MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI

MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI

REEL 21

SWADESHA BIHMANI

CONTD FROM:

8 DECEMBER-1944

D.V.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 8—12—1944 [ಸಂಚಿಕೆ 48]

ಬಡ ಪ್ರಕೃತಿಯ ಈ ಪುಟ್ಟ ಮನುಷ್ಯನಲ್ಲಿ ಬಲಾಢ್ಯ ಶಕ್ತಿಗಳಿಗೂ ಮಣಿಯದ ಬಂಡೆಗಲ್ಲಿನಂಥ ಒಂದು ಉಕ್ಕಿನ ಸತ್ವವು ಇರುತ್ತದೆ. ಅವರ ಮುಖಮುದ್ರೆ ಮನೋವೇಧಕವಾಗಿದ್ದರೂ ಅವರು ಕೌಪೀನ ಧರಿಸಿ ಮೈಮೇಲೆ ಏನೂ ಹೊತ್ತುಕೊಂಡಿರದಿದ್ದರೂ ಅವರನ್ನು ನೋಡಿದ ಕೂಡಲೆ ಅವರ ಮುಂದೆ ತಲೆಬಾಗಿಸುವಂಥ ಒಂದು ಬಗೆಯ ರಾಜಠೀವಿಯು ಇಲ್ಲವೆ ದೊಡ್ಡಸ್ತನವು ಅವರಲ್ಲಿದೆ. ತಿಳಿದು ಮತ್ತು ಬೇಕೆಂತಲೆ ಅವರು ವಿನೀತ ಮತ್ತು ವಿನಮ್ರರಾಗಿದ್ದರೂ ಅವರೊಳ್ಳೆ ಶಕ್ತಿಸಂಪನ್ನ ಹಾಗೂ ಅಧಿಕಾರವಂತರಾಗಿರುವರು. ಈ ಮಾತಿನ ಅರಿವು ಅವರಿಗಿದ್ದುದರಿಂದ, ಪ್ರಸಂಗ ವಿಶೇಷಗಳಲ್ಲಿ ಅವರು ಅಪ್ಪಣೆಗಳನ್ನು ಕೊಡುವರು ಮತ್ತು ಅವುಗಳಂತೆ ನಡೆಯಹಚ್ಚುವರು. ಅವರ ಪ್ರಶಾಂತ ಮತ್ತು ವಿಶಾಲವಾದ ನೇತ್ರಗಳು ಎರಡನೆಯವರನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳುವವು; ತಿಳಿಯಾದ ಮತ್ತು ಸ್ಪಷ್ಟವಾದ ಅವರ ಮಾತುಗಳು ಎರಡನೆಯವರ ಹೃದಯಗಳನ್ನು ಹೊಕ್ಕು ಅವರಲ್ಲಿ ಭಾವನೆಗಳನ್ನು ಹುಟ್ಟಿಸುವವು. ಸಭೆಯಲ್ಲಿ ಒಬ್ಬನೇ ಇರಲಿ ಸಾವಿರ ಜನರಿರಲಿ, ಅವರೆಲ್ಲ ಇವರ ಭಾಷಣದಿಂದ ಆಕರ್ಷಿಸಲ್ಪಟ್ಟವರಾಗಿ ಅವರೊಡನೆ ತಾದಾತ್ಮ್ಯವನ್ನು ಹೊಂದುವರು. ಬುದ್ಧಿಯನ್ನುದ್ದೇಶಿಸಿ ಅವರು ಮಾತಾಡಿದರೂ ಬುದ್ಧಿಗೂ ಈ ಭಾವನೆಗೂ ಯಾವದೇ ಬಗೆಯ ಸಂಬಂಧವಿಲ್ಲ. ವಿಚಾರ ಮತ್ತು ವಿವೇಕಕ್ಕೆ ಗೌಣ ಸ್ಥಾನವಿದೆ.

ಎರಡನೆಯವರನ್ನು ಈ ರೀತಿ ಆಕರ್ಷಿಸಿಕೊಳ್ಳುವ ಶಕ್ತಿಯು ಯಾವದೇ ಬಗೆಯ ವಾಕ್ಚಾತುರ್ಯ ಇಲ್ಲವೆ ಸವಿ ಮಾತುಗಳಿಂದ ಬರಲಾರದು. ಅವರ ಮಾತು ಯಾವಾಗಲೂ ಸರಳ ಮತ್ತು ಮುದ್ದೆಗೆ ಸರಿಯಾದುದು. ಅನವಶ್ಯಕ ಶಬ್ದವನ್ನು ಅವರು ಕ್ವಚಿತ್ತಾಗಿ ಉಪಯೋಗಿಸುವರು. ಅವರ ಅತ್ಯಂತಿಕ ನಿಷ್ಠೆ ಮತ್ತು ವ್ಯಕ್ತಿತ್ವವು ಮಾನವನ ಮನಸ್ಸನ್ನು ಹಿಡಿಯುವವು. ಅವರಲ್ಲಿ ಪ್ರಚಂಡ ಅಂತರಿಕ ಶಕ್ತಿಯು ಝುರಿಯಿದೆಯೆಂದೆನಿಸುವುದು. ಕದಾಚಿತ್ ಅವರ ಬಗ್ಗೆ ಉಂಟಾದ ಒಂದು ಬಗೆಯ ಪರಂಪರೆಯಿಂದಲೂ ಅನುಕೂಲವಾದ ವಾತಾವರಣವುಂಟಾಗಿರಬಹುದು. ಈ ಪರಂಪರೆ ಗೊತ್ತಿಲ್ಲದ ಮತ್ತು ಸುತ್ತಲಿನ ವಾತಾವರಣದ ಅರಿವಿಲ್ಲದ ಪರಕೀಯನು ಕದಾಚಿತ್ ಅಷ್ಟು ಆಳವಾಗಿ ಆಕರ್ಷಿಸಲ್ಪಡಲಾರನು. ಎರಡನೆಯವರ ಮನವೊಲಿಸುವ ಇಲ್ಲವೆ ಶತ್ರುಗಳನ್ನು ನಿರುತ್ತರಗೊಳಿಸುವ ಶಕ್ತಿಯು ಗಾಂಧೀಜಿಯವರ ವೈಶಿಷ್ಟ್ಯವು.

ಹಿಂದುಸ್ತಾನದ ಜೀವಾಳ

[ಲೇಖಕ:— ಜವಾಹರಲಾಲ ನೆಹರು]

ಗಾಂಧೀಜಿಯವರು ಸೃಷ್ಟಿಸೌಂದರ್ಯವನ್ನು ಬಣ್ಣಿಸುತ್ತಿದ್ದರೂ ಕಲೆಯಲ್ಲಾಗಲಿ ಮನುಷ್ಯನಿರ್ಮಿತ ಕೃತಿಗಳಲ್ಲಾಗಲಿ ಅವರಿಗಷ್ಟೊಂದು ಅಸ್ಥೆಯಿಲ್ಲ. ತಾಜಮಹಾಲವೆಂದರೆ ಒತ್ತಾಯದಿಂದ ಮಾಡಿಸಲ್ಪಟ್ಟ ಪರಿಶ್ರಮದ ಪ್ರತೀಕ ಮಾತ್ರ ಅದಕ್ಕೂ ಹೆಚ್ಚಿನದೇನೂ ಅಲ್ಲೆಂದು ಅವರ ಅಭಿಪ್ರಾಯ. ಅವರಲ್ಲಿ ಆಘ್ರಾಣಿಸುವ ಶಕ್ತಿಯೂ ಕಡಿಮೆ. ಆದರೂ ಅವರು ತಮಗೆ ಸರಿದೋರಿದ ರೀತಿಯಲ್ಲಿ ತಮ್ಮ ಜೀವನ ಮಾರ್ಗವನ್ನು ಹಾಕಿಕೊಂಡಿದ್ದಾರೆ. ಒಂದು ಬಗೆಯ ರಸಾತ್ಮಕ ಜೀವನವನ್ನು ಅವರು ಸಾಗಿಸುತ್ತಿರುವರು. ಅವರ ಪ್ರತಿಯೊಂದು ಅಭಿನಯವು ಅರ್ಥಪೂರ್ಣವಾಗಿದ್ದು ಅದರಲ್ಲಿ ಕೃತ್ರಿಮವಾದುದೇನೂ ಇರುವುದಿಲ್ಲ. ದುರ್ದೈವದಿಂದ ನಮ್ಮ ಮಧ್ಯಮವರ್ಗದ ಜನನಲ್ಲಿರುವಂತಹ ಅಸಭ್ಯತೆ, ನೀರಸತೆ ಮೊದಲಾದವುಗಳು ಅವರಲ್ಲಿರುವುದಿಲ್ಲ. ಅಂತಃಶಾಂತಿಯ ಅನುಭವ ಪಡೆದ ಅವರು ಎರಡನೆಯವರಲ್ಲಿಯೂ ಅದನ್ನು ಬೀರುತಿರುವರು. ಜೀವನದ ಕಷ್ಟಮಯ ಮಾರ್ಗವನ್ನು ಒಳ್ಳೆ ಗಟ್ಟಿ ಮತ್ತು ಅವಿಚಲ ಧೈರ್ಯದಿಂದ ಕ್ರಮಿಸುತಿರುವರು.

ಗಾಂಧೀಜಿಯವರು ಅಹಿಂಸೆ, ಅಹಿಂಸಾತ್ಮಕ ಅಸಹಕಾರವನ್ನು ತಮ್ಮಲ್ಲಿದ್ದ ಪ್ರಚಂಡವಾದ ವಾಕ್ಚಾತುರ್ಯ ಮತ್ತು ಮನವೊಲಿಸುವ ಶಕ್ತಿಯಿಂದ ಪ್ರತಿಪಾದಿಸಿದರು. ಅವರ ಭಾಷೆ ಸರಳ ಮತ್ತು ಅಲಂಕಾರರಹಿತವಾಗಿದ್ದರೂ ಅವರ ಮಾತು ಮತ್ತು ಮುಖಮುದ್ರೆ ಪ್ರಶಾಂತ ಮತ್ತು ಸ್ಪಷ್ಟವಾಗಿದ್ದವು. ಯಾವದೇ ಬಗೆಯಿಂದ ಭಾವನಾತ್ಮಕವಾಗಿರಲಿಲ್ಲ. ಆದರೆ ಅದರಲ್ಲಿ ಒಂದು ಬಗೆಯ ಕೆಚ್ಚಿದ್ದಿತು; ಅವರಾಡಿದ ಮಾತುಗಳು ನಮ್ಮ ಮನಸ್ಸು ಮತ್ತು ಹೃದಯದ ಅಂತರಾಳವನ್ನು ಹೊಕ್ಕು ಅಲ್ಲೊಂದು ಬಗೆಯ ಕೆಚ್ಚನ್ನುಂಟುಮಾಡಿದವು. ಅವರು ತೋರಿಸಿದ ಮಾರ್ಗವು ಕಠಿಣ ಮತ್ತು ಕಷ್ಟದ್ದಾಗಿದ್ದಿತು. ಆದರೆ ಅದೊಳ್ಳೆ ಶೂರರ ಮಾರ್ಗವು, ಸ್ವಾತಂತ್ರ್ಯಕ್ಕೆ ಮುಟ್ಟಿಸುವ ಮಾರ್ಗವೆಂದು ತೋರಿತು.

ಜನತೆಯನ್ನು ಈ ರೀತಿ ಆಕರ್ಷಿಸುತಿರುವ ಮನೋವೇಧಕ ಗಾಂಧೀಜಿಯವರು ಎಂಥ ಆಶ್ಚರ್ಯಕಾರಕ ಮನುಷ್ಯರಾಗಿರುವರು! ಅವರ ಬರಹ ಮತ್ತು ಮಾತುಗಳಿಂದ ಅವರ ಬಗ್ಗೆ ಅಷ್ಟೊಂದು ಜ್ಞಾನವಾಗದು. ಅವರ ವ್ಯಕ್ತಿತ್ವವನ್ನು ತಿಳಿಯಲಿಕ್ಕೂ ಅವಷ್ಟೊಂದು ಸಹಾಯಕವಾಗವು. ಹಿಂದುಸ್ತಾನಕ್ಕೆ ಅವರು ಸಲ್ಲಿಸಿದ ಸೇವೆ ಅಪಾರವಾಗಿದೆ. ಹಿಂದೀಯರಲ್ಲಿ ಅವರು ಧೈರ್ಯ ಮತ್ತು ಪೌರುಷವನ್ನು ತುಂಬಿದರು. ಶಕ್ತಿ ಮತ್ತು ಸಹನಶೀಲತೆಗಳನ್ನುಂಟುಮಾಡಿದರು. ಧ್ಯೇಯದ ಸಲುವಾಗಿ ಒಳ್ಳೆ ವಿನಮ್ರತೆಯಿಂದ ಮತ್ತು ಅಭಿಮಾನದಿಂದ ಮಾಡಿದರು. ಧೈರ್ಯವು ಶೀಲದ ಒಳ್ಳೆ ಗಟ್ಟಿಮುಟ್ಟಾದ ತಳಗಲ್ಲು. ಧೈರ್ಯವಿಲ್ಲದಿದ್ದರೆ ನೀತಿಯಿಲ್ಲ, ಧರ್ಮವಿಲ್ಲ, ಪ್ರೇಮವಿಲ್ಲ ಎಂದು ಅವರು ಹೇಳಿದ್ದರು. "ಅಂಜುಬುರುಕನು ಸತ್ಯ ಮತ್ತು ಪ್ರೇಮ ಮಾರ್ಗವನ್ನು ಕ್ರಮಿಸಲಾರನು." ಹಿಂಸೆಯ ಬಗ್ಗೆ ಅಷ್ಟೊಂದು ಜುಗುಪ್ಸೆಯೆನ್ನು ತೋರಿದರೂ "ಹೇಡಿತನವು ಹಿಂಸೆಗಿಂತ ಹೇಯವಾದುದೆಂದು" ಹೇಳಿರುವರು ಅವರು. "ಕಾರ್ಯಮಾಡಬಯಸುವವನಿಗೆ ಶಿಸ್ತು ಅತ್ಯಾವಶ್ಯ. ಸ್ವಾರ್ಥತ್ಯಾಗ, ಶಿಸ್ತು ಮತ್ತು ಆತ್ಮಸಂಯಮನವಿಲ್ಲದೆ ಯಾವದೇ ಬಗೆಯ ಮೋಕ್ಷ ಇಲ್ಲವೆ ಭವಿಷ್ಯತ್ತು ಇರುವುದಿಲ್ಲ. ಶಿಸ್ತಿಲ್ಲದ ಸ್ವಾರ್ಥತ್ಯಾಗವು ನಿರರ್ಥಕವು." ಅವರ ಶಬ್ದಗಳು ಮತ್ತು ವಾಕ್ಯಗಳು ಕದಾಚಿತ್ ತಪ್ಪೆನಿಸಬಹುದು. ಆದರೆ ಆ ಶಬ್ದಗಳ ಹಿಂದೆ ಒಂದು ಬಗೆಯ ಶಕ್ತಿಯಿದೆ. ಈ ಪುಟ್ಟ ಮನುಷ್ಯನು ಕಾರ್ಯಧುರಂಧರನೆಂಬುದು ಹಿಂದುಸ್ತಾನಕ್ಕೆ ಗೊತ್ತಿದೆ.

ಹಿಂದುಸ್ತಾನದ ಪ್ರತಿಬಿಂಬವನ್ನು ಅವರಲ್ಲಿ ಅಸಾಧಾರಣ ಪ್ರಮಾಣದಲ್ಲಿ ಕಾಣಬಹುದು. ಆ ಹಳೆಯ ಮತ್ತು ಕಷ್ಟಕ್ಕೀಡಾದ ಭೂಮಿಯ ಜೀವಾಳವನ್ನೆ ಪ್ರದರ್ಶಿಸುವ ಪ್ರತಿನಿಧಿಗಳವರು. ಹಿಂದುಸ್ತಾನವೆಂದರೆ ಅವರೆಂದು ಹೇಳಬಹುದು; ಅವರ ಪರಾಜಯಗಳು ಹಿಂದುಸ್ತಾನದ ಪರಾಜಯಗಳು. ಅವರನ್ನಲಕ್ಷಿಸುವದು ವೈಯಕ್ತಿಕ ದೃಷ್ಟಿಯಿಂದ ಅಷ್ಟೊಂದು ಮಹತ್ವದ್ದಾಗದಿದ್ದರೂ ಅದು ರಾಷ್ಟ್ರಕ್ಕೆ ಅಪಮಾನಕಾರಕವು. ಮತ್ತು ಈ ಬಗೆಯ ಚಲ್ಲಾಟವನ್ನು ನಡೆಸಿದ ವಾಯಿಸರಾಯ ಮೊದಲಾದವರು ಎಂಥ ಘಾತಕವಾದ ಬೆಳೆಯನ್ನು ತಾವು ಬಿತ್ತುತ್ತಿರುವರೆಂಬುದನ್ನರಿಯರು. ೧೯೩೧ನೇ ಡಿಸೆಂಬರದಲ್ಲಿ ಗಾಂಧೀಜಿಯವರು ದುಂಡುಮೇಜಿನ ಪರಿಷತ್ತನ್ನು ಮುಗಿಸಿಕೊಂಡು ಮರಳಿ ಬರುವಾಗ ಪೋಪರು ಅವರ ಬೇಟಿ ತೆಗೆದುಕೊಳ್ಳಲು ನಿರಾಕರಿಸಿದುದನ್ನು ಕೇಳಿದ ಕೂಡಲೆ ನನಗೊಳ್ಳೆ ಕೆಡಕೆನಿಸಿದ್ದು ನನ್ನ ನೆನಪಿನಲ್ಲಿದೆ.

ಗಾಂಧೀಜಿಯವರನ್ನು ಪ್ರತ್ಯಕ್ಷವಾಗಿ ನೋಡದೆ ಕೇವಲ ಅವರ ಬರಹಗಳನ್ನೋದಿದವರಿಗೆ ಅವರೊಬ್ಬ ಧಾರ್ಮಿಕ ಮನುಷ್ಯರಿರಬಹುದು, "ಕಪ್ಪು ಬಟ್ಟೆಗಳನ್ನು ಧರಿಸಿ ಸಂಚರಿಸುತಿರುವ ಧರ್ಮಗುರುಗಳಂತೆ" ಇರಬಹುದು ಎಂಬ ಕಲ್ಪನೆಯಾಗುವದು. ಆದರೆ ಅವರು ಆ ಬಗೆಯ ಧಾರ್ಮಿಕ ಗುರುಗಳ ಮಾದರಿಯವರಿರುವುದಿಲ್ಲ. ಅವರ ಮಂದಹಾಸ್ಯ ಮನೋಹರ, ಅವರ ನಗೆ ಆಕರ್ಷಕವಾಗಿವೆ. ಅವರನ್ನು ನೋಡಿದ ಕೂಡಲೆ ಎಂಥವನಾದರೂ ಸಂತುಷ್ಟನಾಗುವನು. ಬಾಲಕರಲ್ಲಿರುವ ಒಂದು ಬಗೆಯ ಮುಗ್ಧ ಮನೋಹರತೆ ಅವರಲ್ಲಿರುವದು. ಅವರು ಕೋಣೆಯನ್ನು ಪ್ರವೇಶಿಸಿದ ಕೂಡಲೆ ತಮ್ಮೊಡನೆ ಹೊಸ ಬೆಳಕನ್ನೆ ತರುವರು. ಅದರಿಂದ ಇಡೀ ವಾತಾವರಣವೆ ಉದ್ದೀಪ್ತವಾಗುವದು.

ಅವರು ಹಿಂದುಸ್ತಾನದಲ್ಲಿಯ ಒಕ್ಕಲಿಕ ಜನಸಾಮಾನ್ಯರ ಪ್ರತಿನಿಧಿಗಳು. ಇಷ್ಟೇ ಅಲ್ಲ, ಒಂದು ಬಗೆಯಿಂದ ಅದಕ್ಕೂ ಹೆಚ್ಚಿಗಿರುವರು. ಏಕೆಂದರೆ ಆ ಕೋಟಿಗಟ್ಲೆ ಜನಸಾಮಾನ್ಯರ ಮೂರ್ತಿಮಂತ ಪ್ರತೀಕರಾಗಿರುವರು ಅವರು. ಅವರು ಸಾಮಾನ್ಯ ಒಕ್ಕಲಿಗರಲ್ಲೆಂಬುದು ನಿಜ. ತೀವ್ರವಾದ ಬುದ್ಧಿ ಮತ್ತು, ಸದಭಿರುಚಿ, ಸದ್ಭಾವನೆ, ದೂರದೃಷ್ಟಿ, ಅತ್ಯಂತ ದಯಾಪರತೆ ಇವೆಲ್ಲ ಅವರಲ್ಲಿದ್ದರೂ ಎಲ್ಲ ಬಗೆಯ ಭಾವನೆ ಮತ್ತು ಕಾಮವಾಸನೆಗಳನ್ನು ಹತ್ತಿಕ್ಕಿ, ವಿಶುದ್ಧಗೊಳಿಸಿದ ಅಧ್ಯಾತ್ಮಮಾರ್ಗಕ್ಕೆ ಹತ್ತಿದ ಸನ್ಯಾಸಿಯಂತಿರುವರು ಅವರು. ಅವರೊಬ್ಬ ಪ್ರಚಂಡ ವ್ಯಕ್ತಿ. ಸೂಜಿಗಲ್ಲಿನಂತೆ ಜನತೆಯನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳುತ್ತಿರುವರು. ಭೀಕರವಾದ ಮೋಹ, ಆಸೆಗಳನ್ನು ದೂರೀಕರಿಸುತ್ತಿರುವರು. ಇವೆಲ್ಲ ಒಕ್ಕಲಿಗರಿಗೆ ತೀರ ಸರಿಹೋಗದಂಥ ಗುಣಗಳಾಗಿವೆ. ಹೀಗಿದ್ದರೂ ಅವರೊಳ್ಳೆ ಒಕ್ಕಲಿಗರು; ವ್ಯವಹಾರದಲ್ಲೆಲ್ಲ ಅವರ ದೃಷ್ಟಿ ಒಕ್ಕಲಿಗನ ದೃಷ್ಟಿಯಾಗಿರುವದು. ಜೀವನದ ಹಲವು ವಿಷಯಗಳಲ್ಲಿ ಒಕ್ಕಲಿಗರಂತೆ ಇವರೂ ಅಂಧರಾಗಿರುವರು. ಆದರೆ ಹಿಂದುಸ್ತಾನವು ಒಕ್ಕಲಿಗರ ಹಿಂದುಸ್ತಾನವು;

(೬ನೇ ಪುಟಕ್ಕೆ ಮುಂದುವರಿದಿದೆ)

ಭವಿಷ್ಯ ಸುಳ್ಳಲ್ಲ

ದೊರೆಸಾಮಿಗೆ ಜ್ಯೋತಿಷ್ಯರ ಭವಿಷ್ಯವಾಣಿಯಲ್ಲಿರುವಷ್ಟು ನಂಬಿಕೆ ದೇವರಲ್ಲಿ ಕೂಡಾ ಇಲ್ಲವೆನ್ನಬಹುದು. ಅವನಿಗೆ ಜಾತಕದ 'ಹುಚ್ಚು' ಹ್ಯಾಸ್ಕೂಲಿಗೆ-ಹೋಗುವಾಗಿನಿಂದಲೂ ಇತ್ತು. ಅವನು ದೊಡ್ಡವನಾದ ಹಾಗೆ ಆ ಭ್ರಮೆಯೂ ಅವನಲ್ಲಿ ಬೆಳೆಯಿತು.

ಮೆಟ್ರಿಕ್ ಪರೀಕ್ಷೆಗೆ ಕೂತುಕೊಳ್ಳುವ ಮೊದಲು ದೇವಯ್ಯ ದೀಕ್ಷಿತರು ಅವನಿಗೆ "ಈ ಸಲದ ನಿಮ್ಮ ಪರೀಕ್ಷೆ ತುಸು ಕಠಿಣವಿರುತ್ತದೆ. ಚೆನ್ನಾಗಿ ಓದದಿದ್ದರೆ ಫೈಲ್ ಆಗುವುದು ಖಂಡಿತ" ಎಂದದ್ದನ್ನು ನಂಬಿ ದೊರೆಸಾಮಿ ರಾತ್ರಿ ಹಗಲು ನಿದ್ದೆಯಿಲ್ಲದೆ ಓದಿ ತುಂಬಾ ಎಣ್ಣೆ ಖರ್ಚು ಮಾಡಿದ್ದಾನೆ. ಆದರೆ ಆ ವರ್ಷದ ಪರೀಕ್ಷೆ ಪ್ರಶ್ನೆಗಳು ದೀಕ್ಷಿತರು ಹೇಳಿದಷ್ಟು ಕಠಿಣವಿರಲಿಲ್ಲ. "ನಿಮಗಲ್ಲದಿದ್ದರೂ ಇತರರಿಗಾದರೂ ಕಠಿಣ ವಿದ್ದಿತಲ್ಲವೇ" ಎಂದು ದೀಕ್ಷಿತರು ಹೇಳಿದಾಗ ದೊರೆಸಾಮಿಗೆ ಇನ್ನೂ ನಂಬಿಕೆ ಹೆಚ್ಚಾಯಿತು.

ಆ ಊರಿನ ಜ್ಯೋತಿಷ್ಯರಲ್ಲಿ ದೀಕ್ಷಿತರು ಅಗ್ರಗಣ್ಯರು. ಅವರು ಜ್ಯೋತಿಷ್ಯರು ಮಾತ್ರವಲ್ಲ ಮಂತ್ರಗಾರರೂ, ಬಲ್ಲಿಗಾರರೂ, ವೈದ್ಯರೂ, ಪುರೋಹಿತರೂ ಆಗಿರುತ್ತಾರೆ. ಊರಿನ ಮೂಢ ನಂಬಿಕೆಯ ಜನರೆಲ್ಲ ದೀಕ್ಷಿತರ ಗಿರಾಕಿಗಳು.

ಆ ಊರಿನ ಜನರಲ್ಲಿ ನಾನಾ ವಿಧದವರಿದ್ದಾರೆ. ಶೀತದಿಂದ ವಾತವಾದರೆ ಭೂತ ಬಾಧೆ ಎಂದು ನಂಬುವವರು, ಮಾತ್ರವಲ್ಲ ಸಾಲವಾಗಿ ಸೋತುಹೋದರೆ ಬಾಲ ಬ್ರಹ್ಮಚಾರಿಯ ಉಪದ್ರವೆಂದು ಶಂಕಿಸುವವರೂ ಆ ಊರಲ್ಲಿ ಬಹಳ ಸಂಖ್ಯೆಯಲ್ಲಿದ್ದಾರೆ.

ದೀಕ್ಷಿತರು ಇಂಥವರ ದೈವ ಕಾಟಗಳನ್ನು ಮಂತ್ರಮೂಲಕ ಉಪಶಮಿಸುವುದಲ್ಲದೆ, ಲೇಹ, ಲೇಪನಗಳಿಂದಲೂ ಅದನ್ನು ತಡೆಗಟ್ಟುವರು. ಅವರಿಗೆ ಗ್ರಹಚಾರ ಫಲನೋಡುವದಕ್ಕೆ, ಮಂತ್ರೋಚ್ಚಾಟನೆ ಮಾಡುವದಕ್ಕೆ ಮತ್ತು ವೈದ್ಯಕೀಯ ಚಿಕಿತ್ಸೆ ನಡೆಸುವುದಕ್ಕೆ ಪ್ರತ್ಯೇಕಪ್ರತ್ಯೇಕ 'ಫೀಸು' ತೆರಬೇಕು.

ಜನರು ಕಳವಿನ ಪತ್ತೆಗಾಗಿ ಪೋಲಿಸ್ ಸ್ಟೇಶನಿಗೆ ಹೋಗುವ ಬದಲು ದೀಕ್ಷಿತರ ದೊಡ್ಡಿಗೆ ಬರುವರು. ತಮ್ಮಲ್ಲಿ ನಡೆದ ಕಳವು ಮನುಷ್ಯ ಮಾತ್ರರಿಂದಲ್ಲದೆ ದುಷ್ಟ ದೈವಗಳ ಕಾರ್ಯವಿರುತ್ತದೆಂದೂ ಊಹಿಸಿ ಬರುವವರೂ ಅನೇಕರು. ಸುರಾಸುರ ಪ್ರೇರಣೆಯಿಂದರಿಂದಲೂ ನಡೆದ ಘಟನೆಗಳಿಗೆ ದೀಕ್ಷಿತರಲ್ಲಿ ತಕ್ಕ 'ಔಷಧ' ಇದೆ.

ಇಂತಹ ಶಕುನ ಫಲ ಸಂಬಂಧವಾದ ಕೆಲಸಗಳಿಗೆ ದೀಕ್ಷಿತರ ಆಳೆ ಕವಡೆ ದರ ಒಂದು ಬೆಳ್ಳಿ ಪಾವಲಿ. ಬೆಳ್ಳಿ ನೋಡಿದ ಮೇಲೆ ಅವರು ಕವಡೆ ಚೀಲ ಬಿಚ್ಚುವರು. ಮಣೆಯ ಮೇಲೆ ಬೆಳ್ಳಿಗೆರೆಗಳ ಕೋಣೆಗಳನ್ನು ಹಾಕಿ 'ರೆಡಿ' ಮಾಡಿದ್ದೇ ಇದೆ. ಮಣಮಣನೆ ಮಂತ್ರ ಹೇಳುವಂತೆ ಜಪಿಸಿ ಕವಳಗಳನ್ನು ಎಂಗಡಿಸಿ ಎಂಗಡಿಸಿ ಇಟ್ಟು ಆ ಮೇಲೆ ಪ್ರಶ್ನೆ ಫಲ ಶುರುಮಾಡುವರು.

ಅವರು ಗಿರಾಕಿಗಳಿಗೆ ಹಾಕುವ ಪ್ರಶ್ನೆಯು ಬಹಳ ಜಾಣತನದ್ದಿರುತ್ತದೆ. ಉದಾಹರಣೆಗಾಗಿ ಅವರಲ್ಲಿಗೆ ಒಂದು ಭಯಂಕರ ರೋಗಕ್ಕೆ ತುತ್ತಾದವರ ಕಡೆಯವರು ಬಂದವರೆಂದು ಭಾವಿಸೋಣ. ಜ್ಯೋತಿಷ್ಯರು ಗಿರಾಕಿಗಳು ಬಂದ ಉದ್ದೇಶವನ್ನೂ ತಿಳಿಸಿದರೆ ಮಾತ್ರ ತಾನೇ ಅವರಲ್ಲಿ ನಂಬಿಕೆ ಹೆಚ್ಚುವುದು. ದೀಕ್ಷಿತರು ಹೇಳುವ ರೀತಿಯು ಸುಮಾರು ಇಂತಹ ಹತ್ತು ನಮೂನೆಯು ಗಿರಾಕಿಗಳಿಗೆ ತಗಲುತ್ತದೆ.

"ನಿಮ್ಮಲ್ಲಿ ಯಾವದಾದರೂ ಒಂದು ಅನುಕೂಲ್ಯವಸ್ತು ಅಪಹಾರವಾಗಿದೆಯೊ?" ರೋಗಿಯ ಕಡೆಯಿಂದ ಬಂದವರಿಗೆ ದೀಕ್ಷಿತರಲ್ಲಿ ಒಂದು ಕ್ಷಣದ ಅಪನಂಬಿಕೆ ಹುಟ್ಟಿದಂತಾಗುತ್ತದೆ. ಆದರೆ ಹಾಗೆ ಅಪನಂಬಿಕೆ ಹುಟ್ಟಿಸಿದರೆ ದೀಕ್ಷಿತರು ದಿನತೆಗೆಯ ಬೇಡವೆ? ಗಿರಾಕಿಗಳು "ನಮ್ಮಲ್ಲಿ ಒಬ್ಬನಿಗೆ ನಿನ್ನೆ . . . ."

ದೀಕ್ಷಿತರು:-"ತಿಳಿಯಿತು, ತಿಳಿಯಿತು-ಒಬ್ಬನಿಗೆ ನಿನ್ನೆ ಕಾಯಿಲೆ ಅಲ್ಲವೆ?"

ಗಿರಾಕಿ:-"ಹೌದು ಸ್ವಾಮಿ"

ದೀಕ್ಷಿತ:-"ಅದೇ ನಾನು ಹೇಳಿದ್ದು. ಆ ನಿಮ್ಮವನ ಆರೋಗ್ಯ ಅಪಹರಿಸಲ್ಪಟ್ಟಿದೆ. ನಾನು ಅದೇ ಕೇಳಿದ್ದು. ಆರೋಗ್ಯದಷ್ಟು ಅನುಕೂಲ್ಯ ವಸ್ತು ಬೇರೆ ಇದೆಯೆ?"

ಅದಕ್ಕೆ ಗಿರಾಕಿ:—"ಅದು ಎಂತಹ ರೋಗ ಸ್ವಾಮಿ, ಏನಾದರು ತಮಗೆ ಗೋಚರಿಸುತ್ತದೆಯೋ?" ಎಂದು ಕೇಳಿದರೆ ದೀಕ್ಷಿತರು-"ಅದು ಮತ್ತೇನಿಲ್ಲ. ನಿಮ್ಮ ಮನೆಯ ಹತ್ತಿರ ಒಂದು ಭೂತದ ಗುಡಿ ಇದೆಯಲ್ಲವೆ?" ಎಂದು ಕೇಳುವಾಗ ಗಿರಾಕಿ--"ಇಲ್ಲಸ್ವಾಮಿ" ಎನ್ನುವನು.

ದೀಕ್ಷಿತರು:-"ಇಲ್ಲ, ತೆಂಕಲಲ್ಲಿ"

ಗಿರಾಕಿ-"ಇಲ್ಲ"

ದೀ:-"ಪೂರ್ವಕ್ಕೆ?"

ಗಿ-"ಇಲ್ಲ"

ದೀ:-"ಪಶ್ಚಿಮ? ಈಶಾನ್ಯ? ಬಡಗು? ಆಗ್ನೇಯ? ನಾ. . . ."

ಹೀಗೆ ಮೇಲಿಂದ ಮೇಲೆ ಕೇಳಿದರೂ ನಮ ಪೇಟೆಯಲ್ಲಿ ವಾಸಿಸುವ ಆ ಗಿರಾಕಿಯ ಮನೆಯ ಹತ್ತಿರ ಒಂದೆರಡು ಮೈಲು ಅಂತರದಲ್ಲಾದರೂ ಒಂದು ಭೂತಗುಡಿಯಿಲ್ಲದಿರುವುದನ್ನು ಕೇಳಿ ಗಿರಾಕಿ 'ಗೊಂದಲ'ರೂ ಪ್ರತಿಭಾವಂತ ದೀಕ್ಷಿತರು ಸೋಲುವವರಲ್ಲ. "ಭೂತದ ಗುಡಿ ಎಲ್ಲೂ ಇರಲಿ ಆ ಭೂತದ ದೃಷ್ಟಿ ಮಾತ್ರ ನಿಮ್ಮ ಮನೆ ಮೇಲೆ ಇದೆ." ಎನ್ನುತ್ತಾ ಗಿರಾಕಿಯನ್ನು ತಬ್ಬಿಬ್ಬಾಗಿ ಮಾಡಿಬಿಡುವರು.

ಅಂದು ಅವರ ಮನೆಯಲ್ಲಿ ಅವರ ಹೆಂಡತಿ ತರಲಿಕ್ಕೆ ಹೇಳಿದ ವಸ್ತುಗಳನ್ನೇ ದೀಕ್ಷಿತರು ಗಿರಾಕಿಗಳೊಡನೆ ಮಂತ್ರಾರ್ಪಣೆಗಾಗಿ ಕೇಳುವರು.

ಮನೆಯಲ್ಲಿ ತೆಂಗಿನಕಾಯಿ ಇಲ್ಲವೆಂದರೆ ದೀಕ್ಷಿತರು ರೋಗಿಯ ಕಡೆಯಿಂದ ಬಂದ ಗಿರಾಕಿಗೆ- "ಮಾಮ್ಮಾಯಮ್ಮನಿಗೊಂದು (ದೀಕ್ಷಿತರ ಪತ್ನಿಯ ಹೆಸರು ಅದೇ) ನರಸಿಂಹನಿಗೊಂದು (ಹಿರೇ ಮಗನ ಹೆಸರು) ತೆಂಗಿನ ಕಾಯಿ ಜಪಿಸಿಕೊಳ್ಳಲಿಕ್ಕಿದೆ. ಅದನ್ನು ಈಗಲೇ ಕೊಂಡೊಯ್ದು ಬನ್ನಿ" ಎನ್ನುವರು. ತೆಂಗಿನ ಕಾಯಿ ತಂದರೆ ಕಾಣಿಕೆ ಬೇಕು, ದಕ್ಷಿಣೆ ಬೇಕು, ಪ್ರಸಾದದ ಖರ್ಚು ಬೇಕು.

ಅವರ ಹೆಂಡತಿ ಎಣ್ಣೆ ಇಲ್ಲ ಅಂದರೆ ಗಿರಾಕಿಗಳ ದೈವ ತೃಪ್ತಿಗೆ ಅಂದು ಎಣ್ಣೆಯೇ ಪರಿಹಾರ ದಾನ. ಅಕ್ಕಿ ಇಲ್ಲ ಎಂದರೆ ಅಕ್ಕಿ. ಸೀರೆ ಬೇಕೆಂದರೆ 'ಮಾರಮ್ಮನಿಗೆ ಒಂದು ಸೀರೆ ನಿಮ್ಮಿಂದ ಕೊಡಿಸಿದರೆ ಉಪಶಮನವಾಗುತ್ತದೆ' ಎನ್ನುವರು ದೀಕ್ಷಿತರು.

ಕಳ್ಳತನದ ಕೇಸುಗಳ ಪ್ರಶ್ನೆ ಪತ್ತೆಗೆ ಬಂದರೆ ದೀಕ್ಷಿತರು ಗುಪ್ತ ಪತ್ತೆದಾರನ ತೆರದಲ್ಲಿ ತಮ್ಮ ಕೆಲಸವನ್ನು ನಿರ್ವಹಿಸುವರು.

ಮೊದಲಿನ ಪ್ರಶ್ನೆ ಮುಂಚಿನದೇ. "ನಿಮ್ಮಲ್ಲಿ ಒಂದು ಅಪಹಾರವಾಗಿದೆ"

"ಹೌದು"

"ಲೋಹದ ವಸ್ತುಗಳು ಅಲ್ಲವೆ?"

"ಹೌದು, ಚಿನ್ನದ ಹಾರ"

"ಅದೇ, ಅದೇ, ಅನುಕೂಲ್ಯ ಲೋಹದ್ದು. ಸರಿ. ಕದ್ದುದು ಒಂದು ವಿಚಿತ್ರ ವ್ಯಕ್ತಿ-ಒಂದು-ಸ್ತ್ರೀ, ಹಾಯದ್ದು ಅಲ್ಲವೆ?"

"ಅಲ್ಲ, ಸ್ವಾಮಿ, ಒಬ್ಬ ಮುದುಕ-ಅವ ಓಡಿಹೋಗಿದ್ದಾನೆ- ಎಂದು ಬವಸ ಆಯಿತು."

"ಹೌದು, ಸ್ತ್ರೀ ಅಂದರೆ ಸ್ತ್ರೀಯಂತೆ ಚಂಚಲ ಸ್ವಭಾವದ ವ್ಯಕ್ತಿ ಎಂದರ್ಥ. ತರುಣ ಎಂದರೆ ಪ್ರಾಯದಲ್ಲಿ ಮುದುಕನಾದರೂ ಬುದ್ಧಿಯಲ್ಲಿ ಹುಡುಗ ಎಂದರ್ಥ. ನಿಮ್ಮ ಸಂಬಂಧಿಕನಲ್ಲವೆ?"

"ಅಲ್ಲ ಅವನು ಬೇರೆಯೇ ಜಾತಿ, ಹಿತ್ತಿಲು ಕೆಲಸಕ್ಕೆ ಬಂದಿದ್ದ"

"ಸರಿ, ಸರಿ, ಆ ಕೆಲಸದ ಸಂಬಂಧ–

1944

ಮೈಸೂರು ದಸರಾ ಪ್ರದರ್ಶನದಲ್ಲಿ

ಸುವರ್ಣಪದಕ ಪಡೆದ

ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ–ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳು

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ತ್ವವನ್ನು ಮನಗಾಣುವಿರಿ.

ಅವನಿಗೆ ... ಲ್ಲವೆ?" "ಇಲ್ಲ ... ಅವನ ... "ಹಾಗಿ ... ಪತಿ ಎಂ ... ನಾಲ್ಕು ... ದಿನ ... ದ್ದಾನೆ ... "ಇಲ್ಲ ... ಪಡಕೊಂ ... ಹೇಳಿದ್ದಾ ... "ಮದು ... ಮುದಾ ... ಇದೆ. ... ಮಂತ್ರ ... ನನ್ನ ... "ಆದ ... "ದೇವ ... ಕೊಡಬೇ ... ಕಷ್ಟ." "ಇಷ್ಟು ... ತರು ಒಂ ... ವರಲ್ಲ. "ಇಂಥ ... ನನ್ನ ಮ ... ವುದು. ... ಅವರ ಹೆ ... ದೀಕ್ಷಿತರ ... ಕೊಡಿದ್ದಾ ... ಹೋಕ್ಕಿದ ... ದಿನದ ... ಆಫೀಸಿಗೆ ... ಲ್ಲಿದ್ದ ದೀ ... ನೋಡಿ "... ಯಾರ ... ಅವರಿಂದ ... ವಿದೆ. ... ಎನ್ನು ... ಗ್ರಹಗಳು ... ಸಾಮಿ ... ನಾನ ... ದೊರೆ ಸಾ ... ಸುವುದು, ... ಮಾತನಾ ... 'ಭವಿಷ್ಯ' ... ಸಿಳನೆ ... ಹೋಗುತ ... ಜನರು ... "ಮೊನ್ನೆ ... ಯಿಂದ ... ಮಿದುಳು ... ಹೊಂದುತ ... ತ್ತಿದರು. ಅಂದು ... ಮೇಲೆ ಒ ... ಜರಲ್ಲಿ ... ಅಸಡ್ಡೆಯ, ... ಯಾಕೆ ಇ ... ರರು ಸಾ ... ಗಿರಾಕಿಗಳ ... ನೆಂಬ ನ ... ತಿರೋ?" ... ಸಾಮಿ ... ಸಾರ್, ... ಟಿಕ್ ಕೇ ... ನಾನು ಇಲ್ಲ ... (ಗಿರಾ...

ಯುರೋಪ್ ಯುದ್ಧ ತಯಾರಿಯ ಅಗಾಧತೆ

ಮಿತ್ರರ ಬ್ರಹ್ಮತ್ರಯತ್ನ

ಇಷ್ಟಾದರೂ ಇನ್ನೂ ಕಮ್ಮಿ ಆಯಿತು

ಗಳಲ್ಲಿ ಕೆಲವು ಬ್ರಿಟಿಷರ ಕೈಗೆ ಸಿಕ್ಕಿದುವು. ಕೂಡಲೇ ಇಂಗ್ಲೆಂಡಿನ ಪರಿಶೋಧನಾಲಯಕ್ಕೆ ಅವುಗಳನ್ನು ಕಳುಹಿಸಿ ಅವುಗಳಂತಹುಗಳನ್ನೇ ತಯಾರಿಸಲು ಪ್ರಾರಂಭಮಾಡಲಾಯಿತು. ಅಂದಿನಿಂದ ಮಿತ್ರರ ಎಣ್ಣೆ ಗೇಸ್ ಡಬ್ಬಿಗಳು ಬಲುಭದ್ರವಾದವೂ, ಎಷ್ಟೇ ಮೇಲಿನಿಂದ ಬಿದ್ದರೂ ಒಡೆಯದವುಗಳೂ ಆದವು. ಇದರಿಂದ ಆಫ್ರಿಕದ ಮತ್ತು ಯುರೋಪ್ ಯುದ್ಧದ ಪೂರೈಕೆಗೆ ದೊಡ್ಡ ಸಹಾಯವಾಯಿತು.

ಮುತ್ತಿಗೆ ಪ್ರಾರಂಭವಾಗುವ ಮೊದಲು ಸಾವಿರಾರು ಬ್ರಿಟಿಷ್ ಮತ್ತು ಅಮೇರಿಕನ್ ಹಡಗುಗಳು ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಇತರ ಕಡೆಗಳಿಂದ ಲಕ್ಷಾಂತರ ಯಂತ್ರೋಪಕರಣಗಳನ್ನೂ, ಮಿಲಿಯಾಂತರ ಟನ್ ಭಾರದ ಕಚ್ಚಾ ಪದಾರ್ಥಗಳನ್ನೂ ತಂದರು. ಇಂಗ್ಲೆಂಡಿನ ಕರಾವಳಿಗೆ ಅಲ್ಲಿನ ಒಳಪ್ರದೇಶದಿಂದ ಫ್ರಾನ್ಸಿನತ್ತ ಕಡೆ ಒಯ್ಯುಬೇಕಾದ ಲಕ್ಷೋಪ ಲಕ್ಷ ಸಲಕರಣೆಗಳನ್ನು ತಂದು ದಾಸ್ತಾನಿಡಲಾಯಿತು. ರಾತ್ರೆ ಹಗಲು ಸ್ಪೆಶಲ್ ರೈಲುಗಳೂ, ಮಿಲಿಟರಿ ಲಾರಿಗಳೂ, ಇತರ ವಾಹನಗಳೂ ಬಿಡುವಿಲ್ಲದೆ ಕೆಲಸಮಾಡಿದವು.

ಹೀಗೆ ತರಲ್ಪಟ್ಟ ಉಪಕರಣಗಳಲ್ಲಿ ದೋಣಿಗಳೂ, ಟ್ಯಾಂಕುಗಳೂ, ವಿಮಾನಗಳೂ ಅಲ್ಲದೆ ಸಾವಿರಾರು ಕೃತಕ ಸಂಕಗಳೂ ಇದ್ದುವು. ಈ ಕೃತಕ ಸಂಕಗಳು ಫ್ರಾನ್ಸಿನಿಂದ ಮುಂದರಿಸಿ ಹೋಗುವಾಗ ಸಿಗುವ ಚಿಕ್ಕ ದೊಡ್ಡ ನದಿಗಳನ್ನು ಕ್ಷಣದಲ್ಲಿ ದಾಟಲು ಸಾಧ್ಯವಾಗುವಂತಹುಗಳು. ನದಿಯ ಒಂದು ಕಡೆಯಿಂದ ಯಂತ್ರಮೂಲಕ ತಿರುಗಿಸಿದೊಡನೆ ಕೊಳವೆಯಂತೆ ಈ ಸಂಕಗಳ ಭಾಗಗಳು ಹೊರಬಂದು ಉದ್ದವಾಗಿ ನದಿಯ ಮೇಲಕ್ಕೆ ಎಸೆಯಲ್ಪಡುತ್ತವೆ. ಇದರಿಂದ ಮಿತ್ರರ ಪ್ರಗತಿಯ ವೇಗವು ತುಂಬಾ ತ್ವರಿಯಾಯಿತಂತೆ.

ಹೊಸ ಉಪಕರಣಗಳು

ಯುರೋಪ ಮುತ್ತಿಗೆಯಲ್ಲಿ ಅತ್ಯಂತ ಸಹಾಯಕಾರಿಯಾದ ಇನ್ನೊಂದು ಉಪಕರಣವೆಂದರೆ ಬ್ರಿಟನಿನಲ್ಲಿ ತಯಾರಾಡ ವಿಮಾನ, ಮೋಟಾರು ಯಂತ್ರಗಳಿಗೆ ಉಪಯೋಗಿಸುವ 'ಪ್ಲಗ್ಗು'ಗಳು. ಈ ವಾಹನಗಳ ಯಂತ್ರಗಳು ಪೆಟ್ರೋಲು ಎಣ್ಣೆಯ ದಹನ ಮೂಲಕ ಚಲಿಸುವಂತಹುಗಳಲ್ಲವೆ? ಈ ದಹನ ಕ್ರಿಯೆಯನ್ನು ಶೀಘ್ರವೂ ಆತಂಕವಿಲ್ಲದೆಯೂ ನಡೆಸಲು 'ಪ್ಲಗ್ಗು'ಗಳಿಲ್ಲದಿದ್ದರೆ ಸಾಧ್ಯವಿಲ್ಲ. ಇವು ನಾಜೂಕು ಯಂತ್ರ ಶಿಲ್ಪ ಚತುರತೆಯಿಂದ ತಯಾರಿಸಲ್ಪಟ್ಟ ಚಿಕ್ಕ ಉಪಕರಣಗಳು. ಸ್ವಲ್ಪ ಹಾಳಾದವೆಂದರೆ ಇಡೀ ವಿಮಾನಗಳೇ ಕೆಳಗೆ ಉರುಳಿ ಅಪಾಯ ಸಂಭವಿಸುತ್ತದೆ.

ಅಮೇರಿಕನ್ ಪ್ಲಗ್ಗುಗಳಿಗಿಂತ ಬ್ರಿಟಿಷ್ ತಯಾರಿಕೆಯವುಗಳು ಐದಾರು ಪಾಲು ಬಾಳಿಕೆ ಬರುವಂತಹುಗಳು. ಎಂತಹ ಅನಾನುಕೂಲ ಹವೆಯ ವಾತಾವರಣದಲ್ಲಾದರೂ ಈ ಪ್ಲಗ್ಗು ಯಂತ್ರಗಳು ನಿರಾಂತಕವಾಗಿ ಕೆಲಸಮಾಡುತ್ತವೆ. ಹೀಗಾದುದರಿಂದ ಮಿತ್ರಪಡೆಗಳಿಗೆ ಅದರಿಂದ ದೊಡ್ಡ ಸಹಾಯವಾಯಿತಂತೆ.

ಎಣ್ಣೆ ಕೊಳವೆ

ಫ್ರಾನ್ಸಿನಲ್ಲಿ ಇಳಿದಾಕ್ಷಣ ಮಿತ್ರ ಸೇನೆಗಳು ತಮ್ಮ ಪ್ರತಿಯೊಂದು ತರದ ವಾಹನಗಳಿಗಾಗಿ ಎಣ್ಣೆ ಸರಬರಾಯಿಯ ವ್ಯವಸ್ಥೆ ಮಾಡಿದ್ದರು. ಕರಾವಳಿಯಲ್ಲಿನ ಚೇರ್‌ಬರ್ಗದಿಂದ ಪೇರಿಸಿನ ತನಕ ಎಣ್ಣೆ ಕೊಳವೆಯನ್ನು ಜೋಡಿಸಿದುದು ಒಂದು ಅದ್ಭುತ ಸಾಹಸವೆನ್ನಲಾಗಿದೆ. ಈ ಕೊಳವೆಗಳು ಇಂಗ್ಲೆಂಡಿನಲ್ಲೇ ತಯಾರಿಸಲ್ಪಟ್ಟವು. ಇವೂ ಒಂದು ವಿಶೇಷ ತರದ ತಯಾರಿಕೆಗಳವು. ಒಂದಕ್ಕೊಂದು ಜೋಡಿಸಲ್ಪಡುವಲ್ಲಿ ಇವಕ್ಕೆ ಯಾವ ತರದ ನಟ್ಟು ಬೋಲ್ಟುಗಳು ಇಲ್ಲ. ಒಂದರೊಳಗೆ ಒಂದು ಎಡೆಬಿಡದೆ ಗಪ್ಪನೆ ಕೂತುಕೊಳ್ಳುವಂತಹುಗಳು ಇವೆಂದು ಹೇಳಲಾಗಿದೆ.

ಚಿಕ್ಕ ಅವಶ್ಯಕತೆಗಳು

ಮೇಲಿನ ವಸ್ತುಗಳಲ್ಲದೆ ಈ ಮುತ್ತಿಗೆಗೆ ಸೈನ್ಯಗಳಿಗೆ ಬೇಕಾದ ಇತರ ಚಿಕ್ಕ ಚಿಕ್ಕ ವಸ್ತುಗಳ ವಿಷಯವಾಗಿಯೂ ಮಿತ್ರರು ಜಾಗರೂಕತೆ ವಹಿಸಿರುವರು. ಉದಾಹರಣೆಗಾಗಿ ೧ ಕೋಟಿ ೬೦ ಲಕ್ಷ ಬೆಂಕಿಪೆಟ್ಟಿಗೆಗಳು ಅಲ್ಲಿಗೆ ಕಳುಹಿಸಲು ಸಿದ್ಧಪಡಿಸಲಾಗಿದ್ದುವು. ಅಲ್ಲದೆ ೩ ಕೋಟಿ ರಾತ್ಲ ಮೊಳೆಗಳೂ ಕಳುಹಿಸಲ್ಪಟ್ಟಿವೆ. ಸೈನಿಕರಿಗೆ ಸುಮಾರು ೪ ಕೋಟಿ ಸಾಬೂನುಗಳೂ ಪೂರೈಸಲಾಗಿವೆ. ಬ್ರಿಟನಿನಿಂದಲೂ ಅದರ ಸಾಮ್ರಾಜ್ಯದಿಂದಲೂ ಯುರೋಪ್ ಮುತ್ತಿಗೆಯ ಸೈನ್ಯಗಳಿಗೆ ಬೇಕಾಗುವ ಆಹಾರ ವಸ್ತುಗಳಲ್ಲಿ ಶೇಕಡಾ ೩೦ರಷ್ಟು ಇಲ್ಲಿಂದ ಕಳುಹಿಸಿಕೊಡಲಾಗಿದೆ.

ಒಂದು ಯುದ್ಧದಲ್ಲಿ ಬರೀ ಶಸ್ತ್ರಾಸ್ತ್ರಗಳು ಮಾತ್ರವಲ್ಲ ದಿನನಿತ್ಯ ಉಪಯೋಗದ ಸಾಮಾನುಗಳನೇಕ ಬೇಕಾಗುತ್ತವೆ. ಔಷಧಿಗಳು, ಬಣ್ಣ, ಎಣ್ಣೆಗಳು, ಸ್ಟ್ಯಾಕಲುಗಳು ಇತ್ಯಾದಿ. ೧೪೦ ಸಾವಿರ ಸ್ಟ್ಯಾಕಲುಗಳು ಮುತ್ತಿಗೆ ಸೈನ್ಯಗಳಿಗೆ ಕಳುಹಿಸಲಾಗಿದೆ. ಮಾತ್ರವಲ್ಲ, ೧೦ ಲಕ್ಷ ಗೆಲನಿನ ಪೈಂಟು ಡಬ್ಬಿಗಳೂ ೫೦ ಸಾವಿರ ಟಾಯರುಗಳೂ, ೩೪ ಸಾವಿರ ಟ್ಯೂಬುಗಳೂ ಒಂದೇ ಸಲ ಕಳುಹಿಸಲಾಗಿದೆ.

ಸಾಮ್ರಾಜ್ಯದಿಂದ

ಸಿಲೋನಿನಿಂದ ೪೨೪ ಸಾವಿರ ಖಂಡಿಯಷ್ಟು ರಬ್ಬರೂ, ೨೨೦ ಲಕ್ಷ ಪೌಂಡು ಚಾಸೊಪ್ಪೂ ತರಿಸಿಕೊಳ್ಳಲಾಗಿದೆ. ಭಾರತ, ಆಫ್ರಿಕಾ, ನ್ಯೂಜಿಲೆಂಡ್ ದೇಶಗಳಿಂದ, ೧೨೩ ಲಕ್ಷ ಪೌಂಡು ಕೊಕ್ಕೊ, ೨೫ ಸಾವಿರ ಖಂಡಿ ತೆಂಗಿನೆಣ್ಣೆ, ೧೨೦ ಸಾವಿರ ಕೊಬ್ಬರಿ, ೭ ಲಕ್ಷ ಚರ್ಮ ಮುಂತಾದುವುಗಳನ್ನು ಯುರೋಪ ಮುತ್ತಿಗೆಯ ತಯಾರಿಗೆ ಉಪಯೋಗಿಸಲಾಗಿದೆ. ವಿಮಾನಗಳಿಗೆ ಉಪಯೋಗಿಸುವ ಎಣ್ಣೆ ಗೇಸ್‌ಗಳನ್ನು ತಯಾರಿಸಲು ಸಹಾಯವಾಗುವ ಬೆಂಜೋಲ್ ಎಂಬ ಪದಾರ್ಥವನ್ನು ಆಸ್ಟ್ರೇಲಿಯದಿಂದ ೨೪೦ ಲಕ್ಷ ಗೆಲನುಗಳಷ್ಟು ತರಿಸಲಾಗಿದೆ.

ಆಹಾರ ಉಡುಪು

ಸಾಮ್ರಾಜ್ಯದ ಎಲ್ಲಾ ಭಾಗಗಳಿಂದ ಹೆಚ್ಚಾಗಿ ತಯಾರಿಸಲ್ಪಟ್ಟ ಆಹಾರ ಎಲ್ಲವೂ ಯುರೋಪಿನ ಸೈನ್ಯಕ್ಕೆ ಕಳುಹಿಸಿದೆ. ಒಟ್ಟು ಈ ಕಡೆಗಳಿಂದ ೧೪೫೦ ಲಕ್ಷ ಪೌಂಡುಗಳಷ್ಟು ಆಹಾರವು ಅಲ್ಲಿಗೆ ತಲುಪಿದೆ. ೪೦ ಲಕ್ಷ ಪೌಂಡು ಮಾಂಸವೇ ಅಲ್ಲಿಗೆ ಹೋಗಿರುತ್ತದೆ.

ಇದಲ್ಲದೆ ಮಿಲಿಯಾಂತರ ಬೂಟ್ಸುಗಳೂ, ಕಾಲುಚೀಲಗಳೂ, ಚಾಪೆಗಳೂ ಕಂಬಳಿಗಳೂ, ಹಾಸಿಗೆಗಳೂ, ಕಳುಹಿಸಲ್ಪಟ್ಟಿರುತ್ತದೆ. ಲಂಕ್ಷಾಂತರ ಗಜ ಬಟ್ಟೆಯೂ ಅಲ್ಲಿ ಬೇಕಾಗಿತ್ತು.

ಇಷ್ಟೊಂದು ಅಪಾರ ಸಾಮಗ್ರಿಗಳನ್ನು ತರಿಸುವುದು, ಪೂರೈಸುವುದು ಮತ್ತು ಯುದ್ಧವನ್ನು ಮುಂದುವರಿಸುವುದು ನಿಜವಾಗಿ ಮಹಾತ್ಸಾಧನೆಯ ಕಾರ್ಯವೆನ್ನಬೇಕು. ಇತ್ತೀಚೆಗೆ ಬಂದ ಸುದ್ದಿಪ್ರಕಾರ ಇಷ್ಟೊಂದು ಪ್ರಮಾಣದಲ್ಲೂ ಯುದ್ಧ ಸಾಮಗ್ರಿಗಳನ್ನು ಪೂರೈಸಲಾಗಿದೆಯಾದರೂ ಗುಂಡುಮದ್ದುಗಳ ಮಟ್ಟಿಗೆ ಶೇಕಡ ೪೬ರಷ್ಟು ಕಮ್ಮಿ ಬಿದ್ದಿದೆ ಎಂದು ವರದಿ ಇತ್ತು. ಪೂರೈಕೆಯ ಕೆಲಸವನ್ನು ಸರಿಪಡಿಸದೆ ಮುಂದೆ ಹೋಗಿ ಜರ್ಮನ್ ನಾಡನ್ನು ಹೊಕ್ಕಿದ್ದು ಕೊಂಚ ಅಪಾಯಕರವಾದರೂ ಕಲ್ಲು ಹೊತ್ತವರಿಗೆ ಹುಲ್ಲು ಭಾರವಾಗದೆಂಬಂತೆ ಅದರ ಕಡೆಗೂ ಜನರಲ್ ಐಸನ್ ಹಾವರು ಗಮನಿಸುವರಾಗಿ ಹಾಕೈಸಬಹುದು.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ
ಶಕ್ತಿವರ್ಧಕ ಆಹಾರಪಾನೀಯ
ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ
ಶಿಫಾರಸು ಮಾಡಲ್ಪಟ್ಟಿದೆ.
ದೊರಕುವ ಸ್ಥಳ:-ಬಾಲಸಾಹಿತ್ಯ
ಮಂಡಳ ಲಿಮಿಟೆಡ್, ಮಂಗಳೂರು.

ಭವಿಷ್ಯ ಸುಳ್ಳಲ್ಲ

ದೊರೆಸಾಮಿಗೆ ಜ್ಯೋತಿಷ್ಯರ ಭವಿಷ್ಯ ವಾಣಿಯುಲ್ಲಿರುವಷ್ಟು ನಂಬಿಕೆ ದೇವರಲ್ಲಿ ಕೂಡಾ ಇಲ್ಲವೆನ್ನಬಹುದು. ಅವನಿಗೆ ಜಾತಕದ 'ಹುಚ್ಚು' ಹ್ಯಾಸ್ಕೂಲಿಗೆ ಹೋಗುವಾಗಂದಿನಿಂದಲೂ ಇತ್ತು. ಅವನು ದೊಡ್ಡದಾದ ಹಾಗೆ ಆ ಭ್ರಮೆಯೂ ಅವನಲ್ಲಿ ಬೆಳೆಯಿತು.

ಮೆಟ್ರಿಕ್ ಪರೀಕ್ಷೆಗೆ ಕೂತುಕೊಳ್ಳುವ ಮೊದಲು ದೇವಯ್ಯ ದೀಕ್ಷಿತರು ಅವನಿಗೆ "ಈ ಸಲದ ನಿಮ್ಮ ಪರೀಕ್ಷೆ ತುಸು ಕಠಿಣದ್ದಿರುತ್ತದೆ. ಚೆನ್ನಾಗಿ ಓದದಿದ್ದರೆ ಫೈಲ್ ಆಗುವುದು ಖಂಡಿತ" ಎಂದದ್ದನ್ನೂ ನಂಬಿ ದೊರೆಸಾಮಿ ರಾತ್ರಿ ಹಗಲು ನಿದ್ರೆಯಿಲ್ಲದೆ ಓದಿ ತುಂಬಾ ಎಣ್ಣೆ ಖರ್ಚು ಮಾಡಿದ್ದಾನೆ. ಆದರೆ ಆ ವರ್ಷದ ಪರೀಕ್ಷೆ ಪ್ರಶ್ನೆಗಳು ದೀಕ್ಷಿತರು ಹೇಳಿದಷ್ಟು ಕಠಿಣವಿರಲಿಲ್ಲ. "ನಿಮಗಲ್ಲದಿದ್ದರೂ ಇತರರಿಗಾದರೂ ಕಠಿಣ ವಿದ್ದಿತ್ತಲ್ಲವೇ" ಎಂದು ದೀಕ್ಷಿತರು ಹೇಳಿದಾಗ ದೊರೆಸಾಮಿಗೆ ಇನ್ನೂ ನಂಬಿಕೆ ಹೆಚ್ಚಾಯಿತು.

ಆ ಊರಿನ ಜ್ಯೋತಿಷ್ಯರಲ್ಲಿ ದೀಕ್ಷಿತರು ಅಗ್ರಗಣ್ಯರು. ಅವರು ಜ್ಯೋತಿಷ್ಯರು ಮಾತ್ರವಲ್ಲ ಮಂತ್ರಗಾರರೂ, ಬಲ್ಮೆಗಾರರೂ, ವೈದ್ಯರೂ, ಪುರೋಹಿತರೂ ಆಗಿರುತ್ತಾರೆ. ಪೂರಿನ ಮೂಢ ನಂಬಿಕೆಯ ಜನರೆಲ್ಲ ದೀಕ್ಷಿತರ ಗಿರಾಕಿಗಳು.

ಆ ಪೂರಿನ ಜನರಲ್ಲಿ ನಾನಾ ವಿಧದವರಿದ್ದಾರೆ. ಶೀತದಿಂದ ವಾತವಾದರೆ ಭೂತ ಬಾಧೆ ಎಂದು ನಂಬುವವರು, ಮಾತ್ರವಲ್ಲ ಸಾಲವಾಗಿ ಸೋತುಹೋದರೆ ಬಾಲ ಬ್ರಹ್ಮಚಾರಿಯ ಉಪದ್ರವೆಂದು ಶಂಕಿಸುವವರೂ ಆ ಪೂರಲ್ಲಿ ಧಾರಾಳ ಸಂಖ್ಯೆಯುಲ್ಲಿದ್ದಾರೆ.

ದೀಕ್ಷಿತರು ಇಂಥವರ ದೈವ ಕಾಟಗಳನ್ನು ಮಂತ್ರಮೂಲಕ ಉಪಶಮಿಸುವರಲ್ಲದೆ, ಲೇಹ, ಲೇಪಗಳಿಂದಲೂ ಅದನ್ನು ತಡೆಗಟ್ಟುವರು. ಅವರಿಗೆ ಗ್ರಹಚಾರ ಫಲನೋಡಿದಕ್ಕೆ, ಮಂತ್ರೋಚ್ಚಾಟನೆ ಮಾಡಿದಕ್ಕೆ ಮತ್ತು ವೈದ್ಯಕೀಯ ಶುಶ್ರೂಶೆ ನಡೆಸಿದುದಕ್ಕೆ ಪ್ರತ್ಯಪ್ರತ್ಯೇಕ 'ಫೀಸು' ತೆರಬೇಕು.

ಜನರು ಕಳವಿನ ಪತ್ತೆಗಾಗಿ ಪೋಲಿಸ್ ಸ್ಟೇಶನಿಗೆ ಹೋಗುವ ಬದಲು ದೀಕ್ಷಿತರ ದೊಡ್ಡಿಗೆ ಬರುವರು. ತಮ್ಮಲ್ಲಿ ನಡೆದ ಕಳವು ಮನುಷ್ಯ ಮಾತ್ರರರದ್ದಿರದೆ ಹಾಳು ದೈವಗಳ ಕಾರ್ಯವಿರುತ್ತದೆಂದೂ ಊಹಿಸಿ ಬರುವವರೂ ಅನೇಕರು. ಸುರನರ ಪ್ರೇರಣೆಯಿಂದೆರಡರಿಂದಲೂ ನಡೆದ ಘಟನೆಗಳಿಗೆ ದೀಕ್ಷಿತರಲ್ಲಿ ತಕ್ಕ 'ಔಷಧಿ' ಇದೆ.

ಇಂತಹ ಶಕುನ ಫಲ ಸಂಬಂಧವಾದ ಕೆಲಸಗಳಿಗೆ ದೀಕ್ಷಿತರ ಅತೀ ಕಡಿಮೆ ದರ ಒಂದು ಬೆಳ್ಳಿ ಪಾವಲಿ. ಬೆಳ್ಳಿ ನೋಡಿದ ಮೇಲೆ ಅವರು ಕವಡೆ ಚೀಲ ಬಿಚ್ಚುವರು. ಮಣೆಯ ಮೇಲೆ ಬಿಳಿಗೆರೆಗಳ ಕೋಣೆಗಳನ್ನು ಹಾಕಿ 'ರೆಡಿ' ಮಾಡಿದ್ದೇ ಇದೆ. ಮಣಮಣನೆ ಮಂತ್ರ ಹೇಳುವಂತೆ ಜಪಿಸಿ ಹವಳಗಳನ್ನು ವಿಂಗಡಿಸಿ ವಿಂಗಡಿಸಿ ಇಟ್ಟು ಆ ಮೇಲೆ ಪ್ರಶ್ನೆ ಫಲ ಶುರುಮಾಡುವರು.

ಅವರು ಗಿರಾಕಿಗಳಿಗೆ ಹಾಕುವ ಪ್ರಶ್ನೆಯು ಬಹಳ ಜಾಣತನದ್ದಿರುತ್ತದೆ. ಉದಾಹರಣೆಗಾಗಿ ಅವರಲ್ಲಿಗೆ ಒಂದು ಭಯಂಕರ ರೋಗಕ್ಕೆ ತುತ್ತಾದವರ ಕಡೆಯವರು ಬಂದವರೆಂದು ಭಾವಿಸೋಣ. ಜ್ಯೋತಿಷ್ಯರು ಗಿರಾಕಿಗಳು ಬಂದ ಉದ್ದೇಶವನ್ನೂ ತಿಳಿಸಿದರೆ ಮಾತ್ರ ತಾನೇ ಅವರಲ್ಲಿ ನಂಬಿಕೆ ಹೆಚ್ಚುವುದು. ದೀಕ್ಷಿತರು ಹೇಳುವ ರೀತಿಯು ಸುಮಾರು ಊತಹ ಹತ್ತು ನಮೂನೆಯ ಗಿರಾಕಿಗಳಿಗೆ ತಗಲುತ್ತದೆ.

"ನಿಮ್ಮಲ್ಲಿ ಯಾವದಾದರೂ ಒಂದು ಅಮೂಲ್ಯವಸ್ತು ಅಪಹಾರವಾಗಿದೆಯೊ?" ರೋಗಿಯ ಕಡೆಯಿಂದ ಬಂದವರಿಗೆ ದೀಕ್ಷಿತರಲ್ಲಿ ಒಂದು ಕ್ಷಣದ ಅಪನಂಬಿಕೆ ಹುಟ್ಟಿದಂತಾಗುತ್ತದೆ. ಆದರೆ ಹಾಗೆ ಅಪನಂಬಿಕೆ ಹುಟ್ಟಿಸಿದರೆ ದೀಕ್ಷಿತರು ದಿನತೆಗೆಯ ಬೇಡವೆ? ಗಿರಾಕಿಗಳು "ನಮ್ಮಲ್ಲಿ ಒಬ್ಬನಿಗೆ ನಿನ್ನೆ . . . ."

ದೀಕ್ಷಿತರು:–"ತಿಳಿಯಿತು, ತಿಳಿಯಿತು- ಒಬ್ಬನಿಗೆ ನಿನ್ನೆ ಕಾಯಿಲೆ ಅಲ್ಲವೆ?"

ಗಿರಾಕಿ:–"ಹೌದು ಸ್ವಾಮಿ"

ದೀಕ್ಷಿತ:–"ಅದೇ ನಾನು ಹೇಳಿದ್ದು. ಆ ನಿಮ್ಮವನ ಆರೋಗ್ಯ ಅಪಹರಿಸಲ್ಪಟ್ಟಿದೆ. ನಾನು ಅದೇ ಕೇಳಿದ್ದು. ಆರೋಗ್ಯದಷ್ಟು ಅಮೂಲ್ಯ ವಸ್ತು ಬೇರೆ ಇದೆಯೆ?"

ಅದಕ್ಕೆ ಗಿರಾಕಿ:—"ಅದು ಎಂತಹ ರೋಗ ಸ್ವಾಮಿ, ಏನಾದರು ತಮಗೆ ಗೋಚರಿಸುತ್ತದೆಯೋ?" ಎಂದು ಕೇಳಿದರೆ ದೀಕ್ಷಿತರು–"ಅದು ಮತ್ತೇನಿಲ್ಲ. ನಿಮ್ಮ ಮನೆಯ ಹತ್ತಿರ ಒಂದು ಭೂತದ ಗುಡಿ ಇದೆಯುಲ್ಲವೆ?" ಎಂದು ಕೇಳುವಾಗ ಗಿರಾಕಿ–-"ಇಲ್ಲಸ್ವಾಮಿ" ಎನ್ನುವನು.

ದೀಕ್ಷಿತರು:–"ಇಲ್ಲ, ತೆಂಕಲಲ್ಲಿ"

ಗಿರಾಕಿ–"ಇಲ್ಲ"

ದೀ–"ಪೂರ್ವಕ್ಕೆ?"

ಗಿ–"ಇಲ್ಲ"

ದೀ–"ಪಶ್ಚಿಮ? ಈಶಾನ್ಯ? ಬಡಗು? ಆಗ್ನೇಯ? ವಾ. . . . "

ಹೀಗೆ ಮೇಲಿಂದ ಮೇಲೆ ಕೇಳಿದರೂ ನಡು ಪೇಟೆಯಲ್ಲಿ ವಾಸಿಸುವ ಆ ಗಿರಾಕಿಯ ಮನೆಯ ಹತ್ತಿರ ಒಂದೆರಡು ಮೈಲು ಅಂತರದಲ್ಲಾದರೂ ಒಂದು ಭೂತಗುಡಿಯಿಲ್ಲದಿರುವುದನ್ನು ಕೇಳಿ ನಿರಾಶೆ ಗೊಂಡರೂ ಪ್ರತಿಭಾವಂತ ದೀಕ್ಷಿತರು ಸೋಲುವವರಲ್ಲ. "ಭೂತದ ಗುಡಿ ಎಲ್ಲೂ ಇರಲಿ ಆ ಭೂತದ ದೃಷ್ಟಿ ಮಾತ್ರ ನಿಮ್ಮ ಮನೆ ಮೇಲೆ ಇದೆ." ಎನ್ನುತ್ತಾ ಗಿರಾಕಿಯನ್ನು ತಬ್ಬಿಬ್ಬಾಗಿ ಮಾಡಿಬಿಡುವರು.

ಅಂದು ಅವರ ಮನೆಯಲ್ಲಿ ಅವರ ಹೆಂಡತಿ ತರಲಿಕ್ಕೆ ಹೇಳಿದ ವಸ್ತುಗಳನ್ನೇ ದೀಕ್ಷಿತರು ಗಿರಾಕಿಗಳೊಡನೆ ಮಂತ್ರಾರ್ಪಣೆಗಾಗಿ ಕೇಳುವರು.

ಮನೆಯಲ್ಲಿ ತೆಂಗಿನಕಾಯಿ ಇಲ್ಲವೆಂದರೆ ದೀಕ್ಷಿತರು ರೋಗಿಯ ಕಡೆಯಿಂದ ಬಂದ ಗಿರಾಕಿಗೆ– "ಮಾಮ್ಮಾಯಮ್ಮನಿಗೊಂದು (ದೀಕ್ಷಿತರ ಪತ್ನಿಯ ಹೆಸರು ಅದೇ) ನರಸಿಂಹನಿಗೊಂದು (ಹಿರೇ ಮಗನ ಹೆಸರು) ತೆಂಗಿನ ಕಾಯಿ ಜಪಿಸಿ ಕೊಳ್ಳಲ್ಲಿಕ್ಕಿದೆ. ಅದನ್ನು ಈಗಲೇ ಕೊಂಡೊಯ್ಯು ಬನ್ನಿ" ಎನ್ನುವರು. ತೆಂಗಿನ ಕಾಯಿ ತಂದರೆ ಕಾಣಿಕೆ ಬೇಕು, ದಕ್ಷಿಣೆ ಬೇಕು, ಪ್ರಸಾದದ ಖರ್ಚು ಬೇಕು.

ಅವರ ಹೆಂಡತಿ ಎಣ್ಣೆ ಇಲ್ಲ ಅಂದರೆ ಗಿರಾಕಿಗಳ ದೈವ ತೃಪ್ತಿಗೆ ಅಂದು ಎಣ್ಣೆಯೇ ಪರಿಹಾರ ದಾನ. ಅಕ್ಕಿ ಇಲ್ಲ ಎಂದರೆ ಅಕ್ಕಿ, ಸೀರೆ ಬೇಕೆಂದರೆ 'ಮಾರಮ್ಮನಿಗೆ ಒಂದು ಸೀರೆ ನನ್ನಿಂದ ಕೊಡಿಸಿದರೆ ಉಪಶಮನವಾಗುತ್ತದೆ' ಎನ್ನುವರು ದೀಕ್ಷಿತರು.

ಕಳ್ಳತನದ ಕೇಸುಗಳ ಪ್ರಶ್ನೆ ಪತ್ತೆಗೆ ಬಂದರೆ ದೀಕ್ಷಿತರು ಗುಪ್ತ ಪತ್ತೇದಾರನ ತೆರದಲ್ಲಿ ತಮ್ಮ ಕೆಲಸವನ್ನು ನಿರ್ವಹಿಸುವರು.

ಮೊದಲಿನ ಪ್ರಶ್ನೆ ಮುಂಚಿನದೇ. "ನಿಮ್ಮಲ್ಲಿ ಒಂದು ಅಪಹಾರವಾಗಿದೆ"

"ಹೌದು"

"ಲೋಹದ ವಸ್ತುಗಳು ಅಲ್ಲವೆ?"

"ಹೌದು, ಚಿನ್ನದ ಹಾರ"

"ಅದೇ, ಅದೇ, ಅಮೂಲ್ಯ ಲೋಹದ್ದು. ಸರಿ. ಕದ್ದದು ಒಂದು ವಿಚಿತ್ರ ವ್ಯಕ್ತಿ– ಒಂದು ಸ್ತ್ರೀ, ಪ್ರಾಯದ್ದು ಅಲ್ಲವೆ?"

"ಅಲ್ಲ, ಸ್ವಾಮಿ, ಒಬ್ಬ ಮುದುಕ–ಅವ ಓಡಿಹೋಗಿದ್ದಾನೆ- ಎರಡು ದಿವಸ ಆಯಿತು."

"ಹೌದು, ಸ್ತ್ರೀ ಅಂದರೆ ಸ್ತ್ರೀಯರಂತೆ ಚಂಚಲ ಸ್ವಭಾವದ ವ್ಯಕ್ತಿ ಎಂದರ್ಥ. ತರುಣ ಎಂದರೆ ಪ್ರಾಯದಲ್ಲಿ ಮುದುಕನಾದರೂ ಬುದ್ಧಿಯಿಲ್ಲ ಹುಡುಗ ಎಂದರ್ಥ. ನಿಮ್ಮ ಸಂಬಂಧಿಕನಲ್ಲವೆ?"

"ಅಲ್ಲ ಅವನು ಬೇರೆಯೇ ಜಾತಿ, ಹಿತ್ತಿಲು ಕೆಲಸಕ್ಕೆ ಬಂದಿದ್ದ"

"ಸರಿ, ಸರಿ, ಆ ಕೆಲಸದ ಸಂಬಂಧ– ಅವನಿಗೆ ನಾಲ್ಕು ಅಕ್ಷರದ ಹೆಸರಿದೆಯಲ್ಲವೆ?"

"ಇಲ್ಲ, ಮೂರು- ಶಿವಣ್ಣ ಎಂದು ಅವನ ಹೆಸರು, ಸ್ವಾಮಿ"

"ಹಾಗಾದರೆ ಸರಿ–ಶಿವನಿಗೂ ಉಮಾಪತಿ ಎಂದು ಹೇಳುತ್ತಾರಲ್ಲವೆ? ಅಂತೂ ನಾಲ್ಕು ಅಕ್ಷರದ ದೇವರ ನಾಮದ ಹೆಸರಿನ ವ್ಯಕ್ತಿ–ಅವನು ಉತ್ತರಕ್ಕೆ ಓಡಿದ್ದಾನೆ ಖಂಡಿತ"

"ಇಲ್ಲವಂತೆ ಮದ್ರಾಸಿಗೆ ಟಿಕೇಟು ಪಡಕೊಂಡಿದ್ದಾನೆಂದು ನೋಡಿದವರು ಹೇಳಿದ್ದಾರೆ"

"ಮದ್ರಾಸಿಗೆ? ಹೌದು ಹೌದು ಸರಿ ಮದ್ರಾಸು ಸಿಂಹಳ ದ್ವೀಪದ ಉತ್ತರಕ್ಕೆ ಇದೆ. ನಗವನ್ನು ಅವನು ಮಾರಿದ್ದಾನೆ. ಮಂತ್ರ ಬಲದಲ್ಲಿ ಎರಡು ತಿಂಗಳಲ್ಲಿ ಅವನನ್ನು ಹಿಂದಕ್ಕೆ ತರಿಸಬಹುದು."

"ಆದರೆ ಸೊತ್ತು ಸಿಗಲಿಕ್ಕಿಲ್ಲವೆ?"

"ದೇವರು ಬೇರೆ ರೂಪದಲ್ಲಿ ನಿಮಗೆ ಕೊಡಬೇಕು. ಅದೇ ಪುನಃ ಸಿಗುವುದು ಕಷ್ಟ."

ಇಷ್ಟು ಸಂಭಾಷಣೆಯಲ್ಲಿಯೂ ದೀಕ್ಷಿತರು ಒಂದು ಕಡೆಯಲ್ಲೂ ಸಿಕ್ಕಿ ಬೀಳುವವರಲ್ಲ.

ಇಂಥವರಲ್ಲಿ ದೊರೆಸಾಮಿ (ಛೀ ಅವನನ್ನ ಮರೆತೇ ಬಿಟ್ಟಿದ್ದೆವು!) ಸದಾ ಬರುವುದಿತ್ತು. ಒಂದು ದಿನ ದೀಕ್ಷಿತರಿಗೂ ಅವರ ಹೆಂಡತಿಗೂ ಜೋರು ಜಗಳವಾಗಿ ದೀಕ್ಷಿತರು ಸಿಟ್ಟಿನಿಂದ ಮನೆ ಬಾಗಿಲಲ್ಲಿ ಕೂತಿದ್ದಾರೆ. ಆಗಲೇ ದೊರೆ ಸಾಮಿ ಹೊಕ್ಕಿದ. ಅವನು ದೀಕ್ಷಿತರಿಂದ ದಿನದಿನದ ರಾಶಿ ಭವಿಷ್ಯ ಕೇಳದ ವಿನಹ ಆಫೀಸಿಗೆ ಹೋಗಲಿಕ್ಕಿಲ್ಲ. ಕೋಪದಲ್ಲಿದ್ದ ದೀಕ್ಷಿತರು ದಿನನಿತ್ಯದ ದೊರೆಯನ್ನು ನೋಡಿ "ನೀವು ಇನ್ನೊಂದು ವಾರದ ತನಕ ಯಾರ ಹತ್ತಿರವೂ ಮಾತನಾಡಬಾರದು. ಅದರಿಂದ ಕೆಡುಕು ಉಂಟಾಗುವ ಸಂಭವವಿದೆ. ಈ ವಾರದಲ್ಲಿ ಕೊತುಕೊಂಡ ಮಣೆ ಎದ್ದು ಬಡೇದೀತು ನಿಮಗೆ. ಅಷ್ಟು ನಿಮ್ಮ ಗ್ರಹಗಳು ನೀಚದಲ್ಲಿವೆ" ಎಂದರು.

ಸಾಮಿ ಮೌನತಾಳಿದ. ಒಂದು ವಾರ ಮೌನ. ಮನೆಗೆ ಬಂದರೂ ಕೈಸನ್ನೆಯಲ್ಲೇ ದೊರೆ ಸಾಮಿ ಊಟ ಉಪಚಾರ ಮುಗಿಸುವುದು. ಮಾರ್ಗದಲ್ಲಿ ಯಾರಾದರೂ ಮಾತನಾಡಿದರೆ ಅವನಿಗೆ ದೀಕ್ಷಿತರ 'ಭವಿಷ್ಯ' ನೆನಪಿಗೆ ಬಂದು ಸುಮ್ಮನೆ ಪಿಳಪಿಳನೆ ನೋಡಿ ತಲೆ ಕೆಳಗೆ ಮಾಡಿ ಹೋಗುತಿದ್ದ.

ಜನರು ಮಾತನಾಡಲಾರಂಭಿಸಿದರು– "ಮೊನ್ನೆ ವರೇಗೆ ಸರಿಯಾಗಿದ್ದ. ನಿನ್ನೆಯಿಂದ ಬದಲಾಯಿಸಿದ್ದಾನೆ. ಮನುಷ್ಯನ ಮಿದುಳು ಎಷ್ಟು ಬೇಗ ಪರಿವರ್ತನೆ ಹೊಂದುತ್ತದೆ" ಎಂದು ಆಶ್ಚರ್ಯ ಪಡಹತ್ತಿದರು.

ಅಂದು ಬೇಂಕಿನಲ್ಲಿ ದೊರೆ ಸಾಮಿಯ ಮೇಲೆ ಒಬ್ಬ ಗಿರಾಕಿ ರೇಗಿಬಿದ್ದ. ಮೇನೇಜರರಲ್ಲಿ ದೂರು ಹೋಯಿತು. "ಇಂಥ ಅಸಡ್ಡೆಯ, ಆಲಸ್ಯದ ಮೂರ್ತಿಗಳನ್ನು ಯಾಕೆ ಇಟ್ಟು ಕೊಂಡಿದ್ದರಿ?" ಮೇನೇಜರರು ಸಾಮಿಗೆ ಕರೆಸಿದರು. "ಏನ್ರೀ, ಗಿರಾಕಿಗಳದ್ದು ಯಾವಾಗಲೂ ತಪ್ಪಿಲ್ಲವೆಂಬ ನಮ್ಮ ಬೇಂಕಿನ ತತ್ವವನ್ನು ಮರೆತಿರೋ?"

ಸಾಮಿ ಮಾತಾಡ ತೊಡಗಿದ–"ಇಲ್ಲ ಸಾರ್, ಇವರು ಟ್ಯಾಪಿಸ್ಟನಾದ ನನ್ನ ಬಳಿ ಚೆಕ್ ಕೇಶ್ ಮಾಡಿಕೊಡು ಎಂದರು. ನಾನು ಇಲ್ಲಿ ಆಗುವುದಿಲ್ಲ ಎಂದೆ."

(೧೧ನೇ ಪುಟಕ್ಕೆ ಮುಂದುವರಿದಿದೆ)

1944
ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣಪದಕ ಪಡೆದ
ಮಂಗಳೂರು ನಾಮಾಂಕಿತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಿಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ–ಮಂಗಳೂರು
ನಮ್ಮ ಇತರ ವಿಶೇಷ ವಯಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಕಳೆದ ಜೂನ್ ೬ರಂದು ಮಿತ್ರದಳಗಳು ಯುರೋಪಿನ ಮುತ್ತಿಗೆ ಪ್ರಾರಂಭಿಸಿದವು. ಹಿಟ್ಲರನ ಆಕ್ರಮಣ ವೇಗಗಿಂತಲೂ ತ್ವರಿಯಾಗಿ ಮಿತ್ರದಳಗಳು ಯುರೋಪನ್ನು ವಶಪಡಿಸುತ್ತ ಮುಂದರಿದವು. ಈ ಅಮೋಘ ಸಾಹಸಕ್ಕೆ ಬ್ರಿಟನ್ ಅಮೇರಿಕಗಳು ತಮ್ಮ ಸರ್ವಸ್ವವನ್ನೂ ಅರ್ಪಿಸಿದಂತೆ ಶ್ರಮವಹಿಸಿದ್ದಾರೆ.

ಯುದ್ಧ ಪ್ರಾರಂಭದಲ್ಲಿ ಅಮೇರಿಕದವರು, ಅಂದರೆ ಸಂಯುಕ್ತ (ಯುನೈಟೆಡ್ ಸ್ಟೇಟ್ ಇಲ್ಲವೆ ಯು. ಎಸ್. ಎ.) ರಾಷ್ಟ್ರದವರು ಬ್ರಿಟನ್ನಿಗೆ ಯುದ್ಧ ಸಾಮಾಗ್ರಿಗಳನ್ನು ಕೊಡಬೇಕಾದರೆ ಒಂದು ಷರ್ತಮಾಡಿಕೊಂಡರು. ತಾವು ಕಳುಹಿಸುವ ಸಾಮಾಗ್ರಿಗಳ ಬೆಲೆಯ ಭದ್ರತೆಗಾಗಿ ಬ್ರಿಟಿಷರು ತಮ್ಮ ಸಾಮ್ರಾಜ್ಯದಲ್ಲಿ ಅವರಿಗೆ ಸವಲತ್ತುಗಳನ್ನು ಕೊಡಬೇಕು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸಿಗುವ ಕಚ್ಚಾ ಪದಾರ್ಥಗಳು ಬೇಕಾದಂತೆ ಅವರಿಗೆ ಕೊಡಿಸಬೇಕು. ಯುದ್ಧ ದೃಷ್ಟಿಯಿಂದ ಅನುಕೂಲವಾದ ಯಾವ ಬ್ರಿಟಿಷ್ ವಸಾಹತುಗಳನ್ನು ಅಮೇರಿಕನರಿಗೆ ಬಿಟ್ಟು ಕೊಡಬೇಕು. ಇವೇ ಕೆಲವು ಆ ಷರ್ತಗಳು.

ಮುಂದೆ ಕಳೆದ ವರ್ಷ ಕ್ವಿಬೆಕ್‌ನಲ್ಲಿ ಚರ್ಚಿಲ್–ರೂಸ್‌ವೆಲ್ಟರು ಒಟ್ಟು ಸೇರಿದಾಗ ಇನ್ನೊಂದು ಷರ್ತವನ್ನೂ ಮೊದಲಿನ ಕರಾರಿಗೆ ಸೇರಿಸಲಾಯಿತು. ಇದು ಯುರೋಪನ್ನು ಮುತ್ತುವ ನಿರ್ಧಾರ ಮಾಡಿದ ಮೇಲೆ ಮಾಡಿಕೊಂಡ ಷರ್ತವಾಗಿರುತ್ತದೆ.

ಮರು ಕಡ ಒತ್ತಿ ಕರಾರು

ಯುರೋಪಿನ ಮುತ್ತಿಗೆಗೆ ಭದ್ರವಾದ ಹಿನ್ನಲೆ ಮತ್ತು ಪೂರೈಕೆ ಕೇಂದ್ರ ಇಂಗ್ಲೆಂಡು. ೧೯೪೪ರ ಪ್ರಾರಂಭವಾದ ಅಮೇರಿಕನ್ ದಳಗಳು ಗುಪ್ತವಾಗಿ ಇಂಗ್ಲೆಂಡಿಗೆ ಬರಲಾರಂಭಿಸಿದುವು. ಇವುಗಳ ಆಹಾರ ಪೂರೈಕೆಯನ್ನು ಬ್ರಿಟನ್ನೇ ನೋಡಿಕೊಳ್ಳತಕ್ಕದ್ದು. ಮತ್ತು ಫ್ರಾನ್ಸಿನ ಕರಾವಳಿಯಲ್ಲಿ ಇಳಿಯಲು ಅನುಕೂಲವಾಗುವಂತಹ ಕೃತಕ ಬಂದರುಗಳನ್ನು ಕಟ್ಟಬೇಕು. ಅವುಗಳ ಕಟ್ಟುವಿಕೆಗೆ ಬೇಕಾದ ಮೂಲ ಸಾಮಗ್ರಿಗಳನ್ನು—ಅಂದರೆ ಕಬ್ಬಿಣ, ಉಕ್ಕು ಮತ್ತಿತರ ಶುದ್ಧಮಾಡಿದ ಲೋಹಗಳನ್ನು ಅಮೇರಿಕವು ಪೂರೈಸಿ ಕೊಡುವುದು.

ಹೀಗೆ ಪೂರೈಸಿ ಕೊಟ್ಟ ಲೋಹದಿಂದ ಬ್ರಿಟನ್ನು ತನ್ನ ಕೆಲಸಗಾರರಿಂದ ಬೇಕಾದ ಸಲಕರಣೆಗಳನ್ನು ಒದಗಿಸಿ ಮುತ್ತಿಗೆ ದಳಗಳಿಗೆ ಒದಗಿಸಬೇಕು. ಇದಕ್ಕೆ ಚರ್ಚಿಲ್ಲರು ಒಪ್ಪಿಕೊಂಡುಕ್ವಿಬೆಕದಿಂದ ಹಿಂದಿರುಗಿದಾಕ್ಷಣ ತಮ್ಮ ಹೊಣೆಗಾರಿಕೆಯ ಕೆಲಸದಲ್ಲಿ ಪ್ರವೃತ್ತರಾದರು.

ಐವತ್ತು ಸಾವಿರ ಚತುರ ಕೆಲಸಗಾರರು ಯಾಂತ್ರಿಕ ಸಲಕರಣೆಗಳನ್ನು ತಯಾರಿಸಲು ಸಿದ್ಧಮಾಡಲ್ಪಟ್ಟರು. ಇಂಡಿಯಾ, ಆಸ್ಟ್ರೇಲಿಯಾ, ಸಿಲೋನ್, ನ್ಯೂಜಿಲೆಂಡ್ ದೇಶಗಳಿಂದ ಆಹಾರ ವಸ್ತುಗಳನ್ನೂ, ರಬ್ಬರ್, ಎಣ್ಣೆ, ಹಗ್ಗ ಮುಂತಾದವುಗಳನ್ನೂ ತರಿಸಲು ಏರ್ಪಾಡುಗಳಾದವು.

ಜರ್ಮನರಿಂದ ಕಲಿತು

ರೊಮೆಲನ ದಳಗಳು ಆಫ್ರಿಕದಲ್ಲಿ ಮೋಟಾರು, ಟ್ಯಾಂಕು, ವಿಮಾನಗಳಿಗೆ ಉಪಯೋಗಿಸುವ ಪೆಟ್ರೊಲ್ ಎಣ್ಣೆಯನ್ನು ತುಂಬಿಡಲು ಒಂದು ತರದ ಲೋಹ ಡಬ್ಬಿಗಳನ್ನು ಉಪಯೋಗಿಸುತಿದ್ದರು. ಅವುಗಳಲ್ಲಿ ಕೆಲವು ಬ್ರಿಟಿಷರ ಕೈಗೆ ಸಿಕ್ಕಿದುವು. ಕೂಡಲೇ ಇಂಗ್ಲೆಂಡಿನ ಪರಿಶೋಧನಾಲಯಕ್ಕೆ ಅವುಗಳನ್ನು ಕಳುಹಿಸಿ ಅವುಗಳಂತಹುಗಳನ್ನೇ ತಯಾರಿಸಲು ಪ್ರಾರಂಭಮಾಡಲಾಯಿತು. ಅಂದಿನಿಂದ ಮಿತ್ರರ ಎಣ್ಣೆ ಗೇಸ್ ಡಬ್ಬಿಗಳು ಬಲು ಭದ್ರವಾದವೂ, ಎಷ್ಟೇ ಮೇಲಿನಿಂದ ಬಿದ್ದರೂ ಒಡೆಯದವುಗಳೂ ಆದವು. ಇದರಿಂದ ಆಫ್ರಿಕದ ಮತ್ತು ಯುರೋಪ್ ಯುದ್ಧದ ಪೂರೈಕೆಗೆ ದೊಡ್ಡ ಸಹಾಯವಾಯಿತು.

ಯುರೋಪ್ ಯುದ್ಧ ತಯಾರಿಯ ಅಗಾಧತೆ

ಮಿತ್ರರ ಬ್ರಹ್ಮತ್ಪ್ರಯತ್ನ

ಇಷ್ಟಾದರೂ ಇನ್ನೂ ಕಮ್ಮಿ ಆಯಿತು

ಮುತ್ತಿಗೆ ಪ್ರಾರಂಭವಾಗುವ ಮೊದಲು ಸಾವಿರಾರು ಬ್ರಿಟಿಷ್ ಮತ್ತು ಅಮೇರಿಕನ್ ಹಡಗುಗಳು ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಇತರ ಕಡೆಗಳಿಂದ ಲಕ್ಷಾಂತರ ಯಂತ್ರೋಪಕರಣಗಳನ್ನೂ, ಮಿಲಿಯಾಂತರ ಟನ್ ಭಾರದ ಕಚ್ಚಾ ಪದಾರ್ಥಗಳನ್ನೂ ತಂದರು. ಇಂಗ್ಲೆಂಡಿನ ಕರಾವಳಿಗೆ ಅಲ್ಲಿನ ಒಳಪ್ರದೇಶದಿಂದ ಫ್ರಾನ್ಸಿನತ್ತ ಕಡೆ ಒಯ್ಯಬೇಕಾದ ಲಕ್ಷೋಪ ಲಕ್ಷ ಸಲಕರಣೆಗಳನ್ನು ತಂದು ದಾಸ್ತಾನಿಡಲಾಯಿತು. ರಾತ್ರಿ ಹಗಲು ಸ್ಪೆಶಲ್ ರೈಲುಗಳೂ, ಮಿಲಿಟರಿ ಲಾರಿಗಳೂ, ಇತರ ವಾಹನಗಳೂ ಬಿಡುವಿಲ್ಲದೆ ಕೆಲಸಮಾಡಿದವು.

ಹೀಗೆ ತರಲ್ಪಟ್ಟ ಉಪಕರಣಗಳಲ್ಲಿ ದೋಣಿಗಳೂ, ಟ್ಯಾಂಕುಗಳೂ, ವಿಮಾನಗಳೂ ಅಲ್ಲದೆ ಸಾವಿರಾರು ಕೃತಕ ಸಂಕಗಳೂ ಇದ್ದುವು. ಈ ಕೃತಕ ಸಂಕಗಳು ಫ್ರಾನ್ಸಿನಿಂದ ಮುಂದರಿಸಿ ಹೋಗುವಾಗ ಸಿಗುವ ಚಿಕ್ಕ ದೊಡ್ಡ ನದಿಗಳನ್ನು ಕ್ಷಣದಲ್ಲಿ ದಾಟಲು ಸಾಧ್ಯವಾಗುವಂತಹುಗಳು. ನದಿಯ ಒಂದು ಕಡೆಯಿಂದ ಯಂತ್ರಮೂಲಕ ತಿರುಗಿಸಿದೊಡನೆ ಕೊಳವೆಯಂತೆ ಈ ಸಂಕಗಳ ಭಾಗಗಳು ಹೊರಬಂದು ಉದ್ದವಾಗಿ ನದಿಯ ಮೇಲಕ್ಕೆ ಎಸೆಯಲ್ಪಡುತ್ತವೆ. ಇದರಿಂದ ಮಿತ್ರರ ಪ್ರಗತಿಯ ವೇಗವು ತುಂಬಾ ತ್ವರಿಯಾಯಿತಂತೆ.

ಹೊಸ ಉಪಕರಣಗಳು

ಯುರೋಪ ಮುತ್ತಿಗೆಯಲ್ಲಿ ಅತ್ಯಂತ ಸಹಾಯಕಾರಿಯಾದ ಇನ್ನೊಂದು ಉಪಕರಣವೆಂದರೆ ಬ್ರಿಟನಿನಲ್ಲಿ ತಯಾರಾದ ವಿಮಾನ, ಮೋಟಾರು ಯಂತ್ರಗಳಿಗೆ ಉಪಯೋಗಿಸುವ 'ಪ್ಲಗ್ಗು'ಗಳು. ಈ ವಾಹನಗಳ ಯಂತ್ರಗಳು ಪೆಟ್ರೋಲು ಎಣ್ಣೆಯ ದಹನ ಮೂಲಕ ಚಲಿಸುವಂತಹುಗಳಲ್ಲವೆ? ಈ ದಹನ ಕ್ರಿಯೆಯನ್ನು ಶೀಘ್ರವೂ ಆತಂಕವಿಲ್ಲದೆಯೂ ನಡೆಸಲು 'ಪ್ಲಗ್ಗು'ಗಳಿಲ್ಲದಿದ್ದರೆ ಸಾಧ್ಯವಿಲ್ಲ. ಇವು ನಾಜೂಕು ಯಂತ್ರ ಶಿಲ್ಪ ಚತುರತೆಯಿಂದ ತಯಾರಿಸಲ್ಪಟ್ಟ ಚಿಕ್ಕ ಉಪಕರಣಗಳು. ಸ್ವಲ್ಪ ಹಾಳಾದವೆಂದರೆ ಇಡೀ ವಿಮಾನಗಳೇ ಕೆಳಗೆ ಉರುಳಿ ಅಪಾಯ ಸಂಭವಿಸುತ್ತದೆ.

ಅಮೇರಿಕನ್ ಪ್ಲಗ್ಗುಗಳಿಗಿಂತ ಬ್ರಿಟಿಷ್ ತಯಾರಿಕೆಯವುಗಳು ಐದಾರು ಪಾಲು ಬಾಳಿಕೆ ಬರುವಂತಹುಗಳು. ಎಂತಹ ಅನಾನುಕೂಲ ಹವೆಯ ವಾತಾವರಣದಲ್ಲಾದರೂ ಈ ಪ್ಲಗ್ಗು ಯಂತ್ರಗಳು ನಿರಾಂತಕವಾಗಿ ಕೆಲಸಮಾಡುತ್ತವೆ. ಹೀಗಾದುದರಿಂದ ಮಿತ್ರಪಡೆಗಳಿಗೆ ಅದರಿಂದ ದೊಡ್ಡ ಸಹಾಯವಾಯಿತಂತೆ.

ಎಣ್ಣೆ ಕೊಳವೆ

ಫ್ರಾನ್ಸಿನಲ್ಲಿ ಇಳಿದಾಕ್ಷಣ ಮಿತ್ರ ಸೇನೆಗಳು ತಮ್ಮ ಪ್ರತಿಯೊಂದು ತರದ ವಾಹನಗಳಿಗಾಗಿ ಎಣ್ಣೆ ಸರಬರಾಯಿಯ ವ್ಯವಸ್ಥೆ ಮಾಡಿದ್ದರು. ಕರಾವಳಿಯಲ್ಲಿನ ಚೇರ್‌ಬರ್ಗದಿಂದ ಪೇರಿಸಿನ ತನಕ ಎಣ್ಣೆ ಕೊಳವೆಯನ್ನು ಜೋಡಿಸಿದುದು ಒಂದು ಅದ್ಭುತ ಸಾಹಸವೆನ್ನಲಾಗಿದೆ. ಈ ಕೊಳವೆಗಳು ಇಂಗ್ಲೆಂಡಿನಲ್ಲೇ ತಯಾರಿಸಲ್ಪಟ್ಟವು. ಇವೂ ಒಂದು ವಿಶೇಷ ತರದ ತಯಾರಿಕೆಗಳವು. ಒಂದಕ್ಕೊಂದು ಜೋಡಿಸಲ್ಪಡುವಲ್ಲಿ ಇವಕ್ಕೆ ಯಾವ ತರದ ನಟ್ಟು ಬೋಲ್ಟುಗಳು ಇಲ್ಲ. ಒಂದರೊಳಗೆ ಒಂದು ಎಡೆಬಿಡದೆ ಗಪ್ಪನೆ ಕೂತುಕೊಳ್ಳುವಂತಹುಗಳು ಇವೆಂದು ಹೇಳಲಾಗಿದೆ.

ಚಿಕ್ಕ ಅವಶ್ಯಕತೆಗಳು

ಮೇಲಿನ ವಸ್ತುಗಳಲ್ಲದೆ ಈ ಮುತ್ತಿಗೆಗೆ ಸೈನ್ಯಗಳಿಗೆ ಬೇಕಾದ ಇತರ ಚಿಕ್ಕ ಚಿಕ್ಕ ವಸ್ತುಗಳ ವಿಷಯವಾಗಿಯೂ ಮಿತ್ರರು ಜಾಗರೂಕತೆ ವಹಿಸಿರುವರು. ಉದಾಹರಣೆಗಾಗಿ ೧ ಕೋಟಿ ೬೦ ಲಕ್ಷ ಬೆಂಕಿಪೆಟ್ಟಿಗೆಗಳು ಅಲ್ಲಿಗೆ ಕಳುಹಿಸಲು ಸಿದ್ಧಪಡಿಸಲಾಗಿದ್ದುವು. ಅಲ್ಲದೆ ೩ ಕೋಟಿ ರಾತ್ತಲ್ಲ ಮೊಳೆಗಳೂ ಕಳುಹಿಸಲ್ಪಟ್ಟಿವೆ. ಸೈನಿಕರಿಗೆ ಸುಮಾರು ೪ ಕೋಟಿ ಸಾಬೂನುಗಳೂ ಪೂರೈಸಲಾಗಿವೆ. ಬ್ರಿಟನಿನಿಂದಲೂ ಅದರ ಸಾಮ್ರಾಜ್ಯದಿಂದಲೂ ಯುರೋಪ್ ಮುತ್ತಿಗೆಯ ಸೈನ್ಯಗಳಿಗೆ ಬೇಕಾಗುವ ಆಹಾರ ವಸ್ತುಗಳಲ್ಲಿ ಶೇಕಡಾ ೬೦ರಷ್ಟು ಇಲ್ಲಿಂದ ಕಳುಹಿಸಿಕೊಡಲಾಗಿದೆ.

ಒಂದು ಯುದ್ಧದಲ್ಲಿ ಬರೀ ಶಸ್ತ್ರಾಸ್ತ್ರಗಳು ಮಾತ್ರವಲ್ಲ ದಿನನಿತ್ಯ ಉಪಯೋಗದ ಸಾಮಾನುಗಳನೇಕ ಬೇಕಾಗುತ್ತವೆ. ಔಷಧಿಗಳು, ಬಣ್ಣ, ಎಣ್ಣೆಗಳು, ಸ್ಯಾಕಲುಗಳು ಇತ್ಯಾದಿ. ೧೪೦ ಸಾವಿರ ಸ್ಯಾಕಲುಗಳು ಮುತ್ತಿಗೆ ಸೈನ್ಯಗಳಿಗೆ ಕಳುಹಿಸಲಾಗಿದೆ. ಮಾತ್ರವಲ್ಲ, ೧೦ ಲಕ್ಷ ಗೆಲನಿನ ಪೈಂಟು ಡಬ್ಬಿಗಳೂ ೫೦ ಸಾವಿರ ಟಾಯರುಗಳೂ, ೩೪ ಸಾವಿರ ಟ್ಯೂಬುಗಳೂ ಒಂದೇ ಸಲ ಕಳುಹಿಸಲಾಗಿದೆ.

ಸಾಮ್ರಾಜ್ಯದಿಂದ

ಸಿಲೋನಿನಿಂದ ೬೨೮ ಸಾವಿರ ಖಂಡಿಯಷ್ಟು ರಬ್ಬರೂ, ೨೨೦ ಲಕ್ಷ ಪೌಂಡು ಚಾಸೊಪ್ಪೂ ತರಿಸಿಕೊಳ್ಳಲಾಗಿದೆ. ಭಾರತ, ಆಫ್ರಿಕಾ, ನ್ಯೂಜಿಲೆಂಡ್ ದೇಶಗಳಿಂದ, ೧೨೩ ಲಕ್ಷ ಪೌಂಡು ಕೊಕ್ಕೊ, ೨೫ ಸಾವಿರ ಖಂಡಿ ತೆಂಗಿನೆಣ್ಣೆ, ೧೨೦ ಸಾವಿರ ಕೊಬ್ಬರಿ, ೭ ಲಕ್ಷ ಚರ್ಮ ಮುಂತಾದುವುಗಳನ್ನು ಯುರೋಪ ಮುತ್ತಿಗೆಯ ತಯಾರಿಗೆ ಉಪಯೋಗಿಸಲಾಗಿದೆ. ವಿಮಾನಗಳಿಗೆ ಉಪಯೋಗಿಸುವ ಎಣ್ಣೆ ಗೇಸ್‌ಗಳನ್ನು ತಯಾರಿಸಲು ಸಹಾಯವಾಗುವ ಬೆಂಜೋಲ್ ಎಂಬ ಪದಾರ್ಥವನ್ನು ಆಸ್ಟ್ರೇಲಿಯದಿಂದ ೨೮೦ ಲಕ್ಷ ಗೆಲನುಗಳಷ್ಟು ತರಿಸಲಾಗಿದೆ.

ಆಹಾರ ಉಡುಪು

ಸಾಮ್ರಾಜ್ಯದ ಎಲ್ಲಾ ಭಾಗಗಳಿಂದ ಹೆಚ್ಚಾಗಿ ತಯಾರಿಸಲ್ಪಟ್ಟ ಆಹಾರ ಎಲ್ಲವೂ ಯುರೋಪಿನ ಸೈನ್ಯಕ್ಕೆ ಕಳುಹಿಸಿದೆ. ಒಟ್ಟು ಈ ಕಡೆಗಳಿಂದ ೧೪೫೦ ಲಕ್ಷ ಪೌಂಡುಗಳಷ್ಟು ಆಹಾರವು ಅಲ್ಲಿಗೆ ತಲುಪಿದೆ. ೪೦ ಲಕ್ಷ ಪೌಂಡು ಮಾಂಸವೇ ಅಲ್ಲಿಗೆ ಹೋಗಿರುತ್ತದೆ.

ಇದಲ್ಲದೆ ಮಿಲಿಯಾಂತರ ಬೂಟ್ಸುಗಳೂ, ಕಾಲುಚೀಲಗಳೂ, ಚಾಪೆಗಳೂ ಕಂಬಳಿಗಳೂ, ಹಾಸಿಗೆಗಳೂ, ಕಳುಹಿಸಲ್ಪಟ್ಟಿರುತ್ತದೆ. ಲಕ್ಷಾಂತರ ಗಜ ಬಟ್ಟೆಯೂ ಅಲ್ಲಿ ಬೇಕಾಗಿತ್ತು.

ಇಷ್ಟೊಂದು ಅಪಾರ ಸಾಮಗ್ರಿಗಳನ್ನು ತರಿಸುವುದು, ಪೂರೈಸುವುದು ಮತ್ತು ಯುದ್ಧವನ್ನು ಮುಂದುವರಿಸುವುದು ನಿಜವಾಗಿ ಮಹಾತ್ಸಾಧನೆಯ ಕಾರ್ಯವೆನ್ನಬೇಕು. ಇತ್ತೀಚೆಗೆ ಬಂದ ಸುದ್ದಿಪ್ರಕಾರ ಇಷ್ಟೊಂದು ಪ್ರಮಾಣದಲ್ಲೂ ಯುದ್ಧ ಸಾಮಗ್ರಿಗಳನ್ನು ಪೂರೈಸಲಾಗಿದೆಯಾದರೂ ಗುಂಡುಮದ್ದುಗಳ ಮಟ್ಟಿಗೆ ಶೇಕಡ ೪೬ರಷ್ಟು ಕಮ್ಮಿ ಬಿದ್ದಿದೆ ಎಂದು ವರದಿ ಇತ್ತು. ಪೂರೈಕೆಯ ಕೆಲಸವನ್ನು ಸರಿಪಡಿಸದೆ ಮುಂದೆ ಹೋಗಿ ಜರ್ಮನ್ ನಾಡನ್ನು ಹೊಕ್ಕಿದ್ದು ಕೊಂಚ ಅಪಾಯಕರವಾದರೂ ಕಲ್ಲು ಹೊತ್ತನರಿಗೆ ಹುಲ್ಲು ಭಾರವಾಗದೆಂಬಂತೆ ಅದರ ಕಡೆಗೂ ಜನರಲ್ ಐಶನ್ ಹಾವರು ಗಮನಿಸುವರಾಗಿ ಹಾರೈಸಬಹುದು.

Buy the Best
CASHEW SHELL OIL
We have great pleasure to announce that we have placed on the market the best and purest Cashew Shell oil manufactured by us.
Packing — Tin of 35 lbs. nett or bulk in barrels.
Hindusthan Commodity Corporation Ltd.
Manufacturers & Exporters,
CANARA BANK BUILDING BUNDER Mangalore.

ಮಾಲ್ಟಿನ್
ಮೊದಲೇ ಜೀರ್ಣಿಸಲ್ಪಟ್ಟ
ಶಕ್ತಿವರ್ಧಕ ಆಹಾರಪಾನೀಯ
ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ
ಶಿಫಾರಸು ಮಾಡಲ್ಪಟ್ಟಿದೆ.
ದೊರಕುವ ಸ್ಥಳ:-ಬಾಲಸಾಹಿತ್ಯ
ಮಂಡಳ ಲಿಮಿಟೆಡ್, ಮಂಗಳೂರು.

ಗಾಂಧೀಜಿಯವರು ಸದ್ಯಕ್ಕೆ ಉಪವಾಸ ವ್ರತವನ್ನು ಆಚರಿಸುವುದಿಲ್ಲ. ದಶಂಬರ ತಾ. ೮ರಿಂದ ತಾ. ೩೧ರ ವರೆಗೆ ಪೂರ್ಣ ವಿಶ್ರಾಂತಿಯನ್ನು ಪಡೆಯುವರೆಂದು ಬಳಿದುಬಂದಿದೆ. ಅವರ ದೇಹಪ್ರಕೃತಿಯು ನೆಟ್ಟಗಿರುವುದಾದರೂ ಇಚೆಗೆ ಅವರು ಕೈಕೊಂಡ ಕಾರ್ಯಕಲಾಪಗಳಿಂದ ಅವರು ಬಹಳವಾಗಿ ದುಡಿಯಬೇಕಾಗಿ ಬಂದುದರಿಂದ ಅವರಲ್ಲಿ ಸ್ವಲ್ಪ ಅಶಕ್ತಿಯು ಕಂಡುಬಂದುದರಿಂದ, ವಿಶ್ರಾಂತಿಯು ಅವರಿಗೆ ಅತಿ ಅವಶ್ಯವೆಂದು ವೈದಕೀಯ ಅಭಿಪ್ರಾಯವಾದುದರಿಂದ, ಗಾಂಧೀಜಿ ಈ ತಿಂಗಳ ಕೊನೆಗೆಯ ವರೆಗೆ ಯಾವತ್ತು ಕಾರ್ಯಗಳನ್ನು ಮಾಡದೆ ಸುಮ್ಮನೆ ವಿಶ್ರಾಂತಿಯನ್ನು ಪಡೆಯುವರು.

“ನೊನ್ ಪಾರ್ಟಿ” ಮುಖಂಡರ ಪರಿಷತ್ತು ಸದ್ಯದಲ್ಲೆ ಜರಗುವುದು-ಸದ್ಯದ ರಾಜಕೀಯ ಬಿಕ್ಕಟ್ಟಿನ ಪರಿಹಾರದ ಕುರಿತು ಉಪಾಯಗಳನ್ನು ಕಂಡು ಹಿಡಿಯಲು. ಸದ್ಯಕ್ಕೆ ಹಿಂದೂದೇಶದ ಏಳು ಪ್ರಾಂತ್ಯಗಳಲ್ಲಿ ಆಡಳಿತವುಗವರ್ನರರ ಅಧಿಕಾರದಲ್ಲಿ ನಡೆಯುವುದರ ಕುರಿತು ಅಸಮಾಧಾನ ಸೂಚಿಸಿಯೂ, ಎಲ್ಲಾ ಪ್ರಾಂತ್ಯಗಳಲ್ಲಿ ಮತ್ತು ಕೇಂದ್ರದಲ್ಲೂ ಪ್ರಜೆಗಳ ಹೊಣೆಗಾರಿಕೆಯಿರುವ ಸರ್ವಪಕ್ಷೀಯ ಪ್ರಾತಿನಿಧ್ಯವಿರುವ ಸರಕಾರ ಮಂಡಳಗಳ ರಚನೆಯಾಗಬೇಕಾಗಿಯೂ, ಈ ಮುಖಂಡರ ಸಭೆಯೊಂದು, ಅಲ್ಲಹಾಬಾದಿನಲ್ಲಿ ಸಪ್ರುಗಳವರ ಅಧ್ಯಕ್ಷತನದಲ್ಲಿ ಜರಗಿ, ಠರಾವು ಮಾಡಿರುವುದು.

ಬಂಗಾಳದಲ್ಲಿ ಹಸಿವನ್ನನುಸರಿಸಿ, ಈಗ ಮಲೇರಿಯ ಹಾವಳಿಯು ಉಂಟಾಗಿರುವುದು. ಬಂಗಾಳ ಪ್ರಾಂತ್ಯದಲ್ಲೆಲ್ಲಾ ಮಲೇರಿಯದದ ಕಾಟವು ವಿಪರೀತವಿರುವುದೆಂದು, ಅದೀಗ ಕಲ್ಕತ್ತೆಯ ಹೊರಬಾಗಿಲ ವರೆಗೂ ಪ್ರಸರಿಸಿಕೊಂಡಿರುವುದೆಂದೂ, ಮಲೇರಿಯ ದೆಸೆಯಿಂದ ಪ್ರಾಂತ್ಯದಲ್ಲೆಲ್ಲಾ ಅತ್ಯಂತ ಶೋಚನೀಯ ಪರಿಸ್ಥಿತಿಯು ಉಂಟಾಗಿರುವುದೆಂದೂ, ತಿಳಿದುಬಂದಿದೆ.

ಈ ದುರಂತದ ಸಮಯದಲ್ಲೂ “ಕಳ್ಳಸಂತೆ”ಯ ವರ್ತಕರು ಅತಿರೇಖ ಲಾಭ ಸಾಧಿಸುತ್ತಿರುವರಂತೆ. ಮಲೇರಿಯಾ ನಿವಾರಣೆ ಔಷಧಿಗಳು ಮಲೇರಿಯಾ ಪೀಡಿತರಿಗೆ ಹಂಚಿದವುಗಳನ್ನು ಈ ವರ್ತಕರು ಪಡಕೊಂಡು ಅತಿರೇಖ ದರದಲ್ಲಿ ಇತರರಿಗೆ ಮಾರಾಟಮಾಡಲು ಯತ್ನಿಸುತ್ತಿರುವರಂತೆ. ಏನೊಂದು ತಿಳಿಯದ ಹಳ್ಳಿಗರು ತಮಗೆ ದೊರೆತ ಔಷಧಿಯನ್ನು (ಕ್ವಿನೀನು ಇತ್ಯಾದಿಯನ್ನು) ಕೆಲವು ಚಿಕ್ಕಾಸುಗಳ ಆಸೆಗೆ ಈ ವರ್ತಕರಿಗೆ ಮಾರಲು ಮುಂದಕ್ಕೆ ಬರುತ್ತಿದ್ದಾರಂತೆ.

ಬಂಗಾಳವನ್ನು ಮಲೇರಿಯಾ ಹಾವಳಿಯಿಂದ ಪಾರುಮಾಡಲು ಸರಕಾರವೂ, ಅನೇಕ ಸಂಸ್ಥೆಗಳೂ, ವ್ಯಕ್ತಿಗಳೂ ಹಗಲಿರುಳು ದುಡಿಯುತ್ತಿರುವರು. ಮಲೇರಿಯಾ ಮಾತ್ರವಲ್ಲ ಪೌಷ್ಟಿಕದ ಕೊರತೆಯಿಂದ ಜನರು ನಿರ್ಬಲರಾಗಿದ್ದು, ಕೊಲೆರಾ, ಟ್ಯಾಫೋಡ್ ರೋಗಗಳಿಗೆ ತುತ್ತಾಗದಂತೆ ನೋಡಿಕೊಳ್ಳಬೇಕಾಗಿ ಬಂದಿದೆ.

ಕೆಲವು ಹಳ್ಳಿಗಳಲ್ಲಿ ಮಲೇರಿಯದಿಂದ ಇಡಿ ಇಡಿ ಕುಟುಂಬಗಳೆ ಹಾಸಿಗೆ ಹಿಡಿದಿವೆ. ಬಂಗಾಳದ ಶಾಲೆಗಳಲ್ಲಿ ಈ ಕಾರಣದಿಂದ ಹುಡುಗರ ಹಾಜರಿಯು ಕಡಿಮೆಯಾಗುತ್ತಿದೆ. ಬೇಸಾಯ ಇತ್ಯಾದಿ ಯಾವತ್ತೂ ವ್ಯವಸಾಯಗಳು ಸರಿಯಾಗಿ ನಡೆಯಲು ಆತಂಕಗಳು ಉಂಟಾಗಿವೆ:

ಪ್ರಚಲಿತ ಸಮಾಚಾರಗಳು

ಭಾರತೀಯ ಸಂಸ್ಕೃತಿಯ ಪುನರ್ಜನ್ಮವಾದ ನಾಡು ಇಂದು ನರಳುತ್ತಿದೆ. ಕ್ಷೀಣವಾಗುತ್ತಿದೆ. ಅದನ್ನು ರಕ್ಷಿಸುವ ಕರ್ತವ್ಯವು ಪ್ರತಿಯೋರ್ವ ಭಾರತೀಯನದು. ಬಂಗಾಳಕ್ಕೆ ಈಗ ಆಹಾರ ಮಾತ್ರವಲ್ಲ, ವೈದ್ಯಕೀಯ ಜನರು, ಔಷಧಿಗಳು, ಇತ್ಯಾದಿ ಉಪಶಮನಾದಿ ವ್ಯವಸ್ಥೆಗಳು ಅಧಿಕ ಪ್ರಮಾಣದಲ್ಲಿ ಅವಶ್ಯವಿವೆ. ಮದ್ರಾಸು, ಮುಂಬಾಯಿ ಇತ್ಯಾದಿ ನಗರಗಳಿಂದ ಮೆಡಿಕಲ್ ಮಿಶನ್‌ಗಳು, ಮೆಡಿಕಲ್ ಕಾಲೇಜುಗಳಿಂದ ಅತ್ತ ಕಡೆಗೆ ಹೋಗಿ, ಉಪಶಮನಾ ಕಾರ್ಯಗಳನ್ನು ನಡೆಯಿಸುತ್ತಿವೆ. ಈ “ಮೆಡಿಕಲ್ ಮಿಶನ್”ನುಗಳು ಹೆಚ್ಚಾಗಿ ಮೆಡಿಕಲ್ ವಿದ್ಯಾರ್ಥಿಗಳಿಂದ ಕೂಡಿದವಾಗಿದ್ದು, ಅವುಗಳು ಅಲ್ಲಿ ದೀರ್ಘ ಸಮಯ ದುಡಿಯಲು ಅವಕಾಶವಿರುವುದಿಲ್ಲ. ಈ ಕಾರಣದಿಂದ ಬಂಗಾಳದ ಪ್ರಸಿದ್ಧ ಮುಂದಾಳುಗಳಾದ ಡಾ|ಬಿ.ಸಿ ರೋಯ್‌ರವರು ದೇಶದ ವೈದ್ಯಕೀಯ ಜನರಿಗೊಂದು ಮನವಿಮಾಡಿರುವರು. ಸಾರ್ವಜನಿಕ ಸೇವಾತುರವುಳ್ಳ ಡಾಕ್ಟರರು ಬಂಗಾಳದ ಸಂಕಷ್ಟ ಪೀಡಿತ ಜನರಿಗೆ ನೆರವಾಗಬಹುದೆಂದು ಅವರ ಮನವಿಯ ಅಭಿಪ್ರಾಯವಿರುವುದು. ಡಾಕ್ಟರರು ಮಾತ್ರವಲ್ಲ, ದೇಶದ ಧನಿಕರು, ಇತರರು, ತಮ್ಮಿಂದ ಕೈಲಾದ ಮಟ್ಟಿಗೆ ಬಂಗಾಳದ ಸಂಕಷ್ಟ ನಿವಾರಣೆ ಬಗ್ಗೆ ಸಹಾಯ ಮಾಡಬೇಕೆಂದು ಅವರ ವಿನಂತಿಯಿರುವುದು.

ಆಹಾರದ ಪೂರೈಕೆ ಬಗ್ಗೆ ಮದ್ರಾಸು ಸರಕಾರವು ದೊಡ್ಡ ನಿಧಿಯೊಂದನ್ನು ಪ್ರತ್ಯೇಕಿಸಿರುವುದು. ಆಹಾರ ಪೂರೈಕೆಯ ಬಗ್ಗೆ ಕೇಂದ್ರ ಸರಕಾರದ ಒಂದು ವ್ಯವಸ್ಥೆಯಾಗಿರುವುದು. ಆಹಾರ ಸಾಮಗ್ರಿಗಳನ್ನು ಕೆಟ್ಟು ಹೋಗದಂತೆ ಶೇಖರಿಸಿಡುವುದಕ್ಕೆ ಸರಕಾರದ ಖರ್ಚಿನಿಂದ ಉಗ್ರಾಣಗಳನ್ನು ರಚಿಸುವ ವ್ಯವಸ್ಥೆಗಳಾಗಿವೆ. ಆಹಾರ ಸಾಮಗ್ರಿಗಳನ್ನು ಬಡವರಿಗೆ ಅನುಕೂಲ ದರದಲ್ಲಿ ಮಾರಾಟವಾಗಬೇಕೆಂದು ನಿರ್ಧರಿಸಲಾಗಿದೆ. ಒಂದು ವೇಳೆ ಹೆಚ್ಚಿನ ದರದಲ್ಲಿ ಆಹಾರ ಸಾಮಗ್ರಿಗಳನ್ನು ಪಡಕೊಂಡರೂ, ಅವುಗಳು ನಿರ್ಧರಿಸಲ್ಪಟ್ಟ ಕಂಟ್ರೋಲ್ ದರಗಳಿಗನೆ ಮಾರಾಟವಾಗುವ ಏರ್ಪಾಡುಗಳಿಂದ ಉಂಟಾಗುವ ನಷ್ಟವು ಸರಕಾರದಿಂದ ಭರ್ತಿಮಾಡಲಾಗುವುದು. ಯುದ್ಧದ ದೆಸೆಯಿಂದ ಸಂಚಾರದ ಅನಾನುಕೂಲತೆಗಳು ತುಂಬಾ ಇರುವುದಾದರೂ ಆಹಾರ ಪೂರೈಕೆಯು ತ್ವರ್ಯದಲ್ಲಿ ನಡೆಯುವ ಬಗ್ಗೆ ವ್ಯವಸ್ಥೆಗಳು ಮಾಡಲಾಗಿವೆ. ಹವಾಸ್ಥಿತಿ ಇತ್ಯಾದಿ ಅನಿವಾರ್ಯ ಕಾರಣದಿಂದ ಉಂಟಾಗುವ ತೊಂದರೆಗಳಿಂದ ಅಕ್ಕಿ, ಗೋದಿ ಮೊದಲಾದ ಪ್ರಾಮುಖ್ಯ ಆಹಾರ ಸಾಮಗ್ರಿಗಳ ಉತ್ಪನ್ನ ಕಡಿಮೆಯಾದ ಸಂಭವದಲ್ಲಿ ಅವುಗಳ ಸ್ಥಳದಲ್ಲಿ ದಾನ್ಯಾದಿ ಇತರ ಸಾಮಗ್ರಿಗಳನ್ನು ಸೇವಿಸಲು ಜನರು ಅಭ್ಯಾಶಿಸಬೇಕು. ಇಡಿ ಲೋಕವೆ ಯುದ್ಧದ ದುರಂತಕ್ಕೆ ಒಳಗಾಗಿರುವ ಈ ಸಮಯದಲ್ಲಿ ಎಲ್ಲರೂ ಒಂದಿಷ್ಟು ಕಷ್ಟ ತೊಂದರೆಯನ್ನು ಅನುಭವಿಸಲೆಬೇಕಾಗುವುದು. ಜನರು ಅದಷ್ಟು ಸಹನಾ ಶಕ್ತಿಯನ್ನು ವಹಿಸಿ ವರ್ತಿಸಬೇಕಾಗಿಯದೆ.

ಯುದ್ಧೋತ್ತರದಲ್ಲಿ ದೇಶದ ಉದ್ಧಾರದ ಬಗ್ಗೆ ಚಟುವಟಿಕೆಗಳು ಈಗಲೆ ಪ್ರಾರಂಭವಾಗಿವೆ. ಅನೇಕ ಯೋಜನೆಗಳು ಆ ಬಗ್ಗೆ ಸಿದ್ಧವಾಗುತ್ತಿವೆ. ಆದರೆ ಒಂದು ದೇಶದ ಉದ್ಧಾರ ಮಾರ್ಗವು ಸ್ವಾತಂತ್ರ್ಯವಾಗಿರುವುದರ ಮೇಲೆ ಆಧರಿಸಿಕೊಂಡಿದೆ. ಸ್ವತಂತ್ರವಾಗಿದ್ದರೆ ಮಾತ್ರ ತನ್ನ ಅಭ್ಯುದಯವನ್ನು ಸಾಧಿಸಲು ಅದಕ್ಕೆ ಸಖ್ಯವಾಗುವುದು.

ಹಿಂದಿನ ಆದರ್ಶಗಳು ಲೋಪವಾಗಬೇಕು, ನೂತನ ಆದರ್ಶಗಳು ಹೊರಡಬೇಕು, ಜಗತ್ತು ಒಂದು ವಿಶ್ವ ಕುಟುಂಬವಾಗಿ ಪರಿವರ್ತನೆಯಾಗುವಆದರ್ಶಗಳು ಹೊರಡಬೇಕು. ಹಾಗಿದ್ದರೆ ಮಾತ್ರ ಜಗತ್ತಿನಲ್ಲಿ ಶಾಂತಿ ತಲೆದೋರಬಹುದು. ಹೆಚ್ಚಿನ ಜನರಿಗೆ ಹೆಚ್ಚಿನ ಸುಖಾನುಕೂಲತೆಗಳನ್ನು ಮಾಡಿಕೊಡುವ ತರದಲ್ಲಿ ಸಮಾಜದ ಪರಿವರ್ತನೆಯಾಗಬೇಕು.

ಈ ನೀತಿಯು ಅಮೇರಿಕದಲ್ಲಿ, ರಶ್ಯದಲ್ಲಿ, ಇರೋಪದಲ್ಲಿ ಪ್ರಶಸ್ತಿಗೆ ಬರಲು ಯತ್ನಿಸುತ್ತಿದೆ. ಅದು ಪ್ರಶಸ್ತಿಗೆ ಬರಲು ಅವಕಾಶಗಳು ಮಾಡಿಕೊಡಲಾಗುತ್ತಿವೆ. ರಶ್ಯವು ರಕ್ತಶ್ರವಣದಿಂದ ಪಡೆದುದನ್ನು ಇಂಗ್ಲಂಡು, ಅಮೇರಿಕ, ಫ್ರಾನ್ಸ ಇತ್ಯಾದಿ ದೇಶಗಳು ಶಾಂತರೀತಿಯಲ್ಲಿ ಪಡೆಯಬಹುದು ಎಂಬದೊಂದು ಅಭಿಪ್ರಾಯವು ಹೊರಡಿರುವುದು. ಬ್ರಿಟನು ಈ ಬಗೆ ಅನೇಕ ಸುಧಾರಣೆಗಳನ್ನು ಯೋಜಿಸುತ್ತಿದೆ. ದುಡಿವ ವರ್ಗವನ್ನು ಮೇಲಕ್ಕೆತ್ತುವ ಇವುಗಳ ಉದ್ದಿಶ್ಯ ಶ್ರೀಮಂತ ವರ್ಗವು ಮಹಾತ್ಯಾಗ ಮಾಡಬೇಕಾದ ಒತ್ತಾಯದ [ಶಾಸನಕ್ರಮಗಳು ಅಲ್ಲಿ ಜ್ಯಾರಿಗೆ ಬರಬಹುದು.

ಜರ್ಮನ್ ಆಕ್ರಮಿತ ಫ್ರಾನ್ಸು, ಇಟೆಲಿ, ಗ್ರೀಸ್ ಇತ್ಯಾದಿ ದೇಶಗಳು ಮಿತ್ರರಿಂದ ವಿಮೋಚನೆ ಹೊಂದಿದವುಗಳಲ್ಲಿ ಈ ನೀತಿಯು ಹೆಚ್ಚಿನ ಕ್ಷೋಭೆಗೆ ಕಾರಣವಾಗಿರುತ್ತದೆ. ಕೊಮುನಿಸ್ಟ್-ಬರ್ಜೊಯಿಸ್, (ಮಧ್ಯಮವರ್ಗ) ಕೊಮುನಿಸ್ಟ್-ಪೆಸಿಸ್ಟ್ ಮೊದಲಾದ ಘರ್ಷಣೆಗಳೆ ಈ ಕ್ಷೋಭೆಗಳ ಕಾರಣಗಳು. ದುಡಿವ ವರ್ಗವು ಈ ಎಲ್ಲಾ ಕಡೆಗಳಲ್ಲಿ ಅಧಿನಾಯಕತ್ವಕ್ಕೆ ಬರಲು ಪ್ರೇರೇಪಿಸುತ್ತದೆ.

ಆದರೆ ಪಾಶ್ಚಾತ್ಯದ ಶ್ರೀಮಂತ ವರ್ಗವು-ಸಾಮ್ರಾಜ್ಯವಾದವು, ಪೆಸಿಸ್ಟ್ ಪ್ರಭುತ್ವವು, ಸಾಮ್ಯವಾದಕ್ಕೆ ಪೂರ್ಣ ಅವಕಾಶವನ್ನು ಮಾಡಿಕೊಡಲು ಸಿದ್ಧವಿಲ್ಲ. ದುಡಿವ ವರ್ಗಕ್ಕೆ ಕೆಲವೊಂದು ರಿಯಾಯತಿಗಳನ್ನು ತೋರಿಸಿ, ಎಂದಿನಂತೆ ತಮ್ಮ ಧೋರಣೆಯನ್ನು ಮುಂದೆ ಸಾಗಿಸುವುದು ಅವರ ಸದ್ಯದ ಧ್ಯೇಯವಿರುತ್ತದೆ. ಈಗ ಇರೋಪವು ಎಲ್ಲಾ ಆದರ್ಶಗಳು ಕಲೆತು ಕುದಿಯುವ ಒಂದು ದೊಡ್ಡ ಮೂಶಿಯಾಗಿರುವುದು. ಈ ಮೂಶಿಯಿಂದ ಯಾವ ಆದರ್ಶವು ಪುಟವೆದ್ದು ಮೇಲಕ್ಕೆ ಬರುವುದೆಂದು ನೋಡಲಿದೆ.

ಪಾಶ್ಚಾತ್ಯ ರಾಷ್ಟ್ರಗಳು ಬಹು ಮುಂದುವರಿದಿವೆ. ಸುಖಸಂತುಷ್ಟಿಯ ಸವಿಯು ಅವುಗಳಿಗೆ ದೊರಕಿದಷ್ಟು ಆಫ್ರಿಕಾ, ಆಶ್ಯಾ ಇತ್ಯಾದಿ ಹಿಂದುಳಿದ ಪ್ರದೇಶಗಳಿಗೆ ಪ್ರಾಪ್ತವಾಗಲಿಲ್ಲ. ಪಾಶ್ಚಾತ್ಯ ರಾಷ್ಟ್ರ ಬೆಳವಣಿಗೆಗೆ ಈ ಪ್ರದೇಶಗಳು ಆಧಾರನೀಯ ವಲಸೆಗಳಾಗಿವೆ. ಯುದ್ಧೋತ್ತರದಲ್ಲಿ ಸಂತುಷ್ಟಿ ಸಾಧನೆಗಾಗಿ ಪಾಶ್ಚಾತ್ಯ ಯೋಜನೆಗಳು ಹಲವು ಕಲ್ಪಿಸಲ್ಪಟ್ಟವೆ. ದುಡಿಮೆ ವರ್ಗದವರ ಸ್ಥಿತಿಯನ್ನು ಉತ್ತಮಗೊಳಿಸುವ ಕುರಿತು ವಾಗ್ದಾನಗಳು ಆಗಿವೆ. ಈ ಉದ್ದೇಶ ಸಾಧನೆಗೆ ಪೂರ್ವದ

(೧೦ನೇ ಪುಟಕ್ಕೆ ಮುಂದುವರಿದಿದೆ.)

ತರುಣರಾಗಿಯೂ ಸುಂದರರಾಗಿಯೂ ಯಾಕೆ ಇರಬಾರದು

ಪ್ರತಿದಿನ ರಾತ್ರೆ ಎರಡು ಬೈಲ್‌ಬೀನ್ಸು ಮಾತ್ರೆಗಳನ್ನು ಸೇವಿಸುವ ಸುವರ್ಣ ನಿಯಮವನ್ನಿಟ್ಟು ಕೊಂಡರೆ ನೀವು ಸುಂದರರಾಗಿಯೂ ಆರೋಗ್ಯವಂತರಾಗಿಯೂ ತರುಣರಾಗಿಯೂ ಕಾಣುವಿರಿ. ಬೈಲ್‌ಬೀನ್ಸುಗಳು ಶುದ್ಧ ವನಸ್ಪತಿಯಿಂದ ತಯಾರಿಸಿದ್ದು ಅವು ಜೀರ್ಣವನ್ನುಂಟುಮಾಡುತ್ತದೆ. ರಕ್ತವನ್ನು ಶುದ್ಧಿಗೊಳಿಸುತ್ತವೆ. ದಿನನಿತ್ಯ ಎಲ್ಲಾ ಅಶುದ್ಧ ಆಹಾರವನ್ನು ಹೊರಹಾಕುತ್ತವೆ. ಹೀಗೆ ನಿಮ್ಮ ಆರೋಗ್ಯವನ್ನು ಉತ್ತಮಗೊಳಿಸಿ. ನಿಮ್ಮ ರೂಪವನ್ನು ಸುಂದರಗೊಳಿಸಿ ನೀವು ತರುಣರೂ ಆರೋಗ್ಯವಂತರೂ ಆಗುವಂತೆ ಮಾಡುವವು.

ಬೈಲ್ ಬೀನ್ಸು ನಿಮ್ಮನ್ನು ಆರೋಗ್ಯವಂತರಾಗಿಯೂ ತರುಣರಾಗಿಯೂ ಮಾಡುವುದು

BILE BEANS

ಪಾಶ್ಚಾತ್ಯರಲ್ಲಿ ಮೂಢ ನಂಬಿಕೆ

ಅವರೂ ಸಂತನನ್ನು ನಂಬುತ್ತಾರೆ

ಅವರಿಗೂ ಮೂಢ ಭ್ರಾಂತಿಗಳಿವೆ

ಪೂರ್ವ ದೇಶದವರು ಮುಖ್ಯವಾಗಿ ಭಾರತೀಯರು ಅರಬೀಯರು, ಮತ್ತು ಚೀನಿಯರು ಮೂಢ ನಂಬಿಕೆಗಳಿಗೆ ತುಂಬಾ ಮನ ಸೋತವರೆಂದು ಪಾಶ್ಚಾತ್ಯಜನರಲ್ಲಿ ಒಂದು ಭಾವನೆ ಇದೆ. ಇದು ಅವರಲ್ಲಿರುವ ಒಂದು ಹೆಮ್ಮೆಯ ಭ್ರಾಂತಿ. ಅದನ್ನು “ಅವರ ಮೂಢ ನಂಬಿಕೆ” ಎಂದೂ ಹೇಳಬಹುದು.

ಒಂದು ಸತ್ಕಾರ್ಯ ಮಾಡುವಾಗ ನಮ್ಮ ಕಡೆಯ ಹೆಚ್ಚಿನ ಜನರು ಜ್ಯೋತಿಷ್ಯವನ್ನು ನೋಡುತ್ತಾರೆ. ಪಂಡಿತರಲ್ಲಿ ಪಕೀರರಲ್ಲಿ ನಕ್ಷತ್ರ ಫಲ ಕೇಳುವಂತೆ ಯುರೋಪಿಯನರೂ ಕೆಲವು ಬಿಳಿ ಜ್ಯೋತಿಷ್ಯರನ್ನು ವಿಚಾರಿಸಿಯೇ ಕೆಲಸ ಮಾಡುತ್ತಾರೆ. ಆರ್. ಎಚ್. ನೈಲರ್ ಎಂಬ ಬಿಳಿ ಜ್ಯೋತಿಷ್ಯರೊಬ್ಬರು ಬೊಂಬ್ಬಾಯಿಯಲ್ಲಿದ್ದಾರೆ.

ದೇವರಿಗೆ ದೈವಗಳಿಗೆ ಹಣ್ಣು ಕಾಯಿ ಒಡೆಯುವುದು ಹಿಂದೂಗಳ ಪದ್ಧತಿ ಒಂದು ಹಡಗವನ್ನು ನೀರಿಗೆ ಬಿಡುವಾಗ ಪಾಶ್ಚಾತ್ಯರು ಸಾರಾಯಿ ಬಾಟ್ಲಿಯನ್ನು ಅದಕೆ ಹೊಡೆಯುತ್ತಾರೆ.

ಹಿಂದುಗಳು ದೀಪಾವಳಿಯ ಹಬ್ಬವನ್ನೂ ಮುಸಲ್ಮಾನರು ಇದ್ ಹಬ್ಬವನ್ನು ಆಚರಿಸುವುದು ಐರೋಪರಿಗೆ ಈ ಜನರ ಮೂಢ ನಂಬಿಕೆ ಎಂದು ತೋರುತ್ತದೆ. ಆದರೆ ಅವರೂ ಕ್ರಿಸ್‌ಮಸ್ ಹಬ್ಬವನ್ನು ಆಚರಿಸುತ್ತಾರೆ.

“ನಮ್ಮವರು ದೇವಸ್ಥಾನಕ್ಕೆ ಇಲ್ಲವೆ ಮಸೀದಿಗೆ ಹೋದರೆ ಅದು ಮೂಢ ನಂಬಿಕೆಯಾಗುತ್ತದೆ. ಆದರೆ ಚರ್ಚಿಗೆ (ಈಗರ್ಜಿ) ಹೋಗುವುದು ಮಾತ್ರ ಒಂದು ಸಾಮಾಜಿಕ ವ್ಯವಹಾರ ಲಕ್ಷಣವೆಂದು ಅವರ ನಂಬಿಕೆ” ಹೀಗೆಂದು ಕ್ರಾನಿಕಲ್ ಪತ್ರಿಕೆಯ ಓರ್ವ ಲೇಖಕರು ಬರೆಯುತ್ತಾರೆ.

ಮತ್ತೆ ಅವರು ಹೀಗೆನ್ನುತ್ತಾರೆ: ಹಿಂದು ನಾಗರೀ, ಕತೆ ಬೌಧ ಸಂಸ್ಕೃತಿ ಮುಸಲ್ಮಾನ ಸಂಸ್ಕೃತಿ ಎಂದಾಗ ಅದು ಪಾಶ್ಚಾತ್ಯರಿಗೆ ಮೂಢ ನಂಬಿಕೆಯ ಕುರುಹು ಎಂದರ್ಥವಾಗುತ್ತದಂತೆ. ಆದರೆ ಅಹಿಂಸಾವಾದಿ ಕ್ರಿಸ್ತನ್ ಹೆಸರಿನಲ್ಲಿ ರಕ್ತಪಾತದ ಯುದ್ಧ ಮಾಡುವುದು ‘ಕ್ರೈಸ್ತ ನಾಗರೀಕತೆಗಾಗಿ’ ಎಂದು ಚರ್ಚಿಲ್ ರೂಸ್‌ವೆಲ್ಟರಂತಹರೇ ಹೇಳುತ್ತಾರೆ. ಇದೂ ಒಂದು ಮೂಢ ನಂಬಿಕೆಯಲ್ಲವೆ?

ಗೀತಾ ವಾಕ್ಯವನ್ನಾಗಲೀ ಕುರಾನಿನ ಉಲ್ಲೇಖವನ್ನಾಗಲೀ ಎತ್ತಿದರೆ ಅದು ಹಳೇ ಸಾಂಪ್ರದಾಯವಾಯಿತು. ಆದರೆ ಬ್ಯಾಬಲ್ ಗ್ರಂಥದ ವಾಕ್ಯಗಳನ್ನು ಉದಹರಿಸಿದರೆ ಅದು ಅವರ ಅಭಿಪ್ರಾಯ ಪ್ರಕಾರ ಸಾಹಿತ್ಯ ಸಾಮರ್ಥ ಸೂಚಿಸುವಂತಾದ್ದು.

ದೈವ ಶಕ್ತಿಯ ವಿಶ್ವಾಸ

ಓರ್ವ ಐರೋಪ್ಯನನ್ನು ಕುರಿತು ನೀವು ‘ಸಂತ ತುಕಾರಾಮ’ ಇಲ್ಲವೆ ‘ಸಂತ ಸಖು’ ಚಲ ಚಿತ್ರ ನೋಡಿದೀರಾ ಎಂದು ಕೇಳಿದರೆ ಅವರು ‘ಛೇ!’ ನಮಗೆ ಅಂತಹ ಮತೀಯ ಮೂಢ ವಿಶ್ವಾಸದಿಂದ ಹಳೇ ದೈವ ಚಮತ್ಕಾರದ ಕೃತಿಗಳಿರುವ ನಂಬಲರ್ಹವಲ್ಲದ ಚಿತ್ರಗಳಲ್ಲಿ ಅಭಿರುಚಿ ಇಲ್ಲ” ಎನ್ನುವರು.

ಆದರೆ ಬೊಂಬಾಯಿಯಲ್ಲಿ ಈಗ ‘ಬರ್ನಾಡೆಟ್’ ಎಂಬ ಒಂದು ಅಮೆರಿಕನ್ ಚಿತ್ರವು ಪ್ರದರ್ಶನಕ್ಕೆ ಬಂದಿದೆ. “ನೀವು ‘ಬರ್ನಾಡೆಟ್’ ಚಿತ್ರವನ್ನು ನೋಡಿದಿರಾ?” ಎಂದು ಅದೇ ಐರೋಪ್ಯ ಮಹನೀಯನನ್ನು ವಿಚಾರಿಸಲಾಗಿ ‘ಛೇ!’ ಅದು ಮಹಾ ದೈವೀಕ ಸ್ಫೂರ್ತಿಯ ಚಿತ್ರ ಅದು . . . . . ಹಾ: . . . . ಅತ್ಯಂತ ದೈವೀಕ ಭಾವನೆಯದು ಎಂದು ಹೇಳಿದರು.

ನಿಜವಾಗಿ ಪರಿಶೀಲಿಸಿದರೆ ಮೇಲೆ ಹೇಳಲ್ಪಟ್ಟ “ಸೋಂಗ್ ಆಫ್ ಬರ್ನಾಡೆಟ್” ಚಿತ್ರವು ಮೂಢ ನಂಬಿಕೆಯನ್ನು ಮೂರ್ತಿಮಂತವಾಗಿ ಅಮೇಘತೆಗೊಳಿಸಿದ ಚಿತ್ರ. ಅದು ಅದ್ವಿತೀಯ ಛಾಯಚಿತ್ರ ಚಾತುರ್ಯದಿಂದ ತೆಗೆಯಲ್ಪಟ್ಟು ಸ್ಫೂರ್ತಿದಾಯಕವಾದ ನಟನಾ ನೈಪುಣ್ಯತೆಯಿಂದ ಕೂಡಿದೆ. ಇವುಗಳ ಮಟ್ಟಿಗೆ ಅದು ಶ್ಲಾಘನೀಯವಿದೆ.

ಚಲನ ಚಿತ್ರ ವೈಜ್ಞಾನ, ಶಾಸ್ತ್ರ ದೃಷ್ಟಿಯಿಂದ ‘ಬರ್ನಾಡೆಟ್’ ಚಿತ್ರವು ಪ್ರಶಂಶನೀಯವಿದೆಯಾದರೂ ಮೂಢ ನಂಬಿಕೆಯ ಭಾವನೆಗಳೇ ಆ ಚಿತ್ರದ ಮುಖ್ಯ ಆಧಾರ ಕಥಾ ವಸ್ತು. ಓರ್ವ ಬ್ರಹ್ಮಚಾರಿಣಿ ತರುಣಿಯು ತಾನು ಯೇಸುಕ್ರಿಸ್ತನ ತಾಯಿಯಾದ ಮೇರಿಯೆಂದು ಸ್ಫೂರ್ತಿ ಪಡೆಯುತ್ತಾಳೆ. ಈ ಸ್ಫೂರ್ತಿಯು ಅವಳಿಗೆ ಒಂದು ದೈವಿಕ ಜ್ಞಾನ ಶೋಭೆಯಿಂದ ಉಂಟಾಗುತ್ತದೆಂದು ನಿರೂಪಿಸಲಾಗಿದೆ. ಅದರ ಫಲವಾಗಿ ಅವಳು ಎಲ್ಲಾ ರೋಗರುಜೆಗಳನ್ನು ನಿವಾರಿಸುವ ಶಕ್ತಿಯುಳ್ಳ ಒಂದು ಕೊಳವನ್ನು ಕಾಣುವಳು. ಅವಳನ್ನು ನಂಬಿದವರೆಲ್ಲರೂ ಒಳ್ಳೆ ಮನುಷ್ಯರಿಂತಲೂ ಅವಳ ಮೇಲೆ ವಿಶ್ವಾಸ ಪಡದವರು ಹುಚ್ಚರೂ ಕ್ರೂರಿಗಳೂ ವನ್ಯ ಮನುಷ್ಯರೂ ಎಂಬುದಾಗಿ ಆ ಚಿತ್ರದಲ್ಲಿ ತೋರಿಸಲಾಗಿದೆ.

“ಮತೀಯ ಭಾವನೆಯುಳ್ಳ ಕ್ರೈಸ್ತರು ಈ ಚಿತ್ರವನ್ನು ನೋಡಿ ಸ್ಫೂರ್ತಿಗೊಳ್ಳುವುದು ತಪ್ಪೆಂದು ಹೇಳಬರುವುದಿಲ್ಲ. ಆದರೆ ಮೂಢ ನಂಬಿಕೆಯ ವಿರೋಧಿಗಳಾದ ಆ ಕೆಲವರು (ಇವರು ಭಾರತೀಯ ಸಂತರ ದೈವಲೀಲೆ ಚಮತ್ಕಾರದ ಚಿತ್ರಗಳನ್ನು ತುಚ್ಛೀಕರಿಸುತ್ತಾರೆ.) ಇಂತಹ ಚಿತ್ರದಲ್ಲಿ ಸ್ಫೂರ್ತಿ ಕಂಡದ್ದು ಒಂದು ಭ್ರಮೆಯೇ ಸರಿ. ಅವರಿಗೆ ಅಮೇರಿಕನರು ಮೂಢ ನಂಬಿಕೆ ಚಿತ್ರಗಳನ್ನು ಕಳುಹಿಸಿದರೆ ರುಚಿಸುತ್ತದೆ. ಕಹಿಯಾದ ವಸ್ತುವನ್ನು ಸಕ್ಕರೆಯಲ್ಲಿ ಮುಳುಗಿಸಿ ಕೊಟ್ಟರೆ ಇವರು ಅಡ್ಡಿಯಿಲ್ಲದೆ ತಿನ್ನುವರು.”

ಪೆಪ್ಸಿನ ವಿಷಯ ಒಬ್ಬ ಪ್ರಖ್ಯಾತ್ಯ ಡಾಕ್ಟರರ ಅಭಿಪ್ರಾಯ

ಡಾಕ್ಟರ್ ಗೋರ್ಡ್ಡಿನ್ ಸ್ಟೇಬ್‌ಲ್ಸ್

ಎಂ. ಡಿ. ಸಿ. ಡಿ. ಆರ್. ಎನ್. ಇವರು ಶ್ವಾಸಯೋಗ್ಯ ವಿಷಹಾರಿ ಪೆಪ್ಸನ್ನು ಸತ್ವಃ ಉಪಯೋಗಿಸಿ ಹೀಗೆ ಬರೆದಿರುತ್ತಾರೆ.

“ಕಫವನ್ನು ನಿವಾರಿಸಲು, ಕಂಠವನ್ನು ಸರಿಗೊಳಿಸಲು, ಶ್ವಾಸಕೋಶದ ನೋವನ್ನು ಹೋಗಲಾಡಿಸಲು ಪೆಪ್ಸು ಅತ್ಯಂತ ಹಿತವಾದ ಔಷಧಿಯಾಗಿದೆ”

ಬಾಯಿಗೆ ಹಾಕಿದ ಕೂಡಲೆ ಪೆಪ್ಸು ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ, ಆ ಸತ್ವವು ಶ್ವಾಸದೊಡನೆ ಶ್ವಾಸಕೋಶಕ್ಕೆ ಹೋಗಿ ಅಲ್ಲಿರುವ ರೋಗಕಾರೀ ಅಣುಗಳನ್ನು ಕೊಂದು ಕಫ ಶೀತಾದಿ ಭಾಧೆಗಳನ್ನು ಗುಣಪಡಿಸುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು

ಸೌಮ್ಯವಾದಿ ಸಪ್ರೂ

ಒಂದು ಕಾಲದಲ್ಲಿ ಕಾಂಗ್ರೆಸಿಗರ ದೊಡ್ಡ ರಾಜಕೀಯ ಮುತ್ಸದಿಗಳು

ರಾಜಕೀಯದಲ್ಲಿ ನೆಹರುಗಳು ಉಗ್ರ ಸಮತಾ ವಾದಿಗಳಾದರೆ ಸರ್ ತೇಜ್ ಬಹದ್ದೂರ್ ಸಪ್ರೂಗಳು ಸೌಮ್ಯ ವಾದಿಗಳು. ಅವರು ಉದಾರ ವಾದಿಗಳೂ ಆಗಿದ್ದಾರೆ. ಈ ಉದಾರ ವಾದಿಗಳಲ್ಲಿ (ಲಿಬರಲ್ಸ್) ಕಾಂಗ್ರೆಸಿನವರ ತ್ಯಾಗ ಬುದ್ಧಿಯೂ ಇಲ್ಲ ಸರಕಾರದ ಸ್ಪಷ್ಟ ಮನೋ ಭಾವವೂ ಇಲ್ಲವೆಂದು ಹಿಂದೆ ಸರ್ ಸಿ. ವ್ಯಾ. ಚಿಂತಾಮಣಿ ಅವರೊಂದು ಸಲ ಹೇಳಿದ್ದರು.

ಸರ್ ಸಪ್ರೂ ಅವರು ಈಗಿನ ಭಾರತದ ಓರ್ವ ಹಿರಿಯ ರಾಜಕೀಯ ಮುತ್ಸದಿಗಳು. ಒಂದು ಕಾಲದಲ್ಲಿ ಅವರು ಅಖಿಲ ಭಾರತ ಕಾಂಗ್ರೆಸಿನ ಸದಸ್ಯರಾಗಿದ್ದರು. ಕಾಂಗ್ರೆಸು ಚಳವಳ ಧೋರಣೆ ವಹಿಸಿದಾಗ ಅವರು ಹೊರಗೆ ಬಂದು ತಮ್ಮ ವಕಾಲತಿನಲ್ಲೇ ಮಗ್ನರಾದರು. ಅಲಹಾಬಾದು ಹ್ಯಾ ಕೋರ್ಟಿನಲ್ಲಿ ಇವರು ಎಡ್ವೋಕೇಟರಾಗಿ ತುಂಬಾ ಖ್ಯಾತಿ ಗಳಿಸಿದ್ದಾರೆ. ಈಗ ರಾಜ್ಯ ರಚನಾ ವಿಧಾನದಲ್ಲಿ ಇವರು ದೊಡ್ಡ ಸಮರ್ಥ ನ್ಯಾಯಧೀಶರೆನಿಸಿದ್ದಾರೆ. ರಾಜಕೀಯಗಿಂತ ವಕಾಲು ವೃತ್ತಿಯೇ ಇವರಿಗೆ ರುಚಿಸುವಂತಹದೆಂದು ಅಭಿಪ್ರಾಯವಿದ್ದರೂ ಅವರ ಇತ್ತೀಚೆಗಿನ ಕಾರ್ಯ ಕಲಾಪಗಳಿಂದ ಅವರ ರಚನಾತ್ಮಕ ರಾಜಕೀಯದಲ್ಲಿ ತುಂಬಾ ಅಭಿರುಚಿ ತೋರಿಸುತಿದ್ದಾರೆ.

ಮಾತೇ ಮೇಲು

ಲಿಬರಲ್ ಪಕ್ಷದವರೆಲ್ಲಿ ಎಲ್ಲರೂ ಮುಂದಾಳುಗಳೇ ಅಲ್ಲದೆ ಅವರನ್ನು ಹಿಂಬಾಲಿಸುವವರು ಯಾರು ಇಲ್ಲವೆಂದು ಪ್ರತೀತಿ ಇದೆ. ಕಾಂಗ್ರೆಸನ್ನೂ ಸರಕಾರವನ್ನು ಟೀಕಿಸುವುದು ಮಾತ್ರ ಇವರ ಪ್ರಧಾನ ಕೆಲಸ. ಆದುದರಿಂದಲೇ ಈ ಪಕ್ಷದವರಿಂದ ಕೈಕೊಳ್ಳಲಾಗುವ ಪ್ರಯತ್ನಗಳೆಲ್ಲವೂ ಜನ ಬೆಂಬಲವಿಲ್ಲದೆ ನಿಷ್ಪ್ರಯೋಜನವಾಗುತ್ತವೆ.

ಸಂಧಾನಗಾರ ಸಪ್ರೂ

೧೯೧೩ರಿಂದ ಸಪ್ರೂಗಳು ಕಾಂಗ್ರೆಸ್ ಸರಕಾರಗಳೊಳಗೆ ಒಪ್ಪಂದ ಮಾಡಲು ತುಂಬಾ ಪ್ರಯತ್ನ ಮಾಡಿದ್ದಾರೆ. ಲಾಡ್ಸ್ ರಿಡಿಂಗ್ ಇರ್ವಿನ್ ಮತ್ತು ವಿಲ್ಲಿಂಗ್ಡನ್ ಈ ಮೂರು ವ್ಯಾಸ್‌ರಾಯರ ಕಾಲದಲ್ಲೂ ಇವರು ಸಂಧಾನಕ್ಕೆ ಪ್ರಯತ್ನಿಸಿದ್ದಾರೆ. ಬ್ರಿಟಿಷರು ಹಿಂದೂಸ್ಥಾನಕ್ಕೆ ಸಾಮಂತ ಸ್ವರಾಜ ಕೊಡುವುದು ಒಂದು ಉದಾರ ದಾನವೆಂದು ಅವರು ಈತ್ತೀಚಿಗಿನ ತನಕ ನಂಬಿ ಕೊಂಡಿದ್ದರು. ಭಾರತೀಯರು ‘ಕಾನೂನು ಮುರಿಯುವವರು ಆಗಿರದೆ ‘ಕಾನೂನು ಮಾನ್ಯರು’ ಆಗಬೇಕೆಂಬುದೇ ಅವರ ಆಶಯ. ೧೯೨೦ರಲ್ಲಿ ಇಂಡಿಯಾ ಸರಕಾರದ ನ್ಯಾಯ ಸಚಿವರಾಗಿದ್ದಾಗ ಸಪ್ರೂಗಳು ಕ್ರಿಮಿನಲ್ ಕಾನೂನುಗಳನ್ನು ರಾಜಕೀಯ ಕೈದಿಗಳಿಗೆ ಅನ್ವಯಿಸುವಂತೆ ಮಾಡಿದ್ದರು.

ಒಂದು ಕಾಲದಲ್ಲಿ ಮಹಾತ್ಮಾ ಗಾಂಧಿಯವರು ಬ್ರಿಟಿಷ್ ಸರಕಾರದ ಉದಾರ ಗುಣದಲ್ಲಿ ನಂಬಿಕೆಯುಳ್ಳವರಿದ್ದ ಹಾಗೆ ಸಪ್ರೂಗಳೂ ನಂಬಿದ್ದರು. ಇತ್ತೀಚೆಗೆ ಅವರ ಬ್ರಿಟನಿನ ಮೇಲಿನ ವಿಶ್ವಾಸವು ಕುಲುಕಿಸಲ್ಪಟ್ಟಿದೆ ಎಂದು ತೋರುತ್ತದೆ. ಬ್ರಿಟನ್ನು ತನ್ನ ವಾಗ್ದಾನಗಳನ್ನು ಈಗಲೇ ಪೂರೈಸಬೇಕೆಂದು ಅವರ ಅಭಿಪ್ರಾಯವಿದೆ. ಈ ಬದಲಾವಣೆಯಿಂದಾಗಿ ಅವರಿಂದು ತಮ್ಮ ಪಕ್ಷಾತೀತ ಸಮಿತಿಯಿಂದ ಸಂಧಾನ ಪ್ರಯತ್ನದಲ್ಲಿ ತೊಡಗುವವರಿದ್ದಾರೆ.

ಜಾತೀಯ ಪ್ರಶ್ನೆಯನ್ನೂ ರಾಜಕೀಯ ಬಿಕ್ಕಟ್ಟನ್ನೂ ಬಿಡಿಸಲು ಹಿಂದೆ ಅನೇಕ ಸಲ ಸಪ್ರೂಗಳು ಪ್ರಯತ್ನಿಸಿದ್ದಾರೆ. ಈಗಿನ ಅವರ ಪ್ರಯತ್ನವು ಇನ್ನೂ ಮಹತ್ವದ್ದಿರುತ್ತದೆ. ಪಾಕಿಸ್ತಾನವನ್ನು ಮುಂದೆ ಹಾಕಿ ಮುಸ್ಲಿಂಲೀಗು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದೆ ಬಿದ್ದಿದೆ. ಸಪ್ರೂಗಳು ಈಗ ಈ ಪ್ರಶ್ನೆಯನ್ನು ನ್ಯಾಯ ಶಾಸ್ತ್ರ, ವಿಧಾಯಕ ಪದ್ಧತಿಗನುಸಾರವಾಗಿ ಬಿಡಿಸಲು ಪ್ರಯತ್ನಿಸುತ್ತಾರೆ.

ಸಂಧಾನವಾಗಲಿ ಇಲ್ಲವೇ ಆಗದಿರಲಿ ಸಪ್ರೂ ಸಮಿತಿಯ ನಿರ್ಣಯದಿಂದ ವಿವಿಧ ಪಕ್ಷ ಸಂಗಡಗಳ ಕೇಳಿಕೆಯ ನ್ಯಾಯ ಅನ್ಯಾಯ ರೂಪಗಳು ಹೊರ ಬೀಳುವುದರಲ್ಲಿ ಸಂದೇಹವಿಲ್ಲ. ಸಮಿತಿಯು ನಿಷ್ಪಕ್ಷಪಾತಿಯೂ ಅಚ್ಚ ಭಾರತೀಯವೂ ಆಗಿರದ್ದರಿಂದ ಅದರ ಸೂಚನೆಗಳು ಅಮೂಲ್ಯವಾಗಿರುತ್ತವೆ. ಭಾರತೀಯರಲ್ಲಿನ ಈ ಒಳ ಜಗಳದಿಂದ ಸದ್ಯಕ್ಕೆ ಮುಗಿಯುವ ಯುದ್ಧಾ ನಂತರ ಅಂತರಾಷ್ಟ್ರೀಯ ಸಭೆಯಲ್ಲಿ ಭಾರತಕ್ಕೆ ಒಂದು ಸ್ಥಾನ ಸಿಗದಂತಾದರೆ ಅದರಷ್ಟು ಖೇದಾಸ್ಪದ ವಿಚಾರ ಬೇರೆ ಇರದು.

ಸ್ವದೇಶಾಭಿಮಾನಿ

ತಾರೀಕು 8—12—1944

ಸಂಧಾನ ಯತ್ನಗಳು

ಭಾರತದಲ್ಲಿನ ರಾಜಕೀಯ ಬಿಕ್ಕಟ್ಟು ಜಗತ್ತಿನಲ್ಲೆಲ್ಲಾ ಚರ್ಚಿಸಲ್ಪಡುತ್ತಿರುವ ವಿಷಯವಾಗಿದೆ. ೧೯೩೯ರಲ್ಲಿ–ಅಂದರೆ ಯುದ್ಧ ಪ್ರಾರಂಭಿಸಿದಂದಿನಿಂದ– ಏಳು ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಮಂತ್ರಿಮಂಡಳಗಳು ರಾಜಿನಾಮೆ ಇತ್ತಮೇಲೆ ಹೆಚ್ಚು ಕಮ್ಮಿ ಎಲ್ಲಾ ಪ್ರಾಂತ್ಯಗಳ ಆಡಳಿತವು ಅಲ್ಪ ಸಂಖ್ಯಾಕ ಪಕ್ಷಗಳ ಇಲ್ಲವೆ ಯಾವ ಹೊಣೆಗಾರಿಕೆ ಇಲ್ಲದ ಕೆಲ ವ್ಯಕ್ತಿಗಳ ವರವಾಗಿದೆ.

ಜನರಿಗೆ ಜವಾಬ್ದಾರವಲ್ಲದ ಸರಕಾರಗಳೂ, ಸಲಹೆಗಾರರ ಆಡಳಿತಗಳೂ, ಸರ್ವ ಪಕ್ಷ ಸಮ್ಮಿಳಿತ ಸರಕಾರಗಳೂ ಆಡಳಿತ ವಹಿಸಿದ ನಂತರ ದೇಶದಲ್ಲಿ ಜನಹಿತದ ಯಾವುದೊಂದು ತರದ ಪರಿಣಾಮಾತ್ಮಕ ಸುಧಾರಣೆಗಳಾಗಲೀ, ಯೋಜನೆಗಳಾಗಲೀ ಬೆಳಕಿಗೆ ಬಂದದ್ದು ಕಾಣುವುದಿಲ್ಲ. ಇದರ ಬದಲಿಗೆ ಬಂಗಾಲ ಬಿಹಾರದಲ್ಲಿ ಬರಗಾಲಗಳೂ, ಸಿಂಧದಲ್ಲಿ ಕೊಲೆ ಸುಲಿಗೆಗಳೂ, ಪಂಜಾಬ, ಅಸ್ಸಾಮು, ಗಡಿನಾಡುಗಳಲ್ಲಿ ಅಂತಃಕಲಹ, ಅಶಾಂತಿಗಳೂ ಉತ್ಪನ್ನವಾದದ್ದು ಗೋಚರಕ್ಕೆ ಬಂದಿದೆ.

ಮದ್ರಾಸಿನಲ್ಲಿ, ಬೊಂಬಾಯಿಯಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳಗಳಿಂದ ಪ್ರಾರಂಭಿಸಲ್ಪಟ್ಟ ಮದ್ಯಪಾನ ನಿರೋಧ ಏರ್ಪಾಡುಗಳನ್ನು ಅಂತ್ಯಗೊಳಿಸಲಾಗಿವೆ. ಅವುಗಳ ಬದಲಿಗೆ ಎತ್ತಲಾಗಿದ್ದ ವ್ಯಾಪಾರಕರ (ಸೆಲ್ಸ್ ಟೆಕ್ಸ್) ಮುಂತಾದುವುಗಳನ್ನು ಮಾತ್ರ ರದ್ದು ಮಾಡದಿರುವುದಕ್ಕೆ ಕಾರಣಗಳು ಸ್ಪಷ್ಟವಾಗಿ ಕೊಡಲಾಗಲಿಲ್ಲ.

ಸಲಹೆಗಾರ ಸರಕಾರಗಳು ಸ್ಥಾಪಿಸಲ್ಪಟ್ಟಲ್ಲಿ, ಮತ್ತಿತರ ಕಡೆಗಳಲ್ಲಿ ಪ್ರಜಾಪ್ರತಿನಿಧಿ ಸಭೆಗಳನ್ನು ಇಂದಿಗೆ ಐದು ವರ್ಷಗಳಿಂದ ಕ್ಷೇರಿಸುತ್ತಿಲ್ಲ. ಮಂತ್ರಿಮಂಡಳಗಳಿರುವ ಪಂಜಾಬ್, ಗಡಿನಾಡು ಅಸ್ಸಾಮ್, ಸಿಂಧ್ ಮತ್ತು ಓರಿಸ್ಸಾ ಪ್ರಾಂತ್ಯಗಳಲ್ಲಿ ಹೆಸರಿಗೆ ಮಾತ್ರ ಪ್ರಜಾಪ್ರತಿನಿಧಿ ಸಭೆಗಳು ಕರೆಯಲ್ಪಡುತ್ತವೆ. ಆ ಮಂತ್ರಿಮಂಡಳಗಳು ತರಬಹುದಾದ ಯೋಜನೆಗಳಿಗೆ ವಿರೋಧ ಪಕ್ಷಗಳಿದ್ದರೆ ಅಲ್ಲಿನ ಗವರ್ನರುಗಳು ಅದನ್ನು ನೋಡಿಕೊಳ್ಳುತ್ತಾರೆ. ಈ ತರದ ಪರಿಸ್ಥಿತಿಯು ಶುಭ ಸೂಚಿಯಾಗಿರದೆ ಅಪಾಯಕಾರಕ ಪ್ರತಿಕ್ರಿಯೆಯನ್ನುಂಟುಮಾಡಿ ಮುಂದೆ ದೇಶ ಹಿತಕ್ಕೆ ಹಾನಿ ಸಂಭವಿಸಬಹುದೆಂದು ರಾಜ ಘಟನಾ ಪಂಡಿತರು ಅಭಿಪ್ರಾಯ ಪಡುತ್ತಾರೆ.

ಇಂತಹ ವಿದಾಯಕ ಪದ್ಧತಿ ವಿರೋಧ ರಾಜ್ಯಾಡಳಿತ ಕ್ರಮವನ್ನು ಅಂತ್ಯಗೊಳಿಸಿ ಎಲ್ಲಾ ಪ್ರಾಂತ್ಯಗಳಲ್ಲೂ ಪ್ರಜಾಪ್ರತಿನಿಧಿಗಳು ರಾಜಸೂತ್ರ ವಹಿಸುವಂತಾಗಲು ಸರ್ ತೇಜ್ ಬಹುದೂರ್ ಸಪ್ರೂ ಅವರು ಬಹಳ ಪ್ರಯತ್ನ ಪಡುತ್ತಾರೆ. ಇಂಗ್ಲೆಂಡು ಅಮೇರಿಕಾಗಳಲ್ಲೂ ಈ ವಿಷಯದ ಕುರಿತು ಅಲ್ಲಿನ ನಾಗರೀಕರೂ, ಅಲ್ಲಿ ನೆಲೆನಿಂತ ಭಾರತೀಯರೂ ಚಳವಳ ಪ್ರಾರಂಭಿಸಿದ್ದಾರೆ.

ರಾಷ್ಟ್ರ ಧೋರಣೆಯ ಕಾಂಗ್ರೆಸು ಒಂದು ಕಡೆ, ಜಾತಿ ಮತಧೋರಣೆಯ ಹಿಂದೂ ಮಹಾಸಭೆ, ಮುಸ್ಲಿಂ ಲೀಗುಗಳು ಒಂದು ಕಡೆ. ಹೀಗೆ ಒಂದಕ್ಕೊಂದು ವಿರೋಧವಾದ ಧೋರಣೆಗಳಿಂದ ಯಾವುದೊಂದು ತರದ ಒಪ್ಪಂದಕ್ಕೆ ಬಾರದೆ ಇರುವುದು ಭಾರತದ ದುರಾದೃಷ್ಟವೆನ್ನಬೇಕು.

ಎಲ್ಲರಿಗೂ ಒಪ್ಪುವಂತಹ ಒಂದು ರಾಜ್ಯ ಘಟನೆಯನ್ನು ತಯಾರಿಸುವುದೇ ಸಪ್ರೂ ಸಮಿತಿಯರ ಉದ್ದೇಶ. ಈ ಸಮಿತಿಯಲ್ಲಿ ಸುಮಾರು ಇಪ್ಪತ್ತೈದು ಸದಸ್ಯರಿರುವರು. ಹಿಂದೂ, ಸಿಕ್, ಮುಸಲ್ಮಾನ್, ಕ್ರೈಸ್ತ, ಪಾರ್ಶಿ, ದಕ್ಷಿಣಭಾರತ, ಪ್ರತಿನಿಧಿಗಳಲ್ಲದೆ ವೃತ್ತ ಪತ್ರಿಕಾ ಕರ್ತರೂ, ನ್ಯಾಯಾಧೀಶರೂ, ಎಸೆಂಬ್ಲಿ ಮೆಂಬರರೂ, ಇಂಡಿಯಾ ಸರಕಾರದ ಮಾಜಿ ಮಂತ್ರಿಗಳೂ ಹೀಗೆ ಪ್ರತಿಯೊಂದು, ಅಭಿಪ್ರಾಯ ಧೋರಣೆಗಳವರೂ ಇರುವರು.

ಜಾತೀಯ ಪ್ರಶ್ನೆಯನ್ನು ಸಪ್ರೂ ಸಮಿತಿಯವರು ನ್ಯಾಯ, ಮತ್ತು ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸಿ ಅವುಗಳ ಇತ್ಯರ್ಥಕ್ಕೆ ಯೋಗ್ಯವಾದ ಸಲಹೆ ಸೂಚನೆಗಳನ್ನು ಕೊಡುವರು. ಮಹಾತ್ಮಾ ಗಾಂಧೀಯವರು ಸಮಿತಿಯ ಮುಂದೆ ತಮ್ಮ ಕಡೆಯಿಂದ ಹೇಳಿಕೆ ಕೊಡಲು ಒಪ್ಪಿಕೊಂಡಿದ್ದಾರೆ. ಅವರನ್ನು ಸಪ್ರೂಗಳು ಈ ಮೊದಲೇ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಮುಸ್ಲಿಂ ಲೀಗಿನ ಜಿನ್ನರೊಡನೆಯೂ, ಹಿಂದೂ ಮಹಾಸಭೆಯ ಸಾವರಕರರೊಡನೆಯೂ ಅವರು ವಿಚಾರ ವಿನಿಮಯ ಮಾಡಬೇಕೆಂದಿದ್ದರು. ಆದರೆ ಯಾವುದೊ ಗೋಪ್ಯ ಕಾರಣಗಳಿಂದ ಹಾಗಾಗಲು ಸಾಧ್ಯವಾಗದಿದ್ದುದು ನೋಡಿದರೆ ಸಪ್ರೂ ಸಮಿತಿಯ ಸಂಧಾನ ಯೋಜನೆಯಲ್ಲಿ ಅವರಿಗೆ ಭರವಸೆಯಿಲ್ಲವೆಂಬ ಅರ್ಥವಾಗುತ್ತದೆ.

ಅನೇಕ ಪ್ರಯತ್ನಗಳಾದಾಗ್ಯೂ ಲೀಗು ಪ್ರತಿಸಾರಿ ಎಲ್ಲಾ ಸೂಚನೆಗೂ ವಿರೋಧ ಸೂಚಿಸುತ್ತದೆಯಲ್ಲದೆ ಒಂದು ಸಲವೂ ಅದು ಸಮ್ಮತಿ ಸೂಚಿಸಿದ್ದಿಲ್ಲ. ಲೀಗಿನ ಧೋರಣೆಯೇ ಹಾಗಿರಬಹುದು. ಹಿಂದೂ ಮಹಾಸಭೆಯೂ ಹೆಚ್ಚು ಕಮ್ಮಿ ಅದೇ ಧೋರಣೆಯದು. ಅಂದಮೇಲೆ ಮನಸ್ಸಿಲ್ಲದವರನ್ನು ಒಪ್ಪಿಸುವುದು ಸಾಧ್ಯವಲ್ಲದ ಕೆಲಸ.

ಆದರೆ ಸಪ್ರೂ ಸಮಿತಿಯವರ ಪರಿಶೀಲನೆಯಿಂದ ಮುಂದೆ ದೇಶದ ಧೋರಣೆಗೆ ತುಂಬಾ ಸಹಾಯವಾಗುವುದು. ಹಿಂದೂಗಳಲ್ಲೂ, ಮುಸಲ್ಮಾನರಲ್ಲೂ ಇನ್ನೂ ಹೆಚ್ಚಿನ ವಿಶಾಲ ವಿಚಾರ ಧೋರಣೆಯವರು ಮುಂದೆ ಬರಲಾರರೆಂದಿಲ್ಲ. ಅಂಥವರಾದರೂ ಸಪ್ರೂ ಸಮಿತಿಯ ವರದಿಯನ್ನು ತಮ್ಮ ಜನರಿಗೆ ತಿಳಿಸಲು ಪ್ರಯತ್ನಿಸದಿರಲಿಕ್ಕಿಲ್ಲ.

ದೇಶವೆಲ್ಲವೂ ಈ ಮತ್ತು ಇತರ ಕಡೆಗಳಿಂದ ನಡೆಯುವ ಸಂಧಾನ ಯತ್ನಗಳಿಗೆ ಯಶಸ್ಸು ಕೋರುತ್ತದೆ. ಕಾಂಗ್ರೆಸ್ ಮುಂದಾಳುಗಳನ್ನು ಬಿಡುಗಡೆ ಮಾಡಬೇಕೆಂದೂ, ಒಂದು ತರದ ಇಲ್ಲವೆ ಇನ್ನೊಂದು ತರದ ಜನಪ್ರಿಯ ಆಡಳಿತಗಳನ್ನು ಪ್ರಾಂತ್ಯಗಳಲ್ಲೂ, ಕೇಂದ್ರದಲ್ಲೂ ರಚಿಸಬೇಕೆಂದು ಪಕ್ಷಾತೀತ ಮುಖಂಡರ ಸಭೆಯಲ್ಲಿ ನಿರ್ಣಯಗಳಾದದ್ದು ಸರಕಾರವು ಮನ್ನಿಸಿದರೆ ಸಪ್ರೂ ಸಮಿತಿಯ ಪ್ರಯತ್ನಗಳಿಗೆ ಉತ್ತೇಜನ ಕೊಟ್ಟಂತಾಗಿ ಮುಂದೆ ದೇಶಕ್ಕೂ, ಜಗತ್ತಿಗೂ, ಯುದ್ಧ ಪ್ರಯತ್ನಕ್ಕೂ ಹೆಚ್ಚಿನ ಮತ್ತು ಶಾಶ್ವತವಾದ ಲಾಭವಾದೀತೆಂದು ಹಾರೈಸಲಾಗಿದೆ.

ವಿವಿಧ ಯುದ್ಧರಂಗಗಳಿಂದ

ಮಿತ್ರರು ಕಳೆದ ವಾರ ಪಶ್ಚಿಮ ರಂಗದಲ್ಲಿ ಪ್ರಾರಂಭಿಸಿದ ಆಕ್ರಮಣ ಮೆಲ್ಲನೆ ಪ್ರಗತಿ ಹೊಂದುತ್ತಿದ್ದು, ಅದು ಖಂಡಿತ ಪರಿಣಾಮಕಾರಿಯಾಗಿ ಸಾಗುತ್ತಿದೆ. ಜರ್ಮನರ ಬಲವಾದ ಸಿಗ್‌ಫ್ರಿಡ್ ವ್ಯೂಹವನ್ನು ಮಿತ್ರರು ಆರು ಕಡೆಗಳಲ್ಲಿ ಛೇದಿಸಿ ಜರ್ಮನಿಯು ಒಳ ನಡೆಯುತ್ತಿರುವರು. ಜರ್ಮನರ ಪ್ರತಿಭಟನೆಯು ಅತಿ ಉಗ್ರವಿದೆ ಎಂದು ತಿಳಿದು ಬಂದಿದೆ. ಮಿತ್ರರಿಗೆ ಹವಾಪರಿಸ್ಥಿತಿಯ ಅನಾನುಕೂಲತೆಗಳು ತುಂಬಾ ಇವೆ. ಹೋರಾಟಕ್ಕೆ ಬೇಕಾದ ಸಾಮಾನುಗಳನ್ನು ಪೂರೈಸುವ ಕಾರ್ಯವು ಅತ್ಯಂತ ಅಘಾದವಾಗಿ ಮಿತ್ರರಿಗೆ ಅದೊಂದು ಮಹಾ ಸಮಸ್ಯೆಯಾಗಿ ಪರಿಣಮಿಸಿಯದೆ. ಪ್ರಾರಂಭದ ಹೋರಾಟದಲ್ಲಿ ಮಿತ್ರರ ಸಿಡಿಮದ್ದಿನ ಶೇಖರ ಅಧಿಕಾರವು ವ್ಯಯವಾಗಿರುತ್ತದೆ. ಫ್ರಾನ್ಸಿನ ರೈಲ್ವೆ ಸಂಚಾರ ಮಾರ್ಗಗಳು ಸಂಪೂರ್ಣ ಕಳಚಿಬಿದ್ದ ಮಿತ್ರರಿಗೆ ಬೇಕಾದ ಪೂರೈಕೆಯ ಏರ್ಪಾಡುಗಳನ್ನು ನಡೆಯಿಸುವರೆ ತುಂಬಾ ಅಭ್ಯಂತರಗಳು ಉಂಟಾಗಿವೆ. ಆದರೂ ಜರ್ಮನಿಯ ಆಕ್ರಮಣವು ಈಗಲೇ ಆಗಬೇಕೆಂದು ಮಿತ್ರರು ಹಟತೊಟ್ಟಂತೆ ಕಾಣುತ್ತದೆ. ಅದಕ್ಕಾಗಿ ಅತ್ಯಂತ ಪರಿಶ್ರಮಸ ಮಹಾ ಕಷ್ಟತೊಂದರೆಗಳ ಎದುರು. ಸಹಾಸದ ಯತ್ನಗಳನ್ನು ಮಾಡುತ್ತಿರುವರು. ಎಂಟ್‌ವರ್ಪ ಬಂದರವು ಮಿತ್ರರ ಕೈಗಳಿಗೆ ಬಂದಿದ್ದು ಪಶ್ಚಿಮ ರಂಗಕ್ಕೆ ಬೇಕಾದ ಯಂತ್ರ ಸಿಡಿಮದ್ದು ಪೆಟ್ರೋಲು ದವಸದಾನ್ಯ ಇತ್ಯಾದಿಗಳನ್ನು ಪೂರೈಸಿ ಕೊಳ್ಳಲು ಒಂದು ಠಾಣ್ಯವು ದೊರಕಿದಂತಾಗಿದೆ. ಇಲ್ಲಿಂದ ಉತ್ತಮ ತರದ ಪೂರೈಕೆಯ ವ್ಯವಸ್ಥೆಗಳಾಗಬಹುದು. ರ್‍ಯಾನ್‌ಲೆಂಡ್ ಪ್ರದೇಶವು ಜರ್ಮನಿಯುವರದು ಪ್ರಾಣವಿರುವ ಪ್ರದೇಶವು. ಕಲ್ಲಿದಲ್ಲ ಗನಿಗಳು. ಖನಿಜ ಗನಿಗಳು, ಕೈಗಾರಿಕೆಗಳು, ಇತ್ಯಾದಿ ಯುದ್ಧ ಯತ್ನಗಳ ಆಧಾರವೆ ಈ ಪ್ರದೇಶದಲ್ಲಿರುವುದು. ಈ ಪ್ರದೇಶವು ಜರ್ಮನರು ಕಳಕೊಂಡರೆಂದರೆ ಮತ್ತೆ ಜರ್ಮನಿಗೆ ಉಳಿಗಾಲವಿಲ್ಲ.

ಈ ಕಾರಣದಿಂದಲೆ ಮಿತ್ರರು ಹಠತ್ತಾಗಿ ಈ ಪ್ರದೇಶವನ್ನು ಆಕ್ರಮಿಸಲು ಯತ್ನ ಪಡುತ್ತಿರುವುದು–ಮಹಾ ಯತ್ನಗಳನ್ನು ಮಾಡುತ್ತಿರುವರು. ಈ ಕಾರಣದಿಂದಲೆ ನಾಜಿಗಳು ಅರ್ಧ ಮಿಲಿಯ ಸೈನಿಕರನ್ನು ಒಡ್ಡಿ ತಮ್ಮ ಕೈಲಾದ ಮಟ್ಟಿಗೆ ಪರಿಶ್ರಮಿಸಿ ಮಿತ್ರರಿಗೆ ಅತ್ಯುಗ್ರವಾದ ತಡೆಯನ್ನು ಕೊಡುತ್ತಿರುವರು. ಜರ್ಮನ್ ಬಲದ ಅತ್ಯುತ್ತಮ ದಂಡುಗಳೆಲ್ಲಾ ಉತ್ತಮ ತರದ ಯುದ್ಧಯಂತ್ರಗಳೆಲ್ಲಾ ಈ ರಂಗದಲ್ಲಿ ಪ್ರಯೋಗಿಸಲಾಗಿದೆ. ಜರ್ಮನಿಯ ಈ ಬಲವನ್ನು ಮುರಿದು ಬಿಟ್ಟರೆ ಆಗ ಜರ್ಮನಿಯ ಅಧಿಕ ಬಲದ ನಾಶ ಮಾಡಿದಂತಾಗುವುದು. ಮತ್ತೆ ಜರ್ಮನಿಯ ಸೋಲು ಖಂಡಿತ. ಚಳಿಗಾಲದ ಅತ್ಯಂತ ಕಠಿಣ ಸಮಯವು ಬರುವುದರೊಳಗೆ ತಮ್ಮ ಈ ಧ್ಯೇಯದ ಸಾಧನೆ ಹೆಚ್ಚಿನ ಕಾರ್ಯಗಳು ನಡೆಸುವ ಉದ್ದೇಶದಿಂದಲೆ ಜನರಲ್ ಐಸಸ್ ಹೋವರವರು ಮಹಾ ಕಷ್ಟ ತೊಂದರೆಗಳನ್ನು ಲೆಕ್ಕಿಸದೆ ಆಕ್ರಮಣವನ್ನು ನಡೆಯಿಸುತ್ತಿರುವರು.

ಮಿತ್ರರ ಈ ತರದ ಆಕ್ರಮಣದಿಂದ ಜರ್ಮನ್ ಸೇನಾಪತಿಗಳಿಗೆ ಸ್ವಲ್ಪ ದಿಗಿಲು ಉಂಟಾಗಿರುವುದು. 'ಜನರಲ್ ಐಸನ್‌ಹೋವರವರು ವ್ಯರ್ಥವಾಗಿ ಸಿಡಿ ಗುಂಡುಗಳನ್ನು ವ್ಯಯಿಸುತ್ತಿರುವರೆಂದು ಜರ್ಮನ್ ರೇಡಿಯೊ ಟೀಕಾಕಾರರು ಸಾರುತ್ತಿರುವರಾದರೂ ಹಾಯ್ದು ಬರುವ ಮಿತ್ರರ ಬಲಗಳನ್ನು ಎದುರಿಸುವುದು. ಅವರಿಗೆ ಒಂದು ಮಹಾ ಸಮಸ್ಯೆಯಾಗಿರುವುದು. ಮಿತ್ರರ ಬಲವಾದ ಹೊಡತವನ್ನು ಸಹಿಸಲು ಅವರಿಗೆ ಕಷ್ಟಸಾಧ್ಯವಾಗುತ್ತಿದೆ.

ಹವಾಪರಿಸ್ಥಿತಿ, ಪೂರೈಕೆಯ ಅನಾನುಕೂಲತೆ ಇವೆ ಮೊದಲಾದ ಅಡ್ಡಂತರಗಳ ಎದುರು ಮಿತ್ರರು ಜರ್ಮನಿಯ ಆಕ್ರಮಣವನ್ನು ಕೈಕೊಳ್ಳಲಾರರೆಂದು, ಜರ್ಮನರು ನಂಬಿದ್ದರು. ಆದುದರಿಂದ ಮಿತ್ರರ ಆಕ್ರಮಣವು ಪ್ರಾರಂಭವಾದೊಡನೆ ಜರ್ಮನರಿಗೆ ಅತ್ಯಾಶ್ಚರ್ಯವಾಯಿತು. ಅದರಲ್ಲು ಫ್ರೆಂಚರು ಬೆಲ್‌ಫೊರ್ಟ ಸಂದಿನಲ್ಲಿ ಮುನ್ನುಗಿದುದ್ದನ್ನು ನೋಡಿ ಅವರು ದಿಗಿಲುಗೊಂಡಿರುವರು. ಫ್ರೆಂಚ್ ದಂಡುಗಳ ಕಾರ್ಯಗಳು ಜರ್ಮನರನ್ನು ಮಾತ್ರವಲ್ಲ ಮಿತ್ರರನ್ನು ಕೂಡ ಆಶ್ಚರ್ಯಪಡಿಸಿವೆ. ಮಿತ್ರರ ವಿವಿಧ ದಂಡುಗಳು ಪಶ್ಚಿಮರಂಗದ ವಿವಿಧ ಕಡೆಗಳಲ್ಲಿ ಜರ್ಮನರ ಅತ್ಯಂತ ಈ ಬಲವಾದ ತಡೆಯ ಎದುರು, ಹೋರಾಡುತಿದ್ದ ಹಾಗೆನೆ, ಫ್ರೆಂಚರು ಮುನ್ನಡೆದುದು ಅತ್ಯಂತ ಆಶ್ಚರ್ಯಕರ. ರ್‍ಯಾನ್‌ಲೆಂಡ್ ಪ್ರದೇಶದಲ್ಲಿ ಕಾಲಿಡುವುದರಲ್ಲಿ ಫ್ರೆಂಚ್ ದಂಡು ಪ್ರಥಮದ್ದಾಗಿದೆ. ಮಾತ್ರವಲ್ಲ ಫ್ರೆಂಚರ ಇನ್ನೊಂದು ದಂಡು ಅಮೇರಿಕನ್ ಏಳನೆ ದಂಡಿನೊಡನೆ ಸೇರಿ ಸ್ಟ್ರಾಸ್‌ಬರ್ಗ ನಗರದ ಕಡೆ ಸಾಗುತ್ತಿರುವುದು.

ಸ್ಟ್ರಾಸ್‌ಬರ್ಗ ಮಿತ್ರರಿಂದ ಹಿಡಿಯಲ್ಪಟ್ಟರೆ ಆಗ ವೊಸೆಜಸ್ ಮತ್ತು ರ್‍ಯಾನ್ ನದಿಗಳ ಮಧ್ಯ ಪ್ರದೇಶದಲ್ಲಿ ಹೋರಾಡುವ ೫೦ ಸಾವಿರ ಮಂದಿ ಜರ್ಮನ್ ಸೈನಿಕರು ಬೋನಿನಲ್ಲಿ ಸಿಲುಕಿದಂತಾಗುವುದು. ಈ ಸೈನಿಕರಿಗೆ ತಪ್ಪಿಸಿಕೊಂಡು ಹೋಗಲು ಅನುಕೂಲವಾದ ಸಂಖಗಳು ಇವೆಯಾದರೂ ಮಿತ್ರರ ವಿಮಾನಗಳಿಂದ ಅವುಗಳು ಕೆಡವಲ್ಪಡದೆ ಇರಲಿಕ್ಕಿಲ್ಲ. ತಮ್ಮ ಕೋವಿ ಸಿಡಿಮದ್ದು, ಮತ್ತು ಯಾಂತ್ರಿಕ ಉಪಕರಣ ಇತ್ಯಾದಿಗಳನ್ನು ಈ ಪ್ರದೇಶದಲ್ಲಿ ದಾರಳ ಪ್ರಮಾಣದಲ್ಲಿ ಶೇಖರಿಸಲ್ಪಟ್ಟುದನ್ನು ತ್ಯಜಿಸಿಯೆ ಅವರು ಪಲಾಯನ ಮಾಡಬೇಕಾಗುವುದು. ಈ ಪ್ರಕರಣದಿಂದ ಅಲೆಸ್ಸೆಯಲ್ಲಿದ್ದ ಜರ್ಮನ್ ದಂಡಿಗೆ ಒಳ್ಳೆ ಪಾಠವಾಗಿ, ಅದು ಸರ್ವಾಸ್ತ್ರ ಸುಸಜ್ಜಿತವಾಗಿ ಹಿಂದೆ ನಡೆಯುವ ಕಾರ್ಯದಲ್ಲಿ ಈಗಲೆ ತೊಡಗಿರುವರು.

ಆದರೆ ಫ್ರೆಂಚರು ರ್‍ಯಾನ್‌ಲೆಂಡ್ ಪ್ರದೇಶವನ್ನು ಪ್ರವೇಶಿಸಿದುದು ಪಶ್ಚಿಮ ರಂಗದ ಒಂದು ಕೊನೆಯಿಂದ. ಅಲ್ಲಿ ಅವರಿಗೆ ಮುಂದುವರಿಯಲು ಸೌಲಭ್ಯಗಳಿದ್ದುವು. ಆದರೆ ಸಮಗ್ರ ರ್‍ಯಾನ್‌ಲೆಂಡ್ ಪ್ರದೇಶವನ್ನು ಆಕ್ರಮಿಸುವುದು ಅಷ್ಟು ಸುಲಭವಲ್ಲ. ಕೆಲವು ಕಡೆಗಳಲ್ಲಿ ಜರ್ಮನರ ತಡೆಯ ಎದುರು ಮುಂದೆ ನಡೆಯುವುದೆ ಅಸಾಧ್ಯವೆಂದಾಗಿದೆ. ಭೂಸುರಂಗಗಳಿಂದ ಕೂಡಿದ ಗುಡ್ಡ ಪರ್ವತಗಳನ್ನು ದಾಟಬೇಕಾಗಿಯದೆ. ಅತ್ಯಂತ ನಿಬಿಡವಾದ ಅರಣ್ಯ ಪ್ರದೇಶಗಳನ್ನು ದಾಟಬೇಕು. ಜರ್ಮನರು ಸ್ವಿಸ್ ಕೊಡೆಯಿಂದ ತಮ್ಮ ಬಲವನ್ನು ಹಿಂದಕ್ಕೆ ತೆಗೆದರೂ ಅದರಿಂದ ಅವರಿಗೆ ಅಷ್ಟು ನಷ್ಟವಾಗದೆಂದು ಜನರಲ್ ಐಸನ್‌ಹೋವರ್‌ರವರ ಅಭಿಪ್ರಾಯವು.

ಅಂದರೆ ರ್‍ಯಾನ್‌ಲೆಂಡ್ ಕದನವು ಇನ್ನೂ ನಡೆಯಬೇಕಾಗಿದೆ. ಆರ್ನ್ಹೆಮ್‌ದಲ್ಲಿ ಪ್ರಾರಂ

(೮ನೇ ಪುಟಕ್ಕೆ ಮುಂದುವರಿದಿದೆ.)

1945 1945

ಆಫೀಸು ಕೆಲೆಂಡರುಗಳು

ಮಾರಾಟಕ್ಕೆ ಸಿದ್ಧವಾಗಿವೆ

ಬೆಲೆ 1ರ 0-4-0

ವ್ಯಾಪಾರಿಗಳಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಪ್ರೆಸ್ ರಥಬೀದಿ ಮಂಗಳೂರು

ಜಿಲ್ಲಾ ಸಮಾಚಾರಗಳು

ಮಂಗಳೂರು

ಮೈಲಿಗೆಯ ಪ್ರಾದುರ್ಭಾವ

ನಗರದ ಸಂದುಗೊಂದುಗಳಲ್ಲಿ ಮೈಲಿಗೆ ರೋಗವು ತಲೆಎತ್ತುವುದರಿಂದ ಹೆಲ್ತ್ ಆಫೀಸರರು ಸದ್ಯದಲ್ಲಿಯೇ ಎಲ್ಲರೂ ದಾಕು ಹಾಕಿಸಿಕೊಳ್ಳಬೇಕೆಂದು ಪ್ರಕಟನೆಯನ್ನು ಹೊರಡಿಸಿದ್ದಾರೆ.

ಪ್ರೆಸ್ ಕೆಲಸಗಾರರ ಸಂಘ

ತಾ. ೨೬–೧೧–೪೪ರಲ್ಲು ಶ್ರೀ| ಕೆ. ಕೃಷ್ಣರಾವ್ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಈ ಕೂಲಿಕಾರರ ಸಂಘವು ಜರಗಿತು. ಸಭೆಯಲ್ಲಿ ಕೂಲಿಗಾರರ ಸಲಹೆಗಳು ಯಾವುದೆಂದು ನಿರ್ಣಯಿಸಲ್ಪಟ್ಟವು. ಸದ್ರಿ ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘದ ಆಶ್ರಯದಲ್ಲಿ ಪ್ರೆಸ್ ಮಜೂರರ ಹಾಗೂ ಸಾರ್ವಜನಿಕ ಮಹಾ ಸಭೆಯೊಂದು ಇದೇ ತಾ. ೧೧–೧೨–೪೪ನೇ ಭಾನುವಾರ ಸಾಯಂ. ಗಂಟೆ ೬ಕ್ಕೆ ಮಂಗಳೂರು ಮೈದಾನಿನಲ್ಲಿ ಶ್ರೀ|ಕೆ. ಕಾಂತಪ್ಪ ಶೆಟ್ಟಿ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗುವುದು. ಮೌ| ಡಾ| ಎಚ್.ಎಚ್. ಒಡೆಯರ್ ಇವರು ಪ್ರೆಸ್‌ಮಜೂರರ ನ್ಯಾಯವಾದ ಕೇಳಿಕೆಗಳನ್ನು ಮಹಾಜನರ ಮುಂದೆ ಇಡಲಿರುವರು. ಹೀಗೆಂದು ಪ್ರೆಸ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ತಿಳಿಸುತ್ತಾರೆ.

ಸ್ಮಾರಕ ಹಾಕಿ ಪಂದ್ಯಾಟ

ಅಲನ್ ಪೆರ್ನಾಂಡಿಸ್ ಇವರ ಸ್ಮಾರಕಾರ್ಥದ ಸಲುವಾಗಿ ತಾ. ೨೮-೧೧-೪೪ರಲ್ಲು ಸೈಂಟ್ ಎಲೋಸಿಯಸ್ ಕೋಲೇಜಿನವರಿಗೂ ಕಣ್ಣಾನ್ನೂರಿನ ಸಂಗಡದವರಿಗೂ ನಡೆಯಿತು. ಇದರಲ್ಲಿ ಕಣ್ಣಾನ್ನೂರಿನವರು ಒಂದು ಗೋಲು ಅಧಿಕ ತೆಗೆದು ವಿನ್ನಾದರು. ಅಧ್ಯಕ್ಷರಾಗಿದ್ದ ಶ್ರೀ| ಎ. ಬಿ. ಶೆಟ್ಟರು ಶೀಲ್ಡನ್ನೂ ಪ್ರಿಸಿ ಮೆಡಲುಗಳನ್ನು ಹಂಚಿದರು. ಕಟ್ಟಕಡೆಗೆ ಟೂರ್ನಮೆಂಟ ಕಮಿಟಿಯ ಕಾರ್ಯಕರ್ತರಾದ ಬಿ. ಯಸ್. ಭಾಸ್ಕರ ರೈಗಳವರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ಕ್ರಿಕೆಟು ಪಂದ್ಯಾಟ

ಕಳೆದ ಆದಿತ್ಯವಾರ ಜೋಲಿಕ್ರಿಕೆಟು ಟೀಮಿನವರಿಗೂ ಬೆಂದೂರು ಸಿ. ಜೆ. ಕ್ರಿಕೆಟು ಟೀಮಿನವರಿಗೂ ಕ್ರಿಕೆಟು ಪಂದ್ಯಾಟ ನಡೆಯಿತು. ಇದರಲ್ಲೂ ಬೆಂದೂರು ಟೀಮಿನವರು ವಿಜಯಶಾಲಿಗಳಾದರು.

ಮುಸಲ್ಮಾನರ ಹಬ್ಬ

ಮುಸಲ್ಮಾನರ ಹಬ್ಬಗಳಲ್ಲೊಂದಾದ ಪೆರುನಾಳ್ ಹಬ್ಬವು ಸೋಮವಾರ ದಿನ ನಗರದ ಹೆಬ್ಬೀದಿಗಳಲ್ಲಿ ಧ್ವಜ ಸಹಿತ ಮೆರವಣಿಕೆಯೊಡನೆ ಆಚರಿಸಲ್ಪಟ್ಟು ಕಡೆಗೆ ಮಸೀದಿಯಲ್ಲಿ ಕೊನೆಗೊಂಡಿತು.

ದ. ಕ. ದೇವಾಡಿಗರ ಸಂಘ

ದೇವಾಡಿಗರ ಪ್ರಗತಿಯ ಸಲುವಾಗಿ ಸಭೆಯೊಂದು ಡಿಸೆಂಬರ್ ೩ಕ್ಕೆ ಪೆಂಟ್‌ಲೆಂಟ ಪೇಟೆಯಲ್ಲಿರುವ ಇವರ ಕಾರ್ಯನಿರ್ವಾಹಕ ಭವನದಲ್ಲಿ ನಡೆಯಲಿರುವುದು. ಸ್ವಜಾತಿಯ ಬಂಧುಗಳು ಬಂದು ಸಹಕರಿಸಬೇಕಾಗಿ ಈ ಮೂಲಕ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ದ. ಭಾ| ತೃತೀಯ ಸಂಸ್ಕೃತ ಪರಿಷತ್ತು

ಬಿಜಾಪುರದಲ್ಲಿ ತಾ. ೨೭, ೨೮ರಲ್ಲಿ ವಿಜೃಂಭಣೆಯಿಂದ ನಡೆಯಲಿರುವ ಸಂಸ್ಕೃತ ಪರಿಷತ್ತಿಗೆ ಸೈಂಟ್ ಎಲೋಸಿಯಸ್ ಕೋಲೇಜಿನ ನಿವೃತ್ತ ಸಂಸ್ಕೃತ ಪಂಡಿತರಾಗಿದ್ದ ನಿಡ್ಕೊಡಿ ಅನಂತಕೃಷ್ಣ ಉಪಾಧ್ಯಾಯರು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವರು.

ಜಿಲ್ಲಾ ಹರಿಜನ ಸಂಘ

ಜಿಲ್ಲೆಯ ಹರಿಜನರ ವಾರ್ಷಿಕ ಸಭೆಯು ತಾ. ೩ರಲ್ಲಿ ಶ್ರೀಯುತ ಎ. ಬಿ. ಶೆಟ್ರು ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯ ನಿರ್ವಾಹಕ ಬಿ. ಅನಂತರಾಯರು ಸಂಘದ ವಾರ್ಷಿಕ ಆಯವ್ಯಯಗಳನ್ನು ಸಭೆಯ ಮುಂದಿಟ್ಟರು. ಕಡೆಗೆ ಮುಂದಿನ ವರ್ಷಕ್ಕೂ ಇದೇ ಕಾರ್ಯಕಾರಿ ಮಂಡಲಿಯು ನೇಮಿಸಲ್ಪಟ್ಟಿತು. ಈ ವರ್ಷದ ಸಭೆಯಲ್ಲಿ ಅಮ್ಮೆಂಬಳ ಶ್ರೀನಿವಾಸ ಪೈಗಳು ಗೋವಿಂದರಾಯರ ಬದಲಿಗೆ ಸಭಾಸದರಾಗಿ ನೇಮಿಸಲ್ಪಟ್ಟರು.

ವಿದ್ಯಾರ್ಥಿ ವೇತನ

ಗಾ| ಸಾ| ಬ್ರಾಹ್ಮಣ ಸ್ಕೋಲರ್‌ಶಿಪ್ ಲೀಗ್ ಎಂಬ ಬೊಂಬ್ಬಾಯಲ್ಲಿನ ಸಂಸ್ಥೆಯು ಜಾತಿ ಬಾಂಧವರಾದ ಯೋಗ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವ ಮೂಲಕ ತನ್ನ ಧರ್ಮಕಾರ್ಯವನ್ನು ವಿಶಾಲಗೊಳಿಸಲು ನಿರ್ಧರಿಸಿರುತ್ತದೆ. ಈ ವರ್ಷ ರೂ. ೫೧೫೫ಗಳನ್ನು ಎಲ್ಲಾ ಪ್ರಾಂತ್ಯದೊಳಗಿನ ಸ್ವಜಾತಿ ವಿದ್ಯಾರ್ಥಿಗಳಿಗೆ ಕೊಟ್ಟಿರುತ್ತದೆ, ನಮ್ಮ ಜಿಲ್ಲೆಯಲ್ಲಿನ ವಿದ್ಯಾರ್ಥಿಗಳಿಗೆ ರೂ. ೧೪೪೪ (ಅಂದರೆ ಸುಮಾರು ¼ ಅಂಶ) ಗಳಷ್ಟು ಕೊಡಲಾಗಿದೆ. ಈ ಸಂಸ್ಥೆಯು ಆಡಳಿತಮಂಡಳಿಯಲ್ಲಿ ಪ್ರಭಾವಶಾಲಿ ಸ್ವಜಾತಿ ಸದಸ್ಯರಿದ್ದಾರೆ.

ಗೋದಿ ಪ್ರಚಾರಕ್ಕಾಗಿ

ಜಿಲ್ಲೆಯಲ್ಲಿನ ಅಕ್ಕಿ ಕೊರತೆಯನ್ನು ಆದಷ್ಟು ಮಟ್ಟಿಗೆ ನಿವಾರಿಸುವ ಸಲುವಾಗಿ ಗೋದಿಯನ್ನು ಜನರು ಹೆಚ್ಚಾಗಿ ಉಪಯೋಗಿಸುವಂತೆ ಉತ್ತೇಜನಕೊಡಲು ಜಿಲ್ಲೆಯಲ್ಲಿನ ಎಲ್ಲಾ ಚಿಲ್ಲರೆ ಗೋದಿ ಮಾರಾಟ ಅಂಗಡಿಗಳಲ್ಲಿ ಚಿಲ್ಲರೆ ಪ್ರಮಾಣಗಳ ಬೆಲೆಯನ್ನು ಸ್ವಲ್ಪ ಕಡಿಮೆಮಾಡಲಾಗಿದೆ. ಮಂಗಳೂರು ರೇಶನ್ ಕ್ಷೇತ್ರದಲ್ಲಿ ಗೋದಿ ಸೇರಿನ ಬೆಲೆಯನ್ನು ೪ಆಣೆಯಿಂದ ೩ ಆಣೆ ೧೧ಪೈಗೆ ಇಳಿಸಲಾಗಿದೆ. ಇದೇ ಬೆಲೆ ಜಿಲ್ಲೆಯಲ್ಲೆಲ್ಲಾ ಇಡಲಾಗಿದೆ.

ಅಕ್ಕಿ ಸ್ವೀಕಾರ ಡಿಪೋಗಳ ಸಮಯ

ಮಿಗಿತಾಯದ ಅಕ್ಕಿಯನ್ನು ಸ್ವೀಕರಿಸಲು ಅಧಿಕೃತವಾದ ಸೌತ್‌ಕೆನರಾ ಸೆಂಟ್ರಲ್ ಕೋ-ಒಪರೇಟಿವ್ ಹೋಲ್‌ಸೇಲ್ ಸ್ಟೋರ್‍ಸಿನ ಎಲ್ಲಾ ಅಕ್ಕಿ ಸ್ವೀಕಾರ ಡಿಪೋಗಳು ಸಾಯಂಕಾಲ ೬ಘಂಟೆಗೆ ಮುಚ್ಚುವಂತಹುದಿರುವುದರಿಂದ ಅಕ್ಕಿ ತರುವವರು ಆ ಸಮಯದೊಳಗೆ ತಲ್ಪಿಸುವಂತೆ ಏರ್ಪಡಿಸಬೇಕು. ಮುಚ್ಚುವ ಸಮಯ ನಂತರ ಆ ದಿವಸ ತೆಗೆದುಕೊಳ್ಳಲಾಗುವುದಿಲ್ಲ. ತಂದ ಅಕ್ಕಿಯನ್ನು ಈ ಡಿಪೋಗಳ ಕಟ್ಟಡದಲ್ಲಿಲ್ಲೂ ತಾತ್ಕಾಲಿಕವಾಗಿಯಾದರೂ ಅವಮಾನಾತು ಇಡಬಾರದಾಗಿ ಅಧಿಕಾರಿಗಳ ಹುಕುಂ ಇದೆ.

ಸ್ಟೋರುಗಳ ಕಾಲ ನಿಯಮ

ಎಸ್. ಕೆ. ಸಿ. ಸಿ. ಡಬ್ಲ್ಯೂ ಸ್ಟೋರ್‍ಸಿನ ಅಕ್ಕಿ ಸ್ವೀಕರಿಸುವ ಡಿಪೋಗಳು ಪ್ರತಿ ದಿನ ಬೆಳಿಗ್ಗೆ ೯ರಿಂದ ೧೧ರ ತನಕ, ಮಧ್ಯಾಹ್ನ ೩ರಿಂದ ೬ರ ತನಕವೂ ತೆರೆದಿರುತ್ತವೆ. ಎಲ್ಲಾ ಸರಕಾರಿ ರಜಾ ದಿನಗಳಲ್ಲಿ ಮುಚ್ಚಿರುತ್ತದೆ.

ಅಕ್ಕಿಗೆ ಗೋದಿ ವ ರಾಗಿ

ಸ್ವಲ್ಪ ಸಮಯದ ಹಿಂದೆ ಇಚ್ಛೆಪಟ್ಟಲ್ಲಿ ಅಕ್ಕಿಯ ಬದಲಿಗೆ ಗೋದಿ ಪಡೆದುಕೊಳ್ಳಬಹುದಿತ್ತು. ಎಸ್. ಕೆ. ಸಿ. ಸಿ ಸ್ಟೋರ್‍ಸಿನವರ ಎಲ್ಲಾ ಶಾಖೆಗಳಲ್ಲಿ ಇತರ ಅಕ್ಕಿ ಮಾರುವವರು ಯಾವಾಗಬೇಕಾದರೂ ಅಕ್ಕಿ ಬದಲಿಗೆ ಗೋದಿ ದಾಸ್ತಾನನ್ನು ಬದಲಿಸಬಹುದಿತ್ತು. ಈಗ ಗೋದಿ ಇಲ್ಲವೆ ರಾಗಿಯ ಒಂದಂಶವನ್ನು ಕಡ್ಡಾಯವಾಗಿ ಪಡೆಯಲೇ ಬೇಕಾಗುವ ಕಾನೂನು ಜಾರಿಗೆ ಬಂದಿರುವುದರಿಂದ ಮೇಲಿನ ಅಕ್ಕಿ ಬದಲಿಗೆ ಗೋದಿ ಇಲ್ಲವೆ ರಾಗಿ ದಾಸ್ತಾನು ಪಡೆಯುವ ಕ್ರಮವು ಈ ಸ್ಟೋರ್‍ಸುಗಳಲ್ಲಿ ಮುಂದರಿಸಲಾಗಿದೆ–ಹೀಗೆಂದು ಮಂಗಳೂರು ರೇಶನಿಂಗ್ ಆಫೀಸರರು ತಿಳಿಸುತ್ತಾರೆ.

ಸ್ವೀಕಾರ ಮತ್ತು ವಿಮರ್ಶೆ

ಜೇನಿನ ವ್ಯವಸಾಯ: ಪೈಲೂರು ಲಕ್ಷ್ಮೀನಾರಾಯಣ ರಾವ್, ಬಿ. ಎ. ಚೊಕ್ಕಾಡಿ, ದ. ಕ. ಪುತ್ತೂರು ತಾಲೂಕು ಜೇನು ವ್ಯವಸಾಯಗಾರರ ಸಹಕಾರಿ ಸಂಘ, ಚೊಕ್ಕಾಡಿ ದಕ್ಷಿಣ ಕನ್ನಡ. ಬೆಲೆ ರೂ. ೧–೦–೦. (ಎರಡನೆ ಮುದ್ರಣ).

ಜೇನು ವ್ಯವಸಾಯವು ಗ್ರಾಮ ಕೈಗಾರಿಕೆಗಳಲ್ಲಿ ಒಂದು ಅತ್ಯಂತ ಸುಲಭದಲ್ಲಿ ಧಾರಾಳ ಉತ್ಪತ್ತಿಯನ್ನು ಸಾಧಿಸಲು ಈ ವ್ಯವಸಾಯದಿಂದ ಸಾಧ್ಯವಿದೆ. ಮಾತ್ರವಲ್ಲ ಜೇನು ಅತ್ಯಂತ ಆರೋಗ್ಯಕರವೂ, ಉತ್ತಮತರದ ಆಹಾರವೆಂದು ಪರಿಗಣಿಸಲ್ಪಟ್ಟಿದೆ. ಈ ಪುಸ್ತಕವು ಜೇನಿನ ವ್ಯವಸಾಯವನ್ನು ಕೈಗೊಳ್ಳುವವರಿಗೆ ಒಂದು ಉಪಯುಕ್ತ ಕೈಪಿಡಿಯು. ಪೈಲೂರು ಲಕ್ಷ್ಮೀನಾರಾಯಣ ರಾಯರು ತಮ್ಮ ಅನುಭವದ ಆಧಾರದ ಮೇಲೆ ಈ ಪುಸ್ತಕವನ್ನು ಬರೆದಿರುವರು. ಜೇನಿನ ವ್ಯವಸಾಯ ಸಂಬಂಧದ ಎಲ್ಲಾ ವಿಚಾರಗಳು ಇದರಲ್ಲಿ ಮಂದಟ್ಟಾಗುವಂತೆ ಅನೇಕ ಚಿತ್ರಗಳು ಇದರಲ್ಲಿ ಕೊಡಲಾಗಿವೆ. ಈ ಗ್ರಂಥದ ಮೊದಲ ಮುದ್ರಣವು ಪೂರಾ ಮಾರಾಟವಾಗಿದ್ದು, ಅದೀಗ ಎರಡನೆ ಮುದ್ರಣ ಹೊರಡಿದುದು, ಶ್ಲಾಘನೀಯವು.

ಜೇನು ವ್ಯವಸಾಯಕ್ಕೆ ನಮ್ಮ ಜಿಲ್ಲೆಯು ಅನುಕೂಲ ದೇಶವು. ಆದರೂ ಸಾಕಷ್ಟು ಜನರು ಈ ಕುರಿತು ಉತ್ಸಾಹವನ್ನು ತೋರಿಸದಿರುವುದು ವಿಶಾದಕರವು ನಮ್ಮ ಹಳ್ಳಿಗರು ಪ್ರತಿಯೋರ್ವರಿಂಬಂತೆ ಈ ಉದ್ಯಮವನ್ನು ನಡೆಯಿಸಬಹುದು. ಒಕ್ಕಲಿಗನು ಈ ವೃತ್ತಿಯನ್ನು ಉಪವೃತ್ತಿಯಾಗಿ ನಡೆಯಿಸಬಹುದು ಹಳ್ಳಿ ಶಾಲೆಗಳಲ್ಲಿ ಈ ಕುರಿತು ಬೋಧನೆಯಾಗತಕ್ಕುದಿದೆ. ಅದಕ್ಕೆ ಈ ಪುಸ್ತಕವು ಅತ್ಯಂತ ಉಪಯುಕ್ತವಾಗುವುದು.

ವಿನೋದ ಚಿತ್ರಗಳು: ಮಿತ್ರಮಂಡಳಿ ಮಂಗಳೂರು. ಬೆಲೆ ೧–೪–೦. ಈ ಗ್ರಂಥವು ಜಿಲ್ಲೆಯ ಪ್ರಸಿದ್ಧ ಸಾಹಿತಿಗಳ ಹಾಸ್ಯರಸಭರಿತ ಲೇಖಗಳ ಸಂಗ್ರಹವು. ಲೇಖಗಳೆಲ್ಲ ಉತ್ತಮ ಹಾಸ್ಯರಸಗಳಿಂದಲೂ, ಜೀವನದ ಅನೇಕ ಸನ್ನಿವೇಶಗಳಿಂದಲೂ ಕೂಡಿದ್ದಾಗಿವೆ. ಈ ಸಂಗ್ರಹದಲ್ಲಿ ಅತ್ಯುತ್ತಮವಾದುದರಲ್ಲಿ ಒಂದು ಪಂಜೆ ಮಂಗೇಶರಾಯರ "ಹಳೆಯ ಸಬ್ ಎಸಿಸ್ಟಾಂಟರ ಸಣ್ಣ ಡೈರಿಯಿಂದ" ಎಂಬ ಲೇಖವು. ಹಳ್ಳಿಯ ಶಾಲಾ ಮಾಸ್ತರರ ಜೀವನದ ಹಾಸ್ಯಮಯ ಸನ್ನಿವೇಶಗಳು, ಇದರಲ್ಲಿ ಚಿತ್ರಿತವಾಗಿವೆ.

ಉಡುಪಿ

ಗೀತಾ ಜಯಂತಿ

ಉಡುಪಿಯಲ್ಲಿ ಕಳೆದ ತಾ. ೨೬ರಲ್ಲು ಗೀತಾ ಜಯಂತಿಯ ಸಲುವಾಗಿ ಭಾಷಣಗಳಾದುವು. ಸಭೆಯಲ್ಲಿ ಭಂಡಾರ ಕೇರಿ ಮಠದ ಹಾಗೂ ಪೇಜಾವರ ಮಠದ ಸ್ವಾಮಿಜೀಯವರೂ ಕೂಡಾ ತತ್ವ ಭೋಧಕ ಭಾಷಣಗಳನ್ನಿತ್ತರಂತೆ.

ಇಂಗ್ಲೀಷ್ ಡಾಕ್ಟರರ ನೆರವಿ

ನವಂಬರ್ ೨೬ರಲ್ಲು ಆಂಗ್ಲ ವೈದ್ಯರ ಸಭೆಯೊಂದು ಸರಕಾರೀ ಆಸ್ಪತ್ರೆಯ ವಠಾರದಲ್ಲಿ ನಡೆಯಿತು. ಡಾ. ಪಿ. ಜಿ. ಆಚಾರ್ಯರು ಅಧ್ಯಕ್ಷತೆಯನ್ನು ಅಲಂಕರಿಸಿದ್ದರು. ಮದ್ರಾಸಿನಿಂದ ಅಭ್ಯಾಗತರಾಗಿ ಬಂದ ಡಾ| ವೆಂಕಪ್ಪಕೆಪ್ಟನ್, ಪಂಡಿತ್ ಮತ್ತು ಡಾ| ಸುಂದರಂ ಇವರು ಯುದ್ಧ ಖಾತೆಯಲ್ಲಿ ಜನತಾ ಸೇವೆಯನ್ನು ಮಾಡಲು ಡಾಕ್ಟರರೆಲ್ಲರು ಬದ್ಧ ಕಂಕಣರಾಗಿ ಮುಂದುವರಿಯಬೇಕೆಂದು ಸೂಚಿಸಿದರು. ಅನಂತರ ಡಾ| ನಾರಾಯಣನ್ ಇವರ ಟೀಪಾರ್ಟಿ ಮತ್ತು ಧನ್ಯವಾದಾರ್ಪಣೆಯೊಡನೆ ಸಭೆಯು ವಿಸರ್ಜಿತವಾಯಿತು.

ಮಂಜೇಶ್ವರ

ಇದೇ ಬರುವ ಜನವರಿ ತಾ. ೪, ೫ ಮತ್ತು ೬ನೇ ದಿನಗಳಲ್ಲಿ ನಿಖಿಲ ಕರ್ನಾಟಕ ಚತುರ್ದಶ ಆಯುರ್ವೇದ ಸಮ್ಮೇಲನವನ್ನು ಇಲ್ಲಿ ಜರಗಿಸುವರೆ, ನಿರ್ಧರಿಸಿರುವಷ್ಟೆ. ಆ ಪ್ರಯುಕ್ತ ಸ್ವಾಗತ ಸಮಿತಿಯ ಕಾರ್ಯಕಲಾಪಗಳು ಭರದಿಂದ ಸಾಗುತ್ತಿವೆ. ಸ್ವಾಗತ ಮಂಟಪವು ಈಗಾಗಲೇ ಸಿದ್ಧವಾಗಿರುವುದಲ್ಲದೆ, ಸ್ಥಳೀಯ ಮಹನೀಯರುಗಳಿಬ್ಬರು ಸಮ್ಮೇಳನಕ್ಕೆ ಬರಲಿರುವ ಅತಿಥಿಗಳ ಹಾಗೂ ಪ್ರತಿನಿಧಿಗಳ ಉಪಯೋಗದ ಬಗ್ಗೆ ತಮ್ಮ ಎರಡು ದೊಡ್ಡ ಕಟ್ಟೋಣಗಳನ್ನು ಸ್ವಾಗತ ಸಮಿತಿಯ ವಶ ಕೊಟ್ಟಿರುತ್ತಾರೆ. ಅಲ್ಲದೆ, ಸಾರ್ವಜನಿಕರು ನೂರಾರು ರೂಪಾಯಿಗಳ ಧನ ಸಹಾಯಮಾಡಿ ಆಯುರ್ವೇದದ ಕುರಿತು ತಮಗಿರುವ ಅಭಿಮಾನವನ್ನು ವ್ಯಕ್ತಗೊಳಿಸಿದುದು, ಸ್ತುತ್ಯಾರ್ಹವಾಗಿರುತ್ತದೆ.

ಪುತ್ತೂರು

ತಾ. ೧–೧೨–೧೯೪೪ರಲ್ಲು ಪುತ್ತೂರು ಹ್ಯಾಸ್ಕೂಲಿನ ಹೊಸ ಕಟ್ಟೋಣದ ಬುನಾದಿ ಕಲ್ಲು ಸ್ಥಾಪಿಸುವ ಕಾರ್ಯವನ್ನು ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅನಿವಾರ್ಯ ಗೈರುಹಾಜರಿಯಲ್ಲಿ ಅವರ ಬಗ್ಗೆ ಶ್ರೀ. ಬೆಳ್ಳಂಗಡಿ ಮಂಗೇಶರಾಯರು ನೆರವೇರಿಸಿದರು. ಹ್ಯಾಸ್ಕೂಲ್ ಬಿಲ್ಡಿಂಗ್ ಕಮಿಟಿಯು ಈ ವರೆಗೆ ಸುಮಾರು ರೂ. ೫೨೦೦ನ್ನು ಕಟ್ಟೋಣದ ಬಗ್ಗೆ ಸಂಗ್ರಹಿಸಿ ಇನ್ನು ಸುಮಾರು ರೂ. ೨೫,೦೦೦ ಬೇಕಾಗಬಹುದೆಂದು ಕಾರ್ಯದರ್ಶಿಗಳು ತಿಳಿಸಿದರು.

ಶ್ರೀ. ಮೊಳಹಳ್ಳಿ ಶಿವರಾಯರು ಕಮಿಟಿಯ ಪರವಾಗಿ ಧನಸಹಾಯವನ್ನು ಸಭಿಕರಲ್ಲಿ ಯಾಚಿಸಿದ್ದರ ಫಲವಾಗಿ ರೂ. ೫೭೦೦ಕ್ಕೆ ಮಿಕ್ಕಿ ವಾಗ್ದಾನಗಳು ಸಿಕ್ಕಿವೆ. ಉಳಿದ ಹಣವನ್ನು ಶೀಘ್ರದಲ್ಲಿ ಒದಗಿಸಲು ಧಾರ್ಮಿಕ ಬುದ್ಧಿಯುಳ್ಳವರೂ, ಹಳೆಯ ವಿದ್ಯಾರ್ಥಿಗಳೂ ಸಹಾಯವನ್ನು ಮಾಡಬೇಕೆಂದು ಶ್ರೀ| ಮಂಗೇಶರಾಯರು ಕೇಳಿಕೊಂಡರು. ಶ್ರೀ| ಬೆಳ್ಳಿ ರಾಮಚಂದ್ರರಾಯರು ಧನ್ಯವಾದಗಳನ್ನು ಅರ್ಪಿಸಿದ ಬಳಿಕ ತಿಂಡಿಗಳನ್ನು ಹಂಚಿ ಸಮಾರಂಭವು ಕೊನೆಗೊಂಡಿತು.

ಸುರತ್‌ಕಲ್

ವಿದ್ಯಾದಾಯಿನಿ ಶಾಲೆಯ ನೂತನ ಶಾಲಾ ಕಟ್ಟಡ

ಸುರತ್‌ಕಲ್ ಶಾಲೆಯ ನೂತನ ಕಟ್ಟಡದ ಶಂಕು ಸ್ಥಾಪನೆಯನ್ನು ಚಿತ್ರಾಪುರ ಮಠದ ಶ್ರೀ| ಪಾದಂಗಳವರು ತಾ. ೨೬—೧೧—೪೪ರಲ್ಲು ಮಾಡಿದರು.

ಮೂಲ್ಕಿ

ಬಿಲ್ಲವರ ಸಮಾಜ ಸೇವೆ

ಮೂಲ್ಕಿಯಲ್ಲಿ ಬಿಲ್ಲವ ಸಮಾಜದವರು ಒಂದು ಭಜನಾ ಮಂಡಲಿಯನ್ನು ತಾ.೨೬-೧೧-೪೪ರಲ್ಲು ಪಡುಬಿದ್ರಿ ಯೂನಿಯನಿನ ಅಧ್ಯಕ್ಷರಾದ ಶ್ರೀಯುತ ಯನ್. ನಾಗಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದರು. ಬೋರ್ಡು ಶಾಲೆಯ ಅಧ್ಯಾಪಕರಾದ ವಿದ್ವಾನ್ ಯಂ. ಬಾಬು ಇವರು ಭಜನೆಯ ಆವಶ್ಯಕತೆಯ ಸಲುವಾಗಿ ಸುರಸ ಭಾಷಣವನ್ನು ಕೊಟ್ಟರು. ಅನಂತರ ಕಾರ್ಯಕಾರಿ ಮಂಡಲಿಯ ಚುನಾವಣೆ ನಡೆಯಿತು. ಅಧ್ಯಕ್ಷರು ಮಂಡಲಿಯ ಉತ್ಕರ್ಷಕ್ಕಾಗಿ ನಾನಾ ವಿಧದಿಂದ ಪ್ರಾರ್ಥನೆಯನ್ನು ಮಾಡಿ ಕಡೆಗೆ ೧೧೧ ರೂಪಾಯಿ ದಾನ ಮಾಡುವೆನೆಂದು ಮಾತನ್ನಿತ್ತರು.

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಿಗ್ಗೆ ೬-೨೫.	ರಾತ್ರಿ ೭-೩೦.
ಷಟಲ್ ಕಣ್ಣಾನ್ನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಿಗ್ಗೆ ೯-೨೫
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭

ಸೆಂಟ್ರೆಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ

ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ರಾಜಾಜಿಯವರ ಪುನಃರ್ರಚನೆ

ಯುರೋಪಿನ ಭವಿಷ್ಯ

"ಸಮಾಜೋನ್ನತಿಯೇ ಮಾನವನ ಗುರಿ ಎಂದು ಎಲ್ಲಾ ಶಾಸ್ತ್ರಗಳೂ ತಿಳಿಸುತ್ತವೆ. ಗೀತೆಯಲ್ಲೂ ಅದನ್ನೇ ಹೇಳಲಾಗಿದೆ." ಹೀಗೆಂದು ಬಹು ಕಾಲದಿಂದ ಮೌನವಾಗಿದ್ದ ರಾಜಾಜಿಯವರು ಪಚ್ಚಾಯಪ್ಪಾ ಕಾಲೇಜಿನಲ್ಲಿ ಕೊಟ್ಟ ಒಂದು ಭಾಷಣದಲ್ಲಿ ತಿಳಿಸಿದರು. ಅವರು ಮುಖ್ಯವಾಗಿ ಆರ್ಥಿಕ ಪುನಃರ್ರಚನೆಯ ಕುರಿತು ಮಾತನಾಡಿದರು.

ಸಮತಾವಾದವನ್ನು ಸಮರ್ಥಿಸುತ್ತಾ ಆಚಾರ್ಯರು ಹೀಗೆಂದರು: ಇದುತನಕ ವೈಯಕ್ತಿಕ ಸೊತ್ತಿನ ಲಾಭ ಹೆಚ್ಚಿಸುವಿಕೆಯಲ್ಲಿ ಸಮಾಜಗಳು ಮಗ್ನವಾಗಿದ್ದುವು. ಈಗಲೂ ಸರಕಾರಗಳು ಅತ್ಯಧಿಕ ಲಾಭದ ಕಡೆಗೆ ತಟಸ್ಥಭಾವವನ್ನು ತಾಳಿಕೊಂಡಿವೆ. ಬ್ರಿಟಿಷರಿಗೆ ಈ ಪದ್ಧತಿಯ ಮೇಲೆ ಹೆಚ್ಚಾದ ಪ್ರೀತಿ.

ಆದರೆ ಭಾರತೀಯರು ಪುರಾತನ ಕಾಲದಿಂದಲೂ ಈ ಲಾಭ ಖೋರತನದ ಪದ್ಧತಿಯನ್ನು ಮೆಚ್ಚಲಿಲ್ಲ. ಅವರು ಆಸ್ತಿಪಾಸ್ತಿಗಳನ್ನು ಜನತೆಯ ಹಿತಕ್ಕೆ ಉಪಯೋಗಿಸುವ ಕ್ರಮವೊಂದನ್ನು ಬೋಧಿಸುತಿದ್ದರು. ಈಗಲೂ ಪಾರಂಪರ್ಯವಾಗಿ ಬರುವ ಆಸ್ತಿ ಪಾಸ್ತಿಗಳನ್ನು ಮಾರುವ ಹಕ್ಕು ಆಡಳಿತಗಾರನಿಗೆ ಇರುವುದಿಲ್ಲ.

ರಷ್ಯದ ಪದ್ಧತಿ ತೃಪ್ತಿಕರ

ಈ ಆಧುನಿಕ ಯುಗದಲ್ಲಿ ಭಾರತವೂ ಪಾಶ್ಚಾತ್ಯರ ಈ ಲಾಭ ಖೋರತನಕ್ಕೆ ಮರುಳಾಗಿ, ಜನತೆಯನ್ನು ಸುಲಿದು ತಿನ್ನುವ ಧೋರಣಕ್ಕೆ ಮನವೊಪ್ಪಿಸಿದೆ. ಆದರೆ ರಷ್ಯನರು ಬೇರೆಯೇ ಪದ್ಧತಿಯೊಂದನ್ನು ಹುಡುಕಿದರು. ಈಗಿನ ಯುದ್ಧಾನಂತರ ಜಗತ್ತಿನ ಎಲ್ಲಾ ದೇಶಗಳೂ ರಷ್ಯನ್ ಪದ್ಧತಿಯನ್ನು ಅನುಸರಿಸಿದರೆ ಆಶ್ಚರ್ಯವಲ್ಲ. ಕೃಷಿ ಕೈಗಾರಿಕೆ ಮತ್ತು ಇತರ ಉದ್ಯಮಗಳನ್ನು ರಾಷ್ಟ್ರ ಸರಕಾರವೇ ವಹಿಸಿಕೊಳ್ಳುವುದು ಇದರ ಮೂಲ ತತ್ವ. ಖಾಸಗಿ ಉದ್ಯಮ, ಖಾಸಗಿ ಲಾಭಗಳು ಆಗ ಇಲ್ಲದಂತಾಗುವವು. ಎಲ್ಲರೂ ರಾಷ್ಟ್ರದಹಿತಕ್ಕೆ ದುಡಿಯ ಬೇಕು.

ಯುರೋಪಿನ ಭವಿಷ್ಯ

ಎಲ್ಲಾ ಜನಾಂಗದವರಿಗೆ ಸ್ವಾತಂತ್ರ ಕೊಡುವುದಾಗಿ ಘೋಶಿಸುತ್ತಾ ಕಳೆದ ಯುದ್ಧವು ಕೊನೆಗೊಂಡಿತು. ಈಗಿನ ಯುದ್ಧವೂ ಅದೇ ಘೋಷಣೆಯಿಂದಲೇ ಪ್ರಾರಂಭಿಸಲ್ಪಟ್ಟಿದೆ. ಬ್ರಿಟನ್, ರಷ್ಯಗಳು ಶಕ್ತಿಯಲ್ಲಿ ಬೆಳೆದಿರುವುದರಿಂದ ಯುರೋಪಿನ ಅರೂಪ ಚಿಕ್ಕ ರಾಷ್ಟ್ರವೂ ಸ್ವತಂತ್ರವಾಗಿ ಬಾಳಲು ಸಮರ್ಥವಿಲ್ಲವೆಂದು ಅನುಭವಕ್ಕೆ ಬಂದಿದೆ.

ಕಳೆದ ವರ್ಸೇಲಿಸ್ ಒಪ್ಪಂದದ ಕುಂದುಕೊರತೆಗಳನ್ನು ಪುನಃ ಮಾಡಲಿಕ್ಕಿಲ್ಲವೆಂದು ಈಗ ಶಕ್ತಿ ರಾಷ್ಟ್ರಗಳು ಸಾರಿವೆ. ನಾಜೀಗಳನ್ನು ನಾಶಮಾಡುವುದೇ ತಮ್ಮ ಧ್ಯೇಯವೆಂದು ಮಿತ್ರರು ಅಂದಿರುವರು. ಈ ಕ್ರೈಸ್ತ ಜನಾಂಗಗಳು ತಪ್ಪು ಮಾಡಿದವನಿಗೆ ಕ್ಷಮೆ ಕೊಡಬೇಕೆಂಬ ತತ್ವಗಳನ್ನು ಬಿಟ್ಟೇ ವರ್ತಿಸುವಂತೆ ಭಾಸವಾಗುತ್ತದೆ. ಜರ್ಮನಿಯು ಯೆಹೂದಿಗಳನ್ನು ಶಿಕ್ಷಿಸಿದಂತೆ, ಜರ್ಮನಿಯನ್ನು ಶಿಕ್ಷಿಸಲು ಮಿತ್ರರಾಷ್ಟ್ರಗಳು ಪ್ರಯತ್ನಿಸುವರು.

ಆಸ್ಯದ ವಿಚಾರ

ಆಸ್ಯಾಖಂಡದ ವರ್ಣ ಜನಾಂಗಗಳ ಕುರಿತು ಮಾತನಾಡುತ್ತಾ ರಾಜಾಜಿಯವರು ಹೀಗೆ ತಿಳಿಸಿದರು:

ಚೀನದ ಭವಿಷ್ಯವು ಗೊಂದಲಮಯವಾಗಿದೆ. ಚಾಂಗ್ ಕೈಶೇಕರನ್ನು ಎಲ್ಲರೂ ದೂರುತ್ತಿದ್ದಾರೆ. ರಷ್ಯದ ಸ್ಟೇಲಿನವರು ಜಪಾನಿನ ಕುರಿತು ಕಟುವಾಗಿ ಟೀಕಿಸಿದ್ದು ಅವರಿಗೆ (ರಷ್ಯಕ್ಕೆ) ಚೀನದ ಸಮತಾವಾದಿಗಳೊಡನೆ ಸೇರಿಕೊಳ್ಳುವ ಉದ್ದೇಶದ ಚಿಹ್ನೆ ಎಂದು ಹೇಳಲಾಗಿದೆ. ಇದು ಹೌದಾದರೆ ಸದ್ಯದಲ್ಲೇ ರಷ್ಯವಾಗಲೀ, ಅಮೇರಿಕವಾಗಲಿ ಆಸ್ಯಾಖಂಡದ ಆಡಳಿತವನ್ನು ವಹಿಸುವುದು.

ಭಾರತದ ಪಾತ್ರವೇನು?

"ಜಪಾನು ಸೋಲುವುದೇನೊ ನಿಜ. ಆ ಸೋಲಿನ ನಂತರ ಭಾರತವು ಆಸ್ಯದ ಜನರ ನಾಯಕತ್ವವನ್ನು ವಹಿಸಬೇಕು. ಭಾರತದ ನಾಯಕತ್ವವೂ ಶ್ರೇಷ್ಟವೂ, ಸುಸಂಸ್ಕೃವೂ ಎಂದೆನಿಸಲ್ಪಡುವುದು. ನಾವು ತುಂಬಾ ಕಾಲಹರಣ ಮಾಡಿದ್ದೇವೆ. ನಾವು ನಮ್ಮ ಈ ಭ್ರಾಂತಿ ಮನೋವಿಕಾರಗಳನ್ನು ಬಿಟ್ಟು ಧೈರ್ಯದ ಧೋರಣೆಯೊಂದನ್ನು ಅನುಸರಿಸಿದರೆ ಖಂಡಿತವಾಗಿ ಗುರಿ ಮುಟ್ಟುತ್ತೇವೆ.

ನಾವು ಇದುತನಕ 'ಆಗುವುದಿಲ್ಲ' ವೆಂಬ ಮಾತುಗಳನ್ನೇ ಅಭ್ಯಾಸಮಾಡಿದ್ದೇವೆ. ಈಗ "ಆಗುತ್ತದೆ, ಇರಲಿ," ಎಂಬ ಭಾವನೆಯನ್ನು ತಂದುಕೊಂಡು ಚೈತನ್ಯ, ಚಟುವಟಿಕೆಯಿಂದ ಹೃತ್ಪೂರ್ವಕವಾಗಿ ಕಾರ್ಯ ಮಾಡಿದರೆ ಯಶಸ್ಸು ನಮ್ಮದಾಗುವುದು. ದೇವರ ಹೆಸರಲ್ಲಿ ಹೇಳುತ್ತೇನೆ—ಆತ್ಮಭರವಸೆಯಿಂದ ಕೆಲಸ ಪ್ರಾರಂಭಿಸೋಣ.

ಮೀನುಗಾರಿಕೆಯ ಹೊಸ ಪ್ರಯೋಗ

ಎಡಿನ್ ಬರ್ಗ್ ವಿಶ್ವವಿದ್ಯಾಲಯ ಪ್ರೊಫೆಸರರು ತಮ್ಮ ಕಾಲೇಜುಗಳನ್ನು ಬಿಟ್ಟು ಮೀನುಗಾರಿಕೆಗೆ ಕೈಹಾಕಿರವರು. ಹೊಲಗದ್ದೆಗಳನ್ನು ಯೋಗ್ಯ ಗೊಬ್ಬರಗಳಿಂದ ಸಾರವತ್ತಾಗಿ ಮಾಡಿ ಬೆಳೆಯನ್ನು ಪುಷ್ಟವಾಗಿ ಮಾಡುವಂತೆ ಸಮುದ್ರಗಳಲ್ಲಿ ಸಾರವತ್ತಾದ ಮೀನು ಆಹಾರಗಳನ್ನು ಸೇರಿಸಿ ಮತ್ಸ್ಯಗಳನ್ನು ಕೊಬ್ಬುವಂತೆ ಮಾಡಲು ಅವರು ಪ್ರಯತ್ನಿಸುವರು.

ಸಮುದ್ರ ದಳದಲ್ಲಿ ಜಲಸಸ್ಯಗಳು ಹೆಚ್ಚಾಗಿ ಬೆಳೆಯಿಸಿ, ಆ ನೀರಿನಲ್ಲಿ ಮೀನುಗಳ ಆಹಾರಕ್ಕೆ ಉಪಯುಕ್ತ ಸಾರಜನಕ (ನ್ಯಾಟ್ರೋಜನ್) ಮತ್ತು ರಂಜಕಗಳನ್ನು ಸೇರಿಸಿದರೆ ಆ ಸಾಗರ ಪ್ರದೇಶದ ಮೀನುಗಳು ಈಗಿನದಕ್ಕಿಂತ ಮೂರು ಪಾಲು ಬೆಳೆಯುತ್ತವೆ ಎಂದು ಅವರು ೬೦೦ ಮೀನುಗಳ ಮೇಲೆ ಮಾಡಿದ ಪ್ರಯೋಗದಿಂದ ಕಂಡುಹಿಡಿದಿದ್ದಾರೆ.

ಒಂದು ವರ್ಷದ ಹಿಂದೆ ೬೦೦ ಚಿಕ್ಕ ಮೀನುಗಳನ್ನು ಹಿಡಿದು ಅವುಗಳ ಬಾಲದ ತುದಿಗೆ ಸಂಕೇತ ರೂಪವಾಗಿ ಸರಿಗೆ ಉಂಗುರಗಳನ್ನು ಸಿಕ್ಕಿಸಿ ಸಾರವತ್ತುಗೊಳಿಸಿದ ನೀರಲ್ಲಿ ಬಿಟ್ಟರು. ೧ ವರ್ಷದ ನಂತರ ಉಂಗುರ ಗುರುತಿನ ಮೀನುಗಳನ್ನು ಪುನಃ ಹಿಡಿದು ನೋಡಲು ಅವು ಪುಷ್ಟವಾಗಿ ಬೆಳೆದಿದ್ದುವು.

ವಿವಿಧ ಯುದ್ಧರಂಗಗಳಿಂದ

(೬ನೇ ಪುಟದಿಂದ)

ಭವಾದ ಈ ಕದನವು ಯಶಸ್ವಿಯಾಗುವುದಿತ್ತು. ಆದರೆ ಹವಾಪರಿಸ್ಥಿತಿಯ ದೆಸೆಯಿಂದ ಕೆಲಸವು ಕೆಟ್ಟು ಹೋಯಿತು. ದಕ್ಷಿಣ ಕೊನೆಯಿಂದ (ಸ್ವಿಸ್ ಕೊನೆಯಿಂದ) ರ್‍ಹೈನ್‌ಲೆಂಡ್ ಪ್ರವೇಶವಾಗಿದ್ದುದರಿಂದ ಅದರಿಂದ ಅನೇಕ ಪ್ರಯೋಜನಗಳು ಮಿತ್ರರಿಗೆ ದೊರಕಬಹುದು.

ರ್‍ಹೈನ್‌ಲೆಂಡ್ ಯುದ್ಧವು ಸಮಗ್ರ ಜರ್ಮನಿಯ ಯುದ್ಧವೆಂದು ತಿಳಿಯಬೇಕು. ಈ ಈ ಪ್ರದೇಶದ ಪ್ರತಿಯೊಂದು ಇಂಚಿಗೆ ತಾವು ಹೋರಾಡುವೆವೆಂದು ನಾಜಿಗಳು ಬೊಬ್ಬಿಡುತ್ತಿರುವರು. ಇದಕ್ಕಾಗಿ ರ್‍ಹೈನ್‌ಲೆಂಡಿನ ಪ್ರತಿಯೊಂದು ಕಡೆಯಲ್ಲಿ ಜರ್ಮನಿಯನ್ನು ರಕ್ಷಿಸುವ ಪವಿತ್ರ ಕೆಲಸವನ್ನು ನಡೆಯಿಸಲು "ಜನಸಾಮಾನ್ಯರ ದಂಡುಗಳು" ನಿರ್ಮಿತವಾಗಿವೆ. ರ್‍ಹೈನ್‌ಲೆಂಡಿನ ಪ್ರತಿಯೋರ್ವನ ಕೈಗಳಲ್ಲಿ ಒಂದು ಕೋವಿಯು ಕೊಡಲಾಗಿದೆ. ರ್‍ಹೈನ್‌ಲೆಂಡಿನ ರಕ್ಷಣೆಯಲ್ಲಿ ಜರ್ಮನಿಯ ರಕ್ಷಣೆಯಾಗಬೇಕು. ಆದ ಕಾರಣ ಈ ಪ್ರದೇಶದ ರಕ್ಷಣೆ ತಮ್ಮ ಕರ್ತವ್ಯವೆಂದು ಪ್ರತಿಯೋರ್ವ ಜರ್ಮನರ ಅಭಿಪ್ರಾಯವಿರುವುದು. ರ್‍ಹೈನ್‌ಲೆಂಡ್ ಪ್ರದೇಶವನ್ನು ಹಿಡಿಯಲು ಮಿತ್ರರು ಮಹಾಯತ್ನಗಳನ್ನು ಮಾಡುತ್ತಿರಬಹುದು. ಆದರೆ ಜರ್ಮನ್ ಕಡೆಯಲ್ಲೂ ಅದರಷ್ಟೆ ಮಹತ್ತರ ಯತ್ನಗಳು ಮುಂದೊಡ್ಡಲಾಗಿವೆ. ಈ ಕಾರಣದಿಂದ ಯುದ್ಧವು ಬೇಗನೆ ಕೊನೆಗೊಳ್ಳದು. ಈ ಕಾರಣದಿಂದಲೆ ಚರ್ಚಿಲರು ಈ ಯುದ್ಧ ಇನ್ನೂ ದೀರ್ಘಕಾಲ ನಡೆಯಬಹುದೆಂದು ಪಾರ್ಲಿಮೆಂಟಿನಲ್ಲಿ ಸಾರಿರುವರು.

ಕೊನೆಯವರೆಗೂ ಜರ್ಮನರು ತಮ್ಮ ಪ್ರತಿಭಟನೆಯ ಬಲವನ್ನು ಕಡಿಮೆಮಾಡಲಾರರು. ರ್‍ಹೈನ್ ನದಿಯ ಇಚೆ ಜರ್ಮನಿಯ ಮಹಾ ದಂಡುಗಳು ಹೋರಾಡುತ್ತಿವೆ. ಮಿತ್ರರು ಈ ದಂಡುಗಳು ಉಪಯೋಗಿಸುತ್ತಿರುವ ರ್‍ಹೈನ್ ನದಿಯ ಮೇಲಿನ ಸೇತುವೆಗಳನ್ನು ಕೆಡವಬಹುದು. ಹಾಗೆ ಆ ಸೇತುವೆಗಳು ಕೆಡವಲ್ಪಟ್ಟರೆ ಜರ್ಮನ್ ದಂಡುಗಳಿಗೆ ಹಿಂದೆ ನಡೆಯಲು ಸಾಧ್ಯವಾಗದು. ಆದುದರಿಂದ ಅವರು ಅಲ್ಲಿ ಮಿತ್ರರ ಎದುರು ಕೊನೆಯ ತನಕ ಹೋರಾಡಲೆ ಬೇಕಾಗುವುದು.

ರ್‍ಹೈನ್ ಪ್ರದೇಶದಲ್ಲಿ ಹೋರಾಡುತ್ತಿರುವ ಜರ್ಮನ್ ದಂಡುಗಳು ಕೆಡವಲ್ಪಟ್ಟರೆ, ಅವುಗಳ ಸ್ಥಳದಲ್ಲಿ ಬೇರೆ ದಂಡುಗಳನ್ನು ಕಳುಹಿಸಲು ಜರ್ಮನಿಯೊಡನೆ ಸದ್ಯಕ್ಕೆ ಸೈನ್ಯ ಶಿಬಿರವು ಇರುವುದಿಲ್ಲ. ಅತ್ತಲಾಗೆ ಪೂರ್ವ ರಂಗದಲ್ಲಿ ಕೆಂಪು ಸೇನೆಯು ಚಳಿಗಾಲದ ಆಕ್ರಮಣವನ್ನು ಪ್ರಾರಂಭಿಸಿದೆ. ರ್‍ಹೈನ್‌ಲೆಂಡಿನಲ್ಲಿ ಜರ್ಮನರ ಸೋಲಾದರೆ, ಪೂರ್ವರಂಗದಲ್ಲಿ ಕೆಂಪು ಸೇನೆ ವಿಜಯವಾದರೆ, ಮತ್ತೆ ಜರ್ಮನ್ ಗೊರಿಲ್ಲಾಗಳು ಮಿತ್ರರನ್ನು ಪೀಡಿಸಬಹುದು. ಆದರೆ ನಂತರ ಯುದ್ಧವನ್ನು ಬೇಗನೆ ಕೊನೆಗೊಳಿಸಬಹುದು.

ಆದುದರಿಂದ ಇರೋಪದ ಯುದ್ಧ ರಂಗದಲ್ಲಿ ಪ್ರಕೃತದ್ದು, ಒಂದು ಮಹಾ ಸಂದಿಗ್ಧವೆಂದೆ ತಿಳಿಯಬೇಕು. ಈ ಸಂದಿಗ್ಧದಲ್ಲಿ ಘಟನೆಗಳು ಹೇಗೆ ರೂಪುಗೊಳ್ಳುವವೆಂದು ನೋಡಬೇಕು. ಹವಾಸ್ಥಿತಿ ತೀರ ಕೆಟ್ಟದಿದೆ. ಆದುದರಿಂದ ಈ ಯುದ್ಧವು ಇನ್ನೂ ದೀರ್ಘ ಅವಧಿಗೆ ಮುಂದುವರಿಯಬಹುದು.

ದಕ್ಷಿಣ ಚೀನಾದಲ್ಲಿ ಜಪಾನಿಯ ಆಕ್ರಮಣವು ಬಹಳ ಯಶಸ್ವಿನಡೆದಿದ್ದು, ಚುಂಕಿಂಗ್ ಪ್ರದೇಶ ಮುತ್ತಲ್ಪಡುವ ಸ್ಥಿತಿಯು ಉಂಟಾಗಿದೆ. ಚುಂಕಿಂಗ್ ಹಾಗೆ ಮುತ್ತಲ್ಪಟ್ಟರೂ ಚೀನಿಯರೊಡನೆ ಸಂಪರ್ಕಕ್ಕೆ ಇವರ ಮಾರ್ಗಗಳು ಇವೆ ಎಂದೂ, ಈ ವಿಷಯವು ಇಷ್ಟರತನಕ ಗುಪ್ತವಾಗಿ ಇಡಲಾಗಿತ್ತೆಂದು ವಾರ್ತೆ ಇದೆ. ಚೀನಾದಲ್ಲಿ ಜಪಾನಿಯರ ಹಿಡಿತವನ್ನು ಸಡಿಲಿಸಲು ಈಗಿರುವ ಒಂದೆ ಮಾರ್ಗವೆಂದರೆ ಚೀನಾ ಯುದ್ಧರಂಗದಲ್ಲಿ ಸೋವಿಯಟ್ ಪ್ರವೇಶ. ಜಲಮಾರ್ಗವಾಗಿ ಅಮೇರಿಕವು ಜಪಾನನ್ನು ಬೆನ್ನಟ್ಟಿ ಬರುತ್ತಿದ್ದಾಗ, ನೆಲಮಾರ್ಗವಾಗಿ ರಷ್ಯನರು ಜಪಾನಿಯರನ್ನು ಬೆನ್ನಟ್ಟಿದರೆ ಮಾತ್ರ ಆಗ ಜಪಾನನ್ನು ಸೋಲಿಸುವ ಕಾರ್ಯವು ಸುಲಭವಾಗಬಹುದು. ಆದರೆ ಚೀನಾದ ಕೊಮ್ಯುನಿಷ್ಟ್—ಚಿಯಾಂಗ್ ಕಲಹವು ಒಂದು ಮಹಾ ಕೊರತೆಯಾಗಿ ನಿಂತಿದೆ. ಇದರ ನಿವಾರಣೆ ಬಗ್ಗೆ ಯತ್ನಗಳು ನಡೆಯುತ್ತಿದ್ದರೂ, ಅತಿ ಹಳೆಯದಾದ ಈ ಕಲಹವು ಸುಲಭದಲ್ಲಿ ಪರಿಹಾರವಾಗುವ ಹಾಗೆ ತೋರುವುದಿಲ್ಲ. ಒಂದುವೇಳೆ ಸ್ಟೇಲಿನನು ಜಪಾನಿನ ಮೇಲೆ ಮೆಂಚೂರಿಯದ ಮೇಲೆ ದಂಡೆತ್ತಿ ಬಂದು ಜಪಾನು ಸೋಲಿಸಲ್ಪಟ್ಟರೆ, ಆಗ ಕೊಮ್ಯುನಿಷ್ಟರ ಪ್ರಭಾವದಲ್ಲಿ ಅಖಂಡ ಚೀನಾದ ಸ್ಥಾಪನೆಯಾಗಬಹುದು. ಆದರೆ ಕೆಂಪು ಸೇನೆಯು ಮುನ್ನಡೆಯುವುದೆಂತು?

WANTED

Applications are invited from energetic young men of experience for the post of Checking-Inspectors. Applicants having S. S. L. C. or Intermediate qualification only need apply.

Joint Manager,
Combined Booking Agency.
Car-Street, Mangalore

1945ನೇ ಇಸವಿಯ
ಶಾರದಾ ಪೊಕೆಟ್ ಡೈರಿಗಳು
ಬೆಲೆ 0–12–0
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ. ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—
ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ಹಿಂದುಸ್ಥಾನದ ಜೀವಾಳ

(೧ನೇ ಪುಟದಿಂದ)

ಹಿಂದುಸ್ತಾನದ ಪರಿಚಯ ಅವರಿಗೆ ಚನ್ನಾಗಿದೆ. ಪರಿಸ್ಥಿತಿಯನ್ನು ಚನ್ನಾಗಿ ತಿಳಿದುಕೊಂಡು ಯೋಗ್ಯ ರೀತಿಯಿಂದ ಕಾರ್ಯಪ್ರವೃತ್ತರಾಗುವ ಹದವು ಅವರಿಗೆ ಚೆನ್ನಾಗಿ ಸಾಧಿಸಿದೆ.

ಬ್ರಿಟಿಶ್ ಸರಕಾರಕ್ಕಷ್ಟೇ ಅಲ್ಲ, ತಮ್ಮ ಸ್ವಂತ ಜನರಿಗೆ ಮತ್ತು ಆಪ್ತಮಿತ್ರರಿಗೆ ಕೂಡ ಅವರು ದೊಡ್ಡದೊಂದು ಸಮಸ್ಯೆಯಾಗಿ, ಒಡೆಯಲಾರದ ಒಗಟಾಗಿ ಪರಿಣಮಿಸಿರುವರು. ಇಂದು ಕದಾಚಿತ್ ಬೇರೆ ಯಾವದೇ ದೇಶದಲ್ಲಿ ಅವರಿಗೆ ಸ್ಥಾನವಿರಲಿಕ್ಕಿಲ್ಲ; ಆದರೆ ಹಿಂದುಸ್ತಾನವು ಮಾತ್ರ ಪಾಪ, ಪುಣ್ಯ, ಮೋಕ್ಷ, ಅಹಿಂಸೆ ಮೊದಲಾದವುಗಳ ಬಗ್ಗೆ ಹೇಳುವ ಧಾರ್ಮಿಕ ಗುರುವಿನಂತಿದ್ದ ಅವರನ್ನು ತಿಳಿದುಕೊಳ್ಳುವಂತೆ, ಅವರ ಪ್ರಶಂಸೆ ಮಾಡುವಂತೆ ತೋರುತ್ತದೆ. ಸ್ವಾರ್ಥತ್ಯಾಗ ಮತ್ತು ತಪಸ್ಸಿನಿಂದ ಪುಣ್ಯವನ್ನು ಸಂಪಾದಿಸಿ ಕಿರುಕಳ ದೇವತೆಗಳ ಪ್ರಭುತ್ವವನ್ನು ಕೂಡ ಅಲ್ಲಗಳೆದ ಮಹಾ ವಿಭೂತಿಗಳ ಕತೆಗಳು ಹಿಂದೂ ಪುರಾಣಗಳಲ್ಲಿ ಬೇಕಾದಷ್ಟು ಸಿಕ್ಕುವವು. ಗಾಂಧೀಜಿಯವರ ಆಶ್ಚರ್ಯಕಾರಕ ಉತ್ಸಾಹಶಕ್ತಿ ಮತ್ತು ಅಂತಃಶಕ್ತಿಯನ್ನು ನಿರೀಕ್ಷಿಸಿದಾಗೆಲ್ಲ ಈ ಕತೆಗಳು ನನ್ನ ಸ್ಮರಣೆಗೆ ಬರುವುವು. ಅಕ್ಷಯವಾದ ಯಾವುದೋ ಒಂದು ಆಧ್ಯಾತ್ಮಿಕ ಸಂಗ್ರಹಾಲಯದಿಂದ ಇವು ಬರುತಿರುವಂತೆ ತೋರುವದು. ನಿಜವಾಗಿ ಅವರು ಪ್ರಪಂಚದಲ್ಲಿ ಕಾಣಬರುವ ಸಾಮಾನ್ಯ ಮನುಷ್ಯರಲ್ಲ; ಅವರೊಂದು ವಿಶಿಷ್ಟ ಪಡಿಯಚ್ಚಿನಲ್ಲಿ ಎರಕ ಹೊಯ್ಯಲ್ಪಟ್ಟವರು; ವಿರಳವಾದ ಮಟ್ಟದವರು. ಅವರ ಕಣ್ಣೊಳಗಿಂದ ಅನೇಕ ಸಲ ಅಜೇಯವಾದ ತೇಜಸ್ಸೊಂದು ನಮ್ಮ ಕಡೆಗೆ ದಿಟ್ಟಿಸಿ ನೋಡುತ್ತದೆ. ಹಿಂದುಸ್ತಾನದ ಹಳ್ಳಿಗಳಲ್ಲಿ, ಅದೇಕೆ ಪಟ್ಟಣಗಳಲ್ಲಿ, ಔದ್ಯೋಗಿಕ ನಗರಗಳಲ್ಲಿ ಕೂಡ ಒಕ್ಕಲತನದ ಅಚ್ಚು ಒತ್ತಲ್ಪಟ್ಟಿರುವದು; ಅಂತೆಯೆ ತಮ್ಮ ಹಾಗಿದ್ದರೂ ಭಿನ್ನನಾಗಿರುವ ಈ ಹಿಂದೀ ಸುಪುತ್ರನನ್ನು ದೇವರೆಂದೂ ಪ್ರೀತಿಯ ಮುಖಂಡರೆಂದೂ ಎಲ್ಲರೂ ತಿಳಿದುಕೊಳ್ಳುವುದು ಸ್ವಾಭಾವಿಕವಾಗಿದೆ. ಇವರು ಪ್ರಾಚೀನ ಮತ್ತು ಅರೆಮರೆತುಹೋದವುಗಳನ್ನು ಪುನರುಜ್ಜೀವಿಸಿದರು. ಅವುಗಳಿಗೆ ಆತ್ಮತೇಜಸ್ಸಿನ ಸುಳಿವನ್ನು ದಯಪಾಲಿಸಿದರು. ದಿನದಿನದ ಆಳವಾದ ಕಷ್ಟದಲ್ಲಿ ಕೊಳೆಯುತ್ತಿದ್ದ ಭಾರತೀಯರು ನಿಸ್ಸಹಾಯ ಮಂತ್ರಗಳಲ್ಲಿ ಮತ್ತು ಹಿಂದಿನ ಮತ್ತು ಮುಂದಿನ ಅಸ್ಪಷ್ಟ ಸ್ವಪ್ನಸಾಮ್ರಾಜ್ಯಗಳಲ್ಲಿ ಪರಿಹಾರ ಪಡೆಯಲು ಪ್ರಯತ್ನಿಸುತಿದ್ದರು; ಆದರೆ ಗಾಂಧೀಜಿಯವರು ಮುಂದೆ ಬಂದು ಅವರ ಮನಸ್ಸಿಗೆ ಒಂದು ಬಗೆಯ ಆಸೆಯನ್ನು, ಬಹಳ ಲಿಕಿಲಿಕಿಯಾಗಿದ್ದ ಶರೀರಕ್ಕೆ ಶಕ್ತಿಯನ್ನು ದಯಪಾಲಿಸಿದರು. ಇದರಿಂದ ಭವಿಷ್ಯತ್ತು ಒಳ್ಳೆ ಉಜ್ವಲವಾಗುವಂತೆ ತೋರಿತು. ದ್ವಿಮುಖನಾದ ರೋಮನ್ ದೇವತೆಯಂತೆ ಅವರು ಭೂತ ಭವಿಷ್ಯತ್ತುಗಳೆರಡನ್ನೂ ದಿಟ್ಟಿಸಿ ಎರಡರ ಸಮ್ಮಿಳನ ಮಾಡಲು ಪ್ರಯತ್ನಿಸಿದರು.

ನಮ್ಮಲ್ಲನೇಕರಿಗೆ ಈ ಬಗೆಯ ಒಕ್ಕಲಿಗ ದೃಷ್ಟಿಕೋನವಿಲ್ಲ ಮತ್ತು ಹಳೆಯ ವಿಚಾರಸರಣಿ, ರೂಢಿ ನಡಾವಳಿ ಮತ್ತು ಧರ್ಮಗಳು ನಮಗೆ ಪರಕೀಯವೆಂದು ತೋರುತವೆ. ಆಧುನಿಕರೆಂದು ತಿಳಿದುಕೊಂಡು 'ಪ್ರಗತಿ'ಯ ಬಗ್ಗೆ ನಾವು ವಿಚಾರ ಮಾಡಿದಲ್ಲದೆ ಔದ್ಯೋಗೀಕರಣ ಮತ್ತು ಹೆಚ್ಚಿನ ಜೀವನಮಟ್ಟ ಹಾಗೂ ಸಾಮೂಹಿಕ ಜೀವನದ ಬಗ್ಗೆ ಯೋಚಿಸಿದೆವು. ಒಕ್ಕಲಿಗ ದೃಷ್ಟಿಕೋನವು ಪ್ರತಿಗಾಮಿಯೆಂದು ನಾವೆಣಿಸಿದೆವು. ಕೆಲವರು ಸೊಶಾಲಿಜಂ ಮತ್ತು ಕಮ್ಯುನಿಜಂದ ಬಗೆ ಅನುಕೂಲ ಅಭಿಪ್ರಾಯ ಪಟ್ಟಂತೆ ತೋರಿತು. ಇಂಥವರ ಸಂಖ್ಯೆ ಬೆಳೆಯುತಿದೆ. ರಾಜಕೀಯದಲ್ಲಿ ನಾವು ಗಾಂಧಿಜಿಯವರ ಸಂಗಾತಿಗಳೆಂತಾದೆವು ಮತ್ತು ಅನೇಕ ಸಂದರ್ಭಗಳಲ್ಲಿ ಅವರ ನಿಷ್ಠಾವಂತ ಶಿಷ್ಯರೆಂತಾದೆವು? ಈ ಪ್ರಶ್ನೆಗೆ ಉತ್ತರ ಕೊಡುವುದು ಕಠಿನ. ಗಾಂಧಿಜಿಯವರ ಪರಿಚಯವಿಲ್ಲದವನಿಗೆ ಯಾವ ಉತ್ತರದಿಂದಲೂ ಸಮಾಧಾನವಾಗದು ವ್ಯಕ್ತಿತ್ವವೆಂಬುದಕ್ಕೆ ವ್ಯಾಖ್ಯೆಯಿಲ್ಲ. ಮಾನವರ ಮೇಲೆ ಅಧಿಕಾರ ನಡೆಸುವ ಒಂದು ವಿಶಿಷ್ಟ ಶಕ್ತಿಯದು; ಅವರಲ್ಲಿದು ಪ್ರಚಂಡ ಪ್ರಮಾಣದಲ್ಲಿದೆ. ಅವರೆಡೆಗೆ ಬಂದವರಿಗೆ ಅನೇಕ ಸಲ ಅವರು ಭಿನ್ನಭಿನ್ನವಾಗಿಯೇ ತೋರುವರು. ಜನರು ಅವರಿಂದ ಆಕರ್ಷಿಸಲ್ಪಟ್ಟು ಅವರಲ್ಲಿಗೆ ಬಂದರೂ ಬೌದ್ಧಿಕ ಮನವರಿಕೆಯ ನಂತರವೇ ಅವರ ಅನುಯಾಯಿಗಳಾಗಿ ಅವರ ಸನ್ನಿಧಾನದಲ್ಲಿ ಉಳಿಯುವರು. ಗಾಂಧಿಜಿಯವರ ಜೀವನವೇದಾಂತ ತತ್ವಗಳಿಗೆ ಅವರು ಒಪ್ಪುವುದಿಲ್ಲ. ಇಷ್ಟೇ ಅಲ್ಲ ಅವರ ಅನೇಕ ಗೊತ್ತುಗುರಿಗಳೂ ಅವರಿಗೆ ಒಪ್ಪಿಗೆಯಿಲ್ಲ. ಅನೇಕ ಸಲ ಅವರ ಸ್ವರೂಪಜ್ಞಾನವು ಅನುಯಾಯಿಗಳಿಗೂ ಆಗದು. ಅವರು ಸೂಚಿಸಿದ ಮಾರ್ಗವು ಇಲ್ಲವೆ ಕ್ರಿಯೆಯು ಮನಸ್ಸನ್ನು ಹಿಡಿಯುವಂತಹದಾಗಿದ್ದು ಬೌದ್ಧಿಕ ರೀತಿಯಿಂದ ತಿಳಿದುಕೊಂಡು ಪ್ರಶಂಸಿಸುವಂತಹದಾಗಿರುತ್ತದೆ. ಜೀವಾಳವಿಲ್ಲದ ನಮ್ಮ ರಾಜಕಾರಣದಲ್ಲಿ ದೀರ್ಘಕಾಲದ ವರೆಗೆ ನಿಷ್ಕ್ರಿಯತೆಯು ತುಂಬಿಕೊಂಡ್ಡಿದುದರಿಂದ ಇದೀಗ ಎಂಥ ಬಗೆಯ ಕ್ರಿಯೆಯೂ ಸ್ವಾಗತಾರ್ಹವೆ ಆಗಿದೆ. ಒಂದು ಬಗೆಯ ನೈತಿಕ ತಳಹದಿಯಿರುವ ಆ ವೀರ ಮತ್ತು ಪರಿಣಾಮಕಾರಕವಾದ ಕ್ರಿಯೆಯು ಬುದ್ಧಿಪ್ರಧಾನ ಜನರ ಮತ್ತು ಭಾವನಾತ್ಮಕ ಜನರ ಮನಸ್ಸನ್ನು ಆಳವಾಗಿ ಹಿಡಿಯಿತು. ಗಾಂಧೀಜಿ ತಮ್ಮ ಮಾರ್ಗವು ಯೋಗ್ಯವಾಗಿದೆಯೆಂಬುದನ್ನು ಕ್ರಮಶಃ ನಮ್ಮ ಮನವರಿಕೆ ಮಾಡಿಕೊಟರು; ಅವರ ತತ್ವವಾದವನ್ನು ಒಪ್ಪದಿದ್ದರೂ ಅವರು ಹೇಳಿದಂತೆ ನಾವು ಮಾಡಹತ್ತಿದೆವು. ಅವರ ಬೆನ್ನಹಿಂದೆ ಸಾಗಿದೆವು. ಕ್ರಿಯೆಯ ಹಿಂದಿರುವ ವಿಚಾರದಿಂದ ಅದನ್ನು ಬೇರ್ಪಡಿಸುವುದು ಕದಾಚಿತ್ ಸರಿಯಾದ ರೀತಿಯಲ್ಲ. ಇದರಿಂದ ಮಾನಸಿಕ ತಿಕ್ಕಾಟ ನಡೆಯುವುದು ಮತ್ತು ಮುಂದೆ ತೊಂದರೆಯೂ ಉಂಟಾಗುವುದು. ಮುಖ್ಯವಾಗಿ ಕಾರ್ಯದಲ್ಲಿ ತೊಡಗಿದ ಮತ್ತು ಬದಲಾದ ಪರಿಸ್ಥಿತಿಯ ಬಗ್ಗೆ ಒಳ್ಳೆ ಸೂಕ್ಷ್ಮಜ್ಞಾನವುಳ್ಳ ಗಾಂಧೀಜಿಯವರು ನಮಗೆ ಸರಿಯೆಂದು ತೋರುವ ಮಾರ್ಗದ ಗುಂಟ ಪ್ರಗತಿ ಹೊಂದುವರೆಂದು ಅಸ್ಪಷ್ಟವಾಗಿ ನಾವು ಆಶಿಸಿದ್ದೆವು. ಯಾವದೇ ಪ್ರಸಂಗದಲ್ಲಿ ಅವರು ಅನುಸರಿಸುತಿರುವ ಮಾರ್ಗವು ಈ ವರೆಗಂತೂ ಸರಿಯಾಗಿರುವುದು.

ದೇಶಿ ರಾಜರ ದುರ್ವರ್ತನೆ

ಕೆಲ ಸಂಸ್ಥಾನಗಳ ಹುಚ್ಚು ಆಡಳಿತ

ಬ್ರಿಟಿಷನ ಬೂಟ್ಸು ಬಿಚ್ಚಿದ ಮಹಾರಾಜ

ಹಿಂದೂಸ್ಥಾನದಲ್ಲಿರುವ ೫೦೦ಕ್ಕಿಂತಲೂ ಹೆಚ್ಚು ದೇಶಿ ಸಂಸ್ಥಾಳ ಕುರಿತು ಅನೇಕ ಪುಸ್ತಕಗಳು ಬರೆಯಲ್ಪಟ್ಟಿವೆ. ಕೆಲವು ಸಂಸ್ಥಾನಗಳಲ್ಲಿ ರಾಜರು ಮನಬಂದಂತೆ ವರ್ತಿಸಿ ದುರ್ವರ್ತನೆಯಲ್ಲಿ ಲೋಲರಾಗಿರುವ ಅನೇಕ ಸಂಗತಿಗಳು ಆಗಲೇ ಬಯಲಾಗಿವೆ.

'ದೇಶಿ ರಾಜ್ಯಗಳ ಭವಿಷ್ಯ' ಎಂಬ ಪುಸ್ತಕದಲ್ಲಿ ಕುಲಕರ್ಣಿ ಎಂಬವರು ಈ ಸಂಸ್ಥಾನಗಳ ಆಡಳಿತವನ್ನು ಕಟುವಾಗಿ ಟೀಕಿಸಿ ಬರೆದಿರುವರು. ಅವರು ಕೆಲವು ಸಂಸ್ಥಾನಾಧಿಪತಿಗಳ ಹುಚ್ಚು ವರ್ತನೆಯ ಕುರಿತೂ ಕೆಲವು ಸಂಗತಿಗಳನ್ನು ತಿಳಿಸಿದ್ದಾರೆ.

ಕೆಲವು ಸಂಸ್ಥಾನಗಳಲ್ಲಿ ಹುಲಿಗಳಿಗಿದ್ದಷ್ಟು ಪ್ರಾಧಾನ್ಯ ನ್ಯಾಯನೀತಿ ನಿಯಮಾವಳಿಗಳಿಗಿರುವುದಿಲ್ಲ.

ಕುದುರೆಗಳನ್ನು ಸಾಕಿ ಖಜಾನೆ ಖಾಲಿ ಮಾಡಿಕೊಂಡ ನಿದರ್ಶನಗಳಿವೆ.

ಸುಂದರ ವೈಶ್ಯಾ ಸ್ತ್ರೀಯರು ಆಡಳಿತದಲ್ಲಿ ಕೈಯಾಡಿಸುವುದು ಕೆಲವು ದೇಶೀ ಸಂಸ್ಥಾನಗಳಲ್ಲಿ ಸಾಮಾನ್ಯ ವಿಷಯ. ಅಲ್ಲಿ ಪ್ರಜಾಪ್ರತಿನಿಧಿಗಳಿಗೆ ಆ ಸ್ತ್ರೀಯರಿಗಿದ್ದಷ್ಟು ವರ್ಚಸ್ಸಿಲ್ಲ.

ಒಂದು ಸಂಸ್ಥಾನದಲ್ಲಿ ಕುದುರೆ ಆಟ (ಪೋಲೋ) ನಿಪುಣನಿಗೆ ಏಳು ದಿನ ತನಕ ಖಜಾನೆ ಮಂತ್ರಿಯ ಸ್ಥಾನ ಕೊಡಲಾಯಿತು.

'ಸರ್ ವಿಲಿಯಂ ಬಾರ್ಟನ್ ಎಂಬವರ ಪುಸ್ತಕ ಕೊಟ್ಟ ಒಂದು ಸಂಗತಿ: ಒಂದು ಸಂಸ್ಥಾನದಲ್ಲಿ ವೈಶ್ಯಾ ಸ್ತ್ರೀಯರ ಮೇಲ್ವಿಚಾರಕನಿಗೆ ಸುಮಾರು ವರ್ಷಕ್ಕೆ ೨ ಸಾವಿರ ರೂಪಾಯಿ ಸಂಬಳದ ಅಧಿಕಾರಿ ಇದ್ದ. ಒಂದು ಸಮಯದಲ್ಲಿ ಈತ ಮುಖ್ಯ ನ್ಯಾಯಾಧೀಶರ ಸ್ಥಾನದಲ್ಲೂ ಹಂಗಾಮಿಯಾಗಿ ಕೆಲಸಮಾಡುತಿದ್ದನಂತೆ–೨೦೦ ರೂ. ಸಂಬಳದ ಮೇಲೆ.

ಬಿಳಿಯನ ವೈತಿಕ್ಕಿದ ರಾಜ

ತುಂಬಾ ಅಪಮಾನಕರ ಕೆಲಸಕ್ಕೆ ಒಳಪಡಿಸಲ್ಪಟ್ಟ ಓರ್ವ ತರುಣ ಸಂಸ್ಥಾನಾಧೀಶನ ಕತೆಯನ್ನು ಸರ್ ಹೆನ್ರಿ ಕಾಟನ್ ಎಂಬವರು ತಮ್ಮೊಂದು ಗ್ರಂಥದಲ್ಲಿ ಕೊಟ್ಟಿದ್ದಾರೆ:

ಒಬ್ಬ ದೇಶೀ ರಾಜನು ತನ್ನ ಸಂಸ್ಥಾನದಿಂದ ಆಗ್ರಾ ಪಟ್ಟಣಕ್ಕೆ ಹೋಗಲು ರೈಲಿನ ಫಸ್ಟ್ ಕ್ಲಾಸಿನಲ್ಲಿ ಕೂತು ಅಲ್ಲಿ ಅವನಿಗೆ ಇಬ್ಬರು ಬಿಳಿ ಬ್ರಿಟಿಷ್ ಅಧಿಕಾರಿಗಳು ಸಿಕ್ಕಿದರು. ಅವರು ಬೇಟೆಗೆ ಹೋಗಿ ದಣಿದಿದ್ದರಾದುದರಿಂದ ತಮ್ಮ ಗಾಡಿಯಲ್ಲಿ ಇದ್ದ ರಾಜನನ್ನು ಹೆದರಿಸಿ ಅವನಿಂದ ಚೆನ್ನಾಗಿ ವೈತಿಕ್ಕಿಸಿ 'ಮಾಲಿಸ್' ಮಾಡಿಕೊಂಡರಂತೆ. ಮರಳಿ ಬರುವಾಗ ಆ ರಾಜನು ಮೂರನೇ ತರಗತಿಯ ಗಾಡಿಯಲ್ಲಿ ಬಂದನು. ತನ್ನ ಗೋಳನ್ನು ಸ್ವೀಕರಿಸಲು ಬಂದ ಪ್ರಜೆಗಳಿಗೆ ತಿಳಿಸಿದನಂತೆ. ಮಾತ್ರವಲ್ಲ ಒಬ್ಬ ಬಿಳಿ ಅಧಿಕಾರಿಯು ಆ ರಾಜನಿಂದ ತನ್ನ ಬೂಟ್ಸು ಬಿಚ್ಚಿಸಿ ಕಾಲುಗಳನ್ನು ಒತ್ತಿಸಿಕೊಂಡನಂತೆ. ಈ ಸಂಗತಿಯನ್ನು ಹೈದರಾಬಾದಿನ ರೆಸಿಡೆಂಟರಾದ ಸರ್ ಡೆವಿಡ್ ಬಾರ್ ಎಂಬವರು ನಿಜವೆಂದೊಪ್ಪಿದ್ದಾರೆ.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯ ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು.

(1) ನಿಮ್ಮ ಕೂಡೆ ಮ್ಹಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗ್ಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

(2) ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

(3) ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಾಧ್ಯವಾಗಬಹುದು.

(4) ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವಿಯೋಜನಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪಿತ: 1906.
ಕೆನರಾ ಬೇಂಕ್ ಲಿಮಿಟೆಡ್.
Canara Bank Ltd.

ಪ್ರಚಲಿತ ಸಮಾಚಾರ

(೪ನೇ ಪುಟದಿಂದ)

ವಲಸೆ ರಾಷ್ಟ್ರಗಳು ತಮ್ಮ ಅಧೀನದಲ್ಲೇ ಬಾಳಬೇಕೆಂಬ ನಿರ್ಧಾರಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಬಂದಂತೆ ಕಾಣುತ್ತದೆ.

ಪೌರ್ವಾತ್ಯದ ಕುರಿತು ಆಸಕ್ತಿಯು ಸಂಯುಕ್ತ ರಾಷ್ಟ್ರಗಳಲ್ಲಿ ಎಲ್ಲರಲ್ಲೂ ಇರುತ್ತದೆ. ಸೋವಿಯಟ್ ರಶ್ಯಾಕ್ಕೂ ಈ ತರದ ಆಶಕ್ತಿ ಇರುವುದೆಂದು ಪರ್ಶಿಯಾ ಎಣ್ಣೆ ಪ್ರಕರಣದಿಂದ ತಿಳಿಯಬೇಕಾಗಿಯದೆ. ಸಂಯುಕ್ತರಾಷ್ಟ್ರಗಳಲ್ಲಿ ಈ ಆಸಕ್ತಿಯು ಇರುವುದರಿಂದಲೆ ಅವರಲ್ಲಿ ಅನೇಕ ವಿಚಾರಗಳಲ್ಲಿ ಒಡಂಬಡಿಕೆಗಳು ಆಗುತ್ತಿರುವುದಿಲ್ಲ ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆ, ಪೋಲೆಂಡಿನ ಗಡಿ ಸಮಸ್ಯೆ, ಚೀನಾದಲ್ಲಿ ಕೊಮ್ಯುನಿಸ್ಟ್–ಚಿಯಾಂಗ್ ಸಮಸ್ಯೆ ಇವುಗಳೆಲ್ಲಾ ಪರಿಹಾರವಾಗದಿರುವುದು ಇದೇ ಅಸಕ್ತಿಯು ಕಾರಣವಿರಬಹುದು.

ಮೊದಲು ಈ ಯುದ್ಧವು ಆದರ್ಶವಾದಿ ಯುದ್ಧವೆಂದೂ, ಪ್ರಜಾಪ್ರಭುತ್ವ ನೀತಿಯನ್ನು ಎತ್ತಿ ಹಿಡಿಯುವುದು ಸಂಯುಕ್ತ ರಾಷ್ಟ್ರಗಳ ಧ್ಯೇಯವೆಂದು ಸಾರಲಾಗಿದ್ದರೂ, ಬರಬರುತ್ತಾ, ಸಂಯುಕ್ತ ರಾಷ್ಟ್ರಗಳ ನಿಜವಾದ ಧೋರಣದ ರಹಸ್ಯವು ಬೆಳಕಿಗೆ ಬರುತ್ತಿದೆ.

ಈ ತರದಲ್ಲಿ ಈಗಿನ ಈ ಯುದ್ಧದ ಸಮಸ್ಯೆಗಳು ಗೂಢವಾಗುತ್ತಾ ಬರುವುದರಿಂದಲೆ ಈ ಯುದ್ಧವು ಸದ್ಯಕ್ಕೆ ಕೊನೆಗೊಳ್ಳದು. ಬ್ರಿಟಿಷ್ ಪ್ರಧಾನ ಚರ್ಚಿಲ್ಲರು, ಇದಕ್ಕೆ ಹೆಚ್ಚಿನ ಅವಧಿಯನ್ನು ಹಾಕಿರುವರು. ಕೆಲವೆ ತಿಂಗಳಹಿಂದೆ ಇವರಲ್ಲಿದ್ದ ವಿಜಯದ ಕುರಿತು ಹುರುಪು ಈಗ ಒಮ್ಮಿಂದೊಮ್ಮೆ ಕುಂದಲು ಕಾರಣವೇನು? ಚೀನಾದಲ್ಲಿ, ಚಿಯಾಂಗ್–ಕೊಮ್ಯುನಿಸ್ಟ್ ಭೇದವು ಯಾಕೆ ನಿವಾರಣೆಯಾಗುವುದಿಲ್ಲ? ಸ್ಟೈಲೀನನು ಜಪಾನಿಗೆ ಯಾಕೆ ಧಂಡೆತ್ತಿ ಹೋಗುವುದಿಲ್ಲ? ಈ ಪ್ರಶ್ನೆಗಳೆಲ್ಲಾ ಅತೀ ಗೂಢ ಇವೆ. ಇವುಗಳಿಗೆ ಸದ್ಯಕ್ಕೆ ಉತ್ತರವೀಯುವುದು ಸಾಧ್ಯವಿಲ್ಲ. ಯುದ್ಧ ಮುಗಿದು, ಎಲ್ಲವೂ ಶಾಂತವಾದ ಮೇಲೆ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ದೊರಕಬಹುದು.

ಬ್ರಿಟಿಷರಿಂದ ಹಬಸಿ ರಾಷ್ಟ್ರವು ಇಟಲಿಯ (ಮುಸಲೋಸಿಯ ಕೈಗಳಿಂದ) ವಿಮುಕ್ತಗೊಳಿಸಲಾಗಿತ್ತಷ್ಟೆ. ಮೊನ್ನೆ ಬಂದ ಒಂದು ವಾರ್ತೆಯಿಂದ ಹಬಸಿ ರಾಷ್ಟ್ರವು ಇಟೆಲಿಯನ್ ಅಧೀನ ರಾಷ್ಟ್ರವಾಗುಗಿದ್ದುದು ಬ್ರಿಟಿಷ್ ಆಶ್ರಿತ ರಾಜ್ಯವಾಗಿರುವುದೊ ಎಂಬ ಸಂದೇಹವು ಉಂಟಾಗಿದೆ. ೧೯೪೨ರಲ್ಲಾದ ಒಪ್ಪಂದದ ಪ್ರಕಾರ ಅಭಿಸೀನಿಯದ ಆರ್ಥಿಕ, ಸಾಂಸ್ಕೃತಿಕ ಇತ್ಯಾದಿ ವಿಚಾರಗಳು ಬ್ರಿಟಿಷ್ "ಸಲಹೆಗಾರ" ಆಡಳಿತಕ್ಕೆ ಒಳಪಟ್ಟು ಹಬಸಿ ರಾಷ್ಟ್ರವು ಒಂದು ಆಶ್ರಿತ ರಾಜ್ಯದ ಮಟ್ಟಕ್ಕೆ ಇಳಿದಿರುತ್ತದೆ. ಹಬಸಿ ಚಕ್ರವರ್ತಿಗಳಿಗೆ ಈ ತರದ ರಕ್ಷಣೆಯು ಸರಿದೋರುವುದಿಲ್ಲ. ಸಲಹೆಗಾರರ ಸಂಬಳವಾಗಿ ಹಬಸಿಯವರು ದಾರಳ ಹಣವನ್ನು ಬ್ರಿಟಿಷರಿಗೆ ಒಪ್ಪಿಸಬೇಕಾಗಿದೆ. ಅಲ್ಲಿನ ಜಿಬೂಟಿ–ಅಡಿಸ್ ಅಬಾಬ ರೈಲ್ವೆ ಅಡವು ಬರಕೊಳ್ಳಲಾಗಿದೆ. ಬ್ರಿಟಿಷ್ ಸೋಮಾಲಿಲೆಂಡನ ಸಮೀಪವಿರುವ ಹಬಸಿ ರಾಜ್ಯದ ಓಗಾಡೆನ್ ಪ್ರದೇಶವು ಬ್ರಿಟಿಷ್ ಸೈನಿಕರ ಆಡಳಿತಕ್ಕೆ ಒಳಗಾಗಿತ್ತು. ಅದನ್ನೀಗ ಶಾಸ್ವತವಾಗಿ ತಮ್ಮ ರಾಜ್ಯಕ್ಕೆ ಕೂಡಿಸಿಕೊಳ್ಳುವ ಆಶೆಯು ಹುಟ್ಟಿರುತ್ತದೆ. ಈ ವಿಚಾರಗಳ ಕುರಿತು ಹಬಸಿ ಚಕ್ರವರ್ತಿಗೂ ಬ್ರಿಟಿಷ್ ಪ್ರತಿನಿಧಿಗಳಿಗೂ ಬಹಳ ದೀರ್ಘದ ಮಾತುಕತೆಗಳು ನಡೆದುವಾದರೂ ಹಬಸಿ ಚಕ್ರವರ್ತಿಗಳಿಗೆ ಯಾವತ್ತು ಪರಿಹಾರವು ದೊರಕಲಿಲ್ಲ. ಅವರೀಗ ಅಮೇರಿಕದೊಡನೆ ದೂರಿಟ್ಟಿರುವರು.

ಆದರೆ ಅಮೇರಿಕವೊ! ಬ್ರಿಟಿಷ ಸಾಮ್ರಾಜ್ಯಶಾಹಿಗೆ ಅಮೇರಿಕದ ಡಾಲರು ಸಾಮ್ರಾಜ್ಯಶಾಹಿಯು ಏನು ನೀತಿ ಹೇಳಬಲ್ಲದು. ಬ್ರಿಟಿಷರದು ಸಾಮ್ರಾಜ್ಯ ವಿಸ್ತರಣೆ ನೀತಿಯಾಗಿದ್ದರೆ, ತನ್ನ ಡೊಲ್ಲರು ಎಲ್ಲೆಲ್ಲೂ ಹರಿದಾಡುವಂತೆ ಮಾಡುವುದು ಅಮೆರಿಕದ ನೀತಿಯು. ಚೀನದಲ್ಲೂ ಇದೇ ನೀತಿಯನ್ನನುಸರಿಸಿ, ಅಮೇರಿಕನರು ವರ್ತಿಸುತ್ತಿರುವರು. ಉತ್ತರ ಚೀನಾವು ಸಂಪೂರ್ಣ ಕೊಮ್ಯುನಿಸ್ಟ್ ಪ್ರದೇಶವು. ಕೊಮ್ಯುನಿಷ್ಟರೊಡನೆ ೫೦ ಲಕ್ಷ ಸೈನಿಕರ ಬಲವು ಇರುವುದು. ಚಿಯಾಂಗರ ಕೌಮಿಂಟಾಂಗ್ ಸರಕಾರಕ್ಕೂ, ಕೊಮ್ಯುನಿಸ್ಟರಿಗೂ ಸರಿಬೀಳುವುದಿಲ್ಲ. ಚಿಯಾಂಗರದು ಪೆಸಿಸ್ಟ್ ಮನೋಭಾವವು. ಅವರು ಕೊಮ್ಯುನಿಷ್ಟರ ಅತ್ಯಂತ ಕಡುವಾದ ವೈರಿಗಳು. ಕೊಮ್ಯುನಿಸ್ಟರನ್ನು ಒತ್ತಿ ಹಿಡಿಯಲು ಅವರು ತಮ್ಮ ಸೇನಾಬಲದ ಅತ್ಯುತ್ತಮವಾದ ವಿಭಾಗವನ್ನು ಉಪಯೋಗಿಸುತ್ತಿರುವರು. ಅವರು ಜಪಾನನ್ನು ವಿರೋಧಿಸುತ್ತಿದ್ದರು ಅವರಿಗೆ ಕೊಮ್ಯುನಿಸ್ಟರ ಮೇಲೆ ಹಗೆ ಹೆಚ್ಚು. ಯೆನಾನರೆಂಬವರು, ಈ ಕೊಮ್ಯುನಿಸ್ಟರ ನಾಯಕರು.

ಕೊಮ್ಯುನಿಷ್ಟ ಯನಾನರಿಗೂ ಚಿಯಾಂಗರಿಗೂ ಒಂದು ಒಪ್ಪಂದವಾಗಿ ಬಿಟ್ಟರೆ ಆಗ ಚೀನದಲ್ಲಿ ಕೊಮ್ಯುನಿಷ್ಟ ಪ್ರಭಾವವು ಹೆಚ್ಚುವುದು. ಆಧುನಿಕ ಚೀನಾದ ಸಂಸ್ಥಾಪಕರಾದ ಡಾ। ಸನ್ ಯಾಟ್ ಶೆನ್‌ರ್ ಕಾಲದಲ್ಲಿ ಚೀನಕ್ಕೆ ಸೋವಿಯಟ್ ರಷ್ಯದಿಂದ ತುಂಬಾ ಸಹಾಯವು ಒದಗಿರುತ್ತದೆ. ತಮ್ಮ ಬಂಧುಗಳನ್ನು ಬಹಳವಾಗಿ ಹಿಂಸಿಸಿದ ಚಿಯಾಂಗರ ಮೇಲೆ ಅವರಿಗೆ ಅಷ್ಟೊಂದು ಹಿತ ದೃಷ್ಟಿಯಿಲ್ಲ. ಈ ಕಾರಣಗಳಿಂದ ಕೊಮ್ಯುನಿಷ್ಟ ಪ್ರಭಾವಿತ ಚೀನವು ಮುಂದಕ್ಕೆ ಯಾವತ್ತೂ ವಿಚಾರಗಳಲ್ಲಿ ಸೋವಿಯಟ್ ರಷ್ಯದ ರಾಗಕ್ಕೆ ಮಣಿಯುವುದಲ್ಲದೆ ಅದು ಅಮೆರಿಕದ ಡೊಲ್ಲರಿನ ಕಡೆ ಮಾಲದು. ಚೀನಾದಲ್ಲಿ ಅಮೆರಿಕನ್ ಡೊಲ್ಲರು ಬೇರೂರುವ ಕುರಿತು ಬ್ರಿಟಿಷ ಸಹನೆಯು ಇರುವುದಿಲ್ಲ. ಕೊಮ್ಯುನಿಷ್ಟ ಕೌಮಿಂಗ್‌ಟಾಂಗ್ ವಿವಾದವು ಬೆಳೆದು ಚೀನಾವು ಜಗತ್ತಿನ ಲೋಕಾಪವಾದಕ್ಕೆ ಒಳಗಾಗಬೇಕೆಂಬುದು ಬ್ರಿಟನಿನ ಸದ್ಯದ ನೀತಿ ಇರಬಹುದು. ಚಿಯಾಂಗರ ಪಕ್ಷವು ಕೊಮ್ಯುನಿಷ್ಟರೊಡನೆ ಕಲೆಯುವ ಬದಲಾಗಿ ಬೇರೆ ಇರಬೇಕಾಗಿ ಅಮೆರಿಕದ ಇಚ್ಛೆಯು.

ಕೊಮ್ಯುನಿಷ್ಟರಿಗೆ ಸಣ್ಣ ಒಕ್ಕಲಿಗರ ಬೆಂಬಲವು ಇದೆ. ಚಿಯಾಂಗರಿಗೆ ಶ್ರೀಮಂತ ಭೂಮ್ಹಾಲಿಕರ ಮತ್ತು ಮಧ್ಯಮ ವರ್ಗದ ಬೆಂಬಲವು ಇದೆ. ಚಿಯಾಂಗರು ಒಳ್ಳೆಪ್ರತಿಭಾ ಶಾಲಿಗಳು. ಶಾಂತವಾದ ರೀತಿಯಲ್ಲಿ ದುಡಿಯುವರ್ಗದ ಹಿತಗಳನ್ನು ಸಾಧಿಸುವುದು ಕೊಮ್ಯುನಿಷ್ಟ ಧ್ಯೇಯ. ಅದಕ್ಕಾಗಿ ಅವರಿಗೆ ಶ್ರಿಮಂತ ವರ್ಗದ ಮತ್ತು, ಮಧ್ಯಮ ವರ್ಗಗಳ ಮೇಲೆ ಒಳ್ಳೆಪ್ರಭಾವವುಳ್ಳ ಚಿಯಾಂಗರನ್ನು ಉಪಯೋಗಿಸುವ ಆಶೆ ಇದೆ. ಚೀನಾದ ಕೊಮ್ಯುನಿಷ್ಟರು ಶಾಂತವಾದ ರೀತಿಯಲ್ಲೆ ಕ್ರಾಂತಿಯನ್ನು ನಡೆಯಿಸಬೇಕಾಗಿ ಸ್ಟೈಲೀನರ ಉದ್ದೇಶವು ಇರುತ್ತದೆ. ಮೊದಲು ತಮ್ಮಲ್ಲಿ ಶಿಭಿರ ಕಟ್ಟಿದ ಜಪಾನನ್ನು ಹೊರ ಓಡಿಸಬೇಕು ನಂತರ ನಮ್ಮ ಗೃಹ ವ್ಯವಸ್ಥೆಯನ್ನು ಕೈಕೊಳ್ಳಬಹುದು ಎಂದು ಚಿಯಾಂಗರು ಹೇಳುತ್ತಿರುವರು. ಆದರೆ ಭವಿಷ್ಯದ ಕುರಿತು ಚಿಯಾಂಗರಿಂದ ಆಶಾಸ್ವನಗಳು ಕೊಮ್ಯುನಿಷ್ಟರಿಗೆ ಈಗಲೆ ದೊರಕಬೇಕಾಗಿದೆ. ಕೊಮ್ಯುನಿಷ್ಟರೊಡನೆ ಯಾವತ್ತು ಶರತುಗಳನ್ನು ಮಾಡಿಕೊಳ್ಳಲು ಚಿಯಾಂಗರ ಗರ್ವವು ಒಂದು ಅಡ್ಡಿಯಾಗಿರುತ್ತದೆ. ಹೀಗಾಗಿ ಚೀನಾದಲ್ಲೂ ಅತ್ಯಂತ ಶೋಚನೀಯ ಬಿಕ್ಕಟ್ಟಿನ ಪರಿಸ್ಥಿತಿಯು ಉಂಟಾಗಿರುವುದು. ಈ ಕಾರಣದಿಂದಲೆ ಸ್ಟಿಲ್‌ವೆಲ್ಲರು ಚೀನಾ ರಂಗದ ಸರ್ವಾಧಿಕಾರವನ್ನು ಕೇಳಿದ್ದು. ಅವರಿಗೆ ಆ ಸರ್ವಾಧಿಕಾರವು ಕೊಡಲಾಗುತಿದ್ದರೆ ಜಪಾನಿಗೆ ವಿರೋಧ ಹೋರಾಟದ ವ್ಯವಸ್ಥೆಯು ಚೆನ್ನಾಗಿ ಆಗುತಿತ್ತು. ಕಾರಣ ಅವರಿಗೆ ಕೊಮ್ಯುನಿಷ್ಟರ ಬೆಂಬಲವು ದೊರಕಬಹುದಿತ್ತು. ಆದರೆ ಅದರಿಂದ ಚೀನಾದ ಗೌರವಕ್ಕೆ ಭಂಗ ಬರುತಿತ್ತು.

ಚೀನಾದ ಬಿಕ್ಕಟ್ಟನ್ನು ಪರಿಹರಿಸಲು ಅಮೆರಿಕದ ಉಪಾಧ್ಯಕ್ಷರಾದ ವಾಲ್ಲೆಸರು ಹೋಗಿ ಯತ್ನಿಸಿ ಯಾವ ಫಲವನ್ನು ಪಡೆಯದೆ ಹಿಂತೆರಳಿದರು. ಅಧ್ಯಕ್ಷ ರೂಸ್‌ವೆಲ್ಟರ ಈ ಬಿಕ್ಕಟ್ಟಿನ ಪರಿಹಾರದ ಕಾರ್ಯವನ್ನು ಕೈಗೊಳ್ಳುವರೆಂದೂ ಅವರು ಚೀನಾಕ್ಕೆ ಪ್ರವಾಸಗೆಯ್ಯಬಹುದೆಂದು ವಾರ್ತೆಗಳು ಇವೆ. ಅವರ ಇಚ್ಛೆ ಮೇರೆಗೆ ಸರ್ವ ಪಕ್ಷಗಳ ಪ್ರಾತಿನಿಧ್ಯದ ಒಂದು ಮಂತ್ರಿಮಂಡಳವು ಈಗ ಚಿಯಾಂಗರಿಂದರಚಿಸಲ್ಪಟ್ಟಿದೆ. ಅದರೆ ಕೊಮ್ಯುನಿಷ್ಟರೊಡನೆ ಯಾವತ್ತೂ ಒಪ್ಪಂದಗಳಾಗಲಿಲ್ಲ.

ಚೀನಾದ ಮೇಲೆ ಜಪಾನಿಯ ಒತ್ತಡವು ಹೆಚ್ಚುತ್ತಾ ಬಂದಿದೆ. ಚುಂಕಿಂಗ್ ಪ್ರದೇಶವು ಸದ್ಯದಲ್ಲೆ ಜಪಾನಿಯರಿಂದ ಮುತ್ತಲ್ಪಟ್ಟು ಅದಕ್ಕೆ ಬಹೀರ್ ಲೋಕದ ಯಾವತ್ತೂ ಸಂಪರ್ಕಗಳು ಕಡಿದು ಹಾಕುವ ತರದಲ್ಲಿ ಜಪಾನಿಯರೂ ಅದನ್ನು ಮುತ್ತುತಿರುವರಂತೆ. ಈ ಕಾರ್ಯದಲ್ಲಿ ಅವರಿಗೆ ಯಶಸ್ಸು ದೊರಕಿದರೆ, ಮಿತ್ರರು ಚೀನಾಕ್ಕಾಗಿ ಇಷ್ಟರ ತನಕ ವಹಿಸಿದ್ದ ಶ್ರಮಗಳು ನೀರಿನಲ್ಲಿ ಹೋಮದಂತಾಗುವವು.

ಅಂತಃಕಲಹದ ದಸೆಯಿಂದ ಇಷ್ಟೆಲ್ಲಾ ಅನರ್ಥಗಳು ಚೀನಾನದಲ್ಲಿ ನಡೆದು ಬಿಟ್ಟಿವೆ. ಇದರಲ್ಲಿ ಭಾರತೀಯರಿಗೆ ಉತ್ತಮ ಪಾಠವಿದೆ.

ದಿನವಹಿ ಉಪಯೋಗದ ಲೋಹದ ಪಾತ್ರಸಾಮಾನುಗಳು

ಖಾತರೀ ಬಾಳಿಕೆಯುವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ॰ ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 6- 4
7. Other liabilities and undisbursed profits	3,62,469- 2- 5		
Total	1,14,27,102-10-11	Total	1,14,27,102-10-11

ಸಮತಾವಾದಿ ಚೀನಾ

ಚೀನಿ ಕೊಮ್ಯುನಿಸ್ಟರ ಸ್ವತಂತ್ರ ರಾಜ್ಯ

ಜಪಾನನ್ನು ಗೆಲ್ಲುವುದೇ ಗುರಿ

ಇಂದಿಗೆ ಐದು ವರ್ಷಗಳಿಂದ ಚೀನಿಯ ಸಮತಾ ವಾದಿಗಳ ಕುರಿತು ಯಾರಿಗೂ ಸ್ಪಷ್ಟವಾದ ವಿಚಾರ ವಿಷಯಗಳು ಗೊತ್ತಿರಲಿಲ್ಲ. ಅವರು ಗೋಪ್ಯವಾಗಿ ತಮ್ಮ ಕೆಲಸವನ್ನು ಸಾಗಿಸುತಿದ್ದರು. ಚೀನಾ, ರಷ್ಯಾ, ಗಡಿನಾಡು ಪ್ರದೇಶದಲ್ಲಿ ರಷ್ಯದ ಪ್ರಭಾವದಿಂದಲೋ ಎಂಬಂತೆ ಸಮತಾವಾದ ಭಾವನೆಯುಅಲ್ಲಿ ಹೆಚ್ಚಿದೆ.

೧೦ ಲಕ್ಷ ಚದರ ಮೈಲು ವಿಸ್ತಾರದ ಪ್ರದೇಶವು ಚೀನಿ ಸಮಾತಾ ವಾದಿಗಳ ವಶದಲ್ಲಿದೆ. ೮೦ ಲಕ್ಷ ಜನರು ಇಲ್ಲಿ ವಾಸಿಸುವರು ಇದು ಬಹು ಫಲವತ್ತಾದ ಪ್ರದೇಶವಾಗಿದ್ದು ಜನರು ತುಂಬಾ ಸಂಪತ್ಸಮೃದ್ಧಿಯಿಂದ ಕೂಡಿರುವರು. ತಿನ್ನುಣ್ಣಲ್ಲಿಕ್ಕೆ ಅವರಿಗೆ ಯಾವ ತೊಂದರೆಯೂ ಇಲ್ಲ.

ಗುಹೆಗಳ ರಾಜಧಾನಿ

ಈ ಸಮತಾ ವಾದಿಗಳ ರಾಜಧಾನಿ ಯೆನಾನ್ ಎಂಬ ೨೫ ಸಾವಿರ ಜನಸಂಖ್ಯೆಯ ಸಣ್ಣ ಪಟ್ಟಣ. ಇದು ಗುಡ್ಡಸ್ಥಳದಲ್ಲಿ ಗುಹೆ ರೂಪದಲ್ಲಿ ರಚಿಸಲ್ಪಟ್ಟಿದ್ದು ಇರುತ್ತದೆ. ಎಂಟು ಮಾಳಿಗೆಯ ಒಂದು ಆಸ್ಪತ್ರೆಯು ಗುಹೆಯಲ್ಲೇ ಇದೆ. ಗುಹಾಲಯವೊಂದರಲ್ಲಿ ೨೦೦೦ ವಿದ್ಯಾರ್ಥಿಗಳ ವಿಶ್ವ ವಿದ್ಯಾಲಯ ಕೇಂದ್ರವಿದೆ. ಮನೆಗಳೆಲ್ಲವೂ ಗುಹೆಗಳೇ ಆಗಿವೆ.

ಈ ಸಮತಾ ವಾದಿಗಳು ಒಂದು ಕಾಲದಲ್ಲಿ ನಿರುದ್ಯೋಗಿ ತಿರುಕರಾಗಿದ್ದರು. ಅಲ್ಲಿನ ತರುಣ ಸಮತಾ ವಾದಿಗಳು ಈ ತಿರುಕ ಜನರನ್ನು ಕ್ರಮೇಣ ತಮ್ಮ ತತ್ವಕ್ಕೆ ಒಲಿಸಿ ಕೊಂಡರು. ಈಗ ಅವರು ಸುಖವಾಗಿ ಮನ ಹಿತ್ತಿಲು ಹೊಲಗಳನ್ನು ಮಾಡಿ ಕೊಂಡಿದ್ದಾರೆ.

ಮಜೂರ ಸಂಘಗಳು

ಈ ಚೀನಿ ಸಮತಾ ವಾದಿಗಳ ಬಳಿ ಒಳ್ಳೇ ತರಬೇತು ಪಡೆದ ೪೭೦ ಸಾವಿರ ಸೈನ್ಯವಿದೆ. ಯುದ್ಧ ಶಿಕ್ಷಣ ಪಡೆದ ನಾಗರಿಕರು ಅಲ್ಲಿ ೨೩ ಲಕ್ಷ ಇದ್ದಾರೆ. ಗೊರಿಲ್ಲಾ ಯುದ್ಧದಲ್ಲಿ ಇವರು ತುಂಬಾ ಪ್ರವೀಣರಿದ್ದಾರೆ. ಇವರಲ್ಲಿನ ಹತ್ತು ಸಾವಿರ ಸೈನಿಕರಲ್ಲೂ ಪ್ರತಿಯೊಬ್ಬನಿಗೆ ೫ ಎಕ್ರೆ ಜಮೀನು ಇದೆ. ಅಲ್ಲದೆ ಜಾನುವಾರಗಳನ್ನು ಇವರು ಸಾಕುತ್ತಾರೆ.

ಅವರಲ್ಲಿ ಕೈಗಾರಿಕೆ ಉದ್ಯಮವೂ ಸರಳ ರೀತಿಯಲ್ಲಿ ಅಭಿವೃದ್ಧಿ ಹೊಂದುವಂತೆ ಅಲ್ಲಿನ ಸರಕಾರವು ನೋಡಿ ಕೊಳ್ಳುತ್ತದೆ. ಅವರು ಎಣ್ಣೆ, ಕಬ್ಬಿಣ, ಚಿಕ್ಕ ಯಂತ್ರಗಳು, ಬಂದೂಕು, ಕಾಗದ ಬಟ್ಟೆ ಇವುಗಳನ್ನು ತಯಾರಿಸುತ್ತಾರೆ. ಅಲ್ಲಿ ಗುಪ್ತ ವ್ಯಾಪಾರ ಕಳ್ಳ ಸಂತೆ ತುಂಬಾ ನಡೆಯುತ್ತಾದಾದರೂ ಸಹಕಾರಿ ಸಂಸ್ಥೆಗಳ ಮೂಲಕ ಹೆಚ್ಚಿನ ವ್ಯಾಪಾರ ವಹಿವಾಟುಗಳು ನಡೆಯುತ್ತವೆ.

ಜಮೀನ್ದಾರ ಪದ್ಧತಿಯೂ ಇದೆ

ಚೀನಿ ಗಡಿನಾಡಿನ ಈ ಜನರು ಸಮತಾ ವಾದಿಗಳಾದರೂ ಜಮೀನ್ದಾರಿ ಪದ್ಧತಿಯನ್ನೂ ಅವರು ಸಂಪೂರ್ಣ ಕಿತ್ತು ಹಾಕಲಿಲ್ಲ. ಮಜೂರ ಮಾಲಕರೊಳಗೆ ಬಿಕ್ಕಟ್ಟುಂಟಾದರೆ ಈಗಿನ ಜಪಾನ್ ಚೀನಾ ಯುದ್ಧಕ್ಕೆ ತೊಂದರೆ ಬಂದು ಅಂತರೀಕ ಅಶಾಂತಿ ಉಂಟಾಗುವುದೆಂದು ಅವರು ಉಗ್ರ ಧೋರಣೆಯನ್ನು ಇನ್ನೂ ಕೈಕೊಂಡಿಲ್ಲ. ಅವರ ಪ್ರಥಮ ಉದ್ದೇಶವು ಜಪಾನನ್ನು ಸೋಲಿಸುವುದು ಅದರ ನಂತರ ಅವರು ಜಮೀನ್ದಾರ ಪದ್ಧತಿಯನ್ನು ನಿರ್ಮೂಲ ಗೊಳಿಸಲಿಚ್ಛಿಸುತ್ತಾರೆ.

ಸದ್ಯದ ಅವರ ಆರ್ಥಿಕ ಪರಿಸ್ಥಿತಿಯು ಸಮತಾವಾದಿ ತತ್ವ ಪ್ರಚಾರಕ್ಕೆ ಅನುಕೂಲವಿಲ್ಲವೆಂದು ಅವರು ಬಂಡವಾಳಶಾಹಿ ಪದ್ಧತಿಯನ್ನು ಸ್ವಲ್ಪ ಮಟ್ಟಿಗೆ ಉತ್ತೇಜಿಸುತ್ತಾರೆ.

ಸಿಹಿ ಸುದ್ದಿ ಸಂಗ್ರಹ

ಹಿಟ್ಲರನು ತನ್ನ ಮರಣಶಾಸನವನ್ನು ಬರೆದಿಟ್ಟಿದ್ದಾನೆ. ಅವನ ಅಪಾರ ಧನ ಸಂಪತ್ತು ಅವನ ಮರಣಾನಂತರ ನಾಜೀ ಪಾರ್ಟಿಗೆ ಕೊಡಬೇಕೆಂದು ಅದರಲ್ಲಿ ಕಾಣಿಸಿದೆ. ಅವನ ಕೆಲವೇ ಸಂಬಂಧಿಕರಿಗೆ ಒಂದು ಚಿಕ್ಕಾಸನ್ನಾದರೂ ಅವನು ಬಿಡಲಿಲ್ಲ.

* * *

ಮೆಕ್ಸಿಕೊದಲ್ಲಿ ನೂರರಲ್ಲಿ ೫೦ ಜನರು ಶಿಕ್ಷಿತರು. ಅಲ್ಲಿಯ ಸರಕಾರವು ಈಗ ಹೊಸ ಆಜ್ಞೆಯನ್ನು ಹೊರಡಿಸಿ ಒಬ್ಬೊಬ್ಬ ಶಿಕ್ಷಿತನು ಒಬ್ಬೊಬ್ಬ ಅಶಿಕ್ಷಿತನನ್ನು ತನ್ನ ವಿದ್ಯಾರ್ಥಿಯಾಗಿ ಮಾಡಿಕೊಂಡು ವಿದ್ಯೆ ಕಲಿಸಬೇಕು ಎಂದು ಒತ್ತಾಯ ಮಾಡಲಾಗಿದೆ. ಈ ವಿದ್ಯಾರ್ಥಿಗಳಿಗೆಬೇಕಾಗುವ ೧ ಕೋಟಿ ಪುಸ್ತಕಗಳನ್ನು ಸರಕಾರವು ಒದಗಿಸುವುದು.

* * *

ಸಮುದ್ರದಲ್ಲಿರುವ ಕೆಲವು ಮೀನುಗಳು (ಮುಖ್ಯವಾಗಿ ಸಾಲ್ಮನ್) ಒಂದೊಂದು ೧ ಕೋಟಿ ಮೊಟ್ಟೆಗಳನ್ನು ಇಡುತ್ತವೆಯಂತೆ.

* * *

ಜನರಲ್ ಐಶನ್ ಹಾವರು ತಮ್ಮೊಂದು ಆಜ್ಞೆಯುಲ್ಲಿ ಯಾವ ಅಮೇರಿಕನ್ ಸೈನಿಕನೂ ಕೈದಿಗಳಾದ ಜರ್ಮನ್ ಸೈನಿಕರೊಡನೆ ಸ್ನೇಹ ಬೆಳೆಸಬಾರದೆಂದು ಸೂಚಿಸಿರುವರು. ಜರ್ಮನ್ ಸೈನಿಕ ಕೈದಿಗಳೊಡನೆ ಮಾತನಾಡಿದರೆ ಸುಮಾರು ೧೦೦ ರೂ. ಜುಲ್ಮಾನೆ. ಇನ್ನೂ ಹೆಚ್ಚು ಸ್ನೇಹ ಬೆಳೆಸಿದರೆ ರೂ. ೪೦೦ ತನಕ ದಂಡ ವಿಧಿಸಬಹುದು. ಅವರಿಗೆ 'ಗುಡ್‌ಮಾರ್ನಿಂಗ್' ಅಂತ ಕೂಡಾ ಹೇಳಬಾರದಂತೆ.

* * *

ಜೈಪುರ್ ರೆಲ್ವೇ ಸ್ಟೇಶನಿನಲ್ಲಿ ನಾಗಪುರದ ಒರ್ವ ಶ್ರೀಮಂತ ಶೇಟನ ೧೯ ಸಾವಿರ ರೂಪ್ಯಾಯಿಯ ನೋಟುಗಳನ್ನು ಕಿಸೆ ಕಳ್ಳರು ಬಹು ಚಮತ್ಕಾರವಾಗಿ ಹೊಡೆದು ಬಿಟ್ಟರು. ಹೊರಗೆ ದಪ್ಪವಾದ ಕಂಬಳಿ ಕೋಟು, ವೆಸ್ಟ್ ಕೋಟು, ಶರ್ಟು, ಇವುಗಳ ಒಳಗೆ ಒಂದು ಒಳ ಅಂಗಿಯಲ್ಲಿ ಇದ್ದ ಸಾವಿರ ರೂಪ್ಯಾಯ ೧೯ ನೋಟುಗಳು ಕಾಣೆಯಾಗಿವೆ. ಹರಿತವಾದ ಕ್ಷೌರ ಕತ್ತಿಯಿಂದ ಉಡುಪನ್ನು ಕತ್ತರಿಸಿದಾಗ ಆ ಶೇಟರಿಗೆ ತಿಳಿಯಲಿಲ್ಲ. ಕಳ್ಳನನ್ನು ಹಿಡಿದು ಕೊಟ್ಟವರಿಗೆ ಆ ೧೯ ಸಾವಿರವನ್ನೂ ಇನಾಮಾಗಿ ಕೊಡುತ್ತೇನೆಂದು ಅವನು ಹೇಳಿರುವರು.

* * *

ಪೇರಿಸಿನ ಒಂದು ಚರ್ಚಿನಲ್ಲಿ ಓರ್ವನು "ನಾವು ಜರ್ಮನಿಯನ್ನು ಸೋಲಿಸುವುದು ಮಾತ್ರವಲ್ಲ, ಪ್ರತಿಯೋರ್ವ ಜರ್ಮನ್ ಸ್ತ್ರೀ, ಪುರುಷ, ಮಗುವನ್ನು ಕೂಡಾ ಧ್ವಂಸಮಾಡಬೇಕು. ೧೯೧೮ರ ಒಪ್ಪಂದ ನಂತರ ಏನಾಯಿತೆಂದು ನಮಗೆಲ್ಲರಿಗೂ ತಿಳಿದಿದೆ. ಆದುದರಿಂದ ಜರ್ಮನ್ ಜನಾಂಗವನ್ನೇ ನಾಶ ಮಾಡಬೇಕು" ಎಂದನಂತೆ–ಅವನು ಅಲ್ಲಿಯ ಪಾದ್ರಿ.

ಭವಿಷ್ಯ ಸುಳ್ಳಲ್ಲ

(೨ನೇ ಪುಟದಿಂದ)

"ಸರಿ, ಆದರೂ ಅವರಿಗೆ, ಎಲ್ಲಿ ಕೇಶ್ ಮಾಡುವುದು, ಎಲ್ಲಿ ಹಣ ಪಡೆಯುವುದು ಎಂದು ತೋರಿಸ ಬೇಡವೆ?"

ಇಷ್ಟರಲ್ಲಿ ಗಿರಾಕಿಯು ಮೇನೇಜರ ಮೇಜಿನ ಮೇಲೆ ಕೈ ಹೊಡೆದು "ಈಗಲೇ ಇಂತಹ ಅಪಮಾನಕರ ವರ್ತನೆಯನ್ನು ನಿಲ್ಲಿಸುತ್ತೇನೆ. ಸರಕಾರಕ್ಕೆ ಬರೆಯುತ್ತೇನೆ. ನಿಮ್ಮ ಡೈರೆಕ್ಟರುಗಳಿಗೆ ಟೆಲಿಗ್ರಾಮು ಮಾಡುತ್ತೇನೆ. . . . . ಹಾಗೆ, ಹೀಗೆ. . ."

ಮೇನೇಜರರು ಕೋಪದಿಂದ ದೊರಿಸಾಮಿಯ ಮುಖ ನೋಡಿ ಹತ್ತಿರ ಇದ್ದ ಕೈ ಬೆತ್ತವನ್ನು ಎತ್ತಿದರು. ಸಾಮಿಗೆ ತಣ್ಣೀರು ಸುರಿಸಿದಂತಾಯಿತು. ಏನು ಅಪಮಾನ? ಗಿರಾಕಿಗಳ ಎದುರು ಕ್ಲಾರ್ಕನಿಗೆ ಅಪಮಾನವೆ? ಥೂ, ಈ ಬೇಂಕುಗಳಲ್ಲಿ ಕೆಲಸಮಾಡುವುದಕ್ಕಿಂತ ಹೊರಿಹೊತ್ತು ಜೀವಿಸುವುದೊಳ್ಳೆದೆಂದು ಸಾಮಿ ತಿಳಕೊಂಡ. ದೀಕ್ಷಿತರ ಭವಿಷ್ಯ ನಿಜವಾಯಿತು. ಮೇನೇಜರರು ಸಾಮಿಗೆ "ನೀವು ನಿಮ್ಮ ಕೆಲಸಕ್ಕೆ ಹೋಗಿ ಇನು ಮುಂದೆ, ಹಾಗೆ ಮಾಡ ಬೇಡಿ"ಎಂದರು. ಬಂದ ಮೂರು ತಿಂಗಳಲ್ಲಿ ಎಷ್ಟೊಂದು ಅಪಮಾನ!

ಅತ್ತ ಗಿರಾಕಿ ಇನ್ನೂ ಮಾತಾಡುತಿದ್ದಾನೆ. ಎಲ್ಲರಿಗೂ ಬೈಯಲಿಕ್ಕೆ ಹತ್ತಿದ. ಕಡೆಗೆ ಬೇಂಕಿಗೆ ಬುದ್ಧಿ ಕಲಿಸುವೆನೆಂದು ಹೊರಟು ಹೋದ.

ಅದೇ ಸಾಯಂಕಾಲ ಮೇನೇಜರರು ಸಾಮಿಗೆ ಕರೆ ಕಳುಹಿಸಿದರು. ತನಗೆ ಈ ಕೆಲಸ ಬೇಡವೆಂದೂ, ತನಗೂ ಗ್ರಹಚಾರ ಕೆಟ್ಟದಿದೆ ಎಂದೂ ತಿಳಿಸಬೇಕೆಂದು ಅವನು ನಿರ್ಧರಿಸಿ ಮೆನೇಜರರ ಕೋಣೆಗೆ ಹೋದ.

ಮೆನೇಜರರು ನಗುತಿದ್ದರು. "ದೊರೆಸಾಮಿ, ಬೇಸರ ಮಾಡಬೆಡೀ. ಆಗ ಬಂದ ಗಿರಾಕಿ ನಿಮಗೆ ಗೊತ್ತಿಲ್ಲವೆ? ಸಾಹುಕಾರ ಧನಪಾಲ ಚೆಟ್ಟಿಯ ಮಗ ಅವನು. ತಂದೆಯ ಜಿಪುಣತ್ವದಿಂದ ಸ್ವಲ್ಪ ತಲೆ ಕೆಟ್ಟು ಹೋಗಿದೆ! ಏನಾದರೂ ಹೆಚ್ಚು ಕಮ್ಮಿ ವರ್ತಿಸಿದರೆ ಒಂದೆರಡು ಏಟು ಹಾಕಬೇಕೆಂದು ನಾನು ಬೆತ್ತವನ್ನು ಎತ್ತಿದ್ದೆ."

ದೊರೆಸಾಮಿಗೆ ಆಶ್ಚರ್ಯ. ತಾನು ನೆನಸಿದೇನು? ಆದದ್ದೇನು?

ಕಡೆಗೆ ಮೇನೇಜರರೆಂದರು "ಈ ತಿಂಗಳಿಂದ ಕ್ರಮವಾಗಿ ಸಂಬಳ, ಮತ್ತು ಯುದ್ಧ ಭತ್ತೆ ಸಿಗುವುದು ನಿಮಗೆ" ಎಂದರು.

ಅಂದಿನಿಂದ ದೊರೆಸಾಮಿಗೆ 'ಜ್ಯೋತಿಷ್ಯ' ಹೆಚ್ಚು ನಿಜವಿಲ್ಲವೆಂದು ಅರಿವಾಯಿತು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

THE BANK OF MANGALORE, Ltd.,
MANGALORE.
Interest on Fixed Deposits.

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date willalso be paid accordingly with effect from 1-1-1945

Office of the Bank, Mangalore, 30th Oct. 1944. } By Order H. S. KAMATH, *Manager*

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE:-UDIPI, S. K.

Chief Agents for South India including Indian States.

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 15—12—1944 [ಸಂಚಿಕೆ 49]

ಪೂರ್ವ-ಪಶ್ಚಿಮ

[ಲೇ:—ಮಾರ್ಜೊರಿ ಸಾಯ್ಕ್ಸ]

"ದೇವರನ್ನು ಗೌರವಿಸಿ ಅವನ ಅನಂತ ಸುಖವನ್ನು ಪಡೆಯುವುದೇ ಮಾನವನ ಮುಖ್ಯ ಗುರಿ."

- The Shorter Catechism, Church of Scotland.

"ದೇವರ ಸಾಕ್ಷಾತ್ಕಾರ ಪಡೆಯುವದೇ ಮಾನವನ ಅಂತಿಮ ಧ್ಯೇಯ. ದೇವರ ಈ ಸಾಕ್ಷಾತ್ಕಾರಕ್ಕಾಗಿಯೇ ಮನುಷ್ಯನ ಎಲ್ಲ ಚಟುವಟಿಕೆಗಳು ನಡೆಸಲ್ಪಡಬೇಕು."

—ಮಹಾತ್ಮಾ ಗಾಂಧೀ

ಜಗತ್ತಿನಲ್ಲಿಯ ಪ್ರಸಿದ್ಧ ಪುರುಷರ ಚರಿತ್ರೆ ಹಾಗೂ ಕಾರ್ಯಗಳನ್ನು ಅರಿತುಕೊಳ್ಳಬೇಕಾದರೆ ಅವರ ಮೇಲೆ ಅವರ ಪೂರ್ವ ಪ್ರಸಿದ್ಧ ವ್ಯಕ್ತಿಗಳ ಚರಿತ್ರೆ ಹಾಗೂ ಕಾರ್ಯಗಳ ಪ್ರಭಾವವೆಷ್ಟು ಎಂಬುದನ್ನು ಅಭ್ಯಸಿಸಿ ನಂತರ ಅವರ ಸ್ವಂತಹ ಚಾರಿತ್ರ್ಯವನ್ನು ಅರಿತುಕೊಳ್ಳಬೇಕಾಗುವುದು. ಏಸು ಕ್ರಿಸ್ತನ ಜೀವನ ಕಾರ್ಯಗಳ ಪ್ರಭಾವವು ಮಹಾತ್ಮರ ಮೇಲೆ ಎಷ್ಟರಮಟ್ಟಿಗೆ ಆಗಿದೆಯೆಂಬುದನ್ನು ಈಗ ಇಲ್ಲಿ ಚರ್ಚಿಸಲಾಗುವುದಿಲ್ಲ. ಯಾವನೇ ಒಬ್ಬ ಗುರುವಿನಿಂದ, ಕವಿಯಿಂದ ಅಥವಾ ವೇದಾಂತಿಯಿಂದ ನಮ್ಮ ಜೀವನವು ಇಷ್ಟರಮಟ್ಟಿಗೇ ಮಾರ್ಪಟ್ಟಿದೆಯೆಂದು ಯಾರು ನಿಶ್ಚಿತವಾಗಿ ಹೇಳಬಲ್ಲರು? ಮಾನವವೃಕ್ಷದ ಸೌಂದರ್ಯ ಹಾಗೂ ಫಲದ್ರೂಪತೆಯು ಎಷ್ಟರಮಟ್ಟಿಗೆ ಬೀಜವನ್ನು, ಎಷ್ಟರಮಟ್ಟಿಗೆ ಬೆಳೆಸುವ ನೆಲವನ್ನು ಎಷ್ಟರಮಟ್ಟಿಗೆ ಮಳೆ ಹಾಗೂ ಸೂರ್ಯನನ್ನು ಅವಲಂಬಿಸಿದೆ ಎಂಬುದನ್ನು ಹೇಗೆ ಹೇಳಲಾಗುವುದು? ನಮಗೆ ಚಿರಪರಿಚಿತವಾದ ಇಂಥ ಪ್ರಶ್ನೆಗಳನ್ನು ನಾವೇ ಬಿಡಿಸಲಾರದೆ ಹೋದರೆ ಇನ್ನೊಬ್ಬನ ವ್ಯಕ್ತಿತ್ವದ ಗೂಢವನ್ನು ಹೇಗೆ ಪೃಥಕ್ಕರಿಸಬಲ್ಲೆವು? ಆದರೂ ಒಂದು ಜೀವಿಯು ಕೆಲ ನಿಶ್ಚಿತ ಉದ್ದೇಶ ಸಾಧನೆಗಳಿಗಾಗಿ ಬೇರೊಂದು ಶಕ್ತಿ ಸೌಂದರ್ಯಯುತವಾದ ಜೀವಿಯನ್ನು ಅನುಸರಿಸುವ ರೀತಿಯನ್ನು ನಾವು ಅಭ್ಯಸಿಸಬಲ್ಲೆವು. ನಾಝರೆಥದ ಏಸುಕ್ರಿಸ್ತನ ಹಾಗೂ ಮಹಾತ್ಮಾ ಗಾಂಧಿಯವರ ಆಚಾರ ವಿಚಾರಗಳಲ್ಲಿಯ ಸಾಮ್ಯವೆಂಥದು? ಈ ಪ್ರಶ್ನೆಗೆ ಈ ಲೇಖನದಲ್ಲಿ ಸಂಪೂರ್ಣ ಉತ್ತರ ಕೊಡಲಾಗದಿದ್ದರೂ ಅದರ ಮುಖ್ಯಾಂಶಗಳನ್ನು ಮಾತ್ರ ತೋರಿಸಲಾಗುವದು.

ಗಾಂಧಿಯವರಿಗೆ ಮೊದಲು ಕ್ರಿಸ್ತ ಧರ್ಮದ ಔಪಚಾರಿಕ ಸಂಬಂಧ ಉಂಟಾದದ್ದು ರಾಜಕೋಟದಲ್ಲಿ ಶಾಲೆಯಲ್ಲಿ ಕಲಿಯುತ್ತಿದ್ದಾಗ. ಅವರ ಪ್ರತಿಕ್ರಿಯೆ ಪ್ರತಿಕೂಲವಾಗಿತ್ತು. ಧಾರ್ಮಿಕ ವಾತಾವರಣದಲ್ಲಿ ಬೆಳೆದ ಧಾರ್ಮಿಕ ಪ್ರವೃತ್ತಿಯ ಅವರ ಮನಸ್ಸು ಕ್ರಿಸ್ತಧರ್ಮದ ಬಹಿರಾಡಂಬರಗಳನ್ನು ಹಾಗೂ ಹಿಂದೂಧರ್ಮದ ದುರುಪಯೋಗವನ್ನು ಕಂಡು ಪ್ರತಿಭಟಿಸಿತು. ಕೆಲಕಾಲದ ನಂತರ ರಾಜಕೋಟದ ಉಪದೇಶವನ್ನು ಅಲ್ಲಗಳೆದ ಅವರ ಧಾರ್ಮಿಕ ಪ್ರವೃತ್ತಿಯೆ ಕ್ರಿಸ್ತ ಧರ್ಮದ ತಿರುಳನ್ನು ತಿಳಿದುಕೊಳ್ಳಲು ಹಾತೊರೆಯಹತ್ತಿತು. ಕ್ರಿಸ್ತ ಧರ್ಮಾವಲಂಬಿಗಳಾದ ಅವರ ಅನೇಕ ಮಿತ್ರರು ಮೇಲಿಂದ ಮೇಲೆ ತಮ್ಮ ಧರ್ಮದ ಸತ್ಯವನ್ನು ತಿಳಿದುಕೊಳ್ಳಲು ಅವರಿಗೆ ಸಹಾಯಮಾಡಿದರು. ಇಂಥ ಒಬ್ಬ ಇಂಗ್ಲಂಡದ ಕ್ರಿಶ್ಚನ್ ಮಿತ್ರನು ೧೮೮೯ರಲ್ಲಿ ಮಹಾತ್ಮರು ಇಂಗ್ಲಂಡದಲ್ಲಿ ಓದುತ್ತಿದ್ದಾಗ ಬಾಯಬಲ್ಲನ್ನು ಓದುವಂತೆ ಪ್ರೇರಿಪಿಸಿದನು.

"ಹಳೆ ಒಡಂಬಡಿಕೆ"ಯ ಹಿನ್ನೆಲೆಯ ಪರಿಚಯವಿಲ್ಲದೆ, ಭಾಷಾಪ್ರಯೋಗದ ಪರಿಚಯವಿಲ್ಲದೆ ತರುಣ ವಿದ್ಯಾರ್ಥಿಯು ಸಂಪೂರ್ಣವಾಗಿ ಅದನ್ನು ಓದಿ ಮುಗಿಸಬೇಕಾದಾಗ ದಿಙ್ಮೂಢನಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ 'ಹೊಸ ಒಡಂಬಡಿಕೆ'ಯ ಮಾತೆ ಬೇರೆ. ಏಸುವಿನ ಜೀವನದ, ವಿಶೇಷವಾಗಿ 'ಪರ್ವತದ ಮೇಲಿನ ಉಪದೇಶ' (Sermon on the Mount)ದ ಪ್ರಭಾವವನ್ನು ಹೀಗೆ ಹೇಳಿದ್ದಾರೆ, 'ಅದು ನೇರವಾಗಿ ನನ್ನ ಹೃದಯವನ್ನು ಮುಟ್ಟಿತು. ಗೀತೆಯೊಂದಿಗೆ ಅದನ್ನು ನಾನು ಹೋಲಿಸಿದೆನು. 'ಕೇಡ ತಡೆಯದಿರೆಂದು ನಿನಗೊರೆವೆ ನಾನು; ಬಲಕೆನ್ನೆಯಲಿ ಹೊಡೆಯೆ ಎಡದ ಕೆನ್ನೆಯ ನೀಡು; ಅಂಗಿಯನು ಸೆಳೆದೊಯ್ಯೆ ನಿಲುವಂಗಿಯನು ನೀಡು' ಎಂಬ ನುಡಿಗಳು ನನ್ನ ಮನಸ್ಸಿಗೆ ಅತಿ ಹರುಷವನ್ನಿತ್ತವಲ್ಲದೆ ಶಾಮಲಭಟ್ಟರ 'ಒಕ್ಕುಡಿತೆ ನೀರಿಂಗೆ ಒಂದೂಟವನು ನೀಡು' ಎಂಬ ಶ್ಲೋಕವನ್ನು ನೆನಪಿಗೆ ತಂದುಕೊಟ್ಟಿತು.' 'ಪರ್ವತದ ಮೇಲಿನ ಉಪದೇಶ'ವು ಅವರು ಚಿಕ್ಕಂದಿನಿಂದಲೂ ನೆನಪಿನಲ್ಲಿಟ್ಟಿದ್ದ ಗುಜರಾಥೀ ಶ್ಲೋಕವನ್ನು ಹೋಲುತ್ತಿದ್ದದ್ದು ಅವರ ವಿಚಾರಗಳ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ್ದು.

ಮಹಾತ್ಮರ ಇದೇ ಅಧ್ಯಾತ್ಮ ಜಿಜ್ಞಾಸೆಯು 'ಬರಿ ಧಾರ್ಮಿಕ ಜ್ಞಾನವು ನಿರುಪಯೋಗದ್ದು' ಎಂಬುದನ್ನು ಅವರಿಗೆ ತೋರಿಸಿಕೊಟ್ಟಿತು. 'ಅನುಭವವಿಲ್ಲದ ಧಾರ್ಮಿಕ ಜ್ಞಾನವು ಸಂಕಟ ಪ್ರಸಂಗಗಳಲ್ಲಿ ಹುರುಳಿಲ್ಲದ್ದಾಗಿ ಕಂಡುಬರುತ್ತದೆ. ಅವರು ೧೮೯೦ರಲ್ಲಿ ಪ್ಯಾರಿಸದಲ್ಲಿ ಚರ್ಚುಗಳನ್ನು ವ್ಯಾಪಿಸಿದ್ದ ವೈಭವವನ್ನೂ ಶಾಂತಿಯನ್ನೂ ನೈಜಭಕ್ತಿಯನ್ನೂ ಕಂಡುಕೊಂಡರು. ಮರುವರುಷ ಭಾರತದಲ್ಲಿ, ವರ್ತಕನೂ ಕವಿಯೂ ಆಗಿದ್ದ ರಾಯಚಂದಭಾಯಿಯ ಉಜ್ವಲ ಭಕ್ತಿಯು ಅವರನ್ನು ಮೋಹಿಸಿತು. ೧೮೯೩ರಲ್ಲಿ ದಕ್ಷಿಣ ಆಫ್ರಿಕೆಗೆ ಹೋದಾಗ ಮಹಾತ್ಮರು ಮೊದಲು ಸ್ನೇಹ ಬೆಳೆಸಿದ್ದು ಕೆಲ ನಿಷ್ಠಾವಂತ ಕ್ರಿಶ್ಚನರೊಡನೆ. ಪ್ರಿಟೋರಿಯಾದಲ್ಲಿ ದಾದಾ ಅಬ್ದುಲ್ಲಾ ಮತ್ತು ಕಂಪನಿಯವರ ಕೆಲಸ ನಡೆಸುತ್ತಿದ್ದಾಗ ಇವರಿಗೆ ಮಿ. ಎ.ಡಬ್ಲ್ಯೂ. ಬೇಕರ, ಮಿ. ಕೋಟ್ಸ ಹಾಗೂ ಇನ್ನಿತರ ಕ್ರಿಸ್ತಭಕ್ತರ ಪರಿಚಯವಾಯಿತು. ಇವರು ಅವರಿಗೆ ಪುಸ್ತಕಗಳನ್ನು ಕೊಟ್ಟು, ಅವರೊಡನೆ ಚರ್ಚೆ ನಡೆಸಿ ಕ್ರಿಶ್ಚನರಾಗಲು ಅವರ ಮನವೊಲಿಸಿದರು. ಆಗ ಅವರು ತಮ್ಮ ಧರ್ಮವನ್ನು ಚನ್ನಾಗಿ ಅಭ್ಯಸಿಸಿ ಆ ಧರ್ಮದಿಂದ ಧಾರ್ಮಿಕ ಕೊರತೆಗಳು ಹಿಂಗದಿದ್ದರೆ ಮಾತ್ರ ಮತ್ತು ಅವು ಕ್ರಿಶ್ಚನ ಧರ್ಮದಿಂದ ದೂರಾಗುವಂತಿದ್ದರೆ ಮಾತ್ರ ಕ್ರಿಶ್ಚನನಾಗುವೆನು ಎಂದು ಉತ್ತರ ಕೊಟ್ಟರು. 'ಕ್ರೈಸ್ತಧರ್ಮದ ಕರೆಯನ್ನು ಕೇಳಿದ ಕೂಡಲೇ ನಾನು ಕ್ರಿಶ್ಚನನಾಗುವುದನ್ನು ಯಾರೂ ತಡೆಯಲಾರರೆಂಬ ಆಶ್ವಾಸನವನ್ನು ಅವನಿಗೆ ಕೊಟ್ಟೆನು.' ಅವರಿಗೆ ಆ ಕರೆ ಕೇಳಲಿಲ್ಲ. ಆದರೂ ಧರ್ಮದ ಅಭ್ಯಾಸದ ಈ ಕಾಲಾವಧಿಯನ್ನು ಅವರು ತಮ್ಮ ಜೀವನದಲ್ಲಿ ಮಹತ್ವದ್ದಾಗಿ ಗಣಿಸಿದ್ದಾರೆ. 'ನನ್ನ ಕ್ರಿಶ್ಚನ ಮಿತ್ರರು ತೋರಿಸಿದ ದಾರಿಯನ್ನು ನಾನು ಅನುಸರಿಸದಿದ್ದರೂ ಅವರು ನನ್ನಲ್ಲಿ ಹೊಡೆದೆಬ್ಬಿಸಿದ ಧಾರ್ಮಿಕ ಜಿಜ್ಞಾಸೆಗಾಗಿ ನಾನು ಅವರಿಗೆ ಚಿರಋಣಿಯಾಗಿರುವೆನು.'

ಹೀಗೆ ಉಂಟಾದ ಅವರ ಜಿಜ್ಞಾಸೆಯು ಬೆಳೆಯುತ್ತ ಹೋಯಿತು. ಅದೇ ವರ್ಷ ಅಂದರೆ ೧೮೯೩ರಲ್ಲಿ ಅವರು ಕ್ರಿಶ್ಚನ ವಿಚಾರಗಳ ಬಗ್ಗೆ ಒಂದು ಮಹತ್ವದ ಮಾತು ಹೇಳಿದ್ದಾರೆ.

"ಟಾಲಸ್ಟಾಯರ 'ದೇವರ ರಾಜ್ಯವು ನಿನ್ನಲ್ಲಿಯೆ ಇದೆ' ಎಂಬ ಪುಸ್ತಕವು ನನ್ನನ್ನು ಬಹಳವಾಗಿ ಆಕರ್ಷಿಸಿತು. ಈ ಪುಸ್ತಕದ ಸ್ವತಂತ್ರ ವಿಚಾರಶಕ್ತಿ, ಆಳವಾದ ನೀತಿಮತ್ತೆ ಹಾಗೂ ಸತ್ಯದೆದುರು ಮಿ. ಕೋಟ್ಸರವರು ಕೊಟ್ಟ ಇತರ ಪುಸ್ತಕಗಳು ತೀರ ಸಪ್ಪೆಯಾಗಿ ತೋರಿದವು." ಕೆಲ ದಿನಗಳ ನಂತರ ಅವರು ದರ್ಬಾನದಲ್ಲಿರುವಾಗ ಟಾಲಸ್ಟಾಯರ ಪುಸ್ತಕಗಳನ್ನು ಇನ್ನೂ ಹೆಚ್ಚಾಗಿ ಓದಿದರು.

ಅವರು ಆಫ್ರಿಕೆಯಲ್ಲಿರುವಾಗ ಹಾಗೂ ಹಿಂದೂಸ್ಥಾನಕ್ಕೆ ತಿರುಗಿ ಬಂದನಂತರ, ಪತ್ರ ವ್ಯವಹಾರದಿಂದ, ಅಭ್ಯಾಸದಿಂದ ಹಾಗೂ ಇತರರ ಗೆಳೆತನದಿಂದ ಹಿಂದೂ ಧರ್ಮ ಗ್ರಂಥಗಳ, ವಿಶೇಷವಾಗಿ ಗೀತೆಯ ಬಗ್ಗೆ ಇದ್ದ ಜ್ಞಾನವನ್ನು ಬೆಳೆಸಿಕೊಂಡಿದ್ದರು. ೧೯೦೩ರಲ್ಲಿ ಅವರು ಮತ್ತೊಮ್ಮೆ ದಕ್ಷಿಣ ಆಫ್ರಿಕೆಗೆ ಹೋದಾಗ ಬೇರೆ ಒಬ್ಬ ಕ್ರಿಶ್ಚಿಯನ್ ಲೇಖಕನೊಡನೆ ಉಂಟಾದ ಸಂಬಂಧವನ್ನು ಹೀಗೆ ಬಣ್ಣಿಸಿದ್ದಾರೆ—

'ಮಿ. ಪೋಲಕರು ಜೋಹಾನ್ಸಬರ್ಗ ಸ್ಟೇಶನಕ್ಕೆ ಬಂದು ನನ್ನ ಪ್ರವಾಸದಲ್ಲಿ ಓದಲಿಕ್ಕೆಂದು ನನ್ನ ಕೈಯಲ್ಲಿ ಒಂದು ಪುಸ್ತಕವನ್ನು ಕೊಟ್ಟು ನನಗದು ರುಚಿಸಬಹುದೆಂದು ಹೇಳಿದರು. ಅದು ರಸ್ಕಿನನ 'ಅಂಟು ಧಿಸ್ ಲಾಸ್ಟ್' ಎಂಬ ಪುಸ್ತಕವಾಗಿತ್ತು. ಅದನ್ನು ಓದಿದ ನಂತರ ನನಗೆ ರಾತ್ರಿಯೆಲ್ಲ ನಿದ್ದೆ ಹತ್ತಲಿಲ್ಲ. ಆ ಪುಸ್ತಕದ ಧ್ಯೇಯಗಳಂತೆ ನನ್ನ ಜೀವನವನ್ನು ಮಾರ್ಪಡಿಸಲು ನಿಶ್ಚಯಿಸಿದೆ.

ಗಾಂಧೀಜಿಯವರ ಇಂಥ ಧಾರ್ಮಿಕ ಬೆಳವಣಿಗೆಗೆ ಎಂಥ ಕ್ರಿಶ್ಚನ್ ವಿಚಾರಗಳು ಕಾರಣಗಳಾದವು ಹಾಗೂ ಎಂಥವನ್ನು ಅವರು ತಮ್ಮ ಜೀವನಕ್ಕೆ ವಿಸಂಗತವಾದವುಗಳೆಂದು ಬಿಟ್ಟುಕೊಟ್ಟರೆಂಬುದನ್ನು ನಾವು ಇನ್ನು ಸೂಕ್ಷ್ಮವಾಗಿ ವಿಚಾರಿಸೋಣ. ಕ್ರಿಶ್ಚನ ಧರ್ಮದಲ್ಲಿಯ ಧಾರ್ಮಿಕ ಅನುಭವದ ಆಧ್ಯಾತ್ಮಿಕ ಸ್ವರೂಪ ಮತ್ತು ಹಟ ಹಾಗೂ ಪ್ರೇಮ ಮೂಲಕವಾದ ಧಾರ್ಮಿಕ ಕಲ್ಪನೆಯಿಂದ ಸಮಾಜದ ಎಲ್ಲ ನೀತಿಮತ್ತೆಯ ಮೇಲೆ ಉಂಟಾಗುವ ಅದ್ಭುತ ಪರಿಣಾಮ ಇವೆರಡು ವಿಷಯವನ್ನು ಅವರು ಯಾವಾಗಲೂ ವಿಚಾರಿಸುತ್ತಿದ್ದರು. ಆಧ್ಯಾತ್ಮಿಕ ಅನುಭವದ ಬಗ್ಗೆ ಇಷ್ಟೊಂದು ಆಸ್ಥೆಯಿದ್ದವರಿಗೆ ದೈವೀ ಸ್ಫೂರ್ತಿ ಅಥವಾ ಆವೇಶದಲ್ಲಿ ವಿಶ್ವಾಸವಿರುವುದಿಲ್ಲ. ಬಹು ದಿನಗಳ ಪೂರ್ವದಲ್ಲಿಯೇ ಈ ಆಂತರಿಕ ಶುದ್ಧಿಯ ವಿಷಯವಾಗಿ ಅವರು ಸ್ಪಷ್ಟಾಭಿಪ್ರಾಯವುಳ್ಳವರಾಗಿದ್ದರು. 'ನನಗೆ ಪಾಪಕೃತ್ಯಗಳಿಂದ ಶುದ್ಧಿ ಬೇಡ, ಆದರೆ ಪಾಪದಿಂ

(೯ನೇ ಪುಟಕ್ಕೆ ಮುಂದುವರಿದಿದೆ)

THE BANK OF MANGALORE, Ltd.,
MANGALORE.

Interest on Fixed Deposits.

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date willalso be paid accordingly with effect from 1-1-1945

Office of the Bank, Mangalore, 30th Oct. 1944.
By Order H. S. KAMATH, *Manager*

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ವೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE:-UDIPI, S. K.

Chief Agents for South India including Indian States.

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 15—12—1944 [ಸಂಚಿಕೆ 49]

ಪೂರ್ವ-ಪಶ್ಚಿಮ

[ಲೇ:—ಮಾರ್ಜೋರಿ ಸಾಯಿಕ್ಸ]

"ದೇವರನ್ನು ಗೌರವಿಸಿ ಅವನ ಅನಂತ ಸುಖವನ್ನು ಪಡೆಯುವುದೇ ಮಾನವನ ಮುಖ್ಯ ಗುರಿ."

- The Shorter Catechism, Church of Scotland.

"ದೇವರ ಸಾಕ್ಷಾತ್ಕಾರ ಪಡೆಯುವದೇ ಮಾನವನ ಅಂತಿಮ ಧ್ಯೇಯ? ದೇವರ ಈ ಸಾಕ್ಷಾತ್ಕಾರಕ್ಕಾಗಿಯೇ ಮನುಷ್ಯನ ಎಲ್ಲ ಚಟುವಟಿಕೆಗಳು ನಡೆಸಲ್ಪಡಬೇಕು."

—ಮಹಾತ್ಮಾ ಗಾಂಧೀ

ಜಗತ್ತಿನಲ್ಲಿಯ ಪ್ರಸಿದ್ಧ ಪುರುಷರ ಚರಿತ್ರೆ ಹಾಗೂ ಕಾರ್ಯಗಳನ್ನು ಅರಿತುಕೊಳ್ಳಬೇಕಾದರೆ ಅವರ ಮೇಲೆ ಅವರ ಪೂರ್ವ ಪ್ರಸಿದ್ಧ ವ್ಯಕ್ತಿಗಳ ಚರಿತ್ರೆ ಹಾಗೂ ಕಾರ್ಯಗಳ ಪ್ರಭಾವವೆಷ್ಟು ಎಂಬುದನ್ನು ಅಭ್ಯಸಿಸಿ ನಂತರ ಅವರ ಸ್ವಂತಹ ಚಾರಿತ್ರ್ಯವನ್ನು ಅರಿತುಕೊಳ್ಳಬೇಕಾಗುವುದು. ಏಸು ಕ್ರಿಸ್ತನ ಜೀವನ ಕಾರ್ಯಗಳ ಪ್ರಭಾವವು ಮಹಾತ್ಮರ ಮೇಲೆ ಎಷ್ಟರಮಟ್ಟಿಗೆ ಆಗಿದೆಯೆಂಬುದನ್ನು ಈಗ ಇಲ್ಲಿ ಚರ್ಚಿಸಲಾಗುವುದಿಲ್ಲ. ಯಾವನೇ ಒಬ್ಬ ಗುರುವಿನಿಂದ, ಕವಿಯಿಂದ ಅಥವಾ ವೇದಾಂತಿಯಿಂದ ನಮ್ಮ ಜೀವನವು ಇಷ್ಟರಮಟ್ಟಿಗೇ ಮಾರ್ಪಟ್ಟಿದೆಯೆಂದು ಯಾರು ನಿಶ್ಚಿತವಾಗಿ ಹೇಳಬಲ್ಲರು? ಮಾನವವೃಕ್ಷದ ಸೌಂದರ್ಯ ಹಾಗೂ ಫಲದ್ರೂಪತೆಯು ಎಷ್ಟರಮಟ್ಟಿಗೆ ಬೀಜವನ್ನು, ಎಷ್ಟರಮಟ್ಟಿಗೆ ಬೆಳೆಸುವ ನೆಲವನ್ನು ಎಷ್ಟರಮಟ್ಟಿಗೆ ಮಳೆ ಹಾಗೂ ಸೂರ್ಯನನ್ನು ಅವಲಂಬಿಸಿದೆ ಎಂಬುದನ್ನು ಹೇಗೆ ಹೇಳಲಾಗುವುದು? ನಮಗೆ ಚಿರಪರಿಚಿತವಾದ ಇಂಥ ಪ್ರಶ್ನೆಗಳನ್ನು ನಾವೇ ಬಿಡಿಸಲಾರದೆ ಹೋದರೆ ಇನ್ನೊಬ್ಬನ ವ್ಯಕ್ತಿತ್ವದ ಗೂಢವನ್ನು ಹೇಗೆ ಪೃಥಕ್ಕರಿಸಬಲ್ಲೆವು? ಆದರೂ ಒಂದು ಜೀವಿಯು ಕೆಲ ನಿಶ್ಚಿತ ಉದ್ದೇಶ ಸಾಧನೆಗಳಿಗಾಗಿ ಬೇರೊಂದು ಶಕ್ತಿ ಸೌಂದರ್ಯಯುತವಾದ ಜೀವಿಯನ್ನು ಅನುಸರಿಸುವ ರೀತಿಯನ್ನು ನಾವು ಅಭ್ಯಸಿಸಬಲ್ಲೆವು. ನಾಝರೆಥದ ಏಸುಕ್ರಿಸ್ತನ ಹಾಗೂ ಮಹಾತ್ಮಾ ಗಾಂಧಿಯವರ ಆಚಾರ ವಿಚಾರಗಳಲ್ಲಿಯ ಸಾಮ್ಯವೆಂಥದು? ಈ ಪ್ರಶ್ನೆಗೆ ಈ ಲೇಖನದಲ್ಲಿ ಸಂಪೂರ್ಣ ಉತ್ತರ ಕೊಡಲಾಗದಿದ್ದರೂ ಅದರ ಮುಖ್ಯಾಂಶಗಳನ್ನು ಮಾತ್ರ ತೋರಿಸಲಾಗುವದು.

ಗಾಂಧಿಯವರಿಗೆ ಮೊದಲು ಕ್ರಿಸ್ತಧರ್ಮದ ಔಪಚಾರಿಕ ಸಂಬಂಧ ಉಂಟಾದದ್ದು ರಾಜಕೋಟದಲ್ಲಿ ಶಾಲೆಯಲ್ಲಿ ಕಲಿಯುತ್ತಿದ್ದಾಗ. ಅವರ ಪ್ರತಿಕ್ರಿಯೆ ಪ್ರತಿಕೂಲವಾಗಿತ್ತು. ಧಾರ್ಮಿಕ ವಾತಾವರಣದಲ್ಲಿ ಬೆಳೆದ ಧಾರ್ಮಿಕ ಪ್ರವೃತ್ತಿಯ ಅವರ ಮನಸ್ಸು ಕ್ರಿಸ್ತಧರ್ಮದ ಬಹಿರಾಡಂಬರಗಳನ್ನು ಹಾಗೂ ಹಿಂದೂಧರ್ಮದ ದುರುಪಯೋಗವನ್ನು ಕಂಡು ಪ್ರತಿಭಟಿಸಿತು. ಕೆಲಕಾಲದ ನಂತರ ರಾಜಕೋಟದ ಉಪದೇಶವನ್ನು ಅಲ್ಲಗಳೆದ ಅವರ ಧಾರ್ಮಿಕ ಪ್ರವೃತ್ತಿಯೆ ಕ್ರಿಸ್ತಧರ್ಮದ ತಿರುಳನ್ನು ತಿಳಿದುಕೊಳ್ಳಲು ಹಾತೊರೆಯಹತ್ತಿತು. ಕ್ರಿಸ್ತ ಧರ್ಮಾವಲಂಬಿಗಳಾದ ಅವರ ಅನೇಕ ಮಿತ್ರರು ಮೇಲಿಂದ ಮೇಲೆ ತಮ್ಮ ಧರ್ಮದ ಸತ್ಯವನ್ನು ತಿಳಿದುಕೊಳ್ಳಲು ಅವರಿಗೆ ಸಹಾಯಮಾಡಿದರು. ಇಂಥ ಒಬ್ಬ ಇಂಗ್ಲಂಡದ ಕ್ರಿಶ್ಚನ್ ಮಿತ್ರನು ೧೮೮೯ರಲ್ಲಿ ಮಹಾತ್ಮರು ಇಂಗ್ಲಂಡದಲ್ಲಿ ಓದುತ್ತಿದ್ದಾಗ ಬಾಯಬಲ್ಲನ್ನು ಓದುವಂತೆ ಪ್ರೇರಿಪಿಸಿದನು.

"ಹಳೆ ಒಡಂಬಡಿಕೆ"ಯ ಹಿನ್ನೆಲೆಯ ಪರಿಚಯವಿಲ್ಲದೆ, ಭಾಷಾಪ್ರಯೋಗದ ಪರಿಚಯವಿಲ್ಲದೆ ತರುಣ ವಿದ್ಯಾರ್ಥಿಯು ಸಂಪೂರ್ಣವಾಗಿ ಅದನ್ನು ಓದಿ ಮುಗಿಸಬೇಕಾದಾಗ ದಿಙ್ಮೂಢನಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ 'ಹೊಸ ಒಡಂಬಡಿಕೆ'ಯ ಮಾತೆ ಬೇರೆ. ಏಸುವಿನ ಜೀವನದ, ವಿಶೇಷವಾಗಿ 'ಪರ್ವತದ ಮೇಲಿನ ಉಪದೇಶ' (Sermon on the Mount)ದ ಪ್ರಭಾವವನ್ನು ಹೀಗೆ ಹೇಳಿದ್ದಾರೆ, 'ಅದು ನೇರವಾಗಿ ನನ್ನ ಹೃದಯವನ್ನು ಮುಟ್ಟಿತು. ಗೀತೆಯೊಂದಿಗೆ ಅದನ್ನು ನಾನು ಹೋಲಿಸಿದೆನು. 'ಕೇಡ ತಡೆಯದಿರೆಂದು ನಿನಗೊರಿವೆ ನಾನು; ಬಲಕೆನ್ನೆಯಲಿ ಹೊಡೆಯೆ ಎಡದ ಕೆನ್ನೆಯ ನೀಡು; ಅಂಗಿಯನು ಸೆಳೆದೊಯ್ಯೆ ನಿಲುವಂಗಿಯನು ನೀಡು' ಎಂಬ ನುಡಿಗಳು ನನ್ನ ಮನಸ್ಸಿಗೆ ಅತಿ ಹರುಷವನ್ನಿತ್ತವಲ್ಲದೆ ಶಾಮಲಭಟ್ಟರ 'ಒಕ್ಕುಡಿತೆ ನೀರಿಂಗೆ ಒಂದೂಟವನು ನೀಡು' ಎಂಬ ಶ್ಲೋಕವನ್ನು ನೆನಪಿಗೆ ತಂದುಕೊಟ್ಟಿತು.' 'ಪರ್ವತದ ಮೇಲಿನ ಉಪದೇಶ'ವು ಅವರು ಚಿಕ್ಕಂದಿನಿಂದಲೂ ನೆನಪಿನಲ್ಲಿಟ್ಟಿದ್ದ ಗುಜರಾಥೀ ಶ್ಲೋಕವನ್ನು ಹೋಲುತ್ತಿದ್ದದ್ದು ಅವರ ವಿಚಾರಗಳ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ್ದು.

ಮಹಾತ್ಮರ ಇದೇ ಅಧ್ಯಾತ್ಮ ಜಿಜ್ಞಾಸೆಯು 'ಬರಿ ಧಾರ್ಮಿಕ ಜ್ಞಾನವು ನಿರುಪಯೋಗದ್ದು' ಎಂಬುದನ್ನು ಅವರಿಗೆ ತೋರಿಸಿಕೊಟ್ಟಿತು. 'ಅನುಭವವಿಲ್ಲದ ಧಾರ್ಮಿಕ ಜ್ಞಾನವು ಸಂಕಟ ಪ್ರಸಂಗಗಳಲ್ಲಿ ಹುರುಳಿಲ್ಲದ್ದಾಗಿ ಕಂಡುಬರುತ್ತದೆ. ಅವರು ೧೮೯೦ರಲ್ಲಿ ಪ್ಯಾರಿಸದಲ್ಲಿ ಚರ್ಚುಗಳನ್ನು ವ್ಯಾಪಿಸಿದ್ದ ವೈಭವವನ್ನೂ ಶಾಂತಿಯನ್ನೂ ನೈಜಭಕ್ತಿಯನ್ನೂ ಕಂಡುಕೊಂಡರು. ಮರುವರುಷ ಭಾರತದಲ್ಲಿ, ವರ್ತಕನೂ ಕವಿಯೂ ಆಗಿದ್ದ ರಾಯಚಂದಭಾಯಿಯ ಉಜ್ವಲ ಭಕ್ತಿಯು ಅವರನ್ನು ಮೋಹಿಸಿತು.' ೧೮೯೩ರಲ್ಲಿ ದಕ್ಷಿಣ ಆಫ್ರಿಕೆಗೆ ಹೋದಾಗ ಮಹಾತ್ಮರು ಮೊದಲು ಸ್ನೇಹ ಬೆಳೆಸಿದ್ದು ಕೆಲ ನಿಷ್ಠಾವಂತ ಕ್ರಿಶ್ಚನರೊಡನೆ. ಪ್ರಿಟೋರಿಯಾದಲ್ಲಿ ದಾದಾ ಅಬ್ದುಲ್ಲಾ ಮತ್ತು ಕಂಪನಿಯವರ ಕೆಲಸ ನಡೆಸುತ್ತಿದ್ದಾಗ ಇವರಿಗೆ ಮಿ. ಎ.ಡಬ್ಲೂ. ಬೇಕರ, ಮಿ. ಕೋಟ್ಸ ಹಾಗೂ ಇನ್ನಿತರ ಕ್ರಿಸ್ತಭಕ್ತರ ಪರಿಚಯವಾಯಿತು. ಇವರು ಅವರಿಗೆ ಪುಸ್ತಕಗಳನ್ನು ಕೊಟ್ಟು, ಅವರೊಡನೆ ಚರ್ಚೆ ನಡೆಸಿ ಕ್ರಿಶ್ಚನರಾಗಲು ಅವರ ಮನವೊಲಿಸಿದರು. ಆಗ ಅವರು ತಮ್ಮ ಧರ್ಮವನ್ನು ಚನ್ನಾಗಿ ಅಭ್ಯಸಿಸಿ ಆ ಧರ್ಮದಿಂದ ಧಾರ್ಮಿಕ ಕೊರತೆಗಳು ಹಿಂಗದಿದ್ದರೆ ಮಾತ್ರ ಮತ್ತು ಅವು ಕ್ರಿಶ್ಚನ ಧರ್ಮದಿಂದ ದೂರಾಗುವಂತಿದ್ದರೆ ಮಾತ್ರ ಕ್ರಿಶ್ಚನನಾಗುವೆನು ಎಂದು ಉತ್ತರ ಕೊಟ್ಟರು. 'ಕ್ರೈಸ್ತಧರ್ಮದ ಕರೆಯನ್ನು ಕೇಳಿದ ಕೂಡಲೇ ನಾನು ಕ್ರಿಶ್ಚನನಾಗುವುದನ್ನು ಯಾರೂ ತಡೆಯಲಾರರೆಂಬ ಆಶ್ವಾಸನವನ್ನು ಅವನಿಗೆ ಕೊಟ್ಟೆನು.' ಅವರಿಗೆ ಆ ಕರೆ ಕೇಳಲಿಲ್ಲ. ಆದರೂ ಧರ್ಮದ ಅಭ್ಯಾಸದ ಈ ಕಾಲಾವಧಿಯನ್ನು ಅವರು ತಮ್ಮ ಜೀವನದಲ್ಲಿ ಮಹತ್ವದ್ದಾಗಿ ಗಣಿಸಿದ್ದಾರೆ. 'ನನ್ನ ಕ್ರಿಶ್ಚನ ಮಿತ್ರರು ತೋರಿಸಿದ ದಾರಿಯನ್ನು ನಾನು ಅನುಸರಿಸದಿದ್ದರೂ ಅವರು ನನ್ನಲ್ಲಿ ಹೊಡೆದೆಬ್ಬಿಸಿದ ಧಾರ್ಮಿಕ ಜಿಜ್ಞಾಸೆಗಾಗಿ ನಾನು ಅವರಿಗೆ ಚಿರಋಣಿಯಾಗಿರುವೆನು.'

ಹೀಗೆ ಉಂಟಾದ ಅವರ ಜಿಜ್ಞಾಸೆಯು ಬೆಳೆಯುತ್ತ ಹೋಯಿತು. ಅದೇ ವರ್ಷ ಅಂದರೆ ೧೮೯೩ರಲ್ಲಿ ಅವರು ಕ್ರಿಶ್ಚನ ವಿಚಾರಗಳ ಬಗ್ಗೆ ಒಂದು ಮಹತ್ವದ ಮಾತು ಹೇಳಿದ್ದಾರೆ.

"ಟಾಲಸ್ಟಾಯರ 'ದೇವರ ರಾಜ್ಯವು ನಿನ್ನಲ್ಲಿಯೆ ಇದೆ' ಎಂಬ ಪುಸ್ತಕವು ನನ್ನನ್ನು ಬಹಳವಾಗಿ ಆಕರ್ಷಿಸಿತು. ಈ ಪುಸ್ತಕರ ಸ್ವತಂತ್ರ ವಿಚಾರಶಕ್ತಿ, ಆಳವಾದ ನೀತಿಮತ್ತೆ ಹಾಗೂ ಸತ್ಯದೆದುರು ಮಿ. ಕೋಟ್ಸರವರು ಕೊಟ್ಟ ಇತರ ಪುಸ್ತಕಗಳು ತೀರ ಸಪ್ಪೆಯಾಗಿ ತೋರಿದವು." ಕೆಲ ದಿನಗಳ ನಂತರ ಅವರು ದರ್ಬಾನದಲ್ಲಿರುವಾಗ ಟಾಲಸ್ಟಾಯರ ಪುಸ್ತಕಗಳನ್ನು ಇನ್ನೂ ಹೆಚ್ಚಾಗಿ ಓದಿದರು.

ಅವರು ಆಫ್ರಿಕೆಯಲ್ಲಿರುವಾಗ ಹಾಗೂ ಹಿಂದೂಸ್ಥಾನಕ್ಕೆ ತಿರುಗಿ ಬಂದನಂತರ, ಪತ್ರ ವ್ಯವಹಾರದಿಂದ, ಅಭ್ಯಾಸದಿಂದ ಹಾಗೂ ಇತರರ ಗೆಳೆತನದಿಂದ ಹಿಂದೂ ಧರ್ಮ ಗ್ರಂಥಗಳ, ವಿಶೇಷವಾಗಿ ಗೀತೆಯ ಬಗ್ಗೆ ಇದ್ದ ಜ್ಞಾನವನ್ನು ಬೆಳೆಸಿಕೊಂಡಿದ್ದರು. ೧೯೦೪ರಲ್ಲಿ ಅವರು ಮತ್ತೊಮ್ಮೆ ದಕ್ಷಿಣ ಆಫ್ರಿಕೆಗೆ ಹೋದಾಗ ಬೇರೆ ಒಬ್ಬ ಕ್ರಿಶ್ಚಿಯನ್ ಲೇಖಕನೊಡನೆ ಉಂಟಾದ ಸಂಬಂಧವನ್ನು ಹೀಗೆ ಬಣ್ಣಿಸಿದ್ದಾರೆ—

'ಮಿ. ಪೋಲಕರು ಜೋಹಾನ್ಸಬರ್ಗ ಸ್ಟೇಶನಕ್ಕೆ ಬಂದು ನನ್ನ ಪ್ರವಾಸದಲ್ಲಿ ಓದಲಿಕ್ಕೆಂದು ನನ್ನ ಕೈಯಲ್ಲಿ ಒಂದು ಪುಸ್ತಕವನ್ನು ಕೊಟ್ಟು ನನಗದು ರುಚಿಸಬಹುದೆಂದು ಹೇಳಿದರು. ಅದು ರಸ್ಕಿನನ 'ಅಂಟು ಧಿಸ್ ಲಾಸ್ಟ್' ಎಂಬ ಪುಸ್ತಕವಾಗಿತ್ತು. ಅದನ್ನು ಓದಿದ ನಂತರ ನನಗೆ ರಾತ್ರಿಯೆಲ್ಲ ನಿದ್ರೆ ಹತ್ತಲಿಲ್ಲ. ಆ ಪುಸ್ತಕದ ಧ್ಯೇಯಗಳಂತೆ ನನ್ನ ಜೀವನವನ್ನು ಮಾರ್ಪಡಿಸಲು ನಿಶ್ಚಯಿಸಿದೆ.

ಗಾಂಧೀಜಿಯವರ ಇಂಥ ಧಾರ್ಮಿಕ ಬೆಳವಣಿಗೆಗೆ ಎಂಥ ಕ್ರಿಶ್ಚನ್ ವಿಚಾರಗಳು ಕಾರಣಗಳಾದವು ಹಾಗೂ ಎಂಥವನ್ನು ಅವರು ತಮ್ಮ ಜೀವನಕ್ಕೆ ವಿಸಂಗತವಾದವುಗಳೆಂದು ಬಿಟ್ಟುಕೊಟ್ಟರೆಂಬುದನ್ನು ನಾವು ಇನ್ನು ಸೂಕ್ಷ್ಮವಾಗಿ ವಿಚಾರಿಸೋಣ. ಕ್ರಿಶ್ಚನ ಧರ್ಮದಲ್ಲಿಯ ಧಾರ್ಮಿಕ ಅನುಭವದ ಆಧ್ಯಾತ್ಮಿಕ ಸ್ವರೂಪ ಮತ್ತು ಹಟ ಹಾಗೂ ಪ್ರೇಮ ಮೂಲಕವಾದ ಧಾರ್ಮಿಕ ಕಲ್ಪನೆಯಿಂದ ಸಮಾಜದ ಎಲ್ಲ ನೀತಿಮತ್ತೆಯ ಮೇಲೆ ಉಂಟಾಗುವ ಅದ್ಭುತ ಪರಿಣಾಮ ಇವೆರಡು ವಿಷಯವನ್ನು ಅವರು ಯಾವಾಗಲೂ ವಿಚಾರಿಸುತ್ತಿದ್ದರು. ಆಧ್ಯಾತ್ಮಿಕ ಅನುಭವದ ಬಗ್ಗೆ ಇಷ್ಟೊಂದು ಆಸ್ಥೆಯಿದ್ದವರಿಗೆ ದೈವೀ ಸ್ಫೂರ್ತಿ ಅಥವಾ ಆವೇಶದಲ್ಲಿ ವಿಶ್ವಾಸವಿರುವುದಿಲ್ಲ. ಬಹು ದಿನಗಳ ಪೂರ್ವದಲ್ಲಿಯೇ ಈ ಅಂತರಿಕ ಶುದ್ಧಿಯ ವಿಷಯವಾಗಿ ಅವರು ಸ್ಪಷ್ಟಾಭಿಪ್ರಾಯವುಳ್ಳವರಾಗಿದ್ದರು. 'ನನಗೆ ಪಾಪಕೃತ್ಯಗಳಿಂದ ಶುದ್ಧಿ ಬೇಡ, ಆದರೆ ಪಾಪದಿಂ

(೯ನೇ ಪುಟಕ್ಕೆ ಮುಂದುವರಿದಿದೆ)

ಬಾಗಿಲ ನೆಲದಲ್ಲಿ ಬಿರುಕು

ಸರಕಾರ ಆಫೀಸರರು ಏಳುವುದು ಸೂರ್ಯೋದಯವಾದ ಕೆಲ ಗಂಟೆಗಳ ಮೇಲೆಯೇ. ಅದರಲ್ಲೂ ಪ್ರಮೋದ ಗುಪ್ತನು ಹೆಚ್ಚಿನ ಆಲಸ್ಯಿಯು. ಪೋಸ್ಟ್‌ಮೇನನು ಬಂದು ಬಾಗಿಲು ತಟ್ಟಿದ ನಂತರವೇ ಅವರಿಗೆ ಎಲಾರಮ್ ಇಟ್ಟಂತಾಗುವುದು.

ಅವನಿಗೆ ಪೋಸ್ಟ್‌ಮೇನನ ಸಂಕೇತ ಬಹಳ ಅಭ್ಯಾಸವಾಗಿ ಹೋಗಿದೆ. ಅವನು ಹೊರಗೇಟನ್ನು ದೂಡಿದ ಕೂಡಲೇ ಗುಪ್ತನು ತಟ್ಟನೆ ಎದ್ದು ಹಾಸಿಗೆ ಮೇಲೆ ಕೂರುವನು. ನಂತರ ಟಪ್ಪಾಲು ನೋಡಲು ಗಡಿಬಿಡಿಯಿಂದ ಬಾಗಿಲ ಕಡೆಗೆ ಧಾವಿಸುವನು.

ಹೊರಗೆ ತುಂಬಾ ಚಳಿ ಇದೆ. ನಡುಗುತ್ತಲೂ ಅವುಡುಕಚ್ಚುತ್ತಲೂ ನಿದ್ದೆಗಣ್ಣಿನ ಗುಪ್ತನು ಬಾಗಿಲಿನ ಟಪ್ಪಾಲು ಸಂದಿಯಿಂದ ಬೀಳುವ ಕಾಗದಗಳೊಂದೊಂದನ್ನೆ ದಿಟ್ಟಿಸಿ ಆ ಮೇಲೆ ಒಳಗೆ ನೆಲದ ಮೇಲೆ ಬಿದ್ದಿರುವ ಆ ಪತ್ರಗಳನ್ನೆಲ್ಲ ಹೆಕ್ಕುವುದು ಅವನ ಒಂದು ಕ್ರಮ. ಮೊದಲು ಅವನಿಗೆ ಎಷ್ಟು ಕಾಗದ ಬಂದಿದೆ ಎಂದಾಗ ಬೇಕು. ಆ ಮೇಲೆ ಅದರೊಳಗೆ ಏನಿದೆ ಎಂದು ಅವನು ಪರಕಿಸುವುದು.

ಅಂದು ಬಾಗಿಲ ಸಂದಿನಿಂದ ಕಾಗದ ಒಳಗೆ ಬೀಳುವಾಗ ಗುಪ್ತನು ಒಂದು ವಿಶೇಷ ಕಂಡನು. ಎಡೆಗೆ ತುರುಕಿಸಲ್ಪಟ್ಟ ಕಾಗದವೊಂದು ನೆಲದ ಮೇಲೆ ಬಿದ್ದೊಡನೆ ಮಾಯವಾಯಿತು. ಇದೇನು ಜಾದುವೇ ಎಂದು ಗುಪ್ತನು ಹತ್ತರ ಸಾರಿ ಸೂಕ್ಷ್ಮವಾಗಿ ಪರಿಶೋಧಿಸಿದಾಗ ಮರದ ಹಲಗೆ ಹಾಸಲ್ಪಟ್ಟ ನೆಲದಲ್ಲಿ ಒಂದು ಬಿರುಕನ್ನು ಅವನು ಕಂಡನು. ಕಾಗದವು ಸರ್ರನೆ ಅದರೊಳಗೆ ನೋಟವಿಟ್ಟು ಥಾಕಿದಂತೆ ನುಸುಳಿಕೊಂಡಿದ್ದನ್ನು ಚಕಿತರಾಗಿ ನೋಡಿದನು ಗುಪ್ತನು.

ಇತರ ಪತ್ರಗಳನ್ನು ತೆಗೆದಿಟ್ಟು ಕಾಣೆಯಾದ ಅದೊಂದು ಕಾಗದವನ್ನು ಮೇಲೆ ಎತ್ತಲು ಪ್ರಯತ್ನ ನಡೆಸಿದನು. ಬೆರಳು ತುರುಕಿಸಿದನು–ಸಾಧ್ಯವಾಗಲಿಲ್ಲ. ಕಡ್ಡಿಯಿಂದ ಕುಕ್ಕಿ ನೋಡಿದನು. ಸಾಧ್ಯವಾಗಲಿಲ್ಲ–ಚೂರಿಯಿಂದ ತಿವಿದು ಪ್ರಯೋಗ ಮಾಡಿದನು–ಸಾಧ್ಯವೇ ಆಗಲಿಲ್ಲ. ಇನ್ನೂ ಒಂದೇ ಮಾರ್ಗ ಉಳಿಯಿತು. ಬಡಗಿಯನ್ನು ತರಿಸುವುದು. ಆ ಕಾಗದವನ್ನು ತೆಗೆಯದೆ ಇದ್ದರೆ ಅದರಲ್ಲಿ ಏನಿದೆ ಎಂದು ಹೇಗೆ ಗೊತ್ತಾಗಬೇಕು. ಯಾವ ಮಿತ್ರರ ಪತ್ರವೊ, ಇಲ್ಲವೆ ಯಾವ ಕ್ಲಾರ್ಕನ ಅರ್ಜಿಯೋ ಯಾರು ಬಲ್ಲರು? ಸುರಕ್ಷಿತವಾಗಿರುವ ಕಾಗದಗಳಿಗೆ ಅಷ್ಟೊಂದು ಪ್ರಾಮುಖ್ಯತೆಯಿಲ್ಲ.

ಕಡೆಗೆ ಮರದ ಕೆಲಸದವ ಬಂದ. ಸಿಗರೇಟು ಸೇದುತ್ತ ಗುಪ್ತನು ಬಡಗಿಯ ಸಾಹಸವನ್ನು ನಿರೀಕ್ಷೆಯಿಂದ ನೋಡಹತ್ತಿದನು. ಉಳಿಯಿಂದ ಒತ್ತಿ, ಸುತ್ತಿಗೆಯಿಂದ ಬಡಿದು ಕೆತ್ತೆಗಳು ಕುತ್ತಿ ಹೇಗೂ ಬಡಗಿ ಹಲಗೆಯ ಭಾಗವನ್ನು ಮೇಲಕ್ಕೆತ್ತಿದ. ಏನು ನೋಡುವುದು? ಒಂದು ಕಾಗದವಲ್ಲ. ಅನೇಕ ಕಾಗದಗಳಿದ್ದುವು. ಎಷ್ಟು ವರ್ಷಗಳಿಂದ ತಪ್ಪಿ ಒಂದೊಂದೇ ಅಲ್ಲಿ ಬಿದ್ದುವು. ಅವು ಮಣ್ಣಿನಿಂದ ಮುಚ್ಚಿದ್ದುವು.

ವರ್ಷಕ್ಕೆ ಒಂದೆರಡರಂತಾದರೂ ಪತ್ರಗಳು ಅದರಲ್ಲಿ ಬಿದ್ದಿರಬೇಕು. ಗುಪ್ತರು ಒಂದನ್ನು ಸ್ವತಃ ನೋಡಿದ್ದರಿಂದ ಆಯಿತು. ಇಲ್ಲದಿದ್ದರೆ ಇನ್ನೆಷ್ಟು ಆ ಗುಪ್ತರಂಧ್ರದೊಳಗೆ ಆಹುತಿಯಾಗಿರುತಿದ್ದವೊ ದೇವರೇ ಬಲ್ಲ.

ಅನೇಕ ಕಡೆಗಳಲ್ಲಿ ಇಂತಹೇ ಘಟನೆಗಳಾದುದು ಬಡಗಿಯಿಂದ ಗುಪ್ತನು ಕೌತುಕದಿಂದ ಕೇಳಿದನು. ಮರುದಿನವೇ ಆ ಹಾಳು ತೂತನ್ನು ಮುಚ್ಚುವುದಾಗಿ ವಚನಕೊಟ್ಟು ಬಡಗಿ ತೆರಳಿದ. ಗುಪ್ತನು ಒಂದು ಆರಾಮ ಕುರ್ಚಿಯಲ್ಲಿ ಕೂತು ಆ ಹಳೇ ಅವಿತುಕೊಂಡ ಪತ್ರಗಳಲ್ಲಿ ಏನಿದೆ ಎಂದು ನೋಡುವ ಕುತೂಹಲದಿಂದ ಕಾರ್ಯ ಮಗ್ನನಾದನು. ಮೊದಲು ಅವು ಎಷ್ಟು ಹಳೆಯವು ಇರಬಹುದೆಂದು ಅವುಗಳ ಮುದ್ರೆಯಲ್ಲಿನ ತಾರೀಕನ್ನು ನೋಡುವವನಾದನು. ಮತ್ತು ಒಂದೊಂದಾಗಿ ಒಡೆದನು.

ಒಂದು ಪತ್ರದಲ್ಲಿ ನೂರು ರೂಪಾಯಿಯ ಒಂದು ಚೆಕ್ ಇತ್ತು. ಎಷ್ಟೊ ಸಮಯದ ಹಿಂದೆ ಒಬ್ಬ ಸ್ನೇಹಿತನಿಗೆ ಮೈಸೂರು ದಸರೆಗೆ ಹೋದಾಗ ಕೊಟ್ಟ ಸಾಲದ ಹಣ ಅದು. ಗುಪ್ತರು ಪತ್ತೆ ಇಲ್ಲದ ಆ ಸ್ನೇಹಿತನ ಆಶೆ ಬಿಟ್ಟಿದ್ದರು. ಈ 'ಡೋಂಗಿ' ಎಂದು ತಿಳಕೊಂಡಿದ್ದ ಸ್ನೇಹಿತರು ಎಷ್ಟೊ ಸಮಯದ ಹಿಂದೆಯೇ ತಮ್ಮ ಸಾಲವನ್ನು ಕಳುಹಿಸಿಕೊಟ್ಟಿದ್ದರು.

ಯೋಚನೆ ಮಾಡುವಾಗ ತಿಳಿಯಿತು. ಆ ಸ್ನೇಹಿತ ಈಗ ಮರಣಪಟ್ಟಿದ್ದಾನೆ. ಚೆಕ್ ಕೇಶ್ ಮಾಡಲಿಕ್ಕಾಗುವುದಿಲ್ಲ.

ಇನ್ನೊಂದು ಪತ್ರದಲ್ಲಿ ಒಂದು ವಿವಾಹ ಆಮಂತ್ರಣವಿತ್ತು.

ಆ ಮದುವೆ ಆದಾಗ ಗುಪ್ತರಿಗೆ ಕೋಪ ಬಂದಿತ್ತು. ಊರಿನ ಎಲ್ಲರಿಗೂ ಆಮಂತ್ರಣಕೊಡಲ್ಪಟ್ಟಿದೆ. ಸರಕಾರಿ ಘನಸ್ಥ ಆಫೀಸರನಾದ ತನಗೆ ತಿರಸ್ಕಾರವೇ? ಹೀಗೆಂದು ಕೊಂಡಿದ್ದನು ಗುಪ್ತನು. ಕಡೆಗೆ ನೋಡಹೋದರೆ ಪತ್ರ ಬಿರುಕಿನಲ್ಲಿತ್ತು. ಗುಪ್ತರು ಕೋಪವಮಾಡಿಕೊಂಡದ್ದೇ ಬಂತು.

ಇದರಿಂದ ಗುಪ್ತರಿಗೆ ಇನ್ನೊಂದು ಲಾಭವಾಗಿತ್ತು. ಮದುವೆಯಾದ ಆ ಸ್ನೇಹಿತನಿಗೆ ಉಡುಗೊರೆ ಕಳುಹಿಸಬೇಕೆಂದಿದ್ದನು. ಆದರೆ ಆಮಂತ್ರಣವೇ ಬಾರದ ಮೇಲೆ ಎಲ್ಲಿಯ ಉಡುಗೊರೆ? ಅವನ ತಾಯಿ ತುಂಬಾ ಒತ್ತಾಯ ಮಾಡಿದರೂ ಗುಪ್ತನು ಕೋಪದಲ್ಲೇ ಇದ್ದರೂ ಮತ್ತೊಂದು ಪತ್ರ ತೆರೆದಾಗ ಅದರಲ್ಲಿ ಬೊಂಬಾಯಿಂದ ಒರ್ವ ಸ್ನೇಹಿತನು ಶೇರುಗಳ–ಲಾಭಾಲಾಭಾದ, ಬೆಲೆ ಏರುವಿಕೆಯ ಸಲಹೆಗಳನ್ನು ಕೊಟ್ಟ ಪತ್ರವಿತ್ತು. ಆ ಸಲಹೆ ಪ್ರಕಾರ ನಡೆಯುತಿದ್ದರೆ ಗುಪ್ತನಿಗೆ ಇದುತನಕ ಕಡಿಮೆ ಎಂದರೆ ಐನೂರು ರೂಪ್ಯಾಯಿಗಳ ಲಾಭವಾಗುತಿತ್ತು. ಶೇರು ಪಡೆಯೋಣದಿಂದ ತುಂಬಾ ಬೇಸರ ಪಟ್ಟನು–ಛೇ ಐಷ್ಟೊಂದು ನಷ್ಟ–ಒಂದು ಬಿರುಕಿನಿಂದ!

ಇನ್ನೂ ಕೆಲವು ಪತ್ರಗಳಿದ್ದುವು. ಅವು ಇಲ್ಲಿ ವಿವರಿಸುವಷ್ಟು ಪ್ರಾಮುಖ್ಯವಾದುವುಗಳಲ್ಲ. ಅಂದರೆ ಅದರಿಂದ ಗುಪ್ತನಿಗೆ ಯಾವತರದ ಹಾನಿಯಾಗುವಂತಿಲ್ಲ.

ಕಡೆಯ ಒಂದು ಪತ್ರವನ್ನು ಓದುವಾಗ ಗುಪ್ತರ ಜೀವ ಕುತ್ತಿಗೆಯಲ್ಲಿ ಬಂದು ನಿಂತಹಾಗಾಯಿತು. ಅವರ ಎದೆ ಬಡಿಯ ಲಾರಂಭವಾಯಿತು. ಒರ್ವ ಭಾವನಾಪ್ರಧಾನ ತರುಣಿಯು ತಾನು ಪ್ರೀತಿಸಿದ ತರುಣನಿಗೆ ಬರೆದ ಪ್ರಣಯ ಪತ್ರ ಅದು. ಅರೆ! ಇದು ಈಗ ಹೇಗೆ ಇಲ್ಲಿ ಬಂತು? ಗುಪ್ತನಿಗೆ ಕುತೂಹಲವೂ ಆಶ್ಚರ್ಯವೂ ಆಗಿ ಗಡಬಡನೇ ಅದನ್ನು ಓದಿದರು.

"ಪ್ರಾಣಪ್ರಿಯನೆ

ನಿಜವಾಗಿಯೂ ನಾನು ನಿನ್ನ ವಿಷಯವಾಗಿಯೇ ಯೋಚಿಸುತಿದ್ದೇನೆ. ನಾನು ಏತಕ್ಕೆ ನಿನ್ನೊಡನೆ ಆ ರೀತಿಯಲ್ಲಿ ವರ್ತಿಸಿದೆ ಎಂದು ನನಗೇ ತಿಳಿಯಲಿಲ್ಲ. ನಾನು ಖಂಡಿತವಾಗಿಯೂ ಲಜ್ಜೆಯಿಂದ ಹಾಗೆ ವರ್ತಿಸಿದೆನೆಂದು ನನಗೆ ಈಗ ತೋರುತ್ತದೆ. ನಾನು ನಿನ್ನನ್ನು ಅಪ್ಪಿಕೊಂಡು ನಿನ್ನ ಹೆಗಲ ಮೇಲೆ ಮುಖ ಇಟ್ಟವಳಾಗಿ ಪ್ರೇಮದ ನಿಟುಸಿರನ್ನು ಬಿಡಬೇಕೆಂದು ಬಯಸಿದಳಾದರೂ ಆ ಲಜ್ಜೆಯೊಂದು ನನ್ನ ಭಾವನೆಯನ್ನು ಕುಲುಕಿತು. ನಾನು ಸಂಕೋಚಪಟ್ಟುಕೊಂಡು ನಿನ್ನೊಡನೆ ಬೆರೆಯಲಿಲ್ಲ. ನೀನು ಅದನ್ನು ತಿರಸ್ಕಾರವೆಂದು ಕೊಂಡೆ. ಈ ಪರಿಸ್ಥಿತಿಯನ್ನು ಹೇಗೆ ಸರಿಪಡಿಸಿಕೊಳ್ಳುವುದೆಂದು ನಾನು ಚಿಂತಿಸುತಿದ್ದೆ. ನಾನು ಈ ಪತ್ರ ಬರೆಯದಿದ್ದರೆ ನೀನು ನನ್ನನ್ನು ಖಂಡಿತ ನಿನ್ನ ಮನಸ್ಸಿನಿಂದ ತಳ್ಳಿ ಹಾಕಿ, ನನ್ನ ಮುಖವನ್ನು ಕೂಡಾ ನೋಡಲಿಕ್ಕಿಲ್ಲವೆಂದು ಭಾವಿಸಿಕೊಂಡಿದ್ದೇನೆ. ನಾನು ಅದೆಂತಹ ಮೂರ್ಖೆ. ಹಾಗೆ ವರ್ತಿಸಿದರಿಂದ ನನಗೇ ನಾನು ಘಾತಮಾಡಿಕೊಂಡ ಹಾಗಾಯಿತು. ಪ್ರಿಯನೆ ನನ್ನನ್ನು ಕ್ಷಮಿಸು... ನನಗೆ ಇನ್ನೊಂದು ಸಂದರ್ಭವನ್ನು ಕೊಡುವವನಾಗು. ನೀನು ಇಷ್ಟರ ತನಕ ನನ್ನ ಆ ವರ್ತನೆಗಾಗಿ ನಿನ್ನ ಮನಸ್ಸನ್ನು ತಿರುಗಿಸಿಕೊಂಡಿಲ್ಲವಾದರೆ ನನಗೊಂದು ಉತ್ತರ ಬರಿ. ಇಲ್ಲದಿದ್ದರೆ ಬೇಡ. ನನಗೆ ನಿನ್ನ ಮೌನವೇ ಅರ್ಥವಾಗುವುದು."

ಓ ದೇವರೆ! ಸುಭಾಳ ಪತ್ರ. ಗುಪ್ತನು ಸುಭಾಳನ್ನು ಪ್ರೀತಿಸಿ ಅವಳ 'ಕೈಯನ್ನು' ಕೇಳಿದ್ದರು... ಅವಳು ಲಜ್ಜೆಪಟ್ಟಿದ್ದಳು. ಆದರೂ ನಿಜಸ್ಥಿತಿಯನ್ನು ಕುರಿತು ಬರೆದ ಪತ್ರ ದುರಾದೃಷ್ಟದಿಂದ ನೆಲದ ಬಿರುಕಿನಲ್ಲಿ ಬೀಳಬೇಕೆ?

ಗುಪ್ತನಿಗೆ ಏನೂ ತೋಚದಾಯಿತು. ಪ್ರೀತಿಯ ಸುಭಳು ಯಾರಿಗೆ ನಿಶ್ಚಯ ಮಾಡಲ್ಪಟ್ಟಿರುವಳೊ? ಏನು ಮಾಡಲಿ?

ಹೃದಯದ ಅಂತರಾಳದಿಂದ ಹುಟ್ಟಿದ ಪ್ರೇಮ ಕಂಬನಿಯಿಂದ ಕೂಡಿದ ಆ ಪತ್ರವನ್ನು ಬರೆದ ಸುಭಾಳು ತನ್ನ ಉತ್ತರ ಬಾರದೆ ಅದೆಷ್ಟು ನಿರಾಶೆ ಪಟ್ಟಳೊ? ತನಗೆ ವಿವಾಹವಾಗಬೇಕೆಂದು ಗುಪ್ತನು ಕೇಳಿ ತಿಂಗಳುಗಳು ಹಲವಾದವು. ಈಗ ಅವಳು ಬೇರೆ ಮದುವೆಮಾಡಿಕೊಂಡಿರಬಹುದು. ಇಲ್ಲವೆ ನಿರಾಶೆಯಿಂದ ಬೇರೆ ದೇಶಕ್ಕೆ ಹೋಗಿದ್ದರೂ ಇರಬಹುದು. ಮೌನವಾಗಿದ್ದ ತನ್ನ ಪ್ರಾಣಪ್ರಿಯನ ಕಠಿಣ ಹೃದಯಕ್ಕೆ ಅವಳು ಅದೆಷ್ಟು ಶಪಿಸಿರಬಹುದು.

ಗುಪ್ತನೂ ಬಹಳ ಕನಿಕರಪಟ್ಟವನಾಗಿ ಟೆಲಿಫೋನಿನ ಬಳಿ ಹೋದನು. ಅಲ್ಲಿ ಸ್ವಲ್ಪ ಹೊತ್ತು ಸುಮ್ಮನೆ ನಿಂತನು. ಸಮಯ ಮಧ್ಯಾಹ್ನವಾದುದರಿಂದ ಆ ಪತ್ರ ಬರೆದಿರುವ ಸುಭಾಳ ಆಫೀಸ್ ವಿಳಾಸಕ್ಕೆ 'ಕಾಲ್' ಮಾಡಿದನು. ಅವಳು ಮನೆಗೆ ಹೋದ ಮೇಲೆ ಅವಳಿಗೆ ಈ ವಿಚಿತ್ರ ಸನ್ನಿವೇಶವನ್ನು ತಿಳಿಸೋಣವೆಂದು ಒಂದು ಕ್ಷಣ ಗುಪ್ತನಿಗೆ ಅನಿಸಿತ್ತು; ಆದರೆ ಉಕ್ಕಿ ಬರುವ ಪ್ರೇಮ, ನಿರಾಶೆ ತಡೆಯಲಿಕ್ಕಾಗಲಿಲ್ಲ.

ಟೆಲಿಫೋನಿನಲ್ಲಿ ಮಾತಾಡಬೇಕೆಂದಾಗ ಒಂದೇ ಸವನೆ ಅವನಿಗೆ ಒಂದು ತರದ ಸಮಾಧಾನ ಬಂತು. ಅವಳ ಆ ಪತ್ರವನ್ನು ಬಿಗಿಹಿಡಿದು ಅವನು ಅಲ್ಲೇ ಒಂದು ಕ್ಷಣ ನಿಂತನು. ಅವನ ಕಣ್ಣುಗಳಲ್ಲಿ ಕಂಬನಿಗಳು ದುರಿದವು.

"ಮೊದಲಿನ ಶಬ್ದಗಳನ್ನು ಗುಪ್ತನು ಗದ್ಗದಿತಕಂಠದಿಂದ ನುಡಿದನು.

"ಸುಭಾ, ಸುಭಾ-ನಾನು, ನಿನ್ನ ಪ್ರೀತಿಯ ಗುಪ್ತ. ಪ್ರಿಯೆ... ನಿನಗೆ ನಾನು ತುಂಬಾ ಕ್ರೂರಿ ಎಂದು ಅರ್ಥವಾಗಿರಬಹುದು.... ಆದರೆ ನಿನ್ನ ಪತ್ರವು ನನಗೆ ಇವತ್ತು ಬೆಳಿಗ್ಗೆ ಸಿಕ್ಕಿತು. ನನ್ನನ್ನು ಕ್ಷಮಿಸು. . . ."

ಮತ್ತೆ ಮಾತುಗಳು ಹೊರಡದಾದವು. ಗುಪ್ತನ ಹೃದಯವು ಉಕ್ಕಿ ಬಂತು. ಸುಭಾಳ ಉತ್ತರವೇನಿರಬಹುದು. ತಿಂಗಳು ಮೂರು ಆಯಿತು. ಅವಳ ಗಂಡನ ಹೆಸರೇನಿರಬಹುದು. ಆದರೆ ಅಷ್ಟು ನಿರಾಶೆಗೆ ಕಾರಣವಿಲ್ಲ. ಸುಭಾಳ ಉತ್ತರ ಮರುಕ್ಷಣವೇ ಬಂತು.

"ಪ್ರಮೋದ್, ಪ್ರಿಯ ಪ್ರಮೋದ್" ಬೇಸರ ಪಟ್ಟುಕೊಳ್ಳ ಬೇಡ. ಪತ್ರದಲ್ಲಿ ಮೂರು ತಿಂಗಳ ಹಿಂದಿನ ತಾರೀಕು ಇದ್ದರೂ ಅದನ್ನು ನಾನು ನಿನ್ನೆಯೇ ಟಪ್ಪಾಲಿಗೆ ಹಾಕಿದ್ದೆ, ಕ್ಷಮಿಸು"

1944

ಮೈಸೂರು ದಸರಾ ಪ್ರದರ್ಶನದಲ್ಲಿ

ಸುವರ್ಣಪದಕ ಪಡೆದ

ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ–ಮಂಗಳೂರು

ನಮ್ಮ ಇತರ ವಿಶೇಷ ವಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಬ್ರಿಟಿಷ್ ಐರೋಪ್ಯ ಒಡಕು

ಕಳೆದೆರಡು ವಾರಗಳಿಂದ ಯುರೋಪಿನ ದುರವಸ್ಥೆಯನ್ನು ಪರಿಶೀಲಿಸುವಾಗ ಜರ್ಮನರ ಉಕ್ಕಿನ ಹಿಡಿತದ ಬಿಗಿಯಿಂದ ತಪ್ಪಿಸಲ್ಪಟ್ಟರಾದರೂ ಅಲ್ಲಿನ ಜನರ ಪರಿಸ್ಥಿತಿಯು ಯಾವ ತರದಲ್ಲಿಯೂ ಸುಧಾರಿಸಲ್ಪಟ್ಟಿಲ್ಲ. ತಮ್ಮ ದಾಸ್ಯವು ಪರಿಹಾರವಾಯಿತೆಂದು ಐರೋಪ್ಯರು ಸಮಾಧಾನ ಪಡುವ ಹಾಗಿಲ್ಲದಂತಹ ಒಂದು ನವೀನ ಸಂಕಷ್ಟವು ಅವರಿಗೆ ಬಂದೊದಗಿದೆ.

ನಾಜೀ ಬಂಧನದಿಂದ ಮುಕ್ತಗೊಳಿಸಲ್ಪಟ್ಟ ಯುರೋಪಿನ ಚಿಕ್ಕ ದೊಡ್ಡ ರಾಜ್ಯಗಳಲ್ಲೆಲ್ಲ ಸ್ವಾತಂತ್ರ ದಂಗೆಗಳು ಏಳಹತ್ತಿವೆ. ಅಲ್ಲಿನ ಜನರು ತಮ್ಮನ್ನು ಮುಕ್ತಗೊಳಿಸಿದವರ ಕೈಕೆಳಗೂ ಇರಲು ತೃಪ್ತಿಪಡುವುದಿಲ್ಲ ಎಂದು ತೋರುತ್ತದೆ. ಫೆಸಿಸ್ಟ್ ಮತ್ತು ನಾಜಿ ಸರ್ವಾಧಿಕಾರವನ್ನು ಕಿತ್ತೊಗೆಯುವುದಕ್ಕೆ ಅಲ್ಲಿನ ಜನಪ್ರಿಯ ದೇಶಭಕ್ತರೂ, ಫೆಸಿಸ್ಟ್ ವಿರೋಧಿ ಪಕ್ಷದವರೂ ಹೃತ್ಪೂರ್ವಕ ಪ್ರಯತ್ನಗಳನ್ನು ಮಾಡುತ್ತಾರೆ. ಇವರ ಉದ್ದೇಶ ಗುರಿಗಳು ಇಷ್ಟೇ ಅಲ್ಲ, ದೇಶದ ಒಳಗಿನ ಪ್ರತಿಕ್ರಿಯೆಗಾರರಾದ ಕೆಲ ಫೆಸಿಸ್ಟ್ ಮತ್ತು ಸಾಮ್ರಾಜ್ಯವಾದಿಗಳ ಸ್ನೇಹಿತರನ್ನು ಸದೆಬಡೆಯುವುದಕ್ಕೂ ಇವರು ಪಣತೊಟ್ಟಿದ್ದಾರೆ.

ಜನಹಿತದ ಪ್ರಗತಿದಾಯಕವಾದ ರಾಜಕೀಯ ಸಾಮಾಜಿಕ ಸುವ್ಯವಸ್ಥೆಯುಳ್ಳ ರಾಜ್ಯಾಡಳಿತವನ್ನು ಸ್ಥಾಪಿಸುವುದು ಅಲ್ಲಿನ ದೇಶಭಕ್ತರ ಮಹತ್ವಾಕಾಂಕ್ಷೆ ಇರುತ್ತದೆ. ಮಿತ್ರರ ಜೊತೆಗೆ ಸೇರಿ ಯುದ್ಧ ಮಾಡಿದ ಆ ವೀರ ನಾಯಕರ ದಳಗಳು ಬ್ರಿಟಿಷ್ ಮತ್ತು ಅಮೇರಿಕನ್ ಸೇನಾಧಿಪತಿಗಳಿಂದ ಶ್ಲಾಘಿಸಲ್ಪಟ್ಟಿದ್ದಾರೆ.

ಗ್ರೀಸಿನ ಪ್ರಕರಣ

ಪ್ರಜಾಪ್ರಭುತ್ವ ಮತ್ತು ರಾಜ್ಯಘಟನೆಯ ಹೆಸರಿನಲ್ಲಿ ಗ್ರೀಸಿನ ಪ್ರಗತಿಶೀಲ ರಾಜಕೀಯ ಪಕ್ಷಗಳ ಮೇಲೆ ಬ್ರಿಟಿಷ್ ಆಕ್ರಮಣಗಾರರು ಕಡುವಾದ ಧೋರಣೆಯನ್ನು ಕೈಕೊಂಡಿರುವರು. ಮಿತ್ರದಳಗಳು ಯುರೋಪಿನಲ್ಲಿ ಇನ್ನು ಮುಂದೆ ಯಾವ ತರದ ಧೋರಣೆ ಕೈಕೊಳ್ಳುವರೆಂಬುದರ ಒಂದು ನಿದರ್ಶನ ಇದಾಗಿರಬಹುದೆಂದು ಸಂದೇಹವು ರಾಜಕೀಯ ತಜ್ಞರಲಿ ಉಂಟಾಗಿದೆ.

ಕೊಮನ್ಸ್ ಸಭೆಯಲ್ಲಿ ಪ್ರಧಾನ ಚರ್ಚಿಲ್ಲರು ಗ್ರೀಸಿನಲ್ಲಿ ಕೈಕೊಂಡ ಧೋರಣೆಯನ್ನು ಬಲವಾಗಿ ಸಮರ್ಥಿಸಿರುವುದು ಮೇಲಿನ ಸಂದೇಹಕ್ಕೆ ಹೆಚ್ಚಿನ ಆಧಾರ ಸಿಕ್ಕಿದಂತಾಗಿದೆ. ಗ್ರೀಸ್ ದೇಶವನ್ನು ಬಂಧಮುಕ್ತಗೊಳಿಸಿದ ಕೂಡಲೇ ಸಹಜವಾಗಿ ಅಲ್ಲಿನ ಪ್ರಜಾಪಕ್ಷಗಳೂ ಇತರ ಕೆಲವು ರಾಜಕೀಯ ಪಕ್ಷಗಳೂ ಅಧಿಕಾರಕ್ಕಾಗಿ ಸತ್ಪ್ರಯತ್ನಗಳನ್ನು ನಡೆಸಿದವು. ಮಿತ್ರ ದಂಡುಗಳು ಈ ಕಲಹದಲ್ಲಿ ಕೈಹಾಕಿದುದರಪರಿಣಾಮವಾಗಿ ಭಯಂಕರ ದಂಗೆಯೊಂದು ಅಲ್ಲಿ ತಲೆ ಎತ್ತಿತು. ದಂಗೆಯನ್ನು ಅಣಗಿಸಲು ಮಿತ್ರ ಶಸ್ತ್ರಗಳೂ ವಿಮಾನ ದಳಗಳೂ ಅಪ್ರಹತಿಹತವಾಗಿ ಉಪಯೋಗಿಸಲ್ಪಟ್ಟವು. ಅನೇಕ ನಿಶ್ಶಸ್ತ್ರ ನಾಗರೀಕರುಕೊಲ್ಲಲ್ಪಟ್ಟರು. ಮಿತ್ರರ ಈ ಅಧಿಕ ಪ್ರಸಂಗದ ಕಾರ್ಯವನ್ನು ಎಲ್ಲರೂ ಜಿಗುಪ್ಸೆಯಿಂದ ಕಂಡಿದ್ದಾರೆ. ಚರ್ಚಿಲ್ಲರು ಮಾತ್ರ ಇದನ್ನು ಸಮರ್ಥಿಸಿದರು.

ಮಿತ್ರ ದಳಗಳ ಈ ತರದ ವ್ಯವಹಾರವು ಬ್ರಿಟಿಷ್ ಸರಕಾರದ ಅಂಧವರ್ತನೆಯ ಮತ್ತೊಂದು ನಿದರ್ಶನವೆಂದೆನ್ನಲಾಗಿದೆ. ಪುನಃ 'ಲಾ ಎಂಡ್ ಆರ್ಡರ್' (ನ್ಯಾಯ ಮತ್ತು ಶಿಸ್ತು) ಎಂಬ ತರ್ಕವನ್ನು ಬ್ರಿಟಿಷ್ ಪ್ರಧಾನರು ತಮ್ಮ ಸಮರ್ಥನೆಗಾಗಿ ಉಪಯೋಗಿಸಿಕೊಂಡಿದ್ದಾರೆ. ಮಾತ್ರವಲ್ಲ, ರಚನಾತ್ಮಕ ಸರಕಾರ ಸ್ಥಾಪನೆಗೆ ತಾವು ಸಹಾಯಮಾಡಬೇಕಾದ ಅವಶ್ಯಕತೆಯನ್ನು ಪುನಃ ಒತ್ತಿ ಹೇಳಿರುವರು.

ಗ್ರೀಸ್ ದೇಶದ ಅರಸರಾಗಿದ್ದ ಜಾರ್ಜರು ೧೯೩೬ರಲ್ಲಿ ರಚನಾತ್ಮಕ ಸರಕಾರವನ್ನು ರದ್ದುಗೊಳಿಸಿದ್ದು, ಅನಂತರ ಸರ್ವಾಧಿಕಾರವನ್ನು ಅವರು ಅಲ್ಲಿ ಸ್ಥಾಪಿಸಿದ್ದರು. ಜರ್ಮನರು ೧೯೪೧ರಲ್ಲಿ ಗ್ರೀಸ್ ಆಕ್ರಮಣ ಮಾಡುವ ತನಕ ಅಲ್ಲಿ ಸರ್ವಾಧಿಕಾರವೇ ಜಾರಿಯಲ್ಲಿತ್ತು. ಈಗ ಅಲ್ಲಿ ನ್ಯಾಯಬದ್ಧವಾದ ಸರಕಾರ ಸ್ಥಾಪನೆಗೊಳ್ಳಬೇಕಾಗಿದೆ ಎಂದು ಒಂದು ನೆಪ ಹೇಳಲಾಗಿದೆ. ಈ "ನ್ಯಾಯಬದ್ಧ"ವಾದ "ಸರಕಾರ"ಕ್ಕೆ ಚರ್ಚಿಲ್ಲರು ಮಾತ್ರ ಒಪ್ಪಬೇಕಲ್ಲದೆ ಅಲ್ಲಿನ ಜನರು ಮಿತ್ರರು ಮಾಡುವ ಯಾವ 'ನ್ಯಾಯಬದ್ಧ' ಸರಕಾರಕ್ಕೂ ಮನ್ನಣೆಕೊಡುವುದಿಲ್ಲ. ಇದಕ್ಕೆ ಬೆಲ್ಜಿಯಂ ಫ್ರಾನ್ಸುಗಳಲ್ಲಿನ ಘಟನೆಗಳೇ ನಿದರ್ಶನ. ಫ್ರಾನ್ಸಿನ ಡಿಗಾಲೆ ಸರಕಾರವು ಯಾವ ದೃಷ್ಟಿಯಿಂದಲೂ ನ್ಯಾಯಬದ್ಧವಾದುದಲ್ಲ. ಆದರೂ ಅಲ್ಲಿನ ಭೂರಿ ಜನತೆಯಲ್ಲಿ ಅದು ಮೆಚ್ಚುಗೆ ಪಡೆದಿದೆ.

ಟೀಕೆಟಿಪ್ಪಣಿಗಳು

ಗ್ರೀಸ್ ದೇಶದೊಳಗಿನ ಹಲವಾರು ರಾಜಕೀಯ ಪಕ್ಷಗಳೊಳಗೆ ಐಕ್ಯಮತ್ಯವನ್ನುಂಟು ಮಾಡಲು ಸಿರಿಯದ ಲೆಬೆನಾನಿನಲ್ಲಿ ಒಂದು ಪರಿಷತ್ತು ನಡೆಯಿತು. ಆದರೆ ಅಲ್ಲಿ ಯಾವ ತರದ ನಿರ್ದಿಷ್ಟ ಒಪ್ಪಂದ ನಿರ್ಣಯಗಳಾಗಲಿಲ್ಲ. ಚರ್ಚಿಲ್ಲರು ಲೆಬೆನಾನಿನಲ್ಲಿ ಸೇರಿದ್ದ ಗ್ರೀಸ್ ಪಕ್ಷಗಳೊಳಗೆ ಒಪ್ಪಂದ ಖಂಡಿತವಾಗಿ ಆಗಿಯದೆ ಎಂಬ ಭಾವನೆಯಿಂದ ತಮ್ಮ "ರಚನಾತ್ಮಕ, ನ್ಯಾಯಬದ್ಧ" ಸರಕಾರಗಳ ಕುರಿತು ತರ್ಕಮಾಡಿರುವರು.

ನ್ಯೂ ಸ್ಟೇಟ್ಸ್‌ಮೆನ್ ಎಂಬ ಬ್ರಿಟಿಷ್ ಪತ್ರಿಕೆಯೇ ಹೀಗೆ ಬರೆಯುತ್ತಿದೆ:

"ಗ್ರೀಸಿನಲ್ಲಿ ಒಂದು ಸಂಯುಕ್ತ ಸಮ್ಮಿಳಿತ ಸರಕಾರ ಸ್ಥಾಪಿಸಲು ಪ್ರಯತ್ನ ಮಾಡುವ ಪೆಪೆಂಡ್ರಿಯೊ ಅವರಿಗೆ ಜನ ಜನತೆಯ ಯಾವ ಬೆಂಬಲವೂ ಇಲ್ಲ. ಗ್ರೀಸನ್ನು ಬಂಧ ಮುಕ್ತಗೊಳಿಸಲು ಸಹಕರಿಸಿದವರೆಂದರೆ ಅಲ್ಲಿನ ಒಂದು ತರದ ಸಮತಾವಾದಿ ಪಕ್ಷದವರು. ಪೆಪೆಂಡ್ರಿಯೊ ಅವರು ಈ ಸಮತಾವಾದಿ ಪಕ್ಷವನ್ನು ದೂರಮಾಡಿ ಸರಕಾರ ರಚಿಸಲು ಪ್ರಯತ್ನಮಾಡಿರುತ್ತಾರೆ. ಪೆಪೆಂಡ್ರಿಯೊ ಅವರ ಈ ವರ್ತನೆಗೆ ಧೈರ್ಯ ಬಂದದ್ದು ಅವರಿಗೆ ಬ್ರಿಟಿಷರೂ ಮತ್ತು ಈಗ ಇಂಗ್ಲೆಂಡಿನಲ್ಲಿರುವ ಗ್ರೀಸಿನ ಮಾಜಿ ಅರಸ ಜಾರ್ಜರೂ ಕೊಟ್ಟ ಬೆಂಬಲವಿರುತ್ತದೆ."

ಪರಿಸ್ಥಿತಿಯು ಈ ತರವಾಗಿ ಪರಿವರ್ತನೆಗೊಂಡುದರಿಂದ ನಿರಾಶೆಗೆಗೊಂಡ ಅಲ್ಲಿನ ಸಮತವಾದಿಗಳು ತಮ್ಮ ಆಕಾಂಕ್ಷೆ ಪೂರೈಕೆಗಾಗಿ ಬಲತ್ಕಾರದ ಧೋರಣೆಯನ್ನು ಕೈಕೊಳ್ಳಬೇಕಾಯಿತು. ಜನಪ್ರಿಯವಾದ ಆ ಪಕ್ಷಕ್ಕೆ ಅವರಲ್ಲದೆ ಬೇರೆ ದಾರಿ ಕಾಣಲಿಲ್ಲ. ಹೀಗೆ ದಂಗೆ ಎದ್ದ ಈ ಗ್ರೀಕ್ ಸಮತಾವಾದಿ ಪಕ್ಷದವರು ಚರ್ಚಿಲ್ಲರು ಹೇಳುವಂತೆ 'ನ್ಯಾಯನೀತಿ ಇಲ್ಲದವರೂ, ಗೊಂದಲಗಾರರೂ' ಅಲ್ಲವೆಂದು ತಿಳಿದು ಬಂದಿದೆ. ಅವರ ಜೊತೆ ಒಟ್ಟು ಸೇರಿದವರಲ್ಲಿ ಜನಪ್ರಿಯ ಪ್ರಜಾಪ್ರಭುತ್ವವಾದಿಗಳೂ, ಕೃಷಿ ಕೆಲಸಗಾರರೂ, ಮಜೂರರೂ, ಸಮತಾವಾದ ತತ್ವಕ್ಕೆ ಒಲಿದಿರುವ, ಸೌಮ್ಯ ಧೋರಣೆವಾದಿಗಳೂ ಇದ್ದಾರೆ. ಅಂದ ಮೇಲೆ ಅದು ಜನಪ್ರಿಯ ಹೌದೊ, ಅಲ್ಲವೊ, ಅದು ನ್ಯಾಯ ಬದ್ಧವಾದದ್ದು ಹೌದೊ ಅಲ್ಲವೊ, ಅದು ಪ್ರಜಾಪ್ರಭುತ್ವ ಪದ್ಧತಿಯದು ಮತ್ತು ಫೆಸಿಸ್ಟ್ ವಿರೋಧಿ ಹೌದೊ, ಅಲ್ಲವೊ ಎಂಬ ವಿಷಯವು ಸ್ಪಷ್ಟವಾಗಿ ತಿಳಿಯುವುದು. ಅಲ್ಲಿನ ವಿಚಾರವಂತ ತರುಣವರ್ಗವು ಈ ಪಕ್ಷಕ್ಕೆ ಒಲಿದಿರುವುದು ಇನ್ನೊಂದು ವಿಷಯ.

ಮೇಲಿನ ಈ ಸಮ್ಮಿಳಿತ ಪಕ್ಷದ ಎದುರಿಗೆ ಬ್ರಿಟಿಷ್ ಸರಕಾರದ ಬೆಂಬಲವುಳ್ಳ ಪೆಪೆಂಡ್ರಿಯೋ ಪಕ್ಷವು ಒಂದು ಅಲ್ಪಸಂಖ್ಯಾಕ ಕೂಟವೆನ್ನಲ್ಪಟ್ಟಿದೆ. ಅಲ್ಲಿನ ಕಠಿಣ ಶ್ರೀಮಂತ ವರ್ಗದವರೂ, ಮಿ। ಚರ್ಚಿಲ್ಲರೂ ಗ್ರೀಸಿನಲ್ಲಿ ಉಗ್ರ ಸಮತಾವಾದ (ರಶ್ಯದಂತೆ)ವು ಸ್ಥಾಪಿಸಲ್ಪಡಬಹುದೆಂಬ ಹೆದರಿಕೆಯಿಂದ ತುಂಬಿದ್ದಾರೆಂದು ತೋರುತ್ತದೆ. ಆದರೆ ಅಲ್ಲಿಯ ಜನರಿಗೆ ಇತರ 'ನ್ಯಾಯಬದ್ಧ' 'ಸಂಯುಕ್ತ' ಸರ್ವಾಧಿಕಾರದ ಸಹಕಾರಕಿಂತ ಕೊಮ್ಯುನಿಸ್ಟ್ ಸರಕಾರವು ಹೆಚ್ಚು ಹಿತಕಾರಿ ಇರಬಹುದೆಂದು ಮನಗಂಡಿರಬಹುದು. ಹಿಂದೆ ಅವರು ೧೯೩೬ರಿಂದ ೧೯೪೧ರ ತನಕ ಅಲ್ಲಿನ ಜನರಲ್ ಮೆಟಾಕ್ಸಾಸ್ ಅವರ ಸರ್ವಾಧಿಕಾರತ್ವದ ಸವಿಯನ್ನು ಸವೆದಿರುವರು. ಅನಂತರ ಇಟೇಲಿಯನ್ ಮತ್ತು ಜರ್ಮನ್ ಫೆಸಿಸ್ಟ್ ಆಕ್ರಮಣಗಾರರ ಆಡಳಿತ ಸವಿಯನ್ನೂ ಉಂಡಿದ್ದಾರೆ. ಈ ಎಲ್ಲ ಅನುಭವಕಿಂತಲೂ ತಮ್ಮದೇ ಮೇಲೆಂದು ಅವರಿಗೆ ಅನುಭವವಾದಲ್ಲಿ ಕೌತುಕವೇನಿದೆ?

ಕರ್ತವ್ಯವೇನಿತ್ತು?

ಇನ್ನೊಂದು ಸಾರಸ್ಯದ ವಿಷಯವೆಂದರೆ ಈ ಗಲಾಟೆಗೆ ಕಾರಣಭೂತರೆನಿಸಿದ ಅಲ್ಲಿನ ಪೆಪೆಂಡ್ರಿಯೋ ಅವರು ಹಿಂದೆ ಜರ್ಮನರು ಪ್ರಜಾ ದಂಗೆಯನ್ನು ಅಣಗಿಸಲು ಸ್ಥಾಪಿಸಿದ ಒಂದು ಸೈನ್ಯದಳವನ್ನು ರದ್ದುಗೊಳಿಸದಿದ್ದುದು. ಇವರ ಮತ್ತು ಜರ್ಮನರ ಧೋರಣೆಗೆ ಯಾವ ವ್ಯತ್ಯಾಸವಿಲ್ಲವೆಂದಾಗುತ್ತದೆ. ಈ ವಿಷಯವನ್ನು ಬ್ರಿಟಿಷರಾದರೂ ಏಕೆ ಗಮನಿಸಲಿಲ್ಲವೆಂಬುದು ಆಶ್ಚರ್ಯದ ಸಂಗತಿಯಾಗಿರುತ್ತದೆ.

ಇದಕ್ಕಾಗಿ ಅಲ್ಲಿನ ಪ್ರಜಾಬೆಂಬಲದ ಪಕ್ಷಗಳವರು ಒಂದು ೨೪ ತಾಸಿನ ಮುಷ್ಕರಮಾಡಿ ಮೆರವಣಿಗೆ ಪ್ರದರ್ಶನ ಮಾಡಿದರು. ನಿಶಸ್ತ್ರರಾದ ಈ ಮೆರವಣಿಗೆಗಾರ ನಾಗರಿಕರ ಮೇಲೆ ಗುಂಡಿನ ಸುರಿಮಳೆಯಾಯಿತು. (ಜಾಲಿಯನ್‌ವಾಲಾಭಾಗದ ನೆನಪು ಬರುತ್ತದೆ.) ಇಲ್ಲಿಂದ ಈ ಮುಷ್ಕರವು ನಾಗರೀಕರೊಳಗಿನ ಯುದ್ಧವಾಗಿ ಪರಿಣಮಿಸಿತು.

ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಅಧಿಕಾರ ವರ್ಚಸ್ಸಿನ ಶಕ್ತಿಯನ್ನು ಐಕ್ಯವನ್ನುಂಟುಮಾಡಲು ಉಪಯೋಗಿಸುವ ಬದಲು ಅವರು ತಮಗೆ ಯೋಗ್ಯವೆನಿಸಿದ ಪೆಪೆಂಡ್ರಿಯೋ ಪಕ್ಷವನ್ನು ಹಿಡಿದು ಕುಯುಕ್ತಿ ಸಾಧಿಸಿದರೆಂದು ಒಂದು ಪತ್ರಿಕೆಯು ಬರೆಯುತ್ತದೆ. ಇದರಿಂದ ಗ್ರೀಕರು ಮಾತ್ರವಲ್ಲ ಇಡೀ ಜಗತ್ತೇ ಬೆರಗುಗೊಂಡಿತು. ಮಿತ್ರದಳದ ಉದ್ದೇಶವೇನು? ಗ್ರೀಸಿನಲ್ಲಿ ಮಾಡಿದ್ದೇನು. ಬಂಧವಿಮೋಚನೆ ಏನೊ ಆಯಿತು. ಆದರೆ ಗುಂಡು ಪ್ರದರ್ಶನ ನಿಲ್ಲಲಿಲ್ಲ.

ಅಧಿಕ ಪ್ರಸಂಗ

ಅಮೇರಿಕನರೂ ಈ ವಿಷಯವಾಗಿ ಬ್ರಿಟಿಷ್ ವರ್ತನೆಯನ್ನು ಖಂಡಿಸಿರುವುದು ಗಮನಿಸಬೇಕಾದ ಸಂಗತಿ. ಯುದ್ಧಕಾಲದಲ್ಲಿ ವಶಪಡಿಸಿಕೊಂಡ ದೇಶದೊಳಗೆ ಆಂತರೀಗ ಶಾಂತಿಭಂಗವಾಗದಂತೆ ನೋಡಿಕೊಳ್ಳುವುದು ಸಮರ ದೃಷ್ಟಿಯಿಂದ ಅವಶ್ಯವೆನಿಸುವುದಾದರೂ ಗ್ರೀಸಿನಂತಹ ಅಪ್ರಾಧಾನ್ಯ ದೇಶದಲ್ಲಿ ಬ್ರಿಟಿಷ್ ದಂಡುಗಳು ಅನುಸರಿಸಿದ ದಂಗೆ ನಿರ್ನಾಮದ ನೀತಿಯು ಅನಾವಶ್ಯಕದ್ದೂ, ಅಧಿಕ ಪ್ರಸಂಗತನದ್ದೂ ಇರುತ್ತದಾಗಿ ನಾಗರೀಕ ಪ್ರಪಂಚದಲ್ಲೆಲ್ಲ ಅಭಿಪ್ರಾಯಪಡಲಾಗಿದೆ. ಈ ರೀತಿ ಒಂದು ವೇಳೆ ಬೆಲ್ಜಿಯಮ್ಮಿನಂತಹ ಶತ್ರು ದೇಶದ ಅತೀ ಹತ್ತಿರದ ಪ್ರದೇಶದಲ್ಲಿಯಾದರೆ ಸ್ವಲ್ಪ ಸಹಾನುಭೂತಿ ದೃಷ್ಟಿಯಿಂದ ನೋಡಬಹುದಿತ್ತು.

ಮೂವತ್ತು ಸಾವಿರ ಸೈನಿಕರನ್ನು ಬಲಿದಾನ ಮಾಡಿದ ವೆಚ್ಚದಿಂದ ಹಿಡಿದ ಗ್ರೀಸಿನಲ್ಲಿ ಬ್ರಿಟಿಷರಿಗೆ ಅಲ್ಲಿನ ಸರಕಾರ ರಚನೆಯಲ್ಲಿ ತಕ್ಕಷ್ಟು ಅಧಿಕಾರ ಸ್ವಾತಂತ್ರ್ಯವಿರಬೇಕಾದುದು ಯಥಾಯೋಗ್ಯವೆಂಬ ಇನ್ನೊಂದು ತರ್ಕವು ಮುಂದೆ ಹಾಕಲಾಗಿದೆ. ಹೀಗಾಗುವುದಾದರೆ "ಇಡೀ ಜಗತ್ತಿನ ಭವಿಷ್ಯವನ್ನೇ ಈ ತ್ರಿಮೂರ್ತಿಗಳು ಕೂತು ರಚಿಸಲಿ, ಜನಾಭಿಪ್ರಾಯಕ್ಕೆ ಚಿಕ್ಕಾಸು ಬೆಲೆ ಎಂದಾಗಲಿ" ಹೀಗೆಂದು ಒಂದು ಪತ್ರಿಕೆಯು ಅಭಿಪ್ರಾಯಪಡುತ್ತದೆ.

(೮ನೇ ಪುಟಕ್ಕೆ ಮುಂದುವರಿದಿದೆ.)

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

ಪ್ರಚಲಿತ ಸಮಾಚಾರಗಳು

ಗ್ರೀಸಿನಲ್ಲಿ ಗೊಂದಲವು ಬೆಳೆಯುತ್ತಾಯಿದೆ. ಅದನ್ನು ವಿರೋಧಿಸಲು ಬ್ರಿಟಿಷರು ಕಂಕಣಬದ್ಧರಾಗಿರುವರು.

ಜಗತ್ತು ನಾಗರೀಕವಾಗುತ್ತಾ ಬರುತ್ತಿದ್ದ ಹಾಗೆ ನೂತನ ಸಮಸ್ಯೆಗಳು ಉಂಟಾಗುತ್ತಾ ಹೋಗಿವೆ. ಅದರಲ್ಲಿ ಸ್ವಮ್ಯವಾದವು ಒಂದು. ಎಲ್ಲರೂ ಸಂತುಷ್ಟರಾಗಿ ಬಾಳಬೇಕೆಂಬ ನೀತಿಯು ಎಲ್ಲೆಲ್ಲೂ ಪ್ರಶಸ್ತಿಗೆ ಬರುತ್ತಿದೆ.

ಈ ನೀತಿಯು ಸಾಧನೆಗಾಗಿ, ವಿವಿಧ ರಾಷ್ಟ್ರಗಳಲ್ಲಿ ವಿವಿಧ ನಾಮಾಂಕಿತದ ಸಂಘಗಳು ಸ್ಥಾಪನೆಯಾಗಿವೆ. ಕೊಮ್ಯುನಿಷ್ಟರು, ಸೋಶಲಿಷ್ಟರು, (ಸಮತಾವಾದಿಗಳು), ಡೆಮೊಕ್ರಾಟಿಕ್, ಸೊಶಲಿಷ್ಟರು, ಮೊದಲಾದವರು ಮೇಲಿನ ಈ ನೀತಿಯ ಸಾಧನೆಯನ್ನು ವಿವಿಧ ರೀತಿಯಲ್ಲಿ ಮಾಡುವ ಬೇರೆಬೇರೆ ಸಂಸ್ಥೆಗಳು.

ಗ್ರೀಸಿನಲ್ಲಿ ಈ ಪಕ್ಷಗಳೆಲ್ಲಾ ಒಟ್ಟಾಗಿ ದಂಗೆಯೆಬ್ಬಿಸಿವೆ. ತಮ್ಮ ಧ್ಯೇಯ ಸಾಧನೆಗೆ ಈ ಸಂಧಿಗ್ದವೇ ತಕ್ಕುದಾದ ಸಮಯವೆಂದು ಅವುಗಳಿಗೆ ಮುಂದಟ್ಟಾಗಿರುವುದು.

ತಮ್ಮ ದೇಶವನ್ನು ಆಕ್ರಮಿಸಿದ ಜರ್ಮನರನ್ನು ಹೊರ ಅಟ್ಟುವ ಕೆಲಸದಲ್ಲಿ ಈ ಪಕ್ಷದವರು ಗುಪ್ತವಾಗಿ ದುಡಿದವರು. ಅವರಿಗೆ ಈ ಕಾರ್ಯದಲ್ಲಿ ಮಿತ್ರರ ಸಹಾಯವು ದಾರಳವಾಗಿ ದೊರಕಿರುತ್ತದೆ. ಈ ಸ್ವಮ್ಯವಾದಿ ಸಂಘಗಳ ಉಪಯೋಗದಿಂದಲೆ ಗ್ರೀಸಿನ ಆಕ್ರಮಣದಲ್ಲಿ ಬ್ರಿಟಿಷ ಸೇನಾಬಲಕ್ಕೆ ಅನುಕೂಲಗಳನೇಕ ದೊರಕಿದವು. ಮೇಲಿನ ಈ ಕ್ರಾಂತಿಕಾರರಿಗೆ ಜರ್ಮನರನ್ನು ವಿರೋಧಿಸುವ ಬಗ್ಯೆದಾರಾಳ ಶಸ್ತ್ರ, ಸಿಡಿಮದ್ದು ಇತ್ಯಾದಿಗಳು ಬ್ರಿಟಿಷರಿಂದ ದೊರಕಿದ್ದವು.

ಮುಂದಕ್ಕೆ ಈ ಸ್ವಮ್ಯವಾದಿ ಪಕ್ಷಗಳಿಂದ ತಮಗೆ ಉಪಯೋಗವಿಲ್ಲವೆಂದೂ, ಮತ್ತು ಅವರ ಕೈಗಳಲ್ಲಿ ಯುದ್ಧ ಶಸ್ತ್ರಗಳಿರುವುದು ತಮಗೆ ಅಪಾಯಕರವೆಂದೂ ಬ್ರಿಟಿಷ ಅಧಿಕಾರಿಗಳು ಅಭಿಪ್ರಾಯಕ್ಕೆ ಬಂದ ಪರಿಣಾಮವಾಗಿ, ಈ ಪಕ್ಷಗಳನ್ನೆಲ್ಲ ನಿಶಸ್ತ್ರಗೊಳಿಸುವ ನಿರ್ಧಾರ ಮಾಡಲಾಯಿತು.

ಆದರೆ ಜರ್ಮನರ ವಿರೋಧವಾಗಿ ಪ್ರಾರಂಭವಾದ ದಂಗೆಯು ಈಗ ಬ್ರಿಟಿಷರ ವಿರೋಧವಾಗಿ ಮುಂದುವರಿಸಲಾಗಿದೆ. ಎಡಬಲ 'ಶ್ರೀಮಂತ-ಬಡವ' ಪಕ್ಷದ ಘರ್ಷಣೆಯೇ ಈ ದಂಗೆಯ ಮೂಲ ಕಾರಣವು. ಈ ಘರ್ಷಣೆಯಿಂದಲೆ ಸಮಗ್ರ ಯುರೋಪದಲ್ಲೆಲ್ಲಾ ಮಹಾ ತಲ್ಲಣ ಉಂಟಾಗಿರುತ್ತದೆ.

ಎಲ್ಲರೂ ಸಂತುಷ್ಟರಾಗಿದ್ದರೆ ಮಾತ್ರ ಒಂದು ರಾಷ್ಟ್ರದ ಅಭ್ಯುದಯವಾಗುವುದು. ಪ್ರತಿಯೊಬ್ಬನಿಗೂ ನ್ಯಾಯವಾದ ಪರಿಮಿತಿಯಲ್ಲಿ ಉತ್ತಮ ಆಹಾರವೂ, ಹವಾಸ್ಥಿತಿಯಿಂದ ರಕ್ಷಿಸಿಕೊಳ್ಳಲು ವಸ್ತ್ರವೂ, ಒಂದಿಷ್ಟೂ ಕೊರತೆಯಿಲ್ಲದೆ ದೊರಕಬೇಕು. ಜ್ಞಾನಸಂಪಾದನೆಯಲ್ಲಿ ಎಲ್ಲರಿಗೂ ಅನುಕೂಲ ಅವಕಾಶಗಳು ದೊರಕಬೇಕು. ರಾಷ್ಟ್ರದ ಆಡಳಿತದಲ್ಲಿ ಪ್ರತಿಯೋರ್ವನಿಗೆ ಹೊಣಗಾರಿಕೆಯಿರಬೇಕು, ಇವೇ ಮೊದಲಾದವುಗಳು, ಪ್ರಜಾಪ್ರಭುತ್ವವಾದೀ ಆದರ್ಶನೀಯ ನೀತಿಗಳು.

ಆದರೆ ಪೆಸಿಸ್ಟರ ಆಶ್ರಯದಲ್ಲಿ ಈ ನೀತಿಗಳಿಗೆ ಅವಕಾಶವಿಲ್ಲ. ಪ್ರಜೆಗಳಲ್ಲಿ ರಾಷ್ಟ್ರಾಭಿಮಾನದ ಭ್ರಾಂತಿಯನ್ನು ಹುಟ್ಟಿಸಿ ಅದರಿಂದ ತಮ್ಮ ಸ್ವಾರ್ಥಮಯ ಉದ್ದಿಶ್ಯಗಳನ್ನು ನೆರವೇರಿಸಿಕೊಳ್ಳುವುದೆ ಅವರ ಪದ್ಧತಿಯು. ಈ ಪೆಸಿಷ್ಟರ ನಾಶಗೋಸ್ಕರ, ಪ್ರಜಾಪ್ರಭುತ್ವದ ರಕ್ಷಣೆಗೋಸ್ಕರ, ಮಿತ್ರರು ಈ ಯುದ್ಧವನ್ನು ಕೈಕೊಂಡಿದ್ದರು. ಮಿತ್ರರು ಆಗಿಂದಾಗ್ಯೆ ಹೊರಡಿಸಿದಪ್ರಜಾಪ್ರಭುತ್ವದ ಆದರ್ಶನೀಯ ಘೋಷಣಗಳಿಂದ ಜರ್ಮನ್ ಆಕ್ರಮಿತ ರಾಷ್ಟ್ರಗಳಲ್ಲಿ, ಎಡಪಕ್ಷವು ಹುರುಪುಗೊಳ್ಳುವಂತಾಯಿತು. ಎಡಪಕ್ಷದ ಆದರ್ಶಗಳ ಪ್ರಸಾರವು ಅಲ್ಲಿ ತುಂಬಾ ನಡೆಯುವಂತಾಯಿತು. ಪ್ರಜಾಪ್ರಭುತ್ವ ನೀತಿ–ಸಮತಾವಾದ ಇವುಗಳಿಂದಲೆ ತಮಗೆ ಮೋಕ್ಷ ದೊರಕುವುದೆಂದು ಅವುಗಳಲ್ಲಿನ ಸಾಮಾನ್ಯ ಜನವರ್ಗಕ್ಕೆ ಮುಂದಟ್ಟಾಯಿತು.

ಯುರೋಪದ ರಾಷ್ಟ್ರಗಳಲ್ಲಿ ಈ ತರದ ಸನ್ನಿವೇಶಗಳು ಉಂಟಾದುದರಿಂದಸ್ಪೈಯಿನಿನಲ್ಲಿ ಪೆಸಿಸ್ಟ್‌ನಾಯಕ ಜನರಲ್ ಫ್ರೆಂಕೋನು ಉಭಯ ಸಂಕಟಕ್ಕೆ ಒಳಗಾಗಿರುವನು. ಯುರೋಪದ ಇತರ ರಾಷ್ಟ್ರಗಳಲ್ಲಿ ನಡೆಯುವಂತೆ, ಇಲ್ಲೂ ಪ್ರಜಾಪ್ರಭುತ್ವ ನೀತಿಯು ತಲೆಯೆತ್ತಿದೆಯೆಂದು ಫ್ರೆಂಕೊನು ಅಧಿಕಾರ ತ್ಯಜಿಸಿರುವನಾಗಿಯೂ ವಾರ್ತೆ ಹಬ್ಬಿದೆ.

ಪ್ರಜಾಪ್ರಭುತ್ವ ನೀತಿಯನ್ನು ಎತ್ತಿಹಿಡಿಯುವುದಕ್ಕಾಗಿ ಬ್ರಿಟಿಷರು ಯುದ್ಧರಂಗವನ್ನು ಪ್ರವೇಶಿಸಿದಾದರೂ, ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಇಂದು ಅಧಿಕಾರದಲ್ಲಿರುವ ಪಕ್ಷವು ಸಾಮ್ರಾಜ್ಯಶಾಹಿ ನೀತಿಯನ್ನು ಎತ್ತಿಹಿಡಿಯುವಂತದೆ ಆಗಿರುತ್ತದೆ. ಸಮತಾವಾದಿ ನೀತಿಯು ರೂಢಿಗೆ ಬರುವುದು ಅನಿವಾರ್ಯವೆಂದು ಈ ಪಕ್ಷಕ್ಕೆ ಕಂಡು ಬಂದಿದ್ದರೂ, ತನ್ನ ಹಿಡಿತವನ್ನು ಉಳಿಸಿಕೊಂಡೆ ತಮ್ಮ ಆಶ್ರಯದಲ್ಲೆ ದುಡಿವ ವರ್ಗದ ಏಳ್ಗೆ ಸಾಧನೆಯಾಗಬೇಕೆಂದೂ, ಈ ಪಕ್ಷದ ಧೋರಣವಿರುತ್ತದೆ. ಕೊಮ್ಯುನಿಷ್ಟರು ಮೊದಲಾದ ಪಕ್ಷಗಳು ಬಲಾತ್ಕಾರದಿಂದ ತಮ್ಮ ಸಮತಾವಾದಿ ಧ್ಯೇಯಗಳ ಸಾಧನೆ ಮಾಡುವುದರಲ್ಲಿ ಈ ಪಕ್ಷಕ್ಕೆ ಸಮಾದಾನವಿಲ್ಲ.

ಆದರೆ ಕಳೆದ ಮಹಾ ಯುದ್ಧದಸಮಯ ರಷ್ಯದಲ್ಲಿ ತಳವೂರಿದ ಸಮತಾವಾದವು ಈ ಯುದ್ಧದಿಂದ ಬಲವಂತವಾಗುತ್ತಿದೆ. ಅಂದು ಉದ್ಭವಿಸಿದ ಕ್ರಾಂತಿಯ ದೆಸೆಯಿಂದ ಕಳೆದ ಕಾಲು ಶತಮಾನದ ಅವಧಿಯಲ್ಲಿ ಸ್ಟಾಲಿನನ ಮಾರ್ಗದರ್ಶಕತ್ವದಲ್ಲಿ ಒಳ್ಳೆ ಪೋಷಣೆಯನ್ನು ಪಡೆದಿದೆ. ರಷ್ಯದ ಕೊಮ್ಯುನಿಷ್ಟರಲ್ಲಿ ಈ ನೀತಿಯ ಕುರಿತು ದೃಷ್ಟಿಕೋನವು ಬದಲಾಗಿದ್ದರೂ, ಈ ನೀತಿಯ ಮೂಲವು ಹಾಗೆನೇ ಇರುತ್ತದೆ. ಈನೀತಿಯಿಂದಲೇ ತಮ್ಮ ಮೇಲೆ ಹಾಯ್ದ ನಾಜೀಗಳನ್ನು ಓಡಿಸಿ ಬಿಡಲು ರಷ್ಯಕ್ಕೆ ಸಾಧ್ಯವಾಯಿತು. ಈ ನೀತಿಯ ದೆಸೆಯಿಂದಲೆ ಅಲ್ಲಿ ಅತ್ಯಂತ್ಯ ಯಶಸ್ವಿ ತರದ ಯುದ್ಧ ಯತ್ನಗಳು ನಡೆಯುತ್ತಿವೆ. ತನ್ನ ಮೇಲೆ ಹಾಯ್ದ ವೈರಿಯನ್ನು ಓಡಿಸಿಬಿಟ್ಟುದಲ್ಲದೆ, ರಷ್ಯದ ಕೆಂಪು ಸೇನೆಗಳು ಜರ್ಮನ್ ಆಕ್ರಮಿತ ಇತರ ರಾಷ್ಟ್ರಗಳಲ್ಲಿ ಮುನ್ನಡೆದು ಅವುಗಳನ್ನು ವಿಮೋಚನೆಗೊಳಿಸಿ, ಈಗ ಜರ್ಮನಿಯ ಪೂರ್ವದ ಹೆಬ್ಬಾಗಿಲನ್ನು ದಾಟಿರುತ್ತವೆ. ದೇಶವು ತಮ್ಮದು, ಅದನ್ನು ರಕ್ಷಿಸುವುದು ತಮ್ಮ ಧರ್ಮ ಎಂಬ ಸ್ಫೂರ್ತಿಯಿಂದ ಕೆಂಪು ಸೇನೆಯ ಮಹಾ ಚಟುವಟಿಕೆಗಳು ನಡೆದು ಬಿಟ್ಟವು.

ತಾವು ಆಕ್ರಮಿಸುವ ಪ್ರದೇಶಗಳಲ್ಲಿ ಯಾವ ತರದ ನೀತಿಯು ಆಚರಿಸಲ್ಪಡಬೇಕೆಂದೂ ಈ ವರೆಗೆ ಮಿತ್ರರಲ್ಲಿ ಒಂದು ನಿರ್ದಿಷ್ಟ ಒಪ್ಪಂದವು ಇರಲಿಲ್ಲ. ಆದರೆ ಬ್ರಿಟಿಷರು ಈಗ ಗ್ರೀಸಿನಲ್ಲಿ, ತಮ್ಮದೇ ನೀತಿಯನ್ನು ಎತ್ತಿಹಿಡಿಯುವ ಯತ್ನಗಳನ್ನು ಮಾಡುತ್ತಿರುವುದರಿಂದ, ಸ್ಟೇಲಿನನಿಗೆ ಕೆಂಪುಸೇನೆಗಳ ಆಕ್ರಮಿಸಿದ ಬಾಲ್ಕನ್, ರಾಷ್ಟ್ರಗಳಲ್ಲಿ, ಪೂರ್ವ ಪ್ರದೇಶಗಳಲ್ಲಿ ಫಿನ್‌ಲೇಂಡ್, ಪೊಲೆಂಡ್ ಮೊದಲಾದ ಪ್ರದೇಶದಲ್ಲಿ ತನ್ನದೆ ನೀತಿಯನ್ನು ಸಾಧಿಸುವಂತೆ ಅವಕಾಶ ದೊರಕಿದಂತಾಯಿತೆಂದು ಕೆಲವು ಬ್ರಿಟಿಷ್ ಪತ್ರಿಕೆಗಳು ಟೀಕೆ ಮಾಡಿರುವವು.

ಬ್ರಿಟಿಷರು ಗ್ರೀಸಿನಲ್ಲಿ ಕೈಗೊಂಡ ಧೋರಣದಿಂದ ಸಂಯುಕ್ತ ಅಮೆರಿಕಾ–ಬ್ರಿಟನ್ ಮೈತ್ರಿಯಲ್ಲಿ ಬಿರುಕು ಉಂಟಾಗಬಹುದೆಂದು, ಆ ಕಡೆಯಿಂದ ಬಂದ ಪತ್ರಿಕಾಪ್ರತಿನಿಧಿಗಳ ವರದಿಗಳಲ್ಲಿ ಸಂದೇಹಗಳಿವೆ. ಗ್ರೀಸಿನಲ್ಲಿ ಬ್ರಿಟಿಷರು ಕೈಗೊಂಡ ಧೋರಣದಿಂದ ದೂರ ನಿಲ್ಲುವ ಇಚ್ಛೆಯು ಸಂಯುಕ್ತ ಅಮೆರಿಕಾ ಸರಕಾರಕ್ಕೆ ಇರುವ ಹಾಗೆ ಆ ಸರಕಾರವು ಹೊರಡಿಸಿದ ಕೆಲವು ಪ್ರಕಟಣೆಗಳಿಂದ ಕಾಣಸುತ್ತದೆಂದು ಮೇಲಿನ ವರದಿಗಾರರ ಅಭಿಪ್ರಾಯವು. ಗ್ರೀಸಿನ ಈ ದಂಗೆಯು, ಅಲ್ಪಸಂಖ್ಯಾಕ ಕೊಮ್ಯುನಿಸ್ಟ್ ಅಧಿನಾಯಕತ್ವವನ್ನು ಪಡೆದುದರ ಕುರಿತು ಸಂಯುಕ್ತ ಅಮೆರಿಕಾದ ಸರಕಾರಕ್ಕೆ ಸಮಾಧಾನ ಇರದಿದ್ದರೂ, ಬ್ರಿಟಿಷರು ಈ ಸನ್ನಿವೇಶದಲ್ಲಿ ದುಡಿಕಿರುತ್ತಾರೆ, ಅವರು ಇನ್ನಷ್ಟು ವಿವೇಚನೆಯಿಂದ, ನಯನದಿಂದ ವರ್ತಿಸಬಹುದಾಗಿತ್ತೆಂದು, ಸಂಯುಕ್ತ ಅಮೆರಿಕಾದ ಭಹೀರ್ ವ್ಯವಹಾರಗಳ ಶಾಖೆಯ ಮುಖ್ಯಾಧಿಕಾರಿಗಳ ಅಭಿಪ್ರಾಯವಂತೆ.

ಇಟೆಲಿಯಲ್ಲೂ ಇದೇ ತರದ ಸಮಸ್ಯೆಯು ಉಂಟಾಗಿರುತ್ತದೆ. ಅಲ್ಲೂ ತಮ್ಮದೇ ನೀತಿಯನ್ನು ಅನ್ವಯಿಸುವುದು ಚರ್ಚಿಲ್ ಪಕ್ಷದ ಧೋರಣವಾಗಿರುತ್ತದೆ.

ಒಟ್ಟಿನಲ್ಲಿ ಯುರೋಪದಲ್ಲಿ ನಡೆಯುತ್ತಿರುವ ಈ ದಂಗೆಗಳು ಶುಭ ಸೂಚಕಗಳಲ್ಲ. ಪ್ರಜಾಪ್ರಭುತ್ವ ನೀತಿಯು ಆಚರಿಸಲ್ಪಡುವ ಕುರಿತು ಬಲವಾದ ಆಶ್ವಾಸನೆಗಳು ಮಿತ್ರರಿಂದ ದೊರೆತ ವಿನಹ ಪರಿಸ್ಥಿತಿಯು ಇನ್ನೂ ಕೆಟ್ಟುಹೋಗಬಹುದು. ಜರ್ಮನಿಯ ಫೆಸಿಸ್ಟ್ ನಾಜಿಗಳನ್ನು ಮುರಿಯುವ ಕೆಲಸವು ಇನ್ನೂ ವಿಳಂಬವಾಗಿ ನಡೆಯಬಹುದು.

ಆದರೆ ಯುರೋಪದ ಫ್ರಾನ್ಸ್, ಇಟೆಲಿ, ಗ್ರೀಸ್, ಬೆಲ್ಜಿಯಂ ಕಡೆಗಳಲ್ಲಿ ಉಂಟಾದ ಘಟನೆಗಳಿಂದ, ಇಷ್ಟು ಖಚಿತವಾಗಿದೆ. ಹತ್ತೊಂಬತ್ತನೆ ಶತಮಾನದ ಆದಿಯಲ್ಲಿ, ಔದ್ಯೋಗಿಕಣರದೊಡನೆ ಜನ್ಮವೆತ್ತಿದ ಶ್ರೀಮಂತ ಶಾಹಿಯು ಇಪ್ಪತ್ತನೆ ಶತಮಾನ ಪ್ರಾರಂಭದಲ್ಲಿ ಬೆಳೆದು, ಜಗತ್ತಿನಲ್ಲಿ ಹೆಚ್ಚಿನ ಅನರ್ಥಗಳಿಗೆ ಕಾರಣವಾಗಿದ್ದು, ಅದೀಗ ಪ್ರಜಾಪ್ರಭುತ್ವ ನೀತಿಯನ್ವಯ ಪದ್ಧತಿಗಳಿಗೆ ಎಡೆಕೊಟ್ಟು ಹೊರ ನಡೆಯುವ ಸಮಯವು ಬಂದಿದೆ. ಯುದ್ಧೋತ್ತರ ಜಗತ್ತು ಪ್ರಜಾಪ್ರಭುತ್ವವಾದೀ ಜಗತ್ತಾಗಿ ಪರಿವರ್ತನೆ ಹೊಂದುವುದು.

ಪಾಶ್ಚಾತ್ಯದಲ್ಲಿ ಪರಿಸ್ಥಿತಿಯು ಹೀಗಿರಲು ಪೌರಾತ್ಯಕುರಿತು ವಿಚಾರಿಸೋಣ- ಮಧ್ಯಪೂರ್ವ ಆರಬಿ ನಾಡುಗಳಲ್ಲಿ, ಆಫ್ರಿಕಾದಲ್ಲಿ, ಹಿಂದೂದೇಶದಲ್ಲಿ, ಚೀನಾದಲ್ಲಿ, ಪ್ರಜಾಪ್ರಭುತ್ವ ನೀತಿಯು ಪ್ರಗತಿವಿರೋಧಕ ಶ್ರೀಮಂತಮತ್ತು ಸಾಮ್ರಾಜ್ಯಶಾಹಿಯ ದಬ್ಬುವಿಕೆಯ ಅಡಿಯಲ್ಲಿ ಮೇಲಕ್ಕೆ ಬರಲು ಯತ್ನಿಸುವುದು ಕಾಣಸಿಕೊಳ್ಳುತ್ತಿದೆ. ಹಿಂದೂದೇಶದಲ್ಲೂ ಚೀನಾದಲ್ಲೂ ಇಂದು ಉಂಟಾದ ಬಿಕ್ಕಟ್ಟಿನ ಪರಿಸ್ಥಿತಿಗಳಿಗೆ ಇದೇ ಕಾರಣವಾಗಿರುವುದು.

ಒಂದೇ ರಾಷ್ಟ್ರದಲ್ಲಿ ಒಂದು ಪಂಗಡವು ಇನ್ನೊಂದು ಪಂಗಡದ ದಬ್ಬಾಳಿಕೆಯನ್ನು ಸಹಿಸಲು ಸಿದ್ಧವಿಲ್ಲವೆಂಬುದು ಪಾಶ್ಚಾತ್ಯದ ಸದ್ಯದ ಪರಿಸ್ಥಿತಿಯಿಂದ ಪ್ರಕಾಶಿತವಾಗಿದೆ. ಹಾಗಿರುವಾಗ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ದಬ್ಬಾಳಿಕೆಯನ್ನು ಹೇಗೆ ತಾನೆ ಸಹಿಸುವುದು?

ಚೀನಾದೇಶವು ೪೦೦೦ ವರ್ಷಗಳ ಹಿಂದೆನೆ ಶ್ರೇಷ್ಠ ಸಂಸ್ಕೃತಿಯನ್ನು ಪಡೆದ ನಾಡು. ಅಲ್ಲಿ ಶ್ರಮಜೀವಿಗಳ ಸಂಖ್ಯೆಯು ಹೆಚ್ಚು. ಚಕ್ರವರ್ತಿಗಳ ಸರ್ವಾಧಿಕಾರದಲ್ಲಿ ಯಾತನೆ ಪಡುವ ಚೀನಾದಲ್ಲಿ ಈ ಶತಮಾನದ ಪ್ರಾರಂಭದಲ್ಲಿ, ಡಾ। ಸನ್‌ಯಾಟ್‌ಶೆನ್ ಎಂಬ ಮಹಾನಾಯಕರೊಬ್ಬರಿಂದ ಪ್ರಗತಿಕರ ಕ್ರಾಂತಿಯು ಪ್ರಾರಂಭಿಸಲಾಯಿತು. ಚೀನಾದಲ್ಲಿ ಪ್ರಜಾಪ್ರಭುತ್ವ ನೀತಿಗಳನ್ನು ಸ್ಥಾಪಿಸಿ, ಪ್ರತಿಯೊರ್ವ ಚೀನಿಯನಿಗೆ ಬೇಕಾದಷ್ಟು ಆಹಾರ, ವಸ್ತ್ರವನ್ನು ದೊರಕಿಸಿ, ಆತನನ್ನು ಸಂತುಷ್ಟವಾಗಿ ಮಾಡುವಂತೆಯೂ, ಈ ನೂಲ ಉದ್ದೇಶವನ್ನು ಸಾಧಿಸುವರೆ ಪ್ರಜೆಗಳ ಹೊಣೆಗಾರಿಕೆಯ ಸರಕಾರದ ಸ್ಥಾಪನೆಯಾಗುವಂತೆಯೂ ಚೀನಿಯರ ಶಕ್ತಿಯನ್ನು ಹಿಂಡುವ ಅನ್ಯಪ್ರಭಾವಗಳನ್ನು ಲೋಪಗೊಳಿಸುವಂತೆಯೂ, ಈ ಕ್ರಾಂತಿಯು ನಡೆಯಿಸಲಾಯಿತು. ಈ ಕ್ರಾಂತಿಯು ನಡೆಯುತ್ತಿದ್ದ ಹಾಗೆ ಡಾ। ಸನ್‌ಯಾಟ್ ಶೆನ್ನರು ಗತಿಸಿಕೊಂಡರು. ಅವರು ಹಿಡಿದ ಕಾರ್ಯವು ಅವರ ಶಿಷ್ಯವರ್ಗದಿಂದ ಮುಂದುವರಿಸ

(೧೦ನೇ ಪುಟಕ್ಕೆ ಮುಂದುವರಿದಿದೆ)

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಅವರನ್ನು ದೇವರಂತೆ ಕಾಣುವರು

ಬಾಬುರಾಜೇಂದ್ರ ಪ್ರಸಾದ

ಬಿಹಾರಿನ ಅನಭಿಷಕ್ತರಾಜನಾರು? ಅವರೇ ಬಾಬುರಾಜೇಂದ್ರ ಪ್ರಸಾದ. ತನ್ನ ಪ್ರಜೆಗಳು ಭಯಂಕರ ದುರ್ಭಿಕ್ಷಕ್ಕೆ ಆಹುತಿಯಾಗುತ್ತಿರುವಾಗ ಈ 'ರಾಜೇಂದ್ರರು ಬ್ರಿಟಿಷ್ ಸಾರ್ವಭೌಮನ ಅತಿಥಿಗಳಾಗಿ ಸತ್ಕರಿಸಲ್ಪಡುತಿದ್ದಾರೆ. ಆದರೆ ಪ್ರಜಾ ಹಿತಕಾಂಕ್ಷಿಗಳಾದ ರಾಜೇನ್ ಬಾಬುಗಳ ಹೃದಯವು ತನ್ನ ಪ್ರಜೆಗಳ ಸಂಕಷ್ಟದಿಂದ ಕೊರಗುತ್ತಿರುವುದು. ಅವರ ಶ್ವಾಸಕೋಶಗಳನ್ನು ಪೀಡಿಸುತ್ತಿರುವ ಉಬ್ಬಸ ರೋಗವನ್ನಾದರೂ ಅವರು ಗಮನಿಸದೆ ತನ್ನ ಜನರ ಸೇವೆಮಾಡಲು ಮುಂದಾಗುತಿದ್ದರು.

ಕಳೆದ ಕೆಲವು ದಿನಗಳ ಹಿಂದೆ ಬಾಬುರಾಜೇಂದ್ರ ಪ್ರಸಾದ್ ಅವರು ಜೀವನದ ಅರುವತ್ತನೇ ವರ್ಷದ ಕಲ್ಲನ್ನು ಮುಟ್ಟಿದರು. ಆದರೆ ಅವರದು ಅದೆಂತಹ ದುರ್ಗಮವೂ ಸಂಗ್ರಾಮಯುಕ್ತವೂ ಆದ ಹೋರಾಟವಿರಬಹುದೆಂದು ಹೆಚ್ಚಿನವರಿಗೆ ಗೊತ್ತಿಲ್ಲ. ತಮ್ಮ ವರ್ಧಂತುತ್ಸವವನ್ನು ಬಾಬುಗಳು ಸೆರೆಮನೆಯಲ್ಲಿ ಸೌಮ್ಯವಾಗಿ ಆಚರಿಸಿದರು.

ಮಹಾ ವ್ಯಕ್ತಿತ್ವ

ಸರಳತನದ ಜೀವನ ಆದರ್ಶದಮಟ್ಟಿಗೆ ರಾಜೇನ್ ಬಾಬುಗಳು ಚಕ್ರವರ್ತಿ ರಾಜಾಜಿಯನ್ನು ಕೂಡಾ ಮಿಗಿಸುತ್ತಾರೆ. ಸ್ವತಃ ಕೈಯಿಂದ ಒಗೆದ ಒಂದು ಪಂಚೆ, ಒಂದು ಜಿಬ್ಬ ಮತ್ತೊಂದು ಉದ್ದವೂ ಎತ್ತರವೂ ಇರುವ ಬಿಹಾರಿ ಶೈಲಿಯ ಟೊಪ್ಪಿ. ಊಟ ಉಪಚಾರದಲ್ಲೂ, ಮಾತುಕತೆಯಲ್ಲೂ ಅದ್ವಿತೀಯ ಸರಳತೆ ಬಾಬುಗಳದು.

ತಾರುಣ್ಯದಿಂದಲೂ ತೆಳ್ಳಗೆ ಉದ್ದವಾದ ಶರೀರ, ನಸು ಕಂದು ವರ್ಣ, ಸದಾ ಮುಗುಳ್ನಗೆಯ ಮುಖ, ಸ್ನೇಹಿತರನ್ನೂ, ಬಡ ರೈತರನ್ನು ಕಂಡರೆ ಅವರ ಹೃದಯದೊಂದಿಗೆ ತನ್ನದನ್ನು ಮಿಲಮಾಡಿ ಸ್ವಂತ ಭಾವನೆಯನ್ನೇ ಮರೆತು ಅವರ ಸುಖ ದುಃಖಗಳನ್ನು ತಿಳಿದುಕೊಳ್ಳುವ ಮನಃಶ್ಶಾಂತಿಕೊಡುವ ಸ್ವಭಾವದ ವ್ಯಕ್ತಿ ರಾಜೇಂದ್ರ ಪ್ರಸಾದ್. ಅವರ ಮುಖ ಉದ್ದಕ್ಕೂ ಚಾಚಿದ ಮೀಸೆಗಳೂ, ಸಹಾನುಭೂತಿ ಸೂಸುತ್ತಿರುವ ಕಣ್ಣುಗಳ ಮೇಲೆ ಹಬ್ಬಿರುವ ದಪ್ಪವಾದ ಹುಬ್ಬುಗಳನ್ನು ನೋಡಿದರೆ ಬಾಬುಗಳು ರಷ್ಯದ ಸ್ಟೇಲಿನರಂತೆ ಕಾಣುವರು. ಗಂಭೀರತ್ವ ವಿದ್ಯಾಸಂಪನ್ನತೆಗಳನ್ನೂ, ಸದಾಚಾರ ಸುವಿಚಾರಗಳ ಸಂಪೇತವನ್ನು ತಿಳಿಸುವಂತೆ ಅವರ ಮೂಗು ಗಡ್ಡ ಪ್ರದೇಶಗಳು ವಿಶೇಷ ಲಾಕ್ಷಣಿಕವಾಗಿವೆ.

ವಿದ್ಯಾರ್ಥಿಗಳಾಗಿದ್ದಾಗ ಅಸಾಮಾನ್ಯ ಪ್ರತಿಭೆಯನ್ನು ಬೀರಿ, ಕಲ್ಕತ್ತಾ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಬಂಗಾಳ, ಬಿಹಾರದ ಎಲ್ಲಾ ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ಮಾರ್ಕುಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿರುವರು. ಉಚ್ಛ ಕಾಲೇಜು ಶಿಕ್ಷಣ ಪಡೆದು, ನ್ಯಾಯಶಾಸ್ತ್ರದಲ್ಲೂ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾಗಿ ಕಲ್ಕತ್ತದಲ್ಲಿ ಬಾಬುರಾಜೇಂದ್ರರು ವಕಾಲತು ಆರಂಭಿಸಿದರು. ಬಿಹಾರ ಬಂಗಾಲ ವಿಚ್ಛೇಧಿಕರಣದ ಕಾಲದಿಂದಲೂ ರಾಜಕೀಯ ಚಳವಳದಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ಭಾಗವಹಿಸುತಿದ್ದರು. ಅಂದಮೇಲೆ ಮುಂದೆ ಆ ಚಳವಳ ಪ್ರಾರಂಭಿಸುವ, ಕಾನೂನು ಮುರಿಯುವ, ಮತ್ತು ಕಾಯಿದೆ ಬಾಹಿರವೆನಿಸಿದ ಕಾಂಗ್ರೆಸಿನ ಅಧ್ಯಕ್ಷರಾದುದರಲ್ಲಿ ಆಶ್ಚರ್ಯವೇನಿಲ್ಲ.

ಗೋಖಲೆ ಗಾಂಧಿ ಸಂಪರ್ಕ

ದಿವಂಗತ ಗೋಪಾಲಕೃಷ್ಣ ಗೋಖಲೆ ಅವರು (ಇವರನ್ನು ಗಾಂಧಿಜೀಯವರು ತಮ್ಮ ರಾಜಕೀಯ ಗುರು ಎಂದು ಮನ್ನಿಸಿದ್ದಾರೆ.) ತಮ್ಮ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸ್ಯಾಟಿಗೆ ಬಿಹಾರದಿಂದ ಕೆಲ ಸೇವಕರನ್ನು ಪಡೆಯಲೆಳಸಿದಾಗ ರಾಜೇನ್ ಬಾಬುಗಳಿಗಿಂತ ಹೆಚ್ಚು ಯೋಗ್ಯರೆನಿಸಿದವರು ಸಿಕ್ಕುವುದು ಕಷ್ಟವಾಯಿತು. ಆದರೆ ಬಾಬುಗಳ ಹಿರಿಯಣ್ಣನು ಗೋಖಲೆಯವರ ಸಂಘಕ್ಕೆ ಸೇರಲು ಅಸಮ್ಮತಿ ಸೂಚಿಸಿದರಿಂದ ಗೋಖಲೆಯವರ ಆಹ್ವಾನವನ್ನು ರಾಜೇಂದ್ರ ಪ್ರಸಾದರು ತಿರಸ್ಕರಿಸಬೇಕಾಯಿತು.

ಸೌಮ್ಯ ಪಕ್ಷದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸ್ಯಾಟಿಯವರ ಕೈತಪ್ಪಿದ ಒಡವೆ ಕಾಂಗ್ರೆಸಿಗೆ ಸಿಗುವಂತಾಯಿತು. ಬಿಹಾರಿನ ಚಂಪಾರನ್ ನೀಲಿ ತೋಟಗಳಲ್ಲಿ ಬಿಳಿ ಮ್ಯಾಲಕರು ಅಲ್ಲಿನ ಕೂಲಿಗಳಿಗೆ ಕೊಡುವ ಸಂಕಷ್ಟಗಳ ವಿರೋಧವಾಗಿ ಮಹಾತ್ಮಾ ಗಾಂಧಿಯವರು ದ. ಆಫ್ರಿಕದಿಂದ ಬಂದ ಕೂಡಲೇ ಒಂದು ಸತ್ಯಾಗ್ರಹ ಹೂಡಿದಾಗ ರಾಜೇಂದ್ರ ಪ್ರಸಾದರಿಗೆ ಗಾಂಧಿಜೀಯ ಸಂಪರ್ಕವಾಯಿತು.

ಅಲ್ಲಿ ಮಹಾತ್ಮರು ತೋಟಗಳ ದುರವಸ್ಥೆ ನೋಡ ಹೋಗುವಾಗ ಅಧಿಕಾರಿಗಳಿಂದ ಬಂಧಿಸಲ್ಪಟ್ಟರು. ಕಡೆಗೆ ಅವರನ್ನು ಬಿಡಲಾಯಿತು. ಸರಕಾರವು ಆಗ ಮೊತ್ತಮೊದಲಿಗೆಂಬಂತೆ ಕಣ್ಣು ತೆರೆಯಿತು. ಒಂದು ಪ್ರತ್ಯೇಕ ಸಮಿತಿ ನಿರ್ಮಾಣವಾಗಿ ಆ ತೋಟಗಳಲ್ಲಿನ ಮಜೂರರ ಪರಿಸ್ಥಿತಿಯು ಸುಧಾರಿಸುವಂತಾಯಿತು.

ಹೀಗೆ ಬಿಹಾರಿನಲ್ಲಿ ಇರ್ವ ಪ್ರಸಿದ್ಧ ವಕೀಲರು ಒಟ್ಟುಗೂಡಿದರು. ಸಾರ್ವಜನಿಕ ಸೇವೆಯೇ ಅವರ ಜೀವನದ ಜೀವಾಳ. ವಿದ್ಯಾರ್ಥಿಗಳಾಗಿದ್ದಾಗಲೇ ಸ್ವದೇಶಿ ಚಳವನ್ನು ಆರಂಭಿಸಿದರು. ಇವರ ಅಸಾಧಾರಣ ಬುದ್ಧಿಶಕ್ತಿ ವಿವೇಕವನ್ನು ನೋಡಿ ಸಿಸ್ಟರ್ ನಿವೇದಿತಾ ಎಂಬ ಆಂಗ್ಲ ಮಹಿಳೆಯೋರ್ವಳು ಹಿಂದೂ ಧರ್ಮ ಸ್ವೀಕರಿಸಿದಳು. ರಾಜೇಂದ್ರ ಬಾಬುಗಳ ಕುರಿತು ಅವಳು ಈತನ 'ಸದಾಚಾರ, ಕಲ್ಮಶರಹಿತ ಹೃದಯವನ್ನು ನೋಡಿದರೆ ಮುಂದೆಈತ ದೇಶದ ಮಹಾ ನಾಯಕನಾಗುವುದರಲ್ಲಿಸಂದೇಹವಿಲ್ಲ" ಹೀಗೆಂದು ಬರೆದಿದ್ದಳು.

ಆ ಮಹಿಳೆಯ ಭವಿಷ್ಯವು ಅದೆಷ್ಟು ನಿಜವಾಯಿತು!

ಅಸಹಕಾರ ಚಳವಳದ ಕಾಲದಲ್ಲಿ ರಾಜೇಂದ್ರ ಪ್ರಸಾದರು ಗಾಂಧಿಜೀಯ ಓರ್ವ ಆಧ್ಯಸೇನಾಪತಿಗಳಾದರು. ತಮ್ಮ ವಕಾಲತು ಉಡುಪನ್ನು ಅವರು ತೊಡೆದು ಹಾಕಿದರು. ಆಗ ಅವರಿಗೆ ತಿಂಗಳಿಗೆ ಸಾವಿರಗಟ್ಲೆಯಲ್ಲಿ ಸಂಪಾದನೆ ಇತ್ತೆಂಬ ವಿಷಯವನ್ನು ಯೋಚಿಸುವಾಗ, ಅದನ್ನು 'ಬಿಟ್ಟುರಾಜಕೀಯ ಚಳವಳದಲ್ಲಿ ಒಂದೇ ಸವನೆಹತ್ಪೂರ್ವಕವಾಗಿ ದುಮುಕಿದ ಈ ನಿಸ್ವಾರ್ಥ ವ್ಯಕ್ತಿಗೆ ದೇಶವು ಯೋಗ್ಯ ರೀತಿಯಿಂದ ಗೌರವಿಸಿತು.

ಸಾವಿರಾರು ಸಂಪಾದನೆ ಇದ್ದರೂ ಹಣವನ್ನು ಕೂಡಿಸಿಡುವಷ್ಟು ಜಿಪುಣತ್ವ ಪ್ರಸಾದರಲ್ಲಿ ಇಲ್ಲ. ಉದಾರತ್ವವೇ ಅವರ ಜಿಪುಣತ್ವವನ್ನುಮಿಕ್ಕಿಸಿತು. ಬಡವರಿಗೂ ದೀನರಿಗೂ ಸಹಾಯ ಮಾಡುವುದರಲ್ಲೇ ತಮ್ಮ ಸರ್ವಸ್ವವನ್ನು ಅರ್ಪಿಸಿದ್ದರು. ಒಂದು ಸಲ ಅವರ ಲೆಕ್ಕದಲ್ಲಿ ಬರೀ ಇಪ್ಪತ್ತೈದು ರೂಪಾಯಿಗಳು ಮಾತ್ರ ಬೇಂಕಿನಲ್ಲಿದ್ದುವಂತೆ.

ಅನೇಕ ಸಲ ಚಳವಳದಲ್ಲಿ ಕೈಹಾಕಿದ್ದರೂ ಸರಕಾರದವರು ೧೯೩೦ರ ತನಕ ಅವರ ಮೇಲೆ ಕೈಮಾಡದಿದ್ದುದು ಅವರ ಜನಪ್ರಿಯತೆಯ ನಿದರ್ಶನವೊ ಇವೆಲ್ಲ ಅವರ ಸೌಮ್ಯತೆಯ ಫಲವೊ ತಿಳಿಯದು. ಅಂತು ೧೯೩೦ರ ನಂತರ ಮೇಲಿಂದ ಮೇಲೆ ಅವರು ಸರಕಾರದ ಆತಿಥ್ಯ ಸ್ವೀಕರಿಸಿದ್ದಾರೆ.

ಬಿಹಾರಿಗಳ ದೇವರು

ರಾಜೇನ್ ಬಾಬುಗಳನ್ನು ಕೈದು ಮಾಡಿದಾಗ ಒಂದು ಸಲ ಲೀಡರ್ ಪತ್ರಿಕೆಯು "ಬಿಹಾರಿನ ಜನತೆಯ ದೇವರಂತಿರುವ ಪ್ರಸಾದರನ್ನು ಕೈದು ಮಾಡಲಾಗಿದೆ" ಎಂಬ ಶಿರೋನಾಮೆಯದಲ್ಲಿ ಆ ವರ್ತಮಾನವನ್ನು ಪ್ರಕಟಿಸಿದ್ದರು. ಅಲ್ಲಿನ ಜನತೆಯು ಅವರನ್ನು ಅಷ್ಟು ಸನ್ಮಾನಿಸುತ್ತದೆ.

ಒಂದು ವಿಚಿತ್ರ ಸಂಗತಿಯೆಂದರೆ ಬಿಹಾರಿಗೆ ವಿಪತ್ತು ಸಂಭವಿಸಿದಾಗಲೆಲ್ಲಾ ಹೆಚ್ಚಾಗಿ ರಾಜೇಂದ್ರ ಪ್ರಸಾದರು ಕಾರಾಗೃಹದಲ್ಲಿರುತಿದ್ದರು. ಅಂದು ಬಿಹಾರಿನಲ್ಲಿ ಭಯಂಕರ ಭೂಕಂಪವಾದಾಗ ಅವರು ಬಂಧನದಲ್ಲಿಡಲ್ಪಟ್ಟಿದ್ದರು. ಜನರ ಸೇವೆಗಾಗಿಯೇ ಎಂಬಂತೆ ಅವಧಿಗಿಂತ ಒಂದು ತಿಂಗಳ ಮೊದಲೇ ಅವರು ಬಿಡುಗಡೆ ಮಾಡಲ್ಪಟ್ಟರು. ಕೂಡಲೇ ಹೇಳಬೇಕೆ? ಅವರು ಭೂಕಂಪ ಸಂಕಷ್ಟ ನಿವಾರಣೆಯಲ್ಲಿ ತೊಡಗಿದರು.

ಪಂಡಿತ್ ಜವಾಹರಲಾಲ್ ನೆಹುರುಗಳು ಸ್ವತಃ ಹಾರೆ, ಮಣ್ಣಿನ ಬುಟ್ಟಿ ಹಿಡಿದು ಸ್ವಯಂ ಸೇವಕ ದಳವೊಂದರ ನಾಯಕರಾಗಿ ರಾಜೇನ್ ಬಾಬುಗಳ ನಿರ್ದೇಶತ್ವದಲ್ಲಿ ಕೆಲಸಮಾಡಿ ಆ ಕೆಲಸಕ್ಕೆ ಉತ್ತೇಜನ ಕೊಟ್ಟ ವಿಷಯವು ಮರೆಯುವಂತಹದಲ್ಲ. ದೇಶದ ಮೂಲೆ ಮೂಲೆಯಿಂದ ಪರಿಹಾರ ಧನವು ರಾಜೇಂದ್ರ ಬಾಬುಗಳಿಗೆ ಕಳುಹಿಸಲ್ಪಟ್ಟಿತು.

"ನನ್ನನ್ನು ಹರಿಜನ ಉದ್ಧಾರ ಕೆಲಸಕ್ಕೆ ನೇಮಿಸಿದಂತೆ ರಾಜೇನ್ ಬಾಬುಗಳನ್ನು ದೇವರು ಬಿಹಾರ ಭೂಕಂಪ ಸಂಕಷ್ಟ ನಿವಾರಣೆ ಕಾರ್ಯಕ್ಕೆ ನೇಮಿಸಿದ್ದಾರೆ." ಹೀಗೆಂದು ಮಹಾತ್ಮರು ಉದ್ಗರಿಸಿದರು.

ಇತ್ತೀಚೆಗೆ ಬರಗಾಲದ ಬಾಯಿಗೆ ತುತ್ತಾದ ಬಿಹಾರಿನ ಪರಿಸ್ಥಿತಿಯನ್ನು ಸುಧಾರಿಸಲು ರಾಜೇಂದ್ರ ಪ್ರಸಾದರು ಜೈಲಿನಿಂದ ಬಿಡುಗಡೆ ಹೊಂದಿದ್ದರೆ ಹೆಚ್ಚು ಸಹಾಯಕಾರಿಯಾಗುತಿತ್ತು ಎಂದು ಅಲ್ಲಿನ ಗವರ್ನರರೇ ಅವರ ವಿಷಯವಾಗಿ ಶ್ಲಾಘಿಸಿದರು. ಆದರೂ ಅವರನ್ನು ಇದುತನಕ ಬಿಡದಿದ್ದುದು ಅಲ್ಲಿಯ ಜನರ ಮತ್ತು ಇಡೀ ಭಾರತದ ದುರ್ದೈವವೆನ್ನಬೇಕು.

ಸೇವಾದರ್ಶ

ಇಂಗ್ಲಿಷ್ ಮತ್ತು ಹಿಂದೀ ಸಾಹಿತ್ಯದಲ್ಲಿ ತುಂಬಾ ವ್ಯವಸಾಯ ಮಾಡಿದ ಪ್ರಸಾದರು ಒಂದು ಭಾರತೀಯ ಇತಿಹಾಸ ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದವರು ಭಾರತ ಆಮೂಲಾಗ್ರ-ಇತಿಹಾಸವನ್ನು ಪರಿಶೋಧನೆ ಮಾಡಿ ಅನೇಕ ಗ್ರಂಥ ಭಾಗಗಳಾಗಿ ಪ್ರಕಟಿಸಿದ್ದಾರೆ.

ಅವರ ಸೇವೆಯ ಬಹುಮಾನವೆಂಬಂತೆ ಭಾರತ ಜನಾಂಗವು ಅವರನ್ನು ೧೯೩೪ರಲ್ಲಿ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಚುನಾಯಿಸಿತು. ಅವರು ಅಂದಿನ ಬೊಂಬಾಯಿ ಅಧಿವೇಶನದ ಅಧ್ಯಕ್ಷ ಪೀಠದಿಂದ ಕೊಟ್ಟ ಅಮೋಘ ಭಾಷಣವು ಭಾರತೀಯರ ಹೃದಯದಲ್ಲಿ ಇಂದಿಗೂ ಪ್ರತಿಧ್ವನಿಗೈಯುವಂತಿದೆ:

"ಅನೇಕರು ತಮ್ಮ ಪ್ರಾಣವನ್ನೂ, ಮಾತ್ರವಲ್ಲ ಸರ್ವಸ್ವವನ್ನೂ ಕಳಕೊಂಡಿದ್ದಾರೆ. ಅನೇಕರು ಅನೇಕ ರೀತಿಯಲ್ಲಿ ಈ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಬಲಿ ದಾನ ಮಾಡಿದ್ದಾರೆ. ನಾವೂ ಯಾವ ಅಭ್ಯಂತರ ಆತಂಕಗಳಿಗೂ ಅಂಜದೆ ನಮ್ಮ ಸತ್ಯ ಅಹಿಂಸೆ ಎಂಬೀ ಅಸ್ತ್ರಗಳಿಂದ ಹೋರಾಡೋಣ. ನಮ್ಮ ನಿರ್ಧಾರವು ಬಲಿಷ್ಟವಿರಲಿ. ಸತ್ಯಾಗ್ರಹಕ್ಕೆ ಸೋಲೆಂಬುದು ಎಂದಿಗೂ ಇಲ್ಲ. ಅದು ಸದಾ ವಿಜಯಿಯಾಗಿಯೇ ಇರುತ್ತದೆ. ಓರ್ವ ಆಂಗ್ಲ ಕವಿಯು ಹೀಗೆ ಹಾಡಿದ್ದಾನೆ:

ಸತ್ಯವು ಸದಾ ಗಲ್ಲಿಗೇರಿಸಲ್ಪಡುತ್ತದೆ.
ಅನ್ಯಾಯವುಸದಾ ಸಿಂಹಾಸನ ರೂಢವಾಗಿದೆ.
ಆದರೂ ಭವಿಷ್ಯದಲ್ಲಿ ಆ ಗಲ್ಲಯು
ದೇವರ ನೆರಳಲ್ಲಿ, ನಿಂತು ದೇವ
ರಿಂದ ಕಾಯಲ್ಪಡುತ್ತದೆ.

NOTICE

In the Court of the Subordinate Judge of South Kanara

A S. No. 185/1944

Between.

Karindolan Raman and another— **Appellants.**

and

Kammadath Moidinkunhi and others— **Respondents.**

NOTICE

To

(6) Kaichumma, daughter of Kunhamina, (10) Kaichumma daughter of Ummali, (11) Nafeesa, (12) Beepathu (Daughters of Kaichumma.) (21) Kunhami daughter of Ummali, (22) Pathumma widow of Koidinkunhi, Respondents 6, 10, 11, 12 and 21 reside in Kammadath of Kinanore village, Kasargod Taluk and Respt. 22 resides in Kadapuram of Ajanore village, Kasargod Taluk.

Take notice that the appellants (plaintiffs) have preferred an appeal against the decree and judgment of the Court of the District Munsif of Kasargod in O. S. No. 413/1940 and you as legal representatives of the deceased 1st respondent have been brought on record as supplemental respondents and the appeal stands posted to 22-12-44 for hearing. You may appear either in person or by a pleader on that day failing which the same will be heard in your absence.

G. Somasheker Rao,
Vakil for Appellants.

Mangalore, 9-12-1944.

ಸ್ವದೇಶಾಭಿಮಾನಿ

ತಾರೀಕು 15—12—1944

ಸ್ವಾತಂತ್ರ್ಯಾಭಿಲಾಷೆ

'ಸ್ವಾತಂತ್ರ್ಯವು ನನ್ನ ಜನ್ಮಸಿದ್ಧವಾದ ಹಕ್ಕು' ಎಂದು ಲೋಕಮಾನ್ಯ ತಿಲಕರು ಭಾರತದಲ್ಲಿ ಮಾತ್ರ ಉದ್ಘೋಷಿಸಿದ ಮಂತ್ರವಲ್ಲ. ಇಂದು ಜಗತ್ತಿನಲ್ಲಿ ದಬ್ಬಾಳಿಕೆಗೆ ಒಳಗಾದ ಪ್ರತಿಯೊಂದು ಜನಾಂಗವು ಅದಕ್ಕಾಗಿ ಹೆಣಗಾಡುತ್ತಿದೆ. ಮಿತ್ರರಿಂದ ಯುರೋಪಿನಲ್ಲಿ ಬಿಡುಗಡೆ ಮಾಡಲ್ಪಟ್ಟ ಫ್ರಾನ್ಸ್, ಗ್ರೀಸ್ ಮೊದಲಾದ ಪ್ರತಿಯೊಂದು ದೇಶದಲ್ಲೂ ಅದು ಪ್ರತಿಧ್ವನಿಗೈಯುತ್ತಿದೆ.

ಇದು ಸಹಜವಾದ ಒಂದು ರಾಜಕೀಯ ಉತ್ಕ್ರಾಂತಿ. ಹೊಟ್ಟೆಯೊಳಗಿನ ಮಗು ಬಹಳ ಸಮಯ ಬಂಧನದಲ್ಲಿರಲು ಬಯಸದೆ ಸ್ವಾತಂತ್ರ್ಯದ ತಿಳಿ ಬೆಳಕನ್ನು ಕಾಣಲು ಜನನದ ಕಡೆಗೆ ಧಾವಿಸುತ್ತದೆ. ಅಂದ ಮೇಲೆ ಸುಸಂಸ್ಕೃತ ಜನಾಂಗಗಳ ಮಾತೇನು?

ಆದರೆ ಯುರೋಪಿನಲ್ಲಿ ಇಂದು ನಡೆಯುತ್ತಿರುವ ಗೊಂದಲದಲ್ಲಿ ಎದ್ದುಕಾಣುವ ಮುಖ್ಯ ಎರಡು ವಿಷಯಗಳೆಂದರೆ—ಸಾಮ್ರಾಜ್ಯವಾದ ಮತ್ತು ಪ್ರಜಾಭಿರುಚಿಯ ಸಮತಾವಾದ. ಮೊದಲಿನದು ಸರ್ವಾಧಿಕಾರದ ನಿರಂಕುಶ ಪದ್ಧತಿಯ ಕಡೆಗೆ ಒಲಿದಿರುತ್ತದೆ, ಎರಡನೇದು ಪ್ರಜಾಶಕ್ತಿಯಲ್ಲೇ ಭರವಸೆ ತಾಳಿಕೊಂಡಿದೆ.

ಫ್ರಾನ್ಸ್, ಇಟಲಿ, ಗ್ರೀಸ್ ಮತ್ತು ಬೆಲ್ಜಿಯಮ್‌ಗಳಲ್ಲಿ ವಾಮಪಕ್ಷೀಯರಾದ ಸಮತಾವಾದಿಗಳು ಅಲ್ಲಿನ ಬಹುಜನತೆಯ ಬೆಂಬಲದಿಂದ ಅಧಿಕಾರ ಪಡೆಯಲೆಳಸುತ್ತಾರೆ. ಆದರೆ ಬಲಪಕ್ಷೀಯರಾದ ಬಂಡವಾಳ ಹಿತವಾದಿಗಳು ಶಸ್ತ್ರಬಲದಿಂದ ತಮ್ಮ ವಿರೋಧಿಗಳನ್ನು ಸದೆಬಡೆಯಲು ಪ್ರಯತ್ನ ಮಾಡುತ್ತಾರೆ. ಗ್ರೀಸಿನಲ್ಲಿ ಒಂದುವರೆ ಸಾವಿರಕ್ಕೂ ಮಿಕ್ಕಿ ನಾಗರೀಕರು ಕೊಲ್ಲಲ್ಪಟ್ಟರು. ಆದರೆ ಅವರ ಸ್ವಾತಂತ್ರ್ಯ ಸ್ಫೂರ್ತಿಯು ಅಪ್ರಹತಿಹತವಾಗಿ ಮುಂದುವರಿಯುತ್ತದೆ.

ಗ್ರೀಸಿನಲ್ಲಿ ಬಿಡುಗಡೆ ದಳಗಳ ನಾಯಕರಾದ ಬ್ರಿಟಿಷರು ಅಲ್ಲಿನ ಪ್ರಜಾಪ್ರಿಯರಲ್ಲದ ಮುಖಂಡರೊಡನೆ ಸಹಕರಿಸಿ 'ಶಿಸ್ತು, ನ್ಯಾಯ' ಪರಿಪಾಲನೆಗಳ ಹೆಸರಿನಲ್ಲಿ ತಮ್ಮ ಭಯಂಕರ ಅಸ್ತ್ರಗಳಿಂದ ನಿಶಸ್ತ್ರ ಜನರ ಮೇಲೆ ಕಾರ್ಯಕ್ರಮ ಕೈಕೊಂಡಿದ್ದಾರೆ. ಈ ಕೆಲಸಕ್ಕೆ ಅಮೇರಿಕವು ನಿಷೇಧವನ್ನೂ ಸೂಚಿಸಿ ಅದರಲ್ಲಿ ತನ್ನ ಹೊಣೆಗಾರಿಕೆ ಇಲ್ಲವೆಂದು ಸ್ಪಷ್ಟಪಡಿಸಿರುವುದು ಬ್ರಿಟಿಷ್ ಮುಖಂಡರಿಗೆ ಒಂದು ಸೂಚನೆ ಮಾಡಿರುತ್ತದೆ.

ಒಟ್ಟಿನ ಮೇಲೆ ಯುರೋಪಿನಲ್ಲಿ ರಷ್ಯದ ಸಮತಾವಾದವು ಹರಡುತ್ತದೆಂದು ಸಾಮ್ರಾಜ್ಯವಾದಿಗಳಲ್ಲಿ ಕಳವಳವುಂಟಾಗಿರುತ್ತದೆಂದು ಅಭಿಪ್ರಾಯವಾಗುತ್ತದೆ. ಜರ್ಮನಿಗೂ ಇಟಲಿಗೂ ಈ ಹೆದರಿಕೆಗಳಿದ್ದವು. ಈ ರಾಷ್ಟ್ರಗಳೊಂದಿಗೆ ಬಲಾಬಲ ನೋಡಲು ರಷ್ಯವು ಹಿಂದೆಗೆಯಲಿಲ್ಲ. ಈಗ ಯುರೋಪಿನ ದೇಶಗಳಲ್ಲಿನ ತಮ್ಮ ತತ್ವ ಹಿತವಾದಿಗಳೊಡನೆ ರಷ್ಯವು ಸಹಕರಿಸಿದರೆ ಸದ್ಯದಲ್ಲೇ ಮಿತ್ರರೊಳಗೆ ಒಡಕುವುಂಟಾಗಬಹುದು.

ಮಿತ್ರರೊಳಗೆ ಒಡಕುವುಂಟಾದರೆ ಜರ್ಮನ್ ಜಪಾನ್‌ಗಳಿಗೆ ದೊಡ್ಡ ಅನುಕೂಲ ಸಂಭವಿಸುವುದು. ಆದುದರಿಂದ ಮಿತ್ರ ಮುಖಂಡರು ಮುಖ್ಯವಾಗಿ ಚರ್ಚಿಲ್ ರೂಸ್‌ವೆಲ್ಟರು ಈಗಲೇ ತಮ್ಮ ಧೋರಣೆ ಬದಲಾಯಿಸದಿದ್ದರೆ ಅಪಾಯಕಾರಕ ಪರಿಸ್ಥಿತಿಯು ಯುರೋಪಿನಲ್ಲಿ ಸಂಭವಿಸಲು ಸಾಧ್ಯವಿದೆ.

ಜ್ಞಾನೋದಯ

ದಕ್ಷಿಣ ಆಫ್ರಿಕದ ಸರಕಾರದವರು ಅಲ್ಲಿನ ಭಾರತೀಯರಿಗೆ ತೊಡಕುಂಟಾಗುವ ಕಾನೂನುಗಳನ್ನು ಮಾಡಿದುದಕ್ಕೆ ಸೆಂಟ್ರಲ್ ಎಸೆಂಬ್ಲಿಯಲ್ಲಿ ವಿರೋಧ ಸೂಚಿಸಿ ಪ್ರತಿಕಾರ ದಂಡೋಪಾಯಗಳನ್ನು ಕೈಕೊಳ್ಳಲಿಕ್ಕೆ ನಿರ್ಧರಿಸಿದ ನಿರ್ಣಯದ ಪರಿಣಾಮವಾಗಿ ಅಲ್ಲಿನ ಆಡಳಿತದವರಲ್ಲಿ ಜ್ಞಾನೋದಯವುಂಟಾಯಿತೆಂದು ತಿಳಿದು ಬರುತ್ತದೆ.

ಬಿಳಿಯರ ಮಧ್ಯದಲ್ಲಿ ವಾಸಸ್ಥಳ ಮಾಡಿಕೊಂಡಿರಲು ನಿರ್ಬಂಧಹಾಕುವ ಕಾನೂನನ್ನು ಆಫ್ರಿಕದ ಯೂನಿಯನ್ ಸರಕಾರದವರು ಜ್ಯಾರಿಗೆ ತರುವ ಯೋಜನೆಯನ್ನು ಬಿಟ್ಟುಬಿಟ್ಟಿರುವರು.

ಹಿಂದೆ ಮಾಡಿಕೊಂಡ ಪ್ರಿಟೋರಿಯಾ ಒಪ್ಪಂದದ ಶರ್ತಗಳಿಗೆ ಅಲ್ಲಿನ ಆ ಕಾನೂನು ವಿರೋಧವಾಗಿದೆ ಎಂದು ಜನರಲ್ ಸ್ಮಟ್ಸರು ಒಪ್ಪಿರುವರು.

ಈ ತಿಳುವಳಿಕೆಯು ಸ್ಮಟ್ಸರಿಗೆ ಮೊದಲೇ ಉಂಟಾಗುತ್ತಿದ್ದರೆ ಆ ಕುರಿತು ಸಂಭವಿಸಿದ್ದ ಭಾರತ–ಆಫ್ರಿಕಗಳೊಳಗಿನ ಮನಃಕ್ಲೇಶಕ್ಕೆ ಎಡೆಯಿರುತ್ತಿರಲಿಲ್ಲ.

ದ್ವೇಷಭರಿತವಾದ ಆ ಕಾನೂನುಗಳನ್ನು ನಿಲ್ಲಸಲಾಗಿದೆಯಾದರೂ ಅದರ ಮೂಲರೂಪನಾದ ಪೆಗ್ಗಿಂಗ್ ಏಕ್ಟ್ ಎಂಬ ಶಾಸನವು ಇನ್ನೂ ಮಾಯವಾಗಲಿಲ್ಲ. ಸ್ಮಟ್ಸ್‌ರು 'ಅದು ತಾತ್ಕಾಲಿಕವೆಂದೂ, ಆ ಕುರಿತು ಇತ್ಯರ್ಥ ಮಾಡುವ ದಾರಿಯನ್ನು ಪರ್ಯಾಲೋಚಿಸಲಾಗುವುದೆಂದೂ' ಅಭಯವಿತ್ತುದು ಈಗಿನ ಮಟ್ಟಿಗೆ ಸಮಾಧಾನಕಾರಕವಾಗಿದೆ.

ಈಗ ಅಲ್ಲಿ ಉಳಿದಿರುವ ಪೆಗ್ಗಿಂಗ್ ಏಕ್ಟಿನ ಪ್ರಕಾರ ಓರ್ವ ಬಿಳಿಯವನು—ಅವನು ಕುಷ್ಠರೋಗಿ ಇರಲಿ, ಇಲ್ಲವೆ ಕೊಲೆಪಾತಕಿ ಇರಲಿ—ಡರ್ಬಾನಿನಲ್ಲಿ ಇಚ್ಛೆವುಳ್ಳ ವಸತಿ ಸ್ಥಳವನ್ನು ಕೊಂಡುಕೊಳ್ಳುವ ಹಕ್ಕಿನವನಿರುತ್ತಾನೆ. ಆದರೆ ಅಲ್ಲಿನ ಸಭ್ಯ ಭಾರತೀಯರಿಗೆ ಆ ಹಕ್ಕಿರುವುದಿಲ್ಲ. ಈ ನಿರ್ಬಂಧವು ಹೋಗಬೇಕು. ಆಗ ಮಾತ್ರ ದಕ್ಷಿಣ ಆಫ್ರಿಕದೊಡನೆ ಭಾರತವು ಸಂಪೂರ್ಣ ಮೈತ್ರಿಯಿಂದಿರಬಲ್ಲುದು.

ಜಪಾನ್ ಮುಕ್ತಿಗೆ ಎಂದು?

ಚೀನದ ದುರಂತ ಘಟನೆ! ಕಾಲವಿಳಂಬದಿಂದ ಅಪಾಯ!

ಪರ್ಲ್ ಹಾರ್ಬರ್ ಘಟನೆಯಾಗಿ ಮೂರು ಸಂವತ್ಸರಗಳು ಮುಗಿಯುತ್ತ ಬಂದುವು. ಅಂದಿನಿಂದ ಸಿಂಗಾಪೂರ್, ರಂಗೂನ್, ಸುಮಾತ್ರಾ, ಜಾವಾಗಳು ಒಂದೊಂದಾಗಿ ಜಪಾನರ ವಶವಾದ ವಿದ್ಯುತ್ ಘಟನೆಗಳು ನೆನಪಿಗೆ ಬರುತ್ತವೆ.

ಸಿಂಗಾಪೂರ್ ಬರ್ಮಗಳನ್ನು ಇನ್ನು ಮಿತ್ರರಿಂದ ಹಿಡಿಯಲಿಕ್ಕಾಗಲಿಲ್ಲವಾದರೂ ಪರ್ಲ್ ಹಾರ್ಬರನ್ನು ಧ್ವಂಸಗೊಳಿಸಿದಂತೆ ಜಪಾನರ ಟೋಕಿಯೋ ರಾಜಧಾನಿಯು ಬಲವಾದ ಧಾಳಿಗೆ ಗುರಿಮಾಡಲಾಗಿದೆ. ಅಮೇರಿಕನ್ನರು ಅಲ್ಲಿಗೊಂದು ಬಾಂಬರ್ ವಿಮಾನ ಸರ್ವಿಸನ್ನೇ ತೆರಿದಿರುವರೆಂದರೆ ಅತಿಶಯವಲ್ಲ.

ಸದ್ಯಕ್ಕಂತೂ ಭಾರತಕ್ಕಿದ್ದ ಜಪಾನ್ ಅಪಾಯವನ್ನು ದೂರಕರಿಸಲಾಗಿದೆ. ಕಳೆದ ಮಳೆಗಾಲದಲ್ಲಿ ಹಿಂದೂದೇಶದ ಸಂಪೂರ್ಣ ಆಕ್ರಮಣ ಮಾಡಲಿದ್ದ ಜಪಾನರನ್ನು ಹಿಂದಕ್ಕೆ ತಳ್ಳಲಾಗಿದೆ. ಡಿಲ್ಲಿಯನ್ನು ವಶಪಡಿಸಿಕೊಳ್ಳುವ ಜಪಾನ್ ರೇಡಿಯೋದ ಬೊಬ್ಬೆಯು ಈಗ ನಿಲ್ಲಿಸಲ್ಪಟ್ಟಿದೆಯಂತೆ

ಫೆಸಿಪಿಕಿನ ಸೈಪಾನ್ ದ್ವೀಪದಿಂದ ೧೫೦೦ ಮೈಲು ದೂರದ ಟೋಕಿಯೋದ ಮೇಲೆ ತಮ್ಮ ಬಿ–೨೯ ವಿಮಾನಗಳಿಂದ ಬಾಂಬನ್ನು ಸುರಿಸುತ್ತಿರುವರು. ಟೋಕಿಯೋದ ಪರಿಸ್ಥಿತಿಯು ಜರ್ಮನ್ ನಗರಗಳ ದುರವಸ್ಥೆಯಂತೆ ಮಾಡಲಾಗುತ್ತಿದೆ. ಇತ್ತ ಜನರಲ್ ಮೆಕ್ ಆರ್ಥರರು ಫಿಲಿಪ್ಪೈನಿನಲ್ಲಿ ಭದ್ರವಾಗಿ ತಳವೂರಿದ್ದಾರೆ. ಅಲ್ಲಿ (ಅಮೇರಿಕನರ ಕೈಕೆಳಗೆ) ಫಿಲಿಪ್ಪೈನ್ ಜನರ ಜನಪ್ರಿಯ ಸರಕಾರವು ಸ್ಥಾಪಿಸಲ್ಪಟ್ಟಿದೆ.

ಜಪಾನಿಯರ ಸೈನ್ಯ, ಶಸ್ತ್ರ ಆಹಾರವಸ್ತುಗಳಿಂದತುಂಬಿದ ಹಡಗುಗಳು ನೂರರ ಗಟ್ಲೆಯಲ್ಲಿ ಮುಳುಗಿಸಲ್ಪಡುತ್ತವೆ. ಫಿಲಿಪ್ಪೈನಿನ ಯುದ್ಧವು ಜಪಾನಿಯರಿಗೆ ಅತೀ ಪ್ರಾಮುಖ್ಯವಾದುದು. ಕಾರಣ ಅಲ್ಲಿ ಕಡೆತನಕ ಹೋರಾಡಿದಂತೆ ಮಾಡಿ ಅವರು 'ಶರ್ತರಹಿತ ಶರಣು' ಬರುವ ಪರಿಸ್ಥಿತಿಯನ್ನುತಪ್ಪಿಸಿ ಒಂದು ವೇಳೆಗೆ ಒಪ್ಪಂದವಾಗುವ ಸಂಭವವಿದ್ದರೆ ಆಗ ಹೆಚ್ಚು ಅನುಕೂಲದ ರಾಜಿಶರ್ತಕ್ಕೆ ಮಿತ್ರರು ಒಪ್ಪುವಂತೆ ಮಾಡಲು ಪ್ರಯತ್ನಿಸುತ್ತಿರುವರು ಎಂದು ತೋರಿಬರುತ್ತದೆ. ಅದಕ್ಕಾಗಿಯೇ ಅವರು ಫಿಲಿಪ್ಪೈನಿನಲ್ಲಿ ಎಷ್ಟೋ ನಷ್ಟ ಸಂಭವಿಸಿದರೂ ಮೇಲಿಂದ ಮೇಲೆ ಸೈನ್ಯವನ್ನು ತಂದು ತುರುಕುತಿದ್ದಾರೆ.

ಜಪಾನು ಇನ್ನೂ ಬಲವಾಗಿದೆ

ಮಿತ್ರರು ಪೌರ್ವಾತ್ಯದ ಈ ರಂಗದಲ್ಲಿ ಬಹಳ ಸಾಹಸ ಮಾಡಿದ್ದಾರೆಂಬುದು ನಿಜವಾದ ಸಂಗತಿ. ೧೯೪೧ರ ಅಂತ್ಯ, ೧೯೪೨ರ ಆದಿಯಲ್ಲಿ ತೋರಿಸಿಕೊಂಡಷ್ಟು ಭಯಂಕರ ಪರಿಸ್ಥಿತಿಯು ಇಂದಿಲ್ಲ. ಆದರೂ ಜಪಾನು ಸೋತ ಲಕ್ಷಣಗಳು (ಇದುತನಕ) ಕಾಣುವುದಿಲ್ಲವೆಂದು ಸಮರತಜ್ಞರು ಅಭಿಪ್ರಾಯಗೊಂಡಿದ್ದಾರೆ. ಅವರ ಸೋಲು ಪ್ರಾರಂಭವಾದ ಚಿಹ್ನೆಗಳೂ ಕೂಡ ತೋರುವುದಿಲ್ಲ. ಜರ್ಮನಿಯನ್ನು ಸಂಪೂರ್ಣ ಸೋಲಿಸಿದ ನಂತರ ಎರಡು ವರ್ಷಗಳು ಬೇಕಾಗುವುವು–ಜರ್ಮನನ್ನು ಮುರಿಯಬೇಕಾದರೆ ಎಂದು ತಜ್ಞರ ಅಭಿಮತವು ಪ್ರಕಟವಾಗಿದೆ.

ಹಾಗಾದರೆ ಜರ್ಮನಿಯು ಸೋಲುವುದೆಂದು? ಇದು ಬೇಗನೇ ಘಟಿಸುವ ಕುರಿತು ಚರ್ಚಿಲ್ಲರಿಗೆ ಭರವಸೆಯಿಲ್ಲವೆಂದು ಅವರ ಭಾಷಣದಿಂದ ತಿಳಿದುಬರುತ್ತದೆ. 'ಬರುವ ಬೇಸಗೆಯೊಳಗೆ ಸುಮಾರಿಗೆ ಜರ್ಮನರು ಸೋಲಬಹುದು' ಅವರು ತಮ್ಮ ಭಾಷಣದಲ್ಲಿ ಜಾಗರೂಕತೆಯ ಮಾತಿನಲ್ಲಿ ಹೇಳಿದ್ದಾರೆ. ಬೇಸಗೆಯ ಪ್ರಾರಂಭದಲ್ಲೊ, ಮಧ್ಯದಲ್ಲೊ, ಇಲ್ಲವೆ ಅಂತ್ಯದಲ್ಲೊ ಎಂಬ ವಿಷಯವನ್ನು ಅವರು ಸ್ಪಷ್ಟ ತಿಳಿಸಿಲ್ಲ.

ಫೆಸಿಪಿಕಿನಲ್ಲಿ ಅಮೇರಿಕನರು ಸಾಹಸಪಟ್ಟಷ್ಟು ಅನೇಕ ರಂಗಗಳಲ್ಲಿ ಬ್ರಿಟಿಷರು ಅಷ್ಟೊಂದು ಶ್ರಮವಹಿಸಿಲ್ಲ. ಆರು ತಿಂಗಳ ಹಿಂದೆ ಮುಂದುವರಿಯುತ್ತಿರುವ ಜಪಾನನ್ನು ಬ್ರಿಟಿಷ್ ದಳಗಳು ತಡೆದವಾದರೂ ಅವರ ಅಭಿಯೋಗವು ಸಂರಕ್ಷಣೆದಿಕ್ಕಿಲ್ಲದೆ ಶತ್ರುನಾಶಕವಿರಲಿಲ್ಲ. ಆದರೆ ಮೆಕ್ ಆರ್ಥರ್ ಮತ್ತು ಅಡ್ಮಿರಲ್ ನಿಮಿಟ್ಜರು ಆಸ್ಟ್ರೇಲಿಯದಿಂದ ಮುಂದುವರಿದು ನೆಲಜಲಗಳಲ್ಲಿ ಜಪಾನರನ್ನು ಹತ್ತಿಕ್ಕಿದರು.

ಜಪಾನಿಯರಾದರೂ ಹೆಚ್ಚಿನ ಯಾವ ಪರಿಣಾಮಕಾರಿ ಕೆಲಸವನ್ನೂ ಮಾಡಿಲ್ಲ. ಅವರ ೨ ಲಕ್ಷ ಸೈನಿಕರು ಇದುತನಕ ಮಡಿದಿರುವರು. ಹೆಚ್ಚಿನವರು ಆತ್ಮಹತ್ಯ ಮಾಡಿಕೊಂಡಿರುವುದರಿಂದ ಸೆರೆ ಹಿಡಿಯಲ್ಪಟ್ಟ ಜಪಾನಿ ಸೈನಿಕರು ಕಡಿಮೆ ಎಂದು ಹೇಳಲಾಗಿದೆ.

ಇಷ್ಟಾದರೂ ಮಹತ್ತರವಾದ ಜಪಾನ್ ಸೈನ್ಯದಳಗಳು ಇನ್ನೂ ಸುಭದ್ರವಾಗಿವೆ. ಚೀನದಲ್ಲಿ ಅವರು ಮುಂದುವರಿಯುತ್ತಿರುವ ರೀತಿ ನೋಡಿದರೆ ಜಪಾನೀ ಬಲದ ಸ್ವಲ್ಪ ಅರಿವು ನಮಗಾಗುತ್ತದೆ. ಈಗ ಅವರು ಸಂಪೂರ್ಣವಾಗಿ ಚೀನವನ್ನು ಇಬ್ಭಾಗ ಮಾಡಿದ್ದಾರೆ.

ಚೀನದ ವಿಷಾದ ಪರಿಸ್ಥಿತಿ

ಮಂಚೂರಿಯಾದಿಂದ ಹೊಂಕೊಂಕಿಗೆ ನೇರವಾಗಿ ನೆಲಮಾರ್ಗವಾಗಿ ಸಾಮಾಗ್ರಿಗಳನ್ನು ಚೀನದ ಸಮುದ್ರಪಡೆಗಳಿಗೆ ಮಿತ್ರರು ತಲಪಿಸುವ ಹಂಚಿಕೆ ಮಾಡಿದ್ದಾರೆಂಬುದು ಜಪಾನಿಯರಿಗೆ ತಿಳಿದೇ ಇತ್ತು. ಜಪಾನಿಯರ ಹೊಸ ಸೇನಾಧಿಪತಿ ಒಕಮುರಾ ಅವರು ಚೀನಕ್ಕೆ ತಲಪುವ ಬರ್ಮಾ ರಸ್ತೆಯ ತುದಿಯಲ್ಲಿರುವ ಕುಮಿಂಗದ ಮೇಲೆ ತಮ್ಮ ದೃಷ್ಟಿ ಇಟ್ಟಿದ್ದಾರೆ. ಬರ್ಮಾದಲ್ಲಿ ಮಿತ್ರರ ಮುನ್ನಡೆಯನ್ನು ತಡೆಯುವುದೇ ಅವರ ಉದ್ದೇಶ. ಹಾಗೆ ಮಾಡುವುದು ತುಂಬಾ ಸಾಹಸದ ಕೆಲಸವಾದರೂ ಅದು ಅತ್ಯಾವಶ್ಯವೆಂಬುದು ಜಪಾನಿಗಳಿಗೆ ಖಚಿತವಾಗಿದೆ. ತಕ್ಕ ಸಮಯದಲ್ಲಿ ಕೆಲಸಮಾಡುವುದೇ ಅವರ ಯುದ್ಧ ಇಲಾಖೆಯ ಒಂದು ವೈಶಿಷ್ಟ್ಯ.

ಚೀನದಲ್ಲಿ ಜಪಾನರು ತಡೆಯಿಲ್ಲದೆ ಯಶಸ್ವಿಯಾಗಿ ಮುಂದುವರಿಯುತ್ತಿರುವುದು ಮಿತ್ರರು ಕಣ್ಣುತೆರೆಯಬೇಕಾದ ವಿಷಯ. ಅವರು ಚೀನವನ್ನು ಸಂಪೂರ್ಣ ಸಮುದ್ರ ಕರಾವಳಿಯಲ್ಲಿ ಇಲ್ಲದಂತೆ ಇಬ್ಭಾಗಿಸಿ ಅನೇಕ ಅಮೇರಿಕನ್ ಬಾಂಬರ್ ಠಾಣ್ಯಗಳನ್ನು ಹಿಡಿದಿರುವರು. ಹೊಗೆಯು ಬೆಂಕಿಯ ಲಕ್ಷಣವೆಂದು ತಿಳಿಯುವಂತೆ ಈ ಅಪಾಯವನ್ನು ಈಗಲೇ ಗಮನಿಸಬೇಕು. ಇವತ್ತು ಮಾಡಬೇಕಾದುದನ್ನು ನಾಳೆಗೆ ಮುಂದು ಹಾಕುವುದು ವಿವೇಕವಲ್ಲ. ಚೀನವು ಇಂದು ಮಿತ್ರರು ಕಳುಹಿಸುವ ಶಸ್ತ್ರಾಸ್ತ್ರಗಳ ಮೇಲೆಯೇ ಹೊಂದಿಕೊಂಡಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುಡಿಗೆ ಒಂದಾಣೆ ಹೆಚ್ಚು

ಸಹಕಾರಿ ಸ್ಟೋರ್ಸಿನವರು ಅಕ್ಕಿ ಮುಡಿಯ ಈಗಿನ ಬೆಲೆಯ ಮೇಲೆ ಒಂದಾಣೆ ಹೆಚ್ಚು (ಇದು ಸರ್ ಚಾರ್ಜ್ ಬೆಲೆ) ಪಡೆಯುವಂತೆ ಅಧಿಕೃತರಾಗಿದ್ದಾರೆ. ಅಕ್ಕಿ ಮಾರಲಿಕ್ಕೆ ಕೊಳ್ಳುವ ಚಿಲ್ಲರೆ ವ್ಯಾಪಾರಿಗಳಿಂದಲೂ, ಮತ್ತು ಉಪಯೋಗಕ್ಕೆ ಪಡ ಕೊಳ್ಳುವ ಗಿರಾಕಿಗಳಿಂದಲೂ ಈ ಹೆಚ್ಚಿನ ೧ ಆಣೆ ಪಡಕೊಂಡು ಸ್ಟೋರ್ಸಿನವರು ಆ ಮೂಲಕ ಒಟ್ಟಾದ ಮೊತ್ತದ ಹಣವನ್ನು ಸರಕಾರಕ್ಕೆ ಕೊಡಬೇಕು.

ಕಳ್ಳಾಟಿಕೆ ವ್ಯಾಪಾರ ನಿಲ್ಲಿಸಲು ಸಿಬಂದಿ ಸ್ಥಾಪಿಸಲ್ಪಟ್ಟಿದೆ

ಅಕ್ಕಿ ಬತ್ತಗಳು ಕಳ್ಳಾಟಿಕೆಯಿಂದ ಹೊರಸಾಗದಂತೆ ನೋಡಿಕೊಳ್ಳಲು ಸರಕಾರದವರು ಬರುವ ಮಾರ್ಚ್ ಆಖೇರು ವರೇಗೆ ನಮ್ಮ ಜಿಲ್ಲೆಗೆ ಒಂದು ಸ್ಪೆಶಲ್ ಸಿಬಂದಿಯನ್ನು ಮಂಜೂರು ಮಾಡಿರುವರು. ಇದರಲ್ಲಿ ೩ ಲೋವರ್ ಡಿವಿಜನ್ ಕ್ಲಾರ್ಕರೂ ೧೨ ಪೇದೆಗಳೂ, ೪೦ ಚೌಕಿದಾರರೂ, ೮೧ ಗ್ರಾಮ ಕಾವಲಿನವರೂ ಇರುವರು.

ಈ ಸಿಬಂಧಿಯ ಸಂಬಳ ಇತ್ಯಾದಿ ಖರ್ಚಿಗಾಗಿ ಮೇಲೆ ವಿವರಿಸಿದ ಮುಡಿ ಮೇಲಿನ ೧ ಆಣೆ ಹೆಚ್ಚಿಗೆ ಬೆಲೆಯನ್ನು ಸರಕಾರವು ವಿನಿಯೋಗಿಸುವುದು ಎಂದು ತಿಳಿದು ಬರುತ್ತದೆ.

ಒಣ ಮೀನು ವ್ಯಾಪಾರೀ ಸಭೆ

ಒಣಮೀನು ಮತ್ತಿತರ ಸಂಬಂಧಪಟ್ಟ ವ್ಯಾಪಾರವಹಿವಾಟುದಾರರ ಪ್ರತಿನಿಧಿಗಳ ಸಭೆ ಶ್ರೀ. ಮೋಹನಪ್ಪ ತಿಂಗಳಾಯದ ಅಧ್ಯಕ್ಷತೆಯಲ್ಲಿ ಸೇರಿತ್ತು. ಕಸ್ಟಮ್ ನಿರ್ಬಂಧಗಳಿಂದ ತಮ್ಮ ಉದ್ಯಮಕ್ಕೆ ಉಂಟಾದ ತೊಡಕುಗಳನ್ನು ನಿವಾರಿಸಲು ಸರಕಾರಕ್ಕೆ ಮನವಿ ಮಾಡಿಕೊಳ್ಳಲು ಶ್ರೀ. ತಿಂಗಳಾಯರು ಕಾರ್ಯದರ್ಶಿಗಳಾಗಿರುವ ಒಂದು ಸಮಿತಿ ರಚಿಸಲ್ಪಟ್ಟಿತು.

ನಗರ ಸಭೆ

ಕಳೆದ ಗುರುವಾರ ಸ್ಪೆಶಲ್ ಮುನ್ಸಿಪಲ್ ಮೀಟಿಗೊಂದು ಕರೆಯಲ್ಪಟ್ಟಿತು. ವ್ಯಾಸ್ ಚೇಯರ್ ಮೆನ್ ಮಿ। ಸಿ. ಎಲ್. ಲೋಬೊ ಅವರು ಅಧ್ಯಕ್ಷತೆ ವಹಿಸಲಿದ್ದರು. ಆದರೆ ಅಂದು ಸಾಕಷ್ಟು ಸದಸ್ಯರು ಹಾಜರಿರದ ಕಾರಣ 'ಕೋರಂ' ಇಲ್ಲದೆ ಸಭೆ ನಡೆಯಲಿಲ್ಲ. ಬರೀ ೪ ಮಂದಿ ಮಾತ್ರ ಬಂದಿದ್ದರು.

ಅವಲಕ್ಕಿ ದಾಸ್ತಾನು ಕುರಿತು ಕಲೆಕ್ಟರ ಆಜ್ಞೆ

ಮಂಗಳೂರು ಮತ್ತು ಕಾಸರಗೋಡು ರೇಶನ ಕ್ಷೇತ್ರದಲ್ಲಿ ಅವಲಕ್ಕಿ ದಾಸ್ತಾನಿದ್ದವರು. ಅದು ಸ್ವಂತದಿರಲಿ ಇಲ್ಲವೆ ಪಾಲುಗಾರಿಕೆಯ ವಹಿವಾಟಿನದಿರಲಿ–ಕೆಳಗೆ ಕಾಣಿಸಿದ ಫಾರ್ಮಿನ ಒಕ್ಕಣೆಗಳ ಮೇರೆಗೆ ಸದ್ರಿ ದಾಸ್ತಾನಿನ ಕುರಿತು ತಿಳಿಸುವ ವಿವರಗಳನ್ನು ಬರಾಯಿಸಿ ತಾ. ೨೫ರೊಳಗೆ ಸದ್ರಿ ಹೇಳಿಕೆ ವರದಿಯನ್ನು ಸಂಬಂಧಪಟ್ಟ ರೇಶನಿಂಗ್-ಆಫೀಸರರಿಗೆ ಹಾಜರ್‌ಮಾಡತಕ್ಕದ್ದು-ದಾಸ್ತಾನಿರುವ ಅವಲಕ್ಕಿ ಮೊತ್ತವೆಷ್ಟೆಂದು ಅದರಲ್ಲಿ ನಮೂದಿಸತಕ್ಕದ್ದು-ಹೀಗೆ ಜಿ. ಕಲೆಕ್ಟರರು ಆಜ್ಞೆ ಹೊರಡಿಸಿದ್ದಾರೆ.

ಅವಲಕ್ಕಿ ವಿವರ

೧) ವ್ಯಕ್ತಿಯ ಪೂರ್ಣ ಹೆಸರು (ಬ್ಲಾಕು ಅಕ್ಷರದಲ್ಲಿ) ೨) ವಿಳಾಸ. ೩) ವಶವಿರುವ ಅವಲಕ್ಕಿ ಮೊತ್ತ. ಇದರಲ್ಲಿ (ಎ) ಸ್ವಂತದ್ದೊ (ಬಿ) ಬೇರೆಯವರ ಪರವಾಗಿ ತನ್ನ ವಶ ವಿರಸಲ್ಪಟ್ಟದ್ದೊ, (ಸಿ) ಪಾಲುಗಾರಿಕೆ ವಹಿವಾಟಿನದ್ದೊ ಎಂದು ಇದನ್ನು ತಿಳಿಸತಕ್ಕದ್ದು. ೪) ಅವಲಕ್ಕಿ ದಾಸ್ತಾನಿರಿಸಿರುವ ಉಗ್ರಾಣ ಪತ್ತೆ, ಇಲ್ಲವೆ ಇತರ ಸ್ಥಳಗಳಲಿದ್ದರೆ ಅದರ ಪತ್ತೆ. ಅಲ್ಲಿರುವ ಬೇರೆ ಬೇರೆ ದಾಸ್ತಾನಿನ ಮೊತ್ತ. ೫) ಯಾರ ಪರವಾಗಿ ದಾಸ್ತಾನು ಇರಿಸಲಾಗಿದೆಯೊ ಆ ವ್ಯಕ್ತಿಯ ಹೆಸರು, ವಿಳಾಸ. ಮತ್ತು ಅವರಲ್ಲಿ ಪ್ರತಿಯೊಬ್ಬನ ಪ್ರತಪ್ರತ್ಯೇಕ ದಾಸ್ತಾನು ಇದ್ದರೆ ಅದರ ಮೊತ್ತ. ೬) ಪಾಲುಗಾರರಿದ್ದರೆ ಅವರ ಹೆಸರು. ಇದನ್ನು ಉದ್ದಕ್ಕೆ ಒಂದರ ಕೆಳಗೆ ಒಂದು ಬರೆದು ಉತ್ತರಿಸ ಬಹುದು.

ಶಾಲಾ ವರ್ಧಂತಿ

ನಾಳೆ ತಾ. ೧೬ಕ್ಕೆ ಇಲ್ಲಿಯ ಗವರ್ನಮೆಂಟ್ ಹಾ. ಎ. ಟ್ರೈನಿಂಗ್ ಶಾಲೆಯ ವರ್ಧಂತಿಯು ಆಚರಿಸಲ್ಪಡುವುದು. ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆ. ಫಾ. ಜೋಸೆಫ್‌ಕ್ಯೊಲೊ ಅವರು ಅಧ್ಯಕ್ಷತೆ ವಹಿಸುವರು.

ಮು. ಮೆನೇಜರರಿಗೆ ವರ್ಗ

ತಲ್ಲೇರಿಗೆ ಕಮಿಶನರಾಗಿ ಹೋಗಿದ್ದ ಇಲ್ಲಿಯ ಮುನ್ಸಿಪಲ್ ಮೆನೇಜರ್ ಶ್ರೀ. ಹರಿಶ್ಚಂದ್ರ ರಾಯರು ಉಡ್ಪಿ ನಗರಸಭೆಯ ಕಮಿಶನರಾಗಿ ನೇಮಿಸಲ್ಪಟ್ಟಿರುವರು.

ಜಿಲ್ಲೆಗೆ ನಿರಾವರಿ ಏರ್ಪಾಡು

ನಮ್ಮ ಜಿಲ್ಲೆಯಲ್ಲಿ ಕೃಷಿ ಕಾರ್ಯಕ್ಕೆ ನೀರಾವರಿ ಅನುಕೂಲತೆ ಹೇಗೆ ಏರ್ಪಡಿಸಲು ಸಾಧ್ಯವಿದೆ ಎಂದು ಪರಿಶೀಲಿಸಲು ಸರಕಾರದ ಸದ್ರಿ ಶಾಖೆಯ ಇಂಜಿನಿಯರರು ಈ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಸಂಚರಿಸಲಿರುವರೆಂದು ತಿಳಿದು ಬಂದಿದೆ.

ಈ ಕುರಿತು ಸಲಹೆ ಸೂಚನೆ ಕೊಡಲಿಚ್ಛಿಸುವವರು ಸ್ವಂತವಾಗಿ ಇಂಜಿನಿಯರರ ಬಳಿಯಾಗಲಿ ಇಲ್ಲವೆ ಪತ್ರ ಮೂಲಕ ತಮ್ಮ ವಿಳಾಸಕ್ಕಾಗಲಿ ಬರೆದು ತಿಳಿಸ ಬೇಕಾಗಿ ಶ್ರೀ. ಎ. ಬಿ. ಶೆಟ್ಟಿ ಅವರು ತಿಳಿಸುತ್ತಾರೆ.

ಇಂಜಿನಿಯರರು ಮಂಗಳೂರು, ಗುರ್ಪುರ, ಉಡ್ಪಿ, ಕಾರ್ಕಳ, ಪತ್ತನಡಿ, ಕಾಸರಗೋಡು, ಶಿರಿಯಾಳ ಮೊದಲಾದ ಸ್ಥಳಗಳನ್ನು ಸಂದರ್ಶಿಸಲಿದ್ದಾರೆ.

ಸಾಗುವಳಿ ಸಹಾಯದ ಸೂಚನೆಗಳು

ಜಿಲ್ಲೆಯ ಕೃಷಿಕರ ಪರವಾಗಿ ಜಿಲ್ಲಾ ಫುಡ್ ಕೌನ್ಸಿಲಿನಲ್ಲಿ ಕಲೆಕ್ಟರರ ಸಮಕ್ಷಮದಲ್ಲಿ ಈ ಕೆಳಗಿನ ಸೂಚನೆಗಳಾಗಿವೆ. ಗುಡ್ಡಗಳ ಬಳಿ ತೋಡು ಕಟ್ಟಿ ಮಳೆ ನೀರು ಜಮಾಯಿಸುವುದು. ಸಾಧ್ಯವಿದ್ದಲ್ಲಿ ಹೊಳೆಗಳಿಗೆ ಕಟ್ಟ ಹಾಕುವುದು.

ಮಜೂರ ಸಭೆ

ತಾ. ೧೦ರಂದು ಮೈದಾನಿನಲ್ಲಿ ಪ್ರೆಸ್ ಕೆಲಸಗಾರರ ಸಭೆ ಸೇರಿತ್ತು. ಛಾಪಖಾನೆ, ಪ್ರೆಸ್, ಹಂಚು, ನೇಕಾರ ಕೆಲಸಗಾರರಿಗೆ ಯೋಗ್ಯ ಸವಲತ್ತುಗಳು ದೊರಕಬೇಕಾದುದರ ಕುರಿತು ಸಭೆಯಲ್ಲಿ ಸೂಚನೆ ನಿರ್ಣಯಗಳಾದುವು.

ಪುತ್ತೂರು

ತಂದೆಯನ್ನು ಕೊಂದ ಮಗನಿಗೆ ಟಾಪು

ಪುತ್ತೂರು ಬಳಿಯ ಅಚ್ಯುತ್ ಭಟ್ ಎಂಬ ಅಡಿಕೆ ಸಾಹುಕಾರರನ್ನು ಅವರ ಸ್ವಂತ ಮಗನಾದ ಗಣಪತಿ ಭಟ್ಟ ಎಂಬಾತನು ಗುಂಡಿಕ್ಕಿ ಕೊಂದನೆಂಬ ಆರೋಪವು ಸೆಶ್ಶನ್ ಜಡ್ಜರ ಕೋರ್ಟಿನಲ್ಲಿ ರುಜುವಾತಾಗಿ ಸದ್ರಿ ಗಣಪತಿ ಭಟ್ಟ ಮತ್ತು ಅವನೊಡನೆ ಆ ಖೂನಿ ಕಾರ್ಯದಲ್ಲಿ ಸಹಕರಿಸಿದ ರಾಮ ನಾಯ್ಕ ಎಂಬಾತನಿಗೂ ಟಾಪು ಶಿಕ್ಷೆ ವಿಧಿಸಲಾಗಿದೆ.

ಮೇಲಿನ ಕೊಲೆ ಕಟ್ಲೆಯಲ್ಲಿ ಆರೋಪಿಸಲ್ಪಟ್ಟು ವಿಚಾರಣೆಗೆ ಒಳಗಾದವರಲ್ಲಿ ಹೆಚ್ಚಿನವರೆಲ್ಲರೂ ಮೃತರ ಹತ್ತಿರದ ಬಂಧುಗಳೇ ಇದ್ದರು. ಗಣಪತಿ ಭಟ್ಟನಲ್ಲದೆ ವೆಂಕಟರಮಣ ಭಟ್ಟ ಎಂಬ ಇನ್ನೊಬ್ಬ ಮಗ, ಹೃಷಿಕೇಶ ಭಟ್ಟ ಎಂಬ ತಮ್ಮ, ನಾರಾಯಣ ಭಟ್ಟ ಪಡ್ರೆ ಎಂಬವ ಚಿಕ್ಕಪ್ಪ. ಈ ಮೂವರೂ ನಿರಪರಾಧಿಗಳೆಂದು ಬಿಡಲಾಗಿದೆ.

ವರ್ಷಕ್ಕೆ ಸುಮಾರು ರೂ. ೬೦೦೦ರಷ್ಟು ತೀರ್ವೆ ತೆರುವ ಅಚ್ಯುತ ಭಟ್ಟರಿಗೂ ಅವರ ಮಕ್ಕಳೊಳಗೂ ದ್ವೇಷದ ಕಚ್ಚಾಟ ಸುರುವಾಗಿದ್ದುದರ ಪರಿಣಾಮವಾಗಿ ಪುತ್ತೂರಿನ ೮ ಮೈಲು ದೂರದ ಶೇಕಮಲೆ ಎಂಬಲ್ಲಿ ರಾತ್ರೆ ಹೊತ್ತು ಲೆಕ್ಕ ಪತ್ರ ಬರೆಯುತಿದ್ದ ತಂದೆಯನ್ನು ಮಗನು ರಾಮ ನಾಯ್ಕನೆಂಬ ಸ್ನೇಹಿತನ ಸಹಾಯದಿಂದ ಗುಂಡಿಕ್ಕಿದ್ದನು ಎಂದು ತಿಳಿದು ಬಂದಿದೆ.

ಉಡುಪಿ

ತಾ. ೧೦ರಂದು ಉಡುಪಿ ಮತ್ತು ನೆರಿಕೆರಿಯ ನಾಗರೀಕರು 'ಮುಕುಂದ ನಿವಾಸ'ದಲ್ಲಿ ಸಭೆ ಸೇರಿ ಕೃಷಿ, ಕೈಗಾರಿಗೆ ಅಭಿವೃದ್ಧಿಗಾಗಿ ದ. ಕ. ಜಿಲ್ಲೆಗೆ ಗೆರೆಸೊಪ್ಪೆ ಜಲಪಾತದ ವಿದ್ಯುಚ್ಛಕ್ತಿ ಯೋಜನೆಯಿಂದ ಆದಷ್ಟು ಬೇಗನೇ ವಿದ್ಯುತ್ ಶಕ್ತಿಯನ್ನು ಪಡೆಯಲು ಸಾಧ್ಯಗೊಳಿಸ ಬೇಕಾಗಿ ಮದ್ರಾಸ್ ಸರಕಾರವನ್ನು ವಿನಂತಿಸಿ ಕೊಳ್ಳುವ ನಿರ್ಣಯವನ್ನು ಮಾಡಿದರು. ಹೀಗೆಂದು ಈ ಕುರಿತು ಪ್ರಚಾರ ನಡೆಸಲು ಮೇಲ್ಕಂಡ ಸಭೆಯಿಂದ ಅಧಿಕೃತರಾದ ಕೆನರಾ ಇಂಡಸ್ಟ್ರಿಯಲ್ ಮತ್ತು ಸಿಂಡಿಕೇಟ್ ಬೆಂಕ್ ಲಿಮಿಟೆಡ್ ಇದರ ಡಾ। ಟಿ. ಮಾಧ ಪೈ ಅವರು ತಿಳಿಸುತ್ತಾರೆ.

ಡಾಕ್ಟರರೂ ದಾದಿಗಳೂ ಜಾಂಬಕನ್ನೇ ಉಪಯೋಗಿಸಲು ಹೇಳುತ್ತಾರೆ

ಪ್ರಸಿದ್ಧ ವಿಷಹಾರೀ ಚರ್ಮಲೇಪ

ಜಾಂಬಕ್ ಅರ್ಧ ಶತಮಾನಗಳಿಂದ ಜಗತ್ ಪ್ರಸಿದ್ಧವಾಗಿದ್ದು ಗಾಯ ಮತ್ತು ಹೊಡೆತಗಳಿಗೆ ಇದು ಆದರ್ಶ ಪ್ರಥಮ ಚಿಕಿತ್ಸೆಯಾಗಿದೆ. ಡಾಕ್ಟರರೂ ದಾದಿಯರೂ ಇದನ್ನು ತುರಿಕಜ್ಜಿ, ಬಾವು ವಿಷಪೂರ್ಣ ಗಾಯ, ಕಾಲುನೋವು, ಮೂಲವ್ಯಾಧಿ ಮೊದಲಾದುವುಗಳಿಗೆ ಉಪಯೋಗಿಸ ಹೇಳುತ್ತಾರೆ. ಜಾಂಬಕಿನಲ್ಲಿರುವ ಅತ್ಯುತ್ತಮ ವನಔಷಧಿ ಸತ್ವವು ಸುಲಭವಾಗಿ ಚರ್ಮಕ್ಕೆ ಎಳೆಯಲ್ಪಟ್ಟು ನೋವನ್ನು ಕಡಿಮೆಮಾಡಿ ಬಾವನ್ನು ಗುಣಪಡಿಸಿ, ರತಿಯನ್ನು ನಾಶಮಾಡುವುದು. ಜಾಂಬಕ್ ಕಲೆಯುಳಿಯದಂತೆ ಗುಣಪಡಿಸುವುದು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾಮುದು.

ವಿಶೇಷ ಸುದ್ದಿಸಾರ

ಫ್ರಾನ್ಸಿನ ಡಿಗಾಲೆಯವರು ರಷ್ಯಕ್ಕೆ ಹೋಗಿ ಅಲ್ಲಿನ ಸ್ಟೇಲಿನರೊಂದಿಗೆ ಮಾತುಕತೆ ನಡೆಸಿ ಪರಸ್ಪರ ಮೈತ್ರಿಯ ಮತ್ತು ಸಹಾಯ ಒಂದು ಒಪ್ಪಂದಕ್ಕೆ ಸಹಿಹಾಕಿ ಹಿಂತಿರುಗಿರುವರು. ರಷ್ಯಾ–ಫ್ರಾನ್ಸ್‌ಗಳೊಳಗೆ ಸಂಪೂರ್ಣ ಒಪ್ಪಿಗೆ ಸಹಾನುಭೂತಿಗಳು ಇದರಿಂದ ಉಂಟಾಗಿದೆ ಎಂದು ತಿಳಿದುಬರುತ್ತದೆ. ಯುರೋಪಿನಲ್ಲಿ ಹೊರಗಿನ ಯಾವ ರಾಷ್ಟ್ರದವರೂ ಅತಿಕ್ರಮ ನಡೆಸದಂತೆ ನೋಡುವುದು ಅವರ ಒಮ್ಮತದ ಉದ್ದೇಶ.

* * *

ಜಗತ್ತಿನಲ್ಲಿ ಶಾಂತಿ ಚಿರವಾಗಿ ನೆಲೆಗೊಳ್ಳಬೇಕಾದರೆ ಶತ್ರುಗಳಿಂದ ಮಿತ್ರರು ವಶಪಡಿಸಿಕೊಳ್ಳುವ ದೇಶಗಳನ್ನು ಸ್ವಲ್ಪ ಸಮಯದ ವರೆಗೆ ಒಂದು ಅಂತರ್‍ರಾಷ್ಟ್ರೀಯ ಸಂಯುಕ್ತ ಆಡಳಿತದಲ್ಲಿರಿಸಿ ಆ ಮೇಲೆ ಒಂದು ನಿರ್ದಿಷ್ಟ ಅವಧಿಯೊಳಗೆ ಅದನ್ನು ಆಯಾ ದೇಶಸ್ಥರ ಜವಾಬ್ದಾರಿಕೆ ಬಿಟ್ಟುಕೊಡಬೇಕೆಂದು ಅಮೇರಿಕದ ವಿದೇಶಾಂಗ ಧೋರಣೆಯ ಸಂಘದವರು ಮಿತ್ರಜನಾಂಗದವರಿಗೆ ಸಾರಿರುವರು. ಸಾಮ್ರಾಜ್ಯಗಳನ್ನು ಬಿಟ್ಟುಕೊಡುವ ಯೋಜನೆಯನ್ನು ಒಬ್ಬರೂ ಬಿಡದಿರುವುದನ್ನು ನೋಡಿ ಅಮೇರಿಕನ್ನರಿಗೆ ಕೌತುಕವಾಗಿದೆ.

* * *

ಮೆಟ್ರಿಕ್ ಪಾಸಾದ ತರುಣನನ್ನು ೪ ವರ್ಷ ತರಬೇತಿ ಕೊಟ್ಟು ಹಳ್ಳಿ ಅಭಿವೃದ್ಧಿ ಸಂಬಂಧವಾದ ಕಾರ್ಯದಲ್ಲಿ ಪ್ರವೀಣನಾಗಿ ಮಾಡುವ ಒಂದು ವಿದ್ಯಾ ಯೋಜನೆಯನ್ನು ವಾರ್ಧಾದಲ್ಲಿ ಚರಖಾಸಂಘದವರು ಪ್ರಾರಂಭಿಸಲಿರುವರು. ಪಾಸಾದ ವಿದ್ಯಾರ್ಥಿಗೆ ತಿಂಗಳಿಗೆ ನೂರು ರೂಪಾಯಿ ಸಂಬಳದ ಮೇಲೆ ಹಳ್ಳಿಗಳಿಗೆ ಕಳುಹಿಸಲಾಗುವುದು. ಅಲ್ಲಿ ಅವನು ಕ್ರಮೇಣ ಸ್ವಾವಲಂಬಿಯಾಗಿ ಹಳ್ಳಿಗರ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕು.

* * *

ಮಾಜಿ ಕಾಂಗ್ರೆಸ್ ಅಧ್ಯಕ್ಷರೂ ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯದ ನಿರ್ಮಾಪಕರೂ ಮತ್ತು ಪ್ರಖ್ಯಾತ ದೇಶಭಕ್ತರೂ ಆದ ಪಂಡಿತ್ ಮದನಮೋಹನ ಮಾಲವೀಯರು ೮೪ನೇ ವರ್ಧಂತ್ಯುತ್ಸವವು ದೇಶದ ಅನೇಕ ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಶುದ್ಧವಾದ ಮತ್ತು ಆಧುನಿಕ ವಿಚಾರ ಸರಣೀಯ ವಿಶ್ವಬಾಂಧವ್ಯದ ತತ್ವವುಳ್ಳ ಹಿಂದೂ ಧರ್ಮವನ್ನು ಪ್ರಚರಿಸುವುದೇ ಮಾಲವೀಯರ ಜೀವನ ಉದ್ದೇಶಗಳಲ್ಲಿ ಒಂದು.

* * *

ರೈಲ್ವೆಗಳ ಕುರಿತು ಮಾತನಾಡುತ್ತ ಇಂಡಿಯಾ ಸರಕಾರದ ಟ್ರೇನ್ಸ್‌ಪೋರ್ಟ್ ಮೆಂಬರರಾದ ಸರ್ ಎಡ್ವರ್ಡ್ ಬೆಂತಾಲರು ಮುಂದಿನ ಪುನ್ರರಚನೆಯಲ್ಲಿ ರೈಲುಗಳಲ್ಲಿ ಮೂರನೇ ತರಗತಿಯವರಿಗೆ ಹೆಚ್ಚಿನ ಸೌಕರ್ಯ ಕೊಡಲು ಪ್ರಯತ್ನಿಸಬೇಕು ಎಂದರು. ನಮ್ಮಷ್ಟೇ ವಿಶಾಲವಾದ ರಷ್ಯದಲ್ಲಿ ರೈಲ್ವೆ ನಿರ್ಮಾಣವು ಯಾವ ಅದ್ಭುತ ಪ್ರಗತಿ ಪಡೆದಿದೆ ಎಂಬುದನ್ನು ಬೆಂತಾಲ್ ಸಾಹೇಬರು ತಿಳಿಸಿ ರಷ್ಯನರ ಸಾಹಸವನ್ನು ಶ್ಲಾಘಿಸಿದರು.

* * *

ಸಿಂಧದಲ್ಲಿ ಹುಮಾಯೂನ್ ಎಂಬ ರೈಲ್ವೇ ಸ್ಟೇಶನಿನ ಮಾಸ್ತರನನ್ನು ಅಲ್ಲಿನ ಕೆಲವು ಪುಂಡರು ಗುಂಡಿಕ್ಕಿ ಕೊಂದು ಅಲ್ಲಿದ್ದ ಹಣವನ್ನು ಒಯ್ದಿರುವರು. ಈಗ ಪ್ರತೀ ಸ್ಟೇಶನಿನಲ್ಲಿ ಪೋಲೀಸ್ ಪಹರೆ ಇಡುವಂತೆ ಅಲ್ಲಿನ ಸರಕಾರದವರು ಏರ್ಪಡಿಸಿರುವರು.

* * *

ತಾ. ೧೧ರಲ್ಲಿ ಡಿಲ್ಲಿಯ ಒಂದು ಬಟ್ಟೆಯ ಗಿರಣಿಗೆ ಬೆಂಕಿ ಹತ್ತಿ ೧೮ ಲಕ್ಷದ ಹತ್ತಿ ಸುಟ್ಟು ಹೋಗಿರುತ್ತದೆ.

* * *

ಗಂಗಾನದಿಯ ಮೇಲೆ ವಿಹಾರಕ್ಕಾಗಿ ಹಾರುತಿದ್ದ ಒಂದು ವಿಮಾನವು ಅಪಘಡಕ್ಕೆ ತುತ್ತಾಗಿ ನೀರಿನಲ್ಲಿ ಮುಳುಗಿತು. ಮಿ. ಗೊನ್ಸಾಲ್ವಿಸ್ ಎಂಬ ಐ. ಸಿ. ಎಸ್. ಅಧಿಕಾರಿಗಳೂ ಇನ್ನೂ ಕೆಲವರು ಮರಣಪಟ್ಟಿರುವರು.

ಬ್ರಿಟಿಷ್ ಐರೋಪ್ಯದ ಒಡಕು

(೩ನೇ ಪುಟದಿಂದ)

ಇಟೇಲಿಯಲ್ಲೂ ಅದೇ ಧೋರಣೆ!

ಗ್ರೀಸಿನಲ್ಲಿ ಬ್ರಿಟಿಷರು ಪೆಪೆಂಡ್ರಿಯೋವನ್ನು ಬೆಂಬಲಿಸುವಂತೆ ಇಟೇಲಿಯಲ್ಲಿ ಬೊನಾಮಿ ಸರಕಾರಕ್ಕೆ ಬೆನ್ನು ಚಪ್ಪರಿಸಲು ಪ್ರಾರಂಭವಾಗಿದೆ. ಅಲ್ಲಿಯ ಈಗಿನ ಪ್ರಧಾನರಾದ ಬೊನಾಮಿಯವರು ಕೌಂಟ್ ಸ್ಫೋರ್ಜಾರವರನ್ನು ವಿದೇಶಾಂಗ ಸಚಿವರಾಗಿ ನೇಮಿಸಲು ಬ್ರಿಟಿಷರು ಬಿಡಲಿಲ್ಲ. ಹಿಂದೆ ಅವರು ಫೆಸಿಸ್ಟ್ ಸಹಾನುಭೂತಿಯವರಿದ್ದರೆಂತಲೂ, ಬೊಡೊಗ್ಲಿಯೋ ಸರಕಾರವನ್ನು ಮಗುಚಿ ಹಾಕಲು ಪ್ರಯತ್ನಪಟ್ಟವರಲ್ಲಿ ಅವರೊಬ್ಬರೆಂತಲೂ ಅವರ ಮೇಲೆ ಆರೋಪ ಹಾಕಲಾಗಿದೆ.

ನಿಜವಾಗಿಯೂ ಮುಸೋಲಿನಿಯ ಬಾಧೆಯನ್ನು ತಡೆಯಲಾರದೆ, ಅವನಿಗೆ ವಿರೋಧ ಸೂಚಿಸಿ ೧೯೨೬ರಲ್ಲಿ ಕೌಂಟ್ ಸ್ಫೋರ್ಜಾರವರು ಇಟೇಲಿಯನ್ನು ತ್ಯಜಿಸಿ ಹೊರಹೋಗಿದ್ದರು. ಮುಸೋಲಿನಿಯ ಬೀಳುವಿಕೆ ನಂತರ ಸರಕಾರಾಧಿಕಾರಿಯಾಗಿದ್ದ ಬೊಡೋಗ್ಲಿಯೋ ಅವರಿಗೂ ಕೌಂಟ್ ಸ್ಫೋರ್ಜಾರವರು ವಿರೋಧಿಗಳಿದ್ದರು. ಕಾರಣ ಬೊಡೋಗ್ಲಿಯೋರವರು ಮಿತ್ರರೊಂದಿಗೆ ಮತ್ತೆ ಮೈತ್ರಿ ಬೆಳೆಸಿದರಾದರೂ ಒಂದು ಕಾಲದಲ್ಲಿ ಮುಸಲೋನಿಯ ಎಡಗೈಯಂತಿದ್ದು ಅಬಿಸೀನಿಯದ ಕ್ರೂರ ವಿನಾಶದ ಪಾತಕಿಗಳಾಗಿದ್ದರು.

ಪ್ರಜಾಪ್ರಭುತ್ವವನ್ನು ಇಟೇಲಿಯಲ್ಲಿ ಸ್ಥಾಪಿಸುವುದೇ ಕೌಂಟ್ ಸ್ಫೋರ್ಜಾರವರ ಉದ್ದೇಶವಿರುವಾಗ ಅಂಥವರು ಬ್ರಿಟಿಷರಿಗೆ ಬೇಡವಾದುದು ಕೌತುಕವನ್ನುಂಟುಮಾಡದಿರದು. ಕೌಂಟ್ ಸ್ಫೋರ್ಜಾರವರನ್ನು ಮಂತ್ರಿಮಂಡಲಕ್ಕೆ ಸೇರಲು ಅಡ್ಡಿ ಮಾಡಿದಲ್ಲದೆ ಪ್ರಧಾನ ಚರ್ಚಿಲ್ಲರು "ಈಗಿನ ಆರು ಪಕ್ಷದ ಬೊನೊಮಿ ಸರಕಾರಗಿಂತ ಬೊಡೊಗ್ಲಿಯೋ ಸರಕಾರವೇ ಇದ್ದರೆ ಒಳ್ಳೇದಿತ್ತೆಂದು" ಘಂಟಾಘೋಷವಾಗಿ ಸಾರಿದ್ದಾರೆ. ಇನ್ನೂ ಮಹಾಪಾತಕಿ ಫೆಸಿಸ್ಟ್ ಸಹಾನುಭೂತಿದಾರರೊಂದಿಗೆ ಬ್ರಿಟಿಷರಿಗೆ ಸ್ನೇಹವೆ? ಎಂದು ಹಲವರು ಬಾಯಿ ತೆರೆದು ಬೆರಗು ಸೂಚಿಸಿದ್ದಾರೆ. "ಬೊನೊಮಿ ಸರಕಾರದ ಪಕ್ಷಗಳವರಿಗೆ ಜನಮತದ ಬೆಂಬಲವಿಲ್ಲ" ಎಂದು ಚರ್ಚಿಲ್ಲರ ವಾದ, ಫೆಸಿಸ್ಟ್ ರಾಜ್ಯದಲ್ಲಿ ಜನಮತವಿದೆಯೆ? ಎಂದು ಪ್ರಜಾಪ್ರಭುತ್ವವಾದಿಗಳ ಪ್ರಶ್ನೆ.

ಸಮತಾವಾದದ ಹೆದರಿಕೆ

ಮೇಲಿನ ಈ ಎಲ್ಲ ಕಾರಣಗಳಿಂದ ಬ್ರಿಟಿಷರಿಗೆ ಸಮತಾವಾದ ಕೊಮ್ಯುನಿಜಂಗಳಿಗಿಂತ ಫೆಸಿಸ್ಟ್‌ವಾದವೇ ಹೆಚ್ಚು ಪ್ರಿಯವೆಂಬ ವಿಷಯವು ಸ್ಪಷ್ಟವಾಗುತ್ತದೆ. ಇಂದಿಗೆ ಇಪ್ಪತ್ತು ವರ್ಷಗಳ ಹಿಂದೆ ಇದೇ ಚರ್ಚಿಲ್ ಸಾಹೇಬರು ರಶ್ಯದ ಸಮತಾವಾದಿ ಪದ್ಧತಿಯನ್ನು ಖಂಡಿಸಿದ್ದರು. ಈಗಲೂ ಅವರ ಅಭಿಪ್ರಾಯವು ಬದಲಾಗಲಿಲ್ಲವೆಂದು ತೋರುತ್ತದೆ.

ಚರ್ಚಿಲ್ಲರು ಸಾಂಪ್ರದಾಯವಾದಿಗಳು. 'ಕೆಸರಿನಲ್ಲಿ ಕುಸಿದು ಬಿದ್ದರೂ ಕುಲ ಸಂಪ್ರದಾಯ' ಬಿಡದ ವರ್ಗಕ್ಕೆ ಸೇರಿದ ಟೋರಿಗಳು ಅವರು ಇಂತಹ ನಾಯಕರಿರುವಾಗ ಬ್ರಿಟಿಷ್ ವಿದೇಶಾಂಗ ಧೋರಣೆಯು ಸಂಕುಚಿತ ದೃಷ್ಟಿಯದೇ ಉಳಿದು ಯಾವ ಪ್ರಗತಿಗೂ ಸಹಾಯವಾಗಲಾರದೆಂದು ಒಂದು ಪತ್ರಿಕೆಯು ಅಭಿಪ್ರಾಯ ಸೂಚಿಸಿದೆ.

ಹಾವು ವಿಷಕ್ಕೆ- 'ತಿರಿಯಕ್ ಔಷಧ'

ಕಳೆದ ತಾ. ೫ನೇ ಮಂಗಳವಾರ ಮಂಜೇಶ್ವರ ರೈಲ್ವೇ ಸ್ಟೇಶನ್ ಬಳಿ ಶ್ರೀ. ತಿಮ್ಮಪ್ಪ ಎಂಬ ಮಜೂರನಿಗೆ ಕನ್ನಡಿ ಹಾವೊಂದು (ಉರಿಮಂಡಲ Russel's vipre) ಕಚ್ಚಿ ಭಯಂಕರ ಯಾತನೆಗೆ ಒಳಮಾಡಿತು. ಅಲ್ಲಿಯ ಡಾಕ್ಟರರು ಕಚ್ಚಲ್ಪಟ್ಟ ಎಡಕಾಲಿನ ಹರಡಿನ ಭಾಗಕ್ಕೆ ಅಡ್ಡ ನೀಟಕ್ಕೆ ಘಾಯಹಾಕಿ ತಿರಿಯಕ್ ಎಂಬ ಪಂಜಾಬ್ ಅತ್ತಕಡೆಯ ಒಂದು ಔಷಧಿಯ ೮ ಇಂಜೆಕ್ಷನ್ ಕೊಟ್ಟರು. ಅದರ ಕೆಲವು ತಟಕುಗಳನ್ನು ಒಂದೊಂದು ಸವುಟು ನೀರಿನಲ್ಲಿ ಎರೆದು ಮೊದಲು ೩ ನಿಮಿಷಕ್ಕೊಮ್ಮೆ, ಆ ಮೇಲೆ ೫, ಅನಂತರ ೮ ಹೀಗೆ ನಡಮಂತರವನ್ನು ಏರಿಸುತ ೨ ಘಂಟೆಗಳ ತನಕ ಅದನ್ನು ಕುಡಿಸುತ್ತ ಬಂದ ಹಾಗೆ ಅತನ ಯಾತನೆ ಹತ್ತಕ್ಕೆ ಐದಾಯಿತು. ಆ ಬಳಿಕ ಅವನು ಕೊಡಲ್ಪಟ್ಟ ಮದ್ದನ್ನು ಕಾರಿದನು. ಈಗ ಅವನು ಕ್ಷೇಮ ಹೊಂದುತ್ತಲಿದ್ದಾನೆ.

'ತಿರಿಯಕ್' ಒಂದು ದ್ರವ ಔಷಧ ಬಣ್ಣಹಸರು, ಕರ್ಪೂರದ ತೀಕ್ಷ್ಣ ಸೊಗಡು ಇದೆ. ಹಾವು ಕಡಿಯಲ್ಪಟ್ಟವನಲ್ಲಿ ಇದು ವಾಂತಿ ಉಂಟುಮಾಡಿ ಕಾರಿಸುತ್ತದೆ.

ಪ್ರಸಿದ್ಧ ಸಾಹಿತಿಗಳಾದ ಶ್ರೀ ಮಂಜೇಶ್ವರ ಗೋವಿಂದ ಪೈಯವರು ಮೇಲಿನ ಘಟನೆಯನ್ನು ಸ್ವತಃ ನೋಡಿ ಈ ವರದಿ ತಿಳಿಸಿದ್ದಾರೆ. ಅವರು ಹೀಗೆ ಬರೆದಿದ್ದಾರೆ: ವಿಷಜಂತು ಕಡಿತಕ್ಕೆ ಇದು ದಿವ್ಯ ಔಷಧಿ ಎಂದು ಕಣ್ಣಾರೆ ಕಂಡ ಅನುಭವದಿಂದ ಖಂಡಿತವಾಯಿತು. ಇದು ಸುಮಾರು ೫೭ ವರ್ಷಗಳ ಹಿಂದಿನದಿದೆ ಎಂದು ತಿಳಿದು ಬಂದಿದೆ. ಅದರ ಪೂರ್ಣ ಹೆಸರು Revd. Dr. H. J. Lorbeer's Tiriyaq or Anti-snake-bite. ಕುಪ್ಪಿಯ ಬೆಲೆ ರೂ. ೨. ತರಿಸಿಕೊಳ್ಳುವ ವಿಳಾಸ: Revd. Dr. H. J. Lorbeer's Laboratory, P. O. Box No. 63 Lahore (Panjab.)

ಬಾಲ್ಯ ವಿವಾಹವೇ ಉತ್ತಮ

ಬ್ರಿಟಿಷ್ ಆರೋಗ್ಯ ಸಂಘದ ಸಲಹೆ

ಅದರಿಂದ ಹೆಚ್ಚು ಸುಖ!

ಬ್ರಿಟಿಷ್ ಹುಡುಗಿಯರು ಹೆಚ್ಚು ಪ್ರಾಯ ಹೋದ ಮೇಲೆ ಮದುವೆಮಾಡಿಕೊಳ್ಳುವುದರಿಂದ ಅಲ್ಲಿನ ಜನನ ಸಂಖ್ಯೆಯು ಕಡಿಮೆಯಾಗಲು ಕಾರಣವಾಯಿತೆಂದು ಬ್ರಿಟನಿನ ಒಂದು ಸಮಾಜ ಆರೋಗ್ಯ ಅಭಿವೃದ್ಧಿ ಸಂಘದವರು ಅಭಿಪ್ರಾಯಪಟ್ಟಿದ್ದಾರೆ.

"ಹುಡುಗಿಯರು ಪ್ರಪಂಚದ 'ಸುಖ'ವನ್ನು ಸ್ವಲ್ಪ ಅನುಭವಿಸಿದ ಮೇಲೆ ಮದುವೆಮಾಡಿಕೊಳ್ಳುತ್ತಾರೆ. ಅದುತನಕ ಅವರು ಸ್ವತಂತ್ರ ರೀತಿಯ ಬಾಳ್ವೆ ಮಾಡಿಕೊಂಡಿರುತ್ತಾರೆ. ಹೀಗೆ ಪ್ರಾಯ ಹೋದ ಮೇಲೆ ಮದುವೆಯಾಗುವಾಗ ಮೂರು ಮಕ್ಕಳಾಗುವ ಹೊತ್ತಿಗೆ ಅವರಿಗೆ ಒಂದು ಮಗುವಾಗುತ್ತದೆ.

"ಬ್ರಿಟಿಷ್ ಹುಡುಗಿಯರು ಅತೀ ಫಲದತ್ರುದರಾಗಿರುವ ಸಮಯವೆಂದರೆ ೧೮ರಿಂದ ೨೫ ವರ್ಷ ಪ್ರಾಯದಲ್ಲಿ. ಅದರ ನಂತರ ಮಕ್ಕಳು ಆಗುವ ಸಂಭವವು ಕಡಿಮೆಯಾಗುತ್ತ ಬರುತ್ತದೆ.

ಇನ್ನೊಂದು ಅನುಕೂಲ

"ಬೇಗ ಮದುವೆ ಮತ್ತು ಬೇಗ ಮಕ್ಕಳು ಆಗುವುದರಿಂದ ಇತರ ಅನೇಕ ಸಮಸೆಗಳು ದೂರವಾಗುತ್ತವೆ. ಗೃಹ ಜೀವನದಲ್ಲಿ ಹೆಚ್ಚು ಉಲ್ಲಾಸ ಸುಖ ಸಂತೋಷಗಳು ಉಂಟಾಗುವವು.

"ಬ್ರಿಟನಿನಲ್ಲಿ ತರುಣಿಯರು ಮದುವೆ ಮಾಡಿಕೊಳ್ಳುವ ಸರಾಸರಿ ಪ್ರಾಯವು ೨೬ ಎಂದೇ ಲೆಕ್ಕ ಹಾಕಲಾಗಿದೆ. ಇದೆಂದರೆ ಅವರ ತಾರುಣ್ಯದ ಭರ ದಾಟಿದ ಮೇಲೆ.

ದಂಪತಿಗಳು ಚಿಕ್ಕವರಿದ್ದರೆ ಕುಟುಂಬವು ಐಕ್ಯಮತ್ಯದಲ್ಲಿರಲು ಸಹಾಯವಾಗುತ್ತದೆ. ಅವರು ಹಳಬರೂ, ಹಳೇ ಸಂಪ್ರದಾಯದವರೂ ಆದರೆ ಅಷ್ಟೊಂದು ಸಾರಸ್ಯವಿರುವುದಿಲ್ಲ."

1945ನೇ ಇಸವಿಯ
ಶಾರದಾ ಪ್ಯಾಕೆಟ್ ಡೈರಿಗಳು
ಬೆಲೆ 0-12-0
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ANNOUNCEMENT

We have pleasure to announce that we will shortly be opening branches at:—

COIMBATORE
ERODE
MADURA
SALEM

A vital link for these in business and trade with the above centres, or others desiring to establish new connections with them, will be provided with the opening of these branches.

We extend a hearty invitation to all to avail of the new services and opprtunities offered by us.

Estd: 1906.

CANARA BANK, LIMITED.
(Incorporated in British India, Liability of Members Limited.)

ಮಾಲ್ಟಿನ್
ಮೊದಲೇ ಜೀರ್ಣಿಸಲ್ಪಟ್ಟ
ಶಕ್ತಿವರ್ಧಕ ಆಹಾರಪಾನೀಯ
ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.
ದೊರಕುವ ಸ್ಥಳ:- ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!
ಕುಟಿಕೂರಾ ಮುಲಾಮು.
(Cuticura Ointment)
ಚರ್ಮವ್ಯಾಧಿಗಳನ್ನು ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು
CUTICURA OINTMENT
1.

ಪೂರ್ವ-ಪಶ್ಚಿಮ

(೧ನೇ ಪುಟದಿಂದ)

ದ ಅದೇಕೆ, ಆ ಪಾಪದ ವಿಚಾರದಿಂದಲೇ ಶುದ್ಧಿ ಬೇಕು' ಎಂದು ಒಂದು ಕಡೆಯಲ್ಲಿ ಹೇಳಿದ್ದಾರೆ. 'ದೇವರ ಕಟ್ಟಳೆಗಳನ್ನು ಮುರಿದರೆ ನಮಗೆ ಕಠಿಣ ಶಿಕ್ಷೆಯಾಗದು. ಆದರೆ ಆತ್ಮಶುದ್ಧಿಯ ಶಿಕ್ಷೆ ಮಾತ್ರ ತಪ್ಪದು. ಇದನ್ನು ಮೀರುವುದೂ ನಮ್ಮಿಂದ ಅಸಾಧ್ಯ.' ಗಾಂಧಿಜಿಯವರು ಚಿಕ್ಕವರಾಗಿದ್ದಾಗ ತಾವು ಮಾಡಿದ ಒಂದು ತಪ್ಪನ್ನು ತಮ್ಮ ತಂದೆಯೆದುರು ಒಪ್ಪಿ ಅವರ ಪ್ರೇಮದಿಂದ ತಮ್ಮ ಪಾಪವು ತೊಳೆದುಹೋಯಿತು ಎಂಬ ಅಂದಿನ ಅವರ ಮರೆಯಲಾಗದ ಅನುಭವವು ದೇವರ ವಿಷಯದ ಅವರ ಈ ಉದಾತ್ತ ವಿಚಾರಗಳಿಂದ ಮತ್ತೆ ನೆನಪಾಗುತ್ತದೆ. ಹಾಗೆಯೆ ಆಧ್ಯಾತ್ಮಿಕ ದೃಷ್ಟಿಯಿಂದ, ನೀತಿಯ ದೃಷ್ಟಿಯಿಂದ ಕ್ರಿಸ್ತನು ದೇವರ ಮಗನೆಂಬುದನ್ನು ಒಪ್ಪುತ್ತಾರೆಯೆ ಹೊರತು ದೈವೀ ದೃಷ್ಟಿಯಿಂದಲ್ಲ.

ಮಹಾತ್ಮರು 'Sermon on the Mount' ದಲ್ಲಿಯೇ ಬಾಯಬಲ್ಲದ ಸಾರವನ್ನು ಕಂಡಿದ್ದಾರೆ. ೧೯೨೭ರಲ್ಲಿ ಕೋಲಂಬೋದ ಕ್ರಿಶ್ಚನ ತರುಣ ಸಂಘದವರಿಗೆ 'ಸರ್ಮನ್ ಆನ್ ದಿ ಮೌಂಟ್' ಎಂಬ ಉಪದೇಶದಲ್ಲಿಯೇ ಏಸುವಿನ ಸಮಗ್ರ ಸಂದೇಶವು ಅಡಕವಾಗಿದೆ ಎಂದು ಹೇಳಿದರು. ೧೯ನೇ ಶತಮಾನದ ಕ್ರಿಶ್ಚನ್ ಸಾಮ್ಯವಾದಿಗಳಾದ ಅಮೇರಿಕೆಯ ಎಮರ್ಸನ್ ಹಾಗೂ ಥೋರೋ, ಇಂಗ್ಲಂಡದ ಕಿಂಗ್ಸಲೆ, ಕಾರ್ಲಾಯಿಲ ಮತ್ತು ರಸ್ಕಿನ್ ಮತ್ತು ರಸಿಯಾದಲ್ಲಿ ಟಾಲಸ್ಟಾಯ ಇವರು ತಂತಮ್ಮ ದೇಶಗಳಲ್ಲಿ ಸ್ವಾರ್ಥಮೂಲವಾದ ರಾಜಕೀಯ ಮಿತವ್ಯಯದ ಆದಾರದ ಮೇಲೆ ಆರ್ಥಿಕ ಹಾಗೂ ಯಾಂತ್ರಿಕ ದಾಸ್ಯದಿಂದುದ್ಭವಿಸಿದ ನಾಗರಿಕತೆಯು ಆಗಿನ ಪರಿಸ್ಥಿತಿಯಲ್ಲಿ ಹೇಗೆ ಹಾಳಾಗುತ್ತ ನಡೆದಿದೆ ಎಂಬುದನ್ನು ತಮ್ಮ ದೃಷ್ಟಿಯಿಂದ ಅಭ್ಯಸಿಸುತಿದ್ದರು. ಜನರ ಮನಸ್ಸನ್ನು ಜೀವನದ ಹೋರಾಟದಿಂದ ಅವಶ್ಯಕತೆಗಳ ಕಡೆಗೆ ತಿರುಗಿಸಲು ಮೇಲಿನ ಪ್ರತಿಯೊಬ್ಬರೂ ತಮ್ಮ ದೃಷ್ಟಿಯಿಂದ ಪ್ರಯತ್ನಿಸಿದರು. ಈ ವಾಸ್ತವ ಜಗತ್ತಿನಿಂದ ದೂರವಾಗಲು ಬಯಸಿದರೆ ಮನುಷ್ಯನ ಉದ್ಧಾರ ಸಾಧ್ಯವಿಲ್ಲವೆಂದು ಪ್ರತಿಯೊಬ್ಬನೂ ಸಾರಿದನು.

ಪ್ರತಿಭಾಶಾಲಿಯಾದ ಎಮರ್ಸನ್ನನು ತನ್ನ ಲೇಖಗಳಿಂದ ಸ್ಫೂರ್ತಿಗೊಂಡ ಪ್ರಯೋಗಗಳಲ್ಲಿ ಅಷ್ಟೊಂದು ಆಸ್ಥೆ ವಹಿಸಲಿಲ್ಲ. ಇವನ ಕಿರಿಯ ಮಿತ್ರನಾದ ಥೋರೋನು ವಾಲ್ಡನ ಕೆರೆಯ ಹತ್ತಿರ ತಾನೇ ಮನೆಯನ್ನು ಕಟ್ಟಿಕೊಂಡು ಒಕ್ಕಲತನದಿಂದ ಎರಡು ವರ್ಷ (೧೮೪೫-೪೭) ಕಾಲ ಏಕಾಂತವಾಗಿ ವಾಸಿಸಿದ. ಅಂದಿನಿಂದ ಅವನು ತನ್ನ ಅಲ್ಪ ಜೀವಮಾನದಲ್ಲಿ ನಿಜವಾಗಿಯೂ ಸುಸಂಸ್ಕೃತವಾದ ಜೀವನದ ಅವಶ್ಯಕತೆಗಳು ಎಷ್ಟು ಕಡಿಮೆ ಹಾಗೂ ಸಾದಾ ಇರುವವೆಂಬುದನ್ನು ತೋರಿಸಿಕೊಟ್ಟರು. ಮನುಷ್ಯನ ಸ್ಥಿತಿಯಲ್ಲಿಯ ನಿಜವಾದ ಪ್ರಗತಿಯೇ ನಾಗರಿಕತೆಯೆಂದು ಅವನು ಬರೆದಿದ್ದಾನೆ. ಜಗತ್ತಿನಲ್ಲಿ ಯಾವ ಹಾನಿಗೊಳಗಾಗದೆ ಸಕಲ ಲಾಭಗಳನ್ನೂ ಪಡೆಯುವಂತೆ ಬದುಕಬಹುದೆಂದೂ ಹೇಳಿದ್ದಾನೆ. ಯಾವ ಉದ್ದೇಶಕ್ಕಾಗಿ ನಾನು ಈ ಸರಳ ಜೀವನವನ್ನು ನಡೆಸುತ್ತಿದ್ದೇನೆ? ಎಂಬ ಪ್ರಶ್ನೆಯನ್ನು ತನ್ನದೊಂದು ಪತ್ರದಲ್ಲಿ ಕೇಳಿ ತಾನೇ ಹೀಗೆ ಉತ್ತರ ಕೊಟ್ಟಿದ್ದಾನೆ. 'ಸರಳ ಜೀವನವೇ ನನ್ನ ಧ್ಯೇಯವಲ್ಲ, ಆದರೆ ನನ್ನ ಕಾಯಕದಿಂದ ನಾನು ಮಾನವಂತನಾಗಿ ಬದುಕಬೇಕೆಂಬುದೇ ನನ್ನ ಇಚ್ಛೆ.' ಆಧಿಭೌತಿಕ ವಿಚಾರಗಳಿಗೆ ಎಡೆಮಾಡಿಕೊಡುವ ಧ್ಯೇಯವು ಭಾರತೀಯರಿಗೆ ಹೊಸದಲ್ಲ ಮತ್ತು ಥೋರೋನೂ ಹಿಂದೂ ಹಾಗೂ ಬೌದ್ಧಧರ್ಮಗಳನ್ನು ತಿಳಿದವನಾಗಿದ್ದನು. ಆದರೂ ಅವನು 'Sermon on the Mount' ಕ್ಕೇ ಹೆಚ್ಚು ಋಣಿಯಾಗಿದ್ದಾನೆಂಬುದು ಇಲ್ಲಿ ಕಂಡುಬರದಿರದು.

"ಜನರು 'ಹೊಸ ಒಡಂಬಡಿಕೆ'ಯೆಂದು ಕರೆಯುವ ಪುಸ್ತಕವನ್ನು ನಾನು ಬಲ್ಲೆನು. ಅದರಂಥ ವಿಚಿತ್ರವಾದ ಪುಸ್ತಕ ಬೇರೊಂದಿಲ್ಲ. 'ನಿನ್ನ ದೇವರನ್ನು ನಿನಲ್ಲೇ ಕಂಡುಕೊಳ್ಳು' 'ಐಹಿಕ ವಸ್ತುಗಳನ್ನಪೇಕ್ಷಿಸಬೇಡ' 'ನಿನ್ನ ಸಿರಿಯೆಲ್ಲವನ್ನೂ ಬಡವರಿಗೆ ದಾನಮಾಡು' ಏಸುವಿನ ಇಂಥ ಉಪದೇಶಗಳನ್ನು ಚರ್ಚಿನಲ್ಲಿ ಎಲ್ಲಿಯಾದರೂ ಸರಿಯಾಗಿ ಓದಿದರೆ ಆ ಕಟ್ಟಡದ ಕಲ್ಲುಗಳನ್ನೇ ಕಿತ್ತು ಉಪದೇಶಕನ ಮೇಲೆ ಎಸೆಯಬಹುದು," ಎಂದು ವ್ಯಂಗವಾಗಿ ಟೀಕಿಸಿ ಏಸುವಿನ ಉಪದೇಶದ ಕ್ರಾಂತಿಯ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾನೆ.

ಪ್ರಾಣಿಗಳೂ ಮಾನವರಂತೆ ಮಹತ್ವವನ್ನು ಪಡೆದ ಬೇರೊಂದು ವರ್ಗದ ಜೀವಿಗಳೆಂದು ಥೋರೋನು ತಿಳಿದುಕೊಂಡಿದ್ದನು. ನಿಜವಾಗಿಯೂ ಪ್ರಾಣಿಗಳ ಬಗ್ಗೆ ಇಷ್ಟು ಸಹಾನುಭೂತಿ ಕ್ರಿಶ್ಚನ ಧರ್ಮದಲ್ಲಿಲ್ಲ. ಆದ್ದರಿಂದಲೇ ಈ ದೃಷ್ಟಿಯಿಂದ ಹಿಂದೂ ಧರ್ಮವು ಕ್ರಿಶ್ಚನ್ ಧರ್ಮಕ್ಕಿಂತ ಶ್ರೇಷ್ಠವೆಂದು ಗಾಂಧೀಜಿಯವರು ತಿಳಿದಿದ್ದಾರೆ.

೧೯೩೦ನೇ ಜನವರಿಯಲ್ಲಿ ಅಹಮದಾಬಾದ ಛಾತ್ರ ಸಮ್ಮೇಲನದಲ್ಲಿ "ಪ್ರಾರ್ಥನೆಯ ಅರ್ಥ"ದ ಬಗ್ಗೆ ಮಾತಾಡುತ್ತ "ನಾವು ನಮ್ಮ ಸಹಭಾಂಧವರನ್ನು ಸೇವಿಸುವದಕ್ಕಾಗಿ ಹುಟ್ಟಿದ್ದೇವೆ. ನಾವು ಸಂಪೂರ್ಣ ಜಾಗ್ರತರಾದ ಹೊರತು ಇಂಥ ಸೇವೆ ಸಾಧ್ಯವಿಲ್ಲ"ವೆಂದು ಹೇಳಿದರು. ಈ ವಾಕ್ಯಗಳು ಥೋರೋನ 'ವಾಲ್ಡನ' ಗ್ರಂಥದಲ್ಲಿಯ ಈ ಕೆಳಗಿನ ವಾಕ್ಯಗಳ ಸಾರಾಂಶದಂತಿವೆ.

'ನಾನು ಎಚ್ಚತ್ತು ನನ್ನಲ್ಲಿ ಬೆಳಕು ಕಂಡಾಗ ಬೆಳಗು. ನೈತಿಕ ಸುಧಾರಣೆಯೆಂದರೆ ನಿದ್ದೆಯನ್ನು ತೊರೆಯುವದು. ಶಾರೀರಕ ಶ್ರಮಕ್ಕಾಗಿ ಲಕ್ಷಾವಧಿ ಜನರು ಎಚ್ಚತ್ತಿದ್ದಾರೆ. ಅಷ್ಟು ಜನರಲ್ಲಿ ಒಬ್ಬನು ಮಾತ್ರ ಬೌದ್ಧಿಕ ಶ್ರಮಕ್ಕಾಗಿ ಎಚ್ಚತ್ತಿದ್ದಾನೆ. ಕೋಟ್ಯಾವಧಿ ಜನರಲ್ಲಿ ಒಬ್ಬನು ಮಾತ್ರ ದೈವೀ ಅಥವಾ ಕವಿಜೀವನಕ್ಕಾಗಿ ಎಚ್ಚತ್ತಿರುವನು. ಜಾಗ್ರತವಾಗಿರುವುದೇ ಜೀವಂತವಾಗಿರುವದು. ಸಂಪೂರ್ಣ ಜಾಗ್ರತ ಪುರುಷನನ್ನು ನಾನು ಇದುವರೆಗೆ ಕಂಡಿಲ್ಲ. ಅಂಥವನನ್ನು ನೋಡುವ ಧೈರ್ಯಲಿಗನ ಅಥವಾ ಕೈಗಾರಿಕೆ ಉದ್ಯೋಗ ನನಗೆ ಹೇಗಾದೀತು?"

೧೮೬೦ರಲ್ಲಿ ರಸ್ಕಿನನ 'Unto This Last' ಪುಸ್ತಕವು ಪ್ರಕಟವಾದ ಕೂಡಲೆ ಬಹಳ ಜನಪ್ರಿಯವಾಯಿತು. ಸಾಮಾಜಿಕ ಹಾಗೂ ವ್ಯಾಪಾರೀ ಜೀವನದ ಲೌಕಿಕ ಕಲ್ಪನೆಗಳ ಸೂಚಕ ಹಾಗೂ ಜಾಣ್ಮೆಯ ರಭಸದ ಟೀಕೆ ಅದರಲ್ಲಿದೆ. ಐಶ್ವರ್ಯವೆಂದರೇನು ಎಂದು ಪ್ರಶ್ನಿಕೇಳ ಜನರನ್ನು ಬಡವರನ್ನಾಗಿಟ್ಟು ಅವರ ಮೇಲೆ ಅಧಿಕಾರ ನಡೆಸುವದೇ ಐಶ್ವರ್ಯವಲ್ಲವೆ? ಎಂದು ಮತ್ತೆ ಕೇಳುತ್ತಾನೆ.

ಶ್ರೀಮಂತರಾಗಬಲ್ಲ ಜನರು ಸಾಮಾನ್ಯತಃ ಉದ್ಯೋಗಗಳೂ ದೃಢನಿಶ್ಚಯಿಗಳೂ ಗರ್ವಿಷ್ಠರೂ ಆಸೆಬುರುಕರೂ ತತ್ಪರರೂ ಕಲ್ಪನಾಶಕ್ತಿ ಇಲ್ಲದವರೂ ದಯಾಹೀನರೂ ಮೂಢರೂ ಇರುತ್ತಾರೆ. ಆದರೆ ಬಡವರಾಗಿದ್ದ ಜನರು ಸಂಪೂರ್ಣ ಮೂರ್ಖರೂ ಸಂಪೂರ್ಣ ಪಂಡಿತರೂ ಸೋಮಾರಿಗಳೂ ಪ್ರಾಮಾಣಿಕರೂ ವಿಚಾರವಂತರೂ ದಯಾಳುಗಳೂ ತುಡುಗರೂ ಇರುತ್ತಾರೆ ಎಂದು ರಸ್ಕಿನನು ಬಲ್ಲಿದ-ಬಡವರಲ್ಲಿಯ ಭೇದವನ್ನು ತೋರಿಸಿದ್ದಾನೆ.

ವ್ಯಾಪಾರೀ ಉದ್ಯೋಗವೊಂದನ್ನು ಬಿಟ್ಟು ಉಳಿದ ಎಲ್ಲ ಉದ್ಯೋಗಗಳು ಸನ್ಮಾನೀಯವಾಗಿವೆ. ಯಾಕೆಂದರೆ ಅವುಗಳ ಧ್ಯೇಯ ಸಮಾಜಸೇವೆ, ಸ್ವಾರ್ಥವಲ್ಲ ಎಂದು ಜನರ ಕಲ್ಪನೆ. ಸೈನಿಕನು ರಣರಂಗದಿಂದ ಓಡಿಹೋಗುವುದಕ್ಕಿಂತ ಸಾಯಬೇಕು, ವೈದ್ಯನು ಪಿಡುಗುಗಳಿಗೆ ಹೆದರಿ ತನ್ನ ಕರ್ತವ್ಯ ಬಿಡಬಾರದು, ಆಚಾರ್ಯನು ಅಸತ್ಯವನ್ನು ಪದೇಶಿಸಬಾರದು, ವಕೀಲನು ಅನ್ಯಾಯವನ್ನು ಸಹಿಸಬಾರದು; ಆದರೆ ವರ್ತಕನು? ಅವನ ಅಂತಿಮ ಧ್ಯೇಯವಾವುದು? ರಾಷ್ಟ್ರದ ಬೇಡಿಕೆಗಳನ್ನು ಪೂರೈಸುವುದೇ ಅವನ ಉದ್ಯೋಗ. ಇತರ ಜೀವನರಂಗಗಳಲ್ಲಿಯಂತೆ ಆ ರಂಗದಲ್ಲಿಯೂ ವೀರರಿರಬಹುದು.

ನಂತರ ರಸ್ಕಿನನ ಅದ್ಭುತ ಉಪದೇಶ ಪ್ರಾರಂಭವಾಗುತ್ತದೆ. 'ಪ್ರೀತಿ, ಸಂತೋಷ, ಆದರಗಳಿಂದ ಕೂಡಿದ ಜೀವನದ ಹೊರತು ಬೇರೊಂದು ಸಂಪತ್ತಿಲ್ಲ. ಉದಾರ ಹಾಗೂ ಸುಖಿ ಜೀವಿಗಳಿಂದ ತುಂಬಿದ ರಾಷ್ಟ್ರವೇ ನಿಜವಾಗಿ ಸಮೃದ್ಧವಾದ ರಾಷ್ಟ್ರ.'

'Unto This Last' ಎಂಬ ಪುಸ್ತಕದಿಂದ ತಾವು ಕಲಿತದ್ದೇನು ಎಂಬುದನು ಗಾಂಧಿಯವರು ತಮ್ಮ ಆತ್ಮ ಚರಿತ್ರೆಯಲ್ಲಿ ಹೀಗೆ ಹೇಳಿದ್ದಾರೆ.

'೧. ಎಲ್ಲರ ಒಳಿತಿನಲ್ಲಿಯೇ ತನ್ನೊಬ್ಬನ ಒಳಿತು ಇದೆ.

'೨. ಎಲ್ಲರೂ ತಮ್ಮ ಉದ್ಯೋಗಗಳಿಂದ ಹೊಟ್ಟೆ ಹೊರಕೊಳ್ಳುವವರಾದ್ದರಿಂದ ವಕೀಲನ ವೃತ್ತಿಯೂ ಕೆಲಸಿಗನ ವೃತ್ತಿಯಷ್ಟೇ ಮಹತ್ವದ್ದು.

'೩. ಶ್ರಮದ ಜೀವನವು ಅಂದರೆ ಒಕ್ಕಲತನವನ್ನು ಕೈಕೊಂಡವನ ಜೀವನವು ಬದುಕಲು ಯೋಗ್ಯವಾದುದು.

'ಇವುಗಳಲ್ಲಿ ಮೊದಲನೆಯದನ್ನು ನಾನು ತಿಳಿದುಕೊಂಡಿದ್ದೇನೆ. ಎರಡನೆಯದನ್ನು ಅಸ್ಪಷ್ಟವಾಗಿ ಅನುಭವಿಸಿದ್ದೇನೆ. ಮೂರನೆಯದೊರಡನೆ ನನಗೆ ಸಂಬಂಧವೇ ಉಂಟಾಗಿರಲಿಲ್ಲ.'

ರಸ್ಕಿನನ ಈ ಉಪದೇಶವನ್ನು ಒಪ್ಪುವ ಹಾಗೆ ಮಹಾತ್ಮರಲ್ಲಿ ವಿಚಾರಗಳ ಬೆಳವಣಿಗೆ ಎಂತಾಯಿತೆಂಬುದನ್ನು ಕಂಡುಹಿಡಿಯುವುದು ಅಸಾಧ್ಯವಲ್ಲ. ದಕ್ಷಿಣ ಆಫ್ರಿಕೆಯಲ್ಲಿಯ ಮೊದಲ ದಿನಗಳಲ್ಲಿ ಗಾಂಧಿಜಿಯವರು ವ್ಯಾಪಾರೀ ನೀತಿಮತ್ತೆಯು ಇತರ ನೀತಿಮತ್ತೆಗಳ ಮಟ್ಟಕ್ಕಿಂತ ಕೆಳಗಿರಬಾರದೆಂದು ನಿಷೇಧಿಸಿದ್ದರು. ಹಾಗೆಯೇ ವ್ಯಾಪಾರೀ ರಂಗದಿಂದ ಧರ್ಮವನ್ನು ಬಿಟ್ಟುಕೊಡುವುದಕ್ಕೂ ವಿರುದ್ಧವಾಗಿದ್ದರು.

'ವ್ಯಾಪಾರವು ವ್ಯವಹಾರವಾದರೆ ಸತ್ಯವು ಧರ್ಮಕ್ಕೆ ಸಂಬಂಧಿಸಿದ್ದು. ವ್ಯಾವಹಾರಿಕ ಸಂಗತಿಗಳು ಒಂದು ರೀತಿಯವಾದರೆ ಧರ್ಮವು ಬೇರೊಂದು ಜಾತಿಯದು' ಎಂಬ ಭಾವನೆಯನ್ನು ಅವರು ಪ್ರತಿಭಟಿಸಿದರು. ತಮ್ಮ ವೃತ್ತಿಯ ಬಗ್ಗೆ ರಸ್ಕಿನನ ವಿಚಾರಗಳನ್ನು ಅವರು ಹೇಳುತ್ತಾರೆ. 'ಒಡೆದು ಹೋದ ಪಂಗಡಗಳನ್ನು ಒಂದುಗೂಡಿಸುವುದೇ ವಕೀಲನ ನಿಜವಾದ ವ್ಯವಸಾಯ.' ತಮ್ಮ ಕಾಲರು ತಾವೇ ತೊಳೆಯುವ ಹಾಗೂ ತಮ್ಮ ಕೂದಲು ತಾವೇ ಕತ್ತರಿಸಿಕೊಳ್ಳುವ ಸರಳತನವನ್ನೂ ಸ್ವಾವಲಂಬನವನ್ನೂ 'What then must we do? ಎಂಬ ಪುಸ್ತಕವನ್ನೋದಿ ಕಲಿತೆವೆಂದು ವಿನೋದದಿಂದ ಹೇಳಿದ್ದಾರೆ. ಗೀತೆಯಲ್ಲಿಯ ಅಪರಿಗ್ರಹ ತತ್ವವನ್ನು ಪೂರ್ಣ ಒಪ್ಪಿಕೊಂಡಿದ್ದರೂ ವಿಮೆಯ ಕಾಗದದ ಆಶ್ವಾಸನವು ದೇವರಲ್ಲಿಯ ಶ್ರದ್ಧೆಗಿಂತ ಭಿನ್ನವಾದುದರಿಂದ ಅದನ್ನವರು ಒಪ್ಪುವದಿಲ್ಲ.

ಅನೇಕ ವರ್ಷಗಳ ವಿಚಾರ ಹಾಗೂ ಪ್ರಯೋಗಗಳಿಂದ ತಯಾರಾದ ಮತ್ತು 'Sermon on the Mount' ದ ಬಗ್ಗೆ ತಮ್ಮ ಹಾಗೂ ಟಾಲಸ್ಟಾಯ ಅವರ ಮತಗಳ ಪ್ರಭಾವಕ್ಕೊಳಗಾದ ಅವರಿಗೆ 'Unto this last' ಗ್ರಂಥ ಸಿಡಿಮದ್ದನ್ನು ಹೊತ್ತಿಸುವ ಕೊಳ್ಳಿಯಂತಾಯಿತು. ಆ ಗ್ರಂಥದ ಧ್ಯೇಯಗಳಿಗನುಗುಣವಾಗಿ ತಮ್ಮ ಜೀವನವನ್ನು ಮಾರ್ಪಡಿಸುವ ನಿರ್ಧಾರವು ಕೂಡಲೆ ವಿಶೇಷ ಉತ್ಸಾಹದಿಂದ ಮೂರ್ತಸ್ವರೂಪಕ್ಕೆ ಬಂದಿತು. ಇದರ ತಕ್ಷಣದ ಪರಿಣಾಮವಾಗಿ ಅವರ ದರ್ಬಾನದಲ್ಲಿಯ 'Indian Opinion'ದ ಮುದ್ರಣಾಲಯವನ್ನು ಫಿನಿಕ್ಸಕ್ಕೆ ಸ್ಥಳಾಂತರಿಸಿ ಅಲ್ಲಿ ಫಾರ್ಮಿನಲ್ಲಿಯೆ ವಾಸಿಸತೊಡಗಿದರು. ಜನರಿಗೆ ಹಣಕೊಟ್ಟು ಅವರನ್ನು ದಾಸರಾಗಿಸುವುದನ್ನು ಕಲಿಯದೆ ಮೈಮುರಿದು ದುಡಿದು ತಮ್ಮ ಉಪಜೀವನವನ್ನು ಕಲ್ಪಿಸಿ ಬಡವರ ಭಾರವನ್ನಿಳಿಸಲು ಕಲಿಯಿರಿ ಎಂಬ ಟಾಲಸ್ಟಾಯರ ಉಪದೇಶವು ರಸ್ಕಿನನ ಉಪದೇಶದಂತೆ ಅವರ ಜೀವನವನ್ನು ಸರಳವಾಗಿಸುವ ಕಾರ್ಯವನ್ನು ತೀವ್ರವಾಗಿ ಸಾಗಿಸಿತು. ಫಿನಿಕ್ಸದಲ್ಲಿಯ ಸ್ವಾಭಾವಿಕ ಬೆಳವಣಿಗೆಯೆಂದರೆ 'ಟಾಲಸ್ಟಾಯ ಫಾರ್ಮ.' ಅನೇಕ ದಿನಗಳ ನಂತರದ ಚರಖಾ ಸಂದೇಶವು ಇದರಿಂದಲೇ ಸ್ಫೂರ್ತಿಗೊಂಡಿದೆ.

—ಗಾಂಧೀಜಿ

(ಬರುವ ವಾರಕ್ಕೆ ಮುಂದುವರಿಸಲಾಗುವುದು.)

1945 1945
ಆಫೀಸು ಕೆಲೆಂಡರುಗಳು
ಮಾರಾಟಕ್ಕೆ ಸಿದ್ಧವಾಗಿವೆ
ಬೆಲೆ 1ರ 0-4-0
ವ್ಯಾಪಾರಿಗಳಿಗೆ ಯೋಗ್ಯ ಕಮಿಷನು ಕೊಡಲಾಗುವುದು
ಶಾರದಾ ಪ್ರೆಸ್ ರಥಬೀದಿ ಮಂಗಳೂರು

ಸಿಹಿ ಸುದ್ದಿ ಸಂಗ್ರಹ

ಚಿಕಾಕೊ ವಿಶ್ವವಿದ್ಯಾಲಯದ ಇಬ್ಬರು ಇಂಜಿನಿಯರರು ಉಕ್ಕಿಗಿಂತಲೂ ಗಟ್ಟಿ ಆದರೆ ಅಲೂಮಿನಿಯಮ್ಮಿಗಿಂತ ಹಗುರವಿರುವ ಕೊಂಕ್ರಿಟನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದಿರುವರು. ಕಟ್ಟಡಗಳಿಗೆ ಉಕ್ಕಿನ ಒಳ ಕವಚ ಹಾಕುವ ಬದಲಿಗೆ ಇದನ್ನು ಉಪಯೋಗಿಸಿದರೆ ಮೂರನೆ ಒಂದರಷ್ಟು ಖರ್ಚಿನಲ್ಲಾಗುತ್ತದೆ.

* * *

ಸಂಯುಕ್ತ ಅಮೇರಿಕದ ಬ್ರೂಕ್ಲಿನಿನ ವೂಡ್‌ಬರಿರೆಂಡ್ ಎಂಬ ವಕೀಲನು ಮರಣ ಶಾಸನದಲ್ಲಿ ತನ್ನ ಪ್ರೀತಿಯ ಬೆಕ್ಕಿಗೆ ಸುಮಾರು ೨ ಲಕ್ಷ ರೂಪ್ಯಾಯಷ್ಟು ಧನವನ್ನು ಸಿಗುವಂತೆ ಬರೆದಿಟ್ಟಿರುವನು. ಕೋಪಗೊಂಡ ಒಂಬತ್ತು ಸಂಬಂಧಿಕರಿಗೆ ಅವನು ಏನೂ ಕೊಡಲಿಲ್ಲ. ಕಾರಣ: ಅವರು ಅವನ ಬೆಕ್ಕಿಗೆ ತಿರಸ್ಕಾರ ಮತ್ತು ಕ್ರೂರತನ ತೋರಿಸಿದಕ್ಕೆ.

* * *

ಕೊಲುಂಬಿಯದ ಅಬ್ಬೋನ್ ಜಾರಾಮಿಲ್ಲೊ ಎಂಬ ೭೫ ವರ್ಷದ ಮುದುಕನಿಗೆ ಮೊದಲನೇ ಹೆಂಡತಿಯಿಂದ ೩೦, ಎರಡನೇಯವಳಿಂದ ೧೫, ಹೀಗೆ ೪೫ ಮಕ್ಕಳಿವೆ. ಈಗ ಒಂದೇ ಸಾರಿ ೪ ಅವಳಿ ಜವಳಿ ಹುಟ್ಟಿವೆಯಂತೆ ಅವನಿಗೆ.

* * *

ಬಂಗಾರದ ಹೊಳಪಿನ ಮೀನುಗಳು ಈಜುತ್ತಿರುವ ಗಾಜಿನ ಬುರುಡೆಗಳನ್ನು ಪೆರಿಸಿನ 'ಲೇಡಿ'ಗಳು ತಮ್ಮ ಹೇಟುಗಳಲ್ಲಿ ಧರಿಸುತಿದ್ದರಂತೆ — ನೂರು ವರ್ಷಗಳ ಹಿಂದಿನ ಫ್ಯಾಶನು.

* * *

ಇಂಗ್ಲೆಂಡಿನ ಬ್ರಿಸ್ಟಲ್ ನಗರದಲ್ಲಿ ಕೆಲಸಕ್ಕೆ ಜನರು ಸಿಗುವುದಿಲ್ಲ. ಅದಕ್ಕಾಗಿ ಅಲ್ಲಿನ ಇಲೆಕ್ಟ್ರಿಕ್ ಕಂಪೆನಿಯವರು ಮಾರ್ಗದ ದೀಪಗಳನ್ನು ಕೆಲವು ಕಡೆ ಹಗಲೂ ರಾತ್ರಿಯೂ ಉರಿಸುತ್ತಾರೆ. ಕಾರಣ ಅವುಗಳನ್ನು ಪ್ರತಪತ್ಯೇಕ ಆರಿಸಲು ೧೫೦ ಕೆಲಸಗಾರರು ಬೇಕಾಗುವರಂತೆ.

* * *

ವೆಲಿಸ್ಲಿ ಸಿ ಬಿ ನಿ ಯೋಕ್ ಎಂಬ ಪೊಲೆಂಡ್ ದೇಶಸ್ಥನು ಇಸ್ಪೀಟ್ ಆಟದಲ್ಲಿ ಸೋತಾಗ ತನ್ನ ೨೦ ವರ್ಷದ ಹೆಂಡತಿಯನ್ನು ಅಡವಿಟ್ಟನು.

* * *

ಒಂದುಸಲ ಔಂಧದ ಮಹಾರಾಜರು ಕೋಳಿ ಜೂಜಿನಲ್ಲಿ ತಮ್ಮ ಅರಮನೆಯನ್ನು ಸರ್ ಕ್ಲಾಸ್ ಮಾರ್ಟಿನ್ ಎಂಬವರಿಗೆ ಬಹುಮಾನ ಕೊಟ್ಟರಂತೆ. ಮಹಾರಾಜರ ಕೋಳಿ ಗೆಲ್ಲುತಿದ್ದರೆ ಆ ಇಂಗ್ಲಿಷ್ ಗೃಹಸ್ಥರ ಬಂಗಲೆ ಅವರಿಗೆ ದೊರಕುತಿತ್ತು.

* * *

ಸ್ವತಂತ್ರ ಐಯರ್ಲೆಂಡಿನ ಪ್ರಧಾನ ಮಂತ್ರಿಗಳಾದ ಡಿವೆಲರಾ ಅವರು ಭಾರತೀಯ ಮುಖಂಡರ ದೊಡ್ಡ ಸ್ನೇಹಿತರು. ಅವರು ದೊಡ್ಡ ಗಣಿತ ಶಾಸ್ತ್ರ ಪಂಡಿತರು. ಆದರೂ ಅವರಿಗೆ ಭಾರತೀಯ ತತ್ವಜ್ಞಾನದಲ್ಲಿ ತುಂಬಾ ಅಭಿರುಚಿ ಇದೆ. ಉಪನಿಷತ್ತುಗಳನ್ನು ಅವರು ಅಭ್ಯಾಸಿಸುತ್ತಾರಂತೆ.

* * *

ಕ್ಲಿವಲೆಂಡಿನಲ್ಲಿ ರಿಚಾರ್ಡ್ ಫೀ ಎಂಬವನು ನೊಣಸೊಳ್ಳೆ, ಹುಳಗಳು, ತಿಗಣೆಗಳು, ಕೆಸರು, ಮೇಣ ಮುಂತಾದ ಕೊಳಕು ಪ್ರಾಣಿ ಪದಾರ್ಥಗಳನ್ನು ಬೇಯಿಸಿದ ಸಾರನ್ನು ಮಾರುತಿದ್ದನೆಂದು ನೂರು ಡಾಲರ್ ಜುಲ್ಮಾನೆ ವಿಧಿಸಲ್ಪಟ್ಟಿರುವನು.

* * *

ಮೆಸೆಚುಸೆಟ್ಸಿನ ಕೆಂಬ್ರಿಜ್‌ನಲ್ಲಿ ಒರ್ವ ತರುಣ ಮದುವೆ ಇಲಾಖೆಗೆ ಹೋಗಿ ಅರ್ಜಿ ಬರೆಯುವಾಗ ತನ್ನ ಭಾವೀ ಪತ್ನಿಯ ಹೆಸರು ಮರೆತುಬಿಟ್ಟನು. ಕೂಡಲೇ ತನ್ನ ಪ್ರೇಯಸಿಯ ಮನೆಗೆ ಹೋಗಿ ಅವಳ ಹೆಸರು ತಿಳಿದುಕೊಂಡು ಮತ್ತೆ ಅರ್ಜಿ ಸಂಪೂರ್ಣ ಮಾಡಿದನಂತೆ.

* * *

ಬರ್ಮಾರಂಗದ ಸೈನ್ಯದಲ್ಲಿರುವ ಒರ್ವ ಬ್ರಿಟಿಷ್ ಸೋಲ್ಜರನಿಗೆ ಇಂಗ್ಲೆಂಡಿನ ಒಂದು ರೈಲ್ವೇ ಕಂಪೆನಿಯವರು 'ಟೀಕೇಟು ಇಲ್ಲದೆ ಪ್ರಯಾಣ ಮಾಡಿದುದಕ್ಕೆ ೩॥ ಶಿಲಿಂಗಿನ ವಾರಂಟ್ ಕಳುಹಿಸಿದ್ದರು. ಒಂದು ಸೈನ್ಯ ಪತ್ರಿಕೆಯು ಆ ಕುರಿತು ಹೀಗೆ ಬರೆಯುತ್ತದೆ: ಬರ್ಮಾರಂಗದಲ್ಲಿರುವ ಸೈನಿಕನು ತನ್ನ ಟೀಕೆಟು ಹಣವನ್ನು ಇಂಗ್ಲೆಂಡಿಗೆ ಹೇಗೆ ಕಳುಹಿಸುವುದು? ಅಲ್ಲಿ ಇರುವುದು ಬಾಳೆಹಣ್ಣು ಮತ್ತು ಬಿದಿರು. ನೋಟೂ ಇಲ್ಲ, ನಾಣ್ಯವೂ ಇಲ್ಲ.

* * *

ಕೆಲಸಕ್ಕೆ ತಕ್ಕ ಸಂಬಳ ಕೊಡಬೇಕಾಗಿ ಒತ್ತಾಯಮಾಡುವ ಒಂದು ಕಾನೂನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂಜೂರಾತಿಹೊಂದಲಿಕ್ಕಿದೆ. ಮಂತ್ರಿಮಂಡಳವು ಆಗಲೇ ಅದಕ್ಕೆ ಅನುಮತಿ ಕೊಟ್ಟಿದೆ. ಸಂಬಳ ಕಮ್ಮಿ ಕೊಟ್ಟರೆ ಮಜೂರನೋರ್ವನು ಯಜಮಾನನ ಮೇಲೆ ದಾವೆ ಮಾಡಬಹುದು.

* * *

ನ್ಯೂಯಾರ್ಕಿಗೆ ಜರ್ಮನ್ ಬಾಂಬು!

ವಿಷ ಮತ್ತು ವಿಳ ಬಾಂಬುಗಳು

"ಸೋಲಿನ ಬಾಯಿಯಿಂದ ಜಯವನ್ನು ಕಿತ್ತು ತರುವೆವು" ಎಂಬ ಪ್ರಚಾರವನ್ನು ಜರ್ಮನಿಯ ಗೋಬೆಲ್ಸನು ತನ್ನ ಕೈಕೆಳಗಿನ ವಿಮಾನ ಅಧಿಕಾರಿಗಳಿಂದ ಮಾಡಿಸುತಿದ್ದಾನೆ. ಅವರು ಹಳ್ಳಿ ಹಳ್ಳಿಗೆ ಹೋಗಿ ತಮ್ಮ ಹೊಸ ವಿಷ, ವಿಳ ಶಸ್ತ್ರಗಳ ಕುರಿತು ಜನರಿಗೆ ವಿವರಿಸುತ್ತಲಿದ್ದಾರಂತೆ.

ಇತ್ತೀಚೆಗಿನ ಜರ್ಮನರ ಶೋಧವೆಂದರೆ ೧) ವಿಷ ಎಂಬ ಬೃಹತ್ ಬಾಂಬು ವಿಮಾನ. ರಿಕ್ಕೆ ಬಾಂಬಿಗಿಂತ ಹತ್ತು ಪಾಲು ಭಾರವುಳ್ಳ ಬಾಂಬನ್ನು ಇದು ಎತ್ತಿಕೊಂಡು ಹೋಗಿ ಅಮೇರಿಕದ ಮೇಲೆ ಅಭಿಯೋಗ ನಡೆಸಬಲ್ಲುದಂತೆ.

೨) ಆರ್. ಎ. ಎಫ್. ನ ದಾಳಿಯನ್ನು ಅಣಗಿಸಲು ತಯಾರಿಸಲ್ಪಟ್ಟ ಬೀಸಣಿಗೆ ಇಲ್ಲದ ವಿಮಾನವೊಂದು ಕಂಡುಹಿಡಿಯಲಾಗಿದೆಯಂತೆ.

ಇನ್ನೂ ಗುಪ್ತವಾಗಿ ಇಡಲ್ಪಟ್ಟ ಒಂದು ಶೋಧ ಇದೆ. ಅದೆಂದರೆ 'ಬೆಂಕಿ ಮೋಡ'ಗಳನ್ನು ಕಾರುವ ವಿಮಾನ.

"ಬೆಂಕಿಯ ದೊಡ್ಡ ಜಮಖಾನಿನಂತೆ ಕಾಣುವ ಒಂದು ಪದಾರ್ಥವನ್ನು ಶತ್ರುಗಳ ಮೇಲೆ ಎಸೆದು ಅವರನ್ನು ಭಸ್ಮ ಮಾಡಿ ಬಿಡುವುದು ನಮ್ಮ ಗುರಿ" ಹೀಗೆಂದು ಒಂದು ಜರ್ಮನ ಪತ್ರಿಕೆಯು ಬರೆದಿದೆಯಂತೆ. ಇದು ಪ್ರಯೋಗಕ್ಕೆ ಬರಲು ಕೆಲವು ವಾರ ಇಲ್ಲವೆ ತಿಂಗಳು ಹಿಡಿಯಬಹುದು. ಎಂದು ಅದು ಹೇಳುತ್ತಿದೆ. ಈಗಿನ ಕಾಲವು ಸ್ವಲ್ಪ ಕಷ್ಟತರದ್ದೆಂದು ಆ ಪತ್ರಿಕೆಯು ಸೂಚಿಸುವುದು ಗಣನೀಯ ವಿಷಯ.

ಒರ್ವ ನಾಜೀ ಮುಖಂಡನು ಹೀಗೆಂದು ಕೊಚ್ಚಿಕೊಂಡಿದ್ದಾನೆ: ಜರ್ಮನರೀಗ ಒಂದು ಹೊಸ ಗುಪ್ತಾಸ್ತ್ರವು ಕಂಡು ಹಿಡಿಯಲ್ಪಟ್ಟಿದೆ. ಬಹಳ ಕಷ್ಟಮಯದ ಒಂದು ರಾತ್ರಿಯನ್ನು ಕಳೆದು ಏಳುತ್ತಲೇ ಮರುದಿನ ನಿಮಗೆ ಸುಖವೂ ಶಾಂತಿದಾಯಕವಾದ ವಾತಾವರಣವೂ ಉಂಟಾಗುವುದು. ಇದುತನಕ ನಿಮ್ಮನ್ನು ಹೆದರಿಕೆಗೆ ಗುರಿಮಾಡಿದ ಎಲ್ಲಾ ಪ್ರಸಂಗಗಳೂ ಮಾಯವಾಗುವುವು.

ಮಧ್ಯಾಹ್ನ ಊಟದ ನಂತರ ನಿದ್ದೆ ಮಾಡುವುದು ಆರೋಗ್ಯಕರವಂತೆ. ಇದರಿಂದ ಅನೇಕ ದೇಹಿಕ ಮತ್ತು ಮಾನಸಿಕ ಶ್ರಮಗಳು ಪರಿಹಾರವಾಗುತ್ತವೆಯಂತೆ. ಆ ನಿದ್ರೆ ಮಾತ್ರ ೧೫-೩೦ ಮಿನಿಟುಗಳಿಗಿಂತ ಹೆಚ್ಚಿರಬಾರದು.

ಭಾರತದ ಪ್ರಶ್ನೆ ಅಪಾಯಕರವಾದುದು

ಪ್ರಖ್ಯಾತ ಅಮೇರಿಕನ್ ಗ್ರಂಥಗಾರರ ಅಭಿಪ್ರಾಯ

"ಜಗತ್ತಿನ ಅತೀ ಮಹತ್ವದ ಐದು ಪ್ರಶ್ನೆಗಳು" ಎಂಬ ಶಿರೋನಾಮದ- ಒಂದು ಲೇಖವನ್ನು ಬರೆಯುತ್ತಾ ಅಮೇರಿಕದ ಬಹಳ ಜನಪ್ರಿಯ ಗ್ರಂಥಕರ್ತರಾದ ಜಾನ್ ಗಂಥರರು ಭಾರತದ ಪ್ರಶ್ನೆಯನ್ನು ಆ ಐದರಲ್ಲಿ ಸೇರಿಸಿದ್ದಾರೆ.

"ಹೆಚ್ಚೆಚ್ಚು ಅಮೇರಿಕನ್ನರು ಭಾರತ ಪ್ರಶ್ನೆಯಲ್ಲಿ ಅಭಿರುಚಿ, ಸಹಾನುಭೂತಿವುಳ್ಳವರಾಗುತಿದ್ದಾರೆ. ಅಮೇರಿಕನ್ನರು ಕೇಳುವ ಒಂದು ಪ್ರಶ್ನೆ ಇದು: "ಈ ಯುದ್ಧವು ಸ್ವಾತಂತ್ರ್ಯಕ್ಕಾಗಿ ಹೋರಾಡಲ್ಪಡುವುದಾದರೆ ಭಾರತಕ್ಕೆ ಸ್ವಾತಂತ್ರ ಕೊಡದೆ ಇರುವುದು ನ್ಯಾಯವೆ?"

"ಸಾವಿರಾರು ಅಮೇರಿಕನ್ ಅಧಿಕಾರಿಗಳೂ, ಸೈನಿಕರೂ ಭಾರತದ ವಿಚಾರ ತಿಳಕೊಳ್ಳಲು ಕುತೂಹಲ ಪಡುತ್ತಾರೆ. ಜಗತ್ತಿನ ಅತೀ ಮಹತ್ವದ ಸಮಸ್ಯೆಗಳಲ್ಲಿ ಒಂದಾದ ಭಾರತದ ಪ್ರಶ್ನೆಯನ್ನು ಬಿಡಿಸಲು ಅವರ ಈ ಕುತೂಹಲವು ಸಹಾಯ ಮಾಡದಿರದು" ಹೀಗೆಂದು ಗಂಥರರ ಅಭಿಪ್ರಾಯ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಪ್ರಚಲಿತ ಸಮಾಚಾರ

(೪ನೇ ಪುಟದಿಂದ)

ಲಾಯಿತು. ಚಿಯಾಂಗ-ಕೈ-ಶೇಕರು ಅವರ ನಂತರ ಚೀನಾದೇಶದ ಅಧಿನಾಯಕರಾದರು.

ಚಿಯಾಂಗರ ವಿದ್ಯಾಭ್ಯಾಸವು ನಡೆದುದು ಜಪಾನಿನಲ್ಲಿ. ಚೀನಾದಲ್ಲಿ ಕ್ರಾಂತಿ ಉಂಟಾಗುವ ತನಕ ಅವರು ಜಪಾನಿ ಸೇನಾಮಂಡಳದಲ್ಲಿ ಓರ್ವ ಅಧಿಕಾರಿಗಳಾಗಿ ದುಡಿಯುತ್ತಿದ್ದರು. ಡಾ. ಸನ್‌ಯಾಟುಶೆನ್ನರಿಂದ ಪ್ರಾರಂಭಿಸಲ್ಪಟ್ಟ ಕ್ರಾಂತಿಯಿಂದ ಮೊದಲು ನಿವಾರಿಸಲ್ಪಟ್ಟುದೆಂದರೆ, ಮಂಚ್ಯೂ ಚಕ್ರಾಧಿಪತ್ಯ. ಆದರೆ ಅಲ್ಲಿನ ವಿವಿಧ ನಾಡುಗಳ ಸಂಗ್ರಾಮಾಧಿಪತಿಗಳ ಒಳ ಜಗಳಗಳು ಈ ಕ್ರಾಂತಿಗೆ ಇದ್ದ ಹಲವು ಅಡ್ಯಂತರಗಳಲ್ಲಿ ಒಂದಾಗಿತ್ತು. ಈ ಕೊರತೆಯನ್ನು ನಿವಾರಿಸಿ, ಸಮಗ್ರ ಚೀನಾವನ್ನು ಒಂದು ರಾಷ್ಟ್ರವಾಗಿ ಐಕ್ಯಗೊಳಿಸಿದ ಕೀರ್ತಿಯು ಚಿಯಾಂಗರಿಗೆ ಸಲ್ಲತಕ್ಕುದಿದೆ. ಆದರೆ ಚೀನಾದ ಕ್ರಾಂತಿಯು ಪೂರ್ಣ ಯಶಸ್ವಿಯಾಗಬೇಕಾದರೆ, ಇನ್ನೂ ಕೆಲವು ಸಮಸ್ಯೆಗಳು ಪರಿಹಾರಕ್ಕೆ ಬಾಕಿ ಉಳಿದಿವೆ- ಜಪಾನ್ ಸಾಮ್ರಾಜ್ಯಶಾಹಿಯು ಚೀನಾದಲ್ಲಿ ವಿಸ್ತರಿಸಿದುದನ್ನು ವಿರೋಧಿಸುವುದು, ಚೀನಾದಲ್ಲಿ ವ್ಯಾಪಾರ ಸಾಧನೆಗಾಗಿ ತಳವೂರಿದ ಅನ್ಯ ರಾಷ್ಟ್ರಗಳ ಪ್ರಭಾವವನ್ನು ಲೋಪಗೊಳಿಸುವುದು.

ಚೀನಾದಲ್ಲಿ ಕ್ರಾಂತಿಯು ನಡೆಯುತ್ತಿದ್ದ ಹಾಗೆ, ಬಡವನ ಸಮಸ್ಯೆಯು ಮೇಲಕ್ಕೆ ಬಂತು. ಚೀನಿಯ ದುಡಿಮೆಗಾರರ ಸ್ಥಿತಿಯು ಅತಿ ನಿಕೃಷ್ಟವಿರುತ್ತದೆ. ಚೀನಿಯ ರೈತನು ಅತೀ ಧರಿದ್ರನಿದ್ದು ಆತನ ಸಾಲದ ಹೊರೆಯು ಭಯಂಕರ ಪ್ರಮಾಣದ್ದಾಗಿದೆ ಬಡತನದ ಕಾರಣದಿಂದ ಚೀನಿಯರು ಬಹಳ ಹಿಂದುಳಿದಿರುವರು. ಮಾರ್ಗದಲ್ಲಿ ಬಿದ್ದು ಸಾಯುತ್ತಿರುವರು. ಅಫೀಮು ಸೇವನೆಯ ವಿಪರ್ಯಾಸಕ್ಕೆ ಒಳಗಾಗಿರುವರು. ಕೊನ್‌ಫ್ಯೂಸಿಯಸ್‌ನ ಆದರ್ಶಗಳೂ, ಸಂಸ್ಕೃತಿಯೂ ಅತೀ ಉತ್ತಮವಿವೆ. (ಹಿಂದುಗಳಿಗೆ ವೇದಾಂತವು ಹೇಗೊ ಹಾಗೆ ಚೀನಿಯರಿಗೆ ಕೊನ್‌ಫ್ಯೂಸಿಯಸ್ಸಿನ ನೀತಿಗಳು.) ಆದರೆ ಚೀನಿಯರ ಇಂದಿನ ಸ್ಥಿತಿಯು ಅತ್ಯಂತ ಶೋಚನೀಯವಿದೆ. ಈ ಕಾರಣದಿಂದಲೇ ಇಲ್ಲೂ ಪ್ರಜಾಪ್ರಭುತ್ವದ ಅಂಗವಾದ ಸಮತಾವಾದಿ ನೀತಿಯುತ ಧ್ಯೇಯಸಾಧನೆಗಾಗಿ ಕೊಮ್ಯುನಿಸ್ಟ್ ಪಕ್ಷದ ಉದ್ಭವವಾಗಿ ಅದೀಗ ತುಂಬಾ ಪ್ರಶಸ್ತಿಗೆ ಬಂದಿರುತ್ತದೆ.

ಚಿಯಾಂಗರು ಕೊನ್‌ಫ್ಯೂಸಿಯಸ್ಸಿನ ಉತ್ತಮ ನೀತಿಗಳಲ್ಲಿ ಅನೇಕ ತಮ್ಮ ಜೀವನದಲ್ಲಿ ಆಚರಿಸುತ್ತಿರುವರು. ಚೀನಾವನ್ನು ಒಂದು ಅಖಂಡ ರಾಷ್ಟ್ರವನ್ನಾಗಿ ಮಾಡಿ, ಅದಕ್ಕೆ ಒಂದು ಮಾನ್ಯ ಸ್ಥಾನವನ್ನು ಪಡೆಯುವುದು ಅವರ ಜೀವನದ ಮುಖ್ಯ ಗುರಿಯು. ಆದರೆ ಇವುಗಳೊಂದಿಗೆ ಅವರಲ್ಲಿ ರಾಷ್ಟ್ರಾಭಿಮಾನವೇ ಹೆಚ್ಚು ಪ್ರಭಾವಿತವಾಗಿದೆ. ಚಿಯಾಂಗರು ಕೈಕೊಂಡ ಕಾರ್ಯವು ಸಾಮಾನ್ಯವಲ್ಲ. ಅಂತಃಕಲಹ, ಸಾಂಪತ್ತಿಕ ದುಃಸ್ಥಿತಿ ಮೊದಲಾದ ಕೊರತೆಗಳ ಎದುರಿಗೆ ಚೀನಾವನ್ನು ಪರಿವರ್ತಿಸಿ ಒಂದು ರಾಷ್ಟ್ರವನ್ನಾಗಿ ಮಾಡುವ ಸಮಸ್ಯೆಯು ಮಹತ್ತಾದುದು. ಅದಕ್ಕಾಗಿ ದುಡಿಯಲು ಬಲವಾದ ಸೈನ್ಯಬಲ ಇತ್ಯಾದಿ ತೀಕ್ಷ್ಣ ವ್ಯವಸ್ಥೆಗಳು ಬೇಡವೆ? ಧನ ಬೇಡವೆ? ಚಿಯಾಂಗರೊಡನೆ ಹಣವು ಕಡಿಮೆಯಿದ್ದಿತು. ಬಡ ಕುಟುಂಬದಲ್ಲಿ ಅವರ ಹುಟ್ಟು. ಚೀನಾ ರಾಷ್ಟ್ರಕ್ಕೆ ಪ್ರಭುತ್ವವನ್ನು ಪಡೆಯುವುದು ಅವರ ಧ್ಯೇಯ. ಧನ ಧ್ಯೇಯವನ್ನು ಒದಗಿಸಿಕೊಳ್ಳಲು ಅವರು ತಾವು ನಂಬಿದ ಉತ್ತಮ ಆದರ್ಶಗಳನ್ನು ಬದಿಗಿಡಬೇಕಾಯಿತು. ರಾಷ್ಟ್ರದ ಉನ್ನತಿಗಾಗಿ ಅವರಿಗೆ ಧನವಂತರ ಸಹಾಯಬೇಕಾಯಿತು. ಅವರಿಗೆ ಹಣದ ಕೊರತೆಯು ಎಷ್ಟಿತ್ತೆಂದರೆ—ದೇಶೋದ್ಧಾರದ ಕಾರ್ಯಗಳಿಗೆ ಬೇಕಾದ ಧನಸಂಗ್ರಹವನ್ನು ಅವರು ಅಫೀಮಿನ ಮೇಲಿನ ಅಬಕಾರಿ ಸುಂಕದಿಂದ ಗಳಿಸುವವರಾದರು. ಅಫೀಮು ಸೇವನೆಯು ಅಲ್ಲೀಗ ಬಲವಾದ ಛಟವಾಗಿರುತ್ತದೆ. ಚೀನಾ ದೇಶದ ಎಲ್ಲಾ ಪ್ರದೇಶಗಳ ಸರಕಾರಗಳಿಗೆ ಈ ಅಫೀಮು ಹಣವು ಮುಖ್ಯ ಧನವು. ಹಣದ ಕೊರತೆಯಿಂದಲೆ ಚಿಯಾಂಗರು ಹಣವಂತರಿಂದ ಪ್ರೇರೇಪಿತರಾಗಿ, ದುಡಿಯುವ ವರ್ಗದ ಹಿತಗಳನ್ನು ನಿರ್ಲಕ್ಷಿಸುವವರಾದರು. ಕೊಮ್ಯುನಿಸ್ಟರನ್ನು ದ್ವೇಷಿಸುವವರಾದರು. ಅವರ ಕೊಮ್ಯುನಿಸ್ಟರ ಕುರಿತು ದ್ವೇಷವು, ಹಿಟ್ಲರನ ಯಹೂದಿಯರ ಮೇಲಿನ ದ್ವೇಶದ ಹಾಗೆ. ಹಿಟ್ಲರನು ಯಹೂದಿ ದ್ವೇಷದಿಂದ ನಾಜಿ ಪಕ್ಷಕ್ಕೆ ಜರ್ಮನ್ ಪ್ರಜೆಗಳಿಂದ ಬಲವನ್ನೂ ಆಧಾರವನ್ನೂ ಪಡೆದ ಹಾಗೆ ರಾಷ್ಟ್ರಭಕ್ತ ಚಿಯಾಂಗರಿಗೆ ಕೊಮ್ಯುನಿಷ್ಟ ದ್ವೇಷದಿಂದ ಪ್ರಗತಿ ವಿರೋಧಕ ವರ್ಗದಿಂದಲೂ ಚೀನಾದಲ್ಲಿ ತಳವೂರಿದ ಅನ್ಯ ರಾಷ್ಟ್ರೀಯ ವ್ಯಾಪಾರೀ ಹಿತಗಳಿಂದಲೂ ಭೂಮಾಲಕರಿಂದಲೂ ಧನಸಹಾಯವು ದಾರಳವಾಗಿದೊರಕಿತು. ಈ ಕಾರಣದಿಂದಲೆ ಅವರು ಸುತ್ತಲೂ ಪ್ರಗತಿ ವಿರೋಧಕ ಜನರೆ ಇರುವರು. ಈ ಕಾರಣದಿಂದ ಪ್ರಜಾಪ್ರಭುತ್ವವಾದದ ಕುರಿತು ಅವರಲ್ಲಿ ಆಸಕ್ತಿಯು ಇರುವುದಾದರೂ ಪ್ರಜಾಪ್ರಭುತ್ವವಾದದ ಸ್ಥಾಪನೆಯಲ್ಲಿ ಚಿಯಾಂಗರು ಬಹಳ ಹಿಂದುಳಿದಿರುವರು.

ಈಗ ಸಂಯುಕ್ತ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರೆ ಒತ್ತಾಯದ ಮೇಲೆ ಅವರು ತಮ್ಮ ಮಂತ್ರಿ ಮಂಡಳದಲ್ಲಿನ ಪ್ರಗತಿ ವಿರೋಧಕ ಜನರ ಸಂಖ್ಯೆಯನ್ನು ಕಡಿಮೆ ಮಾಡಿರುವರು. ಆದರೆ ಅವರು ಮಾಡಿದ ಬದಲಾವಣೆಯಿಂದ ಕೊಮ್ಯುನಿಷ್ಟರಿಗೆ ಸಮಾಧಾನವಾಗಲಿಲ್ಲ.

ಕೊಮ್ಯುನಿಷ್ಟರೊಡನೆ ವಿಶೇಷ ಬಲವಿದ್ದಾಗ್ಯೂ ರಷ್ಯದ ಮಾದರಿಯಲ್ಲಿ ಅವರು ಚೀನಾವನ್ನು ಯಾಕೆ ಸೋವಿಯಟ್ ಕರಿಸಲಿಲ್ಲ? ಈ ಪರಿವರ್ತನೆಗೆ ಬೇಕಾದ ಅನುಕೂಲವಾತಾವರಣವು ಚೀನಾದಲ್ಲಿ ಇಲ್ಲದಿರುವುದರಿಂದಲೆ ಕೊಮ್ಯುನಿಷ್ಟರು ದುಡುಕುತ್ತಿರುವುದು. ಬಹಳ ದೀರ್ಘ ಸಮಯ ಯಾತನೆಗಳನ್ನು ಅನುಭವಿಸಿ, ಚೀನಿಯ ದುಡಿವ ವರ್ಗವು, ಯಾವತ್ತೂ ಕಷ್ಟತೊಂದರೆಗಳನ್ನು ಮರುಮಾತೆತ್ತದೆ ಸಹಿಸುತ್ತಿರುವರು. ಪ್ರಗತಿಕರ ಕ್ರಾಂತಿಯಲ್ಲಿ ಅವರು ಕೈ ಹಚ್ಚುವಂತೆ ಮಾಡುವುದು ಒಂದು ಮಹಾ ಸಮಸ್ಯೆಯು.

ಆದುದರಿಂದ ಚೀನವು ಒಂದು ಅಖಂಡ ರಾಷ್ಟ್ರವಾಗಿ ಗಣ್ಯಸ್ಥಾನಕ್ಕೆ ಬರಬೇಕೆಂದೂ ಕೆಳವರ್ಗದ ಹಿತಸಾಧನೆಮಾಡಬೇಕೆಂದೂ ಕೊಮ್ಯುನಿಷ್ಟರ ಧೋರಣವು. ರಾಷ್ಟ್ರನಾಯಕರಾಗಿ ಚಿಯಾಂಗರಿಗೆ ದೇಶದ ಮೇಲೆ ಒಳ್ಳೆ ಹಿಡಿತವು ಇದೆ. ಆದುದರಿಂದಲೆ ಕೊಮ್ಯುನಿಷ್ಟರು ಅವರೊಡನೆ ಅವರು ನಯನ ಧೋರಣದಿಂದ ವರ್ತಿಸುತ್ತಿರುವುದು. ಸದ್ಯಕ್ಕೆ ಕೊಮ್ಯುನಿಷ್ಟರೂ ಚಿಯಾಂಗರೂ ಒಂದೆ ಧ್ಯೇಯಸಾಧನೆಗಾಗಿ ದುಡಿಯುತ್ತಿರುವರು. ತಮ್ಮನ್ನು ಬಲತ್ಕರಿಸುವ ಜಪಾನಿ ಸಾಮ್ರಾಜ್ಯಶಾಹಿಯನ್ನು ದೇಶದಿಂದ ತೊಲಗುವಂತೆ ಮಾಡುವುದಕ್ಕಾಗಿ.

ಚಿಯಾಂಗರಿಗೂ ಕೊಮ್ಯುನಿಷ್ಟರಿಗೂ ದ್ವೇಷವು ಬೆಳೆಯುತ್ತಿದ್ದ ಹಾಗೆನೆ ಜಪಾನಿಯರು ಚೀನಾದ ಆಕ್ರಮಣವನ್ನು ಕೈಕೊಂಡರು. ಅವರೂ ಕೊಮ್ಯುನಿಷ್ಟ ವಿರೋಧಿಗಳು. ಈ ದ್ವೇಷದಿಂದ ಚೀನಾವನ್ನು ಹಿಡಿಯುವ ಕೆಲಸದಲ್ಲಿ ಅವರಿಗೆ ಪ್ರಗತಿ ವಿರೋಧಕ ಚೀನಿಯರಿಂದ ಸಹಾಯವು ದೊರಕಬಹುದೆಂದು ಬಲವಾದ ಆಶಯಗಳಿದ್ದುವು. ಪ್ರಗತಿ ವಿರೋಧಕ ಜನರಿಂದ ಸುತ್ತಲ್ಪಟ್ಟಿದ್ದರೂ ಚಿಯಾಂಗರು ಜಪಾನಿನ ಕಡು ವಿರೋಧಿಗಳು. ಅವರನ್ನು ಒಲಿಸಿಕೊಳ್ಳಲು ಜಪಾನಿಯರಿಗೆ ಅಸಾಧ್ಯವಾಯಿತು. ಚೀನವು ಒಂದು ಮಾನ್ಯ ರಾಷ್ಟ್ರವಾಗಬೇಕೆಂಬ ಉದ್ದೇಶವೂ ಅವರ ಹೃದಯದಲ್ಲಿ ಬಲವಾಗಿ ತಳವೂರಿರುವುದು. ಅವರ ಪ್ರಜಾಪ್ರಭುತ್ವವಾದದ ರಕ್ಷಕರಾಗಿ ಅವರ ಪರಿವರ್ತನೆಯಾದರೆ ಸ್ಥಿತಿಯು ನೆಟ್ಟಗಾಗುವುದು.

ಚೀನಾದಲ್ಲಿ ಈಗ ಎರಡು ಯುದ್ಧಗಳು ನಡೆಯುತ್ತಿವೆ—ರಾಷ್ಟ್ರವನ್ನು ವಿಮೋಚನೆಗೊಳಿಸಲು ಒಂದು; ಪ್ರಜಾಪ್ರಭುತ್ವವಾದದ ಸ್ಥಾಪನೆಗೆ ಇನ್ನೊಂದು. ಒಂದನೆ ಯುದ್ಧವು ನಡೆಯುವುದು ಜಪಾನಿಗೆ ವಿರೋಧವಾಗಿ. ಎರಡನೆ ಯುದ್ಧವು ದೇಶದೊಳಗಿರುವ ಪ್ರಜಾಪ್ರಭುತ್ವವಾದದ ವಿರೋಧ ಪ್ರಭಾವ ಬಲಗಳನ್ನು ಅಡಗಿಸಲು ನಡೆಯುತ್ತಿರುವುದು. ಈ ಎರಡನೆ ಯುದ್ಧವು ಯಶಸ್ವಿಯಾದರೆ ಮಾತ್ರ ಪ್ರಜಾಪ್ರಭುತ್ವವಾದಕರಣವು ಯಶಸ್ವಿಯಾಗಿ ಜಪಾನಿಯರನ್ನು ಹೊರತಳ್ಳಲು ಸುಲಭವಾಗುವುದು. ಹಿಂದೂದೇಶದ ಕೊಮ್ಯುನಿಷ್ಟ ಪಕ್ಷದಂತೆ, ಚೀನಾದ ಕೊಮ್ಯುನಿಷ್ಟರಲ್ಲೂ ದೋಷಗಳು ಅನೇಕ ಇವೆ ನಿಜ. ಆದರೆ ಕೊಮ್ಯುನಿಜಂ ತತ್ವವು ಪ್ರಜಾಪ್ರಭುತ್ವವಾದದ ಒಂದು ಅಂಗವು. ಈ ವಿಚಾರವನ್ನು ಮನ್ನಿಸಿಯೆ, ಚಿಯಾಂಗರು ತಮ್ಮ ಕಾರ್ಯ ಸಾಧನೆ ಮಾಡುವುದರಲ್ಲಿ ಒಳ್ಳಿತಿದೆ.

ಒಟ್ಟಿನಲ್ಲಿ ಜಗತ್ತಿನಲ್ಲೆಲ್ಲಾ ಪ್ರಜಾಪ್ರಭುತ್ವವಾದವು ಪುಟವೆದ್ದು ಮೇಲಕ್ಕೆ ಬರುವ ಮಹಾ ಜ್ವಾಲೆಯು—ಈ ಎರಡನೆ ಮಹಾ ಯುದ್ಧವು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ॰ ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

THE CANARA BANKING CORPORATION LTD.

(Incorporated inBritish India with Limited Liability.)

Estd) **Head Office: UDIPI S. Kanara.** **(1906.**

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

THE BANK OF MANGALORE, Ltd.,
MANGALORE.

Interest on Fixed Deposits.

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date willalso be paid accordingly with effect from 1-1-1945

Office of the Bank, Mangalore, 30th Oct. 1944. By Order H. S. KAMATH, *Manager*

ಹುಳುಕಡ್ಡಿ ಮದ್ದು

AMRUTANJAN DEPOTS BOMBAY MADRAS CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE:-UDIPI, S. K.

Chief Agents for South India including Indian States.

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 22—12—1944 [ಸಂಚಿಕೆ 50]

ಪೂರ್ವ-ಪಶ್ಚಿಮ

[ಲೇ:—ಮಾರ್ಜೊರಿ ಸಾಯಿಕ್ಸ]

—ಮಹಾತ್ಮಾ ಗಾಂಧೀ

(ಕಳೆದ ಸಂಚಿಕೆಯಿಂದ)

ಗಾಂಧೀಜಿಯವರ ವಿಚಾರ ಜೀವನದಲ್ಲಿ ರಸ್ಕಿನರ ಕಾಯಕ ತತ್ವವನ್ನು ಸ್ಪಷ್ಟವಾಗಿ ಬಿಂಬಿಸುವದರಲ್ಲಿ ಟಾಲಸ್ಟಾಯರ ಮಹತ್ವ ಅಷ್ಟಿರಲಿಲ್ಲ. ಆದರೆ 'The Kingdom of God is within You' ಎಂಬ ತಮ್ಮ ಪುಸ್ತಕದಲ್ಲಿ ಪ್ರಣೀತವಾದ ಬಾಯಿಬಲದಲ್ಲಿಯ ಅಪ್ರತೀಕಾರ ತತ್ವವನ್ನು ಗಾಂಧೀಜಿಯವರ ಮೇಲೆ ಬಿಂಬಿಸುವುದರಲ್ಲಿ ಟಾಲಸ್ಟಾಯರು ಅತಿ ಆಸ್ಥೆ ತೋರಿದರು. ೧೮೯೧ರಲ್ಲಿ ಪ್ರಕಟವಾದ ಈ ಪುಸ್ತಕವು ಯುದ್ಧವನ್ನಷ್ಟೇ ಅಲ್ಲ ಎಲ್ಲ ಪ್ರಕಾರದ ಹಿಂಸೆಯನ್ನು ತಿರಸ್ಕರಿಸುತ್ತದಲ್ಲದೆ ಬಲುಮೆಯನ್ನುಪಯೋಗಿಸುವ ಎಲ್ಲ ಸರಕಾರಗಳು ಬಲಿಷ್ಟರ ಹಾಗೂ ಸಿರಿವಂತರ ಲಾಭಕ್ಕಾಗಿ ಹಾಗೂ ಬಡ ನಿರ್ಗತಿಕರ ತೊಂದರೆಗಾಗಿ ಇರುವವೆಂದು ಹೇಳುತ್ತದೆ. ಆದ್ದರಿಂದ ಇಂಥ ಎಲ್ಲ ಸರಕಾರಗಳನ್ನು ಬಹಿಷ್ಕರಿಸಬೇಕೆಂದು ಟಾಲಸ್ಟಾಯರು ಸಾರಿ ಹೇಳುತ್ತಾರೆ. ಅಂಥ ಸರಕಾರಗಳಿಗೆ, ಯಾವ ಸೇವೆಯನ್ನೂ ಸಲ್ಲಿಸದೆ ಅವುಗಳೊಡನೆ ಅಸಹಕಾರವನ್ನು ಹೂಡಬೇಕೆಂದು ಹೇಳುತ್ತಾರೆ.

೧. ಎಲ್ಲರನ್ನೂ ಗೌರವಿಸಿ ಯಾರ ಮೇಲೂ ಸಿಟ್ಟಿಗೇಳದೆ ಎಲ್ಲರೊಡನೆ ಶಾಂತಿಯಿಂದ ಜೀವಿಸಿರಿ.

೨. ಒಬ್ಬ ಪತಿಗೆ ಒಬ್ಬಳೇ ಸತಿಯಿರಲಿ; ಒಬ್ಬ ಸತಿಗೆ ಒಬ್ಬನೇ ಪತಿಯಿರಲಿ. ವಿವಾಹವಿಚ್ಛೇದನವಾಗದಿರಲಿ ಹಾಗೂ ಹಾದರವೂ ಇಲ್ಲದೆ ಇರಲಿ.

೩. ಎಲ್ಲ ಪ್ರತಿಜ್ಞೆಗಳನ್ನು ಧಿಕ್ಕರಿಸಿ ಎಂದಿಗೂ ಆಣೆಯಿಟ್ಟು ಹೇಳಬೇಡಿರಿ.

೪. ಯಾವ ಹಂಚಿಕೆ ಇಲ್ಲದೆ ಅಥವಾ ದಂಡಿಸುವ ಇಚ್ಛೆ ಇಲ್ಲದೆ ನಿಮಗೆ ಮಾಡಿದ ಅನ್ಯಾಯವನ್ನು ಮೂಕರಂತೆ ಸಹಿಸಿರಿ.

೫. ಜನಾಂಗ ಭೇದವನ್ನೆಣಿಸದೆ ಎಲ್ಲರನ್ನೂ ಸಮನಾಗಿ ಪ್ರೀತಿಸಿ ಪಕ್ಷಪಾತವಿಲ್ಲದೆ ಎಲ್ಲರ ಹಿತವನ್ನು ಬಯಸಿರಿ.

ತಾರುಣ್ಯದಲ್ಲಿಯೇ ಗಾಂಧಿಯವರಿಗೆ ದೊರೆತ ಇಂಥ ಉಪದೇಶದ ಮಹತ್ವವನ್ನು ವಿವರಿಸಿ ಹೇಳುವದು ಅನಾವಶ್ಯಕ. ಸರಕಾರವು ಯಾವ ಅಧಿಕಾರದಿಂದ ಹಾಗೂ ಎಂಥ ಪರಿಸ್ಥಿತಿಯಲ್ಲಿ ನ್ಯಾಯವಾಗಿ ಆಳಬಲ್ಲದು ಎಂಬ ಸಮಸ್ಯೆಯನ್ನು ತಮ್ಮ ತೀಕ್ಷ್ಣ ಬುದ್ಧಿಯಿಂದ ಗಾಂಧಿಯವರು ಪರಿಶೀಲಿಸುತ್ತಿರುವಾಗ ಈ ಮೇಲಿನ ಉಪದೇಶವು ಅವರಿಗೆ ದೊರೆಯಿತು.

ಸರಳತನ ಹಾಗೂ ಶ್ರಮ, ನಿವೃತ್ತಿ ಹಾಗೂ ಅಪ್ರತೀಕಾರ ಇವು ಕ್ರಿಶ್ಚನ್ ವೇದಾಂತಿಗಳಿಗೆ ಅಂತೆಯೇ ಗಾಂಧಿಯವರಿಗೆ ಏಸುವಿನ ಶಿಕ್ಷಣದಿಂದ ದೊರೆತ ಪ್ರೀತಿಯ ಫಲಗಳು. ಅಲ್ಲದೆ 'Sermon on the Mount'ದ ಉಪದೇಶವನ್ನನುಸರಿಸುವ ಸಮಾಜದ ಗುರುತುಗಳು. ಈ ಪ್ರೀತಿಯೆಂದರೆ ದುರ್ಬಲ ಭಾವನೆಯಲ್ಲ; ಆದರೆ ಸ್ವರ್ಗದಲ್ಲಿಯ ತಂದೆಯ ಮಕ್ಕಳಾದ ಎಲ್ಲರ ಬಗ್ಗೆ ಬಡವ ಬಲ್ಲಿದರೆಂಬ ಭೇದವಿಲ್ಲದೆ, ಶತ್ರು-ಮಿತ್ರರೆಂಬ ಭೇದವಿಲ್ಲದೆ ತೋರುವ ಪ್ರಬಲ ಸದಿಚ್ಛೆ.

ಇನ್ನು ಮೇಲೆ ನಾವು ಕ್ರಿಶ್ಚನ್, ಅನುಭವದಲ್ಲಿಯ ಬಾಂಧವ್ಯಪ್ರೇಮದಿಂದ ಈಶಪ್ರೇಮದ ಅಧ್ಯಾತ್ಮಿಕ ಅನುಭವದ ಕಡೆಗೆ ಹೊರಳುವಾ.

ಧರ್ಮಗ್ರಂಥಗಳ ಜ್ಞಾನವಾಗಲಿ, ಜಾತಿಯನ್ನೊಪ್ಪಿಕೊಳ್ಳುವದಾಗಲಿ, ಜಾತಿಯ ಕಟ್ಟಳೆಗಳನ್ನು ತಪ್ಪದೆ ಪಾಲಿಸುದಾಗಲಿ ಧರ್ಮವಲ್ಲವೆಂದೂ ಸತ್ಯಬ್ರಹ್ಮನಿಗೆ ಆತ್ಮಸಮರ್ಪಣೆ ಮಾಡಿ ಅವನ ಇಚ್ಛೆಯನ್ನು ನಡೆಸುವದಕ್ಕಾಗಿ ಅವನ ದಯೆಯಲ್ಲಿ ನಂಬುಗೆಯನ್ನಿಡುವದು ಧರ್ಮವೆಂದೂ ಗಾಂಧಿಯವರು ಮೊದಲಿನಿಂದಲೂ ತಿಳಿದುಕೊಂಡಿದ್ದರು. 'ನೀನು ದೇವರನ್ನು ಕಾಯಾ ವಾಚಾ ಮನಸ್ಸಿನಿಂದ ಸಂಪೂರ್ಣವಾಗಿ ಪ್ರೀತಿಸು' ಎಂಬ ಮೊದಲನೆಯ ಮಹತ್ವದ ನುಡಿಯಲ್ಲಿಯೇ ಎಲ್ಲ ಕಟ್ಟಳೆಗಳೂ ಎಲ್ಲ ಮತಾಚಾರ್ಯರೂ ಅಡಕವಾಗಿದ್ದಾರೆಂಬುದನ್ನು ಏಸುವು ಕಲಿಸಿದನು. ಎರಡನೆಯ ನುಡಿಯಿಂದ ನೀನು ನಿನ್ನ ನೆರೆಹೊರೆಯವರನ್ನು ನಿನ್ನಂತೆ ಪ್ರೀತಿಸು ಎಂಬುದನ್ನು ಕಲಿಸಿದನು.

ನಮ್ಮ ತ್ರಿವಿಧ ಸೇವೆಯನ್ನು ಬಯಸುವ ಜಗತ್ತಿನ ಅಂತಿಮ ಸತ್ಯತೆ ಹಾಗೂ ನಿಶ್ಚಿತತೆಗಳ ಪ್ರತೀಕವಾದ ಇಂಥ ವಸ್ತುವನ್ನೇ ದೇವರೆಂದು ಗಾಂಧಿಯರು ತಿಳಿಯುತ್ತಾರೆ. 'ನಾನು ಸತ್ಯವನ್ನೇ ದೇವರೆಂದು ಪೂಜಿಸುತ್ತೇನೆ. ಸತ್ಯಬ್ರಹ್ಮನ ಹೊರತು ಉಳಿದುದೆಲ್ಲ ಮಿಥ್ಯಾ' ಎಂದು ಅವರು ಹೇಳುತ್ತಾರೆ. ಸಂಕುಚಿತ ಮನಸ್ಸಿನ ನಮ್ಮ ಕೊನೆಯ ನಿರ್ಣಯಗಳನ್ನು ಅವರು ಮೀರಿದ್ದಾರೆ. ದೇವರೆಂದರೆ ಸತ್ಯ, ಜ್ಞಾನ, ಆನಂದ ಎಂದು ಅವರು ತಿಳಿದುಕೊಂಡಿದ್ದಾರೆ. ಆದರೂ ಗಾಂಧಿಯವರ ಅಂತಿಮ ಸತ್ಯವು ಅರಿಯಲಾಗದ್ದೆಂದು ನಂಬುವದಿಲ್ಲ. ಆದರೆ ದೇವರ ಸಾಕ್ಷಾತ್ಕಾರವೇ ಜೀವನದ ಗುರಿ ಹಾಗೂ ಅವನನ್ನು ಹುಡುಕುವದೇ ಜೀವನದ ಉದ್ಯೋಗವೆಂದು ನಂಬಿದ್ದಾರೆ. 'ಅಲ್ಪ ಮಾನವ ಪ್ರಾಣಿಗೆ ಅನಂತವಾದ ಸತ್ಯ ಪ್ರೇಮಗಳನ್ನು ಎಂದಿಗೂ ಸಂಪೂರ್ಣವಾಗಿ ಅರಿಯಲಾಗದಿದ್ದರೂ ತನ್ನ ಮಾರ್ಗನಿದರ್ಶನಕ್ಕೆ ಬೇಕಾಗುವಷ್ಟನ್ನು ಮಾತ್ರ ತಿಳಕೊಳ್ಳಲು ಸಾಧ್ಯ.' ತಮ್ಮ ಆತ್ಮ ಚರಿತ್ರೆಯ ಮುನ್ನುಡಿಯಲ್ಲಿ 'ನಾನು ದೇವನನ್ನು ಇನ್ನೂ ಕಂಡಿಲ್ಲ, ಅವನನ್ನು ಹುಡುಕುತ್ತಿರುವೆನು,' ಎಂದು ಬರೆದು ನಮಗೆ ತಿಳಿದ ಮಟ್ಟಿಗೆ ಸತ್ಯವನ್ನನುಸರಿಸಿದರೆ ಮಾತ್ರ ಆ ಪರಮ ಸತ್ಯದ ಶೋಧನೆಯಲ್ಲಿ ಪ್ರಗತಿ ಹೇಗೆ ಕಂಡುಬರುವದೆಂಬುದನ್ನು ಬಣ್ಣಿಸಿದ್ದಾರೆ. ಇನ್ನು ನಮ್ಮ ಜ್ಞಾನಾತೀತವಾದ ಈ ಗೂಢ ಹಾಗೂ ಗಂಭೀರ ವಸ್ತುವಿನ ಬಗ್ಗೆ ಗೌರವವು ಕ್ರಿಶ್ಚನ ಧರ್ಮದಲ್ಲಿಯೂ ದೇವರ ಬಗ್ಗೆ ಸರ್ವಮಾನ್ಯವಾದ ವಿಚಾರವಾಗಿದೆ. ಏಸುವಿನ ಉಪದೇಶದಲ್ಲಿ ಈ ವಿಚಾರವು ಇಲ್ಲದೆ ಹೋದರೆ 'ದೇವರು ಎಲ್ಲರ ತಂದೆ' ಎಂಬ ಮಾತಿನಲ್ಲಿಯ ಚಮತ್ಕಾರವೂ ಗಾಂಭಿರ್ಯವೂ ಕಳೆದು ಹೋಗುವದು. ಕ್ರಿಶ್ಚಿನ್ ಧರ್ಮಾನುಯಾಯಿಯು ಕೂಡ ಈ ಸತ್ಯವು ನಮಗೆ ದಾರಿ ತೋರಿಸಲವಶ್ಯವಿದ್ದಷ್ಟೇ ಕಾಣಿಸುವದೆಂದು ತಿಳಿಯುತ್ತಾನೆ. ಆದ್ದರಿಂದ ದೇವರನ್ನು ತಿಳಿದುಕೊಳ್ಳಲಾಗದೆ ಹೋದರೆ ನಿಜವಾಗಿಯೂ ಧಾರ್ಮಿಕನಾದ ಕ್ರಿಶ್ಚನನ ಮನಸ್ಸು ವ್ಯಥೆಪಡುವದಿಲ್ಲ. ದೇವರನ್ನು ಏಕೋಭಾವದಿಂದ ಪ್ರೀತಿಸಿ ನಿಮ್ಮ ಜ್ಞಾನವನ್ನು ಸತ್ಯಾನ್ವೇಷಣೆಗಾಗಿ ಉಪಯೋಗಿಸಿರಿ ಎಂದು ಏಸುವು ಹೇಳಿದ್ದಾನೆ. ಆದ್ದರಿಂದ ಟಾಲಸ್ಟಾಯರು ತಮ್ಮ 'Reason and Religion' ಪುಸ್ತಕದಲ್ಲಿ ಜನರು ತಮ್ಮ ವಿಚಾರಶಕ್ತಿಯನ್ನು ಉಪಯೋಗಿಸಿ ಸತ್ಯವನ್ನು ತಿಳಿಯಬಹುದು ಎಂದು ಹೇಳಿ, ಸಾಧ್ಯವಿದ್ದ ಎಲ್ಲ ಧಾರ್ಮಿಕ ಸತ್ಯವನ್ನು ಪ್ರತಿಯೊಬ್ಬನು ತಿಳಿದುಕೊಳ್ಳಲು ಪ್ರಯತ್ನಿಸುವುದೇ ಅವನ ಆದ್ಯ ಕರ್ತವ್ಯವಾಗಿದೆ ಎಂದು ಬೇರೊಂದು ಪತ್ರದಲ್ಲಿ ಹೇಳಿದ್ದಾರೆ.

ಗಾಂಧಿಯವರ ಹಾಗೂ ಕ್ರಿಶ್ಚನರ ವಿಚಾರಗಳಲ್ಲಿ ವಿರೋಧವೂ ಕಂಡುಬರುತ್ತದೆ. 'ಸತ್ಯವು ನಮ್ಮ ಉಸಿರಿಗಿಂತಲೂ ನಮ್ಮ ಅವಯವಗಳಿಗಿಂತಲೂ ಸಮೀಪವಾಗಿದೆ' ಎಂಬ ಮಾತಿನ ಅನುಭವದ ಬಗ್ಗೆ ವಿರೋಧ. ೫-೩-೨೫ನೇ ದಿನ ಗಾಂಧಿಯವರು ದೇವರು ನಮ್ಮಲ್ಲಿಯೂ ಇದ್ದಾನೆ, ನಮ್ಮನ್ನು ಮೀರಿ ಕೂಡ ಇದ್ದಾನೆ' ಎಂದು ಬರೆದರು. ದೇವರು ಕಾಬಾದಲ್ಲಿಯೂ ಇಲ್ಲ, ಕಾಶಿಯಲ್ಲಿಯೂ ಇಲ್ಲ—ನಮ್ಮೆಲ್ಲರಲ್ಲಿ ಇದ್ದಾನೆಂದು ಮತ್ತೊಮ್ಮೆ ಹೇಳಿದರು. ನಾವು ನಮ್ಮ ಜ್ಞಾನೇಂದ್ರಿಯಗಳನ್ನು ನಿಗ್ರಹಿಸ ಬಲ್ಲೆವಾದರೆ ಅವನ ಅನುಭವ ಪಡೆಯಬಲ್ಲೆವು, ಯಾಕಂದರೆ ನಮ್ಮಲ್ಲಿ ದೈವೀ ಸಂಗೀತವು ಯಾವಾಗಲೂ ನಡೆದಿರುತ್ತದೆಂದು ಅವರ ಮತ. ನಾವು ಮನಸ್ಸುಮಾಡಿದರೆ ನಮ್ಮ ಹೃದಯಾಂತರಾಳದಲ್ಲಿಯ ಅವನ ಅಂತರ್ವಾಣಿಯನ್ನು ಕೇಳಬಲ್ಲೆವು. ಅವನ ಅಂತರ್ವಾಣಿಯನ್ನು ಕೇಳಬಲ್ಲವರು, ಪ್ರಾರ್ಥನೆಯು ಕೇವಲ ಅದಕ್ಕೆ ಸೂಚಕವೆಂದು ತಿಳಿದುಕೊಂಡಾರೆಂದು ನಾನು ಪ್ರಾರ್ಥಿಸುವದು ಹೊರಗಿನ ಶಕ್ತಿಯನ್ನು ಹಾಗೂ ನಾನು ಆ ಶಕ್ತಿಯಿಂದ ಬೇರೆಯಾಗಿದ್ದಂತೆ ತೋರುವಷ್ಟು ಅಜ್ಞೋರಣೀಯವಾಗಿದ್ದೇನೆಂಬುದನ್ನು ತಿಳಿಸಲಿಚ್ಛಿಸುತ್ತೇನೆಂದು, ಅವರೊಮ್ಮೆ ಧರ್ಮೋಪದೇಶಕರಿಗೆ ಹೇಳಿದರು. ದೇವರ ಈ ಅಂತರಾನುಭವವು ಯಾವ ಧರ್ಮದ ಗುತ್ತಿಗೆಯೂ ಅಲ್ಲ, ಪ್ರತಿ ರಾಷ್ಟ್ರದಲ್ಲಿಯ ಅವನ ಅನುಭಾವಿಗಳ ಆನಂದ. ಇದನ್ನೇ ಕ್ರಿಶ್ಚನರು ಪವಿತ್ರ ಶಕ್ತಿಯ ಸಾನ್ನಿಧ್ಯವೆಂದು ಕರೆಯುತ್ತಾರೆ. ದೇವರ ಅರ್ಚನೆಯ ಕಾಲಕ್ಕೆ ಪ್ರಾರ್ಥನೆಗಳಲ್ಲಿ ವರ್ಣಿತವಾದ ದೇವರ ರೂಪಗಳನ್ನು ನಂಬದೆ ಅಂತರ್ವಾಣಿಯ ಆದೇಶವನ್ನೇ ನಂಬುವ ಕ್ರಿಶ್ಚಿನ್ ಕ್ವ್ಯಾಕರ ಪಂಥವರು ಗಾಂಧಿಯವರನ್ನು ಧಾರ್ಮಿಕ ವಿಚಾರಗಳಲ್ಲಿ ಬಹಳವಾಗಿ ಹೋಲುತ್ತಾರೆ. ಅನುಭವಕ್ಕೆ ಸಾಧನವಾದ ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವ ಹಂಬಲವುಳ್ಳ ಕ್ವ್ಯಾಕರ ಅರ್ಚನೆಯಲ್ಲಿ ಗಾಂಧಿಯವರು ಮೊನ್ನೆ ಇಂಗ್ಲೆಂಡಿಗೆ ಹೋದಾಗ ಅನೇಕ ಸಲ ಭಾಗವಹಿಸಿದ್ದಾರೆ.

ದೇವರ ಸಾಕ್ಷಾತ್ಕಾರ, ಆತ್ಮಶುದ್ಧಿ, ಆತ್ಮಾರ್ಪಣ ಇವುಗಳಲ್ಲಿ ಗಾಂಧಿಯವರದೂ ಕ್ರಿಶ್ಚನರದೂ ಸಮಾನ ವಿಶ್ವಾಸವಿದೆ. 'ಬಡವರು ದೇವನನ್ನು ನೋಡುವುದರಿಂದ ಅಂತಃಸುಖಿಗಳು' ಎಂದು ಏಸೂ ಹೇಳಿದರೆ 'ದೇವನನ್ನು ನಾನು

(೯ನೇ ಪುಟಕ್ಕೆ ಮುಂದುವರಿದಿದೆ)

ಇಂದ್ರಜಾಲ

ನಾನು ಬೊಂಬಾಯಿಗೆ ಹೋಗುವುದಕ್ಕೆ ಮೊದಲು ಬೆಂಗಳೂರಿಗೆ ಹೋದೆ. ಅಲ್ಲಿನ ನನ್ನ ಭಾವನ ಮನೆ ಇದೆ. ತಂದೆ ತರ ಹೇಳಿದ್ದಾರೆ ಎಂದು ಹೇಳಿ ಅಕ್ಕನ ಬಳಿ ಇದ್ದ ನೂರು ರೂಪ್ಯಾ ತೆಗೆದುಕೊಂಡು ಪುನಃ ಮೈಸೂರು ಗಾಡಿ ಹತ್ತುವ ಬದಲು ಪೂನಾ ಮೈಲ್ ಹತ್ತಿದೆ. ಎರಡು ದಿನಗಳಲ್ಲಿ ಬೊಂಬಾಯಿಯ ವಿಕ್ಟೋರಿಯ ಟರ್ಮಿನಸ್‌ನಲ್ಲಿ ಇಳಿದೆ.

ಬೊಂಬಾಯಿಗೆ ಮುಟ್ಟಿದಾಕ್ಷಣ ತಂದೆಯವರಿಗೂ ಅಕ್ಕನಿಗೂ ಒಂದೊಂದು ಪತ್ರ ಬರೆದು ನನ್ನ ತಂತ್ರವನ್ನು ತಿಳಿಸಿ ಕ್ಷಮೆ ಬೇಡಿಕೊಂಡೆ. ಅಲ್ಲಿ ಏನೇನು ಗಲಾಟೆ, ಬೊಬ್ಬೆಗಳಾದವೆಂದು ತಿಳಿಸುವುದು ಅವಶ್ಯವಿಲ್ಲ . . . .

ಅಂತೂ ಬೊಂಬಾಯಿಯಲ್ಲೊ ನನ್ನ ಮಿತ್ರನನ್ನು ಹುಡುಕಿ ತೆಗೆದು ವಿಚಾರಿಸಲಾಗಿ, ಅವನು ನಾನು ಬಂದ ಸಮಯವು ಸ್ವಲ್ಪ 'ಲೇಟ್' ಆಯಿತೆಂದೂ ಇದ್ದ ಕೆಲಸಗಳಿಗೆ ಚತುರ ಮದ್ರಾಸಿಗಳು ಕೆಲವರು ತೂರಿಕೊಂಡರೆಂದೂ ಬೇಸರದಿಂದ ತಿಳಿಸಿದಾಗ ನನಗೆ ಇಲ್ಲದ ದುಃಖವಾಯಿತು. ಆದರೂ ಜೇಬಿನಲ್ಲಿ ಹಣವಿದೆಯಲ್ಲವೆ? ಇನ್ನೂ ಒಂದು ತಿಂಗಳು ಪ್ರಯತ್ನಮಾಡಬಹುದು. ಹೀಗೆ ಸಮಾಧಾನ ತಾಳಿ ಸ್ನೇಹಿತನಲ್ಲಿ ಊಟದ ಏರ್ಪಾಡು ಏನೆಂದು ವಿಚಾರಿಸಿದೆ.

ಆ ದೊಡ್ಡ ನಗರಕ್ಕೆ ಹೋದವರ ಸಂಗತಿಯೇ ವಿಚಿತ್ರ. ನಾಲ್ಕೈದು ಸ್ನೇಹಿತರು ಒಟ್ಟು ಸೇರಿ ಒಂದು ಡಬ್ಬಿ ಊಟ ತರಿಸಿ ಪಾಲಿನಲ್ಲಿ ಉಣ್ಣುತ್ತಾರೆ. ಸಾಮಾನು ಇಡಲಿಕ್ಕೆ ಒಂದು ಚಿಕ್ಕ ಕೋಣೆ ತೆಗೆದುಕೊಂಡು ಎಲ್ಲರೂ ಫೂಟ್‌ಪಾತಿನಲ್ಲೊ, ಟೇರೆಸ್‌ನಲ್ಲೊ ಮಲಗಿ ಜೀವನ ನಡೆಸುತ್ತಾರೆ. ಪ್ಯಾಪಿನ ನೀರಿನ ಸ್ನಾನ. ಒಬ್ಬರ ಡ್ರೆಸ್ಸು ಇನ್ನೊಬ್ಬರು ಹಾಕುವುದು–ಹೇಗೆ ಅನುಕೂಲ ಉಂಟೋ ಹಾಗೆ. ಈ ಅರಬೀ ಜೀವನದಲ್ಲಿ ನಾನೂ ಸಹಭಾಗಿಯಾಗಿಯಾದೆ.

ಬೊಂಬಾಯಿಯಲ್ಲಿ ಕೆಲಸಕ್ಕಿದ್ದ ಮಿತ್ರರು ನಮ್ಮ ಊರಿಗೆ ಬಂದಾಗ ಹಲವು ಸಲ 'ರಾಮು ಬೊಂಬಾಯಿಗೆ ಬಾರೊ, ನಿನಗೆ ಅಲ್ಲಿ ಕೆಲಸ ಕೊಡಿಸೋಣ ಕಣೊ' ಎಂದು ಹೇಳುತಿದ್ದರು. ಈಗ ಅವರೆಲ್ಲರನ್ನು ಹೋಗಿ ನೋಡಲು 'ಇವನು ಏಕೆ ಬಂದನು! ಇಲ್ಲಿ ಕೆಲಸವಾದರೂ ಎಲ್ಲಿದೆ? ಹೆಚ್ಚು ಮಾತನಾಡಿದರೆ ಇವನ ಖರ್ಚು ನಾವು ನೋಡಿ ಕೊಳ್ಳಬೇಕಾದೀತು." ಹೀಗೆಂಬ ಭಾವನೆಯಿಂದ ನೋಡಿದರೂ ನೋಡದ ಹಾಗೆ ಹೋಗುತ್ತಾರೆ. ಒಂದು ವೇಳೆ ನಾನೇ ಗುರುತು ತೆಗೆದು ಮಾತಾಡಿಸಿದರೆ "ಓಹೊ ರಾಮು! ಯಾವಾಗ ಬಂದೆ? ಎಲ್ಲಿ ಇದ್ದಿಯಾ? ಗುರುರಾವ್ ಕೋಣೆಯಲ್ಲಿದ್ದಿಯೋ, ಬಲು ಒಳ್ಳೆದಾಯಿತು. ಅದು ಇದ್ದುದರಲ್ಲಿ ಒಳ್ಳೆ ಸ್ಥಳ. ಆಗಲಿ, ಹೊತ್ತಾಯಿತು, ಆಫೀಸಿಗೆ ಹೋಗಬೇಕು" ಎಂದು ನಡೆದೇ ಬಿಡುವರು.

ನನ್ನ ಸ್ನೇಹಿತರು ನಿರ್ವಾಹವಿಲ್ಲದೆ ನನಗೋಸ್ಕರ ಕೆಲಸದ ಬೇಟೆಮಾಡಿದರು. ನಾನು ಕೆಲವು ಕಂಪೆನಿಗಳ ಹೆಸರು ಸೂಚಿಸಿದಾಗ ನಗರವನ್ನು ಸುತ್ತಿ ಚೆನ್ನಾಗಿ ಅನುಭವವಿದ್ದ ಅವರು "ಅಲ್ಲಿ ಬೋರ್ಡು ಇದೆ ಕಣೊ" ಎನ್ನುವರು. ಈ ಬೋರ್ಡು ಎಂದರೆ 'ನೋ ವೇಕೆನ್ಸಿ' ಬೋರ್ಡು ಎಂದರ್ಥವೆಂದು ಮತ್ತೆ ನನಗೆ ತಿಳಿಸಲಾಯಿತು. ಮಿಲ್ಲುಗಳಲ್ಲಿ ಇದ್ದವರನ್ನು ತೆಗೆಯುತ್ತಾರೆ. ಸೆಲ್ಸ್‌ಮೇನ್ ಕೆಲಸ ಮಾಡುವಷ್ಟು ಅನುಭವ ನನಗಿಲ್ಲ.

ಮಾತ್ರವಲ್ಲ ಅದಕ್ಕೆ ಭದ್ರತೆ ಹಣ ಕಟ್ಟಬೇಕು. ಕೊನೆಗೆ ನಮ್ಮ ಮಿತ್ರನ ಸ್ನೇಹಿತನ ಗೆಳೆಯನೊಬ್ಬನು 'ಬರುವ ತಿಂಗಳು ನೋಡೋಣ' ಎಂದನೆಂದು ನನಗೆ ಸ್ವಲ್ಪ ಸಮಾಧಾನವಾಯಿತು. . . .

ಬೊಂಬಾಯಿಗಾರರಿಗೆ ಸಂಜೆ ಹೊತ್ತು ಸಮುದ್ರ ದಂಡೆ, ಉದ್ಯಾನವನ, ವಿಹಾರಗಳಿಗೆ ಹೋಗದಿದ್ದರೆ ಆ ಸಂಕಷ್ಟಮಯ ನಗರದ ಜೀವನ ಸಂಗ್ರಾಮವನ್ನು ಹೋರಾಡುವಷ್ಟು ಶಕ್ತಿ ಉಂಟಾಗುವುದಿಲ್ಲ. ಅಂತೆಯೇ ನಾನೂ ಚೌಪಾತಿಗೆ ನಡೆದು ಹೋಗುವ ಪದ್ಧತಿ ಇಟ್ಟು ಕೊಂಡೆ. ಬಿಸಿಯಾದ ತಲೆಗಳನ್ನು ತಂಪು ಮಾಡಿಕೊಳ್ಳುವ ಸ್ಥಳಗಳಲ್ಲಿ ಚೌಪಾತಿಯ ಮರಳು ದಂಡೆ ಯೋಗ್ಯ ಸ್ಥಳ. ಅಲ್ಲಿ ಹಲವು ಆಕರ್ಷಣೆಗಳಿವೆ, ವಿನೋದಗಳಿವೆ. ಬೊಂಬಾಯಿ ಚೌಪಾತಿಯಲ್ಲಿ ನಾವು ಅನೇಕ ಗುಂಪುಗಳನ್ನು ನೋಡುತ್ತೇವೆ. ಒಂದೊಂದು ಗುಂಪಿನಲ್ಲಿ ಒಂದೊಂದು ತರದ ವಹಿವಾಟು ನಡೆಯುತ್ತದೆ. ಒಂದು ಕಡೆ ಚೀನಿ ಡೊಂಬರಾಟ. ಇನ್ನೊಂದು ಕಡೆ ಕೂಲಿಕಾರರ 'ಕಿತ್, ಕಿತ್', ಆಟ. ಮತ್ತೊಂದು ಕಡೆ ಒರ್ವ ಸನ್ಯಾಸಿಯ ಆಸನ ಪ್ರದರ್ಶನ. ಮಗದೊಂದು ಕಡೆ 'ಟೂತ್ ಪೌಡರ್, ನೀಲಗಿರಿ, ದಾತುಪುಷ್ಟಿ' ಔಷಧಿಗಳ ಮಾರಾಟ. ಒಂದರಲ್ಲಿ ಒಬ್ಬನು ತನ್ನ ಎತ್ತಿನ ಬುದ್ಧಿಯನ್ನು ತೋರಿಸಿ ಹಣಬೇಡುತ್ತಾನೆ. ಒಂದು ಗುಂಪಿನಲ್ಲಿ ರಸಿಕರು ಲಾವಣಿ ಕೇಳುತ್ತಾರೆ. ಇನ್ನೊಂದರಲ್ಲಿ ಫಕೀರನೊಬ್ಬನು ಕಣ್ಣು ಕಿವಿಯ ಕೊಳೆಯನ್ನು ತೆಗೆದು ಶುಭ್ರ ಮಾಡುತ್ತಾನೆ.

ಇಂತಹ ಸಾರಸ್ಯವುಳ್ಳ ಸ್ಥಳಕ್ಕೆ ಹೋದಾಗ ಒಬ್ಬನು ತನ್ನ ತಾಪತ್ರಯಗಳನ್ನು ಮರೆತು ಸ್ವಲ್ಪ ಸಮಯದ ತನಕ ಹೃದಯದ ಭಾರವೇದನೆಯನ್ನು ಲಘುಮಾಡಿಕೊಳ್ಳಬಹುದು. ನನಗಂತೂ ನನ್ನ ಕಳವಳವನ್ನು ಕಮ್ಮಿಮಾಡಲು ಚೌಪಾತಿಯಷ್ಟು ಸ್ವತಂತ್ರವಾದ ವಿಹಾರ ಸ್ಥಳ ಬೇರೆ ಇಲ್ಲವೆನಿಸಿತು.

ಅಂದು ಒಂದು ದಿನ ನಾನು ಅಲ್ಲಿ ದೊಡ್ಡ ಗುಂಪೊಂದನ್ನು ನೋಡಿ ಆಕರ್ಷಿತನಾದೆ. ಕಿಕ್ಕಿರಿದ ಜನರು ಬೆರಗಿನಿಂದ ಮೌನವಾಗಿ ಒರ್ವ ಭಾಷಣಗಾರನ ವಿಶೇಷ ಪ್ರದರ್ಶನವನ್ನು ನೋಡುತಿದ್ದರು. ನಾನೂ ಗುಂಪಿನೊಳಗೆ ಹೊಕ್ಕು ಎದುರಿನ ಸ್ಥಾನದಲ್ಲಿ ನಿಂತು ಬಿಟ್ಟೆ. ಫುಲ್ ಸೂಟು ಹೇಟು ಧರಿಸಿದ ಒರ್ವ ತರುಣನು ಇಸ್ಪೀಟ್ ಪೆಟ್ಟಿಗೆ ಕೈಯಲ್ಲಿ ಹಿಡಿದು ಕಲಿಸುತ್ತಿದನು. ಅವನು ಮಾತಾಡತೊಡಗಿದ:

"ಪ್ರಿಯ ಬಾಂಧವರೇ, ನಾನು ಕೆಲವು ಆಟಗಳನ್ನು ಮಾಡಿ ನಿಮ್ಮ ಮನಸ್ಸು ಸಂತೋಷ ಪಡಿಸಲಿಚ್ಛಿಸುತ್ತೇನೆ. ಅಂದ ಮಾತ್ರಕ್ಕೆ ನಾನೂ ಒಬ್ಬ ದೊಂಬರಾಟದವನೆಂದು ತಿಳಿಯಬಾರದು. ನಿಮ್ಮ ಹತ್ತಿರ ಆಣೆ ಪಾವಣೆ ಬೇಡಿ ಒಟ್ಟು ಮಾಡುವುದು ನನ್ನ ಉದ್ದೇಶವಿಲ್ಲ. ಹಾಗೆ ಧರ್ಮ ಮಾಡಲಿಚ್ಛಿಸಿದವರು ಹಿಂದೂಗಳಾದರೆ ಸನ್ಯಾಸಿಗಳಿಗೂ, ಮುಸಲ್ಮಾನರೂ ಫಕೀರರಿಗು ಅದನ್ನು ಕೊಡಲಿ."

ಅವನು ಒಂದೆರಡು ಇಸ್ಪೀಟ್ ಚಮತ್ಕಾರಗಳನ್ನು ಮಾಡಿ ಸಭಿಕರನ್ನು ಕೌತುಕಗೊಳಿಸಿಬಿಟ್ಟ, ತೆಗೆದ ಎಲೆಯನ್ನು ಕ್ಷಣದಲ್ಲಿ ತಿಳಿಸುವನು. ಐದು ಜನರು ತೆಗೆದ ಎಲೆಯನ್ನು ಒಂದೇಯಾಗಿ ಮಾಡಿ ತೋರಿಸ್ಸಿದನು. ಕಡೆಗೆ ಅವನೆಂದ: "ಈಗ ಕಡೆಯ ಒಂದು ಆಟ ಮಾಡಿ ತೋರಿಸುತ್ತೇನೆ. ಈ ಎಲೆಗಳನ್ನೆಲ್ಲ ಹತ್ತತ್ತು ರೂಪಾಯಿಯ ನೋಟುಗಳನ್ನಾಗಿ ಮಾಡಿ, ಅವುಗಳನ್ನು ಚಿಲ್ಲರೆ ರೂಪ್ಯಾಗಳಾಗಿ ಮಾಡಿ, ಎಲ್ಲರಿಗೂ ಹಂಚಿಬಿಡುತ್ತೇನೆ. ಇದಕ್ಕೆ ದಯವಿಟ್ಟು ತಾವುಗಳು ತಮ್ಮ ಕೈಕಾಲುಗಳಿಗೆ ಹತ್ತು ಮಿನಿಟಿನ ಶ್ರಮ ಕೊಟ್ಟು ನನ್ನ ಇನ್ನೊಂದು ಅದ್ಭುತವನ್ನು ನೋಡುವಿರಂತೆ. ಎಲ್ಲವೂ ಮುಗಿದ ಮೇಲೆ ತಾವು ತಮ್ಮಮನೆಗೆ, ನಾನು ನನ್ನ ಛತ್ರಕ್ಕೆ" ಹೀಗೆ ಹೇಳುತ್ತಾ ಒಂದು ಕಪ್ಪು ಪೆಟ್ಟಿಗೆಯೊಳಗೆ ಇಸ್ಪೀಟ್ ಪೆಟ್ಟಿಗೆಯನ್ನು ಇಟ್ಟುಬಿಟ್ಟು ಏನೊ ಮಂತ್ರ ಜಪಿಸಿದ್ದಂತೆ ನಟಿಸಿದನು. ನಂತರದ ಅವನ ಆಟ ನಿಜವಾಗಿಯೂ ಅದ್ಭುತವಿತ್ತು. ಅವನು ತನ್ನ ಸಂಗಡವಿದ್ದ ಹುಡುಗನನ್ನು ನೆಲದ ಮೇಲೆ ಕುಳ್ಳಿರಿಸಿ ಏನೊ ಮಂತ್ರ ಹೇಳುತ್ತಾ ಗುರಗುರನೆ ಕೆಲವು ಹೊತ್ತು ದಿಟ್ಟಿಸಿ ಕೈಯಿಂದ ಬೆರಳುಗಳನ್ನು ಏನೋ ಎಳೆದುಕೊಳ್ಳುವಂತೆ ತಿರುಪಿಸುತ್ತಾ ಇದ್ದಾಗ ಎದುರಿನ ಹುಡುಗನು ಮೂರ್ಛೆ ತಪ್ಪಿದಂತೆ ಬಿದ್ದನು. ಕೂಡಲೇ ಅವನನ್ನು ಜಾದುಗಾರನು ಒಂದು ದಪ್ಪ ಕಂಬಳಿಯಿಂದ ಮುಚ್ಚಿ ಅದರ ಮೇಲೆ ಒಂದು ಚಿಕ್ಕ ಬಿಳಿ ಲೋಹದ ಬಿಲ್ಲೆಯನ್ನು ಇಟ್ಟನು.

ನಂತರ ಅವನು ಮಲಗಿದ ಹುಡುಗನನ್ನುದ್ದೇಶಿಸಿ "ಎಲ್ಲೈ, ದೈವವೇ ಹಾಜರಿದ್ದಿಯಾ" ಎಂದು ಕೇಳಿದನು. "ಹಾಜರ್" ಎಂದು ಉದ್ದವಾದ ಧ್ವನಿಯೊಂದು ಕಂಬಳಿ ಕೆಳಗಿನಿಂದ ಬಂತು. "ಇವರ ತಲೆಯ ಮೇಲೆ ಏನಿದೆ?" ಎಂದು ಒರ್ವ ಸಭಿಕನನ್ನು ತೋರಿಸಿದಾಗ "ಗಾಂಧೀ ಟೊಪ್ಪಿ" ಎಂಬದಾಗಿ ಸ್ವರ ಬಂತು. "ಇವರ ಬಳಿ ಏನಿದೆ?" "ಉಂಗುರ, ಟೊಪ್ಪಿ, ಛತ್ರಿ ಇದೆ."

ಹೀಗೆ ನೆರೆದ ಜನರ ಪರಿಚಯವನ್ನು ಚಾಚೂ ತಪ್ಪದೆ ಮಲಗಿದ ಹುಡುಗನು ಹೇಳ ತೊಡಗಿದನು. ಜಾದುಗಾರ ತರುಣನು ಇದೇನೆಂದು ಮುಟ್ಟಿದ ವಸ್ತುಗಳನ್ನು ಮಲಗಿದವನು ಹೇಳುವುದನ್ನು ಜನರು ನೋಡಿ ಬೆರಗುಗೊಂಡರು.

ತರುಣನು ಪುನಃ ಪ್ರಾರಂಭಿಸಿದ: "ಭಾಂಧವರೇ, ಇದು ಮಾಯವಲ್ಲ, ಮಾಟವಲ್ಲ. ಇದು ಇಂದ್ರಜಾಲ. ಮನುಷ್ಯನ ಮನಸ್ಸನ್ನು ಆಕರ್ಷಣ ಮಾಡುವ ಶಕ್ತಿ. ಇದನ್ನು ಓರ್ವ ಗುರುಗಳ ಬಳಿ ಹತ್ತು ವರ್ಷ ಕಲಿತಿದ್ದೇನೆ. ಇದೋ ನೋಡಿ ಈ ಬೆಳ್ಳಿಯ ಚಿಕ್ಕ ಡಬ್ಬಿ. ಇದರೊಳಗೆ ಮಹಾಕಾಳಿಯ ಪ್ರಸಾದವಿದೆ. ಇದನ್ನು ರೇಶ್ಮೆ ದಾರದಿಂದ ಮೈಯಲ್ಲಿ ಧರಿಸಿರಿ, ನಿಮ್ಮ ಪ್ರತಿಯೊಂದು ಕಷ್ಟಗಳು ದೂರವಾಗುತ್ತದೆ. ವ್ಯಾಜ್ಯಗಳು ಗುಣವಾಗುತ್ತವೆ. ಶತ್ರುಗಳು ನಾಶವಾಗುತ್ತಾರೆ, ನಿರುದ್ಯೋಗಿಗಳಿಗೆ ಲಾಭದ ಸಂದರ್ಭಗಳು ದೊರಕುತ್ತವೆ." ಬೇಗನೇ ನಾನೊಂದನ್ನು ಒಂದು ರೂಪ್ಯಾಗೆ ಪಡಕೊಂಡೆ.

ನಿರುದ್ಯೋಗಿಗಳಿಗೆ ಲಾಭದ ಸಂದರ್ಭವೆಂದಾಗ ನನಗೆ ನನ್ನ ಪರಿಸ್ಥಿತಿಯ ಅರಿವುಂಟಾಯಿತು. ಜನರು ತಮ್ಮ ದುಃಸ್ಥಿತಿಗಳನ್ನು ಪರಿಹರಿಸಲು ಆ ಪ್ರಸಾದ ಡಬ್ಬಿಯನ್ನು ಪಡಕೊಳ್ಳಲು ಚೀಲಗಳಿಂದ ಹಣ ತೆಗೆದು ಸಿದ್ಧಪಡಿಸಿಕೊಳ್ಳುತಿದ್ದರು. ನನ್ನ ಹತ್ತಿರ ನಿಂತಿದ್ದ ಓರ್ವ ಶ್ರೀಮಂತ ಶೇಟನು ತನ್ನ ದಪ್ಪವಾದ ಪಾಕೀಟನ್ನು ಹೊರಗೆ ತೆಗೆದು ಚಿಲ್ಲರೆ ಇಲ್ಲದಿದ್ದುದರಿಂದ ಐದು ರೂಪಾಯಿಯ ನೋಟನ್ನೇ ಹೊರತೆಗೆದನು. ಅಷ್ಟರಲ್ಲಿ ಇಂದ್ರಜಾಲದ ತರುಣನು "ಇನ್ನು ಬರೇ ಇಪ್ಪತ್ತೈದು ಮಾತ್ರ ಇರುವುದು. ನಂಬಿಕೆ ಇದ್ದವರು "ಐದೈದು ರೂಪಾಯಿ ಕೊಟ್ಟರೆ ಕೊಡುತ್ತೇನೆ" ಎಂದಾಗ ನನ್ನ ಹತ್ತಿರದ ಶ್ರೀಮಂತ ಶೇಟನು ಉತ್ಸುಕತೆಯಿಂದ ಮರವೆ ತಪ್ಪಿ, ನೋಟನ್ನು ತೋರಿಸಿ ತನಗೊಂದು ಕೊಡಬೇಕೆಂದು ಕೈನೀಡಿದನು. ಹಣದ ಪಾಕೇಟನ್ನು ಗಲಾಟೆಯಲ್ಲಿ ಅವನು ತನ್ನ ಕೋಟಿನ ಹೊರ ಚೀಲದಲ್ಲಿ ತುರುಕಿಸಿದನು.

(೧೧ನೇ ಪುಟಕ್ಕೆ ಮುಂದುವರಿದಿದೆ.)

1945ನೇ ಇಸವಿಯ

ಶಾರದಾ ಪ್ರೊಕೆಟ್ ಡೈರಿಗಳು

ಬೆಲೆ 0—12—0

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಮೃದುವಾದ ಚರ್ಮವನ್ನು ಬಹು

ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ

ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ಬಹುಸಂಖ್ಯಾಕ ಹಿಂದೂಗಳಿರುವ ಹೈದರಾಬಾದ್ ಸಂಸ್ಥಾನಕ್ಕೆ ನೈಜಾಮರೆಂಬ ಮುಸಲ್ಮಾನ್ ರಾಜರಿರುವಂತೆ ಹತ್ತರಲ್ಲಿ ಒಂಭತ್ತರಂತೆ ಮುಸಲ್ಮಾನರಿರುವ ಕಾಶ್ಮೀರದಲ್ಲಿ ಹಿಂದೂ ರಾಜರಿದ್ದಾರೆ. ಸ್ವಲ್ಪ ಸಮಯದಲ್ಲಿ ಕಾಶ್ಮೀರವು ಜಗತ್ತಿಗೇ ಆದರ್ಶವಾಗಿರುವಂತಹ ಸಂಸ್ಥಾನವಾಗುವುದು.

ಕಳೆದ ಒಕ್ಟೋಬರ್ ತಿಂಗಳಲ್ಲಿ ಕಾಶ್ಮೀರದ ಮಹಾರಾಜರು ತಮ್ಮ ಮಂತ್ರಿಮಂಡಲಕ್ಕೆ ಇರ್ವ ಪ್ರಜಾಪ್ರತಿನಿಧಿಗಳನ್ನು ಮಂತ್ರಿಗಳಾಗಿ ಚುನಾಯಿಸಿದರು. ಅವರಲ್ಲೊ ಒರ್ವ ಹಿಂದೂ, ಇನ್ನೋರ್ವ ಮುಸಲ್ಮಾನ್. ಈ ರೀತಿ ಅಲ್ಲಿ ಕಠಿಣವಾದ ಜಾತಿ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗುವುದು.

ಹಿಮಾಲಯದ ಈಶಾನ್ಯ ಇಳಿಬದಿಗಳಲ್ಲಿ ಕಾಶ್ಮೀರ್ ರಾಜ್ಯವು ಅಮೋಘ ಸೃಷ್ಟಿ ಸೌಂದರ್ಯದಿಂದ ಕಂಗೊಳಿಸುತ್ತದೆ. ಕಾಶ್ಮೀರಿನ ಉದ್ಯಾನವನಗಳು ಜಗತ್ಪ್ರಸಿದ್ಧಿ ಪಡೆದಿವೆ. ಅಲ್ಲಿಯ ಸೇಬು ಹಣ್ಣು ಅಂತರ್ರಾಷ್ಟ್ರೀಯ ಖ್ಯಾತಿಯವು. ಯುರೋಪಿನಲ್ಲಿ ಸ್ವಿಜ್ಜರ್‌ಲ್ಲೆಂಡ್ ಇರುವಂತೆ ಭಾರತದಲ್ಲಿ ಕಾಶ್ಮೀರ್ ಎರಡು ದೇಶಗಳೂ ಗುಡ್ಡ ಬೆಟ್ಟ ಪ್ರದೇಶಗಳು. ಕಾಶ್ಮೀರದಲ್ಲೂ ಸ್ವಿಜ್ಜರ್‌ಲೆಂಡಿನಂತೆ ಕುರಿ ಮಂದೆ ಸಾಕುತ್ತಾರೆ. ಯುರೋಪಿನ ಆ ಚಿಕ್ಕ ರಾಷ್ಟ್ರದಲ್ಲಿ ನಾಜೂಕಾದ ಗಡಿಯಾರ ಕೈಗಾರಿಕೆಯಿರುವುದಾದರೆ ಕಾಶ್ಮೀರದಲ್ಲಿ ನಾಜೂಕು ರೇಶ್ಮೆ ಕಂಬಳಿಗಳೂ, ಮನಾಕರ್ಷಕ ಲೋಹದ ಪಾತ್ರೆ ಒಡವೆಗಳೂ ತಯಾರಾಗುತ್ತದೆ. ಕಾಶ್ಮೀರ್ ಶಾಲುಗಳು ಪರಿಪೂರ್ಣತೆ ಹೊಂದಿರುವ ಅಲ್ಲಿನ ಕುಶಲ ಕೆಲಸಗಾರರ ತಯಾರಿಕೆಗಳು.

ಶೇರ್ ಇ. ಕಾಶ್ಮೀರ್

ಅಂದರೆ ಕಾಶ್ಮೀರದ ಸಿಂಹ ಎಂದರ್ಥ. ಟಿಪ್ಪುವಿನ ಪರಾಕ್ರಮಕ್ಕಾಗಿ ಬ್ರಿಟಿಷರು ಆತನನ್ನು ಮೈಸೂರು ಹುಲಿ ಎಂದರಂತೆ. ದಿವಂಗತ ಲಾಲಾಲಜ್‌ಪತ್ ರೈ ಅವರು ಪಂಜಾಬಿನ ಕೇಸರಿ ಎಂದೆನಿಸಲ್ಪಟ್ಟರು– ಅವರ ಅಪ್ರತಿಮ ಸ್ವಾತಂತ್ರ್ಯ ಸಂಗ್ರಾಮ ಸಾಹಕ್ಕಾಗಿ. ಹಾಗಾದರೆ ಈ ಕಾಶ್ಮೀರ್ ಸಿಂಹ ಯಾವ ವ್ಯಕ್ತಿ ಇರಬೇಕು?

ಅವರ ಹೆಸರು ಶೇಕ್ ಅಬ್ದುಲ್ಲಾ– ಕಾಶ್ಮೀರಿನ ಜನಪ್ರಿಯ ಮುಖಂಡರು. ಅವರು ಮುಸ್ಲಿಂ ಲೀಗಿನವರಿರಬಹುದೆಂದು ಊಹಿಸ ಬಾರದು. ಲೀಗಿನೊಂದಿಗೆ ಜಗಳಾಡಿ, ಜಿನ್ನರಿಗೇ ಕದನಕ್ಕೆ ಕರೆದ ಮಹಾ ಪ್ರತಾಪಿಗಳವರು. ಸಾಮಾನ್ಯ ಉಪಾಧ್ಯಾಯ ವೃತ್ತಿಯಲ್ಲಿದ್ದ ಶೇಕ್ ಅಬ್ದುಲ್ಲರು ಇಂದು ಪ್ರಜಾ ಮುಖಂಡರಾಗಿ ಮಹಾರಾಜರಿಂದಲೇ ಗೌರವಿಸಲ್ಪಡುತ್ತಾರೆ. ನಿಸ್ವಾರ್ಥ ಜನ ಸೇವೆಯೇ ಅವರ ಅಪಾರ ಜನಪ್ರಿಯತೆಗೆ ಕಾರಣವೆನ್ನಬೇಕು. ಏಕೆಂದರೆ ಇವರು ಜಾತೀವಾದಿಗಳಿರದೆ ಉಚ್ಚ ರಾಷ್ಟ್ರೀಯವಾದಿಗಳಿರುವರು.

ಶೇಕ್ ಅಬ್ದುಲ್ಲಾ ಅವರು ಕಾಶ್ಮೀರ್ ರಾಷ್ಟ್ರೀಯ ಪರಿಷತ್ತು ಎಂಬ ಸಂಸ್ಥೆಯನ್ನು ಸ್ಥಾಪಿಸಿ ಜನರ ಕೇಳಿಕೆಗಳನ್ನು ಸರಕಾರದ ಮುಂದೆ ಇಟ್ಟರು. ಕಾಶ್ಮೀರಿನ ಈ ರಾಷ್ಟ್ರೀಯ ಪರಿಷತ್ತು ಅಲ್ಲಿನ ಕಾಂಗ್ರೆಸ್ ಎಂದು ಹೇಳ ಬಹುದು. ಶೇಕ್ ಅಬ್ದುಲ್ಲರು ಅನೇಕ ಶಾಸನ ಭಂಗ ಚಳವಳಗಳನ್ನು ನಡೆಸಿ ಐದು ಸಲ ಜೈಲುವಾಸವನನುಭವಿಸಿರುವರು. ಕೊನೆಗೆ ಈಗ ಅಲ್ಲಿನ ಮಹಾರಾಜರ ಉದ್ದೇಶಗಳು ಪ್ರಜಾಹಿತದ್ದಿವೆ ಎಂದು ವಿಶ್ವಾಸ ತಾಳಿ

ಕಾಶ್ಮೀರ್ ಕೇಸರಿ ಶೇಕ್ ಅಬ್ದುಲ್ಲಾ

ಜಿನ್ನರಿಗೆ ಪಾಠ ಕಲಿಸಿದ ವ್ಯಕ್ತಿ

ಆಕರ್ಷಕ ನಾಡು– ಆದರ್ಶ ಸಂಸ್ಥಾನ

ಅವರು ತಮ್ಮ ಕಡೆಯಿಂದ ವಜೀರ್ ಗಂಗಾರಾವ್ ಮತ್ತು ಬೇಗ್ ಎಂಬಿರ್ವ ಪ್ರಜಾಪ್ರತಿನಿಧಿಗಳನ್ನು ಮಂತ್ರಿ ಪದವಿ ಸ್ವೀಕರಿಸಲು ಒಪ್ಪಿಸಿರುವರು. ಅವರ ಹಿಂದೆ ನಿಂತು ಈ ಕಾಶ್ಮೀರ್ ಶೇಕರು ಸಾವಧಾನವಾಗಿ ಪ್ರಜಾಹಿತದ ಕಾರ್ಯವನ್ನು ಶೀಘ್ರಗೊಳಿಸ ಬಯಸುತ್ತಾರೆ.

ಜಿನ್ನರಿಗೆ ಓಡಿಸಿದರು!

ಕೆಲವು ಸಮಯದ ಹಿಂದೆ ಮುಸ್ಲಿಂ ಲೀಗಿನ ಜಿನ್ನರು ಕಾಶ್ಮೀರಿಗೆ ಹೋಗಿದ್ದರು. ಅಲ್ಲಿನ ಲೀಗ್ ಅಧ್ಯಕ್ಷರಾದ ಗುಲಾಮ್ ಅಬ್ಬಾಸರನ್ನೂ ಶೇಕ್ ಅಬ್ದುಲ್ಲರನ್ನೂ ಅವರು ಒಟ್ಟುಗೂಡಿಸಿ ಮಾತುಕತೆ ನಡೆಸ್ಸಿದರು. ಹಿಂದೊಮ್ಮೆ ರಾಷ್ಟ್ರೀಯ ಪರಿಷತ್ತಿನ ಶೇಕ್ ಅಬ್ದುಲ್ಲರೂ, ಮುಸ್ಲಿಂ ಪರಿಷತ್ತಿನ (ಲೀಗಿನ) ಅಬ್ಬಾಸರೂ ಜೊತೆಯಲ್ಲಿ ರಾಜಕೀಯ ಕಾರ್ಯ ಪ್ರವೃತ್ತರಾಗಿದ್ದರು.

ಆದರೆ ಜಾತಿಮತ ಬಾಷಾ ವಿಚಾರವಾಗಿ ಇಕ್ಕಟ್ಟು ಮನೋಭಾವವಿದ್ದವರು ಶೇಕ್ ಅಬ್ದುಲ್ಲರಲ್ಲ. ದೇಶ ಸೇವೆಯೇ ಅವರ ಗುರಿಯಲ್ಲದೆ ಜಾತಿ ಭಾವನೆ ಅವರಿಗೆ ಒಲ್ಲದು. ಜಾತಿ ವಿಚಾರಕ್ಕೇನೇ ಪ್ರಾಮುಖ್ಯತೆ ಕೊಡುವ ಅಲ್ಲಿನ ಮುಸ್ಲಿಂ ಪರಿಷತ್ತಿನ ಅಬ್ಬಾಸರಿಗೂ ಅಬ್ದುಲ್ಲರಿಗೂ ಅಭಿಪ್ರಾಯ ಭೇದ ಬಂತು. ತಮ್ಮ ಕಾರ್ಯ ಸಾಧನೆಗೆ ಜಾತಿ ಪಕ್ಷದ ಬಿಲ್ಲೆ ಇರಬಾರದೆಂದೇ ಅಬ್ದುಲ್ಲರ ಪ್ರಥಮ ಶರ್ತ.

ಕ್ರಮೇಣ ಎರಡು ಮುಖಂಡರು ದೂರ ದೂರ ಸರಿಯುತ್ತಾ ಹೋದರು. ಈಗ ಅಬ್ದುಲ್ಲರ ರಾಷ್ಟ್ರೀಯ ಪಕ್ಷವು ಸರಕಾರದೊಡನೆ ಸಹಕರಿಸುವ ಧೋರಣೆ ತಾಳಿದಾಗ ಮುಸ್ಲಿಂ ಪರಿಷತ್ತಿನ ಅಬ್ಬಾಸರು ವಿರೋಧ ಪಕ್ಷದ ಸದಸ್ಯರಾಗಲಿಚ್ಛಿಸಿದ್ದಾರೆ.

ಇಂಥಹ ಪರಸ್ಪರ ವಿರೋಧಾಭಿಪ್ರಾಯದ ಮುಖಂಡರನ್ನು ಜಿನ್ನರು ಹತ್ತಿರ ತರ ನೋಡಿದರು. ಆದರೆ ಐಕ್ಯವಾಗಲಿಕ್ಕೆ ಅಬ್ದುಲ್ಲರ ಆಕ್ಷೇಪವಿಲ್ಲ. ಆ ಜಾತಿ ಬಿಲ್ಲೆ ಮಾತ್ರ ತೊಡೆದು ಹಾಕಬೇಕು. ಮುಸ್ಲಿಂ ಪರಿಷತ್ತಿನಲ್ಲಿ ಸಕಲರಿಗೂ ಆಶ್ರಯಸಿಗುವಂತಾಗ ಬೇಕು ಎಂಬುದೆ ಅವರ ಶರ್ತಗಳು. ಜಿನ್ನರು ಇದಕ್ಕೆ ಒಪ್ಪುವರೆ? ಜಿನ್ನರು ಖುದ್ದಾಗಿ ಜಾತಿ ಬಿಲ್ಲೆ ಬೇಕೆಂದವರು. ಅಲ್ಲಿನ ಅಲ್ಪ ಸಂಖ್ಯಾಕ ಹಿಂದೂಗಳಿಗೂ, ಸಿಕ್ಕರಿಗೂ ಜಿನ್ನರು ಸಂಪೂರ್ಣ ಭದ್ರತೆಯ ಭರವಸೆ ಕೊಟ್ಟರು. ಆದರೆ ರಾಷ್ಟ್ರವಾದಿ ಅಬ್ದುಲ್ಲರು ಮಾತ್ರ ಕೇಳುವವರಲ್ಲ.

ನಂತರ ಮುಸಲ್ಮಾನರದೇ ಒಂದು ಸಮ್ಮೇಳನ ಕರೆಯಿಸಿ ಅದರಲ್ಲಿ ಅಭಿಪ್ರಾಯ ವಿಚಾರಿಸೋಣವೆಂದು ಅಬ್ದುಲ್ಲರು ಮಿ। ಜಿನ್ನರಿಗೆ ಸೂಚಿಸಿದರು. ಆದರೆ ಆ ಸೂಚನೆ ಜಿನ್ನರಿಗೆ ಯಾಕೊ ರುಚಿಸಲಿಲ್ಲ. ಇದರಿಂದಾಗಿ ಸಂಧಾನ ಮುರಿಯಿತು. ಕಾಶ್ಮೀರದಲ್ಲೂ ಪಾಕಿಸ್ತಾನ ಬೇಕೆಂದೇ ಜಿನ್ನಾರವರ ಕೋರಿಕೆಇದ್ದಿತು. ಇದರಲ್ಲಿ ಇನ್ನೊಂದು ವಿಶೇಷವೆಂದರೆ ಪಾಕಿಸ್ತಾನಕ್ಕೆ ಕಾಶ್ಮೀರದ ಮುಸ್ಲಿಂ ಪರಿಷತ್ತಿನವರೇ ವಿರೋಧ ಸೂಚಿಸಿದ್ದರು. ಅಂದಮೇಲೆ ಶೇಕ್ ಅಬ್ದುಲ್ಲರಾದರೂ ಅದನ್ನು ಹೇಗೆ ಒಪ್ಪುವರು?

ಜಿನ್ನರ ಮಧ್ಯಸ್ಥಿಕೆಯಿಂದ ಬೇಸತ್ತವರಾಗಿ ಅಬ್ದುಲ್ಲರವರು ಅವರಿಗೆ ಕೊನೆಯ ಎಚ್ಚರಿಕೆ ಕೊಡುವವರಾದರು. 'ಕಾಶ್ಮೀರದಿಂದ ದೂರವಿಲ್ಲಿರಿ., ನಮ್ಮೊಳಗಿನ ವ್ಯವಹಾರದಲ್ಲಿ ಹೊರಗಿನವರು ಕೈಯ್ಯಾಡಿಸುವುದು ಬೇಡ' ವೆಂದು ಅವರು ಸ್ಪಷ್ಟ ತಿಳಿಸಿದರು. ಹಾಗೆ ಯಾರಾದರೂ ಅಧಿಕ ಪ್ರಸಂಗಮಾಡಿದರೆ ತಪ್ಪಿಸಿಕೊಳ್ಳಲಾಗದ ಗಂಡಾಂತರ ಅವರ ಮೇಲೆ ಬರಬಹುದೆಂದೂ ಕಡುವಾಗಿ ಜಿನ್ನರಿಗೆ ತಿಳಿಸಲಾಯಿತು. ವಿವೇಕವೇ ಸಾಹಸದ ಒಳ್ಳೇ ಲಕ್ಷಣವೆಂದು ಕಾಶ್ಮೀರದಿಂದ ಜಿನ್ನರು ತಳಕಿತ್ತಿದರು.

ಅಬ್ದುಲ್ಲರ ಉನ್ನತ ಉದ್ದೇಶ

ಮಹಾರಾಜರಿಂದ ಹೊಸತಾಗಿ ಘೋಷಿಸಲ್ಪಟ್ಟ ರಾಜ್ಯಕಾರಣ ಸುಧಾರಣೆಗಳು ಅಬ್ದುಲ್ಲರಿಗೆ ತುಂಬಾ ಸಹಾಯಕಾರಿ ಎಂದೂ, ಆ ಮೂಲಕ ಸಹಕರಿಸಿ ತಾವು ಜನತೆಯ ಪರಿಸ್ಥಿತಿಯನ್ನು ಸುಧಾರಿಸಬಹುದೆಂದು ತಿಳಿದು ಅವರು ಮಹಾರಾಜರೊಂದಿಗೆ ರಾಜಿ ಒಪ್ಪಂದ ಮಾಡಿಕೊಂಡ ಮೇಲೆ ಈಗ ಅವರ ಕಡೆಯಿಂದ ಇರ್ವ ಮಂತ್ರಿಗಳು ಅಧಿಕಾರ ವಹಿಸುವಂತಾದರು.

ಮಹಾರಾಜರ ಉದ್ದೇಶವು 'ನನ್ನ ಮಕ್ಕಳಂತಿರುವ ಪ್ರಜೆಗಳನ್ನು ದಾರಿದ್ರ್ಯದ ದುರವಸ್ಥೆಯಿಂದ ಮೇಲಕ್ಕೆತ್ತಿ, ಅವರಿಗೆ ಶಿಕ್ಷಣ ಕೊಡುವುದರ ಮೂಲಕ ಜಗತ್ತಿನ ಮುಂದುವರಿದ ಜನತೆಯ ಸಮಾನಮಟ್ಟಕ್ಕೇರಿಸುವುದು' ಇರುತ್ತದೆ. ಮೂಢ ನಂಬಿಕೆಯ 'ಮುಖ' ಜನರ—ಶಾಸ್ತ್ರೀಯ ರೀತಿಯ ಕಸಬು ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದರ ಮೂಲಕ-ಕಾಶ್ಮೀರವನ್ನು ಜಗತ್ತಿನ ಆಕರ್ಷಕ ನಾಡಾಗಿ ಮಾತ್ರವಲ್ಲ ಆದರ್ಶ ರಾಜ್ಯವಾಗಿ ಮಾಡುವುದು ಅಲ್ಲಿನ ಮಹಾರಾಜರ ಮಹಾತ್ಮಾಕಾಂಕ್ಷೆ ಇರುತ್ತದೆ. ಅಂತೆಯೇ ಶೇಕ್ ಅಬ್ದುಲ್ಲರೂ ಅವರೊಡನೆ ಸಹಕರಿಸಿದರು.

ಚೀನಾ ರಷ್ಯಗಳಂತೆ

ಹೊಸ ಸುಧಾರಣೆಗಳಲ್ಲಿ ಜನರಿಗೆ ರಾಜಕೀಯ, ಸಾಮಾಜಿಕ ಮತ್ತು ಮತೀಯ ವಿಚಾರಣೆಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗುವುದು. ಕಸಬು ಕೈಗಾರಿಕೆಗಳ ಸರ್ವತೋಮುಖ ಅಭಿವೃದ್ಧಿ ಮಾಡಲ್ಪಡುವುದು. ಈ ಸಂಬಂಧ ರಷ್ಯನ್ ಪದ್ಧತಿಯನ್ನನುಸರಿಸಲಾಗುವುದು. ಚೀನದ ಸಹಕಾರಿ ಸಂಘಗಳ ಮಾದರಿಯ ಮೇಲೆ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸಲಾಗುವುದು. ಪ್ರಾಯಸ್ಥರೆಲ್ಲರೂ ಓಟು ಹಕ್ಕುಳ್ಳವರಾಗುವರು. ಪ್ರಾಥಮಿಕ ಶಿಕ್ಷಣವು ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಕೊಡಲಾಗುವುದು.

ನ್ಯಾಯದೃಷ್ಟಿಯಲ್ಲಿ ಸ್ತ್ರೀಯರಿಗೂ ಸಮಾನ ತರದ ಹಕ್ಕು ಕೊಡಲಾಗಿದೆ. ಎಲ್ಲಾ ಜಾತಿಯವರಿಗೂ ವಿವಾಹವಿಚ್ಛೇದದ ಹಕ್ಕು ಕೊಡಲ್ಪಟ್ಟದ್ದು ವರ ದಕ್ಷಿಣೆಯನ್ನು ಶಾಸನ ವಿರೋಧವೆಂದು ಮಾಡಲಾದುದು ಸುಧಾರಣೆಗಳ ಗಣನೀಯ ಅಂಶವಾಗಿದೆ.

ಶೇಕ್ ಅಬ್ದುಲ್ಲರು ಈ ತರಹರ ಸುಧಾರಣೆಗಳಿಗೆ ಒಪ್ಪಿ ಸಹಕರಿಸಲು ಸಮ್ಮತಿಸಿಸಿದ್ದುದು ಬಹಳ ಸಮಂಜಸವಾದುದೆಂದು ಅಭಿಪ್ರಾಯ ಪಡಲಾಗಿದೆ.

ಪ್ರಸಿದ್ಧ ಕಾಶ್ಮೀರಿಗಳು

ಕಾಶ್ಮೀರು ಆರ್ಯರ ಸಂಸ್ಕೃತಿ ಬೆಳೆದ ನಾಡು. ಅನೇಕ ಮಹಾಪುರುಷರು ಆ ನಾಡಿಗೆ ಸೇರಿದಂತವರಿದ್ದಾರೆ. ಪ್ರಸಿದ್ಧ ಕವಿ ಮಹಮ್ಮದ್ ಇಕ್ಬಾಲರು ಇಲ್ಲಿಯವರು. ಜಗತ್ಪ್ರಸಿದ್ಧ ನೆಹುರುಗಳು ಕಾಶ್ಮೀರಿ ಬ್ರಾಹ್ಮಣರು. ಸಪ್ರೂಗಳೂ ಕಾಶ್ಮೀರಿಗಳು. ಅಂದಮೇಲೆ ಇಂದು ಶೇಕ್ ಅಬ್ದುಲ್ಲರು ಅಪ್ರತಿಮ ಸಾಹಸಿಗಳಾಗಿ ಅವರ ಶ್ರೇಣಿಯಲ್ಲಿ ಸೇರಿದುದು ವಿಶೇಷವಲ್ಲ.

ಅವರು ಅಲ್ಲಿನ ಜನರಲ್ಲಿ ರಾಜಕೀಯ ಜಾಗೃತಿಯುತ್ಪನ್ನ ಮಾಡಿದರು. ಪ್ರತಿಯೊಂದು ಜಾತಿಯವರೂ ಈ ನಿಸ್ವಾರ್ಥ ಮುಖಂಡರನ್ನು ಹಿಂಬಾಲಿಸಿ ತ್ಯಾಗ ಬಲಿದಾನ ಮಾಡಿದರು. ಅವರ ಉನ್ನತ ಧ್ಯೇಯ ಜೀವನವು ಯಾವ ಜಾತಿವಾದಿಯನ್ನೂ ಚಿಸನಾದಿರದು.

ಶೇಕಡಾ ತೊಂಬತ್ತರಷ್ಟು ಕೃಷಿಕರೂ, ಕುರುಬರೂ ಆಗಿರುವ ಜನರಲ್ಲಿ ನವಚೇತನ ಸುಧಾರಣೆಗಳ ಕೆಚ್ಚನ್ನು ಕೆರಳಿಸಿದ ಶೇಕ್ ಅಬ್ದುಲ್ಲರು ನಿಜವಾಗಿಯೂ ಅಸಾಮಾನ್ಯ ವ್ಯಕ್ತಿಗಳು. ಅವರು ಪುನಃ ಐಕ್ಯತೆಗಾಗಿ ಪರಿಶ್ರಮಿಸುತಿದ್ದಾರೆ. ಅವರು ಮುಸ್ಲಿಂ ಪರಿಷತ್ತಿನೊಡನೆ ಐಕ್ಯಮಾಡಿಕೊಂಡರೆ ಇಲ್ಲಿಯ ಕಾಂಗ್ರೆಸ್ ಮುಸ್ಲಿಂ ಲೀಗುಗಳಿಗೂ ಒಂದು ಮಾದರಿ ತೋರಿಸಿದಂತಾಗುತ್ತದೆ.

ಕಾಶ್ಮೀರಿ ಜವಾಹರರು ಅಲ್ಲಿನ ಸಿಂಹದ ಕುರಿತು ಹೀಗೆ ಬರೆದಿದ್ದಾರೆ:– ಜನತೆಯ ಆದರಣೀಯ ಮತ್ತು ಪ್ರೀತಿಯ ಮುಖಂಡರಿವರು. ಅವರು ತಮ್ಮ ಸಂಸ್ಥಾನದ ಇಕ್ಕಟ್ಟಾದ ಜಾತೀಯ ರಾಜಕೀಯದ ಕಿರು ನದಿಯನ್ನು ವಿಶಾಲ ರಾಷ್ಟ್ರೀಯತೆಯ ಸಾಗರದೊಳಗೆ ಹರಿಸಿದರು."

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಗ್ರೀಸಿನಲ್ಲಿ ಪ್ರಗತಿಗಾಮಿ ಪಕ್ಷಗಳು ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಹೋರಾಟವನ್ನು ಮುಂದುವರಿಸಿವೆ. ಗ್ರೀಸಿನ ಹೆಚ್ಚಿನ ಪ್ರದೇಶವು ಅವರ ಹಿಡಿತದಲ್ಲಿರುವುದು. ಅವರನ್ನು ಹತೋಟಿಗೆ ತರಲು ಬ್ರಿಟಿಷರು ಸಿಡಿಗುಂಡು, ಶಸ್ತ್ರಗಳನ್ನು ದಾರಳವಾಗಿ, ಅತ್ತಕಡೆಗೆ ಸಾಗಿಸುತ್ತಿರುವರು. ದೊಡ್ಡ ಯುದ್ಧರಂಗಕ್ಕೆ ಬೇಕಾದ ಮಿತಿಯಲ್ಲಿ ಪೂರೈಕೆಯು ನಡೆಯುತ್ತಿದೆ. ಇಷ್ಟೆಲ್ಲಾ ವ್ಯವಸ್ಥೆಗಳು ನಡೆಯುತ್ತಿರುವುದು ಮೊನ್ನೆ ಮೊನ್ನೆ ಜರ್ಮನರನ್ನು ವಿರೋಧಿಸಿದ ಪಂಗಡಗಳ ವಿರೋಧವಾಗಿ.

ಚರ್ಚಿಲ್ಲರ ಸರಕಾರದ ಈ ಧೋರಣವು, ಪ್ರಜಾಪ್ರಭುತ್ವವಾದೀ ಹಿತೈಷಿಗಳಿಗೆ ಅಸಂಯುಕರವೆನಿಸಿದೆ. ಪ್ರತಿಗಾಮಿ ಪ್ರಭಾವಗಳ ಕಡೆಗೆ ಅವರು ಆಸಕ್ತಿ ತೋರಿಸುವುದರಿಂದ, ಬ್ರಿಟನಿನ ಲೇಬರ ಪಕ್ಷಕ್ಕೂ, ಪತ್ರಿಕೆಗಳಿಗೂ, ಹೆಚ್ಚಿನ ಪ್ರಜಾವರ್ಗಕ್ಕೂ ಅಸಮಾಧಾನ ಉಂಟಾಗಿ ಚರ್ಚಿಲ್ಲರು ತಿದ್ದಿಕೊಳ್ಳುವ ಬಗ್ಗೆ ಅನೇಕ ಸೂಚನೆಗಳಾಗಿದ್ದರೂ ಅವು ನಿರರ್ಥಕವಾಗಿವೆ. ಈ ಟೀಕೆಗಳಾದ ಮೇಲೆ ನಡೆದ ಘಟನೆ ಎಂದರೆ ಗ್ರೀಸಿನ ಸಮಸ್ಯೆ ನಿವಾರಣೆಗಾಗಿ ಸಂಧಾನ ವ್ಯವಹಾರಗಳನ್ನು ನಡೆಯಿಸುವ ಬಗ್ಗೆ ಚರ್ಚಿಲ್ ಸರಕಾರದ ಪರವಾಗಿ ಮುಖಂಡರೊಬ್ಬರು ಅತ್ತಕಡೆಗೆ ಕಳುಹಿಸಲ್ಪಟ್ಟಿರುವುದು.

ಆದರೆ ಬ್ರಿಟಿಷರ ಆಧೀನದಲ್ಲಿ ಗ್ರೀಸಿನಲ್ಲಿ ರಚನೆಯಾದ ಸರಕಾರವು ಪ್ರಗತಿಗಾಮಿಯಲ್ಲ, ಈ ಸರಕಾರದ ನಾಯಕರಾಗಿ ಚುನಾಯಿತರಾದ ವ್ಯಕ್ತಿಯಲ್ಲಿ ಕ್ರಾಂತಿಯೆಬ್ಬಿಸಿದ ಪ್ರಗತಿಗಾಮಿ ಪಕ್ಷಗಳಿಗೆ ಸಮಾಧಾನವಿಲ್ಲ, ಎಂಬ ಕಾರಣದಿಂದಲೆ ಅಲ್ಲಿ ಕ್ಷೋಭೆಯು ಉಂಟಾದುದು. ಬ್ರಿಟಿಷರ ಆಧೀನದಲ್ಲಿ ಫೆಸಿಷ್ಟ ಮನೋವೃತ್ತಿಯ ಜನರಿಗೆ ಹೆಚ್ಚಿನ ಆಸ್ಪದ ದೊರಕಿದುದರಿಂದ, ಪ್ರಜಾಪ್ರಭುತ್ವವಾದೀನೀತಿಯನ್ನು ಪ್ರತಿಪಾದಿಸುವ ಪಕ್ಷಗಳು ತಮ್ಮ ನೀತಿಯನ್ನು ಎತ್ತಿಹಿಡಿಯಲು ಶಸ್ತ್ರ ಎತ್ತಿರುವರು.

ಈ ಕ್ಷೋಭೆಯು ತಣಿಯಬೇಕಾದರೆ ಅಲ್ಲಿ ಪ್ರಜಾಪ್ರಭುತ್ವವಾದದ ಕಡೆಗೆ ಹೆಚ್ಚಿನ ಮಾಲಿಕೆಯಿರುವ ಸರಕಾರದ ರಚನೆಯಾಗಬೇಕು. ಬ್ರಿಟಿಷರು ಎತ್ತಿಹಿಡಿದ ಅರ್ಧ ಫೆಸಿಷ್ಟ ಪ್ರಭಾವಗಳು ಲೋಪವಾಗಬೇಕು. ಫೆಸಿಷ್ಟ ಮನೋವೃತ್ತಿಯಿಂದ ಕೂಡಿದ ಈಗ ನೇಮಕ ಹೊಂದಿದ ಪ್ರಧಾನರು ಅಧಿಕಾರ ತ್ಯಜಿಸಬೇಕು.

ಪ್ರಜಾಪ್ರಭುತ್ವವಾದೀ ನೀತಿಯ ರಕ್ಷಣೆಗೋಸ್ಕರ, ತಾವು ಈ ಯುದ್ಧವನ್ನು ಫೆಸಿಷ್ಟರ ವಿರೋಧವಾಗಿ ನಡೆಯಿಸುತ್ತಿರುವೆವಾಗಿ ಮಿತ್ರರ ನಾಯಕರು ಆಗಿಂದಾಗ್ಗೆ ಸಾರಿದ್ದರೂ, ಆ ಕುರಿತು ನಿರ್ದಿಷ್ಟವಾಗ್ದಾನಗಳಿಂದ ಕೂಡಿದ ಪ್ರಕಟಣೆಗಳು ಹೊರಡಿಸಲಾಗಿದ್ದರೂ, ಗ್ರೀಸಿನಲ್ಲಿ ಚರ್ಚಿಲ್ಲರ ಸರಕಾರವು ಪ್ರಗತಿಗಾಮಿ ಪ್ರಜಾಪ್ರಭುತ್ವವಾದೀ ನೀತಿಗೆ ವಿರೋಧವಾಗಿ, ಪ್ರಗತಿ ವಿರೋಧಕ ಫೆಸಿಷ್ಟ ಜನರಿಗೆ ಬೆಂಬಲ ಕೊಟ್ಟಿದುದರಿಂದ ಮಿತ್ರರ ಕುರಿತು ಇಷ್ಟರ ತನಕ ಪ್ರಜಾಪ್ರಭುತ್ವವಾದೀ ಜಗತ್ತಿಗಿರುವ ಆಶಯಗಳೆಲ್ಲಾ ಮಾಯವಾಗುವಂತಾಗಿದೆ.

ಚರ್ಚಿಲ್ ಪಂಗಡದಲ್ಲಿರುವ ಸಂಕುಚಿತ ಭಾವವು, ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆ ಕುರಿತು ಮಾತ್ರವಲ್ಲ, ಪ್ರಜಾಪ್ರಭುತ್ವವಾದದ ಕುರಿತು ಇರುವುದು ಎಂದು ಈ ಪ್ರಕರಣದಿಂದ ವಿಶದವಾಗುತ್ತದೆ.

ಪ್ರಚಲಿತ ಸಮಾಚಾರಗಳು

ಚರ್ಚಿಲ್ಲರು ಗ್ರೀಸಿನಲ್ಲಿ ತಾವು ಕೈಕೊಂಡ ಧೋರಣವನ್ನು ಎತ್ತಿಹಿಡಿದು, ಪೋಲೆಂಡದಲ್ಲಿ ಸ್ಟೇಲಿನನು ತನ್ನದೇ ನೀತಿಯನ್ನು ನಡೆಯಿಸುವ ಕುರಿತು ಸಮಾಧಾನ ಸೂಚಿಸಿ ಭಾಷಣವಿತ್ತಿರುವರು. ಹಿಂದೆ ಕರ್ಜನರಿಂದ ನಿರ್ಧರಿಸಲ್ಪಟ್ಟಂತೆ ಪೋಲೆಂಡದಪ್ರದೇಶಗಳನ್ನು ಕೆಲವು ರಷ್ಯಕ್ಕೆ ಸಲ್ಲಿಸಿ, ಈ ನಷ್ಟವನ್ನು ಜರ್ಮನಿಯ ಖರ್ಚಿನಲ್ಲಿ ಪೂರ್ವ ಪ್ರಸ್ಸಿಯಾ ಡೆಂಜಿಗ್ ಕೊರಿಡರ್ ಪ್ರದೇಶವೆಲ್ಲಾ ಪೋಲೆಂಡಿಗೆ ಕೂಡಿಸಿ ಭರ್ತಿಮಾಡಿ, ಈ ಕಾರಣದಿಂದ ಅಲ್ಲಿ ಮುಂದಕ್ಕೆ ಶಾಂತಿಭಂಗವಾಗದಂತೆ ಜರ್ಮನ ಪ್ರಜೆಗಳೆನ್ನೆಲ್ಲಾ ಜರ್ಮನಿಯ ಉಳಿದ ಭಾಗಕ್ಕೆ ವರ್ಗಾಯಿಸುವ ಸೂಚನೆಯು ಅವರಿಂದ ಮಾಡಲಾಗಿದೆ.

ಜಗತ್ತಿನ ಶಾಂತಿಭಂಗಕ್ಕೆ ಜರ್ಮನಿಯು ಕಾರಣವೆಂದು, ತಿಳಿದು ಮಿತ್ರರು ಅವರ ಮೇಲೆ ಈ ತರದಲ್ಲಿ ಸೇಡು ತೀರಿಸಲು ಯತ್ನಿಸುತ್ತಿರುವರು. ಕಳೆದ ಮಹಾಯುದ್ಧದ ನಂತರ ಜರ್ಮನಿಯ ಮೇಲೆ ಸೇಡುತ್ತಿರುವ ಧೋರಣದಿಂದಲೆ ಆಗಿನ ಮಿತ್ರರು ವರ್ತಿಸಿದುದರಿಂದ ಪರಿಣಾಮವಾಗಿಯೆ ಈ ಯುದ್ಧವು ಉಂಟಾದುದು. ಈ ಯುದ್ಧವು ನಡೆಯುತ್ತಿದ್ದ ಹಾಗೆ ಇನ್ನೊಂದು ಮಹಾಯುದ್ಧದ ಬೀಜವು ಬಿತ್ತಲ್ಪಡುತ್ತಿದೆ. ಚರ್ಚಿಲ್ಲರ ಧೋರಣ ತಿದ್ದಲ್ಪಡದಿದ್ದರೆ ಮತ್ತವರ ಸೂಚನೆಗಳು ನಡೆಯಿಸಲ್ಪಟ್ಟರೆ. ಚರ್ಚಿಲ್ಲರ ಸೂಚನೆಯಿಂದ ಜರ್ಮನರು ತಮ್ಮ ದೇಶವನ್ನು ರಕ್ಷಿಸಿಕೊಳ್ಳುವರೆ ಇನ್ನೂ ಪ್ರವೃತ್ತರಾಗಬಹುದು. ಒಂದು ವೇಳೆ ಜಯವಿಲ್ಲದಿದ್ದರೂ, ಒಳ್ಳೆ ಗೌರವನಿಯ ರಾಜಿ ಶರತಗಳನ್ನು ಪಡೆಯುವ ದೃಷ್ಟಿಯಿಂದಲಾದರೂ ಜರ್ಮನರು ಯುದ್ಧರಂಗದಲ್ಲಿ ಇನ್ನು ಹೆಚ್ಚಿನ ಸಾಹಸವನ್ನೂ ಯತ್ನಗಳನ್ನೂ, ಮಾಡಿ ಹೋರಾಡದೆ ಇರರು.

"ಚರ್ಚಿಲ್ಲರು ನಮಗೆ ಇನ್ನೂ ಕಳಂಕವನ್ನು ತರುವ ಮೊದಲೆ ಅಧಿಕಾರವನ್ನು ತ್ಯಜಿಸಿ ಹೊರಟುಹೋದರೆ ಉತ್ತಮವಿದೆ. ತಮ್ಮೊಡನೆ ಅವರು ಜಗತ್ತಿನಲ್ಲಿರುವ ರಾಜರುಗಳನ್ನೆಲ್ಲಾ ಕೊಂಡೊಯ್ದುಬಿಟ್ಟರೆ, ಮಾನವತೆಯ ಆಶಯಗಳಿಗೆ ದೊಡ್ಡ ಉಪಕಾರವಾಡಿದಂತಾಗುವುದು. ಚರ್ಚಿಲ್ಲರಿಗಿಂತ ಸ್ಕ್ಯಾಟ್ ಪೋರನೊಬ್ಬನಲ್ಲಿ ಹೆಚ್ಚಿನ ಜ್ಞಾನವಿದೆ. ಚರ್ಚಿಲರ ಹುಟ್ಟು, ತರಬೇತು, ಬೆಳವಣಿಗೆ ಆದುದು ಶ್ರೀಮಂತ ವಾತಾವರಣದಲ್ಲೆ. ವಿಚಾರ ಶಕ್ತಿಯೂ, ಒಳ್ಳೆ ಪರಿಜ್ಞಾನವೂ ಅವರಲ್ಲಿ ಕಾಣಿಸಿಕೊಳ್ಳುವುದಿಲ್ಲ. ಸದ್ಯದ ವಿದ್ಯಮಾನಗಳಿಗೆ ಸರಿಯಾಗಿ ವರ್ತಿಸುವ ಯೋಗ್ಯತೆಯು ಅವರಲ್ಲಿ ಕಾಣಿಸುವುದಿಲ್ಲ. ಅವರಿಂದಾಗತಕ್ಕ ಕೆಲಸವು ಆಗಿಬಿಟ್ಟಿದೆ. ಅವರಿಂದ ನಮಗಾದ ಉಪಕಾರವನ್ನು ನಾವು ಮರೆತುಬಿಡುವ ಮೊದಲೆ ಅವರು ಅಧಿಕಾರ ತೊರೆಯಬೇಕು" ಎಂಬೀ ಅಭಿಪ್ರಾಯವಿರುವ "ಚರ್ಚಿಲ್ಲರು ಹೋಗಬೇಕು" ಎಂಬ ಶಿರೋನಾಮದ ಅಡಿಯಲ್ಲಿ ಪ್ರಖ್ಯಾತ ಆಂಗ್ಲ ಸಾಹಿತಿಗಳಾದ ಎಚ್. ಜಿ. ವೆಲ್ಸರು ಒಂದು ಲೇಖವನ್ನು ಹೊರಡಿಸಿರುವರು.

ಗ್ರೀಸನ್ನು ತಮ್ಮ ಆಧೀನದಲ್ಲಿಟ್ಟುಕೊಳ್ಳಲು ಬ್ರಿಟಿಷ ಸರಕಾರದ ಪ್ರಯತ್ನ, ಪೋಲೆಂಡನ್ನು ರಷ್ಯಕ್ಕೆ ಹಂಚಿಕೊಟ್ಟು, ಪೋಲೆಂಡಿನ ನಷ್ಟವನ್ನು ಜರ್ಮನಿಯ ಖರ್ಚಿನಲ್ಲಿ ಭರ್ತಿಮಾಡುವ ಸೂಚನೆ ಇವುಗಳ ಹಿಂದಿನ ನೆನಪನ್ನು ನಮಗೆ ಮಾಡಿಕೊಡುತ್ತಿವೆ. ಇವುಗಳು ಪ್ರಭುತ್ವ ರಾಷ್ಟ್ರಗಳು ತಮ್ಮ ಹಿತ ಸಾಧಿಸುವ ಹಂಚಿಕೆಗಳು. ಈ ತರದ ಹಂಚಿಕೆಗಳಿಂದ ಪ್ರಜಾಪ್ರಭುತ್ವವಾದದ ರಕ್ಷಣೆಯು ಎಂದಿಗೂ ಆಗದು. ಜಗತ್ತು ಕಲಹಭೂಮಿಯಾಗಿ ಪರಿವರ್ತಿಸಲ್ಪಡುವುದು.

ಮಜೂರ ಪಕ್ಷಗಳು ಯಾವಾಗಲೂ ಪ್ರಗತಿಗಾಮಿಗಳಾಗಿರಬೇಕು ಪ್ರಜಾಪ್ರಭುತ್ವ ನೀತಿಗೆ ಬೆಂಬಲಕೊಟ್ಟರೆ ಮಾತ್ರ ಈ ಪಕ್ಷಗಳ ಧ್ಯೇಯಸಾಧನೆಯು ಸುಲಭವಾಗುವುದು. ಆದರೆ ಇಂಗ್ಲಾಂಡಿನ ಮಜೂರ ಪಕ್ಷದ ಪರಿಷತ್ತಿನಲ್ಲಿ ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಯ ಕುರಿತು ಬಂದ ಗೊತ್ತುವಳಿಯಿಂದ ಪ್ರಗತಿವಿರೋಧಕರ ಪ್ರಭಾವಗಳು ಶ್ರೀಮಂತ ವರ್ಗದಲ್ಲಿ ಮಾತ್ರವಲ್ಲ, ಮಜೂರ ಪಕ್ಷದಲ್ಲೂ ಕೂಡಿರುವುದಾಗಿ ತಿಳಿಯಬೇಕಾಗಿಯದೆ.

ಪ್ರಜಾಪ್ರಭುತ್ವವಾದೀ ನೀತಿಯನ್ನಯ ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆ ಬಗೆಹರಿಸಲ್ಪಡುವಂತೆ ಸೆರೆಮನೆವಾಸದಲ್ಲಿರುವ ಭಾರತೀಯ ರಾಜಕೀಯ ಮುಖಂಡರ ಬಿಡುಗಡೆಯಾಗಿ ಅವರೊಡನೆ ಪರಸ್ಪರ ಅಭಿಪ್ರಾಯ ಸಮ್ಮಿಳನವಾಗಿ ಯೋಗ್ಯ ವ್ಯವಸ್ಥೆಗಳಾಗಿ ಹಿಂದೂದೇಶವು ಸ್ವತಂತ್ರವಾಗಿ, ಪ್ರಜಾಪ್ರಭುತ್ವವಾದಿ ನೀತಿಯನ್ನು ಎತ್ತಿ ಹಿಡಿಯುವರೆ ಪೂರ್ವದಲ್ಲಿರುವ ಮಿತ್ರರು ನಡೆಯಿಸುತ್ತಿರುವ ಯುದ್ಧಕ್ಕೆ ಹಿಂದೂದೇಶವು ಪ್ರೋತ್ಸಾಹ ಬೆಂಬಲಗಳು ದೊರಕುವಂತಾಗಬೇಕೆಂಬ ಗೊತ್ತುವಳಿಯು, ಅಕಸ್ಮಾತ್ತಾಗಿ ಮಂಡನೆಗೆ ಮುಂದೆ ಬಂದಾಗ, ಅಲ್ಲಿ ನೆರೆದ ಕೆಲವು ಲೇಬರ್ ಮುಖಂಡರು ಅಮೆರಿಯವರ ರಾಗವನ್ನೇ ಹಾಡಿಬಿಟ್ಟರು!

ಲೇಬರ್ ಪಕ್ಷದಲ್ಲಿ ಲಂಚಗುಳಿಕರು ಇರುವರೊ ಎಂಬ ಸಂದೇಹ ಉಂಟಾಗಿದೆ. ಮಜೂರ ಪಕ್ಷದಲ್ಲೂ ಕಪ್ಪುಕುರಿಗಳೂ (ಪ್ರಗತಿವಿರೋಧಕರೂ) ಇರುವರೆಂದು ಹಿಂದುದೇಶದ ಮಜೂರ ಸಂಘಗಳ ನಡೆವಳಿಕೆಗಳಲ್ಲಿ ತುಂಬಾ ದೃಷ್ಟಾಂತಗಳು ದೊರಕಿವೆ. ಮಜೂರ ನಾಯಕರಾದ ಶ್ರೀ ಎಂ. ಎನ್. ರಾಯರು, ತಿಂಗಳೊಂದರ ೧೩ ಸಾವಿರ ರೂ. ಗಳನ್ನು ಗಳಿಸುತ್ತಿರುವುದೂ, ಎಲ್ಲರಿಗೂ ತಿಳಿದ ಸಂಗತಿ. ಅಷ್ಟೆ ಅಲ್ಲ, ಅವರ ಆಧೀನದಲ್ಲಿರುವ ಸಂಘಗಳು ಒಟ್ಟು ಕೂಡಿಸಿದ ೪॥ ಲಕ್ಷ ರೂ.ಗಳು ಲೆಕ್ಕವಿಲ್ಲದೆ ಕಣ್ಮರೆಯಾಗಿವೆಂದೂ, ಇನ್ನೋರ್ವ ಮಜೂರ ನಾಯಕರು ರೋಯರ ಮೇಲೆ ಮುನಿದು ಬಿದ್ದು ಮಾಡಿದ ಪ್ರಕಟಣೆಯಿಂದ ತಿಳಿದು ಬಂದಿದೆ. ಮಜೂರ ಸಂಘಗಳು ಇರುವುದಾದರೂ ಮಜೂರರ ಹಿತಸಾಧನೆಗೆ. ದುಡ್ಡಿನಾಶೆಗೆ ಹೀಗೆ ಅವುಗಳ ಮಾರಾಟವಾಗಬಹುದ?

ಚೀನದಲ್ಲಿ ಚಿಯಾಂಗರ ಪ್ರಕಟಣೆಯೊಂದು ಹೊರಡಿರುತ್ತದೆ. ಚೀನಾದಲ್ಲಿ ಪ್ರಜಾಪ್ರಭುತ್ವವಾದೀ ನೀತಿಗೆ ಆಸ್ಪದವಿಲ್ಲವೆಂದು ಹೊರಜಗತ್ತಿನಲ್ಲಿ ನಡೆದ ಟೀಕೆಯನ್ನು ಪ್ರಸ್ತಾಪಿಸಿ ಚೀನಾದ ಪ್ರಜಾಪ್ರಭುತ್ವವಾದೀಕರಣಕ್ಕೂ ಪಾಶ್ಚಾತ್ಯದ ಪ್ರಜಾಪ್ರಭುತ್ವವಾದೀಕರಣಕ್ಕೂ ತುಂಬಾ ವ್ಯತ್ಯಾಸವಿದೆ. ಆದರೆ ಪ್ರಜಾಪ್ರಭುತ್ವವಾದೀಕರಣವು ಚೀನಾದಲ್ಲಿ ಮುಂದೆ ಸಾಗಿದೆ. ಕೊಮ್ಯುನಿಷ್ಟರೊಡನೆ ಒಪ್ಪಂದವು ಬೇಗನೆ ಆಗುವ ತರದಲ್ಲಿ ಮಾತುಕತೆಗಳು ನಡೆಯುತ್ತಿವೆ- ಇದು ಆ ಪ್ರಕಟಣೆಯ ಸಾರವು.

ಚಿಯಾಂಗರು, ಪ್ರಗತಿವಿರೋಧಕ ಪ್ರಭಾವಗಳನ್ನು ಲೋಪಗೊಳಿಸುವರೆ ಯತ್ನಿಸುತ್ತಿರಬಹುದು. ಹಿಂದೂದೇಶದಲ್ಲೂ ಈ ಪ್ರಭಾವವು ಬಗೆಹರಿಸಲ್ಪಡಬೇಕು.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

Buy the Best
CASHEW SHELL OIL
We have great pleasure to announce that we have placed on the market the best and purest Cashew Shell oil manufactured by us.
Packing — Tin of 35 lbs. nett or bulk in barrels.
Hindusthan Commodity Corporation Ltd.
Manufacturers & Exporters,
CANARA BANK BUILDING BUNDER Mangalore.

ನವಧೆಲ್ಲಿಗೆ ಆಫಘಾನಿಸ್ಥಾನದಿಂದ ಮಿಲಿಟರಿ ಶಿಷ್ಟಮಂಡಳವೊಂದು ಬಂದಿರುವುದಾಗಿ ವಾರ್ತೆಯಿದೆ. ಹಿಂದೂದೇಶವು ಇಂದು ದೂರ ಪೂರ್ವದ ಯುದ್ಧರಂಗದ ತಳಹದಿಯಾಗಿದ್ದು, ಇಲ್ಲೀಗ ಆಧುನಿಕ ಯುದ್ಧಶಸ್ತ್ರಗಳೂ, ಯಂತ್ರ ಇತ್ಯಾದಿಗಳು ಧಾರಾಳವಾಗಿ ಸಿದ್ಧಮಾಡುವ ಕಾರ್ಖಾನೆಗಳು ಉದ್ಭವಿಸಿವೆ. ಅಮೆರಿಕಾ, ಬ್ರಿಟನುಗಳಿಂದ ಸೇನಾದಳಗಳು ಇಲ್ಲಿಗೆ ಬಂದು, ದೂರಪೂರ್ವದ ಯುದ್ಧರಂಗಕ್ಕೆ ತೆರಳುತ್ತಿವೆ. ಈ ಕಾರಣದಿಂದ ಆಧುನಿಕ ಯುದ್ಧಕ್ರಮಗಳ ಕುರಿತು ಅನುಭವವನ್ನು ಪಡೆಯಲು ಈ ಶಿಷ್ಟಮಂಡಳವು ಬಂದಿರಬೇಕು.

* * *

ದಕ್ಷಿಣ ಆಫ್ರಿಕೆಯಲ್ಲಿ ಜನರಲ್ ಸ್ಮಟ್ಸರು ಹಿಂದೀಯರ ನ್ಯಾಯವಾದ ಕೋರಿಕೆಗಳನ್ನು ನಡೆಯಿಸಿಕೊಡಲು ಸಿದ್ಧರಿಲ್ಲವೆಂಬ ಸೂಚಕಗಳು ದೊರತ್ತಿವೆ. ಈ ಕಾರಣದಿಂದ ಇಂಡಿಯ ಸರಕಾರದ ಭಾರತೀಯ ಸದಸ್ಯರಲ್ಲಿ ತುಂಬಾ ಅತೃಪ್ತಿ ಉಂಟಾಗಿದ್ದು ಅವರು ದ. ಆಫ್ರಿಕೆಯ ಮೇಲೆ ಪ್ರತಿಕಾರಗಳನ್ನು ತೆಗೆದುಕೊಳ್ಳಲು ಆತುರಪಡುತ್ತಿದ್ದರೂ, ಬ್ರಿಟಿಷ್ ಸರಕಾರವು ಆ ಕುರಿತು ತಣ್ಣಗಾಗಿಯೇ ಇದೆ. ಈ ಪ್ರಕರಣದಿಂದ ವೈಸ್ರಾಯರ ಎಕ್ಸಿಕ್ಯೂಟಿವ್ ಮಂಡಳದ ಭಾರತೀಯ ಸದಸ್ಯರುಯಾವ ಧೋರಣವನ್ನು ಕೈಕೊಳ್ಳಲಿರುವರೆಂದು ನೋಡಲಿದೆ.

* * *

ಹಿಂದೂದೇಶ ನರೇಂದ್ರ ಮಂಡಳದ ಸ್ಥಾಯಿಸಮಿತಿಯು ರಾಜಿಯಿತ್ತ ಸಮಾಚಾರವು ಬಂದಿತಷ್ಟೆ. ಆಶ್ರಿತರಾಜರುಗಳಿಗೂ ವೈಸ್ರಾಯರಿಗೂ ಕೆಲವೊಂದು ಭೇದಾಭಿಪ್ರಾಯಗಳು ಉಂಟಾಗಿದ್ದರೂ ಅವು ಅಷ್ಟೊಂದು ಮಹತ್ವದಲ್ಲವೆಂದೂ, ಬ್ರಿಟಿಷರಿಂದ ತಮ್ಮಮಟ್ಟಿಗೆ ಹೆಚ್ಚಿನ ರಕ್ಷಣಾ ಏರ್ಪಡನ್ನು ಪಡೆಯುವುದು ನರೇಂದ್ರರ ಉದ್ದಿಶ್ಯವಿರಬಹುದೆಂದು, ಈಗ ತಿಳಿದುಬಂದಿದೆ. ಆಶ್ರಿತ ರಾಜರುಗಳು ಪ್ರತಿಗಾಮಿಗಳಾಗಿರುವ ಕುರಿತು ಬ್ರಿಟಿಷ್ ಇಂಡಿಯಾ ಆಗುತ್ತಿರುವ ಟೀಕೆಗಳಿಂದ ಆಶ್ರಿತ ರಾಜ್ಯಗಳ ಪ್ರಜೆಗಳ ಹುರಿದುಂಬಿಸಲ್ಪಟ್ಟು, ಅಲ್ಲಿ ಪ್ರಗತಿಗಾಮಿ ಚಳವಳಿಯನ್ನು ನಡೆಯಿಸುತ್ತಿದ್ದಾರೆಂದೂ, ಈ ತರದಲ್ಲಿ ಟೀಕೆಗಳಾಗದ ಹಾಗೆ ಈ ರಾಜರುಗಳು ವೈಸ್ರಾಯರೊಡನೆ ರಕ್ಷಣೆ ಕೋರಿರುವರಂತೆ.

* * *

ಭಾರತೀಯರು ಸ್ವತಂತ್ರರಾಗಬೇಕಾದರೆ ರಚನಾತ್ಮಕ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಬೇಕಾಗಿದೆ। ಪರದಾಸ್ಯದಲ್ಲಿ ಬಿದ್ದು ವಿಕಾರವಾದ ಜನರ ಬುದ್ಧಿಯು ನೆಟ್ಟಗಾಗಬೇಕು. ಜನರು ಸುಧಾರಿತರಾಗಬೇಕು. ಈ ಸಮಸ್ಯೆಯ ಕುರಿತು ಗಾಂಧೀಜಿಯರು ಹೆಚ್ಚಿನ ಲಕ್ಷ್ಯವನ್ನು ತೋರಿಸುತ್ತಿರುವರು. ಈ ಕಾರ್ಯವು ತೀವ್ರವಾಗಿ ನಡೆಯಬೇಕೆಂದು ಅವರು ಪ್ರತಿಪಾದಿಸುತ್ತಿರುವರು. ಈ ಕಾರ್ಯಕ್ಕಾಗಿ ಕರ್ನಾಟಕ ಪ್ರಾಂತ್ಯಕ್ಕೊಂದು ಸಮಿತಿಯ ರಚನೆಯಾಗಿರುತ್ತದೆ. ಈ ಕುರಿತು ಶಿಕ್ಷಣಕೊಡಲು ಏರ್ಪಾಡುಗಳು ಮಾಡಲಾಗುತ್ತಿವೆ. ಇಷ್ಟೆಲ್ಲಾ ಕಾರ್ಯಕ್ರಮವು ಸಾಂಗವಾಗಿ ನಡೆಯಬೇಕಾದರೆ ಧನವು ಬೇಕು. ಈಗ ಸದ್ಯಕ್ಕೆ ಕರ್ನಾಟಕದಲ್ಲಿ ಕೈಕೊಳ್ಳುವ ಈಕಾರ್ಯಗಳಿಗೆ ಸಾಧಾರಣ ೫೦೦೦ ರೂ.ಗಳು ಬೇಕಾಗಿದೆ ಎಂದು ಅಂದಾಜು ಮಾಡಲಾಗಿದೆ. ದೇಶಭಕ್ತ ಕರ್ನಾಟಕಸ್ತರು ಈ ಧನವನ್ನು ಕೂಡಿಸಿಕೊಡಲು ಮುಂದೆಬರುವುದು ಅವಶ್ಯವಿದೆ. ಈ ವಿಧಾಯಕ ಕಾರ್ಯಗಳೊಡನೆ ಚರಕಾ ಸಂಘ, ಗ್ರಾಮೋದ್ಯೋಗ, ಹರಿಜನಸಂಘ, ಸಾಕ್ಷರತಾ ಪ್ರಚಾರ ಮೊದಲಾದವು ನೆರವಾಗಬೇಕೆಂದು ನಿಶ್ಚಿತವಾಗಿದೆ.

ಆರಿಸಿದ ಅಭಿಪ್ರಾಯಗಳು

ಕಾಂಗ್ರೆಸ್ಸಿನ ನೇತೃತ್ವದಲ್ಲಿ ರಚನಾತ್ಮಕ ಕಾರ್ಯಕರ್ತರ ದೊಡ್ಡದೊಂದು ಸಂಘವನ್ನು ರಚಿಸುವ ಯತ್ನಗಳು ನಡೆದಿವೆ. ಈ ಸಂಘದ ಸದಸ್ಯರ ಸಂಖ್ಯೆಯು ಒಂದು ಲಕ್ಷವನ್ನು ಮೀರಬಹುದು. ಈ ಕಾರ್ಯಕರ್ತರ ಸಂಘಟನೆ ಬಗ್ಗೆ ಒಂದು ಕೇಂದ್ರ ಸಮಿತಿಯು ರಚಿಸಲಾಗುವುದು. ತಾಲೀಮಿ ಸಂಘ, ಚರಕಾ ಸಂಘ, ಗ್ರಾಮೋದ್ಯೋಗ ಸಂಘ, ಗೋಸೇವಾ ಸಂಘ ಮತ್ತು ಹರಿಜನ ಸೇವಕ ಸಂಘ-ಇವು ಪ್ರತಿಯೊಂದರಿಂದ ಮೂವರು ಪ್ರತಿನಿಧಿಗಳಂತೆ ಈ ಕೇಂದ್ರ ಸಮಿತಿಗೆ ಆರಿಸಲಾಗುವರು. ಇನ್ನಿತರ ದೇಶೋದ್ಧಾರಕ ಸಂಘಗಳು ಈ ಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸಿಕೊಡಬಹುದು. ಈ ಕೇಂದ್ರ ಸಮಿತಿ ವಿಧಾಯಕ ಕಾರ್ಯಗಳ ಕುರಿತು, ಸಲಹೆಗಳನ್ನು ಕೊಡುವುದು, ಸುಧಾರಣೆಗಳನ್ನು ಸೂಚಿಸುವುದು. ಹಿಂದೂದೇಶದ ಜೀವಾಳಗಳಾಗಿರುವ ಗ್ರಾಮಗಳಲ್ಲಿ ಸುಧಾರಣಾಕಾರ್ಯಗಳನ್ನು ನಡೆಯಿಸುವ ಬಗ್ಗೆ, ಈ ಒಂದು ಲಕ್ಷ ಜನರ ತರಬೇತಿ ಮಾಡಲಾಗುವುದು. ಗ್ರಾಮಸೇವಕರಾಗತಕ್ಕವರು, ಈ ತರಬೇತಿನ ನಂತರ ಗ್ರಾಮಸೇವಕರು ಹಳ್ಳಿಗಳಿಗೆ ಕಳುಹಿಸಲ್ಪಡುವರು. ಪ್ರಾರಂಭದಲ್ಲಿ ಇವರಿಗೆ ಮಾಸ ಒಂದರ ನೂರು ರೂಪಾಯಿಗಳ ಸಹಾಯದ್ರವ್ಯವು ಕೊಡಲಾಗುವುದು. ಆದರೆ ಕ್ರಮೇಣ ಅವರು ಸ್ವಾವಲಂಭಿಗಳಾಗುವಂತೆ ಕಾರ್ಯವು ನಡೆಯಬೇಕು. ಗ್ರಾಮಗಳಲ್ಲಿ ಸಾಕ್ಷರತೆ ಪ್ರಚಾರ, ಗ್ರಾಮೊದ್ಯೋಗಗಳನ್ನು ನಡೆಯಿಸುವರೆ ಸಹಾಯವನ್ನು ಕೊಡಲಾಗುವುದು, ಮುಂತಾದ ಕೆಲಸವು ಅನರಿಂದ ನಡೆಯಬೇಕು. ನಮ್ಮ ಹಳ್ಳಿಗರ ಉದ್ಧಾರ ಬಗ್ಗೆ ತರಬೇತಾದ ಸುಶಿಕ್ಷಿತ ಜನರು ದುಡಿಯುವುದು ಅತೀ ಅವಶ್ಯವಿದೆ. ಗ್ರಾಮಸೇವೆಯನ್ನೇ ಜೀವನದ ದಾರಿಯಾಗಿ ಸ್ವೀಕರಿಸಿ ಅವರು ದುಡಿಯಬೇಕಾಗಿದೆ. ನಮ್ಮ ತರುಣರು ಈ ಸಂಧಿಯನ್ನು ಉಪಯೋಗಿಸಲು ಆತ್ಮೋದ್ಧಾರಕ್ಕಾಗಿ ದೇಶೋದ್ಧಾರಕ್ಕಾಗಿ ಮುಂದೆ ಬರುವುದು ಅವಶ್ಯವಿದೆ.

* * *

ಗ್ರೀಸಿನಲ್ಲಿ ತೋರಿಸಲ್ಪಟ್ಟ ಚರ್ಚಿಲ್ ಸರಕಾರದ ಪ್ರತಿಗಾಮಿ ಧೋರಣದಿಂದ ಬ್ರಿಟನಿನಲ್ಲಿ ತುಂಬಾ ಅಸಂತೃಪ್ತಿಯು ಉಂಟಾಗಿದ್ದು, ಈ ಧೋರಣವು ಮುಖ್ಯವಾಗಿ ಮಜೂರರ ಹಿತಗಳಿಗೆ ದಕ್ಕೆ ತರವಂತಾದುದ್ಧರಿಂದ ಬ್ರಿಟಿಷ್ ಲೇಬರ್ ಪಕ್ಷದಲ್ಲಿ ಬಹಳ ಜುಗುಪ್ಸೆಯು ಉಂಟಾಗಿದ್ದು, ಚರ್ಚಿಲ್ ಕೆಬಿನೆಟ್ಟಿನಿಂದ ಲೇಬರ್ ಪ್ರತಿನಿಧಿಗಳು ಅಧಿಕಾರ ತ್ಯಜಿಸಬಹುದೆಂದು ನಿರೀಕ್ಷೆಗಳಿವೆ.

* * *

ಸಂಪ್ರದಾಯಕ್ಕೆ ಸರಿಯಾಗಿ ವೈಸ್ರಾಯ ವೇವಲರು, ಕಲ್ಕತ್ತೆಯ ಯುರೋಪೀಯ ವಣಿಕ ಸಂಘದ ವಾರ್ಷಿಕ ಸಭೆಯಲ್ಲಿ ಭಾಷಣವನ್ನು ಮಾಡಿದರು. ಹಿಂದೂದೇಶದ ರಾಜಕೀಯದ ಕುರಿತು ಅದರಲ್ಲಿ ಪ್ರಸ್ತಾವಿಸಲಾಗಿತ್ತು. ಅಮೆರಿರಾಗವನ್ನೇ ಅವರು ಅಲ್ಲಿ ಮತ್ತೊಮ್ಮೆ ಹಾಡಿರುವರು. ಹಿಂದೂದೇಶದ ಮೇಲಿನ ತಮ್ಮ ನಿರಂಕುಶ ಪ್ರಭುತ್ವವನ್ನು ಬಿಟ್ಟುಕೊಡಲು ಸದ್ಯದ ಬ್ರಿಟಿಷ ಸರಕಾರವು ಸಿದ್ಧವಿಲ್ಲವೆಂದು ಇದರಿಂದ ತಿಳಿಯಬೇಕಾಗಿಯದೆ. ರೋಗಿಯು ಡಾಕ್ಟರರಲ್ಲಿ ವಿಶ್ವಾಸವಿಟ್ಟರೆ ಮಾತ್ರ, ಡಾಕ್ಟರರ ಚಿಕಿತ್ಸೆಯಿಂದ ರೋಗಿಗೆ ಗುಣಲಾಭ ದೊರಕುವ ತರದಲ್ಲಿ ಭಾರತೀಯರು ಬ್ರಿಟನಿನ ಮೇಲೆ ವಿಶ್ವಾಸತೋರಿದರೆ ಮಾತ್ರ ಹಿಂದೂದೇಶದ ರಾಜಕೀಯದ ಬಿಕ್ಕಟ್ಟಿನ ಪರಿಸ್ಥಿತಿಯು ನಿವಾರಿಸಲ್ಪಡುವುದೆಂದು ಅವರೊಂದು ಉಪಮೆಯನ್ನು ತಮ್ಮ ಭಾಷಣದಲ್ಲಿ ಕೊಟ್ಟಿರುವರು. ರೋಗಿಯು ಡಾಕ್ಟರನಲ್ಲಿ ವಿಶ್ವಾಸವಿಡಬೇಕಾದರೆ, ಆತನು ರೋಗಿಯ ವಿಶ್ವಾಸಕ್ಕೆ ಪಾತ್ರನಾಗಬೇಡವೆ. ಸದ್ಯದ ಬ್ರಿಟಿಷ್ ಸರಕಾರವು ತಳೆದಿರುವ ಧೋರಣದಿಂದ ಭಾರತೀಯರು ಅವರ ಕುರಿತು ವಿಶ್ವಾಸ ತೋರಿಸಲು ಅವಕಾಶವೇಯಿಲ್ಲ.

* * *

ಜರ್ಮನ್ ನಾಜಿಗಳ ನಿರಂಕುಶ ಪ್ರಭುತ್ವದಿಂದಲೆ, ಅವರು ಆಕ್ರಮಿಸಲ್ಪಟ್ಟ ಫ್ರಾನ್ಸ್, ಹಾಲೆಂಡ್, ಬೆಲ್ಜಿಯಂ, ಇಟಲಿ, ಗ್ರೀಸ್, ಜೆಕೊಸ್ಲೋವಿಯ, ರುಮೇನಿಯ ಮೊದಲಾದ ಪ್ರದೇಶಗಳಲ್ಲಿ ಅವರಿಗೆ ಮಹಾ ವಿರೋಧವು ಉಂಟಾಯಿತು. ಈ ವಿರೋಧದಿಂದಲೆ ಹಿಟ್ಲರನ ಪತನವಾಗುತ್ತಿದೆ. ನಾಜಿಗಳು ಪ್ರತಿಗಾಮಿಗಳಾಗಿರುವುದರಿಂದಲೆ, ಅವರ ನಾಶಕ್ಕೆ ಕಾರಣವಾಯಿತು. ನಾಜಿಗಳ ಪ್ರತಿಗಾಮಿ ಧೋರಣದಿಂದಲೆ ಅವರು ಆಕ್ರಮಿಸಿದ ದೇಶಗಳಲ್ಲಿ ಪ್ರತಿಗಾಮಿ ಚಳವಳವು ತೀಕ್ಷ್ಣವಾಗಿ ನಡೆಯಿತು. ಈ ತರದ ಪ್ರಗತಿಗಾಮಿ ಚಳವಳದಿಂದಲೆ, ರಷ್ಯಕ್ಕೆ ಯುಗೊಸ್ಲೋವಿಯಾ, ರುಮೇನಿಯ, ಪೊಲೆಂಡ್, ಹಂಗೇರಿ, ಫಿನ್‌ಲೆಂಡ್ ಮೊದಲಾದ ಕಡೆಗಳಲ್ಲಿ ವಿಜಯಿ ಮಾತ್ರೆಯನ್ನು ನಡೆಯಿಸಲು ಸಾಧ್ಯವಾಯಿತು. ಗ್ರೀಸುಯಿರುವುದಾದರೂ, ರಷ್ಯದಿಂದ ವಿಮೋಚನೆ ಹೊಂದಿದ ಪ್ರಗತಿಗಾಮಿ ದೇಶಗಳ ಮಧ್ಯದಲ್ಲಿ. ಈ ಕಾರಣದಿಂದ ಗ್ರೀಸಿನ ಪ್ರಗತಿಗಾಮಿಗಳು ಹೆಚ್ಚಿನ ಹುರುಪನ್ನು ತಳೆದಿವೆ.

* * *

ರೂಸ್‌ವೆಲ್ಟರು ಈ ಭಾರಿಯೂ ಚುನಾಯಿತರಾದುದಾದರೆ ನೂತನವಾಗಿ ಸ್ಥಾಪಿಸಲ್ಪಟ್ಟ ಅಧಿಕ ಜನಬೆಂಬಲವಿರುವ ಅಮೆರಿಕದ ಪ್ರಗತಿಗಾಮಿ ಲೇಬರ್ ಪಕ್ಷದ ಸಹಾನುಭೂತಿಯಿಂದ. ಈ ಯುದ್ಧದ ಪ್ರಾರಂಭದಲ್ಲಿ ಜನವೆತ್ತಿದ ಸಂಯುಕ್ತ ಅಮೆರಿಕಾದ ಮಜೂರರ ಈ ಸಂಯು

(೮ನೇ ಪುಟಕ್ಕೆ ಮುಂದುವರಿದಿದೆ.)



WEST END WATCH CO.
BOMBAY — CALCUTTA

ಸ್ವದೇಶಾಭಿಮಾನಿ

ತಾರೀಕು 22—12—1944

ಅಪಾಯ ಪರಿಸ್ಥಿತಿ!

ಒರಿಸ್ಸಾದಲ್ಲಿ ಬಾಂಬು ಬಿದ್ದ ವಿಶೇಷ ಘಟನೆಯ ನಂತರ ನಡೆದ ಕೌತುಕದ ಸಂಗತಿ ಎಂದರೆ ಕಳೆದ ವಾರ ಕಲ್ಕತ್ತದಲ್ಲಿ ವೈಸರಾಯ್ ಲಾರ್ಡ್ ವಾವೆಲ್ಲರು ಕೊಟ್ಟ ರಾಜಕೀಯ ಹಿತೋಪದೇಶಗಳಿಂದ ಕೂಡಿದ ಭಾಷಣ. ಯುದ್ಧಕಾಲದಲ್ಲಿ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು ಹೆಚ್ಚಿನ ಪ್ರಯತ್ನ ಮಾಡಲಾಗುವುದಿಲ್ಲವೆಂದು ಅವರು ಸೂಚಿಸಿದ್ದು ಖೇದಾಸ್ಪದ ವಿಚಾರ.

ವೇವೆಲ್ಲರು ವೈದ್ಯರಾಗಿರುತ್ತಿದ್ದರೆ ನಮ್ಮ ರಾಜಕೀಯ ರೋಗಕ್ಕೆ ಅವರ ಔಷಧವೇ ಬೇರೆ ಇತ್ತು. 'ನಿಜವಾಗಿ ನೀವು ತಿಳಕೊಂಡಷ್ಟು ಕಠಿಣ ಕಾಯಿಲೆಯವರು ನೀವಲ್ಲ. ನೀವು 'ಕ್ವಿಟ್ ಇಂಡಿಯಾ' ವಿಕ್ಕರನ್ನೂ, 'ಸತ್ಯಾಗ್ರಹ'ದ ಮಾತ್ರೆಗಳನ್ನೂ ಅತೀ ಹೆಚ್ಚಾಗಿ ಸೇವಿಸಿದ್ದೀರಿ. ನಿಮಗೆ ಬೇಕಾದುದು ಸ್ವಲ್ಪ ಶುದ್ಧ ವಾಯುಸೇವನೆ ಮತ್ತು ಒಂದಿಷ್ಟು ಗದ್ದೆ ಕೆಲಸ. ಅಂದರೆ ನೀವು ಆರೋಗ್ಯವಂತರಾಗುವಿರಿ." ಇದು ಅವರ ಸಲಹೆ.

ರೋಗಿಗೆ ಕೊನೆತನಕ ಧೈರ್ಯ ಕೊಡುವುದು ವೈದ್ಯವೃತ್ತಿಯ ನೀತಿಗಳಲ್ಲೊಂದೆಂದು ಪ್ರತಿಯೊಬ್ಬರ ಅನುಭವ. ರೋಗಿಯ ಕೈಕಾಲು ಕಟ್ಟಲ್ಪಟ್ಟಿದ್ದರೆ, ಗದ್ದೆಗೆ ಭದ್ರವಾದ ಬೇಲಿ ಹಾಕಿದರೆ ಅವನು ಗಾಳಿ ಸೇವನೆ ಮಾಡುವುದೆಂತು ಹೊಲಗೆಲಸ ಕೈಕೊಳ್ಳುವುದು ಹೇಗೆ?

ಇದರಿಂದ ಭಾರತವು ಒಂದು ರಾಜಕೀಯ ರೋಗಿ ಎಂಬುದು ಸ್ಪಷ್ಟವಾದರೆ ರಾಷ್ಟ್ರೀಯವಾದಿಗಳು ಆ ರೋಗವು ಬಹುಕಾಲದಿಂದ ನರಳಿ ಬಂದ ವ್ಯಾಧಿ ಎಂದು ತಿಳಿಯದಿರಲಿಕ್ಕಿಲ್ಲ. ಸೈನಿಕ ವ್ಯಾಸರಾಯರು ಹೊಸಬರು. ರೋಗ ನಿವಾರಣೋಪಾಯ ವಿಧಾನದಲ್ಲಿ 'ಹೊಸ ವೈದ್ಯನಿಗಿಂತ ಹಳೆ ರೋಗಿಯೇ ಮೇಲೆಂಬ' ನಾಣ್ಣುಡಿಯನ್ನು ರಾಷ್ಟ್ರವಾದಿಗಳು ಪ್ರತಿಪಾದಿಸಿದರೆ ಆಶ್ಚರ್ಯವಲ್ಲ.

ವೈಸರಾಯರು ಧೈರ್ಯವಾಗಿ ಯಾವುದನ್ನೂ ಹೇಳಲಾರದಾದರು. ರಾಷ್ಟ್ರೀಯ ಸರಕಾರ ಸ್ಥಾಪಿಸಲ್ಪಡಬೇಕೆಂಬ ಕೂಗಿಗೆ ಉತ್ತರ ಕೊಡುತ್ತ ಅವರು "ಈಗ ಸ್ಥಾಪಿತವಾಗಿರುವುದು ಹೆಚ್ಚುಕಮ್ಮಿ ರಾಷ್ಟ್ರೀಯ ಸರಕಾರವೆಂತಲೇ ಹೇಳಬಹುದು. ಅನೇಕ ಟೀಕಾರೋಪಗಳಿಗೆ ಒಳಗಾದ ಅವರು ಯುದ್ಧಪ್ರಯತ್ನಕ್ಕೆ ಆತಂಕವಿಲ್ಲದಂತೆ ತಮ್ಮ ಕರ್ತವ್ಯವನ್ನು ಪಾಲಿಸುತ್ತಿದ್ದಾರೆ" ಅಂದರು.

ಆದರೆ ದೇಶದ ಮುಖಂಡರು ಹೇಳುತ್ತಿರುವುದು "ಯುದ್ಧಪ್ರಯತ್ನಕ್ಕೆ ತೃಪ್ತಿ ಮಾಡುವುದು ಮಾತ್ರವಲ್ಲ ಆ ಪ್ರಯತ್ನಕ್ಕೆ ಸಹಾಯ ಮಾಡುವ ಜನತೆಯ ಪರಿಸ್ಥಿತಿ ಸುಧಾರಿಸಲ್ಪಡಲಿ" ಎಂದು.

ನಿಜವಾದ ರಾಷ್ಟ್ರೀಯ ಸರಕಾರ ವೈಸರಾಯರಿಗೆ ಬೇಡವೆಂದಿಲ್ಲ. ಅವರು ಎಂದರು: "ಎಲ್ಲಾ ಪಕ್ಷಗಳು ಒಟ್ಟು ಸೇರಿದ ಮತ್ತು ಪ್ರಜಾಪ್ರತಿನಿಧಿಗಳ ಸರಕಾರ ಆಗಬಾರದೆಂದು ನನ್ನ ಅಭಿಪ್ರಾಯವಲ್ಲ."

ಹಾಗಾದರೆ ಅಂತಹ ಸರಕಾರವು ಸ್ಥಾಪಿಸಲು ಪ್ರಯತ್ನಗಳೇಕೆ ಮಾಡಬಾರದು? ಅದರಲ್ಲಿ ಒಂದು ಶರ್ತವಿದೆ. "ಅದು ಈಗಿನ ರಾಜ್ಯಾಂಗರಚನೆಯ ಮಿತಿಯೊಳಗೆ ಕೆಲಸಮಾಡಬೇಕು". ಯುದ್ಧಕ್ಕೆ ಮಾತ್ರ ತ್ತದೆ ಸಹಾಯ ಮಾಡುವುದು ಅದರ ಲಕ್ಷಣವಿರಬೇಕು.

ಈಗಿನ ರಾಜ್ಯಾಂಗರಚನೆಯ ಮಿತಿಯೊಳಗೆ ಕೆಲಸಮಾಡುವ ಜನ ಬೆಂಬಲವುಳ್ಳ ಸರಕಾರವನ್ನು ಸ್ಥಾಪಿಸಲು ಬ್ರಿಟಿಷ್ ಸರಕಾರವು ಏಕೆ ಪ್ರಯತ್ನಮಾಡುತ್ತಿಲ್ಲವೆಂಬುದು ರಹಸ್ಯದ ವಿಷಯವಾಗಿದೆ. ಬಹುಶಃ ಅದು ಅವರಿಗೆ ಬೇಕಾಗಿಲ್ಲ. ಸೈನಿಕ ಧೋರಣೆಯ ಮನಸ್ಸು ರಚನಾತ್ಮಕ ಸಲಹೆಗಾರರ ಕೂಟಕ್ಕೆ ಒಪ್ಪಲಾರದು ಎಂಬ ವಿಷ್ಮಯವು ಇದರಿಂದ ಸ್ಪಷ್ಟವಾಗುತ್ತದೆ.

ಈಗಿನ ಸರಕಾರದ ಮೇಲೆ ಸಾಮಾನ್ಯ ಜನತೆಗೆ ಭರವಸೆ ವಿಶ್ವಾಸಗಳಿಲ್ಲವೆಂಬ ವಿಷಯವನ್ನು ಮಾನ್ಯ ವೈಸರಾಯರೇ ಒಪ್ಪಿಕೊಂಡದ್ದು ಸ್ತುತ್ಯ ಸಂಗತಿ. ಮಾತ್ರವಲ್ಲ ಜನತೆಯ ದುರವಸ್ಥೆಯನ್ನು ನಿವಾರಿಸುವ ಸೇವೆಮಾಡಲು 'ನಿಸ್ವಾರ್ಥ ಕೆಲಸಗಾರರ ಆವಶ್ಯಕತೆ ಇದೆ' ಎಂಬುದನ್ನೂ ಅವರು ಒಪ್ಪಿಕೊಂಡರು. ಅಂದ ಮೇಲೆ ಅಂತಹ ಸ್ವಾರ್ಥರಹಿತ ಕೆಲಸಗಾರರ ಸಂಸ್ಥೆಗಳ ಪ್ರತಿನಿಧಿಗಳನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಕಾರ್ಯ ಸಾಗಿಸುವುದು ಅತ್ಯಾವಶ್ಯಕವಲ್ಲವೆ?

ದೇಶದಲ್ಲಿನ ಆಹಾರ ಪರಿಸ್ಥಿತಿಯು ಇನ್ನೂ ತೃಪ್ತಿಕರವಾಗಿ ಸುಧಾರಿಸಿಲ್ಲವೆಂದು ವೇವೆಲ್ ಸಾಹೇಬರು ತಿಳಿಸಿದರು. ಅದು ಇಷ್ಟು ಅವಧಿಯೊಳಗೆ—ಅಂದರೆ ಜಪಾನಿನ ಮೇಲೆ ಉಗ್ರ ಪ್ರತಿಭಟನೆಯ ಕಾರ್ಯಕ್ರಮವಾರಂಭಿಸಿದಾಕ್ಷಣ—ಇನ್ನೂ ಹೆಚ್ಚು ದುರ್ದಶೆಗೆ ಮುಟ್ಟಬಹುದೆಂದು ಸೇನಾಧಿಪತಿ ಆಕಿನ್‌ಲೆಕರು ತಿಳಿಸಿರುವುದು ಗಮನಾರ್ಹವಾದ ಎಚ್ಚರಿಕೆ.

ಈಗ ಸಪ್ರೂ ಸಮಿತಿಯವರು ನಡೆಸುತ್ತಿರುವ ಪ್ರಯತ್ನಕ್ಕೆ ಬ್ರಿಟಿಷ್ ಸರಕಾರದವರು ಸಹಕಾರವನ್ನಿತ್ತು ಮತ್ತೆ ಒಳಭೇದಗಳ ಕಡೆಗೆ ಬೆರಳು ತೋರಿಸದೆ ಹೃತ್ಪೂರ್ವಕವಾದ ಸದುದ್ದೇಶಗಳನ್ನು ವ್ಯಕ್ತಪಡಿಸಿದರೆ ಬ್ರಿಟಿಷ್ ಜನಾಂಗದ ಭಾರತ ಹಿತಾಕಾಂಕ್ಷೆಗಳು ನಿಷ್ಕಪಟವಾದುಗಳೆಂದು ಜಗತ್ತಿನಲ್ಲಿ ಸಾರಿದಂತಾಗುವುದು.

"ನಿಮ್ಮ ನಿಷ್ಪ್ರಯೋಜನವಾದ ಬಾಯಿಮಾತಿನ ಸೇವೆ ಬೇಡ. ಹೃತ್ಪೂರ್ವಕವಾದ ಬೆಂಬಲ ಬೇಕು" ಎಂದು ಮಾನ್ಯ ವೇವಲ್ಲರು ಹೇಳಿದ ಬುದ್ಧಿವಾದವು ನಮಗಿಂತ ಹೆಚ್ಚಾಗಿ ಬ್ರಿಟಿಷ್ ಸರಕಾರವೇ ಗಮನಿಸಬೇಕು. ಇಲ್ಲದಿದ್ದರೆ ಸರ್. ಹೋಮಿ ಮೋಡಿಯವರು ಹೇಳಿದಂತೆ ಪರಿಸ್ಥಿತಿ ಅಪಾಯಕಾರಕವಾಗಬಹುದು.

ಅಮೃತ ವಾಣಿ

ನಮ್ಮ ಕೈಗಾರಿಕೆಗಳಲ್ಲಿ ಹೊಸ ನಾಯಕರ ಆಗಮನವಾಗಬೇಕು. ಮಾನವ ಸಮಾಜವೆಂದರೆ ಒಂದು ಕುಟುಂಬ, ವ್ಯಕ್ತಿಯ ಏಳಿಗೆಯು ಸಮಾಜದ ಏಳಿಗೆ ಎಂಬ ದೃಷ್ಟಿಯಲ್ಲಿ ಅವರು ತಮ್ಮ ಅಧೀನದಲ್ಲಿರುವ ಕೈಗಾರಿಕೆಗಳನ್ನು ನಡೆಯಿಸುವ ಬದಲಾಗಿ,-ಬರೆ ಲಾಭದ ಕಡೆಗೆ ಹೆಚ್ಚು ಲಕ್ಷವಿತ್ತು ವರ್ತಿಸಿದವರು, ಔದ್ಯೋಗಿಕ ಪ್ರಪಂಚದಲ್ಲಿ ಈವರೆಗೆ ನಾಯಕತ್ವದಲ್ಲಿದ್ದವರು. ಭವಿಷ್ಯದಲ್ಲಿ ಈ ಮನೋವರ್ತನೆಯಲ್ಲಿ ಮಾರ್ಪಾಡಾಗಬೇಕು. ಒಡೆಯತನ ವಂದರೆ ಸಮಾಜ ಸೇವೆ ಎಂಬ ನೀತಿಯನ್ನನುಸರಿಸಿ, ಕಷ್ಟಗಳು ಬಾರದ ರೀತಿಯಲ್ಲಿ, ತಮ್ಮ ಕಾರ್ಖಾನೆಗಳನ್ನು ಸಾರ್ವಜನಿಕ ಹಿತದೃಷ್ಟಿಯಲ್ಲಿ ನಡೆಯಿಸುವವರಾಗಬೇಕು ಮುಂದಿನ ನಾಯಕರು. ಅವರು ಮಜೂರರನ್ನು ತಮ್ಮ ಸಪ್ರಯೋಜನದ ಸಾಧನಗಳನ್ನಾಗಿ ಉಪಯೋಗಿಸುವ ಕ್ರಮವನ್ನು ತ್ಯಜಿಸಬೇಕು. ವ್ಯಾಪಾರ, ಮತ್ತು ಕೈಗಾರಿಕೆ ಪ್ರಪಂಚದಲ್ಲಿ ಅಧಿನಾಯಕತ್ವ ಪಡೆಯಲಿಚ್ಚಿಸುವವರು ಈ ನೀತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳತಕ್ಕದ್ದು.

ಯಾವತ್ತು ವ್ಯಕ್ತಿಯ ಯಾ ಸಂಸ್ಥೆಯ ಪ್ರಭಾವಗಳಿಗೆ ಒಳಗಾಗಿ ವಾರ್ತಾಪತ್ರಗಳು ನಡೆಯಬಾರದು. ಪತ್ರಿಕೆಗಳು ಜಾಹೀರಾತುಗಳ ಆಧಾರದಿಂದಲೇ ನಡೆಯುವ ಬದಲಾಗಿ ಸಾರ್ವಜನಿಕವಿಶ್ವಾಸಕ್ಕೆಪಾತ್ರರಾಗಿ ನಡೆಯಬೇಕು. ತ್ಯಾಗ ಮಾನವ ಮನಸ್ಸಿನ ಮೇಲೆ ಕೆಟ್ಟ ಪರಿಣಾಮಗಳನ್ನು ಉಂಟುಮಾಡುವ ಹೇಯ ಲೇಖಗಳು ಪತ್ರಿಕೆಗಳಲ್ಲಿ ಪ್ರಕಟವಾಗಬಾರದು.

ಗತಕಾಲಕ್ಕೆ ಮತ್ತು ಭವಿಷ್ಯದ ಕಡೆಗೆ ಹೆಚ್ಚಿನ ಲಕ್ಷ್ಯಕೊಡುವ ಬದಲಾಗಿ ಮಾನವನ ಸದ್ಯದ ಸಾಂಪತ್ತಿಕ ಮತ್ತು ವೈಯುಕ್ತಿಕ ಸಮಸ್ಯೆಗಳನ್ನು ಬಗೆಹರಿಸುವ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟು, ದುಡಿಯುವ ಧಾರ್ಮಿಕ ನಾಯಕರ ಆಗಮನ ಆಗಬೇಕು.

ಶಾಲೆಯಲ್ಲಿ ದೊರೆತ ಜ್ಞಾನವು ಜೀವನ ದುಡಿಮೆಯ ಸಾಧನವಾಗುವ ತರದಲ್ಲಿ ವಿದ್ಯಾಭ್ಯಾಸವು ನಡೆಯಬೇಕು. ವಿದ್ಯಾಕ್ಷೇತ್ರದಲ್ಲಿ ದುಡಿಯುವ ಮುಂದಾಳುಗಳು ಈ ದೃಷ್ಟಿಯನ್ನು ಇಟ್ಟುಕೊಂಡು ಕಾರ್ಯಸಾಧಿಸಬೇಕು. ಇವರು ಕಲ್ಪನೆಗಿಂತ ಅನುಷ್ಠಾನಕ್ಕೆ ಹೆಚ್ಚಿನ ಮಹತ್ವವನ್ನು ಕೊಡುವವರಾಗಬೇಕು.

ವ್ಯಾಪಾರಿಗಳಿಗೆ ವಿನಯವು ಒಂದು ಉತ್ತಮ ಸಾಧನವು. ವಿನಯದಿಂದಲೆ ಮಹಾ ಏಳಿಗೆಯನ್ನು ಹೊಂದಿದ ದೃಷ್ಟಾಂತಗಳು ವಿನಯದೊಡನೆ ಗಿರಾಕಿಯ ಸೇವೆಯೂ ಕೂಡಿರಬೇಕು. ಈ ಎರಡು ಕಾರಣಗಳಿಂದ ವ್ಯಾಪಾರಿಯ ಅಭ್ಯುದಯವಾಗುವುದು ಖಂಡಿತ.

ಮನುಷ್ಯನ ಬಾಲ್ಯವು ಅತಿ ಪ್ರಾಮುಖ್ಯ ಅವಧಿಯು. ಬಾಲ್ಯದ ವಾತಾವರಣದ ಮೇಲೆ ಮನುಷ್ಯನ ಮುಂದಿನ ನಡತೆಯು ಹೊಂದಿಕೊಂಡಿರುವುದು. ಬಾಲ್ಯದಲ್ಲಿ ದುರ್ಜನರ ಸಂಘವಾಗಕೂಡದು.

ವಿಧಿಯನ್ನು ನಂಬಿ ಸುಮ್ಮನೆ ಕಾಲಹರಣ ಮಾಡುತ್ತಿರುವುದು- ಇದೊಂದು ದೊಡ್ಡ ಕೊರತೆ. ಯಾವಾಗಲೂ ಕಾರ್ಯ ಪ್ರವರ್ತರಾಗಿರುವುದೆ ಲೇಸು. ಹೀಗೆ ಮುಂದೆ ಸಾಗಿದ ಹಾಗೆ ಯಶಸ್ಸು ದೊರಕುವುದು.

ದೃಢವಾದ ಯತ್ನಗಳಾಗಬೇಕು. ಸೋಲು ತೋರಿದೊಡನೆ ದುಡುಕಬಾರದು. ದುಡುಕದೆ ದುಡಿಯುವವನಿಗೆ ಫಲಸಿದ್ಧಿ ಖಂಡಿತ.

ನಿರಾಶಾಜನಕ ವ್ಯಕ್ತಿಪ್ರಭಾವವಿದ್ದವನ ಕಡೆ ಯಾರೂ ಆಕರ್ಷಿಸಲ್ಪಡಲಾರರು. ಜಯವು ಪ್ರಾಬಲ್ಯವಿದ್ದಲ್ಲಿ ಇದೆ. ಇತರರ ಸಹಕಾರದಿಂದ ಪ್ರಾಬಲ್ಯವು ಲಭಿಸುವುದು. ನಿರಾಶಾಜನಕ ವ್ಯಕ್ತಿತ್ವದಿಂದ ಇತರರ ಸಹಕಾರವು ದೊರಕದು.

ಜುಗಾರುಖೋರ ಮನೋಭಾವವು ಹಾನಿಕರವು. ಏನೂ ಶ್ರಮಹಾಕದೆ ದಾರಳ ದುಡಿಯುವ ಆಶೆಯು, ಒಳಿತಲ್ಲ. ಇದರಿಂದ ಮಿಲಿಯಾದಿ ಜನರು ಕಷ್ಟಕ್ಕೆ ಈಡಾಗಿರುವರು.

ಜೀವನದಲ್ಲಿ ಒಂದು ಗುರಿಯಿಟ್ಟು ನಾವು ನಡೆಯಬೇಕು. ಹೆಬ್ಬಯಕೆಯನ್ನು ಹಾಕಿಕೊಂಡು ಜೀವನದಲ್ಲಿ ನಡೆಯುವುದರಿಂದ ತುಂಬಾ ಲಾಭವಿದೆ.

ಶಾಲೆಯಲ್ಲಿ ಕಲಿಯುವುದು ಮಾತ್ರ ವಿದ್ಯೆಯಲ್ಲ. ಮನುಷ್ಯನಿಗೆ ಜೀವನ ಯಾತ್ರೆಯಲ್ಲಿ ಮುನ್ನಡೆಯುತ್ತಿದ್ದ ಹಾಗೆ ಶಿಕ್ಷಣವಾಗುವುದು. ಇತರರ ಹಕ್ಕು ಬಾಧ್ಯತೆಗಳನ್ನು ಬಾಸದೆ, ತನಗೆ ಬೇಕಾದುದನ್ನು ಪಡೆಯುವವನು ಅತಿ ವಿದ್ಯಾವಂತ ಪುರುಷನು. ಜ್ಞಾನವು ಉತ್ತಮ ಫಲಕಾರಿಯಾಗುವ ತರದಲ್ಲಿ ಅನುಷ್ಠಾನಗಯ್ಯುವವನು ಅತೀ ವಿದ್ಯಾವಂತನು.

ಸ್ವಾರ್ಥವನ್ನು ಗೆದ್ದ ವಿನಹ ಒಬ್ಬನಿಗೆ ಯಶಸ್ಸು ದೊರಕದು. ಸ್ವಾರ್ಥತ್ಯಾಗವಾದರೆ ಮಾತ್ರ ಶಿಸ್ತು ತಲೆದೋರುವುದು. ಸ್ವಾರ್ಥತ್ಯಾಗವು ಅತಿ ಕಷ್ಟದ ಸಮಸ್ಯೆಯು.

ಸ್ವಾರ್ಥವನ್ನು ನೀವು ಗೆಲ್ಲದಿದ್ದರೆ,— ಅದು ನಿಮ್ಮನ್ನು ಗೆಲ್ಲುವುದು. ಸ್ವಾರ್ಥವು ನಿಮ್ಮ ಉತ್ತಮ ಮಿತ್ರನೂ, ವೈರಿಯೂ ಆಗಿರುವುದು.

ಆರೋಗ್ಯವಿಲ್ಲದವನಿಂದ ಏನೂ ಕೆಲಸವಾಗದು. ಕೆಳಗಿನ ಅನಾರೋಗ್ಯದ ಕಾರಣಗಳು ಸಂಪೂರ್ಣ ನಮ್ಮ ಅಂಕೆಯಲ್ಲಿರುವವು. ಅವುಗಳನ್ನು ನಾವು ನೀಗಿಸಿಕೊಳ್ಳಬಹುದು.

(೧) ಮಿತಿಮೀರಿ ತಿನ್ನುವುದು- ಇದರಿಂದ ಆರೋಗ್ಯ ಸಾಧನವಾಗದು.
(೨) ನಿರಾಶಾಜನಕಭಾವಗಳನ್ನು ತಳೆಯುವುದು—ಇದರಿಂದ ಆರೋಗ್ಯ ಲಾಭವಾಗದು.
(೩) ಲಿಂಗಗಳ ಕೆಟ್ಟ ಪ್ರಯೋಗ,— ಲಿಂಗಸುಖನ್ನು ಮಿತಿಮೀರಿ ಭೋಗಿಸುವುದು.
(೪) ಯೋಗ್ಯ ವ್ಯಾಯಮ; ಯಾ ಕಾಯಕಷ್ಟ ಪಡೆಯದೆಯಿರುವುದು.
(೫) ದೇಹಕ್ಕೆ ಬೇಕಾದ ನಿರ್ಮಲ ಗಾಳಿಯನ್ನು ಒದಗಿಸದಿರುವುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ವ್ಯಾದೆ ಹೆಚ್ಚಿಸಿದೆ ಕಲೆಕ್ಟರರ ಪ್ರಕಟಣೆ

ಅಕಾಲದಲ್ಲಿ ಬಿಡದೆ ಬಂದ ಮಳೆಯ ದೆಸೆಯಿಂದ ಅಕ್ಕಿ ತಯಾರಿಕೆಗೆ ಅನಾನುಕೂಲತೆಯಾಗಿರುವ ಸಂಗತಿ ಕಲೆಕ್ಟರರ ಗಮನಕ್ಕೆ ಬಂದಿದ್ದು ಈಗ ಮಿಗಿತಾಯದ ಅಕ್ಕಿ ಒಪ್ಪಿಸುವ ಪ್ರಥಮ ಮತ್ತು ದ್ವಿತೀಯ ಕಂತು ವಾಯಿದೆಯನ್ನು ಹೀಗೆ ಮುಂದುವರಿಸಿದ್ದಾರೆ, ಐದನೇ ಒಂದಂಶದ ೧ನೇ ಕಂತು ತಾ. ೩೧-೧೨-೪೪ರ ಒಳಗೆ ಒಪ್ಪಿಸಬಹುದು. ೨ನೇ ಕಂತು ಅಂದರೆ ಐದನೇ ಎರಡಂಶವನ್ನು ತಾ. ೧೫-೧-೪೫ರ ಒಳಗೆ ಒಪ್ಪಿಸಬಹುದು.

ಮುಂದುವರಿಸಲ್ಪಟ್ಟ ಈ ವಾಯಿದೆಗಳನ್ನೂ ತಪ್ಪಿದರೆ ಅಕ್ಕಿಗೆ ಬೆಲೆ ಕಡಿಮೆ ಕೊಡುವುದು ಮಾತ್ರವಲ್ಲ (ಅಕ್ಕಿಗೆ ಮುಡಿಯಲ್ಲಿ ೧ ರೂ. ಬತ್ತಕ್ಕೆ ೮ ಆಣೆ ಕಡಿಮೆ) ಇತರ ಕ್ರಮಪ್ರಕಾರ ದಂಡನೆಗೆ ಗುರಿಯಾಗ ಬೇಕಾದೀತು. ತಾ. ೩೧-೧೨-೪೪ರ ನಂತರ ಸ್ಟೋರ್ಸುಗಳಿಗೆ ಅಕ್ಕಿ ತಲಪಿಸುವವರು ತಮ್ಮ ಅಕ್ಕಿಯು ಯಾವ ಕಂತಿಗೆ ಸಂಬಂಧಿಸಿದೆಂದು (೧ನೇ ಅಥವಾ ೨ನೇಯದೋ ಎಂದು) ಸ್ಪಷ್ಟವಾಗಿ ತಿಳಿಸುವ ಒಂದು ಪತ್ರವನ್ನು ಗ್ರಾಮ ಪಟೇಲರಿಗೆ ಕಡಿಮೆಯಲ್ಲದ ರೆವಿನ್ಯೂ ಅಧಿಕಾರಿಯಿಂದ ಪಡೆದು ಅದನ್ನು ಸದ್ರಿ ಸ್ಟೋರ್ಸಿನವರಿಗೆ ಹಾಜರುಮಾಡತಕ್ಕದ್ದು.

ಚಿಮಿಣಿ ಎಣ್ಣೆ ಬೆಲೆ

ಪ್ರಕಟಿಸಲ್ಪಟ್ಟ ಹೊಸ ಬೆಲೆ ಪಟ್ಟಿ ಪ್ರಕಾರ ೨೪ ಔನ್ಸಿನ ೧ ಬಾಟ್ಲಿ ಎಣ್ಣೆಗೆ ಮಂಗಳೂರು ರೇಶನಿಂಗ್ ಪ್ರದೇಶ, ಮಂಗಳೂರು ಟೌನಿನ ಹೊರಗೆ ೩॥ ಆಣೆ. ಮಂಗಳೂರಿನ ೧೫ಮೈಲು ಒಳಗಿನ ಪ್ರದೇಶದಲ್ಲಿ ೩೬ ಪೈ. ಹದಿನೈದು ಮೈಲುಗಳಾಚೆ ೩೬. ೧೨ಪೈ.

ಸಂಗೀತ ಪ್ರವೀಣರು

ಪ್ರಖ್ಯಾತ ಸಂಗೀತಜ್ಞರಾದ ಬರೋಡದ ನಿಸ್ಸಾರ್‌ಹುಸೇನ್ ಅವರು ಮಂಗಳೂರಿಗೆ ಬರಲಿರುವರೆಂದು ತಿಳಿದುಬರುತ್ತದೆ. ಇಲ್ಲಿಯ ಮ್ಯೂಝಿಕ್ ಸರ್ಕಲಿನವರು ಗಾಯನ ಕಚೇರಿ ಏರ್ಪಡಿಸಲಿರುವರು. ಇವರೊಡನೆ ತಬ್ಲಾ ವಾದನಕ್ಕೆ ಮಂಗಳೂರಿನ ಎಚ್. ತಾರಾನಾಥ ರಾವ್ ಅವರು ಸಂಗಾತಿಗಳಾಗುವರು.

ವಿವಿಧ ವಿನೋದಾವಳಿ

ತಾ. ೨೦ರಂದು ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಲೇಡಿಸ್ ಕ್ಲಬ್ಬಿನ ರಜತೋತ್ಸವ ಸಮಾರಂಭದ ಅಂಗವಾಗಿ ಒಂದು ವಿವಿಧ ವಿನೋದಾವಳಿಯು ನಡೆಯಿತು. ಮದ್ರಾಸ್ ರೆವಿನ್ಯೂ ಬೋರ್ಡಿನ ಪ್ರಥಮ ಸದಸ್ಯರೂ, ನಮ್ಮ ಜಿಲ್ಲೆಯ ಮಾಜಿ ಕಲೆಕ್ಟರರೂ ಆಗಿದ್ದ ಮಿ| ಇ. ಎಂ. ಗೋನ್. ಸಿ. ಐ. ಇ, ಐ. ಸಿ. ಎಸ್ ಅವರು ಅಧ್ಯಕ್ಷತೆ ವಹಿಸಿದ್ದರು. ಸಂಗ್ರಹ ಹಣವು ಯುದ್ಧ ನಿಧಿಗೆ ಕೊಡಲ್ಪಡುವುದು.

ನಗರ ವರದಿ

ಕಳೆದವಾರ ಕದ್ರಿಯ ಕಂಬಳ ಗದ್ದೆಯಲ್ಲಿ ಕೋಳಿಕಟ್ಟದ ಕೆಲವರನ್ನೂ, ಅವರ ಪಕ್ಷಿಗಳನ್ನೂ ಪೋಲಿಸ್ ಅಧಿಕಾರಿಗಳು ಹಿಡಿದು ವಿಚಾರಣೆಗೆ ಒಳಪಡಿಸಿದ್ದಾರೆ. ಶಾಂತಿಭಂಗದ ನಿರೀಕ್ಷೆಯೇ ಇದರ ಕಾರಣ.

ಹಂಪನಕಟ್ಟೆಯ ಬಳಿ ಮಾರ್ಗ ನಿಯಮ ತಪ್ಪಿದ ೧೯ಳ ಮಂದಿಗಳ ಮೇಲೆ ಕಟ್ಲೆಯಾಗಿ ೧೭೨ ಜನರಿಗೆ ಜುಲ್ಮಾನೆಯಾಗಿದೆ. ಇವರಲ್ಲಿ ಹೆಚ್ಚಿನವರು ಹಳ್ಳಿಯವರು.

ತಲ್ಪಾಡಿ ಸಮುದ್ರ ಕಿನಾರೆಯಲ್ಲಿ ೩೫ಗೋಣಿ ಅಕ್ಕಿ ಮಂಜಿ ಮೂಲಕ ಸಾಗಿಸನೋಡಿದ ಐವರಿಗೆ ಕೈದು ಮಾಡಲಾಗಿದೆ.

ಖಾದಿ ಕಾರ್ಯ

ಶ್ರೀ. ಕೆ. ವೆಂಕಟ್ರಾಮಯ್ಯ, ಕಾರ್ಯದರ್ಶಿ ಅ. ಕ. ಚರಕಾ ಸಂಘ, ಇವರು ಪೆಂಟ್‌ಲೆಂಡ್ ಪೇಟೆಯಲ್ಲಿ-(ಕೆನಾರಾ ಹ್ಯಾಸ್ಪೋಲ್ ಬ್ರೆಂಚ್) ಇದೇ ತಾ. ೨೪ರಂದು ಖಾದಿಪ್ರೇಮಿಗಳ ಸಭೆಯಲ್ಲಿ ಖಾದಿಕಾರ್ಯದ ಕುರಿತು, ಮಾತಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ. ಅವರು ೨೬ಕ್ಕೆ ಇಲ್ಲಿಗೆ ದಯಮಾಡಿಸುವರು.

ವ್ಯಾಪಾರಿಗಳಿಗೆ ಏಚ್ಚರಿಕೆ

ಕಳ್ಳ ಸಂತೆಯ ವ್ಯವಹಾರವು ಪುನಃ ತಲೆಎತ್ತಿರುವುದಾಗಿ ಅಧಿಕಾರಿಗಳ ಗಮನಕ್ಕೆ ಬಂದಿರುವುದರಿಂದ, ಟೆಸ್ಟ್ ಪರ್ಚೇಸ್‌ಗಳನ್ನು ಮಾಡುವರು. ಹೀಗೆ ಗುಪ್ತ ಪತ್ತೆ ಮಾಡಲಾಗುವುದೆಂದು ಪ್ರಕಟಿಸಲಾಗಿದೆ.

ಬೆಳ್ಳಿ ಹಬ್ಬ

ತಾ. ೨೫ರಲ್ಲು ಕೆನರಾ ಹೈಸ್ಕೂಲಿನ ಮಹಾತ್ಮಾಗಾಂಧಿ ವಸ್ತುಸಂಗ್ರಹಾಲಯದ ರಜತೋತ್ಸವು ಆಚರಿಸಲ್ಪಡುವುದು. ಅಂದು ಸಾಯಂ ೫-೧೫ಕ್ಕೆ ದಿ| ನೆಲ್ಲಿಕಾಯಿ ಸುಂದರಮ್ಮ ವೆಂಕಟ್ ರಾವ್ ಅವರ ಹೆಸರಿನಲ್ಲಿ ಭಾರತೀಯ ಚಿತ್ರಕಲಾಂಕಣವನ್ನೂ, ಶ್ರೀ ಪಾವಂಜೆ ಗೋಪಾಲಕೃಷ್ಣರಾಯರ ಹೆಸರಿನಲ್ಲಿ ಚೀನಿ ಚಿತ್ರಾಂಕಣವನ್ನೂ, ಜಪಾನಿ ಚಿತ್ರಾಂಕಣವನ್ನು ದಿ| ಎಂ. ಎನ್. ಕಾಮತರ ಹೆಸರಲ್ಲೂ, ಪಿಂಗಾಣಿ ವಸ್ತುಗಳ ಅಂಕಣವನ್ನು ಶ್ರೀ. ನಾರಾಯಣ ಚೆಡ್ಡುಬಾಳಿಗ ಹೆಸರಲ್ಲೂ, ಮತ್ತು ಆಫ್ರಿಕದ ವಸ್ತುಗಳ ಅಂಕಣವನ್ನು ಶ್ರೀ. ಅಂತಪ್ಪನವರ ಹೆಸರಲ್ಲೂ, ಶ್ರೀಮತಿ ಶಾಂಭವಿ ಪೂಂಜಾ ಅವರು ತೆರೆಯುವರು. ಈ ಸಂಬಂಧ ದಾತೃ ಪ್ರೋತ್ಸಾಹಕರಿಗೆ ಪ್ರತಪ್ರತ್ಯೇಕ ಆಮಂತ್ರಣ ಕಳುಹಿಸಲು ಸಾಧ್ಯವಾಗದ್ದರಿಂದ ಈ ಮೂಲಕ ಆಹ್ವಾನ ಕೊಟ್ಟಿರುತ್ತದೆ. ಸಂಗ್ರಹಾಲಯವು ಅಂದು ಸಾರ್ವಜನಿಕರಿಗಾಗಿ ತೆರೆದಿಡಲ್ಪಡುವುದು. ಹೀಗೆಂದು ಮೆನೇಜರ್ ಶ್ರೀ. ಮಾಧವರಾಯರು ತಿಳಿಸುತ್ತಾರೆ.

ಚಲಚಿತ್ರ ಅಭಿರುಚಿಯವರು

ಕನ್ನಡ 'ಜೀವನ ನಾಟಕ' ಧ್ವನಿ ಚಿತ್ರವನ್ನು ನಿರ್ದೇಶಿಸಿದ ಮಿ| ವಹಾಬ್ ಅವರು ನಮ್ಮ ಜಿಲ್ಲೆಯಲ್ಲಿ ಸಂಚಾರ ಮಾಡಿ ಈಗ ಉದಕ ಮಂಡಲಕ್ಕೆ ಹೋಗಿರುವರು. ಚಲನಚಿತ್ರ ಉದ್ಯಮಕ್ಕೆ ಅವರಿಗೆ ಕಲಾವಿದರು ಬೇಕಾಗಿರುವರು. ಅಭಿರುಚಿ ಇದ್ದವರು: ಡೈರೆಕ್ಟರ್ ವಹಾಬ್ ಹೊಲ್‌ಬೋರ್ನ್, ಉಟಕಮಂಡ್, ಈ ವಿಳಾಸಕ್ಕೆ ಬರೆಯಬಹುದು.

ಮಂಜೇಶ್ವರ

ಅ. ಕ. ಆಯುರ್ವೇದ ಸಮ್ಮೇಲನ

ಇದರ ನಾಲ್ಕನೇ ವರ್ಷದ ಅಧಿವೇಶನವು ಮಂಜೇಶ್ವರದಲ್ಲಿ ಮೈಸೂರಿನ ಶ್ರೀಮಾನ್ ಪಾರ್ಥನಾರಾಯಣ ಪಂಡಿತ್ ಅವರ ಅಧ್ಯಕ್ಷತೆಯಲ್ಲಿ ಜನವರಿ ೪, ೫, ೬ನೇ ತಾರೀಕುಗಳಲ್ಲಿ ಜರಗುವುದು.

ಶ್ರೀಮಾನ್ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಪ್ರಥಮ ದಿನದ ಸಾಯಂ ೬॥ ಗಂಟೆಗೆ ಸಕಲ ಆಯುರ್ವೇದ ಔಷಧಿ ಮತ್ತು ಗ್ರಂಥ ಪ್ರದರ್ಶನವನ್ನು ಉದ್ಘಾಟಿಸುವರು.

ತಾ. ೫ರಂದು ಪ್ರಾತಃ ೯, ಮತ್ತು ಮಧ್ಯಾಹ್ನ ೨ ಗಂಟೆಗೆ ಅಧಿವೇಶನ ಜರಗುವುದು. ಅಂದು ಅತ್ಯ ಪೂರ್ವವಾದ 'ಧನ್ವಂತರಿ'ಯ ಭಾವಚಿತ್ರ ಅನಾವರಣೋತ್ಸವವೂ ಜರುಗಲಿದೆ.

ಈ ಸಮ್ಮೇಳನದ ಅಧ್ಯಕ್ಷರು ಆಯುರ್ವೇದ ವಿದ್ಯೆಯಲ್ಲಿ ತುಂಬಾ ಅಭ್ಯಾಸ, ಪ್ರಯೋಗ ನಡೆಸಿದ ಒಬ್ಬ ಮೈಸೂರಿನವರು. ತಮ್ಮ ಬರೀ ೪೦ ವರ್ಷ ವಯಸ್ಸಿನಲ್ಲಿಯೇ ಇವರು ದೇಶ, ಸಮಾಜ, ಸಾಹಿತ್ಯ ಸೇವೆಗಳನ್ನು ಮಾಡಿ ಶ್ರಮಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರಾಗಿ ೪ವರ್ಷದ ಶಿಕ್ಷೆಗೆ ಗುರಿಯಾಗಿದ್ದರು. ಒಂದು ಆಯುರ್ವೇದ ಪ್ರಯೋಗಾಲಯವನ್ನೂ, ಎರಡು ಧರ್ಮ ವೈದ್ಯಾಶ್ರಮಗಳನ್ನು ಸ್ಥಾಪಿಸಿದ್ದಾರೆ. ಆಯುರ್ವೇದ ಮಾರ್ತಾಂಡವೆಂಬ ಪತ್ರಿಕೆಯ ಸಂಪಾದಕರು.

ಮಂಜೇಶ್ವರದಲ್ಲಿ ಈ ಸಮ್ಮೇಳನಕ್ಕೆ ಸಂಬಂಧಪಟ್ಟ ಎಲ್ಲಾ ವ್ಯವಸ್ಥೆ ಏರ್ಪಾಡುಗಳು ಸಿದ್ಧವಾಗಿವೆ. ಅತಿಥಿ, ಪ್ರತಿನಿಧಿಗಳಿಗೆ ವಸತಿ ಗೃಹಗಳೇರ್ಪಡಿಸಲ್ಪಟ್ಟಿವೆ. ಮಾತ್ರವಲ್ಲ ಸಮ್ಮೇಲನದಂದು ನಾಟ್ಯ ನಾಟಕ, ಯಕ್ಷಗಾನ, ಹರಿಕೀರ್ತನೆ, ಮುಂತಾದ ಸಾರಸ್ಯ ಮನೋರಂಜನೆಯ ಕಾರ್ಯಕ್ರಮವೂ ಏರ್ಪಡಿಸಲ್ಪಟ್ಟಿದೆ. ತನುಮನಧನಗಳಿಂದ ಅನೇಕರು ಸ್ವಾಗತಾಧ್ಯಕ್ಷರೊಂದಿಗೆ ನೆರವಾಗಿದ್ದಾರೆ.

ಸ್ವೀಕಾರ

'ಹಿಂದೂಸ್ಥಾನವೂ ಹಿಂದೂಗಳು'- ತರಣ ಸಾಹಿತ್ಯ ಗ್ರಂಥಮಾಲೆಯ ೮ನೇ ಪುಷ್ಪ. ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿ ಹಲಕುಂಟೆ ಮಠ, ತುಮಕೂರು, ಅವರು ಪ್ರಕಾಶಕ, ಸಂಪಾದಕರು.

ವಿಶೇಷ ಸುದ್ದಿಸಾರ

ದೊಡ್ಡ ವಿಮಾನ ಪಡೆಯನ್ನೂ ಬಲಿಷ್ಠವೂ ಸಮರ ಚತುರವೂ ಆದ ಸೈನ್ಯವನ್ನೂ ಉಪಯೋಗಿಸಿ ಬೆಲ್ಜಿಯಂನಲ್ಲಿ ಜರ್ಮನರು ಅಮೇರಿಕನ್ ಸೈನ್ಯಗಳನ್ನು ೨೦ ಮೈಲು ಹಿಂಪಕ್ಕಟ್ಟಿರುವರು.

○ ○ ○ ○

ಯುದ್ಧವು ೧೯೪೫ರ ಮಾರ್ಚ್ ಅಖೈರಿಯೊಳಗೆ ಅಂತ್ಯವಾಗುವುದೆಂದು ಇಂಗ್ಲೆಂಡಿನ ಸರ್ ವಿಲಿಯಂ ಬಿವರಿಜ್ ಎಂಬ ಸಾಮಾಜಿಕ ಮುಖಂಡರು ಭವಿಷ್ಯ ಹೇಳಿದ್ದಾರೆ. ರಷ್ಯನರ ಅಭಿಪ್ರಾಯ ಪ್ರಕಾರ ಇನ್ನೂ ೩ ತಿಂಗಳು ಹೆಚ್ಚು ಬೇಕಾಗುವುದು.

○ ○ ○ ○

ಗಾಂಧಿ—ಜಿನ್ನಾ ಭೇಟಿ ಪುನಃ ಆಗಬೇಕೆಂದು ಕಾಕ್ಸರ್ ಮುಖಂಡ ಅಲ್ಲಾಮಾ ಮಶ್ರುಕಿ ಅವರು ಇರ್ವ ಮುಖಂಡರಿಗೂ ತಂತಿ ಕಳಿಸಿರುವರು.

○ ○ ○ ○

ರಾಜಕೀಯ ಬಿಕ್ಕಟನ್ನು ಈಗಲೇ ಬಿಡಿಸದಿದ್ದರೆ ಭಾರತಕ್ಕೆ ಹೆಚ್ಚಿನ ಅಪಾಯವಿದೆ ಎಂದು ಇಂಡಿಯಾ ಸರಕಾರದ ಮಾಜಿ ಮಂತ್ರಿ ಸರ್ ಹೋಮಿ ಮೋಡಿ ಅವರು ತಿಳಿಸಿದರು.

○ ○ ○ ○

ಬಂಗಾಳ ಬರಗಾಲಕ್ಕೆ ಸಿಕ್ಕಿ ನರಳುವ ಚಿಕ್ಕ ಮಕ್ಕಳನ್ನು ದತ್ತಕ್ಕೆ ತೆಗೆದುಕೊಂಡು ಸಾಕಲು ಇಂಗ್ಲೆಂಡ್ ಅಮೇರಿಕದ ಅನೇಕ ಮಹನೀಯರು ಇಚ್ಛೆ ಪಟ್ಟಿದ್ದರೆಂದೂ ಆದರೆ ಆ ಮಕ್ಕಳು ತುಂಬಾ ಅನಾರೋಗ್ಯಕ್ಕೆ ಬಲಿಯಾಗಿದ್ದುದರಿಂದ ಕಳುಹಿಸಲು ಸಾಧ್ಯವಾಗಲಿಲ್ಲವೆಂದು ವಿಜಯಲಕ್ಷ್ಮಿ ಪಂಡಿತರು. ನ್ಯೂಯೋರ್ಕಿನ ಪತ್ರಿಕೆಯೊಂದಕ್ಕೆ ತಿಳಿಸಿರುವರು.

○ ○ ○ ○

ನೆಲಗಡಲೆ ಕಾಯಿಯಿಂದ ಕೃತಕ ಕಂಬಳಿ ನೂಲನ್ನು ತಯಾರಿಸುವ ವಿಧಾನವನ್ನು ಇಂಗ್ಲೆಂಡಿನಲ್ಲಿ ಕಂಡು ಹಿಡಿಯಲಾಗಿದೆ. ೧ ಮಣ ಕಾಯಿಯಿಂದ ೬| ರಾತ್ಲ ಕೃತಕ ಉಣ್ಣೆಯು ದೊರಕುತ್ತದೆಯಂತೆ.

○ ○ ○ ○

ಕೇಂದ್ರ ಸರಕಾರದವರು ಹೊಲಿಗೆ ದರಗಳನ್ನು ನಿಯಂತ್ರಿಸಿದ್ದಾರೆ. ಉತ್ತಮ ದರ್ಜೆಯ ಕೋಟು ಚಲ್ಲಣಕ್ಕೆ ರೂ. ೧೦೦ ಮಜೂರಿ. ಕಮ್ಮಿ ಅಂದರೆ ೧೫ ರೂಪಾಯಿ.

○ ○ ○ ○

ಭಾರತದ ಟೇಬಲ್ ಟೆನ್ನಿಸ್ ಚಾಂಪಿಯನ್ನಾದ ಮದ್ರಾಸಿನ ಶಿವರಾಮನನು ಜಗತ್ತಿನ ಚಾಂಪಿಯನ್ ಎನಿಸಿದ ಅಮೇರಿಕದ ಬೆಲಾಕ್ ಎಂಬಾತನನ್ನು ಕಲ್ಕತ್ತದಲ್ಲಿ ನಡೆದ ಒಂದು ಪಂದ್ಯಾಟದಲ್ಲಿ ಸೋಲಿಸಿದನು.

○ ○ ○ ○

ಗಾಂಧೀಜಿಯ ಜೀವನವನ್ನು ಸಂಸ್ಕೃತ ಕಾವ್ಯ ರೂಪದಲ್ಲಿ ರಚಿಸಿದ ಕ್ಷಮಾಬಾಯಿ ರಾವ್ ಎಂಬ ಮಹಿಳೆಗೆ ಪ್ರಥಮ ಬಹುಮಾನ ಸಿಕ್ಕಿದೆ.

○ ○ ○ ○

ಕೊಂಗ್ರೆಸ್ ಮುಖಂಡರನ್ನು ಸದ್ಯದಲ್ಲಿ ಬಿಡುವ ಸಂಭವವಿರಬಹುದೆಂದು ಇಂಡಿಯಾ ಸರಕಾರದ ಶಿಕ್ಷಣ, ಆರೋಗ್ಯ ಖಾತೆಗಳ ಸಚಿವ ಸರ್ ಜೋಗೇಂದ್ರ ಸಿಂಗರು ತಿಳಿಸಿರುವರು.

○ ○ ○ ○

ಸಂಯುಕ್ತ ಪ್ರಾಂತ್ಯದಲ್ಲಿ ಆರು ನೂರಕ್ಕೂ ಮಿಕ್ಕಿ ರಾಜಕೀಯ ಕೈದಿಗಳನ್ನು ಬಿಟ್ಟುಬಿಡಲು ಅಲ್ಲಿನ ಸರಕಾರವು ಏರ್ಪಡಿಸಿರುವುದು.

○ ○ ○ ○

ಯುದ್ಧಾನಂತರದ ಪುನರ್ರಚನೆಗೆ ಯೋಜನೆ ಖಾತೆಯ ಮುಖ್ಯಸ್ಥರಾಗಿ ಇಂಡಿಯಾ ಸರಕಾರದಿಂದ ನೇಮಿಸಲ್ಪಟ್ಟಿದ್ದ ಸರ್ ಅರ್ದೇಶೀರ್ ದಲಾಲರವರು "ರಾಷ್ಟ್ರೀಯ ಸರಕಾರವಿಲ್ಲದಿರುವುದು ಈ ಕಾರ್ಯಕ್ಕೆ ದೊಡ್ಡದೊಂದು ಆತಂಕ" ವೆಂದು ತಿಳಿಸಿದರು.

○ ○ ○ ○

ಸ್ಥಾನ ಬದ್ಧ ಕೈದಿಗಳನ್ನು ಬಿಟ್ಟುಬಿಡಲು ಸರಕಾರವನ್ನು ಒತ್ತಾಯ ಪಡಿಸಲು ಕಾಂಗ್ರೆಸ್—ಲೀಗ್ ಸಂಯುಕ್ತ ಕೇಳಿಕೆಯೊಂದನ್ನು ಮುಂದೆ ಹಾಕಬೇಕೆಂದು ಕರಾಚಿ ಮುಸ್ಲಿಂ ಲೀಗಿನ ಅಬ್ದುಲ್ಲಾ ಹಾರೂನ್ ಅವರು ಸೂಚಿಸಿದರು.

○ ○ ○ ○

ಭಾರತದ ಚಿಕ್ಕ ದೊಡ್ಡ ೬೪೦ ಪಟ್ಟಣಗಳಲ್ಲಿ ರೇಶನ್ ಪದ್ಧತಿಯು ಜ್ಯಾರಿಗೆ ತರಲಾಗಿದೆ. ೪೨೦ ಲಕ್ಷ ಜನರಿಗೆ ರೇಶನ್ ಕಾರ್ಡ್‌ಗಳಿವೆ.

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾಗಬೇಕಾದರೆ ಪ್ರತಿದಿನ ರಾತ್ರೆ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವನಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು

ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

BILE BEANS

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು.

ಬೇಂಕುಗಳಿಗೆ ಕಂಟ್ರೋಲ್

ಸಣ್ಣ ಪುಟ್ಟ ಬೇಂಕುಗಳಿಗೆ ಕಷ್ಟ ಸಹಕಾರೀ ಬೇಂಕುಗಳಿಗೆ ಸಹಾಯ

"೧೯೪೪ರ ಬೇಂಕಿಂಗ್ ಕಾಯಿದೆ" ಎಂಬ ಶಾಸನವು ಹೊಸ ವರ್ಷದಲ್ಲಿ ಜ್ಯಾರಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ. ರಿಸರ್ವ್ ಬೇಂಕಿನವರಿಂದ ತಯಾರಿಸಲ್ಪಟ್ಟ ಈ ಬೇಂಕು ನಿಯಂತ್ರಣ ಕಾನೂನು ಮೊನ್ನೆ ಎಸೆಂಬ್ಲಿಯ ಮುಂದೆ ಬಂದಿದ್ದು ಈಗ ಒಂದು ಸೆಲೆಕ್ಟ್ ಕಮಿಟಿಯ ಪರಿಶೀಲನೆಯಲ್ಲಿದೆ.

ನಮ್ಮ ದೇಶದ ಬ್ಯಾಂಕುಗಳಲ್ಲಿ ಒಟ್ಟು ಸುಮಾರು ೮೦೦ ಕೋಟಿ ರೂಪಾಯಿಗಳಷ್ಟು ಡೆಪೊಸಿಟ್ ಹಣವು ಇದೆ. ಇವುಗಳಲ್ಲಿ ೭೬೦ ಕೋಟಿಗಳಷ್ಟು ದೊಡ ದೊಡ್ಡ ಬಾಂಕುಗಳಲ್ಲೇ ಇದೆ. ನಮ್ಮ ದೇಶದಲ್ಲಿ ಸಣ್ಣ ಪುಟ್ಟ ಬೇಂಕುಗಳು ಸುಮಾರು ೫೦೦ರಷ್ಟು ಇವೆ. ಇವುಗಳಲ್ಲಿ ಸಾಮಾನ್ಯ ಬಡ ಜನತೆಯ ೪೦ ಕೋಟಿ ರೂಪಾಯಿಗಳ ಡಿಪೊಸೀಟುಗಳಿವೆ.

ಮುಂದೆ ಜಾರಿಗೆ ಬರಬಹುದಾದ ಈ 'ಬೇಂಕಿಂಗ್ ಕಾಯಿದೆ'ಯ ಪ್ರಕಾರ ಸಣ್ಣ ಪುಟ್ಟ ಬೇಂಕುಗಳು ಮುಚ್ಚಲೇ ಬೇಕಾದ ಪರಿಸ್ಥಿತಿ ಬಂದು, ಹಣಕಾಸಿನ ವ್ಯವಹಾರವೆಲ್ಲ ಕೆಲವೊಂದು ಪುಷ್ಟ ಬಂಡವಾಳದವುಗಳಿಗೇ ಕಡ್ಡಾಯವಾಗಿ ಕೊಡಿಸಿದಂತಾಗುತ್ತದೆ.

ಕಾಯಿದೆಯು ತೊಡಕೇನು?

ಇದುತನಕ ೫೦ ಸಾವಿರ ರೂಪಾಯಿಗಳಷ್ಟು ತೆತ್ತ ಬಂಡವಾಳ (ಪೈಡ್‌ಅಪ್ ಕೆಪಿಟಲ್) ವಿದ್ದರೆ ಬೇಂಕು ಇಡಬಹುದಿತ್ತು. ಇನ್ನು ಮೇಲೆ ತೆತ್ತ ಬಂಡವಾಳ ಒಂದು ಲಕ್ಷವಿರಬೇಕು. ಹಿಂದಿನಿಂದ ೫೦ ಸಾವಿರದಲ್ಲೇ ವ್ಯವಹಾರ ಪ್ರಾರಂಭಿಸಿ ಬಂದ ಬೇಂಕುಗಳಿಗೂ ಇದು ಅನ್ವಯಿಸುತ್ತದೆ. ಎರಡು ವರ್ಷಗಳಲ್ಲಿ ಇವುಗಳು ತಮ್ಮ ಪಾಲು ಬಂಡವಾಳವನ್ನೂ ಕ್ಷೇಮನಿಧಿ (ರಿಸರ್ವ್ ಫಂಡ್)ಯನ್ನೂ ೧ ಲಕ್ಷದಷ್ಟು ಮಾಡದಿದ್ದರೆ ಮುಚ್ಚಲೇ ಬೇಕಾಗುವುದು.

ಬ್ರೇಂಚ್ ಮಾಡಬೇಕಾದರೆ

ಬ್ರೇಂಚ್ ಅಥವಾ ಶಾಖೆ ತೆರೆಯಬೇಕಾದರೆ ಒಂದು ಬೇಂಕಿನ ಹತ್ತಿರ ೨೦ ಲಕ್ಷದಷ್ಟು ತೆತ್ತ ಬಂಡವಾಳ ಮತ್ತು ಕ್ಷೇಮನಿಧಿ ಕೂಡಿ ಇರಬೇಕು. ಸಂಸ್ಥಾನದಿಂದ ಬ್ರಿಟಿಷ್ ಇಂಡಿಯಾದಲ್ಲಿ ತೆರೆಯಲ್ಪಡುವುಗಳಿಗೂ ಇದೆ ನಿಯಮ.

ಚಿಕ್ಕ ಶಹರಿನಲ್ಲಿ ತೆರೆಯಲ್ಪಟ್ಟ ಶಾಖೆಯಲ್ಲಿ ಹತ್ತು ಸಾವಿರ ರೂಪಾಯಿಗೆ ಕಮ್ಮಿ ಇಲ್ಲದ ಬಂಡವಾಳ ಮತ್ತು ಕ್ಷೇಮನಿಧಿ ಇರಬೇಕು. ಲಕ್ಷಕ್ಕೆ ಮಿಕ್ಕಿದ ಜನಸಂಖ್ಯೆಯ ನಗರದಲ್ಲಿನ ಶಾಖೆಗೆ ೨ಲಕ್ಷ, ಪ್ರಾಂತ್ಯದ ರಾಜಧಾನಿಗಳಲ್ಲಿ ಶಾಖೆ ತೆರೆಯಲು ೫ ಲಕ್ಷದ ಬಂಡವಾಳ, ಕ್ಷೇಮನಿಧಿಗಳಿರಬೇಕು.

ಹೊರ ದೇಶಗಳಲ್ಲಿ ಮುಖ್ಯ ಕಛೇರಿ ಇರುವ ಬೇಂಕುಗಳು ಭಾರತದಲ್ಲಿ ಶಾಖೆ ತೆರೆಯಬೇಕಾದರೆ ರಿಸರ್ವ್ ಬೇಂಕಿನ ಅನುಮತಿ ಪಡೆಯ ಬೇಕು. ಆ ದೇಶಗಳಲ್ಲಿ ಭಾರತೀಯ ಬೇಂಕುಗಳಿಗೆ ವಿರೋಧ ಕಾಯಿದೆಗಳಿದ್ದರೆ ಅವರಿಗೆ ಅನುಮತಿ ದೊರೆಯಲಾರದು.

ಬೇಂಕುಗಳು ಡಿಪೋಸಿಟ್ ಇಟ್ಟ ತಮ್ಮ ಗಿರಾಕಿಗಳಿಗೆ ಯಾವ ರೀತಿಯಲ್ಲಿಯೂ ನಷ್ಟ ಪಡಿಸದಂತೆ ರಿಸರ್ವ್ ಬೇಂಕಿನ ಪರಿಶೀಲನೆಗೆ ಒಳಗಾಗ ಬೇಕು.

ಸತ್ಪರಿಣಾಮಗಳು

ಈ ಹೊಸ ಕಾಯಿದೆಯಿಂದ ಠೇವಣಾತಿದಾರರಿಗೆ ಭದ್ರತೆ ಸಿಕ್ಕಿದಂತಾಗುವುದು. ಅದು ಸರಕಾರದವರ ಕರ್ತವ್ಯವೂ ಇರುವುದು. ಹೆಚ್ಚು ಬಡ್ಡಿಗೆ, ಭದ್ರತೆ ಇಲ್ಲದೆ ಬಂಡವಾಳವನ್ನು ವ್ಯಾಪಾರಿಗಳಿಗೆ ಹಂಚಿ ವ್ಯವಹಾರ ನಡೆಸುವ ಚಿಕ್ಕ ಚಿಕ್ಕ ಬೇಂಕುಗಳು ಎರಡು ವರ್ಷಗಳಲ್ಲಿ ೧ ಲಕ್ಷದ ಶರ್ತ ಪೂರೈಸದಿದ್ದರೆ ದೀವಾಳಿಯಾಗಲೇ ಬೇಕಾಗುವುದು. ಇದರಿಂದ ಅವುಗಳಲ್ಲಿ ಠೇವಣಾತಿ ಇಟ್ಟ ಬಡ ಜನತೆಗೆ ನಷ್ಟ ಸಂಭವಿಸಬಹುದು. ಇದರ ಯೋಗ್ಯ ಇತ್ಯರ್ಥ ಮಾಡಲು ಚಿಕ್ಕ ಚಿಕ್ಕ ಬೇಂಕಿನವರು ಈ ಹೊಸ ಮಸೂದೆಯನ್ನು ಅಭ್ಯಸಿಸಿ ಸರಕಾರಕ್ಕೆ ಕ್ಲಪ್ತ ಕಾಲದಲ್ಲಿ ಮನವಿ ಮಾಡಿಕೊಳ್ಳುವುದುತ್ತಮ.

ಮೇಲಿನ ಬೇಂಕಿಂಗ್ ಕಾಯಿದೆಯು ಸಹಕಾರಿ (ಕೋಪರೇಟಿವ್) ಬೇಂಕುಗಳಿಗೆ ಅನ್ವಯಿಸುವುದಿಲ್ಲವಾದುದರಿಂದ ಅವುಗಳು ತೃಪ್ತಿಕರವಾಗಿ ಅಭಿವೃದಿ ಹೊಂದಬಹುದು.

ಆರಿಸಿದ ಅಭಿಪ್ರಾಯಗಳು

(೫ನೇ ಪುಟದಿಂದ)

ಕ್ಷ ಸಂಘವು ಅಮೆರಿಕದ ರಾಜಕೀಯದಲ್ಲಿ, ಬಹೀರ್ ವ್ಯವಹಾರದಲ್ಲಿ ಬಹಳ ಪ್ರಭಾವಿತವಾಗಿರುತ್ತದೆ. ಈ ಕಾರಣದಿಂದಲೇ ಸಂಯುಕ್ತ ಅಮೆರಿಕಾದ ಬಹೀರ್ ವ್ಯವಹಾರ ಸಂಘದವರು, ಅಸ್ಯಖಂಡದವರಿಗೆ ರಾಷ್ಟ್ರಗಳು ಸ್ವತಂತ್ರರಾಗಬೇಕೆಂದು ಪ್ರತಿಪಾದಿಸುತ್ತಿರುವರು. ಆದರೆ ಸಂಯುಕ್ತ ಅಮೆರಿಕಾದ ಸರಕಾರೀ ಅಧಿಕಾರವರ್ಗದಲ್ಲಿ ಪ್ರತಿಗಾಮಿ ಜನರ ಸಂಖ್ಯೆಯು ದೊಡ್ಡದಿದೆ. ಸದ್ಯ ಯುರೋಪದಲ್ಲಿ ಅಮೆರಿಕಾದ ಪ್ರತಿನಿಧಿಗಳಾಗಿದ್ದ ಮುರ್ಫಿ ಎಂಬವರು ಕಡುವಾದ ಪ್ರತಿಗಾಮಿಗಳು. ಸಂಯುಕ್ತ ಅಮೆರಿಕಾದ ಬಹೀರ್ ವ್ಯವಹಾರದ ಧೋರಣದಲ್ಲಿ ಇವರ ಪ್ರಭಾವವು ತುಂಬಾಯಿದೆ–ಎಂದು ತಿಳಿದುಬಂದಿದೆ. ಇಂಗ್ಲಾಂಡಿನಲ್ಲಿ ಚರ್ಚಿಲರನ್ನು ತಿದ್ದಲು ಪ್ರಗತಿಗಾಮಿ ಪಂಗಡಗಳನೇಕ ಇದ್ದಂತೆ, ಅಮೆರಿಕಾದಲ್ಲೂ ಈ ತರದ ಸಂಘೆಗಳು ಇವೆ.

* * *

ಚರ್ಚಿಲ್ಲರಲ್ಲಿ ರಾಜರ ಕುರಿತು ಆಸಕ್ತಿ ಹೆಚ್ಚು. ಈ ಆಸಕ್ತಿಯು ಅವರ ಇಟೆಲಿಯ ಸರಕಾರ ಮಂಡಳದ ರಚನೆಯ ಕುರಿತು ತೋರಿದ ಧೋರಣದಲ್ಲಿ ಕಾಣುತ್ತದೆ. ಇಟೆಲಿಯಲ್ಲಿ ಇವರು ರಾಜರನ್ನು ಎತ್ತಿ ಹಿಡಿದುದು ಮಾತ್ರವಲ್ಲ, ಗ್ರೀಸಿನಲ್ಲೂ ರಾಜರನ್ನು ಎತ್ತಿಹಿಡಿಯುವ ಯತ್ನವನ್ನು ಮಾಡುತ್ತಿರುವರು. ರಾಜಪ್ರೇಮಿಗಳಾದ ಚರ್ಚಿಲ್ಲರಿಗೆ ಯುರೋಪದಲ್ಲಿ ಕೊಮ್ಯುನಿಸ್ಟ್ ಪ್ರಭಾವವು ಬೆಳೆಯುತ್ತಿರುವುದರಲ್ಲಿ ಸಹನೆಯಿಲ್ಲ. ಸಮಸ್ತ ಯುರೋಪವು ಕೆಂಪಾಗದಂತೆ ಅವರು ತಮ್ಮ ಹಿಡಿತದೊಳಗೆ ಬರುವ ಯುರೋಪದ ದೇಶಗಳಲ್ಲಿ ನೀಲ ವರ್ಣವನ್ನು ಚೆಲ್ಲುತ್ತಿರುವರು.

* * *

ಸ್ಟೇಲಿನರು ಸಂದರ್ಭಗಳಿಗೆ ಸರಿಯಾಗಿ ತಮ್ಮ ಧೋರಣವನ್ನು ರೂಪಿಸುವರು. ಸೊವಿಯಟ್ ರಷ್ಯವನ್ನು ತನ್ನ ಹಗೆಗಳಿಂದ ಸುರಕ್ಷಿತಗೊಳಿಸುವುದೆ, ಅವರ ಬಹೀರ್ ವ್ಯವಹಾರ ನೀತಿಯು. ಅವರು ಪಿನ್‌ಲೆಂಡಿನ ಮೇಲೆ ದಂಡೆತ್ತಿ ಹೋದುದು ಇದೇ ಕಾರಣದಿಂದ. ಹಿಟ್ಲರನೊಡನೆ ಒಪ್ಪಂದ ಮಾಡಿದುದು ಇದೇ ಕಾರಣದಿಂದ. ಈಗ ಫ್ರಾನ್ಸಿನ ಸದ್ಯದ ನಾಯಕ ಡಿಗೊಲೆಗೂ ಅವರಿಗೂ ಒಂದು ಒಪ್ಪಂದವಾಗಿಯದೆ. ಇದರಲ್ಲೂ ಅವರು ತನ್ನ ಮೂಲನೀತಿಯನ್ನು ಅನ್ವಯಿಸಿರಬೇಕು-ಸಮಯ ಸಾಧಿಸಿ, ಸುಸಂಧಿ ಒದಗಿದಾಗ ಸೋವಿಯಟ್ ರಷ್ಯಕ್ಕೆ ಲಾಭ ಮಾಡಿಕೊಳ್ಳುವತಂಥದ್ದು ಆತನ ದೋರಣವು.

ಲೋಕಪ್ರಸಿದ್ಧವಾದ ಚರ್ಮರೋಗ ನಿವಾರಕ

ಜಾಂಬಕ್ ತುರಿಕಜ್ಜಿ ಗಾಯಬಾವುಗಳನ್ನು ಗುಣಪಡಿಸುವುದು

ಚರ್ಮದ ರೋಗಗಳಿಗೆ ಮತ್ತು ಗಾಯಗಳಿಗೆ ಇಡೀ ಲೋಕದಲ್ಲೆ ಪ್ರಖ್ಯಾತವಾಗಿರುವ ಔಷಧವೆಂದರೆ ಜಾಂಬಕ್ ಗಾಯವಾದರೆ ಇಲ್ಲವೇ ಕಜ್ಜಿಯಾದರೆ ಇದನ್ನು ಅದರ ಮೇಲೆ ಮೆಲ್ಲಗೆ ತಾಗಿಸಿರಿ; ಅದು ಕೂಡಲೇ ಸುಲಭದಲ್ಲಿ ಗುಣವಾಗುವುದು. ಜಾಂಬಕಿನಲ್ಲಿರುವ ಅಮೂಲ್ಯ ವನೌಷಧಿ ಸತ್ವವು ಚರ್ಮದ ನರಗಳಲ್ಲಿ ಕೂಡಲೇ ಹೀರಿಕೊಂಡು, ಬೇನೆಯನ್ನು ಕಡಿಮೆಮಾಡುವುದು. ಬಾವನ್ನು ಇಳಿಸುವುದು, ಒಣಗುವಂತೆ ಮಾಡಿ ಗುಣಕೊಡುವುದು. ಕಲೆಯುಳಿಯದಂತೆ ಜಾಂಬಕ್ ಗುಣಮಾಡುತ್ತದೆ.

ಯಾವಾಗಲೂ ಜಾಂಬಕನ್ನು ಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದದ್ದು.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ಪೂರ್ವ-ಪಶ್ಚಿಮ

(೧ನೇ ಪುಟದಿಂದ)

ಕಾಣಲಾರೆ. ನನ್ನ ಪಾಪವನ್ನು ಕಳೆದುಕೊಂಡು ಪರಿಶುದ್ಧನಾಗುತ್ತ ಹೋದಂತೆ ಅವನನ್ನು ಸಮೀಪಿಸುವೆನು.' 'ಅಪವಿತ್ರರಿಗೆ ಸತ್ಯಸಿಂಹಾಸನದೆದುರು ನಿಲ್ಲಲು ಕೂಡ ಅಸಾಧ್ಯ' ಎಂದು ಗಾಂಧಿಯವರು ಹೇಳಿದ್ದಾರೆ. 'ದೇವರೇ, ಎಂದು ಒರಲುವವರೆಲ್ಲರೂ ಸ್ವರ್ಗವನ್ನು ಪಡೆಯಲಾರರು. ಆದರೆ ಸ್ವರ್ಗದಲ್ಲಿಯ ತಂದೆಯ ಇಚ್ಛೆಯಂತೆ ನಡೆಯುವವರೇ ಅವನನ್ನು ಸೇರುವರು' ಎಂದು ಏಸೂ ಹೇಳುತ್ತಾನೆ. ಇದೇ ಮಾತನ್ನೆತ್ತಿಕೊಂಡು ಗಾಂಧಿಯವರು ಅನಾಥರ ಸೇವೆಯೆ ಧರ್ಮ; ಅನಾಥರ ಸೇವೆ ನಡೆಸುವವನ ಹೃದಯ ಸಿಂಹಾಸನವನ್ನು ದೇವರು ತಾನಾಗಿಯೇ ಹುಡುಕಿಕೊಂಡು ಬರುತ್ತಾನೆಂದು ಹೇಳುತ್ತಾರೆ. (೨೪–೯–೨೫).

ಏಸೂ, ಮಹಾತ್ಮರಿಬ್ಬರಿಗೂ ಆತ್ಮಶುದ್ಧಿ, ಆತ್ಮಾರ್ಪಣೆಗಳೇ ಮುಖ್ಯವಾಗಿರುವಾಗ ಇವೆರಡನ್ನೂ ಬಹಿರಂಗವಾಗಿ ತೋರಿಸಿ ಡಂಬಾಚಾರದ ಸೇವೆ ಸಲ್ಲಿಸುವುದು ಸಾಧ್ಯವೆಂಬುದನ್ನು ಇಬ್ಬರೂ ಅರಿತಿದ್ದಾರೆ. ಏಸೂ ಹಾಗೂ ಗಾಂಧಿಯವರು ತಮ್ಮ ಉಪದೇಶ–ಲೇಖನಗಳಲ್ಲಿ ಸಂಪೂರ್ಣ ಆತ್ಮ ಸಮರ್ಪಣೆಯನ್ನೇ ಕೇಳಿರುವುದರಿಂದ ಢಂಭಾಚಾರಿಗಳಿಗೆ ಅಲ್ಲಿ ಆಸ್ಪದವಿಲ್ಲದಾಗಿದೆ. 'ಬೀಜವು ನೆಲದಲ್ಲಿ ಬಿದ್ದು ಆತ್ಮಾರ್ಪಣೆಯನ್ನು ಮಾಡಿದ ಹೊರತು ಹೆಚ್ಚು ಬೆಳೆಯನ್ನು ತರಲಾರದು. ಪ್ರಾಣರಕ್ಷಣೆಗಾಗಿ ಹೆಣಗುವವನು ಅದನ್ನು ಕಳೆದುಕೊಳ್ಳುತ್ತಾನೆ. ಆದರೆ ನನ್ನ ಹಾಗೂ ಧರ್ಮದ ಸಲುವಾಗಿ ಪ್ರಾಣಾರ್ಪಣ ಮಾಡುವವನು ಚಿರಂಜೀವಿಯಾಗುತ್ತಾನೆ' ಎಂದು ಏಸುವಿನ ಉಪದೇಶ. ಇವೇ ವಿಚಾರಗಳನ್ನು ಗಾಂಧಿಯವರೂ ಹೇಳುತ್ತಾರೆ. 'ನಿರಹಂಕಾರಿಯಲ್ಲದವನ ಸೇವೆ ಸ್ವಾರ್ಥ ಹಾಗೂ ಆತ್ಮಪೌರುಷಕ್ಕಾಗಿ.' 'ನಮಗೆ ಬೇಕಾದ ಸ್ವಾತಂತ್ರ್ಯವನ್ನು ಪಡೆಯಲು ಆತ್ಮಸಮರ್ಪಣೆಯೊಂದೇ ಮಾರ್ಗ. ಹೀಗೆ ತನ್ನನ್ನು ತಾನು ಮರೆತೊಡನೆ ಅವನು ಜಗತ್ತಿನ ಎಲ್ಲ ಸಜೀತನ ವಸ್ತುಗಳ ಸೇವೆಗೆ ಬದ್ಧಕಂಕಣನಾಗುತ್ತಾನೆ.' 'ನಿನ್ನನ್ನು ನೀನು ಮರೆತ ಹೊರತು ದೇವರನ್ನು ಅಥವಾ ಪ್ರಾರ್ಥನೆಯನ್ನು ಅರಿಯಲಾರೆ.' (೧೯–೮–೩೯)

ಲೌಕಿಕ ಜಗತ್ತು, ದೇಹದ ಬದುಕು ಹಾಗೂ ಸಂನ್ಯಾಸ ಇವುಗಳ ವಿಚಾರಗಳಲ್ಲಿ ಗಾಂಧಿಯವರು ಕ್ರಿಶ್ಚಿಯನರನ್ನು ಬಹಳ ಹೋಲುತ್ತಾರೆ. ಅವರು ಪೂರ್ವಕಾಲದ ಕ್ರಿಶ್ಚನರಂತೆ ದೇವರನ್ನು ಸೃಷ್ಟಿಕರ್ತನೆಂದು ಕರೆಯುವದು ಅವರ ಆಶಾವಾದಿ ಧರ್ಮದ ದ್ಯೋತಕವಾಗಿದೆ. ಹೀಗಾಗಿ ದೇವರ ಸೃಷ್ಟಿಯಾದ ಲೌಕಿಕ ಜಗತ್ತು ಹಾಗೂ ಮಾನವ ಶರೀರಗಳು ಒಳ್ಳೆಯವೆಂದು ಒಪ್ಪುತ್ತಾರೆ. ಕ್ರಿಶ್ಚನರಂತೆ ಇವರೂ ದೇಹ ದೇವಾಲಯವೆಂದು ಹೇಳುತ್ತಾರೆ. ದೇವಾಲಯವನ್ನು ಚೆನ್ನಾಗಿಡುವದಕ್ಕಾಗಿ ಬ್ರಹ್ಮಚಾರಿಯು ಆಹಾರವನ್ನು ಭಕ್ಷಿಸುಸ್ತಾನೆ. ಅವರ ಸಂನ್ಯಾಸದ ಶಿಸ್ತು ಲೌಕಿಕ ವಸ್ತುಗಳ ಪವಿತ್ರತೆಯಿಂದ ಭಿನ್ನವಾಗಿಲ್ಲ. ಆಡಂಬರದ ಆಚರಣೆಯನ್ನು ಅವರು ಪುನಃ ಪುನಃ ನಿಷೇಧಿಸಿದ್ದಾರೆ. 'ನಿಜವಾಗಿಯೂ ಅಪವಿತ್ರವಾದ ಮನಸ್ಸನ್ನು ಉಪವಾಸದಿಂದ ಶುದ್ಧಗೊಳಿಸಲಾಗುವುದಿಲ್ಲ.' ದೇವರೇ ಸರ್ವಸ್ವಾಮಿಯೆಂಬ ಕರುಳಿನ ಕೂಗೇ ನಿಜವಾದ ಉಪವಾಸ.

ಗಾಂಧಿಯವರ ಹಾಗೂ ಕ್ರಿಶ್ಚನ ಧರ್ಮದ ವಿಚಾರಗಳಲ್ಲಿಯ ಸಾಮ್ಯವನ್ನು ಇನ್ನು ವಿಶದವಾಗಿ ಚರ್ಚಿಸದೆ, ಕ್ರಿಶ್ಚನ ಸಾಧು ಸಂತರ ಯೋಗ್ಯ ಅನುಭಾವಗಳನ್ನು ಹೇಳಲಾಗುವದು. ಈ ಅನುಭಾವ ಹಾಗೂ ಮಹಾತ್ಮರ ವಿಚಾರಗಳಲ್ಲಿ ವಿಶೇಷ ವೈಷಮ್ಯ ಕಂಡುಬರುವದಿಲ್ಲ. ಈ ವೈಷಮ್ಯಗಳಲ್ಲಿ ಕೂಡ ಅನೇಕ ಕ್ರಿಶ್ಚನ ಪಂಗಡದವರು ಮಹಾತ್ಮರನ್ನು ಹೆಚ್ಚಾಗಿ ಹೋಲುತ್ತಾರೆ. ಕಲ್ಪನಾತೀತವಾದ ಸತ್ಯವನ್ನು 'ನಮ್ಮ ತಂದೆ' ಎಂದು ಏಸೂ ಕರೆದದ್ದನ್ನು ಅನೇಕರು ಉಚಿತವಲ್ಲವೆಂದು ಹೇಳಬಹುದು. ಆದರೂ ಅವರು ಏಸುವಿನಲ್ಲಿ ದೇವರ ಅಂಶವನ್ನು, ಅವನ ಪ್ರೀತಿಯ ಬದುಕನ್ನು, ಅವನ ವೈಭವವನ್ನು ಕಾಣುವರು. ಮಹಾತ್ಮರ ರೀತಿ ವಿಶೇಷವಾಗಿ ಆತ್ಮಾರ್ಪಣೆಯದಾಗಿದೆ. 'ನಾನು ದೇವರನ್ನು ವ್ಯಕ್ತಿಯೆಂದು ತಿಳಿದಿಲ್ಲ. ಸತ್ಯವೇ ನನಗೆ ದೇವರು.' 'ಸಾಕಾರವನ್ನಪೇಕ್ಷಿಸುವವರಿಗೆ ಅವನು ಸಾಕಾರನಾಗಿಯೇ ಇದ್ದಾನೆ. ದೇವರು ಅವರವರಿಗೆ ಬೇಕಾದ ರೂಪದಲ್ಲಿ ಕಾಣಿಸಿಕೆದಳ್ಳುತ್ತಾನೆ.' ಈ ಮತ ಭೇದವು ಪ್ರಾಮುಖ್ಯವಾಗಿ ಸತ್ಯದ ವಿಷಯವಾಗಿ ಇದೆಯೋ ಅಥವಾ ಕೇವಲ ಸಾಮಾನ್ಯ ಮತಭೇದವಾಗಿದೆಯೋ!

ಕೊನೆಯದಾಗಿ ಗಾಂಧಿಯವರ ಈ ನುಡಿಗಳನ್ನು ಯಾರೂ ಉದಹರಿಸದಿರಲಾರರು.

'ನಾನು ನನ್ನ ಅನೇಕ ಪಾಪಗಳನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದೇನೆ. ಆದರೆ ಅವುಗಳ ಭಾರವನ್ನು ನಾನು ಹೊರಲಾರೆ. ನನಗೆ ತೋಚಿದಂತೆ ನಾನು ದೇವರ ಸಾಕ್ಷಾತ್ಕಾರವನ್ನು ಕುರಿತು ಸಾಗಿದ್ದರೆ ಒಳಿತೇ ಆಯಿತು. ನಾನು ಅವನ ಸಾನ್ನಿಧ್ಯವನ್ನು ಅನುಭವಿಸಹತ್ತಿದ್ದೇನೆ. ನನ್ನ ಸುಧಾರಣೆಗಾಗಿ ನಾನು ನನ್ನ ವ್ರತ, ಉಪವಾಸ, ಪ್ರಾರ್ಥನೆಗಳನ್ನವಂಬಿಸಿದರೆ ಅವು ನಿರುಪಯೋಗಿಯಾಗುವವು. ಆದರೆ ದೇವರ ಪದತಲದಲ್ಲಿ ಆತ್ಮಾರ್ಪಣೆ ಮಾಡಲು ಅವು ಸಹಾಯಕವಾದರೆ ಅಮೂಲ್ಯವಾದವುಗಳಾಗುವವು."

1945 1945

ಆಫೀಸು ಕೆಲೆಂಡರುಗಳು

ಮಾರಾಟಕ್ಕೆ ಸಿದ್ಧವಾಗಿವೆ

ಬೆಲೆ 1ರ 0-4-0

ವ್ಯಾಪಾರಿಗಳಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಪ್ರೆಸ್ ರಥಬೀದಿ ಮಂಗಳೂರು

ಭಾರತದಲ್ಲಿ 'ಭಾರದ' ಕೈಗಾರಿಕೆ ವರ್ಷಬೇಕಾಗಿಲ್ಲ,

ಭಾರತೀಯ ಕೆಲಸಗಾರರು ಚತುರರು

ರೈಲು, ಮೋಟಾರು, ವಿಮಾನ, ಯಂತ್ರ ತಯಾರಿಸುವುದು. ಹಡಗ ಕಟ್ಟುವುದು ಮತ್ತಿತರ ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಹೇಗೆ ಸ್ಥಾಪಿಸಬಹುದೆಂಬುದರ ಕುರಿತು ಬಿ. ಬಿ. ಸಿ. ರೇಡಿಯೊದಲ್ಲಿ ಒಂದು ಚರ್ಚೆ ನಡೆಯಿತು.

ಸರ್ ಮ್ಯಾಲ್ ಥಾಮಸ್ ಎಂಬ ಕೈಗಾರಿಕೆ ತಜ್ಞರು ಇದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾರತದ ಸರ್ ಅತುಲ್ ಚಟರ್ಜಿಯವರೂ ಮತ್ತು ಪ್ರಖ್ಯಾತ ಅಂತರಾಷ್ಟ್ರಿಯ ಪತ್ರಿಕೋದ್ಯೋಮಿಗಳಾಗಿರುವ ಮಿ। ವಿಕ್ಹಾಮ್ ಸ್ಟೀಡ್ ಅವರೂ ಭಾಗವಹಿಸಿದ್ದರು.

ಅವರ ಚರ್ಚೆಯ ಸಾರಾಂಶ ಹೀಗಿದೆ.

ಸರ್ ಥಾಮಸ್

ಪಾಶ್ಚಾತ್ಯ ಕೈಗಾರಿಕೆ ದೇಶಗಳೊಂದಿಗೆ ಸಮಾನ ಸ್ಥಾನಕ್ಕೆ ಬರಬೇಕಾದರೆ ಭಾರತಕ್ಕೆ ಸುಮಾರು ಐವತ್ತು ಆರುವತ್ತು ವರ್ಷಗಳು ಬೇಕಾಗುವುವು.

ಇನ್ನೂ ಹಿಂದೆ ಬೀಳುತ್ತೇವೆ. ಕಾರಣ ಅವರ ಕೈಗಾರಿಕೆ ಅನುಭವವು ಅಷ್ಟರೊಳಗೆ ನಮಗಿಂತ ಇಮ್ಮಡಿಯಾಗುತ್ತದೆ.

ವಿಕ್ಹಾಮ್ ಸ್ಟೀಡ್

ಸರ್ ಥಾಮಸರ ಮಾತಿನ ಅರ್ಥ ನಿಮಗೆ ತಿಳಿಯಲಿಲ್ಲ ಭಾರತೀಯರು ಪ್ರಾರಂಭದಲ್ಲಿ ಚಿಕ್ಕ ಚಿಕ್ಕ ಯಂತ್ರೋಪಕರಣಗಳನ್ನು ಮಾಡಲು ಕಲಿಯಬೇಕು. ದೊಡ್ಡ ಯಂತ್ರ ಭಾಗಗಳನ್ನು ಸದ್ಯಕ್ಕೆ ಹೊರಗಿನಿಂದ ತರಿಸಬೇಕು. ಕ್ರಮೇಣ ಅವರು ದೊಡ್ಡ ಯಂತ್ರಗಳನ್ನು ಮಾಡಲು ಕಲಿಯುವರು.

ಸರ್ ಅಥುಲ್

ಭಾರತೀಯರು ಎಲ್ಲವನ್ನೂ ಪ್ರಾರಂಭದಿಂದಲೇ ಮಾಡಲು ಕಲಿತರೆ ಹೆಚ್ಚು ಸಮಯ ಹಿಡಿಯುವುದೆಂದರೆ, ಅವರು ಪ್ರಾಮುಖ್ಯ ಉಪಕರಣಗಳನ್ನೂ, ಯಂತ್ರಶಿಲ್ಪಿಗಳನ್ನೂ ಹೊರ ದೇಶದಿಂದ ತರಿಸಿದರೆ ಉದ್ಯೋಗೀಕರಣವು ತ್ವರೆಗೊಳುವುದೆಂದು ನಿಮ್ಮ ಅಭಿಪ್ರಾಯವೆ?

ಸರ್ ಥಾಮಸ್

ಕೈಗಾರಿಕೆ ದೇಶದಿಂದ ತರಿಸುವ ಉಪಕರಣಗಳನ್ನು ಜೋಡಿಸಿ, ದುರಸ್ತಿಮಾಡುವುದರ ಮೂಲಕ ಭಾರತೀಯ ಕೆಲಸಗಾರರು ಅನುಭವಸ್ಥರಾಗುವರು. ಅವರಿಗೆ ಚೆನ್ನಾಗಿ ತರಬೇತಿ ಸಿಕ್ಕಿದಂತಾಗುತ್ತದೆ. ಕಡೆಗೆ ಅವರು ಸ್ವಂತ ಯಂತ್ರ ತಯಾರಕರಾಗುತ್ತಾರೆ.

ಧೀರ ಭಾರತೀಯ ಸೈನಿಕ

ಚಿತ್ರದ ಹಿನ್ನೆಲೆಯಲ್ಲಿ ಬಾಗಿ ಬರುತ್ತಿರುವನೊಬ್ಬ ಭಾರತೀಯ. ಇಟೆಲಿಯಲ್ಲಿ ಯುದ್ಧ ಮಾಡುವ ಘೂರ್ಕಾ ದಳವೊಂದರಲ್ಲಿ ಅವನು ಸೈನಿಕರಿಗೆ ಚಾ ತಯಾರಿಸುವವ. ದಣಿದ ತನ್ನ ಗೆಳೆಯರಿಗೆ ಚಾ ಒಯ್ದು ಕೊಡಲು ಅವನು ಅನೇಕ ಸಲ ಗುಂಡಿನ ಸುರಿಮಳೆಯನ್ನೆದುರಿಸಿದ್ದಾನೆ.

ಕಾರಣ ಪಾಶ್ಚಾತ್ಯರು ಮೋಟಾರು ವಿಮಾನ ರೈಲು ಮುಂತಾದ ಯಂತ್ರಗಳ ಪ್ರಾಮುಖ್ಯ ಉಪಕರಣ ಭಾಗಗಳನ್ನು ತಯಾರಿಸಲು ಹಲವು ವರ್ಷದ ಪರಿಶ್ರಮ ನಡೆಸಿರುವರು. ಅವನ್ನು ತಯಾರಿಸುವ ಮೊದಲು ಭಾರತೀಯರು ಈ ಉಪಕರಣಗಳನ್ನು ತರಿಸಿ ಕೊಳ್ಳಬೇಕು. ಆ ಮೇಲೆ ಅವುಗಳನ್ನು ತಮ್ಮಲ್ಲಿ ಸುಲಭವಾಗಿ ತಯಾರಾಗುವ ಇತರ ಚಿಕ್ಕಉಪಕರಣದೊಂದಿಗೆ ಜೋಡಿಸಲು ಕಲಿಯಬೇಕು.

ಹೀಗೆ ಯಂತ್ರೋಪಕರಣಗಳನ್ನು ಜೋಡಿಸುವುದರ ಮೂಲಕ ಪಡೆವ ಅನುಭವದಿಂದ ಕೊನೆಗೆ ಭಾರತೀಯ ಕೆಲಸಗಾರರು ತಮ್ಮ ಸ್ವಂತ ಭಾರವಾದ ಯಂತ್ರಗಳನ್ನು ತಯಾರಿಸಲು ಸಮರ್ಥರಾಗುವರು.

ಸರ್ ಅತುಲ್ ಚಟರ್ಜಿ

ಕಷ್ಟವೂ ಸೂಕ್ಷ್ಮವೂ ಇರುವ ಈ ಯಂತ್ರ ಭಾಗಗಳನ್ನು ತಯಾರಿಸಲು ನಾವು ಐವತ್ತು ಆರುವತ್ತು ವರ್ಷ ಕಳೆದರೆ ನಾವು ಪಾಶ್ಚಾತ್ಯ ದೇಶಗಳಿಗಿಂತ

ಈ ಚರ್ಚೆಯ ಮೇಲೆ ಟೀಕಿಸುತ್ತಾ ಬೊಂಬಾಯಿ ಉದ್ಯೋಗೀಕರಣ ಯೋಜನೆಗಾರರಲ್ಲಿ ಒಬ್ಬರಾದ ಡಾ। ಜಾನ್ ಮಾಥೆ ಅವರು ಹೀಗೆಂದಿದ್ದಾರೆ: 'ಭಾರತೀಯ ಕೆಲಸಗಾರರು ಯಂತ್ರಶಿಲ್ಪ ಕಲಿಯುವುದರಲ್ಲಿ ಚತುರರಲ್ಲವೆಂಬುದು ಸರ್ ಥಾಮಸರ ಅಭಿಪ್ರಾಯ ತಪ್ಪು. ಸರಿಯಾದ ಅನುಕೂಲತೆ ಕಲ್ಪಿಸಿಕೊಟ್ಟರೆ ಭಾರತೀಯರು ಅತೀ ಶೀಘ್ರವಾಗಿ ಎಲ್ಲವನ್ನೂ ಕಲಿಯುತ್ತಾರೆ.

ಚಲನ ಚಿತ್ರ ಪ್ರಪಂಚ

ಈಚೀಗೆ ಭಾರತದಲ್ಲಿ ಅನೇಕಾನೇಕ ಚಿತ್ರಪಟಗಳು ತಯಾರಾಗುತ್ತಲಿವೆ. ಕೆಲವು ಕಾಲ ಸಾಮಾಜಿಕ ಚಿತ್ರಗಳ ಬೆಳೆಯಾಯಿತು. ಈಗ ಜನತೆಗೆ ಅದರಲ್ಲಿ ಆಕರ್ಷಣೆಗಳು ಕಮ್ಮಿಯಾಗಿವೆಯೋ ಏನೊ ಪೌರಾಣಿಕ ಮತ್ತು ಐತಿಹಾಸಿಕ ಕಥಾ ವಸ್ತುಗಳೇ ಚಿತ್ರ ನಿರ್ದೇಶಕರ ಮುಂದಿವೆ. ಹಲವಾಗಲೇ ತಯಾರಿಕೆಯನ್ನು ಪ್ರಾರಂಭಿಸಿವೆ.

ನ್ಯೂಹನ್ಸ್ ಚಿತ್ರ ಕಂಪೆನಿಯ 'ದ್ರೌಪದಿ'ಯು ವೃತ್ತ ಪತ್ರಿಕೆಗಳ ಶಿರೋನಾಮುಗಳಲ್ಲಿ ಹಲವುಕಾಲದ ತನಕ ತರ್ಕವಿತರ್ಕಗಳ ವಿಷಯ ವಸ್ತುವಾಗಿ ಮೆರೆಯಿತು.

ಬಹಳ ವರ್ಷಗಳ ತನಕ ಚಿತ್ರ ನಿರ್ಮಾಪಕರನ್ನು ದಾಕ್ಷಿಣ್ಯವಿಲ್ಲದ ಟೀಕೆಗೆ ಗುರಿಮಾಡಿ, ಆದರ್ಶ ಚಿತ್ರಗಳನ್ನು ತಯಾರಿಸಬೇಕೆಂದು ಒಂದು ದಶಮಾನವನ್ನೇ ಅದಕ್ಕಾಗಿ ಶ್ರಮಿಸಿದ ಚಲಚಿತ್ರ ಪ್ರತಿಕೋದ್ಯೋಮಿಗಳಾದ ಶ್ರೀ ಬಾಬುರಾವ್ ಪಟೇಲರು ಕಡೆಗೆ ತಮ್ಮ ನಿರ್ದೇಶಕತ್ವದ 'ದ್ರೌಪದಿ'ಯನ್ನು ಸಾರ್ವಜನಿಕರ ಮುಂದೆ ತಂದರು.

ಬೊಂಬಾಯಿಯಲ್ಲಿ ದ್ರೌಪದಿ ಪ್ರದರ್ಶನ ನೋಡಿದವರು ಆ ಚಿತ್ರಕ್ಕೆ ಶಾಂತಾರಾಮರ ಶಕುಂತಲೆಯ ಶ್ಲಾಘನೆಯನ್ನಾಗಲೀ, ರಾಮರಾಜ್ಯದ ಹೊಗಳಿಕೆಯನ್ನಾಗಲಿ ಸಲ್ಲಿಸಲಿಲ್ಲ. ಮುಖ್ಯ ನಟಿ ಸುಶೀಲಾರಾಣಿಯವರ ಸಂಗೀತವಲ್ಲದಿದ್ದರೆ ಚಿತ್ರವು ಪಾಸ್ ಮಾಡುವಷ್ಟು ಯೋಗ್ಯವಿರುತ್ತಿರಲಿಲ್ಲವೆಂದೇ ಸರ್ವರ ಅಭಿಪ್ರಾಯ.

ಇದರಿಂದ ಚಿತ್ರಗಳನ್ನು ಟೀಕಿಸುವುದು ಸುಲಭ, ನಿರ್ಮಿಸುವುದು ಕಷ್ಟವೆಂಬ ಸಾಮಾನ್ಯ ತಿಳುವಳಿಕೆಯ ತತ್ವವು ಪುನಃ ತನ್ನ ನೈಜತ್ವವನ್ನು ತೋರಿಸಿದಂತಾಯಿತು. ಈ ತತ್ವವು ಸಾಹಿತ್ಯದ ಎಲ್ಲಾ ಅಂಗಗಳಿಗೂ ಅನ್ವಯಿಸುವುದು.

ಕುರುಕ್ಷೇತ್ರ

ಯುನಿಟಿ ಪ್ರೊಡಕ್ಷನ್ ಇವರು ಈ ಭಗವದ್ಗೀತಾ ಸನ್ನಿವೇಶದ ಚಿತ್ರವನ್ನು ತಯಾರಿಸುತ್ತಲಿದ್ದಾರೆ. ಪರಮಾತ್ಮ ನಿರ್ಮಿತ ಸೃಷ್ಟಿಯನ್ನು ಉಳಿಸುವುದೊ, ಅಳಿಸುವುದು ಎಂಬ ಪ್ರಶ್ನೆಗೆ ಉತ್ತರ ಕೊಡಲು ಈ ಚಿತ್ರದಲ್ಲಿ ಪ್ರಯತ್ನಿಸಲಾಗಿದೆಯಂತೆ.

ಕೃಷ್ಣಾರ್ಜುನ ಕಾಳಗ

ಇದನ್ನು ಮುರಾರಿ ಪಿಕ್ಚರ್ಸ್‌ನವರು ತಯಾರಿಸಲಿದ್ದಾರೆ. ಪೌರಾಣಿಕ ಪಾತ್ರಗಳಾಗಿ ಪೃಥ್ವಿರಾಜ್, ಸೋಭನಾಸಮರ್ಥ್, ಮತ್ತು ಸಾಹು ಮೋಡಕ್ ಇವರು ಅಭಿನಯಿಸಲಿರುವರು.

ನಳ ದಮಯಂತಿ

ಈ ಸುರಸ ಪುರಾಣ ಕಥೆಯನ್ನು ಜನಕ್ ಪಿಕ್ಚರ್ಸ್‌ನವರು ಸಿದ್ಧ ಮಾಡಲಿರುವರು. ಇದರಲ್ಲಿಯೂ ಪೃಥ್ವಿರಾಜನೂ, ಸ್ವರ್ಣಲತಳೂ ನಳ ದಮಯಂತಿಗಳಾಗುವರು.

ದಕ್ಷಿಣ ಹಿಂದೂಸ್ಥಾನದಲ್ಲಿಯಂತೂ ಪೌರಾಣಿಕ ಚಿತ್ರಗಳಿಗೇ ಹೆಚ್ಚು ಪ್ರಾಧಾನ್ಯ.

ಸಾಮ್ರಾಟ ಅಶೋಕ್

ಬೊಂಬೇ ಸಿನೆಟೋನಿನವರು ಬೌಧ ಮಹಾನಲಂಬಿಯಾದ ಈ ಜಗತ್ತಿನ ಅತೀ ಶ್ರೇಷ್ಟ ರಾಜನೆನಿಸಿದ ಅಶೋಕನ ಜೀವನ ಚಿತ್ರವನ್ನು ತಯಾರಿಸಲಿರುವರು. ಇದರಲ್ಲಿ ನಟಿ ಬೀನಾಳು ಅಭಿನಯಿಸುತ್ತಾಳೆ. ಅಲ್ಲದೆ ಚಂದ್ರಮೋಹನ್, ಜಾಗೀರ್‌ದಾರ್, ಉಲ್ಲಾಸ್ ಇವರೂ ಇದರಲ್ಲಿರುವರು. ಇದು ಐತಿಹಾಸಿಕ.

ಸಾಮ್ರಾಟ ಚಂದ್ರಗುಪ್ತ

ಜಯಂತ್ ದೇಸಾಯಿಯವರ ಇನ್ನೊಂದು ಐತಿಹಾಸಿಕ. ಅಮೋಘ ದೃಶ್ಯಾವಳಿಗಳಿಂದ ಕೂಡಿದ್ದಿರುತ್ತದಾಗಿ ಪ್ರಕಟಿಸಲ್ಪಟ್ಟಿದೆ. ನಟರು ಯಾರೆಂದು ಇನ್ನೂ ರಹಸ್ಯವಾಗಿಡಲ್ಪಟ್ಟಿದೆ.

ಭೈರಾಮ್ ಖಾನ್

ಅಕ್ಬರನ ಈ ಚಿಕ್ಕತಂದೆಯ ಜೀವನ. ಇದನ್ನು ರಾಮಾಶಾಸ್ತ್ರಿ ನಿರ್ದೇಶಿಸಿದ ಜಾಗೀರ್‌ದಾರರು ತಯಾರಿಸುತ್ತಾರೆ.

ಪನ್ನಾದಾಸಿ

ಇದನ್ನು ಒರ್ವ ಮಂಗಳೂರು ಕಡೆಯ ಮಹಿಳೆ ತಯಾರಿಸುತಿದ್ದಾಳೆಂಬುದು ಸಾರಸ್ಯದ ಸಂಗತಿ. ಪ್ರದೀಪ್ ಪಿಕ್ಚರ್ಸ್ ಎಂಬುದು ಇವರ ಸಂಸ್ಥೆ. ಚಂದ್ರಮೋಹನ್, ಬೇಗಂ ದುರ್ಗಾ ಕೋಟೆ, ಬ್ರಹ್ಮಚಾರಿಯ ವಿನಾಕ್ಷಿ, ಮುಬಾರಕ್ ಮೊದಲಾದ ಶ್ರೇಷ್ಟ ನಟವರ್ಗವು ಇದರಲ್ಲಿ ಭಾಗವಹಿಸುವಂತೆ ಏರ್ಪಡಿಸಿರುವರು. ಯಶಸ್ವಿಯಾದರೆ ದ. ಕನ್ನಡಕ್ಕೆ ಕೀರ್ತಿ.

ಶಾಲಿಮಾರ್

ಇದರಲ್ಲೂ ಚಂದ್ರಮೋಹನ್ ಅಲ್ಲದೆ ಪ್ರಭಾತ ಕಂಪೆನಿಯ ನವತಾರೆ ಬೇಗಂ ಪಾರಾ ಮನೋರಮಾ, ಇವರು ಮುಖ್ಯ ನಟವರ್ಗ. ಇದು ಮೊಗಲರ ಕಾಲಕ್ಕೆ ಸಂಬಂಧಿಸಿದ ಇತಿಹಾಸ ಕಥಾವಸ್ತುವಿನಿಂದ ಕೂಡಿದೆ.

ಭಕ್ತ ಪ್ರಹ್ಲಾದ

ಚಿಮನ್‌ಲಾಲ್ ಟ್ರಿವೆಡಿಯವರು ಲಕ್ಷ್ಮಿ ಪ್ರೊಡಕ್ಷನಿನವರಿಗಾಗಿ ಇದನ್ನು ತಯಾರಿಸಲಿರುವರು.

ಸಾಮಾಜಿಕಗಳು

ಇನ್ನು ಅನೇಕ ಚಿಕ್ಕ ದೊಡ್ಡ ಸಾಮಾಜಿಕಗಳ ಹೆಸರುಗಳು ಅಭಿರುಚಿಯನ್ನುಂಟುಮಾಡುವಂತಹುಗಳು: 'ನನ್ನ ತಂಗಿ' 'ಕೋಗಿಲೆ' 'ದೊಡ್ಡ ತಾಯಿ' 'ಚಂದ್ರ' 'ಮನೆ' 'ಪರ್ವತದ ಮೇಲೆ ನನ್ನ ಶಿಬಿರ' 'ಹೂ' 'ರತ್ನ' 'ಅದೃಷ್ಟ' 'ಒಬ್ಬ ಹಿಂತಿರುಗಲಿಲ್ಲ' ಕೊನೆದು ಶಾಂತಾರಾಮ ರಾಜ್‌ಕಮಲ್ ಮುಖಿ ಸ್ಟುಡಿಯೋದಲ್ಲಿ ತಯಾರಾಗುವ ಚೀನಕ್ಕೆ ಕಳುಹಿಸಲ್ಪಟ್ಟ ಭಾರತೀಯ ವೈದಕೀಯ ದಳದ ಚಿತ್ರ. ಜಗದ್ವಿಖ್ಯಾತ ಸ್ಯಾಕಲ್ ಸವಾರಿ ನಿಪುಣನೆನಿಸಿದ ಒಲಿಂಪಿಕ್ ಚಾಂಪಿಯನ್ ಜಾನಕಿ ದಾಸನೂ ಇದರಲ್ಲಿ ಭಾಗಹಿಸುವನಂತೆ. ಶಾಂತಾರಾಮರ ಸ್ಟುಡಿಯೋವು ಈಗ ಒಂದು ಚೀನಿ ಮನೆ ಮಠಗಳ ದೃಶ್ಯಾವಳಿಗಳಿಂದ ತುಂಬಿದೆಯಂತೆ.

ಬೌಧ ಚಿತ್ರಾರಂಭದಲ್ಲಿ ಅಹಿಂಸೆ ಶಾಂತಾ ಅಪ್ಟೆಯ ದಾಖಲೆ ಮುರಿಯಿತು

ಬೊಂಬೇ ಸಿನೇ ಟೋನಿನವರ 'ಸಾಮ್ರಾಟ ಅಶೋಕ' ಎಂಬ ಚಿತ್ರದಲ್ಲಿ ಮೀನಾ ಅವಳು ಮುಖ್ಯ ನಟಿ. ಕೆಲವು ದಿನಗಳ ಹಿಂದೆ ಈ ಚಿತ್ರದ ಮುಹೂರ್ತ ಸಮಾರಂಭ ನಡೆದಾಗ ಈ ಮೀನಳು ಒರ್ವ ಉರ್ದು ಪತ್ರಿಕೋದ್ಯೋಮಿಗೆ ಕೆನ್ನೆಯ ಮೇಲೆ ಹೊಡೆದು ಬೌಧ ತತ್ವಮಯವಾದ ಆ ಚಿತ್ರಕ್ಕೆ ದೋಷ ತಂದಳೆಂದು ಬೊಂಬಾಯಿಯ ಒಂದು ಪತ್ರಿಕೆ ಬರೆದಿದೆ.

ಹಿಂದೆ ಶಾಂತಾ ಅಪ್ಟೆಯು 'ಪಿಲ್ಮ್ ಇಂಡಿಯಾ'ದ ಬಾಬುರಾಯ ಪಟೇಲರ ಆಫೀಸಿಗೆ ಹೋಗಿ ಚೆತ್ತದಿಂದ ಒಂದೇಟು ಕೊಟ್ಟಳಂತೆ. "ಮೀನಳು ಸ್ವಂತ ಕೈಯಿಂದ ಆ ಪತ್ರಿಕೆಯವನ ಗಲ್ಲ ಸ್ಪರ್ಶ ಮಾಡಿದಳು".

ಚಲಚಿತ್ರ ವ್ಯಕ್ತಿ ವಿಶೇಷ

ಈ ಛಾಯಾಚಿತ್ರ ವ್ಯವಸಾಯದಲ್ಲಿ ಆಕರ್ಷಿತ ವ್ಯಕ್ತಿಗಳಲ್ಲಿ ಬಹು ವಿಧದವರಿರುವರು. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

ನ್ಯೂಥಿಯೇಟರ್ಸಿನ ಬರ್ವಾರವರು ಒರ್ವ ದೇಶೀ ರಾಜ ಕುಮಾರರಂತೆ.

ರಂಜಿತದ ಚಂದೂಲಾಲ್ ಷಾರವರು ಸರ್ದಾರ್ ಬಿರುದಾಂಕಿತರು. ಬೊಂಬೇ ಟಾಕೀಸಿನ ಟೂನಿಲಾಲರು ರಾಯ್ ಸಾಹೇಬರು.

ಪ್ರಖ್ಯಾತ ಮರಾಠಿ ಚಲಚಿತ್ರ ಲೇಖಕ ತಯಾರಕರು ಒರ್ವ ಪ್ರೊಫೇಸರರು. ವನಮಾಲೆಯು ಒರ್ವ ಅಧ್ಯಾಪಕಿ.

ಪೃಥ್ವಿರಾಜ್, ಲೀಲಾಚಿಟ್ನಿಸ್, ಅಶೋಕ್ ಕುಮಾರ್ ಇವರು ಬಿ. ಎ. ಪದವೀಧರರು.

ನಟ ಸುರೇಂದ್ರ, ನಟ ನಿರ್ದೇಶಕ ನಾರಾಯಣ ಕಾಳೆ ಇವರು ಎಲ್.ಎಲ್.ಬಿ. ವಕೀಲರು.

ನ್ಯೂಥಿಯೇಟರ್ಸಿನ ನೇಮೊ ಅವರು ಬಿಲಿಯಾರ್ಡ್ ಚಾಂಪಿಯನ್ನರು. ಈಗ ಜಾನಕೀದಾಸ್ ಎಂಬ ಒಬ್ಬ ಸ್ಯಾಕಲ್ ಸವಾರಿ ಚಾಂಪಿಯನ್ನರು ಸೇರಿದ್ದಾರೆ.

ಜಗತ್ತಿನಲ್ಲಿ ಚಲಚಿತ್ರ ಉದ್ಯಮಕ್ಕೆ ನಟಿಯರಾಗಿ ಸೇರಿರದವರೆಂದರೆ ಪಾರ್ಶಿ ಮಹಿಳೆಯರು. ಸೋರಾಬ್ ಮೋಡಿಯವರು ಶ್ರೇಷ್ಟ ಪಾರ್ಶಿನಟ.

ಪ್ರೇಮ್ ಅದೀಬ್‌ರು ಕಾಶ್ಮೀರ್ ಬ್ರಾಹ್ಮಣರು, ಹಾಸ್ಯಗಾರ ದೀಕ್ಷಿತರು ಮರಾಠಿ ಬ್ರಾಹ್ಮಣರು.

ಮನೋರಮಾ, ರೋಸ್, ಮಾಧುರಿ ಇವರು ಯೆಹೂದಿ ಕ್ರೈಸ್ತರಂತೆ.

ಡೈರೆಕ್ಟರ್ ಸರ್ವೋತ್ತಮ ಬಾದಾಮಿ, ನಟ ನಯಂಪಳ್ಳಿ, ನಟಿ ಸುಶೀಲಾರಾಣಿ ಮತ್ತು ಪದ್ಮಾಸಾಲೀಗ್ರಾಮ್ ಇವರು ಕನ್ನಡಿಗರು. ರಂಜಿತದ ಮಾಜೀ ನಟಿ ರಾಜಾಸೆಂಡೋ ಮದ್ರಾಸಿ.

ನಟ ಜುಹೂರಾ ರಾಜಾ, ಹಾಸ್ಯಗಾರ ಗೋರಿ ಗಡಿನಾಡಿನ ಪಠಾಣರು.

ಪ್ರಖ್ಯಾತ ಸಂಗೀತಗಾರ ನಾರಾಯಣ ವ್ಯಾಸರ ತಮ್ಮ ಶಂಕರ್ ರಾವ್ ವ್ಯಾಸರು ರಾಮರಾಜ್ಯದ ಸಂಗೀತ ನಿರ್ದೇಶಕರು.

ಈಗ ಜಗತ್ಪ್ರಸಿದ್ಧ ಉದಯ ಶಂಕರರೂ ಫಿಲ್ಮ್ ಉದ್ಯೋಗಕ್ಕೆ ಸೇರಿದ್ದಾರೆ.

ನಾಟಕ ವಿಮರ್ಶೆ

ಈಚೇಗೆ ಕೆಲವೊಂದು ವಾರಗಳಿಂದ ಮಂಗಳೂರಲ್ಲಿ ಸಿದ್ಧಾಪುರದ ಜಯ ಕರ್ನಾಟಕ ನಾಟ್ಯಕ ಸಂಘದವರು ತಮ್ಮ ಸಾರಸ್ಯ ನಾಟಕಗಳಿಂದ ಜನ ರಂಜನೆ ಮಾಡುತ್ತಲಿರುವರು. ಇವರ ಪ್ರತಿಯೊಂದು ನಾಟಕವೂ ಅತ್ಯಂತ ಚಿತ್ತಾಕರ್ಷಕವಿದ್ದು ಎಂತಹ ವರ್ಗದವರನ್ನಾದರೂ ಹರುಷಗೊಳಿಸುವಂತಹುಗಳಿವೆ. ಇದಕ್ಕೆ ಕಾರಣ ಈ ಸಂಘದಲ್ಲಿರುವ ನಿಪುಣ ನಟವರ್ಗ. ಇದರಲ್ಲಿನ ಸ್ತ್ರೀ ಪಾತ್ರಗಳು ಎಲ್ಲಾ ಬಹಳ ಮನೋಹರವಿದ್ದು ಪ್ರತೀ ನಾಟಕಪ್ರೇಮಿಗಳು ನೋಡಲೇ ಬೇಕಾದ ವಿಷಯ. ಹಾಸ್ಯವಂತೂ ನಗೆ ಸಂತೋಷಗಳನ್ನು ಉಂಟುಮಾಡುವ ಗಾಂಭಿರ್ಯ ಶೀಲತೆಯಿಂದ ಕೂಡಿದೆ. ಆರೇಳು ವರ್ಷದ ಬಾಲಕನಿಂದ ದೊಡ್ಡವರವರೇಗೂ ಗಾಯಕರಿದ್ದು ಸಂಗೀತವು ಪ್ರತಿಯೊಂದು ನಾಟಕದವಿಶೇಷತೆ. ಇವರಿಗೆ ಎಲ್ಲೆಲ್ಲಿಯೂ ಹೆಚ್ಚಿನ ಶ್ರೇಯಸ್ಸು ಅಭಿವೃದ್ಧಿಗಳು ನಿಶ್ಚಯವಾಗಿ ಪ್ರಾಪ್ತವಾಗದಿರವು.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:- ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

1944

ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣಪದಕ ಪಡೆದ

ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ – ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಸಿಹಿ ಸುದ್ದಿ ಸಂಗ್ರಹ

ಮಧ್ಯಪ್ರಾಂತ್ಯದ ಬಾಲಘಾಟ್ ಜಿಲ್ಲಾ ಕಲೆಕ್ಟರ್–ಒರ್ವ ಐ. ಸಿ. ಎಸ್.–ಅವರು ಮಿ। ವರ್ಮಾ ಎಂಬ ಬ್ಯಾರಿಸ್ಟರರಿಗೆ ನ್ಯಾಯಸ್ಥಾನದ ತಿರಸ್ಕಾರ ವರ್ತನೆಗಾಗಿ ರೂ. ೫೦ ಜುಲ್ಮಾನೆ ವಿಧಿಸಿದರು. ಬ್ಯಾರಿಸ್ಟರರ ತಪ್ಪೆಂದರೆ ಆ ಕಲೆಕ್ಟರ್ ಸಾಹೇಬರು ಕೋರ್ಟಿಗೆ ಬಂದಾಗ 'ಗುಡ್ ಮಾರ್ನಿಂಗ್ ಸರ್' ಎಂದು ಹೇಳದ್ದು. 'ಸರ್' ಬಿಟ್ಟು ಬರೀ 'ಗುಡ್ ಮಾರ್ನಿಂಗ್' ಅಂತ ಹೇಳುವುದು ಬ್ಯಾರಿಸ್ಟರ್ ವರ್ಮರ ಕ್ರಮವಂತೆ.

* * *

ಇಂದೋರಿನ ಹ್ಯಾಕೋರ್ಟಿನವರು ಕೊಟ್ಟವೊಂದು ವಿಚಿತ್ರ ತೀರ್ಮಾನ ವಕೀಲ ಪ್ರಪಂಚವನ್ನು ಬೆರಗುಗೊಳಿಸಿದೆ. ಅಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದ ರಂಗೀಲಾಲ್‌ರ ಮೇಲೆ ಅಲ್ಲಿನ ವಕೀಲ್ ಸಂಘದವರು ಅವಿಶ್ವಾಸದ ಠರಾವುಮಾಡಿದರು. ಇದಕ್ಕಾಗಿ ಅವರು ರಾಜಿನಾಮೆ ಕೊಟ್ಟರು. ನಂತರ ಅಂತಹ ಪ್ರಸಂಗ ತಂದೊಡ್ಡಿದ್ದು ನ್ಯಾಯಸ್ಥಾನದ ತಿರಸ್ಕಾರವಾಯಿತೆಂದು ಇಡೀ ಸಂಘಕ್ಕೆ ೫೦೦ರೂ. ಜುಲ್ಮಾನೆ ಮಾಡಲಾಗಿದೆ. ಇದು ನಮ್ಮ ದೇಶದ ವಕಾಲಾತಿನ ಇತಿಹಾಸದಲ್ಲೇ ಪ್ರಥಮ ದಾಖಲೆಯಂತೆ.

* * *

ಬೊಂಬ್ಯಾಯಲ್ಲಿ ಮನೆ ಕೆಲಸಕ್ಕೆ ನಿಲ್ಲುವವರಿಗೆ ರಾಮಾ ಎಂದು ಕರೆಯುವುದು ಪದ್ಧತಿ. ಹಾಗೆ ಮಲಯದ ರಬ್ಬರ್ ತೋಟಗಳಲ್ಲಿ ಕೆಲಸಕ್ಕೆ ಹೋಗುವ ಭಾರತೀಯ ಕೆಲಸಗಾರರಿಗೆ ರಾಮಸಾಮಿ ಎಂದು ಕರೆಯುತ್ತಾರಂತೆ.

* * *

ಮಹಾತ್ಮಾ ಗಾಂಧಿಯವರು ಆಫ್ರಿಕದಲ್ಲಿರುವಾಗ ಅವರ ಕೈ ಕೆಳಗೆ ಇರ್ವ ಬಿಳಿ ಕ್ಲಾರ್ಕರು ಕೆಲಸಕ್ಕಿದ್ದರು. ಕೆಲವು ಬ್ರಿಟಿಷ್ ತರುಣರು ಅವರ ಬಳಿ ನ್ಯಾಯಶಾಸ್ತ್ರ ಕಲಿತಿದ್ದಾರೆ.

* * *

ಬೊಂಬಾಯಿಯಲ್ಲಿ ಜಪಾನೀ ಸಂತನೊಬ್ಬನ ದೇವಾಲಯವಿದೆ. ಅದು ಬುದ್ಧನ ಪ್ರತಿಮೆಯನ್ನು ಆರಾಧಿಸುವ ನೆವನದಲ್ಲಿ ಸ್ಥಾಪಿಸಲ್ಪಟ್ಟಿದ್ದು ಮರಣಪಟ್ಟ ಜಪಾನ್ ಸೈನಿಕರ ಸ್ಮರಣೆಯ ಪ್ರಾರ್ಥನೆಗಳು ನಡೆಯುತ್ತಿದ್ದುವಂತೆ.

* * *

ಜಗತ್ತಿನ ಜನ ಸಂಖ್ಯೆಯಲ್ಲಿ ಆರನೇ ಒಂದಂಶ ತರುಣರೂ, ಆರನೇ ಇನ್ನೊಂದಂಶ ನಡು ಪ್ರಾಯದವರೂ ಇದ್ದಾರೆ. ಆದುದರಿಂದ ಮುಂದಿನ ಯುದ್ಧಗಳಿಗೆ ಮುದಿತನದ ಕಡೆಗೆ ಧಾವಿಸುವ ೪೫ ವರ್ಷಕ್ಕೆ ಮಿಕ್ಕಿದವರನ್ನೇ ಸೈನಿಕರಾಗಿ ಕಳುಹಿಸಿದರೆ ಜೀವರಾಶಿಯ ದೃಷ್ಟಿಯಿಂದಲೂ ಆರ್ಥಿಕ ದೃಷ್ಟಿಯಿಂದಲೂ ಯಾವ ನಷ್ಟವಿಲ್ಲವೆಂದು ಅಮೇರಿಕದ ಪ್ರಖ್ಯಾತ ವಿಜ್ಞಾನಿಗಳೊಬ್ಬರ ಮತ. ಅವರು ಮುದಿದರೆ ಅವರ ಪತ್ನಿಯರು ನರ್ಸ್‌ಗಳಾಗಿ ಕೆಲಸ ಮಾಡಬಹುದೆಂದು ಅವರ ಅಭಿಪ್ರಾಯ.

* * *

ಈ ವರ್ಷದ ನೋಬೆಲ್ ಪಾರಿತೋಷಕ ಪಡೆದವರಲ್ಲಿ ಇಬ್ಬರು ಜರ್ಮನರಿರುವರು. ಹತ್ತು ವರ್ಷದ ಹಿಂದೆ ಸ್ವದೇಶವನ್ನು ತ್ಯಜಿಸಿ ಅಮೇರಿಕದಲ್ಲಿ ತಮ್ಮ ವೈಜ್ಞಾನಿಕ ಶೋಧನೆಗಳನ್ನು ನಡೆಸಿ ಬಹುಮಾನಕ್ಕೆ ಅರ್ಹರೆನಿಸಿದರು. ಇವರಲ್ಲಿ ಒಬ್ಬ ಯೆಹೂದಿ.

* * *

ಅಕ್ಬರನ ತಂದೆ ಹೂಮಾಯೂನನು ಪಟ್ಟ ಬಿಟ್ಟು ಪರ್ಶಿಯಕ್ಕೆ ಓಡಿದನು. ಅಲ್ಲಿಯ ರಾಜನು ಅವನಿಗೆ ಕೂತುಕೊಳ್ಳಲು ಹೇಳಲಿಲ್ಲವಂತೆ–ಸ್ವಲ್ಪ ಅಪಮಾನ ಮಾಡಲಿಕ್ಕೆ. ಆದರೆ ಒರ್ವ ಸೇವಕನು ತನ್ನ ಸೊಂಟದ ಶಾಲನ್ನು ಕತ್ತರಿಸಿ ಹಾಸಿ "ದೊರೆಗಳೇ ಕೂಡ್ರಿ" ಎಂದನಂತೆ. ಅಂತೂ ಆಸನ ಸಿಕ್ಕಿತು.

ಇಂದ್ರಜಾಲ

(ಹಿನೇಪುಟದಿಂದ)

ಇಷ್ಟರಲ್ಲಿ ನನ್ನ ಮತ್ತು ಆ ಶ್ರೀಮಂತನ ನಡುವೆ ಇನ್ನೊಬ್ಬ 'ಹೇಟುವಾಲನು' ನುಗ್ಗುತಿದ್ದನು. ಒತ್ತುತ್ತಾ, ಒತ್ತುತ್ತಾ ಅವನು ಕಾಳೀ ಪ್ರಸಾದವನ್ನುಪಡೆಯಲು ಪ್ರಯತ್ನಿಸುತಿದ್ದಂತೆ ಭಾಸವಾಯಿತು.

ಮರುಕ್ಷಣದಲ್ಲಿ ಶ್ರೀಮಂತ ಶೇಟನು "ಅರೇ ನನ್ನ ಪಾಕೇಟ್ ನನ್ನ ಪಾಕೇಟ್" ಎಂದು ಅದುರುತ್ತಾ ನಮ್ಮ ನಡುವೆ ನುರುಕಿದ ಆ ತರುಣನನ್ನು ಗಟ್ಟಿಯಾಗಿ ಹಿಡಿದು ಒಂದೇಟು ಕೊಟ್ಟು "ಕಳ್ಳ, ಬೇಕೂಬ್, ಕಿಸೆಕಳ್ಳ, ನನ್ನ ಪಾಕೇಟು ಕೊಡು ಎಲ್ಲಿ, ಪೋಲೀಸ್, ಪೋಲೀಸ್."

ಪೋಲೀಸರು ಬಂದು ತನಿಖೆ ನಡೆಸಿದಾಗ ನಾನು ದೂರ ನಿಂತಿದ್ದೆ. ಪಾಕೀಟು ಸಿಗಲಿಲ್ಲ. ತರುಣನು ನಿರಾಪರಾಧಿ ಎಂದು ಬಿಡಲ್ಪಟ್ಟ. ಸ್ವಲ್ಪ ಗಲಾಟೆಯಾದ ಮೇಲೆ ಕತ್ತಲಾಯಿತು. ಬೊಂಬಾಯಿಯ ಗೊಂದಲದಲ್ಲಿ ಮತ್ತೆ ಏನಾಯಿತೆಂದು ನನಗೆ ತಿಳಿಯಲಿಲ್ಲ. ನಾನೂ ನನ್ನ ಕೋಣೆಗೆ ಹೊರಟೆ. ಬಹಳ ಹೊತ್ತಾದುದರಿಂದ ಟ್ರಾಮು ಹತ್ತಿದೆ. ಟೀಕೆಟು ಹಣ ಕೊಡಲು ಕೋಟಿನ ಹೊರ ಕಿಸೆಗೆ ಕೈ ಹಾಕಿದಾಗ ದಪ್ಪವಾದ ಚರ್ಮದ ಪಾಕೀಟೊಂದು ಕೈಗೆ ಸ್ಪರ್ಶವಾಯಿತು. ಎದೆ ದಡಲ್ ಎಂದಿತು. ಒಂದು ಸಲ ವಿದ್ಯುತ್ ಬಳ್ಳಿ ಹರಿದಂತಾಯಿತು ನಾನು ಮತ್ತೆ ಸುಮ್ಮಗಾದೆ. ಕಂಡಕ್ಟರನಿಗೆ ಮೆಲ್ಲಗೆ ಎರಡಾಣೆ ಕೊಟ್ಟೆ.

ಪಾಕೀಟಿನಲ್ಲಿ ಸಾವಿರದ ಎಳ್ನೂರು ರೂಪಾಯಿಗಳಿದ್ದವು. . . . ನಾನು ಕೇಳಿದ ಇಂದ್ರಜಾಲ ನಿಜವಾಯಿತು. ನಿರುದ್ಯೋಗಿಗೆ ಲಾಭದ ಸಂದರ್ಭ ದೊರಕಿತು. ಆ ಕಿಸೆ ಕಳ್ಳನು ಸಿಕ್ಕಿ ಬಿದ್ದುದನ್ನು ತಪ್ಪಿಸಲು ಪಾಕೀಟನ್ನು ತನ್ನ ಕಿಸೆಗೆ ತುರುಕಿದ್ದನೆಂದು ಮತ್ತೆ ತಿಳಿದೆ. ಮರುದಿನ ನಾನು ಮೈಸೂರಿಗೆ.

ದಕ್ಷಿಣ ಕನ್ನಡ ಸೆಂಟ್ರಲ್ ಕೊ–ಓಪರೇಟಿವ್ ಬೆಂಕ್, ಲಿಮಿಟೆಡ್, ಮಂಗಳೂರು

ನಿರುಖು ಠೇವಣಾತಿಗಳ ಬಡ್ಡಿದರ

ಒಂದು ವರ್ಷಕ್ಕೆ	ಶೇಕಡಾ 3.
ಆರು ತಿಂಗಳಿಗೆ	ಶೇಕಡಾ 2½.

ಸಹಕಾರಿ ಸಂಘಗಳಿಗೆ ಶೇಕಡಾ ¼ರಂತೆ ಜಾಸ್ತಿ ಕೊಡಲಾಗುವುದು.

ಕಾರ್ಯದರ್ಶಿ.

ANNOUNCEMENT

We have pleasure to announce that we will shortly be opening branches at:—

COIMBATORE
ERODE
MADURA
SALEM

A vital link for those in business and trade with the above centres, or others desiring to establish new connections with them, will be provided with the opening of these branches.

We extend a hearty invitation to all to avail of the new services and opprtunities offered by us.

Estd: 1906.

CANARA BANK, LIMITED.

(Incorporated in British India, Liability of Members Limited.)

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE BANK OF MANGALORE, Ltd.,
MANGALORE.
Interest on Fixed Deposits.

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date willalso be paid accordingly with effect from 1-1-1945

Office of the Bank, Mangalore, 30th Oct. 1944. By Order H. S. KAMATH, Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

FOREMOST

In insurance service since 1910, we are proud of our achievements for over 30 year. With a net-work of Branches all over South India and a field organisation assisted by men and women of ability and ambition it shall be our endeavour to extend widely the advantages of Life Assurance to every one who seek it.

Agency opportunities available on liberal terms

KOCHIKAR BROTHERS LTD.

CENTRAL OFFICE:-UDIPI, S. K.

Chief Agents for South India including Indian States.

The Bombay Life Assurance Co., Ltd.,

P. B. 337- 30, MOUNT ROAD, MADRAS.

Other Offices at:

BOMBAY BANGALORE CALICUT MADURA MANGALORE TRIVANDRUM

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 29—12—1944 [ಸಂಚಿಕೆ 52]

ಸೌಂದರ್ಯದಲ್ಲಿ ಸತ್ಯ

(ಲೇಖಕ: ಡಿ. ಜಿ. ತೆಂಡುಲಕರ)

"ಸತ್ಯ ಸೌಂದರ್ಯಗಳಿಗಾಗಿ ನಾನು ಹಂಬಲಿಸುವೆ,
ಬದುಕುವೆ, ಸಾಯಲೂ ಬಲ್ಲೆ."
—ಗಾಂಧಿಜಿ.

ಗಾಂಧೀಜಿಯಲ್ಲಿ ಕಲಾಭಿರುಚಿಯಿಲ್ಲ, ಸಾಂಸ್ಕೃತಿಕ ದೃಷ್ಟಿಯಿಲ್ಲ ಎಂದು ಅವರ ಪಕ್ಷಪಾತಿಗಳು ಕೂಡ ಹೇಳುವುದುಂಟು! ಕಲಾ–ಸಂಸ್ಕೃತಿಗಳನ್ನು ಕುರಿತು ಗಾಂಧೀಜಿ ಬರೆದಿರುವುದು ಅತ್ಯಲ್ಪವೆಂದು ಒಪ್ಪದೆ ನಿರ್ವಾಹವಿಲ್ಲ. ಆದರೆ ಅವರ ಮಾತಿನಲ್ಲಿಯೂ ಕೃತಿಗಳಲ್ಲಿಯೂ ಒಂದು ಬಗೆಯ ನೂತನ ತತ್ವಜ್ಞಾನದ ಒಪ್ಪವಿದೆ. ಅದರ ಪ್ರಭಾವ ಅವರ ಜೀವನದ ಮೇಲೆ ಹೇಗೋ ಹಾಗೆಯೆ ನಮ್ಮ ಜೀವನಗಳ ಮೇಲೂ ಬಿದ್ದಿದೆ.

"ತಮ್ಮದೇ ಆದ ರೀತಿಯಲ್ಲಿ ಜೀವನ ಕಲೆಯ ಸಾಕ್ಷಾತ್ಕಾರ ಮಾಡಿಕೊಂಡು ಅವರು ತಮ್ಮ ಜೀವನವನ್ನು ಒಂದು ಅಖಂಡ ಕಲಾಪಿಂಡವಾಗಿ ರೂಪಿಸಿದ್ದಾರೆ. ಅವರ ಒಂದೊಂದು ಭಾವದಲ್ಲಿಯೂ ಒಂದೊಂದು ಅರ್ಥ, ಒಂದೊಂದು ಭಂಗಿಯಲ್ಲಿಯೂ ಒಂದೊಂದು ಸೊಬಗು ಮೈವೆತ್ತಿದೆ. ಯಾವುದರೊಳಗೂ ಕೃತ್ರಿಮತೆಯ ಅಪಶ್ರುತಿ ಇಲ್ಲ. ತಮ್ಮೊಳಗೆ ತಾವೊಂದು ಆತ್ಮಶಾಂತಿಯನ್ನು ಕಂಡುಕೊಂಡು ಗಾಂಧೀಜಿ ಅದನ್ನು ಇತರರ ಮೇಲೆ ಎರೆಯುತ್ತಾರೆ," ಎಂದು ಜವಹರಲಾಲರು ಹೇಳಿದ್ದಾರೆ.

ಗಾಂಧೀಜಿಯ ಜೀವನದ ವೈಭವವನ್ನು ನಮ್ಮಲ್ಲಿ ಅನೇಕರು ಅರ್ಥಮಾಡಿಕೊಳ್ಳಲಾರದ್ದು ಸೋಜಿಗವಲ್ಲ. ಎಷ್ಟೋ ದಶಕಗಳಿಂದ ಬಿಳಿ "ಸಾಹೇಬ"ರೇ ನಮ್ಮ ಗುರುಗಳೂ ಮಾರ್ಗದರ್ಶಕರೂ ತತ್ವಜ್ಞಾನಿಗಳೂ ಆಗಿದ್ದಾರೆ. ಗಿಳಿಗಳಂತೆ ನಾವು ಅವರ ಭಾಷೆಯನ್ನು ಆಡುತ್ತೇವೆ, ಅವರ ಉಡುಗೆ ತೊಡುಗೆಯನ್ನು ಧರಿಸುತ್ತೇವೆ. ಸಾಹೇಬರ ಕನ್ನಡಕಗಳನ್ನು ಏರಿಸಿಕೊಂಡೇ ನಾವು ಎಲ್ಲವನ್ನೂ ನಿರೀಕ್ಷಿಸುತ್ತೇವೆ. ಅಜಂತಾ, ಎಲ್ಲೋರಾಗಳು ನಮ್ಮ ಪಾಲಿಗೆ ಕೇವಲ ಭಗ್ನಾವಶೇಷಗಳಾಗಿಬಿಟ್ಟಿವೆ. ನಮ್ಮ ಮನೆಗಳಲ್ಲಿದ್ದ ಚಿತ್ರವಿಚಿತ್ರ ಕಂಚುಗಳನ್ನು ಕರಗಿಸಿ ಪಶ್ಚಿಮದ ಪೇಟೆಯ ಕಲಾಕೃತಿಗಳನ್ನು ಪೂಜಿಸ ತೊಡಗಿದ್ದೇವೆ. ನಮ್ಮ ಸಾಹಿತ್ಯ, ನಮ್ಮ ವೇದಾಂತ, ನಮ್ಮ ಕಲೆ, ನಮ್ಮ ಸಂಸ್ಕೃತಿಯೆಂದರೆ ತಿರಸ್ಕಾರದ ನಗೆ ನಗಲು ಕಲಿತಿದ್ದೇವೆ.

ತಮ್ಮ ಸಾಮ್ರಾಜ್ಯಕ್ಕೊಂದು ಪುರವಣಿ ಎಂಬಂತೆ ಇಂಗ್ಲೀಷರು ನಮ್ಮ ಶಿಕ್ಷಣದ ಯೋಜನೆ ಮಾಡಿದರು. "ಅಕ್ಷರಸ್ಥ ವರ್ಗಕ್ಕೆಮ್ಮೆ ಇಂಗ್ಲೀಷ್ ಕಲಿಸಿಬಿಟ್ಟರೆ, ಮತ್ತೆ ಇಂಗ್ಲೀಷಿನ ಮುಖಾಂತರ ಪಾಶ್ಚಿಮಾತ್ಯ ಸಂಸ್ಕೃತಿ ಕಾಲಾಂತರದಲ್ಲಿ ಜನತೆಯಲ್ಲೆಲ್ಲ ಹಬ್ಬುವುದು. ಈ ಪ್ರಕಾರ ಹಿಂದೀಯರೆಲ್ಲ ಯುರೋಪೀಕೃತರಾಗಿ, ಕೊನೆಗೆ, ಸ್ವಾಭಾವಿಕವಾಗಿ ಕ್ರಿಶ್ಚಿಯನ್ ಧರ್ಮವನ್ನೇ ಸ್ವೀಕರಿಸುವರು"–ಹೀಗೆ ಬ್ರಿಟಿಶರು ಲೆಕ್ಕ ಹಾಕಿದ್ದರೆಂದು ರಶ್‌ಬ್ರೂಕ್ ವಿಲಿಯಮ್ಸರು ಮೆಕಾಲೆಯವರ ಶಿಕ್ಷಣ ಪದ್ಧತಿಯನ್ನು ಕುರಿತು ಬರೆದಿದ್ದಾರೆ. ಆದರೆ ಗಾರುಡಿಗ ಗಾಂಧೀ ಈ ಮಾಟದ ಬಲೆಯನ್ನು ಹರಿದೊಗೆದರು.

"ಈಗಿರುವ ಶಿಕ್ಷಣ ಪದ್ಧತಿ ಕೇವಲ ನ್ಯಾಯ ವಿರುದ್ಧವಾದ ಸರಕಾರಕ್ಕೆ ಸಂಬಂಧಿಸಿದುದು, ಎಂಬುದೊಂದೇ ಅದರ ದೋಷವಲ್ಲ. ಸರ್ವಥಾ ಪರಕೀಯವಾದ ಸಂಸ್ಕೃತಿಯೆ ಅದರ ಅಡಿಗಲ್ಲು. ಅದರಲ್ಲಿ ದೇಶೀಯ ಸಂಸ್ಕೃತಿಗೆ ಸ್ಥಾನವೇ ಇಲ್ಲವೆಂದರೂ ಸಲ್ಲುವದು," ಎಂದು ಗಾಂಧೀಜಿ ದೂರುತ್ತಾರೆ. "ಹಿಂದೀ ದೇಶಭಾಷೆಗಳನ್ನು ಮರವೆಯ ಗರ್ಭದಿಂದ ಉದ್ಧರಿಸಿ ಅವುಗಳನ್ನು ರಾಷ್ಟ್ರೀಯ ಪುನರುಜ್ಜೀವನದ ಹಿಂದೀ ಸಂಸ್ಕೃತಿಯ ಬುಗ್ಗೆಗಳಾಗಿ ಮಾಡಬೇಕೆಂದು ರಾಷ್ಟ್ರೀಯ ಶಿಕ್ಷಣದ ಗುರಿ. ಶಿಕ್ಷಣ ಪರಿಪೂರ್ಣವಾಗಬೇಕಾದರೆ ಪಾಶ್ಚಿಮಾತ್ಯ ವಿಜ್ಞಾನಗಳ ಅರಿವು ಹೇಗೋ ಹಾಗೆಯೇ ಪೌರ್ವಾತ್ಯ ಸಂಸ್ಕೃತಿಗಳ ಕ್ರಮಬದ್ಧವಾದ ಅಭ್ಯಾಸವೂ ಅತ್ಯವಶ್ಯ. ಸಂಸ್ಕೃತ, ಅರಬ್ಬಿ, ಪರ್ಶಿಯನ್ ಪಾಲಿ ಮತ್ತು ಮಾಗಧಿ ಭಾಷೆಗಳನ್ನು ಉದ್ಧರಿಸಬೇಕು. ನಮ್ಮ ರಾಷ್ಟ್ರದ ಶಕ್ತಿ ಎಲ್ಲಿ ಅಡಕವಾಗಿದೆಯೆಂಬುದನ್ನು ಬೆಳಕಿಗೆ ತರಬೇಕು. ಪ್ರಾಚೀನ ಸಂಸ್ಕೃತಿಯನ್ನೇ ಪುನರಾವರ್ತಿಸುವುದಾಗಲಿ, ಕೇವಲ ಅದನ್ನೇ ಅವಲಂಬಿಸುವುದಾಗಲಿ ರಾಷ್ಟ್ರೀಯ ಶಿಕ್ಷಣದ ಉದ್ದೇಶವಲ್ಲ. ಹಳೆಯ ಸಂಪ್ರದಾಯಗಳ ತಳಹದಿಯ ಮೇಲೆ ಹೊಸ ಸಂಸ್ಕೃತಿಯನ್ನು ಕಟ್ಟಿ ಅದನ್ನು ಆಧುನಿಕ ಅನುಭವಗಳಿಂದ ಸಿಂಗರಿಸಬೇಕೆಂದು ಅದರ ಹವಣಿಕೆ. ಹಿಂದುಸ್ಥಾನದಲ್ಲಿ ಕಾಲಿಟ್ಟು ಇಲ್ಲಿಯೇ ಬೇರೂರಿ, ಇಲ್ಲಿಯ ಜೀವನವನ್ನು ರೂಪುಗೊಳಿಸಿ, ತಾವೂ ಇಲ್ಲಿಯ ಜೀವನದಲ್ಲಿ ಸಮರಸವಾದ ವಿವಿಧ ಸಂಸ್ಕೃತಿಗಳನ್ನು ಒಂದುಗೂಡಿಸಿ ಅಪೂರ್ವವಾದ ಸಮಾವೇಶವನ್ನು ನಿರ್ಮಿಸುವುದೇ ರಾಷ್ಟ್ರೀಯ ಶಿಕ್ಷಣದ ದೃಷ್ಟಿಪಥದಲ್ಲಿದೆ. ಈ ಸಮಾವೇಶ ಸ್ವದೇಶೀ ರೂಪದಲ್ಲಿರಬೇಕು. ಅದರಲ್ಲಿ ವಿವಿಧ ಸಂಸ್ಕೃತಿಗಳಿಗೆ ನಿರ್ದಿಷ್ಟ ಸ್ಥಾನ ಸಿಗಬೇಕು. ಅಮೇರಿಕೆಯಲ್ಲಿ ಒಂದು ಹಿರಿ ಸಂಸ್ಕೃತಿ ಇತರ ಎಲ್ಲ ಚಿಕ್ಕ ಸಂಸ್ಕೃತಿಗಳನ್ನು ಹೀರಿಕೊಳ್ಳುತ್ತದೆ. ಆದರೆ ಇಲ್ಲಿ ಅಂಥ ಕೃತ್ರಿಮನಾದ, ಒತ್ತಾಯದ ಐಕ್ಯವನ್ನು ಸಂಪಾದಿಸುವ ಇಚ್ಛೆಯಿರಬಾರದು."

ಯಾವುದಾದರೊಂದು ಸಮಸ್ಯೆಯ ಬಗೆಗೆ ತಮ್ಮ ಅಭಿಪ್ರಾಯಗಳು ಆಧುನಿಕ ಮೋಡಿಯಲ್ಲಿ "ತರ್ಕಶುದ್ಧ"ವೋ ಅಲ್ಲವೋ ಎಂಬುದನ್ನು ಗಾಂಧೀಜಿ ಸ್ವಲ್ಪವೂ ಗಮನಿಸುವುದಿಲ್ಲ. ಕೇವಲ ಸುಶಿಕ್ಷಿತರ ದೃಷ್ಟಿಯಿಂದ ನೋಡಿದರೆ, ಗಾಂಧೀಜಿಯ ವಿಚಾರಗಳಲ್ಲಿ ದಂಗುಬಡಿಸುವಂಥ ಕ್ರಾಂತಿಯನ್ನೂ ದಂಗುಬಡಿಸುವಂಥ ಪ್ರತಿಗಾಮಿತನವನ್ನೂ ಏಕಕಾಲದಲ್ಲಿ ಕಾಣಬಹುದು.

ಸಂಸ್ಕೃತಿಯ ಮಹಾ ಯಾತ್ರೆಯಲ್ಲಿ ಸ್ವತಂತ್ರ ತತ್ವದರ್ಶನವೇ ಮೊದಲ ಘಟ್ಟ. ಗಾಂಧೀಜಿ ತಮ್ಮ ತತ್ವದರ್ಶನವನ್ನು ಪ್ರಕಟಗೊಳಿಸಿದ ರೀತಿಯಲ್ಲಿ ಅದು ರಾಷ್ಟ್ರದ ಜೀವನದ ಮೇಲೆ ಸ್ಫುಟವಾದ ಪ್ರಭಾವವನ್ನು ಬೀರಿದೆ.

ಗಾಂಧೀಜಿ ಸಂಸ್ಕೃತಿಯನ್ನು ಉಪದೇಶಿಸುವುದಿಲ್ಲ. ಅವರು ತಮ್ಮ ಜೀವನವನ್ನೇ ಸಂಸ್ಕೃತಿಯಾಗಿ ಮಾಡಿದ್ದಾರೆ. "ಆಚರಣೆಯಲ್ಲಿ ಪರಿಣತವಾಗದ ಬರಿ ತಾತ್ವಿಕ ಪಾಂಡಿತ್ಯ ಸಿಂಗರಿಸಿದ ಹೆಣದಂತೆ; ನೋಡಲು ಸೊಗಸಾಗಿರಬಹುದಾದರೂ ಅದರಲ್ಲಿ ಚೈತನ್ಯದಾಯಿಯಾದ ಭವ್ಯತೆ ಎಲ್ಲಿ?" ಇದು ಗಾಂಧೀಜಿಯ ತತ್ವ. ಸಂಸ್ಕೃತಿಯನ್ನು ಕುರಿತು ಅವರ ವಿಚಾರವೇನೆಂದು ತಿಳಿಸಿಕೊಡಲು ಈ ಕೆಳಗಿನ ಅವರ ಮಾತು ಸಾಕು:–

"ಹಿಂದುಸ್ಥಾನವನ್ನು ಪ್ರೀತಿಸುವ ಪ್ರತಿಯೊಬ್ಬನೂ ಮಗು ತಾಯಿಯ ಎದೆಯನ್ನು ಅವಚಿಕೊಳ್ಳುವಂತೆ ತನ್ನ ದೇಶದ ಸಂಸ್ಕೃತಿಯನ್ನು ಅಪ್ಪಿಕೊಳ್ಳಬೇಕು."

"ಹಿಂದೀ ಸಂಸ್ಕೃತಿಯೆಂದರೆ ಹಿಂದೂ ಸಂಸ್ಕೃತಿಯಲ್ಲ. ಅದು ಇಸ್ಲಾಮಿ ಸಂಸ್ಕೃತಿಯೂ ಅಲ್ಲ, ಅಥವಾ ಬೇರಾವ ಒಂದೇ ಸಂಸ್ಕೃತಿಯೂ ಅಲ್ಲ. ಅದು ಎಲ್ಲದರ ಎರಕ. ಅದರ ಸ್ವರೂಪ ಅವಶ್ಯವಾಗಿ ಪೌರ್ವಾತ್ಯವೇ ಸರಿ. . . ಹಿಂದೀಯನೆಂದು ಕರೆಸಿಕೊಳ್ಳುವ ಪ್ರತಿಯೊಬ್ಬನೂ ಆ ಸಂಸ್ಕೃತಿಯನ್ನು ರತ್ನದಂತೆ ಜತನವಾಗಿಟ್ಟುಕೊಳ್ಳಬೇಕು. ಅದರ ಮೇಲೆ ಬರುವ ದಾಳಿಗಳನ್ನು ಎದುರಿಸಬೇಕು . . . . .ಎಲ್ಲ ನಾಡುಗಳ ಸಂಸ್ಕೃತಿಗಳು ನನ್ನ ಮನೆಯ ಬಳಿ ಸ್ವೈರವಾಗಿ ಹರಿದಾಡಲಿ. ಆದರೆ ಯಾವ ಸಂಸ್ಕೃತಿಯೂ ನನ್ನ ಕಾಲು ಹಿಡಿದೆಳೆಯಲು ಪ್ರಯತ್ನಿಸದಿರಲಿ. ನಾನು ಇನ್ನೊಬ್ಬರ ಮನೆಯಲ್ಲಿ ಬೇಡದವನಾಗಿ, ಭಿಕ್ಷುಕನಾಗಿ ಅಥವಾ ಗುಲಾಮನಾಗಿ ಬಾಳಲು ಒಪ್ಪಲಾರೆ."

ಮುಂದುವರಿಯುತ್ತ ಗಾಂಧೀಜಿ ಹೇಳುತ್ತಾರೆ. "ನಾವು ಮಡಿವಂತಿಕೆಯನ್ನು ಅಭ್ಯಾಸ ಮಾಡಬೇಕು, ನಮ್ಮ ಸಂಸ್ಕೃತಿಯ ಸುತ್ತ ಗೋಡೆಗಳನ್ನು ಏರಿಸಬೇಕು, ಎಂದು ನಾನು ಸರ್ವಥಾ ಹೇಳುವುದಿಲ್ಲ. ನಮ್ಮ ಸಂಸ್ಕೃತಿಯಲ್ಲಿರುವಂಥ ಅನರ್ಘ್ಯ ರತ್ನಗಳು ಬೇರಾವ ಸಂಸ್ಕೃತಿಯಲ್ಲಿಯೂ ದೊರೆಯಲಾರವೆಂದು ನನ್ನ ಅವಿಚಲ ವಿಶ್ವಾಸವುಂಟು. ಅದನ್ನು ನಾವು ಅರಿತಿಲ್ಲ. ಅದರ ಯೋಗ್ಯತೆಯನ್ನು ಅವಹೇಳನ ಮಾಡಲು ಕೂಡ ಕಲಿತಿದ್ದೇವೆ. ಆ ಸಂಸ್ಕೃತಿಯಲ್ಲಿ ಬಾಳುವುದನ್ನು ಸಹ ಬಿಡಲನುವಾಗಿದ್ದೇವೆ. . . . .ನನ್ನ ಸಂಸ್ಕೃತಿಯನ್ನೆ ಅನುಸರಿಸುವುದು, ಅದರ ಬಾಳನ್ನೆ ಬಾಳುವುದು ಕರ್ತವ್ಯವೆಂದು ನನ್ನ ಧರ್ಮದ ಆದೇಶವುಂಟು; ಸಂಗಡಲೇ ಇತರ ಸಂಸ್ಕೃತಿಗಳನ್ನು ತಿರಸ್ಕರಿಸುವುದೂ ನಿಷೇಧಿಸಲ್ಪಟ್ಟಿದೆ."

"ಯುರೋಪಿಯನರಿಗೆ ಯುರೋಪಿ ಸಂಸ್ಕೃತಿಯೇ ಹಿತ"ವೆಂದು ಗಾಂಧೀಜಿ ಒಪ್ಪುವರು. "ಆದರೆ ನಾವು ಅದರ ಅನುಕರಣೆಗೆ ಕೈಹಾಕಿದರೆ ಹಿಂದುಸ್ಥಾನಕ್ಕೆ ಅಧೋಗತಿ ಕಟ್ಟಿಟ್ಟದ್ದು." ಯುರೋಪಿ ಸಂಸ್ಕೃತಿಯಲ್ಲಿ ಉತ್ತಮವಾಗಿದ್ದು ನಮಗೆ ಅರಗಿಸಿಕೊಳ್ಳಲು ಸಾಧ್ಯವಿರುವುದನ್ನು ನಾವು ಹೊಂದಿಸಿಕೊಂಡು ಅರಗಿಸಿಕೊಳ್ಳಬಾರದೆಂದು ಇದರ ಅರ್ಥವಲ್ಲ. ಯುರೋಪಿಯನನಾದರೂ ಅದರಲ್ಲಿ ತ್ಯಾಜ್ಯವಾಗಿರುವುದನ್ನು ಕೂಡ ಗಟ್ಟಿಯಾಗಿ ಅವಚಿಕೊಳ್ಳಬೇಕೆಂದೂ ಅಲ್ಲ. ಯುರೋಪಿಯನರು ಆಧಿಭೌತಿಕ ಸುಖಸೌಕರ್ಯಗಳ ಬೆಳವಣಿಗೆಯ ಮತ್ತು ಅವುಗಳ ಬೆನ್ನಟ್ಟಿ ಎಡೆಬಿಡದೆ ಓಡುವ ಹುಚ್ಚನ್ನು ಬಿಟ್ಟುಕೊಟ್ಟು ತಮ್ಮ ದೃಷ್ಟಿಕೋನವನ್ನು ಬದಲಿಸದೆ ಹೋದರೆ ತಾವು ನಿರ್ಮಿಸಿದ ಸೌಕರ್ಯಗಳಿಗೆ ತಾವೇ ದಾಸರಾಗಿ, ನಿರ್ನಾಮವಾಗಿ ಹೋಗುವುದರಲ್ಲಿ ಸಂದೇಹವಿಲ್ಲ" ಎಂದು ಯುರೋಪಿ ಸಂಸ್ಕೃತಿಗೆ ಅವರು ಎಚ್ಚರಿಕೆ ಕೊಟ್ಟಿದ್ದಾರೆ.

ಆಧುನಿಕ ಬುದ್ಧಿಜೀವಿ ತನ್ನ ತರ್ಕಶಕ್ತಿಯ ಮದದಲ್ಲಿ ಶಬ್ದಗಳನ್ನೇ ಅಪ್ಪಿಕೊಳ್ಳುವುದು ಬಹಳ ನಿಜವಾದ ವಿಚಾರಗಳನ್ನು ವಿರಳ. ಗಾಂಧೀಜಿಯ ಬುದ್ಧಿ ಭಾವನೆಗಳ ಸಂಗಮ ಸಜೀವ ಮಾನವನಲ್ಲಿ.–ಕಲ್ಪನಾತ್ಮಕ ಮಾನವನಲ್ಲಲ್ಲ. ನೈಜ ಜೀವನದಲ್ಲಿ, ಜನಸಮೂಹದ ಸಂಪೂರ್ಣ, ಸಚೇತನ ಜೀವನದಲ್ಲಿ ಅವರ ವಿಚಾರಗಳು ವಿಹರಿಸುತ್ತಿರುತ್ತವೆ. ಆದುದರಿಂದ ಅವರ ಶೀಘ್ರವೇದಿ ಬುದ್ಧಿ ನಿತ್ಯಜೀವನದ ಕೋಲಾಹಲದಲ್ಲಿ ಲೀನವಾಗಿರುವ ಸೌಂದರ್ಯಜಗತ್ತನ್ನು ಥಟ್ಟನೆ ಗುರುತಿಸಬಲ್ಲರು. "ಸತ್ಯಾನ್ವೇಷಣೆ ಮೊದಲನೆಯ ಧರ್ಮ. ಆ ಮೇಲೆ ಸೌಂದರ್ಯವೂ ಸಾಧುತ್ವವೂ ತಾವಾಗಿ ನಿನ್ನಲ್ಲಿ ಪ್ರವೇಶಿಸುವವು" ಎಂದು ಅವರು ಉಪದೇಶಿಸುತ್ತಾರೆ.

"ದೇವರು ನನಗೆ ಕಲಾಬುದ್ಧಿಯನ್ನು ದಯಪಾಲಿಸಿದ್ದಾನೆ"–ಇದು ಗಾಂಧೀಜಿ ಫೈಜಪುರದಲ್ಲಿ ಹೇಳಿದ ಮಾತು. ಸಂಸ್ಕೃತಿಯ ತೀರ್ಥಕ್ಷೇತ್ರದಲ್ಲಿ ಅವರು ನಡೆಸಿದ ಯಾತ್ರೆಯ ಕಥೆ ಸ್ವಾರಸ್ಯದ್ದು. ಅವರ ಕಲಾಬುದ್ಧಿಯ ಸ್ವರೂಪವನ್ನು ಅದು ವಿಶದಗೊಳಿಸುತ್ತದೆ.

ಸತ್ಯ, ಸೌಂದರ್ಯ, ಸರಳತನಗಳ ಆರಾಧಕರಾದ ರಸ್ಕಿನ್ ಟಾಲ್‌ಸ್ಟಾಯಿ, ಥೋರೋ ಮತ್ತು ಎಮರ್ಸನರ ಪ್ರಭಾವ ಗಾಂಧೀಜಿಯ ಮೇಲೆ ಬಹಳವಾಗಿ ಆಗಿದೆ, ತಮ್ಮಲ್ಲಿ ಆಳವಾಗಿ ಬೇರೂರಿರುವ ಅನೇಕ ವಿಚಾರಗಳನ್ನು ಅವರು ರಸ್ಕಿನ್ನನ "ಅಂದಿನ ವರೆಗೂ—" (Unto This Last) ಪುಸ್ತಕದಲ್ಲಿ ಕಂಡುಕೊಂಡರಂತೆ; ಅದರಿಂದಲೇ ಆ ಪುಸ್ತಕ ತಮ್ಮ ಮನಸ್ಸನ್ನು ಸೆರೆಹಿಡಿದುಬಿಟ್ಟಿದೆಯೆಂದು ಅವರು ಹೇಳುತ್ತಾರೆ "ಕವಿಗಳ ಪ್ರಭಾವ ಎಲ್ಲರ ಮೇಲೂ ಒಂದೇ ಬಗೆಯಾಗಿರುವುದಿಲ್ಲ." ಗಾಂಧೀಜಿಗೆ-ಈ ಸಾಹಿತ್ಯದಿಗ್ಗಜಗಳ ಮೇಲೆ ಅಷ್ಟೊಂದು ಮಮತೆ ಮೂಡಲು ಅವರಿವರ ಮನೋವೃತ್ತಿಗಳಲ್ಲಿರುವ ಸಾಮರಸ್ಯವೆ ಕಾರಣ. ಸ್ವಯಂ ಗಾಂಧೀಜಿಯ ಲೇಖಗಳು ಅತ್ಯಂತ ಸುಂದರವೂ ಸುಸಂಸ್ಕೃತವೂ ಆಗಿವೆ. ಅವುಗಳನ್ನು ಅರಿತುಕೊಳ್ಳುವುದೇ ಒಂದು ಬಗೆಯ ಸಾಂಸ್ಕೃತಿಕ ಶಿಕ್ಷಣವೆನಿಸುತ್ತದೆ. ಗಾಂಧೀಜಿಯ ಮಟ್ಟಿಗೆ ಸಂಸ್ಕೃತಿ ಮಾತಿನ ವಿಷಯವಲ್ಲ, ಆಚರಣೆಯದು.

ಹಿಮಾಲಯದ ಲಕ್ಷ್ಮಣ ಝೂಲಾಕ್ಕೆ ಗಾಂಧೀಜಿ ಸಂದರ್ಶನವಿತ್ತಾಗ ಅಲ್ಲಿನ ತೂಗು ಸೇತುವೆಯನ್ನು ಕಂಡು ಹೇಳಿದ್ದು। "ಇಂದಿನ ಈ ತೂಗು ಸೇತುವೆ ಹಿಂದಿನ ಸುಂದರ ಹಗ್ಗದ ಸೇತುವೆಯಾಗಿತ್ತು." ಆ ಸೇತುವೆಯ ನಡುವೆ ನಿಂತಿದ್ದ ಕೆಲವು ವಿಕೃತವಾದ ಕಬ್ಬಿಣ ತಗಡಿನ ಮನೆಗಳು ಆ ಸ್ಥಳದ ರೂಪುಗೆಡಿಸುತಿದ್ದುದನ್ನು ನೋಡಿ ಅವರು ಬಹಳ ನೊಂದುಕೊಂಡರು. ಅವರ ಕಲಾಭಿರುಚಿಗೆ ಸಾಕ್ಷ್ಯಕೊಡಲು ಸೇವಾಗ್ರಾಮದಲ್ಲಿರುವ ಅವರ ಗುಡಿಸಲೊಂದೇ ಸಾಕು. ಅದು ಸರಳ ಸೌಂದರ್ಯದ ಪ್ರತೀಕವಾಗಿದೆ. ಕಾಂ

(೩ನೇ ಪುಟಕ್ಕೆ ಮುಂದುವರಿದಿದೆ.)

ಆಗಸ್ಟ್ ಗಲಭೆಯ ಕಾಲ. ಪ್ರತಿ ವೂರಿನಲ್ಲೂ ಹೆಚ್ಚುಕಡಿಮೆ ಮಾರ್ಶಲ್ ಲಾ ಜಾರಿಯಲ್ಲಿದ್ದಂತೆ ತೋರುತಿತ್ತು. ರಾತ್ರಿ ಒಂಬತ್ತು ಗಂಟೆಯ ಮೇಲೆ ಮಾರ್ಗದಲ್ಲಿ ಜನರ ಸುಳಿವಿರುತ್ತಿರಲಿಲ್ಲ. ನಾಟಕ ಸಿನೇಮಾಗಳಿಗೂ, ಹೋಟೇಲು ಚಾಖಾನೆಗಳಿಗೂ ವ್ಯಾಪಾರವೇ ಇಲ್ಲ. ಸಿನೇಮಾಕ್ಕೆ ಹೋಗಬೇಕಾದರೆ ಸಂಜೆ ಐದಕ್ಕೆ.

ತುಸು ಶ್ರೀಮಂತನೆಂದನಿಸಿಕೊಂಡ ನಮಗೆಲ್ಲ ಈ ದೊಂಬಿ ಗಲಾಟೆಗಳು ಯಾಕೆ? ಏನೊ ಹಿರಿಯರು ಮಾಡಿಟ್ಟದ್ದು ಅಲ್ಪ ಸ್ವಲ್ಪ ತಿಂದುಟ್ಟುಕೊಂಡು ಈ ಮೋಜಿನ ಪ್ರಪಂಚದಲ್ಲಿ ಭಾಗಿಯಾಗಿ ಒಂದು ದಿನ ಕ್ರಿಮಿಕೀಟದಂತೆ ಈ ದೇಹವನ್ನು ಬಿಟ್ಟು ಹೋಗ ಬೇಕಲ್ಲವೆ?

ನನ್ನ ತತ್ವಜ್ಞಾನಕ್ಕೆ ತಕ್ಕಂತೆ ನನ್ನ ಧೋರಣೆ. ದೇಶದಲ್ಲಿ ಗಾಂಧಿ ಚಳವಳ ಜೋರಾಗಿ ನಡೆಸಿದರೆ ನಾನೂ ದೇಶಪ್ರೇಮದ ಆ ಬಿಳಿ ಕುರುಹಿನ ಟೊಪ್ಪಿ ಧರಿಸಿ ದಬ್ಬಾಳಿಕೆಗಾರರಿಗೆ ನನ್ನ ತಿರಸ್ಕಾರ ತೋರಿಸುವೆ. ಮತ್ತೆ ಕಾಂಗ್ರೆಸ್ ಮಂತ್ರಿಮಂಡಳಗಳಾದಾಗ ನಾನೊಂದು ಖದ್ದರ್ ಶರ್ಟ್ ಮಾಡಿಸುವೆ. ನನಗೆ ಬೇರೆ ಕೆಲಸವಿಲ್ಲದಾದರಿಂದ ದೇಶ ಮುಖಂಡರ ಪ್ರಶಂಸೆಯೇ ನನ್ನ ದಿನನಿತ್ಯದ ಹರಟೆ. ಇದರಿಂದ ನನ್ನನ್ನು ಗಾಂಧಿವಾದದ ಮಿಶನರಿ ಎಂದು ಹೇಳಿದರೂ ಒಪ್ಪುತಿತ್ತು.

ಆದರೆ ಕಾಂಗ್ರೆಸಿನವರು ಕನಸಿನಲ್ಲೂ ಮನಸ್ಸಿನಲ್ಲಿ ನೆನಸದನ್ನು ಜನರು ಮಾಡಹತ್ತಿದಾಗ ನನ್ನ ಬಿಳಿ ಟೊಪ್ಪಿಗೂ ಶರ್ಟಿಗೂ ಕೆಲವು ತಿಂಗಳು ರಜೆ ಕೊಟ್ಟೆ. ನಮ್ಮೂರಲ್ಲಂತೂ ಕೆಲಸಕ್ಕೆ ಬಾರದ ಅನೇಕ ಸಂಸ್ಥೆಗಳಿವೆ. ಅದರಲ್ಲಿ ಸೇರಿಕೊಂಡರೆ ಸತ್ಯಾಗ್ರಹ ಮಾಡಬೇಕಿಲ್ಲ, ಜೈಲಿಗೆ ಹೋಗಬೇಕಿಲ್ಲ, ತಂತಿ ಕಂಭ ಕಡಿಯಬೇಕೆಂದಿಲ್ಲ. ಅಂತಹ ಸಂಸ್ಥೆಗಳ ಧ್ಯೇಯವಾದರೂ ಏನು? ಅದು ಈ ಯುಗದಲ್ಲಿ ಸಾಧ್ಯವಾಗದಂತಹುದು. ಅಂತಹ ಸಂಸ್ಥೆಗಳನ್ನು ಕಟ್ಟಿ ಕೊಂಡರೆ ನಮ್ಮಂತಹ ಸದಸ್ಯರನ್ನು ಒಟ್ಟು ಮಾಡ ಬಹುದು.

ನಾನು ಸೇರಿದ ಸಂಸ್ಥೆಯ ದಿನನಿತ್ಯದ ಕಾರ್ಯಕ್ರಮವೆಂದರೆ ಆಡುವುದು, ಓಡುವುದು ಮತ್ತು ಹಾಡುವುದು. ಇದರಿಂದ ವೇಗವಾಗಿ ಓಡುವುದರಲ್ಲೂ, ಗಟ್ಟಿಯಾಗಿ ಒದರುವುದರಲ್ಲೂ ಮತ್ತು ಆಲಸ್ಯದ ಆಟಗಳಲ್ಲೂ ನಾನು ನುರಿತಿದ್ದೆ. ಇವು ಮೂರು ಇದ್ದರೆ ನನ್ನಂತಹವರು ಎಲ್ಲಿ ಬೇಕಾದರೂ ದಿನ ತೆಗೆಯ ಬಹುದೆಂದೇ ನನ್ನ ಧೈರ್ಯ. ಆದರೆ ಈಗ ನಾನು ಹೇಳಲಿರುವ ಘಟನೆಯ ಕಾಲದಲ್ಲಿ ಇವೊಂದೂ ನನ್ನ ಸಹಾಯಕ್ಕೆ ಬಾರದಾದವು.

ಅಂದು ನಾನು ಸಿನೇಮಾಕ್ಕೆಹೋಗಿದ್ದೆ. ನನಗೆ ಗೊತ್ತಿರಲಿಲ್ಲ ಆ ತಮಿಳು ವಾಕ್ಚಿತ್ರವು ನಾಲ್ಕುವರೆ ಗಂಟೆಗಳ ಕಾಲ ಓಡುವುದೆಂದು. ಮನೆಗೆ ಮರಳುವಾಗ ನಮ್ಮ ಅತ್ತ ಕಡೆಯ ಮಾರ್ಗಗಳಲ್ಲಿ ನರಪ್ರಾಣಿ ಇರಲಿಲ್ಲ. ನಮ್ಮ ಮನೆಗೆ ಹೋಗಬೇಕಾದರೆ ನಾಲ್ಕು ಓಣಿಗಳನ್ನು ದಾಟ ಬೇಕಿತ್ತು. ಪುಂಡರ ಗಲಾಟೆಯಿಂದ ಇದ್ದ ಎಣ್ಣೆದೀಪಗಳೂ, ವಿದ್ಯುತ್ ದೀಪಗಳೂ ಅಲ್ಲಲ್ಲಿ ಬಿರುಗಾಳಿಗೆ ಬಿದ್ದ ಮರಗಳಂತೆ ಬಿದ್ದಿದ್ದುವು.

ಮೊದಲನೇ ಓಣಿಯನ್ನು ಹೊಕ್ಕು ನಾಲ್ಕು ಮಾರು ತಿರುಗುವಲ್ಲಿ ಒಂದು ಚಿಕ್ಕ ದಿಣ್ಣೆಯ ಮೇಲೆ ಒರ್ವ ವ್ಯಕ್ತಿ ಕಾಣಿಸಿತು. ಬೆಂಕಿಕಡ್ಡಿ ಒರಸಿದೆ. ವ್ಯಕ್ತಿ ಗಂಡು ಎಂದು ತಿಳಿಯಿತು. ಸ್ವಲ್ಪ ಹೊತ್ತು ಇನ್ನೂ

ವಾರದ ಕತೆ

ದಂಗೆಯದಿನ ದರೋಡೆ

ನೋಡಲಾಗಿ ಅವನೊಬ್ಬ ಸಭ್ಯ ಗೃಹಸ್ಥನಾಗಿರದೆ ಒರ್ವ ಕಿಲಾಡಿ ಎಂಬುದು ಖಂಡಿತವಾಯಿತ್ತು. ಅಸ್ತವ್ಯಸ್ತವಾಗಿ ಕೆದರಿದ ಕೂದಲ ರಾಶಿ ಅವನ ತಲೆಯನ್ನು ಅಲಂಕರಿಸಿತ್ತು. ಎಂಟತ್ತು ದಿನ ಕ್ಷೌರ ಮಾಡದೆ ಬೆಳೆದಿರುವ ಗಡ್ಡಮೀಸೆಗಳು. ಹರಿದು ಹೋಗಿದ್ದರೂ ತೆಳ್ಳಗಾಗಿ-ಒಳಗಿನ ಕೆಂಪು ಬನಿಯನ್ ಕಾಣುವ ಶರ್ಟು. ಅವನ ಕೈಗೆ ಕೆಲವೊಂದು ಉಂಗುರಗಳಿದ್ದುವು-ಬಹುಶ್ಯ ಗಿಲೀಟಿನವೆಂದು ನನ್ನ ಊಹೆ. ಕೆಂಪಾದ ಅವನ ಕಣ್ಣುಗಳಿಂದಲೂ, ಬಾರವಾದ ಎವೆಗಳಿಂದಲೂ ಕೂಡಿ ಕಸಿರಬೇಕೆಂದು ಯಾರಿಗಾದರೂ ತಿಳಿಯದಿರದು.

ಸರಿ. ನನ್ನನ್ನು ನೋಡಿದೊಡನೆ ಸರ್ರನೇ ಅವನು ದಿಣ್ಣೆಯ ಮೇಲಿಂದ ಕೆಳಗಿಳಿದು ಹೆಗಲ ಮೇಲಿನ ತನ್ನ ಶಾಲನ್ನು ಸರಿ ಮಾಡುತ್ತಾ ನಿಂತು, ಒಂದು ಕೈಯನ್ನು ಮುಂದೆ ಚಾಚಿ 'ಯಾರದು, ನಿಲ್ಲಿ' ಎಂದ. ನನ್ನ ಪಂಚ ಪ್ರಾಣಗಳಲ್ಲಿ ನಾಲ್ಕು ಹಾರಿಹೋದಂತೆ ಆಗಿ ಹಿಮದಲ್ಲಿ ಮುಳುಗಿಸಲ್ಪಟ್ಟವನಂತೆ ಒಂದುಸಲ ತಣ್ಣಗಾದೆ. ಮೋಡಗಳು ತಣ್ಣಗಾಗಿ ಮಳೆ ಬರುವಂತೆ ಅಂಗಾಂಗಗಳಿಂದ ಗಂಗೆ ಪ್ರಹವಾಕ್ಕಾರಂಭವಾಯಿತು. ಓಡುವುದರಲ್ಲಿ ಚತುರನೆನಿಸಿದ ನನ್ನ ಕಾಲುಗಳು ಮಡಿಕೇರಿಯ ಚಳಿಗೆ ನಡುಗುವಂತೆ ದರ್ಶನ ಮಾಡುತಿದ್ದುವು. ಕೈಗಳನ್ನು ಸೊಂಟದಲ್ಲಿಡಲಾಗದೆ ಕೋಟಿನ ಚೀಲದಲ್ಲಿ ನುಗ್ಗಿಸಿ ಇಡೀ ಮುಳುಗಿದವನಿಗೆ ಚಳಿಯೇನೆಂಬಂತೆ "ಏನು ಮಾರಾಯಾ, ನಿನಗೇನಾಗ ಬೇಕು?" ಎಂದೆ. ಅವನಿಗೆ ಕೇಳಿಸಿತೊ ಇಲ್ಲವೊ? ದೇವರೇ ಬಲ್ಲ.

ಅವನೂ ಒಂದು ಬೆಂಕಿಕಡ್ಡಿ ಹೊತ್ತಿಸಿ ನನ್ನ ಮುಖವನ್ನು ಆರತಿ ಮಾಡುವವನಂತೆ ಪರೀಕ್ಷಿಸಿದ. ಬಹುಶ್ಯ ಕಿವಿಯಲ್ಲಿರುವ ಪುಷ್ಯರಾಗದ ವಂಟಿ ಜೋಡಿನ ಮೇಲೆ ಅವನ ದೃಷ್ಟಿ ಹೋಗಿರಬೇಕು. ತನ್ನೆರಡೂ ಕೈಗಳನ್ನು ನನ್ನ ಹೆಗಲ ಮೇಲೆ ಇಟ್ಟು "ಓ, ಹೋ! ನೀವು ಶ್ರೀಮಂತರಿದ್ದೀರಿ ಅಲ್ಲವೆ?" ಎಂದ. "ಹೌದು, ಹಾಗೆ ಕೆಲವರು ಹೇಳುತ್ತಾರೆ. ಅವರಿಗೆ ತಲೆ ಸರಿಯಿಲ್ಲ" ಎಂದೆ. ಹೂಂ,ಎಂದು ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಅವನು "ಹಾಂ, ಹಾಂ, ಹಾಗೇಯೋ ಅಂತೂ ಇರಲಿ. ಇಕೊಳ್ಳಿ ಒಂದು ಬೀಡಿ ಎಳೆಯಿರಿ" ಎಂದು ತನ್ನ ಚೀಲದಲ್ಲಿ ಕೈಹಾಕಿದ. ಸಿಗರೇಟು ಎಳೆಯುವುದು ನನ್ನ ಅಭ್ಯಾಸ. ಅದರಲ್ಲೂ ಈ ಕಿಲಾಡಿ ಕೊಡುವ ಬೀಡಿ ಎಳೆಯ ಬೇಕೆ ಎಂದು ನನಗೆ ಅನಿಸಿತು. ನಾನು: "ಛೆ!, ಛೆ! ನನಗೆ ಅಭ್ಯಾಸವಿಲ್ಲ. ಎದೆ ನೋವು ಉಂಟು" ಎಂದೆ.

ಅವನೆಂದ; "ಹಾಗೆಂದರೇನು? ಇದು ಸ್ವದೇಶಿ, ತಾಜಾದೇಶಿ. ನಮ್ಮ ಜನರು, ಸ್ವಂತ ಕೈಯಿಂದ ಕಟ್ಟಿದ್ದು. ಗಾಂಧಿಜನರು ಖಾದಿ ಹಾಕಿಕೊಳ್ಳುವುದಿಲ್ಲವೆ? ನಿಮ್ಮಂತ ಶ್ರೀಮಂತರು ಇದಕ್ಕೆ ಪ್ರೋತ್ಸಾಹ ಕೊಡಬೇಕು, ತಗೊಳ್ಳಿ."

ಇವನು ಸ್ವಲ್ಪ ಕಲಿತ ಕಿಲಾಡಿ ಎಂದು ತಿಳಿದು ಕೊಂಡೆ. ಮತ್ತೆ ಅವನು ಪ್ರಾರಂಭಿಸಿದ:"ಈಗ ನೀವು ಶ್ರೀಮಂತರು,ನಾನು ಬಡವ ಅಲ್ಲವೆ? ನನಗಿಂತ ನೀವೇನು ಮೇಲು?"

ಎಲಾ, ಇವನು ಸಮತಾವಾದ ಮಾತಾಡುತ್ತಾನೆಯೋ ಎಂದು ಭಾಸವಾಯಿತು. ಕಡೆಗೆ ಹೇಗಾದರೂ ತಪ್ಪಿಸಿಕೊಳ್ಳಬೇಕಲ್ಲಾ ಎಂದು "ನಿಜವಾಗಿಯೂ ನೀನೇ ಮೇಲಪ್ಪ. ನೋಡು ನಮಗೆಷ್ಟು ತೊಂದರೆ. ಸುಖವಾಗಿ ನಾಲ್ಕು ಜನರ ಸ್ನೇಹ ಮಾಡಲಿಕ್ಕಿಲ್ಲ. ಎಲ್ಲಿಯಾದರೂ ಠೋಕರ್ ಇಟ್ಟಾರೊ ಅಂತ ಭಯ. ನಮಗೆ ಯಾವಾಗಲೂ ಕಳ್ಳಕಾಕರ ಭೀತಿ. ಒಂದು ದಿನ ಸುಖವಿಲ್ಲ. ಬಡವರೇ ಎಷ್ಟೊ ಮೇಲು" ಎಂದು ಗಟ್ಟಿಯಾಗಿ ನಕ್ಕೆ. ಅದೇನು ಮನಃಪೂರ್ವಕವಾಗಿ ನಗಾಡಿದಲ್ಲ. ಹಾಗಾದರೂ ಅವನಿಗೆ ಸಮಾಧಾನವಾಗಲೆಂದು ನನ್ನ ಭಾವನೆ.

ಅವನು ಪುನಃ ಸಂಭಾಷಣೆಗೆ ತೊಡಗಿದ. ವಿಷಯ ಮೊದಲಿನದೇ. "ಈಗ ನೋಡಿ. ನಿಮ್ಮ ಹತ್ರ ಸ್ವಲ್ಪ ಧನವಿದೆ. ನನ್ನ ಹತ್ರ ಇಲ್ಲ. ಅಂದ ಮಾತ್ರಕ್ಕೆ ನಮ್ಮೊಳಗೆ ಹೆಚ್ಚು ವ್ಯತ್ಯಾಸವಾಯಿತೆ?"

"ಒಂದು ತಿಳ ಮಾತ್ರ ವ್ಯತ್ಯಾಸವಿಲ್ಲ. ಹಣದಿಂದೇನು? ಹಣವನ್ನು ನಾಯಿ ಕೂಡಾ ತಿನ್ನುವುದಿಲ್ಲ" ಎಂದೆ. ಮತ್ತೂ ಆತನಿಗೆ ಸಮಾಧಾನವಾದಂತೆ ತೋರಲಿಲ್ಲ. "ನಿಮ್ಮ ದುಡ್ಡು ನನ್ನ ಹತ್ರ ಇರುತಿದ್ದರೆ ನಾನು ಬೇರೆಯೇ ಆಗುತಿದ್ದೆ. ಆದರೆ ಏನು ಮಾಡಲಿ. ದುಡ್ಡು ನಿಮ್ಮ ಹತ್ರ ಆಯಿತು. ನಾನು ದಿವಾಳಿಖೋರನಾಗಿದ್ದೇನೆ" ಎಂದ.

"ಏನು ಮಾಡುವುದು ಅದೆಲ್ಲ ದೇವರ ಕೆಲಸ. ಮನುಷ್ಯನಿಗೆ ಹೆಚ್ಚು ಕಷ್ಟಕೊಡಬೇಕೆಂದು ದೇವರು ಅವನಿಗೆ ಶ್ರೀಮಂತಗಿರಿ ಕೊಡುತ್ತಾನೆ"ಎಂದು ಹೇಳಿ ಮತ್ತೆ- "ಹೊತ್ತಾಯಿತು ಮಾರಾಯಾ, ಮನೆಯಲ್ಲಿ ಕಾಯುತ್ತಿರುತ್ತಾರೆ. ಊಟ ಆಗಲಿಲ್ಲ, ದಾರಿ ಬಿಡು" ಎಂದೆ.

ಇದಕ್ಕೆ ಅವನ ಉತ್ತರವೇ ಬೇರೆ. "ಸ್ವಲ್ಪ ತಾಳಿ. ನಿಮ್ಮ ತತ್ವಜ್ಞಾನ ನನಗೆ ತುಂಬಾ ಸಂತೋಷ ಮಾಡಿದೆ. ಇನ್ನೂ ಸ್ವಲ್ಪ ಮಾತಾಡೋಣ".

ಈ ಬೇತಾಳ ಬಿಡುವವನಲ್ಲವೆಂದು ಖಾತ್ರಿಯಾಯಿತು. ಅವನು ಪುನಃ ಸುರು ಮಾಡಿಬಿಟ್ಟ:

"ಎಲ್ಲ ಹಣವೂ ನಿಮ್ಮ ಹತ್ರ ಯಾಕೆ ಇರಬೇಕು?"

ನಾನು: "ಅದೇ ಅಲ್ಲವೊ ದೇವರ ಮೂರ್ಖತನ ಅಂದರೆ!"

ಅವನು: "ನಿಮ್ಮ ಕೈ ಮುಟ್ಟುವಾಗ ಅದೆಷ್ಟು ಮೆದುವಾಗಿದೆ. ಚೂರು ಕೆಲಸ ಮಾಡದೆ ಇಷ್ಟೊಂದು ಹಣ ನಿಮ್ಮ ಪಾಲಿಗೆ ಬಂದಿದೆ"

ನಾನು: "ನಾನು ಮಿದುಳು ಕೆಲಸಗಾರ ತಲೆ ಖರ್ಚುಮಾಡಿ ಸಂಪಾದಿಸುತ್ತೇನೆ."

ಅವನು: "ಸರಿ ನಿಮ್ಮ ತಲೆ ನಿಮ್ಮ ಕೈಯಷ್ಟೇ ಮೆದು. ಆದರೂ ಜಗತ್ತಿನಲ್ಲಿ ದುಡ್ಡೇ ಶ್ರೇಷ್ಟವಲ್ಲ."

ನಾನು: "ನೀನು ಹೇಳಿದ್ದು ನೂರು ಪಾಲು ಸತ್ಯ. ನಮ್ಮ ಈ ದುರವಸ್ಥೆಗೆ ಈ ದುಡ್ಡೇ ಕಾರಣ. ಅದು ಎಲ್ಲಾ ಅನೀತಿಗಳ ಮೂಲ. ಅದರಷ್ಟು ತುಚ್ಛವಾದ ವಸ್ತು ಬೇರೆ ಇಲ್ಲ"

ನನ್ನ ಈ ಲೆಕ್ಚರಿಗೆ ಅವನು ತಲೆದೂಗಿದಂತೆ ತೋರಿತು. ಅವನು "ನಿಜ" ಎಂದಾಗ ನನಗೆ ಸ್ವಲ್ಪ ಧೈರ್ಯ ಬಂತು. ಆದರೂ ಪುನಃ ಹೇಳಿದ: "ಆದರೆ, ಗಾದೆಯಲ್ಲಿ ಹಣ ಕಂಡರೆ ಹೆಣ ಬಾಯಿ ಬಿಡುತ್ತದೆ ಎಂದು ಹೇಳುತ್ತಾರಲ್ಲ, ಅದು ಹೇಗೆ?"

ಇವನು ಬಹಳ ಗಟ್ಟಿಗನಿರುವಂತೆ ಗೊತ್ತಾಯಿತು. "ಹಣ ಅಂದ್ರೆ ಅಷ್ಟು ಕೊಳಕು ವಸ್ತು. ಮುಕ್ತಿ ಹೊಂದಿದ ಜಡದೇಹಗಳೂ ಕೂಡಾ ಅದಕ್ಕೆ ಹೆದರುತ್ತವೆ. ಹೆದರಿ ಬಾಯ್ಬಿಡುತ್ತವೆ ಎಂದು ಕವಿಗಳು ವರ್ಣಿಸಿದ ರೀತಿ ಅದು" ಎಂದೆ.

ಅವನು ಕೇಳಿದ: "ಹಾಗಾದರೆ ನಿಮ್ಮ ಅಭಿಪ್ರಾಯದಲ್ಲಿ ಹಣ ಎಂಬುದು ಕೆಟ್ಟ ವಸ್ತು ಅಲ್ಲವೇ?"

ಇವನೇನೊ ಪರಿವರ್ತನೆ ಹೊಂದಿರಬಹುದೆಂದು ತಿಳಿದು ಬಾಯಿಗೆ ಬಂದ ಅನೇಕ ಹಳೇ ಗಾಥೆಗಳನ್ನು ಹೇಳಿದೆ. ಮತ್ತೆ ಕಡೆಗೆ "ನಿನಗೆ ಆಣೆ ಹಾಕಿ ಹೇಳುತ್ತೇನೆ ಹಣವನ್ನು ನಾನು ದ್ವೇಷಿಸುವಷ್ಟು ಯಾವುದನ್ನು ದ್ವೇಷಿಸುವುದಿಲ್ಲ. ಹಣವಿದ್ದರೆ ಗುಣಗಳು ಮಾಯವಾಗುತ್ತವೆ, ತಿಳಿಯಿತೆ?"

ಇಷ್ಟಕ್ಕೆ ಅವನು 'ಬೇಷ್' ಅಂದ. ನಾನೂ ಸಂತೋಷ ಪಟ್ಟುಕೊಂಡಂತೆ ನಟಿಸುವಷ್ಟರೊಳಗೆ "ಹಾಗಾದರೆ ಆ ನಿಮ್ಮ ಪಾಕೀಟ್ ಈ ಕಡೆ ಕೊಡಿ. ನಿಮಗೆ ಅಂತಹ ವಸ್ತು ಬೇಡವೇ ಬೇಡ. ನನಗಾದರೂ ಬಾಯಾರಿಕೆ ಆಗಿದೆ" ಎಂದಾಗ ನನಗೆ ಮೂರ್ಛೆ ಬಂದಂತಾಯಿತು.

ಕೇಳಿದೆ: "ಇದೇನು ಮಾರಾಯಾ, ದೋಸ್ತಿ ಮಾಡಿ ದರೋಡೆ ಶುರುಮಾಡಿಬಿಟ್ಟೆಯಲ್ಲ!"

"ನೀವು ನನಗೆ ಖಚಿತಮಾಡಿಬಿಟ್ಟಿದ್ದೀರಿ ಈ ದುಡ್ಡಿನಿಂದ ಏನೂ ಸುಖವಿಲ್ಲವೆಂದು. ಅದುದರಿಂದ ನಿಮಗೆ ಸ್ವಲ್ಪವಾದರೂ ಸುಖಕೊಡುವುದರಲ್ಲಿ ನನ್ನ ತಪ್ಪೇನಿದೆ. ಈ ಕಡೆ ತಿರುಗಿಸಿ, ನಿಮ್ಮ ಪಾಕೀಟು."

ಇದರ ಮೇಲೆ ಹೆಚ್ಚು ಮಾತಾಡಬಾರದೆಂದು, ನನಗೆ ಆತ ಎಚ್ಚರಿಕೆ ಕೊಟ್ಟ. ಅವನ ನಿರ್ಧಾರ ತಿಳಿಯಿತು. ಆದರೂ ಕೇಳಿದೆ: "ನಿನ್ನ ಈ ಸುಲಿಗೆಗೆ ಕಾರಣ ಕೊಡಬೇಕು"

"ಹಾಗೊ, ಕೇಳಿ-ನಿಮಗಿಂತ ನಾನು ದಾಂಡಿಗ. ನಿಮಗಿಂತಲೂ ಹೆಚ್ಚು ಬಾಯಾರಿಕೆ ನನಗೆ ಆಗಿದೆ. ನಿಮ್ಮ ಹತ್ರ ಆ ಹಾಳು ಹಣವಿದೆ. ಎಲ್ಲದಕ್ಕಿಂತಲೂ ದೊಡ್ಡ ಕಾರಣ ಇಲ್ಲಿ ಉಂಟು. ಮಾತಾಡಿದರೆ ಅದು ನಿಮ್ಮ ತಲೆ ಮೇಲೆ ಬೀಳುತ್ತದೆ" ಎಂದು ಹೇಳುತ್ತಾ ಅಲ್ಲಿಯೇ ಪಕ್ಕದಲ್ಲಿರಿಸಿದ ದೊಡ್ಡ ದೊಣ್ಣೆ ತೆಗೆದ. ಇವನದು ನ್ಯಾಯವಾದ ಕೇಳಿಕೆ ಎಂಬ ಇಲ್ಲದ ಸಮಧಾನವಾಯಿತು-ದೊಣ್ಣೆ ನೋಡಿ. ಇನ್ನು ವಿಚಾರವಿಲ್ಲ-ಪಾಕೀಟು ಕೈಗೆ ಕೊಟ್ಟೆ. "ನಮುಸ್ಕಾರ" ಎಂದೆ. "ನಮುಸ್ಕಾರ" ಎಂದ.

—ಕೆ. ಶಿವಭಟ್

ಮಾಲ್ಟಿನ್
ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ
ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.
ದೊರಕುವ ಸ್ಥಳ:- ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

ಸೌಂದರ್ಯದಲ್ಲಿ ಸತ್ಯ

(೧ನೇ ಪುಟದಿಂದ)

ಗ್ರೆಸ್ಸಿನ ಗ್ರಾಮಾಧಿವೇಶನಗಳನ್ನು ಗಾಂಧೀಜಿಯೆ ಕಲ್ಪಿಸಿದರು. ಅದು ಬರಿ ಜನತಾ ಸಂಪರ್ಕದ ಉಪಕರಣವಾಗಿದ್ದಿಲ್ಲ. ಪ್ರಸಿದ್ಧ ಚಿತ್ರಕಾರರಾದ ನಂದಲಾಲ ಬಸುಗಳನ್ನು ಈ ಗ್ರಾಮಾಧಿವೇಶನ ಮಂಟಪದ ಶಿಲ್ಪಿಯಾಗಿ ಗಾಂಧೀಜಿ ಆರಿಸಿದರು. ಅವರಿಬ್ಬರೂ ಎಷ್ಟೋ ದಿನಗಳ ವರೆಗೆ ಅದನ್ನು ಕುರಿತು ಚರ್ಚಿಸಿದ ಮೇಲೆ ನಂದಲಾಲರು ಈ ವ್ಯವಹಾರಿಕ ಧ್ಯೇಯವಾದಿಯ ಸುಂದರ ಕಲ್ಪನೆಗಳನ್ನು ರಕ್ತಗತ ಮಾಡಿಕೊಂಡು ಹೋದರು.

"ಕಾಂಗ್ರೆಸ್ ಭವನದ ಕಟ್ಟಡ ನಂಬಲಾರದಷ್ಟು ಸರಳವಾಗಿತ್ತು. ಆಸಾಮ್ ಬಿದಿರು, ಆಸಾಮ್ ಮಣ್ಣು, ಆಸಾಮ್ ಕರಡ, ಅಸಾಮ್ ಖಾದಿ, ಅಸಾಮಿ ಶ್ರಮ, ಕೇವಲ ಇವುಗಳಿಂದ ಬ್ರಹ್ಮಪುತ್ರದ ತೀರದಲ್ಲಿ ಈ ಸರಳವಾದರೂ ಸುಂದರ ಗುಡಿಸಲುಗಳು ರಚಿಸಲ್ಪಟ್ಟವು. ....ಪ್ರತಿ ವ್ಯವಸ್ಥೆಯೂ ಈ ಕಲಾಮಯ ಸರಳತೆಯೊಡನೆ ಮೇಳಗೂಡುವಂತಿತ್ತು"ಎಂದು ಗಾಂಧೀಜಿ ಗೋಹತಿ ಕಾಂಗ್ರೆಸಿನಲ್ಲಿ ಉದ್ಗರಿಸಿದರು! ಫೈಜಪುರ ಗ್ರಾಮಾಧಿವೇಶನವೇ ಈ ಮಾರ್ಗದಲ್ಲಿ ಮೊದಲನೆ ಪ್ರಯೋಗವಾಗಿತ್ತು. ನಗರವಾಸಿಗಳಿಗೆ ಅದು ಮೆಚ್ಚುಗೆಯಾಗಲಿಲ್ಲ. ಮುಂಬಯಿಯ "ಟಾಯಿಮ್ಸ್ ಆಫ್ ಇಂಡಿಯಾ" ಪತ್ರಿಕೆ ಅದನ್ನು ಹೀಗೆ ಟೀಕಿಸಿತು: "ಎಲ್ಲವೂ ಒರಟಿನಲ್ಲಿ ಶತ ಒರಟು ..... ಇದೊಂದು ಬಿದಿರುಗಳ ನಗರ!" ಆದರೆ ಆಂಗ್ಲೋ ಇಂಡಿಯನ್ ಬುದ್ಧಿಗೂ ಅದರ ಸೌಂದರ್ಯದ ಬೋಧೆಯಾಗಲು ಬಹಳ ಕಾಲ ಹಿಡಿಯಲಿಲ್ಲ. ಮರುವರುಷವೇ ಹರಿಪುರದ ಕಾಂಗ್ರೆಸ್ ಮಂಟಪದ ರಚನೆ ಅದೇ ಪತ್ರಿಕೆಯ ಪ್ರಶಂಸೆಗೆ ಪಾತ್ರವಾಯಿತು.

"ಹಿಂದುಸ್ಥಾನದಲ್ಲಿ ಆತ್ಮವಿಹೀನವಾದ ಜಡ ಶಿಕ್ಷಣ ಪದ್ಧತಿಯೊಂದು ನಮಗೂ ನಮ್ಮ ಪ್ರಾಚೀನ ಸಂಸ್ಕೃತಿ ಸಂಪ್ರದಾಯಗಳಿಗೂ ಇರುವ ಸಂಬಂಧವನ್ನು ಕತ್ತರಿಸಿ ಹಾಕಿದೆ. ಈ ಕತ್ತರಿಸಿದ ಬೇರುಗಳು ಇಂದು ಜತೆಗೂಡುತಿದ್ದರೆ, ನಮ್ಮ ಜನತೆಯ ಪ್ರಕೃತಿಯಲ್ಲಿ ಕಂದಿದ್ದರೂ ನಂದದೆ ಉಳಿದಿರುವ ಅಧ್ಯಾತ್ಮಿಕ ಕೋಮಲತೆಯೂ ಕಲ್ಪನಾಶಕ್ತಿಯೂ ಅದಕ್ಕೆ ಕಾರಣ," ಎಂದು ಯೋಗಿ ಅರವಿಂದರು ಹೇಳುತ್ತಾರೆ. ಈ ಅಧ್ಯಾತ್ಮಿಕ ಮಾರ್ದವದ, ಈ ಕಲ್ಪನಾಶಕ್ತಿಯ ತಂತಿಗಳನ್ನು ತುಡುಕಿಯೇ ಗಾಂಧೀಜಿ ಮರೆತುಹೋದ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿದರು. ರೊಮೆ ರೋಲಾ ನುಡಿದಂತೆ, "ಚರಕಾ ಸಂಗೀತ'ವನ್ನು, ನೇಕಾರ ಕವಿಯಾದ ಕಬೀರನ ಮನಸ್ಸಿಗೆ ಮೋದದಾಯಿಯಾದ ಹಿಂದೂದೇಶದ ಆ ಅತಿ ಪ್ರಾಚೀನ ಸಂಗೀತವನ್ನು ಬಣ್ಣಿಸುವಾಗ ಗಾಂಧೀಜಿಯ ಮಾತು ಕಾವ್ಯಮಯವಾಗುತ್ತದೆ."

"ಅಕಲಂಕ ಧವಲ ಖಾದಿ"ಯಲ್ಲಿ "ನಯವಾದ ಒರಟುತನ"ವನ್ನು ಆರೋಪಿಸುವ ಗಾಂಧೀಜಿ ಕವಿಯಲ್ಲವೆನ್ನಲು ಯಾರಿಗೆ ಎದೆಯುಂಟು? "ನಮ್ಮ ಅಭಿರುಚಿ ಅಧಃಪತಿತವಾಗಿರದಿದ್ದರೆ ನಾವು ಅಂಟಂಟಾದ ಕ್ಯಾಲಿಕೋ ಬಟ್ಟೆಗಿಂತ ಖಾದಿಯನ್ನೇ ಮೆಚ್ಚುತಿದ್ದೆವು," ಎಂದು ಅವರ ಕೆಣಕಾಟ. ಖಾದಿಯ ಅಧ್ಯಾತ್ಮಿಕ ಸೌಂದರ್ಯದ ಬೋಧೆಯನ್ನು ಅವರು ನಮ್ಮಲ್ಲಿ ಎಚ್ಚರಗೊಳಿಸಿದ್ದಾರೆ. "ಪ್ರಾಣಾಪಹಾರಕವಾದ ಕಲೆಯೂ ಉಂಟು, ಪ್ರಾಣಸಂಜೀವಿನಿಯಾದ ಕಲೆಯೂ ಉಂಟು. ಪಶ್ಚಿಮದಿಂದಲೂ ದೂರ ಪೂರ್ವ ದೇಶದಿಂದಲೂ ನಾವು ತರಿಸಿಕೊಂಡ ಬಟ್ಟೆ ಯಥಾರ್ಥವಾಗಿ ನಮ್ಮ ಲಕ್ಷಾಂತರ ಬಂಧು-ಭಗಿನಿಯರ ಪ್ರಾಣಗಳನ್ನಪಹರಿಸಿದೆ ಮತ್ತು ಸಾವಿರಾರು ಪ್ರಿಯ ಸಹೋದರಿಯರನ್ನು ನಿರ್ಲಜ್ಜ ಜೀವನಕ್ಕೆ ನೂಕಿದೆ. ನಿಜವಾದ ಕಲೆಯಲ್ಲಿ ಅದರ ನಿರ್ಮಾಪಕರ ಸುಖ, ಸಂತೃಪ್ತಿ, ಪಾವಿತ್ರ್ಯಗಳ ಪ್ರತಿಬಿಂಬವಿರಬೇಕು. ಅಂಥ ಕಲೆ ನಿಮ್ಮೆಲ್ಲರ ನಡುವೆ ಪುನರುಜ್ಜೀವನಗೊಳಬೇಕೆಂಬ ಬಯಕೆ ನಿಮಗಿದ್ದರೆ, ಖಾದಿಯನ್ನು ಧರಿಸುವುದು ನಿಮ್ಮ ಕರ್ತವ್ಯವಾಗುವುದು."

ಖಾದಿ ಏತರ ಪ್ರತೀಕ? ಎಂದು ಸಕಲತವಾಲ ಕೇಳಿದ್ದಕ್ಕೆ ಗಾಂಧೀಜಿ ಹೀಗೆ ಉತ್ತರವಿತ್ತರು: "ಖಾದಿ ಸರಳತನದ ಪ್ರತೀಕವೇ ಹೊರತು ಒರಟುತನದ ಸಂಕೇತವಲ್ಲ. ಬಡವರ ಹೆಗಲಮೇಲೆ ಅದು ಚೆನ್ನಾಗಿ ಒಪ್ಪುತ್ತದೆ. ಹಿಂದಿನ ಕಾಲದಲ್ಲಿ ಅದನ್ನು ತಯಾರಿಸುತ್ತಿದ್ದ ರೀತಿಯಲ್ಲಿ ಸಿದ್ಧಗೊಳಿಸಿದರೆ ಅದು ಅತ್ಯಂತ ಶ್ರೀಮಂತರಿಗೂ ಅತ್ಯಂತ ಕಲಾವಂತರಿಗೂ ಅಲಂಕಾರಪ್ರಾಯವಾಗಬಲ್ಲದು. ಅದು ಪ್ರಾಚೀನ ಕಲೆ ಕೈಗಾರಿಕೆಗಳ ಸಂಜೀವನ." ಅವರು ಖಾದಿಯನ್ನು ಸ್ವಾತಂತ್ರ್ಯದ ಉಪಕರಣವಾಗಿ ಮಾತ್ರವಲ್ಲ, ಕಳೆದುಹೋದ ಕಲೆಯನ್ನು ಸಂಪಾದಿಸುವ ಉಪಕರಣವಾಗಿಯೂ ಮಾಡಿದ್ದಾರೆ.

ಚರಕವೆಂದರೆ ಸೂರ್ಯ, ಇತರ ಕೈಗಾರಿಕೆಗಳು ಅದರ ಸುತ್ತ ಪ್ರದಕ್ಷಿಣೆ ಮಾಡುವ ಗ್ರಹಗಳು, ಎಂದು ಗಾಂಧೀಜಿಯ ರೂಪಕೋಕ್ತಿ. 'ಹಳೆಗಾಲದ ನಯವಾದ, ರಮ್ಯವಾದ, ಒಂದು ಕಾಲದಲ್ಲಿ ಜಗತ್ತಿನ ಅಸೂಯೆಗೆ ಗುರಿಯಾಗಿದಂತ ಬಟ್ಟೆಯ ಪುನರುಜ್ಜೀವನಕ್ಕಾಗಿ ಹಿಂದುಸ್ಥಾನ ಈಗಲೆ ಕಾತರಗೊಳ್ಳಬೇಕಾದ ಕಾರಣವಿಲ್ಲ. ಅರ್ಧೋಪವಾಸಿಯಾದ ಜನಾಂಗಕ್ಕೆ ಧರ್ಮವಾಗಲಿ, ಕಲೆಯಾಗಲಿ ಸಂಘಟನೆಯಾಗಲಿ ಸಾಧ್ಯವಲ್ಲ. ಈ ಅರ್ಥರಹಿತ ಅಪವ್ಯಯದಿಂದ ನಮ್ಮನ್ನು ಪಾರುಮಾಡಲು ಚರಕವೊಂದೇ ಸಮರ್ಥವಾಗಬಹುದು. ಈ ಅಪವ್ಯಯದ ಕಾರಣದಿಂದ ನಮ್ಮ ಚೈತನ್ಯ ಹೆಪ್ಪುಗಟ್ಟಿಹೋಗಿದೆ. ಅದರಲ್ಲಿ ಪ್ರಾಣಸಂಚಾರವಾಗಬೇಕಾದರೆ ಮನೆಮನೆಯೂ ನೂಲುವ ಗಿರಣಿಯಾಗಬೇಕು, ಹಳ್ಳಿಹಳ್ಳಿಯೂ ನೇಯುವ ಗಿರಣಿಯಾಗಬೇಕು. ಅದರ ಜೋಡಿ ನಮ್ಮ ಪ್ರಾಚೀನ ಗ್ರಾಮಕಲೆಯೂ ಗ್ರಾಮಗೀತವೂ ತಲೆಯೆತ್ತುವವು'-ಅವರ ಒಳನೋಟದ ನುಡಿಯಿದು.

ಕೈಗಾರಿಕೆಗಳನ್ನು ಪ್ರಚುರಗೊಳಿಸವದಕ್ಕಾಗಿಯೂ ಜನತೆಯ ಕಲಾರುಚಿಯನ್ನು ಹೆಚ್ಚಿಸುವುದಕ್ಕಾಗಿಯೂ ಖಾದಿಯ ಮತ್ತು ಮನೆ ಕೈಗಾರಿಕೆಗಳ ಪ್ರದರ್ಶನಗಳನ್ನು ಗಾಂಧೀಜಿ ಏರ್ಪಡಿಸಿದರು. ಪ್ರತಿ ಕಾಂಗ್ರೆಸ್ ಅಧಿವೇಶನದಲ್ಲಿಯೂ ಈ ಕೆಲಸವನ್ನು ಅವರು ನಂದಲಾಲ ಬಸುಗಳಿಗೇ ಒಪ್ಪಿಸುತ್ತಿದ್ದರು. ಹರಿಪುರದಲ್ಲಿ ನಂದಲಾಲರು ಪ್ರಾಚೀನ ಕಾಲದಿಂದ ಇಂದಿನ ವರೆಗೆ ಕಲೆಯ ಪರಿವರ್ತನೆಯೆಂತಾಯಿತೆಂದು ದೃಷ್ಟಾಂತಗೊಳಿಸಲು ಪ್ರಯತ್ನಿಸಿದರು. ಈ ಪ್ರದರ್ಶನಗಳನ್ನು ಗಾಂಧಿಜಿ ತಪ್ಪದೆ ಅಭ್ಯಸಿಸುತ್ತಿದ್ದರು. ಇತರರಿಗೂ ಹಾಗೆ ಮಾಡಲು ಪ್ರೇರೇಪಿಸುತ್ತಿದ್ದರು. ಅ. ಭಾ. ಚರಖಾ ಸಂಘಕ್ಕೆ ಸಲಹೆ ಕೊಡುತ್ತಾ ಅವರು 'ಮುಖ್ಯವಾಗಿ ಯೋಗ್ಯತೆಯನ್ನೇ ಅನುಲಕ್ಷಿಸಬೇಕಲ್ಲದೆ ಬರೀ ಡಂಭಾಚಾರ ಬೇಕಿಲ್ಲ,....ಅವು ಸ್ವತಂತ್ರವಿರಬೇಕು. ಮೌಲಿಕವಿರಬೇಕು, ಹಳ್ಳಿಯ ಕಲೆಯನ್ನು ನಗರಗಳಲ್ಲಿ ಬೆಳಗುವಂತಿರಬೇಕು,' ಎನ್ನುತ್ತಾರೆ. ಇನ್ನೂ ನಮ್ಮ ಖಾದೀ ಭಂಡಾರಗಳಲ್ಲಿ ಒರಟು ಬಟ್ಟೆಗಳೇ ತುಂಬಿರುವುವಾದರೆ ಅದರ ಅರ್ಥ ನಾವೇ ಒರಟರೆಂದು.

ಗಾಂಧೀಜಿಯ ದೃಷ್ಟಿಯಲ್ಲಿ, ಕೈಗಾರಿಕೆಗಳಲ್ಲಿಯೇ ಕಲೆಯ ಚರಮ ಪರಿಪೂರ್ಣತೆ ಇರಬಲ್ಲದು. "ಹಾಗೆ ಕೇಳಿದರೆ, ನಿಜವಾದ ಕಲೆಯ ಅಭಿವ್ಯಕ್ತಿ ಶಕ್ತಿಚಾಲಿತವಾದ ಜಡಯಂತ್ರಗಳಿಂದ ಆಗಲಾರದು. ಸ್ತ್ರೀ-ಪುರುಷರ ಮೃದು ಹಸ್ತದ ಚೈತನ್ಯಮಯ ಸ್ಪರ್ಶದಲ್ಲೇ ಅದು ವ್ಯಕ್ತವಾಗುವದು" ಎನ್ನುವರವರು. ಹಳ್ಳಿಯ ಕೈಗಾರಿಕೆಗಳ ಗುರಿಯೇನೆಂದು ಲಾರ್ಡ್ ಲೋಥಿಯನ್ ಒಮ್ಮೆ ಅವರನ್ನು ಕೇಳಿದರು. "ಕಳೆಯಾಗುವುದನ್ನು ಬೆಳೆಯಾಗಿ ಮಾಡಿ ತೋರಿಸುವುದೇ" ಗುರಿಯೆಂದು ಗಾಂಧೀಜಿ ಹೇಳಿದರು.

ಸೌಂದರ್ಯ ಸಂಸ್ಕೃತಿಗಳ ಅರಿವು ಗಾಂಧೀಜಿಗೆ ಅಷ್ಟು ಇದ್ದ ಪಕ್ಷದಲ್ಲಿ ಅವರಿಗೆ ಈ ಕೌಪೀನದ ಹುಚ್ಚೇಕೆ ಎಂದು ಯಾರಾದರೂ ಕೇಳಬಹುದು. ಮಾತಿನ ಮಲ್ಲರಾದ ಚರ್ಚಿಲ್ಲರು ಅವರನ್ನು 'ಅರೆಬತ್ತಲೆ ಫಕೀರ'ನೆಂದು ಕರೆದು ನಿಂದಿಸಿದ್ದರು. ಅವರ ಸರಣಿಯನ್ನೇ ಹಿಡಿದು ಇತರ ಅನೇಕ ಸುಸಂಸ್ಕೃತರೆನಿಸಿಕೊಳ್ಳುವವರೂ ಗಾಂಧಿಜಿಯ ವೇಷವನ್ನು ಹೀಯಾಳಿಸಿದರು. ಮನುಷ್ಯರ ಯೋಗ್ಯತೆ ಬಟ್ಟೆಯಲ್ಲಿ ಕಾಣುವುದು ಎಂಬ ಜರ್ಮನ್ ಗಾದೆಯನ್ನೆ ಈ ಮನುಷ್ಯರು ಗಟ್ಟಿಯಾಗಿ ನಂಬುತ್ತಾರೆ.

ಕೌಪೀನದ ವಿರೋಧಿಗಳಿಗೆ ಗಾಂಧಿಜಿಯ ಉತ್ತರವಿಷ್ಟೆ: 'ಇಲ್ಲಿ ಕೌಪೀನನಾಗರಿಕತೆಯ ಪ್ರಶ್ನೆಯೇ ಇಲ್ಲ. ಕೌಪೀನಧಾರಣೆ ನನಗೆ ಅವಶ್ಯವಾಯಿತೆಂದು ನಾನು ಅದನ್ನು ಕೈಕೊಂಡೆ. ಆದರೆ ಎಷ್ಟು ಮಟ್ಟಿಗೆ ಕೌಪೀನದಲ್ಲಿ ಸರಳತೆಯ ಸಾನಿಧ್ಯವುಂಟೋ ಅಷ್ಟು ಮಟ್ಟಿಗೆ ಅದು ಹಿಂದೀ ನಾಗರಿಕತೆಯ ಪ್ರತಿನಿಧಿಯಾಗುವುದರಲ್ಲಿ ಏನು ಅಭ್ಯಂತರ?' ಗಾಂಧಿಜಿ ಬಡವರಲ್ಲಿ ತಮ್ಮ ಐಕ್ಯವನ್ನು ಸಾಧಿಸಿಕೊಳ್ಳಲೆಂದು ಟೊಪ್ಪಿಗೆ ಅಂಗಿಗಳನ್ನು ಪರಿತ್ಯಜಿಸಿ ಕೌಪೀನವನ್ನೂ ಅಂಗವಸ್ತ್ರವನ್ನೂ ಸ್ವೀಕರಿಸಿ ಎಷ್ಟೋ ವರ್ಷಗಳಾದವು. ೧೯೨೧ ಸಪ್ಟಂಬರ ೨೯ರ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ 'ಬಡವರ ದಾರಿ'ಯೆಂಬ ಲೇಖದಲ್ಲಿ ವಿದೇಶೀ ಬಟ್ಟೆಯನ್ನು ಬಿಟ್ಟುಕೊಟ್ಟು ಖಾದಿಯನ್ನು ಧರಿಸುವಂತೆ ಅವರು ಜನತೆಯನ್ನು ಪ್ರಾರ್ಥಿಸಿಕೊಂಡರು. ಅದೇ ಲೇಖದಲ್ಲಿ ಅವರು ತಮ್ಮ ಸಹಯೋಗಿಗಳೆಂದ,-ಅದು ಅವರ ಕೆಲಸಕ್ಕೆ ಅತ್ಯಂತ ಅವಶ್ಯವೆಂದು ಅವರಿಗನಿಸಿದ ವಿನಾ,-ಕೌಪೀನ ಧಾರಣೆಯನ್ನು ತಾವು ನಿರೀಕ್ಷಿಸುವುದಿಲ್ಲವೆಂದು ಸ್ಪಷ್ಟೀಕರಿಸಿದ್ದರು.

ಗುರುಕುಲ ವಿದ್ಯಾರ್ಥಿಗಳಿಗಿತ್ತ ಭಾಷಣವೊಂದರಲ್ಲಿ ಗಾಂಧೀಜಿ-"ಜನರ ಉಡುಗೆಗೂ ಸುತ್ತಣ ವಾತಾವರಣಕ್ಕೂ ಒಂದು ಬಗೆಯ ಸಂಬಂಧವುಂಟು ನಿಜ. . . .ಪಾಯಜಮಾದ ಮೇಲೆ ಸಡಿಲಾದ ನಿಲುವಂಗಿಯನ್ನು ಧರಿಸಿ ಅದರ ಮೇಲೆ ನೆಕ್‌ಟಾಯಿ ಇಲ್ಲದೆ ವೆಸ್ಟ್ ಹಾಕಿಕೊಂಡು ನಿಲುವಂಗಿಯ ತುದಿಯನ್ನು ಗಾಳಿಯಲ್ಲಿ ತೂರುತ್ತ ನಡೆದಿರುವ ಹಿಂದೀಯನು ಸ್ವಲ್ಪ ವಿಕಟವಾಗಿಯೇ ಕಾಣಿಸುತ್ತಾನೆ" ಎಂದಿದ್ದರು. ಗಾಂಧೀಜಿ ತಮ್ಮ ಕೌಪೀನಧಾರಣೆಯಲ್ಲೂ ಸರಳತನವೆಂದರೆ ವಿಕಾರತನವಲ್ಲೆಂದು ತೋರಿಸಿಕೊಟ್ಟಿದ್ದಾರೆ. ಸರಳತನದಲ್ಲಿಯೂ ಓರಣದ ಕಡೆ ಅವರ ಒಲವು-ವಿಶೇಷ. ಕಣ್ಣು ಕುಕ್ಕುವಂಥ ವಸ್ತ್ರಾಲಂಕಾರಗಳಿಂದ ಭೂಷಿತರಾದ ಹೆಣ್ಣು ಮಕ್ಕಳನ್ನುದ್ದೇಶಿಸಿ ಒಂದುಭಾಷಣದಲ್ಲಿ ಅವರು "ನಾನು ಮಲಬಾರಿನ ಮಹಿಳೆಯರಿಗೆ ಮನಸೋತಿದ್ದೇನೆ. ಆಸಾಮು ಒಂದನ್ನು ಬಿಟ್ಟರೆ, ಹಿಂದುಸ್ಥಾನದಲ್ಲಿ ಬೇರೆ ಯಾವ ಪ್ರದೇಶದಲ್ಲಿಯೂ ಮಲಬಾರಿನ ಹೆಣ್ಣು ಮಕ್ಕಳಷ್ಟು ಸರಳವಾಗಿ ಆದರೂ ಅಷ್ಟು ಓರಣವಾಗಿ ಉಡುತೊಡುವ ಮಹಿಳೆಯರನ್ನು ನಾನು ಕಂಡಿಲ್ಲ" ಎಂದು ಹೇಳಿದ್ದುಂಟು.

ಅವರ ಶೀಘ್ರವೇದಿ ಮನಸ್ಸಿಗೆ ಹೊಲಸು, ಓರಣಗೇಡಿತನ ಸ್ವಲ್ಪವೂ ಸಹನೆಯಾಗುವುದಿಲ್ಲ. "ಹೇಗೋ ಬಣ್ಣಬಳಿದ ಹೊಲಸು ಬಟ್ಟೆಯ ಚೂರು ರಾಷ್ಟ್ರಧ್ವಜಕ್ಕೆ ಸಲ್ಲುವ ಅಪಾರ ಗೌರವವನ್ನು ಮನಸ್ಸಿನಲ್ಲಿ ಹೇಗೆ ಉದ್ದೀಪನಗೊಳಿಸಬಲ್ಲದು?" ಎಂದು ಅವರು ಕೇಳುತ್ತಾರೆ.

ಸಾರ್ವಜನಿಕ ಕ್ಷೇತ್ರದಲ್ಲಿ ಕಾಲಿಟ್ಟಂದಿನಿಂದಲೂ ಅವರು ನೈರ್ಮಲ್ಯದಲ್ಲಿ ಆತ್ಯಂತಿಕ ಆಸ್ಥೆಯನ್ನೆ ತೋರಿಸುತ್ತ ಬಂದಿದ್ದಾರೆ. "ವಿಧಾಯಕ ಕಾರ್ಯದ ನೆಲೆಗಟ್ಟೇ ಅದು, ಸ್ವರಾಜ್ಯದ ಅರ್ಹತಾ ಪತ್ರವೇ ಅದು" ಅವರಿಗೆ. "ಹೊಲಸೆಂದರೆ ನನ್ನ ಮನಸ್ಸು ಹೀಕರಿಸಿಕೊಳ್ಳುತ್ತದೆ. ಹೊಲಸಾದ ಬಟ್ಟಲಲ್ಲಿ ನಾನು ಉಣ್ಣಲಾರೆ, ಹೊಲಸಾದ ಚಮಚೆಯನ್ನಾಗಲಿ ಕರವಸ್ತ್ರವನ್ನಾಗಲಿ ಮುಟ್ಟಲಾರೆ. ಆದರೆ ಹೊಲಸನ್ನು ಎತ್ತಿ ಅದರ ಯೋಗ್ಯ ಸ್ಥಾನಕ್ಕೆ ಒಯ್ದರೆ ಮತ್ತೆ ಅದು ಹೊಲಸುತನದಿಂದ ಮುಕ್ತವಾಗುತ್ತದೆ."

ಸುಂದರವಾದ ಬರವಣಿಗೆ, ಮಧುರ ನಾದ, ಸುರಸವಾದ ಭಾಷಾಶೈಲಿ, ಇವುಗಳಿಂದ ಗಾಂಧಿಜಿ ಮೋಹಿತರಾಗುತ್ತಾರೆ. ದೇವನಾಗರಿ ಲಿಪಿಯ ಸೌಂದರ್ಯವನ್ನು ಅವರು ಮನವಾರೆ ಹೊಗಳುತ್ತಾರೆ. ಸಂಸ್ಕೃತ ಶಬ್ದಗಳ ಮಧುರ ನಾದ ಅವರ ಕಿವಿಯಲ್ಲಿ ಸದಾ ಗುಂಜರಿಸುತ್ತಿರುತ್ತದೆ. ಆದರಿಂದ ಅವರು ಎಲ್ಲ ಹಿಂದೂ ಧರ್ಮಕರ್ಮಗಳು ಸಂಸ್ಕೃತದಲ್ಲಿ ನಡೆಯಬೇಕೆಂದು ಹಾರೈಸುವರು. 'ಅನುವಾದಗಳು ಎಷ್ಟೇ ಚನ್ನಾಗಿದ್ದರೂ ಮೂಲ ಸಂಸ್ಕೃತ ಶಬ್ದಗಳ ಮೋಹಕನಾದ ಅವುಗಳಲ್ಲಿ ಇಳಿಯಲಾರದು.'

ಹೊಲಸು ಮುದ್ರಣವನ್ನು ಗಾಂಧಿಜಿ 'ಹಿಂಸೆ'ಯೆಂದು ಕರೆಯುತ್ತಾರೆ. ಶಬ್ದಗಳನ್ನು ಅವರು ವಿಜ್ಞಾನಿಯಂತೆ ಪರೀಕ್ಷಿಸಿ ಬಳಸುವದಾದರೂ ಅವರಿಗೆ ಅವು ಧಾರಾವಾಹಿಯಾಗಿ ಬರುವವು. ಮನುಷ್ಯನ ನಿಲುವು ಶೈಲಿಯಲ್ಲಿ ಮೂಡಿರುತ್ತದೆ, ಎನ್ನುವರು. ಗಾಂಧಿಜಿಯ ವಿಷಯದಲ್ಲಿ ಇದು ಇಮ್ಮಡಿ ಸತ್ಯವೆನಿಸುವುದು. ಗಾಂಧಿಜಿ ಕವಿಯಂತೆ ಸುಂದರ ಸಾಹಿತ್ಯವನ್ನು ಹರಿಸುವರು. ಒಮ್ಮೊಮ್ಮೆ ತಾವು ರಚಿಸಿದ ಸಾಹಿತ್ಯವನ್ನು ತಾವೇ ಗುರುತಿಸಲಾರದಷ್ಟು ತಾದಾತ್ಮ್ಯ ಅವರನ್ನು ಆವರಿಸಿರುತ್ತದೆ. ಆಗಾಖಾನ್ ಅರಮನೆಯ ಸೆರೆಮನೆಯಲ್ಲಿ ಅವರ ಜನ್ಮದಿನದಂದು ಸರೋಜಿನಿ ನಾಯ್ಡುರವರು ತಾವು ಆರಿಸಿ ಆರಿಸಿದ ಸಾಹಿತ್ಯರತ್ನಗಳನ್ನು ಗಾಂಧಿಜಿಯವರಿಗೆ ಒಪ್ಪಿಸಿದರು. ಅದರಲ್ಲಿದ್ದ 'ಗೋವೆಂಬುದು ಕರುಣೆಯ ಕವನ' ಎಂಬ ವಾಕ್ಯವನ್ನು ತಾವೇ ಬರೆದಿದ್ದುದು ಮಹಾತ್ಮರ ಸ್ಮರಣಕ್ಕೆ ಬರಲೇ ಇಲ್ಲ. ಭಾಷಾಶೈಲಿಯ ಅನುಪಮ ಸೌಂದರ್ಯದಲ್ಲಿ ಗಾಂಧಿಜಿಗೆ ಸರಿದೊರೆಯಾಗುವವರು ಸಿಗುವುದು ದುರ್ಲಭ. ಈ ವಿಷಯದಲ್ಲಿ ಅವರ ಸ್ಥಾನ ರಸ್ಕಿನ್, ಥೋರೊ, ಟಾಲ್‌ಸ್ಟಾಯಿಯರ ಮಗ್ಗುಲಲ್ಲಿಯೇ ಇದೆ.

ಅವರ ಜೀವನದಲ್ಲಿ ಸಂಗೀತ ವಹಿಸುವ ಪಾತ್ರ ದೊಡ್ಡದು. ಅದು ಅವರ ಜೀವನದ ಒಂದು ಅಂಶವೇ ಆಗಿಬಿಟ್ಟಿದೆ. 'ಸಂಗೀತವೆಂದರೆ ಲಯಬದ್ಧತೆ, ಒಂದು ವ್ಯವಸ್ಥೆ. ಅದರ ಪ್ರಭಾವ ವಿದ್ಯುತ್ತಿನಂತೆ. ಅದು ಕ್ಷಣಮಾತ್ರದಲ್ಲಿ ಮನಸ್ಸನ್ನು ಶಾಂತಗೊಳಿಸುವುದು,' ಎಂದು ಗಾಂಧಿಜಿ ಹೊಗಳುತ್ತಾರೆ. ಅವರ ಸಾಬರಮತಿ ಆಶ್ರಮದಲ್ಲಿ ಸಂಗೀತವೂ ಶಿಕ್ಷಣದ ಒಂದು ಪ್ರಮುಖ ಅಂಗವಾಗಿತ್ತು. ಅವರು ಆ ಆಶ್ರಮವನ್ನು ಬಿಟ್ಟಾಗ 'ದಿವಂಗತ ಖರೆಯವರು ಜಾಗ್ರತಗೊಳಿಸಿದ ಆಸಕ್ತಿಯನ್ನು ಬೆಳೆಸಿರಿ' ಎಂದು ಗುಜರಾತಿಗಳಿಗೆ ಉಪದೇಶಿಸಿದ್ದರು.

'ನಮ್ಮ ಇತರ ಶಾಸ್ತ್ರಗಳಂತೆ ಸಂಗೀತವೂ ಬರಿ ಕೆಲವರ ಸೊತ್ತಾಗಿ ಕುಳಿತಿದೆ'ಎಂದು ಗಾಂಧೀಜಿ ತಲ್ಲಣಿಸುತ್ತಾರೆ. 'ರಾಷ್ಟ್ರೀಯ ಗೀತಗಳನ್ನು ಶುದ್ಧವಾಗಿ ಹಾಡುವಂತೆ ಎಲ್ಲರಿಗೂ ವಿಧಿಸಬೇಕೆಂದು ನನಗೆ ಅನಿಸುತ್ತದೆ. ಇದಕ್ಕೋಸ್ಕರ ಪ್ರತಿ ಕಾಂಗ್ರೆಸ್ ಅಧಿವೇಶನಕ್ಕೂ ಪ್ರತಿ ಪರಿಷತ್ತಿಗೂ ಉದ್ದಾಮ ಸಂಗೀತಜ್ಞರನ್ನು ಬರಮಾಡಿಕೊಂಡು ಸಂಗೀತವನ್ನು ಕಲಿಸುವಂತೆ ಮಾಡಬೇಕೆನ್ನುವೆ' ಎಲ್ಲ ನೈಜ ಸಂಗೀತ ಪ್ರೇಮಿಗಳಂತೆ ಗಾಂಧಿಜಿಗೆ ಹಾರ್ಮೋನಿಯಮನ್ನು ಕಂಡರಾಗುವುದಿಲ್ಲ.

ಕಲೆಯನ್ನು ಕುರಿತು ಗಾಂಧೀಜಿ ಒಮ್ಮೆ ಶಾಂತಿನಿಕೇತನದ ಕಲಾವಿದ್ಯಾರ್ಥಿಗೆ ಕೊಟ್ಟ ಸಂವಾದವೊಂದು ಒಳ್ಳೆ ಅರ್ಥಗರ್ಭಿತವಾಗಿದೆ. "ಆತ್ಮಸಾಕ್ಷಾತ್ಕಾರಕ್ಕೆ ಬಾಹ್ಯ ಸ್ವರೂಪಗಳ ಸಹಾಯ ಅವಶ್ಯಕವಲ್ಲೆಂದು ನನ್ನ ಅನುಭವ. ಅದುಕಾರಣ, ನೀವು ಯಾವುದನ್ನೂ ಕಲೆಯೆಂದು ತಿಳಿದುಕೊಂಡಿರುವಿರೋ ಅದು ನನ್ನಲ್ಲಿ ನಿಮಗೆ ಕಾಣಿಸದೆ ಹೋದರೂ ನನ್ನ ಜೀವನದಲ್ಲಿ ನಿಜವಾಗಿ ಸಾಕಷ್ಟು ಕಲೆಯುಂಟೆಂದು

(೯ನೇ ಪುಟಕ್ಕೆ ಮುಂದುವರಿದಿದೆ)

1944
ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣಪದಕ ಪಡೆದ
ಮಂಗಳೂರು ನಾಮಾಂಕಿತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ—ಮಂಗಳೂರು
ನಮ್ಮ ಇತರ ವಿಶೇಷ ತಯಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಪ್ರಚಲಿತ ಸಮಾಚಾರಗಳು

ಅಖಿಲ ಭಾರತ ಹಿಂದೂ ಮಹಾಸಭೆಯ ೨೬ನೇ ವಾರ್ಷಿಕ ಅಧಿವೇಶನವು ತಾ. ೨೪ರಂದು ಮಧ್ಯಪ್ರಾಂತ್ಯದ ಬಿಲಾಸಪುರದಲ್ಲಿ ಜರಗಿತು. ಹಿಂದೂದೇಶದ ವಿವಿಧ ರಾಜಕೀಯ ಪಂಗಡಗಳೊಳಗೆ ಇರುವ ಪರಸ್ಪರ ವೈರತ್ವವು ತ್ಯಜಿಸಲ್ಪಟ್ಟು, ಸ್ವಾತಂತ್ರ್ಯ ಸಾಧನೆಗಾಗಿ ಅವುಗಳೆಲ್ಲಾ ಐಕ್ಯಗೊಳ್ಳಬೇಕು, ಹೀಗೆ ಐಕ್ಯಗೊಂಡರೆನೆ ಬ್ರಿಟನಿನ ಸಾಮ್ರಾಜ್ಯಶಾಹಿ ನೀತಿಗೆ ಬಲವಾದ ವಿರೋಧವನ್ನು ಕೊಡಬಹುದು; ವೈಸ್ರಾಯರು, ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ತಾವು ಮೊನ್ನೆ ಆಡಿದ ಮಾತುಗಳ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಲಿ, ಎಂದೂ ಪ್ರತಿಭಟಿಸಿಯೂ, ಅಮೆರಿಕಾ, ಬ್ರಿಟನ್, ಚೀನಾ, ರಷ್ಯಾ ಈ ನಾಲ್ಕು ಕಡೆಗಳಿಂದ ಈರ್ವರು ನಿಷ್ಪಕ್ಷಪಾತೀ ಯೋಗ್ಯ ಪ್ರತಿನಿಧಿಗಳಿರಡರ ಪ್ರಕಾರ ಇರುವ ಒಂದು ನ್ಯಾಯಮಂಡಳವನ್ನು ಏರ್ಪಡಿಸಿ, ಬ್ರಿಟನನ್ನೂ ಹಿಂದೂದೇಶವನ್ನೂ ವಿಚಾರಿಸಿ, ಹಿಂದೀಯ ಸಾತಂತ್ರ್ಯ ಸಮಸ್ಯೆಯನ್ನು ನೀಗಿಸುವ ವ್ಯವಸ್ಥೆಯಾಗಬೇಕೆಂದೂ ಸೂಚಿಸಿಯೂ ಹಿಂದೂ ಮಹಾಸಭೆಯ ಸದ್ಯದ ಅಧಿಪತಿಗಳಾದ ಶ್ಯಾಮಪ್ರಸಾದ ಮುಖರ್ಜಿಯವರು ಅಧ್ಯಕ್ಷ ಭಾಷಣವನ್ನಿತ್ತರು. ಹಿಂದುಗಳಿಗೆ ಮುಸ್ಲಿಮರು ಅಧಿಕಸಂಖ್ಯಾಕರಾಗಿರುವ ಮುಸ್ಲಿಂಲೀಗ್ ಅಧಿಕಾರದಲ್ಲಿರುವ ಪ್ರಾಂತ್ಯಗಳಲ್ಲಿ ಆಗುತ್ತಿರುವ ಅನ್ಯಾಯಗಳ ಪಟ್ಟಿಯೊಂದು, ಅವರ ಭಾಷಣದಲ್ಲಿ ಕೂಡಿತ್ತು. ಈ ಸಂದಿಗ್ಧದಲ್ಲಿ ಹಿಂದುಗಳೂ ಸಂಘಟಿಸಿದ ವಿನಹ ಅವರಿಗೆ ಉಳಿಗಾಲವಿಲ್ಲವೆಂದೂ, ತನ್ನ ಹಿತವನ್ನು ಕಾಯ್ದುಕೊಳ್ಳಲು ಪ್ರತಿಯೋರ್ವ ಹಿಂದುವು ಕರ್ತವ್ಯಬದ್ಧನಾಗಿ ಮುಂದೆ ಬರಬೇಕಾಗಿಯೂ ಅವರು ಭಿನ್ನವಿಸಿಕೊಂಡಿರುವರು.

ವಿಜಯಲಕ್ಷ್ಮೀ ಪಂಡಿತರು ಅಮೆರಿಕಕ್ಕೆ ತೆರಳಿರುವರು. ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಯ ಕುರಿತು ಅಮೆರಿಕನರಲ್ಲಿ ಆಸಕ್ತಿಯು ಉಂಟಾಗುವಂತೆ, ಪ್ರಚಾರ ಕಾರ್ಯವನ್ನು ಕೈಗೊಂಡಿರುವರು. ಈಗಾಗಲೆ ಹಿಂದೂದೇಶದ ರಾಜಕೀಯ ಸಮಸ್ಯೆಯ ಕುರಿತು ಹಲವಾರು ಕಡೆಗಳಲ್ಲಿ ಭಾಷಣಗಳನ್ನಿತ್ತಿರುವರು. ಇನ್ನೂ ಮಾಡಲಿರುವರು. ಅವರ ಭಾಷಣಗಳನ್ನು ಲಾಲಿಸಲು ಜನಸ್ತೋಮಗಳು ಕಿಕ್ಕಿರಿದು ನೆರೆದು ಬರುತ್ತಿವೆ ಎಂದೂ ವರದಿಗಳು ಬಂದಿವೆ. ಅದಲ್ಲದೆ ಅಮೆರಿಕದ ಮುಖಂಡರನೇಕರು ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದೂ, ಶ್ರೀಮತಿಯವರೊಡನೆ ಹಿಂದೂದೇಶದ ಕುರಿತು ವಿಚಾರ ಮಾತೆತ್ತಿರುವರಂತೆ.

ಹಿಂದೂದೇಶದ ೭,೦೦,೦೦೦ ಹಳ್ಳಿಗಳ ಪುನರುದ್ಧಾರದ ಬಗ್ಗೆ ಹತ್ತು ವರ್ಷದ ಯೋಜನೆಯೊಂದು ಮದ್ರಾಸಿನ ಶ್ರೀ. ಕೆ. ಎಸ್. ವೆಂಕಟ್ರಮಣಿ ಎಂಬವರಿಂದ ಸೂಚಿತವಾಗಿದೆ: ಶ್ರೀ. ವೆಂಕಟ್ರಮಣಿಯವರು ಹಳ್ಳಿ ಸಮಸ್ಯೆಗಳನ್ನು ಅರಿತುಕೊಳ್ಳಲು ಬಹಳ ದೀರ್ಘ ಸಮಯ ದುಡಿದವರು. ಅವರು ಮೊನ್ನೆ ಸೇವಾಗ್ರಾಮಕ್ಕೆ ತೆರಳಿ, ಅಲ್ಲಿ ಹತ್ತು ದಿವಸ ಇದ್ದುಕೊಂಡು ಗ್ರಾಮಾಭ್ಯುದಯದ ಕುರಿತು ಗಾಂಧಿಜಿಯೊಡನೆ ಮಾತುಕತೆ ನಡೆಸಿ, ಹಿಂತೆರಳಿರುವರು. ಹಿಂದೂದೇಶದ ಹಳ್ಳಿಗಳು ಪುನರುದ್ಧಾರವಾಗಿ, ಅವುಗಳು ಹಿಂದೆಯಿದ್ದ ಉತ್ತಮಸ್ಥಿತಿಗೇ ಬರುವಂತೆ ರಚನಾತ್ಮಕ ಕಾರ್ಯಗಳು ನಡೆಯಬೇಕಾಗಿ ಗಾಂಧಿಜಿಯವರ ಉದ್ದೇಶವಿದ್ದು, ಈ ರಚನಾತ್ಮಕ ಕಾರ್ಯಗಳು ಫಲಹೊಂದುವಂತೆ ಅವರು ಹಾತೊರೆಯುತ್ತಿರುವರು. ಈ ಯೋಜನೆಯಿಂದ ಹಿಂದೂದೇಶದ ಅಂತರ್ಯ ಶುದ್ಧವಾಗಿ, ಅದು ಮಹತ್ತಾದ ಬಲವನ್ನು ಪಡೆದು, ಹಿಂದೂದೇಶದ ಕಲ್ಯಾಣವಲ್ಲದೆ, ಜಗತ್ತಿನಲ್ಲೆಲ್ಲಾ ಶಾಂತಿ ತಲೆದೋರುವ ಪರಿಣಾಮಗಳುಂಟಾಗಬಹುದು.

ಈ ಯೋಜನೆಯಲ್ಲಿ ಈ ಕೆಳಗಿನ ವಿಷಯಗಳು ಅಡಕವಾಗಿವೆ:

ಮೊದಲಾಗಿ ೭ ಲಕ್ಷ ಹಳ್ಳಿಗಳನ್ನು ಒಂದು ಲಕ್ಷ ಪಂಗಡಗಳನ್ನಾಗಿ ವ್ಯವಸ್ಥೆಗೊಳಿಸಬೇಕು. ಒಂದೊಂದು ಪಂಗಡದಲ್ಲಿ ಜನಸಂಖ್ಯೆಯು ಅರ್ಧ ಲಕ್ಷಕ್ಕೆ ಮಿಕ್ಕಬಾರದು. ಒಂದೊಂದು ಹಳ್ಳಿಪಂಗಡದಲ್ಲಿ ಈ ಕೆಳಗಿನವುಗಳು ಕೂಡಿರಬೇಕು: ೧) ಮೂಲ ಶಿಕ್ಷಣವನ್ನೀಯುವ ಶಾಲೆಗಳು, (ಇವುಗಳು ನಮ್ಮ ರಾಷ್ಟ್ರೀಯ ಆದರ್ಶಗಳನ್ನು ಮತ್ತು ಭಾವನೆಗಳನ್ನು ಪ್ರತಿಫಲಿಸುವಂತವುಗಳಾಗಬೇಕು. ೨) ಈ ಶಾಲೆಗೆ ಕೂಡಿದ ಒಂದು ಕರ್ಮಶಾಲೆ ವಿಭಾಗವು ಇರಬೇಕು. ಈ ಕರ್ಮಶಾಲೆಯಲ್ಲಿ ಆ ಪಂಗಡದ ಸ್ಥಳೀಕ ಕೈವೃತ್ತಿಗಳಲ್ಲಿ ನುರಿತ ಜನರಿರಬೇಕು. ಆಯಾಯ ಸ್ಥಳಗಳಿಗೆ ಸರಿಯಾದ ಕೈವೃತ್ತಿಗಳುದ್ಧಾರವಾಗುವ ತೆರದಲ್ಲಿ ಅಲ್ಲಿ ಬೋಧನೆಯು ನಡೆಯಬೇಕು. ೩) ಒಂದು ಗೋಶಾಲೆ,-ಇಲ್ಲಿ ಗೋವ್ಯವಸಾಯದಲ್ಲಿ ಆ ಪಂಗಡದ ಜನರೆಲ್ಲಾ ಒಟ್ಟಾಗಿ ದುಡಿಯಬೇಕು. ಹಾಲಿನ ಉತ್ಪಾದನೆ ದೃಷ್ಟಿಯಿಂದಲೂ, ಸಾಗುವಳಿಗಾರರ ಆವಶ್ಯಕತೆಯ ದೃಷ್ಟಿಯಿಂದಲೂ ಈ ಗೋಶಾಲೆಯಲ್ಲಿ ಒಳ್ಳೆ ಆಕಳು ಸಂಸಾರಗಳು ಹುಟ್ಟಿ ಬೆಳೆಯುವಂತಾಗಬೇಕು. ೪) ಸಾಗುವಳಿಯಲ್ಲಿ ಮತ್ತು ತೋಟಗಾರಿಕೆಯಲ್ಲಿ ಆಚರಿಸಲಾಗುವ ಸುಧಾರಣೆಗಳನ್ನು ರೈತರಿಗೆ ತಿಳಿಸುವ ಬಗ್ಗೆ, ಪ್ರದರ್ಶನಾ ಫಾರ್ಮು. ೫) ಒಂದು ಡಿಸ್‌ಪೆನ್ಸರಿ (ಇವುಗಳು ಮುಖ್ಯವಾಗಿ ರೋಗಗಳನ್ನು ಪ್ರತಿಬಂಧಿಸುವ ದೃಷ್ಟಿಯಿಂದ ಕೂಡಿದವಾಗಬೇಕು. ೬) ವಿವಿಧ ಉದ್ದಿಶ್ಯಗಳಿರುವ ಒಂದು ಸಹಕಾರಿ ಸಂಘ (ಹಳ್ಳಿಗಳ ಉತ್ಪತ್ತಿಯನ್ನು ವಿಕ್ರಯಿಸಲು ಹಳ್ಳಿಗರ ಆವಶ್ಯಕತೆಗಳನ್ನು ಒದಗಿಸುವಂತವುಗಳು.) ೭) ಒಂದು ಪಂಚಾಯತು. ಇದು ವೇತನವನ್ನು ಪಡೆದು ದುಡಿಯುವ ಗ್ರಾಮಾಧಿಕಾರಿಯ ಅಧೀನದಲ್ಲಿರತಕ್ಕದ್ದು. ಹಳ್ಳಿಗರ ಬೇಸಾಯದ ಉತ್ಪತ್ತಿಯನ್ನೂ, ಕೈವೃತ್ತಿಗಳಿಂದ ಉತ್ಪತ್ತಿಯನ್ನೂ ಹೆಚ್ಚಿಸುವಂತೆ ಹುರುಪುಗೊಳಿಸುವ ತರದಲ್ಲಿ ಈ ಪಂಚಾಯತು ಕಾರ್ಯ ನಿರ್ವಹಿಸಬೇಕು. ಈ ಏಳು ವಿಧಾನಗಳಿಂದ ಗ್ರಾಮಾಭ್ಯುದಯ ಸಾಧಿಸಬೇಕು. ಜನರು ಸರಳಜೀವನ ಮತ್ತು ಶ್ರೇಷ್ಠಭಾವವನ್ನು ತಳೆದು, ಸಂತುಷ್ಟರಾಗಿ ಬಾಳುವಂತಾಗಬೇಕು.

ಹಿಂದೂದೇಶದ ವಿವಿಧ ಪ್ರಾಂತ್ಯಗಳಲ್ಲಿ ಸಿವಿಲ್ ಖಾತೆಯಲ್ಲಿ ದುಡಿಯುವ ಬಗ್ಗೆ ಮಿಲಿಟರಿ ಜನರಿಂದ ಕೆಲವರನ್ನು ಆರಿಸುವ ನಿರ್ಣಯವು ಆಗಿದ್ದು, ಆ ಕುರಿತು ಫೆಡರಲ್ ಸರ್ವಿಸ್ ಕಮಿಶನ್ ಡೆರಾಡನಿನಲ್ಲಿ ಸಿಲೆಕ್ಷನ್ ಕೆಲಸದಲ್ಲಿ ತೊಡಗಿರುತ್ತದೆ. ಮಿಲಿಟರೀ ವರ್ಗದಿಂದ ಆರಿಸಿದ ಉದ್ಯೋಗಿಗಳಿಗೆ ಸಿವಿಲ್ ಆಡಳಿತದ ಕುರಿತು ತರಬೇತು ಕೊಡುವ ವ್ಯವಸ್ಥೆ ಮಾಡಲಾಗಿದೆ.

ಇಂಡಿಯಾ ಸರಕಾರದ ಆರ್ಥಿಕ ಸಚಿವರ ಹುದ್ದೆಯು ಸದ್ಯದಲ್ಲೆ ಖಾಲಿಯಾಗಲಿದೆ. ಈ ಹುದ್ದೆಯನ್ನು ಪಾಶ್ಚಾತ್ಯರಿಗೆ ವಹಿಸಿಕೊಡುವುದೆಂದು ಇಂಡಿಯಾ ಸರಕಾರದ ಸಾಂಪ್ರದಾಯವಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ರಾಷ್ಟ್ರೀಕರಣವು ಅತಿ ಅವಶ್ಯವಿರುವುದರಿಂದ, ಈ ಹುದ್ದೆಯನ್ನು ನುರಿತ ಭಾರತೀಯನೊಬ್ಬನಿಗೆ ಯಾಕೆ ಒಪ್ಪಿಸಿ ಬಿಡಬಾರದು? ಹಾಗೆನೇ ಇಂಡಿಯಾ ರಕ್ಷಣಾ ಇತ್ಯಾದಿ ಇನ್ನಿತರ ವಿಭಾಗಗಳಲ್ಲಿ ಯಾಕೆ ಭಾರತೀಯ ಸಚಿವರ ನೇಮಕವಾಗಬಾರದು ಎಂದು ಮೊದಲಾಗಿ ಅಪೇಕ್ಷಿಸಿ ಮುಂಬ್ಯಾಯ ವಾಣಿಜ್ಯಸಂಘವು ಒಂದು ಠರಾವನ್ನು ಮಾಡಿ ಅದನ್ನು ನವದೆಲ್ಲಿಗೆ ಕಳುಹಿಸಿ ಕೊಟ್ಟಿರುವುದು.

ಈಗಿನ ಈ ಮಹಾ ಹೋರಾಟವು ನಡೆಯುತ್ತಿರುವುದು, ರಷ್ಯವನ್ನು ಬೇರ್ಪಡಿಸಿ, ಆಂಗ್ಲೇಯ ಅಮೆರಿಕನ್ ಅಧಿನಾಯಕತ್ವದ ಸ್ಥಾಪನೆಗಾಗಿ ಎಂದು ಪಾಶ್ಚಾತ್ಯರ ಕೈಗಳಲ್ಲಿ ನ್ಯಾಯ ದೊರಕದ ಮಿಲಿಯಾದಿ ಪೌರಾತ್ಯರ ನಂಬುಗೆಯಾಗಿತ್ತು. ಅವರ ಈ ನಂಬುಗೆಗೆ ಆಧಾರವೆಂಬಂತೆ ಇನ್ನೊಂದು ಮಹತ್ವದ ಘಟನೆಯು ನಡೆದುಬಿಟ್ಟಿದೆ.

೧೯೪೧ರ ಅಗೋಸ್ತು ತಿಂಗಳಲ್ಲಿ, ಅತ್ಲಾಂತಿಕ್ ಸಾಗರದಲ್ಲಿ ಒಂದು ಕ್ರೂಯಿಸರಿನ ಮೇಲೆ, ಚರ್ಚಿಲ್-ರೂಸ್‌ವೆಲ್ಟರ ಬೇಟಿಯಾಗಿ, ಮಿತ್ರರ ಯುದ್ಧನೀತಿಯ ಕುರಿತು ಅತ್ಲಾಂತಿಕ್ ಚಾರ್ಟರ್ (ಅಜ್ಞಾಪತ್ರ) ಎಂಬದೊಂದು ಹೊರಡಿರುವುದೆಂದೂ, ಇದರಲ್ಲಿ ಮಿತ್ರರು ಪ್ರಜಾಪ್ರಭುತ್ವ ನೀತಿ ಎತ್ತಿ ಹಿಡಿದು, 'ಆಯಾಯ ಪ್ರದೇಶಗಳ ಜನರು ತಮಗೆ ಬೇಕಾದ ಸರಕಾರವನ್ನು ಚುನಾಯಿಸುವ ಹಕ್ಕನ್ನು ಮಿತ್ರರು ಮನ್ನಿಸುವರೆಂದೂ' ಸಾರಲಾಗಿತ್ತು. ಅದೇ ವರ್ಷ ಲಂಡನಿನಲ್ಲಿ ಮಿತ್ರರಾಷ್ಟ್ರಗಳ ಪ್ರತಿನಿಧಿಗಳ ಸಭೆಯೊಂದು ಜರಗಿ ಅತ್ಲಾಂತಿಕ ಚಾರ್ಟರು ಅನುಮೋದಿಸಲ್ಪಟ್ಟಿತ್ತು. (ಸೋವಿಯಟ್ ಪ್ರತಿನಿಧಿಗಳು ಮಿತ್ರರ ಮುತ್ಸದ್ಧಿಗಳ ಎದುರು ಕುಳಿತದ್ದು ಇದೇ ಪ್ರಥಮ ಬಾರಿ.) ಎಲ್ಲಾ ಜನರಿಗೆ ಸ್ವಂನಿರ್ಣಯದ ಹಕ್ಕು ಕೊಡುವ ಈ ಚಾರ್ಟರೂ, ಹಿಂದೂದೇಶಕ್ಕೆ ಅನ್ವಯಿಸಲ್ಪಡುವುದಿಲ್ಲವೆಂದೂ ಚರ್ಚಿಲ್ಲರು ಅಂದು ಸಾರಿದ್ದರು. ಇವೆಲ್ಲಾ ನೀವು ಕೂಡ ಕೇಳಿದ ವಾರ್ತೆಗಳಷ್ಟೆ.

ಈಗ ಅತ್ಲಾಂತಿಕ್ ಚಾರ್ಟರ್ ಎಂಬದೊಂದು ಘಟನೆಯು ನಡೆದುದೇ ಇಲ್ಲವೆಂದೂ ರೂಸ್‌ವೆಲ್ಟರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಕಳೆದ ವಾರ ನುಡಿದುಬಿಟ್ಟಿರುವರು. ಈ ಘಟನೆಯಿಂದ ಮಿತ್ರರ ಕುರಿತು ಮಿತ್ರ ರಾಷ್ಟ್ರಗಳಲ್ಲಿಯೂ ಮಿತ್ರರ ಅಧೀನ ರಾಷ್ಟ್ರಗಳಲ್ಲಿನ ಜನರಲ್ಲಿಯೂ ಮೊದಲೇ ಇದ್ದ ಅಪನಂಬಿಗೆ ಇನ್ನೂ ಬಲವಂತವಾಗಿದೆ.

'ಪ್ರಜಾಪ್ರಭುತ್ವ ನೀತಿಯ ರಕ್ಷಣೆ' ಎಂಬ ಘೋಷವೊಂದು ಮಿತ್ರರಾಷ್ಟ್ರದ ಅಧಿನಾಯಕರಿಂದ ಹೊರಡಿತ್ತು ನಿಜ.

(ಆನೇ ಪುಟಕ್ಕೆ ಮುಂದುವರಿದಿದೆ)

ದೊರೆ ದುರೀಣರು



ಅರಸ ಆರನೇ ಜಾರ್ಜರೂ ಅವರ ಮಂತ್ರಿಮಂಡಲವು. ಎಡದಿಂದ ಬಲಕ್ಕೆ: ಹರ್ಬರ್ಟ್ ಮೊರಿಸನ್, ಲಾರ್ಡ್ ವೂಲ್ಟನ್, ಸರ್ ಜಾನ್ ಎಂಡರ್ಸನ್, ಮಿ। ಎಟ್ಲಿ, ಆರನೇ ಜಾರ್ಜ್ ಪ್ರಭುಗಳು, ಮಿ। ಚರ್ಚಿಲ್ಲರು, ಮಿ। ಎಂಟನಿ ಈಡನ್, ಒಲಿವರ್ ಲಿಟ್ಲ್‌ಟನ್ ಮತ್ತು ಮಿ। ಬೆವಿನ್.

ಮಾಯವಾದ ಮುಂದಾಳುಗಳು

ಸರ್ವಾಧಿಕಾರದ ಸುಳಿಗಾಳಿ

ಮಾನ್ಯ ಮುಖಂಡರು ಎಲ್ಲಿ ಹೋದರು?

ಯುರೋಪನ್ನು ಪ್ರಚಂಡ ಜಂಝಾವಾತದಂತೆ ಆವರಿಸಿದ ಹಿಟ್ಲರನ ನಿರಂಕುಶ ಪ್ರಭುತ್ವದ ಧೋರಣೆಯಿಂದಲೊ ಎಂಬಂತೆ ಯುರೋಪಿನಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲಿ ಕೈಬೆರಳಿನಲ್ಲಿ ಎಣಿಕೆ ಮಾಡುವಷ್ಟು ಪ್ರಖ್ಯಾತ ಮುಂದಾಳುಗಳು ಸಿಗುವಂತಿಲ್ಲ. ನಿಜವಾಗಿಯೂ ಇದು ಆ ಪಾಶವೀ ಸರ್ವಾಧಿಕಾರದ ಪ್ರಭಾವವೇ ಇರುತ್ತದೆಂದು ರಾಜಕೀಯ ತಜ್ಞರು ಹೇಳುತ್ತಿರುವರು.

ಇಂದು ನಾವು ಕೇಳುತ್ತಿರುವುದು ಯುರೋಪಿನ ಮಟ್ಟಿಗೆ ಒಬ್ಬ ಹಿಟ್ಲರ್ ಇಲ್ಲವೇ ಹಿಮ್ಲರ್. ರಷ್ಯದಲ್ಲಿ ಒಬ್ಬ ಸ್ಟೇಲಿನ್. ಇಗ್ಲೆಂಡಿನಲ್ಲಿ ಚರ್ಚಿಲ್. ಅಮೇರಿಕದಲ್ಲಿ ರೂಸ್‌ವೆಲ್ಟ್. ಚೀನದಲ್ಲಿ ಚಿಯಾಂಗರೂ, ಜಪಾನಿನಲ್ಲಿ ಟೋಜೊ. ಭಾರತದಲ್ಲಿ ಗಾಂಧಿ-ನೆಹುರು. ಇವರಿಷ್ಟು ಮಂದಿಯನ್ನು ಬಿಟ್ಟರೆ ವೃತ್ತ ಪತ್ರಿಕೆಗಳಲ್ಲಿ ಬೇರೆ ಯಾರ ಹೆಸರುಗಳೂ ಪ್ರಧಾನವಾಗಿ ಕಂಡು ಬರುವುದಿಲ್ಲ. ಯುರೋಪಿನಲ್ಲಿ ಈ ಯುದ್ಧಕ್ಕೆ ಮುಂಚೆ ಅಲ್ಲಿನ ಪ್ರತಿಯೊಂದು ಸಣ್ಣ ದೊಡ್ಡ ದೇಶದಲ್ಲೆಂಬಂತೆ ಎಂಟೆತ್ತು ಪ್ರಭೃತಿಗಳು ನಾಮಾಂಕಿತರಾಗಿ ಮೆರೆಯುತಿದ್ದರು. ಆ ದೇಶಗಳೆಲ್ಲವೂ ಸ್ವತಂತ್ರವಾಗಿದ್ದುವು. ಈಗ ಆ ಪರಿಸ್ಥಿತಿಯು ಸಂಪೂರ್ಣ ಬದಲಿಸಿದೆ. ಆ ದೇಶಗಳಲ್ಲಿನ ಜನಪ್ರಿಯ ಮುಖಂಡರು ಬಂಧನದಲ್ಲೊ, ಸೆರೆಮನೆಯಲ್ಲೊ, ದ್ವೀಪಾಂತರ ವಾಸದಲ್ಲೊ ಕೊಳೆಯುತಿದ್ದಾರೆ. ಅನೇಕರು ಮರಣಪಟ್ಟರು. ಹೊಸ ಮುಖಂಡರು ತಲೆಎತ್ತದಂತಹ ದುಷ್ಕಾಲವು ಅಷ್ಟರಲ್ಲಿ ಆ ದೇಶಗಳಲ್ಲಿ ಆವರಿಸಿತು.

ಇಟೆಲಿಯಲ್ಲಿ

ಒಂದೆರಡೇ ವರ್ಷಗಳ ಹಿಂದೆ ತನ್ನ ಅಗಾಧ ಶಕ್ತಿಯ ಜಂಬವನ್ನು ಕೊಚ್ಚುತ್ತಾ ಗುಡುಗುಡಿಸುತಿದ್ದ ಇಟೆಲಿಯ ಸರ್ವಾಧಿಕಾರಿ ಮುಸೋಲಿನಿಯ ಪಾಡಾದರೂ ಏನಾಗಿದೆ? ಅವನೀಗ ಹಿಟ್ಲರನ ಪುಟ್ಟ ಕೈಗೊಂಬೆಯಾಗಿ ವಿಶ್ವವಾರ್ತಾರಂಗದಿಂದ ಕಾಣೆಯಾಗಿರುವನು. ಅವನ ಸೇನಾಪತಿಯಾಗಿದ್ದ ಸಿನೋರ್ ಗ್ರೆಂಡಿಯು ಎಲ್ಲೊ ತಲೆ ತಪ್ಪಿಸಿಕೊಂಡಿದ್ದಾನೆ. ಇಟೆಲಿಯ ಅರಸ ಇಮಾನ್ಯುವೇಲರ ಸುದ್ದಿಯೇ ಇಲ್ಲ. ಇಟೇಲಿಯನ್ನು ಮಿತ್ರರು ಹಿಡಿದಾಗ ಕೆಲವು ಸಮಯ ಬೊಡೊಗ್ಲಿಯೋನ ವಿಚಾರ ಕೇಳಿ ಬರುತಿತ್ತು. ಅದೀಗ ನಿಶಬ್ದವಾಗಿದೆ.

ಬ್ರಿಟನಿನಲ್ಲಿ

ಇಂಗ್ಲೆಂಡಿನಲ್ಲೂ ಅದೇ ಪರಿಸ್ಥಿತಿ. ದೊಡ್ಡ ರಾಜಕಾರಣಿಯಾಗಿ ಮೆರೆದ ಬಾಲ್ಡವಿನ್ನರು ಎಲ್ಲೊ ವಾನಪ್ರಸ್ತದಲ್ಲಿದ್ದಾರೆ. ಚೆಂಬರ್ಲೀನರು ಬಹಳ ಬಳಲಿದವರಾಗಿ ಈಹಲೋಕವನ್ನೇ ತ್ಯಜಿಸಿದರು. ಪ್ರಖ್ಯಾತ ಫೆಸಿಸ್ಟ್ ಪಂಗಡದವನೆನಿಸಿದ ಒಸ್ವಾಲ್ಡ್ ಮೊಸ್ಲೆಯು ಜೈಲುವಾಸದ ಪರಿಣಾಮದಿಂದಲೊ ಏನೊ ಸಾರ್ವಜನಿಕದಿಂದ ಮಾಯವಾಗಿದ್ದಾನೆ. ಈಗ ಅಲ್ಲಿ ಕೇಳಿಸುತ್ತಿರುವುದು ಒಂದು ಪ್ರಧಾನ ಚರ್ಚಿಲ್ಲರ ಹೆಸರು. ಇವರೂ ಒಂದು ಕಾಲದಲ್ಲಿ ಹಿನ್ನೆಲೆಗೆ ಹೋಗಿದ್ದರು. ಹಿಟ್ಲರನ ಬದ್ಧ ವೈರಿಗಳಾಗಿ ಅವನ ವಿನಾಶಕ್ಕೆ ಕಂಕಣತೊಟ್ಟವರಿದ್ದರಿಂದ ಇಂದು ಅವರ ಪ್ರಖ್ಯಾತಿಗೆ ಕಾರಣವಾಗಿದೆ.

ಐಯರ್ಲೆಂಡಿನಲ್ಲಿ ಡಿವೆಲೆರಾ ಅವರು ಆಗಿಂದಾಗ್ಗೆ ಜಗತ್ತಿನ ಪತ್ರಿಕೆಗಳಲ್ಲಿ ಚರ್ಚಿಸಲ್ಪಡುತಿದ್ದವರು, ಆ ದೇಶವು ವಿಚಿತ್ರ ತಾಟಸ್ಥ್ಯವನ್ನು ಧರಿಸಿದ ಮೇಲೆ ಅವರೂ ಮೌನದಿಂದೆಂಬಂತೆ ಇದ್ದಾರೆ.

ಜರ್ಮನಿಯಲ್ಲಿ

ಈ ನಾಜೀ ದೇಶದಲ್ಲೂ ಅನೇಕ ನಾಜೀ ಮುಖಂಡರ ಹೆಸರುಗಳೇ ಅಚ್ಚಾಗುತಿಲ್ಲ. ಜರ್ಮನ್ ರಾಜತಂತ್ರ ಪವೀಣರೆನಿಸಿದ ವಾನ್ ನ್ಯೂರೇತ್, ವಾನ್ ಪೇಪನ್, ಹೆಡ್ರೀಚ್ ಇವರೆಲ್ಲರೂ ಒಂದೊಂದು ಹಿಡಿದ ಪ್ರಾಂತ್ಯದ ಗವರ್ನರರಾಗಿ ಹಿಟ್ಲರನ ಕೈಕೊಂಬೆಗಳಂತಿರುವುದರಿಂದ ಇವರ ಪ್ರಾಧಾನ್ಯವು ಅಣಗಿದೆ.

ಜರ್ಮನಿಯಲ್ಲಿ ಹಿಟ್ಲರನಸ್ಥಾನದಲ್ಲಿದ್ದ ವೊನ್ ಬ್ರೂನಿಂಗ್ ಎಂಬವನು ಈಗ ಅಮೇರಿಕದಲ್ಲಿ ಓರ್ವ ಪ್ರೊಫೆಸರನಾಗಿ ಕಾಲ ಕಳೆಯುತಿದ್ದಾನೆ. ಹಿಟ್ಲರನ ಎಡಗೈಯಂತಿದ್ದ ಹರ್ ಹೆಸ್ಸನು ಇಂಗ್ಲೆಂಡಿನಲ್ಲಿ ಕೈದಿಯಾಗಿದ್ದಾನೆ. ವಿಮಾನ ದಳಪತಿಯಾಗಿದ್ದ ಜನರಲ್ ಗೋರಿಂಗನು ಹಿಟ್ಲರನ ಅಸಂತೋಷಕ್ಕೆ ಬಿಲಿಬಿದ್ದು ತೆಪ್ಪಗಿರಿಸಲ್ಪಟ್ಟಿದ್ದಾನೆ. ಫ್ರಿನ್ಸ್ ಬಿಸ್ಮಾರ್ಕ್, ಶ್ಯೂಲೆನ್ ಬರ್ಗ್, ಡಾ। ಶೆಷ್ಟ್, ಇವರೆಲ್ಲರೂ ಒಂದು ಕಾಲದಲ್ಲಿ ಹಿಟ್ಲರನ ಗ್ರಹಮಂಡಲದ ತಾರಾಂಗಣದಲ್ಲಿ ಮೆರೆಯುತಿದ್ದವರು. ಈಗಿವರ ಪತ್ತೆ ಇಲ್ಲದಾಗಿದೆ.

ಆಸ್ಟ್ರಿಯದಲ್ಲಿ

ಇಲ್ಲಿ ಅದ್ವಿತಿಯತೆ ಜನಪ್ರಿಯ ಹೊಂದಿದ ಡಾ। ಡೊಲ್ಫಸ್‌ನೆಂಬ ನಾಲ್ಕುವರೆ ಅಡಿ ಎತ್ತರದ ಸರ್ವಾಧಿಕಾರಿ ಇದ್ದನು. ಇವನು ಹಿಟ್ಲರನ ವಿರೋಧಿಯಾಗಿದ್ದುದರಿಂದ ಆ ನಾಜೀ ಸರ್ವಾಧಿಕಾರಿಯ ಗುಪ್ತಕೂಟದವರು ಅವನನ್ನು ಕೊಂದರು. ಅವನ ನಂತರ ಬಂದ ಶೂಷ್‌ನಿಗ್‌ನು ಆಸ್ಟ್ರಿಯಾ ವಶಪಡಿಸಿಕೊಂಡಾಗಿನಿಂದ ಸೆರೆಮನೆಯಲ್ಲಿದ್ದಾನೆ.

ಫ್ರಾನ್ಸಿನಲ್ಲಿ

ಜರ್ಮನರು ಫ್ರಾನ್ಸನ್ನು ಹಿಡಿದಾಗ ಅಲ್ಲಿನ ಅಧ್ಯಕ್ಷನಾಗಿದ್ದ ಲೆಬ್ರನರು, ಈಗ ಅದು ಪುನಃ ವಶಪಡಿಸಿಕೊಂಡ ಮೇಲೂ ಮುಂದಕ್ಕೆ ಬಾರದವರಾಗಿದ್ದಾರೆ. ಹಾಗೇ ಅಲ್ಲಿ ಪ್ರಧಾನನಾಗಿದ್ದ ಲಿಯೊನ್ ಬ್ಲಮ್, ಡೆಲೆಡಿಯರ್, ಚೊಟೆಂಪ್ಸ್ ಇವರೂ ಕೂಡಾ ರಹಸ್ಯವಾದ ಸ್ಥಳಗಳಲ್ಲಿ ಕಾರಾಗೃಹವನ್ನೊ, ಗುಪ್ತ ಜೀವನವನ್ನೊ ನಡೆಸುತಿದ್ದಾರೆ.

ಇತರ ಕಡೆಗಳಲ್ಲಿ

ಬೆಲ್ಜಿಯಮ್‌ನ ಗೊಂದಲಮಯ ರಾಜಕಾರಣವನ್ನು ಯಶಸ್ವಿಯಾಗಿ ಸುಧಾರಿಸಿದ ಫ್ರಿಟೊ ಎಂಬವನು ಮೆಕ್ಸಿಕೊದಲ್ಲೊ, ಡೆಲ್ ವೊಯೆನ್‌ನು ನ್ಯೂಯೋರ್ಕಿನಲ್ಲೂ ವಾಸಿಸಿ ಕೊಂಡಿದ್ದಾರೆ. ಇನೂ ಹೆಚ್ಚಿನ ಖ್ಯಾತಿಯ ಬೆಲ್ಜಿಯಮ್ಮಿನ ವೊನ್ ಜೀಲೆಂಡನು ದೇಶದಿಂದ ದೇಶಕ್ಕೆ ಅಲೆಯುತಿದ್ದಾನೆ.

ಪೋಲೆಂಡಿನ ಸ್ಮಿಗ್ಲಿರಿಡ್ಜ್, ಸ್ಟೊಯೋಡಿನೆವಿಚ್ ಮೊದಲಾದವರು ವಾರ್ತಾದಿಗಂತದಿಂದ ಮುಳುಗಿದಂತಾಗಿದ್ದಾರೆ.

ರಷ್ಯದಲ್ಲೂ ಅನೇಕರು ಗಡಿಪಾರು ಮಾಡಲ್ಪಟ್ಟರು, ಕೆಲವರು ಕೊಲ್ಲಲ್ಪಟ್ಟರು, ಇನ್ನೂ ಕೆಲವರು ಕಾರಾಗೃಹದಲ್ಲಿರುವರು. ಲಿಟ್ವಿನೊಫ್, ಮೊಲೊಟೊವ್ ಇವರ ಸುದ್ದಿಯೇ ಮುಳುಗಿಹೋಗಿದೆ.

ಭಾರತದಲ್ಲಿ

ಇಲ್ಲಿದ್ದಾಗ ಅಂತೂ ಸುಭಾಸ್‌ಭೋಸರು ಒಂದಲ್ಲ ಒಂದು ರೀತಿಯಲ್ಲಿ ಸಾರ್ವಜನಿಕ ಗಮನಕ್ಕೆ ಬೀಳುತಿದ್ದರು. ಜಪಾನಿಗೆ ತಪ್ಪಿಸಿ ಕೊಂಡುಹೋದ ಮೇಲೆ ಕೆಲವು ಕಾಲ ಬಹಳವಾಗಿ ಅವರ ವಿಷಯ ವರದಿ ಬರಲಾರಂಭಿಸಿತು. ನಂತರ ಜಪಾನರಿಗೆ ಸ್ವಲ್ಪ ಸೋಲು ಬಂದದರಿಂದ ಈಗ ಪುನಃ ಅವರ ವಿಷಯ ರಹಸ್ಯ ಮುಸುಕಿದೆ.

ಎಂ. ಎನ್ ರಾಯರು ಒಂದು ಕಾಲದಲ್ಲಿ ಪ್ರಖ್ಯಾತಿಗೆ ಬಂದಿದ್ದರು. ಈಗ ಕತ್ತಲಲ್ಲಿದ್ದಂತಿದ್ದಾರೆ.

ಅನೇಕಾನೇಕ ಕಾಂಗ್ರೆಸ್ ಮುಖಂಡರು ಕೂಡಾ ಯಾವುದೊಂದು ಚಟುವಟಿಕೆ ತೋರಿಸದೆ ಸಾರ್ವಜನಿಕ ಗಣನೆಯಿಂದ ಹೊರಗಾಗಿರುವರು.

ಇಷ್ಟಾದರೂ ಮಹಾತ್ಮಾ ಗಾಂಧಿ ನೆಹುರು, ಮುಂತಾದ ಕೆಲವರು ಮಾತ್ರ ಜೈಲಿನೊಳಗಿದ್ದರೂ, ಹೊರಗಿದ್ದರೂ ಏಕಪ್ರಕಾರವಾಗಿ ಹೆಚ್ಚೆಚ್ಚು ಕೀರ್ತಿವಂತರಾಗಿ ಮೆರೆಯುವುದು ಈ ವಿಚಿತ್ರ ಪರಿಸ್ಥಿತಿಯಲ್ಲಿ ಒಂದು ಕೌತುಕದ ವಿಷಯ. ಅದಕ್ಕೆ ಅವರ ಉನ್ನತ ಧ್ಯೇಯಗಳೂ, ನಿಸ್ವಾರ್ಥ ಸೇವಾದರ್ಶಗಳೂ ಕಾರಣವಾಗಿರುತ್ತವೆ.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ಸ್ವದೇಶಾಭಿಮಾನಿ

ತಾರೀಕು 29—12—1944

ನಾವು ಮಲಬಾರಿಗಳೇ?

ನಮಗೆ ಗೊತ್ತಿಲ್ಲದಿದ್ದರೂ ಕೇರಳದ ಶ್ರೀ. ಎಂ. ಸಿ. ಕೃಷ್ಣನಾಯರ್ ಎಂಬ ವಕೀಲರು ತಮ್ಮೊಂದು ಗ್ರಂಥದಲ್ಲಿ ನಾವು ಕೇರಳವವರೆಂದೇ ಪ್ರತಿಪಾದಿಸಿರುವರು. ದಕ್ಷಿಣ ಕನ್ನಡಿಗರು ಮಾತ್ರವಲ್ಲ ಕೊಡಗರೂ, ನೀಲಗಿರಿ ಪ್ರಾಂತ್ಯದವರೂ ಇನ್ನು ಮುಂದೆ ಮಲಬಾರಿಗಳೆಂದು ಕರೆದುಕೊಳ್ಳಬೇಕೆಂದು ಶ್ರೀ. ನಾಯರರ ತರ್ಕ. ದಕ್ಷಿಣ ಕನ್ನಡದ ಪ್ರದೇಶವು ಇದು ಪರಶುರಾಮ ಸೃಷ್ಟಿಗೆ ಸೇರಿದ್ದಾದರೂ ಆ ಅವತಾರ ಪುರುಷನ ಸಂಸ್ಕೃತಿ ಕೊಡಲಿಯ ಪ್ರಭಾವ ಶ್ರೀ. ನಾಯರರು ತಿಳಕೊಂಡಷ್ಟರ ತಿಲಾಂಶವಾದರೂ ಈ ಕಡೆಗೆ ಬೀರಿಲ್ಲ.

ದ. ಕನ್ನಡವು ತೌಳವ ನಾಡು. ತೌಳವರು ಕನ್ನಡವನ್ನು ಮಲತಾಯಿ ನುಡಿಯಾಗಿ ಅಪ್ಪಿಕೊಂಡಿದ್ದು ಅದರ ಸಾಹಿತ್ಯ ದೇವಿಗೆ ಅಪಾರ ಸೇವೆ ಸಲ್ಲಿಸಿ ಕೀರ್ತಿ ತಂದಿದ್ದಾರೆ. ಇಲ್ಲಿ ನೆಲೆಸಿದ್ದ ಸಾರಸ್ವತ ಕೊಂಕಣಿಗರೂ ಕನ್ನಡಿಗರಾಗಿರಲು ಹೆಮ್ಮೆ ಪಡುತ್ತಾರೆ. ಕಾರಣ ಅವರು ಕನ್ನಡ ನಾಡಿನ ಉಪ್ಪು ತಿಂದು ಕನ್ನಡ ನುಡಿಯ ಪೋಷಣೆಯಲ್ಲಿ ಬೆಳೆದವರು. ಕನ್ನಡ ಸಾಹಿತ್ಯಕ್ಕೆ ಅವರೂ ಅಪಾರ ಸೇವೆ ಸಲ್ಲಿಸಿದ್ದಾರೆ.

ಧಾರವಾಡದಲ್ಲಿ ತಾ. ೨೬ರಂದು ಜರುಗಿದ ಏಕೀಕರಣ ಪರಿಷತ್ತಿಗೆ ಅಧ್ಯಕ್ಷರಾದ ತೌಳವ ನಾಡಿನ ಕನ್ನಡಿಗರಾದ ಶ್ರೀ. ಜಿನರಾಜಹೆಗ್ಗಡೆ ಎಂ.ಎಲ್.ಎ.(ಕೇಂದ್ರ) ಅವರು ಶ್ರೀ. ನಾಯರರ ವಾದಕ್ಕೆ ತಕ್ಕ ಉತ್ತರವನ್ನು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕೊಟ್ಟಿರುವರು. 'ದ. ಕನ್ನಡ, ಕೊಡಗು, ನೀಲಗಿರಿಗಳಿಗೂ ಮಲಬಾರಿಗೂ ಜನಾಂಗಿಕ, ಭೌತಿಕ, ಆರ್ಥಿಕ ಮತ್ತು ಚಾರಿತ್ರಿಕ ಸಂಬಂಧ ಉಂಟೆಂಬ ತಿರುಳಿಲ್ಲದ ಭಾಂದವ್ಯವನ್ನು ಶ್ರೀ. ನಾಯರರು ತರುವುದಕ್ಕಿಂತ ಶ್ರೀ. ನಾಯರರು ನಮಗೆ ಇರಲಿಕ್ಕೆ ಎಡೆಯಿಲ್ಲ, ಆದುದರಿಂದ ಈ ದೇಶಗಳಲ್ಲಿ ನಮಗೆ ಎಡೆ ಸಿಗಬೇಕೆಂದು ಹೇಳಿದರೆ ಒಳ್ಳೆದಿತ್ತು' ಹೀಗೆಂದು ಶ್ರೀಮಾನ್ ಹೆಗ್ಗಡೆಯವರು ಅಂದುದಕ್ಕೆ ದ. ಕನ್ನಡಿಗರೆಲ್ಲರ ಬೆಂಬಲವಿದೆ ಎಂದು ನಾವು ಭರವಸೆ ಕೊಡುತ್ತೇವೆ.

ಚೀನಕ್ಕೂ ಭಾರತಕ್ಕೂ ಚಾರಿತ್ರಿಕ, ಭೌತಿಕ ಮತ್ತು ಆರ್ಥಿಕ ಸಂಬಂಧಗಳಿದ್ದ ಮಾತ್ರಕ್ಕೆ ಒಂದನ್ನೊಂದು ತಮ್ಮದೆಂದು ವಾದಿಸಿದರೆ ಅರ್ಥವಿದೆಯೇ? ಕೇರಳದ ಜನರ ಸರಳಜೀವನ ಕ್ರಮವನ್ನು ಉಡುಪು ತೊಡುಪು ರೀತಿಗಳನ್ನು ನಮ್ಮ ಗಡಿನಾಡಿನ ಜನರು ಅನುಕರಣ ಮಾಡಿರಬಹುದು. ಅದು ಸಾಂಸ್ಕೃತಿಕ ವ್ಯವಹಾರದಅದಲುಬದಲಾವಣೆಗಳಲ್ಲದೇ ಪ್ರದೇಶಗಳನ್ನು ಸೆಳೆದುಕೊಳ್ಳಲಿಕ್ಕೆ ಆಧಾರಭೂತವಾದ ವಿಷಯಗಳಲ್ಲ.

ಅಂತೂ ನಮ್ಮ ಏಕೀಕರಣಕ್ಕೆ ತಮ್ಮ ಹೊಸ ತರ್ಕದಿಂದ ಉತ್ತೇಜನಗೊಂಡ ಶ್ರೀ. ನಾಯರರಿಗೆ ನಾವು ತುಂಬಾ ಕೃತಜ್ಞರಿರಬೇಕು.

ಇನ್ನು ತೌಳವರ ಕುರಿತು ಒಂದೆರಡು ಮಾತು. ದ. ಕನ್ನಡದಲ್ಲಿ ಬಹುಸಂಖ್ಯಾಕರಾಗಿರುವ ಈ ಜನರ ತುಳುಭಾಷೆಯೂ ಕನ್ನಡ ಸಾಮ್ರಾಟರ ಮಾಂಡಲೀಕರಾಗಿ ಆಳಿದ ತೌಳವ ರಾಜರುಗಳ ಕಾಲದಲ್ಲಿ ತುಂಬಾ ಪರಿಷ್ಕಾರಹೊಂದಿತ್ತು. ಅದಕ್ಕೆ ಸ್ವತಂತ್ರವಾದ ಒಂದು ಲಿಪಿ ಇದೆ. ಅದರಲ್ಲಿ ಉಚ್ಚ ಸಾಹಿತ್ಯವೂ ಬೆಳೆದಿತ್ತೆಂದು ಬಲ್ಲವರು ತಿಳಿಸುತ್ತಾರೆ. ಕರ್ನಾಟಕಕ್ಕೆ ಹೃತ್ಪೂರ್ವಕವಾಗಿ ಸೇರಲಿಚ್ಛಿಸುವ ಈ ಜನರ ಭಾಷೆಯನ್ನು ಪುನರುಜ್ಜೀವನಗೊಳಿಸುವುದರಿಂದ ಅವರ ಸಹಜವಾದ ಆಕಾಂಕ್ಷೆಗಳನ್ನು ತೃಪ್ತಿಪಡಿಸಿದಂತಾಗಬಹುದೆಂದು ನಮ್ಮ ಅಭಿಪ್ರಾಯ.

ಸೋವಿಯಟ್ ರಷ್ಯದ ಹಲವಾರು ಭಾಷಾ ಪ್ರಾಂತ್ಯಗಳಲ್ಲಿ ರಷ್ಯನ್ ಭಾಷೆಯು ಕಡ್ಡಾಯವಾಗಿ ಕಲಿಸಲ್ಪಡುತ್ತಾದರೂ ಬಹುಸಂಖ್ಯಾಕರ ಭಾಷೆಗಳಿಗೂ ಅಲ್ಲಿ ಯೋಗ್ಯ ಪ್ರಾಧಾನ್ಯ ಕೊಡಲ್ಪಟ್ಟಿದೆ. ಇಲ್ಲೂ ಸರ್ವ ಸಾಮಾನ್ಯವಾಗಿ ಕನ್ನಡವು ಆಗಲೇ ಬಳಕೆಯಲ್ಲಿರುತ್ತದೆ. ತುಳು ಭಾಷೆ ಲಿಪಿಗಳನ್ನು ಪರಿಶೋಧಿಸಿ ಕಲಿಯಲಿಚ್ಛಿಸುವವರಿಗೆ ಅದರ ಅನುಕೂಲತೆಗಳನ್ನು ಕಲ್ಪಿಸಿ ಕೊಡಲು ಪ್ರಯತ್ನಿಸುವುದೂ ಅವಶ್ಯವಿದೆಯೆಂದು ನಮಗನಿಸುತ್ತದೆ. ಕರ್ನಾಟಕ ಏಕೀಕರಣವನ್ನೂ ದೃಷ್ಟಿಯಲ್ಲಿಟ್ಟು ತೌಳವರೇ ಈ ಉದ್ಯಮದಲ್ಲಿ ಈಗಲೇ ಪರಿಶ್ರಮುಕ್ಕೆ ತೊಡಗಿದರೆ ಮುಂದಿನ ಅವರ ಜನಾಂಗವು ತಮ್ಮ ಸ್ವಂತ ಮಾತೃಭಾಷೆಯಲ್ಲಿ ವಿದ್ಯೆಕಲಿಯುವುದಕ್ಕೆ ಸಾಧ್ಯವಾದರೂ ಆಗಬಹುದು.

ಒಂದು ಕನ್ನಡ ಪ್ರಾಂತ್ಯ

ಈಗ ಕರ್ನಾಟಕವು ಇಪ್ಪತ್ತೊಂದು ಬೇರೆ ಬೇರೆ ಆಡಳಿತಗಳೊಳಗೆ ಹಂಚಲ್ಪಟ್ಟಿದೆ. ಇಂದಿನ ಈ ವಿಭಾಗೀಕರಣಕ್ಕೆ ಐತಿಹಾಸಿಕ ಘಟನೆಗಳೇ ಕಾರಣವಿರುವು. ಉನ್ನತಿಯ ಶಿಖರವನ್ನು ಮುಟ್ಟಿದ ಪ್ರತಿಯೊಂದು ರಾಜ್ಯವೂ ಅವನತಿಗೆ ಇಳಿಯುವುದು ಒಂದು ಸಹಜವಾಗಿ ಪುನರಾವೃತ್ತಿ ಹೊಂದಿಬಂದಿರುವ ಐತಿಹಾಸಿಕ ಲಕ್ಷಣ. ಇತಿಹಾಸದಲ್ಲಿನ ಯಾವ ರಾಷ್ಟ್ರವೂ ಈ ದುರ್ದಶೆಯನ್ನು ತಪ್ಪಿಸಿಕೊಂಡಿಲ್ಲ. ಆದುದರಿಂದ ಹರಿದುಹೋದಂತೆ ಮತ್ತೆ ಪುನಃ ಜೋಡಿಸುವುದೂ ಒಂದು ಜನಾಂಗ ಸ್ವಭಾವದ ವಿಶಿಷ್ಟತೆ.

ಆದುದರಿಂದ ಏಕೀಕರಣವು ಯಾರನ್ನೂ ಕೌತುಕಗೊಳಿಸುವ ವಿಷಯವಲ್ಲ. ಅದು ಅತ್ಯಾವಶ್ಯಕವಾದುದು. ಕಳಚಿಹೋಗಿರುವ ಸಂಸ್ಕೃತಿ ಯಂತ್ರದ ಅಂಗೋಪಾಂಗಗಳನ್ನು ಒಟ್ಟುಗೂಡಿಸಿ ಹಿಂದಿನ ಮಾದರಿಯ ಮೇಲೆ ಆದರೂ ಇಂದಿನ ಹೊಸ ತಿಳಿವಿನ ಬೆಳಕಿನಲ್ಲಿ ಪುನರ್ಜೀತನಗೊಳಿಸುವುದು ಈ ಪ್ರಯತ್ನದ ಉದ್ದೇಶ. ಇಂತಹ ಅನೇಕ ಪ್ರಾಂತ್ಯಗಳು ಒಟ್ಟುಸೇರಿ ಪರಸ್ಪರ ಅಂತರ್ ಸಾಂಸ್ಕೃತಿಕ ವ್ಯವಹಾರವನ್ನು ಕಲ್ಪಿಸಿ ತನ್ಮೂಲಕ ಅನ್ಯೋನ್ಯ ಸಾಮಾನ್ಯ ಐಕ್ಯತೆಗಳಿರುವ ಒಂದು ಅಖಂಡ ಭಾರತವನ್ನೂ ಇಂತಹ ಅಖಂಡ ದೇಶಗಳ ಪರಸ್ಪರ ಸಹಕಾರ ಮಿಲನಗಳಿಂದ ಒಂದು ಉಚ್ಚ ನಾಗರೀಕತೆಯ ವಿಶ್ವವನ್ನೂ ನಿರ್ಮಿಸುವುದು ನಮ್ಮ ಗುರಿ.

ವಿವಿಧ ಯುದ್ಧರಂಗಗಳಿಂದ

ಪಶ್ಚಿಮ ರಂಗದಲ್ಲಿ ಆಶ್ಚರ್ಯಕರ ಘಟನೆಯೊಂದು ನಡೆದುಬಿಟ್ಟಿದೆ. ಜರ್ಮನರು ಮತ್ತೊಮ್ಮೆ ಬೆಲ್ಜಿಯಮ್ಮಿನೊಳಗೆ ನುಗ್ಗಿರುವರು. ಕೆಲಸಮಯ ಮಾಯವಾದ ಜರ್ಮನರ ಲಪ್ತವಾಫೆ ಅಂದರೆ ವಾಯುಬಲವು ಈಗ ಪ್ರತ್ಯಕ್ಷವಾಗಿದೆ. ಜರ್ಮನರ ವಾಯುಬಲವು ಧಾರಾಳ ಪ್ರಮಾಣದಲ್ಲಿ ಬಂದಿದೆ. ಟೈಗರ್ ಟೇಂಕ್‌ಗಳು ಮುಂದೆ ಬಂದಿವೆ. ನೂತನ ತರದ ಕೋವಿಗಳು ಉಪಯೋಗಿಸಲ್ಪಡುತ್ತಿವೆ. ಅಮೆರಿಕನ್ ಸೈನಿಕನ ಪೋಷಾಕಿನಲ್ಲಿ ಜರ್ಮನರ ಕೊಡೆ ವೈಮಾನಿಕರು ಬಹಳ ಸಂಖ್ಯೆಯಲ್ಲಿ ಮಿತ್ರರ ಪಡೆಗಳ ಬೆನ್ನಹಿಂದೆ ಇಳಿದು, ತೊಂದರೆ ಕೊಡುತ್ತಿವೆ. ಮಿತ್ರರು ಕೈಕೊಂಡ ಮಂದಪ್ರಗತಿಯ ಎದುರು, ಬೆಲ್ಜಿಯಮ್ಮಿನಲ್ಲಿ ಜರ್ಮನ್ ಬಲವು ಬಹಳ ಬಿರುಸಾಗಿ ಕಾರ್ಯ ಸಾಗಿಸಿಬಿಟ್ಟಿತು. ಒಂದೆರಡು ದಿನಗಳಲ್ಲಿ ಅದು ಬೆಲ್ಜಿಯಮ್ಮಿನೊಳಗೆ 50 ಯಾ 60 ಮೈಲು ದೂರಕ್ಕೆ ಬಂದು, ಮಿತ್ರರು ಹಿಡಿದಿಳುವ ಪ್ರದೇಶಗಳನೇಕ ಹಿಡಿದುಬಿಟ್ಟಿರುವರು. ಜರ್ಮನರ ಈ ಹೊಡೆತದ ಮುಖ್ಯ ಗುರಿ ಅಮೆರಿಕನ್ ಪ್ರಥಮದಳ. ಈ ಅತಿಕ್ರಮವು ನಡೆದುದಾದರೂ ಹಿಟ್ಲರನ ಖುದ್ದು ನಾಯಕತ್ವದಲ್ಲಿ. ಇದಲ್ಲದೆ ಈ ಅತಿಕ್ರಮವನ್ನು ನಡೆಯಿಸುವ ನಾಯಕ ರಂಡ್‌ಸ್ಟೆಡ್‌ರು ಅಪ್ರತಿಮ ಸಾಹಸಿ ವೀರರಂತೆ.

ಆದರೆ ಅಮೆರಿಕನ್ ಸೇನಾನಾಯಕ ಐಸನ್ ಹೋವರರು ಜರ್ಮನರನ್ನು ತಡೆದು ಹಿಡಿಯಲು ಮಹಾಯತ್ನಗಳನ್ನು ಮಾಡಿಬಿಟ್ಟಿರುವರು. ಪ್ರಥಮ ಅಮೆರಿಕನ್ ದಳದ ಕೆಲವು ವಿಭಾಗಗಳು ಜರ್ಮನರಿಗೆ ಸೆರೆಯಾಗಬೇಕಾದ ಪ್ರಸಂಗಗಳು ಉಂಟಾಗಿದ್ದರೂ, ಈಗ ಜರ್ಮನರು ಬಲವಾಗಿ ತಡೆಯಲ್ಪಟ್ಟಿರುವರೆಂದು ವಾರ್ತೆಬಂದಿದೆ.

ಜರ್ಮನರ ಹೋರಾಟದ ಹುರುಪು ಇನ್ನೂ ಕುಂದಿಲ್ಲವೆಂದು ಇದೊಂದು ದೃಷ್ಟಾಂತ. ಇದಲ್ಲದೆ, ಪಶ್ಚಿಮ ರಂಗಕ್ಕೆ ತೆರಳಿದ ಪ್ರಸಿದ್ಧ ಆಂಗ್ಲ ಪತ್ರಿಕಾ ವರದಿಗಾರರಾದ ದಗ್ಲಾಸ್ ರೀಡರು ಹೇಳಿದಂತೆ, ಜರ್ಮನರು ಈ ಭಾರಿಯೂ ಸೋಲಿಸಲ್ಪಟ್ಟರೂ ಅದರಿಂದ ಮುಂದೆ ಯುದ್ಧಗಳೇ ತಡೆದಂತಾಗದು. ಸೆರೆಹಿಡಿಯಲ್ಪಟ್ಟ ಜರ್ಮನ ಸೈನಿಕರೊಡನೆ ಮಾತುಕತೆ ನಡೆಯಿಸಿದಾಗ, ಪ್ರಕೃತ ಒದಗಿದ ಸೋಲು ವಿಧಿವಿಲಾಸದಿಂದಲ್ಲದೆ ತಮ್ಮದೌರ್ಬಲ್ಯದಿಂದಲ್ಲ, ಎಂಬ ಮನೋಭಾವ ಅವರಲ್ಲಿ ಕಾಣಬಂತಂತೆ. ಜರ್ಮನರು ಈ ಯುದ್ಧದ ದೆಸೆಯಿಂದ, ಮಹಾ ಕಷ್ಟನಷ್ಟ, ತೊಂದರೆ ಇತ್ಯಾದಿ ಅನುಭವಿಸಿದುದು ನಿಜ. ಅದರಿಂದ ಅವರ ಪರಿವರ್ತನೆಯು ಆಗಲಿಲ್ಲ! ಕಲಹಪಿಯತೆಯೂ, ಹೋರಾಟಕ್ಕಾಗಿ ಎಡೆಗಾರಿಗೆಯೂ ಅವರ ಸ್ವಭಾವವಾಗಿಬಿಟ್ಟದೆ!

ಜರ್ಮನರು ಹೀಗೆ ಒಂದೇಸವನೆ ಚೇತನಗೊಂಡು ಮೇಲ್ವಾಯ್ದು ಬರಲು ಅನೇಕ ಕಾರಣಗಳಿವೆ. ಮಿತ್ರರು ಜರ್ಮನಿಯ ಹೆಬ್ಬಾಗಿಲುವರೆಗೆ ಸರಿದು ಬಂದು, ಅವುಗಳನ್ನು ದಾಟಿಬರುವ ಹವಣಿಕೆಯಲ್ಲಿದ್ದರು. ಹಿಟ್ಲರನ ಈ ನೂತನ ಎದುರುಪೆಟ್ಟು ಅಲ್ಲದಿರುತಿದ್ದರೆ, ಆ ಹೆಬ್ಬಾಗಿಲುಗಳಲ್ಲಿರುವ ಜರ್ಮನರ ಬಲವಾದ ತಡೆಗಳನ್ನು ಮಿತ್ರರು ಖಂಡಿತ ಮುರಿಯುತ್ತಿದ್ದರು. ಹಾಗೆ ಮುಂದರಿವ ಮಿತ್ರಸೇನೆಗಳು ಪ್ರವೇಶಿಸುವುದಾದರೂ ಜರ್ಮನಿಯ ಅಡಿಗಟ್ಟಾದ ಕೈಗಾರ ಪ್ರದೇಶಗಳನ್ನು. ಉತ್ತರದಲ್ಲಿ ಮಿತ್ರರು ರೋರ್‌ನದಿಯ ತನಕ ಮುನ್ನಡೆದಿದ್ದರು. ಈ ನದಿಯನ್ನು ದಾಟಿದರೆ, ಮಿತ್ರರ ಪ್ರವೇಶವು ಜರ್ಮನಿಯ ಕೊಲೊನ್ ಪ್ರಾಂತ್ಯದೊಳಗಾಗುತಿತ್ತು. ಈ ಪ್ರಾಂತ್ಯದಲ್ಲಿ ತುಂಬಾ ಕಾರ್ಖಾನೆಗಳಿವೆ. ಹಾಗೆನೆ ದಕ್ಷಿಣದಲ್ಲಿ ಮಿತ್ರರು ಸಾರ್ ಪ್ರದೇಶದಲ್ಲಿ ಮೆಲ್ಲಮೆಲ್ಲನೆ ಮುನ್ನಡೆಯುತ್ತಿದ್ದರು. ಈಗ ರಂಡ್‌ಸ್ಟೆಡನು ಬಿರುಸಾಗಿ ಒಳಬಂದದ್ದು, ಈ ಎರಡು ಪ್ರದೇಶಗಳ ನಡುವೆ. ಯುದ್ಧಯತ್ನಗಳಿಗೆ ಅಡಿಗಟ್ಟಾಗಿರುವ ಕೈಗಾರಿಕಾ ಪ್ರದೇಶವನ್ನು ರಕ್ಷಿಸಿಕೊಳ್ಳಲು ಹಿಟ್ಲರನು ಈ ಮಹಾ ಸಾಹಸವನ್ನು ನಡೆಯಿಸಿಬಿಟ್ಟಿರುವನು. ರಂಡ್‌ಸ್ಟೆಡ್‌ನ ಈ ಬಿರುಕು ಬೆಳೆಯುತ್ತಾ ಹೋದರೆ. ಆಗ ಮಿತ್ರರ ಸೇನೆಗಳಿಗೆ ಪರಸ್ಪರ ಸ್ಪರ್ಶದ ದಾರಿಗಳು ಕಳಚಿಹೋಗಿ, ಮಿತ್ರರ ಮುನ್ನಡೆಯನ್ನು ಕೆಲಕಾಲಕ್ಕೆ ತಡೆಯುದಂತಾಗುವುದು. ಅಷ್ಟೇ ಅಲ್ಲ. ಮಿತ್ರರನ್ನು ಸಮುದ್ರ ಕರಾವಳಿಗೆ ಅಟ್ಟಿಬಿಟ್ಟು ಮಗದೊಮ್ಮೆ ಪೆರಿಸ್ ತನಕ ಮುನ್ನಡೆಯಬೇಕೆಂದು ಹಿಟ್ಲರನಿಗೆ ಹಿರಿದಾದ ಬಯಕೆ ಇದೆ. ತನ್ನ ರಾಷ್ಟ್ರಕ್ಕೆ ಪೆರಿಸ್‌ನ್ನು ನವವರ್ಷದ ಉಡುಗೊರೆಯಾಗಿ ಒಪ್ಪಿಸುವನೆಂದು ಅವನು ಜಂಭಕೊಚ್ಚಿರುವನು.

ಪೂರ್ವರಂಗದಲ್ಲಿ ರಷ್ಯನರ ಒತ್ತಡವು ದಿನೆ ದಿನೆ ವೃದ್ಧಿಯಾಗುತ್ತಾ ಬರುತ್ತಿದೆ. ಅದಿದ್ದಾಗ್ಯೂ ಜರ್ಮನರು ಪಶ್ಚಿಮರಂಗದ ಈ ಚಟುವಟಿಕೆಗಳು ಅತ್ಯಂತ ಶ್ಲಾಘನೀಯವೆಂದೇ ತಿಳಿಯಬೇಕಾಗಿದೆ. ಬಹುಶಃ ಹಿಟ್ಲರನು ಬಚ್ಚಿಟ್ಟ ಬಲವನ್ನು ಈಗ ಕೊನೆಯ ಯತ್ನಕ್ಕಾಗಿ ಹೊರಗೆ ತೆಗೆದಿರಬಹುದು. ಪಶ್ಚಿಮರಂಗದ ಯುದ್ಧಗತಿಯು ಈ ಸನ್ನಿವೇಶದ ಮೇಲೆ ಹೊಂದಿಕೊಂಡಿದೆ. ಹಿಟ್ಲರನಿಗೆ ಈ ನೂತನ ಚಟುವಟಿಕೆಯಲ್ಲಿ ಯಶಸ್ಸು ದೊರಕಿಬಿಟ್ಟರೆ–ಈ ಯುದ್ಧವು ಮುಕ್ತಾಯವಾಗುವ ದಿನವು ಇನ್ನೂ ಮುಂದಕ್ಕೆ ಹಾಕಿದಂತಾಯಿತು. ಮಿತ್ರರು ಇನ್ನೊಂದು ಭಗೀರಥ ಯತ್ನವನ್ನು ಮಾಡಬೇಕಾಗಬಹುದು. ಧೃತಿಕೆಟ್ಟ ಜರ್ಮನರಿಗೆ ಹಿಟ್ಲರನ ಈ ನೂತನ ಸಾಹಸದಿಂದ ಚೇತನವು ಬರಬಹುದು. ಅವನ ಈ ಕಾರ್ಯವು ನಿಷ್ಫಲವಾಯಿತೆಂದರೆ, ಆಗ ಮಿತ್ರರನ್ನು ಪಶ್ಚಿಮರಂಗದಲ್ಲಿ ತಡೆದಿಡುವ ಬಲವೆಲ್ಲಾ ಜರ್ಮನರಿಂದ ಕಳೆದು ಹೋದಂತಾಗುವುದು. ನಂತರ ಪರಿಪಕ್ವವಾದ ಫಲವು ಬೀಳುವ ತರದಲ್ಲಿ, ಜರ್ಮನಿಯು ಬೀಳಲೇಬೇಕಾಗುವುದು. ಮಿತ್ರರು ಈ ತರದ ಪರಿಸ್ಥಿತಿಯನ್ನು ಮುನ್ನೋಡಿರಬೇಕು. ಕಾರಣ ದ್ವಿತೀಯ ರಂಗವು ಪ್ರಾರಂಭವಾದಾಗ, ಮುಖ್ಯ ಹೋರಾಟವು ನಡೆಯುವುದಾದರೆ, ರ್‍ಹಾನ್ ನದಿ ಪಶ್ಚಿಮದಲ್ಲಿ ಎಂದು ಐಸನ್ ಹೋವರರು ಈ ಮೊದಲೇ ತಾವು ಹೊರಡಿಸಿದ್ದ ಒಂದು ಪ್ರಕಟಣೆಯಲ್ಲಿ ವಿಶದಪಡಿಸಿದ್ದರು.

ಪೂರ್ವದಲ್ಲಿ ೨೦೦ ಮೈಲಿನ ರಂಗದಲ್ಲಿ ಮೇಲ್ವಾಯಿದು ಬರಲು ಕೆಂಪು ಸೇನೆ ಸಿದ್ಧವಾಗಿದೆ. ಹಂಗೇರಿಯಲ್ಲಿ ರಷ್ಯನರಿಂದ ಬಹಳ ಯಶಸ್ಸಿನ ಕಾರ್ಯಸಾಧನೆಯು ನಡೆದಿರುತ್ತದೆ. ಅಲ್ಲಿಂದ ಜರ್ಮನ್ ಸಿವಿಲಿಯನರು ಆಸ್ಟ್ರಿಯದ ವಿಯನ್ನಕ್ಕೆ ಪಲಾಯನ ಮಾಡಿರುವರು. ಬುಡಾಪೆಸ್ಟ್ ನಗರವು ರಶ್ಯನ್ ಸೇನೆಯಿಂದ ಸುತ್ತಲ್ಪಟ್ಟು, ಅದು ಅವರ ಕೈಸೇರುವುದು ಖಂಡಿತವೆಂಬಂತಾಗಿದೆ. ರಶ್ಯನರಿಂದ ವಿಮುಕ್ತಗೊಳಿಸಲಾದ ಹಂಗೇರಿಯ ಬಗ್ಗೆ ನೂತನ ಸರಕಾರದ ರಚನೆಯು ಈಗಲೆ ನಡೆದುಬಿಟ್ಟಿದೆ. ಬುಡಾಪೆಸ್ಟ್ ನಗರವು ರಶ್ಯನರ ಕೈಸೇರಿದೊಡನೆ, ಹಂಗೇರಿಗಾಗಿ ಹೋರಾಟವು ಪರಿಸಮಾಪ್ತಿಯಾದಂತಾಗುವುದು. ಈ ನೂತನ ಸರಕಾರವು ರೂಢಿಗೆ ಬರುವುದು. ಈ ನೂತನ ಸರಕಾರದಲ್ಲಿ ಸಮತಾವಾದಿಗಳ ಸಂಖ್ಯೆಯು ಹೆಚ್ಚುಯಿದ್ದು, ಅದು ರೈತ ಹಿತಸಾಧನೆಯ ತರದು ಆಗಿರುವುದು. ಹಂಗೇರಿಯ ಯುದ್ಧವು ಹೀಗೆ ಮುರಿದೊಡನೆ, ರಶ್ಯವು ಮತ್ತು ಆಸ್ಟ್ರಿಯಕ್ಕಾಗಿ ಯುದ್ಧವನ್ನು ಕೈಗೊಳ್ಳಬಹುದು. ಆದರೆ ರಶ್ಯನರಿಗೆ ಮುಂದಿನ ಕಾರ್ಯವೇನೂ ಅಷ್ಟು ಸುಲಭವೆನಿಸದು. ಜರ್ಮನರ ೨೦ ಬ್ಬಲವಾದ ದಂಡುಗಳು ಇಲ್ಲಿ ಇವೆ. ಪಶ್ಚಿಮರಂಗದ ದಳಗಳಂತೆ ಇವೂ ಸುಸಜ್ಜಿತವಾಗಿವೆ. ಇವುಗಳ ಎದುರು, ಪೊಲೆಂಡ ಇತ್ಯಾದಿ ಪೂರ್ವರಂಗ ಕಡೆಗಳಲ್ಲಿ ರಶ್ಯನರು ತಮ್ಮ ಹೋರಾಟವನ್ನು ಮುಂದರಿಸಬೇಕಾಗಿಯದೆ. ಪೊಲೆಂಡದಲ್ಲಿ ನಿಲ್ಲಿಸಿಬಿಟ್ಟ ಹೋರಾಟವನ್ನು ರಶ್ಯನರು ಈಗ ಪುನಃ ಪ್ರಾರಂಭಿಸಿರುವರು.

ಚೀನದಲ್ಲಿ ಕೊಮ್ಯುನಿಷ್ಟರು ಚಿಯಾಂಗರಿಗೆ ಕಳುಹಿಸಲ್ಪಟ್ಟ ಸಂಧಾನದ ಶರತುಗಳು ಸಿರಾಕರಿಸಲ್ಪಟ್ಟಿವೆ. ಚೀನದ ಅಂತಃಕಲಹವು ನಿವಾರಿಸಲ್ಪಡದುದರಿಂದ, ಇನ್ನು ಚೀನಾದಿಂದ ಮಹತ್ವದ ಶುಭವಾರ್ತೆಗಳನ್ನು ಕೇಳುವ ಸಂಭವ ಕಡಿಮೆ ಎಂದು ತಿಳಿಯಬೇಕು. ಕೊಮ್ಯುನಿಸ್ಟ್ ಚಿಯಾಂಗ ವಿವಾದದಿಂದ ಮುಂದಕ್ಕೆ ಯಾವ ಸಂಘಟನೆಗಳು ಘಟಿಸುವದೆಂದು ನೋಡಲಿದೆ. ಸದ್ಯಕ್ಕೆ ಜಪಾನಿನ ಮೇಲೇರಿ ಹೋಗುವ ಕಾರ್ಯವು ಸಾಗರ ಮೂಲಕವೆ ಸಾಗಬೇಕಾಗಿಯದೆ. ಅಮೆರಿಕನ್ ನೌಕಾದಳವೂ, ವಾಯುಬಲವು ಈ ಕುರಿತು ಅತ್ಯಂತ ಪರಿಶ್ರಮ ವಹಿಸಬೇಕಾಗಿ ಬಂದಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಲಾಗಾರರ ನಿಧನ

ಶ್ರೇಷ್ಠ ಚಿತ್ರ ಕಲಾ ಕೋವಿದರೂ, ಚಿತ್ರಕಲಾನಿಧಿ ಎಂಬ ಪ್ರಶಸ್ತಿ ಪಡೆದವರೂ ಆದ ಶ್ರೀ. ಪಾವಂಜೆ ಗೋಪಾಲಕೃಷ್ಣಯ್ಯ ಅವರು ಕಳೆದ ತಾ. ೨೦ರಂದು ತಮ್ಮ ೮೮ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಕೆನರಾ ಹೈಸ್ಕೂಲಿನ ಪ್ರಥಮ ಅಧ್ಯಾಪಕ ವರ್ಗದಲ್ಲಿ ಇವರೂ ಒಬ್ಬರಾಗಿದ್ದು ಅಲ್ಲಿ ಚಿತ್ರಕಲಾ ಅಧ್ಯಾಪಕರಾಗಿದ್ದು ನಿವೃತ್ತರಾಗಿದ್ದರು. ಚಿತ್ರಕಲೆಯಲ್ಲಿ ಇವರದು ಅಸಾಧಾರಣ ಪ್ರತಿಭೆ ಇದ್ದು, ಜರ್ಮನಿಯಲ್ಲಿ ಅಚ್ಚಾದ ಇವರ ಕೃತಿಗಳು ಇಂದೂ ಅಸಾಮಾನ್ಯ ವೈಶಿಷ್ಟ್ಯದಿಂದ ಕೂಡಿವೆ. ಶ್ರೀ. ಪಾವಂಜೆಯವರು ಭಾರತೀಯ ಕಲಾ ಸೂಕ್ಷ್ಮತೆಯನ್ನೂ, ಪಾಶ್ಚಾತ್ಯ ಕಲಾ ಶೈಲಿಯ ವಿಶಾಲತೆಯನ್ನೂ ತಮ್ಮ ಕೃತಿಗಳಲ್ಲಿ ಅದ್ವಿತೀಯ ನೈಪುಣ್ಯತೆಯಿಂದ ಹೊಂದಿಸಿಕೊಂಡಿದ್ದರು. ಇವರ ಜೀವನ ಕ್ರಮಗಳೂ ಕಲಾಮಯವೇ ಆಗಿದ್ದುವು. ಅತೀ ವೃದ್ಧಾಪ್ಯದ ದೆಸೆಯಿಂದ ಬಳಲುತಿದ್ದರೂ ಇವನು ಶುಭ್ರ ಖಾಧಿ ಉಡುಪುಧಾರಿಗಳಾಗಿ ಮಾರ್ಗದಲ್ಲಿ ಸಂಚಾರಕ್ಕಾಗಿ ಬರುತ್ತಿರುವುದನ್ನು ಕಾಣಬಹುದಿತ್ತು. ಇವರ ಜೀವನವು ಪ್ರತಿಯೊಬ್ಬರಿಗೂ ಆದರ್ಶನೀಯವಾಗಿದೆ. ಇವರು ಧರ್ಮಾರ್ಥವಾಗಿ ಅನೇಕಾನೇಕ ತರುಣ ಕಲಾ ಉತ್ಸಾಹಿಗಳಿಗೆ ಶಿಕ್ಷಣ ಕೊಟ್ಟಿರುವುದು ಮೌನವಾಗಿ ಅವರು ಮಾಡಿದ ಕಲಾಪ್ರಸಾರ ಸೇವೆ ಇರುತ್ತದೆ. ಜಿಲ್ಲೆಯ ಕಲಾಗಾರರು ಅವರಿಗೊಂದು ಸ್ಮಾರಕ ರಚಿಸುವುದು ಯೋಗ್ಯವಿದೆ. ಮೃತರ ಆತ್ಮಕ್ಕೆ ಚಿರ ಶಾಂತಿ ಕೋರುವೆವು.

ಆತ್ಮ ಹತ್ಯೆ!

ರಾಮಚಂದ್ರನೆಂಬ ತರುಣನೊಬ್ಬನು ಜೈಲಿನ ಬಳಿಯ ತನ್ನ ಮನೆಯಲ್ಲಿ ನೇಣು ಹಾಕಿ ಹತ್ಯ ಮಾಡಿಕೊಂಡನೆಂಬ ಭೀಕರ ವಾರ್ತೆ ಬಂದಿದೆ. ಯುವಕನು ಕೆನೆರಾ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದು ಅಲ್ಲಿ ಕ್ರಿಕೇಟ್ ಟೀಮಿನ ಕೆಪ್ಟನ್ ಆಗಿದ್ದನು. ಮರಣದ ಮುಂಚಿನ ದಿನ ಅವನಿಗೆ ಶಾಲಾದಿನದಂದು ಕೆಲವು ಬಹುಮಾನ ಪಾರಿತೋಷಕಗಳೂ ದೊರಕಿವೆಯಂತೆ. ಆತ್ಮಹತ್ಯದ ಕಾರಣ ತಿಳಿದು ಬಂದಿಲ್ಲ.

ಶಾಲಾ ವರ್ಧಂತಿ

ಸ್ಥಳೀಯ ಕೆನೆರಾ ಹೈಸ್ಕೂಲಿನ ವರ್ಧಂತಿ ದಿನಾಚರಣೆಯು ತಾ. ೨೫ರಂದು ಜರಗಿತು. ನಗರ ಸಭೆಯ ಅಧ್ಯಕ್ಷ ಜ। ಎಚ್. ಹುಸ್ಸೇನ್ ಪುತ್ತೂರು ಸಾಹೇಬರು ಅಧ್ಯಕ್ಷರಾಗಿದ್ದರು. ಶಾಲೆಯ ಮತ್ತು ಅದರ ಉರ್ವದ ಶಾಖೆಯ ವರದಿಗಳ ವಾಚನ, ಬಹುಮಾನ ವಿತರಣಗಳಾದ ಮೇಲೆ ವಿವಿಧ ವಿನೋದಾವಳಿಗಳ ಕಾರ್ಯಕ್ರಮವಿತ್ತು.

ಉಪಹಾರ ಗೃಹ

ರಥಬೀದಿಯಲ್ಲಿ ನ್ಯೂ ತಾಜ್ ಮಹಾಲ್ ಕೆಫೆ ಎಂಬ ಹೆಸರಿನ ಉಪಹಾರ ಗೃಹವೊಂದು ತಾ. ೨೭ರಂದು ತೆರೆಯಲ್ಪಟ್ಟಿದೆ. ಇದು ಶ್ರೀಮಾನ್ ಕತ್ರಿಯವರ ಕಟ್ಟಡದಲ್ಲಿ ಸ್ಥಾಪಿತವಾಗಿದೆ.

ಆರೋಗ್ಯ

ನಗರದ ಆರೋಗ್ಯ ಖಾತೆಯವರ ಅವಿಶ್ರಾಂತ ಶ್ರಮದ ಫಲವಾಗಿ ಸಿಡುಬು ರೋಗದ ಪ್ರಸಾರವು ತಡೆಗಟ್ಟಲ್ಪಟ್ಟಿದೆ ಎಂದು ಊಹಿಸಬಹುದು. ಸುಮಾರು ೮೦ ಮಂದಿಗೆ ಆ ಜಾಡ್ಯವು ತಗಲಿದ್ದಲ್ಲಿ ೧೭ ಮರಣದಲ್ಲಿ ಅಂತ್ಯವಾಗಿವೆ. ಸುಮಾರು ಮೂರನೇ ಒಂದು ಜನ ಸಂಖ್ಯೆಗೆ ದಾಕು ಹಾಕಲಾಗಿದೆ.

ಕಳವು

ಪದವಿನ ಮೊರಿಸ್ ಡಿ ಸೋಜಾ ಎಂಬ ೧೨ ವರ್ಷದ ಬಾಲಕನು ಜಾಕಿ ಸೋಜಾ ಎಂಬ ಗೆಳೆಯನ ದುರ್ಬೋಧನೆಯಿಂದ, ಸಾಬೂನು ಅಚ್ಚಿನಿಂದ ತಯಾರಿಸಿದ ಬೀಗದ ಕೈಯಿಂದ ಕಪಾಟಿನಲ್ಲಿದ್ದ ಬಂಗಾರದ ಸರವೊಂದನ್ನು ಹೊಡೆದು ಅತ್ಯಲ್ಪ ಬೆಲೆಗೆ ಮಾರಲು ಪ್ರಯತ್ನಿಸಿದಾಗ ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಯಾಗಿರುವರು.

ಕೆಲವು ಮುಸಲ್ಮಾನರ ವಸ್ತುಗಳನ್ನು ಕದ್ದೆಂಬ ಆರೋಪದ ಮೇಲೆ ಬಂದಿಸಲ್ಪಟ್ಟ ಒರ್ವ ಮಲೆಯಾಳಿ ತರುಣಿಯು ಕೋರ್ಟು ವಿಚಾರಣೆಗೆ ಗುರಿಯಾಗಿರುವಳು.

ಕಾಯಿದೆ ವಿರೋಧವಾಗಿ ಮನೆಯಲ್ಲಿ ಶರಾಬು ಇಟ್ಟುಕೊಂಡಿದ್ದ (ಇದು ಕೆಲವು ಸಮಯದ ಹಿಂದೆ ಪತ್ತೆ ಮಾಡಲ್ಪಟ್ಟಿದ್ದಿತು) ಕದ್ರಿಯ ನಿವೃತ್ತ ಪೊ। ಸಬ್ ಇನ್ಸ್‌ಪೆಕ್ಟರ್ ಮತ್ತವರ ಮನೆಕೆಲಸದವನ ಕಟ್ಲೆ ವಿಚಾರಣೆಯಾಗುತ್ತಿದೆ.

ಸೀಯಾಳ ಮಾರ ಕೂಡದೆ?

ಅಂಗಡಿಗಳಲ್ಲಿ ಇದರ ಮಾರಾಗಟವಾಗದಂತೆ ನಿರ್ಬಂಧ ಹಾಕುವರೆಂದು ಹರಡಿದ ಸುದ್ದಿಯು, ನಿರಾಧಾರವೂ ಸುಳ್ಳಾಗಿರುವುದೆಂದೂ ನಂಬಲರ್ಹವಾದ ಕಡೆಗಳಿಂದ ತಿಳಿದು ಬಂದಿರುತ್ತದೆ.

ಕೋವಿ ಲೈಸೆನ್ಸ್

ಹಳ್ಳಿ ಕಡೆಗಳಲ್ಲಿ ಕ್ರೂರ ಕಾಡು ಮೃಗಗಳಿಂದ ವಿಪರೀತ ಬಾಧೆಯಾಗುತ್ತಿರುವುದರಿಂದ ಕೋವಿ ಲೈಸನ್ಸುಗಳನ್ನು ಹೆಚ್ಚಿಸ ಬೇಕು; ಇತರ ಜಿಲ್ಲೆಗಳಂತೆ ನ್ಯಾಯಬದ್ಧರಿಗೆ ಅಕ್ಕಿ ಕೊಡಲ್ಪಡುವ ಪ್ರಮಾಣ ಹೆಚ್ಚಿಸ ಬೇಕು; ಪ್ರಥಮ ಬೆಳೆಯ ಖರ್ಚಿಗಾಗಿ ಮುಂಗಡ ಹಣಕೊಡುವ ವ್ಯವಸ್ಥೆಯಾಗಬೇಕು,–ಹೀಗೆಂಬ ಅರ್ಥದ ಠರಾವುಗಳನ್ನು ಶ್ರೀ. ಎ. ಬಿ. ಶೆಟ್ಟಿ ಅವರು ಜಿಲ್ಲಾ ಫುಡ್ ಕೌನ್ಸಿಲಿನ ಮುಂದೆ ತಂದಿರುವರು.

ಕಟ್ಟಿಗೆ ತಕ್ಷೀರು

ಕದ್ರಿಯ ಮಿ। ಪಿಯಾದ್ ಸಾಲ್ಡಾನ್ ಎಂಬ ಕಟ್ಟಿಗೆ ಡಿಪೊದವರು ಕಟ್ಟಿಗೆ ಮಾರಲು ಒಪ್ಪದಕ್ಕೆ ಮೂರು ತಿಂಗಳ ಕಠಿಣ ಸಜೆಗೆ ಗುರಿಯಾಗಿರುವರು. ಸರಿಯಾದ ಲೆಕ್ಕ ಇಡದಕ್ಕೂ, ಹೆಚ್ಚಿಗೆ ಬೆಲೆಗೆ ಮಾರಿದಕ್ಕೂ ಅವರಿಗೆ ೩೦೦, ಮತ್ತು ೪೦೦ ರೂ.ಗಳ ಜುಲ್ಮಾನೆಯೂ ಆಗಿದೆ.

ಹೆಚ್ಚು ಚಿಲ್ಲರೆಗೆ

ಅಬ್ದುಲ್ ರಹಿಮಾನ್ ಎಂಬ ಮಾರ್ಕೇಟಿನ ಹಣ್ಣಿನ ವ್ಯಾಪಾರಿ ಬಳಿ ಹೆಚ್ಚಿಗೆ ಚಿಲ್ಲರೆ ಇಟ್ಟುಕೊಂಡಿದ್ದಕ್ಕೆ ರೂ. ೩೦೦ ಜುಲ್ಮಾನೆಯಾಗಿದೆ.

ತಾಲೂಕುಗಳಿಂದ

ಶ್ರೀ. ಶೀರೂರು ಮಠಾಧಿಪತಿಗಳ ನೇತೃತ್ವದಲ್ಲಿ ಶಿಪಾಯಿ ದಿನಾಚರಣೆಯು ಕಲ್ಯಾಣಪುರದಲ್ಲಿ ಜರುಗಿಸಲ್ಪಟ್ಟಿತು. ಅಂದು ಶಿಪಾಯಿಗಳ ಕುಟುಂಬಗಳಿಗೆ ಊಟ ವ್ಯವಸ್ಥೆ ಮಾಡಿತ್ತು. ಪ್ರಮುಖ ಸರಕಾರಿ ಅಧಿಕಾರಿಗಳು ಹಾಜರಿದ್ದರು.

ಉಡುಪಿಯಲ್ಲಿ ಯುದ್ಧನಿಧಿಗಾಗಿ ಆಡಿದ ನಾಟಕಕ್ಕೆ ೫ ಸಾವಿರ ರೂಪಾಯಿ ಸಂಗ್ರಹಿಸಲ್ಪಟ್ಟಿದೆಯಂತೆ.

ಕಾಸರಗೋಡು ತಾಲೂಕು ಬೋರ್ಡ್ ಉಪಾಧ್ಯಾಯ ಸಕಘದ ತ್ರೈವಾರ್ಷಿಕೋತ್ಸವ ಶ್ರೀ। ಕೆ. ಬಿ. ಜಿನರಾಜ ಹೆಗ್ಗಡೆ ಅವರು ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

ಕಾರ್ಕಳದ ಅಡಿಕೆ ವ್ಯವಸಾಯಿಗಳು ತಮ್ಮೊಂದು ಸಭೆಯಲ್ಲಿ ತಮ್ಮ ಸಂಕಷ್ಟಗಳನ್ನು ಸರಕಾರಕ್ಕೆ ನಿವೇದಿಸಿ ವಿಮೋಚನೆ ಹೊಂದುವ ಯೋಜನೆಯನ್ನು ಪರ್ಯಾಲೋಚಿಸಿದರು.

ಅಕ್ಕಿ ಸ್ಟಾಕ್ ದಾಖಲೆ ಲೆಕ್ಕಾಚಾರದಲ್ಲಿ ಅವ್ಯವಸ್ಥೆಯಿದ್ದುದಕ್ಕೆ ವಿಚಾರಣೆಗೆ ಗುರಿಯಾದ ಕಿನ್ನಿಗೋಳಿಯ ಸಹಕಾರಿ ಸ್ಟೋರ್ಸಿನ ಮೇನೇಜರರು ರುಜುವಾತು ಸರಿ ಇಲ್ಲದ್ದರಿಂದ ಆರೋಪ ಮುಕ್ತಗೊಳಿಸಲ್ಪಟ್ಟರು.

ಏಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಇದರ ಮೂರನೇ ವಾರ್ಷಿಕ ಪದವಿದಾನ ಸಮಾರಂಭವು ಬರುವ ಜನವರಿ ೧೩ರಂದು ಜರಗುವುದು. ಅನ್ನಾಮಲೆ ವಿಶ್ವ ವಿದ್ಯಾಲಯದ ವೈಸ್ ಚಾನ್ಸಲರರಾದ ಪಿ. ಎಂ. ಎಂ. ರತ್ನಸ್ವಾಮಿ, ಎಂ. ಎ. ಬಾರ್–ಎಟ್–ಲಾ–ಸಿ. ಐ. ಇ. ಅವರು ಸಮಾರಂಭ ಭಾಷಣ ಮಾಡುವರು.

ಮಂಜೇಶ್ವರ

ಮಂಜೇಶ್ವರದ ನಿಖಿಲ ಕರ್ನಾಟಕ ೧೪ನೇ ಆಯುರ್ವೇದ ಸಮ್ಮೇಲನಕ್ಕೆ ಬರಲಿರುವ ವೈದ್ಯರು-ಡೆಲಿಗೇಟರು-ಮತ್ತು ಪ್ರೇಕ್ಷಕರು ಇವರುಗಳಿಗೆ, ಮೋಟಾರು ಬಸ್ಸುಗಳ ಮೂಲಕ ಪ್ರಯಾಣದಲ್ಲಿ ಬಸ್ಸುಗಳಲ್ಲಿ ಸ್ಥಳಾಭಾವದ ಅಡಚಣೆಯುಂಟಾಗದಂತೆ, ಅನುಗೊಳಿಸಬೇಕಾಗಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ-ಜ್ವೊಂಟ್ ಬುಕ್ಕಿಂಗ್ ಏಜನ್ಸಿ–ಹನುಮಾನ್ ಟ್ರಾನ್ಸ್‌ಪೋರ್ಟ ಕಂಪೆನಿ–ಶಂಕರ ವಿಠಲ ಮೋಟರ್ ಕಂಪೆನಿ, ವಗೈರರಿಗೆ ಅಪೇಕ್ಷಿಸೋಣಾಗಿತ್ತು. ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು, ನಮ್ಮ ಅಪೇಕ್ಷೆಯನ್ನು ಮನ್ನಿಸಿ, (೧) ಚಿಕ್ಕಮಂಗಳೂರು. (೨) ಕುಮಟಾ. (೩) ಸಕಲೇಶಪುರ. (೪) ಮೈಸೂರು. (೫) ಸೆಂಟ್ರಲ್ ಮೋಟಾರ ಸರ್ವಿಸ್ ಸ್ಥಳಗಳಲ್ಲಿರುವ ತಮ್ಮ ಪ್ರತಿನಿಧಿಯವರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸುವರೆ, ತಿಳಿಸಿರುವ ವಿವರವನ್ನು ನಮಗೆ ಬರೆದಿರುತ್ತಾರೆ. ಬೇರೆ ಕಂಪೆನಿಯವರು ಸಹಾ ಹಾಗೆಯೇ ಅನುಕೂಲಿಸುವರಾಗಿ ನಂಬಿಕೆ ಇದೆ. ಅದ್ದರಿಂದ ಬಸ್ಸು ಮೂಲಕ ಪ್ರಯಾಣ ಮಾಡುವ ವೈದ್ಯರು ಡೆಲಿಗೇಟರು–ಪ್ರೇಕ್ಷಕರು ೨ ದಿನ್ನಗಳ ಮುಂಚಿತವಾಗಿ, ತಮ ತಮಗೆ ಬೇಕಾಗುವ ಆಸನ (ಸೀಟು)ಗಳ ವಿವರವನ್ನು ಆಯಾ ಸ್ಥಳಗಳ ಬಸ್ ಆಫೀಸಿನ ಅಧಿಕಾರಸ್ಥರಿಗೆ, ತಿಳಿಸುವಂತೆ, ಅಪೇಕ್ಷಿಸೋಣಾಗುತ್ತದೆ.

ದಿ ಕೆನರಾ ಎಸೋಸಿಯೇಶನ್ ಕೊಲ್ಹಾಪುರ

ಸದ್ರಿ ಎಸೋಸಿಯೇಶನಿನ ಆಶ್ರಯದಲ್ಲಿ ಅಧ್ಯಕ್ಷ ಪ್ರೊ॥ ಮೇಥ್ಯೂರವರ ನೇತೃತ್ವದಲ್ಲಿ, ಲೋಕೋಲೇಜಿನ ಹೋಲಿನಲ್ಲಿ, ಪ್ರೊಫೆಸರ್ ಗಜೇಂದ್ರಗಡರವರು ಕಾರವಾರ ಜಿಲ್ಲೆಯ ಪ್ರಸಿದ್ಧ ಸೀನ್‌ಸೀನೇರಿಗಳನ್ನು "ಮೇಜಿಕ್ ಲಾಂಟರ್ನ್ ಶೋ" ಮೂಲಕ ತೋರಿಸಿದರು. ಕೆನರಾ ಜಿಲ್ಲೆಯ ಕೈಗಾರಿಕೆ, ಪ್ರಸಿದ್ಧ ಸ್ಥಳ ವೃತ್ತಿ ವಗೈರೆಗಳ ಕುರಿತು ಹಲವರು ಮಾತನಾಡಿದರು. ಲಘು ಫಲಾಹಾರದೊಂದಿಗೆ ಸಭಾಂತ್ಯವಾಯಿತು. ವರ್ಕಿಂಗ್ ಕಮಿಟಿ ಮಿಟಿಂಗು ಬರುವ ತಾ. ೬–೧–೧೯೪೫ ಶನಿವಾರ, ಸೆಕ್ರಿಟರಿ ಡಾ। ಎಂ. ಎಸ್. ಹೆಗ್ಡೇರ "ಪ್ರೇಮ ಮೆಡಿಕಲ್ ಹೋಲ್" ನಲ್ಲಿ ಕೂಡಬೇಕೆಂದು ನಿಶ್ಚಯವಾಯಿತು.

ವಿಶೇಷ ಸುದ್ದಿ ಸಾರ

ಗ್ರೀಸಿನಿನ ಗೊಂದಲವನ್ನು ಇತ್ಯರ್ಥ ಮಾಡುವ ಉದ್ದೇಶದಿಂದ ಮಿ। ಚರ್ಚಿಲ್ಲರು ಎಂಟನಿ ಈಡನರೊಂದಿಗೆ ಎಥೆನ್ಸ್ ನಗರಕ್ಕೆ ಬಂದಿರುವರು. ದಂಗೆಕಾರರ ಪ್ರತಿನಿಧಿಗಳನ್ನು ಒಂದು ದಂಡು ಮೇಜಿನ ಪರಿಷತ್ತಿಗೆ ಆಹ್ವಾನಿಸಲಾಗಿದೆ.

○ ○ ○ ○

ಕಳೆದ ಒಕ್ಟೋಬರದಲ್ಲಿ ಪ್ರಾರಂಭವಾದ ಲೇಟಿ ದ್ವೀಪ ಆಕ್ರಮಣವು ಅಮೇರಿಕನ್ನರಿಗೆ ಯಶಸ್ವಿಯಾಗಿ ಕೊನೆಗೊಂಡಿತು. ಇದರಲ್ಲಿ ಸುಮಾರು ೧೧ ಸಾವಿರ ಅಮೇರಿಕನ್ನರೂ, ೧೧೩ ಸಾವಿರ ಜಪಾನರೂ ಸಾವು ನೋವುಗಳಿಗೆ ಗುರಿಯಾದರು. ಜಪಾನಿಯರ ೨೭೫೦ ವಿಮಾನಗಳು ನಾಶವಾಗಿವೆಯಂತೆ.

○ ○ ○ ○

ಬೆಲ್ಜಿಯಮ್ಮಿನಲ್ಲಿ ಜರ್ಮನ್ ಮುನ್ನಡೆಯು ಅವ್ಯಾಹತವಾಗಿ ಸಾಗಿದೆ. ಹೊಸ ಶಸ್ತ್ರಗಳಿಂದಲೂ, ಹೊಸ ಸೈನ್ಯಗಳಿಂದಲೂ, ನವೀನ ಸಮರೋಪಾಯಗಳಿಂದಲೂ ಜರ್ಮನರು ಕಾದಾಡುತ್ತಿರುವರು.

○ ○ ○ ○

"ಮಹಾತ್ಮಾ ಗಾಂಧಿಯವರು ಹಾಕಿಕೊಟ್ಟ ವಿಧಾಯಕ ಕಾರ್ಯಕ್ರಮವೇ ನಮ್ಮ ಸಮಾಜ ರಚನೆಗೆ ತಕ್ಕ ತಳಹದಿಯಾಗಿರುವುದು" ಹೀಗೆಂದು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಪುಣೆ ವಿದ್ಯಾರ್ಥಿ ಪರಿಷತ್ತನ್ನು ಉದ್ಘಾಟನೆ ಮಾಡಿದ ಭಾಷಣದಲ್ಲಿ ತಿಳಿಸಿದರು.

○ ○ ○ ○

ಅಸ್ಸಾಮದಲ್ಲಿ ಭೂಕಂಪದ ದಕ್ಕೆ ಯಾಗಿರುತ್ತದೆಯಾಗಿ ಸುದ್ದಿ ಬಂದಿರುತ್ತದೆ. ಅಘಘಾತ ಏನು ಸಂಭವಿಸಿದೆ ಎಂಬುದರ ಕುರಿತು ಇನ್ನೂ ಸ್ಪಷ್ಟ ವರದಿ ಬಂದಿಲ್ಲ.

○ ○ ○ ○

ಮದ್ರಾಸ್ ಹೈದರಾಬಾದ್ ಪ್ರಾಂತ್ಯಗಳೊಳಗೆ ನಡೆದ ರಂಜಿಟ್ರಾಫಿ ಕ್ರಿಕೆಟ್ ಪಂದ್ಯಾಟದಲ್ಲಿ ಮದ್ರಾಸಿನವರೇ ಜಯಶೀಲರಾದರು. ದಕ್ಷಿಣ ಕನ್ನಡದ ಬಿ. ಚಂದ್ರಹಾಸ್ ಆಳ್ವರು ಮದ್ರಾಸ್ ಕಡೆಯವರ೨ನೇ ಇನ್ನಿಂಗ್ಸ್‌ನಲ್ಲಿ ಅತ್ಯುಪಯುಕ್ತವಾದ ೩೬ ರನ್ನುಗಳನ್ನು ತೆಗೆದು ವಿಜಯ ಸಂಪಾದನೆಗೆ ಅತ್ಯಂತ ಸಹಾಯ ಮಾಡಿದರು.

○ ○ ○ ○

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 52/1944.

ಅಣ್ಣಪ್ಪ ಭಟ್ಟ— ವಾದಿ.

ಮತ್ತು

ಸುಬ್ರಾಯ ಕಲ್ಕೂರ ಕೂಡ—ಪ್ರತಿವಾದಿರು

ಇವರೊಳಗೆ

ಮೇಲ್ಕಂಡ ವ್ಯಾಜ್ಯವು ವಾದಿಯು ಪ್ರತಿವಾದಿರ ಮೇಲೆ ಈಡಿನ ಬಡ್ಡಿ ಬಗ್ಗೆ ಮಾಡಿದಾಗಿದ್ದು ಸದರಿ ವ್ಯಾಜ್ಯದಲ್ಲಿ ಸಪ್ಲಿಮೆಂಟು 9ನೆ ಪ್ರತಿವಾದಿ ಕೊಚ್ಚಿಕಾರ ಪುರೋತ್ತಮ ಪೈಗೆ ಆಗತಕ್ಕ ನೋಟೀಸಿಗೆ ತಾರೀಕು 11—1—1945ಕ್ಕೆ ಇಡೋಣಾಗಿಯದೆ. ಅದ್ರಿಂದ ಸದರಿ 9ನೆ ಪ್ರತಿವಾದಿಯು ಅವರ ಆಕ್ಷೇಪ ವಗೈರೆ ಹೇಳುವ ಸಂಗತಿಯಲ್ಲಿ ಸ್ವತಹ ಅಥವಾ ವಕೀಲರ ಮುಖಾಂತರ ಆ ದಿವಸ ಬೆಳಿಗ್ಗೆ 11 ಗಂಟೆಗೆ ಸದರಿ ಕೋರ್ಟುಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಇಲ್ಲವಾದರೆ ಅವರ ಗೈರಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ.

P. Padmanabha Rao,
B. A. B. L.
Vakil for Plaintiff.

ಉಡ್ಪಿ, ತಾ. 22-12-1944.

ಎದೆನೋವನ್ನು ನಿವಾರಿಸಿರಿ

ನಿಮಗೆ ಬೇಗನೇ ಶೀತವಾಗುವುದೇ ನೀವು ಆಗಾಗ ಕೆಮ್ಮು, ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾದೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸುಗಳನು ಸೇವಿಸಿ ಗುಣಹೊಂದಿರಿ.

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸ್ಟೆಲಿನ್ ಯಾರನ್ನೂ ನಂಬಿ ಇಲ್ಲ

ಪೋಲೆಂಡ್ ಪ್ರಕರಣದ ಗುಟ್ಟು

ತಪ್ಪುಮಾಡಿದ್ದೆ ಪೋಲೆಂಡ್

ರಷ್ಯನರೂ ಪೋಲಿಶ್ ಜನರೂ ಸ್ಲೆವ್ ಎಂಬ ಒಂದೇ ಜನಾಂಗ ಮೂಲಕ್ಕೆ ಸೇರಿದ ಜನರು. ಸ್ಲೆವ್ ಅಂದರೆ ಒಂದು ಆರ್ಯ ಜನರ ಪಂಗಡ. ಈ ಶಬ್ದದ ಅರ್ಥ ಬುದ್ಧಿವಂತ ಜನರೆಂದು. ಇವರು ಜರ್ಮನಿಯ ಟ್ಯುಟೋನಿಕ್ ಆರ್ಯರನ್ನು 'ನೀಮೆಟ್ಸ್' ಅಥವಾ ಮೂಖ ಜನರೆಂದು ಕರೆಯುತ್ತಿದ್ದರು. ಇದರಿಂದ ಪುರಾತನ ಕಾಲದಿಂದಲೂ ಈ ಸ್ಲೆವ್ ಜನಾಂಗಿಕರು ತುಂಬಾ ಮುಂದುವರಿದ ಜನರೆಂದು ತಿಳಿಯಬಹುದು.

ಕಾಲ ಕ್ರಮೇಣವಾಗಿ ಪೋಲೆಂಡಿನ ಪೋಲರು ರೋಮನ್ ಕೆಥೋಲಿಕ್ ಕ್ರೈಸ್ತರಾದರು—ಅವರ ಆಚಾರ ವಿಚಾರ ಸಂಸ್ಕೃತಿಗಳು ಅಚ್ಚ ಪಾಶ್ಚಿಮಾತ್ಯ ರೀತಿನೀತಿಯವುಗಳಾದುವು. ರಷ್ಯದ ಸ್ಲೆವರು ಗ್ರೀಕ್ ಕ್ರೈಸ್ತ ಮತಾನುಯಾಯಿಗಳಾಗಿ ಪೂರ್ವ ದೇಶದ ಸಂಸ್ಕೃತಿಯ ಸಂಸ್ಕಾರ ಹೊಂದಿದವರಾದರು.

ಅನೇಕ ಶತಮಾನಗಳ ಹಿಂದೆ ಒಂದು ಜನಾಂಗದ ಜೀವನವು ಮತೀಯ ವಿಚಾರ ಪ್ರಾಧಾನ್ಯದಿಂದಲೇ ಪ್ರಭಾವಿತವಾಗಿತ್ತು. ಅಂದರೆ ಮತವಿಚಾರವೇ ಅವರ ಪ್ರಧಾನ ಧ್ಯೇಯ. ಕಳೆದ ಶತಮಾನದಲ್ಲೂ ಮತೀಯ ಭಾವನೆಗಳ ಮೇಲೆ ಕಟ್ಟಲ್ಪಟ್ಟ ರಾಷ್ಟ್ರೀಯ ಚಳವಳಿಗಳು ಅಲ್ಲಿ ತಲೆಎತ್ತಿದುವು.

ಪೋಲ್ ಜನರು ಶ್ರದ್ಧಾವಂತ ಕೆಥೋಲಿಕ್ ಕ್ರೈಸ್ತರಾಗಿದ್ದು ಅಲ್ಲಿನ ಸರಕಾರವೂ ಮತೀಯ ಭಾವನೆಯೊಂದಿಗೆ ಹತ್ತಿರದ ಸಂಬಂಧವಿದ್ದುದಾಗಿತ್ತು. ರಷ್ಯದಲ್ಲಿ ಮಜೂರ ಸರಕಾರ ಪದ್ಧತಿ ಸ್ಥಾಪನೆಯಾಗುವ ಮೊದಲು ಅಲ್ಲಿನ ಜನರೂ ಮತಶ್ರದ್ಧೆಯಲ್ಲಿ ತುಂಬಾ ಆಸಕ್ತಿಯಿಂದಿದ್ದರು. ಆದರೆ ಬಡತನವನ್ನು ಹೋಗಲಾಡಿಸಿದ ಬೊಲ್ಶೆವಿಕ್ ಪದ್ಧತಿಯು ಅವರನ್ನು ಇತ್ತೀಚೆಗೆ ಮತಗಿಂತಲೂ ದೇಶವೇ ಹೆಚ್ಚೆಂಬ ಭಾವನೆಗೆ ಒಳಮಾಡಿತು.

ಈ ಬದಲಾವಣೆಹೊಂದಿದ ವ್ಯತ್ಯಾಸವೇ ಇಂದಿನ ರಷ್ಯಾ—ಪೋಲೆಂಡ್ ವೈಮನಸ್ಸಿಗೆ ಕಾರಣವಾಯಿತೆನ್ನಬಹುದು.

ಬೇರೆ ಕಾರಣಗಳು

ಕೆಲವು ಶತಮಾನಗಳ ಹಿಂದೆ ಪೋಲರು ಬಹು ಸಂಕಷ್ಟಕ್ಕೀಡಾದರು. ಪಶ್ಚಿಮದಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತ ಚಕ್ರವರ್ತಿಯ ಪ್ರಶ್ಯನ್ ಸಾಮ್ರಾಜ್ಯವೂ, ಪೂರ್ವದಲ್ಲಿ ಗ್ರೀಕ್ ಕ್ರೈಸ್ತರಾದ ರಷ್ಯದ ಝಾರ್ ಆಧಿಪತ್ಯವೂ, ದಕ್ಷಿಣದಲ್ಲಿ ಮತ್ತೊಂದು ಕೆಥೋಲಿಕ್ ವಿರೋಧಿ ಆಸ್ಟ್ರಿಯನ್ ಸಾಮ್ರಾಜ್ಯವೂ ಪ್ರಬಲವಾಗಿ ಪೋಲೆಂಡ್ ಇವುಗಳನಡುವೆ ಜಜ್ಜಿದಂತಾಯಿತು.

ಒಂದು ಶತಮಾನಗಳ ವರೀಗೆ, ರಷ್ಯ, ಪ್ರಶ್ಯ, ಮತ್ತು ಆಸ್ಟ್ರೀಯದ ಪ್ರಭುಗಳು ಪೋಲೆಂಡನ್ನು ಹರಿದು ಹಂಚಿಕೊಂಡರು. ನಿರಂಕುಶವಾದ ಜಮೀನ್ದಾರ್ ಪದ್ಧತಿಯು ಪೋಲೆಂಡಿನಲ್ಲಿ ಅಸ್ತಿತ್ವದಲ್ಲಿದ್ದುದರಿಂದ ಅಲ್ಲಿ ಸಾಮಾನ್ಯ ಜನತೆಯೊಳಗೂ, ಆಳುವವರ್ಗದೊಳಗೂ ಐಕ್ಯತೆ ಸಾಧ್ಯವಾಗಲಿಲ್ಲ.

ಪೋಲೆಂಡ್ ಜನರ ಈ ದುರವಸ್ಥೆಗಾಗಿ ಇಂಗ್ಲೆಂಡ್ ಅಮೇರಿಕಾಗಳಲ್ಲಿ ಬಹಳ ಸಹಾನುಭೂತಿಯುಂಟಾಯಿತು.

೧೯೧೯ರಲ್ಲಿ ವರ್ಸೇಲಿಸ್ ಒಪ್ಪಂದವಾದಾಗ ಇಂಗ್ಲೆಂಡ್ ಅಮೇರಿಕಗಳು ಪೋಲೆಂಡಿಗೆ ಉದಾರ ರೀತಿಯಲ್ಲಿ ಸವಲತ್ತುಗಳನ್ನು ಕೊಟ್ಟು ಸ್ವತಂತ್ರ ಜನಾಂಗವಾಗಿ ಮಾಡಿದರು. ಆದರೆ ದುರಾದೃಷ್ಟವೆಂಬಂತೆ ಇಂಗ್ಲೆಂಡ್ ಅಮೇರಿಕಾಗಳ ಸಹಾನುಭೂತಿಗೆ ಪ್ರತಿ ಮನ್ನಣೆಯನ್ನು ತೋರಿಸುವ ರೀತಿಯಲ್ಲಿ ಪೋಲಿಶ್ ಜನರು ನಡೆಯದಾದರು. ಅದು ಮಾದರಿ ಪ್ರಜಾಪ್ರಭುತ್ವವಾಗುವ ಬದಲು ಶ್ರೀಮಂತ ಜಮೀನ್ದಾರ್ ವರ್ಗದವರಿಂದ ಆಳಲ್ಪಡುವ ಸಂಕುಚಿತ ನಿರಂಕುಶ ಪ್ರಭುತ್ವ ರಾಷ್ಟ್ರವಾಯಿತು.

ಆ ಕಾಲದಲ್ಲಿ ರಷ್ಯವು ನಿರ್ಬಲವಾಗಿತ್ತು. ಕಳೆದ ಯುದ್ಧಾನಂತರ ರಷ್ಯನರು ತಮ್ಮ ಹಳೇ ಲಂಚಗುಳಿ ರಾಜ್ಯಪದ್ಧತಿಯನ್ನು ಕೊನೆಗೊಳಿಸಿ ಸಮತಾವಾದಿ ಕ್ರಮವನ್ನು ರಚಿಸತೊಡಗಿದರು. ಅದರ ಪರಿಣಾಮದಿಂದ ಇಂದು ಬಲಿಷ್ಟವಾದ ಶಕ್ತಿರಾಷ್ಟ್ರವು ರಷ್ಯವಾಗಿ ನಮ್ಮೆದುರಿಗೆ ನಿಂತಿದೆ.

ಉಕ್ರೇನ್ ಪ್ರಕರಣ

೧೯೨೦ರಲ್ಲಿ ಪೋಲೆಂಡಿನ ಮುಖಂಡನಾದ ಪಿಲ್ಸುಡ್ಸ್ಕಿ ಅವರು ಇನ್ನೂ ನಿರ್ಬಲಾವಸ್ಥೆಯಲ್ಲಿದ್ದ ರಷ್ಯದ ಮೇಲೆ ಬೀಳಲು ತನ್ನ ಜನರನ್ನು ಪ್ರೇರೆಪಿಸಿದನು. ಅವರು ರಷ್ಯದ ಆಹಾರ ಉಗ್ರಾಣವೆನಿಸಿದ ಉಕ್ರೇನ್ ಗೋದಿ ಪ್ರದೇಶದ ಮೇಲೆ ದಾಳಿ ಮಾಡಿದರು. ಹಿಂದೆ ಅದು ಪೋಲೆಂಡ್ ಸಾಮ್ರಾಜ್ಯಧಿಪತ್ಯಕ್ಕೆ ಒಳಗಾಗಿತ್ತೆಂಬ ನೆಪದ ಮೇಲೆ ಪೋಲಿಶ್ ಜನರು ಬಹು ಸಂಖ್ಯಾತ ರಷ್ಯನ್‌ರಿರುವ ಆ ಪ್ರದೇಶವನ್ನು ಹಿಡಿದರು.

ಚಿಕ್ಕ ಪೋಲೆಂಡನ್ನು ಕೂಡಾ ಎದುರಿಸುವಷ್ಟು ಶಕ್ತಿ ಆಗ ರಷ್ಯನರಲ್ಲಿಲ್ಲದೆ ಹೋಯಿತು. ಆದರೂ ತಮ್ಮ ಜನರ ದೇಶಭಾಗವನ್ನು ಅಪಹರಿಸಿದ ಪೋಲೆಂಡಿನ ದುಷ್ಕೃತ್ಯವನ್ನು ರಷ್ಯನರು ಎಂದೂ ಮರೆಯುವ ಹಾಗಿಲ್ಲ. ಅದಲ್ಲದೆ ಇನ್ನೂ ಅನೇಕ ಕಾರಣಗಳೂ ಇವೆ.

ಬಾಲ್ಟಿಕ್ ಸಮುದ್ರ ತೀರದಲ್ಲಿ ರಷ್ಯಾ ಪೋಲೆಂಡುಗಳಿಗೆ ಹತ್ತಿರವಿರುವ ಲಿಥುವೇನಿಯಾ ಎಂಬ ಚಿಕ್ಕ ಸ್ವತಂತ್ರ ರಾಜ್ಯವು ಒಂದು ರಾಜ ಕುಟುಂಬ ಸಂಬಂಧದಿಂದ ಪೋಲೆಂಡಿನೊಂದಿಗೆ ಸೇರಿತ್ತು. ಆದರೆ ಸ್ವಾತಂತ್ರ್ಯದಾಹದಿಂದ ಸ್ಫೂರ್ತಿಗೊಂಡ ಲಿಥುವೇನಿಯದ ಜನರು ಪೋಲೆಂಡಿನ ಆಧೀನದಲ್ಲಿರಲು ಇಷ್ಟ ಪಡಲಿಲ್ಲ.

ಲಿಥುವೇನಿಯ

ರಷ್ಯದ ಬೋಲ್ಶೆವಿಕ್ ರಾಷ್ಟ್ರಮಂಡಕ್ಕೆ ಸೇರಿ ಲಿಥುವೇನಿಯದವರು ಸ್ವತಂತ್ರವಾಗಿರಬಹುದೆಂದು ರಷ್ಯನರು ಆ ಜನರನ್ನು ಪ್ರೇರೆಪಿಸಿದರು. ಇದು ಈಗ ಇಂಗ್ಲೆಂಡಿನಲ್ಲಿರುವ ಪೋಲಿಶ್ ಜನರ ಸರಕಾರಕ್ಕೆ ಸಹನೆಯಾಗುವಂತಹದಲ್ಲ. ಅವರು ಲಿಥುವೇನಿಯವು ತಮಗೇ ಸೇರಿರಬೇಕೆಂದು ಹಟ ತೊಟ್ಟಿರುವರು. ವಿಲ್ನಾ ಎಂಬುದು ಲಿಥುವೇನಿಯದ ರಾಜಧಾನಿ. ಲೊವ್ ಎಂಬುದು ಇನ್ನೊಂದು ಪಟ್ಟಣ. ಇದು ಪೋಲೆಂಡ್ ಪ್ರಭಾವಕ್ಕೆ ಒಳಗಾಗಿರುವುದಾದರೂ ರಷ್ಯದ ಉಕ್ರೇನ್ ಪ್ರಾಂತದ ವಾತಾವರಣದಲ್ಲಿದೆ. ಇದೂ ತಮಗೇ ಸೇರಿರಬೇಕೆಂಬುದೇ ಪೋಲರ ಆಗ್ರಹ.

ಪ್ರಚಲಿತ ಸಮಾಚಾರ

(೬ನೇ ಪುಟದಿಂದ)

ಆದರೆ ಇದೊಂದು ಬರಿ ಸೋಗು. ಈ ಚಾರ್ಟರಗಿಂತ ದೊಡ್ಡ ಸುಳ್ಳು ಇನ್ನೊಂದಿಲ್ಲ. ಇಡೀ ಜಗತ್ತನ್ನೇ ಸೂರೆಗೊಳಿಸುವ ಮಹಾಸುಳ್ಳು ಅದು!

ಈ ಹೋರಾಟವು ನಡೆಯುತ್ತಿರುವುದಾದರೂ ಏತಕ್ಕೆ? ಮಿತ್ರರಾಷ್ಟ್ರಗಳ ಯುದ್ಧ ನೀತಿಯು ಏನು? ಎಂಬಿವೆ ಮೊದಲಾದ ಪ್ರಶ್ನೆಗಳ ಕಳಕಳಿಯು ಅಂದು ಉಂಟಾದ್ದುದರಿಂದ, ಈ 'ಅಟ್ಲಾಂಟಿಕ್ ಚಾರ್ಟರು' ಎಂಬದೊಂದು ಸಮುದ್ರ ಮಧ್ಯದಿಂದ ಹೊರಡಿಸಲಾಯಿತು. ಆಗಿನ ಪರಿಸ್ಥಿತಿಯನ್ನು ತಣಿಯಲು, ಹೂಡಿದ ಉಪಾಯವದು! ಆ ಚಾರ್ಟರಿನ ಮೇಲೆ ಸಹಿಯಾದುದೆಯಿಲ್ಲವಂತೆ! ಚರ್ಚಿಲ್—ರೂಸ್‌ವೆಲ್ಟರು, ಕ್ರೂಸರಿನಲ್ಲಿ ಕುಳಿತು ಮಾತನಾಡುತ್ತಿದ್ದ ಹಾಗೆ ಚರ್ಚಿಲ್ಲರು, ಕೆಲವೊಂದು ವಿಷಯಗಳನ್ನು ಒಂದು ಕಾಗದದಲ್ಲಿ ಗೀಚಿದುದಕ್ಕೆ ಅಟ್ಲಾಂಟಿಕ್ ಚಾರ್ಟರೆಂದುನಾಮಕರಣವಾಯಿತಂತೆ! ಅವಸರದಲ್ಲಿ ಗೀಚಿದ ರಿಕಾರ್ಡು! ಅದರಲ್ಲಿ ತಿದ್ದುಪಡಿಯಾಗಬೇಕಾಯಿತು. ದಿನಗಳು ಕಳೆದುವು. ತಿದ್ದುಪಡಿಗಳೂ ಇಲ್ಲ. ಈಗ ಅಟ್ಲಾಂಟಿಕ್ ಚಾರ್ಟರೇ ಮಾಯವಾಗಿಬಿಟ್ಟದೆ!

ಫ್ರಾನ್ಸಿನ ಅತಿಕ್ರಮದ ತನಕ ಮಿತ್ರರಾಷ್ಟ್ರಗಳ ಅಧಿಕಾರವರ್ಗದಲ್ಲಿ ಪ್ರಜಾಪ್ರಭುತ್ವ ಆದರ್ಶಗಳ ಕುರಿತು, ಆಸಕ್ತಿಯಿದ್ದಿತು. ದ್ವಿತೀಯ ರಂಗದ ಪ್ರಾರಂಭದೊಡನೆ ಈ ಆದರ್ಶಗಳ ಕುರಿತು ಮಿತ್ರರಾಷ್ಟ್ರಗಳ ಅಧಿನಾಯಕರಲ್ಲಿ ಭೇದಾಭಿಪ್ರಾಯವು ಬಂದುಬಿಟ್ಟಿತು. ಮುಸುಕು ಜಾರಿಬಿಟ್ಟಿತು. ಮಿತ್ರರ ನಿಜವಾದ ಸ್ವರೂಪಗಳು ಜಗತ್ತಿಗೆ ಕಾಣಿಸಿದವು!

'ನಿಮಗೆ ಬೇಕಾದದು ನೀವು ತೆಗೆಯಿರಿ. ನಮಗೆ ಬೇಕಾದುದನ್ನು ನಾವು ತೆಗೆಯುತ್ತೇವೆ' ಎಂಬುದು ಚರ್ಚಿಲ್ಲರ. ಸದ್ಯದ ನೀತಿಯಾಗಿರುತ್ತದೆ.

ಸೋವಿಯಟ್ ರಷ್ಯವು ಪ್ರಜಾಪ್ರಭುತ್ವ ನೀತಿಗಾಗಿ ಕ್ರಾಂತಿಯೆಬ್ಬಿಸಿ, ಮಹಾಕಾರ್ಯಗಳನ್ನು ನಡೆಯಿಸಿದ ರಾಷ್ಟ್ರ. ಹಾಗೆನೆ ಪ್ರಜಾಪ್ರಭುತ್ವ ಸಂಪ್ರದಾಯವು ಅಮೇರಿಕದ್ದೆ—ಪ್ರಜಾಪ್ರಭುತ್ವ ನೀತಿಯನ್ನು ಅನ್ವಯಿಸಿ, ಸ್ವರಾಜ್ಯ ಪಡೆಯಲು, ಯುದ್ಧ ನಡೆಯಿಸಿದವರೂ ಅವರು. ಆದರೆ ಕಾಲಸ್ಥಿತಿಯು ಬದಲಾಗಿದೆ. ಅದರೊಡನೆ ಅನೇಕ ಮಾರ್ಪಾಡುಗಳೂ, ನ್ಯೂನತೆಗಳೂ ಬಂದುಬಿಟ್ಟಿವೆ.

ಇದಿಷ್ಟು ಪೋಲೆಂಡ್-ರಷ್ಯಗಳೊಳಗಿನ ಕಲಹದ ಕಾರಣ. ಪೋಲಿಶ್ ಜನರೊಳಗೇ ಇದರ ವಿಷಯವಾಗಿ ಭೇದಾಭಿಪ್ರಾಯಗಳಿವೆ. ಆದರೆ ಲಂಡನಿನಲ್ಲಿರುವ ಪೋಲಿಶ್ ಸರಕಾರವು ಮಾತ್ರ ಇದಕ್ಕೆ ಎಂದಿಗೂ ಒಪ್ಪುವುದಿಲ್ಲವೆನ್ನುತ್ತಿದೆ.

ಮಿತ್ರ ಐಕ್ಯತೆಗೆ ಕುಂದು

ಈಗಿನ ಪರಿಸ್ಥಿತಿಯಲ್ಲಿ ಕಾಲಹರಣ ಮಾಡುವ ಹಾಗಿಲ್ಲ. ಸ್ಟೇಲಿನನು ಯಾರನ್ನೂ ಕಾಯುವಂತಹನಲ್ಲ. ಲಂಡನಿನಲ್ಲಿ ಒಂದು ಪೋಲಿಶ್ ಸರಕಾರವಿರುವಂತೆ ಮೊಸ್ಕೋದಲ್ಲೂ ಅವನು ಪೋಲಿಶ್ ಪ್ರಜಾಪ್ರಾತಿನಿಧ್ಯವಿದ್ದ ಒಂದು ಪೋಲಿಶ್ ಸರಕಾರವನ್ನು ಸ್ಥಾಪನೆ ಮಾಡಿಯೇ ಬಿಟ್ಟ.

ಚೀನಾದಿಂದ ಜಪಾನೀಯರು ಹೊರಟ್ಟಲ್ಪಡಬೇಕು—ಯಾಕೆ? ಯುರೋಪದ ದೇಶಗಳು ಜರ್ಮನರ ಅತಿಕ್ರಮದಿಂದ ಹೊರಗಾಗಬೇಕು—ಯಾಕೆ? ಎಥಿಯೋಪಿಯಾವು ಮುಸಲೋನಿಯ ಹಿಡಿತದಿಂದ ವಿಮುಕ್ತಗೊಳಿಸಲಾಯಿತು—ಯಾಕೆ? ಫೆಸಿಸ್ಟ್ ನೀತಿಯು ದೊಡ್ಡ ಅನರ್ಥವು. ಜರ್ಮನ್—ಜಪಾನ್—ಇಟಲಿ ಅಕ್ಷವು ಫೆಸಿಸ್ಟ್ ಐಕ್ಯವು. ಈ ಅಕ್ಷವು ಪ್ರಬಲವಾದರೆ, ಮತ್ತೆ ಸ್ವಾತಂತ್ರ್ಯವಿಲ್ಲ. ಜಗತ್ತೂ ನಿರಂಕುಶ ಪ್ರಭುತ್ವದ ಬೀಡಾಗಿ ಪರಿವರ್ತನವಾಗುವುದು. ಇದನ್ನು ತಡೆಯುವರೆ ಮಿತ್ರರು ಯುದ್ಧ ಸಾರಿದುದು. ಪೋಲೇಂಡಿನ ಮೇಲೆ ಕೈಯಾದೊಡನೆ, ಮಿತ್ರರು ಈ ಯುದ್ಧವನ್ನು ಸಾರಿದರು. ಫೆಸಿಸ್ಟರಿಗೆ ವಿರೋಧವಾಗಿ ಪ್ರಜಾಪ್ರಭುತ್ವವಾದಿಗಳು ಹೋರಾಟಕ್ಕೆ ಇಳಿದುಬಿಟ್ಟರು. ಇವೆಲ್ಲಾ ನಮ್ಮ ಅಂದಿನ ಭಾವನೆಗಳು. ಇಂದಿನ ಸ್ಥಿತಿಯೊ! ನಾವು ಕನಸು ನೋಡುತ್ತಿದ್ದೆವೊ, ಎಂಬ ಭ್ರಾಂತಿಯು ನಮ್ಮಲ್ಲೀಗ ಉಂಟಾಗಿರುತ್ತದೆ.

ಇಟಲಿ, ಗ್ರೀಸ್, ಬೆಲ್ಜಿಯಂ, ಫ್ರಾನ್ಸು ಮೊದಲಾದ ದೇಶಗಳು ಜರ್ಮನರ ಹಿಡಿತದಿಂದ ವಿಮುಕ್ತಗೊಳಿಸಲ್ಪಟ್ಟೊಡನೆ, ಹಿಂದೆ ಜರ್ಮನ್ ಆಕ್ರಮಣವಾದಾಗ ದೇಶ ತ್ಯಜಿಸಿ, ಲಂಡನಿಗೆ ಪಲಾಯನ ಮಾಡಿದ ದೊಡ್ಡವರ ಕೂಟಗಳು, ಮಿತ್ರಸೇನೆಗಳೊಡನೆ ಅಲ್ಲಿಗೆ ಮರಳಿದವು. ದೇಶದ ಆಡಳಿತವನ್ನು ವಹಿಸಲು ಉದ್ಯುಕ್ತರಾದರು. ಇದನ್ನು ದೇಶರಕ್ಷಣೆಗಾಗಿ ಮಹಾ ಶ್ರಮ, ಯಾತನೆ ಇತ್ಯಾದಿಗಳನ್ನು ಅನುಭವಿಸಿದ ಎಡಪಕ್ಷದವರು ಸಹಿಸದಾದರು. ಮಿತ್ರರ ಬೆಂಬಲವು ದೊರಕಿತಾದರೂ, ಅಧಿಕಾರಲಾಲಸೆಯಿಂದ ಹಿಂತೆರಳಿದ ಪ್ರತಿಗಾಮಿ ದೊಡ್ಡವರ ಕೂಟಕ್ಕೆ! ಇದೇ ಗ್ರೀಸಿನ ಗೊಂದಲದ ರಹಸ್ಯವು.

ಗ್ರೀಸಿನಲ್ಲಿ ಸ್ಥಿತಿಯು ಅಂಕಿತತಪ್ಪಿಹೋಗಿ, ಅಲ್ಲಿ ಮಹಾಗದ್ದಲವು ಉಂಟಾದ ಕಾರಣ, ಅಲ್ಲಿನ ನಿಜಸ್ಥಿತಿಯ ಪರಿಚಯವು ಜಗತ್ತಿಗಾಯಿತು. ಅಲ್ಲಿನ ELAS ಅಂದರೆ ಎಡಪಕ್ಷದವರಿಗೂ ಮತ್ತು EDAS ಅಂದರೆ ಬಲಪಕ್ಷ(ದೊಡ್ಡವರ ಪಕ್ಷ)ದವರಿಗೂ ಸಂಧಾನಯತ್ನಗಳು ನಡೆಯುತ್ತಿವೆ. ಬೆಲ್ಜಿಯಮ್ಮಿನಲ್ಲಿ, ಇಟೆಲಿಯಲ್ಲಿ ಫ್ರಾನ್ಸಿನಲ್ಲಿ ಇದೇ ತರದ ಸಂದಿಗ್ಧಗಳು ಉಂಟಾಗಿದ್ದರೂ, ಸ್ಥಿತಿಯು ಮಿತ್ರರ ಅಂಕಿತದಲ್ಲಿವೆ. ಈ ರಾಷ್ಟ್ರಗಳಲ್ಲೆಲ್ಲಾ ಪ್ರಜಾಪ್ರಭುತ್ವವು ತಲೆಎತ್ತಿ ನಿಲ್ಲಲು ಯತ್ನಿಸುತ್ತಿದೆ. ಫ್ರಾನ್ಸಿನಲ್ಲಿ ಸದ್ಯಕ್ಕೆ ಪರಿಸ್ಥಿತಿಯು ಅಂಕಿತದಲ್ಲಿದ್ದರೂ, ಅಲ್ಲಿ ಕೊಮ್ಯುನಿಸ್ಟ್ ಇತ್ಯಾದಿ ಪ್ರಜಾಪ್ರಭುತ್ವವಾದೀ ಪ್ರಗತಿಗಾಮಿ ಪಂಗಡಗಳ ಮೇಲೆ ಮಿತ್ರರ ವಕ್ರದೃಷ್ಟಿಬಿದ್ದಿರುವುದೆಂದೂ, ಈ ಕಾರಣದಿಂದ ಈ ಪಂಗಡಗಳ ಗುರಿಲ್ಲಾಗಳನ್ನು ನಿಶಸ್ತ್ರಗೊಳಿಸಲಾಗಿದೆ ಎಂದೂ ಅದರಿಂದ ತುಂಬಾ ಅಸಮಾಧಾನವು ಭವಿಷ್ಯದಲ್ಲಿ ವಿರಾಟರೂಪವನ್ನು ತಾಳಬಹುದೆಂದೂ ಮೊದಲಾದ ಊಹಾಪೋಹೆಗಳಿವೆ.

ಸಪ್ರೂಗಳು ಹಿಡಿದ ಕಾರ್ಯವು ಮುಂದೆ ಸಾಗುತ್ತಿದೆ. ಅವರೊಡನೆ ಸಹಕರಿಸಲು, ಜಿನ್ನಾರವರು ನಿರಾಕರಿಸಿರುವರು. ಹಿಂದೂ ನಾಯಕರು ಸಪ್ರುಗಳವರನ್ನು ಕಂಡು ಮಾತನಾಡಲು ಒಪ್ಪಿರುವರು. ಎಂ. ಎನ್. ರೊಯರು, ಜನಸಾಮಾನ್ಯರರ ಮಾತಿಗೆ ಮನ್ನಣೆ ಕೊಡುವ ಸರಕಾವನ್ನು ಉತ್ಪಾದಿಸುವುದರಲ್ಲಿರುವರು.

ಸೌಂದರ್ಯದಲ್ಲಿ ಸತ್ಯ

(೩ನೇ ಪುಟದಿಂದ)

ಧೈರ್ಯವಾಗಿ ಹೇಳಬಲ್ಲೆ. ನಾನು ಹೀಗೆ ಹೇಳುವಾಗ ಕಲಾಕೃತಿಗಳ ಮಹತ್ವವನ್ನು ಅಲ್ಲಗಳೆಯುತ್ತಿದ್ದೇನೆಂದು ತಿಳಿದುಕೊಳ್ಳಬಾರದು. . . . ಕಲೆಯ ದೃಶ್ಯ ಸ್ವರೂಪಗಳು ಎಷ್ಟುಮಟ್ಟಿಗೆ ಅವುಗಳ ನಿರ್ಮಾಪಕರ ಅಂತರಂಗದ ಚೇತನವನ್ನು ಪ್ರತಿಬಿಂಬಿಸುತ್ತವೆಯೋ ಅಷ್ಟು ಮಟ್ಟಿಗೆ ಮಾತ್ರ ಅವುಗಳಿಗೆ ಬೆಲೆ. ನಾನು ಸತ್ಯದಲ್ಲಿಯೇ ಸೌಂದರ್ಯವನ್ನು ಅರಸುವೆ, ಕಾಣುವೆ. ಸತ್ಯವೆಂದರೆ ಕೇವಲ ಸತ್ಯ ವಿಚಾರಗಳಲ್ಲ; ಸತ್ಯವಂತರ ಮುಖಗಳು, ಸತ್ಯವಾದಿ ಗೀತಗಳು ಇವುಗಳೆಲ್ಲವೂ ಬಹಳ ಸುಂದರವಾಗಿರುತ್ತವೆ. . . . ಮನುಷ್ಯನು ಸತ್ಯದಲ್ಲಿಯೇ ಎಂದು ಸೌಂದರ್ಯವನ್ನು ಕಾಣುವನೋ ಅಂದೇ ನಿಜವಾದ ಕಲೆಯ ಜನ್ಮವಾಗುವುದು. . . . . . . ಅಂತರಂಗದ ಸತ್ಯಪ್ರಭೆ ಯಾವ ಮುಖಗಳಲ್ಲಿ ತಳತಳಿಸುವುದೋ ಅವುಗಳೇ ನೈಜ ಕಲಾಕಾರನಿಗೆ ಸುಂದರವಾಗಿ ತೋರುತ್ತವೆ. . . . ಸಾಕ್ರೆಟೀಸನು ನನ್ನ ದೃಷ್ಟಿಯಲ್ಲಿ ಸುಂದರನೆ: ಏಕೆಂದರೆ ಅವನು ಜೀವಮಾನದಲ್ಲೆಲ್ಲ ಸತ್ಯದ ಬೆನ್ನುಬಿದ್ದಿದ್ದನು. . . . ಫಿಡಿಯಾಸನು ಸೌಂದರ್ಯದ ದೃಶ್ಯ ಸ್ವರೂಪವನ್ನು ಬೇಕಾದಷ್ಟು ಕಂಡ ಕಲಾಕಾರನಾಗಿದ್ದರೂ ಅವನು ಸಾಕ್ರೆಟೀಸನ ಬಾಹ್ಯ ಕುರೂಪಿತನದಿಂದ ಮೋಸಹೋಗಿ ಅವನಲ್ಲಿದ್ದ ಸತ್ಯದ ಸೌಂದರ್ಯವನ್ನು ಗುರುತಿಸಲು ತಪ್ಪಲಿಲ್ಲ."

"ಕಲೆಗಾಗಿ ಕಲೆ"ಯೆಂಬ ಕಲಾವಿದ್ಯಾರ್ಥಿಗಳಿಗೆ ಇದು ಜಡವಾದದಂತೆ ಕಾಣಬಹುದು. ಆದರೆ ಗಾಂಧೀಜಿಯ ಬೌದ್ಧಿಕ ಪೂರ್ವಜರಾದ ಸಾಕ್ರೆಟೀಸ್, ರಸ್ಕಿನ್, ಟಾಲ್‌ಸ್ಟಾಯ್ ಮೊದಲಾದವರೂ ಕಲೆಯನ್ನು ಇದೇ ದೃಷ್ಟಿಯಿಂದ ನೋಡುತ್ತಿದ್ದರು.

ಇಂಗ್ಲಂಡಿನಿಂದ ಹಿಂದುಸ್ಥಾನಕ್ಕೆ ರೋಮದ ಮಾರ್ಗವಾಗಿ ಮಹಾತ್ಮರು ಬರುತ್ತಿದ್ದಾಗ ವೆಟಿಕನ್ ನಗರದ ಕಲಾಭವನವನ್ನು ಗಾಂಧೀಜಿಗಾಗಿ ತೆರೆದಿಡಲಾಯಿತು. ಅಲ್ಲಿಯ ಕಲಾರತ್ನ ಭಾಂಡಾರ ಗಾಂಧೀಜಿಯ ಹೃದಯವನ್ನು ಸೂರೆಮಾಡಿತು. ಸಿಸ್ಟಾಯಿನ್ ಚಾಪೆಲವಂತೂ ಅವರನ್ನು ಮುಗ್ಧರನ್ನಾಗಿ, ಅವಾಕ್ಕಾಗಿ ಮಾಡಿತು. "ಅಲ್ಲಿ ನಾನು ಕ್ರಿಸ್ತನ ಒಂದು ವಿಗ್ರಹವನ್ನು ಕಂಡೆ. ಅದು ಅದ್ಭುತವಾಗಿತ್ತು. ಅದರಲ್ಲಿ ನಟ್ಟ ನನ್ನ ಹೃದಯ ಎಳೆದರೂ ಹಿಂದೆ ಬರಲಿಲ್ಲ. ಅದನ್ನು ನೋಡ ನೋಡುತ್ತ ನನ್ನ ಕಣ್ಣುಗಳಲ್ಲಿ ನೀರು ಉಕ್ಕಿ ಬಂತು," ಎಂದು ಗಾಂಧೀಜಿ ತಮ್ಮ ಅನುಭವವನ್ನು ಬಣ್ಣಿಸಿದ್ದಾರೆ.

ಕಲೆ, ಸಾಹಿತ್ಯಗಳಲ್ಲಿ ಒಬ್ಬನ ರುಚಿ ಎಷ್ಟೇ ನಯವಾಗಿರಲೊಲ್ಲದೇಕೆ, ಅವನ ಹೃದಯದಲ್ಲಿ ಜಗತ್ತಿನ ಜೀವನದ ಕಡೆಗಿರಬೇಕಾದ ಸಹಾನುಭೂತಿಯ ಸ್ಥಾನವನ್ನಾಕ್ರಮಿಸಲು ಅದು ಅರ್ಹವಾಗಲಾರದು. ಮನುಷ್ಯನ ಶಿಕ್ಷಣದ ತುದಿ—ಬುಡಗಳೆರಡೂ ಇದರಲ್ಲಿಯೇ ಅಡಕವಾಗಿವೆ. ಮಾನವನ ಅಂತರಂಗದಲ್ಲಿ ಪ್ರಕೃತಿ ಸೌಂದರ್ಯದ ಅನುಭೂತಿಯ ಪರಿಪಕ್ವವಾಗಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ಗಾಂಧಿಯ ಪ್ರಕೃತಿಪ್ರೇಮ ಎಲ್ಲರಿಗೂ ಚೆನ್ನಾಗಿ ಗೊತ್ತು. 'ನನ್ನ ಕೊಟಡಿಯ ಗೋಡೆಗಳೆಲ್ಲ ಬರಿದಾಗಿದ್ದರೂ ಪರವಿಲ್ಲ, ತನ್ನ ತಲೆಯ ಮೇಲೆ ಮಾಡವಿಲ್ಲದಿದ್ದರೂ ದುಃಖವಿಲ್ಲ; ನಕ್ಷತ್ರಖಚಿತ ಆಕಾಶದ ಅನಂತ ವಿಸ್ತಾರದಲ್ಲಿ ಸೂಸುತ್ತಿರುವ ಸೌಂದರ್ಯದಲ್ಲಿ ಕಣ್ಣು ಹಾಯಿಸಿ ಅದರಲ್ಲಿ ಮಗ್ನನಾಗಲು ನನಗೆ ಅನುಕೂಲವೇ ಆಗಬಹುದು. ತಲೆಯೆತ್ತಿದೊಡನೆ ಕಣ್ಣಮುಂದೆ ತೆರೆದು ಬೀಳುವ ಈ ಎಲ್ಲ ಮಿನುಗು ತಾರೆಗಳ ಸೌಂದರ್ಯರಾಶಿಯನ್ನು ಮಾನವನು ನಿರ್ಮಿಸುವ ಯಾವ ಸಾಪೇಕ್ಷ ಕಲಾಕೃತಿ ಕೊಡಬಲ್ಲುದು? ಆತ್ಮದ ಹಾರಾಟಕ್ಕೆ ಆತಂಕವಾಗುವ ಯಾವ ಸಂಗತಿಯೇ ಆಗಲಿ, ಅದೊಂದು ಮಾಯೆ, ಒಂದು ಜಾಲ.'

ಇದರಿಂದ ಗಾಂಧೀಜಿ ಪ್ರಕೃತಿಯೇ ಸೌಂದರ್ಯವೆಂದು ಹೇಳುವವರ ಗುಂಪಿನವರೆಂದು ತೋರಬಹುದು. ಆದರೆ ತದ್ವಿರುದ್ಧವಾಗಿ, ಲೆನಿನನಂತೆ ಗಾಂಧೀಜಿಯವರೂ 'ಉಪವಾಸಿ ಕೋಟಿಗಳಿಗೆ ಉಪಯೋಗವಾಗುವುದೇನೇ ಇದ್ದರೂ ಅದು ಸೌಂದರ್ಯವೆಂದು ನನ್ನ ಭಾವನೆ. ಮೊದಲು ನಾವು ಅವರಿಗೆ ಜೀವನದ ಅಪರಿಹಾರ್ಯ ಅವಶ್ಯಕತೆಗಳನ್ನು ಒದಗಿಸೋಣ, ಅದರ ಹಿಂದೆಯೇ ಜೀವನದ ಎಲ್ಲ ಸೊಗಸುಗಾರಿಕೆ, ಎಲ್ಲ ಅಲಂಕಾರಗಳು ಬರುವವು.....ಕೋಟ್ಯಂತರ ಜನರಿಗೆ ತಿಳಿಯಬಲ್ಲ ಕಲೆ, ಸಾಹಿತ್ಯಗಳನ್ನು ನಾನು ಅಪೇಕ್ಷಿಸುವೆ' ಎನ್ನುವರು.

ಸಂಸ್ಕೃತಿಯ ದ್ವಾರಪಾಲಕರೆನಿಸಿದ ರವೀಂದ್ರನಾಥ ಠಾಕೂರರಿಗೂ ಗಾಂಧೀಜಿಗೂ ನಡುವೆ ಉತ್ಪನ್ನವಾದ ಪ್ರಸಿದ್ಧ ವಿವಾದವೊಂದರಲ್ಲಿ ಗಾಂಧೀಜಿ ತಮ್ಮ ದೃಷ್ಟಿಕೋನವನ್ನೂ ಸದ್ಯದ ಕಾರ್ಯಕ್ರಮವನ್ನೂ ವಿವರಿಸಿದ್ದಾರೆ: "ಕವಿಸಹಜವಾದ ಅಂತರಂಗದಿಂದ ಕವಿ ನಾಳೆಗಾಗಿ ಬಾಳುತ್ತಾನೆ, ನಮಗೂ ಹಾಗೆ ಬಾಳಲು ಉಪದೇಶಿಸುತ್ತಾನೆ. ಬೆಳಗಾಗುತ್ತಲೆ ಪ್ರಾರ್ಥನಾಗೀತಗಳನ್ನು ಹಾಡುತ್ತ ಗಗನಪಥದಲ್ಲಿ ಹಾರಾಡುವ ಪಕ್ಷಿಗಳ ಸುಂದರ ಚಿತ್ರವನ್ನು ನಮ್ಮ ಸಂತುಷ್ಟ ನಯನಗಳಿಗೆ ಸಮರ್ಪಿಸುತ್ತಾನೆ. ಆ ಹಕ್ಕಿಗಳಿಗೆ ದಿನದ ಗುಟುಕು ಲಭಿಸಿತ್ತು, ರಾತ್ರಿಯ ವಿಶ್ರಾಂತಿ ದೊರಕಿತ್ತು; ಅವು ಮುಂಜಾನೆ ತಮ್ಮ ಹೊಸ ಧಮನಿಗಳಲ್ಲಿ ಹೊಸ ನೆತ್ತರವನ್ನು ತುಂಬಿಕೊಂಡು ಉಡ್ಡಾಣ ನಡೆಸಿವೆ. ಆದರೆ ಕಸುವಿಲ್ಲದ ಹಕ್ಕಿಗಳು ಹಲವು ಎಷ್ಟು ಹುರಿದುಂಬಿಸಿದರೂ ರೆಕ್ಕೆ ಬಡಿಯಲೂ ಬಾರದೆ ತೊಳಲುತಿರುವುದನ್ನು ನನ್ನ ದುಃಖಿತ ನೇತ್ರಗಳು ದಿನನಿತ್ಯ ನೋಡುತ್ತಲಿವೆ. ಹಿಂದುಸ್ಥಾನದ ಆಕಾಶದ ಮಾನವ ಪಕ್ಷಿಗಳು ಹಿಂದಿನ ರಾತ್ರಿ ಮಲಗಿದಂತೆ ಮಾಡಿದಾಗ ಇದ್ದದ್ದಕ್ಕಿಂತಲೂ ದುರ್ಬಲವಾಗಿಯೇ ಮರುದಿನ ಮುಂಜಾನೆ ಏಳುವವು. ಕೋಟಿಕೋಟ್ಯಾಂತರ ಜನರಿಗೆ ರಾತ್ರಿಯೆಲ್ಲ ಅನಂತ ಜಾಗರ, ಇಲ್ಲವೆ ಅನಂತ ದುಃಸ್ವಪ್ನ. ಈ ಅತ್ಯಂತ ಯಾತನಾಮಯ ಜೀವನದ ಅರಿವು ಅನುಭವಿಸಿಯೇ ವೇದ್ಯವಾಗಬಲ್ಲದು. ಸಂಕಟದಿಂದ ಸವೆಯುವ ರೋಗಿಗಳನ್ನು ಕಬೀರನ ಗೀತಗಳಿಂದ ಸಮಾಧಾನಗೊಳಿಸುವುದು ಅಸಾಧ್ಯವೆಂದು ನನಗೆ ಪೂರ್ಣ ಮನವರಿಕೆಯಾಗಿದೆ. ಹಸಿದ ಕೋಟ್ಯಾಂತರ ಜನ ಒಂದೇ ಒಂದು ಗೀತವನ್ನು ಬೇಡುತ್ತದೆ—ಅದೇ ಅನ್ನವೆಂಬ ಪ್ರಾಣಪ್ರತಿಷ್ಠಾಪಕ ಗೀತ. ಅದನ್ನು ಕೊಡಲು ಸಾಧ್ಯವಿಲ್ಲ. ಅದನ್ನು ಅವರು ಸಂಪಾದಿಸಬೇಕಾಗಿದೆ, ಮತ್ತು ಹಣೆಯ ಬೆವರು ಹರಿಸಿದ ಮಾತ್ರ ಅದನ್ನು ಸಂಪಾದಿಸಬಹುದು' ಲೆನಿನ್ ಮತ್ತು ಗೋರ್ಕಿ ಇವರೊಳಗೆ ಇಂಥ ಮತಭೇದಗಳಿದ್ದರೂ ಅವರ ಗೆಳೆತನಕ್ಕೆ ಭಂಗ ಬರಲಿಲ್ಲ. ಗಾಂಧಿಜಿ ಠಾಕೂರರ ಸ್ನೇಹ ಸಂಬಂಧವೂ ಹಾಗೆಯೆ.

ಕಸ್ತೂರಬಾ ಅವರ ಚಿತೆಯ ಮುಂದೆ, ಒಂದು ಮರದ ನೆರಳಲ್ಲಿ ಕುಳಿತು ಗಾಂಧಿಜಿ ಪಿಸುಗುಟ್ಟಿದ್ದು, 'ವಿಚಾರಗಳು ಶಬ್ದಗಳಲ್ಲಿ ಉಚ್ಚರಿಸಲ್ಪಡದಿದ್ದರೂ ಅವು ಒಂದು ಕಡೆಯಿಂದ ಇನ್ನೊಂದು ಕಡೆ ಓಡಾಡುವವೆಂದು ನಾನು ಗಟ್ಟಿಯಾಗಿ ನಂಬಿದ್ದೇನೆ.' ಇಂದು ಸಂಸ್ಕೃತಿಯನ್ನು ಕುರಿತು ನಮ್ಮ ವಿಚಾರಗಳ ಪರಿವರ್ತನೆಗೆ ಗಾಂಧಿಜಿಯ ನೂತನ ಸಾಂಸ್ಕೃತಿಕ ತತ್ವಜ್ಞಾನವೇ—ಅದನ್ನು ಕುರಿತು ಅವರು ಆಡಿತೋರಿಸಿದ್ದು ಅತ್ಯಲ್ಪವಾಗಿದ್ದರೂ ಅವರ ನಿಶ್ಶಬ್ದ ಆಚರಣೆಯ ಫಲವಾಗಿ—ಕಾರಣವಾಯಿತೆಂದು ಹೇಳಬೇಕು. ಇಂದು ನಾವು ಅಜಂತದಗೋಸುಗ ಅಭಿಮಾನ ತಳೆದಿದ್ದರೆ, ನಂದಲಾಲ ಬಸುಗಳ ಚಿತ್ರಶಿಲ್ಪವನ್ನು ಅನುಮೋದಿಸುತಿದ್ದರೆ, ಶಾಸ್ತ್ರೀಯ ಸಂಗೀತದಲ್ಲಿ ರುಚಿ ಕಾಣುತಿದ್ದರೆ, ಕಾಳಿದಾಸ, ಠಾಕೂರರ ಕೃತಿಗಳನ್ನು ಸವಿಯಬಲ್ಲವರಾಗಿದ್ದರೆ, ಹಿಂದೀ ಚಿತ್ರಗಳಿಂದ ನಮ್ಮ ಮನೆಗಳನ್ನು ಸಿಂಗರಿಸುತಿದ್ದರೆ, ಹಿಂದೀ ವಸ್ತ್ರಗಳಿಗೆ ಒಲವು ತೋರುತಿದ್ದರೆ, ಅದರ ಪುಣ್ಯವೆಲ್ಲ ಗಾಂಧಿಜಿಯ ಪಾಲಿನದು. ನಮ್ಮ ಮನಸ್ಸಿನ ದಾಸ್ಯ ಶೃಂಖಲೆಯನ್ನು ಮುರಿದ ಅದಮ್ಯವಾದ ಶಕ್ತಿಗಳಿಗೆ ಸಂಚಾಲನೆಯಿತ್ತವರು ಗಾಂಧಿಜಿ. ಇಂದಿಗೂ ನಮ್ಮಲ್ಲಿ ಅನೇಕರು ತಮ್ಮ ತಾಯ್ತಂದೆಯರನ್ನು 'ಮಮ್ಮಾ' 'ಪಪ್ಪಾ' ಎಂದು ಕರೆಯುತಿದ್ದೇವೆ, ಹಿಂದೀ ಸೀರೆಗಳನ್ನು ಉಟ್ಟು ವಿದೇಶೀ ಕುಣಿತ ಕುಣಿಯುತಿದ್ದೇವೆ, ನಮ್ಮ ಸಂಪನ್ನವಾದ ಭಾಷೆಗಳನ್ನು ಬಿಟ್ಟು ಮಕ್ಕಳಿಗೆ ಇಂಗ್ಲೀಷು ಓದಿಸುತಿದ್ದೇವೆ, ಹಿಂದೀ ಶಾಸ್ತ್ರೀಯ ಸಂಗೀತವನ್ನು ತುಚ್ಛೀಕರಿಸಿ ಸಂಕರ ರಾಗಗಳನ್ನು ಹಾಡುತ್ತೇವೆ, ಗಾಂಧಿಜಿಯ 'ಕೌಪೀನ ಮನೋವೃತ್ತಿ'ಯನ್ನು ನಗುತ್ತೇವೆ. ಆದರೆ ಇದು ಕೇವಲ ಮಧ್ಯಕಾಲದ ಸ್ಥಿತಿ. ಇದನ್ನೆಲ್ಲ ನಡೆಸಿದವರೂ ಬರಿ ಚಿಕ್ಕ ಗುಂಪು. ನಮ್ಮ ಉದೀಯಮಾನ ಜನಾಂಗದ ಜೀವನದ ಮೇಲೆ ಅವರ ಪ್ರಭಾವ ಅತ್ಯಲ್ಪ.

ಗಾಂಧಿಜಿಯ ಮೂರ್ತಿ ನಮ್ಮ ಹೃದಯದ ಗರ್ಭಗುಡಿಯಲ್ಲಿ ಪ್ರತಿಷ್ಠಿತವಾಗಿದೆ, ಮಾತ್ರವಲ್ಲ, ಪಶ್ಚಿಮ ಜಗತ್ತಿನಲ್ಲಿಯೂ ಅವರು ಉನ್ನತ ಸ್ಥಾನವನ್ನು ಗಳಿಸಿದ್ದಾರೆ. ಅತ್ಯುನ್ನತ ಸಂಸ್ಕೃತಿಯ ಮೂರ್ತ ಸ್ವರೂಪರಾದ ರೊಮೆರೋಲಾ ಅವರು ತಮ್ಮ ಮನೆಯ ಗೋಡೆಯ ಮೇಲೆ ಎಂಟು ಜನರ ಚಿತ್ರಗಳಿಗೆ ಸ್ಥಾನವಿತ್ತಿದ್ದಾರೆ; ಅವರಾರೆಂದರೆ ಗಯಟೆ, ಬಿಥೋವನ್, ಟಾಲಸ್ಟಾಯಿ, ಲೆನಿನ್, ಗೋರ್ಕಿ, ಈನ್‌ಸ್ಟೀನ್, ಠಾಕೂರ ಮತ್ತು ಗಾಂಧಿ.

1945ನೇ ಇಸವಿಯ
ಶಾರದಾ ಪ್ರೋಕೆಟ್ ಡೈರಿಗಳು
ಬೆಲೆ 0—12—0
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

The MOTORIST
and his Watch!
ಮೋಟಾರು ನಡೆಸುವವ, ಮತ್ತವನ ವಾಚು.
ನಿತ್ಯೋಪಯೋಗಗಳಲ್ಲಿ ವಾಚು ತೃಪ್ತಿಪಡಿಸುವಂತೆ ಮೋಟಾರು ನಡೆಸುವ, ಸವಾರಿ ಇತ್ಯಾದಿ ವಿಶೇಷ ಸಂದರ್ಭಗಳಲ್ಲೂ ಅವುಗಳ ಸೇವೆ ಅಷ್ಟೆ ಅಗತ್ಯ; ಯಾವತ್ತೂ ವೆಸ್ಟ್‌ಎಂಡ್ ವಾಚುಗಳೂ ಬಹಳ ಅನುಕೂಲವಾಗಿವೆ, ಕಾರಣ ಅವುಗಳ ಬಲಿಷ್ಟ ಆಕಾರ, ರಮ್ಯ ಮೆರುಗು ಸರ್ವದಾ "ಭದ್ರ" ಉಪಯೋಗಕ್ಕೆ ಅನುಕೂಲವಾಗಿದೆ.

ನ್ಯೂ ಕೆಲಿಬ್ರೆ 'ಎ-2'
18 ಕ್ಯಾ. ಗಟ್ಟಿ ಭಂಗಾರದ್ದು ರೂ. 200
ಅಕ್ರಮದ ತಲ್ಪೋಣದಿಂದ ಜಾಹೀರಾತಿನ ಎಲ್ಲಾ ನಮೂನೆಗಳನ್ನು ಒದಗಿಸಲಾಗದಿದ್ದರೂ ಸಾಧ್ಯವಿರುವಷ್ಟು "ಆರ್ಡರ್" ಪೂರೈಸಲಾಗುವದು.
ಕಾಗದದ ನಿರ್ಬಂಧದಿಂದ ಕ್ಯಾಟಲಾಗನ್ನು ಕಳುಹಿಸಲಾಗದೆಂದು ವಿಷಾದ.
WEST END WATCH CO.
BOMBAY ◆ CALCUTTA

ನೋಬೆಲನ ಕೊಲೆಯ ಕಾರ್ಖಾನೆ

ಅವನು ಶಾಂತಿ ಬಹುಮಾನ ಕೊಟ್ಟನು

ಜಗತ್ತಿನ ವಿಚಿತ್ರ ಬ್ರಹ್ಮಚಾರಿ

ವಿಶ್ವಕವಿ. ರವೀಂದ್ರನಾಥ ಠಾಕೂರರಿಗೆ ೧೯೧೩ರಲ್ಲಿ ಸುಮಾರು ಹತ್ತು ಸಾವಿರ ಪವನಿನ ಸಾಹಿತ್ಯ ಬಹುಮಾನ ದೊರಕಿತು. ಹದಿನೇಳು ವರ್ಷಗಳ ನಂತರ ಸರ್ ಸಿ. ವಿ ರಾಮನ್ ಅವರಿಗೆ ಅದೇ ಬಹುಮಾನ ಭೌತಿಕ ಶಾಸ್ತ್ರ ಸಂಶೋಧನೆಗಾಗಿ ದೊರೆಯಿತು. ಇಂದು ಜಗತ್ತಿನ ಪ್ರತಿಯೊಂದು ರಾಷ್ಟ್ರವೂ ಈ ಬಹುಮಾನದಿಂದ ಸನ್ಮಾನಿತವಾಗಲು ಹೆಮ್ಮೆಪಡುತ್ತಿದೆ.

ನೋಬೆಲ್ ಪಾರಿತೋಷಕವೆಂದು ಆ ಬಹುಮಾನದ ಹೆಸರು. ಜಗತ್ತಿನ ಶ್ರೇಷ್ಠ ವಿಜ್ಞಾನಿಗಳಿಗೂ, ಸಾಹಿತಿಗಳಿಗೂ ಮತ್ತು ಮಾನವ ಶಾಂತಿಗಾಗಿ ದುಡಿದವರಿಗೂ ಅದು ದೊರಕುವುದು. ಈ ಬಹುಮಾನದ ನಿಧಿಯನ್ನು ನಿರ್ಮಿಸಿದವನು ಆಲ್ಫ್ರೆಡ್ ನೋಬೆಲ್ ಎಂಬ ಯುದ್ಧಾಸ್ತ್ರ ಸಿಡಿಮದ್ದು ತಯಾರಕನೆಂದಾಗ ಕೌತುಕ ಉಂಟಾಗದಿರದು. ಅವನ ಅರುವತ್ತಮೂರು ವರ್ಷ ಆಯುಸ್ಸಿನ ಜೀವನವು ಓದಲು ಅಭಿರುಚಿಯುಳ್ಳದ್ದಾಗಿರುತ್ತದೆ.

ಸ್ವೀಡನ್ ದೇಶದ ರಾಜಧಾನಿಯಲ್ಲಿ ಸಿಡಿಮದ್ದುಗಳನ್ನು ತಯಾರಿಸುತಿದ್ದ ಇಮಾನ್ಯುವೇಲ್ ನೋಬೆಲ್ ಎಂಬವನಿಗೆ ೧೮೩೩ರಲ್ಲಿ ಒಂದು ಗಂಡು ಮಗು ಹುಟ್ಟಲು ಅದಕ್ಕೆ ಆಲ್ಫ್ರೆಡ್ ನೋಬೆಲ್ ಎಂದು ಹೆಸರಿಡಲಾಯಿತು. ಶಾಲೆಯಲ್ಲಿನ ಸಾಮಾನ್ಯ ಶಿಕ್ಷಣದಲ್ಲಿ ಬಾಲಕ ಆಲ್ಫ್ರೆಡನಿಗೆ ಯಾವ ಅಭಿರುಚಿ ಇಲ್ಲದುದರಿಂದ ಅವನು ಯಾವ ಹ್ಯಾಸ್ಕೂಲ್ ವಿದ್ಯೆಯನ್ನೂ ಕೂಡ ಪಡೆಯಲಿಲ್ಲ. ಆದರೆ ತನ್ನ ಇಪ್ಪತ್ತನೆ ವರ್ಷದಲ್ಲಿ ಭಯಂಕರ ಸ್ಫೋಟಕಾರಕ ರಸಾಯನಿಕ ವಸ್ತುಗಳೊಂದಿಗೆ ಅವನು ಸಂಶೋಧನೆ ನಡೆಸಿದನು.

ಹೀಗೆ ಸಿಡಿಮದ್ದುಗಳೊಂದಿಗೆ ಪ್ರಯೋಗ ನಡೆಸುತ್ತಿದ್ದಾಗ ಅವನ ತಂದೆಯ ಕಾರ್ಖಾನೆಯಲ್ಲಿ ದೊಡ್ಡ ಸ್ಫೋಟವಾಗಿ ಅದು ಸಂಪೂರ್ಣ ನಾಶವಾಯಿತು. ಆದರೆ ತರುಣ ಆಲ್ಫ್ರೆಡನು ಅದನ್ನು ಪುನಃ ನಿರ್ಮಿಸಿದನು. ನಂತರ ಒಂದೊಂದಾಗಿ ಹೊಸ ಹೊಸ ರೀತಿಯ ಸಿಡಿಮದ್ದುಗಳನ್ನು ಅವನು ಕಂಡು ಹಿಡಿದನು.

ತರುಣ ವಿಜ್ಞಾನಿ ನೋಬೆಲನು ಕಂಡುಹಿಡಿದ ಶೋಧಗಳಲ್ಲಿ ಪ್ರಾಮುಖ್ಯವೂ ಅತೀ ಪರಿಣಾಮಕಾರಿಯಾದವುಗಳೆಂದರೆ ನೀರಿನಲ್ಲಿ ಕೂಡಾ ಸಿಡಿಯುವ ಬಾಂಬುಗಳು. ಅದಕ್ಕೆ ಮಾಯ್ನುಗಳೆಂದು ಹೇಳುತ್ತಾರೆ. ನೆಲದ ಮೇಲೆ ಶತ್ರುಗಳು ಬರುವ ದಾರಿಯುದ್ದಕ್ಕೆ ಇವನ್ನು ಹೂತು ಸಿಡಿಸಬಹುದು.

ನೋಬೆಲನ ಇನ್ನೊಂದು ಬಹಳ ಪ್ರಖ್ಯಾತ ಶೋಧ ಎಂದರೆ ಹೊಗೆ ಇಲ್ಲದ ಗುಂಡು ಮದ್ದು. ಬಂದೂಕಿನಲ್ಲಿ ಇದನ್ನು ಹಾಕಿ ಬಿಡುವಾಗ ಹೊಗೆ ಏಳುವುದಿಲ್ಲವಾದುದರಿಂದ ಶತ್ರುಗಳಿಗೆ ಅವು ಬಂದ ದಿಕ್ಕನ್ನು ಕಂಡು ಹಿಡಿಯಲಿಕ್ಕಾಗುವುದಿಲ್ಲ.

ಈ ತರುಣ ಸಿಡಿಮದ್ದು ತಯಾರಕನು ದೊಡ್ಡವನಾಗುತಿದ್ದ ಹಾಗೆ ಜಗತ್ತಿನಲ್ಲಿ ಕೀರ್ತಿ ಪಡೆದು ಈಗ ಅವನು ತನ್ನದೆಂದು ಹಕ್ಕು ಕಾಯ್ದಿಟ್ಟುಕೊಂಡ ೩೫೫ ತರದ ಶೋಧಗಳು ಚಲಾವಣೆಯಲ್ಲಿದ್ದು ಹಿಂದಿನ ಮತ್ತು ಇಂದಿನ ಯುದ್ಧದಲ್ಲಿ ಅವುಗಳಿಂದ ಘೋರವಾದ ಮಾನವ ಹತ್ಯೆವು ನಡೆದಿದೆ. ಎಲ್ಲರೂ ತಮ್ಮ ಸೈನ್ಯ ಶಕ್ತಿಯನ್ನು ಹೆಚ್ಚಿಸುವುದಕ್ಕೆ ನೋಬೆಲ್ಲನ ಗುಂಡು ಮದ್ದು ಬಾಂಬುಗಳನ್ನು ತರಿಸಿಕೊಂಡರು. ಹತ್ತು ವರ್ಷಗಳಲ್ಲಿ ಅವನ ಈ ಭೀಕರ ಮದ್ದು ತಯಾರಕ ಹದಿನೈದು ಕಾರ್ಖಾನೆಗಳು ಸ್ಥಾಪಿಸಲ್ಪಟ್ಟವು.

ಹೊಗೆ ಇಲ್ಲದ ಬಂದೂಕು ಮದ್ದು ಕಂಡು ಹಿಡಿದ ವರ್ತಮಾನವು ಬ್ರಿಟಿಷ್ ಸರಕಾರಕ್ಕೆ ತಿಳಿದೊಡನೆ ಅವರು ಗುಪ್ತಚಾರರ ಸಹಾಯದಿಂದ ಅದರ ಮರ್ಮವನ್ನು ತಿಳಕೊಂಡರು. ಕೂಡಲೇ ಇಂಗ್ಲೆಂಡಿನಲ್ಲಿ 'ಕೊಡೈಟ್' ಎಂಬ ಹೊಗೆ ಬಾರದ ಗುಂಡುಮದ್ದು ಬ್ರಿಟಿಷ್ ವಿಜ್ಞಾನಿಗಳಿಂದ ಶೋಧಿಸಲ್ಪಟ್ಟಿದೆ ಎಂದು ಸಾರಲಾಯಿತು. ಇದನ್ನು ತಿಳಿದ ನೋಬೆಲನು ಬ್ರಿಟಿಷ್ ಸರಕಾರದ ಮೇಲೆ ತನ್ನ ತಯಾರಿಕೆಯ ರಹಸ್ಯವನ್ನು ಕದ್ದಿದ್ದಾರೆಂದು ದಾವೆ ಮಾಡಿದನು. ಆದರೆ ತಮ್ಮ ಅಪಾರ ದ್ರವ್ಯ ಬಲದಿಂದ ಬ್ರಿಟಿಷರು ಅವನ ಆರೋಪವನ್ನು ಸುಳ್ಳೆಂದು ತೀರ್ಪು ತೆಗೆದು ಕೊಂಡರು. ಈ ದಾವೆಯಿಂದ ನೋಬೆಲನಿಗೆ ೨೮ ಸಾವಿರ ಪವನು ಖರ್ಚಾಯಿತು. ಅವನು ವನ್ನ ಹಕ್ಕನ್ನು ಪ್ರತಿಪಾದಿಸಲು ಇಷ್ಟೊಂದು ಹಣವನ್ನು ವ್ಯಯಿಸಿದನು.

ಸಿಡಿಮದ್ದು ತಯಾರಿಕೆಯೊಂದಿಗೆ ನೋಬೆಲನು ಕೃತಕ ರೇಶ್ಮೆ, ಚರ್ಮ, ವಾರ್ನಿಸ್ ಪೈಂಟು ಮೊದಲಾದುಗಳನ್ನು ತನ್ನ ಮಹಾ ಚತುರ ತಮ್ಮಂದಿರ ಸಹಾಯದಿಂದ ಸ್ಥಾಪಿಸಿದನು. ಈ ಎಲ್ಲ ತಯಾರಿಕೆಗಳಿಂದ ನೋಬೆಲನ ಬಳಿ ಅಪಾರವಾದ ಹಣವು ಶೇಕರಿಸಲ್ಪಟ್ಟಿತು. ಅವನ ಜೀವನವು ನಿಕಟ ದೇಹಿಕ ಶ್ರಮದಿಂದ ಕೂಡಿತ್ತಾದುದರಿಂದ ಸದಾ ಅವನು ಶಾರೀರಿಕ ಅನಾರೋಗ್ಯದಿಂದ ನರಳುತಿದ್ದು ಆಗಾಗ್ಯೆ ಆರೋಗ್ಯ ಹವಾ ಪ್ರದೇಶಗಳಿಗೆ ಹೋಗಿ ವಾಸಿಸುತಿದ್ದನು.

ಕಡೆಗೆ ಅರುವತ್ತು ವರ್ಷ ಪ್ರಾಯದಲ್ಲಿ ಅವನು ಭಯಂಕರ ದೇಹ ಜಾಡ್ಯವೊಂದಕ್ಕೆ ಸಿಕ್ಕಿ ಬಳಲುವವನಾದನು. ಆಗ ಅವನ ವೈದ್ಯರು ಅವನಿಗೆ ಸಿಡಿಮದ್ದುಗಳಿಗೇ ಉಪಯೋಗಿಸಲ್ಪಡುವ ಸಾರಜನಕದ ಅನಿಲವನ್ನೊಳಗೊಂಡ ಔಷಧಿಯನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದುದು ತುಂಬಾ ಸಾರಸ್ಯವಾಗಿರುತ್ತದೆ. ಕೊಲ್ಲುವ ದ್ರಾವಕವೇ ಜೀವಿಸಲು ಉಪಯೋಗಿಸಬಹುದು. ಅಂತೂ ಮೂರು ವರ್ಷಗಳ ರೋಗ ಯಾತನೆಯಿಂದ ೧೮೯೬ರಲ್ಲಿ ಈ ಸಿಡಿಮದ್ದಿನ ದೊರೆಯು ಮರಣಪಟ್ಟನು.

ನೋಬೆಲನು ಅದೆಂತಹ ವಿಚಿತ್ರ ವ್ಯಕ್ತಿ ಎಂಬುದು ಅವನ ಜೀವಮಾನ ಚರಿತ್ರೆಯನ್ನು ಓದಿದರೆ ತಿಳಿಯುತ್ತದೆ. ಹೆಚ್ಚಾಗಿ ಅವನು ರಹಸ್ಯವಾಗಿಯೇ ತನ್ನ ಜೀವನವನ್ನು ಕಳೆದವನಾದುದರಿಂದ ಅವನ ವಿಷಯವಾಗಿ ಸವಿಸ್ತಾರವಾದ ಸಂಗತಿಗಳು ಯಾರಿಗೂ ತಿಳಿದಿಲ್ಲ.

ಆದರೂ ನೋಬೆಲನು ಸಾಯುವ ತನಕ ಬ್ರಹ್ಮಚಾರಿಯಾಗಿಯೇ ಉಳಿದನು. ಕಾರಣ ತಾರುಣ್ಯದಲ್ಲಿ ಅವನಿಂದ ಪ್ರೀತಿಸಲ್ಪಟ್ಟಿದ ಓರ್ವ ತರುಣಿಯು ಅಲ್ಪಾಯುಷಿನಲ್ಲೇ ತೀರಿ ಹೋದಳು. ಅಂದಿನಿಂದ ಅದನು ಅವಿವಾಹಿತನಾಗಿಯೇ ಉಳಿದನು. ಏಕಾಂಗಿ ಜೀವನದ ಬೇಸರಿಕೆಯ ಕುರಿತು ಅವನು ತುಂಬಾ ವ್ಯಥೆಪಟ್ಟು ಕೊರಗುತಿದ್ದನು.

ರಸಾಯನಿಕ ವಿಜ್ಞಾನಿಯಾಗಿದ್ದ ನೋಬೆಲನು ಯುರೋಪ್ ಅಮೇರಿಕಾಗಳಲ್ಲಿ ವಿಶಾಲ ಸಂಚಾರಮಾಡಿದ್ದನು. ಅವನು ತನ್ನ ಮಾತೃಭಾಷೆಯನ್ನಲ್ಲದೆ ಜರ್ಮನ್ ಲೇಟಿನ್ ಫ್ರೆಂಚ್ ಇಂಗ್ಲಿಂಷ್ ಭಾಷೆಗಳಲ್ಲೂ ತುಂಬಾ ಪ್ರವೀಣನಿದ್ದನು. ಮಾತ್ರವಲ್ಲ ಅನೇಕ ಸಣ್ಣ ಕತೆಗಳನ್ನೂ ಕವಿತೆಗಳನ್ನೂ ಬರೆದು ಇವನು ಸಾಹಿತ್ಯ ಕಲೆಯಲ್ಲೂ ವ್ಯವಸಾಯ ಮಾಡಿ ಕೀರ್ತಿಗಳಿಸಿದ್ದಾನೆಂಬ ವಿಷಯವು ಆಶ್ಚರ್ಯಗೊಳಿಸುವಂತದಾದರೂ ನಿಜವಾದುದು.

ಈ ಸಾಹಿತ್ಯ ಪ್ರೇಮವೇ ಮುಂದೆ ನೋಬೆಲ್ ಸಾಹಿತ್ಯ ಪಾರಿತೋಷಕಕ್ಕೆ ಕಾರಣವಾಯಿತೆನ್ನಬಹುದು. ಹಳೇ ರೋಗಿಯಾದುದರಿಂದ ವೈದಕೀಯದಲ್ಲೂ ಇವನಿಗೆ ತುಂಬಾ ಅಭಿರುಚಿಯಿದ್ದಿತು. ಆದುದರಿಂದಲೇ ವೈದ್ಯವಿಜ್ಞಾನಿಗೂ ಒಂದು ಬಹುಮಾನವನ್ನು ಅವನು ಇಟ್ಟಿರುವನು. ಭೌತಿಕ, ರಸಾಯನಿಕ ವಿಜ್ಞಾನ ಶಾಸ್ತ್ರದಲ್ಲಿ ಅವನು ಸ್ವಂತ ಪರಿಶ್ರಮಿಸಿ ಅನುಭವವಿದ್ದವನಾದುದರಿಂದ ತನ್ನ ಮರಣ ಶಾಸನದಲ್ಲಿ ಅವೆರಡರ ಶ್ರೇಷ್ಠ ವಿಜ್ಞಾನಿಗಳಿಗೂ ಅವನು ಬಹುಮಾನ ಕೊಡಬೇಕೆಂದು ಬರೆದಿಟ್ಟನು.

ಅವನ ಇನ್ನೊಂದು ಬಹುಮಾನವೆಂದರೆ ಶಾಂತಿ ಪಾರಿತೋಷಕ. ನೋಬೆಲನು ಈ ಬಹುಮಾನಗಳಿಗಾಗಿ ನಿರ್ಮಿಸಿದ ನಿಧಿಯು ಭಯಂಕರ ಜೀವನಾಶಕ ವಸ್ತುಗಳಿಂದಾದರೂ ಅಂತ್ಯದಲ್ಲಿ ಅವನ ಆತ್ಮಕ್ಕೆ ಅದರಿಂದ ಶಾಂತಿ ದೊರಕಲಿಲ್ಲವೆಂಬುದಕ್ಕೆ ಅವನಿಟ್ಟ ಶಾಂತಿ ಬಹುಮಾನವೇ ನಿದರ್ಶನ—ಪಾಪ ಮಾಡಿದವರು ಹರಿಕೆ ಹೇಳಿಕೊಂಡ ಹಾಗೆ. ಅಂತೂ ಇಷ್ಟೊಂದು ಸಾರ್ಥಕದ ಕೆಲಸವನ್ನಾದರೂ ಅವನು ಮಾಡಿ ಮಡಿದನೆಂದು ಸಮಾಧಾನ ಪಟ್ಟುಕೊಳ್ಳಬಹುದು.

ಈ ನೋಬೆಲ್ ಬಹುಮಾನ ನಿಧಿಯು ಸ್ವೀಡನ್ ದೇಶದ ಅರಸರ ಧರ್ಮದರ್ಶಿತ್ವದಲ್ಲಿದೆ. ಅಲ್ಲಿನ ಪ್ರಖ್ಯಾತ ವಿಶ್ವವಿದ್ಯಾಲಯದವರು ಅದನ್ನು ಯೋಗ್ಯ ವಿಜ್ಞಾನಿಗಳಿಗೂ ಶ್ರೇಷ್ಠ ವ್ಯಕ್ತಿಗಳಿಗೂ ಅದನ್ನು ವಿತರಣೆಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ. ಒಂದೊಂದು ನೋಬೆಲ್ ಪಾರಿತೋಷಕದ ಮೌಲ್ಯವು ಸುಮಾರು ಹತ್ತು ಸಾವಿರ ಪವನುಗಳಷ್ಟಿರುವದು. ಪ್ರತಿ ವರ್ಷದ ಒಕ್ಟೋಬರ್ ತಿಂಗಳಲ್ಲಿ ಪಾರಿತೋಷಕ ಗೆದ್ದ ಐವರ ಹೆಸರನ್ನು ಪ್ರಕಟಿಸುವರು. ಅವರೆಂತಹ ವ್ಯಕ್ತಿಗಳು! ವಿಜ್ಞಾನ, ಸಾಹಿತ್ಯಗಳಲ್ಲಿ ಅದ್ವಿತೀಯ ವ್ಯವಸಾಯ ಪರಿಶ್ರಮಪಟ್ಟ ವ್ಯಕ್ತಿಗಳು. ಅವರು ಮಾನವ ಪ್ರಗತಿಗೆ ತಮ್ಮ ಅಮೋಘ ಶೋಧೆ, ಸಾಹಿತ್ಯಗಳಿಂದ ಅಮರ ಸೇವೆಸಲ್ಲಿಸಿದಂತವರು.

ಇದುತನಕ—ಅಂದರೆ ೧೯೦೧ರಿಂದ—೧೩೮ ನೋಬೆಲ್ ಬಹುಮಾನಗಳು ಹಂಚಲ್ಪಟ್ಟಿವೆ, ಕೆಲವು ಸಲ ಒಂದೇ ಬಹುಮಾನ ಇರ್ವ ಸಮಾನ ಶ್ರೇಷ್ಠತೆಯ ವ್ಯಕ್ತಿಗಳಿಗೆ ಹಂಚಲಾಗಿದೆ. ಅಂದರೆ ಇವನ್ನು ೨೧೯ ಸಮರ್ಥರು ಪಡೆದಿದ್ದಾರೆ. ಅವರಲ್ಲಿ ನಮ್ಮ ಕವಿರವೀಂದ್ರರೂ, ಸರ್ ಸಿ. ವಿ. ರಾಮನರೂ ಇಬ್ಬರು.

ವಿಶೇಷವೆಂದರೆ ಅತೀ ಹೆಚ್ಚು ಬಹುಮಾನ ಪಡೆದವರು ಜರ್ಮನ್ ವಿಜ್ಞಾನಿಗಳು ಮತ್ತು ಸಾಹಿತಿಗಳು. ೧೯೩೬ರಲ್ಲಿನ ಶಾಂತಿ ಬಹುಮಾನವು ನಾಜಿಗಳ ಸೆರೆಯಲ್ಲಿ ಕೊಳೆಯುತಿದ್ದ ಕಾರ್ಲ್‌ವೊನ್ ಒಸಿಟ್‌ಸ್ಕಿಎಂಬ ಜರ್ಮನ್ ಶಾಂತಿ ಪ್ರಚಾರಕನಿಗೆ ದೊರಕಿತು. ಆಗ ಹಿಟ್ಲರನು ತನ್ನ ಅಧಿಕಾರ ದರ್ಪದ ದಿಗಂತದಲ್ಲಿ ಮೆರೆಯುತಿದ್ದನು. ತನ್ನ ಸೆರೆಯಾಳಿಗೆ ಬಹುಮಾನವೆ? ಅಂದಿನಿಂದ ಅವನು ಒಂದು ಹೊಸ ಬಹುಮಾನ ನಿಧಿಯನ್ನು ಪ್ರಾರಂಭಿಸಿ, ನೋಬೆಲ್ ಬಹುಮಾನವನ್ನು ಯಾವ ಜರ್ಮನನೂ ಪಡೆಯಬಾರದೆಂದು ಆಜ್ಞೆಮಾಡಿದ. ತಮ್ಮ ಜ್ಞಾನ ವಿಕಾಸಕ್ಕೆ ತೊಡಕುಂಟಾಗುವುದೆಂದು ನಂಬಿದ ಅನೇಕ ವಿಜ್ಞಾನಿಗಳು ಜರ್ಮನಿಯನ್ನು ತೊರೆದು ವಿದೇಶಗಳಲ್ಲಿ ನೆಲೆಸುವವರಾದರು.

ಇವಿಷ್ಟು ಈ ವಿಚಿತ್ರ ಬಹುಮಾನಕ್ಕೆ ಸಂಬಂಧಿಸಿದ ಸಂಗತಿಗಳು. ಯುದ್ಧಕ್ಕಿಂತ ಶಾಂತಿಯೇ ಮೇಲೆಂಬ ತತ್ವವನ್ನು ನೋಬೆಲನು ಕಾರ್ಯತಃ ಮಾಡಿ ತೋರಿಸಿಕೊಟ್ಟಂತಾಗಲಿಲ್ಲವೆ?

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

1945 1945

ಆಫೀಸು ಕೆಲೆಂಡರುಗಳು

ಮಾರಾಟಕ್ಕೆ ಸಿದ್ಧವಾಗಿವೆ

ಬೆಲೆ 1ರ 0-4-0

ವ್ಯಾಪಾರಿಗಳಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಪ್ರೆಸ್ ರಥಬೀದಿ ಮಂಗಳೂರು

ಸಿಹಿ ಸುದ್ದಿ ಸಂಗ್ರಹ

ಅಲ್ವಾರ್ ಸಂಸ್ಥಾನದಲ್ಲಿ ಒಂದು ಎತ್ತು ತನ್ನ ಬುದ್ಧಿ ಶಕ್ತಿ ಪ್ರದರ್ಶನವನ್ನು ಅಲ್ಲಿನ ಮಹಾರಾಜರ ಮುಂದೆ ಮಾಡಿ ತೋರಿಸಿತು. ಕಿಕ್ಕಿರಿದ ಸಭೆಯಲ್ಲಿನ ಅತೀ ವೃದ್ಧನನ್ನೂ, ಬಹಳ ವಿದ್ಯಾವಂತ ಪಂಡಿತನನ್ನೂ ಅದು ತನ್ನ ಮೂತಿಯಿಂದ ಮುಟ್ಟಿ ತೋರಿಸಿ ಕೊಟ್ಟಿತು. ತನ್ನ ಯಜಮಾನನು ತೋರಿಸಿಕೊಡೆಂದು ಹೇಳಿದ ವ್ಯಕ್ತಿಯನ್ನು ಅದು ತನ್ನಷ್ಟಕ್ಕೆ ತೋರಿಸಿಕೊಡುತ್ತದೆ. ಅವರ ಹೆಸರು ಶಂಭೂನಾಥ್.

* * *

ಯುನೈಟೆಡ್ ಸ್ಟೇಟ್ಸನಲ್ಲಿ ಪ್ರತಿ ನಾಲ್ಕರಲ್ಲಿ ಒಬ್ಬನಂತೆ ಪೆಟೆಂಟ್ ಔಷಧಿಗಳನ್ನು ತೆಗೆದು ಕೊಳ್ಳುತ್ತಾರೆ. ಈ ಔಷಧಿಗಳು ಅಲ್ಲಿನ ಸರಕಾರದ ವೈದ್ಯಕೀಯ ಸಂಶೋಧನಾ ಖಾತೆಯಿಂದ ಯೋಗ್ಯವೆಂದು ಶಿಫಾರಸುಮಾಡಲ್ಪಟ್ಟ ಔಷಧಿಗಳು. ಇವನ್ನು ಉಪಯೋಗಿಸಲು ವೈದ್ಯರ ಸಲಹೆ ಬೇಕಾಗಿರುವುದಿಲ್ಲ. ೧೦೦ ಕೋಟಿ ಪವನಿನ ಒಟ್ಟು ಬಂಡವಾಳದ ಈ ಔಷಧಿ ತಯಾರಕ ಕಂಪೆನಿಗಳು ಅಲ್ಲಿವೆ. ಪ್ರತಿ ವರ್ಷ ೨೦ ಕೋಟಿ ಪವನಿನಷ್ಟು ಖರ್ಚಾಗುತ್ತವೆ.

* * *

ಸೈನ್ಯದ ಸಹಾಯ ಮಾಡುವ ನಾಯಿಗಳನ್ನು ತರಬೇತು ಮಾಡುವುದು ಫ್ರೆನ್ಸಿಸ್ ಹೋರೆಸ್‌ನ ಕೆಲಸ. ಅವನಿಗೆ ಒಂದು ನಾಯಿಯ ಮೇಲೆ ಬಹಳ ಪ್ರೀತಿ ಬಿತ್ತು. ಕೆಲವು ಸಮಯದ ಮೇಲೆ ಅವನಿಗೆ ಬೇರೆ ಕೆಲಸ ಕೊಟ್ಟರು. ತನ್ನ ನಾಯಿಂದ ಅಗಲಿದ ದುಃಖದಿಂದ ಅವನು ಆತ್ಮಹತ್ಯ ಮಾಡಿಕೊಂಡನು.

* * *

ಪ್ರೆಸಿಡೆಂಟ್ ರೂಸ್‌ವೆಲ್ಟರ 'ಫಾಲಾ' ಎಂಬ ನಾಯಿ 'ವರ'ನಿಗೂ, ಜನರಲ್ ಐಶನ್‌ಹಾವರ ರೂಬೆವ್ ಎಂಬ ಶುನಕ 'ವಧೂ'ವಿಗೂ ಸದ್ಯದಲ್ಲೇ ವಿವಾಹವಾಗಲಿರುವುದು. ಆಗಲೇ ಅಧಿಕಾರ ಯುಕ್ತವಾಗಿ ವಿವಾಹ ಪ್ರಸ್ತಾಪ ಮುಗಿದಿದೆ.

* * *

ಚೀನದ ವ್ಯಾಪಾರಿಗಳಲ್ಲಿ ಯುದ್ಧದೆಸೆಯಿಂದ ವಿಪುಲ ಹಣ ಸಂಪಾದನೆಯಾಗಿರುತ್ತದೆ. ಕಳ್ಳ ಸಂತೆ ಅಲ್ಲಿಯೂ ಇದೆ. ಈಚೆಗೆ ಒಬ್ಬ ಹಣ್ಣು ಮಾರುವವನು ಬಿದಿರಿನ ಕಡ್ಡಿಗೆ ನೋಟುಗಳನ್ನು ಸಿಕ್ಕಿಸಿ ನೊಣಗಳನ್ನು ಓಡಿಸುವ ಬೀಸಣಿಗೆ ಮಾಡಿದ್ದನಂತೆ— ನೋಟುಗಳು ಅಲ್ಲೂ ಅಷ್ಟು ಹೆಚ್ಚಾಗಿವೆ.

* * *

ಒಂದು ವಿಚಿತ್ರ ಶವ-ಸಂಗ್ರಹಾಲಯವನ್ನು ರಚಿಸಲು ಓರ್ವ ರಷ್ಯನ್ ವಿಜ್ಞಾನಿಯು ಪ್ರಯತ್ನಿಸುತ್ತಲಿದ್ದಾನೆ. ವಸ್ತುಗಳು ಹಿಮಗಡ್ಡೆಯಲ್ಲಿ ಎಷ್ಟು ವರ್ಷ ಹೋದರೂ ಹಾಳಾಗುವುದಿಲ್ಲವೆಂಬ ತತ್ವದ ಮೇಲೆ, ಸೈಬಿರಿಯದ ಉತ್ತರಕ್ಕಿರುವ ತುಂದ್ರಾ ಹಿಮ ಪ್ರದೇಶದ ಗುಹೆಗಳಲ್ಲಿ, ಜಗತ್ತಿನಲ್ಲಿನ ಪ್ರತಿಯೊಂದು ಜನಾಂಗದ ಒಬ್ಬೊಬ್ಬ ಮನುಷ್ಯನ ಶವವನ್ನೂ, ಮತ್ತು ಪ್ರತಿಯೊಂದು ಮೃಗ ಪಕ್ಷಿಗಳ ಮೃತ ಶರೀರಗಳನ್ನೂ ಇರಿಸುವುದು ಅವನ ಯೋಜನೆ. ಮುಂದಿನ ಜನರಿಗೆ ಅದರಿಂದ—ಪ್ರಯೋಜನ ದೊರೆಯಲೆಂದು.

* * *

ಕಲ್ಕತ್ತದ ಬಳಿಯ ಚಿತ್‌ಪುರ್ ಎಂಬಲ್ಲಿ ಚಾಂದರಾಣಿ ಎಂಬ ಅತ್ತೆಯು ಮಕ್ಕಳನ್ನು ಪಡೆಯದ ತನ್ನ ಸೊಸೆ ಸತ್ತರೆ ಮಗನಿಗೆ ಎರಡನೇ ಮದುವೆ ಮಾಡಿಸಿ ಮೊಮ್ಮಕ್ಕಳನ್ನು ಪಡೆಯ ಬಹುದೆಂಬ ಉದ್ದೇಶದಿಂದ ಆ ೨೪ ವಯಸ್ಸಿನ ಸೊಸೆಯನ್ನು ಚಿಮಿಣಿ ಎಣ್ಣೆ ಎರೆದು ಬೆಂಕಿ ಕೊಟ್ಟಳು. ಪತಿಯ ಹಿತ ದೃಷ್ಟಿಯಿಂದ ಪತಿ ಪರಾಯಣೆಯಾದ ಆ ಸೊಸೆಯೂ ಈ ತರದ ಮರಣಕ್ಕೆ ಒಪ್ಪಿಕೊಂಡಳಂತೆ. ಈಗ ಅತ್ತೆ ಕೋರ್ಟು ವಿಚಾರಣೆಗೆ ಗುರಿಯಾಗಿರುವಳು.

* * *

ಸಾಮಾನ್ಯವಾದ ಒಂದು ಇಲಿ ವರ್ಷಕ್ಕೆ ೬ರೂ. ಬೆಲೆಯ ದವಸಧಾನ್ಯ ವಸ್ತುಗಳನ್ನು ತಿಂದು ಬೆಳೆಯುತ್ತದೆ. ನಮ್ಮ ದೇಶದಲ್ಲಿ ಜನ ಸಂಖ್ಯೆಯಷ್ಟೆ (೪೦ಕೋಟಿ) ಇಲಿಗಳಿದ್ದಾವೆಂದು ಊಹಿಸಿದರೆ ಅವುಗಳನ್ನು ಸಾಕಲು ೨೪೦ಕೋಟಿ ರೂಪಾಯಿಗಳಷ್ಟು ಬೇಕು. ನೂರು ಇಲಿಗಳು ವರ್ಷಕ್ಕೆ ೪ ಖಂಡಿಯಷ್ಟು ಆಹಾರ ಪದಾರ್ಥಗಳನ್ನು ತಿಂದು ಹಾಕುತ್ತವೆ. ೧ ಜೋಡಿ ಇಲಿಗಳು ಒಂದು ವರ್ಷದಲ್ಲಿ ೮೦೦ ಮೂಷಿಕಗಳನ್ನುಂಟು ಮಾಡಬಲ್ಲುದು.

* * *

ಸಮುದ್ರದಲ್ಲಿ ೨೪೦ ಪ್ರತಪ್ರತ್ಯೇಕ ಟೆಲಿಗ್ರಾಫ್ ತಂತಿಗಳಿವೆ. ಇವುಗಳ ಒಟ್ಟು ಉದ್ದ ೨೫೦೦೦ ಮೈಲು. ಇವುಗಳು ಎಲ್ಲಿಯಾದರೂ ಕಡಿದು ಹೋದರೆ ಜಗತ್ತಿನ ವ್ಯಾಪಾರ ವಹಿವಾಟು ಸಂಬಂಧಗಳೇ ಕಡಿದಂತಾಗುತ್ತದೆ.

* * *

ಆಸ್ಟ್ರೇಲಿಯದ ಓರ್ವ ಶ್ರೀಮಂತ ಯುವಕನ ಎದೆಗುಂಡಿಗೆಗೆ ಸುತ್ತಲೂ ಒಂದು ತರದ ಸಿಮೆಂಟಿನಂತಹ ಗಟ್ಟಿ ಪದಾರ್ಥವು ಆವರಿಸಿತ್ತು. ಇನ್ನು ಆರು ತಿಂಗಳಲ್ಲಿ ಅವನು ಮರಣ ಹೊಂದುವವನಾಗಿ ಅಲ್ಲಿನ ವೈದ್ಯರು ತಿಳಿಸಿದರು. ಅವನು ಕೂಡಲೇ ಅಮೇರಿಕದ ಒಂದು ಪ್ರಖ್ಯಾತ ಆಸ್ಪತ್ರೆಗೆ ಹೋದನು. ಅಲ್ಲಿನ ನಿಪುಣ ವೈದ್ಯರು ಅವನ ಎದೆಯನ್ನು ಕತ್ತರಿಸಿ, ಹೃತ್ಕೋಶವನ್ನು ಹೊರ ತೆಗೆದು ಅದರ ಸುತ್ತಲಿನ ಗಟ್ಟಿ ಪದಾರ್ಥವನ್ನು ಕೊಯ್ದು ಪುನಃ ಇರಿಸಿ ಹೊಲಿದು ಬಿಟ್ಟರು-ಎಲ್ಲವನ್ನೂ ಮೂರೇ ಮಿನಿಟುಗಳಲ್ಲಿ. ಯುವಕ ಗುಣಹೊಂದಿ ಮರಳಿದ.

* * *

ಮಹಾತ್ಮಾ ಗಾಂಧಿಯವರು ದ. ಆಫ್ರಿಕದಲ್ಲಿದ್ದಾಗ ತಮಿಳು ಭಾಷೆಯನ್ನು ಕಲಿತಿದ್ದು, ಇತರರಿಗೂ ಕಲಿಸುತಿದ್ದರು. ಅವರಿಗೆ ತೆಲುಗು, ಕನ್ನಡಗಳ ಸ್ವಲ್ಪ ಪರಿಜ್ಞಾನವೂ ಇದೆ. ಈ ಕಡೆಗಳಲ್ಲಿ ಅವರು ಬಹಳ ಸಮಯ ಆರೋಗ್ಯಕ್ಕಾಗಿ ಇದ್ದರು.

ದಕ್ಷಿಣ ಕನ್ನಡ ಸೆಂಟ್ರಲ್ ಕೊ-ಓಪರೇಟಿವ್ ಬೆಂಕ್, ಲಿಮಿಟೆಡ್, ಮಂಗಳೂರು

ನಿರುಖು ಠೇವಣಾತಿಗಳ ಬಡ್ಡಿದರ

ಒಂದು ವರ್ಷಕ್ಕೆ	ಶೇಕಡಾ 3.
ಆರು ತಿಂಗಳಿಗೆ	ಶೇಕಡಾ 2¼.

ಸಹಕಾರಿ ಸಂಘಗಳಿಗೆ ಶೇಕಡಾ ¼ರಂತೆ ಜಾಸ್ತಿ ಕೊಡಲಾಗುವುದು.

ಕಾರ್ಯದರ್ಶಿ.

ANNOUNCEMENT

We have pleasure to announce that we will shortly be opening branches at:—

COIMBATORE
ERODE
MADURA
SALEM

A vital link for those in business and trade with the above centres, or others desiring to establish new connections with them, will be provided with the opening of these branches.

We extend a hearty invitation to all to avail of the new services and opprtunities offered by us.

Estd: 1906.

CANARA BANK, LIMITED.

(Incorporated in British India, Liability of Members Limited.)

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE BANK OF MANGALORE, Ltd.,

MANGALORE.

Interest on Fixed Deposits.

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date willalso be paid accordingly w th effect from 1-1-1945

Office of the Bank, Mangalore, 30th Oct. 1944.

By Order
H. S. KAMATH, *Manager*

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾದ, ಅದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: **ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ** ಮತ್ತು **ಉಡುಪಿ.**

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್‌ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

1945

1945

ಎದೆಕೊಟ್ಟು ಏಳುವರೆ ವರ್ಷಗಳಿಂದೆ ...ದೆ. ಇದು ಜಗತ್ತಿನ ವಿಚಿತ್ರ ...ಗಳ ಕುಮಿಂಗ್, ... ಅಭಿಯೋಗ ... ಅಮೇರಿ ...ಯ

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 5—1—1945 [ಸಂಚಿಕೆ 1]

ಇಸ್ಲಾಮದ ಗೆಳೆಯ

[ಲೇಖಕ:- ಕೆ. ಎ. ಅಬ್ಬಾಸ್]

ಜುಹೂ ಕಡಲದಂಡೆಯಲ್ಲಿ ಅದೊಂದು ಚಿರಸ್ಮರಣೀಯ ಸಂಧ್ಯಾಕಾಲ. ಗಾಂಧೀಜಿಯ ಸಂಧ್ಯಾ-ಪ್ರಾರ್ಥನೆಯಲ್ಲಿ ಅವರೊಡನೆ ಸೇರಲು ಹತ್ತು ಸಾವಿರ ಜನರು ನೆರೆದಿದ್ದಾರೆ. ಗಾಂಧೀ-ಆಶ್ರಮದ ನಿವಾಸಿಗಳು ವಿವಿಧ ಧರ್ಮಗಳ ಭಜನ ಗೀತಗಳನ್ನು ಹಾಡುತಿದ್ದಾರೆ. ಪ್ರತಿಮೆಯಂತೆ ನಿಶ್ಚಲರಾಗಿ ಕುಳಿತು ಗಾಂಧೀಜಿ ಆ ಭಜನಗಳ ರಾಗತರಂಗಗಳನ್ನು ಆಲಿಸುತಿದ್ದಾರೆ.

ಆ ಸಂಸ್ಕೃತ ಸ್ತೋತ್ರ, ಆ ತುಲಸೀದಾಸರ ಹಿಂದೀ ಪದ ಎಲ್ಲರ ಕಿವಿಗಳಿಗೂ ಚಿರಪರಿಚಿತವಾದವುಗಳೆ. ಆದರೆ ಅಕಸ್ಮಾತ್ತಾಗಿ ನೂತನ ಆಲಾಪನೆಯೊಂದು ಮುಚ್ಚಂಜೆಯ ಪ್ರಶಾಂತ ವಾತಾವರಣದಲ್ಲಿ ಕಲಕಲ ಎಬ್ಬಿಸಿತು. ಅದರ ಧ್ವನಿ ಉಚ್ಚವಾಗಿದ್ದರೂ ಮೃದುಲ, ಶಾಂತವಾಗಿದ್ದರೂ ಸ್ಫೂರ್ತಿದಾಯಕ. "ಬಿಸ್ಮಿಲ್ಲಾಹ್-ಇರ್ರಹ್ಮಾನ್-ಉರ್-ರಹೀಮ್"-ಕರುಣಾಘನ ಪರಮಾತ್ಮನ ನಾಮಕೆ ನಮೊ ಎಂಬೆ. "ಅಲ್ಹಮ್ದ್ ಉಲಿಲ್ಲಾಹಿರಬ್ಬಿ'ಲ್ ಅಲಾಮೀನ್. ಉರ್ರಹೀಮೋ ಮಲಿಕ್-ಎ-ಯಾಮುದ್ದೀನ್........"-ಸಕಲ ವಿಶ್ವಗಳೊಡೆಯ, ಕರುಣಾಕರಾ, ಪ್ರಲಯದಿನದಲಿ ಸಕಲ ಕರ್ಮಫಲಶಾಸಕಾ, ಸಕಲ ಸ್ತೋತ್ರಂಗಳೂ ನಿನಗರ್ಪಿತ.

ಪವಿತ್ರ ಕುರಾಣದ ಒಂದು ಶ್ಲೋಕದ ಪಾರಾಯಣವದು ಎಂಬ ಮಾತು ಅಲ್ಲಿ ನೆರೆದ ಜನಜಂಗುಳಿಯಲ್ಲಿ ನೂರಕ್ಕೊಬ್ಬನಿಗಾದರೂ ತಿಳಿಯಿತೋ ಇಲ್ಲವೋ. ಇಸ್ಲಾಂ ಗ್ರಂಥದ ಒಂದೆರಡು ಶ್ಲೋಕಗಳನ್ನಾದರೂ ಪಠಿಸದೆ ತಮ್ಮ ಪ್ರಾರ್ಥನೆ ಸಾಂಗವಾಯಿತೆಂದು ಗಾಂಧೀಜಿ ಸರ್ವಥಾ ಭಾವಿಸುವುದಿಲ್ಲೆಂದೂ ಎಷ್ಟೋ ಜನರಿಗೆ ಗೊತ್ತಿದ್ದಿರಲಿಕ್ಕಿಲ್ಲ. ಅದನ್ನು ಅರಿತಿದ್ದ ಕೆಲವರಾದರೂ ಆ ಸಂದರ್ಭದ ಇಂಗಿತವನ್ನು ಚಿಂತಿಸಲು ಹವಣಿಸಲಿಲ್ಲ.

ಜಿನ್ನಾ ಸಾಹೇಬರೂ ಅವರ ಹೊಣೆಗೆಟ್ಟ ಬೆಂಬಲಿಗರೂ ಗಾಂಧೀಜಿಯು ಮುಸ್ಲಿಮರ ಮತ್ತು ಇಸ್ಲಾಂ ಧರ್ಮದ ವೈರಿಯೆಂದು ನಿಂದಿಸುತ್ತಾರೆ. ಅಂಥ ಮನುಷ್ಯನಿಗೆ ಕುರಾಣದ ಶ್ಲೋಕಗಳಿಂದ ಸ್ಫೂರ್ತಿಲಾಭವಾಗುತ್ತಿರುವುದು ಎಂಥ ವಿಚಿತ್ರ!

ಅಗಸ್ಟ್ ೯ರ ಆ ಮಹಾ ದುರ್ದಿನದಂದು ಅವರನ್ನು ಪೋಲೀಸರು ಕರೆದೊಯ್ಯುತಿದ್ದಾಗ ಅವರು ಪ್ರಾರ್ಥನೆಗಾಗಿ ಕೆಲವು ನಿಮಿಷಗಳ ಅವಕಾಶ ಕೇಳಿದರು. ಆ ಪ್ರಾರ್ಥನಾಸ್ತೋತ್ರಗಳಲ್ಲಿ ಕುರಾಣದ ಶ್ಲೋಕಗಳೂ ಸೇರಿದ್ದವು. ಅವರು ತಮ್ಮೊಡನೆ ಒಯ್ದ ಪುಸ್ತಕಗಳು ಬರಿ ನಾಲ್ಕಾರು. ಅವುಗಳಲ್ಲಿ ಕುರಾಣಗ್ರಂಥ ಒಂದು.

ಇದೆಲ್ಲ ನಟನೆ ಇರಬಹುದೆ? ಮುಸ್ಲಿಮರನ್ನು ವಂಚಿಸುವ ಕಪಟನಾಟಕವಿರಬಹುದೆ? "ಅಲ್ಲ"-ಎಂಬುದೇ ಅದಕ್ಕೆ ಸ್ಪಷ್ಟವಾದ ಉತ್ತರ. ಇಸ್ಲಾಮದಲ್ಲಿ ಗಾಂಧೀಜಿಗೆ ಶ್ರದ್ಧಾ-ಆಸಕ್ತಿಗಳು ಮೂಡಿ ಐವತ್ತು ವರ್ಷ ಮೇಲಾಯಿತು. ಅವು ಅವರ ರಾಜಕೀಯ ಮುಂದಾಳುತನಕ್ಕಿಂತಲೂ ಪ್ರಾಚೀನವಾದವು. ಅವರ ಜೀವಮಾನದಲ್ಲೆಲ್ಲ ಅವರಿಗೆ ಹಲವಾರು ಮುಸ್ಲಿಂ ಗೆಳೆಯರ, ಸಹಯೋಗಿಗಳ ಪ್ರೀತಿ ವಿಶ್ವಾಸಗಳಿಲ್ಲದ ದಿನಗಳೆ ಇಲ್ಲ. ಅವರ ಕುರಿತು ಯಾರ ಅಭಿಪ್ರಾಯ ಹೇಗೇ ಇರಲಿ, ಮಡಿವಂತಿಕೆಯ ಧರ್ಮಾಂಧತೆ ಅವರಲ್ಲುಂಟೆಂದು ಯಾರೂ ಅಪಾದನೆ ಹೊರಿಸಲಾರರು.

ಗಾಂಧೀಜಿಯ ಆತ್ಮಚರಿತ್ರೆ ("ಸತ್ಯಶೋಧನೆ")ಯಲ್ಲಿ ಚಿಕ್ಕಂದಿನಿಂದಲೂ ಅವರಿಗೆ ಹಿಂದೂ ಧರ್ಮದ ಎಲ್ಲ ಪಂಥಗಳ ಮತ್ತು ಇತರ ಧರ್ಮಗಳ ಬಗೆಗೆ ಸಹಿಷ್ಣುತೆಯ ಅಭ್ಯಾಸ ಹೇಗೆ ದೊರಕಿತೆಂದು ವಿವರಿಸಲ್ಪಟ್ಟಿದೆ. ಅವರ ತಂದೆಯವರಿಗೆ "ಮುಸ್ಲಿಂ ಮತ್ತು ಪಾರ್ಸಿ ಗೆಳೆಯರು ಬಹಳ ಮಂದಿ ಇದ್ದರು. ಅವರು ಇವರೊಡನೆ ತಮ್ಮ ತಮ್ಮ ವಿಶ್ವಾಸಗಳನ್ನು ಕುರಿತು ಆಗಿಂದಾಗ ಮಾತಾಡುತಿದ್ದುದುಂಟು. ಅವರ ವಿಚಾರಗಳನ್ನು ಇವರು ಆದರದಿಂದ ಮತ್ತು ಎಷ್ಟೋ ಬಾರಿ ಆಸಕ್ತಿಯಿಂದ ಆಲಿಸುತಿದ್ದರು. ಈ ಚರ್ಚೆಗಳು ನಡೆಯುತಿದ್ದಾಗ ನಾನು ಅನೇಕ ವೇಳೆ ಅಲ್ಲಿ ಉಪಸ್ಥಿತನಾಗಿರುತಿದ್ದೆ. ನನ್ನಲ್ಲಿ ಸರ್ವ ಧರ್ಮಗಳ ಬಗೆಗೆ ಸಹಿಷ್ಣುತೆಯನ್ನು ಬಿತ್ತಿದ ಹಲವು ಸಂಗತಿಗಳು ಅಲ್ಲಿ ಸಂಮಿಲಿತವಾಗಿರುತಿದ್ದವು."

ಧರ್ಮದ ನಿಜವಾದ ಅನುಸಂಧಾನ, ಜಾಗೃತಿ ಅವನಲ್ಲಿ ಉದ್ಭವಿಸಿದ್ದು ಅದಕ್ಕಿಂತಲೂ ಬಹಳ ತಡವಾಗಿ ಎನ್ನುವುದು ನಿಸ್ಸಂಶಯ. ಆದರೆ ಧಾರ್ಮಿಕ ಸಮನ್ವಯದ ಭಾವನೆ ಅವರಲ್ಲಿ ಮೂಡಿದ ಕಾಲಕ್ಕೂ ಅನೇಕ ಮುಸ್ಲಿಂ ಬಾಂಧವರೊಡನೆ ಅವರಿಗೆ ಗೆಳೆತನದ ಸಂಬಂಧ ಒದಗುವುದಕ್ಕೂ ತಾಳೆಬಿದ್ದುದು ಕೌತುಕದ ಸಂಗತಿ. ಉದೀಯಮಾನ ಬ್ಯಾರಿಸ್ಟರರಾಗಿದ್ದ ಗಾಂಧೀಜಿ ದಕ್ಷಿಣ ಆಫ್ರಿಕೆಗೆ ಪಯಣ ಬೆಳೆಸಲು ಅಬ್ದುಲ್ಲಾ ಸೇಠ್ ಎಂಬ ಒಬ್ಬ ಮುಸ್ಲಿ ವ್ಯಾಪಾರಿಯ ಆಮಂತ್ರಣವೇ ಕಾರಣವಾಯಿತೆಂದು ನೆನಪಿನಲ್ಲಿಡಬೇಕು. ಅಬ್ದುಲ್ಲಾ ಸೇಠರೊಡನೆ ಮತ್ತು ತನ್ಮೂಲಕ ಇಸ್ಲಾಂ ಧರ್ಮದೊಡನೆ ತಮ್ಮ ಪ್ರಥಮ ಸಂಪರ್ಕವಾದುದನ್ನು ಅವರು ಹೀಗೆ ಬಣ್ಣಿಸಿದ್ದಾರೆ:

"ಅವರಿಗೆ (ಅಬ್ದುಲ್ಲಾ ಸೇಠರಿಗೆ) ಇಸ್ಲಾಂ ಎಂದರೆ ಬಹಳ ಅಭಿಮಾನ. ಇಸ್ಲಾಮೀ ತತ್ವಜ್ಞಾನವನ್ನು ಕುರಿತು ಚರ್ಚಿಸುವುದು ಅವರಿಗೆ ಪ್ರಿಯವಾಗಿತ್ತು. ಅವರಿಗೆ ಅರಬ್ಬೀ ಭಾಷೆ ಬರುತ್ತಿದ್ದಿಲ್ಲ; ಆದರೆ ಪವಿತ್ರ ಕುರಾಣ ಮತ್ತು ಇಸ್ಲಾಮೀ ಸಾಹಿತ್ಯ ಅವರಿಗೆ ಸಾಕಷ್ಟು ಪರಿಚಿತವಾಗಿದ್ದವು. ದೃಷ್ಟಾಂತಗಳನ್ನು ಅವರು ಧಾರಾಳವಾಗಿ ಕೊಡಬಲ್ಲವರಾಗಿದ್ದರು. ಅವು ಸಂದರ್ಭೋಚಿತವಾಗಿ ಅನಾಯಾಸದಿಂದ ಅವರ ಭಾಂಡಾರದಿಂದ ಹೊರಬರುತಿದ್ದವು, ಅವರ ಸಂಪರ್ಕದಿಂದ ನನಗೆ ಇಸ್ಲಾಮದ ಕುರಿತು ಸಾಕಷ್ಟು ವ್ಯವಹಾರಿಕ ತಿಳುವಳಿಕೆ ಲಭಿಸಿತು. ನಮ್ಮ ಗೆಳೆತನ ಬೆಳೆದಂತೆ ಧಾರ್ಮಿಕ ವಿಷಯಗಳ ಮೇಲೆ ದೀರ್ಘವಾದ ಚರ್ಚೆಗಳನ್ನೂ ನಡೆಸತೊಡಗಿದೆವು."

ದಕ್ಷಿಣ ಆಫ್ರಿಕೆಯಲ್ಲಿ ಅವರ ದೀರ್ಘವಾದ ವಸತಿಯಲ್ಲಿಯೇ ಅವರು ಬೇರೆ ಬೇರೆ ಧರ್ಮಗಳನ್ನು ಹೋಲಿಸಿ ಅಭ್ಯಾಸಮಾಡಿದ್ದು. ಆಗ ಅವರು "ಹಿಂದೂ ಧರ್ಮವನ್ನು ವಿವರಿಸುವ ಉಪನಿಷತ್ತುಗಳಲ್ಲಿ ಮಾತ್ರವಲ್ಲ, ಕ್ರಿಶ್ಚನ್, ಇಸ್ಲಾಮೀ ಮತ್ತು ಜರತುಷ್ಟ್ರ ಧರ್ಮಗಳ ಧಾರ್ಮಿಕ ಗ್ರಂಥಗಳಲ್ಲಿಯೂ ಗಾಢವಾದ ಅವಗಾಹನೆ ಮಾಡಿದರು. "ಇವೆಲ್ಲವುಗಳಿಂದ ನನಗೆ ಹಿಂದೂ ಧರ್ಮದಲ್ಲಿ ಮೇಲಿದ್ದ ಆದರ ಹೆಚ್ಚಾಯಿತು. ಅದರ ಸೊಬಗು ನನ್ನ ಮನಸ್ಸಿಗೆ ಹೆಚ್ಚು ಹೆಚ್ಚು ಪ್ರಕಾಶಮಾನವಾಯಿತು," ಎಂದು ಗಾಂಧೀಜಿ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಅವರಿಗೆ ಧರ್ಮಾಂಧತೆಯಾಗಲಿ ಧಾರ್ಮಿಕ ಪ್ರತ್ಯೇಕತೆಯಾಗಲಿ ಅಂಟಿಕೊಳ್ಳಲೇ ಇಲ್ಲ. "ಇದರಿಂದ ಬೇರೆ ಧರ್ಮಗಳ ಬಗ್ಗೆ ನನಗೆ ಸ್ವಲ್ಪವೂ ಅನಾದರ ಹುಟ್ಟಲಿಲ್ಲ"ವೆಂದು ಅವರು ಹೇಳುತ್ತಾರೆ. ಭಿನ್ನ ಧರ್ಮಗಳ ಪ್ರವರ್ತಕರ ಅದರಲ್ಲಿಯೂ ಇಸ್ಲಾಂ ಧರ್ಮದ ಪ್ರವಾದಿಯ ಜೀವನವೃತ್ತಾಂತಗಳು ಅವರ ಅಭ್ಯಾಸದ ವಿಷಯಗಳಾದವು. "ಈ ಪುಸ್ತಕಗಳನ್ನೋದಿ ಮಹಮ್ಮದ ಪೈಗಂಬರರ ಬಗ್ಗೆ ನನ್ನ ಗೌರವ ಬಹಳ ಹೆಚ್ಚಿತು." ಅವರ ಧಾರ್ಮಿಕ ಆಸಕ್ತಿ ಬೆಳೆದಂತೆ ಧರ್ಮಸಹಿಷ್ಣುತೆಯೂ ಸಂಗಡಲೆ ಮಾನವ ಪ್ರೇಮವೂ ಹೆಚ್ಚುತ್ತ ಹೋದವೆಂದು ಇದರಿಂದ ವ್ಯಕ್ತವಾಗುತ್ತದೆ. ಸ್ವಧರ್ಮಶ್ರದ್ಧೆಯೊಡನೆ ಎಲ್ಲ ಧರ್ಮಗಳ ಮೇಲೆ ಗೌರವವೂ ಅವರಲ್ಲಿ ಈ ಪ್ರಕಾರ ವೃದ್ಧಿಗೊಂಡಿತು. ಇಷ್ಟೇ ಅಲ್ಲ. "ಈ ಅಭ್ಯಾಸಗಳು ನನ್ನ ಅಂತರ್ಮಥನಕ್ಕೆ ಪುಟವಿತ್ತು, ಅಧ್ಯಯನ ಕಾಲದಲ್ಲಿ ನನ್ನ ಮನಸ್ಸಿಗೆ ಮುಟ್ಟಿದ್ದನ್ನೆಲ್ಲ ಆಚರಣೆಗಿಳಿಸುವ ಹವ್ಯಾಸವನ್ನುಂಟುಮಾಡಿದವು." ಹೀಗೆ ಧರ್ಮಗಳ ತುಲನಾತ್ಮಕ ಅಧ್ಯಯನದಿಂದ ಅವರಲ್ಲಿ ಸಂಕುಚಿತ ಹಿಂದೂ ಧರ್ಮಾಂಧನೊಬ್ಬನ ಉಗಮವಾಗದೆ ವ್ಯವಹಾರಜ್ಞಾನಿಯಾದ ಮಾನವ ಪ್ರೇಮಿಯ ಮೂರ್ತಿಯನ್ನು ಕಡೆದಂತಾಗಿ, ವಿಶಾಲ ಮಾನವ ಕುಲದ ಜಾತಿ-ವರ್ಣ-ಧರ್ಮಾತೀತವಾದ ಸೇವಕಾರ್ಯದಲ್ಲಿ ಎಲ್ಲ ಧರ್ಮಗಳನ್ನು ವ್ಯಾಪಿಸಿರುವ ವಿಶ್ವಾಸ, ಸ್ಫೂರ್ತಿಗಳ ಗಾಢ ಸಂವೇದನೆಗಳನ್ನು ಉಪಯೋಗಿಸಿಕೊಳ್ಳಲು ಅನುಕೂಲವಾಯಿತು.

ಆದುದರಿಂದ, ಈ ಹಿಂದೂ ಬ್ಯಾರಿಸ್ಟರನು ಸ್ವಲ್ಪ ಸಮಯದಲ್ಲಿಯೇ ದಕ್ಷಿಣ ಆಫ್ರಿಕೆಯ ಎಲ್ಲ ಹಿಂದೀಯರ-ಅವರಲ್ಲಿ ಮುಸ್ಲೀಮರ ಸಂಖ್ಯೆ ದೊಡ್ಡದಿತ್ತು-ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡದ್ದು ಆಶ್ಚರ್ಯವಲ್ಲ. ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಅವರು ಔಪಚಾರಿಕವಾಗಿ ಸೇರುವುದಕ್ಕೆ ಮೊದಲೇ ಅವರು ದಕ್ಷಿಣ ಆಫ್ರಿಕೆಯಲ್ಲಿ ನಾತಾಳ ಹಿಂದೀ ಕಾಂಗ್ರೆಸ್ ಎಂಬ ಅದರ ಪ್ರತೀಕವನ್ನು ಸ್ಥಾಪಿಸಿದರು. ಈ ಕೆಲಸದಲ್ಲಿ ಅವರಿಗೆ ದಕ್ಷಿಣ ಆಫ್ರಿಕೆಯಲ್ಲಿ ನಾತಾಳ ಹಿಂದೀ-ಮುಸ್ಲಿಮ್ ಗೆಳೆಯರಿಂದಲೂ ಸಹಯೋಗಿಗಳಿಂದಲೂ ಮುಖ್ಯವಾಗಿ ದಾದಾ ಅಬ್ದುಲ್ಲಾ ಅವರಿಂದ ಸಕ್ರಿಯ ಸಹಕಾರ ದೊರಕಿತ್ತು. ವಾಸ್ತವವಾಗಿ, ದಕ್ಷಿಣ ಆಫ್ರಿಕೆಯ ವಸತಿ ಕಾಲದಲ್ಲಿ ಗಾಂಧೀಜಿಯವರು ಹಿಂದೀಯರಿಗೆ ನಾಗರಿಕ ಹಕ್ಕುಗಳನ್ನು ಗಳಿಸಿಕೊಡಲು ಹೂಡಿದ ಹೋರಾಟವೆಲ್ಲ ಮುಸ್ಲಿಮರ ಪರವಾಗಿ ನಡೆಸಿದ ಹೋರಾಟವೆಂದೇ ಹೇಳಬೇಕು. ಏಕೆಂದರೆ ದಕ್ಷಿಣ ಆಫ್ರಿಕೆಯ ಹಿಂದೀಯರ ಸಮುದಾಯದಲ್ಲಿ ದೊಡ್ಡ ಅಂಶ ಮುಸ್ಲಿಮರದೆ. ಈ ಎಲ್ಲ ಚಟುವಟಿಕೆಗಳು ಧಾರ್ಮಿಕ ವಿಶ್ವಾಸಗಳ ಮತ್ತು ಆರ್ಥಿಕ ಅಥವಾ ಸಾಮಾಜಿಕ ಸ್ಥಾನಮಾನಗಳ ತಾರತಮ್ಯವಿಲ್ಲದೆ ಎಲ್ಲ ಹಿಂದೀಯರ ಹಕ್ಕುಗಳ ರಕ್ಷಣೆಯನ್ನೆ ಲಕ್ಷ್ಯವಾಗಿಟ್ಟುಕೊಂಡವುಗಳು. ನಾತಾಳ ಹಿಂದೀ ಕಾಂಗ್ರೆಸ್ಸು ಅವರ ಮುಂದಾಳ್ತನದಲ್ಲಿ, ವ್ಯಾಪಾರಿಗಳ ಹಕ್ಕುಗಳಿಗಾಗಿ ಎಷ್ಟೋ ಅಷ್ಟೇ ಹುರುಪಿನಿಂದ ಕರಾರು-ಬದ್ಧ ಕೂಲಿಕಾರರ ಹಿತರಕ್ಷಣೆಗಾಗಿಯೂ ಹೋರಾಡುವ ಜಾತ್ಯತೀತ ಪ್ರಜಾತಂತ್ರ ಸಂಸ್ಥೆಯಾಗಿತ್ತು.

ಹಿಂದುಸ್ಥಾನಕ್ಕೆ ಅವರು ಮರಳಿದಾಗ ಹಿಂದೀ ಮುಸ್ಲಿಮರ ಮುಂದಾಳುಗಳು ತುರ್ಕಿಯ ಪ್ರಶ್ನೆಯ ಮೇಲೆ ಅಧಿಕಾರಿಗಳೊಡನೆ ತೀವ್ರ ದ್ವಂದ್ವದಲ್ಲಿ ಮಗ್ನರಾಗಿದ್ದರು. ಈ ಮುಸ್ಲಿಂ ಮುಂದಾಳುಗಳೊಡನೆ ಬಾಂಧವ್ಯ ಬೆಳೆಸುವುದರಲ್ಲಿ ಗಾಂಧೀಜಿ ಸ್ವಲ್ಪವೂ ಕಾಲಹರಣ ಮಾಡಲಿಲ್ಲ. ಅಲೀ ಸಹೋದರರು, ಹಕೀಮ ಅಜಮಲ್ ಖಾನ್, ಮೌಲಾನಾ ಅಬ್ದುಲ್ ಬಾರಿ, ಅಬ್ದುಲ್ ಮಜೀದ ಖ್ವಾಜಾ, ಶಾಯಿಬ್ ಕುರೇಶಿ, ಡಾಕ್ಟರ ಅನ್ಸಾರಿ, ಮಜಹರುಲ್ ಹಕ್ ಮೊದಲಾದವರೊಡನೆ ಗಾಂಧೀಜಿಗೆ ಗೆಳೆತನವಾದುದು ಇದೇ ಸಮಯದಲ್ಲಿ. ಅವರು ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿರುವಂತೆ, "ಯೋಗ್ಯ ಮುಸಲ್ಮಾನರೊಡನೆ ನಾನು ಗೆಳೆತನವನ್ನು ಅಪೇಕ್ಷಿಸುತಿದ್ದೆ. ಮುಸಲ್ಮಾನರ ಮನಸ್ಸನ್ನು ಅರಿತುಕೊಳ್ಳುವ ಉದ್ದೇಶದಿಂದ ಅವರ ಶ್ರೇಷ್ಠರಾದ ಮತ್ತು ದೇಶಾಭಿಮಾನಿಗಳಾದ ಪ್ರತಿನಿಧಿಗಳೊಡನೆ ಸಂಪರ್ಕ ಬೆಳೆಸಲು ಆತುರಪಡುತಿದ್ದೆ. ಅದುದರಿಂದ, ಅವರೊಡನೆ ನಿಕಟ ಸಖ್ಯವನ್ನು ಸಂಪಾದಿಸುವುದಕ್ಕಾಗಿ ಅವರೆಲ್ಲಿ ಕರೆದರೂ ಹೋಗಲು ನನ್ನನ್ನು ಯಾರೂ ಒತ್ತಾಯಗೊಳಿಸಬೇಕಾಗಿರಲಿಲ್ಲ."

ಆ ಮುಂದಿನ ಕೆಲ ವರ್ಷಗಳಲ್ಲಿ, ಗಾಂಧೀಜಿಯವರು ಕಾಯಾ-ವಾಚಾ-ಮನಸಾ ಖಿಲಾಫತ್ ಚಳವಳಿಯಲ್ಲಿ ದುಮುಕಿ ಪರಿಶ್ರಮಿಸಿದರು. ಅಲೀ ಸಹೋದರರು ಕಾಂಗ್ರೆಸ್ಸಿನ ಆಧಾರಸ್ತಂಭಗಳಾದರು. ಈ ತ್ರಿಮೂರ್ತಿಗಳು ಪ್ರತಿಯೊಂದು ಸಂಚಾರದಲ್ಲಿ, ಭಾಷಣವೇದಿಕೆಯಲ್ಲಿ ಅಚ್ಛೇದ್ಯ ಸಂಗಾತಿಗಳಾದರು. ಕೋಟ್ಯಾಂತರ ದೇಶಬಾಂಧವರು ಈ ಮೂವರನ್ನು ಹಿಂದು-ಮುಸ್ಲಿಂ ಐಕ್ಯದ ಜೀವಂತ ಸಂಕೇತವಾಗಿ ಭಾವಿಸುತಿದ್ದ ಸಮಯವದು. ಆ ಸಂದರ್ಭದಲ್ಲಿ ಗಾಂಧೀಜಿಯವರು ಮುಸ್ಲಿಮರ ಭಾವನೆ-ಆಕಾಂಕ್ಷೆಗಳೊಡನೆ ಎಷ್ಟು ತಾದಾತ್ಮ್ಯ ಹೊಂದಿದ್ದರು, ಅದರಿಂದ ದೇಶದಲ್ಲಿ ಹಿಂದೂ-ಮುಸಲ್ಮಾನರ ಭ್ರಾತೃಭಾವನೆಯ ಎಂಥ ಪ್ರಬಲ ತರಂಗಗಳು ಜಾಗೃತವಾದುವು, ಎಂದರೆ ಮಸೀದಿಗಳಲ್ಲಿ ನಡೆಯುತಿದ್ದ ಮುಸ್ಲಿಂ ಸಭೆಗಳಲ್ಲಿ ಭಾಷಣ ಮಾಡಲು ಹಿಂದೂಗಳನ್ನು ಕರೆದೊಯ್ಯಲಾಗುತಿತ್ತು!

"ಖಿಲಾಫತ್ ಪ್ರಶ್ನೆಯ... ವನ್ನು ಗೆಳೆಯರೂ ಟೀ... ದ್ದಾರೆ. ಈ ಟೀಕೆಗಳಲ್ಲಿ ... ಲ್ಮಾನರೊಡನೆ ಸಹಕರಿ... ಪವೂ ಆಗಿಲ್ಲ, ಅದನ್ನು... ಕತೆಯೂ ಕಾಣಿಸಿಲ್ಲ...

(೯ನೇ ಪುಟಕ್ಕೆ ...)

...ಯು ... ಸಿಕ್ಕುತ್ತವೆ. ...ಳೂರು

ಭೂತ ಬಾಧೆ

[illegible]...ಯಲ್ಲಿ ಅಂದು ...ಊರಿನ ಅನೇಕ ರಿಟಾ... ಅಧಿಕಾರಿಗಳಿಗೆ ಆಮಂತ್ರಣ ... ನಿವೃತ್ತ ಸೆಶ್ಶನ್ ಜಡ್ಜ್ ಮಿ. ನಾಯ್ಡು ಅವರೂ ತಮ್ಮ ಎಂಬತ್ತ ನಾಲ್ಕು ವಯಸ್ಸಿನ ಶರೀರದೊಂದಿಗೆ ಅಲ್ಲಿಗೆ ಹೋಗಿದ್ದರು. ಎರಡು ಮೂರು ಗಂಟೆಗಳ ಕಾಲ ಉಪಹಾರವಿತರಣಗಳು ನಡೆದವು. ಜಡ್ಜ್ ನಾಯ್ಡುಗಳು ತಮ್ಮ ನಾಲ್ಕೈದು ಮುದಿ ಮಿತ್ರರೊಂದಿಗೆ ಬಂಗಲೆಯ ಉಪವನದಲ್ಲಿ ಕೂತು ನಾನಾತರದ ಪ್ರಚಲಿತ ಸಮಾಚಾರ ಸುದ್ದಿಗಳ ಕುರಿತು ಚರ್ಚಿಸುತಿದ್ದರು.

ಅಷ್ಟೊತ್ತಿಗೆ ಪಕ್ಕದ ಮಾರ್ಗದಲ್ಲಿ ಬೇಂಡುವಾಲಗದ ಶಬ್ದ ಕೇಳಿಸಿತು. ಆಟವಾಡುತಿದ್ದ ಮಕ್ಕಳು ಮಾರ್ಗಕ್ಕೆ ಓಡಿದರು. ಕೆಲವು ಹೊತ್ತಿನ ನಂತರ ಎಲ್ಲರೂ ಒಂದೊಂದು ಬಣ್ಣ ಬಣ್ಣದ ನೋಟೀಸನ್ನು ಹಿಡಿದು 'ನಾಟಕ ನೋಟೀಸ್, ನಾಟಕ ನಾಟಕ–ಬಡತನದ ಭೂತ.' ಎಂದು ಕೂಗಾಡುತ್ತಾ ಹೊರಗೆ ಓಡಿದ ಹುಡುಗ ಹುಡುಗಿಯರು ಒಳಗೆ ಬಂದರು. ಹರಟೆ ಹೊಡೆಯುತ್ತಲಿದ್ದ ಮುದುಕನೊಬ್ಬನು ಅಂದಿನ 'ಬಡತನದ ಭೂತ' ನಾಟಕದ ಕುರಿತು ಪ್ರಸ್ತಾಪಿಸಿದನು. ಅವರಲ್ಲಿ ನಾಟಕ ನೋಡಿದ ಕೆಲವರು ಅದು ಚೆನ್ನಾಗಿದೆ, ನೋಡುವಂತಹದು ಎಂದರು.

ಭೂತ ಎಂತ ಕೇಳಿದ ಕೂಡಲೇ ಜಡ್ಜ್ ನಾಯ್ಡುಗಳು ನೆಟ್ಟಗೆ ಕುಳಿತುಕೊಂಡರು. ಇತರ ಮುದುಕರೂ ಅವರ ಕಡೆಗೇ ನೋಡಿ "ಏನು ನಾಯ್ಡುಗಳೇ, ತಾವೇನೊ ಗಾಬರಿಗೊಂಡವರ ಹಾಗೆ ಕಾಣುತ್ತಿರಲ್ಲಾ" ಎಂದು ಕೇಳಿದರು.

ಒಂದು ಕ್ಷಣ ಮೌನವಾಗಿದ್ದು ನಾಯ್ಡು ಅವರು ಹೇಳಿದರು: "ಏನಿಲ್ಲ, ಭೂತ ಎಂದು ಕಿವಿಗೆ ಬಿದ್ದೊಡನೆ, ನನಗೆ ರೋಮಾಂಚನವಾಗುತ್ತದೆ. ಪಕ್ಕನೆ ನನ್ನ ಎದೆ ಕೆಲವು ಕ್ಷಣ ಬಡಿಯುತ್ತದೆ. ಇಂದಿಗೆ ಐವತ್ತು ವರ್ಷಗಳ ಹಿಂದೆ ನಡೆದ ಒಂದು ಘಟನೆಯಿಂದಾಗಿ ನನ್ನ ಮನಸ್ಸು ತನ್ನಷ್ಟಕ್ಕೆ ಪಕ್ಕನೆ ಭೀತಿಗೊಳಗಾಗುತ್ತದೆ. ಅಂದು ನನಗಾದ ಅನುಭವವು ಈಗಲೂ ನನ್ನ ಮೇಲೆ ಪರಿಣಾಮಮಾಡುತ್ತದೆ. ಆದರೂ ಅದು ಸಾರಸ್ಯವಾಗಿರುವುದರಿಂದ ನಿಮಗೆಲ್ಲರಿಗೆ ಕೇಳಮನಸ್ಸಿದ್ದರೆ ಹೇಳುವೆನು."

ಸೂರ್ಯನು ಇನ್ನೂ ಮುಳಿಗಿರಲಿಲ್ಲ, ಒಂದೆರಡು ಗಂಟೆಗಳ ತನಕ ಕೂತು ಹೋಗಬಹುದು. ಮುದುಕರಿಗೆ ತುರುತಿನ ಕೆಲಸವೇನು? ಎಲ್ಲರೂ ಅಗತ್ಯವಾಗಿ ಆ ಘಟನೆಯನ್ನು ಅರುಹಬೇಕೆಂದು ಒತ್ತಾಯ ಮಾಡಿದರು. ಜಡ್ಜ್ ನಾಯ್ಡುಗಳು ತಮ್ಮ ಕತೆ ಪ್ರಾರಂಭಿಸಿದರು:

ಮೂವತ್ತು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಗೆ ನಾನು ಮುನ್ಸಿಪನಾಗಿ ವರ್ಗಾಯಿಸಲ್ಪಟ್ಟಿದ್ದೆ. ಆಗಲೂ ಯುದ್ಧ ಕಾಲವಾದುದರಿಂದ ಮಂಗಳೂರಲ್ಲಿ ಯೋಗ್ಯ ಬಂಗಲೆಗಳು ನಗರಕ್ಕೆ ಹತ್ತಿರ ... ಎಲ್ಲೂ ಸಿಗದ್ದರಿಂದ ಅದೃಷ್ಟವ... ...ರೂ ನನ್ನ ಸ್ನೇಹಿತರೂ ...ದನ್ ಅವರು ಅಲ್ಲಿ ... ಸುಪರಿಂಟೆಂಡೆಂಟ... ...ರಲ್ಲಿ ನನ್ನ ಸಂಸಾರ ...ರುದಿನವೇ ನಾನು ... ಕೋರ್ಟಿನ ಹೆಡ್ ...ನ್ನು ನನಗೊಂದು ಒಳ್ಳೆ ಬಂಗಲೆ ನೋಡಿಕೊಂಡು ಬರುವಂತೆ ಹೇಳಿದೆ.

ಮರುದಿನವೇ ಅವನು "ಕದ್ರಿ ಬೆಂದೂರು ಬಡಾವಣೆಯಲ್ಲಿ ಒಂದು ಬಂಗಲೆ ಖಾಲಿ ಇರುವುದಾಗಿಯೂ, ಆದರೆ ಬಹಳ ಸಮಯದಿಂದ ಅದು ಖಾಲಿ ಬಿದ್ದಿರುವುದೆಂದೂ, ಜನವಸತಿ ಕಮ್ಮಿ ಇರುವ ಆ ಪ್ರದೇಶದಲ್ಲಿ ಯಾರೂ ನಿಲ್ಲುವುದಿಲ್ಲವೆಂತಲೂ ತಿಳಿಸುವವನಾದನು.

ಆ ಬಂಗಲೆಯು ಮಂಗಳೂರಿನ ಒಬ್ಬ ಸಾಹುಕಾರರದೆಂತಲೂ, ಅವರು ಈಗ ಬೊಂಬ್ಯಾಯಲ್ಲಿರುವುದಾಗಿಯೂ ವರ್ತಮಾನ ಸಿಕ್ಕಿತು. ಬಂಗಲೆ ಮ್ಹಾಲಕರು ಬೊಂಬ್ಯಾಯಲ್ಲಿ ದೊಡ್ಡ ಧಾನ್ಯ ವ್ಯಾಪಾರಿಗಳು. ಅವರು ಹತ್ತು ವರ್ಷಗಳ ಹಿಂದೆ ಆ ಬಂಗ್ಲೆಯಲ್ಲಿ ಬಂದಿದ್ದಾಗಲೇ ಹೊಸದಾಗಿ ಮದುವೆಯಾದ ಅವರ ಸೊಸೆ ಅದರಲ್ಲಿ ಹೃದ್ರೋಗದಿಂದ ಅಕಸ್ಮಾತಾಗಿ ತೀರಿಕೊಂಡ ಮೇಲೆ ಅವರು ಅದನ್ನು ಬಿಟ್ಟು, ಅದರ ಮೇಲ್ತನ್ನಿಯನ್ನು ಓರ್ವ ವಕೀಲರ ವಶಕ್ಕೆ ಬಿಟ್ಟು ಹೋಗಿದ್ದರು. ನಂತರ ಅವರು ಊರಿಗೆ ಮರಳಲೇ ಇಲ್ಲ.

ನಾನು ಹೋಗಿ ಆ ವಕೀಲರನ್ನು ಕಂಡು ಮಾತಾಡಿದೆ. ಅವರು "ಜನರು ಆ ಬಂಗಲೆಯಲ್ಲಿ ಭೂತ ಸಂಚಾರವಿದೆಯೆಂದು ನಂಬುತ್ತಾರೆ. ಆದುದರಿಂದಲೇ ಅಲ್ಲಿ ಯಾರೂ ವಸತಿ ಬರಲಿಲ್ಲ." ಎಂದರು. ನನಗೆ ಭೂತ ಪಿಶಾಚಿಗಳಲ್ಲಿ ಒಂದಿಷ್ಟು ನಂಬಿಕೆಯಿಲ್ಲ. ನೋಡಬೇಕು ಅದೇ ಮನೆಯಲ್ಲಿರಬೇಕೆಂದು ನಿರ್ಧರಿಸಿಕೊಂಡೆ. ಮತ್ತು ನನಗದನ್ನು ಬಿಟ್ಟುಕೊಡುವಂತೆ ಆ ವಕೀಲರನ್ನು ಕೇಳಿಕೊಂಡೆ. ಅವರು ನನ್ನ ಧೈರ್ಯಕ್ಕೆ ಮೆಚ್ಚಿಕೊಂಡು, ಭೂತಕ್ಕೆ ಹೆದರುವ ಮೂಢ ನಂಬಿಗಸ್ಥರನ್ನು ದೂರುತ್ತಾ ಬಂಗಲೆಯನ್ನು ಬಿಟ್ಟು ಕೊಡುವಂತೆ ಅಲ್ಲಿನ ಕಾವಲುಗಾರನೊಬ್ಬನಿಗೆ ಒಂದು ಪತ್ರವನ್ನೂ ಕೊಟ್ಟರು.

ಬಂಗಲೆಗೆ ಕಾವಲುಗಾರನೊಬ್ಬನಿದ್ದಾನೆಂದೂ, ಅವನು ಅದರ ಹಿತ್ತಿಲಲ್ಲಿರುವ ಚಿಕ್ಕ ಮನೆಯಲ್ಲಿ ವಾಸಿಸುತ್ತಿರುವನೆಂತಲೂ ತಿಳಿದೊಡನೆ ನನಗೆ ಆಶ್ಚರ್ಯವಾಯಿತು. ಈ ಭೂತವು ಅವನನ್ನು ತೊಂದರೆಕೊಡುವುದಿಲ್ಲವೆ? ಏನೋ ರಹಸ್ಯವಿರಬೇಕೆಂದು ನನಗೆ ಸಂಶಯವು ಹುಟ್ಟಿತು. ನಾನು ಪೋಲಿಸ್ ಸುಪರಿಂಡೆಂಟರ ಮನೆಗೆ ಬಂದಾಗ ಅವರು ಯಾವುದೋ ಖೂನಿ ಪತ್ತೆಗಾಗಿ ಕುಂದಾಪುರಕ್ಕೆ ಹೋಗಿದ್ದರು. ಏನಾದರೂ ಆಗಲಿ ನಾನೊಬ್ಬನೇ ಸ್ವತಃ ಹೋಗಿ ಬಂಗಲೆಯನ್ನು ನೋಡಿ ಬರುತ್ತೇನೆಂದು ನಿರ್ಧರಿಸಿ ನನ್ನ ಬಳಿಯಲ್ಲಿರುವ ಒಂದು ಚಿಕ್ಕ ತಳವಾರವನ್ನು ಕೋಟಿನ ಒಳ ಕಿಸೆಯಲ್ಲಿರಿಸಿ ಹೊರಟೆ.

ನಾನು ಒಂದು ಕುದುರೆ ಬಂಡಿಯನ್ನು ಗೊತ್ತುಮಾಡಿ ಸುಮಾರು ಸಾಯಂಕಾಲ ಆರು ಗಂಟೆ ಹೊತ್ತಿಗೆ ಬಂಗಲೆ ತಲಪಿದೆ. ಆ ಕಟ್ಟಡವು ಹೊಸದಾಗಿದ್ದರೂ ಬಹಳ ವರ್ಷಗಳಿಂದ ಖಾಲಿಬಿದ್ದಿದ್ದರಿಂದ ಹಳೇದಾಗಿ ಕಾಣುತಿತ್ತು. ಮುಂದುಗಡೆಯ ಗೇಟುಗಳಿಗೆ ಮಣ್ಣು ಹಿಡಿದಿತ್ತಿತು. ಕಂಪೌಂಡಿನ ಗೋಡೆಯ ಮೇಲೂ, ಬಂಗಲೆಯ ಮಾಡಿನ ಮೇಲೂ ಕೆಲವು ಕಡೆ ಹುಲ್ಲು ಬೆಳೆದಿತ್ತು. ಎದುರಿನ ತೋಟದಲ್ಲಿ ಆಳೆತ್ತರದ ಹುಲ್ಲು ಬೆಳೆದು ಹೂ ಗಿಡಗಳು ಕಾಡು ಬೆಳೆದಿದ್ದುವು. ಸಂಜೆ ಕೆಂಪಿಗೆ ಅದು ಒಂದು ತರವಾಗಿ ಶೋಭಿಸುತಿತ್ತು.

ಗೇಟನ್ನು ತಳ್ಳಿಕೊಂಡು ಒಳಗೆ ಹೋಗಿ ಎದುರುಗಡೆಯ ವೃತ್ತಾಕಾರದ ಹೊರ ಚಾವಡಿಯ ಮೇಲೆ ನಿಂತು ಬಾಗಿಲು ತಟ್ಟಿದೆ. ಕೆಲವು ಕ್ಷಣದಲ್ಲಿ ಪಕ್ಕದ ಇನ್ನೊಂದು ಬಾಗಿಲಿನಿಂದ ಆ ಕಾವಲುಗಾರನು ಹೊರಗೆಬಂದು ನನ್ನನ್ನು ಕೌತುಕದಿಂದ ನೋಡಿ ನಮಸ್ಕರಿಸಿದ. ಅವನ ಕೈಗೆ ವಕೀಲನ ಪತ್ರಕೊಟ್ಟು 'ನನಗೆ ಒಳಗೆ ನೋಡಬೇಕಾಗಿದೆ' ಎಂದೆ. ಆದರೆ ಅವನು ಒಂದುಸಲ ಪತ್ರವನ್ನೂ ಮತ್ತೊಂದು ಸಲ ನನ್ನನ್ನೂ ಈಕ್ಷಿಸುತ್ತ: "ಸ್ವಾಮಿ ಆದರೆ ಇಲ್ಲಿ ಜನರು—" ಎನ್ನುವಷ್ಟರಲ್ಲಿ ಅಧಿಕಾರಿಯೆಂಬ ಹೆಮ್ಮೆ ಇದ್ದ ನನಗೆ ಸಹನೆಯಾಗದೆ: "ಅದೆಲ್ಲ ನನಗೆ ಗೊತ್ತಿದೆ. ಹೆಚ್ಚು ಹರಟೆಮಾಡಬೇಡ" ಎಂದವನೇ ಬಾಗಿಲು ತಳ್ಳಿ ಒಳಗೆ ಪ್ರವೇಶಿಸಿದೆ. 'ಬನ್ನಿ ತೋರಿಸುತ್ತೇನೆ, ಸ್ವಾಮಿ, ಈ ಕಡೆ ಬನ್ನಿ" ಎಂದು ಕಾವಲುಗಾರ ಮತ್ತೆ ಹೇಳಿದ.

"ಬೇಡ ಬೇಡ, ಮಾಳಿಗೆಯ ದಾರಿಯನ್ನು ಮಾತ್ರ ತೋರಿಸು, ನಾನೇ ನೋಡಿಕೊಂಡು ಬರುತ್ತೇನೆ" ಎಂದು ನುಡಿಯುತ್ತ ನಾನು ಮುಂದರಿದೆ. ಮೊದಲು ಒಂದು ವಿಶಾಲ ಭವನವನ್ನು ದಾಟಿ ಅದರ ಉತ್ತರ ಭಾಗದಲ್ಲಿದ್ದ ಇನ್ನೊಂದು ಚಿಕ್ಕ ಕೋಣೆಯಲ್ಲಿರುವ ಮಹಡಿ ಮೆಟ್ಟಲುಗಳನ್ನು ಹತ್ತಿದೆ. ಮೇಲ್ಗಡೆ ತಲ್ಪುತಿ[illegible] ಅಲ್ಲಿ ಭವ್ಯವಾದ ಬಾಗಿಲುಗಳಿರುವ ಅನೇಕ ಕೋಣೆಗಳನ್ನು ನೋಡಿದೆ. ಅವುಗಳ ಒಳಗೂ ನೋಡಬೇಕೆಂಬ ಕೂತುಹಲದಿಂದ ದೊಡ್ಡ ಕೋಣೆಯ ಬಾಗಿಲೊಂದನ್ನು ದೂಡಿದೆ. ಒಳಗೆ ಕತ್ತಲು ಆವರಿಸಿತ್ತು. ಸಂಜೆಯಾಗುತ್ತ ಬಂದದ್ದರಿಂದ ಇನ್ನೂ ಕಪ್ಪಾಗಿ ಕಾಣಿಸುತಿತ್ತದು ಗವಿಯಂತೆ.

ಒಳಗೆ ಹೋದೆ, ಕತ್ತಲಲ್ಲಿ ಕೆಲವು ಹೊತ್ತಿನ ನಂತರ ಅರ್ಧಮರ್ಧವಾಗಿ ಕಾಣಹತ್ತಿತು. ಒಂದು ಪಕ್ಕದಲ್ಲಿ ದೊಡ್ಡದೊಂದು ಪಲ್ಲಂಗವಿತ್ತು. ಅದರ ಮೇಲೆ ದಪ್ಪವಾದ ಬಟ್ಟೆಹಾಸದ ಹಾಸಿಗೆಯಿದ್ದು, ಇತ್ತೀಚೆಗೆ ಯಾರೋ ಅದರಲ್ಲಿ ಮಲಗಿದ್ದಂತೆ ಅದರ ತಲೆಗಿಂಬುಗಳು ಒತ್ತಿದಂತಿದ್ದವು. ನಾನು ನೇರವಾಗಿ ಕಿಟಕಿಯ ಕಡೆ ಧಾವಿಸಿ ಬೆಳಕಿಗಾಗಿ ಅದರ ಬಾಗಿಲುಗಳನ್ನು ತೆರೆಯಲು ಪ್ರಯತ್ನಿಸಿದೆ. ಅದರ ಕಬ್ಬಿಣದ ಚಿಲಕಗಳೂ ಕೀಲುಗಳೂ ಮಣ್ಣುಹಿಡಿದು ಹೋಗಿದ್ದರಿಂದ ಎಷ್ಟು ಬಲವಾಗಿ ಒತ್ತಿದರು ಬಾಗಿಲು ತೆರೆಯಲು ಸಾಧ್ಯವಾಗಲಿಲ್ಲ.

ಅಲ್ಲಿಂದ ನನ್ನ ದೃಷ್ಟಿಯು ವಿಶಾಲವಾಗಿರುವ ಒಂದು ಮೇಜಿನ ಕಡೆ ಹೊರಳಿತು. ಅದರ ಸುತ್ತಲೂ ಕುರ್ಚಿಗಳಿದ್ದವು. ಅವುಗಳೊಂದರಲ್ಲಿ ಕೂತುಕೊಂಡು ಮೇಜಿನ ಡ್ರಾವರುಗಳನ್ನು ತೆರೆದೆ. ಆಗ ನನ್ನ ಹಿಂದೆ ಏನೋ ಸಣ್ಣ ಸಪ್ಪಳ ಕೇಳಿಸಿತು. ಹಿಂದೆ ನೋಡಿದಾಗ ಅಲ್ಲಿ ಅರ್ಧಬಾಗಿಲು ತೆರೆದ ಒಂದು ಕೋಣೆ ಕಾಣಿಸಿದ್ದು, ಅದರಲ್ಲಿ ಜಗ್ಗನೆ ಬೆಂಕಿಕಡ್ಡಿ ಹಚ್ಚಿದಂತೆ ಒಂದು ಕ್ಷಣ ಬೆಳಕು ಕಂಡ ಹಾಗಾಯಿತು. ಸಂಜೆ ಬಿಸಿಲಿನ ಪರಿಣಾಮ ಇರಬೇಕೆಂದು ಮತ್ತು ಆ ಡ್ರಾವರಿನ ಬಾಗಿಲು ಎಳೆದೆ. ಅದರಲ್ಲಿ ಕೆಲವು ಹಳೇ ಇಸ್ಪೀಟು ಪೆಟ್ಟಿಗೆಗಳಿದ್ದವು. ಒಂದು ಲೆಕ್ಕ ಬರಿಯುವ ಪುಸ್ತಕವೂ ಕೈಗೆ ಸಿಕ್ಕಿತು. ಅದನ್ನು ಹೊರತೆಗೆದೆ.

ಇಷ್ಟಾಗುವಾಗ ನನ್ನ ಬೆನ್ನ ಮೇಲೆ ಎಂಬಂತೆ ಸರಸರನೆ ಒಂದು ಶಬ್ದ ಕೇಳಿದ ಹಾಗಾದಾಗ ಮೊದಲನೇ ಸಲಕ್ಕೆ ನನಗೆ ಜುಮ್ಮಾಯಿತು, ಎದೆ ಮೆಲ್ಲನೆ ಬಡಿಯ ಹತ್ತಿತು. ಕಡೆಗೆ ಆ ಶಬ್ದವು ಭುಜದ ಬಳಿಯಲ್ಲೇ ಕೇಳಿಸಿದಾಗ ಪಕ್ಕನೇ ಹಿಂದೆ ನೋಡಿದೆ. ಏನು ಹೇಳಲಿ! ಶುದ್ಧ ಬಿಳೀ ಬಟ್ಟೆ ಧರಿಸಿ ತಲೆಯ ಮೇಲೆ ಕೆಂಪು ಮುಸುಕು ಹಾಕಿದ ಒಂದು ಸ್ವರೂಪ ನನ್ನ ಕಣ್ಣಿಗೆ ಕತ್ತಲನ್ನುಂಟುಮಾಡಿತು. ಜಗ್ಗನೇ ಕೂತಲ್ಲೇ ಹಾರಿದ ಪೆಟ್ಟಿಗೆ ಕೆಲವು ಅಡಿಗಳಷ್ಟು ದೂರಕ್ಕೆ ನೆಲದ ಮೇಲೆ ಹೋಗಿ ಬಿದ್ದೆ. ಕೂಡಲೇ ನನ್ನ ಕೈ ಕೋಟಿನ ಕಿಸೆಯಲ್ಲಿದ್ದ ತಳವಾರಿನ ಮೇಲೆ ಹಾಯಿಸಿ, ಅದನ್ನು ಬಿಗಿಯಾಗಿ ಹಿಡಕೊಂಡೆ. ಅದು ಕೈಗೆ ಸಿಗದಿದ್ದರೆ ನನ್ನ ಅವಸ್ಥೆ ಏನಾಗುತಿತ್ತೊ!

ಇಷ್ಟರಲ್ಲಿ ಕೆಂಪು ಮುಸುಕಿನ ಆ ರೂಪವು ಸರ‍್ರನೇ ತಿರುಗಿ ನನ್ನ ಕಡೆ ನೋಡಿದಂತಾಯಿತು. ತನ್ನ ಕೈಯನ್ನು ಮುಂದೆ ಚಾಚಿ ಕತ್ತಲಲ್ಲಿ ಏನೋ ಹುಡುಕಾಡಿದಂತೆ ಮಾಡುತಿತ್ತು. ನರಗಳು ಕಟ್ಟಿದಂತಾಗಿ ಬಾಯಿ ಆರಿಹೋದ ನನಗೆ ಅಲುಗಾಡಲು ಧೈರ್ಯವಾಗಲಿಲ್ಲ. ಮೆಲ್ಲನೆ ಅದು ಮೇಜಿನಲ್ಲಿದ್ದ ಸಾಮಾನುಗಳನ್ನೆಲ್ಲ ತೆಗೆದು ತನ್ನ ಬಟ್ಟೆಯಲ್ಲಿ ಹಾಕಿಕೊಂಡಿತು. ಆ ಕತ್ತಲಲ್ಲಿ ಅದರ ಹಸ್ತಗಳೇ ನನಗೆ ಕಾಣಲಿಲ್ಲ. ಒಂದೆರಡು ಮಿನಿಟು

(೧೧ನೇ ಪುಟಕ್ಕೆ ಮುಂದುವರಿದಿದೆ.)

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

೧೯೪೪ರ ಜಗತ್ತು

೧೯೪೪ರ ವರ್ಷಾಂತ್ಯದ ಪರದೆ ಬಿತ್ತು. ಅಮೋಘ ಯುದ್ಧ ದಿಗ್ವಿಜಯಗಳ ವರ್ಷವದು. ಆದರೆ ರಾಜಕೀಯ ರಾಜಕಾರವು ಮಾತ್ರ ಅಧೋಗತಿಗೆ ಇಳಿದ ಸಂವತ್ಸರವೂ ಅದಾಗಿದೆ. ಸ್ವಾತಂತ್ರ ಸೇನೆ ಸಮೂಹಗಳು ಯುರೋಪನ್ನು ಮುತ್ತಿದಾಗ ೧೯೪೪ರ ಮಹಾಘಟನೆಗಳ ಮಾತ್ರವಲ್ಲ ಇಡಿ ಯುದ್ಧದ ವೈಶಿಷ್ಟ್ಯವು ಪರಮಾಧಿಗೆ ಮುಟ್ಟಿತು.

ಇಂದಿಗೆ ಒಂದು ಸಾವಿರ ವರ್ಷಗಳಲ್ಲಿ ಬ್ರಿಟನ್ನು ನಾಲ್ವತ್ತ ಒಂದು ಬಾರಿ ಯುರೋಪಿನ ಮೇಲೆ ತನ್ನ ಸೈನ್ಯಗಳನ್ನು ಕಳುಹಿಸಿದ್ದಿತು. ನಾಲ್ವತ್ತೆರಡನೇ ಬಾರಿ ಅವರು ನೂತನ ಖಂಡದ (ಸಂಯುಕ್ತ, ಅಮೇರಿಕಾ ಮತ್ತು ಕೆನಡಾ) ಯೋದ್ಧರೊಡಗೂಡಿ ಜೂನ್ ತಾ. ೬ರಂದು ಯುರೋಪಿನ ಮೇಲೆ ದಾಳಿ ಮಾಡಿದರು. ಆ ದಿನವು ೧೯೪೪ರ ಮಾತ್ರವಲ್ಲ ಮಾನವ ಇತಿಹಾಸದಲ್ಲೇ ಅತ್ಯಮೋಘವಾದ ಘಟನಾ ವಿಶೇಷವಾಗಿದೆ. ಸುಧೀರ್ಘ ಯೋಜನೆಗಳಿಂದಲೂ, ಅತೀ ಸೂಕ್ಷ್ಮವಾಗಿ ಪರಿಪೂರ್ಣತೆಗೆ ಮುಟ್ಟಿಸಲ್ಪಟ್ಟ ಏರ್ಪಾಡಿನಿಂದಲೂ ನಾಜೀ ನೇಗಿಲಿನಿಂದ ನೊಂದ ಐರೋಪ್ಯರ ಬಂಧ ಮುಕ್ತತೆಯ ಘಂಟಾನಾದವು ಸಂಕೇತಿಸಲ್ಪಟ್ಟಿತು.

ಈ ಅಪ್ರತಿಮ ಸಾಹಸವನ್ನು ಜಗತ್ತು ವಿಸ್ಮಯದಿಂದ ನೋಡುತ್ತಿರುವಾಗ ನಾಜೀಗಳು ತಮ್ಮ V-I ಗುಪ್ತಾಸ್ತ್ರವನ್ನು ಇಂಗ್ಲೆಂಡಿನ ಮೇಲೆ ಕಳುಹಿಸಲಾರಂಭಿಸಿದರು. ೧೯೪೪ರ ವೈಜ್ಞಾನಿಕ ಇತಿಹಾಸದಲ್ಲಿ ಇದೂ, ಇದರಂತಹ ಇತರ ಅನೇಕ ಅಸ್ತ್ರಗಳೂ ಪ್ರಚಂಡ ಮೇಧಾವಿ ಶಕ್ತಿಯಿಂದ ಕೂಡಿದಂತವುಗಳು. ಆದರೆ ಬ್ರಿಟನ್ನು ಈ ಘಾತಕ ಉಪಕರಣಕ್ಕೆ ಎದೆಗುಂದದೆ ಮುಂದೆ ಸಾಗಿತು.

ಆಗಸ್ಟ್ ಅಂತ್ಯದಲ್ಲಿ ಪೆರಿಸ್ ಮುಕ್ತಗೊಳಿಸಲ್ಪಟ್ಟಿತು. ಒಂದು ವಾರದ ನಂತರ ಬೆಲ್ಜಿಯಮ್ ವಶವಾಯಿತು. ಹಿಟ್ಲರನ ಮಿಂಚು ಯುದ್ಧಕ್ಕೆ ಪ್ರತಿ ಮಿಂಚು ದಾಳಿಯ ಸವಿಯನ್ನು ಉಣ್ಣಿಸಲಾಯಿತು. ಗಡಿಯಾರದ ಪರಿಪೂರ್ಣತೆ ಸೂಕ್ಷ್ಮತೆಗಳಿಂದ ಮಿತ್ರ ಮಂಡಳವು ಮುಂದುವರಿಯಿತು.

ಹಿಂದೊಮ್ಮೆ ಚರ್ಚಿಲ್ಲರು ಸೆಪ್ಟಂಬರ್ ಮಧ್ಯದಲ್ಲಿ ಯುಂದ್ಧಾಂತ್ಯವಾಗುವುದೆಂದು ಭವಿಷ್ಯ ಹೇಳಿದ್ದರು. ಆದರೆ ಅವರ ಆಶೆ ಕನಸ್ಸಿನ ನೋಟವಾಯಿತು. ಕರಾವಳಿಯ ಪ್ರದೇಶಗಳನ್ನು ವಶ ಪಡಿಸದೆ ಮಿತ್ರ ದಳಗಳು ಮಧ್ಯ ಯುರೋಪಿನ ಕಡೆಗೆ ಧಾವಿಸಿ' ಹೊಲೆಂಡಿನಲ್ಲಿ ಕೊಡೆ ವೈಮಾನಿಕ ದಳವೊಂದನ್ನು ಇಳಿಸಿದರು. ವಿರಳ ವಿರಳವಾಗಿ ಚೆಲ್ಲಿಬಿದ್ದ ಮಿತ್ರ ಸೈನಿಕರು ಜರ್ಮನ್ ಯುದ್ಧ ಯಂತ್ರದ ಕತ್ತರಿಯಲ್ಲಿ ಸಿಕ್ಕಿ ನುಚ್ಚು ನೂರಾದರು–ಅಂದಿನ ಆರ್ನೆಮ್ ದುರಂತವು ಐತಿಹಾಸಿಕವಾಯಿತು.

ಒಕ್ಟೋಬರ್ ಮೂರನೇ ವಾರದಲ್ಲಿ ಆಚೆನ್ ನಗರವು ಮಿತ್ರ ವಶವಾಯಿತು. ಆದರೆ ಆರ್ನೆಮ್ ದುರಂತದ ದುಷ್ಪರಿಣಾಮದಿಂದ ಅವರು ಸಂಪೂರ್ಣ ಚೇತರಿಸಿ ಕೊಳ್ಳಲಿಲ್ಲ. ನಾಜೀಗಳ ಸಿಗ್‌ಫ್ರೀಡ್ ದುರ್ಗಗಳನ್ನು ಮಿತ್ರರು ಕೆಣಕಿದರು. ಘಾಯಗೊಂಡ ಹುಲಿಯಂತೆ ನಾಜೀ ವ್ಯಾಘ್ರವು ಸಿಡಿದು ಬಿತ್ತು. ರುಂಡ್‌ಸ್ಟೆಡ್ಟನ ನಿರ್ದೇಶಕತ್ವದಲ್ಲಿ ನಾಜೀ ಯಂತ್ರವು ಭಯಂಕರ ಆಟೋಪದಿಂದ ಹಿಂದಕ್ಕೆ ತಿರುಗಿಗೊಂಡು ರಭಸದ ದಾಳಿಯಾರಂಭಿಸಿ ಪುನಃ ಮಿಂಚಿನ ವೇಗದಲ್ಲಿ ಉರಿದು ಬಿತ್ತು. ಅದರ ಭರವು ಕುಗ್ಗುವಂತೆ ಇನ್ನೂ ತೋರುವದಿಲ್ಲ. ಅವ್ಯಾಹತವಾಗಿ ಅದು ಮುಂದೆ ಸಾಗಿ ಬಂತು.

◈ ◈ ◈

ಇತ್ತ ಕೆಳಗೆ ದಕ್ಷಿಣದಲ್ಲಿ ಮಿತ್ರರು 'ಮುನ್ನಡೆಯುತ್ತಲಿದ್ದಾರೆ' ಆದರೆ ಅದು ಮುನ್ನಡೆಯಲ್ಲ. 'ಹೊಟ್ಟೆಯಿಂದ ಹೊರಳಿ ಹೋಗುವ ಎರೆಹುಳುವಿನ ಹರಿದಾಟ. ೧೯೪೪ರ ಪ್ರಾರಂಭದ ಸುಮಾರಿಗೆ ಅವರು ಇಟೆಲಿಯ ಆಂಜಿಯೋ ತೀರದಲ್ಲಿ ತಮ್ಮನ್ನು ಭದ್ರವಾಗಿ ಪ್ರತಿಷ್ಠಿಸಿ ಕೊಂಡರು. ಆದರೆ ಹತ್ತಿರದ ರೋಮ್ ನಗರಕ್ಕೆ ತಲಪಲು ಅವರಿಗೆ ಆರು ತಿಂಗಳು ಹಿಡಿಯಿತು. ಒಂದು ತಿಂಗಳಿಗೆ ಬರೀ ಆರು ಮೈಲಿಯ ಮುನ್ನಡೆತ–ಒಂದು ದಿವಸಕ್ಕೆ ಬರೀ ೬೦ ಗಜಗಳ ಸಾಗುವಿಕೆ! ಕೆಸಿನೊದಲ್ಲಿ ಶತ್ರುವು ತನ್ನ ಭೀಕರತೆಯನ್ನು ತೋರಿಸಿದುದರ ಪರಿಣಾಮವೇ ಇದು. ಮಿತ್ರ ವಿಮಾನಗಳು ಆ ನಗರವನ್ನು ದೂಳೀಭೂತವಾಗಿ ಮಾಡಿಬಿಟ್ಟವು. ಆಗಸ್ಟಿನ ಸುಮಾರಿಗೆ ಫ್ಲೋರೆನ್ಸ್, ರಿಮಿನಿಗಳು ಕೈವಶವಾದುವು. ನಂತರ ಮಿತ್ರರು ಪೊ ಮತ್ತು ಲೊಂಬಾರ್ಡಿ ಕಣಿವೆ ಪ್ರದೇಶವನ್ನು ಹೊಕ್ಕರು. ಈಗಲೂ ಅಲ್ಲಿಯೇ ಇದ್ದಾರೆ. 'ಮೆತ್ತಗಾದ ಡೊಳ್ಳು ಹೊಟ್ಟೆ' ಎಂದು ಚರ್ಚಿಲ್ಲರಿಂದ ಕರೆಯಲ್ಪಟ್ಟ ಇಟಲಿಯು ಉಕ್ಕಿನಂತೆ ಗಟ್ಟಿಯಾಗಿ ಕಂಡು ಬಂದಿದೆ.

◈ ◈ ◈

ಆದರೆ ರಷ್ಯದ ಕಡೆಗೆ ನೋಡಿರಿ. ೧೯೪೪ರಲ್ಲಿ ಹಿಟ್ಲರನ ಯುದ್ಧ ಯಂತ್ರವು ಅಲ್ಲಿ ನುಚ್ಚುನೂರಾಯಿತು. ಪಲಾಯನವೇ ಪಲಾಯನ. ಇತಿಹಾಸದಲ್ಲಿ ದಾಖಲೆ ಮಾಡುವ ಓಟ. ೧೯೪೪ರ ಪ್ರಾರಂಭದಲ್ಲಿ ಇನ್ನೂ ಹಿಮದಿಂದ ಪ್ರದೇಶಗಳು ಮುಚ್ಚಿದ್ದಾಗಲೇ ರಷ್ಯನ್ ಸೈನ್ಯಗಳು ಯುದ್ಧ ಮುಂಚಿನ ಪೋಲೆಂಡ್ ಗಡಿಗಳ ತನಕ ಬಂದು ನಿಂತುವು: ಅಂದಿನಿಂದ ಅವರು ಒಂದೇ ಸವನೇ ಮುಂದರಿಯುತ್ತಲೇ ಇರುವರು. ಒಂದೇ ತಿಂಗಳೊಳಗೆ ಅವರು ರುಮೇನಿಯದೊಳಗೆ ನುಗ್ಗಿ ಜೆಕೊಸ್ಲೋವಾಕಿಯದ ಗಡಿ ತನಕ ಬಂದು ನಿಂತರು. ಒಡೆಸ್ಸಾ ವಶಪಡಿಸಲಾಯಿತು. ಮೇ ತಿಂಗಳಲ್ಲಿ ಸೆಬೆಸ್ಟ ಪೋಲವನ್ನೂ ವಾರ್ಸೊ ಬಳಿಯ ಪ್ರದೇಶವನ್ನೂ ಹಿಡಿದರು. ಆಗಸ್ಟಿನೊಳಗೆ ರುಮೇನಿಯವು ಯುದ್ಧದಿಂದ ಹೊರ ಬಿತ್ತು. ಸೆಪ್ಟೆಂಬರಿನಲ್ಲಿ ಬಲ್ಗೇರಿಯಾ. ಆದರೆ ವಾರ್ಸೊದಲ್ಲಿ ಭಯಂಕರ ವಿಶ್ವಾಸಘಾತಕದ ಕೆಲಸ ನಡೆಯಿತು. ರಷ್ಯನರು ವಾರ್ಸೊವನ್ನು ಹಿಡಿಯಲಿಕ್ಕೆ ಸ್ವಲ್ಪ ಕಾಲವೇ ಉಳಿಯಿತೆನ್ನುವಾಗ ರಷ್ಯವನ್ನು ದ್ವೇಷಿಸುವ ಕೆಲ ಪೋಲಿಶ್ ಸೈನ್ಯ ಮುಖಂಡರು ದಂಗೆ ಎದ್ದೇಬಿಟ್ಟರು. ಆದರೂ ಎದೆ ಗುಂದದೆ ಕೆಂಪು ದಳಗಳು ಬುಡಾಪೆಸ್ಟಿನ ಕಡೆಗೆ ತಿರುಗಿದವು.

◈ ◈ ◈

೧೯೪೪ರ ಫೆಬ್ರುವರಿಯಲ್ಲಿ (ಲಂಡನಿನಂತೆ) ಬರ್ಲಿನ್ ನಗರವು ಮಿತ್ರರ ಬಾಂಬು ಸುರಿಮಳೆಗೆ ಈಡಾಯಿತು. ಈ ಯುದ್ಧದ ಅತ್ಯೋಗ್ರ ದಾಳಿ ಅದು. ಅಂದಿನಿಂದ ಅಭಿಯೋಗದ ಮೇಲೆ ಅಭಿಯೋಗಗಳು ನಡೆದು ಜರ್ಮನ್ ವಶವಾದ ಯುರೋಪ್ ಗುಂಡುಗಳ ಗುಡುಗಿನಿಂದ ಗಡ ಗಡಿತು.

ಮಿತ್ರರ ಈ ವಿಮಾನ ದಾಳಿಗೆ ಉತ್ತರವಾಗಿ ತನ್ನ ಕ್ರೂರಾಸ್ತ್ರಗಳ ರಾಶಿಯಲ್ಲಿ ಹುದುಗಿ ಅವಿತಿರುವ ಶತ್ರುವು V-೨ನ್ನು ಉಪಯೋಗಿಸತೊಡಗಿದನು. V-೧ರಿಂದ ದಕ್ಷಿಣ ಇಂಗ್ಲೆಂಡಿಗೆ ಮಾತ್ರ ಇದ್ದ ಅಪಾಯವು V–೨ರಿಂದ ಉತ್ತರ ಇಂಗ್ಲೆಂಡಿಗೂ ಹರಡಿತು.

◈ ◈ ◈

ಮಾರ್ಚ್ ೧೯೪೪ರಲ್ಲಿ ಜಪಾನರು ಮಣಿಪುರ ಪ್ರದೇಶದಲ್ಲಿ ನುಸುಳಿಕೊಳ್ಳುತ್ತಾ ಭಾರತದ ಮೇಲೆ ಅಭಿಯೋಗ ಪ್ರಾರಂಭಿಸಿದರು. ಭಾರತದ 'ಮುಕ್ತಿಗೆ' ಆರಂಭವಾಯಿತು. ಒಂದು ಸಮಯದಲ್ಲಿ ಇಂಪಾಲಿನಿಂದ ಹರಿಯುವ ನಾಲ್ಕು ಹೆದ್ದಾರಿಗಳೂ ಜಪಾನರ ವಶವಿದ್ದುವು. ಎಪ್ರಿಲ್ ಅಂತ್ಯದಲ್ಲಿ ಮಿತ್ರರು ಕೊಹಿಮಾವನ್ನು ಹಿಡಿದಾಗ ಘಟನೆಗಳು ಬದಲಿದವು. ಮಿತ್ರ ದಂಡುಗಳು ಪ್ರತಿ ದಾಳಿಯನ್ನಾರಂಭಿಸಿದವು. ಒಂದೇ ರಭಸದಲ್ಲಿ ಕಾಲೇಮ್ಯೊ, ಕಾಲೇವಾ, ಮತ್ತು ಭಾಮೊಗಳು ಕಳೆದ ತಿಂಗಳೊಳಗೆ ವಶವಾದುವು.

ಈಗ ಮಿತ್ರರು ಅಕ್ಯಾಬಿನ ಸನೀಯದಲ್ಲಿರುವರು. ಅಕ್ಯಾಬವನ್ನು ಹಿಡಿದರೆ ಅಂಡಮಾನದಲ್ಲಿನ ಶತ್ರು ಟಾಣ್ಯವನ್ನು ಕತ್ತರಿಸಬಹುದು.

◈ ◈ ◈

ಕಳೆದ ವರ್ಷದಲ್ಲಿ ಫೆಸಿಫಿಕ್ ಯುದ್ಧವು ಭಯಂಕರ ಗೊಂದಲಮಯವಾಗಿತ್ತು. ಜಪಾನ್ ಜೇಡನ ಕಾಲುಗಳನ್ನು ಕತ್ತರಿಸಲು ಈ ರಣರಂಗದಲ್ಲಿ ಅಮೇರಿಕನರೊಬ್ಬರೇ ಅವಿಶ್ರಾಂತವಾಗಿ ಹೋರಾಡಿರುವರು. ಭದ್ರವಾದ ವಿಮಾನ ಠಾಣ್ಯವು ಅವರಿಗೆ ಅಲ್ಲಿ ದೊರಕಿದಂದಿನಿಂದ ಬಿ-೨೯ ಎಂಬ ಅವರ 'ಆಕಾಶ ದುರ್ಗ'ಗಳು ಟೋಕಿಯೊ ಮತ್ತಿತರ ಜಪಾನ್ ನಗರಗಳ ಮೇಲೆ ತಡೆಯಿಲ್ಲದೆ ದಾಳಿ ಮಾಡಲು ಶಕ್ಯವಾಗಿವೆ. ಅಮೇರಿಕನರು ತಮ್ಮ ಕೆಲಸವನ್ನು ಅತ್ಯಂತ ಪರಿಪೂರ್ಣತೆಯಲ್ಲಿ ನಿರ್ವಹಿಸಿದ್ದಾರೆ.

ಕ್ವಾಜಲಿನ್ (ಜನವರಿ), ಎಡ್ಮಾರಿಲ್ಟಿ (ಫೆಬ್ರುವರಿ), ಬ್ಯಾಕ್ (ಮೇ), ಸೈಪಾನ್ (ಜೂನ್), ಗೋಮ್, ಪಾಲೋ, ಈ ದ್ವೀಪಗಳನ್ನು ಅವರು ವಶಪಡಿಸಿದ್ದಾರೆ. ಕಳೆದ ವರ್ಷದ ಫೆಸಿಫಿಕ್ ಕಾಳಗದಲ್ಲಿ ಜಪಾನ್ ನೌಕೆಯು ಬಲವಾದ ಪೆಟ್ಟು ತಿಂದಿದೆ. ಅದು ಹೆಚ್ಚು ಕಮ್ಮಿ ಮುರಿದು ಮುದುಡಿ ಹೋಗಿದೆ ಎನ್ನಬಹುದು. ಎರಡುವರೆ ತಿಂಗಳ ಸಾಹಸದಿಂದ ಲೇಟಿ ಆಕ್ರಮಣವಾಯಿತು. ಇದರಿಂದ ಅಮೇರಿಕನರಿಗೆ ಪ್ರಾಧಾನ್ಯ ಒಂದು ಠಾಣ್ಯ ತಳ ಸಿಕ್ಕಿತು. ಜಪಾನಿನ ನೌಕೆಯನ್ನೂ, ಕೈಗಾರಿಕೆ ಪ್ರದೇಶಗಳನ್ನೂ ಇಲ್ಲಿಂದ ಪುಡಿ ಮಾಡಬಹುದು.

ದೂರ ಪ್ರಾಶ್ಚದ ದಿಗಂತದಲ್ಲಿ ಚೀನವು ಒಂದು ಕರಿ ಚುಕ್ಕಿಯಾಗಿ ಕಂಗೊಳಿಸುತ್ತದೆ. ಅಂತಃಕಲಹಗಳಿಂದ ತುಂಬಿರುವ ಒಂದು ನಿರ್ಬಲ ಜನಾಂಗವು ರಬ್ಬರ್ ಗೊಂಬೆಯಂತೆ ಕಠಿಣ ಶತ್ರುವಿನ ಏಟಿಗೆ ಎದೆಕೊಟ್ಟು ಏಳುವರೆ ವರ್ಷಗಳಿಂದ ಹೋರಾಡುತ್ತಿದೆ. ಇದು ಜಗತ್ತಿನ ವಿಚಿತ್ರಗಳಲ್ಲಿ ಒಂದು! ಶತ್ರುಗಳ ಕುಮಿಂಗ್, ಮತ್ತು ಚುಕ್ಕಿಂಗ್ ಮೇಲೆ ಅಭಿಯೋಗ ನಡೆಸ ಹತ್ತಿದಾಗಲೇ ಅಲ್ಲಿನ ಅಮೇರಿಕನ್ ಸೇನಾಪತಿಯನ್ನು ಹಿಂದಕ್ಕೆ ಕರೆಯಲಾಯಿತು. ೧೯೪೫ರ ದೊಡ್ಡ ಪ್ರಶ್ನೆ ಎಂದರೆ "ಚೀನವು ವಶಪಡಿಸಲ್ಪಡುವುದೆ?" ಎಂಬುದಾಗಿದೆ.

◈ ◈ ◈

ಜಾರ್ಜ್ ಸಾರ್ವಭೌಮ್ಮರು ತಮ್ಮ ಕ್ರಿಸ್‌ಮಸ್ ಸಂದೇಶದಲ್ಲಿ ಆಶಾದಾಯಕವಾಗಿ ಮಾತನಾಡಿರುವರು. 'ಜನಾಂಗಗಳೊಳಗೆ ಸುಲಿಗೆ ರಹಿತವಾದ ಸ್ವಾತಂತ್ರ ಶಿಸ್ತು'ಗಳ ವಿಷಯವಾಗಿ ಅವರು ಅಭಯವಿತ್ತರು. ಈ ಯುದ್ಧವು ಅದಕ್ಕಾಗಿಯೇ ಹೋರಾಡಲ್ಪಡುತ್ತಿದೆ. ಆದರೆ ಪ್ರಾಮಾಣಿಕವಾಗಿ ಯೋಚಿಸಿದರೆ ಯಾವ ಕಡೆಯಿಂದಾದರೂ ಈಗ ಅಂತಹ ಆಶಾಕಿರ್ಣವು ಕಾಣಿಸುವುದೆ? ಮಿತ್ರರು ಸಂಕಷ್ಟ ರಹಿತವಾದ ಒಂದು ಜಗತ್ತನ್ನು ನಿರ್ಮಿಸಲಿಚ್ಛಿಸುವರೊ?

ಆಕಾಶ ಮಾರ್ಗಗಳ ಬಾಧ್ಯಸ್ಥಿಕೆಗಾಗಿ ಆಗಲೇ ಬ್ರಿಟನ್ ಅಮೇರಿಕಗಳೊಳಗೆ ಕಚ್ಚಾಟವೆದ್ದಿದೆ. ವರ್ಣದ್ವೇಷದಿಂದ ಈ ಎರಡು ಜನಾಂಗಗಳು ಇನ್ನೂ ಮುಕ್ತವಾಗಿಲ್ಲ. ಚೀನವೂ, ಯುರೋಪೂ ಸಮತಾವಾದಿ ಯಾಗುತ್ತಲಿದೆ ಎಂಬ ಭಯವೇ ಅವರನ್ನು ಆವರಿಸಿದೆ. ಪೋಲೆಂಡ್ ಮತ್ತು ಗ್ರೀಸಿನ ಪ್ರಕರಣಗಳು ಅಘರ ರುಚಿಯನ್ನು ತೋರಿಸಿವೆ. ಪೋಪ್ ಸಾಹೇಬರು ತಮ್ಮ ಕ್ರಿಸ್‌ಮಸ್ ಸಂದೇಶದಲ್ಲಿ ಅಜಮರವಾದ ಶಾಂತಿ ಜಗತ್ತೊಂದರ ನಿರ್ಮಾಣ ಯೋಜನೆಗಳಾಗುತ್ತಿವೆಯಾಗಿ ಸಾರಿದರು. ಮುಸ್ಸೊಲಿನಿಯ ಕಾಲದಲ್ಲಿದ್ದಂತೆ ಆ ಶಾಂತಿಯು ಸ್ಥಾಪಿತವಾಗಬೇಕೆಂದು ಅವರ ಅಭಿಮತವಿದ್ದಂತೆ ತೋರುತ್ತದೆ. ಪ್ರಜಾಪ್ರಭುತ್ವಕ್ಕೆ ಜಗತ್ತಿನಲ್ಲಿ ಎಲ್ಲಿಯೂ ಸ್ಥಾನವನ್ನು ಪೋಪ್ ಪ್ರಭುಗಳು ಕಾಣದಾದರು. ಅಂತಹ ಕಾಲದಲ್ಲಿ ಜನರಿಗೆ ದೇವರದೇ ಸಹಾಯ.

◈ ◈ ◈

ಇನ್ನು ೧೯೪೪ರ ಕುರಿತು ಓರ್ವ ಸಾಮಾನ್ಯ ವ್ಯಕ್ತಿಯ ಮನೋಕ್ರಿಯೆ ಹೇಗಿದೆ ಎಂದು ನೀವು ತಿಳಿಯ ಬಯಸಿರಾದರೆ ಅದು ಹೀಗಿದೆ: ಮಿತ್ರರ ಯಶಸ್ಸಿನಿಂದ ಸಂತೋಷಗೊಳ್ಳದ ವ್ಯಕ್ತಿ ಇಲ್ಲ. ಆದರೆ ರಾಜಕೀಯವಾಗಿ ಮಿತ್ರರು ಯಾವ ಆಶಾದಾಯಕ ಚಿಹ್ನೆಯನ್ನೂ ತೋರಿಸಿಲ್ಲ. ಅಧಿಕಾರ ಲಾಲಸೆಯಿಂದ ಹಾತೊರೆಯುವ ಕ್ರೂರ ಪೆಡಂಭೂತ ಶಕ್ತಿಯ ಆರಾಧನೆಯಲ್ಲಿ ಅವರು ಇನ್ನೂ ತೊಡಗಿರುವಂತೆ ತೋರುತ್ತಿದೆ.

ನಾನು ಈ ಅಧಿಕಾರ ದರ್ಪದ ವಿಘಾತುಕ ಧೋರಣೆಯಿಂದ ಬಳಲಿದ ವ್ಯಕ್ತಿ. ನನ್ನ ಹೃದಯವು ದಾಸ್ಯವ್ಯಾಧಿಯಿಂದ ನರಳುತ್ತಿದೆ. ೧೯೪೪ನೇ ವರ್ಷವೇನೋ ಹೋಯಿತು. ಆದರೆ ಆ ವರ್ಷದಲ್ಲಿ ತಲೆ ಎತ್ತಿದ ಆತ್ಮನಾಶಕ ಧೋರಣೆಗಳು ಮಾಯವಾಗಿರುವವೆ?

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

1944 ನೋಟಗಳು 1944

೧೯೪೪ನೇ ವರುಷವು ಮುಗಿಯಿತು. ೧೯೪೫ರ ಆಗಮನವಾಗಿ ಈಗ ಕೆಲ ದಿನಗಳು ಸಂದವು. ೧೯೪೪ರ ವಿದ್ಯಮಾನಗಳೇನು? ೧೯೪೫ರಲ್ಲೇನು?

೧೯೪೪ರಲ್ಲಿ ಹಿಂದೂದೇಶದ ರಾಜಕೀಯರಂಗದಲ್ಲಿ ಚಟುವಟಿಕೆಗಳು ಬಹಳ ನಡೆದಿದ್ದರೂ ಬಿಕ್ಕಟ್ಟಿನ ಪರಿಸ್ಥಿತಿಯು ನಿವಾರಿಸಲ್ಪಡುವ ಕಾರ್ಯವು, ಸೆರೆಯಲ್ಲಿರುವ ರಾಷ್ಟ್ರೀಯ ನಾಯಕರ ಬಿಡುಗಡೆಯಾಗದೆ ಹಾಗೆನೆ ಉಳಿದುಬಿಟ್ಟಿರುತ್ತದೆ. ಮಿತ್ರರಿಗೆ ವಿಜಯ ಲಭಿಸುವ ಸಂಭವಗಳು ೧೯೪೪ರಲ್ಲಿ ಹೆಚ್ಚಿದ್ದರೂ, ಮಿತ್ರರು 'ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರೂ, ಹಿಂದೂದೇಶಕ್ಕೆ ಸ್ವಾತಂತ್ರ್ಯ ಲಭಿಸುವ ದಿನವು ಇನ್ನೂ ದೂರವಿದೆ ಎಂದು ೧೯೪೪ರಲ್ಲಿ ನಡೆದ ಘಟನಾವಳಿಗಳಿಂದಲೂ, ಚರ್ಚಿಲ್ ಸರಕಾರದ ಧೋರಣದಿಂದಲೂ ಖಚಿತವಾಗಿರುತ್ತದೆ. ಸಮಸ್ತ ಭಾರತದಲ್ಲೆಲ್ಲಾ ಆಶಾಭಂಗಭಾವವು ಉಂಟಾಗಿರುತ್ತದೆ.

ತಮ್ಮ ಪ್ರಿಯಪತ್ನಿಯರ ನಿಧನವಾಗಿ, ದೇಹಪ್ರಕೃತಿಯು ಕ್ಷೀಣವಾಗಿ, ಆರೋಗ್ಯವನ್ನು ಕಳೆದುಕೊಳ್ಳುವ ಸ್ಥಿತಿಯು ಸಂಭವಿಸಿದ ಕಾರಣದಿಂದ ಗಾಂಧೀಜಿಯರ ಬಿಡುಗಡೆ ಆಯಿತು. ಕ್ವಿಟ್ ಇಂಡಿಯಾ ಚಳವಳವನ್ನು ಉತ್ಪಾದಿಸಿದ ಅವರ ಬಿಡುಗಡೆಯ ಬೆನ್ನಲ್ಲೇ, ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯರ ಬಿಡುಗಡೆಯಾಗುವದೆಂದು ದೇಶದಲ್ಲೆಲ್ಲಾ ಇದ್ದ ಆಶಯವು ಫಲಿಸದೆ ಹೋಯಿತು.

ಕಾಂಗ್ರೆಸಿನ 'ಆಗಸ್ಟ್ ನಿರ್ಣಯವು' ಹಿಂತೆಗೆಯಲಾಗದೆ ಯಾವತ್ತೂ ಸಂಧಾನದ ವ್ಯವಹಾರಕ್ಕೆ ಸಿದ್ಧವಿಲ್ಲನೆಂದು ಸರಕಾರವು ಹಟತೊಟ್ಟಂತೆ ಕಾಣುತ್ತದೆ. ಗಾಂಧಿಜಿಯರಿಂದ ಹೊರಡಿಸಿದ ಪ್ರಕಟಣೆಯಿಂದ ಆ ನಿರ್ಣಯವು ಸಲ್ಲದ ಮತ್ತು ಆಗದ ವಿಷಯವೆಂದು ಆಗಿದ್ದರೂ ಸರಕಾರವು ತಮ್ಮ ಮೇಲೆ ತೋರಿಸಿದ ಗಲಭೆಯ ಆರೋಪದ ಕುರಿತು ಅವರು ಒಳ್ಳೆ ವಿಚಾರವತ್ತಾದ ಪತ್ರವ್ಯವಹಾರ ಮಾಡಿದರೂ ಸಾರ್ಥಕವಾಗದೆ ಆಗಸ್ಟ್ ನಿರ್ಣಯದ ನಂತರ ದೇಶದಲ್ಲಿ ಉಂಟಾದ ಗಲಭೆಯ ಕಾರಣ ಕಾಂಗ್ರೆಸ್ಸು ಎಂಬ ಅಭಿಪ್ರಾಯವನ್ನು ಬದಲಾಯಿಸಲು ಸಿದ್ಧವಿಲ್ಲದಾಗಿಯೇ ಅಧಿಕಾರ ವರ್ಗವು ಕುಳಿತುಬಿಟ್ಟಿದೆ. ಆದರೆ ಗಲಭೆಯ ನಿಮಿತ್ತ ಸೆರೆ ಸೇರಿದವರನ್ನು ಕ್ರಮೇಣ ವಿಮುಕ್ತಗೊಳಿಸುವುದು ಅವರ ಸ್ಪದ್ಯದ ಧೋರಣೆಯಾಗಿದ್ದರೂ, ಕಾಂಗ್ರೆಸ್ಸು, ತಾವು ಹೊರಿಸಿದ ತಪ್ಪಿತವನ್ನು ಒಪ್ಪಬೇಕು, 'ಆಗಸ್ಟ್ ನಿರ್ಣಯ'ವು ಹಿಂತೆಗೆಯಲಾಗಬೇಕು, ತಾನು ನಿರ್ಣಯಿಸಿದ ಕಾರ್ಯಕ್ರಮವು ಬಿಟ್ಟುಬಿಡಬೇಕು ಎಂಬದಾಗಿ ಅವರು ಛಲಹಿಡಿದಂತೆ ಕಾಣುತ್ತದೆ.

ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೆರೆಯಲ್ಲಿದ್ದು, ಯಾವತ್ತೂ ನಿರ್ಣಯ ಇತ್ಯಾದಿಗಳು ಈ ಕಮಿಟಿಯಿಂದಲೆ ಆಗುವುದು ಶಾಸನಬದ್ಧವಿರುವುದರಿಂದ, ಗಾಂಧೀಜಿಯರು ಅಧಿಕಾರ ವರ್ಗದ ಮೇಲಿನ ಕೀಳಿಕೆ ವಿಷಯವಾದರೊ ಏನು ಮಾಡಬಲ್ಲರು. ಆ ನಿರ್ಣಯವು ಹಿಂತೆಗೆಯುವ ಅಧಿಕಾರವು ವರ್ಕಿಂಗ್ ಕಮಿಟಿಗೆ ಅಲ್ಲದೆ ಗಾಂಧೀಜಿಯರಿಗೆ ಇರುವುದೆ? ಈ ವಿಚಾರವನ್ನು ಅಧಿಕಾರವರ್ಗವು ತಲೆಗೆ ತೆಕ್ಕೊಂಡ ಹಾಗೆ ಕಾಣುವುದಿಲ್ಲ.

ಯುದ್ಧಯತ್ನಗಳಲ್ಲಿ ಕೆಲವು ಶರತ್ತುಗಳ ಮೇಲೆ ಸಹಕಾರವನ್ನೀಯಲು ಕಾಂಗ್ರೆಸ್ಸು ಎರಡು ವರ್ಷಗಳ ಹಿಂದೆ ಸಿದ್ಧವಿತ್ತು. ಈಗ, ಕ್ರಿಪ್ಸ್ ಸಲಹೆಗಳು ನಿರಾಕರಿಸಲ್ಪಟ್ಟಿದ್ದು, ಅವುಗಳನ್ನು ಈಗ ಕಾಂಗ್ರೆಸ್ಸಿಗರು ಯಾವತ್ತು ಶರತ್ತುಗಳಿಲ್ಲದೆನೆ ಅನುಮೋದಿಸಿದರೆ ಮಾತ್ರ ಅಧಿಕಾರ ವರ್ಗಕ್ಕೆ ಸಮಾಧಾನವಾಗಬಹುದು.

ಆದರೆ ಕಾಂಗ್ರೆಸ್ಸಿನ ಗೌರವಕ್ಕೆ ಕುಂದುವ ರೀತಿಯಲ್ಲಿ ವರ್ಕಿಂಗ್ ಕಮಿಟಿಯ ಬಿಡುಗಡೆ ಸಾಧಿಸುವುದಕ್ಕೆ ಗಾಂಧೀಜಿಯವರು ಸಿದ್ಧವಿಲ್ಲ. ಕಾಂಗ್ರೆಸಿನ ಸಹಕಾರವು ಸರಕಾರಕ್ಕೆ ಸದ್ಯಕ್ಕೆ ಬೇಕಾಗಿಲ್ಲ.

ಮುತ್ತಿಗೆಯ ಮುನ್ನೋಟ

ಮಿತ್ರ ನೌಕಾಧಿಪತಿ ಎಡ್ಮಿರಲ್ ಸರ್ ಬರ್ಟ್ರಾಮ್ ರೆಮ್ಸೆ ಅವರು ಟಾರ್ಪೆಡೊ ಬೋಟಿನ ಮೇಲೆ ನಿಂತು, ಮತ್ತು ಪಡೆಗಳು ಮುಂದುವರಿಯುವುದನ್ನು ನಿರೀಕ್ಷಿಸುತ್ತಿರುವುದು.

ಅವರ ಉದ್ದಿಶ್ಯವು ನಡೆಯುತ್ತಿದೆ. ಧನದ ಬಲದಿಂದ ಯುದ್ಧಯತ್ನವು ಸಾಗುತ್ತಿದೆ. ಸರಕಾರಕ್ಕೆ ಜನರ ಬೆಂಬಲ ಇಲ್ಲ. ಆದರೆ 'ನೈತಿಕ ಆಧಾರ'ವು ಇಲ್ಲವೆಂಬ ವಿಚಾರತರ್ಕದಿಂದ ಪರಿಣಾಮ. ಉಂಟಾಗುವ ಹಾಗಿಲ್ಲ. ಸೆರೆಸೇರಿದ ಕಾಂಗ್ರೆಸ್ ನಾಯಕರಿಗೆ ಜನವರ್ಗದ ಬೆಂಬಲವಿಲ್ಲವೆಂದೂ ಇಂಡಿಯಾ ಸೆಕ್ರಟರಿ ಅಮೆರಿಯರು ಪಾರ್ಲಿಮೆಂಟಿನಲ್ಲಿ ಸಾರಿದ್ದರೂ, ಅಂಥವರನ್ನು ಸೆರೆಯಲ್ಲಿಡುವುದರಿಂದ ಏನು ಪ್ರಯೋಜನವಿದೆ ಎಂಬ ಪ್ರಶ್ನೆಗೆ ಮಾತ್ರ ಸಮಾಧಾನಕರ ಉತ್ತರ ದೊರಕುವಹಾಗಿಲ್ಲ.

ಸತ್ಯವಾವುದೆಂದರೆ—ಕಾಂಗ್ರೆಸ್ಸಿನ ಸಹಕಾರವಿಲ್ಲದೆ ಕಠಿಣ ಸಂಧಿಗ್ದವು ನೀಗಿಸಲ್ಪಟ್ಟಿದೆ; ಈಗ ಸರಕಾರಕ್ಕೆ ಅದರ ಸಹಕಾರವು ಬೇಕಾಗಿಲ್ಲ. ಕಾಂಗ್ರೆಸಿನ ಮತ್ತು ಕಾಂಗ್ರೆಸ್ಸೇತರ ಪಕ್ಷಗಳ ಸಹಕಾರದಿಂದ ತಮ್ಮ ಕಾರ್ಯ ಸುಲಭವಾಗುವುದೆಂಬ ಅಭಿಪ್ರಾಯಕ್ಕೆ ಬರಲು ಅದು ಸಿದ್ಧವಿಲ್ಲ. ಮಿತ್ರರ ಹಿತೋಪದೇಶಗಳಿಗೆ ಕಿವಿ ಕೊಡಲು ಅದು ಸಿದ್ಧವಿಲ್ಲ. ಈ ಕುರಿತು ಯಾರೂ ಏನೂ ಹೇಳಿದರೂ ಅದು ಕೇಳುವ ಹಾಗಿಲ್ಲ. ಆದುದರಿಂದ ಅಮೇರಿಕಾ ಇತ್ಯಾದಿ ಪ್ರಭುತ್ವಗಳು ಆ ಕುರಿತು ಮಾತೆತ್ತುವುದು ವ್ಯರ್ಥವೆಂದೆ ಹೇಳಬೇಕು. ಬ್ರಿಟನಿನ ಲೇಬರ ಪಕ್ಷವು ಈ ಕುರಿತು ಮಾಡಿದ ಠರಾವಿನ ಅವಸ್ಥೆಯು ಇದೇ ಎಂದು ತಿಳಿಯಬೇಕು.

ಹೀಗೆ ವೈಸ್ರಾಯ ವೇವೆಲ್ಲರ ಹೃದಯ ಪರಿವರ್ತನೆಯ ಕಾರ್ಯದಲ್ಲಿ ಗಾಂಧೀಜಿಯರಿಗೆ ಫಲ ದೊರಕದಿರಲು, ಅವರು ಜಿನ್ನಾರವರ ಬಳಿ ನಡೆದರು. ಬ್ರಿಟಿಷರು ಹಿಂದೂದೇಶವನ್ನು ಬಿಟ್ಟು ಹೊರಟುಹೋಗದ ವಿನಹ ಹಿಂದೂ-ಮುಸ್ಲಿಂ ಐಕ್ಯವು ಉಂಟಾಗದು ಎಂಬ ತಮ್ಮ ಮೊದಲಿನ ನಂಬುಗೆಯನ್ನು ಈ ಕ್ಷಣಕ್ಕಾಗಿ ಮೂಲೆಗೆ ಒತ್ತಿದರು. ಜಿನ್ನಾರೊಡನೆ ಒಂದು ಒಪ್ಪಂದವೆಂದರೆ ಹಿಂದೂದೇಶದ ಮುಸ್ಲಿಂ ಬಂಧುಗಳೊಡನೆ ಒಪ್ಪಂದವಾದಂತಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಇನ್ನೂ ಬಲವಂತವಾಗಿ ನಡೆಯಿಸಬಹುದೆಂದು ಅವರು ನೆನಸಿದರು. ಹಿಂದೂದೇಶದ ವಿಭಜನೆಯಾಗಬಾರದೆಂಬ ಕಾಂಗ್ರೆಸ್ಸಿನ ನಿರ್ಣಯದ ಮೇರೆಮಿಕ್ಕಿ ನಡೆದರು. ಇಷ್ಟೆಲ್ಲಾ, ಲೀಗ್ ನಾಯಕರನ್ನು ಒಲಿಸಿಕೊಳ್ಳಲು.

೦ ೦ ೦ ೦

ಮುಂಬ್ಯಾಯಲ್ಲಿ ಗಾಂಧಿ-ಜಿನ್ನಾ ಮಾತುಕತೆಗಳು ನಡೆದವು. ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿಯಿರುವ ಪ್ರಾಂತ್ಯಗಳಲ್ಲಿ ಸ್ವನಿರ್ಣಯದ ಹಕ್ಕನ್ನು ಅವರಿಗೆ ಕೊಡುವ ರಾಜಾಜಿಯರ ಸಿದ್ಧಾಂತದ ಮೇಲೆ ಈ ಮಾತುಕತೆಗಳು ನಡೆದವು.

ಆದರೆ ಯಾವತ್ತು ತರ್ಕಸರಣಿಯಿಂದಲೂ ಜಿನ್ನಾರವರ ಮನ ಒಪ್ಪಿಸಲು ಗಾಂಧೀಜಿಯರಿಗೆ ಅಸಾಧ್ಯವಾಯಿತು. ತಮ್ಮ 'ಪಾಕಿಸ್ತಾನ'ದ ಮಹತ್ವ ಕಡಿಮೆಯಾಗದಂತೆ ಜಿನ್ನರು ಕಾಯ್ದುಕೊಂಡು ವರ್ತಿಸುವವರಾದರು. ಯಾವತ್ತು ತರ್ಕವಿಲ್ಲದೆ, ವಿಚಾರವೆತ್ತದೆ, ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳೆಂದು ಅವರು ಹೇಳುವ ಪ್ರಕಾರ ಮೇರೆಗಳನ್ನು ಹಾಕಿ ಪಾಕಿಸ್ತಾನಕ್ಕೆ ಒಪ್ಪಿಸಿಬಿಡಬೇಕೆಂದು ಅದು ವಾದಿಸಿತು. ವೈಸ್ರಾಯರ ವೇವೆಲ್ಲರಂತೆ ಜಿನ್ನಾರವರ ಹೃದಯ ಪರಿವರ್ತನೆಯು ನಡೆಯದಾಯಿತು. ಇಬ್ಬರೂ ಕೋರುವುದು—ಸಂಪೂರ್ಣ ಶರಣು.

೦ ೦ ೦ ೦

ಮೇಲಿನ ಎರಡು ಸೋಲುಗಳಿಂದ ಗಾಂಧೀಜಿಯರು ನೊಂದರು. ದೇಶದಲ್ಲಿ ಹಬ್ಬಿರುವ ಯಾತನೆ—ಒಂದೆಡೆ, ಮನುಷ್ಯನು ಹಸಿವಿನಿಂದ ಬಳಲುತ್ತಿರುವಾಗ, ಮನುಷ್ಯನು ಲಾಭಗಡುಕ ದೃಷ್ಟಿಯಿಂದ ಸಂಗ್ರಹಿಸಿಡುವುದು,—ಯಿಂದ ಮನುಷ್ಯನ ಮೇಲಿನ ಅವರ ವಿಶ್ವಾಸವೆಲ್ಲಾ ಇಂಗಿತು. ಭಗವಂತನಲ್ಲಿ ಮೊರೆಯಿಡುವವರಾದರು. ಈ ಯಾತನೆಯಿಂದ ಜಗತ್ತನ್ನು ಪಾರುಮಾಡಲು, ದೀರ್ಘಾಲೋಚನಪರರಾದರು. ಜಗತ್ತು ಶುದ್ಧೀಕರಿಸುವ ವಿಚಾರ ತರ್ಕಿಸಿದರು. ಆಶಾಭಂಗರಾಗಿ, ಆತ್ಮಶುದ್ಧಿಗಾಗಿ 'ಸತ್ಯಾಗ್ರಹಿಯ ಕೊನೆಯ ಅಸ್ತ್ರ'ವಾದ ಉಪವಾಸನನ್ನು ಕೈಗೊಳ್ಳುವ ಸೂಚನೆಯು ಅವರಲ್ಲಿ ಹೊಳೆದಿತ್ತು. ಗಾಂಧೀಜಿಯು ಈ ಸಂಕಟದಿಂದ ಡಿಲ್ಲಿ ಮತ್ತು ಲಂಡನಿನ ವ್ಹಾಯ್ಟ್ ಹೋಲ್ ಕದಲದೆ ಬಂಡೆಗಳಂತೆ ನಿಂತುಬಿಟ್ಟವು.

ಪ್ರಕೃತ ಗಾಂಧೀಜಿಯರು ಉಪವಾಸ ವ್ರತದ ಆಲೋಚನೆಯನ್ನು ತೊರೆದಿರುವರು. ಮೃತ್ಯುವನ್ನು ಆಲಿಸುವ ಬದಲಾಗಿ ಬದುಕಿದ್ದು ಸಂಕಟಪಟ್ಟು ಮಾನವಸೇವೆಗಯ್ಯುವುದೇ ಲೇಸೆಂದು ಅವರು ತಿಳಿದರು. ಸದ್ಯ ಅವರು ಕೆಲಸ ತ್ಯಾಗಮಾಡಿ ವಿಶ್ರಾಂತಿ ಪಡೆಯುತ್ತಿರುವರು.

ಸರಕಾರವು ಕ್ರಿಪ್ಸ್‌ಸಲಹೆಗಳು ನಿರಾಕರಿಸಲ್ಪಟ್ಟದಂದಿನಿಂದ ಆಚರಿಸಿದ ಧೋರಣೆಯನ್ನು ತ್ಯಜಿಸಲು ಸಿದ್ಧವಿಲ್ಲವೆಂಬುದು ಖಂಡಿತ. ಆದ ಕಾರಣ ಅದರೊಡನೆ ವ್ಯವಹರಿಸುವ ಕಾರ್ಯವನ್ನು ಗಾಂಧೀಜಿಯರು ಮುಂದಕ್ಕೆ ಮಾಡಲಾರರು. ತನ್ನ ದೇಶವನ್ನು ದೇಶೋದ್ಧಾರದ ರಚನಾತ್ಮಕ ಕಾರ್ಯಪಥದಲ್ಲಿ ನಡೆಸುವುದೆ ಅದರ ಉದ್ದಿಶ್ಯವಿರುತ್ತದೆ. ಗ್ರಾಮಗಳಿಗೆ ಹುರುಪುಕೊಡುವುದು, ಖಾದಿ ಪ್ರಚಾರ, ಭೂರಿವರ್ಗ ಸ್ಪರ್ಶ, ಗೇಯುತ್ತಿರುವಾಗಲೆ ಶಿಕ್ಷಣಕೊಡುವುದು, (ಕೈವೃತ್ತಿಗಳ ಮೂಲಕ ವಿದ್ಯಾಭ್ಯಾಸ) ಮತ್ತು ಈ ಕಾರ್ಯದಲ್ಲಿ ದೇಶದ ಎಲ್ಲಾ ಸಂಘ, ಸಂಸ್ಥೆಗಳ ಸಹಾನುಭೂತಿ ಪಡೆಯುವುದು—ಇದು ಅವರ ರಚನಾತ್ಮಕ ಯೋಜನೆ. ಸೆರೆಯ ಹೊರಗಿರುವ ಕಾಂಗ್ರೆಸ್ಸಿಗರು. ಈ ಕಾರ್ಯಕ್ರಮದ ಬಗ್ಗೆ ಸಭೆಕೂಡಿಸಿ ವ್ಯವಸ್ಥೆಮಾಡುತ್ತಿರುವರು. ಗಾಂಧೀಜಿಯರು ರಾಷ್ಟ್ರದ ನಾಯಕರೆಂಬ ಶಬ್ದವು ದೇಶದಲ್ಲೆಲ್ಲಾ ಮತ್ತೊಮ್ಮೆ ಪ್ರತಿಫಲಿಸಲ್ಪಟ್ಟಿದೆ.

೦ ೦ ೦ ೦

ದೇಶದಲ್ಲಿ ಹಬ್ಬಿರುವ ಯಾತನೆ ನೀಗಿಸುವ ಕಾರ್ಯಗಳಲ್ಲಿ ಕಾಂಗ್ರೆಸಿಗರು ಸರಕಾರದ ಅಧೀನದಲ್ಲಿ ನಡೆಯುವ ವ್ಯವಸ್ಥೆಗಳಲ್ಲಿ ಸಹಕರಿಸಿ ನಡೆಯಬಹುದೆ? ಎಂ

(೬ನೇ ಪುಟಕ್ಕೆ ಮುಂದುವರಿದಿದೆ)

ಕನ್ನಡವು ಮುನ್ನಡೆಯಲಿ

ಸಾಹಿತ್ಯ ಸಮ್ಮೇಲನಾಧ್ಯಕ್ಷರ ಸಂದೇಶ

ಸಾಹಿತ್ಯ ಲಲಿತ ಕಲೆಗಳು ನಾಡಲ್ಲಿ ಹಬ್ಬಲಿ

ಸಾಂಗಲೀ ಸಂಸ್ಥಾನದ ರಬಕವಿಯಲ್ಲಿ ಜರಗಿದ ೨೮ನೇ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಅಧ್ಯಕ್ಷ ಶ್ರೀ. ಶಿ. ಬಸವನಾಳರ ಭಾಷಣದ ಸಾರಾಂಶ:

ಕನ್ನಡ ಜನ ಸಾಮಾನ್ಯರಲ್ಲೆಲ್ಲ ಜಾಗೃತಿಯನ್ನುಂಟುಮಾಡಿ ಅದು ಸದಾ ಪ್ರಜ್ವಲಿಸುವಂತೆ ನೋಡಿಕೊಳ್ಳುವ ಭಾರವೂ ನಮ್ಮದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಈ ಹೊಣೆಯನ್ನು ಹೊತ್ತು ದ್ರವ್ಯನಿಧಿಯನ್ನು ಸೇರಿಸಿ ಪ್ರಚಾರಮಾಡಬೇಕು. ಆದರೆ ಕನ್ನಡದ ಉಜ್ವಲಾಭಿಮಾನವಿಲ್ಲದವರು ಹುಟ್ಟು ಕನ್ನಡಿಗರಲ್ಲದವರು, ಕನ್ನಡ ನಾಡಿನಲ್ಲಿ ಕೆಲಕಾಲ ನೆಲೆಸಿದ ಮಾತ್ರದಿಂದಲೆ ಕನ್ನಡ ನಾಯಕತ್ವವನ್ನು ಕೈಕೊಂಡು ಕೊನೆಗೆ ಕನ್ನಡವನ್ನೇ ವಂಚಿಸಲು ಹಿಂದು ಮುಂದು ನೋಡದವರ ಕೈಯಲ್ಲಿ ಬಿದ್ದು ಈ ಕಾರ್ಯ ಬರಿದಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವುದು ಅತ್ಯಾವಶ್ಯಕವಾದುದು.

ಆಕಾಶವಾಣಿಯಲ್ಲಿ ಕನ್ನಡ: ಕನ್ನಡವು ಭಾರತದಲ್ಲಿನ ಹತ್ತು ಪ್ರಾಮುಖ್ಯ ಭಾಷೆಗಳಲ್ಲಿ ಒಂದು. ಆದರೆ ಇಂದು ಅಖಿಲ ಭಾರತ ರೇಡಿಯೋ ನಿಲಯದಲ್ಲಿ ಇತರ ೨೫ ಭಾಷೆಗಳಿಗೆ ಸ್ಥಾನಮಾನಗಳು ದೊರಕಿದ್ದು ಕನ್ನಡವು ಮಾತ್ರ ಕಡೆಗಣಿಸಲ್ಪಟ್ಟುದು ಲಾಂಛನಾಸ್ಪದವಾದ ಸಂಗತಿ.

ಇದೊಂದು ತತ್ವದ ವಿಷಯ. ಡೆಲ್ಲಿಯ ಕೇಂದ್ರ ಪ್ರಸಾರ ಸ್ಥಾನದಲ್ಲೂ ಅದಕ್ಕೆ ಎಡೆಸಿಗುವಂತೆ ಪ್ರಚಾರಮಾಡಬೇಕು.

ನೆರೆಹೊರೆಯ ಆಕ್ರಮಣ: ಆಂಧ್ರ ಮಹಾರಾಷ್ಟ್ರ ಮುಂತಾದ ನಮ್ಮ ನೆರೆಕರೆಯವರು ಆಗಲೇ ನಮ್ಮ ಗಡಿಪ್ರದೇಶಗಳನ್ನು ಮಾತ್ರವಲ್ಲ ಒಳಭಾಗಗಳನ್ನು ತಮ್ಮ ವಿಶ್ವವಿದ್ಯಾಲಯಗಳ ಯೋಜನೆಯಲ್ಲಿ ಸೇರಿಸಿ ಕಾರ್ಯಕ್ಕೆ ತೊಡಗಿದ್ದಾರೆ. ನಾವು ಈಗಲೇ ಕನ್ನಡ ವಿಶ್ವವಿದ್ಯಾಲಯದ ಯೋಜನೆಯೊಂದನ್ನು ಸಿದ್ಧಪಡಿಸದಿದ್ದರೆ, ನಮ್ಮದು ಇನ್ನೂ ಸಿದ್ಧವಾಗಿಲ್ಲವೆಂದು ಅವರು ತಮ್ಮ ಯೋಜನೆಯನ್ನು ನಮ್ಮ ಮೇಲೆ ಹೊರಿಸದಿರರು. ಇದನ್ನು ಸಾಹಿತ್ಯ ಸಮ್ಮೇಲನ ಹಾಗೂ ಪರಿಷತ್ತು ಕೈಕೊಳ್ಳತಕ್ಕದ್ದು.

ಪರಿಷತ್ತು ಸಮ್ಮೇಲನಗಳ ಧ್ಯೇಯ: ಕನ್ನಡ ಸಾಹಿತ್ಯದ ಏಳ್ಗೆ ಹೆಚ್ಚಳಕ್ಕಾಗಿ ಇವು ಶ್ರಮಿಸಬೇಕು. ಇವು ಹಳೆಯ ಸಾಹಿತ್ಯವನ್ನು ಸಂರಕ್ಷಿಸಬೇಕು. ಹೊಸ ಸಾಹಿತ್ಯದ ನಿರ್ಮಾಣಕ್ಕೆ ಅವಶ್ಯವಾದ ಚಾಲನೆ ಪ್ರೋತ್ಸಾಹಗಳನ್ನು ಕೊಡಬೇಕು.

ಪ್ರಾಚೀನ ಗ್ರಂಥಗಳ ಉದ್ಧಾರ: ನಮ್ಮ ಪ್ರಾಚೀನ ಸಾರಸ್ವತ ಭಂಡಾರವನ್ನು ಪೋಷಿಸುವುದು ನಮ್ಮ ಆದ್ಯ ಕರ್ತವ್ಯ. ಇನ್ನೂ ದೊರೆಯದ ಅನೇಕ ಹಸ್ತಲಿಖಿತ ಪತ್ರಿಕೆಗಳಿವೆ. ಹಳೇ ಜೈನ, ವೀರಶೈವ ಮಠಗಳಲ್ಲಿ ಇವು ಪೂಜೆಗೈಯಲ್ಪಡುತ್ತಿವೆ. ಅಲ್ಲಿ ಅವು ಹುಳಹಿಡಿದು ಹೋಗುತ್ತಿವೆ. ಅದನ್ನು ರಕ್ಷಿಸಬೇಕು.

ಉದ್ ಗ್ರಂಥಗಳ ಪ್ರಕಟಣೆ: ಪ್ರಾಚೀನ ಕವಿಗಳ ಉದ್ ಗ್ರಂಥಗಳನ್ನು "ಆಂಗ್ಲ ಕವಿತೆ"ಗಳನ್ನು ಪ್ರಕಟಿಸಿದಂತೆ ಶುದ್ಧವಾದ ಮೂಲ, ಮಹತ್ವದ ಪಾಠಾಂತರ, ಶಬ್ದಕೋಶ, ಉಪಯುಕ್ತ ಹಾಗೂ ಸಂಕ್ಷಿಪ್ತ ಪ್ರಸ್ತಾವನೆ ಇವುಗಳೊಂದಿಗೆ ಅಂದವಾಗಿ ಮುದ್ರಿಸಿ ಸುಲಭ ಬೆಲೆಗೆ ಪ್ರಚಾರಮಾಡಬೇಕು. ಕನ್ನಡ ನುಡಿ ಸಾಹಿತ್ಯಗಳ ಬೆಳವಣಿಗೆಗಳನ್ನು ಕುರಿತು ಶಾಸ್ತ್ರೀಯವಾದ ಅಭ್ಯಾಸ ಈಗ ಬೇಕಾಗಿದೆ. ಈಗ ಈ ಕಾರ್ಯಕ್ಕೆ ಹೆಚ್ಚು ಅನುಕೂಲತೆಗಳೂ ಇವೆ. ಭಾಷಾ ಪಂಡಿತರು ಇದಕ್ಕೆ ಕೈ ಹಚ್ಚಬೇಕು.

ನಿಘಂಟು: ಜರ್ಮನಿಯ ಕಿಟ್ಟೆಲ್‌ರವರು ಉತ್ಕೃಷ್ಟವಾದ ಒಂದು ನಿಘಂಟನ್ನು ತಯಾರಿಸಿ ಕನ್ನಡಕ್ಕೆ ಅಪಾರ ಸೇವೆ ಮಾಡಿರುತ್ತಾರೆ. ಆದರೆ ಅದು ಹಳೇದಾಗಿದೆ. ಕನ್ನಡ ದೇಶದಲ್ಲಿ ಈಗ ಮುಸಲ್ಮಾನ್, ಕ್ರೈಸ್ತ ಸಂಸ್ಕೃತಿಗಳು ತಳ ಊರಿರುವುದರಿಂದ ಅವುಗಳ ಸಂಪರ್ಕದಿಂದ ಮತ್ತು ನೆರೆಕರೆಯ ಭಾಷಾಪ್ರಾಂತ್ಯಗಳ ಸಂಪರ್ಕದಿಂದ ಉಂಟಾಗಿರುವ ಶಬ್ದಗಳನ್ನು ಆಯಾ ಪಂಗಡ ಮುಖಂಡರಿಂದ ತಿಳಕೊಂಡು ಒಂದು ಸಂಪಾದಕ ಮಂಡಳವನ್ನು ನಿರ್ಮಿಸಿ ಆಧುನಿಕ ಪರಿಸ್ಥಿತಿಗನುಕೂಲವಾದ ಶಬ್ದಕೋಶವನ್ನು ತಯಾರಿಸತಕ್ಕದ್ದು.

ಭಾಷಾ ಚರಿತ್ರೆ: ಕನ್ನಡವು ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳ ಸಂಪರ್ಕದಿಂದ ಉತ್ತರ ಭಾಷಾ ವರ್ಗಗಳಿಗೂ ದಕ್ಷಿಣ ಭಾಷಾ ವರ್ಗಗಳಿಗೂ ಮಧ್ಯಸ್ಥವಾಗಿದೆ, ಸಹಸ್ರಾರು ವರ್ಷಗಳಿಂದ ಬೆಳೆದು ಬಂದ ಈ ಭಾಷೆ ಅನೇಕ ರೂಪ, ಅರ್ಥಾಂತರಗಳನ್ನು ಹೊಂದಿದೆ. ಆದುದರಿಂದ ಭಾಷಾ ಶಾಸ್ತ್ರದ ದೃಷ್ಟಿಯಿಂದ ಬರೆದ ಕನ್ನಡ ನುಡಿಯ ಸಾಹಿತ್ಯ ಚರಿತ್ರೆಯು ಅವಶ್ಯವಾಗಿ ತಯಾರಿಸಬೇಕು.

ಸಾಹಿತ್ಯ ಚರಿತ್ರೆ: ಹಿಂದಿನ ಕವಿಗಳ, ಸಾಹಿತ್ಯಗಾರರ ಜೀವನ ಚರಿತ್ರೆ, ಕೃತಿಗಳು, ಅವುಗಳ ಪರಿಣಾಮ, ಮುಂದಿನ ಗ್ರಂಥಕರ್ತರಲ್ಲಿ ಅವರಿಂದಾದ ಪ್ರಭಾವ ಮುಂತಾದ ವಿಷಯಗಳನ್ನು ತಿಳಿಸುವ ಒಂದು ಸಾಹಿತ್ಯ ಚರಿತ್ರೆಯೂ ಸಿದ್ಧಗೊಳಿಸಬೇಕು. 'ಆಂಗ್ಲ ಭಾಷಾ ಸಾಹಿತಿಗಳು' ಎಂಬ ಗ್ರಂಥದಂತೆ 'ಕನ್ನಡ ಬಾಷಾ ಸಾಹಿತಿಗಳು' ಎಂಬ ಗ್ರಂಥವು ರಚಿಸಲ್ಪಡಬೇಕು.

ಸಂಶೋಧನೆ: ಸಾಹಿತ್ಯ, ಸಂಸ್ಕೃತಿ, ಧರ್ಮ, ಇತಿಹಾಸ ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆ ಇನ್ನೂ ಹೆಚ್ಚಿನ ಉತ್ಸಾಹ, ಚಟುವಟಿಕೆಯಿಂದ ನಡೆಯತಕ್ಕದ್ದು. ಇನ್ನೂ ಇದು ವಿಸ್ತಾರಗೊಳ್ಳಬೇಕು. ಸಂಶೋಧನೆಯು ಪರಸ್ಪರ ಅಪಪ್ರಚಾರದ ಕಾರ್ಯದಲ್ಲಿ ತೊಡಗಬಾರದು. ಇದಕ್ಕಾಗಿ ಪರಿಷತ್ತಿನವರು ಪ್ರತ್ಯೇಕ ಪತ್ರಿಕೆಯನ್ನು ಹೊರಡಿಸಬೇಕು. ಉದ್ಬೋಧಕ ಸಂಶೋಧನಾ ಲೇಖಗಳು ಇದರಲ್ಲಿ ಪ್ರಕಟವಾಗಬೇಕು.

ಗ್ರಂಥಾಲಯಗಳು: ಸಂಶೋಧನಕ್ಕೂ, ಅಭ್ಯಾಸಕ್ಕೂ ಅನುಕೂಲವಾಗುವಂತಹ ಉತ್ತಮ ಪುಸ್ತಕಾಲಯವನ್ನು ಸ್ಥಾಪಿಸುವುದು ಅತ್ಯಾವಶ್ಯಕ. ಕನ್ನಡದಲ್ಲಿ ಮುದ್ರಿತವಾದ ಎಲ್ಲಾ ಪುಸ್ತಕಗಳು ವೃತ್ತಪತ್ರಿಕೆಗಳೂ ಇಲ್ಲಿಗೆ ಕಳುಹಿಸಿಕೊಡಲ್ಪಡಬೇಕು. ಹಳೆಯ ಕೈಬರೆಹ ಪತ್ರಿಕೆಗಳೂ ಗ್ರಂಥಗಳೂ ಇವುಗಳಲ್ಲಿ ಸುವ್ಯಸ್ಥಿತವಾಗಿ ಸಂಗ್ರಹಿಸಬೇಕು.

ಭಾಷಾಂತರ ಕಾರ್ಯ: ನಮ್ಮ ಇತರ ದೇಶಿಯ ಭಾಷೆಗಳಲ್ಲಿ ಹೆಸರಾಂತ ಗ್ರಂಥಗಳು ಕನ್ನಡಕ್ಕೆ ಭಾಷಾಂತರಿಸಲ್ಪಡಲಿ. ಇವು ಅರ್ಧಮರ್ಧ ಭಾಷಾಂತರಗಳಾಗಿರಬಾರದು. ಇಂಗ್ಲಿಷ್, ಜರ್ಮನ್, ರಷ್ಯನ್ ಭಾಷೆಯ ಶ್ರೇಷ್ಠ ಗ್ರಂಥಗಳು ಅವಶ್ಯವಾಗಿ ಭಾಷಾಂತರಗೊಳ್ಳಬೇಕು.

ಪಾರಿಭಾಷಿಕ ಶಬ್ದಗಳು: ವಿದ್ವಜ್ಜನರ ಒಂದು ಸ್ಥಿರ-ಉಪಮಂಡಳವನ್ನು ರಚಿಸಿ, ಆದಷ್ಟು ಮಟ್ಟಿಗೆ ಭಾರತದ ಎಲ್ಲಾ ಭಾಷೆಗಳಿಗೂ ಸಮನ್ವಯ ಕಲ್ಪಿಸುವ ಒಂದು ವಿಜ್ಞಾನಿಕ ಸಾಹಿತ್ಯದ ಕ್ಷೇತ್ರಗಳಲ್ಲಿ ಉಪಯೋಗಿಸುವ ಪಾರಿಭಾಷಿಕ ಶಬ್ದಗಳನ್ನು ತಯಾರಿಸಲು ಪ್ರಯತ್ನಗಳಾಗತಕ್ಕದ್ದು.

ಸಾಹಿತ್ಯದ ನೂತನ ಪ್ರಕಾರಗಳು: ನಾಟಕದ ವಿವಿಧ ರೂಪಗಳು ಬಳಕೆಯಲ್ಲಿ ಬರಬೇಕು. ನಮ್ಮವು ಸಂಗೀತ ಮಿಶ್ರವಾದವುಗಳು. ಪಾಶ್ಚಾತ್ಯ ರೀತಿಯ ಸಮಗ್ರ ಸಂಗೀತಮಯ ನಾಟಕಗಳೂ, ಪ್ರಚಲಿತ ಸಂಗತಿಗಳನ್ನು ಟೀಕಾತ್ಮಕವಾಗಿ ಎತ್ತಿ ತೋರಿಸುವ ನಾಟಕಗಳೂ, ಹಾಸ್ಯ, ವಿಡಂಬನ, ಪ್ರಹಸನ ರೂಪವಾದವುಗಳೂ ಪ್ರಚಾರಕ್ಕೆ ಬರಬೇಕು. ಅದ್ಭುತ ಕಲ್ಪನೆಯ ದೃಶ್ಯಾವಳಿ, ಘಟನಾವಳಿಗಳುಳ್ಳ 'ಫಾಂಟಸಿ' ನಾಟಕಗಳೂ ನಿರ್ಮಾಣವಾಗಬೇಕು.

ಲೇಖಕರ ಸ್ಥಾನಮಾನ: ಲೇಖಕರಿಗೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನ ದೊರಕಬೇಕು. ಅವರು ತಮ್ಮೊಳಗೆ ಸಂಘಟನೆ ಮಾಡಿಕೊಳ್ಳಬೇಕು. ಇತರ ಪ್ರಾಂತೀಕ ಸಾಹಿತಿ ಕಲಾಗಾರರೊಡನೆ ಅವರು ಸಂಬಂಧವಿಟ್ಟುಕೊಳ್ಳಬೇಕು.

ವೃತ್ತ ಪತ್ರಿಕೆಗಳು. ವಿವಿಧ ಸಾಹಿತ್ಯ ಕ್ಷೇತ್ರಗಳಲ್ಲಿ ನುರಿತವರಿಂದ ಲೇಖನಗಳನ್ನು ಬರೆಯಿಸಿ ಪ್ರಕಟಿಸಬೇಕು. ವ್ಯಂಗ ಚಿತ್ರಗಳು, ಕಲಾ ಚಿತ್ರಗಳಿಗೂ ಪ್ರೋತ್ಸಾಹ ಕೊಡಬೇಕು. ಕನ್ನಡ ಪತ್ರಿಕೆಗಳು ಪಾಶ್ಚಾತ್ಯ ಮಾದರಿಯನ್ನು ಮುಂದಿಟ್ಟು, ಸಾಹಿತ್ಯ, ಕಲೆಗಳಿಗೆ ತಕ್ಕ ಪರಿಶ್ರಮ ಕೊಟ್ಟು ಉತ್ತೇಜನ ಕೊಡಬೇಕು. ಲೇಖಕರಿಗೂ, ಚಿತ್ರಗಾರರಿಗೂ ಯೋಗ್ಯ ಸವಲತ್ತು ಧನವನ್ನು ತೆರಬೇಕು. ಅವರು ಆಧುನಿಕ ಪ್ರಪಂಚದ ಪ್ರತಿಯೊಂದು ಕ್ಷೇತ್ರದ ಕುರಿತಾದ ಲೇಖಗಳನ್ನು ಪ್ರಕಟಿಸಬೇಕು.

ಹೊಚ್ಚ ಹೊಸ ಬರೆಹಗಾರರಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸಿ ಅವರನ್ನು ಪ್ರೋತ್ಸಾಹಿಸಲಿಕ್ಕೂ, ನೂತನ ಸಾಹಿತ್ಯ ಆದಷ್ಟು ಅಭಿವೃದ್ಧಿ ಹೊಂದಲಿಕ್ಕೂ ಸಹಾಯಕವಾಗುವಂತೆ ನಮ್ಮ ವಿಮರ್ಶೆಗಳಿರಬೇಕು. ಹಿರಿಯ ಸಾಹಿತಿಗಳನ್ನು ಪ್ರೋತ್ಸಾಹಿಸಿ ಸನ್ಮಾನಿಸಲು ಪಾರಿತೋಷಗಳನ್ನು ಏರ್ಪಡಿಸಬೇಕು.

ವಾಕ್ಚಿತ್ರಗಳ ಮೂಲಕ ನುಡಿ, ಸಂಸ್ಕೃತಿ, ಕಲೆ, ಜೀವನಗಳನ್ನು ಪ್ರಚಾರಿಸಲು ಕನ್ನಡಿಗರು ಈ ಕ್ಷೇತ್ರದಲ್ಲಿ ಶ್ರೇಷ್ಠ ಪ್ರಯತ್ನಗಳನ್ನು ಮಾಡಬೇಕು.

ಸೌಹಾರ್ದ ಸಹಾನುಭೂತಿಗಳನ್ನು ಅರಳಿಸುವುದು ಸಾಹಿತ್ಯ; ದ್ವೇಷಗಳನ್ನು ಕೆರಳಿಸುವಂತಾದ್ದು ಸಾಹಿತ್ಯವಲ್ಲ. ಅಲ್ಲಸಲ್ಲದ ಸಂಗತಿಗೆ ಕೈ ಹಾಕುವುದು ಪ್ರಗತಿಯ ಲಕ್ಷಣವಲ್ಲ.

ಕರ್ನಾಟಿಕ ಭಾರತ: ಭಾರತ ಖಂಡದ ಅರ್ಥಪೂರ್ಣವಾದ ವಿವಿಧತೆಯೊಡನೆ ಸ್ವಜವಾದ ಏಕರೂಪತೆಯನ್ನು ಪ್ರಕಟಿಸುವಂತೆ ಸುಂದರ ಆದರ್ಶವನ್ನು ಭಾರತಾಂಬೆಯ ಪುತ್ರ ಪುತ್ರಿಯರ ಕಣ್ಣೆದುರಿಗೆ ಕಟ್ಟುವಂತಹ ಸಾಹಿತ್ಯವನ್ನು ನಾವು ನಿರ್ಮಿಸಬೇಕು. ದೇಶವನ್ನು ಹೋಳುಮಾಡಿ ಹಾಳು ಮಾಡುವ ಪ್ರಯತ್ನಗಳನ್ನು ನಾವು ತಡೆಯಬೇಕು.

ಸಂಗೀತ: ಸಾಹಿತ್ಯದೊಡನೆ ನಿಕಟ ಸಂಬಂಧವಿರುವ ಸಂಗೀತವೂ ಬೆಳೆಯಬೇಕು. ಜನಪದ ಸಾಹಿತ್ಯವೆಲ್ಲ ಹೆಚ್ಚಾಗಿ ಹಾಡುರೂಪದಲ್ಲಿದೆ. ಮುಂದೆ ಸಾಹಿತ್ಯ ಸಮ್ಮೇಲನದ ಅಂಗವಾಗಿ ಸಂಗೀತ ಗೋಷ್ಠಿಗಳೂ ನಡೆಯಲಿ.

ಉಪಸಂಹಾರ: "ಮೃತ್ಯಲೋಕವು ಕರ್ತಾರನ ಕಮ್ಮಟ"ವೆಂದು ಬಸವಣ್ಣನವರು ಹೇಳಿದ್ದಾರೆ, ನಾವೂ ಕಾಯಕರ್ತರಾಗೋಣ. ಎಲ್ಲರ ಬೆಂಬಲದಿಂದ ಪರಿಷತ್ತಿನ ಆಶ್ರಯದಲ್ಲಿ ಈ ಕಾರ್ಯಗಳು ನಡೆಯಲಿ ಅವು ಖಂಡಿತ ಫಲಕಾರಿಯಾಗುವುವು.

ದಕ್ಷಿಣ ಕನ್ನಡ ಸೆಂಟ್ರಲ್ ಕೊ-ಓಪರೇಟಿವ್ ಬೆಂಕ್, ಲಿಮಿಟೆಡ್, ಮಂಗಳೂರು

ನಿರುಖು ಠೇವಣಾತಿಗಳ ಬಡ್ಡಿದರ

ಒಂದು ವರ್ಷಕ್ಕೆ ಶೇಕಡಾ 3.

ಆರು ತಿಂಗಳಿಗೆ ಶೇಕಡಾ 2¼.

ಸಹಕಾರಿ ಸಂಘಗಳಿಗೆ ಶೇಕಡಾ ¼ರಂತೆ ಜಾಸ್ತಿ ಕೊಡಲಾಗುವುದು.

ಕಾರ್ಯದರ್ಶಿ.

1944

ಮೈಸೂರು ದಸರಾ ಪ್ರದರ್ಶನದಲ್ಲಿ

ಸುವರ್ಣಪದಕ ಪಡೆದ

ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಿಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಸ್ವದೇಶಾಭಿಮಾನಿ

ತಾರೀಕು 5—1—1945

ನಾಲ್ವತ್ತೈದು

ಸಾವಿರದ ಒಂಬೈನೂರ ನಾಲ್ವತ್ತೈದನೆ ಇಸವಿ ಎಂದಾಗ ನಮಗೆ ೧೯೪೪ ವರ್ಷಗಳ ಹಿಂದೆ ಹುಟ್ಟಿದ ಆ ಯೇಸುಕ್ರಿಸ್ತನೆಂಬೊಬ್ಬ ಮಹಾಪುರುಷನ ಸ್ಮರಣೆಯಾಗುವುದು. ಅವನು ಜಗತ್ತಿಗೆ ಅಹಿಂಸೆಯ ಅಮೋಘ ಸಂದೇಶವನ್ನು ಕೊಟ್ಟು ಮಾನವ ಕೋಟಿಯ ಪಾಪಕ್ಕಾಗಿ ಶಿಲುಬೆಯ ಮೇಲೆ ತನ್ನ ದಿವ್ಯಪ್ರಾಣವನ್ನರ್ಪಿಸಿದನು.

ಆದರೆ ಇಂದು ಆ ಮಹಾತ್ಮನ ಅನುಯಾಯಿಗಳಾದರೂ ಏನು ಮಾಡುತ್ತಿರುವರು? ಇತಿಹಾಸವೆಂದೂ ಕಾಣದ ಘೋರ ನರಹತ್ಯಾ ಪಾತಕದಲ್ಲಿ ಅವರು ಕೈಯಾಡಿಸುತಿದ್ದಾರೆ. ಶ್ರೇಷ್ಠವೆನಿಸದ ಮನುಷ್ಯ ಜೀವಿಯನ್ನು ತೃಣಸಮಾನವಾಗೆಣಿಸಿ ಅವನ್ನು ಭಯಂಕರ ಹತ್ಯಾಸ್ತ್ರಗಳಿಂದ ಕೊಲ್ಲಹತ್ತಿರುವರು. ಕಾಡುಜಂತುಗಳಂತೆ ಮಾನವ ಕೋಟಿಯು ಒಬ್ಬರನ್ನೊಬ್ಬರು ಕತ್ತುಹಿಸುಕಿ ಹೀರಲು ಪ್ರಯತ್ನಿಸುತ್ತಿರುವರು.

ಇತ್ತ ಎರಡುವರೆ ಸಾವಿರ ವರ್ಷಗಳ ಹಿಂದೆ ಅವತರಿಸಿದ ಅಹಿಂಸಾ ಪರಮೋಧರ್ಮ ಬೋಧಕನಾದ ಬುದ್ಧದೇವನ ಅನುಯಾಯಿಗಳಾದ ಜಪಾನಿಯರಾದರೂ ಭೀಕರ ಕ್ರೂರತೆಯನ್ನು ಪ್ರದರ್ಶಿಸಿ ಮೆರೆಯುತಿದ್ದಾರೆ.

ಇದೇನು? ಕೌತುಕಗಳಲ್ಲಿ ಅತೀ ಕೌತುಕವಾದ ವಿಷಯ. ಅಹಿಂಸಾವಾದಿಗಳಾದ ಈರ್ವ ಅವತಾರೀ ಪುರುಷರ ಅನುಯಾಯಿಗಳು ಲೋಕಕಂಠಕರಾಗಿ ತಮ್ಮ ಮತಸ್ಥಾಪನಾಚಾರ್ಯರ ತತ್ವಗಳನ್ನೇ ಕಾಲಡಿಯಲ್ಲಿ ಹಾಕಿ ತುಳಿಯುತ್ತಿರುವರಲ್ಲಾ!

ಅಹಿಂಸೆಯ ಮೂಲ ತಳಹದಿಯ ಮೇಲೆ ಕಟ್ಟಲ್ಪಟ್ಟ ಮತಗಳು ಕಾಲಚಕ್ರದ ತಿರುಗುವಿಕೆಯೊಂದಿಗೆ ತದ್ವಿರೋಧ ಭಾವನೆಗಳಿಂದ ಪ್ರೇರೇಪಿತವಾಗುವುದು ಇತಿಹಾಸದ ಸಹಜ ಪರಿಣಾಮವೋ ಎಂದು ಸಂದೇಹವಾಗುತ್ತಿದೆ.

ಉಪಾಯವಿಲ್ಲ. ಕಹಿಯನ್ನುಂಡವರಿಗೆ ಸಿಹಿಯ ಸವಿ ಹೆಚ್ಚಿನ ರುಚಿಯಿಂದ ಅನುಭವವಾಗುತ್ತದೆ. ಸಿಹಿಯನ್ನೇ ಸವೆದಿದ್ದ ನಾಲಿಗೆ ಕಹಿಯನ್ನು ನೆಕ್ಕುವುದಕ್ಕೆ ಕಾತುರಪಡುವುದು ಸಹಜವಾದ ಪ್ರಕೃತಿ ಸ್ವಭಾವವಿರಬಹುದು.

ಕಳೆದ ವರ್ಷವೆಲ್ಲ ಈ ಭೀಕರ ಹೋರಾಟದಲ್ಲಿ ಕಳೆಯಿತು. ಪುನಃ ಜರ್ಮನಿಯು ಕೆರಳಿಕೊಂಡಿದೆ. ಜಾಪಾನು ಇನ್ನೂ ಬಲಿಷ್ಟವಾಗಿಯೇ ಇದೆ ಎಂಬ ಅಭಿಪ್ರಾಯ ಹರಡಿದೆ. ಅಂದ ಮೇಲೆ ಹೊಸ ವರ್ಷದಲ್ಲೂ ಆಶಾದಾಯಕ ಚಿಹ್ನೆಗಳು ತೋರುವುದಿಲ್ಲ. ಬ್ರಿಟನ್ ಅಮೇರಿಕಾ ರಷ್ಯಾ ಚೀನಾಗಳು ದೊಡ್ಡ ಮನಸ್ಸುಮಾಡಿ ಹೇಗಾದರೂ ಕೊಲೆಗಡುಕರನ್ನು ಹದಗೊಳಿಸಿ ಮುಂದೆಂದೂ ಜಗತ್ತು ಇಂತಹ ವಿಪತ್ತಿಗೆ ತುತ್ತಾಗದಂತೆ ಮಾಡಬೇಕೆಂದು ಮಾನವ ಕೋಟಿಯೇ ಹಾರೈಸುತ್ತದೆ.

ರಾಷ್ಟ್ರಗಳು ನೆಮ್ಮದಿಯಲ್ಲಿರಲು ಸಾಧ್ಯವಿದೆ. ಕೊಲೆಯೇ ಮಾನವನ ಧ್ಯೇಯವಲ್ಲ. ಶಕ್ತಿ ರಾಷ್ಟ್ರಗಳು ಸಂಕುಚಿತ ಭಾವನೆಗಳನ್ನು ತೊರೆದು ವಿಶ್ವಸಂಸ್ಕೃತಿಯನ್ನು ಬೆಳಗಿಸಲು ನಿರ್ಧರಿಸಿದರೆ ನಾಗರೀಕತೆಯು ಪರಿಪೂರ್ಣತೆಗೆ ಮುಟ್ಟದಿರದು.

ಹೊಸ ವರ್ಷದಲ್ಲಿ ಭಾರತದಲ್ಲೂ ನವ ಉತ್ಸಾಹ ಸ್ಫೂರ್ತಿಗಳಿಗೆ ಎಡೆಕಾಣಿಸುವುದಿಲ್ಲ. ರಾಜಕೀಯ ಬಿಕ್ಕಟ್ಟು ಇನ್ನೂ ಬಿಗಿಯಾಗಿಯೇ ಇದೆ. ಸಪ್ರೂ ಸಮಿತಿಯವರ ಪ್ರಯತ್ನಗಳು ಒಂದು ಆಶಾ ಕಿರಣ. ಜಗತ್ತು ಭಾರತದ ಆಧುನಿಕ ಮಹಾಪುರುಷನನ್ನು ತನ್ನ ವಿಶ್ವಾಸದಲ್ಲಿ ತೆಗೆದುಕೊಂಡು ಶಾಂತಿ ಪರಿಷತ್ತಿನಲ್ಲಿ ಆತನಿಗೊಂದು ಸಂದರ್ಭ ಕೊಟ್ಟರೆ ಪಾಶ್ಚಾತ್ಯ ನಾಗರೀಕತೆ ಎಂದೂ ಎಣಿಸಲಾಗದ ಮಹಾಕಾರ್ಯವನ್ನು ಆತನು ಮಾಡಿತೋರಿಸದಿರನು.

ಜಗತ್ತಿನಲ್ಲಿ ಚಿರ ಶಾಂತಿಯನ್ನು ನೆಲೆಸಲು ಭಾರತದ ಗಾಂಧೀ ಎಂಬೀ ದಿವ್ಯ ಜ್ಯೋತಿಯು ನೆರವಾಗಲಿ. ಇನ್ನು ಕೆಲವು ಶತಮಾನಗಳ ತನಕವಾದರೂ ಜಗತ್ತು ಪರಿಪಕ್ವವಾದೀ ನಾಗರಿಕತೆಯ ಸವಿಯನ್ನುಣ್ಣಲಿ ಎಂದು ನಮ್ಮ ಪ್ರಾರ್ಥನೆ.

ಗಾಂಧೀ ವಿರೋಧಿ ಶಾಸ್ತ್ರಿ

ಗಾಂಧೀಜಿಯ ಧೋರಣೆ, ವಿಚಾರಗಳನ್ನು ಟೀಕಿಸುವುದಕ್ಕೆ ರ್‍ಯಾಟ್ ಆನರೆಬಲ್ ಶ್ರೀನಿವಾಸ ಶಾಸ್ತ್ರಿಗಳು ಹಿಂದೆ ಮುಂದೆ ನೋಡುವವರಲ್ಲ. ಗಾಂಧಿ-ಜಿನ್ನಾ ಮಾತುಕತೆ ಕಾಲದಲ್ಲೂ ಇವರು ಮಹಾತ್ಮರನ್ನು ಕಡುವಾಗಿ ಆದರೆ ಗಂಭೀರ ರೀತಿಯಲ್ಲಿ ಟೀಕಿಸಿದ್ದಾರೆ. ಅವರ ಟೀಕೆಯಲ್ಲಿ ಸ್ನೇಹಭಾವದ ಸಹಾನುಭೂತಿ ಇದ್ದೇ ಇರುತ್ತದೆ.

ಇದಕ್ಕಾಗಿಯೇ ಮಹಾತ್ಮರು ತಮ್ಮ ಆತ್ಮಕತೆಯಲ್ಲಿ ಶಾಸ್ತ್ರಿಗಳನ್ನು ತಮ್ಮ ಆಧ್ಯ ಸ್ನೇಹಿತನೆಂದು ಕರೆದಿದ್ದಾರೆ. 'ಗಾಂಧಿಜಿ ನನ್ನನ್ನು ತಮ್ಮ ಸ್ನೇಹಿತನೆಂದು ಕರೆದಿರುವುದೇ ಜೀವನದಲ್ಲಿ ನನಗೆ ಅದು ಅತ್ಯಂತ ಸಂತೃಪ್ತಿಯ ವಿಷಯ' ಹೀಗೆಂದು ಶಾಸ್ತ್ರಿಗಳು ಉದ್ಗರಿಸಿದ್ದಾರೆ.

ಹಿಂದೆ ಶ್ರೀನಿವಾಸ ಶಾಸ್ತ್ರಿಗಳು ಹೆಡ್ಮಾಸ್ತರರಾಗಿದ್ದರು. ತಮ್ಮ ಆಂಗ್ಲ ಭಾಷಾ ತಜ್ಞತೆಯಿಂದಲೂ ಅಮೋಘ ಭಾಷಣ ಸಾಮರ್ಥ್ಯದಿಂದಲೂ ಬ್ರಿಟಿಷ್ ಸರಕಾರದ ಸ್ನೇಹಿತರಾಗಿ ಸಾಮ್ರಾಜ್ಯದ ಹಿತಕಾರಿಗಳಿಗೆ ಸಿಕ್ಕುವ 'ರ್‍ಯಾಟ್ ಆನರೆಬಲ್' ಬಿರುದನ್ನು ಸಂಪಾದಿಸಿದರು. ಈ ಬಿರುದು ಚರ್ಚಿಲ್ಲರಿಗೂ ಸಿಕ್ಕಿದೆ. ಆಫ್ರಿಕಾದಲ್ಲಿ ಸರಕಾರ ಪ್ರಾತಿನಿಧ್ಯಾಧಿಕಾರದಿಂದ ಶಾಸ್ತ್ರಿಯವರು ಕೆಲಸ ಮಾಡಿದ್ದಾರೆ. ಮಾತ್ರವಲ್ಲ ಅನೇಕ ಸರಕಾರ ಮತ್ತು ಇತರ ಸ್ವತಂತ್ರ ಸಮಿತಿಗಳ ಸದಸ್ಯರೂ ಅಧ್ಯಕ್ಷರೂ ಆಗಿ ರಾಜ್ಯಘಟನಾ ಕಾರ್ಯದಲ್ಲಿ ಸಹಭಾಗಿಗಳಾಗಿ ಶ್ಲಾಘನೆ ಪಡೆದಿದ್ದಾರೆ. ರಾಜಕೀಯವನ್ನು ಹೆಡ್ಮಾಸ್ತರ್ ಶಾಸ್ತ್ರಿಗಳು ಆಳವಾಗಿ ಅಭ್ಯಾಸಿಸಿದ್ದಾರೆ. ಅದರಲ್ಲಿ ತುಂಬಾ ನುರಿತಿದ್ದಾರೆ. ರೌಂಡ್ ಟೇಬಲ್ ಪರಿಷತ್ತಿಗೆ ಸಲಹೆಗಾರೆ ಪ್ರತಿನಿಧಿಯಾಗಿಯೂ ಮಾನ್ಯ ಶಾಸ್ತ್ರಿಗಳು ಹೋಗಿದ್ದರು.

ಭಾಷಣ ಸಾಮರ್ಥ್ಯ

ಇಂಗ್ಲಿಷ್ ಭಾಷೆಯಲ್ಲಿ ಅಗಾಧ ಪಾಂಡಿತ್ಯವಿರುವ ಶಾಸ್ತ್ರಿಗಳು ಆ ಭಾಷಾ ಶಬ್ದ ಉಚ್ಚಾರ, ವ್ಯಾಕರಣ ಸಾಹಿತ್ಯಗಳಲ್ಲಿ ಪ್ರಪಂಚದಲ್ಲೇ ಒಬ್ಬ ಅಗ್ರಗಣ್ಯ ಪಂಡಿತರೆನಿಸಿದ್ದಾರೆ. ಶಾಸ್ತ್ರಿಗಳು ಜಗದ್ವಿಖ್ಯಾತಿ ಪಡೆದ ಇಂಗ್ಲಿಷ್ ಭಾಷಣಗಾರರೆಂದು ಎನಿಸಿಕೊಂಡಿದ್ದಾರೆ. ಅವರು ಬೆಂಗಳೂರಿನಲ್ಲಿ ತಮ್ಮ ಪ್ರಥಮ ಸಾರ್ವಜನಿಕ ಭಾಷಣ ಮಾಡಿದರು. ಅಲ್ಲಿ ಅವರಿಗೆ ತುಂಬಾ ಉತ್ತೇಜನ ಭರವಸೆಗಳು ದೊರಕಿ ಮುಂದೆ ಅವರ ಕೀರ್ತಿಗೆ ಭದ್ರವಾದ ತಳಹದಿಯಾಯಿತು.

ಭಾಷಣಗಳು ಕೇಳುವವರಿಗೆ ರುಚಿಕರವಿರಬೇಕಾದರೆ ಅದರಲ್ಲಿ ಸುರಸವಾದ ಹಾಸ್ಯ ಭಾಗಗಳು ತುಂಬಿರಬೇಕೆಂದು ಶಾಸ್ತ್ರಿಗಳ ಅಭಿಪ್ರಾಯ. ಎಲ್ಲಾ ವರ್ಗದ ಜನರಿಗೂ ರುಚಿಸುವ ಹಾಸ್ಯಮಯ ವಿಚಾರಗಳನ್ನು ನಿರೂಪಿಸುವುದರಲ್ಲಿ ಶಾಸ್ತ್ರಿಗಳು ತುಂಬಾ ನಿಪುಣರು. ಭಾಷಣಗಾರನು ತನಗೆ ಸಭೆಯಲ್ಲಿ ಅಧ್ಯಕ್ಷನು ಕೊಡುವ ಸಮಯದೊಳಗೇ ಭಾಷಣ ಮುಗಿಸುವಷ್ಟು ಮತ್ತು ಅದೇ ಅವಧಿಯಲ್ಲಿ ಹೇಳಬೇಕಾದ ವಿಷಯವನ್ನು ಸಂಕ್ಷೇಪಿಸಬೇಕಾದುದು ಅತ್ಯಾವಶ್ಯಕವೆಂದು ಅವರ ಸೂಚನೆ.

ಘಟನಾವಳಿಗಳು

ಹಿಂದೆ ಗಾಂಧೀಜಿ ರೌಂಡ್ ಟೇಬಲ್ ಪರಿಷತ್ತಿಗೆ ಇಂಗ್ಲೆಂಡಿಗೆ ಹೋಗಿದ್ದರು. ಶಾಸ್ತ್ರಿಗಳೂ ಹೋಗಿದ್ದರು. ಒಂದು ದಿನದ ಸಭೆಯಲ್ಲಿ ಅಂದಿನ ಅಧ್ಯಕ್ಷರು ಭಾಷಣಗಾರರಿಗೆ ಹತ್ತೇ ನಿಮಿಷ ಕಾಲ ಕೊಟ್ಟಿದ್ದರು. ಅಷ್ಟೆ ಅವಧಿಯಲ್ಲಿ ಶಾಸ್ತ್ರಿಗಳು ತಮ್ಮ ವಿಚಾರಗಳನ್ನು ಶ್ರೇಷ್ಠ ಶೈಲಿಯಲ್ಲಿ ತಿಳಿಸಿದರು. ರ್‍ಯಾಟರ್ ಸುದ್ದಿ ಸಂಸ್ಥೆಯವರು ಮರುದಿನ ಪತ್ರಿಕೆಗಳಲ್ಲಿ 'ಶಾಸ್ತ್ರಿಗಳ ಅದ್ಭುತ ಭಾಷಣ ಸಂಕ್ಷೇಪ' ಎಂದು ಪ್ರಕಟಿಸಿದ್ದರು.

ಆಂಗ್ಲ ವ್ಯಾಕರಣ ತಜ್ಞ ಶಾಸ್ತ್ರಿಗಳು ಅನೇಕ ಸಲ ಮಹಾತ್ಮಾಜಿಯವರ ಲೇಖನಗಳಲ್ಲಿ ವ್ಯಾಕರಣ ದೋಷಗಳನ್ನು ಹೆಕ್ಕಿ ತೆಗೆದು ತಿಳಿಸಿದ್ದರು. ಒಂದು ಸಲ ಗಾಂಧೀಜಿಯವರ ಯಾವುದೋ ಲೇಖನದಲ್ಲಿನ ರಾಜಕೀಯ ವಿಚಾರವನ್ನು ಶಾಸ್ತ್ರಿಗಳು ಟೀಕಿಸಿದ್ದಾಗ ಗಾಂಧೀಜಿ ಅವರಿಗೆ 'ನನ್ನ ವಿಚಾರಗಳಲ್ಲಿ ತಪ್ಪುಗಳಿರಬಹುದು. ಆದರೆ ಈ ಸಲ ವ್ಯಾಕರಣ ದೋಷಗಳಿಲ್ಲವಷ್ಟೆ?' ಎಂದು ಹಾಸ್ಯ ಧಾಟಿಯಲ್ಲಿ ಒಂದು ಪತ್ರ ಬರೆದರಂತೆ.

ಇಂಗ್ಲೆಂಡಿನಲ್ಲಿ ಒಂದು ಕಡೆ ಭಾಷಣ ಮಾಡುತ್ತಿರುವಾಗ ಗಾಂಧೀಜಿಗೆ ಇವರು 'ಮಿಸ್ಟರ್ ಗಾಂಧಿ' ಎಂದು ಸಂಭೋದಿಸಿದಾಗ ಸಭೆಯಲ್ಲಿ ಅನೇಕರು (ಬ್ರಿಟಿಷರು ಸಮೇತ) ವಿರೋಧ ಸೂಚಿಸಿ ಗಲಾಟೆ ಮಾಡಿದರಂತೆ.

ಮಹಾತ್ಮರನ್ನು ಟೀಕಿಸುವುದರಲ್ಲಿ ಪ್ರಖ್ಯಾತಿಪಡೆದ ಶಾಸ್ತ್ರಿಗಳಿಗೆ ಅನೇಕ ಕಡೆಗಳಲ್ಲಿ ಜನರು ಭಾಷಣ ಮಾಡಲು ಬಿಡಲಿಲ್ಲ. ಕೆಲವು ಕಡೆ ಭಾಷಣ ಸ್ಥಳಕ್ಕೆ ಕೂಡ ಹೋಗದಂತೆ ಅಡ್ಡಿಮಾಡಿದ್ದೂ ಉಂಟು. ಶ್ರಿವಲ್ಲಿ ಪುತೂರು ಎಂಬ ಚಿಕ್ಕ ದಕ್ಷಿಣ ಭಾರತದ ಹಳ್ಳಿ ಊರಲ್ಲಿ ಕೂಡಾ ಜನರು ಗಾಂಧಿ ವಿಮರ್ಶಕ ಶಾಸ್ತ್ರಿಗಳಿಗೆ ಭಾಷಣ ಆತಂಕ ಮಾಡಿದ್ದಾರೆ.

ಇಷ್ಟಾದರೂ ಮಹಾತ್ಮರು ಶಾಸ್ತ್ರಿಗಳಿಗೂ ಅವರ ಅಭಿಪ್ರಾಯಗಳಿಗೂ ತುಂಬಾ ಮನ್ನಣೆ ಕೊಡುತ್ತಾರೆ. ಶಾಸ್ತ್ರಿಗಳಿಂದ ವಿಮರ್ಶಿಸಿಕೊಳ್ಳುವುದೆಂದರೆ ಮಹಾತ್ಮರಿಗೂ ಒಂದು ಹೆಮ್ಮೆ.

ಹೊಸ ವರುಷದ ಶುಭಾಶಂಸೆ

ನಮ್ಮ ಆಶ್ರಯದಾತರಿಗೂ ಗೆಳೆಯರಿಗೂ ಹೊಸ ವರುಷವು ಆನಂದ-ಸಮೃದ್ಧಿಗಳನ್ನು ತರಲೆಂದು ಕೋರುವಾಗ, ಅವರಿಗೆ ಸತ್ಸೇವೆ ಸಲಿಸಲನುವಾದ ಅವರ ಸಹಕಾರ ಮತ್ತು ಸ್ನೇಹಮಯ ಸತ್ಯ ಸಹಾಯಕ್ಕಾಗಿ ಅವರಿಗೆ ಅಭಿವಂದನೆಗಳನ್ನು ಸಲಿಸುವೆವು.

ಮುಂಬರುವ ವರುಷದಲ್ಲಿ ನಮ್ಮೊಳಗಿನ ಸಂಬಂಧವು ಇನ್ನೂ ಬಲಗೊಂಡು, ಇಂದಿನ ಸಂಬಂಧವು ಅಖಂಡವಾಗುವಂತಹ ಹೆಚ್ಚಿನ ಸಂದರ್ಭಗಳನ್ನಿದಿರು ನೋಡುತ್ತಿರುವೆವು.

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್

Canara Bank Ltd.

(Incorporated in British India Liabilitay of members Limited.)

1945 1945

ಆಫೀಸು ಕೆಲೆಂಡರುಗಳು

ಮಾರಾಟಕ್ಕೆ ಸಿದ್ಧವಾಗಿವೆ

ಬೆಲೆ ೧ರ 0-4-0

ವ್ಯಾಪಾರಿಗಳಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಪ್ರೆಸ್ ರಥಬೀದಿ ಮಂಗಳೂರು

ಜಿಲ್ಲಾ ಸಮಾಚಾರಗಳು

ಮಂಗಳೂರು

ಕೋವಿ ಬಂದೂಕು ಲ್ಯಾಸನ್ಸ್: ಕಳೆದ ತಿಂಗಳ ಆಖೈರಿಯೊಳಗೇ ಈ ಶಸ್ತ್ರಗಳ ಲ್ಯಾಸನ್ಸುಗಳನ್ನು (ಹೊಸ ವರ್ಷದ ಅವಧಿಗೆ) ಪುನಃ ಕೊಡಿಸಲಿಕ್ಕೆ ಪ್ರಯತ್ನ ಮಾಡಲಾಗಿದೆ—ಆಯಾ ತಹಶೀಲ್ದಾರರ ಮುಖಾಂತರ. ಈಗಾಗಲೇ ಅನೇಕವು ಕೊಡಲಾಗಿವೆ. ಆದುದರಿಂದ ಸಂಬಂಧ ಪಟ್ಟವರು ತಾಲೂಕು ಅಧಿಕಾರಿಗಳಿಂದ ಆದಷ್ಟು ಬೇಗನೇ ಅವುಗಳನ್ನು ಪಡೆಯಬೇಕು. ತಮ್ಮ ಆಯುಧವನ್ನು ಅವರು ತಾ. ೧೫-೧-೪೫ರ ತನಕ ಡೆಪೋಜಿಟ್ ಇಡಬೇಕಾಗಿಲ್ಲ. ಹೊಸ ವರ್ಷದ ಅವಧಿಯ ಲಾಸನ್ಸ ಈ ಬಂದೂಕುದಾರರು ಪಡೆದುಕೊಳ್ಳಬೇಕಾದ ಹೊಣೆಗಾರಿಗೆ ಅವರದೇ ಇರುತ್ತದೆ—ಹೀಗೆಂದು ಕಲೆಕ್ಟರರ ಒಂದು ಪ್ರಕಟನೆ.

ಅಕ್ಕಿ ಅಳತೆ: ಇದುತನಕ ಅಕ್ಕಿ ಮತ್ತು ಬತ್ತದ ಮುಡಿಗಳನ್ನು ತೂಕ ಮಾಡಿ ಸಹಕಾರಿ ಸ್ಟೋರ್ಸಿನವರು ಪಡೆಯುತಿದ್ದರು. ಈಗ ಅದನ್ನು ಅಳತೆ ಮಾಡಿ ಪಡೆಯಬಹುದೆಂದು ಕಲೆಕ್ಟರರು ಅಪ್ಪಣೆ ಮಾಡಿರುವರು. ರೇಶನ್ ಪಡೆಯುವವರಿಗೆ ಇದೇನು ಲಗಾವಿಲ್ಲ.

ಡ್ರಗ್ ಲ್ಯಾಸನ್ಸ್: ಔಷಧ ಮಾರುವವರಿಗೆ ಲ್ಯಾಸೆನ್ಸ್ ಇರುವುದು ಇದೇ ಫೆಬ್ರುವರಿ ತಾ. ೧೫ರ ತನಕ ಮಾತ್ರ. ಅದೇ ಅವಧಿಯೊಳಗೆ ಅಂದರೆ ೧೫-೨-೪೫ರ ಒಳಗೆ, ಅವರು ಮುಂದಿನ ಅವಧಿಯ ಲ್ಯಾಸೆನ್ಸ್ ಪಡೆಯಬೇಕು, ಎಂದು ಜಿಲ್ಲಾ ಕಮ್ಮರ್ಶಿಯಲ್ ಟಾಕ್ಸ್ ಆಫೀಸರರು ತಿಳಿಸುತ್ತಾರೆ.

ಅಕ್ಕಿ ಬತ್ತ ಪಾವತಿ: ಇದನ್ನು ಒಪ್ಪಿಸಬೇಕಾದ ಎರಡನೇ ಮತ್ತು ಮೂರನೇ ಕಂತುಗಳ ಅವಧಿಯನ್ನು ಕ್ರಮವಾಗಿ ೩೧-೧-೪೫, ಮತ್ತು ೨೮-೨-೪೫ಕ್ಕೆ ಮುಂದರಿಸಿದೆ. ಯಾವ ಕಾರಣದಿಂದಲೂ ಈ ಅವಧಿಯನ್ನು ಇನ್ನೂ ಮುಂದುವರಿಸಲಾಗುವುದಿಲ್ಲ. ಈ ಅವಧಿ ನಂತರ ಒಪ್ಪಿಸುವ ಅಕ್ಕಿ ಮುಡಿ ಒಂದಕ್ಕೆ ರೂ. ೧ಕಡಿಮೆ ಕೊಡಲಾಗುವುದು. ತಾ. ೧-೧-೪೫ರಿಂದ ಪ್ರಥಮ ಕಂತಿನ ಐದನೇ ಒಂದಂಶದ ಅಕ್ಕಿಗೆ ಒಂದು ರೂಪಾಯಿ ಕಡಿಮೆ ಕೊಡಲಾಗಿದೆ. ಆದುದರಿಂದ ಇನ್ನೂ ತಂದೊಪ್ಪಿಸುವ ಅಕ್ಕಿ ಯಾವ ಕಂತಿನದೆಂದು (೨ನೇ ಅಥವಾ ೩ನೇಯದೋ ಎಂದು) ಗ್ರಾಮಾಧಿಕಾರಿಗಳ ಇಲ್ಲವೆ ರೆವಿನ್ಯೂ ಅಧಿಕಾರಿಗಳ ಚೀಟು ಸಮೇತ ತಂದೊಪ್ಪಿಸಬೇಕು.

ಈ ಜಿಲ್ಲೆಯಲ್ಲಿ ಗೇಣಿ ಕೊಡುವ ವ್ಯಾದೆ ಮಾರ್ಚಿ ಆಖೈರಿನ ವರೇಗಿರುವುದರಿಂದ ಅನೇಕ ಭೂಮ್ಯಾಲಿಕರಿಗೆ ಉಳಿತಾಯ ಅಕ್ಕಿ ಬತ್ತದ ಕುರಿತು ನೋಟಿಸುಗಳು ಇನ್ನೂ ಕೊಡಲಿಲ್ಲ. ಅಂಥ ಗೇಣಿ ಅಕ್ಕಿಯು ಒಕ್ಕಲುಗಳ ಸ್ವಾಧೀನವೇ ಇದ್ದರೂ ಅವು ರಿಕ್ವಿಜೇಶನ್ ಆರ್ಡರುಗಳಿಗೆ ಒಳಪಟ್ಟವುಗಳಾಗಿರುತ್ತವೆ. ಅಲ್ಲದೆ ರಿಕ್ವಿಜೇಶನ್‌ಆದ ಈ ಸ್ಟಾಕುಗಳು ನಿಯಮಿತ ಕಂತುಗಳ ಪ್ರಕಾರ ಒಪ್ಪಿಸಬೇಕಾಗಿರುತ್ತದೆ. ಆದುದರಿಂದ ರೆವಿನ್ಯೂ ಅಧಿಕಾರಿಗಳಿಂದ ಮಂಜೂರು ಮಾಡಲ್ಪಟ್ಟ ಅವರವರ ಉಪಯೋಗದ ಬಗ್ಗೆ ಬೇಕಾದ ಅಕ್ಕಿಯಾ ಬತ್ತವನ್ನೂ ಭೂಮ್ಯಾಲಿಕರು ವಶಪಡಿಸಿಕೊಳ್ಳಬೇಕು. ಮತ್ತು ತಮ್ಮೊಡನೆಯೂ, ತಮ್ಮ ಒಕ್ಕಲುಗಳೊಡನೆಯೂ ಇರಬಹುದಾದ ಉಳಿತಾಯದ ಸ್ಟಾಕನ್ನು ಒಪ್ಪಿಸಿ ಅದರ ಕ್ರಯವನ್ನು ಪಡೆದು ಕೊಳ್ಳಬೇಕಾಗಿ ವಿನಂತಿಸಲಾಗಿದೆ—ಹೀಗೆಂದು ಜಿಲ್ಲಾ ಕಲೆಕ್ಟರರು ಪ್ರಕಟನೆಗೆ ಕೊಟ್ಟಿರುವರು.

ಸ್ವರ್ಣೋತ್ಸವ: ಸ್ಥಳೀಯ ಕೆನರಾ ಗರ್ಲ್ಸ್ ಸ್ಕೂಲ್ ಇದರ ಸ್ವರ್ಣೋತ್ಸವವು ಶ್ರೀ. ಅಮ್ಮೆಂಬಳ್ ಶ್ರೀನಿವಾಸ್ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಎಂ. ಲೀಲಾಬಾಯ್ ಕಾಮತ್ ಅವರು ಸ್ಮಾರಕ ಭಾಷಣ ಮಾಡಿದರು. ಇದರ ಸ್ವರ್ಣೋತ್ಸವ ನಿಧಿಗೆ ೨೭ ಸಾವಿರ ರೂಪಾಯಿ ಕೂಡಿವೆ. ಅನೇಕ ಕಡೆಗಳಿಂದ ಶುಭ ಸಂದೇಶಗಳು ಬಂದಿದ್ದುವು. ಅಂದು ವಿವಿಧ ವಿನೋದಾವಳಿಗಳೂ ಇದ್ದವು.

ಚೇಂಬರ್ ವಾರ್ಷಿಕೋತ್ಸವ: ಕಳೆದ ತಾ. ೩೧ನೇ ಆದಿತ್ಯವಾರ ಕೆನರಾ ಹ್ಯಾಸ್ಕೂಲ್ ಅಲ್ಲಿ ಜಿಲ್ಲೆಯ ಚೇಂಬರ್ ಆಫ್ ಕಾಮರ್ಸ್ ಇದರ ವಾರ್ಷಿಕೋತ್ಸವ ಜಿಲ್ಲಾ ಕಲೆಕ್ಟರರ ಘನ ಅಧ್ಯಕ್ಷತೆಯಲ್ಲಿ ಜರಗಿತು. ಮಾನ್ಯ ಕಲೆಕ್ಟರರು ಈ ಜಿಲ್ಲೆಯ ಅಧಿಕಾರ ವಹಿಸಿದಂದಿನಿಂದ ಮಾಡಿದ ಅನೇಕಾನೇಕ ಜನೋಪಕಾರದ ಕಾರ್ಯಗಳನ್ನು ಪ್ರಶಂಸಿಸಲಾಯಿತು. ಅಧ್ಯಕ್ಷ ಕಲೆಕ್ಟರರು ತಾವು ಸಾರ್ವಜನಿಕ ಸೇವಾ ಬುದ್ಧಿಯಿಂದ ಈ ಎಲ್ಲಾ ಕಾರ್ಯವನ್ನು ಮಾಡುವುದಾಗಿಯೂ, ಸಹಕಾರಿ ಸಂಸ್ಥೆಯು ಇದರಲ್ಲಿ ತಮಗೆ ಬಹಳ ಸಹಾಯ ಸಹಕಾರವನ್ನು ಕೊಟ್ಟಿರುವುದಾಗಿ ತಿಳಿಸಿ ಕೊನೆಗೆ 'ವ್ಯಾಪಾರಿಗಳನ್ನು ಹಿಂಸಿಸುವುದು ನಮ್ಮ ಉದ್ದೇಶವಲ್ಲ, ಗಿರಾಕಿಗಳ ಹಿತ ಸಾಧನೆಯೇ ನಮ್ಮ ಗುರಿ' ಎಂದು ಹೇಳಿದರು. ಅಂದು ನಾಟಕ, ಡಿನ್ನರ್ ಪಾರ್ಟಿಗಳೂ ಇದ್ದವು. ಅಂದು ಬೆಳಗ್ಗೆ ಡಾ। ಟಿ. ಎಂ. ಎ. ಪೈ ಅವರ ಅಧ್ಯಕ್ಷತೆಯಲ್ಲಿ ಚೇಂಬರಿನ 'ಬಿಸ್ನೆಸ್' ಮೀಟಿಂಗು ಜರಗಿ ಪ್ರಾಮುಖ್ಯವಾದ ೧೪ ಠರಾವುಗಳು ಮಂಜೂರಾದುವು.

ರವಿವಾರ ರಜೆ

ಇದೇ ತಾ. ೭ರಿಂದ ಪ್ರಾರಂಭವಾಗುವ ಪ್ರತಿ ಆದಿತ್ಯವಾರವನ್ನು ಜಿಲ್ಲೆಯಲ್ಲಿನ ವ್ಯಾಪಾರಸ್ಥರೆಲ್ಲರೂ ರಜಾದಿನವಾಗಿ ಆಚರಿಸಬೇಕು. ಅಂದು ಯಾವ ತರದ ವ್ಯಾಪಾರ ವಹಿವಾಟುಗಳನ್ನು ಮಾಡಬಾರದಾಗಿ ಕೆನರಾ ಚೇಂಬರ್ ಆಫ್ ಕಾಮರ್ಸ್ ಅವರು ವಿನಂತಿಸಿಕೊಂಡಿದ್ದಾರೆ.

ವೈಶ್ಯ ವಿದ್ಯಾರ್ಥಿ ಸಂಘ: ಇದರ ರಜತೋತ್ಸವ ಸಮಿತಿಯವರು ಸಾರ್ವಜನಿಕ ಧನ ಸಹಾಯಕ್ಕೆ ವಿನಂತಿಸಿ ಕೊಂಡಿರುವರು. ಇಂದಿಗೆ ೨೫ ವರ್ಷಗಳಿಂದ ಈ ಸಂಸ್ಥೆಯು ವೈಶ್ಯ ವಿದ್ಯಾರ್ಥಿಗಳಿಗೆ ಅನೇಕ ರೀತಿಯಲ್ಲಿ ಸಹಾಯ ಒದಗಿಸಿ ಕೊಡಲು ಶ್ರಮಿಸಿದೆ. ಸ್ಥಳೀಯ ಪುತ್ತು ವೈಕುಂಠಸೇಟ್ ಹಾಗೂ ಇನ್ನಿತರರು ಧನ,ಕಟ್ಟಡ ಮುಂತಾದುವನ್ನು ಕೊಟ್ಟು ಸಹಾಯಮಾಡಲು ವಾಗ್ದಾನ ಇತ್ತಿರುವರು. ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ, ಅನಾಥಾಲಯ, ಹಾಸ್ಟೆಲ್ ಇವುಗಳನ್ನು ಒದಗಿಸಲು ಇವರು ಪ್ರಯತ್ನಿಸುವುದು ಸ್ತುತ್ಯ.

ಗೊಬ್ಬರ ವ್ಯಾಪಾರ: ಕರಾವಳಿಯಲ್ಲಿ ಮೀನು ಗೊಬ್ಬರವನ್ನು ಮೀನುಗಾರರು ತಯಾರಿಸಲು ಲ್ಯಾಸೆನ್ಸ್ ಬೇಕಾಗಿಲ್ಲವೆಂದು ಸರಕಾರಿ ಕಾನೂನಿನ ತಿದ್ದುಪಡಿಯಾಗಿದೆ. ಮೀನು ಗೊಬ್ಬರವನ್ನು ತಾವೇ ತಯಾರಿಸಿ ಮಾರುವವರಿಗೆ ಮಾತ್ರ ಇದು ಲಗಾವಾಗುವುದು.

ನೀರ್ಮರಣ: ತಾ. ೨೭ರಂದು ಕೊಡಿಯಾಲ ಬೈಲಿನ ಕೆರೆಯೊಂದರಲ್ಲಿ ವಸ್ತ್ರ ಒಗೆಯಲು ಹೋದ ಯುವತಿಯೋರ್ವಳು ಕಾಲು ಜಾರಿ ನೀರಿಗೆ ಬಿದ್ದು ಮೃತಳಾಗಿರುವಳು.

ಕೌನ್ಸಿಲ್ ಆಫ್ ಸ್ಟೇಟ್ ಚುನಾವಣೆ: ಕೌನ್ಸಿಲ್ ಆಫ್ ಸ್ಟೇಟ್ ಇದರ ಸದಸ್ಯರಾಗಿದ್ದ ಶ್ರೀ. ರಾಮದಾಸ್ ಪಂತುಲು ಅವರು ಮೃತ ಪಟ್ಟಿದ್ದು ಈಗವರ ಸ್ಥಾನಕ್ಕೆ ಹಿಂದೆ ಕಾಂಗ್ರೆಸ್ ಎಂ. ಎಲ್. ಎ. (ಕೇಂದ್ರ) ಗಳಾಗಿದ್ದ ಶ್ರೀ. ತಿರುಮಲ್ ರಾವ್ ಅವರು ಕಾಂಗ್ರೆಸ್ ಕಡೆಯ ಉಮೇದುವಾರರಾಗಿ ಚುನಾವಣೆಗೆ ನಿಂತಿರುವರು. ಇವರು ಕಳೆದ ಕಾಂಗ್ರೆಸ್ ಚಳವಳದಲ್ಲಿ ಬಂಧಿಯಾಗಿದ್ದು ಅವರನ್ನು ಎಂ.ಎಲ್. ಎ. ಸ್ಥಾನದಿಂದ ಚ್ಯುತರನ್ನಾಗಿ ಮಾಡಲಾಗಿತ್ತು. ಈಗ ಅವರು ಬಿಡುಗಡೆ ಹೊಂದಿರುವರು. ಓಟು ಗಳಿದ್ದ ಸರ್ವರೂ ಶ್ರೀಯುತರನ್ನು ಬೆಂಬಲಿಸಬೇಕಾಗಿ ಈ ಕೆಳಗಿನ ಮಹನೀಯರು ವಿನಂತಿಸಿಕೊಂಡಿದ್ದಾರೆ: ಶ್ರೀಯುತರಾದ ಎ. ಬಿ. ಶೆಟ್ಟಿ, ಜಿನರಾಜ ಹೆಗ್ಗಡೆ, ಮುಳಪಳ್ಳಿ ಶಿವರಾವ್, ವೆಂಕಟ್ರಾಯ ಬಾಳಿಗಾ, ಕೆ. ಆರ್. ಆಚಾರ್, ಸಾಹುಕಾರ ವೆಂಕಟೇಶ ಪೈ, ಡಾ। ಕೇಶವ ಪೈ, ಫೆಲಿಕ್ಸ್ ಅಲ್ಬುಕರ್ಕ್, ಡಾ। ಅಡಪ್ಪಾ, ಮತ್ತು ರಂಗನಾಥ ಪೂಂಜಾ.

ತಾಲೂಕುಗಳಿಂದ

ಪುತ್ತೂರು ಬೋರ್ಡು ಹ್ಯಾಸ್ಕೂಲಿನ ಹೊಸ ಕಟ್ಟಡಕ್ಕಾಗಿ ಧನ ಸಂಗ್ರಹ ಕಾರ್ಯವು ಉತ್ಸುಕತೆಯಿಂದ ಸಾಗುತ್ತಿದೆ. ತಾಲೂಕಿನ ಅನೇಕ ಹಳ್ಳಿ ಗ್ರಾಮಗಳಿಂದ ಒಂದೇ ತಿಂಗಳಲ್ಲಿ ಮೂರುವರೆ ಸಾವಿರಕ್ಕೆ ಮಿಕ್ಕಿ ಸಹಾಯ ದೊರಕಿದೆ. ಕಟ್ಟಡಕ್ಕೆ ಬೇಕಾಗುವ ೪೦ ಸಾವಿರ ರೂಪಾಯಿಯಲ್ಲಿ ಇಷ್ಟರತನಕ ೧೯೭೪೪ ರೂ. ಒಟ್ಟುಗೂಡಿವೆಯಾಗಿ ಕಟ್ಟಡ ಸಮಿತಿಯ ಜತೆ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕಾಸರಗೋಡಿನ ಗೋರಕ್ಷಣ ಸಮಿತಿಯವರು ಆಸುಪಾಸಿನ ಪ್ರದೇಶಗಳಲ್ಲಿ ತಮ್ಮ ಉದ್ದೇಶ ಅವಶ್ಯಕತೆಗಳ ಕುರಿತು ಪ್ರಚಾರ ಮಾಡುತಿದ್ದಾರೆ. ಆಗಲೇ ಅನೇಕ ಆಢ್ಯ ಮಹನೀಯರು ಈ ಸ್ತುತ್ಯ ಕಾರ್ಯಕ್ಕೆ ಧನ ಸಹಾಯವನ್ನು ನೀಡಿರುವರು.

ಕಾಸರಗೋಡು ತಾಲೂಕಿನ ಕೆಲ ಗ್ರಾಮಗಳಲ್ಲಿ ಬೆಳೆಗೆ ನೀರಿನ ಅಭಾವ ಬಂದಿದೆಯಂತೆ. ಅಡಿಕಾಡಿ ಗ್ರಾಮದಲ್ಲಿ ಸಿಡುಬು ರೋಗ ತಲೆ ಎತ್ತಿದೆ. ಕೆಲವು ಮರಣಗಳಾಗಿವೆ.

ಬೇಳ ಗ್ರಾಮದ ಯೆರ್ಮಕಟ್ಟೆ ಎಂಬಲ್ಲಿ ಕೆಲ ದಿನ ಹಿಂದೆ ಒಬ್ಬನು ತಾನು ಅಬ್ಕಾರಿ ಇನ್ಸ್‌ಪೆಕ್ಟರನೆಂದು ಬಡ ಜನರನ್ನು ಬೆದರಿಸಲು ಪ್ರಯತ್ನ ಪಟ್ಟಾಗ ಶ್ರೀ. ಕೇಶವ ಭಟ್, ಮತ್ತು ಪುಂಡಲಿಕ ಮಲ್ಯ ಎಂಬ ಗ್ರಾಮಾಧಿಕಾರಿಗಳಿಂದ ಸಂಶಯದ ಮೇಲೆ ಹಿಡಿಯಲ್ಪಟ್ಟು ಪೋಲೀಸ್ ಕೈದಿಗೊಳಮಾಡಲ್ಪಟ್ಟನು. ಅವನ ಬಳಿ ಕತ್ತಿ ಮೊದಲಾದುವುಗಳಿದ್ದುವು.

ತಮ್ಮ ಸ್ಥಳೀಕ ಬೋರ್ಡು ಶಾಲೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶಾಶ್ವತ ಧರ್ಮಾರ್ಥ ಶಿಕ್ಷಣ ದೊರೆಯುವಂತೆ ವಿಟ್ಲದ ಶ್ರೀ. ರಾವ್ ಸಾಹೇಬ್ ರಾಜಾ ಲಕ್ಷ್ಮೀನಾಥ ಸ್ವಾಮಿಜಿಯವರು ಒಂದು ಏರ್ಪಾಡು ಮಾಡಿರುವರು.

ಸುರತ್ಕಲದಲ್ಲಿ ತಾ. ೨೩ ಮತ್ತು ೨೪ರಲ್ಲಿ ಜಿಲ್ಲಾ ಸ್ಕೌಟ್ ಸಮ್ಮೇಳನ ಜರಗಿತು. ಮೊದಲ ದಿನ ಡಾ। ಎಂ. ಕೇಶವ ಪೈ ಅವರು ಅಧ್ಯಕ್ಷತೆ ವಹಿಸಿದ್ದರು. ಹಿಂದೂಸ್ಥಾನ್ ಸ್ಕೌಟ್ ಕಮಿಶನರ್ ಶ್ರೀ.ಏಕಾಂಬರ್ ರಾವ್ ಅವರೂ ಹಾಜರಿದ್ದರು. ಕನ್ನಡದಲ್ಲಿ ಒಂದು ಸ್ಕೌಟ್ ಸಾಹಿತ್ಯವನ್ನು ಪ್ರಕಟಿಸಲು ಒಂದು ಸಮಿತಿಯಾಯಿತು. ಕಷ್ಣಾಪುರದ ಶ್ರೀ. ಸ್ವಾಮಿಜಿಯವರು ಇಲ್ಲಿನ ಹೈಸ್ಕೂಲಿಗೆ ವಿಸ್ತರಿತ ಕಟ್ಟಡ ಭಾಗವನ್ನು ರಚಿಸಿ ಕೊಡುವುದಾಗಿ ವಾಗ್ದಾನ ಮಾಡಿರುವರು.

ಪುತ್ತೂರಲ್ಲಿ ತರಕಾರಿ ಮೇಲಿನ ನಿಯಂತ್ರಣಾಜ್ಞೆಯನ್ನು ತೆಗೆದು ಹಾಕಲಾಗಿದೆ.

ಉಡುಪಿಯ ನಗರ ಸಭೆಗೆ ಹೊಸ ಕಮಿಶನರರು ನೇಮಿಸಲ್ಪಟ್ಟ ಸರಕಾರೀ ಆರ್ಡರನ್ನು ಸಭೆಯ ಸೇರಿದಂದು ಸದಸ್ಯರ ಮುಂದೆ ಅದು ಇರಿಸದಿದ್ದುದಕ್ಕೆ ಆಕ್ಷೇಪಿಸಲಾಯಿತು. ನಗರದ ಜಟ್ಕಾ ಗಾಡಿಗಳ ಬಾಡಿಗೆಯನ್ನು ಸಭೆಯವರು ನಿಯಂತ್ರಿಸಿದರೆ ಗಾಡಿಗಳೇ ಕಮ್ಮಿಯಾದಾವೆಂದು ಡಿಫೆನ್ಸ್‌ರೂಲ್ಸ್ ಅನ್ವಯ ಕಲೆಕ್ಟರರೇ ಅದನ್ನು ಮಾಡಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

ಇಲ್ಲಿಯ ಹಿಂದೂ ಮಹಾ ಸಭೆಯವರು ಸಿಂಧ್ ಸರಕಾರದ 'ಸತ್ಯಾರ್ಥ ಪ್ರಕಾಶ' ನಿರ್ಬಂಧಕಾಜ್ಞೆಯನ್ನು ಖಂಡಿಸಿದರು.

ಇಲ್ಲಿಯ ಲೋಹ ಪಾತ್ರೆ ವ್ಯಾಪಾರಿ ಶ್ರೀ. ಕಲ್ಮಂಜೆ ವ್ಯಾಸರಾಯಾಚಾರ್ಯರು ತಾವು ಕಲಿತ ಸಂಸ್ಕೃತ ಮಹಾ ಪಾಠಶಾಲೆಗೆ ಒಂದು ಸಾವಿರ ರೂಪಾಯಿ ದಾನ ವಿತ್ತರು.

ತಾ. ೧೩ರಿಂದು ಉಡುಪಿಯ ಏಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಎಂಬ ವಿದ್ಯಾ ಸಂಸ್ಥೆಯ ಸಮಾವರ್ತನಾ ಸಮಾರಂಭ ಜರಗುವುದು.

ವಿಶೇಷ ಸುದ್ದಿ ಸಾರ

ಮಹಾತ್ಮಾ ಗಾಂಧಿಯವರ ಜೀವನ ಇತಿಹಾಸವನ್ನು ಬರೆದು ಅವರನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಟ್ಟ ಜಗದ್ವಿಖ್ಯಾತ ಫ್ರೆಂಚ್ ಸಾಹಿತಿಗಳಾದ ರೊಮ್ಯೆನ್ ರೊಲಾಂಡರು ತಮ್ಮ ೭೯ನೇ ವಯಸ್ಸಿನಲ್ಲಿ ಪೇರಿಸದಲ್ಲಿ ಮೃತಪಟ್ಟರು. ೧೯೧೫ರಲ್ಲಿ ಇವರಿಗೆ ನೋಬೆಲ್ ಸಾಹಿತ್ಯ ಪಾರಿತೋಷಕ ದೊರಕಿತ್ತು. ಇವರು ದಾಸ್ಯ ಜನಾಂಗಗಳ ಹಿತಾಕಾಂಕ್ಷಿಗಳು.

o o o o

ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘದ ಕಾರ್ಯದರ್ಶಿಗಳಾಗಿದ್ದು ಈಗ ಸ್ಥಾನ ಬದ್ಧರಾಗಿ ಜಬ್ಬಲಪುರದ ಜೈಲಿನಲ್ಲಿಡಲ್ಪಟ್ಟ ಪ್ರೊ। ಜೆ. ಸಿ. ಕುಮಾರಪ್ಪನವರು ಅತಿರೇಕ ರಕ್ತ ಒತ್ತಾಟದಿಂದಾಗಿ ಕಠಿಣ ಕಾಯಿಲೆಗೆ ತುತ್ತಾಗಿರುವರು. ಅವರನ್ನು ಸ್ವತಂತ್ರ ವೈದ್ಯಕೀಯ ಶುಶ್ರೂಷೆ ಕೊಡಲು ಸರಕಾರವು ನಿರಾಕರಿಸಿದೆ.

o o o o

ಆಗಾಖಾನ್ ಅರಮನೆಯಲ್ಲಿ ಬಂಧನದಲ್ಲಿದ್ದಾಗ ಕಸ್ತೂರಬಾ ಅವರಿಗೆ ಪರೀಕ್ಷಿಸಲು ಗಾಂಧೀಜಿ ಯೆರವಾಡಾ ಜೈಲಿನಲ್ಲಿದ್ದ ಡಾ। ಜೀವರಾಜ ಮೆಹತಾ ಅವರನ್ನು ಬರ ಮಾಡಬೇಕೆಂದು ಜೈಲಾಧಿಕಾರಿಗಳನ್ನು ಕೇಳಿಕೊಂಡಾಗ ಎಂಟು ಗಂಟೆಗಳ ನಂತರ ಅವರನ್ನು ಕರೆತರಲಾಯಿತು. ಮೆಹತಾ ಅವರು ಕಸ್ತೂರ್ ಬಾರನ್ನು ಪರೀಕ್ಷಿಸುತಿದ್ದಾಗ ಮಹಾತ್ಮರು ಅವರೊಡನೆ ಮಾತನಾಡಲು ಜೈಲಾಧಿಕಾರಿಯ ಅನುಮತಿ ಕೇಳಿದರು. ತಮಗೆ ಸರಕಾರದ ಹುಕುಂ ಇಲ್ಲವೆಂದು ನಿರಾಕರಿಸಿದರೆಂಬ ಸಂಗತಿಯನ್ನೂ ಡಾ। ಮೆಹತಾ ಅವರು ಕಾನ್‌ಪುರದ ವೈದಿಕೀಯ ಪರಿಷತ್ತಿನಲ್ಲಿ ತಿಳಿಸಿದರು.

o o o o

ಹಿಂದೂ ವಿವಾಹ, ಆಸ್ತಿ ಭಾಧ್ಯಸ್ತಿಕೆಗಳ ಕುರಿತು ಹೊಸ ಕಾನೂನನ್ನು ಸಮರ್ಥಿಸಬೇಕೆಂದು ಸರೋಜಿನಿ ದೇವಿಯವರು ಕಲ್ಕತ್ತದಲ್ಲಿ ಹೇಳಿದರು. ಕಾಶೀ ವಿಶ್ವ ವಿದ್ಯಾಲಯದ ಪಂಡಿತ್ ಮದನ ಮೋಹನ್ ಮಾಲವೀಯರು ಅದಕ್ಕೆ ವಿರೋಧ ಸೂಚಿಸಿರುವರು.

o o o o

ಮದ್ರಾಸ್ ವಿದ್ಯಾಂಗ ಖಾತೆಯ ಡ್ಯಾರೆಕ್ಟರರಾದ ಸರ್. ಆರ್. ಎಂ. ಸ್ಟೆಥಾಮ್ ಅವರು ತಾ. ೨೭ರಂದು ಮದ್ರಾಸಿನಲ್ಲಿ ಮಲಗಿಕೊಂಡಲ್ಲೇ ಮೃತಪಟ್ಟರು.

o o o o

ಪಂಡಿತ್ ನೆಹರುಗಳು ಕಾರಾಗೃಹವಾಸದಲ್ಲಿದ್ದರೂ ವಿಶ್ವ ವಿಚಾರಗಳನ್ನು ಮೌನವಾಗಿ ತಿಳಕೊಳ್ಳುತ್ತಲಿದ್ದಾರೆ. ಇತ್ತೀಚೆಗೆ ಪ್ರಕಟವಾದ ಹೊಸ ಹೊಸ ಪುಸ್ತಕ ಗ್ರಂಥಗಳನ್ನೂ ಅವರು ಓದುತ್ತಲಿದ್ದಾರೆ. ಚೀನದ ವಿಷಯ ಅವರಿಗೆ ತುಂಬಾ ವಿಷಾದವಾಗಿದೆ.

o o o o

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು ಕಳೆದ ತಾ. ೩೧ರಲ್ಲಿ ಬೊಂಬ್ಯಾಯಲ್ಲಿ ಜರುಗಿತು. ವಿದ್ಯಾರ್ಥಿಗಳಿಗೆ ಮಹಾತ್ಮಾಜೀಯವರ ಮೇಲೆ ಭರವಸೆ ಇರುವುದಾಗಿ ಪರಿಷತ್ತು ಪುನಃ ವಿಶದೀಕರಿಸಿತು.

o o o o

ರಷ್ಯನ್ ಮಾದರಿಯ ಮೇಲೆ ಭಾರತದಲ್ಲಿನ ಜಾತೀಯ ಗೊಂದಲವನ್ನು ಇತ್ಯರ್ಥ ಮಾಡಬಹುದೆಂದು ಲಕ್ನೋ ವಿಶ್ವ ವಿದ್ಯಾಲಯದ ಡಾ। ರಾಧಾಕುಮುದ್ ಮುಖರ್ಜಿಯವರು ಒಂದು ಭಾಷಣದಲ್ಲಿ ತಿಳಿಸಿದರು.

The South Canara Central Co-operative Bank, Ltd., Mangalore.

SEASON DEPOSITS

of Rs. 10,000/ and above for six months will be accepted at 3% up to 31st March 1945.

U. Shantha Rama Rao,
Secretary.

26-12-1944

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:-ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

1944—ನೋಟಗಳು

(೪ನೇ ಪುಟದಿಂದ)

ಬ ಪ್ರಶ್ನೆಗೆ ಗಾಂಧೀಜಿಯರ ಹೌದು ಎಂಬ ಉತ್ತರವು ಬಂದಿರುತ್ತದೆ. ಅದರಿಂದ ಕಾಂಗ್ರೆಸ್ಸಿನ ಆದರ್ಶಗಳಿಗೆ ಮತ್ತು ನಿಯಮಗಳಿಗೆ ಭಂಗಬಾರದೆಂದು ತಿಳಿಸಲಾಗಿದೆ.

ಇದೆ ದೃಷ್ಟಿಯನ್ನು ವಿಸ್ತರಿಸಿ, ಕಾಂಗ್ರೆಸ್ಸಿಗರು ಮತ್ತೊಮ್ಮೆ ಸರಕಾರಗಳನ್ನು ಸೇರಿದರೇನು? ವೈಸ್ರಾಯ ವೆವೆಲ್ಲರು ಮೊನ್ನೆ ಕೇಳಿಕೊಂಡ ಬ್ರಿಟಿಷರ ಉತ್ತಮ ಉದ್ದೇಶ್ಯಗಳಲ್ಲಿ ವಿಶ್ವಾಸ ತೋರಿ ಭಾರತೀಯ ಜನರ ಹಿತಕ್ಕಾಗಿ, ಸ್ವಾತಂತ್ರ್ಯ ಸರಕಾರದ ಸ್ಥಾಪನೆಗಾಗಿ, ಅವರೊಡನೆ ದೇಶವು ಯಾಕೆ ಸಹಕರಿಸಬಾರದು? ಈ ಕುರಿತು ಗಾಂಧೀಜಿಯರ ಅಭಿಪ್ರಾಯವು ಏನಿರಬಹುದೆಂದು ಯಾರಿಗೂ ತಿಳಿಯದು. ಆದರೆ ೧೯೩೫ರ ರಾಜಶಾಸನದ ಅಡಿಯಲ್ಲಿ ಅಧಿಕಾರ ಸ್ವೀಕರಿಸಿದಂತೆ, ಇದ್ದುದರಲ್ಲಿ ಒಳ್ಳೆದನ್ನು ಪಡೆಯುವಂತೆ, ಪರೀಕ್ಷಾರ್ಥವಾಗಿ ಮತ್ತೊಮ್ಮೆ ಅಧಿಕಾರ ಸ್ವೀಕಾರವಾಗುವುದೆ? ಎಂಬುದು ಸದ್ಯದ ಪ್ರಶ್ನೆ. ೧೯೩೭ರಲ್ಲಿ ಕಾಂಗ್ರೆಸ್ಸಿಗರು ಅಧಿಕಾರವನ್ನು ಸ್ವೀಕರಿಸಿದುದು, ಸರಕಾರದ ಆಶ್ವಾಸನೆಯ ಮೇಲೆ. ಗವರ್ನರರು ತಮ್ಮ ರಿಸರ್ವ ಅಧಿಕಾರಗಳನ್ನುಪಯೋಗಿಸುವುದಿಲ್ಲವೆಂಬುದಾಗಿ ಅಂದು ಭರವಸೆಯು ದೊರಕಿತ್ತು. ಆದರೆ ಯುದ್ಧದ ಪರಿಸ್ಥಿತಿಯು ಇಂದಿನ ದಿನಗಳಲ್ಲಿ, ಡಿಫೆನ್ಸ್ ಒಫ್ ಇಂಡಿಯಾ ಆರ್ಡಿನೆನ್ಸ್ ಜ್ಯಾರಿಯಿದ್ದ ಈ ಸಮಯದಲ್ಲಿ, ಕಾಂಗ್ರೆಸ್ಸಿಗರು ನಿರಾಂತಕರಾಗಿ ಆಡಳಿತದ ಕಾರ್ಯನಿರ್ವಾಹ ಬಲ್ಲರೆ? ಎಂಬುದಾಗಿ ಇನ್ನೊಂದು ಪ್ರಶ್ನೆ.

ಧನದ ಆಶೆಯು ಕಾಂಗ್ರೆಸ್ಸಿಗರಿಗೆ ಇಲ್ಲ. ಬಿರುದಾವಳಿಗಳು ಅವರಿಗೆ ಬೇಕಾಗಿಲ್ಲ. ಆದುದರಿಂದ ಯಾವತ್ತೂ ಶರತ್ತುಗಳಿಲ್ಲದೆನೆ ಸರಕಾರದೊಡನೆ ಸಹಕರಿಸುವುದಕ್ಕೂ, ಯಾವತ್ತೂ ಶರತ್ತುಗಳಿಲ್ಲದೆನೆ ಶರಣು ಹೋಗುವುದರಲ್ಲಿ, ಅದು ವ್ಯತ್ಯಾಸವನ್ನು ಕಾಣುವ ಹಾಗಿಲ್ಲ.

೧೯೪೪ರ ಅಂತ್ಯದಲ್ಲಿ ಸರಕಾರಕ್ಕೂ ಕಾಂಗ್ರೆಸ್ಸಿಗೂ ನಡುವೆ ಉಂಟಾದ ಬಿರುಕು ಜೋಡಿಸಲ್ಪಡದೆ ಹಾಗೆನೆ ಇದೆ. ತಮ್ಮ ತಮ್ಮ ಮಾರ್ಗದಲ್ಲೆ ನಡೆಯುವುದೆ, ಇಕ್ಕಡೆಗಳ ನಿರ್ಣಯವಿರುತ್ತದೆ. ಕಾಂಗ್ರೆಸಿನ ಸಹಕಾರವಿಲ್ಲದೆನೆ, ಯುದ್ಧ ಯತ್ನಗಳನ್ನು ನಡೆಯಿಸುವ ಭರವಸೆಯು ಸರಕಾರಕ್ಕಿದೆ, ಸರಕಾರದ ಅನುಕೂಲಗಳನ್ನೆ ಹೊಂದದೆ, ದೇಶಭ್ಯುದಯಗಳನ್ನೂ ಕಾರ್ಯಗಳನ್ನೂ ನಡೆಯಿಸಬಹುದೆಂದು ಕಾಂಗ್ರೆಸಿಗರಿಗೆ ಬಲವಾದ ನಂಬಿಕೆಗಳಿವೆ

○ ○ ○ ○

೧೯೪೪ರಲ್ಲಿ ಮುಸ್ಲಿಂ ಲೀಗಿಗೆ ಇನ್ನಷ್ಟು ಹೆಚ್ಚು ಪೋಷಣೆಯು ದೊರಕಿರುತ್ತದೆ. ಅದು ಮುಸ್ಲಿಮರ ಪ್ರಾತಿನಿಧ್ಯವಿರುವ ವ್ಯವಸ್ಥಿತ ಸಂಸ್ಥೆ ಎಂಬ ಜಿನ್ನಾರವರ ಹೇಳಿಕೆ ಹೆಚ್ಚಿನ ಮನ್ನಣೆಯು ಈ ವರ್ಷದಲ್ಲಿ ದೊರೆಕಿದೆ—ಅನೇಕ ಸಂದರ್ಭಗಳಿಂದ. ಕ್ರಿಪ್ಸ ಸಲಹೆಗಳು ಕಾಂಗ್ರೆಸಿನಂತೆ ಅವರಿಂದ ನಿರಾಕರಿಸಲ್ಪಟ್ಟಿದ್ದರೂ, ಕೇಂದ್ರ ಸರಕಾರದ ಅಧಿಕಾರವನ್ನು ಸ್ವೀಕರಿಸಲು ಅದು ಮುಂದೆ ಬಾರದಿದ್ದರೂ, ಅವರು ಯುದ್ಧಯತ್ನಗಳನ್ನು ಯಾವತ್ತೂ ತರದಲ್ಲಿ ವಿರೋಧಿಸಿದುದಿಲ್ಲ. ೧೯೩೯ರಲ್ಲಿ ಕಾಂಗ್ರೆಸು ಪ್ರಾಂತ್ಯಗಳಲ್ಲಿ ಅಧಿಕಾರ ತ್ಯಜಿಸಿದೊಡನೆ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರಾಂತ್ಯಗಳಲ್ಲಿ ಅಧಿಕಾರಕ್ಕೆ ಬರಲು ಲೀಗಿನ ಯತ್ನಗಳಾದವು. ಬಂಗಾಳ, ಸಿಂಧ, ವಾಯುವ್ಯ ಗಡಿನಾಡಿನ ಪ್ರಾಂತ್ಯ ಮತ್ತು ಅಸ್ಸಾಂ ಈ ನಾಲ್ಕು ಪ್ರಾಂತ್ಯಗಳಲ್ಲಿ ಲೀಗಿನ ಅಧೀನದಲ್ಲಿ ಮಂತ್ರಿಮಂಡಳವು ಅಧಿಕಾರ ನಿರ್ವಹಿಸುತ್ತಿವೆ. ಲೀಗಿನವರು ಕೋರಿದಂತೆ ಈ ಪ್ರಾಂತ್ಯಗಳ ಗಡಿಗಳಿವೆ.

ಗಾಂಧಿಜಿಯರು ಜಿನ್ನಾರೊಡನೆ ನಡೆಯಿಸಿದ ಐಕ್ಯದ ಮಾತುಕತೆಯಿಂದ ಲೀಗಿಗೆ ಇನ್ನೂ ಹೆಚ್ಚು ಪ್ರಶಸ್ತಿ ದೊರಕುವಂತಾಯಿತು. ಲೀಗಿನ ಸಹಕಾರವಿಲ್ಲದೆ ಸ್ವಾತಂತ್ರ್ಯ ಕೋರಿಕೆಯನ್ನು ಎದುರಿಗೆ ಹಾಕುವುದು ಅಸಾಧ್ಯವೆಂದಾಗಿದೆ.

ಪಂಜಾಬಿನ ಮಂತ್ರಿಮಂಡಳ ಲೀಗಿನ ಪ್ರಭಾವದಿಂದ ಹೊರಗಾಗಿರುತ್ತದೆ. ಇದರಿಂದ ಲೀಗಿನ ಮತ್ತು ಜಿನ್ನಾರವರ ಗೌರವಕ್ಕೆ ಸ್ವಲ್ಪ ಕುಂದುಬಂದಿರುತ್ತದೆ. ಸಿಂಧದಲ್ಲಿನ ಲೀಗ ಮಂತ್ರಿಮಂಡಳವು ಅಧಿಕಾರದಲ್ಲಿರುವುದಾದರೂ, ಅದರ ಪ್ರಾಣವು ಸೂಕ್ಷ್ಮವಾದ ದಾರದಿಂದ ಜೋತಾಡುತ್ತಿದೆ.

ಆದರೆ ಒಂದು ವಿಷಯವನ್ನು ಇಲ್ಲಿ ಹೇಳುವುದು ಅವಶ್ಯವಿದೆ. ಲೀಗು ಅಧಿಕಾರದಲ್ಲಿರುವ ಪ್ರಾಂತ್ಯಗಳಲ್ಲಿ, ಶಾಸನ ಸಭೆಯ ಸದಸ್ಯರಾದ ಕಾಂಗ್ರೆಸಿಗರ ಹೆಚ್ಚಿನ ಸಂಖ್ಯೆಯು ಸೆರೆಯಲ್ಲಿದ್ದು, ಶಾಸನಸಭೆಯಲ್ಲಿ ಅವರು ಭಾಗವಹಿಸುವುದರಲ್ಲಿ ಆತಂಕಗಳುಂಟಾಗಿವೆ. ಇದರಿಂದ ಲೀಗ್ ಮಂತ್ರಿಮಂಡಳದ ವಿರೋಧಪಕ್ಷಗಳ ಬಲವು ಬಹಳ ಮಟ್ಟಿಗೆ ಕುಂದಿರುತ್ತದೆ.

ಜಿನ್ನಾರವರ ಪಾಕಿಸ್ಥಾನದ ಕುರಿತು ಛಲ ಮತ್ತು ಪಾಕಿಸ್ಥಾನ ವಿಷಯ ಆಲೋಚಿಸಲು ಗಾಂಧಿಜಿಯರು ಮುಂದೆ ಬಂದುದರಿಂದ, ಲೀಗಿಗೆ ವಿರೋಧಪಕ್ಷವಾಗಿ ಹಿಂದೂ ಮಹಾಸಭೆಗೆ ಪ್ರಶಸ್ತಿಯು ಹೆಚ್ಚಿರುವುದು. ಅಖಂಡ ಹಿಂದೂಸ್ಥಾನವು ಮಹಾಸಭೆಯ ಧ್ಯೇಯ. ಜನಸಂಖ್ಯೆಯ ಮೇಲೆ ಹೊಂದಿಕೊಂಡು ಮುಸ್ಲಿಮರಿಗೆ ಮಹತ್ವವನ್ನು ಕೊಡಲು ಅದು ಸಿದ್ಧವು. ಸ್ವಲ್ಪ ದಿನಗಳ ಹಿಂದೆ ಕಾಂಗ್ರೆಸಿಗೆ ವಿರೋಧವಾಗಿ ಸಿಂಧದಲ್ಲಿ ಸಭೆಯವರು ಲೀಗಿನೊಡನೆ ಸೇರಿದ್ದರೂ, ಹಿಂದೂ ವಿರೋಧಿಗಳೊಡನೆ ಬಾಳಲು ಸಾಧ್ಯವಿಲ್ಲವೆಂಬ ಮನವರಿಕೆಯು ಹಿಂದೂ ಮಹಾಸಭೆಯು ಆಗಿನ ನಾಯಕರಾದ ಸಾವರ್ಕಾರರಲ್ಲಿ ಆಗಿ, ಅದು ತನ್ನ ಸಹಕಾರವನ್ನು ಹಿಂತೆಗೆಯಿತು. ಆದರೂ ಸದ್ಯದ ಸಿಂಧದ ಲೀಗ್ ಮಂಡಳದಲ್ಲಿ ಈರ್ವರು ಹಿಂದೂ ಮಂತ್ರಿಗಳಿರುವರು.

ರಾಜಕೀಯರಂಗದಲ್ಲಿ ಮಹಾಸಭೆಯು ಲೀಗಿನ ಮತ್ತು ಕಾಂಗ್ರೆಸಿನ ಕಡು ವಿರೋಧಿಯಾಗಿದ್ದರೂ, ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಳ್ಳುವ ಕುರಿತು ಅದಕ್ಕೆ ತುಂಬಾ ಆಸಕ್ತಿಯು ಇದೆ. ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯು ನಿವಾರಣೆಯಾಗಬೇಕೆಂಬ ಲವಲವಿಕೆಯು ಅದಕ್ಕೆ ಇದೆ. ಸೆರೆಯಲ್ಲಿರುವ ಕಾಂಗ್ರೆಸ್ ನಾಯಕರ ಬಿಡುಗಡೆಯಾಗಬೇಕೆಂದು ಅದು ಕೋರಿದೆ.

ಜಿನ್ನಾರವರ ಪಾಕಿಸ್ಥಾನದ ಕೂಗಿನಿಂದ, ದೇಶದಲ್ಲಿ ಇನ್ನೆರಡು ಪಕ್ಷಗಳು ಉದ್ಭವಿಸಿವೆ. ಮುಸ್ಲಿಮರಿಗೆ ಪಾಕಿಸ್ಥಾನವು ದೊರಕುವುದಾದರೆ, ಪಂಜಾಬದಲ್ಲಿ ಸಿಕ್ಖಸ್ಥಾನದ ಸ್ಥಾಪನೆಯಾಗಬೇಕೆಂದು ಸಿಕ್ಕರು ಚಳವಳವನ್ನು ಹೂಡಿರುವರು. ಹಾಗೆನೇ ದಕ್ಷಿಣ ಹಿಂದೂದೇಶದಲ್ಲಿ ದ್ರಾವಿಡಸ್ಥಾನಯಾಗಬೇಕೆಂದು ಚಳವಳವೊಂದು ನಡೆಯುತ್ತಿದೆ.

ಲೀಗಿನಿಂದ ಬೇರ್ಪಟ್ಟ! ಕಾಕ್ಸಾರರು ಮತ್ತು ಕಾಂಗ್ರೆಸಿನ ದೂರಯಿರಿಸಲಾದ ಕೊಮ್ಯುನಿಸ್ಟರು, ರಾಷ್ಟ್ರೀಯ ಐಕ್ಯದೃಷ್ಟಿಯಿಂದ ಲೀಗ್ ಕಾಂಗ್ರೆಸ್ ಮಿಲನ ಬಗ್ಗೆ ಶ್ರಮಿಸುತ್ತಿರುವರು.

○ ○ ○ ○

೧೯೪೪ರಲ್ಲಿ ಹಿಂದೂದೇಶದ ರಾಜಕೀಯ ರಂಗದಲ್ಲಿ ಇನ್ನೊಂದು ಕುತೂಹಲಮಯ ಘಟನೆಯು ನಡೆದುಬಿಟ್ಟಿದೆ. ಅಲ್ಪ ಸಂಖ್ಯಾಕರನ್ನೆಲ್ಲಾ ಬೇರೆ ಒಂದು ಪಕ್ಷದ ಅಡಿಯಲ್ಲಿ ವ್ಯವಸ್ಥೆಪಡಿಸಲು, ಆಂಗ್ಲೋ-ಇಂಡಿಯನ್ ಮತ್ತು ಡೋಮಿಸ್ಯಾಲ್ಡ್ ಇರೋಪಿಯನ್ ಸಂಘದ ಅಧ್ಯಕ್ಷರ ಯತ್ನಗಳು ನಡೆದವು. ಈ ಅಲ್ಪ ಸಂಖ್ಯಾಕರ ಲೀಗ್ ಬೆಳೆಯುತ್ತಾ ಹೋದ ಹಾಗೆಲ್ಲಾ ಅದು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಪಕ್ಷದಂತೆ ಪ್ರಶಸ್ತ ಸ್ಥಾನಕ್ಕೆ ಬರಬಹುದು. ಈ ನೂತನ ಪಕ್ಷವನ್ನು ಅಧಿಕಾರವರ್ಗದವರು, ಕಾಂಗ್ರೆಸು ಮತ್ತು ಲೀಗ್ ಪಕ್ಷಗಳನ್ನು ವಿರೋಧಿಸುವುದರಲ್ಲಿ ಮುಂದಕ್ಕೆ ಹೇಗೆ ಬಳಸುವರೆಂದು ಇನ್ನು ನೋಡಬೇಕು. ಹಿಂದೂ ಮುಸ್ಲಿಂ ವಿವಾದ ಒಂದೇ ನೆಪ ಸಾಲದೆ, ಇದೊಂದು ಹೊಸತು ಅಡ್ಡಿಯು ಸ್ಥಾಪನೆಯಲ್ಲಿದೆ. ಈ ತರದ ಪರಿಸ್ಥಿತಿಯು ಎದುರಲ್ಲಿ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗು ಸಮೀಪಿಸಿಕೊಂಡು, ಐಕ್ಯ ಹೊಂದುವುದರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಾಧನೆ ದೃಷ್ಟಿಯಲ್ಲಿ ತುಂಬಾ ಲಾಭವಿದೆ.

ಹಿಂದೂದೇಶ ಹಿತ ಸಾಧಿಸುವ ಶಾಸನಬದ್ಧ ಚಟುವಟಿಕೆಗಳಲ್ಲಿ ಸಹಕರಿಸುವುದು ತಮ್ಮ ಸಂಘದ ಉದ್ದೇಶವೆಂದು, ಈ ನೂತನ ಸಂಘದ ಅಧ್ಯಕ್ಷರಿಂದ ಸಾರಲಾಗಿದೆ. ಆಂಗ್ಲೋ-ಇಂಡಿಯನ್ ಜನರು ದೇಶದ ರಾಷ್ಟ್ರೀಯ ಜೀವನದಲ್ಲಿ ಸ್ಥಾನವನ್ನು ಪಡೆದು ದುಡಿಯಬೇಕೆಂದು ಅವರ ಅಭಿಪ್ರಾಯವಿರುತ್ತದೆ.

ಅಧಿಕಾರವರ್ಗದ ಪ್ರೋತ್ಸಾಹದಲ್ಲಿರುವ ಎಂ. ಎನ್. ರೋಯರು ಕಾಂಗ್ರೆಸಿಗೆ ವಿರೋಧವಾಗಿ, ಭೂರಿ ಜನವರ್ಗವನ್ನು ವ್ಯವಸ್ಥೆಪಡಿಸುವ ಕಾರ್ಯದಲ್ಲಿ ಸದ್ಯ ದುಡಿಯುತ್ತಿರುವರು! ಅವರ ಚಟುವಟಿಕೆಗಳು ಕಾಂಗ್ರೆಸಿಗೆ ಮಾತ್ರವಲ್ಲ, ದೇಶದ ಶ್ರೀಮಂತ ವರ್ಗಕ್ಕೂ ವಿರೋಧವಾಗಿ ನಡೆಯಿಸಲಾಗುವುದಂತೆ! ಸದ್ಯದ ಯುದ್ಧ ಪರಿಸ್ಥಿತಿಯಿಂದ ಮತ್ತು ದೇಶದಲ್ಲಿನ ಸಂದಿಗ್ಧ ಪರಿಸ್ಥಿತಿಯಿಂದ ರೋಯರ ಚಟುವಟಿಕೆಗಳಿಗೂ ನಡೆಯುತ್ತವೆ. ಆದರೆ ಶುಭ್ರ ವಾತಾವರಣ ಮೂಡುವಿಕೆಯೊಂದಿಗೆ ರೋಯರ ಪಂಗಡವು ಮಾಯವಾಗುವುದು ಖಂಡಿತ.

○ ○ ○ ○

೧೯೪೪ರಲ್ಲಿ ನಡೆದ ಅತ್ಯಂತ ವಿಸ್ಮಯುಕರ ಘಟನೆಯು ಒಂದು ಇದೆ. ಇದಾವದೆಂದರೆ ಹಿಂದೂದೇಶದ ಆಶ್ರಿತರಾಜರುಗಳು ಬ್ರಿಟಿಷ್ ಪ್ರಭುತ್ವದ ಮೇಲೆ ಮುನಿದು, ರಾಜರುಗಳು ಚೆಂಬರಿನ ಸ್ಟಾಡಿಂಗ್ ಕಮಿಟಿಯು ಪೂರ್ಣ ರಾಜಿಯಿತ್ತುದು. ತಮ್ಮನ್ನು ವಿಚಾರಿಸದೆನೆ ಪ್ರಭುತ್ವವು ಕೆಲವು ವಿಚಾರಗಳಲ್ಲಿ ವರ್ತಿಸುವುದರಲ್ಲಿ ಈ ರಾಜರುಗಳಿಗೆ ಅಸಮಾಧಾನ ಉಂಟಾಗಿತ್ತು. ತಮ್ಮ ವ್ಯಕ್ತಿತ್ವವನ್ನು ರಕ್ಷಿಸಿಕೊಳ್ಳುವ ದೊಡ್ಡ ಇಚ್ಛೆಯು ಈ ರಾಜರುಗಳಿಗೆ ಇರುವುದಂತೆ! ತಮ್ಮ ಸಂಸ್ಥಾನಗಳಲ್ಲಿ ಕೆಲವು ಕೈಗಾರಿಕೆಗಳನ್ನು ನಡೆಯಿಸಿ, ಅಧಿಕ ಲಾಭ ಸಾಧಿಸುವ ಇಚ್ಛೆ ಅವರಿಗೆ ಇದೆ. ಕಾರಣ ಸಂಸ್ಥಾನಗಳಲ್ಲಿ ಬ್ರಿಟಿಷ್ ಇಂಡಿಯಾದಲ್ಲಿರುವಷ್ಟು ಕಂದಾಯಗಳಿಲ್ಲ. ಆದರೆ ಈ ರಾಜರುಗಳು ನಿರಂಕುಶವಾದಿಗಳು. ಪ್ರತಿಗಾಮಿಗಳಾದುದರಿಂದ ಅವರಿಗೆ ಅವರ ಪ್ರಜಾವರ್ಗದ ಬೆಂಬಲ ಇಲ್ಲ. ತಮ್ಮ ಹಿತಕ್ಕಾಗಿ ಬ್ರಿಟಿಷ್ ಪ್ರಭುತ್ವದ ಮೇಲೆ

(೧೧ನೇ ಪುಟಕ್ಕೆ ಮುಂದುವರಿದಿದೆ.)

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.
1. Paid up Capital	14,39,555- 0- 0
2. Reserves	4,12,017- 3- 7
3. Due to Bankers	78,603-14- 2
4. Deposits	83,73,191- 0- 5
5. Bills for collection	4,39,235- 2- 7
6. Branch Adjustments	3,22,041- 3- 9
7. Other liabilities and undisbursed profits	3,62,459- 2- 5
Total	1,14,27,102-10-11

PROPERTY AND ASSETS	Rs. As.Ps.
1. Office Buildings, safes, furniture, books, etc.	93,560- 3- 3
2. Advances	52,55,-065 9- 5
3. Investments on Govt. Securities etc.	28,74,632- 0- 0
4. Bills for collection	4,39,235- 2- 7
5. Other Assets	1,24,714- 6- 4
6. Cash on hand and with Bankers in Current A/cs	26,39, 895- 5- 4
Total	1,14,27,102-10-11

ಇಸ್ಲಾಮದ ಗೆಳೆಯ

(೧ನೇ ಪುಟದಿಂದ)

ಪ್ರಸಂಗವೇ ಎದ್ದರೆ ನಾನು ಮತ್ತೆ ಅದೇ ಮಾರ್ಗವನ್ನು ಹಿಡಿಯಬೇಕೆನಿಸುತ್ತದೆ," ಎಂದು ಅವರು ಆತ್ಮಚರಿತ್ರೆಯಲ್ಲಿ ಸ್ಪಷ್ಟಗೊಳಿಸಿದ್ದಾರೆ.

ವಾಯಸರಾಯರಿಗೆ ಬರೆದ ಒಂದು ಪತ್ರದಲ್ಲಿ ತಾವು ಖಿಲಾಫತ್ ಚಳವಳಿಗೆ ಬೆಂಬಲವಿತ್ತ ಕಾರಣವನ್ನು ಮಹಾತ್ಮರು ವಿಶದಗೊಳಿಸಿದ್ದಾರೆ: "ಮುಸ್ಲಿಂ ರಾಷ್ಟ್ರಗಳನ್ನು ಕುರಿತು ಸ್ಪಷ್ಟವಾದ ಅಭಯ ವಚನವನ್ನೀಯಬೇಕೆಂದು ನೀವು ಚಕ್ರವರ್ತಿಗಳ ಮಂತ್ರಿಮಂಡಲಕ್ಕೆ ಸೂಚನೆ ಕೊಡಬೇಕಾಗಿ ನಾನು ಕೇಳಿಕೊಳ್ಳುವೆ. ಪ್ರತಿಯೊಬ್ಬ ಹಿಂದೀ-ಮುಸ್ಲಿಮನೂ ಅವುಗಳಲ್ಲಿ ಆಳವಾಗಿ ಆಸಕ್ತನಾಗಿದ್ದಾನೆಂಬ ಮಾತು ನಿಮಗೂ ಗೊತ್ತೆಂದು ನಂಬಿದ್ದೇನೆ. **ನಾನೊಬ್ಬ ಹಿಂದುವಾಗಿ ಅವರ ಕಾರಣದಲ್ಲಿ ಅನಾಸಕ್ತನಾಗಿರಲಾರೆ. ಅವರ ದುಃಖಗಳೇ ನಮ್ಮ ದುಃಖಗಳು."**

ಖಿಲಾಫತ್ ಪ್ರಶ್ನೆಯನ್ನು ಹಿಂದೂ-ಮುಸಲ್ಮಾನರ ನಡುವಣ ವ್ಯಾಪಾರವೇದಿಕೆಯಾಗಿ ಮಾಡಿಗೊಡಲು ಗಾಂಧೀಜಿಯವರು ದೃಢನಿರ್ಧಾರದಿಂದ ನಿರಾಕರಿಸಿದರೆಂಬುದನ್ನು ಇಲ್ಲಿ ನೆನೆದುಕೊಳ್ಳಬೇಕು. "ಖಿಲಾಫತ್ ಪ್ರಶ್ನೆಗೆ ನ್ಯಾಯದ ತಳಹದಿಯಿದ್ದರೆ,—ಹಾಗಿದೆಯೆಂಬುದೇ ನನ್ನ ನಂಬಿಕೆ,—ಮತ್ತು ಸರಸಾರ ನಿಜವಾಗಿ ದೊಡ್ಡ ಅನ್ಯಾಯ ಮಾಡಿದ್ದು ಸತ್ಯವಾದರೆ, ಖಿಲಾಫತ್ ಅನ್ಯಾಯವನ್ನು ಸರಿಗೊಳಿಸಲು ಮುಸ್ಲಿಮರು ಮುಂದೊಡ್ಡಿದ ಬೇಡಿಕೆಗೆ ಬೆಂಬಲಕೊಡುವುದು ಹಿಂದುಗಳ ಕರ್ತವ್ಯವೇ ಸರಿ. ಇದರಲ್ಲಿ ಗೋವಧೆಯ ಪ್ರಶ್ನೆಯನ್ನು ಎಳತರುವುದಾಗಲಿ, ಮುಸಲ್ಮಾನರೊಡನೆ ಒಪ್ಪಂದದ ಕರಾರುಗಳನ್ನು ಮಾಡಿಕೊಳ್ಳುವುದಕ್ಕೆ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುವುದಾಗಲಿ ಅವರಿಗೆ ಶೋಭಿಸಲಾರದು. ಹಾಗೆಯೆ ಖಿಲಾಫತ್ ಪ್ರಶ್ನೆಗೆ ಬೆಂಬಲವೀಯುವುದಕ್ಕೆ ಪ್ರತಿಫಲವಾಗಿ ಗೋವಧೆಯನ್ನು ನಿಲ್ಲಿಸುವೆವೆಂದು ಹೇಳುವುದೂ ಮುಸಲ್ಮಾನರಿಗೆ ಒಪ್ಪುವ ಸಂಗತಿಯಲ್ಲ."

೧೯೨೩ರಲ್ಲಿ ಕೋಕನಾಡದಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಪೀಠದಿಂದ ಮೌಲಾನಾ ಮುಹಮ್ಮದ ಅಲ್ಲಿಯವರು ಕೊಟ್ಟ ಚರಿತ್ರಾರ್ಹ ಭಾಷಣ "ಅಲ್ಲಾಹೋ ಅಕಬರ್"—(ದೇವರು ದೊಡ್ಡವನು) ವಾಕ್ಯದಿಂದ ತೊಡಗಿ "ಮಹಾತ್ಮಾ ಗಾಂಧೀಕೀ ಜೈ"ಯಿಂದ ಕೊನೆಗಂಡಿತ್ತು. ಅದರಲ್ಲಿ ಸ್ವರ್ಗವಾಸಿ ಮೌಲಾನಾ ಸಾಹೇಬರು ಗಾಂಧೀಜಿಯನ್ನು ಈ ಕೆಳಗಿನ ಶಬ್ದಗಳಲ್ಲಿ ಪ್ರಶಂಸಿಸಿದ್ದರು:

"ಎಂದಿಗಿಂತಲೂ ಹೆಚ್ಚಾಗಿ ನಮ್ಮ ಮಹಾನಾಯಕರಾದ ಮಹಾತ್ಮಾ ಗಾಂಧೀಯವರ ಅವಶ್ಯಕತೆ ನಮಗಿಂದು ಇದೆ......ಮಹಾತ್ಮಾ ಗಾಂಧೀಯವರ ಬಂಧನಕ್ಕೆ ಕಾರಣನಾದ ಮನುಷ್ಯನು ಅವರನ್ನು 'ಸಜೀವವಾಗಿ ಹುಗಿಯುವ' ಮೂಲಕ ಮಹಾತ್ಮರು ರಾಷ್ಟ್ರದಲ್ಲಿ ತುಂಬಿದ ಚೈತನ್ಯವನ್ನು ಮಣ್ಣುಗೂಡಿಸುವೆನೆಂದು ಆಶಿಸಿದ್ದ. ಆದರೆ ಮಹಾತ್ಮರು ಜೀವಂತರಾಗಿರುವುದೆಷ್ಟು ಸತ್ಯವೊ ಅಷ್ಟೇ ಸತ್ಯವಾಗಿಯೂ ಅವರು ಹರಿಸಿದ ಚೈತನ್ಯವೂ ಜೀವಂತವಾಗಿದೆಯೆಂದು ನನಗೆ ಭರವಸೆಯಿದೆ......ಗೆಳೆಯರೇ, ಗಯಾ ಅಧಿವೇಶನಗಳ ಆಯ್ಕೆಗೊಂಡ ಅಧ್ಯಕ್ಷರು ಇದ್ದೇ ಇದ್ದರೂ ಯಾರು ಅಮೃತಸರದಲ್ಲಿ, ಕಲಕತ್ತೆಯಲ್ಲಿ, ನಾಗಪುರದಲ್ಲಿ ಮತ್ತು ಅಹಮ್ಮದಾಬಾದದಲ್ಲಿ ನಿಮ್ಮ ಮುಂದಾಳಾಗಿದ್ದರೋ ಆ ಮಹಾತ್ಮರೊಬ್ಬರೇ ಇಂದಿಗೂ ನಿಮ್ಮನ್ನು ಮುನ್ನಡೆಸಬಲ್ಲವರು. ನಮ್ಮ ದಂಡನಾಯಕನು ಇಂದು ನಮ್ಮ ಶತ್ರುವಿನ ಕೈಯಲ್ಲಿ ಯುದ್ಧಬಂದಿಯಾಗಿದ್ದಾನೆ. ಅವನು ನಮ್ಮ ನಡುವೆ ತೆರವುಬಿಟ್ಟುಹೋದ ಶೂನ್ಯವನ್ನು ಯಾರೂ ತುಂಬಲಾರರು......ಕಷ್ಟಸಹನೆಯಿಂದ ಆತ್ಮಶುದ್ಧಿ; ಸರಕಾರದ ಹೊಣೆಗಾರಿಕೆಗಾಗಿ ನೈತಿಕ ಸಿದ್ಧತೆ; ಸ್ವರಾಜ್ಯಲಾಭಕ್ಕೆ ಅನಿವಾರ್ಯ ಪೂರ್ವಾವಶ್ಯಕತೆಯಾದ ಆತ್ಮನಿಗ್ರಹ—ಇದು ಮಹಾತ್ಮರ ಪಂಥ, ಇದು ಅವರ ಮನೋನಿಶ್ಚಯ; ಅಹಮದಾಬಾದ ಕಾಂಗ್ರೆಸ್ ಅಧಿವೇಶನದಲ್ಲಿ ಪರಿಣತವಾದ ಆ ಪುಣ್ಯವರ್ಷದಲ್ಲಿ ಬದುಕಿರುವ ಭಾಗ್ಯವನ್ನು ಪಡೆದುಬಂದ ನಮಗೆಲ್ಲರಿಗೂ ಅವರು ಮಹಾ ಜನಸಮೂಹಗಳ ಮನಸ್ಸು, ಭಾವನೆ, ಕಾರ್ಯಗಳಲ್ಲಿ ಎಷ್ಟು ಶೀಘ್ರವಾಗಿ ಎಂಥ ಅಪೂರ್ವ ಪರಿವರ್ತನೆಯನ್ನು ತಂದೊಡ್ಡಿದರೆಂಬುದು ಚೆನ್ನಾಗಿ ಗೊತ್ತಿದೆ."

"ಆ ನಿಷ್ಠಾವಂತ ಹಿಂದೂ, ಮಹಾತ್ಮಾ ಗಾಂಧೀಯವರು, ಮುಸ್ಲಿಂ ಕಾರಣವನ್ನು ಎತ್ತಿಹಿಡಿದು ಸೆರೆಮನೆಗೆ ಹೋದರು" ಎಂದೂ "ಅತ್ಯಂತ ನಿಃಸ್ವಾರ್ಥದಿಂದ ಅವರು ಖಿಲಾಫತ್ ಚಳವಳಿಯನ್ನು ನಡೆಸಿದ್ದು ಅವರ ಅಪೂರ್ವ ಔದಾರ್ಯದ ಕುರುಹು" ಎಂದೂ ಮೌಲಾನಾ ಮಹಮ್ಮದ್ ಅಲ್ಲಿಯವರು ಹೇಳಿದ್ದು ಅದೇ ಭಾಷಣದಲ್ಲಿ. ಇಂದು ಗಾಂಧೀಜಿಯವರ ನಿಂದೆಯಲ್ಲಿ ನಿರತರಾದವರಲ್ಲಿ ಕೆಲವರು, ಏಕೆ ಎಲ್ಲರೂ ಮುಹಮ್ಮದ್ ಅಲ್ಲಿಯವರ ಈ ಪ್ರಶಂಸಾ ವಾಕ್ಯಗಳನ್ನೋದಿಕೊಂಡು ಈ "ನಿಷ್ಠಾವಂತ ಹಿಂದೂ" ಗಾಂಧೀಯವರು ಮುಸ್ಲಿಂ ಕಾರಣವನ್ನೆತ್ತಿ ಹಿಡಿದು ಸೆರೆಮನೆಗೆ ಹೋಗಿದ್ದಾಗ ತಾವೆಲ್ಲಿ ಅಡಗಿದ್ದೆವೆಂದು ತಮ್ಮನ್ನೇ ತಾವು ಕೇಳಿಕೊಳ್ಳಲೆಂದು ಆಶಿಸುವೆ.

ಈ "ನಿಷ್ಠಾವಂತ ಹಿಂದು" ತನ್ನ ಹಿಂದುತ್ವಕ್ಕೂ ತನ್ನ ಮಾನವಪ್ರೇಮಕ್ಕೂ ತಿಕ್ಕಾಟ ಬರುವ ಅವಕಾಶ ಕೊಟ್ಟಿಲ್ಲ. ಯಾವುದೊಂದು ನಿರ್ದಿಷ್ಟ ಸಿದ್ಧಾಂತದಲ್ಲಿ ಅವರ ಧರ್ಮ ಸೀಮಿತವಾಗಿಲ್ಲ. ಅದು ಎಲ್ಲ ಸತ್ಯ ಧರ್ಮಗಳ ಮೂಲ ತತ್ವಗಳನ್ನೂ ಉದಾರ ವಿಚಾರಗಳನ್ನೂ ಅಸ್ಮಿಗತ ಮಾಡಿಕೊಂಡಿದೆ. ಇದು ಅವರ ಪ್ರಾರ್ಥನಾಸ್ತೋತ್ರಗಳ ಆಯ್ಕೆಯಿಂದ ಸಿದ್ಧವಾಗುವುದು. ಆದುದರಿಂದ ಈ "ನಿಷ್ಠಾವಂತ ಹಿಂದು"ವಿಗೆ ಅಲ್ಲಿ ಸಹೋದರರು, ಇಮಾಮ್ ಬವಾಜರ್, ಅಬ್ಬಾಸ್ ತಯಾಬ್ಜಿ, ಡಾಕ್ಟರ್ ಅನ್ಸಾರಿ, ಹಕೀಮ ಅಜಮಲ ಖಾನ್, ಮೌಲಾನಾ ಅಬುಲ ಕಲಮ ಅಜಾದರಂಥ "ನಿಷ್ಠಾವಂತ ಮುಸ್ಲಿಮರು" ಹೃದಯದ ಗೆಳೆಯರಾಗಿ, ರಾಜಕೀಯ ಸಹಯೋಗಿಗಳಾಗಿ ದೊರೆತದ್ದು ಆಶ್ಚರ್ಯವಲ್ಲ. ಹೆಸರಿಗೆ ಮಾತ್ರ ಮುಸಲ್ಮಾನರಾಗಿರುವವರು ರಾಜಕೀಯ ಕಾರಣಕ್ಕಾಗಿ ಮುಸ್ಲಿಮರನ್ನು ಗಾಂಧೀಜಿಯಿಂದಲೂ ಕಾಂಗ್ರೆಸ್ಸಿನಿಂದಲೂ ಸ್ವಾತಂತ್ರ್ಯ ಸಂಗ್ರಾಮದಿಂದಲೂ ಪ್ರತ್ಯೇಕಿಸಿಡುವಗೋಸುಗ "ಇಸ್ಲಾಮಿಗೆ ಅಪಾಯ" ಎಂಬ ಕೂಗನ್ನು ಎಬ್ಬಿಸುತ್ತಿರುವ ಈ ಕಾಲದಲ್ಲಿಯೂ ನಿಜವಾಗಿ ಧಾರ್ಮಿಕ ಮನೋವೃತ್ತಿಯುಳ್ಳ ಮುಸ್ಲಿಮರನೇಕರು ಗಾಂಧೀಜಿಯವರ ಹತ್ತಿರದ ಗೆಳೆಯರಾಗಿರುವುದನ್ನು ಅವಶ್ಯವಾಗಿ ಲಕ್ಷಿಸಬೇಕು. ರಾಷ್ಟ್ರೀಯ ಶಿಕ್ಷಣದ ಯೋಜನೆಗೆ ಪ್ರಮುಖರನ್ನಾಗಿ ಗಾಂಧೀಜಿ ಡಾ। ಝುಕೀರ ಹುಸೇನರಂಥ ಮುಸ್ಲಿಮ್ ಶಿಕ್ಷಣಜ್ಞರನ್ನು ನಿಯಮಿಸಿದ್ದಾರೆ. ಮತ್ತು ಕಳೆದ ಇಪ್ಪತ್ತು ವರ್ಷಗಳಲ್ಲಿ ಅವರು ಡಾಕ್ಟರ್ ಅನ್ಸಾರಿಯವರನ್ನಾಗಲಿ (ಅವರ ಜೀವಮಾನದಲ್ಲಿ), ಮೌಲಾನಾ ಅಬುಲ ಕಲಮ ಅಜಾದರನ್ನಾಗಲಿ ವಿಚಾರಿಸದೆ ಒಂದೇ ಒಂದು ದೊಡ್ಡ ನಿರ್ಣಯವನ್ನು ಕೂಡಾ ಮಾಡಿಲ್ಲ.

ಗಾಂಧೀಜಿ ಎಂದಿನಂತೆ ಈಗಲೂ ಇಸ್ಲಾಂ ಮತ್ತು ಮುಸ್ಲಿಂ ಜನರ ವಿಶ್ವಾಸಿಕ ಗೆಳೆಯರಾಗಿಯೆ ಇದ್ದಾರೆ. ಮುಸ್ಲಿಮರ ಇಂದಿನ ಮುಂದಾಳುಗಳು ಇಸ್ಲಾಮಿಗೆ ಬಂದಿದ್ದ ಅಪಾಯದಲ್ಲಿ ಅನಾಸಕ್ತರಾಗಿ ಸುಖಜೀವನವನ್ನು ನಡೆಸುತಿದ್ದಾಗ, ಮುಸ್ಲಿಂ ಲೀಗ್ ಮತ್ತು ಪಾಕಿಸ್ತಾನಕ್ಕೆ ದೊರಕಿದ ಇಂದಿನ ಹೊಸ "ಕೆಂಪು" ಗೆಳೆಯರು ಇಸ್ಲಾಂ ಮತ್ತು ಎಲ್ಲ ಧರ್ಮಗಳ ಮೇಲೆ ಬೈಗಳ ಸುರಿಮಳೆಗರೆಯುತಿದ್ದಾಗ, ೧೯೨೨ರಲ್ಲಿ ಇಸ್ಲಾಮದ ಕಾರಣಕ್ಕಾಗಿ ಸೆರೆಮನೆ ಸೇರಿದ ಮನುಷ್ಯ ನಿಶ್ಚಯವಾಗಿ ಮುಸ್ಲಿಮರ ನ್ಯಾಯವಾದ ಹಿತಗಳನ್ನು ಕಷ್ಟಕ್ಕೊಳಗಾಗಲು ಬಿಡಲಾರ; ಇಸ್ಲಾಮಿಗೆ ಅಪಾಯವನ್ನಂತೂ ಬರಗೊಡಿಸಲೇ ಆರ. ಏಕೆಂದರೆ ಈ ಮನುಷ್ಯ ಎಲ್ಲ ಜಾತಿ, ಪಂಥ, ವರ್ಣ, ಕುಲಗಳ ಸೀಮೆಯನ್ನು ಮೀರಿ ತನ್ನ ಧರ್ಮವನ್ನು ಈ ಕೆಳಗಿನ ಶಬ್ದ ಚತುಷ್ಟಯದಲ್ಲಿ ಸಂಗ್ರಹಿಸಿದನು:

"ಸತ್ಯವಲ್ಲದ ದೇವರಿಲ್ಲ."

ಒಸಗೆ

ಕೀರ್ತಿ ಕಿರೀಟವು ಕಡುಪಿನಿಂ ದುಡುಕುವ
ದೂರ್ತರ ಸೆಳೆತಕೆಗೆ ಒಳಪಡುತಿರಲು;
ತ್ಯಾಗದ ಸೇವೆಗೆ ಪ್ರೇಮದ ಲಹರಿಗೆ
ಜಗದೊಳು ಯೋಗ್ಯದ ಆಸರೆ ಇರದಿರಲು;

ಸ್ವಾರ್ಥದ ಹೊನಲಿಗೆ ಅನೃತದ ಸುರಿಮಳೆ
ಅರ್ಥಿಸಿ ಜಡಿದು ಮಹಾ ಪೂರವೆ ಉಕ್ಕುತ
ಲಿರಲು;

ದೂರ್ತನ ಮೋಸವು ಮಾಯದ ಮುಸುಕಿಂ
ಆರ್ತಿಯ ರಮ್ಯವ ಜೀರುತಲಿರಲು;

ಹೊರಳುತ ಹೊರಳುತ ವರ್ಷಗಳೈದು
ನರಳುತಲಿರಲು ಮಾನವ ಕುಲವು
ಘೋರದ ಹತ್ಯಾಖಾಂಡದ ಒರಳಿನೊಳು
ಬರಿದೆ ಶಾಂತಿಯ ಘೋಷಣೆ ಒದರುತಲಿರಲು;

ದಿನದಿನಕೂ ನಾಶವಿನಾಶದ ಸಾಧನವೆಲ್ಲ
ಘನತೆಯ ಹೊಂದುತ ಅತಿಮಿತಿಯಾಗಿ
ಹಿಂಸೆಯ ಪಶುಬಲ ಶಿಖರವನೇರಿ
ಸಂಶಯವಿಲ್ಲದೆ ಆತ್ಮಘಾತವನು ಇಣುಕುತ
ಲಿರಲು;

ಸುಖಸಂಪದಗಳ ವೃದ್ಧಿಯ ಕಾಂತಿಯಿಂ
ಮುಖಸ್ತುತಿಗೆಂದೆ ಒಸಗೆಯ ಸಾರುವು
ದೆಂತೊ?

ಸತ್ಯ ಅಹಿಂಸೆಗಳೆಂಬುವ ಯುಗಲವು
ನೃತ್ಯ ಲೋಕದೊಳು ನಿತ್ಯವೂ ಮೂರ್ತಿಸ
ದಿರಲು;

ನವ ನವ ವರ್ಷದ ಶುಭ ಸಂದೇಶವ
ಸವಿಸವಿ ಎನುತಲಿ ಕವಿತೆಯಿಂ ಭುವಿಯೊಳು
ಹೊಸೆದೊಸೆದೆಸೆಯುವ ಮಬ್ಬಿನ ಜನರೆ!
ಅಸುಗಳ ಅರ್ಪಿಸೆ ಸತ್ಯದ ಕಾಯ್ಪಿಗೆ ಕಂಕಣ
ತೊಡಿರೌ!

"ದಾಮೋದರ"

ಪಾಂಡವರಾಜ್ಯದ ಪ್ರಜೆಗಳು

ಅಣ್ಣತಮ್ಮಂದಿಯರಿಗೆ ಒಂದೇ ಹೆಂಡತಿ

ಗುಡ್ಡಕಾಡು ಜನರ ಪದ್ಧತಿಗಳು

ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳೂ, ಮಹಾತ್ಮಾಗಾಂಧಿಯವರ ಆಪ್ತ ಮಿತ್ರರೂ ಆದ ತಕ್ಕರ್ ಬಾಪಾ ಅವರು ಗುಡ್ಡ ಕಾಡುನಿವಾಸಿಗಳ ಸುಧಾರಣೆಗಾಗಿ ತುಂಬಾ ಶ್ರಮಿಸಿದವರು. ಉತ್ತರ ಹಿಂದೂಸ್ಥಾನದ—ಮುಖ್ಯವಾಗಿ ಪಂಜಾಬಿನ—ಬಳಿಯ ಬೆಟ್ಟ ನಿವಾಸಿಗಳ ಕೆಲವು ಆಚಾರ ಪದ್ಧತಿಗಳನ್ನು ಅವರ ಕುರಿತು ಒಂದು ಲೇಖನ ಬರೆದಿದ್ದಾರೆ. ಪಂಜಾಬು ಹಿಂದಿನ ಪಾಂಡವರ ರಾಜ್ಯವಾಗಿತ್ತು.

ಇಲ್ಲಿಯ ನಿವಾಸಿಗಳು ತುಂಬಾ ಪ್ರಾಚೀನ ಕಾಲದ ಜನರು. ಈಗಿನ ಹಿಂದೂ ಸಮಾಜದ ಆಚಾರವಿಚಾರಗಳಿಂದಾಗಲೀ, ಪಾಶ್ಚಾತ್ಯ ನಾಗರೀಕತೆಯಿಂದಾಗಲೀ ಅವರ ಮೇಲೆ ಯಾವ ತರದ ಪರಿಣಾಮವಾಗಲಿಲ್ಲ.

ಅಲ್ಲಿ ಬ್ರಾಹ್ಮಣರೂ ಕ್ಷತ್ರಿಯರೂ ಇದ್ದಾರೆ. ಅವರಲ್ಲಿ ಜಾತಿ ಭೇದದ ಗೊಡವೆ ಇಲ್ಲ. ಎಲ್ಲರೂ ಒಟ್ಟಿಗೆ ಕೂತು ಊಟ ಮಾಡುತ್ತಾರೆ. ಅವರೊಳಗೆ ಅಂತರ್ ವಿವಾಹಗಳೂ ಆಗುತ್ತವೆ. ಹರಿಜನರು ಅಸ್ಪರ್ಶ್ಯರೆಂಬಭಾವನೆ ಅವರಲ್ಲಿಲ್ಲ. ಅವರ ಕೈಯ ನೀರನ್ನು ಕುಡಿಯುತ್ತಾರೆ. ಇತರ ಕಡೆಗಳಲ್ಲಿರುವಂತೆ ಕಡುವಾದ ಜಾತಿ ಭೇದವಿಚಾರಗಳು ಅವರೊಳಗಿರುವುದಿಲ್ಲ. ಅಲ್ಲಿಯ ಬ್ರಾಹ್ಮಣರಲ್ಲಿ ಯಜ್ಞೋಪವೀತ ಕೂಡ ಹಾಕಿ ಕೊಳ್ಳಲೇ ಬೇಕೆಂಬ ನಿರ್ಬಂಧವಿಲ್ಲ.

ಆರ್ಥಿಕವಾಗಿ ಅಲ್ಲಿನ ಜನರು ಸ್ವಾವಲಂಬಿಗಳು. ಹೊರಗಿನ ವಸ್ತುಗಳ ಮೇಲೆ ಅವರು ಹೊಂದಿಕೊಂಡೇ ಇಲ್ಲ.

ಕೈಯಿಂದ ಉಳುವುದು

ಈ ಜನರ ಪ್ರದೇಶವು ಗುಡ್ಡಬೆಟ್ಟ ಸ್ಥಳವಿರುವುದರಿಂದ ಅಲ್ಲಿನ ಗದ್ದೆಗಳು ಹೆಚ್ಚಾಗಿ ಬೆಟ್ಟ ಪ್ರದೇಶಗಳು. ಇಳಿಜಾರಾದ ಸ್ಥಳದಲ್ಲಿ ಅವರು ಗುಡ್ಡಗಳನ್ನು ಕಡಿದು ಗದ್ದೆಗಳಾಗಿ ಮಾಡುತ್ತಾರೆ. ಇಂತಹ ಪ್ರದೇಶದಲ್ಲಿ ಎತ್ತು ಕೋಣಗಳು ಉಳಲಿಕ್ಕೆ ಉಪಯೋಗಿಸಲಾಗುವುದಿಲ್ಲ. ಅದುದರಿಂದ ಆ ಜನರು ಸ್ವಂತ ನೇಗಿಲನ್ನು ಎಳೆದು ಗದ್ದೆ ಉಳುತ್ತಾರೆ.

ಈ ಪ್ರದೇಶದ ಬ್ರಾಹ್ಮಣರೂ, ರಾಜಪೂತರು ತಾವೂ ಪಾಂಡವ ಕೌರವರ ವಂಶದವರೆಂದು ಹೇಳಿಕೊಳ್ಳುತ್ತಾರೆ. ಅಲ್ಲಿ ಪಾಂಡವರಿಗಾಗಿ ಕಟ್ಟಿದ ಅನೇಕ ದೇವಾಲಯಗಳಿವೆ.

ದ್ರೌಪದಿಯು ಐದು ಜನ ಪಾಂಡುಪುತ್ರರನ್ನು ಮದುವೆಮಾಡಿಕೊಂಡಂತೆ ಈ "ಪಾಂಡವ ರಾಜ್ಯದ" ಜನರು ತಮ್ಮ ಒರ್ವ ಹೆಣ್ಣು ಮಗಳನ್ನು ಐದಾರು ಅಣ್ಣ ತಮ್ಮಂದಿಯರಿಗೆ ವಿವಾಹ ಮಾಡಿಕೊಡುತ್ತಾರೆ: ಇದರಿಂದ ಮದುವೆ ಖರ್ಚು ತುಂಬಾ ಕಡಿಮೆಯಾಗುತ್ತದೆಂದು ಅವರ ನಂಬಿಕೆ. ಇಂತಹ ಪತ್ನಿಯ ಮಕ್ಕಳು ಐದಾರು ಅಣ್ಣ ತಮ್ಮಂದಿರಿಗೂ 'ಅಪ್ಪಾ' ಎಂದು ಕರೆಯುತ್ತಾರೆ.

ಕೆಲವು ಸಮಯ ಹಿರಿಯ ಗಂಡನಿಗೂ ಕಿರಿಯ 'ಗಂಡ'ನಿಗೂ ವಯಸ್ಸಿನಲ್ಲಿ ತುಂಬಾ ವ್ಯತ್ಯಾಸವಿರುತ್ತದೆ. ಹಿರೇ ಗಂಡನಿಗೆ ಹುಟ್ಟಿದ ಮಗು ಕೆಲವು ಸಂದರ್ಭಗಳಲ್ಲಿ ಅದರ ಕಿರೀ 'ಅಪ್ಪ'ನಿಗಿಂತ ಹೆಚ್ಚು ವಯಸ್ಸಿನದಿರುತ್ತದೆ.

ಇತರ ವಿಚಿತ್ರ ಪದ್ಧತಿಗಳು

ಒಬ್ಬಳಿಗೆ ಐದಾರು ಜನರು ಮದುವೆಯಾಗುವಂತೆ, ಕೆಲವು ಕಡೆಗಳಲ್ಲಿ ಐದಾರು ಜನರು ಮೂರು ನಾಲ್ಕು ಮಂದಿ ಹೆಂಡತಿಯರನ್ನು ತರುತ್ತಾರೆ. ಎಲ್ಲಾ ಮಕ್ಕಳೂ ಎಲ್ಲಾ ತಾಯಿಂದಿರಿಗೂ, ತಂದೆಂದಿಯರಿಗೂ ಸಮಾನವಾಗಿ ಮನ್ನಣೆ ಮಾಡುತ್ತಾರೆ.

ಹೀಗೆ ಆದಷ್ಟು ಕಡಿಮೆ ಹೆಂಡತಿಯರನ್ನು ತರುವುದರಿಂದ ಹಿರಿಯರ ಆಸ್ತಿಯು ಹೆಚ್ಚು ಪಾಲಾಗಿ ಹೋಗುವ ಸಂದರ್ಭವಿರುವುದಿಲ್ಲವೆಂದು ಅವರ ಅಭಿಪ್ರಾಯ. ಆ ಪ್ರದೇಶದಲ್ಲಿರುವ ಕೃಷಿಯೋಗ್ಯ ಪ್ರದೇಶವು ಬಹಳ ಸ್ವಲ್ಪವಿರುತ್ತದೆ. ಹೊಸ ಹೊಲ ಗದ್ದೆಗಳನ್ನು ಪಡೆದುಕೊಳ್ಳಲು ಅಲ್ಲಿರುವುದಿಲ್ಲ. ಹೀಗೆ ಮದುವೆ ಮಾಡಿಕೊಳ್ಳುವುದರಿಂದ ಸಂಸಾರ ವಿಶಾಲತೆಯು ಸಂಕುಚಿತವಾಗಿ ಆಸ್ತಿಪಾಸ್ತಿಗಳು ಹರಿದು ಹಂಚಾಗಿ ಹೋಗಲಾರವೆಂದು ಅವರ ಮತ.

ಗುಲಾಮ ಗಿರಿಯೂ ಇದೆ

ಇಲ್ಲಿಯ ಹರಿಜನರಾದ ಕೊಲ್ಹಾ ಎಂಬ ಜನರು ಬ್ರಾಹ್ಮಣರ ಮತ್ತು ರಾಜಪೂತರ ದಾಸ್ಯರಲ್ಲಿರ ಬೇಕೆಂಬ ಸಾಂಪ್ರದಾಯವಿದೆ—ಸಾಯುವ ತನಕ ಅವರ ಒಕ್ಕಲಾಗಿ ಇರಬೇಕು.

ಕೊನೆಗೆ ತಕ್ಕರ್ ಬಾಪಾರವರು ಇಂತಹ ಜನರಲ್ಲಿ ಶಿಕ್ಷಣ ಪ್ರಸಾರ ಮಾಡಲು ನಿಸ್ವಾರ್ಥ ಸೇವೆಯ ಕೆಲಸಗಾರರು ತಮಗೆ ಬೇಕು ಎಂದು ವಿನಂತಿಸಿಕೊಂಡಿರುವರು.

Dissolution of Firm

Notice is hereby given that the firm 'QUILON SUPPLY AGENCY', registered under the Indian Partnership Act and carrying on business at Mangalore and Quilon, by the undersigned in partnership with Sri Fangal Anantha Nayak, has been dissolved with effect from 1—1—1945.

Mangalore 2-1-1945 } (Sd.) P. Gopalkrishna Nayak.

1944 ನೋಟಿಗಳು

(೮ನೇ ಪುಟದಿಂದ)

ಹೊಂದಿಕೊಂಡಿರುವ ಬದಲಿಗೆ ತಮ್ಮ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗುವುದು ಲೇಸೆಂಬ ಭಾವನೆಯು ಅವರಲ್ಲಿ ಈಗಲಾದರೂ ಮೂಡಿರುವುದೇ ಎಂಬ ಪ್ರಶ್ನೆ. ಬ್ರಿಟಿಷ್ ಪ್ರಭುತ್ವಕ್ಕೂ ಈ ರಾಜರುಗಳಿಗೂ ಏನೋ ವಿವಾದ ಉಂಟಾಗಿದೆ ನಿಜ. ಅದರೆ ಪ್ರಭುತ್ವವನ್ನು ಉಲ್ಲಂಘಿಸಿ ನಡೆಯುವ ಬೆನ್ನಲುಬು, ಈ ರಾಜರುಗಳಲ್ಲಿ ಖಂಡಿತವಾಗಿ ಇಲ್ಲವೆಂದೇ ತಿಳಿಯಬೇಕು.

° ° ° °

ತೀಕ್ಷ್ಣವಾದ ಕಂಟ್ರೋಲ್ ಕ್ರಮಗಳು ಜ್ಯಾರಿಗೆ ಬಂದ ಪರಿಣಾಮವಾಗಿ ದೇಶವನ್ನು ಬಹಳವಾಗಿ ಪೀಡಿಸುತ್ತಿರುವ ವ್ಯಾಧಿಗಳಾದ, ಸಂಗ್ರಹಿಸಿಡೋಣ ಮತ್ತು ಲಾಭಖೋರತನವು ಸರಕಾರದ ಹಿಡಿತದೊಳಗೆ ಬಂದಿರುತ್ತದೆ. ಆದರೆ ಈ ಕಂಟ್ರೋಲ್ ಕ್ರಮಗಳು, ಜನರಿಗೆ ಬೇಕಾದ ಆವಶ್ಯಗಳನ್ನು ಒದಗಿಸಿ ಕೊಡುವುದರಲ್ಲಿ ಪೂರ್ಣ ಯಶಸ್ವಿಯಾಗಿದೆ ಎಂದು ಹೇಳಬರುವುದಿಲ್ಲ. ರೋಗದ ಹೊರ ಚಿಹ್ನೆಗಳು ಮಾಯವಾಗಿದ್ದರೂ, ರೋಗಾಣುಗಳು ಇನ್ನೂ ದೇಹದೊಳಗೆ ಅವಿತು ಕೂತಿವೆ. ಇವುಗಳನ್ನು ನಾಶ ಮಾಡಲು ಪರಿಣಾಮಕಾರಿ ಔಷದಿ ಪ್ರಯೋಗವು ಇನ್ನೂ ಆಗಬೇಕಾಗಿದೆ.

ರೇಶನ್ ಕ್ರಮವು ಹೆಚ್ಚಾಗಿ ನಗರಗಳಲ್ಲಿ ಜ್ಯಾರಿಗೆ ಬಂದಿದ್ದು ಅಲ್ಲಿನ ಆಹಾರ ಕೊರತೆಯು ನೀಗಿಸಲ್ಪಟ್ಟಿದ್ದರೂ, ಹಳ್ಳಿಗರ ಕುರಿತು ಹೆಚ್ಚಿನ ಲಕ್ಷ ತೋರಬೇಕಾಗಿಯದೆ. ರೇಶನ್ ಕ್ರಮವನ್ನು ಹಳ್ಳಿಗಳಲ್ಲೂ ಜ್ಯಾರಿಗೆ ತರುವ ವ್ಯವಸ್ಥೆಗಳು ಈಗ ಪರಿಪೂರ್ಣವಾಗಿದ್ದು, ಹಳ್ಳಿಗರಿಗೂ ಹೆಚ್ಚಿನ ಆಯಾಸವಿಲ್ಲದೆ ಆಹಾರ ದೊರಕುವುದೆಂಬ ಭರವಸೆಗಳಿವೆ. ಆಹಾರ ಮತ್ತು ಧಾರಣೆ ಕುರಿತು ಇನ್ನೂ ಪರಿಣಾಮಕಾರಿಯಾದ ಧೋರಣವು ಸರಕಾರದಿಂದ ನಿರೀಕ್ಷಿಸಲಾಗಿದೆ. ಯುದ್ಧ ಯತ್ನಗಳಿಗೆ ಹೆಚ್ಚಿನ ಪ್ರಶಸ್ತಿಯು ಈಗ ದೊರಕುತ್ತಿದ್ದು, ನಾಗರೀಕರ ಆವಶ್ಯಗಳ ಬಗ್ಗೆ ಪೂರೈಕೆಯ ಏರ್ಪಾಡುಗಳನ್ನು ಇನ್ನಷ್ಟು ಸಾಂಗವಾಗಿ ನಡೆಯಿಸಲು ಸ್ವಲ್ಪ ಅಡ್ಡಿಗಳು ಇವೆ. ಈ ಕೆಲವು ದೋಷಗಳು ನಿವಾರಣೆಯಾಗುವ ತರದಲ್ಲಿ ಇನ್ನು ಹೆಚ್ಚು ಕ್ರಮಗಳು ಆಶಿಸಲಾಗಿದೆ.

ಅಕ್ಕಿ ಒಂದನ್ನೆ ಸೇವಿಸುತ್ತಿರುವ ಮದರಾಸು ಪ್ರಾಂತ್ಯದಲ್ಲಿ, ಈಗ ಎರಡು ಬಗೆ, ಯಾಕೆ ಮೂರು ಬಗೆಯ ಆಹಾರವನ್ನು ಸೇವಿಸಬೇಕಾದ ಕ್ರಮಗಳು ಜ್ಯಾರಿಯಾಗಿದೆ. ಈ ತರದ ಕ್ರಮಗಳಿಂದ ಆರೋಗ್ಯ ಸಾಧನೆಯಾಗುತ್ತಿದೆ, ಪೌಷ್ಟಿಕ ದೊರೆಯುತ್ತದೆ ನಿಜ. ಆದರೆ ಅಕ್ಕಿಯ ವ್ಯವಸಾಯ, ಫಲವು ಇನ್ನೂ ಹೆಚ್ಚುವ ತರದಲ್ಲಿ ನಡೆಯುವ ಕಾರ್ಯಗಳು ನಡೆಯಬೇಕಾಗಿಯದೆ.

° ° ° °

ದೊಡ್ಡ ವ್ಯಾಪಾರಿ ವರ್ಗದ ಕುರಿತು ಈ ಯುದ್ಧ ಸಮಯವು ಅವರಿಗೆ ಶ್ರೀಲಕ್ಷ್ಮೀಯ ಅತಿ ದೊಡ್ಡ ವರವಾಗಿ ನಿಂತಿದೆ. ಅವರ ತ್ರಿಜೋರಿಗಳು ಧನದಿಂದ ತುಂಬಿ ತುಲುಕಾಡುತ್ತಿವೆ. ಈ ಸಿರಿಯ ದೆಸೆಯಿಂದ ಉನ್ಮಾದರಾದವರು ಕೆಲವರು ಅಲ್ಲಲ್ಲಿ ಕಾಣಿಸುತ್ತಿರುವರು. ಯುದ್ಧ ಕಾಲದಲ್ಲಿ ಲಕ್ಷ್ಮೀಗೆ ಇವರಿಗೆ ಅನುಕೂಲ ವರಕೊಡಲು ಸಾಧ್ಯವಾಯಿತೇನೊ ನಿಜ. ಆದರೆ ಯುದ್ಧದ ನಂತರ ಲಕ್ಷ್ಮೀಯ ಕಟಾಕ್ಷ ಈಗ ನಡೆದಂತೆ ನಡೆಯದು. ಆದುದರಿಂದ ಮುಂದೆ ದುರ್ದಸೆ ಉಂಟಾಗದಂತೆ ದೇಶದ ಸಾಂಪತ್ತಿಕ ಸ್ಥಿತಿಯು ಉದ್ಧಾರವಾಗುವಂತೆ, ಔದ್ಯೋಗಿಕರಣ ಮತ್ತು ಬೇಸಾಯದ ಉದ್ಧಾರದ ಬಗ್ಗೆ, ಯೋಗ್ಯ ಯೋಜನೆಗಳು ಈಗಲೆ ಸಿದ್ಧವಾಗಬೇಕು. ಯುದ್ಧೋತ್ತರದ ಪುನರ್ರಚನೆಗಾಗಿ, ಮುಂಬ್ಯಾಯ ದೊಡ್ಡ ವ್ಯಾಪಾರಿವರ್ಗಕ್ಕೆ ಪ್ರಭಾವಿತ ಮಂಡಳದವರಿಂದ ಮಹಾಯೋಜನೆಯೊಂದು ಸಿದ್ಧವಾಯಿತು. ಆದರೆ ಅದರಲ್ಲಿ ಅನೇಕ ಕೊರತೆಗಳಿವೆ, ವಿಶಾಲದೃಷ್ಟಿಯಿಂದ ಅದು ರೂಪಿತವಾಗಿಲ್ಲ ಎಂದು ನುರಿತ ಅನೇಕರು ಹೇಳುತ್ತಿರುವರು. ದೇಶದ ಸಾಂಪತ್ತಿಕ ಉದ್ಧಾರವು, ಅದರ ರಾಜಕೀಯ ಉದ್ಧಾರವನ್ನು ಅನುಸರಿಸಿ ನಡೆಯುವಂತಾಗಬೇಕು. ರಾಜಕೀಯವೆ ಅತಿ ಪ್ರಾಮುಖ್ಯವಾದುದು. ರಾಜಕೀಯ ರಂಗದಲ್ಲಿ ಕಲ್ಯಾಣವಾದರೆ, ಆಗ ದೇಶದ ಕಲ್ಯಾಣವಾಗುವುದು. ಯುದ್ಧದೆಸೆಯಿಂದ ನಮಗೆ ಭಹೀರ್ ದೇಶದಿಂದ ದೊಡ್ಡ ವ್ಯಾಪಾರವು ಲಭಿಸಿತು. ನಮ್ಮ ಹೆಸರಲ್ಲಿ ಸಾವಿರ ಕೋಟಿ ಪವನುಗಳ ಮೌಲ್ಯದ ಜಮೆ ಲಂಡನಿನಲ್ಲಿ ಆಗಿರುತ್ತದೆ. ಈ ಹಣವೆಲ್ಲಾ ಲಂಡನಿನಲ್ಲೆ ವಿನಿಯೋಗಿಸಲ್ಪಡುವಂತೆ, ಹಿಂದೂದೇಶದ ಔದ್ಯೋಗಿಕರಣ ಮುಂತಾದ ಸಮಸ್ಯೆಗಳ ಕುರಿತು ಪ್ರಭುತ್ವದವರು ಅವರದೆ ಹಿತದ ಧೋರಣವನ್ನು ಕೈಗೊಳ್ಳುವ ಯತ್ನದಲ್ಲಿದ್ದಾರೆ. ಈ ನಿಧಿಯ ವಿನಿಯೋಗದ ಕುರಿತು ನಮ್ಮನ್ನು ಕೇಳಬೇಡವೆ, ನಮಗೆ ಹಿತವಾಗುವ ತರದಲ್ಲಿ ಅದು ನಡೆಯಬೇಡವೆ, ಎಂದು ನಮ್ಮ ಸಾಂಪತ್ತಿಕ ತಜ್ಞರು ಠೀಕಿಸುತ್ತಿರುವರು.

ದೇಶದಲ್ಲಿ ಸದ್ಯ ಕಾಣಿಸಿಕೊಂಡ ಸಂತುಷ್ಟಿಯು ಕೃತ್ರಿಮವಾದುದು. ದೇಶದ ಸರಕಾರದ ಅಧಿಕಾರವು ಭಾರತೀಯರ ಕೈಗಳಿಲ್ಲದಿರುವುದು ಒಂದು ಮಹಾ ಕೊರತೆಯು. ಫೆಸಿಸ್ಟ್ ದಬ್ಬಾಳಿಕೆಗೆ ಒಳಗಾಗದ ಇರೋಪದ ಜನರ ವಿಮೋಚನೆ ಬಗ್ಗೆ, ಹಿಂದೂದೇಶವು ಮಹಾ ಶ್ರಮ ಮತ್ತು ಯತ್ನಗಳನ್ನು ಮಾಡುತ್ತಿದ್ದಾಗ, ಅದು ಮಾತ್ರ ಸ್ವತಂತ್ರವಾಗಿಲ್ಲ. ತನ್ನ ಕುರಿತು ಯಾವತ್ತೂ ನಿರ್ಧಾರಕ್ಕೆ ಬರಲು ಅದಕ್ಕೆ ಅವಕಾಶವಿಲ್ಲ. ತನ್ನನ್ನು ಸುಧಾರಿಸಿಕೊಳ್ಳಲು ಅದಕ್ಕೆ ಅನುಕೂಲವಿಲ್ಲ. ಹಿಂದೂದೇಶದ ರೈತವರ್ಗವು ಉಪಶಮನಕ್ಕಾಗಿ ಕೂಗುತ್ತಿದೆ. ನಮ್ಮಲ್ಲಿ ಧಾರಾಳ ಧನಸಂಗ್ರಹವಾಗಿದೆ ನಿಜ. ಆದರೆ ಮೂಖರಾಗಿದ್ದು ನಾವು ಏನು ಮಾಡಬಲ್ಲೆವು-ಬೊಕ್ಕೆಯ ಮೇಲೆ ಬರೆ ಎಂಬಂತೆ, ಪರಿಸ್ಥಿತಿಯು ಹೀಗಿದ್ದರೂ, ದೇಶದೊಳಗೆ ಐಕ್ಯವಿಲ್ಲ! ಸ್ವಾತಂತ್ರ್ಯಪಥದಲ್ಲಿ ನಾವಿನ್ನೂ ಹಿಂದುಳಿದಿದ್ದೇವೆ!

° ° ° °

ಯುದ್ಧವು ಮುಂದೆ ಸಾಗಿದೆ. ಅದು ಯಾವಾಗ ಕೊನೆಗಾಣುವುದೆಂದು ಭವಿಷ್ಯವಾಗಿ ನುಡಿಯಲು ಅಸಾಧ್ಯವೆಂದಾಗಿದೆ. ಹಿಂದೂದೇಶವು ಸ್ವಾತಂತ್ರ್ಯ ಕಾರಣವನ್ನು ಆಧರಿಸುತ್ತಿದೆ. ಆದರೆ ಅದಕ್ಕೆ ಸ್ವಾತಂತ್ರ್ಯವು ದುರ್ಲಭವೆನಿಸಿದೆ. ಗಾಂಧಿಜಿಯರ ಮಹಾಯತ್ನವು ನಡೆಯಿತು. ಅದು ನಿರರ್ಥಕವಾಯಿತು. ಈಗ ಅವರು ಬೇರೊಂದು ಹಾದಿಯನ್ನು ಬಗೆದಿರುವರು. ರಾಜಕೀಯದಿಂದ ಅವರ ಸಾಂಪತ್ತಿಕರಂಗಕ್ಕೆ ಇಳಿದಿರುವರು. ಲೀಗು ತಾನು ಸಂಪಾದಿಸಿಕೊಂಡ ಪ್ರಶಸ್ತಿಯಲ್ಲಿ, ಪಾಕಿಸ್ಥಾನ ಬೊಂಬೆ ಹಿಡಿದು ಹಸನ್ಮುಖವಾಗಿ ಕುಳಿತುಬಿಟ್ಟಿದೆ. ಧಾರ್ಮಿಕ ಶ್ರದ್ಧೆ ಮತ್ತು ರಾಷ್ಟ್ರೀಯ ಮನೋಭಾವವನ್ನು ಬೆಳೆಯಿಸಿ, ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಹಿಂದೂ ಮಹಾಸಭೆಯು ಹೊಂಚು ಹಾಕುತ್ತಿದೆ. ದೇಶದಲ್ಲಿ ಉಂಟಾದ ಕಲಹ ಪರಿಸ್ಥಿತಿಯನ್ನು ನಿವಾರಿಸುವರೆ, ಬುದ್ಧಿವಂತರ ಮಂಡಳವೊಂದು ಸಪ್ರೂರವರ ನಾಯಕತ್ವದಲ್ಲಿ ದುಡಿಯುತ್ತಿದೆ. ಆದರೆ ಈ ವರ್ಗಕ್ಕೆ ಯಾರ ಪ್ರೋತ್ಸಾಹವೂ, ಸಹಾನುಭೂತಿಯೂ ಲಭಿಸಲಿಲ್ಲ. ಯುದ್ಧೋತ್ತರದಲ್ಲಿ ಉದ್ಧಾರದ ಬಗ್ಗೆ ಯೋಜನೆಗಳ ಕೂಗೇ ದೇಶದಲ್ಲೆಲ್ಲಾ ಹಬ್ಬಿದ್ದು, ಸಾಮಾನ್ಯ ಜನವರ್ಗವು ಆದರಿಂದ ಭ್ರಾಂತವಾಗಿ, ಎಲ್ಲವನ್ನೂ ಸಹಿಸಿ ನಡೆಯುತ್ತಿದೆ. ಸಾಮಾನ್ಯ ಜನವರ್ಗವಾದರೂ ಮಾಡುವುದಾದರೂ ಏನು? ಬೇರೆ ಹಾದಿ ಅದಕ್ಕಿಲ್ಲ. ಅದು ತನ್ನ ಭವಿಷ್ಯದ ಭಾರವನ್ನು ವಿಧಿಗೆ ಬಿಟ್ಟು ಬಿಟ್ಟಿರುವುದು.

Retirement of Partner

Notice is hereby given that the undersigned has retired as and from 1-1-1945 from the firm 'HINDUSTAN' TRADING CO. a firm registered under the Indian Partnership Act, and carrying on business at Bunder, Mangalore and Sri P. Gopalkrishna Nayak, the continuing partner will be the sole proprietor of the firm from the above date, and he is entitled to collect all outstandings to the firm and also liable to pay all dues and liabilities of the said firm.

Mangalore 2-1-1945. (Sd.) M. Srinivasa Hegde

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾಗ ಬೇಕಾದರೆ ಪ್ರತಿದಿನರಾತ್ರೆ ತಪ್ಪದೆ ಎರಡು ಬೈಲ್‌ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸ್ ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು; ಕೊಬ್ಬು

ಬೆಳೆಯುವುದಿಲ್ಲ. ಇದು ಹೀಗೆ ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

BILE BEANS

ಬೈಲ್‌ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ· ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಸಿಹಿ ಸುದ್ದಿ ಸಂಗ್ರಹ

ಸಂಯುಕ್ತ ರಾಷ್ಟ್ರದ ಪಸಡಿನಾ ಪ್ರಾಂತ್ಯದಲ್ಲಿನ ಯೋರ್ಕ್ ನಗರ ಪ್ರದೇಶದಲ್ಲಿ ಅಲ್ಲಿನ ನಾಗರೀಕರು ಸಿಗರೇಟು ಚುಟ್ಟ ಸೇದ ಬಾರದೆಂಬ ನಿಷೇಧಾಜ್ಞೆ ಇದೆ. ಅಲ್ಲಿ ತರುಣ ಪ್ರಾಯದವರು ಪಿಟೀಲು ವಾದ್ಯವನ್ನು ಬಾರಿಸಬಾರದು. ಅಲ್ಲಿ ಹೊಗೆಸೊಪ್ಪು ತಿನ್ನುವವರೇ ಹೆಚ್ಚಾಗಿರುವುದರಿಂದ ಮೊದಲನೇ ಕಾನೂನನ್ನೂ, ತಂತಿ ವಾದ್ಯ ಬಾರಿಸುವುದರಿಂದ ತರುಣರು ಕೆಟ್ಟು ಹೋಗುತ್ತಾರೆಂದು ಎರಡನೇ ಕಾನೂನನ್ನು ಜಾರಿಮಾಡಿದ್ದರು.

* * *

ಕಲ್ಕತ್ತಾದಲ್ಲಿ ಒಂದು ಚೀನಿ ಭಾಷೆಯ ಪತ್ರಿಕೆಯು ಪ್ರಕಟವಾಗುತ್ತದೆ. ಅಲ್ಲಿ ಒಂದು ಚೀನಿ ಛಾಪಖಾನೆಯೂ ಇದೆ.

* * *

ಹಣ ಚಲಾವಣೆಯ ನೋಟುಗಳು ಚೀನದಲ್ಲಿ ಪ್ರಥಮತಃ ಸುಮಾರು ೪ ಸಾವಿರ ವರ್ಷಗಳ ಹಿಂದೆ ಜ್ಯಾರಿಗೆ ತರಲ್ಪಟ್ಟವು.

* * *

ಕೆಲಿಫೋರ್ನಿಯದ ಲೊಸ್ ಎಂಜಿಲೀಸ್ ಪಟ್ಟಣದಲ್ಲಿ ಒರ್ವ ಬೇಂಡು ವಾದ್ಯಗಾರನು ತನ್ನ ಹೆಂಡತಿಯೊಂದಿಗೆ ವಿವಾಹ ವಿಚ್ಛೇಧನ ಮಾಡಿಕೊಂಡ ಕಾರಣ-ಅವಳು ಅವನ ಬೇಂಡು ಉಪಕರಣವೊಂದನ್ನು ಅಡವಿಟ್ಟು ಹಣ ಪಡೆದಳೆಂದು.

* * *

ಇತ್ತೀಚೆಗೆ ಭಾರತ ವಿಮಾನ ದಳಕ್ಕೆ ಸೇರಿದವರಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದವರಿಗೆಂದು ಭೋಪಾಲಿನ ನವಾಬರು ಇಟ್ಟ ಒಂದು ಸುವರ್ಣ ಖಡ್ಗದ ಬಹುಮಾನವು ದಕ್ಷಿಣ ಕನ್ನಡಿಗರಾದ ಮಾಧವ ಲಕ್ಷ್ಮಣ್ ಕತ್ರೆ ಎಂಬ ತರುಣರಿಗೆ ಸಿಕ್ಕಿರುವುದು.

* * *

ಖೋಜಾ ಮುಸ್ಲಿಮರ ಮತ ಗುರುಗಳಾದ ಆಗಾಖಾನ್ ಪ್ರಭೃತಿಗಳಿಗೆ ಇದೇ ಬರುವ ಮಾರ್ಚ್ ತಿಂಗಳಲ್ಲಿ ೬೦ ವರ್ಷ ತುಂಬುತ್ತದೆ. ಹೆಚ್ಚಾಗಿ ಶ್ರೀಮಂತರಾದ ಈ ಮುಸ್ಲಿಂ ಪಂಗಡದವರು ಆಗಾಖಾನರ ೬೦ನೇ ವರ್ಧಂತಿಯ ವಜ್ರೋತ್ಸವವನ್ನು ಆಚರಿಸಿ, ಅವರಿಗೆ ಅವರ ತೂಕದಷ್ಟೇ ವಜ್ರಗಳನ್ನು ಉಡುಗೊರೆಯಾಗಿ ಕೊಡಲು ನಿರ್ಧರಿಸಿರುವರಂತೆ. ಹತ್ತು ವರ್ಷಗಳ ಹಿಂದೆ ಆಗಾಖಾನರ ಸುವರ್ಣೋತ್ಸವವಾದಾಗ ಭಂಗಾರ ತುಲಾಭಾರವಾಗಿತ್ತು.

* * *

ಆರು ಸಾವಿರ ವರ್ಷಗಳ ಹಿಂದೆ ಸಿಂಧೂ ನದೀ ಪದೇಶದಲ್ಲಿ ದೊಡ್ಡ ನಾಗರೀಕತೆಯನ್ನು ಬೆಳೆಸಿದ ತಮಿಳರು ಯುರೋಪ್, ಚೀನಾ ಮೊದಲಾದ ದೇಶಗಳಲ್ಲೂ ಹೋಗಿ ನೆಲೆನಿಂತಿದ್ದರೆಂದು ಅಲ್ಲಿ ದೊರೆತ ಭೂಗರ್ಭ ಸಂಶೋಧನೆಗಳಿಂದ ತಿಳಿದು ಬಂದಿದೆ.

* * *

ಚೀನಿಯರು ತಮ್ಮ ಹೇಟುಗಳನ್ನು ಹಾಸಿಗೆಗೆ ಮುಟ್ಟಿಸುವುದಿಲ್ಲ. ತಲೆ ಕೂದಲಿಂದ ಹೊರಟ ಕೆಲವು ಹಾಲು ದೆವ್ವಗಳು ಅವರ ಹೇಟನ್ನು ಹಿಡಿದು ನೇತಾಡುತ್ತಿರುವುದರಿಂದ, ಹೇಟು ತಗಲಿದ ಹಾಸಿಗೆಯು ಅವರಿಗೆ ಅಪಶಕುನದ್ದೆಂದು ಭಾವನೆ.

* * *

'ಬ್ರಹ್ಮಚಾರಿ' ಚಿತ್ರದಲ್ಲಿ ಪ್ರಖ್ಯಾತಿ ಪಡೆದ ನಟ ಮಾಸ್ಟರ್ ವಿನಾಯಕ್ ಇವನು ಈಗ ಅವಳಿಜವಳಿ ಮಕ್ಕಳ ತಂದೆಯಾಗಿದ್ದಾನೆ.

* * *

ಅನೇಕ ತಮಿಳ ಚಿತ್ರಗಳಲ್ಲಿ ಪಾತ್ರ ವಹಿಸಿ ಕೀರ್ತಿ ಪಡೆದ ಪ್ರಖ್ಯಾತ ಸಂಗೀತಗಾರ ಎಂ. ಕೆ. ತ್ಯಾಗರಾಜ್ ಭಾಗವತಾರ್, ಮತ್ತು ಪ್ರಖ್ಯಾತ ಹಾಸ್ಯಗಾರನೆನಿಸಿದ ಎನ್. ಎಸ್ ಕೃಷ್ಣನ್ ಇವರು ಒರ್ವ ಪತ್ರಿಕೋದ್ಯೋಮಿಯ ಕೊಲೆ ಮಾಡಿದ ಪ್ರಕರಣದಲ್ಲಿ ಆರೋಪಿತರಾಗಿ ಕೈದು ಮಾಡಲ್ಪಟ್ಟಿರುವರು.

* * *

ಎಲ್ಲಾ ರೋಗ ವ್ಯಾಧಿಗಳಿಗೂ ಸಂಜೀವಿನಿಯೆಂದು ಪ್ರಖ್ಯಾತವಾಗುತ್ತಿರುವ 'ಪೆನಿಸಿಲಿನ್' ಔಷಧವು ಮದ್ರಾಸಿಗೂ ತರಿಸಲ್ಪಟ್ಟು ಆಗಲೇ ಒಬ್ಬ ವಾಧಿಗ್ರಸ್ತ ಡಾಕ್ಟರರು ಅದರಿಂದ ಗುಣಮಾಡಲ್ಪಟ್ಟರು.

ನಮ್ಮ ಆಯುಸ್ಸು ಬರಿ ೨೭

ಸುಜಲಾಂ! ಸುಫಲಾಂ

ಆದರೂ ಭಾರತೀಯರಿಗೆ ಹೊಟ್ಟೆಗಿಲ್ಲ

ಶ್ರೀ। ಎಂ. ಆರ್. ಮಾಸಾನಿ ಅವರು "ನಿಮ್ಮ ಆಹಾರ" ಎಂಬ ಚಿಕ್ಕ ಪುಸ್ತಕದಲ್ಲಿ ಸಂಪತ್ಸಮೃದ್ಧಿಯುಳ್ಳ ಭಾರತದ ಜನರ ಆಹಾರ ದುರವಸ್ಥೆಯನ್ನು ಅಂಕೆ ಸಂಖ್ಯೆಗಳ ಮೂಲಕ ಬಣ್ಣಿಸಿರುವರು.

ಭಾರತೀಯರ ಜೀವನ ಅವಧಿ ಸರಾಸರಿಯಲ್ಲಿ ಬರೀ ೨೭ ವರ್ಷ. ಜಪಾನಿಯನದು ೫೦. ಬ್ರಿಟಿಷ್ ಮತ್ತು ಅಮೇರಿಕನನದು ೬೦. ನ್ಯೂಜೀಲೆಂಡಿನವನದು ೬೦ಕ್ಕೂ ಮಿಕ್ಕಿದೆ. ಇದಕ್ಕೆ ಕಾರಣ ಭಾರತದಲ್ಲಿನ ಆಹಾರದ ಅಭಾವ.

ಪ್ರತಿಯೊಬ್ಬ ಭಾರತೀಯನಿಗೆ ಸರಾಸರಿಯಾಗಿ ಸರ್ವಸಾಧಾರಣ ಜೀವನ ಚೇತನಕ್ಕೆ ೨೮೦೦ ಕೆಲರಿ (ಇದೊಂದು ಆಹಾರ ಅಳತೆ) ಆಹಾರ ಬೇಕು. ಆದರೆ ನಮಗೆ ಈಗ ದೊರೆಯುವುದು ಬರೀ ೨೦೦೦ ಕೆಲರಿ ಮಾತ್ರ. ನಮ್ಮ ಆಹಾರವನ್ನು ೨೮೦೦ ಕೆಲರಿ ಪ್ರಕಾರ ಎಲ್ಲರಿಗೂ ಹಂಚಿದರೆ ೧೫ ಕೋಟಿ ಜನರಿಗೆ ಆಹಾರವೇ ಇಲ್ಲದಂತಾಗುತ್ತದೆ.

ಉಪವಾಸದ ಕಥೆ

ಭಾರತದಲ್ಲಿ ೩೬ ಕೋಟಿ ಎಕ್ರೆ ಸಾಗುವಳಿ ಜಮೀನು ಇದೆ. ಇದರಲ್ಲಿ ಶೇಕಡಾ ೮೦ರಷ್ಟು ಮುಖ್ಯ ಆಹಾರ ಬೆಳೆಯುತ್ತದೆ. ೪೦ ಕೋಟಿ ಜನರಲ್ಲಿ ೩೫ ಕೋಟಿ ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಶೇಕಡಾ ೮೦ರಷ್ಟು ಭೂವ್ಯವಸಾಯ ಮಾಡುವವರು.

"ಗಂಗಾ ನದಿಯು ಸಮುದ್ರಕ್ಕೆ ಸೇರುವಲ್ಲಿನ ಬಂಗಾಳದ ನದೀ ಮುಖಜ ಭೂಮಿಯು ಅತ್ಯಂತ ಫಲವತ್ತಾದ ಸ್ಥಳವಾದರೂ ಅಲ್ಲಿನ ಜನರೇ ಮೊದಲು ಬರಗಾಲದ ಬಾಯಿಗೆ ಬಿದ್ದರು. ಅಲ್ಲಿಯ ಜನರಿಗೆ ಸಿಕ್ಕುವ ಆಹಾರವನ್ನು ಒಂದು ವೇಳೆ ಇಲಿಗಳಿಗೆ ಹಾಕಿದರೂ ಅವು ಕೆಲವೇ ದಿನಗಳಲ್ಲಿ ಅರೆಹೊಟ್ಟೆಯಿಂದ ಸಾಯಬಹುದು".

ಭೂತ ಬಾಧೆ

(೨ನೇ ಪುಟದಿಂದ)

ಗಳಲ್ಲಿ ಅದು ಸತ್ತ ಮನುಷ್ಯನ ಗೋರಕಲ್ಲಿನಂತೆ ಗರ್ಗರಿಸುತ್ತಾ ಸುಯ್ಯನೆ ಆ ಒಂದು ಅರ್ಧ ತೆರೆದ ಕೋಣೆಯೊಳಗೆ ಪ್ರವೇಶಿಸಿ ಮಾಯವಾಯಿತು. ಟಪ್ಪನೇ ಒಂದು ಬಾಗಿಲು ಬಿದ್ದ ಶಬ್ದವೂ ಅಲ್ಲೇ ಕೇಳಿಸಿತು.

ಇದು ಭೂತವಲ್ಲವೆಂದು ನನಗೆ ಖಚಿತವಾಯಿತು. ಆದರೂ ಅನಿರೀಕ್ಷಿತ ಸನ್ನಿವೇಶದಲ್ಲಿ, ಕತ್ತಲ ವಾತಾವರಣದಲ್ಲಿ ಹಳೇ ಬಂಗಲೆಯೊಳಗೆ ಆದ ಘಟನೆಯಲ್ಲವೇ? ಎಂತಹನಾದರೂ ಒಂದುವೇಳೆ ಹೆದರದಿರಲಿಕ್ಕಿಲ್ಲ.

ಮೆಲ್ಲನೆ ಎದ್ದು ನೇರವಾಗಿ ಹೊರಗೆ ಬಂದೆ. ಮತ್ತೆ ಒಂದೇ ಸವನೆ ಮಹಡಿ ಮೆಟ್ಟಲು ಇಳಿದು ಕೆಳಗಡೆ ಓಡಿದೆ. ಕೆಳಗಿನ ದೊಡ್ಡ ಕೋಣೆಗೆ ಮುಟ್ಟಿದಾಕ್ಷಣ ಕಿಟಕಿಯಿಂದ ಮಾರ್ಗಕ್ಕೆ ನೋಡಿದೆ. ಗಾಡಿಯವ ನಿಂತಿದ್ದ. ಸ್ವಲ್ಪ ಧೈರ್ಯ ತಳೆದು, ಅಡಿಗೆ ಕೋಣೆಯ ಕಡೆಗೆ ಸಾರಿದೆ. ಅಲ್ಲಿಂದ ಹಿತ್ತಲ ಕಡೆಗೆ ನೋಡುವಾಗ ಆ ಕಾವಲುಗಾರನೂ, ಅವನ ಬಳಿಯಲ್ಲಿ ಓರ್ವ ಹೆಂಗಸೂ ಇದ್ದು ಅವರು ವೇಗವಾಗಿ ತಮ್ಮ ಗುಡಿಸಲಿನ ಒಳಗೆ ಹೊಕ್ಕಿದ್ದನ್ನು ನೋಡಿದೆ. ಒಂದುಕ್ಷಣ ಯೋಚಿಸಿದೆ, ಏನೋ ಹೊಳೆಯಿತು. ಕೂಡಲೆ ಹಿಂತಿರುಗಿದೆ. . . .

* * *

ಎರಡು ದಿನಗಳ ನಂತರ ಪೋಲಿಸ್ ಅಧಿಕಾರಿ ಮಿ. ಪಿಳ್ಳೈಯವರು ಬಂದಿದ್ದು ಅವರೊಡನೆ ನನ್ನ ಬಂಗಲೆ ಘಟನೆಯನ್ನು ತಿಳಿಸಿದಾಗ ಅವರು ನಗುತ್ತಾ "ಇಂದು ನಾನೇ ಪತ್ರತೆಗೆದುಕೊಂಡು ಹೋಗುತ್ತೇನೆ" ಎಂದರು.

ಪಿಳ್ಳೈಯವರು ಹೊತ್ತು ಮುಳುಗಿದ ಮೇಲೆಯೇ ಅಲ್ಲಿಗೆ ಹೋದರು. ಸಶಸ್ತ್ರ ಪೋಲೀಸರು ಗುಪ್ತ ವೇಶಧಾರಿಗಳಾಗಿ ಮನೆಸುತ್ತ ಕಾವಲುನಿಂತರು. ಮಾಳಿಗೆಯಲ್ಲಿ ಅವರಿಗೂ ಅದೇ 'ಭೂತ' ಕಾಣಿಸಿಕೊಂಡಿತು. ಆದರೆ ಚಾಣಾಕ್ಷರಾದ ಅವರು ತಮ್ಮ ಪಿಸ್ತೂಲಿನಿಂದ ಅದರ ಕಾಲಿಗೆ, ಹೊಡೆದರು. ದೊಪ್ಪನೆ ಅದು ನೆಲಕ್ಕೆ ಬಿತ್ತು. ಮುಸುಕು ಎತ್ತಿದಾಗ ಅದೊಂದು ಹೆಂಗಸು. "ಸ್ವಾಮಿ ಕ್ಷಮಿಸಬೇಕು. ಇದು ಎಲ್ಲ ನನ್ನ ಗಂಡನ ಕೆಲಸ" ಅವಳ ಕಾಲಿಗೆ ಗಾಯವಾಗಿತ್ತು.

ಪಿಸ್ತೂಲಿನ ಶಬ್ದಕ್ಕೆ ಕೆಳಗಿನ ಕೋಣೆಗಳ ಬಾಗಿಲುಗಳು ತೆರೆದುವು. ಅನೇಕ ವ್ಯಕ್ತಿಗಳು ಕೋಟುಹಾಕುತ್ತ ರುಮಾಲು ಸುತ್ತುತ್ತ, ಮುಸುಕು ಹಾಕುತ್ತ ಹಿತ್ತಿಲ ಕಡೆ ಓಡಿದರು. ಕಾಯುತಿದ್ದ ಪೋಲಿಸ್ ಸಿಪಾಯಿಗಳು ಅವರನ್ನು ಹಿಡಿದೇ ಬಿಟ್ಟರು. ಅವರೆಲ್ಲ ಊರಪರ ಊರಿನ ಜುಗಾರಿ ಪ್ರೇಮಿಗಳು ಅನೇಕ ಪ್ರಖ್ಯಾತ ಶ್ರೀಮಂತರೂ ಅವರಲ್ಲಿದ್ದರು.

ಏಳು ದಿವಸಗಳಲ್ಲಿ ನಾನು ಬಂಗಲೆ ದುರಸ್ತಿ ಮಾಡಿಸಿ ಅಲ್ಲಿ ನನ್ನ ಸಂಸಾರ ತಂದು ಸ್ಥಾಪಿಸಿದೆ. ಮತ್ತೆ ಯಾವ ಭೂತದ ಭಾದೆಯೂ ನಮಗೆ ಬರಲಿಲ್ಲ. ಇಷ್ಟಾದರೂ ಈಗಲೂ ನನಗೆ ಕತ್ತಲೆಂದರೆ ಮೈ ಒಂದು ಸಲಕ್ಕೆ ಜುಮ್ಮೆನ್ನುತ್ತಿದೆ. ಆದ್ದರಿಂದ ಹೋಗೋಣ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

1944 ನೋಟಗಳು

(೮ನೇ ಪುಟದಿಂದ)

ಹೊಂದಿಕೊಂಡಿರುವ ಬದಲಿಗೆ ತಮ್ಮ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗುವುದು ಲೇಸೆಂಬ ಭಾವನೆಯು ಅವರಲ್ಲಿ ಈಗಲಾದರೂ ಮೂಡಿರುವುದೇ ಎಂಬ ಪ್ರಶ್ನೆ. ಬ್ರಿಟಿಷ್ ಪ್ರಭುತ್ವಕ್ಕೂ ಈ ರಾಜರುಗಳಿಗೂ ಏನೋ ವಿವಾದ ಉಂಟಾಗಿದೆ ನಿಜ. ಆದರೆ ಪ್ರಭುತ್ವವನ್ನು ಉಲ್ಲಂಘಿಸಿ ನಡೆಯುವ ಬೆನ್ನಲುಬು, ಈ ರಾಜರುಗಳಲ್ಲಿ ಖಂಡಿತವಾಗಿ ಇಲ್ಲವೆಂದೇ ತಿಳಿಯಬೇಕು.

ಂ ಂ ಂ ಂ

ತೀಕ್ಷ್ಣವಾದ ಕಂಟ್ರೋಲ್ ಕ್ರಮುಗಳು ಜ್ಯಾರಿಗೆ ಬಂದ ಪರಿಣಾಮವಾಗಿ ದೇಶವನ್ನು ಬಹಳವಾಗಿ ಪೀಡಿಸುತ್ತಿರುವ ವ್ಯಾದಿಗಳಾದ, ಸಂಗ್ರಹಿಸಿಡೋಣ ಮತ್ತು ಲಾಭಖೋರತನವು ಸರಕಾರದ ಹಿಡಿತದೊಳಗೆ ಬಂದಿರುತ್ತದೆ. ಆದರೆ ಈ ಕಂಟ್ರೋಲ್ ಕ್ರಮುಗಳು, ಜನರಿಗೆ ಬೇಕಾದ ಆವಶ್ಯಗಳನ್ನು ಒದಗಿಸಿ ಕೊಡುವುದರಲ್ಲಿ ಪೂರ್ಣ ಯಶಸ್ವಿಯಾಗಿದೆ ಎಂದು ಹೇಳಬರುವುದಿಲ್ಲ. ರೋಗದ ಹೊರ ಚಿಹ್ನೆಗಳು ಮಾಯವಾಗಿದ್ದರೂ, ರೋಗಾಣುಗಳು ಇನ್ನೂ ದೇಹದೊಳಗೆ ಅವಿತು ಕೂತಿವೆ. ಇವುಗಳನ್ನು ನಾಶ ಮಾಡಲು ಪರಿಣಾಮಕಾರಿ ಔಷದಿ ಪ್ರಯೋಗವು ಇನ್ನೂ ಆಗಬೇಕಾಗಿದೆ.

ರೇಶನ್ ಕ್ರಮುವು ಹೆಚ್ಚಾಗಿ ನಗರಗಳಲ್ಲಿ ಜ್ಯಾರಿಗೆ ಬಂದಿದ್ದು ಅಲ್ಲಿನ ಆಹಾರ ಕೊರತೆಯು ನೀಗಿಸಲ್ಪಟ್ಟಿದ್ದರೂ, ಹಳ್ಳಿಗರ ಕುರಿತು ಹೆಚ್ಚಿನ ಲಕ್ಷ್ಯ ತೋರಬೇಕಾಗಿಯದೆ. ರೇಶನ್ ಕ್ರಮುವನ್ನು ಹಳ್ಳಿಗಳಲ್ಲೂ ಜ್ಯಾರಿಗೆ ತರುವ ವ್ಯವಸ್ಥೆಗಳು ಈಗ ಪರಿಪೂರ್ಣವಾಗಿದ್ದು, ಹಳ್ಳಿಗರಿಗೂ ಹೆಚ್ಚಿನ ಆಯಾಸವಿಲ್ಲದೆ ಆಹಾರ ದೊರಕುವುದೆಂಬ ಭರವಸೆಗಳಿವೆ. ಆಹಾರ ಮತ್ತು ಧಾರಣೆ ಕುರಿತು ಇನ್ನೂ ಪರಿಣಾಮಕಾರಿಯಾದ ಧೋರಣವು ಸರಕಾರದಿಂದ ನಿರೀಕ್ಷಿಸಲಾಗಿದೆ. ಯುದ್ಧ ಯತ್ನಗಳಿಗೆ ಹೆಚ್ಚಿನ ಪ್ರಶಸ್ತಿಯು ಈಗ ದೊರಕುತ್ತಿದ್ದು, ನಾಗರೀಕರ ಆವಶ್ಯಗಳ ಬಗ್ಗೆ ಪೂರೈಕೆಯ ಏರ್ಪಾಡುಗಳನ್ನು ಇನ್ನಷ್ಟು ಸಾಂಗವಾಗಿ ನಡೆಯಿಸಲು ಸ್ವಲ್ಪ ಅಡ್ಡಿಗಳು ಇವೆ. ಈ ಕೆಲವು ದೋಷಗಳು ನಿವಾರಣೆಯಾಗುವ ತರದಲ್ಲಿ ಇನ್ನು ಹೆಚ್ಚು ಕ್ರಮುಗಳು ಆಶಿಸಲಾಗಿದೆ.

ಅಕ್ಕಿ ಒಂದನ್ನೆ ಸೇವಿಸುತ್ತಿರುವ ಮದರಾಸು ಪ್ರಾಂತ್ಯದಲ್ಲಿ, ಈಗ ಎರಡು ಬಗೆ, ಯಾಕೆ ಮೂರು ಬಗೆಯ ಆಹಾರವನ್ನು ಸೇವಿಸಬೇಕಾದ ಕ್ರಮುಗಳು ಜ್ಯಾರಿಯಾಗಿದೆ. ಈ ತರದ ಕ್ರಮುಗಳಿಂದ ಆರೋಗ್ಯ ಸಾಧನೆಯಾಗುತ್ತಿದೆ, ಪೌಷ್ಟಿಕ ದೊರೆಯುತ್ತದೆ ನಿಜ. ಆದರೆ ಅಕ್ಕಿಯ ವ್ಯವಸಾಯ, ಫಲವು ಇನ್ನೂ ಹೆಚ್ಚುವ ತರದಲ್ಲಿ ನಡೆಯುವ ಕಾರ್ಯಗಳು ನಡೆಯಬೇಕಾಗಿಯದೆ.

ಂ ಂ ಂ ಂ

ದೊಡ್ಡ ವ್ಯಾಪಾರಿ ವರ್ಗದ ಕುರಿತು ಈ ಯುದ್ಧ ಸಮಯವು ಅವರಿಗೆ ಶ್ರೀ ಲಕ್ಷ್ಮೀಯ ಅತಿ ದೊಡ್ಡ ವರವಾಗಿ ನಿಂತಿದೆ. ಅವರ ತ್ರಿಜೋರಿಗಳು ಧನದಿಂದ ತುಂಬಿ ತುಲುಕಾಡುತ್ತಿವೆ. ಈ ಸಿರಿಯ ದೆಸೆಯಿಂದ ಉನ್ಮಾದರಾದವರು ಕೆಲವರು ಅಲ್ಲಲ್ಲಿ ಕಾಣಿಸುತ್ತಿರುವರು. ಯುದ್ಧ ಕಾಲದಲ್ಲಿ ಲಕ್ಷ್ಮೀಗೆ ಇವರಿಗೆ ಅನುಕೂಲ ವರಕೊಡಲು ಸಾಧ್ಯವಾಯಿತೇನೊ ನಿಜ. ಆದರೆ ಯುದ್ಧದ ನಂತರ ಲಕ್ಷ್ಮೀಯ ಕಟಾಕ್ಷ ಈಗ ನಡೆದಂತೆ ನಡೆಯದು. ಆದುದರಿಂದ ಮುಂದೆ ದುರ್ದಸೆ ಉಂಟಾಗದಂತೆ ದೇಶದ ಸಾಂಪತ್ತಿಕ ಸ್ಥಿತಿಯು ಉದ್ಧಾರವಾಗುವಂತೆ, ಔದ್ಯೋಗಿಕರಣ ಮತ್ತು ಬೇಸಾಯದ ಉದ್ಧಾರದ ಬಗ್ಗೆ, ಯೋಗ್ಯ ಯೋಜನೆಗಳು ಈಗಲೆ ಸಿದ್ಧವಾಗಬೇಕು. ಯುದ್ಧೋತ್ತರದ ಪುನರ್ರಚನೆಗಾಗಿ, ಮುಂಬ್ಯಾಯ ದೊಡ್ಡ ವ್ಯಾಪಾರಿವರ್ಗಕ್ಕೆ ಪ್ರಭಾವಿತ ಮಂಡಳದವರಿಂದ ಮಹಾಯೋಜನೆಯೊಂದು ಸಿದ್ಧವಾಯಿತು. ಆದರೆ ಅದರಲ್ಲಿ ಅನೇಕ ಕೊರತೆಗಳಿವೆ, ವಿಶಾಲದೃಷ್ಟಿಯಿಂದ ಅದು ರೂಪಿತವಾಗಿಲ್ಲ ಎಂದು ನುರಿತ ಅನೇಕರು ಹೇಳುತ್ತಿರುವರು. ದೇಶದ ಸಾಂಪತ್ತಿಕ ಉದ್ಧಾರವು, ಅದರ ರಾಜಕೀಯ ಉದ್ಧಾರವನ್ನು ಅನುಸರಿಸಿ ನಡೆಯುವಂತಾಗಬೇಕು. ರಾಜಕೀಯವೆ ಅತಿ ಪ್ರಾಮುಖ್ಯವಾದುದು. ರಾಜಕೀಯ ರಂಗದಲ್ಲಿ ಕಲ್ಯಾಣವಾದರೆ, ಆಗ ದೇಶದ ಕಲ್ಯಾಣವಾಗುವುದು. ಯುದ್ಧದೆಸೆಯಿಂದ ನಮಗೆ ಭಹೀರ್ ದೇಶದಿಂದ ದೊಡ್ಡ ವ್ಯಾಪಾರವು ಲಭಿಸಿತು. ನಮ್ಮ ಹೆಸರಲ್ಲಿ ಸಾವಿರ ಕೋಟಿ ಪವನುಗಳ ಮೌಲ್ಯದ ಜಮೆ ಲಂಡನಿನಲ್ಲಿ ಆಗಿರುತ್ತದೆ. ಈ ಹಣವೆಲ್ಲಾ ಲಂಡನಿನಲ್ಲೆ ವಿನಿಯೋಗಿಸಲ್ಪಡುವಂತೆ, ಹಿಂದೂದೇಶದ ಔದ್ಯೋಗಿಕರಣ ಮುಂತಾದ ಸಮಸ್ಯೆಗಳ ಕುರಿತು ಪ್ರಭುತ್ವದವರು ಅವರದೆ ಹಿತದ ಧೋರಣವನ್ನು ಕೈಗೊಳ್ಳುವ ಯತ್ನದಲ್ಲಿದ್ದಾರೆ. ಈ ನಿಧಿಯ ವಿನಿಯೋಗದ ಕುರಿತು ನಮ್ಮನ್ನು ಕೇಳಬೇಡವೆ, ನಮುಗೆ ಹಿತವಾಗುವ ತರದಲ್ಲಿ ಅದು ನಡೆಯಬೇಡವೆ, ಎಂದು ನಮ್ಮ ಸಾಂಪತ್ತಿಕ ತಜ್ಞರು ಕೇಕಿಸುತ್ತಿರುವರು.

ದೇಶದಲ್ಲಿ ಸದ್ಯ ಕಾಣಿಸಿಕೊಂಡ ಸಂತುಷ್ಟಿಯು ಕೃತ್ರಿಮವಾದುದು. ದೇಶದ ಸರಕಾರದ ಅಧಿಕಾರವು ಭಾರತೀಯರ ಕೈಗಳಿಲ್ಲದಿರುವುದು ಒಂದು ಮಹಾ ಕೊರತೆಯು. ಫೆಸಿಸ್ಟ್ ದಬ್ಬಾಳಿಕೆಗೆ ಒಳಗಾಗದ ಇರೋಪದ ಜನರ ವಿಮೋಚನೆ ಬಗ್ಗೆ, ಹಿಂದೂದೇಶವು ಮಹಾ ಶ್ರಮ ಮತ್ತು ಯತ್ನಗಳನ್ನು ಮಾಡುತ್ತಿದ್ದಾಗ, ಅದು ಮಾತ್ರ ಸ್ವತಂತ್ರವಾಗಿಲ್ಲ. ತನ್ನ ಕುರಿತು ಯಾವತ್ತೂ ನಿರ್ಧಾರಕ್ಕೆ ಬರಲು ಅದಕ್ಕೆ ಅವಕಾಶವಿಲ್ಲ. ತನ್ನನ್ನು ಸುಧಾರಿಸಿಕೊಳ್ಳಲು ಅದಕ್ಕೆ ಅನುಕೂಲವಿಲ್ಲ. ಹಿಂದೂದೇಶದ ರೈತವರ್ಗವು ಉಪಶಮನಕ್ಕಾಗಿ ಕೂಗುತ್ತಿದೆ. ನಮ್ಮಲ್ಲಿ ಧಾರಾಳ ಧನಸಂಗ್ರಹವಾಗಿದೆ ನಿಜ. ಆದರೆ ಮೂಖರಾಗಿದ್ದು ನಾವು ಏನು ಮಾಡಬಲ್ಲೆವು—ಬೊಕ್ಕೆಯ ಮೇಲೆ ಬರಿ ಎಂಬಂತೆ, ಪರಿಸ್ಥಿತಿಯು ಹೀಗಿದ್ದರೂ, ದೇಶದೊಳಗೆ ಐಕ್ಯವಿಲ್ಲ! ಸ್ವಾತಂತ್ರ್ಯಪಥದಲ್ಲಿ ನಾವಿನ್ನೂ ಹಿಂದುಳಿದಿದ್ದೇವೆ!

ಂ ಂ ಂ ಂ

ಯುದ್ಧವು ಮುಂದೆ ಸಾಗಿದೆ. ಅದು ಯಾವಾಗ ಕೊನೆಗಾಣುವುದೆಂದು ಭವಿಷ್ಯವಾಗಿ ನುಡಿಯಲು ಅಸಾಧ್ಯವೆಂದಾಗಿದೆ. ಹಿಂದೂದೇಶವು ಸ್ವಾತಂತ್ರ್ಯ ಕಾರಣವನ್ನು ಆಧರಿಸುತ್ತಿದೆ. ಆದರೆ ಅದಕ್ಕೆ ಸ್ವಾತಂತ್ರ್ಯವು ದುರ್ಲಭವೆನಿಸಿದೆ. ಗಾಂಧಿಜಿಯರ ಮಹಾಯತ್ನವು ನಡೆಯಿತು. ಅದು ನಿರರ್ಥಕವಾಯಿತು. ಈಗ ಅವರು ಬೇರೊಂದು ಹಾದಿಯನ್ನು ಬಗೆದಿರುವರು. ರಾಜಕೀಯದಿಂದ ಅವರ ಸಾಂಪತ್ತಿಕರಂಗಕ್ಕೆ ಇಳಿದಿರುವರು. ಲೀಗು ತಾನು ಸಂಪಾದಿಸಿಕೊಂಡ ಪ್ರಶಸ್ತಿಯಲ್ಲಿ, ಪಾಕಿಸ್ಥಾನ ಬೊಂಬೆ ಹಿಡಿದು ಹಸನ್ಮುಖವಾಗಿ ಕುಳಿತುಬಿಟ್ಟಿದೆ. ಧಾರ್ಮಿಕ ಶ್ರದ್ಧೆ ಮತ್ತು ರಾಷ್ಟ್ರೀಯ ಮನೋಭಾವವನ್ನು ಬೆಳೆಯಿಸಿ, ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಹಿಂದೂ ಮಹಾಸಭೆಯು ಹೊಂಚು ಹಾಕುತ್ತಿದೆ. ದೇಶದಲ್ಲಿ ಉಂಟಾದ ಕಲಹ ಪರಿಸ್ಥಿತಿಯನ್ನು ನಿವಾರಿಸುವರಿ, ಬುದ್ಧಿವಂತರ ಮಂಡಳವೊಂದು ಸಪ್ರೂರವರ ನಾಯಕತ್ವದಲ್ಲಿ ದುಡಿಯುತ್ತಿದೆ. ಆದರೆ ಈ ವರ್ಗಕ್ಕೆ ಯಾರ ಪ್ರೋತ್ಸಾಹವೂ, ಸಹಾನುಭೂತಿಯೂ ಲಭಿಸಲಿಲ್ಲ. ಯುದ್ಧೋತ್ತರದಲ್ಲಿ ಉದ್ಧಾರದ ಬಗ್ಗೆ ಯೋಜನೆಗಳ ಕೂಗೇ ದೇಶದಲ್ಲೆಲ್ಲಾ ಹಬ್ಬಿದ್ದು, ಸಾಮಾನ್ಯ ಜನವರ್ಗವು ಅದರಿಂದ ಭ್ರಾಂತವಾಗಿ, ಎಲ್ಲವನ್ನೂ ಸಹಿಸಿ ನಡೆಯುತ್ತಿದೆ. ಸಾಮಾನ್ಯ ಜನವರ್ಗವಾದರೂ ಮಾಡುವುದಾದರೂ ಏನು? ಬೇರೆ ಹಾದಿ ಅದಕ್ಕಿಲ್ಲ. ಅದು ತನ್ನ ಭವಿಷ್ಯದ ಭಾರವನ್ನು ವಿಧಿಗೆ ಬಿಟ್ಟುಬಿಟ್ಟಿರುವುದು.

Retirement of Partner

Notice is hereby given that the undersigned has retired as and from 1-1-1945 from the firm 'HINDUSTAN' TRADING CO. a firm registered under the Indian Partnership Act, and carrying on business at Bunder, Mangalore and Sri P. Gopalkrishna Nayak, the continuing partner will be the sole proprietor of the firm from the above date, and he is entitled to collect all outstandings to the firm and also liable to pay all dues and liabilities of the said firm.

Mangalore 2-1-1945. } (Sd.) **M. Srinivasa Hegde**

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾಗ ಬೇಕಾದರೆ ಪ್ರತಿದಿನರಾತ್ರೆ ತಪ್ಪದೆ ಎರಡು ಬೈಲ್‌ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್‌ಬೀನ್ಸ್ ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು; ಕೊಬ್ಬು

ಬೆಳೆಯುವುದಿಲ್ಲ. ಇದು ಹೀಗೆ ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

BILE BEANS

ಬೈಲ್‌ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೇಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ. ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಸಿಹಿ ಸುದ್ದಿ ಸಂಗ್ರಹ

ಸಂಯುಕ್ತ ರಾಷ್ಟ್ರದ ಪಸಡಿನಾ ಪ್ರಾಂತ್ಯದಲ್ಲಿನ ಯೋರ್ಕ್ ನಗರ ಪ್ರದೇಶದಲ್ಲಿ ಅಲ್ಲಿನ ನಾಗರೀಕರು ಸಿಗರೇಟು ಚುಟ್ಟ ಸೇದ ಬಾರದೆಂಬ ನಿಷೇಧಾಜ್ಞೆ ಇದೆ. ಅಲ್ಲಿ ತರುಣ ಪ್ರಾಯದವರು ಪಿಟೀಲು ವಾದ್ಯವನ್ನು ಬಾರಿಸಬಾರದು. ಅಲ್ಲಿ ಹೊಗೆಸೊಪ್ಪು ತಿನ್ನುವವರೇ ಹೆಚ್ಚಾಗಿರುವುದರಿಂದ ಮೊದಲನೇ ಕಾನೂನನ್ನೂ, ತಂತಿ ವಾದ್ಯ ಬಾರಿಸುವುದರಿಂದ ತರುಣರು ಕೆಟ್ಟು ಹೋಗುತ್ತಾರೆಂದು ಎರಡನೇ ಕಾನೂನನ್ನು ಜಾರಿಮಾಡಿದ್ದರು.

* * *

ಕಲ್ಕತ್ತಾದಲ್ಲಿ ಒಂದು ಚೀನಿ ಭಾಷೆಯ ಪತ್ರಿಕೆಯು ಪ್ರಕಟವಾಗುತ್ತದೆ. ಅಲ್ಲಿ ಒಂದು ಚೀನಿ ಛಾಪಖಾನೆಯೂ ಇದೆ.

* * *

ಹಣ ಚಲಾವಣೆಯ ನೋಟುಗಳು ಚೀನದಲ್ಲಿ ಪ್ರಥಮತಃ ಸುಮಾರು ೪ ಸಾವಿರ ವರ್ಷಗಳ ಹಿಂದೆ ಜ್ಯಾರಿಗೆ ತರಲ್ಪಟ್ಟವು.

* * *

ಕೆಲಿಪೋರ್ನಿಯದ ಲೊಸ್ ಎಂಜಿಲೀಸ್ ಪಟ್ಟಣದಲ್ಲಿ ಓರ್ವ ಬೇಂಡು ವಾದ್ಯಗಾರನು ತನ್ನ ಹೆಂಡತಿಯೊಂದಿಗೆ ವಿವಾಹ ವಿಚ್ಛೇಧನ ಮಾಡಿಕೊಂಡ ಕಾರಣ-ಅವಳು ಅವನ ಬೇಂಡು ಉಪಕರಣವೊಂದನ್ನು ಅಡವಿಟ್ಟು ಹಣ ಪಡೆದಳೆಂದು.

* * *

ಈತ್ತೀಚೆಗೆ ಭಾರತ ವಿಮಾನ ದಳಕ್ಕೆ ಸೇರಿದವರಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದವರಿಗೆಂದು ಭೋಪಾಲಿನ ನವಾಬರು ಇಟ್ಟ ಒಂದು ಸುವರ್ಣ ಖಡ್ಗದ ಬಹುಮಾನವು ದಕ್ಷಿಣ ಕನ್ನಡಿಗರಾದ ಮಾಧವ ಲಕ್ಷ್ಮಣ್ ಕತ್ರೆ ಎಂಬ ತರುಣರಿಗೆ ಸಿಕ್ಕಿರುವುದು.

* * *

ಖೋಜಾ ಮುಸ್ಲಿಮರ ಮತ ಗುರುಗಳಾದ ಆಗಾಖಾನ್ ಪ್ರಭೃತಿಗಳಿಗೆ ಇದೇ ಬರುವ ಮಾರ್ಚ್ ತಿಂಗಳಲ್ಲಿ ೬೦ ವರ್ಷ ತುಂಬುತ್ತದೆ. ಹೆಚ್ಚಾಗಿ ಶ್ರೀಮಂತರಾದ ಈ ಮುಸ್ಲಿಂ ಪಂಗಡದವರು ಆಗಾಖಾನರ ೬೦ನೇ ವರ್ಷಂತಿಯ ವಜ್ರೋತ್ಸವವನ್ನು ಆಚರಿಸಿ, ಅವರಿಗೆ ಅವರ ತೂಕದಷ್ಟೇ ವಜ್ರಗಳನ್ನು ಉಡುಗೊರೆಯಾಗಿ ಕೊಡಲು ನಿರ್ಧರಿಸಿರುವರಂತೆ. ಹತ್ತು ವರ್ಷಗಳ ಹಿಂದೆ ಆಗಾಖಾನರ ಸುವರ್ಣೋತ್ಸವವಾದಾಗ ಭಂಗಾರ ತುಲಾಭಾರವಾಗಿತ್ತು.

* * *

ಆರು ಸಾವಿರ ವರ್ಷಗಳ ಹಿಂದೆ ಸಿಂಧೂ ನದೀ ಪದೇಶದಲ್ಲಿ ದೊಡ್ಡ ನಾಗರೀಕತೆಯನ್ನು ಬೆಳೆಸಿದ ತಮಿಳರು ಯುರೋಪ್, ಚೀನಾ ಮೊದಲಾದ ದೇಶಗಳಲ್ಲೂ ಹೋಗಿ ನೆಲೆನಿಂತಿದ್ದರೆಂದು ಅಲ್ಲಿ ದೊರೆತ ಭೂಗರ್ಭ ಸಂಶೋಧನೆಗಳಿಂದ ತಿಳಿದು ಬಂದಿದೆ.

* * *

ಚೀನಿಯರು ತಮ್ಮ ಹೇಟುಗಳನ್ನು ಹಾಸಿಗೆಗೆ ಮುಟ್ಟಿಸುವುದಿಲ್ಲ. ತಲೆ ಕೂದಲಿಂದ ಹೊರಟ ಕೆಲವು ಹಾಲು ದೆವ್ವಗಳು ಅವರ ಹೇಟನ್ನು ಹಿಡಿದು ನೇತಾಡುತ್ತಿರುವುದರಿಂದ, ಹೇಟು ತಗಲಿದ ಹಾಸಿಗೆಯು ಅವರಿಗೆ ಅಪಶಕುನದ್ದೆಂದು ಭಾವನೆ.

* * *

'ಬ್ರಹ್ಮಚಾರಿ' ಚಿತ್ರದಲ್ಲಿ ಪ್ರಖ್ಯಾತಿ ಪಡೆದ ನಟ ಮಾಸ್ಟರ್ ವಿನಾಯಕ್ ಇವನು ಈಗ ಅವಳಿಜವಳಿ ಮಕ್ಕಳ ತಂದೆಯಾಗಿದ್ದಾನೆ.

* * *

ಅನೇಕ ತಮಿಳ ಚಿತ್ರಗಳಲ್ಲಿ ಪಾತ್ರ ವಹಿಸಿ ಕೀರ್ತಿ ಪಡೆದ ಪ್ರಖ್ಯಾತ ಸಂಗೀತಗಾರ ಎಂ. ಕೆ. ತ್ಯಾಗರಾಜ್ ಭಾಗವತಾರ್, ಮತ್ತು ಪ್ರಖ್ಯಾತ ಹಾಸ್ಯಗಾರನೆನಿಸಿದ ಎನ್. ಎಸ್ ಕೃಷ್ಣನ್ ಇವರು ಓರ್ವ ಪತ್ರಿಕೋದ್ಯೋಗಿಯ ಕೊಲೆ ಮಾಡಿದ ಪ್ರಕರಣದಲ್ಲಿ ಆರೋಪಿತರಾಗಿ ಕೈದು ಮಾಡಲ್ಪಟ್ಟಿರುವರು.

* * *

ಎಲ್ಲಾ ರೋಗ ವ್ಯಾಧಿಗಳಿಗೂ ಸಂಜೀವಿನಿಯೆಂದು ಪ್ರಖ್ಯಾತವಾಗುತ್ತಿರುವ 'ಪೆನಿಸಿಲಿನ್' ಔಷಧವು ಮದ್ರಾಸಿಗೂ ತರಿಸಲ್ಪಟ್ಟು ಆಗಲೇ ಒಬ್ಬ ವ್ಯಾಧಿಗ್ರಸ್ತ ಡಾಕ್ಟರರು ಅದರಿಂದ ಗುಣಮಾಡಲ್ಪಟ್ಟರು.

ನಮ್ಮ ಆಯುಸ್ಸು ಬರಿ ೨೭
ಸುಜಲಾಂ! ಸುಫಲಾಂ
ಆದರೂ ಭಾರತೀಯರಿಗೆ ಹೊಟ್ಟೆಗಿಲ್ಲ

ಶ್ರೀ। ಎಂ. ಆರ್. ಮಾಸಾನಿ ಅವರು "ನಿಮ್ಮ ಆಹಾರ" ಎಂಬ ಚಿಕ್ಕ ಪುಸ್ತಕದಲ್ಲಿ ಸಂಪತ್ಸಮೃದ್ಧಿಯುಳ್ಳ ಭಾರತದ ಜನರ ಆಹಾರ ದುರವಸ್ಥೆಯನ್ನು ಅಂಕೆ ಸಂಖ್ಯೆಗಳ ಮೂಲಕ ಬಣ್ಣಿಸಿರುವರು.

ಭಾರತೀಯರ ಜೀವನ ಅವಧಿ ಸರಾಸರಿಯಲ್ಲಿ ಬರೀ ೨೭ ವರ್ಷ. ಜಪಾನಿಯನದು ೫೦. ಬ್ರಿಟಿಷ್ ಮತ್ತು ಅಮೇರಿಕನನದು ೬೦. ನ್ಯೂಜೀಲೆಂಡಿನವನದು ೬೦ಕ್ಕೂ ಮಿಕ್ಕಿದೆ. ಇದಕ್ಕೆ ಕಾರಣ ಭಾರತ್ತದಲ್ಲಿನ ಆಹಾರದ ಅಭಾವ.

ಪ್ರತಿಯೊಬ್ಬ ಭಾರತೀಯನಿಗೆ ಸರಾಸರಿಯಾಗಿ ಸರ್ವಸಾಧಾರಣ ಜೀವನ ಚೇತನಕ್ಕೆ ೨೮೦೦ ಕೆಲರಿ (ಇದೊಂದು ಆಹಾರ ಅಳತೆ) ಆಹಾರ ಬೇಕು. ಆದರೆ ನಮುಗೆ ಈಗ ದೊರೆಯುವುದು ಬರೀ ೨೦೦೦ ಕೆಲರಿ ಮಾತ್ರ. ನಮ್ಮ ಆಹಾರವನ್ನು ೨೮೦೦ ಕೆಲರಿ ಪ್ರಕಾರ ಎಲ್ಲರಿಗೂ ಹಂಚಿದರೆ ೧೫ ಕೋಟಿ ಜನರಿಗೆ ಆಹಾರವೇ ಇಲ್ಲದಂತಾಗುತ್ತದೆ.

ಉಪವಾಸದ ಕಥೆ

ಭಾರತದಲ್ಲಿ ೩೬ ಕೋಟಿ ಎಕ್ರೆ ಸಾಗುವಳಿ ಜಮೀನು ಇದೆ. ಇದರಲ್ಲಿ ಶೇಕಡಾ ೮೦ರಷ್ಟು ಮುಖ್ಯ ಆಹಾರ ಬೆಳೆಯುತ್ತದೆ. ೪೦ ಕೋಟಿ ಜನರಲ್ಲಿ ೩೫ ಕೋಟಿ ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಶೇಕಡಾ ೮೦ ರಷ್ಟು ಭೂವ್ಯವಸಾಯ ಮಾಡುವವರು.

"ಗಂಗಾ ನದಿಯು ಸಮುದ್ರಕ್ಕೆ ಸೇರುವಲ್ಲಿನ ಬಂಗಾಳದ ನದೀ ಮುಖಜ ಭೂಮಿಯು ಅತ್ಯಂತ ಫಲವತ್ತಾದ ಸ್ಥಳವಾದರೂ ಅಲ್ಲಿನ ಜನರೇ ಮೊದಲು ಬರಗಾಲದ ಬಾಯಿಗೆ ಬಿದ್ದರು. ಅಲ್ಲಿಯ ಜನರಿಗೆ ಸಿಕ್ಕುವ ಆಹಾರವನ್ನು ಒಂದು ವೇಳೆ ಇಲಿಗಳಿಗೆ ಹಾಕಿದರೂ ಅವು ಕೆಲವೇ ದಿನಗಳಲ್ಲಿ ಅರೆಹೊಟ್ಟೆಯಿಂದ ಸಾಯಬಹುದು".

ಭೂತ ಬಾಧೆ

(೨ನೇ ಪುಟದಿಂದ)

ಗಳಲ್ಲಿ ಅದು ಸತ್ತ ಮನುಷ್ಯನ ಗೋರ ಕಲ್ಲಿನಂತೆ ಗರ್ಗರಿಸುತ್ತಾ ಸುಯ್ಯನೆ ಆ ಒಂದು ಅರ್ಧ ತೆರೆದ ಕೋಣೆಯೊಳಗೆ ಪ್ರವೇಶಿಸಿ ಮಾಯವಾಯಿತು. ಟಪ್ಪನೇ ಒಂದು ಬಾಗಿಲು ಬಿದ್ದ ಶಬ್ದವೂ ಅಲ್ಲೇ ಕೇಳಿಸಿತು.

ಇದು ಭೂತವಲ್ಲವೆಂದು ನನಗೆ ಖಚಿತವಾಯಿತು. ಆದರೂ ಅನಿರೀಕ್ಷಿತ ಸನ್ನಿವೇಶದಲ್ಲಿ, ಕತ್ತಲ ವಾತಾವರಣದಲ್ಲಿ ಹಳೇ ಬಂಗಲೆಯೊಳಗೆ ಆದ ಘಟನೆಯಲ್ಲವೇ? ಎಂತಹನಾದರೂ ಒಂದುವೇಳೆ ಹೆದರದಿರಲಿಕ್ಕಿಲ್ಲ.

ಮೆಲ್ಲನೆ ಎದ್ದು ನೇರವಾಗಿ ಹೊರಗೆ ಬಂದೆ. ಮತ್ತೆ ಒಂದೇ ಸವನೆ ಮಹಡಿ ಮೆಟ್ಟಲು ಇಳಿದು ಕೆಳಗಡೆ ಓಡಿದೆ. ಕೆಳಗಿನ ದೊಡ್ಡ ಕೋಣೆಗೆ ಮುಟ್ಟಿದಾಕ್ಷಣ ಕಿಟಕಿಯಿಂದ ಮಾರ್ಗಕ್ಕೆ ನೋಡಿದೆ. ಗಾಡಿಯವ ನಿಂತಿದ್ದ. ಸ್ವಲ್ಪ ಧೈರ್ಯ ತಳೆದು, ಅಡಿಗೆ ಕೋಣೆಯ ಕಡೆಗೆ ಸಾರಿದೆ. ಅಲ್ಲಿಂದ ಹಿತ್ತಲ ಕಡೆಗೆ ನೋಡುವಾಗ ಆ ಕಾವಲುಗಾರನೂ, ಅವನ ಬಳಿಯಲ್ಲಿ ಓರ್ವ ಹೆಂಗಸೂ ಇದ್ದು ಅವರು ವೇಗವಾಗಿ ತಮ್ಮ ಗುಡಿಸಲಿನ ಒಳಗೆ ಹೊಕ್ಕಿದ್ದನ್ನು ನೋಡಿದೆ. ಒಂದುಕ್ಷಣ ಯೋಚಿಸಿದೆ, ಏನೋ ಹೊಳೆಯಿತು. ಕೂಡಲೆ ಹಿಂತಿರುಗಿದೆ. . . .

* * *

ಎರಡು ದಿನಗಳ ನಂತರ ಪೋಲಿಸ್ ಅಧಿಕಾರಿ ಮಿ. ಪಿಳ್ಳೆಯವರು ಬಂದಿದ್ದು ಅವರೊಡನೆ ನನ್ನ ಬಂಗಲೆ ಘಟನೆಯನ್ನು ತಿಳಿಸಿದಾಗ ಅವರು ನಗುತ್ತಾ "ಇಂದು ನಾನೇ ಪತ್ತೆತೆಗೆದುಕೊಂಡು ಹೋಗುತ್ತೇನೆ" ಎಂದರು.

ಪಿಳ್ಳೆಯವರು ಹೊತ್ತು ಮುಳುಗಿದ ಮೇಲೆಯೇ ಅಲ್ಲಿಗೆ ಹೋದರು. ಸಶಸ್ತ್ರ ಪೋಲೀಸರು ಗುಪ್ತ ವೇಶಧಾರಿಗಳಾಗಿ ಮನೆಸುತ್ತ ಕಾವಲುನಿಂತರು. ಮಾಳಿಗೆಯಲ್ಲಿ ಅವರಿಗೂ ಅದೇ 'ಭೂತ' ಕಾಣಿಸಿಕೊಂಡಿತು. ಆದರೆ ಚಾಣಾಕ್ಷರಾದ ಅವರು ತಮ್ಮ ಪಿಸ್ತೂಲಿನಿಂದ ಅದರ ಕಾಲಿಗೆ, ಹೊಡೆದರು. ದೊಪ್ಪನೆ ಅದು ನೆಲಕ್ಕೆ ಬಿತ್ತು. ಮುಸುಕು ಎತ್ತಿದಾಗ ಅದೊಂದು ಹೆಂಗಸು. "ಸ್ವಾಮಿ ಕ್ಷಮಿಸಬೇಕು. ಇದು ಎಲ್ಲ ನನ್ನ ಗಂಡನ ಕೆಲಸ" ಅವಳ ಕಾಲಿಗೆ ಗಾಯವಾಗಿತ್ತು.

ಪಿಸ್ತೂಲಿನ ಶಬ್ದಕ್ಕೆ ಕೆಳಗಿನ ಕೋಣೆಗಳ ಬಾಗಿಲುಗಳು ತೆರೆದುವು. ಅನೇಕ ವ್ಯಕ್ತಿಗಳು ಕೋಟುಹಾಕುತ್ತ ರುಮಾಲು ಸುತ್ತುತ್ತ, ಮುಸುಕು ಹಾಕುತ್ತ ಹಿತ್ತಿಲ ಕಡೆ ಓಡಿದರು. ಕಾಯುತಿದ್ದ ಪೋಲಿಸ್ ಸಿಪಾಯಿಗಳು ಅವರನ್ನು ಹಿಡಿದೇ ಬಿಟ್ಟರು. ಅವರೆಲ್ಲ ಊರಪರ ಊರಿನ ಜುಗಾರಿ ಪ್ರೇಮಿಗಳು ಅನೇಕ ಪ್ರಖ್ಯಾತ ಶ್ರೀಮಂತರೂ ಅವರಲ್ಲಿದ್ದರು.

ಏಳು ದಿವಸಗಳಲ್ಲಿ ನಾನು ಬಂಗಲೆ ದುರಸ್ತಿ ಮಾಡಿಸಿ ಅಲ್ಲಿ ನನ್ನ ಸಂಸಾರ ತಂದು ಸ್ಥಾಪಿಸಿದೆ. ಮತ್ತೆ ಯಾವ ಭೂತದ ಭಾದೆಯೂ ನಮುಗೆ ಬರಲಿಲ್ಲ. ಇಷ್ಟಾದರೂ ಈಗಲೂ ನನಗೆ ಕತ್ತಲೆಂದರೆ ಮೈ ಒಂದು ಸಲಕ್ಕೆ ಜುಮ್ಮೆನ್ನುತ್ತಿದೆ. ಆದ್ದರಿಂದ ಹೋಗೋಣ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE BANK OF MANGALORE, Ltd.,
MANGALORE.
Interest on Fixed Deposits.

It is notified for the information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly wth effect from 1-1-1945

Office of the Bank, Mangalore, 80th Oct. 1944. By Order H. S. KAMATH, Manager

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ವೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾದ, ಆದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,
ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906
[ಸಂಪುಟ 39] ತಾರೀಕು 12—1—1945 [ಸಂಚಿಕೆ 2]

ಶ್ರೇಷ್ಠ ಸೇನಾಪತಿ ಗಾಂಧೀ

ಆಗಸ್ಟ್ 'ಯುದ್ಧ' ಅವರು ಘೋಷಿಸಿಲ್ಲ

ಜನತೆ ಪಕ್ಷವೇ ಕಡೆಗೆ ಗೆಲ್ಲುವುದು

'ಮಹಾತ್ಮಾ ಗಾಂಧಿಯವರು ಆಗಸ್ಟ್ ಚಳವಳವನ್ನು ಪ್ರಾರಂಭಿಸಿರಲಿಲ್ಲ. ಅವರು ಜೈಲಿಗೆ ಕೊಂಡೊಯ್ಯಲ್ಪಟ್ಟರು. ಅವರು ಒಯ್ಯಲ್ಪಟ್ಟ ಮೇಲೆ ಕಾಂಗ್ರೆಸಿಗರು ಕಾಂಗ್ರೆಸೇತರರು, ಕಾಂಗ್ರೆಸ್ ವಿರೋಧಿಗಳೂ ಕೂಡಾ ಆಗಿದ್ದ ಜನರು ಏನೋ ಗಲಾಟೆ ಮಾಡಲಾರಂಭಿಸಿದರು. ಜೈಲಿಗೆ ತುರುಕಿಸಲ್ಪಟ್ಟ ನಮಗೆ ಮೂರು ವಾರಗಳ ತನಕ ಏನು ಸಂಗತಿ ದೇಶದಲ್ಲಿ ನಡೆದಿದೆ ಎಂದು ತಿಳಿಯಲಿಲ್ಲ.'

ಹೀಗೆಂದು ವರ್ಕಿಂಗ್ ಕಮಿಟಿಯ ಸದಸ್ಯೆಯಾದ ಸರೋಜಿನಿ ನಾಯ್ಡು ಅವರು ಕಲ್ಕತ್ತದ ವಿದ್ಯಾರ್ಥಿಗಳ ರಚನಾತ್ಮಕ ಕಾರ್ಯ ಸಂಘದಲ್ಲಿ ಭಾಷಣ ಮಾಡುತ್ತ ತಿಳಿಸಿದರು.

ಕೊಂಗ್ರೆಸಿನ ಮೇಲೆ ಹೊರಿಸಿದ ಅಪರಾಧದ ಹೊಣೆಗಾರಿಕೆಯನ್ನು ಅಲ್ಲಗಳೆಯುವ ಅರ್ಥದಲ್ಲಿ ಶ್ರೀಮತಿ ಸರೋಜಿನಿಯವರು ಮಾತನಾಡಿದರು.

'ಕಾಂಗ್ರೆಸು ಯಾವ ಚಳವಳವನ್ನೂ ಪ್ರಾರಂಭಿಸಿಲ್ಲ. ಕ್ರೋಧಗೊಂಡ ಜನತೆಯಿಂದಲೇ ಅದು ಪ್ರಾರಂಭಿಸಲ್ಪಟ್ಟಿತು. ಕಾಂಗ್ರೆಸಿನ ಅಹಿಂಸಾತ್ಮಕ ವ್ರತ ಬದ್ಧವಾದ ಪ್ರತಿಜ್ಞೆಯನ್ನು ಉಲ್ಲಂಘಿಸಿದವರ ಯಾವ ಕಾರ್ಯವನ್ನೂ ಕಾಂಗ್ರೆಸು ಸಮರ್ಥಿಸಿಲ್ಲ' ಹೀಗೆಂದು ಅವರು ಸ್ಪಷ್ಟಪಡಿಸಿದರು.

ಆಗಸ್ಟ್ ಠರಾವಿನ ಅರ್ಥ

ಅಂದಿನ ಆ ಆಗಸ್ಟ್ ಠರಾವನ್ನು ಕುರಿತು ಸರೋಜಿನಿಯವರು ಅದರಲ್ಲಡಕವಾದ ಅಧಿಕಾರದ ಹೊಣೆಯೆಂತಹುದೆಂಬುದನ್ನೂ ವಿಷದಪಡಿಸಿದರು.

'ಚಳವಳವು ಅವಶ್ಯವೆನಿಸಿದಾಗ ಅದನ್ನು ನಡೆಸುವ ಅಧಿಕಾರ ಮಹಾತ್ಮರಿಗೆ ಬಿಟ್ಟುಕೊಟ್ಟಿತ್ತು. ಚಳವಳವನ್ನು ಪ್ರಾರಂಭಿಸಲು ಅವರಿಗೆ ಅಧಿಕಾರ ಕೊಡಲ್ಪಟ್ಟಿತ್ತು. ಗಲಾಟೆಗೊಳಗಾದ ಆ ಠರಾವಿನ ನಿಜವಾದ ಸಂಗತಿ ಅದು. ಅದರಲ್ಲಿ ಚಳವಳವೊಂದನ್ನು ಪ್ರಾರಂಭಿಸಬೇಕೆಂಬ ಕಾರ್ಯರೂಪೀ ಅಂಶವಿರಲಿಲ್ಲ. ಆದರೆ ಚಳವಳವೊಂದು ಅವಶ್ಯವೆಂದು ಮಹಾತ್ಮರಿಗೆ ತೋರಿದರೆ ಅವರು ಅದನ್ನು ಪ್ರಾರಂಭಿಸಲು ಅಧಿಕೃತರಾಗಿದ್ದರು. ಅದು ಅವರಿಗೆ ಕೊಡಲ್ಪಟ್ಟ ಒಂದು ಅಧಿಕಾರ. ನಮಗೆ ನಮ್ಮ ಸ್ವಾತಂತ್ರ್ಯದ ಆವಶ್ಯಕತೆ ಇದೆ. ನಾವು ಅದನ್ನು ಶಾಂತ ರೀತಿಯಲ್ಲಿ ಇಲ್ಲವೆ ಸಾಧ್ಯವಾದರೆ ಒಪ್ಪಂದ ಮಾತುಕತೆಗಳ ಮೂಲಕ ಪಡೆಯಬಿಚ್ಛಿಸುತ್ತೇವೆ ಎಂದೂ ಅದರ ಅರ್ಥವಾಗಿತ್ತು' ಇಷ್ಟು ಆಗಸ್ಟ್ ಠರಾವಿನ ಸರಳ ಅರ್ಥ ಮತ್ತು ಅದರೊಳಗೊಂಡ ಪ್ರಾಮುಖ್ಯ ವಿಷಯ.

ಸಮರತಜ್ಞ ಗಾಂಧಿ

ಇನ್ನು ಚಳವಳ ಆರಂಭಿಸುವ ವಿವೇಕಾವಿವೇಕ ವಿಚಾರಗಳ ಕುರಿತು ಗಾಂಧೀಜಿಯವರ ದೂರದೃಷ್ಟಿ, ಜಾಗರೂಕತಾ ಬುದ್ಧಿಯ ಕುರಿತು ಶ್ರೀಮತಿ ನಾಯ್ಡು ಅವರು ಹೀಗೆನ್ನುತ್ತಾರೆ:

"ವಿವೇಕಿಯಾದ ಶ್ರೇಷ್ಠ ಸೇನಾನಾಯಕನು ಅತ್ಯಾವಶ್ಯಕ ಸಂದರ್ಭದಲ್ಲಿ ಮಾತ್ರ ತನ್ನ ಸೈನಿಕರನ್ನೂ ಬಲಿದಾನ ಅರ್ಪಿಸಲು ಸಿದ್ಧನಾಗುತ್ತಾನೆ. ಮಹಾತ್ಮಾ ಗಾಂಧಿಯವರು ಮಹಾ ಶ್ರೇಷ್ಠ ಸೇನಾಪತಿಗಳಾಗಿರುವರು. ಅತ್ಯಾವಶ್ಯಕವೆಂದು ತೋರದಿದ್ದರೆ ಅವರು ಒಬ್ಬನೇ ಒಬ್ಬ ಸೈನಿಕನನ್ನು ಎಂದಿಗೂ ಬಲಿ ಅರ್ಪಿಸಲು ಬಯಸುವವರಲ್ಲ."

ಹಿಂಸೆಯನ್ನು ಸಮರ್ಥಿಸಲಿಲ್ಲ.

ಕಾಂಗ್ರೆಸಿನದೇ ಚಳವಳವೆಂದು ಕೂಗಾಡುತಿದ್ದವರಿಗೆ ಉತ್ತರ ಕೊಡುತ್ತಾ ಸರೋಜಿನಿಯವರು ಹೀಗೆ ಹೇಳಿದರು:

"ಅದು ಕಾಂಗ್ರೆಸ್ ಚಳವಳಿಯೆಂದೇ ನೀವು ಹೇಳುತ್ತ ಹೋಗಿರುವಿರಿ. ಜನರು ಕೋಪೋದ್ರೇಕಗೊಂಡದರಿಂದ ಚಳವಳವಾರಂಭವಾಯಿತು. ಆ ಚಳವಳವು ವಿವಿಧ ರೂಪಾಕೃತಿಗಳನ್ನು ಹೊಂದಿತು. ಮಾಡಬಾರದಂತಹ ಅನೇಕಾನೇಕ ಕೃತ್ಯಗಳು ಮಹಾತ್ಮಾ ಗಾಂಧಿಯವರ ಹೆಸರಲ್ಲಿ ಆಚರಿಸಲ್ಪಟ್ಟವು. ಅವರು ಇಂದಿನ ಇಪ್ಪತ್ತು ವರ್ಷಗಳಿಂದ ಹೇಳಿಬಂದ ವಿಚಾರಗಳನ್ನು ಯೋಚಿಸಿದರೆ ಜನರ ಈ ಕೆಲಸಗಳು ನಿಜವಾಗಿ ಅಕೃತ್ಯಗಳು. ಆವೇಶಭರದಲ್ಲಿ ಏನಾದರೂ ಮಾಡಬೇಕೆಂದು ಜನರಲ್ಲಿ ಅನೇಕರು ಕಾಂಗ್ರೆಸಿನ ಅಹಿಂಸೆಯ ಪ್ರತಿಜ್ಞೆಯನ್ನು ಉಲ್ಲಂಘಿಸಿದರು. ನಾನು ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯೆಯಾಗಿದ್ದೇನೆ. ಅಹಿಂಸೆಯ ಪ್ರತಿಜ್ಞೆಯನ್ನು ಉಲ್ಲಂಘಿಸುವಂತ ಕಾರ್ಯವನ್ನು ಕಾಂಗ್ರೆಸ್ ಸಂಸ್ಥೆಯು ಸಮರ್ಥಿಸಲಿಲ್ಲವೆಂದು ಅಧ್ಯಕ್ಷ ಅಬುಲ್‌ಕಲಂ ಅಜಾದರು (ವ್ಯಾಸ್‌ರಾಯರಿಗೆ) ಬರೆದ ಪತ್ರದಲ್ಲಿ ಸ್ಪಷ್ಟಪಡಿಸಿದ ಸಂಗತಿ ನನಗೆ ಗೊತ್ತಿದೆ.

ಕಾಂಗ್ರೆಸ್ ಮತ್ತು ಚುನಾವಣೆಗಳು

ಮುನ್ಸಿಪಲ್ ಚುನಾವಣೆಗೆ ಕಾಂಗ್ರೆಸಿಗರು ಪ್ರಯತ್ನ ಪಡುವುದರ ಪ್ರಶ್ನೆಯ ಕುರಿತು ಸರೋಜಿನಿ ದೇವಿಯವರು ಹೀಗೆ ಸೂಚಿಸಿದರು.

'ಅಹಮದಾಬಾದ್, ಬೊಂಬಾಯಿ ಮತ್ತು ಬಂಗಾಲಗಳಲ್ಲಿ ಕಾಂಗ್ರೆಸ್‌ವಾಲರನೇಕರು ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿ ತೋರಿರುತ್ತಾರೆ. ಕಾಂಗ್ರೆಸ್ ಸ್ಪಷ್ಟವಾಗಿ ಚುನಾವಣೆಗೆ ನಿಲ್ಲುವುದರ ವಿಷಯ ನಿರ್ಬಂಧ ಹಾಕಿಲ್ಲವೆಂಬುದು ನಿಜ. ಆದರೂ ಇಂತಹ ಚುನಾವಣೆಗಳಲ್ಲಿ ಮನಸ್ಸು ಕಹಿಮಾಡಿಕೊಳ್ಳದಿರುವುದು ಹೆಚ್ಚು ವಿವೇಕದ್ದು. ಈಗಿನ ಪರಿಸ್ಥಿತಿಯಲ್ಲಿ ಒಬ್ಬನು ಕಾಂಗ್ರೆಸಿಗನೆಂದು ಕರೆದುಕೊಳ್ಳಲ್ಪಡಬಹುದಾದರೂ ಕಾಂಗ್ರೆಸಿನ ಹೆಸರಲ್ಲಿ ಚುನಾವಣೆಗೆ ಅವರು ನಿಲ್ಲಬಾರದು.

ಯುದ್ಧ ಮತ್ತು ದೇಶಸೇವೆ

ಈ ಯುದ್ಧದ ಲಾಕ್ಷಣೀಕ ಗುಣ ವಿಶೇಷಗಳನ್ನೂ ವರ್ಣಿಸುತ್ತಾ ಸರೋಜಿನಿಯವರು ಈ ರೀತಿ ಅಭಿಪ್ರಾಯಪಟ್ಟರು:

'ಈಗಿನ ಈ ಸಮರವು ಜನತೆಯ ಸಂಗ್ರಾಮವೆಂದು ಕರೆಯಲ್ಪಟ್ಟಿದೆ. ಇದು ಯಾವ ಯುದ್ಧವಿದ್ದರೂ ನಮ್ಮ ಯುದ್ಧ ಮಾತ್ರ ಅಲ್ಲ. ಇದೊಂದು ಸಾಮ್ರಾಜ್ಯವಾದೀ ಯುದ್ಧ. ಇದು ಜನರ ಯುದ್ಧವಾಗಲೀ, ಜನರೇತರರ ಯುದ್ಧವಾಗಲೀ ಕಾಂಗ್ರೆಸ್ ಠರಾವು ಮಾತ್ರ ಅದರ ಮೇಲೆ ಹೊಂದಿಕೊಂಡಿಲ್ಲ. ಭಾರತಕ್ಕೆ ಸ್ವಾತಂತ್ರ್ಯವು ಅದರಿಂದ ದೊರಕಬಲ್ಲುದೋ, ಮತ್ತು ಅದು ಯಾವಾಗ ಎಂಬುದರ ಮೇಲೇ ಅದು ಹೊಂದಿಕೊಂಡಿರುತ್ತದೆ.

ದೇಶದೊಳಗಿನ ಎಲ್ಲಾ ಪಕ್ಷದವರಿಗೂ ತಮ್ಮ ಧ್ಯೇಯಗಳನ್ನು ಕುರಿತು ಪ್ರಚಾರ ಮಾಡುವ ಹಕ್ಕಿದೆ ಎಂಬ ವಿಷಯವನ್ನೂ ಪ್ರಸ್ತಾಪಿಸುತ್ತಾ ಅವರು ಈ ರೀತಿ ನಿರೂಪಿಸಿದರು.

'ಪ್ರತಿ ಪಕ್ಷದವರೂ ಬಾಳಿಕೊಂಡಿರುವ ಹಕ್ಕುಳ್ಳವರಿರುತ್ತಾರೆ. ತಪ್ಪಾಗಲೀ ಒಪ್ಪಾಗಲೀ ಪ್ರತಿ ಪಕ್ಷವೂ ತನ್ನ ಅಭಿಮತ ಧ್ಯೇಯಗಳನ್ನು ಪ್ರಚಾರ ಮಾಡುವ ಹಕ್ಕುಳ್ಳದ್ದಿದೆ. ಕೊನೆಗೆ ಜನರ ಸೇವೆಯನ್ನು ಮಾಡುವ ಪಕ್ಷವೇ ಸ್ಥಿರವಾಗಿ ಬಾಳುವುದು. ಇನ್ನೊಂದು ಪಕ್ಷದ ವಿಷಯವಾಗಿ ಹೆದರಿಕೊಂಡಿರುವುದು ಒಂದು ದೊಡ್ಡ ನಿರ್ಬಲತೆಯೆನ್ನಬೇಕು. ನೀವು ಬಲಿಷ್ಠರಾಗಿದ್ದರೆ ನಿಮಗೆ ಇನ್ನೊಬ್ಬರ ಹೆದರಿಕೆ ಏನು? ಅದಕ್ಕೆ ಪ್ರತಿಯಾಗಿ ನೀವು "ಎಲ್ಲಾ ಪಕ್ಷದವರೂ ಬರಲಿ, ಒಂದೇ ಕೈಯಿಂದ ನಾನವರೆಲ್ಲರಿಗೂ ಹತ್ತಿಕ್ಕಬಲ್ಲೆ" ಎಂದು ಹೇಳುವವರಿರಬೇಕು.

ಅದೇ ಸರಿಯಾದ ಧೋರಣೆ. ನನಗೆ ಎಲ್ಲಾ ಪಕ್ಷದವರಲ್ಲೂ ಸ್ನೇಹಿತರಿದ್ದಾರೆ. ಕಾಂಗ್ರೆಸಿನ ಓರ್ವ ಮುಂದಾಳಾಗಿದ್ದುದರಿಂದ ನಾನು ಅವರನ್ನು ನನ್ನ ಧ್ಯೇಯಕ್ಕೆ ಪರಿವರ್ತಿಸಿಕೊಳ್ಳಲು ಪ್ರಯತ್ನಿಸುವೆ. ಅದು ನನ್ನ ಕಾರ್ಯದ ಒಂದು ಭಾಗವೇ ಆಗಿದೆ.'

ಸರಕಾರ ಅಭಿಪ್ರಾಯ

ಸರೋಜಿನಿಯವರ ಮೇಲಿನ ಭಾಷಣದಿಂದ ನವಡಿಲ್ಲಿಯ ಅಧಿಕಾರ ಕೇಂದ್ರಗಳಲ್ಲಿ ನಾನಾ ತರದ ಅಭಿಪ್ರಾಯಗಳು ಉಂಟಾಗಿವೆ. ತಮಗೆ ಅವಶ್ಯ ತೋರಿದಾಗ ಗಾಂಧೀಜಿಯವರು ಚಳವಳವನ್ನಾರಂಭಿಸಲು ಅಧಿಕೃತರಾಗಿರುವರೆಂದು ಕಾಂಗ್ರೆಸಿನ ಆಗಸ್ಟ್ ಠರಾವಿನಲ್ಲಿ ಯಾವ ಕುರುಹುಗಳೂ ಕಾಣುವುದಿಲ್ಲವೆಂದೇ ಸರಕಾರ ವರ್ಗದವರ ಅಭಿಪ್ರಾಯ.

ಚರ್ಚಾಸ್ಪದವಾದ ಆಗಸ್ಟ್ ಠರಾವಿನ ಮುಖ್ಯಾಂಶವು ಹೀಗಿದೆ: "ಜನಾಂಗವನ್ನು ಅತೀ ದೀರ್ಘ ಕಾಲದ ಹಿಂದಕ್ಕೆ ತಳ್ಳಿ ಹಿಡಿಯುವುದು. ನ್ಯಾಯವೆಂದು ಸಮಿತಿಯು (ವರ್ಕಿಂಗ್ ಕಮಿಟಿಯು) ಭಾವಿಸುವುದಿಲ್ಲ....ಆದುದರಿಂದ ಸಾಮೂಹಿಕ ಚಳವಳವೊಂದನ್ನು ಪ್ರಾರಂಭಿಸುವದೇ ಈ ಸಮಿತಿಯು ಮಂಜೂರಾತಿ ಕೊಡಲು ನಿರ್ಣಯಿಸುತ್ತದೆ. ಅಂತಹ ಚಳವಳವೊಂದು ಗಾಂಧೀಜಿಯವರ ನಾಯಕತ್ವದಲ್ಲಿರಬೇಕಾದುದು ಅನಿವಾರ್ಯ. ಅವರು (ಗಾಂಧೀಜಿ) ಮುಂದಾಳುತ್ವವನ್ನು ವಹಿಸಿ ಕೈಕೊಳ್ಳಬೇಕಾದ ಕಾರ್ಯದ ಕುರಿತು ನಿರ್ದೇಶಿಸಬೇಕಾಗಿ ಈ ಸಮಿತಿಯು ಅವರನ್ನು ವಿನಂತಿಸುತ್ತದೆ.

ಯಾವ ಚಳವಳವೂ ಪ್ರಾರಂಭಿಸಿರದಿದ್ದರೆ ಇತ್ತೀಚೆಗೆ ಹೊಸದಾಗಿ ಪ್ರಾಂತ್ಯಗಳಲ್ಲಿ ರಚಿಸಲ್ಪಟ್ಟ ಕಾಂಗ್ರೆಸ್ ಸಮಿತಿಗಳಲ್ಲಿ ಚಳವಳದಲ್ಲಿ ಭಾಗವಹಿಸಿರದವರಿಗೆ ಏಕೆ ಸ್ಥಾನಕೊಡಲಾಗಿಲ್ಲವೆಂದೇ ಅಧಿಕಾರಿ ಕಡೆಯ ಪ್ರಶ್ನೆ.

ಇಷ್ಟೇ ಅಲ್ಲ. ಸರೋಜಿನಿಯವರು 'ಇದು ನಮ್ಮ ಯುದ್ಧವಲ್ಲ, ಇದು ಸಾ ಸಾಮ್ರಾಜ್ಯವಾದೀ ಯುದ್ಧ'ವೆಂದು ಹೇಳಿದುದು ಆಗಸ್ಟ್ ನಿರ್ಣಯವು ಯುದ್ಧಕ್ಕೆ ಸಹಾಯ ತೆರಲಿಕ್ಕಾಗಿಯೇ ಯೋಜಿಸಲ್ಪಟ್ಟದ್ದು ಎಂಬ ವಾದಕ್ಕೆ ಅನುಗುಣವಾಗಿರುವುದೆ? ಎಂಬುದೂ ಅಧಿಕಾರಿ ಕಡೆಯಿಂದ ಬಂದ ಇನ್ನೊಂದು ಪ್ರಶ್ನೆ.

ವ[illegible]ದ ಕತೆ

ಒಳ್ಳೇ ಪಾಠ

ಯುದ್ಧಕಾಲದಲ್ಲಿ ಪ್ರಯಾಣದ ತೊಂದರೆ ವಿಪರೀತವಿದ್ದರೂ ಉತ್ಸಾಹದ ಭರದಲ್ಲಿ ನನ್ನ ಸ್ನೇಹಿತರು ಅವನ್ನು ಗಣಿಸದೆ ಮೈಸೂರು ದಸರಕ್ಕೆ ಬರಲೇ ಬೇಕೆಂದು ನನಗೆ ಒತ್ತಾಯ ಮಾಡಿದ್ದರಿಂದ ಸಂಚಾರ ಪ್ರಿಯನಾದ ನನಗೂ ಉತ್ಸಾಹ ತೋರಿತು. ಏಳು ದಿವಸ ಮೊದಲೇ ನಾವು ಹೊರಟೆವು. ಕರ್ಣಾ (ನಾರ್ಣ) ಟಕ ಏಕೀಕರಣಕ್ಕೆ ಹಿಂದೆ ನಾನು ಕಾಲೇಜು ಡಿಬೇಟಿನಲ್ಲಿ ಬಲವಾದ ವಕಾಲತು ವಹಿಸಿದ್ದೆನಾದುದರಿಂದಲೂ ಮೈಸೂರು ಕನ್ನಡ ರಾಜರ ಸಂಸ್ಥಾನವಾದುದರಿಂದಲೂ ಮತ್ತು ದಾರಿಯಲ್ಲಿ ವೀರ ಕೊಡಗರ ನಾಡ ಸೌಂದರ್ಯ ನೋಡ ಸಿಗುವುದರಿಂದಲೂ ಕೊನೆಕೊನೆಗೆ ನನ್ನ ಸ್ನೇಹಿತರಿಗಿಂತಲೂ ನನ್ನದೇ ಉತ್ಸಾಹ ಪ್ರೋತ್ಸಾಹಗಳು ಹೆಚ್ಚಾದುವು.

ಕನ್ನಡ ನಾಡು ನುಡಿಗಳ ಅಭಿಮಾನಿಯಾದ ನಾನು ಮೋಟರ್ ದಾರಿ ಉದ್ದಕ್ಕೂ ಎರಡೂ ಬದಿಗಳಲ್ಲಿ ಕಂಗೊಳಿಸುವ ಪ್ರಕೃತಿ ಸೌಂದರ್ಯದ ಸೊಬಗನ್ನು ನೋಡಿ ಅದನ್ನು ನನ್ನ ಸ್ನೇಹಿತರಿಗೆ ಕವಿತಾ ರೂಪದಲ್ಲಿ ಬಣ್ಣಿಸತೊಡಗಿದೆ. ಪುತ್ತೂರು ದಾಟಿದ ಮೇಲಂತೂ ನಿಬಿಡವಾಗಿ ಬೆಳೆದ ಅರಣ್ಯಗಳಲ್ಲಿನ ಪ್ರತಿಯೊಂದು ಮರ ಪೊದರುಗಳು ಅವುಗಳಲ್ಲಿನ ಜೀವಜಂತುಗಳೂ ಹಾಡುವ ಕೂಗುವ ಕನ್ನಡ ಧ್ವನಿಗಳಿಗೆ ತಾಳಹಾಕಿ ತಲೆಯಲ್ಲಾಡಿಸುವಂತೆ ತೋರಿತು. ನನ್ನಲ್ಲಿರುವ ಕವಿತಾ ಪ್ರತಿಭೆಯ ಭಾವನೆಯು ಉಕ್ಕೇರಿತು. ದೊಡ್ಡ ಮರಗಳನ್ನು ಸ್ತ್ರೀ ಸಹಜವಾದ ಸ್ವಭಾವದಿಂದ ಆಶ್ರಯಿಸಿದ ಲತೆಗಳೂ, ಸೂರ್ಯನ ಬಿಸಿಲಿನ ಸೇನೆಯ ತಾಪನನ್ನೂ, ವರುಣನಿಂದ ಕಳುಹಿಸಲ್ಪಟ್ಟ ಮಳೆ ರಾಶಿಯ ಹೊಡೆತವನ್ನೂ ದರ್ಪದಿಂದ ಎದುರಿಸಿ ನಿಂತಿರುವ ಎತ್ತರವಾದ ವೃಕ್ಷಗಳನ್ನೂ ಮಧ್ಯಮಧ್ಯದಲ್ಲಿ ಹಳದಿ ಹಸರು ಬಣ್ಣದ ಬಿಲ್ಲು ಅಂಬಿನಂತಿರುವ ಬಿದಿರು ರಾಶಿಗಳನ್ನೂ ನೋಡುವಾಗ ಕಾಳಿದಾಸನು ಇತ್ತ ಬಂದಿದ್ದರೆ ಇವನ್ನು ಹೇಗೆ ವರ್ಣಿಸಿಯಾನು ಎಂದು ನನಗನಿಸಿತು.

ಮತ್ತೆ ಮುಂದರಿಯುತ್ತಾ ಕೊಡಗರ ನಾಡನ್ನು ಪ್ರವೇಶಿಸಿದೆವು. ಹಾ! ಹಾ! ಮೂರು ಕನ್ನಡ ಪ್ರಾಂತ್ಯಗಳ ಸೊಬಗು ಒಟ್ಟುಗೂಡಿದ ಪ್ರದೇಶ. ಉಷ್ಣವಲಯದ ವನಸ್ಪತಿರಾಶಿಯು ಸೈನ್ಯಗಳು ಕಟ್ಟಿದ ಸಿಗಫ್ರೀಡ್ ಕೋಟೆಯೋ ಎಂಬಂತೆ ಪಶ್ಚಿಮ ಘಟ್ಟಗಳು ಹಸುರು ಕೆಂಪು ಬಣ್ಣದ ಹುಲ್ಲು ಉಡುಪಿನಿಂದ ಆಚ್ಛಾದಿತವಾಗಿದ್ದವು. ಹತ್ತು ಗಂಟೆಯ ಸೂರ್ಯನಿಂದ ಶುಭ್ರವಾಗಿದ್ದ ಆಕಾಶವು ಬಾಗಿರುವಲ್ಲಿ ಕಡಿದಾಗಿರುವ ನೇರಳೇ ಬಣ್ಣದಿಂದ ಅತೀ ದೂರದಲ್ಲಿ ಮುಸುಕಾಗಿ ಕಾಣುತ್ತಿರುವ ಪರ್ವತರಾಶಿಗಳ ಒಂದು ಸಾಲು ಫೋಲ್ವೆಟ್ಟಿನಂತಿದ್ದವು. ಅದರ ಎದುರಿಗೆ ಅತೀ ಹತ್ತಿರದಲ್ಲಿ ಕಾಣುತ್ತಿರುವ ಇತರ ಘಟ್ಟಗಳು-ಆನೆ ಬೆನ್ನಿನಂತೆಯೂ ಕೆಲವು ಕಡೆ ಒಂಟೆ ಬೆನ್ನಿನಂತೆಯೂ, ಕಾಣಿಸುತ್ತಿದ್ದವು. ಎರಡು ಬೆಟ್ಟಗಳು ಕೂಡುವಲ್ಲಿ ಬೆಳೆದ ಪರ್ವತ ವೃಕ್ಷಗಳು ದೂರದಿಂದ ಸೈನ್ಯ ಶಿಬಿರಗಳಂತಿದ್ದವು. ಆ ಜಲಪಾತಗಳು, ಆ ತೊರೆಗಳು, ಮತ್ತಾ ಹೂ ಮರ ಬಳ್ಳಿಗಳು, ಆ ಬಣ್ಣ ಬಣ್ಣದ ಹಕ್ಕಿಗಳು! ಅದೆಂತಹ ನೋಟ! ಮಡಿಕೇರಿ ಹತ್ತಿರ ಮುಟ್ಟಿದಾಗಂತೂ ನಾವೊಂದು ನಾಟಕ ಶಾಲೆಯಲ್ಲಿ ಕೂತಿರುವಂತೆಯೂ, ವಿವಿಧ ದೃಶ್ಯಗಳ ಬಣ್ಣ ಪರದೆಗಳು ನಮ್ಮೆದುರಿಗೆ ತೂಗಬಿಟ್ಟಂತೆಯೂ ಕಾಣಿಸಿತು. ಇನ್ನು ಆ ಸುರಶ್ರೇಷ್ಠರಬೀಡಾದ ಹಿಮಾಚಲವನ್ನು ಬೇರೆ ನೋಡಬೇಕೆ? ಅಲ್ಲಿನ ಹಿಮ ಆಚ್ಛಾದಿತ ಪರ್ವತಗಳ ಬದಲಿಗೆ ಇಲ್ಲಿ ಮಂಜು ಮುಸುಕಿದ ಬೆಟ್ಟ ಸಮೂಹಗಳು. ಅವುಗಳ ಶಿಖರಗಳು ತಮ್ಮ ಎದೆ ಭಾಗದಷ್ಟಕ್ಕೆ ಮುಸುಕಿಕೊಂಡ ಮಂಜಿನ ರಾಶಿಯ ಮೇಲ್ಭಾಗದಲ್ಲೇ ನಿರುವುದೆಂಬುದನ್ನು ನೋಡಿ ನಗುವಂತೆ ಬಿಸಿಲಿನ ಪ್ರಭೆಗೂ ನೆರಳಿಗೂ ಮನಮೋಹಕ ದಾಮಾಶಯದಲ್ಲಿ ಸೇರಿಸಿದ ಚಿತ್ರಕಾರನ ವರ್ಣ ಮಿಶ್ರಣ ಕೌಶಲ್ಯವೆಂಬಂತೆ ರಾರಾಜಿಸುತ್ತಿದ್ದುವು.

ಮಡಿಕೇರಿಯಂತೂ ಟಿಬೇಟಿನ ಲಾಮಾಗಳ ರಾಜಧಾನಿಯಾದ ಲಾಸಾ ನಗರದಂತೇ ನನಗೆ ಭಾಸವಾಯಿತು. ಗುಡ್ಡದ ಎತ್ತರಕ್ಕೂ, ತಗ್ಗಿನಲ್ಲೂ ಮಾರ್ಗಗಳು. ಮಾರ್ಗದ ಕೆಳಗೆ ಮಾರ್ಗಗಳು. ದೂರದಿಂದ ಈ ಮಾರ್ಗಗಳು ಯಾವುದೊ ಬಂಡೆಕಲ್ಲನ್ನು ಸುತ್ತಿಕೊಂಡಿರುವ ಹೆಬ್ಬಾವಿನಂತೆ ಒಂದರ ಮೇಲೆ ಒಂದು ಪದರಿನಂತೆ ಸುತ್ತಿಕೊಂಡಿದ್ದವು. ಮೇರು ಪರ್ವತವನ್ನು ಕ್ಷೀರ ಸಾಗರದಲ್ಲಿ ಕಡೆದಾಗ ದೇವ ದಾನವರು ಮಹಾಶೇಷನನ್ನು ಅದಕ್ಕೆ ಸುತ್ತಿದಾಗ ಹೇಗೆ ಕಾಣಿಸುತ್ತಿರುವುದೆಂಬುದನ್ನು ಚಿತ್ರಕಾರರು ವರ್ಣಿಸಿದರೊ ಅದು ನನ್ನ ಕವಿತಾ ಪೂರ್ಣ ಮನಸ್ಸಿಗೆ ಭಾವೋದ್ರೇಕಗೊಳಿಸಿದವು. ಹಸಿವು ಬಾಯಾರಿಕೆಗಳನ್ನು ನಾನು ಮರೆತುಬಿಟ್ಟೆ.

ಅಲ್ಲಿಂದ ಮುಂದೆ ಮೈಸೂರ್ ರಾಜ್ಯಕ್ಕೆ ನಮ್ಮ ಬಸ್ಸು ಹೊಕ್ಕಿತು. ಬೆಟ್ಟಸೀಮೆಯನ್ನು ಬಿಟ್ಟು ಬಯಲು ನಾಡಿನ ಹವೆಯು ನಮ್ಮನ್ನು ಬೆಚ್ಚಗಿರಿಸಿತು. ದಾರಿಯುದ್ದಕ್ಕೂ ಮರಗಳಲ್ಲಿ ವಾನರ ತಂಡಗಳು ಕುಣಿದಾಡುತಿದ್ದುವು. ಶ್ರೀ ರಾಮಚಂದ್ರನಿಗೆ ಸಹಕರಿಸಿದ ಸೇನೆಗಳು ಇಲ್ಲಿ ನೆಲೆಸಿದ್ದವೊ ಎಂದು ತೋರುವ ತೆರದಲ್ಲಿ ಕಪಿಗಳು ಆ ಆಧುನಿಕ ಗೇಸ್ ಮೋಟಾರು ರಥವು ಓಡುವಾಗಲೂ ಅಲಕ್ಷ್ಯದಿಂದ ಅತ್ತಿತ್ತ ಚಲಿಸುತಿದ್ದುವು.

ಮೈಸೂರು ನಗರವು ದೂರದಿಂದ ಕಾಣಿಸುತ್ತಲೇ ನಮ್ಮ ಮಿತ್ರ ವೃಂದವೆಲ್ಲವೂ ಕತ್ತು ಹೊರಗೆ ಹಾಕಿ ಆನಂದದಿಂದ ನಿರಪಯವಾಗಿ ಗುರಿ ಮುಟ್ಟಿಸಿದುದಕ್ಕೆ ದೂರದಲ್ಲಿ ಕಂಗೊಳಿಸುವ ಚಾಮುಂಡಿ ಬೆಟ್ಟಕ್ಕೆ ವಂದನೆ ಮಾಡಿದರು. ಮತ್ತೆ ಹತ್ತಿರ ಬರುತ್ತಲೇ ನಾಟಕದ ರಂಗಭೂಮಿಯ ಪರದೆ ಸಿನೇರಿಯಂತೆ ಭವ್ಯವಾದ ವಾದ ವಿವಿಧಾಕೃತಿಯ ಕಟ್ಟಡಗಳೂ, ಉಪವನಗಳೂ, ಅರಮನೆಗಳೂ, ಕಛೇರಿಗಳೂ, ವಿದ್ಯುದ್ದೀಪಲಂಕೃತವಾದ ಮಾರ್ಗಗಳು ಕಾಣಿಸಿದವು. ನಗರ ಮಧ್ಯಕ್ಕೆ ಮುಟ್ಟಿದೊಡನೆ ದಸರೆಗಾಗಿ ಶೃಂಗರಿಸಲ್ಪಟ್ಟ ಮೈಸೂರು ನಾಲ್ಕು ಸುತ್ತಲೂ ವಿವಾಹ ಮಂಟಪದಂತೆಯೋ, ಕಾಂಗ್ರೆಸ್ ನಗರದಂತೆಯೋ ಒಬ್ಬೊಬ್ಬರಿಗೆ ಒಂದೊಂದು ತರವಾಗಿ ಕಾಣಿತು.

ಪ್ರಾಚೀನ ಶಿಲ್ಪ ರಚನೆಯ ಆಧುನಿಕ ಕಟ್ಟಡಗಳು, ಆಧುನಿಕ ಕಾಂಕ್ರಿಟ್ ಶಿಲ್ಪ ಮಾದರಿಯ ಕಟ್ಟಡಾವಳಿಗಳು, ಮನೆಗಳು, ಶಾಲೆಗಳು, ಕಾಲೇಜುಗಳು, ಹೊಟೇಲುಗಳು, ಮಂದಿರಗಳು, ಸಾರ್ವಜನಿಕ ಕಟ್ಟಡಗಳು, ಗಡಿಯಾರ ಕಂಭ, ರಾಜಪುತ್ತಳಿಯ ಕಟ್ಟೆ, ಹಿಂದೂ ಮೊಗಲ್ ಕಟ್ಟಡ ಶಿಲ್ಪ ರೀತಿಯ, ಕೆಂಪು ಕಲ್ಲಿನ ಅರಮನೆ, ಕೋಟೆ, ದೇವಳಗಳು.

ನಾವೊಂದು ಶ್ರೇಷ್ಠ ತರಗತಿಯ ಭೋಜನಾಲಯದಲ್ಲಿ ನಮ್ಮ ವಸತಿ ಮಾಡಿದೆವು. ಎರಡು ಕೋಣೆಗಳಿಗೆ ದಿನಕ್ಕೆ ಹತ್ತು ರೂಪಾಯಿ. ಊಟಕ್ಕೊಂದಕ್ಕೆ ಹದಿನೆರಡಾಣೆ. ಆದರೆ ಬೇರೆ ಸ್ಥಳವಿಲ್ಲ. ಖರ್ಚಿನಲ್ಲಿ ಖರ್ಚು. ಆರಾಮವಾಗಿ ಉಳಕೊಳ್ಳಬಹುದಲ್ಲವೇ. ಎಂದು ನಾವು ಏಳು ದಿನಗಳ ಮಟ್ಟಿಗೆ ಅಲ್ಲಿ ಇದ್ದೆವು.

ಮರುದಿನ ನಾನು ಈಗ ಹೇಳಲಿರುವ ಘಟನೆ ನಡೆಯಿತು. ಅದು ಬಹಳ ಸಾರಸ್ಯವಾದುದು. ಆದರೂ ಕೆಲವು ದಿವಸಗಳ ತನಕ ನನ್ನನ್ನು ಅದು ಬಹಳ ತಳಮಳಗೊಳಿಸಿದ ಸಂಗತಿ.

ನನಗೆ ಬೆಳಿಗ್ಗೆ ಏಳುವ ಅಭ್ಯಾಸ. ನನ್ನ ಸ್ನೇಹಿತರೆಲ್ಲರೂ ಪ್ರಾತಃಕಾಲದ ಸಿಹಿ ನಿದ್ರೆಯ ರುಚಿಯನ್ನನುಭವಿಸುತ್ತಿರುವಾಗ ನಾನೆದ್ದು ನಿತ್ಯ ಕರ್ಮಗಳನ್ನು ತೀರಿಸಿ, ಹತ್ತಿರದ ಹೊಟೇಲೊಂದರಲ್ಲಿ ಉಪಹಾರ ಮಾಡಿ ನಮ್ಮ ಹೊಟೇಲ್ ಕೋಣೆಯ ಕಿಟಿಕಿ ಎದುರಿನ ಕುರ್ಚಿಯ ಮೇಲೆ ಕೂತು ಪೇಪರ್ ಓದತೊಡಗಿದೆ. ದಸರಾ ಸಮಯವಾದುದರಿಂದ ಮಾರ್ಗದಲ್ಲಿ ಎಂಟು ಗಂಟೆ ಹೊತ್ತಿಗೇ ಜನರು ತುಂಬುತಿದ್ದರು. ನನ್ನ ಸ್ನೇಹಿತರು ಒಬ್ಬೊಬ್ಬರಾಗಿ ಎದ್ದು ಉಪಾಹಾರ ತೆಗೆದುಕೊಳ್ಳಲು ಒಟ್ಟಿಗೆ ಹೋದರು. ನಾನು ಕೋಣೆಯಲ್ಲೇ ಕೂತೆ.

ನಮ್ಮ ಕೋಣೆಯ ಕಿಟಿಕಿ ಎದುರು ಒಬ್ಬ ವಕೀಲರ ಮನೆ. ಚಿಕ್ಕದಾಗಿದ್ದರೂ ಅಚ್ಚುಕಟ್ಟಾಗಿತ್ತು. ಮುಂದುಗಡೆ ಮಾರ್ಗಕ್ಕೆ ತಗಲಿಕೊಂಡು ಹೂ ಬಳ್ಳಿಗಳ ಚಿಕ್ಕ ತೋಟ. ತೋಟದಲ್ಲಿನ ಗಿಡಗಳು ಚಿಕ್ಕಚಿಕ್ಕವಾಗಿದ್ದುವರಿಂದ ಆ ಮನೆಯ ಒಂದು ಪಕ್ಕದಲ್ಲಿನ ವಿಶಾಲವಾದ ಕಿಟಿಕಿಯು ಮಾರ್ಗದಲ್ಲಿ ಕಾಣಿಸದಿದ್ದರೂ ನಾನು ಕೂತಲ್ಲಿಂದ ಸ್ಪಷ್ಟವಾಗಿ ಕಾಣಿಸುತಿತು.

ಆ ವಕೀಲರ ಮನೆಯ ಕಿಟಿಕಿಯೊಳಗೆ ಓರ್ವ ಸುಂದರ ತರುಣಿಯು ಕೂತಿದ್ದು ಹಾರ್ಮೋನಿಯಂ ಪೆಟ್ಟಿಗೆಯೊಂದರಿಂದ ಯಾವುದೋ ಒಂದು ರಾಗವನ್ನು ನುಡಿಸಲು ಅಭ್ಯಾಸಿಸುತಿದ್ದಳು. ಸರಿಯಾಗಿ ಆ ರಾಗವು ಗಟ್ಟಿಯಾಗದ್ದರಿಂದಲೋ ಏನೊ ಅವಳು ಮೇಲಿಂದ ಮೇಲೆ ಪಲ್ಲವಿಯಂತಿರುವ ಆ ರಾಗದ ಪ್ರಾರಂಭ ದಾಟಿಯನ್ನೇ ಸರಿಯಾಗಿ ನುಡಿಸಲು ಪ್ರಯತ್ನಿಸುತಿದ್ದಳು. ಮಧ್ಯಮಧ್ಯದಲ್ಲಿ ಪಕ್ಕದಲ್ಲಿಟ್ಟಿರುವ ಚಿಕ್ಕ ನೋಟ್ ಪುಸ್ತಕವನ್ನು ಇಣಿಕಿ ನೋಡುತ್ತಾ ಮತ್ತೆ ಬಾಯಿಯಿಂದ ಸ್ವರಗಳನ್ನು ಹಾಕುತ್ತಾ ಹಾಡುತ್ತಲೂ ಬಾರಿಸುತ್ತಲೂ ಇದ್ದಳು. ಹಾರ್ಮೋನಿಯಮ್ಮಿನ ಗಾಳಿ ತಿದಿಯನ್ನು ಒತ್ತಲು ಅವಳು ಉದ್ದಕ್ಕೆ ನೀಡಿದ ಎಡಗೈ ತೋಳು ಅವಳ ತುಂಬುತಾರುಣ್ಯದ ಚೈತನ್ಯವನ್ನು ಸೂಸುತಿದ್ದು ಆರೋಗ್ಯಕರವಾದ ಪುಷ್ಟಿಯಿಂದ ಹೊಳೆಯುವಂತಿದ್ದುವು. ರಾಗದ ಪಟ್ಟಿಗಳ ಮೇಲೆ ಚಲಿಸುವ ಅವಳ ಕೋಮಲ ಬೆರಳುಗಳು ಲಲಿತ ಕಲೆಗೆ ಹೇಳಿದಂತಿದ್ದುವು. ಅಪಸ್ವರ ಬಂದಾಗ ಅವಳು ಒಂದು ಸಲಕ್ಕೆ ಅಸಹ್ಯ ಪಟ್ಟುಕೊಂಡವಳಂತೆ ತನ್ನ ಅಚಾತುರ್ಯಕ್ಕೆ ಧಿಕ್ಕಾರ ಸೂಚಿಸಿ ತಿರುಪಿಕೊಳ್ಳುವ ತುಟಿ, ಕೊರಳು ಗಲ್ಲಗಳು ಅತ್ಯಾಕರ್ಷಕ ಭಾವವನ್ನುಂಟುಮಾಡುತಿದ್ದವು.

ಅಷ್ಟು ಹೊತ್ತಿಗೆ ಹೇಟುಬೂಟು ಧರಿಸಿದ ಓರ್ವ ಯುವಕನು ಒಂದು ಕೈಚೀಲ ಹಿಡಕೊಂಡು ಮಾರ್ಗದ ಕಡೆಯಿಂದ ಬಂದು ವಕೀಲರ ಮನೆಯನ್ನು ಪ್ರವೇಶಿಸಿ ನೇರವಾಗಿ ಆ ತರುಣಿಯ ಕೊಠಡಿಗೆ ಹೊಕ್ಕನು. ಹಿಂದುಮುಂದು ನೋಡದೆ ಆತನು ಬಾಗಿಲ ಕದಗಳನ್ನು ಹಾಕಿದ್ದು ನನಗೆ ಕಂಡುಬಂತು. ನನ್ನ ಕೌತುಕವು ಹೆಚ್ಚಿತು. ಯುವಕನನ್ನು ನೋಡಿದ ಕೂಡಲೇ ತರುಣಿಯು 'ಮೇಸ್ಟ್ರಿಗೆ ನಮಸ್ಕಾರ' ಎಂದಳು. ಅವನೆಂದ: 'ಕಮಲಾ ಸಂಗೀತ ಎಲ್ಲಿ ತನಕ ಗಟ್ಟಿ ಮಾಡಿದೆ?' ಅವಳೆಂದಳು: 'ಏನು ಸಂಗೀತವೋ, ಆ ಹಾಳು ರಾಗವೊಂದು ಇನ್ನೂ ಚೆನ್ನಾಗಿ ಬರುತ್ತಿಲ್ಲ.' ಅಷ್ಟಕ್ಕೆ ತರುಣನು ಅವಳ ಬಳಿಗೆಹೋಗಿ ಅವಳನ್ನು ಬಿಗಿಯಪ್ಪಿದನು ಮತ್ತೆ ನಾಲ್ಕೈದು ಸಲ ಚುಂಬಿಸಿ ಚುಂಬಿಸಿ ಗಟ್ಟಿಯಾಗಿ 'ಕಮಲಾ ನಿನ್ನೆಯ ಇಂಗ್ಲಿಷ್ ಪಾಠಗಳನ್ನು ಸರಿಯಾಗಿ ಕಲಿಯಲಿಲ್ಲ. ಇವತ್ತು ಅದನ್ನು ಚೆನ್ನಾಗಿ ಅಭ್ಯಾಸ

(೧೧ನೇ ಪುಟಕ್ಕೆ ಮುಂದುವರಿದಿದೆ.)

ಹೊಸ ವರುಷದ ಶುಭಾಶಂಸೆ

ನಮ್ಮ ಆಶ್ರಯದಾತರಿಗೂ ಗೆಳೆಯರಿಗೂ ಹೊಸ ವರುಷವು ಆನಂದ-ಸಮೃದ್ಧಿಗಳನ್ನು ತರಲೆಂದು ಕೋರುವಾಗ, ಅವರಿಗೆ ಸತ್ಸೇವೆ ಸಲಿಸಲನುವಾದ ಅವರ ಸಹಕಾರ ಮತ್ತು ಸ್ನೇಹಮಯ ಸತ್ಯ ಸಹಾಯಕ್ಕಾಗಿ ಅವರಿಗೆ ಅಭಿವಂದನೆಗಳನ್ನು ಸಲಿಸುವೆವು.

ಮುಂಬರುವ ವರುಷದಲ್ಲಿ ನಮ್ಮೊಳಗಿನ ಸಂಬಂಧವು ಇನ್ನೂ ಬಲಗೊಂಡು, ಇಂದಿನ ಸಂಬಂಧವು ಅಖಂಡವಾಗುವಂತಹ ಹೆಚ್ಚಿನ ಸಂದರ್ಭಗಳನ್ನಿದಿರು ನೋಡುತ್ತಿರುವೆವು.

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್

Canara Bank Ltd.

(Incorporated in British India Liabilitay of members Limited.)

ಪ್ರಚಲಿತ ಸಮಾಚಾರಗಳು

ಅಮೇರಿಕಾದ ಡಂಬಾರ್ಟನ್ ಓಕ್ಸ್ ಎಂಬಲ್ಲಿ ಇನ್ನೊಂದು ರಾಷ್ಟ್ರಮಂಡಳವನ್ನು ನಿರೂಪಿಸುವ ಕುರಿತು ದೊಡ್ಡದೊಂದು ಪರಿಷತ್ತು ನಡೆದು, ರಚನೆಯಾಗಲಿರುವ ನೂತನ ಮಂಡಳದ ನಿಯಮಗಳ ಕುರಿತು ಬ್ರಿಟನು, ರಷ್ಯಾ, ಅಮೇರಿಕ, ಚೀನಾ ರಾಷ್ಟ್ರಗಳಿಂದ ಸಲಹೆ ಸೂಚನೆಗಳ ಪಟ್ಟಿಗಳು ಮುಂದೆ ಬಂದಿದ್ದವು. ಈ ಪಟ್ಟಿಗಳಲ್ಲಿ ಚೀನಿಯರ ಪಟ್ಟಿಗೆ ಅದು ಹಿಂದುಳಿದ ರಾಷ್ಟ್ರದಿಂದ ಬಂದುದೆಂದು ಅದಕ್ಕೆ ಲಕ್ಷ್ಯವು ದೊರಕಲಿಲ್ಲ. ರಷ್ಯ, ಬ್ರಿಟನು, ಅಮೇರಿಕಾ, ಸದ್ಯಕ್ಕೆ ಈ ಮೂವರೊಡನೆ ಪ್ರಾಬಲ್ಯವಿದ್ದುದರಿಂದ, ನೂತನ ರಾಷ್ಟ್ರ ಮಂಡಳದ ಕುರಿತು ಅವರು ಹೇಳಿದ್ದೇ ನ್ಯಾಯವಾಗಬಹುದು.

ಈ ಪರಿಷತ್ತಿನ ಕುರಿತು ಪ್ರಸ್ತಾಪಿಸಿ ಅಮೇರಿಕಾದ ಪ್ರಸಿದ್ಧ ಪತ್ರಿಕಾ ವ್ಯವಸಾಯಿಗಳಾದ ಲೂಯಿ ಫಿಶರರು, ಒಂದು ಲೇಖನವನ್ನು ಬರೆದಿರುವರು. ಚಿಕ್ಕದರಲ್ಲಿ ಅದರ ಅಭಿಪ್ರಾಯವಿಷ್ಟೆ:

ಯುದ್ಧೋತ್ತರದಲ್ಲಿ ಯಾವತ್ತಾದರೂ ಒಂದು ರಾಷ್ಟ್ರದಿಂದ ಲೋಕಶಾಂತಿಯು ಭಂಗವಾದರೆ ಅದರ ಮೇಲೆ ದಂಡೆತ್ತಿ ಹೋಗಿ ಅದಕ್ಕೆ ಬುದ್ಧಿ ಪಾಠಮಾಡಬೇಕು. ಆದರೆ ಈ ನಿರ್ಣಯಕ್ಕೆ ತ್ರಿರಾಷ್ಟ್ರಗಳಲ್ಲಿ ಯಾವದಾದರೂ ಒಂದು ರಾಷ್ಟ್ರವು ಅದು ಬೇಡವೆಂದು ಹೇಳಿದರೆ, ಆಗ ಆ ರಾಷ್ಟ್ರದ ಮೇಲೆ ಶಸ್ತ್ರವೆತ್ತಬಾರದು—ಈ ಅಭಿಪ್ರಾಯವಿರುವ ನಿಯಮವೊಂದು ಅಮೇರಿಕದ ಕಡೆಯಿಂದ ಸೂಚಿಸಲಾಗಿ ಅದಕ್ಕೆ ರಷ್ಯಾ, ಬ್ರಿಟನುಗಳ ಅನುಮೋದನೆಯು ದೊರಕಿರುತ್ತದೆ. ಈ ನಿಯಮದಿಂದ ಒಂದು ವೇಳೆ ರಷ್ಯವು ಶಾಂತಿ ಭಂಗ ಮಾಡಿದರೆ, ಅದರ ಮೇಲೆ ಇತರರು ಶಸ್ತ್ರವೆತ್ತದಂತೆ ಮಾಡಲು ಅದಕ್ಕೆ ಅವಕಾಶ ದೊರಕಿದಂತಾಗುತ್ತದೆ.

ಅಂದರೆ ನೂತನವಾಗಿ ಸ್ಥಾಪನೆಯಾಗಲಿರುವ ಈ ರಾಷ್ಟ್ರ ಮಂಡಳದಿಂದ ಹೆಚ್ಚಿನದನ್ನು ಬಯಸಿದರೆ ಲೋಕವು ಮೋಸಹೋಗಬೇಕಾಗುವುದು-ಈ ಮಂಡಳವು ತ್ರಿರಾಷ್ಟ್ರಗಳ ಒಪ್ಪಂದದ ಕೂಡುವಿಕೆಯಲ್ಲದೆ, ಅದು ಬೇರೆ ಅಲ್ಲ ಎಂದು ಅವರ ಅಭಿಪ್ರಾಯ.

ಸದ್ಯಕ್ಕೆ ಪ್ರಾಬಲ್ಯವು ರಷ್ಯಾ, ಬ್ರಿಟನು ಅಮೇರಿಕ ಕೈಗಳಲ್ಲಿ ಕೇಂದ್ರಿಕೃತವಾಗಿರುವುದರಿಂದ ನೂತನ ರಾಷ್ಟ್ರಮಂಡಳವು ಈ ಮೂರು ರಾಷ್ಟ್ರ ಅಧಿಕಾರ ನಡೆಯುವ ತ್ರಿರಾಷ್ಟ್ರ ಮಂಡಳವಾಗುವುದು.

ಈ ಮಹಾಯುದ್ಧದಿಂದ ಇಟೆಲಿ, ಜರ್ಮನಿ, ಫ್ರಾನ್ಸ್ ರಾಷ್ಟ್ರಗಳ ಪ್ರಾಬಲ್ಯ ನಾಶವಾಯಿತು. ಈ ಮೊದಲು ಜಗತ್ತಿನ ಅಂಕಿತಕ್ಕಾಗಿ ಪೈಪೋಟಿ ನಡೆಯಿಸುವವರ ಸಂಖ್ಯೆಯು ಈ ಯುದ್ಧದಿಂದ ಬರೇ ಮೂರಕ್ಕೆ ಇಳಿಸಿದಂತಾಯಿಗಿದೆ.

ಡಂಬಾರ್ಟನ್ ಓಕ್ಸ ಪರಿಷತ್ತಿನಲ್ಲಿ ಜರ್ಮನಿಯನ್ನು ಮತ್ತು ಜಪಾನನ್ನು ತಬ್ಬಿಡುವ ಕುರಿತು ಮಹಾ ಯೋಜನೆಯೊಂದು ಸಿದ್ಧವಾಗಿದೆ.

ಲೋಕಶಾಂತಿಯನ್ನು ಕೆಡಿಸಿದ ಈ ರಾಷ್ಟ್ರಗಳಿಗೆ ತಕ್ಕ ಪ್ರಾಯಶ್ಚಿತ್ತವಾಗಬೇಕು ನಿಜ. ಆದರೆ ಲೋಕಶಾಂತಿಯ ಕುರಿತು ತ್ರಿರಾಷ್ಟ್ರಗಳು ಇನ್ನೂ ವಿಶಾಲ ದೃಷ್ಟಿಯನ್ನು ಹೊಂದದಿದ್ದರೆ, ಆಗ ಯುದ್ಧ ಮುಗಿದು ಒಪ್ಪಂದ ಪತ್ರಗಳಿಗೆ ಸಹಿಯಾದ ಮರುದಿನವೇ ಕಲಹಕ್ಕೆ ಪ್ರಾರಂಭವಾಗಬಹುದು.

° ° ° °

ಅಕ್ಯಾಬ್ ಈಗ ಜಪಾನಿಯರಿಂದ ವಿಮುಕ್ತಗೊಳಿಸಲ್ಪಟ್ಟ ಫಲವಾಗಿ, ಅಲ್ಲಿ ಹೆಚ್ಚಿಗೆಯಾಗಿ ಉಳಿಯುವ ಅಕ್ಕಿಯನ್ನು ಹಿಂದೂದೇಶಕ್ಕೆ ರಫ್ತು ಮಾಡುವ ವ್ಯವಸ್ಥೆಗಳಾಗಬಹುದೆಂದು ನಿರೀಕ್ಷೆಯಿದೆ.

° ° ° °

ಗ್ರೀಸಿನ ದುರಂತ, ಪೋಲೇಂಡಿನ ಸಮಸ್ಯೆ, ಫ್ರಾನ್ಸು, ಬೆಲ್ಜಿಯಂ, ಹಾಲ್ಲೆಂಡ್ ಮೊದಲಾದ ದೇಶಗಳಲ್ಲಿ ರಾಜಕೀಯ ಗದ್ದಲ, ಹಿಟ್ಲರನ ಮರುದಾಳಿ ಈ ಘಟನೆಗಳಿಂದ ಮಿತ್ರರ ವಿಜಯದ ದಿನವು ಮುಂದೆ ಹಾಕಲ್ಪಟ್ಟಿದೆ ಎಂದು ತಿಳಿಯಬೇಕು. ಈ ಕಾರಣಗಳಿಂದ ಮಿತ್ರರೊಳಗೆ ಒಡಕು ಉಂಟಾಗುವುದೇ ಎಂಬುದೊಂದು ಪ್ರಶ್ನೆ?

ಸದ್ಯದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಮುಂದಿನ ಕಾರ್ಯಸಿಯೋಜನೆ ಬಗ್ಗೆ ತ್ರಿರಾಷ್ಟ್ರಗಳ ನಾಯಕರು ಈಗ ಕೂಡುವ ಅವಶ್ಯವು ಉಂಟಾಗಿದೆ. ಆದರೆ ಮಿಲಿಟರಿ ಕಾರ್ಯಗಳಲ್ಲಿ ಮಗ್ನನಾದ ಸ್ಟೇಲಿನನಿಗೆ ಬಿಡುವಿಲ್ಲವೆಂದು ತಿಳಿದು ಬಂದಿದೆ. ತ್ರಿರಾಷ್ಟ್ರಗಳ ನಾಯಕರು ಕೂಡುವ ಬದಲಾಗಿ, ತ್ರಿರಾಷ್ಟ್ರಗಳ ಬಹೀರ್ ವ್ಯವಹಾರ ಕಾರ್ಯದರ್ಶಿಗಳಾದ, ಎಡೆನ್, ಸ್ಟೆಟಿಸನ್ ಮತ್ತು ಮೊಲೊಟೋವರು ಕೂಡಿಬರಬಹುದೆಂದು ಬಲವಾದ ನಿರೀಕ್ಷೆಗಳಿವೆ. ಈ ಮೂವರು ಕಾರ್ಯದರ್ಶಿಗಳ ಕೂಡುವಿಕೆಯು ಉತ್ತಮ ಫಲಕಾರಿಯಾದರೆ ನಂತರ ತ್ರಿರಾಷ್ಟ್ರಗಳ ಮುಂದಾಳುಗಳು ಕೂಡಿಬರಬಹುದಂತೆ.

ಯುದ್ಧವು ಬೇಗನೆ ಮುಗಿಯುವುದು, ನಂತರ ಹಾಯಾಗಿ ಕುಳಿತುಕೊಳ್ಳಬಹುದೆಂಬ ಆಶಯಗಳು ಬ್ರಿಟನಿನ ಜನರಲ್ಲಿದ್ದವು. ಆದರೆ ಯುದ್ಧ ಮುಗಿದು ವಿಶ್ರಾಂತಿಯ ಬದಲಾಗಿ, ಮೇಲಿನ ಪರಿಸ್ಥಿತಿಯಿಂದ ಅವರು ವಿಜಯಕ್ಕಾಗಿ, ಇನ್ನಷ್ಟು ಯಾತನೆಗಳನ್ನು ಅನುಭವಿಸಬೇಕಾಗಿ ಬಂದಿದೆ. ಪಶ್ಚಿಮ ರಂಗದಲ್ಲಿ ಜರ್ಮನರು ತೋರಿಸಿದ ಚೇತನಕ್ಕೆ ವಿರೋಧವಾಗಿ ಮಿತ್ರರಕಡೆಯಿಂದ ಇನ್ನೂ ಮಹತ್ತರ ಯತ್ನಗಳು ನಡೆಯಬೇಕಾಗಿ ಬಂದಿದೆ.

° ° ° °

ಬ್ರಿಟಿಷ್ ಪ್ರಭುತ್ವವು ಸದ್ಯದ ಈ ಯುದ್ಧದಲ್ಲಿ ತನ್ನ ಸ್ವರಕ್ಷಣೆಯನ್ನೆ ಧ್ಯೇಯವಾಗಿಟ್ಟು ವರ್ತಿಸುವ ಹಾಗೆ ಸ್ಟೇಲಿನನು ಚರ್ಚಿಲ್ಲರನ್ನು ಅನ್ವಯಿಸಿ ನಡೆಯುತ್ತಿರುವನು. ಸೋವಿಯಟ್ ಸೇನೆಗಳಿಂದ ವಿಮುಕ್ತಗೊಳಿಸಲಾದ ರಾಷ್ಟ್ರಗಳ ಸರಕಾರ ಮಂಡಳಗಳು, ಕೆಂಪು ವರ್ಣದವುಗಳಾಗಬೇಕೆಂದು ಆತನ ಧೋರಣವು.

° ° ° °

ಮಿಲಿಟರಿ ಪ್ರವೀಣ ವೈಸ್ರಾಯ ವೆವೆಲ್ಲರು ಮತ್ತೊಮ್ಮೆ ಯುದ್ಧರಂಗಕ್ಕೆ ತೆರಳಬಹುದಾದ ಪ್ರಸಂಗವು ಬರಬಹುದೆಂದು ಊಹೆಗಳಿವೆ. ಹಿಂದೂದೇಶದಿಂದ ತೆರಳುವ ಮೊದಲು, ಇಲ್ಲಿನ ರಾಜಕೀಯ ಬಿಕ್ಕಟ್ಟನ್ನು ನಿವಾರಿಸಿ, ಕೇಂದ್ರದಲ್ಲೂ, ಪ್ರಾಂತ್ಯಗಳಲ್ಲೂ ಸರ್ವಜನ ಮಾನ್ಯ ಸರಕಾರಗಳನ್ನು ಸ್ಥಾಪಿಸಿ, ಜಪಾನಿಗೆ ವಿರೋಧವಾಗಿ ಸದ್ಯದಲ್ಲೆ ಹೊರಡಲಿರುವ ಮಹಾದಾಳಿಗೆ ಒಳ್ಳೆ ಅನುಕೂಲ ವಾತಾರಣವನ್ನು ಉಂಟುಮಾಡುವ ಉದ್ದೇಶದಿಂದ, ಅವರೂ ಕೆಲವು ಭಾರತೀಯ ಮುಂದಾಳುಗಳು ರಹಸ್ಯದಲ್ಲಿ ಯತ್ನಿಸುತ್ತಿರುವ ಕುರಿತು ಒಂದು ವಾರ್ತೆಯಿದೆ. ಶ್ರೀ. ಭುಲಾಭಾಯಿ ದೇಸಾಯಿಯವರು ವೈಸ್ರಾಯರ ಬೇಟಿ ಮಾಡಿದ್ದೂ ನಂತರ ಅವರು, ಸರದಾರ್ ಪಟೇಲರನ್ನು ಕಾಣಲು ಅಹಮ್ಮದಾಬಾದಿಗೆ ತೆರಳಿದರು. ಈ ಪ್ರಸಂಗದಲ್ಲೆ ಈ ಚಟುವಟಿಕೆಗಳು ನಡೆದಿರಬೇಕೆಂದು ಊಹೆಗಳಿವೆ.

ಲೀಗು ಅಧಿಕಾರದಲ್ಲಿರುವ ಪ್ರಾಂತ್ಯಗಳೆಲ್ಲಾ ಲೀಗಿನ ಸ್ಥಿತಿಯು ನೆಟ್ಟಗಿರುವುದಿಲ್ಲ. ಬಿಕ್ಕಟ್ಟು ಪರಿಹಾರವಾದರೆ, ಸೂರ್ಯನ ಆಗಮನದೊಂದಿಗೆ ಇಬ್ಬನಿಯು ಮಾಯವಾಗುವಂತೆ, ಲೀಗಿನ ಅಧಿಕಾರವು ಕರಗಿ ಹೋಗುವುದು ಖಂಡಿತ. ಯಾವ ಪ್ರಾಂತ್ಯದಲ್ಲೂ ಲೀಗ್ ಮಂತ್ರಿ ಮಂಡಳಗಳಿಗೆ ಭದ್ರತೆಯು ಇರುವುದಿಲ್ಲ.

° ° ° °

"ನಮ್ಮೊಡನೆ ವ್ಯಾಪಾರ ಸಂಬಂಧ ಒಂದು ಒಪ್ಪಂದಮಾಡಿಕೊಳ್ಳಲು ೧೯೩೯ರಲ್ಲೆ ಅಮೆರಿಕವು ಸಿದ್ಧವಿತ್ತು; ಈ ಒಪ್ಪಂದದಿಂದ ಹಿಂದೂದೇಶದ ವ್ಯಾಪಾರಿಗಳಿಗಿರುವ ಅನೇಕ ಕೊರತೆಗಳ ನಿವಾರಣೆಯಾಗುತಿತ್ತು; ಈ ಒಪ್ಪಂದದಿಂದ ದೇಶಕ್ಕೆ ಮಹದುಪಕಾರವಾಗುತಿತ್ತು; ದೇಶಕ್ಕೆ ಒಂದು ವ್ಯಕ್ತಿತ್ವವು ಬರುತಿತ್ತು; ಆದರೆ ಇಂಡಿಯಾ ಸರಕಾರವು ಅಮೇರಿಕ-ಒಪ್ಪಂದಕ್ಕೆ ಈ ಸಮಯವು ಸರಿಯಲ್ಲ ಎಂದು ಬಿಟ್ಟಿತು." ಇದು ಅಮೆರಿಕಾದ ಬ್ರೆಟನ್‌ವುಡ್ಸ್‌ನಲ್ಲಿ ನಡೆದ ವಾಣಿಜ್ಯ ಪರಿಷತ್ತಿನಲ್ಲಿ ಭಾಗವಹಿಸಿ ಹಿಂತೆರಳಿದ ಸರ್ ಚುನಿಲಾಲ್ ಮೆಹತಾರವರ ಅಭಿಪ್ರಾಯವು.

ಅಮೆರಿಕಕ್ಕೆ ಹಿಂದೂದೇಶದೊಡನೆ ಸಹಕರಿಸಲು ಇಚ್ಛೆಯು ಇದೆ. ಹಿಂದೀಯರಿಗೆ ಅಲ್ಲಿರುವ ಅನೇಕ ತೊಂದರೆಗಳನ್ನು ನಿವಾರಿಸಿ, ಅಮೆರಿಕನ್‌ರಿಗೆ ನಮ ದೇಶದಲ್ಲಿ ದೊರಕುವ ತರದಲ್ಲೇ ಅಲ್ಲಿ ಭಾರತೀಯರಿಗೆ ಅನುಕೂಲಗಳನ್ನು ಒದಗಿಸುವ ಶಾಸನಕ್ರಮವನ್ನು ಮಾಡುವ ಉದ್ದಿಶ್ಯವು ಅಮೆರಿಕನ್ ಕಾಂಗ್ರೆಸ್ಸಿಗಿತ್ತು.

ಅಮೆರಿಕಾ-ಇಂಡಿಯಾ ಸೌಹಾರ್ದ ಸಮ್ಮಿಲನ ಉಂಟಾಗಲು ಅಡ್ಡಿಗಳು ತುಂಬಾಯಿವೆ. ಹಿಂದೀಯ ಕಾರಣದ ಕುರಿತು ಅಲ್ಲಿ ಪ್ರಚಾರವಾಗುವ ಕುರಿತು ತುಂಬಾ ತಡೆಗಳಿವೆ. ಶ್ರೀ. ವಿಜಯಲಕ್ಷ್ಮೀ ಪಂಡಿತರಿಗೆ ಅಧ್ಯಕ್ಷ ರೂಸ್‌ವೆಲ್ಟರ ಪತ್ನಿಯರನ್ನು ಬೇಟಿಗೆ ಅವಕಾಶ ಮಾಡದೆಯಿದ್ದುದು ಈ ಕುರಿತು ಒಂದು ದೃಷ್ಟಾಂತವು.

ಕಳೆದ ಮಹಾಯುದ್ಧದಲ್ಲಿ ಅಮೆರಿಕದ ಸಹಾಯದಿಂದಲೇ ವಿಜಯವು ಲಭಿಸಿದುದು. ಅಂದು ನಡೆದ ಒಪ್ಪಂದದಲ್ಲಿ ಅಂದಿನ ಅಮೇರಿಕದ ಅಧ್ಯಕ್ಷ ವಿಲ್ಸನ್ನರಿಗೆ ಹೆಚ್ಚಿನ ಕೈವಾಡವಿತ್ತು. ಇನ್ನೊಂದು ಯುದ್ಧವನ್ನು ತಡೆಯುವ ಭಾರವು ಅವರ ಮೇಲಿತ್ತು. ಆದರೆ ಅವರು ದುಡುಕಿದರು. ಅಮೆರಿಕವು ಯುರೋಪ ಯುದ್ಧರಂಗವನ್ನು ಪ್ರವೇಶಿಸಿ, ಮಹತ್ಕಾರ್ಯಗಳನ್ನು ಮಾತ್ರ ಸಾಧಿಸಿಬಿಟ್ಟಿತು. ಆದರೆ ಶಾಂತಿ ಸಾಧನೆಯಲ್ಲಿ ಯಶಸ್ವಿಯಾಗುವ ಒಪ್ಪಂದದ ಕುರಿತು ಅವರ ನಿರ್ಲಕ್ಷ್ಯವಾಯಿತು. ಪರಿಣಾಮ, ಅತ್ಯಂತ ಭೀಕರವಾದ ಈಗಿನ ಮಹಾಯುದ್ಧ. ವಿಲ್ಸನ್‌ರಿಗೆ ಬುದ್ಧಿ ಭ್ರಮಣವಾಯಿತು.

ಅಧ್ಯಕ್ಷ ರೂಸ್‌ವೆಲ್ಟರು, ಅಧ್ಯಕ್ಷ ವಿಲ್ಸನ್‌ರಾಗುವರೆ. ಪ್ರಜಾಪ್ರಭುತ್ವವಾದ, ಸ್ವಾತಂತ್ರ್ಯ ನೀತಿ ಅಮೆರಿಕಾದ ಜೀವಾಳವಾಗಿದ್ದರೂ, ಈ ನೀತಿಯನ್ನು ಎತ್ತಿ ಹಿಡಿಯುವ ಬಲವಾದ ಯತ್ನಗಳು ಸದ್ಯ ರೂಸ್‌ವೆಲ್ಟರಿಂದ ಆಗುತ್ತಿಲ್ಲ.

° ° ° °

ನೀರಿನ ಕೊರತೆಯಿಂದ ಆಸ್ಟ್ರೇಲಿಯದ ಗೋದಿ ಪಸಲು ಕಡಿಮೆಯಾಗಿದೆ ಎಂದು ತಿಳಿದುಬಂದಿದೆ. ಈ ಕಾರಣದಿಂದ ಹಿಂದೂದೇಶಕ್ಕೆ ಈ ತನಕ ಬರುತ್ತಿರುವ ಆಸ್ಟ್ರೇಲಿಯದ ಗೋದಿಯು ಕಡಿಮೆಯಾಗಿ, ನಮಗಿನ್ನು ಕೆನಡಾದಿಂದ ಗೋದಿಯು ಬರಬಹುದು.

° ° ° °

ಯುದ್ಧೋತ್ತರದಲ್ಲಿ ಲಂಡನಿನಲ್ಲಿರುವಂತೆ ಮುಂಬ್ಯಾಯಲ್ಲೂ ತುರಂಗ ರೈಲ್ವೆ ಲ್ಯಾನು ಹಾಕುವ ಕುರಿತು ಸೂಚನೆಗಳಾಗಿವೆ.

° ° ° °

ಚೀನಾದಲ್ಲಿ ಸ್ಥಿತಿಯು ನೆಟ್ಟಗಿಲ್ಲ. ಡಾ. ಸನ್ ಯಾಟ್‌ಸೆನ್‌ರ ಪ್ರಜಾಪ್ರಭುತ್ವವಾದಿ ಆದರ್ಶಗಳಿಗೆ ಚಿಯಾಂಗರ ಕೌಮಿಂಗ್‌ಟಾಂಗ್ ಸರಕಾರದಲ್ಲಿ ಅವಕಾಶವಿಲ್ಲ. ಈ ಕೌಮಿಂಗ್‌ಟಾಂಗ್ ಸರ

(೮ನೇ ಪುಟಕ್ಕೆ ಮುಂದುವರಿದಿದೆ)



ಹೊಸ ಟೇಂಕು

ಈ ಮಿತ್ರರು ಉಪಯೋಗಿಸುವ ನವೀನ ಅಸ್ತ್ರ. ಫ್ಲೈಲ್ ಟೇಂಕ್ ಎಂದು ಇದರ ಹೆಸರು. ಸಿಡಿಮದ್ದುಗಳ ಹೊಡೆತವನ್ನು ತಡೆಯುವ ಕವಚವು ಇದಕ್ಕೆ ಹೊದಿಸಿದೆ. ನೆಲ ಸುರಂಗಗಳನ್ನು ಇದರಲ್ಲಿನ ಮುಂದೆ ನೀಡಿಕೊಳ್ಳುವ ಸರಪಳಿ ಆಕಾರದ ಉಪಕರಣವು ಸಿಡಿದುಹಾಕುವುದು.

3ನೇ ಮಹಾ ಯುದ್ಧವು ತಡೆಯಲ್ಪಡಬೇಕಾದರೆ "ವಾರ್ತ ಸ್ವಾತಂತ್ರ್ಯ"ವು ಪ್ರತಿರಾಷ್ಟ್ರದಲ್ಲಿರಬೇಕು

[ವಾರ್ತೆಗಳು ಇರುತಿದ್ದ ಹಾಗೆ, ಯಾವತ್ತು ಸೋಗಿಲ್ಲದೆ, ಜಗತ್ತಿನಲ್ಲಿ ಪ್ರಚಾರವಾಗದ ವ್ಯವಸ್ಥೆಯಾದರೆ ಮಾತ್ರ–೩ನೇ ಯುದ್ಧವು ಉಂಟಾಗದು.]

ಒಂದನೆ ಮಹಾಯುದ್ಧದ ಮೊದಲು ಜರ್ಮನಿಯ ಪ್ರಾಮುಖ್ಯ ವಾರ್ತಾಪ್ರಸಾರಕ ಸಂಸ್ಥೆಯು ಪ್ರಸಿದ್ಧ ಬೇಂಕರರಾದ ರೊತ್ಸ್‌ಚ್ಯಾಲ್ಡರ ಅಧೀನದಲ್ಲಿದ್ದು, ರೊತ್ಸ್‌ಚ್ಯಾಲ್ಡರು ಕೈಸರನ ಬೇಂಕರರು ಆಗಿದ್ದುದರ ಪರಿಣಾಮವಾಗಿ, ಅದರ ಮೇಲೆ ಕೈಸರನಿಗೆ ಅತ್ಯಂತ ಬಲವಾದ ಹಿಡಿತವು ದೊರಕಿತ್ತು; ಕೈಸರನಿಗೆ ಸರಿತೋರಿದ ವಾರ್ತೆಗಳೇ ಜರ್ಮನಿಯೊಳಗೆ ಪ್ರಕಟವಾಗುತಿದ್ದವು. ಈ ಅನುಕೂಲದಿಂದ ಕೈಸರನು ಜರ್ಮನ್ ಜನವರ್ಗವನ್ನು ತನ್ನ ಮಹಾತ್ವಾಕಾಂಕ್ಷೆಯನ್ನು ಸಾಧಿಸುವ ಯುದ್ಧದಲ್ಲಿ ಧುಮುಕುವಂತೆ ಮಾಡಿದ್ದನು. ಅಂದು ಕೈಸರನಿಗೆ ನೆರವಾದ 'ವೂಲ್ಫ' ವಾರ್ತಾ ಸಂಸ್ಥೆಯಂತೆ ಹಿಟ್ಲರನಿಗೆ ಡಿ.ಎನ್.ಬಿ. ಎಂಬ ವಾರ್ತಾ ಸಂಸ್ಥೆಯು ದೊರೆಯಿತು. ನಾಜಿ ಧ್ಯೇಯಗಳಿಗೆ ಜರ್ಮನರನ್ನು ಪರಿವರ್ತಿಸಿ, ಅತನಿಂದ ಯುರೋಪಿನ, ಯಾಕೆ ಇಡೀ ಜಗತ್ತಿನ ಶಾಂತಿಭಂಗವಾಯಿತು. ರಾಷ್ಟ್ರದ ಪ್ರಾಮುಖ್ಯ ವಾರ್ತಾ ಸಂಸ್ಥೆಗಳಲ್ಲಿ ಅಲ್ಲಿನ ಸರಕಾರಕ್ಕೆ ಕೈಯಿರುವುದರಿಂದ, ದುಷ್ಪರಿಣಾಮಗಳು ಉಂಟಾದುದರ ಕುರಿತು ಮೇಲಿನವು ಎರಡು ಉತ್ತಮ ನಿದರ್ಶನಗಳು.

ಹೀಗೆ ಪ್ರಭುತ್ವದ ರಾಷ್ಟ್ರಗಳಲ್ಲಿ ನಡೆಯುವುದು ಒಂದು ರೂಢಿಯಾಗಿಬಿಟ್ಟದೆ. ಅಧಿಕಾರ ಗದ್ದುಗೆಯಲ್ಲಿರುವ ಸರಕಾರದ ಆದರ್ಶ ಧ್ಯೇಯಗಳನ್ನೆ ಎತ್ತಿಹಿಡಿಯುವ ಜಗತ್ತಿನ ವಾರ್ತೆಗಳು ಮಾತ್ರ ಆ ರಾಷ್ಟ್ರಗಳಲ್ಲಿ ಪ್ರಚಾರವಾಗುತ್ತವೆ. ಜಗತ್ತಿನ ವಿವಿಧ ಕಡೆಗಳ ವಾರ್ತೆಗಳು ಯಾವ ಪ್ರಭಾವಗಳಿಲ್ಲದೆನೇ ಪ್ರಜೆಗಳಿಗೆ ಸಾರಲ್ಪಡುವುದು ದುರ್ಲಭವಾಗಿದೆ. ಈ ಕಾರಣದಿಂದ ರಾಷ್ಟ್ರಗಳ ಪರಸ್ಪರ ಸನ್ಮಿಲನ, ಸೌಹಾರ್ದ ಬೆಳೆಯುವುದು ಅಸಾಧ್ಯವಾಗಿದೆ. ಇದೊಂದು ಕೊರತೆಯು ನಿವಾರಿಸಲ್ಪಡದೆ ಜಗತ್ತಿನಲ್ಲಿ ಶಾಂತಿ ತಲೆದೋರದು; ಇದು ಜಗತ್ತಿನ ವಿವಿಧ ರಾಷ್ಟ್ರಗಳ ಪ್ರಭತಿಗಳನೇಕ ಮಂದಿಯರ ಅಭಿಪ್ರಾಯವಾಗಿರುವುದು. ಲೋಕ ಕಲ್ಯಾಣದ ದೃಷ್ಟಿಯಿಂದ ಎಲ್ಲಾ ರಾಷ್ಟ್ರಗಳಲ್ಲೂ ವಾರ್ತಾ ಸ್ವಾತಂತ್ರ್ಯವಿರಬೇಕೆಂದು ಅವರು ಕೋರುತ್ತಿರುವರು.

ಕಳೆದ ಮಹಾಯುದ್ಧದ ಪೂರ್ವದಲ್ಲಿ, ಈ ವಾರ್ತಾ ಸಂಸ್ಥೆಗಳು, ಆಯಾ ರಾಷ್ಟ್ರಗಳ ರಾಯಭಾರ ಸಂಘಗಳಂತೆ ದುಡಿಯುತ್ತಿದ್ದವು. ರಂಗಿಲ್ಲದೆ ವಾರ್ತೆಗಳು ಅವುಗಳಿಂದ ಪ್ರಚಾರವಾಗುತ್ತಿರಲಿಲ್ಲ. ವಾರ್ತಾ ಸಂಸ್ಥೆಗಳು ಒಂದು ರಾಷ್ಟ್ರದ ಪ್ರಾಬಲ್ಯವನ್ನು ವೃದ್ಧಿಕರಿಸುವ ಸಾಧನಗಳಾಗಿದ್ದವು.

ಬ್ರಿಟಿಷರ ರೊಯಿಟರ್ ವಾರ್ತಾ ಸಂಸ್ಥೆಯು, ಪ್ರಾರಂಭದಲ್ಲಿ ಯುರೋಪದ ವಿವಿಧ ದೇಶಗಳಿಗೆ, ಸರಕಾರದ ಸಂದೇಶಗಳನ್ನೂ, ಮಾರ್ಕೇಟು ಧಾರಣೆಗಳನ್ನು ಕಳುಹಿಸುವ ವ್ಯವಸ್ಥೆಯಾಗಿತ್ತು. ಟೆಲಿಗ್ರಾಫ್ ಸಾಧನವು ಕಂಡುಹಿಡಿಯಲ್ಪಟ್ಟ ನಂತರ, ರೊಯಿಟರನು ಇಂಗ್ಲಾಂಡಿನ ವರ್ತಮಾನ ಪತ್ರಿಕೆಗಳಿಗೆ ವಾರ್ತೆಗಳನ್ನು ಕೊಡಿಸುವ ಸಂಸ್ಥೆಯೊಂದನ್ನು ಸ್ಥಾಪಿಸಿದನು. ಅದರ ಉಪಯುಕ್ತತೆಯ ಕುರಿತಾಗಿ ಅಂದಿನ ಪತ್ರಿಕೆಗಳ ಒಡೆಯರಿಗೆ ಮನವರಿಕೆ ಮಾಡಿದನು. ಈ ಸಂಸ್ಥೆಯು ರೊಯಿಟರನ ಅಂಕಿತದಲ್ಲಿದ್ದು, ಅದರ ಮೂಲಕ ಹೋಗುವ ವಾರ್ತೆಗಳು ಸಂಪೂರ್ಣ ಅವನ ಅಂಕಿತದಲ್ಲಿ ಹಂಚಲ್ಪಡುತ್ತಿದ್ದವು. ಸ್ವಲಾಭ ದೃಷ್ಟಿಯಿಂದಲೂ ಸಮಾಜದಲ್ಲಿ ತನಗೊಂದು ಉನ್ನತ ಸ್ಥಾನವನ್ನು ಸಂಪಾದಿಸುವ ಧ್ಯೇಯದಿಂದಲೂ ಆತನು ಈ ಸಂಸ್ಥೆಯನ್ನು ನಡೆಯಿಸುವವನಾದನು. ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಈ ಸಂಸ್ಥೆಯು ಸಮಸ್ತ ಜಗತ್ತಿನ ವಾರ್ತೆಗಳನ್ನು ಸಂಚಯಿಸಿ, ಇಡೀ ಜಗತ್ತಿಗೆ ಪ್ರಚಾರಪಡಿಸುವ ತರದ ಮಹತ್ತಾದ ಬ್ರಿಟಿಷ್ ವಾರ್ತಾ ಸಂಸ್ಥೆಯಾಗಿ ವ್ಯವಸ್ಥೆ ಹೊಂದಿತು. ಕೆಟ್ಟದು ಒಳ್ಳೆದಾಗಿ, ಒಳ್ಳೆದು ಅತ್ಯುತ್ತಮವಾಗಿ,–ವಾರ್ತೆಗಳನ್ನು ಪ್ರಚುರಪಡಿಸಿ, ಈ ಸಂಸ್ಥೆಯು ಮಹಾ ಕೀರ್ತಿಯನ್ನು ಪಡೆಯಿತು. ರಾಣಿ ಸರಕಾರದಿಂದ ಮಹಾ ಮನ್ನಣೆಯನ್ನು ಪಡೆಯಿತು. ರೊಯಿಟರನು ಪ್ರಸ್ಸಿಯಾ ದೇಶಿಗನಾದರೂ, ಆತನಿಗೆ ಬ್ರಿಟನಿನ ಗೌರವದ ಬಿರುದಾವಳಿಗಳು ಸಂದವು. ಇದೇ ಸಮಯ, ಫ್ರಾನ್ಸಿನಲ್ಲಿ 'ಹವಾಸ್' ಎಂಬ ವಾರ್ತಾ ಸಂಸ್ಥೆಯೂ, ಜರ್ಮನಿಯಲ್ಲಿ 'ವೂಲ್ಫ' ಎಂಬ ವಾರ್ತಾ ಸಂಸ್ಥೆಯೂ ರೊಯಿಟರ ಮಾದರಿಯಲ್ಲೇ ವ್ಯವಸ್ಥೆ ಹೊಂದಿಕೊಂಡು, ಬೆಳೆದವು.

ಅಮೇರಿಕಾದಲ್ಲಿ ಮೊಟ್ಟಮೊದಲು ಜನಿಸಿದ ವಾರ್ತಾ ಸಂಸ್ಥೆಯೆಂದರೆ 'ಎಸೋಸಿಯೆಟೆಡ್ ಪ್ರೆಸ್' ಎಂಬುದು. ಟೆಲಿಗ್ರಾಫಿನ ಪೂರ್ವದಲ್ಲಿ ತಮತಮಗೆ ದೊರೆತ ವಾರ್ತೆಗಳನ್ನು ಪರಸ್ಪರ ಹಂಚಿಕೊಳ್ಳುವ ಉದ್ದಿಶ್ಯದಿಂದ ಈ ಸಂಸ್ಥೆಯ ಉದ್ಭವವಾದುದು. 'ಟೆಲಿಗ್ರಾಫಿ'ನ ನಂತರ ಈ ಸಂಸ್ಥೆಯು ತುಂಬಾ ಪ್ರಗತಿ ಹೊಂದಿತು. 'ಯುನೈಟೆಡ್ ಪ್ರೆಸ್' ಎಂಬ ಇನ್ನೊಂದು ಅಮೆರಿಕನ್ ವಾರ್ತಾ ಸಂಸ್ಥೆಯು, ಇದರ ನಂತರ–೧೯೦೭ರಲ್ಲಿ ಜನಿಸಿದ್ದು. ಕರ್ತವ್ಯನಿಷ್ಠೆಯು 'ಎಸೋಸಿಯೆಟೆಡ್ ಪ್ರೆಸ್ಸಿ'ನ ಧ್ಯೇಯವು. ಅದು ಲಾಭ ಗಳಿಸುವ ಸಂಸ್ಥೆಯಾಗಿರಲಿಲ್ಲ. ವಿವಿಧ ವಾರ್ತಾ ಪತ್ರಗಳಿಗೆ ವಾರ್ತೆಗಳ ಸೌಲಭ್ಯ ಒದಗಿಸುವುದರಲ್ಲಿ ಅದರ ದುಡಿತ. ಲಾಭಗಳಿಸುವ ಚಟುವಟಿಕೆಗಳು 'ಯುನೈಟೆಡ್ ಪ್ರೆಸ್ಸಿ'ನದು.

ರೊಯಿಟರ್, ವೂಲ್ಫ ಮತ್ತು ಹವಾಸ್ ಈ ಮೂವರ ನೀತಿಯು ಒಂದೇಯಾಗಿದ್ದು, ಅಂತರಾಷ್ಟ್ರೀಯ ವಾರ್ತಾ ಪ್ರಸಾರಣೆ ಬಗ್ಗೆ ಅವರಲ್ಲಿ ಒಂದು ಒಪ್ಪಂದದ ಕೂಡುವಿಕೆ ನಡೆಯಿತು. ಈ ಕೂಡುವಿಕೆಯಿಂದ ಇಡೀ ಜಗತ್ತಿನ ಕಾರ್ಯಕ್ಷೇತ್ರವನ್ನು ತಮ್ಮಲ್ಲಿ ವಿಭಾಗಿಸಿಕೊಂಡರು. ಅಮೆರಿಕದ 'ಅಸೋಸಿಯೆಟೆಡ್ ಪ್ರೆಸ್' ಈ ಕೂಡುವಿಕೆಯಲ್ಲಿ ಸೇರಿದುದರಿಂದ, ಆ ವಿಭಾಗದ ಕಾರ್ಯವು ಅದಕ್ಕೆ ನಿರ್ವಹಿಸಲ್ಪಟ್ಟಿತ್ತು. ಈ ಕೂಡುವಿಕೆಯಿಂದ ರೊಯಿಟರ್, ವೂಲ್ಫ ಮತ್ತು ಹವಾಸ್ ಸಂಸ್ಥೆಗಳ ಹಿಂದಕ್ಕಿರುವ ಧೋರಣದ ರಂಗಿನಲ್ಲೇ ವಾರ್ತೆಗಳು ಜಗತ್ತಿನಲ್ಲಿ ಹರಡುವಂತಾಯಿತು.

ಸತ್ಯವಾದ ವಾರ್ತೆಗಳು ಜಗತ್ತಿಗೆ ದೊರಕುವುದು ದುರ್ಲಭವಾಯಿತು. ಕಳೆದ ಮಹಾಯುದ್ಧದ ಸಮಯದಲ್ಲೂ ಈ ಕೂಡುವಿಕೆಯು ಒಡಕಿಲ್ಲದೆ ಕಾರ್ಯಿಸಿತು. ಜರ್ಮನ್ 'ವೂಲ್ಫ' ಸಂಸ್ಥೆಯ ಚಟುವಟಿಕೆಗಳು ನಿರ್ಬಂಧಿಸಲ್ಪಟ್ಟುದರಿಂದ ಮಿಕ್ಕುಳಿದ ರೊಯಿಟರ್ ಮತ್ತು ಹವಾಸ್ ಸಂಸ್ಥೆಗಳಿಗೆ ಹೆಚ್ಚಿನ ಅವಕಾಶಗಳು ದೊರತವು. ಈ ಸಮಯದಲ್ಲಿ ರೊಯಿಟರ್ ಸಂಸ್ಥೆಯು ಬ್ರಿಟಿಷ್ ಸರಕಾರದ ಅಂಗವಾಗಿ ಪರಿವರ್ತಿಸಲ್ಪಟ್ಟಿತಂತೆ. ಯುದ್ಧೋತ್ತರದಲ್ಲಿ ಸರಕಾರದ ಪ್ರಚಾರ ಶಾಖೆಯಲ್ಲಿ ದುಡಿದು, ಸರಕಾರದ ಬಿರುದಾವಳಿಗೆ ಪಾತ್ರರಾದ ಪ್ರಚಾರ ಶಾಖೆಯ ಪ್ರಾಮುಖ್ಯ ಅಧಿಕಾರವನ್ನು ನೋಡಿದ ಮಹನೀಯರ ಸಂಚಾಲಕತ್ವಕ್ಕೆ ರೊಯಿಟರ್ ಸಂಸ್ಥೆಯು ಕೊಡಲಾಯಿತು. ಫ್ರಾನ್ಸಿನ 'ಹವಾಸ್' ಸಂಸ್ಥೆಯು 'ಜಾಹೀರಾತು' ಏಜನ್ಸಿಯಾದುದರಿಂದ ಪತ್ರಿಕೆಗಳ ಮೇಲೆ ಇನ್ನೂ ಹೆಚ್ಚಿನ ಪ್ರಭಾವವನ್ನು ತೋರಿಸಲು ಅದಕ್ಕೆ ಸಾಧ್ಯವಿತ್ತಂತೆ. ಜಗತ್ತಿನ ವಿವಿಧ ಕಡೆಗಳಲೆಲ್ಲಾ ಕಛೇರಿಗಳನ್ನು ಸ್ಥಾಪಿಸಿ, ಈ ಸಂಸ್ಥೆಯು ರೊಯಿಟರೊಡನೆ ಮಹಾ ಯಶಸ್ಸನ್ನು ಸಾಧಿಸಿತು.

ವಾರ್ತಾ ಪ್ರಸಾರಕ ಸಂಸ್ಥೆಗಳ ಮೇಲಿನ ಧೋರಣದಿಂದ, ಜಗತ್ತೆಲ್ಲಾ ಕಲಹದ ಬೀಡಾಯಿತು. ರಾಷ್ಟ್ರಗಳಲ್ಲಿ ಮನಃಕ್ಲೇಶವು ಬೆಳೆಯುತ್ತಾ ಹೋಯಿತು. ಇದರ ನಡುವೆ ಕೆಲವೊಂದು ವ್ಯಕ್ತಿ ಯಾ ಸಂಸ್ಥೆಗಳು ಸತ್ಯವನ್ನು ಬೆಳಕಿಗೆ ತರಲು ಮಾಡಿದ ಯತ್ನಗಳು ಅರಣ್ಯರೋದನಗಳೆಂದೆಣಿಸಿಕೊಂಡವು.

ಕಳೆದ ಮಹಾಯುದ್ಧವು ಮುಗಿದು, ಸಂಧಾನ ಪ್ರಸ್ತಾಪದ ಸಮಯದಲ್ಲಿ, ಇನ್ನೊಂದು ಮಹಾಯುದ್ಧವು ಉಂಟಾಗದಂತೆ ಅನೇಕ ಶರತಗಳು ವಾರ್ಸಲೆ ಒಪ್ಪಂಧದಲ್ಲಿ ನಿರೂಪಿಸಲ್ಪಟ್ಟಿದ್ದವು. ವಾರ್ತಾ ಸಂಸ್ಥೆಗಳು ಯಾವತ್ತು ಪ್ರಭಾವ, ಅಡ್ಡಿ, ಬಲಾತ್ಕಾರವಿಲ್ಲದೆ, ಸತ್ಯವಾದುದನ್ನೇ ಬೆಳಕಿಗೆ ತರುವ ತರದಲ್ಲಿ ವಿವಿಧ ರಾಷ್ಟ್ರಗಳ ಒಂದು ಒಪ್ಪಂದದ ಕುರಿತು, ಓರ್ವ ಮಹನೀಯರು ವಿಚಾರವೆತ್ತಿದಾಗ ಅವರ ಸಲಹೆಗೆ ಅಂದಿನ ಮಿತ್ರರ ಮುತ್ಸದ್ದಿಗಳ ಲಕ್ಷ್ಯ ದೊರಕದೆ ಹೋಯಿತು. ಕಳೆದ ಯುದ್ಧದ ಪೂರ್ವದಲ್ಲಿಯಿದ್ದಂತೆ ಕಾಲವು ಸಾಗಿತು. ಎರಡನೆ ಮಹಾಯುದ್ಧವು ಉಂಟಾಯಿತು.

ಅಮೇರಿಕದ 'ಎಸೋಸಿಯೆಟೆಡ್' ಸಂಸ್ಥೆಯು, ವಾರ್ತೆಗಳು ನಿಷ್ಪಕ್ಷಪಾತಭಾವದಿಂದ ಕೊಡಿಸುವುದರಲ್ಲಿ ಮೇಲಿನ ಸಂಸ್ಥೆಗಳಿಗಿಂತ ವಾಸಿ ಎಂದು ತಿಳಿದುಬಂದಿದೆ. ಅಮೇರಿಕಾದಲ್ಲಿ ಸ್ವಾತಂತ್ರ್ಯ ನೀತಿ ಧೋರಣೆಗೆ ಹೆಚ್ಚಿನ ಅವಕಾಶವಿದೆ ಎಂದು ಇದೊಂದು ನಿದರ್ಶನ. ನಿಷ್ಪಕ್ಷಪಾತ ದೃಷ್ಟಿಯಿಂದ ವಾರ್ತೆಗಳನ್ನು ಸಂಚಯಿಸಿ, ಜಗತ್ತಿಗೆ ಕೊಡುವುದು, ಅವರ ಧ್ಯೇಯವಿರುತ್ತದೆ. ಆದರೆ ಅಮೇರಿಕದಲ್ಲೂ ಪ್ರತಿಗಾಮಿಗಳಿರುವರು. ಈ ಪ್ರತಿಗಾಮಿಗಳ ಪ್ರಭಾವ ಎಲ್ಲಾ ಕ್ಷೇತ್ರಗಳಲ್ಲದೆ ಹಾಗೆನೆ ವಾರ್ತಾ ಪ್ರಚಾರ ಸಂಸ್ಥೆಗಳಲ್ಲೂ ಅವರ ಕೈಯಿರದೆ ಇಲ್ಲ. ಆದರೂ ಸದ್ಯಕ್ಕೆ ಅಮೇರಿಕದ ವಾರ್ತಾ ಸಂಸ್ಥೆಗಳೆ ವಾಸಿ ಎಂದು ಧೈರ್ಯದಿಂದ ಹೇಳಬಹುದು.

* * *

ಸೋವಿಯಟ್ ಆದರ್ಶಗಳಲ್ಲಿ 'ಸ್ವತಂತ್ರ ವಾರ್ತೆ'ಗೆ ಅವಕಾಶವಿಲ್ಲವೆಂದು ಕೆಲವರು ವಾದಿಸುತ್ತಿರುವರು. ಆದರೆ ಅದು ಇತರ ಅನೇಕ ವಿಚಾರಗಳಲ್ಲಿ ಮಾರ್ಕ್ಸನ ನೀತಿಯನ್ನು ಬಿಟ್ಟು ವರ್ತಿಸಿದುದು ಕಾಣಿಸುತ್ತದೆ. 'ಧರ್ಮವೆಂದರೆ ಜನವರ್ಗದ ಅಪೀಮು' ಎಂದು ತಿಳಿದು ಧರ್ಮವನ್ನೇ ತ್ಯಜಿಸಬಿಟ್ಟ ಸೋವಿಯಟ್ ರಷ್ಯಕ್ಕೆ ಈಗ ಧರ್ಮವು ಬೇಕಾಗಿಯದೆ. ವಾರ್ತೆಗಳು ಯಾವತ್ತೂ ಆತಂಕವಿಲ್ಲದೆ ಪ್ರಚಾರವಾಗಬೇಕೆಂಬ ಸೂಚನೆಯು ಸ್ಟೇಲಿನರ ಅವಗಾಹನೆಗೆ ಬಂದಿರುತ್ತದೆ. ರಷ್ಯಕ್ಕೆ ಅಮೇರಿಕವನ್ನು ಅನ್ವಯಿಸುವುದೆಂದರೆ ಇಷ್ಟ. ಅಮೇರಿಕಾದಲ್ಲಿ ವಾರ್ತಾ ಸ್ವಾತಂತ್ರ್ಯವು ಸ್ಥಾಪಿಸಲ್ಪಟ್ಟರೆ, ಆಗ ಆ ವಿಚಾರದಲ್ಲಿ ಸ್ಟೇಲಿನನು ಹಿಂದೆ ಉಳಿಯನು.

ಬ್ರಿಟಿಷ್ ಕೊಮನ್ ವೆಲ್ತಿನಲ್ಲಿ-ತಾಯಿನಾಡಾದ ಇಂಗ್ಲಾಂಡಿನಲ್ಲಿರುವುದಕ್ಕಿಂತ ಹೆಚ್ಚಿನ ವಾರ್ತಾಸ್ವಾತಂತ್ರ್ಯವು ವಲಸೆ ರಾಷ್ಟ್ರಗಳಲ್ಲಿದೆ. ಈ ವಿಚಾರದಲ್ಲಿ ಬ್ರಿಟಿಷರು ಅಮೇರಿಕಾದಷ್ಟು ಮುಂದುವರಿಯಲಿಲ್ಲವೆಂದು ಹೇಳಬೇಕು. ವಾರ್ತಾ ಸ್ವಾತಂತ್ರ್ಯದ ನಿಯಮಗಳು ಸಂಯುಕ್ತ ಅಮೇರಿಕದ ಸರಕಾರವು ಸ್ವೀಕರಿಸಿದಷ್ಟು ಅವರು ಸ್ವೀಕರಿಸಲಿಲ್ಲ. ಈ ವಿಚಾರದಲ್ಲಿ ಬ್ರಿಟನು ಅಮೇರಿಕದ ದೃಷ್ಟಾಂತವನ್ನು ಅನುಸರಿಸಿದರೆ, ಆಗ ಜಗತ್ತಿನ ವಾರ್ತಾ ಸ್ವಾತಂತ್ರ್ಯ ಕಾರಣಕ್ಕೆ ದೊಡ್ಡ ಉಪಕಾರವಾಗುವುದು.

ಚೀನಾದಲ್ಲೂ ವಾರ್ತಾ ಸ್ವಾತಂತ್ರ್ಯ ಬಗ್ಗೆ ಹೆಚ್ಚಿನ ಆಸಕ್ತಿಯು ಕಾಣಿಸಿಕೊಂಡದೆ. ಯುರೋಪದ ರಾಜಕೀಯ ರಂಗದಲ್ಲಿ ಫೆಸಿಸ್ಟರ ಆಗಮನದಿಂದಾಗಿ ದಕ್ಷಿಣ ಅಮೇರಿಕದ ರಾಷ್ಟ್ರಗಳಲ್ಲಿ ವಾರ್ತಾ ಸ್ವಾತಂತ್ರ್ಯದ ಹಾದಿಯಲ್ಲಿ ಒಂದು ತೊಡಕು ಬಂದಿದ್ದರೂ, ಈಗ ಅಲ್ಲಿನ ವಾತಾವರಣವು ಸಂಯುಕ್ತ ಅಮೇರಿಕದಿಂದ ಸುಧಾರಿಸಲ್ಪಡುವುದರಿಂದ, ವಾರ್ತಾ ಸ್ವಾತಂತ್ರ್ಯಕ್ಕೆ ಹೆಚ್ಚಿನ ಆಸ್ಪದವು ದೊರಕಬಹುದು.

ಹೀಗೆ ಜಗತ್ತಿನ ಎಲ್ಲೆಡೆಗಳಲ್ಲೂ ವಾರ್ತಾ ಸ್ವಾತಂತ್ರ್ಯದ ಕುರಿತು ಚೇತನವು ಉಂಟಾಗಿದೆ. ಪ್ರಭುತ್ವ ರಾಷ್ಟ್ರಗಳು ಈ ಕಾರಣದಲ್ಲಿ ಮಾರ್ಗದರ್ಶಕತ್ವವನ್ನು ವಹಿಸಿದರೆ–ಆಗ ಕಾರ್ಯವು ತನ್ನಷ್ಟಕ್ಕೆ ತಾನೆ ಸಾಗುವುದು.

ಜಗತ್ತಿನಲ್ಲಿ ಚಿರವಾದ ಶಾಂತಿಯು ನೆಲೆನಿಲ್ಲಬೇಕಾದರೆ, ಹೇಗೆ ಪ್ರತಿಯೊಂದು ರಾಷ್ಟ್ರದಲ್ಲಿ ಪ್ರಜೆಗಳಿಂದಲೇ ಪ್ರಜೆಗಳಿಗಾಗಿ, ಪ್ರಜೆಗಳ ಸರಕಾರಗಳ ಸ್ಥಾಪನೆಯಾಗಬೇಕೊ, ವಿಶ್ವಬಾಂಧವ್ಯ ನೀತಿಯು ಸಮತಾವಾದದ ಸ್ಥಾಪನೆಯಾಗಬೇಕೊ, ಹಾಗೆನೆ ಸತ್ಯವಾದ ವಾರ್ತೆಗಳನ್ನು ರಂಗಿಲ್ಲದೆ ಜಗತ್ತಿಗೆ ಪ್ರಚಾರಪಡಿಸುವ "ವಾರ್ತಾ ಸ್ವಾತಂತ್ರ್ಯ" ಪ್ರತಿಯೊಂದು ರಾಷ್ಟ್ರದಲ್ಲಿರಬೇಕು. ಆಗ ಕಲಹದ ಕಾರಣವಾದ ಮನಃಕ್ಲೇಶವು ಮಾಯವಾಗಬಹುದು–ಜಗತ್ತಿನ ವಿವಿಧ ರಾಷ್ಟ್ರಗಳೊಳಗೆ ಪರಸ್ಪರ ಸೌಹಾರ್ದ ಉಂಟಾಗಲು, ಉತ್ತಮ ವಾತಾವರಣವು ಉಂಟಾಗಬಹುದು.

[ಈ ಲೇಖನವನ್ನು ಅಮೇರಿಕದ ಎಸೋಸಿಯೆಟೆಡ್ ಪ್ರೆಸ್ಸಿನ ಕೆಂಟ್ ಕೂಪರರ ಲೇಖದ ಆಧಾರದ ಮೇಲೆ ಬರೆದುದಾಗಿರುತ್ತದೆ.]

ವೈದ್ಯಕೀಯದಲ್ಲಿ ಆಯುರ್ವೇದದ ಸ್ಥಾನ

ಮಂಜೇಶ್ವರದಲ್ಲಿ, ಕಳೆದವಾರ ನಿಖಿಲ ಕರ್ನಾಟಕ ಆಯುರ್ವೇ ೧೧ನೇ ಸಮ್ಮೇಲನದ ಅಧ್ಯಕ್ಷ ಶ್ರೀ ಪಾರ್ಥನಾರಾಯಣ ಪಂಡಿತರು, ಮಾಡಿದ ಭಾಷಣದ ಪ್ರಾಮುಖ್ಯ ಅಂಶಗಳನ್ನು ಎತ್ತಿ ಇಲ್ಲಿ ಕೊಡಲಾಗಿದೆ.

ಇಂದು ದೇಶದಲ್ಲಿ ಬಹಳ ಭೀಕರ ಕಾಲವು ಒದಗಿದೆ. ಕ್ಷಾಮ ಡಾಮರಗಳಿಂದಲೂ, ದಾರಿದ್ರ್ಯದಿಂದಲೂ ಅಸಂಖ್ಯಾತ ಪ್ರಜಾಸಾಮಾನ್ಯರು ಮರಣಹೊಂದುತ್ತಿದ್ದಾರೆ. ಈ ಪೀಡೆಗಳ ನಿವಾರಣೋಪಾಯಗಳನ್ನು ಸಂಶೋಧಿಸಿ, ಜನಪದವನ್ನು ಸಂರಕ್ಷಿಸುವ ಹೊಣೆಗಾರಿಕೆಯು ಹೆಚ್ಚಿಗೆ ವೈದ್ಯರಿಗೆ ಸೇರಿದ್ದು.

ಆಯುರ್ವೇದ ಶಾಸ್ತ್ರದ ಮಹತ್ವ, ಪ್ರಾಚೀನತೆ, ಉನ್ನತಿ ಅವನತಿಗಳು, ವಿಮರ್ಶೆಗಳು ಗ್ರಂಥಗಳ ರೂಪವಾಗಿ, ಪ್ರಬಂಧಗಳ ರೂಪವಾಗಿ, ಪ್ರಾಜ್ಞರಾದ ಚರಿತ್ರಕಾರರು ಪರಿಶೋಧಕರು ನಮಗೆ ಒದಗಿಸಿಕೊಟ್ಟಿದ್ದಾರೆ. ಆಯುರ್ವೇದಿಯರು ಅತುಲವಿದ್ವತ್ ಪ್ರಭಾಯುಕ್ತರಾಗಿ, ಸಾಮ್ರಾಟರಿಂದ ಗೌರವಿಸಲ್ಪಟ್ಟು, ದೇಶದ ಆರ್ಥಿಕ, ವ್ಯಾವಹಾರಿಕ, ಸಾಮಾಜಿಕ ಉನ್ನತಿಯಲ್ಲಿ ನಿರ್ದೇಶಕರಾಗಿದ್ದುದಲ್ಲದೆ, ಯುದ್ಧಕಾಲದಲ್ಲಿ ಪಕ್ಷಭೇದವಿಲ್ಲದೆ ನೊಂದವರಿಗೆ ಉತ್ತಮೋತ್ತಮ ಚಿಕಿತ್ಸೆಗಳನ್ನೂ ನಡೆಸುತಿದ್ದರು. ಮೂಳೆಗಳನ್ನು ಸರಿಪಡಿಸುವುದು, ಗಾಯಗಳನ್ನು ಶೀಘ್ರದಲ್ಲಿ ಮಾಯುವಂತೆ ಮಾಡುವುದು ಮತ್ತು ಗದಹರ ಔಷಧಿಗಳನ್ನು ಪ್ರಯೋಗಿಸುವುದು, ವಾಯು, ನೀರು, ಆಹಾರಗಳಲ್ಲಿ ಶತ್ರುಗಳು ಬೆರಸಿದ ವಿಷಗಳನ್ನು ಭೇದಿಸಿ ಶುದ್ಧಮಾಡುವುದು ಈ ವಿಜ್ಞಾನಗಳಲ್ಲಿ ನಿಪುಣರಾಗಿದ್ದರೆಂದು ಕೌಟಿಲ್ಯ, ವರಾಹಮಿಹಿರ, ವಿದ್ಯಾಮಾಧವ, ಡಿಗ್ಬಿ ಮುಂತಾದವರ ಗ್ರಂಥಗಳಿಂದ ತಿಳಿದು ಬರುತ್ತದೆ. ಮನುಷ್ಯನಿಗೆ ಮಾತ್ರವಲ್ಲದೆ ಜನೋಪಯುಕ್ತವಾದ ಪ್ರಾಣಿಗಳ ರೋಗ ಚಿಕಿತ್ಸೆಗಳಲ್ಲೂ ಪ್ರವೀಣರಾಗಿದ್ದರೆಂದು ಹಸ್ತ್ಯಾಯುರ್ವೇದ, ಅಶ್ವಾಯುರ್ವೇದ, ಗವಾಯುರ್ವೇದ ಶಾಸ್ತ್ರಗಳಿಂದ ತಿಳಿದು ಬರುತ್ತಿದೆ. ಗೈರಿಕಾದಿ ಧಾತುಗಳ ಪ್ರಭಾವವನ್ನೂ, ಸರ್ವ ಪ್ರಾಣಿಗಳ ರಸಾದಿ ಸಪ್ತಧಾತುಗಳು ಮತ್ತು ಮಲಮೂತ್ರಗಳ ಗುಣ ಉಪಯೋಗಗಳನ್ನೂ ವನಸ್ಪತಿಗಳ ರಸವೀರ್ಯ ವಿಪಾಕಗಳನ್ನೂ, ನದಿ ಮತ್ತು ಸಾಗರಗಳ ಜಲ ವ್ಯತ್ಯಾಸವನ್ನೂ, ವಿವಿಧ ದೇಶಗಳ ವಾಯುಗುಣಗಳನ್ನೂ ನಮ್ಮ ಆಯುರ್ವೇದ ವಿಶಾರದರು ಅಳೆದಿದ್ದುದಲ್ಲದೆ ಪಂಚಭೂತ, ತ್ರಿದೋಷ, ಸಪ್ತಧಾತು, ಷಡ್ರಸ – ಇವುಗಳ ಸ್ವರೂಪವಿಮರ್ಶೆಯನ್ನೂ ಸ್ಪಷ್ಟವಾಗಿ ಮಾಡಿಕೊಟ್ಟಿದ್ದಾರೆ. ರೋಗಕಾರಣ ಮತ್ತು ನಿವಾರಣೋಪಾಯಗಳನ್ನೂ, ಚಿಕಿತ್ಸೆಗೆ ಬೇಕಾದ ಸರ್ವ ಔಷಧಿಗಳ ನಿರ್ಮಾಣ ವಿಧಿಗಳನ್ನೂ ನಿರೂಪಿಸಿದ್ದಾರೆ. ಇಷ್ಟೇ ಅಲ್ಲ, ಜನಪದಧ್ವಂಸಕ ರೋಗಗಳ ನಿರೋಧ, ನಿವಾರಣೋಪಾಯಗಳನ್ನೂ ಸಹ ನಮಗೆ ವಿಶದವಾಗಿ ತಿಳಿಸಿದ್ದಾರೆ. ಪ್ರತಿ ಆಯುರ್ವೇದೀಯನೂ ಗುರುಮುಖೇನ ಕರ್ಮವೇದಾಭ್ಯಾಸವಾದೊಡನೆಯೇ ತನ್ನ ಗ್ರಾಮದಲ್ಲಿ ನೆಲಸಿ, ಗ್ರಾಮಸ್ಥರ ರೋಗ ಚಿಕಿತ್ಸೆಗೆ ಮಾತ್ರವಲ್ಲದೆ ಅವರ ಆರೋಗದೃಢಕಾಯತೆಗೆ ಸಾಧನವಾದ ಆರೋಗ್ಯನಿಯಮಗಳಿಗೂ ಶಿಕ್ಷಕನಾಗಿ ಸಾತ್ವಿಕ ನಿದರ್ಶನದಿಂದ ಅವನು ಆದರ್ಶನಾಯಕನಾಗಿ ಖ್ಯಾತಿ ಪಡೆಯುತ್ತಿದ್ದನು.

ಸ್ವಾತಂತ್ರ್ಯವಿಹೀನವಾದ ನಮ್ಮ ದೇಶವನ್ನು ತಮ್ಮ ಔಷಧಗಳ ಮಾರಾಟಕ್ಕೆ ಸಂತೆಯನ್ನಾಗಿ ಮಾಡಿಕೊಂಡಿದ್ದಾರೆ. ದಾಸ್ಯವನ್ನು ಸ್ಥಾಪಿಸಲು ಹಿಂದೀಯನು ಹೇಗೆ ಪರದೇಶದವರೊಡನೆ ಸಹಕರಿಸಿದನೋ ಹಾಗೆಯೇ ಆಯುರ್ವೇದ ವೈದ್ಯವನ್ನು ಹೀನಸ್ಥಿತಿಗೆ ತರಲೂ ಹಿಂದೀಯನೇ ಕಾರಣನಾದನು. ಆತನು ಪಾಶ್ಚಾತ್ಯವೈದ್ಯ ಶಿಕ್ಷಣ ಶಾಲೆಗೆ ಕಾಲಿಟ್ಟ ಕೂಡಲೇ ದೇಶೀಯವೈದ್ಯ ವಿರೋಧಿಯಾಗಿ ಆಮದು ಔಷಧಿಗಳ ಪ್ರಸಾರಕನಾಗುವನು. ಆರ್ಷೇಯದಿಂದ ಆಯುರ್ವೇದೀಯನು ಗಳಿಸಿಟ್ಟಿದ್ದ ಕೋಟಿಗಟ್ಟಲೆ ಹೊನ್ನು ಈ ಪ್ರಸಾರಕರಿಂದ ಈ ಆಮದು ಔಷಧಿಗಳಿಗಾಗಿ ಹಿಂದೂಸ್ಥಾನದಿಂದ ಪ್ರತಿ ವರ್ಷವೂ ಸಾಗರದಾಚೆಗೆ ಹರಿದುಹೋಗಿ ಹಿಂದೂಸ್ಥಾನವು ಬರಿದಾಗುತ್ತಿದೆ.

ಆರೋಗ್ಯ ನಿಯಮಗಳು ಸುಲಭವಾಗಿಯೂ ಪ್ರತಿಯೊಬ್ಬರಲ್ಲಿಯೂ ಸಚೇತನವಾಗಿರುವಂತೆಯೂ ಆಗಬೇಕು. ಶುದ್ಧವಾದ ಗಾಳಿ, ಆಹಾರ, ನೀರು ಆರೋಗ್ಯಕ್ಕೆ ಮೂಲಭೂತವೆಂದು ಆರೋಗ್ಯಪಾಠಗಳನ್ನು ನಾವು ಕಲಿಯುತ್ತೇವೆ. ಮರು ನಿಮಿಷವೇ ಸಮಸ್ತ ರೋಗಗಳ ತೌರುಮನೆಯಂತಿರುವ ಫಲಹಾರ ಮಂದಿರಗಳಲ್ಲಿ ಅಮಿತವಾಗಿ ಭುಜಿಸುತ್ತೇವೆ. ಕೃತಕ ಕೊಬ್ಬುಗಳಿಂದ ಮಾಡಿದ ಹಳಸಿದ ತಿಂಡಿಗಳನ್ನು ಹಂಚಿ ಸಾರ್ವಜನಿಕರ ಆರೋಗ್ಯವನ್ನು ಅಧೋಗತಿಗೆ ಎಳೆಯುತ್ತಿರುವ ಈ ಮಂದಿರಗಳ ಸಂಖ್ಯೆ ಅಮಿತವಾಗಿ ಬೆಳೆಯುತ್ತಿದೆ. ಕಣ್ಣಿಂದ ನೋಡುವುದು ಕೂಡಾ ದೂಷ್ಯವಾಗಿರುವ ಈ ತಿನಿಸುಗಳಿಂದ ಜನರ ಜಠರಾಗ್ನಿಯು ನಂದಿಹೋಗುತ್ತಿದೆ.

ವಿವಿಧ ರೋಗಿಗಳು ಬಿಟ್ಟ ನಿಶ್ವಾಸದಿಂದ ತುಂಬಿ ಶುದ್ಧವಾದ ವಾಯು ಸಂಚಾರವಿಲ್ಲದ ಸಿನಿಮಾ ಮಂದಿರಗಳು ಬಿಡಲು ಆಗದ ಕೆಡುಕುಗಳಾಗಿವೆ. ಕೃತಕವಾದ ವನಸ್ಪತಿಗಳ ತುಪ್ಪಗಳೂ ಸತ್ವವಿಲ್ಲದ ಏರಂಡ ತೈಲಗಳೂ ನಮ್ಮನ್ನು ಯಕೃತ್ ಮತ್ತು ಅಂತರಜನಿತ ರೋಗಗಳಿಗೆ ಬೀಡನ್ನಾಗಿ ಮಾಡುತ್ತಿವೆ; ಚಲನಚಿತ್ರಗಳು, ಫಲಹಾರ ಮಂದಿರಗಳು, ಸಿನಿಮಾಗಳು, ಹೆಂಡದಂಗಡಿಗಳು, ನೋಟುಗಳ ಚಲಾವಣೆಗಳು–ಇವುಗಳಿಂದ ಕ್ಷಯರೋಗವು ಹೇಗೆ ಹರಡುವುದೆಂಬುದನ್ನೇನೋ ಪ್ರದರ್ಶಿಸುತ್ತಾರೆ; ಆದರೆ ಇಂದಿಗೂ ಫಲಹಾರಮಂದಿರಗಳ ಮೇಲಿನ ಹತೋಟಿಯು ಫಲದಾಯಕವಾಗಿಲ್ಲ. ದಾರಿಯುದ್ದಕ್ಕೂ ಧೂಳಿನಲ್ಲಿ, ಉಗಿಯುವ ಸ್ಥಳಗಳಲ್ಲಿ ತಿಂಡಿಯನ್ನು ಬೇಯಿಸಿ ಮಾರುವುದನ್ನು ನಿಲ್ಲಿಸದಿರುವುದು ನಾಚಿಕೆಗೇಡು. ಸಿನಿಮಾ ಮಂದಿರಗಳಲ್ಲಿ ಧೂಮಪಾನವು ನಿಷೇಧವಾಗಿಲ್ಲ. ಸಣ್ಣ ಹಣದ ಕಾಗದಗಳ ಚಲಾವಣೆಯು ಹೆಚ್ಚುತ್ತಿದೆ. ತಾಮ್ರ, ಬೆಳ್ಳಿ, ಭಂಗಾರ ಇತ್ಯಾದಿ ಲೋಹಗಳನ್ನು ನಾಣ್ಯಗಳಾಗಿ ಉಪಯೋಗಿಸುವುದರಿಂದ ರೋಗಕಾರಕ ವಿಷವು ನಾಶಹೊಂದುವುದು. ರೋಗವನ್ನು ಹರಡುವ, ಹೆಚ್ಚುಮಾಡುವ ಅಥವಾ ಉಪರೋಗಗಳನ್ನು ಉಂಟುಮಾಡುವ ಅನೇಕ ಆರೋಗ್ಯಸೂತ್ರಗಳು ನಮ್ಮ ಮೇಲೆ ಬಲಾತ್ಕಾರದಿಂದ ಹೊರಿಸಲ್ಪಡುತ್ತಿವೆ. ಹಿಂದೂಸ್ಥಾನದಲ್ಲಿ ಇತ್ತೀಚೆಗ ಉದರವ್ಯಾಧಿಗಳು ಹೆಚ್ಚಾಗುತ್ತಿವೆ. ಇದಕ್ಕೆ ಮುಖ್ಯ ಕಾರಣ ಆಹಾರ ವಿಹಾರಗಳಿಂದ ಜೀರ್ಣಕೋಶವು ದುರ್ಬಲವಾಗಿರುವುದು. ಪಾಠಶಾಲೆಗಳು ಮತ್ತು ಕಛೇರಿಗಳು ಮಧ್ಯಾಹ್ನಾತ್ಪರ ನಡೆಸಲ್ಪಡುತ್ತಿವೆ. ಬಿಸಿಬಿಸಿಯಾಗಿ, ಅವಸರವಾಗಿ ಆಹಾರವನ್ನು ಭುಜಿಸಿ, ವಿರಾಮವಿಲ್ಲದೆ ಒಂದೆರಡು ಮೈಲಿಗಳ ಫಾಸಲೆ ನಡೆದು, ಸಂಜೆಯವರೆಗೆ ದುಡಿದು, ದೇಹಕ್ಕೆ ಅಪೌಷ್ಟಿಕವಾದ ಕಾಫಿ ಟೀಗಳನ್ನು ಕುಡಿದು ಸಂಜೆಯವೇಳೆಗೆ ಹಿಂತಿರುಗುವ ಜನಪದದ ಜಠರಾಗ್ನಿಯು ದೂಷ್ಯವಾಗಿ ಉದರ ರೋಗಗಳು ಉತ್ಪನ್ನವಾಗುವುವು.... ಬಿಳಿಯವರು ಓದುವ ಯಾವ ಶಾಲೆಯನ್ನಾದರೂ ನೋಡಿ, ಅವರ ಆಹಾರನಿಯಮಾನುಸಾರವಾಗಿ ಕೆಲಸದ ವೇಳಾಪಟ್ಟಿಗಳೂ ತಯಾರಾಗುತ್ತವೆ. ತಮ್ಮ ಪೀಳಿಗೆಯ ಆರೋಗ್ಯವನ್ನು ಎಲ್ಲಿದ್ದರೂ ಕಾಪಾಡುವುದು ಆ ಜನಾಂಗದ ಮುಖ್ಯ ಗುರಿಯಾಗಿದೆ. ನಾವೂ ನಮ್ಮಲ್ಲಿ ಬಳಕೆಯಲ್ಲಿರುವ ಈ ಅಕಾಲ ಭೋಜನಾದಿಗಳನ್ನು ತಪ್ಪಿಸಿ ಹೆಚ್ಚು ವಿರಾಮವನ್ನು ಕೊಡುವುದರಿಂದ ಬಹುಭಾಗ ಉದರರೋಗಗಳು ಬರುವುದಿಲ್ಲ. ಅಧಿಕಾರವರ್ಗದವರು ಈ ವಿಷಯವನ್ನು ಗಮನಿಸಬೇಕಾಗಿ ಕೋರುತ್ತೇನೆ...

ಆಹಾರನಿಯಮವಿಲ್ಲದೆ ಜ್ವರವು ಬಂದಾಗಲೆಲ್ಲಾ ಕ್ವಿನೈನ್ ಸೇವಿಸುವುದರಿಂದ ಜ್ವರವು ಪಾಕವಾಗದೆ ಅಸ್ಥಿಗತವಾಗಿ ಪಾಂಡು, ಯಕೃದ್ದಾಲ್ಯುದರ, ಪ್ಲೀಹ ಮತ್ತು ಅಜೀರ್ಣ ವ್ಯಾಧಿಗಳು ಹುಟ್ಟುವುವು. ಆಸ್ಪರೀನ್ ಮುಂತಾದ ತಾತ್ಕಾಲಿಕ ಶಮನೀಯ ಔಷಧಗಳು ಜನ ಸಾಮಾನ್ಯಕ್ಕೆ ಸುಲಭವಾಗಿ ಸಿಕ್ಕುವಂತೆ ಮಾಡಿರುವುದರಿಂದ ಅವುಗಳ ಅಮಿತ ಸೇವನೆಯಿಂದ ಹೃದಯಾವರಣ ಮೊದಲಾದ ರೋಗಗಳು ಹೆಚ್ಚುತ್ತಿರುವುವು. ಚಲನಚಿತ್ರಗಳಲ್ಲಿ ಸ್ತ್ರೀಪುರುಷರು ಸಾಂಸಾರಿಕ ವ್ಯಾಮೋಹಗಳನ್ನು ನೋಡಿ ಕಾಮವಶರಾಗಿ, ಬ್ರಹ್ಮಚರ್ಯವನ್ನು ತಾವೇ ನೀಗಿ, ಶಿಥಿಲರಾಗುತ್ತಿರುವ ತರುಣರ ಸಂಖ್ಯೆಯು ಶೇಕಡಾ ೯೦ಕ್ಕೆ ಮೀರಿದೆ. ಇಂತಹ ನಾಗರಿಕತೆಯಿಂದ ನಮ್ಮ ನಾಡನ್ನು ಉದ್ಧರಿಸುವುದು ಹೇಗೆ?...

ದೇಶದಲ್ಲಿ ಆಹಾರಾಭಾವದಿಂದ ವಿಪಾಕ ಹೊಂದದೆ ಇರುವ ದವಸ ಧಾನ್ಯಗಳು ಉಪಯೋಗವಾಗುತ್ತಿರುವುದರಿಂದ ಜನಿಸಬಹುದಾದ ರೋಗಾದಿಗಳನ್ನು ಜನಗಳಿಗೆ ತಿಳಿಯಪಡಿಸಿ, ಅವುಗಳು ಬಾರದಿರಲು ಕೈಕೊಳ್ಳಬೇಕಾದ ಉಪಾಯಗಳನ್ನು ಕಂಡುಹಿಡಿಯಬೇಕು. ಆಹಾರವು ಸಿಕ್ಕದಿರುವಾಗ ಕ್ಷಾಮದಿಂದಲೂ, ಅಕಾಲಮರಣದಿಂದಲೂ ಜನಪದವನ್ನು ತಪ್ಪಿಸಲು ಆರೋಗ್ಯಕರವೂ, ಬೃಂಹಣವೂ ಆದ ಮೂಲಿಕೆಗಳನ್ನು ತಿಳಿಯಲು ನಾವು ಔಷಧಾನ್ವೇಷಣಗಳನ್ನು ನಡಸಬೇಕು. ಅಥರ್ವಣ, ಮತ್ತು ರುಗ್ವೇದಗಳ ಸಂಹಿತೆಗಳೂ, ವರಾಹಮಿಹಿರ, ವಾಯು, ಸೋಮ ಇತ್ಯಾದಿ ಪುರಾಣಗಳೂ ಔಷಧಸೇವನೆಗಳಿಂದ ದೇಹವು ಖಿಲವಾಗದೆ, ಆರೋಗ್ಯವಾಗಿ ಇರಬಹುದೆಂದು ತಿಳಿಸುತ್ತವೆ. ಆ ಮಹೌಷಧಿಗಳನ್ನೂ ತಿಳಿಸಿದ್ದಾರೆ. ಯುವಕರಿಗೆ ವೀರ್ಯವೃದ್ಧಿ, ಧಾತುಪುಷ್ಟಿಗಳನ್ನು ತಿನ್ನಿಸುವ ಬದಲು ಬ್ರಹ್ಮಚರ್ಯವನ್ನು ಕಾಯುವ ರೀತಿಯನ್ನೂ, ಅಬ್ರಹ್ಮಚರ್ಯದಿಂದ ಆಗುವ ಭಯಂಕರ ಪರಿಣಾಮವನ್ನೂ ತಿಳಿಸುವುದು ನಮ್ಮ ಕರ್ತವ್ಯ. ಆಯುರ್ವೇದವೈದ್ಯರು ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಆಹಾರ, ಔಷಧಿಗಳ ವಿಚಾರವಾಗಿ ಶಾಸ್ತ್ರಸಮ್ಮತವಾದ ಸಲಹೆಗಳನ್ನು ನಿರ್ಭಯವಾಗಿ ಪ್ರಕಟಿಸುತ್ತಿರಬೇಕು. ಹಾಗೆಯೇ ಅಶಾಸ್ತ್ರೀಯವಾದ ಆಯುರ್ವೇದ ಔಷಧಿಗಳ ಮೇಲೆ ಹತೋಟಿಯನ್ನೂ ಇಡಬೇಕು....

ಪಾಶ್ಚಾತ್ಯ ದೇಶಗಳಲ್ಲಿ ವೈದ್ಯಸಂಘಗಳ ತೀರ್ಮಾನಕ್ಕೆ ಸರ್ಕಾರಗಳೂ ಕೂಡಾ ತಲೆಬಾಗುತ್ತವೆ. ಈ ಸಮಿತಿಗಳಿಗೆ ಸದಸ್ಯರಾಗುವುದೆಂದರೆ ವೈದ್ಯರಿಗೆ ಹೆಮ್ಮೆ. ವೈದ್ಯಸಂಘದ ಸದಸ್ಯನಾದ ಮಾತ್ರಕ್ಕೆ ಜನಪದವು ಅವನನ್ನು ಗೌರವಿಸುವುದು. ಅಂತೆಯೇ ನಾವೂ ನಮ್ಮ ಸಂಘಗಳನ್ನು ಬಲಪಡಿಸಬೇಕು.... ಜನಪದದಲ್ಲಿಯೂ, ಸರಕಾರದಲ್ಲಿಯೂ ಮಾನ್ಯತೆಯನ್ನು ದೊರಕಿಸಬೇಕು. ಪ್ರಶಸ್ತಿಗಳನ್ನು ವಿಕ್ರಯಮಾಡುತ್ತಿರುವ ಸಂಸ್ಥೆಗಳನ್ನು ಬಹಿಷ್ಕರಿಸಬೇಕು... ಮಂಡಲದ ಆಶ್ರಯದಲ್ಲಿ ಉತ್ತಮ ಸಂಶೋಧನಾಲಯವೂ ರುಗ್ಣಾಲಯವೂ ಸ್ಥಾಪಿತವಾಗಬೇಕು...

ಗ್ರಂಥಪ್ರಚಾರಗಳು ಅತ್ಯಾವಶ್ಯಕ. ಹೆಚ್ಚುಹೆಚ್ಚು ಆಯುರ್ವೇದ ಗ್ರಂಥಗಳು ಪ್ರಕಟವಾಗಿ ಆಯುರ್ವೇದ ಪುಸ್ತಕಭಂಡಾರವು ಹೆಚ್ಚಬೇಕು. ಉತ್ತಮ ಗ್ರಂಥಗಳನ್ನು ಅಚ್ಚುಹಾಕಿಸಲು ಮಂಡಲವು ನೆರವಾಗಬೇಕು. ಮಂಡಲದ ಪತ್ರಿಕೆಯ ಪ್ರಚಾರವನ್ನೂ ಹೆಚ್ಚಿಸಬೇಕಾಗಿದೆ...

ಕ್ರಿಮಿ ಮತ್ತು ಅವ್ಯಕ್ತಗಳು ರೋಗಕಾರಕಗಳಾಗದೆ ನಮ್ಮಲ್ಲಿ ಸದಾ ವಾಸಿಸುತ್ತಿದ್ದು ಧಾತು ಮತ್ತು ರಸಾದಿಗಳು ಮಿಥ್ಯಾಹಾರ ವಿಹಾರಗಳಿಂದ ವಿಷಮಿಸಿದ ಮೇಲೆ ರೋಗಕಾರಕಗಳಾಗಬಹುದು. ರಕ್ತಷ್ಠೀವಿ (Pneumonia) ಚಿತ್ತವಿಭ್ರಮಸನ್ನಿ (Typhoid) ಗಳಲ್ಲಿ ಪ್ರಯೋಗಿಸಿ ಆಹಾರಪರಿಣಾಮವನ್ನು ಸ್ಪಷ್ಟೀಕರಿಸಿ ಕಾಲಾರ್ಥಕರ್ಮಗಳ ಹೀನ ಮಿಥ್ಯಾತಿಯೋಗಗಳೇ ರೋಗಕಾರಕಗಳೆಂದೂ ಸಮ್ಯಕ್‌ಯೋಗವೇ ಆರೋಗ್ಯಸಾಧನವೆಂದೂ ಸಿಂದ್ಧಾಂತಮಾಡಿದ್ದಾರೆ. ಕ್ರಿಮಿ ಮತ್ತು ಅವ್ಯಕ್ತಗಳು ನೇರವಾಗಿ ರೋಗಕಾರಕಗಳಲ್ಲದಿರುವಾಗ, ವ್ಯಾಕ್ಸೈನ್ ಮತ್ತು ಸೀರಮ್ಮುಗಳು ದೇಹಕ್ಕೆ ಅಪಾಯಕರವೆಂದೂ ನರ ಮತ್ತು ಮಾನಸಿಕ ದೌಬಲ್ಯವನ್ನುಂಟುಮಾಡುತ್ತವೆಂದೂ ಹೇಳಿರುವಾಗ, ಈ ಪದ್ಧತಿಗಳಿಂದ ಪೀಳಿಗೆಯು ಕ್ರಮೇಣ ನಿರ್ವೀರ್ಯವಾಗುವುದೆಂದೂ ತಿಳಿದು, ಹೆಚ್ಚು ಹಾನಿಕರವಾಗಿರುವ ಈ ಸಾರ್ವಜನಿಕ ಸೂಜೀ ಮುಖ ಚಿಕಿತ್ಸೆಗಳನ್ನು ತ್ಯಜಿಸಿ ಉತ್ತಮ ಆಯುರ್ವೇದ ನಿರೋಧಕಗಳನ್ನು ಏಕೆ ಉಪಯೋಗಿಸಬಾರದು? ಪ್ರತಿಬಂಧಕ ಔಷಧಿಗಳು ಉಪರೋಗಗಳಿಗೆ ಎಡೆಗೊಡುತ್ತವೆಂಬುದು ಅನಿವಾರ್ಯ...

ಹೀಗಿರುವಲ್ಲಿ ಕೇವಲ ನಮ್ಮಲ್ಲಿ ಬೆಳೆದು ನಿಂತಿರುವ ಖನಿಜ, ಪ್ರಾಣಿ, ಔಷಧಿಗಳ ಸರ್ವತೋಮುಖವಾದ ಉಪಯೋಗಗಳನ್ನು ತಿಳಿಸಿರುವ ವೈದ್ಯವನ್ನು ಈಗಲಾದರೂ ಎತ್ತಿ ಹಿಡಿದರೆ ಮುಂದಿನ ದುರ್ದಿನಗಳು ಹಿಂದೂಸ್ಥಾನದಲ್ಲಿ ಕಾಲಿಡದಂತೆ ಮಾಡಬಹುದು... ಆಯುರ್ವೇದ ತತ್ವಗಳು ಸಹಸ್ರಾರು ವರ್ಷಗಳ ಪ್ರಯೋಗದ ಪರೀಕ್ಷೆಯ ಫಲಿತಾಂಶ. ಜೀವ ಚಕ್ಷುಸ್ಸಿನಿಂದ ನೋಡಲರಿಯದ ಅವ್ಯಕ್ತಗಳನ್ನು ಆಯುರ್ವೇದೀಯರು ತಿಳಿಸಿದ್ದಾರೆ. ಪಂಚಭೂತಗಳ ವಿವಿಧ ಸಮ್ಮಿಲನದಿಂದ ಸೃಷ್ಟಿಯಾಗಿರುವ ಪ್ರಕೃತಿಯನ್ನು ಭೇದಿಸಿ, ಅದರಲ್ಲಿರುವ ಸಮಸ್ತ ವಸ್ತುಗಳ ಪಂಚಭೂತ ಪ್ರಮಾಣವನ್ನು ಅಳೆದು ತೋರಿಸಿದ್ದಾರೆ.... ಆಯುರ್ವೇದಕ್ಕೆ ನ್ಯಾಯವಾದ ಪುರಸ್ಕಾರವು ದೊರೆತರೆ ನೂರು ವರ್ಷಗಳ ಪ್ರಯೋಗದಿಂದ ಮಾಡಲಾಗದದ್ದನ್ನು ಹತ್ತಾರು ವರ್ಷಗಳಲ್ಲಿ ಹೆಚ್ಚು ಪ್ರಭಾವದಿಂದ ಮಾಡಿ ತೋರಿಸಬಲ್ಲೆವೆಂದು ನಾನು ನಿರ್ಭಯವಾಗಿ, ನಿಸ್ಸಂಕೋಚವಾಗಿ ಹೇಳಬಯಸುತ್ತೇನೆ.

ಆಯಾ ಪ್ರಾಂತ್ಯದ ಸರ್ಕಾರಗಳು ಆರೋಗ್ಯ ಶಾಖೆಗಳಲ್ಲಿ ನಮಗೆ ಸರಿಯಾದ ಪಾಲುಗಾರಿಕೆಯನ್ನು ಕೊಡಬೇಕು. ಪ್ರಯೋಗಕ್ಷೇತ್ರಗಳನ್ನು ನಮಗೆ ಮೀಸಲಾಗಿಡಬೇಕು. ಸಂಶೋಧನಾಲಯಗಳನ್ನು ಸ್ಥಾಪಿಸಿ, ಉಚ್ಚವೈದ್ಯ ಶಾಸ್ತ್ರವೇತ್ತರನ್ನೇ ಅದರ ಆಡಳಿತಕ್ಕೆ ನಿಯಮಿಸಬೇಕು.. ಶುದ್ಧ ಆಯುರ್ವೇದವನ್ನು ಕಲಿಸುವ ಪ್ರೌಢ ವಿದ್ಯಾಶಾಲೆಗಳು ಸ್ಥಾಪಿತವಾಗಬೇಕು.

ಅಲೋಪತಿಗಿಂತ ಹೆಚ್ಚಿನ ಪುನರುದ್ಧಾರವನ್ನು, ಪ್ರೋತ್ಸಾಹವನ್ನು ಸರಕಾರವು ಆಯುರ್ವೇದೀಯರಿಗೆ ನೀಡಿದ್ದಾದರೆ, ಕೆಲವೇ ಕೆಲವು ವರ್ಷಗಳಲ್ಲಿ ಅಲೋಪತಿ ವೈದ್ಯವನ್ನು ಮೀರಿಸಿ ಈಗಿರುವ ಸಕಲ ಆಸ್ಪತ್ರೆಗಳಲ್ಲಿ ಉಚ್ಚ ದೇಶೀಯ ವೈದ್ಯವೇ ಜನಪದದ ನಂಬಿಕೆಯನ್ನು ಗಳಿಸುವುದಲ್ಲದೆ, ಮತ್ತೊಮ್ಮೆ ಈ ವೈದ್ಯ ವಿಜ್ಞಾನವನ್ನು ಕಲಿಯಲು ಪಾಶ್ಚಾತ್ಯ ದೇಶಗಳಿಂದ ತಂಡತಂಡವಾಗಿ ವಿದ್ಯಾರ್ಥಿಗಳು ಬರಲಾರಂಭಿಸುವರೆಂದು ನಾವು ಉಚ್ಚ ಕಂಠದಿಂದ ಆಶ್ವಾಸನ ಕೊಡಬಲ್ಲೆವು....

ವೈದ್ಯಕ್ಕೂ, ರಾಜಕೀಯಕ್ಕೂ ಸಂಬಂಧವಿಲ್ಲ, ಇರಬಾರದು ಎಂದು ಕೆಲವರು ವಾದಿಸುವವರು ಇದ್ದಾರೆ. ಯಾವ ದೇಶದ ಸಂಸ್ಕೃತಿಯು ಮುಂದಕ್ಕೆ ಬರಬೇಕಾದರೂ ರಾಷ್ಟ್ರೀಯಪೋಷಣೆ ಅತ್ಯಾವಶ್ಯಕ. ಈ ರಾಷ್ಟ್ರೀಯ ಪೋಷಣೆಯಿಂದಲೇ ಅಲೋಪತಿ ವೈದ್ಯವು ಇಷ್ಟು ಬೇಗನೆ ನಮ್ಮಲ್ಲಿ ಬೇರು ಬಿಟ್ಟಿದೆ. ಪೂರ್ಣ ರಾಷ್ಟ್ರೀಯ ಸರ್ಕಾರವೇ ನಮ್ಮ ಯಶಸ್ಸಿಗೆ ಮದ್ದು....

"ಇಂದಿನಿಂದ ದೇಶೀಯ ಔಷಧಿಗಳನ್ನು ವಿನಃ ಬೇರೆ ಔಷಧಿಗಳನ್ನು ಸೇವಿಸುವುದಿಲ್ಲವೆಂದೇ ಈ ಸಂಕಲ್ಪ." ತಮ್ಮ ಈ ಸಂಕಲ್ಪದಿಂದ ಭಾರತೇತರ ದೇಶಗಳಲ್ಲಿ ಊಹಿಸಲಶಕ್ಯವಾಗುವ ಆಂದೋಳನವಾಗುವುದು. ತಾವು ದೇಶೀಯ ವೈದ್ಯಶಾಲೆಗಳ ಸ್ಥಾಪನೆಗೆ ಸರಕಾರಗಳನ್ನು ಒತ್ತಾಯಪಡಿಸಬೇಕು. ಈ ದೇಶೀಯ ವೈದ್ಯರು ಶುದ್ಧಾಯುರ್ವೇದದವರೇ ಆಗರಬೇಕು. ಶಸ್ತ್ರಚಿಕಿತ್ಸೆಯೇ ಬೇಕಾದರೇನುಮಾಡುವುದು? ಎಂಬ ಪ್ರಶ್ನೆಯು ಈಗ ಏಳುವುದು. ಶಸ್ತ್ರಚಿಕಿತ್ಸೆಯು ದೇಶೀಯವೈದ್ಯರ ಗತವೈಭವ. ಅದನ್ನು ಪುನರುಜ್ಜೀವನಗೊಳಿಸಲು ಸ್ವಾಧ. ಆದರೆ ಅದು ಕಾಲದ ಮಾತು. ಶಸ್ತ್ರಚಿಕಿತ್ಸೆಯೇ ಅತ್ಯಗತ್ಯವಾಗಿ ಬೇಕಾಗುವುದು, ಸಾವಿರಕ್ಕೆ ಒಂದು ಸಹ ಅಲ್ಲ. ಚಿಕಿತ್ಸಾನಂತರ ಸೇವಿಸಬಹುದಾದ ಉತ್ತಮ ದೇಶೀಯ ಔಷಧಿಗಳಿವೆ. ತಮ್ಮ ಈ ಸಂಕಲ್ಪವು ನಮ್ಮನ್ನು ಹುರಿದುಂಬಿಸುವುದು. ತಮಗೆ ಬೇಕಾದ ಪೆನ್ಸಿಲಿನ್, ವಿಟಮಿನ್, ಮೀರಿಸಿದ ಪ್ರಭಾವವುಳ್ಳ ಔಷಧಗಳನ್ನೂ ಶ್ರೇಷ್ಠ ಆರೋಗ್ಯಕರವಾದ ರುಗ್ಣಾಹಾರಗಳನ್ನು ವಾಕ್ಸಿನ್‌ಸೆರಮ್ಮುಗಳಿಗಿಂತ ದೋಷರಹಿತವಾದ ಉತ್ತಮ ನಿವಾರಕ ನಿರೋಧಕಗಳನ್ನೂ ಆಯುರ್ವೇದವು ಬಹು ಅಲ್ಪ ಕಾಲದಲ್ಲಿ ಸಿದ್ಧಗೊಳಿಸಬಲ್ಲುದೆಂದು ತಮಗೆ ಅಭಿವಚನ ಕೊಡುತ್ತೇವೆ.

ಮಾಲ್ಟಿನ್

ಮೊದಲೇ ಜೀರ್ಣಿಸಲ್ಪಟ್ಟ ಶಕ್ತಿವರ್ಧಕ ಆಹಾರಪಾನೀಯ

ಮಕ್ಕಳಿಗೂ ದುರ್ಬಲರಿಗೂ ವಿಶೇಷತಃ ಶಿಫಾರಸು ಮಾಡಲ್ಪಟ್ಟಿದೆ.

ದೊರಕುವ ಸ್ಥಳ:- ಬಾಲಸಾಹಿತ್ಯ ಮಂಡಳ ಲಿಮಿಟೆಡ್, ಮಂಗಳೂರು.

ಸ್ವದೇಶಾಭಿಮಾನಿ

ತಾರೀಕು 12—1—1945

ಫೆಸಿಸ್ಟ್ ಸರ್ವಾಧಿಕಾರದ ಅಪಾಯ

ಈಗಿನ ಯುದ್ಧವು ವಿಚಿತ್ರವಾದುದು–ಅಂತ್ಯವಿಲ್ಲದ ವಿಚಿತ್ರಗಳಿಂದ ತುಂಬಿದಂತಹುದು. ಜಗತ್ತಿನಲ್ಲಿ ಲೋಕಕಂಠಕವಾದ ಫೆಸಿಸ್ಟ್ ನಿರಂಕುಶ ಸರ್ವಾಧಿಕಾರ ತತ್ವವನ್ನು ಮಣ್ಣು ಗೂಡಿಸಲೆಂದು ಮಿಲಿಯಾಂತರ ವೀರರು ತಮ್ಮ ರಕ್ತವನ್ನು ಸುರಿಸುತಿದ್ದಾರೆ. ಒಂದು ಕ್ಷಣ ಅವರು ತಮ್ಮ ಧ್ಯೇಯದ ಯೋಗ್ಯಾಯೋಗ್ಯತೆಗಳನ್ನು ಪುನಃರಾಲೋಚಿಸ ನಿಂತರೆ ಅವರಲ್ಲಿ ಬಲವಾದ ಸಂದೇಹ ಉಂಟಾಗುವುದು ಖಂಡಿತ.

ಸಾಮ್ರಾಜ್ಯವಾದಿ ಬ್ರಿಟನ್ನು, ಸಮತಾವಾದಿ ರಷ್ಯ, ಪ್ರಜಾಪ್ರಭುತ್ವವಾದಿ ಅಮೇರಿಕ, ರಾಷ್ಟ್ರೀಯವಾದ ಚೀನಾಗಳು ಒಂದು ಕಡೆ. ಪೆಸಿಸ್ಟ್ ನಾಜಿಗಳ ಜರ್ಮನಿ, ಸಾಮ್ರಾಜ್ಯಲಾಲಸೆಯ ಫೆಸಿಸ್ಟ್ ಧೋರಣೆಯ ಜಪಾನು ಇನ್ನೊಂದು ಕಡೆ. ಫ್ರಾನ್ಸು ಒಳಗೆ ಪ್ರಜಾಪ್ರಭುತ್ವವಾದಿಯಾದರೂ ಹೊರಗೆ ಸಾಮ್ರಾಜ್ಯವಾದಿಯಾಗಿತ್ತು. ರಷ್ಯವು ಒಂದು ಕಾಲದಲ್ಲಿ ಸ್ವತಂತ್ರ ಜನತೆಯ ಆಳ್ವಿಕೆಯಲ್ಲಿ ವಿಶ್ವಾಸವಿದ್ದ ದೇಶವಾಗಿದ್ದರೂ ಈಗ ಸಾಮ್ರಾಜ್ಯ ಕಟ್ಟಲು ಹವಣಿಸುತ್ತಿದೆ. ಪ್ರಜಾಪ್ರಭುತ್ವದ ಚೀನದಲ್ಲಿ ಸಮತವಾದಿಗಳಿಗೆ ತಲೆ ಎತ್ತಬಿಡುವುದಿಲ್ಲ. ಆದರ್ಶ ಪ್ರಜಾಪ್ರಭುತ್ವವಾಗಿ ಮೆರೆದ ಅಮೇರಿಕವು ಗ್ರೀಸಿನಲ್ಲಿ ಮಿತ್ರರ ಧೋರಣೆಯಿಂದ ಅವಕ್ಕಾಗಿದೆ. ಈ ಯುದ್ಧವು ಯಾರು ಯಾರಿಗಾಗಿ, ಏತಕ್ಕೆ ಹೋರಾಡಲ್ಪಡುವುದೆಂಬುದೇ ತಿಳಿಯುವುದಿಲ್ಲ.

ಅಪಾಯಕಾರಿ ಸ್ಪೈನ್

ಚರ್ಚಿಲ್ಲರು ತಮ್ಮ ಪಾರ್ಲಿಮೆಂಟ್ ಭಾಷಣದಲ್ಲಿ ಸ್ಪೈನನ್ನು ಮಿತ್ರನಂತೆ ಸಂಬೋಧಿಸಿ ಉದ್ಗಾರ ಮಾಡಿದರು. ಸ್ಪೈನು ಈಗ ಅದೆಂತಹ ಸರಕಾರದಿಂದ ಆಳಲ್ಪಡುತ್ತಿದೆ ಎಂದು ಅವರು ಗಮನಿಸಿದಂತೆ ತೋರುವುದಿಲ್ಲ. ಸ್ಪೈನಿನಲ್ಲಿ ಇಂದು ಹಿಟ್ಲರ್ ಮುಸಲೋನಿಗಳ ಅತೀ ಪ್ರೀತಿಯ ಸ್ನೇಹಿತನಾದ ಜನರಲ್ ಫ್ರೆಂಕೋವು ಸರ್ವಾಧಿಕಾರ ನಡೆಸುತಿದ್ದಾನೆ. ಈತನು ರಷ್ಯದ ಬದ್ಧ ವೈರಿಯಾಗಿದ್ದಾನೆಂದು ಆಣೆ ಹಾಕಿಕೊಂಡ ವ್ಯಕ್ತಿ. ಸ್ಪೈನಿನಲ್ಲಿ ಅಂತಃಕಲಹ ನಡೆದಾಗ ಹಿಟ್ಲರ್ ಮುಸಲೋನಿಗಳು ಇವನಿಗೆ ಬಹಿರಂಗವಾಗಿ ಶಸ್ತ್ರಾಸ್ತ್ರಗಳಿಂದಲೂ, ಸೈನ್ಯದಿಂದಲೂ ಸಹಾಯ ಮಾಡಿದರು. ಮಧ್ಯ ಯುರೋಪಿನಲ್ಲಿ ಬಲವಾಗಿ ಬೇರೂರಿದ ಒಂದು ಪ್ರಜಾಪ್ರಭುತ್ವವು ಕೊನೆಗೊಳಿಸಲ್ಪಟ್ಟಿತು.

೧೯೩೮ರ ಮುಂಚೆ ಯುರೋಪಿನಲ್ಲಿ ಅದ್ಭುತ ಘಟನೆಗಳು ನಡೆದವು. ಹಿಟ್ಲರನು ನೆರೆಕೆರೆಯ ರಾಜ್ಯಗಳನ್ನು ಆಶಿಸಿದಾಗ ಆಗ ಇಂಗ್ಲೆಂಡಿನ ಪ್ರಧಾನರಾಗಿದ್ದ ಚೇಂಬರ್ಲೀನರು ಅವನ ಬಳಿಗೆ ಓಡಿ ಒಂದೊಂದಾಗಿ ನಿರ್ಬಲ ರಾಷ್ಟ್ರಗಳಾದ ಆಸ್ಟ್ರಿಯಾ ಜೆಕೋಸ್ಲೊವೇಕಿಯಗಳನ್ನು ದಾರೆ ಎರೆದುಕೊಟ್ಟಂತೆ ಆ ಫೆಸಿಸ್ಟ್ ಪುಂಡನಿಗೆ ಅರ್ಪಿಸಿದರು. ಅಂತೆಯೇ ಸ್ಪೈನಿನಲ್ಲಿ ಅಲ್ಲಿನ ಪ್ರಜಾಪ್ರಭುತ್ವ ಸರಕಾರಕ್ಕೂ, ದಂಗೆಕೋರ ಸರ್ವಾಧಿಕಾರಿ ಸೇನಾಪತಿ ಫ್ರೆಂಕೋವಿಗೂ ಕೈ ಕೈ ಹತ್ತಿದಾಗ ಇಂಗ್ಲೆಂಡು 'ತಾಟಸ್ಥ್ಯ'ವನ್ನು ವಹಿಸಿತು. ಪರಿಣಾಮವಾಗಿ ಯುರೋಪಿನ ಬಲವಾದ ಒಂದು ಪ್ರಜಾಪ್ರಭುತ್ವ ಆಡಳಿತೆಯು ಬಿದ್ದು ಹೋಯಿತು.

ಸ್ಪೈನು ಇಂದು ಪ್ರಜಾಪ್ರಭುತ್ವವಾಗಿರುತಿದ್ದರೆ ಫ್ರಾನ್ಸು ಎಂದಿಗೂ ಬೀಳುತ್ತಿರಲಿಲ್ಲ. ಜರ್ಮನಿಯ ಸೊಕ್ಕನ್ನು ಎಂದೋ ಮುರಿಯಬಹುದಿತ್ತು. ಮಿಲಿಯಾವಧಿ ಸ್ಪೈನಿಶ್ ಸೈನ್ಯಗಳು ಇಂದು ಮಿತ್ರರ ಭುಜಕ್ಕೆ ಭುಜಕೊಟ್ಟು ಕಾದಾಡುತಿದ್ದರು. ಆದರೆ ಫೆಸಿಸ್ಟರನ್ನು ಮುರಿದಿಕ್ಕುವುದು ಇಂಗ್ಲೆಂಡಿಗೆ ಬೇಡವಾಗಿದೆ ಎಂದು ತೋರುತ್ತದೆ.

ಹಾಗಾದರೆ ಇಂದು ಮಿತ್ರರ ಧ್ಯೇಯವೇನು? ಜಗತ್ತಿನ ಸರ್ವಾಧಿಕಾರಿ ತತ್ವವನ್ನು ನಾಶಮಾಡುವುದೇ? ಇಲ್ಲವೆ ಜರ್ಮನಿಯ ಸರ್ವಾಧಿಕಾರವನ್ನು ಅಂತ್ಯಗೊಳಿಸುವುದು ಮಿತ್ರರ ಧ್ಯೇಯವಾಗಿದ್ದರೆ, ಈ ಯುದ್ಧವು ಖಂಡಿತವಾಗಿ ಇನ್ನೊಂದು ಸಲ ಹೋರಾಡಲ್ಪಡಬೇಕು. ಕಾರಣ ಸರ್ವಾಧಿಕಾರವೆಂಬ ಈ ನಿರಂಕುಶ ಪ್ರಭುತ್ವದ ರೋಗಾಣುಗಳನ್ನೆ ನಾಶಮಾಡದಿದ್ದರೆ ಜಗತ್ತನ್ನು ಸಂಗ್ರಾಮದ ಘೋರ ನರಕಕ್ಕೆ ತಳ್ಳುವ ಈ ಫೆಸಿಸ್ಟ್ ಜಾಡ್ಯವನ್ನು ತಡೆಗಟ್ಟಲಾಗುವುದಿಲ್ಲ.

ಫ್ರೆಂಕೋವಿನ ತಾಟಸ್ಥ್ಯ

ಇಂದು ಸ್ಪೈನು ತಾಟಸ್ಥ್ಯ ವಹಿಸಿದೆ. ಇದರಿಂದ ಜನರಲ್ ಫ್ರೆಂಕೋಗೆ ಬ್ರಿಟಿಷರ ಇಲ್ಲವೆ ಮಿತ್ರರ ಮೇಲೆ ತುಂಬಾ ಪ್ರೀತಿ ಎಂದರ್ಥವಲ್ಲ. ೧೯೩೭ರ ಸ್ಪೈನಿನ ಅಂತಃಕಲಹದಿಂದ ಆ ದೇಶದ ಇಡೀ ಪರಿಸ್ಥಿತಿಯೇ ಜರ್ಜರಿತವಾಯಿತು. ಹತ್ತು ವರ್ಷಕ್ಕೆ ಸುಧಾರಿಸಿಕೊಳ್ಳದಂತಹ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗೆ ಅದು ಒಳಗಾಯಿತು. ಮತ್ತೆ ೧೯೩೯ರಲ್ಲಿ ಬ್ರಿಟನ್ನು ಜರ್ಮನಿಯ ಮೇಲೆ ಯುದ್ಧ ಸಾರಿದಾಗ ಸ್ಪೈನು ಯಾವ ಸಿದ್ಧತೆಯಲ್ಲೂ ಇರಲಿಲ್ಲ. ಆದುದರಿಂದಲೇ ಫ್ರೆಂಕೋ ಸುಮ್ಮನೆ ಇದ್ದುಬಿಟ್ಟಿದ್ದಾನೆ. ಸರ್ವಸಿದ್ಧನಾಗಿರುತಿದ್ದರೆ ಅವನು ಹಿಟ್ಲರನ ಕಡೆ ಸೇರಲು ಹಿಂದುಮುಂದು ನೋಡುತ್ತಿರಲಿಲ್ಲ. ಒಂದುವೇಳೆ ಈಗ ಅವನು ಯುದ್ಧ ಸಾರುತಿದ್ದರೆ ಮುಸ್ಸೋಲಿನಿಯ ಅವಸ್ಥೆಯೇ ಅವನಿಗಾಗುತಿತ್ತು.

ಈ ಫ್ರೆಂಕೋವನ್ನು ಉಳಿಸುವುದಾದರೆ ಹಿಟ್ಲರನನ್ನೂ ಉಳಿಸಬಹುದೆಂದು ಓರ್ವ ಲೇಖಕರು ಅಭಿಪ್ರಾಯಪಡುತ್ತಾರೆ. ಹಿಂದಿನ ಯುದ್ಧದ ಭೀಕರ ಪರಿಣಾಮಗಳು ಜರ್ಮನಿಯ ಮೇಲಾಗದಂತೆ ಹಿಂದಿನ ಕೈಸರನು ಹೊಲೆಂಡದ ಡೂರ್ನ್ ಎಂಬಲ್ಲಿ ತಲೆಮರೆಸಿಕೊಂಡು ಗುಪ್ತವಾಗಿ ಇಂದಿನ ಹಿಟ್ಲರನಿಗೆ ಉತ್ತೇಜನ ಕೊಟ್ಟನೆಂದು ಹೇಳಲಾಗಿದೆ. ಒಂದು ವೇಳೆ ಹಿಟ್ಲರನು, ಜರ್ಮನಿಯ ಸೋಲು ಖಂಡಿತವಾದರೆ, ಸ್ಪೈನಿನಲ್ಲಿ ಆಶ್ರಯಪಡೆಯುವುದರಲ್ಲಿ ಅಡಿಯೇನಿದೆ? ಅಲ್ಲಿ ಇದ್ದು ಅವನು ಫೆಸಿಜಂ ಪ್ರಚಾರ ಮಾಡದಿರಲಿಕ್ಕಿಲ್ಲ. ಹಾಗಾದರೆ ಈ ಫೆಸಿಜಂ ಭೂತಕ್ಕೆ ಅಳಿಗಾಲ ಖಂಡಿತವಾಗಿ ಇಲ್ಲವೆಂದಾಯಿತು.

ಚರ್ಚಿಲ್ಲರ ಕೌತುಕ ಧೋರಣೆ

ಈ ಯುದ್ಧದ ಲಕ್ಷಣವೇ ಹಾಗೆ. ರಷ್ಯದ ಘಾತುಕ ಕೊಮ್ಯುನಿಸಮನ್ನು ನಾಶಮಾಡುವ ಧ್ಯೇಯದ ಮೇಲೆ ತನ್ನ ಇಡೀ ಅಸ್ತಿತ್ವವನ್ನೆ ಕಟ್ಟಿದ ಹಿಟ್ಲರನು ಯುದ್ಧಾರಂಭದಲ್ಲಿ ೨೪ ತಾಸುಗಳಲ್ಲಿ ಸ್ಟೇಲಿನನೊಡನೆ ಒಪ್ಪಂದ ಮಾಡಿಕೊಂಡನು. ಆ ಮೈತ್ರಿಯಿಂದ ನಂತರ ರಷ್ಯಕ್ಕೆ ಎಷ್ಟೊಂದು ಅಪಘಾತವಾಯಿತೆಂದು ವರ್ಣಿಸಲು ಸಾಧ್ಯವಿಲ್ಲ. ಮೊಸ್ಕೊತನಕದ ಪ್ರದೇಶವು ಒಂದು ಸಲಕ್ಕೆ ಸ್ಮಶಾನವಾಯಿತು.

ಚೆಂಬರ್ಲೀನರು ಹಿಟ್ಲರ್ ಮುಸ್ಸೋಲಿನಿಗಳನ್ನು ಒಲಿಸಿಕೊಂಡಾಗ ಹಾವಿಗೆ ಹಾಲೆರೆದಂತಾಯಿತು. ಮುಂಬರುವ ಘೋರ ಪರಿಸ್ಥಿತಿಯನ್ನು ತಡೆಯಲಾರದೆ ಅವರು ತಮ್ಮ ಸ್ಥಾನ ಖಾಲಿಮಾಡಬೇಕಾಗಿ ಬಂತು. ನಂತರ ಬ್ರಿಟನಿನ ಪ್ರಧಾನಿಗಳಾದವರು ಕೊಮ್ಯುನಿಸ್ಟ್ ವಿರೋಧಿ ಚರ್ಚಿಲ್ಲರು. ಅವರಾದರೊ ರಷ್ಯದ ನೀತಿಯನ್ನು ಹಿಟ್ಲರನಿಗೆ ಕಮ್ಮಿ ಎನಿಸಿದಷ್ಟು ಕಡುವಾಗಿ ಟೀಕಿಸಿದವರು. ಅವರೂ ಸ್ಟಾಲೀನನೊಂದಿಗೆ ಮೈತ್ರಿ ಬೆಳೆಸಿ ಅವನನ್ನೂ ಅವನ ಕೆಂಪು ಪಡೆಯನ್ನೂ ಈಗ ಶ್ಲಾಘಿಸತೊಡಗಿರುವರು.

ಈಗ ಚರ್ಚಿಲ್ಲರು ಜನರಲ್ ಫ್ರೆಂಕೋವಿನ ಬೆನ್ನು ಚಪ್ಪರಿಸುತಿದ್ದಾರೆ. ಚೆಂಬರ್ಲೀನರ ತಪ್ಪುಗಳನ್ನು ಇವರೂ ಮಾಡಿದಂತಾಗಬಹುದೆಂದು ರಾಜಕೀಯ ಶಾಸ್ತ್ರತಜ್ಞರು ಸಂದೇಹಪಟ್ಟು ಕೊಳ್ಳುತಿದ್ದಾರೆ. ವಿಶ್ವ ಸ್ವಾತಂತ್ರ್ಯಕ್ಕಾಗಿ ಹೋರಾಡುವವರು ಸ್ವಾತಂತ್ರ್ಯ ವಿರೋಧಿಗಳೊಡನೆ ಮಿತ್ರತ್ವ ಬೆಳೆಸಿದರೆ ಹೇಗಾದೀತು? ನಿನ್ನೆ ಹಿಟ್ಲರನು ಮಾಡಿದನ್ನು ನಾಳೆ ಫ್ರೆಂಕೋ ಮಾಡುವನು ಎಂಬುದನ್ನು ಮರೆಯಬಾರದು. ಫೆಸಿಸ್ಟರನ್ನು ವಿಶ್ವಾಸದಿಂದ ಕಾಣುವುದು ತಲೆಗಿಂಬಿನಡಿಯಲ್ಲಿ ಹಾವಿಟ್ಟುಕೊಂಡಿರುವುದೂ ಒಂದೇ.

ಅಮೇರಿಕನ್ನರು ಜಪಾನನ್ನು ಮೆಚ್ಚಿಸಲು ಸಂಧಾನ ನಡೆಸಿದರು. ಅವರ ಓರ್ವ ರಾಯಭಾರಿಯು ವಾಶಿಂಗ್ಟನ್ನಿಗೆ ಹೋಗಿ ಮಾತುಕತೆ ನಡೆಸಿದನು. ಮಾತುಕತೆ ಮುರಿಯಿತು, ರಾಯಭಾರಿಯು 'ಮಾತುಕತೆ ಮುರಿದರೂ ಮೈತ್ರಿಗೆ ಹಾನಿಬರಲಿಲ್ಲ'ವೆಂದು ಹೇಳಿ ಹಿಂತಿರುಗಿದನು. ಸ್ವದೇಶವನ್ನು ಮುಟ್ಟುವುದರೊಳಗೆ ಪರ್ಲ್ ಹಾರ್ಬರ್ ಪ್ರಕರಣದ ಭೀಕರ ವಾರ್ತೆಯು ಪ್ರಪಂಚವನ್ನು ದಿಗಿಲುಗೊಳಿಸಿತು. ವಿಶ್ವಾಸಘಾತಿ ಜಪಾನೀ ಫೆಸಿಸ್ಟರು ಏಕಾಏಕಿಯಾಗಿ ಎಚ್ಚರ ಕೊಡದೆ ಅಮೇರಿಕನ್ ನೌಕೆಯನ್ನು ಪುಡಿಮಾಡಹತ್ತಿದರು.

ಆದುದರಿಂದ ಫೆಸಿಸ್ಟ್ ಸರ್ವಾಧಿಕಾರಿಗಳನ್ನು ನಂಬದಿರುವುದು ಲೇಸು. ಜರ್ಮನಿಯನ್ನು ನಾಶಮಾಡಿದರೆ ಕರ್ತವ್ಯ ಮುಗಿಯಲಿಲ್ಲ. ಫೆಸಿಜಮ್ ತತ್ವವನ್ನು ನಿರ್ಮೂಲಿಸಬೇಕು. ಜಗತ್ತಿನ ಜನತೆಯು ಕೆಲವೊಂದು ಪುಂಡ ದಬ್ಬಾಳಿಕೆಗಾರರ ಕೈಕೆಳಗೆ ಸಂಕಷ್ಟ ಪಡುವುದನ್ನು ನಿಲ್ಲಿಸಿದಾಗಲೇ ಜಗತ್ತಿಗೆ ಶಾಂತಿಯುಂಟಾಗುವುದು. ಅದುಕಾರಣ ಚರ್ಚಿಲ್ಲರು ಫ್ರೆಂಕೋವನ್ನು ದೂರವಿರಿಸುವುದು ಹೆಚ್ಚು ಶ್ರೇಯಸ್ಕರ.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ

ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ಕ್ರಾಂತಿಯುಕ್ತ ಪುನರ್ರಚನೆಬೇಕು

ಅಸ್ಪೃಶ್ಯತೆ ಹಿಂದೂ ಧರ್ಮವಲ್ಲ

ಯುದ್ಧದಂತೆ ಶಾಂತಿಯೂ ಅವಶ್ಯ -

"ಜಗತ್ತು ಇಂದು ಕ್ರಾಂತಿಯುಕ್ತ ಪುನಃರ್ರಚನೆಗಾಗಿ ಹಾತೊರೆಯುತ್ತಿದೆ. ಮಾನವೀ ಶಕ್ತಿಯ ಉತ್ಕ್ರಾಂತಿಯ ಚಳವಳದಲ್ಲಿ ಆತ್ಮ ಪ್ರಭಾವವುಳ್ಳ ವ್ಯಕ್ತಿಗಳು ಮುಂದಾಳತ್ವ ವಹಿಸಿದ್ದಾರೆ. ಭಾರತದಲ್ಲಿ ನಾವು ದ್ವಿದಳ ಸಾಂಪ್ರದಾಯ ಪದ್ಧತಿಯೊಂದನ್ನು ಬೆಳಸಿಕೊಂಡು ಬಂದಿದ್ದೇವೆ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರೆಂದು ಒಂದು ಕಡೆ ನಾವು ಸಾರುತಿದ್ದೇವೆ. ಇನ್ನೊಂದು ಕಡೆಯಲ್ಲಿ ನಾವು ಈ ಸ್ಪರ್ಶ ಅಸ್ಪೃಶ್ಯತಾ ಬೇಧವನ್ನಿಟ್ಟುಕೊಂಡಿದ್ದೇವೆ."

ಇದನ್ನು ಕಾಶೀ ವಿದ್ಯಾಲಯದ ಪ್ರಧಾನಾಧಿಕಾರಿಗಳೂ, ಜಗತ್ತಿನ ದೊಡ್ಡ ತತ್ವಜ್ಞಾನ ಶಾಸ್ತ್ರ ಪಂಡಿತರೂ ಮತ್ತು ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ತತ್ವಜ್ಞಾನ ಪ್ರೊಫೆಸರರೂ ಆಗಿದ್ದ ಸರ್ ಸರ್ವಪಳ್ಳಿ ರಾಧಾಕೃಷ್ಣನ್ ಅವರು ಮಾಡಿದ ಭಾಷಣದಲ್ಲಿ ಹೇಳಿದರು.

'ಹರಿಜನರ ವಿಷಯದಲ್ಲಿ ನಮ್ಮ ವರ್ತನೆ, ಜಾತಿಕಟ್ಟಳೆಯ ಕಡುತ್ವ ಇವು ಹಿಂದೂಧರ್ಮದ ತತ್ವಗಳಿಗೆ ಶುದ್ಧ ವಿರೋಧವಾದವುಗಳು. ದಾಸ್ಯದ ಹೀನತ್ವಕ್ಕೆ ಒಳಪಟ್ಟ ಜೀವನ ಕ್ರಮವನ್ನು ಪರಿವರ್ತಿಸಲು ಜಗತ್ತಿನಲ್ಲಿ ಅವತಾರಿ ಪುರುಷರು ಜನ್ಮವೆತ್ತಿದರು. ಇಂದು ಅಂತಹ ಮಿಲಿಯಾವಧಿ ನೊಂದ ಜನತೆಯ ಹೃದಯದಲ್ಲಿ ಆಶಾಕಿರಣವನ್ನು ಬೆಳಗಿದವರೆಂದರೆ ಮಹಾತ್ಮಾ ಗಾಂಧಿಯವರು'.

ಈ ರೀತಿ ತತ್ವಜ್ಞಾನಿ ರಾಧಾಕೃಷ್ಣನರು ಪಾಟ್ನಾ ವಿಶ್ವವಿದ್ಯಾಲಯದ ರಜತೋತ್ಸವದ ತಮ್ಮ ಭಾಷಣದಲ್ಲಿ ಗಾಂಧೀಜಿಯ ಜೀವನ ಧ್ಯೇಯಗಳನ್ನು ಶ್ಲಾಘಿಸಿದರು.

ಮಿತ್ರರಾಷ್ಟ್ರಗಳ ಕರ್ತವ್ಯ

'ಮಿತ್ರ ರಾಷ್ಟ್ರಗಳು ಘೋಷಿಸಿದ ಸ್ವಾತಂತ್ರ್ಯ ತತ್ವಗಳನ್ನು ಕಾರ್ಯರೂಪಕ್ಕೆ ತಂದರೆ, ನಿಜವಾಗಿಯೂ ಎಲ್ಲರಲ್ಲಿ ಒಂದು ಹೃದಯ ಪರಿವರ್ತನೆಯಾದರೆ, ಸಾಮ್ರಾಜ್ಯವಾದವನ್ನು ಎಲ್ಲರೂ ತ್ಯಜಿಸಿದರೆ, ಜನಾಂಗದರ್ಪವನ್ನು ಎಲ್ಲರೂ ಕಡಿಮೆ ಮಾಡಿಕೊಂಡರೆ ಮತ್ತು ಒಂದು ವಿಶ್ವ ನ್ಯಾಯಸ್ಥಾನವೂ ಸಂಸ್ಥೆಯೂ ಸ್ಥಾಪಿಸಲ್ಪಟ್ಟರೆ ಈ ಜಗತ್ತು ಖಂಡಿತವಾಗಿ ಒಂದು ಯೋಗ್ಯ ವಾಸಸ್ಥಾನವಾಗಿ ಮಾರ್ಪಡುವುದು'. ಇದು ರಾಧಾಕೃಷ್ಣನ್‌ರವರ ವಿಶ್ವಾಸ.

ಹಾಗೇ ಮುಂದರಿಯುತ್ತಾ ಸರ್ವಪಳ್ಳಿಯವರು ಈ ಕೆಳಗಿನ ಅಂಶಗಳನ್ನು ವಿಶದಮಾಡಿದರು:

ಜಗತ್ತಿನಲ್ಲಿ ಇಂದು ಇಷ್ಟೊಂದು ಜನಾಂಗ ವೈವಿಧ್ಯವು ಇದೆಯಾದರೂ ಪದೇಪದೇ ಜನರು ವಿಶ್ವಬಾಂಧವ್ಯಕ್ಕಾಗಿ ಕಾತರಿಸುತ್ತಿರುವರು.

ಇಂದು ವಿವಿಧ ಜನಾಂಗದ ಜನರು ಒಟ್ಟು ಸೇರಿ ತಮ್ಮೊರ್ವ ಶತ್ರುವನ್ನು ನಾಶಮಾಡಲು ಪ್ರಯತ್ನಿಸುತ್ತಿರುವರು. ಇದೇ ಪ್ರಕಾರ ಶಸ್ತ್ರ ಬಾಂಧವ್ಯ ತಾಳಿದ ವಿವಿಧ ಜನಾಂಗಿಕರು ತಮ್ಮ ಅಧಿಕಾರ ಬಲದಿಂದ ತಮ್ಮ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರಲು ಒಟ್ಟುಕೂಡಲಿಕ್ಕೆ ಮಾತ್ರ ಸಾಧ್ಯವಾಗುವುದಿಲ್ಲವೆ?

ಭಾರತದಲ್ಲಿ ಇಂದಿನ ಪರಿಸ್ಥಿತಿಯು ಕಳವಳಾವಸ್ಥೆಯದಿದ್ದರೂ ಅದು ನಿರಾಶಾಜನಕವಾಗಿಲ್ಲ. ಇಂದು ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆಯು ಜಗತ್ತಿನಲ್ಲೇ ಗೊಂದಲವೆಬ್ಬಿಸಿದೆ.

ಇವತ್ತಿನ ದಿವಸಕ್ಕೆ ಜಗತ್ತಿನ ಪ್ರತಿಯೊಂದು ಜನಾಂಗವೂ ಹೇಗಾದರೂ ಮಾಡಿ ಸ್ವತಂತ್ರವಿರಲು ಪ್ರಯತ್ನಿಸುತ್ತಿದಲ್ಲದೆ ಪಾರತಂತ್ರ್ಯದಲ್ಲಿರಲು ಯಾರಿಗೂ ಮನಸ್ಸಿಲ್ಲ. ರಾಜಕೀಯ ದಾಸ್ಯವೇ ಇಂದಿನ ನಮ್ಮ ಈ ದುಸ್ಥಿತಿಗೆ ಕಾರಣವಾಗಿದೆ.

ವಿವೇಕಶಕ್ತಿಯುಳ್ಳ ಮಾನವನ ಸ್ವಾತಂತ್ರ್ಯವನ್ನು ಅಪಹರಿಸುವುದೆಂದರೆ ಅವನನ್ನು ಘೋರವಾದ ಆತ್ಮನಾಶಕವಾದ ನರಕದಲ್ಲಿ ತಳ್ಳಿದಂತೆಯೇ ಸರಿ. ಇಂತಹ ಅಧ್ಯಾತ್ಮಿಕ ಘನತೆಗೆ ಸರಿಸಮಾನವಾದ ಇತರ ಯಾವ ಲೌಕಿಕ ಸವಲತ್ತುಗಳೂ ಅವನಿಗೆ ಬೇಕಾಗಿರುವುದಿಲ್ಲ.

ದಾಸ್ಯವು ಒಂದು ಜನಾಂಗದ ನಾಗರೀಕತೆಯನ್ನು ಅಭಿವೃದ್ಧಿಗೊಳಿಸುವ ಬುದ್ಧಿಶಕ್ತಿಯನ್ನು ನಾಶಮಾಡುತ್ತದೆ. ಸ್ವಾತಂತ್ರ್ಯವೆಂದರೆ ಕಲ್ಪನಾಶಕ್ತಿಯ ಬಂಧವಿಮೋಚನೆ.

ಭಾರತೀಯರು ಇಂದು ರಾಜಕೀಯವಾಗಿ ಅಸ್ವಸ್ಥತೆಯಿಂದಿದ್ದಾರೆ. ಇಂದಿನ ರಾಜಕೀಯವು ಒಂದು ಅಂಟುರೋಗವಾಗಿದೆಯೆಂದರೆ ಅದು ಸಹಜವಾದುದು ಮತ್ತು ಬುದ್ಧಿಯಿದ್ದವರು ತಿಳಕೊಳ್ಳಬೇಕಾದ ವಿಷಯ.

ಬ್ರಿಟಿಷರ ಜವಾಬ್ದಾರಿಕೆ

ಯುದ್ಧ ಮುಕ್ತಾಯದ ಕೂಡಲೇ ಭಾರತೀಯರಿಂದಲೇ ತಯಾರಿಸಲ್ಪಟ್ಟ ರಾಜ್ಯಘಟನೆಯನ್ನು ಒಪ್ಪುವುದಾಗಿ ಬ್ರಿಟಿಷರು ವಾಗ್ದಾನವಿತ್ತಿದ್ದಾರೆ. ಇದುತನಕ ಭಾರತೀಯರು ಅಂತಹ ಒಂದು ಸರ್ವಸಾಮಾನ್ಯ ಒಪ್ಪಿಗೆಯ ರಾಜ್ಯಘಟನೆಯನ್ನು ತಯಾರಿಸಲು ಸಮರ್ಥರಾಗದಿದ್ದುದಕ್ಕೆ ಬಹಳ ಮಟ್ಟಿಗೆ ಬ್ರಿಟಿಷರೇ ಕಾರಣರಾಗಿರುವರು.

ಒಂದು ಜನತಾ ಸರಕಾರವು ಮಾತ್ರ ನಮ್ಮ ಈ ಆಲಸ್ಯ, ನಿರಕ್ಷರತೆ, ಮೂಢ ನಂಬಿಕೆಗಳನ್ನು ಹೋಗಲಾಡಿಸಿ, ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡೀತು.

ತನ್ನ ದೀರ್ಘಕಾಲದ ಸಂಬಂಧದಿಂದ ಭಾರತವನ್ನು ಉದ್ಧಾರಮಾಡುವ ಹೊಣೆಗಾರಿಕೆಯ ಭಾಗ್ಯವು ಬ್ರಿಟಿಷರ ಪಾಲಿಗೆ ಬಂದಿದೆ.

ಇಂದು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರೆ ಮಾತ್ರ ಅದು ಬ್ರಿಟಿಷ್ ಸಾಮ್ರಾಜ್ಯದ ಸದಸ್ಯನಾಗಿ ಸ್ನೇಹದಲ್ಲಿ ನಿಲ್ಲುವುದು. ಗಾಂಧಿಜಿಯವರು 'ಕ್ವಿಟ್ ಇಂಡಿಯಾ'ದ ಅರ್ಥ ಕೇಳಲಾಗಿ 'ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತೀಯರು ಇರಲಿಕ್ಕೂ, ಇರದಿರಲಿಕ್ಕೂ ಸ್ಪಷ್ಟವಾಗಿ ತಿಳಿಸಲು ಬೇಕಾದ ಸ್ವಾತಂತ್ರ್ಯ ಅದು' ಎಂದು ಅವರು ತಿಳಿಸಿದ್ದಾರೆ.

ಸ್ವಾತಂತ್ರ್ಯ ಈಗಲೇ ಕೊಟ್ಟರೆ ಮಹಾತ್ಮರು ಭಾರತವು ಬ್ರಿಟಿಷ್ ಸಂಯುಕ್ತ ರಾಜ್ಯದಲ್ಲಿ ಸಹಕರಿಸಿ ಇರಲು ಇಷ್ಟಪಡುವರೆಂದು ನನಗೆ ಖಂಡಿತ ಭರವಸೆ ಇದೆ.

ಕ್ರಿಪ್ಸ್ ಯೋಜನೆಯು ಒಂದು ತರದ ಸಾಮಂತ ಸ್ವರಾಜ್ಯ ಕೊಡುವಂತಹದಿದ್ದು ಸಾಮ್ರಾಜ್ಯದಿಂದ ಹೊರಹೋಗಲು ಅದರಲ್ಲಿ ಅಧಿಕಾರ ಕೊಡಲಾಗಿತ್ತು. ಅಂದಮೇಲೆ ಸಂಪೂರ್ಣ ಸ್ವಾತಂತ್ರ್ಯಕ್ಕೂ, ಸಾಮಂತ ಸ್ವರಾಜ್ಯಕ್ಕೂ ಹೆಚ್ಚಿನ ಬೇಧವಿಲ್ಲವೆಂದಾಯಿತು.

ಕೊನೆಗೆ ಸರ್ ರಾಧಾಕೃಷ್ಣನ್ ಅವರು ದೇಶ ವಿಭಾಗೀಕರಣದ ಪ್ರಯತ್ನಗಳಿಗಾಗಿ ಖೇದ ವ್ಯಕ್ತಮಾಡಿದರು.

ಆಫ್ರಿಕದ ಬಿಳಿಯರ ದುರ್ವರ್ತನೆ!

ಭಾರತೀಯರಿಗೆ ಅಮಾನುಷ ಶಿಕ್ಷೆ! ನೀವು ದುಡಿಯಿರಿ, ನಾವು ತಿನ್ನುತ್ತೇವೆ!

ಹಿಟ್ಲರನು ಯೆಹೂದಿಗಳ ಮೇಲೂ ಜಪಾನರು ಬಿಳಿಯರ ಮೇಲೂ ದ್ವೇಷಯುದ್ಧ ಹೂಡಿರುವುದಾಗಿ ಆರೋಪಿಸಲ್ಪಟ್ಟಿದೆ. ಆದರೆ ಆಫ್ರಿಕದ ಬಿಳಿಯರು ಅಲ್ಲಿ ನೆಲೆನಿಂತ ಭಾರತೀಯರ ಮೇಲೂ ಮತ್ತು ಅಲ್ಲಿನ ಮೂಲನಿವಾಸಿಗಳ ಮೇಲೂ ನಡೆಸುವ ದುಷ್ಕೃತ್ಯಗಳು ಅಕ್ಷಮ್ಯವಾದುಗಳಿರುತ್ತವೆ.

ಭಾರತೀಯ ಮಜೂರರು ಅಲ್ಲಿಗೆ ಹೋಗಿ ಅಲ್ಲಿನ ಅನಾರೋಗ್ಯ ಸ್ಥಳಗಳನ್ನು ಆರೋಗ್ಯವಂತ ನಿವಾಸ ಸ್ಥಳಗಳಾಗಿ ಮಾರ್ಪಡಿಸಿದರು. ಕಾಡುಗಳನು ಕಡಿದು ನಾಡು ಮಾಡಿದರು. ಆದರೆ ಅದೇ ಭಾರತೀಯರ ಸರ್ವಸ್ವವನ್ನೂ ಅಲ್ಲಿನ ಕಾನೂನುಗಳು ಅಪಹರಿಸಿವೆ.

ಅವರಿಗೆ ತೆರಿಗೆ ಹಾಕಿದ್ದಾರೆ. ಆದರೆ ಓಟಿನ ಹಕ್ಕಿಲ್ಲ! ಪ್ರತಿಯೊಂದಕ್ಕೂ ಅವರು ಸುಂಕ ಕೊಡಬೇಕು ಆದರೆ ಅವರಿಗೆ ಆಡಳಿತದಲ್ಲಿ ಸ್ಥಾನಮಾನಗಳಿಲ್ಲ!

ನಾಜಿಗಳ ಪ್ರತಿರೂಪಿಗಳೆನಿಸುವ ಆಫ್ರಿಕದ ಬಿಳಿಯರು ಭಾರತೀಯರಿಗೆ ಮಾಡಿದ ಅನ್ಯಾಯಗಳ ಅಸಂಖ್ಯಾತ ನಿದರ್ಶನಗಳಿವೆ.

ಅಲ್ಲಿಯ ಆರೋಗ್ಯ ಖಾತೆಯ ಅಧಿಕಾರಿಗಳಾದ ಡಾ. ಸ್ಟಿವನ್‌ಸನ್ ಎಂಬವರು ಅಲ್ಲಿನ ಆಸ್ಪತ್ರೆ ಅಧಿಕಾರಿಗಳಿಗೆ ಕಳುಹಿಸಿದ ಸೂಚನೆ ಪತ್ರದಲ್ಲಿ ಹೀಗಿದೆ:

ಭಾರತೀಯರಿಗೆ ನಿಗ್ರೋ ಮೂಲನಿವಾಸಿಗಳದ್ದೇ ಕೆಲಸ ಕೊಡಬಹುದು. ಸಂಬಳವೂ ಅಷ್ಟೇ ಕಮ್ಮಿ.

ಭಾರತೀಯರನ್ನು ಆರೈಕೆ ಕೆಲಸಕ್ಕೆ ತೆಗೆದುಕೊಳ್ಳಬಹುದು. ಆದರೆ ಅವರು ನಿಗ್ರೋಗಳಂತೆ ವಾಸಿಸಲು, ದಂಡಿಸಿಕೊಳ್ಳಲು ಸಿದ್ಧರಿರಬೇಕು.

ಮುಗುಳು ನಕ್ಕರೆ ಶಿಕ್ಷೆ

ಓರ್ವ ಬಿಳಿ ಮೆನೆಜರ್ ಮಹಿಳೆಯು ಮಾತನಾಡುವಾಗ ಮುಗುಳ್ನಗೆ ನಕ್ಕ ಓರ್ವ ಕೆಲಸಗಾರನಿಗೆ ಮುಷ್ಕರ ಹಿಡಿದನೆಂಬ ಸುಳ್ಳು ಆರೋಪದ ಮೇಲೆ ೧೫ ರೂ. ಜುಲ್ಮಾನೆ ವಿಧಿಸಲಾಯಿತು.

ನಾಲ್ವತ್ತು ವರ್ಷ ಶಿಕ್ಷಣ ಖಾತೆಯಲ್ಲಿ ಕೆಲಸ ಮಾಡಿದ ಓರ್ವ ಭಾರತೀಯನು ನಿವೃತ್ತನಾದಾಗ ಆ ಖಾತೆಯ ಡೈರೆಕ್ಟರರು ಅವನಿಗೆ ಬರೀ ಒಂದು 'ಥೇಂಕ್ಸ್' ಕೊಟ್ಟರಂತೆ–ಪೆನ್ಶನ್ ಇಲ್ಲ, ಪ್ರೊವಿಡೆಂಟ್ ಫಂಡ್ ಇಲ್ಲ, ವೃದ್ಧಾಪ್ಯದ ದ್ರವ್ಯವಿಲ್ಲ, ಏನೂ ಇಲ್ಲ.

ಬಿಳಿಯರ ಕಾಲೇಜುಗಳ ಕೆಲ ವಿದ್ಯಾಂಗ ಶಾಖೆಗಳಲ್ಲಿ 'ಕಪ್ಪು' ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲ. ಭಾರತೀಯರಾದುದರಿಂದ ನುರಿತ ವೈದಕೀಯ ಕೆಲಸಗಾರರಿಗೆ ಬಿಳಿ ಸಂಸ್ಥೆಗಳಲ್ಲಿ ಆಶ್ರಯವಿಲ್ಲ.

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

U. Shantha Rama Rao, Secretary

26-12-1944

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

ಪ್ರಚಲಿತ ಸಮಾಚಾರ

(೩ನೇ ಪುಟದಿಂದ)

ಕಾರದಲ್ಲಿ ಲಂಚಗುಳಿಕರ ಸಂಖ್ಯೆಯು ದೊಡ್ಡದಿದೆ. ಚೀನಾವು ಪ್ರಜಾಪ್ರಭುತ್ವ ನೀತಿಯ ಕುರಿತು ಬಹಳ ಮುಂದುವರಿದಿದೆಯಾಗಿ, ಬರಿ ಪ್ರಸಾರಣೆಯಲ್ಲದೆ, ಚೀನಾವು ಇಂದಿಗೂ ಹದಿನೈದು, ಹದಿನಾರನೆ ಶತಮಾನದ ಮಟ್ಟದಲ್ಲಿದೆ. ಅಮೆರಿಕದಿಂದ 'ಕಡ-ಒತ್ತು'ಯೋಜನೆ ಪ್ರಕಾರ ದೊರಕುವ ಸಾಮಾನುಗಳು ಕಳ್ಳ ಸಂತೆಯಲ್ಲಿ ವಿಕ್ರಯಿಸಲ್ಪಡುತ್ತದೆ. ಚಿಯಾಂಗರ ಚುಂಕಿಂಗ್ ನಗರದಲ್ಲಿ ಇತ್ತೀಚೆಗೆ ಜಪಾನಿನಿಂದ ಬಂದ ಒಡವೆಗಳು ಮಾರಾಟವಾಗುತ್ತಿವೆ. ಚಿಯಾಂಗರೂ ಜಪಾನಿಯರಿಗೆ ವಿರೋಧವಾಗಿ ಹೋರಾಡುತಿದ್ದರೂ ಜಪಾನು ಆಕ್ರಮಿತ ಚೀನಕ್ಕೂ, ಚಿಯಾಂಗ ಚೀನಾಕ್ಕೂ ಸಮ್ಮಿಲನ ಸಂಬಂಧಗಳು ನಡೆಯುತ್ತಿವೆ.

ಜಪಾನಿಯರನ್ನು ತಡೆಯುವ ಕಾರ್ಯದಲ್ಲಿ ತುಂಬಾ ದುಡಿದವರು ಚೀನಾದ ಎಡಪಕ್ಷವು. ಚಿಯಾಂಗರ ವಕ್ರದೃಷ್ಟಿಗೆ ಒಳಗಾದ ಈ ಜನರಿಗೆ ಬೇಕಾದ ಶಸ್ತ್ರಗಳು ದೊರಕಲಿಲ್ಲ. ಜಪಾನಿಯರಿಂದಲೇ ಅವರು ಅವುಗಳನ್ನು ಕಸಗೊಂಡು ಒದಗೆಸಿಕೊಂಡರು. ಡಾ. ಸನ್‌ವಾಟ್‌ಸೆನ್ನ ನೀತಿಯು ಇವರಿಂದ ಎತ್ತಿಹಿಡಿಯಲಾಗಿದೆ.

ಮೇಲಿನದು ಮೊನ್ನೆ ಚೀನಾದ ಪ್ರವಾಸಗೈದು ಬಂದು ಕಲ್ಕತ್ತೆಯ ಸ್ಟೇಟ್ಸ್‌ಮೇನ್ ಪತ್ರಿಕೆಯಲ್ಲಿ ಚೀನಾದ ಕುರಿತು ಸ್ಪಿವರ್ಟ ಗಿಲ್ಡರರು ಪ್ರಕಟಿಸಿದ ಲೇಖದ ಅಭಿಪ್ರಾಯವು.

° ° ° °

ಈ ಯುದ್ಧದ ಇಷ್ಟರತನಕದ ಫಲಿತಾಂಶವೆಂದರೆ, ಜಗತ್ತಿನ ರಾಜಕೀಯದಲ್ಲಿ ಲಂಡನಿಗೆ ಇರುವ ಮಹತ್ವಿಕೆಯು, ಮೊಸ್ಕೊ ಕಡೆಗೆ ಹೋಗಿರುವುದು. ಸ್ಟೇಲಿನನಿಗೆ ಎಲ್ಲರಿಗೂ ಎತ್ತರದ ವೇದಿಕೆಯು ದೊರಕಿರುತ್ತದೆ.

° ° ° °

ನವವರ್ಷದ ಆರಂಭದಲ್ಲಿ ಜರ್ಮನ್ ಪ್ರಜೆಗಳಿಗೆ ಹಿಟ್ಲರನ ಭಾರಿ ಭಾಷಣವೊಂದಾಯಿತು. ಎಂದಿನದೇ ಅದರ ರಾಗ. ಅಂಧರಾಷ್ಟ್ರಾಭಿಮಾನ, ಯಹೂದ ದ್ವೇಷ, ಈ ಭಾಷಣದಲ್ಲಿ ಕಾಣಿಸಿಕೊಂಡವು. ಸ್ವರಕ್ಷಣೆಗಾಗಿ ಜರ್ಮನರನ್ನು ಹುರಿದುಂಬಿಸಿರುವನು. ದ್ರೋಹಿಗಳಿಂದ ಪಾರಾಗಿರುವೆನೆಂದು ತಿಳಿಸಿರುವನು. ೧೯೪೫ರೊಳಗೆ ಜರ್ಮನಿಗೆ ವಿಜಯವೆಂದು ಭರವಸೆ ಕೊಟ್ಟಿರುವನು.

ಹಿಟ್ಲರನು ತಮ್ಮ ಸರ್ವಸ್ವ ಎಂದು ಗೊಬೆಲ್ಸನು ಇನ್ನೊಂದೆಡೆ ಭಾಷಣ ಮಾಡಿರುವನು.

° ° ° °

ಹಿಂದೂದೇಶವು, ರಷ್ಯ, ಅಮೆರಿಕಾ ದೇಶಗಳಂತೆ ಸಾಗುವಳಿ ನಾಡು. ಸುಧಾರಿತ ಸಾಗುವಳಿ ಕ್ರಮಗಳಿಂದ ರಷ್ಯದಲ್ಲಿ ಮತ್ತು ಅಮೆರಿಕಾದಲ್ಲಿ ಸಾಗುವಳಿಯ ಉತ್ಪತ್ತಿಯಲ್ಲಿ ಅತಿರೇಖ ವೃದ್ಧಿ ನಡೆದಿರುತ್ತದೆ. ಅಮೆರಿಕಾದೊಡನೆ ಬೆಳೆಯು ಪೈದಾಸಿನ ಫಲವು, ಅವರ ನಾಗರೀಕರ ಸೈನಿಕರ ಮತ್ತು ಸೇವನೆಯಾಗಿ, ಅಧಿಕಾಂಶ ಬಾಕಿ ಉಳಿಯುವುದರಿಂದ ಯುದ್ಧದ ಹಾವಳಿಗೆ ಒಳಗಾದ ಫ್ರಾನ್ಸು, ಇಟಲಿ ಇತ್ಯಾದಿ ಕಡೆಗಳಿಗೆ ಕಳುಹಿಸಲಾಗಿವೆ. ಹಿಂದೂದೇಶದ ಸಾಗುವಳಿಯ ಸ್ಥಿತಿಯು ಬಹಳ ಕೆಳಮಟ್ಟದಲ್ಲಿದೆ. ಅಮೇರಿಕಾ ಮತ್ತು ರಷ್ಯದಲ್ಲಿ ನಡೆದಂತೆ, ಹಿಂದೂದೇಶದ ಸಾಗುವಳಿಯ ಯಾಂತ್ರೀಕರಣವಾಗಿ ನೀರಿನ ಪೂರೈಕೆಯ ಏರ್ಪಾಡುಗಳಾಗಿ, ಸುಧಾರಿತ ಕ್ರಮಗಳು ಆಚರಿಸಲ್ಪಟ್ಟರೆ, ಮತ್ತೆ ಹಿಂದೂದೇಶವು ಆಹಾರಕ್ಕಾಗಿ ಹಂಬಲಿಸಬೇಕಾಗಿಲ್ಲ. ಸಾಗುವಳಿಯ ಉದ್ಧಾರದ ಬಗ್ಗೆ ಕೇಂದ್ರ ಸರಕಾರದ ನೇತೃತ್ವ ಪ್ರಾಂತೀಕ ಸರಕಾರಗಳು ಅತ್ಯಂತ ಹುರುಪಿನ ಕಾರ್ಯಕ್ರಮಗಳನ್ನು ವಹಿಸುವಂತೆ ಏರ್ಪಾಡುಗಳಾಗಿವೆ.

° ° ° °

೧೯೪೫ರ ಅಂತ್ಯದೊಳಗೆ ನಾಜಿಗಳು ಅಂತ್ಯವಾಗಬೇಕು. ಜಪಾನಿನ ಸುತ್ತಲೂ ಪ್ರತಿಕಾರ ಬಲಗಳು ಆವರಿಸಲ್ಪಡಬೇಕು. ವೈರಿಯ ನಾಶದ ಕಡೆ ನಾವು ಸಮೀಪಿಸುತ್ತಿದ್ದ ಹಾಗೆ, ಮಿತ್ರರಲ್ಲಿ ಭಿನ್ನಾಭಿಪ್ರಾಯಗಳುಂಟಾಗುತ್ತಿವೆ. ಈ ಕ್ಲೇಶಗಳಿಂದ ಚಿರವಾದ ಶಾಂತಿಯನ್ನು ಸ್ಥಾಪಿಸುವ ಕಡೆ ಮತ್ತು ಈ ಯುದ್ಧವನ್ನು ಗೆಲ್ಲುವ ಕಡೆ, ನಮ್ಮಲ್ಲಿ ಅಂಧತೆಯು ಉಂಟಾಗಬಾರದು.

ಯುದ್ಧೋತ್ತರದಲ್ಲಿ ರಾಷ್ಟ್ರಗಳ ಪರಸ್ಪರ ಸಂಬಂಧಗಳಲ್ಲಿ ಪ್ರಾಬಲ್ಯ ರಾಷ್ಟ್ರಗಳು ತಮ್ಮ ತಮ್ಮ ಪ್ರಾಬಲ್ಯದ ದೆಸೆಯಿಂದ ತಮ್ಮದೆ ಪ್ರಭಾವವನ್ನು ನಡೆಯಿಸುವಂತಾಗಬಾರದು. ಪ್ರಾಬಲ್ಯವು ಹೊಣೆಗಾರಿಕೆಯಿದ್ದುದಾಗಿ, ಸಾರ್ವತ್ರಿಕ ಕ್ಷೇಮವನ್ನು ಬೆಳೆಯಿಸುವಂತಾಗಬೇಕು. ಸಾಮ್ರಾಜ್ಯಶಾಹಿಯು ಅಂತರ್ರಾಷ್ಟ್ರೀಯ ಶಾಂತಿಪಥದಲ್ಲಿ ಮಹಾ ಆತಂಕವು. ಅದನ್ನು ನೀಗುವಂತೆ ನಾವು ಪ್ರಭಾವಿತರಾಗಬೇಕು–ಈ ಕಾರ್ಯವು ಈಗಲೇ ಪ್ರಾರಂಭವಾಗಬೇಕು. ಅತ್ಲಾಂತಕ್ ಟಾರ್ಜರಿನ ಧ್ಯೇಯಗಳು ಪೂರೈಸಲ್ಪಡಬೇಕು.

ಮೇಲಿನದು ಅಮೆರಿಕಾದ ಅಧ್ಯಕ್ಷ ರೂಸ್‌ವೆಲ್ಟರು ಅಲ್ಲಿನ ಕಾಂಗ್ರೆಸಿಗೆ ಮೊನ್ನೆ ಕೊಟ್ಟ ಭಾಷಣದ ಸಾರಾಂಶ. ಅತ್ಲಾಂತಿಕ್ ಚಾರ್ಟರಿನ ಹೆಸರು ಅವರು ಪುನಃ ಎತ್ತಿರುವುದು ನಿಜ. ಆದರೆ ಆ ಚಾರ್ಟರು ಸುಳ್ಳೆಂದಾಗಿಯದಲ್ಲವೆ. ಕೊಟ್ಟ ಮಾತಿಗೆ, ಸರಿಯಾಗಿ ನಡೆಯುವುದು ಅವರ ಧೋರಣವಾದರೆ, ಮೇಲಿದರಿಂದ ನಾವು ಮಹಾಶಯಗಳನ್ನು ಹೊಂದಬಹುದು.

ಆಸ್ಯಾ, ಆಫ್ರಿಕಾ ಇತ್ಯಾದಿ ವಲಸೆ ರಾಷ್ಟ್ರಗಳು ಪ್ರಜಾಪ್ರಭುತ್ವವಾದೀ ನಿಯಮಗಳಿಗೆ ಸರಿಯಾಗಿ ಸ್ವಾತಂತ್ರ್ಯ ಕೊಡುವ ಬಗ್ಗೆ ಅಮೆರಿಕದ ಉಪಾಧ್ಯಕ್ಷರಿಂದ ಒಂದು ಯೋಜನೆಯು ನಿಯೋಜಿಸಲ್ಪಡುವುದಂತೆ.

ಮನುಷ್ಯನ ವಾಸಸ್ಥಾನ

ಬಹಳ ವರ್ಷ ವಿಶ್ವದಲ್ಲಿ ಅನೇಕ ಗ್ರಹಗಳಿಂದ ಸುತ್ತಲ್ಪಡುವ ಸೂರ್ಯನೆಂಬ ಒಂದೇ ನಕ್ಷತ್ರವಿರುವುದಾಗಿ ಜನರು ತಿಳಿದುಕೊಂಡಿದ್ದರು. ಇತ್ತೀಚೆಗಿನ ಸಂಶೋಧನೆಗಳಿಂದ ಅನೇಕ ನಕ್ಷತ್ರ ವ್ಯೂಹಗಳಿವೆ ಎಂದೂ ತಿಳಿದು ಬಂದಿದೆ. ಆದರೆ ಅವುಗಳ ಕುರಿತು ಸವಿಸ್ತಾರವಾದ ವಿವರಗಳು ಇನ್ನೂ ತಿಳಿದುಬಂದಿಲ್ಲ. ಎಲ್ಲಾ ಇಲ್ಲವೆ ಕೆಲವೊಂದು ಗ್ರಹಗಳಲ್ಲಿ ಜೀವಕೋಟಿಗಳು ಇಲ್ಲವೆಂದು ಹೇಳಬರುವುದಿಲ್ಲ. ಈಗಿನ ಸಂಶೋಧನಾ ಜ್ಞಾನದಿಂದ ತಿಳಿದುಬಂದ ಮಟ್ಟಿಗೆ ಸೂರ್ಯನ ಸುತ್ತು ತಿರುಗುವ ಗ್ರಹ ಪ್ರದೇಶದ ಮೇಲ್ಭಾಗ ಮಾತ್ರ ಜೀವ ರಾಶಿಯ ಇರುವಿಕೆಗೆ ಅನುಕೂಲತೆಯುಳ್ಳ ವಾತಾವರಣವುಳ್ಳದ್ದಿವೆ ಎಂದು ಊಹಿಸಬಹುದು.

ಇದರಲ್ಲೂ ಸೌರ್ಯ ವ್ಯೂಹದ ಎಲ್ಲಾ ಗ್ರಹಗಳು ಜೀವಯೋಗ್ಯ ವಾತಾವರಣ ಪರಿಸ್ಥಿತಿಯಿಂದ ಕೂಡಿವೆ ಎಂದು ಹೇಳಬರುವುದಿಲ್ಲ. ಬೃಹಸ್ಪತಿ, ಶನಿ, ಯೂರೆನಸ್, ನೆಪ್ಚ್ಯೂನ್, ಪ್ಲುಟೊ ಇವುಗಳಲ್ಲಿ ಜೀವಸ್ಥಿತಿ ಸಾಧ್ಯವೇ ಇಲ್ಲವೆಂದು ಖಗೋಳ ಪಂಡಿತರು ಅಭಿಪ್ರಾಯ ಪಡುತ್ತಾರೆ. ಬೃಹಸ್ಪತಿ ಮತ್ತು ಮಂಗಳ ಗ್ರಹಗಳ ಸುತ್ತು ಹಿಡಿದು ತಿರುಗುವ ಸಾವಿರಾರು ಇತರ ಚಿಕ್ಕಪುಟ್ಟ ನಕ್ಷತ್ರಿಕೆಗಳೂ ಜೀವ ರಹಿತವಾದವೆಂದೆನಿಸಿವೆ. ಸೂರ್ಯಪಥದ ಹತ್ತಿರದ ಗ್ರಹಗಳಲ್ಲಿ ಮಾತ್ರ ಜೀವಾದಿಗಳನ್ನು ನಿರೀಕ್ಷಿಸಬಹುದಾಗಿದೆ. ಈ ಕುರಿತು ಅವಿಶ್ರಾಂತ ಸಂಶೋಧನೆ ನಡೆಸಿದರೂ ಭೂಮಿ ಎಂಬೀ ಗ್ರಹದ ಹೊರತು ಬೇರೆ ಯಾವುದರಲ್ಲೂ ಜೀವರಾಶಿಯ ಪ್ರತ್ಯಕ್ಷ ಪ್ರಮಾಣಗಳು ಕಂಡುಬಂದಿಲ್ಲ.

ಆದರೂ ಗ್ರಹಗಳಲ್ಲಿ ಜೀವರಾಶಿ ಶಕ್ಯವಿದೆ

ಸೂರ್ಯಗೋಲಕ್ಕೆ ಅತೀ ಹತ್ತಿರವಾಗಿರುವ (೩೬ ಮಿಲಿಯ ಮೈಲು) ಬುಧ ಎಂಬ ಗ್ರಹವಿದೆ. ಇದರ ಚಲನೆಯ ಮಾರ್ಗವು ಒಂದು ವಿಶಿಷ್ಟ ಸ್ಥಾನದಲ್ಲಿರುವುದರಿಂದ ಇದರ ಅರ್ಧ ಭಾಗವು ಸದಾ ಕತ್ತಲಲ್ಲೂ ಇನ್ನುಳಿದರ್ಧ ಭಾಗವು ಸದಾ ಬೆಳಕಿನಲ್ಲೂ ಇದೆ. ಅತೀ ತೆಳ್ಳಗಾದ ವಾಯು ಮಂಡಲದಿಂದ ಈ ಗ್ರಹವು ಆವೃತವಾಗಿದೆ. ಒಂದು ವೇಳೆ ಇಲ್ಲಿ ಗಾಳಿ ಇಲ್ಲವೆಂತ ಹೇಳಬಹುದು. ಸೂರ್ಯನಿಗೆ ತೆರೆಯಾದ ಇದರ ಭಾಗವು ಭಯಂಕರ ಉಷ್ಣವುಳ್ಳದ್ದೂ, ಮರೆಯಾದ ಭಾಗವು ಕಠಿಣ ಚಳಿದ್ದೂ ಇರುತ್ತದೆ.

ಈ ಗ್ರಹದ ಕತ್ತಲು ಮತ್ತು ಬೆಳಕುಗಳ ನಡುವಿನ ಭಾಗದಲ್ಲಿ ಒಂದು ವೇಸ ಜೀವಸ್ಥಿತಿಯು ಸಾಧ್ಯವಿದೆ ಎಂದು ಊಹಿಸಬಹುದು.

ಭೂಮಿಗೆ ಅತೀ ಹತ್ತಿರವೂ ಸೂರ್ಯನಿಂದ ೬೭ ಮಿಲಿಯ ಮೈಲು ಅಂತರವಿರುವಂತಹುದೂ ಆದ ಶುಕ್ರ ಗ್ರಹದ ನಿಜವಾದ ಪರಿಸ್ಥಿತಿಯು ಇನ್ನೂ ತಿಳಿದುಬಂದಿರುವುದಿಲ್ಲ. ಕಾರಣ ಈ ಗ್ರಹಮಂಡಳವು ಮೋಡಮಯ ವಾತಾವರಣದಿಂದ ಮುಸುಕಿದ್ದು, ಸಂಶೋಧಕರ ಪ್ರಯತ್ನಕ್ಕೆ ಕಷ್ಟತರವೆನಿಸಿದೆ.

ಸೂರ್ಯನಿಗೆ ಭೂಮಿಗಿಂತಲೂ ಹೆಚ್ಚು ಹತ್ತಿರದಲ್ಲಿರುವ ಈ ಶುಕ್ರ ಗ್ರಹದ ಉಷ್ಣತೆಯು ಕುದಿಯುವ ನೀರಿಗಿಂತ ಹೆಚ್ಚಿದೆ. ಆದುದರಿಂದ ಅಲ್ಲಿ ಜಲಾಂಶದ ಬದಲು ಆವಿಯೇ ಹೆಚ್ಚಾಗಿದೆ. ಇನ್ನೊಂದು ವಿಷಯವೆಂದರೆ ಈ ಗ್ರಹದ ವಾತಾವರಣದಲ್ಲಿ ಅಂಗಾರಾಮ್ಲವೇ ಹೆಚ್ಚಾಗಿರುವುದರಿಂದ ಅಲ್ಲಿ ಸಸ್ಯಗಳು ಇಲ್ಲವೆಂತಲೇ ಊಹಿಸಬೇಕು. ಸಸ್ಯಗಳಿರುತಿದ್ದರೆ ಈ ಅಂಗಾರಾಮ್ಲವನ್ನು ಹೀರುತಿದ್ದುವು–ಭೂಮಿಯಲ್ಲಿ ಸಸ್ಯಗಳು ಹೀರುವಂತೆ.

ರೇಡಿಯೋ ವಿಜ್ಞಾನಿಯ ಸಾಕ್ಷ್ಯ

ಮಂಗಳ ತಾರೆಯಲ್ಲಿ ಜೀವಾಂಶ ಇರುತ್ತದೆಂಬ ವಿಷಯವು ಇದುತನಕ ಕಲ್ಪನಾವಿಚಾರದ್ದೇ ಇರುತ್ತದಾದರೂ ಅಂತಹ ಕಲ್ಪನೆಗೆ ವೈಜ್ಞಾನಿಕ ಆಧಾರವಿಲ್ಲವೆಂದಿಲ್ಲ.

ರೇಡಿಯೋ ಸಂಶೋಧಕರಾದ ದಿವಂಗತ ಮಾರ್ಕೋನಿಯವರು ಕೆಲವು ವರ್ಷಗಳ ಹಿಂದೆ ರೇಡಿಯೋ ಪ್ರಯೋಗಗಳನ್ನು ನಡೆಸುತ್ತಿದ್ದಾಗ ಅತೀ ಒತ್ತಡದ ಶಬ್ದ ತರಂಗಗಳು ತಮ್ಮ ರೇಡಿಯೋ ಉಪಕರಣಗಳ ಮೇಲೆ ಪ್ರತಿಕ್ರಿಯೆ ನಡೆಸುತ್ತಿರುವುದನ್ನು ಕಂಡುಕೊಂಡಿದ್ದರು. ಅವು ಗಗನ ಮಂಡಳದ ಯಾವುದೋ ದಿಕ್ಕಿನಿಂದ ಬರುತಿತ್ತೆಂದು ತಿಳಿಯಿತು.

ಮಾರ್ಕೋನಿಯವರ ಈ ಉಲ್ಲೇಖನವನ್ನು ಕೆಲವರು ಮಂಗಳ ಗ್ರಹದಿಂದ ಬರುವ ರಹಸ್ಯ ಧ್ವನಿಯ ಕುರಿತಾಗಿರಬಹುದೆಂದು ತಮ್ಮಷ್ಟಕ್ಕೆ ತರ್ಕಿಸಿದರು. ಆ ವಿಷಯದಲ್ಲಿ ಕೊನೆಗೆ ಒಂದು ಸಂದರ್ಭದಲ್ಲಿ ಆ ಪ್ರಖ್ಯಾತ ವಿಜ್ಞಾನಿಗಳು "ಸೂರ್ಯಗ್ರಹದಲ್ಲುಂಟಾದ ಅಯಸ್ಕಾಂತತೆ (ಆಕರ್ಷಣ ಶಕ್ತಿ) ಶಕ್ತಿಯ ಪರ್ಯಟನದಿಂದ ಅದು ಉಂಟಾಗಿರಬಹುದು, ಇಲ್ಲವೆ ಮಂಗಳನಿಂದ ಅಥವಾ ಶುಕ್ರನಿಂದ ಅದು ಬಂದಿದ್ದರೂ ಇರಬಹುದು" ಎಂದಿರುವರು.

ಕೆಲವು ವರ್ಷಗಳ ನಂತರ ಈ ರಹಸ್ಯವಾದ ಧ್ವನಿ ವಿಶೇಷಗಳು ಕಮ್ಮಿಯಾಗುತ್ತಾ ಬಂದುವು. ಇದರ ಕುರಿತು ಮಾರ್ಕೋನಿಯವರು: "ಬುಧಲೋಕದ ಜನರು ತಾವು ಕಳುಹಿಸಿದ ಸಂಕೇತ ಧ್ವನಿಗಳನ್ನು ಭೂಲೋಕದ ಮಂದಗತಿಯ ನಾಗರೀಕತೆಯ ಜನರು ತಿಳಕೊಳ್ಳಲು ಸಮರ್ಥರಾಗಲಿಲ್ಲವೆಂದು ತಿಳಿದುಕೊಂಡು ಮುಂದೆ ಕೆಲವು ಸಹಸ್ರ ವರ್ಷಗಳ ತನಕ ಪುನಃ ಆ ಧ್ವನಿಗಳನ್ನು ಕಳುಹಿಸಲು ಕಾದು ನಿಂತಿರುವರೆಂದು ಯಾರೂ ಅರ್ಥಮಾಡಲಾರರೆಂದು ನಂಬುತ್ತೇನೆ" ಎಂದಿರುವರು.

ಈಗ ವಿಜ್ಞಾನಿಗಳ ಬಹುಮತ ಅಭಿಪ್ರಾಯವು ಹೀಗಿದೆ: "ಒಂದು ವೇಳೆ ಮಂಗಳ ಲೋಕದಲ್ಲಿ ಜೀವಸ್ಥಿತಿ ಇದ್ದರೆ ಅದು ನಮ್ಮ ಭೂಮಿಯಲ್ಲಿರುವುದಕ್ಕಿಂತ ಬೇರೆ ತರದ್ದಿರುತ್ತದೆ." ಹೀಗಾದರೆ ಬುಧ ಗ್ರಹದ ಕುರಿತು ಬರೆದ ಅನೇಕ ಕಲ್ಪನಾ ಕಾದಂಬರಿಗಳ ವಿಷಯವಸ್ತುವಿಗೆ ಆಧಾರವಿಲ್ಲವೆಂದಾಗಲಿಲ್ಲ.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ಆಯುರ್ವೇದವೂ ಕನ್ನಡಿಗರೂ

೧೪ನೇ ನಿಖಿಲ ಕರ್ನಾಟಕದ ಆಯುರ್ವೇದ ಸಮ್ಮೇಳನದ ಸ್ವಾಗತ ಅಧ್ಯಕ್ಷರಾದ ಶ್ರೀ ಮಂಜೇಶ್ವರ ವೈಕುಂಠ ಭಕ್ತರ ಭಾಷಣದ ಈ ವಿಚಾರ ಪ್ರಸ್ತಾಪಿಸಿದ ಕೆಲವು ಅಂಶಗಳನ್ನು ಆರಿಸಿ, ಈ ಕೆಳಗೆ ಕೊಡಲಾಗಿದೆ.

ಈ ಮಂಜೇಶ್ವರ ಕ್ಷೇತ್ರವು ಐತಿಹಾಸಿಕ ದೃಷ್ಟಿಯಿಂದ ಎಷ್ಟು ಮಹತ್ವವಾದುದೆಂದು ಆಪಾತತಃ ನುಡಿಯುತ್ತಿರುವೆ. ಮಂಜುಳಕ್ಷೇತ್ರ ಮಹಾತ್ಮ್ಯವು ಸ್ಕಂದ ಪುರಾಣಾಂತರ್ಗತ. ಅದರಂತೆ ಈ ಕ್ಷೇತ್ರವು ಚತುರ್ಯುಗಗಳಲ್ಲಿಯೂ ಪ್ರಸಿದ್ಧಿ ಹೊಂದಿದ್ದುದಾಗಿದೆ. ನವಿಲ್ಯಾಕ್ಷೇತ್ರದಲ್ಲಿ ಶೇಷ-ಚಕ್ರ-ಕಣ್ವ-ರಾಮ-ಮತ್ಸ್ಯಗಳೆಂಬ ಪಂಚ ತೀರ್ಥಗಳಿವೆ. ಈ ಕ್ಷೇತ್ರಾಧಿಪತಿ ಶ್ರೀಮದನಂತೇಶ್ವರನು ಸ್ವಾಯಂಬು ಲಿಂಗರೂಪೇಣ ಶೋಭಿಸುವವನು. ಬ್ರಹ್ಮದೇವರ ನಿರೂಪದಂತೆ, ಹಿಂದೆ ಚಂದ್ರಮನು ತನಗೆ ಪ್ರಾಪ್ತವಾದ ತೊನ್ನುರೋಗ ಈ ಶೇಷತೀರ್ಥದಲ್ಲಿ ಮಿಂದು ಶ್ರೀಮದನಂತೇಶ್ವರನ ಸೇವೆಯಿಂದ ನೀಗಿಸಿಕೊಂಡುದು ಪುರಾಣ ಪ್ರಸಿದ್ಧ. ಅದಲ್ಲದೆ ಈ ನಮ್ಮೆದುರು ತೋರುವ ದೇವಳದಲ್ಲಿ ಅನಂತ-ನೃಸಿಂಹ-ಮಹಾ ನಂದೀಶ್ವರ-ವರುಣ-ಕುಬೇರರೆಂಬ ಪಂಚಮೂರ್ತಿಗಳ ಸಾನ್ನಿಧ್ಯವಿದೆ. ದೇವಳ ಮಹಾತ್ಮೆ ಅತೀ ಗಹನವಾದದ್ದು. ಆಮಲಕ-ಬಿಲ್ವ ವೃಕ್ಷಗಳ ಏಕತ್ರ ನಿಲವು ಅನ್ಯತ್ರಕಂಡುಬಂದುದಿಲ್ಲ. ಅದು ಇಲ್ಲಿ ದೃಗ್ಗೋಚರವಾಗುವುದು. ಬಿಲ್ವಪತ್ರುವುಅನ್ಯದ್ರವ್ಯ ಮಿಶ್ರಣವಿಲ್ಲದೆ ತನ್ನ ರಸವನ್ನು ಕೊಡದಿರುವುದು ಪರಿಚಿತವಾದ ಸಂಗತಿ. ಇಲ್ಲಿನ ಬಿಲ್ವಪತ್ರವು ಸ್ವಯಂರಸವನ್ನು ಕೊಡುತ್ತಿರುವುದನ್ನು ತಾವು ಪರೀಕ್ಷಿಸಲನುಕೂಲವಿದೆ. ಅದಂತಿರಲಿ, ನಿಸರ್ಗ ಸಿದ್ಧರಮಣೀಯತೆ, ಶೋಭಿಸುವ ಗುಡಿಮಂದಿರ-ತಳಿರಡಿದ ಲತಾವೃಕ್ಷ-ಫಲಪುಷ್ಪ-ಸಸ್ಯಶಾದ್ವಲ-ವಿಶಾಲ ಶಾಲೀಕ್ಷೇತ್ರ-ಸುತ್ತಿರುವ ನದಿ-ದೂರಕ್ಕೆ ಮುಂದುಗಾಂಬ ಬೆಟ್ಟ-ಪಡುಗಡೆ ಕಾಂಬಕಡಲು ತೆರೆ, ತೆರೆಗಳ ನರ್ತನ, ಅದರ ಅಕ್ಕಪಕ್ಕಗಳ ತೆಂಗಿನ ತೋಪು-ಗುಡಿ ಗುಡಿಸಲುಗಳು-ಬೆಳಗಿನ ಜಾವ ಇಲ್ಲವೆ ಸಂಜೆ ಹೊತ್ತು ಕಂಡವರಿಗೆ ಆನಂದವನ್ನುಣ್ಣಿಸುವುವು.

ಕರ್ನಾಟಕದ ಮತ್ತು ಕನ್ನಡಿಗರ ಕೀರ್ತಿ ವಿಶಾಲ. ಶಂಕರ-ಮಾಧ್ವ–ರಾಮಾನುಜರ ಧರ್ಮ ತ್ರಿವೇಣಿಯು ಕಲಿತ ಭೂಮಿ-ಮೆರೆದ ಭೂಮಿ ಕರ್ನಾಟಕಂ! ಹೆಚ್ಚೇಕೆ! ಸರ್ವಧರ್ಮಗಳವರನ್ನೂ "ಮಾಮೇಕ ಶರಣಂ ವಜ್ರ" ಎಂದವಳು ಕನ್ನಡಜನನಿ. ಕರ್ನಾಟಕರ ಕಲೆ ಅವರ ವಿಭೂತಿ ವೈಶಿಷ್ಟ್ಯಗಳು ಆರ್ಯರಿಗಿಂತಲೂ ಮಿಗಿಲಿನವಲ್ಲವೇ? ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಶ್ರೀ ವಿದ್ಯಾರಣ್ಯರು ಕನ್ನಡ ವಿಭೂತಿಪುರುಷರು. ಕರ್ನಾಟಕದ ಕೀರ್ತಿ ಅವರಿಂದ ವೇದ ಭಾಷ್ಯದ ಮೂಲಕ ದಶದಿಕ್ಕುಗಳಲ್ಲಿ ಹರಿಯಿತು. ಪುರಾಣಕಾಲದ ಶ್ರೀ ರಾಮ-ಪಾಂಡವರಿಗೆ ಕನ್ನಡನಾಡೂ ಕನ್ನಡಜನರೂ ಸಹಾಯಕರಾಗಿದ್ದರು. ಅದಕ್ಕೆ ಹಂಪೆಯ ಸುಗ್ರೀವಸಖ-ಹಾನಗಲ್ಲಿನ ವಿರಾಟ ನಗರಗಳು ನಮಗಿಂದೂ ಸಾಕ್ಷಿಗಳು. ಲಂಕೆಗೆ ಸೇತು ಕಟ್ಟಿದವರು ಕನ್ನಡಿಗರಲ್ಲವೇ? ರಾಮನ ಬಂಟನಾದ ಹನುಮಂತನು ಕನ್ನಡಿಗನಲ್ಲವೇ?

ವಿವಿಧ ಸಾಂಸ್ಕೃತಿಕಾನ್ವೇಷಣ ದೃಷ್ಟಿಯಿಂದ ಕರ್ನಾಟಕದ ಕೀರ್ತಿ ಸರ್ವರ ಕರ್ಣರಂಧ್ರಗಳ ಬಳಿಗೆ ಅಟನೆಗೆಯ್ದು ಕರ್ನಾಟಕವಾದುದಲ್ಲವೇ? ಕನ್ನಡದಲ್ಲೇ ವೈದ್ಯಕ ಗ್ರಂಥಗಳನ್ನು ಕಾಣಲಾರೆವೇ? ಅಶ್ವಶಾಸ್ತ್ರ-ಸೂಪಶಾಸ್ತ್ರ-ವಿಷವೈದ್ಯ-ಖಗೇಂದ್ರಮಣಿ ದರ್ಪಣ- ಕರಾಟ ಮೊದಲಾದ ವಿವಿಧ ಚಿಕಿತ್ಸಕ ಗ್ರಂಥಗಳನ್ನು ಚರಿತ್ರೆಯ ವಾಚಕರರಿತವರಲ್ಲವೇ? ಗೃಹವೈದ್ಯದ ಅನೇಕ ಗ್ರಂಥಗಳು ಮಣ್ಣುಪಾಲಾಗಿ ಇಂದು ಕೈಬೆರಳಿನಿಂದ ಎಣಿಸತಕ್ಕ ಹೊತ್ತಗೆಗಳೂ ಕಾಣದಿರುವುದು ನಮ್ಮೆಲ್ಲರ ಅಭಿಮಾನಕ್ಕೆ ಕೊರತೆಯಲ್ಲವೇ? ಚಿಕಿತ್ಸೆಗಳಲ್ಲಿ ದೈವೀ-ಮಾನುಷೀ-ಅಸುರೀ ಚಿಕಿತ್ಸೆಗಳನ್ನು ಬಲ್ಲ ಅಂತಹ ಗ್ರಂಥಗಳನ್ನು ರಚಿಸಿದ ಹಲವು ಗ್ರಂಥಕಾರರಿಗೆ ಮತ್ತು ಚಿಕಿತ್ಸಕರಿಗೆ ನೆಲಿಮನೆಯಂತಿದ್ದ ಬೀಡು ಕರ್ನಾಟಕ. ತ್ರಿಗುಣ ಯಾ ತ್ರಿದೋಷಗಳಿಂದ ಕೂಡಿದ ಸಂಸಾರದಲ್ಲಿ ಮನುಜಪ್ರಕೃತಿಗೆ ಚಿಕಿತ್ಸೆಗನುಗುಣವಾದ ಸ್ಥಳ-ಗಿಡ ಮೂಲಿಕೆಗಳೂ ಅದರ ಪರಿಚಿತರೂ ಎನಿಸಿದ್ದ ಕರ್ನಾಟಕರಂದು ಗಳಿಸಿದ ಕೀರ್ತಿ ಕಿರಿದಲ್ಲ. ಸಂಜೀವನದ ರಹಸ್ಯವನ್ನೂ ಚ್ಯವನದ ರಸವಾದವನ್ನೂ ಸಂಪೂರ್ಣ ಅರಿತು ಬೆಳಕಿಗೆ ತಂದವರು ಕರ್ನಾಟಕರಲ್ಲವೇ?

ಶ್ರೀ ಬಸವೇಶ್ವರರ ಪವಾಡ ಅತೀ ಮಹೋನ್ನತ. ಅವರು ತಮ್ಮ ಚಾತುರ್ಯದಿಂದ ತೋರಿದ ಅವಿಭಿನ್ನತೆ-ಸಮಸ್ವಾತಂತ್ರ್ಯಗಳು ಶೈವರಿಗೆ ಮಾತ್ರವಲ್ಲಾ ಇನ್ನಿತರರಿಗೂ ಆದರಣೀಯಗಳು. ಜೈನಧರ್ಮಾವಲಂಬಿಗಳು ಮಾಡಿದ ಸಾಹಿತ್ಯಸೇವೆ ಅಸದೃಶ. "ಪರುಷ" ತಾಗಿದರೆ ಕಬ್ಬಿಣವು ಚಿನ್ನವಾಗುವುದಂತೆ. ಅಂತಹ ಲೋಹ ವಿಶೇಷವಾವುದೆಂದು ಪರಿಚಿತರುಳ್ಳ ಮಹಾವಸ್ತು ಪರಿಚಯ ಶಾಸ್ತ್ರಜ್ಞಾನಿಗಳು ಕನ್ನಡದವರು. ಕರ್ನಾಟಕ ಚರಿತ್ರೆಯನ್ನು ಚಿಕಿತ್ಸಕನ ರೀತಿಯಿಂದ, ದರ್ಶನ-ಸ್ಪರ್ಶನ ಪ್ರಶ್ನೆಗಳಮೂಲಕ ಅಮೂಲಾಗ್ರವಾಗಿ ಅವಲೋಕಿಸುವುದು ಮಾತ್ರವಲ್ಲದೆ ಶೋಧಿಸಲೂ ಹತ್ತಿದರೆ ಉಜ್ವಲವೂ-ಗಹನವೂ-ಪವಿತ್ರವೂ ಆಗಿ ಕಂಡುಬರುವುದು.

ಕರ್ನಾಟಕದವರ ವಾಸ್ತು ಶಿಲ್ಪ ಜ್ಞಾನ ಪ್ರಪಂಚಕ್ಕೆ ಅದ್ವಿತೀಯವೆಂದು ಇಂದು ಕಣ್ಣಮುಂದಿದ್ದು ಮಾತನಾಡಿಸುತ್ತಿರುವ ಬೇಲೂರ-ಶ್ರವಣಬೆಳ್ಗೊಳದ- ಮೂಡಬಿದ್ರೆಯ - ಕಾರ್ಕಳ-ಬಾದಾಮಿಯ ಶಿಲಾಪ್ರತಿಬಿಂಬಗಳು ಹೇಳುವಂತೆ ಎಲ್ಲರನ್ನೂ ಪ್ರೋತ್ಸಾಹಗೊಡುತ್ತವೆ. ಸಾಹಿತ್ಯ ದೃಷ್ಟಿಯಿಂದ ಅವಲೋಕಿಸಿದರೆ ನೃಪತುಂಗನೆಂಬಂತೆ "ಕುರಿತೋದದೆಯುಂ ಚತುರಪ್ರಯೋಗಮತಿಗಳ್" ಎಂದು ಹೇಳುವದು ಬೇಡ.

ವಾಣಿಜ್ಯವು ಕನ್ನಡಿಗರದಿತ್ತು. ವಾಣಿಜ್ಯ ಕಾರಣದಿಂದ ಹಡಗು ಪಡೆಯ ಮೂಲಕ ವಿದೇಶೀಯರೊಂದಿಗೆ ಸಹಕಾರವನ್ನು ಬೆಳೆಯಿಸಿದ್ದರೆಂದು ತಿಳಿದು ಬರುತ್ತದೆ. ಅವರಾಷ್ಟ್ರವೂ ಬೆಳೆದಿರುವುದು ಖನಿಜ ಮತ್ತು ಇತರ ವಸ್ತು ಸಂಪತ್ತಿನಿಂದ. ಅಂತಹ ಸಕಲ ಸಂಪತ್ತುಗಳನ್ನು ಪರಾಶ್ರಯವನ್ನು ಕಾಣದೆ ಪರರಿಗಿತ್ತ ನಾಡು ಕರ್ನಾಟಕ. ಇದರಿಂದ ಇಲ್ಲಿನ ಜನತೆಯ ಕೃಷಿಕರ್ಮ ಕುಶಲತೆ ಎಷ್ಟೆಂದು ಮನಗಾಣಬೇಕು....

ರಸವಾದದ ಮಹತ್ವ ಗಂಭೀರ. ರಸವಾದಕ್ಕೆ ಎಷ್ಟು ಮಹತ್ವವಿದೆಯೋ ಅದಕ್ಕಿಂತಲೂ ರೋಗ ನಿಧಾನವನ್ನು ಕಂಡುಕೊಳ್ಳುವುದು ಘನ. ಅಂತಹ ರೋಗನಿದಾನದ ವಿಷಯದಲ್ಲಿ "ನಿದಾನೇಮಾಧವಃಶ್ರೇಷ್ಠಃ" ಎಂಬ ಕನ್ನಡದ ಮಾಧವನ ಹೆಸರೆತ್ತಿ ವೈದ್ಯರೆಲ್ಲರೂ ಮುಕ್ತಕಂಠವಾಗಿ ಉದ್ಘೋಷಿಸಿರುವುದು ನಮಗೆಲ್ಲರಿಗಭಿಮಾನಾಸ್ಪದವಿದ್ದರೂ ಇಂದಿನ ಕೊರತೆ ಆ ಅಭಿಮಾನದ ಮಟ್ಟದಲ್ಲಿ ಇರಗೊಡುವುದಿಲ್ಲ.

ಆಯುರ್ವೇದ ವೈದ್ಯ ಪರಿಚಯವು ಪ್ರಪಂಚಕ್ಕೆ ಬೆರಗುಗೊಳಿಸುವಂತಹುದು..........

ಶಸ್ತ್ರಚಿಗಿತ್ಸೆಯು ಅಸುರೀ ಚಿಕಿತ್ಸೆ. ಅಸುರೀ ಚಿಕಿತ್ಸೆಯನ್ನು ಕೊನೆಗೆ ನಡೆಸುತ್ತಿದ್ದುದು ಪ್ರಾಚೀನ ಸಂಪ್ರದಾಯ... ಚಿಕಿತ್ಸಾವಿಚಾರದಲ್ಲಿ ಗಿಡಮೂಲಿಕೆಗಳ- ಕಂದಮೂಲಗಳ- ಫಲವಸ್ತುಗಳ ರೀತ್ಯಾ ಚಿಕಿತ್ಸೆಯು ಉತ್ತಮವಾದುದೆಂದು ನಾವು ಹಿಂದೆ ಆಚರಿಸುತ್ತಿದ್ದುದು ಉತ್ತಮವಾದ ಸಾಧನವೆಂದು ವಿದೇಶೀಯ ವೈದ್ಯರಿಂದು ಮನಗಂಡಿದ್ದಾರೆ. ವಿದೇಶೀಯ ವಿದ್ಯಾಲಯಗಳಲ್ಲಿಂದು "ಅಷ್ಟಾಂಗಹೃದಯ"ದ ಪಾಠವು ನಡೆತ್ತಿರುವುದು ಸರ್ವರೂ ತಿಳಿದದ್ದು....

ಆರ್ಯರ ಸಮಗ್ರ ಸಂಪತ್ತನ್ನು ಪಾಶ್ಚಾತ್ಯ ರಾಷ್ಟ್ರಗಳು ಸುಲಿಗೆಗೈದೊಯ್ದು ಪ್ರಪಂಚದ ಮುಂದೆ ತಾವು ಶ್ರೇಷ್ಠರೆಂದು ಅಭಿಮಾನಿಸುತ್ತಿರುವರಾದರೂ ಅವರ ಅಭಿಮಾನೋನ್ನತಿಗೆ ಆರ್ಯರ ಸಮಗ್ರ ಜ್ಞಾನ ಸಂಪತ್ತೇ ಮೂಲಾಧಾರ. ಜರ್ಮನಿ ಇಂದು ಒಂದು ಪ್ರಬಲವಾದ ರಾಷ್ಟ್ರ. ಆ ರಾಷ್ಟ್ರವು ಆರ್ಯರ ಸಂಸ್ಕೃತ ಗ್ರಂಥಗಳನ್ನು ಕೊಂಡೊಯ್ದು ವಿವಿಧ ವಿಜ್ಞಾನಗಳಲ್ಲಿ ಎಷ್ಟು ಮುಂದರಿದಿರುವರೆಂಬುದು ಪ್ರಪಂಚಕ್ಕೆ ವಿಧಿತ. ಜರ್ಮನರು ಸಂಸ್ಕೃತಪ್ರೀತರಂತೆ. ಅಲ್ಲಿನ ಪಂಡಿತರು ಸಂಸ್ಕೃತದಲ್ಲಿ ಹಿರಿಯರಂತೆ. ಅವರು ಸಂಸ್ಕೃತಾಭಿಮಾನಿಗಳಂತೆ. ಈ ಹಿರಿತನ ಹಿಗ್ಗು ಭಾರತದ ಆರ್ಯರ ಸಂಪತ್ತು. ಹೀಗಿದ್ದರೂ ನಮ್ಮ ಜನತೆಗೆ ಸಂಸ್ಕೃತ ಸಾಹಿತ್ಯವು ಮೃತ ಸಾಹಿತ್ಯ-ಮೃತ-ಭಾಷೆ. ಆ ಸಾಹಿತ್ಯ ವೃಕ್ಷದ ಚಿಗುರುಗಳು ರೆಂಬೆಗಳು ಎಂದೂ ಹಸುರುಹಚ್ಚೆಯಾಗಿ ಪುನಃ ಮೆರೆಯುತಿದ್ದು ನಿಲ್ಲುತ್ತಿರುವುದೋ ಆ ಸಂಸ್ಕೃತ ಸಾಹಿತ್ಯವು ನಮಗೆ ಮೃತ ಸಾಹಿತ್ಯವಂತೆ. ಅದಕ್ಕೆ ಉತ್ತೇಜನಕೊಡುವವರಿಲ್ಲ-ಕಲಿತ ಮಂದಿಗಳಿಲ್ಲ-ಕಲಿತ ಮಂದಿಗಳಿಗೆ ಆದರವಿಲ್ಲ...

ವೈಷ್ಣವ - ಶೈವ - ಸ್ಮಾರ್ತರಿರಲಿ ಬುದ್ಧರಿರಲಿ-ಕ್ರೈಸ್ತರಿರಲಿ-ಮುಸ್ಲೀಮರಿರಲಿ; ಅವರ ಧರ್ಮ ಗ್ರಂಥಗಳೂ-ಧರ್ಮ ಪುರುಷರೂ ಸಮಾಜದ ಹಿತವನ್ನೇ ಸಾರಿರುವರು. ಒಡಕನ್ನು ಮಾಡಿಲ್ಲ. ಐಕ್ಯತೆಯನ್ನೇ ಮಾನವ ಸುಖಜೀವನದ ಹಾದಿಯೆಂದು ಬೋಧಿಸಿರುವರು. ಎಲ್ಲರಲ್ಲೂಮಾನವ ಸಹಾನುಭೂತಿಯನ್ನು ತೋರಿ ಮನುಷ್ಯತೆಯಿಂದ ಅಮರರಾಗಲಿರುವ ಬೋಧೆಯುಧರ್ಮ ಬೋಧಕರ ವಾಣಿಯಲ್ಲಿ ಕಂಡು ಬರುತ್ತಿದೆ.

ಮ. ವೈಕುಂಠಭಕ್ತ.

ಯುದ್ಧಾನಂತರ ವ್ಯಾಪಾರ

ಅಮೇರಿಕದಲ್ಲಿ ಭಾರತೀಯರು

ಭಾರತ–ಅಮೇರಿಕಾ ಒಪ್ಪಂದ!

ಅಮೇರಿಕದಲ್ಲಿನ ಭಾರತೀಯ ವ್ಯಾಪಾರಿ ಸಂಘದಲ್ಲಿ ಭಾರತದಿಂದ ವಿಶ್ವ ವಾಣಿಜ್ಯ ಪರಿಷತ್ತಿನ ಪ್ರತಿನಿಧಿಗಳಾಗಿ ಹೋಗಿದ್ದ ಸರ್ ಚೂನಿಲಾಲ್ ಮೇತಾ ಅವರು ಭಾಷಣ ಮಾಡುತ್ತಾ ಭಾರತ ಅಮೇರಿಕಾಗಳೊಳಗೆ ಒಂದು ದೀರ್ಘ ಒಪ್ಪಂದವಾಗಬೇಕೆಂದರು.

'ಇಂಗ್ಲೆಂಡು ಭಾರತದೊಡನೆ ಸಾಲ ಮಾಡುತ್ತದೆ. ಆಗಲೇ ಮಿಲಿಯಾವಧಿ ಪವನುಗಳಷ್ಟು ಹಣವು ಬಾಕಿಯಾಗಿದೆ. ಈ ಸಾಲವನ್ನು ಅಮೇರಿಕಕ್ಕೆ ಸಲ್ಲಿಸಿ ಅಲ್ಲಿಂದ ಭಾರತೀಯರಿಗೆ ಸಾಲ ಸಿಕ್ಕುವಂತೆ ಮಾಡಲು ಬ್ರಿಟಿಷರು ತಡೆಹಾಕುತ್ತಾರೆ. ಬ್ರಿಟಿಷರಿಗೇ ಅಮೇರಿಕದಿಂದ ಎಷ್ಟು ಸಾಲಸಿಕ್ಕಿದರೂ ಬೇಕಾಗಿರುವುದು.

'ಮುಂದಿನ ಇಪ್ಪತ್ತು ಮೂವತ್ತು ವರ್ಷಗಳ ತನಕ ಭಾರತವು ಅಮೇರಿಕದೊಡನೆ ಸ್ವಲ್ಪಸ್ವಲ್ಪವಾಗಿ ತನ್ನ ವ್ಯಾಪಾರವನ್ನು ಬೆಳೆಸಿಕೊಂಡು ಬರಲಿಚ್ಛಿಸುತ್ತದೆ. ಆದುದರಿಂದ ಅಮೇರಿಕದ ಸಣ್ಣ ದೊಡ್ಡ ಎಲ್ಲಾ ವ್ಯಾಪಾರಸ್ಥರಿಗೂ ಹಣವು ಹಂಚಿ ಬೀಳುವಂತಾಗಬೇಕಾದರೆ ಭಾರತೀಯ ವ್ಯಾಪಾರಿಗಳಿಗೆ ಅಲ್ಲಿ ಸ್ವತಂತ್ರ್ಯವಾಗಿ ವ್ಯಾಪಾರ ಮಾಡಲು ಅವಕಾಶ ಸಿಗಬೇಕು.

'ಭಾರತೀಯರಿಗೆ ಯುನೈಟೆಡ್ ಸ್ಟೇಟ್ಸಿನ ನಾಗರೀಕರಾಗಲು ಹಕ್ಕು ಕೊಡಬೇಕು. ಅಮೇರಿಕಾ ಭಾರತಗಳೊಳಗೆ ಈಗಲೇ ಒಂದು ವಾಣಿಜ್ಯ ಮತ್ತು ಹಡಗ ವ್ಯವಹಾರದ ಒಪ್ಪಂಧವಾಗಬೇಕು' ಹೀಗೆ ಶ್ರೀ. ಮೇತಾರವರು ಬೋಧಪರವಾಗಿ ನುಡಿದರು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ. ಸೂ.– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಬಾವು ಮತ್ತು ರಕ್ತ ವಿಷವೇರುವುದನ್ನು ತಡೆಯಿರಿ.

ಜಾಂಬಕ್ ಆದರ್ಶ ವಿಷಹಾರಿ ಔಷಧ

ಗಾಯವಾದ ಗಾಯವು ವಿಷರೂಪಿಯಾಗಿ ನೋವು ಮತ್ತು ಸಂಕಷ್ಟಗಳನ್ನುಂಟುಮಾಡುತ್ತದೆ. ಇದನ್ನು ಯಾವಾಗಲೂ ಜಾಂಬಕ್ ಲೇಪ ಸವರುವುದರಿಂದ ಪರಿಹರಿಸಬಹುದು. ಜಾಂಬಕನಲ್ಲಿರುವ ಅತ್ಯುತ್ತಮ ಶುದ್ಧ ವನಸ್ಪತಿ ತೈಲವು ಚರ್ಮಕ್ಕೆ ಬೇಗನೇ ಅಂಟಿಕೊಂಡು ನೋವನ್ನು ಕಡಿಮೆಮಾಡಿ, ಬಾವನ್ನು ಇಳಿಸಿ, ಹೀಗೆ ಎಲ್ಲಾ ತರದ ಗಾಯ ವ್ರಣಗಳ ಕೆಡುಕನ್ನು ಹೊರ ಹಾಕುತ್ತದೆ. ಜಾಂಬಕ್‌ಕಲ್ಲದೆ ಗುಣವಾಗುವುದು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ವಕೀಲ ವಾನ್ ರುಂಡ್‌ಸ್ಟೆಡ್

ಜರ್ಮನಿಯ ಅದ್ವಿತೀಯ ಸಮರಜ್ಞ

ಯುದ್ಧವು ಅವನಿಗೊಂದು ಆಟ

ಇಂದು ಬೆಲ್ಜಿಯಮ್ಮಿನಲ್ಲಿ ಕಠೋರ ಪ್ರತಿದಾಳಿ ಮಾಡಿ ಕೆಲವೇ ದಿನಗಳಲ್ಲಿ ಆ ಭಯಂಕರ ಜರ್ಮನ್ ಯುದ್ಧಯಂತ್ರವನ್ನು ೭೦ ಮೈಲುಗಳಷ್ಟು ಅವ್ಯಾಹತವಾಗಿ ಮುಂದೆ ತಂದು ಮಿತ್ರ ಸೇನೆಗಳನ್ನು ಕಕ್ಕಾಬಿಕ್ಕಿ ಮಾಡಿದ ಮಾರ್ಶಲ್ ವಾನ್ ರುಂಡ್‌ಸ್ಟೆಡ್‌ನು ಜಗತ್ತಿನ ಒರ್ವ ಮಹಾ ಸಮರ ಶಾಸ್ತ್ರ ಪ್ರವೀಣನಿದ್ದಾನೆ.

ಇಂದಿಗೆ ಐವತ್ತು ವರ್ಷಗಳಿಂದ ಅವನು ಸೈನ್ಯ ರಚನೆಯಲ್ಲಿಯೇ ಕಳೆದವನು. ಜರ್ಮನ್ ಇತಿಹಾಸದಲ್ಲಿ ಅಗ್ರಗಣ್ಯರೆನಿಸಿದ ಸೇನಾಪತಿಗಳಾದ ವೊನ್ ಪೊಲ್ಟ್ರಕೆ, ವೊನ್ ಸ್ಲಿಬ್ಲರ್, ಫ್ರಿಚ್ ಇವರ ಶ್ರೇಣಿಯಲ್ಲಿ ರುಂಡ್‌ಸ್ಟೆಡನು ಪರಿಗಣಿಸಲ್ಪಟ್ಟಿದ್ದಾನೆ.

ತರುಣನಿದ್ದಾಗ ಅವನು ವಕಾಲತು ಕಲಿಯಲು ಇಚ್ಛೆ ಪಟ್ಟಿದ್ದನೇ ಹೊರತು ಯುದ್ಧಶಾಸ್ತ್ರದಲ್ಲಿ ಅವರಿಗೆ ಅಭಿರುಚಿ ಇರಲಿಲ್ಲ. ಆದರೆ ಸೈನ್ಯ ಕುಟುಂಬಕ್ಕೆ ಸೇರಿದ ಅವನ ತಂದೆಯವರು ಒತ್ತಾಯಪಡಿಸಿ ಅವರಿಗೆ ಮಿಲಿಟರಿ ಶಾಲೆಗೆ ಕಳುಹಿಸಿದರು.

ಯುದ್ಧ ನೀತಿಯನ್ನು ನಿರ್ದೇಶಿಸುವ ಮಟ್ಟಿಗೆ ರುಂಡ್‌ಸ್ಟೆಡನು ಸ್ವತಂತ್ರನು. ಅವನು ಸೈನ್ಯ ಖಾತೆಯಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಅಧಿಕಾರಿಯಲ್ಲ. ಸ್ವತಂತ್ರ ವಿಚಾರದಲ್ಲಿ ಅವನು ಹಿಟ್ಲರನಿಗೂ ಹೆದರುವುದಿಲ್ಲ. ಯುದ್ಧದ ಪರಿಣಾಮವು ಕಳವಳಾಸ್ಪದವಾದಾಗ ಹಿಟ್ಲರನು ರುಂಡ್‌ಸ್ಟೆಡನ ಬಳಿಗೆ ಓಡಿಹೋಗಿ ಅವನ ಸಹಾಯವನ್ನು ವಿನಂತಿಸುವನು.

ಪೋಲೆಂಡಿನಲ್ಲಿ ಯುದ್ಧಾರಂಭವಾದಾಗಕ್ಷಣಮಾತ್ರದಲ್ಲೆಂಬಂತೆ ಜಯಶೀಲರಾದುದು ಈ ರುಂಡ್‌ಸ್ಟೆಡನ ಯೋಜನೆಯಿಂದ. ೧೯೪೦ರಲ್ಲಿ ಬೆಲ್ಜಿಯಮ್, ಫ್ರಾನ್ಸ್‌ಗಳನ್ನು ಹಿಡಿದು ಮಿತ್ರರನ್ನು ಡನ್‌ಕರ್ಕ್‌ದಿಂದ ಅಟ್ಟಿದ್ದೂ ರುಂಡ್‌ಸ್ಟೆಡ್‌ನ ಚತುರ ಯುದ್ಧನೀತಿಯಿಂದಿರುತ್ತದೆ. ಈ ಕೀರ್ತಿ ರೋಮೆಲನಿಗೆ ಹೋಯಿತು. ಕಾರಣ ಅವನು ಅಧಿಕಾರದ ಹೊಣೆ ಹೊತ್ತವನಾಗಿದ್ದನು. ರುಂಡ್‌ಸ್ಟೆಡನು ಹಿಂದೆನಿಂತು ಕೆಲಸ ಮಾಡಿದನು. ೧೯೪೩ರ ತನಕ ಯುರೋಪ್ ಮುತ್ತಿಗೆಯನ್ನು ಎದುರಿಸುವ ಹೊಣೆಗಾರಿಕೆಗೆ ಈ ನಿಪುಣನಿಗೇ ಕೊಡಲ್ಪಟ್ಟಿತು.

ಮಧ್ಯರಾತ್ರಿ ತನಕ ರುಂಡ್‌ಸ್ಟೆಡನು ತನ್ನ ಆಫೀಸಿನಲ್ಲಿ ಕುಳಿತು ಕೆಲಸಮಾಡುತ್ತಾನೆ. ಅವನು ಏಳುವುದೂ ಬೇಗ. ತಿನ್ನುವುದು ಸ್ವಲ್ಪ. ಊಟಕ್ಕೆ ಕುಳಿತರೆ ಕೆಲವೇ ಕ್ಷಣಗಳಲ್ಲಿ ಮುಗಿಸಿ ಏಳುವನು. ಹೊಗೆಸೊಪ್ಪು ಸೇದುವ, ಇಲ್ಲವೆ ಮಾದಕ ದ್ರವ್ಯಗಳನ್ನು ಸೇವಿಸುವ ಚಟವು ಅವನಿಗೆ ಇಲ್ಲದಿದ್ದುದು ಒಂದು ಸಾರಸ್ಯ ವಿಷಯ.

ಚರ್ಚಿಲ್ಲರ ಮರಣ!

ಹಳೇ ವರ್ಷಾಂತ್ಯದ ಸೋಜಿಗ ವಾರ್ತೆ

೧೯೪೪ನೇ ಅಂತ್ಯದ ದಿನದಂದು ಅಮೇರಿಕದಲ್ಲಿ ಇದ್ದಕಿದ್ದ ಹಾಗೆ 'ಚರ್ಚಿಲ್ಲರು ಹೃದ್ರೋಗದಿಂದ ಮರಣಪಟ್ಟರೆಂಬ' ವಾರ್ತೆಯು ಅಲ್ಲಿನ ಜನರನ್ನು ದಿಗಿಲುಗೊಳಿಸಿತು. ಅವರ ಮೇಲೆ ಗ್ರೀಸಿನಲ್ಲಿ ಗುಂಡೆಸೆದ ಪರಿಣಾಮವಿರಬಹುದೆಂದೇ ಎಲ್ಲರೂ ಊಹಿಸುವವರಾದರು.

ವಾರ್ತಾ ಸಂಸ್ಥೆಗಳೂ, ರೇಡಿಯೋ ಸಂಸ್ಥೆಗಳೂ ಕೂಡಲೇ ಲಂಡನಿಗೆ ಸಂಬಂಧ ಕಲ್ಪಿಸಿ ಮೇಲಿಂದ ಮೇಲೆ ಸಂಗತಿಯೇನೆಂದು ವಿಚಾರಿಸಿದವು.

ಕಡೆಗೆ ಬ್ರಿಟಿಷ್ ಪ್ರಧಾನರ ನಂಬರ್ ಟೆನ್ ಡೌನಿಂಗ್ ಸ್ಟ್ರೀಟ್ ಭವನಕ್ಕೂ ಈ ವಾರ್ತೆ ಮುಟ್ಟಿತು. ಚರ್ಚಿಲ್ಲರಿಗೇ ಇದು ಆಶ್ಚರ್ಯಗೊಳಿಸಿತು. ಅವರು ವಿನೋದವಾಗಿ: "ಈ ವಾರ್ತೆ ಉತ್ಪ್ರೇಕ್ಷೆಯದು. ಇದು ಹೆಚ್ಚು ನಿಜವಲ್ಲ" ಎಂದರಂತೆ. ಚರ್ಚಿಲ್ಲರ ಈ ಸ್ವಂತ ಹೇಳಿಕೆಯನ್ನು ಕೇಳಿದಾಗ ಅಮೇರಿಕನ್ನರು ಮುಗುಳುನಗೆ ನಕ್ಕರಂತೆ.

ಜಪಾನಿಯರ ಗುಪ್ತಾಸ್ತ್ರ

ಹಾರಿತು ಆದರೆ ಹಾನಿಯಾಗಲಿಲ್ಲ

ಜಪಾನಿಯರಿಂದ ಬಿಡಲ್ಪಟ್ಟ ಒಂದು ಗುಪ್ತಾಸ್ತ್ರವು ಸಿಕ್ಕಿದೆ. ಅದೊಂದು ಕಾಗದದಿಂದಲೇ ಮಾಡಲ್ಪಟ್ಟ ಉರುಟು ಗೋಳ. ಲಘುವಾಗಿ ಮೇಲಕ್ಕೇರುವ ವಾಯುವಿನಿಂದ ತುಂಬಿದ್ದಂತಾದ್ದು. ೨೩॥ ಅಡಿ ಎತ್ತರವಿದ್ದು ೮೦೦ ರಾತ್ತಲುಗಳಷ್ಟು ಭಾರದ ಸ್ಫೋಟಕ ವಸ್ತುಗಳನ್ನು ಅದು ತನ್ನಲ್ಲಿ ಹೊತ್ತುಕೊಂಡಿತ್ತು.

ಇದಕ್ಕೆ ಜೋಡಿಸಲ್ಪಟ್ಟ ಸ್ಫೋಟವಾಗುವ ಉಪಕರಣವು ಸರಿಯಾಗಿ ಕೆಲಸ ಮಾಡದ್ದರಿಂದ ಅದು ಗಾಳಿಯಲ್ಲಿ ತೇಲಾಡುತ್ತಾ ಉತ್ತರ ಅಮೇರಿಕದ ಮೊಂಟೊನಾ ಬೆಟ್ಟ ಪ್ರದೇಶದಲ್ಲಿ ಹೋಗಿ ಬಿದ್ದಿತ್ತು. ಇದು ರಚನೆಯಲ್ಲಿ ಬಹಳ ಸರಳತರದಿದ್ದು ಅತೀ ಕಮ್ಮಿ ಖರ್ಚಿನಲ್ಲಿ ತಯಾರು ಮಾಡಿದ ಗುಪ್ತಾಸ್ತ್ರವಿರಬೇಕೆಂದು ತಿಳಿಯಲಾಗಿದೆ.

ಮಹಾತ್ಮರಿಗಿಂತ ಮಿಗಿಲಾದವರಿಲ್ಲ

ಅಮೇರಿಕನ್ ಪ್ರೊಫೆಸರರ ಪ್ರಶಂಸೆ

ರಶ್ಯವು ಸಾಮ್ರಾಜ್ಯವಾದಿಯೊ?

ಸೇವಾಗ್ರಾಮದಲ್ಲಿ ಮಹಾತ್ಮರ ಸಂದರ್ಶನಮಾಡಿದ ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡೆವಿಸ್ ಅವರು ಮಹಾತ್ಮರ ಕುರಿತು ಹೀಗೆ ತಿಳಿಸಿದ್ದಾರೆ:

"ಇಡೀ ಜಗತ್ತಿನಲ್ಲಿ ತನ್ನ ತತ್ವಗಳಿಗೇ ಅಂಟಿಕೊಂಡಿದ್ದು ಈ ಯುದ್ಧದಿಂದ ಯಾವ ಬದಲಾವಣೆಯಿಂದಲೂ ಪರಿಣಾಮಹೊಂದದೆ ಇರುವ ಒಂದು ವ್ಯಕ್ತಿಯೆಂದರೆ ಗಾಂಧೀಜಿ. ಮುಂದಿನ ಒಂದು ಶತಮಾನ ನಂತರ ಚರ್ಚಿಲ್, ಸ್ಟೇಲಿನ್, ರೂಸ್‌ವೆಲ್ಟ್ ಮುಂತಾದ ಪ್ರಭೃತಿಗಳ ಹೆಸರು ಜಗತ್ತಿನಲ್ಲಿ ಮರೆತು ಹೋಗುವಾಗ ಇವರ ಹೆಸರು ಪ್ರಕಾಶಮಾನವಾಗಿ ಹೊಳೆಯುತ್ತಿರುವುದು. ಯಾಕೆಂದರೆ ಇಂದು ಮಹಾತ್ಮಾಗಾಂಧಿಯವರಿಗೆ ಮಿಗಿಸುವ ಅಂತರಾಷ್ಟ್ರಿಯವಾದಿಗಳು ಬೇರೆ ಇಲ್ಲ."

ಅಹಿಂಸಾತ್ಮಕ ಚಳವಳ 'ಸೋಗು'

ಗಾಂಧೀಜಿ ಮೇಲೆ ಬ್ರಿಟಿಷನೊಬ್ಬನ ಟೀಕೆ

ಬ್ರಿಟಿಷನಿಗೆ ಆಂಗ್ಲೆಯನ ಪ್ರತ್ಯುತ್ತರ

೧೯೨೧ರಲ್ಲಿ ಇಂಗ್ಲೆಂಡಿನ ಪಟ್ಟಾಧಿಕಾರಿ ಫ್ರಿನ್ಸ್ ಆಫ್ ವೇಲ್ಸರು ಭಾರತಕ್ಕೆ ಬಂದಿದ್ದರು. ಅವರನ್ನು ಕಪ್ಪು ಪತಾಕೆಗಳಿಂದ ಜನರು ಎದುರುಗೊಂಡರು. ಬೊಂಬಾಯಿಯಲ್ಲಿ ಅವರಿಳಿದಾಗ ದೊಡ್ಡ ದಂಗೆಎದ್ದು ಬಹಳ ಪ್ರಾಣಹಾನಿ ಅವಘಡಗಳು ಸಂಭವಿಸಿದುವು.

ಪ್ರಿನ್ಸ್ ಆಫ್ ವೇಲ್ಸರು ಸವಾರಿ ಮಾಡುವ ಕುದುರೆಗಳನ್ನು ಸಿದ್ಧಪಡಿಸಲು ಸರಕಾರದಿಂದ ನಿಯಮಿಸಲ್ಪಟ್ಟ ಕರ್ನಲ್ ಹಂಟರ್ ಎಂಬವರು ಒಂದು ಇಂಗ್ಲೆಂಡಿನ ಪತ್ರಿಕೆಯಲ್ಲಿ ಮಹಾತ್ಮಾಗಾಂಧಿಯವರನ್ನು ಟೀಕಿಸುತ್ತಾ ಒಂದು ಲೇಖನ ಬರೆದಿರುವರು.

ಅದರಲ್ಲಿ ಕರ್ನಲರು: "ಗಾಂಧಿ ಎಂಬ ಈ ಮನುಷ್ಯ ಸನ್ಯಾಸಿಯ ಸೋಗಿನಲ್ಲಿ ಜನರನ್ನು ಇಲ್ಲದ ಸಲ್ಲದ ಕಾರಣಗಳಿಂದ ಪುಸಲಾಯಿಸಿ ದಂಗೆ ಏಳಿಸುತ್ತಾನೆ. ಅಹಿಂಸಾ ಚಳವಳದ ಹೆಸರಿನಲ್ಲಿ ಅವನ ಕಣ್ಣ ಎದುರಿನಲ್ಲೇ ಬೊಂಬಾಯಿಯಲ್ಲಿ ಜನರು ಭೀಕರ ಪುಂಡಾಟಿಕೆ ನಡೆಸಿ ಅನೇಕ ನರಹತ್ಯದ ಕೆಲಸಗಳನ್ನು ಮಾಡಿದರು. ಆದರೆ ಧೀರ ಬ್ರಿಟಿಷ್ ಸೈನಿಕರು ಸಾವಕಾಶಮಾಡದೆ ಅದನ್ನು ಅಣಗಿಸಿದರು.

"ಈ ಗಾಂಧೀಜಿಯು ಜನರನ್ನು ಠಕಾಯಿಸಲಿಕ್ಕೆ ಮತ್ತವರ ಮತೀಯ ಭಾವನೆಗಳ ಮೇಲೆ ಪರಿಣಾಮವಾಗುವಂತಹ ಮೂಢ ವಿಚಾರಗಳ ಪ್ರಚಾರ ಮಾಡುತ್ತಾನೆ. ಆತನಿಗೆ ವಾತದೋಷವಿರುವುದರಿಂದ ಉಪವಾಸ ಮಾಡಬೇಕಾಗುತ್ತದೆ. ಅದನ್ನು ಅವನು ದೇಶೋದ್ಧಾರದ ಧ್ಯೇಯಕ್ಕೆಂದು ಜನರಿಗೆ ಮರಳುಗೊಳಿಸುತ್ತಾನೆ."

ಇದಕ್ಕೆ ಪ್ರತ್ಯುತ್ತರವೆಂಬಂತೆ ಮಿ। ಗ್ರಿಫಿತ್ ಎಂಬ ಮೆಚ್‌ಫೆಲ್ಡಿನ ಇನೊಬ್ಬ ಬ್ರಿಟಿಷ್ ಸದ್ಗೃಹಸ್ಥರು ಈ ರೀತಿ ಬರೆದಿದ್ದಾರೆ:

ಭಾರತ ಜನರ ವರ್ಷಾವಧಿ ಸರಾಸರಿ ಆದಾಯವು ಕೆಲವೇ ರೂಪಾಯಿಗಳಷ್ಟಿರುವುದು. ಅಲ್ಲಿ ಅರೆ ಹೊಟ್ಟೆಯ ಮತ್ತು ಉಪವಾಸ ಬೀಳುವ ಜನರೇ ಹೆಚ್ಚು. ಇಂತಹ ದೇಶದಲ್ಲಿ ನಮ್ಮ ರಾಜಕುಟುಂಬದವರು ಹೋಗಿ ಕುದುರೆ ಆಟ ಆಡುವುದೆಂದರೆ ಯಾವ ಜನರು ತಾನೆ ಸುಮ್ಮಗಿರುವರು. ದಂಗೆ ಏಳದೆ ಅವರನ್ನೇನುಮಾಡುವರು. ಕರ್ನಲ್ ಹಂಟರರು ಇನ್ನು ಹೆಚ್ಚಿನ ವಿವೇಕವಂತರಾಗಿ ಭಾರತ ಜನರ ಪರಿಸ್ಥಿತಿಯನ್ನು ಅಲ್ಲಿಯ ದೇಶ ಮುಖಂಡರ ಜೀವನ ಇತಿಹಾಸವನ್ನು ಕಲಿತುಕೊಂಡರೆ ಒಳ್ಳೇದಿತ್ತು."

ಸ್ವೀಕಾರ: "ಕತೆಗಾರ" ಇದರ ಕೈಗಾರಿಕೆ ವಿಶೇಷಾಂಕದ ವಾರ್ಷಿಕ ಸಂಚಿಕೆಯ ೧೨ನೇ ಸಂಪುಟ ಶ್ರೀ. ಜಿ. ಎ. ನರಸಿಂಹ ಮೂರ್ತಿ ಬಿ. ಎಸ್. ಸಿ. ಇವರು ಸಂಪಾದಕ ಮತ್ತು ಪ್ರಕಾಶಕರು ಬೆಲೆ ೧೨ ಆಣೆ.

1944

ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣಪದಕ ಪಡೆದ

ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಎದೆನೋವನ್ನು ನಿವಾರಿಸಿರಿ.

ನಿಮಗೆ ಬೇಗನ್ನೇ ಶೀತವಾಗುವುದೆ? ನೀವು ಆಗಾಗ ಕೆಮ್ಮು ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತಿರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸ್‌ಗಳನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸ್ ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಒಳೇ ಪಾಠ

(೨ ನೇಪುಟದಿಂದ)

ಮಾಡು' ಎಂದು ಹೇಳುತ್ತಾ ಮತ್ತೆ ತನ್ನ ಸರಸಸಲ್ಲಾಪದಲ್ಲಿ ತೊಡಗಿದನು.

ನನಗೆ ರೋಮಾಂಚನವಾದ ಹಾಗಾಯಿತು. ಇದೇನು? ಉಪಾಧ್ಯಾಯನೊಬ್ಬನು ತನ್ನ ತರುಣಿ ವಿದ್ಯಾರ್ಥಿಯೊಂದಿಗೆ ಈ ರೀತಿ ವರ್ತಿಸುವುದೇ? ಥೂ, ಧಿಕ್ಕಾರ. ಹಾಳಾಯಿತು ನಮ್ಮ ಭಾರತೀಯ ಸಂಸ್ಕೃತಿ. ಗುರುಗಳು ತಮ್ಮ ಶಿಷ್ಯರನ್ನು ಈ ರೀತಿ ಕಲಂಕಿತರನ್ನಾಗಿ ಮಾಡುವುದೆ? ಅದರಲ್ಲೂ ಓರ್ವ ತರುಣಿಯನ್ನು ಪಾಠ ಕಲಿಸುವ ನೆಪದಿಂದ ಅವಳನ್ನು ಕಾಮಚೇಷ್ಟೆಗೆ ಗುರಿಮಾಡಿಸಿದರೆ ಮುಂದೆ ಅದೆಷ್ಟು ಭೀಕರ ಪರಿಣಾಮದಲ್ಲಿ ಅಂತ್ಯವಾಗಬಹುದು? ಧ್ಯೇಯವಾದಿಯಾದ ನನ್ನ ರಕ್ತವು ಕುದಿಯಿತು.

ಮತ್ತೆ ಉಪಾಧ್ಯಾಯನು ಒಂದು ಪುಸ್ತಕವನ್ನು ತನ್ನ ಶಿಷ್ಯಳಿಂದ ಓದಿಸಹತ್ತಿದ. ಅವಳು ತಪ್ಪಿ ತಪ್ಪಿ ಓದುವಾಗ ಅವನು ಅವಳ ಹೆಗಲ ಮೇಲೆ ಕೈ ಹಾಕಿ ಅವಳ ಮುಖವನ್ನು ತನ್ನ ಮುಖದ ಬಳಿ ಎಳೆದು ಅವಳ ಗಲ್ಲಕ್ಕೆ ತನ್ನದನ್ನು ಒತ್ತುತ್ತಾ ಮತ್ತೊಂದು ಸಾರಿ ಬಿಗಿಯಾಗಿ ಆಲಿಂಗಿಸುತ್ತಾ ಗಟ್ಟಿಯಾಗಿ ಹೊರಗೆ ಕೇಳಿಸುವಂತೆ ಅವಳನ್ನು ಗದರಿಸಿದಂತೆ ಮಾಡಿ ಮೆಲ್ಲಗೆ ವಂಚನೆಯ ನಗುನಗುತ್ತಾ ತನ್ನ ಸಲ್ಲಾಪಗಳನ್ನು ಮುಂದರಿಸಿದನು.

ಗುರು ಶಿಷ್ಯಂದಿರ ಈ ವಿಲಾಸಾದಿಗಳನ್ನು ನೋಡುತಿದ್ದ ನನ್ನಲ್ಲಿ ಸಹಜವಾದ ಉದ್ರೇಕಗಳುಂಟಾದವಾದರೂ ಆ ಧೂರ್ತ ಉಪಾಧ್ಯಾಯನ ವರ್ತನೆಯನ್ನು ಯಾವುದಾದರೂ ರೀತಿಯಲ್ಲಿ ಆ ತರುಣಿಯ ಹೆತ್ತವರಿಗೆ ತಿಳಿಸದಿದ್ದರೆ ಸಮಾಜದಲ್ಲಿ ಒಂದಲ್ಲ ಒಂದು ದಿವಸ ಅನರ್ಥ ಸಂಭವಿಸದಿರದೆಂದು ನೆನಸಿ ನಾನು ಉಪಾಯವನ್ನು ಯೋಚಿಸಹತ್ತಿದೆ. ಇಷ್ಟರಲ್ಲಿ ನನ್ನ ಸ್ನೇಹಿತರು ಬಂದು ಗಟ್ಟಿಯಾಗಿ ಮಾತನಾಡಲೂ ನಗಲೂ ಆರಂಭಿಸಿದರಿಂದ ಆ ಗುಲ್ಲು ಎದುರಿನ ಗುರು ಶಿಷ್ಯಂದಿರ ಗಮನವನ್ನು ಸೆಳೆದು ಅವರು ಅರ್ಧದಲ್ಲೇ ತಮ ಅಭ್ಯಾಸವನ್ನು ಮುಗಿಸಿದರು.

ನಾನು ನೋಡಿದ ಸಂಗತಿಯನ್ನು ಸ್ನೇಹಿತರಿಗೆ ತಿಳಿಸಲು ಅವರು ಒಮ್ಮತವಾಗಿ ನಾನು ಅವಳ ಹೆತ್ತವರಿಗೆ ತಿಳಿಸಬೇಕೆಂದು ಮಾಡಿದ ನಿರ್ಧಾರವನ್ನು ಸಮರ್ಥಿಸಿದರು. ಇದರಿಂದ ಹೆಚ್ಚಿನ ಸ್ಫೂರ್ತಿಗೊಂಡು ನಾನು ಮಾರ್ಗಕ್ಕೆ ಬಂದು ಆ ವಕೀಲರ ಮನೆ ಹೊಕ್ಕಿದೆ. ಅಲ್ಲಿ ಹೊರಜಗಲಿಯ ಮೇಲೆ ಅವರ ಗುಮಾಸ್ತ ಕೂತಿದ್ದ. ನಾನು ಅವನನ್ನು ಕರೆದು ವಕೀಲರ ಪರಿಚಯ ಕೇಳುತ್ತಾ: 'ಆ ಹುಡುಗಿಗೆ ಕಲಿಸಲು ಬರುವ ಆ ಹಾಳು ಅಸಾಮಿ ಯಾರು?' ಎಂದು ಕೇಳಿದೆ. ಅದಕ್ಕೆ ಮೈಸೂರು ಧಾಟಿಯಲ್ಲಿ ಗುಮಾಸ್ತ: 'ಯಾಕೆ? ಅವರು ಬಿ. ಎ. ಬಿ. ಟಿ. ಹೈಸ್ಕೂಲ್ ಟೀಚರ್ ಶ್ಯಾಮರಾವ್, ರಿಟಾಯರ್ಡ್ ಡಿಪ್ಟಿ ಕಮಿಶನರ್ ಮಗ' ಎಂದ.

ನಾನು ಹೇಳಿದೆ: 'ಗುಮಾಸ್ತರೆ ಆದರೆ ಒಂದು ವಿಷಯ. ಆ ನವತರುಣಿಯಾದ ನಿಮ್ಮ ವಕೀಲರ ಮಗಳನ್ನು ಆ ಅನೈತಿಕ ಉಪಾಧ್ಯಾಯನಿಂದ ಪಾಠ ಹೇಳಿಸುವುದು ಅಪಾಯಕರ. ಅವನು ಸ್ವಲ್ಪ ಹೊತ್ತು ಮೊದಲು ನಾನು ನೋಡುತಿದ್ದ ಹಾಗೆ....'

ಗುಮಾಸ್ತ ನನ್ನನ್ನು ಅರ್ಧ ಮಾತಿನಲ್ಲೇ ತಡೆದು: 'ಹೋಗಲಿ ಬಿಡ್ರಿ, ಗಂಡ ಹೆಂಡತಿ, ಏನೂ ಮಾಡ್ಲಿ ಬಿಡ್ರಿ,' ಎಂದಾಗ ನಾನು ಬೆಪ್ಪನಾದೆ.

ಉಪಾಧ್ಯಾಯನು ಆ ತರುಣಿಯ ಗಂಡ. ದಸರದ ಸಮಯಕ್ಕೆ ತಂದೆ ಮನೆಗೆ ಬಂದಿದ್ದಳು. ಮತ್ತೆ ಅವರ ಸಲ್ಲಾಪವನ್ನು ನೋಡುವ ಆಶೆ ನನಗಾದರೂ ನಮ್ಮ ಸ್ನೇಹಿತ ಬಳಗದ ಗಲಾಟೆಗೆ ಆ 'ಉಪಾಧ್ಯಾಯ' ಪುನಃ ಅವಳಿಗೆ ನಾವಿದ್ದಾಗ 'ಕಲಿಸಲು' ಪ್ರಯತ್ನ ಮಾಡಲಿಲ್ಲ.

K. V. B

ಸಿಹಿ ಸುದ್ದಿ ಸಂಗ್ರಹ

ಈಗ ಜಪಾನಿಯರಿಂದ ಸುತ್ತುಗಟ್ಟಲ್ಪಟ್ಟ ಅನಾಕ್ರಮಿತ ಚೀನದ ರಾಜಧಾನಿಲ್ಲಿ ದಿನನಿತ್ಯ ಉಪಯೋಗದ ವಸ್ತುಗಳ ಬೆಲೆಯು ಒಂದಕ್ಕೆ ನೂರುಪಾಲಷ್ಟು ಹೆಚ್ಚಿದೆ. ಒಂದು ಹೇಟಿನ ಬೆಲೆ ೫೦ ಪವನು. ಒಂದು ಜೋಡಿ ಬೂಟ್ಸುಗಳಿಗೆ ೨೦೦; ಪೌಡರ್ ಕರಡಿಗೆಗೆ ೧೦ ಪವನು; ವಿಸ್ಕಿ ಬಾಟ್ಲಿಯೊಂದಕ್ಕೆ ೧೯೦ ಪವನು; ಬೆಣ್ಣೆ ರಾತ್ತಲಿಗೆ ೧೦ ಪವನು.

* * *

ವೆಸ್ಟ್ ಇಂಡೀಸ್ ದ್ವೀಪದಲ್ಲಿನ ನಿವಾಸಿಗಳ ಹೆಂಗಸರು ತಮ್ಮ ಗಂಡಸರೆದುರಿನಲ್ಲಿ ಮಾತಾಡುವಾಗ ಒಂದು ಕಣ್ಣು ಮುಚ್ಚಿಕೊಂಡಿರಬೇಕು.

* * *

ಚರ್ಚಿಲ್, ಸ್ಟೈಲಿನ್, ರೂಸ್‌ವೆಲ್ಟ್ ಮಹಾತ್ಮಾ ಗಾಂಧಿ ನಾಲ್ವರು ಪ್ರಭೃತಿಗಳ ಪೈಕಿ ಆಧುನಿಕ ಜಗತ್ತಿನ ಮಹಾಪುರುಷನಾರೆಂದು ನಾಗಪುರದ ಮೊರಿಸ್ ಕಾಲೇಜಿನ ವಿದ್ಯಾರ್ಥಿ ಸಂಘದಲ್ಲಿ ವೋಟು ತೆಗೆದಾಗ ಗಾಂಧೀಜಿಯವರೇ ಬಹುಮತ ನಡೆದರು.

* * *

ಬರೋಡಾ ಸಂಸ್ಥಾನದ ಮಾಹೀ ನದಿ ತೀರದಲ್ಲಿನ ಒಂದು ಹಳ್ಳಿಯಲ್ಲಿ ೭೬ ಅಡಿಯ ತಿಮಿಂಗಿಲದ ಶವವೊಂದು ಬಿದ್ದಿತು. ಈಗ ಅದರ ಅಸ್ತಿಪಂಜರವನ್ನು ಬರೋಡಾ ವಸ್ತು ಪ್ರದರ್ಶನಾಲಯದಲ್ಲಿಡಲು ಪ್ರಯತ್ನಗಳಾಗುತ್ತಿವೆ.

* * *

ಕಳೆದ ೧೯೪೨ ಆಗಸ್ಟ್ ಗಲಭೆಯಲ್ಲಿ ಚಿಮೂರ್ ಮತ್ತು ಆಶ್ತಿ ಎಂಬಲ್ಲಿ ಕೊಲ್ಲಲ್ಪಟ್ಟ ಸ್ಪೆಶಲ್ ಡಿವಿಜನಲ್ ಆಫೀಸರರಾದ ಮಿ. ಡೊಂಗಾಜಿ ಅವರ ಕಟ್ಲೆಯಲ್ಲಿ ಆರೋಪಿತರಾದ ಹದಿನಾರು ಜನರಿಗೆ ಮರಣ ದಂಡನೆ ವಿಧಿಸಲ್ಪಟ್ಟಿತಷ್ಟೇ. ಈಗ ಆ ಆಫೀಸರರ ತಾಯಿಯವರು ಆರೋಪಿಗಳಿಗೆ ಕ್ಷಮಾದಯೆ ತೋರಿಸಬೇಕಾಗಿ ವ್ಯಾಸ್‌ರಾಯರಿಗೆ ವಿನಂತಿಸಿಕೊಂಡಿರುವರಂತೆ.

* * *

ಹಿಂದೆ ಒಂದು ಸಲ ಯುದ್ಧ ಕೈದಿಗಳಾಗಿ ಚರ್ಚಿಲ್ಲರು ಆಫ್ರಿಕದಲ್ಲಿದ್ದು ಬಿಡುಗಡೆ ಹೊಂದಿ ಹೋಗುವಾಗ ಒರ್ವ ಕ್ಷೌರಿಕನ ಬಳಿ ಐದು ಶಿಲಿಂಗು ಸಾಲ ಮಾಡಿದ್ದರಂತೆ. ಇಚೀಗೆ ಮಾರ್ಶಲ್ ಸ್ಮಟ್ಸರು ಇಂಗ್ಲೆಂಡಿಗೆ ಹೋಗಿದ್ದಾಗ ಅದನ್ನು ವಸೂಲಿ ಮಾಡಿ ತರುವಂತೆ ಆ ಕ್ಷೌರಿಕನು ವಿನಂತಿಸಿಕೊಂಡಿದ್ದನು.

* * *

ಬಟ್ಟೆ ತಯಾರಿಕೆಯ ಕೈಗಾರಿಕೆ ಬಿಟ್ಟರೆ ಮತ್ತೆ ಭಾರತದಲ್ಲಿ ಅತೀ ಪ್ರಾಮುಖ್ಯದ ಉದ್ಯಮವೆಂದರೆ ಸಕ್ಕರೆ ತಯಾರಿಕೆ. ನಮ್ಮ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು ಒಂದು ಲಕ್ಷ ಕೆಲಸಗಾರರಿದ್ದಾರೆ. ಅವರಲ್ಲಿ ದೊಡ್ಡ ಜವಾಬುದಾರಿ ಹುದ್ದೆಯಲ್ಲಿ ೩ ಸಾವಿರ ವಿಶ್ವವಿದ್ಯಾಲಯದ ಪದವೀದರರೂ, ಯಂತ್ರವಿಜ್ಞಾನ ಪದವೀಧರರೂ, ಇದ್ದಾರೆ. ೨೦೦ ಲಕ್ಷ ರೈತರಿಗೆ ಉದ್ಯೋಗ ದೊರಕುವಂತಾಗಿದೆ. ೩೩ ಕೋಟಿ ರೂಪಾಯಿಗಳಷ್ಟು ಭಂಡವಾಳವು ಸಕ್ಕರೆ ಕೈಗಾರಿಕೆಯ ಮೇಲೆ ವ್ಯಯಿಸಲಾಗಿದೆ. ವರ್ಷಕ್ಕೆ ೫೨ ಲಕ್ಷ ಖಂಡಿಗಳಷ್ಟು ಸಕ್ಕರೆಯು ನಮ್ಮ ದೇಶದಲ್ಲಿ ತಯಾರಾಗುತ್ತದೆ. ಇದರ ಬೆಲೆ ೫೭ ಕೋಟಿಯಷ್ಟಾಗುತ್ತದೆ. ೧೯೧೪ರ ಮುಂಚೆ ಸುಮಾರು ೩೨೦ ಕೋಟಿ ರೂಪಾಯಿಯ ಸಕ್ಕರೆಯು ನಮ್ಮ ದೇಶದೊಳಗೆ ಪರದೇಶಗಳಿಂದ ಬರುತಿತ್ತು.

* * *

'ಹೆಚ್ಚು ಆಹಾರ ಬೆಳೆಸಿರಿ' ಎಂಬ ಪ್ರಚಾರವನ್ನು ವೃದ್ಧಿಪಡಿಸಲು ಇಂಡಿಯಾ ಸರಕಾರದವರು ೫೮೮ ಲಕ್ಷ ರೂಪಾಯಿ ವೆಚ್ಚಮಾಡಿ, ೧೮೦೬ ಸಾವಿರ ಎಕ್ರೆ ಬಂಜರು ಸ್ಥಳವನ್ನು ಕೃಷಿಯೋಗ್ಯ ಮಾಡಲಿರುವರು. ಇದರಿಂದ ೧೨ ಲಕ್ಷ ಖಂಡಿಯಷ್ಟು ಆಹಾರಧಾನ್ಯಗಳು ಮತ್ತು ಇತರ ವಸ್ತುಗಳು ಉತ್ಪತಿಯಾಗಬಹುದು.

* * *

ಯುದ್ಧಕಾಲದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ೧೪ ಲಕ್ಷ ಖಂಡಿ ಕೃತಕ ಗೊಬ್ಬರ ಬೇಕಾಗುವುದು. ಇದನ್ನು ತಯಾರಿಸಲು ೧೧೦ ಲಕ್ಷ ರೂಪಾಯಿಯ ಭಂಡವಾಳದ ಕಾರ್ಖಾನೆಗಳನ್ನು ಸ್ಥಾಪಿಸಬೇಕಾಗುವುದು.

* * *

ಅಸ್ಸಾಮಿನ ಆಸ್ಸಿಜೊಂಗ್ ಎಂಬ ಊರಿನ ಆಸ್ಪತ್ರೆಯೊಂದರಲ್ಲಿ ಕಳೆದ ವರ್ಷ ಮಲೇರಿಯಾದಿಂದ ಅನೇಕಾನೇಕ ರೋಗಿಗಳು ಮರಣಪಟ್ಟರು. ಈಗ ಅಲ್ಲಿರುವ ೫೦ ರೋಗಿಗಳಿಗೆ ಭೂತ ಪಿಶಾಚಗಳು ಭಾದೆಕೊಡುತ್ತವೆಯೆಂದು ಒಬ್ಬರೂ ಅಲ್ಲಿಗೆ ಶುಶ್ರೂಷೆಗೆ ಬರುವುದಿಲ್ಲ. ಸರಕಾರದವರು ಆ ಸ್ಥಳವು ಅನಾರೋಗ್ಯಕರವೆಂದು ಬದಲಾಯಿಸಲಿರುವರು.

* * *

ಕಲ್ಕತ್ತಾದಲ್ಲಿ ಒಂದು ಮಾರ್ಗದಲ್ಲಿ ಒಂದು ಗಂಟೆ ತನಕ ನಾಣ್ಯಗಳ 'ಮಳೆ' ಬಿದ್ದು ಅಸಂಖ್ಯಾತ ಜನರು ಅದನ್ನು ಹೆಕ್ಕಲು ಕಿಕ್ಕಿರಿದರು. ದೈವಚಮತ್ಕಾರವೆಂದು ಕೆಲವರೂ, ಮಂಗಗಳ ಆಟವೆಂದೂ ಕೆಲವರೂ, ಚಿಲ್ಲರೆ ದಾಸ್ತಾನಿಟ್ಟವರ ಉಪಾಯವಿರಬಹುದೆಂದು ಮತ್ತು ಕೆಲವರೂ ಊಹಾ ಪೋಹೆ ಮಾಡಿದರು. ಸರಿಯಾಗಿ ಆ ನಾಣ್ಯ 'ವೃಷ್ಟಿ'ಯ ಕಾರಣ ಗೊತ್ತಾಗಲಿಲ್ಲ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE BANK OF MANGALORE, Ltd.,
MANGALORE.
nterest on Fixed Deposits.

It is notified for the information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly wth effect from 1-1-1945

Office of the Bank, Mangalore, 30th Oct. 1944.
By Order
H. S. KAMATH, Manager

ಹುಳುಕಡ್ಡಿ ಮದ್ದು
ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.
ಅಮೃತಾಂಜನ ಡಿಪೋ,
ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಅದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: ಮದ್ರಾಸ್, ಬೆಂಗಳೂರು, ತ್ರಿವೆಂಡ್ರಂ, ಮಂಗಳೂರು,
ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ
ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. 1906
ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.
[ಸಂಪುಟ 39] ತಾರೀಕು 19—1—1945 [ಸಂಚಿಕೆ 3]

ಕೊಂಗ್ರೆಸಿನಲ್ಲಿ ಎಲ್ಲರಿಗೂ ಸ್ಥಾನವಿದೆ

ಅದನ್ನು ಪ್ರಾಮಾಣಿಕತೆಯ ಸಂಸ್ಥೆ ಮಾಡಿರಿ

ಕಿಸಾನ್-ಮಜೂರರೇ ದೇಶ ಆಳಬೇಕು

ಗಾಂಧೀಜಿಯ ಸ್ಪಷ್ಟೀಕರಣ

ಕಿಸಾನ್ ಸಂಸ್ಥೆಗಳ ನಾಯಕರೆನಿಸಿದ ಪ್ರೊ. ರಂಗಾ ಅವರು ಜೈಲಿನಿಂದ ಬಿಡುಗಡೆ ಹೊಂದಿದೊಡನೆ ಮಹಾತ್ಮಾಜೀಯವರ ಮುಂದೆ ಒಂದು ಪ್ರಶ್ನಾವಳಿಕೆಯನ್ನು ಇಟ್ಟು ಅದರ ಉತ್ತರವನ್ನು ಅಪೇಕ್ಷಿಸಿದರು. ಅದನ್ನು ಸಂಕ್ಷೇಪವಾಗಿ ಕಾರ್ಯದರ್ಶಿ ಪ್ಯಾರೇಲಾಲರು ಪ್ರಕಟನೆಗೆ ಕೊಟ್ಟರು. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ:

ಕಿಸಾನರೆಂದರೆ ಭೂವ್ಯವಸಾಯ ಮಾಡುವ ರೈತರು ಮತ್ತು ರೈತಮಜೂರರು. ರಷ್ಯದಲ್ಲಿ ಇವರಿಗೆ ಅಲ್ಲಿನ ಭೂಮಿಯನ್ನು ಹಂಚಿ ಕೊಡಲಾಗಿದೆಯಾದರೂ ಸರಕಾರದಲ್ಲಿ ಅವರಿಗೆ ಬೇಕಾದಷ್ಟು ಅಧಿಕಾರದ ಪ್ರಾತಿನಿಧ್ಯವಿಲ್ಲ. ನಮ್ಮ ದೇಶದಲ್ಲಿ ಮುಂದೆ ಅವರ ಸ್ಥಾನಮಾನಗಳು ಹೇಗೆಂಬುದಕ್ಕೆ ಗಾಂಧೀಜಿಯ ಉತ್ತರ: ರಷ್ಯದ ಪರಿಸ್ಥಿತಿ ನನಗೆ ಸರಿಯಾಗಿ ಗೊತ್ತಿಲ್ಲ. ಅಹಿಂಸಾತ್ಮಕ ಚಳವಳದ ಮೂಲಕ ನಮಗೆ ಪ್ರಜಾಪ್ರಭುತ್ವದ ಸ್ವರಾಜ್ಯ ಸಿಕ್ಕಿದರೆ ಅದರ ಎಲ್ಲಾ ಅಂಗಗಳಲ್ಲೂ ಮುಖ್ಯವಾಗಿ ರಾಜಕೀಯವಾದ-ಅಧಿಕಾರವನ್ನು ಕಿಸಾನರೇ ಹಿಡಿದುಕೊಳ್ಳಬೇಕು.

ಜಮೀನ್ದಾರರ ಪದ್ಧತಿ

ಜಮೀನ್ದಾರ ಪದ್ಧತಿಯನ್ನು ತೆಗೆದುಹಾಕುವ ಕುರಿತು ಗಾಂಧೀಜಿಯ ಉತ್ತರ: ಸಹಕಾರದಿಂದ ನಿರ್ದೇಶಿಸಲ್ಪಡುವ ಒಂದು ಧರ್ಮದರ್ಶಿತ್ವದ ಪದ್ಧತಿಯೇ ನನ್ನ ಗುರಿ. ಕಾರಣವಿಲ್ಲದೆ ಜಮೀನ್ದಾರರನ್ನು ಮಾತ್ರವಲ್ಲ ಇತರ ಯಾವ ವರ್ಗದವರನ್ನಾದರೂ ಆಗಲಿ-ತೊಂದರೆ ಕೊಡುವುದಕ್ಕೆ ನಾನು ಬಯಸುವುದಿಲ್ಲ.

'ರೈತರು ತಮ್ಮನ್ನು ಜಮೀನ್ದಾರರು ಸುಲಿಗೆ ಒಳಪಡಿಸದಂತೆ ನೋಡಬೇಕು' ಎಂದು ಗಾಂಧೀಜಿ ಹಿಂದೊಮ್ಮೆ ಹೇಳಿದನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂಬುದಕ್ಕೆ ಗಾಂಧೀಜಿಯ ಉತ್ತರ:

ಶಾಸನಭಂಗ ಮತ್ತು ಅಸಹಕಾರ ಚಳವಳಗಳು ಭೂವ್ಯವಸಾಯ ಮಾಡುವ ರೈತರಿಗೆ ರಾಜಕೀಯ ಅಧಿಕಾರವನ್ನು ಪಡೆಯುವಂತಾಗಲು ನಡೆಸಬಹುದಾದ ಆಂದೋಲನಗಳು. ರಾಜಕೀಯ ಅಧಿಕಾರ ದೊರೆತೊಡನೆ ಅವರ ಎಲ್ಲಾ ಸಂಕಷ್ಟಗಳನ್ನೂ ವಿಧಾಯಕ ಸಭೆಗಳ ಮುಖಾಂತರ ನಿವಾರಿಸಿಕೊಳ್ಳಬರುತ್ತಿದೆ. ಅಹಿಂಸಾತ್ಮಕ ರೀತಿಯಿಂದ ನಮಗೆ ಸ್ವರಾಜ್ಯ ಸಿಕ್ಕಿಯೇ ಸಿಕ್ಕುವುದು. ಆಗ ಕಿಸಾನರಿಗೆ ಯೋಗ್ಯ ಪ್ರಾತಿನಿಧ್ಯ ಸಿಕ್ಕಿಯೇ ಸಿಕ್ಕುವುದು. ಒಂದು ವೇಳೆ ಅವರಿಗೆ ಆ ಅಧಿಕಾರ ದೊರೆಯದಿದ್ದರೂ ಅವರ ಹಿತಗಳನ್ನು ಜಾಗರೂಕತೆಯಿಂದ ಕಾಪಾಡಲಾಗುವ ಒಪ್ಪಂದ ಮಾಡಲಾಗುವುದು. ಆಗಲೂ ಕಿಸಾನರ ಸಂಕಷ್ಟಗಳು ದೂರಮಾಡಲಾಗದಿದ್ದರೆ ಅವರಿಗೆ ಶಾಸನಭಂಗ ಅಸಹಕಾರದ ಅಸ್ತ್ರಗಳಂತೂ ಇವೆ. ಬರೀ ಧೈರ್ಯದ ಮಾತುಗಳಾಗಲೀ ಕಾಗದ ಭರವಸೆಗಳಿಂದಾಗಲೀ ಏನೂ ಪ್ರಯೋಜನವಿಲ್ಲ. ಅವರಿಗೆ ಬೇಕಾದುದು ಅಹಿಂಸಾತ್ಮಕ ಒಂದು ಸಂಸ್ಥೆ, ಶಿಸ್ತು ಮತ್ತು ತ್ಯಾಗ ಬುದ್ಧಿಯ ಧೋರಣೆ. ಇದೇ ಕೊನೆಗೆ ದಬ್ಬಾಳಿಕೆಯನ್ನು ಯಶಸ್ವಿಯಾಗಿ ಎದುರಿಸಬಲ್ಲವು.

ಕಿಸಾನ್ ಸಂಸ್ಥೆಗಳ ಸುಧಾರಣೆ

ಕೊಂಗ್ರೆಸಿನ ಅಹಿಂಸಾತ್ಮಕ ಧ್ಯೇಯ, ನಾಯಕತ್ವಗಳನ್ನು ಒಪ್ಪಿಕೊಂಡ ಪ್ರತ್ಯೇಕ ಕಿಸಾನ್ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಗಾಂಧೀಜಿಯ ಉತ್ತರ: ಕಿಸಾನ್ ಸಭೆಗಳನ್ನು ಸುಧಾರಿಸಬೇಕು. ಆದರೆ ಸರಕಾರದಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಅದು ಪ್ರತ್ಯೇಕವಾಗಿ ಪ್ರಯತ್ನಮಾಡಬೇಕೆಂದಲ್ಲ. ಕೊಂಗ್ರೆಸಿನಲ್ಲಿ ಮೊದಲು ಅದು ಅಧಿಕಾರವನ್ನು ಪಡೆಯಬೇಕು. ಈ ಸೂಚನೆಯನ್ನು ವಿದ್ಯಾರ್ಥಿ ಮತ್ತು ಮಜೂರ ಸಂಸ್ಥೆಗಳೂ ಗಮನಿಸಬೇಕು.

ಕೊಂಗ್ರೆಸನ್ನು ನೀವೇ ನಡೆಸಿರಿ

ಕಿಸಾನ್ ಸಂಸ್ಥೆಗೆ ಸದಸ್ಯನಾಗಿ ಸೇರುವವನು ಕೊಂಗ್ರೆಸ್ ಸದಸ್ಯನಾಗಲೂ ಬೇಕೆಂದು ಮಾಡಿ ಪ್ರತ್ಯೇಕ ಒಂದು ಕಿಸಾನ್ ಕೊಂಗ್ರೆಸನ್ನು ಪಾರಂಭಿಸಿದರ ಕುರಿತು ಗಾಂಧೀಜಿಯ ಉತ್ತರ:

ಪ್ರತ್ಯೇಕವಾದೊಂದು ಸಂಸ್ಥೆ ಯಾಕೆ? ಕಿಸಾನರೇ ಕೊಂಗ್ರೆಸನ್ನು ನಡೆಸುವಂತಾಗಲಿ. ಕಿಸಾನ್ ಸಭೆಗಳು ನ್ಯಾಯಬದ್ಧ ಸಂಸ್ಥೆಗಳೆಂದ ಮೇಲೆ ಅವು ಕೊಂಗ್ರೆಸಿನೊಳಗೇ ಏಕೆ ಸೇರಬಾರದು. ಕೊಂಗ್ರೆಸು ಇಡೀ ಜನಾಂಗದ ಪ್ರತಿನಿಧಿ ಸಂಸ್ಥೆ. ಇಂದು ಅದರಲ್ಲಿ ಜನತೆಯ ಒಂದಂಶ ಮಾತ್ರ ಪ್ರಾತಿನಿಧ್ಯ ತಾಳಿದೆ. ತನ್ನ ಸೇವೆಯಿಂದ ಕೊಂಗ್ರೆಸು ತನ್ನ ಹೊರಗಿದ್ದವರ ಪರವಾಗಿಯೂ ಹೋರಾಡಬಯಸುತ್ತದೆ. ಸಂಪೂರ್ಣ ರಾಷ್ಟ್ರೀಯ ಸಂಸ್ಥೆಯಾಗಿರುವ ಕೊಂಗ್ರೆಸಿನಲ್ಲಿ ಕಿಸಾನರೇ ಬಹುಸಂಖ್ಯಾಕರಾಗಿರಬೇಕಾದುದು ಸಹಜವಾದುದು. ಆಗ ಕೊಂಗ್ರೆಸಿನ ಧೋರಣೆಯನ್ನು ಕಿಸಾನರೇ ನಿರ್ದೇಶಿಸಬಹುದು.

ಕೊಂಗ್ರೆಸನ್ನು ಬಲಗೊಳಿಸಿರಿ

ಕೆಲ ಕೊಂಗ್ರೆಸ್ ಮುಖಂಡರಿಗೆ ಕಿಸಾನರ ಮೇಲೆ ಭರವಸೆ ಇಲ್ಲವೆಂದೂ ಆದುದರಿಂದ ತಾವು ಪ್ರತ್ಯೇಕವಾಗಿ ನಿಂತು ಕೊಂಗ್ರೆಸಿನೊಳಗೆ ಒಡಕುಂಟುಮಾಡಿ ಅದರ ಶಕ್ತಿಯನ್ನು ಕುಗ್ಗಿಸಲು ಮನಸ್ಸಿಲ್ಲದೆ ತಮ್ಮದೇ ಸ್ವಂತ ಜಾಗೃತಿ, ಶಕ್ತಿಗಳನ್ನು ಬೆಳೆಸುವುದಕ್ಕೆ ಕಿಸಾನರು ಪ್ರಯತ್ನ ಮಾಡುವರು ಎಂಬುದಕ್ಕೆ ಗಾಂಧೀಜಿಯ ಉತ್ತರ:

ಕೊಂಗ್ರೆಸಿನೊಳಗೆ ಎಲ್ಲಾ ಕಿಸಾನರಿಗೇ ಪ್ರಾತಿನಿಧ್ಯ ಸಿಗುವಂತೇ ನೀವು ಪ್ರಯತ್ನಿಸಬೇಕು. ಬುಡದಿಂದ ಬಲಗೊಳಿಸುವ ಈ ಪ್ರಾಮುಖ್ಯ ಕೆಲಸವನ್ನು ಮಾಡದಿದ್ದರೆ ನಮಗೆ ಸ್ವರಾಜ್ಯ ಸಿಗುವುದಿಲ್ಲ. ಪ್ರತಿಯೊಬ್ಬ ಕೊಂಗ್ರೆಸಿಗನೂ ಕೊಂಗ್ರೆಸ್ ಸಂಸ್ಥೆಯನ್ನು ಒಂದು ಪ್ರಾಮಾಣಿಕ ಸಂಸ್ಥೆಯನ್ನಾಗಿ ಮಾಡಲು ಶ್ರಮಿಸಬೇಕು ಅಧಿಕಾರ ಹಕ್ಕುಗಳು ತ್ಯಾಗಸೇವೆಗಳ ಬಲದಿಂದಲೇ ಬರುವಂತಹುಗಳು. ತ್ಯಾಗಸೇವೆಗಳನ್ನು ಮಾಡದೇ ಅಧಿಕಾರಕ್ಕಾಗಿ ಪ್ರಯತ್ನಿಸುವುದೆಂದರೆ ಅದೊಂದು ಬಲಾತ್ಕಾರವೇ ಸರಿ.

ಇಂದು ಕೊಂಗ್ರೆಸಿನಲ್ಲಿ ಬಿರ್ಲಾಬಂಧುಗಳಂತಹ ಶ್ರೀಮಂತ ವರ್ಗದ ಕೈವಾಡವಿರುವ ತನಕ ಅದು ಕಿಸಾನ್ ಹಿತಗಳ ಸಂಸ್ಥೆಯಾಗಲಾರದೆಂಬುದಕ್ಕೆ ಗಾಂಧಿಜಿಯ ಉತ್ತರ:

ಕೊಂಗ್ರೆಸಿನ ಕೆಳಗೆ ಕೆಲಸಮಾಡುವಾಗಲೇ ಪ್ರತ್ಯೇಕ ಸಮಾನಸಂಸ್ಥೆಯೊಂದನ್ನು ನಡೆಸುವುದು ನಿಮ್ಮ ಉದ್ದೇಶವಿದ್ದಂತಾಯಿತು. ಶ್ರೀಮಂತರಿಗೂ ಬಡವರಿಗೂ ಒಂದೇ ಸಂಸ್ಥೆಯಾಗಿರಬೇಕೆಂಬುದು ನನ್ನ ಧ್ಯೇಯ. ಪ್ರತ್ಯೇಕ ಸಂಸ್ಥೆಮಾಡುವುದಾದರೆ ನೀವು ಕೊಂಗ್ರೆಸಿನಿಂದ ಹೊರಗಿರುವುದೇ ಒಳ್ಳೇದು.

ಅಹಮದಾಬಾದ್ ಮಜೂರ್ ಸಂಸ್ಥೆಯಂತೆಯೇ ಕಿಸಾನ್ ಸಭೆಯನ್ನೂ ಏಕೆ ಸೇರಿಸಿಕೊಳ್ಳಬಾರದೆಂಬುದಕ್ಕೆ ಉತ್ತರ:

ಪದಾರ್ಥದ ಯೋಗ್ಯತೆ ಅದನ್ನು ತಿನ್ನುವುದರಲ್ಲಿದೆ. ನಿಮ್ಮ ವಿಷಯವಾಗಿ ನನ್ನಲ್ಲಿರುವ ಸಂದೇಹಗಳನ್ನು ನೀವು ದೂರಮಾಡಲು ಪ್ರಯತ್ನಿಸಬೇಕು. ಅಹಮದಾಬಾದಿನ ಮಜೂರ ಸಂಘದ ಸದಸ್ಯರೆಲ್ಲರೂ ಕೊಂಗ್ರೆಸಿನ ಸದಸ್ಯರು ಹೌದು. ನೀವೂ ಹಾಗೇ ಮಾಡಬಹುದು. ನೀವು ನಿಮ್ಮ ಆಂಧ್ರಪ್ರಾಂತ್ಯದಲ್ಲಿ ಮಾತ್ರ, ನಿಮ್ಮ ಚಟುವಟಿಕೆಗಳನ್ನು ಮಾಡಿರಿ. (ಅಹಮದಾಬಾದಿನ ಮಜೂರ ಸಂಸ್ಥೆಯು ಇತರ ಯಾವ ಸಂಸ್ಥೆಯೊಡನೆಯೂ ಸಂಬಂಧವಿಟ್ಟುಕೊಂಡಿರದೆ, ಅದರ ಮುಖಂಡರೆಲ್ಲರೂ ಕೊಂಗ್ರೆಸಿನ ಧೋರಣೆಗನುಸಾರವಾಗಿಯೆ ತಮ್ಮ ಸಂಸ್ಥೆಯನ್ನು ನಡೆಸುತ್ತಾರೆ.) ನೀವು ಅಲ್ಲಿ (ಆಂಧ್ರದಲ್ಲಿ ಮಾತ್ರ) ಪ್ರತ್ಯೇಕ ಕಿಸಾನ್ ಸಂಸ್ಥೆಮಾಡಿ ಅದರ ಸದಸ್ಯರನ್ನು ಕೊಂಗ್ರೆಸ್ ಮನೋಭಾವದವರಾಗಿ ಮಾಡಿರಿ. ಕೊಂಗ್ರೆಸ್ ಕಿಸಾನ್, ಮಜೂರ ಪ್ರಜೆಗಳ ರಾಜ್ಯವೇ ಕೊಂಗ್ರೆಸಿನ ಗುರಿ. ಕೊಂಗ್ರೆಸ್ ಸಂಸ್ಥೆಯೆಂದರೆ ಕಿಸಾನ್ ಸಂಸ್ಥೆಯೆಂದೇ ನನ್ನ ಅರ್ಥ.

ಗಾಂಧಿಜಿಯ ಇನ್ನೂ ಕೆಲವು ಅಭಿಪ್ರಾಯಗಳು ಹೀಗಿವೆ:

ಹರಿಜನೋದ್ಧಾರ ಮಾಡಿದಂತೆ ಗುಡ್ಡಬೆಟ್ಟಗಳ ನಿವಾಸಿಗಳ ಉದ್ಧಾರಕ್ಕೂ ಪ್ರಯತ್ನಗಳನ್ನು ಮಾಡಬೇಕಾದುದು ಕರ್ತವ್ಯ.

ಕಿಸಾನರು ತಮ್ಮ ಸಂಕಷ್ಟನಿವಾರಣೆಗಾಗಿ ಚಳವಳವನ್ನು ಪ್ರಾರಂಭಿಸಬೇಕಾಗಿದ್ದರೆ ಕೊಂಗ್ರೆಸ್ ಸಮಿತಿಗಳ ಸಲಹೆಗಳನ್ನು ಕೇಳಲೇ ಬೇಕು. ಇಲ್ಲದಿದ್ದರೆ ಹುಚ್ಚಿನ ಕೆಲಸವಾಗಬಹುದು.

ರಾಷ್ಟ್ರೀಯ ಧ್ವಜದೊಂದಿಗೆ ಕಿಸಾನರ ಧ್ವಜವೊಂದಿರಬಹುದು.

ಕೃಷಿಕವರ್ಗವನ್ನು ಸುಲಿಗೆ ದಬ್ಬಾಳಿಕೆಗಳಿಗೆ ಗುರಿಮಾಡುವ ಆಡಳಿತವನ್ನು ಮೂಲಸಮೇತ ಕಿತ್ತುಹಾಕುವುದು ನನ್ನ ಧ್ಯೇಯ

ಕಿಸಾನ್ ಸಭೆಯ ಸದಸ್ಯರು ಕೊಂಗ್ರೆಸ್ ಸದಸ್ಯರಾಗಿರಲೇ ಬೇಕು. ಕಿಸಾನ್ ಸದಸ್ಯರು ತಮ್ಮ ಜಮೀನ್ದಾರೀ ಸಂಕಷ್ಟ ನಿವಾರಣೆಗಾಗಿ ಹೋರಾಡುವಾಗ ಕೊಂಗ್ರೆಸು ರಾಜಕೀಯ ಹಕ್ಕುಬಾಧ್ಯತೆಗಳಿಗಾಗಿ ಪ್ರಯತ್ನಿಸುವುದು.

ಕಿಸಾನರು ಕೊಂಗ್ರೆಸ್ ರಚನಾತ್ಮಕ ಸಂಸ್ಥೆಗಳನ್ನು ಸ್ಥಾಪಿಸಿ ಕೆಲಸಮಾಡಬಹುದು. ಆದರೆ ಯಾವ ಭಾಷಣಾಡಂಬರವಿಲ್ಲದೆ ಆ ಕೆಲಸವು ಸಾಗಬೇಕು. ಇಂದು ಖಾದಿ ವಿದ್ಯಾಲಯಗಳಲ್ಲೂ, ಗ್ರಾಮಸೇವಾ ಸಂಘಗಳಲ್ಲೂ ಕೆಲಸಗಾರರು ಅವಿಶ್ರಾಂತವಾಗಿ ತಮ್ಮ ಕಾರ್ಯದಿಂದಲೇ ಹಳ್ಳಿಗರೊಂದಿಗೆ ಮಾತನಾಡುತ್ತಾರೆ.

ಕಮ್ಯೂನಿಸ್ಟರನ್ನಾಗಲೀ ಸಮತಾವಾದಿಗಳನ್ನಾಗಲೀ ಯಾರನ್ನಾದರೂ ಆಗಲಿ ಅವರು ಕೊಂಗ್ರೆಸನ್ನು ಸೇರದಂತೆ ಮಾಡುವುದು ಅಸಾಧ್ಯದ ಕೆಲಸ. ಆದರೆ ನಾನು ಸೂಚಿಸಿದ ಮಾದರಿಯ ಮೇಲೆ ನೀವು ಕಾರ್ಯಪ್ರವೃತ್ತರಾದರೆ ಎಂತಹ ತೊಂದರೆಗಳನ್ನಾದರೂ ನೀವು ನಿವಾರಿಸಿಕೊಳ್ಳಬಹುದು.

THE BANK OF MANGALORE, Ltd.,
MANGALORE.
nterest on Fixed Deposits.

It is notified for the information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly wth effect from 1-1-1945

Office of the Bank, Mangalore, 30th Oct. 1944.
By Order
H. S. KAMATH, Manager

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಬಾ, ಮದರಾಸು, ಕಲ್ಕತ್ತ,
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಅದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: ಮದ್ರಾಸ್, ಬೆಂಗಳೂರು, ತ್ರಿವೇಂಡ್ರಂ, ಮಂಗಳೂರು,
ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906
[ಸಂಪುಟ 39] ತಾರೀಕು 19—1—1945 [ಸಂಚಿಕೆ 3]

ಕೊಂಗ್ರೆಸಿನಲ್ಲಿ ಎಲ್ಲರಿಗೂ ಸ್ಥಾನವಿದೆ
ಅದನ್ನು ಪ್ರಾಮಾಣಿಕತೆಯ ಸಂಸ್ಥೆ ಮಾಡಿರಿ
ಕಿಸಾನ್-ಮಜೂರರೇ ದೇಶ ಆಳಬೇಕು
ಗಾಂಧೀಜಿಯ ಸ್ಪಷ್ಟೀಕರಣ

ಕಿಸಾನ್ ಸಂಸ್ಥೆಗಳ ನಾಯಕರೆನಿಸಿದ ಪ್ರೊ. ರಂಗಾ ಅವರು ಜೈಲಿನಿಂದ ಬಿಡುಗಡೆ ಹೊಂದಿದೊಡನೆ ಮಹಾತ್ಮಾಜೀಯವರ ಮುಂದೆ ಒಂದು ಪ್ರಶ್ನೆ ಮಾಲಿಕೆಯನ್ನು ಇಟ್ಟು ಅದರ ಉತ್ತರವನ್ನು ಅಪೇಕ್ಷಿಸಿದರು. ಅದನ್ನು ಸಂಕ್ಷೇಪವಾಗಿ ಕಾರ್ಯದರ್ಶಿ ಪ್ಯಾರೇಲಾಲರು ಪ್ರಕಟನೆಗೆ ಕೊಟ್ಟರು. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ:

ಕಿಸಾನರೆಂದರೆ ಭೂವ್ಯವಸಾಯ ಮಾಡುವ ರೈತರು ಮತ್ತು ರೈತಮಜೂರರು. ರಷ್ಯದಲ್ಲಿ ಇವರಿಗೆ ಅಲ್ಲಿನ ಭೂಮಿಯನ್ನು ಹಂಚಿ ಕೊಡಲಾಗಿದೆಯಾದರೂ ಸರಕಾರದಲ್ಲಿ ಅವರಿಗೆ ಬೇಕಾದಷ್ಟು ಅಧಿಕಾರದ ಪ್ರಾತಿನಿಧ್ಯವಿಲ್ಲ. ನಮ್ಮ ದೇಶದಲ್ಲಿ ಮುಂದೆ ಅವರ ಸ್ಥಾನಮಾನಗಳು ಹೇಗೆಂಬುದಕ್ಕೆ ಗಾಂಧೀಜಿಯ ಉತ್ತರ: ರಷ್ಯದ ಪರಿಸ್ಥಿತಿ ನನಗೆ ಸರಿಯಾಗಿ ಗೊತ್ತಿಲ್ಲ. ಅಹಿಂಸಾತ್ಮಕ ಚಳವಳದ ಮೂಲಕ ನಮಗೆ ಪ್ರಜಾಪ್ರಭುತ್ವದ ಸ್ವರಾಜ್ಯ ಸಿಕ್ಕಿದರೆ ಅದರ ಎಲ್ಲಾ ಅಂಗಗಳಲ್ಲೂ ಮುಖ್ಯವಾಗಿ ರಾಜಕೀಯವಾದ-ಅಧಿಕಾರವನ್ನು ಕಿಸಾನರೇ ಹಿಡಿದುಕೊಳ್ಳಬೇಕು.

ಜಮೀನ್ದಾರರ ಪದ್ಧತಿ

ಜಮೀನ್ದಾರ ಪದ್ಧತಿಯನ್ನು ತೆಗೆದು ಹಾಕುವ ಕುರಿತು ಗಾಂಧೀಜಿಯ ಉತ್ತರ: ಸರಕಾರದಿಂದ ನಿರ್ದೇಶಿಸಲ್ಪಡುವ ಒಂದು ಧರ್ಮದರ್ಶಿತ್ವದ ಪದ್ಧತಿಯೇ ನನ್ನ ಗುರಿ. ಕಾರಣವಿಲ್ಲದೆ ಜಮೀನ್ದಾರರನ್ನು ಮಾತ್ರವಲ್ಲ ಇತರ ಯಾವ ವರ್ಗದವರನ್ನಾದರೂ ಆಗಲಿ-ತೊಂದರೆ ಕೊಡುವುದಕ್ಕೆ ನಾನು ಬಯಸುವುದಿಲ್ಲ.

'ರೈತರು ತಮ್ಮನ್ನು ಜಮೀನ್ದಾರರು ಸುಲಿಗೆ ಒಳಪಡಿಸದಂತೆ ನೋಡಬೇಕು' ಎಂದು ಗಾಂಧೀಜಿ ಹಿಂದೊಮ್ಮೆ ಹೇಳಿದನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂಬುದಕ್ಕೆ ಗಾಂಧೀಜಿಯ ಉತ್ತರ:

ಶಾಸನಭಂಗ ಮತ್ತು ಅಸಹಕಾರ ಚಳವಳಗಳು ಭೂವ್ಯವಸಾಯ ಮಾಡುವ ರೈತರಿಗೆ ರಾಜಕೀಯ ಅಧಿಕಾರವನ್ನು ಪಡೆಯುವಂತಾಗಲು ನಡೆಸಬಹುದಾದ ಆಂಧೋಲನಗಳು. ರಾಜಕೀಯ ಅಧಿಕಾರ ದೊರೆತೊಡನೆ ಅವರ ಎಲ್ಲಾ ಸಂಕಷ್ಟಗಳನ್ನೂ ವಿಧಾಯಕ ಸಭೆಗಳ ಮುಖಾಂತರ ನಿವಾರಿಸಿಕೊಳ್ಳಬರುತ್ತಿದೆ. ಅಹಿಂಸಾತ್ಮಕ ರೀತಿಯಿಂದ ನಮಗೆ ಸ್ವರಾಜ್ಯ ಸಿಕ್ಕಿಯೇ ಸಿಕ್ಕುವುದು. ಆಗ ಕಿಸಾನರಿಗೆ ಯೋಗ್ಯ ಪ್ರಾತಿನಿಧ್ಯ ಸಿಕ್ಕಿಯೇ ಸಿಕ್ಕುವುದು. ಒಂದು ವೇಳೆ ಅವರಿಗೆ ಆ ಅಧಿಕಾರ ದೊರೆಯದಿದ್ದರೂ ಅವರ ಹಿತಗಳನ್ನು ಜಾಗರೂಕತೆಯಿಂದ ಕಾಪಾಡಲಾಗುವ ಒಪ್ಪಂದ ಮಾಡಲಾಗುವುದು. ಆಗಲೂ ಕಿಸಾನರ ಸಂಕಷ್ಟಗಳು ದೂರಮಾಡಲಾಗದಿದ್ದರೆ ಅವರಿಗೆ ಶಾಸನಭಂಗ ಅಸಹಕಾರದ ಅಸ್ತ್ರಗಳಂತೂ ಇವೆ. ಬರೀ ಧೈರ್ಯದ ಮಾತುಗಳಾಗಲೀ ಕಾಗದ ಭರವಸೆಗಳಿಂದಾಗಲೀ ಏನೂ ಪ್ರಯೋಜನವಿಲ್ಲ. ಅವರಿಗೆ ಬೇಕಾದುದು ಅಹಿಂಸಾತ್ಮಕ ಒಂದು ಸಂಸ್ಥೆ, ಶಿಸ್ತು ಮತ್ತು ತ್ಯಾಗ ಬುದ್ಧಿಯ ಧೋರಣೆ. ಇದೇ ಕೊನೆಗೆ ದಬ್ಬಾಳಿಕೆಯನ್ನು ಯಶಸ್ವಿಯಾಗಿ ಎದುರಿಸಬಲ್ಲವು.

ಕಿಸಾನ್ ಸಂಸ್ಥೆಗಳ ಸುಧಾರಣೆ

ಕೊಂಗ್ರೆಸಿನ ಅಹಿಂಸಾತ್ಮಕ ಧ್ಯೇಯ, ನಾಯಕತ್ವಗಳನ್ನು ಒಪ್ಪಿಕೊಂಡ ಪ್ರತ್ಯೇಕ ಕಿಸಾನ್ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಗಾಂಧೀಜಿಯ ಉತ್ತರ: ಕಿಸಾನ್ ಸಭೆಗಳನ್ನು ಸುಧಾರಿಸಬೇಕು. ಆದರೆ ಸರಕಾರದಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಅದು ಪ್ರತ್ಯೇಕವಾಗಿ ಪ್ರಯತ್ನಮಾಡಬೇಕೆಂದಲ್ಲ. ಕೊಂಗ್ರೆಸಿನಲ್ಲಿ ಮೊದಲು ಅದು ಅಧಿಕಾರವನ್ನು ಪಡೆಯಬೇಕು. ಈ ಸೂಚನೆಯನ್ನು ವಿದ್ಯಾರ್ಥಿ ಮತ್ತು ಮಜೂರ ಸಂಸ್ಥೆಗಳೂ ಗಮನಿಸಬೇಕು.

ಕೊಂಗ್ರೆಸನ್ನು ನೀವೇ ನಡೆಸಿರಿ

ಕಿಸಾನ್ ಸಂಸ್ಥೆಗೆ ಸದಸ್ಯನಾಗಿ ಸೇರುವವನು ಕೊಂಗ್ರೆಸ್ ಸದಸ್ಯನಾಗಲೂ ಬೇಕೆಂದು ಮಾಡಿ ಪ್ರತ್ಯೇಕ ಒಂದು ಕಿಸಾನ್ ಕೊಂಗ್ರೆಸನ್ನು ಪಾರಂಭಿಸಿದರ ಕುರಿತು ಗಾಂಧೀಜಿಯ ಉತ್ತರ:

ಪ್ರತ್ಯೇಕವಾದೊಂದು ಸಂಸ್ಥೆ ಯಾಕೆ? ಕಿಸಾನರೇ ಕೊಂಗ್ರೆಸನ್ನು ನಡೆಸುವಂತಾಗಲಿ. ಕಿಸಾನ್ ಸಭೆಗಳು ನ್ಯಾಯಬದ್ಧ ಸಂಸ್ಥೆಗಳೆಂದ ಮೇಲೆ ಅವು ಕೊಂಗ್ರೆಸಿನೊಳಗೇ ಏಕೆ ಸೇರಬಾರದು. ಕೊಂಗ್ರೆಸು ಇಡೀ ಜನಾಂಗದ ಪ್ರತಿನಿಧಿ ಸಂಸ್ಥೆ. ಇಂದು ಅದರಲ್ಲಿ ಜನತೆಯ ಒಂದಂಶ ಮಾತ್ರ ಪ್ರಾತಿನಿಧ್ಯ ತಾಳಿದೆ. ತನ್ನ ಸೇವೆಯಿಂದ ಕೊಂಗ್ರೆಸು ತನ್ನ ಹೊರಗಿದ್ದವರ ಪರವಾಗಿಯೂ ಹೋರಾಡಬಯಸುತ್ತದೆ. ಸಂಪೂರ್ಣ ರಾಷ್ಟ್ರೀಯ ಸಂಸ್ಥೆಯಾಗಿರುವ ಕೊಂಗ್ರೆಸಿನಲ್ಲಿ ಕಿಸಾನರೇ ಬಹುಸಂಖ್ಯಾಕರಾಗಿರಬೇಕಾದುದು ಸಹಜವಾದುದು. ಆಗ ಕೊಂಗ್ರೆಸಿನ ಧೋರಣೆಯನ್ನು ಕಿಸಾನರೇ ನಿರ್ದೇಶಿಸಬಹುದು.

ಕೊಂಗ್ರೆಸನ್ನು ಬಲಗೊಳಿಸಿರಿ

ಕೆಲ ಕೊಂಗ್ರೆಸ್ ಮುಖಂಡರಿಗೆ ಕಿಸಾನರ ಮೇಲೆ ಭರವಸೆ ಇಲ್ಲವೆಂದೂ ಆದುದರಿಂದ ತಾವು ಪ್ರತ್ಯೇಕವಾಗಿ ನಿಂತು ಕೊಂಗ್ರೆಸಿನೊಳಗೆ ಒಡಕುಂಟುಮಾಡಿ ಅದರ ಶಕ್ತಿಯನ್ನು ಕುಗ್ಗಿಸಲು ಮನಸ್ಸಿಲ್ಲದೆ ತಮ್ಮದೇ ಸ್ವಂತ ಜಾಗೃತಿ, ಶಕ್ತಿಗಳನ್ನು ಬೆಳೆಸುವುದಕ್ಕೆ ಕಿಸಾನರು ಪ್ರಯತ್ನ ಮಾಡುವವರು ಎಂಬುದಕ್ಕೆ ಗಾಂಧೀಜಿಯ ಉತ್ತರ:

ಕೊಂಗ್ರೆಸಿನೊಳಗೆ ಎಲ್ಲಾ ಕಿಸಾನರಿಗೇ ಪ್ರಾತಿನಿಧ್ಯ ಸಿಗುವಂತೇ ನೀವು ಪ್ರಯತ್ನಿಸಬೇಕು. ಬುಡದಿಂದ ಬಲಗೊಳಿಸುವ ಈ ಪ್ರಾಮುಖ್ಯ ಕೆಲಸವನ್ನು ಮಾಡದಿದ್ದರೆ ನಮಗೆ ಸ್ವರಾಜ್ಯ ಸಿಗುವುದಿಲ್ಲ. ಪ್ರತಿಯೊಬ್ಬ ಕೊಂಗ್ರೆಸಿಗನೂ ಕೊಂಗ್ರೆಸ್ ಸಂಸ್ಥೆಯನ್ನು ಒಂದು ಪ್ರಾಮಾಣಿಕ ಸಂಸ್ಥೆಯನ್ನಾಗಿ ಮಾಡಲು ಶ್ರಮಿಸಬೇಕು ಅಧಿಕಾರ ಹಕ್ಕುಗಳು ತ್ಯಾಗಸೇವೆಗಳ ಬಲದಿಂದಲೇ ಬರುವಂತಹುಗಳು. ತ್ಯಾಗ ಸೇವೆಗಳನ್ನು ಮಾಡದೇ ಅಧಿಕಾರಕ್ಕಾಗಿ ಪ್ರಯತ್ನಿಸುವುದೆಂದರೆ ಅದೊಂದು ಬಲಾತ್ಕಾರವೇ ಸರಿ.

ಇಂದು ಕೊಂಗ್ರೆಸಿನಲ್ಲಿ ಬಿರ್ಲಾಬಂಧುಗಳಂತಹ ಶ್ರೀಮಂತ ವರ್ಗದ ಕೈವಾಡವಿರುವ ತನಕ ಅದು ಕಿಸಾನ್ ಹಿತಗಳ ಸಂಸ್ಥೆಯಾಗಲಾರದೆಂಬುದಕ್ಕೆ ಗಾಂಧಿಜಿಯ ಉತ್ತರ:

ಕೊಂಗ್ರೆಸಿನ ಕೆಳಗೆ ಕೆಲಸಮಾಡುವಾಗಲೇ ಪ್ರತ್ಯೇಕ ಸಮಾನಸಂಸ್ಥೆಯೊಂದನ್ನು ನಡೆಸುವುದು ನಿಮ್ಮ ಉದ್ದೇಶವಿದ್ದಂತಾಯಿತು. ಶ್ರೀಮಂತರಿಗೂ ಬಡವರಿಗೂ ಒಂದೇ ಸಂಸ್ಥೆಯಾಗಿರಬೇಕೆಂಬುದು ನನ್ನ ಧ್ಯೇಯ. ಪ್ರತ್ಯೇಕ ಸಂಸ್ಥೆಮಾಡುವುದಾದರೆ ನೀವು ಕೊಂಗ್ರೆಸಿನಿಂದ ಹೊರಗಿರುವುದೇ ಒಳ್ಳೇದು.

ಅಹಮದಾಬಾದ್ ಮಜೂರ್ ಸಂಸ್ಥೆಯಂತೆಯೇ ಕಿಸಾನ್ ಸಭೆಯನ್ನೂ ಏಕೆ ಸೇರಿಸಿಕೊಳ್ಳಬಾರದೆಂಬುದಕ್ಕೆ ಉತ್ತರ:

ಪದಾರ್ಥದ ಯೋಗ್ಯತೆ ಅದನ್ನು ತಿನ್ನುವುದರಲ್ಲಿದೆ. ನಿಮ್ಮ ವಿಷಯವಾಗಿ ನನ್ನಲ್ಲಿರುವ ಸಂದೇಹಗಳನ್ನು ನೀವು ದೂರ ಮಾಡಲು ಪ್ರಯತ್ನಿಸಬೇಕು. ಅಹಮದಾಬಾದಿನ ಮಜೂರ ಸಂಘದ ಸದಸ್ಯರೆಲ್ಲರೂ ಕೊಂಗ್ರೆಸಿನ ಸದಸ್ಯರು ಹೌದು. ನೀವೂ ಹಾಗೇ ಮಾಡಬಹುದು. ನೀವು ನಿಮ್ಮ ಆಂಧ್ರಪ್ರಾಂತ್ಯದಲ್ಲಿ ಮಾತ್ರ ನಿಮ್ಮ ಚಟುವಟಿಕೆಗಳನ್ನುಮಾಡಿರಿ.(ಅಹಮದಾಬಾದಿನ ಮಜೂರ ಸಂಸ್ಥೆಯು ಇತರ ಯಾವ ಸಂಸ್ಥೆಯೊಡನೆಯೂ ಸಂಬಂಧವಿಟ್ಟುಕೊಂಡಿರದೆ, ಅದರ ಮುಖಂಡರೆಲ್ಲರೂ ಕೊಂಗ್ರೆಸಿನ ಧೋರಣೆಗನುಸಾರವಾಗಿಯೆ ತಮ್ಮ ಸಂಸ್ಥೆಯನ್ನುನಡೆಸುತ್ತಾರೆ.) ನೀವು ಅಲ್ಲಿ (ಆಂಧ್ರದಲ್ಲಿ ಮಾತ್ರ) ಪ್ರತ್ಯೇಕ ಕಿಸಾನ್ ಸಂಸ್ಥೆಮಾಡಿ ಅದರ ಸದಸ್ಯರನ್ನು ಕೊಂಗ್ರೆಸ್ ಮನೋಭಾವದವರಾಗಿ ಮಾಡಿರಿ. ಕೊಂಗ್ರೆಸ್ ಕಿಸಾನ್, ಮಜೂರ ಪ್ರಜೆಗಳ ರಾಜ್ಯವೇ ಕೊಂಗ್ರೆಸಿನ ಗುರಿ. ಕೊಂಗ್ರೆಸ್ ಸಂಸ್ಥೆಯೆಂದರೆ ಕಿಸಾನ್ ಸಂಸ್ಥೆಯೆಂದೇ ನನ್ನ ಅರ್ಥ.

ಗಾಂಧಿಜಿಯ ಇನ್ನೂ ಕೆಲವು ಅಭಿಪ್ರಾಯಗಳು ಹೀಗಿವೆ:

ಹರಿಜನೋದ್ಧಾರ ಮಾಡಿದಂತೆ ಗುಡ್ಡಬೆಟ್ಟಗಳ ನಿವಾಸಿಗಳಉದ್ಧಾರಕ್ಕೂಪ್ರಯತ್ನಗಳನ್ನು ಮಾಡಬೇಕಾದುದು ಕರ್ತವ್ಯ.

ಕಿಸಾನರು ತಮ್ಮ ಸಂಕಷ್ಟನಿವಾರಣೆಗಾಗಿ ಚಳವಳವನ್ನು ಪ್ರಾರಂಭಿಸಬೇಕಾಗಿದ್ದರೆ ಕೊಂಗ್ರೆಸ್ ಸಮಿತಿಗಳ ಸಲಹೆಗಳನ್ನು ಕೇಳಲೇ ಬೇಕು. ಇಲ್ಲದಿದ್ದರೆ ಹುಚ್ಚಿನ ಕೆಲಸವಾಗಬಹುದು.

ರಾಷ್ಟ್ರೀಯ ಧ್ವಜದೊಂದಿಗೆ ಕಿಸಾನರ ಧ್ವಜವೊಂದಿರಬಹುದು.

ಕೃಷಿಕವರ್ಗವನ್ನುಸುಲಿಗೆ ದಬ್ಬಾಳಿಕೆಗಳಿಗೆ ಗುರಿಮಾಡುವ ಆಡಳಿತವನ್ನುಮೂಲಸಮೇತಕಿತ್ತುಹಾಕುವುದು ನನ್ನಧ್ಯೇಯ

ಕಿಸಾನ್ ಸಭೆಯ ಸದಸ್ಯರು ಕೊಂಗ್ರೆಸ್ ಸದಸ್ಯರಾಗಿರಲೇ ಬೇಕು. ಕಿಸಾನ್ ಸದಸ್ಯರು ತಮ್ಮ ಜಮೀನ್ದಾರೀ ಸಂಕಷ್ಟ ನಿವಾರಣೆಗಾಗಿ ಹೋರಾಡುವಾಗ ಕೊಂಗ್ರೆಸು ರಾಜಕೀಯ ಹಕ್ಕುಬಾಧ್ಯತೆಗಳಿಗಾಗಿ ಪ್ರಯತ್ನಿಸುವುದು.

ಕಿಸಾನರು ಕೊಂಗ್ರೆಸ್ ರಚನಾತ್ಮಕ ಸಂಸ್ಥೆಗಳನ್ನು ಸ್ಥಾಪಿಸಿ ಕೆಲಸಮಾಡಬಹುದು. ಆದರೆ ಯಾವ ಭಾಷಣಾಡಂಬರವಿಲ್ಲದೆ ಆ ಕೆಲಸವು ಸಾಗಬೇಕು. ಇಂದು ಖಾದಿ ವಿದ್ಯಾಲಯಗಳಲ್ಲೂ, ಗ್ರಾಮಸೇವಾ ಸಂಘಗಳಲ್ಲೂ ಕೆಲಸಗಾರರು ಅವಿಶ್ರಾಂತವಾಗಿ ತಮ್ಮ ಕಾರ್ಯದಿಂದಲೇ ಹಳ್ಳಿಗರೊಂದಿಗೆ ಮಾತನಾಡುತ್ತಾರೆ.

ಕಮ್ಯೂನಿಸ್ಟರನ್ನಾಗಲೀ ಸಮತಾವಾದಿಗಳನ್ನಾಗಲೀ ಯಾರನ್ನಾದರೂ ಆಗಲಿ ಅವರು ಕೊಂಗ್ರೆಸನ್ನು ಸೇರದಂತೆ ಮಾಡುವುದು ಅಸಾಧ್ಯದ ಕೆಲಸ. ಆದರೆ ನಾನು ಸೂಚಿಸಿದ ಮಾದರಿಯ ಮೇಲೆ ನೀವು ಕಾರ್ಯಪ್ರವೃತ್ತರಾದರೆ ಎಂತಹ ತೊಂದರೆಗಳನ್ನಾದರೂ ನೀವು ನಿವಾರಿಸಿಕೊಳ್ಳಬಹುದು.

ಸೆಕೆಕಾಲ. ಉಷ್ಣದಿಂದ ಸಂತಪಿತವಾದ ಪಟ್ಟಣದ ಮನೆಗಳಲ್ಲಿ ನಿದ್ರಿಸುವುದು, ಅದರಲ್ಲೂ ಕಿಕ್ಕಿರಿದ ವಸತಿಗೃಹಗಳಲ್ಲಿ ವಾಸಿಸುವ ನಮ್ಮಂತಹರಿಗೆ ಅಸಾಧ್ಯ ಕೆಲಸವೇ ಸರಿ. ಸಮಾನ ಸಂಕಷ್ಟಕ್ಕೊಳಗಾದ ಸ್ನೇಹಿತರ ತಂಡುಗಳು ಗಾಳಿಬೀಸುವ ಮೈದಾನುಗಳಿಗೊ, ಉಪವನಗಳಿಗೊ, ನದೀ ದಡಕ್ಕೊ ಇಲ್ಲವೇ ಗುಡ್ಡದ ಸ್ಥಳಕ್ಕೊ ಹೋಗಿ ಮಧ್ಯರಾತ್ರಿಯ ತನಕ ತಂಗಾಳಿಯನ್ನು ಸೇವಿಸುತ್ತಾ ಹರಟಿಸಲ್ಲಾಪಗಳಲ್ಲಿ ಕಾಲಕಳೆದು ಆ ಮೇಲೆ ಕೊಂಚ ತಂಪೆನಿಸಿದಾಗ ಮನೆಗಳನ್ನು ಸೇರಿ, ಬೆಳಗ್ಗೆ ಒಂಬತ್ತು ಗಂಟೆಗಳ ತನಕ ಸುಖನಿದ್ರಾಸೀನರಾಗುವುದು ಉಷ್ಣವಲಯದ ಪೇಟೆಗಳಲ್ಲಿನ ಜನರ ಸಾಮಾನ್ಯ ಬೇಸಿಗೆ ಕಾಲದ ರಾತ್ರಿ ಕಾರ್ಯಕ್ರಮ.

ನಮ್ಮ ಪಂಗಡ ಅಂದು ನದೀ ತೀರಕ್ಕೆ ಹೋಯಿತು. ಅಲ್ಲಿ ಮರಳ ರಾಶಿಯ ಮೇಲೆ ನೀರಕಡೆಯ ತಂಗಾಳಿಗೆ ಮೈಯೊಡ್ಡಿ ಬಿದ್ದುಕೊಂಡೆವು. ನಮ್ಮಲ್ಲಿನ ಧೂಮ್ರಪಾನ ಭಕ್ತರು ಬೀಡಿ ಸುರುಳಿಗಳನ್ನೊ, ಸಿಗರೇಟು ಬತ್ತಿಗಳನ್ನೊ ಉರಿಸಿ ಹೊಗೆಯಾನಂದದಲ್ಲಿ ಮುಳುಗುವವರಾದರು. ಹೊಗೆ ಬತ್ತಿ ಸೇದುವ ಬೆಂಕಿ ದೂರದಿಂದ ಕೆಂಪು ತಾರೆಗಳಂತೆ ಕಾಣಿಸುತ್ತಿರುವುದು. ಬೆಂಕಿಪೆಟ್ಟಿಗೆ ಇಲ್ಲದೆ ಬರೀ ಬೀಡಿ ಬಾಯಲ್ಲಿಟ್ಟು ಅಗ್ನಿಯ ದಾರಿ ಕಾಯುವ ಅನೇಕರು ವಿನಂತಿಪೂರ್ವಕವಾಗಿ ಸೇದುವವರ ಬಾಯೊಳಗಿನಹೊಗೆಬತ್ತಿಯ ಅಗ್ನಿಕೊಳ್ಳಿಯನ್ನು ಅಪೇಕ್ಷೆಮಾಡುವಾಗ ಜಾತಿನೀತಿ ಕಟ್ಟಳೆಗಳಿಂದಲೂ, ಸ್ಪರ್ಶಅಸ್ಪರ್ಶತಾ ನಿರ್ಬಂಧಗಳಿಂದಲೂ ರಹಿತವಾದ ಬಾಂಧವ್ಯ ಸಂಪರ್ಕದ ಅನುಭವವಾಗುವುದು. ಒಂದು ಧ್ಯೇಯಕ್ಕಾಗಿ ಐಕ್ಯತೆಯಲ್ಲೂ, ಪರಸ್ಪರ ಸಹಕಾರದಲ್ಲೂ, ಸಂಘಟನೆಹೊಂದಲು ಈ ಬೀಡಿ ಬೆಂಕಿ ಎಷ್ಟು ಸಹಾಯ ಮಾಡುತ್ತಿದೆ! ಒಬ್ಬರು ಬಾಯಿಹಾಕಿದ ಕಾಫಿ ಕುಡಿಯುವುದು ದೇಹಾರೋಗ್ಯ ದೃಷ್ಟಿಯಿಂದ ಅಶುಚಿಕರವಾದರೂ ಬೀಡಿ ಬೆಂಕಿಗೆ ದೋಷವಿಲ್ಲ.

ಅಂದು ನಮ್ಮ ಬಳಿಗೆ ಬೆಂಕಿಯಾಡಿಸಿ ಬಂದ ವ್ಯಕ್ತಿ ಒರ್ವ ಮಿಲಿಟರಿಯವ. ಹಂಚು ಒಯ್ಯಲು ತಂದ ಲಾರಿಯೊಂದರ ಡ್ರ್ಯಾವರ್ ಅವನು. ಹತ್ತಿರದ ಹಂಚು ಕಾರ್ಖಾನೆ ಬಳಿಯ ತನ್ನ ಶಿಬಿರದಿಂದ ಗಾಳಿಸೇವನೆಗಾಗಿ ಅವನೂ ನದೀ ದಡಕ್ಕೆ ಬಂದಿದ್ದ. ಅವನ ಮಾತಿನಿಂದ ಮೈಸೂರು ಕಡೆಯವನೆಂದು ತಿಳಿಯಿತು. ಅವನೂ ನಮ್ಮ ಬಳಿ ಕೂತು ನಮ್ಮೂರ ವಿಚಾರ ಕೇಳ ತೊಡಗಿದ. ತುಲನಾತ್ಮಕವಾಗಿ ತನ್ನ ದೇಶದ ಸಂಗತಿಗಳನ್ನೂ ತಿಳಿಸಿದ. ಕೊನೆಗೆ ಅವನು ಪ್ರಸ್ತುತದ ತನ್ನ ಸುಖಮಯ ಜೀವನವನ್ನೂ, ತಾನು ಹಿಂದೆ ಅನುಭವಿಸಿದ ಸಂಗತಿಗಳನ್ನೂ ಪರಸ್ಪರ ಹೋಲಿಸಿ ತನ್ನ ದೇಶದ ಲಾಕ್ಷಣೀಕ ಜಾಣ್ಮೆಯಿಂದ ನಿವೇದಿಸಿದ.

ಯುದ್ಧ ಸೇವೆಗೆ ಸೇರುವ ಮುಂಚೆ ಅವನು ಬೆಂಗಳೂರಲ್ಲಿ ಸ್ವಂತ ಒಂದು 'ಬಾಡಿಗೆ ಕಾರ್' ಇಟ್ಟುಕೊಂಡಿದ್ದ. ತನ್ನ ಡ್ರೈವರ್ ಜೀವನದಲ್ಲಿ ನಡೆದ ಅತೀ ಸಾರಸ್ಯವಾದೊಂದು ಘಟನೆ ತನ್ನನುಭವಕ್ಕೆ ಬಂತೆಂದು ಅವ ಹೇಳಿದಾಗ ಹೇಗಾದರೂ ಕಾಲ ಕಳೆಯ ಬೇಕೆಂದಿರುವ ನಾವು ಸ್ವಲ್ಪ ಕುತೂಹಲ ತೋರಿಸಿ, ಅವನಿಗೊಂದು ಸಿಗರೇಟು ಅರ್ಪಿಸಿ ಆ ಘಟನೆ ಹೇಳುವಂತೆ ಒತ್ತಾಯಪಡಿಸಿದೆವು. ಸಿಗರೇಟ್ ದಾಕ್ಷಿಣ್ಯಕ್ಕೂ ಮತ್ತು ನಮ್ಮನ್ನು ಮೆಚ್ಚಿಸಬೇಕೆಂಬ ಒಂದು ಸ್ವೇಚ್ಛೆಯಿಂದ

ಆದರೂ ಕಳ್ಳನಲ್ಲ

ಲೂ ಅವನು 'ಕತೆ' ಪ್ರಾರಂಭಿಸಿದ. ಅವನು ಹೇಳಿದ ಘಟನೆಯ ಸಂಗತಿಗಳು ನಿಜವೊ, ಅಥವಾ ಬಣ್ಣ ಬಳಿಯಲ್ಪಟ್ಟುವುಗಳೊ ಎಂದು ಹೇಳಲು ಸಾಧ್ಯವಿಲ್ಲವಾದರೂ ಕೇಳಲಿಕ್ಕೆ ನಿಸ್ಸಂದೇಹವಾಗಿ ಸಾರಸ್ಯವಾಗಿದ್ದುವು-ನಮಗೆ ಅರೇಬಿಯನ್ ರಾತ್ರೆ ಕಥೆಗಳಲ್ಲಿನ 'ಬಗ್ದಾದಿನ ಚೋರ'ನ ನೆನಪುಂಟಾಯಿತು. ಮರಳಿನಲ್ಲಿ ಕೈಯೂರಿ ಅವನು ಪ್ರಾರಂಭಿಸಿದ:

ಆ ವರ್ಷ ನಾನು ಅತೀ ಹೊಸದಾದ ಕಾರನ್ನು ತೆಗೆದುಕೊಂಡು ಬಾಡಿಗೆಗೆ ಇಟ್ಟಿದೆ. ರೈಲ್ವೇ ಸ್ಟೇಶನಿನಲ್ಲಿ ಒಂದು ದಿನ ಮದ್ರಾಸ್ ಗಾಡಿ ಬಂದಾಗ ಹಸರು ಬಣ್ಣದ ವಿಚಿತ್ರ ಮುಂಡಾಸು ಇಟ್ಟು, ಕಂದು ಕೋಟಿನ ಮೇಲೆ ಕೆಂಪು ಸೊಂಟದ ಪಟ್ಟಿಸುತ್ತಿದ್ದ ಒರ್ವ ಪೇದೆ ಜವಾನನಂತೆ ಕಾಣಿಸುವ ವ್ಯಕ್ತಿಯು ನನಗೆ ಪ್ಲೇಟ್ ಫೋರ್ಮಿನ ಹೊರಗಿಂದ ಕೈಸನ್ನೆಮಾಡಿ ಕರೆಯಿತು. ಯಾರೋ ಅಧಿಕಾರಿಗಳು ಬಾಡಿಗೆಗಿರಬೇಕೆಂದು ಸರ್ರನೆ ಕಾರು ಅವನ ಬಳಿಗೆ ಒಯ್ದೆ. ಅಷ್ಟರಲ್ಲೇ, ಅತ್ಯಾಧುನಿಕ ಯುರೋಪಿಯನ್ ಶೈಲಿಯಲ್ಲಿ ಹೇಟು ಕೋಟು ಧರಿಸಿದ ಒರ್ವ ಸಭ್ಯಗೃಹಸ್ಥರು ಫಸ್ಟ್‌ಕ್ಲಾಸ್ ಗೇಟಿನಿಂದ ಹೊರಗೆ ಬಂದರು. ಹಸರು ಮುಂಡಾಸಿನ ಜವಾನನು ನಮ್ರತೆಪೂರ್ಣವಾಗಿ ಉಚ್ಚ ಅಧಿಕಾರಿಯಂತೆ ತೋರುವ ಆ ಮನುಷ್ಯನನ್ನು ಕಾರಿನ ಕಡೆಗೆ ನಿರ್ದೇಶಿಸಿದನು. ಐರೋಪ್ಯ ಮರ್ಜಿಯಿಂದ ಆ ಅಧಿಕಾರಿಯು ಕಾರಿನೊಳಗೆ ಕೂತುಕೊಂಡನು. ಅವನ ಜವಾನ ನನ್ನ ಪಕ್ಕದಲ್ಲಿ ಕೂತ. "ಸರ್ದಾರ್ ಹೋಟ್ಲಿಗೆ" ಎಂದು ಜವಾನ ನನಗೆ ಸೂಚನೆ ಕೊಟ್ಟ—ಅಲ್ಲಿಂದ ಕೆಲವೇ ಫರ್ಲಾಂಗು ದೂರ.

ದಾರಿಯಲ್ಲಿ ನನ್ನನ್ನೆದುರುಗಿರುವ ಉರುಟು ಕನ್ನಡಿಯಲ್ಲಿ ನಾನು ಹಿಂದೆ ಕೂತ ಆ ಭವ್ಯ ವ್ಯಕ್ತಿಯನ್ನು ನೋಡಿದೆ. ತುದಿಗಳನ್ನು ಚೂಪಾಗಿ ಮೇಲಕ್ಕೆ ಹುರಿಗೊಳಿಸಿದ ಲಘು ಮೀಸೆಗಳು ಅವನ ಉದ್ದವೂ ಸೂಕ್ಷ್ಮಜಾಣತನ ಸೂಚಿಸುವ ಅವನ ಮೂಗಿನಡಿಯಲ್ಲಿ ಸುಶೋಭಿತವಾಗಿದ್ದು, ಕಾಲುಗಳಿಲ್ಲದ ಕನ್ನಡಕವಿಟ್ಟ ಅವನ ಅಚ್ಚು ಹಳದಿ ಕೆಂಪು ಮಿಶ್ರಿತವಾದ ಬಿಳೀ ಮುಖಕ್ಕೆ ದರ್ಪದ ಭಾವವನ್ನು ಕೊಡುತಿದ್ದವು. ಯಾವ ಆಸಕ್ತಿ ಕುತೂಹಲಗಳನ್ನು ಸೂಚಿಸಿದ ಅವನ ನಸು ಕಂದು ಕಣ್ಣುಗಳು, ನಿರ್ವಿಕಾರವಾಗಿ ಒತ್ತಲ್ಪಟ್ಟು ಒಂದು ಮಾತ್ರ ಸ್ವಲ್ಪ ಹೊರ ಚಾಚಿರುವ ತುಟಿಯು, ಆರೋಗ್ಯವಂತ ಚಿಹ್ನೆಗಳನ್ನು ಸೂಚಿಸುವ ಅವನ ನಯವಾದ ಕೆನ್ನೆಗಳೂ, ಅತೀ ಮೌಲ್ಯದ ರೇಶ್ಮೆ ಶರ್ಟಿನ ಮೇಲೆ ಬಿಗಿದ ನೆಕ್ಟ್ಯಾಯ ಮೇಲೆ ಒರ್ವ ಗ್ರೀಕ್ ಕ್ರೀಡಾ ನಿಪುಣನ ಆಕೃತಿಯ ಕೊರಳೂ ಧನವಂತಿಕೆಯ ಲಕ್ಷಣಗಳಿಂದ ಕೂಡಿದ್ದವು. ಅವನ ಹೇಟು, ಕೋಟುಗಳೂ, ಬಂಗಾರದ ಹಿಡಿಯ ಕೈಬೆತ್ತವೂ ಯಾರಲ್ಲೂ ಗೌರವವನ್ನುಂಟು ಮಾಡುತಿದ್ದವು.

ಹೋಟೇಲು ಬಳಿ ಕಾರು ನಿಲ್ಲಿಸಿದೆ. ಆ ಮಹಾಶಯನು ನನಗೆ ಕೊಡುವಂತೆ ಹತ್ತು ರೂಪಾಯಿಯ ನೀಲ ನೋಟೊಂದನ್ನು ಕೊಟ್ಟಾಗ ಅಂತೂ ನಾನು ಎರಡೂ ಕೈಗಳನ್ನು ಜೋಡಿಸಿ ಇರ್ವರಿಗೂ ಮನಃಪೂರ್ವಕವಾಗಿ ನಮಸ್ಕರಿಸಿದೆ. ಕೆಳಗಿಳಿದು ಹೇಟಿನ ವ್ಯಕ್ತಿಯು ತನ್ನ ಓವರ್ ಕೋಟನ್ನು ಎಡ ಕೈ ಮೇಲೆ ಹಾಕಿ ಹೋಟೇಲ್ ಭವನವನ್ನು ಪ್ರವೇಶಿಸಿತು. ಜವಾನನು ಅವನನ್ನು ಹಿಂಬಾಲಿಸಿದವನು ಪಕ್ಕನೆ ಹಿಂತಿರುಗಿ "ರಾಯರಿಗೆ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಕಾರು ಬೇಕು. ತರುತ್ತಿಯೊ?" ಎಂದು ಕೇಳಿದ. "ಅಗತ್ಯವಾಗಿ" ಎಂದೆ ನಾನು. ಕಾರಣ ಆ ಕಾಲದಲ್ಲಿ ಬೆಂಗಳೂರಲ್ಲಿ ಸ್ಯಾಕಲಿನಷ್ಟು ಕಾರುಗಳಿದ್ದು, ಅತೀ ಅಗ್ಗದ ಬಾಡಿಗೆಗೆ ಹೊಡೆಯುತಿದ್ದರು. ನನಗಂತೂ ಎರಡು ರೂಪ್ಯಾ ವಾರಿಗೆ ಹತ್ತು ಸಿಕ್ಕಿದೆ.

ಮರುದಿನ ಹತ್ತು ಗಂಟೆಗೆ ಸರಿಯಾಗಿ ಕಾರು ತಂದು 'ಸರ್ದಾರ್ ಹೋಟೇಲಿನ' ಮುಂದೆ ನಿಲ್ಲಿಸಿದಾಗ ಕೆಲವೇ ಮಿನಿಟುಗಳಲ್ಲಿ ಸಿಗರೇಟು ನಳಿಗೆ ಬಾಯಲ್ಲಿಟ್ಟು ಅದೇ ಹೇಟಿನ ಮನುಷ್ಯ ಇನ್ನೂ ಹೆಚ್ಚಿನ ಆಡಂಬರದ ಉಡುಪು ಧರಿಸಿದವನಾಗಿ ಹೊರಗೆ ಬಂದು ಕಾರಿನಲ್ಲಿ ಕೂತ: "ಕೆಂಟೋನ್‌ಮೆಂಟಿನ ಶರೀಫ್ ಕಟ್ಲೆರಿ ಶಾಪಿಗೆ ಹೊಡೆ" ಎಂದನು. ಅವನ ಮಾತಿನಲ್ಲೂ ಸರದಾರೀ ನಿಟ್ಟು ಇತ್ತು. ಕೆಂಟೋನ್‌ಮೆಂಟಿನಲ್ಲಿ ಶರೀಫರ ಕಟ್ಲೆರಿ ಅಂಗಡಿಯೆಂದರೆ ಪ್ರಸಿದ್ಧ ಸಂಸ್ಥೆ. ಅಲ್ಲಿಗೆ ಕಾರು ನಿಲ್ಲಿಸಿದೆ. ನಮ್ಮ ಸರದಾರ ಅಂಗಡಿಯೊಳಗೆ ಪ್ರವೇಶಿಸಿದ ಸುಮಾರು ಒಂದು ಗಂಟೆಯ ಮೇಲೆ ಹೊರಗೆ ಬಂದನು. ಅವನ ಜೊತೆಯಲ್ಲಿ ಶರೀಪ್ ಅಂಗಡಿಯ ಕಾರಕೂನನೊಬ್ಬನೂ ಇದ್ದ. ಅಂಗಡಿಯ ಹತ್ತಿರ ಎರಡು ಲಾರಿಗಳು ನಿಂತಿದುವು. ಕಾರಿನಲ್ಲಿ 'ಸರದಾರ'ನೂ ಕಾರಕೂನನೂ ಕೂತುಕೊಂಡರು. ಆಗಲೇ ಅಲ್ಲಿ ನಿಂತಿದ್ದ ಲಾರಿಯ ಒಬ್ಬ ಡ್ರೈವರನು ಸಲಾಂ ಮಾಡಿ ಸರದಾರನ ಹತ್ತಿರ ಬಂದಾಗ "ಸಾಮಾನು ತೆಗೆದು ಇವತ್ತೇ ಮುಟ್ಟಿಸು" ಎಂದು ಅವನಿಗೆ ಆಜ್ಞೆ ಕೊಡಲ್ಪಟ್ಟಿತು. ಅವನು ಸಮ್ಮತಿ ಸೂಚಿಸಿ ವಿನಯ ಪೂರ್ವಕವಾಗಿ ಹಿಂದೆ ಸರಿದ ಮೇಲೆ ಪುನಃ 'ಹೋಟೇಲಿಗೆ' ಎಂದು 'ಸರದಾರ' ನನಗೆ ಹುಕುಂಕೊಟ್ಟ.

ಪುನಃ 'ಸರ್ದಾರ್ ಹೋಟೆಲಿಗೆ' ಕಾರು ತಂದು ನಿಲ್ಲಿಸಿದೆ. 'ಈಗಲೇ ಬಂದೆ' ಎಂದು ಹೇಳುತ್ತಾ 'ಸರದಾರ' ಕಾರಕೂನನೊಂದಿಗೆ ಹೋಟೇಲ್ ಒಳಗೆ ಹೋದ. ಈ ಸಲ ನನಗೆ ತುಂಬಾ ಬಾಡಿಗೆ ದೊರಕುವುದು ಖಂಡಿತವೆಂದು ನಾನು ವಿನಯತೆಯಿಂದ ಸಮಸರಿಸಿ ಒಪ್ಪಿಕೊಂಡು ಸಿಗರೇಟು ಸೇದುತ್ತಾ ಕಾರಿನೊಳಗೇ ದಾರಿ ಕಾಯುತ್ತಾ ಕೂತೆ. ಕೂತೆ-ಕೂತೆ-ಕೂತೇ ಬಿಟ್ಟೆ. ಗಂಟೆ ಒಂದಾಯಿತು. ಆಸಾಮಿ ಕಾಣಿಸುವುದಿಲ್ಲ. ಏನೋ ದೊಡ್ಡವರ ಮರ್ಜಿ ಎಂದು ಮತ್ತೂ ಕೂತೆ. ಆ ಹಸರು ಮುಂಡಾಸಿನ ಜವಾನನೂ ಕಾಣಿಸಲಿಲ್ಲ.

ಇಷ್ಟರೊಳಗೆ ಹೋಟೇಲಿನೊಳಗೆ ಏನೋ ಗದ್ದಲ ಕೇಳಿಸಿದ ಹಾಗಾಯಿತು. ಏನಿರಬಹುದೆಂದು ಒಳಗೆ ಇಣಿಕಿದೆ. ಹೋಟೇಲ್ ಮೇನೇಜರನಿಗೂ ಸರದಾರನ ಜೊತೆಯಲ್ಲಿ ಬಂದ ಶರೀಫ್ ಅಂಗಡಿಯ ಕಾರಕೂನನಿಗೂ ವಾಗ್ಯುದ್ಧ ನಡೆಯುತಿತ್ತು. "ಲಾಡು ಯಾರಿಗೆ ಬೇಕ್ರೀ? ರುಪ್ಯಾ ಕೊಡ್ರೀ. ಏನು ತಮಾಷೆ ಮಾಡುತ್ತಿರೋ" ಎಂದು ಕಾರಕೂನನು ಮಾತಾಡುತಿದ್ದ. ಅದಕ್ಕೆ ಮೇನೇಜರ್ "ಅವರು ಹೇಳಿದ್ದಾರೆ ಲಾಡು ಕೊಡಲಿಕ್ಕೆ ನೀನು ರೂಪ್ಯಾ ಕೇಳುತ್ತಿಯಾ, ತಲೆಗಿಲೆ ಕೆಟ್ಟು ಹೋಗಿದ್ದೀಯೋ" ಎಂದು ಮೇನೆಜರ್ ಕಾರಕೂನನಿಗೆ ಪ್ರಶ್ನಿಸುತಿದ್ದ. ನಾನು ಚಕಿತನಾದೆ. ಕಡೆಗೆ ನನಗೆ ತಿಳಿಯಿತು. ಹೋಟೇಲಿನಲ್ಲಿ ಬಾಡಿಗೆ ಕೋಣೆ ಪಡಕೊಂಡಿದ್ದ ಸರದಾರನೂ ಇರಲಿಲ್ಲ. ಅವನ ಜವಾನನೂ ಇರಲಿಲ್ಲ.....

ಕತೆ ಇಲ್ಲಿಗೆ ಮುಟ್ಟಿದಾಗ ನಮ್ಮವರಲ್ಲೂ ಕೌತುಕ ಕುತೂಹಲಗಳು ಹುಟ್ಟಿ ನಾವು "ಅವನು ಎಲ್ಲಿಗೆ ಹೋದ? ಮತ್ತೇನಾಯಿತು?" ಎಂದು ಆಸಕ್ತಿಯಿಂದ ಮಿಲಿಟರಿ ಡ್ರೈವರನಿಗೆ ಮತ್ತೊಂದು ಸಿಗರೇಟು-ಅಲ್ಲ-ಬೀಡಿ-ಕೊಡುತ್ತಾ ಕೇಳಿದೆವು. ಡ್ರೈವರ್ ಜೋರಾಗಿ ನಗುತ್ತಾ "ಇಲ್ಲಿ ಕೇಳಿ ಸ್ವಾಮಿ ಆ ಸರದಾರ ಕೆಲವು ತಿಂಗಳ ಮೇಲೆ ಮದ್ರಾಸಿನಲ್ಲಿ ಗುಪ್ತ ಪೋಲೀಸರಿಂದ ಹಿಡಿಯಲ್ಪಟ್ಟ. ಅವನ ಜೀವನವೇ ಸಾರಸ್ಯವಾದ ಒಂದು ಚರಿತ್ರೆ" ಎಂದ. "ಹೇಳು ಹೇಳು" ಎಂದೆವು ನಾವು. ಅವನು ತನ್ನ ನಿರೂಪ ಮುಂದರಿಸಿದ. ಅವನು ಚೆನ್ನಪಟ್ಟಣದ ಒಂದು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವ. ಶಾಲೆಯಲ್ಲಿ ಚತುರ ವಿದ್ಯಾರ್ಥಿಯೆನಿಸಿದರೂ ತುಂಬಾ ಪೋಕರಿ. ತಂದೆಯೊಂದಿಗೆ ಜಗಳಮಾಡಿ ಹದಿನಾರನೆ ವಯಸ್ಸಿನಲ್ಲಿ ಮನೆ ಬಿಟ್ಟು ಪ್ರಾಂತಪ್ರಾಂತ್ಯ ಸಂಚರಿಸಿ ಕಳ್ಳತನದ ಕೌಶಲ್ಯಗಳನ್ನೆಲ್ಲ ಕಲಿತುಕೊಂಡು ನಾಲ್ಕೈದು ಸಾರಿ ತುರಂಗ ಕಂಡಿದ್ದಾನೆ: ಕೊನೆಯ ಸಲ ಅವನು ಜೈಲಿನೊಳಗಿದ್ದಾಗ ಚಮತ್ಕಾರವಾಗಿ ತಪ್ಪಿಸಿಕೊಂಡ.

(೯ನೇ ಪುಟಕ್ಕೆ ಮುಂದುವರಿ ದಿದೆ.)

ಹೊಸ ವರುಷದ ಶುಭಾಶಂಸೆ

ನಮ್ಮ ಆಶ್ರಯದಾತರಿಗೂ ಗೆಳೆಯರಿಗೂ ಹೊಸ ವರುಷವು ಆನಂದ-ಸಮೃದ್ಧಿಗಳನ್ನು ತರಲೆಂದು ಕೋರುವಾಗ, ಅವರಿಗೆ ಸತ್ಸೇವೆ ಸಲಿಸಲನುವಾದ ಅವರ ಸಹಕಾರ ಮತ್ತು ಸ್ನೇಹಮಯ ಸತ್ಯ ಸಹಾಯಕ್ಕಾಗಿ ಅವರಿಗೆ ಅಭಿವಂದನೆಗಳನ್ನು ಸಲಿಸುವೆವು.

ಮುಂಬರುವ ವರುಷದಲ್ಲಿ ನಮ್ಮೊಳಗಿನ ಸಂಬಂಧವು ಇನ್ನೂ ಬಲಗೊಂಡು, ಇಂದಿನ ಸಂಬಂಧವು ಅಖಂಡವಾಗುವಂತಹ ಹೆಚ್ಚಿನ ಸಂದರ್ಭಗಳನ್ನಿದಿರು ನೋಡುತ್ತಿರುವೆವು.

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್

Canara Bank Ltd.

(Incorporated in British India Liabilitay of members Limited.)

ಜಪಾನಿನಲ್ಲಿ ಗೆಣಸು ತಿನ್ನುತಿದ್ದಾರೆ

ಶತ್ರುದೇಶದ ಆಂತರೀಕ ಸ್ಥಿತಿ

ಅಲ್ಲಿಯೂ ಅಕ್ಕಿ ಬಟ್ಟೆಗಳಿಲ್ಲ

ದಿನದಿಂದ ದಿನಕ್ಕೆಂಬಂತೆ ಜಪಾನಿಯರು ಮಿತ್ರರ ಕೈಯಲ್ಲಿ ಸೋಲು ಅನುಭವಿಸುತಿದ್ದ ಹಾಗೆ ಅವರ ದೇಶದ ಆಂತರೀಕ ಪರಿಸ್ಥಿತಿಯೂ ಕೆಡುತ್ತಿದೆಯೆಂಬ ವಿಷಯವು ರಷ್ಯನ್ ಕಡೆಯಿಂದ ಬಂದ ವಾರ್ತಾ ಮೂಲದಿಂದ ಗೊತ್ತಾಗುತ್ತದೆ.

ಇಂದು ಜಪಾನ್ ಕೆಲಸಗಾರರು ಎಂದಿಗಿಂತಲೂ ಕಡಿಮೆ ವಿಶ್ರಾಂತಿಯಲ್ಲಿ ಹೆಚ್ಚು ಕೆಲಸ ಮಾಡುವಂತೆ ಬಲಾತ್ಕರಿಸಲ್ಪಡುತ್ತಾನೆ. ಅವನ ಆದಾಯವೇನೋ ತುಂಬಾ ಹೆಚ್ಚಿದೆಯಾದರೂ ಅವನ ಮನೆಯ ಆಹಾರ ಉಗ್ರಾಣ ಮಾತ್ರ ಬರಿದಾಗಿದೆ. ಜಪಾನಿನಲ್ಲಿಯೂ ಕಳ್ಳಸಂತೆಯ ವಹಿವಾಟು ಅತ್ಯಂತ ರಭಸದಿಂದ ನಡೆಯುತ್ತದೆ.

ಕಳ್ಳ ಸಂತೆಯ ಸಾಮಾನು ಪಡೆಯಲಿಕ್ಕಾಗದವರು ದಿನನಿತ್ಯದ ಉಪಯೋಗಕ್ಕೆ ಬೇಕಾಗುವ ಸುಖೋಪಭೋಗದ ವಸ್ತುಗಳ ಮೇಲೆ ತಮ್ಮ ಅತಿರೇಕ ಲಾಭದ ಬಂಡವಾಳವನ್ನು ವ್ಯಯಿಸಿ ತನ್ಮೂಲಕ ಮಿತಿಮೀರಿದ ಲಾಭ ಪಡೆಯುತ್ತಾರೆ. ಸಿಗರೇಟು, ಪೌಡರ್, ಸ್ನೋ, ಹೇಟು, ಬೂಟು, ರೇಶ್ಮೆ ಮತ್ತು ಉಣ್ಣೆ ಬಟ್ಟೆಗಳಿಗೆ ಅಲ್ಲಿ ಹದಮಿಕ್ಕಿ ಬೆಲೆ ಏರಿದೆ.

ಜಪಾನಿಗಳ ರೇಶನ್ ದುರವಸ್ಥೆ

ಕೆಲವೇ ವರ್ಷಗಳ ಹಿಂದೆ ಕಟ್ಟುನಿಟ್ಟಾದ ಪೋಷಾಕಿನಲ್ಲಿ ಶೃಂಗರಿಸಿಕೊಳ್ಳುತಿದ್ದ ಜಪಾನಿಗಳು ಇಂದು ಹರಕು ಚಿಂದಿಗಳಂತಹ ಉಡುಪುಗಳನ್ನು ಧರಿಸಿ ಗಂಟೆಕಟ್ಲೆಯಲ್ಲಿ ರೇಶನ್ ಅಂಗಡಿ ಮುಂದೆ ನಿಂತು ಅಲ್ಲಿನ ಪೋಲಿಸರ ದಬ್ಬಾಳಿಕೆಗೆ ತಲೆಬಾಗಿ ಸಂಕಷ್ಟಪಡುತಿದ್ದಾರೆ. ಯುದ್ಧಾರಂಭದಲ್ಲಿ ಅಲ್ಲಿ ಒಬ್ಬೊಬ್ಬನಿಗೆ ೫೦ ಮೊಳ ಬಟ್ಟೆ ಸಿಗುತಿದ್ದುದು ಈಗ ಬರೀ ೩೦ ಮೊಳವಾಗಿದೆ.

ವಿಶಾಲವಾದ ಅಕ್ಕಿ ಪ್ರದೇಶಗಳು ಇಂದು ಜಪಾನಿನ ವಶದಲ್ಲಿದ್ದರೂ ಫಿಲಿಪೈನ್, ಸಿಂಗಾಪುರ ಕೇಂದ್ರಗಳಲ್ಲಿನ ಸೈನಿಕರಿಗೆ ಶಸ್ತ್ರಾಸ್ತ್ರಗಳನ್ನೂ ಆಹಾರಗಳನ್ನೂ ಒಯ್ಯಲಿಕ್ಕೇ ಅವರ ಹೆಚ್ಚಿನ ಸ್ಟೀಮರುಗಳು ಉಪಯೋಗಿಸಲ್ಪಡುತ್ತಾವಾದ್ದರಿಂದ ನಾಗರೀಕರಿಗೆ ಅಕ್ಕಿ ಒಯ್ದುಕೊಡಲು ಹಡಗಗಳೇ ದೊರಕುವುದಿಲ್ಲ. ಹೆಚ್ಚು ಪ್ರಮಾಣದಲ್ಲಿ ಹಡಗುಗಳೂ ಪದೇ ಪದೇ ಅಮೇರಿಕನ್ ವಿಮಾನಗಳಿಂದ ಮುಳುಗಿಸಲ್ಪಡುವುದರಿಂದ ಇನ್ನೂ ಪರಿಸ್ಥಿತಿ ವಿಷಮವಾಗಿದೆ.

ಮುಂಚೆ ೧ ರಾತ್ಲ ಅಕ್ಕಿ ಒಂದು ದಿನಕ್ಕೆ ಒಬ್ಬನಿಗೆ ಸಿಗುತಿದ್ದುದು ಈಗ ಮುಕ್ಕಾಲು ರಾತ್ಲಿಗೆ ಇಳಿಸಲಾಗಿದೆ-ಅಂದರೆ ಸುಮಾರು ೩ ಪಾವಿನಷ್ಟು. ಅಲ್ಲಿನ ಅಕ್ಕಿ ಬೆಳೆಯೂ ಈಚೆಗೆ ಫಲಪ್ರದವಾಗಲಿಲ್ಲದ್ದರಿಂದ ಸರಕಾರದವರು ಗೆಣಸುಗಳನ್ನೂ, ಕುಂಬಳಕಾಯನ್ನೂ, ಕೆಸುವಿನ ಗೆಡ್ಡೆಗಳನ್ನೂ ಬೆಳೆಸಲು ಪ್ರೋತ್ಸಾಹಿಸುತ್ತಿರುವರು. ಆದರೆ ನಮ್ಮಂತೆ ಜಪಾನರ ಮುಖ್ಯ ಆಹಾರವಾದರೂ ಅಕ್ಕಿಯೇ ಇರುವುದರಿಂದ ಅಲ್ಲಿನ ನಾಗರೀಕರಿಗೆ ತುಂಬಾ ತೊಂದರೆಯಾಗಿದೆ.

ಜಪಾನಿನಲ್ಲಿ ಮೀನಿಗೂ ರೇಶನ್ ಮಾಡಿದ್ದಾರೆ. ಅದೂ ವಾರಕ್ಕೊಂದಾವರ್ತಿ ಮಾತ್ರ ಸಿಗುವುದು. ಲಂಚಖೋರರಾದ ಅಲ್ಲಿನ ಪೋಲಿಸ್ ಇಲಾಖೆಯವರು ಇದರ ಅನುಕೂಲತೆ ತೆಗೆದುಕೊಂಡು ತುಂಬಾ ಹಣ ಗಳಿಸಿಟ್ಟಿದ್ದಾರೆ. 'ಕಂಟ್ರೋಲ್' ಆಗಿ 'ರೇಶನ್' ಆಗದ ಪದಾರ್ಥಗಳೆಂದರೆ ಗೆಣಸು ಮತ್ತು ಉಪ್ಪು.

ಹೀಗೆ ಜಪಾನರ ಊಟದ ಬಟ್ಟಲು ಬರಿದಾಗುತ್ತ ಬಂದ ಹಾಗೆ ಅಧಿಕಾರಿಗಳ ಕಾನೂನುಗಳೂ ಹೆಚ್ಚುತ್ತಿವೆಯಂತೆ.

ಜಪಾನೀ ಸೈನ್ಯದ ದುರವಸ್ಥೆ

ಆಹಾರ ವ್ಯವಸ್ಥೆಯು ಸರಿಯಾಗಿಲ್ಲದ್ದರಿಂದ ಪ್ರತೀ ನಾಲ್ಕು ಜಪಾನಿ ತರುಣರಲ್ಲಿ ಒಬ್ಬನಿಗೆ ಕ್ಷಯರೋಗವುಂಟಾಗಿದೆಯಂತೆ. ರೈಲ್ವೇ, ವಿಮಾನ, ಹಡಗುಗಳಲ್ಲಿ ಕೆಲಸಮಾಡುವವರಿಗಂತೂ ಈ ರೋಗವು ಅತೀ ಹೆಚ್ಚಾಗಿ ತಗಲಿದೆ ಎಂದು ಒಬ್ಬ ಜಪಾನ್ ಆಹಾರ ಖಾತೆಯ ಅಧಿಕಾರಿ ತಿಳಿಸಿದ್ದಾನೆ.

ಆದರೆ ಸೈನಿಕ ಮನೋವೃತ್ತಿಯ ಜಪಾನೀ ಸೇನಾಧಿಪತಿಗಳು ತಮ್ಮ ಸೈನಿಕರಿಗೆ ಆಹಾರ ಕೊರತೆಯನ್ನು ನೀಗುವುದರ ಬದಲು ಅವರಿಗೆ ಬೆಟ್ಟಹತ್ತುವ, ಕಾಡು ದಾಟುವ ಅಭ್ಯಾಸಗಳಲ್ಲಿ ಹೆಚ್ಚೆಚ್ಚಾಗಿ ತರಬೇತು ಕೊಡುತಿದ್ದಾರೆ. ಚಳಿಗಾಲದಲ್ಲಿ ಅವರಿಗೆ ತಣ್ಣೀರನ್ನೇ ಸ್ನಾನ ಪಾನಗಳಿಗೆ ಕೊಡಲಾಗುತ್ತದೆ. ಇದರಿಂದ ಕಳೆದ ಚಳಿಗಾಲದಲ್ಲಿ ಅನೇಕಾನೇಕ ಸೈನಿಕರು ಶೀತಬಾಧೆಯಿಂದ ನರಳುವವರಾದರು. ಅವರಿಗೆ ಹಾಕಕೊಡುತಿದ್ದ ದಪ್ಪವಾದ ಒವರ್ ಕೋಟುಗಳನ್ನೂ ಈಗ ಕೊಡುವುದಿಲ್ಲ.

ಮಜೂರರ ಕ್ಷಾಮ

ಅಕ್ಕಿಗೆ ಕ್ಷಾಮ ಬಂದ ಹಾಗೆ ಇಂದು ಜಪಾನಿನಲ್ಲಿ ಮಜೂರ ಬರಗಾಲವೂ ಬಂದಿದೆ. ಕೈಗಾರಿಕೆ ಕಾರ್ಖಾನೆಗಳಲ್ಲಿ ಅಲ್ಲಿ ಈಗ ೨೦ ಲಕ್ಷ ವೃದ್ಧ ಪ್ರಾಯಸ್ಥರು ಬಲಾತ್ಕಾರದಿಂದ ಕೆಲಸಕ್ಕೆ ಹಚ್ಚಲ್ಪಟ್ಟಿದ್ದಾರೆ. ಹದಿನೆರಡು ವರ್ಷದ ಕೆಳಗಿನ ಮಕ್ಕಳನ್ನು ಅವರು ಕೆಲಸಕ್ಕೆ ಹಚ್ಚಿದ್ದಾರೆ. ೬೦ ಸಾವಿರ ಚೀನಿಯರೂ, ೧೦ ಲಕ್ಷ ಕೋರಿಯ ದೇಶದ ಕೂಲಿಗಳೂ ಜಪಾನೀ ಬಂದೂಕುಗಳ ಕೆಳಗೆ ಕೆಲಸ ಮಾಡಿಸಲ್ಪಡುತ್ತಾರೆಂದು ಒಂದು ರಷ್ಯನ್ ವರದಿಯು ತಿಳಿಸುತ್ತದೆ.

ಅದೂ ಸಾಲದೆ ೪೫ ಸಾವಿರ ಕೈದಿಗಳು ಈಚೆಗೆ ಹಡಗುಕಟ್ಟುವಿಕೆಗೆ ಉಪಯೋಗಿಸಲ್ಪಟ್ಟಿದ್ದಾರೆ. ಸಾರಸ್ಯವೆಂದರೆ ಜಪಾನಿನಲ್ಲಿನ ೧೬೦ ಸಾವಿರ ಬೌಧ ಸನ್ಯಾಸಿಗಳು ತಮ್ಮ ವಿಶ್ರಾಂತಿ ಸಮಯದಲ್ಲಿ ಯುದ್ಧಾಸ್ತ್ರ ತಯಾರಿಕೆಯಲ್ಲಿ ಸಹಕರಿಸಬೇಕಾಗಿ ಬಲಾತ್ಕರಿಸಲ್ಪಟ್ಟವಿಷಯ. ಅದು 'ಅಧ್ಯಾತ್ಮಿಕ ಕೆಲಸ'ವೆಂದು ಸಾರಲಾಗಿದೆ.

ಕಳೆದ ವರ್ಷ ಸರಕಾರೀ ಇಲಾಖೆಗಳಲ್ಲಿನ ಸೇಕಡಾ ೩೦ರಷ್ಟು ಸರಕಾರಿ ಅಧಿಕಾರಿಗಳನ್ನು ಶಸ್ತ್ರ ಕಾರ್ಖಾನೆಗಳಿಗೆ ಕಳುಹಿಸಲಾಯಿತು. ಈ ಸಲ ೮೩ ಸಾವಿರ ಅಧಿಕಾರಿಗಳನ್ನು ಕೂಲಿ ಕೆಲಸಕ್ಕೆ ಹಚ್ಚಿರುವರು.

ಶಾಲಾಮಕ್ಕಳಿಗೂ ಕೆಲಸ

ಇಂದು ಜಪಾನಿನಲ್ಲಿನ ಹೆಚ್ಚಿನ ವಿದ್ಯಾಸಂಸ್ಥೆಗಳೆಲ್ಲವೂ ಮುಚ್ಚಲ್ಪಟ್ಟಿವೆ. ಏಳು ವರ್ಷದ ಮೇಲಿನ ವಿದ್ಯಾರ್ಥಿಗಳೆಲ್ಲ ಕಡ್ಡಾಯವಾಗಿ ಯುದ್ಧ ಸಹಾಯಕವಾದ ಕೆಲಸ ಮಾಡಬೇಕೆಂದು ಕಾನೂನು ಮೂಲಕ ವಿಧಿಸಿದ್ದಾರೆ. ಚಿಕ್ಕ ಚಿಕ್ಕ ಉಪಕರಣಗಳನ್ನೂ ತಯಾರಿಸ್ಸುವ ಯಂತ್ರಗಳು ಶಾಲಾ ಕಟ್ಟಡಗಳಲ್ಲಿ ತಂದು ಇರಿಸಲ್ಪಟ್ಟು ಮಕ್ಕಳು ಕಲಿಯುವ ಬದಲು ಕೆಲಸ ಮಾಡುವ ಪ್ರಸಂಗಗಕ್ಕೆ ಒಳಗಾಗಿದ್ದಾರೆ.

ಮಕ್ಕಳ ಹೆತ್ತವರನ್ನು ದೂರದೂರದ ಕಾರ್ಖಾನೆಗಳಿಗೆ ಕೆಲಸಕ್ಕಾಗಿ ಕಳುಹಿಸಲಾಗುವುದರಿಂದ ಮಕ್ಕಳಿಗೆ ಆರೈಕೆ ನೋಡುವವರಿಲ್ಲವಾಗಿ ಪ್ರತಿದಿನ ಅನೇಕಾನೇಕ ಮಕ್ಕಳು ಅಲ್ಲಿ ಕಾಣೆಯಾಗುತ್ತಿವೆ. ಹೀಗೆ ದಾರಿತಪ್ಪಿದ ಪ್ರತಿ ಮಗುವಿನ ತಂದೆಯು ೧೦ ರೂಪಾಯಿಯ ಯುದ್ಧ ಬೋಂಡ್ ತೆಗೆದುಕೊಳ್ಳಲೇ ಬೇಕು.

ಲೋಹ, ಕಲ್ಲಿದ್ದಲೂ ಇಲ್ಲ

ಜಪಾನಿನಲ್ಲಿ ಹಡಗು, ವಿಮಾನ, ಯುದ್ಧಾಸ್ತ್ರಗಳನ್ನೂ ತಯಾರಿಸಲು ಲೋಹವಿಲ್ಲದ್ದರಿಂದ ಅಲ್ಲಿನ ವಿಮಾನ ಕಾರ್ಖಾನೆಗಳ ಸಾಮ್ರಾಟನೆನಿಸಿದ ಸಾಬುರೊ ಎಂಡೋ ಅವನು 'ಜನರು ಲೋಹ ಸಂಬಂಧವಾದ ಉಪಕರಣಗಳನ್ನು ದಿನನಿತ್ಯದ ವಸ್ತು ಒಡವೆಗಳನ್ನೂ ಉಪಯೋಗಿಸದಂತೆ ಬಲಾತ್ಕರಿಸಬೇಕು. ಇಸ್ತ್ರಿಹಾಕದ ಬಟ್ಟೆಗಳನ್ನು ಧರಿಸದಿದ್ದರೆ ಏನೂ ಆಗುವುದಿಲ್ಲ' ಹೀಗೆಂದು ಕೂಗಿಟ್ಟನಂತೆ. ಕಾರಣ ಬಟ್ಟೆಗೆ ಇಸ್ತ್ರಿಮಾಡಿ ಹಾಕಲು ಲೋಹದ ಆ ಬೆಚ್ಚಗೆ ಪಾತ್ರ ಬೇಕಾಗುವುದಿಲ್ಲವೆ? ಆದುದರಿಂದ ಅಲ್ಲಿಯ ತನಕ ಅಲ್ಲಿನ ಕೈಗಾರಿಕೆ ಮುಖಂಡರು ಭಂಗಕ್ಕೊಳಗಾಗಿರುವರು.

ಅತಿಯಾಗಿ ಲೋಹದ ಯಂತ್ರಗಳು ಖರ್ಚಾಗುವ ಛಾಪಖಾನೆಗಳನ್ನು ಸರಕಾರದವರು ನಿಲ್ಲಿಸಿ ಬಿಟ್ಟಿದ್ದಾರೆ. ಕಳೆದ ವರ್ಷದಲ್ಲಿ ೧೬೭೫ ಮುದ್ರಾಣಾಲಯಗಳಿದ್ದಲ್ಲಿ ಅವು ಈ ವರ್ಷ ಬರೀ ೧೬೨ಕ್ಕೆ ಇಳಿಸಲಾಗಿವೆ.

ಕಳೆದ ಯುದ್ಧದಲ್ಲಿ ಜರ್ಮನಿಯ ಸೋಲಿಗೆ ಅಲ್ಲಿನ ಲೋಹ, ಕಲ್ಲಿದ್ದಲಿನ ಕೊರತೆಯೂ ಒಂದು ಕಾರಣವಾಗಿತ್ತು. ಇಂದು ಟೋಕಿಯೋದಲ್ಲೂ ಅದೇ ಪರಿಸ್ಥಿತಿ ಉಪಸ್ಥಿತವಾಗಿದೆ.

ಜನ ಸಾಗಿಸುವಿಕೆಯ ತೊಂದರೆ

ಈಚೇಗೆ ಅಮೇರಿಕನ್ ಬಾಂಬರ್ ವಿಮಾನಗಳಿಂದ ಜಪಾನಿನ ಕೈಗಾರಿಕೆ ಕಷ್ಟವು ಮತ್ತಷ್ಟು ಹೆಚ್ಚಿದೆ. ಅವರ ಹಡಗುಗಳ ಸಾಲುಗಳೇ ಮುಳುಗಿಸಲ್ಪಡುತ್ತವೆ. ಲೇಟೆ ದ್ವೀಪ ಹಿಡಿದಿರುವುದರಿಂದ ಜಪಾನ್ ಚಕ್ರವರ್ತಿಯ ಅರಮನೆಯು ದಾಳಿಗೆ ಅತೀ ಹತ್ತಿರವಾಗಿದೆ.

ಕಳೆದ ಒಕ್ಟೋಬರದಲ್ಲಿ ಜಪಾನ್ ಪಾರ್ಲಿಮೆಂಟಿನಲ್ಲಿ ಸರಕಾರವನ್ನು ವಿಕೇಂದ್ರಿಕರಿಸುವ ಅನುಮತಿ ಮಂಜೂರು ಮಾಡಲ್ಪಟ್ಟಿತು. ವಿಕೇಂದ್ರೀಕರಣವೆಂದರೆ ದೇಶದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸ್ವತಂತ್ರವಾದ ಸರಕಾರಗಳನ್ನೂ ಸ್ಥಾಪಿಸುವುದು. ಇದರಿಂದ ಒಂದು ವೇಳೆ ಟೋಕಿಯೋ ರಾಜಧಾನಿಯು ಧ್ವಂಸಮಾಡಲ್ಪಟ್ಟರೆ ದೇಶದ ಆಡಳಿತದಲ್ಲಿ ತೊಂದರೆ ಬರದಂತೆ ಮಾಡಿದ ಉಪಾಯವದು. ಇದರಿಂದ ಜಪಾನಿಯರಿಗೆ ಮುಂಬರುವ ಗಂಡಾಂತರವು ಕಟ್ಟಿಟ್ಟದ್ದೆಂದು ಖಚಿತವಾಗಿರುವುದೆಂದು ತಿಳಿಯಬಹುದು.

1944

ಮೈಸೂರು ದಸರಾ ಪ್ರದರ್ಶನದಲ್ಲಿ

ಸುವರ್ಣಪದಕ ಪಡೆದ

ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore.

ಪುಸ್ತಕ ವಿಮರ್ಶೆ

ಶ್ರೀ ಪುರಂದರದಾಸರು ಮತ್ತು ಅವರ ಕೀರ್ತನೆಗಳು

ಲೇಖಕ ಶ್ರೀ. ಜಿ. ವರದರಾಜರಾವ್ ಎಂ. ಎ. ಬೆಂಗಳೂರು, ಪ್ರಕಾಶಕರು, ಮಿತ್ರ ಸಂಘ ಬೆಂಗಳೂರು. ಕ್ರಾ. 1/8 x + 50 ಪುಟಗಳು. ಬೆಲೆ ಹತ್ತು ಆಣೆ.

ದಾಸಕೂಟಕ್ಕೆ ಕಿರೀಟಪ್ರಾಯರಾದ ಶ್ರೀ ಪುರಂದರ ದಾಸರ ಜೀವನ ಚರಿತ್ರೆ ಹಾಗೂ ಅವರ ಪದ ಕೀರ್ತನೆ ಸುಳಾದಿಗಳ ವಿಮರ್ಶಾತ್ಮಕ ಅಭ್ಯಾಸ ಮತ್ತು ಪ್ರಚಾರವು ಇತ್ತೀಚೆಗಾದರೂ ಸ್ವಲ್ಪ ಮಟ್ಟಿಗೆ ಕೈಗೊಳ್ಳಲ್ಪಟ್ಟಿದೆ ಎಂಬುದು ಸಂತೋಷದ ವಿಷಯ. ಈ ವರೇಗೆ ನಡೆದುದು ಅಲ್ಪ, ಇನ್ನೂ ನಡೆಯಬೇಕಾದುದು, ಹೇರಳವಿದೆ ಎಂಬುದಾಗಿ ಲೇಖಕರು "ಅರಿಕೆ" "ಪರಿಶಿಷ್ಟ"ಗಳಲ್ಲಿ ಸೂಚಿಸಿದುದು ಸಾಹಿತಿಗಳೂ, ವಿಮರ್ಶಕರೂ, ಸಂಗೀತಜ್ಞರೂ ಗಮನಿಸಬೇಕಾದ ವಿಷಯ. ಪುರಂದರ ದಾಸರ ಕೀರ್ತನೆಗಳು ಸ್ವರ ಪ್ರಸ್ತಾರ ಸಮೇತವಾಗಿ ತಮಿಳು ತೆಲುಗುಗಳಲ್ಲಿ ಸಂಗೀತ ಪುಸ್ತಕಗಳೂ ಪ್ರಚಾರವಾಗುತ್ತಿರುವಾಗ ಕನ್ನಡದಲ್ಲಿ ಈ ಮಾದರಿಯ ಪುಸ್ತಕಗಳಿಗೆ ಲೋಪವಿದೆ ಎಂಬುದು ಖೇದಕರ.

ಕನ್ನಡ ಸಾಹಿತ್ಯ ಸರಿಷತ್ತಿನವರು ೧೯೪೨ ರಲ್ಲಿ "ಪುರಂದರದಾಸರ ಕೀರ್ತನೆಗಳು" ಎಂಬ ಹೆಸರಿನಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಪ್ರಬಂಧವು ಕರ್ನಾಟಕದ ಹಿರಿ ಸಾಹಿತ್ಯಗಳಲ್ಲೊಬ್ಬರಾದ ಆಲೂರು ವೆಂಕಟರಾವ್ ಇವರ ಮುನ್ನುಡಿಯೊಡನೆ ಈ ಪುಸ್ತಕ ರೂಪದಲ್ಲಿ ಪ್ರಚಾರವಾಗಿದೆ. ಪುರಂದರದಾಸರಂಥ ಸೀಮಾ ಪುರುಷರು ಆಗಿನ ಕಾಲದ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಗಳ ಹಿನ್ನೆಲೆಯಲ್ಲಿ ಅವಲೋಕಿಸಿದರೆ ಕೇವಲ ಪದಹೇಳುವ ದಾಸರಲ್ಲ; ಕೇವಲ ಒಣ ಕವಿಗಳಲ್ಲ. ಅವರು "ನಿಜಕ್ಕೂ ಆಗಿನ ಕಾಲದ ಒಂದು ದೊಡ್ಡ ಜನಜಾಗ್ರತಿಯ ಮುಖಂಡರು" ಎಂಬುದನ್ನು ತಮಗಿದ್ದ ಸ್ವಲ್ಪ ಅವಕಾಶದಲ್ಲಿ ಸ್ಪಷ್ಟಪಡಿಸಿದ್ದಾರೆ. ಸಾಹಿತ್ಯದೃಷ್ಟಿಯಲ್ಲಿ ಪುರಂದರದಾಸರ ಕೀರ್ತನೆಗಳು ಜೀವನ ವಿಮರ್ಶೆಯೇ ಆಗಿವೆ ಎಂಬುದನ್ನು ಎತ್ತಿ ತೋರಿಸಿದ್ದಾರೆ. ಪುರಂದರದಾಸರು ರಹಸ್ಯಬೋಧೆಯಲ್ಲಿ (Mysticism)ದಲ್ಲಿ ಪ್ರವೀಣರು. ಅವರ ಆಧ್ಯಾತ್ಮಿಕ ದೃಷ್ಟಿಯ ಕುರಿತು ವಿವೇಚಿಸುವಾಗ ಅವರ ರಹಸ್ಯ ಭೋದೆ ಅಥವಾ ಈಶ್ವರ ಪ್ರಣೀದಾನದ ಕುರಿತು ಅವರ ಅನೇಕಾನೇಕ ರೂಪಕಾರ್ಥಕಗಳ ಪೈಕಿ ಕೆಲವನ್ನಾದರೂ ಉದಾಹರಣೆಗಾಗಿ ವಿವರಿಸಿ ತೋರಿಸಿದರೆ ಚೆನ್ನಾಗಿ ಆಗುತ್ತಿತ್ತು. ಒಟ್ಟಿನಲ್ಲಿ ಪುಸ್ತಕವು ಇಂದಿನ ವರೆಗೆ ಪುರಂದರದಾಸರ ಕೀರ್ತನೆಗಳ ಕುರಿತು ಪ್ರಸಿದ್ಧವಾಗಿರುವ ಎಲ್ಲ ಗ್ರಂಥಗಳನ್ನೂ ಲೇಖನಗಳನ್ನೂ ಓದಿ ಓಲೆ ಪ್ರತಿಗಳ ಹಾಗೂ ಹಸ್ತಾಕ್ಷರ ಪ್ರತಿಗಳ ಪರಿಚಯದಿಂದ ಸಾಹಿತ್ಯ ದೃಷ್ಟಿಯಲ್ಲಿ ಒಂದು ಯೋಗ್ಯ ವಿಮರ್ಶೆ. ಇಂಥ ಲೇಖಕರಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಇನ್ನೂ ಹೆಚ್ಚಿನ ಕಾರ್ಯಗಳನ್ನು ಈ ರೀತಿಯ ಕ್ಷೇತ್ರಗಳಲ್ಲಿ ನಡೆಯಿಸುವಂತೆ ಮಾಡುವುದು ಇಡೀ ಕರ್ನಾಟಕದವರ ಹೊಣೆಗಾರಿಕೆಯಾಗಿದೆ.

ಕಾಂಗ್ರೆಸ್ ಮತ್ತು ಕಮುನಿಸ್ಟರು:-

ಬರೆದವರು ಪಿ. ಸಿ. ಜೋಶಿ. ಕನ್ನಡ ಅನುವಾದದ ಪ್ರಕಾಶಕರು: ಜನತಾ ಸಾಹಿತ್ಯ, ೧೨೧ ಸುಲ್ತಾನಪೇಟೆ, ಬೆಂಗಳೂರು ನಗರ. ಪುಟ ಸಂಖ್ಯೆ ೬೪. ಬೆಲೆ ೬ ಆಣೆ.

ಈ ಪುಸ್ತಕವು ಕಟ್ಟುನಿಟ್ಟಿನ ಈಗೀನ ಕೋರ್ಟು ಕಚೇರಿಗಳಲ್ಲಿ ಮುದ್ದೆಯಾಲಿಯು ತನ್ನ ಮೇಲಿನ ಆರೋಪವನ್ನು ಮುಚ್ಚುಮರೆಮಾಡಲು ಮಂಡಿಸಿದ ಶಾತೀತ ಹೇಳಿಕೆಯಂತಿದೆ. ಕೊಮ್ಯುನಿಸ್ಟರನ್ನು ರಾಷ್ಟ್ರೀಯ ಸಂಸ್ಥೆಯಾದ ಕೊಂಗ್ರೆಸಿನಿಂದ ಹೊರ ಹಾಕಬೇಕೆಂಬ ಉದ್ದೇಶ ಕೆಲವೆಡೆಗಳಲ್ಲಿ ಪ್ರಕಟವಾದೊಡನೆ ಈ ಕೊಮ್ಯುನಿಸ್ಟ ಹೊತ್ತಿಗೆಯು ಹೊರಬಿದ್ದ ಕಾರಣ "ಕೆಲಮಂದಿ ಕೊಂಗ್ರೆಸಿನೊಳಗೆ ಒಡಕನ್ನುಂಟುಮಾಡಲು ಯತ್ನಿಸುವವರ" ಫಿರ್ಯಾದಿಗೆ ಇದೊಂದು ಪ್ರತಿಹೇಳಿಕೆ ಎಂದು ಹೇಳಬಹುದು. ಇದು ಮುದ್ದೆಯಾಲಿಯ ನಿವೇದನೆಯ ಮಟ್ಟವನ್ನು ಮಿಕ್ಕಿ ಕೆಲವೆಡೆ ತೀರ್ಪಿನ ರೂಪವನ್ನೂ ಮುಟ್ಟಿಯದೆ. ಅಲ್ಲಲ್ಲಿ ಗೂಢವಾದ ಗದರಿಕೆಯನ್ನು ಅಪಾದಿತನು ತನ್ನ ಹೇಳಿಕೆಯಲ್ಲಿರಿಸುವುದು ಅನುಚಿತವು. ಸಂದರ್ಭಕ್ಕೆ ಮಿಕ್ಕಿ ಸ್ವಪ್ರಶಂಸೆಯನ್ನು ಉದ್ಬುದ್ಧ ಬೆಳೆಸಿದುದು ಪಾರ್ಟಿಪ್ರಚಾರ ದೃಷ್ಟಿಯಿಂದ ಹಿತಕಾರವಾದರೂ ಓದುಗರ ಮೇಲೆ ಇದರ ಪರಿಣಾಮವು ಒಳಿತಾಗಲಾರದು.

ಈ ಪುಸ್ತಕದ ಮುಖ್ಯ ಉದ್ದೇಶವೇನೆಂದು ಸರಿಯಾಗಿ ತಿಳಿಯುವುದಿಲ್ಲ. ಇದು ಕಾಂಗ್ರೆಸ್ ಕೊಮ್ಯುನಿಸ್ಟ ಪಾರ್ಟಿಗಳ ಇತಿಹಾಸದ ಗಂಧವನ್ನರಿಯದ ಅನೇಕ ಮಂದಿ ಜನಸಾಮಾನ್ಯರ ಬಗ್ಗೆ ಬರೆದುದೆ ಅಥವಾ ಜೈಲಿನಿಂದ ಹೊರಬಿದ್ದ ಕೊಂಗ್ರೆಸಿನ ಮಂದಿಗಳ ಅವಗಾಹನೆಯ ಬಗ್ಗೆ ಬರೆದುದೊ ಎಂಬುದು ಅಸ್ಪಷ್ಟ. ಆದುದರಿಂದ ವಿಮರ್ಶೆಯಲ್ಲಿ ಈ ಕೊಮ್ಯುನಿಸ್ಟ ಪಾರ್ಟಿಯ ಹಿನ್ನೆಲೆಯ ವಿವರ ಅಗತ್ಯ.

ಕೊಮ್ಯುನಿಸ್ಟ ಪಾರ್ಟಿಯೊಂದು ಇಂಡಿಯಾದಲ್ಲಿತ್ತೆಂದು ಮುಕ್ಕಾಲು ಮೂರು ವೀಸ ಜನರಿಗೆ ಈಚೇಗೆ ಗೊತ್ತಾಗಿರಬೇಕು. ಅದು ನೆಲದಡಿಯಿಂದ ಮೇಲೆ ಬಂದುದು ಮೊನ್ನೆ ಮೊನ್ನೆಯೇ-ರಶಿಯಾ ಜರ್ಮನಿ ಯುದ್ಧದ ಕೆಲಕಾಲ ಬಳಿಕ. ಆ ತನಕ ಅದರ ಕಾರ್ಯಕರ್ತರೂ ಅವರ ಕಾರ್ಯಕಲಾಪಗಳೂ ಅಜ್ಞಾತವಾಗಿಯೇ ನಡೆಯುತ್ತಿದ್ದವು. ೧೯೧೯—೨೦ರಲ್ಲಿ ಕೊಂಗ್ರೆಸಿನ ಇಲ್ಲವೆ ಖಿಲಾಫತಿನ ಆಂದೋಲನದಲ್ಲಿ ಭಾಗವಹಿಸಿದವರೇ (ಯಾವ ರೀತಿಯ ಶಿಸ್ತಿನಲ್ಲಿ ಭಾಗವಹಿಸಿದವರೆಂದು ವಿದಿತವಾಗಿ ಹೇಳಿಲ್ಲ) ಅಥವಾ ವಿಧ್ವಂಸಕ ಕ್ರಾಂತಿಕಾರಿ ಪಂಗಡಗಳವರೇ ನಮ್ಮ ಪಾರ್ಟಿಯನ್ನು ಸ್ಥಾಪಿಸಿದವರು ಎಂದು ಈ ಪುಸ್ತಕದಲ್ಲಿರುವುದು. ಈ ಪಾರ್ಟಿಯ ಮೇಲೆ ಇರುವ ಸರಕಾರಿ ಬಹಿಷ್ಕಾರ ರಾಯಸವನ್ನು ಬ್ರಿಟಿಷ್ ಇಂಡಿಯಾ ಸರ್ಕಾರದವರು ಕ್ಷಿಪ್ರದಲ್ಲಿಯೇ ತೆಗೆಯಲಿಲ್ಲ. ರಾಷ್ಟ್ರೀಯ ಕೇಳಿಕೆಗಳಿಗೆ ಕೊಂಗ್ರೆಸಿನ ಒತ್ತಡವು ಜಾಸ್ತಿಯಾಗುವ ಸಂದರ್ಭ ಸರಿಯಾಗಿ ಈ ಪಾರ್ಟಿಯು ನ್ಯಾಯಸಮ್ಮತದ್ದೆಂದು ಉದ್ಧರಿಸಲಾಯಿತು. ಈ ಪಾರ್ಟಿ ಸ್ಫೂರ್ತಿ ನೀತಿರೀತಿಗಳೆಲ್ಲಾ ರಶಿಯಾದಿಂದಲೇ ಅಮದು ಆಗುತ್ತಿದ್ದುವೆಂದು ಪ್ರತೀತಿ. ಕಳೆದ ವರ್ಷದ ತನಕ ಇದು ಮೊಸ್ಕೊ ನಗರದ ಸ್ಟೆಲಿನರ ಕೇಂದ್ರ ಸಂಸ್ಥೆಗೆ ಸಂಬಂಧಪಟ್ಟುಕೊಂಡಿರಬಹುದು. ೧೯೪೧ರ ಅಕ್ಟೋಬರ ತನಕ ಇಂಡಿಯನ್ ಪಾರ್ಟಿಯವರ ಕಾರ್ಯಕ್ರಮದಲ್ಲಿ ಸಾಮ್ರಾಜ್ಯಶಾಹಿಯನ್ನು ತೀವ್ರವಾಗಿ ವಿರೋಧಿಸುವುದೇ ಮೊತ್ತ ಮೊದಲಿನದಾಗಿದ್ದಿತು. ಹೆಚ್ಚು ಕಡಿಮೆ ಸಾಮ್ರಾಜ್ಯಶಾಹಿಯ ವಿನಾಶವೇ ಈ ಪಾರ್ಟಿಯ ಅಸ್ತಿವಾರವಾಗಿದ್ದಿತು. ಕೊಮ್ಯುನಿಸ್ಟರು ಎಡೆಬಿಡದ ತೀವ್ರ ಸಾಮ್ರಾಜ್ಯಶಾಹಿ ವಿರೋಧದಿಂದ ಭಾರತದ ಸ್ವಾತಂತ್ರ್ಯವನ್ನು ಗಳಿಸುವದರಲ್ಲಿ ಅವರು ಅಚಲನಿಷ್ಠೆಯುಳ್ಳವರೆಂಬ ನಂಬಿಗೆಯು ಹುಟ್ಟಿ ಕೊಂಗ್ರೆಸ್ಸಿನ ವಾಮಪಕ್ಷದವರು ಅಂದರೆ ಕೊಂಗ್ರೆಸ್ ಸೊಶ್ಯಲಿಸ್ಟ ಮೊದಲಾದವರು ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಈ ಪಾರ್ಟಿಗೆ ಕೊಟ್ಟರು. ಆದರೆ ಅದೇ ವರ್ಷದ ನವಂಬರ ತಿಂಗಳೊಳಗಾಗಿ ಮೊಸ್ಕೊ ನಗರದಿಂದ ಹೊರಬಿದ್ದ ಹೊಸ ಘೋಷಣೆಯ ಒಳಮರ್ಮದ ಪರಿಚಯವು ಕೊಮ್ಯುನಿಸ್ಟ ಇಂಟರ್ ನೆಶನಲ್ (ಅಂತರಾಷ್ಟ್ರೀಯ ಕೊಮ್ಯುನಿಸ್ಟ ಸಂಸ್ಥೆ) ಈ ಸಂಸ್ಥೆ ಇತ್ತೀಚೆಗೆ ಸ್ಟೆಲಿನರು ವಿಸರ್ಜಿಸಿರುತ್ತಾರೆ. ಇದರ ಲಂಡನ್ ಶಾಖೆಯು ಮುಖಾಂತರ ಒಂದಲ್ಲ ಒಂದು ವಿಧಾನದಿಂದ ಹಿಂದುಸ್ಥಾನದ ಕೊಮ್ಯುನಿಸ್ಟರಿಗೆ ಉಂಟಾಗಿರಬೇಕು. ಇದರ ಪರಿಣಾಮವೆಂದರೆ ಕೊಮ್ಯುನಿಸ್ಟರ ಧೋರಣದಲ್ಲಿ ಹಟಾತ್ತಾಗಿ ಉಂಟಾದ ಅಸಹ್ಯ ಮಾರ್ಪಾಟುಗಳು— ಸಾಮ್ರಾಜ್ಯಶಾಹಿಯೊಡನಿರುವ ವಿರೋಧ ಹೋಗಿ "ಪ್ರಜಾ ಸಂಗ್ರಾಮ" (ಜನರ ಯುದ್ಧ) ಎಂಬ ಹೊಸ ಗದ್ದಲ. ಈ ಕರ್ಕಶತೆ ಉಂಟಾದ ರೀತಿಯು ಇನ್ನೂ ಚೆನ್ನಾಗಿ ಬಯಲಿಗೆ ಬಂದಿಲ್ಲ. ಅಂತೂ ಇಂಡಿಯಾದ ಕೊಮ್ಯುನಿಸ್ಟ ಪಾರ್ಟಿಯ ಮೇಲೆ ಇದ್ದ ಬಹಿಷ್ಕಾರವನ್ನು ಸರ್ಕಾರವು ಎತ್ತಿದ ಬಳಿಕ ಇಡೀ ದೇಶದಲ್ಲಿರುವ ಯಾವತ್ತು ಮಜೂರ್ ಕಿಸಾನ್ ಸಂಘಗಳನ್ನು ಅಷ್ಟೆ ಅಲ್ಲದೆ ಜಾತೀಯ ಸಂಸ್ಥೆಯಾದ ಮುಸ್ಲಿಂಲೀಗನ್ನು ರಾಷ್ಟ್ರೀಯ ಸಂಸ್ಥೆಯಾದ ಕೊಂಗ್ರೆಸನ್ನೂ ತಮ್ಮ ಹಸ್ತಗತ ಮಾಡಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯು ಕೊಮ್ಯುನಿಸ್ಟರಲ್ಲಿ ಪ್ರಜ್ವಲಿತವಾಗಿದ್ದಿತು. ಇದಕ್ಕಾಗಿ ಅವರು ಭಗೀರಥ ಪ್ರಯತ್ನ ಮಾಡಿದ್ದಾರೆ. ಅನೇಕ ರೀತಿಗಳಿಂದ ಚಾಣಕ್ಯಮಾಡಿದ್ದಾರೆ. ಇದರ ಪರಿಣಾಮವಾಗಿ ಅಖಿಲಭಾರತದ ಕಿಸಾನ್ ಸಭೆಯ ಮೂಲ ಸಂಸ್ಥಾಪಕರಲ್ಲಿ ಪ್ರತಿಭಾವಂತರಾದ ಮೂವರು—ಆಚಾರ್ಯ ರಂಗ, ರಂಗರವರ ಧರ್ಮಪತ್ನಿ ಮತ್ತು ಇಂದುಲಾಲ್ ಯಾಜ್ನಿಕ್—ಇವರು ಕಿಸಾನ್ ಸಭೆಯನ್ನು ಬಿಟ್ಟುದು ಜನಜನಿತವಾಗಿದೆ. ಇಂದುಲಾಲರ ಮತ್ತು ಆಚಾರ್ಯ ರಂಗರ ಹೇಳಿಕೆಗಳನ್ನು ಓದಿದರೆ ಇಂಡಿಯಾದ ಕೊಮ್ಯುನಿಸ್ಟ ಪಾರ್ಟಿಯು ಅರಿತೊ ಅರಿಯದೆಯೊ ತೊಟ್ಟ ಭಾರತ ರಾಷ್ಟ್ರದ ಹಾಗೂ ಕಿಸಾನರ ದೃಷ್ಟಿಯಿಂದ ಅತ್ಯಂತ ದುರಂತಮಯವಾದ ಧೋರಣೆಯು ಒಡೆದು ಕಾಣಿಸುತ್ತಿದೆ. ಈ ಪ್ರಭೃತಿಗಳ ಉಲ್ಲೇಖದ ಉದ್ಧಾರನನ್ನು ಸಂಕ್ಷಿಪ್ತವಾಗಿ ಕೆಳಗೆ ಕೊಟ್ಟಿರುವುದು.

"ಹಿಂದುಸ್ಥಾನದ ಕೊಮ್ಯುನಿಸ್ಟ ಪಾರ್ಟಿಯು ರಶ್ಯದ ಕೋಮಿಟರ್ನಿನ ಒಂದು ಕೇವಲ ಕೈಗೊಂಬೆ. ಹೀಗಾಗಿ ಇಂಡಿಯನ್ ಕೊಮ್ಯುನಿಸ್ಟ ಪಾರ್ಟಿಯು ಭಾರತದ ಮತ್ತು ಭಾರತದ ಪ್ರಜಾಕೋಟಿಯ ಹಿತವನ್ನೂ ಅದರ ಸಬಂಧ ತಮ್ಮ ವಿದಿತವಿರುವ ಕರ್ತವ್ಯವನ್ನು ಮರೆತು, ಈ ತನಕ ತಮ್ಮದೆ ಆಗಿರುವ ಸಾಮ್ರಾಜ್ಯಶಾಹಿ ವಿರೋಧದ ಉರಿಗೆ ನೀರು ಮಣ್ಣೆರಚಿ ಒಮ್ಮೆಗೆ ನಂದಿಸಲು ಅಪರೋಕ್ಷ ಪ್ರಯತ್ನಪಟ್ಟರೆಂದು ಈ ಬಗೆಗೆ ಇರುವ ತನ್ನ ಉಜ್ವಲ ಪ್ರಚಾರವನ್ನು ಬಿಟ್ಟು ತಣ್ಣಗೆ ಧೃತಿ ಮತಿಗೆಟ್ಟ- ಸಾಮ್ರಾಜ್ಯಶಾಹಿ ಮತ್ತು ಭಂಡವಾಳ ಶಾಹಿಗೆ ಹಿತಕರವಾದ ಭಾರತಕ್ಕೆ ದ್ರೋಹಕರವಾದ ಧೋರಣವನ್ನು ಮುಂದೊತ್ತಿದೆ." ಈ ಆರೋಪವು ಈಗ ಜೈಲಿನಿಂದ ಬಿಡುಗಡೆಯಾದ ಹತಾಶ ಕೊಂಗ್ರೆಸಿಗರದಲ್ಲ. ಕೊಮ್ಯುನಿಸ್ಟರಿಗೆ ಸಂಪೂರ್ಣ ಸಹಕಾರ ಸಹಾನುಭೂತಿಯನ್ನಿತ್ತ ವಾಮ ಪಕ್ಷದವರು ೧೯೪೨ನೇ ಇಸವಿಯ ಆಗೋಸ್ಟು ಠರಾವಿಗೆ ಮುಂಚಿತವಾಗಿಯೇ ತಮ್ಮ ಹೃದಯ ಕರಗಿ ಆಡಿದ ಮಾತುಗಳಿವು.

ಆಗೋಸ್ಟಗಿಂತ ಮುಂಚಿತವಾಗಿಯೇ ಕೊಂಗ್ರೆಸಿಗರಲ್ಲಿಯೂ ಕೊಮ್ಯುನಿಸ್ಟರಲ್ಲಿಯೂ ಭೇದಾಭೇದಗಳಿದ್ದುವು. ಈ ತನಕ ನಡೆವ ಯಾವತ್ತು ರಾಷ್ಟ್ರೀಯ ಚಳವಳದಲ್ಲಿ ಒಂದಲ್ಲ ಒಂದು ನೆಪದಿಂದ ಹಿಂದುಳಿದ ಕೊಮ್ಯುನಿಸ್ಟರು ಆಗೋಸ್ಟು ೮ರ ಠರಾವಿನಲ್ಲಿ ಸೂಚಿಸಲಾದ ಅಹಿಂಸಾತ್ಮಕ ಕ್ರಾಂತಿಯಲ್ಲಿ ತ್ಯಾಗ ಸಂಕಷ್ಟಗಳಿಗೆ ಸಿದ್ಧರಿರಲಿಲ್ಲವೆಂಬುದಾಗಿ ಆ ಮೊದಲೇ ಕೊಂಗ್ರೆಸ್ಸಿನ ಸಾಮಾನ್ಯ ಸದಸ್ಯರಿಗೂ ಗೊತ್ತಿದ್ದ ವಿಷಯ. ಸೋವಿಯಟ್ ರಶ್ಯದ, ಸ್ಫೂರ್ತಿ ಆಜ್ಞೆಗಳಿಗನುಸಾರವಾಗಿ ರಾಷ್ಟ್ರದ ಹಿತವನ್ನು ಮೂಲೆಗೊತ್ತುವ ಅಂತರ್‌ರಾಷ್ಟ್ರೀಯ ಮಜೂರ ಸಮುದಾಯಕ್ಕೆ ಮಾತ್ರ ತಮ್ಮ ಪಿತೃಭಕ್ತಿಯನ್ನು ಮೀಸಲಾಗಿಟ್ಟು ತಾಯ್ನಾಡಿನ ಒಲವು ನಿಲುವುಗಳಿಗೆ ತಿಲಾಂಜಲಿಯನ್ನು ಕೊಡಲು ಸಿದ್ಧರಿದ್ದ ಕೊಮ್ಯುನಿಸ್ಟ ಪಾರ್ಟಿಯವರು ಇತರ ರಾಷ್ಟ್ರೀಯ ಪಾರ್ಟಿಗಳೊಡನೆ ಸಮಕೂಟವಾಗುವುದು ಅಶಕ್ಯವೆಂದು ಹಲವು ಕೊಂಗ್ರೆಸಿಗರ—ಏಕೆ—ಭಾರತದ ರಾಜಕೀಯದ ಅಲ್ಪಸ್ವಲ್ಪ ಪರಿಚಯವಿದ್ದವರ ಅಭಿಪ್ರಾಯವಾಗಿದ್ದಿತು. ೧೯೪೨-೪೩ ಈ ವರ್ಷಗಳು ಅಲ್ಲೋಲ ಕಲ್ಲೋಲವಾಗಿದ್ದುವು. ಕೊಂಗ್ರೆಸ್ ಸಂಸ್ಥೆಯೇ ಇಲ್ಲವಾಯಿತು. ಅವರ ಪರವಾಗಿ ಮಾತನಾಡುವರಿಲ್ಲದಾಗ ಇತರರು ಬೇಕಾದ ರೀತಿಯಲ್ಲಿ ನಾಜೂಕಿನಿಂದ ಪ್ರಚಾರ ನಡೆಸಿದ್ದಾರೆ.

ಈಗ ಅನೇಕ ಮಂದಿ ಜೈಲಿನಿಂದ ಹಿಂತಿರುಗಿ ಬಂದಿದ್ದಾರೆ. ಆದರೆ ಗಾಂಧೀಜೀಯ ನೇತೃತ್ವವು ಇರುವ ತನಕ ಈ ಪುಸ್ತಕದಲ್ಲಿ ಅಂದಂತೆ ಅವರು "ಅಸಹಾಯರಲ್ಲ". ತಡೆಯಾದ ಕಾರ್ಯಕ್ರಮವನ್ನು ತೀವ್ರದಿಂದ ಮುಂದೊತ್ತಲು ನೋಡುತ್ತಾರೆ. ಆ ಸಮಯ ಅವರಿಗೆ ಘರ್ಷಣೆ ಬೇಕಾಗಿಲ್ಲ. ಆದುದರಿಂದ ಆಗೋಸ್ಟು ೮ರ ಕೊಂಗ್ರೆಸಿನ ಠರಾವಿನ ಮೂಲತತ್ವಕ್ಕೆ ಕತ್ತಿ ಇತ್ತವರೊಡನೆ ಕೂಡುವುದು ಅಯೋಗ್ಯವೆಂದೇ ಅವರ ನಿರ್ಧಾರ. ಅಷ್ಟಕ್ಕೆ ಪಿ. ಸಿ. ಜೋಶಿ ಮತ್ತು ಪಂಗಡದ ಕೊಮ್ಯುನಿಸ್ಟರು (ಅನೇಕ ಕೊಮ್ಯುನಿಸ್ಟ ಪ್ರಭೃತಿಗಳು ಈ ಪಂಗಡದ ಹೊರಗಿರುವರೆಂಬುದನ್ನು ತಿಳಿದುಕೊಳ್ಳಬೇಕು) ಏಕೆ ಈ ಹೊತ್ತಿಗೆಯನ್ನು ಪ್ರಕಟಮಾಡಬೇಕು. ನಿಜವಾಗಿಯೂ ನೋಡಿದರೆ ಇಂದು ಕೊಂಗ್ರೆಸಿನ ಕೆಲಮಂದಿ ಹಾಗೂ ಇತರರು ಇಂಡಿಯಾದ ಕೊಮ್ಯುನಿಸ್ಟ ಪಾರ್ಟಿಯ ಮೇಲೆ ಬಹಿರಂಗವಾಗಿ ಹೊರಿಸಿದ ಅಪಾದನೆಗಳ ಸುಳಿವೇ ಈ ಪುಸ್ತಕದಲ್ಲಿ ಕಾಣಲೊಲ್ಲದು. ಈ ಪುಸ್ತಕದಲ್ಲಿ ಹೇಳುವಂತೆ "ಕೊಂಗ್ರೆಸು ಕೊಮ್ಯುನಿಸ್ಟ ಬಂಧು ಸಂಸ್ಥೆ. ಅದರ ಮುಖಂಡರು ಅವರ ತಾತರು; ಕೊಂಗ್ರೆಸಿನ ಹಿಂಬಾಲಕರು ಅವರ ಸಹೋದ್ಯೋಗಿ ಸೋದರರು" ಅಂದ ಮೇಲೆ ಈ ಕುಟುಂಬ ಸಂಬಂಧವನ್ನು ಕಲ್ಪಿಸಿದ ಕೊಮ್ಯುನಿಸ್ಟರು ಇಷ್ಟೆಲ್ಲಾ ಕೊಳಕು ಬಟ್ಟೆಯನ್ನು ಬಹಿರಂಗವಾಗಿ ತೊಳೆದುದು ಅಯುಕ್ತವು.

(೧೦ನೇ ಪುಟಕ್ಕೆ ಮುಂದುವರಿದಿದೆ)

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39,555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,-065 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

[ಸ್ವಿಟ್ಜರ್ಲೆಂಡಿನ ವಿಜ್ಞಾನಿಗಳೆಂದರೆ ವಿಶ್ವಮಾನ್ಯರು. ಜೆ. ಎಚ್. ಫೆಬರ್ ಎಂಬವರು ಅಲ್ಲಿನ ಪ್ರಖ್ಯಾತ ಪ್ರಕೃತಿಶಾಸ್ತ್ರ ಪರಿಶೋಧಕರು. ಕ್ರಿಮಿಕೀಟ ಜೀವನ ರಹಸ್ಯವನ್ನು ಅಭ್ಯಾಸಿಸಲು ಜೀವಮಾನವನ್ನು ವ್ಯಯಿಸಿದ ಇನ್ನೊಬ್ಬ ಅಗ್ರಗಣ್ಯರೆಂದರೆ ಆಗಸ್ಟ್ ಫೊರೆಲ್ ಅವರು. ಈ ಇರ್ವ ವಿಜ್ಞಾನಿಗಳೂ ಜೀವಪ್ರಾಣಿಗಳ ಸ್ವಭಾವಾಭ್ಯಾಸ, ಜೀವನ ರೀತಿನೀತಿಗಳನ್ನು ಆಳವಾಗಿ ಹಲವು ವರ್ಷಗಳ ದೀರ್ಘ ಪರಿಶೋಧನೆಯಿಂದ ಅವಲೋಕಿಸಿ ತಮ್ಮ ಅನುಭವವನ್ನು ಬರೆದಿಟ್ಟಿರುತ್ತಾರೆ. ಪ್ರಾಣಿಸ್ವಭಾವದಲ್ಲಿ ಅತ್ಯಮೋಘ ಪರಿಪೂರ್ಣತೆಯನ್ನು ಹೊಂದಿದ ಯಾಂತ್ರಿಕ ಜೀವನ ಕ್ರಿಯಾ ಸ್ವರೂಪವನ್ನು ವಿಜ್ಞಾನಿ ಫೇಬರರು ಕಂಡು ಅದು ಪರಮಾತ್ಮ ಸೃಷ್ಟಿಯ ಚಮತ್ಕಾರವೆಂದು ನಂಬಿರುವವರು. ಆದರೆ ಅದಕ್ಕೆ ವಿರುದ್ಧ ಅಭಿಪ್ರಾಯವನ್ನು ದೈವೀಕ ಶಕ್ತಿಗಿಂತಲೂ ಭೌತಿಕವಾದಿಗಳಾದ (ಅಂದರೆ ಇವರು ಪ್ರಾಣಿ ಚಟುವಟಿಕೆಗಳು ಸಂದರ್ಭಕ್ಕನುಗುಣವಾಗಿ ಸೂಕ್ಷ್ಮ ವಿವೇಕವನ್ನು ತಾಳಬಲ್ಲವೆಂಬ ಭಾವನೆಯವರು.) ಆಗಸ್ಟ್ ಫೊರೆಲ್‌ರು ಕ್ರಿಮಿಕೀಟವರ್ಗಗಳು ಬರೀ ಒಂದು ಯಾಂತ್ರಿಕ ಪ್ರಕೃತೀಯವಾದ ಮನೋಕ್ರಿಯೆಯಿಂದ ಮಾತ್ರ ಕೂಡಿದವಾಗಿರದೆ ಅವುಗಳಲ್ಲಿ ಅದಕ್ಕೆ ವಿರುದ್ಧವಾದ ವಿಚಾರ ವಿವೇಚನೆಗಳಿಗೂ ಎಡೆಯುಂಟೆಂದು ತಮ್ಮ ಸ್ವಂತ ಪ್ರಯೋಗದ ಅನುಭವದಿಂದ ಬರೆದಿಟ್ಟಿರುವರು.

ಮಾನವಕೋಟಿಯೊಳಗೆ ನಡೆಯುತ್ತಿರುವ ಭಯಂಕರ ಹತ್ಯಾಕಾಂಡದ ಮನೋವೃತ್ತಿಗೂ ಸೃಷ್ಟಿಯ ಪ್ರಾಣಿವರ್ಗದಲ್ಲಿ ಅತೀ ಸೂಕ್ಷ್ಮವಾದರೂ ಅತ್ಯಂತ ಚತುರತೆಯ ಜ್ಞಾನವೈಶಿಷ್ಟ್ಯದಿಂದೊಡಗೂಡಿರುವ ಇರುವೆ ವರ್ಗದ ಕೀಟಗಳ ಮನೋವೃತ್ತಿಗೂ ನಿಕಟಸಂಬಂಧವೊಂದು ಕಾಣುತ್ತಿರುವುದನ್ನು ದಿವಂಗತ ರೊಮೈನ್ ರೊಲಾಂಡ್ (ರೋಲಾ?) ಅವರು ತಮ್ಮೊಂದು ಗ್ರಂಥದಲ್ಲಿ ಡಾ. ಫೊರೆಲ್ ಅವರ ಗ್ರಂಥದಿಂದ ಉಲ್ಲೇಖಿಸಿದ ಭಾಗದಿಂದ ತುಲನಾತ್ಮಕವಾಗಿ ವಿಮರ್ಶಿಸಿರುವರು. ಇರುವೆಗಳ ಜೀವನ ಕ್ರಿಯವನ್ನು ಈ ಕೆಳಗಿನ ಲೇಖದಲ್ಲಿ ಸಂಕ್ಷೇಪಿಸಲಾಗಿದೆ.]

ಇರುವೆಗಳೂ ಯುದ್ಧ ಶಾಂತಿ ಮಾಡುವು

ಕೀಟ ಶಾಸ್ತ್ರಜ್ಞರ ವಿಚಿತ್ರ ಶೋಧೆ

ಮನುಷ್ಯ-ಇರುವೆಗಳ ಹತ್ತಿರ ಸಂಬಂಧ

ಮಿಲಿಯಾಂತರ ವರ್ಷಗಳ ಹಿಂದೆ ಭೂಲೋಕದಲ್ಲಿ ಅತ್ಯಗಾಧ ಪರಿಮಾಣದ ಪ್ರಾಣಿವರ್ಗಗಳು ನೆಲ, ಜಲಗಳಲ್ಲಿ ವಾಸಿಸಿಕೊಂಡಿದ್ದುವೆಂಬುದಕ್ಕೆ ಅವುಗಳಿಗೆ ಸಂಬಂಧಿಸಿದ ಮೂಳೆ, ಅಸ್ತಿಪಂಜರಗಳಿಂದ ವಿಜ್ಞಾನಿಗಳಿಗೆ ಸಾಕ್ಷ್ಯ ದೊರಕಿದೆ. ಈಗಲೂ ಆನೆ, ಜಿರಾಫೆಗಳೂ, ಮೊಸಳೆ, ತಿಮಿಂಗಿಲಗಳೂ ಮನುಷ್ಯನ ಪರಿಮಾಣಕ್ಕೆ ಎಷ್ಟೋ ಮಿಕ್ಕಿದ ರೂಪಾಕೃತಿಯವುಗಳೆಂದು ಸಾಮಾನ್ಯವಾಗಿ ತಿಳಿದಿರುವ ವಿಷಯ. ಹಾಗೆಯೇ ಜೇಡರಹುಳ, ಪತಂಗ, ಜೇಳು ಮಿಡಿತೆಗಳೊಂದಿಗೆ ಹೋಲಿಸಿದಾಗ ಇರುವೆಗಳು ಅತೀ ಚಿಕ್ಕ ಪರಿಮಾಣದ ಜೀವಾದಿಗಳು. ಆದರೆ ಈ ಸೂಕ್ಷ್ಮ ಕೀಟಗಳಾದ ಇರುವೆಗಳ ಮಿದುಳು ರಚನೆಯು ಅದ್ವಿತೀಯ ರಚನಾ ಸೃಷ್ಟಿಯದಿದ್ದು ಎಲ್ಲಾ ಕ್ರಿಮಿಕೀಟಗಳ ಮಿದುಳನ್ನು ಮಿಕ್ಕಿಸುವ ಸಾಮರ್ಥ್ಯದಿಂದ ಒಳಗೊಂಡಿವೆ ಎಂದು ಫೊರೆಲ್‌ರ ಹೇಳಿಕೆ. ಇತರ ದೊಡ್ಡ ಪ್ರಮಾಣದ ಆಕೃತಿಯ ಪ್ರಾಣಿಗಳ ವೈಯುಕ್ತೀಕ ಬುದ್ಧಿಶಕ್ತಿಯ ಸಾಮಾನ್ಯ ಮಟ್ಟಕ್ಕೆ ಅವುಗಳ ಮಿದುಳು ಬರಲಾರದಾದರೂ ಅವುಗಳ ಸಮಾಜ ಸ್ವಭಾವ ವಿಶೇಷದಲ್ಲಿ ಅವು ಇತರ ಎಲ್ಲಾ ಪ್ರಾಣಿಗಳನ್ನೂ (ಮನುಷ್ಯನ ಸಮೇತವಾಗಿ) ಮಿಗುತ್ತದೆ. ಆದುದರಿಂದ ಇರುವೆಗಳ ಸಮಾಜ ಜೀವನವು ಅತೀ ಮುಂದರಿದ ಮಾನವ ನಾಗರೀಕ ಸಮಾಜದ ಸರಿಮಟ್ಟವನ್ನು ಹೋಲುವುದು ಮತ್ತು ಅವುಗಳ ಸಮಾಜಗಳು ಪ್ರಜಾಪ್ರಭುತ್ವ ನೀತಿಯ ಮೇಲೆ ಆಧಾರವಾಗಿ ನಡೆಸಲ್ಪಡುತ್ತಿವೆಂದಾಗ ನಮ್ಮಲ್ಲಿ ಕೌತುಕವಾಗುವುದಾದರೂ ಅದು ಸಹಜವಾಗಿ ತೋರಿಬಂದ ವಿಷಯ. ಇದಕ್ಕಾಗಿ ನಾವು ಅವುಗಳ ದಿನನಿತ್ಯದ ಜೀವನ ಕ್ರಮವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಬೇಕು.

ಇರುವೆಯ ಹುತ್ತಗಳನ್ನು ನಾವು ನೋಡುತ್ತಿರುತ್ತೇವೆ. (ಇವುಗಳಲ್ಲಿ ಕೆಲವು ವೇಳೆ ಹಾವುಗಳು ಮನೆಮಾಡಿಕೊಂಡಿರುತ್ತವಾದರೂ ನಿಜವಾಗಿ ಹಾವುಗಳಿಗೆ ಅಂತಹ ಮಣ್ಣಿನ ಗೋಪುರಗಳನ್ನು ಕಟ್ಟಬರುವುದಿಲ್ಲ.) ಈ ಮಣ್ಣಗೋಪುರಗಳು ಮಾತ್ರ ಇರುವೆಗಳ ರಾಜ್ಯವಲ್ಲ. ಅವುಗಳಿಗೂ ವಿಶಾಲವಾದ ವಸಾಹತುಗಳೂ, ಆಡಳಿತ ರಾಜ್ಯಗಳೂ, ಮಾಂಡಲೀಕ ಪ್ರದೇಶಗಳೂ ಇರುತ್ತವೆ. ಅವು ತಮ್ಮ ಸ್ವಂತ ಸೈನ್ಯ ಶಿಬಿರಗಳನ್ನೂ, ಬಂದರು ಸ್ಥಳಗಳನ್ನೂ ಆಹಾರ ಪೂರೈಕೆಯ ಕೇಂದ್ರಗಳನ್ನೂ ಸ್ಥಾಪಿಸಿಕೊಳ್ಳುತ್ತವೆ.

ಇಷ್ಟೊಂದು ಸ್ಥಾನ ಕೇಂದ್ರಗಳಿಂದ ಕೂಡಿರುವ ಇರುವೆಗಳ ಸಾಮ್ರಾಜ್ಯವು ಒಂದು ವಿಶಾಲವಾದ ಹುಲ್ಲುಗಾವಲು ಪ್ರದೇಶ, ಇಲ್ಲವೆ ಕೆಲವು ದೊಡ್ಡ ಮರಗಳು, ಇಲ್ಲವೆ ಅಗಲಕ್ಕೆ ಹರಡಿರುವ ಪೊದರುಗಳಾಗಿರುತ್ತವೆ. ಅವುಗಳು ದಾಳಿ ಮಾಡುವ, ಆಕ್ರಮಣ ಮಾಡುವ, ಸುಲಿಗೆ ಲೂಟಿಗಳನ್ನು ಮಾಡುವ ಪ್ರದೇಶಗಳು ನೆಲದಡಿಯ ಭಾಗವೂ, ಗೆದ್ದಲು ಹಿಡಿದ ಮರಗಳೂ ಆಗಿರುತ್ತವೆ. ಕೆಲವು ವೃಕ್ಷಕ್ರಿಮಿಗಳನ್ನು ಇರುವೆಗಳು ಹಿಡಿದು ತಮ್ಮ ಗೋಪುರ ಗೂಡುಗಳಲ್ಲಿ ಮನೆಕೆಲಸಕ್ಕೆ ಇಟ್ಟುಕೊಳ್ಳುತ್ತವೆ. ಅವುಗಳ ರಾಜಧಾನಿಯು ಪ್ರತ್ಯೇಕವಾದೊಂದು ಪ್ರದೇಶದಲ್ಲಿದ್ದು ಆಸುಪಾಸಿನ ತಮ್ಮ ವಸಾಹತುಗಳಿಗೆ ಸಂಬಂಧವುಳ್ಳವುಗಳಾಗಿರುತ್ತವೆ. ನೆಲದ ಮೇಲೆ ಇಲ್ಲವೆ ಕೆಳಭಾಗದಲ್ಲಿನ ಉದ್ದವಾದ 'ರಾಜ ರಸ್ತೆ'ಗಳು ರಾಜಧಾನಿಗೆ ತಲ್ಪುವಂತೆ ರಚಿಸಲ್ಪಡುತ್ತವೆ.

ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಈ ಇರುವೆ ಸಮಾಜದಲ್ಲಿ ಕ್ರಮೇಣ ಒಂದೊಂದರೊಳಗೆ ಕಲಹಕ್ಕಾರಂಭವಾಗುತ್ತದೆ. ರಾಜ್ಯದ ಗಡಿಗಳಿಗಾಗಿಯೇ ಜಗಳಗಳು ಉಂಟಾಗುವುವು. ಕೆಲವು ಮರಗಳಲ್ಲಿ ಜೇನಿನಂತೆ ಒಂದು ಸಿಹಿ ಆಹಾರ ದ್ರವವನ್ನು ತಯಾರಿಸುವ ಹೇನಿನಂತಹ ಒಂದು ತರದ ಕೀಟಗಳಿವೆ. ಇವುಗಳಿಗೆ 'ಇರುವೆಯ ದನ'ಗಳೆಂದು ಹೆಸರಿದೆ. ಕಾರಣ ಇರುವೆಗಳು ಇವುಗಳನ್ನು ಬಲಾತ್ಕಾರದಿಂದ ತಮ್ಮ ಗೂಡುಗಳಿಗೆ ಒಯ್ದಿಟ್ಟುಕೊಂಡು ಅವುಗಳು ತಯಾರಿಸುವ ಆ ಸಿಹಿ ಪದಾರ್ಥವನ್ನು ತಾವು ತಿನ್ನುವವು. ಈ 'ದನ'ಗಳನ್ನು ಒಂದು ಮರದಿಂದ ವ್ಯಾಪಡಿಸಿಕೊಳ್ಳಲು ಒಂದು ಇರುವೆ ಪಂಗಡವು ದೊಡ್ಡ ಸೈನ್ಯದೊಂದಿಗೆ ದಾಳಿಮಾಡಲು ಬಂದಾಗ ಆಗಲೇ ಅಲ್ಲಿ ತಳವೂರಿದ್ದ ಇರುವೆ ವರ್ಗವು ಆಕ್ರಮಿಸುವ ಶತ್ರುವನ್ನು ಇದಿರಿಸುವುದು. ಕೆಲವು ಜಾತಿಯ ಇರುವೆಗಳು ಈ ರೀತಿ ಆಕ್ರಮಣ ಶೀಲಸ್ವಭಾವದಿಂದಲೇ ಸ್ಫೂರ್ತಿಗೊಂಡು ಸುಲಿಗೆ, ಕೊಳ್ಳೆ ಊಟ ಮಾಡಿಯೇ ಜೀವಿಸುತ್ತಿರುತ್ತವೆ. ಕೆಲವು ಸಲ ಕೆಲವು ಮರಗಳ ನೆಲದೊಳಗಿನ ಬೇರು- ಆಹಾರಕ್ಕಾಗಿ ಭಯಂಕರ ಕದನಗಳಾಗುತ್ತವೆ. ವಿಚಿತ್ರವೆಂಬಂತೆ ಈ ತರದ ಇರುವೆಗಳು ತಮಗಿಂತ ಶಕ್ತಿಹೀನರಾಗಿರುವ ಬೇರೊಂದು ಜಾತಿಯ ಇರುವೆಗಳನ್ನು-ಅವು ಮೊಟ್ಟೆ ಸ್ಥಿತಿಯಲ್ಲಿರುವಾಗಲೇ-ತಮ್ಮ ಗೂಡಿನಲ್ಲಿ ಹಿಂದಣ ಕಾಲದ ಗುಲಾಮರಂತೆ ಕೆಲಸಕ್ಕೆ ಹಚ್ಚಿ ಅದರಿಂದ ದುಡಿಸಿ ತಿನ್ನುತ್ತವೆ.

ಹೀಗೆ ಇರುವೆಗಳಲ್ಲಿ ಯುದ್ಧವೆಂಬುದು ಸಾಮಾನ್ಯ ದಿನನಿತ್ಯದ ವಿಷಯ. ಕೆಲವು ಇರುವೆಗಳ ಸೈನಿಕ ವರ್ಗವು ಮಜೂರ ವರ್ಗದಿಂದ ಸ್ಪಷ್ಟವಾಗಿ ಬೇರೆಯಾಗಿರುತ್ತದೆ. ಸೈನಿಕನು ಗೃಹಕೃತ್ಯದಲ್ಲಿ ಯಾವ ಭಾಗವನ್ನೂ ವಹಿಸುವುದಿಲ್ಲ. ತನ್ನ ಶಿಬಿರದಲ್ಲಿ ಆಲಸ್ಯದಿಂದ ಕಾಲಹರಣ ಮಾಡುವುದೇ ಅವನ ಅಭ್ಯಾಸ. ಆದರೆ ಯುದ್ಧ ಕಾಲದಲ್ಲಿ ಜೀವದಾಸೆ ತೊರೆದು ಇವರು ಕಾದಾಡುತ್ತಾರೆ. ಇವರಲ್ಲಿ ಸೇನಾಪತಿಗಳೆಂದಿಲ್ಲ. ಇದ್ದರೂ ಸಮಯಕ್ಕೆ ತಕ್ಕಂತೆ-ತಾತ್ಕಾಲಿಕ ನ್ಯಾಯಕತ್ವ. ನೂರರಿಂದ ಇನ್ನೂರು ಸಾವಿರ ಸೈನ್ಯಗಳು ಒಂದೊಂದು ದಳದಲ್ಲಿರುತ್ತವೆ. ಸೈನ್ಯವು ಮುಂದರಿಯುತ್ತಿರುವಾಗ ಪಕ್ಕನೆ ದಿಗ್ಭ್ರಾಂತವಾದಂತೆ ನಿಂತು ಬಿಡುತ್ತದೆ. ಕೆಲವು ಕ್ಷಣಗಳ ನಂತರ ಅವುಗಳ ಮಧ್ಯದಿಂದೊಂದು ಇರುವೆ ನಾಯಕನು ಮುಂದೆ ಬಂದು ಸೈನಿಕರಿಗೆಲ್ಲಾ ತಲೆಯಮೇಲೆ ಒಂದೊಂದು ಏಟು ಕೊಟ್ಟು ತಾನು ಮುಂದರಿಯುತ್ತಾನೆ. ಆಗ ಪುನಃ ಸೈನ್ಯವು ಕದಲಲಾರಂಭವಾಗುವುದು.

ಇರುವೆಗಳು ಯುದ್ಧ ಮಾಡುವ ರೀತಿಯೂ ಈಗಿನ ಯುದ್ಧ ಚತುರತೆಯಿಂದಲೇ ಕೂಡಿರುತ್ತದೆ. ಚಿಕ್ಕ ಚಿಕ್ಕ ಉಪ ದಳಗಳಾಗಿ ಅವುಗಳು ಮುಂದರಿಯುತ್ತವೆ. ಒಬ್ಬೊಬ್ಬ ಮುಖ್ಯಸ್ಥನು ಮುಂದಿನ ಮತ್ತು ಹಿಂದಿನ ದಳಗಳೊಳಗೆ ಸಮೀಪದ ವ್ಯವಹಾರ ಸಂಬಂಧವನ್ನು ಕಲ್ಪಿಸಿಕೊಡುತ್ತಾನೆ. ಇರುವೆಗಳು ಇದಿರಿದಿರಾಗಿ ಅಭಿಯೋಗ ನಡೆಸುವುದಿಲ್ಲ. ಶತ್ರುಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ನಂತರ ಅವರ ಪಕ್ಕದ ಭಾಗಗಳ ಮೇಲೆ ಒಂದೇ ಸವನೆ ದಾಳಿ ನಡೆಸುವರು.

(೧೧ನೇ ಪುಟಕ್ಕೆ ಮುಂದುವರಿದಿದೆ.)

ಸ್ವದೇಶಾಭಿಮಾನಿ

ತಾರೀಕು 19—1—1945

ಸದ್ಯ ಪರಿಸ್ಥಿತಿ

ಕೊಮ್ಯುನಿಸಂ ಎಂಬುದು ಐರೋಪ್ಯ ಭಾಷಾ ಸಂಪರ್ಕದ ಶಬ್ದ. ಅದರ ಅರ್ಥ: "ಖಾಸಗೀ ಮಾಲಿಕತ್ವವನ್ನು ರದ್ದುಮಾಡಿ ಸೊತ್ತುಗಳನ್ನು ಸರ್ವಸಾಮಾನ್ಯ ಒಡೆತನಕ್ಕೆ ಒಳಪಡಿಸುವ ಒಂದು ತತ್ವ" ಎಂದು. ಈ ತತ್ವವನ್ನು ಸಾಧಿಸುವವರೇ ಕೊಮ್ಯುನಿಸ್ಟರು. ರಷ್ಯದಲ್ಲಿ ಕಳೆದ ಯುದ್ಧಾನಂತರ ಝಾರ ಶಾಹಿಯನ್ನು ನಿರ್ಮೂಲಿಸಿ ಅಲ್ಲಿನ ಕೊಮ್ಯುನಿಸ್ಟರು ತಮ್ಮ ತತ್ವಾರ್ಥದ ರಾಜ್ಯಘಟನೆಯನ್ನು ನಿರ್ಮಿಸಿದರೆಂದು ಹೇಳಲಾಗಿದೆ. ಈ ಕೊಮ್ಯುನಿಸ್ಟರಿಗೂ ಸಾಮ್ರಾಜ್ಯವಾದಿಗಳಿಗೂ, ಆಕ್ರಮಣಗಾರರಿಗೂ ಎಣ್ಣೆ ಸೀಗೆಯ ವೈಷಮ್ಯ. ಕೊಂಗ್ರೆಸು ಕೊಮ್ಯುನಿಸ್ಟ್ ಸಂಸ್ಥೆಯಲ್ಲ. ಆದರೂ ಸಾಮ್ರಾಜ್ಯವಾದಕ್ಕೂ, ಅದರ ಫೆಸಿಜಂ ಸೋದರ ತತ್ವಗಳಿಗೂ ಅದು ವಿರೋಧ ಸೂಚಿಸಿದೆ. ಕೊಂಗ್ರೆಸು ಒಂದುವೇಳೆ ಸಾಮ್ರಾಜ್ಯವಾದಿಗಳೊಡನೆ ಸಹಕರಿಸಿದರೂ ಕೊಮ್ಯುನಿಸ್ಟರು ಸಹಕರಿಸುವುದೆಂದರೆ ಅದು ಹೆಸರಿಗೆ ಮಾತ್ರ ಕೊಮ್ಯುನಿಸ್ಟ್, ಒಳಗೆ ಬೇರೆಯೇ ಎಂಬುದು ಸ್ವತ ಸಿದ್ಧವಾಗುತ್ತದೆ—ಜಪಾನು ಪ್ರಜಾಪ್ರಭುತ್ವವಾದಿಯೆಂದು ಹೆಸರಿಟ್ಟುಕೊಂಡರೆ ಹೇಗೋ ಹಾಗೆ.

ಆದುದರಿಂದ ಶ್ರೀ. ಪಿ. ಸಿ. ಜೋಶಿಯವರ ಪಕ್ಷವು ತಮ್ಮ ಚಟುವಟಿಕೆಗಳು ಕೊಮ್ಯುನಿಸ್ಟ್ ತತ್ವಕ್ಕೆ ಅನುಗುಣವಾದುದೊ ಇಲ್ಲವೊ ಎಂಬುದನ್ನು ಹಲವು ಬಾರಿ ಯೋಚಿಸಿದ್ದಾರೋ ಇಲ್ಲವೊ ಎಂಬುದು ಸಂದೇಹವನ್ನುಂಟುಮಾಡುತ್ತದೆ. ರಷ್ಯದ ಕೊಮ್ಯುನಿಸ್ಟರು ಹಿಂಸಾವಾದಿಗಳೆಂದು ಸ್ಪಷ್ಟವಾಗಿದೆ. ಆಧುನಿಕ ವಿಚಾರವಂತ ಯುಗದಲ್ಲಿ, ಅದರಲ್ಲೂ ಭಾರತ ಸಂಸ್ಕೃತಿಯ ಉಚ್ಚ ದೃಷ್ಟಿಯಿಂದ ಹಿಂಸೆಗೆ ಎಲ್ಲೂ ಸ್ಥಾನವಿರಬಾರದು. ಅಹಿಂಸಾತ್ಮಕವಾಗಿ ಯಾವ ಉದ್ದೇಶವನ್ನು ಪಡೆಯಲೆಳೆಸುವುದಾದರೆ ಮಹಾತ್ಮಾ ಗಾಂಧಿಯವರ ಮಾದರಿಯು ಸರ್ವೋತ್ಕೃಷ್ಟವಾದುದು. ಕೊಂಗ್ರೆಸು ಬಹಳಮಟ್ಟಿಗೆ ಅದನ್ನು ಒಪ್ಪಿಕೊಂಡಿದೆ. ಆದುದರಿಂದ ಗಾಂಧೀವಾದಿ ಕೊಂಗ್ರೆಸಿಗೂ ಕೊಮ್ಯುನಿಸ್ಟ್ ತತ್ವಕ್ಕೂ ಮೂಲದಲ್ಲೇ ತೋರಿಕೆಯ ವ್ಯತ್ಯಾಸವಿದೆ.

ಈಚೆಗೆ ಭಾರತದ ರಾಜಕೀಯ ಪಕ್ಷಗಳ ಪರಿಸ್ಥಿತಿಯನ್ನು ಪರಿಶೀಲಿಸುವಾಗ ಎರಡು ಪ್ರಾಮುಖ್ಯ ವಿಷಯಗಳು ಕಂಡುಬರುತ್ತವೆ. ಕೊಗ್ರೆಂಸ್ ಮುಂದಾಳತ್ವವು ಆದರ್ಶ ವ್ಯಕ್ತಿಗಳಿಂದ ವಹಿಸಲ್ಪಟ್ಟಿದೆ. ಆದರೆ ಕೆಳಗೆ ಬರುತ್ತಾ ಅದರ ಹಿಂದಾಳುಗಳು ಮುಂದಾಳುಗಳಷ್ಟು ಶ್ರದ್ಧಾವಂತರಲ್ಲವೆಂದೂ, ವರ್ಗ ಕಲಹದಲ್ಲಿ ಅದಕ್ಕೆ ವಿಶ್ವಾಸವಿಲ್ಲವೆಂತಲೂ ಕಂಡುಬಂದಿದೆ. ಕೊಮ್ಯುನಿಸ್ಟ್ ಎಂದೆನಿಸುವ ಸಂಗಡದ ಹಿಂಬಾಲಕರಲ್ಲಿ ಶ್ರದ್ಧೆ ಇದೆ ಆದರೆ ಆ ತತ್ವಕ್ಕನುಗುಣವಾದ ನಾಯಕತ್ವ ಅವರಿಗಿಲ್ಲವೆಂದು ತೋರುತ್ತದೆ.

ಪರಿಸ್ಥಿತಿ ಹೀಗಿಲ್ಲದಿರುತಿದ್ದರೆ ಬರೀ ಮಧ್ಯಮ ವರ್ಗದ ಜನತೆಯ ವಿಶ್ವಾಸಕ್ಕೆ ಒಳಗಾದ ಕೊಂಗ್ರೆಸು ಇಷ್ಟು ದುರ್ಬಲವಾಗುತ್ತಿರಲಿಲ್ಲ. ಕೊಮ್ಯುನಿಸ್ಟರು ಜಗತ್ತಿನಲ್ಲಿ ಸಾಮ್ರಾಜ್ಯ ಲಾಲಸೆಗೆ ಕೈಹಾಕುತ್ತಿರಲಿಲ್ಲ.

ಯಾವ ಚಳವಳವನ್ನು ಶಾಂತರೀತಿಯಲ್ಲಿ ಪರಿಣಾಮಕಾರಿಯಾಗಿ ಸಾಗಿಸಬೇಕಾದರೆ ಜನತೆಯು ಚಳವಳ, ಮುಷ್ಕರಗಳ ಕಾಲದಲ್ಲಿ ಸ್ವತಂತ್ರವಾದ ರಚನಾತ್ಮಕ ಕಾರ್ಯದಿಂದ ಸ್ವಾವಲಂಬಿಯಾಗಿರಲವಕಾಶವಿರಬೇಕು. ಅಂದರೆ ಅಂದೋಲನವನ್ನು ಅಸಹಕಾರದಿಂದಲೇ ಯಶಸ್ವಿಗೊಳಿಸಬಹುದು. ಕೊಂಗ್ರೆಸ್ ಮಧ್ಯಮ ವರ್ಗದವರ ಚಳವಳವು ಯಶಸ್ವಿಯಾಗಲು ಕಾರಣವೇನು? ಚಳವಳಗಾರರಿಗೆ ಸ್ವತಂತ್ರಜೀವನದ ಭರವಸೆ ಹಿನ್ನೆಲೆಯಲ್ಲಿದೆ. ಹಾಗಾದರೆ ಭೂರಿ ಜನತೆಯು ಚಳವಳದಲ್ಲಿ ಭಾಗವಹಿಸಬೇಕಾದರೆ ಅದಕ್ಕೂ ಒಂದು ತರದ ಹೊಟ್ಟೆತುಂಬಿಸುವ ಸ್ವತಂತ್ರ ಉದ್ಯಮ ಕಲ್ಪಿಸಬೇಕು. ಅದಕ್ಕಾಗಿಯೇ ಮಹಾತ್ಮರು ರಚನಾತ್ಮಕ ಕಾರ್ಯಕ್ರಮವನ್ನು ಒತ್ತಾಯಪಡಿಸುತ್ತಿರುವುದು.

ಕೊಮ್ಯುನಿಸ್ಟರಾದರೂ 'ನಾವು ಹಾಗೆ ಮಾಡುತಿದ್ದೆವು, ಹೀಗೆಮಾಡಬೇಕೆಂದಿದ್ದೇವೆ.' ಎಂದು ಹೇಳುವಾಗ ಅದು ಹೀಗೆ ಎಂಬ ಪ್ರಶ್ನೆ ತನ್ನಷ್ಟಕ್ಕೆ ಕೊಮ್ಯುನಿಸ್ಟ್ ಸದಸ್ಯರಲ್ಲಾದರೂ ಉತ್ಪನ್ನವಾಗದಿರಲಿಕ್ಕಿಲ್ಲ. ಆದುದರಿಂದ ಕೊಂಗ್ರೆಸಿಗರೂ, ಕೊಮ್ಯುನಿಸ್ಟರೂ ರಚನಾತ್ಮಕ ಕಾರ್ಯಕ್ರಮವನ್ನು ಪುಷ್ಟಿಕರಿಸುವುದರಲ್ಲಿ ತಮ್ಮ ಶಕ್ತಿಯನ್ನುಪಯೋಗಿಸಿಕೊಂಡರೆ ಇತ್ತಂಡಗಳ ಬಲಗಳೂ ಅಭಿವೃದ್ಧಿಯಾಗಿ ಇತ್ತಂಡದವರಿಗೂ, ಅವರು ಬೇಕೆಂದು ಬಯಸಿದ ಸಾಮಾನ್ಯ ರಾಜಕೀಯ ರಂಗವು ತನ್ನಷ್ಟಕ್ಕೆ ಏರ್ಪಡುವುದು. ಇದನ್ನುಬಿಟ್ಟು ಎರಡು ಪಕ್ಷದವರೂ ಪರಸ್ಪರ ಟೀಕಾರೋಪಗಳಲ್ಲಿ ಮಗ್ನರಾಗಿರುವುದು ಅಪ್ರಾಸಂಗಿಕವೆಂದು ನಮಗೆ ತೋರುತ್ತದೆ.

ಗಾಂಧೀ ತತ್ವದ ಪ್ರಕಾರ ವರ್ಗವೈಷಮ್ಯವೂ ತಪ್ಪು. ಬಂಡವಾಳ ವರ್ಗವು ಸಿರಿವಂತಿಕೆಯಲ್ಲೇ ಇರಲಿ, ಬಡವರು ಬಡವರಾಗಿಯೇ ಇರಲಿ ಎಂಬುದು ಇದರ ಅರ್ಥವಲ್ಲ. 'ಬಂಡವಾಳ ವರ್ಗವು ಹೇಗೂ ಇರಲಿ, ಬಡವರು ಉನ್ನತ ಜೀವನಾನುಕೂಲತೆಗಳನ್ನು ಪಡೆಯುವಂತವರಾಗಬೇಕು; ಅವರ ಜೀವನ ಮಟ್ಟವು ನೆಮ್ಮದಿಯ ಸ್ಥಾನಕ್ಕೇರಬೇಕು, ಅಲ್ಲದೆ ಶ್ರೀಮಂತ ಗಿರಿಯನ್ನು ಪೋಷಿಸಲು ಬಡವರು ಸುಲಿಗೆ, ನರಳುವಿಕೆಗಳಿಗೆ ತುತ್ತಾಗಬಾರದು.' ಇಂದಿನ ರಷ್ಯದ ಜನತೆಯ ಪರಿಸ್ಥಿತಿಯಾದರೂ ಹೀಗಿಯೇ ಆಗಿದೆ. ಅಂದಮೇಲೆ ಗಾಂಧಿವಾದವೂ ಒಂದು ತರದ ವಿಶಾಲರೂಪ ರಚನೆಯ ಕೊಮ್ಯೂನಿಸಂ ಎಂದೇ ಭಾವಿಸಬಹುದು.

ಆದುದರಿಂದ ಕೊಮ್ಯುನಿಸ್ಟರಾಗಲೀ ಇತರ ಯಾವ ರಾಜಕೀಯ ಧ್ಯೇಯದ ಪಕ್ಷವಾಗಲೀ ಸರಿಯಾಗಿ ವಿಚಾರಮಾಡಿ ಕೆಲಸಮಾಡುತಿದ್ದರೆ ಮತ್ತದಕ್ಕೆ ಆಧಾರಭೂತವಾದ ಬೆಂಬಲ ಬರಬೇಕಾದರೆ ಯಾವುದಾದರೊಂದ ತರದ ರಚನಾತ್ಮಕ ಮೂಲ ಕೈಗಾರಿಕೆಗಳಿಂದೊಡಗೂಡಿದ ಕಾರ್ಯರಂಗದ ಅಡಿಗಟ್ಟು ನಿರ್ವಿವಾದವಾಗಿ ಇರಬೇಕು. ಇಲ್ಲದಿದ್ದರೆ ಅದರ ಶ್ರಮವು ಅಪಯಶಸ್ವಿಯಾಗಿ ಕೊನೆಗೊಳ್ಳುವುದು. ಈ ದೃಷ್ಟಿಯಿಂದ ನಮ್ಮ ಮುಂದಾಳುಗಳು ತಮ್ಮ ಕಾರ್ಯಕ್ಷೇತ್ರವನ್ನು ಮುಂದೆ ಸಾಗಿಸಲೆಂದು ಅಪೇಕ್ಷೆ.

ಗಾಂಧಿ ವಿಚಾರ ವಚನಗಳು

(ಕನ್ನಡ ಸಾಹಿತ್ಯದಲ್ಲಿ ವೀರಶೈವರ "ವಚನ"ಗಳಷ್ಟು ಉತ್ತಮವಾದ ಸಿಡಿಮುತ್ತುಗಳು ಬೇರೆ ಇಲ್ಲ. ಆಧುನಿಕ ವಿಚಾರ ಕ್ಷೇತ್ರದಲ್ಲಿ ಮಹಾತ್ಮಾ ಗಾಂಧೀಯವರ ಸರ್ವವ್ಯಾಪಿ ವಿಚಾರ ಬಹಳ ಓಜಸ್ವಿಯಾದುದೆಂದು ಲೋಕ ಸಮ್ಮತವಿದೆ. ಗಾಂಧೀವಿಚಾರವನ್ನು ವಚನ ರೂಪಕ್ಕಿಳಿಸಲು ಜೈಲಿನಲ್ಲಿ ಪಟ್ಟ ಪ್ರಯತ್ನದ ಫಲವಿದು.)

1. ಎಲ್ಲವನು ಹೊದ್ದಿರುವ, ಎಲ್ಲವನು ಅದ್ದಿರುವ, ಎಲ್ಲೆಲ್ಲೂ ಹಬ್ಬಿರುವ, ಸೊಲ್ಲಿನಲಿ ಬಲ್ಲಂತೆ ಬಣ್ಣಿಸಲು ಸಲ್ಲದಿಹ ಆದಿಶಕ್ತಿಯೊಂದಿಹುದು ಕಾಣಾ. ಇದುವೇ ಚೈತನ್ಯ ಜಗಕೆಲ್ಲ ಆಧಾರವಯ್ಯ ಭಾರತ ಭಾಗ್ಯವಿದಾತ.

2. ಅಸ್ಥಿರವು ನಶ್ವರವು ಸುತ್ತಲಿನ ವಸ್ತುಗಳು. ನಾಶಪಾಶದಲಿ ಸಿಲುಕಿಹುವು ಎಲ್ಲ. ಚಂಚಲದಿ ಮಿಂಚುತಿಹ ಮಿತ್ಯವಿಹ ಸೃಷ್ಟಿಯಾ ಸಂಚಿನಂಚನು ತಿಳಿಯಲಘಾದವಯ್ಯ. ಇಂತಪ್ಪ ಸೃಷ್ಟಿಯತಿ ಮೂಲದೊಳು ಅತ್ಯತುಲ ಅಚಲ ಸೂತ್ರವಿಹ ನಿಯಾಮಕ ಸಚೇತನ ಶಕ್ತಿಯ ಪತ್ತೆಯದು ಅನುಭವದೊಳಿಹೆನೆಂಬೆ ನಾನು. ದೇವರು ದೇವರೆಂದೆ ನಾವು ಪೆಸರಿಪೆವಿದನು ಭಾರತ ಭಾಗ್ಯವಿದಾತ.

3. ಕೇವಲ ಪಂಚೇಂದ್ರಿಯಗಳಿಂ ಗ್ರಹಿಪ ವಿಷಯ ವಸ್ತುಗಳೆಲ್ಲ ವಿಶ್ವದೊಳು ನಶ್ವರವಿರಲು ಅನಂತವಿಹ, ಅನಾದಿ ಇಹ ಚೈತನ್ಯವಿದುವೇ ಶಾಶ್ವತವು. ವಿಶ್ವದಾತ್ಮವು ಇದುವೇ. ವಿಶ್ವದಾಕಾರಣವು ಇದುವೆ. ಸಚ್ಚಿತಾನಂದ ಸ್ವರೂಪವಿದು ನಿತ್ಯ ಶಾಶ್ವತವಯ್ಯ ಭಾರತ ಭಾಗ್ಯವಿದಾತ.

4. ದಾರುಣದ ಸಾವಿನೆಡೆಯಲಿ ಜೀವ, ಹುಲು ಹೊಲಸು ಕಟುಸಟೆಗಳ ನಡವೆ ಅಭೇದ್ಯ ಸತ್ಯ, ಕರ್ಬೊಗೆಯ ತೆರದೆ ಕಗ್ಗತ್ತಲದು ಎತ್ತೆತ್ತಲೂ ಕವಿದಿರಲು ನಡಮಧ್ಯೆ ದಿವ್ಯಜ್ಯೋತಿ ಇರುತಿರಲು ಜ್ಯೋತಿ, ಸತ್ಯ, ಜೀವ ಇವನೆಲ್ಲ ದೇವರೆಂಬೆನಯ್ಯ ಭಾರತ ಭಾಗ್ಯವಿದಾತ.

5. ಕೊಟ್ಟ ತುತ್ತನು ಅತ್ತಿತ್ತ ನೋಡಲೊಡ ಕಿತ್ತೊಗೆವ ದೇವನನು ಕ್ರೂರಿ ಎನಲೆ! ಅತ್ತತ್ತು ಪಶ್ಚಾತ್ತಾಪ ಪಡಲನುವಿತ್ತ ದೇವನನು ಕ್ಷಮಾವಂತನೆನಲೆ! ಲೋಕದೊಳು ನ್ಯಾಯಾನ್ಯಾಯ ಧರ್ಮಾಧರ್ಮಗಳ ತಿಳಿದು ಆಯ್ದು ಕೊಳ್ಳಲು ಪೂರ್ಣ ಸ್ವಾತಂತ್ರವನುಯಿತ್ತ ದೇವನನು ಅನುರಾಗಿ ಎನಲೆ! ಪ್ರಜಾರಾಜ್ಯ ಸಾಮ್ರಾಟನೆನಲೆ! ಶಾಂತಿಮೂರುತಿ ಎನಲೆ! ಉಗ್ರವತಾರವೆನಲೆ! ವಿವಿಧ ರೂಪದರ್ಶಕನವನನು ಜಗದೇಕ ಆದಿಶಕ್ತಿಯನು ಬಣ್ಣಿಸಲಸದಳವಯ್ಯ ಭಾರತ ಭಾಗ್ಯವಿದಾತ.

6. ದೇವರೆಂಬುವನವನು ಪ್ರೇಮಮೂರುತಿಯಯ್ಯ. ಪರಿಪೂರ್ಣ ದಯಾಮಯ ಶಕ್ತಿಯಯ್ಯ. ಪರಹಿತದ ಪರವಧಿಯ ತುತ್ತತುದಿ ಕಾಣಾ. ಹೇಯದಿಂ ಮಾನವನು ರೀತಿನೀತಿಗಳನೆಲ್ಲ ತೊಡೆದೊಡೆದು ದೇವದೇವನ ಪೆಸರಿನಿಂ ಪಾಶವೀಕೃತ್ಯಗಳನೆಸಗಿದೊಡೆಯೂ ನಿರ್ಲಿಪ್ತವಿಹ ಈ ನಿರ್ಮಲದ ಶಕ್ತಿಯ ಅಸ್ತಿತ್ವ ನೆಮ್ಮದಿಯಯ್ಯ ಭಾರತ ಭಾಗ್ಯವಿದಾತ.

7. ವಿಶ್ವದಾಧಾರನಿಹ ಈಶ್ವರನು ಸತ್ಯಸ್ವರೂಪಿ; ಪ್ರೇಮಸ್ವರೂಪಿ; ಜಗಕೆಲ್ಲ ವಿಗಿಲಾದ ಅಭಯ ಮೂರ್ತಿ ಕಾಣಾ. ಜ್ಞಾನದಾನಿಯವನು ಜೀವದಾತ. ಆದೊಡೆಯೂ ಜೀವಜ್ಞಾನಗಳ ಮಿಗೆ ಮಿಕ್ಕಿಹನು ಅವನು. ಚಿನ್ಮಯನವನು ಸನಾತನ ಕಣಾ. ನಾಸ್ತಿಕನ ನಾಸ್ತಿಕತೆ ಈಶ್ವರನ ವಿಶ್ವಾಸವೆಂಬನು ಭಾರತ ಭಾಗ್ಯವಿದಾತ.

8. ಸತ್ಯಪ್ರೇಮಗಳೆರಡು ಏಕರೂಪವಯ್ಯ. ಪ್ರೇಮದಾ ಮಾಧ್ಯಮದಿ ಸತ್ಯವನು ಸಿದ್ಧಿಸಲಕ್ಕು. ಪ್ರೇಮಸತ್ಯಗಳೊಳಗೊಳಗೆ ಒಡನಾಟ ಸಮಾಗಮಗಳು ಶಕ್ಯವಿಹುದು. ಇಂತಿರ್ಕೆ ಕೊನೆಯೊಳಗಭೇದ್ಯ ಸತ್ಯವೇ ನಿತ್ಯ ಕಾಣಾ. ನಿತ್ಯವಿಹ ಸತ್ಯವೇ ಪರಮಾತ್ಮನಯ್ಯ. ಇಂತು ಪರಮಾತ್ಮನೇ ಸತ್ಯ, ಸತ್ಯವೇ ಪರಮಾತ್ಮನೆಂಬುದು ಖಚಿತವಯ್ಯ. ಸತ್ಯದಂತಹ ಗುರಿಯ ತಟ್ಟಿ ಮುಟ್ಟಲು ಪ್ರೇಮವದುವೇ ಸಾಧನೆಯ ಮಾರ್ಗವೆಂಬನು ಭಾರತ ಭಾಗ್ಯವಿದಾತ.

9. ಬುದ್ಧಿಗಪ್ರಾಪ್ಯನಿಹನವನು ದೇವ. ಬಾಹ್ಯ ಪಂಚೇಂದ್ರಿಗಳಿಗೆ ನಿಲುಕದವನ ನೆಲೆಯು. ಚಪಲವಿಹ ಬುದ್ಧಿಯನು ಸಾಕ್ಷಾತ್ಕಾರದಿಂ ಸತ್ಕರಿಪುದು ದೇವರಿಗೆ ಒಪ್ಪದಯ್ಯ ಆತನಿಹನೆಮ್ಮ ಹೃದಯೇಶ್ವರನು. ಹೃದಯದೊಳು ಹುದುಗಿಹನು ಸದ್ವಿವೇಕದ ರೂಪಿನಿಂದೆ. ವಾಙ್ಮನಗಳಿಗೆ ಅಗೋಚರನಿರ್ಪ ಈ ದೇವನೆಮ್ಮ ಹೃದಯ ಪರೀಕ್ಷಕನಯ್ಯ ಭಾರತ ಭಾಗ್ಯವಿದಾತ.

10. ಮಾನವನ ಜೀವನವು ಘನತರದ ಮಹದಾಶೆಯಯ್ಯ. ಪರಿಪೂರ್ಣತೆಯ ನೆರವ ದೊರಕಿಸಲು ಪರಿಪರಿಯಾ ದುಗುಡ ಬವಣೆಗಳನನುಭವಿಸಿ ದುಡಿಯುವುದೇ ಅದರ ತೆರವಯ್ಯ. ದೋಷದುರಿತಗಳ ನೀಗಿ ಪರಿಶುದ್ಧ ಜೀವನದಿ ಪ್ರೇಮದಾ ಮಾಧ್ಯಮದಿ, ತ್ಯಾಗದಾ ಸೇವೆಯಲಿ ಶುದ್ಧಸತ್ಯದತ್ತತ್ತ ಸಾಗುತಲೆ ಪರಿಶುದ್ಧವಿಹ ನಿತ್ಯವಿಹ ಸತ್ಯದೊಳು ಐಕ್ಯವಾಗಲು ಮುನ್ನ ಬೇರೆ ಕೈವಲ್ಯ ಪದವೇತರದು ಭಾರತ ಭಾಗ್ಯವಿದಾತ.

(ಮುಂದರಿವುದು) "ದಾಮೋದರ"

ಜಿಲ್ಲೆಯಲ್ಲಿ ಹುಲಿಕಾಟ!

ರಥೋತ್ಸವಕ್ಕೆ ಸಮಾರಾಧನೆ ಇಲ್ಲ!

ಮಂಗಳೂರಲ್ಲಿ ಕಾಯಿಪಲ್ಯ ಕಂಟ್ರೋಲ್?

ಸರಕಾರಿ ಅಧಿಕಾರಿಗೆ ಶಿಕ್ಷೆ!

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವಗಳು ಪ್ರಾರಂಭವಾಗಿವೆ. ಎಂದಿನಂತೆ ಈ ವರ್ಷ ಸದ್ರಿ ದೇವಳದಲ್ಲಿ ಊಟದ ಸಮಾರಾಧನೆಗಳಿಲ್ಲವೆಂದು ಸಾರಲಾಗಿದೆ. ಜಿಲ್ಲೆಯ ಅಕ್ಕಿಯ ಪರಿಸ್ಥಿತಿಯೇ ಇದರ ಕಾರಣ. ಆದರೂ ಯಥಾಪ್ರಕಾರ ಬ್ರಾಹ್ಮಣ ಸಂತರ್ಪಣೆಗಳು ನಡೆಯುವುವು. ದೇವಸ್ಥಾನಗಳಲ್ಲಿ ನಡೆಯುವ ಕೆಲವು ದಿನಗಳ ಸಮಾರಾಧನೆಗಳಿಂದ ಹೆಚ್ಚಿನವರಾರಿಗೂ ಯಾವ ಲಾಭವಿಲ್ಲ. ಇವುಗಳು ನಿಂತದ್ದರಿಂದ ಆಡಳಿತಗಳಿಗೆ ತುಂಬಾ ಉಳಿತಾಯವಾಗುವುದು. ಧರ್ಮದರ್ಶಿಗಳು ಈ ಉಳಿತಾಯದ ಆದಾಯವನ್ನು ಸಮಾಜೋದ್ಧಾರದ ಕಾರ್ಯಗಳಿಗೆ ವಿನಿಯೋಗಿಸಲು ಪ್ರಯತ್ನಿಸಿದರೆ ಅವರ ಸೇವೆ ಫಲಪ್ರದವಾಗದಿರದು.

ಖಾಧಿ ತಯಾರಿಕೆ ಸಂಬಂಧವಾದ ಕೈಗಾರಿಕೆ-ನೂಲುವುದು, ಹತ್ತಿ ಶುದ್ಧೀಕರಿಸಿ ಬತ್ತಿಗಳಾಗಿ ಮಾಡುವುದು,-ಇವುಗಳನ್ನು ಕಲಿಸುವ ಏರ್ಪಾಡೊಂದನ್ನು ರಥಬೀದಿಯ ಗ್ರಾಮಕೈಗಾರಿಕೆಸಂಘದ ಬಳಿ ಒಂದು ಪರಿಶ್ರಮಾಲಯವನ್ನು ತೆರೆಯಲಾಗಿದೆ, ಚರಖಾ ಸಂಘದ ಒರ್ವ ಕಾರ್ಯಕರ್ತರು ಇವುಗಳನ್ನು ಕಲಿಸುವರು, ಇಚ್ಛೆ ಪಡುವವರು ಸೇರಬಹುದೆಂದು ಕಾರ್ಯದರ್ಶಿ ಶ್ರೀ. ಜಿ. ಎಂ. ಪ್ರಭುಗಳು ತಿಳಿಸುತ್ತಾರೆ. ಈ ಪ್ರಯತ್ನಗಳು ಕೊಂಗ್ರೆಸಿನ ರಚನಾತ್ಮಕ ಭಾಗವೊ ಅಥವಾ ಸ್ವತಂತ್ರ ಪರಿಶ್ರಮವೊ ಎಂದು ಸದ್ರಿ ಸಂಸ್ಥೆಯವರು ಸ್ಪಷ್ಟೀಕರಿಸಿದರೆ ಜನತೆಗೆ ಹೆಚ್ಚಿನ ಉತ್ಸಾಹಗಳುಂಟಾಗಬಹುದೆಂದು ಒಂದು ಬಾತ್ಮಿ.

ತಮ್ಮ ಕೆಲಸಕ್ಕಾಗಿ ಸರಕಾರಿ ಅಧಿಕಾರಿಗಳಿಗೆ ಆಕರ್ಷಣೆಯನ್ನುಂಟುಮಾಡುವಂತೆ ಇಲ್ಲಿಯ ಶ್ರೀ. ರಾಮಚಂದ್ರ ಎಂಬ ಒರ್ವ ಉದ್ಯೋಗಾಪೇಕ್ಷಿಯು ಮದ್ರಾಸಿನ ಕಸ್ಟಮ್ ಕಲೆಕ್ಟರರಿಗೆ ಅರ್ಜಿ ಬರಕೊಂಡಾಗ ಅದರೊಂದಿಗೆ ನೂರು ರೂಪಾಯಿಯ ನೋಟೊಂದನ್ನೂ ಇಟ್ಟಿದ್ದರಂತೆ. ಸಬ್ ಡಿವಿಜನಲ್ ಮೇಜಿಸ್ಟ್ರೇಟರಲ್ಲಿ ಈ ಆರೋಪ ತನಿಖೆಯಾಗಿ ಸದ್ರಿ ಅರ್ಜಿದಾರರಿಗೆ ೩೫೦ ರೂ. ಜುಲ್ಮಾನೆ ವಿಧಿಸಲಾಗಿದೆ.

ಅಪೀಲು ಮಾಡಿದಾಗ ದಂಡನೆಗಳು ತಗ್ಗಿಸಲ್ಪಟ್ಟವರಲ್ಲಿ ಕೃಷ್ಣಭವನದ ಮತ್ತು ತಾಜಮಹಾಲ್ ಹೋಟೇಲಿನ ಮಾಲಕರೂ ಸೇರಿದರು. ಈಗ ಇವರ ಎರಡೆರಡು ತಿಂಗಳ ಶಿಕ್ಷೆ ರದ್ದುಮಾಡಿ ತಲಾ ಒಂದು ಸಾವಿರ ರೂಪಾಯಿಯ ಜುಲ್ಮಾನೆ ಮಾತ್ರ ವಿಧಿಸಲಾಗಿದೆ.

ನಗರದ ಆರೋಗ್ಯದ ಕುರಿತು ವಿಚಾರಿಸಿದರೆ ಗಾಬರಿಗೊಳಿಸುವ ಜಾಡ್ಯಗಳ ಸುದ್ದಿ ಕೇಳಿಬರುವುದಿಲ್ಲ. ಪ್ಲೇಗ್ ರೋಗವಂತೂ ಸಂಪೂರ್ಣ ತಡೆಯಲ್ಪಟ್ಟಿದೆಯಾಗಿ ತೋರುತ್ತದೆ. ಸಿಡುಬಿನಿಂದ ನಗರದಲ್ಲಿ ಮರಣಪಟ್ಟವರ ಸಂಖ್ಯೆ ಇದುತನಕ ಇಪ್ಪತ್ತು. ಇನ್ನೂ ಧೂಳು ಮಾರ್ಗಗಳಿಗೆ ನೀರು ಹಾಕುವ ವ್ಯವಸ್ಥೆ ಸಾಧ್ಯವಾಗುವುದಿಲ್ಲವೆಂದು ತೋರುತ್ತದೆ.

ವಿದ್ಯಾ ಇಲಾಖೆಯ ಡ್ಯಾರೆಕ್ಟರ್ ಸರ್ ಸ್ಟೇಥಾಮರ ಅಕಸ್ಮಾತ್ ಮರಣದ ಸುದ್ದಿಯ ನಂತರ ವಿದ್ಯಾಂಗ ಇಲಾಖೆಯ ಕಡೆಯಿಂದ ಬಂದ ವರ್ತಮಾನವೆಂದರೆ ಹ್ಯಾಸ್ಕೂಲುಗಳಲ್ಲಿ ಹಿಂದೀಯನ್ನು ಕಡ್ಡಾಯವಾಗಿ ಕಲಿಸಬಾರದೆಂಬ ಆಜ್ಞೆ. ರಾಷ್ಟ್ರಭಾಷಾ ಪ್ರೇಮಿಗಳಾದವರು ತಮ್ಮ ಮಕ್ಕಳಿಗೆ ಹಿಂದೀಯನ್ನು ಕಲಿಯಲೇಬೇಕೆಂದು ಕಡ್ಡಾಯವಾಗಿ ಭೋಧಿಸಿದರೆ ಹಿಂದೀ ಚಳವಳಕ್ಕೆ ಯಾವ ದಕ್ಕೆಯಾಗದು.

ಬಹಳ ಕಾಲದಿಂದ ಪರ್ಯಾಲೋಚಿಸಲ್ಪಡುತಿದ್ದ ತರಕಾರಿ ದರ ನಿಯಂತ್ರಣದ ಕುರಿತು ಪರ್ಯಾಲೋಚಿಸಿ ವರದಿ ಒಪ್ಪಿಸಲು ನಗರ ಮುನ್ಸಿಪಾಲಿಟಿಯವರು ಒಂದು ಪ್ರತ್ಯೇಕ ಸಮಿತಿಯನ್ನು ನೇಮಿಸಿದ್ದಾರೆ. ಈ ಸಲವಾದರೂ ಶೀಘ್ರವಾಗಿ ಪರಿಶೀಲನೆಗಳಾಗಿ ಕಾರ್ಯರೂಪವಾದ ಕಂಟ್ರೋಲ್ ದರಗಳು ಹೊರ ಬೀಳಬಹುದೆಂದು ನಿರೀಕ್ಷಿಸಲಾಗಿದೆ.

ಮಂಗಳೂರಲ್ಲಿ ಮಕ್ಕಳ ಸಮ್ಮೇಳನವು ಈ ತಿಂಗಳ ಕಡೇ ದಿನಗಳಲ್ಲಿ ಜರಗಿಸಲೇರ್ಪಾಡುಗಳಾಗಿವೆ ಎಂದು ತಿಳಿದುಬರುತ್ತದೆ. ಮಕ್ಕಳ, ವಿದ್ಯಾರ್ಥಿಗಳ ಸಮ್ಮೇಳನಗಳನ್ನು ಏರ್ಪಡಿಸುವುದರಿಂದ ಬೆಳೆಯಲಿರುವ ಈ ಚಿಕ್ಕ ಜನಾಂಗಕ್ಕೆ ನಿಜವಾದ ಶೈಕ್ಷಣೀಕ ಅನುಭವಲಾಭಗಳುಂಟಾಗುವುವು. ಅವರ ನೈತಿಕ ಶೀಲಗಳೂ ಅಭಿವೃದ್ಧಿ ಹೊಂದುವವು. ನಿಷ್ಪಕ್ಷಪಾತ ದೃಷ್ಟಿಯಿಂದ ಹಿರಿಯರು ಇವುಗಳನ್ನು ನಿರ್ದೇಶಿಸಬೇಕು.

ತಾ. ೧೫ರಂದು ಬೆಳಿಗ್ಗೆ ಸ್ಥಳೀಯ ಗಣಪತಿ ದೇವಸ್ಥಾನದ ಬಳಿಯ ಗದ್ದೆಯ ನೀರು ಹರಿಯುವ ತೋಡಿನಲ್ಲಿ ಒರ್ವ ಬ್ರಾಹ್ಮಣ ಜಾತಿಯುವನ ಶವವು ಕಾಣಬಂತು. ಮಲಶುದ್ಧಿಗೆ ಕೂತುಕೊಂಡಾಗ ಅಪಸ್ಮಾರದ ಬಾಧೆಯಿದ್ದ ಆತನು ತೋಡಿನೊಳಗೆ ಬಿದ್ದು ಅವನ ಮುಖವು ನೀರಿನಲ್ಲಿ ಮುಳುಗಿಹೋದುದರಿಂದ ಮೃತಪಟ್ಟಿರಬೇಕೆಂದು ಊಹಿಸಲಾಗಿದೆ.

ಬರುವ ತಾ. ೨೨ರಂದು ಮಧ್ವನವಮಿಯಂದು ಸ್ಥಳೀಯ ಶ್ರೀ ವೆಂಕಟ್ರಮಣ ದೇವಳದ ಮಾಳಿಗೆಯಲ್ಲಿ ಶ್ರೀ ಮನ್ಮಧ್ವಾಚಾರ್ಯರ ಪುಣ್ಯ ಸ್ಮರಣೋತ್ಸವವು ಜರುಗಿಸಲಾಗುವುದು. ಸಂಸ್ಕೃತ ವಿದ್ಯಾರ್ಥಿಗಳ ಪಾಠ ಸ್ಪರ್ಧೆ, ಉಪನ್ಯಾಸ, ಪೂಜಾ ವಿನಿಯೋಗಾದಿ ಕಾರ್ಯಕ್ರಮಗಳಿರುವುದರಿಂದ ಮಧ್ವಮತಾನುಯಾಯಿಗಳೆಲ್ಲರಿಗೂ ಸ್ವಾಗತವಿದೆ.

ಇದೇ ತರದ ಕಾರ್ಯಕ್ರಮವು ಮದ್ರಾಸಿನಲ್ಲಿ ಮೋಡರ್ನ್ ಕೆಫೆಯ ಕೆ. ಸೀತಾರಾಮರಾಯರ ಮನೆಯಲ್ಲೂ ಭಜನೆ, ಭಾಷಣ, ಪೂಜೆಗಳಿಂದಲೂ ಜರಗುವುದಾಗಿಯೂ ತಿಳಿದುಬಂದಿದೆ.

ಇದೇ ಬರುವ ಪೆಬ್ರುವರಿಯಿಂದ ಸೈನ್ಯಕ್ಕೆ ಸಿಬಂಧಿಯನ್ನು ಸೇರಿಸುವ ಪ್ರಚಾರಕ್ಕಾಗಿ ಸೈನಾಧಿಕಾರಿಗಳ ಒಂದು ಸಂಚಾರ ಕೂಟವು ಮಡಿಕೇರಿಯಿಂದ ಇಲ್ಲಿಗೆ ಬರಲಿರುವರು. ಬೆಂಗಳೂರು ಠಾಣ್ಯದ ಮೇಜರ್ ಇಂಗಲ್ ಅವರು ಕೂಟದ ನಾಯಕರಾಗಿರುವರು. ವಿಮಾನ ಶಾಖೆಯ ಶ್ರೀ. ಎಸ್. ಎಲ್. ಸೊನ್ಸ್ ಅವರೂ ಜೊತೆಯಲ್ಲಿರುವರು. ಇವರು ಶಾಲಾ ಕಾಲೇಜುಗಳಲ್ಲಿ ಭಾಷಣ, ಚಲಚಿತ್ರ ಪ್ರದರ್ಶನಗಳನ್ನು ಮಾಡುವರು. ಮಾತ್ರವಲ್ಲ ಸೈನ್ಯಕ್ಕೆ ಸೇರಲಿಚ್ಛಿಸುವ ತರುಣರ ಹೆತ್ತವರನ್ನೂ ಇವರು ಕಂಡು ಮಾತನಾಡಲಿಚ್ಛಿಸುತ್ತಾರೆ. ಸೈನ್ಯಕ್ಕೆ ಸೇರಲಿಚ್ಛಿಸುವವರು ಇವರ ಮುಖಾಂತರ ನೇರವಾಗಿ ಏರ್ಪಾಡುಗಳನ್ನು ಮಾಡಬಹುದೆಂದೂ ತಿಳಿಸಲಾಗಿದೆ.

ಈ ಕೆಲವು ವಾರಗಳಿಂದ ಮಂಗಳೂರಲ್ಲಿ ತಮ್ಮ ಸಾರಸ್ಯವಾದ ನಾಟಕಗಳನ್ನಾಡಿ ನಾಗರೀಕರ ಮೆಚ್ಚಿಗೆಗೆ ಪಾತ್ರರಾದ ಶ್ರೀ ಜಯಕರ್ನಾಟಕ ನಾಟಕ ಸಂಘದವರು ಸದ್ಯದಲ್ಲಿಯೇ ಇಲ್ಲಿಯ ಕಾರ್ಯಕ್ರಮವನ್ನು ಮುಗಿಸಿ ಮೂಡಬಿದರೆಗೆ ತೆರಳಲಿರುವರೆಂದು ತಿಳಿದುಬರುತ್ತದೆ. ಇವರಿಗೆ ಎಲ್ಲಾ ಕಡೆಗಳಲ್ಲೂ ಪ್ರೋತ್ಸಾಹ ಸಿಗಲೆಂದು ಹಾರೈಕೆ.

ನಮ್ಮ ಜಿಲ್ಲೆಗೆ ದಯಮಾಡಿಸಿದ ಅನ್ನಾಮಲೆ ವಿಶ್ವವಿದ್ಯಾಲಯದ ಚಾನ್ಸಲರರಾದ ಶ್ರೀ ಚೆವೆಲಿಯರ್ ರತ್ನ ಸ್ವಾಮಿ ಅವರು ಇಲ್ಲಿಯ ಕೆಥೋಲಿಕ್ ಕ್ಲಬ್ಬಿನಲ್ಲಿ ಭಾರತ ಸಂಸ್ಕೃತಿ, ಮತ್ತು ಕ್ರೈಸ್ತತತ್ವ, ವಿದ್ಯಾಯೋಜನೆಗಳ ಕುರಿತು ಸುರಸ ಭಾಷಣ ಮಾಡಿದರು.

ಬೊಂಬ್ಬಾಯಲ್ಲಿನ ದ. ಕನ್ನಡಿಗರ 'ಮೊಗವೀರ ಸಮಾಜ ಸೇವಾ ಸಂಘ' ಇದರ ಸಹಾಯಾರ್ಥವಾಗಿ ಅಲ್ಲಿನ ಕರ್ನಾಟಕ ನೂತನ ಸಂಗೀತ ಸಭೆಯವರು ನಾಟಕವೊಂದನ್ನು ಹಾಡಿ ಧನ ಸಹಾಯ ಮಾಡಿರುವರು. ಮಾಸ್ಟರ್ ನಾರಾಯಣ ಪಡುಬಿದ್ರಿ ಎಂಬವರ ಉತ್ತಮ ನಟನೆಗೆ ಅಧ್ಯಕ್ಷ ಗಾಯ್‌ತೊಂಡೇ ಅವರು ಚಿನ್ನದ ಪದಕ ವಿತ್ತರು. ಸಹಕರಿಸಿದವರೆಲ್ಲರಿಗೂ ಸಂಘವು ಧನ್ಯವಾದವನ್ನರ್ಪಿಸುತ್ತದೆ.

ತಾಲೂಕುಗಳಿಂದ

ಫಜೀರು ಗ್ರಾಮದ ಶ್ರೀ. ಬಂಟಆಳ್ವ ಎಂಬ ಪಟೇಲರನ್ನು ಅವರು ಕಳ್ಳ ಸಂತೆಯಲ್ಲಿ ಅಕ್ಕಿ ಮಾರಿದ್ದರೆಂಬ ಅರೋಪ ರುಜುವಾತಾಗಿ ಈಗ ಅವರ ಪಟೇಲಿಕೆ ತೆಗೆದುಹಾಕಲಾಗಿದೆ. ಬೇಲಿಯೇ ಹೊಲವನ್ನು ಮೇಯದಂತೆ ನೋಡಬೇಕಾದುದು ಅತ್ಯಾವಶ್ಯಕವೆಂದು ಅಭಿಪ್ರಾಯಪಡಲಾಗಿದೆ.

ನೂಲುವುದು ಮತ್ತು ಖಾಧಿ ಸೇವಾಕಾರ್ಯಗಳನ್ನು ಮಾಡುವ ಉದ್ದೇಶದಿಂದ ಮಹಿಳಾ ಸೇವಾ ಸಭೆ ಎಂಬೊಂದು ಸಂಸ್ಥೆಯು ಮಂಜೇಶ್ವರದಲ್ಲಿ ವೈದ್ಯ ಪಾರ್ಥಸಾರಾಯಣ ಪಂಡಿತ್ ಅವರ ಧರ್ಮಪತ್ನಿಯವರಿಂದ ಉದ್ಘಾಟಿಸಲ್ಪಟ್ಟಿದೆ.

ಜಿಲ್ಲೆಯ ಭಾಗಗಳಿಂದ ಬಂದ ಸಾರಸ್ಯವೂ ಆದರೂ ಬಹಳ ವಿಷಾದಕರವೂ ಆದ ವರ್ತಮಾನಗಳಲ್ಲಿ ಮೂಲ್ಕಿಯ ಹುಲಿಯೊಂದರ ಹಾವಳಿಯ ವರದಿ. ರೇಶನ್ ಕಾಲವೆಂದೇನೊ ಹತ್ತಿರದ ಕಾಡುಗಳಿಂದ ಹುಲಿಯು ನಡುಪೇಟೆಯೊಳಗೆ ಹಾಯ್ದು ಒಂದು ಮನೆಯಲ್ಲಿನ ಕರುವನ್ನು ಕೊಂದು ತಿಂದುಹಾಕಿತಂತೆ. ಆ ಮನೆಯು ಅಲ್ಲಿನ ಪೋಲಿಸ್ ಸ್ಟೇಶನಿಗೆ ಎದುರಿನಲ್ಲಿತ್ತೆಂದೂ ತಿಳಿದು ಬಂದಿದೆ— ಅಂದ ಮೇಲೆ ಹುಲಿಯ ಧೈರ್ಯವಾದರೂ ಎಷ್ಟಿರಬೇಕು!

ಪೊತ್ತೂರಿನ ಬಳಿ ಯಾರೋ ದುರಾತ್ಮರು (ಬಹುಶ್ಯ ನರ ವ್ಯಾಘ್ರಗಳು) ಒರ್ವ ಬ್ರಾಹ್ಮಣನನ್ನು ಕಡಿದು ಹಾಕಿದ್ದು, ಅಂಗಾಂಗಳೆಲ್ಲಾ ಘಾಯಗೊಂಡ ಶವವು ಮಾರ್ಗದಲ್ಲಿ ಬಿದ್ದಿತಂತೆ.

ಉಡುಪಿಯ ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಇದರ ಸಮಾವರ್ತನ ಭಾಷಣದಲ್ಲಿ ಮಿ। ಚೆವೆಲಿಯರ್ ರತ್ನ ಸ್ವಾಮಿಯವರು ಉದ್ಯೋಗ ಶಿಕ್ಷಣದ ಪ್ರಾಮುಖ್ಯತೆ ಕುರಿತು ಬೋಧಪರ ಭಾಷಣವಿತ್ತರು.

ಇಲ್ಲಿಯ ಒಂದು ವಾಣಿಜ್ಯ ಸಂಸ್ಥೆಯವರು ಹೊಸ ವರ್ಷಾರಂಭದಂದು ಸ್ಥಳೀಯ ರಾಮಕೃಷ್ಣಾ ಥಿಯೇಟರಿನಲ್ಲಿ ಕ್ರಿಶ್ಚಿಯನ್ ಹ್ಯಾಸ್ಕೂಲಿನ ನಿವೃತ್ತ ಹೆಡ್ಮಾಸ್ತರ್ (ಕೆಲವು ವರ್ಷಗಳಾದುವು!) ಮಿ। ಇ. ಸಾಲಿಸ್. ಬಿ. ಎ. ಇವರನ್ನು ಸನ್ಮಾನಿಸಿದರು. ಹೆಡ್ಮಾಸ್ತರರ ಹಳೇ ವಿದ್ಯಾರ್ಥಿಗಳೂ ಹಾಜರಿದ್ದರು. ಉಪಹಾರ, ಭಾಷಣ ಪ್ರಶಂಸೆಗಳಾದುವು.

ಪೆರಡಾಲಿನ ಸಂಸ್ಕೃತ ಕೋಲೇಜಿನಲ್ಲಿ ಕರ್ನಾಟಕ ಸಂಗೀತ ವರ್ಧಕ ಸಂಘದವರು ತ್ಯಾಗರಾಜಮಹೋತ್ಸವವನ್ನು ಆಚರಿಸಿದರು— ತಾ. ೧೨. ೧೩. ೧೪ರಲ್ಲಿ. ನಾಟಕ, ಹರಿಕಥೆ, ಸಂಗೀತ ಕಛೇರಿಗಳಿದ್ದವು.

ವಿಶೇಷ ಸುದ್ದಿ ಸಾರ

ಕೇಂದ್ರಶಾಸನ ಸಭೆಯ ಸದಸ್ಯ ವರ್ಗದಿಂದ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಇತರ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸರಕಾರ ಮಂಡಳವನ್ನು ಚುನಾಯಿಸಿದರೆ ಒಂದು ತರದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬಹುದೆಂಬ ಯೋಜನೆಯಿಂದ ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷ ನಾಯಕರಾದ ಶ್ರೀ ಭುಲಾಭ್ಹಾ ದೇಸಾಯಿ ಅವರೂ ಮುಸ್ಲಿಂ ಲೀಗಿನ ಲಿಯಾಖತ್ ಆಲಿ ಖಾನರೊಂದಿಗೆ ಮಾತುಕತೆ ನಡೆಸಿದ್ದು ಏನೋ ಒಂದು ತೃಪ್ತಿಕರ ಒಪ್ಪಂದಕ್ಕೆ ಬಂದಿರುವರೆಂದು ತಿಳಿದುಬಂದಿದೆ. ಈ ಯೋಜನೆಯು ರಾಜಾಜಿಯವರ ಸೂಚನೆಗಳ ಮಾದರಿಯಲ್ಲಿರಬಹುದೆಂದು ಊಹಿಸಲಾಗಿದೆ. ಇದಕ್ಕೆ ವ್ಯಾಸ್ ರಾಯರ, ಗಾಂಧೀಜಿಯವರ ಮಾತ್ರವಲ್ಲ ಮಿ। ಜಿನ್ನರ ಅನುಮತಿಯೂ ದೊರಕುವು ಹೇಗೊ ಎಂದೂ ಈ ಸುದ್ದಿ ಹೊರಡಿಸಿದ ಬಾತ್ಮಿದಾರರು ಸಂದೇಹಪಟ್ಟಿದ್ದಾರೆ.

○ ○ ○ ○ ○ ○

ಕಳೆದ ವಾರದಲ್ಲಿ ಅಮೇರಿಕದ ಯುದ್ಧ ನೌಕೆಗಳು ಜಪಾನರ ಅತೀ ಶಕ್ತಿಯುಕ್ತವಾದ ೨೫ ಹಡಗಗಳನ್ನೂ ಮುಳುಗಿಸಿವೆ—ಇಂಡೋಚೀನದ ಕರಾವಳಿಯ ಯುದ್ಧವೊಂದರಲ್ಲಿ.

○ ○ ○ ○ ○ ○

"ಗಾಂಧಿಯವರು ಬಿಡುಗಡೆ ಮಾಡಲ್ಪಟ್ಟಾಗ ವ್ಯಾಸರಾಯರೊಡನೆ ಭೇಟಿಮಾಡಿಸಿದರು. ಅದೂ ತಿರಸ್ಕರಿಸಲ್ಪಟ್ಟಿತು. ಗಾಂಧಿ-ಜಿನ್ನಾ ಮಾತುಕತೆ ಸಮಯದಲ್ಲಿ ಸರಕಾರವು ಮುಂದಾಳುಗಳನ್ನು ಬಂಧಮುಕ್ತ ಮಾಡದೆ ಪರಸ್ಪರ ಮಾತುಕತೆ ಒಪ್ಪಂದಕ್ಕೆ ಸಹಾಯವಾಗದಂತೆ ಮಾಡಿತು. ಇದರಿಂದ ಅವರಿಗೆ ಸ್ವಾತಂತ್ರ್ಯವನ್ನು ಈಗ ಕೊಡಲು ಇಷ್ಟವಿಲ್ಲವೆಂದು ತೋರುತ್ತದೆ" ಹೀಗೆಂದು ವಿಜಯಲಕ್ಷ್ಮಿ ಪಂಡಿತರು ಅಮೇರಿಕದ ಪೆಸಿಫಿಕ್ ರಿಲೇಶನ್ ಪರಿಷತ್ತಿನ ಭಾಷಣದಲ್ಲಿ ತಿಳಿಸಿದರು.

○ ○ ○ ○ ○ ○

ಶ್ರೀಮತಿ ಸರೋಜಿನಿ ದೇವಿಯವರು ತಾ. ೧೪ರಂದು ಮದ್ರಾಸಿಗೆ ಬಂದಿರುವರು. ಅಲ್ಲಿ ಒಂದು ವಾರದ ತನಕ ನಿಲ್ಲುವರೆಂದು ಸುದ್ದಿ. ಕಲ್ಕತದಲ್ಲಿ ಕೊಟ್ಟಂತೆ ಇಲ್ಲೂ ಮಹತ್ವದ ಭಾಷಣಗಳಾಗಬಹುದೆಂದು ನಿರೀಕ್ಷಿಸಲಾಗಿದೆ.

○ ○ ○ ○ ○ ○

"ಕಾನೂನು ಬಾಹಿರವೆಂದು ನಿಷೇಧಿಸಲ್ಪಟ್ಟಿರದ ಧ್ವಜ (ಕಾಂಗ್ರೆಸ್ ಧ್ವಜ)ವನ್ನು ಸಾರ್ವಜನಿಕ ಸ್ಥಳವೊಂದರಲ್ಲಿ ನೆಡುವುದು ಶಾಸನ ವಿರೋಧವಲ್ಲ. ಅಂಥಹ ಧ್ವಜವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರೆ ಅದನ್ನು ಎದುರಿಸುವುದು ಅಲ್ಲಿ ನೆರೆದವರ ಹಕ್ಕು ಇರುತ್ತದೆ. ಹೀಗಿರುವುದರಿಂದ ಅಧಿಕಾರಿಗಳು ಅದನ್ನು ತಮ್ಮ ಕರ್ತವ್ಯಪಾಲನೆ ದೃಷ್ಟಿಯಿಂದ ತೆಗೆದುಹಾಕಲು ಪ್ರಯತ್ನ ಮಾಡಿದ್ದೇವೆಂದು ಹೇಳಲು ಹಕ್ಕುಳ್ಳವರಾಗುವುದಿಲ್ಲ. ಸಾರ್ವಜನಿಕ ಅಧಿಕಾರಿಗಳು ಕರ್ತವ್ಯ ಪರಿಪಾಲನೆಯ ಹೆಸರಲ್ಲಿ ಅನ್ಯಾಯ ಮಾಡಬೇಕೆಂದು ಎಂದೂ ಅಧಿಕೃತರಾಗಿಲ್ಲ." ಹೀಗೆಂದು ಎಚ್ಚರಿಸುತ್ತ, ನಾಗಪುರ ಹ್ಯಾಕೋರ್ಟಿನ ನ್ಯಾಯಾಧೀಶ ನಿಯೋಗಿಯವರು ಯಾವಳ್ಳಿಯ ಧ್ವಜ ಪ್ರಕರಣದಲ್ಲಿ ಆರೋಪಿತರಾದ ಐವರನ್ನು ನಿರಪರಾಧಿಗಳೆಂದು ಬಿಟ್ಟುಬಿಟ್ಟರು.

○ ○ ○ ○ ○ ○

ಈಗ ಸೇವಾಗ್ರಾಮದಲ್ಲಿ ಕುನ್ವಾರ್ ದ್ವಾರಕಜೀ ಎಂಬ ಶಿಕ್ಷಣತಜ್ಞರು ಬಂದಿದ್ದಾರೆ. ಬರೇ ಎಂಟು ದಿನಗಳಲ್ಲಿ ಅಶಿಕ್ಷಿತರಿಗೆ ಓದಲು ಬರೆಯಲು ಕಲಿಸುವ ಒಂದು ಯೋಜನೆಯನ್ನು ಇವರು ತಮ್ಮ ಸ್ವಂತ ಅನುಭವದಿಂದ ತಯಾರಿಸಿದ್ದಾರೆ. ಮಹಾತ್ಮಾಜಿಯವರು ಅವರ ಪ್ರಯತ್ನಗಳಲ್ಲಿ ತುಂಬಾ ಅಭಿರುಚಿ ತೋರಿಸುತ್ತಿದ್ದಾರೆ.

○ ○ ○ ○ ○ ○

ಕಳೆದ ತಾ. ೧೧ರಲ್ಲಿ ರಾವಲ್‌ಪಿಂಡಿಯ ಓರ್ವ ಕಮ್ಮಾರನಿಗೆ ಬಾಟ್ಲಿ ಆಕೃತಿಯ ಒಂದು ಲೋಹದ ವಸ್ತು ಸಿಕ್ಕಿತು. ಅದರ ಲೋಹ ಭಾಗವನ್ನು ಕರಗಿಸಿ ತೆಗೆಯೋಣವೆಂದು ಅವನು ಅದನ್ನು ಬಿಸಿಮಾಡಲಿಟ್ಟಾಗ ಅದು ಭಯಂಕರ ಸ್ಫೋಟವನ್ನುಂಟುಮಾಡಿ ಕಮ್ಮಾರನ ಸಮೇತ ಅವನ ಕುಟುಂಬದ ನಾಲ್ಕು ಮಂದಿಗಳನ್ನು ತಕ್ಷಣ ಮಡಿದರು—ಅದೊಂದು ಬೊಂಬ್ ಆಗಿತ್ತಂತೆ.

○ ○ ○ ○ ○ ○

ಡೆಂಕನಾಲ್ ಎಂಬದು ಒರಿಸ್ಸಾದೊಳಗಿನ ಒಂದು ಸಂಸ್ಥಾನ. ಅಲ್ಲಿಯ ಮಹಾರಾಜರ ಮೂರನೇ ತಮ್ಮ ದೇವಸಿಂಗ್ ಎಂಬ ರಾಜಕುಮಾರರು ಲಾಭಖೋರತನ ಮಾಡಿದರೆಂದೂ ಅಕ್ರಮ ದಾಸ್ತಾನಿಟ್ಟಿದ್ದರೆಂದೂ ಅಲ್ಲಿನ ಮೆಜಿಸ್ಟ್ರೇಟರು ಅವರಿಗೆ ೨ ವರ್ಷ ಶಿಕ್ಷೆ, ೧೫ ಸಾವಿರ ರೂಪ್ಯಾ ಜುಲ್ಮಾನೆ ಮಾಡಿದ್ದಾರೆ—ಇತರರ ಪಾಡೇನು?

ಡಂಬಾರ್ಟನ್ ಓಕ್ಸ್‌ನಲ್ಲಿ ನಡೆದುದೇನು?

ಅದರ ಸಂಕ್ಷೇಪ ವಿಚಾರ

ಮುಂಬರಲಿರುವ ಜನಾಂಗ ಮಂಡಳ

'ಡಂಬಾರ್ಟನ್ ಓಕ್ಸ್ ಪರಿಷತ್ತು' 'ಡಂಬಾರ್ಟನ್ ಓಕ್ಸಿನಲ್ಲಿ ಒಪ್ಪಿಕೊಂಡ ಸೂಚನೆಗಳು' ಡಂಬಾರ್ಟನ್ ಓಕ್ಸಿನ ಗೊತ್ತುಗುರಿ'? 'ಡಂಬಾರ್ಟನ್ ಓಕ್ಸಿನ ನಿರ್ಣಯ' ಎಂಬೀ ವಿಷಯದ ಕುರಿತು ಈಚೀಗೆ ವರ್ತಮಾನ ಪತ್ರಿಕೆಗಳಲ್ಲಿ ಬಹಳವಾಗಿ ವರದಿಗಳೂ ಲೇಖಗಳೂ ಬರುತ್ತಲಿವೆ. ಆದರೆ ಅದು ಎಂತಹ ಪರಿಷತ್ತು, ಏತಕ್ಕಾಗಿ ಸೇರಿತ್ತು, ಮತ್ತು ಅದರ ಉದ್ದೇಶ ಗುರಿಗಳೇನು ಎಂಬುದರ ಕುರಿತು ಬಹಳ ಜನರಿಗೆ ಸರಿಯಾಗಿ ಇನ್ನೂ ತಿಳಿದಿಲ್ಲ.

ಇದಕ್ಕಾಗಿ ಅಮೇರಿಕನ್ ಸ್ಪೇಶಲ್ ವಾರ್ತಾ ಸಂಸ್ಥೆಯವರು ಒಂದು ಪ್ರಕಟನೆಯಲ್ಲಿ ಸಂಕ್ಷೇಪವಾಗಿಯೂ, ಸರಳ ರೀತಿಯಲ್ಲಿಯೂ ಆ ಡಂಬಾರ್ಟನ್ ಓಕ್ಸ್ ಪರಿಷತ್ತಿನ ಕುರಿತು ಪ್ರಚಾರಕ್ಕಾಗಿ ಕಳುಹಿಸಿರುವರು. ಅದರ ಮುಖ್ಯಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಡಂಬಾರ್ಟನ್ ಓಕ್ಸ್‌ನಲ್ಲಿ ಚರ್ಚಿಸಲ್ಪಟ್ಟ ಸೂಚನೆಗಳೇನು?:–ಸಂಯುಕ್ತ ಅಮೇರಿಕದ ರಾಜಧಾನಿಯಾದ ವಾಶಿಂಗ್ಟನ್ ನಗರದ ಸಮೀಪದಲ್ಲಿ ಇರುವ ಒಂದು ಸ್ಥಳಕ್ಕೆ ಡಂಬಾರ್ಟನ್ ಓಕ್ಸ್ ಎಂದು ಹೆಸರು. ಇಲ್ಲಿ ಮಿತ್ರ ಜನಾಂಗದ ಎಲ್ಲಾ ಪ್ರತಿನಿಧಿಗಳು ಒಟ್ಟು ಸೇರಿ ಒಂದು ಅಂತರಾಷ್ಟ್ರೀಯ ಮಂಡಳವನ್ನು ರಚಿಸಬೇಕೆಂದು ನಿರ್ಧರಿಸಿದರು. ಅಂತಹ ಅಂತರಾಷ್ಟ್ರೀಯ ಮಂಡಳವು ಹೇಗೆ ಸ್ಥಾಪಿಸಲ್ಪಡಬೇಕು ಮತ್ತು ಅದು ಹೇಗೆ ಕಾರ್ಯವನ್ನು ಕೈಕೊಳ್ಳಬೇಕೆಂದು ಮಾಡಲ್ಪಟ್ಟ ಸೂಚನೆಗಳಿಗೆ ನಾಲ್ಕು ಶಕ್ತಿ ರಾಷ್ಟ್ರಗಳಾದ ಬ್ರಿಟನ್, ಚೀನಾ, ರಷ್ಯಾ ಮತ್ತು ಅಮೇರಿಕಾಗಳ ಪ್ರತಿನಿಧಿಗಳು ಒಪ್ಪಿಗೆಯಿತ್ತರು.

ಈ ಸೂಚನೆಗಳನ್ನು ಯಾವ ಪ್ರಯೋಜನಕ್ಕೆ ಉಪಯೋಗಿಸಲಾಗುವುದು?:–ಈ ನಾಲ್ಕು ಪ್ರಧಾನ ರಾಷ್ಟ್ರಗಳು ಈ ಸೂಚನೆಗಳನ್ನು ಸರಿಯಾಗಿ ಪರ್ಯಾಲೋಚಿಸಿ ಮತ್ತೆ ತಮ್ಮೊಂದು ಸಂಯುಕ್ತಸಭೆಸೇರಿಸಿ ಅದರಲ್ಲಿ ಆ ಅಂತರಾಷ್ಟ್ರೀಯ ಸಂಸ್ಥೆಯ ರೂಪರಚನೆಗಳು ಇತರ ಜನಾಂಗಗಳ ಸಹಕಾರ ಪದ್ಧತಿಗನುಕೂಲವಾಗಿ ಮಾರ್ಪಡಿಸಲು ಬರುತ್ತದೆ.

ಸ್ಥಾಪಿಸಲ್ಪಡುವ ಆ ಸಂಸ್ಥೆಯು ಯಾವ ಯಾವ ಕ್ಷೇತ್ರಗಳಲ್ಲಿ ತನ್ನ ಕಾರ್ಯ ನಿರ್ವಹಿಸುವುದು?:–ಜಗತ್ತಿನಲ್ಲಿ ಭದ್ರತೆಯನ್ನು ಕಾಯುವ ಕ್ಷೇತ್ರದಲ್ಲಿ ಅದು ಈ ಕೆಳಗಿನ ಸಾಧನಗಳ ಮೂಲಕ ಮುಂದೆ ಯುದ್ಧಗಳಾಗದಂತೆ ಸಾಧಿಸುವುದು: (೧) ಶಾಂತರೀತಿಯಲ್ಲಿ ಪರಸ್ಪರ ಇತ್ಯರ್ಥಗಳನ್ನು ಮಾಡಿಕೊಡಲು ಉತ್ತೇಜನಕೊಟ್ಟು ಅಂತರಾಷ್ಟ್ರೀಯ ಜಗಳಗಳನ್ನುನಿವಾರಿಸುವುದು. (೨) ವಿಶ್ವಶಾಂತಿಗೆ ಬರಬಹುದಾದ ಗಂಡಾಂತರವನ್ನು ತಡೆಯುವುದು ಇಲ್ಲವೇ ತೆಗೆದು ಹಾಕುವುದು. (೩) ಒಟ್ಟುಗೂಡಿಸಿದ ಶಕ್ತಿಬಲದಿಂದ ಶಾಂತಿಭಂಗ ಮಾಡಿದವರನ್ನು ಅಣಗಿಸುವುದು.

ಮಾನವ ಸ್ವಾತಂತ್ರ್ಯದ ಮೂಲ ತತ್ವಗಳು ಮಾನ್ಯವಾಗುವಂತೆ ಆ ಸಂಸ್ಥೆಯು ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲೂ ಕೆಲಸಮಾಡಿ ಮಾನವೀಯತೆಯ ಕಾರ್ಯವನ್ನು ಮಾಡುವುದು.

ಯಾವ ಪ್ರಧಾನ ಸಂಘಗಳ ಮೂಲಕ ಈ ಸಂಸ್ಥೆಯು ಕಾರ್ಯನಿರ್ವಹಿಸುವುದು?:–ಈ ಸಂಸ್ಥೆಗೆ ಮೂರು ಮುಖ್ಯಾಂಗಗಳಿರುವವು. ವರ್ಷಕ್ಕೊಂದು ಸಾರಿ ಸೇರುವ ಒಂದು ಕೇಂದ್ರ ಸಭೆ. ಎಲ್ಲಾ ಜನಾಂಗಗಳ ಪ್ರತಿನಿಧಿಗಳಿಗೂ ಇದರಲ್ಲಿ ಸ್ಥಾನವಿದೆ; ಮತ್ತು ಓಟಿನ ಹಕ್ಕಿದೆ.

ಎರಡನೆಯ ಅಂಗವೆಂದರೆ ಒಂದು ಭದ್ರತೆ ಮಂಡಳ. ಇದು ಸದಾ ಸಿದ್ಧವಾಗಿದ್ದು ಹನ್ನೊಂದು ರಾಷ್ಟ್ರಗಳ ಪ್ರಾತಿನಿಧ್ಯದಿಂದ ಕೂಡಿರುವಂತಹದು. ಬ್ರಿಟನ್, ಅಮೇರೀಕಾ, ರಷ್ಯಾ, ಚೀನಾ ಮತ್ತು ಫ್ರಾನ್ಸ್ ಈ ರಾಷ್ಟ್ರಗಳಿಗೆ ಇದರಲ್ಲಿ ಶಾಶ್ವತ ಪಾತಿನಿಧ್ಯ ಸ್ಥಾನವಿದೆ. ಇತರ ರಾಷ್ಟ್ರಗಳಿಗೆಲ್ಲ ಎರಡು ವರ್ಷಗಳ ಅವಧಿಯವರೇಗೆ ಸರತಿ ಮೇಲೆ ಪ್ರಾತಿನಿಧ್ಯ ಕೊಡಲ್ಪಡುವುವು.

ಅಂತರಾಷ್ಟ್ರಿಯ ನ್ಯಾಯ ತೀರ್ಮಾನ ಸಭೆಯೇ ಇದರ ಮೂರನೇ ಅಂಗ. ಇದರಲ್ಲಿ ಎಲ್ಲಾ ಜನಾಂಗದವರಿಗೂ ಸ್ಥಾನವಿದೆ.

ಕೇಂದ್ರ ಸಭೆಯು ಕೆಲಸವೇನು?: ಜಗತ್ತಿನ ಆರ್ಥಿಕ ಸಾಮಾಜಿಕ ಮತ್ತು ಅಂತರಾಷ್ಟ್ರೀಯ ವಿಚಾರಗಳಲ್ಲಿ ಹೇಗೆ ಮತ್ತು ಯಾವ ಯೋಗ್ಯರೀತಿಯಲ್ಲಿ ಸುಧಾರಣೆ, ಪ್ರಗತಿಗಳನ್ನು ಮಾಡಬಹುದು, ಶಾಂತಿ ಭದ್ರತೆಗಳನ್ನು ಹೇಗೆ ರಕ್ಷಣೆ ಮಾಡಿಕೊಳ್ಳಬಹುದು ಎಂಬ ವಿಷಯವನ್ನು ಪರ್ಯಾಲೋಚಿಸಿ, ಪ್ರಚಾರಮಾಡುವುದೇ ಈ ಸಭೆಯ ಮುಖ್ಯ ಕಾರ್ಯ ಅಲ್ಲದೆ ಭದ್ರತಾ ಮಂಡಳಕ್ಕೆ ಸರತಿ ಪ್ರಕಾರ ಆರಿಸಲಿಕ್ಕಿರುವ ಪ್ರತಿನಿಧಿಗಳನ್ನು ಚುನಾಯಿಸುವುದೂ ಇದರ ಕೆಲಸ.

ಸಂಸ್ಥೆಯ ಖರ್ಚಿನ ಕುರಿತು ಮೇಲ್ತನಕಿ ನೋಡುವುದೂ ಇದೇ ಸಭೆ.

ಭದ್ರತಾ ಮಂಡಳದ ಪ್ರಾಮುಖ್ಯ ಕಾರ್ಯ ಕಲಾಪವೇನು?:–ಅಂತರಾಷ್ಟ್ರೀಯ ಶಾಂತಿಭಂಗಕ್ಕೆ ಎಡೆಕೊಡಬಹುದಾದಂತಹ ಜನಾಂಗಗಳೊಳಗಿನ ಕಲಹಗಳನ್ನು ಇತ್ಯರ್ಥಿಸುವುದು; ಶಾಂತಿ ರೀತಿಯಲ್ಲಿ ಕಲಹಗಳನ್ನು ಸುಧಾರಿಸಿಕೊಳ್ಳುವಂತೆ ಜನಾಂಗಗಳಿಗೆ ಎಚ್ಚರಿಕೆ ಕೊಡುವುದು; ಇತ್ಯರ್ಥ ಮಾಡಿಕೊಳ್ಳುವ ಬಗೆಹರಿಸಿಕೊಳ್ಳುವ ವಿಧಾನಗಳನ್ನು ತಿಳಿಸುವುದು; ಕಲಹವು ಬೆಳೆದರೆ ರಾಜಕಾರಣ ನೀತಿಗನುಸಾರವಾಗಿ ಮಾತುಕತೆಗಳ ಮೂಲಕ, ಸಹಕಾರ ಸಹಾಯವನ್ನು ತಪ್ಪಿಸುವ ಮೂಲಕ, ಕೊನೆಗೆ ಯಾವುದೂ ಸಾಧ್ಯವಿಲ್ಲದಿದ್ದರೆ ನೆಲ, ಜಲ, ಆಕಾಶ ಶಸ್ತ್ರಾಸ್ತ್ರಗಳ ಮೂಲಕ ಜಗಳಗಂಟ ಜನಾಂಗವನ್ನು ಅಣಗಿಸಿ ಬಿಡುವುದು.

ಯೋಗ್ಯ ಒಪ್ಪಂದಗಳ ಮೂಲಕ ಎಲ್ಲಾ ಜನಾಂಗಗಳು ಈ ಭದ್ರತಾ ಮಂಡಳಕ್ಕೆ ಸೈನ್ಯ, ಯುದ್ಧಾಸ್ತ್ರ ಸಲಕರಣೆಗಳನ್ನು ಬೇಕಾದಾಗ ಕೊಡಬೇಕು. ಈ ಮಂಡಳದಿಂದ ನೇಮಕ ಹೊಂದುವ ಅಧಿಕಾರಿಯ ಕೈಕೆಳಗೆ ಇವುಗಳು ವಹಿಸಿಕೊಡಲಾಗುವುವು. ಮಂಡಳದ ನಿರ್ದೇಶಕತ್ವದಲ್ಲಿ ಶಾಂತಿಭಂಗ ರಾಷ್ಟ್ರಗಳ ಮೇಲೆ ಶಕ್ತಿಯನ್ನುಪಯೋಗಿಸಿ ಅದರ ಚಟುವಟಿಕೆಗಳನ್ನೂ ಅಣಗಿಸಲಾಗುವುದು.

ಅಂತರಾಷ್ಟ್ರೀಯ ನ್ಯಾಯ ತೀರ್ಮಾನ ಮಂಡಳದ ಕೆಲಸವೇನು?: ನ್ಯಾಯರೀತಿಯಲ್ಲಿ ತೀರ್ಮಾನ ಮಾಡಲಾಗುವ ಕಲಹ, ಜಗಳ, ಚರ್ಚಾಸ್ಪದ ವಿಷಯಗಳು ಈ ಸಂಸ್ಥೆಯು ಇತ್ಯರ್ಥಿಸುವುದು. ಅಂತರಾಷ್ಟ್ರೀಯ ಕಾನೂನು ವಿಷಯಕವಾದ ನ್ಯಾಯಾಲೋಚನೆಯನ್ನು ಇದು ಭದ್ರತಾ ಮಂಡಳಕ್ಕೆ ಬೇಕಾದಾಗ ಕೊಡುವುದು.

ಹಿಂದಿನ ಜನಾಂಗ ಸಭೆಗೂ ಮುಂದಿನ ಈ ಅಂತರಾಷ್ಟ್ರೀಯ ಸಭೆಗೂ ಇರುವ ವ್ಯತ್ಯಾಸವೇನು?: ಹಿಂದಿನ ಜನಾಂಗ ಸಭೆಯ ಕೇಂದ್ರ ಸಭೆಗೂ, ಅದರ ಭದ್ರತಾ ಮಂಡಳಕ್ಕೂ ಅಂತರಾಷ್ಟ್ರೀಯ ವ್ಯವಹಾರದಲ್ಲಿ ಸಮಾನ ಹಕ್ಕು ಕೊಡಲ್ಪಟ್ಟಿತ್ತು. ಆದರಿಂದ ಸಭೆಯು ತೀರ್ಮಾನಿಸಿದ ವಿಷಯಕ್ಕೆ ಮಂಡಳದ ಒಪ್ಪಿಗೆ ಸಿಗದಾಯಿತು. ಮಂಡಲದ ಧೋರಣೆಗೆ ಸಭೆ ಸಮ್ಮತಿಸದಾಯಿತು. ಹೀಗೆ ಎರಡರೊಳಗೆ ಪರಸ್ಪರ ತಿಕ್ಕಾಟ ಪ್ರಾರಂಭವಾಗಿ ಕೊನೆಗೆ ಎರಡೂ ನಿಷ್ಪ್ರಯೋಜನಕಾರಿಯಾದುವು.

ಆದರೆ ಡಂಬಾರ್ಟನ್ ಓಕ್ಸಿನ ಈ ಅಂತರಾಷ್ಟ್ರೀಯ ಮಂಡಳದ ಕೇಂದ್ರ ಸಭೆಗೂ, ಭದ್ರತಾ ಮಂಡಳಕ್ಕೂ ಪ್ರತ್ಯೇಕ ಪ್ರತ್ಯೇಕ ಹೊಣೆಗಾರಿಕೆ ಕೊಡಲಾಗುವುದು. ಭದ್ರತಾ ಮಂಡಳವು ನಿರ್ಧರಿಸಿದ ಕಾರ್ಯಕ್ರಮಕ್ಕೆಯಾರೂ ತಡೆಹಾಗುವಂತಿಲ್ಲ. ಈವೊಂದು ಪ್ರಾಮುಖ್ಯ ವ್ಯತ್ಯಾಸವಿರುವುದರಿಂದ ಮುಂದಿನ ಈ ಮಂಡಳವು ತೃಪ್ತಿಕರವಾಗಿ ವಿಶ್ವಶಾಂತಿ ರಕ್ಷಿಸಬಲ್ಲದೆಂದು ಹಾರೈಸಲಾಗಿದೆ.

ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು

ಜಾಂಬಕನ್ನು ಪ್ರತಿ ರಾತ್ರೆ ಮಲಕೊಳ್ಳುವಾಗ ಹಚ್ಚಿರಿ.

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಕೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಬೇಗನೇ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿಹೋಗುವುದು. ಹಾಗೆ ಅವು ಶ್ವಾಸಕೋಶದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

CANARA BANK LTD.

(Incorporated in British India Liability of Members Limited.)

NOTICE

Is hereby given that under Section 37 of the Indian Companies Act VII of 1913, the Register of Members and Share transfer Books of the Bank, will be closed from Monday the 29th January '45 to Monday, the 19th February 1945 both days inclusive.

ಕೆನರಾ ಬೇಂಕ್ ಲಿಮಿಟೆಡ್

ನೋಟೀಸು

1913ನೇ ಇಸವಿಯ ನಂಬ್ರ VIIನೇ ಇಂಡಿಯನ್ ಕಂಪೆನಿಸ್ ಆಕ್ಟಿನ 37ನೇ ಸೆಕ್ಶನಿಗನುಗುಣವಾಗಿ, ಈ ಬೇಂಕಿನ ಮೆಂಬರರ ರಿಜಿಸ್ಟರು ವ ಶೇರು ಟ್ರಾನ್ಸಫರ ಪುಸ್ತಕಗಳು 1945ನೇ ಇಸವಿ ಜನವರಿ ತಾ 29ನೇ ಸೋಮವಾರದಿಂದ 1945ನೇ ಇಸವಿ ಫೆಬ್ರವರಿ ತಾ 19ನೇ ಸೋಮವಾರದ ವರೆಗೆ (ಉಭಯ ದಿವಸಗಳು ಕೂಡಿ) ಮುಚ್ಚಲ್ಪಡುವುವು.

By Order
Sd/–P. Sarvothum Nayak
General Manager

Office of the Bank.
Mangalore,
17th January, 1945.

ಆದರೂ ಕಳ್ಳನಲ್ಲ

(೨ನೇ ಪುಟದಿಂದ)

ಕೆಲವು ಕೈದಿಗಳಿಗೆ ಜೈಲಿನ ಗೋಡೆಗೆ ಸುಣ್ಣ ಸಾರಿಸುವ ಕೆಲಸ ಕೊಟ್ಟಿದ್ದರು. ಇವನಿಗೆ ತೋಟ ಅಗೆಯುವುದಕ್ಕೆ ಹಾಕಿದ್ದರು. ಅಂದು ಮಧ್ಯಾಹ್ನ ಇವನು ಸುಣ್ಣ ಬಳಿಯುವ ಕೆಲಸದ ಕೈದಿಯೊಂದಿಗೆ 'ನಿನ್ನ ಮನೆಯವರಿಗೆ ೨ ಸಾವಿರ ರೂಪಾಯಿ ಕೊಡುತ್ತೇನೆ. ನನಗೆ ಸಹಾಯ ಮಾಡು' ಎಂದು ಒಲಿಸಿಕೊಂಡು ಅವನ ಕೆಲಸ ತಾನು ಯಾರಿಗೂ ತಿಳಿಯದಂತೆ ತೆಗೆದು, ಸುಣ್ಣ ಬಳಿಯುತ್ತಾ ಬಳಿಯುತ್ತಾ ಸೀದಾ ಮಾರ್ಗಕ್ಕೆ ಹೊರಟ. ಹೊರಟು ಹೋಗಿ ಮತ್ತೆ ಮಾಯವಾಗಿ ನಂತರ ಸಿಕ್ಕಿದ್ದು ಅವನು ಮದ್ರಾಸಿನಲ್ಲಿ.

ಬೆಂಗಳೂರಲ್ಲಿ ಅವನು ಮಾಡಿದ ಕತೆ ಕೇಳಿ ನನ್ನ ಕಾರಿನಲ್ಲಿ 'ಸರದಾರ್ ಹೋಟೇಲಿಗೆ' ಹೋದನಲ್ಲವೇ? ಅವನ ಬಳಿಯಲ್ಲಿ ಪೇದೆಯಾಗಿದ್ದವನೂ ಅವನ ಕೂಟದ ಒಬ್ಬ ಸಹಾಯಕ. ಹೋಟಲಿಗೆ ಹೋದಾಕ್ಷಣ ಅಲ್ಲಿನ ಮೇನೇಜರನ್ನು ಕರೆದು "ನಾಳೆ ಹದಿನೆರಡು ಗಂಟೆಯೊಳಗೆ ಐದು ಸಾವಿರ ಬೂಂದಿ ಲಾಡು ತಯಾರಿಸಿ ಕೊಡಬಹುದೇ. ಒಂದು ಟೀಪಾರ್ಟಿಗಾಗಿ ಇಲ್ಲಿಂದ ಐವತ್ತು ಮೈಲು ದೂರದ ಊರಿಗೆ ಕಳುಹಿಸಬೇಕು." ಎಂದು ಮುನ್ನೂರು ರೂಪಾಯಿ ಮುಂಗಡವಾಗಿ ಕೊಟ್ಟ. ಹೋಟೇಲಿನವರು ಒಪ್ಪಿಕೊಂಡರು.

ಮರುದಿವಸ ನನ್ನ ಕಾರಿನಲ್ಲಿ ಶರಾಫ ಅಂಗಡಿಗೆ ಹೋದನಲ್ಲವೇ?. ಅಲ್ಲಿ ಅವನು ಈ ಮೊದಲು ನಾಲ್ಕೈದು ಸಾರಿ ಸಾವಿರ ಎರಡು ಸಾವಿರ ರೂಪಾಯಿಯ ಸಾಮಾನು ಖರೀದಿ ಮಾಡಿದ್ದ. ಆ ದಿನ ಐದು ಸಾವಿರ ಚಿಲ್ಲರೆ ರೂಪಾಯಿಗಳ ಸಾಮಾನು ಖರೀದಿಮಾಡಿ, ಆ ಚಿಲ್ಲರೆ ರೂಪಾಯಿ ಕೊಟ್ಟು "ಐದು ಸಾವಿರ ಹೋಟಲಿನಲ್ಲಿ ಕೊಡುತ್ತೇನೆ. ನಿಮ್ಮ ಕಾರಕೂನನನ್ನು ಕಳುಹಿಸಿ" ಎಂದು ಹೇಳಿ ಅಲ್ಲಿ ಹೊರಗೆ ನಿಂತಿದ್ದ ಲಾರಿಯವರಿಗೆ ಸಾಮಾನು ತೆಗೆದುಕೊಂಡು ಹೋಗಲು ಸೂಚನೆ ಕೊಟ್ಟು, ಕಾರಕೂರನೊಂದಿಗೆ ನನ್ನ ಕಾರಿನಲ್ಲಿ ಪುನಃ ಹೋಟ್ಲೀಗೆ ಬಂದ.

ಹೋಟ್ಲೀನೊಳಗೆ ಹೋಗುತ್ತಲೇ ಅಲ್ಲಿನ ಮೆನೇಜರನಿಗೆ ನೋಡಿ: "ಆ ಐದು ಸಾವಿರ ಈತನಿಗೆ ಕೊಡಿ" ಎಂದ. ಮೆನೇಜರ: "ಆಗಲಿ ಈಗಲೇ ಕೊಡುತ್ತೇನೆ". ಎಂದು ಹೇಳಿ ಲಾಡು ತಯಾರಿಸುವ ಒಳಕೋಣೆಗೆ ಹೋಗಿ ಬಂದು ಕಾರಕೂನನನ್ನು ನೋಡಿ ಕೊಂಡು ಹೋಗಲು ಬುಟ್ಟಿಗಿಟ್ಟು ತರಲಿಲ್ಲವೇ? ಎಂದು ಕೇಳಿದಾಗ ಕಾರಕೂನನು "ಚೆಕ್ ಕೊಡಿ ಸ್ವಾಮಿ" ಎಂದ. ಅದಕ್ಕೆ ಮೆನೇಜರ್ "ಚೆಕ್? ಯಾವುದಕ್ಕೆ ಚೆಕ್? ಲಾಡುಗಳಿಗೆ ನೀವು ಚೆಕ್ ಕೊಡಬೇಕು. ಮುನ್ನೂರು ರೂಪಾಯಿ ಕೊಟ್ಟಿದ್ದಾರೆ. ನಮ್ಮ ರೇಟ್ ಪ್ರಕಾರ ಇನ್ನೂ ಮುನ್ನೂರು ರೂಪಾಯಿ ಬರಬೇಕು." ಎಂದು ಗದರಿಸಿ ಹೇಳುವಾಗ ಶರಾಫರ ಕಾರಕೂನನಿಗೆ ದಿಗಿಲುಂಟಾಯಿತು. ಮೆನೇಜರನಿಗೂ ಅವನಿಗೂ ವಾಗ್ಯುದ್ಧ ನಡೆದದ್ದು ನನ್ನ ಗಮನಕ್ಕೆ ಬಂದಿರಲಿಲ್ಲವೇ? ಅದೇ ಜಗಳ ಅದು.

ಇತ್ಯರ್ಥಕ್ಕಾಗಿ ಅವರು ಮಹಡಿಗೆ ಹೋಗಿ 'ಲಾಡುಗಳಿಗೆ' 'ಆರ್ಡರ್ ಕೊಟ್ಟ ನಮ್ಮ ಆಸಾಮಿಯನ್ನು ನೋಡಿದರೆ ಅವನು ಅಲ್ಲಿರಲಿಲ್ಲ. ಅವನ ಠಕ್ಕು ಜವಾನನೂ ಕಾಣೆ. ನನಗಂತೂ ಬಾಡಿಗೆ ಸೊನ್ನೆ, ಹೋಟೇಲಿನವರಿಗೆ ಲಾಡು ಹಣ ಟೊಪ್ಪಿ, ಶರೀಫರಿಗೆ ಐದು ಸಾವಿರಕ್ಕೆ ಠಕ್ಕರ್.

ಇನ್ನೂ ಅವನು ಮೈಸೂರಿನಲ್ಲಿ ಮಾಡಿದ ಸಾಹಾಸದ ಕೆಲಸಗಳನ್ನೂ ನಾನು ಕೇಳಿದ್ದೇನೆ. ಈಗ ಮಧ್ಯರಾತ್ರೆಯಾಯಿತು. ಆ ವಿಚಿತ್ರ ಮೂರ್ತಿಯ ಕತೆ ಬಹು ಸಾರಸ್ಯವಾಗಿದೆ. ನಾಡಿದ್ದು ಅಂದರೆ ಬರುವ ಮಂಗಳವಾರ ಇಲ್ಲಿ ಸಿಕ್ಕಿದರೆ ಆ ಕತೆ ಪೂರ್ಣ ಹೇಳುವೆ......

ಕಳ್ಳನ ಚಮತ್ಕಾರವನ್ನು ಶ್ಲಾಘಿಸುತ್ತಾ ನಾವು ಮನೆಗೆ ಹಿಂತಿರುಗಿದೆವು.

(ಬರುವ ವಾರಕ್ಕೆ ಮುಂದುವರಿಯುವುದು.)

ಸುಂಕ ವಂಚಿಸುವ ಕಳ್ಳಸಂತೆ

ಅಂತರಾಷ್ಟ್ರೀಯ ಸುಂಕದ್ರೋಹಿ ಕೂಟ

ಸುಂಕದಧಿಕಾರಿಗಳನ್ನು ವಂಚಿಸಿದ ಮಹಾರಾಣಿ

ಚೀನದಲ್ಲಿ ತುಂಬಾ ಅಫೀಮು ತಯಾರಾಗುತ್ತದೆ. ಅದರ ಗಿಡವನ್ನು ಅಲ್ಲಿ ಕೃಷಿ ಮಾವಿನ ತೋಟಗಳಂತೆ ಬೆಳೆಸುತ್ತಾರೆ. ನಮ್ಮ ದೇಶದಲ್ಲೆಲ್ಲ 'ಅಫೀಮು ಭಕ್ತ'ರಿಗಂತೂ ಕೊರತೆ ಇಲ್ಲ. ಸುಂಕದ ರೂಪದಲ್ಲಿ ಸರಕಾರಕ್ಕೂ ಅಫೀಮಿನಿಂದ ತುಂಬಾ ಆದಾಯವಿದೆ. ಅದರ ಬೆಲೆಗಿಂತ ಸುಂಕವೇ ಹೆಚ್ಚು. ಸುಂಕಕೊಡದೆ ಆ ಮಾಧಕ 'ಲೇಹ'ವನ್ನು ಒಂದಕ್ಕೆ ಅರ್ಧ ದರದಲ್ಲಿ ಮಾರಿದರೂ ಕೈತುಂಬಾ ಹಣವಾಗುತ್ತದೆ

ಅನೇಕ ವರ್ಷಗಳಿಂದ ಜನರು–ಚೀನಿಯರೂ, ಇತರರೂ-ಮುಖ್ಯವಾಗಿ ಹಡಗು ಕೆಲಸಗಾರರು, ನಾವಿಕರು, ಮತ್ತು ವ್ಯಾಪಾರಿಗಳೂ–ಈ ಅಫೀಮನ್ನು ಗುಪ್ತ ವಿಧಾನಗಳಿಂದ ನಮ್ಮ ದೇಶಕ್ಕೆ ತರುತ್ತಿರುವರು. ಸುಂಕದ ಕಛೇರಿಯವರು ಇದರ ತಡೆಗಾಗಿ ನುರಿತ ಪತ್ತೆದಾರರನ್ನು ಕೆಲಸಕ್ಕಿಟ್ಟಿದ್ದಾರೆ.

ನಮ್ಮ ದೇಶಕ್ಕೆ ಸುಂಕವಿಲ್ಲದೆ ತರಬಹುದಾದ ಇನ್ನೂ ಅನೇಕ ವಸ್ತುಗಳಿವೆ-ಗಡಿಯಾರಗಳು, ವಜ್ರಗಳು, ಸಿಲ್ಕು ಬಟ್ಟೆಗಳು ಮತ್ತಿತರ ಸುಖೋಪಭೋಗದ ವಸ್ತುಗಳು. ಇತರ ದೇಶಗಳಲ್ಲಿ ಹೆಚ್ಚು ಬೆಲೆ ಬರುವ ಪದಾರ್ಥಗಳನ್ನು ನಮ್ಮ ದೇಶದಿಂದ ಸುಂಕಾಧಿಕಾರಿಗಳಿಗೆ ವಂಚಿಸಿ ತೆಗೆದುಕೊಂಡು ಹೋಗಲೂ ಅನೇಕ ಪ್ರಯತ್ನಗಳಾಗಿವೆ.

ಆದರೆ ಸುಂಕಾಧಿಕಾರಿಗಳು ಬಲು ಚಾಣಕ್ಯವ್ಯಕ್ತಿಗಳು. ಅವರ ಕಣ್ಣು ತಪ್ಪಿಸಿ ಹೋಗುವುದೆಂದರೆ ಕಷ್ಟಸಾಧ್ಯವೇ ಸರಿ.

ಕಲ್ಕತ್ತಾ ಬಂದರಕ್ಕೆ ಚೀನದಿಂದ ಹಡಗುಗಳು ಕತ್ತಲಿರುವಾಗಲೇ ಬಂದು ತಲ್ಪುತ್ತವೆ. ಅಲ್ಲೆ ಕಾಯುತ್ತಿರುವ ಕಡವು ದೋಣಿಗಳಲ್ಲಿ ಅಫೀಮಿನ ಮೂಟೆಗಳು ಬೀಸಾಡಲ್ಪಡುತ್ತವೆ. ಅವು ಕತ್ತಲ ಮರೆಯಲ್ಲಿ ದಡದ ದೂರ ಭಾಗದಲ್ಲಿ ಇಳಿದು ಹೊಂಚುಹಾಕುತ್ತಿರುವ ಕಳ್ಳ ಸಂತೆ ವ್ಯಾಪಾರಿಗಳಿಗೆ ಕೊಡುತ್ತಾರೆ.

ಒಂದು ಹಡಗದವರು ಕಲ್ಕತ್ತದ ಹತ್ತಿರ ಬರುವಾಗ ರಬ್ಬರ್ ಚೀಲಗಳಲ್ಲಿ ಅಫೀಮು ತುಂಬಿಸಿ ತೇಲ ಬಿಡುವರು. ಚತುರ ದೋಣಿಯವರು ಅದನ್ನು ಬಲೆಗಳಲ್ಲಿ ಹಿಡಿದು ಮುಟ್ಟಿಸ ಬೇಕಾದ ಸ್ಥಳಕ್ಕೆ ಗುಪ್ತವಾಗಿ ತಲ್ಪಿಸುವರು.

ಅಸಂಖ್ಯಾತ ಇತರ ವಿಧಾನಗಳೂ ಇವೆ. ಟೊಳ್ಳಾದ ಕೈ ಬೆತ್ತದಲ್ಲಿ ತುಂಬಿಸಿ, ತಳಕ್ಕೆ ಹೊಡೆಯಲ್ಪಟ್ಟ ಎರಡು ಹಲಗೆಗಳ ನಡುವೆ ಸೇರಿಸಿ, ತರುವಂತಹದು ಸಾಮಾನ್ಯ ವಿಷಯ.

ಬಂಗಾರದ ಒಯ್ಯುಕೆ

ಚೀನದಲ್ಲಿ ಬಂಗಾರದ ಬೆಲೆ ನಮ್ಮ ದೇಶಕ್ಕಿಂತ ಎರಡಷ್ಟು ಹೆಚ್ಚು. ಲಾಭದ ಆಕರ್ಷಣೆಯಿಂದ ಅನೇಕರು ನಮ್ಮ ದೇಶದಿಂದ ಅಲ್ಲಿಗೆ ಸುಂಕ ರಹಿತವಾಗಿ ಸಾಗಿಸಲು ಸಾಹಸ ಪಟ್ಟರು.

ಮೂರು ವರ್ಷಗಳ ಹಿಂದೆ ಒರ್ವ ಬರ್ಮಿ ಸ್ತ್ರಿಯು ವಿಮಾನ ಹತ್ತುವಾಗ ತಡೆಯಲ್ಪಟ್ಟಳು. ಅವಳ ಮೇಲೆ ದಪ್ಪದಪ್ಪ ಬಂಗಾರದ ದಾಗಿನೆಗಳಿದ್ದವು. ಝಡತಿ ಮಾಡುವಾಗ ಸುಂಕಾಧಿಕಾರಿಗಳಿಗೆ ದಯೆ ದಾಕ್ಷಿಣ್ಯವಿಲ್ಲ, ಹೆಂಗಸು ಗಂಡರೆಂದಿಲ್ಲ, ರಾಜಪ್ರಜೆಯೆಂತಿಲ್ಲ–ಬಟ್ಟೆಬರೆಗಳನ್ನು ಬಿಚ್ಚಿಸಿಯೇ ಬಿಡುವರು. ಅದೇ ಪ್ರಕಾರ ಪರೀಕ್ಷೆ ಮಾಡಿದಾಗ ಮೇಲೆ ಹೇಳಿದ ಆ ಬರ್ಮಿ ಹೆಂಗುಸಿನ ಸೊಂಟಕ್ಕೆ ನೂರು ಪವನಿನ ಒಂದು ಡಾಬೂ, ಎದೆಯ ಹತ್ತಿರ ೮೦ ಪವನಿನ ಒಂದು ಚಿನ್ನದ ಡಾಬೂ ಸಿಕ್ಕಿದವು.

ಕೆಲವು ಸಮಯ ಪವನುಗಳನ್ನು ಕಾಫಿ ಪಾತ್ರೆಯಲ್ಲೂ ಅದರ ಅಡಿಯಲ್ಲೂ ಅಡಗಿಸಿಟ್ಟ ಸಂಗತಿಗಳು ಪತ್ತೆಯಾಗಿವೆ. ಚೀನಿಯ ಮತ್ತು ಅಮ್ಮೇರಿಕನ್ ವೈಮಾನಿಕರೂ ಈ ವ್ಯಾಪಾರದಲ್ಲಿ ಕೈಯಿದ್ದವರಿದ್ದಾರೆ. ವಿಮಾನ ಯಂತ್ರಗಳ ಒಳಭಾಗದಲ್ಲಿ ಚಿನ್ನದ ಘಟ್ಟಿಗಳನ್ನು ಅಡಗಿಸಿಟ್ಟು ಅವರು ಒಯ್ಯುತಿದ್ದರಂತೆ.

ಕಲ್ಕತ್ತಾ ಬಂದರಿನ ಸುಂಕ ಕಛೇರಿಯ ಎದುರು ಒಂದು ವಿಶೇಶ ಸಂಗತಿ ಹಿಡಿಯಲ್ಪಟ್ಟಿತು. ಐವತ್ತು ವರ್ಷದ ಅಮೇರಿಕನ್ ಪಾದ್ರಿಯೊಬ್ಬನು ಹಡಗದಿಂದ ಮೆಲ್ಲಗೆ ಇಳಿಯುತಿದ್ದ. ಅಧಿಕಾರಿಗಳು ಅವನನ್ನು ಹತ್ತಿರ ಕರೆದಾಗ ಅವನು ತನ್ನ ಉದ್ದ ಕೋಟಿನ ಭಾರದಿಂದ ಮಾಲುತಿದ್ದನಂತೆ. ಸಂಶಯವಾಗಿ ಅವನನ್ನು ಬಿಚ್ಚಿಸಿ ನೋಡುವಾಗ, ಕೋಟು ಚಲ್ಲಣ, ಹೇಟು ಇವುಗಳೊಳಗೆ ಕೈಗಡಿಯಾರಗಳನ್ನೂ, ಫೌಂಟನ್ ಪೆನ್ನುಗಳನ್ನೂ, ಇತರ ಹೆಚ್ಚು ಬೆಲೆಯ ದಿನನಿತ್ಯದುಪಯೋಗದ ವಸುಗಳನ್ನೂ ಮುಚ್ಚಿ ಹೊಲಿಸಿಕೊಂಡಿದ್ದದ್ದು ಕಂಡುಬಂತು.

ಗೋದಿ ರೊಟ್ಟಿಯೊಳಗೆ ವಾಚುಗಳು

ಡಿಲ್ಲಿಯ ಒರ್ವ ಆಭರಣ ವ್ಯಾಪಾರಿಗೆ ಈಜಿಪ್ತ್‌ನಲ್ಲಿ ವ್ಯಾಪಾರ ಸಂಬಂಧ ಇತ್ತು. ಅವನು ಬೊಂಬ್ಬಾ ಬಂದರಿಗೆ ಒಂದುಸಲ ಒಂದು ಬುಟ್ಟಿ ತಂದ. ಅದರಲ್ಲಿ ತುಂಬಾ ರೊಟ್ಟಿಗಳೂ ಲಾಡು ಮಿಠಾಯಿಗಳೂ ಇದ್ದವು. ಅಧಿಕಾರಿಗಳು ಅವನ್ನು ಹಿಡಿದಾಗ ಅವನು 'ಛೆ, ಛೆ, ಅವಕ್ಕೆ ಪರಜಾತಿಯವರು ಮುಟ್ಟ ಬಾರದು, ಅವು ತಿನ್ನುವ ವಸ್ತುಗಳು, ನಾನು ಆಚಾರವಂತ ಹಿಂದೂ ಇರುತ್ತೇನೆ' ಎಂದನಂತೆ. ಅವನಿಂದಲೇ ಬಿಡಿಸಿದಾಗ ಮಿಠಾಯಿ ಕಟ್ಟಗಳಲ್ಲಿ ಬಂಗಾರದ ನಾಲ್ಕು ಕೈ ಗಡಿಯಾರಗಳು ದೊರಕಿದವು.

ಮಹಾ ರಾಣಿಯ ಮೋಸ

ಪರದೇಶದಿಂದ ಕೆಲವು ವ್ಯಾಪಾರಿಗಳಿಗೆ ಒಂದೇ ತರದ ಎರಡು ಪಟ್ಟಿಗೆಗಳು ಪಾರ್ಸೆಲ್ ಆಗಿ ಬರುತ್ತವೆ. ಒಂದರಲ್ಲಿ ಹಣ್ಣುಗಳಿದ್ದರೆ ಇನ್ನೊಂದರಲ್ಲಿ ವಾಚ್‌ಗಳೂ, ಪೆನ್ನುಗಳೂ, ವಜ್ರಗಳೂ, ಇಡುತ್ತಾರೆ. ಹಣ್ಣಿನ ಪೆಟ್ಟಿಗೆಗೂ, 'ಹೊನ್ನಿನ' ಪೆಟ್ಟಿಗೆಗೂ ಪ್ರತಪ್ರತ್ಯೇಕ ಸಂಕೇತಗುರುಗಳಿರುತ್ತವೆ. ಒಂದರಲ್ಲಿ ಹಣ್ಣುಗಳಿವೆ ಎಂದು ಸುಂಕಪೋಲಿಸರು ಇನ್ನೊಂದನ್ನೂ ಬಿಟ್ಟರೆ ಮೋಸ ನಡೆದು ಹೋಗುತ್ತದೆ.

ಮಹಾರಾಜ, ಮಹಾರಾಣಿಯವರು ಧರಿಸುವ ಸ್ವಂತ ಆಭರಣಗಳಿಗೆ ಸುಂಕವಿಲ್ಲ. ೧೯೩೮ರಲ್ಲಿ ಒಂದುಸಲ ಬೊಂಬ್ಬಾಯಲ್ಲಿ ಒರ್ವ ಮಹಾರಾಣಿಯ ಕೈಚೀಲದಲ್ಲಿ ಮೂರು ಲಕ್ಷ ಬೆಲೆಯ ವಜ್ರಗಳಿದ್ದುವು. ಇಳಿಯುವಾಗ ಅವಳು ಅದನ್ನು ತನ್ನ ಬೆರಳುಗಳ ಎಡೆಯಲ್ಲಿ ಧರಿಸಿ ತನ್ನ ಅಮೂಲ್ಯ ಸೀರೆಯ ಸೆರಗಿನಿಂದ ಮುಚ್ಚಿ ಹಿಡಿದಾಗ ಸಂಶಯವಾಗಿ ಪತ್ತೆಗೆ ಕಾರಣವಾಯಿತು.

ಈಚೆಗೆ ಧನುಷ್ಕೋಡಿ ಬಂದರದಲ್ಲಿ ಚಿಕ್ಕ ಚಿಕ್ಕ ಬಂಗಾರದ ಗುಳಿಗೆಗಳನ್ನು ತಿಂದು ಸಿಂಹಳ ದ್ವೀಪಕ್ಕೆ ಮುಟ್ಟಿದಮೇಲೆ ಭೇದಿ ಔಷಧದ ಮೂಲಕ ಮಲದಲ್ಲಿ ತರಿಸುವ ವಿಧಾನ ಎಲ್ಲದಕ್ಕಿಂತಲೂ ಸಾರಸ್ಯವಾದುದು. ಹೀಗೆ ಭಾರತದಲ್ಲಿ ಇಂದು ನಾನಾರೀತಿಯಲ್ಲಿ ಸುಂಕ ಮೋಸಗಳು ಮೋಜಿನಲ್ಲಿ ನಡೆಯುತ್ತಿರುತ್ತವೆ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ನೋಟಿಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

REA 469/1944 O. S. 162/1941

ವಾದಿ–ಹಸ್ಸನ್ ಹಾಜಿಗನ್ನಿ ಮುಸಾ ಬೆಳಗಾಂವಾಲಾ

ಪ್ರತಿವಾದಿರು– 1 ಬಾವಾ ಸಾಹೇಬ್ ನಂಬ್ರ 159ನೇ ಕಾರ್ಗೊ ಬೋಟಿನ ತಂಡೇಲ 2. ಬಾಡ್ಯಾಬಿನ್ ಶಾಹುನ್ನಿ ಬೇರಿ–ನಂಬ್ರ 159 ನೇ ಕಾರ್ಗೊಬೋಟಿನ ಮಾಲಿಕ–ಮಂಗಳೂರು ಪೋರ್ಟಿನಲ್ಲಿರುವವರು.

ವಾದಿಯು ಪ್ರತಿವಾದಿರ ಮೇಲೆ ಪಡೆದ ಮೇಲ್ಕಂಡ ಡಿಕ್ರಿಯ ಮೇಲೆ ಮೇಲ್ಕಂಡ ಅಮ್ಲುಜಾರಿಯನ್ನು ದಾಖಲುಮಾಡಿರುತ್ತಾನೆ. ಆ ಕುರಿತು ಏನಾದರೂ ಆಕ್ಷೇಪವಿದ್ರೆ ತಾ 5–2–45 ನೇ ದಿವಸ ಪೂರ್ವಾಹ್ನ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹಿರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಗ್ಯೆರ್ ಹಾಜರಾತಿಯಲ್ಲಿ ಮುಂದಿನ ಕ್ರಮ ನಡಿಯಲಾಗುವುದೆಂಬ ಸಂಗತಿ ಪ್ರತಿವಾದಿರಿಗೆ ಈ ಮೂಲ್ಕ ತಿಳಿಸೋಣಾಗುತ್ತದೆ.

K. Raghunath Shenai
ವಾದಿಯಕಡೆ ಪ್ಲೀಡರರು

ಕುಂದಾಪುರ 5–1–1945

ಈ ಯುದ್ಧ

ಮೊದಲು ಜರ್ಮನಿಯು ಸೋಲಾಗಬೇಕು, ನಂತರ ಜಪಾನಿನ ಸೊಕ್ಕು ಮುರಿಯಲಾಗುವುದೆಂದು ಮಿತ್ರರ ಮುಂದಾಳುಗಳ ಅಂಬೋಣವಾಗಿದ್ದರೂ, ಮೊದಲು ಜಪಾನು ಸೋಲಿಸಲ್ಪಡುವುದು, ನಂತರ ಜರ್ಮನಿಯ ಬೆನ್ನು ಮುರಿಲ್ಪಡುವುದು, ಎಂಬ ಪರಿಸ್ಥಿತಿಯು ಸದ್ಯದೊ, ಎಂದೆನಿಸುತ್ತದೆ. ಬರ್ಮಾದಲ್ಲಿ ಜಪಾನಿಯರ ಹಿನ್ನಡೆ, ಚೀನಾದ ಬರ್ಮಾರಸ್ತೆ ಪ್ರದೇಶವು ಮಿತ್ರರ ಕೈವಶವಾದುದು ಪಿಲಿಪ್ಪಾನು ದ್ವೀಪಗಳ ಮೇಲೆ ಮೆಕ್ ಆರ್ಥರರ ಯಶಸ್ವಿ ಮರುದಾಳಿ, ಅಲ್ಲಿಂದ ಜಪಾನಿಯರ ಪಲಾಯನ, ಇವೆಲ್ಲಾ ವಾರ್ತೆಗಳು ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸುವಂತಿವೆ. ಅಮೇರಿಕಾದ ನೌಕಾಬಲವು ಶಾಂತಸಾಗರದಲ್ಲಿ ಯಶಸ್ವಿತರದಲ್ಲಿ ಬಳಸಲ್ಪಡುತಿದ್ದು, ಜಪಾನೀ ನೌಕಾಬಲದ ರೆಕ್ಕೆಗಳು ಮುರಿಯಲ್ಪಡುತ್ತಿವೆ. ಅಮೇರಿಕನರ ಉಗ್ರ ದಾಳಿಯಿಂದ ಜಪಾನೀಯ ನೌಕಾಬಲದ ದೊಡ್ಡ ಸಣ್ಣ ಅನೇಕ ಜಹಜುಗಳು ನಷ್ಟವಾಗಿವೆಂದು ತಿಳಿದುಬಂದಿದೆ. ಬರ್ಮಾದಿಂದ ಕಾಲನ್ನು ಹಿಂತೆಗೆಯುವುದೇ ಜಪಾನಿಯರ ಸದ್ಯದ ಧೋರಣವಾಗಿರುವುದಂತೆ. ಅಕ್ಯಾಬನ್ನು ತ್ಯಜಿಸಿ ಕಾಲಿಗೆ ಬುದ್ಧಿಹೇಳಿದ ಜಪಾನಿಯರು, ಈಗಲೊ ಮತ್ತೊ ಮಂಡಲೆಯನ್ನು ಮಿತ್ರ ಸೇನೆಗಳಿಗೆ ಒಪ್ಪಿಸಿಬಿಡುವುದು ಖಂಡಿತವೆಂದೆ ತಿಳಿಯಬೇಕು. ಚೀನಾದಲ್ಲಿ ಅಂತಃಕಲಹದ ಉರಿಯು ಉರಿಯುತಿದ್ದರೂ, ಅಲ್ಲಿ ಅನೇಕ ಕಡೆಗಳಲ್ಲಿ ಜಪಾನಿಯರು ತಡೆಯಲ್ಪಟ್ಟಿರುವರೆಂದು ವರದಿಗಳಿವೆ.

ಪಿಲಿಪ್ಪಾನು ದ್ವೀಪಗಳಲ್ಲಿ ಮಿತ್ರರು ಮತ್ತೊಮ್ಮೆ ಭದ್ರವಾಗಿ ಕಾಲೂರಿಬಿಟ್ಟರೆ, ಮತ್ತು ದಕ್ಷಿಣ ಚೀನಾದಿಂದ ಜಪಾನಿಯರನ್ನು ಹೊಡೆದೂಡಿಸುವ ಕೆಲಸವಲ್ಲ ಸುಲಭವೆನಿಸುವುದು. ಮಾತ್ರ ದಕ್ಷಿಣ ಚೀನಾದ ಕರಾವಳಿಯಲ್ಲಿಳಿದು, ಚೀನಾದೊಳಗೆ ದೊಡ್ಡದೊಂದು ಹೋರಾಟವನ್ನು ಪ್ರಾರಂಭಿಸಿ, ಒಂಭತ್ತು ವರ್ಷಗಳ ಹಿಂದೆ ಪ್ರಾರಂಭವಾದ ಚೀನಾ ಯುದ್ಧವನ್ನು ಮಿತ್ರರು ಬೇಗನೆ ಕೊನೆಗೊಳಿಸಬಹುದು. ಮಿತ್ರರಿಗೆ ಇತ್ತಕಡೆ ಬಲವಾದ ತಳವು ದೊರಕಿತೆಂದರೆ ಸ್ಟಲೀನನು ಇದೆ ಸಮಯವೆಂದು ಮಂಚೂರಿಯಾದಲ್ಲಿ ಜಪಾನಿಯರ ಮೇಲೆ ಮೇಲ್ವಾಯ್ದು ಬರಬಹುದು. ಚೀನಾದ ಕೊಮ್ಯುನಿಸ್ಟರಿಗೆ ಬೇಕಾದ ಸಹಾಯ ಸಹಕಾರವು ದೊರಕಬಹುದು. ತಮ್ಮ ಪಾಲಿಗೆ ಈ ದುರ್ಘಟನೆ ಘಟಿಸದಂತೆ ಜಪಾನಿಯರು ತಮ್ಮ ಶಕ್ತಿಮೀರಿ ದುಡಿಯುತ್ತಿರುವರು.

ಯುರೋಪದ ಪಶ್ಚಿಮ ರಂಗದಲ್ಲಿ ರಂಡ್‌ಸ್ಟೆಡರು ಪ್ರಾರಂಭಿಸಿದ ಮರುದಾಳಿಗೆ ಮಿತ್ರರು ತಮ್ಮ ಪ್ರತ್ಯುತ್ತರವನ್ನು ಕೊಡುತ್ತಿದ್ದಾರೆ. ಈ ಮರುದಾಳಿಯು ಕೆಲವು ಕೆಲವು ಕಡೆಗಳಲ್ಲಿ ಯಶಸ್ವಿಯಾಗಿ ನಡೆದಿದ್ದರೂ, ಒಟ್ಟಿನಲ್ಲಿ ಅದು ನಿಷ್ಫಲಿಸಿತ್ತೆಂದೇ ಹೇಳಬೇಕು. ಮಿತ್ರರ ಸೇನಾನಿ ಮಂಡಳದಲ್ಲಿ ಕೆಲವೊಂದು ಬದಲಾವಣೆಯಾಗಿವೆ. ಜನರಲ್ ಐಸನ್‌ಹೋವರ್‌ರವರು ಜರ್ಮನರನ್ನು ತಡೆಯುವುದು ಮಾತ್ರವಲ್ಲ, ಅವರ ಊರೊಳಗೆ ಅವರನ್ನು ಬೆನ್ನಟ್ಟಿ ಹೋಗುವುದರಲ್ಲಿದ್ದಾರೆ. ಹಿಟ್ಲರನು ತನ್ನ ಮರುದಾಳಿಯನ್ನು ಇನ್ನೂ ಬೆಳೆಯಿಸುವುದರಲ್ಲಿದ್ದಾನೆಂದೂ, ಹಾಗೆನೆ ಮಿತ್ರರು ಅದಕ್ಕೆ ತಕ್ಕ ಪ್ರತೀ ವಿರೋಧದ ಸಿದ್ಧತೆ ಮಾಡುತ್ತಿರುವರೆಂದು ತಿಳಿದುಬಂದಿದೆ. ಜರ್ಮನಿಯ ಹೋರಾಟದ ಶಕ್ತಿಯು ಇನ್ನೂ ಕುಂದಿಲ್ಲವೆಂಬುದಕ್ಕೆ ಈ ಮರುದಾಳಿಯು ಒಂದು ಸೂಚಕವಾಗಿರಬಹುದು. ಜರ್ಮನಿಯ ಈ ಶಕ್ತಿಯನ್ನು ನೊಂದಿಸುವ ಸಲುವಾಗಿ ಮಿತ್ರರ ವಿಮಾನ ದಳಗಳು ಹಗಲಿರುಳು ಶ್ರಮಿಸುತ್ತಿರುವವು.

ವಿನಾಶಕಾಲ ಸಮೀಪಿಸಿದ್ದರೂ ಜರ್ಮನ್ ಸಮರ ಬಲದಲ್ಲಿ ದುಡುಕು ಬರಲಿಲ್ಲ; ಅದು ದಿಗ್ಭ್ರಾಂತವಾದಂತೆ ತೋರುವುದಿಲ್ಲ–ಇದಕ್ಕೆ ನಿದರ್ಶನವೆಂಬಂತೆ ಯುರೋಪದ ಪೂರ್ವ ರಂಗದಲ್ಲಿ ತಮ್ಮ ದೇಶದ ಕಡೆ ಪ್ರಸರಿಸಿಕೊಂಡು ಬರುತ್ತಿರುವ ಸೋವಿಯಟ್ ಬಲಕ್ಕೆ ವಿರೋಧವಾಗಿ ಜರ್ಮನರು ಅನೇಕ ಪ್ರತಿವಿರೋಧಗಳನ್ನು ಹೂಡಿರುವರು. ಆದರೆ ದಕ್ಷಿಣ ಪೋಲೆಂಡದಲ್ಲಿ ಜರ್ಮನ್ ರಕ್ಷಣಾ ವ್ಯೂಹವು ಅನೇಕ ಕಡೆಗಳಲ್ಲಿ ಬಿರುಕುಬಿಟ್ಟ ವಾರ್ತೆ ಬಂದಿದೆ. ಅಲ್ಲಿ ಸೋವಿಯಟ್‌ರ ಹೊಡತದೆದುರಿಗೆ ಜರ್ಮನರು ಕೆಲವೆಡೆಗಳಲ್ಲಿ ಕಾಲ್ತೆಗೆದಿರುವರಾಗಿ ತಿಳಿದುಬಂದಿದೆ. ಹಂಗೇರಿಯಲ್ಲಿ, ಆ ದೇಶ ರಾಜಧಾನಿಯು ಜರ್ಮನ್ ಬಲದಿಂದ ಅತಿ ಭದ್ರವಾಗಿ ಹಿಡಿಯಲ್ಪಟ್ಟಿದ್ದುದು, ಈಗ ಅರ್ಧಕ್ಕಿಂತ ಹೆಚ್ಚುಭಾಗವು ಸೋವಿಯಟ್ ಬಲದ ಕೈವಶವಾಗಿರುವುದೆಂದೂ, ಈ ನಗರವೂ ಸಂಪೂರ್ಣವಾಗಿ ಸೋವಿಯಟ್‌ರ ಕೈ ಸೇರುವುದು ಖಂಡಿತವೆಂದು ತಿಳಿಯಲು ತುಂಬಾ ಆಧಾರಗಳಿವೆ. ಹೀಗೆ ಹಂಗೇರಿಯ ಸೋವಿಯಟ್ ಆಕ್ರಮಣವು ಯಶಸ್ವಿಯಾಗಿ, ಅದು ಆಸ್ಟ್ರಿಯಾದ ಗಡಿನಾಡನ್ನು ದಾಟಿ ಆಸ್ಟ್ರಿಯಾದೊಳಗೆ ನಡೆಯುವ ಪ್ರಸಂಗ ಉಂಟಾದುದರಿಂದ, ಈ ಆಸ್ಟ್ರೀಯಾದ ಗಡಿಯಲ್ಲಿರುವ ಜರ್ಮನ್ ಸೇನೆಗಳಿಗೆ ಸಹಾಯಾರ್ಥವಾಗಿ ಟ್ಯಾಗರ್ ಟೇಂಕುಗಳು, ವಿಮಾನಗಳು, ಇನ್ನಿತರ ಸಲಕರಣೆಗಳು ಧಾರಾಳವಾಗಿ ಕಳುಹಿಸಲಾಗಿವೆ ಎಂದು ತಿಳಿದುಬಂದಿದೆ. ಸೋವಿಯಟ್ ಸೇನೆಯು ಆಸ್ಟ್ರೀಯಾದ ಈ ಗಡಿಯಿಂದ ಮುಂದೆ ಬರುತ್ತಿರುವಾಗ, ಅವರನ್ನು ಎದುರುಗಾಣಿಸಲು ಇಟೆಲಿಯಲ್ಲಿ ಮಿತ್ರ ಸೇನೆಗಳು ಜರ್ಮನ್ ತಡೆಯನ್ನು ಕರಗಿಸಿ ಮುಂದೆ ನಡೆಯಲು ಪ್ರಯತ್ನಿಸುತ್ತಿರುವರು. ಆದರೆ ಸದ್ಯದ ಹವೆಯ ದೆಸೆಯಿಂದಲೊ ಏನೋ, ಇಟೆಲಿಯ ರಂಗದಲ್ಲಿ ಅಷ್ಟೊಂದು ಕಾರ್ಯಸಾಧನೆಯಾದುದಿಲ್ಲವೆಂದು ಹೇಳಬೇಕಾಗಿಯದೆ. ಉತ್ತರ ಇಟೆಲಿಯು ಜರ್ಮನ್ ಕೈಗಳಿಂದ ತಪ್ಪಿಸುವ ಕಾರ್ಯವು ಇನ್ನೂ ಬಾಕಿ ಉಳಿದಿದೆ.

ಗ್ರೀಸಿನ ಪ್ರಕರಣವು ಸುಧಾರಿಸಲ್ಪಡುತ್ತಿದೆ. ಸಂಧಾನಪ್ರಸ್ತಾಪವು ನಡೆಯುತ್ತಿದೆ. ಪಾದ್ರಿ ನಾಯಕರೊಬ್ಬರು ಅರಸರ ಬದಲಾಗಿ ಗ್ರೀಸಿನ ರಿಜೆಂಟರಾಗಿರುವರು. ಅದಕ್ಕೊಂದು ಸರಕಾರವು ಇನ್ನು ರಚನೆಯಾಗಲಿದೆ.

ಮೊದಲ ಮುನ್ನಡೆ

ಮಿತ್ರಸೇನೆಗಳು ಮುತ್ತಿಗೆಯಾರಂಭಿಸಿದ ಪ್ರಥಮ ದಿನಗಳಲ್ಲಿ ಬಹಳ ಶಿಸ್ತಿನಿಂದ ಮುಂದರಿದರು. ಮೇಲಿನದು ತೋಫು ದಳದವರು ಶತ್ರು ಶಿಬಿರದ ಮೇಲೆ ಗುಂಡುಹಾರಿಸುವುದನ್ನು ಓರ್ವ ಸೈನ್ಯ ಚಿತ್ರಗಾರನು ತೆಗೆದ ಚಿತ್ರ.

ಪುಸ್ತಕ ವಿಮರ್ಶೆ

(೮ನೇ ಪುಟದಿಂದ)

ನೆರೆಮನೆಯವರು ಒಕ್ಕಲು ಹೋದರೆ ಈಚೆಮನೆಯವರ ದನಕರುಗಳು ಕಟ್ಟಿ ಹಾಕಲಿಕ್ಕೆ ಜಾಗವಾಯಿತು ಎಂಬಂತೆ ಜೋಶಿ ಪಂಗಡದ ಕೊಮ್ಯುನಿಸ್ಟರು ಕೊಂಗ್ರೆಸ್ ತುರಂಗದಲ್ಲಿ ಬಿದ್ದಾಗ ಕೊಂಗ್ರೆಸಿಗರ ಗೈರಹಾಜರಿಯಲ್ಲಿ ತುಂಬಾ ಪ್ರಯೋಜನಪಟ್ಟಿದೆ. ಈ ಪುಸ್ತಕದಲ್ಲಿ ಕೊಟ್ಟಿರುವ ಉಪಮೆಯನ್ನೆ ಮುಂದರಿಸಿದರೆ ತಾತಂದಿರೂ ಸೋದರರೂ ಪುಣ್ಯ ಯಾತ್ರೆಗೆ ಹೋದಾಗ ಮರಿಮಕ್ಕಳು ಕುಟುಂಬದ ಎಲ್ಲಾ ವ್ಯವಸ್ಥೆಗಳ ನಿಗಾ ತೆಗೆದುಕೊಡು ಕುಟುಂಬದ ಮಾನಮರ್ಯಾದೆಯನ್ನು ಕಾಯುವ ಬದಲು ಸ್ವಾರ್ಥದ ಸ್ವೇಚ್ಛಾವೃತ್ತಿಯಿಂದ ಕುಟುಂಬದ ಒಳ್ಳೆ ಹೆಸರಿನಲ್ಲಿ ಎಲ್ಲವನ್ನೂ ಕೆಡಿಸಿಯದೆ. ಆದ ಕಾರಣ ಈ ಮರಿಮಕ್ಕಳ ಮೇಲೆ ಇನ್ನು ಭರವಸೆ ಇಡಲು ಸಾಧ್ಯವಿಲ್ಲ, ಜವಾಬ್ದಾರಿ ಕೆಲಸಗಳನ್ನು ಕೈಯಿಂದ ಹಿಂದಿರುಹಿದವರೇ ತಮ್ಮ ನಂಬಿಗೆಯವರ ಕೂಟದಲ್ಲಿ ಮಾಡುವುದು ಲೇಸೆನ್ನುತ್ತಾರೆ. ನಿಜವಾಗಿಯೂ ಮರಿಮಕ್ಕಳು ಬೇಜವಾಬ್ದಾರಿಯಿಂದ ಕೆಲಸ ಮಾಡದಿದ್ದರೆ ಅವರು ನೇರಾಗಿ ಹಿಂತಿರುಗಿ ಬಂದವರೊಡನೆ ವಿಚಾರ ವಿನಿಮಯ ಮಾಡಿ ತಮ್ಮ ಅಂತಃಕರಣದ ಶುದ್ಧತೆಯನ್ನು ಶ್ರುತಪಡಿಸಬಹುದಿತ್ತು. ಊಟ ಆಯಿತು ಎಂದರೆ ಮುಂಡಾಸು ಮೂವತ್ತು ಮೊಳ ಎಂಬಂತೆ ಈ ಪುಸ್ತಕದಲ್ಲಿ ತಮ್ಮ ನಿಸ್ಪೃಹತೆಯನ್ನು ಪ್ರಕಟಗೊಳಿಸುವ ಬದಲು ಕೊಂಗ್ರೆಸ್ ಸೋಶಿಯಲಿಸ್ಟರ ಮೇಲೆ ರೇಗಿಬಿದ್ದು ಆರೋಪಗಳನ್ನು ಹೊರಿಸಿದುದು ಸಮ್ಮತವಲ್ಲ. ಕುಟುಂಬದಲ್ಲಿ ವಾದ ವಿವಾದಗಳು ಬಂದಾಗ ನಡೆಯುವ ಪಂಚಾಯಿದಿಗಳಿಗೂ ಕೋರ್ಟಿನಲ್ಲಿ ನಡೆಯುವ ಕಟ್ಟುನಿಟ್ಟಿನ ವ್ಯವಹರಣೆಗೂ ಅಜಗಜಾಂತರದ ವ್ಯತ್ಯಾಸವಿದೆಯಷ್ಟೆ. ಯಾವ ತರದ ನ್ಯಾಯಬದ್ಧವಾದ, ರಾಷ್ಟ್ರಕ್ಕೆ ಹಿತಕರವಾದ, ಎಲ್ಲರಿಗೂ ಮರ್ಯಾದಿತವಾದ ಒಂದು ರೀತಿಯ ಸಂಧಾನವಿಲ್ಲವೆಂದು ಖಚಿತಪಟ್ಟೇ ಶ್ರೀ ಜೋಶಿಯವರು ಈ ಪುಸ್ತಕವನ್ನು ಬರೆದರೋ ಎಂಬ ಅನುಮಾನ ಬರುತ್ತದೆ. ಕೋರ್ಟಿನಲ್ಲಿ ನಡೆಯುವಂತೆ ಹೇಳಿಕೆ ಪ್ರತಿ ಹೇಳಿಕೆಗಳಿಗಿಂತ ಇದ್ದ ಯಥಾರ್ಥವನ್ನು ಅಂತಃಕರಣಶುದ್ಧಿಯಿಂದ ಹೊರಗೆಡಹಿದರೆ ಮಾತ್ರ ಈಗ ಕೆಲವು ಕೊಂಗ್ರೆಸಿಗರಲ್ಲಿಯೂ ಕೊಮ್ಯುನಿಸ್ಟರಲ್ಲಿಯೂ ಇರುವ ವೈಮನಸ್ಸು ತೊರೆಯಲು ಸಾಧ್ಯವಾಗುವುದಲ್ಲದೆ ಈ ಪುಸ್ತಕದ ರೀತಿಯ ವಕೀಲಿ ಪದ್ಧತಿಯ ಹೇಳಿಕೆಗಳಿಂದಲೂ ಆಶಾತೀತವಾತ ದುಡುಕಿನಿಂದ ತಂದ ಹೊಸ ಹೊಸ ಅಪಾದನೆಗಳಿಂದ ದ್ವೇಷವು ಇನ್ನಷ್ಟು ಬೆಳೆಯಬಹುದು.

ವಿಧ್ವಂಸಕರಿಂದಲೂ ತೀವ್ರಗಾಮಿಗಳಿಂದಲೂ ಸಂಸ್ಥಾಪಿಸಲ್ಪಟ್ಟು ಇಡೀ ಜಗತ್ತನ್ನೇ ಗಡಗಡ ನಡಗಿಸುವ ಶಕ್ತಿಯ ಸಂಪಾದನೆಯನ್ನು ಸಾಧಿಸುತ್ತಲಿದ್ದ ಸಿಂಹದಂತಹ ಈ ಪಾರ್ಟಿಯು ೧೯೪೧ರ ಬಳಿಕ ಕೇವಲ ಕುರಿಯಾಗಿದೆ. ಕಟುಕನ ಕೈಯನ್ನು ನೆಕ್ಕುತ್ತ ದಯಾ ಜನಕವಾದ ಮಂದ ರೀತಿಯ ಕೂಗು ಅಸ್ಪಷ್ಟವಾಗಿ ಕೇಳಿಸುತ್ತಿದೆ–ದಿಕ್ಕಳವನ್ನು ಮುಟ್ಟುವ ಮೊಳಗಿನ ಸಿಂಹ ಗರ್ಜನೆಯ ಬದಲಾಗಿ–ಎಂದು ಹೇಳುವ ಈ ಅಪವಾದದ ಕುರಿತು ಶ್ರೀ ಪಿ. ಸಿ. ಜೋಶಿಯವರು ಸೊಲ್ಲೆತ್ತಲಿಲ್ಲ. ಸಿಂಹವು ಕುರಿಯಾಗಲು ತಿಂದ ಅಫೀಮು ಯಾವುದು. ಅದು ಎಲ್ಲಿಂದ ಬಂತು ಎಂಬಿತ್ಯಾದಿ ವಿಷಯಗಳು ಕಾಲಾನುಭೋಗದಲ್ಲಿಯೇ ಸ್ಪಷ್ಟವಾಗಬೇಕಷ್ಟೆ.

'ಭೀಮನಿದ್ದ ಸ್ವರ್ಗದಲ್ಲಿ ನಾನಿರಲಾರೆ'ನೆಂದು ದುರ್ಯೋಧನನು ಹೇಳಿದಂತೆ ಕೊಮ್ಯುನಿಸ್ಟರಿದ್ದಲ್ಲಿ ನಾವಿರಲಾರೆವೆಂದು ಕೊಂಗ್ರೆಸಿಗರು ಹೇಳಲಾರರು. ಎಲ್ಲಾ ಕೊಮ್ಯುನಿಸ್ಟರನ್ನು ಹೊರಗೆ ಹಾಕಬೇಕೆಂದು ಹೇಳಲೂ ಸಾಧ್ಯವಿಲ್ಲ. ನಿರ್ಮಲವಾದ ಕೊಮ್ಯುನಿಸ್ಟ ತತ್ವದ ಪ್ರತಿಪಾದನೆಯೂ ಅಂದರಂತೆ ವರ್ತನೆಯೂ ಅನೇಕ ಮಂದಿ ಕೊಂಗ್ರೆಸಿಗರಲ್ಲಿಯೂ ಇದ್ದೇ ಇದೆ. ಆದುದರಿಂದ ಕೊಮ್ಯುನಿಸ್ಟ ತತ್ವದ ಪ್ರತಿಪಾದನೆ ಜೋಶಿಯವರ ಕೊಮ್ಯುನಿಸ್ಟ ಪಾರ್ಟಿಯ ಸ್ಥಿರಾಸ್ತಿಯಲ್ಲ. ಈಗಿನ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಈ ರೀತಿಯ ಒಂದೇ ಕಡೆಯ ನ್ಯಾಯವನ್ನು ಪ್ರತಿಪಾದಿಸುವ ಪುಸ್ತಕಗಳನ್ನು ಜನಸಾಮಾನ್ಯರ ಕೈಗೆ ಹಾಕಿ ಇನ್ನಷ್ಟು ದಿಗಿಲು ಭ್ರಾಂತಿಗಳನ್ನುಂಟುಮಾಡುವುದು ಅನುಚಿತ. ಜೋಶಿ ಪಂಗಡದ ಕೊಮ್ಯುನಿಸ್ಟ ಅಂತರ್ಮಥನ ಚೆನ್ನಾಗಿ ಮಾಡಿ ರಾಷ್ಟ್ರ ಜೀವನದಲ್ಲಿ ನ್ಯಾಯಬದ್ಧವಾದ ಎಡೆಯನ್ನು ಸಂಪಾದಿಸಲು ಈ ರೀತಿಯ ಹೊತ್ತಿಗೆ ಹೆಚ್ಚು ಹಾನಿಕರಗಳೆಂದೇ ಹೇಳಬೇಕು.

"ವಿಕ್ರಮಾದಿತ್ಯ"

ಸೆಂಟ್ರಲ್ ಎಕ್ಸಯ್ಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ನಿಮಗೆ ತಿಳಿದಿರುವುದೆ?

ಬೆಳೆಬೆಳೆಯುತ್ತಾ ಹೋಗಿ ಕೊನೆಗೊಂದು ದಿನ ನಾಶಹೊಂದುವುದು ಜೀವಿತ ವರ್ಗದ ಒಂದು ಗುಣವಂತೆ. ಮಾನವನು ಬೆಳೆಯುತ್ತಾ ಹೋದ ಹಾಗೆಲ್ಲ ತನ್ನ ನಿರ್ಮೂಲವನ್ನೆ ಸಾಧಿಸುತ್ತಿರುವನೆ?

* * *

ಜೀವಿತ ಜಗತ್ತಿನಲ್ಲಿ ಸೂರ್ಯನ ಶಕ್ತಿಯ ಇಪ್ಪತ್ತು ಸಾವಿರ ಸಮಭಾಗಗಳಲ್ಲಿ ಒಂದು ಭಾಗ ಮಾತ್ರ ಪ್ರಯೋಜಿಸಲ್ಪಡುತ್ತದಂತೆ!

* * *

ಸ್ವರಕ್ಷಣಾ ದೇಹದಾನುಕೂಲಗಳುಯಿಲ್ಲದುದರಿಂದ, ಮಾನವನು ಮೂಲದಿಂದಲೂ ಸಂಘಜೀವಿಯಾಗಿ ಜೀವಿಸಲುಪಕ್ರಮಿಸಿದ್ದನಂತೆ!

* * *

ನಾಗರೀಕ ಮನುಷ್ಯನಿಗಾದರೂ ಏಕಾಂಗಿಯಾಗಿರುವುದು ರುಚಿಸದು!

* * *

ಸ್ಪೈಯಿನಿನಲ್ಲಿ ಫೆಸಿಸ್ಟ ಪ್ರಭುತ್ವವು ತಳವೂರಿದ್ದು, ಮೊರೊಕ್ಕೊ ಸೇನಾಬಲದ ಉಪಯೋಗದಿಂದ; ಹಿಟ್ಲರ್, ಮುಸಲೇನಿಯರ ಸಹಾಯದಿಂದ; ರಾಷ್ಟ್ರಮಂಡಳದ 'ನಾನ್ ಇಂಟರ್‌ವೆನ್ಶನ್' (ತಟಸ್ಥ) ಧೋರಣದಿಂದ.

* * *

ಗೋರಿಂಗನು ನಾಜೀ ಸರಕಾರದಡಿಯಲ್ಲಿ ಪೊಲಿಸ್ ಅಧಿಪತಿಯಾಗಿ ಪಟ್ಟವೇರಿದ ಪರಿಣಾಮವಾಗಿ, ೧೯೩೩–೩೪ರ ನಡುವೆ ೨೧೨ ಜನರ ಶಿರಚ್ಛೇದನ ನಡೆಯಿತು. ಇವರಲ್ಲಿ ಹೆಚ್ಚಿನವರು ರಾಜಕೀಯ ಕೈದಿಗಳು. ಇದೆ ಅವಧಿಯಲ್ಲಿ ಸೆರೆಸೇರಿಸಲ್ಪಟ್ಟ ಜನರ ಸಂಖ್ಯೆ ೨೫೦೩೦೮ ವಿಧಿಸಲಾದ ಶಿಕ್ಷೆಯ ಕಾಲಾವಧಿ ೧೯೪೪೯ ವರ್ಷಗಳು; ಇವರಲ್ಲಿ ತಲೆತಪ್ಪಿಸಿಕೊಳ್ಳಲು ಪ್ರಯತ್ನದಲ್ಲಿ ೧೫೪ ಮಂದಿಗಳು ಗುಂಡಿನೇಟುಗಳಿಗೆ ತುತ್ತಾಗಿದ್ದರು; ೧೩೦೦೦ ಜನರು ನಾಗರೀಕ ಹಕ್ಕು ರದ್ದುಮಾಡಲಾಗಿತ್ತು; ೪೦,೦೦೦ ಮಂದಿ ಕೊನ್‌ಸನ್‌ಟ್ರೈಶನ್‌ಯಾಗಿ ನರಕ ಶಿಬರಗಳಿಗೆ ಕಳುಹಿಸಲಾಗಿದ್ದರು.

* * *

ನಾಜಿಗಳು ಈಗಿನ ಮಹಾಯುದ್ಧಕ್ಕಾಗಿ ಸಿದ್ಧತೆಯಲ್ಲಿಯೆ ನಿರತರಾಗಿದ್ದ ಕುರಿತು ಹಾಸ್ಯಮಯ ಕಥೆಯೊಂದು ಹೀಗಿದೆ:

ಜರ್ಮನ್ ಮಡದಿಯೋರ್ವಳು ಮಕ್ಕಳ ಗಾಡಿಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ದುಡಿಯುತ್ತಿರುವ ತನ್ನ ಪತಿಯೊಡನೆ ತಮ್ಮ ಮಕ್ಕಳಿಗಾಗಿ ಒಂದು ಗಾಡಿಯನ್ನು ಕಳ್ಳಾಟಿಕೆಯಲ್ಲಿ ಒದಗಿಸುವಂತೆ ಪ್ರೇರಿಸಿದಳು. ಇಡಿ ಗಾಡಿಯನ್ನು ಕದ್ದು ಹೊರತರಲು ಸಾಧ್ಯ ಉಂಟೆ. ಆತನು ಗಾಡಿಯ ವಿವಿಧ ಭಾಗಗಳೆಂದು ನಂಬಿ ಕೆಲವು ಭಾಗಗಳನ್ನು ದಿನದಿಂದ ದಿನ, ಮನೆಗೆ ಕೊಂಡೊಯ್ದನು. ಒಂದು ದಿನ ಅವುಗಳನ್ನು ಕೂಡಿಸಿ ಗಾಡಿ ರಚಿಸಲು ಕೂತನು. ಅವನ ಆಶ್ಚರ್ಯಕ್ಕೆ ವಿವಿಧ ಭಾಗಗಳನ್ನು ಕೂಡಿಸಿದ ಹಾಗೆ, ಗಾಡಿಯ ಬದಲಾಗಿ, ಆತನೆದುರು ಒಂದು ಮೆಶಿನ್ ತುಫಾಕಿ ರಚಿಸಲ್ಪಟ್ಟಿತು. ಎಷ್ಟು ಪ್ರಯತ್ನಗೊಂಡರೂ ಅದು ಮತ್ತೂ ಮತ್ತೂ ಮೆಶಿನ್ ತುಫಾಕಿಯಾಗಿಯೇ ನಿರ್ಮಾಣವಾಗುತಿತ್ತಂತೆ!

* * *

ಫ್ರೆಂಚ್ ರಿಪಬ್ಲಿಕ್ ಸರಕಾರದ ಕಳೆದ ೬೫ವರ್ಷಗಳ ಜೀವಾವಧಿಯಲ್ಲಿ ೯೮ ಮಂತ್ರಿಮಂಡಳಗಳು ಅಧಿಕಾರ ತಳೆದಿದ್ದವು!

ಇರುವೆಗಳೂ ಯುದ್ಧ ಶಾಂತಿ ಮಾಡುವುವು

(೫ನೇ ಪುಟದಿಂದ)

ಈ ಸಂಬಂಧ ಅವರ ಯುದ್ಧನೀತಿಯು ನೇಪೋಲಿಯನನ ಸಮರೋಪಾಯಕ್ಕೆ ಸಮ ಹೋಲುತ್ತದೆ. ಆ ಪ್ರಖ್ಯಾತ ಸೇನಾಪತಿಯೂ ಶತ್ರುಗಳ ಮನೋಸ್ಥೈರ್ಯವನ್ನು ಕಳಚಿಹಾಕುವುದರಲ್ಲಿ ತನ್ನ ಚಟುವಟಿಕೆಗಳನ್ನು ಕೇಂದ್ರಿಕರಿಸುತಿದ್ದನು. ಇರುವೆಗಳೂ ತಮ್ಮ ಶತ್ರುವಿನಲ್ಲಿ ಭಯ ಭ್ರಾಂತಿಗಳನ್ನುಂಟುಮಾಡಿ ಆ ಮೇಲೆ ಭಯಂಕರ ಆವೇಶದಿಂದ ಮೇಲಿಂದ ಮೇಲೆ ಬಿದ್ದು ಶತ್ರುವನ್ನು ಪುಡಿಮಾಡ ಪ್ರಯತ್ನಿಸುತ್ತವೆ. ಗಾಬರಿಗೊಂಡ ಶತ್ರುವಿನ ನೂರು ಮಂದಿಗೆ ತಮ್ಮ ಕಡೆಯ ಒಬ್ಬನೇ ಒಬ್ಬ ಯೋಧನಿದ್ದರೆ ಸಾಕೆಂದು ಅವುಗಳಿಗೂ ತಿಳಿಯುತ್ತದೆ.

ಒಳ್ಳೇ ಸೈನಿಕ ನೀತಿಯಂತೆ ಇರುವೆ ಯೋಧನ ಯೋಚನೆಯಾದರೂ ಕೊಲ್ಲುವುದಕಿಂತ ಗೆಲ್ಲುವುದೇ ಹೆಚ್ಚಿನದೆಂಬ ಭಾವನೆಯದಿದೆ. ವಿಜಯವು ದೊರಕಿದ ಕೂಡಲೇ ಪರಾಜಿತರ ಠಾಣ್ಯಗಳ ಸಂದಿಗ್ಧ ಸ್ಥಾನಗಳಲ್ಲಿ ಕಾವಲು ಪಡೆಗಳನ್ನಿಡುವರು. ಇವರು ಸೋತ ಶತ್ರುವಿನ ಬಳಗಗಳನ್ನು ಓಡಿಹೋಗಲು ಬಿಡುವರು. ಆದರೆ ಯಾವ ಪದಾರ್ಥಗಳನ್ನೂ ಕೊಂಡೊಯ್ಯಲು ಬಿಡುವುದಿಲ್ಲ. ವಿಜಯಿಗಳು ಸುಲಿಗೆ ಲುಟಾಯಿಸುವಿಕೆಯಲ್ಲಿ ನಿರತರಾಗುವುದಾದರೂ ಆದಷ್ಟು ಕಮ್ಮಿ ಶತ್ರುಗಳನ್ನು ಕೊಲ್ಲುವರು. ಸಮಾನ ಶಕ್ತಿಯ ಪಂಗಡಗಳೊಳಗೆ ಜಗಳವಾದರೂ ಕೆಲವೇ ಸಮಯ ಮಾತ್ರ. ಪರಸ್ಪರ ಒಪ್ಪಂದದಂದೆಂಬಂತೆ ಅವುಗಳು ತಮ್ಮ ಸೈನ್ಯಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತವೆ. ತಮ್ಮ ತಮ್ಮ ರಾಜ್ಯದ ಗಡಿಗಳನ್ನು ವಿರಚಿಸಿಕೊಂಡು ಅವುಗಳ ಪವಿತ್ರತೆಯನ್ನು ಇರ್ವರೂ ಮಾನ್ಯ ಮಾಡಿ ಮನುಷ್ಯರಿಗಿಂತಲೂ ಹೆಚ್ಚಿನ ಹಿತ ತೃಪ್ತಿಗಳಿಂದ ಜೀವನ ಸಾಗಿಸುತ್ತವೆ.

ಯುದ್ಧ ಮಾಡುವುದೇ ಇರುವೆಗಳ ಪ್ರಧಾನ ಉದ್ದೇಶವಲ್ಲವೆಂದು ಡಾ। ಫೊರೇಲರ ಅಭಿಪ್ರಾಯ. ಪರಸ್ಪರಶತ್ರುವರ್ಗಕ್ಕೆ ಸೇರಿದ ಎರಡು ಇರುವೆಗಳು ತಮ್ಮ ತಮ್ಮ ರಾಜ್ಯದಿಂದ ದೂರವಿರುವ ಯಾವುದಾದರೂ ಪ್ರದೇಶದಲ್ಲಿ ಒಟ್ಟುಗೂಡಿದರೆ ಜಗಳಮಾಡಿಕೊಳ್ಳುವ ಬದಲು ಉಭಯತರೂ ವಿರೋಧ ದಿಕ್ಕುಗಳಿಗೆ ಓಡಿಹೋಗುತ್ತವೆ. ಜಗಳಕ್ಕೆ ಸಿದ್ಧವಾದ ಎರಡು ಪಕ್ಷದ ಇರುವೆಗಳ ಕೂಟದಿಂದ ಎರಡು ಇರುವೆ ಯೋಧರನ್ನು ಹೆಕ್ಕಿ ಒಂದು ಗಾಜಿನ ಪಾತ್ರೆಯಲ್ಲಿ ಹಾಕಿದರೆ ಅವುಗಳು ಒಬ್ಬರಿಗೊಬ್ಬರು ಏನೂ ಹಾನಿಮಾಡದೆ ಸುಮ್ಮನಿರುತ್ತವೆ. ಆದರೆ ಪುನಃ ಇವುಗಳನ್ನು ಅವರವರ ಶಿಬಿರಗಳಲ್ಲಿ ಬಿಟ್ಟು ಬಿಟ್ಟರೆ ಮತ್ತೆ ಅವುಗಳಲ್ಲಿ ಯುದ್ಧಾತುರತೆ ಉತ್ಪನ್ನವಾಗಿ ಕಾದಾಡಲು ಸಿದ್ಧವಾಗುತ್ತವೆ. ಇದರಿಂದ ಇರುವೆಗಳಲ್ಲಿಯೂ ಯುದ್ಧಪ್ರಿಯತೆಯು ಸಾಮೂಹಿಕವಾದುದಲ್ಲದೆ ಅದು ವೈಯಕ್ತೀಕವಲ್ಲ.

ಕೆಲವು ಸಮಯ ಇರುವೆಗಳಲ್ಲಿ ಯುದ್ಧದ ಹುಚ್ಚು ನೆತ್ತಿಗೇರಿ ಅವು ತಮ್ಮ ತಮ್ಮೊಳಗಿನವರನ್ನೆ ಕೊಲ್ಲುವವು. ತಮ್ಮ ಗುಲಾಮರನ್ನು ಕೊಲೆ ಮಾಡುವವು. ಹೀಗಾದಾಗ ಕೆಲಸಗಾರರೂ, ಗುಲಾಮರೂ ಸೇರಿ ಅವನ್ನು ಕೈಕಾಲುಗಳಿಗೆ ಹಿಡಿದು ತಡೆದು ನಿಲ್ಲಿಸಿ ಸಮಾಧಾನ ಮಾಡುವುದೂ ಉಂಟು. ನಂತರ ಅದಕ್ಕೆ 'ವಿವೇಕ' ಬರುತ್ತದೆ.

ಫೊರೆಲರು ಒಂದುಸಲ ಕಪ್ಪು ಇರುವೆಗಳನ್ನೂ ಕೆಂಪು ಇರುವೆಗಳನ್ನೂ ಒಂದು ಗಾಜಿನ ಪೆಟ್ಟಿಗೆಯೊಳಗೆ ಹಾಕಿದರು. ಕೆಲವು ದಿನಗಳ ಯುದ್ಧ ನಂತರ ಪಕ್ಕನೆ ಅವರಲ್ಲಿ ಶಾಂತಿ ಒಪ್ಪಂದವಾಯಿತು. ಆಗ ಹೊಸದಾಗಿ ಮರಿಯೊಡೆದು ಹೊರಬಂದ ಒಂದು ಕಪ್ಪು ಇರುವೆಯನ್ನು ಅವರ ಮಧ್ಯಕ್ಕೆ ಸೇರಿಸಲಾಯಿತು. ಹಸಿವಿನಿಂದ ಒಳಲುವ ಅದು ಇತ್ತಂಡದವರೊಡನೆ ಆಹಾರಕ್ಕಾಗಿ ಬೇಡುತಿತ್ತು. ಆಗ ಕರುಣೆಗೊಂಡಂತಿದ್ದ ಎರಡು ಕೆಂಪಿರುವೆಗಳು ಅದಕ್ಕೆ ಆಹಾರಕೊಟ್ಟವು. ಕೆಂಪು ಕಪ್ಪು ಇರುವೆಗಳನ್ನು ಒಟ್ಟು ಸೇರಿಸಿ ಒಂದು ಖಾಲಿಯಾದ ಇರುವೆ ಗೋಪುರದಲ್ಲಿ ಅವನ್ನು ಬಿಟ್ಟಾಗ ಅವು ಐಕ್ಯಮತ್ಯದಲ್ಲಿ ಯಾವ ಜಗಳವೂ ಇಲ್ಲದೆ ಒಂದು ಮಿಶ್ರ ಸಮಾಜವನ್ನು ಕಲ್ಪಿಸಿಕೊಂಡು ಶಾಂತಿಯಲ್ಲಿದ್ದವು. ಹೊಸ ಕಪ್ಪು ಇರುವೆಗಳನ್ನು ಈ ಮಿಶ್ರ ಸಮಾಜದೊಳಗೆ ಸೇರಿದರೆ ಅವು ವೈಯಕ್ತೀಕವಾಗಿ ಕೆಂಪಿರುವೆಗಳೊಡನೆ ಜಗಳ ಕೆಣಕುವುವು. ಆದರೆ ಕೆಂಪಿರುವೆಗಳು ಅದಕ್ಕೆ ಪ್ರತಿ ಜಗಳಕೊಡದೆ ಸುಮ್ಮಗಿರುವುದನ್ನು ನೋಡಿ ಆ ಕಪ್ಪು ಇರುವೆಯೂ ಮತ್ತೆ ಅವುಗಳೊಂದಿಗೇ ಮಿಲನವಾಗಿರುವುದು. "ಹೀಗೆ ಬೇರೆ ಬೇರೆ ವರ್ಣದ, ಬೇರೆ ಜಾತಿ ಜನಾಂಗದ ಇರುವೆಗಳು ಕೂಡಾ ಒಪ್ಪಂದಮಾಡಿಕೊಂಡು ಚಿರ ಶಾಂತಿಯಲ್ಲಿರಬಲ್ಲವೆಂದ ಮೇಲೆ ಶ್ರೇಷ್ಠನೆನಿಸಿದ ಮಾನವನಿಗೆ ಅದು ಅಸಾಧ್ಯವೆಂದು ತೋರುವುದಾದರೆ ವಿವೇಕದ ಅಧಃಪತನವೆಂದು ಅರ್ಥವಾಗುವುದಿಲ್ಲವೆ?" ಹೀಗೆಂದು ಶಾಂತಿವಾದಿ ರೊಮ್ಯಾನ್‌ರೋಲಾಂಡರು ಪ್ರಶ್ನಿಸುತ್ತಾರೆ.

The South Canara Central Co-operative Bank, Ltd., Mangalore.
SEASON DEPOSISTS
of Rs. 10,000/ and above for six months will be accepted at 3½% up to 31st March 1945.
U. Shantha Rama Rao,
26-12-1944 Secretary

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ
ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.
ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.
ಪ್ರಯಾಣ ಮಾಡಲೇ ಬೇಕೆಂದಿರುವಾಗ
ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.
ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇಳದೆ ಏಜಂಟರೊಡನೆ ಸಹಕರಿಸಿರಿ.
JOINT MANAGERS,
The Combined Booking Agency, MANGALORE.
The Joint Booking Office, KODIALBAIL.

THE BANK OF MANGALORE, Ltd.,
MANGALORE.
Interest on Fixed Deposits.

It is notified for the information of Depositors, that interest on all Fixed Deposits received from this date will be paid every half year instead of quarterly as hitherto; those received prior to this date will also be paid accordingly with effect from 1-1-1945

Office of the Bank, Mangalore, 30th Oct. 1944. By Order H. S. KAMATH, Manager

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಅದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: **ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ** ಮತ್ತು **ಉಡುಪಿ.**

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906
[ಸಂಪುಟ 39] ತಾರೀಕು 26—1—1945 [ಸಂಚಿಕೆ 4]

ಗಾಂಧೀಜಿಯವರ ಸತ್ಯನಿಷ್ಠೆ

ಲೇಖಕ: ಘನಶ್ಯಾಮದಾಸ ಬಿರ್ಲಾ

ಗಾಂಧೀಜಿಯವರು ಅಹಿಂಸೆಯನ್ನು ಕುರಿತು ಮಾತಾಡುವಾಗೆಲ್ಲ 'ಅಹಿಂಸೆ ಸತ್ಯದ ತಳಹದಿ ಇದೆ' ಎಂದು ಹೇಳುವರು ಹಾಗೂ ಒಳ್ಳೆ ಜೋರಿನಿಂದ ಸತ್ಯತತ್ವದ ಪ್ರತಿಪಾದನೆ ಮಾಡುವರು. ನಮ್ಮ ಶಾಸ್ತ್ರಗಳಲ್ಲಿ ಆಪದ್ಧರ್ಮಗಳೆಂದು, ಹಲವು ಅಪವಾದಗಳು ವಿಹಿತವೆಂದು, ಮನ್ನಿಸಲಾಗಿವೆ. ಒಮ್ಮೆ ಪ್ರಾಚೀನ ಕಾಲದಲ್ಲಿ ಹನ್ನೆರಡು ವರ್ಷದ ಬರ ಬಿದ್ದಿತು. ಆಗ ವಿಶ್ವಾಮಿತ್ರನು ಹಸಿದು ಕಕ್ರಾಂತನಾಗಿ ಆಹಾರವನ್ನು ಹುಡುಕಲು ಹೊರಟನು. ಅವನಿಗೆ ಎಲ್ಲೆಲ್ಲಿಯೂ ಏನೂ ದೊರೆಯಲಿಲ್ಲ. ಆಗ ರಾತ್ರಿ ಚಾಂಡಾಲರಿದ್ದಲ್ಲಿ ಹೋದನು ಹಾಗೂ ಅಲ್ಲಿ ಒಂದು ನಾಯಿಯ ಮಾಂಸವನ್ನು ಕದಿಯಬೇಕೆಂದು ನಿಶ್ಚಯಿಸಿದನು. ಆದರೆ ಇವನು ಕಳವು ಮಾಡುವಾಗ ಚಾಂಡಾಲನ ಕಣ್ಣು ತೆರೆದವು ಹಾಗೂ ಅವನು ಋಷಿಗೆ 'ತಾವು ಈ ಅಧರ್ಮವನ್ನೇಕೆ ಆಚರಿಸುತ್ತಿರುವಿರಿ?' ಎಂದು ಕೇಳಿದನು. ಆಪತ್ಕಾಲದಲ್ಲಿ ಬ್ರಾಹ್ಮಣನು ಕಳವು ಸಹ ಮಾಡಿದರೆ ಅದು ವಿಹಿತವು ಎಂಬುದೆ ವಿಶ್ವಾಮಿತ್ರನ ಹೇಳಿಕೆ.

ಆಪತ್ಸು ವಿಹಿತಂ ಸ್ತೈನ್ಯಂ ವಿಶೇಷಂ ಚ
ಮಹೀಯಸಃ ।
ವಿಪ್ರೇಣ ಪ್ರಾಣರಕ್ಷಾರ್ಥಂ ಕರ್ತವ್ಯಮಿತಿ
ನಿಶ್ಚಯಃ ॥

ಆಪತ್ಕಾಲದಲ್ಲಿ ಕಳವು ವಿಹಿತವು. ದೊಡ್ಡವರು ಹಾಗೆ ಮಾಡಿದರೂ ವಿಶೇಷ ವಿಹಿತವು. ಪ್ರಾಣರಕ್ಷಣಕ್ಕಾಗಿ ಬ್ರಾಹ್ಮಣನು ಕಳವು ಮಾಡುವುದು ಅವನ ಕರ್ತವ್ಯವೆಂಬುದು ನಿಶ್ಚಯ.

ಆಗ ಚಾಂಡಾಲನು ಅವನಿಗೆ ಹೊಟ್ಟೆ ತುಂಬ ಧರ್ಮೋಪದೇಶವನ್ನು ಮಾಡಿದನು! ನೀವು ಪಾಪವನ್ನು ಮಾಡುತ್ತಿರುವಿರಿ, ಎಂದು ಹೇಳಿದನು. ಕೊನೆಗೆ ಉಪದೇಶ ಕೇಳಿ ಕೇಳಿ ವಿಶ್ವಾಮಿತ್ರನು ಸಂತಪ್ತನಾದನು. 'ಕಪ್ಪೆಗಳ ಕೂಗಾಟ ಕೇಳಿ ಅವು ಸರೋವರದ ನೀರು ಕುಡಿಯುವುದನ್ನು ಬಿಡುವುದಿಲ್ಲ, ನೀನು ಧರ್ಮದ ಉಪದೇಶ ಕೊಡಲು ಅಧಿಕೃತನಲ್ಲ. ಆದುದರಿಂದ ವ್ಯರ್ಥ ಏಕೆ ಬೊಗಳುತ್ತೀ?

ಪಿಬಂತ್ಯೇವೋದಕಂ ಗಾವೊ ಮಂಡೂಕೇಷು
ರುದತ್ಸ್ವಪಿ ।
ನ ತೈಧಿಕಾರೋ ಧರ್ಮೇಸ್ತಿ ಮಾ ಭೂರಾತ್ಮ
ಪ್ರಶಂಸಕ ॥

ನನಗೇನು ಧರ್ಮ ಗೊತ್ತಿಲ್ಲವೆ? ಬದುಕಿದರೆ ಧರ್ಮ ಸಾಧನವು ಆಗೇ ಆಗುವುದು. ಈ ದೇಹವೆ ಉಳಿಯದಿದ್ದರೆ ಧರ್ಮಕ್ಕೆ ಎಡೆಯೆಲ್ಲಿ? ಆದುದರಿಂದ ಈ ಸಮಯದಲ್ಲಿ ಪ್ರಾಣರಕ್ಷಣೆಯೇ ಪರಮ ಧರ್ಮವು' ಎಂದು ವಿಶ್ವಾಮಿತ್ರನು ನುಡಿದನು.

ಗಾಂಧೀಜಿಯವರು ಈ ಬಗೆಯ ಯುಕ್ತಿವಾದವನ್ನು ಎಂದೂ ಆಶ್ರಯಿಸಲಿಲ್ಲ. ಇದು ಅವರಿಗೆ ಸರಿದೋರುವುದೂ ಇಲ್ಲ.

ಆತ್ಮನ ಆದೇಶದ ವಿರುದ್ಧ ಅವರು ಹಲವು ಕೆಲಸಗಳನ್ನು ಮಾಡಿದ್ದು ನಿಜ. ಉದಾ: ಹಾಲು ಕುಡಿಯದಿರುವ ವ್ರತವನ್ನು ಅವರು ಕೈಕೊಂಡಿದ್ದರು. ಆ ವ್ರತದ ಬುಡದಲ್ಲಿ ಹಲವು ವಿಚಾರಗಳಿದ್ದವು. ನಮ್ಮ ಶಾಸ್ತ್ರಗಳಲ್ಲಿ ಈ ಸಿದ್ಧಾಂತವಿರದಿದ್ದರೂ ಬ್ರಹ್ಮಚಾರಿಗಳಿಗೆ ಹಾಲು ಯೋಗ್ಯವಾದ ಆಹಾರವಲ್ಲ ಎಂಬುದೊಂದು ಅಭಿಪ್ರಾಯ ಅವರದಿತ್ತು. ಆದರೆ ವ್ರತವನ್ನು ಕೈಕೊಂಡಾಗ ಅವರೆದುರು ಕಲಕತ್ತೆಯ ಗವಳಿಗರು ಆಕಳ ಮೇಲೆ ಮಾಡುವ "ಫೂಕಾ" ಎಂಬ ಅತ್ಯಾಚಾರವು (ರಕ್ತ ಬರುವವರೆಗೆ ಹಾಲು ಹಿಂಡುವ ಒಂದು ವಿಶಿಷ್ಟ ಕ್ರಮ) ಇತ್ತು. ವ್ರತವನ್ನು ಕೈಕೊಂಡರು. ವರ್ಷಾನುವರ್ಷ ನಡೆಯಿತು. ಕೊನೆಗೊಮ್ಮೆ ಒಂದು ರೋಗವು ಗಂಟುಬಿತ್ತು. ಹಾಲು ಕುಡಿಯಬೇಕೆಂದು ಎಲ್ಲರೂ ಹೇಳಿದರು. ಗಾಂಧೀಜಿಯವರು ನಿರಾಕರಿಸುತ್ತಲೆ ಇದ್ದರು. ಗೋಖಲೆಯವರು ಹೇಳಿದರು, ಡಾಕ್ಟರರು ಬಿನ್ನವಿಸಿದರು, ಯಾರದೂ ನಡೆಯಲಿಲ್ಲ. ಮತ್ತೊಂದು ಜಡ್ಡು ಆವರಿಸಿತು. ಅದು ಹೆಚ್ಚು ಮಾರಕವಿತ್ತು. ಆದರೆ ಹಾಲಿನ ಬಗ್ಗೆ ಗಾಂಧಿಜಿಯವರ ಹಟ ಇನ್ನೂ ಇತ್ತು. ಒಂದು ದಿನ ಕಸ್ತೂರಬಾ ಇವರು ಅಂದದ್ದು, "ತಾವು ಪ್ರತಿಜ್ಞೆ ಮಾಡಿದಾಗ ಎಮ್ಮೆ ಆಕಳುಗಳ ಹಾಲು ಮಾತ್ರ ತಮ್ಮೆದುರು ಇತ್ತು. ಆಡಿನ ಹಾಲಿನ ಸಂದರ್ಭವಿರಲಿಲ್ಲ. ಆದುದರಿಂದ ಆಡಿನ ಹಾಲು ಏಕೆ ಸೇವಿಸಬಾರದು?" ಬಾರವರ ಮಾತು ಮನ್ನಿಸಿ ಆಡಿನ ಹಾಲು ಕುಡಿದರು. ಅಂದಿನಿಂದ ಆಡಿನ ಹಾಲು ಕುಡಿಯುತ್ತಿರುವರು. ತಾವು ಆಡಿನ ಹಾಲು ಸೇವಿಸಿದ್ದು ವ್ರತಭಂಗವಾಯಿತೋ ಇಲ್ಲವೋ ಎಂಬ ಬಗ್ಗೆ ಗಾಂಧೀಜಿಯವರ ಮನಸಿನಲ್ಲಿ ಇನ್ನೂ ಸಂಶಯವಿದೆ.

ಕೈಕೊಂಡ ವ್ರತ, ಮಾಡಿದ ಪ್ರತಿಜ್ಞೆ ಇವುಗಳ ಆದಷ್ಟು ವ್ಯಾಪಕ ಅರ್ಥವನ್ನು ಮಾಡಿ ಅದರಂತೆ ಅವುಗಳನ್ನು ಪಾಲಿಸುವುದು ಗಾಂಧೀಜಿಯವರ ರೂಢಿಯು. ತಾವು ಮಾಡುವ ಕೆಲಸವು ಅನೀತಿಯುಕ್ತವು ಎಂದು ಪ್ರತೀತವಾದೊಡನೆ ಎರಡನೆಯವರು ಹೇಳುವ ಹಾದಿ ನೋಡದೆ ಅದನ್ನು ಕೂಡಲೆ ಬಿಟ್ಟುಬಿಡುವರು. ಆದರೆ ತಮ್ಮ ಮಾರ್ಗವು ಅನೀತಿಯುಕ್ತವಿದೆ ಎಂದು ಎನಿಸುವವರೆಗೆ ಅವರು ಸಣ್ಣ ಪುಟ್ಟ ಸಂಗತಿಗಳಲ್ಲಿ ಸಹ ಬದಲಾವಣೆ ಮಾಡುವುದಿಲ್ಲ. ಅಡ್ಡಾಡಲು ಹೋದರೆ ಅದೇ ಒಂದು ದಾರಿ, ಮಲಗುವುದು ಒಂದೇ ಕಡೆಗೆ, ಊಟ ಒಂದೇ ಸ್ಥಳದಲ್ಲಿ, ಅವೇ ಪಾತ್ರೆಗಳು, ಅವೇ ವಸ್ತುಗಳು. ಡಿಲ್ಲಿಗೆ ಬಂದರೆ ನಿಜಾಮುದ್ದೀನ ಸ್ಟೇಶನ್ನಿನ ಮೇಲೆ ಇಳಿದು, ಹೋಗುವಾಗ ದೊಡ್ಡ ಸ್ಟೇಶನಿನಲ್ಲಿ ಗಾಡೀ ಹತ್ತುವರು. ಇಳಿಯಲು ನನ್ನಲ್ಲಿ ಬಂದರೆ ಯಾವ ಕೋಣೆಯಲ್ಲಿ ಮೊದಲು ಇಳಿಯುತ್ತಿದ್ದರೊ ಅದೇ ಕೋಣೆಯಲ್ಲಿರುವರು. ಮೋಟರು ಒದಲು ಮಾಡುವುದು ಸಹ ಅವರ ಮನಸ್ಸಿಗೆ ಬರುವುದಿಲ್ಲ. ಯಾವುದೇ ರೂಢಿ-ಪದ್ಧತಿಯನ್ನು ನಿಷ್ಕಾರಣ ಪಲ್ಲಟಿಸುವುದಿಲ್ಲ. ಸಣ್ಣಸಣ್ಣ ಮಾತುಗಳಲ್ಲಿ ಸಹ ಒಂದು ಬಗೆಯ ಬಿಗುವಾದ ಹಿಡಿತವಿದೆ.

'ಯಾವ ಪ್ರಧಾನ ಧರ್ಮದಲ್ಲಿ ಎಲ್ಲ ಧರ್ಮಗಳು ಒಳಗೊಳ್ಳುವವೋ ಆ ಸತ್ಯಧರ್ಮವೆ ನನ್ನ ಸರ್ವೋತ್ತಮ ಧರ್ಮವು. ಸತ್ಯವೆಂದರೆ ಕೇವಲ ವಾಚಿಕ ಸತ್ಯವಲ್ಲ. ಮಾನಸಿಕ ಸತ್ಯವೂ ಅವಶ್ಯ. ಸತ್ಯವೆಂದರೆ ಮಿಶ್ರಸತ್ಯವಲ್ಲ, ಆದರೆ ಅನಿತ್ಯ, ಶುದ್ಧ, ಸನಾತನ, ಎಂದೂ ಬದಲಾಗದಂಥ ಸತ್ಯವು. ಅದೇ ಆ ಪರಮಾತ್ಮ. ಪರಮಾತ್ಮನ ವ್ಯಾಖ್ಯೆಗಳು ಹಲವು, ಯಾಕೆಂದರೆ ಅವನ ಸ್ವರೂಪಗಳು ಅನೇಕ. ಈ ವ್ಯಾಖ್ಯೆಗಳನ್ನು ಕೇಳಿ ನಾನು ಆಶ್ಚರ್ಯಚಕಿತನಾಗುವೆನು. ಹಾಗೂ ಸ್ತಬ್ಧನಾಗುವೆನು. ಆದರೆ ನಾನು ಪರಮಾತ್ಮನನ್ನು ಸತ್ಯಾವತಾರವೆಂಬ ಸ್ವರೂಪದಲ್ಲಿ ಪೂಜಿಸುವೆನು. ನನಗೆ ಇನ್ನೂ ಅವನು ಪ್ರತ್ಯಕ್ಷನಾಗಿಲ್ಲ. ನಾನು ಅವನನ್ನು ಹುಡುಕುತ್ತಿರುವೆನು. ಈ ಶೋಧೆ ಮಾಡುವಾಗ ಸಾವು ಬಂದರೆ ನಾನು ಸಾವಿಗೂ ಸಿದ್ಧನು. ಆ ಶುದ್ಧ ಸತ್ಯವು ನನಗೆ ಹಸ್ತಗತವಾಗುವತನಕ ನಾನು ಸತ್ಯವೆಂದು ಮನ್ನಿಸಿದುದನ್ನು ಅನುಸರಿಸುವೆನು. ಈ ಸತ್ಯ ಮಾರ್ಗವು ತೀರ ಬಿಕ್ಕಟ್ಟಿನದು ಹಾಗೂ ಕತ್ತಿಯ ಮೊನೆಯಂತೆ ಕೂರಾದುದು. ಆದರೆ ನನಗೆ ಇದು ಸುಗಮವು. ನಾನು ಈ ಸತ್ಯಮಾರ್ಗವನ್ನು ಎಂದು ಬಿಟ್ಟಿಲ್ಲ. ಆದುದರಿಂದ ಗುಡ್ಡದಂಥ ನನ್ನ ತಪ್ಪುಗಳು ಸಹ ನನ್ನನ್ನು ಸಂತಾಪಗೊಳಿಸಿಲ್ಲ.' ಇದು ಅವರ ಸತ್ಯನಿಷ್ಠೆ.

ಸತ್ಯ, ಅಹಿಂಸೆ, ದೇವರಲ್ಲಿ ಶ್ರದ್ಧೆ ಈ ಮೂರು ಮಾತುಗಳ ಅಂಕುರವು ಗಾಂಧಿಜಿಯವರ ಹೃದಯದಲ್ಲಿ ಚಿಕ್ಕಂದಿನಲ್ಲೇ ಇದ್ದಂತೆ ತೋರುವುದು. ಇವುಗಳಲ್ಲಿ ಮೊದಲು ಮೊಳೆತುದು ಯಾವುದು ಇದನ್ನು ಹೇಳುವವರಾರು? ಪೂರ್ವಜನ್ಮದ ಹಲವು ಸಂಸ್ಕಾರ ಬೀಜಗಳು ಅವರೊಡನೆ ಬಂದಿರಬಹುದು. ಆದರೆ ಈ ಜನ್ಮದಲ್ಲಿ ಸತ್ಯವೆ ಮೊದಲು ಅವರ ಹೃದಯಾಕಾಶದಲ್ಲಿ ಉದಯ ಹೊಂದಿರಬೇಕು. ಅವರು ಹೇಳುವುದೇನಂದರೆ, 'ಚಿಕ್ಕಂದಿನಲ್ಲೆ ಒಂದು ಸಂಗತಿಯು ನನ್ನ ಮನಸಿನಲ್ಲಿ ಬೇರು ಬಿಟ್ಟಿತು. ಅದಾವುದೆಂದರೆ, ಧರ್ಮವೆ, ಸತ್ಯವೆ ಎಲ್ಲ ಮಾತುಗಳ ಮೂಲವು ಎಂಬುದು. ಆದುದರಿಂದ ಸತ್ಯವೆ ನನ್ನ ಪರಮ ಧ್ಯೇಯವಾಯಿತು. ಈ ಸತ್ಯವು ನನ್ನ ಮನದಲ್ಲಿ ರೂಪುಗೊಂಡಂತೆ ಅದರ ವ್ಯಾಖ್ಯೆಯು ವಿಸ್ತಾರಹೊಂದಲಾರಂಭಿಸಿತು.'

ಚಿಕ್ಕಂದಿನಲ್ಲಿ ಗಾಂಧೀಜಿಯವರು ಬಹಳ ಲಜ್ಜಾಶೀಲ ವೃತ್ತಿಯವರಾಗಿದ್ದರು. ಹತ್ತಿಪ್ಪತ್ತೇ ಗೆಳೆಯರು ಇರುವಾಗ ಸಹ ಅವರು ಬಾಯಿಬಿಚ್ಚಿ ಮಾತಾಡುತ್ತಿರಲಿಲ್ಲ. ಸಾರ್ವಜನಿಕ ಸಭೆಗಳಲ್ಲಿಯಂತೂ ಅವರ ಬಾಯಿ ಒಂದು ರೀತಿ ಕಟ್ಟಿಯೆ ಹೋಗುತಿತ್ತು. ಲಂಡನದಲ್ಲಿ ವಿದ್ಯಾಭ್ಯಾಸ ಮಾಡುವಾಗ ಸಣ್ಣ ಪುಟ್ಟ ಸಭೆಗಳಲ್ಲಿ ಎದ್ದುನಿಂತು ಮಾತಾಡುವ ಪ್ರಸಂಗಗಳು ಬಂದಾಗ ಅವರ ವಾಣಿಯು ಅವರಿಗೆ ಸಹಾಯ ಮಾಡಲಿಲ್ಲ. ಇದು ಅವರಿಗೂ ಅಪಮಾನಕಾರಕವೆನಿಸಿತು. ಆದರೆ ಬಹುದಿನಗಳ ವರೆಗೆ ಇದೇ ಸ್ಥಿತಿ ಇದ್ದಿತು. ಬ್ಯಾರಿಸ್ಟರರಾಗಿ ಈ ದೇಶಕ್ಕೆ ಮರಳಿ ಬಂದರೂ ಸುಧಾರಣೆಯಾಗಲಿಲ್ಲ. ಮುಂಬಾಯಿ ಕೋರ್ಟಿನಲ್ಲಿ ಒಂದು ಖಟ್ಲೆ ನಡೆಸಲು ನಿಂತಾಗ ಬಾಯಿ ಬಂದಾಗಿಬಿಟ್ಟಿತು. ಕಾಗದಗಳನ್ನು ತಿರುಗಿ ಕೊಟ್ಟು ಇವರು ಮನೆ ಹಾದೀ ಹಿಡಿದರು!

ಆಗ ಈ ಲಜ್ಜಾಶೀಲ ಸ್ವಭಾವವೇಕೆ? ಈ ಹೊತ್ತು ಗಾಂಧೀಜಿಯವರ ವಾಕ್ಪ್ರವಾಹವು ಒಂದು ಹೊಳೆಯಂತೆ ಹರಿಯುವುದು. ಒಂದು ನಿರರ್ಥಕ ಶಬ್ದವೂ ಅದರಲ್ಲಿರುವುದಿಲ್ಲ. ಆ ಸ್ವಭಾವವು ಸತ್ಯದ ಪೋಷಣೆಗೆ ಅವಶ್ಯವೊ? ಅವರು ಶಬ್ದಗ

(೯ನೇ ಪುಟಕ್ಕೆ ಮುಂದುವರಿದಿದೆ.)

ಆದರೂ ಕಳ್ಳನಲ್ಲ

(ಕಳೆದ ಸಂಚಿಕೆಯುಲ್ಲಿ ಆ ಕಳ್ಳನ ವಿಷಯು ಒಂದು ಘಟನೆ ಪ್ರಸ್ತಾಪಿಸಿತ್ತು. ಬೆಂಗಳೂರಿನ ಸರ್ದಾರ್ ಹೋಟೆಲಿಗೆ ಬಂದು ಐನೂರು ಲಾಡುಗಳಿಗೆ ಆರ್ಡರ್ ಕೊಟ್ಟ. ಶರೀಫರ ಕಟ್ಲೇರಿ ಅಂಗಡಿಯಲ್ಲಿ ಐದುಸಾವಿರ ಚಿಲ್ಲರೆಯ ಸಾಮಾನು ಖರೀದಿಮಾಡಿ, ಚಿಲ್ಲರೆ ಕೊಟ್ಟು, ಉಳಿದ ಐದು ಸಾವಿರವನ್ನು ಸರ್ದಾರ್ ಹೋಟೆಲಿನಲ್ಲಿ ಕೊಡುವೆನೆಂದು ಶರೀಫರ ಅಂಗಡಿಯ ಕಾರಕೂನನೊಬ್ಬನನ್ನು ಜೊತೆಯಲ್ಲಿ ತಂದು, ಸರ್ದಾರ್ ಹೋಟೆಲಿನ ಮೆನೇಜರರ ಎದುರಿನಲ್ಲಿ 'ಇವರಿಗೆ ಆ ಐದುಸಾವಿರ ಕೊಡಿರಿ' ಎಂದು ಒಪ್ಪಿಸಿ ಮತ್ತೆ ಕಾಣೆಯಾದ.)

ಡ್ರೈವರನು ತನ್ನ ಕತೆ ಪೂರ್ಣ ಹೇಳುವೆನೆಂದು ಒಪ್ಪಿಕೊಂಡ ಮಂಗಳವಾರ ದಂದು ನಾವು ಎಂದಿಗಿಂತಲೂ ಮುಂಚಿತವಾಗಿ ನದೀ ದಂಡೆಯ ಮರಳ ರಾಶಿಯ ಮೇಲೆ ಕೂತು ದಾರಿಕಾಯುತಿದ್ದಾಗ ಮಾತಿನಂತೆ ಡ್ರೈವರನೂ ಬಂದ. ವಂದನೆ ಮರುವಂದನೆಗಳಾಗಿ ಅವನು ತನ್ನ ಕೆಲವು ದಿನಗಳ ಅನುಭವವನ್ನು ವಿವರಿಸುತ್ತಿರುವಾಗ ನಾವು 'ಆ ಕತೆಯನ್ನು ಮುಗಿಸಿ ಬಿಡಿರಿ' ಎಂದವನಿಗೆ ಅಗ್ರಹ ಮಾಡಿದೆವು. 'ಒಹೋ, ಅದೇಂತಾನೆ ಸರಿ, ಸರಿ ಹೇಳುತ್ತೇನೆ ಕೇಳಿ' ಎಂದು ಒಂದು ಸಿಗರೇಟ್ ಹೊತ್ತಿಸಿ, ಹೊಗೆಯನ್ನು ಆಳವಾಗಿ ಹೀರಿಕೊಂಡು ಮತ್ತೆ ಮೂಗಿನಿಂದ ಬಿಡುತ್ತ ಹೇಳಲಾರಂಭಿಸಿದ:

ಅವನ ಹೆಸರು ಹೇಳಲಿಕ್ಕೆ ನಿಮಗೆ ಮರ್‍ತೆ. ಅದು ವೆಂಕಟನಾರಾಯಣ ರಾವ್ ಎಂದು, ಅವನನ್ನು ನಾರ್ಣಪ್ಪನೆಂದು ಕರೆಯುತಿದ್ದರಂತೆ—ಅವನ ಮನೆಯಲ್ಲಿ ನಾವೂ, ಅದೇ ಹೆಸರಿನಿಂದ ಆ ಮಹಾನುಭಾವನನ್ನು ಕರೆಯೋಣ.

ಮಹಾನುಭಾವನೆಂದೆ, ಕಾರಣ ಖಂಡಿತವಾಗಿಯೂ ಅವನೊಬ್ಬ ಅವಧೂತ ಪುರುಷ. ಹೆಚ್ಚು ಕಲಿತಿರಲಿಲ್ಲವಾದರೂ ಇಂಗ್ಲಿಷನ್ನು ಬಹಳ ಸಫಾಯಾಗಿ ಮಾತಾಡುತಿದ್ದ. ಇತರ ಉತ್ತರ ಹಿಂದೂಸ್ಥಾನದ ಅನೇಕ ಭಾಷೆಗಳೂ, ಎಲ್ಲಾ ದ್ರಾವಿಡ ಭಾಷೆಗಳೂ ಅವನಿಗೆ ಸ್ಪಷ್ಟವಾಗಿ ಬರುತಿದ್ದವು. ಅವನ ಬಳಿಯಲ್ಲಿ ಒಂದು ನೂರು ತರದ ಉಡುಪುಗಳಿದ್ದುವು. ಸಂದರ್ಭಕ್ಕೆ ಬೇಕಾದ ವೇಷವನ್ನು ಅವನು ಧರಿಸಬಲ್ಲ. ವೇಷ ಧರಿಸುವುದರಲ್ಲಿಯೂ ಮತ್ತು ನಟನೆಯಲ್ಲಿಯೂ ಅವನು ಪರಿಪೂರ್ಣತೆಯನ್ನೇ ಹೊಂದಿದ್ದ. ಯಾವ ನಾಟಕ ಕಂಪೆನಿಯಲಾದರೂ ಅವನಿಗೆ ಕೆಲಸ ನಿರಾಯಾಸವಾಗಿ ದೊರಕಬಲ್ಲುದು. ಅವನು ತನ್ನ ಎರಡು ಹಲ್ಲುಸಾಲುಗಳನ್ನು ತೆಗೆಯಿಸಿ ಬೇಕಾದಾಗ ಕೃತಕ ಹಲ್ಲುಗಳನ್ನು ಇಟ್ಟುಕೊಳ್ಳುತಿದ್ದ. ಇಲ್ಲವೇ ಮುದುಕನಂತೆ, ಪಕೀರನಂತೆ, ಸಾಧುಗಳಂತೆ ಹೇಗೆ ಬೇಕೊ ಹಾಗೆ ಗಡ್ಡಮೀಸೆ ಇಟ್ಟುಕೊಂಡು ತಿರುಗುತಿದ್ದ. ಐರೋಪ್ಯ ಪೋಷಾಕು ಹಾಕಿ ಕನ್ನಡಕ ಇಟ್ಟುಬಿಟ್ಟು ಒಂದು ಪೇಟಾ ಸುತ್ತಿದರೆ, ಇವನೇನು ಸರಕಾರ ಅಧಿಕಾರಿಯೋ ರಾಜಕುಟುಂಬದವನೋ ಎಂದು ಹೇಳ ಬರುತ್ತಿರಲಿಲ್ಲ.

ಹೀಗೆ ಅವನು ತನ್ನ ವೃತ್ತಿಗೆ ಬೇಕಾದ ಸೌಕರ್ಯ ಅನುಕೂಲತೆಗಳನ್ನು ಧಾರಳವಾಗಿ ಮಾಡಿಕೊಂಡಿದ್ದು, ಎಂತಹ ಚಾಣಕ್ಷ ಗುಪ್ತ ಪೋಲಿಸರನ್ನೂ ಠಕಾಯಿಸಿ ಬಿಡುತ್ತಿದ್ದನಂತೆ. ಮಾತ್ರವಲ್ಲ ತಾನು ಎಲ್ಲಿ ಏನು ಮಾಡಬೇಕೆಂದಿರುವ ಮನೆಯವರ, ಸಂಸ್ಥೆಯವರ, ಕಛೇರಿ ಅಧಿಕಾರಿಗಳವರ ಚಲನವಲನಗಳನ್ನೂ ಅಭ್ಯಾಸ ಮನೋವೃತ್ತಿಗಳನ್ನೂ ಅವನು ಸೂಕ್ಷ್ಮವಾಗಿ ಬಲ್ಲವನಿದ್ದ ಇಲ್ಲವೆ ಅದನ್ನೆಲ್ಲ ಕೂಲಂಕೂಶವಾಗಿ ತಿಳಕೊಂಡು ಮತ್ತೆ ತನ್ನ ಕಾರ್ಯ ನಿರ್ವಹಣೆಗೆ ತೊಡಗುತಿದ್ದ.

ಮೈಸೂರಿನಲ್ಲಿ ಅವನು ಮೊತ್ತಮೊದಲಿನ ಪ್ರಯೋಗ ನಡೆಸಿದ್ದು ಓರ್ವ ಐರೋಪ್ಯ ಸರ್ಜನರ ಮನೆಯಲ್ಲಿ. ಆ ಸರ್ಜನರ ಮನೆ ನಗರದಿಂದ ಒಂದುವರೆ ಮೈಲು ದೂರದ ಒಂದು ಬಂಗಲೆಯಲ್ಲಿ. ಮಧ್ಯಾಹ್ನ ಅವರು ೧೨ ಗಂಟೆಯಿಂದ ಸುಮಾರು ೩ ಗಂಟೆಯ ತನಕ ಬಂಗಲೆಯಲ್ಲಿರುವುದಿಲ್ಲ—ತಮ್ಮ ರೋಗಿಗಳನ್ನು ನೋಡಹೋಗುತ್ತಾರೆ. ಅವರ ಈ ಕ್ರಮ ನಾರ್ಣಪ್ಪನಿಗೆ ಗೊತ್ತಿತ್ತು. ಒಂದು ದಿನ ಸಮಯ ನೋಡಿ ಅವನು ಮೈಸೂರಿನ ಅತೀ ಹೊಸದಾಗಿರುವ ಬಾಡಿಗೆ ಕಾರು ಒಂದರಲ್ಲಿ ಕೂತು ಸರ್ಜನರ ಬಂಗಲೆಗೆ ಹೋದ. ಸರ್ಜನರು ಇಲ್ಲದ ಸಮಯದಲ್ಲಿ ಅವರ ಲೇಡಿಯು ಮನೆಗೆ ಬಂದವರನ್ನು ಸತ್ಕರಿಸುತ್ತಿದ್ದಳು. ಅಂತೆಯೇ ನಾರ್ಣಪ್ಪನು ಸೂಟ್, ಪೇಟಾ ಸುತ್ತಿ ಕಾರಿನಿಂದಿಳಿದಾಕ್ಷಣ ಅವಳು ಅವನನ್ನು ಸ್ವಾಗತೀಕರಿಸಿ ಬಂದ ಉದ್ದೇಶವನ್ನು ಪ್ರಶ್ನಿಸಿದಳು. ತಾನು ಹತ್ತಿರದ ಸಂಸ್ಥಾನದ ಒಬ್ಬ ಜಮೀನ್ದಾರರ ತಮ್ಮನೆಂತಲೂ, ತನ್ನ ಅಣ್ಣನಿಗೆ ಉದರ ರೋಗವೊಂದು ಬಾಧಿಸುವುದರಿಂದ ಶಸ್ತ್ರಚಿಕಿತ್ಸೆಗೆಗಾಗಿ ಸರ್ಜನರನ್ನು ತೆಗೆದುಕೊಂಡು ಹೋಗಲು ಮಾತನಾಡಲಿಕ್ಕೆ ಬಂದಿರುವೆನಾಗಿಯೂ ತಿಳಿಸಿದಾಗ ಸನ್ಮಾನಪೂರ್ವಕವಾಗಿ ಸಾಕು ವಯಸ್ಸಿನ ಸ್ವಭಾವದ ಆ ಐರೋಪ್ಯ ಮಹಿಳೆ ಅವನನ್ನು ಬಂಗಲಿಯ ವಿರಾಮ ಕೋಣೆಯಲ್ಲಿ ವಿಶ್ರಮಿಸಿಕೊಳ್ಳಲು ವಿನಂತಿಸಿಕೊಂಡಾಗ ನಾರ್ಣಪ್ಪನು ದರ್ಪದಿಂದ ಆಮಂತ್ರಣವನ್ನು ಸ್ವೀಕರಿಸಿ ಗಂಭೀರವಾಗಿ ಅಲ್ಲಿನ ಆರಾಮ ಕುರ್ಚಿಯ ಮೇಲೆ ಕುಳಿತುಕೊಂಡನು.

ಕೆಲವು ಮಿನಿಟುಗಳಲ್ಲಿ ನಾರ್ಣಪ್ಪನ ದೃಷ್ಟಿ ಟೆಲಿಪೋನಿನ ಕಡೆಗೆ ಹೊರಳಿತು. ಮತ್ತೆ ಅವನು ಶೀಘ್ರದಿಂದಲೇ ಎದ್ದು ಟೆಲಿಫೋನಿನ ಮೇಲೆ ಮಾತಾಡತೊಡಗಿದನು. ಅವನು ಮಾತಾಡಿದ್ದು 'ಚೆಟ್ಟಿಯಾರ್ ಎಂಡ್ ಸನ್ಸ್' ಎಂಬ ಸರಾಫರ ಅಂಗಡಿಯವರೊಡನೆ: 'ಸರ್ಜನ್ ಸಾಹೇಬರಿಗೆ ಕೆಲವೊಂದು ಸ್ಪೆಶಲ್ ಇಂಜಕ್ಷನ್ನುಗಳನ್ನು (ಕ್ಷಯರೋಗಕ್ಕೆ ಬಂಗಾರದ ಸತ್ವ ಮಿಶ್ರಣವಿರುವ ಇಂಜಕ್ಷನ್ನು ಕೊಡುತ್ತಾರಂತೆ.) ತಯಾರಿಸಲು ಇನ್ನೂರು ತೊಲೆ ಪುತ್ಥಳೀ ಬಂಗಾರ ಬೇಕಾಗಿದೆ. ಈಗಲೇ ಅತೀಶೀಘ್ರವಾಗಿ ಅದನ್ನು ತಲುಪಿಸಲು ಸಾಧ್ಯವಿದೆಯೇ?' ಚೆಟ್ಟಿಯಾರರ ಉತ್ತರ ಬಂತು: 'ಅಗತ್ಯವಾಗಿ ಕಳುಹಿಸಿಕೊಡುತ್ತೇವೆ. ಮೊನ್ನೆ ಬಂಗಾರ ತೆಗೆದುಕೊಂಡು ಬಂದ ಮುನಿಸ್ವಾಮಿ-ನಮ್ಮ ಮೆನೇಜರ್-ಕಾರಿನಲ್ಲಿ ಅದನ್ನು ತರುವರು.' ಅಂದರೆ ಆ ಸರ್ಜನರು ಆಗಾಗ್ಗೆ ಚೆಟ್ಟಿಯಾರರ ಅಂಗಡಿಯಿಂದ ಬಂಗಾರ ತರಿಸುತಿದ್ದ ವಿಷಯ 'ವಿವೇಕಿ'ಯಾದ ನಾರ್ಣಪ್ಪನಿಗೆ ಗೊತ್ತು....

ಕಾಲ ಗಂಟೆಯೊಳಗೆ ಚೆಟ್ಟಿಯಾರರ ಅಂಗಡಿಯ ಕಾರು ಸರ್ಜನರ ಬಂಗಲೆಯ ಎದುರು ಬಂದುನಿಂತಾಗ ಕ್ರಮದಂತೆ ಸರ್ಜನರ ಹೆಂಡತಿಯು ಹೊರ ಬಂದು ನಿಂತಳು. ಆದರೆ ಅಲ್ಲೇ ವಿರಾಮಕೋಣೆಯೊಳಗೆ ಕಾಯುತಿದ್ದ ನಾರ್ಣಪ್ಪನು ಜರ್ಬಿನಿಂದ ಕೊರಳಲ್ಲೇ ಕೆಮ್ಮುತ್ತ ಹೊರ ಬಂದು ಲೇಡಿಯನ್ನುದ್ದೇಶಿಸಿ: "ಕ್ಷಮಿಸಿ, ಕಾರಿನಲ್ಲಿ ಬಂದ ವ್ಯಕ್ತಿ ನನ್ನನ್ನು ಕಾಣ ಬಂದವರು. ಅವರ ಪರಿಚಯ ತಮಗಿರಬಹುದು," ಲೇಡಿ ಎಂದಳು: "ಹೌದು, ಹೌದು, ಇವರು ಚೆಟ್ಟಿಯರ್ ಅಂಗಡಿಯವರು." "ನಿಜವಾಗಿಯೂ ಹೌದು. ಅವರೊಡನೆ ಒಂದು ವಜ್ರದ ಸರ ದುರಸ್ತಿಗೆ ಕೊಟ್ಟಿದ್ದು ಅದನ್ನು ಈಗ ಇಲ್ಲಿ ನಾನಿರುವುದರಿಂದ ಇಲ್ಲಿಗೇ ತಂದು ಕೊಡಲು ಹೇಳಿದೆ, ಟೇಲಿಫೋನಿನಲ್ಲಿ" ಎಂದು ನಾರ್ಣಪ್ಪನೆಂದಾಗ ಲೇಡಿ: "ಹಾಗಾದರೆ ನಿಮ್ಮ 'ಪ್ರಾಯ್ವೇಟ್' ವಿಚಾರವೆ? ಸರಿ, ನೀವೇ ನೋಡಿಕೊಳ್ಳಿ" ಎಂದು ಒಳಗಡೆ ಹೊರಟು ಹೋದಳು.

ಇಷ್ಟರೊಳಗೆ ಇನ್ನೂರು ತೊಲೆ ಬಂಗಾರ ತೆಗೆದುಕೊಂಡು ಬಂದ ಚೆಟ್ಟಿಯಾರರ ಮೆನೇಜರನು ಬಂಗಲೆಯ ಮೆಟ್ಟಲು ಹತ್ತುವಾಗ ನಾರ್ಣಪ್ಪನವರಿಂದ ತಡೆಯಲ್ಪಟ್ಟ. "ಎಲ್ಲಿಗೆ ಹೋಗುತ್ತೀರಿ?"

"ಸರ್ಜನರ ಬಳಿ ಸ್ವಲ್ಪ ಕೆಲಸವಿದೆ."

"ಸರ್ಜನರು ಹೊರಗೆ ಹೋಗಿದ್ದಾರೆ. ಅವರಿಲ್ಲದ ವೇಳೆ ಅವರ ಪರವಾಗಿ ಮಾತನಾಡಲು ಅವರು ನನ್ನನ್ನು ಪ್ರೈವೇಟ್ ಸೆಕ್ರೆಟರಿಯಾಗಿ ನೇಮಿಸಿದ್ದಾರೆ. ನಿಮ್ಮಲ್ಲಿಯಾರಿಗಾದರೂ ಅಸ್ವಸ್ಥವಾಗಿದೆಯೋ?"

"ಅಲ್ಲ ಅಲ್ಲ. ಈಗ ನಮ್ಮ ಚೆಟ್ಟಿಯಾರರ ಅಂಗಡಿಗೆ ಟೇಲಿಫೋನು ಬಂತು. ಆ ಕುರಿತು......"

"ಓಹೋ! ಇನ್ನೂರು ತೊಲೆ ಬಂಗಾರ ತರಲಿಕ್ಕೆ ತಾನೇ ಸರಿ. ಟೇಲಿಫೋನ್ ನಾನೇ ಸರ್ಜನರ ಆರ್ಡರ್ ಮೇರೆಗೆ ಮಾಡಿದವ. ಎಲ್ಲಿ ಬಂಗಾರ ಎಲ್ಲಿದೆ? ಈ ಕಡೆ ದಯಮಾಡಿಸಿ,-ವಿರಾಮ ಕೋಣೆಯೊಳಗೆ. ಕೆಲವು ದಿನಗಳ ಹಿಂದೆ ನಿಮ್ಮ ಸಂಸ್ಥೆಯಿಂದ ಕೊಟ್ಟ ಬಂಗಾರ ಅಷ್ಟೊಂದು ಚೆನ್ನಾಗಿರಲಿಲ್ಲ. ಅದರಲ್ಲಿ ಸ್ವಲ್ಪ ಮಿಶ್ರಣವಿದ್ದಂತೆ ಕಂಡು ಬಂದಿದೆ."

ಗಾಬರಿಗೊಂಡು ಬಂಗಾರ ತಂದವನು: "ಛೇ, ಛೇ, ನಮ್ಮ ಅಂಗಡಿಯೆಂದರೆ ಮೈಸೂರಲ್ಲೇ ಪ್ರಖ್ಯಾತ. ತಾಜಾ ಬಂಗಾರವೆಂದರೆ ತಾಜಾ ವಸ್ತುವನ್ನೇ ನಾವು ಕೊಡುವವರು" ಎಂದು ನಮ್ರತೆಯಿಂದ ತಿಳಿಸಿದನು. "ಹೋಗಲಿ ಪರವಾ ಇಲ್ಲಾ, ನೋಡೋಣ ಬಂಗಾರ. ಈ ಕಡೆ ಕೊಡಿ, ಸರ್ಜನರ ಹೆಂಡತಿಗೆ ತೋರಿಸಬೇಕು. ಈ ಸಲ ಅವರು ಪಾಸ್ ಮಾಡಬೇಕು." ಎಂದು ನಾರ್ಣಪ್ಪನು ಒಳ್ಳೇ ಮಾನಸೀಕ ದಿಗ್ಬಂಧನದ ಸಂದರ್ಭವನ್ನು ನಿರ್ಮಿಸಿ ಬಿಟ್ಟ. ಮೆನೇಜರನು ಬೆಳ್ಳಿಯ ಒಂದು ಕರಡಿಗೆಯನ್ನು ಅವನ ಕೈಗೆ ಕೊಟ್ಟಾಗ ನಾರ್ಣಪ್ಪನು ಟಕ್ಕನೆ ಒಂದು ಬೆಲ್ ಬಾರಿಸಿದನು. ಓರ್ವ ಜವಾನನು ಓಡಿ ಬಂದು "ಏನು ಬುದ್ಧಿ" ಎಂದ. "ಸ್ವಲ್ಪ, ಇಲ್ಲಿ ಇರು." ಎಂದು ಗಟ್ಟಿಯಾಗಿ ಅವನಿಗೆ ಆರ್ಡರ್ ಮಾಡಿ, ಮತ್ತೆ ಕೋಣೆಯ ಹೊರಗೆ ಕರೆದು "ಇಲ್ಲಿಯ ಮಲಶುದ್ಧಿಯ ಮನೆಯೆಲ್ಲಿ?" ಎಂದು ಕೇಳಿದನು. ಜವಾನನು ವಿನಯಪೂರ್ವಕವಾಗಿ ಅಲ್ಲಿಂದಲ್ಲೇ ಬಂಗಲೆಯ ಹಿಂದಿನ ಭಾಗದ ಬಯಲಲ್ಲಿ ಕಾಣುವ ಚೊಕ್ಕಾಟವಾದ ಚಿಕ್ಕ ಕಟ್ಟಡವನ್ನು ತೋರಿಸಿದನು. "ಈಗ ಬಂದೆ" ಎಂದು ಹೇಳುತ್ತಾ ನಾರ್ಣಪ್ಪ 'ಪಾಯಿಖಾನೆ'ಯ ಕಡೆ ಧಾವಿಸಿದ. ಅಲ್ಲಿ ಸರ್ಜನರ ಲೇಡಿ ಮಹಿಳೆ ಅವನಿಗೆ ಎದುರು ನೋಡ ಸಿಕ್ಕಿದಾಗ "ಕ್ಷಮಿಸಿ, ಹೊಟ್ಟೆ ಸಡಲಿಸಿ ಬರುವೆ" ಎಂದಾಗ "ಸಂತೋಷ" ವೆಂದಳವಳು.

ಸರಿ. ಮತ್ತೆ ನಾರ್ಣಪ್ಪನ ಪತ್ತೆಯಿಲ್ಲ. ಚೆಟ್ಟಿಯಾರರ ಮೆನೇಜರನೂ ಅಲ್ಲೇ, ಕಾರಿನ ಡ್ರೈವರುಗಳೂ ಅಲ್ಲೇ, ಎಲ್ಲರೂ ಅಲ್ಲೆ. ನಾರ್ಣಪ್ಪ ಮಲಶುದ್ಧಿಗೆ ಹೋದವನು ಅಲ್ಲಿಂದಲೇ ಪರಾರಿ. ಕಣ್ಣಿಗೆ ಮರೆಯಾದೊಡನೆ ಅವನು ಕೃತಕ ಗಡ್ಡ ವಿಟ್ಟೊ, ಹಲ್ಲು ತೆಗೆದೋ ಇಲ್ಲವೆ ಕಪ್ಪು ಕನ್ನಡಕವಿಟ್ಟೊ ಮಾಯವಾಗುವುದು ಅವನ ಪದ್ಧತಿ.

ಸರ್ಜನರು ಮನೆಗೆ ಬಂದಾಗ ಅವರ ಹೆಂಡತಿಯು ಓರ್ವ ಯೊವನೋ ಜಮೀನ್ದಾರನ ಕಡೆಯವ ಬಂದಿರುವನೆಂದು ವಿರಾಮ ಕೋಣೆಯೊಳಗೆ ಬಂದಾಗ ಅಲ್ಲಿ ಚೆಟ್ಟಿಯಾರರ ಮೆನೇಜರನು ಇದ್ದು ಅವನು ವಂದನೆ ಮಾಡಿದನು. ಅವನ ಪರಿಚಯು ಇದ್ದ ಸರ್ಜನರು 'ಏನು ಬಂದ್ರಿ? ಹೋದ ಸಲದ ಬಂಗಾರ ಚೆನ್ನಾಗಿತ್ತು. ಅದರ ಮೌಲ್ಯಕ್ಕೆ ಚೆಕ್ ಬಂದಿದೆಯಲ್ಲವೆ? ಇವತ್ತೇನು ಬಂದ್ರಿ?' ಎಂದು ಇಂಗ್ಲಿಷಿನಲ್ಲಿ ಕೇಳಿದಾಗ ಮೆನೇಜರನು ಗಾಬರಿಯಾಗಿ 'ಇವತ್ತೂ ಇನ್ನೂರು ತೊಲೆ ತರಲು, ಹೇಳಿದ್ದಿರಿ' ಎಂದಾಗ 'ಯಾರು, ಯಾರು?' ಎಂದು ಕೇಳಿದರು ಸರ್ಜನರು. 'ತಮ್ಮ ಪ್ರೈವೇಟ್ ಸೆಕ್ರಿಟರಿಯವರು ಬಂಗಾರ ತೋರಿಸಿ ತರುತ್ತೇನೆಂದು ಹೋಗಿದ್ದಾರೆ. ಎಲ್ಲಿ ಹೋದರು?' ಎಂದು ಮೆನೇಜರು ತಿಳಿಸಿದಾಗ ಸರ್ಜನರೂ ಅವರ ಹೆಂಡತಿಯೂ ಮುಖಮುಖ ನೋಡಿ ಕಣ್ಣುಕೆರಳಿಸಿಕೌತುಕಗೊಂಡರು.

ಮತ್ತೆ ಎಲ್ಲ ವಿಷಯವೂ ತಿಳಿಯಿತು. ಪೊಲೀಸ್‌ಸ್ಟೇಶನಿಗೆ ದೂರು ಹೋಯಿತು. ಆದರೂ 'ಜಮೀನ್ದಾರ' ನಾರ್ಣಪ್ಪನಿಲ್ಲ.

(ಕಡೆಯ ಭಾಗವನ್ನು ಬರುವ ಸಂಚಿಕೆಯಲ್ಲಿ ಪೂರ್ತಿಗೊಳಿಸಲಾಗುವುದು.)

ದಿನವಹಿ ಉಪಯೋಗದ ಲೋಹದ
ಪಾತ್ರಸಾಮಾನುಗಳು
ಖಾತರೀ ಬಾಳಿಕೆಯುವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ॰ ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಸ್ವಾತಂತ್ರ್ಯದ ಆಧಾರ ಸ್ಥಂಭಗಳು

ಜೈ ಜೈ ಕಾರದಿಂದ ಕ್ರಾಂತಿ

ಒಂದು ವರ್ಷದಲ್ಲಿ ಸ್ವರಾಜ್ಯ

ನೇಶನಲ್ ಹೆರಾಲ್ಡ್ ಪತ್ರಿಕೆಯ ಸಂಪಾದಕ ಶ್ರೀ. ಕೆ. ರಾಮರಾವ್ ಅವರು ಸ್ವಾತಂತ್ರ್ಯದ ಮೂರು ಆಧಾರ ಸ್ತಂಭಗಳು ಎಂಬೊಂದು ವಿಚಾರ ಪರಲೇಖನ ಬರೆದಿರುವರು. ಅದರಲ್ಲಿ ಅವರು: 'ಮೊದಲು ಹುಟ್ಟುವುದು ಒಂದು ಯೋಚನೆ. ಕ್ರಮೇಣ ಅದು ಒಂದು ಚಳವಳದ ಘೋಷಣೆ, ಜೈಜೈಕಾರದ ಕೂಗು ಆಗಿ, ಕೊನೆಗೆ ರಾಜಕೀಯ ಕ್ರಾಂತಿಯಾಗಿ ಪರಿಣಮಿಸುವುದು' ಎಂದು ದೃಷ್ಟಾಂತ ರೂಪವಾಗಿ ವಿವರಿಸಿರುವರು. ಆ ಲೇಖದ ಮುಖ್ಯಾಂಶಗಳನ್ನು ಇಲ್ಲಿ ಭಾಷಾಂತರಿಸಲಾಗಿದೆ:

ಮೊತ್ತಮೊದಲು ನೊಂದ ಜನತೆಯ ಗೊಣಗುಟ್ಟುವಿಕೆಯಾಗಿ ನಂತರ ರಾಜಕೀಯ ಚಳವಳ ಭಾಷಣವೇದಿಕೆಗಳ ಘೋಷಣೆ ವಿಷಯವಾಗಿ ಕೊನೆಗೆ ರಾಜಶಾಸನವಾಗಿ ಮಾರ್ಪಟ್ಟ ಅನೇಕ ಘಟನೆಗಳು ಇತಿಹಾಸದಲ್ಲಿ ಅನೇಕಾನೇಕ ಇವೆ.

ಒಬ್ಬ ದಂಗೆ ನಾಯಕನು ಅಪ ಯಶಸ್ವಿಯಾದರೆ ಗಲ್ಲಿಗೇರಿಸಲ್ಪಡುವನು; ಆದರೆ ಅದೇ ನಾಯಕನು ತನ್ನ ಕಾರ್ಯದಲ್ಲಿ ಯಶಸ್ವಿಯಾದರೆ ರಾಷ್ಟ್ರಮನ್ನಣೆಯ ಮೂರ್ತಿಯಾಗುವನು. (ಇಲ್ಲಿ ಶಿವಾಜಿಯ ನಿದರ್ಶನವನ್ನು ನೆನಪಿಗೆ ತಂದುಕೊಳ್ಳಬಹುದು. 'ಬೆಟ್ಟದ ಇಲಿ' ಎಂದು ಔರಂಗಜೇಬನಿಂದಲೂ, 'ಪುಂಡ ಮರಾಟ'ನೆಂದು ಬಿಜಾಪುರದರಸನಿಂದಲೂ ಕರೆಯಲ್ಪಟ್ಟ ಈ ಛತ್ರಪತಿಯು ಆ ಈರ್ವರ ಯವನ ಸಾಮ್ರಾಟರ ಹಿಡಿಯೊಳಗೆ ಸಿಕ್ಕಿದರೆ ಅವನನ್ನು ಏನುಮಾಡುತಿದ್ದರೆಂಬುದನ್ನು ನಾವು ಬರೆಯುವುದಕ್ಕಿಂತ ವಿಚಾರ ಮಾಡಿಯೇ ತಿಳಿದುಕೊಳ್ಳಬಹುದು.)

ಆದುದರಿಂದ ಓರ್ವ ದಂಗೇಕಾರನಿಗೂ, ರಾಷ್ಟ್ರಭಕ್ತನಿಗೂ ಇರುವ ವ್ಯತ್ಯಾಸದ ಅಂತರವು ಬರೀ ಒಂದು ಕೂದಲಿನಷ್ಟೆ. (ಅಡಿಯ ಮುಂದಿಡೆ ಸ್ವರ್ಗ, ಹಿಂದಿಡೆ ನರಕ ಎಂದು ಸರ್ವಜ್ಞನೆಂದಂತೆ.) ಅಂದರೆ ಗಲ್ಲಿಗೇರಿಸಲ್ಪಡುವುದರಿಂದ ಅಮರ ಕೀರ್ತಿ ಬರುವುದಿಲ್ಲವೆಂದೂ, ರಾಷ್ಟ್ರಪತಿಯಾದವನೇ ಮೂರ್ತಿಮಂತನಾಗುವನು ಎಂಬದು ಇದರ ಅರ್ಥವಲ್ಲ. ಅದು ಆ ವ್ಯಕ್ತಿಯು ಅರಿಸಿಕೊಂಡ ಜೈಜೈಕಾರದ ಸ್ಫೂರ್ತಿದಾಯಕ ಘೋಷಣೆಯ ಮೇಲೆ ಹೊಂದಿಕೊಂಡಿದೆ.

ಒಂದು ತೆರಿಗೆಯ ವಿಷಯವಾಗಿ ಹಿಂದೆ ಇಂಗ್ಲೆಂಡಿನಲ್ಲಿ ಭಯಂಕರ ಅಂತಃಕಲಹವಾಗಿ ಮೊದಲನೇ ಚಾರ್ಲ್ಸ್ ಅರಸನು ಪ್ರಜಾ ಮುಖಂಡನಾದ ಕ್ರೊಮ್‌ವೆಲ್ಲನಿಂದ ತಲೆ ಕಡಿಸಿಕೊಂಡನು. ಸಾಮಾನ್ಯನಾದ ಕ್ರೊಮ್‌ವೆಲ್ಲನು ಅರಸುಪದವಿಗೇರಿ, ಒಂದು ತಲಾಂತರದ ತನಕ ರಾಜ್ಯವಾಳಿದನು. ಆಗಲೂ ಅವರು 'ಹಡಗು ತೆರಿಗೆ ನಾಶವಾಗಲಿ, ಸರ್ವಾಧಿಕಾರ ಅಂತ್ಯವಾಗಲಿ' ಎಂಬಿತ್ಯಾದಿಯಾಗಿ ಹಾಕಿದ ಘೋಷಣೆಗಳಿಂದಲ್ಲವೇ ಜನತೆಯಲ್ಲಿ ಹುರುಪುಂಟಾದುದು?

ಈಗಲೂ 'ಮಾನವ ಸ್ವಾತಂತ್ರ್ಯ ಬಾಳಲಿ' 'ಜಗತ್ತು ಪ್ರಜಾಪ್ರಭುತ್ವಕ್ಕೆ ಭದ್ರವಾಗಲಿ' 'ಸ್ವಾತಂತ್ರ್ಯವು ಗಂಡಾಂತರದಲ್ಲಿದೆ' ಮುಂತಾದ ಘೋಷಣೆಗಳು ಜನಮನದ ಮೇಲೆ ಒಂದು ತರದ ಪರಿಣಾಮ ಮೂಡುವುದಿಲ್ಲವೆ? 'ಎಟ್ಲಾಂಟಿಕ್ ಘೋಷಣೆ' 'ಮಾನವನ ನಾಲ್ಕು ಸ್ವಾತಂತ್ರ್ಯಗಳು' ಇತರ ನಿದರ್ಶನಗಳು.

'ಪ್ರಾತಿನಿಧ್ಯವಿಲ್ಲದೆ ತೆರಿಗೆ ಇಲ್ಲ' ಎಂಬ ಜೈಜೈಕಾರ ಹಾಕುತ್ತ ಅಮೇರಿಕದ ಸ್ವಾತಂತ್ರ ಸಂಗ್ರಾಮ ಪ್ರಾರಂಭವಾಯಿತು. ಅದರ ಕೊನೆಯ ಪರಿಣಾಮವೆಂದರೆ ಬ್ರಿಟಿಷ್ ಆಡಳಿತವು ಅಲ್ಲಿಂದ ಹೊರ ಓಡಿಸಲ್ಪಟ್ಟದ್ದು. ಆಗ ನಡೆದ ಯುದ್ಧದಲ್ಲಿ ಬ್ರಿಟಿಷರು ಬಾಡಿಗೆಗೆ ಪಡೆದ ಜರ್ಮನ್ ಸೈನಿಕರನ್ನೂ ಅಮೇರಿಕನ್ನರ ವಿರೋಧವಾಗಿ ಉಪಯೋಗಿಸಿಕೊಂಡರೂ ಆ ಜನರ ದೇಶಭಕ್ತಿಯ ಉತ್ಸಾಹದಲ್ಲಿ ಯಾವ ಶಕ್ತಿಯೂ ಉಳಿಯದಾಯಿತು.

ನೋರ್ಮೆಂಡಿಯಿಂದ ದಂಡಿಗೆ

ಉಪ್ಪಿನ ಮೇಲಿನ ಕರಕ್ಕಾಗಿ ನೋರ್ಮೆಂಡಿಯ ಕರಾವಳಿಯ ಜನರು ಆಗಿನ 'ಸರಕಾರವು ನಾಶವಾಗಲಿ' ಎಂದು ಕ್ರಾಂತಿ ಎಬ್ಬಿಸಿದರು. ಅಮೇರಿಕನ್ ಸ್ವಾತಂತ್ರ್ಯ ಯುದ್ಧದಲ್ಲಿ ಫ್ರೆಂಚರು ಸಹಾಯ ಮಾಡಿದ್ದರಿಂದ ಅಮೇರಿಕನರು ಫ್ರೆಂಚ್ ಜನರ ಸಹಾಯಕ್ಕೆ ಬಂದರು. ಫ್ರಾನ್ಸಿನ ಕ್ರಾಂತಿ ವಿಜಯಿಯಾಯಿತು. ನಂತರ ಭಾರತದಲ್ಲಿ ಗಾಂಧೀಜಿ 'ಉಪ್ಪಿನ ಕರ ಮುರಿಯಿರಿ' ಎಂದು ದಂಡೀ ಯಾತ್ರೆಮಾಡಿದರು. ಹೀಗೆ ಉಪ್ಪು ಕ್ರಾಂತಿಯ ಇತಿಹಾಸದಲ್ಲಿ ತುಂಬಾ ಪ್ರಚಾರಕ್ಕೆ ಬಂದಿದೆ.

ಈಗ ಫ್ರಾನ್ಸಿನ ದಿಗಾಲೆಯವರ ಘೋಷಣೆಯ ಹಾಡಾದರೂ 'ಫ್ರಾನ್ಸನ್ನು ನಾಜೀಗಳ ವಶಕ್ಕೆ ಕೊಟ್ಟ ಆ ೨೦೦ ಬೇಂಕು ಶ್ರೀಮಂತರಿಗೆ ಧಿಕ್ಕಾರ' ಎಂದಿರಬಹುದು.

ಜರ್ಮನರ ಕೂಗು

ನಾವು 'ಗಾಂಧಿ ಕಿ ಜೈ' 'ಭಾರತ ಮಾತಾಕೀ ಜೈ' ಅನ್ನುವಂತೆ, ಜರ್ಮನಿಯಲ್ಲಿ 'ಹೈಲ್ ಹಿಟ್ಲರ್' ಎಂದು ಜನರು ತಮ್ಮ ಮೂಗುಮೀಸೆಯ ನಾಯಕನನ್ನೂ ಜೈಜೈಕರಿಸುವರು. ಹಿಂದಿನ ಕೈಸರನು "ಪೂರ್ವದತ್ತ ಕಡೆ ಸಾಗಿರಿ" ಎಂದು ಜರ್ಮನ್ ಜನಾಂಗವನ್ನು ಯುದ್ಧಕ್ಕೆ ಪ್ರೇರೇಪಿಸಿದ. ಬ್ರಿಟನ್ನೂ 'ಸಾಗರದ ರಾಣಿ' ಅನಿಸಿಕೊಂಡಂತೆ ಕೈಸರನು 'ಎಟ್ಲಾಂಟಿಕದ ಸಾಗರಾಧಿಪತಿ' ತಾನೆಂದು ಘೋಷಿಸಲ್ಪಟ್ಟ. ಹಿಟ್ಲರನು 'ನಮಗೆ ಜೀವಿಸಲು ಜಾಗೆ ಇಲ್ಲ' ಎಂದು ಹೇಳುತ್ತಾ ತನ್ನ ಜನರನ್ನು ಯುದ್ಧಕ್ಕೆಬ್ಬಿಸಿದ. ಮತ್ತೆ ಅವನ ಕೂಗು ಎಂದರೆ 'ಒಂದು ಜರ್ಮನಿ, ಒಂದು ಜನಾಂಗ, ಒಬ್ಬ ಹಿಟ್ಲರ್'ಎಂದು. ಘೋಷಣೆಗಳಿಂದ ಗೆದ್ದವರಲ್ಲಿ ಹಿಟ್ಲರನೇ ಅಗ್ರಗಣ್ಯನೆನ್ನಬೇಕು.

ನಂತರ ಸಮತಾವಾದಿಗಳ ಘೋಷಣೆ ಜಗತ್ತಿನ ನಭೋ ಮಂಡಲಗಳನ್ನು ಬಿರಿಯಿತು. "ಜಗತ್ತಿನ ಮಜೂರರೇ ಒಂದಾಗಿರಿ" ಎಂಬ ಗರ್ಜನೆಯು ಬಂಡವಾಳ ಪ್ರಪಂಚದ ಎದೆಯನ್ನು ಕೊರೆಯಿತು. ಶತಮಾನಗಳಿಂದ ಜರ್ಜರಿತವಾದ ರಷ್ಯನ್ ಸಾಮ್ರಾಟತ್ವವು ಆ ಕೂಗಿಗೆ ಮುರಿಯಿತು. ಅಲ್ಲಿ ನವ ಕ್ರಾಂತಿಯ ಹೊನಲು ಅವ್ಯಾಹತವಾಗಿ ರಭಸದಿಂದ ಹರಿಯಿತು.

ಮುಸ್ಸೋಲಿನಿಯು ಭೂಮಧ್ಯ ಸಮುದ್ರದ ಅಧಿಕಾರಕ್ಕಾಗಿ ತನ್ನ ಜನರಿಗೆ "ಈ ಸಮುದ್ರ ಯಾರದು? ನಮ್ಮದು" ಎಂಬ ಘೋಷಣೆ ಕಲಿಸಿದ.

ವಿಘಾತಕ ಐದು ಚಳವಳಗಳು

ದಾದಾಭಾಯಿ ನೌರೋಜಿಯವರು ನಮಗೆ 'ಸ್ವರಾಜ್ಯ' ಮಂತ್ರದ ಘೋಷಣೆಯನ್ನುಪದೇಶಿಸಿದರು. ಬ್ರಿಟಿಷರು ಐದು ಕಂತುಗಳಲ್ಲಿ ಐದು ತರದ ರಾಜಕೀಯ ಸುಧಾರಣೆಗಳನ್ನು ನಮಗೆ ಕೊಟ್ಟರು. ನಾವು ಐದು ಚಳವಳಗಳ ಮೂಲಕ ಅದಕ್ಕೆ ಉತ್ತರವಿತ್ತೆವು. ೧೯೦೮, ೧೯೧೮, ೧೯೨೧, ೧೯೩೦ ಮತ್ತು ೧೯೪೨.

ನಂತರ ಲೋಕಮಾನ್ಯ ತಿಲಕರು ರೋಮಾಂಚನವಾಗುವ ಆ "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು, ನಾನದನ್ನು ಪಡೆಯುವೆ" ಎಂಬ ಘೋಷಣೆಯನ್ನು ಸಾರಿ ದೇಶದಲ್ಲಿ ದೇಶಭಕ್ತಿಯ ವಿದ್ಯುತ್ ಪ್ರವಾಹ ಹರಿಸಿದರು. ಮಹಾತ್ಮರು 'ಒಂದು ವರ್ಷದಲ್ಲಿ ಸ್ವರಾಜ್ಯ' ಎಂದು ಘೋಷಿಸಿದರು. ಆದರೆ ದೇಶವು ನಿರೀಕ್ಷಿಸಿದ ಮಟ್ಟಕ್ಕೆ ಏರಲಿಲ್ಲ. ಕೊಂಗ್ರೆಸ್ ಪ್ರತಿಜ್ಞೆಯ ಪ್ರತಿಯೊಂದು ವಾಕ್ಯವೂ ಒಂದು ಸೈನ್ಯಪಡೆಗೆ ಕೊಟ್ಟು ಮುಂದೆ ಸಾಗುವಿಕೆಯ ಆಜ್ಞೆ.

"ಹಿಂದೂ ಮುಸ್ಲಿಂ ಜಿಂದಾಬಾದ್" 'ಸಾಮ್ರಾಜ್ಯವಾದವು ನಾಶವಾಗಲಿ' 'ಹಿಂದೂಸ್ಥಾನವು ಸ್ವತಂತ್ರವಾಗಲಿ' ಇವು ಇನ್ನೂ ನಮ್ಮ ಮುಂದಿವೆ. ಆದರೂ ಆ 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆಯಷ್ಟು ಮನಾಕರ್ಷಕವಾದುದು ಬೇರೊಂದಿಲ್ಲ.

ಹೊಸ ವರುಷದ ಶುಭಾಶಂಸೆ
ನಮ್ಮ ಆಶ್ರಯದಾತರಿಗೂ ಗೆಳೆಯರಿಗೂ ಹೊಸ ವರುಷವು ಆನಂದ-ಸಮೃದ್ಧಿಗಳನ್ನು ತರಲೆಂದು ಕೋರುವಾಗ, ಅವರಿಗೆ ಸತ್ಸೇವೆ ಸಲಿಸಲನುವಾದ ಅವರ ಸಹಕಾರ ಮತ್ತು ಸ್ನೇಹಮಯ ಸತ್ಯ ಸಹಾಯಕ್ಕಾಗಿ ಅವರಿಗೆ ಅಭಿವಂದನೆಗಳನ್ನು ಸಲಿಸುವೆವು.
ಮುಂಬರುವ ವರುಷದಲ್ಲಿ ನಮ್ಮೊಳಗಿನ ಸಂಬಂಧವು ಇನ್ನೂ ಬಲಗೊಂಡು, ಇಂದಿನ ಸಂಬಂಧವು ಅಖಂಡವಾಗುವಂತಹ ಹೆಚ್ಚಿನ ಸಂದರ್ಭಗಳನ್ನಿದಿರು ನೋಡುತ್ತಿರುವೆವು.
ಸ್ಥಾಪಿತ: 1906
ಕೆನರಾ ಬೇಂಕ್ ಲಿಮಿಟೆಡ್
Canara Bank Ltd.
(Incorporated in British India Liability of members Limited.)

ಶವಗಳ ನಡುವೆ ಸುಖನಿದ್ರೆ

ಉಪಾಧ್ಯಾಯನ ಭೀಕರ ಅನುಭವ

ಮಚಲೀಪಟ್ಟಣದ ನೋಬಲ್ ಹ್ಯಾಸ್ಕೂಲಿನ ಹೆನ್ರಿ, ಪೋಲ್ ಎಂಬ ಉಪಾಧ್ಯಾಯರು ಕೆಲವು ಮೈಲುಗಳ ದೂರದಲ್ಲಿನ ಊರಲ್ಲಿರುವ ತನ್ನ ಹೆಂಡತಿಗೆ ಕಾಯಿಲೆಯೆಂದು ನೋಡಲು ಸ್ಯಾಕಲಿನಲ್ಲಿ ಬೆಳದಿಂಗಳ ರಾತ್ರೆಯೊಂದು ದಿನ ಹೊರಟರು.

ಮಚಲೀಪಟ್ಟಣ ದಾಟಿ ಕೆಲವು ಮೈಲು ಹೋಗುವಷ್ಟರಲ್ಲಿ ಅವರ ಸ್ಯಾಕಲು ಟ್ಯೂಬು 'ಪೇಚ್' ಆಗಿ ನಡೆದುಕೊಂಡು ಹೋಗಬೇಕಾಯಿತು. ತಾನು ಹೋಗಬೇಕಾದ ಊರು ಇನ್ನೂ ಹಲವು ಮೈಲುಗಳ ದೂರದಲ್ಲಿದೆ, ಚಂದ್ರ ಪ್ರಕಾಶವೂ ಮರೆಯಾಯಿತು. ಇನ್ನು ಎಲ್ಲಾದರೂ ವಿಶ್ರಮಿಸಿ ಪ್ರಾತಃಕಾಲ ಪಯಣ ಮುಂದರಿಸುವುದು ಕ್ರಮವೆಂದು ಯೋಚಿಸುತಿದ್ದಾಗ ಅವರೊಂದು ಮುರುಕು ಮನೆಯ ಆಕೃತಿಯನ್ನು ನಕ್ಷತ್ರ ಬೆಳಕಿನಲ್ಲಿ ಕಂಡರು.

ಆ ಮನೆಯ ಜಗಲಿಯ ಮೇಲೆ ಸಾಲಾಗಿ ಅನೇಕರು ಮಲಗಿಕೊಂಡಿದ್ದರು. ಗಾಢ 'ನಿದ್ರೆ'ಯಲ್ಲಿದ್ದುದರಿಂದ ಮಿ॥ ಹೆನ್ರಿಯವರು ಎಷ್ಟು ಕರೆದರೂ ಒಬ್ಬರೂ 'ಓ' ಎನ್ನಲಿಲ್ಲ. ಕೊನೆಗೆ ತುಂಬಾ ದಣಿದಿರುವ ಹೆನ್ರಿಯವರು ಮಲಗಿದ ಒಬ್ಬಿಬ್ಬರನ್ನು ಆ ಕಡೆ ಈ ಕಡೆ ತಳ್ಳಿ ಮಧ್ಯದಲ್ಲಿ ಸ್ವಲ್ಪ ಜಾಗಮಾಡಿ ಆರಾಮವಾಗಿ ಮಲಗಿಬಿಟ್ಟರು, ಕೊಳಕು ಮನೆಯಾದ್ದರಿಂದ ಏನೋ ಕೊಳೆತ ನಾತ ಬರುತಿತ್ತು. ಅದನ್ನವರು ಲೆಕ್ಕಿಸಲಿಲ್ಲ.

ಕೆಲವು ಗಂಟೆಗಳ ನಂತರ ಪ್ರಭಾತದ ಸಮಯಕ್ಕೆ ಹಳ್ಳಿ ಟಪ್ಪಾಲು ಜವಾನನ 'ಜ್ಞೆಂ ಜ್ಞೆಂ' ಶಬ್ದಕ್ಕೆ ಮಿ॥ ಹೆನ್ರಿಯವರು ಎಚ್ಚರವಾಗಿ ಕೆಳಗೆ ಬಂದು ಗಟ್ಟಿಯಾಗಿ ಅವನನ್ನು ಕರೆದರು. ಭೂತವೂ ಪಿಶಾಚವೊ ಇರಬೇಕೆಂದು ಟಪ್ಪಾಲಿನವನು ಇನ್ನೂ ಜೋರಾಗಿ ಓಡತೊಡಗಿದ. ಕಡೆಗೆ ಹೆನ್ರಿಯವರು ಓಡಿಹೋಗಿ ಅವನನ್ನು ತಡೆದಾಗಂತೂ ಅವನು ಬೆಚ್ಚಿಬಿದ್ದ.

ಕಾರಣ ಕೇಳಿದಾಗ ಹೆನ್ರಿಯವರು ನಿದ್ರಿಸಿದ ವಠಾರ ಪ್ರದೇಶದಲ್ಲಿ ಕೊಲೇರಾ ರೋಗವು ಇಡೀ ಕುಟುಂಭಗಳನ್ನೇ ಬಲಿತೆಗೆದುಕೊಂಡಿದೆಯಾಗಿಯೂ ಅಳಿದುಳಿದ ಜನರು ಶವಗಳನ್ನು ಸುಡದೆಯೂ ಹುಗಿಯದೆಯೂ ಹಾಗೇ ಬಟ್ಟೆಗಳಿಂದ ಮುಚ್ಚಿ ಓಡಿಹೋಗಿರುವರೆಂದೂ ಆ ಜವಾನನು ತಿಳಿಸಿದಾಗ ಹೆನ್ರಿಯವರ ಅವಸ್ಥೆ ಏನಾಗಿರಬೇಕೆಂದು ವಾಚಕರೇ ಊಹಿಸಿಕೊಳ್ಳಿ. ಇದು ನಿಜವಾದ ಸಂಗತಿ.

ಪ್ರಚಲಿತ ಸಮಾಚಾರಗಳು

ಸೋತ ಜರ್ಮನಿಯ ಕುರಿತು ಆಚರಿಸಬೇಕಾದ ಧೋರಣದ ವಿಷಯವು ಮಿತ್ರರಾಷ್ಟ್ರಗಳ ಕೆಲ ಮುಂದಾಳುಗಳು ಈಗಲೇ ಪ್ರಸ್ತಾಪವನ್ನೆತ್ತಿರುವರು. ಜರ್ಮನರ ಕೈಗಳಲ್ಲಿ ಭಯಂಕರ ಚಿತ್ರಹಿಂಸೆ, ಯಾತನೆ, ಲಯ ಇತ್ಯಾದಿ ಭಯಾನಕ ಕೃತ್ಯಗಳನ್ನು ಅನುಭವಿಸಿದ ರಷ್ಯನರು, ಮತ್ತು ಫ್ರೆಂಚರು ಅವರ ಮೇಲೆ ಮುಯ್ಯಿಗೆ ಮುಯ್ಯಿ ತೀರಿಸಲು ಹವಣಿಸುತ್ತಿದ್ದಾರೆ. ರಷ್ಯಾ ದೇಶದ ಆಕ್ರಮಣದ ಸಮಯ ಫ್ರಾನ್ಸಿನ ದಾಳಿಯ ಸಮಯ ಜರ್ಮನರಿಂದ ನಡೆದ ಹಿಂಸಾಕೃತ್ಯಗಳ ಕಥೆಗಳ ವಿವರಗಳನ್ನು ಓದಿದರೆ, ಜರ್ಮನಿಯ ಮೇಲೆ ವಿಶೇಷ ತರದ ಪ್ರತೀಕಾರವಾಗದೆ ಅವರಿಗೆ ಸಮಾಧಾನವಾಗುವಂತಿಲ್ಲ ಎಂದು ತಿಳಿಯಬೇಕಾಗಿದೆ. ಇಂಗ್ಲಾಂಡು ಜರ್ಮನಿಯ ಕೈಗಳಲ್ಲಿ ಅನೇಕ ಸಂಕಷ್ಟ ನಷ್ಟ ಇತ್ಯಾದಿಗಳನ್ನು ಅನುಭವಿಸಿದ್ದರೂ ಭವಿಷ್ಯದಲ್ಲಿ ವ್ಯಾಪಾರದ ಉದ್ಧಾರ ದೃಷ್ಟಿಯಿಂದ, ಜರ್ಮನಿಯ ಮೇಲೆ ಹದವಾದ ಪ್ರತೀಕಾರವನ್ನೇ ನಡೆಸುವುದು ಅಲ್ಲಿನ ವ್ಯಾಪಾರಿ ಜನರ ಅಭಿಮತವಾಗಿರುತ್ತದೆ. ಆದರೆ ಲೋಕಶಾಂತಿಯನ್ನು ಕೆಡಿಸಿದ ಜರ್ಮನಿಯು ಮುಂದಕ್ಕೆ ಈ ಶಾಂತಿಗೆ ಘಾತಕವಾಗದಂತೆ, ಅದರ ಅಂಗಾಂಗಗಳ ಮೇಲೆ ಶಸ್ತ್ರಚಿಕಿತ್ಸೆ ನಡೆಯಿಸಿ, ಅದನ್ನು ಅಚೇತನಾ ಸಜೀವಿ ರಾಷ್ಟ್ರವನ್ನಾಗಿ ಮಾರ್ಪಡಿಸಬೇಕಾಗಿ ಸೂಚನೆಗಳು ಅಲ್ಲಿನ ಎಲ್ಲಾ ಪಕ್ಷಗಳಿಂದ ಮುಂದೆ ಹಾಕಲಾಗಿವೆ. ಸಾಧಾರಣ ಇದೇ ರೂಪದ್ದು ಅಮೇರಿಕಾದ್ದು ಈ ಕುರಿತು ಧೋರಣವು.

ಶಾಂತಸಾಗರದ ದೇಶಗಳ ಸಂಬಂಧಗಳ ಕುರಿತು ಪರ್ಯಾಲೋಚಿಸಲು ಅಮೆರಿಕಾದಲ್ಲಿ ಜರಗಿದ ಪರಿಷತ್ತಿನಲ್ಲಿ ಸೋತ ಜಪಾನಿಯರ ಕುರಿತು ಆಚರಿಸಬೇಕಾದ ಧೋರಣದ ವಿಷಯವು ಚರ್ಚೆಗೆ ಬಂದಿತ್ತು. ಜಪಾನಿಯರ ರೆಕ್ಕೆಗಳನ್ನೆಲ್ಲಾ ಕಿತ್ತೊಗೆದು, ಅದು ಶಾಂತಸಾಗರದ ದೇಶಗಳ ಮೇಲೆ ಕೈಎತ್ತದ ಹಾಗೆ ಮಾಡಬೇಕೆಂಬ ಸೂಚನೆಗಳು ಅಲ್ಲಿ ಮುಂದೆ ಬಂದಿದ್ದವು. ಅಲ್ಲದೆ ಶಾಂತಸಾಗರದ ದೇಶಗಳಿಗಾಗಿ ಪ್ರಜಾಪ್ರಭುತ್ವದ ಕುರಿತು ಸೋಗಿನ ಒಂದು ಯೋಜನೆಯ ಸೂಚನೆಯೊಂದು ಅಲ್ಲಿ ಮುಂದೆ ಬಂದಿತ್ತು. ಸ್ವಾತಂತ್ರ್ಯರಾಗುವ ಕುರಿತು ಈ ದೇಶಗಳ ತರಬೇತು ಆಗಬೇಕು, (ಬಿಳಿಯರ ನೇತೃತ್ವದಲ್ಲಿ) ನಂತರ ಅವುಗಳು ಸ್ವತಂತ್ರರಾಗಲು ಅರ್ಹರೆಂದು ಬಿಳಿಯರು ತಿಳಿದ ಕೂಡಲೆ ಅವುಗಳಿಗೆ ಸ್ವಾತಂತ್ರ್ಯಧಾನವಾಗಬೇಕು. ಇದು ಆ ಪರಿಷತ್ತಿನಲ್ಲಿ ನಡೆದ ವಿಚಾರ ಸರಣಿಯ ಮುಖ್ಯ ಅಭಿಪ್ರಾಯವು.

ಸೇಡನ್ನು ತೀರಿಸುವುದರಿಂದಲೆ ಒಬ್ಬ ಅನ್ಯಾಯಿಯ ಪರಿವರ್ತನೆಯಾಗದು. ಒಬ್ಬನು ತನ್ನ ತಪ್ಪನ್ನು ತಿದ್ದಿಕೊಳ್ಳಬೇಕಾದರೆ ಸತ್ಯದ ಕುರಿತು ಆತನ ಶಿಕ್ಷಣವಾಗಬೇಕು. ಈ ಕುರಿತು ಆತನೆದುರು ಉತ್ತಮ ದೃಷ್ಟಾಂತಗಳು ಪ್ರಕಾಶಿತವಾಗಬೇಕು. ಜರ್ಮನಿಯ, ಜಪಾನಿನ ಸದ್ಯದ ರಾಜಕೀಯ ಮುಂದಾಳುತನಗಳು ತೀರ ಕೆಟ್ಟದಿವೆ ನಿಜ. ಈ ಮುಂದಾಳುಗಳು ಹೋಗಬೇಕು. ಅವರ ವಿಚಾರಣೆಯಾಗಬೇಕು. ಆದರೆ ಇನ್ನೊಮ್ಮೆ ಯುದ್ಧವು ಉಂಟಾಗದಂತೆ ಆ ರಾಷ್ಟ್ರಗಳ ಮೇಲೆ ಸೇಡು ತೀರಿಸುವದೇ ಧೋರಣವು ಕೈಗೊಳ್ಳಲ್ಪಟ್ಟರೆ ಅದರಿಂದ ಹೆಚ್ಚಿನ ಒಳ್ಳಿತು ಉಂಟಾಗದು. ವಿಜಯಿ ರಾಷ್ಟ್ರಗಳು ವಿಶಾಲ ದೃಷ್ಟಿಯ ವರ್ತನದಿಂದ ಅವುಗಳು ತಮ್ಮೊಡನೆ ಸತ್ಯ ಪಥದಲ್ಲಿ ನಡೆಯುವಂತೆ ಪ್ರೇರೇಪಿಸಿದರೆ, ಆಗ ಉತ್ತಮ ಭವಿಷ್ಯದ ಕುರಿತು ಆಶ್ರಯಗಳನ್ನು ಹೊಂದಬಹುದು.

ಈ ಯುದ್ಧವು ನಡೆಯುತ್ತಿದ್ದ ಹಾಗೆಯೆ ಮಿತ್ರರಾಷ್ಟ್ರಗಳ ವರ್ತನವು ಸತ್ಯದ ಆಶ್ವಾಸನೆ ಕೊಡುವಂತವುಗಳಾದರೆ, ಯುದ್ಧೋತ್ತರದಲ್ಲಿ ಸತ್ಯಯುಗದ ಪ್ರಾರಂಭವಾಗುವುದೆಂದು ನಂಬಬಹುದು. ಸದ್ಯದಲ್ಲೇ ತ್ರಿರಾಷ್ಟ್ರಗಳು (ಬ್ರಿಟನು, ರಷ್ಯ, ಅಮೇರಿಕ) ಮುಂದಾಳುಗಳು ಕೂಡುವುದರಲ್ಲಿದ್ದಾರೆ. ಮಹತ್ವದ ವಿಚಾರಗಳನ್ನು ಎತ್ತಲಿದ್ದಾರೆ. ಅವರೊಳಗೆ ಪ್ರಕೃತ ಉಂಟಾದ ಭಿನ್ನಾಭಿಪ್ರಾಯಗಳ ಕುರಿತು ಪ್ರಸ್ತಾಪವೆತ್ತಲಿದ್ದಾರೆ. ಈ ಕೂಡುವಿಕೆಯಿಂದ ಜಗತ್ತಿನ ಸದ್ಯದ ಕತ್ತಲೆಯಲ್ಲಿ ಬೆಳಕು ಉಂಟಾಗುವಂತಾಗಲಿ.

* * *

ಬರ್ಮಾದಲ್ಲಿ ಮಿತ್ರರ ದಾಳಿಯು ಯಶಸ್ವಿಯಾಗಿ ನಡೆಯುತ್ತಿದೆ. ಆ ಪ್ರದೇಶವು ಪೂರ್ಣವಾಗಿ ಮಿತ್ರರ ಕೈಸೇರಬಹುದೆಂದು ಲೆಕ್ಕಹಾಕಲಾಗಿದೆ. ಇದರಿಂದಾಗಿ ಬರ್ಮಾದಲ್ಲಿ ನೂತನ ರಾಜ್ಯಾಂಗ ಘಟನೆಯ ಕುರಿತು ಈಗಲೇ ಮಾತೆತ್ತಲಾಗಿದೆ.

ಆಫ್ರಿಕಾದಲ್ಲಿ ನಡೆಯುವಂತೆ, ಬರ್ಮದಲ್ಲಿ ನೆಲೆಸಿದ ಹಿಂದೀಯರನ್ನು ಬೇರ್ಪಡಿಸಿ, ಬರ್ಮಾದಲ್ಲಿ ಪಾಶ್ಚಾತ್ಯರಿಗೆ ಹೆಚ್ಚಿನ ಆಸ್ಪದ ಕಲ್ಪಿಸಿ ಕೊಡುವುದೇ ಸದ್ಯದ ಧೋರಣೆ ಎಂದು, ಬರ್ಮಾದಿಂದ ಜಪಾನಿಯರ ಆಕ್ರಮಣದ ಸಮಯ ಹಿಂದೆ ಮರಳಿದ ಓರ್ವ ಪ್ರಸಿದ್ಧ ಹಿಂದೀ ವರ್ತಕನ ಪ್ರಕಟಣೆಯಿಂದ ತಿಳಿದುಬಂದಿದೆ.

ಬರ್ಮಾವು ನಮ್ಮ ನೆರೆನಾಡು ನಮ್ಮ ಅವರೊಳಗೆ ಸಂಪರ್ಕವು ಇರಲೆಬೇಕು. ಈರ್ವರು ಒಟ್ಟಾಗಿ ಪರಸ್ಪರ ಉದ್ಧಾರಕ್ಕಾಗಿ ಗೇಯುವಂತಾಗಬೇಕು.

* * *

ಹಿಂದೂದೇಶದ ಉದ್ಧಾರ ಬಗ್ಗೆ ಅಮೆರಿಕಾದಿಂದ ಸಾಲ ಪಡೆಯುವ ಕುರಿತು ಸೂಚನೆಗಳಾಗಿವೆ. ಹಿಂದೂದೇಶದ ಹೆಸರಲ್ಲಿ ಲಂಡನಿನಲ್ಲಿ ಭಹೀರ್ ವ್ಯಾಪಾರದೆಸೆಯಿಂದ ಜಮೆಯಾದ ಸ್ಟರ್‌ಲಿಂಗ್ (ಪವನು) ಉಳಿತಾಯವನ್ನು ಜವಾಬ್ದಾರಿಯಾಗಿ ಕೊಟ್ಟು ಈ ಸಾಲವನ್ನು ಪಡೆಯಬಹುದಲ್ಲವೆ ಎಂದು ಸಲಹೆಗಳಾಗಿವೆ

ಯುದ್ಧದ ದೆಸೆಯಿಂದ ಇಂಗ್ಲಾಂಡಿನ ಭಹೀರ್ ವ್ಯಾಪಾರದಲ್ಲಿ ತುಂಬಾ ಇಳಿತಾಯವಾಗಿದೆ. ಹಾಗೆಯೆ ಅಮೇರಿಕಾವು ತನ್ನ ಭಹೀರ್ ವ್ಯಾಪಾರ ಅಧಿಕಾಂಶವನ್ನು ಕಳೆದುಕೊಂಡಿವೆ. ಸದ್ಯ ಕೈಗಾರಿಕೆಗಳ ಒಡವೆಗಳಿಗೆ ಯುದ್ಧರಂಗವು ಒಂದು ಹಾದಿಯಾಗಿರುವುದರಿಂದ ಈ ಕೊರತೆಯ ಪರಿಣಾಮಗಳು ಕಾಣಿಸಿಕೊಳ್ಳಲಿಲ್ಲ. ಆದರೆ ಯುದ್ಧವು ಮುಗಿದುಬಿಟ್ಟ ಮೇಲೇನು? ಎಂಬ ಪ್ರಶ್ನೆಯು, ಅಮೇರಿಕಾ ಬ್ರಿಟನು ದೇಶಗಳ ಮುತ್ಸದ್ದಿಗಳನ್ನು ಕಾಡುತ್ತಿದೆ. ಭಹೀರ್ ವ್ಯಾಪಾರದಲ್ಲಿ ಪ್ರಾಮುಖ್ಯ ಸ್ಥಾನವನ್ನು ಹೊಂದುವುದರಲ್ಲಿ ದೇಶದ ಕೈಗಾರಿಕೆಗಳು ಬಳಿಸಲಾಗುವುದೆಂದು, ರೂಸ್‌ವೆಲ್ಟರ ಹೇಳಿಕೆಯು ಆಗಿಬಿಟ್ಟಿದೆ. ಬ್ರಿಟನಿನ ಮುತ್ಸದ್ದಿಗಳ ಯತ್ನಗಳು ಇದೆ ಹಾದಿಯಲ್ಲಿ ನಡೆಯುತ್ತಿವೆ. ಇವರೊಡನೆ ಸೋವಿಯಟ್ ರಷ್ಯವು ತನಗೆ ದೊರಕಿದ ಉನ್ನತ ಸ್ಥಾನವನ್ನು ರಕ್ಷಿಸಿಕೊಳ್ಳಲು ಭಹೀರ್ ವ್ಯಾಪಾರಕ್ಷೇತ್ರದಲ್ಲಿ ಕಾಲಿಡಲು ಯತ್ನಿಸುತ್ತಿದೆ.

ಈ ಮೂರು ರಾಷ್ಟ್ರಗಳು ಜಗತ್ತಿನ ವ್ಯಾಪಾರದಲ್ಲಿ ಒಳ್ಳೆ ಅನುಕೂಲ ಸ್ಥಾನಗಳನ್ನು ಪಡೆದುಕೊಳ್ಳುವ ಯತ್ನದಲ್ಲಿವೆ. ಇದರಿಂದ ಇವರೊಳಗೆ ಘರ್ಷಣೆಯಾಗುವುದೆ?

ಯುದ್ಧದ ಕಾರಣದಿಂದಲೆ ಹಿಂದೂದೇಶದ ವ್ಯಾಪಾರದಲ್ಲಿ ತೇಜಿಯಾದುದು. ಯುದ್ಧೋತ್ತರದಲ್ಲಿ ಈ ತೇಜಿಯನ್ನು ರಕ್ಷಿಸಿಕೊಂಡು ಹೋಗಲು ಏರ್ಪಾಡುಗಳಾಗಬೇಡವೆ?

ವಿದ್ಯಾಕ್ಷೇತ್ರದಲ್ಲಿ ಉದ್ಧಾರ, ಬೇಸಾಯದಲ್ಲಿ ಉದ್ಧಾರ, ಕೈಗಾರಿಕೆಗಳಲ್ಲಿ ಉದ್ಧಾರ, ಸಾಂಪತ್ತಿಕ ಉದ್ಧಾರ, ಹಳ್ಳಿಗರ ಉದ್ಧಾರ ಇತ್ಯಾದಿ ಅನೇಕ ಉದ್ಧಾರ ಹಿಂದೂದೇಶದಲ್ಲಾಗಬೇಕಾಗಿವೆ. ಈ ಕುರಿತು ತುಂಬಾ ಕಾರ್ಯಗಳು ನಡೆಯಬೇಕಾಗಿವೆ. ಕೆಲವೊಂದು ಕಡೆಗಳಿಂದ ಯತ್ನಗಳು ಈಗಲೇ ಪ್ರಾರಂಭವಾಗಿವೆ. ನಮ್ಮ ಉದ್ಧಾರವು ನಮ್ಮಿಂದಲೇ ಆಗಬೇಕೆ ಅಥವಾ ಇತರರ ನೆರವಿದ್ದು ಆಗಬೇಕೆ? ಎಂಬುದು ಸದ್ಯದ ಪ್ರಶ್ನೆ. ಸ್ವಾತಂತ್ರ್ಯ ಸಮಸ್ಯೆಯು ಸಮೋಕಾರದೊಡನೆ ಈ ಸಮಸ್ಯೆಯು ಪರಿಹಾರವಾಗಬಹುದು.

* * *

“ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಪಾಕಿಸ್ಥಾನ ಬೇಕೆಂದು ಜಿನ್ನಾರವರು ಕೇಳುತ್ತಿರುವರು. ಹಾಗೆಯೆ ಹಿಂದುಗಳು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳು ಕೂಡಿಕೊಂಡು ಪ್ರಜಾಪ್ರಭುತ್ವದ ನೀತಿಗಳಿಂದ ಕೂಡಿದ ಶಾಸನಗಳಿಂದ ಕೂಡಿದ ಹಿಂದುಸ್ಥಾನದ ಸ್ಥಾಪನೆ ಯಾಕೆ ಆಗಬಾರದು? ಸ್ವತಂತ್ರ ಹಿಂದೂದೇಶದಲ್ಲಿ ಅಲ್ಪಸಂಖ್ಯಾಕರಿಗೆ ಕೇಡುಕಾಗುವ ಕುರಿತು ಜಿನ್ನಾರವರಿಗೆ ಸಂದೇಹಗಳಿರಬಹುದು ಆದರೆ ಪಾಕಿಸ್ಥಾನದ ಅಲ್ಪಸಂಖ್ಯಾಕರ ಕುರಿತು ಇದೇ ತರದ ಸಂದೇಹಗಳಿಗೆ ಜಿನ್ನಾರವರ ಉತ್ತರವೇನು? ಪಾಕಿಸ್ಥಾನದ ಅಲ್ಪಸಂಖ್ಯಾಕರಿಗೆ ರಕ್ಷಣೆಯ ವ್ಯವಸ್ಥೆಯನ್ನು ಕೊಡಲು ಅವರು ಸಿದ್ಧರೆಂದಾದರೆ, ಅದೇ ತರದಲ್ಲಿ ಅಖಂಡ ಹಿಂದೂದೇಶದಲ್ಲೂ ಅಲ್ಪಸಂಖ್ಯಾಕರಿಗೆ ಅದೇ ರಕ್ಷಣೆಯು ದೊರಕಬಹುದೆಂದು ಅವರ್ಯಾಕೆ ನಂಬುವುದಿಲ್ಲ.” ಇದು ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ಯಾಮಪ್ರಸಾದ ಮುಖರ್ಜಿಯರು ಜಮ್‌ಶೆದ್‌ಪುರದಲ್ಲಿ ಮಾಡಿದ ಭಾಷಣದಲ್ಲಿ ಆಡಿದ ಮಾತುಗಳು. ಹಿಂದೂದೇಶವನ್ನು ವಿಚ್ಛೇದನಗೊಳಿಸುವುದು ಸ್ವಾತಂತ್ರ್ಯ ಸಮಸ್ಯೆಯನ್ನು ಬಗೆಹರಿಸುವ ಕಾರ್ಯಕ್ಕೆ ಒಂದು ಆತಂಕವೇ ಎಂದು ಅಭಿಪ್ರಾಯಪಟ್ಟಿರುವರು.

ಒಂದು ರಾಷ್ಟ್ರದ ವಿಕಾಸವು ವಿಶಾಲ ಸತ್ಯದ ಮೇಲೆ ಹೊಂದಿಕೊಂಡಿದೆ, ಮತವಿಚಾರಗಳು ರಾಜಕೀಯದಲ್ಲಿ ಪ್ರಶಸ್ತಿಯನ್ನು ಪಡೆಯುವುದು ಒಂದು ದೊಡ್ಡ ಕೊರತೆಯು ಎಂಬ ಅಭಿಪ್ರಾಯದಿಂದ ತುರ್ಕಿಯ ರಾಷ್ಟ್ರ ಜೀವನವನ್ನು ಸುಧಾರಿಸಿದ ಮುಸ್ತಾಫಾ ಕೆಮಲರ ನೀತಿಯು ಭಾರತದ ಮುಸ್ಲಿಮರಿಗೂ ಹಿಂದೂಗಳಿಗೂ ಉತ್ತಮ ಪಾಠವು. ಮತೀಯ ಆಸಕ್ತಿಯು ಹೆಚ್ಚಿದ ಹಾಗೆ ಸಂಕುಚಿತ ಭಾವವು ತನ್ನಷ್ಟಕ್ಕೆ ತಾನೆ ಉಂಟಾಗುತ್ತದೆ. ಹಿಂದೂದೇಶದಲ್ಲಿ ಹೊಸ ಯುಗದ, (ಸತ್ಯಯುಗದ) ಆಗಮನವಾಗಬೇಕಾದರೆ, ಅದರ ಜನರಲ್ಲಿ ಮುಖ್ಯವಾಗಿ ಮುಂದಾಳುಗಳಲ್ಲಿ ಸತ್ಯದ ವಿಶಾಲದೃಷ್ಟಿಯ ತಿಳುವಳಿಕೆಯು ಬರಲೇಬೇಕು.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 30th September 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,39.555- 0- 0	1. Office Buildings, safes, furniture, books, etc.	93,560- 3- 3
2. Reserves	4,12,017- 3- 7	2. Advances	52,55,065- 9- 5
3. Due to Bankers	78,603-14- 2	3. Investments on Govt. Securities etc.	28,74,632- 0- 0
4. Deposits	83,73,191- 0- 5	4. Bills for collection	4,39,235- 2- 7
5. Bills for collection	4,39,235- 2- 7	5. Other Assets	1,24,714- 6- 4
6. Branch Adjustments	3,22,041- 3- 9	6. Cash on hand and with Bankers in Current A/cs	26,39, 895- 5- 4
7. Other liabilities and undisbursed profits	3,62,459- 2- 5		
Total	1,14,27,102-10-11	Total	1,14,27,102-10-11

ಹೊಸಯುಗ ಎಂದು?

ರಣಕ್ಷೇತ್ರಗಳಾಗಿದ್ದ ದೇಶಗಳ ಪುನರ್ರಚನೆಯ ಮತ್ತು ಶಮನದ ಬಗ್ಗೆ ಮಿತ್ರರಾಷ್ಟ್ರಗಳ ಆಧೀನದಲ್ಲಿ ಒಂದು ವ್ಯವಸ್ಥೆಯಾಗಿತ್ತಷ್ಟೆ. ಅಮೇರಿಕಾದ ಮುಂದಾಳುತನದಲ್ಲಿ ಜನಿಸಿದ ಈ ವ್ಯವಸ್ಥೆಯು ತನ್ನ ಉದ್ದಿಷ್ಟಸಾಧನೆಗಾಗಿ ಯುರೋಪದ ಕಡೆಗೆ ತೆರಳಿದೆ. ಕೈರೋ ಮತ್ತು ಲಂಡನ್ ನಗರಗಳಲ್ಲಿ ಈ ವ್ಯವಸ್ಥೆಯ ದೊಡ್ಡ ಕಾರ್ಯಾಲಯಗಳು ಸ್ಥಾಪನೆಯಾಗಿವೆ. ಜರ್ಮನ್ ಆಕ್ರಮಣದಿಂದ ಫ್ರಾನ್ಸು, ಬೆಲ್ಜಿಯಮ್, ಇಟೆಲಿ, ಗ್ರೀಸ್ ರುಮೇನಿಯಾ ಇತ್ಯಾದಿ ದೇಶಗಳು ವಿಮೋಚನೆಯಾಗಿದ್ದರೂ, ಈ ವ್ಯವಸ್ಥೆಯು ಆ ದೇಶಗಳಲ್ಲಿ ಕಾರ್ಯಸುವ ಕುರಿತು ವಾರ್ತೆಗಳೇ ಬಂದಿಲ್ಲ. ಈ ವ್ಯವಸ್ಥೆಯ ಅಧಿಕಾರಿಗಳಿಗೂ ವಿಮೋಚನೆ ಹೊಂದಿದ ದೇಶಗಳ ಜನರ ಮುಖಂಡರಿಗೂ ಕೆಲವೊಂದು ಭಿನ್ನಾಭಿಪ್ರಾಯಗಳು ಉಂಟಾದುದರಿಂದ, ಈ ವ್ಯವಸ್ಥೆಯ ಕಾರ್ಯಗಳು ಪ್ರಾರಂಭಿಸಲ್ಪಡಲಿಲ್ಲ ಎಂದು ಒಂದು ವಾರ್ತೆ ಮಾತ್ರ ಬಂದಿರುತ್ತದೆ. ಈ ವ್ಯವಸ್ಥೆಯ ಕಾರ್ಯಕ್ಷೇತ್ರಗಳಲ್ಲಿ ಅದಕ್ಕೆ ಸಂಬಂಧಪಟ್ಟ ರಾಷ್ಟ್ರಗಳ ಹಿತಗಳ ಪ್ರಭಾವಗಳು ಭೀರಲಾಗುವವೊ, ಸದ್ಯ ತಾವು ಪಡೆಯುವ ಉಪಶಮನಕ್ಕಾಗಿ, ಮುಂದಕ್ಕೆ ಋಣ ಸಲ್ಲಿಸಬೇಕಾದ ಪ್ರಸಂಗಗಳು ಉಂಟಾಗಬಹುದೊ ಎಂಬುದಾಗಿ ಸಂದೇಹಗಳು ಉಂಟಾಗಿರುವುದರಿಂದಲೆ ಈ ವ್ಯವಸ್ಥೆಯ ಕಾರ್ಯಾರಂಭವು ವಿಳಂಬವಾಗಿರುವುದೆಂದು ತಿಳಿದುಬಂದಿದೆ.

ಗ್ರೀಸಿನಲ್ಲಿ ಮಿತ್ರರಿಗೆ ವಿರೋಧವಾಗಿ ಪ್ರಗತಿಪರ ಪಂಗಡಗಳು ಶಸ್ತ್ರವೆತ್ತಿದಾಗ, ಚರ್ಚಿಲ್ಲರು ಆಡಿದ ಮಾತುಗಳಿಂದ ವಿಮೋಚನೆಗೊಳಿಸಲ್ಪಟ್ಟ ದೇಶಗಳಲ್ಲಿ ಮಿತ್ರರ ಈ ಶಮನಾವ್ಯವಸ್ಥೆಯ ಕುರಿತು ಬಲವಾದ ಸಂದೇಹಗಳುಂಟಾಗಿರಬಹುದು. ಅತ್ಯಂತ ವ್ಯಯದಿಂದ, ಮಹಾಸಾಹಸದ ಯುದ್ಧ ಶ್ರಮವನ್ನು ವಹಿಸಿ, ಪ್ರಾಣಾರ್ಪಣೆ ಮಾಡಿ ಜರ್ಮನರನ್ನು ಓಡಿಸಿದ ನಮಗೆ ಆ ದೇಶದ ರಾಜಕೀಯದಲ್ಲಿ ಅವಕಾಶ ದೊರಕದಿದ್ದರೆ ಮತ್ತೇನು ಪ್ರಯೋಜನ ಎಂಬ ಅಭಿಪ್ರಾಯವುಳ್ಳ ಮಾತುಗಳು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಗ್ರೀಸ್ ಪ್ರಕರಣದ ಪ್ರಸ್ತಾಪ ಬಂದಿದ್ದಾಗ ಅವರು ಆಡಿದ್ದರು. ಈ ಕಾರಣದಿಂದಲೇ ಮಿತ್ರರಿಂದ ವಿಮೋಚನೆಹೊಂದಿದ ದೇಶಗಳು ಅದರಿಂದ ಹೆಚ್ಚಿನ ಸಹಾಯ ಸಹಕಾರವನ್ನು ಬಯಸುತ್ತಿರುವುದರಲ್ಲಿ ಹಿಂಜರಿಯುತ್ತಿರಬಹುದು.

ಈ ವಿಚಾರದಲ್ಲಿ ಸೋವಿಯಟ್‌ರ ವರ್ತನೆಯು ಬೇರೆಯಿದೆ. ಬರೆ ಕೂಟ ಪರಿಷತ್ತುಗಳಲ್ಲಿ ಸಮಯ ಕಳೆಯದೆ ತನ್ನಿಂದ ವಿಮೋಚನೆ ಹೊಂದಿದ ದೇಶಗಳಲ್ಲಿ, ತನ್ನದೆ ಹಿತಸಾಧಿಸುವ ದೃಷ್ಟಿಯಿಂದ ಅವರ ಕಾರ್ಯಸಾಧನೆಯು ಬೇರೆ ರೂಪದಲ್ಲಿ ನಡೆಯುತ್ತದೆ. ಅಲ್ಲಿನ ಪ್ರತಿಗಾಮಿ ಪಕ್ಷಗಳೊಡನೆ ಕೂಡಿ, ಪ್ರಗತಿಗಾಮಿ ಪ್ರಭಾವಗಳಿಗೆನೆ ಪ್ರೋತ್ಸಾಹಕೊಟ್ಟು, ಆ ದೇಶದಲ್ಲಿ ಹಾಳಾದ ಸ್ಥಿತಿಯನ್ನು ಸುಧಾರಿಸುವ ಕಾರ್ಯವನ್ನು ಅವರು ಒಡನೆ ಪ್ರಾರಂಭಿಸಿಬಿಡುತ್ತಾರೆ. ತಮ್ಮ ಶಮನ ಕಾರ್ಯಗಳಿಗೆ ಪ್ರತಿಫಲ ದೊರಕುವ ಕುರಿತು ಹೆಚ್ಚಿನ ಆಶೆಯನ್ನು ತೋರಿಸದೆ, ಆ ದೇಶಗಳ ಆಹಾರ ಕೊರತೆ ಇತ್ಯಾದಿಗಳನ್ನು ನೀಗಿಸುವುದರಲ್ಲಿ ತುಂಬಾ ಸಹಾಯವನ್ನು ಮಾಡುತ್ತಿದ್ದಾರೆ. ಯುಗೊಸ್ಲೆವಿಯಾದಲ್ಲಿ ಪ್ರಗತಿಗಾಮಿ ಟಿಟೊವಿನೊಡನೆ ಸೇರಿ, ಆ ದೇಶವನ್ನು ಜರ್ಮನರಿಂದ ವಿಮೋಚನೆಗೊಳಿಸಿದ್ದು ಮಾತ್ರವಲ್ಲದೆ, ಯುದ್ಧ ನಡೆಯುತ್ತಿದ್ದ ಹಾಗೆ ಅಲ್ಲಿ ಸೋವಿಯಟ್ ಕಡೆಯಿಂದ ೫೦ ಸಾವಿರ ಟನ್ ಆಹಾರ ಸಾಮಗ್ರಿ ಹಂಚಲಾದವು. ಮಹಾ ಸಂಕಟದ ಸಂಧಿಗ್ದದಲ್ಲಿ ದೊರಕಿದ ಸಹಾಯವನ್ನು ಯಾರಾದರೂ ಮರೆತುಬಿಡುವ ಹಾಗುಂಟೆ? ಇದೊಂದಲ್ಲದೆ ಸದ್ಯ ಆರಿಸಲ್ಪಟ್ಟ ಸರಕಾರ ಮಂಡಳಿಗಳು ಬರೆ ತಾತ್ಕಾಲಿಕವಾದುವುಗಳು, ಯುದ್ಧ ಮುಗಿದ ಬಳಿಕ, ಆ ದೇಶಗಳು ತಮಗೆ ಬೇಕಾದ ಶಾಸನಗಳನ್ನು ರಚಿಸಿಕೊಳ್ಳಬಹುದೆಂದು ಸೋವಿಯಟ್ ರಿಂದ ಆಶ್ವಾಸನೆಯು ಈಗಲೇ ದೊರಕಿರುತ್ತದೆ.

ಮಿತ್ರರಾಷ್ಟ್ರಗಳು ಪ್ರಜಾಪ್ರಭುತ್ವ ನೀತಿಯ ಕುರಿತು ಆಗಾಗ ಘೋಷಣೆಗಳನ್ನು ಹೊರಡಿಸುತ್ತಿದ್ದಾರೆ ನಿಜ. ಹೊಸ ಯುಗದ ಕುರಿತು ಅವರ ಮುಂದಾಳುಗಳ ಉದ್ದುದ್ದ ಭಾಷಣಗಳಾಗುತ್ತಿವೆ ನಿಜ. ಆದರೆ ಅವರ ಮಾತು ಒಂದೆಡೆ, ಕಾರ್ಯ ಇನ್ನೊಂದೆಡೆ ಎಂಬ ಪರಿಸ್ಥಿತಿಯು ಇಂದಿನದು. ರಷ್ಯ, ಬ್ರಿಟನು, ಅಮೇರಿಕಾ ರಾಷ್ಟ್ರಗಳು ತಮ್ಮತಮ್ಮದೇ ಸ್ವಾರ್ಥತೆಯ ದೃಷ್ಟಿಯಿಂದ ಈ ಯುದ್ಧ ಕ್ಷೇತ್ರದಲ್ಲಿ ದುಡಿಯುತ್ತಿರುವರು ಎಂಬ ವಿಷಯ ಸಮರವು ಬೆಳೆದ ಹಾಗೆ, ವಿಜಯ ದಿನವು ಸಮೀಪಿಸಿದ ಹಾಗೆ ವಿಶದವಾಗುತ್ತಾ ಬರುತ್ತಿದೆ. ಈ ಒಂದು ಕಾರಣದಿಂದಲೇ ಮಿತ್ರರಾದ ತ್ರಿರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯಗಳುಂಟಾಗುತ್ತಿವೆ. ಈ ಭಿನ್ನಾಭಿಪ್ರಾಯಗಳ ನಿವಾರಣೆಯು ಈಗ ಒಂದು ಸಮಸ್ಯೆಯಾಗಿಬಿಟ್ಟಿದೆ. ಇವುಗಳ ನಿವಾರಣೆಗೆ ತ್ರಿರಾಷ್ಟ್ರ ಮುಖಂಡರ ಕೂಡುವಿಕೆಯಾಗಬಹುದೆಂದು ವಾರ್ತೆಗಳಿವೆ. ಹೀಗಾಗಿ ಪ್ರಜಾಪ್ರಭುತ್ವವಾದದ ರಕ್ಷಣೆಗಾಗಿ, ಪೊಲೆಂಡಿನ ಸ್ವಾತಂತ್ರ್ಯದ ರಕ್ಷಣೆಗಾಗಿ ಹೂಡಲ್ಪಟ್ಟ ಈ ಯುದ್ಧದ ರೂಪವು ದಿನೆದಿನೆ ಬದಲಾಗುತ್ತಾ ಇದೆ. ಇದೇ ತಕ್ಕ ಸಮಯವೆಂದು ಸ್ಟೆಲೀನನು ಸೋವಿಯಟ್‌ನ ಪ್ರಾಬಲ್ಯದ ವೃದ್ಧಿಯನ್ನುಸಾಧಿಸುತ್ತಿದ್ದಾನೆ. ಈ ಕಾರಣದಿಂದಲೇ ವಿಮೋಚನೆ ಹೊಂದಿದ ರಾಷ್ಟ್ರಗಳು ತಮ್ಮದೇ ವ್ಯಕ್ತಿತ್ವವನ್ನು ಕಾಯ್ದುಕೊಳ್ಳಲು ಮಿತ್ರರ ಈ ಶಮನಾ ವ್ಯವಸ್ಥೆಗಳ ಕಡೆಗೆ ಸಹಾಯಕ್ಕಾಗಿ ಕೈನೀಡುತ್ತಿಲ್ಲವಾಗಿರಬಹುದು.

ಮಿತ್ರರಾಷ್ಟ್ರಗಳ ಕುರಿತು ಹೀಗೆ ಅನೇಕ ಪ್ರಸಂಗಗಳಲ್ಲಿ ಸಂದೇಹಗಳು ಉಂಟಾಗಹತ್ತಿವೆ. ಈ ಸಂದೇಹಗಳ ಸಂಖ್ಯೆಯು, ಹೊಸಯುಗದ ಯೋಜನೆಗಳನ್ನು ನಿರ್ಮಿಸಲೋಸುಗ ಕೂಡುತ್ತಿರುವ ಪರಿಷತ್ತುಗಳಿಂದ ಇನ್ನೂ ಹೆಚ್ಚಾಗುತ್ತಿವೆ. ಹೊಸಯುಗವು ಸತ್ಯ ಯುಗವಾಗಬೇಕಾದರೆ, ಜಗತ್ತಿನ ಶುದ್ಧೀಕರಣವಾಗಬೇಕಾದರೆ, ರಷ್ಯ, ಬ್ರಿಟನು, ಅಮೇರಿಕಾ ರಾಷ್ಟ್ರಗಳ ಯುದ್ಧ ನೀತಿಯು ಪ್ರಜಾಪ್ರಭುತ್ವದ ರಕ್ಷಣೆಗಾಗಿ ನಡೆಯುವ ಕುರಿತು ಈಗಲಾದರೂ ಸರಿಯಾದ ಸ್ಪಷ್ಟೀಕರಣವಾಗಬೇಕು. ಸ್ಟೆಲೀನನು ಸರ್ವ ಜನಹಿತಕ್ಕಾಗಿ ನಿರೂಪಿಸಲ್ಪಟ್ಟ ಕೊಮ್ಯುನಿಶಮನ್ನು ನಿರಂಕುಶ ಪ್ರಭುತ್ವವಾಗಿ ಬಳಸುತ್ತಿರುವುದು ನಿಲ್ಲಬೇಕು. ಈ ಕುರಿತು ಚರ್ಚಿಲ್ಲರು ಮತ್ತವರ ಅನುಯಾಯಿಗಳ ಧೋರಣವು ಸುಧಾರಿಸಲ್ಪಡಬೇಕು. ಹೊಸಯುಗದ ಮುಂದಾಳುಗಳು ಬ್ರಿಟನಿನಲ್ಲಿ ಅನೇಕರಿರುವರು. ಜಗತ್ತಿನ ಹಿತದೃಷ್ಟಿಯಿಂದ ಈ ಮುಂದಾಳುಗಳಿಗೆ ಅವಕಾಶಮಾಡಿ ಕೊಡುವುದು ಅತೀ ಅವಶ್ಯವಿದೆ. ಪ್ರಜಾಪ್ರಭುತ್ವವಾದೀ ರಾಷ್ಟ್ರವೆಂದು ಹೇಳಿಕೊಳ್ಳುತ್ತಿರುವ ಅಮೇರಿಕಾವು, ರೂಸ್‌ವೆಲ್ಟರನ್ನು ಈ ಕುರಿತು ಪ್ರೇರಿಪಿಸಬೇಕು.

ಕಳೆದ ಯುದ್ಧದ ನಂತರ ಸತ್ಯಕ್ಕೆ ಆಸ್ಪದ ದೊರಕದುದರಿಂದ ಈ ಯುದ್ಧವು ಉಂಟಾಯಿತು. ಆದರೆ ಆ ಯುದ್ಧ ಮತ್ತು ಈ ಯುದ್ಧದ ನಡುವಿನ ಅವಧಿಯಲ್ಲಿ ಸತ್ಯದ ಪ್ರೇರಣೆಯು ತುಂಬಾ ನಡೆದಿದೆ. ಈ ಜಗತ್ತು ಸ್ವಲ್ಪ ಪರಿವರ್ತಿಸಲ್ಪಟ್ಟಿದ್ದು ಒಂದು ತರದ ನೂತನ ದೃಷ್ಟಿಯು ಉಂಟಾಗಿರುತ್ತದೆ. ಆದರೆ ಮನುಷ್ಯನ ಅಹಂಭಾವವಲ್ಲವೆ? ಅದು ಇನ್ನೂ ತಿದ್ದಲ್ಪಡಬೇಕಾಗಿಯದೆ. ಈ ತಿದ್ದುವಿಕೆ ಈ ಯುದ್ಧಾಂತ್ಯದೊಳಗೆ ಆಗದಿದ್ದರೆ, ಆಗ ಇನ್ನೊಂದು ಯುದ್ಧವು ಅನಿವಾರ್ಯವೆಂದೆ ತಿಳಿಯಬೇಕು.

“ವಿಮರ್ಶಕ”

ವೇದಗಳು ಮನುಷ್ಯನಿರ್ಮಿತವಲ್ಲ

ಸ್ಮೃತಿ ವಚನಗಳನ್ನು ತಿದ್ದಲು ಅಸಾಧ್ಯ

ಹಿಂದು ನ್ಯಾಯ ಸೂತ್ರಗಸ ವಿಮರ್ಶೆ

ಸರ್ ಬಿ. ಎನ್ ರಾವ್ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ನ್ಯಾಯವಿಧಾಯಕ ಸಭೆಗಳ ಅನೇಕ ಹಿಂದೂ ಸದಸ್ಯರು ಸೇರಿ ೧೯೪೪ರಲ್ಲಿ ಕೇಂದ್ರ ಶಾಸನ ಸಭೆಯ ಮೂಲಕ ಮಂಜೂರಾತಿ ಪಡೆದು ಜಾರಿಗೆ ತರಬೇಕೆಂದಿರುವ ಸುಧಾರಿಸಿದ “ಹಿಂದೂ ನ್ಯಾಯನೀತಿ ಸೂತ್ರ” ಎಂಬ ಸೂಚನಾ ಪತ್ರಿಕೆಸ್ನು ವಿಮರ್ಶಿಸ ಸಲುವಾಗಿ ಮದ್ರಾಸಿನಲ್ಲಿ ಹಿಂದೂ ಶಾಸ್ತ್ರ ಪಂಡಿತ ಮಂಡಳಿಯೊಂದು ಸೇರಿತ್ತು.

ಬೆನಾರಿಸ್, ಪೂನಾ, ಪಂಡಾರಾಪುರ್, ಗುಜರಾತ್ ಮೊದಲಾದ ಕಡೆಗಳಿಂದಲ್ಲದೆ ದಕ್ಷಿಣ ಭಾರತದ ಅನೇಕ ವೇದ ವಿದ್ಯಾಪಾರಂಗತರೂ ಸಭೆಯ ಚರ್ಚೆಯಲ್ಲಿ ಭಾಗವಹಿಸಿದ್ದರು. ವೇದೋಪನಿಶತ್ತು, ಸ್ಮೃತಿ ವಿಚಾರಗಳಲ್ಲಿ ಆಳವಾಗಿ ಅಭ್ಯಯಿಸಿದ ಮಹಾ ಪಂಡಿತರು ಕೊನೆಯ ತೀರ್ಮಾನ ಕೊಡುವ ‘ನ್ಯಾಯಾಧೀಶ’ರಾಗಿ ಪಾತ್ರವಹಿಸಿದ್ದರು.

ಹಿಂದೂ ಮತೀಯ ಆಚಾರ ವಿಚಾರಗಳಿಗೆ ಆಧಾರ ಗ್ರಂಥಗಳು ವೇದೋಪನಿಶತ್ತುಗಳು. ಸ್ಮೃತಿ ವಚನಗಳೂ ಹಿಂದೂ ನ್ಯಾಯನೀತಿಗಳನ್ನು ನಿರ್ದೇಶಿಸಿವೆ. ಈಗ ಮೇಲೆ ಹೇಳಿದ ಸಮಿತಿಯವರು ‘ಡ್ರಾಫ್ಟ್ ಹಿಂದೂ ಕೋಡ್’ ಎಂಬೀ ಸುಧಾರಿಸಿದ ಹಿಂದೂ ಮತ ನೀತಿ, ಸಮಾಜ ನೀತಿಗಳ ಯೋಜನೆಯನ್ನು ಒಪ್ಪಿಕೊಳ್ಳುವ ಮೊದಲು ಅಂತಹ ನ್ಯಾಯ ನೀತಿ ಸೂತ್ರಗಳನ್ನು ತಿದ್ದಲು ಮನುಷ್ಯ ಮಾತ್ರರಿಗೆ ಸಾಧ್ಯವೊ, ಹಕ್ಕಿದೆಯೋ ಎಂಬೀ ಕೆಲವು ಸಂಗತಿಗಳು ಪ್ರಥಮತಃ ಸ್ಪಷ್ಟವಾಗಬೇಕು.

ವೇದಗಳು ಮನುಷ್ಯ ಮಾತ್ರರಿಂದ ನಿರ್ಮಿತವಾದುವುಗಳಾದರೆ ಮಾತ್ರ ಮನುಷ್ಯರು ಅವುಗಳನ್ನು ತಿದ್ದಿ ಸುಧಾರಿಸಲು ಹಕ್ಕುಳ್ಳವರಾಗುತ್ತಾರೆ. ಆದುದರಿಂದ ಮದ್ರಾಸಿನಲ್ಲಿ ಸೇರಿದ ಈ ಪಂಡಿತ ಸಭೆಯಲ್ಲಿ ಆ ಕುರಿತೇ ಮೊದಲು ತರ್ಕಾರಂಭವಾಯಿತು.

ವೇದಗಳಲ್ಲಿ ‘ಕಟಿಕ’ (ತಪ್ಪಲು ಪ್ರದೇಶ), ವೆಂಬ ಶಬ್ದ ಉಪಯೋಗಿಸಲ್ಪಟ್ಟಿದೆ. ಇದು ‘ಕಟ’ (ಚಾಪೆ) ಎಂಬ ಶಬ್ದದ ರೂಪಾಂತರ. ಅಂದ ಮೇಲೆ ಮನುಷ್ಯರು ತಮ್ಮ ಅನುಭವದಲ್ಲಿನ ವಸ್ತುಗಳನ್ನು ಸೂಚಿಸುವ ಶಬ್ದಗಳನ್ನೇ ಉಪಯೋಗಿಸಿ ಈ ವೇದಗಳನ್ನು ಬರೆದಿರಬೇಕು. ಮಾತ್ರವಲ್ಲ ಅನೇಕ ಕಡೆಗಳಲ್ಲಿ ‘ಯಾಜ್ಞವಲ್ಕ’ನು ಉದ್ಗರಿಸಿದನು ಎಂದೂ ವೇದದಲ್ಲಿ ಉಲ್ಲೇಖವಿದೆ. ಯಾಜ್ಞವಲ್ಕನು ಓರ್ವ ಮಾನವನು. ಅವನ ನಂತರವೇ ಇವುಗಳು ಬರೆದಿರಲ್ಪಟ್ಟಿರಬೇಕು. ಇಷ್ಟೇ ಅಲ್ಲ ಈ ವೇದಗಳು ವ್ಯಾಕರಣಬದ್ಧವಾಗಿದ್ದು, ಮನುಷ್ಯರ ಉಚ್ಚಾರಕ್ಕೆ ಯೋಗ್ಯವಾದವುಗಳಾಗಿರುತ್ತವೆ. ಅದನ್ನು ನಿರ್ಮಿಸಿದವರ ಹೆಸರುಗಳು ಮಾತ್ರ ಅವುಗಳಲ್ಲಿ ಸೇರಿಸಲ್ಪಟ್ಟಿಲ್ಲ. ಆದುದರಿಂದ ವೇದಗಳು ಮನುಷ್ಯರ ಕೃತಿಗಳೇ ಆಗಿರುವವು ಎಂದು ಕೆಲವರು ತರ್ಕಿಸಿದರು.

‘ವೇದಗಳು ನರ ನಿರ್ಮಿತವಲ್ಲ, ಅವು ಸುರ ನಿರ್ಮಿತವಾದವು’ ಗಳೆಂದು ತರ್ಕಿಸಿದವರು: ‘ಕಟ’ ಎಂಬ ಶಬ್ದಾರ್ಥದ ಪ್ರಯೋಗವು ಅವುಗಳಲ್ಲಿ ಉಪಯೋಗಿಸಲ್ಪಟ್ಟ ಮಾತ್ರಕ್ಕೆ ವೇದಗಳು ಮನುಷ್ಯ ನಿರ್ಮಿತವೆಂದಾಗುವುದಿಲ್ಲ. ಯಾಜ್ಞವಾಲ್ಕನೆಂಬವನು ವೇದಗಳನ್ನು ಪ್ರಸರಿಸಿದವರಲ್ಲಿ ಒಬ್ಬನಿದ್ದವನಾದುದರಿಂದ ಅವನ ಹೆಸರು ಮೇಲಿಂದ ಮೇಲೆ ಅದರಲ್ಲಿ ಸೇರಿಸಿರಬಹುದು. ಮನುಷ್ಯರೇ ಅವುಗಳನ್ನು ಉಚ್ಚರಿಸುತಿದ್ದಾರೆಂಬ ಮಾತ್ರಕ್ಕೆ ಅವು ಪುರುಷ ನಿರ್ಮಿತವೆಂದಾಗುವುದಿಲ್ಲ.’ ಹೀಗೆಂದು ವಾದಿಸಿದರು.

ಕೊನೆಗೆ ವೇದಗಳು ಸನಾತನವಾದುವುಗಳು. ಅವು ಆದ್ಯಂತ್ಯವಿಲ್ಲದಸತ್ಯಸೂತ್ರ

(೮ನೇ ಪುಟಕ್ಕೆ ಮುಂದುವರಿದಿದೆ)

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣಪದಕ ಪಡೆದ ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಸ್ವದೇಶಾಭಿಮಾನಿ

ತಾರೀಕು 26—1—1945

ಸ್ತ್ರೀಯರಿಗೆ ಸರೋಜಿನಿಯರ ಬೋಧೆ

ಮದ್ರಾಸಿನಲ್ಲಿ ಕಳೆದವಾರ ಜರಗಿದ ಆಂಧ್ರಾ ಮಹಿಳೆಯರ ಪರಿಷತ್ತಿನಲ್ಲಿ ಶ್ರೀಮತಿ ಸರೋಜನಿ ನಾಯ್ಡುರವರು, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿಪುರುಷರು ಇನ್ನು ಸ್ಫೂರ್ತಿಗೊಂಡು ಕಾರ್ಯಿಸುವಂತೆ ಸ್ತ್ರೀಯರು ಪ್ರೇರಿತರಾಗಬೇಕೆಂದೂ, ಮನುಷ್ಯನ ವ್ಯಕ್ತಿ ಜೀವನದಲ್ಲಿ ಸ್ತ್ರೀಯು ಹೇಗೆ ಪುರುಷನ ಸಹಪಾಟಿ ಮತ್ತು ಸಹಧರ್ಮಿಣಿಯಾಗಿರುವಳೂ ಅದೇ ತರದಲ್ಲಿ ದೇಶದ ಮುಂದಿರುವ ಹಲವಾರು ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಹಪಾಟಿ,ಸಹಧರ್ಮಿಣಿಗಳಾಗಬೇಕೆಂದು ಕೇಳಿಕೊಂಡರು. ಗಾಂಧೀಜಿಯವರು ಸ್ತ್ರೀಗೆ ಸಮಾಜದಲ್ಲಿ ಮಾನ್ಯ ಸ್ಥಾನವನ್ನು ದೊರಕಿಸಿಕೊಟ್ಟಿರುವರೆಂದೂ ಅಭಿಪ್ರಾಯ ಪಟ್ಟರು. ಗಾಂಧೀಜಿಯರ ಆದರ್ಶ ಜೀವನವನ್ನು ರೂಪಿಸುವುದರಲ್ಲಿ ಪ್ರೇರಿತರಾದ ಕಸ್ತೂರಬಾರವರು ಹಿಂದೂದೇಶದ ಸ್ತ್ರೀಯರಿಗೆ ಉತ್ತಮ ನಿದರ್ಶನವೆಂದರು.

ಕಳೆದ ನೂರೈವತ್ತು ವರ್ಷಗಳಲ್ಲಿ ನಡೆದ ಮಾರ್ಪಾಡುಗಳಿಂದ ಹಿಂದೂದೇಶದ ಸ್ತ್ರೀಯರು ಭಾರತೀಯತ್ವವನ್ನು ಮರೆತು ಬಿಟ್ಟಿರುವರೆಂದೂ, ಅವರು ಭಾರತೀಯ ಸಂಸ್ಕೃತಿಯಿಂದ ದೂರ ಸರಿದಿರುವರಾಗಿಯೂ, ಈ ಕಾರಣದಿಂದ, ಪ್ರಾಂತೀಯ, ಬಾಷೀಯ, ಧಾರ್ಮೀಯ ಇತ್ಯಾದಿ ಭಿನ್ನಾಭಿಪ್ರಾಯಗಳುಂಟಾಗಿ ಬೆಳೆದು ಹೋಗಿವೆಯೆಂದೂ, ಈ ತರದ ಸ್ಥಿತಿಯು ರಾಷ್ಟ್ರೀಯ ಉಚ್ಚ ಶಿಕ್ಷಣವು ನಡೆಯುವುದರಲ್ಲಿ ಪ್ರತಿಕೂಲವೆಂದೂ; ದೇಶದಲ್ಲಿರುವ ಭಿನ್ನಭಿನ್ನ ಸಂಸ್ಕೃತಿಗಳು ಬಿನ್ನಾಭಿಪ್ರಾಯಗಳುಳ್ಳನೆಂದೂ ತಿಳಿದು, ಒಂದರಿಂದ ಇನ್ನೊಂದಕ್ಕೆ ಘಾತವಿದೆಯೆಂಬ ಅಭಿಪ್ರಾಯದಿಂದ ವರ್ತಿಸುವುದರಿಂದ ದೇಶಕ್ಕೆ ತುಂಬಾ ಅಪಾಯವಿದೆಯೆಂದೂ ತೋರಿಸಿಕೊಟ್ಟರು. ನಮ್ಮ ಸಂಸ್ಕೃತಿಯು ಪೂರ್ಣ ಭಾರತೀಯವಾಗಿ ಇರತಕ್ಕದ್ದು, ಹಾಗೆನೆ ಬೆಳೆಯತಕ್ಕದ್ದು. ಇದನ್ನೆ ಗುರಿಯಾಗಿಟ್ಟು, ಭಾರತೀಯರ ಶಿಕ್ಷಣವು ನಡೆಯಬೇಕು. ವಿವಿಧ ಧರ್ಮಗಳು, ಪ್ರಾಂತ್ಯಗಳೂ, ಬಾಷೆಗಳು ಭಾರತೀಯ ಮೂಲ ಸಂಸ್ಕೃತಿಯನ್ನ ಬೆಳಿಸುವಂತವುಗಳಾಗಬೇಕು. ಈ ಕುರಿತು ಸ್ತ್ರೀಯರು ಹೆಣಗಾಡಬೇಕು.

ರಾಷ್ಟ್ರೀಯ ಶಿಕ್ಷಣದ ಕುರಿತು,–ಒಂದು ಕೋಮು ತನ್ನ ಪ್ರಗತಿಗಾಗಿ ಕಲ್ಪಿಸುವ ಉಪಾಯಗಳು ಇನ್ನೊಂದು ಏಳ್ಗೆಗೆ ಘಾತುಕಪ್ರಾಯವಾಗಬಾರದು. ಇತರರಿಗೂ ತನ್ನಂತೆ ಜೀವಿಸಿಕೊಂಡಿರಲು ಸರಿಸಮಾನವಾದ ಹಕ್ಕುಬಾಧ್ಯತೆಗಳಿವೆ ಎಂಬ ಅಭಿಪ್ರಾಯವು ಎಲ್ಲರಲ್ಲೂ ವಿಕಾಸವಾಗಬೇಕು.

ಸರೋಜಿನಿಯರ ಈ ನುಡಿಗಳು ಸ್ತ್ರೀಯರಿಗೆ ಮಾತ್ರವಲ್ಲ ಪುರುಷರಿಗೂ ಅನ್ವಯಿಸುವಂತವುಗಳು.

ಶಾಲೆಗಳಲ್ಲಿಧಾರ್ಮಿಕಶಿಕ್ಷಣ

ಹಿಂದೂದೇಶದ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ಆವಶ್ಯಕತೆಯ ಕುರಿತು ಪರ್ಯಾಲೋಚಿಸಲು ತಜ್ಞರ ಒಂದು ಸಮಿತಿಯು ಇಂಡಿಯಾ ಸರಕಾರದಿಂದ ನೇಮಿತವಾಗಿದೆ. ಈ ವಿಷಯ ಕುರಿತು ಭಿನ್ನಾಭಿಪ್ರಾಯಗಳು ವಿಶೇಷ ಎದ್ದು ಬಂದುದರಿಂದ ಈ ಸಮಿತಿಯ ಕಳದ ವಾರದ ಕೂಡುವಿಕೆಯಿಂದ ಯಾವ ಪರಿಣಾಮಗಳುಂಟಾಗದೆ, ವಿಚಾರವು ಮುಂದೆ ಹಾಕಲಾಯಿತು.

ಧರ್ಮದ ಕುರಿತು ಶಿಕ್ಷಣವಾಗಬೇಕು ನಿಜ, ಆದರೆ ಯಾವ ಧರ್ಮ? ಸಮಾಜ ಜೀವನವನ್ನು ಉತ್ತಮಗೊಳಿಸುವ ಸತ್ಯಧರ್ಮವೆಂದು ಈ ಸಮಿತಿಯವರು ತಿಳಕೊಂಡು ತಮ್ಮ ಸಲಹೆಗಳು ಸಿದ್ಧಪಡಿಸಿ ಒಪ್ಪಿಸುವುದಾದರೆ ಅದರಿಂದ ಮಹದುಪಕಾರವಾಗಬಹುದು. ಆದರೆ ಧರ್ಮದ ಕುರಿತು ಸಂಕುಚಿತಭಾವಗಳಿಂದಲೇ ಈ ಸಮಿತಿಯು ಪ್ರೇರಿತವಾಗಿಬಿಟ್ಟರೆ ಮತ್ರವರಿಂದ ಅದೇ ಪ್ರೇರಣೆಯ ಸಲಹೆಗಳಾಗಿಬಿಟ್ಟು, ಅವುಗಳು ಒಂದುವೇಳೆ ಕಾರ್ಯರೂಪಕ್ಕೆ ಬರುವುದೆಂದಾದರೆ, ಹಿಂದೀಯರನ್ನು ಪರಮಾತ್ಮನೇ ರಕ್ಷಿಸಲಿ.

ಪ್ರಶ್ನೆಗೆ ತಕ್ಕ ಉತ್ತರಗಳು

೧. ಎಲ್ಲಕ್ಕಿಂತಲೂ ಹೆಚ್ಚು ಪುರಾತನವಾದ ವಸ್ತು ಯಾವುದು?
"ದೇವರು; ಏಕೆಂದರೆ ಅವನು ಯಾವಾಗಲೂ ಇದ್ದೇ ಇದ್ದಾನೆ."

೨. ಎಲ್ಲಕ್ಕಿಂತಲೂ ಹೆಚ್ಚು ಸುಂದರವಾದ ವಸ್ತು ಯಾವುದು?
"ಪ್ರಪಂಚ; ಏಕೆಂದರೆ ಅದು ದೇವರ ಕಾರ್ಯ"

೩. ಎಲ್ಲಕ್ಕಿಂತಲೂ ದೃಢವಾದ ವಸ್ತು ಯಾವುದು?
"ಆಶೆ (ಭರವಸೆ); ಏಕೆಂದರೆ ಮನುಷ್ಯನು ಉಳಿದುದೆಲ್ಲವನ್ನೂ ಕಳೆದುಕೊಂಡರೂ ಸಹ ಆಶೆಯೆಂಬುದು ಅವನಲ್ಲಿ ನಿಂತೇ ನಿಲ್ಲುತ್ತದೆ."

೪. ಎಲ್ಲಕ್ಕಿಂತಲೂ ಹೆಚ್ಚು ಉತ್ತಮವಾದ ವಸ್ತು ಯಾವುದು?
"ಸದ್ಗುಣ; ಏಕೆಂದರೆ ಅದಿಲ್ಲದಿದ್ದರೆ ಮತ್ತೆ ಯಾವುದೂ ಒಳ್ಳೆಯದಾಗುವುದಿಲ್ಲ."

೫. ಎಲ್ಲಕ್ಕಿಂತಲೂ ಹೆಚ್ಚು ವೇಗವಾದ ವಸ್ತು ಯಾವುದು?
"ಚಿಂತನೆ; ಏಕೆಂದರೆ ಒಂದು ಕ್ಷಣಕ್ಕಿಂತಲೂ ಕಡಮೆಕಾಲದಲ್ಲಿ ಅದು ಜಗತ್ತಿನ ಆದಿ ಅಂತ್ಯಗಳನ್ನು ನೋಡಿಕೊಂಡು ಬರಬಲ್ಲುದು."

೬. ಎಲ್ಲಕ್ಕಿಂತಲೂ ಹೆಚ್ಚು ಬಲವುಳ್ಳ ವಸ್ತು ಯಾವುದು?
"ಅವಶ್ಯಕತೆ; ಏಕೆಂದರೆ ಅದು ಜೀವನದ ಎಲ್ಲ ಅಪಾಯಗಳನ್ನೂ ಮನುಷ್ಯನು ಎದುರಿಸುವಂತೆ ಮಾಡುತ್ತದೆ."

೭. ಎಲ್ಲಕ್ಕಿಂತಲೂ ಹೆಚ್ಚು ಮಹತ್ತಾದ ವಸ್ತು ಯಾವುದು?
"ಆಕಾಶ; ಏಕೆಂದರೆ ಸೃಷ್ಟಿಯಾದುದೆಲ್ಲವನ್ನೂ ಅದು ಒಳಗೊಂಡಿರುತ್ತದೆ."

೮. ಎಲ್ಲಕ್ಕಿಂತಲೂ ಹೆಚ್ಚು ತಿಳಿವಳಿಕೆಯುಳ್ಳ ವಸ್ತು ಯಾವುದು?
"ಕಾಲ; ಏಕೆಂದರೆ ಎಲ್ಲವನ್ನೂ ಅದು ಕಂಡುಹಿಡಿಯುತ್ತಷೆ."

೯. ಎಲ್ಲಕ್ಕಿಂತಲೂ ಹೆಚ್ಚು ಸುಲಭವಾದ ಕೆಲಸ ಯಾವುದು?
"ಇತರರಿಗೆ ಬುದ್ಧಿ ಹೇಳುವುದು."

೧೦. ಎಲ್ಲಕ್ಕಿಂತಲೂ ಹೆಚ್ಚು ಕಷ್ಟವಾದ ಕೆಲಸ ಯಾವುದು?
"ನಿನ್ನನ್ನೆ ನೀನು ತಿಳಿದುಕೊಳ್ಳುವುದು."

(ಕೆ.ಆರ್.ಶ್ರೀನಿವಾಸಯ್ಯಂಗಾರ್ ಎಂ.ಎ.ಇವರ ಗ್ರೀಕರ ತತ್ವಶಾಸ್ತ್ರ ಸಾರಸಂಗ್ರಹದಿಂದ ಆರಿಸಿದ್ದು)

ಗಾಂಧಿ ವಿಚಾರ ವಚನಗಳು

(ಕಳದಸಂಚಿಕೆಯಿಂದ)

೧೧. 'ಸತ್ಯ'ವೆಂಬುವ ಪದಕೆ'ಸತ್' ಎಂಬುವದೆ ಮೂಲವಯ್ಯ 'ಸತ್' ಎಂದೊಡೆ "ಇರುವುದೆ'ಂದರ್ಥ. ಇರುವುದೆಂದೊಡೆ ನಿರಂತರ ಶಾಶ್ವತ ಇರುವುದೆಂದೇ ತಿಳಿಯಿರೆಲ್ಲ. ಸತ್ಯವನುಳಿದು ಉಳಿವುದೊಂದನೂ ನಾ ಕಾಣೆ ಭಾರತ ಭಾಗ್ಯವಿಧಾತ.

೧೨. ಪ್ರಚಾರವಿಹ ಪರಿಪಂಯ ನಾಮಾಂಕಿತಗಳಲಿ ದೇವರನು ಸತ್ಯವೆಂಬುವುದೊಂದೇ ಅರ್ಥಗರ್ಭಿತವಾಗಿ ಪರಿಪೂರ್ಣತೆಯಿಂದೆ ನಿರ್ದೋಶ ನಿರ್ಲೋಪವಾಗಿ ಪೆಸರಿಪುದೆಂದೇ ಎನ್ನಭಿಮತವಯ್ಯ ಭಾರತ ಭಾಗ್ಯವಿಧಾತ.

೧೩. ಸತ್ಯವಿದ್ದೆಡೆಯಲ್ಲೆ ಪರಿಶುದ್ಧ ಜ್ಞಾನವಿಹುದು ಕಾಣಾ. 'ಜ್ಞಾನ'ವೆಂಬುವ ಅರ್ಥವನೆ ಕುಡುವ 'ಚಿತ್' ಎಂಬುವಪದವು ದೇವದೇವನ ನಾಮಾವಳಿಯೊಳಿಹುದೆಂಬುದನು ತಿಳಿಯಾ. ಸತ್ಯವಿಹ ಪರಿಶುದ್ಧ ಜ್ಞಾನವಿರೆ ಅಲ್ಲೆಯೇ ಪರಮಾನಂದವದು ಸ್ಥಿರವಲ್ಲದಿನ್ನೆಲ್ಲಿಯಯ್ಯ. ಈ ಸತ್–ಚಿತ್–ಆನಂದ–ಸಚ್ಚಿತಾನಂದವನು ಪೊಂದುವುದೆ ಮಾನವನ ಜೀವನದ ಸಾರ್ಥಕತೆಯೆಂಬೆನಯ್ಯ ಭಾರತ ಭಾಗ್ಯವಿಧಾತ.

೧೪. ಸತ್ಯವನು ಮನಮೆಚ್ಚಿ ಅರಿವುದಕೆ ಪ್ರೌಢತರ ಪಾಂಡಿತ್ಯ ಶ್ರೇಷ್ಠತಮ ತತ್ವಗಳ ಗೊಂದಲವು ಬೇಡವಯ್ಯ. ಎಲ್ಲೆಲ್ಲೂ ಎಲ್ಲರ ಪರಿಶುದ್ಧವಿಹ ವಿಚಾರಪರ ಗ್ರಹಿಕೆಗೊಳಪಡುವುದೆ ಸತ್ಯದ ಪ್ರಾಮಾಣಿಕತೆ ಲಕ್ಷಣಗಳೆಂಬದನು ಮನಗಂಡು ತಿಳಿಯಿರ್ ಭಾರತ ಭಾಗ್ಯವಿಧಾತ.

೧೫. ಆಂತರಿಕ ಸತ್ಯದೊಡನೆಮಗೆಲ್ಲರಿಗಿರ್ಪ ಬಿಡಿಸಲಾಗದ ಬಿಗಿತವಿರ್ಪುದನು ಅರಿವುದೇ ಎನ್ನ ಧರ್ಮ. ಈ ಬಿಗಿತ ಬಹಳ ಪಾವನವಯ್ಯ. ಈ ಧರ್ಮ ಲೋಕದ ಎಲ್ಲ ಧರ್ಮಗಳಿಗೂ ಅತೀತವೆಂಬೆ ನಾನು. ಈ ಧರ್ಮದ ಮರ್ಮವರಿತೊಡೆ ಮಾನವನ ಸ್ವಭಾವದಲಿ ಸಿದ್ಧವಿಹ ಪ್ರತಿಷ್ಠ ಉಚ್ಚ ಗುಣ ಅನವರತ ಲವಲವಿಸುವುದೈ ಪೂರ್ಣತೆಗಾಗಿ. ಪೂರ್ಣತೆಯ ಮಾರ್ಗದಲಿ ಎಡರು ತೊಡರುಗಳ ಎಣಿಕೆಯೋ ಸಲ್ಲ. ಪೀಡೆಯಾತಗಳನೆಲ್ಲ ವಿವರಿಸಲಾರು ಬಲ್ಲ! ಆಂತರಿಕ ಸತ್ಯವಿಹ ಆತ್ಮವದು ವಿಶ್ವ ಸತ್ಯವಿಹ ಕರ್ತನಲಿ ಐಕ್ಯವಾಗದ ತನಕ ಶಾಂತಿಗನುವೆಲ್ಲಿಯದಯ್ಯ ಭಾರತ ಭಾಗ್ಯವಿಧಾಶ.

೧೬. ಅಚಲ ಶ್ರದ್ಧೆಯನೆ ಸತ್ಯದೊಳಿರಿಸಿ ನೆಚ್ಚಿ ನಡೆವುದೇ ಜೀವನದ ಧ್ಯೇಯ ಕಾಣಾ. ಸತ್ಯವನೇ ಬಾಳಿನುಸಿರಾಗಿರಿಸಬೇಕಯ್ಯ ತ್ರಿಕರಣದೊಳು ಸತ್ಯವೈಕ್ಯವಾಗಿರಲು ಜೀವನದ ಅನ್ಯ ನಿಯಮಗಳೆಲ್ಲ ಸುಗಮಾಗಮವಾಗಲೇ ಬೇಕೆಂಬೆನಯ್ಯ. ಸೌಂದರ್ಯ, ಸಾಧುತ್ವ, ಸ್ಥಿತಪ್ರಜ್ಞೆಗಳೆಲ್ಲ ಸತ್ಯದನ್ವೇಷಕನೊಳು ಅನುವಿಂದೆ ತಾವಾಗಿ ಒಡಮೂಡುವುವಯ್ಯ ಭಾರತ ಭಾಗ್ಯವಿಧಾತ.

೧೭. ಸತ್ಯವಿಹ ಪರಮಾತ್ಮನೇ ಎಮ್ಮಯಾ ಒಡನಾಡಿ, ಮಾರ್ಗದರ್ಶಕನಿರ್ಕೆ. ದಯಾಮಯ ದೇವನೆಮ್ಮನೆಂದೆಂದಿಗೂ ಕೈಬಿಡನು ಕಾಣಾ. ಆದೊಡೆಯೂ ಎಲ್ಲ ಹಂಗನು ತೊರೆದು ಸತ್ಯವನೆ ನೆರೆನಂಬಿ ಅದನೆ ತಬ್ಬಿರ್ದೊಡೆ ಕಾಣಾ ಸತ್ಯವದು ತೇರೈಸದಾ ಸಹಾಯ ಭಾರತ ಭಾಗ್ಯವಿಧಾತ.

೧೮. ಪರಿ ಶುದ್ಧತೆಯಿಂ ಸತ್ಯವನೆ ಎಡೆಬಿಡದೆ ಶೋಧಿಪ ಸಾಧಕನು ಸ್ಥಿತ ಪ್ರಜ್ಞನಯ್ಯ. ಸತ್ಯದೊಳೆ ಭಕ್ತಿಯ ಒಲವಿರಲು ಅಂಜಿಕೆಗೆ ಏಡೆಯೆಲ್ಲಿಯದಯ್ಯ. ಸೋಲೆಂಬುವ ಸೊಲ್ಲೇ ಅಲ್ಲಿಲ್ಲವಯ್ಯ. ಮಗ್ಗುರಿಸಿ ಸಾಧಕನು ಅಪ್ಪಿತಪ್ಪಿದೊಡೆಯೂ ಅಂತ್ಯದೊಳು ಸತ್ಯಶೋಭನವಪ್ಪುದಯ್ಯ ಭಾರತ ಭಾಗ್ಯವಿಧಾತ.

೧೯. ತೀವ್ರ ಕಡುಗಲಿಗಳಿಗೆ ಮಾತ್ರ ಉಚಿತಮಾದುದಯ್ಯ ಸತ್ಯದ ಹಾದಿ. ಪುಕ್ಕ ಹೇಡಿಗಳು ಅಂಜಿಕೆಯ ಮುದ್ದೆಗಳು ಸರ್ವಥಾ ಮೆಟ್ಟಲರಿಯರಯ್ಯ ಈ ಹಾದಿಯನು. ತುಳಿಮೆಟ್ಟಿ ಹಸನಾದ ಹೊಲಬಾಗಿಲ್ಲವಿನ್ನು. ದಿಟ್ಟತನದಿಂ ಈ ಪಥವ ಬಳಿಸಿದರ ಸಂಖ್ಯೆ ಬಹು ಅಲ್ಪವಯ್ಯ. ಇಂತಿರಲು ದುರ್ಗಮದ ಪಥದಲಿ ಹಳಿಯ ಹೆಜ್ಜೆ ಗುರುತುಗಳೆಲ್ಲ ಅತಿವಿರಳ ಅತಿ ವಿರಳ ಭಾರತ ಭಾಗ್ಯವಿಧಾತ.

೨೦. ಸತ್ಯಶೋಧಕನಿಗೆ ಮಾನವನ ಭೀತಿಸಲ್ಲದಯ್ಯ. ಸ್ವಾರ್ಥದ ಕುರುಡಿರಲಾಗದಯ್ಯ. ಸೋಗು ಡಾಂಬಿಕಗಳಿಗೆ, ಮೋಹ ಅಹಂಭಾವಗಳಿಗೆ ಕೋಪನಿಷ್ಟುರಗಳಿಗೆಲ್ಲ ಎಡೆ ಇಲ್ಲ ಸತ್ಯಶೋಧನೆಯೊಳಗೆ. ಹತಾಶೆ ವಿಫಲಗಳಿಗೆಲ್ಲ ಶರಣಾಗಿ ಶಿರಭಾಗದೆಲೆ ಘೋರತರ ಭೀಕರದ ಕಷ್ಟಗಳನ್ನೆಲ್ಲ ನಿದಿರಿಸಿ ಕಾದುವ ಕಾಯುವ ಧೃತಿ ಇರಬೇಕಯ್ಯ. ತಾಳ್ಮೆ ಧೃತಿಗಳ ಕೆಡದೆ ದುಸ್ತರದ ತಡೆಗಳನು ತೊಡೆದೊಡೆದು ನಡೆಮುಂದಿಡುವುದೇ ಸತ್ಯಸಾಧಕನ ಕರ್ತವ್ಯವಯ್ಯ ಭಾರತ ಭಾಗ್ಯವಿಧಾತ.

೨೧. ಸನಾತನ ಸತ್ಯದೊಳೆ ಅದ್ದಿರುವ, ಹೃದಯಾಂತರದೊಳು ಸ್ಥಿರಸತ್ಯವದು ಹುದುಗಿರಲು ಮಾನವಗು ಸತ್ಯವಿಹ ದೇವರಿಗೂ ಪರಮಪವಿತ್ರದ ಬಾಂಧವ್ಯವಯ್ಯ. ಧ್ಯಾನದಿಂ ಪ್ರಣಿಧಾನದಿಂ ಈ ನೆಂಟಿನ ಗಂಟನು ಬಿಗಿಯಲಪ್ಪುದಯ್ಯ. ಭೀಕರ ಭಯಂಕರವಿಹ ತಮೋರಾಜ್ಯದ ಮೆಲ್ವಾಯ್ಕೆಗಳನ್ನೆಲ್ಲ ಕೆಚ್ಚೆದೆಯಿಂದಿದಿರಿಸಲು ಇದು ವೇಅಭೇಧ್ಯ ಕವಚವೆಂಬೆನು ಭಾರತ ಭಾಗ್ಯವಿಧಾತ.

(ಮುಂದರಿವುದು) "ದಾಮೋದರ"

ಮಂಗಳೂರಿನಲ್ಲಿ ಮುಸ್ಲಿಂ ಮುಖಂಡರು

ಕಯ್ಯೂರು ಕಿಸಾನ್ ಸಮ್ಮೇಲನ

ಅಡಿಕೆ ಸುಂಕ ಕಿತ್ತುಹಾರುವ ಪ್ರಯತ್ನ

ಮಂಗಳೂರು ವೆನ್‌ಲೊಕ್ ಸರಕಾರ ಆಸ್ಪತ್ರೆಯಲ್ಲಿ ರೆಸಿಡೆಂಟ್ ಸರ್ಜನರಾಗಿದ್ದ ಡಾ॥ ಬಿ. ಆನಂದ ಬಾಳಿಗಾ ಅವರು ನಿಮೋನಿಯಾ ಜ್ವರದಿಂದ ಕೆಲವು ದಿವಸಗಳಿಂದ ಕಾಯಿಲೆಯಲ್ಲಿದ್ದು ನಿನ್ನೆ ತಾ ೨೫ರಂದು ದೈವಾಧೀನರಾದರೆಂಬುದು ಅತ್ಯಂತ ವಿಷಾದದ ಸಂಗತಿ. ಮಾನ್ಯ ಡಾಕ್ಟರರು ತುಂಬಾ ಜನಪ್ರಿಯರಿದ್ದದು, ಬಡವರ ವಿಷಯದಲ್ಲಂತು ದಿವಂಗತರು ಬಹಳ ಸಹಾನುಭೂತಿಗಳಾಗಿದ್ದರು. ಅವರ ಆತ್ಮಕ್ಕೂ ದುಃಖಿತ ಕುಟುಂಬಕ್ಕೂ ಶಾಂತಿ ಕೋರುವೆವು.

ಅ. ಭಾ. ಮುಸ್ಲಿಂ ಲೀಗ್ ಇದರ ಚಳವಳ ಪ್ರಚಾರ ಮಂಡಳಿಯ ಸದಸ್ಯರೂ, ಲೀಗಿನ ಕಾರ್ಯದರ್ಶಿಗಳೂ, ಕೇಂದ್ರ ಸಭೆಯ ಲೀಗ್ ಪಕ್ಷ ಮುಖಂಡರೂ ಆದ ನವಾಬ್ಜಾದಾ ಲಿಯಾಖತ್ ಆಲೀ ಖಾನ್ ಅವರು, ತಮ್ಮ ಸ್ವಯಂಸೇವಕ ದಳದ ಮುಖಂಡರಾದ ನವಾಬ್ ಸಿದ್ದಿಕ್ ಆಲೀ ಖಾನ್‌ರೊಡನೆ ತಾ. ೧೫ರಂದು ಸಂಜೆ ಇಲ್ಲಿಗೆ ಚಿತ್ತೈಸಿದ್ದರು. ಜಿಲ್ಲೆಯ ಅನೇಕ ಭಾಗಗಳಿಂದ ಮುಸ್ಲಿಂ ಜನರು ಮುಖಂಡರ ಸ್ವಾಗತ ದರ್ಶನಗಳಾಗಿ ನೆರೆದಿದ್ದು ಉತ್ಸಾಹಪೂರ್ವಕ ಮೆರವಣಿಗೆಯೂ ನಡೆಯಿತು.

ಮಂಗಳೂರು ನಗರ ಸಭೆಯವರು ಮುಸ್ಲಿಂ ಮುಖಂಡರನ್ನು ಆಹ್ವಾನಿಸಿ ಮಾನ ಪತ್ರದಿಂದ ಆದರಿಸಿದರು. ಅಂದು ರಾತ್ರೆ ೮॥ ಗಂಟೆಗೆ ಮೈದಾನಿನಲ್ಲಿ ಸಾರ್ವಜನಿಕ ಭಾಷಣವಿತ್ತು.

ನಗರ ಸಭೆಯಲ್ಲಿ ನವಾಬ್ಜಾದಾ ಅವರು ಕೊಟ್ಟ ಭಾಷಣದಲ್ಲಿ ಹಿಂದೂ ಮುಸ್ಲಿಂ ಐಕ್ಯತೆಯ ಅವಶ್ಯಕತೆಯನ್ನು ಒತ್ತಿ ಹೇಳಿ ಮುಸ್ಲಿಂ ಸಂಘಟನೆಯು ಯಾರಿಗೂ ವಿರೋಧವಾದುದಲ್ಲವೆಂದು ತಿಳಿಸಿದರು.

ನಂತರ ಸಾರ್ವಜನಿಕ ಭಾಷಣವನ್ನು ಮೊದಲು ಉರ್ದುವಿನಲ್ಲಿ ಕೊಡುತ್ತಾ ನವಬ್ಜಾದರು ಇಸ್ಲಾಂ ಮತದ ಶ್ರೇಷ್ಟತೆಯನ್ನೂ, ಮಹಮ್ಮದ್ ಆಲಿ ಜಿನ್ನಾ ಸಾಹೇಬರ ಮಹತ್ವವನ್ನೂ, ಮತ್ತು ಪಾಕಿಸ್ತಾನದ ಅವಶ್ಯಕತೆಯನ್ನೂ ಸವಿಸ್ತಾರವಾಗಿ ನಿರೂಪಿಸಿದರು.

ಆ ಮೇಲೆ ಕೊಟ್ಟ ಇಂಗ್ಲಿಷ್ ಭಾಷಣದಲ್ಲಿ ನವಾಬ್ಜಾದಾ ಅವರು ಜಗತ್ತಿನ ಸಂಕಷ್ಟಗಳಿಗೆಲ್ಲಾ ಇಸ್ಲಾಮಿನ ತತ್ವಗಳೇ ಶ್ರೇಷ್ಟವಾದ ಪರಿಹಾರೋಪಾಯ, ಸಮತಾವಾದಿ ತತ್ವ, ಪ್ರಜಾಪ್ರಭುತ್ವ ತತ್ವ, ಅಂತರಾಷ್ಟ್ರೀಯತೆಯ ತತ್ವವನ್ನೂ ಭೋಧಿಸಲು ಮತ್ತು ಸ್ವೀಕರಿಸಲು ಹೇಗೆ ಎಲ್ಲರಿಗೂ ಹಕ್ಕು ಸ್ವಾತಂತ್ರ್ಯಗಳಿರುವವೊ ಹಾಗೇ ಇಸ್ಲಾಮಿನ ತತ್ವಗಳನ್ನೂ ಆಚರಿಸಲು ಆ ಮತಾನುಯಾಯಿಗಳಿಗೆ ಸರ್ವ ಹಕ್ಕು ಬಾಧ್ಯತೆಗಳಿವೆ ಎಂದು ಅವರು ಸಾರಿದರು. ಭಾರತದಲ್ಲಿ ಎರಡು ನಿರ್ದಿಷ್ಟ ಆಚಾರ ವಿಚಾರ, ಸಂಸ್ಕೃತಿಗಳಿಂದ ಕೂಡಿದ ಎರಡು ಜನಾಂಗಗಳಿವೆ ಎಂದು ಅಭಿಪ್ರಾಯ ಸೂಚಿಸಿದರು. ಒಟ್ಟಿನಲ್ಲಿ ಮುಸ್ಲಿಮರು ಲೀಗಿನ ಧ್ವಜದ ಕೆಳಗೆ ಒಟ್ಟುಗೂಡುವುದು ಶ್ರೇಯಸ್ಕರವೆಂದೂ, ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರಿಗೆ ಎಲ್ಲಾ ತರದ ಭದ್ರತೆ, ಭರವಸೆಗಳನ್ನು ಕೊಡುವುದಾಗಿಯೂ ಆಲೀ ಖಾನರು ನುಡಿದರು. ಇನ್ನೂ ಇತರ ಮುಖಂಡರೂ ಮುಸಲ್ಮಾನ ಏಕೀಕರಣ, ಸಂಘಟನೆಯ ಕುರಿತು ಭಾಷಣ ಕೊಟ್ಟರು.

ಮುಸ್ಲಿಂ ಮುಖಂಡರಿಗೆ ಕೊಮ್ಯುನಿಸ್ಟ್ ಪಕ್ಷದ ವತಿಯಿಂದ ಮಾನಪತ್ರ ಕೊಡುವ ಕಾರ್ಯಕ್ರಮವು ಮೊದಲೇ ಪ್ರಕಟವಾಗಿತ್ತು. ಅವರ ಒಂದೆರಡು ಧ್ವಜಗಳೂ ಮೆರವಣಿಗೆಯ ಮಧ್ಯದಲ್ಲಿ, ರೈಲ್ವೇ ಸ್ಟೇಶನ್ ಸ್ವಾಗತ ಸಮಾರಂಭದ ವೇಳೆಯಲ್ಲೂ ಕಾಣಿಸಿಕೊಂಡಿದ್ದುವು. ಆದರೆ ನಂತರ ಸಾರ್ವಜನಿಕ ಭಾಷಣಕಾಲದಲ್ಲಿ ಅವು ಕಂಡುಬರಲಿಲ್ಲ. ಮುಸ್ಲಿಂ ಮುಖಂಡರು ಕೊಮ್ಯುನಿಸ್ಟರ ಮಾನಪತ್ರವನ್ನು ಸ್ವೀಕರಿಸಲು ಒಪ್ಪಲಿಲ್ಲವೆಂದು ವದಂತಿ ಇದೆ. ಇದರಿಂದ ಅವರು ನಿರುತ್ಸಾಹಗೊಂಡಿದ್ದರೂ ಇರಬಹುದೆಂದು ಅನೇಕರ ಊಹೆ.

ಈ ಸಂದರ್ಭದಲ್ಲಿ ಹಿಂದೂ ಮಹಾಸಭೆಯ ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರು ಜೆಮ್‌ಶೇದ್‌ಪುರದಲ್ಲಿ ಕೊಟ್ಟ ಭಾಷಣದ ಸಾರವು ಗಮನೀಯವಿರುವುದರಿಂದ ಅದನ್ನು ಇಲ್ಲಿ ಕೊಡಲಾಗಿದೆ: "ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರಿಗೆ ಭದ್ರತೆಯ, ಭರವಸೆಗಳನ್ನು ಕೊಡುತ್ತೇವೆಂದೂ, ಅಲ್ಪ ಸಂಖ್ಯಾಕರು ಅವನ್ನು ವಿಶ್ವಾಸದಿಂದ ಒಪ್ಪಬೇಕೆಂದೂ ಪಾಕೀಸ್ಥಾನ ಪ್ರಮುಖರು ಘೋಶಿಸುತ್ತಿರುವರು. ಆದರೆ ಅಖಂಡ ಹಿಂದೂಸ್ತಾನದಲ್ಲಿನ ಬಹು ಸಂಖ್ಯಾಕರು ಅಲ್ಪ ಸಂಖ್ಯಾಕರಿಗೆ ಅದೇ ಭದ್ರತೆಯ ಭರವಸೆಗಳನ್ನು ಕೊಡುತ್ತೇವೆಂದಾಗ ಯಾಕೆ ಒಪ್ಪುವುದಿಲ್ಲ? ತಮಗೆ ಒಪ್ಪಿಗೆ ಇಲ್ಲದ ವಿಷಯವನ್ನು ಇತರರು ಒಪ್ಪಬೇಕೆಂದರೆ ಹೇಗಾಗುತ್ತದೆ?"

ಇನ್ನು ಆಹಾರ ವಸ್ತುಗಳ ವಿಷಯ. ಅಕ್ಕಿಯನ್ನು ಸ್ಟೋರುಗಳಿಗೆ ತಲ್ಪಿಸುವ ತಾರೀಕನ್ನು (೨ನೇ, ೩ನೇ ಕಂತನ್ನು) ಕಲೆಕ್ಟರರು ಕ್ರಮವಾಗಿ ಜನವರಿ ೩೧ ಮತ್ತು ಫೆ. ೨೮. ಎಂದು ತಿಳಿಸಿದ್ದಾರೆ. ರಾಗಿಯ ಬೆಲೆ ಮುಡಿಗೆ ರೂ. ೬-೫-೦ ಇದನ್ನು ಸಂಪೂರ್ಣವಾಗಿ ಫೆ. ೨೮ರೊಳಗೆ ತಲ್ಪಿಸಬೇಕು. ಇಲ್ಲವೆ ರೂ. ೧. ಕಡಿಮೆ ಕೊಡಲಾಗುವುದು.

ವರ್ಗದಾರರು ಒಕ್ಕಲುಗಳಿಗೆ ಅಕ್ಕಿಯನ್ನು ಮುಂಗಡವಾಗಿ ಕೊಡಬೇಕಾಗಿಲ್ಲ. ಅವರಿಗೆ ಗುರುತು ಚೀಟು ಕೊಟ್ಟು ಸ್ಟೋರು ಮೂಲಕ ಅಕ್ಕಿ ಒದಗಿಸಲಾಗುವುದು. ಅಕ್ಕಿ ಬದಲಿಗೆ ಹಣವನ್ನೇ ಕೊಡಬಹುದು. ಎಂದೂ ಮಾನ್ಯ ಕಲೆಕ್ಟರರು ಸೂಚಿಸಿರುವರು. ಆದುದರಿಂದ ಇನ್ನು ಹೆಚ್ಚಿನ ನೆವನಗಳನ್ನು ಅವರು ನಿರೀಕ್ಷಿಸುವುದಿಲ್ಲ.

ಇನ್ನು ಬಹುಮಾನ ಹೊಂದಲಿಚ್ಛಿಸುವವರಿಗೆ ಸುಸಂದರ್ಭವಿದೆ. ಅವರು ಕಳ್ಳಾಟಿಕೆಯಲ್ಲಿ ಅತ್ತಿತ್ತ ಸಾಗಿಸಲ್ಪಡುವ ನಿಯಂತ್ರಣದ ಆಹಾರ ವಸ್ತುಗಳನ್ನು ಅವುಗಳ 'ಮಾಲಕ'ರೊಂದಿಗೆ ಹಿಡಿದುಕೊಟ್ಟರೆ ಪಾರಿತೋಷಕ ಕೊಡಲಾಗುವುದೆಂದು ಕಲೆಕ್ಟರರು ಪ್ರಕಟಿಸಿದ್ದಾರೆ.

ಕಟ್ಲೇರಿ ಮುಂತಾದ ಕನ್ಸೂಮರ್ ಗುಡ್ಸ್ ಇದರ ನಿಭಂಧನೆಯಂತೆ ಸಂಬಂಧ ಪಟ್ಟವರು ಅದರ ಎಲ್ಲಾ ವಿವರ (ಉತ್ಪತ್ತಿ ಮಿತಿ, ಖರ್ಚು,) ಗಳನ್ನು ಪ್ರತಿ ತಿಂಗಳ ೧೫ರೊಳಗೆ ತಲುಪಿಸಬೇಕಾದುದು ಯಾರೂ ಲಕ್ಷಿಸಿದಂತಿಲ್ಲವೆಂದೂ, ಹಾಗೆ ತಪ್ಪಿದವರಿಗೆ ಶಿಕ್ಷೆಗೆ ಒಳಪಡಿಸುದಾಗಿಯೂ ಕ. ಟೇಕ್ಸ್ ಆಫೀಸರರು ತಿಳಿಸುತ್ತಾರೆ. ಇನ್ನಾದರೂ ನಿಯಮಗಳ ಉಲ್ಲಂಘನೆಗೆ ಯಾರೂ ತೊಡಗದಿರಲಿ.

ಮಂಗಳೂರಿನಲ್ಲಿ ಶ್ರೀ. ವೆಂಕಟ್ರಮಣ ದೇವಳದ ರಥೋತ್ಸವಗಳೂ ಯಥಾಸಾಂಗವಾಗಿ ನಡೆದವು. ಊಟದಂತೆ ಉತ್ಸವದ ಕಾರ್ಯಕ್ರಮದಲ್ಲೂ ಕೆಲವೊಂದನ್ನು 'ರೇಶನ್' ಮಾಡಲಾಗಿದೆ ಎಂದು ಕೆಲ ಉತ್ಸವಾಭಿಮಾನಿಗಳು ಆಕ್ಷೇಪಿಸಿದಂತೆ ವದಂತಿ ಇದೆ. ಇಲ್ಲದಂತೂ ಇಲ್ಲ, ಇದ್ದದಕ್ಕೆ ಕಡಿತ ಬೇಡವೆಂದು ಅನೇಕ ಹಿತೈಷಿಗಳ ಅಭಿಮತ. ಈ ಸಲದ ಉತ್ಸವವರ್ಗ ವಿಷೇಶವೆಂದರೆ, ದಸರಾ, ರಮ್‌ಜಾನ್ ಹಬ್ಬಗಳಂತೆ 'ಹುಲಿವೇಷ'ದ ಕಾರ್ಯಕ್ರಮವೂ ಇತ್ತು. ಇದು ಅತ್ಯಾವಶ್ಯವೇ ಎಂದು ಕೆಲವರ ಪ್ರಶ್ನೆ.

ಯುದ್ಧ ಕಾಲದಲ್ಲಿ ಆರ್ಥಿಕ ಲಾಭ ಪಡೆಯಲು ಪ್ರಯತ್ನಿಸಿದ್ದು ಹೆಚ್ಚಾಗಿ ಸ್ವತಂತ್ರ ವ್ಯಾಪಾರಿಗಳೂ, ಇತರ ನಾಗರೀಕರೂ ಆಗಿದ್ದರೂ, ನಮ್ಮ ದೇಶದಲ್ಲಿ ಈ ಅಪರಾಧಕ್ಕೆ ಸರಕಾರೀ, ರೆಲ್ವೇ, ಮಿಲಿಟರಿ ನೌಕರರೂ ಗುರಿಯಾಗಿದ್ದುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ಜಿಲ್ಲೆಯಲ್ಲಿ ಈಚೇಗೆ ಗ್ರಾಮ ಉದ್ಯೋಗಸ್ಥರನೇಕರು ಈ ಆರೋಪಕ್ಕೆ ತುತ್ತಾಗಿ ಶಿಕ್ಷೆಗೆ ಒಳಗಾಗಿದ್ದಾರೆ- ಮೇಲಾಡಳಿತಗಾರರಿಗೆ ದೊಡ್ಡ ಸಮಸ್ಯೆಯಾಗಿದೆ. ಒಂದು ಕಡೆ ನಾಗರೀಕರ ಮೇಲೆ ನಿಗಾ ಇಟ್ಟುಕೊಳ್ಳಬೇಕು ಇನ್ನೊಂದು ಕಡೆ ಕೈಕಳಗಿನ ಅಧಿಕಾರಿಗಳ ಮೇಲೂ ಕಣ್ಣಿಟ್ಟುಕೊಳ್ಳಬೇಕಾಗಿದೆ.

ಕಳ್ಳ ಸಂತೆಯಲ್ಲಿ ಸಹಕರಿಸಿದ ಮೂಡೂರಿನ ಶ್ಯಾನುಭಾಗರ ಕೆಲಸ ಹೋಯಿತು. ಕೊಣಾಜೆ ಪಟೇಲರಿಗೆ ೧ ವರ್ಷ ಅಮಾನತು. ಅಜ್ಜಿಬೆಟ್ಟು ಶ್ಯಾನುಭಾಗರಿಗೆ ೨ ವರ್ಷ ಅಮಾನತು. ಐಕಳ ಗ್ರಾಮ ಪಟೇಲರು ಸಕ್ಕರೆ, ಚಿಮ್ಣಿಎಣ್ಣೆ ಕಾರ್ಡುಗಳ ಮೇಲೆ'ಲಂಚ' ತೆಗೆದುಕೊಂಡದಕ್ಕೆ ತಾತ್ಕಾಲಿಕ ಅಮಾನತು. ಅನುಭವಸ್ಥರು ಇಂತಹ ಕೇಸುಗಳನ್ನು ಹಿಡಿದು ಬಹುಮಾನ ಪಡೆಬಹುದಲ್ಲವೆ?

ಕಳೆದ ತಾ. ೧೫ರಂದು ಕಯ್ಯೂರಿನಲ್ಲಿ ಕಿಸಾನ್ ಸಮ್ಮೇಲನವು ಜರಗಿತು. ಸಾರಸ್ಯವೆಂದರೆ-ನಗರಗಳಲ್ಲಿ ಕಾಲು, ಕಾರು, ಮೆರವಣಿಗೆ ನಡೆಯುವಂತೆ ಕಯ್ಯೂರ ನದಿಯಲ್ಲಿ ಕಿಸಾನರ ದೋಣಿ ಮೆರವಣಿಗೆ ನಡೆಯಿತು. ಅಲ್ಲದೆ ಕಿಸಾನ್, ಗಂಡಸರ, ಹೆಂಗಸರ,ಮತ್ತು ಮಕ್ಕಳ ಪ್ರತ್ಯ ಪ್ರತ್ಯೇಕ ಮೆರವಣಿಗೆಗಳಿದ್ದುವು. ಪೋಲಿಸರನ್ನು ಕೊಂದರೆಂಬ ಆಪಾದನೆಗೆ ಗುರಿಯಾಗಿ ಗಲ್ಲಿಗೇರಿಸಲ್ಪಟ್ಟ ನಾಲ್ವರು ಕೃಷಿಕರ ಸ್ಮಾರಕವೆಂದು ಹೇಳಲ್ಪಟ್ಟ 'ಕಯ್ಯೂರು ಬಂಧುಗಳ ದ್ವಾರ'ವೊಂದು ಕಮ್ಯೂನಿಸ್ಟ್ ಮುಖಂಡ ಗೋಪಾಲನ್ ಸ್ಮಾರಕ ಸಮ್ಮೇಳನ ನಗರದಲ್ಲಿತ್ತು.

ಜಿಲ್ಲೆಯಲ್ಲಿ ಜ್ಯಾರಿ ಇರುವ ಅಡಿಕೆ ಸುಂಕವನ್ನು ಕಿತ್ತುಹಾಕಲು ಪ್ರಯತ್ನಿಸುವುದಾಗಿ ಕಿಸಾನ್ ಮುಖಂಡ ಪ್ರೊ॥ ರಂಗಾ ಅವರು ಸಾರಿರುವರು. ಅವರು ಬರುವ ಜುಲ್ಯಾ ತಿಂಗಳಲ್ಲಿ ನಮ್ಮ ಜಿಲ್ಲೆಗೆ ಬರುವವರಿದ್ದಾರಂತೆ. ಇವರು ಈಚೆಗೆ ಗಾಂಧೀ ತತ್ವಗಳ ಕಡೆಗೆ ತಮ್ಮ ಹಿಂಬಾಲಕರನ್ನು ನಿರ್ದೇಶಿಸುತ್ತಿರುವುದು ತೃಪ್ತಿಯ ಸಂಗತಿ. ಅಡಿಕೆಯನ್ನು ಉತ್ಪತ್ತಿಗಾರರು ಸ್ವತಃ ಚಿಲ್ಲರೆ ಗಿರಾಕಿಗಳಿಗೆ ಮಾರುವುದಾದರೆ ಸುಂಕ ತೆರಬೇಕಾಗಿಲ್ಲವೆಂದು ಕೇಂದ್ರ ಸರಕಾರ ಪ್ರಕಟನೆ ತಿಳಿಸುತ್ತದೆಯಂತೆ. ಅಡಿಕೆ ಸಾಹುಕಾರರು ಅಡಿಕೆ ವೀಳ್ಯದೆಲೆ ಸುಣ್ಣದ ಅಂಗಡಿ (ಭಂಡಸಾಲೆ ಬದಲಿಗೆ) ಇಟ್ಟು ಕೊಳ್ಳಬೇಕೆ?

ಮುಲ್ಕಿಯಲ್ಲಿ ಕನ್ನಡದ ಏಳ್ಗೆಯ ಉದ್ದೇಶದಿಂದ ಒಂದು ಕರ್ನಾಟಕ ಸಂಘ ಸ್ಥಾಪನೆಯಾಗಿದೆ. ತಾ. ೧೨ರಂದು ಇದರ ಮೊದಲ ಸಭೆ ಸೇರಿ ಕಾರ್ಯಕಾರಿ ಮಂಡಳಿಯನ್ನು ಆರಿಸಿದರು. ಎಲ್ಲೆಲ್ಲೂ ಇಂತಹ ಸಂಘಗಳು ಸ್ಥಾಪಿಸಿ ಕೆಲಸ ಸಾಗಲಿ.

ಮುಲ್ಕಿಯ ಬಿಲ್ಲವ ಸೇವಾ ಸಂಘದವರು ಬ್ರಹ್ಮಶ್ರೀ ನಾರಾಯಣ ಗುರು ಪ್ರತಿಷ್ಠಾ ದಿನಾಚರಣೆಯನ್ನಾಚರಿಸಿದರು. (ತಾ. ೨ರಂದು) ಎಲ್ಲಾ ಸಮಾಜದವರೂ ಅಂತರ್ಜಾತೀಯ ಐಕ್ಯತೆ ನೆಮ್ಮದಿಗಳನ್ನುಂಟುಮಾಡುವುದಕ್ಕೆ ಶ್ರಮಿಸಬೇಕು.

ಉಡುಪಿಯಲ್ಲಿ ನೇಕಾರ ಮತ್ತು ಬೀಡಿ ಕೆಲಸಗಾರರ ಸಭೆಗಳು ಉತ್ಸಾಹದಿಂದ ಕೆಲಸಮಾಡುತ್ತಿವೆ. ಇನ್ನೂ ಇತರ ಮಜೂರ ವರ್ಗದವರೂ ತಮ್ಮ ಸಂಘಗಳ ಮೂಲಕ ಇವುಗಳಲ್ಲಿ ಭಾಗವಹಿಸಿ ದೇಶಹಿತಕ್ಕಾಗಿ ಪ್ರಯತ್ನಿಸಬೇಕು.

ಉಡುಪಿ ಮುನ್ಸಿಪಲ್ ಬಜೇಟ್ ಸಭೆಯಲ್ಲಿ ಪುನರಾವರ್ತಿಸಿದ ೧೯೪೫ರ ಅಂದಾಜುಖರ್ಚು ಜಮಾ ಅಂಕೆಸಂಖ್ಯೆಗಳನ್ನು ಅಂಗೀಕರಿಸಲಾಯಿತು. ಮುನ್ಸಿಪಲ್ ಶಿಬಂಧಿಯವರಿಗೆ ತುಟ್ಟಿಭತ್ತೆ ಕೊಡಬೇಕಾಗಿ ಬಂದದರಿಂದ ಜಾಸ್ತಿ ಇದ್ದ ಉತ್ಪತ್ತಿಗಿಂತಲೂ ವೆಚ್ಚವೇ ಹೆಚ್ಚಾಗಿದೆ ಎಂದು ಹೇಳಲಾಗಿದೆ. ಪಾಪ!

ಉಡುಪಿ ನಾಗರೀಕರಿಂದ ಮದ್ರಾಸ್ ಗವರ್ನರರಿಗೆ ಒಂದು ಮನವಿ ಹೋಗಿದೆ. ರೇಶನ್ ಪಡಿ ಅರ್ಧ ಸೇರು ಸಿಕ್ಕಬೇಕೆಂಬುದೇ ಅವರ ವಿನಂತಿ. ಇತರ ಕಡೆಗಳಲ್ಲೂ ಹಾಗೇ ಮಾಡಬಾರದೆ?

ನಿಯಂತ್ರಣದ ವಸ್ತುಗಳನ್ನು ಕ್ರಮತಪ್ಪಿ ಮಾರಿದಕ್ಕೆ ಉಡುಪಿಯ ಶ್ರೀ. ವೈಕುಂಠಶ್ಯಾನುಭಾಗ ಎಂಬವರಿಗೆ ೧ ಸಾವಿರ ರೂ. ಜುಲ್ಮಾನೆಯಾಗಿದೆ. ಲೆಕ್ಕ ಸರಿ ಇಡುವಂತೆ ಇತರರಾದರೂ ತಿಳಿಯಲಿ.

ಓಲೆಬೆಲ್ಲ (೨೫೦ ಕಟ್ಟು) ಮೈಸೂರು ಅತ್ತಕಡೆ ಸಾಗಿಸಲು ಪ್ರಯತ್ನಿಸಿದ ಉಪ್ಪಿನಂಗಡಿಯ ಶ್ರೀ. ದಾಮೋದರ ಪೈ ಅವರಿಗೆ ೪೦೦ ರೂ. ಜುಲ್ಮಾನೆ ಯಾಗಿದ್ದುದು ಈಗ ಸೆಶ್ಶನ್ ಜಡ್ಜರು ೫೦ಕ್ಕೆ ಇಳಿಸಿದ್ದಾರೆ.

ಅಮೇರಿಕದ ಟಿನೆಸಿ ನದೀ ಪ್ರದೇಶದಲ್ಲಿ ಇಚೇಗೆ ಇಲ್ಲಿನ ಸರಕಾರದವರು ಬೃಹದ್ ಪ್ರಮಾಣದ ನೀರಾವರಿ ಮತ್ತು ಕೃಷಿಗಾರಿಕೆಯ ಅಭಿವೃದ್ಧಿ ಯೋಜನೆಯನ್ನು ಮಾಡಿರುವುದನ್ನು ನೋಡಿ ಅನುಭವ ಪಡೆದು ಬರಲು ಪಂಜಾಬ್ ಸರಕಾರದವರು ಓರ್ವ ತಜ್ಞರನ್ನು ಅಮೇರಿಕಕ್ಕೆ ಕಳುಹಿಸಲು ನಿರ್ಧರಿಸಿರುವರು.

○ ○ ○ ○

ಮಹಾರಾಷ್ಟ್ರ ಪ್ರಾಂತ್ಯದಲ್ಲೂ ದೇವಾಲಯ ಪ್ರವೇಶ ಸಕಲ ಹಿಂದೂಗಳೆಂದೆನಿಸುವವರಿಗೆ ಸಿಗುವಂತೆ. ಅಲ್ಲಿನ ಹರಿಜನ ಸೇವಕ ಸಂಘದವರು ಚಳವಳವನ್ನಾರಂಭಿಸಲು ನಿರ್ಧರಿಸಿರುವರು.

○ ○ ○ ○

ಅಮೇರಿಕದಲ್ಲಿ ನೆಲೆ ನಿಲ್ಲುವ ಭಾರತೀಯರಿಗೆ ಅಲ್ಲಿನ ನಾಗರೀಕ ಹಕ್ಕು ಬಾಧ್ಯತೆಗಳನ್ನು ಕೊಡುವಂತಹ ಒಂದು ಮಸೂದೆಯನ್ನು ಅಲ್ಲಿನಪ್ರಜಾಪ್ರತಿನಿಧಿ ಸಭೆಯಲ್ಲಿ ಸೆನೆಟರ್ ಬೊಲ್ ಅವರು ತರಲಿದ್ದಾರೆ.

ಕೋಮಲ ಸೌಂದರ್ಯ ನಿಮಗೆ ಇರಬೇಕೆ

ನಿಮಗೆ ಶುದ್ಧವಾದ ಮತ್ತು ಹಾಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯ ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ, ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸ ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನು ಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕ್ಕೆ ಕೋಮಲತೆಯನ್ನುಂಟುಮಾಡುವುದು

ಬೈಲ್ ಬೀನ್ಸ ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು.

BILE BEANS

ವೇದಗಳು ಮನುಷ್ಯ ನಿರ್ಮಿತವಲ್ಲ

(೫ನೇ ಪುಟದಿಂದ)

ಗಳು. ವೇದೋಕ್ತಿಗಳ ಅರ್ಥವನ್ನು ವಿವರಿಸುವ ಮೀಮಾಂಸಗ್ರಂಥಗಳೇ ಶಾಸ್ತ್ರೀಯವಾದ ಘನ ಆಧಾರಗಳು. ಎಂಬ ತೀರ್ಮಾನವನ್ನು ವಿದ್ವತ್ಪರಿಷತ್ತಿನವರು ನಿರ್ಣಯಿಸಿದರು.

ಶಂಕರಾಚಾರ್ಯರ ಮನವಿ

'ಹಿಂದೂ ಪದ್ಧತಿ ಸುಧಾರಣೆ ಸೂತ್ರಗಳ' ಕುರಿತು ಕಾಮಕೋಟಿ ಪೀಠದ ಜಗದ್ಗುರು ಶಂಕರಾಚಾರ್ಯರು ಮದ್ರಾಸ್ ಸರಕಾರಕ್ಕೆ ಒಂದು ಮನವಿ ಮಾಡಿದರ ತಾತ್ಪರ್ಯವು ಈ ಕೆಳಗಿನಂತಿದೆ:–

ಈಗ ಹೊಸತಾಗಿ ಶಾಸನ ಸಭೆಯ ಮುಂದೆ ತರಲೆಳಿಸುವ ಸುಧಾರಣೆಗಳಲ್ಲಿ ಕೆಲವು ಹೀಗಿವೆ:– (೧) ಹಿಂದುಗಳಲ್ಲದವರೊಡನೆ ವಿವಾಹವು ನ್ಯಾಯಬದ್ಧ ಮಾಡುವುದು, ಸ್ವಜಾತಿಯವರಲ್ಲದವರೊಡನೆ ಆಗುವ ವಿವಾಹವನ್ನು ನ್ಯಾಯಬದ್ಧ ಮಾಡುವುದು. (೨) ಬೇಕಾದಾಗ ವಿವಾಹವನ್ನು ರದ್ದು ಇಲ್ಲವೇ ವಿಚ್ಛೇದನ ಮಾಡುವ ಹಕ್ಕನ್ನು ಕೊಡುವುದು. (೩) ತಂದೆಯ ಉತ್ತರಕ್ರಿಯೆಗಳನ್ನುಮಾಡಲು ಅಧಿಕೃತನಾಗಿರುವ ಮಗನಿರುವಾಗ ತಂದೆಯ ಆಸ್ತಿಯ ಪಾಲುಗಾರಿಕೆಯನ್ನು ಇತರರಿಗೂ ಕೊಡಿಸುವುದು. (೪) ಎರಡನೇ ಮದುವೆ ಮಾಡಿಕೊಂಡು ಒಬ್ಬನು ಸಂತತಿ ಪಡೆಯ ಬಯಸಿದರೆ ಅದಕ್ಕೆ ತಡೆ ಹಾಕುವುದು. (ಮೊದಲನೇ ಹೆಂಡತಿಯಲ್ಲಿ ಸಂತಾನವಿಲ್ಲದಿದ್ದರೆ ಎರಡನೇವಳನ್ನು ಮದುವೆ ಮಾಡಿ ಮಕ್ಕಳನ್ನು ಪಡೆಯಬಹುದೆಂದು ನಿಜವಾದ ಹಿಂದು ನ್ಯಾಯಶಾಸ್ತ್ರಗಳು ಉಪದೇಶಿಸುತ್ತವೆ.) (೫) ಸನ್ಯಾಸ ಆಶ್ರಮ ಸ್ವೀಕಾರ ಮಾಡಿದ ಮಗನೊಬ್ಬನಿಗೆ ತಂದೆಯ ಆಸ್ತಿಯಲ್ಲಿ ಪಾಲು ಕೊಡುವ ಹಕ್ಕನ್ನು ಕಲ್ಪಿಸುವುದು. (ಸನ್ಯಾಸವನ್ನು ಸ್ವೀಕರಿಸುವುದೆಂದರೆ ಈಹ ಸಂಬಂಧವಾದ ಎಲ್ಲಾ ವಿಷಯಗಳನ್ನು ತೊರೆಯುವುದು ಎಂದರ್ಥ. ಇದರಿಂದ ನಿಜವಾದ ಅಧ್ಯಾತ್ಮ ಸಿದ್ಧಿ ಸಾಧಿಸುತ್ತದೆ. ಇಂಥವರಿಗೆ ಸಿರಿಸಂಪತ್ತುಗಳ ಹೊಣೆಗಾರಿಕೆಯನ್ನು ಕೊಡುವುದು ಶಾಸ್ತ್ರ ವಿರೋಧವಾದುದು.)

ಈ ಹೊಸ ಕಾನೂನನ್ನು ಸೂಚಿಸಿದ ಸಮಿತಿಯವರು ನಿಜವಾದ ಹಿಂದೂ ಸಂಸ್ಕೃತಿಯ ಮೇಲೆ ಭರವಸೆ ವಿಶ್ವಾಸವಿಲ್ಲದವರು. ಅವರಿಗೆ ಐಹಿಕ ಸುಖಸಂಬಂಧವಾದ ವಿಚಾರಗಳೇ ಹೆಚ್ಚು ರುಚಿಸುವವು.

ಒಂದು ಜಾತಿಗೆ ಸರಿಯಾಗುವ ಕಾನೂನು ಇನ್ನೊಂದಕ್ಕೆ ಸರಿ ಹೋಗದು. ಹೆಚ್ಚಿನ ಹಿಂದುಗಳು ಈ ಸುಧಾರಣೆಗಳಿಗೆ ಒಪ್ಪುವವರಲ್ಲ. ಕೆಲವು ಹಿಂದೂ ಸುಧಾರಕರ ಅಭಿಪ್ರಾಯವನ್ನು ಜನಸಾಮಾನ್ಯರ ಅಭಿಮತವಾಗಿ ತಿಳಿದುಕೊಳ್ಳಲಾಗದು.

ಈ ಸಮಿತಿಯವರು ವರ ದಕ್ಷಿಣೆಯನ್ನು ಪ್ರತಿಬಂಧಿಸುವ ಕಾನೂನುಗಳನ್ನು ತಮ್ಮ ಯಾದಿಯಲ್ಲಿ ಸೇರಿಸಿದ್ದಾರೆ. ವರದಕ್ಷಿಣೆಯ ಪದ್ಧತಿಯು ಹಿಂದೂಗಳಲ್ಲಿ ಮಾತ್ರವಲ್ಲ ಎಲ್ಲಾ ಮತಸ್ಥರಲ್ಲೂ ಅದು ಆಚಾರದಲ್ಲಿದೆ. ಅದನ್ನು ತಡೆಯಲು ಬೇರೆಯೇ ವಿಧಾಯಕ ಶಾಸನಗಳನ್ನು ಮಾಡಬೇಕಲ್ಲದೆ ಹಿಂದೂ ನ್ಯಾಯನೀತಿಯ ಶಾಸನದಲ್ಲಿ ಅದಕ್ಕೆ ಎಡೆಯಿಲ್ಲ.

ಒಟ್ಟಿನಲ್ಲಿ ಹಿಂದುಗಳಿಗೆ ಶಾಸ್ತ್ರ ಸಮ್ಮತವಲ್ಲದ ಈ ಸುಧಾರಣೆಗಳು ಸ್ವೀಕಾರಕ್ಕೆ ಅಯೋಗ್ಯವಾಗಿವೆ.

ಕೆಲವು ನೋಟಗಳು

ಗ್ರೀಸಿನಲ್ಲಿ ಸದ್ಯ ಸ್ಥಿತಿಯು ಹತೋಟಿಗೆ ಬಂದಿದೆ. ಕ್ರಾಂತಿಯೆಬ್ಬಿಸಿದ ಇಲಾಸ್ ಪಕ್ಷದವರಿಗೆ ಕ್ಷಮಾಪಣೆ ಇಲ್ಲವೆಂದೂ; ತಪ್ಪಿತಸ್ಥರಾದವರ ವಿಚಾರಣೆಯಾಗಿ ವಿನಯದ ವರ್ತನೆ ಕೈಕೊಳ್ಳಲಾಗುವುದೆಂದು ಸದ್ಯ ಮುಖ್ಯಮಂತ್ರಿ ಪದವಿಯನ್ನೇರಿದ ಜನರಲ್ ಪ್ಲಾಸ್ಟಿರಾಸರ ಹೇಳಿಕೆ ಹೊರಡಿರುತ್ತದೆ.

ಗ್ರೀಸಿನಲ್ಲಿ ಟ್ರೇಡ್ ಯೂನಿಯನ್ (ಲೇಬರ್ ಹಿತಕಾಂಕ್ಷಿ ವ್ಯವಸ್ಥೆ) ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿವೆಂಬುದನ್ನು ನಿರೀಕ್ಷಿಸಿ ವರದಿ ಮಾಡಿಕೊಳ್ಳಲು ಬ್ರಿಟನಿನ ಟ್ರೇಡ್ ಯೂನಿಯನ್ ಪರವಾಗಿ ಸರರೊಬ್ಬರು ಅಲ್ಲಿಗೆ ಕಳುಹಿಸಿಕೊಡುವ ವ್ಯವಸ್ಥೆಯು ಚರ್ಚಿಲ್ ಸರಕಾರದಿಂದ ಮಾಡಲಾಗಿದೆ.

° ° ° °

ಜರ್ಮನಿಯ ಭವಿಷ್ಯದ ಕುರಿತು ಮಿತ್ರರೊಳಗೆ ಒಪ್ಪಂದದ ನಿರ್ಧಾರವು ಇನ್ನೂ ಆಗಲಿಲ್ಲವೆಂದು ತಿಳಿದುಬಂದಿದೆ.

° ° ° °

ಡಿಗೋಲೆಯವರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳಲು ಚರ್ಚಿಲರು ಪೇರಿಸಿಗೆ ತೆರಳಿ ಯತ್ನಿಸಿದ ಕುರಿತು ವಾರ್ತೆಗಳು ಬಂದಿದ್ದವಷ್ಟೆ. ಆದರೆ ಅವರ ಯತ್ನಗಳು ಫಲಿಸಲಿಲ್ಲ. ಈಗ ಅಮೇರಿಕಾವನ್ನು ತನ್ನ ಪಕ್ಷಕ್ಕೆ ಒಲಿಸಿಕೊಳ್ಳಲು ಅವರ ಯತ್ನಗಳು ನಡೆಯುತ್ತವಂತೆ. ತ್ರಿರಾಷ್ಟ್ರಗಳ ಮುಖಂಡರ ಕೂಡುವಿಕೆಯ ದಿನದೊಳಗೆ ತಮ್ಮ ಕಾರ್ಯವನ್ನು ಪೂರೈಸಿ ಬಿಡುವುದು ಅವರ ಸದ್ಯದ ಹವಣಿಕೆಯಂತೆ.

° ° ° °

ಹಿಂದೂದೇಶದ ರಾಜಕೀಯ ಪರಿಸ್ಥಿತಿ ಪರಿಶೀಲನೆ ಮಾಡಿ ಬ್ರಿಟಿಷ್ ಸರಕಾರಕ್ಕೆ ವರದಿ ಮಾಡಲು ಪಾರ್ಲಿಮೆಂಟಿನ ಸದಸ್ಯರ ಒಂದು ಮಂಡಳವು ಇತ್ತಕಡೆಗೆ ಬರುವುದಂತೆ.

° ° ° °

'ಪರಸ್ಪರ ಆರೋಪಗಳನ್ನು ಹೊರಿಸುವ ಕೆಲಸವನ್ನು ನಾವು ನಿಲ್ಲಿಸಬೇಕು. ಸತ್ಯಾಂಶವನ್ನು ತಿಳಿಯದೆ ದೂರುವುದು ತೀರಾ ಅನ್ಯಾಯವು. ರುಜುವಾತುಗಳಿದ್ದೆ ನಾವು ಮಾತನಾಡಬೇಕು' ಹೀಗೆಂದು ಕೊಮ್ಯುನಿಸ್ಟ ಪ್ರಕರಣದ ಕುರಿತು ಮಾತೆತ್ತಿದಾಗ ಸರೋಜಿನಿ ದೇವಿಯರ ಬೋಧನೆಯಾಗಿರುತ್ತದೆ.

° ° ° °

'ನನಗೂ ಜಿನ್ನಾರವರಿಗೂ ಒಡಂಬಡಿಕೆಯಿಲ್ಲ ನಿಜ. ಆದರೆ ಇಷ್ಟು ನಾನು ಹೇಳಬಲ್ಲೆನು. ಜಿನ್ನಾರವರು ಅಸಧಾರಣ ಪುರುಷರು. ಅವರನ್ನು ಕೆಡಿಸಲು ಯಾರಿಂದಲೂ ಸಾಧ್ಯವಿಲ್ಲ. ಗೌರವದ ಬಿರುದಾವಳಿಗಳಿಂದಲೂ, ಉನ್ನತಿ ಅಧಿಕಾರಪದವಿಗಳಿಂದಲೂ ಅವರನ್ನು ಕೊಂಡುಕೊಳ್ಳುವುದು ಅಸಾಧ್ಯವೆಂದು ನಾನು ತಿಳಿದಿದ್ದೇನೆ'–ಇದು ಜಿನ್ನಾರವರ ಕುರಿತು ಸರೋಜಿನಿಯರ ಅಭಿಪ್ರಾಯವು.

° ° ° °

'ವಿದ್ಯಾರ್ಥಿಗಳು ಕಾಂಗ್ರೆಸ್ಸಿನ ಧ್ಯೇಯಗಳಿಗೆ ಸರಿಯಾಗಿ ವರ್ತಿಸಬೇಕು. ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕು. ಮೌನದಲ್ಲಿ ದುಡಿದು ಸ್ವಾತಂತ್ರ್ಯಕ್ಕಾಗಿ ನಡೆಯಬೇಕಾದ ಕೊನೆಯ ಹೋರಾಟದ ಸಿದ್ಧತೆಗಳನ್ನು ಅವರು ಮಾಡಬೇಕು' ಇದು ಗಾಂಧಿಜಿಯವರು ವಿದ್ಯಾರ್ಥಿಗಳಿಗೆ ಕೊಟ್ಟ ಬೋಧನೆಯ ಸಾರವು.

° ° ° °

ಮುಂದಕ್ಕೆ ಗ್ರೀಸಿಗೆ ಯುದ್ಧ ಸಾಮಗ್ರಿ ಕಳುಹಿಸಲಾಗುವುದಿಲ್ಲವೆಂದೂ ಅದರ ಬದಲು ಆ ಸಾಮಾಗ್ರಿಗಳು ಫ್ರಾನ್ಸಿಗೆ ಕಳುಹಿಸಿಕೊಡಲಾಗುವುದೆಂದು ತಿಳಿದುಬಂದಿದೆ.

° ° ° °

ಅಟ್ಲಾಂಟಿಕ ಚಾರ್ಟರಿನಂತೆ ಪೆಸಿಫಿಕ್ (ಶಾಂತಸಾಗರ) ಚಾರ್ಟರ್ ಎಂಬದೊಂದು ನಿರೂಪಣೆಯಾಗುವ ಕುರಿತು ಸೂಚನೆಯಾಗಿದೆ. ಪೆಸಿಫಿಕ್ ಸಾಗರದ ಪ್ರದೇಶಿಗಳ ಪರಿಷತ್ತಿನಲ್ಲಿ. ಇದರಿಂದ ಪೂರ್ವದ ರಾಷ್ಟ್ರಗಳು ಹೆಚ್ಚಿನದನ್ನು ಬಯಸಬೇಕಾಗಿಲ್ಲ. ಅಟ್ಲಾಂಟಿಕ್ ಚಾರ್ಟರಿನಂತೆ ಅದು ಇನ್ನೊಂದು ಪೆಸಿಫಿಕ್ ಚಾರ್ಟರ್.

° ° ° °

'ಮಧ್ಯಪೂರ್ವದ ಅರಬ ರಾಷ್ಟ್ರಗಳೊಡನೆ ಮೈತ್ರಿಯಿಂದ ವರ್ತಿಸುವುದು ಬ್ರಿಟಿಷ್ ಸಾಮ್ರಾಜ್ಯವು ಛಿನ್ನಭಿನ್ನವಾಗಿ ಹೋಗುವುದರಿಂದ ತಡೆಯಲು ಒಂದೇ ಉಪಾಯವು. ಅಲ್ಲಿ ತಲೆದೋರಿದ ಅರಬಿ ರಾಷ್ಟ್ರೀಯತೆಯನ್ನು ಗೌರವಿಸಿ ನಡೆಯುವುದು ಒಳಿತು' ಎಂದು ಅಲ್ಲಿದ್ದು, ಇಂಗ್ಲಾಂಡಿಗೆ ಹಿಂತೆರಳಿದ ರೊಯಲ್ ಎಂಪಾಯರ್ ಸಂಘದ ಮೇಜರ್ ಜನರಲ್ ಸ್ಪಿಯರ್ಸರು ತನ್ನದೇಶಿಗರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿರುವರು. ಮುಂದುವರಿಯುತ್ತಾ ಅವರು ಹೀಗೆಂದಿರುವರು:

ಮಧ್ಯಪೂರ್ವದ ಅರಬಿ ನಾಡುಗಳಲ್ಲಿ ಅಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬೆಳೆಯಿಸಿ, ಇಲ್ಲದ ಉಪಾಯಗಳಿಂದ ಅಲ್ಲಿ ಹುಟ್ಟಿದ ರಾಷ್ಟ್ರೀಯ ಪ್ರೇರಣೆಯ ಬಲವನ್ನು ಇಂಗಿಸಲು ಯತ್ನಪಟ್ಟರೆ, ಅದರಿಂದ ದುಷ್ಪರಿಣಾಮಗಳೇ ಉಂಟಾಗುವವು. ಮೈತ್ರಿಯಿಂದ, ಅಲ್ಲಿನ ಸಮಸ್ಯೆಗಳನ್ನು ಸುಧಾರಿಸಿ, ಆ ರಾಷ್ಟ್ರ ನಮ್ಮ ಹಿತೈಷಿಗಳಾಗಿ ದೂಡುವುದರಿಂದ, ನಮಗೆ ತುಂಬಾ ಲಾಭವಿದೆ. ಆದ್ದರಿಂದ ಅರಬರಿಗೆ ವಿರೋಧವಾಗಿ ಯಹೂದಿಯರನ್ನು ಪೆಲೆಸ್ತೀನದೊಳಗೆ ತುಂಬುವ ಹಂಚಿಕೆಯನ್ನು ನಾವು ಬಿಟ್ಟುಬಿಡಬೇಕು.

WANTED

Typists who have got typewriting machines are required in the collector's office (Mangalore) for immediate employment. Even failed S. S. L. C's, if they have got good speed in typewriting, will be employed.

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು.
(Cuticura Ointment)
ಚರ್ಮವ್ಯಾಧಿಗಳನ್ನು ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು
CUTICURA OINTMENT

ಪೆಪ್ಸಿನ ವಿಷಯ ಒಬ್ಬ ಪ್ರಖ್ಯಾತ ಡಾಕ್ಟರರ ಅಭಿಪ್ರಾಯ

ಡಾಕ್ಟರ್ ಗೋರ್ಡನ್ ಸ್ಟೇಬ್ಲ್ಸ್ ಎಂ. ಡಿ. ಸಿ. ಡಿ. ಆರ್. ಎನ್. ಇವರು ಶ್ವಾಸಯೋಗ್ಯ ವಿಷಹಾರಿ ಪೆಪ್ಸನ್ನು ಸ್ವತಃ ಉಪಯೋಗಿಸಿ ಹೀಗೆ ಬರೆದಿರುತ್ತಾರೆ:

"ಕಫವನ್ನು ನಿವಾರಿಸಲು, ಕಂಠವನ್ನು ಸರಿಗೊಳಿಸಲು, ಶ್ವಾಸಕೋಶದ ನೋವನ್ನು ಹೋಗಲಾಡಿಸಲು ಪೆಪ್ಸ ಅತ್ಯಂತ ಹಿತವಾದ ಔಷಧಿಯಾಗಿದೆ."

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ, ಆ ಸತ್ವವು ಶ್ವಾಸದೊಡನೆ ಶ್ವಾಸಕೋಶಕ್ಕೆ ಹೋಗಿ ಅಲ್ಲಿರುವ ರೋಗಕಾರೀ ಅಣುಗಳನ್ನುಕೊಂದು ಕಫ ಶೀತಾದಿಬಾಧೆಗಳನ್ನು ಗುಣಪಡಿಸುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಮಜೂರರೂ ಶ್ರಮದ ಘನಸ್ತಿಕೆಯೂ

ಕ್ಷೌರಿಕ, ವಕೀಲ ವೃತ್ತಿಗಳಲ್ಲಿ ವ್ಯತ್ಯಾಸವಿಲ್ಲ

ಗಾಂಧೀ ಮಾದರಿಯ ಮಜೂರಸಂಸ್ಥೆ

ದಕ್ಷಿಣ ಆಫ್ರಿಕದಲ್ಲಿದ್ದಾಗ ಗಾಂಧೀಜಿಯವರು ರಸ್ಕಿನ್ನರ ಒಂದು ಪುಸ್ತಕವನ್ನು ಓದಿದ ಮೇಲೆ ಅವರಿಗೆ ಶ್ರಮದ ಘನಸ್ತಿಕೆಯ ಕುರಿತು ಮಂದಟ್ಟಾಯಿತು. ಜೀವನವನ್ನು ಸಾಗಿಸಲು ಒಬ್ಬನು ಗೌರವಯುಕ್ತವಾದ ಯಾವ ಪ್ರಾಮಾಣಿಕತನದ ಕೆಲಸವನ್ನು ಮಾಡಿದರೂ ಅದರಿಂದ ಅವಮಾನವಾಗುವುದಿಲ್ಲವೆಂದು ಅವರು ತಿಳಕೊಂಡರು. ತಮಗೆ ಖಚಿತವಾದ ಈ ತತ್ವವನ್ನು ಕಾರ್ಯರೂಪಕ್ಕೆ ತರಲು ಹೆಚ್ಚು ಸಮಯ ತೆಗೆಯಲಿಲ್ಲ. ಅಲ್ಲಿ ಅವರು ಫೊನಿಕ್ಸ್ ವಸತಿಸ್ಥಾನವೆಂಬುದೊಂದನ್ನು ಸ್ಥಾಪಿಸಿ, ಸ್ವತಂತ್ರವಾಗಿ ದುಡಿಯುವವರಿಗೆ ಆಶ್ರಯ ಕೊಟ್ಟರು.

ಅಲ್ಲಿ ಅವರೊಂದು ಛಾಪಖಾನೆಯನ್ನು ನಡೆಸುತಿದ್ದರು. ಸ್ವತಃ ಅಲ್ಲಿ ಛಾಪಿಸಲ್ಪಡುತಿದ್ದ ಪತ್ರಿಕೆಯೊಂದನ್ನು ಅಚ್ಚುಮಾಡಲು ಶ್ರಮಿಸುತಿದ್ದರು. ಎಣ್ಣೆಯಂತ್ರವು ಹಾಳಾದಾಗ ಅಚ್ಚುಯಂತ್ರವನ್ನು ಗಾಂಧೀಜಿಯವರು ಅವರ ಸಹೋದ್ಯೋಗಿಗಳೂ ಕೈಯಿಂದಲೇ ತಿರುಗಿಸುತಿದ್ದರು. ಪತ್ರಿಕೆಗಳನ್ನು ಮಡಚುವುದನ್ನೂ ಕಾಗದವನ್ನು ಕತ್ತರಿಸುವ ಕೆಲಸವನ್ನೂ ಅವರು ಸ್ವತಃ ಮಾಡಿದ್ದರು. ಫೊನಿಕ್ಸ್ ವಸತಿಯಲ್ಲಿನ ನಿವಾಸಿಗಳೆಲ್ಲರೂ ಅಚ್ಚುಮೊಳೆಗಳನ್ನು ಜೋಡಿಸುವ (ಕಂಪೋಜಿಂಗ್) ಕೆಲಸವನ್ನು ಕಲಿಯುತಿದ್ದರು. ಗಾಂಧೀಜಿಯವರೂ ಅದನ್ನೂ ಅಭ್ಯಾಸ ಮಾಡುತಿದ್ದರು.

ಭಾರತಕ್ಕೆ ಬಂದ ಮೇಲೆ ಅವರು ಮಜೂರರ ಸ್ಥಿತಿಗತಿಗಳನ್ನು ಸುಧಾರಿಸಲು ಪ್ರಥಮತಃ ಕಾರ್ಯ ಕೈಕೊಂಡರು. ಈ ವಿಷಯದಲ್ಲಿ ಅವರ ಧೋರಣೆಯೇ ವಿಶೇಷ ವೈಶಿಷ್ಟ್ಯದ್ದು. ಶರೀರ ಶ್ರಮದಲ್ಲಿ ಘನಸ್ತಿಕೆ ಇದೆ ಎಂದು ತೋರಿಸುವುದೇ ಅವರ ಉದ್ದೇಶ.

ಮೊದಲ ಪ್ರಯೋಗ

೧೯೧೮ರಲ್ಲಿ ಗಾಂಧೀಜಿ ತಮ್ಮ ಮಜೂರ ಪ್ರಯೋಗವನ್ನು ಪ್ರಾರಂಭಿಸಿದರು. ಅಮದಾಬಾದ್ ಗಿರಣಿ ಕೇಂದ್ರದಲ್ಲೇ ಅವರು ಅದನ್ನು ಶುರುಮಾಡಿದರು. ಅದರ ಕುರಿತು ಅವರು ಹೀಗೆ ಬರೆದಿರುವರು: 'ಅಮದಾಬಾದಿನ ಮಜೂರ ಸಂಘದ ಮಾದರಿಯ ಮೇಲೆ ಭಾರತದಲ್ಲಿನ ಎಲ್ಲಾ ಕೂಲಿಕಾರ ಹಿತ ಸಂಸ್ಥೆಗಳು ಕೆಲಸಮಾಡಬೇಕೆಂದು ನನ್ನ ಬಯಕೆ. ಈ ಸಂಘವು ಕೊಂಗ್ರೆಸಿನಿಂದ ಪ್ರಭಾವಿತವಾಗಿಲ್ಲ. ಅಖಿಲ ಭಾರತ ಟ್ರೇಡ್ ಯೂನಿಯನ್ ಇದರೊಂದಿಗೆ ಅದು ಘರ್ಷಣೆಮಾಡಿಕೊಳ್ಳುವ ಸಂಭವವಿಲ್ಲ.'

ಅಮದಾಬಾದ್ ಗಿರಣಿ ಕೆಲಸಗಾರರಿಗೆ ಇತರ ಕಡೆಗಳಲ್ಲಿ ಅದೇ ನಮೂನೆಯ ಕೆಲಸಕ್ಕಿರುವ ಮಜೂರಿಗಿಂತ ಹೆಚ್ಚಿನ ಮಜೂರಿ ದೊರೆಯುತ್ತದೆ. ಅಲ್ಲಿನ ಮಜೂರ ಸಂಘವು ತನ್ನ ಸದಸ್ಯರ ಜೀವನ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸುತ್ತದೆ.

ಮಜೂರರಿಗೆ ಯೋಗ್ಯ ವಸತಿ ಸ್ಥಳ. ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲತೆ, ಆರೋಗ್ಯದ ಏರ್ಪಾಡು ಮುಂತಾದುವುಗಳನ್ನು ಮಾಡಿಕೊಡುವಂತೆ ಅಲ್ಲಿನ ಸಂಘವು ತುಂಬಾ ಪ್ರಯತ್ನಿಸುತ್ತಲಿದೆ. ಅನೇಕ ಸವಲತ್ತುಗಳನ್ನು ಅವರು ಹೊಂದಿರುವರು.

ಆ ಸಂಘವು ಮಜೂರ ಮಕ್ಕಳಿಗಾಗಿ ಶಾಲೆಗಳನ್ನೂ, ವಾಚನಾಲಯಗಳನ್ನೂ, ಆಟದ ಸ್ಥಳಗಳನ್ನೂ, ಬೇಂಕುಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿದೆ. 'ಮಜೂರ ಸಂದೇಶ' ಎಂಬ ಪತ್ರಿಕೆಯನ್ನೂ ಅವರು ಹೊರಡಿಸುತ್ತಾರೆ. ಅದಕ್ಕೆ ೨೭ ಸಾವಿರ ಚಂದಾದಾರರಿದ್ದಾರೆ.

ಮಜೂರ ಮಾಲಿಕರ ಸಂಬಂಧ

'ಮಾಲಕರು ತಮ್ಮಲ್ಲಿ ದುಡಿಯುವ ಮಜೂರರಿಗೆ ಶುಚಿಯಾದ ಆಹಾರ, ಉಡುಪು, ವಿಶ್ರಾಂತಿ ಮುಂತಾದ ಜೀವನ ಸೌಕರ್ಯಗಳನ್ನು ಕಲ್ಪಿಸಬೇಕು. ತಮ್ಮ ಸ್ವಂತ ಸಂಘಗಳನ್ನು ಸ್ಥಾಪಿಸಲು ಅವರಿಗೆ ಅವಕಾಶ ಕೊಡಬೇಕು. ದಿನನಿತ್ಯದ ಜೀವನದ ಸಾಮಗ್ರಿಗಳನ್ನುಅವರು ಸಹಕಾರ ಪದ್ಧತಿಯ ಮೇಲೆ ಹೊಂದಲು ಅವರಿಗೆ ಏರ್ಪಾಡುಗಳನ್ನು ಕಲ್ಪಿಸಿ ಕೊಡಬೇಕು.

'ಕಾರಣವಿಲ್ಲದೆ ಮತ್ತು ಮಜೂರ ಸಂಘಕ್ಕೆ ತಿಳಿಸದೆ ಕೆಲಸಗಾರರನ್ನು ಮಾಲಕರು ತೆಗೆದುಹಾಕಬಾರದು. ಆ ವಿಷಯದಲ್ಲಿ ಮಾಲಕರು ಯಾವ ಮಧ್ಯಸ್ಥಿಕೆಗೂ ಒಪ್ಪದಿದ್ದರೆ ಮಾತ್ರ ಮುಷ್ಕರವನ್ನು ಹಿಡಿಯಬೇಕು.' ಇದು ಮಾಲಕರ ಹೊಣೆಗಾರಿಕೆಯ ಕುರಿತು ಗಾಂಧೀಜಿಯವರ ಸಲಹೆ.

ಮಜೂರರಿಗೂ ಅವರ ಉಪದೇಶ ಹೀಗಿದೆ:

'ಮಜೂರರು ತಮಗೆ ತಮ್ಮ ಮ್ಹಾಲಕರಿಂದ ಕಲ್ಪಿಸಲ್ಪಟ್ಟ ಅನುಕೂಲತೆ, ಸವಲತ್ತುಗಳನ್ನು ಯೋಗ್ಯ ರೀತಿಯಲ್ಲಿ ಜೀವನವನ್ನು ನಡೆಸುವುದರ ಮೂಲಕ ಸಫಲತೆಗೊಳಿಸಲು ಪ್ರಯತ್ನಿಸಬೇಕು. ಅವರು ನಿಷ್ಕಲಂಕವೂ, ಗೌರವಯುಕ್ತವೂ, ಪ್ರಾಮಾಣಿಕತನದ್ದೂ ಸಂಸ್ಕೃತಿಯುಕ್ತವೂ ಆದ ಜೀವನ ಕ್ರಮವನ್ನು ಅನುಸರಿಸಬೇಕು. ತಮ್ಮ ಕೆಲಸವನ್ನು ಅವರು ಉಚ್ಚ ಕರ್ತವ್ಯ ನಿರ್ವಹಣೆಯ ಧ್ಯೇಯದಿಂದ ಪೂರ್ಣಗೊಳಿಸಬೇಕು. ತಮ್ಮ ಕೇಳಿಕೆಗಳನ್ನು ಹೊಂದಲು ಅವರು ಎಂದೂ ಹಿಂಸೆಯೊಳಗಾಗಲೀ, ಅಪ್ರಾಮಾಣಿಕ ವರ್ತನೆಯಲ್ಲಾಗಲೀ ಕೈಹಾಕಬಾರದು.'

ಬೊಂಬಾಯಿಯ ಪ್ರಯೋಗ

ಕೊಂಗ್ರೆಸ್ ಚಟುವಟಿಕೆಗಳಾರಂಭವಾದಂದಿನಿಂದ ಬೊಂಬಾಯಿಯ ಧುರೀಣರು ಗಾಂಧೀ ಮಾದರಿಯ ಮಜೂರ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಯತ್ನಿಸುತಿದ್ದಾರೆ.

'ಮಾಲಕ ಮಜೂರರೊಳಗಣ ಸಂಬಂಧವನ್ನು ಇತ್ತಂಡದವರಿಗೂ ಶ್ರೇಯಸ್ಕರವಾಗುವ ತೆರದಲ್ಲಿ ನಾವು ಮಜೂರ ಸೇವೆ ಮಾಡಬೇಕೆಂದಿದ್ದೇವೆ. ಸ್ವಾತಂತ್ರ್ಯ ಸಿಗುವುದೆಂದರೆ ಮಜೂರರಿಗೆ ತೃಪ್ತಿಕರವಾದ ಜೀವನ ಸೌಕರ್ಯಗಳು ದೊರಕಬೇಕೆಂಬರ್ಥವಿದೆ. ಒಂದು ಸಿಕ್ಕಿದರೆ ಇನ್ನೊಂದು ಪಡೆದಂತೇ ಸರಿ. ಈಗ ಮಜೂರ ನಾಯಕರೆನಿಸಿದವರು ಸ್ವತಃ ಮಜೂರರಲ್ಲ (ಮಜೂರ ಚಳವಳನ್ನೆಬ್ಬಿಸುವುದೇ ಅವರ ಉದ್ಯೋಗ?) ಮಜೂರರಿಗೆ ಮಜೂರ ನಾಯಕರೇ ಬೇಕಲ್ಲದೇ ಹೊರಗಿನವರಲ್ಲ. ಮಜೂರರು ತಮ್ಮ ಸಂಘಗಳನ್ನು ತಾವೇ ಚಲಾಯಿಸಬೇಕು' ಹೀಗೆಂದು ಬೊಂಬಾಯಿ ಪ್ರಾಂತ್ಯದ ಕೊಂಗ್ರೆಸ್ ಕಾರ್ಯದರ್ಶಿಗಳೂ ಪ್ರಖ್ಯಾತ ದೇಶಸೇವಕರೂ ಆದ ಎಸ್. ಕೆ. ಪಾಟೀಲರು ಮಜೂರ ಸಂಘ ಸ್ಥಾಪನೆ ಚಳವಳವನ್ನು ಉದ್ಘಾಟಿಸುವ ಭಾಷಣವೊಂದರಲ್ಲಿ ತಿಳಿಸಿದರು.

ಗಾಂಧೀಜಿಯವರ ಸತ್ಯನಿಷ್ಟೆ

(೧ನೇ ಪುಟದಿಂದ)

ಳನ್ನು ತೂಗಿ ತೂಗಿ ಮಾತಾಡಬೇಕೆಂದು ಅಷ್ಟೊಂದು ಆಗ ಹಿಂಜರಿಯುತ್ತಿರಬಹುದೊ? ಆ ಸ್ವಭಾವವೇ ಸತ್ಯವನ್ನು ಪೋಷಿಸಿರಲಿಕ್ಕಿಲ್ಲವೆ? 'ನನ್ನ ಈ ಸ್ವಭಾವದ ಮೂಲಕ ನಾನು ಮೇಲಿಂದ ಮೇಲೆ ಚೇಷ್ಟೆಗೆ ಗುರಿಯಾಗುತ್ತಿದ್ದೆನೆಂಬ ಮಾತು ನಿಜವಿದ್ದರೂ ಇದರಿಂದ ನನಗೆ ಯಾವ ಹಾನಿಯೂ ಆಗಿಲ್ಲವೆಂದು ಹೇಳಬಲ್ಲೆ. ಇಷ್ಟೇ ಅಲ್ಲ, ಇದರಿಂದ ನನಗೆ ಲಾಭವೆ ಆಗಿದೆ ಎಂದು ನನ್ನ ಅಭಿಪ್ರಾಯ. ಎಲ್ಲಕ್ಕೂ ಹೆಚ್ಚಿನ ಲಾಭವೇನಂದರೆ ನಾನು ಶಬ್ದಗಳನ್ನು ಮಿತದಿಂದ ಉಪಯೋಗಿಸಲು ಕಲಿತೆನು. ನನ್ನ ವಿಚಾರಗಳಿಗೆ ಸ್ವಾಭಾವಿಕವಾದ ಒಂದು ಸಂಯಮವುಂಟಾಯಿತು. ಈಗ ನನ್ನ ಬಾಯಿಂದ ಇಲ್ಲವೆ ಲೆಕ್ಕಣಿಕೆಯಿಂದ ಕ್ವಚಿತವೇ ವಿಚಾರಹೀನ ಶಬ್ದಗಳು ಹೊರಬೀಳುವವು. ನಾನು ಬರೆದ ಅಥವಾಮಾತಾಡಿದ ಯಾವುದೊಂದು ಮಾತಿನ ಬಗ್ಗೆ ನನಗೆ ಪಶ್ಚಾತ್ತಾಪವಾದ ಪ್ರಸಂಗವು ನನ್ನ ನೆನಪಿಗೆ ಬರುವುದಿಲ್ಲ. ಸತ್ಯದ ಅರ್ಚಕನಿಗೆ ಮೌನವೆಂಬುದು ಆತ್ಮನಿಗ್ರಹದ ಬಲವಾದ ಆಯುಧವೆಂಬುದನ್ನು ನಾನು ಅನುಭವದಿಂದ ಅರಿತೆನು. ಅತಿಶಯೋಕ್ತಿ ಇಲ್ಲವೆ ಸತ್ಯವನ್ನು ಹತ್ತಿಕ್ಕುವ ಅಥವಾ ಅದನ್ನು ವಿಕ್ರತಗೊಳಿಸುವ ಪ್ರವೃತ್ತಿಯು ಮನುಷ್ಯನಲ್ಲಿ ಎಷ್ಟೋ ಸಾರೆ ಕಂಡುಬರುವುದು. ಮೌನವೆಂಬ ಶಸ್ತ್ರವು ಈ ಹೀನ ವೃತ್ತಿಯನ್ನು ಸವರಿಬಿಡುವುದು. ಕಡಿಮೆ ಮಾತಾಡುವವನು ಪ್ರತಿ ಶಬ್ದವನ್ನು ತೂಗಿನೋಡುವನು. ಆದುದರಿಂದ ಅವನು ವಿಚಾರಗೆಟ್ಟ ಮಾತುಗಳನ್ನು ಆಡುವುದಿಲ್ಲ. ಈ ನನ್ನ ಸ್ವಭಾವವು ಸತ್ಯಶೋಧನೆಯ ಕೆಲಸದಲ್ಲಿ ನನಗೆ ಅಪಾರ ಸಹಾಯ ಮಾಡಿತು.' ಹೀಗೆ ಅವರ ಅನುಭವವಿದೆ.

ಭಗವಂತನ ಅನುಗ್ರಹವಿದ್ದರೆ ದೂಷಣಗಳೆಲ್ಲ ಭೂಷಣವಾಗಿ ಬಿಡುವವು. ನಂಜುಂಡನು ನಂಜನುಂಡು ಪ್ರಪಂಚದ ಹಿತವನ್ನು ಸಾಧಿಸಿದನು. ಆ ಕಾರಣ ಅವನ ಕೊರಳು ಕಪ್ಪಾಯಿತು. ಅದು ಸಹ ಅವನ ಸೌಂದರ್ಯವನ್ನು ಹೆಚ್ಚಿಸಿತು. ಅವನಿಗೆ ನೀಲಕಂಠನೆಂಬ ಬಿರುದಾಯಿತು. ಗಾಂಧೀಜಿಯವರ ಲಜ್ಜಾಶೀಲ ಸ್ವಭಾವವು ಅವರಿಗೆ ಹಲವು ಲಾಭಗಳನ್ನು ಮಾಡಿಕೊಟ್ಟಿತು; ಕಡಿಮೆ ಶಬ್ದಗಳ ಉಪಯೋಗ, ಹಾಗೂ ಒಳ್ಳೇ ತೂಕದಿಂದ ಶಬ್ದಪ್ರಯೋಗ.

ಗಾಂಧೀಜಿಯವರ ಸತ್ಯಶ್ರದ್ಧೆ ಬೆಳೆದು ಅದೊಂದು ಅವರ ಸ್ವಭಾವವಾಗಿ ಹೋಯಿತು. ಅವರು ಚಿಕ್ಕ ವಯಸ್ಸಿನಲ್ಲಿಯೆ ಸತ್ಯದ ಲಾಭಗಳನ್ನು ಕಂಡುಹಿಡಿದಿದ್ದರು. ಲಂಡನಕ್ಕೆ ಹೋಗುವಾಗ ಅಭೋಜ್ಯ ಭೋಜನ ಮಾಡಲಿಕ್ಕಿಲ್ಲ ಹಾಗೂ ಬ್ರಹ್ಮಚರ್ಯವನ್ನು ಪಾಲಿಸುವೆನು ಎಂಬ ಪ್ರತಿಜ್ಞೆಯನ್ನು ತಾಯಿಯ ಎದುರು ಮಾಡಿ ಮುಂದೆ ಸಾಗಿದ್ದರು. ಸತ್ಯನಿಷ್ಠರಾಗಿದ್ದುದರಿಂದ ಅವರಿಗೆ ಈ ಪ್ರತಿಜ್ಞೆ ಪಾಲಿಸುವದು ಕಠಿಣವೆನಿಸಲಿಲ್ಲ. ಧ್ಯೇಯದತ್ತ ಸ್ಥಿರದೃಷ್ಟಿಯಿಟ್ಟು ಅವರು ನಡೆದುದರಿಂದ ತಗ್ಗಿನಲ್ಲಿ ಬೀಳುವ ಪ್ರಸಂಗ ಬರಲಿಲ್ಲ.

ಬೊಂಬ್ಬಾ ಪ್ರಾಂತ್ಯದೊಳಗಿನ ಶಾಲೆಗಳಲ್ಲಿನ ಉನ್ನತ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮತಮ್ಮ ಮನೆಯೊಳಗಿನ ಓದು ಬರಹ ಬಾರದ ಹೆಂಗಸರಿಗೆ ತಮಗೆ ತಿಳಿದಷ್ಟನ್ನು ಕಲಿಸುವ ಒಂದು ಯೋಜನೆಯನ್ನು ಮಂಜೂರು ಮಾಡಿರುವರು. ಅವರಿಗೆ ಬೇಕಾದ ಪುಸ್ತಕ, ಪತ್ಯಮಾಲೆಗಳನ್ನು ಒದಗಿಸಲಾಗುವುದು. ಎಲ್ಲಾ ಪ್ರಾಂತ್ಯಗಳಲ್ಲೂ ಈ ಹೊಸ ಯೋಜನೆಯನ್ನು ಪರ್ಯಾಲೋಚಿಸುವುದೊಳಿತು.

° ° ° °

ಇಂಗ್ಲೆಂಡಿನ ಅನೇಕ ಪ್ರಾಮುಖ್ಯ ಪಟ್ಟಣ ಕೇಂದ್ರಗಳಲ್ಲಿ ತಾ. ೨೬ರಂದು ಭಾರತ ಸ್ವಾತಂತ್ರ ದಿನವನ್ನಾಚರಿಸಲೇರ್ಪಡಿಸಿದೆ.

° ° ° °

'ಅಖಿಲ ಭಾರತ ಹಿಂದೂ ಮಹಾಸಭೆಯ ಒಂದು ಶಾಖೆಯನ್ನು ಲಂಡನಿನಲ್ಲೂ, ಇನ್ನೊಂದನ್ನು ನ್ಯೂಯೋರ್ಕ್ ಪಟ್ಟಣದಲ್ಲೂ ತೆರೆಯಲಾಗುವುದೆಂದು ತಿಳಿದು ಬರುತ್ತದೆ.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಸಿಹಿ ಸುದ್ದಿ ಸಂಗ್ರಹ

ಕಾನಾಡಾ ದೇಶದಲ್ಲಿ ಸಿಕ್ ಜನರ ಅನೇಕ ವಸತಿ ಸ್ಥಾನಗಳಿವೆ. ಕಳೆದ ಯುದ್ಧ ಕಾಲದಲ್ಲಿ ಸೈನ್ಯ ಅಧಿಕಾರಿಗಳಾಗಿ ಹೋದವರನೇಕ ಸಿಕ್ ಜನರು ಅಲ್ಲೇ ಮನೆಮಾಡಿ ನಿಂತರು.

* * *

ನ್ಯೂಯೋರ್ಕಿನ ಗ್ರೀಸ್ ಫೀಲ್ಡ್ ವಿಹಾರತೋಟಗಳಲ್ಲಿ ಒಂದು 'ಪ್ರಣಯಿಗಳ ಗಲ್ಲಿ' ಇದೆ. ಈ 'ಗಲ್ಲಿ'ಯೊಳಗಿಟ್ಟ ಬೆಂಚುಗಳಲ್ಲಿ ಎರಡು ವಿದ್ಯುತ್ ದೀಪಗಳಿವೆ. ಯಾರಾದರೂ ಕೂತುಕೊಂಡಿದ್ದರೆ ಕೆಂಪು ದೀಪ ಉರಿಯುತ್ತಿರುತ್ತದೆ. ಖಾಲಿ ಇದ್ದಾಗ ಹಸರು ಬಣ್ಣದ ದೀಪ ಹಚ್ಚಿಕೊಳ್ಳುತ್ತದೆ.

* * *

ಜಪಾನಿಯರ ಮತ ಶಾಸ್ತ್ರ ಪುರಾಣ ಪುಸ್ತಕಗಳೂ, ಅವರ ತತ್ವಶಾಸ್ತ್ರ ಗ್ರಂಥಗಳೂ ಎಲ್ಲವೂ ಇಂದಿಗೂ ಚೀನಿ ಭಾಷೆಯಲ್ಲೇ ಬರೆಯಲ್ಪಡುತ್ತವೆ.

* * *

ಇಟೇಲಿಯ ಪಿಸಾ ನಗರದಲ್ಲಿ ಎಂಟು ಮಹಡಿಯ ಮಾಲಿಕೊಂಡಿದ್ದ ಕಟ್ಟಡವೊಂದು ಇದೆ. ಶತಮಾನಗಳ ಹಿಂದೆ ಕಟ್ಟಲ್ಪಟ್ಟ ಇದು ಅರ್ಧ ಕಟ್ಟಲ್ಪಡುವಾಗಲೆ ಅದರ ತಳಹದಿಯು ಕುಸಿದು ಮಾಲಿಕೊಂಡಿತು. ಮಾಲಿಕೊಂಡ ಹಾಗೆ ಮೇಸ್ತ್ರಿಗಳು ಕಟ್ಟಡ ಸಂಪೂರ್ಣಗೊಳಿಸಿದ್ದು ಈಗ ಇದು ಜಗತ್ತಿನ ೭ ವಿಚಿತ್ರಗಳಲ್ಲಿ ಒಂದಾಗಿದೆ. ಇದೇ ತರ ಮಾಲಿಕೊಂಡಿರುವ ಇನ್ನೊಂದು ಕಟ್ಟಡವು ಚೀನದ ಸುಚೊ ಪಟ್ಟಣದಲ್ಲಿದೆಯಂತೆ.

* * *

ಕೆಲವು ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಬಂಗಾರದ ಗಡಿಯಾರಗಳ ಮೇಲೆ ೮ರೂ. ಬೆಳ್ಳಿಯವುಗಳಿಗೆ ೨ರೂ. ತೆರಿಗೆ ಕೊಡಬೇಕಾಗಿತ್ತು.

* * *

ಯುದ್ಧದಿಂದ ಅನೇಕ ಕೈಗಾರಿಕೆಗಳು ವಿಸ್ತರಿಸಲ್ಪಟ್ಟಿವೆಯಾದರೂ ಟಾಟಾಕಂಪೆನಿಯವರ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆ ಕಾರ್ಖಾನೆಯಷ್ಟು ದೊಡ್ಡ ಮತ್ತು ಶ್ರೇಷ್ಠ ಸಂಸ್ಥೆಯು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಇಲ್ಲವೆಂದೆಣಿಸಲ್ಪಟ್ಟಿದೆ.

* * *

ಈಗ ಡಾಕ್ಟರರು ಶಸ್ತ್ರ ಚಿಕಿತ್ಸೆಮಾಡುವಾಗ ಕ್ಲೋರೋಫೊರ್ಮ್ ಎಂಬ ಮೂರ್ಛೆ ಉಂಟುಮಾಡುವ ಅನಿಲವನ್ನುಪಯೋಗಿಸುತ್ತಾರೆ. ಆದರೆ ಹಿಂದಿನ ಕಾಲದ ಈಜಿಪ್ತ್ ದೇಶದ ಜನರು ತಲೆಯ ಒಂದು ನಿರ್ದಿಷ್ಟ ಭಾಗದ ಮೇಲೆ ಹದವಾದ ಒಂದು ಏಟು ಕೊಟ್ಟು ರೋಗಿಯ ಸ್ಮೃತಿ ತಪ್ಪಿಸಿ ನಂತರ 'ಆಪರೇಶನ್' ಮಾಡುತಿದ್ದರು.

* * *

ಹಿಂದಿನ ಕಾಲದ ಈಜಿಪ್ತ್ ದೇಶವನ್ನು ಫಾರೋವಾ ಎಂಬ ಅರಸರು ಆಳುತಿದ್ದರು. ಇವರು ತಾವು ಸೂರ್ಯದೇವಸಂಭೂತರೆಂದು ಭಾವಿಸಿಕೊಂಡಿದ್ದು ಇತರರೆಲ್ಲರೂ ಸಾಮಾನ್ಯ ಮಾನವರೆಂದು ತಿಳಕೊಂಡಿದ್ದುದರಿಂದ ಅವರು ಈ ಇತರ ಮಾನವರೊಂದಿಗೆ ಲಗ್ನ ಸಂಬಂಧವನ್ನು ಮಾಡಿಕೊಳ್ಳುತ್ತಿರಲಿಲ್ಲ. ಅವರು ತಮ್ಮ ಸ್ವಂತ ತಂಗಿಯರನ್ನು ವಿವಾಹಮಾಡಿಕೊಳ್ಳುತಿದ್ದರು. ಕಡೆಯ ಫಾರೋವಸಿಗೆ ತಂಗಿಂದಿಯರು ಇರಲಿಲ್ಲವಾದಕಾರಣ ಫಾರೋವಾ ವಂಶವು ಅಲ್ಲಿಗೇ ಮುಗಿಯಿತು.

* * *

ನೀವು ಒಬ್ಬ ಮನುಷ್ಯನ ಎದುರಿನಲ್ಲಿ ಹಣ್ಣಾಗದ ಹುಣುಸೆ ಕಾಯಿಯನ್ನು ತಿನ್ನುವಾಗ ಎದುರಿನವರ ಬಾಯಲ್ಲಿ ನೀರು ಬರುವುದನ್ನು ಲಕ್ಷಿಸಬಹುದು.

* * *

ಯುನೈಟೆಡ್ ಸ್ಟೇಟ್ಸಿನ ಎಟ್ಲಾಂಟಾ ಸಿಟಿ ಎಂಬ ನಗರದಲ್ಲಿ ಮುನ್ಸಿಪಲ್ ಕಾರುಗಳಿಗೆ ಎದುರುಗಡೆಯಲ್ಲಿ ಕಸಬರಿಕೆಯನ್ನೂ ಹಿಂದುಗಡೆಯಲ್ಲಿ ಕಸದ ಡಬ್ಬಿಯುನ್ನೂ ಕಟ್ಟುತ್ತಾರೆ. ಮೋಟಾರು ಟಾಯರುಗಳಿಗೆ ಹಾನಿ ಮಾಡುವ ಮೊಳೆ, ಗಾಜಿನ ಚೂರುಗಳನ್ನು ಸಾರಿಸಿ ತೆಗೆಯುವುದೇ ಇದರ ಉದ್ದೇಶ.

* *

ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿರುವ ಚೀನಾ ದೇಶದಲ್ಲೂ ರೇಡಿಯೊ ಉಪಕರಣಗಳನ್ನು ಮಾಡುತ್ತಾರೆ. ಭಾರತದಲ್ಲಿ ಕೈಗಾರಿಕೆಗೆ ಅನುಕೂಲವಾದ ಎಲ್ಲಾ ಲೋಹ ವಸ್ತುಗಳೂ, ಚತುರ ಯಾಂತ್ರಿಕರೂ ಇರುವಾಗ ಭಾರತೀಯರು ಪಾಶ್ಚಾತ್ಯ ತಯಾರಿಕೆಗಳ ಮೇಲೇ ಹೊಂದಿಕೊಂಡಿರ ಬೇಕಾಗಿದೆ. ಇಚೀಗೆ ರೇಡಿಯೊಗಳನ್ನು ತಯಾರಿಸುವ ಹತ್ತು ಕೋಟಿ ಬಂಡವಾಳ ಸಂಸ್ಥೆಯ ಏರ್ಪಾಡುಗಳಾಗುತ್ತಿವೆ ಮಾತ್ರ.

* * *

ರಬ್ಬರ್ ದ್ರಾವಕವನ್ನು ಕೊಡುವ ಮರಗಳು ದಕ್ಷಿಣ ಅಮೇರಿಕದ ಬ್ರೇಜಿಲ್ ದೇಶದಲ್ಲಿ ಮಾತ್ರ ಬೆಳೆಯುತಿದ್ದುವು. ಇಂಗ್ಲೆಂಡಿನ ಕ್ಯೂ ಗಾರ್ಡನ್ಸ್ ಎಂಬ ವನಸ್ಪತಿ ಸಂಗ್ರಹಾಲಯದಲ್ಲಿ ಅದರ ಕೆಲವು ಸಸಿಗಳಿದ್ದುವು. ಈ ಸಸಿಗಳಿಂದ ಉಂಟಾದ ಬೀಜಗಳನ್ನು ಕೆಲವರು ಕದ್ದು ಸಿಂಹಳ ದ್ವೀಪಕ್ಕೆ ಒಯ್ದುದರಿಂದ ಇಂದು ಬ್ರಿಟಿಷ್ ಸಾಮ್ರಾಜ್ಯಕ್ಕೆ ವಿಪುಲವಾದ ರಬ್ಬರ್ ತೋಟಗಳುಂಟಾಗಲು ಕಾರಣವಾಯಿತು.

* * *

ಜಗತ್ತಿನಲ್ಲಿ ಅತೀ ಎತ್ತರವಾದ ಹಿಮಾಲಯ ಪರ್ವತ ಶ್ರೇಣಿಯ ಬಹಳ ಉನ್ನತ ಪ್ರದೇಶಗಳಲ್ಲಿ ರೈಲುದಾರಿ ಇರುವುದಾದರೂ ಅದಕ್ಕಿಂತಲೂ ಎತ್ತರದಲ್ಲಿ ರೈಲು ಕಂಬಿ ಹಾಕಲ್ಪಟ್ಟ ದೇಶವೆಂದರೆ ದ. ಅಮೇರಿಕದ ಪೆರು ರಾಜ್ಯ. ಅಲ್ಲಿನ ಮೊರೊಕೋಚಾ ಎಂಬ ರೆಲ್ವೇ ಸ್ಟೇಶನು ಸಮುದ್ರ ಮಟ್ಟದಿಂದ ೧೫೬೬೫ ಅಡಿ ಎತ್ತರವಿದೆ.

ಕೊಲ್ಹಾಪುರದಲ್ಲಿ ಪೊಲೀಸ್ ಜುಲುಂ
ಸ್ತ್ರೀಯ ಮೇಲೆ ಅತ್ಯಾಚಾರ

ಆಗಸ್ಟ್ ಗಲಭೆಯ ಆರೋಪಿಯೊಬ್ಬನ ಪತ್ತೆ ಹಚ್ಚುವಿಕೆಯಲ್ಲಿ ತೊಡಗಿದ ಕೊಲಾಪುರದ ಒಬ್ಬ ಪೋಲಿಸ್ ಸಬ್ ಇನ್ಸ್‌ಪೆಕ್ಟರನು, ಕಾಶೀಬಾಯಿ ಎಂಬ ಮಹಿಳೆಗೆ ಆ ತಲೆ ತಪ್ಪಿಸಿಕೊಂಡ ಆರೋಪಿಯ ವಿಚಾರ ಗೊತ್ತಿದೆಯೆಂದು ಅವಳ ಬಾಯಿ ಬಿಡಿಸಲು ನಾನಾತರದ ಚಿತ್ರಹಿಂಸೆ ಕೊಟ್ಟನಂತೆ. ಅವಳನ್ನು ಬತ್ತಲೆ ಮಾಡಿ, ಪೃಷ್ಠಭಾಗದ ಮೇಲೆ ಚಡಿಏಟುಗಳನ್ನು ಕೊಟ್ಟು, ಅವಳ ಗುಪ್ತಾಂಗಗಳಿಗೆ ಮೆಣಸಿನ ಹುಡಿಯನ್ನು ಹಚ್ಚಿಸಿ, ಕೊನೆಗೆ ಅತ್ಯಾಚಾರವನ್ನು ಮಾಡಿದನಂತೆ.

ಈ ಅಮಾನುಷ ಹಿಂಸೆಗೆ ಒಳಗಾದ ಕಾಶೀಬಾಯಿ ಮಹಿಳೆಯು ಸಂಸ್ಥಾನದ ದಿವಾನರಿಗೆ ಅರ್ಜಿಮಾಡಿ ಕೊಂಡಳು. ಅಧಿಕಾರಿಕವಾಗಿ ಸಂಗತಿಗಳನ್ನು ಪರಿಶೀಲಿಸಿ, ನಡೆದದ್ದು ಹೆಚ್ಚುಕಡಿಮೆ ಸರಿಯೆಂದು ಈಗ ಆ ಇನ್ಸ್‌ಪೆಕ್ಟರನಿಗೆ ಸಾಮಾನ್ಯ ಪೋಲಿಸನನ್ನಾಗಿ ಕೆಳಗಿನ ಸ್ಥಾನ ಕೊಡಲಾಗಿದೆ.

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3¼% up to 31st March 1945.

26-12-1944

U. Shantha Rama Rao,
Secretary.

ಸೆಂಟ್ರೆಲ್ ಎಕ್ಸಯಿಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

ಈ ಯುದ್ಧ

ಎಲ್ಲಾ ದಿಕ್ಕುಗಳಿಂದಲೂ ಜರ್ಮನ್ ಬಲವು ಸಂಕೋಚಿಸಲ್ಪಡುತ್ತಿದೆ. ಜಗತ್ತನ್ನು ವಿಸ್ಮಯಗೊಳಿಸಿ ಯುರೋಪದಲ್ಲೆಲ್ಲಾ ಪ್ರಸರಿಸಿದ ಹಿಟ್ಲರನ ಸೇನಾಬಲವು ರಕ್ಷಣೆಗಾಗಿ ಮನೆಯ ಕಡೆ ಕಾಲ್ತೆಗೆದಿದೆ. ಪಶ್ಚಿಮರಂಗದಲ್ಲಿ, ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು ಅವರು ತುಂಬಾ ಪ್ರಯಾಸಗೊಳ್ಳುತ್ತಿದ್ದಾರೆ. ಸ್ವದೇಶ ರಕ್ಷಣೆಯ ಕೆಲಸದಲ್ಲಿ ಮಹಾ ಬಲವನ್ನು ಹೂಡಿ, ಮಿತ್ರರನ್ನುತಡೆಯುವುದರಲ್ಲಿ ಕಂಕಣಬದ್ಧರಾಗಿರುವರು. ಪಶ್ಚಿಮರಂಗದಲ್ಲಿ ಮಿತ್ರರ ಮಹಾಬಲಗಳಿಗೆ ವಿರೋಧವಾಗಿ ಅವರ ಮಹಾಬಲಗಳು ಬಳಸಲಾಗಿವೆ. ಬೆಲ್ಜಿಯಮ್ಮಿನಲ್ಲಿ ತಮ್ಮನ್ನು ಹಿಂದಕ್ಕೆ ದೂಡಿ ಮುಂದೆ ಬಂದ ಜರ್ಮನ್ ದಂಡುಗಳನ್ನು ಮಿತ್ರರು ಮತ್ತೊಮ್ಮೆ ಹಿಂದಕ್ಕೆ ದೂಡಿರುವರು. ಆದರೆ ಪಶ್ಚಿಮರಂಗದ ಜರ್ಮನ್ ಸೇನಾನಾಯಕನ್ ಚಟುವಟಿಕೆಗಳನ್ನು ನೋಡಿದರೆ, ಹಿಟ್ಲರನ ಸಮರ ವಿವೇಚನೆಯು ಇನ್ನೂ ಇದೆ. ಜರ್ಮನಿಯ ಸೇನಾಬಲವು ವಿಶೇಷವಾಗಿ ಸಡಿಲಾಗಲಿಲ್ಲ ಎಂಬ ಭಾವನೆಯು ಉಂಟಾಗುತ್ತದೆ.

ಆದರೆ ಪೂರ್ವರಂಗದಲ್ಲಿ ಪರಿಸ್ಥಿತಿಯು ಹಿಟ್ಲರನಿಗೆ ಪ್ರತಿಕೂಲವಾಗಿಯೇ ಇದೆ. ಸ್ಟೈಲೀನನ ಶೀತಗಾಲದ ದಾಳಿಯು ಸ್ವಲ್ಪ ವಿಳಂಬವಾಗಿ ಪ್ರಾರಂಭವಾಗಿದ್ದರೂ ಈ ಬಾರಿ ಅದು ಅತಿ ಉಗ್ರರೂಪದಲ್ಲಿ ಹೊರಡಿರುತ್ತದೆ. ಈ ರಂಗದ ಕಡೆಗಳಲ್ಲಿ ರಷ್ಯನರ ಅಪ್ರತಿಮ ತರದ-ಚಟುವಟಿಕೆಗಳು ಪ್ರಾರಂಭವಾಗಿ, ಸಾಂಗವಾಗಿ ನಡೆಯುತ್ತಿವೆ.

ಮಿತ್ರರು ಪಶ್ಚಿಮರಂಗದಲ್ಲಿ ಮಹಾಯತ್ನಗಳು ಮುಂದೊಡ್ಡಿ ಶ್ರಮಿಸುತ್ತಿರುವಾಗ, ಪೂರ್ವರಂಗದಲ್ಲೂ ಅದೇ ತರದ ಚಟುವಟಿಕೆಗಳು ನಡೆಯ ಬೇಡವೇ. ಮೊದಲೇ ನಿಯೋಜಿಸಿದಂತೆ, ಸರ್ವಸಿದ್ಧತೆಗಳನ್ನು ಮಾಡಿ ಸ್ಟೈಲೀನನು ಈ ಭಾರಿಯ ದಂಡಯಾತ್ರೆಯನ್ನು ಪ್ರಾರಂಭಿಸಿರುವನು. ಈ ದಂಡಯಾತ್ರೆಯು ಕೊನೆಯದಾಗಬೇಕು, ಬರ್ಲಿನ್ ನಗರದಲ್ಲಿ



ಹಾರುವ ಘಾಯಾಳುಗಳು

ಯುರೋಪಿನ ಮುತ್ತಿಗೆಯಾದಾಗ ಘಾಯಗೊಂಡ ಸೈನಿಕರನ್ನು ಆರೈಕೆ ಶಷ್ರೂಸೆ ಕೇಂದ್ರಗಳಿಗೆ ಶೀಘ್ರವಾಗಿ ಕೊಂಡೊಯ್ಯಲು, ಅನೇಕಾನೇಕ ಮೋಟಾರ ವಾಹನಗಳೂ ದೊಡ್ಡ ವಿಮಾನಗಳೂ ಸದಾ ಸಿದ್ಧವಾಗಿರುತ್ತವೆ. ಈ ಚಿತ್ರದಲ್ಲಿ ಘಾಯಾಳುಗಳನ್ನು ಮೋಟಾರಿನಿಂದ ವಿಮಾನದಲ್ಲಿರಿಸುವುದನ್ನು ಕಾಣಬಹುದು.

ರೆಂಡ್‌ಸ್ಟಡ್‌ನ ಯತ್ನಗಳಿಗೆ ಈ ರಂಗದ ಇತರ ಕಡೆಗಳಲ್ಲಿ ಸ್ವಲ್ಪ ಯಶಸ್ಸು ದೊರಕಿರುತ್ತದೆ. ಮಿತ್ರರು ಈ ಮೊದಲು ಹಿಡಿದಿರುವ ಸ್ಟ್ರಾಸ್‌ಬರ್ಗ್, ಅಲೆಸ್ಸೆ, ಲೊರೆನ್ ಮೊದಲಾದ ಪ್ರದೇಶಗಳಲ್ಲಿ ರೆಂಡ್‌ಸ್ಟಡರ ದಳಗಳು ಮುಂದೆ ನಡೆದು ಹೋಗಿವೆ. ಮಿತ್ರರ ಬಲವಾದ ವಿರೋಧ ಎದುರು ದೊಡ್ಡ ಪರಿಶ್ರಮವನ್ನು ಹಾಕುತ್ತಿರುವ ಜರ್ಮನ್ ದಂಡುಗಳು ವಿಶ್ರಾಂತಿಯನ್ನು ಬಯಸುತ್ತಿದ್ದರೂ, ಅವರಿಗೆ ಅದು ದೊರಕದಾಗಿದೆ. ಕಾರಣ ಪೂರ್ವರಂಗದಲ್ಲಿ ಸ್ಟೈಲೀನನ ಪ್ರಚಂಡ ದಾಳಿ. ಒಂದು ಕಡೆ ಬೆಂಕಿ; ಇನ್ನೊಂದೆಡೆ ನೀರು ಇವೆರಡರ ನಡುವೆ ಉಪಾಯಗಾಣದೆ, ಹಿಟ್ಲರನ ಸೇನಾನಾಯಕರು ಉಭಯ ಸಂಕಟಕ್ಕೆ ಒಳಗಾಗಿರುವರು. ಈ ಅರಿಷ್ಟ ಒಂದೇ ಅಲ್ಲ. ಮಿತ್ರರ ಸಾವಿರ ಸಾವಿರ ವಿಮಾನಗಳು ಉಪಯೋಗಿಸಲ್ಪಟ್ಟು ನಡೆಯುವ ವಾಯು ದಾಳಿ—ಈ ತರದ ಪರಿಸ್ಥಿತಿಯಿಂದ ಹಿಟ್ಲರನು ದಿಗ್ಭ್ರಾಂತನಾದನು ಪಶ್ಚಿಮರಂಗದ ಜರ್ಮನ್ ಅದನ್ನು ಕೊನೆಗಾಣಿಸಬೇಕು ಎಂಬ ಮಹದೇಚ್ಛೆಯಿಂದ ಸ್ಫೂರ್ತಿಗೊಂಡವರಾಗಿ ರಷ್ಯನರು ಹೋರಾಡುತ್ತಿರುವರು. ಪೋಲೆಂಡದಲ್ಲಿ ಅವರ ರಭಸದ ಎದುರು ಜರ್ಮನರು ನಿಲ್ಲಲಾರದೆ, ತುಂಬಾ ಹಿಂದೆ ಸರಿಯುತ್ತಿರುವರು. ವಾರ್ಸೊ, ಕ್ರೆಕೊವ್ ಮೊದಲಾದ ಪೊಲೆಂಡದ ಪ್ರಾಮುಖ್ಯ ಪ್ರದೇಶಗಳು ರಷ್ಯನರ ಕೈಸೇರಿವೆ. ಪೊಲೆಂಡಿನ ಪ್ರಸಿದ್ಧ ಕೈಗಾರ ಪ್ರದೇಶವಾದ ಸೈಲೆಶಿಯಾದಲ್ಲಿ ಅವರ ಪ್ರವೇಶವಾಗಿದೆ. ಪೊಲೆಂಡನ್ನು ಪೂರ್ಣ ತ್ಯಜಿಸಿಬಿಟ್ಟು ತಮ್ಮ ಗಡಿಯೊಳಗೆ ನಡೆದುಬಿಡುವುದೇ ಉತ್ತಮವೆಂದು ಜರ್ಮನರ ಅಭಿಪ್ರಾಯಕ್ಕೆ ಬಂದ ಹಾಗೆ ಕಾಣುತ್ತದೆ. ಇದೇ ಭರದಲ್ಲಿ ಸ್ಟೈಲೀನನ ಈ ದಾಳಿಯು ನಡೆದುಬಿಟ್ಟರೆ, ಪೂರ್ವರಂಗದಲ್ಲಿ ಜರ್ಮನ್ ಬಲವು ಸಂಪೂರ್ಣ ಮುರಿದು ಬೀಳಬಹುದೆಂದು ಅಭಿಪ್ರಾಯಗಳಿವೆ. ಪೂರ್ವ ಪ್ರಸ್ಸಿಯಾದಲ್ಲಿ ಕೆಂಪು ದಳವು ಸುಮಾರು ೫೦ ಮೈಲು ಒಳನಡೆದಿದೆ. ಇನ್ನೂ ನಡೆಯುತ್ತಿದೆ.

ದೇಶ ರಕ್ಷಣೆಯಲ್ಲಿ ಜನಸಾಮಾನ್ಯರು ದುಡಿಯುವಂತೆ, ಹುರಿದುಂಬಿಸುವ ಕೆಲಸವು, ಹಿಟ್ಲರನು ಸ್ವತಹವಾಗಿದ್ದು, ಈ ಪ್ರದೇಶದಲ್ಲಿ ನಡೆಯುತ್ತಿದೆ. ಬುಡಾಪೆಸ್ಟಿನಿಂದ ಜರ್ಮನ್ ಸೇನೆ ಹೊರನಡೆಯಲೇ ಬೇಕಾಗಿಯದೆ.

ಆಸ್ಟ್ರೀಯಾದ ವಿಯೆನ್ನಾ ನಗರವನ್ನು ಗುರಿಯಾಗಿಟ್ಟು, ಪೂರ್ವರಂಗದ ಹಂಗೇರಿ ಮತ್ತು ಜೆಕೆಸ್ಲೊವೆಕಿಯಾದಲ್ಲಿ ಕೆಂಪು ದಳಗಳು ತುಂಬಾ ಮುನ್ನಡೆದಿವೆ. ಕೆಂಪು ಬಲದ ೨೦೦ ವಿಭಾಗಗಳು ಪೂರ್ವರಂಗದಲ್ಲಿ ಪ್ರಯೋಗಿಸಲಾಗಿವೆ ಎಂದು ತಿಳಿದುಬಂದಿದೆ. ರಷ್ಯನರಿಗೆ ಯಶಸ್ಸು ದೊರಕಿದ ಕುರಿತು ಜರ್ಮನ್ ಅಧಿಕಾರ ವರ್ಗದಿಂದಲೆ ವಾರ್ತೆಗಳು ಬಂದಿವೆ.

ಶಾಂತಸಾಗರದಲ್ಲಿ, ಪಿಲಿಪ್ಪಾನು ದ್ವೀಪಗಳು ಸಂಪೂರ್ಣ ಅಮೇರಿಕನರ ಕೈವಶವಾಗುವುದು ಅನಿವಾರ್ಯವೆಂದೇ ಹೇಳಬೇಕು. ಅಮೇರಿಕನರ ಬಲವಾದ ನೌಕಾಬಲ, ವಾಯುಬಲಗಳ ಎದುರು, ಈ ದ್ವೀಪಗಳಲ್ಲಿ ಸಿಕ್ಕಿಬಿದ್ದ ತಮ್ಮ ಬಲಗಳಿಗೆ ಬೇಕಾದ ಸಹಾಯವನ್ನು ಕಳುಹಿಸುವ ಕೆಲಸವು ಜಪಾನಿಯರಿಗೆ ತೀರಾ ಅಸಾಧ್ಯವಾದುದಾಗಿದೆ. ಇಂಡೋಚೀನಾದ ಕರಾವಳಿಯಬಳಿ ಜಪಾನಿಯರ ಅತಿ ದೊಡ್ಡದಾದ ನೌಕಾಪಡೆಯೊಂದು ಮುಳುಗಿಸಲಾಯಿತು. ಚೀನಾದ ಜಪಾನಿ ಆಕ್ರಮಿತ ಹಾಂಗ್‌ಕಾಂಗ್ ಮೊದಲಾದ ಪ್ರದೇಶಗಳ ಮೇಲೆ ಉಗ್ರತರದ ವಾಯು ದಾಳಿಯು ನಡೆದಿರುತ್ತದೆ. ಜರ್ಮನರಂತೆ ಜಪಾನಿಯರು ತಮ್ಮ ಸ್ವದೇಶವನ್ನು ರಕ್ಷಿಸಿಕೊಳ್ಳುವುದರ ಕಡೆ ತಮ್ಮ ಲಕ್ಷ್ಯವನ್ನು ತಿರಿಗಿಸಿರುವರು!

ಸಂಪೂರ್ಣ ದಕ್ಷಿಣ ಬರ್ಮಾವು ಬ್ರಿಟಿಷ ಮತ್ತು ಹಿಂದೀಯ ದಂಡುಗಳ ಕೈವಶವಾಗಿದೆ. ಜಪಾನಿಯರು ಬರ್ಮಾವನ್ನು ತ್ಯಜಿಸಿ ಬಿಟ್ಟುಹೋಗುವ ಸಂಭವಗಳು ದಿನೆದಿನೆ ವೃದ್ಧಿಯಾಗುತ್ತಿವೆ.

ನೋಟಿಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 395/1932
R. E. P. 1015/1944

ವಾದಿ—ಯಚ್. ಪುರುಷನಾಯಕ. ವೆಂಕಟಯ್ಯನವರ ಮಗ. ರಿಟಾಯರ್ಡ ಅಬಕಾರಿ ಸಬ್ ಇನ್ಸ್‌ಪೆಕ್ಟರ್. ಹೊಸದುರ್ಗದಲ್ಲಿರುವವ...... ಅರ್ಜಿದಾರ. ಮತ್ತು

ದೇವಪ್ಪ, ದಾಸನ ಮಗ. ಹೊಸದುರ್ಗದಲ್ಲಿರುವವ—ಪ್ರತಿವಾದಿ. ರೆಸ್ಪೊಂಡೆಂಟ್.

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರಗೆ ಬಹಾ ಡಿಕ್ರಿ ಸಾಲಕ್ಕೆ ರೆಸ್ಪಾಂಡೆಂಟಿನ ಬಾಬ್ತು ಬಲ್ಲ ಗ್ರಾಮದ ರಿ. ಸ. ನಂ. 274. 1, B. 190-10. ಹೊಸದುರ್ಗ ಗ್ರಾಮದ ರಿ. ಸ. ನಂ. 197-1, 188-5A, ನೇ ಆಸ್ತಿಗಳನ್ನು ಜಪ್ತಿ ಮಾಡಲ್ಪಟ್ಟಿದೆ. ಸದ್ರಿ ಜಪ್ತಿ ಕುರಿತು ರೆಸ್ಪಾಂಡೆಂಟಿಗೆ ಆಕ್ಷೇಪಯಿದ್ದರೆ ತಾರೀಕು 1-2-1945ಕ್ಕೆ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಯೇಲಂ, ಬಗ್ಗೆ ಮುಂದರಿಸಲಾದೀತು.

ಕಾಸರಗೋಡು ತಾ. 20-1-45.
ಸಿ. ಬಾಸ್ಕರ ರಾವ್. ಅರ್ಜಿದಾರನ ಕಡೆ ಎಡ್ವಕೇಟ್.

The Engineer....

ಎಂಜಿನಿಯರನ ವಾಚ

ವೆಸ್ಟ್ ಎಂಡ್ ವಾಚುಗಳು ಯಂತ್ರಶಾಲೆಯ ಕೆಲಸಗಾರರಿಗೆ ಸರಿ ಸಮಯ ತೋರಿಸುವಂತೆ ಭದ್ರವಾದ ಏರ್ಪಾಡಿನಿಂದ ರಚಿಸಲಾಗಿವೆ. ಅಲ್ಲಿನ ಕಂಪನ, ಘರ್ಷಣೆ ಧೂಳು, ಲೋಹಾಕರ್ಷಣೆ ಇವುಗಳನೆಲ್ಲ ತಡೆಯುವಂತಹಗಳು. ಯಾಂತ್ರಿಕರು ಇವನ್ನೆ ತರಿಸುವರು;



ಸೆಕುಂಡೆನ್ ಮೋಡರ್ನ್
ನಿಕ್ಕೆಲ್ ಬೆಳ್ಳಿ, ರೂ. 44.

ಅಕೃತದ ತಲ್ಪೋಣದಿಂದ ಜಾಹೀರಾತಿನ ಎಲ್ಲಾ ನಮೂನೆಗಳನ್ನು ಒದಗಿಸಲಾಗದಿದ್ದರೂ ಸಾಧ್ಯವಿರುವಷ್ಟು "ಆರ್ಡರ್" ಪೂರೈಸಲಾಗುವದು.
ಕಾಗದದ ನಿರ್ಬಂಧದಿಂದ ಕ್ಯಾಟಲಾಗನ್ನು ಕಳುಹಿಸಲಾಗದೆಂದು ವಿಷಾದ.

WEST END WATCH CO.
BOMBAY ◆ CALCUTTA

THE BANK OF MANGALORE, Ltd.,
MANGALORE.
nterest on Fixed Deposits.

It is notified forthe information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly wth effect from 1-1-1945

Office of the Bank, Mangalore, 80th Oct. 1944. By Order H. S. KAMATH, Manager.

ಹುಳುಕಡ್ಡಿ ಮದ್ದು

AMRUTANJAN DEPOTS BOMBAY MADRAS CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾದ, ಆದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,
ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 2—2—1945 [ಸಂಚಿಕೆ 5]

ಭಾರತ ವಾರಾಂತ್ಯ ವರದಿಗಳು

ಮುಖಂಡರ ಆರೋಗ್ಯ-ಜಿನ್ನರ ಶರ್ತ-ಗಾಂಧೀ ಸಲಹೆ-ಚಿಮೂರ್ ಮಾಫಿ-ನಿಕೋಲಸರ ವಿಚಿತ್ರ ತೀರ್ಪು

ಬಿಡುಗಡೆ ಮಾಡಲ್ಪಟ್ಟ ಡಾ. ಪಿ. ಸಿ. ಘೋಶ್ ಅವರು ಅಹಮದ್ ನಗರದ ಕೋಟೆಯೊಳಗೆ ಬಂಧನದಲ್ಲಿರಿಸಲ್ಪಟ್ಟ ತಮ್ಮ ಇತರ ಸಹೋದ್ಯೋಗಿಗಳ ಆರೋಗ್ಯದ ಕುರಿತು ಪರಿಚಯ ಕೊಟ್ಟರು. ನೆಹರುಗಳು ೧೫ ರಾತ್ಲ್ ಇಳಿದಿದ್ದಾರೆ. ಅವರ ಚಟುವಟಿಕೆ ಚೈತನ್ಯ ಕಡಿಮೆಯಾಗಿದೆ. ನೆಟ್ಟಗಿರುವೆನಾಗಿ ಅವರು ಹೇಳುತ್ತಿದ್ದರೂ ಮುದಿತನದ ಕುರುಹುಗಳು ಅವರಲ್ಲಿ ಬಲವಾಗಿ ಕಾಣಿಸಿಕೊಳ್ಳಹತ್ತಿವೆ. ೭೦ ವರ್ಷದ ವಲ್ಲಭ್ಯಾ ಪಟೇಲರು ಆಗಿಂದಾಗ್ಗೆ ಉದರ ಶೂಲೆಯಿಂದ ನರಳುತ್ತಿದ್ದಾರೆ. ಪಟ್ಟಾಭಿ ಸೀತಾರಾಮಯ್ಯನವರು ಸಿಹಿಮೂತ್ರದ ವ್ಯಾಧಿ ಪೀಡಿತರಾಗಿದ್ದಾರೆ. ಅಬುಲ್ ಕಲಂ ಅಜಾದರಿಗೆ ಆಗಿಂದಾಗ್ಗೆ ಜ್ವರಬಾಧೆ ಇದೆ.

ಘೋಶರನ್ನು ಬಿಡುವಾಗ ಸರಕಾರ ಪ್ರಕಟಣೆಯು: 'ಅವರ ಹೊಟ್ಟೆ ವ್ಯಾಧಿಯ ಚಿಹ್ನೆಗಳು ಮೇಲಿಂದ ಮೇಲೆ ಕಾಣಿಸಿದರಿಂದ ಅವರನ್ನು ಇನ್ನು ಜೈಲಿನಲ್ಲಿ ಇಟ್ಟುಕೊಳ್ಳುವ ಅವಶ್ಯಕತೆ ತೋರುವುದಿಲ್ಲ' ಎಂದು ಹೇಳಿತ್ತು. ಹೀಗೆ ದೀರ್ಘ ಬಂಧನದಿಂದ ಜನಪ್ರಿಯ ಮುಖಂಡರ ಶಾರೀರಿಕ ಶಕ್ತಿಯು ಹಾನಿಗೊಳಗಾಗುವವರೆಗೆ ಯಾವ ವಿಚಾರಣೆ ಇಲ್ಲದೆ ಕಾರಾಗೃಹದಲ್ಲಿರಿಸುವುದು ನಾಗರೀಕ ಧರ್ಮವಲ್ಲ. ಕಾಂಗ್ರೆಸ್ಸು ಚಳವಳವನ್ನಾರಂಭಿಸಿಲ್ಲವೆಂದು ಸರೋಜಿನಿಯರು ಒತ್ತೊತ್ತಿ ಹೇಳಿದ ಮೇಲಾದರೂ ಸರಕಾರವು ಈ ವಿಚಾರವನ್ನು ಪರ್ಯಾಲೋಚಿಸುವುದರಲ್ಲಿ ಹಿತವಿದೆ.

ಎರಡು ವರ್ಷಗಳಲ್ಲಿ ಜಿನ್ನರಸ್ವರಾಜ್ಯ

ಅಮದಾಬಾದ್ ಸಂಚಾರಕ್ಕೆ ಹೋದಾಗ ವೃತ್ತಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಬ್ಯಾ. ಜಿನ್ನರು: 'ಗಾಂಧೀಜಿ ಇಂದಿಗೆ ೨೫ ವರ್ಷಗಳಿಂದ ತಮ್ಮ ಸ್ವಂತ ತತ್ವಯೋಜನೆಗಳನ್ನು ಹಿಂಬಾಲಿಸಿ ನೋಡಿದರು. ಮಿಲಿಯಾವಧಿ ಹಿಂದುಗಳು ಅವರ ಅನುಯಾಯಿಗಳಾಗಿರುವರು. ಎರಡು ವರ್ಷಗಳ ಮಟ್ಟಿಗೆ ಅವರು ನನ್ನನ್ನು ಹಿಂಬಾಲಿಸಲಿ' ಎಂದು ಗರ್ಭಿತಾರ್ಥದಲ್ಲಿ ಹೇಳಿದರು. ಯಾವ ರಾಜಕೀಯ ನ್ಯಾಯಕಾರಣಕ್ಕೂ ಒಳಪಡದ ಧ್ಯೇಯಗಳನ್ನು ಮಿ. ಜಿನ್ನರು ಮುಂದಿಡುವವರೆಂದು ರಾಜಕಾರಣ ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಜಿನ್ನಾಸಾಹೇಬರನ್ನು ಹಿಂಬಾಲಿಸುವುದಾದರೂ ಹೇಗೆ? ಅವರನ್ನು ಆದರದಿಂದ ಹಿಂಬಾಲಿಸಿದ ಬಂಗಾಳದ ಫಜಲೂಲ್ ಹಕ್ಕರು ಮತ್ತು ಪಂಜಾಬಿನ ಹಯತ್ ಖಾನ್ ತಿವಾನಾ ಅವರ ಈಗ್ಗಿನ ಧೋರಣೆಯಾದರೂ ಹೇಗಿದೆ? ಸಿಂಧದ ಮಂತ್ರಿಮಂಡಲದಿಂದ ಹೊರಬಂದ ಗಜದರರು ಮುಸ್ಲಿಂ ಲೀಗಿಗೆ ವಿರೋಧ ಪ್ರಚಾರ ನಡೆಸುತ್ತಿರುವರು. ಈಗ ಅಸ್ಸಾಮಿನ ಮುಖ್ಯ ಮಂತ್ರಿ ಸರ್ ಸಾದುಲ್ಲಾ ಅವರು: 'ನಾನು ಈ ರಾಜಕೀಯದಲ್ಲಿರಲು ಅಯೋಗ್ಯ'ನೆಂದು ಹೇಳಿ ವ್ಯಾಸರಾಯರ ಕೌನ್ಸಿಲಿನಲ್ಲಿ ಸರ್ ಸುಲ್ತಾನ್ ಅಹಮ್ಮದರು ರಜೆಯಲ್ಲಿ ಹೋದಾಗ ಹಂಗಾಮಿ ಕೆಲಸ ದೊರಕಿಸಿಕೊಳ್ಳಲು ಪ್ರಯತ್ನಿಸುವರಂತೆ. ಬಹುಶಃ ಅವರಿಗೂ ಸಾಕಾಗಿರಬೇಕು. ಸಿಂಧದಲ್ಲಿ ನ್ಯಾಯವಿಧಾಯಕ ಸಭೆಯ ಒಂದು ಸ್ಥಾನದ ಚುನಾವಣೆಯಲ್ಲಿ ಜಿನ್ನ ವಿರೋಧಿ ಕೊಲೆಮಾಡಲ್ಪಟ್ಟ ಅಲ್ಲಾಬಕ್ಷರ ತಮ್ಮಂದಿರೊಬ್ಬರು ಚುನಾಯಿತರಾಗಿ ಬಂದರು. ಸಂಗತಿಗಳೇ ಪರಿಸ್ಥಿತಿಯನ್ನು ತಿಳಿಸುತ್ತವೆ.

◆ ◆ ◆

ಗಾಂಧೀ ಸಲಹೆ

ಸದ್ಯದಲ್ಲೇ ಇಂಡಿಯಾ ಸರಕಾರದ ವತಿಯಿಂದ ಹ್ಯಾಕಮಿಶನರರಾಗಿ ಆಫ್ರಿಕಕ್ಕೆ ಹೋಗಲಿರುವ ಶ್ರೀ. ಆರ್. ಎಂ. ದೇಶ್‌ಮುಖ ಅವರು ಸೇವಾಗ್ರಾಮದಲ್ಲಿ ಮಹಾತ್ಮಾಜಿಯವರನ್ನು ಕಂಡು ಒಂದು ಗಂಟೆ ತನಕ ಮಾತುಕತೆಯಾಡಿದರು. ಅದೇ ಹುದ್ದೆಯಿಂದ ನಿವೃತ್ತರಾಗಿ ಬಂದ ಸರ್ ಶಾಫನ್ ಅಹಮದ್ ಖಾನ್‌ಸಾಹೇಬರು ಹಿಂತಿರುಗುವಾಗ ದ. ಆಫ್ರಿಕದ ಸರಕಾರದವರ ಅವಿವೇಕ ವರ್ತನೆಯನ್ನು ಖಂಡಿಸಿರುವರು. ಆಗಲೇ ಅಲ್ಲಿನ ನ್ಯಾಯವಿಧಾಯಕ ಸಭೆಯಲ್ಲಿ "ಭಾರತದಿಂದ ಹೊಸ ಹ್ಯಾಕಮಿಶನರರು ಬರದಂತೆ ಮಾಡಬೇಕು" ಎಂಬ ಸೂಚನೆ ಮಿ। ಲೊವ್ ಎಂಬ ಸದಸ್ಯರು ಕೊಟ್ಟಿರುವರು. ತಾವು ಆ ಕುರಿತು ಇಂಡಿಯಾ ಸರಕಾರದೊಡನೆ ಪತ್ರವ್ಯವಹಾರ ನಡೆಸುವನಾಗಿ ಮಂತ್ರಿ ಜನರಲ್ ಸ್ಮಟ್ಸರು ಉತ್ತರವಿತ್ತಿದ್ದಾರೆ. ಹೀಗೆ ಅಲ್ಲಿಗೆ ಈಗ ಹೋಗಲಿರುವ ದೇಶಮುಖರಿಗೇನಾದರೂ ವಿಶಿಷ್ಟ ಸಂದರ್ಭಗಳು ಬಂದರೆ ಅವರು ಗಾಂಧೀ ಮಾದರಿಯನ್ನು ಅನುಸರಿಸಲು ಸಲಹೆ ಕೇಳುವುದು ವಿಹಿತವಾದುದೇ ಸರಿ.

◆ ◆ ◆

ಪಾಶೀ ಶಿಕ್ಷೆಯಿಂದ ಆತ್ಮಶಾಂತಿ ಇಲ್ಲ

ಚಿಮೂರ್ ಮತ್ತು ಅಶ್ತಿ ಗಲಾಟೆಯಲ್ಲಿ ಸರಕಾರ ಅಧಿಕಾರಿಗಳನ್ನು ಕೊಂದದಕ್ಕೆಂದು ಗಲ್ಲಿಗೇರಿಸಲ್ಪಡಲಿರುವ ನಾಲ್ಕು ಮಂದಿ ಆರೋಪಿತರಿಗೆ ಗಲ್ಲಿಗೇರಿಸದೆ ದಯೆ ತೋರಿಸಬೇಕೆಂದು ಕೊಲ್ಲಲ್ಪಟ್ಟ ಅಧಿಕಾರಿಯ ಪತ್ನಿಯೋರ್ವಳು ವ್ಯಾಸ್‌ರಾಯರಿಗೆ ವಿನಂತಿಸಿಕೊಂಡಿರುವಳು. ಆ ಧೀರ ಮಹಿಳೆಯ ಮಾತುಗಳು: "ನನ್ನ ಹಾಗೆ ಪತಿಗಳನ್ನು ಕಳಕೊಂಡು ಇತರ ಕೆಲವು ನನ್ನ ತಂಗಿಂದಿಯರು ಕೂಡಾ ಆ ಮರಣ ಪರ್ಯಂತ ಹೇಗಾದರೂ ಈ ದುಃಖವನ್ನು ಸಹಿಸಿಕೊಂಡಿರಬೇಕಾಗುತ್ತದೆ. ನಮ್ಮ ಪತಿಗಳನ್ನು ಕೊಲೆಮಾಡಿದ ಆಪಾದನೆಯಲ್ಲಿ ಮರಣ ಶಿಕ್ಷೆಗೆ ಗುರಿಯಾಗಿರುವವರನ್ನು ಗಲ್ಲಗೇರಿಸುವುದರಿಂದ ನಮ್ಮ ದುಃಖವೂ ನೀಗದು, ಸತ್ತ ನಮ್ಮ ಪತಿಗಳ ಆತ್ಮಕ್ಕೂ ಅದರಿಂದ ಶಾಂತಿ ದೊರೆಯದು. ಆದುದರಿಂದ ಅವರನ್ನು ಮಾಫಿಮಾಡುವುದೇ ಶ್ರೇಷ್ಠ ಕಾರ್ಯ" ಹೀಗೆಂದಿವೆ. ದೇಶ ವಿದೇಶದಿಂದ ಮಾಫಿಗಾಗಿ ವಿನಂತಿಗಳು ಮಾಡಲ್ಪಟ್ಟಿವೆ. ಸಾರ್ವಭೌಮ್ಯ ಪ್ರತಿನಿಧಿಗಳು ಗಲ್ಲಿಗೇರಿಸಲ್ಪಡುವವರ ಹೆಂಡತಿ ಮಕ್ಕಳ ಕಡೆಗಾದರೂ ಕರುಣೆಯಿಟ್ಟು ಅವರಿಗೆ ಮಾಫಿ ಮಾಡುವುದು ಯೋಗ್ಯವಿದೆ ಎಂದು ಅಮೃತ್ ಬಜಾರ ಪತ್ರಿಕೆಯು ಬರೆದಿದೆ. ದಯೆಯು ದೇವ ಸಾಕ್ಷಾತ್ಕಾರವಲ್ಲವೆ?

◆ ◆ ◆

ತಲೆಕೆಳಗಾದ ನೋಟ

ಬಿವರ್ಲಿ ನಿಕೋಲಸ್ ಎಂಬವರು ಬ್ರಿಟನಿನ ಜನಪ್ರಿಯ ಲೇಖನ ಸಾಹಿತಿ. ಯಾವುದಾದರೂ ಒಂದು ಪಕ್ಷದ ಜನರನ್ನು ಹೀನವಾಗಿ ಚಿತ್ರಿಸಿ ಅವರನ್ನು ಅಸಹಾನುಭೂತಿ ದೃಷ್ಟಿಯಿಂದ ನೋಡುವ ಇನ್ನೊಂದು ಪಕ್ಷದವರನ್ನು ಮೆಚ್ಚಿಸುವ ಉದ್ದೇಶದಿಂದ ಕೆಲವು ಸಾರ್ವಜನಿಕ ಘಟನೆ ವಿಶೇಷಗಳನ್ನು ತಮ್ಮ ಭಾಷಾವೈಕರಿಯ ಚಾತುರ್ಯದಿಂದ ಬರೆಯಲು ತುಂಬಾ ಅಭ್ಯಾಸಿಸಿದ ಪತ್ರಿಕೋದ್ಯೋಮಿ—ಬಿವರ್ಲಿ ನಿಕೋಲಸ್. ಇಂಡಿಯಾ ಸರಕಾರದ ಆಮಂತ್ರಣ ಮೇರೆಗೆ ಈ ಪ್ರತಿಭಾವಂತ ಲೇಖಕರು ಭಾರತಕ್ಕೆ ಬಂದು, ಹಿಂದೆ ಅಮೇರಿಕದ ಮಿಸ್ ಮೇಯೊ ಮಹಿಳೆಯಂತೆ ಇಲ್ಲಿನ 'ಕೆಸರು ಕೊಂಪೆ'ಗಳನ್ನೂ, 'ಕೊಳಕು ಚರಂಡಿ'ಗಳನ್ನೂ ಇಣಿಕಿ ನೋಡಿ ಅಸಹ್ಯಪಟ್ಟು ಮೂಗು ಮುಚ್ಚಿಕೊಳ್ಳುವ ಭಾವದಿಂದೆಂಬಂತೆ 'ವರ್ಡಿಕ್ಟ್ ಓನ್ ಇಂಡಿಯಾ' (ಭಾರತದ ಮೇಲಿನ ತೀರ್ಪು) ಎಂಬ ಗ್ರಂಥವನ್ನು ಬರೆದರು. ಇಂದು 'ಬಹಳ' ಮುಂದರಿದಂತಹುಗಳೆಂದು ಹೇಳಲ್ಪಟ್ಟ ಐರೋಪ್ಯ ಅಮೇರಿಕಗಳಲ್ಲಿ ನಾವು ಹೋಗಿ ಪರಿಶೀಲಿಸಿದರೆ ಅಲ್ಲೂ 'ಕೆಸರು ಕೊಂಪೆ' ಮತ್ತು 'ಕೊಳಕು ಚರಂಡಿ'ಗಳನ್ನು ನಾವು ಕಾಣಬಹುದು. ಆದುದರಿಂದ ಇಂತಹ ಸರ್ವಸಾಮಾನ್ಯ ವಿಷಯಗಳನ್ನೂ ಪ್ರಚಾರಿಸಲು ಪ್ರಯತ್ನ ಪಟ್ಟುದು ಕೆಲ ಬ್ರಿಟಿಷ್ ಪತ್ರಿಕೋದ್ಯೋಮಿಗಳ ಮತ್ತು ಗ್ರಂಥಕಾರರ ವಿಚಾರಶಕ್ತಿಯು ಅಧೋಗತಿಗೆ ಇಳಿಯುತ್ತಿರುವುದರ ಲಕ್ಷಣವಾಗಿರುತ್ತದೆ. ಬಿವರ್ಲಿ ನಿಕೋಲಸರ ಈ 'ತೀರ್ಪಿ'ನ ಕೆಲವು ವಿಚಾರಗಳನ್ನು ಮುಂದಿಟ್ಟ ಮಾತ್ರಕ್ಕೆ ಆ ಗ್ರಂಥದ ಮತ್ತು ಅದರ ನಿರ್ಮಾಪಕರ ಮಿದುಳು ಶಕ್ತಿಯ ಸಾಮರ್ಥ್ಯದ ಯೋಗ್ಯತೆ ಎಷ್ಟೆಂಬುದನ್ನು ಓದುಗರೇ ಮಾಡಿಕೊಳ್ಳಬಹುದು. ಕೆಲವರಿಗೆ ನಗು ಬರಲೂಬಹುದು- ಉಪಾಯವಿಲ್ಲ- ಕೆಳಗಿನವು ನಿಕೋಲಸರಿಗೆ ಮುಂದಟ್ಟಾದ ಕೆಲವು ಇತ್ಯರ್ಥಗಳು:

ಗಾಂಧೀಜಿ ಅತ್ಯುಗ್ರ ಫೆಸಿಸ್ಟ್ ನಿರಂಕುಶ ವಾದಿಗಳು.

ಮಿ। ಜಿನ್ನರು ಆಸ್ಯಾಖಂಡದಲ್ಲಿನ ಅತೀ ಪ್ರಾಮುಖ್ಯ ವ್ಯಕ್ತಿಗಳು.

ಪಾಕಿಸ್ತಾನವೆಂಬುದು ಭಾರತೀಯ ರಾಜಕೀಯದಲ್ಲಿ ಒಂದೇ ಒಂದಾಗಿರುವ ಕ್ರಿಯಾತ್ಮಕ ವಿಚಾರದ ಬೃಹದ್ ಕಲ್ಪನೆಯು.

ಶ್ರೀ। ಎಂ. ಎನ್. ರಾಯ್ ಅವರು ಭಾರತದ ಕಾರ್ಲ್ ಮೆಕ್ಸ್ ಪ್ರಭೃತಿಗಳು. ಮತ್ತು ಅತೀ ಪ್ರಾಮಾಣಿಕರಾದ ಸಮತಾವಾದಿಗಳು.

ಭಾರತದಲ್ಲಿ ಆರೇ ಆರು ಮಹಾಮೇಧಾವಿಗಳೂ, ಜ್ಞಾನಿಗಳೂ ಆದ ವ್ಯಕ್ತಿಗಳಿರುವರು. ಅವರಲ್ಲಿ ಡಾ। ಅಂಬೇಡ್ಕರರವರು ಒಬ್ಬರು.

ಇಷ್ಟೇ ಅಲ್ಲ. ಭಾರತೀಯ ಚಿತ್ರ, ಶಿಲ್ಪ, ಸಂಗೀತ, ಚಲಚಿತ್ರ ಕಲೆಗಳನ್ನು ನಿಕೋಲಸರು ಕೀಳುಗಾಣಿಸಿ ಅವುಗಳ ಮೇಲೆ ಕೆಸರೆರಚಲು ಪ್ರಯತ್ನಿಸಿರುವರು.

(೯ನೇ ಪುಟಕ್ಕೆ ಮುಂದುವರಿದಿದೆ.)

ಆದರೂ ಕಳ್ಳನಲ್ಲ

[ಕಳೆದ ಸಂಚಿಕೆಗಳಲ್ಲಿ ವೆಂಕಟ ನಾರ್ಣಪ್ಪನೆಂಬ ಸುಸಂಸ್ಕೃತ ಚೋರ ಶಿಖಾಮಣಿಯ ಕೆಲವು ಚಮತ್ಕಾರ ಕೃತ್ಯಗಳ ವರದಿಯನ್ನು ಮೈಸೂರ್ ಕಡೆಯ ಮಿಲಿಟರಿ ಡ್ರೈವರನೊಬ್ಬನು ಹೇಳಿದಂತೆ ವಿವರಿಸಲಾಗಿತ್ತು. ಈ ಸಲ ಅವನು ಮಾಡಿದ ಒಂದೆರಡು ಇತರ ಚೌರ್ಯಗಳನ್ನು ತಿಳಿಸಿ ಕತೆಯನ್ನು ಅಂತ್ಯಗೊಳಿಸಲಾಗಿದೆ.]

ಮರುದಿನ ಆ ಡ್ರೈವರನು ಪುನಃ ನಮಗೆ ನದೀ ತೀರದಲ್ಲಿ ಭೇಟಿಯಾದ. ಅತ್ಯಾತುರತೆಯಿಂದ ನಾವವನನ್ನು ಕತೆ ಮುಂದರಿಸಲು ಕೇಳಿಕೊಂಡೆವು. ಮುಂಚಿನ ದಿನದ ನಿರೂಪವನ್ನು ನಿಲ್ಲಿಸಿದಲ್ಲಿಂದ ಮತ್ತೆ ಅವನು ಮುಂದರಿಸಿದ:

ಐರೋಪ್ಯ ಸರ್ಜನರಿಗೆಂದು ಟೆಲಿಫೋನು ಮಾಡಿ ಚೆಟ್ಟಿಯಾರರ ಅಂಗಡಿಯಿಂದ ಇನ್ನೂರು ತೊಲೆ ಪುತ್ತಳಿ ಬಂಗಾರ ತರಿಸಿ, 'ತೋರಿಸಿ ತರುವೆ'ನೆಂದು ಹಿತ್ತಲ ಭಾಗದಿಂದ ಅದೃಶ್ಯನಾದ ನಾರ್ಣಪ್ಪನು ಮತ್ತೆ ಕಾಣಿಸಿದುದು ಇನ್ನೊರ್ವ ದೊಡ್ಡ ಅರಮನೆ ಅಧಿಕಾರಿಯ ಬಂಗಲೆ ಮುಂದೆ. ಆಗಲೂ ಒಂದು ತಾಜಾ ಹೊಸದಾದ ಬಾಡಿಗೆ ಕಾರಿನಲ್ಲಿ ಅವನು ಬಂದಿದ್ದನು. ಸಮಯ ಸುಮಾರು ಮಧ್ಯಾಹ್ನ ನಾಲ್ಕು ಘಂಟೆಯದು. ಆ ಉನ್ನತ ಅಧಿಕಾರಿಗಳು ಯಾರನ್ನೋ ಕಾಣಲು ಲಲಿತ್ ಮಹಾಲ್ ಅರಮನೆಗೆ ಹೋಗಿದ್ದರು. ಅವರು ಹಿಂದಕ್ಕೆ ಬರುವಾಗ ಒಂದೆರಡು ಗಂಟೆಗಳಾಗಬಹುದೆಂದು ನಾರ್ಣಪ್ಪನಿಗೆ ಖಂಡಿತ ಗೊತ್ತಿತ್ತು.

ಸರಕಾರೀ ಆಫೀಸಿನ ದೊಡ್ಡ ಅಧಿಕಾರಿಯಂತೆ ಜರಿ ಮುಂಡಾಸು ಇಟ್ಟುಕೊಂಡಿದ್ದ ನಾರ್ಣಪ್ಪನನ್ನು ನೋಡಿದ ಕೂಡಲೇ ಬಂಗಲೆಯ ಹೊರ ಅಂಗಳದಲ್ಲಿ ನಿಂತಿದ್ದ ಆ ಅಧಿಕಾರಿಯ ಪೇದೆಯು ಓಡಿ ಬಂದು: "ಯಜಮಾನರು ಲಲಿತ್ ಮಹಾಲಿಗೆ ಹೋಗಿರುವರು ಬುದ್ಧೀ" ಎಂದ. ಅದಕ್ಕೆ ನಾರ್ಣಪ್ಪ ಕೌತುಕ ಸೂಚಿಸದೇ: "ಹೌದು, ನಾನೂ ಅಲ್ಲಿಂದಲೇ ಬಂದದ್ದು. ನೀನು ನನ್ನ ಜೊತೆಯಲ್ಲಿ ಬಾ. ನಿನ್ನೊಡನೆ ಕೆಲವು ಸಾಮಾನುಗಳನ್ನು ತೆಗೆಸಿಕೊಡಲು ಸಾಹೇಬರು(ಅಧಿಕಾರಿ) ಹೇಳಿದ್ದಾರೆ. ಕಾರಿನಲ್ಲಿ ಕೂತುಕೊ. ಮತ್ತು ನಿನ್ನ ಆ ಪೇದೇ ಪಟ್ಟೆ ಹಾಕಿಕೊಂಡು ಬಾ" ಎಂದ. ಪೇದೇ ಪಟ್ಟೆ ಎಂದರೆ ದೊಡ್ಡ ದೊಡ್ಡ ರಾಜಸ್ಥಾನದ, ಸರಕಾರೀ ಹುದ್ದೆಯ ಅಧಿಕಾರಿಗಳ ಪೇದೆಗಳಿಗೆ ಆಯಾ ಇಲಾಖೆಯ ಮತ್ತು ಅದರ ಅಧಿಕಾರಿಯ ಹುದ್ದೆಯ ಹೆಸರು ಬರೆದಿರುವ ಹಿತ್ತಾಳೆಯ ಪಟ್ಟೆಯೊಂದನ್ನು ಧರಿಸಲು ಕೊಡುತ್ತಾರೆ. ಕೆಂಪು ಅಥವಾ ಹಸರು ಬಣ್ಣದ ಬಟ್ಟೆಗೆ ಅದನ್ನು ಸಿಕ್ಕಿಸಿ ಅವರು ಒಂದು ಕಡೆಯ ಹೆಗಲಿನ ಮೇಲಿನಿಂದ ತೂಗಿಸಬೇಕು. ಅಧಿಕಾರಿಗಳು ಸರಕಾರಿ ಕೆಲಸದ ಮೇಲೆ ಎಲ್ಲಾದರೂ ಹೋದಾಗ ಈ ಪೇದೆಗಳು ಪಟ್ಟೆಗಳನ್ನು ಧರಿಸಿ ಅವರ ಜೊತೆಯಲ್ಲಿದ್ದರೆ ಆ ಅಧಿಕಾರಿ ಯಾರೆಂದು ಪಕ್ಕನೆ ತಿಳಿಯುತ್ತದೆ.

ನಾರ್ಣಪ್ಪನಿಗೆ ಈ ಪೇದೆಗಳ ಮಹತ್ವ ತಿಳಿಯದೇ ಇಲ್ಲ. ಅದಕ್ಕಾಗಿಯೇ ಅವನು ಪ್ರತ್ಯೇಕವಾಗಿ ನಿನ್ನ 'ಹೆಗಲು ಪಟ್ಟೆ ಸಿಕ್ಕಿಸಿ ಬಾ' ಎಂದು ಸೂಚಿಸಿದ್ದು. ಏನೋ ಅವಶ್ಯದ ಕೆಲಸವಿರಬಹುದೆಂದು ಪೇದೆಯು 'ಪಟ್ಟೆ' ಸಿಕ್ಕಿಸಿ ಧಾವಿಸಿ ಬಂದು ನಾರ್ಣಪ್ಪನು ನಿರ್ದೇಶಿಸಿದಂತೆ ಕಾರಿನೊಳಗೆ ಕೂತ. ರಾಜಧಾನಿಯಲ್ಲಿನ ದೊಡ್ಡದೊಂದು ಕೈಗಾರಿಕೆ ವಸ್ತು ಪ್ರದರ್ಶನಾಶಾಲೆಗೆ ತೆಗೆದುಕೊಂಡು ಹೋಗೆಂದು ಡ್ರೈವರನಿಗೆ ಸೂಚಿಸಲು ಕೆಲವೇ ಕ್ಷಣಗಳಲ್ಲಿ ಕಾರು ಪ್ರದರ್ಶನಾಲಯದ ಮುಂದೆ ನಿಂತಿತು.

ಪೇದೆಯನ್ನು ಜೊತೆಯಲ್ಲಿ ಕರಕೊಂಡು ನಾರ್ಣಪ್ಪನು ಪ್ರದರ್ಶನಾಲಯದೊಳಗೆ ಹೊಕ್ಕಿದಾಗ ಅಲ್ಲಿನ ಸೇವಕರೂ, ನೌಕರರೂ ಯಾರೋ ಅಧಿಕಾರಿಗಳ ಕಡೆಯವನೆಂದು ಅವನಿಗೆ ಸನ್ಮಾನಪೂರ್ವಕವಾಗಿ ವಂದಿಸಿದರು. ಪೇದೆಯನ್ನು ಬಾಗಿಲ ಬಳಿಯಲ್ಲಿ ನಿಲ್ಲುವಂತೆ ಹೇಳಿ ನಾರ್ಣಪ್ಪನು ನೇರವಾಗಿ ಅಲ್ಲಿನ ಮುಖ್ಯಾಧಿಕಾರಿಯ ಮೇಜಿನ ಬಳಿಗೆ ಹೋಗಿ ಅರಮನೆಯ ಆ ದೊಡ್ಡ ಅಧಿಕಾರಿಯ ಹೆಸರನ್ನು ಹೇಳಿ ತಾನು ಅವರ ಕಡೆಯಿಂದ ಬಂದವನೆಂತಲೂ, ಅವರು ತನಗೆ ಕೆಲವೊಂದು ವಸ್ತುಗಳನ್ನು ತರಲು ಹೇಳಿರುವುದಾಗಿಯೂ ತಿಳಿಸಿ ಭರವಸೆಗಾಗಿ ಬಾಗಿಲಲ್ಲಿ ನಿಂತ ಪೇದೆಯನ್ನು ತೋರಿಸಿದ. ಅರಮನೆಯ ಬಿಲ್ಲೆ ಧರಿಸಿದ ಪೇದೆಯನ್ನು ನೋಡಿದ ಮೇಲಂತೂ ಯಾರೂ ಸಂದೇಹಪಡುವಂತಿಲ್ಲ. ಪ್ರದರ್ಶನಾಲಯದ ಅಧಿಕಾರಿಗಳು: "ಆಗಲಿ, ಸರ್. ತಮಗೆ ಬೇಕಾದ ವಸ್ತುಗಳನ್ನು ಚುನಾಯಿಸಿ" ಎಂದಾಗ ನಾರ್ಣಪ್ಪ ತನ್ನ ಅರ್ಧ ಕೆಲಸ ಆಯಿತೆಂದು ತಿಳಿದುಕೊಂಡ.

ಮತ್ತೆ ವಸ್ತುಗಳನ್ನು ಚುನಾಯಿಸಲಿಕ್ಕೆ ಆರಂಭ ಮಾಡಿದ. ಚೀಲದಿಂದ ಒಂದು ಡೈರಿಯನ್ನು ತೆಗೆದು ಅದರಲ್ಲಿ ಅವನು ಕೆಲವು ದಿವಸಗಳ ಮೊದಲೇ ಬರಕೊಂಡಿದ್ದ ಅನೇಕ ಅಮೂಲ್ಯ ವಸ್ತುಗಳ ಹೆಸರನ್ನು ಓದ ತೊಡಗಿದಾಗ ಪ್ರದರ್ಶನಾಲಯದ ಕೆಲಸಗಾರರು ಅವನನ್ನೂ ಆಯಾ ವಸ್ತುಗಳಿರುವ ಕಪಾಟುಗಳ ಬಳಿ ಕರಕೊಂಡು ಹೋಗಿ ತೋರಿಸಿದರು. ನಾರ್ಣಪ್ಪನು ಮೊದಲು ಚಿನ್ನಬೆಳ್ಳಿಯ ಮೂರ್ತಿಗಳಲ್ಲೂ, ಆಟದ ವಸ್ತುಗಳಲ್ಲಿ ಬೇರೆ ಬೇರೆ ಮಾದರಿಯವುಗಳನ್ನೂ ಆರಿಸಿಕೊಂಡ. ನಂತರ ದಂತದ ನಾಜೂಕು ಕೆಲಸದ ವಿಗ್ರಹಗಳನ್ನೂ, ಮತ್ತಿತರ ಬೆಲೆಬಾಳುವ ಸಾಮಾನುಗಳನ್ನೂ ಆರಿಸಿದ. ಅಮೋಘ ಕಲಾ ಕುಶಲತೆಯಿಂದ ತಯಾರಿಸಿದ ಕೈ ಬಳೆಗಳನ್ನೂ, ಚಿನ್ನ ಬೆಳ್ಳಿಯ ಕಂಠ ಸರಗಳನ್ನೂ ಚುನಾಯಿಸಿದ. ಆ ಮೇಲೆ ಅವನ ಡೈರಿಯಲ್ಲಿ ಮೈಸೂರು ಸಿಲ್ಕು ಬಟ್ಟೆಗಳ ವಿವರವಿತ್ತು. ನಾಜೂಕು ರೇಶ್ಮೆಯ ಎಂಟತ್ತು ಸೀರೆಗಳನ್ನೂ, ಮತ್ತು ಕೆಲವು ಬೇರೆ ಬೇರೆ ಬಣ್ಣದ ಸಿಲ್ಕು, ಸೆಟಿನ್, ಮತ್ತು ವೆಲ್ವೆಟ್ ಬಟ್ಟೆಗಳನ್ನೂ ತೆಗೆಯಲು ಹೇಳಿದ. ಅವನು ಹೇಳಿದಂತೆ ನೌಕರರು ತೆಗೆದು ಒಂದು ಮೂಟೆ ಮಾಡಿದರು. ಹತ್ತಿರವಿದ್ದ ಕಾರಕೂನನೊಬ್ಬನು ಸಾಮಾನುಗಳ ವಿವರವನ್ನೂ ಬೆಲೆಯನ್ನೂ ಹಾಕಿದ ಬಿಲ್ಲ ತಯಾರಿಸಿದ. ಮೈಸೂರು ಸಂಸ್ಥಾನದ ಬೇರೆ ಬೇರೆ ಕೈಗಾರಿಕೆ ಕೇಂದ್ರಗಳಿಂದ ಪ್ರದರ್ಶನಕ್ಕೂ ಮಾರಾಟಕ್ಕೂ ಇಡಲ್ಪಟ್ಟಂತ ಆ ವಸ್ತುಗಳ ಬೆಲೆಯಾದರೂ ಸಾಮಾನ್ಯವಾದುದಲ್ಲ. ಅದರ ಒಟ್ಟು ಮೌಲ್ಯವು ನಾಲ್ಕು ಸಾವಿರಕ್ಕೂ ಮಿಕ್ಕಿತು. ನಾರ್ಣಪ್ಪನೆಂದ: "ನಮ್ಮ ಸಾಹೇಬರಿಗೆ ಇವೆಲ್ಲವೂ ಬೇಡ. ಆದರೆ ಇವುಗಳಲ್ಲಿಂದ ಅವರ ಮನೆಯವರು ಬೇಕಾದುದನ್ನು ಮಾತ್ರ ಚುನಾಯಿಸಿ ಉಳಿದುದನ್ನು ವಾಪಾಸು ಮಾಡುತ್ತಾರೆ. ಆದರೆ ವಸ್ತುಗಳು ಕೆಡದಂತೆ ನೋಡಿಕೊಳ್ಳುವರು." ಹೀಗೆಂದಾಗ ಪ್ರದರ್ಶನಾಲಯದ ಮೆನೇಜರರು "ಆಗಲಿ, ಸರ್, ಈಗ ತೆಗೆದುಕೊಂಡು ಹೋಗುವ ವಸ್ತುಗಳ ವಿವರವೂ ಅವುಗಳ ಬೆಲೆಯೂ ಈ ಬಿಲ್ಲಿನಲ್ಲಿ ಸೂಚಿಸಿದೆ. ಬೇಕಾದುದನ್ನು ಅವರು ಚುನಾಯಿಸಿದ ನಂತರ ಪ್ರತ್ಯೇಕ ಬೇರೆ ಬಿಲ್ಲ್ ಮಾಡಲಾಗುವುದು" ಎಂದಾಗ ನಾರ್ಣಪ್ಪ: "ಸರಿ, ಸರಿ. ದೇಟ್ಸ್ ಆಲ್ ರ್‍ಯಾಟ್" ಎಂದ.

ಎಲ್ಲವೂ ಭದ್ರವಾಗಿ ಕಟ್ಟಿ ಆದ ಮೇಲೆ ಬಾಗಿಲ ಬಳಿ ನಿಂತ ಪೇದೆಯನ್ನು ಕರೆದು: "ಲೋ, ಇವುಗಳನ್ನು ತೆಗೆದುಕೊಂಡು ಕಾರಿನಲ್ಲಿ ಇಡೊ, ಅಮ್ಮಾ ಅವರಿಗೆ ತೋರಿಸಿ ತರೋಣ" ಎಂದು ಗಟ್ಟಿಯಾಗಿ ನುಡಿದಾಗ ಪೇದೆಯು ನಮ್ರನಾಗಿ ಹೇಳಿದಂತೆ ಮಾಡಿದ. ಅವನಿಗೆ ಯಾವುದನ್ನೂ ಯೋಚಿಸಲು ಅವಕಾಶ ದೊರೆಯಲಿಲ್ಲ. ಆದರೂ ಮನಸ್ಸಿನಲ್ಲೇ ಅವನಿಗೆ ಒಂದು ತರದ ಸಂಶಯವಾಗಿದ್ದರೂ, ದೊಡ್ಡವರ ಮರ್ಜಿ ಹೇಗಿರುತ್ತದೆಂದು ಹೇಳಬರುವುದಿಲ್ಲವಾದುದರಿಂದ ತೆಪ್ಪಗಾದ.

ಕಾರನ್ನು ಇನ್ನೊಂದು ಬಂಗ್ಲೆಯ ಬಳಿ ನಿಲ್ಲಿಸಿದಾಗ ಅಲ್ಲೊಬ್ಬ ಪೇದೆ ಓಡಿ ಬಂದ. ಆ ಬಂಗಲೆಯು ಸರಕಾರಿ ಬಂಗಲೆಯಾಗಿತ್ತು. ಹೊರಗಿನ ದೊಡ್ಡ ಮಹನೀಯರು ರಾಜ ಅತಿಥಿಗಳಾಗಿ ಬಂದಾಗ ಅವರು ಉಳಕೊಳ್ಳುವ ಬಂಗಲೆ ಅದು. ತಿಂಗಳಲ್ಲಿ ಅನೇಕ ದಿವಸ ಅದು ಖಾಲಿ ಬೀಳುತ್ತಿರುತ್ತದೆ. ಅಲ್ಲಿಂದ ಓಡಿ ಬಂದ ಪೇದೆ ಮತ್ತಾರೂ ಅಲ್ಲದೆ ನಮ್ಮ ನಾರ್ಣಪ್ಪನ ಕೂಟದವನೇ ಆಗಿದ್ದ. ಅವನು ಹತ್ತಿರ ಬಂದಾಗ: "ಇವುಗಳನ್ನು ನಿಮ್ಮ ರಾಯರಿಗೆ ತೋರಿಸಿತ್ತಾರೊ" ಎಂದ ನಾರ್ಣಪ್ಪ. "ಆಗಲಿ ಬುದ್ಧಿ" ಎಂದು ನಟಿಸುತ್ತಾ ಅವನು ಅವುಗಳನ್ನು ಒಳಗೆ ಕೊಂಡ್ಯೊಯ್ದ. ಅಲ್ಲಿಯ ಕಾವಲಿನ ಒಬ್ಬಿಬ್ಬರು ಏನೊ ಸರಕಾರಿ ಆಫೀಸರರ ಕೆಲಸವಿರಬೇಕೆಂದು ಮಿಟಮಿಟನೆ ನೋಡುತ್ತಿದ್ದರು. ಕಡೆಗೆ ನಾರ್ಣಪ್ಪನು ಕಾರಿನಿಂದ ಇಳಿದು "ಈಗ ಬಂದೆ" ಎಂದು ಹೇಳಿ ಬಂಗಲೆಯ ಬಳಿ ಹೋದ. ಸಾಮಾನು ಹಿಡಕೊಂಡ ಪೇದೆಯೂ ನಾರ್ಣಪ್ಪನೂ ಬಂಗಲೆಯ ಹಿಂಭಾಗಕ್ಕೆ ಹೋಗಿ ಮರೆಯಾದರು. ಮತ್ತೆ ಅವರ ಪತ್ತೆ ಇಲ್ಲ. ಹೊರಗೆ ನಿಂತ ಕಾರು ಅಲ್ಲೇ.

ಸರ್ಜನರ ಮನೆಯಲ್ಲಿ ಬಂಗಾರ ಕಾಣೆಯಾದ ಮರುದಿವಸವೇ ಈ ಘಟನೆ ನಡೆದುದು. ಕಾರಣ ನಾರ್ಣಪ್ಪನಿಗೆ ಗೊತ್ತು ತನ್ನ ಕಳ್ಳಾಟಿಕೆಯ ವರ್ತಮಾನ ಊರಲ್ಲೆಲ್ಲ ಹರಡಿದರೆ ಮತ್ತೆ ಕಷ್ಟಕ್ಕೆ ಬರಬಹುದೆಂದು. ಅದಕ್ಕಾಗಿ ಅವನು ಅಂದೇ ಸಾಯಂಕಾಲ ದೊಡ್ಡ ಪೇಟೆಯ ಒಂದು ಚಿನ್ನಾಭರಣದ ಸರಾಫ ಅಂಗಡಿಯಲ್ಲಿ ಮತ್ತೊಂದು ಚಮತ್ಕಾರ ನಡೆಸಿಬಿಟ್ಟ.

ಸುಮಾರು ಐದು ಗಂಟೆ ಹೊತ್ತಿಗೆ ಒಂದು ಪರದೆ ಮುಚ್ಚಿದ ಟಾಂಗಾ ಗಾಡಿಯು ದೊಡ್ಡ ಪೇಟೆಯ ಪಕ್ಕದ ಮಾರ್ಗದಿಂದ ಬಂತು. ಆ ಮಾರ್ಗವು ದೊಡ್ಡ ಪೇಟೆಯ ವಿಶಾಲ ರಸ್ತೆಯನ್ನು ಕೂಡುವಲ್ಲೇ ಆ ಚಿನ್ನಾಭರಣ ಅಂಗಡಿಯಿತ್ತು. ಆದುದರಿಂದ ಗಾಡಿಯನ್ನು ಅಡ್ಡವಾಗಿ–ಅಂದರೆ ಅಂಗಡಿಯವರಿಗೆ ಕುದುರೆ ಮತ್ತು ಪರದೆ ಮುಚ್ಚಿದ ಮುಂಭಾಗ ಇಷ್ಟು ಮಾತ್ರ ಕಾಣುವಂತೆ ಅದನ್ನು ನಿಲ್ಲಿಸಲಾಗಿತ್ತು. ಪರದೆಯ ಮುಂದೆ ಒಬ್ಬ ಬಿಳಿ ಗಡ್ಡದ, ಕೆಂಪು ಟೊಪ್ಪಿಯ ಮೇಲೆ ಮುಂಡಾಸು ಸುತ್ತಿ, ಬೆಲೆಬಾಳುವ ಮುಸಲ್ಮಾನ ಶೈಲಿಯ ಉಡುಪುಗಳನ್ನು ಧರಿಸಿದ ಓರ್ವ ಮುದುಕ ಗೃಹಸ್ತ ಕೂತಿದ್ದ. ಅವನ ಬಾಯಲ್ಲಿ ಹಲ್ಲುಗಳಿರಲಿಲ್ಲ. ಅವನೇ ನಮ್ಮ ನಾರ್ಣಪ್ಪ. ನಾರ್ಣಪ್ಪನು ಸರಾಫ ಅಂಗಡಿಯ ಒಳಗೆ ಹೋಗಿ ನಾಲ್ಕೈದು ವಜ್ರದ ಹಾರಗಳನ್ನೂ, ಕೈ ಬಳೆಗಳನ್ನೂ, ಉಂಗುರಗಳನ್ನೂ ತೆಗೆದು: "ಗಾಡಿಯೊಳಗೆ ಹೆಂಗಸರಿದ್ದಾರೆ. ತೋರಿಸುತ್ತೇನೆ" ಎಂದ. ಅಲ್ಲಿಯ ಮಾಲಕರು "ಆಗಲಿ ಆಗಲಿ" ಎಂದರು. ಉರ್ದು ಭಾಷೆಯಲ್ಲಿ ಗಾಡಿಯೊಳಗಿನವರನ್ನೂ ಉದ್ದೇಶಿಸಿ "ಕತೀಜಾ ಬೀಬಿ ಇವುಗಳನ್ನು ನೋಡಿ ಆರಿಸಿ ಕೊಡು" ಎಂದಾಗ ಸ್ತ್ರೀ ಲಕ್ಷಣದ ಮತ್ತು ಹಾವಭಾವದ ಎರಡು ಕೈಗಳು ಹೊರ ಬಂದು ಆಭರಣಗಳನ್ನು ಸ್ವೀಕರಿಸಿದವು. ಕೆಲವು ಕ್ಷಣದಲ್ಲಿ ನಾಲ್ಕೈದು ಆಭರಣಗಳಲ್ಲಿ ಮೂರನ್ನು ಇಟ್ಟು, ಎರಡು ಪುನಃ ಹೊರಗೆ ಕೊಡಲ್ಪಟ್ಟವು. ನಾರ್ಣಪ್ಪ ಸಾಹೇಬನು ಅವುಗಳನ್ನು ಅಂಗಡಿ ಒಳಗಡೆ ತಂದು ಬೇರೆ ಕೆಲವುಗಳನ್ನು ಹೆಕ್ಕಿ ತೆಗೆದ.

(೧೧ನೇ ಪುಟಕ್ಕೆ ಮುಂದುವರಿದಿದೆ.)

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

2-12-1944

U. Shantha Rama Rao, *Secretary*

ಸೆಂಟ್ರೆಲ್ ಎಕ್ಸಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ವಜ್ರ ವೈಢೂರ್ಯಗಳ ವೈಚಿತ್ರ

ಅವುಗಳ ವಿಚಿತ್ರ ಶಕ್ತಿ

ವೈಜ್ಞಾನಿಕ ಅದ್ಭುತ ಶೋಧೆಗಳು

ಜಗತ್ತಿನ ಎಲ್ಲಾ ತರದ ಜೀವಜಂತುಗಳೂ ವಿದ್ಯುತ್ ಶಕ್ತಿಯ ಒಂದಲ್ಲ ಒಂದು ತರದ ಪ್ರಭಾವಕ್ಕೆ ಗುರಿಯಾಗುತ್ತವೆಂದು ವಿಜ್ಞಾನಿಗಳು ನಂಬಿ ಬಂದಿರುವರು. ವಿದ್ಯುತ್ ಶಕ್ತಿಯ ಅದ್ಭುತ ಪರಿಣಾಮಗಳನ್ನು ಹಲವು ವಿಧದಲ್ಲಿ ಬೇರೆ ಬೇರೆ ಸಂಶೋಧಕರು ಕಂಡುಹಿಡಿದಿರುವರು. ಮನುಷ್ಯನ ಶರೀರದಲ್ಲೇ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಪ್ರಮಾಣ ಪೂರ್ವಕವಾಗಿ ತೋರಿಸಿಕೊಟ್ಟಿರುವರು.

ಕೆಲವು ವರ್ಷಗಳ ಹಿಂದೆ ಬುಡಾಪೆಸ್ಟ್ ಅಲ್ಲಿ ಒಬ್ಬನು ತನ್ನ ಎರಡು ಕೈಗಳಿಗೆ ಎರಡು ತಂತಿಗಳನ್ನು ಕಟ್ಟಿ ಅವಕ್ಕೆ ಒಂದು ಬಲ್ಬನ್ನು ಜೋಡಿಸಿ ತನ್ನ ದೇಹದೊಳಗಿನ ವಿದ್ಯುತ್ ಶಕ್ತಿಯಿಂದ ಅದನ್ನು ಉರಿಸಿ ತೋರಿಸಿದನು.

ಮನುಷ್ಯರ ಮತ್ತು ಪ್ರಾಣಿಗಳ ರೋಮವನ್ನು ರೇಶ್ಮೆ ಬಟ್ಟೆಗೆ ಚೆನ್ನಾಗಿ ತಿಕ್ಕಿದರೆ ವಿದ್ಯುತ್ ಕಿಡಿಗಳು ಹಾರುವುದನ್ನು ನಾವು ಕಾಣಬಹುದು.

ದಕ್ಷಿಣ ಅಮೇರಿಕದ ಬಳಿಯ ಸಮುದ್ರದಲ್ಲಿ ಈಲ್ ಎಂಬೊಂದು ಜಾತಿಯ ಮೀನು ಇದೆ. ಇದು ತನ್ನ ದೇಹದಿಂದ ವಿದ್ಯುತ್ ಕಿರಣಗಳನ್ನು ಉಂಟುಮಾಡಿ ತನ್ನ ಕೊಳ್ಳೆಯನ್ನು ಕೊಲ್ಲುತ್ತದೆ.

ಮನುಷ್ಯನ ಸ್ನಾಯುಗಳಲ್ಲೂ ಮಿದುಳಿನಲ್ಲೂ ವಿದ್ಯುತ್ ಪ್ರವಾಹವು ಹರಿಯುವುದರಿಂದಲೇ ಅವಕ್ಕೆ ಅಷ್ಟು ಅಗಾಧವಾದ ಬಲ ಮತ್ತು ವಿಚಾರ ಶಕ್ತಿಯುಂಟಾಗುತ್ತದೆಂದು ಕೆಲವು ವಿಜ್ಞಾನಿಗಳ ಅಭಿಪ್ರಾಯ.

ಸತ್ತ ಕಪ್ಪೆಗಳ ಅಂಗಗಳನ್ನೂ ಹೃತ್ಕೋಶವನ್ನೂ ಅತೀ ದುರ್ಬಲವಾದ ವಿದ್ಯುತ್ ಶಕ್ತಿಯ ಬಲದಿಂದ ಹಲವು ವರ್ಷಗಳ ತನಕ ಜೀವಂತವಿರಿಸಲಿಕ್ಕೆ ಸಾಧ್ಯವಾಗುತ್ತದೆ. ಇದೇ ವಿದ್ಯುತ್ ಶಕ್ತಿಯಿಂದ ಹಾಳಾದ ಅನೇಕ ಅವಯವಗಳನ್ನೂ ಪುನಃಜೀವನಗೊಳಿಸಬಹುದೆಂದು ಪ್ರಯೋಗ ಶಾಲೆಯಲ್ಲಿ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಭೂತ ಬಾಧೆ

ಕಣ್ಣಿಗೆ ಕಾಣದ ವಿದ್ಯುತ್ ಕಿರಣಗಳಿಂದ ದೂರ ದೂರ ದೇಶಗಳಿಂದ ವರ್ತಮಾನವನ್ನೂ, ಚಿತ್ರಗಳನ್ನೂ ಕಳುಹಿಸಬಹುದು. ಒಬ್ಬ ಭಾಷಣಗಾರನು ಸಭಿಕರನ್ನು ದಂಗು ಬಡಿಸುತ್ತಾನೆ. ಇದಕ್ಕೆ ಕಾರಣವಾದರೂ ಅವನ ವ್ಯಕ್ತಿತ್ವದಿಂದ ಹೊರಡುವ ವಿದ್ಯುತ್ ಕಿರಣ ಪ್ರಭಾವವೆಂದು ಹೇಳಬಹುದು.

ಗುಡ್ಡಗಳ ಇಲ್ಲವೆ ದೊಡ್ಡ ಕಟ್ಟಡಗಳ ಎದುರು ನಿಂತು ಗಟ್ಟಿಯಾಗಿ ಮಾತನಾಡಿದರೆ ಆ ಶಬ್ದವು ಪ್ರತಿಧ್ವನಿಗೈಯ್ಯುತ್ತದೆಂಬುದು ಸಾಮಾನ್ಯ ಅನುಭವ. ಇದೇ ಪ್ರಕಾರ ಅತೀ ಪ್ರಭಲವಾದ ವಿದ್ಯುಚ್ಛಕ್ತಿಯು ಉನ್ನತ ಮಟ್ಟಕ್ಕೇರಿದಾಗ ಜಗಳಮಾಡಿಕೊಳ್ಳುವವರಲ್ಲಿ ಒಬ್ಬನು ಇನ್ನೊಬ್ಬನನ್ನು ಕೊಲ್ಲುತ್ತಾನೆಂದೂ; ಹೀಗೆ ಹೊರಸೂಸಲ್ಪಟ್ಟ ವಿದ್ಯುತ್ ಚೈತನ್ಯವು ಪ್ರಕೃತಿಯಲ್ಲಿ ಒಂದು ನಿಯಮಿತ ಕಾಲ ಪ್ರಮಾಣದಲ್ಲಿ ಪ್ರತಿ ಉತ್ಪಾದನ ಹೊಂದಿ ನೆರಳು, ಶಬ್ದಗಳ ರೂಪದಲ್ಲಿ ಪುನಃ ಕಾಣಿಸುವುದೂ ಕೇಳಿಸುವುದೂ ಎಂದೂ, ಅದೇ ನಾವು ನಂಬುವ ಭೂತ, ಪಿಶಾಚ ಅನುಭವವೆಂದೂ ಕೆಲವರು ತರ್ಕಿಸುವರು.

ವಜ್ರ ವೈಢೂರ್ಯ ಶಕ್ತಿ

ವಜ್ರ, ಕೆಂಪು, ಪಚ್ಚೆ, ನೀಲ ಕಲ್ಲುಗಳನ್ನು ನಮ್ಮಲ್ಲಿ ಆಭರಣವಾಗಿ ತೊಟ್ಟುಕೊಂಡು ಬರುವ ಪದ್ಧತಿ ಅತೀ ಪ್ರಾಚೀನ ಕಾಲದಿಂದಲೂ ಸಾಂಪ್ರದಾಯವಾಗಿದೆ. ಇವುಗಳಿಂದ ನಮ್ಮ ದೇಹದ ಮೇಲೆ ಒಳ್ಳೇ ಆರೋಗ್ಯಕರ ಪರಿಣಾಮ ಉಂಟಾಗುತ್ತವೆಂದು ಅನೇಕರಿಗೆ ಗೊತ್ತಿದೆ. ಕೆಲವು ಅಂತಹ ಕಲ್ಲುಗಳಿಂದ ಒಳ್ಳೇ ಭಾಗ್ಯವುಂಟಾಗುವುದೆಂದೂ ನಂಬಿಕೆ ಇದೆ. ವಿಜ್ಞಾನಿಗಳು ಈ ಕುರಿತು ಕೆಲವು ತಾರ್ಕಿಕ ಸತ್ಯಗಳನ್ನು ಕಂಡುಹಿಡಿಯಲು ಪ್ರಯತ್ನ ಮಾಡಿರುವರು.

ವಿದ್ಯುತ್ಚ್ಛಕ್ತಿಯ ಯಾವುದೊ ಒಂದು ರೂಪವು ಈ ಕಲ್ಲುಗಳ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಭೂಗರ್ಭ ಶಾಸ್ತ್ರಜ್ಞರು ತಿಳಿದುಕೊಂಡಿರುವರು. ಇದೇ ಪ್ರಕಾರ ವಿವಿಧ ಲೋಹಗಳೂ ಉತ್ಪನ್ನವಾಗುತ್ತದೆ. ಬಂಗಾರ ಬೆಳ್ಳಿಗಳು ವಿದ್ಯುತ್ ಪ್ರವಾಹಕ್ಕೆ ಒಳ್ಳೇ ಸಹಕಾರಿಯಾಗುವ ಲೋಹಗಳು. ಅವುಗಳನ್ನು ಧರಿಸುವುದರಿಂದ ವಾತಾವರಣದಲ್ಲಿ ಹರಿದಾಡುವ ವಿದ್ಯುತ್ ಚೇತನವು ಆಕರ್ಷಿಸಲ್ಪಟ್ಟು ಅದು ಧರಿಸಿದವನ ದೇಹದೊಳಗೆ ಸೂಕ್ಷ್ಮರೂಪದಲ್ಲಿ ಸೇರುವಂತಾಗುತ್ತದೆ. ಇದರಿಂದ ಆರೋಗ್ಯವು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.

ಕೆಂಪು ಪಚ್ಚೆ ಕಲ್ಲುಗಳಲ್ಲಿ ಶೇಕಡಾ ೫೦ಗಿಂತಲೂ ಹೆಚ್ಚಾಗಿ ಅಲ್ಯೂಮಿನಿಯಂ ಲೋಹವು ಮಿಶ್ರವಾಗಿದೆ ಎಂದರೆ ನಮಗೆ ಆಶ್ಚರ್ಯವಾಗಬಹುದು. ಹೀಗೆ ಪ್ರತಿಯೊಂದೂ ಕಲ್ಲುಗಳಲ್ಲೂ ವಿದ್ಯುತ್ ಶಕ್ತಿಯನ್ನು ಆಕರ್ಷಿಸಿಕೊಳ್ಳುವ ಲೋಹ ಮಿಶ್ರಣವಿರುವುದರಿಂದ ಅವುಗಳು ವಿದ್ಯುತ್ತಿನೊಡನೆ ಸೂಜಿಕಲ್ಲಿನ ಆಕರ್ಷಕ ಶಕ್ತಿಯನ್ನು ಉಂಟುಮಾಡುತ್ತವೆ.

ಸೂಜಿಕಲ್ಲಿನ ಆಕರ್ಷಣ ಶಕ್ತಿಗೂ ವಿದ್ಯುತ್ ಶಕ್ತಿಗೂ ನಿಕಟ ಸಂಬಂಧವಿದೆ. ಅದರಿಂದಲೇ ವಿದ್ಯುತನ್ನು ಉತ್ಪಾದನ ಮಾಡಬಹುದು. ಹೀಗೆ ವಜ್ರ ಮುಂತಾದುವುಗಳಲ್ಲಿರುವ ಲೋಹ ಅಂಶಗಳು ವಿದ್ಯುತ್ ಸಂಬಂಧದಿಂದ ಆಕರ್ಷಣ ಶಕ್ತಿಯನ್ನು ಹೊಂದಿ ರಕ್ತದೊಳಗೆ ಕೂಡಿಕೊಂಡಿರುವ ಕಬ್ಬಿಣದ ಸತ್ವವನ್ನು ಶುದ್ಧ ಮಾಡುತ್ತವೆ, ಮತ್ತು ಸರಿಯಾಗಿ ಚಲನೆ ಹೊಂದುವಂತೆ ಮಾಡುತ್ತವೆಂದು ಅನೇಕ ವಿಜ್ಞಾನಿಗಳು ಆ ಸಂಬಂಧ ಶೋಧೆ ನಡೆಸುತ್ತಲಿದ್ದಾರೆ.

1944—A YEAR OF RECORD PROGRESS:

NEW BUSINESS COMPLETED Rs. 20,22,550.

IT IS WORTHY OF NOTE THAT INSPITE OF A 100% INCREASE IN NEW BUSINESS, THE RENEWAL EXPENSE RATIO FOR THE YEAR 1944 WORKS BELOW 15%. A NET INTEREST OF 4% HAS BEEN EARNED ON THE MEAN LIFE ASSURANCE FUND DURING THE YEAR. THESE FACTORS COMPARE VERY FAVOURABLE WITH THE BEST MANAGED LIFE ASSURANCE COMPANIES IN INDIA.

THIS PROGRESS OF THE "**POPULAR**" MUST HIGHLY IMPRESS YOU. AS A COMPANY OF YOUR **OWN**, IT LAYS A CLAIM TO YOUR LIFE ASSURANCE. IN THE NEW ORGANISATION PROGRAMME OF THE COMPANY THERE IS A PLACE FOR YOU ON HANDSOME REMUNERATION AS AN **ORGANISER, SPECIAL AGENT** OR **DISTRICT AGENT** ON A SMALL ANNUAL GUARANTEE OF BUSINESS. OR, IF YOU CAN DEVOTE YOUR SPARE TIME FOR AN **ORDINARY AGENCY**, YOU CAN EARN THE MAXIMUM COMMISSION PERMISSIBLE WITHOUT ANY BUSINESS GUARANTEE. PLEASE CALL AT THE OFFICE OR WRITE FOR DETAILS.

TO MAKE 1945 A YEAR OF GREATER ACHIEVEMENT, WE SOLICIT YOUR CO-OPERATION. THE MANAGEMENT IS CONFIDENT THAT IT WILL BE READILY EXTENDED

THE POPULAR INSURANCE COMPANY LTD.,

MANGALORE.

"The Popular by Preference for an Agency or a Policy"

ಆದರೂ ಕಳ್ಳನಲ್ಲ

[ಕಳೆದ ಸಂಚಿಕೆಗಳಲ್ಲಿ ವೆಂಕಟ ನಾರ್ಣಪ್ಪನೆಂಬ ಸುಸಂಸ್ಕೃತ ಚೋರ ಶಿಖಾಮಣಿಯ ಕೆಲವು ಚಮತ್ಕಾರ ಕೃತ್ಯಗಳ ವರದಿಯನ್ನು ಮೈಸೂರ್ ಕಡೆಯ ಮಿಲಿಟರಿ ಡ್ರೈವರನೊಬ್ಬನು ಹೇಳಿದಂತೆ ವಿವರಿಸಲಾಗಿತ್ತು. ಈ ಸಲ ಅವನು ಮಾಡಿದ ಒಂದೆರಡು ಇತರ ಚೌರ್ಯಗಳನ್ನು ತಿಳಿಸಿ ಕತೆಯನ್ನು ಅಂತ್ಯಗೊಳಿಸಲಾಗಿದೆ.]

ಮರುದಿನ ಆ ಡ್ರೈವರನು ಪುನಃ ನಮಗೆ ನದೀ ತೀರದಲ್ಲಿ ಭೇಟಿಯಾದ. ಅತ್ಯಾತುರತೆಯಿಂದ ನಾವವನನ್ನು ಕತೆ ಮುಂದರಿಸಲು ಕೇಳಿಕೊಂಡೆವು. ಮುಂಚಿನ ದಿನದ ನಿರೂಪವನ್ನು ನಿಲ್ಲಿಸಿದಲ್ಲಿಂದ ಮತ್ತೆ ಅವನು ಮುಂದರಿಸಿದ:

ಐರೋಪ್ಯ ಸರ್ಜನರಿಗೆಂದು ಟೆಲಿಫೋನು ಮಾಡಿ ಚೆಟ್ಟಿಯಾರರ ಅಂಗಡಿಯಿಂದ ಇನ್ನೂರು ತೊಲೆ ಪುತ್ಥಳಿ ಬಂಗಾರ ತರಿಸಿ, 'ತೋರಿಸಿ ತರುವೆ'ನೆಂದು ಹಿತ್ತಲ ಭಾಗದಿಂದ ಅದೃಶ್ಯನಾದ ನಾರ್ಣಪ್ಪನು ಮತ್ತೆ ಕಾಣಿಸಿದುದು ಇನ್ನೊರ್ವ ದೊಡ್ಡ ಅರಮನೆ ಅಧಿಕಾರಿಯ ಬಂಗಲೆ ಮುಂದೆ. ಆಗಲೂ ಒಂದು ತಾಜಾ ಹೊಸತಾದ ಬಾಡಿಗೆ ಕಾರಿನಲ್ಲಿ ಅವನು ಬಂದಿದ್ದನು. ಸಮಯ ಸುಮಾರು ಮಧ್ಯಾಹ್ನ ನಾಲ್ಕು ಘಂಟೆಯದು. ಆ ಉನ್ನತ ಅಧಿಕಾರಿಗಳು ಯಾರನ್ನೋ ಕಾಣಲು ಲಲಿತ್ ಮಹಾಲ್ ಅರಮನೆಗೆ ಹೋಗಿದ್ದರು. ಅವರು ಹಿಂದಕ್ಕೆ ಬರುವಾಗ ಒಂದೆರಡು ಗಂಟೆಗಳಾಗಬಹುದೆಂದು ನಾರ್ಣಪ್ಪನಿಗೆ ಖಂಡಿತ ಗೊತ್ತಿತ್ತು.

ಸರಕಾರೀ ಆಫೀಸಿನ ದೊಡ್ಡ ಅಧಿಕಾರಿಯಂತೆ ಜರಿ ಮುಂಡಾಸು ಇಟ್ಟುಕೊಂಡಿದ್ದ ನಾರ್ಣಪ್ಪನನ್ನು ನೋಡಿದ ಕೂಡಲೇ ಬಂಗಲೆಯ ಹೊರ ಅಂಗಳದಲ್ಲಿ ನಿಂತಿದ್ದ ಆ ಅಧಿಕಾರಿಯ ಪೇದೆಯು ಓಡಿ ಬಂದು: "ಯಜಮಾನರು ಲಲಿತ್ ಮಹಾಲಿಗೆ ಹೋಗಿರುವರು ಬುದ್ಧೀ" ಎಂದ. ಅದಕ್ಕೆ ನಾರ್ಣಪ್ಪ ಕೌತುಕ ಸೂಚಿಸದೇ: "ಹೌದು, ನಾನೂ ಅಲ್ಲಿಂದಲೇ ಬಂದದ್ದು. ನೀನು ನನ್ನ ಜೊತೆಯಲ್ಲಿ ಬಾ. ನಿನ್ನೊಡನೆ ಕೆಲವು ಸಾಮಾನುಗಳನ್ನು ತೆಗೆಸಿಕೊಡಲು ಸಾಹೇಬರು (ಅಧಿಕಾರಿ) ಹೇಳಿದ್ದಾರೆ. ಕಾರಿನಲ್ಲಿ ಕೂತುಕೊ. ಮತ್ತು ನಿನ್ನ ಆ ಪೇದೇ ಪಟ್ಟಿ ಹಾಕಿಕೊಂಡು ಬಾ" ಎಂದ. ಪೇದೇ ಪಟ್ಟಿ ಎಂದರೆ ದೊಡ್ಡ ದೊಡ್ಡ ರಾಜಸ್ಥಾನದ, ಸರಕಾರೀ ಹುದ್ದೆಯ ಅಧಿಕಾರಿಗಳ ಪೇದೆಗಳಿಗೆ ಆಯಾ ಇಲಾಖೆಯ ಮತ್ತು ಅದರ ಅಧಿಕಾರಿಯ ಹುದ್ದೆಯ ಹೆಸರು ಬರೆದಿರುವ ಹಿತ್ತಾಳೆಯ ಪಟ್ಟಿಯೊಂದನ್ನು ಧರಿಸಲು ಕೊಡುತ್ತಾರೆ. ಕೆಂಪು ಅಥವಾ ಹಸರು ಬಣ್ಣದ ಬಟ್ಟೆಗೆ ಅದನ್ನು ಸಿಕ್ಕಿಸಿ ಅವರು ಒಂದು ಕಡೆಯ ಹೆಗಲಿನ ಮೇಲಿನಿಂದ ತೂಗಿಸಬೇಕು. ಅಧಿಕಾರಿಗಳು ಸರಕಾರಿ ಕೆಲಸದ ಮೇಲೆ ಎಲ್ಲಾದರೂ ಹೋದಾಗ ಈ ಪೇದೆಗಳು ಪಟ್ಟಿಗಳನ್ನು ಧರಿಸಿ ಅವರ ಜೊತೆಯಲ್ಲಿದ್ದರೆ ಆ ಅಧಿಕಾರಿ ಯಾರೆಂದು ಪಕ್ಕನೆ ತಿಳಿಯುತ್ತದೆ.

ನಾರ್ಣಪ್ಪನಿಗೆ ಈ ಪೇದೆಗಳ ಮಹತ್ವ ತಿಳಿಯದೇ ಇಲ್ಲ. ಅದಕ್ಕಾಗಿಯೇ ಅವನು ಪ್ರತ್ಯೇಕವಾಗಿ ನಿನ್ನ 'ಹೆಗಲು ಪಟ್ಟಿ ಸಿಕ್ಕಿಸಿ ಬಾ' ಎಂದು ಸೂಚಿಸಿದ್ದು. ಏನೋ ಅವಶ್ಯದ ಕೆಲಸವಿರಬಹುದೆಂದು ಪೇದೆಯು 'ಪಟ್ಟಿ' ಸಿಕ್ಕಿಸಿ ಧಾವಿಸಿ ಬಂದು ನಾರ್ಣಪ್ಪನು ನಿರ್ದೇಶಿಸಿದಂತೆ ಕಾರಿನೊಳಗೆ ಕೂತ. ರಾಜಧಾನಿಯಲ್ಲಿನ ದೊಡ್ಡದೊಂದು ಕೈಗಾರಿಕೆ ವಸ್ತು ಪ್ರದರ್ಶನಾಶಾಲೆಗೆ ತೆಗೆದುಕೊಂಡು ಹೋಗೆಂದು ಡ್ರೈವರನಿಗೆ ಸೂಚಿಸಲು ಕೆಲವೇ ಕ್ಷಣಗಳಲ್ಲಿ ಕಾರು ಪ್ರದರ್ಶನಾಲಯದ ಮುಂದೆ ನಿಂತಿತು.

ಪೇದೆಯನ್ನು ಜೊತೆಯಲ್ಲಿ ಕರಕೊಂಡು ನಾರ್ಣಪ್ಪನು ಪ್ರದರ್ಶನಾಲಯದೊಳಗೆ ಹೊಕ್ಕಿದಾಗ ಅಲ್ಲಿನ ಸೇವಕರೂ, ನೌಕರರೂ ಯಾರೋ ಅಧಿಕಾರಿಗಳ ಕಡೆಯವನೆಂದು ಅವನಿಗೆ ಸನ್ಮಾನಪೂರ್ವಕವಾಗಿ ವಂದಿಸಿದರು. ಪೇದೆಯನ್ನು ಬಾಗಿಲ ಬಳಿಯಲ್ಲಿ ನಿಲ್ಲುವಂತೆ ಹೇಳಿ ನಾರ್ಣಪ್ಪನು ನೇರವಾಗಿ ಅಲ್ಲಿನ ಮುಖ್ಯಾಧಿಕಾರಿಯ ಮೇಜಿನ ಬಳಿಗೆ ಹೋಗಿ ಅರಮನೆಯ ಆ ದೊಡ್ಡ ಅಧಿಕಾರಿಯ ಹೆಸರನ್ನು ಹೇಳಿ ತಾನು ಅವರ ಕಡೆಯಿಂದ ಬಂದವನೆಂತಲೂ, ಅವರು ತನಗೆ ಕೆಲವೊಂದು ವಸ್ತುಗಳನ್ನು ತರಲು ಹೇಳಿರುವುದಾಗಿಯೂ ತಿಳಿಸಿ ಭರವಸೆಗಾಗಿ ಬಾಗಿಲಲ್ಲಿ ನಿಂತ ಪೇದೆಯನ್ನು ತೋರಿಸಿದ. ಅರಮನೆಯ ಬಿಲ್ಲೆ ಧರಿಸಿದ ಪೇದೆಯನ್ನು ನೋಡಿದ ಮೇಲಂತೂ ಯಾರೂ ಸಂದೇಹಪಡುವಂತಿಲ್ಲ. ಪ್ರದರ್ಶನಾಲಯದ ಅಧಿಕಾರಿಗಳು: "ಆಗಲಿ, ಸರ್. ತಮಗೆ ಬೇಕಾದ ವಸ್ತುಗಳನ್ನು ಚುನಾಯಿಸಿ" ಎಂದಾಗ ನಾರ್ಣಪ್ಪ ತನ್ನ ಅರ್ಧ ಕೆಲಸ ಆಯಿತೆಂದು ತಿಳಿದುಕೊಂಡ.

ಮತ್ತೆ ವಸ್ತುಗಳನ್ನು ಚುನಾಯಿಸಲಿಕ್ಕೆ ಆರಂಭ ಮಾಡಿದ. ಚೀಲದಿಂದ ಒಂದು ಡೈರಿಯನ್ನು ತೆಗೆದು ಅದರಲ್ಲಿ ಅವನು ಕೆಲವು ದಿವಸಗಳ ಮೊದಲೇ ಬರಕೊಂಡಿದ್ದ ಅನೇಕ ಅಮೂಲ್ಯ ವಸ್ತುಗಳ ಹೆಸರನ್ನು ಓದ ತೊಡಗಿದಾಗ ಪ್ರದರ್ಶನಾಲಯದ ಕೆಲಸಗಾರರು ಅವನನ್ನೂ ಆಯಾ ವಸ್ತುಗಳಿರುವ ಕಪಾಟುಗಳ ಬಳಿ ಕರಕೊಂಡು ಹೋಗಿ ತೋರಿಸಿದರು. ನಾರ್ಣಪ್ಪನು ಮೊದಲು ಚಿನ್ನ ಬೆಳ್ಳಿಯ ಮೂರ್ತಿಗಳಲ್ಲೂ, ಆಟದ ವಸ್ತುಗಳಲ್ಲಿ ಬೇರೆ ಬೇರೆ ಮಾದರಿಯವುಗಳನ್ನೂ ಆರಿಸಿಕೊಂಡ. ನಂತರ ದಂತದ ನಾಜೂಕು ಕೆಲಸದ ವಿಗ್ರಹಗಳನ್ನೂ, ಮತ್ತಿತರ ಬೆಲೆಬಾಳುವ ಸಾಮಾನುಗಳನ್ನೂ ಆರಿಸಿದ. ಅಮೋಘ ಕಲಾ ಕುಶಲತೆಯಿಂದ ತಯಾರಿಸಿದ ಕೈ ಬಳೆಗಳನ್ನೂ, ಚಿನ್ನ ಬೆಳ್ಳಿಯ ಕಂಠ ಸರಗಳನ್ನೂ ಚುನಾಯಿಸಿದ. ಆ ಮೇಲೆ ಅವನ ಡೈರಿಯಲ್ಲಿ ಮೈಸೂರು ಸಿಲ್ಕು ಬಟ್ಟೆಗಳ ವಿವರವಿತ್ತು. ನಾಜೂಕು ರೇಶ್ಮೆಯ ಎಂಟತ್ತು ಸೀರೆಗಳನ್ನೂ, ಮತ್ತು ಕೆಲವು ಬೇರೆ ಬೇರೆ ಬಣ್ಣದ ಸಿಲ್ಕು, ಸೆಟಿನ್, ಮತ್ತು ವೆಲ್ವೆಟ್ ಬಟ್ಟೆಗಳನ್ನೂ ತೆಗೆಯಲು ಹೇಳಿದ. ಅವನು ಹೇಳಿದಂತೆ ನೌಕರರು ತೆಗೆದು ಒಂದು ಮೂಟೆ ಮಾಡಿದರು. ಹತ್ತಿರವಿದ್ದ ಕಾರಕೂನನೊಬ್ಬನು ಸಾಮಾನುಗಳ ವಿವರವನ್ನೂ ಬೆಲೆಯನ್ನೂ ಹಾಕಿದ ಬಿಲ್ಲ ತಯಾರಿಸಿದ. ಮೈಸೂರು ಸಂಸ್ಥಾನದ ಬೇರೆ ಬೇರೆ ಕೈಗಾರಿಕೆ ಕೇಂದ್ರಗಳಿಂದ ಪ್ರದರ್ಶನಕ್ಕೂ ಮಾರಾಟಕ್ಕೂ ಇಡಲ್ಪಟ್ಟಂತ ಆ ವಸ್ತುಗಳ ಬೆಲೆಯಾದರೂ ಸಾಮಾನ್ಯವಾದುದಲ್ಲ. ಅದರ ಒಟ್ಟು ಮೌಲ್ಯವು ನಾಲ್ಕು ಸಾವಿರಕ್ಕೂ ಮಿಕ್ಕಿತು. ನಾರ್ಣಪ್ಪನೆಂದ: "ನಮ್ಮ ಸಾಹೇಬರಿಗೆ ಇವೆಲ್ಲವೂ ಬೇಡ. ಆದರೆ ಇವುಗಳಲ್ಲಿಂದ ಅವರ ಮನೆಯವರು ಬೇಕಾದುದನ್ನು ಮಾತ್ರ ಚುನಾಯಿಸಿ ಉಳಿದುದನ್ನು ವಾಪಾಸು ಮಾಡುತ್ತಾರೆ. ಆದರೆ ವಸ್ತುಗಳು ಕೆಡದಂತೆ ನೋಡಿಕೊಳ್ಳುವರು." ಹೀಗೆಂದಾಗ ಪ್ರದರ್ಶನಾಲಯದ ಮೆನೇಜರರು "ಆಗಲಿ, ಸರ್, ಈಗ ತೆಗೆದುಕೊಂಡು ಹೋಗುವ ವಸ್ತುಗಳ ವಿವರವೂ ಅವುಗಳ ಬೆಲೆಯೂ ಈ ಬಿಲ್ಲಿನಲ್ಲಿ ಸೂಚಿಸಿದೆ. ಬೇಕಾದುದನ್ನು ಅವರು ಚುನಾಯಿಸಿದ ನಂತರ ಪ್ರತ್ಯೇಕ ಬೇರೆ ಬಿಲ್ಲ್ ಮಾಡಲಾಗುವುದು" ಎಂದಾಗ ನಾರ್ಣಪ್ಪ: "ಸರಿ, ಸರಿ. ದೇಟ್ಸ್ ಆಲ್ ರ್‍ಯಾಟ್" ಎಂದ.

ಎಲ್ಲವೂ ಭದ್ರವಾಗಿ ಕಟ್ಟಿ ಆದ ಮೇಲೆ ಬಾಗಿಲ ಬಳಿ ನಿಂತ ಪೇದೆಯನ್ನು ಕರೆದು: "ಲೋ, ಇವುಗಳನ್ನು ತೆಗೆದುಕೊಂಡು ಕಾರಿನಲ್ಲಿ ಇಡೊ, ಅಮ್ಮಾ ಅವರಿಗೆ ತೋರಿಸಿ ತರೋಣ" ಎಂದು ಗಟ್ಟಿಯಾಗಿ ನುಡಿದಾಗ ಪೇದೆಯು ನಮ್ರವಾಗಿ ಹೇಳಿದಂತೆ ಮಾಡಿದ. ಅವನಿಗೆ ಯಾವುದನ್ನೂ ಯೋಚಿಸಲು ಅವಕಾಶ ದೊರೆಯಲಿಲ್ಲ. ಆದರೂ ಮನಸ್ಸಿನಲ್ಲೇ ಅವನಿಗೆ ಒಂದು ತರದ ಸಂಶಯವಾಗಿದ್ದರೂ, ದೊಡ್ಡವರ ಮರ್ಜಿ ಹೇಗಿರುತ್ತದೆಂದು ಹೇಳಬರುವುದಿಲ್ಲವಾದುದರಿಂದ ತೆಪ್ಪಗಾದ.

ಕಾರನ್ನು ಇನ್ನೊಂದು ಬಂಗ್ಲೆಯ ಬಳಿ ನಿಲ್ಲಿಸಿದಾಗ ಅಲ್ಲೊಬ್ಬ ಪೇದೆ ಓಡಿ ಬಂದ. ಆ ಬಂಗಲೆಯು ಸರಕಾರಿ ಬಂಗಲೆಯಾಗಿತ್ತು. ಹೊರಗಿನ ದೊಡ್ಡ ಮಹನೀಯರು ರಾಜ ಅತಿಥಿಗಳಾಗಿ ಬಂದಾಗ ಅವರು ಉಳಕೊಳ್ಳುವ ಬಂಗಲೆ ಅದು. ತಿಂಗಳಲ್ಲಿ ಅನೇಕ ದಿವಸ ಅದು ಖಾಲಿ ಬೀಳುತ್ತಿರುತ್ತದೆ. ಅಲ್ಲಿಂದ ಓಡಿ ಬಂದ ಪೇದೆ ಮತ್ತಾರೂ ಅಲ್ಲದೆ ನಮ್ಮ ನಾರ್ಣಪ್ಪನ ಕೂಟದವನೇ ಆಗಿದ್ದ. ಅವನು ಹತ್ತಿರ ಬಂದಾಗ: "ಇವುಗಳನ್ನು ನಿಮ್ಮ ರಾಯರಿಗೆ ತೋರಿಸಿತ್ತಾರೊ" ಎಂದ ನಾರ್ಣಪ್ಪ. "ಆಗಲಿ ಬುದ್ಧಿ" ಎಂದು ನಟಿಸುತ್ತಾ ಅವನು ಅವುಗಳನ್ನು ಒಳಗೆ ಕೊಂಡ್ಹೊಯ್ದ. ಅಲ್ಲಿಯ ಕಾವಲಿನ ಒಬ್ಬಿಬ್ಬರು ಏನೊ ಸರಕಾರಿ ಆಫೀಸರರ ಕೆಲಸವಿರಬೇಕೆಂದು ಮಿಟ ಮಿಟನೆ ನೋಡುತ್ತಿದ್ದರು. ಕಡೆಗೆ ನಾರ್ಣಪ್ಪನು ಕಾರಿನಿಂದ ಇಳಿದು "ಈಗ ಬಂದೆ" ಎಂದು ಹೇಳಿ ಬಂಗಲೆಯ ಬಳಿ ಹೋದ. ಸಾಮಾನು ಹಿಡಕೊಂಡ ಪೇದೆಯೂ ನಾರ್ಣಪ್ಪನೂ ಬಂಗಲೆಯ ಹಿಂಭಾಗಕ್ಕೆ ಹೋಗಿ ಮರೆಯಾದರು. ಮತ್ತೆ ಅವರ ಪತ್ತೆ ಇಲ್ಲ. ಹೊರಗೆ ನಿಂತ ಕಾರು ಅಲ್ಲೇ.

ಸರ್ಜನರ ಮನೆಯಲ್ಲಿ ಬಂಗಾರ ಕಾಣೆಯಾದ ಮರುದಿವಸವೇ ಈ ಘಟನೆ ನಡೆದುದು. ಕಾರಣ ನಾರ್ಣಪ್ಪನಿಗೆ ಗೊತ್ತು ತನ್ನ ಕಳ್ಳಾಟಿಕೆಯ ವರ್ತಮಾನ ಊರಲ್ಲೆಲ್ಲ ಹರಡಿದರೆ ಮತ್ತೆ ಕಷ್ಟಕ್ಕೆ ಬರಬಹುದೆಂದು. ಅದಕ್ಕಾಗಿ ಅವನು ಅಂದೇ ಸಾಯಂಕಾಲ ದೊಡ್ಡ ಪೇಟೆಯ ಒಂದು ಚಿನ್ನಾಭರಣದ ಸರಾಫ ಅಂಗಡಿಯಲ್ಲಿ ಮತ್ತೊಂದು ಚಮತ್ಕಾರ ನಡೆಸಿಬಿಟ್ಟ.

ಸುಮಾರು ಐದು ಗಂಟೆ ಹೊತ್ತಿಗೆ ಒಂದು ಪರದೆ ಮುಚ್ಚಿದ ಟಾಂಗಾ ಗಾಡಿಯು ದೊಡ್ಡ ಪೇಟೆಯ ಪಕ್ಕದ ಮಾರ್ಗದಿಂದ ಬಂತು. ಆ ಮಾರ್ಗವು ದೊಡ್ಡ ಪೇಟೆಯ ವಿಶಾಲ ರಸ್ತೆಯನ್ನು ಕೂಡುವಲ್ಲೇ ಆ ಚಿನ್ನಾಭರಣ ಅಂಗಡಿಯಿತ್ತು. ಆದುದರಿಂದ ಗಾಡಿಯನ್ನು ಅಡ್ಡವಾಗಿ— ಅಂದರೆ ಅಂಗಡಿಯವರಿಗೆ ಕುದುರೆ ಮತ್ತು ಪರದೆ ಮುಚ್ಚಿದ ಮುಂಭಾಗ ಇಷ್ಟು ಮಾತ್ರ ಕಾಣುವಂತೆ ಅದನ್ನು ನಿಲ್ಲಿಸಲಾಗಿತ್ತು. ಪರದೆಯ ಮುಂದೆ ಒಬ್ಬ ಬಿಳಿಗಡ್ಡದ, ಕೆಂಪು ಟೊಪ್ಪಿಯ ಮೇಲೆ ಮುಂಡಾಸು ಸುತ್ತಿ, ಬೆಲೆಬಾಳುವ ಮುಸ[illegible] ಶೈಲಿಯ ಉಡುಪುಗಳನ್ನು ಧರಿಸಿದ ಓರ್ವ ಮುದುಕ ಗೃಹಸ್ತ ಕೂತಿದ್ದ. ಅವನ ಬಾಯಲ್ಲಿ ಹಲ್ಲುಗಳಿರಲಿಲ್ಲ. ಅವನೇ ನಮ್ಮ ನಾರ್ಣಪ್ಪ. ನಾರ್ಣಪ್ಪನು ಸರಾಫ ಅಂಗಡಿಯ ಒಳಗೆ ಹೋಗಿ ನಾಲ್ಕೈದು ವಜ್ರದ ಹಾರಗಳನ್ನೂ, ಕೈ ಬಳೆಗಳನ್ನೂ, ಉಂಗುರಗಳನ್ನೂ ತೆಗೆದು: "ಗಾಡಿಯೊಳಗೆ ಹೆಂಗಸರಿದ್ದಾರೆ. ತೋರಿಸುತ್ತೇನೆ" ಎಂದ. ಅಲ್ಲಿಯ ಮಾಲಕರು "ಆಗಲಿ ಆಗಲಿ" ಎಂದರು. ಉರ್ದು ಭಾಷೆಯಲ್ಲಿ ಗಾಡಿಯೊಳಗಿನವರನ್ನೂ ಉದ್ದೇಶಿಸಿ "ಕತೀಜಾ ಬೀಬಿ ಇವುಗಳನ್ನು ನೋಡಿ ಆರಿಸಿ ಕೊಡು" ಎಂದಾಗ ಸ್ತ್ರೀ ಲಕ್ಷಣದ ಮತ್ತು ಹಾವಭಾವದ ಎರಡು ಕೈಗಳು ಹೊರ ಬಂದು ಆಭರಣಗಳನ್ನು ಸ್ವೀಕರಿಸಿದ[illegible] ಕೆಲವು ಕ್ಷಣದಲ್ಲಿ ನಾಲ್ಕೈದು ಆಭರಣಗಳಲ್ಲಿ ಮೂರನ್ನು ಇಟ್ಟು, ಎರಡು ಪುನಃ ಹೊರಗೆ ಕೊಡಲ್ಪಟ್ಟವು. ನಾರ್ಣಪ್ಪ ಸಾಹೇಬನು ಅವುಗಳನ್ನು ಅಂಗಡಿ ಒಳಗಡೆ ತಂದು ಬೇರೆ ಕೆಲವುಗಳನ್ನು ಹೆಕ್ಕಿ ತೆಗೆದ.

(೧೧ನೇ ಪುಟಕ್ಕೆ ಮುಂದುವರಿದಿದೆ.)

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

2-12-1944 U. Shantha Rama Rao, *Secretary*

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ

ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ವಜ್ರ ವೈಢೂರ್ಯಗಳ ವೈಚಿತ್ರ

ಅವುಗಳ ವಿಚಿತ್ರ ಶಕ್ತಿ

ವೈಜ್ಞಾನಿಕ ಅದ್ಭುತ ಶೋಧೆಗಳು

ಜಗತ್ತಿನ ಎಲ್ಲಾ ತರದ ಜೀವಜಂತುಗಳೂ ವಿದ್ಯುತ್ ಶಕ್ತಿಯ ಒಂದಲ್ಲ ಒಂದು ತರದ ಪ್ರಭಾವಕ್ಕೆ ಗುರಿಯಾಗುತ್ತವೆಂದು ವಿಜ್ಞಾನಿಗಳು ನಂಬಿ ಬಂದಿರುವರು. ವಿದ್ಯುತ್ ಶಕ್ತಿಯ ಅದ್ಭುತ ಪರಿಣಾಮಗಳನ್ನು ಹಲವು ವಿಧದಲ್ಲಿ ಬೇರೆ ಬೇರೆ ಸಂಶೋಧಕರು ಕಂಡುಹಿಡಿದಿರುವರು. ಮನುಷ್ಯನ ಶರೀರದಲ್ಲೇ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಪ್ರಮಾಣ ಪೂರ್ವಕವಾಗಿ ತೋರಿಸಿಕೊಟ್ಟಿರುವರು.

ಕೆಲವು ವರ್ಷಗಳ ಹಿಂದೆ ಬುಡಾಪೆಸ್ಟ್ ಅಲ್ಲಿ ಒಬ್ಬನು ತನ್ನ ಎರಡು ಕೈಗಳಿಗೆ ಎರಡು ತಂತಿಗಳನ್ನು ಕಟ್ಟಿ ಅವಕ್ಕೆ ಒಂದು ಬಲ್ಬನ್ನು ಜೋಡಿಸಿ ತನ್ನ ದೇಹದೊಳಗಿನ ವಿದ್ಯುತ್ ಶಕ್ತಿಯಿಂದ ಅದನ್ನು ಉರಿಸಿ ತೋರಿಸಿದನು.

ಮನುಷ್ಯರ ಮತ್ತು ಪ್ರಾಣಿಗಳ ರೋಮವನ್ನು ರೇಶ್ಮೆ ಬಟ್ಟೆಗೆ ಚೆನ್ನಾಗಿ ತಿಕ್ಕಿದರೆ ವಿದ್ಯುತ್ ಕಿಡಿಗಳು ಹಾರುವುದನ್ನು ನಾವು ಕಾಣಬಹುದು.

ದಕ್ಷಿಣ ಅಮೇರಿಕದ ಬಳಿಯ ಸಮುದ್ರದಲ್ಲಿ ಈಲ್ ಎಂಬೊಂದು ಜಾತಿಯ ಮೀನು ಇದೆ. ಇದು ತನ್ನ ದೇಹದಿಂದ ವಿದ್ಯುತ್ ಕಿರಣಗಳನ್ನು ಉಂಟುಮಾಡಿ ತನ್ನ ಕೊಳ್ಳೆಯನ್ನು ಕೊಲ್ಲುತ್ತದೆ.

ಮನುಷ್ಯನ ಸ್ನಾಯುಗಳಲ್ಲೂ ಮಿದುಳಿನಲ್ಲೂ ವಿದ್ಯುತ್ ಪ್ರವಾಹವು ಹರಿಯುವುದರಿಂದಲೇ ಅವಕ್ಕೆ ಅಷ್ಟು ಅಗಾಧವಾದ ಬಲ ಮತ್ತು ವಿಚಾರ ಶಕ್ತಿಯುಂಟಾಗುತ್ತದೆಂದು ಕೆಲವು ವಿಜ್ಞಾನಿಗಳ ಅಭಿಪ್ರಾಯ.

ಸತ್ತ ಕಪ್ಪೆಗಳ ಅಂಗಗಳನ್ನೂ ಹೃತ್ಕೋಶವನ್ನೂ ಅತೀ ದುರ್ಬಲವಾದ ವಿದ್ಯುತ್ ಶಕ್ತಿಯ ಬಲದಿಂದ ಹಲವು ವರ್ಷಗಳ ತನಕ ಜೀವಂತವಿರಿಸಲಿಕ್ಕೆ ಸಾಧ್ಯವಾಗುತ್ತದೆ. ಇದೇ ವಿದ್ಯುತ್ ಶಕ್ತಿಯಿಂದ ಹಾಳಾದ ಅನೇಕ ಅವಯವಗಳನ್ನೂ ಪುನಃರ್ಜೀವನಗೊಳಿಸಬಹುದೆಂದು ಪ್ರಯೋಗ ಶಾಲೆಯಲ್ಲಿ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಭೂತ ಬಾಧೆ

ಕಣ್ಣಿಗೆ ಕಾಣದ ವಿದ್ಯುತ್ ಕಿರಣಗಳಿಂದ ದೂರ ದೂರ ದೇಶಗಳಿಂದ ವರ್ತಮಾನವನ್ನೂ, ಚಿತ್ರಗಳನ್ನೂ ಕಳುಹಿಸಬಹುದು. ಒಬ್ಬ ಭಾಷಣಗಾರನು ಸಭಿಕರನ್ನು ದಂಗು ಬಡಿಸುತ್ತಾನೆ. ಇದಕ್ಕೆ ಕಾರಣವಾದರೂ ಅವನ ವ್ಯಕ್ತಿತ್ವದಿಂದ ಹೊರಡುವ ವಿದ್ಯುತ್ ಕಿರಣ ಪ್ರಭಾವವೆಂದು ಹೇಳಬಹುದು.

ಗುಡ್ಡಗಳ ಇಲ್ಲವೆ ದೊಡ್ಡ ಕಟ್ಟಡಗಳ ಎದುರು ನಿಂತು ಗಟ್ಟಿಯಾಗಿ ಮಾತನಾಡಿದರೆ ಆ ಶಬ್ದವು ಪ್ರತಿಧ್ವನಿಗೈಯ್ಯುತ್ತದೆಂಬುದು ಸಾಮಾನ್ಯ ಅನುಭವ. ಇದೇ ಪ್ರಕಾರ ಅತೀ ಪ್ರಭಲವಾದ ವಿದ್ಯುಚ್ಛಕ್ತಿಯು ಉನ್ನತ ಮಟ್ಟಕ್ಕೇರಿದಾಗ ಜಗಳಮಾಡಿಕೊಳ್ಳುವವರಲ್ಲಿ ಒಬ್ಬನು ಇನ್ನೊಬ್ಬನನ್ನು ಕೊಲ್ಲುತ್ತಾನೆಂದೂ, ಹೀಗೆ ಹೊರಸೂಸಲ್ಪಟ್ಟ ವಿದ್ಯುತ್ ಚೈತನ್ಯವು ಪ್ರಕೃತಿಯಲ್ಲಿ ಒಂದು ನಿಯಮಿತ ಕಾಲ ಪ್ರಮಾಣದಲ್ಲಿ ಪ್ರತಿ ಉತ್ಪಾದನ ಹೊಂದಿ ನೆರಳು, ಶಬ್ದಗಳ ರೂಪದಲ್ಲಿ ಪುನಃ ಕಾಣಿಸುವುದೂ ಕೇಳಿಸುವುದೂ ಎಂದೂ, ಅದೇ ನಾವು ನಂಬುವ ಭೂತ, ಪಿಶಾಚ ಅನುಭವವೆಂದೂ ಕೆಲವರು ತರ್ಕಿಸುವರು.

ವಜ್ರ ವೈಢೂರ್ಯ ಶಕ್ತಿ

ವಜ್ರ, ಕೆಂಪು, ಪಚ್ಚೆ, ನೀಲ ಕಲ್ಲುಗಳನ್ನು ನಮ್ಮಲ್ಲಿ ಆಭರಣವಾಗಿ ತೊಟ್ಟುಕೊಂಡು ಬರುವ ಪದ್ಧತಿ ಅತೀ ಪ್ರಾಚೀನ ಕಾಲದಿಂದಲೂ ಸಾಂಪ್ರದಾಯವಾಗಿದೆ. ಇವುಗಳಿಂದ ನಮ್ಮ ದೇಹದ ಮೇಲೆ ಒಳ್ಳೇ ಆರೋಗ್ಯಕರ ಪರಿಣಾಮ ಉಂಟಾಗುತ್ತವೆಂದು ಅನೇಕರಿಗೆ ಗೊತ್ತಿದೆ. ಕೆಲವು ಅಂತಹ ಕಲ್ಲುಗಳಿಂದ ಒಳ್ಳೇ ಭಾಗ್ಯವುಂಟಾಗುವುದೆಂದೂ ನಂಬಿಕೆ ಇದೆ. ವಿಜ್ಞಾನಿಗಳು ಈ ಕುರಿತು ಕೆಲವು ತಾರ್ಕಿಕ ಸತ್ಯಗಳನ್ನು ಕಂಡುಹಿಡಿಯಲು ಪ್ರಯತ್ನ ಮಾಡಿರುವರು.

ವಿದ್ಯುತ್‌ಚ್ಛಕ್ತಿಯ ಯಾವುದೊ ಒಂದು ರೂಪವು ಈ ಕಲ್ಲುಗಳ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಭೂಗರ್ಭ ಶಾಸ್ತ್ರಜ್ಞರು ತಿಳಿದುಕೊಂಡಿರುವರು. ಇದೇ ಪ್ರಕಾರ ವಿವಿಧ ಲೋಹಗಳೂ ಉತ್ಪನ್ನವಾಗುತ್ತದೆ. ಬಂಗಾರ ಬೆಳ್ಳಿಗಳು ವಿದ್ಯುತ್ ಪ್ರವಾಹಕ್ಕೆ ಒಳ್ಳೇ ಸಹಕಾರಿಯಾಗುವ ಲೋಹಗಳು. ಅವುಗಳನ್ನು ಧರಿಸುವುದರಿಂದ ವಾತಾವರಣದಲ್ಲಿ ಹರಿದಾಡುವ ವಿದ್ಯುತ್ ಚೇತನವು ಆಕರ್ಷಿಸಲ್ಪಟ್ಟು ಅದು ಧರಿಸಿದವನ ದೇಹದೊಳಗೆ ಸೂಕ್ಷ್ಮರೂಪದಲ್ಲಿ ಸೇರುವಂತಾಗುತ್ತದೆ. ಇದರಿಂದ ಆರೋಗ್ಯವು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.

ಕೆಂಪು ಪಚ್ಚೆ ಕಲ್ಲುಗಳಲ್ಲಿ ಶೇಕಡಾ ೫೦ಗಿಂತಲೂ ಹೆಚ್ಚಾಗಿ ಅಲ್ಯೂಮಿನಿಯಂ ಲೋಹವು ಮಿಶ್ರವಾಗಿದೆ ಎಂದರೆ ನಮಗೆ ಆಶ್ಚರ್ಯವಾಗಬಹುದು. ಹೀಗೆ ಪ್ರತಿಯೊಂದೂ ಕಲ್ಲುಗಳಲ್ಲೂ ವಿದ್ಯುತ್ ಶಕ್ತಿಯನ್ನು ಆಕರ್ಷಿಸಿಕೊಳ್ಳುವ ಲೋಹ ಮಿಶ್ರಣವಿರುವುದರಿಂದ ಅವುಗಳು ವಿದ್ಯುಶ್ಶಕ್ತಿನೊಡನೆ ಸೂಜಿಕಲ್ಲಿನ ಆಕರ್ಷಕ ಶಕ್ತಿಯನ್ನು ಉಂಟುಮಾಡುತ್ತವೆ.

ಸೂಜಿಕಲ್ಲಿನ ಆಕರ್ಷಣ ಶಕ್ತಿಗೂ ವಿದ್ಯುತ್ ಶಕ್ತಿಗೂ ನಿಕಟ ಸಂಬಂಧವಿದೆ. ಅದರಿಂದಲೇ ವಿದ್ಯುತನ್ನು ಉತ್ಪಾದನ ಮಾಡಬಹುದು. ಹೀಗೆ ವಜ್ರ ಮುಂತಾದುವುಗಳಲ್ಲಿರುವ ಲೋಹ ಅಂಶಗಳು ವಿದ್ಯುತ್ ಸಂಬಂಧದಿಂದ ಆಕರ್ಷಣ ಶಕ್ತಿಯನ್ನು ಹೊಂದಿ ರಕ್ತದೊಳಗೆ ಕೂಡಿಕೊಂಡಿರುವ ಕಬ್ಬಿಣದ ಸತ್ವವನ್ನು ಶುದ್ಧ ಮಾಡುತ್ತವೆ, ಮತ್ತು ಸರಿಯಾಗಿ ಚಲನೆ ಹೊಂದುವಂತೆ ಮಾಡುತ್ತವೆಂದು ಅನೇಕ ವಿಜ್ಞಾನಿಗಳು ಆ ಸಂಬಂಧ ಶೋಧೆ ನಡೆಸುತ್ತಲಿದ್ದಾರೆ.

1944--A YEAR OF RECORD PROGRESS:

NEW BUSINESS COMPLETED Rs. 20,22,550.

IT IS WORTHY OF NOTE THAT INSPITE OF A 100% INCREASE IN NEW BUSINESS, THE RENEWAL EXPENSE RATIO FOR THE YEAR 1944 WORKS BELOW 15%. A NET INTEREST OF 4% HAS BEEN EARNED ON THE MEAN LIFE ASSURANCE FUND DURING THE YEAR. THESE FACTORS COMPARE VERY FAVOURABLE WITH THE BEST MANAGED LIFE ASSURANCE COMPANIES IN INDIA.

THIS PROGRESS OF THE "**POPULAR**" MUST HIGHLY IMPRESS YOU. AS A COMPANY OF YOUR **OWN**, IT LAYS A CLAIM TO YOUR LIFE ASSURANCE. IN THE NEW ORGANISATION PROGRAMME OF THE COMPANY THERE IS A PLACE FOR YOU ON HANDSOME REMUNERATION AS AN **ORGANISER**, **SPECIAL AGENT** OR **DISTRICT AGENT** ON A SMALL ANNUAL GUARANTEE OF BUSINESS. OR, IF YOU CAN DEVOTE YOUR SPARE TIME FOR AN **ORDINARY AGENCY**, YOU CAN EARN THE MAXIMUM COMMISSION PERMISSIBLE WITHOUT ANY BUSINESS GUARANTEE. PLEASE CALL AT THE OFFICE OR WRITE FOR DETAILS.

TO MAKE 1945 A YEAR OF GREATER ACHIEVEMENT, WE SOLICIT YOUR CO-OPERATION. THE MANAGEMENT IS CONFIDENT THAT IT WILL BE READILY EXTENDED

THE POPULAR INSURANCE COMPANY LTD.,

MANGALORE.

"The Popular by Preference for an Agency or a Policy"

ವೈಸ್ರಾಯ ವೇವಲ್ಲರ ಕೆಲವು ವಚನ ಹೀಗಿವೆ:

ಪಂಜಾಬದಲ್ಲಿ ನೀರಾವರಿ ಕಾಲಿವೆಗಳಿಂದ ನೀರು ಭೂಮಿಯೊಳಗೆ ಸೇರುವುದರಿಂದ ವ್ಯವಸಾಯಕ್ಕೆ ತೊಂದರೆಗಳಿಗೆ ಕಾರಣವಾಗಿರುತ್ತದೆ. ಈ ಕೊರತೆಯನ್ನು ನಿವಾರಿಸುವರೆ ನೀರನ್ನು ಅಲ್ಲಿಂದ ಮೂಲನದಿಗೆ ಹಿಂದಕ್ಕೆ ಚೆಲ್ಲಬೇಕಾಗಿಯದೆ; ಕಾಲಿವೆಗಳ ಒಳಮೈಗಳನ್ನು ಸಿಮೆಂಟಿನ ಕವಚದಿಂದ ಮುಚ್ಚಬೇಕಾಗಿ ನಿರ್ಧಾರವಾಗಿರುತ್ತದೆ. ಈ ಮೂಪರ್ಾಟಿನ ಬಗ್ಗೆ ಕೆಲಸವು ಪ್ರಾರಂಭವಾಗಿರುತ್ತದೆ. ಅದೆ ತರದಲ್ಲಿ ಸಮರ ಸಂಬಂಧ ಚಟುವಟಿಕೆಗಳಿಂದ ದೇಶದೊಳಗೆ ಹಣವು ಅತಿರೇಕವಾಗಿ ಸುರಿವಂತಾಗಿದೆ- ಸರಕಾರದ ಬೊಕ್ಕಸಗಳಿಂದ. ಅತಿರೇಕವಾಗಿ ಸುರಿದು ಬಂದ ಈ ಹಣವು ಜನರಲ್ಲೆ ಉಳಿಯುವುದರಿಂದ, ಕ್ರಯದಲ್ಲಿ ಹೆಚ್ಚಳ, ಮುಂತಾದ ಅನರ್ಥಕ್ಕೆ ಕಾರಣವಾಗುತ್ತದೆ. ಸರಕಾರ ಬೊಕ್ಕಸಗಳಿಂದ ಬಂದ ಈ ಹಣವು ಸರಕಾರದ ಬೊಕ್ಕಸಗಳಿಗೆನೆ ಹಿಂದಕ್ಕೆ ಸುರಿಯಲ್ಪಡಬೇಕು. ಆಗ ಮಾತ್ರ ಸ್ಥಿತಿಯು ನೆಟ್ಟಗಾಗುವುದು. ಸರಕಾರದ ಯುದ್ಧ ಬಾಂಡುಗಳು ಈ ಹಣವನ್ನು ಹಿಂದಕ್ಕೆ ಎಳೆಯುವ ಉಪಾಯಗಳು.

ಔದ್ಯೋಗಿಕರಣದ ಉತ್ಸಾಹದಲ್ಲಿ ವ್ಯವಸಾಯದ ಕುರಿತು ನಿರ್ಲಕ್ಷ್ಯವಾಗಬಹುದು. ಹೀಗಾಗಬಾರದು. ಹಿಂದೂದೇಶದ ಜನಸಂಖ್ಯೆಯ ಮುಕ್ಕಾಲು ಅಂಶವು ಬೇಸಾಯವಲಂಭಿಗಳು. ಯುದ್ಧೋತ್ತರದಲ್ಲಿ ನಡೆಯುವ ಯಾವತ್ತೂ ಯೋಜನೆಗಳಲ್ಲಿ 'ರೈತನ ಉದ್ಧಾರ ಸಮಸ್ಯೆ'ಗೆ ಮಹತ್ವದ ಸ್ಥಾನವು ದೊರಕಬೇಕು. [ಗಾಂಧೀಜಿಯರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹಳ್ಳಿಗಳಿಗೆ ಮುಖ್ಯ ಸ್ಥಾನವು ಕೊಡಲಾಗಿದೆ. ಹಳ್ಳಿಗಳು ಹಿಂದೂದೇಶದ ಸರ್ವ ಉದ್ಧಾರಗಳ ತಳಹದಿ ಎಂದು ಪರಿಗಣಿಸಲಾಗಿದೆ.]

ಆಸ್ಪತ್ರೆಗಳು, ದೇಶದ ಆರೋಗ್ಯ ರಕ್ಷಣೆಯ ಕುರಿತು ನಿರ್ಲಕ್ಷವಾದುದರ ಕುರಿತು ಸಾಕ್ಷ್ಯಗಳು. ವಿಜ್ಞಾನದ ಸಹಾಯದಿಂದ, ದೇಶದ ಆರೋಗ್ಯವನ್ನು ಕಾಪಾಡಿಕೊಳ್ಳುವರೆ ಅನೇಕ ದಾರಿಗಳು ಕಲ್ಪಿಸಲಾಗಿವೆ. ರೋಗಗಳನ್ನು ತಡೆಯುವ ಉಪಾಯಗಳು, ಧಾರಾಳವಾಗಿ ರೂಢಿಗೆ ಬರಬೇಕಾಗಿದೆ. ಔದ್ಯೋಗಿಕರಣದಿಂದ ನಗರಗಳಲ್ಲಿ ಜನಸಂಖ್ಯೆಯು ಹೆಚ್ಚಾಗಿ, ಅನಾರೋಗ್ಯಕ್ಕೆ ಕಾರಣವಾದ ಹಲವು ದೃಷ್ಟಾಂತಗಳು ನಮ್ಮ ಮುಂದಿವೆ. ಭವಿಷ್ಯದ ಯೋಜನೆಗಳಲ್ಲಿ ಈ ವಿಚಾರಕ್ಕೆ ಹೆಚ್ಚಿನ ಲಕ್ಷ್ಯಕೊಟ್ಟು, ಕೆಲಸಗಾರರ ಆರೋಗ್ಯವನ್ನು ರಕ್ಷಿಸುವ ಏರ್ಪಾಡುಗಳಾಗಬೇಕು. [೧೯೪೩ರಲ್ಲಿ ಕಾನಪುರದಲ್ಲಿ ಜನಿಸಿದ,-ಪ್ರತಿ ಸಾವಿರ ಶಿಶುಗಳಲ್ಲಿ, ೩೫೦ ಮೃತವಾಗಿವೆ! ಸಂಯುಕ್ತ ಪ್ರಾಂತ್ಯವನ್ನು ಒಂದಾಗಿ ಪರಿಗಣಿಸಿ, ಈ ಸಂಖ್ಯೆಯು ಸಾವಿರಕ್ಕೆ ೧೩೫ ಎಂದು ಕಂಡುಹಿಡಿಯಲಾಗಿದೆ. ಆಸ್ಟ್ರೀಯಾದಲ್ಲಿ ಈ ಸಂಖ್ಯೆ ೬೦.]

ಂ ಂ ಂ ಂ

ಇಂಡಿಯಾ ಸರಕಾರದ ಪ್ಲಾನಿಂಗ್ ಸದಸ್ಯರಾದ ಸರ್ ಆರ್ದೇಷರ ದಲಾಲರು ಒಂದೆಡೆ ಭಾಷಣ ಮಾಡುತ್ತಿದ್ದಾಗ ಈ ಕೆಳಗಿನ ಅಭಿಪ್ರಾಯವನ್ನು ಸೂಚಿಸಿರುವರು:

ಹಿಂದೂದೇಶದ ಸರಕಾರದಿಂದ ಕಲ್ಪಿಸಲಾದ ಯುದ್ಧೋತ್ತರ ಯೋಜನೆಗಳಿಗೆ

ಪ್ರಚಲಿತ ಸಮಾಚಾರಗಳು

ಲಂಡನಿನ ವ್ಹಾಯ್ಟ್‌ಹೋಲ್ ಸರಕಾರದ ಯಾವತ್ತು ಪ್ರತಿಬಂಧಕಗಳಿರುವುದಿಲ್ಲ. ಈ ಯೋಜನೆಗಳು ಯಶಸ್ವಿಯಾಗಿ ನಡೆಯಬೇಕಾದರೆ, ರಾಷ್ಟ್ರೀಯ ಸರಕಾರವು ಏರ್ಪಡುವುದು ಅತಿ ಅವಶ್ಯವಿದೆ. ಇದು ಕಾಂಗ್ರೆಸ್ ಸರಕಾರವೆ ಆಗಬೇಕಾಗಿಲ್ಲ ಸರ್ವ ಪಕ್ಷ ಪ್ರಾತಿನಿಧ್ಯದಿಂದ ಕೂಡಿದ ಸರಕಾರವಾಗಬಹುದು.

ಂ ಂ ಂ ಂ

ಗಾಂಧೀಜಿಯರಿಗೆ ಕಾಂಗ್ರೆಸ್ ಕಾರ್ಯಕಾರಿ ಮಂಡಳವನ್ನು ಕಂಡು ವಿಚಾರವಿನಿಮಯ ಮಾಡಲು ಅವಕಾಶ ದೊರಕದೆ, ಗಾಂಧಿ-ಜಿನ್ನಾ ಮಾತುಕತೆಗಳು ಮತ್ತೊಮ್ಮೆ ನಡೆಯಿಸಲಾಗದವೆಂದು ತಿಳಿದುಬಂದಿದೆ. ಕಳೆದವಾರ ಅಹಮ್ಮದಾಬಾದಿನ ಸೆರೆಯಿಂದ ವಿಮುಕ್ತರಾದ, ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯರಲ್ಲಿ ಒಬ್ಬರಾದ ಡಾ. ಘೋಷರು ಸೇವಾಗ್ರಾಮಕ್ಕೆ ತೆರಳಿ ಗಾಂಧೀಜಿಯರನ್ನುಕಂಡು ಮಾತನಾಡಿದರಾಗಿಯೂ ಆಗ ಅವರು ಗಾಂಧಿ-ಜಿನ್ನಾರವರ ಈ ಮೊದಲು ನಡೆದ ಮಾತುಕತೆಗಳ ಕುರಿತು ಕಾರ್ಯಕಾರಿ ಮಂಡಳದ ಇತರ ಸದಸ್ಯರ ಅಭಿಪ್ರಾಯ ಇತ್ಯಾದಿ ಏನಿರುವುದೆಂದೂ ತಿಳಿಸಿದರಾಗಿಯೂ ತಿಳಿದುಬಂದಿದೆ.

ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವ ಕುರಿತು, ಸದ್ಯ ಸರ್ವಜನ ಆಧಾರದ ರಾಷ್ಟ್ರೀಯ ಸರಕಾರವು ಕೇಂದ್ರದಲ್ಲಿ ಸ್ಥಾಪನೆಯಾಗುವ ಕುರಿತು ಸಾರ್ವಭೌಮ ಸರಕಾರದ ಆಶ್ವಾಸನೆಯು ದೊರಕಿದರೆ ಕಾಂಗ್ರೆಸ್ಸಿನ ಆಗಸ್ಟ್ ನಿರ್ಣಯವು ಹಿಂತೆಗೆಯಲ್ಪಡುವಂತೆ ತಾನು ಕಾಂಗ್ರೆಸ್ ಕಾರ್ಯಕಾರಿ ಮಂಡಳಕ್ಕೆ ಬೋಧಿಸುವೆನೆಂದು, ಗಾಂಧೀಜಿಯರು ವೈಸ್ರಾಯರಿಗೆ ಬರೆದ ಪತ್ರಕ್ಕೆ ನಕಾರದ ಉತ್ತರವು ಬಂದಿದ್ದ ವಿಚಾರವು ಎಲ್ಲರಿಗೂ ತಿಳಿದ ವಿಷಯವು.

* * *

'ಹರಿಜನ'ರ ಪರವಾಗಿ ಅಲ್ಪಸಂಖ್ಯಾಕರ ಹಿತಸಾಧಕರೆಂಬ ಹೆಸರಲ್ಲಿ ವೈಸ್ರಾಯರ ಬೋಧಕ ಮಂಡಳದ ಸದಸ್ಯರಾದ ಡಾ. ಅಂಬೇಡ್ಕರರು ಸಪ್ರೂರವರ ಸಂಧಾನ ಸಮಿತಿಗೆ ಹರಿಜನ ಪರವಾಗಿ ಯಾವತ್ತು ಸಲಹೆಗಳನ್ನು ಕೊಡಲು ನಿರಾಕರಿಸಿದ್ದರಷ್ಟೆ. ಆದರೆ ಹರಿಜನ ಪರವಾಗಿ ಒಂದು ಶಿಷ್ಟಮಂಡಳವು ಹೋಗಿ ಸಪ್ರೂ ಸಮಿತಿಗೆ ತಮ್ಮ ಕೋರಿಕೆಗಳಿಂದ ಕೂಡಿದ ಮನವಿ ಮಾಡುವ ಕುರಿತು, ಇತರ ಹರಿಜನ ಮುಖಂಡರು ನಿರ್ಧರಿಸಿರುವರು. ಅವರ ಈ ನಿರ್ಧಾರಕ್ಕೆ ಗಾಂಧೀಜಿಯವರ ಸಮ್ಮತ ದೊರಕಿದರೆ ಮಾತ್ರ ಈ ಶಿಷ್ಟಮಂಡಳಿಯು ರಚನೆಯಾಗುವುದು.

* * *

ಯುದ್ಧ ಸಂಬಂಧ ಸ್ಥಾಪಿಸಲಾದ ಸಂಚಾರದ ಅನುಕೂಲತೆಗಳಿಂದ ಭವಿಷ್ಯದಲ್ಲಿ ಜಗತ್ತಿನ ವಿವಿಧ ರಾಷ್ಟ್ರಗಳೊಳಗೆ ಪರಸ್ಪರ ವಿನಿಮಯಕ್ಕೆ ಉತ್ತಮ ಆಸ್ಪದಗಳು ಕಲ್ಪಿಸಿದಂತಾಗಿವೆ. ಇವುಗಳ ಸದುಪಯೋಗ ಮಾಡಬೇಕೆಂದು ಅಮೇರಿಕಾದ ಒಂದು ದೊಡ್ಡ ವ್ಯಕ್ತಿಯ ಅಭಿಪ್ರಾಯ. ಜಗತ್ತಿನ ಭಾವಿ ಶಾಂತಿಗೆ ಈಗ ಸ್ಥಾಪನೆಯಾದ ಅನುಕೂಲತೆಗಳಲ್ಲದೆ, ಬಿಳಿ-ಕರಿಯ ವರ್ಣಬೇಧವು ನಿವಾರಣೆಯಾಗಬೇಡವೆ? ಬಿಳಿಯರ 'ಶ್ರೇಷ್ಠನಾಭಾವ'ವು ತೊರೆಯಲ್ಪಡಬೇಡವೆ?

ಂ ಂ ಂ ಂ

ಅಮೇರಿಕನರ ಫಿಲಿಪ್ಪೈನುಗಳ ಮರುದಾಳಿಯು ಯಶಸ್ವಿಯಾದುದರ ಪರಿಣಾಮವಾಗಿ, ಜಪಾನಿನಲ್ಲಿ ದಿಗಿಲು ಉಂಟಾಗಿರುವುದೆಂದೂ, ಜಪಾನ್ ರಾಷ್ಟ್ರವೆಲ್ಲಾ ತಲ್ಲಣಗೊಂಡಿದೆ ಎಂದೂ ವಾರ್ತೆಗಳು ಬರುತ್ತಿವೆ. ಇತ್ತ ಚೀನಾದಲ್ಲಿ ಸರ್ವಪಕ್ಷೀಯ ಪ್ರಾತಿನಿಧ್ಯದ ಸರಕಾರದ ಸ್ಥಾಪನೆಯಾಗುವಂತೆ, ಕೊಮ್ಯುನಿಸ್ಟ ನಾಯಕರೊಬ್ಬರು, ಚುಂಕಿಂಗ್ ಸರಕಾರದೊಡನೆ ವ್ಯವಹಾರದ ಮಾತುಕತೆ ನಡೆಯಿಸುವುದಕ್ಕೆ ಬಂದಿರುವರಾಗಿ ತಿಳಿದುಬಂದಿದೆ. ಬರ್ಮಾ ರಸ್ತೆಯು ಪುನಹ ತೆರೆಯಲ್ಪಟ್ಟಿರುವುದೆಂದು ವಾರ್ತೆಯು ಬಂದಿರುತ್ತದೆ ಈ ಘಟನೆಗಳಿಂದ ಚೀನಾಕ್ಕೆ ಮತ್ತೊಮ್ಮೆ ತಲೆ ಎತ್ತಲು ಅವಕಾಶ ದೊರಕಬಹುದೆ?

ಂ ಂ ಂ ಂ

ಪೂರ್ವರಂಗದಲ್ಲಿ ಜರ್ಮನ್ ಸೇನೆಗಳು ಕೆಂಪು ಬಲದ ರಭಸವನ್ನು ತಡೆಯಲಾರದುದರಿಂದ ಸೋವಿಯಟ್ ರಷ್ಯಾದೊಡನೆ ಸಂಧಾನ ಸಾಧಿಸುವ ಯತ್ನಗಳನ್ನು ನಾಜಿ ಸರಕಾರವು ಮಾಡಿದ ಕುರಿತು ವಾರ್ತೆಯೊಂದು ಬಂದಿದೆ. ಜರ್ಮನಿಯಿಂದ ನಾಜಿಗಳ ನಿರ್ಗಮನವಾಗದೆ ಸಂಧಾನವಿಲ್ಲವೆಂದು ಮಿತ್ರರ ಸಾರಿಕೆಯು ಆಗಿರುತ್ತದೆ. ನಾಜಿ ಸರಕಾರವು ರಷ್ಯನರ ಯಾವತ್ತು ಶರ್ತಗಳನ್ನು ಮಾನಿಸಲು ಸಿದ್ಧವಿದೆಯಾಗಿ ಒಪ್ಪಿದ್ದರೂ ಸ್ಟೆಲಿನನಿಗೆ ನಾಜಿಗಳೊಡನೆ ಒಪ್ಪಂದದಲ್ಲಿ ಎಳ್ಳಷ್ಟು ವಿಶ್ವಾಸವಿಲ್ಲದುದರಿಂದ ಅವರನ್ನು ನಾಶಮಾಡಿಯೆ ತೀರಬೇಕೆಂದು, ಆತನ ಸಂಕಲ್ಪವಾಗಿದೆ ಎಂದು ತಿಳಿದುಬಂದಿದೆ.

ಂ ಂ ಂ ಂ

'ಹೆಚ್ಚು ಆಹಾರವನ್ನು ಬೆಳೆಯಿಸುವ' ಚಳವಳಿಯು ಇನ್ನಷ್ಟು ಉತ್ಸಾಹಭರಿತವಾಗಿ ನಡೆಯುವ ಕುರಿತು, ಬೇಸಾಯ ಕಾರ್ಯಗಳಲ್ಲಿ ಕೆಲಸಗಾರರನ್ನು ತರಬೇತು ಮಾಡುವ ವ್ಯವಸ್ಥೆಯೊಂದು ಮದ್ರಾಸು ಸರಕಾರದಿಂದ ಮಾಡಲಾಗಿದೆ. ಸದ್ಯಕ್ಕೆ ೫೨೦ ಮಂದಿಗಳನ್ನು ಈ ಕೆಲಸಕ್ಕೆ ತರಬೇತುಗೊಳಿಸಲಾಗುವುದು. ಪ್ರಾಂತ್ಯದ ಎಗ್ರಿಕಲ್ಚರಲ್ ಸ್ಟೇಶನುಗಳಲ್ಲಿ ಈ ತರಬೇತು ನಡೆಯುವುದು. ಈ ತರಬೇತು ಅವಧಿಯು ನಾಲ್ಕು ತಿಂಗಳು. ತರಬೇತಿನ ಸಮಯ ರೂ. ೨೦ರ ಮಾಸಕ್ಕೆ ಪ್ರಕಾರ ಸ್ಟ್ಯಾಪೆಂಡು ಕೊಡಲಾಗುವುದು. ಈ ಉದ್ಯೋಗವನ್ನು ಆಚರಿಸಲು ಸಿದ್ಧರಿರುವವರು, ಕನಿಷ್ಠ S.S L.C ವರೆಗೆ ವಿದ್ಯಾವಂತರಾಗಬೇಕು. S. S. L. C. ಯಲ್ಲಿ ತೇರ್ಗಡೆ ಹೊಂದಿದವರಿಗೆ ಹೆಚ್ಚಿನ ಆಸಕ್ತಿ ತೋರಿಸಲಾಗುವುದು. ಇದಲ್ಲದೆ, ೨೭೪೦ ಬೇಸಾಯ ಮೇಸ್ತ್ರಿಗಳ ತರಬೇತು ಕೈಗೊಳ್ಳಲಾಗುವುದು. [ಈ ಬೇಸಾಯ ಉದ್ಧರಣೆ ಕಾರ್ಯದೊಡನೆ, ಗ್ರಾಮಾಭ್ಯುದಯ ಕಾರ್ಯಗಳು ಕೈಗೊಳ್ಳಬಾರದೆ? ಸೇವಾಗ್ರಾಮದಿಂದ ಗ್ರಾಮಾಭ್ಯುದಯ ಕಾರ್ಯಗಳಲ್ಲಿ ತರುಣರನ್ನು ತರಬೇತುಗೊಳಿಸುವ ಯೋಜನೆಯೊಂದು ಹೊರಡಿಸಲಾಗಿದೆ. ಬೇಸಾಯಕ್ಕೆ ಅದರಲ್ಲಿ ಪ್ರಾಮುಖ್ಯ ಸ್ಥಾನ ಕೊಡಲಾಗಿದೆ. ಇಲ್ಲಾದರೂ ಸರಕಾರವು ಗಾಂಧೀಜಿಯರೊಡನೆ ಸಹಕರಿಸಿ ನಡೆಯಬಾರದೆ?]

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ವಿಶ್ವ ವಿಚಾರ ವಿನಿಮಯ

ಎಂ. ಪಿ.ಗಳಿಗೂ ಕತ್ತರಿ-ಇಟೆಲಿಯೂ ವಸಾಹತುಗಳೂ-ಆಫ್ರಿಕನ್ನರ ಹೊಸ ಯೋಜನೆ-ಯುಗೋಸ್ಲೆವಿಯ ಅರಸರ ದುಡುಕುತನ-ಇಂಗ್ಲೆಂಡ್ ಅಮೇರಿಕಗಳಲ್ಲಿ ಭಾರತ ಸ್ವಾತಂತ್ರ್ಯ ದಿನ

ಎಂ. ಪಿ.ಗಳ ಬಾಷಣಕ್ಕೂ ಕತ್ತರಿ

ಪಾರ್ಲಿಮೆಂಟಿನ ಮಜೂರ ಪ್ರತಿನಿಧಿಗಳಾದ ಮಿ। ರಿಚಾರ್ಡ್ ಸ್ಟೋಕ್ಸ್ ಅವರು ಮಧ್ಯಪೂರ್ವದ ಸೈನ್ಯಶಿಬಿರ ಸಂಚರಿಸಿದಾಗ ಅಲ್ಲಿನ ಆರ್. ಎ. ಎಫ್. ಬ್ರಿಟಿಷ್ ವಿಮಾನ ಠಾಣ್ಯವೊಂದರ ದಳದವರಲ್ಲಿ ಒಂದು ಭಾಷಣ ಮಾಡಿದರು. ಆದರೆ ಸೈನ್ಯದ ವಿಮಾನ ಖಾತೆಯ 'ವಿಮಾನದಳ ಪತ್ರಿಕೆ'ಯಲ್ಲಿ ಅದು ಪ್ರಕಟವಾಗದಿದ್ದುದನ್ನು ತಿಳಿದು ಮಿ। ಸ್ಟೋಕ್ಸರು ಕಾಮನ್ಸ್ ಸಭೆಯಲ್ಲಿ ಆ ಕುರಿತು ವಿಮಾನ ಖಾತೆಯ ಮಂತ್ರಿಗಳನ್ನು ಪ್ರಶ್ನಿಸಿದರು. ವಿಮಾನ ಖಾತೆಯ ಮಂತ್ರಿ ಸರ್. ಆರ್ಚಿಬಾಲ್ಡ್ ಸಿನ್‌ಕ್ಲೇರರು ಜವಾಬು ಕೊಡುತ್ತಾ ಹೀಗೆಂದರು; "ತಾವು ಕೊಟ್ಟ ಆ ಭಾಷಣವು ತುಂಬಾ ಆಕ್ಷೆಪಕರವಾದುದು. ಯುದ್ಧರಂಗಕ್ಕೆ ಹೋಗಲು ಸದಾ ಸಿದ್ಧರಾಗಿರುವವರ ಮಧ್ಯದಲ್ಲಿ ಹಾಗೆ ಟೀಕಾರೋಪದ ಭಾಷಣ ಮಾಡಿದುದನ್ನು ಮತ್ತೆ ಅದನ್ನು ಪ್ರಕಟಿಸಬೇಕೆ? ವಿಮಾನದಳ ಪತ್ರಿಕೆಯ ಸಂಪಾದಕರು ಶ್ಲಾಘನೀಯ ಜಾಣ್ಮೆ ತೋರಿದರು. ಎಟ್ಲಾಂಟಿಕ್ ಘೋಷಣೆಯನ್ನು ಹರಿದುಹಾಕಲು ಮಿತ್ರಮುಖಂಡರು ಟೆಹರಾನ್ ಪರಿಷತ್ತಿಗೆ ಹೋದರೆಂತಲೂ, ಅಲ್ಲಿ ಅವರು ಮುಂದಿನ ಯುದ್ಧದ ಬೀಜಗಳನ್ನು ಬಿತ್ತಿದರೆಂತಲೂ, ಈ ಪಾರ್ಲಿಮೆಂಟ್ ಸಭೆಯು ಒಂದು ಹುಚ್ಚರ ಆಸ್ಪತ್ರೆಯೆಂತಲೂ, ಅದರಲ್ಲಿ ಸ್ಥಿರಬುದ್ಧಿಯವರು ನೀವೊಬ್ಬರೆಂತಲೂ, ಪ್ರಧಾನ ಚರ್ಚಿಲ್ಲರು ಯುದ್ಧಪ್ರಿಯರಾದ ಒಬ್ಬ ವೃದ್ಧ ವ್ಯಕ್ತಿಗಳೆಂದೂ ಒಂದು ಗಂಟೆತನಕ ಕೊಟ್ಟ ಈ ಭಾಷಣವನ್ನು ಹೇಗೆ ಸೈನ್ಯಪತ್ರಿಕೆಯಲ್ಲಿ ಪ್ರಕಟಿಸಬಹುದು?" ಬ್ರಿಟಿಷ್ ಮಂತ್ರಿಗಳಿಗೂ ಕಂಡದನ್ನು ಹೇಳಿದರೆ ಕೋಪ ಬರುವುದಾಗಿ ಮಿ। ಸ್ಟೋಕ್ಸರು ಗೊಣಗುಟ್ಟಿರಬಹುದೇ?

◈ ◈ ◈

ಇಟಲಿಗೆ ವಸಾಹತುಗಳೆಲ್ಲಿ?

ಪಾಪ! ಯಾಕೆ? ಎಂದು ಹಲವರು ಪ್ರಶ್ನಿಸಬಹುದು. ಅದಕ್ಕೂ ಕಾರಣವಿದೆ. ವಿದೇಶಾಂಗ ಸಚಿವ ಮಿ। ಎಂಟನೀ ಈಡನ್ನರು "ಆಫ್ರಿಕದಲ್ಲಿನ ಇಟೇಲಿಯ ವಸಾಹತುಗಳನ್ನು ಪುನಃ ಆ ದೇಶದ ವಶಕೊಡುವ ವಿಚಾರವನ್ನು ಮಿತ್ರರಾಷ್ಟ್ರಗಳು ಯುದ್ಧಾಂತ್ಯದಲ್ಲಿ ನಿಷ್ಕರ್ಷಿಸಬೇಕಾಗಿದೆ" ಎಂದು ಹೇಳಿದರು. ಕಳೆದ ವರ್ಷ ಮಿ। ಈಡನ್ನರು" ಇಟಲಿಗೆ ಅವರ ಎಲ್ಲಾ ವಸಾಹತುಗಳು ಪರತುಸಿಗಲಾರವು" ಎಂದಿದ್ದರು. ಅಂದರೆ ಕೆಲವಾದರೂ ಸಿಗುತ್ತವೆಂದಾಯಿತು. ಹಾಗಾದರೆ ಈ ಸಿಗುವ ವಸಾಹತುಗಳು ಯಾವುವು ಎಂದು ಸರ್ ಆರ್ಚಿಬಾಲ್ಡ್ ಸದ್ಭಿ ಎಂಬ ಸದಸ್ಯರು ಕೇಳಿದಾಗ ಮಂತ್ರಿ ಈಡನ್ನರು "ಇಟಲಿ ಸರಕಾರಕ್ಕೆ ವಸಾಹತುಗಳನ್ನು ಪುನಃ ಪಡೆಯುವ ಯಾವ ಅಧಿಕಾರ ಈಗ ಇಲ್ಲ" ಎಂದರು. ಗೆದ್ದವರಿಗೆ ಇರುವಾಗ ಸೋತವರಿಗೂ ಒಂದಿಷ್ಟು ಇರಲಿ. ಹೇಗೂ ಜಗತ್ತೆಲ್ಲ ಶಕ್ತಿ ರಾಷ್ಟ್ರಗಳಿಗೇ ಎಂದು ಮೀಸಲಾಗಿಟ್ಟಂತೆ ಈಗಿನ ವರ್ತನೆ ನೋಡಿದರೆ ಭಾಸವಾಗುತ್ತದೆ.

◈ ◈ ◈

ನಮ್ಮದೂ ನಿಮ್ಮದೂ ಒಂದೇ.

ದ. ಆಫ್ರಿಕದ ಯೂನಿಯನ್ ಎಸೆಂಬ್ಲಿಯಲ್ಲಿ ಮಿ। ಇ. ಎಚ್. ಲೊವ್ ಎಂಬ ಪ್ರತಿನಿಧಿಗಳು ಜನರಲ್ ಸ್ಮಟ್ಸರಿಗೆ "ಭಾರತೀಯರ ವಿಚಾರವಾಗಿ ಇಂಡಿಯಾ ಸರಕಾರವು ದ. ಆಫ್ರಿಕದಲ್ಲಿನ ಭಾರತೀಯರನ್ನು ತನ್ನ ಪ್ರಜೆಗಳಾಗಿ ಭಾವಿಸುತ್ತದೊ? ಹಾಗಾದರೆ ಅವರನ್ನು ಇಲ್ಲಿಂದ ಏಕೆ ಭಾರತಕ್ಕೆ ತೆಗೆದುಕೊಂಡು ಹೋಗಿ ಬಿಡಬಾರದು?" ಎಂಬೀ ಪ್ರಶ್ನೆಗಳನ್ನು ಕೇಳಲಿದ್ದರು.

ಒಂದು ವೇಳೆ ಅಲ್ಲಿನ ಭಾರತೀಯ ಇಂಡಿಯಾ ಸರಕಾರದ ಪ್ರಜೆಗಳಾಗಿರದೆ ಅವರು ದ. ಆಫ್ರಿಕದ ಪ್ರಜೆಗಳೇ ಆಗಿರುವರೆಂದು ಭಾವಿಸೋಣ. ಹಾಗೆಂದ ಮೇಲೆ ಅವರಿಗೆ ಎಲ್ಲರಂತೆ ಸಮಾನ ಹಕ್ಕು ಬರಬೇಡವೆ? ಈ ಕಪ್ಪು ಬಿಳಿ ಬಣ್ಣ ಭೇದವೇಕೆ?

◈ ◈ ◈

ಯುಗೋಸ್ಲೇವಿಯದಲ್ಲೂ ಗ್ರೀಕ ಪ್ರಕರಣ

ಜರ್ಮನ್ ಹಿಡಿತದಿಂದ ಯುರೋಪಿನ ರಾಜ್ಯಾಧಿಪತ್ಯ, ಪ್ರಜಾಧಿಪತ್ಯಗಳನ್ನು ಬಿಡಿಸುತ್ತಾ ಬಂದಹಾಗೆ ಆ ದೇಶದ ಆಡಳಿತಗಾರರ ನಿಜಸ್ವರೂಪವು ಹೊರಬೀಳುತ್ತಲಿರುವುದು ಒಂದು ಸಾರಸ್ಯ ಸಂಗತಿ. ಪೋಲೆಂಡಿನ ನ್ಯಾಯವಾದ ಸರಕಾರವೆನಿಸಿಕೊಂಡಂತಾ ಒಂದು ಆಡಳಿತ ಮಂಡಲವು ಇಂಗ್ಲೆಂಡಿನಲ್ಲಿದೆ. ಗ್ರೀಸಿನ ರಾಜರೂ, ಯುಗಸ್ಲೇವಿಯದ ರಾಜರೂ ಇಂಗ್ಲೆಂಡಿನಲ್ಲೇ ಇದ್ದಾರೆ. ಆದರೆ ಪೋಲೆಂಡಿನ ಈ 'ನ್ಯಾಯವಾದ' ಸರಕಾರವು ರಷ್ಯದೊಂದಿಗೆ ನೆಮ್ಮದಿಯಿಂದ ಇರಬಯಸುವುದಿಲ್ಲ. ಅದಕ್ಕಾಗಿ ಸ್ಟೆಲಿನರು ಜನಪ್ರಿಯವಾದ ಒಂದು ಪ್ರತ್ಯೇಕ ಸರಕಾರವನ್ನು ಮೊಸ್ಕೋದಲ್ಲಿ ರಚಿಸಿಕೊಂಡರು. ಗ್ರೀಸಿನಲ್ಲಿ ಅಲ್ಲಿನ ಸಾಮಾನ್ಯ ಜನತೆಯ ಪ್ರತಿನಿಧಿಗಳು ಮಿತ್ರರೊಡಗೂಡಿ ಜರ್ಮನರನ್ನು ತಮ್ಮ ದೇಶದಿಂದ ಹೊಡೆದೊಡಿಸಿದರೂ ಸರಕಾರದಲ್ಲಿ ಮಾತ್ರ ಅವರಿಗೆ ಸ್ಥಾನಸಿಗಲಾರದೆಂದು ಗ್ರೀಸಿನರಾಜರು ಅಂದರು. ಬ್ರಿಟಿಷ ದಳಗಳು ಗ್ರೀಸ್ ದೇಶ ಭಕ್ತರ ಮೇಲೆ ಕಡುವಾದ ಕೈಯನ್ನು ತೋರಿಸಿಯೂ ಆಯಿತು. ಈಗ ಯುಗೋಸ್ಲೆವಿಯದಲ್ಲಿ ಜರ್ಮನರ ವಿರೋಧವಾಗಿ ಸ್ವತಂತ್ರವಾಗಿ ಹೋರಾಡಿದ ಮಾರ್ಶಲ್ ಟೀಟೋ ಅವರೊಂದಿಗೆ ಇಂಗ್ಲೆಂಡಿನಲ್ಲಿರುವ ಅಲ್ಲಿನ ರಾಜರು ಠಿಕ್ಕಾಟಮಾಡಿದ್ದಾರೆ. ಟಿಟೋರವರೊಡನೆ ಒಪ್ಪಂದಮಾಡಿಕೊಂಡು ಅಲ್ಲಿನ ಮುಖ್ಯ ಪ್ರಧಾನರಾಗಿದ್ದ ಡಾ। ಸುಭೆಸಿಕ್ ಅವರನ್ನು ಅರಸ ಪೀಟರರು ರದ್ದುಮಾಡಿರುವರು. ಇದರಿಂದ ಟಿಟೊ-ಸುಭೆಸಿಕ್ ಇವರೊಳಗಾದ ಒಪ್ಪಂದವು ಅಮಾನ್ಯ ಮಾಡಿದಂತಾಯಿತು. ಈಗ ಮಾರ್ಶಿಲ್ ಟೀಟೊ ಅವರು ತಮ್ಮ ಸ್ವಂತ ಕಾರ್ಯಕ್ರಮವನ್ನು ಕೈಕೊಳ್ಳುವರಂತೆ. ಅಂತೂ ಎಷ್ಟು ಪಾಠಕಲಿತರೂ ಯುರೋಪಿನ ಬಂಡವಾಳಶಾಹೀ ರಾಜರಿಗೂ, ಆಡಳಿತ ಮುಖಂಡರಿಗೂ ಇನ್ನೂ ಬುದ್ಧಿ ಸರಿಯಾಗಿ ಬಂದಿಲ್ಲ.

◈ ◈ ◈

ಸ್ವಾತಂತ್ರ್ಯ ದಿನ

ನ್ಯೂಯೋರ್ಕಿನಲ್ಲಿ ಅಮೇರಿಕದ ಇಂಡಿಯನ್ ಲೀಗ್ ಎಂಬ ಭಾರತ ಸಹಾನುಭೂತಿ ಸಂಘದವರು ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತ್ ಅವರ ಗೌರವಾರ್ಥವಾಗಿ ಒಂದು ಔತಣ ಸಮಾರಂಭವನ್ನು ನೆರವೇರಿಸಿದರು. ಅಂದು ಜನವರಿ ೨೬ ತಾರೀಕು ಆದುದರಿಂದ ಸ್ವಾತಂತ್ರ ದಿನವೂ ಆಚರಿಸಲ್ಪಟ್ಟಿತು. ಪ್ರಖ್ಯಾತ ಸಾಹಿತಿಗಳಾದ ಶ್ರೀಮತಿ ಪರ್ಲ್‌ಬಕ್ ಅವರು ಒಂದು ಚಿಕ್ಕ ಭಾಷಣದಲ್ಲಿ: "ಮುಂಬರುವ ಇಪ್ಪತ್ತು ವರ್ಷಗಳಲ್ಲಿ ಭಾರತವು ಜಗತ್ತಿನ ಇತರ ಎಲ್ಲಾ ದೇಶಗಳಿಗಿಂತಲೂ ಹೆಚ್ಚಿನ ಬದಲಾವಣೆಗಳನ್ನು ಕಾಣಲಿರುವುದು. ಈ ಯುದ್ಧದಿಂದ ಒಂದು ನವೀನ ಭಾರತವು ಹೊರಬರುವುದೆಂದು ನನ್ನ ವಿಶ್ವಾಸ. ಇಂದು ಎಲ್ಲರಿಗಿಂತಲೂ ಹೆಚ್ಚಾಗಿ ಭಾರತೀಯರು ಸ್ವಾತಂತ್ರ ಮತ್ತು ಪ್ರಜಾಪ್ರಭುತ್ವಗಳ ಭಾಷೆಯನ್ನು ಮಾತಾಡುತಿದ್ದಾರೆ." ಹೀಗೆಂದು ಹೇಳಿದರು.

"ಜಗತ್ತಿನ ಇತಿಹಾಸದಲ್ಲೆಂದೂ ಕಾಣದ ಅಹಿಂಸಾತ್ಮಕ ರೀತಿಯ ಯುದ್ಧದಿಂದ ಭಾರತವು ತನ್ನ ಸ್ವಾತಂತ್ರ್ಯವನ್ನು ಗಳಿಸಲು ಪ್ರಯತ್ನಿಸುತ್ತಿದೆ. ಜಗತ್ತು ನಿರೀಕ್ಷಿಸಿದಷ್ಟು ತೃಪ್ತಿಕರವಾಗಿ ಬ್ರಿಟಿಷರು ತಮ್ಮ ಕರ್ತವ್ಯವನ್ನು ಪರಿಪಾಲಿಸುವುದರಲ್ಲಿ ಆಸಕ್ತಿ ವಹಿಸಿಲ್ಲ. ಅಮೇರಿಕನ್ನರೂ ಒಂದುಕಾಲದಲ್ಲಿ ಬ್ರಿಟಿಷರ ಕೈಕೆಳಗೆ ಇದ್ದವರು, ಈಗ ಸ್ವತಂತ್ರತೆಯಲ್ಲಿ ನೆಮ್ಮದಿಯಿಂದಿದ್ದಾರೆ. ಭಾರತೀಯರ ಪ್ರಯತ್ನಗಳೂ ಅದೇ ಗುರಿಯನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ" ಹೀಗೆಂದು ಗೌರವ ಅತಿಥಿ ವಿಜಯಲಕ್ಷ್ಮಿ ಪಂಡಿತರು ತಿಳಿಸಿದರು.

◈ ◈ ◈

ನಿಗ್ರೋ ಪ್ರಮುಖರ ಸಂದೇಶ

ಅಮೇರಿಕದ ನಿಗ್ರೋ ಜನರ ಮುಂದಾಳುಗಳಾದ ಮಿ। ಬ್ರೊಂಕ್ಲೆ ಅವರು: "ಪಾರತಂತ್ರ್ಯಕ್ಕೊಳಗಾದ ಜಗತ್ತಿನ ಜನರೆಲ್ಲರೂ ಭಾರತೀಯ ಜನರ ಹೋರಾಟದಲ್ಲಿ ಸಹಾನುಭೂತಿಯುಳ್ಳವರಿದ್ದಾರೆ. ಆಫ್ರಿಕದ ನಿಗ್ರೋ ಜನರಿಗಂತೂ ಗಾಂಧಿ-ನೆಹರುಗಳ ಮೇಲೆ ತುಂಬಾ ವಿಶ್ವಾಸಮನ್ನಣೆಗಳಿವೆ. ಗಾಂಧೀಜಿಯವರು ಸ್ವಾತಂತ್ರ್ಯವನ್ನು ಗಳಿಸುವ ಮಾರ್ಗದರ್ಶಕರಾಗಿ ಕೀರ್ತಿ ಪಡೆದವರು. ತಮ್ಮ ಅಂತರಾಷ್ಟ್ರೀಯ ವಿಶಾಲ ಭಾವನೆಗಳಿಂದ ನೆಹರುಗಳು ನಿಗ್ರೋ ಯುವಕರ ಪ್ರೀತಿ ಆದರಗಳಿಗೆ ಪಾತ್ರರಾಗಿರುವರು." ಹೀಗೆಂದು ಉದ್ಗರಿಸಿದರು. ಪಾಶ್ಚಾತ್ಯದೇಶಗಳ ಸುಹೃದಯದ ಜನರಲ್ಲಿ ಇಷ್ಟೊಂದು ಜನಪ್ರಿಯರಾಗಿರುವ ಮುಖಂಡರನ್ನಿಂದು ಕಾರಾಗೃಹದಲ್ಲಿರಿಸುವುದು ವಿವೇಕವಲ್ಲ.

◈ ◈ ◈

ಹಾನಿಕಾರಕ ಧೋರಣೆ

"ಇದೇ ಧೋರಣವನ್ನು ಇನ್ನೂ ಮುಂದರಿಸಲು ಚರ್ಚಿಲ್ಲರಿಗೆ ಅವಕಾಶಕೊಟ್ಟರೆ ಬ್ರಿಟಿಷ್ ಸಾಮ್ರಾಜ್ಯವು ಚೂರು ಚೂರಾಗಿ ಹೋಗುವುದರಲ್ಲಿ ಸಂದೇಹವಿಲ್ಲ." ಇದು ಪಾರ್ಲಿಮೆಂಟ್ ಸದಸ್ಯರಾದ ಮಿ। ರೈಸ್‌ಡೆವಿಸರವರು ಲಂಡನಿನಲ್ಲಿ ಹಿಂದೀ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ ಕೂಡಿದ ಸಭೆಯಲ್ಲಿ ಕೊಟ್ಟ ಎಚ್ಚರಿಕೆಯ ಮಾತುಗಳು. ಪ್ರಧಾನ ಚರ್ಚಿಲ್ಲರ ಮಂತ್ರಿಮಂಡಲವು ಭಾರತದ ಬಿಕ್ಕಟ್ಟು ಪರಿಹಾರದ ಕಡೆ ತೋರಿಸುವ ಅಲಕ್ಷ್ಯದ ಪರಿಣಾಮ ಹೀಗಾಗಬಹುದೆಂದು ಮಿ। ರೈಸರ ಸೂಚನೆ. ಹಿಂದೆ ಚರ್ಚಿಲ್ ಸಾಹೇಬರು "ಸಾರ್ವಭೌಮ್ಯ ಆಧಿಪತಗಳನ್ನು ಕರಗಿಸಿ ದಿವಾಳಿಮಾಡಲು ನಾನು ಪ್ರಧಾನ ಪೀಠವನ್ನೇರಿದಲ್ಲ"ವೆಂದು ಸ್ಪಷ್ಟವಾಗಿ ತಿಳಿಸಿದುದಕ್ಕೆ ಇದು ಪ್ರತ್ಯುತ್ತರವಿರಬಹುದೆ?

ನೀವು ನಿಮ್ಮ ಪ್ರಾಯಕ್ಕಿಂತ ತರುಣರಾಗಿ ಯಾಕೆ ಆಗಬಾರದು?

ಪ್ರತಿದಿನ ರಾತ್ರಿ ಎರಡು ಬೈಲ್ ಬೀನ್ಸುಗಳನ್ನು ಸೇವಿಸುವ 'ಸುವರ್ಣ ನಿಯಮ'ವನ್ನನುಸರಿಸಿದಾದರೆ, ನೀವು ನಿಮ್ಮ ನಿಜವಾದ ಪ್ರಾಯಕ್ಕಿಂತ ಎಳೆಯುವರಾಗಿ ಕಾಣುವುದು ಮಾತ್ರವಲ್ಲ ಸ್ವತಃ ನೀವೇ ಹಾಗೆಂದು ಅನುಭವಿಸುವಿರಿ. ಬೈಲ್‌ಬೀನ್ಸು ಶುದ್ಧ ಶಾಕಾಹಾರದಿಂದಲೇ ಮಾಡಿದ್ದು ಅವು ಅವಯವಗಳನ್ನು ಸರಿಗೊಳಿಸುವವು. ರಕ್ತವನ್ನು ಶುದ್ಧಿಕರಿಸುವವು. ದಿನನಿತ್ಯದ ಕೊಸಿಯನ್ನು ನಿರ್ಮಲಗೊಳಿಸುವವು. ಹೀಗೆ ನಿಮ್ಮನ್ನು ಆರೋಗ್ಯವಂತಾಗಿ ತರುಣರಾಗಿ ಮತ್ತು ಆಕರ್ಷಕರಾಗಿ ಮಾಡುವವು.

ಬೈಲ್ ಬೀನ್ಸು ನಿಮ್ಮನ್ನು ತರುಣರಾಗಿಯೂ ಆರೋಗ್ಯವಂತರಾಗಿಯೂ ಮಾಡುವವು.

BILE BEANS

ಸ್ವದೇಶಾಭಿಮಾನಿ

ತಾರೀಕು 2—2—1945

ವಿಶ್ವವಿದ್ಯಾಲಯಗಳು

ಜಯಪುರದಲ್ಲಿ ಒಂದೆಡೆ ಭಾಷಣ ಕೊಡುತ್ತಾ ಭಾರತದ ಪ್ರಸಿದ್ಧ ವಿಜ್ಞಾನಾಚಾರ್ಯರಾದ ಸರ್ ಸಿ. ವಿ. ರಾಮನ್‌ರವರು, ಹಿಂದೂದೇಶದಲ್ಲಿ ವಿಶ್ವವಿದ್ಯಾಲಯಗಳು ಇನ್ನೂ ಹೆಚ್ಚಬೇಕು, ಜಯಪುರದಲ್ಲಿ ಒಂದು ವಿಶ್ವವಿದ್ಯಾಲಯದ ಸ್ಥಾಪನೆಯಾಗಬೇಕು ಎಂದು ಸೂಚಿಸಿದರು.

ಹೌದು. ಹಿಂದೂದೇಶದಲ್ಲಿ ಇನ್ನೂ ಹೆಚ್ಚು ವಿಶ್ವವಿದ್ಯಾಲಯ ಬೇಕು. ಬರೆ ಪದವೀದರರನ್ನು ಹೆಚ್ಚಿಸುವವುಗಳಲ್ಲ. ಅಲ್ಲಿಗೆ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಮಾಜಕ್ಕೆ ಅತ್ಯಂತ ಉಪಯುಕ್ತರಾಗುವ ತರದಲ್ಲಿ ಶಿಕ್ಷಣವನ್ನುಕೊಡುವಂತವುಗಳು. ಬರೆ ಪುಸ್ತಕ ಜ್ಞಾನದ ಬದಲು ಜೀವನದ ಸಮಸ್ಯೆಗಳನ್ನು ಬಗೆಹರಿಸುವಂತ ಜ್ಞಾನವು ಅಲ್ಲಿ ದೊರಕಬೇಕು. ನೈತಿಕ ಮಟ್ಟವನ್ನು ಏರಿಸುವ ತರದ ಜ್ಞಾನಾರ್ಜನೆಯು ಅಲ್ಲಿ ಆಗಬೇಕು.

ನಮ್ಮ ವಿಶ್ವವಿದ್ಯಾಲಯಗಳು ಆಂಗ್ಲೇಯ ವಿಶ್ವವಿದ್ಯಾಲಯಗಳ ಕ್ರಮದಲ್ಲಿ ಸ್ಥಾಪನೆಯಾದವುಗಳು. ಅವುಗಳ ಕ್ರಮದಲ್ಲಿ ನಡೆಯುವವುಗಳು. ಆಂಗ್ಲ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ಶಿಕ್ಷಣದ ಕುರಿತು ಇಂಗ್ಲಾಂಡಿನ ಪ್ರಗತಿಗಾಮಿಗಳಾದ ವೆಲ್ಸ್; ಶಾ ಮೊದಲಾದ ಮಹಿನಿಯರು ಅತೃಪ್ತಿಯನ್ನು ಸೂಚಿಸಿರುವರು. ಅಲ್ಲಿ ವಿಶಾಲವಾದ ವಿಶ್ವ ಸತ್ಯಗಳ ಕುರಿತು ಪರಿಪಾಠವಾಗುತ್ತಿಲ್ಲವೆಂದು ವೆಲ್ಸರು ಹಿಂದೊಮ್ಮೆ ದೂರೆತ್ತಿದ್ದರು. ಅವುಗಳ ಸುಧಾರಣೆಯಾಗಬೇಕೆಂದು ಕೋರಿದ್ದರು.

ಆದೇ ರೀತಿ, ನಮ್ಮ ಸದ್ಯಕ್ಕಿರುವ ವಿಶ್ವವಿದ್ಯಾಲಯಗಳ ಸುಧಾರಣೆಯಾಗಬೇಕು. ನವಯುಗಕ್ಕೆ ಸರಿಯಾಗಿ ನೂತನ ದೃಷ್ಟಿಯ ವಿದ್ಯಾ ಪ್ರಚಾರವನ್ನು ಮಾಡುವ ವಿಶ್ವವಿದ್ಯಾಲಯಗಳು ಹೆಚ್ಚಬೇಕು.

ಶುಭಸೂಚಕವಲ್ಲ

ಸೆರೆಯಿಂದ ಹೊರಬಂದ ಕಾಂಗ್ರೆಸ್ ಮಂದಿಗಳು ಹೊಸತೊಂದು ಕೆಲಸದಲ್ಲಿ ಕೈಹಚ್ಚಿರುವರು—ಉಚ್ಛ ಕಾಂಗ್ರೆಸ್‌ವಾಲರು, ಯಾರು, ಯಾರಲ್ಲ ಎಂಬುದನ್ನು ಕಂಡುಹಿಡಿಯುವುದು. ಉಚ್ಛ ಕಾಂಗ್ರೆಸ್‌ವಾಲರೆಂಬ ಹೊಸತೊಂದು ವರ್ಗವನ್ನು ನಿರ್ಮಿಸುವುದರಲ್ಲಿ ಅವರ ಯತ್ನವೊ ಎಂಬ ಸಂದೇಹವು ಉಂಟಾಗುತ್ತದೆ.

ಭಿನ್ನತೆಗಳು ನಮ್ಮಲ್ಲಿ ಸಾಕಷ್ಟು ಇವೆ. ಪ್ರಗತಿಯುತ ರಾಷ್ಟ್ರಗಳಲ್ಲಿ ಈ ಭಿನ್ನತೆಗಳು ರಾಷ್ಟ್ರದ ಏಳ್ಗೆಯ ವಿಚಾರಗಳಲ್ಲಿ ಐಕ್ಯ ಹೊಂದುತ್ತವೆ. ಆದರೆ ನಮ್ಮಲ್ಲಿ ಈ ಭಿನ್ನತೆಗಳು ಕಲಹದ ಕಾರಣವಾಗಿರುತ್ತವೆ. ಈ ಭಿನ್ನತೆಗಳಿಂದಲೆ, ನಮ್ಮ ಸ್ವಾತಂತ್ರ್ಯ ಸಮಸ್ಯೆಯು ಬಗೆಹರಿಸಲ್ಪಡದೆ ಹಾಗೆನೆ ಉಳಿದಿದೆ.

ಹಿಂದೂ, ಬೌದ್ಧ, ಇಸ್ಲಾಂ, ಕ್ರೈಸ್ತೀಯ ಮೊದಲಾದ ಧರ್ಮಗಳಿವೆಯಷ್ಟೆ. ಇವುಗಳು ಒಂದೇ ಸತ್ಯವನ್ನು ಬೋಧಿಸುವ ಭಿನ್ನತೆಗಳು. "ದೇವಮಾರ್ಗ"ವನ್ನು ತೋರಿಸಿಕೊಡುವಂತವುಗಳು. ಹಾಗೆನೆ ನಮ್ಮಲ್ಲಿರುವ ಭಿನ್ನತೆಗಳು ನಮ್ಮನ್ನು ಸ್ವಾತಂತ್ರ್ಯದ ಕಡೆ ಒಯ್ಯುವಂತವುಗಳಾಗಬೇಕು.

ಆದುದರಿಂದ ಉಚ್ಛ ಕಾಂಗ್ರೆಸ್ಸಿಗರು ಕೊಮ್ಯುನಿಷ್ಟರು ಮೊದಲಾದ ಭಿನ್ನತೆಗಳು ನಮಗೆ ಬೇಗನೆ ಸ್ವಾತಂತ್ರ್ಯವನ್ನು ಒದಗಿಸುವಂತವುಗಳಾಗಬೇಕು. ಬರೆ ಹೊಗಳಿಕೆ ಮತ್ತು ತೆಗಳಿಕೆಯಲ್ಲಿ ಸಮಯ ಕಳೆಯುವ ಬದಲಾಗಿ, ಗಾಂಧೀಜಿಯ ನೆರವಿನಲ್ಲಿ ಹೊರಟ, ವಿಧಾಯಕ ಕಾರ್ಯಕ್ರಮಗಳಲ್ಲಿ ಜನತೆಯು ಉತ್ಸಾಹಗೊಳ್ಳುವಂತೆ ಚಟುವಟಿಕೆಗಳು ನಡೆಯಬೇಕು.

ಗಾಂಧೀಜಿಯರು ಅನ್ನುವಂತೆ, ಲೋಕಮಾನ್ಯ ತಿಲಕರು 'ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು' ಎಂಬ ಮಂತ್ರವನ್ನು ಹೊರಡಿಸಿದರು; ಆ ಮಂತ್ರವನ್ನು, ಸತ್ಯ ಅಹಿಂಸಾಚರಣೆಗಳಿಂದ ಕಾರ್ಯರೂಪಕ್ಕೆ ತರುವುದು ನಮ್ಮೆಲ್ಲರ ಗುರಿಯಾಗಿರಬೇಕು.

ಯುರೋಪಿನಲ್ಲಿ ಒಂದು ಹಿಂದೂ ಸಂಘವಿದೆ. ಅವರು ೧೯೪೫ ವರ್ಷಕ್ಕೆ ಡಾ। ದಿವಾನ್ ಸಿಂಗ್ ಎಂಬವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ, ಯುರೋಪಿನಲ್ಲೂ, ಬ್ರಿಟನಿನಲ್ಲೂ ಪ್ರಾಮುಖ್ಯ ಹಿಂದೂ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸಬೇಕೆಂದು ನಿರ್ಧರಿಸಿರುವರು.

ಡೆಮಾಕ್ರಿಟಸ್ಸಿನ ಸ್ವರ್ಣವಚನಗಳು

೧. ಲೋಕ ವ್ಯವಹಾರ ಜ್ಞಾನದಿಂದ ನಾವು ಪಡೆಯುವ ಫಲಗಳು ಮೂರು: ವಿಧಾನವಾಗಿ ಆಲೋಚಿಸುವುದು; ವಿಷಯಕ್ಕೆ ಸರಿಯಾಗಿ ಮಾತನಾಡುವುದು; ನ್ಯಾಯವಾದುದನ್ನು ನಡೆಸುವುದು.

೨. ಜೀವನದ ತಿರುಳನ್ನು ಸವಿಯಬೇಕೆಂದಿರುವವನು ಹೆಚ್ಚು ವಿಚಾರಗಳ ಗೊಂದಲಕ್ಕೆ ಹೋಗಬಾರದು, ಮತ್ತು ತಾನು ಮಾಡುವ ಕಾರ್ಯದಲ್ಲಿಯೂ ತನ್ನ ಸ್ವಾಭಾವಿಕ ಶಕ್ತಿಯನ್ನು ಮೀರಿ ಮಾಡುವ ಆಶೆಯಿರಬಾರದು. ಅದೃಷ್ಟ ಕೂಡಿ ಬಂದು ತನ್ನನ್ನು ಉನ್ನತ ಪದವಿಗಳಿಗೆ ಏರಿಸುವ ಸಂಭವ ಒದಗಿದಾಗಲೂ ಸಹ, ಮನುಷ್ಯನು ಉಕ್ಕಿಬರುವ ಮಹತ್ವಾಂಕ್ಷೆಗಳನ್ನು ಹಿಡಿತಕ್ಕೆ ತಂದು, ತನ್ನ ಏಳ್ಗೆಯನ್ನು ತಿಳಿದು, ಭಾಗ್ಯಲಕ್ಷ್ಮಿಯನ್ನು ಹೋಗಿ ಬಾರೆಂದು ಹೇಳಬೇಕೇ ಹೊರತು ತನ್ನ ಶಕ್ತಿಗೆ ಮೀರಿ ನಡೆಯಲು ಪ್ರಯತ್ನಪಡಬಾರದು. ಏಕೆಂದರೆ ಅತಿಯಾಗಿ ಊದಿ ಹೋಗಿರುವ ಮನುಷ್ಯನಿಗಿಂತಲೂ ಸಾಧಾರಣ ಗಾತ್ರವುಳ್ಳ ಮನುಷ್ಯನೇ ಕ್ಷೇಮಿ.

(ಗ್ರೀಕರ ತತ್ವಶಾಸ್ತ್ರ ಸಾರಸಂಗ್ರಹ)

ಗಾಂಧಿ ವಿಚಾರ ವಚನಗಳು

(ಕಳೆದಸಂಚಿಕೆಯಿಂದ)

೨೨. ಬರಿದೆ ತುಟಿಗಳ ತಡಬಡಿಸಿ ಪ್ರಾರ್ಥನೆಯ ಪಾಂಗಿನಿಂ ಸ್ತೋತ್ರಗಳನೊದರಿದನು ಹೃದಯ ಭರಿತವಿಹ ಪ್ರಣಿಧಾನವೆನ್ನಲಾರೆನಯ್ಯ. ನಡೆ, ನುಡಿ, ಮನಸಿನೊಳು ಎಡೆಬಿಡದೆ ಹೊರ ಚಿಮ್ಮುತಲಿಹ ಸತ್ಯದಾ ತೃಷ್ಣೆ ಕಾಣಾ ಪ್ರಣಿಧಾನ. ಪ್ರಣಿಧಾನವದು ಏಕಾಗ್ರತೆಯಿಂ ಸರ್ವಾರ್ಪಣೆ ಎಂಬೆ ನಾನು. ಪಾಪಪೂರಿತವಿಹ ಆವರಣದೊಳು ಪ್ರಾರ್ಥನೆಯೆ ಸಂಪೂರ್ಣ ಸಂರಕ್ಷೆ ಭಾರತ ಭಾಗ್ಯವಿಧಾತ.

೨೩. ಉಪಾಸನೆ, ಪ್ರಾರ್ಥನೆ ಎಂದೊಡೆ ಪರಮಾತ್ಮನ ಸಾನ್ನಿಧ್ಯವನು ಸೇರುವುದಯ್ಯ. ಸಾನ್ನಿಧ್ಯವನು ಸೇರಿ ತದ್ರೂಪವಾಗುವುದೆ ಉಪಾಸನೆಯ ಹಿರಿ ಬಯಕೆ ಕಾಣಾ. ಪರಮಾತ್ಮನ ತದ್ರೂಪವೆಂದೊಡೆ ಸತ್ಯರೂಪವಾಗುವುದೆಂದೇ ಅರ್ಥವಾಯಿತಲ್ಲ. ಸತ್ಯರೂಪವ ಪೊಂದುವ ತೀವ್ರ ಇಚ್ಛೆಯ ಭರದಿಂ ಭಗವಂತನೊಳು ಮೊರೆಯಿಟ್ಟು ಬಿನ್ನವಿಪುದೆ ಪ್ರಾರ್ಥನೆ ಭಾರತ ಭಾಗ್ಯವಿಧಾತ.

೨೪. ಪ್ರಾರ್ಥನೆಯು ಬುದ್ಧಿಯ ವಿಷಯಮಲ್ಲ. ಮೇಣ್ ಅದು ಕೇವಲ ಶ್ರದ್ಧೆ ಎಂಬೆನಯ್ಯ. ದಿನದಿನಕೂ ಮಿಗಿಲೆನಿಪ ಶ್ರದ್ಧೆಯಿಂ ಉಪಾಸನೆಯ ಮಾಡುತಲೆ ಇರಬೇಕಯ್ಯ ಪರಿಶುದ್ಧತೆಯ ನೆಲೆಯ ಪಿಡಿಯಲ್ಕೆ. ಉಂಡುದುದು ಕಾಯವನು ಬಲಿಸುವ ತೆರದೆ ಪ್ರಾರ್ಥನೆಯು ಆತ್ಮ ಬಲವನು ವರ್ಧಿಪುದಯ್ಯ ಭಾರತ ಭಾಗ್ಯವಿಧಾತ.

೨೫. ಸರ್ವಂತರ್ಯಾಮಿ ಇಹ ಸತ್ಯವದು ಜೀವಿಕೋಟಿಗಳಲೆಲ್ಲ ನೆಲಸಿಹುದು ಕಾಣಾ. ಸಕಲ ಜೀವಿಗಳೆಲ್ಲ ಸತ್ಯದ ಕಿಡಿಗಳೆಂದೆ ತಿಳಿಯಿರಣ್ಣಾ. ಇಂತಿರ್ಕೆ ಸತ್ಯಸಾಧಕನವನು ಜೀವಕೋಟಿಗಳೊಡನೆ ಐಕ್ಯತೆಯ ಅನುಭವವ ಪೊಂದಬೇಕಯ್ಯ. ಇದಕೆಲ್ಲ ವ್ಯಕ್ತಿಗತ ಪ್ರಾರ್ಥನೆ ಮಾತ್ರ ಸಾಲದಣ್ಣ. ಸಾಮುದಾಯಿಕಮಾದ ಉಪಾಸನೆಯೂ ಬೇಕಯ್ಯ ಬೇಕಯ್ಯ ಭಾರತ ಭಾಗ್ಯವಿಧಾತ.

೨೬. ಜೀವಕೋಟಿಗಳೊಡನೆ ಐಕ್ಯತೆಯು ಏರ್ಪಡಲು ನಿಷ್ಕಾಮ ಸೇವೆಯೇ ಉಚ್ಛಮಾರ್ಗವಯ್ಯ. ಇಂತಿರ್ಕೆ ನಿಷ್ಕಾಮ ಸೇವೆಯುನೂ ಉಪಾಸನೆಯೆಂಬೆನಯ್ಯ ಭಾರತ ಭಾಗ್ಯವಿಧಾತ.

೨೭. "ಜಗದ ಕನಸುಗಳನೆಲ್ಲ ಮಿಗಿಸಿ ಕಾರ್ಯವನು ಸಾಧಿಪುದು ಪ್ರಾರ್ಥನೆ" ಎಂದಿಹನು ಆಂಗ್ಲ ಕವಿಯೋರ್ವ. ಶುದ್ಧತೆಯ ಸಾಧನೆಗೆ ಸತ್ಯದಾರಾಧನೆಗೆ ಶ್ರದ್ಧೆ ಭಕ್ತಿಯುಕ್ತವಹ ಪ್ರಾರ್ಥನೆಯು ನೆರವು ತೆರದೆಂದು ಬಣ್ಣಿಸಲಯ್ಯ ಭಾರತ ಭಾಗ್ಯವಿಧಾತ.

೨೮. ಸತ್ಯಸ್ವರೂಪಿ ಪರಮಾತ್ಮನನುದಿನದೊಳು ಎಲ್ಲ ಮನುಜರ್ಗೆ ಪ್ರವಚನವೀಯುವನಯ್ಯ ಆದೊಡೆಯು ಮಂದ್ರವಿಹ ಆ ಉಲಿಯು ಆಲಿಸದಿರ್ಪವಕಟಾ ನಾವು. ದಿವ್ಯಜ್ಯೋತಿಯದುವೇ ಕಟ್ಟೆದಿರಲೇ ಬೆಳಗುತಿರಲು ಕಣ್ಮುಚ್ಚುವೆವಯ್ಯ. ಭಯಭೀತಿಗಳ ತೊಲಗಿ ದೇವರೇ ಆಗಿರ್ಪ ಸತ್ಯವನೆ ಅನವರತ ಅರಸುತಲಿರ್ಪ ಸಾಧಕಗೆ ಪರಮಾತ್ಮನ ಪ್ರವಚನ ಪ್ರಕಟಸ್ವರೂಪಗಳೆಲ್ಲ ನಿತ್ಯವೂ ಖಚಿತವಯ್ಯ ಭಾರತ ಭಾಗ್ಯವಿಧಾತ.

೨೯. ಹಿರಿ ಗುರಿಯನಿರಿಸಿದವನಿಗೆ ಬೇನೆ ಬವಣೆಗಳ ಕಾಟ ಬಹಳವಯ್ಯ. ಆದೊಡೆಯೂ ಅಂಜಿಕೆಯಿಂ ಉಚ್ಛಧ್ಯೇಯದ ಮಟ್ಟವನು ಕೆಳಕಿಳಿಸುವುದು ಸಲ್ಲದಣ್ಣಾ. ನೆರವಿಂದೆ ಕುಂದುಕೊರತೆಗಳ ನೀಗಿ ಸರಿದಾರಿಗೆ ಹಚ್ಚೆಂದೆನ್ನ ನಿರಂತರದ ಮೌನರೋಧನವದು ಸತ್ಯದ ದಿಕ್ಕಿಂಗೆ ಸಾಗುತಿದೆ ಭಾರತ ಭಾಗ್ಯವಿಧಾತ.

೩೦. ಅನಂತವಿಹ ಸತ್ಯವನು ಅಪಾರವಿಹ ವಿಶ್ವದಲಿ ಸಾಧನೆಯಿಂ ಶೋಧಿಪುದ ಸಾಧ್ಯವೇಂ ಎಂದೆಂಬ ಶಂಕೆಯನು ಬಿಡಬೇಕೆನ್ನ ಅಣ್ಣಗಳಿರಾ. ಬಾಳಿನಾ ಗೋಳಿನಲಿ ನಡೆಯಲಿಹ ಘನ ಲಘು ಪ್ರವೃತ್ತಿಗಳಲೆಲ್ಲ ಸತ್ಯವನೆ ಎಡೆಬಿಡದೆ ಹುಡಕಾಡಿ ಅದನೆ ತಪ್ಪದೆ ಕಾರ್ಯರೂಪಕೆ ತರ್ಪುದನು ಸತ್ಯದ ಆಗ್ರಹವೆಂಬೆ. ಇದುವೇ ಪರಮಾತ್ಮನನು ಸಾಕ್ಷಾತ್ಕರಿಸಲು ಪರಮ ಸಾಧನವಯ್ಯ ಭಾರತ ಭಾಗ್ಯವಿಧಾತ.

೩೧. ವಿಚಾರ, ನುಡಿ, ನಡೆಗಳಲೆಲ್ಲ ನನ್ನಿಯನು ಅನುಗೊಳಿಸಿ ಸಾಗುವುದೇ ಲೌಕಿಕ ಸತ್ಯವಯ್ಯ. ಈ ತೆರದ ಸತ್ಯವ್ರತ ನಿಯಮಗಳಿಲ್ಲದೊಡೆ ಪರಮಾತ್ಮನೇ ಆಗಿರ್ಪ ಅಪರ ಸತ್ಯವನೆಂತು ಪೊಂದುವುದಯ್ಯ ರಾಗದ್ವೇಷಗಳನುಳಿದ, ಶ್ರದ್ಧೆ ಭಕ್ತಿಗಳ ಕೂಟದಿಂ ನಿಷ್ಪಕ್ಷಪಾತವಿಹ ಬುದಿಮಥನದಿಂ ಯೋಗ್ಯ ನ್ಯಾಯ ಸಮ್ಮತವೆನಿಪ ವಿಚಾರವನು ಸತ್ಯವಿಚಾರವೆಂಬೆನಯ್ಯ ಭಾರತ ಭಾಗ್ಯವಿಧಾತ.

೩೨. ನುಡಿಯುವ ಸಡಗರವು ಒದಗಿರಲು ತಾನರಿತುದುದನು ಲವಲೇಶ ಅಭಾಸವಾಗದ ತೆರದೆ ಇದ್ದುದನು ಇದ್ದಂತೆ ಆಡುವ ನುಡಿಯುದುವೇ ಸತ್ಯವಾಣಿಯೆಂಬೆನಯ್ಯ ಭಾರತ ಭಾಗ್ಯವಿಧಾತ.

(ಮುಂದರಿವುದು) "ದಾಮೋದರ"

ಕೆಲವು ತಿಂಗಳ ಹಿಂದೆ ರದ್ದು ಮಾಡಿದ ನಿರ್ಭಂಧಆಜ್ಞೆಯು ಕಳೆದ ತಾ. ೨೫ರಿಂದ ಒಂದು ತಿಂಗಳ ಮಟ್ಟಿಗೆ ಪುನಃ ಜಾರಿಗೆ ತರಲಾಗಿದೆ. ಮಂಗಳೂರು ಮತ್ತು ಉಡುಪಿ ಮುನಿಸಿಪಾಲಿಟಿಯೊಳಗೂ ಮತ್ತು ಇಡೀ ಕಾಸರಗೋಡು ತಾಲೂಕಿನಲ್ಲೂ ಇದು ಫೆಬ್ರವರಿ ೨೫ರ ತನಕ ಚಾಲ್ತಿಯಲ್ಲಿರುವುದು. ಸಾರ್ವಜನಿಕ ಸಭೆ, ಮೆರವಣಿಗೆ ಮೊದಲಾದವುಗಳು ನಡೆಯಬಾರದು. ಮತೀಯ ಮತ್ತು ಸಾಮಾಜಿಕ ಪದ್ಧತಿಸಂಬಂಧವಾದ ಕೂಟ ವ್ಯವಹಾರಗಳಿಗೆ ಇದು ತಗಲುವುದಿಲ್ಲ. ಹೀಗೆಂದು ಜಿಲ್ಲಾ ಕಲೆಕ್ಟರರ ಒಂದು ಹುಕುಂ ತಿಳಿಸುತ್ತದೆ.

ಕಳೆದ ವಾರವು ಹೆಚ್ಚಾಗಿ ಆಜ್ಞೆ ಪ್ರಕಟನೆಗಳ ವಾರವೆನ್ನಬಹುದು. ಜಿಲ್ಲೆಯ ಮಜುರರೂ, ಬೇಸಾಯಗಾರರೂ ಅವರಿಗೆ ಕೊಡಲ್ಪಡುವ ರೇಶನ್ ಪ್ರಮಾಣವನ್ನು ಧಾನ್ಯದವಸಗಳಿಂದ ಪಡೆಯುವಲ್ಲಿ ಅದರ ಸಂಗ್ರಹವು ಅವರ ಬಳಿ ಇರುವ ತನಕ ರೇಶನ್ ಕಾರ್ಡುಗಳನ್ನು ಉಪಯೋಗಿಸಬಾರದೆಂದೂ ಕಲೆಕ್ಟರರ ಒಂದು ಪ್ರಕಟನೆ ಹೊರಟಿದೆ.

ಇನ್ನೂ ನಿರ್ಬಂಧವಿಲ್ಲವೆಂದರೆ ಹೊಳೆ ಮತ್ತು ನೆಲ ಮಾರ್ಗವಾಗಿ ಕಟ್ಟಿಗೆಯನ್ನು ಹಂಚು ಯಾ ಇತರ ಕಾರ್ಖಾನೆಗಳಿಗೆ ಒದಗಿಸುವ ಕಟ್ಟಿಗೆಗೆ. ಇಂತಹ ಕಟ್ಟಿಗೆಯನ್ನು ಪೋಲಿಸರು ತಡೆಯಬಾರದಾಗಿ ನಿರ್ದೇಶಿಸಲಾಗಿದೆ. ಆದರೆ ಇನ್ನು ಎರಡು ತಿಂಗಳುಗಳಲ್ಲಿ ಬರುವ ಮಳೆಗಾಲದಲ್ಲಿ ಮಾತ್ರ ಕಟ್ಟಿಗೆಯನ್ನು ಒಬ್ಬೊಬ್ಬರಿಗೆ ಎರಡು ಮಣಕಿಂತಲೂ ಹೆಚ್ಚಿಗೆ ಕೊಡದಂತೆ ನಿಬಂಧಿಸುವ ಅವಶ್ಯಕತೆ ಬೀಳಬಹುದಾದುದರಿಂದ ಸಾರ್ವಜನಿಕರು ಈಗಲೇ ಮಳೆಗಾಲದ ದಾಸ್ತಾನು ಮಾಡುವಂತೆ ಕಲೆಕ್ಟರರ ಪ್ರಕಟನೆಯೊಂದು ತಿಳಿಸುತ್ತದೆ.

ಯುದ್ಧಕಾಲದ ಸಾರ್ವಜನಿಕ ಹಿತದೃಷ್ಟಿಯಿಂದ ಇನ್ನೂ ಇತರ ಬೇರೆ ಬೇರೆ ನಿರ್ಬಂಧ ಕಾಜ್ಞೆಗಳೂ, ಶಾಸನಗಳೂ ಹೆಚ್ಚಬಹುದೆಂದು ನಿರೀಕ್ಷಿಸಬಹುದು. ಕಾರಣ ಇನ್ನು ಸ್ವಲ್ಪ ಸಮಯದಲ್ಲೇ ಜಿಲ್ಲೆಯಲ್ಲೆಲ್ಲ ಸಾರ್ವತ್ರಿಕ ರೇಶನ್ ಪದ್ಧತಿಯು ಜಾರಿಗೆ ಬರಲಿದೆ ಎಂದು ಸಿವಿಲ್ ಸಪ್ಲಾಯಿ ಕಮಿಶನರರು ತಿಳಿಸಿರುವಂತೆ ವದಂತಿ ಇದೆ.

ಎಷ್ಟು ಆಜ್ಞೆ ಪ್ರಕಟನೆಗಳು ಜಾರಿಯಲ್ಲಿದ್ದರೂ ಸಾರ್ವಜನಿಕರು ಸಹಕರಿಸದೆ ಅವುಗಳ ಉಪಯುಕ್ತತೆಯನ್ನು ಪರಿಪೂರ್ಣಗೊಳಿಸಲಾಗುವುದಿಲ್ಲ. ಮಾತ್ರವಲ್ಲ ಸಾರ್ವಜನಿಕ ಸೇವೆಗಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳೂ ಅವುಗಳ ಪ್ರತಿನಿಧಿಯವರೂ ಅವರವರಿಗೆ ಸಂಬಂಧಪಟ್ಟ ಕಾನೂನು ಕಾಯಿದೆ ಮೀರದಂತೆ ನೋಡಿಕೊಳ್ಳುವುದು ಉತ್ತಮ. ಕಾರಣ ಇಚೀಗೆ ರೇಶನಿಂಗ್ ಸರಬರಾಯಿಯ ಕುರಿತು ನಾನಾ ತರದ ದೂರುಗಳು ಏಳಹತ್ತಿವೆ. ಕೆಲವು ಸ್ಟೋರ್ಸುಗಳವರು ಬಡಜನರ ರೇಶನ್ ಕಾರ್ಡುಗಳನ್ನು ಅವುಗಳಲ್ಲಿ ಹಾಕಬೇಕಾದ ಗುರುತುಗಳನ್ನು ಅಕ್ರಮರೀತಿಯಿಂದ ಭರಾಯಿಸಿ ವಂಚಿಸಲು ಪ್ರಯತ್ನಮಾಡಿದರೆಂಬ ಆರೋಪಗಳು ಬರಹತ್ತಿವೆ. ಸಾರ್ವಜನಿಕರಿಗೆ ಕೊಡುವ ಸಲಹೆ ಎಚ್ಚರಿಕೆಗಳನ್ನು ಸಂಬಂಧಪಟ್ಟ ಇಲಾಖೆಯವರಿಗೂ ಕೊಡುವುದವಶ್ಯಕ.

ಕಾಲು ದಾರಿಯ ನಿಯಮಗಳನ್ನು ಉಲ್ಲಂಘಿಸಿದ ಅನೇಕರಿಗೆ ಶಿಕ್ಷೆಗಳಾಗಿವೆ. ಹಿಂದೊಮ್ಮೆ ಸಾರ್ವಜನಿಕರಿಗೆ ರಸ್ತೆ ಅಪಾಯದ ಕುರಿತು ನಾವು ಸೂಚನೆಕೊಟ್ಟಿದ್ದೇವೆ. ಅಧಿಕಾರಿಗಳೂ ಇನ್ನೂ ಹೆಚ್ಚಿನ ಸಹಾನುಭೂತಿಯಿಂದ ಮಾರ್ಗಸ್ಥರು ಯೋಗ್ಯ ದಾರಿಯಲ್ಲಿ ಸಂಚರಿಸುವಂತೆ ಶ್ರಮವಹಿಸಿದರೆ ಇಂತಹ ಆರೋಪಗಳಿಗೆ ಹೆಚ್ಚಾಗಿ ತುತ್ತಾಗುವ ಈ ಉಲ್ಲಂಘನೆಗಳು ತಿಳಿಯದ ಅನೇಕ ಅನಕ್ಷರ ಕೃತಜ್ಞತೆಗೆ ಪಾತ್ರರಾಗಬಹುದು.

ಕಳೆದ ವಾರ ನಗರದಲ್ಲಿ ಅನೇಕ ಸಭೆಸಮ್ಮೇಳ ಉತ್ಸವಗಳೂ ಜರಗಿದುವು. ತಾ. ೨೧ರಲ್ಲಿ ಮಾನ್ಯ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಇಲ್ಲಿನ ಡಿಪ್ರೆಸ್ಡ್ ಕ್ಲಾಸ್ ಮಿಶನ್ ಶಾಲೆಯ ವರ್ಧಂತ್ಯುತ್ಸವವು ಜರಗಿತು. ಅಂದೇ ವಕೀಲ್ ಶ್ರೀ. ಎಂ. ಕೆ. ದೇವರಾಜ ಅವರ ಅಧ್ಯಕ್ಷತೆಯಲ್ಲಿ ಇಲ್ಲಿನ ಜೈನ್ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವ ಜರುಗಿತು. ತಾ. ೨೬ರಂದು ಕೆನೆರಾ ಹೈಸ್ಕೂಲಿನಲ್ಲಿ ವರಬೇಡ್ ನರಸಿಂಹಾಚಾರ್ಯರು 'ಹರಿಸರ್ವೋತ್ತಮ'ನೆಂಬ ವೇದಾಂತ ವಿಚಾರದ ಕುರಿತು ವಿದ್ಯುತ್‌ಪೂರ್ಣವಾದ ಭಾಷಣಕೊಟ್ಟರು. ತಾ. ೨೯ರಂದು ದ. ಕ. ಜಿಲ್ಲಾ ಪತ್ರಿಕೋದ್ಯೋಗಿಗಳ ವಾರ್ಷಿಕ ಸಭೆಯು ಅದರ ಕಾರ್ಯಾಲಯದಲ್ಲಿ ಜರಗಿತು. ಜನತಾರಂಗ ಭೂಮಿಯ ಸಂಬಂಧವಾದ ಒಂದು ಸಭೆಯು ಅಂದೇ ಸದ್ರಿ ಕಾರ್ಯಾಲಯದಲ್ಲಿ ಜರುಗಿತು.

ಮಂಗಳೂರಲ್ಲಿ ಮಕ್ಕಳ ಸಮ್ಮೇಲನ

ಜಿಲ್ಲಾ ರೇಶನ್ ಪದ್ಧತಿ ಬರುವುದು

ಚಿಮೂರ್ ಕೈದಿಗಳ ಪ್ರಾಣದಾನ ಬೇಡಿಕೆ

ಕದ್ರಿಯಲ್ಲಿ ಹುಲಿ ಬೇಟೆ

ತಾ. ೨೭, ೨೮ರಲ್ಲು ಇಲ್ಲಿಯ ಕೆನೆರಾ ಹ್ಯಾಸ್ಕೂಲಿನಲ್ಲಿ ಮಕ್ಕಳಸಮ್ಮೇಳನವೊಂದು ಜರುಗಿತು. ಜಿಲ್ಲೆಯಲ್ಲಿನ ಹಲವು ಶಾಲೆಯ ಮಕ್ಕಳುಗಳು ಸಹಕರಿಸಿದ್ದರು. ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆಯವರು ಮೊದಲನೇ ದಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ಯಶಸ್ಸು ಕೋರಿದರು. ಮೈಸೂರಿನ ಕುಮಾರ ಕೆ. ಶಂಕರ ನಾರಾಯಣ ಎಂಬ ಬಾಲಕನು ಸಮ್ಮೇಳನಾಧ್ಯಕ್ಷನಾಗಿ ಭಾಷಣ ಕೊಟ್ಟನು. ಮರುದಿನ ವೃತ್ತಿ ಸ್ಪರ್ಧೆ ಸಾಹಿತ್ಯ ವಾಚನಗಳು ಇದ್ದವು. ಅಧ್ಯಕ್ಷತೆ ವಹಿಸಲಿದ್ದ ಶ್ರೀ. ಜಿ. ಪಿ. ರಾಜರತ್ನಂ ಅವರು ಕಾರಣವಶಾತ್ ಬರಬಾರದುದರಿಂದ ಬೆಂಗಳೂರಿನ ಶ್ರೀಯುತ್ ಪಾಂಡುರಂಗರಾಯರು ಅಗ್ರಾಸನ ವಹಿಸಿದ್ದರು. ನಾಟಕ, ವಿವಿಧ ವಿನೋದಾವಳಿಗಳಿದ್ದುವು. ಕೆಲವು ಹಿರಿಯ ಸಾಹಿತಿಗಳ ಹಿನ್ನಲೆಯಿಂದ ಮಕ್ಕಳ ಈ ಚಟುವಟಿಕೆಗಳನ್ನು ನಿರ್ದೇಶಿಸಿದ್ದರು. ಆ ದೃಷ್ಟಿಯಿಂದ ಸಮ್ಮೇಳನವನ್ನು ಇನ್ನೂ ಹೆಚ್ಚಿನ ಆಕರ್ಷಕವೂ, ಶೈಕ್ಷಣೀಕವೂ ಆಗಿರಬೇಕಿತ್ತು. ಇಂತಹ ಸಮ್ಮೇಳನವನ್ನು ಮಕ್ಕಳೇ ಸ್ವತಃ ಜರುಗಿಸುವಂತೆ ಪ್ರೋತ್ಸಾಹಿಸಬೇಕು. ಮುಂದಿನ ವರ್ಷ ನಿಜವಾಗಿಯೂ ಮಕ್ಕಳದಾಗಿರುವ ಸಮ್ಮೇಲನವು ಜರಗಲೆಂದು ಹಾರೈಸುವೆವು.

ಪದವು-ಕದ್ರಿ ಬಳಿಯ ಕಾಡಿನ ಒಂದು ಚಿಟ್ಟೆ ಹುಲಿಯನ್ನು ಓರ್ವ ಶಿಕಾರಿ ನಿಪುಣರು ಕೊಂದಿರುವರು. ಕೆಲವು ಸಮಯ ಹಿಂದೆ ಹುಲಿಯೊಂದು ನರಬಲಿಯನ್ನು ತೆಗೆದುಕೊಂಡಿತ್ತೆಂದು ವದಂತಿಯಿತ್ತು. ಜೈಲಿನ ಬಳಿಯ ಜಾನುವಾರ ಆಸ್ಪತ್ರೆಗೆ ಈ ಕ್ರೂರ ಚಿರತೆಯ ಶವವು ತರಲ್ಪಟ್ಟಿತ್ತು. ಪೇಟೆಗಳ ಸುಖ ಹುಲಿಗೆ ಏಕೆ ಬೇಕಾಗಿತ್ತು?

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ, ಅ. ಭಾ. ಟ್ರೇ. ಯೂ, ಕಾಂಗ್ರೆಸ್, ಕ. ಏಕೀಕರಣ ಸಮಿತಿ, ಬೊಂಬೇ ಫುಡ್ ಕೌನ್ಸಿಲ್ ಇವುಗಳ ಸದಸ್ಯರೂ, ಕನ್ನಡ ಮತ್ತು ಕೊಂಕಣಿ ಭಾಷೆಯ ಕವಿತೆಗಳ ಪ್ರಸಿದ್ಧ ಲೇಖಕರೂ ಆದ ಶ್ರೀ. ದಿನಕರ ದೇಸಾಯಿ ಅವರು ಕಳೆದ ಆದಿತ್ಯವಾರ ಮಂಗಳೂರಿಗೆ ಬಂದಿದ್ದು ಹಲವು ಸಂಸ್ಥೆಗಳನ್ನೂ ಸಂದರ್ಶಿಸಿ, ಹಲವು ಪ್ರಮುಖರೊಂದಿಗೆ ಮಾತುಕತೆ ನಡೆಸಿದರು.

ಬಂಟರ ಯಾನೆ ನಾಡವರ ಶ್ರೀ. ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ಭವನಗಳ ವಾರ್ಷಿಕೋತ್ಸವವು ತಾ. ೨೭ರಂದು ಗ। ಕಾಲೇಜ್ ಪ್ರಿನ್ಸಿಪಾಲ್ ಮಿ। ಕೆ. ಪಿ. ವರ್ಗೀಸರ ಅಧ್ಯಕ್ಷತೆಯಲ್ಲಿ ಜರುಗಿತು. ಆಕರ್ಷಕ ಕಾರ್ಯಕ್ರಮವಿತ್ತು. ಶ್ರೀಮತಿ ವರ್ಗೀಸರು ಬಹುಮಾನ ಹಂಚಿದರು.

ಮದ್ರಾಸಿನ ಶ್ರೀ. ಗೆಬ್ರಿಯೇಲ್ ಎಂಬ ಸಂಗೀತ ವಾದ್ಯ ನಿಪುಣರೊಬ್ಬರು ನಗರದ ಹಲವು ಪ್ರಮುಖರ ಗೃಹಗಳಲ್ಲಿ ಕಛೇರಿಯನ್ನು ನಡೆಸುತ್ತಿರುವರು. ಇವರು ಮದ್ರಾಸಿನ ಓರ್ವ ಕ್ರೈಸ್ತರು. ಹಿಂದೂಸ್ತಾನಿ ಸಂಗೀತವನ್ನು ನಾನಾ ತರದ ವಿಚಿತ್ರ ವಾದ್ಯಗಳ ಮೇಲೆ ಇವರು ಬಾರಿಸಿ ಸಭಿಕರನ್ನು ಆನಂದಗೊಳಿಸುತ್ತಾರೆ. ಹಾಗೆಯೇ ಸಂಗೀತ ವಿದ್ವಾನ್ ಶ್ರೀ. ಗೋಪಿನಾಥ್, ವಿದ್ವಾನ್, ನಾರಾಯಣ ಶಾಸ್ತ್ರಿ, ತಬ್ಲಾ, ವಿದ್ವಾನ್ ಎನ್. ವಿ. ಮೂರ್ತಿ. ಇವರು ಒಂದು ಸಂಗೀತ ಕಛೇರಿಯೂ ಖಾಸಗಿಯಾಗಿ ನಡೆಯಿತು. ಇನ್ನೂ, ನಾಡಲ್ಲೆಲ್ಲ ಸಂಗೀತ ಪ್ರಚಾರವು ಹೆಚ್ಚಾಗಿ ನಡೆಯಲೆಂದು ಹಾರೈಸುವೆವು.

ಬೀಡಿ ಲೇಬರ್ ಯೂನಿಯನ್ನಿನ ಕಾರ್ಯದರ್ಶಿ ಶ್ರೀ. ಲಿಂಗಪ್ಪ ಸುವರ್ಣ, ಮತ್ತು ಅಧ್ಯಕ್ಷ ಶ್ರೀ. ಮಂಜು ಅವರನ್ನು ತಾ. ೨೬ರರ ಸ್ವಾತಂತ್ರ್ಯ ದಿನಾಚರಣೆಯಂದು ಜಾರಿಮಾಡಲಾದ ಮೆರವಣಿಗೆ, ಸಭಾ ನಿರ್ಬಂಧದ ಕಾನೂನು ಮೀರಿದರೆಂದು ಸ್ಪೆಶಲ್ ಬ್ರೇಂಚ್ ಪೋಲಿಸರಿಂದ ಕೈದು ಮಾಡಲ್ಪಟ್ಟು ಹತ್ತು ದಿನದ ರಿಮಾಂಡಿನಲ್ಲಿರುವರು.

ಈ ಸಾರಿ ಡಿಸ್ಟ್ರಿಕ್ಟ್ ಬೋರ್ಡು ಸಭೆಯು ತಾ. ೨೫ರಲ್ಲಿ ತಿಕ್ರರಪುರದ ಬೋರ್ಡು ಶಾಲೆಯಲ್ಲಿ ಖಾನ್ ಬಹದೂರ್ ಮಹಮದ್ ಚಮ್ನಾಡರ ಅಧ್ಯಕ್ಷತೆಯಲ್ಲಿ ಜರುಗಿತು. ಜಿಲ್ಲೆಯ ಹಲವು ಕಡೆಗಳಲ್ಲಿ ಡಿಸ್ಪೆನ್ಸರಿಗಳನ್ನು ಸ್ಥಾಪಿಸಲು ಯೋಜನೆಗಳನ್ನು ಮಂಜೂರುಮಾಡಲಾಯಿತು. ಕಾಯಂ ಆಗಿ ಓರ್ವ ಎಡಿಶನಲ್ ಪಂಚಾಯತ್ ಆಫೀಸರರನ್ನು ನೇಮಿಸಲು ಸರಕಾರವು ಸಮ್ಮತಿ ಕೊಟ್ಟಿದೆ. ಯುದ್ಧಾನಂತರ ಮಾರ್ಗ ಆಡಳಿತವು ಡಿಸ್ಟ್ರಿಕ್ಟ್ ಬೋರ್ಡುಗಳ ಕೈಕೆಳಗೆ ಕೊಡಬೇಕೆಂಬ ಕುರಿತು ಸಭೆಯು ಒಪ್ಪಿಗೆ ಸೂಚಿಸಿತು. ಬೀಡಿ ಚುಟ್ಟಾ ತಯಾರಿಸುವ ಕಾರ್ಖಾನೆಗಳಿಗೆ ಒಂದು ರೂಪಾಯಿ ಫೀಸು ತೆಗೆದುಕೊಂಡು ಲೈಸೆನ್ಸ್ ಕೊಡುವವಿರ್ಷಾಡು ಮಂಜೂರಾಯಿತು. ಕಲೆಕ್ಟರರ ಇತ್ತೀಚೆಗಿನ ಪ್ರಕಟನೆ ಹೀಗಿದೆ:

ಒಪ್ಪಿಸಬೇಕಾದ ಐದನೇ ಎರಡು ಅಂಶದ ಅಕ್ಕಿಯ ಅವಧಿ ಜನವರಿ ಆಖೇರು ಎಂದಿತ್ತು. ಆದರೂ ಫೆಬ್ರುವರಿ ಆಖೇರಿಯೊಳಗೆ ಈ ಐದನೇ ಎರಡು ಅಂಶವನ್ನು ತಲಿಪಿಸುವವರಿಗೆ ೧ರೂ. ಕಮ್ಮಿಕೊಡಲಾಗುವುದಿಲ್ಲ. ಈ ರಿಯಾಯಿತಿಯು ಇನ್ನೂ ಮುಂದರಿಸಲಾಗುವುದಿಲ್ಲ. ಆದರೆ ಮೊದಲ ೪ನೇ ಕಂತಿನ ಅಕ್ಕಿಗೆ (ಕಡೇ ತಾರೀಕು ೩೧-೧೨-೪೪) ಮಾತ್ರ ೧ರೂ. ಕಡಿತವಿದೆ. ಫೆಬ್ರುವರಿ ೨೮ರ ಅವಧಿಕಿಂತಲೂ ಹೆಚ್ಚಿನ ರಿಯಾಯಿತಿಯನ್ನು (೨ನೇ, ಇಲ್ಲವೆ ೩ನೇ ಕಂತಿನದಕ್ಕೆ) ತೋರಿಸುವುದಿಲ್ಲ. ಹೊರಗಿನಿಂದ ತರಿಸುವ ಗೋಣಿ ಅಕ್ಕಿಯ ತೂಕ 164½ ರಾತ್ಲು. ೧, ೨, ೩ನೇ ತರದ ಅಕ್ಕಿಗಳ ಲೆಕ್ಕ ಕ್ರಮವಾಗಿ ಸೇರುಗಳಲ್ಲಿ ಹೀಗಿರುವುದಾಗಿ ಲೆಕ್ಕಹಾಕಲಾಗುವುದು: 1=79½ಸೇ. 2=79½ಸೇ. 3=80½ಸೇ.—ಹೀಗೆಂದು ಕಲೆಕ್ಟರರ ಇನ್ನೊಂದು ಪ್ರಕಟನೆ ತಿಳಿಸುತ್ತದೆ.

ಜಿಲ್ಲೆಯ ಹಲವು ಕಡೆಗಳಲ್ಲಿ ಹುಲಿಗಳ ಹಾವಳಿ ಏದ್ದಿರುವುದರಿಂದ ಶಿಕಾರಿಗಳು ಜಾಗರೂಕತೆಯಿಂದಿದ್ದಾರೆ. ಸುಳ್ಯದ ಅಲೆಟ್ಟಿ ಗ್ರಾಮದಲ್ಲಿನ ವಕೀಲ್ ಕೃಷ್ಣ ಭಟ್ಟರು ಇಚೀಗೆ ಒಂದು ಹುಲಿಯನ್ನು ಗುಂಡಿನಿಂದ ಕೊಂದರು.

ಸಿಡುಬು ಜಾಡ್ಯವು ಸುಬ್ರಮಣ್ಯದ ಆಸುಪಾಸಿನಲ್ಲಿ ತಲೆಯೆತ್ತಿದೆಯಂತೆ. ಅಲ್ಲಿ ಸುಮಾರು ೫೦ ಜನರಿಗೆ ಇದು ತಗಲಿ ೧೨ ಮರಣಗಳಾಗಿವೆ ಎಂಬ ವಿಷಯವು ಆರೋಗ್ಯಾಧಿಕಾರಿಗಳ ಗಮನಕ್ಕೆ ಬಂದಿರುವುದೆಂದು ಹಾರೈಕೆ.

ಬಜಪೆ ಊರು ವಿಹಾರಿ ಸ್ಥಳವಾಗಿ ಪ್ರಖ್ಯಾತಿಪಟ್ಟ ಸ್ಥಳ. ಇಲ್ಲಿ ಜಿಲ್ಲೆಯಲ್ಲಿನ ಮೂರನೇ ದೊಡ್ಡ ಸಂತೆ ಸೇರುವುದು. ಈ ಪೇಟೆಯಲ್ಲಿ 800ರಕ್ಕೂ ಮಿಕ್ಕಿದ ಮನೆಮಾರುಗಳಿದ್ದು ಅನೇಕ ಅಂಗಡಿಗಳೂ ಇಲ್ಲಿವೆ. ಇದರ 5 ಮೈಲಿನ ಆಸುಪಾಸಿನಲ್ಲಿ 7 ಹಾಯರ್ ಎಲಿಮೆಂಟರಿ ಶಾಲೆಗಳೂ, 80ಕ್ಕೂ ಮಿಕ್ಕಿದ ಲೋವರ್ ಎಲಿಮೆಂಟರಿ ಶಾಲೆಗಳೂ ಮತ್ತು ಮಹಮ್ಮದೀಯರ, ಹರಿಜನರ ಶಾಲೆಗಳೂ ಇವೆ. ವರ್ಷಕ್ಕೆ ಸುಮಾರು 800 ವಿದ್ಯಾರ್ಥಿಗಳೂ ಹ್ಯಾಸ್ಕೂಲ್ ಶಿಕ್ಷಣಕ್ಕಾಗಿ ಈ ಕಡೆಗಳಿಂದ ಹೊರ ಊರುಗಳಿಗೆ ಹೋಗುತ್ತಾರೆ. ಹೊರ ಊರುಗಳಿಗೆ ಹೋಗಿ ಕಲಿಯುವ ಖರ್ಚು ವಿಪರೀತ ಬೀಳುವುದರಿಂದ ಅನಾನುಕೂಲವಾಗಿ ಅನೇಕಾನೇಕ ಹೆತ್ತವರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಅರ್ಧದಲ್ಲೇ ಕೊನೆಗಾಣಿಸುತ್ತಾರೆ. ಈಗ ಇಲ್ಲಿ ಒಂದು ಹ್ಯಾಸ್ಕೂಲ್ ತೆರೆಯಬೇಕೆಂಬ ಮನವಿಯನ್ನು ಇಲ್ಲಿನ ವಿದ್ಯಾಭಿಮಾನಿಗಳು ಕೆಲವರು ವಿದ್ಯಾಂಗಾಧಿ ಕಾರಿಗಳ ಕಡೆಗೆ ತಿಳುಹಿಸಿದ್ದಾರೆ. ಯುದ್ಧಪ್ರತ್ಯಕ್ಷ್ಯೂ ಈ ಕಡೆಯ ನಾಗರೀಕರು ಧನ, ಜನಗಳಿಂದ ಸಹಾಯಕರಾಗಿದ್ದಾರೆ. ಬಜಪೆಯಲ್ಲೊಂದು ಹ್ಯಾಸ್ಕೂಲ್ ಅವಶ್ಯಕವೆಂದು ನಮಗೂ ತೋರುತ್ತದೆ. ಆದುದರಿಂದ ವಿದ್ಯಾಧಿಕಾರಿಗಳು ಸಹಾನುಭೂತಿಯಿಂದ ಈ ವಿಷಯವನ್ನು ಸಮರ್ಥಿಸಿ ಬೇಕಾದ ವ್ಯವಸ್ಥೆಗಳನ್ನು ಮಾಡಬೇಕೆಂದು ಕೂಡುವ ಇಲ್ಲಿನ ವಿದ್ಯಾಭಿಮಾನಿಗಳು ಆಶ್ರಯವನ್ನು ನೆರವೇರಿಸಲೆಂದು ನಮ್ಮ ಹಾರೈಕೆ.

ಉಡುಪಿ ಕ್ಷೇತ್ರದಲ್ಲಿ ಶ್ರೀ ಕೃಷ್ಣ ಮಠದಲ್ಲಿಯೂ ಈ ಸಲದ ಮಧ್ವನವಮಿ ಸಂತರ್ಪಣೆಯು ನಡೆಯಲಿಲ್ಲ. ಸಮಾರಾಧನೆಗಳಿಲ್ಲವೆಂದು ನೊಂದ ಇತರ ದೇವಳಾಧಿ ಮಠಗಳು ಈ ವಿಷಯವನ್ನು ಗಮನಿಸಿ ಸಮಧಾನ ತಾಳಲಿ. ಅಕ್ಕಿಯ ತೊಂದರೆ ಎಲ್ಲಾ ಕಡೆಗಳಲ್ಲೂ ಸಮಾನವಾಗಿದೆ.

ಸಂಕ್ಷೇಪ ಸುದ್ದಿಸಾರ

ಸ್ವಾತಂತ್ರ್ಯ ದಿನದಂದು ಸೇವಾಗ್ರಾಮದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿನ ರಚನಾತ್ಮಕ ಕೆಲಸಗಾರರ ತರಬೇತು ಶಿಬಿರದ ನಾಯಕರಾದ ಶ್ರೀ ಕನೂ ಗಾಂಧಿಯವರು ಹತ್ತಿರದ ಹಳ್ಳಿಯೊಂದನ್ನು ಶುದ್ಧೀಕರಿಸಲು 250 ಸ್ವಯಂಸೇವಕರ ದಳವೊಂದನ್ನು ಸಾಲುಕ್ರಮದಲ್ಲಿ ಒಯ್ಯುತಿದಾಗ ವಾರ್ಧಾದ ಎಡಿಶನಲ್ ಪೋಲಿಸರು ಬಂದು ಅದನ್ನು ತಡೆದು ನಿಲ್ಲಿಸಿ ಹಾಗೆ ಮೆರವಣಿಗೆಯಲ್ಲಿ ಸಾಲಾಗಿ ಹೋಗಲಿಕ್ಕೆ ಬಿಡಲಾರೆವೆಂದರು. ಸ್ವಯಂಸೇವಕರು ಅಲ್ಲೆ ಕುಳಿತು ಬಿಟ್ಟರು. ಎರಡು ಗಂಟೆಗಳ ನಂತರ ಈ ವಿಷಯವು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಗಮನಕ್ಕೆ ತರಲಾಯಿತು. ಅವರು ಕೂಡಲೇ ಪೋಲಿಸರನ್ನು ಹಿಂದಕ್ಕೆ ಬರುವಂತೆ ಹುಕುಂ ಕೊಟ್ಟರು. ಗಾಂಧೀಜಿ ತಮ್ಮ ಕಾರ್ಯದರ್ಶಿಯ ಮೂಲಕ ಅಂದಿನ ಗ್ರಾಮ ಶುದ್ಧೀಕರಣದ ಉದ್ದೇಶಕ್ಕಾಗಿ ಸ್ವಯಂಕರು ಹೋಗುತ್ತಿರುವರೆಂದೂ ಮತ್ತು ಅದು ರಚನಾತ್ಮಕ ಕಾರ್ಯಕ್ರಮದ ಒಂದು ಅಂಗವೆಂತಲೂ ತಿಳಿಸಿದರು. ಪೋಲಿಸರು ದಾರಿ ಬಿಟ್ಟಮೇಲೆ ಸೇವಕದಳವು ಹಳ್ಳಿಗೆ ಹೋಗಿ ಶುದ್ಧತೆಯ ತಮ್ಮ ಕೆಲಸವನ್ನು ಅರ್ಧ ಗಂಟೆಯಲ್ಲಿ ಮುಗಿಸಿ ಬಂದರು. ಈ ಘಟನೆಯ ಕುರಿತು ಗಾಂಧೀಜಿ ಹೇಗೆಹೇಳಿದ್ದಾರೆ? "ಉಗ್ರ ಸಂಗ್ರಾಮದ ಕಾರ್ಯಕ್ರಮವನ್ನು ನಾವೀಗ ಕೈಕೊಳ್ಳಬಾರದೆಂದು ನಿಶ್ಚಯಿಸಿದ್ದೇವೆ. ರಚನಾತ್ಮಕ ಕಾರ್ಯಕ್ರಮವೇ ಪರಿಪೂರ್ಣತೆಯಿಂದ ಸಾಗಿದರೆ ಸ್ವಾತಂತ್ರವು ಬೇಗನೆ ಕೈಗೂಡುವುದು. ಸತ್ಯ ಅಹಿಂಸೆಗಳಿಂದಲೇ ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು' ಎಂಬ ತಿಲಕರ ಮಂತ್ರವನ್ನು ನಾವು ಪೂರ್ತಿಗೊಳಿಸೋಣ. ಸ್ವಯಂಸೇವಕರು ಇಂದು ಗಂಭೀರವಾಗಿ ವರ್ತಿಸಿದ್ದು ಶ್ಲಾಘನೀಯ. ಅಂತೇ ನಮ್ಮೀ ರಚನಾತ್ಮಕ ಕಾರ್ಯಕ್ಕೆ ಅಡ್ಡಿ ಬಂದರೆ ಪ್ರಾಣ ಹೋಗುವ ತನಕ ಅದನ್ನು ಬಿಡಬಾರದು. ದುಃಖದಲ್ಲಿಯೇ ನಿಜವಾದ ಸುಖವಿದೆ. ದುಃಖವೆಂದರೆ ನಾವು ಈ ಸ್ವಾತಂತ್ರ್ಯ ಕಾರ್ಯಕ್ಕಾಗಿ ಪಡುವ ಸಂಕಷ್ಟ ಸಹಿಷ್ಣತೆಗಳು. ಈ ಕಾರ್ಯವೆಲ್ಲ ಸ್ವಯಂಸೇವಕರು ಗೋಳಿಬಾರು ಮಾಡುವ ಪ್ರಸಂಗವನ್ನುಂಟುಮಾಡಬಾರದು. ಇಲ್ಲವೆ ಅಂತಹ ಪ್ರಸಂಗ ಬಂದರೂ ಅದರಿಂದ ತಪ್ಪಿಸಿಕೊಳ್ಳಲೂ ಪ್ರಯತ್ನಿಸಬಾರದು.

"ದೇಶ ಮುಖಂಡರು ಕಾರಾಗೃಹದಲ್ಲಿದ್ದೇ ತಮ್ಮ ದೇಶ ಸೇವೆಯ ಕರ್ತವ್ಯವನ್ನು ಪರಿಪಾಲಿಸುತ್ತಲಿದ್ದಾರೆ. ಸೆರೆ ಮನೆಯಲ್ಲಿ ಓರ್ವ ಸತ್ಯಾಗ್ರಹಿಯು ಕೊಳೆಯುತ್ತಿರುವುದೆಂದರೆ ಹೊರಗಿದ್ದವರಿಗೆ ಅದೊಂದು ಸ್ಫೂರ್ತಿಯೇ ಸರಿ. ನಮ್ಮಲ್ಲಿ ಶಕ್ತಿಯಿರುತಿದ್ದರೆ ನಮ್ಮೋರ್ವ ಮುಖಂಡನೂ ತುರಂಗದಲ್ಲಿರುತಿದ್ದಿಲ್ಲ. ಸಾರ್ವತ್ರಿಕ ಶಾಸನ ಭಂಗ ಚಳವಳವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿದೆಯಾದರೂ ಸ್ವಾತಂತ್ರ ಸಂಗ್ರಾಮವು ಅದನ್ನು ದೊರಕಿಸಿಕೊಳ್ಳುವ ತನಕ ಮುಂದರಿಸುತ್ತಲೇ ಇರುತ್ತದೆ. ಸ್ವತಂತ್ರ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಮುಖಂಡರ ದಿನ (ಪ್ರತಿ ತಿಂಗಳ ೯ನೇ ತಾರೀಕ)ನ್ನಾಚರಿಸಲಿಚ್ಛಿಸಿದರೆ ಶಾಂತ ರೀತಿಯಿಂದ ತಮ್ಮ ಉಪಾಧ್ಯಾಯರ ಸಲಹೆಗಳನ್ನು ಪಡೆದು ಚಿತ್ತ ಶುದ್ಧಿಯಾಗುವ ರೀತಿಯಲ್ಲಿ ಮಾಡಬೇಕು." ಹೀಗೆಂದು ಗಾಂಧೀಜೀಯವರು ಅಮದಾಬಾದಿನ ಒಂದು ವಿದ್ಯಾರ್ಥಿ ಸಂಘಕ್ಕೆ ತಿಳಿಸಿದ್ದಾರೆ.

ಶ್ರೀ ಪಾಂಗಾಳ್ ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಕಳೆದ ವಾರ ಉಡುಪಿಯ ಮಜೂರರ ಮಹಾಸಭೆಯೊಂದು ಸೇರಿ ಚಿಮೂರು ಅಷ್ಟಿಗಲಬೆಯಲ್ಲಿ ಮರಣದ ದಂಡನೆಗೆ ಒಳಗಾದ 16 ಮಂದಿಗಳಿಗೆ ಪ್ರಾಣದಾನ ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯಗಳಾದುವು.

ಕಾಸರಗೋಡು ಜಾಲ್ಸೂರು ರಸ್ತೆಯ 19ನೇ ಮೈಲು ಕಲ್ಲಿನ ಸಮೀಪ ಪಡ್ಯವಡ್ಕವೆಂಬಲ್ಲಿ 5 ಸಾವಿರ ಮುಡಿ ಭತ್ತ ಹಿಡಿಯುವ ಒಂದು ಉಗ್ರಾಣವನ್ನು ಕಟ್ಟಲಾಗಿದೆ. ಸುಮಾರು ಅಷ್ಟೇ ಖರ್ಚು ತಗಲಿದೆ. ಬತ್ತವೂ ಹಾಗೇ ಸರಬರಾಯಿಯಾಗಲೆಂದು ಹಾರೈಕೆ.

ಕೆಲವು ನೋಟಗಳು

ಮುಸಲೇನಿಯ ಪತ್ರಿಕೆಯಾಗಿದ್ದ, ಆತನ ಆಳ್ವಿಕೆಯಲ್ಲಿ ಪ್ರಸಿದ್ಧವೆನಿಸಿಕೊಂಡ 'ಪೊಪೊಲೊ ಡಿ'ಇಟೆಲಿಯಾವು' ಫ್ರೆಂಚ್ ಧನಸಹಾಯದಿಂದ ಸ್ಥಾಪಿಸಲ್ಪಟ್ಟಿದ್ದು. ಕಳೆದ ಮಹಾಯುದ್ಧದಲ್ಲಿ ಇಟೆಲಿಯು ಪ್ರವೇಶವಾಗುವಂತೆ ಪ್ರೇರೇಪಿಸಲು ಫ್ರೆಂಚರು ಈ ಧನವನ್ನು ವ್ಯಯಿಸಿದ್ದು. ಮುಸಲೇನಿಯು ಅಂದಿನ ವರೆಗೆ ಕಡು ಸಾಮ್ಯವಾದಿಯಾಗಿದ್ದವನು, ಇಟೆಲಿಯು ಯುದ್ಧದಲ್ಲಿ ಪ್ರವೇಶಿಸುವ ಕುರಿತು ಅಂದಿನ ಇಟೆಲಿಯಾನ್ ಸಾಮ್ಯವಾದಿಗಳು ವಿರೋದಭಿಪ್ರಾಯವುಳ್ಳರಾದುದರಿಂದ, ತನ್ನ ದೇಶವು ಯುದ್ಧದಲ್ಲಿ ಭಾಗವಹಿಸಬೇಕಾಗಿ ಆತನು ಆಸಕ್ತನಾದುದರಿಂದ,– ಆತನು ಸಾಮ್ಯವಾದಿಗಳಿಂದ ಬೇರ್ಪಟ್ಟನು.

* * *

ಯುದ್ಧರಂಗದಿಂದ ಮರಳಿದ ನಿರುದ್ಯೋಗಿ ಸಮುರುದ್ಯೋಗಿಗಳ ಕೂಟದಿಂದ ನಾಜಿ ಪಕ್ಷವು ಉದ್ಭವಿಸಿದಂತೆ–ಇಟೆಲಿಯಲ್ಲೂ ತದ್‌ರೀತಿಯ ಒಂದು ಕೂಟ ಉಂಟಾಗಿ, ಅದು ಕ್ರಮೇಣ ಮುಸಲೇನಿಯ ನಾಯಕತ್ವದಲ್ಲಿ ಫೆಸಿಸ್ಟ ಪಕ್ಷವಾಗಿ ರೂಪುಗೊಂದಿತು.

* * *

ಸ್ಪೆಯಿನಿನ ಪ್ರಜಾಪ್ರಭುತ್ವರೂಪದ ಕ್ರಾಂತಿಯಿಂದ ಅಧಿಕಾರದಲ್ಲಿದ್ದ ಅರಸುತನವು ಅಧಿಕಾರ ತ್ಯಜಿಸಬೇಕಾಯಿತು. ಆದರೆ ಪ್ರಜಾಸತ್ತೆಯ ಸಮೂಹದಲ್ಲಿ 'ಲೆನೀನ್'ರಂತಹ ನಾಯಕರಿಲ್ಲದುದರಿಂದ, ಆ ಕ್ರಾಂತಿ ಯಶಸ್ವಿಯಾಗಲಿಲ್ಲ. ಸಾಹಿಕಿ ಅಜೊನಾರ ದುಡುಕಿನ ಧೋರಣದಿಂದ, ಅದರ ಶಕ್ತಿಯು ಕುಂದಿತು–ಬಲಪಕ್ಷಕ್ಕೆ ಅವಕಾಶ ಮಾಡಿಕೊಟ್ಟಿತು–ಫ್ರೆಂಕೊವಿನ ಬಲಾತ್ಕಾರಯುತ ಪ್ರವೇಶವಾಯಿತು.

* *

ಒಂದು ರಾಷ್ಟ್ರದ ವಾರ್ತಾಪತ್ರಗಳನ್ನು ಅಂಕಿತದಲ್ಲಿಟ್ಟರೆ ಸರಿ, ಆಗ ಸರ್ವಾಧಿಕಾರತ್ವವು ಯಶಸ್ವಿಯಾಗುವುದು–ಇದನ್ನು ಹಿಟ್ಲರನ ಪ್ರಚಾರಾಧಿಕಾರಿ ಡಾ। ಗೊಬೆಲ್ಸರು ತಿಳಕೊಂಡೇ ಕಾರ್ಯನಿರ್ವಹಿಸಿದರು. ಸಟೆ, ದೂಷಣೆಗಳಿಂದಲೆ ಆತನು ನಾಜಿಗಳ ಪ್ರಾಬಲ್ಯವನ್ನು ಬೆಳೆಯಿಸಿದನು. ಜರ್ಮನ್ ಯಹೂದಿಗಳ ಕುರಿತು ಸಲ್ಲದ ಆರೋಪಗಳನ್ನು ಹೊರಡಿಸಿ, ಜರ್ಮನರು ಅವರ ಮೇಲೆ ಉದ್ರೇಕಗೊಳ್ಳುವಂತೆ ಆತನ ಯತ್ನಗಳು ಯಶಸ್ವಿಯಾಗಿದ್ದವು.

* * *

ನಾಜಿ ನಾಯಕರಲ್ಲಿ ಇರುವ ಒಂದೇ ಒಂದು ಸುಗುಣವೆಂದರೆ, ರಾಷ್ಟ್ರಾಭಿಮಾನ.

* * *

ಮೆಡಲುಗಳಿಂದ ಅಲಂಕಾರಭೂಷಿತನಾಗುವುದರಲ್ಲಿ, ನಾಜಿ ನಾಯಕರಲ್ಲೊಬ್ಬನಾದ ಗೋರಿಂಗನಿಗೆ ತುಂಬಾ ಅನುರಾಗ. ಆತನ ಎದೆಯ ಮೇಲೆ ನಿರಂತರವೂ ಮೆಡಲುಗಳು ಬಹುಸಂಖ್ಯೆಯಲ್ಲಿ ಜೋತಾಡುವವು. ಆತನ ಈ ಅನುರಾಗದ ಕುರಿತು ಹಾಸ್ಯಮಯವಾದ ಕಥೆಯೊಂದಿದೆ. ಆತನು ಒಮ್ಮೆ ನಿರೀಕ್ಷಣೆಗಾಗಿ ಒಂದು ಕಾರ್ಖಾನೆಗೆ ತೆರಳಿದ್ದನಂತೆ. ಆ ಕಾರ್ಖಾನೆಯಲ್ಲಿ ಉಕ್ಕಿನ ಭದ್ರವಾದ ಸಾಮಾನುಗಳು ಅತ್ತಿತ್ತ ಒಯ್ಯಲು ವಿದ್ಯುತ್‌ಕಾಂತಗಳು ಮೇಲೆ ಏರ್ಪಡಿಸಲ್ಪಟ್ಟಿದ್ದವಂತೆ. ಈ ವಿದ್ಯುತ್ ಕಾಂತಗಳಿದ್ದ ಕ್ಷೇತ್ರಕ್ಕೆ ತೆರಳಿದೊಡನೆ, ಗೊರಿಂಗನು, ಪಕ್ಕನೆ ಮಾಯವಾಗಿ ಬಿಟ್ಟನಂತೆ! ಆತನ ಸಂಗಡಿಗರು ದಿಗ್ಭ್ರಾಂತರಾಗಿ, ಆತನನ್ನು ಅರಸಿದಾಗ, ಆತನು ಅಲ್ಲೇ ಮೇಲಿರುವ ವಿದ್ಯುತ್‌ಕಾಂತದಿಂದ ಜೋತಾಡುತ್ತಿರುವುದು ಕಾಣಿಸಿತಂತೆ!

* * *

'ಉತ್ತಮ ಪ್ರಚಾರದಿಂದಲೆ, ಎಂತಹದ್ದನ್ನೂ ರಚಿಸುವಂತೆ ಮಾಡಬಹುದು–ಮೃತ್ಯುವನ್ನೂ ಕೂಡ ಅತ್ಯಂತ ರುಚಿಕರ ವಿಷಯವಾಗಿ ಮಾಡಿಬಿಡಬಹುದು'–
ಗಂಥರ್.

* * *

'ಸೋವಿಯಟ್ ರಷ್ಯದೊಡನೆ ಒಪ್ಪಂದವೆ! ಅಂತಹ ಒಪ್ಪಂದಕ್ಕೆ ಸಹಿಹಾಕುವುದಕ್ಕಿಂತ ಆತ್ಮತ್ಯಾಗವೇ ಲೇಸು'–
ಹಿಟ್ಲರ್.

* * *

ಹಿಟ್ಲರನ ಉಪದೇಶಕ ಮಂಡಳದಲ್ಲಿ ಪ್ರಾಮುಖ್ಯ ವ್ಯಕ್ತಿಗಳಾದ ರೂಬೆನ್‌ಟ್ರಾಪನು, ತನ್ನ ಜೀವನ ಸಂಗ್ರಾಮವನ್ನು, ಕೆನಡಾದೇಶದಲ್ಲಿ ಒಂದು ಉಕ್ಕಿನ ಕಾರ್ಖಾನೆಯಲ್ಲಿ, ಕೂಲಿಯಾಗಿ ಪ್ರಾರಂಭಿಸದವನು. ಕಳೆದ ಮಹಾಯುದ್ಧವು ಪ್ರಾರಂಭವಾಗುವ ದಿನ, ಆತನು ಕೆನಡಾದ ಒಂದು ಬೇಂಕಿನಲ್ಲಿ ಗುಮಾಸ್ತನಾಗಿದ್ದ. ವಿಧಿಯ ವೈಚಿತ್ರ!

* * *

ಜರ್ಮನಿಯು ಗಗನಮಂಡಳದ ಹೋರಾಟದಲ್ಲಿ ವಿಶ್ವಾಸತಾಳಿ ತನ್ನ ವಾಯುಬಲದ ಹೆಚ್ಚಳದಲ್ಲಿ ನಿರತವಾಗಿದ್ದಾಗ, ಫ್ರಾನ್ಸಿನ ಸಂಗ್ರಾಮ ಚತುರರು ತುರಂಗಗಳಲ್ಲಿ ವಿಶ್ವಾಸಕಂಡು, ಬಲವಾದ ಸೇನಾಬಲವನ್ನು ರಚಿಸಿ ಅದನ್ನು ಭದ್ರವಾಗಿ ಭೂಗರ್ಭದೊಳಗೆ ಇಡಲು, ಹವಣಿಸಿದರು. ಇದರ ಪರಿಣಾಮ ಈಗ ಎಲ್ಲರಿಗೂ ತಿಳಿದ ವಿಷಯವು.

* * *

'ಒಪ್ಪಂದಗಳೆಂದರೆ ಬರೆ ಕಾಗದಪತ್ರಗಳು–ಬೇಡವಾದಾಗ ಅವುಗಳನ್ನು ಹರಿದು ಹಾಕಬಹುದು, ಮತ್ತು ಸ್ವೇಚ್ಛಾಪರರಾಗಿ ವರ್ತಿಸಬಹುದು'. ಈ ಸಿದ್ಧಾಂತವನ್ನು ಸ್ಥಾಪಿಸಿದ ಕೀರ್ತಿಯು ಹಿಟ್ಲರನಿಗೆ ಸಲ್ಲಬೇಕು. ಕಳೆದ ಮಹಾಯುದ್ಧೋತ್ತರದಲ್ಲಿ ಜಗತ್ತಿನ ಶಾಂತಿಯನ್ನು ಪಾಲಿಸುವ ಕುರಿತು ಅನೇಕಾನೇಕ ಒಪ್ಪಂದಗಳು ನಡೆದಿದ್ದರೂ, ಅವುಗಳು ಯಾರಿಂದಲೂ ಮಾನ್ಯವಾಗಿಲ್ಲದುದರಿಂದಲೆ, ಹಿಟ್ಲರನು ಅಷ್ಟು ಧೈರ್ಯ ಹೊಂದಲು ಕಾರಣವಿರಬಹುದು.

* * *

ಪ್ರಕೃತದ ಮಹಾಯುದ್ಧದ ಪೂರ್ವದಲ್ಲಿ ಫ್ರಾನ್ಸಿನಲ್ಲಿ, ರಾಜಕೀಯ ವ್ಯವಹಾರಗಳೆಲ್ಲಾ, ಅಲ್ಲಿನ ಪ್ರಾಮುಖ್ಯ ಬೇಂಕಿಂಗ್ ಸಂಸ್ಥೆಯಾಗಿದ್ದ, 'ಬೇಂಕ್ ಡಿ'ಫ್ರಾನ್ಸ್'ನ ಅಂಕಿತದಲ್ಲಿದ್ದವು. ಈ ಸಂಸ್ಥೆಯು ೨೦೦ ಮಂದಿ ಶ್ರೀಮಂತ ಕುಲಗಳ ಆಟದ ಗೊಂಬೆಯಾಗಿತ್ತು. ವಂ[illegible]ಪರ್ಯವಾಗಿ ಈ ಬೇಂಕಿನ ಅಧಿಕಾರವು ಆ ಶ್ರೀಮಂತ ವರ್ಗದಲ್ಲೆ ಉಳಿಯುವ ಹಾಗೆ ನಡೆದು ಬಂದಿತ್ತು. ಧನವೆ ಈ ಸಂಸ್ಥೆಯ ಪ್ರಾಬಲ್ಯದ ತಳಹದಿ. ಈ ಧನದಿಂದಲೆ ಅವರಿಗೆ ಮಣಿಯದ ಅನೇಕ ಸರಕಾರಗಳು ಉರುಳಿಸಲಾದವು. ಫ್ರಾನ್ಸಿನ ಪ್ರಗತಿಗೆ ಇದೊಂದು ದೊಡ್ಡ ಕೊರತೆಯಾಗಿತ್ತು. ಫ್ರಾನ್ಸಿನ ಪುನರ್ರಚನೆಯಲ್ಲಿ ಈ ಬೇಂಕು ಮತ್ತೊಮ್ಮೆ ಜೀವಕ್ಕೆ ಬಾರದಂತೆ ಡಿ'ಗೊಲೆಯವರು ಜಾಗರೂಕರಾಗಿರುವರಂತೆ.

* * *

ಗ್ರೀಕರಲ್ಲಿ ಫ್ರೆಂಚ್ ಪತ್ರಿಕೆಗಳಿಗೆ ಲಂಚವಾಗಿ ಇಟೆಲಿಯು ೬೫ ಮಿಲಿಯ ಪವನಿನ ನಿಧಿಯನ್ನು ವ್ಯಯಿಸಿರುವುದು–ಮುಸಲೇನಿಯು ಹಬಶಿಗಳ ಮೇಲೆ [illegible] ಡೆತ್ತಿಹೋದ ಸಮಯವದು.

* * *

ಜಪಾನಿಯರು ಮೆಂಚ್ಯೂರಿಯದ ಮೇಲೆ ಕೈಮಾಡಿದಾಗ ಫ್ರೆಂಚ್ ಪತ್ರಿಕಾ ಸಮೂಹದಲ್ಲಿ ಬಹುಸಂಖ್ಯೆಯು, ಜಪಾನಿಯರ ಹಿತವಾದಿಯಾಗಿತ್ತು. ಲಂಚವೇ ಇದಕ್ಕೆ ಕಾರಣ.

* * *

ಸ್ಪೆಯಿನಿನಲ್ಲಿ ಬಂಡಾಯದ ಸಮಯ ಸ್ಪೆಯಿನಿನ ಪ್ರಗತಿಪರ ಸರಕಾರ ಕುರಿತು ಸತ್ಯಗಳಿಂದ ಕೂಡಿದ ಲೇಖನಮಾಲೆಯನ್ನು ಫ್ರೆಂಚ್ ಪತ್ರಿಕೆಗಳ ಮೂಲಕ ಪ್ರಚುರಪಡಿಸಬೇಕಾದರೆ ಧಾರಾಳ ಹಣವನ್ನು ವ್ಯಯಿಸಬೇಕಾಯಿತಂತೆ!

ಬಾವು ಮತ್ತು ರಕ್ತ ವಿಷವೇರುವುದನ್ನು ತಡೆಯಿರಿ.

ಜಾಂಬಕ್ ಆದರ್ಶ ವಿಷಹಾರಿ ಔಷಧ

ಗಣ್ಯಮಾಡದ ಗಾಯವು, ವಿಷರೂಪಿಯಾಗಿ ನೋವು ಮತ್ತು ಸಂಕಷ್ಟಗಳನ್ನುಂಟುಮಾಡುತ್ತದೆ. ಇದನ್ನು ಯಾವಾಗಲೂ ಗಾಯವಾದ ಕೂಡಲೇ ಜಾಂಬಕ್ ಲೇಪ ಸವರುವುದರಿಂದ ಪರಿಹರಿಸಬಹುದು, ಜಾಂಬಕಿನಲ್ಲಿರುವ ಅತ್ಯುತ್ತಮ ಶುದ್ಧ ವನಸ್ಪತಿ ತೈಲ್ಯವು ಚರ್ಮಕ್ಕೆ ಬೇಗನೇ ಅಂಟಿಕೊಂಡು ನೋವನ್ನು ಕಡಿಮೆ ಮಾಡಿ, ಬಾವನ್ನು ಇಳಿಸಿ, ಹೀಗೆ ಎಲ್ಲಾ ತರದ ಗಾಯ ವ್ರಣಗಳ ಕೊಳೆ ವಸ್ತುಗಳನ್ನು ಹೊರಹಾಕುತ್ತದೆ. ಜಾಂಬಕ್ ಕಲೆಯಿಲ್ಲದೆ ಗುಣಮಾಡುವುದು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣಪದಕ ಪಡೆದ ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ–ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ. ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಆರೋಗ್ಯವಂತರಾಗಿರುವುದೇ ಭಾಗ್ಯವು

ಹೆಚ್ಚು ಬೊಜ್ಜು ಬೆಳೆಸಬೇಡಿ

ಆರೋಗ್ಯದ ಸಂಪೂರ್ಣ ಆನಂದವನ್ನನುಭವಿಸಲು ನಾವು ವ್ಯಾಯಾಮ ಮಾಡಬೇಕು. ಬೆಳಿಗ್ಗೆ ಎದ್ದ ಕೂಡಲೇ ಉಪಹಾರದ ಮೊದಲು ನಾವು ಬರೀ ಹದಿನೈದು ಮಿನಿಟುಗಳ ತನಕ ಕೆಲವೊಂದು ಅಂಗಸಾಧನಗಳ ಮೂಲಕ ವ್ಯಾಯಾಮ ಮಾಡಿದರೆ ಖಂಡಿತವಾಗಿ ಆ ಶರೀರಸುಖ ಉಲ್ಲಾಸ ಶಾಂತಿಗಳು ನಮ್ಮದಾಗುವುದರಲ್ಲಿ ಸಂದೇಹವಿಲ್ಲ.

ಮೆತ್ತಗಾದ ಆರಾಮ ಕುರ್ಚಿಯಲ್ಲಿ ಬಿದ್ದುಕೊಂಡಿರುವುದು ಯಾವ ಸಾರ್ಥಕದ ವಿಷಯವೂ ಅಲ್ಲ. ನಾವು ನಮ್ಮ ರಕ್ತಚಲನೆಯನ್ನು ವೇಗಗೊಳಿಸಬೇಕು. ಇದಕ್ಕೆ ಶಾರಿರೀಕ ವ್ಯಾಯಾಮವೊಂದೇ ದಾರಿ ಅದುವೇಭಾಗ್ಯ.

ಮಾಂಸ ಬೆಳೆಸಬೇಡಿರಿ

ದೇಹವು ವಿಪರೀತ ಬೊಜ್ಜುಬೆಳೆಯುವುದರಿಂದ ಹೃತ್ಕೋಶದ ಮೇಲೆ ಹೆಚ್ಚು ದುಕೊಳ್ಳುವ ದೇಹದಲ್ಲಿ ಹದಮಿಕ್ಕಿದ ಕೊಬ್ಬಿನ ಮಾಂಸವು ಇರಬಾರದು. ಶರೀರ ವ್ಯಾಯಾಮದಿಂದ ಉಂಟಾಗುವ ಉಷ್ಣತೆಯು ಈ ಕೊಬ್ಬನ್ನು ಕರಗಿಸಿ ಬಿಡುತ್ತದೆ. ನಿಮ್ಮ ಹೊಟ್ಟೆ, ಸೊಂಟದ ಭಾಗಗಳಲ್ಲಿ, ಕೈರಟ್ಟೆಯಲ್ಲಿ ಮಾಂಸವು ಬೆಳೆದು ಜೋಲುವುದಕ್ಕಾರಂಭವಾದರೆ ನೀವು ತಿನ್ನುವ, ಪದಾರ್ಥಗಳನಲ್ಲಿ (ಅನ್ನ, ಸಕ್ಕರೆ, ಬೆಣ್ಣೆ ತುಪ್ಪ, ಗೋದಿ) ಕೊಬ್ಬು ಪದಾರ್ಥಗಳ ಪ್ರಮಾಣವನ್ನು ಕಮ್ಮಿ ಮಾಡಬೇಕು. ಮತ್ತು ಶಿಸ್ತಿನಿಂದ ಬಿಡದೇ ವ್ಯಾಯಾಮವನ್ನು ಕೈಕೊಳ್ಳಬೇಕು. ಹೀಗೆಂದ ಮಾತ್ರಕ್ಕೆ ಮನಸ್ಸು ಬಂದಾಗ ವಾರಕ್ಕೊಂದಾವರ್ತಿ ಇಲ್ಲವೆ ವಾರಾಂತ್ಯದಿನಗಳಲ್ಲಿ ಸ್ಫೂರ್ತಿಗೊಂಡು ಒಂದೇ ಸವನೆ ದಣಿವುಂಟುಮಾಡುವ ಆಟಗಳನ್ನು ಆಡುವುದು ತಪ್ಪು. ನೀವು ನಿಮ್ಮ ಇತರ ದಿನಚರಿಯ ಕೆಲಸದಂತೆ ಯೋಗ್ಯ ವ್ಯಾಯಾಮ ಕ್ರಮವನ್ನು ನಿತ್ಯವೂ ಜಪದಂತೆ ಮಾಡಬೇಕು.



ಮುಳುಗಿಸುವ ಮುಳುಗುವ ಹಡಗ

ಚಿತ್ರದ ಮುಂಭಾಗದಲ್ಲಿ ಕಾಣುತ್ತಿರುವುದು 'ಟ್ರೆಸ್‌ಪಾಸರ್' ಎಂಬ ಬ್ರಿಟಿಷ್ ಸಬ್‌ಮೆರಿನ್ 1943ರಿಂದ ಇದು ತನಕ ಇದು 50 ಸಾವಿರ ಮೈಲು ಪ್ರಯಾಣ ಮಾಡಿ ಅನೇಕ ಜರ್ಮನ್, ಜಪಾನಿ ಹಡಗ ನಾವೆಗಳನ್ನು ಮುಳುಗಿಸಿದೆ. ಅನೇಕ ಅಪಾಯಕರ ಗಂಡಾಂತರಗಳಿಂದ ತಪ್ಪಿಸಿಕೊಂಡಿದೆ. ಆದರೂ ಒಂದು ಸಲವೂ ಅದರ ಯಂತ್ರಗಳು ತೊಂದರೆ ಕೊಡಲಿಲ್ಲ. ಅದರ ಆಚೆಕಡೆ ಇರುವುದು ಸಾಮಗ್ರಿ ಪೆಟ್ರೋಲ್‌ಸರಬರಾಯಿ ಮಾಡುವ 'ಉಗ್ರಾಣ' ಹಡಗವೊಂದು.

ದುಷ್ಪರಿಣಾಮವಾಗುತ್ತದೆ. ಕಾರಣ ಹೆಚ್ಚು ಮಾಂಸ ಬೆಳೆದಷ್ಟಕ್ಕೆ ಅವುಗಳ ಗ್ರಂಥಿಗಳಿಗೆ ಹೆಚ್ಚೆಚ್ಚು ರಕ್ತವನ್ನು ಕಳುಹಿಸಬೇಕಾಗುವುದು. ಇದರಿಂದ ಎದೆಗುಂಡಿ (ಹಾರ್ಟ್)ಯ ಮೇಲೆ ಹೆಚ್ಚು ಶ್ರಮಬೀಳುವುದು, ಆದುದರಿಂದ ಆದಷ್ಟು ಕಮ್ಮಿ ಮಾಂಸವನ್ನು ಹೊತ್ತಷ್ಟಕ್ಕೆ ಹೃದಯದ ಮೇಲೆ ಬೀಳುವ ಭಾರವು ಕಮ್ಮಿಯಾಗುತ್ತದೆ.

ನಿಷ್ಪ್ರಯೋಜಕವಾದ ಈ ಮಾಂಸದ ಹೊರೆಯನ್ನು ಬೆಳೆಸುವುದಕ್ಕಾಗಿ ಗಂಡಸು ಹೆಂಗಸರು ಒಂದು ಕಾಲದಲ್ಲಿ ತುಂಬಾ ಪ್ರಯತ್ನಿಸುತ್ತಿದ್ದರು. ಆಗ ಅವರಿಗೆ ಅದರಿಂದಾಗುವ ಕೆಡುಕಿನ ತಿಳಿವು ಇರಲಿಲ್ಲ. ಅಕಾಲ ಮರಣಕ್ಕೆ, ಹಾರ್ಟ್‌ಫೆಲರ್ ಆಗಿ ಸಾಯುವುದಕ್ಕೆ ಇದೊಂದು ಪ್ರಧಾನ ಕಾರಣವಾಗುತ್ತದೆ.

ಆದರೆ ಸರಿಯಾಗಿ ವ್ಯಾಯಾಮ ತೆಗೆ

ಎದೆಗುಂಡಿಗೆಗೆ ವಿಶ್ರಾಂತಿ ಕೊಡಿರಿ.

ವ್ಯಾಯಾಮವೆಂದರೆ ನಾವು ಎದೆಗುಂಡಿಗೆ, ರಕ್ತಕೋಶಕ್ಕೆ ಕೊಡುವ ಒಂದು ಮನ್ನಣೆ. ಸ್ನಾಯುಗಳ ಒಂದು ಗಂಟಿನಂತಿರುವ ಆ ಅತ್ಯಮೋಘ ಸೃಷ್ಟಿ ಚಮತ್ಕಾರದ ಅವಯವವು ಇಂತಹ ಒಳ್ಳೇ ಶರೀರ ಸಾಧನೆಯ ಮೇಲೇ ಹೊಂದಿಕೊಂಡಿರುತ್ತದ. ಅವರಿಂದಲೇ ಅದು ಚಲೋ ರೀತಿಯಲ್ಲಿ ಬೆಳೆದುಕೊಂಡು ಬಂದು ತನ್ನ ಕಾರ್ಯವನ್ನು ತೃಪ್ತಿಕರವಾಗಿ ಸಾಗಿಸಬಲ್ಲುದು. ಒಂದು ವೇಳೆ ಸ್ವಲ್ಪ ಎದೆನೋವು ಇದ್ದವರ ಎದೆಗುಂಡಿಗೆಯ ವೇದನೆಯಿಂದ ನರಳುವವರೂ ಈ ಸರಳ ವ್ಯಾಯಾಮಕ್ಕೆ ಹೆದರಬೇಕಾದ ಅವಶ್ಯಕತೆ ಇಲ್ಲ. ಮಾಂಸ ಬೆಳವಣಿಗೆಯಿಂದಲೇ ಹೆಚ್ಚಿನವರ 'ಹಾರ್ಟ್‌ಫೈಲ್' ಆಗಿದೆ ವಿನಹ ಅತಿರೇಕದ ವ್ಯಾಯಾಮದಿಂದಲ್ಲ. ಮಿತಿಮಿಕ್ಕಿ ವ್ಯಾಯಾಮದಿಂದಲೂ ಎದೆಗುಂಡಿಗೆಗೆ ಹಾನಿಯುಂಟಾಗುವುದಾದರೂ ಅದು ಕಮ್ಮಿ. ಅದರಲ್ಲಿ ಸಂದೇಹ ಬಂದರೆ ಯೋಗ್ಯ ವೈದ್ಯನನ್ನು ಕಂಡು ಅವರ ಸಲಹೆಯನ್ನು ಪಡೆಯಿರಿ.

ಕೃತಕ ಔಷಧಿಗಳನ್ನು ತ್ಯಜಿಸಿರಿ.

ಮಾಂಸವನ್ನು ಕಮ್ಮಿಮಾಡಿ ಬೊಜ್ಜು ಇಳಿಸಲು ಔಷಧಿ ಅಂಗಡಿಗಳಲ್ಲಿ ಅನೇಕ ಸಿದ್ಧ ಔಷಧಿಗಳನ್ನು ಮಾರುತ್ತಾರೆ. ತಲೆನೋವಿಗೆ, ಮಲಶುದ್ಧಿಗೆ, ಚೇತನಶಕ್ತಿಗೆ ಮುಂತಾದವುಗಳಿಗೆ ನಾನಾ ತರದ ಔಷಧಿಗಳು ಇವೆ. ಆದರೆ ಅವುಗಳನ್ನು ಕೊಂಡು ಕೊಳ್ಳುವ ಅವಶ್ಯಕತೆಯೇ ಇಲ್ಲ. ಇವುಗಳನ್ನು ಒಂದು ಸಲ ತೆಗೆದುಕೊಂಡರೆ ಅವುಗಳದ್ದೇ ಅಭ್ಯಾಸವಾಗುತ್ತದೆ. ದಿನಕ್ಕೆ ವ್ಯಾಯಾಮಕ್ಕಾಗಿ ಹದಿನೈದು ನಿಮಿಷಗಳನ್ನು ನೀವು ವ್ಯಯಿಸಿದರೆ ಇವುಗಳೆಲ್ಲದರ ಅವಶ್ಯಕತೆ ನಿಮಗಿರುವುದಿಲ್ಲ.

ನಾಗರೀಕನಾದ ಪ್ರತಿಯೊಬ್ಬನೂ ಇಂದು ವ್ಯಾಯಾಮ ಮಾಡಬೇಕು. ಇದರಿಂದ ನಾವು ಶಾರಿರೀಕ ಆರೋಗ್ಯ ಅಭಿವೃದ್ಧಿ ಪರಿಪೂರ್ಣತೆಗಳನ್ನು ಹೊಂದಬಹುದು. ಆತ್ಮಕ್ಕೆ ಪ್ರಾರ್ಥನೆ ಅವಶ್ಯವೆಂದು ನೀವು ನಂಬಿದ್ದರೆ, ವ್ಯಾಯಾಮವು ಶರೀರಕ್ಕೆ ಅತ್ಯವಶ್ಯಕವೆಂದು ತಿಳಿಯಬೇಕು. ಇದರಿಂದ ದೇಹವೂ, ಮನಸ್ಸೂ ಏಕಪ್ರಕಾರವಾದ ಚೈತನ್ಯ ಸ್ಫೂರ್ತಿಗಳನ್ನನುಭವಿಸುವುದು.

ಭಾರತ ವಾರಾಂತ್ಯ ವರದಿಗಳು

(೧ನೇ ಪುಟದಿಂದ)

ಅವರ ವಿಚಿತ್ರ ಕಲ್ಪನಾ ಸಾಮರ್ಥದ ನಿದರ್ಶನವೆಂದರೆ ಅವರು ಬೊಂಬಾಯಿಯ ಕಟ್ಟಡ ರಚನಾ ಶೈಲಿಯ ಮೇಲೆ ಮಾಡಿದ ಟೀಕೆ. ಅಂತರಾಷ್ಟ್ರೀಯ ಸಂಸ್ಕೃತಿಗಳು ಮಿಶ್ರಣವಾದ ಆ ಮಹಾ ನಗರದಲ್ಲಿನ ಭವ್ಯ ಕಟ್ಟಡಗಳನ್ನು ಹೆಚ್ಚಾಗಿ ನಿಕೋಲಸರ ದೇಶಸ್ಥರೇ ರಚಿಸಿದವರು. ಅವುಗಳ ಕುರಿತು ಅವರು 'ಸುಂದರ ಭೀಕರತೆ'ಗಳೆಂದು ಟೀಕಿಸಿದ್ದಾರೆ.

ನಿಕೋಲಸರು ಭಾರತಕ್ಕೆ ಬಂದಂದಿನಿಂದ ಬೊಂಬಾಯಿಯ ಸೆಂಟಿನಲ್ ಪತ್ರಿಕೆಯು ಅವರ ಮತ್ತವರ ವಿದ್ವತ್ತಿನ ಕುರಿತಾಗಿ ಬಹುವಾಗಿ ವಿನೋದ ಮಾಡಿರುವುದನ್ನು ನೋಡಿ ಬಹಳ ಕೆರಳಿಕೊಂಡು ಭಾರತದಲ್ಲಿನ ಪತ್ರಿಕೋದ್ಯೋಮವನ್ನೇ ಅವರು 'ಹರಟೆ, ಊಹಾಪೋಹೆಗಳ ಕಲಸು ಮೇಲೋಗರ'ವೆಂದು ಬರೆದಿದ್ದಾರೆ. ಸೆಂಟಿನಲ್ ಪತ್ರಿಕೆಯು ನಿಕೋಲಸರ ಕುರಿತು 'ಅವರು ಮುಂದಿನ ವ್ಯಾಸ್‌ರಾಯರಾಗಿ ಕಳುಹಿಸಲ್ಪಡಬಹುದು' ಎಂದು ಹಾಸ್ಯಮಾಡಿದರ ಪರಿಣಾಮವಿದು.

ಇಂತಹ ಪುಸ್ತಕವನ್ನು ಸರಕಾರವು ನಿಷೇಧಹಾಕಬೇಕು ಎಂದು ಕೆಲವು ಪತ್ರಿಕೆಗಳೂ, ಪ್ರಮುಖರೂ ಸೂಚಿಸಿದರ ಕುರಿತು ಬರೆಯುತ್ತಾ ಮದ್ರಾಸಿನ ಹಿಂದೂ ಪತ್ರಿಕೆಯು: "ಹಾಗೆ ಮಾಡುವುದೆಂದರೆ ಇಂತಹ ಪುಸ್ತಕಗಳಿಗೆ ನಾವು ವಿಪರೀತ ಲಕ್ಷ್ಯಕೊಟ್ಟಂತಾಗುವುದು. ಗಂಭೀರವಾದ ಲಕ್ಷ್ಯಕ್ಕೆ ಅದು ಯೋಗ್ಯವಾಗಿಲ್ಲ" ಎಂಬರ್ಥದಲ್ಲಿ ವಿಮರ್ಶೆ ಬರೆದಿರುವುದು ಗಮನೀಯವಾದ ಸೂಚನೆ.

CANARA BANK LIMITED

(Incorporated in British India with limited liability.)

(ESTD. 1906)

General Manager: P. S. Nayak, B. A., B. L., F. I. I. B.

LIABILITIES.	Dec. 31, 1944 Rs.	1943 Rs.
Capital Subscribed.	29,00,000.	29,00,000.
Capital Paid up	26,33,583.	22,49,438.
Reserves	10,34,408.	8,54,188.
Deposits	2,30,69,445.	197,85,847.
Due to Bankers	34,37,515.	20,00,000.
Call Deposits from Banks	8,50,000.	—
Branch Adjustments	13,83,632.	10,08,553.
Bills for Collection and Foreign Bills negotiated	18,31,405.	26,27,394.
Other Liabilities	1,30,633.	15,766.
Profit for the Year	2,75,195.	2,68,576.
Total	3,46,45,816.	2,88,09,762

ASSETS.	Dec. 31, 1944 Rs.	1943 Rs.
Cash	58,97,414.	73,51,060.
Govt. Securities	1,17,93,098.	90,47,683.
Advances to Customers	1,43,36,118.	92,99,429.
Bills for Collection and Foreign Bills negotiated	18,31,405.	26,27,394.
Landed Properties	30,174.	70,736.
Bank Premises & Furniture & Fixtures	1,17,250.	93,963.
Other Assets	6,40,357.	3,19,497.
Total	3,46,45,816.	2,88,09,762.

ಪ್ರಖ್ಯಾತ ತಟಸ್ಥ ರಾಷ್ಟ್ರಗಳು

ಡೆನ್ಮಾರ್ಕ್, ಸ್ವೀಡನ್, ನಾರ್ವೆ

ಒಂದೇ ದಾರದ ಮುತ್ತುಗಳು

ಅವರದು ಸಮತಾವಾದಿ ಪ್ರಜಾಪ್ರಭುತ್ವ

ಇಂದಿಗೆ ಸುಮಾರು ೧೩೦ ವರ್ಷಗಳಿಂದ ಯಾವ ಯುದ್ಧದಲ್ಲೂ ಸೇರಿರದ ರಾಷ್ಟ್ರವೆಂದರೆ ಸ್ವೀಡನ್. ೧೮೧೪ರಿಂದ ಈ ದೇಶವು ಯಾವ ಯುದ್ಧದಲ್ಲೂ ಭಾಗ ವಹಿಸಿಲ್ಲದಿರುವುದು ಒಂದು ವಿಶೇಷ ಸಂಗತಿ. ಇನ್ನೊಂದು ವಿಶೇಷವೆಂದರೆ ಸ್ವೀಡನ್ ದೇಶಕ್ಕೆ ಹೊರಗಿನ ರಾಷ್ಟ್ರಗಳೊಂದಿಗೆ ಕಲಹದೊಳಗೆ ದುಮುಕಬೇಕಾಗಿ ಬರುವ ಯಾವ ವಿದೇಶಿ ಒಪ್ಪಂದ ಕರಾರುಗಳಿಲ್ಲದಿರುವುದು. ನೆಮ್ಮದಿಯ ಆತ್ಮವಿಶ್ವಾಸದಿಂದಲೂ ಬಿಗುವಾದ ತಾಟಸ್ಥ್ಯಧೋರಣೆಯಿಂದಲೂ ಕೂಡಿರುವುದಾದರೂ ಆ ದೇಶವು ಐರೋಪ್ಯ ರಾಜಕಾರಣದಿಂದ ಪ್ರತ್ಯೇಕವಾಗಿಲ್ಲವೆನ್ನಬೇಕು. ಅವರು ಶ್ರೇಷ್ಠ ಇತಿಹಾಸವೂ ನಿರ್ಮಲ ದೇಶಭಕ್ತಿ ಗುಣವಿಶೇಷವೂ ಅವರು ಸರ್ವ ವಿಧದಿಂದಲೂ ಐರೋಪ್ಯರಾಗಿಯೇ ಉಳಿದಿರುವರು. ಬಹಳ ಕಾಲದಿಂದಲೂ ಅವರು ಲೀಗ್ ಆಫ್ ನೇಶನ್ಸ್ ಮುತ್ತು ಅಂತರಾಷ್ಟ್ರೀಯ ಸಹಕಾರತ್ವಗಳ ಅವಶ್ಯಕತೆಯನ್ನು ಕುರಿತು ತುಂಬಾ ವಿಶ್ವಾಸ ತಾಳಿದ್ದವರು.

ಸ್ವೀಡ್ ಜನರಿಗೆ ಸಾಮ್ರಾಜ್ಯ ವಸಾಹತುಗಳನ್ನು ಕಾಪಾಡಿಕೊಳ್ಳುವ ತಾಪತ್ರಯವಿಲ್ಲ; ದೊಡ್ಡ ಸೈನ್ಯದಳವನ್ನು ಇಟ್ಟುಕೊಂಡಿರುವ ಅವಶ್ಯಕತೆ ಇಲ್ಲ; ಮುತ್ತು ಸುಧಾರಿಸಿಕೊಳ್ಳಬೇಕಾದ ಬಿಕ್ಕಟ್ಟಿನ ಅಂತರಾಷ್ಟ್ರೀಯ ಒಪ್ಪಂದ ಕರಾರುಗಳ ರಗಳೆಗಳಿರುವುದಿಲ್ಲ. ಅವರು ತಮ್ಮ ಅಂತರೀಕ ಶಕ್ತಿ ಬಲದಿಂದಲೇ ತಮ್ಮ ದೇಶವನ್ನು ಡೆನ್ಮಾರ್ಕಿನಂತೆ ಶಾಂತಿ ಶ್ರೇಯಸ್ಸಭಿವೃದ್ಧಿಯದನ್ನಾಗಿ ಮಾಡಿರುವರು. ಯುರೋಪಿನ ದೇಶಗಳಲ್ಲಿ ಸ್ವೀಡನ್ ಮತ್ತು ಡೆನ್ಮಾರ್ಕ್‌ಗಳು ನಿಜವಾದ ಆರೋಗ್ಯವಂತ ನೆಮ್ಮದಿಯ ತವರೂರುಗಳು. ನರಕಯಾತನೆಯ ಯುರೋಪ ಖಂಡದಲ್ಲಿ ಈ ಸ್ಕೆಂಡಿನೇವಿಯನ್ ರಾಷ್ಟ್ರಗಳು(ಸ್ವೀಡನ್, ಡೆನ್ಮಾರ್ಕ್, ನೋರ್ವೆ) ಸಂತಸದ ಸುರಸುಯ್ಯಾಲೆಯಂತಿರುವವು. ಇದರ ನೆರೆಕೆರೆಯ ದ್ವೀಪಸ್ತೋಮಗಳು ನೆಮ್ಮದಿ ಸಭ್ಯ ಜೀವನದ ಬೀಡುಗಳೂ, ಮತ್ತು ತೃಪ್ತಿಕರ ಸರಕಾರ ಪದ್ಧತಿಯಿಂದಲೂ ಮೆರೆಯುವಂತವುಗಳು.

ಸ್ವೀಡನ್ ಡೆನ್ಮಾರ್ಕ್ ದೇಶಗಳ ಸರಕಾರ ಪದ್ಧತಿಗಳು ಜಗತ್ತಿನಲ್ಲೇ ಅದ್ವಿತೀಯ ಮಾದರಿಯವುಗಳು. ಪ್ರಜೆಗಳನ್ನು ಪುತ್ರವಾತ್ಸಲ್ಯದಿಂದ ಸಲಹುವ ಆಡಳಿತ ಕ್ರಮಗಳು ಅಲ್ಲಿ ಸ್ಥಾಪಿಸಲ್ಪಟ್ಟಿವೆ. ಆ ದೇಶದಲ್ಲಿ ಒಂದು ಮಗು ಹುಟ್ಟಿದಾಕ್ಷಣ ಅದು ರಾಷ್ಟ್ರ ಸಂಸ್ಥೆಯ ಸೊತ್ತೆನಿಸುವುದು. ಪ್ರತಿಯೊಂದು ಹಳ್ಳಿ, ಪಟ್ಟಣದಲ್ಲೂ ಅಲ್ಲಿ ಶಿಶುಸಂರಕ್ಷಣಾ ಸಂಸ್ಥೆಗಳಿವೆ. ಮಕ್ಕಳು ಸರಕಾರೀ ವಿದ್ಯಾಲಯಗಳಲ್ಲೇ ಶಿಕ್ಷಣ ಪಡೆಯುತ್ತಾರೆ. ತರುಣರಾದಾಗ ಅವರು ಸಮಾಜ ಭದ್ರತೆಯ ವಿಮಾವ್ಯವಸ್ಥೆಯೊಂದಕ್ಕೆ ಸೇರಿಸಲ್ಪಡುವರು. ಪರಿಣಾಮವಾಗಿ ವೃದ್ಧಾಪ್ಯದಿಂದಾಗಲೀ, ಇತರ ಶಾರರೀಕ ದುರ್ಬಲತೆಯಿಂದಾಗಲೀ ನರಳುವ ಸಂದರ್ಭದಲ್ಲಿ ಅಲ್ಲಿನ ಸರಕಾರವು ಯುರೋಪಿನಲ್ಲಿರುವ ವಿಮಾಪದ್ಧತಿಗಳಲ್ಲಿ ಅತ್ಯಮೋಘ ಪರಿಪೂರ್ಣತೆಯದೆನಿಸುವ ಒಂದು ಏರ್ಪಾಡಿನಿಂದ ಅವರ ಆರೈಕೆಯನ್ನು ನೋಡುವುದು. ಸ್ವೀಡ್ ಜನರು ಸರಕಾರೀ ಸಂಯೋಜಿತ ರೈಲ್ವೇಗಳಲ್ಲೇ ಪ್ರಯಾಣ ಮಾಡುತ್ತಾರೆ. ಸರಕಾರೀ ಟೆಲಿಫೋನು ವ್ಯವಸ್ಥೆಯನ್ನೇ ಉಪಯೋಗಿಸುತ್ತಾರೆ. ಅಲ್ಲಿನ ರಫ್ತು ಪದಾರ್ಥಗಳಲ್ಲಿ ಅತೀ ಹೆಚ್ಚಿನ ಪ್ರಮಾಣವಾಗಿರುವ ಖನಿಜ ಪದಾರ್ಥಗಳನ್ನು ತೆಗೆಯುವ ಗನಿಗಳಲ್ಲವೂ ಸರಕಾರೀ ಮಾಲಕತ್ವದವುಗಳಿರುತ್ತವೆ. ಮಾತ್ರವಲ್ಲ ಸೀಡ್ ಜನರು ಕುಡಿಯುವ ಶೇಂದಿ ಶರಾಬುಗಳನ್ನೂ ಸರಕಾರೀ ನಿಯಂತ್ರಿತ ಕಾರ್ಖಾನೆಗಳ ಮೂಲಕವೇ ಸರಬರಾಯಿ ಮಾಡಲಾಗುತ್ತದೆ.

ಅಲ್ಲಿನ ಸಹಕಾರ ಪದ್ಧತಿಯ ಕುರಿತು ಗ್ರಂಥಗಳನ್ನೇ ಬರೆಯಬಹುದು. ಚಿಲ್ಲರೆ ವ್ಯಾಪಾರದ ಮೂರನೇ ಒಂದಂಶವನ್ನೂ, ರಖಂ ಮತ್ತು ಕಾರ್ಖಾನೆ ತಯಾರಿತ ವಸ್ತುಗಳ ಶೇಕಡಾ ಹತ್ತರಷ್ಟು ಅಂಶವನ್ನು ಸಹಕಾರಿ ಸಂಸ್ಥೆಗಳು ನಿರ್ವಹಿಸುತ್ತವೆ. ಸ್ವೀಡನ್ ಡೆನ್ಮಾರ್ಕ್ ದೇಶಗಳಲ್ಲಿ ಕೊಳಕು ಗುಡಿಸಲುಗಳು ಕಸಕೊಂಪೆಯಿಂದ ಕೂಡಿರುವ ವಸತಿ ವಠಾರಗಳಿಲ್ಲವೆಂಬ ವಿಷಯವು ಗಮನಿಸಬೇಕಾದ ಸಂಗತಿ. ಸಹಕಾರಿ ಸಂಸ್ಥೆಗಳು ಅಲ್ಲಿನ ಜನರಿಗೆ ಚೊಕ್ಕಟ ನಿವಾಸಸ್ಥಾನಗಳನ್ನು ನಿರ್ಮಿಸಿಕೊಡುತ್ತವೆ. ಜೀವನ ಕ್ರಮದ ಮಟ್ಟವನ್ನು ಏರಿಸಲೂ ಅಲ್ಲಿನ ಸಹಕಾರಿ ಯೋಜನೆಯು ಸಹಾಯಮಾಡುತ್ತದೆ. ಇಂದು ಸ್ವೀಡನ್ ಡೆನ್ಮಾರ್ಕ್ ದೇಶಗಳ ಜನರ ಜೀವನ ಮಟ್ಟವು ಯುರೋಪಿನ ಇತರ ಎಲ್ಲಾ ಜನರಿಗಿಂತಲೂ ಉನ್ನತವಾಗಿರುತ್ತದೆ. ಆದರೂ ಬಂಡವಾಳಶಾಹಿಯ ಅನುಕೂಲತೆಗಳನ್ನೂ ಅದರ ಹಕ್ಕು ಬಾಧ್ಯತೆಗಳನ್ನೂ ಅವರು ಕಿತ್ತುಹಾಕಿಲ್ಲ. ಜನರು ಸ್ವಂತ ಆಸ್ತಿಗಳನ್ನಿಟ್ಟುಕೊಳ್ಳಬಹುದು. ಲಾಭಕರ ವ್ಯಾಪಾರವನ್ನು ಮಾಡಬಹುದು ಇಲ್ಲವೇ ಸ್ವತಂತ್ರ ತಯಾರಿಕೆ ಸಂಸ್ಥೆಗಳನ್ನೂ ಚುನಾಯಿಸಿಕೊಂಡಿರಬಹುದು. ಸ್ವೀಡನಿನಲ್ಲಿ ಬಂಡವಾಳ ಶಾಹಿಯು ನಿಯಂತ್ರಣದಲ್ಲಿರಿಸಲ್ಪಟ್ಟಿದೆ. ಅಲ್ಲಿನ ವ್ಯಕ್ತಿಗಳು ಸದಾ ಸ್ವತಂತ್ರರು.

ಡೆನ್ಮಾರ್ಕ್ ಅತ್ಯಂತ ಫಲವತ್ತಾಗಿ ಮಾಡಲ್ಪಟ್ಟ ಪ್ರದೇಶ. ಪ್ರತಿಯೊಂದು ಇಂಚೂ ಫಲಪ್ರದವಾಗಿದೆ. ಶೇಕಡಾ ೯೦ರಷ್ಟು ಕೃಷಿ ಪ್ರದೇಶಗಳು ಸ್ವಂತ ಮಾಲಕರಿಂದ ಸಾಗುವಳಿಮಾಡಲ್ಪಡುತ್ತವೆ. ಸ್ವೀಡನ್ ನೋರ್ವೆಗಳಿಗಿಂತ ಡೆನ್ಮಾರ್ಕ್ ದೇಶವು ಹೆಚ್ಚು ಐರೋಪ್ಯ ಸಂಬಂಧವುಳ್ಳದ್ದು. ಅದು ಜರ್ಮನಿಗೆ ಅತೀ ಸಮೀಪವಾಗಿದೆ. ಸ್ವೀಡ್ ಜನರು ತಮ್ಮ ಖನಿಜ ಸಂಪತ್ತಿನಿಂದಲೂ, ಕಾರ್ಖಾನೆ ತಯಾರಕ ವಸ್ತುಗಳಿಂದಲೂ ಮತ್ತು ಕೃಷಿಗಳಿಂದಲೂ ಜೀವನ ನಡೆಸುತ್ತಾರೆ. ಇನ್ನೂ ಸರಿಯಾಗಿ ಅಭಿವೃದ್ಧಿಗೊಳಿಸಿರದ ವಿಶಾಲ ಖನಿಜ ಪ್ರಾಂತ್ಯಗಳೂ ಅಲ್ಲಿದ್ದು ಅಪಾರ ವಿದ್ಯುದುತ್ಪನ್ನತೆಯ ಅನುಕೂಲತೆಯಿರುವ ಜಲಪ್ರವಾಹಗಳು ಅಲ್ಲಿ ವಿಪುಲವಾಗಿವೆ. ಅದರ ಉತ್ತರ ಪ್ರದೇಶಗಳು ವಿಶಿಷ್ಟತೆಯಲ್ಲಿ ರಮ್ಯದ ಇಲ್ಲವೆ ಆಸ್ಯದ ಪ್ರಕೃತಿಗುಣದಿಂದ ಹೊಂದಿಕೊಂಡಿವೆ.

ಡೆನ್ಮಾರ್ಕಿನಷ್ಟು ಜನಾಂಗ ವೈವಿಧ್ಯತೆ ಸ್ವೀಡನಿನಲ್ಲಿಲ್ಲ. ಆದರೂ ಸ್ವೀಡ ಜನರ ಅಂತರಾಷ್ಟ್ರೀಯತ್ವವು ಅಪ್ರತಿಮ ಲಾಕ್ಷಣೀಯವಾದುದು. ಅವರು ಡೆನ್ ಜನರಿಗಿಂತಲೂ ಹೆಚ್ಚು ಒರಟು ಜನರಾದರೂ ಅವರ ಐಕ್ಯತೆ ಸಂಘಟನಾ ಬುದ್ಧಿಗಳು ಆದರ್ಶನೀಯವಾದವುಗಳು. ನೋರ್ವೆಯ ಜನರು ಸ್ವೀಡರಿಗಿಂತಲೂ ಡೇನ ಜನರನ್ನೇ ಹೆಚ್ಚಾಗಿ ಹೋಲುತ್ತಾರೆ. ಇವರೂ ಕಡು ರಾಷ್ಟ್ರೀಯವಾದಿಗಳು. ಆದರೂ ತಮ್ಮ ನೆರೆ ರಾಷ್ಟ್ರಗಳ ಸೌಹಾರ್ದತೆಯ ಮೇಲೆ ಇವರಿಗೆ ಭರವಸೆ ಕಡಿಮೆ. ಅವರು ಡೇನರಂತೆ ಇತ್ತೀಚೆಗೆಂಬಂತೆ ಸ್ವತಂತ್ರ ರಾಷ್ಟ್ರೀಯತೆ ಹೊಂದಿದವರು. ಕೆಲವು ವರ್ಷಗಳ ಹಿಂದೆ ಅವರ ದೇಶ ಭಾಷೆಯು ಡೆನಿಶ್ ಭಾಷಾ ಮಿಶ್ರಣದ್ದಾಗಿದ್ದರೂ ಈಗ ಅವರು ತಮ್ಮ ನೋರ್ವೆಯನ್ ಭಾಷೆಯನ್ನೇ ಪ್ರಚಾರದಲ್ಲಿಟ್ಟುಕೊಂಡಿದ್ದಾರೆ. ಅವರ ದೇಶವು ಸ್ವೀಡನ್ ಡೆನ್ಮಾರ್ಕ್‌ಗಳಿಗಿಂತ ಕಮ್ಮಿ ಸಂಪತ್ತಿಯದಾಗಿದ್ದು ಜನ ಸಂಖ್ಯೆಯು ಬಹುವಾಗಿ ರೈತರು. ಮರ, ಕಾಗದ ಮತ್ತು ಮರದ ಹುಡಿ ಇವೇ ಆ ದೇಶದ ಪ್ರಾಮುಖ್ಯ ರಫ್ತುಗಳು.

ಡೆನ್ಮಾರ್ಕ್, ನೋರ್ವೆ, ಸ್ವೀಡನ್ ದೇಶದ ರಾಜಕುಟುಂಭಗಳೊಳಗೆ ರಕ್ತ ಸಂಬಂಧವಿದೆ; ಡೆನಿಶ್ ಮತ್ತು ನೋರ್ವೆ ಅರಸರು ಸಹೋದರ ಬಂಧುಗಳು. ಅವರ ರಾಜಕಾರಣಗಳೂ ಸಾಮಾನ್ಯ ಒಂದೇ ಧೋರಣೆಯದಾಗಿವೆ. ಅವರ ಸರಕಾರ ಪದ್ಧತಿಯು ಸಮತಾವಾದಿ ಪ್ರಜಾಪ್ರಭುತ್ವದ್ದಿರುತ್ತದೆ. ಈ ಮೂರು ದೇಶಗಳಲ್ಲೂ ಟಪ್ಪಾಲು ದರಗಳು ಒಂದೇ, ಹಣದ ನೋಟುಗಳು ಪರಸ್ಪರ ಬದಲಾವಣೆ ಮಾಡಿಕೊಳ್ಳಬಹುದಂತವುಗಳು (ಈಗ ಮಾತ್ರ ನಾರ್ವೆ ಡೆನ್ಮಾರ್ಕ್‌ಗಳು ಜರ್ಮನ್ ಆಕ್ರಮಿತ ರಾಷ್ಟ್ರಗಳಾಗಿವೆ.) ಮೂರು ಜನಾಂಗದವರ ಭಾಷೆಗಳೂ ಹೆಚ್ಚುಕಮ್ಮಿ ಒಂದೇ ತರದವುಗಳು. ಈ ತ್ರಿರಾಷ್ಟ್ರಗಳೂ ಸಮೀಪದ ವೈತ್ರಿಯಿಂದಲೂ, ಸಹಕಾರ ಸೌಹಾರ್ದತೆಯಿಂದಲೂ ಕೆಲಸಮಾಡುತ್ತವೆ. ಅವರ ಮುಖ್ಯ ಮಂತ್ರಿಗಳು ಆಗಿಂದಾಗ್ಗೆ ಒಟ್ಟುಗೂಡುತ್ತಾರೆ. ಅವರ ಸಮಾಜ ರಚನಾಕ್ರಮವೂ, ಶಿಶುಸಂರಕ್ಷಣಾಸಂಸ್ಥೆಗಳೂ, ಸುಧಾರಣೆಗಳೂ, ಉನ್ನತ ಜೀವನ ಮಟ್ಟವೂ ಒಂದೇ ತರಗತಿಯವುಗಳು. ಮೂರರಲ್ಲೂ ಬಂಡವಾಳಶಾಹಿಯ ಕಟುತ್ವವನ್ನು ಕಮ್ಮಿಮಾಡಲಾಗಿದೆ. ಪ್ರಗತಿ, ಸಂಸ್ಕೃತಿ ಮತ್ತು ಶೈಕ್ಷಣೀಕ ಕ್ಷೇತ್ರಗಳಲ್ಲೂ ಅವರಲ್ಲಿ ಪರಸ್ಪರ ಹೋಲಿಕೆ ಇದೆ. ಈ ದೇಶಗಳ ಶಿಶು ಮರಣದ ಸಂಖ್ಯೆಯು ಅತೀ ಕಮ್ಮಿಯಾಗಿರುತ್ತದೆ. ತಮ್ಮ ದೇಶದ ಗಡಿಗಳ ಹೊರಗಿನ ವಿಚಾರಗಳಲ್ಲಿ ಈ ಮೂರು ರಾಷ್ಟ್ರಗಳಿಗೂ ಹೆಚ್ಚಿನ ಅಭಿರುಚಿ ಇಲ್ಲ. ಅವರಿಗೆ ಪರರಾಷ್ಟ್ರ ಆಕ್ರಮಣದ ಮಹಾತ್ವಾಕಾಂಕ್ಷೆಯೂ ಇಲ್ಲ. ಸ್ವರಾಷ್ಟ್ರದ ಹೆಮ್ಮೆದರ್ಪ ಪ್ರದರ್ಶನಾಲವಲವಿಕೆಯೂ ಇಲ್ಲ.

ದೇವದರ್ಶನ

(ಗುರುದೇವ ರವೀಂದ್ರನಾಥ ಟಾ[illegible] "ಗೀತಾಂಜಲಿ"ಯಿಂದ)

ಸಾಕು, ಬಿಡು ನಿನ್ನಯ ಗಾನ ಸ್ತೋತ್ರ
ಏಕೆ ನಿನ್ನೊಳಾ ಜಪಮಣಿಯ ಹಾರ!
ಏಕಾಂತ ದೇಗುಲದ ಕತ್ತಲಿನ ಕೋಣೆಯಲಿ
ಸಕಲ ಕದಗಳ ಮುಚ್ಚಿ ನೀ ಭಜಿಪುದಾರನೆಲಾ?
ತೆರೆ ನಿನ್ನ ಕಂಗಳನು—ನೋಡು!
ಇರನು ನಿನ್ನಯ ದೇವ ನಿನ್ನಿದಿರು.
ಇಹನವನಲ್ಲಿ ಉತ್ತುವ ರೈತನೊಕ್ಕಲು
ಸಹಿಸಿ ಕಡುಪಿನ ನೆಲವ ಕುತ್ತಿ ಉಳುತಿಹಲ್ಲಿ
ಇಹನವನಲ್ಲಿ ಗೈಯ್ಯುವ ಹಾದಿ ಹದನದ ಕೂಲಿ
ಮಹಾಕಲ್ಲ ಬಂಡೆಯ ಹುಡಿಹೊಡೆವೆಡೆಯಲ್ಲಿ
ಬಿಸಿಲು ಮಳೆಗಳಲಿ ಇಹನವರೊಡನೆ ಕಲೆತು
ಮಾಸಿಹುದವನ ಉಡಿಗೆ ಧೂಳಿಯೊಳು
ಮಲೆತು.
ತ್ಯಜಿಸೆಲವೊ ನಿನ್ನಯ ಪೂಜ್ಯ ಪೀತಾಂಬರವ
ರಾಜಿಯಿಂ ಇಳಿ ಕೆಳಗೆ ಅವನಂತೆ ಧೂಳಿನಾ
ನೆಲಕೆ!
ವಿಮೋಚನೆಯೆ? ಅರಸುತಿರ್ಪುದೆ ಇರವ[illegible]
ವಿಮೋಚನೆಯ ಇಹುದೆಲ್ಲೆಲ್ಲೆಂಬ ಪರಿಯ!
ನಮ್ಮೊಡೆಯ ತಾನವನು ಹೊತ್ತಿಹನು ಸರ್ವ
ಸಮ್ಮತಿಯಿಂ ಸೃಷ್ಟಿಯಾ ಬಂಧಗಳನೆಲ್ಲಾ
ನೆಮ್ಮದಿಯಿಂ ಎಮ್ಮೊಡನವತಾ ಸ್ಥಿರಬಂಧಿಯಲ್ಲ!
ತೊಲಗೆಲವೊ ನಿನ್ನ ಧ್ಯಾನ ಧಾರಣದಿಂ
ಕೆಲದಲಿಹ ಧೂಪ ಪುಷ್ಪಾದಿಗಳ ಎಸೆದು
ದೋಷವಿರದೈ ನಿನ್ನ ಬಟ್ಟೆ ಹರಕು ಹೊಲಸಾ
ದೊಡೆಯು
ದರ್ಶಿಸವನನು ನಿನ್ನಯಾ ದುಡಿಮೆಯಲಿ
ಬೆವರಿನ ತೊಟ್ಟಿನಲಿ ॥

ದಾಮೋದರ

ಪ್ರಾರ್ಥನೆ ಮತ್ತು ದೇವರ ಸಾಕ್ಷಾತ್ಕಾರದ ಕುರಿತು ಅನೇಕ ಪ್ರಗತಿಶೀಲರೆನಿಸಿಕೊಳ್ಳುವವರು ಬೆಚ್ಚಿ ಬೆರಗಾಗುವಂತಹ ಒಂದೆರಡು ವಚನಗಳನ್ನು ಕವಿ ರವೀಂದ್ರರು ತಮ್ಮ "ಗೀತಾಂಜಲಿ"ಯಲ್ಲಿ ಬರೆದಿದ್ದಾರೆ. ಅದರ ಕನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದ್ದೇವೆ. ವಿಚಾರವು ಬಹಳ ಪ್ರಗತಿಶೀಲವೇ ಇದೆ ಎಂದು ಒಪ್ಪಲೇಬೇಕಾಗುವುದು. (ಸಂ. ಸ್ವ.)

ಅಖಿಲ ಭಾರತ ಗ್ರಾಮ ಕೈಗಾರಿಕೆ ಸಂಘದ ಸಹಾಯ ಕಾರ್ಯದರ್ಶಿ ಶ್ರೀ. ಭರತನ್ ಕುಮಾರಪ್ಪಾ ಅವರು ಮಹಾತ್ಮರನ್ನು ಕಂಡಾಗ ಜೈಲಿನಲ್ಲಿ ತಮ್ಮೊಡನೆ ಇದ್ದ ಫೊರವರ್ಡ್ ಬ್ಲೋಕ್ (ಸುಭಾಸರ ಪಕ್ಷ) ಇದರ ಕಾರ್ಯಕಾರಿ ಮಂಡಳದ ಸದಸ್ಯರೆಲ್ಲರೂ ಜರ್ಮನ್ ಜಪಾನ್ ತತ್ವಗಳ ವಿರೋಧ ಸೂಚಿಸಿರುವರೆಂದು ತಿಳಿಸಿದರು.

ಅಮೇರಿಕದ ಪ್ರವಾಸವನ್ನು ಮುಗಿಸಿ ಬಂದ ಗಗನ್ ವಿಹಾರಿಮೇಥಾ ಅವರೂ ಮಹಾತ್ಮರನ್ನು ಭೇಟಿಯಾಗಿ ಭಾರತದಲ್ಲಿ ಪರಿಸ್ಥಿತಿಯ ಕುರಿತು ತಪ್ಪಾದ ತಿಳವಳಿಕೆಯ ಪ್ರಚಾರ ನಡೆಯುತ್ತಿದೆಯಾಗಿ ತಿಳಿಸಿದರು.

○ ○ ○ ○

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಸಿಹಿ ಸುದ್ದಿ ಸಂಗ್ರಹ

ಒಂದು ಜಾತಿಯ ಮರದ ಎಲೆಗಳ ರಸದಿಂದ ಕರ್ಪೂರವನ್ನು ತಯಾರಿಸುತ್ತಾರೆ. ಈ ಮರಗಳು ಹೆಚ್ಚಾಗಿ ಜಪಾನಿನ ಫೊರ್ಮೋಸಾ ದ್ವೀಪಗಳಲ್ಲಿ ಬೆಳೆಯುತ್ತದೆ. ಮೈಸೂರಿನಲ್ಲೂ ಇಂತಹ ಮರಗಳಿದ್ದು ಅಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕರ್ಪೂರವನ್ನು ತಯಾರಿಸುತ್ತಾರೆ.

* * *

ತಮಿಳು ಭಾಷೆಯಲ್ಲಿ ಇಂಗ್ಲಿಷಿನಂತೆ ಒಂದೇ ತರದವಾಗಿ ಬರೆಯಲ್ಪಡುವ ಕೆಲವು ಶಬ್ದಗಳನ್ನು ಬೇರೆ ಬೇರೆ ತರದಲ್ಲಿ ಉಚ್ಚರಿಸುತ್ತಾರೆ. 'ಗಾಂಧಿ' ಎಂಬ ಶಬ್ದವನ್ನು 'ಶಾಂತಿ' ಎಂದೂ ಉಚ್ಚರಿಸಬಹುದು.

* * *

ಒಂದು ಸ್ಯಾಕಲಿನಲ್ಲಿ ಇಬ್ಬರು ಕೂತುಕೊಂಡರೆ ತಪ್ಪಾಗುತ್ತದೆಂದು ಅನೇಕ ಪ್ರಾಂತಗಳ ಪೋಲಿಸ್ ಅಧಿಕಾರಿಗಳು 'ತಪ್ಪಿತಸ್ಥ'ರಿಗೆ ಶಿಕ್ಷೆಗೆ ಗುರಿಮಾಡುತ್ತಾರೆ. ಆದರೆ ಹಾಗೆ ತಪ್ಪೆಂದು ಹೇಳುವ ಯಾವ ಶಾಸನವೂ ಇಲ್ಲವಂತೆ. ವ್ಯಾಸ್‌ರಾಯರ ನ್ಯೂ ಡಿಲ್ಲಿಯಲ್ಲಂತೂ ಒಂದು ಸ್ಯಾಕಲಿನಲ್ಲಿ ಇಬ್ಬಿಬ್ಬರು ಕೂತುಕೊಂಡರು ಯಾರೂ ಗಮನಿಸುವುದಿಲ್ಲ.

* * *

ಎಟ್ಲಾಂಟಿಕ್ ಸಾಗರವನ್ನು ಉಗಿಹಡಗವೊಂದು ದಾಟಿ ಇಂಗ್ಲೆಂಡಿನಿಂದ ಅಮೇರಿಕಕ್ಕೆ ಮೊದಲನೇ ಸಲಕ್ಕೆ ತಲುಪಿದ್ದು 1838ರಲ್ಲಿ.

* * *

ಈಗಿನ ಯುದ್ಧಕಾಲದ ಪರಿಸ್ಥಿತಿಯಿಂದಾಗಿ ನಮ್ಮ ಪ್ರಾಂತ್ಯದಲ್ಲೆಲ್ಲ ಮೋಟಾರು ಬಸ್ಸುಗಳು ಗೇಸು ತಯಾರಿಯ ಉಪಕರಣದ ಸಹಾಯದಿಂದ ಚಲನ ಆಗುತ್ತವೆ. ಆದರೆ ನಾರ್ವೆ, ಸ್ವೀಡನ್ ದೇಶಗಳಲ್ಲಿ ಎಷ್ಟೋ ವರ್ಷಗಳ ಹಿಂದಿನಿಂದ ಮೋಟಾರುಗಳಿಗೆಲ್ಲ ಇದೇ ವ್ಯವಸ್ಥೆ.

* * *

ಯುದ್ಧಕ್ಕೆ ಮುಂಚೆ ಪಿಲಿಪೈನ್ ದ್ವೀಪದ ವಿಶ್ವವಿದ್ಯಾಲಯದಲ್ಲಿ ಭಾರತಿಯರೊಬ್ಬರು ಪ್ರೊಫೆಸರರಾಗಿದ್ದರು.

* * *

'ಸೇಬಿನ ಹಣ್ಣಿನ (ಎಪಲ್) ಮರವು ಗುಲಾಬಿ ಹೂವಿನ ಜಾತಿಗೆ ಸೇರಿದ್ದು. ತಿಳಿನೀರಿನ ಮೇಲೆ ಸೇಬುಹಣ್ಣುಗಳು ತೇಲುತ್ತವೆ.

* * *

ಪೂನಾದಲ್ಲಿ ಹಿಂದೂ ಮಹಾಸಭೆಯ ಧ್ಯೇಯವನ್ನು ಸಮರ್ಥಿಸಿ ಪ್ರಚಾರಮಾಡುವ ಒಂದು ಪ್ರಭಾವಶಾಲಿ ಪತ್ರಿಕೆ ಇದೆ. ಅದರ ಒಬ್ಬ ಪ್ರತಿನಿಧಿಯು ಲಂಡನಿನಲ್ಲಿದ್ದ. ಈಗ ಅವನನ್ನು ತೆಗೆದುಹಾಕಿದ್ದಾರಂತೆ. ಕಾರಣ ಅವನು ಒಬ್ಬ ಐರೋಪ್ಯ ಸ್ನೇಹಿತರೊಡನೆ "ನಾನು ಭಾರತೀಯ" ಎಂದರಂತೆ. "ನಾನು ಹಿಂದು" ಎಂದು ಅವನು ಹೇಳಿದ್ದರೆ ಅವನ ಕೆಲಸ ಹೋಗುತ್ತಿರಲಿಲ್ಲವಂತೆ.

* * *

ಇಂಗ್ಲೆಂಡಿನಲ್ಲಿ ಕಳೆದ ವರ್ಷ ಹತ್ತು ಸಾವಿರಕ್ಕೂ ಹೆಚ್ಚಾಗಿ ವಿವಾಹ ವಿಚ್ಛೆದನಗಳಾದುವು. ಈ ಸಂಖ್ಯೆಯು ಬೆಳೆಯುತ್ತ ಹೋದರೆ ಇನ್ನು ಕೆಲವೇ ವರ್ಷಗಳಲ್ಲಿ ವಿವಾಹಗಿಂತಲೂ ವಿಚ್ಛೇದನಗಳೇ ಹೆಚ್ಚಾಗುವವಂತೆ.

* * *

ಇಂಗ್ಲೆಂಡಿನ ಆಗ್ಯಾರ್ಲ್‌ಶ್ಯಾಯರಿನಲ್ಲಿ ಒಂದು ಕೋಳಿಯು ಒಂದು ಮೊಟ್ಟೆ ಇಟ್ಟಿತು. ಒಡೆದಾಗ ಅದರ ಒಳಗೆ ಸಣ್ಣ ಆಕೃತಿಯ ಇನ್ನೊಂದು ಮೊಟ್ಟೆ ಇತ್ತು. ಅದು ಮರಿ ಉಂಟುಮಾಡಲು ಯೋಗ್ಯವಿತ್ತು ಪ್ರಾಣಿವಿಜ್ಞಾನಿಗಳಿಗೆ ಈ ವಿಚಿತ್ರ ಅವಳಿಜವಳಿ ಮೊಟ್ಟೆಯಿಂದ ಸೋಜಿಗವಾಗಿದೆ.

ಮಚಲೀ ಪಟ್ಟಣದ ಇಬ್ಬರು ಹೊಟೇಲು ಮಾಲಕರು 'ಜಿಲೇಬಿ'ಯನ್ನು ಕೃತಕ ತುಪ್ಪದಿಂದಲೂ ಇತರ ಹಾನಿಕಾರಕ ವಸ್ತುಗಳಿಂದಲೂ ತಯಾರಿಸಿದರೆಂದು ವಿಚಾರಣೆಗೆ ಗುರಿಯಾದರು. ಆದರೆ ಹ್ಯಾಕೋರ್ಟಿನಲ್ಲಿ ತಪ್ಪು ರುಜುವಾತಾಗದ್ದರಿಂದ ಅವರ ಶಿಕ್ಷೆ ರದ್ದಾಯಿತು. ಹೊಟೇಲು ತಿಂಡಿಗಳಲ್ಲಿ ನಿರ್ದಿಷ್ಟವಾಗಿ ಇಂತಹದೇ ವಸ್ತುಗಳನ್ನು ಸೇರಿಸಬೇಕೆಂಬ ಸೂಚನೆ ಆರೋಗ್ಯ ಇಲಾಖೆಯ ಕಾನೂನುಗಳಲ್ಲಿ ಇಲ್ಲವಂತೆ.

* * *

ಮಾಲ್ವಾ ಮತ್ತು ರಾಜಪುತಾನದ ಕಾಡುಗುಡ್ಡದ ಜನರಾದ ಬಿಲ್ಲರಲ್ಲಿ ಅನೇಕರು ಮದ್ಯಪಾನ ಮಾಡುವುದಿಲ್ಲವಾಗಿ ಪ್ರತಿಜ್ಞೆ ಮಾಡಿಕೊಂಡುದರ ಫಲವಾಗಿ ಅಲ್ಲಿನ ಗುತ್ತಿಗೆದಾರರಿಗೂ, ಅಬಕಾರಿ ಇಲಾಖೆಗೂ ತುಂಬಾನಷ್ಟ ಸಂಭವಿಸಬಹುದು. ಅಲ್ಲಿನ ಜಾಬೋ ಎಂಬ ಚಿಕ್ಕ ಸಂಸ್ಥಾನದ ಅಬಕಾರಿ ಅಧಿಕಾರಿಗಳು ಹಿಂದುಳಿದ ಅಲ್ಲಿನ ಜನರ ಸುಧಾರಣೆಗಾಗಿ ದುಡಿಯುತ್ತಿರುವ ಓರ್ವ ಕೆಲಸಗಾರನನ್ನು ಈ ಸಂಬಂಧದಲ್ಲಿ ಕೈದುಮಾಡಿರುವರಂತೆ. ಇತರ ಸಂಸ್ಥಾನಗಳಲ್ಲಿ 'ಹೆಚ್ಚಾಗಿ ಶೇಂದಿ ಕುಡಿಯಿರಿ' ಎಂಬ ಪ್ರಚಾರ ಅಧಿಕಾರಿಗಳ ಕಡೆಯಿಂದ ನಡೆಯುತ್ತದೆಯಂತೆ.

ಆದರೂ ಕಳ್ಳನಲ್ಲ

(೨ನೇ ಪುಟದಿಂದ)

ಇಷ್ಟಾಗುತ್ತಿರುವಾಗ ಗಾಡಿಯವನು ಹತ್ತಿರದ ಬೀಡಾ ಬೀಡಿ ಅಂಗಡಿಯಲ್ಲಿ ಹರಟೆ ಕೊಚ್ಚುತಿದ್ದ. ಗಾಡಿಯೊಳಗೆ ನಾರ್ಣಪ್ಪನ ಸಹಾಯಕರಿಬ್ಬರು ಮುಸುಕಿ ಹಾಕಿ ಮುಸಲ್ಮಾನ ಹೆಂಗಸರ ಉಡುಪಿ ಹಾಕಿ ಕೂತಿದ್ದವರು ಒಬ್ಬೊಬ್ಬರಾಗಿ ಗಾಡಿಯಿಂದ ಇಳಿದು ಹೋದರು. ಕೆಳಗೆ ಇಳಿಯುವಾಗ ಅವರು ಮುಸಲ್ಮಾನ್ ಸಭ್ಯ ಗೃಹಸ್ಥರಂತೆ ವೇಷ ಪಲ್ಲಟಮಾಡಿಕೊಂಡಿದ್ದು ಕೈಯಲ್ಲಿ ಒಂದೊಂದು ಚೀಲ ಹಿಡಕೊಂಡಿದ್ದರು–ಅದರಲ್ಲಿ ಸ್ತ್ರೀ ವೇಷದ ಉಡುಪುಗಳಿದ್ದುವು.

ಕೊನೆಗೆ ನಾರ್ಣಪ್ಪ ಸಾಬಿಯೂ ಬೇರೆ ಆಭರಣಗಳನ್ನು ತೆಗೆದುಕೊಂಡು "ಏದೇಕೊ" ಎಂದು ಹೇಳುತ್ತಾ ಗಾಡೀ ಪರದೆಯೊಳಗೆ ನುಗ್ಗಿದನು. ಅಲ್ಲಿ ಅವನು ತನ್ನ ಗಡ್ಡ ತೆಗೆದು, ಹಲ್ಲು ಮಾಲೆ ಇಟ್ಟು ಮುಂಡಾಸಿನ ಬದಲಿಗೆ ಕೆಂಪು ಟೊಪ್ಪಿ ಇಟ್ಟು ಕ್ರಮವಾಗಿ ಹಿಂದಿನ ಪರದೆಯಿಂದ ಕೆಳಗಿಳಿದು ಹೊರಟೇ ಹೋದ. ಏನೋ ಪರದೆ ಗಾಡಿಗಳು ಆ ಕಡೆಗಳಲ್ಲೆಲ್ಲ ಸಾಮಾನ್ಯ ವಿಷಯವಾದುದರಿಂದ ಮಾರ್ಗಸ್ಥರಾರೂ ಅದನ್ನು ಗಮನಿಸಲಿಲ್ಲ. ಅಂದರೆ ನಡೆಸಿದ ಕೆಲಸವು ಅಷ್ಟು ಮುಂದಾಲೋಚನೆಯದಿತ್ತು.

ಗಾಡಿಯೊಳಗೆ ಹೋದ ವ್ಯಕ್ತಿ ಎಷ್ಟು ಹೊತ್ತಾದರೂ ಬಾರದನ್ನು ನೋಡಿ ಸರಾಫ ಅಂಗಡಿಯ ಕೆಲಸಗಾರರಿಗೆ ಸಂಶಯ ಹುಟ್ಟಿ ಗಾಡಿಯ ಪರದೇ ಮೇಲೆ ಮಾಡಿ ನೋಡಿದಾಗ ಅದು ಬರಿದಾಗಿತ್ತು!

ಇಷ್ಟೆಲ್ಲ ಘಟನೆಗಳಾದಾಗ ನಗರದಲ್ಲೆಲ್ಲ ಈ ವಿಚಿತ್ರ ಕಳ್ಳನ ಸುದ್ದಿಯೇ ಸುದ್ದಿ. ಅವನನ್ನು ಹಿಡಕೊಟ್ಟರೆ ಐದು ಸಾವಿರದ ಬಹುಮಾನವೂ ಸಾರಲ್ಪಟ್ಟಿತು. ನಾರ್ಣಪ್ಪ ಅಲ್ಲಿಂದ ತಪ್ಪಿಸಿ ಮದ್ರಾಸಿಗೆ ಬಂದ. ಅಲ್ಲಿ ಅವನ ಕೂಟಗಾರರಲ್ಲಿ ಒಬ್ಬನು ಬಹುಮಾನದ ಆಶೆಗಾಗಿ ಗುಪ್ತಪೋಲಿಸರ ಸಹಾಯದಿಂದ ಒಂದು ಹೋಟೇಲಿನಲ್ಲಿ ಫಲಾಹಾರ ಮಾಡುತಿದ್ದಾಗ ಹಿಡಿಸಿಬಿಟ್ಟ. ಅವನ ಡೈರಿ ತೆಗೆದು ನೋಡುವಾಗ ಅದರಲ್ಲಿ ಅನೇಕಾನೇಕ ಧರ್ಮ ಸಂಸ್ಥೆಗಳಿಗೂ, ಶಾಲೆಗಳಿಗೂ, ಅನಾಥಾಲಯಗಳಿಗೂ ಅವನು ಸಾವಿರ ಗಟ್ಲೆಯಲ್ಲಿ ಬೇರೆ ಬೇರೆ ಹೆಸರಲ್ಲಿ ಉದಾರ ಧನ ಸಹಾಯ ಮಾಡಿದ ಲೆಕ್ಕವಿದ್ದುದು ಕಂಡುಬಂದು ಎಲ್ಲರಿಗೂ ಸೋಜಿಗವನ್ನುಂಟುಮಾಡಿತು.

ಕೋಳಗಳಿಗೆ ಕೈಗಳನ್ನು ಮುಂದರಿಸುತ್ತಾ ನಾರ್ಣಪ್ಪ 'ನಡೆಯಿರಿ' ತುಸು 'ವಿಶ್ರಾಂತಿ' ಪಡೆಯೋಣ ಎಂದನಂತೆ.

"ನಂತರ ಅವನಿಗೆ ಎಷ್ಟೊ ವರ್ಷಗಳ ಶಿಕ್ಷೆಯಾಯಿತು. ಅಂತೂ ವಿಚಿತ್ರ ಆಸಾಮಿಸ್ವಾಮಿ" ಎಂದು ಡ್ರೈವರ್ ಕತೆ ಮುಗಿಸಿದ.

K. V. B.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

ರೇಡಿಯೋಗಳಲ್ಲಿ ಹಿಂದೀ ಭಾಷೆಯನ್ನು ಉಪಯೋಗಿಸಿ ಮಾಡುವ ಚಳವಳದ ಪರಿಣಾಮವಾಗಿ ಕೇಂದ್ರ ಸರಕಾರದವರು ಹಿಂದೀ ಸಾಹಿತ್ಯ ಸಮ್ಮೇಲನದ ಪರವಾಗಿ ಮೂರು ಪ್ರತಿನಿಧಿಗಳನ್ನು ತಮ್ಮ ರೇಡಿಯೋ ಭಾಷಾ ಇಲಾಖೆಯ ಸಮಸ್ಯೆಗಳನ್ನು ಪರ್ಯಾಲೋಚಿಸುವುದಕ್ಕಾಗಿ ಆರಿಸಿಕೊಂಡಿರುವರು. ಇವರಲ್ಲಿ ಸಂಯುಕ್ತ ಪ್ರಾಂತ್ಯದ ಕೊಂಗ್ರೆಸ್ ಮಂತ್ರಿಗಳಾಗಿದ್ದ ಶ್ರೀ. ಸಂಪೂರ್ಣಾನಂದರೂ ಒಬ್ಬರಾಗಿದ್ದಾರೆ.

○ ○ ○ ○

ಇಂಗ್ಲೆಂಡಿನ ಬ್ರ್ಯಾಟನ್ ನಗರದ ಒಂದು ಸೆಕೆಂಡರಿ ಶಾಲೆಯಲ್ಲಿ ಓರ್ವ ಭಾರತೀಯ ಉಪಾಧ್ಯಾಯನನ್ನು ನೇಮಿಸಲು ನಿರ್ಧರಿಸಿರುವರು. ಆ ಶಾಲೆಯ ಆಡಳಿತ ಮಂಡಳ ಸಭೆಯಲ್ಲಿ ಈ ಕುರಿತು ಅನೇಕರು ಆಕ್ಷೇಪವೆತ್ತಿದರೂ ಕೊನೆಗೆ 'ವೋಟು' ತೆಗೆಯಲಾಗಿ ಆಕ್ಷೇಪ ತೆಗೆದವರೇ ಸೋತರು.

○ ○ ○ ○

ತೆಂಗಿನ ಮತ್ತು ತಾಳೆ ಮರಗಳಿಂದ ತೆಗೆದ ನೀರಾರಸದಿಂದ ಬೆಲ್ಲವನ್ನು ತಯಾರಿಸುವ ವಿಧಾನವನ್ನು ಕಲಿಸಲು ಸೇವಾ ಗ್ರಾಮದ ಗ್ರಾಮ ಕೈಗಾರಿಕೆ ವಿದ್ಯಾಲಯದವರು ಒಂದು ತಿಂಗಳ ತರಬೇತಿಯ ಕ್ಲಾಸನ್ನು ತೆರೆಯಲಿರುವರು.

THE BANK OF MANGALORE, Ltd.,
MANGALORE.
Interest on Fixed Deposits.

It is notified forthe information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly wth effect from 1-1-1945

Office of the Bank, Mangalore, 30th Oct. 1944. | By Order H. S. KAMATH, *Manager*.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಚೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನಮ್ಮ ಎಲ್ಲಾ ಪೋಲಿಸಿದಾರರಿಗೂ, ವೈದ್ಯಕೀಯ ಪರೀಕ್ಷಕರಿಗೂ, ಏಜಂಟರಿಗೂ ಮತ್ತು
ನಮ್ಮ ಶ್ರೇಯಸ್ಸು ಬಯಸುವವರೆಲ್ಲರಿಗೂ ಹೊಸ ವರ್ಷವು ಶ್ರೇಯಸ್ಸು
ಆಯುರಾರೋಗ್ಯ ಅಭಿವೃದ್ಧಿಗಳುಂಟಾಗಲೆಂದು ಕೋರುವೆವು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದುಸ್ಥಾನ, ಆದರೊಳಗಿನ ದೇಶಿ ಸಂಸ್ಥಾನಗಳಿಗೆ ಸಮೇತ ಮತ್ತು
ಬೊಂಬಾಯಿ ನಗರದ ಪ್ರಾಮುಖ್ಯ ಏಜೆಂಟರು

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಶಾಖೆಗಳು: **ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,**
ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು **ಉಡುಪಿ.**

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

-ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906
[ಸಂಪುಟ 39] ತಾರೀಕು 9-2-1945 [ಸಂಚಿಕೆ 6]

ವಿದೇಶ ವಿಚಾರ ವಿಮರ್ಶೆ

ಸೋಲುವ ಜರ್ಮನಿ–ಆಹಾರಕ್ಕಾಗಿ ರಾಜಿನಾಮೆ–ಐರೋಪ್ಯರ ಒಂದು ಒಳ್ಳೆ ಗುಣ–ಬ್ರಿಟಿಷ್-ಅಮೇರಿಕನ್ ಟೀಕಾ

ಜಗತ್ತಿಗೆ ಅಪಾಯ ನಿಜ

'ಜರ್ಮನಿಯ ಸೋಲು ಯುರೋಪಿಗೆ ಅಪಾಯಸೂಚಕ'ವೆಂದು ಜರ್ಮನಿಯ ಗೊಬೆಲ್ಸನ ಎಚ್ಚರಿಕೆ. ಜರ್ಮನಿಯೇ ಯುರೋಪಿನ ಅಪಾಯವೆಂದು ಮಿತ್ರರ ಅಭಿಪ್ರಾಯ. ರಷ್ಯನರು ಇನ್ನು ಕೆಲವೇ ಸಮಯದಲ್ಲಿ ಯುರೋಪನ್ನು ಗಂಡಾಂತರದಿಂದ ತಪ್ಪಿಸುವರು. ಅಂದ ಮೇಲೆ ಆ ಬಿಳೀ ಖಂಡದ ತೊಡಕು ಪರಿಹಾರವಾಯಿತೆನ್ನಬಹುದು. ಆದರೆ ಆ ನಂತರ ಯುರೋಪಿನ ಪರಿಸ್ಥಿತಿ ಹೇಗೆ ನಿಲ್ಲುವುದೆಂದು ಇನ್ನೂ ತಿಳಿಯಬೇಕಾಗಿದೆ. ಗೆದ್ದ ರಾಷ್ಟ್ರಗಳು ಯುದ್ಧದಲ್ಲಾದ ನಷ್ಟವನ್ನೂ ತುಂಬಿಸಬೇಕೆಂದು ಇಚ್ಛಿಸಿದರೆ ಮಾತ್ರ ಪುನಃ ಕಷ್ಟಕ್ಕೆ ಬರಬಹುದು. ರಷ್ಯವು ತಾನು ಹಿಡಿದ ಭಾಗವು ತನಗೆಂದೂ, ಉಳಿದ ಭಾಗವು ಬ್ರಿಟನ್ ಅಮೇರಿಕಗಳೊಳಗೆ ಹಂಚಿಕೊಳ್ಳುವುದೆಂದೂ ಯೋಚಿಸಿದರೆ ಮತ್ತೆ ತಿರುಗಿ ಜಗತ್ತಿಗೆ ಗಂಡಾಂತರ ತಪ್ಪಿದಲ್ಲ.

ಪ್ರಾಮುಖ್ಯ ವ್ಯತ್ಯಾಸ

ದೇಶದಲ್ಲಿ ಆಹಾರ ಸರಬರಾಯಿಯ ಪರಿಸ್ಥಿತಿಯು ಕೆಡಹತ್ತಿದಂತೆ ಬೆಲ್ಜಿಯಂ ಸರಕಾರ ಮಂಡಳಿಯ ಕರ್ತವ್ಯನಿರ್ವಹಣಕ್ಕೆ ಜನತೆಯಿಂದ ಕಠಿಣ ಅಭ್ಯಂತರ ಬಂದು ಕಟ್ಟಕಡೆಗೆ ಅಲ್ಲಿನ ಮಂತ್ರಿಮಂಡಲದ ಐದು ಮಂದಿ ಮಂತ್ರಿಗಳು ರಾಜಿನಾಮೆಯಿತ್ತರು. ಆದರೆ ಮುಖ್ಯ ಮಂತ್ರಿ ಪಿಯರ್‌ಲೊಟ್ ಅವರು ಅದನ್ನು ಸ್ವೀಕರಿಸಲಿಲ್ಲ. ಮತ್ತೆ ಅವರೊಳಗೆ ಪರ್ಯಾಲೋಚನೆಗಳಾಗಿ ರಾಜಿನಾಮೆಯಿತ್ತವರು ತಮ್ಮ ಪತ್ರಗಳನ್ನು ಹಿಂದೆಗೆದರು. ನಮ್ಮ ದೇಶಕ್ಕೂ ಐರೋಪ್ಯ ದೇಶಗಳ ಆಡಳಿತ ಮಂಡಳಕ್ಕೂ ಇರುವ ವ್ಯತ್ಯಾಸವೆಂದರೆ ಅಲ್ಲಿನವರು ತಮ್ಮ ದೇಶದ ಆಹಾರಪರಿಸ್ಥಿತಿ ತಮ್ಮಕೈಕೆಳಗೆ ಕೆಡುವಂತಾದರೆ ಅವರು ಅದನ್ನು ಸುಧಾರಿಸಲು ಯೋಗ್ಯವಾದವರಿಗೆ ಸ್ಥಾನಬಿಟ್ಟು ಕೊಡುತ್ತಾರೆ.

ಹುಟ್ಟು ಗುಣವೆ?

ಹಿಟ್ಲರನಿಂದ ಸ್ವಾತಂತ್ರ್ಯವನ್ನು ಕಳಕೊಂಡ ಫ್ರಾನ್ಸು ಮಿತ್ರರ ಮುತ್ತಿಗೆಯಿಂದ ಅದನ್ನು ಪುನಃ ಪಡೆಯಿತು. ಜನಪ್ರಿಯ ಮುಖಂಡರೆನಿಸಿದ ಜನರಲ್ ಡಿಗೊಲೆ ಅವರು ಆಡಳಿತದ ಮುಖಂಡತ್ವ ಕೊಡಲ್ಪಟ್ಟಿರುವವರು. ಪಾರತಂತ್ರ್ಯದಲ್ಲಿರುವುದು ಅದೆಷ್ಟು ಸಂಕಷ್ಟಮಯವಾದುದೆಂದು ಸ್ವಲ್ಪ ಅವಧಿಯಲ್ಲೇ ಫ್ರಾನ್ಸು ನಾಜಿಗಳಿಂದ ಕಲಿತಿದೆ. ಆದರೂ ಫ್ರಾನ್ಸಿನ ಆಧೀನದಲ್ಲಿರುವ ಸಿರಿಯಾ ದೇಶದ ಕುರಿತು ಡಿಗೊಲೆ ಸರಕಾರದವರು 'ಅಲ್ಲಿ ಶಿಸ್ತನ್ನು ಪಾಲಿಸುವ ಹೊಣೆಗಾರಿಕೆ ನಮಗೆ ಸೇರಿದೆ' ಎಂದು ತಮ್ಮ ಪ್ರಜಾಪ್ರತಿನಿಧಿ ಸಭೆಯಲ್ಲಿ ತೀರ್ಮಾನಿಸಿರುವರೇ ವಿನಹ ಆ ದೇಶಕ್ಕೇನಾದರೂ ಸ್ವಾತಂತ್ರ್ಯ ಕೊಡುವ ಯೋಚನೆ ಇಲ್ಲದಂತೆ ತೋರುವುದು. ಇತರರನ್ನು ದಾಸ್ಯದಲ್ಲಿರಿಸುವದರಲ್ಲಿ ಐರೋಪ್ಯ ಜನರು ತುಂಬಾ ಇಷ್ಟಪಡುವರೆಂದು ತೋರುತ್ತವೆ. ಆದರೂ ಈ ಧೋರಣೆ ಬಹಳ ಕಾಲ ಬಾಳಲಾರದೆಂದು ಇಂದು ಜಗತ್ತಿನ ಹಲವೆಡೆಗಳಲ್ಲಿ ತಲೆಯೆತ್ತಿದ ಚಳವಳಗಳಿಂದ ಸ್ಪಷ್ಟವಾಗುತ್ತದೆ.

ಪ್ರಖ್ಯಾತ ಮದ್ಯಪಾನ ನಿರೋಧಿ

ಮದ್ಯಪಾನ ನಿರೋಧಕ್ಕಾಗಿ ತಮ್ಮ ಜೀವಮಾನವನ್ನು ಸವೆದ ೮೨ ವಯಸ್ಸಿನ ಮಿ। ವಿಲಿಯಂ ಯುಜಿನ್ ಜಾನ್ಸನ್ ಎಂಬ ಸಮಾಜ ಸುಧಾರಕರೊಬ್ಬರು ಕಳೆದವಾರ ನ್ಯೂಯೋರ್ಕಿನಲ್ಲಿ ಗತಿಸಿದರೊ ಇವರು ಮೂರು ಸರ್ತಿ ಪ್ರಪಂಚ ಸಂಚಾರ ಮಾಡಿದ್ದು ಮದ್ಯಪಾನದ ವಿರೋಧವಾಗಿ ೪ ಸಾವಿರ ಭಾಷಣಗಳನ್ನು ಮಾಡಿರುವರು. ಈ ಸುಸಂಸ್ಕೃತ ಅಮೇರಿಕನ್ ಗೃಹಸ್ಥರು ನಮ್ಮ ದೇಶದ ದೇವಾಲಯ ಸಂಘದ ಮತ್ತು ವಿಶ್ವ ಭಾರತಿ ಎಂಬ ಸಂಘದ ಗೌರವ ಸದಸ್ಯರರಾಗಿದ್ದರು. ಮಾತ್ರವಲ್ಲ ಭಾರತದ ಮದ್ಯನಿಷೇಧ ಚಳವಳ ಸಂಘದ ಸದಸ್ಯರೂ ಆಗಿದ್ದರು. ಐರೋಪ್ಯ ಜನತೆಯಲ್ಲಿ ಮದ್ಯಪಾನ ನಿಷೇಧದ ಪ್ರಚಾರ ಮಾಡುವುದು ಎಂತಹ ಕಠಿಣ ಕೆಲಸವೆಂಬುದು ಜಾನ್ಸನ್ನರ ಸಂಚಾರ ಜೀವನದಲ್ಲಿನ ಒಂದು ಘಟನೆಯಿಂದ ತಿಳಿದುಬರುತ್ತದೆ. ಒಂದುಸಲ ಲಂಡನಿನಲ್ಲಿ ಭಾಷಣ ಮಾಡುತ್ತಿದ್ದಾಗ ಸಭೆಯೊಳಗಿಂದ ಕಲ್ಲುಗಳು ಅವರ ಮೇಲೆ ಬಿಸಾಡಲ್ಪಟ್ಟ ಪರಿಣಾಮವಾಗಿ ಅವರ ಒಂದು ಕಣ್ಣು ಕುರುಡಾಯಿತು.

ಬ್ರಿಟಿಷರ ಮೇಲೆ ಅಮೇರಿಕನ್ ಟೀಕೆ

ಜಗತ್ತಿನಲ್ಲಿ ಚಿರಶಾಂತಿಯನ್ನು ಸ್ಥಾಪಿಸಲು ಭಾರತವನ್ನು ಸ್ವತಂತ್ರ ಮಾಡಿ ಬ್ರಿಟಿಷರು ನೆರವಾಗ ಬೇಕೆಂಬ ಠರಾವು ಒಂದನ್ನು ಮಾಡಿ ಅಮೇರಿಕದ ಭಾರತ ಸ್ವಾತಂತ್ರ್ಯ ಸಮಿತಿಯವರು ಅಲ್ಲಿನ ಸರಕಾರಕ್ಕೆ ಕಳುಹಿಸಿರುವರು. ಈ ಠರಾವನ್ನು ಮಂಡಿಸಿದ ಪ್ರಜಾ ಪ್ರತಿನಿಧಿ ಸೆಲ್ಲರ್ ಅವರು ಈ ಕುರಿತು ಹೀಗೆ ಅಭಿಪ್ರಾಯಪಟ್ಟರು: 'ಭಾರತದಲ್ಲಿ ಇಂದು ಯುದ್ಧ ಪ್ರಯತ್ನಕ್ಕೆ ನಿಜವಾದ ತಡೆಯೆಂದರೆ ಬ್ರಿಟಿಷರು ಆ ದೇಶಕ್ಕೆ ಹಾಕಿದ ಸುತ್ತು ಬಂಧನ. ಈ ತಡೆಯ ಹೊಣೆಗಾರಿಕೆಯನ್ನು ಅವರು ವಿಚಾರವಿಲ್ಲದೆ ಜೈಲಿನೊಳಗಿರಿಸಿದ ಕೊಂಗ್ರೆಸ್ಸಿನವರ ಮೇಲೆ ಹಾಕಿರುವುದು ಸತ್ಯಸ್ಥಿತಿಗೆ ಮಾಡಿದ ಒಂದು ಘಾತವೆನ್ನಬಹುದು. ಈ ರೀತಿಯಲ್ಲಿ ಮಾನವನ ಸ್ವಾತಂತ್ರ್ಯ ಅಪಹರಣ ಮಾಡಿರುವುದನ್ನು ನಾವು ಬಾಯಿಮುಚ್ಚಿ ಸುಮ್ಮನೆ ನೋಡಲಿಕ್ಕಾಗದು."

ಮಿ। ಸೆಲ್ಲರರ ಇತರ ಕೆಲವು ಸೂಚನೆಗಳು ಗಮನಾರ್ಹವಿವೆ: ಭಾರತೀಯರಿಗೆ ಇಂತಿಷ್ಟೇ ಅವಧಿಯಲ್ಲಿ ಸ್ವರಾಜ್ಯ ಕೊಡುವುದಾಗಿ ತಿಳಿಸಿದರೆ ಜಪಾನನ್ನು ಇನ್ನಷ್ಟು ಬೇಗವಾಗಿ ಸೋಲಿಸಬಹುದು. ಸ್ವಾತಂತ್ರ್ಯ ಪಡೆದ ಪ್ರತಿಯೊಂದು ದೇಶದಲ್ಲೂ ಸ್ವರಾಜ್ಯ ದೊರೆತ ಮೇಲೆಯೇ ಐಕ್ಯತೆಯುಂಟಾಗಿದೆ.

ಮುಸ್ಲಿಂ ಸಮಸ್ಯೆಯೆಂಬೀ ಪ್ರಶ್ನೆಯು ಬ್ರಿಟಿಷರ ಕೈಕೆಳಗಿರುವ ಪೆಲೆಸ್ತೀನ್ ಮತ್ತು ಇಂಡಿಯಾ ದೇಶಗಳಲ್ಲಿ ಮಾತ್ರ ಎದ್ದು ಕಾಣಿಸುತ್ತದೆ. ಚೀನದಲ್ಲೂ ಫಿಲಿಪ್ಪಾನಿನಲ್ಲೂ ಅಂತಹ ಪ್ರಶ್ನೆಗಳೇ ಇಲ್ಲ.

ನಿಜವಾಗಿ ಬ್ರಿಟಿಷರು ಭಾರತೀಯರಿಗೆ ಸ್ವಾತಂತ್ರ್ಯ ಕೊಡಬಯಸುವರಾದರೆ ಆ ದೇಶದ ಸಂರಕ್ಷಣೆಯ ಹೊಣೆಗಾರಿಕೆಯನ್ನು ಬ್ರಿಟಿಷ್ ಅಧಿಕಾರಿಗಳಿಗೆ ಕೊಡಬಾರದು.

ತ್ರಿಮೂರ್ತಿ ಸಮಾಗಮ

'ವೃದ್ಧರಾದ ಚರ್ಚಿಲ್ಲರು ಈ ಸಲ ಎಲ್ಲಿಗೂ ಹೋಗುವುದಿಲ್ಲ. ಬೇಕಾದರೆ ಸ್ಟೆಲೀನ್, ರೂಸ್‌ವೆಲ್ಟರೇ ಇಂಗ್ಲೆಂಡಿಗೆ ಬರಲಿ', ಎಂಬೀ ಭಾವನೆಯು ಬ್ರಿಟಿಷ್ ಸಾರ್ವಜನಿಕರಲ್ಲಿ ತುಂಬಿತ್ತು. ಆದರೆ ಕಳೆದ ತಿಂಗಳ ಕೊನೆಯ ದಿನಗಳಲ್ಲಿ ಚರ್ಚಿಲರೂ, ಎಂಟನಿ ಈಡನ್ನರೂ ಲಂಡನಿನಲ್ಲಿ ಕಾಣಿಸಿಕೊಳ್ಳಲಿಲ್ಲವಂತೆ. ಈತ್ತೀಚೆಗಿನ ವರದಿ ಪ್ರಕಾರ ಬ್ರಿಟಿಷ್ ಪ್ರಧಾನರು ಜಿಬ್ರಾಲ್ಟರಿನಲ್ಲಿಳಿದಿದ್ದಾರೆ ಎಂಬ ಊಹನಾತ್ಮಕ ಸುದ್ಧಿಯು ಪ್ರಚಾರವಾಗಿದೆ.

ಅಂತೂ ಮೂರು ವಿಶ್ವಪ್ರಭೃತಿಗಳು ಎಲ್ಲಾದರೂ ಒಂದು ಕಡೆ ಒಟ್ಟುಸೇರಿ ಭಾವಿ ಯುದ್ಧಶಾಂತಿಯ ವಿಚಾರಗಳನ್ನು ಪರ್ಯಾಲೋಚಿಸಿ ಒಂದು ನಿರ್ಣಯಕ್ಕೆ ಬರುವರು. ರಷ್ಯದ ಅತೀ ವೇಗದ ಪ್ರಗತಿಯಿಂದ ಸದ್ಯಕ್ಕೆ ಜರ್ಮನಿಯ ಪ್ರಶ್ನೆಯೇ ಅವರ ಮಾತುಕತೆಗಳ ಮುಖ್ಯವಿಷಯವಾಗಬಹುದು. ಅಮೇರಿಕದ ರಾಜ್ಯಕಾರಣ ಕಾರ್ಯದರ್ಶಿ ಮಿ. ಸ್ಟೆಟಿನಿಯುಸ್ ಅವರೂ ಇಟೆಲಿಗೆ ಬಂದಿರುವರು. ತ್ರಿಮೂರ್ತಿಗಳ ಪರಿಷತ್ತು ಇಟೆಲಿ, ಸ್ಪೈನುಗಳ ಅಂತರದೊಳಗೆಲ್ಲಿಯಾದರೂ ಸೇರಬಹುದು.

ಚರ್ಚಿಲ ಸಾಹೇಬರು ಈ ಸಲದ ಸ್ಟೆಲಿನ್ ರೂಸ್‌ವೆಲ್ಟ್ ಪರಿಷತ್ತಿನಲ್ಲಿ ಭಾರತದ ಪ್ರಶ್ನೆಯು ಬಾರದಂತೆ, ಇಲ್ಲವೆ ಆ ವಿಷಯವನ್ನೇ ತಪ್ಪಿಸಲು ಪ್ರಯತ್ನಪಡಬಹುದೆಂದು ಕೆಲವು ಪಾರ್ಲಿಮೆಂಟ್ ಸದಸ್ಯರು ಅಭಿಪ್ರಾಯಪಟ್ಟಿರುವರು. ಅಂತೂ ಪ್ರಾಮುಖ್ಯ ಪ್ರಶ್ನೆಯ ವಿಚಾರವೇ ಇಲ್ಲವೆಂದಾದ ಮೇಲೆ ಜಗತ್ತಿನ ಶಾಂತಿಯ ಕುರಿತು ಪರ್ಯಾಲೋಚಿಸಲಿಕ್ಕಾದರೂ ಏನಿದೆ?

ಗೋಪ್ಯ ಪತ್ರಗಳು

ಕೆಲವು ಸಮಯದ ಹಿಂದೆ ಚರ್ಚಿಲ್–ಜನರಲ್ ಫ್ರೆಂಕೋ ಇವರೊಳಗೆ ಯಾವುದೋ ಗುಪ್ತವಿಚಾರದ ಕುರಿತು ಒಂದು ದೀರ್ಘ ಪತ್ರ ವ್ಯವಹಾರ ನಡೆದಿತ್ತು. ಅನಂತರ ತಮ್ಮ ಪಾರ್ಲಿಮೆಂಟ್ ಭಾಷಣವೊಂದರಲ್ಲಿ ಪ್ರಧಾನರು ಸ್ಪೈನಿನ ಸರ್ವಾಧಿಕಾರಿಯಾದ ಆ ಫ್ರೆಂಕೊವನ್ನು ಬಾಯಿ ತುಂಬಾ ಹೊಗಳಿ ಅವನ ತಾಟಸ್ಥ್ಯಕ್ಕಾಗಿ ಅಭೂತ ಶ್ಲಾಘನೆ ಇತ್ತಿರುವರು. ಕಾಮನ್ಸ್ ಸಭೆಯಲ್ಲಿ ಕೆಲ ಸದಸ್ಯರು ಈ ಪತ್ರವ್ಯವಹಾರವನ್ನು ಪ್ರಕಟನೆಗೆ ಕೊಡಬೇಕೆಂದಾಗ ಚರ್ಚಿಲ್ಲರ ಪರವಾಗಿ ಉಪ ಪ್ರಧಾನ ಏಟ್ಲೆ ಅವರು ನಕಾರಾತ್ಮಕ ಉತ್ತರವಿತ್ತರು. ಹೀಗೆ ಮಾಡಿದರೆ ಸಂದೇಹವು ಬಲಗೊಳ್ಳುವುದೆಂದು ಅವರಿಗೆ ತಿಳಿಯದಿದ್ದುದು ಸೋಜಿಗ.

ಕುರುಡು ದೃಷ್ಟಿ

ಬೆಂದು ಬರಿಯುವ ಮಧ್ಯಾಹ್ನ, ನೇಸರು ಕಿಡಿಜಳೆ ನೇಯ್ಯುತ್ತು. ಮೇದಿನಿ ಕೆಚ್ಚನೆಯು ಕೆಂಬಿಸಿಲಿಂದ ಕಾವುಗೊಂಡಿತ್ತು. ಕಣ್ಣಿಗೆ ಕೇಡಾದ ಕೆಂಧೂಳಿಯು ಮಾರ್ಗದಲ್ಲಿ ಕಾಲಿರಿಸುವುದರಿಂದ ಸುಟ್ಟು ಕರ್ರಗಾಗುತಿತ್ತು.

ಬಡವಾದ ಮೈಯು, ಎದ್ದು ಬರುವ ಎಲುಬುಗೂಡಿನ ಮೇಲಣ ಚರ್ಮದ ಮಾನವನ್ನು ಕಾಯಲು ಉಟ್ಟಿದ ಹರಕು ಸೀರೆ. ಕೆದರಿದ ಕೇಶರಾಶಿ, ಮುತ್ತೈದೆತನದ ಬೊಟ್ಟು ಅಳಿದಿರುವ ಬರಿದಾದ ಹಣೆ. ಅನುದಿನದ ಭಿಕ್ಷೆಯನ್ನು ಎತ್ತಿ, ಮೊಸಲಾಗಿಟ್ಟು, ದಿನ ನೂಕಲು ಕೂಡಿಸಿಡುವ ಬೊಕ್ಕಸದಂತಿರುವ ಬರಿದಾದ ಜೋಳಿಗೆ, ಚಿಂದಿ ಅರಿವೆ ಚಂಡಿಗಳಿಂದ ಹೊದೆದ ಏಳಗೂಸನ್ನು ಎತ್ತಿ, ಯಾವ ಜೀವಕ್ಕೂ ಬೇಡವಾದ ಹೊತ್ತಿಲ್ಲದೀ ಹೊತ್ತಿನಲ್ಲಿ ಕೃಶಾಂಗಿ ನಾರಿಯೊಬ್ಬಳು ತಿರುಪೆಗಾಗಿ ತಿರುವುತಿದ್ದಳು. ಬೆಳಗ್ಗಿನಿಂದ ಮಧ್ಯಾಹ್ನದ ತನಕ ಊರಲ್ಲಿಯ ಮನೆಯ ಮುಂದೆ ನಿಂತು 'ಅಮ್ಮಾ, ಸ್ವಾಮಿ, ರಾಯರೇ, ಧರ್ಮ' ಎಂದು ಆರ್ತ ಧ್ವನಿಯಿಂದ ಕರೆದಾಯ್ತು. ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಜನಗಳಲ್ಲಿ ಕಾಸುಕೊಡಿರೆಂದು ಬಾಯಿಂದ ಒರಲಿದಳು. ಕೈಗಳು ಚಾಚಿ, ಬೇಡುವಿಕೆಯಿಂದ ಸೋತಿದ್ದವು. ಗಂಟಲ ಪಸೆ ಆರಿದ್ದಿತು. ಸುಡುವ ಬಿಸಿಲಲ್ಲಿ ನಡೆದು ಬಸವಳಿದು, ಬಳಲಿ, ಬಾಡಿ ಬಾಯಾರಿದ್ದಳು. ಮನೆಮನೆಗಳಲ್ಲಿ ದೊರೆತ ಭಿಕ್ಷೆಯ ರೂಪವೆಂದರೆ 'ತೊಲಗಾಚೆ, ತೊಲಗಾಚೆ' ಎಂಬ ಹೀನ ನುಡಿಗಳೂ, ಬೀದಿಯಲ್ಲಿ ಜನರು 'ದೂರ, ದೂರ ಸರಿ' ಎಂಬ ಬಿರುನುಡಿಯ ಧರ್ಮವೇ ಪಡೆದ ತಿರುಪೆ. ಹೊರುತಿದ್ದ ಕಂದನೊಂದಿಗೆ ಈ ಹೇರಲ್ಪಟ್ಟ ಅವಮಾನದ ಭಾರವನ್ನು ಸಹಿಸುತ್ತ, ಉಸ್ಸೆನ್ನುತ್ತ ಮುಂದರಿದಿದ್ದಳು. ಕಾಸೊಂದು ದೊರೆತಿರಲಿಲ್ಲ. ತುತ್ತೊಂದು ಸಿಗಲಿಲ್ಲ. ತನ್ನ ಹೊಟ್ಟೆಗಾಗಿ ಅಲ್ಲ-ತನ್ನ ಹೊಟ್ಟೆಯಲ್ಲಿ ಹುಟ್ಟಿಬಂದ ಕರುಳಿನ ತುಂಡಿನ ಪೋಷಣೆಗೆ ಪೇಚಾಟ.

ತಾನು ಉಣ್ಣದೆ ಎರಡು ದಿನಗಳಾಗಿದ್ದವು. ಸಿಕ್ಕಿದುದನ್ನೆಲ್ಲಾ ಮಗುವಿಗಾಗಿ ಮೊಸಲಿಟ್ಟುಕೊಡುತ್ತ ಬಂದಿದ್ದಳು. ಜೋಳಿಗೆಯಾದರೋ ನಿನ್ನೆಯೇ ಜೋಲು ಬಿದ್ದಿತ್ತು. ಹಾಲಿಗಾಗಿ ಅಳುತಿದ್ದ ಮಗುವಿನ ದಾಹ ನೀರಿನಿಂದ ತಣಿಸಿದ್ದಳು. ಹಾಲಿಗಾಗಿ ಅತ್ತಾಗ ತನ್ನ ಸ್ತನ ಉಣಿಸಿದಳು. ಕಸುವು ಇಲ್ಲದ ಮೈಯಲ್ಲಿ, ಎಲುಬುಗೂಡಿನ ದೇಹದಲ್ಲಿ ಹಾಲೆಲ್ಲಿ ಬರಬೇಕು? ಬೆಳಗಿನಿಂದ ಹಸಿವುಗೊಂಡ ಮಗುವಿನ ಬಾಯಿಗೆ ಸಮಾಧಾನಕ್ಕೆ ತನ್ನ ಕೈಬೆರಳನ್ನು ಬಾಯಿಗಿರಿಸುತ್ತ ನಡೆದಿದ್ದಳು.

ಊರೆಲ್ಲಾ ತುತ್ತಿಗಾಗಿ, ಹಾಲಿಗಾಗಿ ಅಲೆದಾಡಿದಾಯ್ತು. ತಾಪದಿಂದ ದಾಹವೇರಿ ಬಳಲಿಕೆ ತೋರಿತು. ದಣುವಾರಿಸಲೆಂದು ಊರದೇವಾಲಯದ ಮುಂದಿನ ಅರಳಿಮರದೆದುರಲ್ಲಿರುವ ಮಾವಿನ ಮರದ ಪಡಿನೆಳಲಲ್ಲಿ ಕೂತಳು. ಮಗು ಬೆರಳನ್ನು ಚೀಪುತ್ತಿತ್ತು, ಎಂತಹ ತಾಪ! ತಾಪಕ್ಕಿಂತಲೂ ದೇಹದೊಳಗಿನ ಹಸಿವೆಯ ಬೇಗೆಯ ಬಾಧೆ. ಮೊಗದಲ್ಲಿ ಸುರಿಯುತ್ತಿರುವ ಧಾರಾಕಾರವಾದ ಬೆವರನ್ನು ಮೊಣಕೈಯಿಂಹ ಒರಸುತ್ತ ಆ ದಿನ ತಾನು ತುತ್ತಿಗಾಗಿ, ಪಟ್ಟ ಪಾಡನ್ನು ಯೋಚಿಸಿದಳು.

ಮನೆ ಇಲ್ಲದೆ ಹೋದಾಗ ಧರ್ಮಶಾಲೆಯ ಮೂಲೆಯಲ್ಲಿ ದಿನ ನೂಕುವುದು. ಬಂದು ಹೋಗುವ ಪುಣ್ಯಾತ್ಮರು ಎಸೆದಾ ಕಾಸುಗಳಿಂದ ಮಗುವಿಗಾಗಿ ತಿನಿಸು. ತನಗೆ ಸತ್ರದಲ್ಲಿ ಅಳಿದುಳಿದ ಎಲೆಯ ಮೇಲಣದು ಮೃಷ್ಟಾನ್ನ. ಎರಡು ದಿನಗಳಿಗಿಂದ ಅವಕ್ಕೂ ಮಾರ್ಗವಿದ್ದಿಲ್ಲ. ಯಾರೋ ಒಬ್ಬನು ಕುದುರೆಯೇರಿ ಬಂದಿದ್ದ. ಅವಳು ಮುಂದೆ ಬಂದು ಭಿಕ್ಷೆ ಬೇಡಿದನ್ನು ಕಂಡು ಮೂಗು ಮುರಿದ. ಸತ್ರದ ಯಜಮಾನನಿಗೂ ಅಸಹ್ಯ ಕಂಡಿತು. ಅಷ್ಟು ದೊಡ್ಡ ಜನದ ಮುಂದೆ ತನ್ನ ದರ್ಪವನ್ನು ತೋರಿಸಲು ಅವಳನ್ನು ಅಲ್ಲಿಂದ ಹೊರಡಿಸಿದ. ಆ ರಾತ್ರೆ ಚಳಿಯಲ್ಲಿ ನಡುಗುತ್ತ, ಮಗುವನ್ನು ತೋಳತಕ್ಕೆಯಲ್ಲಿ ಅಪ್ಪಿ ಬೆಳಗು ಮಾಡಿದಳು. ಮರುದಿನ ಅಂಗಡಿಯ ಹರಕು ಜಗುಲಿಯ ಮೇಲೆ ಕಳೆದಳು. ಈ ದಿನ ಎದ್ದಾಗ ಮಗು ಹಾಲಿಗಾಗಿ ಅಳುತ್ತಿತ್ತು. ಸಮಾಧಾನಕ್ಕೆ ಒಮ್ಮೆ ನೀರು ಕುಡಿಸಿದಳು. ನೀರಿನಿಂದ ದಾಹ ತೀರಿತೆ ಹೊರತು ಹಸಿವೆ ಹಿಂಗಲಿಲ್ಲ. ಅಳುತ್ತಿರುವ ಮಗುವನ್ನು ಹಿಡಿದು ಒಂದು ಮನೆ ಬಾಗಲಲ್ಲಿ ಬಂದು 'ಅಮ್ಮಾ' ಎಂದಾಗ "ಅಯ್ಯೋ ರಕ್ಕಸಿ ಬೆಳಗಾತ ಬಂದೆಯಾ ನಿನ್ನ ಮುಖ ನೋಡಿದೆನೇ ಈ ದಿನವೆಲ್ಲಾ ಕೆಲಸ ತಲೆಕೆಳಗು ನಡಿಯಾಚೆ" ಎಂದನು. ಇನ್ನೊಂದು ಬಾಗಿಲಲ್ಲಿ ಒಬ್ಬ 'ಥೂ ನಿನ್ನ ದರ್ಶನದಿಂದ ಎಂತಹ ಅನಿಷ್ಟವೋ-ಬಂದೆಯಲ್ಲಾ ಅವಲಕ್ಷಣ' ಎಂದನು. ಮತ್ತೊಂದೆಡೆಯಲ್ಲಿ 'ನೀನು ಹಾಳಾಗು ನಿನ್ನಿಂದ ಈ ದಿನದ ಲಾಭಕ್ಕೆ ಮುಟ್ಟುಗೊಲೇ ಸರಿ ಎಂದು ಜಬರಿಸಿದನು.

ಇನ್ನೊಂದೆಡೆಯ ಗೃಹಿಣಿಯೊಬ್ಬಳು 'ಏ ಬೆಳಗಾತ ವಾದ್ಯ ಮಾಡುತ್ತ ಧರ್ಮ ಎಂತ ಒದರುತ್ತಿಯಲ್ಲಾ ಅದಕ್ಕೊಂದು ಸಮಯವೆಂಬುದು ಇಲ್ಲವೇ-ತೊಲಗಾಚೆ' ಎಂದಳು. ಇನ್ನೊಬ್ಬಳು 'ಅಬ್ಬ ನಿನ್ನ ಸೊಕ್ಕೆ! ಧರ್ಮದ ಸೋಗಿನಿಂದ ಬಂದು ಮನೆಯಲ್ಲಿರುವುದನ್ನು ಎತ್ತಿ ಹಾಕುವ ಹವಣಿಕೆ' ಎಂದು ಹೀಯಾಳಿಸಿದಳು. ಮತ್ತೊಬ್ಬಳು 'ಅಯ್ಯಮ್ಮ ನಿನಗೆ ಧರ್ಮವೇ? ನಿನಗೆ ಕೊಡುವುದರಿಂದಲೇ ಪುಣ್ಯ, ಇಲ್ಲದಿದ್ದರೆ ಪಾಪ ಅಲ್ಲವೆ?' ಎನ್ನುತ್ತ ಬಾಗಿಲು ಮುಖದಲ್ಲಿ ಮುಚ್ಚಿದಳು. ಮನೆಗಳಲ್ಲೆಲ್ಲಾ ಇದೇ ಹಾಡು. ರಾಗ, ರೂಪ ಬೇರೆ ಬೇರೆ. ಆಳುಗಳಿಂದ ಗದರಿಕೆ ನಾಯನ್ನು 'ಛೂ' ಬಿಡುವುದೂ ನೋಡಿಯಾಯ್ತು. ಮನೆಗಳ ಗೊಡವೆ ಬೇಡವೆಂದು ಮಾರ್ಗದಲ್ಲಿ ನಿಂತಳು. ಬಿಸಿಲೇರುತ್ತ ಬಂದಿತ್ತು. ಪಥಿಕರೊಡನೆ ಹಿಂಬಾಲಿಸಿ ದುಂಬಾಲು ಬಿದ್ದು ಬೇಡಿದಳು.

"ಅಯ್ಯಾ ಒಂದು ಕಾಸು, ಸ್ವಾಮಿ ಧರ್ಮಮಾಡಿರಯ್ಯಾ ಪುಣ್ಯಕಟ್ಟಿಕೊಳ್ಳಿ" ಎಂದು ಅಂಗಲಾಚಿದಳು. ಒಬ್ಬನು 'ಹಾಳು ಶನಿಕಾಟವಪ್ಪ ಈ ದಿನ ಯಾರ ಮುಖ ಕಂಡೆನೋ ಬೇಡುವವರೇ ಜಾಸ್ತಿ ಅಂತ ಕಾಣುತ್ತೆ' ಎಂದು ಮುಂದರಿದನು. ಇನ್ನೊಬ್ಬನು 'ಹುಂ ಪ್ರಯಾಣಕ್ಕೆ ಹೊರಟ್ಟದೆ ನಿನ್ನಿಂದ ಕೆಟ್ಟಿತು.' ಎಂದು ಸರಿದನು. ಅವಳೂ ಮುಂದರಿದಳು ನಾಲ್ಕೈದುಜನ ಶಿಸ್ತಿನಿಂದ ಬರುತ್ತಿದ್ದರು. ಅವರಲ್ಲೂ ಯಾಚಿಸಿದಳು. 'ಏನಪ್ಪ ಈ ಊರಿನಲ್ಲಿ ಭಿಕ್ಷುಕರ ಸಂಘವಿದೆಯೇ ಏನು? ಕಾಸು ಕೊಡಲು ಹೊರಟರೆ ಕುಬೇರನ ಭಂಡಾರ ಸಾಲದು.' ಎಂದು ತೆಗಳಿದರು. 'ಅರೇ, ಸರಕಾರ ಇದಕ್ಕೊಂದು ಕಾನೂನು ಮಾಡಲು ಮರೆಯಿತಲ್ಲ. ಇದು ನಿರ್ಮೂಲವಾಗದೆ ಉದ್ಧಾರವಿಲ್ಲ. ಪಾಶ್ಚಾತ್ಯ ದೇಶ ನೋಡಿ' ಎಂದು ಭಾಷಣ ಪ್ರಾರಂಭಿಸಿದನು. ಮತ್ತೊಬ್ಬನು 'ಛೆ ಎಂತಹ ಮೋಸವಾಯ್ತು ಪಾಕೇಟು ಮರೆತು ಬಿಟ್ಟು ಬಂದೆನಲ್ಲ' ಎಂದು ಧರ್ಮ ಡಾಂಭಿಕನಾಗಿ ತೋರಿದ. ನಾಲ್ಕನೆಯವನು 'ನನ್ನಲ್ಲಿ ಚಿಲ್ಲರೆಯಿಲ್ಲ ಇನ್ನೊಮ್ಮೆ ನೋಡೋಣ' ಎನ್ನುತ್ತ ಕೊಡುವ ಕನಿಕರ ಉಳ್ಳವನಾಗಿ ತೋರಿದ ಅಂಗಡಿಗಳನ್ನು ಬೇಡಿ ನಾಸ್ತಿ ಪಡೆದಾಯ್ತು. ಹೋಟೆಲಿನ ಬಳಿ ನಿಂತಳು. ಬಿಟ್ಟ ಚೂರುಗಳನ್ನು ಬಳಿವೆನೆಂದರೆ ಒಳಗಣ ನಾಯಿಯೊಂದು ಕಾದೇ ತಿನ್ನುತ್ತಿತ್ತು. ಗಂಟೆ ಹನ್ನೊಂದಾಯ್ತು. ಮಗು ಅಳುತಿತ್ತು ಬ್ರೆಡ್ಡಿನ ಅಂಗಡಿಯ ಮುಂದೆ ನಿಂತು ಬೇಡಿದಳು. ಅವನೊಂದು ಬ್ರೆಡ್ಡನ್ನು ಮಗುವಿನೆಡೆಗೆ ಎಸೆದನು. ಪಾಪ ಪುಣ್ಯದ ವಿಚಾರದಿಂದಲ್ಲ. ನಾಲ್ಕು ದಿನಗಳಿಂದ ಮಾರದೆ ಉಳಿದು ಕಲ್ಲಿನಂತೆ ಗಟ್ಟಿಯಾಗಿದ್ದು ಸ್ಥಳಕ್ಕೆ ತೊಡಕನ್ನು ಮಾಡುತ್ತಿದ್ದನ್ನು ತೊಲಗಿಸಲು ಕೊಟ್ಟನು. ಅವಳು ಅದನ್ನು ಸಂತೋಷದಿಂದ ಪಡೆದು ಅಂಗಡಿಯವನನ್ನು ಹರಸಿ ಮುನ್ನಡೆದಳು. ಮಗು ಅದನ್ನು ಒಂದು ಬಾರಿ ಕಡಿಯಿತು. ಕಲ್ಲೇ ಅದು. ಆದರೆ ಅದರ ರುಚಿ ಒಮ್ಮೆಗೆ ಸವಿಯುವ ಭಾಗ್ಯವಿತ್ತು. ಹಾಯ್! ಕಾಗೆಯೊಂದು ಹಾರಿಬಂದು ರೆಕ್ಕೆ ಬಡಿದು ಬೀಳಿಸಿ ಕೊಕ್ಕಿನಲ್ಲಿರಿಸಿ ಓಡಿತು. ಮಗುವಿನ ಅಳು ವರ್ಣಿಸಲಳವಲ್ಲ. ತಾಯಿಯ ಕಣ್ಣೀರು ಕರೆಯಿತು. ಮುನ್ನಡೆದಾಗ ಯಾವಳೋ ತಾಯಿ ತನ್ನೆರಡು ಮಕ್ಕಳೊಡನೆ ಸಾಗುತ್ತಿದ್ದಳು. ಭಿಕ್ಷುಕಿ ಬದಿಗೆ ನಿಂತು ಬೇಡಿದಳು. ಅವಳು ಒಮ್ಮೆ ಮಗುವನ್ನು ಭಿಕ್ಷುಕಿಯನ್ನು ದುರುಗಟ್ಟಿ ನೋಡಿದಳು. ಸಂಗಡವಿದ್ದ ಬಾಲಕನಿಗೆ ಭಿಕ್ಷುಕಿಯ ಕಣ್ಣೀರು ನೋಡಿ ಎದೆ ತುಂಬಿತ್ತು. ತನ್ನ ಕೈಯಲ್ಲಿದ್ದ ಒಂದಾಣೆಯನ್ನು ನೀಡಲು ಕೈನೀಡಿದಾಗ 'ಅಯ್ಯೋ ದೇವರ ಡಬ್ಬಿಗೆ ಹಾಕಲೆಂದು ತಂದುದನ್ನು ಅವಳಿಗೆ ಕೊಡುತ್ತೀಯಾ?' ಎಂದು ಗದರಿಸಿ ಕೈ ಸೆಳೆದಳು. ಸಿಕ್ಕಿತೆಂಬ ಭಿಕ್ಷುಕಿಯ ಆಶೆಯೂ ಕೊಟ್ಟೆನೆಂಬ ಮಗುವಿನ ತೃಪ್ತಿಯೂ ಭಂಗವಾಯ್ತು. ಭಾಲಕನು ಮುಖ ಸಣ್ಣದು ಮಾಡುತ್ತ ತಾಯ ಸೆರಗ ಹಿಡಿದು ಹಿಂಬಾಲಿಸಿದನು. ದಾರಿಯಲ್ಲಿ ಕಿತ್ತಳೆಯವನು ಬಂದು ನಿಲ್ಲಲು ತಾಯಿ ದೇವರಿಗೆಂದು ತಂದ ಆಣೆಯನ್ನು ಅವನಿಗೆ ಸಮರ್ಪಿಸಿ ಮುಂದೆ ಸಾಗಿದಳು. ಭಿಕ್ಷುಕಿ ನೋಡುತ್ತ ಮುನ್ನ ಸಾಗಿದಳು.

ಭವ್ಯವಾದ ಮನೆಯಲ್ಲಿ ಸಮಾರಾಧನೆ ನಡೆದಿದೆ. ಬಾಗಿಲು ಮುಚ್ಚಿದೆ. ಏನಾದರೂ ದೊರಕಿತೆಂಬ ಆಶೆಯಿಂದ ಭಿಕ್ಷುಕಿ ನಿಂತಳು. ಬಿಟ್ಟೆಲೆಯ ಮೇಲಿನದನ್ನು ಆರಿಸಿ ಮಗುವಿಗಿಕ್ಕುವೆನೆಂದು ಬಗೆದಳು. ಎಲೆಗಳು ಚೆಲ್ಲಿದವು. ನಾಯಿಗಳ ತಂಡವು ಕಚ್ಚಾಡಿ ಕಾದಾಡಿ ತಿಂದಾಯ್ತು. ಹರಿದೆಲೆಗಳನ್ನು ದನಗಳು ನುಂಗಿದವು. ತೃಪ್ತಿಯಿಂದ ಪ್ರಾಣಿಗಳು ಚದರಿದವು. ಭಿಕ್ಷುಕಿ ನಿರಾಶೆಗೊಂಡು ದೇವಾಲಯದ ಬಳಿ ಕುಳಿತು ಬೇಡುವೆನೆಂದು ಬಂದಳು. ಕಾಗೆಯೊಂದು ತಲೆಯಲ್ಲಿ ಕರ್ರಗೆ ಕೂಗಿತು, ಬೆಕ್ಕೊಂದು ಬಲದಿಕ್ಕಿಗೆ ಹಾಯಿತು. ಬಲಭುಜ ಕಣ್ಣುಗಳೆರಡು ಸ್ಫುರಿಸಿ ಹಾರಿದವು. ಭಿಕ್ಷುಕಿ ಮನದಲ್ಲಿ ಅಳುಕುತ್ತ ದೇವಾಲಯದ ಮುಂಬಾಗದಲ್ಲಿ ಬಂದಳು. ಗಂಟೆ ಹದಿನೆರಡು ಕಳೆದಿತ್ತು. ಪೂಜಾರಿ ಪೂಜೆ ಮುಗಿಸಿ ದೇವಾಲಯದ ಬಾಗಿಲೆಳೆದನು. ಆ ದಿನ ಹರಕೆಯಿಂದಾಗಿ ದೊರೆತಿಹ ಹಣ್ಣು ಕಾಯಿ ಹೋಳುಗಳ ಮೂಟೆಯನ್ನು ಹೊರುತ್ತ ಹಣವನ್ನೆಣಿಸುತ್ತ ಆನಂದದಿಂದ ಮೆಟ್ಟಲಿಳಿಯುತ್ತಿದ್ದನು. 'ಸ್ವಾಮಿ ಧರ್ಮಕೊಡಿರಯ್ಯಾ ದೇವರು ನಿಮಗೆ ಒಳ್ಳೇದು ಮಾಡಲಿ' ಎಂದು ದೀನತೆಯಿಂದ ಬೇಡಿದಳು. ಪೂಜಾರಿ ಕಣ್ಣರಳಿಸಿ 'ಏನು ಇಲ್ಲಿ ತನಕ ಬಂದು ಬೇಡುವ ಧೈರ್ಯ ಬಂತೇ?' ಎಂದನು. 'ಅಯ್ಯ ಹಾಗೆನ್ನಬೇಡಿ ಈ ಮಗುವಿಗಾಗಿ ಬಂದೆ ಏನಾದರೂ ಕೊಡಿ ಪುಣ್ಯ ಬರುವುದು' ಎಂದಳು. 'ಏನು ಮಗುವಿಗೆ ಕೊಡುವುದರಿಂದಲೇ ಪುಣ್ಯ ಬರುವುದೇ? ನಾನು ಇಲ್ಲಿ ದೇವರ ಪೂಜೆಯನ್ನು ಒಂದೇ ಸವನೆ ಹತ್ತು ವರ್ಷ

(೧೧ನೇ ಪುಟಕ್ಕೆ ಮುಂದುವರಿದಿದೆ)

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

U. Shantha Rama Rao,
Secretary

2-12-1944

ಸೆಂಟ್ರೆಲ್ ಎಕ್ಸಯ್ಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಬೊಂಬ್ಯಾಯಲ್ಲಿ ಶಿಕ್ಷಣ ಪ್ರಚಾರ

ಲೀಲಾಬ್ಯಾ ಮುನ್ಶಿಯವರ ಚಳವಳ

ಅಧೋಗತಿಗೆ ಇಳಿಯುವ ಈ ಶಿಕ್ಷಣ ಬೇಡ

"ಈಗಿನ ಶಿಕ್ಷಣ ಪದ್ಧತಿಯನ್ನು ಇನ್ನು ಒಂದು ದಿನವಾದರೂ ಹೆಚ್ಚಿಗೆ ಇಟ್ಟುಕೊಳ್ಳುವುದೆಂದರೆ ನಾಗರೀಕತೆಯ ದೃಷ್ಟಿಯಿಂದ ದೊಡ್ಡ ಪಾತಕವೇ ಸರಿ. ಇದನ್ನು ಮುಂದುವರಿಸುವುದರಿಂದ ಅಪಾರವಾದ ಮಾನವ ಚೈತನ್ಯ, ಶ್ರಮ ಶಕ್ತಿಗಳು ನಿಷ್ಪ್ರಯೋಜಕವಾಗಿ ನಶಿಸಿ ಹೋದಂತೇ ಸರಿ. ಈಗ ಮೆಟ್ರಿಕ್ ತನಕ ಕಲಿತ ತರುಣರನ್ನು ಶಾಸನದ ಒತ್ತಾಯದ ಮೂಲಕ ಉಪಾಧ್ಯಾಯ ವೃತ್ತಿಗೆ ಎರಡು ವರ್ಷವಾದರೂ ಸೇರುವಂತೆ ಮಾಡಿದರೂ, ಮತ್ತು ಶ್ರೇಷ್ಠ ತರಗತಿಯ ಶಿಕ್ಷಣ ಕ್ರಮವನ್ನು ಕೈಗಾರಿಕೆಗಳ ಅನುಭವಕೊಡುವ ಮೂಲ ಶಿಕ್ಷಣ ಪದ್ಧತಿಯ ಮೂಲಕ ಸ್ಥಾಪಿಸುವ ಕಾರ್ಯದಲ್ಲಿ ಅಲ್ಪಸ್ವಲ್ಪ ಶ್ರೇಷ್ಠತೆಯ ಗುಣ ಲೋಪವಾದರೂ ಗಮನಿಸದೆ ಈಗಲೇ ಆ ಕೆಲಸವನ್ನಾರಂಭಿಸಬೇಕು"

ಹೀಗೆಂದು ಶ್ರೀಮತಿ ಲೀಲಾ ಬ್ಯಾ ಮುನ್ಶಿಯವರು ಬೊಂಬ್ಯಾ ವಿಶ್ವವಿದ್ಯಾಲಯದ ಆಡಳಿತ ಸಭೆಯಲ್ಲಿ ತಾವು ತರಲಿರುವ 'ಸಾರ್ಜಂಟ್ ಶಿಕ್ಷಣ ಯೋಜನೆಯ ಕ್ರಮದಲ್ಲಿ ಕೆಲವೊಂದು ಬದಲಾವಣೆಗಳನ್ನು ಸೂಚಿಸಿ' ತಿದ್ದುವ ಒಂದು ಠರಾವನ್ನು ವಿವರಿಸುತ್ತಾ ಬರೆದಿರುವ ಲೇಖನವೊಂದರಲ್ಲಿ ತಿಳಿಸುತ್ತಾರೆ.

ಅವರು ತಮ್ಮ ಈ ಯೋಜನೆಯನ್ನು ಬೊಂಬ್ಯಾ ಪ್ರಾಂತ್ಯಕ್ಕೇ ಸದ್ಯಕ್ಕೆ ಅನ್ವಯಿಸುವಂತೆ ಮಾಡುವ ಉದ್ದೇಶದವರಿದ್ದರೂ ಇತರ ಪ್ರಾಂತ್ಯಗಳ ವಿದ್ಯಾಂಗ ಇಲಾಖೆಯವರೂ ಅನುಸರಿಸ ಬಹುದು. ಅವರ ಯೋಜನೆಯ ಮುಖ್ಯ ಅಂಶಗಳು ಹೀಗಿವೆ:

ಪ್ರಾಂತ್ಯದ ಶಾಲೆಗಳಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯೂ ಮೆಟ್ರಿಕ್ ಪರೀಕ್ಷೆಗೆ ಕೂತುಕೊಳ್ಳುವಂತೆ ಅನುಕೂಲಗಳನ್ನು ಕಲ್ಪಿಸುವ ಯೋಜನೆಯೊಂದನ್ನು ವಿದ್ಯಾಂಗದವರು ರಚಿಸಬೇಕು.

ಇದರಲ್ಲಿ ಉನ್ನತ ಕಾಲೇಜ ಶಿಕ್ಷಣಕ್ಕೆ ಹೋಗುವವರನ್ನೂ, ಮತ್ತು ಕೈಗಾರಿಕೆ, ವಾಣಿಜ್ಯ, ಕೃಷಿಗಾರಿಕೆ ಶಿಕ್ಷಣದಲ್ಲಿ ವಿಶಿಷ್ಟ ತರಬೇತಿ ಹೊಂದಲೆಳಿಸುವವರನ್ನೂ ಬಿಟ್ಟು, ಮಿಕ್ಕುಳಿದವರನ್ನು ಎರಡು ವರ್ಷಗಳ ತನಕ ಕಡ್ಡಾಯವಾಗಿ ಯೋಗ್ಯ ಸಂಭಳದ ಮೇಲೆ ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳುವಂತೆ ಮಾಡಬೇಕು. ನಂತರ ಅವರು ತಮಗೆ ಇಷ್ಟಕಂಡ ವೃತ್ತಿಯನ್ನು ಅನುಸರಿಸಬಹುದು.

ಇದೇ ರೀತಿಯಲ್ಲಿ ಸಾರ್ಜೆಂಟ ಯೋಜನೆಯಲ್ಲಿ ಸೂಚಿತವಾದಂತೆ ಎರಡು ವರ್ಷಗಳ ತನಕ ಹ್ಯಾಸ್ಕೂಲುಗಳಲ್ಲಿ ಉಪಾಧ್ಯಾಯ ವೃತ್ತಿಯ ಸೇವೆಯನ್ನು ಯೋಗ್ಯ ಸಂಭಳದ ಮೇಲೆ ಮಾಡಲು ಸಿದ್ಧರಿದ್ದವರನ್ನು ಮಾತ್ರ ಬಿ. ಎ. ಪರೀಕ್ಷೆಗೆ ಕುಳಿತುಕೊಳ್ಳಲು ಸರಕಾರದವರು ಬಿಡಬೇಕು.

ಯುದ್ಧಾನಂತರ ಶಿಕ್ಷಿತ ವರ್ಗದಲ್ಲಿ ಸಹಜವಾದ ನಿರುದ್ಯೋಗದ ಸಮಸ್ಯೆಗಳುಂಟಾಗುವುದರಿಂದ ಎರಡು ವರ್ಷಗಳ ತನಕ ಯೋಗ್ಯ ಸಂಭಳ ಸಿಗುವಂತಾಗುವಂತಾದರೆ ಉಪಾಧ್ಯಾಯ ವೃತ್ತಿಗೆ ಕಡ್ಡಾಯವಾದ ಶಾಸನ ಮಾಡುವ ಅವಶ್ಯಕತೆ ಬೀಳದು.

ನಿರಕ್ಷರತೆಯ ವಿರೋಧವಾಗಿ ನಾವು ಯುದ್ಧವನ್ನು ಹೆಚ್ಚಿನ ಆಸಕ್ತಿಯಿಂದ ನಿರ್ವಹಿಸಬೇಕು. ಉಪಾಧ್ಯಾಯನೋರ್ವನಿಗೆ ಯೋಗ್ಯ ಭರವಸೆಯ ಕೆಲಸ ದೊರೆಯುವ ಸಂದರ್ಭವಿರುವುದರಿಂದ ರಣರಂಗದಲ್ಲಿ ಶತ್ರುವನ್ನು ಕಾದಾಡುವುದಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ನಾವಿಂದು ಈ ನಿರಕ್ಷರತಾರಾಕ್ಷಸನನ್ನು ಕೊಲ್ಲಬೇಕಾಗಿದೆ.

ಈ ಯೋಜನೆಯ ವೈಶಿಷ್ಟಗಳೆಂದರೆ:

೧) ಸಾರ್ಜೆಂಟ್ ಯೋಜನೆಯು ೪೦ ವರ್ಷಗಳಲ್ಲಿ ಪಡೆಯಲೆಳಿಸುವ ಫಲವನ್ನು ಇದರಿಂದ ೨೦ ವರ್ಷಗಳಲ್ಲೇ ಹೊಂದಬಹುದು.

೨) ಸಾರ್ಜೆಂಟ್ ವರದಿಯಲ್ಲಿ ಮೆಟ್ರಿಕ್ ಉಪಾಧ್ಯಾಯನಿಗೆ ೩೫, ಬಿ. ಎ. ಯವನಿಗೆ ೫೦ ಎಂದಿದ್ದನ್ನು ೩೦ ಮತ್ತು ೪೦ಕ್ಕೆ ಇಳಿಸಲಾಗಿರುವುದರಿಂದ ಶಿಕ್ಷಣ ಇಲಾಖೆಯ ವೆಚ್ಚವೂ ಕಡಿಮೆಯಾಗುವುದು.

೩) ಪರೀಕ್ಷೆಗಳಲ್ಲೂ, ಜೀವನದಲ್ಲೂ ಅಪಯಶಸ್ವಿಯಾದರೆ ಸಂಕಷ್ಟಗಳುಂಟಾಗುವುದರ ಬದಲು ಈ ಯೋಜನೆಯಿಂದ ಸಾರ್ವಜನಿಕ ಸೇವೆಯ ಸ್ಫೂರ್ತಿ ಉತ್ಸಾಹಗಳುಂಟಾಗುವವು. ಯುವಕ ಜನಾಂಗದ ಚೈತನ್ಯವನ್ನು ಯೋಗ್ಯ ಮಾರ್ಗದಲ್ಲಿ ರಚನಾತ್ಮಕ ರೀತಿಯಲ್ಲಿ ನಿರ್ದೇಶಿಸದಂತಾಗುವುದು.

೪) ಜನತೆಯೊಳಗೂ ಶಿಕ್ಷಿತವರ್ಗದೊಳಗೂ ಸಂಪರ್ಕವನ್ನು ಬೆಳೆಸಿದಂತಾಗುತ್ತದೆ.

೫) ರಾಷ್ಟ್ರೀಯ ಶಕ್ತಿ ಐಕ್ಯತೆಗಳು ಹೆಚ್ಚುವವು.

೬) ಜನಾಂಗದ ಸರ್ವತೋಮುಖ ಅಭಿವೃದ್ಧಿಯಾಗುವುದು.

೭) ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಿದಂತಾಗುವುದು.

ಅಮೇರಿಕದಲ್ಲಿ ಭಾರತ ಸ್ವಾತಂತ್ರ್ಯ ದಿನ ಆಚರಿಸಲ್ಪಟ್ಟ ಮರುದಿವಸ ಪ್ರೆಸಿಡೆಂಟ್ ರೂಸ್‌ವೆಲ್ಟರ ಧರ್ಮಪತ್ನಿ ಶ್ರೀಮತಿ ಎಲಿಯನರ್ ರೂಸ್‌ವೆಲ್ಟರು ವಿಜಯಲಕ್ಷ್ಮಿ ಪಂಡಿತರನ್ನು ಅತಿಥಿಗಳಾಗಿ ಆಹ್ವಾನಿಸಿ ಅವರೊಂದಿಗೆ ಏಕಾಂಗಿಗಳಾಗಿ ಮಾತುಕತೆ ನಡೆಸಿದರು. ಮಹಿಳೆ ರೂಸ್‌ವೆಲ್ಟರು ಭಾರತ ವಿಚಾರದಲ್ಲಿ ತುಂಬಾ ಅಭಿರುಚಿ ತಾಳಿಕೊಂಡಿರುವರೆಂದು ಶ್ರೀಮತಿ ಪಂಡಿತರು ತಿಳಿಸಿದರು. ಅವರೊಳಗಿನ ಮಾತುಕತೆಗಳು ಗೋಪ್ಯವಾಗಿರಿಸಲಾಗಿದೆ.

1944--A YEAR OF RECORD PROGRESS:

NEW BUSINESS COMPLETED Rs. 20,22,550.

IT IS WORTHY OF NOTE THAT INSPITE OF A 100% INCREASE IN NEW BUSINESS, THE RENEWAL EXPENSE RATIO FOR THE YEAR 1944 WORKS BELOW 15%. A NET INTEREST OF 4% HAS BEEN EARNED ON THE MEAN LIFE ASSURANCE FUND DURING THE YEAR. THESE FACTORS COMPARE VERY FAVOURABLY WITH THE BEST MANAGED LIFE ASSURANCE COMPANIES IN INDIA.

THIS PROGRESS OF THE "**POPULAR**" MUST HIGHLY IMPRESS YOU. AS A COMPANY OF YOUR **OWN**, IT LAYS A CLAIM TO YOUR LIFE ASSURANCE. IN THE NEW ORGANISATION PROGRAMME OF THE COMPANY THERE IS A PLACE FOR YOU ON HANDSOME REMUNERATION AS AN **ORGANISER**, **SPECIAL AGENT** OR **DISTRICT AGENT** ON A SMALL ANNUAL GUARANTEE OF BUSINESS. OR, IF YOU CAN DEVOTE YOUR SPARE TIME FOR AN **ORDINARY AGENCY**, YOU CAN EARN THE MAXIMUM COMMISSION PERMISSIBLE WITHOUT ANY BUSINESS GUARANTEE. PLEASE CALL AT THE OFFICE OR WRITE FOR DETAILS.

TO MAKE 1945 A YEAR OF GREATER ACHIEVEMENT, WE SOLICIT YOUR CO-OPERATION. THE MANAGEMENT IS CONFIDENT THAT IT WILL BE READILY EXTENDED

THE POPULAR INSURANCE COMPANY LTD.,
MANGALORE.

"The Popular by Preference for an Agency or a Policy"

ಪ್ರಚಲಿತ ಸಮಾಚಾರಗಳು

ಹಿಂದೂದೇಶದೊಡನೆ ವ್ಯಾಪಾರದ ಕುರಿತು ಅಮೇರಿಕಾಕ್ಕೂ, ಬ್ರಿಟನಿಗೂ ನಡುವೆ ಒಂದು ಒಪ್ಪಂದವಾಗಿದೆ ಎಂದು ತಿಳಿದು ಬಂದಿದೆ. ಹಿಂದೂದೇಶದ ಭಾವೀ ಔದ್ಯೋಗಿಕರಣಕ್ಕೆ ಬೇಕಾದ ಹಣ ಯಂತ್ರ, ಸಹಾಯ, ಸಹಾನುಭೂತಿಗಳು ನೇರಾಗಿ ಬಾರದೆ, ಈ ಒಪ್ಪಂದದ ಮಾರ್ಗವಾಗಿ ಬರುವಂತಾಗಿದೆ.

ಹಿಂದೂದೇಶದಲ್ಲಿ ಕಲ್ಲಿದ್ದಲಿನ ದೊಡ್ಡ ಶೇಖರವಿರುವುದಾದರೂ, ಕಲ್ಲಿದ್ದಲಿನ ಕೊರತೆಯಿಂದ ಅನೇಕ ಅರಿವೆ ಗಿರಣಿಗಳು, ಇತರ ಕಾರ್ಖಾನೆಗಳು ಕಾರ್ಯಿಸಲು ಅಡ್ಡಿಗಳು ಉಂಟಾಗಿವೆ. ಈ ಕಾರಣದಿಂದಲೊ, ಎಂಬಂತೆ ಇನ್ನು ಅಮೇರಿಕದಿಂದ ಮಾಸ ಒಂದರ ೫೦ ಸಾವಿರ ಉಕ್ಕು, ೫೦ ಸಾವಿರ ಸಿಮೆಂಟು, ೫೦ ಸಾವಿರ ಮೌಲ್ಯದ ಲೊಂಗ್‌ಕ್ಲೊತ್, ಇವುಗಳನ್ನು ತರಿಸಿಕೊಳ್ಳಬೇಕೆಂದು ಇಂಡಿಯಾ ಸರಕಾರದ ನಿರ್ಧಾರವಾಗಿರುತ್ತದೆ.

ಕೆಲಸಗಾರರು ದೊರಕದಿರುವುದೆ ಕಲ್ಲಿದ್ದಲಿನ ಕೊರತೆಗೆ ಕಾರಣವಂತೆ. ಕಲ್ಲಿದ್ದಲಿನ ಧಾರಣೆಯನ್ನು ಏರಿಸಿ, ಕಲ್ಲಿದ್ದಲಿನ ಗನಿಯ ಕೆಲಸಗಾರರು ಮಜೂರಿಯನ್ನು ಹೆಚ್ಚಿಸಿ, ಕೆಲಸಗಾರರನ್ನು ಗನಿಗಳ ಕಡೆಗೆ ಆಕರ್ಷಿಸುವಂತೆ ಮಾಡಬಾರದಿತ್ತೆ ಎಂದು ಅನಿಸಬಹುದು. ಹಿಂದೂದೇಶದ ಅರಿವೆ ಗಿರಣಿಗಳು ಎಲ್ಲಾ ಒಟ್ಟಾಗಿ ೭೫ ಕೋಡಿ ಲಾಭವನ್ನು ಗಳಿಸಿವೆ ಎಂದು ವಾರ್ತೆ. ತಾತಾರವರ ಉಕ್ಕಿನ ಸಂಸ್ಥೆಯ ಲಾಭವು ಕಡಿಮೆಯಿಲ್ಲ. ಹೀಗೆ ಪ್ರತಿಯೊಂದು ಕೈಗಾರಿಕೆಯಲ್ಲಿ ವಿಶೇಷ ಉಳಿತಾಯಗಳಿವೆ. ಈ ಲಾಭವು ಬಾಂಡವಾಳಿಗರಲ್ಲೇ ಸೇರುವ ಬದಲು, ಒಂದಿಷ್ಟು ಮಜೂರರ ಕೈಗಳಿಗೂ ಸೇರಬಾರದೆ. ಬಾಂಡವಾಳಗಾರರು ಈ ತರದ ಯತ್ನಗಳನ್ನು ಮಾಡಿದರೆ, ಎಂದು ಪ್ರಶ್ನೆ?

ಈಗ ಪರದೇಶದಿಂದ ಒಡವೆಗಳು ಬರಮಾಡಿಕೊಳ್ಳುವ ನಿರ್ಧಾರವಾದೊಡನೆ ಬಂಡವಾಳಗಾರರು ಕಣ್ಣು ತೆರೆದಂತೆ ಕಾಣುತ್ತದೆ. ಇವರಲ್ಲಿ ಕೆಲವರು ಡಿಲ್ಲಿಯ ಕಡೆ ಪ್ರಮಾಣ ಬೆಳೆಸಿರುವರಾಗಿ ವಾರ್ತೆಯಿದೆ.

ಪರದೇಶದಿಂದ ಬಂದ ಈ ಒಡವೆಯ ದೆಸೆಯಿಂದ ದೇಶಿಯ ಧಾರಣೆಗಳ ಪೈಪೋಟಿ ನಡೆಯದಂತೆ ನೋಡಿಕೊಳ್ಳಲಾಗುವುದೆಂದು ಆಶ್ವಾಸನೆಯು ದೊರಕಿರುತ್ತದೆ. ಅಮೆರಿಕಾದಿಂದ ನಮ್ಮ ನೆರೆನಾಡಾದ ಸಿಲೋನಿಗೆ ಧಾರಾಳ ಅರಿವೆಯು ಬಂದಿರುತ್ತದೆಂದೂ ಅದು ಹಿಂದೀಯ ಅರಿವೆಗಿಂತ ಕಡಿಮೆ ಧಾರಣೆಯಲ್ಲಿ ವಿಕ್ರಯವಾಗುತ್ತಿದೆ ಎಂದೂ ತಿಳಿದುಬಂದಿದೆ. ಸಿಲೋನಿನಲ್ಲಿ ಹಿಂದೀಯ ಧಾರಣೆಗಿಂತ ಕಡಿಮೆಯಲ್ಲಿ ಅಮೇರಿಕನ್ ಅರಿವೆಯನ್ನು ವಿಕ್ರಯಿಸಲು ಸಾಧ್ಯವಿರುವುದಾದರೆ, ಹಿಂದೂದೇಶದಲ್ಲಿ ಅವುಗಳು ದೇಶಿಯ ಅರಿವೆಯಷ್ಟೆ ದರದಲ್ಲಿ ವಿಕ್ರಯಿಸಿ, ಉಂಟಾಗುವ ಲಾಭವು ಯಾರಿಗೆ?

ಹಿಂದೂದೇಶದಲ್ಲಿ ಅರಿವೆಯ ಕೊರತೆಯಿದ್ದಾಗ್ಯೂ, ಹಿಂದೀಯ ಅರಿವೆಯು ಧಾರಾಳ ಪರಿಮಾಣದಲ್ಲಿ ಈಗಲೂ ರಫ್ತಾಗುತ್ತದೆ.

ಬಿರ್ಲಾ ಸಹೋದರರು ಮೋಟಾರು ವಾಹನಗಳನ್ನು ಸಿದ್ಧಪಡಿಸುವ ಒಂದು ಕಾರ್ಖಾನೆಯ ಸಂಸ್ಥೆಯನ್ನು ಸ್ಥಾಪಿಸಿರುವರು. ಇವರಿಗೆ ಬ್ರಿಟನಿನ ಲೋರ್ಡ ನಫ್ಫಿಲ್ಡರ ಮೋರಿಸ್ ಮೋಟರ ಸಂಸ್ಥೆಯು ನೆರವುಣುರುವುದೆಂದು ತಿಳಿದುಬಂದಿದೆ. ವಾಲ್‌ಚಂದರು ಹಿಂದೊಮ್ಮೆ ಅಮೆರಿಕದ ಕ್ರ್ಯಾಸಲರ್ ಮೋಟರ ಸಂಸ್ಥೆಯೊಡನೆ ವ್ಯವಹಾರ ನಡೆಯಿಸಿದ್ದರೆಂದೂ, ಅವರಿರ್ವರಲ್ಲಿ ಒಡಂಬಡಿಕೆಯ ತೀರ್ಮಾನಗಳು ಆಗಿದ್ದವೆಂದೂ ತಿಳಿದಿತ್ತು. ಆದರೆ ಪ್ರಥಮ ಹೊರಡಿತು ಬಿರ್ಲಾ ಮೋಟಾರು ಸಂಸ್ಥೆ—ಬ್ರಿಟಿಷ್ ಮೊರಿಸ್ ನೆರವಿನಲ್ಲಿ.

ಇಂಡಿಯಾ ಸರಕಾರದ ಹೋಮ್ ಸೆಕ್ರಿಟರಿಗಳಾದ ಮೋಡಿಯವರು ದೇಶದ ಪ್ರವಾಸಮಾಡಿ, ಪ್ರಾಮುಖ್ಯ ಸಂಸ್ಥೆಗಳನ್ನೂ, ವ್ಯಕ್ತಿಗಳನ್ನೂ, ಕಾಂಗ್ರೆಸ್‌ವಾಲರನ್ನೂ ಕಾಣುತ್ತಿರುವರು. ಇದರ ಉದ್ದೇಶವೇನಿರಬಹುದು? ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದ ಚಟುವಟಿಕೆಗಳು ಹೇಗೆ ವ್ಯವಸ್ಥೆಗೊಳ್ಳುತ್ತಿವೆ ಎಂದು ತಿಳಿಯಲೊ? ಹಾಗೆ ತಿಳುವಳಿಕೆ ಆದ ನಂತರ ನ್ಯಾಶನಲ್ ವಾರ್ ಪ್ರಂಟ್ ಆಧೀನದಲ್ಲಿ ಅದೇ ತರದ ಚಟುವಟಿಕೆಗಳನ್ನು ನಡೆಯಿಸಿ, ಹಳ್ಳಿಗರನ್ನು ತಮಗೆ ಒಲಿಸಿಕೊಳ್ಳುವ ಉದ್ದಿಶ್ಯವಿರಬಹುದೊ? ಮುಂತಾದ ಸಂದೇಹಗಳು ಹಲವರಲ್ಲಿ ಉಂಟಾಗಿವೆ.

ಹಿಂದೂದೇಶದ ಸಾಂಪತ್ತಿಕ ಉದ್ಧಾರಣೆಯ ಕುರಿತು, ಅಮೆರಿಯವರ ಅಭೀಸು ಆಸಕ್ತಿಯನ್ನು ತೋರಿಸಿದ ಕುರಿತು ವಾರ್ತೆಗಳು ಬಂದಿವೆ. ರೈತನ ಬಡತನವನ್ನು ಹೋಗಗೊಳಿಸಿದರೆ, ಆಗ ಸದ್ಯ ಆತನಲ್ಲುಂಟಾದ ರಾಷ್ಟ್ರೀಯ ಜಾಗೃತಿಯು ಮಾಯವಾಗಬಹುದೆಂದೂ, ಅಮೆರಿಯವರು ನಂಬಿರುವರೆಂದೂ, ಸದ್ಯದಲ್ಲೆ ರೈತನ ಉದ್ಧಾರದ ಯೋಜಗಳು ಇಂಡಿಯಾ ಸರಕಾರದಿಂದ ಕೈಗೊಳ್ಳಲಾಗಬಹುದೆಂದೂ ಸೂಚನೆಗಳು ಬಂದಿವೆ. ಮೋಡಿಯವರ ಪ್ರವಾಸಕ್ಕೂ ಇದಕ್ಕೂ ಸಂಬಂಧವಿರಬಹುದೆ?

ಬಿಹಾರದಲ್ಲಿ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದ ಪ್ರಾರಂಭೋತ್ಸವದಲ್ಲಿ ಮಾಡಿದ ಭಾಷಣಗಳ ನಿಮಿತ್ತ ಬಿಹಾರ ಕಾಂಗ್ರೆಸ್ ಮುಖಂಡರುಗಳು ಮತ್ತು ಹಿಂದೆ ಕಾಂಗ್ರೆಸ್ ಮಂತ್ರಿಮಂಡಳದ ಸದಸ್ಯರಾಗಿದ್ದ ಕೆಲವರ ಮೇಲೆ ಅವರು ತಮ್ಮ ಸ್ವನಾಡುಗಳಿಂದ ಹೊರಗೆ ಹೋಗಬಾರದಾಗಿ ನಿರ್ಬಂಧಗಳು ಹಾಕಲಾಗಿವೆ—ಬಿಹಾರದ ಸರಕಾರದಿಂದ. ಇತ್ತಕಡೆಗೆ ಗಾಂಧೀಜಿಯ ಕುತೂಹಲವು ಸರಿದಿರುತ್ತದೆ. ವಾರ್ಧಾದಲ್ಲಿ ಗಾಂಧಿಜಿಯವರೊಡನೆ ನಿಂತು ರಚನಾತ್ಮಕ ಕಾರ್ಯಕ್ರಮಗಳ ವಿಷಯ ವಿಚಾರವೆತ್ತಿದ. ಬಿಹಾರದ ಮುಖಂಡರಲ್ಲಿ ಒಬ್ಬರು, ಈಗ ಪಾಟ್ನಾಕ್ಕೆ ಹಿಂತೆರಳಿದವರು, [ಇವರ ಮೇಲೂ ನಿರ್ಬಂಧ ಹಾಕಲಾಗಿದ್ದುದು, ಹಿಂತೆಗೆಯಲಾಗಿದೆ] ಬಿಹಾರಿನ ಗವರ್ನರರೊಡನೆ, ಈ ಸಂಬಂಧ ವ್ಯವಹಾರ ನಡೆಯಿಸುತ್ತಿರುವರು. ಪ್ರಾರಂಭೋತ್ಸವದಲ್ಲಿ ನಡೆದ ಭಾಷಣಗಳು ಯುದ್ಧಯತ್ನಗಳಿಗೆ ವಿರೋಧವನ್ನುತರುವಂತವುಗಳೆಂದು ಸರಕಾರದ ಆಜ್ಞೆಯಲ್ಲಿ ವಾದಿಸಲಾಗಿದೆ.

ಈ ಯುದ್ಧವು ನಡೆಯುತ್ತಿದ್ದ ಹಾಗೆ ಒಂದು ವಿಷಯವು ಖಚಿತವಾಗುತ್ತಿದೆ. ಯುರೋಪದಲ್ಲಿ ಮುಂದಕ್ಕೆ ಅರಸುತನವು ಸಹಿಸಲಾಗದು ಎಂಬ ವಿಷಯವು. ಒಂದುವೇಳೆ ಈ ಅರಸತನಗಳು, ಸಹಿಸಲ್ಪಟ್ಟರೂ, ಅವುಗಳು ಪ್ರಜೆಗಳ ಸುಖಸಂತುಷ್ಟಿ ಸಾಧನಗಳಾಗಬೇಕು, ಪ್ರಗತಿ ಸಾಧಕರಿರಬೇಕು, ಪ್ರಜಾಸತ್ತೆಯ ಕ್ರಮಗಳನ್ನು ಅನ್ವಯಿಸಿ ನಡೆಯುವಂತವುಗಳಾಗಬೇಕುಎಂಬುದು.

ಹಿಂದೂದೇಶದಲ್ಲಿ ಈ ಅರಸರುಗಳ ಸಂಖ್ಯೆಯು ದೊಡ್ಡದಿದೆ. ಇವರಲ್ಲಿ ರುಮೇನಿಯಾದ ಕೆರೊಲರನ್ನೂ ಯುಗೊಸ್ಲೆವಿಯಾದ ಪೀಟರರನ್ನೂ ಮೀರಿಸುವವರಿದ್ದಾರೆ. ಯುರೋಪಕ್ಕೆ ಇಂಥ ರಾಜರುಗಳು ಬೇಡವೆಂದಾದರೆ, ನಮ್ಮ ವಿಚಾರವೇನು? ಒಂದು ವೇಳೆ ನಮ್ಮ ರಾಜರುಗಳನ್ನು ಸಹಿಸಬೇಕಾದರೆ ಅವರು ಸುಧಾರಣೆಯಾಗಬೇಡವೆ? ಅವರು ಇಂಗ್ಲಾಂಡಿನ (Constitutional Monarch) ಶಾಸನಬದ್ಧ ಚಕ್ರವರ್ತಿಗಳಂತೆ, ಮಾರ್ಪಡಾಗಬೇಡವೆ?

ಕಾಶ್ಮೀರದ ಮಹಾರಾಜರನ್ನು ಹೀಗೆ ಮಾರ್ಪಡಿಸಲು, ಯೋಜನೆಯೊಂದು ಸಿದ್ಧವಾಗಿರುತ್ತದೆ. ಯುದ್ಧೋತ್ತರದ ಕಾಲಕ್ಕೆಂದು ಹೊರಟ ಅನೇಕ ಯೋಜನೆಗಳಲ್ಲಿ ಇದು ಅತ್ಯಂತ ಸ್ವಾರಸ್ಯಮಯವಿದೆ. ಕಾಶ್ಮೀರ ಸಂಸ್ಥಾನ ಪ್ರಜೆಗಳನ್ನು ಉದ್ಧರಿಸುವ, ಅವರನ್ನು ಬಡತನದಿಂದ ಪಾರುಮಾಡುವ, ಅವರಿಗೆ ಸ್ವಯಂನಿರ್ಧಾರದ ಹಕ್ಕುಬಾಧ್ಯತೆಗಳನ್ನು ಕೊಡುವ, ಅವರ ಅಂಧಶ್ರದ್ಧೆಗಳನ್ನು ಹೋಗಗೊಳಿ,ಸುವ ಅವರ ಜ್ಞಾನವಿಕಾಸಗೊಳಿಸುವ, ತರುವ ಇತ್ಯಾದಿ ಉತ್ತಮ ಉದ್ದೇಶಗಳಿಂದ ಕೂಡಿದ ರಾಜ್ಯಾಂಗ ಶಾಸನವು ಪ್ರಜೆಗಳ ಪರವಾಗಿ ಸಿದ್ಧವಾಗಿರುತ್ತದೆ. ಈ ಶಾಸನದಲ್ಲಿ ಸೇರಿಸಲಾದ ನಿಯಮಗಳು ಚುಟುಕಿನಲ್ಲಿ ಈ ಕೆಳಗಿನಂತಿವೆ.

ಎಲ್ಲ ನಾಗರೀಕರಿಗೆ ಸರಿಸಮನವಾದ ಹಕ್ಕುಬಾಧ್ಯತೆಗಳನ್ನು ದೊರಕಿಸಿ ಕೊಡುವುದು, ಈ ನೂತನ ಶಾಸನವು ಮೂಲಮಂತ್ರವಾಗಿರುತ್ತದೆ. ನಾಗರೀಕರ ರಾಷ್ಟ್ರೀಯತೆ, ಧರ್ಮ, ಜಾತಿ, ಜನನ ಇತ್ಯಾದಿಗಳ ಮೇಲೆ ಹೊಂದಿಕೊಂಡಿರದೆ ಸಾಂಪತ್ತಿಕ, ರಾಜಕೀಯ, ಸಂಸ್ಕೃತೀಯ ಮತ್ತು ಸಾಮಾಜಿಕ ಎಲ್ಲಾ ವಿಚಾರಗಳಲ್ಲಿ ನಾಗರೀಕರ ಹಕ್ಕುಬಾಧ್ಯತೆಗಳಲ್ಲಿ ಸಾಮ್ಯವಿರಬೇಕೆಂದು ಈ ಶಾಸನದಲ್ಲಿ ಒತ್ತಿಹೇಳಲಾಗಿದೆ. ಇದಲ್ಲದೆ, ನಾಗರೀಕರಿಗೆ, ಭಾಷಣ ಸ್ವಾತಂತ್ರ್ಯ, ಸಭೆಗಳನ್ನು ಕೂಡಿಸುವ ಸ್ವಾತಂತ್ರ್ಯ, ಟ್ರೇಡ್ ಯೂನಿಯನ್, ಸಹಕಾರಿ ಸಂಘ, ಯುವಕ ಸಂಘ, ಸ್ತ್ರೀಯ ಸಂಘ, ಸ್ವರಕ್ಷಣಾ ವ್ಯವಸ್ಥೆ, ವಿಜ್ಞಾನ ಸಂಘ, ಔದ್ಯೋಗಿಕ ಸಂಘ ಮೊದಲಾದವುಗಳನ್ನು ವ್ಯವಸ್ಥೆಪಡಿಸಿ, ನಡೆಯುವ ಸ್ವಾತಂತ್ರ್ಯವು ದೊರಕುವ ಏರ್ಪಾಡುಗಳು ಇದರಲ್ಲಿ ಕಲ್ಪಿಸಲಾಗಿವೆ. ಪ್ರತಿಯೊಬ್ಬನಿಗೂ ದಿನಕ್ಕೆ ಒಂದು ನಿಯಮಿತ ಅವಧಿಯಲ್ಲಿ ದುಡಿವರೆ, ಅದಕ್ಕೆ ತಕ್ಕ ಪ್ರತಿಫಲವನ್ನು ದೊರಕಿಸುವ (ಈ ಪ್ರತಿಫಲವು ಎಷ್ಟೆಂದು ನಿರ್ಧರಿಸುವ ಕುರಿತು ಕ್ರಮಗಳಿವೆ.) ಕ್ರಮ, ಉತ್ತಮ ತರದಲ್ಲಿ ನಿಯೋಜಿಸಲ್ಪಟ್ಟ ಸಾಂಪತ್ತಿಕ ಮತ್ತು ಔದ್ಯೋಗಿಕ ಉದ್ಧಾರದ ಯೋಜನೆಗಳನ್ನು ನಡೆಯಿಸುವ ಕ್ರಮ, ಖಡ್ಡಾಯದ ಪ್ರ್ಯಾಮರಿ ವಿದ್ಯಾಭ್ಯಾಸಾಕ್ರಮ, ಸ್ತ್ರೀಯರಿಗೆ ಸಮವಾದ ಹಕ್ಕುಗಳು ಇತ್ಯಾದಿ ಉತ್ತಮಕ್ರಮುಗಳೆ ಈ ಶಾಸನದಲ್ಲಿ ಕೂಡಿಸಲಾಗಿವೆ.

ಈ ಶಾಸನದ ಪ್ರಕಾರ ಕ್ರಮುಗಳನ್ನು ಹೊರಡಿಸುವರೆ, ನ್ಯಾಶನಲ್ ಅಸೆಂಬ್ಲಿಯು, ಪ್ರತಿಯೋರ್ವ ಪ್ರಾಯಭರಿತನಿಗೆ ಮತಕೊಟ್ಟು, ಚುನಾಯಿಸಲ್ಪಡಬೇಕೆಂದೂ. ಅದರೊಡನೆ, ಮಹಾರಾಜರು ಕೆಲವು ನಿಯಮಿತ ಅಧಿಕಾರಗಳಿಂದ ಕೂಡಿದವರಾಗಿ, 'ಶಾಸನಬದ್ಧ ರಾಜರು'ಗಳಾಗಿರಬೇಕು. (ಬ್ರಿಟಿಷ್ ಮಾದರಿಯಲ್ಲಿ) ಎಂದು ಈ ಶಾಸನದಲ್ಲಿ ಸೂಚಿಸಲಾಗಿದೆ.

ಇಷ್ಟೆ ಅಲ್ಲದೆ, ಕಾಶ್ಮೀರದ ಪ್ರಜಾವರ್ಗ ಜೀವನದ ಮಟ್ಟವನ್ನು ಏರಿಸುವರೆ, ಬೇಸಾಯದ ಉದ್ಧರಣದ ಯೋಜನೆಯಲ್ಲಿ ಭೂಮ್ಯಾಲಿಕತನವನ್ನು ರದ್ದುಗೊಳಿಸುವ ಸೂಚನೆಗಳೂ, ರೈತನಿಗೆ ತನ್ನ ಶ್ರಮದ ಪ್ರತಿಫಲವು ನ್ಯಾಯವಾದ ತರದಲ್ಲಿ ದೊರಕಿಸಿಕೊಡುವ ಬೇಸಾಯ ಸಹಕಾರಿ ಸಂಘಗಳ ಏರ್ಪಾಡು; ಔದ್ಯೋಗಿಕರಣದಲ್ಲಿ ಬಂಡವಾಲಗಾರನ ಸ್ಥಳದಲ್ಲಿ ಸರಕಾರವೆ ಕೈಗಾರಿಕೆಗಳನ್ನು ನಡೆಯಿಸುವಂತೆಯೂ, ಆ ಕೈಗಾರಿಕೆಗಳು ದುಡಿಮೆಗಾರರ ಸಾಧಿಸುವಂತೆಯೂ, ಪ್ರಜೆಗಳ ನಿತ್ಯ ಸೇವನೆಗೆ ಬೇಕಾದ ವಸ್ತುಒಡವೆ ಸಿದ್ಧಪಡಿಸುವಂತವುಗಳಾಗುವಂತೆ ಯೂ ಮೊದಲಾದ ಉತ್ತಮ ಸಾಮ್ಯವಾದೀ ಆದರ್ಶಗಳ ಮೇಲೆ ಹೊಂದಿಕೊಂಡ ಉತ್ತಮ ಕ್ರಮುಗಳು ಈ ಶಾಸನದಲ್ಲಿ ಕೂಡಿಸಲಾಗಿವೆ.

ಈ ನೂತನ ರಾಜಶಾಸನವು ಸರ್ವಜನ ಮಾನ್ಯವಾಗುವಂತೆ, ಸರ್ವಜನ ಲಕ್ಷ್ಯವು ಈ ಶಾಸನದ ಕಡೆ ತಿರುಗುವಂತೆ ಅತ್ಯಂತ ಹುರುಪಿನ ಕಾರ್ಯಗಳು, ಕಾಶ್ಮೀರದಲ್ಲಿ ಪ್ರಕೃತ ನಡೆಯುತ್ತಿವೆ. ಮತ್ತು ಈ ಶಾಸನವು ಜನಜನೀತವಾಗುವ ಕುರಿತು ಸಂದೇಹಗಳೆಯಿಲ್ಲವೆಂದು ತಿಳಿದುಬಂದಿದೆ.

ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದಲ್ಲಿ ಕೂಡಿರುವ ಅನೇಕ ವಿಷಯಗಳೂ ಕಾಶ್ಮೀರದ ಈ ನೂತನ ರಾಜಶಾಸನದಲ್ಲಿ ಕೂಡಿವೆ.

ದಿನವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಅಂತರಾಷ್ಟ್ರೀಯ ಶಿಷ್ಟ ಸಾಂಪ್ರದಾಯ

ಚರ್ಚಿಲ್ಲರ ರಾಜಕೀಯ ಯಾತ್ರೆಗಳು

ಬೈರಾಗಿ ವೇಷದಲ್ಲಿ ವಿಠ್ಠಲ್‌ಭ್ಯಾ ಪಟೇಲರು

ಜಿನ್ನರ ಉನ್ನತ ಮಾತುಗಳು

ಸದ್ಯದಲ್ಲೇ ಚರ್ಚಿಲ್, ರೂಸ್‌ವೆಲ್ಟ್ ಮತ್ತು ಸ್ಟೇಲಿನ್ ಎಂಬೀ ತ್ರಿಮೂರ್ತಿಗಳ ಭೇಟಿಯಾಗಲಿದೆ ಎಂದು ವಿಪರೀತ ಸಾರಲ್ಪಟ್ಟಿದೆಯಲ್ಲವೆ? ಈಗ ಇದಕ್ಕೊಂದು ದೊಡ್ಡ ತೊಡಕಿನ ದಕ್ಕೆಬಂದಿದೆ. ಇತ್ತೀಚೆಗೆ ಸೇರಿದ ಕಾಮನ್ಸ್ ಸಭೆಯಲ್ಲಿ ಈ ಭಾವಿ ಭೇಟಿಯ ಕುರಿತು ಮಾತಾಡುತ್ತ ವಿದೇಶಾಂಗ ಮಂತ್ರಿ ಈಡನ್ನರು ಹೀಗೆಂದರು: ಚರ್ಚಿಲ್ಲರು ಮೂವರ ಪೈಕಿ ಅತೀ ವೃದ್ಧರು. ಅವರ ಮೇಲೆ ಈ ಯುದ್ಧದ ಹೆಚ್ಚಿನ ಹೊಣೆಗಾರಿಕೆಯ ಭಾರವಿದೆ. ಆದರೂ ಅನೇಕ ಬಾರಿ ಅವರು ಇತರ ಇರ್ವ ಮಿತ್ರ ಮುಖಂಡರನ್ನು ಕಾಣಲು ಹೋಗಿರುವರು. ಈಗ ಅವರೀ ಈ ಕಡೆ ದಯಮಾಡಿಸುವರೆಂದು ಹಾರೈಸುತ್ತೇವೆ.

ಅನೇಕ ಸಾರಿ ಸೂರ್ಯನು ಅಸ್ತಮಿಸದ ಬ್ರಿಟಿಷ್ ಸಾಮ್ರಾಜ್ಯದ ಪ್ರಧಾನರಾದ ಮಿ. ಚರ್ಚಿಲ್ಲರು ಮೊಸ್ಕೋಗೂ, ಅಮೇರಿಕಕ್ಕೂ ತಾವಾಗಿಯೇ ಹೋಗಿ ಮಾತುಕತೆ ನಡೆಸಿದ್ದುದರಿಂದ ಬ್ರಿಟಿಷ್ ಆಡಳಿತ ವರ್ಗದಲ್ಲಿ ಅವರ ಮೇಲೆ ಸ್ವಲ್ಪ ನಿಕೃಷ್ಟತಾಭಾವ ಉಂಟಾಗಿದೆ. ಲೋಕದೃಷ್ಟಿಯಲ್ಲಿ ಸ್ವಲ್ಪ ಕೀಳಾದರಲ್ಲಾ ಎಂಬ ಭಾವನೆ ಇದು. ಬ್ರಿಟಿಷ್ ಸಾಮ್ರಾಟರ ಪ್ರಧಾನರು ಸಹಾಯ ಬೇಡುತ್ತಾ ಯಾತಕ್ಕೆ ಯಾರ್‍ಯಾರ ಕಾಲಡಿಗೆ ಹೋಗಬೇಕು—ಎಂಬುದೇ ಈ ಭಾವನೆ. ಬ್ರಿಟಿಷರ ದರ್ಪಕ್ಕೆ ಸ್ವಲ್ಪ ಕುಂದು ತರುವಂತಹ ಕೆಲಸವಿದು ಎಂದು ಅನೇಕರ ಮನೋಗತ.

ಆದರೆ ಈ ಮಾನಸೀಕ ಪರಿಸ್ಥಿತಿಯು ಬ್ರಿಟಿಷ್ ಜನರಲ್ಲಿ ಮಾತ್ರವಲ್ಲ ಭಾರತದ ಜನರಲ್ಲೂ ಅನೇಕ ವೇಳೆ ಉಂಟಾಗುತ್ತದೆ. ಈ ವಿಷಯ ಬ್ಯಾ. ಜಿನ್ನಾರವರನ್ನು ವಿಚಾರಿಸಿದರೆ ತಿಳಿಯುತ್ತದೆ. ಈ ದೇಶದ ಯಾವ ರಾಜಕೀಯ ಮುಖಂಡರಾದರೂ ಸರಿಯೇ ಜಿನ್ನಾರೊಡನೆ ಅವರಿಗೆ ರಾಜಕೀಯ ಮಾತುಕತೆ ನಡೆಸಬೇಕೆಂದಿದ್ದರೆ ಅವರಿದ್ದಲ್ಲಿಗೇ ಹೋಗಬೇಕು. ಈಚೀಗೆ ಬ್ಯಾ. ಸಾವರಕರರೂ ಅದೇ ಧೋರಣೆಯನ್ನು ತಳೆದಿರುವರು. ಅವರಿಗೂ ಎಲ್ಲರಂತೆ ತಮ್ಮ ದರ್ಪವೇ ಹೆಚ್ಚು ಮನಸ್ಸಿಗೆ ಹೋಗುತ್ತದೆ.

ಆದರೆ ಮಹಾತ್ಮಾ ಗಾಂಧಿಯವರನ್ನು ಕೇಳಿ. ನ್ಯಾಯ, ನೀತಿ, ಶಾಂತಿಸ್ಥಾಪನೆಗಾಗಿ ಅವರು ಜಗತ್ತಿನ ಯಾವ ಮೂಲೆಗಾದರೂ ಹೋಗಲೂ ಸಿದ್ಧರಿದ್ದಾರೆ.

ಮುಸಲ್ಮಾನ ಜನರ ಮನಸ್ಸಿನ ಮೇಲೆ ತಾನೊಬ್ಬ ಅತ್ಯುನ್ನತ ಪ್ರಭೃತಿಯೆಂಬ ವಿಷಯವನ್ನು ಒತ್ತುವಂತೆ ಮಾಡುವುದೇ ಜಿನ್ನರ ಈ ಧೋರಣೆಗೆ ಕಾರಣವೆಂದು 'ನೇಶನಲ್ ಹೆರಾಲ್ಡ್' ಪತ್ರಿಕೆಯ ಸಂಪಾದಕ ಕೆ. ರಾಮರಾವ್ (ಇವರ ಲೇಖನದ ಸಾರಾಂಶವೇ ಈ ಭಾಷಾಂತರವಾಗಿದೆ.) ಅವರು ಓರ್ವ ಮುಸ್ಲಿಂ ಸ್ನೇಹಿತರು ತಿಳಿಸಿದರಂತೆ.

ಗಾಂಧಿ-ಜಿನ್ನಾ ಮಾತುಕತೆ

ಈ ಮಾತುಕತೆಗಳ ಫಲಿತಾಂಶವೇನೇ ಆಗಿರಲಿ ಜಿನ್ನರಿಗೆ ಇಷ್ಟು ಹೇಳಲಿಕ್ಕೆ ಅವಕಾಶ ದೊರಕಿತು:

'ನೋಡಿದಿರೊ, ನಾನೀ ಮಹಾತ್ಮನನ್ನು ನನ್ನಲ್ಲಿಗೆ ಬರುವಂತೆ ಮಾಡಿದೆ. ಅದೂ ಎಡೆಬಿಡದೆ ಎರಡು ವಾರಗಳ ತನಕ. ಆದರೆ ಒಂದು ಸಲವಾದರೂ ನಾನು ಅವರಿದ್ದಲ್ಲಿಗೆ ಹೋಗಿರುವೆನೆ? ಆದುದರಿಂದ ಇಬ್ಬರಲ್ಲಿ ಹೆಚ್ಚು ಶ್ರೇಷ್ಠರು ಯಾರು?'

ಅಂದರೆ ಹೀಗೆ ಹೇಳುವುದು ಮೂರ್ಖತನವೆನ್ನೋಣ—ಅದಿರಲಿ. ಗಾಂಧೀಜಿಯವರು ಎಂದಿಗಿಂತಲೂ ಒಂದಿಷ್ಟು ಹೆಚ್ಚು ಕೀರ್ತಿ ಗೌರವಕ್ಕೇನೇ ಪಾತ್ರರಾಗಿದ್ದಾರೆ ಖಂಡಿತ. ಅವರು ನಮ್ರತೆಯಿಂದಲೇ ಬಗ್ಗಿಕೊಂಡು ಕಾರ್ಯಸಾಧಿಸುವವರು—ಬಗ್ಗಿಕೊಂಡೇ ಗೆಲ್ಲುವರು. ಗಾಂಧೀಜಿಯವರೊಡನೆ ಹೀಗೆ ವ್ಯವಹರಿಸಿದ ಜಿನ್ನರು ವ್ಯಾಸ್‌ರಾಯರು ಕರೆದೊಡನೆ ಅವರ ಅರಮನೆಗೆ ಓಡುತ್ತಾರೆ. ವೈಸರಾಯ್ ಪ್ರಭುಗಳೇನು ನ್ಯೂಡಿಲ್ಲಿಯ ಜಿನ್ನರ ಮನೆಗೇನೂ ಬರುವವರಲ್ಲ—ಮಾತುಕತೆಗಾಗಿ. ಅವರಲ್ಲಿಗೆ ಜಿನ್ನರೀ ಹೋಗಬೇಕು.

ಸಾವರಕರರೂ ಹಾಗೆಯೇ. ಅವರನ್ನು ಕಾಣಲು ಅವರಿದ್ದಲ್ಲಿಗೇ ಹೋಗಬೇಕು. ಆದರೆ ವ್ಯಾಸ್‌ರಾಯರು ಕರೆದಾಕ್ಷಣ ಮಾತ್ರ ಇವರೂ ಗೌರವಸ್ಥರಾದಂತೆ ಭಾವಿಸುವರು. ಇದರಿಂದ ಹಿಂದೂಮಹಾಸಭೆಗೂ ವ್ಯಾಸ್‌ರಾಯರು ಪ್ರಾಧಾನ್ಯ ಕೊಟ್ಟಂತಾಗುವುದೆಂದೂ ಅವರು ತಿಳಕೊಳ್ಳುವಂತೆ ತೋರುತ್ತದೆ.

ಜಿನ್ನಾ ಸಾರ್ವಕರರೂ ಶ್ರೇಷ್ಟತೆಯ ಭಾವವನ್ನು ತಾಳಿಕೊಂಡಿರುವಂತೆ ಬ್ರಿಟಿಷ್ ಸಾರ್ವಜನಿಕರು ನಿಕೃಷ್ಟತಾ ಭಾವವನ್ನು ತಾಳಿಕೊಂಡಿದ್ದಾರೆ. ಅವರ ಪ್ರಧಾನರು ಅಮೇರಿಕಕ್ಕೆ ಅನೇಕ ಬಾರಿ ಹೋದರು. ಮತ್ತೆ ಟೆಹರಾನ್, ಕೆಸಬ್ಲಾಂಕಾ, ಮೊಸ್ಕೊ, ಕೆಲವು ಸಮಯ ಎಟ್ಲಾಂಟಿಕ್ ಸಮುದ್ರ ಮಧ್ಯಕ್ಕೆ. ಇಷ್ಟು ಯಾತ್ರೆ ಮಾತ್ರವಲ್ಲ ಇತ್ತೀಚೆ ಕೆಲವೇ ವಾರಗಳ ಹಿಂದೆಂಬಂತೆ ಗ್ರೀಸಿಗೂ ಹಾರಿದರು—ಗುರಿತಪ್ಪಿದ ತಮ್ಮ ಧೋರಣೆಯನ್ನು ಸರಿಪಡಿಸಲು. ಹಾಗಾದರೆ ಆ ಕೆಲವೇ ವಾರಗಳ ನಂತರ ಅವರು ಅಷ್ಟೊಂದು ಮುದುಕರಾದುದು ಹೇಗೆ? ಎಂಬ ಪ್ರಶ್ನೆಯೇ ಮೇಲಕ್ಕೇಳುತ್ತಧೆ.

ಟರ್ಕಿಯ ದಿವಂಗತ ಕೆಮಲ್‌ಪಾಶ್ ಅವರು ಯುದ್ಧಶಾಂತಿಯ ಎಲ್ಲಾ ಕೆಲಸಗಳನ್ನು ಇಸ್ಮೆಟ್ ಪಾಶ್ ಎಂಬ ಸೇನಾನಿಯ ಮೂಲಕ ಮಾಡಿಸುತಿದ್ದರು. ಅದೇ ಪ್ರಕಾರ ಟೆಹರಾನ್‌ನಲ್ಲಿ ಚರ್ಚಿಲ್ ರೂಸ್‌ವೆಲ್ಟ್. ಸ್ಟೆಲಿನರು ಒಟ್ಟುಗೂಡಿದ್ದರಷ್ಟೆ. ಆ ಪರಿಷತ್ತಿನ ಮಾತುಗಳು ಇನ್ನೂ ಪೂರ್ತಿಯಾಗುವ ಮೊದಲೇ ಸ್ಟೇಲಿನರು ತಾವೊಬ್ಬ ದರ್ಶನ ಮಾತ್ರ ಕೊಡುವ ದೇವತೆಯೋ ಎಂಬಂತೆ ಮಧ್ಯದಲ್ಲೇ ಹೊರಟು ಹೋಗಿಬಿಟ್ಟರು. ಮಾತುಕತೆಯ ಕೆಲಸವನ್ನು ಅವರ ಕೆಲ ಸೇನಾಪತಿಗಳು ತೀರಿಸಿದರು.

ಚಕ್ರವರ್ತಿಗಳ ಮರ್ಜಿ.

ಜರ್ಮನಿಯ ಹಿಂದಿನ ಕೈಸರನಿಗೆ ಒಂದು ಸಲ ಇಂಗ್ಲೆಂಡಿನಲ್ಲಿ ಏನೋ ರಹಸ್ಯ ರಾಜಕೀಯದ ಕೆಲಸವಿತ್ತು. ಅದಕ್ಕಾಗಿ ಹೋಗುವುದೆಂದರೆ ದರ್ಪಕ್ಕೆ ಕಡಿಮೆಯಲ್ಲವೆ? ಅದೇ ಸಮಯಕ್ಕೆ ಒಂದು ನೆವನ ಸಿಕ್ಕಿತು. ವಿಕ್ಟೋರಿಯಾ ಮಹಾರಾಣಿಯು ವೃದ್ಧಾಪ್ಯದ ದೆಸೆಯಿಂದ ಮರಣ ಶಯ್ಯೆಯಲ್ಲೇ ಇದ್ದಳು. ಕೈಸರನು ವಿಕ್ಟೋರಿಯಾ ರಾಣಿಯ ಮೊಮ್ಮಗ. ಆದುದರಿಂದ ಕಾಯಿಲೆಯ ಅಜ್ಜಿಯನ್ನು ನೋಡಲೆಂದು ಇಂಗ್ಲೆಂಡಿಗೆ ಹೋಗಿ ತನ್ನ ಕೆಲಸ ತೀರಿಸಿ ಬಂದ. ಹೀಗೇ ರಷ್ಯದ ಹಿಂದಿನ ಝಾರನು ಜರ್ಮನಿಗೆ ಹೋಗುತಿದ್ದನು—ರಾಜಸಂಬಂಧದ ಮಾತುಕತೆಗಾಗಿ ಎಂದು ನೆವನ. ನಿಜವಾದ ಮಾತುಕತೆ ರಾಜಕೀಯ ವಿಚಾರದ್ದು. ರಷ್ಯನ್ ಜರ್ಮನ್, ಮತ್ತು ಬ್ರಿಟಿಷ್ ರಾಜರಿಗೆ ಕುಟುಂಬ ಸಂಬಂಧವಿದೆ ನಿಜ.

ಇಂಗ್ಲೆಂಡಿನ ಅರಸರು ಪರದೇಶಕ್ಕೆ ಹೋಗಬೇಕಾದರೆ ಒಂದು ತಾತ್ಕಾಲಿಕ ರಾಜಪ್ರತಿನಿಧಿ ಮಂಡಲವನ್ನು ರಚಿಸದೆ ಹೊರಹೋಗುವಂತಿಲ್ಲ. ಆದರೆ ಹಿಂದಿನ ಏಳನೇ ಎಡ್ವರ್ಡರು ಮಾತ್ರ ಶಾಂತಿಸ್ಥಾಪನೆಗೆಂದು ಯುರೋಪಿನಲ್ಲೆಲ್ಲ ತಿರುಗಿದ್ದಾರೆ.

ಅಮೇರಿಕದ ಅಧ್ಯಕ್ಷರು ತಮಗೆ ಬೇಕಾದಲ್ಲಿಗೆ ಹೋಗಬಹುದು. ಆದರೆ ಅಲ್ಲಿನ ಪ್ರಜಾಪತಿ ಸಭೆಯ ಸಮ್ಮತಿ ಇಲ್ಲದೆ ಯಾವ ಯುದ್ಧ, ಶಾಂತಿಯನ್ನೂ ಅವರು ಮಾಡಬರುವುದಿಲ್ಲ.

ಸಮಯ ಬಂದಾಗ ಕತ್ತೆಯ ಕಾಲನ್ನಾದರೂ ಹಿಡಿಯಬೇಕೆಂಬುದಕೆ ಶ್ರೀ ಕೃಷ್ಣ ಜನನದ ಸಂಬಂಧವೊಂದು ಪುರಾಣ ಕಥೆ ಇದೆ. ಕೃಷ್ಣ ಜನ್ಮವಾದ ಕೂಡಲೇ ತಂದೆ ವಸುದೇವನು ಅಲ್ಲೇ ಕಾವಲಿಗಿಟ್ಟಿದ್ದ ಕತ್ತೆಯ ಕಾಲನ್ನು ಮುಟ್ಟಿದನಂತೆ—ಅದು ಅನಾವಶ್ಯಕವಾಗಿಬೊಗಳಿ ಕಾವಲುಗಾರರನ್ನು ಎಚ್ಚರಿಸದಂತೆ ಅಹಂಕಾರಿಯಾದ ದುರ್ಯೋಧನನು ಕೃಷ್ಣನನ್ನು ಒಲಿಸಿಕೊಳ್ಳಲು ದ್ವಾರಕಾ ಪಟ್ಟಣದ ತನಕ ಬಂದಿದ್ದರೂ ಆ ಪರಮಾತ್ಮರೂಪಿಯು ಮಾತ್ರ ಕಡೆಗೆ ಪಾಂಡು ಪುತ್ರರನ್ನೇ ಸಮರ್ಥಿಸಿದನು.

ಸೋತ ರಾಜನು ಗೆದ್ದ ಅರಸನ ಕಾಲ ಮೇಲೆ ಬೀಳುವುದು ಹಿಂದಿನ ಪದ್ಧತಿ. ಆದರೆ ಅಲೆಗ್ಸಾಂಡರನನ್ನು ಕಂಡ ಪುರೂರವ ಅರಸನು ಮಾತ್ರ ಬಗ್ಗಲಿಲ್ಲ. ಪಂಜಾಬಿನ ಪ್ರಖ್ಯಾತ ರಾಜಾ ರಣಜಿತ್‌ಸಿಂಗನು ಒಂದು ಸಲ ತನ್ನ ಕೈಯಲ್ಲಿ ಸೋತ ಪಾಳೆಯಗಾರನ ದರ್ಪದ ವಿಷಯ ಕೇಳಿದ್ದನು. ಅವನು ಎಂದೂ ಬಗ್ಗುವವನಲ್ಲ. ಅದಕ್ಕೆ ಒಂದು ಉಪಾಯ ಮಾಡಲಾಯಿತು. ಆ ಪಾಳೆಯಗಾರನು ರಣಜಿತ್ ಸಿಂಗನ ಭೇಟಿಗೆ ಬರುವಲ್ಲಿ ಒಂದು ಚಿಕ್ಕ ಗೋಡೆಯ ಆವರಣ ಹಾಕಿ ಅದಕ್ಕೆ ತಗ್ಗಾದ ಒಂದು ಬಾಗಿಲು ಇಡಲ್ಪಟ್ಟಿತು. ಅದರ ಕೆಳಗಿಂದ ಬರುವಾಗ ಯಾರಾದರೂ ತಲೆಯನ್ನು ಸ್ವಲ್ಪ ಬಗ್ಗಿಸಿಕೊಂಡೇ ಬರಬೇಕಿತ್ತು. ಇಲ್ಲವೆ ತಲೆಗೆ ಮೇಲ್ಭಾಗ ತಗಲುತ್ತದೆ. ಆದರೆ ವೀರನಾದ ಆ ಪಾಳೆಯಗಾರನು ಇದಕ್ಕೆಲ್ಲ ಮಣಿಯುವವನಲ್ಲ. ಅವನು ತನ್ನ ಕುದುರೆಯನ್ನು ಸ್ವಲ್ಪ ಹಿಂದಕ್ಕೆ ತಂದು ಅಲ್ಲಿಂದ ರಭಸದಲ್ಲಿ ಅದನ್ನು ಓಡಿಸಿ ಒಂದೇ ನೆಟ್ಟಿಗೆ ಆ ಅವರಣದ ಗೋಡೆಯ ಮೇಲಿಂದಲೇ ಅಶ್ವವನ್ನು ಹಾರಿಸಿದನಂತೆ. ರಣಜಿತ್ ಸಿಂಗನಿಗೆ ತುಂಬಾ ಸಂತೋಷವೂ ಆಯಿತು.

ಆಡಳಿತ ರಾಜ್ಯದ ಮುಖಂಡರು ಮಾಂಡಲೀಕರಂತೆ ನಮ್ಮ ಜನರಾಗಿರಬೇಕಲ್ಲವೆ? ಅದಕ್ಕೇ ಅನೇಕ ಸಲ ಚರ್ಚಿಲ್ಲರು ಗಾಂಧೀಜಿಯನ್ನು ಭೇಟಿಮಾಡಲು ತಿರಸ್ಕರಿಸಿದ್ದರು. ಮಾತ್ರವಲ್ಲ ಸರ್ ತೇಜಬಹುದ್ದೂರ್ ಸಪ್ರೂಗಳನ್ನೂ ಕಾಣಲು ಅವರು ಒಪ್ಪಲಿಲ್ಲವಂತೆ. ಒಂದು ಸಾರಿ ಪತ್ರಿಕಾವ್ಯವಸಾಯಿಗಳಾಗಿದ್ದ ಚರ್ಚಿಲ್ಲರ ಮಗ ರೊಂಡೊಲ್ಫ್ ಅವರು ಸಪ್ರೂಗಳ ಭೇಟಿಗಾಗಿ ಬಂದಾಗ ಅವರು ತಿರಸ್ಕರಿಸಿಬಿಟ್ಟರು.

ಎಲ್ಲದಕಿಂತಲೂ ಸಾರಸ್ಯವಾದ ಸಂಗತಿ ಎಂದರೆ ಉದ್ದಗಡ್ಡದ ವಿಠಲ್ ಭ್ಯಾ ಪಟೇಲರದು. (ಇವರು ವಲ್ಲಭಾಯರ ಹಿರಿಯ ಅಣ್ಣ) ಅವರು ಕೇಂದ್ರಸಭೆಯ ಅಧ್ಯಕ್ಷರಾಗಿದ್ದಾಗ, ಭಾರತದ ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು ರಾಜಸಮಿತಿಯು ಒಂದಿತ್ತು. ಸ್ಯಾಮುನ್ ಕಮಿಶನ್ ಎಂದು ಅದರ ಹೆಸರು. ಬ್ರಿಟಿಷ್ ಮಂತ್ರಿಗಳಾದ ಸರ್ ಜಾನ್ ಸ್ಯಾಮುನರು ಅದರ ಮುಖಂಡರಾಗಿದ್ದರು. ಅಂತರಾಷ್ಟ್ರೀಯ ಸಾಂಪ್ರದಾಯ ಪ್ರಕಾರ ಹೊರಗಿನಿಂದ ಬಂದ ರಾಜಪ್ರತಿನಿಧಿಗಳು ತಾವು ಹೋದ ದೇಶದ ಮುಖಂಡರ ಮನೆಗೆ ಹೋಗಿ ಮಾತುಕತೆ ನಡೆಸಬೇಕು. ಆದರೆ ಎಷ್ಟೆಂದರೂ ಭಾರತವು ದಾಸ್ಯ ದೇಶವಲ್ಲವೆ? ಸರ್ ಜಾನ್ ಸ್ಯಾಮುನ್ನರಿಗೆ ಶಾಸನ ಸಭೆಯ ಅಧ್ಯಕ್ಷ ಪಟೇಲರನ್ನು ಕಾಣುವುದು ಹೇಗೆಂದು ತೋರಲಿಲ್ಲ. (ಇನ್ನೊಂದು ಕಾರಣ ಶ್ರೀ ಪಟೇಲರು ಕಾಂಗ್ರೆಸಿಗರಾಗಿದ್ದರು.)

ಇಷ್ಟರಲ್ಲಿ ಕೆಲವು ಸ್ನೇಹಿತರು ಒಂದು ಉಪಾಯ ಕಂಡುಹಿಡಿದರು. ಪಟೇಲರು ಮನೆಯಲ್ಲಿ ಇಲ್ಲದ ಹೊತ್ತಿಗೆ ಹೋಗಿ ಬರುವುದು. ನಂತರ ಪಟೇಲರು ಸ್ಯಾಮುನರ ಮನೆಗೆ ಮರುಭೇಟಿಗಾಗಿ ಬರುವುದು. ಪಟೇಲರು ಶಾಸನ ಸಭೆಯ ಕಛೇರಿಗೆ ತಪ್ಪದೆ ಹೋಗುತಿದ್ದರು. ಆ ಹೊತ್ತಿಗೆ ಸ್ಯಾಮುನರ ಸವಾರಿ ದಯಮಾಡಿಸಿತು. ತಾನು ಬಂದಿರುವೆನೆಂಬದಾಗಿ ತಿಳಿಸಲು ಅವರು ಜವಾನನ ಹತ್ತಿರ ತಮ್ಮ ವಿಳಾಸದ ಕಾಗದ ಕೊಟ್ಟು ಹಿಂತಿರುಗುವಷ್ಟರಲ್ಲಿ "ಪಟೇಲಜಿಯವರು ಸ್ನಾನ ಮಾಡುತ್ತಾರೆ. ಈಗಲೇ ಬರುತ್ತಾರೆ" ಎಂದು ಜವಾನ ತಿಳಿಸಿದ. ಇನ್ನು ಪಕ್ಕನೆ ಹೋಗುವುದಕ್ಕಾಗುತ್ತದೆಯೇ? ಕೆಲವೇ ಕ್ಷಣಗಳಲ್ಲಿ ಸೊಂಟಕ್ಕೆ ಮೈ ಉಜ್ಜಿದ ಬೈರಾಸು ಸುತ್ತಿ ಬ್ಯಾರಿಸ್ಟರ್ ಪಟೇಲರು 'ನಮಸ್ತೆ' ಮಾಡಿ ಸ್ಯಾಮುನರ ಎದುರು ನಿಂತರು ಅಂದು ಅವರು ಕಛೇರಿಗೆ ಹೋಗಲಿಲ್ಲ.

ಸ್ವದೇಶಾಭಿಮಾನಿ

ತಾರೀಕು 9—2—1945

ಮೂಲ ಶಿಕ್ಷಣ

"ಈಗಿನ ನಮ್ಮೀ ಶಿಕ್ಷಣ, ಪೋಷಣೆ, ಆರೈಕೆ ಪದ್ಧತಿಗಳನ್ನು ಅನುಸರಿಸುತ್ತಾ ಮುಂದುವರಿದರೆ ಅಮೇರಿಕದ ಸಾರ್ವಜನಿಕ ಶಾಲೆಗಳಲ್ಲಿನ ಮಿಲಿಯಾವಧಿ ವಿದ್ಯಾರ್ಥಿಗಳು ಒಂದಲ್ಲ ಒಂದು ದಿನ ಹುಚ್ಚರ ಆಸ್ಪತ್ರೆಯನ್ನು ಕಂಡೇ ಕಾಣುವ ಪ್ರಸಂಗ ಬರುವುದು." ಹೀಗೆಂದು ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಮನೋಶಾಸ್ತ್ರ ಪಂಡಿತರಾದ ಪ್ರೊ। ಕೆನೆತ್ ಎಪೆಲ್ ಅವರು ಎಚ್ಚರಿಕೆ ಕೊಟ್ಟಿದ್ದಾರೆ. ಅಮೇರಿಕದ ಎಲ್ಲಾ ರೋಗರುಜೆ ಚಿಕಿತ್ಸಾಲಯಗಳಲ್ಲಿರುವ ಎಲ್ಲಾ ರೋಗಿಗಳ ಸಂಖ್ಯೆಗಿಂತ ಇಂದು ಅಲ್ಲಿನ ಹುಚ್ಚರ ಆಸ್ಪತ್ರೆಗಳಲ್ಲಿರುವ ಮನೋವ್ಯಾಧಿಗ್ರಸ್ತರೇ ಹೆಚ್ಚಾಗಿದ್ದಾರೆ. ಸೈನ್ಯಕ್ಕೆ ಸೇರ ಬಂದ ಅಲ್ಲಿನ ಯುವಕರಲ್ಲಿ ೧೬ ಲಕ್ಷ ಮಂದಿಗಳನ್ನು ಮಾನಸೀಕ ವ್ಯಾಧಿ ಸಂಬಂಧ ಕಾರಣದಿಂದ ಕೆಲಸದಿಂದ ತೆಗೆದುಹಾಕಿರುವರೆಂಬ ಸಂಗತಿ ಅತೀ ಸೋಜೀಗವೂ ಗಾಬರಿ ಕಾರಣವೂ ಆದ ವಿಷಯ.

ಇದರ ಕಾರಣವನ್ನು ಪ್ರೊ। ಎಪೆಲ್ಲರು ಹೀಗೆ ವಿವರಿಸುತ್ತಾರೆ: "ಮಕ್ಕಳನ್ನು ಮಿತಿ ಮೀರಿದ ಅಕ್ಕರೆಯಿಂದಲೂ, ಮುದ್ದಾಟದಿಂದಲೂ, ಕೂಡಿದ ಬಿಗಿಯಿಲ್ಲದ ಪೋಷಣೆಯೂ, ಶಿಕ್ಷಣಕ್ರಮವೂ ನಮ್ಮ ಮಕ್ಕಳ ಈ ಮಾನಸೀಕ ಅಸ್ತವ್ಯಸ್ತತೆಗೆ ಪ್ರಾಮುಖ್ಯ ಕಾರಣವೆನ್ನಬಹುದು." ರಾಮನೆಂಬ ಹುಡುಗನನ್ನು ದೃಷ್ಟಾಂತವಾಗಿ ತೆಗೆದುಕೊಳ್ಳೋಣ. ಅವನು ಬಾಲ್ಯದಲ್ಲೂ, ತಾರುಣ್ಯದಲ್ಲೂ ಅತಿಯಾಗಿ ಮುದ್ದಿಸಲ್ಪಟ್ಟು ಬೆಳೆದವನು. ಅವನಿಗೆ ಒಂದು ತಿಲ ತೂಕದ ಕೆಲಸವನ್ನು ಮಾಡುವ ಶ್ರಮವನ್ನು ಕೊಡಲಿಲ್ಲ. ಬುದ್ಧಿ ಶಕ್ತಿಯಲ್ಲಿ ಸಾಮಾನ್ಯ ಮಟ್ಟಿನವನಾಗಿದ್ದುದರಿಂದ ಅವನು ಮೂರು ಶಾಲೆಗಳಲ್ಲಿ 'ಫೈಲ್' ಆಗಿ ಕೊನೆಗೆ ಒಂದು ಕಮ್ಮಿ ಶಿಕ್ಷಣ ತರಗತಿಯ ಶಾಲೆಯೊಂದರಲ್ಲಿ ಹೇಗೂ 'ಪಾಸಾ'ದನು. ತಿಳಿದೋ ತಿಳಿಯದೆಯೋ ಅವನ ಹೆತ್ತವರು ಅವನಿಗೊಂದು ಸಾಮಾನ್ಯವಾದ ಶಿಕ್ಷಣವನ್ನು ಕೊಡಿಸಿದರು. ಆದರೆ ಇಂಥವನು ಮುಂದೆ ಈ ವಿಶಾಲ ಜಗತ್ತಿನಲ್ಲಿ ಕಾಲಿಟ್ಟಾಗ ಯಾವದೊಂದು ತರದ ಶಿಸ್ತಿನ ಉದ್ಯಮಕ್ಕೂ ಅಯೋಗ್ಯನಾಗುತ್ತಾನೆ. ತಾನು ಚಾತುರ್ಯದ ಇಲ್ಲವೆ ಶರೀರಶ್ರಮದ ಯಾವ ಕೆಲಸಕ್ಕೂ ತಕ್ಕವನಲ್ಲವೆಂಬ ಸಂಗತಿಯು ಆತನಿಗೆ ಮಂದಟ್ಟಾದೊಡನೆ ಅವನ ಮನಸ್ಸಿನ ಮೇಲೆ ಈ ಆಶಾಭಂಗದ ದುಷ್ಪರಿಣಾಮವಾಗುವುದು. ನಿಜವಾದ ಜೀವನ ಸಂಗ್ರಾಮಕ್ಕೂ ನಿಜವಲ್ಲದ ಜೀವನ ಮಾಯೆಗೂ ಇರುವ ಅಜಗಜಾಂತರವನ್ನು ಅವನು ತಿಳಿದೊಡನೆ ಮನಸ್ಸೆಂಬ ಸೂಕ್ಷ್ಮ ಬುದ್ಧಿ ಪ್ರಚೋದಕ ಅವಯವವು ಸ್ಥಿಮಿತ ತಪ್ಪಿದಂತಾಗಿ ತತ್ಫಲವಾದ ಪ್ರತಿಕ್ರಿಯೆಯು ಮನೋವ್ಯಾಧಿಯಲ್ಲಿ ಕೊನೆಗೊಳ್ಳುತ್ತದೆ.

ಈ ರಾಮನಂತೆ ಇಂದು ಅದೆಷ್ಟು ಮಿಲಿಯಾಂತರ ತರುಣರು ಈ ಘೋರ ಯಾತನೆಗೆ ಒಳಗಾಗಿರುವುದಿಲ್ಲ! ಕೆಲವು ಹೆತ್ತವರು ಮಕ್ಕಳನ್ನು ಅತಿಯಾಗಿ ಮುದ್ದಿಸಿ ಬೆಳೆಸುವಂತೆ ಕೆಲವರು ಯಾಂತ್ರಿಕ ಶಿಷ್ಟ ಸಾಂಪ್ರದಾಯದ ಕಠಿಣ ಶಿಸ್ತಿನಿಂದ ಪರಿಪೋಷಿಸಿ ದೊಡ್ಡವರನ್ನಾಗಿ ಮಾಡುತ್ತಾರೆ. ಆದರೆ ಪ್ರಪಂಚ ಹೋರಾಟದ ಈ ವಿಶಾಲ ಕ್ಷೇತ್ರವನ್ನು ಹೊಕ್ಕಾಗ ಅವರಿಗೆ ತಮ್ಮ ನೈಪುಣ್ಯದ ಅಲ್ಪತೆಯು ಅರಿವಾಗುವುದು. ಕೂಡಲೇ ಅವರಿಗೆ ಎದೆಗುಂದಿದಂತಾಗಿ ಕಾರ್ಯೋತ್ಸಾಹವು ಒಮ್ಮೆಗೇ ಕನಿಷ್ಟ ಮಟ್ಟಕ್ಕಿಳಿಯುತ್ತದೆ. ಆಗಲೇ ಮಾನಸೀಕ ಪ್ರತಿಕ್ರಿಯೆಗಾರಂಭವಾಗುವುದು. ಕ್ರಮೇಣವಾಗಿ ಅದು ಶಕ್ತಿಹೀನವಾಗಿ ಮನಷ್ಯನು ಉನ್ಮತ್ತತೆಯ ಕಡೆ ಧಾವಿಸುತ್ತಾನೆ.

ಈ ಮಾನಸೀಕ ಕಕ್ಕಾಬಿಕ್ಕಿಯಿಂದ ಅದೆಷ್ಟು ಸಂಸಾರಗಳು ಒಡೆದು ಭಿನ್ನವಾಗಿ ನಶಿಸಿಹೋಗಿಲ್ಲ. ಹಿರಿಯರಲ್ಲೂ ಕಿರಿಯರಲ್ಲೂ ಈ ಮನೋಭಗ್ನತೆಯ ಲಕ್ಷಣಗಳುಂಟಾಯಿತೆಂದರೆ ಒಂದು ಕುಟುಂಬದ ಪತನಕ್ಕಾರಂಭವಾದಂತೇ ಸರಿ. ಈ ಸಂದರ್ಭಗಳಲ್ಲಿ ಹೆತ್ತವರು ಕದಡಿಹೋದ ತಮ್ಮ ಆಶಾಭಗ್ನತೆಯ ದುಃಖದಾಹಕ್ಕೊಳಗಾದ ಮನಸ್ಸಿನ ಹೀನಪ್ರಭಾವವು ತಮ್ಮ ಮಕ್ಕಳುಮರಿಗಳ ಮೇಲೆಬೀಳದಂತೆ ನೋಡಬೇಕು. ಇಲ್ಲದಿದ್ದರೆ ಮಕ್ಕಳಲ್ಲಿ ಅವಶ್ಯವಾಗಿರಬೇಕಾದ ಮನೋಭದ್ರತೆಯ ವಿಶ್ವಾಸವು ನಾಶವಾಗುವುದು.

ಹೊಣೆಗಾರಿಕೆಯನ್ನು ಹೊತ್ತು ಸಹಕಾರಭಾವದಿಂದ ಸಮಾಜ ಜೀವನಕ್ಕೆ ನೆರವಾಗಿ ನಡಿಯುವುದೇ ನಾಗರೀಕರಲ್ಲಿರಬೇಕಾದ ಅವಶ್ಯ ಲಕ್ಷಣಗಳು. ಇಂತಹ ಶಿಕ್ಷಣವನ್ನು ಯಾವ ಹೆತ್ತವರು ತಮ್ಮ ಮಕ್ಕಳಿಗೆ ತಿಳಿಸುತ್ತಾರೆ? ಯಾವ ಶಾಲೆಗಳಲ್ಲಿ ಅದನ್ನು ಇಂದು ಕಲಿಸುತ್ತಾರೆ? ಕೋಪ, ನಿರಾಶೆಗಳನ್ನು ಮನಸ್ಸು ಬಿಗಿಹಿಡಿಯುವುದರ ಮೂಲಕವೂ, ಸೋಲನ್ನು ಸ್ಥೈರ್ಯಶಕ್ತಿಯಿಂದಲೂ ಎದುರಿಸುವಂತೆ ಮಕ್ಕಳನ್ನೂ ವಿದ್ಯಾರ್ಥಿಗಳನ್ನೂ ತರಬೇತುಮಾಡಬೇಕಾಗಿದೆ. ಮತ್ಸರ, ಹೆದರಿಕೆ, ಕೋಪ, ನಿರಾಶೆ, ಇವು ಮನುಷ್ಯಮಾತ್ರರೆಲ್ಲರಲ್ಲೂ ವಿಕಾರಗೊಳ್ಳುವ ಸ್ವಾಭಾವಿಕ ಗುಣ ವಿಶೇಷಗಳು. ಆದರೆ ಅವುಗಳನ್ನು ನಿಯಂತ್ರಣದಲ್ಲಿರಿಸಬೇಕಾದುದು ಅತ್ಯಾವಶ್ಯಕ. ಮನೋಭಾವನೆ, ವಿಕಾರಗಳಿಗೆ ಸಂಬಂಧಿಸಿದ ಶಿಕ್ಷಣವೇ ನಮಗಿಂದು ಬೇಕಾಗಿದೆ.

ಇಲ್ಲಿ ಮಹಾತ್ಮಾ ಗಾಂಧಿಯವರ ಮೂಲ ಕೈಗಾರಿಕೆ ಶಿಕ್ಷಣದ ಮಹತ್ವದ ಅರಿವು ಒಂದಿಷ್ಟು ನಮಗಾಗುತ್ತದೆ. ಆ ಒಹಿಯೊ ಕೊಲೇಜಿನ ಬೇರೊಂದು ರೂಪಾಂತರವೇ ಈ ವಾರ್ದಾ ಶಿಕ್ಷಣವೆನ್ನಬಹುದು. ವಿದ್ಯೆ ಕಲಿಯುತಿದ್ದ ಹಾಗೆ ವಿದ್ಯಾರ್ಥಿಯು ದುಡಿಮೆಯ ಗೌರವವನ್ನೂ, ಸಶ್ರಮ ಜೀವನದ ಸುಖವನ್ನೂ ಮನಗಾಣುವನು. ಕ್ರಿಯಾತ್ಮಕ, ಕಲ್ಪನಾತ್ಮಕ ಚಟುವಟಿಕೆಯ ಕೈಗಾರಿಕೆಗಳಲ್ಲಿ ಮಗ್ನವಾಗುವ ಮನಸ್ಸು ದುಷ್ಟ ಮನೋವಿಕಾರಗಳಿಗೆ ಬಲಿಬೀಳದು. ಉಚ್ಚ ಸೀಚ ಭಾವನೆಗಳಿಗೆ ಅಲ್ಲಿ ಎಡೆಸಿಗದೆ ಗುಣಶ್ರೇಷ್ಟತೆಯು ಅಭಿವೃದ್ಧಿಗೊಳ್ಳುವುದು.

ಮನಸ್ಸು ಶರೀರಗಳು ಒಂದೇ ಪ್ರಾಧಾನ್ಯತೆಯವೆಂದು ವೈದ್ಯ ವಿಜ್ಞಾನವು ತಿಳಿಸುತ್ತದೆ. ಅಂತೇ ವೈದ್ಯನು ಸಂಸಾರವೊಂದರ ಶಾರೀರಿಕ ಮಾತ್ರವಲ್ಲ ಮಾನಸಿಕ ಜಾಡ್ಯದ ಕಡೆಗೆ ಗಮನವಿಟ್ಟು ಪರಿಶೀಲಿಸಿ ಅದಕ್ಕೆ ಯೋಗ್ಯ ಪರಿಹಾರೋಪಾಯವನ್ನು ಸೂಚಿಸಬೇಕು. ವಿದ್ಯಾ ಸಂಸ್ಥೆಗಳು ಸಶ್ರಮ ಈ ಶಿಕ್ಷಣದ ವ್ಯವಸ್ಥೆಯನ್ನು ಮಾಡುವುದರಿಂದ ಅದೆಷ್ಟು ಅಮೋಘ ಮಾನವ ಸೇವೆಯನ್ನು ಸಲ್ಲಿಸಿದಂತಾಗುತ್ತದೆ.

ಗಾಂಧಿ ವಿಚಾರ ವಚನಗಳು

(ಕಳೆದ ಸಂಚಿಕೆಯಿಂದ)

೩೩. ವಿಚಾರದಿಂ ಸತ್ಯವೆನಿಸಿದುದನು ವಿವೇಕ ಬಲದಿಂ ಆಚರಣೆಗೆ ತರ್ಪುದೇ ಸತ್ಯಕರ್ಮ. ಸದ್ವಿಚಾರದಿಂ ಭಕ್ತಿಯುಕ್ತಮಾಗಿರ್ಪ ಶ್ರದ್ಧೆಯಿಂ ಮನಗಂಡ ಸತ್ಯವದು ವ್ಯಕ್ತಿ ವ್ಯಕ್ತಿಗಳಲಿ ಭೇದಾಭೇದ ತೋರ್ಪಡಿಸಬಹುದಯ್ಯ. ಸತ್ಯದೊಳು ತೋರ್ಪಡುವ ಈ ಬಗೆಬಗೆಗಳೆಲ್ಲ ಒರೊಂದು ಹೆಮ್ಮರನ ಅಮಿತ ಎಲೆ ಮಿಡಿ ಕಾಯಿಗಳೆಂದೇ ವಿದಿತವಯ್ಯ ನಿಶ್ಚಲದ ಸತ್ಯಶೋಧಕಂಗೆ ಭಾರತ ಭಾಗ್ಯವಿಧಾತ.

೩೪. ಅನ್ಯಾಯ, ದುರ್ನೀತಿ, ಅಧರ್ಮ, ಅಸತ್ಯಗಳೆಂಬುವೆಲ್ಲ ಸುತ್ತಲೂ ತಲೆಎತ್ತಿ ಮೆರೆಯುತಿರಲು ತಾಟಸ್ಥ್ಯದಿಂದಿರ್ಪವನನು ಸತ್ಯಸಾಧಕನೆಂದೆಂತೆಂಬೆನಯ್ಯ. ಈ ತೆರದ ಉದಾಸೀನ ಮಾನವನವನು ಸತ್ಯವನು ಮನಗಾಣನಯ್ಯ. ಸತ್ಯ ಶೋಧಕನಿರ್ಪವನು ನಿಜದಿಂ ಈ ತೆರದ ಧರ್ಮಬಾಹಿರವಿರ್ಪ, ನೀತಿ ಬಾಹಿರವಿರ್ಪ, ಸತ್ಯ ಬಾಹಿರವಿರ್ಪ, ನ್ಯಾಯ ಬಾಹಿರವಿರ್ಪ ಸಕಲವನು ಪ್ರತಿಭಟಿಸಿ ಸತ್ಯದ ದಿಗ್ವಿಜಯಕಾಗಿಯೇ ಬಿಡುವಿಲ್ಲದೆಲೆ ಹೆಣಗಾಡುವನಯ್ಯ. ಇದುವೇ ಆತಗೆ ಅಲ್ಲಗಳೆಯಲಸಾಧ್ಯವಿಹ ಆದ್ಯ ಕರ್ತವ್ಯ ಕಾಣಾ ಭಾರತಭಾಗ್ಯವಿಧಾತ.

೩೫. ಸ್ವತಃ ಸತ್ಯದಾಗ್ರಹ ಪಿಡಿದು ಸತ್ಯಕೊಗ್ಗುವ ದಿವ್ಯ ಸಾಧನಗಳಿಂದೆ ಅಧರ್ಮವನು ಪ್ರತಿಭಟಿಸೆ ಅದುವೇ ಸತ್ಯಾಗ್ರಹ. ಅದುವೇ ದಿವ್ಯ ಸಾಧನ. ಅದುವೇ ಉತ್ತಮೋತ್ತಮ ಮೋಕ್ಷ ಪಥವೆಂಬೆನಯ್ಯ ಭಾರತ ಭಾಗ್ಯವಿಧಾತ.

೩೬. ನಿಷ್ಕ್ರಿಯ ಪ್ರತಿಭಟನೆ ಸತ್ಯಾಗ್ರಹಗಳಲಿ ಅಜಗಜಾಂತರ ವ್ಯತ್ಯಾಸವಿಹುದಯ್ಯ ದಕ್ಷಿಣೋತ್ತರ ಧ್ರುವಗಳಂತೆ. ನಿಷ್ಕ್ರಿಯ ಪ್ರತಿಭಟನೆ ನಿರ್ಬಲರ ಸಾಧನವಯ್ಯ. ಕಾರ್ಯಸಾಧನೆಗಾಗಿ ಕಾಯಕ ಹಿಂಸೆಯ ನಿಷೇದವೆಂಬುವುದಿಲ್ಲ ಈ ಉಪಾಯದೊಳಗೆ. ಸತ್ಯಾಗ್ರಹವೆಂಬುವುದು ಧೀರತಮ ಬಲಾಢ್ಯರ ಅತಿ ಉಚ್ಚ ಶಸ್ತ್ರ ಮೂಗಿದೊರ್ಡೆಯೂ ಇದರೊಳಗೆ ಏತೆರದ ಹಿಂಸೆಗೂ ಲವಲೇಶ ಎಡೆ ಇಲ್ಲವಯ್ಯ ಭಾರತ ಭಾಗ್ಯವಿಧಾತ.

೩೭. ಸತ್ಯವನೆ ಹಂಬಲಿಸಿ ಹುಡುಕುತಿಹ ಹೊತ್ತಿನಲಿ ಮೊತ್ತ ಮೊದಲೊಳೆ ವಿರೋಧಿಯನು ಹಿಂಸೆಯಿಂ ಪೀಡಿಪುದು ಸಲ್ಲದೆಂಬುದನೆ ಮನಗಂಡೆನಯ್ಯ. ಒಲ್ಮೆಯಿಂ ತಾಳ್ಮೆಯಿಂ ಪೂರ್ಣ ಸಹಾನುಭೂತಿಯನೆ ತೋರಿ ವೈರಿಯನವನಪ್ಪಿದ ತಪ್ಪಿನಿಂ ತಪ್ಪಿಪುದೆ ಸತ್ಯಾಗ್ರಹದ ಪಂಥವಯ್ಯ ಭಾರತ ಭಾಗ್ಯವಿಧಾತ.

೩೮. ತಾಳ್ಮೆ ಎಂದೊಡೆ ದುರಿತ ಸಂಕಟಗಳನೆಲ್ಲ ತನಗೆ ತಾನೇ ಸಹಿಪುದಯ್ಯ. ಕಕ್ಷಿಯನು ಶಿಕ್ಷಿಸದೆ, ಬವಣೆ ಬೇನೆಗಳ ಹೊರೆ ತಾನೇ ಹೊತ್ತಿರುತ ಸತ್ಯವನೆ ಶ್ರುತ ಪಡಿಪ ಕಾರ್ಯವನೆ ಸತ್ಯಾಗ್ರಹವೆಂಬೆನಯ್ಯ.

೩೯. ಕಾರ್ಯವನು ಸಾಧಿಸಲು ಸೌಂದರ್ಯಮಯ ಸತ್ಯಾಗ್ರಹಕಿಂತ ಮಿಗಿಲಾದುದನು ನಾ ಕಾಣೆನಯ್ಯ. ಅಡಕವಾಗಿರುವ ತತ್ವವದು ಅತಿ ಸರಳಮಾಗಿರ್ದು ಕಿರಿಯರ್ಗು ಸಫಲದಿಂ ಬೋಧಿಸಲಕ್ಕು ಭಾರತ ಭಾಗ್ಯವಿಧಾತ.

೪೦. ಸತ್ಯಾಗ್ರಹದ ಮೂಲ ತತ್ವವದು ಸತ್ಯವನೆ ದೃಢ-ಮುಷ್ಟಿಯಿಂ ಹಿಡಿಯುವುದೆಂಬನಯ್ಯ. ಇಂತಿರಲು ಸತ್ಯಾಗ್ರಹವ ಸತ್ಯಬಲವೆನಲೂ ಬಹುದು. ಇದನೇ ಪ್ರೇಮಬಲ ಮೇಣ್ ಆತ್ಮಬಲಗಳೆಂಬ ಅಂಕಿತದಿಂ ತಿಳಿದು ಅರುಹಿಹೆನು ಭಾರತ ಭಾಗ್ಯವಿಧಾತ.

೪೧. ಆತ್ಮಬಲವದು ತಾನೆ ಜೀವಿಕೋಟಿಗಳಲೆಲ್ಲ ಕಿರೀಟದ ತೆರದೆ ಉಚ್ಛನಿಹ ಮನುಜನಿಗೆ ಯುಕ್ತವಾದುದಯ್ಯ. ಪಶುಬಲ ಆತ್ಮಬಲಗಳಲಿ ಬಹು ತರದ ವ್ಯತ್ಯಾಸ ನೋಡಾ. ದುರ್ಬಲರ ನಿರಂಕುಶ ಸ್ವೇಚ್ಛೆಯಿಂ ಪೀಡಿಸುತ ಹೆಚ್ಚಿನ ಬಲಾಢ್ಯರನು ಬೆಚ್ಚಿ ಬೆದರುವುದೇ ಪಶುಬಲದ ತೆರವಯ್ಯ. ಬಲಹೀನರನು, ದೀನರನು ಮಮತೆಯಿಂ ಕಾಪಾಡಿ ಉದ್ಧಟದ ವಿಕ್ರಮಕೆ ಮಣಿಯದಿರ್ಪುದೆ ಆತ್ಮಬಲದ ದಿವ್ಯ ರೀತಿ ಕಾಣಾ ಭಾರತ ಭಾಗ್ಯವಿಧಾತ.

೪೨. ಅಹಿಂಸೆಯೇ ಸತ್ಯಾಗ್ರಹದ ಅಡಿಕಲ್ಲು, ಅಸ್ತಿವಾರ ಎಲ್ಲ. ಸತ್ಯ ಅಹಿಂಸೆಗಳು ಒಂದೇ ನಾಣ್ಯದ ಇಕ್ಕೆಲಗಳ ತೆರದೆ ಸತಾನವಿಹ ಪರಮಾತ್ಮ ಪರವಸ್ತುವಿನ ಇಕ್ಕೆಲಗಳೆಂದೆ ಭಾವಿಪೆನಯ್ಯ ಭಾರತ ಭಾಗ್ಯವಿಧಾತ.

೪೩. ಅಹಿಂಸೆಯನು ಅಗಾಧ ಪ್ರೇಮವೆಂಬೆನಯ್ಯ. ಅದುವೇ ಶ್ರೇಷ್ಟತಮ ನೀತಿನಿಯಮ. ತೊಳಲಿ ಬಳಲಿ ಅಳಿಗಾಲವನೇ ಕರೆಯುತಿಹ ಮಾನವ ಕುಲವ ಉಳಿಸಲು ಅಹಿಂಸೆಯೇ ಏಕಮಾತ್ರ ಸಾಧನವಯ್ಯ ಭಾರತ ಭಾಗ್ಯವಿಧಾತ.

೪೪. ಅಹಿಂಸೆಯದು ಬರಿಯ ಆಚರಣೆಗಿರಿಸಿದ ಕಟ್ಟುಕಟ್ಟಲೆಯಲ್ಲವಯ್ಯ. ಬಾಯಿ ಮಾತುಗಳಿಂದ ಅಹಿಂಸೆಯನು ಬೋಧಿಸಲು ಅಸಾಧ್ಯವಯ್ಯ. ಯೋಗ್ಯ ಶಿಸ್ತುಗಳಿಂದ ಶ್ರದ್ಧೆ ಪ್ರಾರ್ಥನೆಗಳಿಂದ ಅಹಿಂಸೆಯದು ಹೃದಯದಲಿ ಒಡ ಮೂಡುವುದಯ್ಯ. ಇದನು ಮನಸಿನ ಅತಿ ಮೇಲ್ತರದ ಸ್ಥಿತಿಯೆನಲೂ ಬಹುದು. ಅಂತರಾಳದೊಳಗೂ ದ್ವೇಷದ ವಾಸನೆಯು ಸುಳಿವಿಲ್ಲದೆ ಒಲ್ಮೆಯದೆ ಚಿಲುಮೆಯಾಗಿಹ ಮನಸಿನ ವೃತ್ತಿಯನು ಅಹಿಂಸೆಯೆಂಬೆನಯ್ಯ ಭಾರತ ಭಾಗ್ಯವಿಧಾತ.

(ಮುಂದರಿವುದು) "ದಾಮೋದರ"

ಮೋಟಾರು ಪ್ರಯಾಣಿಕರ ಸೌಕರ್ಯಕ್ಕಾಗಿ ಹಂಪನಕಟ್ಟೆಯ ಬಸ್‌ಸ್ಟೆಂಡ್ ಬಳಿ ಒಂದು ಹಂಗಾಮಿ ಕಟ್ಟಡವು ರಚಿಸಲಾಗುವುದು. ನಗರ ಸಭೆಯವರು ತಮ್ಮ ಪಾಲಿನ ಸಹಾಯ ಧನವನ್ನು ಮಂಜೂರುಮಾಡಿರುವರು. ಪ್ರಯಾಣಿಕರು ಈ ಕಟ್ಟಡದಲ್ಲಿ ದೀರ್ಘಕಾಲ ಆಶ್ರಯ ತೆಗೆದುಕೊಳ್ಳುವಂತಾಗದಂತೆ ಮೋಟಾರು ಸಂಸ್ಥೆಯವರೂ ಸುವ್ಯವಸ್ಥೆಮಾಡಿದರೆ ಮತ್ತು ಸರಕಾರದವರೂ ಅತ್ಯಾವಶ್ಯವಿರುವ ವಾಹನೋಪಕರಣಗಳನ್ನೂ ಒದಗಿಸಿಕೊಟ್ಟರೆ ಸಾರ್ವಜನಿಕ ಪ್ರಯಾಣಕ್ಕೆ ಮಹದುಪಕರವಾಗುವುದು.

ಈ ವಿಷಯವಾಗಿ ಆಗಲೇ ನಗರ ಸಭೆಯಲ್ಲಿ ಚರ್ಚೆಗೆ ಬಂದಿದೆ. ನಗರದ ಸಿಟಿಬಸ್ ಸರ್ವಿಸ್‌ನವರಿಗೆ ತಮ್ಮ ಪ್ರಯಾಣಿಕರಿಗೆ ಸಾಕಷ್ಟು ಸೌಕರ್ಯ ದೊರಕಿಸಿಕೊಡಲು ಕಷ್ಟವಾಗುತ್ತಿರುವುದರಿಂದ ಅದನ್ನು ತೃಪ್ತಿಕರವಾಗಿ ನಿರ್ವಹಿಸಲೊಪ್ಪುವ ಇತರ ಮೋಟಾರು ಕಂಪೆನಿಗಳಿಗೆ ಪ್ರೋತ್ಸಾಹಕೊಡಬೇಕೆಂದೂ ಇಲ್ಲವೆ ನಗರಸಭೆಯವರೇ ಅಂಥಹದೊಂದನ್ನು ನಡೆಸಲು ಪ್ರಯತ್ನಿಸಬೇಕೆಂದೂ ಸೂಚಿಸುವ ಠರಾವೊಂದು ನಗರ ಸಭೆಯ ಕಳೆದ ಮೀಟಿಂಗಿನಲ್ಲಿ ಮಂಡಿಸಲಾಯಿತು. ಇದನ್ನು ಪ್ರತ್ಯೇಕ ಸಮಿತಿಯೊಂದಕ್ಕೆ ವಿಮರ್ಶೆಗೆ ಒಪ್ಪಿಸಲಾಗಿದೆ. ಈ ಕಾಲದಲ್ಲಿ ಸರ್ವತೋಮುಖ ಸಾರ್ವಜನಿಕ ತೃಪ್ತಿಯನ್ನುಮಾಡುವುದು ಸರಕಾರಕ್ಕೂ ಹೆಚ್ಚು ಮಟ್ಟಿನ ಕಷ್ಟದ ಕೆಲಸವೆಂದು ಕಂಡುಬಂದಿದೆ. ಪ್ರಾಂತ್ಯದ ಮುನ್ಸಿಪಲ್ ಸಭೆಗಳಿಗೆ ನಗರ ಶುಚಿತ್ವಕ್ಕೆ ಅತ್ಯಾವಶ್ಯಕವಿರುವ ಮೋಟಾರು ವಾಹನಗಳೇ ಸಿಗದಿರುವಾಗ ಈ ಸೂಚನೆಯು ಹೆಚ್ಚು ಪರ್ಯಾಲೋಚಿಸಬೇಕಾಗಿದೆ.

ಕಳೆದ ಆದಿತ್ಯವಾರದಂದು ನಗರದ ಅನೇಕ ಕಡೆಗಳಲ್ಲಿ ಬೇರೆ ಬೇರೆ ಚಟುವಟಿಕೆ ವಿಭಾಗಗಳಿಗೆ ಸೇರಿದ ವಿವಿಧ ಕಾರ್ಯಕ್ರಮಗಳು ಜರಗಿದವು. ಬೆಸೆಂಟ್ ಶಾಲೆಯಲ್ಲಿ ಹಿಂದೂಸ್ಥಾನ್ ಸ್ಕೌಟ್ ಸಂಘದ ಸಮ್ಮೇಲನ; ಗಣಪತಿ ಶಾಲೆಯಲ್ಲಿ ಪ್ರಕಾಶ್ ಸಂಘ ಎಂಬವರ ವಾರ್ಷಿಕೋತ್ಸವ. ಸ್ಕೌಟ್ ಪ್ರದರ್ಶನದಲ್ಲಿ ಡಾ। ಎಂ. ಕೇಶವ ಪೈಗಳು ಅಧ್ಯಕ್ಷರಾಗಿದ್ದರು. ಪ್ರಕಾಶ ಕೂಟದಲ್ಲಿ ಡಾ। ಯು. ಪಿ. ಮಲ್ಯರು ಅಗ್ರಾಸನ ವಹಿಸಿದ್ದರು. ಒಂದರಲ್ಲಿ ಸ್ಕೌಟ್ ನೀತಿ ಧ್ಯೇಯಗಳ ಇನ್ನೊಂದರಲ್ಲಿ ಸಾಹಿತ್ಯ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಪ್ರಗತಿ ಪ್ರಚೋದನೆ ಸೇವಾ ಮಾರ್ಗಗಳ ಕುರಿತು ಪ್ರತಿಪಾದನೆ, ಭಾಷಣಗಳಾದವು. ಜಿಲ್ಲೆಯಲ್ಲಿ ಈಚೇಗೆ ಈ ವಿವಿಧ ವಿನೋದಾವಳಿಗಳ ಕಾರ್ಯಕ್ರಮಗಳು ಬಹಳವಾಗಿ ನಡೆಯುತ್ತವೆ. ಅನೇಕ ಸಂದರ್ಭಗಳಲ್ಲಿ ಇಂತಹ ಕಾರ್ಯಕ್ರಮಗಳ ಪ್ರಧಾನಾಂಶವು ಚಿಕ್ಕ ಹಾಸ್ಯ ನಾಟಕಗಳಿಂದಲೇ ಕೂಡಿರುತ್ತವೆ. ಇಂತಹ ನಾಟಕಗಳು ಶೈಕ್ಷಣೀಕ ದೃಷ್ಟಿಯವಿದೆಯಾದರೂ ಅವುಗಳಲ್ಲಿ ವೈವಿಧ್ಯತೆಯನ್ನು ಕಲ್ಪಿಸಿ, ಪೌರಾಣಿಕ, ಐತಿಹಾಸಿಕ ಮತ್ತು ಅನೇಕ ಇತರ ನಾಟ್ಯರಸಭಾವ ಪ್ರಧಾನವಾದ ನಾಟಕಗಳನ್ನು ಪ್ರದರ್ಶಿಸಲು ಸಾಹಸಪಟ್ಟರೆ ಯುವಕರ ನಟನಾ ಚಾತುರ್ಯಕ್ಕೂ, ಸಂಗೀತ ನಾಟ್ಯ ಕಲಾಬುದ್ಧಿಶಕ್ತಿಗೂ ಮಾತ್ರವಲ್ಲ ಕನ್ನಡ ಸಾಹಿತ್ಯಕ್ಕೂ ಪ್ರೋತ್ಸಾಹ, ಉತ್ತೇಜನಕೊಟ್ಟಂತಾಗಿ, ಸಾರ್ವಜನಿಕರಲ್ಲೂ ಗಂಭೀರ ವಿಚಾರವು ಪ್ರಚೋಧನೆ ಮಾಡಿದಂತೆಯೂ ಆಗುವುದು. ಶಾಲಾ ವಿದ್ಯಾರ್ಥಿಗಳು ಸ್ಕೌಟ್ ಆಟ ನಾಟಕಗಳಲ್ಲಿ ಮಾತ್ರವಲ್ಲ ತಮ್ಮ ಸುತ್ತುಮುತ್ತಿನ ಪ್ರದೇಶದ ಅನೇಕಾನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗ ವಹಿಸಿದಂತಾಗಬೇಕು. ಮುಖ್ಯವಾಗಿ ಅವರ ರಜಾ ದಿನಗಳಲ್ಲಿ ಈ ಕೆಲಸವನ್ನು ಮಾಡಿದರೆ ಸ್ಕೌಟ್ ಧ್ಯೇಯಕ್ಕೆ ಹೆಚ್ಚಿನ ಮಹತ್ವ ಬರುವುದು.

ನಗರದಲ್ಲಿ, ಅಂದರೆ ಗೋಳಿಕಟ್ಟೆ ವಾರ್ಡಿನ ಬಳಿ ಪ್ಲೇಗಿನ ಇಲಿ ಬಿದ್ದಿತಾಗಿ ಸುದ್ದಿ. ನಾಗರೀಕರು ತಮ್ಮ ವಸತಿ ಸ್ಥಾನದ ವಠಾರಗಳನ್ನು ಶಕ್ಯವಿದ್ದಷ್ಟು ಸ್ವಚ್ಛವಾಗಿರಿಸಲು ಪ್ರಯತ್ನಿಸುವುದು ಅವಶ್ಯವಿದೆ. ಆಸುಪಾಸಿನಲ್ಲಿ ವಿಪರೀತ ಕೆಸರುಕೊಂಪೆಗಳಿದ್ದು, ಬೆಳಕು ಗಾಳಿಯ ಸರಿಯಾದ ಸಂಚಾರದ ಏರ್ಪಾಡುಗಳಿಲ್ಲದ ವಸತಿ ಗೃಹಗಳಲ್ಲಿ ಈ ಸಾಂಕ್ರಾಮಿಕ ವ್ಯಾಧಿಗಳು ಬಲು ಬೇಗನೆ ಉದ್ಭವಿಸುವುದರಿಂದ ಅಂತಹ ಪ್ರದೇಶದವರು ಆರೋಗ್ಯ ಇಲಾಖೆಯವರ ಸಹಾಯದಿಂದ ಯೋಗ್ಯ ನಿರ್ಮಲತ್ವವನ್ನುಂಟುಮಾಡುವುದೊಳಿತು.

ಕೆಲವು ದಿನಗಳ ಹಿಂದೆ ನಗರದಲ್ಲಿ ಹರಿಜನರ ಸಾರ್ವಜನಿಕ ಸಭೆಯೊಂದು ಸೇರಿ ತಮ್ಮ ಸಮಾಜದವರಿಗುಂಟಾದ ಹಲವು ಕಷ್ಟಸಂಕಷ್ಟಗಳನ್ನು ನಿವಾರಿಸುವ ಕುರಿತು ಪರ್ಯಾಲೋಚಿಸಿದರು. ಹಿಂದುಳಿದ ಈ ಜನರಿಗೆ ನಾಗರೀಕ ಸಮಾಜದಲ್ಲಿ ಸಮಾನ ಸಂದರ್ಭಾನುಕೂಲತೆಗಳನ್ನು ಒದಗಿಸಿಕೊಡುವುದು ಸರಕಾರ ಮತ್ತು ಸಾರ್ವಜನಿಕರ ಪ್ರಾಮುಖ್ಯ ಕರ್ತವ್ಯವಾಗಿದೆ. ಹರಿಜನರಿಗೆ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸವೂ, ಆಡಳಿತ ನಿರ್ವಹಣಾಮಂಡಳದಲ್ಲಿ ಪ್ರಾತಿನಿಧ್ಯವೂ ದೊರಕಿರುವುದಿಲ್ಲವೆಂಬ ಸಂಗತಿಯು ಅಂದಿನ ಸಭೆಯಲ್ಲಾದ ನಿರ್ಣಯಗಳಿಂದ ತಿಳಿದುಬಂತು. ದೇಶ ಮುಖಂಡರು, ರಾಷ್ಟ್ರೀಯ ಮುಂದಾಳುಗಳು ಬಂಧನದಲ್ಲಿರದೆ ಕೊಂಗ್ರೆಸ್ ಸಂಸ್ಥೆಯು ತೊಡಕಿಲ್ಲದೆ ಕಾರ್ಯ ನಿರ್ವಹಿಸುವಂತಿರುತಿದ್ದರೆ ಹರಿಜನರ ಬಹುತೇಕ ಸಂಕಷ್ಟಗಳು ಪರಿಹಾರವಾಗುತಿದ್ದುವು. ಸಮಾಜದ ಅಂಧದೃಷ್ಟಿಯನ್ನು ಬದಲಿಸಲೂ ಅವರು ತುಂಬಾ ಪ್ರಯತ್ನಿಸುತಿದ್ದರು.

ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮೂರ್ಖಸನ್ಯಾಸಿಯ ಗಲಾಟೆ

ರೈಲ್ವೇ ಸ್ಟೇಶನಿನಲ್ಲಿ ದುರ್ಮರಣ, ಬಾರ್ಕೂರಲ್ಲಿ ಟಪ್ಪಾಲು ವ್ಯವಸ್ಥೆ

ತಾ. ೩ರ ಶನಿವಾರ ಸಂಜೆ ಸುಮಾರು 4½ ಗಂಟೆಗೆ ಇಲ್ಲಿಯ ಸ್ಪೆ। ಸಬ್। ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ತಮ್ಮ ಕೆಲಸದಲ್ಲಿ ಮಗ್ನರಾಗಿ ಕುಳಿತ ಸ್ಪೆ। ಸ। ಮೇಜಿಸ್ಟ್ರೇಟ್ ಶ್ರೀ. ಸೀತಾರಾಮ ಶೆಟ್ಟಿ ಅವರ ಕಡೆಗೆ ಮೂರ್ಖಾನಂದ ಸ್ವಾಮಿ ಎಂಬ ಓರ್ವ ೩೦ ವರ್ಷದ ತರುಣನು ಏಕಾಏಕಿಯಾಗಿ ಉನ್ಮತ್ತಗೊಂಡವನಂತೆ ಹಾಯ್ದು ಬಂದು ಮೆಜಿಸ್ಟ್ರೇಟರನ್ನು ಕೈಯಲ್ಲಿದ್ದ ಹೂಜಿಯೊಂದರಿಂದ ಹೊಡೆಯಲು ಪ್ರಯತ್ನಪಟ್ಟನು. ಆದರೆ ಪ್ರಸಂಗಾವಧಾನದ ಸ್ಥೈರ್ಯದಿಂದ ಮೇಜಿಸ್ಟ್ರೇಟರು ಅವನನ್ನು ಹಿಂದಕ್ಕೆ ತಳ್ಳಿದ ಪರಿಣಾಮವಾಗಿ ಸ್ವಾಮಿಯು ನೆಲಕ್ಕಪ್ಪಳಿಸಲ್ಪಟ್ಟನಂತೆ. ಇಷ್ಟರಲ್ಲಿ ಕೋರ್ಟಿನಲ್ಲಿ ಹಾಜರಿದ್ದ ಇನ್ಸ್‌ಪೆಕ್ಟರ್ ಮೊದಲಾದ ಪೋಲಿಸ್ ಅಧಿಕಾರಿಗಳು ಅವನನ್ನು ಬಂಧಿಸಿದರು. ಈಗ ಅವನು ರಿಮಾಂಡಿನಲ್ಲಿಡಲ್ಪಟ್ಟಿದ್ದಾನೆ. ಮೂರ್ಖಾನಂದನೆಂಬ ಹೆಸರಿಗೆ ತಕ್ಕಂತೇ ಈ ಪಂಜಾಬಿಯ ಬುದ್ಧಿಯೂ ಭ್ರಮಣಗೊಂಡಿರಬಹುದು– ಸನ್ಯಾಸಿ ಜೀವನ ನಡೆಸುತಿದ್ದನಂತೆ. ದೇಹ ಬೆಳವಣಿಗೆ ಬಲದಲ್ಲಿ ಈತ ಚಿಕ್ಕ ಭೀಮಸೇನಂತಿದ್ದಾನಂತೆ. ಹಿಂದೊಮ್ಮೆ ಇಂತಹ ಸಾಹಸದಿಂದಲೇ ಏನೊ ತುರಂಗ ಕಂಡಿದ್ದಾನಂತೆ.

ನಗರದಲ್ಲಿ ಸೈಕಲ್ ವ್ಯಾಪಾರಿಗಳು ತಮ್ಮಲ್ಲಿ ಮಾರಲ್ಪಡುವ ಸೈಕಲ್ ಉಪಕರಣಗಳನ್ನು ವಿಪರೀತ ಬೆಲೆಗೆ ಮಾರಿದರೆ ಅತೀ ಲಾಭತನದ ತಪ್ಪಿಗಾಗಿ ಶಿಕ್ಷೆಗೆ ಗುರಿಮಾಡಲಾಗುವುದೆಂದು ಕಮ್ಮರ್ಶಿಯಲ್ ಟೇಕ್ಸ್ ಆಫೀಸರರು ತಿಳಿಸಿದ್ದಾರೆ. ೩ಪೈ ಬೆಲೆ ಬಾಳುವ ವಾಲ್‌ಟ್ಯೂಬ್‌ಗಳನ್ನು 1½ ಆಣೆ 2 ಆಣೆಗೆ ಮಾರಿದ ನಿದರ್ಶನಗಳು ಗಮನಕ್ಕೆ ಬಂದಿವೆಯಂತೆ.

ಅಕ್ಕಿ ರೇಶನಿನ ಭಾಗವಾಗಿ ಅವಲಕ್ಕಿಯನ್ನು ಕೊಡುವಂತೇರ್ಪಡಿಸಲಾಗುವುದಿಲ್ಲವೆಂದೂ, ಪ್ರತಿ ವರ್ಷ ನಮ್ಮ ಜಿಲ್ಲೆಗೆ ಆರೇಳು ಲಕ್ಷ ಮುಡಿ ಅಕ್ಕಿ ಕಮ್ಮಿಬೀಳುವುದರಿಂದ ಅದನ್ನು ಹೊರಗಿನಿಂದ ತರಿಸದೆ ನಿವೃತ್ತಿಯಿಲ್ಲವೆಂಬ ಈ ಸಂಗತಿಗಳು ಜಿಲ್ಲಾ ಫುಡ್ ಕೌನ್ಸಿಲಿನ ಸಭೆಯಲ್ಲಿ ತಿಳಿದು ಬಂದವು.

ಮಂಗಳೂರಿಗೆ 'ಜನರಲ್ ಹೆಡ್ ಕ್ವಾರ್ಟರ್ಸ್ ಟೂರಿಂಗ್' ಟೀಮ್ ಎಂಬ ಸೈನ್ಯ ಭರ್ತಿ ಪ್ರಚಾರಾಂಗದವರು ಬಂದಿದ್ದು ಕೊಲೇಜಿನಲ್ಲಿ ಭಾಷಣಗಳನ್ನೂ, ಮಾಡಿ ಇಲ್ಲಿನ ಕೆಲ ಸಿನೇಮಾ ಮಂದಿರಗಳಲ್ಲಿ ಸೈನ್ಯ ಚಟುವಟಿಕೆಯ ಚಲಚಿತ್ರಗಳನ್ನು ಪ್ರದರ್ಶಿಸಿದರು.

ದ. ಕನ್ನಡ ಜಿಲ್ಲೆಯ ಯಾವ ಭಾಗದಿಂದಾದರೂ ಎಳ್ಳಿನಬೀಜವನ್ನು ಜಿಲ್ಲೆಯ ಹೊರ ಪ್ರದೇಶಕ್ಕೆ ಕಲೆಕ್ಟರರ ಪರ್ಮಿಟ್ ಇಲ್ಲದೆ ಹೊರಸಾಗಿಸಬಾರದೆಂದೂ, ಈ ಆಜ್ಞೆಯನ್ನು ಉಲ್ಲಂಘಿಸಿದವರು ಶಿಕ್ಷಾರ್ಹರಾಗುವರೆಂದೂ ಕಲೆಕ್ಟರರ ಒಂದು ಪ್ರಕಟನೆ ತಿಳಿಸುತ್ತದೆ. ಈ ಹುಕುಂ ತಾ. ೧೧ರಿಂದ ಜಾರಿಗೆ ಬರುತ್ತದೆ.

ಕೆಲವು ಸಾಗುವಳಿದಾರರು ಆಗಲೇ ಸುಗ್ಗಿ ಅಕ್ಕಿಯನ್ನು ಸ್ಟೋರ್ರುಗಳಿಗೊಪ್ಪಿಸಲು ತಂದಿದ್ದುದರಿಂದ, ಮತ್ತು ಸುಗ್ಗಿ ಅಕ್ಕಿಯ ಕುರಿತು ಕಲೆಕ್ಟರರು ಯಾವ ಅವಧಿ ನಿಯಮವನ್ನು ಪ್ರಕಟಿಸಿಲ್ಲವಾದುದರಿಂದಲೂ ಮಾರ್ಚ್ ತಿಂಗಳ ಆಖೇರು ತನಕ ಈ ಸುಗ್ಗಿ ಅಕ್ಕಿಯನ್ನು ಸ್ಟೋರ್ರುಗಳಲ್ಲಿ ತೆಗೆದುಕೊಳ್ಳಬಾರದೆಂದು ದ. ಕ. ಸೆಂಟ್ರಲ್ ಸಹಕಾರಿ ರಖಂ ಸ್ಟೋರ್ಸಿನ ಶ್ರೀ. ಮಳಹಳ್ಳಿ ಶಿವರಾಯರು ತಿಳಿಸಿರುವರು. ಕಲೆಕ್ಟರರೂ ಇದಕ್ಕೆ ಸಮ್ಮತಿಕೊಟ್ಟಿರುವರಂತೆ. ಕಾರಣ ಈಗಲೇ ತರಲ್ಪಡುವ ಈ ಸುಗ್ಗಿ ಅಕ್ಕಿಯು ಅವಸರದಲ್ಲಿ ತಯಾರಿಸಲ್ಪಡುವುದರಿಂದ ಇದು ಉಪಯೋಗಕ್ಕೆ ತುಂಬಾ ಕೆಡುಕು ಬರುತ್ತದೆ.

ತಾ. ೫ರಲ್ಲಿ ಮುನ್ಸಿಪಲ್ ಸಭೆ ಸೇರಿತ್ತು. ಪ್ರಾಯಭರಿತರಿಗೆ ಅರ್ಧ ಸೇರಿನ ರೇಶನ್ ಸಿಗಬೇಕೆಂದೂ, ಅವಲಕ್ಕಿಯನ್ನು ರೇಶನಿನೊಂದಿಗೆ ಸೇರಿಸಬಾರದೆಂದೂ ವಿನಂತಿಸುವ ಠರಾವು ಪಾಸಾದವು. ಬಂಟರ ಹೆಣ್ಣು ಮಕ್ಕಳ ಹೊಸ್ಟೆಲಿಗಾಗಿ ಕೇಳಲ್ಪಟ್ಟ ೪ ಎಕ್ರೆ ಸ್ಥಳವನ್ನು ಕೊಡಲು ಆಕ್ಷೇಪವಿಲ್ಲವೆಂದಾಯಿತು. ಮಂಗಳೂರಲ್ಲಿ ನೀರಿನ ಸರಬರಾಯಿಯ ಕುರಿತು ಪರ್ಯಾಲೋಚನೆಯಾಗುತ್ತಿದೆ. ಇದರ ಕುರಿತು ಸರಿಯಾದ ಅಂಕೆಸಂಕೆಗಳ ಅನ್ವೇಷಣ ಕಾರ್ಯ ನಡೆಸಲು ನಗರ ಸಭೆಯವರು ರೂ. ೫ ಸಾವಿರವನ್ನು ಮಂಜೂರು ಮಾಡಿರುವರು.

ಪೆಂಟ್ಲೆಂಡ್ ಪೇಟ್ ಸ್ಪೋರ್ಟ್ಸ್ ಎಸೋಸಿಯೆಶನ್ ಇದರ ಮುನ್ಸಿಪಲ್ ಚೇಯರ್ಮೇನರ ಅಧ್ಯಕ್ಷತೆಯಲ್ಲೂ, ಮೋಗವೀರ ಸ್ಟೂಡೆಂಟ್ಸ್ ಯೂನಿಯನ್ನಿನ ವಾರ್ಷಿಕೋತ್ಸವ ಡಾ। ಯನ್. ಚಂಪ ಇವರ ಅಧ್ಯಕ್ಷತೆಯಲ್ಲೂ ತಾ. ೧೧ರಂದು ಜರಗುವವು.

ವಕೀಲ್ ಶ್ರೀ. ಜಿ. ಸೋಮಶೇಖರ ರಾವ್ ಅವರು ಸೈಂಟ್ ಎಲೋಶಿಯಸ್ ಕೊಲೇಜಿನಲ್ಲಿ 'ಹಿಂದೂ ಕಾನೂನಿನಂತೆ ಮಹಿಳೆಯರ ಹಕ್ಕು ಬಾಧ್ಯತೆ' ಎಂಬ ವಿಷಯದ ಕುರಿತು ಯುನಿವರ್ಸಿಟಿ ಎಕ್ಸಟೆನ್ಶನ್ ಭಾಷಣವನ್ನುಕೊಟ್ಟರು. ೧೯೪೬ರಲ್ಲಿ ಜಾರಿಗೆ ಬರಲಿರುವ ಹೊಸ ಹಿಂದೂ ಸಮಾಜ ನ್ಯಾಯ ಶಾಸನದ ಕುರಿತು ಇತರ ವೇದ ವಿದ್ಯಾಪಂಡಿತರೂ ಚರ್ಚಾಸಭೆಗಳನ್ನೇರ್ಪಡಿಸಿ ಸಾರ್ವಜನಿಕರಿಗೆ ಒಂದು ನಿರ್ದಿಷ್ಟ ಮಾರ್ಗವನ್ನು ತೋರಿಸಲು ಸಹಾಯಮಾಡಬಹುದು.

ದ. ಕ. ಕಸ್ತೂರ್ ಬಾ ಸ್ಮಾರಕ ಸಮಿತಿಯ ವತಿಯಿಂದ ಜಿಲ್ಲೆಯಲ್ಲಿ ಒಂದು ಹೆರಿಗೆ ಆಸ್ಪತ್ರೆಯೂ, ಹಲವಾರು ಮೂಲ ಶಿಕ್ಷಣ ಶಾಲೆಗಳೂ, ವಾಚನಾಲಯಗಳೂ ತೆರೆಯಲ್ಪಡಲಿರುವುವೆಂದು ನಿರ್ಣಯವಾಗಿದೆ. ರಚನಾತ್ಮಕ ಚಟುವಟಿಕೆಗಳನ್ನು ವಿಕಾಸಗೊಳಿಸಲೂ ಪ್ರಯತ್ನಗಳಾಗಬೇಕಾದುದೂ ಅತ್ಯಾವಶ್ಯಕ.

ಮಂಗಳೂರು ರೆಲ್ವೇ ಸ್ಟೇಶನಿನಲ್ಲಿ ಒಂದು ದುರ್ಮರಣ ಸಂಭವಿಸಿದೆ. ಸುಮಾರು ೨೦ ವರ್ಷ ಪ್ರಾಯದ ಓರ್ವ ತರುಣನು ಗೂಡ್ಸ್ ರೈಲು ಗಾಡಿಗಳಡಿಯಲ್ಲಿ ಬಿದ್ದಿದ್ದು ಜರ್ಜರಿತವಾಗಿ ತುಂಡುತುಂಡಾದ ಅವನ ಶವವು ತಾ. ೬ರಂದು ಬೆಳಿಗ್ಗೆ ನೋಡ ಸಿಕ್ಕಿತು. ಅವನ ಜಾತಿ, ಪತ್ತೆ ಘಟನೆಯ ಕಾರಣ ಇವುಗಳು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಅಘಘಾತವೊ ಆತ್ಮ ಹತ್ಯವೊ ಎಂಬುದೂ ತಿಳಿದಿಲ್ಲ. ರಾತ್ರೆ ಕಾಲದಲ್ಲಿ ರೆಲ್ವೇ ಕಂಬಿಗಳ ಬಳಿ ಸಂಚರಿಸುವಾಗ ಜಾಗರೂಕತೆಯಿಂದಿರುವುದು ಒಳಿತು.

ಎಕ್ಸೈಸ್ ಶಾಖೆಯ ನೌಕರರೊಬ್ಬರನ್ನು ತನಿಖೆಗೆ ಬಂದ ಸಮಯದಲ್ಲಿ ಹೊಡೆದನೆಂಬ ಆಪಾದನೆಯಲ್ಲಿ ವಿಚಾರಣೆಗೊಳಗಾದ ಮಳವೂರು ಗ್ರಾಮದ ಅಲ್ಫಾನ್ಸ್ ಸೋಜ ಎಂಬವನಿಗೆ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರು ೮ ತಿಂಗಳ ಶಿಕ್ಷೆಕೊಟ್ಟಿರುವರು. ಸೈರಣೆಯಲ್ಲಿ ಸುಖವಿದೆ.

ಜಿಲ್ಲೆಯಲ್ಲಿ ಯಕ್ಷಗಾನ ಅರ್ಥಗಾರಿಕೆಯಲ್ಲಿ ಯಕ್ಷಗಾನ ಚಾತುರ್ಯರೆಂಬ ಬಿರುದು ಪಡೆದು ಪ್ರಖ್ಯಾತರಾದ ಶ್ರೀ. ಅರ್ಕುಳ ಸುಬ್ರಾಯಾಚಾರಿ ಅವರು ಕಳೆದ ಶನಿವಾರ ದಿವಂಗತರಾದ ಸಂಗತಿ ವಿಷಾದಕರ. ಈ ಕಾವ್ಯ ವಾಚನ ವಿದ್ವಾಂಸರ ಆತ್ಮಕ್ಕೆ ಶಾಂತಿ ಇರಲಿ.

ಊರ ಪ್ರಮುಖರ ವಿನಂತಿ ಮನ್ನಿಸಿ ಅಂಚೆ ಖಾತೆಯವರು ಬಾರಕೂರಿನಲ್ಲಿ ಓರ್ವ ಹೆಚ್ಚಿಗೆ ಟಪ್ಪಾಲ್ ಜವಾನನ್ನು ನೇಮಿಸಿದ್ದಾರೆ. ಪತ್ರ ಬಟವಾಡೆಯನ್ನು ವಾರಕ್ಕೆ ಮೂರಾವರ್ತಿ ಮಾಡಿರುವರು. ಆದರೂ ವಿಳಾಸದಾರರಿಗೆ ಟಪ್ಪಾಲು ಕ್ಲಪ್ತ ಕಾಲದಲ್ಲಿ ತಲುಪುತಿಲ್ಲವೆಂದೂ ಮೇಲಾಧಿಕಾರಿಗಳು ಈ ಕುರಿತು ತಕ್ಕ ವ್ಯವಸ್ಥೆ ನಡೆಸಬೇಕೆಂದೂ ವಿನಂತಿಸುವ ಬಾತ್ಮಿಯನ್ನು ಆ ಕಡೆಯ ಓರ್ವ ಮಹನೀಯರು ಕಳುಹಿಸಿದ್ದಾರೆ. ಹಳ್ಳಿಕಡೆಗಳಲ್ಲಿ ಟಪ್ಪಾಲು ವ್ಯವಸ್ಥೆ ಸರಿಯಾಗಿರುವುದೇ ಅಂಚೆ ಖಾತೆಯ ವ್ಯವಸ್ಥಾನಾ ಪರಿಪೂರ್ಣತೆಯ ಚಿಹ್ನೆ.

ಉಡುಪಿ ಬೋರ್ಡು ಹ್ಯಾಸ್ಕೂಲಿನ ಪೀಪಲ್ಸ್ ಹೋಲ್ ಭವನದ ಸಹಾಯಾರ್ಥಕ್ಕಾಗಿ ಬೊಂಬಾಯಿಯ ಲಲಿತ ಕಲಾ ಕರ್ನಾಟಕ ಸಂಗೀತ ಸಭೆಯವರು ತಾ. ೧೪ರಂದು ರಾತ್ರೆ ೯-೩೦ಕ್ಕೆ ದಾಮೋದರ್ ಥೆಕೆರ್ಸೀ ಹೋಲಿನಲ್ಲಿ 'ಸಂಶಯ ಸಾಮ್ರಾಜ್ಯ'ವೆಂಬ ನಾಟಕವಾಡುವರು. ಅಲ್ಲಿನ ದ. ಕನ್ನಡಿಗರು ಪ್ರೋತ್ಸಾಹಿಸಲಿ.

ಹಂಗರ ಕಟ್ಟೆಯ ಫಿಶರೀಸ್ ಶಾಖೆಯ ಸಬ್-ಇನ್ಸ್‌ಪೆಕ್ಟರರಾಗಿದ್ದ ಶ್ರೀ. ಬೋಳಾರ ಸುಬ್ಬಯ್ಯ ಅವರು ಕೆಲವೇ ದಿನಗಳ ಅಸ್ವಸ್ಥದಿಂದ ದಿವಂಗತರಾದರು.

ಒಂದನೇ ತಾರೀಕಿನಿಂದ ಕುಂಬಳೆಯಲ್ಲಿ ಹೊಸತಾಗಿ ಸಬ್ ಪೋಸ್ಟ್ ಆಫೀಸೊಂದನ್ನು ತೆರೆಯಲಾಗಿದೆ.

ತಾ. ೪ರಂದು ಕುಂಬಳೆಯಲ್ಲಿ ಪ್ರೇಮ ಮೆಡಿಕೆಲ್‌ಹೊಲ್ ಎಂಬ ಆಯುರ್ವೇದ ಚಿಕಿತ್ಸಾಲಯವೊಂದು ತೆರಿಯಲ್ಪಟ್ಟಿದೆ.

ಸ್ವೀಕಾರ

ರಜಕ ಸಂಘ ಮುಂಬಯಿ, ಇದರ 8ನೇ ವಾರ್ಷಿಕ ವರದಿ.

ಅರುಣೋದಯ: ಸಾಹಿತ್ಯ ಪ್ರಕಾಶ ಸಂಘ ಮಂಗಳೂರು, ಇವರ ಮೊದಲ ಕಿರಣ– ಶ್ರೀ. ಎಸ್. ಜಿ. ನಾಯಕ್ ಅವರು ಬರೆದ 9 ಸಣ್ಣ ಕತೆಗಳು–ಸಂಪಾದಕ ಮ. ಸಾಂತಯ್ಯ ಭಟ್. ಬೆಲೆ 6 ಆಣೆ.

ಸಂಕ್ಷೇಪ ಸುದ್ದಿಸಾರ

ಸ್ಟೇಲಿನನು ಜರ್ಮನಿಯೊಡನೆ ರಹಸ್ಯ ಒಪ್ಪಂದ ಮಾಡಿಕೊಂಡಿರುವನೆಂದು ಲಂಡನಿನಲ್ಲಿರುವ ಪೋಲಿಶ್ ಸರಕಾರ ಕಡೆಯವರು ಪ್ರಕಟಿಸಿದ ಊಹಾಪೋಹೆಗಳು ಸುಳ್ಳೆಂದು ಪ್ರತಿಪಾದಿಸಲಾಗಿದೆ.

ಆದರೂ ಮಿತ್ರದಳಗಳು ಜರ್ಮನಿಯನ್ನು ಆಕ್ರಮಿಸಬಾರದೆಂದು ಸ್ಟೇಲೀನರ ಅಭಿಪ್ರಾಯವಿದೆಯಾಗಿ ಸಂಯುಕ್ತ ರಾಷ್ಟ್ರದ ಕೆಲವು ಪತ್ರಿಕೆಗಳು ಬರೆದಿವೆ. ಅವರು ತಾನು ಹಿಡಿದ ಜರ್ಮನಿಯ ಭಾಗಗಳಲ್ಲಿ ಒಂದು ಹಂಗಾಮಿ ಸರಕಾರ ಸ್ಥಾಪಿಸುವರಂತೆ. ರಷ್ಯದಲ್ಲಿ ಕೈಸೆರೆಯಾಗಿ ಹಿಡಿಯಲ್ಪಟ್ಟ ಜರ್ಮನ್ ಸೇನಾಪತಿಗಳೇ ಈ ಸರಕಾರದ ಮಂತ್ರಿಗಳಾಗುವರಂತೆ. ಅಂತೂ ವಾಶಿಂಗ್ಟನ್ನಿನ ಒಂದು ಪತ್ರಿಕೆಯು ತ್ರಿಮೂರ್ತಿಗಳ ಭೇಟಿಯ ಸಂಬಂಧ ಈ ಕೆಳಗಿನ ವಿನೋದ ಕತೆಯನ್ನು ಪ್ರಕಟಿಸಿದೆ:

ರೂಸ್‌ವೆಲ್ಟರು ಹೇಳಿದರಂತೆ: "ನಿನ್ನೆ ರಾತ್ರೆ ನನಗೊಂದು ಸ್ವಪ್ನ ಬಿತ್ತು–ಯುದ್ಧ ನಿಂತು ಜನರು ನನ್ನನ್ನು ಅಂತರ್‌ರಾಷ್ಟ್ರೀಯ ಸಭೆಯ ಅಧ್ಯಕ್ಷನನ್ನಾಗಿ ಮಾಡಿದರು. ಚರ್ಚಿಲ್ಲರೆಂದರಂತೆ: ನಾನೂ ಒಂದು ಸ್ವಪ್ನ ಕಂಡೆ. ನನ್ನನ್ನು ಆ ಸಭೆಯ ಮುಖ್ಯ ಪ್ರಧಾನರಾಗಿ ಆರಿಸಿರುವರಂತೆ.

ಕೊನೆಗೆ ಸ್ಟೇಲೀನರೆಂದರಂತೆ: ಆದರೆ ನನಗಂತಹ ಸ್ವಪ್ನವೊಂದೂ ಬೀಳಲಿಲ್ಲ. ನಿಮ್ಮಿರ್ವರಿಗೆ ಯಾವ ಕೆಲಸಕೊಟ್ಟ ನೆನಪೂ ನನಗಿಲ್ಲ.

ಇದರಿಂದ ಸ್ಟೇಲೀನರಿಗೇ ಜರ್ಮನಿಯ ಮೇಲಾಡಳಿತ ನೋಡಿಕೊಳ್ಳುವ ಮಹದಾಶೆ ಇದೆಯೆಂದು ಅರ್ಥವಾಗುತ್ತದೆ. ಇದುತನಕ ಹಿಡಿದ ದೇಶಗಳಲ್ಲಿ ಸ್ಟೇಲೀನರು ಅನುಸರಿಸಿದ ಧೋರಣೆಯಾದರೂ ಅದೇ ತರವಾಗಿದೆ.

ಯುದ್ಧ ವರದಿ

ಬರ್ಲಿನ್ ಸ್ಟೆಲಿನ್‌ಗ್ರಾಡ್ ವಾಗುವುದೆ?

'ಜರ್ಮನಿಯು ಶರಣು ಬಂದಿತು' ಎಂಬ ವಾರ್ತೆಯು ಸದ್ಯದಲ್ಲೆ ಜಗತ್ತಿನ ವಾರ್ತಾ ಪತ್ರಿಕೆಗಳಲ್ಲಿ ಹೊಳೆಯುವುದೆ? ಅಥವಾ ಹಿಟ್ಲರನು ಬಚ್ಚಿಟ್ಟ ಗುಪ್ತಾಸ್ತ್ರಗಳನ್ನು ಹೊರತೆಗೆಯುವನೆ? ವಿಷವಾಯು ಪ್ರಯೋಗಮಾಡುವನೆ? ವಿಷವಾಯುವನ್ನು ಪ್ರಯೋಗಿಸಲ್ಪಟ್ಟರೆ, ಅದಕ್ಕೆ ಹತ್ತುಪಾಲಷ್ಟು ಪ್ರತ್ಯುತ್ತರ ಕೊಡುವರೆ ಸಿದ್ಧತೆಗಳು ಮಿತ್ರರಿಂದ ಮಾಡಲಾಗಿವೆ ಎಂದು ಚರ್ಚಿಲರು ಹೊರಡಿಸಿದ ಎಚ್ಚರಿಕೆಯಿಂದ ಹಿಟ್ಲರನು ವಿಷವಾಯು ಪ್ರಯೋಗದ ಕುರಿತು ಭೀತನಾಗಿರಬಹುದೆಂದು ಊಹೆಗಳಿದ್ದರೂ, ಪೂರ್ವರಂಗದಲ್ಲಿ ಕೆಂಪು ಬಲದ ಅಲೆಗಳು ಬರ್ಲಿನ್ ಕಡೆ ಅಬ್ಬರಿಸಿ ಬರುವುದನ್ನು ತಡೆಯಲು ಆತನು ವಿಷವಾಯುವನ್ನು ಪ್ರಯೋಗಿಸಲೂ ಬಹುದು ಎಂದು ಕೆಲವು ಊಹೆಗಳಿವೆ. ಆದರೆ ರಷ್ಯನರು ಈಗ ಜರ್ಮನಿಯೊಳಗೆ ಬಹಳ ಒಳನಡೆದಿರುವರು. ವಿಷವಾಯು ಬಾಂಬುಗಳ ಪ್ರಯೋಗವಾದರೆ ಅವುಗಳು ಕೆಂಪು ಸೇನೆಯ ಮೇಲೆ ಮಾತ್ರವಲ್ಲ, ಜರ್ಮನಿ ನಾಡುಗಳ ಮೇಲೆ ಭೀಕರ ಪರಿಣಾಮಗಳನ್ನು ಉಂಡುಮಾಡುವುದು ಖಂಡಿತ. ಈ ಕಾರಣದಿಂದ ಹಿಟ್ಲರನು ವಿವೇಕನಾಗಿ ವರ್ತಿಸಬಹುದು. ಇಲಿಯ ಮೇಲೆ ಕೋಪದಿಂದ ಮನೆಗೆ ಬೆಂಕಿ ಕೊಡಬಹುದೆ?

ಹಿಟ್ಲರನಲ್ಲಿ ಮಿತ್ರರನ್ನು ತಡೆದಿಡಲು ಬೇಕಾದ ಬಲವು ಇಲ್ಲವೆಂದೆ ತಿಳಿಯುವರೆ ಅನೇಕ ಆಧಾರಗಳಿವೆ. ಸಿದ್ಧಪಡಿಸಿದ ಆತನ ಬಲವೆಲ್ಲಾ ರಷ್ಯದ ಆಕ್ರಮಣದಲ್ಲಿ ವ್ಯರ್ಥವಾಗಿ ಕಳೆದುಹೋಗಿದೆ. ಅಲ್ಲದೆ ಮಿತ್ರರು ಪಶ್ಚಿಮದಲ್ಲಿ ಹಾಕಿದ ಬಲದ ಎದುರು ಜರ್ಮನ್ ಬಲದ ಅಧಿಕಾಂಶವು ಸಿಗ್‌ಫ್ರಿಡ್ ಕೋಟೆಗಳಲ್ಲಿ ಜಮಾಯಿಸಲಾಗಿದೆ. ಕೆಂಪು ಬಲಕ್ಕೆ ತಕ್ಕುದಾದ ವಿರೋಧವನ್ನು ಕೊಡಲು ಸಿದ್ಧತೆಗಳನ್ನು ಮಾಡುವಷ್ಟರೊಳಗೆ ಅತ್ಯಂತ ಆಧುನಿಕ ಯಾಂತ್ರಿಕ ಉಪಕರಣಗಳಿಂದ ಕೂಡಿದ ಸ್ಟೆಲೀನನ ಆ ಬಲವು ಪೂರ್ವಪ್ರಸ್ಸಿಯಾದಿಂದ ಹಿಡಿದು, ಬುಡಾಪೆಸ್ಟ್ ಅಲ್ಲಿಂದ ಮುಂದಕ್ಕೆ ಜೆಕೆಸ್ಲೆವೆಕಿಯಾ, ಆಸ್ಟ್ರೀಯಾದ ಅತ್ತಕಡೆ, ಮುನ್ನುಗ್ಗಿತ್ತು. ಒಂಭತ್ತು ಕಡೆಗಳಲ್ಲಿ ಅತಿರೇಖವಾದ ಬಲವನ್ನು ಹಾಕಿತು. ಈ ತರದ ಕೆಂಪು ಬಲದ ರಭಸವನ್ನು ತಡೆಯುವರೆ ಹಿಟ್ಲರನ ಸೇನಾನಿಗಳು ದಾರಿಕಾಣದಾದರು. ಜರ್ಮನ್ ಸೇನೆಗಳು ಕಾಲಿಗೆ ಬುದ್ಧಿಹೇಳದೆ ನಿರ್ವಾಹವಿಲ್ಲದಾಯಿತು. ಈಗ ಪೂರ್ವಪ್ರಸ್ಸಿಯಾ ಪೂರ್ಣ ರಷ್ಯನರ ವಶವಾಗಿರುವುದು. ಪೋಲೆಂಡು ಇಡಿ ರಷ್ಯನರಿಂದ ಆಕ್ರಮಿಸಲ್ಪಟ್ಟಿದೆ. ಕೆಂಪು ಬಲದ ಒಂದು ವಿಭಾಗವು ಸೇನಾನಿ ಜೆಕೊವ್ ವನನೆಂಬ ಮುಂದಾಳುತನದಲ್ಲಿ ಬರ್ಲಿನ್ ನಗರಕ್ಕೆ ಅತೀ ಸಮೀಪಕ್ಕೆ ಬಂದಿರುವುದು. ಡಾಂಜಿಂಗ್ ಪ್ರದೇಶವು ರಷ್ಯನರ ಕೈವಶವಾಗಿದೆ. ಪೂರ್ವ ಪ್ರಸ್ಸಿಯಾ ಕರಾವಳಿಯ ಅನೇಕ ನಗರಗಳು ಕೆಂಪುಸೇನೆಯಿಂದ ಆಕ್ರಮಿಸಲ್ಪಟ್ಟಿವೆ. ಸದ್ಯಕ್ಕೆ ಓಡರ್ ನದಿಯು ಒಂದು ಅಡ್ಡಿಯಾಗಿ ನಿಂತಿದ್ದರೂ, ಕೆಂಪು ಸೇನೆಯು ಅದನ್ನು ದಾಟಿಬಿಟ್ಟಿತ್ತೆಂದರೆ, ನಂತರ ನಿರಾಂತಕವಾಗಿ ಬರ್ಲಿನ್ ನಗರದೊಳಗೆ ನಡೆದುಬಿಡಬಹುದು. ಆದುದರಿಂದ ಓಡರ್ ನದಿಯ ತೀರದಲ್ಲಿ ಜರ್ಮನರು ವಿಶೇಷ ತಡೆಯನ್ನು ಹಾಕಿರುವರೆಂದು ತಿಳಿದುಬಂದಿದೆ. ಆದರೂ ಕೆಂಪು ಸೇನೆಯು ಅದನ್ನು ಕೆಡವಿಕೊಂಡು ಮುನ್ನಡೆಯುವುದು ಖಂಡಿತವೆಂದು ಬಲವಾದ ಅಭಿಪ್ರಾಯವಿದೆ. ಸ್ಟೆಲೀನ್‌ಗ್ರಾಡಿನಲ್ಲಿ, ಲೆನಿನ್‌ಗ್ರಾಡಿನಲ್ಲಿ, ಮತ್ತು ಮೊಸ್ಕೊದಲ್ಲಿ ಹಿಂದೆ ರಷ್ಯನರು ಜರ್ಮನರಿಗೆ ಕೊಟ್ಟ ತರದಲ್ಲಿ ತಡೆಯನ್ನುಕೊಡಲು ನಾಜಿಗಳ ಸಿದ್ಧತೆಗಳಾಗಿರುವವೆಂದು ತಿಳಿದುಬಂದಿದೆ.

ಆದರೆ ಒಂದೆಡೆ ಕೆಂಪು ಸೇನೆಯ ಅತ್ಯಂತ ಉಗ್ರವಾದ ಒತ್ತಡ, ಮೇಲಿಂದ ಮಿತ್ರರ ವಿಮಾನಗಳ ಮೂಲಕ ಹಲ್ಲೆ (ಸಾವಿರ ಸಾವಿರ ಬಾಂಬರುಗಳು ಭಾಗವಹಿಸಿ) ಪಶ್ಚಿಮರಂಗದಲ್ಲಿ ಮಿತ್ರರ ಮುನ್ನಡೆ, ಈ ಎಲ್ಲಾ ಕಾರಣಗಳಿಂದ ಜರ್ಮನರು ಬರ್ಲಿನ್ ನಗರವನ್ನು ರಷ್ಯನರಿಗೆ ಬೇಗನೆ ಒಪ್ಪಿಸಿಬಿಡಬೇಕಾಗುವುದು.

ಹಿಟ್ಲರನ ಸರಕಾರವು ಬರ್ಲಿನ್ ನಗರದಿಂದ ಮ್ಯೂನಿಕ್ ನಗರಕ್ಕೆ ಒಯ್ಯಲಾಗಿದೆ. ಪ್ರಸಂಗವು ಹದಮೀರಿ ಹೋಗಿದೆ, ಏನಾದರೂ ಮಾಡಿ ಅದನ್ನು ಸುಧಾರಿಸಿಕೊಳ್ಳೋಣ ನಂತರ ಬೆನ್ನಿಗೆ ಬಲಬಂದಾಗ ಮರು ಏಟುಕೊಡೋಣ, ಎಂಬ ನಿರ್ಧಾರಕ್ಕೆ ಹಿಟ್ಲರನು ಮತ್ತಾತನ ಅನುಯಾಯಿಗಳು ಬಂದಿರುವರೊ ಎಂಬಂತೆ, ಮೊದಲು ರಷ್ಯದೊಡನೆ ಸಂಧಾನ ಸಾಧಿಸಲು ಯತ್ನಗಳು ನಡೆದವು. ಆದರೆ ತಮ್ಮ ದೇಶವನ್ನು ಸೂರೆಗೊಂಡವರೊಡನೆ ರಷ್ಯನರು ಸಂಧಾನಕ್ಕೆ ಸಿದ್ಧರಿಲ್ಲರೆಂದು ಹೇಳಿಬಿಟ್ಟರು. ನಾಜಿಗಳ ನಿರ್ಮೂಲವಾಗದೆ ಯುದ್ಧ ನಿಲ್ಲಿಸಲಾಗದೆಂದು ಕೆಂಪು ಶಿಬಿರದಿಂದ ಘೋಷವು ಹೊರಟಿತು. ಹೀಗೆ ಇಲ್ಲಿ ತಮ್ಮ ಹಂಚಿಕೆಗಳು ನಡೆಯದಿರಲು, ಪೆಪನ್‌ನ ನಾಯಕತ್ವದಲ್ಲಿ ಸಂಧಾನ ಸಾಧನೆಗಾಗಿ ಒಂದು ಶಿಷ್ಟಮಂಡಳವು ಮಿತ್ರ ಪ್ರೆಂಕೊನ ಸ್ಪೈನಿನ ಕಡೆ ತೆರಳಿರುವುದಾಗಿ ವಾರ್ತೆಯೊಂದು ಬಂದಿದೆ. ಕೊಮ್ಯುನಿಸ್ಟರಿಗೆ ವಿರೋಧವಾಗಿ ಒಂದು ಒಪ್ಪಂದ ಸಾಧಿಸಿ ಬಿಡೋಣವೆಂದರೆ, ಆ ಸಮಯವು ದಾಟಿಹೋಗಿದೆ. ಚರ್ಚಿಲ್ಲರನ್ನು ಪ್ರೆಂಕೋನ ಮೂಲಕ ಹೇಗಾದರೂ ಒಲಿಸಿಕೊಳ್ಳೋಣ ಎಂಬುದಾಗಿ ಅವರ ಉದ್ದಿಶ್ಯವಾದರೆ, ಹಿಟ್ಲರನ ನಾಶವಾಗದೆ ಅವರಿಗೆ ಸಮಾಧಾನವಾಗುವಂತಿಲ್ಲ ಎಂದು ಈ ಮೊದಲು ಅವರು ಆಡಿದ ಮಾತುಗಳಿಂದ ತಿಳಿಯಬೇಕಾಗಿದೆ. ಬಾವಿಗೆ ಬೀಳುವಾತನು ಕಡೆಗೆ ಒಂದು ತೃಣವನ್ನಾದರೂ ಹಿಡಿದು ಜೀವಿಸಲು ಪ್ರಯತ್ನಗೊಳ್ಳುತ್ತಾನಂತೆ. ಹಾಗೆ ಇವುಗಳೆಲ್ಲಾ ಹತಾಶ ನಾಜಿಗಳ ಕೊನೆಯ ಯತ್ನಗಳಾಗಿರಬಹುದು.

ಈಗ ತ್ರಿರಾಷ್ಟ್ರ ಮುಖಂಡರುಗಳು ಕೂಡಿರುತ್ತಾರೆ. ರಷ್ಯದ ಒಂದು ಕಡೆಯಲ್ಲಿ ಬಹುಶಃ ಶರಣುಬಂದ ಜರ್ಮನಿಗೆ ಯಾವ ತರದ ಶರ್ತಗಳನ್ನುಕೊಡಬೇಕು ಎಂಬ ವಿಷಯ ವಿಚಾರವೆತ್ತಲು, ಈ ಕೂಡುವಿಕೆಯು ನಡೆಯುತ್ತಿರಬಹುದು. ಮತ್ತು ಯುದ್ಧವು ಮುಗಿಯುತ್ತಿದ್ದ ಹಾಗೆ ಮುಂದಿನ ಪುನರ್ರಚನೆ ಕಾರ್ಯಕ್ರಮಗಳು, ಜಾಗತಿಕ ಶಾಂತಿಸಾಧಕ ಯೋಜನೆಗಳು ಮುಂತಾದವುಗಳು ಕಲ್ಪಿಸಲ್ಪಡಬೇಕಷ್ಟೆ. ಭವಿಷ್ಯದ ಕುರಿತು ಒಡಂಬಡಿಕೆಯ ನಿರ್ಧಾರಕ್ಕೆ ಬರುವುದು ಈ ಕೂಡುವಿಕೆಯ ಉದ್ದೇಶವೂ ಇರಬಹುದು. ರಷ್ಯವು ಹಿಟ್ಲರನು ಹಾಳುಗೆಡವಿದ ತನ್ನ ಪ್ರದೇಶದ ಪುನರ್ರಚನೆಗಾಗಿ ಅಮೇರಿಕದೊಡನೆ ದೊಡ್ಡ ಸಾಲವನ್ನು (೭೫೦ ಮಿಲಿಯ ಡೊಲ್ಲರುಗಳು) ಕೇಳಿರುವುದು. ಹೀಗೆ ಬ್ರಿಟನಿನೊಡನೆಯೂ ೭೫೦ ಮಿಲಿಯ ಪವನಿನ ಸಾಲವು ಕೇಳಲಾಗಿದೆ ಎಂದೂ ವಾರ್ತೆಗಳಿವೆ. ಬ್ರಿಟನು ಅಷ್ಟು ದೊಡ್ಡದಾದ ಸಾಲವನ್ನು ಕೊಡಲು ಸದ್ಯ ಸಿದ್ಧವಿಲ್ಲವೆಂದೂ, ಸಣ್ಣ ಕಂತುಗಳಲ್ಲಿ ರಷ್ಯದ ಪುನರ್‌ನಿರ್ಮಾಣಕ್ಕೆ ಬೇಕಾದ ಯಂತ್ರ ಇತ್ಯಾದಿಗಳನ್ನು ಒದಗಿಸಿಕೊಡಲು ಸಿದ್ಧವೆಂದು ತಿಳಿಸಲಾಗಿದೆ. ಅಮೇರಿಕಾದ ಅಧ್ಯಕ್ಷ ರೂಸ್‌ವೆಲ್ಟರು, 'ಲಿಸ್‌ಲೆಂಡ್' ಕಾಯಿದೆಯಿಂದಲೆ ಸ್ಟೆಲೀನನಿಗೆ ಬೇಕಾದ ಸಾಮಾನುಗಳನ್ನು ಒದಗಿಸಲು ಯೋಜನೆಯನ್ನು ಮಾಡಬಹುದೆಂದು ಊಹೆಗಳಿವೆ. ಮಿತ್ರರಲ್ಲಿ ಒಡಕು ಉಂಟಾಗುವ ಕುರಿತು ಹಿಟ್ಲರನಿಗೆ ಬಲವಾದ ಆಶೆಗಳಿದ್ದರೂ, ಒಂದೇ ದೋಣಿಯಲ್ಲಿ ಮುನ್ನಡೆಯುವ ಮಿತ್ರರ ಧೋರಣೆಯಲ್ಲಿ ಒಂದಿಷ್ಟು ಬದಲಾಗದೆ, ಇನ್ನಷ್ಟು ಭದ್ರವಾಗಬಹುದೆಂದು ನಂಬಲಾಗಿದೆ.

ಶಾಂತಸಾಗರದಲ್ಲಿ ಮಿತ್ರರ ಚಟುವಟಿಕೆಗಳು ಯಶಸ್ವಿಯಾಗಿ ನಡೆಯುತ್ತಿದೆ. ಫಿಲಿಪ್ಪಾನು ದ್ವೀಪಸಮೂಹ ಸಂಪೂರ್ಣ ಅಮೇರಿಕನರ ವಶವಾಗುವುದು ನಿಸ್ಸಂದೇಹಕರ. ಚೀನಾದಲ್ಲಿ ಪರಿಸ್ಥಿತಿಯು ಸುಧಾರಿಸಿಕೊಳ್ಳದಿದ್ದರೂ, ಯುರೋಪದ ಯುದ್ಧರಂಗದಲ್ಲುಂಟಾದ ಸುಧಾರಿತ ಪರಿಸ್ಥಿತಿಯಿಂದ ಮಿತ್ರರು ಈ ಕಡೆಗೆ ಇನ್ನೂ ಹೆಚ್ಚಿನ ಬಲವನ್ನು ವಿನಿಯೋಗಿಸಬಹುದೆಂದು ಊಹಿಸಲಾಗಿದೆ.

ಬರ್ಮಾವನ್ನು ತ್ಯಜಿಸಿ ಪಲಾಯನ ಮಾಡುವುದೆ ಜಪಾನಿಯ ಉದ್ದೇಶಿಸಿದಂತೆ ಕಾಣುತ್ತದೆ. ಬರ್ಮಾದ ವಿಮೋಚನೆಯು ಪೂರ್ಣವಾಗುವ ದಿನವು ದೂರದಲ್ಲಿಲ್ಲವೆಂದು ಹೇಳಬೇಕು.

ಹೀಗೆ ಜಗತ್ತಿನ ಸಮರಸ್ಥಿತಿಯು ಮಿತ್ರರಿಗೆ, (ಪ್ರಜಾಸತ್ತೆಗೆ) ಸುಧಾರಿಸಿಕೊಳ್ಳುತ್ತಿದ್ದ ಹಾಗೆ ನಮ್ಮ ಸ್ಥಿತಿಯು ಕೂಡ ಸುಧಾರಿಸಲ್ಪಡುವುದೊ ಎಂಬ ಆಶೆಯು ನಮ್ಮಲ್ಲಿ ಉಂಟಾಗುತ್ತಿದೆ! ಅದು ಯಾಕೆ ಸುಧಾರಿಸಲ್ಪಡಬಾರದು?

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—
ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ಎದೆಗೆ ನೋವನ್ನುಂಟುಮಾಡುವ ಬ್ರೊಂಕೈಟ್ಸನ್ನು ಗುಣಪಡಿಸಿರಿ.
ಬ್ರೊಂಕೈಟ್ಸ್ ನಿಮ್ಮ ಎದೆಯಲ್ಲಿ ನೋವನ್ನುಂಟುಮಾಡಿ ತೊಂದರೆ ಕೊಡುತ್ತದೆಯೆ? ನೀವು ಆಗಾಗ ಶ್ವಾಸಕ್ಕಾಗಿ ತೊಂದರೆ ಪಡುತ್ತೀರೆ? ನಿಮ್ಮ ತಲೆ ಸಿಡಿವ ಹಾಗೆ ಆಗಾಗ ಕಫ ಬರುತ್ತದೆಯೆ? ಹಾಗಾದರೆ ವಿಷಹಾರಿ ಶ್ವಾಸಯೋಗ್ಯ ಪೆಪ್ಸು ಮಾತ್ರೆಗಳನ್ನು ಸೇವಿಸಿರಿ.
ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಔಷಧಿ ಸತ್ವವನ್ನು ಹೊರಗೆಡವಿ ಅದು ಶ್ವಾಸದೊಡನೆ ಸೇರಿ ಶ್ವಾಸಕೋಶಕ್ಕೆ ಮುಟ್ಟುತ್ತದೆ. ಹೀಗೆ ಪೆಪ್ಸು ಎದೆನೋವು, ಕಫ, ತಲೆನೋವು ಮೊದಲಾದವುಗಳ ... ಣಪಡಿಸಿ ... ಮ ... ಶ್ವಾಸ ಸರಿಯಾಗಿರುವಂತೆ ಸಹಾಯಮಾಡುವುದು. ಪೆಪ್ಸು ಕಂಠವನ್ನು ಸರಿಗೊಳಿಸಿ ಶ್ವಾಸಕೋಶವನ್ನು ಬಲಗೊಳಿಸುವುದು.

ಯಾವಾಗಲೂ ಪೆಪ್ಸನ್ನೇ
PEPS
ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಭಾರತದ ವಾರಾಂತ್ಯ ವರದಿಗಳು

ಮಧ್ಯಪ್ರಾಂತ್ಯ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಮಾನ್ಯ ಘನ ಶ್ಯಾಮ ಸಿಂಗ್ ಗುಪ್ತಾ ಅವರು ಆರ್ಯಪ್ರತಿನಿಧಿ ಸಭೆಯ ಅಧ್ಯಕ್ಷರೂ ಆಗಿರುವರು. ಈ ಸಂಸ್ಥೆಯ ಚಳವಳ ನಿರ್ದೇಶಕ ಮಂಡಳಿಯ ಸಭೆಯೊಂದು ಡಿಲ್ಲಿಯಲ್ಲಿ ಸೇರಲಿದೆ ಎಂದೂ, ಅದರಲ್ಲಿ ಸಿಂಧ್ ಸರಕಾರದವರು 'ಸತ್ಯಾರ್ಥ ಪ್ರಕಾಶ'ದ ೧೪ನೇ ಅಧ್ಯಾಯದ ಮೇಲೆ ಹೊರಿಸಿದ ನಿರ್ಭಂಧದ ಕುರಿತು ಪರ್ಯಾಲೋಚನೆ ನಡೆಯುವುದಾಗಿಯೂ ತಿಳಿಸಿರುವರು. ಆರ್ಯ ಸಮಾಜದವರು ಇದೇ ವಿಷಯ ಸಂಬಂಧವಾಗಿ ಸಿಂಧ್ ಸರಕಾರದೊಡನೆ ನಡೆಸಿದ ಮಾತುಕತೆಗಳು ಅಯಶಸ್ವಿಯಾದವು. ಸಿಂಧ್ ಸರಕಾರವು ಸತ್ಯಾರ್ಥ ಪ್ರಕಾಶದ ಮೇಲೆ ಹೊರಿಸಿದ ಆಜ್ಞೆಯನ್ನು ಮುರಿಯಲು ಒಂದು ಸತ್ಯಾಗ್ರಹದ ಚಳವಳವನ್ನು ಆರ್ಯ ಪ್ರತಿನಿಧಿ ಸಭೆಯು ಯೋಚಿಸಿರುವುದಾಗಿಯೂ ತಿಳಿದು ಬರುತ್ತದೆ. ಮಾತ್ರವಲ್ಲ ಸತ್ಯಾಗ್ರಹಿಗಳಿಗಾಗಿ ಮನವಿಯೂ ಮಾಡಲಾಗಿದೆ. ಚಳವಳದಲ್ಲಿ ಭಾಗವಹಿಸಲಿಚ್ಛಿಸುವ ಸತ್ಯಾಗ್ರಹಿಗಳು ಉಚ್ಛ ಜೀವನ ಕ್ರಮಗಳನ್ನು ಅಭ್ಯಾಸಿಸಿ ಆದರ್ಶ ಕಲ್ಪಿಸಬೇಕೆಂದೂ ವಿನಂತಿಸಲಾಗಿದೆ. ಸತ್ಯಾಗ್ರಹದ ಅತೀ ಪ್ರಾಮುಖ್ಯ ವಿಷಯವೆಂದರೆ ಈ ಆದರ್ಶ ಜೀವನ ಕ್ರಮ. ಯಾವ ಪಕ್ಷದವರೇ ಆಗಲಿ ಸತ್ಯಾಗ್ರಹಕ್ಕೆ ಇಳಿಯಲಿಚ್ಛಿಸಿದರೆ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಕರ್ತವ್ಯ ನಿರ್ವಹಿಸಿದರೆ ಅವರ ಯತ್ನಗಳು ಫಲಪ್ರದವಾಗಲು ಸಂದೇಹವಿಲ್ಲ. 'ಸತ್ಯಕ್ಕೆ ಸೋಲಿಲ್ಲ' ವೆಂಬುದು ಖಂಡಿತ.

ಆಯುರ್ವೇದ ಕಾಲೇಜ್

ಅಖಿಲ ಭಾರತ ಆಯುರ್ವೇದ ಸಮ್ಮೇಲನದ ಅಧ್ಯಕ್ಷ ಕವಿರಾಜ್ ಮುಕರ್ಜಿ ಅವರು ಕೊಚ್ಚೀ ಅರಸರ ಅತಿಥಿಗಳಾಗಿ ಸನ್ಮಾನಿಸಲ್ಪಟ್ಟರು. ಎಂಬತ್ತಕ್ಕೆ ಏಕ್ಕಿದ ವಯಸ್ಸಿನ ಈ ಕೇರಳ ರಾಜರು ಸ್ವತಃ ದೊಡ್ಡ ಆಯುರ್ವೇದ ವಿಜ್ಞಾನಿಗಳು. ಮುಕರ್ಜಿಯವರು ಕೊಚ್ಚಿಯಲ್ಲಿ ಒಂದು ಆಯುರ್ವೇದ ಕಾಲೇಜನ್ನು ತೆರೆಯುವಂತೆ ಮಹಾರಾಜರನ್ನು ವಿನಂತಿಸಿಕೊಂಡರು. ಅದಕ್ಕೆ ರಾಜ ಸಮ್ಮತಿಯೂ ದೊರೆತಿದೆ. ಹಿಂದಿನಂತೆ ಆಯುರ್ವೇದಾಭ್ಯಾಸವು ಮೆರೆಯುವಂತಾದರೆ ಜಗತ್ತು ಬೆರಗಾಗುವಂತಹ ವೇದ ವಿದ್ಯೆಯೊಂದರ ಮಹತ್ವವು ಪ್ರಕಾಶವಾಗಿ ಜನತೆಗೆ ಸುಲಭ ರೀತಿಯ ಚಿಕಿತ್ಸಾಅನುಕೂಲತೆಗಳುಂಟಾಗುವವು.

ಯುದ್ಧ ಲಾಭ

ಕಲ್ಕತ್ತದಲ್ಲಿ ಐವತ್ತು ಲಕ್ಷ ರೂಪಾಯಿಯ ವಂಚನೆಯಾದ ಸಂಗತಿ ಬೆಳಕಿಗೆ ಬಂದಿದೆ. ಯುದ್ಧ ಶಾಖೆಯ ಸ್ಪೆಶಲ್ ಪೋಲಿಸರು ಕೆಳಗಿನಿಂದ ಮೇಲಿನ ತನಕದ ಒಂದು ಇಲಾಖೆಯ ಅಧಿಕಾರಿಗಳೆಲ್ಲರೂ ಒಟ್ಟು ಸೇರಿ ಮೆಲೆ ಹೇಳಿದಷ್ಟು ಹಣವನ್ನು ತಮ್ಮಲ್ಲಿ ಹಂಚಿಕೊಂಡಿರುವರೆಂದು ಪತ್ತೆಯಾಗಿದೆ. ಇದು ಯುದ್ಧ ಯತ್ನಕ್ಕೆ ಆತಂಕವಾಗುತ್ತದೆಂಬುದು ಆ ಅಧಿಕಾರಿಗಳಿಗೆ ತಿಳಿಯದೆಹೋದುದು ಸೋಜಿಗ ಸಂಗತಿ.

ಅರ್ಧ ಮಾಫಿ

ಚಿಮೂರ್-ಅಷ್ಟಿ ಗಲಭೆಯ ಸಂಬಂಧಗಳ್ಲಿಗೇರಿಸಲ್ಪಡಲಿದ್ದ ೧೫ ಮಂದಿಗಳಿಗೆ ದಯೆ ತೋರಿಸಬೇಕೆಂದು ದೇಶ ವಿದೇಶದಿಂದ ಬಂದ ಹಾರೈಕೆ ವಿನಂತಿಗಳನ್ನು ಅರ್ಧ ಮನ್ನಿಸಿದ ಹಾಗಾಯಿತೆಂಬಂತೆ ಮಧ್ಯಪ್ರಾಂತ್ಯ ಸರಕಾರದವರು ೮ ಮಂದಿಗಳಿಗೆ ಮರಣದಂಡನೆಯ ಬದಲು ಜೀವಾಂತ ಕಾರಾಗೃಹವಾಸದ ಶಿಕ್ಷೆಗೆ ತಂದಿಳಿಸಿದೆ. ಇನ್ನು ಉಳಿದ ೭ ಮಂದಿಗಳಿಗೆ ವ್ಯಾಸ್‌ರಾಯ್ ಸಾಹೇಬರು ಮಾಫಿಮಾಡಬೇಕೆಂದು ದೇಶವು ಆಶಿಸುತ್ತದೆ. ಅಂದು ಕೊಲೆಮಾಡಲ್ಪಟ್ಟವರ ಧರ್ಮ ಪತ್ನಿಗಳೇ ಆ ಕುರಿತು ವಿನಂತಿ ಕಳುಹಿಸಿರುವರು. ವ್ಯಾಸರಾಯರು ಇದನ್ನು ಗಮನಿಸಿ ಬ್ರಿಟಿಷ್ ಸಂಸ್ಕೃತಿಯ ಉದಾರತ್ವವನ್ನು ಪ್ರದರ್ಶಿಸುವರೆಂದು ಹಾರೈಕೆ.

ಸಂಸ್ಕೃತ ಇಂಗ್ಲಿಷಿನಲ್ಲಿ

ಮದ್ರಾಸಿನಲ್ಲಿ ರಾಜಾಜಿಯವರು ಉಪಾಧ್ಯಾಯರ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಹೀಗೆಂದರು: "ಮಾತೃ ಭಾಷೆಯಲ್ಲೇ ಪಾಠ ಕಲಿಸುವುದೇ ಹೆಚ್ಚಿನ ಅನುಕೂಲತೆಯದು. ಈಚೀಗೆ ಸಂಸ್ಕೃತವನ್ನು ಇಂಗ್ಲಿಷ್ ಭಾಷೆಯಲ್ಲಿ ಕೆಲವು ಕಡೆ ಕಲಿಸುತ್ತಾರೆ. ಸಂಸ್ಕೃತವೂ ಗೊತ್ತಿಲ್ಲದ ಭಾಷೆ, ಇಂಗ್ಲಿಷೂ ಸ್ಪಷ್ಟವಾಗಿ ತಿಳಕೊಳ್ಳಲಾಗದ ಭಾಷೆ. ಕಷ್ಟ ಭಾಷೆಯನ್ನು ಸ್ಪಷ್ಟ ತಿಳಿಯದ ಭಾಷೆಯಲ್ಲಿ ಹೇಳಿದರೆ ಎಷ್ಟು ತಿಳಕೊಳ್ಳಬಹುದು? ಈಚೆಗೆ ಮದ್ರಾಸಿಗೆ ಬಂದಿದ ರಷ್ಯದ ಶ್ರೇಷ್ಟ ವೈದ್ಯರೊಬ್ಬರು ತಮ್ಮ ಜ್ಞಾನವನ್ನು ರಷ್ಯನ್ ಭಾಷೆಯಲ್ಲೇ ಕಲಿತರು. ಅವರಿಗೆ ಬೇರೆ ಯಾವ ಭಾಷೆಯೂ ಬರುವುದಿಲ್ಲ. ಇಲ್ಲಿಯೂ ಪ್ರಾಂತ್ಯ ಭಾಷೆಗಳಲ್ಲೇ ವಿದ್ಯೆಯನ್ನು ಕೊಡುವುದು ಸುಲಭವೂ ಅನುಕೂಲವೂ ಆದದ್ದು. ಕೆಲವು ಪಾರಿ ಭಾಷಿಕ ಶಬ್ದಗಳ ವಿಷಯ ಮೊದಮೊದಲು ಸ್ವಲ್ಪ ಕಷ್ಟಗಳು ಬರಬಹುದು. ಆದರೆ ಕೆಲವೇ ವರ್ಷಗಳಲ್ಲಿ ನಮ್ಮದೇ ಭಾಷೆಯವುಗಳಾದ ಪಾರಿ ಭಾಷಿಕ ಶಬ್ದಗಳುಂಟಾಗುವುವು. ನಾವು ಇಂಗ್ಲಿಷ್ ಭಾಷೆಯನ್ನೂ ನಮ್ಮ ನಮ್ಮ ಮಾತೃ ಭಾಷೆಗಳ ಮೂಲಕವೇ ನಾವು ಸುಲಭವಾಗಿ ಕಲಿಯಬಹುದು. ಶೇಕ್ಸ್‌ಪಿಯರನ ನಾಟಕಗಳೊಳಗಿನ ವಿಪುಲಾರ್ಥಭರಿತವಾದ ಅನೇಕ ವಾಕ್ಯಗಳನ್ನು ಓರ್ವ ಹುಡುಗನಿಗೆ ಇಂಗ್ಲಿಷಿನಲ್ಲೇ ವಿವರಿಸಿ ಹೇಳುವುದು ಕಷ್ಟದ ಕೆಲಸವೇ ಸರಿ. ವಿವರಿಸುವವರಿಗೇ ಅವುಗಳ ಅರ್ಥ ಸರಿಯಾಗಿ ಆಗಲಾರದು. ಅದನ್ನೇ ಮಾತೃ ಭಾಷೆಯಲ್ಲಿ ತಿಳಿದಷ್ಟನ್ನು ಸರಳವಾಗಿ ವಿವರಿಸಿ ತಿಳಿಸಬಹುದು." ಆಚಾರ್ಯರ ಈ ಸೂಚನೆಯಿಂದ ಅನೇಕ ಇಂಗ್ಲಿಷ್ ಕಲಿಸುವ ಉಪಾಧ್ಯಾಯರ ಸಂದೇಹಗಳು ದೂರವಾಗಬಹುದು.

ಜಾತೀಯ ಸಂಸ್ಥೆಗಳಿಂದ ದೂರವಿರಿ

ಕೈರಾ ಜಿಲ್ಲೆಯ ಕೊಂಗ್ರೆಸ್ ಕೆಲಸಗಾರರಾದ ಮಿ। ಮಹಮ್ಮದ್ ಬೆಗ್ ಅವರು ಸೇವಾ ಗ್ರಾಮದಲ್ಲಿ ಮಹಾತ್ಮರನ್ನು ಕಂಡು ತಮಗೆ ಮುಸಲ್ಮಾನ್ ಜನತೆಯೊಳಗೆ ಕೆಲಸಮಾಡಲಿರುವ ಉದ್ದೇಶವನ್ನು ತಿಳಿಸಿದರು. ಮಹಾತ್ಮರು ಹೀಗೆ ಉತ್ತರಕೊಟ್ಟರು: "ನೀವು ಮುಸಲ್ಮಾನ್ ಜನತೆಯ ನಿಜವಾದ ಸೇವೆ ಮಾಡಬೇಕೆಂದು ಬಯಸುವುದಾದರೆ ಜಾತೀಯ ಮತ್ತು ಮತೀಯ ಸಂಸ್ಥೆಗಳ ಸಂಪರ್ಕವಿಟ್ಟುಕೊಳ್ಳದೆ ಸಂಪೂರ್ಣವಾಗಿ ದೂರವಿರಬೇಕು ಎಂಬುದೇ ನಿಮಗೆ ನನ್ನ ಸಲಹೆ." ದೇಶ ಸ್ವಾತಂತ್ರ್ಯ ಬೇಡವಾದರೆ ಜಾತೀಯ ಸಂಸ್ಥೆಗಳಿಗೇ ಅಂಟಿಕೊಂಡಿರಬಹುದು.

ವಿಭಾಗಿಸಲು ಬಿಡುವುದಿಲ್ಲ

"ಮುಸಲ್ಮಾನರು ನಮ್ಮ ದೇಶಕ್ಕೆ ಹೊರಗಿನವರು. ಮೂಲತಃ ಅವರು ಪರದೇಶಿಯರು. ಮುತ್ತಿಗೆ, ನುಗ್ಗುವಿಕೆಯಿಂದ ಅವರು ಇಲ್ಲಿ ಬಂದು ತಳವೂರುವವರಾದರು. ಆದುದರಿಂದ ಅವರು ತಾವು ಬೀಡುಬಿಟ್ಟ ಪ್ರದೇಶಗಳಲ್ಲಿ ತಮ್ಮ ಹಿತ, ಸಂಸ್ಕೃತಿಗಳನ್ನು ಕಾಪಾಡಿಕೊಂಡಿರಲು ಅಡ್ಡಿಯಿಲ್ಲ. ಆದರೆ ನಮ್ಮ ಈ ಪ್ರಾಚೀನ ಪುಣ್ಯ ಭೂಮಿಯನ್ನು ವಿಭಾಗಿಸಿ, ಹರಿದು ಹಂಚಲಿಕ್ಕೆ ಅವರಿಗೆ ಯಾವ ಅಧಿಕಾರವೂ ಇಲ್ಲ." ಹೀಗೆಂದು ಅಖಂಡ ಭಾರತ ಪರಿಷತ್ತಿನ ಅಧ್ಯಕ್ಷ ಡಾ। ರಾಧಾಕುಮುದ್ ಮುಖರ್ಜಿಯವರು ಹೇಳಿದರು. ಮುಂದುವರಿಯುತ್ತಾ ಮುಖರ್ಜಿಯವರು: "ನಮ್ಮ ದೇಶದೊಳಗೆ ಬೇಕಾದರೆ ನಾವು ಅವರಿಗೆ ಪ್ರತ್ಯೇಕವಾಗಿರಲು ಬಿಡಬಯಸುತ್ತೇವೆ. ಆದರೆ ಒಂದು ಕೇಂದ್ರ ಸರಕಾರದ ಅಧೀನದಲ್ಲಿ ಅವರು ಇರಬೇಕು. ಈ ದೇಶವನ್ನು ವಿಭಾಗಿಸಲು ಹಿಂದುಗಳು ಎಂದಿಗೂ ಬಿಡಲಾರರು. ವಿಭಾಗಿಸಿದ ಮೇಲೆ ಅವರು ಹತ್ತಿರದ ಅಫಘಾನರೊಂದಿಗೆ ಸೇರಿ ಉಳಿದವರಿಗೆ ಅಪಾಯಕಾರಕರಾಗಿ ಪರಿಣಮಿಸುತ್ತಾರೆ. ಜಿನ್ನರು ನಮಗೆ ಕೊಡುತ್ತೇನೆಂದು ಹೇಳುವ ಭರವಸೆ ಭದ್ರತೆಗಳನ್ನೇ ನಾವು ಅವರಿಗೆ ಕೊಡಲು ಸಿದ್ಧರಿದ್ದೇವೆ." ಹೀಗೆಂದರು. ಕಾಂಗ್ರೆಸ್ ಲೀಗ್ ಮಾತುಕತೆಗಳ ಕುರಿತು ಮುಖರ್ಜಿಯವರು ಈ ರೀತಿ ಅಭಿಪ್ರಾಯ ಪಟ್ಟರು: "ಕೇಂದ್ರದಲ್ಲಿ ಬಲವಾದ ಸರಕಾರವೊಂದನ್ನು ಸ್ಥಾಪಿಸುವುದಕ್ಕೆ ಪ್ರಯತ್ನಗಳು ನಡೆಯುತಿದ್ದರೆ ನಾವು ಅದನ್ನು ಸಮರ್ಥಿಸುವೆವು. ಆದರೆ ಒಂದು ಎಚ್ಚರಿಕೆ: ಜಿನ್ನರನ್ನು ಸಮಧಾನ ಪಡಿಸಲು ಯಾರಿಗೂ ಸಾಧ್ಯವಿಲ್ಲ. ಯಾವಾಗಲೂ ಅವರ ಹೊಸ ಹೊಸ ಷರ್ತಗಳೂ ಇದ್ದೇ ಇವೆ." ಈ ವಿಷಯದ ಮೇಲೆ ಹೆಚ್ಚಿನ ಟೀಕೆ ಅಗತ್ಯವಿಲ್ಲ.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

CANARA BANK LIMITED

(Incorporated in British India with limited liability.)

(ESTD. 1906)

General Manager: **P. S. Nayak,** B. A., B. L., F. I. I. B.

LIABILITIES.

	Dec. 31, 1944 Rs.	1943 Rs.
Capital Subscribed.	29,00,000.	29,00,000.
Capital Paid up	26,33,583.	22,49,438.
Reserves	10,34,408.	8,54,188.
Deposits	2,30,69,445.	197,85,847.
Due to Bankers.	34,37,515.	20,00,000.
Call Deposits from Banks	8,50,000.	—
Branch Adjustments	13,83,632.	10,08,553.
Bills for Collection and Foreign Bills negotiated	18,31,405.	26,27,394.
Other Liabilities	1,30,633.	15,766.
Profit for the Year	2,75,195.	2,68,576.
Total	3,46,45,816.	2,88,09,762

ASSETS.

	Dec. 31, 1944 Rs.	1943 Rs.
Cash	58,97,414.	73,51,060.
Govt. Securities	1,17,93,098.	90,47,683.
Advances to Customers	1,43,36,118.	92,99,429.
Bills for Collection and Foreign Bills negotiated	18,31,405.	26,27,394.
Landed Properties	30,174.	70,736.
Bank Premises & Furniture & Fixtures	1,17,250.	93,963.
Other Assets	6,40,357.	3,19,497.
Total	3,46,45,816.	2,88,09,762.

ಕೆಲವು ನೋಟಗಳು

ಜೀವಂತರಿರುವಾಗಲೆ ತನ್ನದೆ ಸ್ಮಾರಕದ ಉದ್ಘಾಟನೆ ಮಾಡಿದ ವ್ಯಕ್ತಿಯ ಕುರಿತು ನೀವು ಕೇಳಿದುಂಟೆ? ನಾಜಿ ಸರಕಾರದ ಭೂವ್ಯವಸಾಯದ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ದಾರ್ರೆ ಎಂಬಾತನು, ಜರ್ಮನಿಯ ಒಂದೆಡೆ ತನ್ನದೆ ಒಂದು ಸ್ಮಾರಕವನ್ನು ಏರಿಸಲ್ಪಡುವ ಏರ್ಪಾಡು ಮಾಡಿ, ಅದರ ಉದ್ಘಾಟನೆಯನ್ನು ತಾನೆ ಮಾಡಿಬಿಟ್ಟನು! ತನ್ನ ಬೆನ್ನನ್ನು ತಾನೆ ತಟ್ಟುವಂತೆ-ತನ್ನನ್ನೇ ಶ್ಲಾಘಿಸಿ ಭಾರಿ ಒಂದು ಭಾಷಣವನ್ನು ಅಲ್ಲಿ ಉಸಿರಿದ್ದನಂತೆ!

ಈ ದಾರ್ರೆಯು ಜರ್ಮನ್ ಸ್ತ್ರೀಯರನ್ನು ಆಕಳುಗಳೋಪಾದಿ, ಉತ್ತಮ ಫಲ ಕೊಡುವ ಸ್ತ್ರೀಯರೆಂಬ ಒಂದು ವಿಭಾಗವನ್ನು ಕಲ್ಪಿಸಿದನಂತೆ. ಹೀಗೆ ಉತ್ತಮ ಫಲ ಕೊಡುವ ಸ್ತ್ರೀಯರನ್ನು ವಿಂಗಡಿಸಿದುದು ಮಾತ್ರವಲ್ಲದೆ, ಉತ್ತಮ ಪುರುಷರನ್ನೂ ಆರಿಸಿ ಭಾವಿ ಜರ್ಮನ್ ಜನಾಂಗವು ಅತ್ಯುತ್ತಮವಾಗುವಂತೆ ಏರ್ಪಡಿಸುವ ಯೋಜನೆಯೊಂದನ್ನು ಸಿದ್ಧಪಡಿಸಿದ್ದನಂತೆ.

* * *

ಜರ್ಮನಿಯೊಳಗೆ ನಾಜೀ ಪ್ರಭಾವ ಎಷ್ಟರವರೆಗೆ ಬೆಳೆಂದರೆ—ಹಿಟ್ಲರನೆ ಜರ್ಮನರ ದೇವರು, ನಾಜಿ ನೀತಿಯೆ ಅವರ ಧರ್ಮವಾಗಿತ್ತು. ಕ್ರೈಸ್ತಧರ್ಮವು ಅಲ್ಲಿ ಮಾಯವಾಗಿತ್ತು. ಜರ್ಮನಿಯೊಂದು ಮಾತ್ರ ಶ್ರೇಷ್ಠ ರಾಷ್ಟ್ರ ಎಂಬ ಅಂಧ ರಾಷ್ಟ್ರಾಭಿಮಾನವು ಅವರಲ್ಲಿ ಉಂಟಾಗಿತ್ತು. ನಂಬಿದ ದೇವರು ಸದ್ಯಕ್ಕೆ ಜರ್ಮನಿಗೆ ಯಾವ ಸ್ಥಿತಿಯನ್ನು ತಂದೊದ್ದಿದ್ದಾನೆ ನೋಡಿ!

* * *

ಫ್ರೆಂಚ್ ರಿಪಬ್ಲಿಕ್ ಸರಕಾರದ ೬೫ ವರ್ಷಗಳ ಜೀವಾವಧಿಯಲ್ಲಿ, ೯೮ ಮಂತ್ರಿಮಂಡಳಗಳು ಅಧಿಕಾರ ನಡೆಯಿಸಿರುತ್ತವೆ.

* * *

ಒಮ್ಮೆಫ್ರಾನ್ಸಿನ ಪ್ರಧಾನ ಮಂತ್ರಿಯರ್ಯಾಗಿದ್ದ ಲಾವಲರು, ಹಳ್ಳಿಯ ಕಟುಗಾರನ ಮನೆಯಲ್ಲಿ ಜನನ ಹೊಂದಿಕೊಂಡು, ಅಧ್ಯಾಪಕ ವೃತ್ತಿಯಿಂದ ಪ್ರಾರಂಭವಾದಿ ನಂತರ ನ್ಯಾಯಶಾಸ್ತ್ರದ ವ್ಯಾಸಂಗ ಮಾಡಿ ಬೆರಿಸ್ಟರಾಗಿ, ಕೊನೆಗೆ ಉನ್ನತ ಸ್ಥಾನವನ್ನು ಸೇರಿದ್ದರಂತೆ.

* * *

ಫ್ರೆಂಚ್ ಸರಕಾರದ ಪ್ರಧಾನ ಮಂತ್ರಿ ಪದವಿಯನ್ನು ಪಡೆದವರಲ್ಲಿ ಒಬ್ಬನಾದ ಎಡ್ವರ್ಡ್ ಹೆರಿಯೋರವರ ವಿಶೇಷ ಗುಣವೆಂದರೆ, ಭಾಷಣಗಳನ್ನು ಅತ್ಯಂತ ಭಾವನಾವೇಶದಿಂದ (ಎದೆಯ ಮೇಲೆ ಕೈಯಿಟ್ಟು) ಮಾಡುವುದು ಮತ್ತು ಬೇಕಾದ ಸಂದರ್ಭಗಳಲ್ಲಿ ಪ್ರೇಕ್ಷಕರ ಮನ ಒಲಿಸಲು ಕಣ್ಣೀರಧಾರೆಯನ್ನು ಸುರಿಸುವುದು. ಹಿಟ್ಲರನು ಈ ಉಪಾಯವನ್ನು ಈಗ ಉಪಯೋಗಿಸುತ್ತಿರಬಹುದು.

* * *

ಫ್ರಾನ್ಸನ್ನು ಫೆಸಿಸ್ಟ್ ಪ್ರಭುತ್ವವನ್ನಾಗಿ ಪರಿವರ್ತಿಸಲು ಅನೇಕ ಯತ್ನಗಳು ನಡೆದಿದ್ದರೂ ಅಲ್ಲಿ ಸಾಮ್ಯವಾದ ನೀತಿಯು ಕೊನೆಗೆ ಪ್ರಜಾಸತ್ತೆಯನ್ನೆ ಎತ್ತಿಹಿಡಿಯಿತು. ಅಲ್ಲಿನ 'ಪ್ರೆಂಚ್ ಪೊಪ್ಯುಲೆರ್' ಎಂಬ ಸೌಮ್ಯವಾದ ಸಂಸ್ಥೆಯಿಂದ ನಾಜಿಗಳಿಗೆ ಬಲವಾದ ವಿರೋಧವು ಬೆಳೆಯಿಸಲ್ಪಟ್ಟಿತ್ತು. ಈ ಸಂಸ್ಥೆಯು, ಮುಖಂಡರಾದ ಲಿಯೊನ್‌ಬ್ಲುಮರು ರೂಢಿಗೆ ತಂದ ಸುಧಾರಣಾಕ್ರಮಗಳಿಂದ ಅಲ್ಲಿ, ನಿರಂಕುಶಪ್ರಭುತ್ವ, ಅಂಧ ರಾಷ್ಟ್ರಾಭಿಮಾನ,- ಇವೇ ಮೊದಲಾದ ಫೆಸಿಸ್ಟತತ್ವಗಳು ತಲೆಎತ್ತದಂತಾಯಿತು.

* * *

ಕಳೆದ ಯುದ್ಧೋತ್ತರದಲ್ಲಿ, ಸಮರಭೂಮಿಯಿಂದ ಹಿಂತಿರುಗಿದವರಿಂದ ಜರ್ಮನಿಯಲ್ಲಿ ನಾಜಿ ಪಕ್ಷವು ಏರ್ಪಟ್ಟಂತೆ ಫ್ರಾನ್ಸಿನಲ್ಲೂ ಅದೇ ತರದ ಪಂಗಡವೊಂದು ವ್ಯವಸ್ಥೆಯಾಗಿತ್ತು. ಆದರೆ ನಾಜಿಗಳಿಗೆ ದೊರೆತ ಅವಕಾಶವು ಈ ಪಂಗಡಕ್ಕೆ ಒದಗುದರಿಂದ ಮತ್ತು ಪ್ರತಿಗಾಮಿ ಪಂಗಡಗಳನ್ನು ವಿಸರ್ಜಿಸುವ ಬ್ಲುಮ್‌ರ ಶಾಸನಕ್ರಮದಿಂದ ಈ ಪಂಗಡವು ಕತ್ತಲೆಗೆ ಹೋಯಿತು.

* * *

ಮುಸಲೇನಿಯು ಅತೀ ಬಡ ಕುಟುಂಬದಲ್ಲಿ ಜನಿಸಿದವನು. ಆತನ ತಾತ ಕ್ರಾಂತಿಗಾರನಾಗಿದ್ದ. ಮುಸಲೇನಿಯು ಅತ್ಯಂತ ಬುದ್ಧಿವಂತ. ಸಾಮ್ಯವಾದ ಕುರಿತು ಅನೇಕ ಗ್ರಂಥಗಳು ಆತನಿಂದ ರಚಿತವಾಗಿದ್ದವು. ಚಿಕ್ಕಂದಿನಲ್ಲಿ ಆತನಿಗೆ ರಷ್ಯದ ಕ್ರಾಂತಿಗಾರನೊಬ್ಬನ ಸಂಪರ್ಕವಾಗಿತ್ತು. ಈ ಕಾರಣಗಳಿಂದ ಸಾಮ್ಯವಾದೀ ನೀತಿಗಳು ಆತನಲ್ಲಿ ಬಲವಾಗಿ ಬೇರೂರಿದ್ದವು. ರಷ್ಯದ ಕ್ರಾಂತಿನಾಯಕ ಲೆನಿನ್ನರಿಗೆ ಅಜ್ಞಾತವಾಸದಲ್ಲಿರುವಾಗ, ತರುಣ ಮುಸಲೇನಿಯ ಪರಿಚಯವಾಗಿತ್ತು. ಮುಸಲೇನಿಯ ಕುರಿತು ಅವರಲ್ಲಿ ಒಳ್ಳೆ ಅಭಿಪ್ರಾಯಗಳುಂಟಾಗಿದ್ದವು. [ಮುಸಲೇನಿಯು ಆತನ ೨೦ನೇ ವಯಸ್ಸಿನ ತನಕ ಕಾಫಿಯನ್ನೇ ನೋಡಲಿಲ್ಲವಂತೆ] ಇಂಥವನು ಕ್ರಮೇಣ ಫೆಸಿಸ್ಟ್ ನಿರಂಕುಶ ಪ್ರಭುತ್ವದ ನಾಯಕನಾದನು! ದೇಶಭ್ರಷ್ಟನಾಗಿ ಪಲಾಯನ ಮಾಡಿದನು.

* * *

ಚರ್ಚಿಲ್ಲರ ತಾಯಿಯ ತವರುಮನೆ ಸಂಯುಕ್ತ ಅಮೇರಿಕಾ.

* * *

ಚರ್ಚಿಲ್ಲರ ದ್ವೇಷಗಳಲ್ಲಿ, ಕೊಮ್ಯುನಿಸ್ಟರ ಕುರಿತು ದ್ವೇಷವು ಅತಿ ಬಲವಂತದಾಗಿತ್ತು. ದೊಡ್ಡ ವಿಚಿತ್ರವೆಂದರೆ ಇಂದು ಚರ್ಚಿಲ್ಲರು ಮತ್ತು ಸ್ಟೈಲೀನರು ಒಂದೇ ಶಿಭಿರದಲ್ಲಿ ಮಡಿಯುತ್ತಿರುವುದು!

* * *

ಚರ್ಚಿಲ್ಲರು ಚತುರ ಭಾಷಣಗಾರರು. ಅವರ ಭಾಷಣಗಳಲ್ಲಿ ಮಾತುಗಳ ಡಂಬಾಚಾರ ತುಂಬ. ದೊಡ್ಡ ದೊಡ್ಡ ಮಾತುಗಳನ್ನು ಆಡುವುದರಲ್ಲಿ ಅವರಿಗೆ ತುಂಬಾ ಅನುರಾಗ. ಹಿಟ್ಲರನು ಬ್ರಿಟನಿನ ಮೇಲೆ ಯುದ್ಧ ಸಾರಿದ ಸಮಯ, ಆತನನ್ನು ಎದುರಿಸಲು ಅರ್ಧ ಮನಸ್ಸಿನ ಸಿದ್ಧತೆಗಳನ್ನು ಮಾಡಿದ ಸರಕಾರವನ್ನು ಹುರಿದುಂಬಿಸಿ, ಇಡೀ ರಾಷ್ಟ್ರದಲ್ಲೆ ಸಮರಚೇತನವು ಉಂಟಾಗುವಂತೆ ಮಾಡಿದ್ದೂ ಅವರ ಭಾಷಣ ಚಾತುರ್ಯವೇ.

* * *

ಲೇಬರ್ ಮುಖಂಡರುಗಳಲ್ಲಿ ಒಬ್ಬರಾದ ಕ್ರಿಪ್ಸ್‌ರು-ತಂದೆ ಲೋರ್ಡ್ ಪಾರ್ಮೂರ್-ಶ್ರೀಮಂತ ಪುರುಷರು. ಇವರ ವರ್ಷ ಒಂದರ ದುಡಿಮೆ £ ೩೦,೦೦೦. ಸರ್ ಜೋನ್ ಸ್ಯಾಮನರಂತೆ ಇವರೂ ಚಾಣಾಕ್ಷ ವಕೀಲರು. ಸಾಮ್ಯವಾದ ನೀತಿಯ ಸಿದ್ಧಾಂತಗಳು ಅನೇಕ ಇವರಿಂದ ಹೊರಡಿಸಲಾಗಿವೆ.

* * *

ಇಂಗ್ಲಾಂಡಿನ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನಲ್ಲಿ ಟೋರಿ ಪ್ರಭಾವವೇ ಹೆಚ್ಚು.

* *

ಲಂಡನಿನ ಬಂಡವಾಳಗಾರರ ಧಾರಾಳಧನವು ಜರ್ಮನಿಯೊಳಗೆ ಸಂಚಯಿಸಲ್ಪಟ್ಟಿತ್ತು.

* * *

ಈಡೆನ್ನರು 'ಪೌರ್ವಾತ್ಯ ಭಾಷೆಗಳು' ಎಂಬ ವಿಷಯದಲ್ಲಿ ಓಕ್ಸಫರ್ಡಿನಲ್ಲಿ ವ್ಯಾಸಂಗಮಾಡಿ, ಉಚ್ಛ ಶ್ರೇಣಿಯಲ್ಲಿ ಪಾಸಾಗಿದ್ದರು. ಅವರಿಗೆ ಪರ್ಶಿಯನ್ ಭಾಷೆ ಗೊತ್ತಿದೆ.

* * *

ಸರ್ ಜೊನ್ ಸ್ಯಾಮನರು ಹಿಂದೂದೇಶವನ್ನು ಸುತ್ತಾಡಿ ತಯಾರಿಸಿದ ಉದ್ದದ ವರದಿಯಲ್ಲಿ ಗಾಂಧೀಜಿಯವರ ಕುರಿತು ಪ್ರಸ್ತಾಪವೇ ಇಲ್ಲ!

ಪಾದಪೀಠ

("ಗೀತಾಂಜಲಿ"ಯಿಂದ)

ಇದುವೆ ನಿನ್ನಯ ಇದುವೆ ನಿನ್ನಯ
ಪಾದ ಪೀಠವು ಒಡೆಯನೆ-
ಎಲ್ಲಿ ಬಡವರು ದೀನ ಪತಿತರು
ಕಾಲಕಳೆಯುವರಲ್ಲಿಯೆ.
ಮುಟ್ಟಲರಿಯದು 'ನಮ' ಪ್ರಣಾಮವು
ನಿನ್ನ ಪಾದದ ಆಳಿವಾ-
ಎಲ್ಲಿ ಬಡವರು ದೀನ ಪತಿತರು
ಕಾಲಕಳೆಯುವರಲ್ಲಿಗೆ.
ಸಾಗದಲ್ಲಿಗೆ ಹಮ್ಮು ಸರ್ವಥ
ಜಾಗರದಿ ನೀನಲೆವಲ್ಲಿಗೆ
ಜಗದ ಬಡವರ ದೀನ ಪತಿತರ
ಸೋಗಿನಿಂ ನೀ ಚಲಿಪಲ್ಲಿಗೆ.
ಎನ್ನ ಹೃದಯವು ಹರಿಯಲೊಲ್ಲದು
ನಿನ್ನ ಸ್ನೇಹದ ಇಂಬಿಗೆ
ಎಲಿ ಬಡವರು ಗೆಳೆಯರಿಲ್ಲದೆ
ಕಾಲಕಳೆಯುವರಲ್ಲಿಗೆ.

ದಾಮೋದರ

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣಪದಕ ಪಡೆದ ಮಂಗಳೂರು ನಾಮಾಂಕಿತ್ವ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ಸಿಹಿ ಸುದ್ದಿ ಸಂಗ್ರಹ

ಯುದ್ಧಾನಂತರ ನಮ್ಮ ದೇಶದಲ್ಲಿ ಒಂದು ಚಕ್ರದ ಗಾಡಿಗಳು ಉಪಯೋಗಕ್ಕೆ ಬರಬಹುದು. ಹಿಂದಿನ ಕಾಲದಿಂದ ಚೀನದಲ್ಲಿ ಇಂತಹುಗಳು ಚಲಾವಣೆಯಲ್ಲಿವೆ. ಸಿಮೆಂಟ್ ತಯಾರಕರ ಸಂಘದ ಇಂಜಿನಿಯರಾದ ಮಿ| ಕೆನ್ನರ್‌ಸ್ಲೇ ಎಂಬವರು ಇಂತಹ ಗಾಡಿಗಳ ಚಿಕ್ಕ ಮಾದರಿಗಳನ್ನು ಸಿದ್ಧ ಮಾಡಿದ್ದು, ಆಗಲೇ ಬೊಂಬ್ಯಾ ಸರಕಾರದವರು ತಮ್ಮ ಹಳ್ಳಿ ಉದ್ಧಾರದ ಯೋಜನೆಯಲ್ಲಿ ಈ ವಿಷಯವನ್ನು ಸೇರಿಸಿರುವರು. ಅಗಲ ಕಿರಿದು ಮಾರ್ಗಗಳಿದ್ದಲ್ಲಿ ಇವು ತುಂಬಾ ಅನುಕೂಲ—ಖರ್ಚು ಕಮ್ಮಿ.

* * *

ಹಿಂದೂ ದೇಶವನ್ನು ಬಿಟ್ಟರೆ ಇತರ ಎಲ್ಲಾ ದೇಶಗಳಲ್ಲೂ ಗಂಡಸರಿಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಇಂಗ್ಲೆಂಡಿನಲ್ಲಿ ಪ್ರತಿ ಐದು ಸ್ತ್ರೀಯರಲ್ಲಿ ಒಬ್ಬಳೂ, ಅಮೇರಿಕದಲ್ಲಿ ಪ್ರತಿ ಏಳರಲ್ಲಿ ಒಬ್ಬಳೂ ಜೀವಮಾನವನ್ನು ಬ್ರಹ್ಮಚಾರಿಣಿಯಾಗಿಯೇ ಕಳೆಯಬೇಕು. ಸ್ವೀಡನ್ ದೇಶದಲ್ಲಿ ಮಕ್ಕಳು ಕಡಿಮೆ. ಕಾರಣ ಅಲ್ಲಿಯವರು ಮದುವೆ ಮಾಡಿಕೊಳ್ಳುವುದು ಹೊತ್ತಾಗಿ.

* * *

ಸಂಯುಕ್ತ ಅಮೇರಿಕದಲ್ಲಿ ಈಗ ೪೮ ಪ್ರಾಂತ್ಯಗಳಿವೆ. ಸ್ವತಂತ್ರರಾಗುವ ಮೊದಲು ಇವುಗಳನ್ನು ೬ ವಿದೇಶಿ ಸರಕಾರಗಳು ಆಳುತಿದ್ದವು. ಈ ಪ್ರಾಂತ್ಯಗಳಲ್ಲಿನ ೩೦ ಉಪಭಾಗಗಳನ್ನು ಬ್ರಿಟಿಷರೂ, ೨೫ ಪ್ರಾಂತ್ಯಾಂತರ್ಗತ ಪ್ರದೇಶಗಳನ್ನು ಫ್ರೆಂಚರೂ, ೧೯ ಸ್ಪೆನಿನವರೂ, ೮ ಮೆಕ್ಸಿಕೋದವರೂ, ನಾಲ್ಕನ್ನು ಡಚ್ಚರೂ ಮತ್ತು ಎರಡನ್ನು ಸ್ವಿಡಿಶ್ ಜನರೂ ಆಳುತಿದ್ದರು.

* * *

ಮಕ್ಕಳು ತಾಯಿಯ ಹೊಟ್ಟೆಯಲ್ಲಿರುವಾಗಲೇ ಕೆಲವು ಸಲ ಅಳುತ್ತವೆ. ಅಮೇರಿಕದ ಒಂದು ಹೆಂಗೆ ಆಸ್ಪತ್ರೆಯಲ್ಲಿ ಒಂದು ಮಗು ೪೦ ಮಿನಿಟುಗಳ ತನಕ ಅತ್ತಿತು. ಅದು ಎಷ್ಟು ಗಟ್ಟಿಯಾಗಿ ಅಂದರೆ ಹೊಟ್ಟೆಯೊಳಗಿನಿಂದಲೇ ಅದರ ಕೂಗು ಪಕ್ಕದ ಕೋಣೆಯಲ್ಲಿ ಕೇಳಿಸಿತಂತೆ.

* * *

ಉತ್ತರ ಧ್ರುವ ಪ್ರದೇಶವು ಅತೀ ಶೀತವಾದ ಪ್ರದೇಶ. ಅಲ್ಲಿ ನೀರು ಸದಾ ಹೆಪ್ಪುಗಟ್ಟಿರುತ್ತದೆ. ಆದರೆ ಬೇಸಿಗೆ ಕಾಲದಲ್ಲಿ ಕೆಲ ಸಮಯ ಅಲ್ಲಿನ ಉಷ್ಣತೆಯು ೯೫ ಡಿಗ್ರಿ (ಅಂದರೆ ನಮ್ಮ ಪ್ರದೇಶದಷ್ಟೆ) ಯಷ್ಟೂ ಆಗುತ್ತದಂತೆ.

* * *

ನೀರು ಹೆಪ್ಪುಗಟ್ಟುವ ಧ್ರುವಪ್ರದೇಶಗಳಲ್ಲಿನ ಇನ್ನೊಂದು ವಿಶೇಷ ಸಂಗತಿ ಎಂದರೆ-ಅಲ್ಲಿ ಪಿಸು ಮಾತನಾಡಿದರೆ ಎರಡು ಮೈಲು ದೂರದಲ್ಲಿ ಸ್ಪಷ್ಟ ಕೇಳಿಸುತ್ತದೆಯಂತೆ.

* * *

ಈಚೆಗೆ ಜಪಾನಿನ ನಗರಗಳ ಮೇಲೆ ಆಗುತ್ತಿರುವ ಮಿತ್ರ ವಿಮಾನ ದಾಳಿಯಿಂದ ತುಂಬಾ ಹಾನಿಯಾಗಿದೆ. ಜಪಾನಿಯರು ಐರೋಪ್ಯ ಉಡುಪುಗಳನ್ನು ಧರಿಸಬಾರದಾಗಿ ಅಲ್ಲಿ ರಾಜಾಜ್ಞೆಯಾಗಿದೆ.

ಕುರುಡು ದೃಷ್ಟಿ

(೨ನೇ ಪುಟದಿಂದ)

ಮಾಡಿ ಪುಣ್ಯದರಾಶಿ ದೋಚಿದ್ದೇನೆ. ಊರಮಂದಿಗೆ ಹರಸುವ ನನಗೆ ನೀನು ಹೇಳುವದರಿಂದ ಶುಭವಾಗುವುದೇ? ನೀನು ಇಲ್ಲಿ ನಿಂತಿರುವುದರಿಂದಲೇ ಬರುವ ಜನವೂ ಬರಲಿಲ್ಲ. ಸಾಲದ್ದಕ್ಕೆ ಯಾರಿಗೋ.....ರಕ್ಕೆ ಹುಟ್ಟಿದ ಮಗು, ಥೂ' ಎನ್ನುತ್ತ ಗದರಿಸಿ ನಡೆದನು. ಭಿಕ್ಷುಕಿ ದಿಟ್ಟಿಸಿದಳು. ಪೂಜಾರಿಯ ಕಡೆಯ ಮಾತಿಂದ ನೊಂದಳು. ಮಗು ಏನೋ ಅಂತೆ ಯಾರದೊ ಅಂತೆ? ಛೀ ಎಂತಹ ಅಪವಾದ ಎನ್ನುತ್ತ ದೇವರಿಗೆ ಕೈಮುಗಿದಳು. ನಮಿಸುವ ಸನ್ನೆ ಮಾಡಿದಳು. ಕಂಠ ಬಿಗಿದು ಬಂದಿತ್ತು. ಗಾಯದ ಮೇಲೆ ಬರೆ ಎಳೆದಂತೆ ಸ್ಥಿತಿಯಾಗಿತ್ತು. ದಣುವಾರಿಸಲೆಂದು ಮಾವಿನ ಮರದೆಡೆಯಲ್ಲಿ ಕುಳಿತು ಅಂದಿನ ದಿನಚರಿ ಯೋಚಿಸಿದಂತೆ ಸ್ಮೃತಿಪಟಲದಲ್ಲಿ ಚಿತ್ರಗಳಂತೆ ಸಂಗತಿಗಳು ಸುಳಿದು ಮಾಯವಾದವು.

ಧರ್ಮಕ್ಕೆ ಹೆಸರಾದ, ಬೇಡಿದವಗೆ ಇಲ್ಲೆಂಬ ಸೊಲ್ಲಿಲ್ಲದ ಕೊಡುಗೈಗೆ ಪ್ರಸಿದ್ಧಿಯಾದ ಊರು ಬರಿದಾಯಿತೇ ಎನ್ನುತ್ತ ಮಡಿಲಲ್ಲಿರುವ ಮಗುವಿನ ಮುಖ ದಿಟ್ಟಿಸಿದಳು. ಅದರಾಶೆ-ಹಾಲಿನಾಶೆ-ನೀಗಿಸದ್ದಕ್ಕಾಗಿ ಮರುಗಿದಳು. ಮಗು ಹಸಿವಿನ ಯಾತನೆ ಮುಖದಲ್ಲಿದ್ದು, ಬೇಡಿದ ವಸುವನ್ನೀವ ಕಲ್ಪವೃಕ್ಷದಂತಿರುವ ತಾಯಿ ಇರುವ ತನಕ ಯಾವ ಭಯವೂ ತನಗಿಲ್ಲೆಂಬ ಧೈರ್ಯದಿಂದ ಕಣ್ಮುಚ್ಚಿ ಬೆರಳು ಚೀಪುತ್ತಿತ್ತು. ನಾರಿಯೊಬ್ಬಳು ಕೈಯಲ್ಲಿ ಹರಿವಾಣ ಹಿಡಿದೆತ್ತಿ ಕಟ್ಟೆಯನ್ನೇರಿ ಮಕ್ಕಳಾಗಬೇಕೆಂಬ. ಬಯಕೆಯಿಂದ ಮರದ ಬುಡದಲ್ಲಿರುವ ನಾಗನ ಪೂಜೆಗೈಯಲು ಬಂದಳು. ಪ್ರದಕ್ಷಿಣೆಗೈದು ಹರಿವಾಣ ಕೆಳಗಿಟ್ಟಳು. ಹರಿವಾಣದಲ್ಲಿ ಅರ್ಪಿಸಲು ಹೂ ಹಣ್ಣು ಹಾಲು ಮಡಗಿತ್ತು. ನಾರಿಯ ಮುಖವನ್ನು ಕಂಡೊಡನೆ ಭಿಕ್ಷುಕಿ ಮಗುವಿನೊಂದಿಗೆ ಆಶೆಯಿಂದ ಬಂದಳು. ನಾಗನಿಗೆ ನಮಸ್ಕರಿಸಿ ಏಳುತ್ತಿದ್ದ ಸ್ತ್ರೀ 'ಅಮ್ಮಾ' ಎಂಬ ಕರುಣ ವಾಣಿ ಕೇಳಿ ತಿರುಗಿ ನೋಡಿದಳೊಮ್ಮೆ, ಭಿಕ್ಷುಕಿಯು ಮಗುವಿನೊಂದಿಗೆ ಕೈ ಒಡ್ಡಿದ್ದಾಳೆ. ತಾಯಿಯ ಸ್ವರಕೇಳಿ ಮಗು ಬೆರಳು ಚೀಪುವುದನ್ನು ಬಿಟ್ಟು ಹರಿವಾಣವನ್ನು ಕಣ್ಣು ಮಿಟುಕಿಸದೆ ನೋಡುತ್ತಿತ್ತು—ಗಮನ ಹಾಲಿನ ಮೇಲಿತ್ತು. 'ಅಮ್ಮಾ ಈ ಮಗುವಿಗೆ ಹಾಲುಕೊಟ್ಟು ಕಾಪಾಡು ತಾಯಿ' ಎಂದು ಆರ್ತಳಾಗಿ ಬೇಡಿದಳು. 'ಅಯ್ಯೋ ನೀನು ಇಲ್ಲಿಗೂ ಬಂದೆಯಾ, ನಾನು ಮಡಿಯಲ್ಲಿದ್ದೇನೆ—ದೂರನಿಲ್ಲು' ಎನ್ನುತ್ತ ನಾಗನಿಗೆ ಹಾಲನ್ನೆರೆಯಲು ಪಾತ್ರೆ ಎತ್ತಿದಳು. 'ಅಮ್ಮಾ ನಿಮ್ಮ ಹಾಗೆಯೇ ನಾನು ಸ್ತ್ರೀ. ನಾನು ದಿನಕೂಲಿಯಾಕೆ. ಕೈಹಿಡಿದಾತನು, ಈ ಮಗುವಿನ ಜನಕನು, ಮಗು ಬೆಳಕು ಕಂಡ ಎರಡು ತಿಂಗಳಲ್ಲಿ ಕಾಲನಿಗೆ ಸಂದನು. ಮನೆಮಾರು ಸಾಲದ ಪಾಲಾಯ್ತು. ಅಂದಿನಿಂದ ಹತ್ತು ತಿಂಗಳು ಸಂದಿತು. ತಿರುಪೆಯಲ್ಲಿದ್ದೇನೆ. ನಾನು ಉಣ್ಣದೆ ಎರಡು ದಿನಗಳಾಯ್ತು. ಈ ಹಸಿದ ಮಗು ಹಾಲಿಗಾಗಿ ತವಕಿಸುತ್ತದೆ. ಆ ಹಾಲು ಕೊಟ್ಟು ಉಳಿಸು ತಾಯಿ, ದೇವರು ನಿಮ್ಮ ಅಭೀಷ್ಟ ಸಿದ್ಧಿಸಲಿ' ಎಂದು ತನ್ನ ಬಾಳಬವಣೆಯನ್ನು ಉಸುರಿದಳು. ಹೆಂಗಸಿಗೆ ಸಿಟ್ಟು ಬಂತು: 'ಏನು ಮಾತಾಳಿ! ದೇವರಿಗೆ ತಂದ ಹಾಲನ್ನು ಮಗುವಿಗೆ ಕೊಡಬೇಕೇ ನಿನ್ನಲ್ಲಿ ಮಾತಾಡಿ ಮಡಿ ಮೈಲಿಗೆಯಾಯ್ತು. ತೊಲಗಾಚೆ' ಎನ್ನುತ್ತ ಹಾಲನ್ನು ಕಲ್ಲ ಮೇಲೆ ಸುರಿಯಲು ಪ್ರಾರಂಭಿಸಿದಳು. ಮಗುವಿನ ಆಶಾಭರಿತ ಕಣ್ಣಿನಲ್ಲಿ ಹೋಗುತ್ತದಲ್ಲಿ ಎಂಬ ನಿರಾಶೆ ಸುಳಿವು ಹೊಳೆಯಿತು. ಪಾತ್ರೆಯಲ್ಲಿನ ಹಾಲು ಭೂಮಿಗೆ ಇಳಿಯುತ್ತಿದ್ದಂತೆ ಮಗುವಿನ ಕಣ್ಣು ಮುಚ್ಚುತ್ತ ಬಂತು. ಜೀವವು ಕಸಿವಿಸಿಗೊಂಡಿತು. ಹಾಲು ಬಿಸಿ ನೆಲದಲ್ಲಿ ಚರಚರನೆ ಇಂಗಿತು. ಮಗುವಿನ ಚೈತನ್ಯವೂ ಉಡುಗಿತು. ತಾಯಿ ಮಗುವನ್ನು ನೋಡಿದಳು. ಚಲನವಲನಗಳಿಲ್ಲದೆ ಬಾಡಿದ ಹೂವನಂತಿರುವವನ್ನು ಕೆಳಗಿರಿಸಿದಳು. ಪೂಜಾ ಸ್ತ್ರೀ ನೋಡಿ ಲಗುಬಗೆಯಿಂದ ಹೂವನ್ನು ಕಲ್ಲ ಮೇಲೆ ಸುರಿದು ಗಡಿಬಿಡಿಯಿಂದ ನಡೆದಳು. ಭಿಕ್ಷುಕಿ ಮಗುವಿನ ದೇಹವನ್ನು ಕೈಯಲ್ಲಿ ಎತ್ತಿಕೊಂಡು 'ಮಕ್ಕಳಿದ್ದವರಿಗೂ ಮಕ್ಕಳ ಹಸಿವು ತಿಳಿಯದು. ಮಕ್ಕಳಿಲ್ಲದವರಿಗೆ ಹೇಗೆ ತಿಳಿಯಬೇಕು? ಜೀವವಿಲ್ಲದ ಕಲ್ಲಿಗೆ ಹಾಲೆರೆಯುವ ಮೃಧುಹೃದಯವಿದೆ ಪರಂತು ಜೀವವಿರುವ ದೇಹಕ್ಕೆ ಹಾಲೆರೆಯುವಷ್ಟು ಎದೆ ಕಗ್ಗಲ್ಲು.' ಎನ್ನುತ್ತ ನದಿಯ ಕಡೆ ಸಾಗಿದಳು. ಮರಳಿದ ಹೆಜ್ಜೆಯ ಚಿನ್ಹೆ ಯಾರಿಗೂ ಕಾಣಲಿಲ್ಲ. ಜಗತ್ತು ನೋಡಿತು—ತನ್ನಲ್ಲಿ ಜನಿಸಿದ ಒಂದು ಜೀವವನ್ನು ಸಾಕಲಿಕ್ಕೆ ಸಮಾಜವು ಕುರುಡು ದೃಷ್ಟಿಯಿಂದ ಮರೆಯುತ್ತಿದೆ ಎಂಬುದನ್ನು. ಎಂ. ಎಸ್. ಭಟ್.

BOOKS RECEIVED.

1. Socialist and the Polish Cause-Contributors-M. R. Masani, Phillip Murray, Robert watt, David Dubinsky.
2. What Poland Wants-By Ignacy Matuszewski. Price 0-12-0
3. The Core of a Continen-(Problems of Central and Eastern Europe)-by Henry Strasburger. Price 1-8-0
4. Socialists and Poland-by Patrick J. Dollan· Price 0-10-0
5. Russia, Poland and India-by S. R. Ali.
6. Free Poland-By Major Macdonald Jalowiecki and J. Barski.
7. History of Poland-(An analytical Summary-by W. R. Price 1-8-0

All the above books are published by The INDO-POLISH LIBRARY and distributed for India through PADMA PUBLICATIONS LIMITED, Sir Phirozshah Mehta Road, Bombay.

NOTICE

The Bombay Life Assurance Company, Limited.

Notice having been given of the Loss of Policy No: 10121 on the Life of Mr. Mugga Mudenkila alias Birmanna Poojary a duplicate policy will be issued unless objection is lodged with us within one month from this date.

K. Balasubrahmanyam
Manager & Actuary.

Bombay 5-2-45

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

THE BANK OF MANGALORE, Ltd.,
MANGALORE.
Interest on Fixed Deposits.

It is notified forthe information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly wth effect from 1-1-1945

Office of the Bank, Mangalore, 30th Oct. 1944. By Order H. S. KAMATH, Manager.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
(ಸ್ಥಾಪನೆ: 1908)
ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು
1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ
ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
(ಸ್ಥಾಪನೆ: 1910)
ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ
1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.
ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 16—2—1945 [ಸಂಚಿಕೆ 7]

ವಿದೇಶ ವರ್ತಮಾನಗಳಲ್ಲಿ ರಷ್ಯನ್ ಮುನ್ನಡೆ ಮತ್ತು ತ್ರಿಮೂರ್ತಿಗಳ ಮಾತುಕತೆಗಳೇ ಪ್ರಧಾನವಾದ ವಿಷಯಗಳು. ಜರ್ಮನರು ಬರ್ಲಿನ್ ನಗರದ ರಕ್ಷಣೋಪಾಯಗಳನ್ನು ಮಾಡುತ್ತಿರುವರು. ಮಿತ್ರ ವಿಮಾನಗಳು ಜರ್ಮನ್ ರಾಜಧಾನಿಯನ್ನು ಧ್ವಂಸಮಾಡಲು ಪ್ರಯತ್ನಿಸುತ್ತಿರುವರು. ಇಷ್ಟಾದರೂ ಜರ್ಮನಿಗೆ ಗಂಡಾಂತರದ ಸಂದರ್ಭ ಬಂದಿಲ್ಲವಂತೆ. ಡಾ। ಗೊಬೆಲ್ಸನ ಒಂದು ವರದಿಯಂತೆ "ರಷ್ಯನರು ಅಪಾಯದ ಗಡಿಯನ್ನು ಮುಟ್ಟಿದೊಡನೆ ಒಂದೇ ಸವನೇ ಹೊಡೆದುಹಾಕಲ್ಪಡುವರು. ಅದುತನಕ ನಾವು ಸಣ್ಣ ಸಣ್ಣ ಏಟುಗಳನ್ನನುಭವಿಸಬೇಕಾಗಿದೆ" ಎಂಬ ಆಶ್ಚರ್ಯಕರವಾದ ಹೇಳಿಕೆ ಕೊಟ್ಟಿರುವನು. ಇಂತಹ ಅನೇಕ ಬೆದರಿಕೆಗಳನ್ನು ಸ್ಟೇಲಿನನು ಗಮನಿಸನೆಂಬುದನ್ನು ಹಿಟ್ಲರನ ಪ್ರಚಾರ ಮಂತ್ರಿಗೆ ತಿಳಿಯದಿದ್ದುದು ಸೋಜಿಗ.

ಚಿಕ್ಕ ರಾಷ್ಟ್ರಗಳ ಕೇಳಿಕೆ

ತ್ರಿಮೂರ್ತಿಗಳ ಮಾತುಗಳಲ್ಲಿ ನಿರ್ಣಯಗಳನ್ನು ಕೊನೆಯದಾಗಿ ಒಪ್ಪಿಕೊಳ್ಳುವ ಮೊದಲು ಚಿಕ್ಕ ಚಿಕ್ಕ ಇತರ ರಾಷ್ಟ್ರಗಳನ್ನು ವಿಚಾರಿಸಿಕೊಳ್ಳುವುದು ಒಳಿತೆಂದು ಯುರೋಪಿನ ಸಣ್ಣ ರಾಷ್ಟ್ರಗಳಲ್ಲಿ ಬಲವಾದ ಅಭಿಪ್ರಾಯ ಸೂಚಿಸಲಾಗಿದೆ. ಫ್ರಾನ್ಸಿನ ಡಿಗೋಲೆಯವರಿಗೂ ಈ ಮಾತುಕತೆಗಳಲ್ಲಿ ಒಂದು ಸ್ಥಾನ ಕೊಡದಿದ್ದುದು ಬಹಳ ಹೊಟ್ಟೆ ಉರಿಗೆ ಕಾರಣವಾಗಿದೆ. ಯುದ್ಧವನ್ನು ಆದಷ್ಟು ಶ್ರೀಘ್ರವಾಗಿ ಅಂತ್ಯಗೊಳಿಸುವುದೇ ಮಾತುಕತೆಗಳ ಚರ್ಚೆಯ ಪ್ರಧಾನ ವಿಷಯವೆಂದು ಊಹಿಸಲಾಗಿದೆ.

ಹಂಚಿಕೊಳ್ಳುವಿಕೆ

ತ್ರಿಮೂರ್ತಿಗಳ ಸಮ್ಮೇಳನದಲ್ಲಿ ಸ್ಟೇಲಿನರು ಜರ್ಮನಿ ಸಮೇತವಾದ ಪಶ್ಚಿಮ ಯುರೋಪನ್ನು ತನಗೆ ಕೊಡಬೇಕೆಂದೂ, ಭೂಮಧ್ಯ ಸಮುದ್ರದ ದೇಶದ ರಾಜ್ಯಗಳಲ್ಲೂ, ದೇಶಗಳಲ್ಲೂ ತನಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕೆಂದು ಚರ್ಚಿಲ್ಲರು, ಮಲಯಾ ಸಿಂಗಾಪೂರ ಸಮೇತವಾಗಿ ಫಿಲಿಪ್ಪಾನ್ ದ್ವೀಪಗಳ ಮತ್ತು ಪೆಸಿಫಿಕ್ ಸಮುದ್ರದ ಪ್ರದೇಶಗಳ ಕಾರ್ಯಭಾರವನ್ನು ಅಮೇರಿಕಕ್ಕೆ ವಹಿಸಿಕೊಡಬೇಕೆಂದು ರೂಸ್‌ವೆಲ್ಟರು ಕೇಳುವರೆಂದೂ ಲಂಡನಿನಲ್ಲಿ ಉಹಾಪೋಹೆಗಳೆದ್ದಿವೆ. ಒಂದು

ವಿದೇಶ ವಿಚಾರ ವಿಮರ್ಶೆ

ಗೋಬೆಲ್ಸನ ಧೈರ್ಯದ ಗೋಳು—ಚಿಕ್ಕ ರಾಷ್ಟ್ರಗಳ ಗತಿಯೇನು?—ವಸಾಹತು ಜನರ ಪಾಡೇನು--ಸ್ವತಂತ್ರರಿಗೆ ಸ್ವಾತಂತ್ರ್ಯ—ಮುಂದಿನ ಯುದ್ಧ ರಷ್ಯದ ಮೇಲೆ—ಪಾಲುಗಾರಿಕೆಗೆ ಆರಂಭ—ಫ್ರಾನ್ಸಿನಿಂದ ಬ್ರಿಟನಿಗೆ ತೊಂದರೆ—ಗುಪ್ತಾಸ್ತ್ರ ಇನ್ನೂ ಗೋಪ್ಯವಾಗಿದೆ.

ಅಮೇರಿಕನ್ ಪತ್ರಿಕೆಯು "ಫಿಲಿಪೈನನ್ನು ನಾವು ಹೇಗಾದರೂ ರಕ್ಷಿಸಿಕೊಂಡೆವು. ಇನ್ನು ಮಲಯವನ್ನು ಬಿಡಿಸಿ ಬ್ರಿಟನ್ನಿಗೆ ಅದನ್ನು ಕೊಡಿಸಲಿಕ್ಕೆ ಅಮೇರಿಕನರು ತಮ್ಮ ರಕ್ತವನ್ನು ಏಕೆ ಸುರಿಸಬೇಕು?" ಎಂದು ಪ್ರಶ್ನಿಸಿದೆ. ಅಂತೂ ಹಂಚಿಕೊಳ್ಳುವ ಸ್ವಾತಂತ್ರ್ಯವನ್ನೇ ಶಕ್ತಿ ರಾಷ್ಟ್ರ ಮುಖಂಡರು ಮುಂದೊತ್ತುವರೇ ವಿನಹ ಹಂಚಲ್ಪಡಬೇಕೆಂದಿರುವ ರಾಷ್ಟ್ರಗಳ ಸ್ವಾತಂತ್ರ್ಯ ಪ್ರಶ್ನೆಯೇ ಮೇಲೆ ಬರುತ್ತಿಲ್ಲ.

ಕಚ್ಚಾಟಕ್ಕೆ ಎಡೆ

ರಷ್ಯದ ಮುನ್ನಡೆಯ ಕುರಿತು ಆಗಲೇ ಜಗತ್ತಿನ ಹಲವು ಬಂಡವಾಳ ಶಾಹಿಗಳಿಗೆ ದಿಗಿಲಾಗಿದೆ ಎಂಬ ಸಂಗತಿಯು ಕೆಲವು ಆಧ್ಯ ಮಹನೀಯರ ಪ್ರಕಟನೆಗಳಿಂದ ತಿಳಿಯುತ್ತದೆ. ಬ್ರಿಟನಿನ ದೊಡ್ಡ ಶ್ರೀಮಂತರೂ ಕಡು ರಷ್ಯನ್ ವಿರೋಧಿಗಳೂ ಆದ ಬೆಡ್‌ಫೋರ್ಡಿನ ಡ್ಯೂಕರು ಒಂದು ಮಹತ್ವದ ಪ್ರಶ್ನೆಯನ್ನು ಕೇಳಿರುವರು:" ಪೋಲೆಂಡಿನ ಒಂದು ಭಾಗವನ್ನು ಹಿಡಿದ ಜರ್ಮನಿಯ ಮೇಲೆ ಬ್ರಿಟನ್ನು ತಡಮಾಡದೆ ಯುದ್ಧ ಸಾರಿತು. ಈಗ ರಷ್ಯವು ಸಂಪೂರ್ಣವಾಗಿ ಪೋಲೆಂಡನ್ನೂ ಇತರ ಪ್ರದೇಶಗಳನ್ನೂ ಆಕ್ರಮಿಸಿರುವಾಗ ಬ್ರಿಟನ್ನು ಹೇಗೆ ಸಹಿಸಿಕೊಂಡಿದೆ?" ಚರ್ಚಿಲ್ಲರ ಸ್ನೇಹಿತನಾದ ಜನರಲ್ ಫ್ರೆಂಕೋ ಕೂಡಾ ಈಗಲೇ ರಷ್ಯದ ಮೇಲೆ ಯುದ್ಧ ಸಾರಿ ಅದರ ಪ್ರಭಾವವನ್ನು ತಡೆಗಟ್ಟದಿದ್ದರೆ ಜಗತ್ತಿಗೆ ದೊಡ್ಡ ವಿಪತ್ತು ಸಂಭವಿಸಬಹುದೆಂದು ಸೂಚಿಸಿರುವನು. ಇದುತನಕ ಜಗತ್ತಿನ ವಿಪತ್ತಿಗೆ ಕಾರಣಭೂತರು ಜರ್ಮನ್ ಜಪಾನಿಗಳು ಮಾತ್ರವೆಂದು ವಿಶ್ವ ಜನತೆ ತಿಳಕೊಂಡಿತ್ತು. ಮಾನವೀಯತೆಯ ಸ್ವಾತಂತ್ರ್ಯಕ್ಕಾಗಿ ಮತ್ತು ವಿಶ್ವ ಶಾಂತಿಗಾಗಿ ಕಾದಾಡುವುದು ರಷ್ಯನರ ಉದ್ದೇಶವಿದ್ದುದರಿಂದಲೇ ಬ್ರಿಟನ್ ಅಮೇರಿಕಗಳು ಅದರೊಡನೆ ಮೈತ್ರಿಗಳಿಸಿಕೊಂಡಿವೆ. ಮಾತ್ರವಲ್ಲ ತಾವು ಇಟೇಲಿಯವರಿಂದ ಕಿತ್ತುಕೊಂಡ ಪ್ರದೇಶಗಳನ್ನೂ, ಮತ್ತು ಬಹು ಕಾಲದಿಂದ ಕೈಕೆಳಗೆ ಇಟ್ಟುಕೊಂಡ ದೇಶಗಳನ್ನೂ ಮಿತ್ರರು ಇನ್ನೂ ಆಯಾ ಬಾಧ್ಯಸ್ಥರಿಗೆ ಬಿಟ್ಟುಕೊಟ್ಟಿರುವುದಿಲ್ಲ. ಅಂದ ಮೇಲೆ ತಾವು ಮಾಡಲು ಸಿದ್ಧರಿಲ್ಲದ ವಿಷಯವನ್ನು ಇತರರಿಗೆ ಬೋಧಿಸುವುದಾದರೂ ಹೇಗೆ? ಜರ್ಮನಿ, ಜಪಾನುಗಳ ಮೇಲಿನ ಮತಭೇಧವು ಈಗ ಮಿತ್ರತ್ವದಲ್ಲಿರುವ ರಷ್ಯದ ಮೇಲೆ ತಿರುಗಬಹುದೆ?

ಹಾಸ್ಯಾಸ್ಪದ ಟೀಕೆ

ಸಿರಿಯಾ ದೇಶವು ಫ್ರೆಂಚ್ ಆಡಳಿತಕ್ಕೆ ಒಳಪಟ್ಟಿತ್ತು. ಕೆಲವು ಸಮಯ ಅದನ್ನು ಜರ್ಮನರು ಹಿಡಿದರು. ಮಿತ್ರರು ನಾಜೀಗಳನ್ನು ಅಫ್ರಿಕದಿಂದ ಓಡಿಸಿ ಪುನಃ ಸಿರಿಯಾವನ್ನು ಶತ್ರುಗಳಿಂದ ಕಿತ್ತುಕೊಂಡರು. ಆಗ ಫ್ರೆಂಚ್ ಆಡಳಿತಗಾರರು ಸಿರಿಯಾ ದೇಶದ ಜನರಿಗೆ ಸ್ವಾತಂತ್ರ್ಯ ಘೋಷಣೆಯನ್ನು ಮಾಡಿದ್ದರು. ಆಂತರೀಕ ವ್ಯವಹಾರಗಳಲ್ಲಿ ತಮಗೆ ಸಂಪೂರ್ಣ ಸ್ವಾತಂತ್ರ್ಯವಿದೆಯಾಗಿ ತಿಳಿದ ಆ ಜನರು ತಮ್ಮ ಸ್ವಂತ ಸೈನ್ಯ ಬಲವೊಂದನ್ನು ಸಂಗ್ರಹಿಸಲು ನಿರ್ಣಯಿಸಿದಾಗ ಜನರಲ್ ಡಿಗಾಲೆಯವರು ಆಕ್ಷೇಪ ತೆಗೆದು ಸಿರಿಯದ ಆಂತರೀಕ ಶಾಂತಿ ಶಿಸ್ತುಗಳನ್ನು ಪಾಲಿಸುವುದು ಫ್ರಾನ್ಸಿನ ಹೊಣೆಗಾರಿಕೆ ಎಂದು ತಿಳಿಸಿ ರಾಜಧಾನಿ ಡೆಮಸ್ಕಸ್‌ನಲ್ಲಿ ನಡೆಯ ಬಹುದಾದ ಸಭೆ ಮೆರವಣಿಗೆಗಳನ್ನು ತಡೆಯಲು ನಿರ್ಧರಿಸಿರುವರು.

ಈ ಕುರಿತು ಸರ್ ಎಡ್ವರ್ಡ್‌ಸ್ಪೀಯರ್ಸ್ ಎಂಬ ಮಾಜಿ ಬ್ರಿಟಿಷ್ ರಾಯಭಾರಿಗಳು ಒಂದು ಹೇಳಿಕೆಕೊಟ್ಟು, ಜರ್ಮನಿಯ ಕೈಯಲ್ಲಿ ಸೋತಂದಿನಿಂದ ಫ್ರಾನ್ಸು ತನ್ನ ವಸಾಹತು ಅಧಿಕಾರವನ್ನು ಅರ್ಧದಷ್ಟು ಕಳಕೊಂಡಿದೆ. ಸಿರಿಯದ ಜನರ ಮೇಲೆ ಡಿಗಾಲೆ ಸರಕಾರದವರು ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುವುದರಿಂದ ಮಧ್ಯಪೂರ್ವದ ಅರಬೀ ಪ್ರಪಂಚದಲ್ಲಿ ಫ್ರೆಂಚರಿಗಿಂತಲೂ ಬ್ರಿಟಿಷರ ಅನೇಕ ಹಿತಗಳಿಗೇ ಧಕ್ಕೆ ತಗಲ್ಬುವುದೆಂದು ಎಚ್ಚರಿಕೆ ಕೊಟ್ಟಿರುವರು. ಹೀಗೆ ರಷ್ಯ, ಅಮೇರಿಕಾ, ಫ್ರಾನ್ಸುಗಳು ತಮತಮಗೆ ಯೋಗ್ಯ ತೋರಿದಂತೆ ವರ್ತಿಸಲಿಚ್ಛಿಸುವುವೆಂಬ ವಿಷಯವು ಸ್ಪಷ್ಟವಾಗುವುದು. ಬ್ರಿಟನ್ನು ತನ್ನ ಹಿತಗಳನ್ನು ರಕ್ಷಿಸಿಕೊಳ್ಳುವಾಗ ಇತರರಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಿದ ನಿದರ್ಶನಗಳು ಹೆಚ್ಚಾಗಿ ತೋರಿಬರುವುದಿಲ್ಲವೆಂದ ಮೇಲೆ ಬ್ರಿಟಿಷ್ ರಾಯಭಾರಿಯು ಫ್ರಾನ್ಸಿಗೆ ಕೊಟ್ಟ ಎಚ್ಚರಿಕೆಯಲ್ಲಿ ಹುರುಳಿಲ್ಲವೆನ್ನಬೇಕಾಗುತ್ತದೆ. ವಸಾಹತು ಜನರ ಹಿತಗಳನ್ನು ಪರಿಪಾಲಿಸುವುದರಲ್ಲೇ ಎಲ್ಲರ ಹಿತಗಳೂ ಭದ್ರವಾಗಿರಬಲ್ಲವು.

V3 ಎಲ್ಲಿ ಅಡಗಿದೆ?

ಜರ್ಮನಿಯು ವಿ1, ವಿ2 ಮತ್ತು ಈತ್ತೀಚೆಗೆ ಅಮೇರಿಕದ ಮೇಲೆ ಬಿಡಲು ವಿ4 ಎಂಬ ಗುಪ್ತಾಸ್ತ್ರವನ್ನು ತಯಾರಿಸಿರುವುದು. ಆದರೆ ಈ ಅಸ್ತ್ರ ಮಾಲೆಯಲ್ಲಿ ವಿ3 ಎಂಬದೊಂದು ತಪ್ಪಿಹೋಗಿದೆ. ಅದರ ಹೆಸರೇ ಹೊರಬರದಿದ್ದುದಕ್ಕೆ ಅನೇಕ ಉಹಾಪೋಹೆಯ ಕಾರಣಗಳು ಪಾಶ್ಚಾತ್ಯ ಪತ್ರಿಕೆಗಳಲ್ಲಿ ಕೊಡಲಾಗಿವೆ.

ಈ ರೆಕ್ಕೆಯ ಅಸ್ತ್ರಗಳನ್ನು ಕಂಡುಹಿಡಿದ ಜರ್ಮನಿಯ ಪ್ರೊಫೆಸರ್ ಹರ್ಮನನು ಈಗ ಜರ್ಮನಿಯಿಂದ ಓಡಿಹೋಗಿರುವನಂತೆ. ಜನವರಿ ಆಖೇರಿಯೊಳಗೆ ಅವನು ಉಗ್ರವಾದ ವಿ3 ಎಂಬೀ ಅಸ್ತ್ರವೊಂದನ್ನು ಪರಿಪೂರ್ಣಗೊಳಿಸಿಕೊಡುತ್ತೇನೆಂದು ಹಿಟ್ಲರನಿಗೆ ಮಾತುಕೊಟ್ಟಿದ್ದನಂತೆ. ಆದರೆ ಆ ವಿಜ್ಞಾನಿಯು ತನ್ನ ಪ್ರಯೋಗಗಳಲ್ಲಿ ಅಯಶ್ವಯಾದುದರಿಂದ ತನ್ನ 'ಫ್ಯೂರರನ' ಕೋಪಾಗ್ನಿಗೆ ತುತ್ತಾಗುವೆನೆಂದು ಬೆದರಿ ಈಗ ಓಡಿಹೋಗಿದ್ದಾನೆ.

ಅಮೇರಿಕದಲ್ಲಿ ಪ್ರತೀ ಚಳಿಗಾಲದಲ್ಲಿ ೨೦ ಕೋಟಿ ಜನರಿಗೆ ಶೀತ ನೆಗಡಿಯಾಗುವುದು.

* * *

ಈ ವಾರದ ಕತೆ

ಸುಹೃದಯಿ

ನಮ್ಮ ಜಿಲ್ಲೆಯಲ್ಲಿ ಬೊಗ್ಗುವನ್ನು ಬಲ್ಲದವರಿಲ್ಲ. ಅವ ದೊಡ್ಡ ಕೇಡಿ. ಕಳ್ಳವಿದ್ಯೆಯಲ್ಲಿ ಅವನನ್ನು ಮಿಗಿಸುವವರು ಇನ್ನು ಹುಟ್ಟಬೇಕು. ಬೊಗ್ಗುವು ತನ್ನ ಅರ್ಧ ಜೀವಮಾನವನ್ನು ಬಂದಿಖಾನೆಯಲ್ಲಿ ಕಳೆದನು. ಅವನೊಬ್ಬ ಆದರ್ಶ ಕಳ್ಳ. ರಾತ್ರೆ ಹೊತ್ತಿನಲ್ಲಿ ಜೈಲಿನಿಂದ ಬಿಟ್ಟರೆ ಕೋಳಿ ಕೂಗುವುದರೊಳಗೆ ಪುನಃ ಬಿಟ್ಟಲ್ಲಿಗೇ ಬರುವನು. ಅವನಿಗೆ ಅಧಿಕಾರಿಗಳ ಹೆದರಿಕೆ ಇಲ್ಲ. ಊರಿನಲ್ಲಿ ಎಲ್ಲಿ ಕಳವಾದರೂ ವಾರಂಟು ಬರುವುದು ಬೊಗ್ಗುವಿಗೆ. ಇಷ್ಟಾದರೂ ಅಡಗಿಕೂತುಕೊಳ್ಳುವ ಅಭ್ಯಾಸ ಅವನಿಗೆ ಇಲ್ಲ. ಅವನ ಪ್ರಾಮಾಣಿಕತೆಯ ಮೇಲೆ ಅಧಿಕಾರಿಗಳಿಗೂ ಬಹಳ ನಂಬಿಗೆ.

ಬೊಗ್ಗು ಜಾತಿಯಲ್ಲಿ ಗಾಣಿಗನಂತೆ. ಹುಟ್ಟುವಾಗ್ಗಲೇ ರಾಕ್ಷಸನಂತೆ ಬೆಳವಣಿಗೆಯಿಂದ ಕೂಡಿದ್ದನೊ ಏನೋ ಅವನು. ಕಾರಣ ನಡುಪ್ರಾಯದಲ್ಲಿ ಅವನ ಎತ್ತರ ಆರುವರೆ ಮೊಳವಿತ್ತಂತೆ. ಸಾಧಾರಣ ಒಂದು ಗಜ ಅಗಲದ ಎದೆ ಇದ್ದಿರಬಹುದು. ಇಂಥ ಅಗಾಧ ಮನುಷ್ಯನ ಶಕ್ತಿಯಾದರೂ ಎಷ್ಟಿರಬಹುದೆಂದು ಊಹಿಸಿರಿ. ಸಣ್ಣ ಗುಮ್ಮಟನಂತೆ ಕಾಣುತಿದ್ದರೆ ಆಶ್ಚರ್ಯವಲ್ಲ. ಅವನ ಪರಿಚಯವಿಲ್ಲದ ದಫೇದಾರನೊಬ್ಬನು ಅವನಿಗೆ ಹಿಡಿಮುಕೊಂಡು ಹೋಗುವಾಗ ಕೈಗೆ ಬೋಳವನ್ನು ಹಾಕಿದನಂತೆ. ಪೋಲಿಸ್ ಸ್ಟೇಶನಿಗೆ ಮುಟ್ಟುವುದರೊಳಗೆ ಬೋಳವನ್ನು ಒಂದಕ್ಕೆ ಎರಡು ಮಾಡಿ ದಫೇದಾರನ ಕೈಗೆ ಕೊಟ್ಟನಂತೆ. ಅಂದಿನಿಂದ ಅವನಿಗೆ ಬೋಳ ಹಾಕುತ್ತಿರಲಿಲ್ಲ. ಅವನ ಜಾತಿಯವರು ಎಣ್ಣೆ ಗಾಣದಲ್ಲಿ ತೆಗೆದರೆ ಬೊಗ್ಗು ಅದನ್ನು ಕೈಯ ತ್ರಾಣದಲ್ಲೇ ತೆಗೆಯುತ್ತಿದ್ದ. ಕೊಬ್ರಿಯನ್ನು ಕೈಯಿಂದಲೇ ಒತ್ತಿ ಎಣ್ಣೆ ತೆಗೆದು ತಲೆಗೆ ಇಟ್ಟುಕೊಳ್ಳುವುದು ಅವನದೊಂದು ಅಭ್ಯಾಸ. ಯಾರಿಗಾದರೂ ಎಲೆ ಅಡಿಕೆ ಗುದ್ದಿ ತಿನ್ನುವ ಅಭ್ಯಾಸವಿದ್ದರೆ ಬೊಗ್ಗು ಕೈಯಿಂದಲೇ ಜಜ್ಜಿಕೊಡುತಿದ್ದನು. ಸಾಧಾರಣ ಮನೆಯ ಗೋಡೆಗಳನ್ನು ಕೈಯಿಂದ ಹೊಡೆದೇ ಕನ್ನ ಹಾಕುತಿದ್ದುದರಿಂದ ಅವನ ಕೆಲಸ ಸುಲಭವಾಗುತಿತ್ತು. ಬಾಯಾರಿದರೆ ತೆಂಗಿನ ಮರವನ್ನು ಕುಲುಕಿ ಶೀಯಾಳ ಬೀಳಿಸುವ ಶಕ್ತಿ ಅವನಲ್ಲಿತ್ತು.

ಒಂದು ಸಾರಿ ಅವನು ತುರುತಿನ ಕೆಲಸದ ಮೇಲೆ ಹಳ್ಳಿಯೊಂದನ್ನು ಹಾದು ಹೋಗುತ್ತಿದ್ದ. ಹಳ್ಳಿಯಲ್ಲಿ ಅಂದು ಸಂತೆಯ ದಿನ. ಗೋಳಿಮರದ ಬುಡದಲ್ಲಿ ಕೆಲವು ಹಳ್ಳಿ ಜವಾನರು ೧೦-೧೨ ಮಣ ಭಾರದ ಕಲ್ಲನ್ನು ಮೊಣಕಾಲು ಎತ್ತರಕ್ಕೆ ಎತ್ತಲು ಪ್ರಯತ್ನಿಸುತ್ತಿದ್ದರು. ದೇಹದಲ್ಲಿ ದುಂಡಾಳಾಗಿದ್ದ ಹಾಜರ್ ಬ್ಯಾರಿಯು ಅದನ್ನು ಎತ್ತಿ ಪಂಥದ ಒಂದು ರೂಪ್ಯಾಯನ್ನು ಪಡೆದು ಮಿಕ್ಕವರು ಯಾರಾದರೂ ಎತ್ತಿದರೆ ಎರಡು ರೂಪ್ಯಾ ಕೊಡುವೆನೆಂದು ಹೆಮ್ಮೆ ಕೊಚ್ಚುತ್ತ ಕಟ್ಟೆಯ ಮೇಲೆ ಕುಳಿತಿದ್ದ. ಅದೇ ಹೊತ್ತಿಗೆ ನಮ್ಮ ಬೊಗ್ಗು ಮಹಾಶಯನ ಸವಾರಿಯು ಅಲ್ಲಿಗೆ ತಲ್ಪಿತು. ತರುಣರ ಉತ್ಸಾಹ ನೋಡಿ ಮುದುಕನಂತೆ ನಟಿಸಿ ಬೊಗ್ಗು ಗುಂಪಿನ ಕಡೆಗೆ ಬಂದನು. 'ಈ ಮುದುಕ ಕಲ್ಲು ಎತ್ತಲು ಬಂದನು. ದಾರಿ ಬಿಡಿರೊ' ಎಂದು ಕೆಲವರು ನಗುತ್ತಾ ಗೇಲಿಮಾಡಿದರು. ಬೊಗ್ಗು 'ಹಿಂದೆ ಇಂತಹ ಕಲ್ಲನ್ನು ಹೆಗಲ ಮೇಲೆ ಇಟ್ಟವ ನಾನು. ಈಗ ಪ್ರಾಯವಾಯ್ತು' ಎಂದ.

ಹೆಮ್ಮೆಯ ಹಾಜರ್ ಬ್ಯಾರಿ ಬೊಗ್ಗು ನಡು ಬಿಗಿಯುವುದನ್ನು ನೋಡಿ 'ಈಗ ಕಲ್ಲನ್ನು ಎದೆ ಎತ್ತರಕ್ಕೆ ಮುಟ್ಟಿಸಿದಲ್ಲಿ ಐದು ರೂಪ್ಯಾ ಇನಾಮು' ಎನ್ನುತ್ತಾ ನೋಟನ್ನು ಹತ್ತಿರ ನಿಂತಿದ್ದ ಪಟೇಲರ ಕೈಗೆ ಕೊಟ್ಟ.

ನೋಟು ನೋಡಿದ ಕೂಡಲೇ ಬೊಗ್ಗುವಿಗೆ ಧೈರ್ಯವಾಯ್ತು. ಕಲ್ಲಿನ ಕೆಳಗೆ ಎರಡೂ ಕೈಹಾಕಿ ಬೆರಳು ಜೋಡಿಸಿದ. ದಮ್ಮುಕಟ್ಟಿ ಕೈಗಳನ್ನು ಬಿರುಸಾಗಿ ಮೇಲಕ್ಕೆ ಒತ್ತಿದಾಕ್ಷಣ ಫೂಟ್‌ಬಾಲಿನ ಹಾಗೆ ಕಲ್ಲುಗುಂಡು ಮೇಲಕ್ಕೆ ಬಂತು. ಸರ್ರನೆ ಕೈಗಳು ತಲೆಯ ಮೇಲಕ್ಕೆ ಹೋದುವು. ಅಲ್ಲಿಂದ ಬೊಗ್ಗು ಕಲ್ಲನ್ನು ತಲೆಯ ಮೇಲಿಂದ ಬೆನ್ನಿನ ಹಿಂದಿನಿಂದಾಗಿ ಬಿಟ್ಟುಬಿಟ್ಟ. ನೆಲದಲ್ಲಿ ಒಂದಡಿಯ ಹೊಂಡಮಾಡಿ ಕಲ್ಲು ದೊಪ್ಪನೆ ನೆಲಕ್ಕೆ ಬಿತ್ತು. ಹಾಜರ್ ಬ್ಯಾರಿಯ ನಾಡಿ ಒಂದು ಕ್ಷಣಕ್ಕೆ ನಿಂತಹಾಗಾಯಿತು. ಎಲ್ಲರೂ 'ಅಜಪ್' ಆದರು. ಎಲವಸ್ತ್ರ ಹೆಗ್ಗಲ ಮೇಲೆ ಎಳೆದು ಪಟೇಲರ ಕೈಯಿಂದ ಐದು ರೂಪ್ಯಾ ನೋಟನ್ನು ಕಿತ್ತು ಬೊಗು ಹೊರಟೇ ಬಿಟ್ಟ. ಅಂದು ಹಳ್ಳಿಯಲ್ಲಿ ಅದೇ ಪಂಚಾದಿಕೆ. ಅದರಲ್ಲೂ ಬೊಗ್ಗು ಐದು ರೂಪ್ಯಾಯನ್ನು ಚಿಲ್ಲರೆ ಮಾಡಿ ಯೋಗ್ಯಕಂಡ ಐದು ಬಡವರಿಗೆ ಹಂಚಿ ಹೋಗಿದ್ದಾನೆ ಎಂದು ಕೇಳಿದವರೆಲ್ಲರಿಗೂ ಇಲ್ಲದ ಆಶ್ಚರ್ಯ—'ಏನು ಉದಾರಿಯಪ್ಪಾ ಕಲ್ಲು ಎತ್ತಿದ ದಾಂಡಿಗ' ಎಂದು ಎಲ್ಲರೂ ಚಕಿತರಾಗುತಿದ್ದರು.

ಹೀಗೆ ಬೊಗ್ಗು ಒಬ್ಬ ನಿಸ್ವಾರ್ಥ ಪ್ರಾಣಿ. ಅವನ ಜೀವಮಾನದ ಕೆಲಸಗಳನ್ನು ವಿಮರ್ಶಿಸಿದಾಗ ತಿಳಿದುಬರುವ ಒಂದು ವಿಷಯವೆಂದರ ಅವನೊಬ್ಬ ಅತ್ಯಂತ ನಿಶ್ಕಾಮ ಜೀವಿಯೆಂದು. ಬಡವರನ್ನೂ, ಬಡತನವನ್ನೂ ಕಂಡರೆ ಅವನ ಕರುಳು ಕಡಿಯುತಿತ್ತು. ಆದಷ್ಟು ಮಟ್ಟಿಗೆ ಬಡವರಿಗೆ ಸಹಾಯ ಮಾಡಬೇಕೆಂಬುದೇ ಅವನ ಜೀವನದ ಉದ್ದೇಶವಿತ್ತೆಂದರೂ ಅತಿಶಯವಾಗಲಾರದು. ಇದಕ್ಕೆ ನಂಬಲರ್ಹವಾದ ನಿದರ್ಶನಗಳೂ ಹಲವಿವೆ. ಬಡ ಪೋಲಿಸ್‌ನವರ ಮೇಲೆ ಅವನಿಗೆ ತುಂಬಾ ಕರುಣೆ. ಹಿಡಿಯಲು ಬಂದ ಪೋಲಿಸರ ಸುಖದುಃಖಗಳನ್ನು ವಿಚಾರಿಸಿ ಯೋಗ್ಯನೆಂದು ಕಂಡರೆ ಹೂತಿಟ್ಟ ಒಂದು ಮುಷ್ಟಿ ಬಂಗಾರವನ್ನು ತಂದು ಕೈಗೆಹಾಕಿ 'ಇನ್ನು ಚಾವಡಿಗೆ ಹೋಗೋಣ' ಅನ್ನುವಷ್ಟು ಉದಾರಿ ನಮ್ಮ ಬೊಗ್ಗು.

ಒಮ್ಮೆ ಒಬ್ಬ ಪೋಲಿಸ್ ಕೋತವಾಲನು ಬೊಗ್ಗುವನ್ನು ಒಂದು ಹಳ್ಳಿಯಲ್ಲಿ ಹಿಡಿಯಲಿಕ್ಕೆ ಹೋದ. ಅವನ ಜೊತೆಯಲ್ಲಿ ೬ ಮಂದಿ ಜವಾನರೂ ಇದ್ದರು. ಬೊಗ್ಗು ಗಾಣಿಗನೊಬ್ಬನ ಮನೆಯಲ್ಲಿ ಕೋಳಿಯೂಟ ಮಾಡುತಿದ್ದ. ಊಟ ಆಗುವವರೆಗೆ ಜವಾನರು ಕಾದರು. ಬೊಗ್ಗು ಕೈತೊಳೆದು ಸ್ಟೇಶನಿಗೆ ಹೋಗಲು ತಯಾರಾಗಿ ಬರುತ್ತಾ ಪೋಲಿಸನೊಬ್ಬನನ್ನು ಕರೆದು ಕಿವಿಯಲ್ಲಿ 'ಸಂಕದ ನಾಲ್ಕನೇ ಕಂಬದ ಬಲಬದಿಯಲ್ಲಿ ಎರಡು ಗೇಣು ಬಿಟ್ಟು ಇರುವ ಸ್ಥಳದಲ್ಲಿ ನಿನ್ನೆ ಕದ್ದ ಬಂಗಾರವನ್ನು ಇಟ್ಟಿದ್ದೇನೆ. ನೀನೇ ತೆಗೆ' ಎಂದ. ಪುಣ್ಯಾತ್ಮ ಆ ಜವಾನನು ಸುಮ್ಮನೆ ಇದ್ದು ಗುಟ್ಟಿನಲ್ಲಿ ಗಂಟನ್ನು ಅಪಹರಿಬೇಕಿತ್ತಲ್ಲವೆ? ಬೊಗ್ಗುವನ್ನು ನಂಬಲಿಲ್ಲ. ಪರೀಕ್ಷಿಸಬೇಕೆಂದು ಮರುದಿನ ನಾಲ್ಕೈದು ಜವಾನರನ್ನು ಜತೆ ಕರೆದುಕೊಂಡು ಬೊಗ್ಗು ಹೇಳಿದ ಸ್ಥಳಕ್ಕೆ ಬಂದು ನೋಡಿದರೆ ೩॥ ಸೇರು ಬಂಗಾರ ಸಿಕ್ಕಿತು. ಯಾರು ಬಡವ? ಕಡೆಗೆ ಜವಾನನಿಗೆ ಸಿಕ್ಕಿದ ಬಂಗಾರ ಆ ಪೂರ ಕೋತವಾಲ ಕೈವಶವಾಯಿತು. ಜವಾನನ ಬಾಯಿಗೆ ಮಣ್ಣು ಬಿತ್ತು. ಈ ವರ್ತಮಾನ ಕೇಳಿ ಬೊಗ್ಗುವಿಗೂ ತುಂಬಾ ಕನಿಕರವಾಯಿತಂತೆ. ಮತ್ತೊಂದು ಸಾರಿ ಬೊಗ್ಗುವಿಗೆ ಆ ಜವಾನನು ನೋಡಲು ಸಿಕ್ಕಿದಾಗ 'ಎಲಾಮೂರ್ಖಾ' ಎಂದು ಉಗುಳಿದನಂತೆ.

ಜಗಳದಲ್ಲಾದರೊ ಬೊಗ್ಗುವಿನ ಪರಾಕ್ರಮವನ್ನು ಓದುಗರು ಊಹಿಸಬಹುದು ಅದನ್ನು ವಿವರಿಸುವ ಅಗತ್ಯವಿಲ್ಲ. ಒಂದು ವಿಷಯ-ಅದೆಂದರೆ ಅವನು ಜಗಳದಲ್ಲಿಯೂ ನ್ಯಾಯಶಾಲಿ. ಅನ್ಯಾಯದ ಜಗಳಕ್ಕೆ ಅವನು ಹೋಗುತ್ತಿರಲಿಲ್ಲ. ದುರ್ಬಲರೊಂದಿಗೆ ಅವನ ಜಗಳವೇ ಇಲ್ಲ. ಇತರ ಕೇಡಿಗಳು ಅವನನ್ನು ಗೊತ್ತಿಲ್ಲದೆ ಕೆಣಕಿದರೆ ಅವರ ಕೈಯನ್ನೊ ಕಾಲನ್ನೊ ಮುರಿದು ಹಾಕಿ ಜನ್ಮಕ್ಕೆ ಪೋಕರಿ ಮಾಡದ ಹಾಗೆ ಮಾಡುತ್ತಿದ್ದ. ಈ ರೀತಿಯಲ್ಲಿ ಗಲಾಟೆ ಮಾಡುತಿದ್ದ ಅನೇಕ ಪುಂಡರನ್ನು ಬೊಗ್ಗು ಹದಮಾಡಿ ಹಳ್ಳಿಗರಿಗೆ ಸಹಾಯ ಮಾಡಿದ್ದಾನೆ.

ಕಾಳಕಟ್ಟೆಯಲ್ಲಿ ತಿಮ್ಮ ಕೊಟ್ಟಾರಿಯು ದೊಡ್ಡ ಕಾರಬಾರಿ. ಬಡ ಹಳ್ಳಿಗರನ್ನು ಸುಲಿಗೆ ಮಾಡುವುದು ಅವನ ಕ್ರಮ. ಭತ್ತ ದಾಸ್ತಾನು ಮಾಡಿದ ಸಮಯದಲ್ಲೇ ಕೊಟ್ಟಾರಿಯ ಕಾರಬಾರಿನ ವೇಳೆ. ನಾಲ್ಕು ಜನರ ಆಸ್ತಿಯನ್ನು ಗೇಣಿಗೆ ಪಡಕೊಂಡ ಬಡ ಬೊಗ್ರಮ್ಯೊಲಿಯು ಗೇಣಿಯ ಭತ್ತವನ್ನು ದಾಸ್ತಾನು ಇಟ್ಟಿದ್ದ. ಕತ್ತಲು ರಾತ್ರೆಯಲ್ಲಿ ಕೊಟ್ಟಾರಿಯು ತನ್ನ ಪುಂಡ ಪಂಗಡವನ್ನು ಕಟ್ಟಿಕೊಂಡು ಬಂದು ಬೊಗ್ರು ಮ್ಯೊಲಿಯನ್ನು ಹೊಡೆದು ಭತ್ತದ ಕಣಜವನ್ನು ಖಾಲಿಮಾಡಿ ಹೊರಟುಹೋದ. ವಿಚಿತ್ರವೆಂಬಂತೆ ಬೊಗ್ಗು ಸ್ವಲ್ಪ ಸಮಯದ ನಂತರ ಆ ಮಾರ್ಗವಾಗಿ ಯಾವುದೋ ತನ್ನ ಸ್ವಂತ ಕಾರ್ಯಕ್ರಮಕ್ಕಾಗಿ ಹೋಗುತಿದ್ದವ ಮ್ಯೊಲಿಯ ಮನೆಯವರ ಕೂಗು ಕೇಳಿ ಆ ಕಡೆಗೆ ಧಾವಿಸಿ ಬಂದು ನೋಡುವಾಗ ಕೊಟ್ಟಾರಿಯು ಮಾಡಿದ ಹೀನ ಕೆಲಸವು ಅದೆಂದು ಅವನಿಗೆ ತಿಳಿಯಿತು. ಒಡನೆ ಬೊಗ್ಗು ಹತ್ತಿರದ ಒಳಮಾರ್ಗದತ್ತ ಕಡೆ ತನ್ನ ಉದ್ದ ಕಾಲಿನ ವೇಗ ಬಿಟ್ಟನು. ಕೊಟ್ಟಾರಿಯು ಅದೇ ಮಾರ್ಗದಲ್ಲಿ ಭತ್ತ ತುಂಬಿದ ಐದು ಗಾಡಿಗಳನ್ನು ಸಾಗಿಸುತಿದ್ದ. ಒಂದು ಗಾಡಿಯಲ್ಲಿ ತುಂಬಾ ಆಯುಧಗಳೂ ಇದ್ದುವು.

ಬೊಗ್ಗು ಹತ್ತಿರ ಬರುತ್ತಲೇ ಮೊದಲು ಒಂದು ಗೇರುಮರದ ದಪ್ಪ ಕೊಂಬೆಯನ್ನು ಕಿತ್ತು ಬಿಗಿಯಾಗಿ ಹಿಡಿದುಕೊಂಡು ನಡೆದ. ಅವನಿಗೆ ಕೊಟ್ಟಾರಿಯು ಯಾರೆಂದು ಗೊತ್ತಿರಲಿಲ್ಲ. ಸ್ವಲ್ಪ ದೂರದಿಂದ 'ಸ್ವಾಮಿ ಕೊಟ್ಟಾರಿಗಳೇ' ಎಂದ. ಥಕ್ಕನೇ ನಡುವಿನ ಗಾಡಿಯಲ್ಲಿದ್ದ ಕೊಟ್ಟಾರಿಯು ಕೆಳಗೆ ಇಳಿದು ನಿಂತ. ಹತ್ತಿರ ಬರುತ್ತಲೇ ಬೊಗ್ಗು ಅವನ ತಲೆಗೆ ಒಂದು ಬಿಟ್ಟ-ಗೇರುಗೆಲ್ಲಿನಿಂದ. ಕೊಟ್ಟಾರಿ ತೋಡಿಗೆ ಮಗುಚಿದ. ಉಳಿದ ಗಾಡಿಗಳು ಓಡಲಾರಂಭಿಸಿದುವು. ಕ್ಷಣದಲ್ಲಿ ಬೊಗ್ಗು ಎದುರಿನ ಗಾಡಿಗೆ ಓಡಿ ಎರಡೆತ್ತುಗಳನ್ನೂ ತಡೆದ. ಗಾಡಿಯಲ್ಲಿದ್ದವನು ಒಳಗಿಂದ ಒಂದು ಮಾರಿನ ತಳವಾರನ್ನು ಬೊಗ್ಗುವಿನ ಕಡೆ ತಿರುವಿಸಿದ. ಅದು ಬೊಗ್ಗುವಿನ ಕಂಕುಳಲ್ಲಿದ್ದ ಗೇರುಗೆಲ್ಲಿನ ತುದಿಗೆ ಚುಚ್ಚಿಕೊಂಡಿತು. ತಕ್ಷಣ ಬೊಗ್ಗು ತನ್ನ ಎಡಕೈಯಿಂದ ಅವನ ತೋಳನ್ನು ಹಿಡಿದು ಎತ್ತಿ ಹತ್ತಿರದ ಗದ್ದೆಗೆ ಬಿಸುಡಿದನು. ಉಳಿದವರು ಬೊಗ್ಗುವಿನ ಗುರ್ತು ತಿಳಿದು 'ದಮ್ಮಯ್ಯ' ಎಂದರು. ಗಾಡಿಗಳನ್ನು ಕಾಳಕಟ್ಟೆಗೆ ತಿರುಗಿಸಿ ಬೊಗ್ಗು ಬೆಳಗ್ಗೆ ಹೊತ್ತು ಮೂಡಬೇಕಾದರೆ ಬೊಗ್ರಮ್ಯೊಲಿಗೆ ಭತ್ತವನ್ನು ತಲ್ಪಿಸಿ ಒಂದಿಷ್ಟು ನೀರು ಬೆಲ್ಲ ಸೇವಿಸಿ ಮುಂದಕ್ಕೆ ನಡೆದನು.

S. P. P. C. H. School.

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣಪದಕ ಪಡೆದ ಮಂಗಳೂರು ನಾಮಾಂಕಿತ್ತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ– ಮಂಗಳೂರು
ನಮ್ಮ ಇತರ ವಿಶೇಷ ತಯಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಸೆಂಟ್ರಲ್ ಎಕ್ಸಯಿಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ರಷ್ಯಾದಲ್ಲಿ ನಿತ್ಯವೂ ರೇಷನಿಂಗ್

ಕೊಮ್ಯುನಿಸ್ಟ್ ಸರ್ವಾಧಿಕಾರದ ಮಹಿಮೆ

ಸಾಮ್ಯವಾದದಲ್ಲೂ ಸಮಾನತೆ ಇಲ್ಲ

ಅಮೇರಿಕನರೊಬ್ಬರ ರಷ್ಯನ್ ವರದಿ

ಝಾರ್ ಚಕ್ರಾಧಿಪತ್ಯವನ್ನು ಕಿತ್ತೊಗೆದು ೧೯೧೭ರಲ್ಲಿ ಕೊಮ್ಯುನಿಸ್ಟ್ ಎಂಬ ಸಾಮ್ಯವಾದ ಪದ್ಧತಿಯನ್ನು ಸ್ಥಾಪಿಸಿ ಬೆಳೆಸಿಕೊಂಡು ಬಂದ ರಷ್ಯದ ಜನರ ಸ್ಥಿತಿಗತಿಗಳೇನು ಎಂಬುದನ್ನು ನೋಡಬೇಕಾದರೆ ಅಲ್ಲಿನ ಸಾಮಾನ್ಯ ಜನತೆಯ ಜನಜೀವನವನ್ನೂ, ದಿನನಿತ್ಯ ವ್ಯವಹಾರವನ್ನೂ, ಮಜೂರ ಕಾರ್ಯಕಲಾಪಗಳನ್ನೂ ಪರಿಶೀಲಿಸಿದರೆ ತಿಳಿಯುವುದು. ಕಳೆದ ವರ್ಷ ಅಮೇರಿಕನ್ ವಾಣಿಜ್ಯ ವ್ಯವಹಾರ ತಜ್ಞರ ಸಂಚಾರಕೂಟವೊಂದು ಮೊಸ್ಕೋಗೆ ಹೋಗಿತ್ತು. ಅದರ ಸದಸ್ಯರಲ್ಲಿ ಪ್ರಖ್ಯಾತ ಪತ್ರಿಕೋದ್ಯೋಮಿಗಳೊಬ್ಬರೂ ಇದ್ದರು. ತಮ್ಮ ಉನ್ನತ ಮಟ್ಟದ ದೃಷ್ಟಿಕೋನದಿಂದ ಈ ಅಮೇರಿಕನರು ರಷ್ಯನ್ ಜನಜೀವನವನ್ನೂ ಆಡಳಿತ ನಿರ್ವಹಣವನ್ನೂ ನೋಡಿ ತಮ್ಮ ಪತ್ರಿಕೆಗಳಿಗೆ ಕೊಟ್ಟ ಒಂದು ವರದಿಯಿಂದ ನಮ್ಮ ವಾಚಕರಿಗಾಗಿ ಕೆಲವೊಂದು ಸಂಗತಿಗಳನ್ನು ಈ ಲೇಖನದಲ್ಲಿ ಕೊಡಲು ಪ್ರಯತ್ನಿಸಲಾಗಿದೆ.

[ಈ ವರದಿಗಾರರು ರಷ್ಯನ್ ಜನತೆಯಲ್ಲಿ ಸಹಾನುಭೂತಿ ದೃಷ್ಟಿಯಿಂದಲೇ ಎಲ್ಲವನ್ನೂ ನಿವೇದಿಸಿದಂತೆ ಕಂಡುಬರುತ್ತದಾದುದರಿಂದ ಓದುಗರು ಕೆಳಗೆ ವಿವರಿಸಿದ ಪರಿಸ್ಥಿತಿಗಳ ಕುರಿತು ಸ್ವಂತ ಅಭಿಪ್ರಾಯ ಮಾಡಿಕೊಳ್ಳಬೇಕು.]

ರಷ್ಯಕ್ಕೆ ಅತಿಥಿಗಳಾಗಿ ಹೋಗುವ ಹೊರ ದೇಶಸ್ಥರಿಗೆ ಸತ್ಕಾರಮಾಡಲು ಅಲ್ಲಿ ಪ್ರತ್ಯೇಕ ಒಂದು ಇಲಾಖೆಯಿದೆ. ಜಗತ್ತಿನ ಪ್ರತಿಯೊಂದು ದೇಶದ ಜೀವನ ಕ್ರಮಗಳನ್ನು ಬಲ್ಲ ನಿಪುಣರು ಆಯಾ ದೇಶಗಳಿಂದ ಬರುವ ಅತಿಥಿಗಳ ಸತ್ಕಾರಕ್ಕೆ ನಿಯಮಿಸಲ್ಪಡುತ್ತಾರೆ. ರೈಲು ಅಥವಾ ವಿಮಾನದಿಂದ ಅತಿಥಿಗಳು ಇಳಿದ ಕೂಡಲೇ ಇಂತಹ ಅಧಿಕಾರಿಗಳು ಬಂದು ಸ್ವಾಗತೀಕರಿಸಿ ಅವರ ಊಟ ಉಪಚಾರ, ವಸತಿ, ಸಂಚಾರ ಕಾರ್ಯಕ್ರಮಗಳ ಏರ್ಪಾಡುಮಾಡುತ್ತಾರೆ.

ಅತಿಥಿಗಳು ಸರಕಾರ ಆತಿಥ್ಯ ಗೃಹಗಳಲ್ಲಿ ಉಳಕೊಳ್ಳಬಹುದು, ಇಲ್ಲವೇ ಸ್ವಂತವಾದ ಏರ್ಪಾಡುಗಳನ್ನು ಮಾಡಬಹುದು. ಸ್ವಂತ ಏರ್ಪಾಡು ಮಾಡಲಿಚ್ಛಿಸುವವರಿಗೆ ಮೊಸ್ಕೋದಲ್ಲೂ, ಇತರ ನಗರಗಳಲ್ಲೂ, ಇಲ್ಲವೇ ಕಾರ್ಖಾನೆ ಕೇಂದ್ರಗಳಲ್ಲೂ ದೊಡ್ಡ ಹೊಟೇಲುಗಳು ಇವೆ. ಈ ಹೊಟೇಲುಗಳಲ್ಲಿ ಐರೋಪ್ಯ ಪದ್ಧತಿಯ ಉಟೋಪಚಾರಗಳಿಗೂ ಮತ್ತು ಆಸ್ಯಾ ಜನರ ಆಹಾರ ರೀತಿನೀತಿಗಳಿಗನುಸಾರವಾಗಿಯೂ ಏರ್ಪಾಡುಗಳಿವೆ. ಯುರೋಪಿಯನರೂ, ಅಮೇರಿಕನರೂ ಐರೋಪ್ಯ ವಸತಿಕೋಣೆಗಳಲ್ಲೂ, ಚೀನಿ, ಜಪಾನಿ, ಮತ್ತು ಭಾರತೀಯರೇ ಮೊದಲಾದವರು ಆಸ್ಯಾ ಮಾದರಿಯ ಸೌಕರ್ಯಗಳಿರುವಲ್ಲಿಯೂ ತಂಗುವರು. ಇಂತಹ ಉನ್ನತ ತರಗತಿಯ ಹೊಟೇಲುಗಳಲ್ಲಿ ಅಲ್ಲಿನ ಸಾಮಾನ್ಯ ಜನರಿಗೆ ಆಶ್ರಯವಿಲ್ಲ. ಆದರೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಮಾತ್ರ 'ಸ್ಪೆಶಲ್' ಅನುಮತಿ ಇದೆ.

ನಮ್ಮ ದೇಶದ ರೂಪ್ಯಾಯಂತೆ ರಷ್ಯದಲ್ಲಿ ರೂಬೆಲ್ ಎಂಬ ನಾಣ್ಯ ಇಲ್ಲವೇ ನೋಟು ಚಲಾವಣೆ ಇದೆ. ಈ ರೂಬೆಲಿನ ಬೆಲೆ ಸುಮಾರು ಹದಿನೆರಡಾಣೆಯಷ್ಟಾಗಬಹುದು. ಹೊಟೇಲುಗಳಲ್ಲಿ ಉಳಕೊಳ್ಳುವ ಅತಿಥಿಗಳಿಗೆ ರೇಶನ್ ಕಾರ್ಡುಗಳ ಒಂದು ಪುಸ್ತಕ ಕೊಡಲಾಗುವುದು. ಕಾರಣ ರಷ್ಯದಲ್ಲಿ ಪ್ರತಿಯೊಂದು ವಸ್ತುವಿಗೂ ನಿಯಂತ್ರಣ (ಕಂಟ್ರೋಲ್ ಬೆಲೆ) ಮತ್ತು ಒಬ್ಬೊಬ್ಬನಿಗೆ ಇಂತಿಷ್ಟೇ ಕೊಡಬೇಕೆಂದು ಶಾಸನವಿದೆ. ಅಲ್ಲಿ ಮಾರ್ಗಗಳಲ್ಲಿ ಮಾರಲ್ಪಡುವ ಸೋಡಾ, ಶರ್ಬತ್ತುಗಳಿಗೆ ಮಾತ್ರ ರೇಷನ್ ಇಲ್ಲ.

ಬಟ್ಟೆಬರೆಗಳೂ, ಇತರ ಸುಖೋಪಭೋಗದ ವಸ್ತುಗಳೂ ಒಂದೇ ತರದ ಶ್ರೇಷ್ಠತೆಯವುಗಳು-ನಮ್ಮ ಕಡೆ ಸ್ಟೆಂಡಾರ್ಡ್ ಬಟ್ಟೆಗಳಿದ್ದಂತೆ. ಅತಿಥಿಗಳಿಗೆ ಆಯಾ ದೇಶದ ರಾಯಭಾರ ಕಛೇರಿಗಳಲ್ಲಿ ಬೇಕಾದ ವಿವಿಧ ವಸ್ತುವಿಷಯಗಳನ್ನು ಕೊಂಡುಕೊಳ್ಳುವ ಏರ್ಪಾಡು ಮಾಡಲಾಗಿದೆ.

ಮೋಸ್ಕೋ ನಗರವನ್ನು ನೋಡಿದರೆ ಅಲ್ಲಿನ ಕಟ್ಟಡ ಶಿಲ್ಪ ಶೈಲಿಯಲ್ಲಿ ಲಂಡನ್, ನ್ಯೂಯೋರ್ಕ್‌ಗಳಲ್ಲಿರುವಂತೆ ವೈವಿಧ್ಯತೆ ಕಂಡುಬರುವುದಿಲ್ಲ. ಅಲ್ಲಿನ ಕಟ್ಟಡ ಸಮೂಹಗಳು ಜೇನು ನೊಣದ ಗೂಡಿನಂತೆ ಕಾಣುತ್ತವೆ.

ಅಂಗಡಿಗಳಲ್ಲಿ ಗಿರಾಕಿಗಳನ್ನು ಆಕರ್ಶಣ ಮಾಡುವ ಜಾಹಿರಾತುಗಳೂ, ವಸ್ತುಪ್ರದರ್ಶನ ಏರ್ಪಾಡುಗಳೂ ಕಂಡು ಬರುವುದಿಲ್ಲ. ಕಾರಣ ಎಲ್ಲವೂ ಸರಕಾರದ ಸೊತ್ತುಗಳು. ಪ್ರಜೆಗಳಿಗೆ ಬೇಕಾದುವುಗಳನ್ನು ಮಾತ್ರ ಅಲ್ಲಿ ಮಾರಲಿಕ್ಕೆ ಇಡುವರು. ಸಾಮಾನುಗಳು ಖರ್ಚು ಆದರೂ ಆಗದಿದ್ದರೂ ಅಂಗಡಿಕಾರನಿಗೆ ನಷ್ಟವಿಲ್ಲ. ಕಾರಣ ಅವನೂ ಒಬ್ಬ ಸರಕಾರಿ ಅಧಿಕಾರಿ. ಹೀಗೆ ವ್ಯಾಪಾರದಲ್ಲಿ ಪೈಪೋಟಿ ಇಲ್ಲವೆ ಸ್ಪರ್ಧೆ ಎಂಬುದಿಲ್ಲ. ಕಂಟ್ರೋಲ್ ದರಗಳು, ಕಂಟ್ರೋಲ್ ಸಾಮಾನುಗಳು.

ಮೊಸ್ಕೋ ನಗರದ ಮಾರ್ಗಗಳಲ್ಲಿ ಜನ ಸಂದಣಿ ಎಂಬುದಿಲ್ಲ. ಕೆಲಸ ಸಮಯದಲ್ಲಂತೂ ಅಲ್ಲಿನ ವಿಶಾಲ ಮಾರ್ಗ, ಉಪಮಾರ್ಗಗಳೆಲ್ಲವೂ ನಿರ್ಜನವಾಗಿರುವಂತೆ ಕಾಣುತ್ತವೆ. ಪ್ರತಿಯೊಬ್ಬ ರಷ್ಯನನೂ ಕೆಲಸಕ್ಕೆ ಹೋಗಬೇಕು. ವೈಗಳ್ಳನಿಗಾಗಲೀ, ಆಲಸ್ಯಗಾಗಲೀ ಅಲ್ಲಿ ಪ್ರೋತ್ಸಾಹವಿಲ್ಲ. ಕೆಲಸಗಾರನೊಬ್ಬನಿಗೆ ಅಸೌಖ್ಯವುಂಟಾದರೆ ಕೂಡಲೇ ಅವನು ತನ್ನ ಕಾರ್ಖಾನೆ ವೈದ್ಯನ ಸರ್ಟಿಫಿಕೇಟ್ ಪಡೆಯಬೇಕು. ಅನಾರೋಗ್ಯದಿಂದಾಗಲೀ ಅವಘಡದಿಂದಾಗಲೀ ಕೆಲಸಗಾರನೊಬ್ಬ ಕೆಲಸಕ್ಕೆ ಅಯೋಗ್ಯನಾದರೆ ಸರಕಾರವು ಅವನಿಗೆ ತಕ್ಕ ಜೀವನಾರ್ಥವನ್ನುಕೊಡುವುದು.

ರಷ್ಯನ್ ಅಧಿಕಾರಿಗಳೂ, ಕಾರ್ಖಾನೆ ಚಾಲಕರೂ ದೇಹಾರೋಗ್ಯದಲ್ಲಿ ಪುಷ್ಟಿಯುಕ್ತವಾಗಿದ್ದಾರೆ, ಆದರೆ ರಷ್ಯನ್ ಮಹಿಳೆಯರ ಮುಖ ಕಾಂತಿಯು ಅಷ್ಟು ಆರೋಗ್ಯವಂತವಿದ್ದ ಹಾಗೆ ಕಾಣುವುದಿಲ್ಲ. ಅವರಿಗೆ ಪೂರೈಸಲ್ಪಡುವ ಆಹಾರದಲ್ಲಿ ಸತ್ವ ಭರಿತವಾದುಗಳು ಕಡಿಮೆ ಇರುವುದೇ ಇದರ ಕಾರಣವೆಂದು ತಿಳಿಯಬಹುದು.

ಒಬ್ಬ ರಷ್ಯನ್ ಕೆಲಸಗಾರನಿಗೆ ತಿಂಗಳಿಗೆ ಸರಾಸರಿ ಎಪ್ಪತ್ತರಿಂದ ನೂರಿಪ್ಪತ್ತು ರೂಪ್ಯಾಗಳ ತನಕ ಮಜೂರಿ ದೊರೆಯುತ್ತದೆ. ಕಾರ್ಖಾನೆ ಚಾಲಕರಿಗೆ ಐನೂರರಿಂದ ಎರಡು ಸಾವಿರ ರೂಪ್ಯಾಗಳ ತನಕ ದೊರಕುವುದೂ ಉಂಟು. ಇದು ಅವರವರ ಚಾತುರ್ಯ, ಚೈತನ್ಯ ತಯಾರಕ ಪರಿಪೂರ್ಣತೆಗಳ ಯೋಗ್ಯತೆಯ ಮೇಲೆ ಹೊಂದಿಕೊಂಡಿದೆ.

ಕೆಲಸಗಾರನಿಗೆ ಕಾರ್ಖಾನೆಯಲ್ಲೇ ಊಟದ ಏರ್ಪಾಡುಗಳಿವೆ. ಪ್ರತಿ ಕೈಗಾರಿಕೆ ಸಂಸ್ಥೆಯವರು ತಮ್ಮ ಕಾರ್ಖಾನೆಗೇ ಸಂಬಂಧಪಟ್ಟ ಮಜೂರ ವಸತಿಗೃಹಗಳನ್ನೂ, ಕಾಯಿಪಲ್ಯ ತೋಟಗಳನ್ನೂ, ಗೋಧಿ ಗದ್ದೆಗಳನ್ನೂ, ಶಾಲೆಗಳನ್ನೂ, ನಾಟಕ ಸಿನೇಮಾ ಗೃಹಗಳನ್ನೂ, ಆಸ್ಪತ್ರೆಗಳನ್ನೂ, ಮತ್ತಿತರ ಮನೋರಂಜನೆಯ ವಿಶ್ರಾಂತಿ ಆಲಯಗಳನ್ನೂ ಸ್ಥಾಪಿಸಿರುವರು. ಕಮ್ಮಿಯೆಂದರೆ ದಿವಸಕ್ಕೆ ಎಂಟು ಗಂಟೆ ಕೆಲಸಮಾಡಬೇಕು. ವಾರದಲ್ಲಿ ಒಂದು ದಿನ ರಜೆ. ಹೆಚ್ಚಿಗೆ ಕೆಲಸಮಾಡಿದ ಪ್ರತಿ ಗಂಟೆಗೆ ಒಂದುವರೆ ಪಾಲಷ್ಟು ಹೆಚ್ಚು ಮಜೂರಿ ಕೊಡಲಾಗುವುದು. ಈ ಕ್ರಮವು ಅಮೇರಿಕಾ ಇಂಗ್ಲಾಂಡುಗಳಲ್ಲಿದ್ದಂತೆ ಇದೆ. ಒಂದು ನಿಯಮಿತ ಸಂದರ್ಭದಲ್ಲಿ ಕೆಲಸಗಾರರಿಗೆ ದೀರ್ಘ ಕಾಲದ ರಜೆ ಕೊಡಲಾಗುವುದು. ಆಗ ಅವರು ತಮ್ಮ ಕಾರ್ಖಾನೆಯವರು ಹೇಳಿದ ರೈಲುಗಳಲ್ಲಿ, ಅವರು ಏರ್ಪಡಿಸುವ ವಿಹಾರ ಸ್ಥಳಗಳಿಗೆಲ್ಲಿಯಾದರೂ ಸಂಚಾರಕ್ಕೆ ಹೋಗಬಹುದು. ರೈಲುಗಳಲ್ಲಿ ಸಾಮಾನ್ಯ ಜನರಿಗೆ ಮತ್ತು ಮೇಲಾಧಿಕಾರಿಗಳಿಗೆಂದು 'ಎರಡು ತರದ ತರಗತಿಗಳನ್ನು ಕಲ್ಪಿಸಲಾಗಿದೆ. ಮೇಲಧಿಕಾರಿಗಳು ಮೆದುವಾದ ಆಸನಗಳಿರುವ ಗಾಡಿಗಳಲ್ಲೂ, ಸಾಮಾನ್ಯ ಜನರು ಸ್ವಲ್ಪ 'ಗಟ್ಟಿ' ಯಾದ ಆಸನಗಳಿರುವ ಗಾಡಿಗಳಲ್ಲೂ ಪ್ರಯಾಣ ಬೇಕು. ಅಲ್ಲಿನ ಮೇಲಾಧಿಕಾರಿಗಳು ವಿಶೇಷವಾಗಿ ತೋರುವ ಟ್ರಂಕು ಬೆಡ್ಡಿಂಗ್‌ಗಳನ್ನು ಒಯ್ಯಬಾರದೆಂದು ಕಾನೂನಿದೆ.

ಐರೋಪ್ಯ ಮತ್ತು ಅಮೇರಿಕನ್ ಅಳತೆಯಿಂದ ರಷ್ಯನ್ ಜನರ ಉಡುಪು ತೊಡುಪುಗಳನ್ನು ವಿಮರ್ಶಿಸಿದರೆ ಅವರ ಬಟ್ಟೆಬರೆಗಳು ಕಮ್ಮಿ ಶ್ರೇಷ್ಟತೆಯವುಗಳೂ, ಕೀಳು ಶೈಲಿಯವುಗಳೂ ಆಗಿವೆ. ಮಾತ್ರವಲ್ಲ ಅವು ಕಟ್ಟು ನಿಟ್ಟಿನವುಗಳೂ ಅಲ್ಲ. ಅಧಿಕಾರಿಗಳ ಶಿಸ್ತಿನ ಉಡುಪುಗಳ ಬಟ್ಟೆಯೂ ಅಮೇರಿಕನರಷ್ಟು ಶ್ರೇಷ್ಟ ಮಾದರಿಯವುಗಳಲ್ಲ. ಅವುಗಳಲ್ಲಿ ಕೆಂಪು ಪಟ್ಟಿಯವುಗಳು ಅಲ್ಲಲ್ಲಿ ಜೋತಾಡುತಿದ್ದು ಬೆಳ್ಳಿಯ ನಕ್ಷತ್ರ ಆಕೃತಿಯ ಪದಕಗಳಿಂದ ಅಲಂಕರಿಸಲ್ಪಡುತ್ತವೆ. ಎರಡು ಫರ್ಲಾಂಗು ದೂರದಿಂದ ಮಿನುಗುವ ಈ ರಜತ ಪದಕದಿಂದ ಅವನೊಬ್ಬ ಉನ್ನತ ಅಧಿಕಾರಿಯೆಂದು ತಿಳಿದುಕೊಳ್ಳಬಹುದು. ಹಾಗೇ ಅವರು ಅನೇಕಾನೇಕ ಬಂಗಾರ ಮತ್ತು ಕಂಚಿನ ಪ್ರಶಸ್ತಿ ಪದಕಗಳನ್ನೂ ತಮ್ಮ ಎದೆಗೆ ಚುಚ್ಚಿಕೊಳ್ಳುವುದರಲ್ಲಿ ಮೆಚ್ಚುತ್ತಾರೆ.

ನಾಟಕ ಶಾಲೆಯೊಂದರಲ್ಲಿ ಸೇರುವ ಅಧಿಕಾರಿಗಳು ಪದೇ ಪದೇ ಒಬ್ಬರನ್ನೊಬ್ಬರು ಕೈಯೆತ್ತಿ, ತಲೆ ಬಗ್ಗಿಸಿ, ಹೇಟ್ ಎತ್ತಿ ವಂದನೆ ಮಾಡುತ್ತಿರುವುದನ್ನು ಕಾಣಬಹುದು. ಇನ್ನೊಂದು ವಿಶೇಷವೆಂದರೆ ರಷ್ಯನ್ ಸಾರ್ವಜನಿಕರಲ್ಲಿ ಮುದುಕರೇ ಕಮ್ಮಿಯಿರುವುದು. ಕ್ರಾಂತಿ ಪ್ರಾರಂಭದಲ್ಲಿ ನಡು ವಯಸ್ಸಿನವರಾಗಿದ್ದವರು ಈಗ ಮುದುಕರಾಗಿರಬೇಕಿತ್ತು. ಆದರೆ ಅಲ್ಲಿ ಮುದುಕರು ಕಣ್ಣಿಗೆ ಬೀಳುವುದೇ ಇಲ್ಲ. ಒಂದೊ ಅವರು ವೃದ್ಧ ಪೋಷಣಾಲಯದಲ್ಲಿದ್ದಾರೊ, ಇಲ್ಲವೇ ದೇಶ ಬಿಟ್ಟು ಓಡಿರುವರೋ ಎಂಬುದು ಸರಿಯಾಗಿ ತಿಳಿಯುವುದಿಲ್ಲ.

ನರ್ತನ, ನಾಟಕ, ಸಂಗೀತ ಪ್ರದರ್ಶನದಲ್ಲಿ ಭಾಗವಹಿಸುವ ಪಾತ್ರ ವರ್ಗಗಳು ನಿಜವಾಗಿ ಶ್ರೇಷ್ಟ ತರಗತಿಯ ಬಟ್ಟೆಬರೆಗಳಿಂದ ಅಲಂಕೃತರಾಗಿರುತ್ತಾರೆ. ರಷ್ಯನ್ ಸಂಗೀತ, ನಾಟ್ಯ ನಾಟಕಗಳು ಸರ್ವಸಾಧಾರಣವಾಗಿ ಶ್ರೇಷ್ಠ ತರಗತಿಯವುಗಳಿವೆಯೆಂದು ಒಪ್ಪಬೇಕು.

(ಈ ಲೇಖನವನ್ನು ಮುಂದಿನ ಸಂಚಿಕೆಯಲ್ಲಿ ಸಂಪೂರ್ಣ ಮಾಡಲಾಗುವುದು.)

ದಿನವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಮಂಜೇಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

The South Canara Central Co-operative
Bank, Ltd., Mangalore.
SEASON DEPOSISTS
of Rs. 10,000/ and above for six months will be
accepted at 3½% up to 31st March 1945.
U. Shantha Rama Rao,
Secretary
2-12-1944

ನಮ್ಮಲ್ಲಿ ನಿತ್ಯ ಜೀವನದ ವ್ಯಯವು ಶೇ. ೨೫೦ ಹೆಚ್ಚಿರುವುದು, ಆದರೆ ಒಂದು ವ್ಯಕ್ತಿಯ ದುಡಿಮೆಯಲ್ಲಿ ಆದ ಹೆಚ್ಚಳವು ಅಂದರೆ ಶೇ. ೫೦ ಮಾತ್ರ. ಬ್ರಿಟನಿನಲ್ಲಿ ೧೯೪೪ರ ವರ್ಷಾಂತ್ಯದಲ್ಲಿ ಜೀವನದ ವ್ಯಯದಲ್ಲಿ ಹೆಚ್ಚಳವು ಯುದ್ಧ ಪೂರ್ವದ ದಿವಸಗಳಿಗಿಂತ, ಶೇ. ೩೩ ಆಗಿರುವುದು. ಇದೆ ಅವಧಿಯಲ್ಲಿ ದುಡಿಮೆಯ ಹೆಚ್ಚಳವು ಶೇಕಡಾ ೪೫ ಆಗಿರುವುದು. ಹೀಗೆಂದು ಪತ್ರಿಕೆಯೊಂದರ ವರದಿಯಲ್ಲಿದೆ. ನಿತ್ಯದ ಖರ್ಚಿನಲ್ಲಿ ಅಷ್ಟೊಂದು ಹೆಚ್ಚಳವಾಗಿದ್ದರೂ, ಸಿಕ್ಕಿದರಲ್ಲೆ ನಮ್ಮವರು ಜೀವನ ಸಾಗಿಸುತ್ತಿರುವುದು ಆಶ್ಚರ್ಯವಲ್ಲವೆ? ಅದರಲ್ಲೂ ಈಗಿನ ಕಂಟ್ರೊಲ್ ಯುಗದಲ್ಲಿ ಬಡವರಿಗೆ ಸಾಲವೆ ದೊರಕದಿರುವಾಗ ಉಪವಾಸ ಬಿದ್ದೆ, ಜನರು ಈ ಅಂತರವನ್ನು ನೀಗಿಸಬೇಕು, ಬೇರೆ ಹಾದಿಯಿಲ್ಲ. ಪೌರ್ವಾತ್ಯದಲ್ಲಿ, ಮುಖ್ಯವಾಗಿ ಚೀನಿಯರಲ್ಲಿ ಸಂಕಷ್ಟಗಳನ್ನು ಅನುಭವಿಸಲು ಒಳ್ಳೆ ಸಹನಾಶಕ್ತಿಯಿರುವುದೆಂದು ಶ್ಲಾಘನೆಯು ನಮಗೆ ಅನೇಕ ಕಡೆಗಳಿಂದ ದೊರಕಿದ್ದು ಪ್ರಕೃತಕ್ಕೆ ಈ ಸಹನಾಶಕ್ತಿಯಿಂದಲೆ ಜನರು ಜೀವನ ಸಾಗಿಸುತ್ತಿರಬಹುದು.

ಪೆಲೆಸ್ತೀನದಲ್ಲಿ ಇಡೀ ಜಗತ್ತಿಗೆ ಇನ್ನೂ ೧೫೦ ವರ್ಷಗಳಿಗೆ ಬೇಕಾಗುವಷ್ಟು, ಖನಿಜ ಎಣ್ಣೆಯನ್ನು ಒದಗಿಸುವ ಎಣ್ಣೆಯ ಶೇಖರವಿರುವುದೆಂದು ತಿಳಿದುಬಂದಿದೆ. ಈ ಎಣ್ಣೆ ಪ್ರದೇಶಗಳ ಹೆಚ್ಚಿನವುಗಳನ್ನು ಅಮೇರಿಕನರು ಗೇಣಿಗೆ ತೆಗೆದುಕೊಂಡಿರಾಗಿಯೂ, ಅಲ್ಲಿಯ ಹ್ಯಾ ಕಮಿಶನರರು ಬ್ರಿಟಿಷ್ ಪರವಾಗಿ ವರ್ತಿಸುತ್ತ ಅಲ್ಲಿನ ಪ್ರಜೆಗಳ ಹಿತಗಳಿಗೆ ದಕ್ಕೆ ಬಾರದಂತೆ ಕೆಲವು ಶರ್ತಗಳು ಗೇಣಿಚೀಟಿನಲ್ಲಿ ಬರುವಿಕೆಮಾಡಿರುವರೆಂದು ತಿಳಿದುಬಂದಿದೆ. ಗೇಣಿಚೀಟಿನಲ್ಲಿ ಶರ್ತಗಳು ಯಾವದೇ ಇರಲಿ ಎಣ್ಣೆ ಫಲವು ದೊರಕುವುದು ಅಮೇರಿಕಕ್ಕಲ್ಲವೆ! ಎಣ್ಣೆಗಾಗಿ ಇರಾಣದಲ್ಲೂ ಅಮೇರಿಕನರ ಪ್ರವೇಶವಾಗಿದ್ದಿತು. ಆದರೆ ಅದು ಸೋವಿಯಟ್ ರಷ್ಯದ ಗಡಿಯಲ್ಲಿರುವುದರಿಂದ, ಸ್ಟೆಲೀನನ ದೃಷ್ಟಿಯೂ ಕೂಡ ಅಲ್ಲಿನ ಎಣ್ಣೆಯ ಮೇಲೆ ಹೊರಳಿದರಿಂದ ಅಮೇರಿಕನ್ನರು ಸದ್ಯಕ್ಕೆ ಆ ವಿಚ್ಚಾರವನ್ನು ಬಿಟ್ಟುಬಿಟ್ಟಿರುವರು.

ಹಿಂದೂದೇಶದ ಭಹೀರ್ ದೇಶಗಳೊಡನೆ ವ್ಯಾಪಾರದದೆಸೆಯಿಂದ ಲಂಡನಿನ ೧೩೦೫ ಕೋಟಿ ರೂ. ಜಮೆಯಾಗಿರುವುದೆಂದು ತಿಳಿದುಬಂದಿದೆ. ಸದ್ಯಕ್ಕೆ ಈ ನಿಧಿಯನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲವೆಂದೂ ತಿಳಿದುಬಂದಿದೆ. ಹಿಂದೂದೇಶವು ಸಾಮಾನುಗಳನ್ನು ಹೊರಕಳುಹಿಸಿ ಅದರ ಮೌಲ್ಯವು ಸುಮ್ಮನೆ ಲಂಡನಿನಲ್ಲಿ ಶೇಖರಿಸಲ್ಪಡುವ ಬದಲಾಗಿ ಅದೆ ಸಾಮಾನುಗಳನ್ನು ಸಂಯುಕ್ತ ಅಮೇರಿಕಾದಿಂದಲೂ, ಬ್ರಿಟಿಷ್ ಸಾಮ್ರಾಜ್ಯ ಇನ್ನಿತರ ದೇಶಗಳಿಂದಲೊ ಯಾಕೆ ಪಡಕೊಳ್ಳಬಾರದೆಂದು ಪ್ರಶ್ನೆಯೊಂದು ನವಡಿಲ್ಲಿಯಲ್ಲಿ ಸದ್ಯ ನಡೆಯುವ ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಕೇಳಲಾಗಿತ್ತು.

ಭೂಲಾಬಾಯಿ ದೇಸಾಯಿಯವರು ಮುಸ್ಲಿಂ ಲೀಗಿನವರೊಡನೆ ಒಪ್ಪಂದ ಮಾಡಿಕೊಂಡು, ಕೇಂದ್ರದಲ್ಲಿ ಮತ್ತು ಪ್ರಾಂತ್ಯಗಳಲ್ಲಿ ಸರ್ವ ಪಕ್ಷೀಯ ಸರಕಾರ ಮಂಡಳಿಗಳನ್ನು ಸ್ಥಾಪಿಸುವ ಕುರಿತು ಯತ್ನದಲ್ಲಿದ್ದರಷ್ಟೆ. ಈ ವಿಚಾರ ತುಂಬಾ ಊಹಾಪೂಹೆಗಳು ಎದ್ದಿದ್ದವಷ್ಟೆ. ವೈಸ್ರಾಯರು ಈ ವ್ಯವಹಾರದ ಕುರಿತು ವರದಿಯನ್ನು ವ್ಯಾಟ್‌ಹೋಲಿಗೆ (ಲಂಡನಿಗೆ) ಕಳುಹಿಸಿಕೊಟ್ಟಿದ್ದು, ಅಲ್ಲಿಂದ ಆಜ್ಞೆಯನ್ನು ಎದುರು ನೋಡುತ್ತಿದ್ದಾರಂತೆ. ದೇಸಾಯಿಯವರು ಸರ್ವಪಕ್ಷೀಯ ಸರಕಾರದ ರಚಿಸುವ ಸೂಚನೆಗಳಿರುವ ಸಲಹೆ ಪತ್ರವನ್ನು ವೈಸ್ರಾಯರಿಗೆ ಒಪ್ಪಿಸಿರುವರು, ಅಲ್ಲದೆ ಈ ಸಲಹೆ ಪತ್ರದಲ್ಲಿ ಅಡಕವಾಗಿರುವ ಸೂಚನೆಗಳಿಗೆ ಮುಸ್ಲಿಂ ಲೀಗಿನ ಒಡಂಬಡಿಕೆಯೂ ಇರುವುದೆಂದು ತಿಳಿದುಬಂದಿದೆ. ಆದರೆ ಲಂಡನು ಸದ್ಯ ತ್ರಿಮೂರ್ತಿಗಳ ಕೂಡುವಿಕೆಯ ಗೊಂದಲದಲ್ಲಿರುವಾಗ, ಬೇಗನೆ ಈ ವಿಚಾರ ಒಂದು ಇತ್ಯರ್ಥಕ್ಕೆ ಬರುವ ಹಾಗಿಲ್ಲ. ಮತ್ತು ವೈಸ್ರಾಯರು ಸದ್ಯ ದಕ್ಷಿಣದ ಪ್ರವಾಸದಲ್ಲಿರುವುದರಿಂದ ಸದ್ಯಕ್ಕೆ ಈ ವ್ಯವಹಾರವು ನಿಲ್ಲಿಸಲ್ಪಟ್ಟಿದೆ ಎಂದು ತಿಳಿಯಬೇಕು. ಒಂದುವೇಳೆ ಯಾವದಾದರೂ ನಿರ್ಣಯಕ್ಕೆ ಬರುವುದಾದರೂ, ತನ್ನ ಸದ್ಯದ ಸಲಹೆಗಾರ ಮಂಡಳವನ್ನು ವಿಚಾರಿಸಿಯೆ ಮುಂದುವರಿಯುವೆಂದು, ವೈಸ್ರಾಯರ ಆಶ್ವಾಸನೆಯು ಸಲಹೆಗಾರರಿಗೆ ದೊರಕಿರುವುದೆಂದು ವಾರ್ತೆಯಿದೆ. ದೇಸಾಯಿಯರ ಈ ವ್ಯವಹಾರಕ್ಕೆ ಕಾಂಗ್ರೆಸ್ಸಿನ ಸಮ್ಮತವಿದ್ದ ಹಾಗೆ ಕಾಣುವುದಿಲ್ಲ. ಕಾಂಗ್ರೆಸ್ಸು ಕಡೆಯಿಂದ ಈ ಕುರಿತು ಒಂದಿಷ್ಟು ಗಂಧವಾದರೂ ಈ ತನಕ ಹೊರಡಲಿಲ್ಲ. ಆದರೆ ದೇಸಾಯಿಗಳು ಕಾಂಗ್ರೆಸ್ ಮುಖಂಡರಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದವರಾದುದರಿಂದ, ಅವರ ಯೋಜನೆಗಳಿಗೆ ಕಾಂಗ್ರೆಸ್ಸು ಸಮ್ಮತಿಸಬಹುದು ಎಂಬ ಕೆಲವೆಡೆಗಳಲ್ಲಿ ಊಹೆಗಳು ಮಾತ್ರಯಿರುವವು.

ಆದರೆ ಕಾಂಗ್ರೆಸ್ಸಿನ ಮುಖಂಡರುಗಳು ಸೆರೆಮನೆಯಲ್ಲಿ ಇರುವವರೆಗೆ ದೇಸಾಯಿರವರ ಈ ವ್ಯವಹಾರದ ಫಲವು ಕಾರ್ಯರೂಪಕ್ಕೆ ಬರಲು ಸಾಧ್ಯವಿದೆಯೆ? ಬೇಗನೆ ಅವರ ಬಿಡುಗಡೆಯು ನಡೆದುಬಿಟ್ಟರೆ, ದೇಸಾಯಿರವರ ವ್ಯವಹಾರದಿಂದ ಒಳ್ಳೆ ಸಾರ್ಥಕವಿದೆ ಎಂದು ತಿಳಿಯಬಹುದಿತ್ತು.

ಸೆರೆಯಲ್ಲಿರುವ ಸರದಾರ ಪಟೇಲರು ತಮ್ಮ ಜೀವನದ ಸವಿನೆನಪುಗಳನ್ನು ಕೊಡಿಸಬೇಕಾಗಿ ಒಂದು ನಿರ್ಧಾರಮಾಡಿದ್ದರೆಂದು ಈ ಮೊದಲು ತಿಳಿದುಬಂದಿತ್ತು, ಆದರೆ ಅವರ ಸದ್ಯದ ದೇಹಸ್ಥಿತಿಯಿಂದ, ಅವರಿಗೆ ಬರೆಯಲು ಅಸಾಧ್ಯವಾದುದರಿಂದ, ಅವರು ಹೇಳುವುದನ್ನು ಬರೆದುಕೊಳ್ಳಲು ಕರಣೀಕರ ವ್ಯವಸ್ಥೆಯು ಇಲ್ಲದುದರಿಂದ, ಅವರು ಮಾಡಿದ ನಿರ್ಧಾರವನ್ನು ಸದ್ಯ ಬಿಟ್ಟುಬಿಟ್ಟಿರುವರೆಂದು ಈಗ ತಿಳಿದುಬಂದಿದೆ.

ನೆಹರುಗಳವರು ಸೆರೆಯಲ್ಲಿ ಅಂದವಾದ ಹೂದೋಟವನ್ನು ಬೆಳೆಸಿರುವರಂತೆ. ಅವರಿಗೆ ಓದಲು ತುಂಬಾ ಪುಸ್ತಕಗಳು ಬರುತ್ತಿದ್ದವಂತೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಬಂಧಿಸಲ್ಪಟ್ಟಿದ್ದ ಸದಸ್ಯರಿಗೆ ಸೆರೆವಾಸದಿಂದ ಸಿಕ್ಕಿದ ಲಾಭವೆಂದರೆ, ಪ್ರತಿಯೊಬ್ಬನು ಅನೇಕ ವಿಷಯಗಳ ಕುರಿತು ತುಂಬಾ ಗ್ರಂಥಗಳನ್ನು ಓದಿ ಜ್ಞಾನ ಹೆಚ್ಚಿಸಿಕೊಂಡುದು.

ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರ ಹಿತಗಳಿಗೆ ದಕ್ಕೆತರುವ ಶಾಸನಗಳು ದಿನೆದಿನೆ ಹೆಚ್ಚುತ್ತಾಯಿದ್ದರೂ ಅಲ್ಲಿನ ಯೂನಿಯನ್ ಸರಕಾರಕ್ಕೆ ಬುದ್ಧಿ ಪಾಠಮಾಡಲು ಇಂಡಿಯಾ ಸರಕಾರದ ಯತ್ನಗಳು ಬಿರುಸಾಗಿ ನಡೆಯುತಿದ್ದ ಹಾಗೆ ಕಾಣುವುದಿಲ್ಲ. ಕಳೆದ ಸಲ ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಡಾ. ಖರೆಯವರ, ಉತ್ತರಕುಮಾರನ ಭಾಷಣೋಪಾದಿ, ಗಂಭೀರವಾದ ನುಡಿಗಳಿಂದ ಕೂಡಿದ, ಎಚ್ಚರಿಕೆಯ ಭಾಷಣವೊಂದು ಆಗಿದ್ದರೂ, ಆ ವಿಚಾರ ಈ ತನಕ ಇಂಡಿಯಾ ಸರಕಾರವು ತೆಗೆದುಕೊಂಡ ನಿಗಾ ಅತ್ಯಲ್ಪವೆಂದು ತಿಳಿದುಬಂದಿದೆ. ಯೂನಿಯನ್ ಸರಕಾರದ ಮೇಲೆ ಸೆಂಕ್ಷನುಗಳನ್ನು ಜ್ಯಾರಿಮಾಡುವ ವಿಚಾರ ಹಾಗೆನೆ ಬಾಕಿ ಉಳಿದಿದೆ. ಖರೆಯವರು ಮಾತನಾಡಿದ ಮಾತುಗಳು ಖರೆ ಅಲ್ಲವೆಂದು ಹೇಳಬೇಕಾಗಿದೆ. ಇನ್ನಾದರೂ ಸರಕಾರವು ಈ ಕುರಿತು ಲಕ್ಷ್ಯ ತೋರಬೇಕು ಎಂದು ಸೂಚನೆಗಳು ಈ ಭಾರಿಯ ಅಸೆಂಬ್ಲಿ ಅಧಿವೇಶನದಲ್ಲಾಗಿವೆ. ಯೂನಿಯನ್ ಸರಕಾರವು ಬಿಳೆಯವರದಲ್ಲವೆ? ಸ್ವಲ್ಪ ವಿನಯದಿಂದ ವರ್ತಿಸುವ ಎಂದು ಖರೆಯವರ ಧೋರಣವಿರಬಹುದು.

ಹಿಂದೂದೇಶದ ಸ್ವಾತಂತ್ರ್ಯ ಪ್ರಸ್ತಾಪದಲ್ಲಿ ಮಾತ್ರ ಅಮೇರಿಕನ್ ಮತ್ತು ಬ್ರಿಟನಿನ ಲಕ್ಷ್ಯವು ಲಭಿಸದಾದರೂ, ಯುದ್ಧೋತ್ತರ ಹಿಂದೂದೇಶದ ವ್ಯಾಪಾರ, ಔದ್ಯೋಗಿಕರಣ ಮೊದಲಾದ ವಿಚಾರಗಳಲ್ಲಿ ಇಬ್ಬರೂ ತುಂಬಾ ಎಚ್ಚರಿಕೆಯನ್ನು ತೋರಿಸುತ್ತಿರುವರು. ಹಿಂದೂದೇಶದ ಕುರಿತು ಗಮನ ಅಲ್ಲಿ ಇದ್ದೇಯಿರುವುದೆಂದು ಅದು ದೃಷ್ಟಾಂತವಲ್ಲವೆ? ಹಿಂದೂದೇಶದ ಉದ್ಧಾರಕ್ಕೆಂದು ನಿಯೋಜಿಸಲ್ಪಟ್ಟ, ಮುಂಬಾಯಿ ಯೋಜನೆಯ ಪ್ರಕಟಣೆಯೊಂದು ಬ್ರಿಟನಿನಲ್ಲಿ ಹೊರಬಿದ್ದುದು, ಎರಡು ಆವೃತ್ತಿಯಲ್ಲಿ ಹೂಡಿಸಬೇಕಾಯಿತಂತೆ. ಹಿಂದೂದೇಶದ ವ್ಯಾಪಾರದ ಕುರಿತು ಪಾಶ್ಚಾತ್ಯರ ಆಸಕ್ತಿಯು ಕಾಣಿಸಿಕೊಳ್ಳುತ್ತಿದ್ದ ಹಾಗೆ ಹಿಂದೀಯರಿಗೆ ಸ್ವಾತಂತ್ರ್ಯ ದೊರಕಿಸಿಕೊಡುವ ಆಸಕ್ತಿ ಯಾಕೆ ಕಾಣಸಿಕೊಳ್ಳುವುದಿಲ್ಲ?

ನ್ಯಾಶನಲ್ ವಾರ್ ಫ್ರಂಟ್ ಎಂಬ ಸಂಸ್ಥೆಯೊಂದು ನಮ್ಮಲ್ಲೀಗ ಇರುವುದಷ್ಟೆ. ಇದು ಯುದ್ಧ ಪ್ರಚಾರದ ಬಗ್ಗೆ ಇಂಡಿಯಾ ಸರಕಾರದ ಏರ್ಪಾಡು. ಈ ಏರ್ಪಾಡಿನ ಬಗ್ಗೆ ವ್ಯಯವಾಗುತ್ತಿರುವ ಹಣದ ಕುರಿತು ಪ್ರಸ್ತಾಪವು ಈ ಬಾರಿಯ ಎಸೆಂಬ್ಲಿ ಅಧಿವೇಶನದಲ್ಲಿ ಬಂತು. ಕರ್ಚಿನ ಪಟ್ಟಿ ನೋಡಿ ಕೆಲವರಿಗೆ ತಲೆತಿರುಗಿತು. ಈ ಸಂಸ್ಥೆಯು ನಡೆಯಿಸುತ್ತಿರುವ ಕಾರ್ಯಕಲಾಪಗಳಿಗೆ ಅಷ್ಟು ಖರ್ಚೆ? ಆ ಖರ್ಚಿನ ವಿವರಗಳೇನು? ಆ ಹಣವನ್ನು ಪ್ರಜೆಗಳಿಗೆ ಉಪಯುಕ್ತವಾಗುವಂತೆ ಬೇರೆ ಸಾರ್ಥಕ ರೀತಿಗಳಿಂದ ವಿನಿಯೋಗಿಸಬಾರದೆ, ಮೊದಲಾದ ಪ್ರಶ್ನೆಗಳು ಕೇಳಲಾದವು. ಕಾಂಗ್ರೆಸ್ ಪತ್ರಿಕೆಗಳಿಗೂ ಈ ಸಂಸ್ಥೆಯಿಂದ ತುಂಬಾ ಲಾಭವಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು. ಹಣವಲ್ಲವೆ?

ಮಹಾರಾಜರು, ಸಾಧುಗಳು, ಫಕೀರರು, ಹಿಂದೂ–ಮುಸ್ಲಿಂ ಬೇಧ, ನೂರಾರು ಭಾಷೆಗಳು, ಕ್ರಮಗಳು, ಸಂಸ್ಕೃತಿಗಳು, ಮೊದಲಾದ ಬಿನ್ನತೆಯ ರಾಶಿಗಳೆಯಿರುವ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವೆ? ಎಂಬ ಹೊಸತೊಂದು, ಬ್ರಿಟನಿನಲ್ಲಿ ಹೊಸತಾಗಿ ಏರ್ಪಡುತ್ತಿರುವ ಲಿಬರಲ್ ಪಕ್ಷದ ಪರಿಷತ್ತಿನಲ್ಲಿ ಮೊನ್ನೆ ಕೇಳಿಸಿಬಂತು. ಯುದ್ಧೋತ್ತರದಲ್ಲಿ ಬ್ರಿಟನಿನ ಉದ್ಧಾರ ಸಾಧಿಸಿವೆವೆಂಬ ಘೋಷದಿಂದ ಈ ಪಕ್ಷವು ಮುಂಬರುವ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯಲು ಯತ್ನಿಸುತ್ತಿದೆ. ಬ್ರಿಟನಿನ ಉದ್ಧಾರ ಮತ್ತು ಹಿಂದೂದೇಶದ ಸ್ವಾತಂತ್ರ್ಯ ಎರಡು ಒಟ್ಟಾಗಿ ಸಾಧಿಸುವುದು ಅಸಾಧ್ಯ ವಿಷಯ ಎಂಬ ತಿಳುವಳಿಕೆಯಿಂದ ಲಿಬರಲ್ ಪಕ್ಷದ ಕೆಲವರು ವರ್ತಿಸುತ್ತಿರಬಹುದು. ಲಿಬರಲರು, ಬ್ರಿಟನಿನ ಕುರಿತು ಮಾತ್ರ ಲಿಬರಲರು ಹಿಂದೂದೇಶದ ಕುರಿತಲ್ಲವೆಂದು ತಿಳಿಯಬೇಕಾಗಿಯದೆ.

ಆಯುರ್ವೇದಯಿರುವುದಷ್ಟೆ. ನುರಿತ ಅನುಭವಶಾಲಿ ಜ್ಞಾನಿಗಳಿಂದ ಉದ್ಭವಿಸಿದ ಈ ಶಾಸ್ತ್ರದ ಕುರಿತು, ಆಧುನಿಕ ಪರಿಶೋಧನೆ ನಡೆದು, ಅದು ಪ್ರಶಸ್ತಿಗೆ ಬರುವಂತೆ ಸಾಧನೆಗಳಾಗಬೇಕೆಂದು, ಈ ವಿಚಾರ ಯುದ್ಧೋತ್ತರ ಉದ್ಧಾರಕ್ಕೆಂದು ರಚಿಸಲ್ಪಡುತ್ತಿರುವ ಯೋಜನೆಗಳಲ್ಲಿ ಸೇರಿಸಬೇಕೆಂದೂ ಸೂಚನೆಗಳಾಗಿವೆ. ಜಪಾನಿನಲ್ಲಿ ಪಾಶ್ಚಾತ್ಯಕರಣವು ಬಹಳ ಹುರುಪಿನಿಂದ ನಡೆದಿದೆ. ಆದರೆ ಜಪಾನಿ ಕಲೆ, ಸಾಹಿತ್ಯ, ವಿದ್ಯೆ, ಸಂಸ್ಕೃತಿ, ಕ್ರಮಕಟ್ಟಳೆ ಇತ್ಯಾದಿಗಳು ಕತ್ತಲೆಗೆ ಹೋಗುವ ಬದಲಾಗಿ, ಪಾಶ್ಚಾತ್ಯ ಕ್ರಮಗಳಿಂದ ಇನ್ನೂಬೆಳಕಿಗೆ ಬರುವಂತೆ ಸಾಧನೆಗಳು ನಡೆದಿದ್ದವು. ಉತ್ತಮ ಪರಿಣಾಮ ಉಂಟಾದುವು. ಹಾಗೆನೆ ಆಯುರ್ವೇದವನ್ನು ರಕ್ಷಿಸುವುದು ಮಾತ್ರವಲ್ಲ ಅದನ್ನು ಬೆಳೆಸು

(೬ನೇ ಪುಟಕ್ಕೆ ಮುಂದುವರಿಧಿದೆ)

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಭಾರತದ ಸ್ವಾತಂತ್ರ್ಯ–ಬ್ರಿಟಿಷ್ ಕೊಮ್ಯುನಿಸ್ಟ ಸೈನಿಕನ ದೃಷ್ಟಿಕೋನ

ಫೆಬ್ರವರಿ ತಾ ೪ರ "ಬೊಂಬೆ ಕ್ರೊನಿಕಲ್" ವಾರಪತ್ರಿಕೆಯಲ್ಲಿ ಭಾರತದ ಕುರಿತು ಒಬ್ಬ ಆಂಗ್ಲ ಸೈನಿಕನು ತನ್ನ ಹೆಂಡತಿಗೆ ಬರೆದ ಪತ್ರಗಳನ್ನು ಒಟ್ಟು ಕೂಡಿಸಿ ಪ್ರಕಟಮಾಡಿದ ಪುಸ್ತಕದಿಂದ ಆಯ್ದು ತೆಗೆದ ಕೆಲವು ಅನೋಘ ವಿಚಾರಗಳನ್ನು ಪ್ರಚಾರಮಾಡಿದ್ದಾರೆ.

ಈ ಪುಸ್ತಕದ ಹೆಸರು 'ಬ್ರಿಟಿಷ್ ಸೊಲ್ಜರ್ ಇನ್ ಇಂಡಿಯಾ" (ಇಂಡಿಯಾದಲ್ಲಿ ಬ್ರಿಟಿಷ್ ಸೈನಿಕ)–ಬರೆದವನು ಕ್ಲೈವ್ ಬ್ರೆನ್ಸನ್ ಎಂಬವನು. ಈತನ ತಂದೆಯು ಬ್ರಿಟಿಷ್ ಸೇನೆಯಲ್ಲಿ ಒಬ್ಬ ಹುದ್ದೆದಾರನು. ಈತನು ಹುಟ್ಟಿದ್ದು ಅಹಮದ್ ನಗರದಲ್ಲಿ. ೧೯೦೪ರಲ್ಲಿ ಭಾರತದಲ್ಲಿ ಜನ್ಮವೆತ್ತಿದ ಈತ ತನ್ನ ವಿದ್ಯಾಭ್ಯಾಸವನ್ನು ಇಂಗ್ಲೆಂಡ್‌ದಲ್ಲಿ ಪಡೆಯುವಾಗ ಚಿತ್ರಕಲೆಯಲ್ಲಿ ತುಂಬಾ ನಿಪುಣತೆಯನ್ನು ಸ್ಫೂರ್ತಿಯನ್ನೂ ತೋರಿದ. ಬ್ರೆನ್ಸನು ೧೯೩೬ರಲ್ಲಿ ಕೊಮ್ಯುನಿಸ್ಟ ಪಾರ್ಟಿಯನ್ನು ಸೇರಿದನು. ಆಗ ಸ್ಪೆಯಿನಿನಲ್ಲಿ ನಡೆಯುತ್ತಿದ್ದ ಅಂತಃಕಲಹದಲ್ಲಿ ಭಾಗಿಯಾದ ಕಾರಣ ಜನರಲ್ ಫ್ರಾಂಕೊವಿನ ದೊಡ್ಡಿಯಲ್ಲಿ ಕೊಳೆಯಬೇಕಾಯಿತು. ೧೯೪೦ರಲ್ಲಿ ಅವನು ಬ್ರಿಟಿಷ್ ಸೈನ್ಯಕ್ಕೆ ಕಡ್ಡಾಯವಾಗಿ ಆಹ್ವಾನಿಸಲ್ಪಟ್ಟು ೧೯೪೧ರಲ್ಲಿ ಇಂಡಿಯಾ ದೇಶಕ್ಕೆ ಬಂದನು. ಮೊನ್ನೆ ೧೯೪೪ರಲ್ಲಿ ಬರ್ಮಾ ಯುದ್ಧದಲ್ಲಿ ಅರಕಾನ್ ಪ್ರಾಂತದಲ್ಲಿ ಈ ತರುಣ ಸೈನಿಕನು ಆಹುತಿಯಾದನು. ೧೯೪೦ರಿಂದ ೪೪ರ ತನಕ ಬ್ರೆನ್ಸನನು ತನ್ನ ಮಡದಿಗೆ ಬರೆದ ವಾರಂಪ್ರತಿ ಪತ್ರಗಳನ್ನೆಲ್ಲಾ ಸಂಗ್ರಹಿಸಿ ಅವನ ಮರಣದ ನಂತರ ಇಂಗ್ಲೆಂಡದಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾದರೂ ಹಿಂದುಸ್ಥಾನಕ್ಕೆ ಈ ಪುಸ್ತಕದ ಪ್ರತಿಗಳು ಮಾರಾಟಕ್ಕಾಗಿ ಇನ್ನೂ ಬಂದಿಲ್ಲ. ಪ್ರಾಯಶಃ ಬರುವಹಾಗೂ ಇಲ್ಲ. ಬೆವರ್ಲಿ ನಿಕೊಲಸ್ಸನು ಇಂಡಿಯದ ವಿಷಯವಾಗಿ ಬರೆದ ಹೇಯವಾದ ಪುಸ್ತಕಕ್ಕೂ ಈ ತರುಣ ಸೈನಿಕನು ಕಂಡದ್ದನ್ನು ಕಂಡಂತೆ ಬರೆದ ಪುಸ್ತಕಕ್ಕೂ ಇರುವ ತೀವ್ರ ವ್ಯತ್ಯಾಸವೇ ಇದಕ್ಕೆ ಕಾರಣವೆಂದು ಎತ್ತಿ ಹೇಳುವುದು ಬೇಡ.

ಬ್ರೆನ್ಸನನು ಬರೆದ ಈ ಪುಸ್ತಕವು ಅಪ್ಪಟವಾದ ಸತ್ಯ ಅಥವಾ ಸಂಪೂರ್ಣ ಯತಾರ್ಥವೆಂದಲ್ಲ. ಭಾರತದ ರಾಜಕೀಯದ ಪರಿಚಯ ಚೆನ್ನಾಗಿಲ್ಲದ ಕಾರಣ ರಾಷ್ಟ್ರೀಯ ಚಳವಳದ ಉದ್ದೇಶದ ವಿಷಯ ಈತನು ಪಟ್ಟ ಶೋಚನೀಯ ತಪ್ಪು ಅಭಿಪ್ರಾಯಗಳು ಅಲ್ಲಲ್ಲಿ ಸ್ಪಷ್ಟ ಒಡೆದು ಕಾಣುತ್ತಿವೆ. ಕೊಮ್ಯುನಿಸ್ಟನಿಗೆ ಸಹಜವಾದ ತೀವ್ರ ಫೆಸಿಸ್ಟ ವಿರೋಧ ಬ್ರೆನ್ಸನನಲ್ಲಿ ಇದ್ದು ಆ ಮಬ್ಬಿನಿಂದ'ಕ್ವಿಟಾ ಇಂಡಿಯಾ ಚಳವಳದಲ್ಲಿರುವ ಅವನಂಬಿಕೆಯನ್ನು ವ್ಯಕ್ತಪಡಿಸಿದ್ದರೂ ಅವನು ತನ್ನ ಹೃದಯ ಭರಿತವಾದ ಸಾಮ್ರಾಜ್ಯಶಾಹಿ ವಿರೋಧವನ್ನು ದಯೆ ದಾಕ್ಷಿಣ್ಯವಿಲ್ಲದೆ ನಿರ್ಭೀತಿಯಿಂದ ಪ್ರಕಟಪಡಿಸಿದ್ದಾನೆ. ಬ್ರಿಟಿಷರ ಹಿಂದೂಸ್ಥಾನದ ಆಳ್ವಿಕೆಯ ಅನ್ಯಾಯ ಮತ್ತು ಕರಾಳತ್ವವನ್ನು ಒಪ್ಪಿಕೊಂಡಿರುವನು. ಹಿಂದೂಸ್ಥಾನದಲ್ಲಿರುವ ಒಳ್ಳೆ ಸೌಂದರ್ಯಮಯವಾದ ವಿಷಯ ವಸ್ತುಗಳನ್ನು ಮನಮುಟ್ಟಿ ಅರಿಯುವಷ್ಟು ಕಲಾದೃಷ್ಟಿಯು. ಬ್ರೆನ್ಸನಲ್ಲಿ ಚೆನ್ನಾಗಿ ಇದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿತಕ್ಕೆ ಗಂಡಾಂತರ ಬರುವುದಿದ್ದರೂ ಇಂಡಿಯಾದ ವಿಷಯ ಯಥಾರ್ಥವನ್ನು ಬಯಲಿಗೆ ತಂದ ಒಬ್ಬನೇ ಒಬ್ಬ ಬ್ರಿಟಿಷ್ ಸೈನಿಕ ಕೊಮ್ಯುನಿಷ್ಟನಿದ್ದಾನೆ ಎಂಬುದು ಸಂತೋಷದ ವಿಷಯ. ಬ್ರೆನ್ಸನನ ಕೆಲವು ಅಭಿಪ್ರಾಯಗಳನ್ನು ಈ ಕೆಳಗೆ ಆಯ್ದು ಕೊಟ್ಟಿದೆ.

ಸೈನಿಕರ ದುರಂತಮಯ ವರ್ತನೆ

'ಕೆಲವು ದಿನಗಳಿಂದ 'ಅಸ್ತವ್ಯಸ್ತತೆ' ಎಂಬ ಪಿಡುಗು ನನ್ನನ್ನು ಕಾಡುತ್ತಿದೆ. ಹಿಂದೀಯರನ್ನು ಅವಹೇಳನ ಮಾಡಿ ಬಯ್ದಾಡುವ ಶತಮೂರ್ಖ ಸೈನಿಕರೊಡನೆ ವ್ಯವಹರಿಸುವಾಗಲಂತೂ ನನ್ನ ಮನಸ್ಸಿನ ಆ ವೇಗವು ಕುಗ್ಗುವುದೇ ಇಲ್ಲ. ಈ ಸೈನಿಕರು ಹಿಂದೀಯರನ್ನು ನಡೆಯಿಸುವ ರೀತಿಯು ಭವಿತವ್ಯದ ವಿಚಾರದಲ್ಲಿ ಭಯಾನಕವಾಗಿರುವುದು ಮಾತ್ರವಲ್ಲದೆ ನಾನು ಕೂಡ ಅವರ ಸಂಗಾತಿಯಾಗಿರುವನೆಂಬ ಯೋಚನೆಯು ನನ್ನನ್ನ ನಾಚಿಕೆಗೀಡುಮಾಡುತ್ತದೆ"

"ಕ್ವಿಟ್ ಇಂಡಿಯಾ" ಚಳವಳ

ಪುಣೆಯ ಸಮೀಪವಿರುವ ಸೇನಾ ಶಿಬಿರವನ್ನು ಸೇರಿದ ಕೆಲವೊಂದು ದಿನಗಳಲ್ಲಿ ಅವನಿಗೆ ತೋಚಿದ ಪ್ರಥಮದ ಅಭಿಪ್ರಾಯಗಳು ಈ ಕೆಳಗಿನಂತಿವೆ.

'ದುರಂತಮಯವಾದ ಪರಿಸ್ಥಿತಿಯಲ್ಲಿರುವ ಹಿಂದೀ ಪ್ರಜಾಕೋಟಿಯ ಎಲ್ಲರನ್ನೂ ಕನಿಕರಯುಕ್ತವಾದ ಆಶ್ಚರ್ಯದಲ್ಲಿ ಮುಳುಗಿಸಿ ಬಿಟ್ಟಿತು. ಅನೇಕ ಉಲ್ಲಾಸಪರವಾದ ಚರ್ಚೆ ವಿವಾದಗಳಿಗೆಲ್ಲ ಇದುವೇ ವಿಷಯ! ವಾದವಿವಾದಗಳೆಲ್ಲಾ ಏಕರೂಪವಾದ ತೀರ್ಮಾನಕ್ಕೆ ಬಾರದಿದ್ದರೂ ಎಲ್ಲರೂ ತಾಳಿದ ಮೂಲ ಅಭಿಪ್ರಾಯಗಳಲ್ಲಿ ಇಷ್ಟಿಷ್ಟಾದರೂ ವ್ಯತ್ಯಾಸವಿರಲಿಲ್ಲ. ಆ ಮೂಲ ಅಭಿಪ್ರಾಯಯ ವೇನೆಂದರೆ **ಬ್ರಿಟಿಷ್ ಸಾಮ್ರಾಜ್ಯಶ್ಯಾಹಿ ೧೭೫ ವರ್ಷಗಳಿಂದ ಪ್ರಚಲವಿದ್ದರೂ ಇಂದಿನ ಪರಿಸ್ಥಿತಿಯು ಚೋಗ್ಗರಿವ ದುಮ್ಮನ.....**

ಬಿಳೇ ಸಾಹೇಬರನ್ನು ಅವರ ಕಂಚಿನ ಶಿರಸ್ತ್ರಾಣಗಳನ್ನು ಸಾಂಪ್ರದಾಯಿಕ ಹುದ್ದೆದಾರರ ವರ್ಗಶ್ರೇಣಿಯನ್ನು ಬ್ರೆನ್ಸನನು ರೇಖಿಸಿರುವ ರೀತಿಯು ಪೂಣೆಯ ಅನೇಕ ಕರ್ನಲ್ ದೊರೆಗಳ ನೇತ್ರರನ್ನು ಹೆಪ್ಪುಗಟ್ಟಿಸುವುದೆಂಬುದರಲ್ಲಿ ಸಂಶಯವಿಲ್ಲ. ಡ್ಯೂಕ್ ಆಫ್ ಗ್ಲೊಸೆಸ್ಟರರನ್ನು ಸನ್ಮಾನಿಸಲು ಜರಗಿಸಿದ ಕವಾತು ಮೆರವಣಿಗೆಯ ವಿವರಣೆಯನ್ನು ಬ್ರೆನ್ಸನನು ಈ ರೀತಿಯಾಗಿ ಅಂತ್ಯಗೊಳಿಸಿರುವನು" 'ಸೆಬೆಸ್ಟೆಪೊಲ್‌ದ ಪಥನವು ಸಂಭವಿಸುತ್ತಿದೆ. ಆದರೆ ನಮ್ಮ ಸೇನಾಪತಿಗೆ ಟೋಪಿಯ ಮೈ ಮತ್ತು ಚರ್ಮದ ಬೆಲ್ಟಿನ ಹೊಳಪು ಚೆನ್ನಾಗಿಲ್ಲದಿರುವ ಕಾರಣ ತೀವ್ರ ಅಸಂತುಷ್ಟಿ. ನಮ್ಮ ಆಳರಸರಿಗೆ ಈ ಯುದ್ಧವನ್ನು ಅಂತ್ಯಗೊಳಿಸುವುದಕ್ಕೆ ಇರುವ ಶ್ರದ್ಧೆಯ ಬಗೆಯನ್ನು ವಿದಿತಪಡಿಸಲು ಈ ಪ್ರದರ್ಶನಕ್ಕಿಂತ ಹೆಚ್ಚಿನದೇನೂ ಬೇಕಾಗಿಲ್ಲ.

ಬ್ರೆನ್ಸನನು ಹಿಂದೂಸ್ಥಾನವನ್ನು ಸೇರಿದ ಬರೆ ನಾಲ್ಕು ತಿಂಗಳಲ್ಲಿ ಕೊಂಗ್ರೆಸ್ ಮುಖಂಡರ ದಸ್ತಗಿರಿಯಾಯಿತು. ಅವನ ತಾರೀಕು ೧೩–೮–೪೨ರ ಪತ್ರದಲ್ಲಿ ಕುರಿತಾದ ಈ ಮಾತುಗಳಿವೆ...."ಈ ದಸ್ತಗಿರಿಯು ಮೂಲ ಸಮಸ್ಯೆಯನ್ನು ಅಂದರೆ ಭಾರತವು ತನ್ನ ಸ್ವಾತಂತ್ರ್ಯಕ್ಕಾಗಿ ಹೂಡಿದ ಹೋರಾಟವನ್ನು-ಬಗೆಹರಿಸಲು ಯಾವ ತರದಲ್ಲಿ ಉಪಕಾರಿಯಾಗಿಲ್ಲ. ಆದರೆ ಇದು ನಮ್ಮನ್ನು (ಬ್ರಿಟಿಷರನ್ನು) ಇನ್ನಷ್ಟು ಹೆಚ್ಚಿಗೆ ದ್ವೇಷಿಸಲು ಪ್ರತಿಯೊಬ್ಬ ಭಾರತೀಯನಿಗೂ ಕಲಿಸುವುದು.

".....ಕೊಂಚ ಕೂಡ ಅರಿತಿದ್ದವರಿಗೆ ಈ ಕೆಳಗಿನ ವಿಷಯಗಳು ಸ್ಪಟಿಕದಂತೆ ಸ್ಪಷ್ಟ (೧) **ಕೊಮ್ಯುನಿಸ್ಟ ಪಾರ್ಟಿಯನ್ನು ನ್ಯಾಯ ಸಮ್ಮತವಾದುದೆಂದು ಮಾಡಿದುದು ಕೊಂಗ್ರೆಸಿನಲ್ಲಿ ಒಡಕುಂಟುಮಾಡಿ ಅದನ್ನು ಸದೆಬಡಿಯುವುದಕ್ಕೆ ಹೂಡಿದ ಅಂತಿಮ ಪ್ರಯತ್ನ.** ಕೊಂಗ್ರೆಸ್ ಪಾರ್ಟಿಯ ಬಳಿಕ ಜನಸಾಮಾನ್ಯರ ಬೆಂಬಲವಿರುವ ಪಾರ್ಟಿಯು ಕೊಮ್ಯುನಿಸ್ಟರದು. (೨) ಬರ್ಮಾದಲ್ಲಿ ಮಾಡಿದಂತೆ ಇಲ್ಲಿಯೂ ಕೂಡ ಹೊತ್ತುಮೀರಿಯೇ ಕೊಮ್ಯುನಿಸ್ಟ ಪಾರ್ಟಿಯನ್ನು ನ್ಯಾಯಸಮ್ಮತವೆಂದು ಉದ್ಧರಿಸಿದುದು.

'ಒಡನಾಡಿಗಳಲ್ಲೆಲ್ಲಾ ವಿಶೇಷ ತರದ ಗಲಬೆ ಗದ್ದಲ... ಅಹೋರಾತ್ರಿ ತರ್ಕ ಚರ್ಚೆಗಳು ಜರಗುತ್ತಲೇ ಇದ್ದುವು. ತುದಿ ಬುಡಗಳಿಂದ ಹೊರಡುವ ತೀವ್ರ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಲೇ ಇದ್ದುವು. (೧) ಒಬ್ಬನು 'ನಾನು ಇಂಡಿಯಾ ದೇಶಕ್ಕೆ ಬಂದುದು ಜಪಾನರೊಡನೆ ಕಾದುವುದಕ್ಕಲ್ಲದೆ ಹಿಂದೀಯರೊಡನೆ ಅಲ್ಲ ಎಂದರೆ (೨) ಇನ್ನೊಬ್ಬನು 'ಗಾಂಧೀ ಮತ್ತು ಅವನ ಹಿಂದುಗಳೊಡನೆ ಕೈ ನೋಡಿಯೇ ಬಿಡಬೇಕು; ಜಪಾನಿಯರಿಗೆ ಚೀನದಲ್ಲಿ ಸಿಕ್ಕಿದ ರೀತಿಯ ತರಬೇತಿಯು ನಮಗಿಲ್ಲಿ ಒದಗುವುದು' ಎಂದು ಹೇಳುವನು. ಆದುದರಿಂದ ತಲೆಯನ್ನು ಮುರಿ ಬಿಗಿದು ಭದ್ರವಾಗಿರಿಸಿ, ಕಿವಿಯನ್ನು ನೆಲಕಿಕ್ಕಿ ತನ್ನ ಮಾತುಕತೆಗಳನ್ನು ನಾಜೂಕಾಗಿರಿಸುವುದೇ ಪ್ರತಿಯೊಬ್ಬನಿಗೂ ಯುಕ್ತವಾದುದು.

ಬ್ರೆನ್ಸನನು ಪುನಃ ಇದೇ ವಿಷಯವನ್ನು ತಾರೀಕು ೨೦–೮–೪೨ರಲ್ಲಿ ಬರೆದ ಕಾಗದದಲ್ಲಿ ಎತ್ತಿ ನಿಜತ್ವದಲ್ಲಿ ತನಗಿದ್ದ ಹಿಡಿತದ ಹೆಚ್ಚಿನ ಬಿಗಿತವನ್ನು ವ್ಯಕ್ತ ಪಡಿಸಿದ್ದಾನೆ.

'**ಚುಟುಕಾಗಿ ಹೇಳುವುದಿದ್ದರೆ ಈ ಇಡೀ ವ್ಯವಹಾರವೇ ದುರಂತಮಯ. ಹಿಂದೀಯರಿಗೆ ಜಪಾನಿಯರೊಡನೆ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುವುದಕ್ಕೆ ಸ್ವಾತಂತ್ರ್ಯ ಬೇಕಾಗಿದೆ.** ಆದರೆ ಬಿಳಿ ಸಾಹೇಬರು— ಆಗದು ಈಗ ಸದ್ಯಕ್ಕಾಗದು ಎಂದು ಬರೀ ಮಾತಿನಲ್ಲಿ ಹೇಳುವುದಲ್ಲದೆ ಕಾರ್ಯರೂಪದಲ್ಲಿ ಇನ್ನಿತರ ಅನೇಕ ರೀತಿಗಳಲ್ಲಿ ಇದನ್ನು ಜಾರಿಗೆ ತರುತ್ತಾರೆ. ನಾಡಿನ ಕಾಪ್ಪಿಗೆ ಸ್ವಯಂಸೇವಕದಳವಿಲ್ಲ, ಸಾಮುದಾಯಿಕ ಜನತಾ ಸೇನೆ ಇಲ್ಲ, ಗೋರಿಲ್ಲಾ ಪಡೆಗಳ ಕೇಂದ್ರಗಳಿಲ್ಲ ಲಾಭಖೋರರನ್ನು ಬಂದೋಬಸ್ತು ಯಾ ಶಿಕ್ಷೆಗೊಳಪಡಿಸುವ ಹವ್ಯಾಸವೇ ಇಲ್ಲ, ಅತ್ಯಗತ್ಯದ ಮತ್ತು ಜರೂರಿನ ವ್ಯಾಪಕತೆಯು ಬೇಕಾಗಿರುವ ಹಿಂದೀ ಕೈಗಾರಿಕೆ ವಿದ್ಯೆಗಳ ಮೇಲೆ ಗಟ್ಟಿಮುಟ್ಟಿನ ಹತೋಟಿ, ಕೊನೆಯದಾದರೂ ಅತಿ ಗಣನೀಯವಾದುದೆಂದರೆ ಮುಂದರಿಯುತ್ತಿರುವ ಶ್ವೇತರಾಜ್ಯದ ಹಂಕಾರ, ದುಂಡುಗಾರಿಕೆ ಮತ್ತು ಆಧಿಪತ್ಯ ಇವೆಲ್ಲ ಕಾರ್ಯರೂಪದ ಉಪಾಯಗಳು.

"ಬ್ರಿಟಿಷ್ ಮಜೂರ ಪಕ್ಷದ ಮುಂದಾಳುಗಳು ಕೊಂಗ್ರೆಸ್ ಮುಖಂಡರು ಸವಿನಯ ಕಾಯಿದೆ ಭಂಗವನ್ನು ಹಿಂತೆಗೆಯ ಬೇಕೆಂದು ನಿವೇದಿಸಿದ್ದಾರೆಂದು ನಾನು ತಿಳಿದಿದ್ದೇನೆ–ಎಷ್ಟು ಶೋಭಾಯಮಾನವಾಗಿದೆ! ಕೊಂಗ್ರೆಸ್ ನೇತಾ ಎನಿಸುವರೆಲ್ಲಾ ಜೈಲಿನೊಳಗಿದ್ದಾರೆ, ಆದುದರಿಂದಲೇ ಮುಖಂಡರಿಲ್ಲದ ಜನತೆಯು ಕಂಗೆಟ್ಟು ದಂಗೆ ಎದ್ದು ಎಲ್ಲೆಲ್ಲಿಯೂ ಅರಾಜಕತ್ವವು ಏರ್ಪಡಲು ಮುಂದಾಳುಗಳ ಗೈರ ಹಾಜರಿಯೇ ಕಾರಣವೆಂದು ಬ್ರಿಟಿಷ್ ಮಜೂರ್ ಮುಖಂಡರಿಗೆ ತಿಳಿಯದೇ!

"ಕುಷ್ಟ ರೋಗಿಗಳೇ!"

ಈ ಪುಸ್ತಕದಲ್ಲಿರುವ ಉಜ್ವಲ ಉದ್ಧೃತ ವಾಕ್ಯಗಳಲ್ಲೊಂದು ಸಾಮ್ರಾಜ್ಯ ಶಾಹಿಯ ಒಳಸಂಚಿನ ಮೇಲೆ ಹಾಕಿರುವ ಪೋಷಾಕನ್ನು ತೀರ ಚೂರು ಚೂರಾಗಿ ಹರಿದು ಬಿಸುಟಿಯದೆ. ಬ್ರಿಟಿಷ್ ಸೈನಿಕರನ್ನು ಹಿಂದೀ ಜನತೆಯ ಸಂಪರ್ಕದಿಂದ ದೂರದಲ್ಲಿರಿಸಿ ಹಿಂದೀ ಜನರ ವಿಷಯವಾಗಿ ಕೇವಲ ಅಜ್ಞಾನವನ್ನೇ ಬ್ರಿಟಿಷ್ ಸೈನಿಕರಲ್ಲಿ ಸ್ಥಾಪಿಸುವುದೇ ಈ ಒಳಸಂಚಿನ ಉದ್ದೇಶವಾಗಿದೆ.

(೧೦ನೇ ಪುಟಕ್ಕೆ ಮುಂದುವರಿದಿದೆ.)

ANNOUNCEMENT

We have pleasure to announce that the following new branches will be opened on 21st February, 1945.

COIMBATORE SALEM
ERODE MADURA

Other Branches at:

Quilon, Alleppey, Ernakulam, Cochin, Calicut, Cannanore, Mangalore, Bangalore, Belgaum, Dharwar, Hubli, Chikmagalur etc. etc.

4 Branches in Bombay City.

Capital 26 lakhs. Reserves 10 lakhs.

(ESTD. 1906)

CANARA BANK LIMITED

(Incorporated in British India, liability of Members limited.)

ವಿವೇಕಾನಂದರ ಸಂದೇಶ

ಪರಮ ಪವಿತ್ರತೆಯಿಂದ ಸ್ಫೂರ್ತಿಗೊಂಡವರಾಗಿಯೂ, ಪರಮಾತ್ಮನಲ್ಲಿನ ಅನಂತ ವಿಶ್ವಾಸದಿಂದ ದೃಢಮನಸ್ಕರಾಗಿಯೂ, ತುಳಿಯಲ್ಪಡುವ ದೀನ ದರಿದ್ರ ನಿರ್ಗತಿಕರ ಮೇಲಿನ ಸಹಾನುಭೂತಿಯಿಂದ ಸಿಂಹಸ್ಥೈರ್ಯದಿಂದಾವೃತರಾಗಿಯೂ, ಶತ ಸಾವಿರ ಸ್ತ್ರೀ ಪುರುಷರು ಮೋಕ್ಷಸುವಾರ್ತೆಯನ್ನೂ, ಸೇವೆಯ ಸಂದೇಶವನ್ನೂ, ಸಮಾಜೋನ್ನತಿಯ ಸುಬೋಧನೆಯನ್ನೂ ಮತ್ತು ಮಾನವ ಸಮಾನತೆಯ ಅಮೃತವಾಣಿಯನ್ನೂ ಉಪದೇಶಿಸುತ್ತಾ ದೇಶವಿಶಾಲವಾಗಿ ಮುನ್ನಡೆವರು.

ಮನುಷ್ಯತ್ವದ ಘನಸ್ತಿಕೆಯನ್ನು ಹಿಂದೂ ಧರ್ಮವು ಬೋಧಿಸುವಷ್ಟು ಉನ್ನತವಾಣಿಯಲ್ಲಿ ಜಗತ್ತಿನ ಮತ್ತಾವ ಧರ್ಮವೂ ಸಾರುವುದಿಲ್ಲ. ದೀನ ಕನಿಷ್ಠರ ಕತ್ತುಗಳ ಮೇಲೆ ಹಿಂದೂಧರ್ಮವು ತುಳಿವಷ್ಟು ಜಗತ್ತಿನ ಮತ್ತಾವ ಧರ್ಮವೂ ತುಳಿಯುತ್ತಿಲ್ಲ. ಇದು ಧರ್ಮದ ತಪ್ಪಲ್ಲವೆಂದು ಪರಮಾತ್ಮ ಸ್ವಾಮಿಯು ನನಗೆ ತೋರಿಸಿಕೊಟ್ಟಿರುವನು. ಪಾರಮಾರ್ಥಿಕ ಮತ್ತು ವ್ಯಾವಹಾರಿಕವೆಂಬ ಕರಾಳ ಯಾತನೆಯ ತತ್ವ ಯಂತ್ರಗಳನ್ನು ಸಂಶೋಧಿಸಿದ ಕೆಲ ಪರಮಘಾತುಕಿಗಳಾದ ಶಾಸ್ತ್ರಾರ್ಥಗಾರರ ಮತ್ತು ವಂಚಕ ವೇದಾಭಿಮಾನಿಗಳ ಕೆಲಸವದು.

ನಿರಾಶೆಗೊಳ್ಳಬೇಡಿರಿ. ಸ್ವಾಮಿಯು ಗೀತೆಯಲ್ಲಿ "ಕೆಲಸವೇ ನಿಮ್ಮ ಹಕ್ಕಿನದು, ಅದರ ಫಲದ ಮೇಲೆ ನಿಮಗೆ ಹಕ್ಕಿಲ್ಲ"ವೆಂದು ಹೇಳಿದ್ದನ್ನು ಸ್ಮರಿಸಿರಿ. ಮಗನೇ ಟೊಂಕಕಟ್ಟಿ ಸಿದ್ಧನಾಗು. ನಾನು ಇದೇ ಕೆಲಸಕ್ಕಾಗಿ ಸ್ವಾಮಿಯಿಂದ ಕರೆಯಲ್ಪಟ್ಟಿದ್ದೇನೆ. ಅನೇಕಾನೇಕ ಸಂಕಷ್ಟ ಶಿಲುಬೆಗಳಿಂದ ಕೂಡಿದ ಜೀವನದಿಂದ ನನ್ನನ್ನವನು ಎಳೆದನು. ನನ್ನ ಹತ್ತಿರದವರೂ, ಆಪ್ತಬಂಧುಗಳೂ ಹೊಟ್ಟೆಗಿಲ್ಲದೆ ಸಾಯುತ್ತಿರುವುದನ್ನು ನಾನು ಕಂಡಿದ್ದೇನೆ. ಹೀಯಾಳಿಸಿ ದೂಷಣೆ ಮಾಡುವವರ ಮೇಲೆ ಸಹಾನುಭೂತಿ ತೋರಿಸಿದುದಕ್ಕೆ ತುಂಬಾ ಸಂಕಷ್ಟಗಳನ್ನನುಭವಿಸಿದ್ದೇನೆ–ಅನೇಕ ವ್ಯಂಗ, ಹಾಸ್ಯಕ್ಕೂ, ಅವಿಶ್ವಾಸಕ್ಕೂ ನಾನು ಗುರಿಯಾಗಿದ್ದೇನೆ. ಮಗನೇ ಇದು ಸಂಕಷ್ಟಗಳದೊಂದು ಶಾಲೆ. ಮಹಾಮಹಾ ಆತ್ಮಗಳು ಕಲಿತ ಶಾಲೆಯೂ ಇದೇ ಆಗಿದೆ. ನಿಂತ ಸ್ಥಳವೇ ಸ್ಥಾನತಪ್ಪಿದರೂ ಅಲುಗಾಡದಂತಹ ಉಕ್ಕಿನಂತಹ ಮನೋಬಲವನ್ನೂ, ಸಹಾನುಭೂತಿ, ಸಹಿಷ್ಣುತೆಗಳನ್ನೂ ಅವರು ಇಲ್ಲೇ ಬೆಳೆಸಿಕೊಂಡರು. ಅವರನ್ನು ನೋಡಿ ನಾನು ಕನಿಕರ ಪಡುತ್ತೇನೆ. ಈ ತಪ್ಪು ಅವರದೂ ಅಲ್ಲ. ಸಮಾಜದಲ್ಲಿ ಶ್ರೇಷ್ಠರೂ ಉನ್ನತ ಮಟ್ಟದವರಿದ್ದರೂ ಅವರು ಕೇವಲ ಶಿಶುಗಳೇ ಸರಿ—ಬರೀ ತಿನ್ನುವುದು, ಉಣ್ಣುವುದು, ಕುಡಿಯುವುದು, ಸಂಪಾದಿಸುವುದು, ಹೊಂದುವುದು, ಒಬ್ಬರನ್ನೊಬ್ಬರು ಗಣಿತ ನಿಯಮದಂತೆ ಅನುಸರಿಸುವುದು ಅವರ ದಿನನಿತ್ಯದ ವ್ಯವಹಾರ. ಈ ಕ್ಷೇತ್ರ ದಿಗಂತದ ಕೆಲವೇ ಮಾರುಗಳ ಆಚೆ ಅವರ ದೃಷ್ಟಿ ಸರಿಯಲಾರದು. ಈ ಸುಖಾತ್ಮರುಗಳು ಈ ಸಾಮಾನ್ಯ ವ್ಯವಹಾರದಿಂದಾಚೆ ಇರುವ ಯಾವುದನ್ನೂ ಎಂದೂ ಬಲ್ಲವರಲ್ಲ. ಅವರ ನಿದ್ರೆಯು ಎಂದೂ ಭಂಗಗೊಂಡದ್ದಿಲ್ಲ. ಶತಮಾನಗಳ ದಬ್ಬಾಳಿಕೆಯ ಪರಿಣಾಮವಾಗಿ ಉಂಟಾದ ದುಃಸ್ಥಿತಿ, ದಾರಿದ್ರ್ಯ, ಬಾಳಿನ ಗೋಳು, ಇವುಗಳಿಂದ ಈ ಚಿಕ್ಕ ಜೀವಿಗಳ ಜೀವನಸ್ಥಿತಿಯು ಎಂದೂ ಭೀಕರ ಧಕ್ಕೆಗೆ ಒಳಗಾಗಿಲ್ಲ. ದೇವರ ಪ್ರತಿಬಿಂಬಗಳಾದವರು ಕಾಲನ ಕ್ರೂರ ಮಾನಸೀಕ, ನೈತಿಕ ಮತ್ತು ಶಾರೀರಿಕ ನರಕಯಾತನೆಗೊಳಪಟ್ಟು ಕೇವಲ ಹೊರೆಹೊರುವ ಪ್ರಾಣಿಯಾಗಿಯೂ, ಭೂದೇವಿಯ ಸಾಕಾರ ಸ್ವರೂಪಿಗಳಾದ ನಾರಿಯರು ಮಕ್ಕಳು ಪಡೆಯುವ ಗುಲಾಮರಾಗಿಯೂ, ನಿಕೃಷ್ಟಾವಸ್ಥೆಗೆ ಇಳಿದುದನ್ನೂ, ಮತ್ತು ಬಾಳೇ ಗೋಳಿನ ಗೋಲವಾಗಿರುವುದನ್ನು ಅವರು ಕನಸ್ಸಿನಲ್ಲೂ ಕಂಡವರಲ್ಲ. ಆದರೆ ಇದನ್ನು ನೋಡಿ ಮನಗಂಡ ಹೃದಯದಿಂದ ರಕ್ತದ ಬೆವರನ್ನು ಸುರಿಸಲು ಸಿದ್ಧವಿದ್ದು, ಇದಕ್ಕೊಂದು ಪರಿಹಾರವಿದೆಯೆಂದು ತಿಳಿದು ಈ ಸಂಹಾರೋಪಾಯನ್ನು ಅದರ ನಿವಾರಣೆಗಾಗಿ ಪ್ರಯೋಗಿಸುವ ಪ್ರಯತ್ನದಲ್ಲಿ ಪ್ರಾಣವನ್ನಾದರೂ ಬಲಿ ಅರ್ಪಿಸಲು ಸಿದ್ಧವಿದ್ದವರೂ ಇದ್ದಾರೆ. "ಸ್ವರ್ಗ ರಾಜ್ಯವು ಇಂತವರದೇ ಆಗಿರುತ್ತದೆ." ಆದುದರಿಂದ ಸ್ನೇಹಿತರೇ ಯಾವ ಕ್ಷಣದಲ್ಲೂ ತುಚ್ಛ ಚಿಕ್ಕ ವಿಷಯವನ್ನು ಉಗುಳಲು ಸಿದ್ಧವಾಗಿ ತಿರಸ್ಕಾರಯೋಗ್ಯವಾದ ಈ ಚಿಕ್ಕ ಜೀವಿಗಳ ದುಷ್ಪಾಚಾರದ ಕಡೆಗೆ ತಮ್ಮ ಉನ್ನತ ಸ್ಥಾನಗಳಿಂದ ಕೆಳಗೆ ನೋಡಲು ಅವರಿಗೆ ಸಮಯವೇ ಇಲ್ಲದಿರುವುದು ಸಹಜವಲ್ಲವೆ?

ಆ ಶ್ರೀಮಂತರೆಂದು ಕರೆಯಲ್ಪಡುವವರನ್ನು ನಂಬದಿರಿ. ಅವರು ಬದುಕಿದ್ದಾರೆಂದು ಕಾಣುವುದಕ್ಕಿಂತಲೂ ಹೆಚ್ಚಾಗಿ ಸತ್ತಿರುವ ಹಾಗೆ ತೋರುತ್ತದೆ. ನಮ್ಮವರೂ, ನಿಕೃಷ್ಟರೂ, ಆದರೆ ನಂಬಿಗಸ್ತರೂ ಆಗಿರುವ ನಿಮ್ಮಲ್ಲಿಯೇ ಆಶೆ ಹಾರೈಕೆಗಳು ಹೊಂದಿಕೊಂಡಿವೆ. ಪರಮಾತ್ಮನ ಮೇಲೆ ವಿಶ್ವಾಸತಾಳಿರಿ. ಇದೇನು ಯುಕ್ತಿಯಲ್ಲ. ಅತ್ಯಂತ ಸರಳವಾದುದು. ದೀನರಿಗಾಗಿ ಮರುಗಿರಿ; ಸಹಾಯಕ್ಕಾಗಿ ಪ್ರಾರ್ಥಿಸಿರಿ. ಅದು ಬಂದೇ ಬರುವುದು. ಹೃದಯದಲ್ಲಿ ಈ ಹೊರೆಯನ್ನೂ, ತಲೆಯಲ್ಲಿ ಈ ಯೋಚನೆಯನ್ನೂ ಹೊತ್ತುಕೊಂಡು ನಾನು ಹದಿನೆರಡು ಸಂವತ್ಸರಗಳ ತನಕ ಪ್ರವಾಸಮಾಡಿದ್ದೇನೆ. ಆ ದೊಡ್ಡವರೂ, ಶ್ರೀಮಂತರೂ ಎಂದು ಕರೆಯಲ್ಪಡುವವರ ಮನೆ ಬಾಗಿಲಿಂದ ಬಾಗಿಲಿಗೆ ನಾನು ಅಲೆದಾಡಿದ್ದೇನೆ. ಘಾಯಗೊಂಡ ಹೃದಯವನ್ನು ಹೊತ್ತು ಇಂದು ಅರ್ಧ ವಿಶ್ವವನ್ನು ದಾಟಿ ಸಹಾಯವನ್ನು ಯಾಚಿಸಿ ನಾನೀ ಈ ವಿಚಿತ್ರ ಭೂಭಾಗಕ್ಕೆ (ಅಮೇರಿಕಕ್ಕೆ) ಬಂದಿದ್ದೇನೆ. ನನ್ನ ಸ್ವಾಮಿಯು ಸರ್ವಶ್ರೇಷ್ಠನೆಂಬ ವಿಷಯವು ನನಗೆ ತಿಳಿದಿದೆ. ಅವನು ನನಗೆ ಸಹಾಯ ಮಾಡುವನು. ನಾನೀ ದೇಶದಲ್ಲಿ ಹಸಿವೆಯಿಂದಾಗಲೀ, ಚಳಿಯಿಂದಾಗಲೀ ನಾಶಹೊಂದಬಹುದು. ಆದರೆ ತರುಣರೇ ನಿಮಗೊಂದು ಸಂದೇಶವನ್ನು ಕೊಡಬಯಸುತ್ತೇನೆ—ದೀನ, ದರಿದ್ರರ ಮತ್ತು ತುಳಿಯಲ್ಪಡುವ ನಿರಕ್ಷರಸ್ಥರ ಸಲುವಾಗಿ ಸಹಾನುಭೂತಿ ತಾಳಿರಿ-ಅವರಿಗಾಗಿ ಹೋರಾಡಿರಿ.

ಈ ಕ್ಷಣವೇ ಹೋಗಿ-ಅರ್ಜುನನ ಸಾರಥಿಯಾದ ಆ ಕೃಷ್ಣ ಸ್ವಾಮಿಯ ದೇಗುಲಕ್ಕೆ ಹೋಗಿ ಅವನ ಪದ ಕಮಲಕ್ಕೆ ಎರಗಿ ನಿಮ್ಮ ಇಡೀ ಜೀವನವನ್ನು ಬಲಿದಾನ ಕೊಡುವುದಾಗಿ ಪ್ರತಿಜ್ಞೆಮಾಡಿಕೊಳ್ಳಿರಿ. ಯಾವ ಸ್ವಾಮಿಯು ದೀನರೂ ಹೀನರೂ ಆಗಿದ್ದ ಗೋಕುಲದ ಗೋಪಾಲಕರ ಪರಮಾಪ್ತನಾಗಿದ್ದಾನೋ, ಯಾವ ಸ್ವಾಮಿಯು ಅಸ್ಪೃಶ್ಯನಾದ ನಾವಿಕ ಗುಹನನ್ನು ಅಪ್ಪಿಕೊಳ್ಳಲು ಅಸಹ್ಯಪಟ್ಟುಕೊಳ್ಳಲಿಲ್ಲವೊ, ಘನವಂತ ಮಾಂಡಲೀಕರ ಆತಿಥ್ಯಕಿಂತಲೂ ವ್ಯಭಿಚಾರಿಣಿಯ ಆಮಂತ್ರಣವನ್ನು ಸ್ವೀಕರಿಸಿ ಆವಳನ್ನು ಬುದ್ಧಾವತಾರಿಯಾಗಿ ರಕ್ಷಿಸಿದನೋ–ಹೌದು, ಅಂಥವನ ಚರಣಾರವಿಂದಗಳಲ್ಲಿ ದಿನ ದಿನಕ್ಕೆ ಅಧೋಗತಿಗೆ ಇಳಿಯುತ್ತಿರುವ ಈ ಮೂವತ್ತು ಕೋಟಿ ಜೀವರುಗಳಿಗೆ ಮುಕ್ತಗೊಳಿಸುವ ಸೇವೆಗಾಗಿ ನಿಮ್ಮ ಜೀವನವನ್ನು ಅರ್ಪಿಸುವಿರೆಂದು ಪ್ರತಿಜ್ಞೆಮಾಡಿರಿ.

ಪ್ರಚಲಿತ ಸಮಾಚಾರ

(೪ನೇ ಪುಟದಿಂದ)

ವಂತೆ, ಪಾಶ್ಚಾತ್ಯ ಕ್ರಮಗಳಿಂದ ಕೂಡಿದ ಯತ್ನಗಳು ಆಗುವುದರಲ್ಲಿ ತುಂಬಾ ಒಳಿತಿದೆ. ಆಯುರ್ವೇದವು ಖಾಕಪೋಳ ಪಂಡಿತರ ಸೊತ್ತಾಗಿದೆ, ಆಧುನಿಕ ವಿಜ್ಞಾನಿಗಳ ಸೊತ್ತಾಗಿ ಮಾಡುವ ಯತ್ನಗಳಾಗಬೇಕು.

ಯುದ್ಧೋತ್ತರದಲ್ಲಿ ಹಿಂದೂದೇಶದ ಔದ್ಯೋಗೀಕರಣವಾಗಬೇಕು, ಅಮೇರಿಕಾದಿಂದ, ಬ್ರಿಟನಿನಿಂದ ಈ ಬಗ್ಗೆ ಸಹಾಯ ಪಡೆಯಬೇಕು,–ದೊಡಲಾದ ಸೂಚನೆಗಳಾಗುತ್ತಿವೆಯಷ್ಟೆ. ಔದ್ಯೋಗಿಕರಣ ಯುದ್ಧೋತ್ತರದ ದಿವಸಗಳಿಗೆ ಯಾಕೆ ಮುಂದಿಡಬೇಕು? ಅನ್ಯರ ಸಹಾಯವಿಲ್ಲದೆನೆ ಇದನ್ನು ನಡೆಯಿಸಲು ಸಾಧ್ಯವೆ? ಎಂಬ ಪ್ರಶ್ನೆಗಳಿಗೆ ಚೀನಾದಲ್ಲಿ ಸದ್ಯ ನಡೆಯುತ್ತಿರುವ ಸಹಕಾರಿ ಔದ್ಯೋಗಿಕ ಚಟುವಟಿಗಳಲ್ಲಿ ಉತ್ತಮ ಉತ್ತರವಿದೆ. ಜಪಾನಿಯರು ಕರಾವಳಿಯನ್ನು ಹಿಡಿದುಬಿಟ್ಟರು. ಇದರಿಂದ ಹೊರದೇಶಗಳಿಂದ ಚೀನಾಕ್ಕೆ ಬೇಕಾದ ವಸ್ತು ಒಡವೆಗಳು, ಯುದ್ಧ ಸಾಮಗ್ರಿಗಳು ಬರಲು ದೊಡ್ಡ ತಡೆಯು ಉಂಟಾಯಿತು. ಕರಾವಳಿ ಪ್ರದೇಶಗಳಲ್ಲಿ ಸ್ಥಾಪಿಸಲಾದ ಕೈಗಾರಿಕೆಗಳು ಜಪಾನಿಯರ ಕೈವಶವಾದವು. ಧೀರ ಚೀನಿಯರು ಜಪಾನಿಯರನ್ನು ವಿರೋಧಿಸುವ ಉದ್ದೇಶವನ್ನು ಹಾಕಿಕೊಂಡು, ತಂಡೋಪತಂಡವಾಗಿ, ಒಳ ಪ್ರದೇಶಗಳಿಗೆ ನಡೆದರು. ಆಗ ತಮ್ಮ ಕೈಲಾದನುಟ್ಟಿಗೆ ಯಂತ್ರ ಇತ್ಯಾದಿಗಳು ಒಯ್ದರು. ಹೀಗೆ ದಾರಿಗಾಣದ ಚೀನಿಯರಿಗೆ ಆಸ್ಟ್ರೇಲಿಯಾದ ವ್ಯಕ್ತಿಯೊಂದು ಬೆಳಕು ತೋರಿಸಿತು. ಸ್ವಾವಲಂಬನೆಯೆ ಶ್ರೇಷ್ಠವೆಂಬ ತಿಳುವಳಿಕೆಯನ್ನು ಚೀನಿಯರಲ್ಲಿ ಬೀರಿತು. ನೂಲು ತೆಗೆಯುವುದು, ನೇಯುವುದು, ನಿತ್ಯಸೇವನೆಯ, ಉಪಯೋಗದ ವಸ್ತುಒಡವೆ ಸಿದ್ಧಪಡಿಸುವುದು ಮೊದಲಾದ ಆವಶ್ಯಕತೆಗಳು ಒದಗಿಸುವ ಕೈಗಾರಿಕೆಗಳನ್ನು ನಡೆಯಿಸುವ ಸಣ್ಣಸಣ್ಣ ಸಹಕಾರಿ ಸಂಘಗಳನ್ನು ವ್ಯವಸ್ಥೆಪಡಿಸಿದರು. 'ಇಂಡಸ್ಕೊ' ಎಂದು ಈ ಚಟುವಟಿಕೆಯ ನಾಮಕರಣವಾಯಿತು. ಈ ವ್ಯವಸ್ಥೆಯಿಂದ ಚೀನಿಯರು ನಿತ್ಯದ ಆವಶ್ಯಕತೆಗಳನ್ನು ಮಾತ್ರವಲ್ಲ, ಯುದ್ಧಕ್ಕೆ ಬೇಕಾದ ಕೋವಿ, ಸಿಡಿಮದ್ದು, ಯಂತ್ರ ಇತ್ಯಾದಿಗಳನ್ನು ಸಿದ್ಧಪಡಿಸುವ ಕೆಲಸಗಳನ್ನು ವಹಿಸಿ ನಡೆಯಿಸುತ್ತಿರುವರು. ಚೀನಾದ ಗ್ರಾಮ ಕೈಗಾರಿಕೆಗಳನ್ನು ಯಶಸ್ವಿಯಾಗಿ ನಡೆಯಿಸುವುದು ಈ ಚಳವಳದ ಮುಖ್ಯ ಧ್ಯೇಯವು. ಈ ವ್ಯವಸ್ಥೆಯು ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಚೀನಾವು ಜಪಾನನ್ನು ಎಂಟೊಂಬತ್ತು ವರ್ಷಗಳ ದೀರ್ಘ ಸಮಯ ಎದುರಾಯಿಸಿಕೊಂಡು ಬಂದಿರಬೇಕಾದರೆ, ಅದು 'ಇಂಡಸ್ಕೊ' ಚಳವಳಿಂದಲೆ ಎಂದು ಧಾರಾಳವಾಗಿ ಹೇಳಬಹುದು.

ಹಿಂದೂದೇಶ ನರೇಂದ್ರರಿಗೂ ವೈಸ್ರಾಯ ಸರಕಾರಕ್ಕೆ ಏನೋ ಭಿನ್ನಾಭಿಪ್ರಾಯಗಳುಂಟಾಗಿ, ನರೇಂದ್ರ ಮಂಡಳವು ರಾಜಿಯತ್ತು ನಡೆಲ್ಲಿಯಿಂದ ಹೊರಟು ಹೋದ ವಾರ್ತೆಯೊಂದು ಈ ಮೊದಲು ಕೇಳಿರುವರಷ್ಟೆ. ನರೇಂದ್ರರು ಮೊನ್ನೆ ಮುಂಬ್ಯಾಯ ತಾಜಮಹಾಲದಲ್ಲಿ ಕೂಡಿದರಂತೆ. ಮತ್ತೊಮ್ಮೆ ವೈಸ್ರಾಯ ಸರಕಾರದೊಡನೆ ಕೂಡಿ ನಡೆಯುವ ನಿರ್ಧಾರ ಮಾಡಿರುವರಂತೆ. ಯುರೋಪದಲ್ಲಿ ಪ್ರಜಾಸತ್ತಾತ್ಮಕ ಭಾವನೆಯು ರೂಢಿಗೆ ಬರುತಿದ್ದು, ಕೆಂಪು ಪಡೆಯ ರೆಕ್ಕೆಗಳ ಸಾಮ್ಯವಾದವು ಪಶ್ಚಿಮ ಯುರೋಪದಲ್ಲೆಲ್ಲಾ ಹರಡುತ್ತಿರುವಾಗ, ಬ್ರಿಟನು ಈ ಪರಿವರ್ತನೆಯಲ್ಲಿರುವಾಗ, ನಮ್ಮ ರಾಜರುಗಳ ಕುರಿತು ಬ್ರಿಟನಿನ ನೀತಿ ಬದಲಾಗದೆ? ಆಗ ನಮ್ಮ ರಾಜರೆಲ್ಲಿ?

ಸುಧಾಮನು ಮಿತ್ರ ಕೃಷ್ಣನಿಗೆ ಅರ್ಪಿಸಲು ಕೊಂಡೊಯ್ದುದುದು ಒಂದಿಷ್ಟು ಅವಲಕ್ಕಿ. ಅವಲಕ್ಕಿಯಿಲ್ಲದ ಮನೆಗಳು ನಮ್ಮಲ್ಲಿ ಕಡಿಮೆಯಾಗಿದ್ದವು. ಸುಧಾಮನ ಅವಲಕ್ಕಿಯು ಅಲ್ಪವೆಂದು ತಿಳಿಯುವವರಿರಬಹುದು. ಅದರಲ್ಲಿ ಪೌಷ್ಟಿಕ ತುಂಬಾ ದೊರೆಯುವುದೆಂದು, ಆಧುನಿಕ ಡಾಕ್ಟರರಿಂದ ಕಂಡುಹಿಡಿಯಲಾಗಿದೆ. ಮಾನವನ ಪೋಷಣೆಯು ಸಾಂಗವಾಗಿ ನಡೆಯಬೇಕಾಗಿ 'ಭಿ' ಜೀವಾತು ಅವಶ್ಯವಿದೆ. ಈ ಜೀವಾತು ಅವಲಕ್ಕಿಯಲ್ಲಿ ಧಾರಾಳ ದೊರಕುತ್ತದೆ. ಆದರೆ ಈಗ ಅವಲಕ್ಕಿ ಎಲ್ಲಿ? ಮುಂಬ್ಯಾಯಲ್ಲಿ ಈ ಅವಲಕ್ಕಿಯು ಕಳ್ಳ ಸಂತೆಯಲ್ಲಿ ಅತಿರೇಖ ದರದಲ್ಲಿ ಮಾರಾಟವಾಗುವ ವಾರ್ತೆಗಳು ಬಂದಿವೆ.

ಕಳೆದ ಶುಕ್ರವಾರ ಕೃಷಿ ಇಲಾಖೆಯ ಡೆ. ಡೈರೆಕ್ಟರ್ ಶ್ರೀ. ಎಂ. ಆನಂದನ್ ಅವರು ಹಂಪನಕಟ್ಟೆಯ ಜಿಲ್ಲಾ ಕೃಷಿ ಶಾಖೆಯ ಕಾರ್ಯಾಲಯದಲ್ಲಿ ಸೇರಿದ ವರ್ಗದಾರರ ಸಭೆಯಲ್ಲಿ ಹೆಚ್ಚು ಆಹಾರ ಬೆಳೆಸುವುದರ ಅವಶ್ಯಕತೆಯ ಕುರಿತು ಭಾಷಣವಿತ್ತರು. ನಮ್ಮ ಜಿಲ್ಲೆಯಲ್ಲಿ ಆಹಾರ ಪರಿಸ್ಥಿತಿಯ ಕಠಿಣತೆಯು ಅಲ್ಪ ಸ್ವಲ್ಪವಾಗಿಯಾದರೂ ಅನುಭವವಾಗುತ್ತಲಿದೆ. ಸರಕಾರದವರು ಈ ಜಿಲ್ಲೆಯನ್ನು ಅಕ್ಕಿಯಮಟ್ಟಿಗೆ ಸ್ವಾವಲಂಬಿಯಾಗಿರ ಬಯಸುವುದಾದರೆ ಇಲ್ಲಿ ಅವಶ್ಯವಿದ್ದ ಕಡೆಗಳಲ್ಲಿ ನೀರಾವರಿ ಕಾಮಗಾರಿಗಳ ಅನುಕೂಲತೆಗಳನ್ನು ಶೀಘ್ರವಾಗಿ ಒದಗಿಸಿಕೊಡಬೇಕಿತ್ತು. ಆದರೆ ಅಂತಹ ಸಹಾಯಕ ಮನೋವೃತ್ತಿಯನ್ನು ಸರಕಾರವು ತೋರಿಸುತ್ತಿಲ್ಲವೆಂದು ಭೂವ್ಯವಸಾಹಿಗಳ ಪರವಾಗಿ ಮಾತನಾಡಿದ ಶ್ರೀ. ಎ. ಬಿ. ಶೆಟ್ಟಿ ಮತ್ತು ಶ್ರೀ. ಕೆ. ಎನ್. ಹೆಗ್ಗಡೆಯವರು ತಿಳಿಸಿದರು. ಹೆಚ್ಚು ಆಹಾರ ಬೆಳೆಸಲಿಕ್ಕೆ ಅನೂಕೂಲವಾಗುವ ಪ್ರಾಮುಖ್ಯ ಯೋಜನೆಗಳನ್ನು ದೇಶದ ಸರಕಾರವೇ ಕಲ್ಪಿಸಿಕೊಡಬೇಕಲ್ಲದೇ ಸ್ವತಂತ್ರವಾಗಿ ಇದನ್ನು ನಿರೀಕ್ಷಿಸುವುದು ಯುಕ್ತವಲ್ಲ. ಈ ಸಂದರ್ಭದಲ್ಲಿ ಜಿಲ್ಲಾ ಕೃಷಿ ಶಾಖೆಯ ಆಫೀಸರರಾದ ಶ್ರೀ. ಕೆ. ವೆಂಕಟ್‌ರಾಯನ್ ಅವರು ತಮ್ಮ ಕೈಲಾದ ಮಟ್ಟಿನ ಪ್ರಯತ್ನಗಳನ್ನು ಮಾಡುತ್ತೇವೆಂದು ಭರವಸೆ ಕೊಟ್ಟಿರುವರು. ಮೇಲಾಧಿಕಾರಿಗಳು ಅವರ ಪ್ರಯತ್ನಗಳಿಗೆ ಪ್ರೋತ್ಸಾಹಕೊಟ್ಟರೆ ಅತೀ ಹೆಚ್ಚಿನ ಪರಿಮಾಣದಲ್ಲಿ ನಮ್ಮ ಜಿಲ್ಲೆಯಲ್ಲಿ ವಿವಿಧ ಆಹಾರ ವಸ್ತುಗಳನ್ನು ಉತ್ಪಾದಿಸಲು ಸಾಧ್ಯವಿದೆ.

ನಾಳೆ ಮಂಗಳೂರಲ್ಲಿ ಚತುರ್ಥ ಸಹಕಾರೀ ಪರಿಷತ್ತು ಜರಗುವುದು. ಮದ್ರಾಸ್ ಪ್ರಾಂತೀಕ ಸಹಕಾರೀ ಬೇಂಕಿನ ಅಧ್ಯಕ್ಷರಾದ ಶ್ರೀ. ಟಿ. ಎ. ರಾಮಲಿಂಗಮ್ ಚೆಟ್ಟಿಯಾರ್ ಅವರು ಅಧ್ಯಕ್ಷರಾಗುವರು. ಸೇಲಂ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ. ನಾಚಿಯಪ್ಪಗೌಂಡರ್ ಇವರು ಉದ್ಘಾಟನೆ ಸಮಾರಂಭ ನೇರವೇರಿಸುವರು. ಮದ್ರಾಸ್ ಸರಕಾರೀ ಸಂಘದ ಜೋಯಿಂಟ್ ರಿಜಿಸ್ತ್ರಾರರಾದ ಶ್ರೀ. ಎಂ. ಎ. ಸುಬ್ರಮಣ್ಯಂ ಅವರು ಕಾರ್ಯಕಲಾಪಗಳಲ್ಲಿ ಭಾಗವಹಿಸುವರು.

ನಮ್ಮ ದೇಶವು ಕೃಷಿ ಪ್ರಧಾನವಿದ್ದಂತೆ ನಮ್ಮ ಜಿಲ್ಲೆಯೂ ಕೃಷಿ ಪ್ರಧಾನವಾದದ್ದು. ದೇಶದ ಆರ್ಥಿಕ ದುಃಸ್ಥಿತಿಯು ಸುಧಾರಿಸಲು ಕೃಷಿ ಉದ್ಯಮದ ಮತ್ತು ವ್ಯವಸಾಯಿಗಳ ಉದ್ಧಾರವಾಗಬೇಕಾದುದು ಅತ್ಯಾವಶ್ಯಕ. ಗಾಂಧೀ ಯೋಜನೆಯ ಪ್ರಕಾರ ದೇಶದ ಎಲ್ಲೆಯ ನೆಲೆಗಟ್ಟೇ ಸುವ್ಯವಸ್ಥಿತವಾಗಿರಸಲ್ಪಟ್ಟ ಕೃಷಿ ಪ್ರಧಾನವಾದ ಆರ್ಥಿಕ ನೆಮ್ಮದಿಯಾಗಿದೆ. ನಮ್ಮ ದೇಶದಂತಹ ಪರಿಸ್ಥಿತಿಯಲ್ಲಿರುವ ಐರೋಪ್ಯ ಅಮೇರಿಕಾ ದೇಶಗಳಲ್ಲಿ ಸಹಕಾರಿ ಸಂಘಗಳ ಮೂಲಕವೇ ಕೃಷಿಗಾರಿಕೆಯನ್ನು ಶ್ರೇಯಸ್ಸಿಗೆ ತರಲಾಗಿದೆ. ಸಹಕಾರೀ ಸಂಸ್ಥೆಗಳು ಭೂವ್ಯವಸಾಯಿಗಳಿಗೆ ಸಾಂಪತ್ತಿಕ ಅನುಕೂಲತೆಯನ್ನು ಒದಗಿಸಿಕೊಡುವುದರೊಂದಿಗೆ ಗ್ರಾಮ ಕೈಗಾರಿಕೆ, ಗುಡಿಕೈಕಾರಿಕೆ ಮತ್ತು ಅದರ ಹಂಚುವಿಕೆಗೆ ಅನುಕೂಲವಾದ ಸೌಕರ್ಯಗಳನ್ನು ಕಲ್ಪಿಸಿಕೊಡಲು ತಮ್ಮ ಪ್ರಭಾವವನ್ನು ಉಪಯೋಗಿಸಿದರೆ ನಮ್ಮ ಜಿಲ್ಲೆಯ ಮಾತ್ರವಲ್ಲ ದೇಶಕ್ಕೇ ಒಂದು ಆದರ್ಶ ಕಲ್ಪಿಸಿದಂತಾಗಿ ನೆಮ್ಮದಿಯ ಮಾರ್ಗವು ಸುಗಮವಾಗುವುದು.

ಕಳೆದ ವಾರದಲ್ಲಿ ನಗರದ ಹಲವು ಸಂಸ್ಥೆಗಳ ವಾರ್ಷಿಕೋತ್ಸವಗಳು ಜರಗಿದವು. ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸೈಂಟ್ ಎಲೋಶಿಯಸ್ ಕಾಲೇಜ್ ಯೂನಿಯನ್ನಿನ ಸಂತೋಷ ಕೂಟವೊಂದು ಜರಗಿತು. ಸ್ಥಳೀಯ ಬಿ. ಇ. ಎಂ. ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ರಾವ್ ಸಾಹೇಬ್. ಎಂ. ಕೆ. ನಂಬಿಯಾರ್ ಬಾರ್-ಎಟ್-ಲೋ-ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಸ್ಟೂಡೆಂಟ್ಸ್ ಯೂನಿಯನ್ನಿನ ದಿನಾಚರಣೆ ಶ್ರೀ. ಎ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪೆಂಟ್ಲೆಂಡ್‌ಪೇಟಾ ಸ್ಪೋರ್ಟ್ ಎಸೋಶಿಯೇಶನ್ ಇದರ ವಾರ್ಷಿಕೋತ್ಸವವು ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಶುಕ್ರವಾರ ಸೈಂಟ್ ಎಗ್ನಿಸ್ ಕೋಲೇಜ್ ಮತ್ತು ಹ್ಯಾಸ್ಕೂಲ್ ಶಾಖೆಯ ಬಹುಮಾನ ವಿತರಣೋತ್ಸವವು ಜಿಲ್ಲಾ ಕಲೆಕ್ಟರ್ ರಾವ್ ಸಾಹೇಬ್ ರಾಮದಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ತಾ. ೧೧ರಲ್ಲು ಸನ್ಯಾಸಿಗುಡ್ಡೆ ಆರ್ಯ ಸಮಾಜ ಮಂದಿರದಲ್ಲಿ ಋಷಿಬೋಧೋತ್ಸವವು ಶ್ರೀಮಾನ್ ವೈದ್ಯ ಗುರು ಯಂ.

ಪಾಣೆಮಂಗ್ಳೂರಲ್ಲಿ ಹಗಲು ಖೂನಿ

ಜಿಲ್ಲೆಯ 'ಸ್ಪೋರ್ಟ್ಸ್' ಕಲಹಗಳು

ಹುಲಿಶಿಕಾರಿ-ಶಿಕ್ಷಣ ಉತ್ಸಾಹ-ವ್ಯಾಪಾರಿಗಳ ಆದರ್ಶ-ಪಟ್ಟಾಭಿಷೇಕ

ಆರ್. ಭಟ್ ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಶ್ರೀ. ಕೆ. ಕೆ. ಶೆಟ್ಟಿ, ಶ್ರೀ. ಬಿ. ಮೊಹನಪ್ಪ ತಿಂಗಳಾಯ ಇವರ ಭಾಷಣಗಳಿದ್ದುವು.

ಹೀಗೆ ನಗರದಲ್ಲಿ ಶೈಕ್ಷಣೀಕ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿವಿಧ ಕಾರ್ಯಕ್ರಮಗಳು ಜರಗುವುವು. ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡುತ್ತಿರುವಾಗಲೇ ತಮ್ಮ ಬಿಡು ಸಮಯಗಳಲ್ಲಿ ಯಾವುದಾದರೊಂದು ರೀತಿಯ ನಾಗರೀಕ ಸುಧಾರಣೆಯ ಕಾರ್ಯಕ್ರಮವನ್ನು ಶಕ್ಯವಿದ್ದಷ್ಟು ನಿರ್ವಹಿಸಲು ಪ್ರಯತ್ನಪಟ್ಟರೆ ವರ್ಷಾಂತ್ಯದಲ್ಲಿ ಜರಗುವ ಅವರ ಸಂಘ ದಿನಾಚರಣೆಯಂದು ಅವರು ತಮ್ಮ ಚಟುವಟಿಕೆಗಳಲ್ಲಿ ಹೆಚ್ಚಿನ ಹೆಮ್ಮೆಯ ಮತ್ತು ಆತ್ಮ ತೃಪ್ತಿಯ ವರದಿಯನ್ನು ಓದುವಂತಾಗುತ್ತದೆ. ಶಿಕ್ಷಣವು ಇಂದು ಬರೀ ನೌಕರಿ ಶೋಧನೆಗಾಗಿ ಅಲ್ಲವೆಂತಲೂ, ಶಿಕ್ಷಿತರು ತಮಗಿಂತ ನಿರ್ಭಾಗ್ಯರಾದವರ, ಅಜ್ಞರಾಗಿರುವವರಲ್ಲಿ ಆಧುನಿಕ ಜ್ಞಾನದ ಬೆಳಕನ್ನು ಪಸರಿಸಿ ಮೇಧಾವಿಯಾದೊಂದು ಸಮಾಜ ರಚನೆಗೆ ತಳಹದಿ ಹಾಕಿಕೊಡುವರೆ ಸಹಾಯಮಾಡಬೇಕೆಂದು ಶ್ರೀ. ರಾಜಗೋಪಾಲಾಚಾರಿಯವರು ವಿದ್ಯಾರ್ಥಿಗಳಿಗೊಮ್ಮೆ ಕೊಟ್ಟ ಉಪದೇಶವು ವಿಚಾರಣೀಯವಾಗಿದೆ. ಮಂಗಳೂರಲ್ಲಿ ಪ್ರಾರಂಭಿಸಲ್ಪಡುವ ಅನೇಕ ಸಂಸ್ಥೆಗಳು ಶಿಶು ಪ್ರಾಯದಲ್ಲೆಂಬಂತೆ ಅವಸಾನ ಕಾಣುವುದು ಸಾಮಾನ್ಯ ವಿಷಯವಾಗಿದೆ. ಇದಕ್ಕೆ ಅವರ ಪ್ರತ್ಯಕ್ಷ ಕಾರ್ಯರೂಪಿಯಾಗಿ ಯಾವುದಾದರೊಂದು ಕೆಲಸವನ್ನು ಮಾಡದಿರುವುದೇ ಕಾರಣ.

ಇಲ್ಲಿಯ ಕ್ರೀಡಾರಂಗದಲ್ಲೂ ವಿದ್ಯಾರ್ಥಿಗಳೂ, ಇತರರೂ ಬಹಳ ಉತ್ಸಾಹವನ್ನು ತೋರಿಸುತ್ತಿರುವರು. ಆದರೆ ಮಂಗಳೂರಿನ ಕ್ರೀಡಾರಂಗದ ಚಟುವಟಿಕೆಗಳನ್ನು ಪ್ರತ್ಯಕ್ಷವಾಗಿ ಹತ್ತಿರದಿಂದ ನಿರೀಕ್ಷಿಸಿದರೆ ಇವುಗಳಲ್ಲಿ ಒಂದಲ್ಲ ಒಂದು ರೀತಿಯ ಪಂಗಡ ಕಲಹ, ಪಕ್ಷಪಾತಗಳೇ ಇವೆಯೆಂದು ಅಭಿಪ್ರಾಯವಾಗುತ್ತದೆ. ಕ್ರೀಡಾಗಾರನೊಬ್ಬನು ಶರೀರ ಶ್ರಮ ವ್ಯಾಯಾಮದ ಆದರ್ಶವನ್ನು ಮಾತ್ರ ಕಲ್ಪಿಸುವುದಲ್ಲದೇ ಪ್ರಗತಿಪರವಾದ ಸಂಸ್ಕೃತಿ, ಜ್ಞಾನೋಭಿವೃದ್ಧಿಯ ಬೆಳವಣಿಗೆಗೂ ಮಾದರಿಕಲ್ಪಿಸಬೇಕು. ಅಂಗಸಾಧನವು ಜ್ಞಾನ ಪರಿಪೋಷಣೆಗೆ ಸಾಧಕವಾದುದು, ಎಂಬ ವಿಷಯವನ್ನು ಮರೆಯಬಾರದು. ಇದರ ಬದಲಿಗೆ ಈ ಕ್ರೀಡಾಭಿಮಾನಿ ಸಂಸ್ಥೆಗಳು ಜಾತಿಮತ ಕಲಹ ಪ್ರೇರಕವಾದ ಕಲಹಗಳಿಗೆ ಗಮನಕೊಟ್ಟರೆ ಅದು ನಾಗರೀಕ ಜೀವನ ಧ್ಯೇಯದಲ್ಲಿ ವಿಕಲ್ಪನಾತ್ಮಕ ಕುಂದನ್ನುಂಟುಮಾಡಿದಂತಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಅನೇಕವೇಳೆ ಕ್ರಿಕೆಟ್, ಹೊಕ್ಕಿ, ಫೂಟ್‌ಬಾಲ್, ವಾಲಿಬಾಲ್ ಸ್ಪೋರ್ಟ್ ಮತ್ತಿತರ ಕ್ರೀಡಾ ಸ್ಪರ್ಧೆಗಳಿಗೆ ಪರಸ್ಪರ ಮತಭೇದ ವೈಶಮ್ಯದ ಸೋಗು ಅಂಟಿಕೊಂಡಿರುವಂತೆ ಕಾಣುತ್ತದೆ. ಕೆಲವು ಸಂದರ್ಭಗಳಲ್ಲಿ ಮಧ್ಯಸ್ಥಿತಿಗೆ ನಿಲ್ಲಿಸಲ್ಪಡುವ 'ಅಂಪಾಯರುಗಳ' ಮೇಲೇ ಅಭಿಕ್ರಮಣ ನಡೆಸಲ್ಪಡುತ್ತಿರುವುದು ಕ್ರೀಡಾ ಧ್ಯೇಯವು ಹೇಗೆ ಅಧೋಗತಿಗಿಳಿಯುತ್ತದೆಂಬುದನ್ನು ಸಾಕ್ಷ್ಯವಾಗಿ ತೋರಿಸುತ್ತದೆ. ಇಂತಹ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಅಸಾಧ್ಯವೆಂದು ಕಂಡುಬಂದ ಸಂದರ್ಭದಲ್ಲಿ ಇಂತಹ 'ಸ್ಪೋರ್ಟ್ಸ್'ಗಳನ್ನು ಆಡದಿರುವುದೇ ಒಳಿತೆಂದು ನಮಗೆ ತೋರುತ್ತದೆ.

ತಾ. ೧೨ನೇ ಸೋಮವಾರದಂದು ಮದ್ರಾಸ್ ವಿಶ್ವ ವಿದ್ಯಾಲಯದ ಪುಸ್ತಕ ಭಂಡಾರದ ಪ್ರಮುಖಾಧಿಕಾರಿಗಳಾದ ಶ್ರೀ. ಎಸ್. ಆರ್. ರಂಗನಾಥನ್ ಅವರು ಮುನ್ಸಿಪಲ್ ಕೌನ್ಸಿಲಿನಲ್ಲಿ ಗ್ರಂಥಾಲಯಗಳ ಮಹತ್ವದ ಕುರಿತು ಬೋಧಪರ ಭಾಷಣವಿತ್ತರು. ಯುರೋಪಿನ ದೇಶಗಳಲ್ಲಿ ಅಲ್ಲಿನ ಜನ ಸಂಖ್ಯೆಯಷ್ಟೇ ರೂಪಾಯಿಗಳನ್ನು ಪುಸ್ತಕ ಭಂಡಾರಗಳಿಗೆ ಪುಸ್ತಕಗಳನ್ನೊದಗಿಸುವುದಕ್ಕೆ ವೆಚ್ಚಮಾಡುತ್ತಾರೆ. ಸ್ವೀಡನ್ ದೇಶದ ಪುಸ್ತಕಭಂಡಾರದಲ್ಲಿ ಅಲ್ಲಿನ ಜನ ಸಂಖ್ಯೆಯ ಇಮ್ಮಡಿ ಸಂಖ್ಯೆಯಷ್ಟು ಪುಸ್ತಕಗಳಿವೆ. ಭಾರತದಲ್ಲಿ ಸರಕಾರದವರೂ ಸ್ಥಳೀಕ ಸಂಸ್ಥೆಗಳೂ ಒಬ್ಬೊಬ್ಬ ಪ್ರಜೆಯ ಮೇಲೆ ಪುಸ್ತಕಗಳಿಗಾಗಿ ಎಂಟಾಣೆಯನ್ನಾದರೂ ವೆಚ್ಚಮಾಡಬೇಕು. ಶಿಕ್ಷಣದಲ್ಲಿ ಬಹಳ ಹಿಂದಿರುವ ನಮ್ಮ ಜನತೆಗೆ ಓದುವ ಸಂದರ್ಭಗಳನ್ನು ವಿಶೇಷ ರೀತಿಯಲ್ಲಿ ಒದಗಿಸಿಕೊಟ್ಟರೆ ದೇಶದ ಪ್ರಗತಿಗೆ ತುಂಬಾ ಸಹಾಯವಾಗುತ್ತದೆ. ಪುಸ್ತಕ ಭಂಡಾರವೊಂದರಲ್ಲಿ ಬರೀ ಕಾದಂಬರಿ ಮತ್ತು ಕತೆ, ಇತಿಹಾಸಕ್ಕೆ ಸಂಬಂಧಪಟ್ಟ ಪುಸ್ತಕಗಳು ಮಾತ್ರವಲ್ಲ ಸಾಹಿತ್ಯವಿಜ್ಞಾನ ಕ್ಷೇತ್ರದ ಕುರಿತಾಗಿ ಬರೆಯಲ್ಪಟ್ಟ ಗ್ರಂಥಗಳನ್ನು ಸೇರಿಸಬೇಕು. ಆದಷ್ಟು ಹೆಚ್ಚು ಪತ್ರಿಕೆಗಳನ್ನು ಪೂರೈಸಬೇಕು. ಮಂಗಳೂರು ಮುನ್ಸಿಪಲ್ ಲೈಬ್ರೆರಿಯಲ್ಲಿ ಇಂದು ಕಮ್ಮಿ ಎಂದರೆ ಐವತ್ತು ಸಾವಿರ ಗ್ರಂಥಗಳಾದರೂ ಇರಬೇಕಿತ್ತು. ಆದರೆ ಅಲ್ಲಿ ಈಗ ಬರೀ ೨೫೦೦ ಮಾತ್ರ ಇವೆ. ನಗರದ ಹಲವು ಕಡೆಗಳಲ್ಲಿ ಪುಸ್ತಕಾಲಯದ ಶಾಖೆಗಳನ್ನು ತೆರೆಯುವ ಬದಲು ಇದ್ದ ಒಂದು ಕೇಂದ್ರ ಭಂಡಾರವನ್ನೇ ಪುಷ್ಟಿಗೊಳಿಸುವುದುತ್ತಮ—ಹೀಗೆಂದು ಶ್ರೀ. ರಂಗನಾಥನ್ ಅವರು ನುಡಿದರು. ನಗರಸಭೆಯ ವತಿಯಿಂದ ಅನಾವಶ್ಯಕವಾಗಿ ವ್ಯಯವಾಗುತ್ತಿರುವ ಯಾವುದಾದರೂ ದಾರಿಗಳಿದ್ದರೆ ಅದನ್ನು ನಿಲ್ಲಿಸಿ ನಾಗರೀಕರಿಗೆ ಯೋಗ್ಯವಾದ ಪುಸ್ತಕ ಭಂಡಾರವನ್ನು ಅಭಿವೃದ್ಧಿಗೊಳಿಸುವುದುತ್ತಮ.

ಜಪ್ಪು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಡಿ. ಕೃಷ್ಣ ತಂತ್ರಿ ವಿದ್ವಾನ್ ಅವರ ಅಧ್ಯಕ್ಷತೆಯಲ್ಲಿ ಮಕ್ಕಳ ಸಾಹಿತ್ಯ ಸಂಘ ಸ್ಥಾಪನೆಹೊಂದಿತು. ಇಲ್ಲಿಯ ಎಲ್ಲಾ ಶಾಲೆಗಳಲ್ಲೂ ಇಂತಹ ಸಂಘಗಳು ಸ್ಥಾಪನೆಮಾಡಲು ಕನ್ನಡಾಭಿಮಾನಿಗಳು ಪ್ರಯತ್ನಿಸಿದರೆ ಚಿಕ್ಕಂದಿನಲ್ಲೇ ಕರ್ನಾಟಕದ ವಿದ್ಯಾರ್ಥಿಗಳಲ್ಲಿ ತಮ್ಮ ತಾಯಿ ಇಲ್ಲವೆ ಮಲತಾಯಿಯ ನುಡಿಯ ಸಾಹಿತ್ಯಾಭಿಮಾನ, ಶ್ರೇಷ್ಠತೆಯು ಮೊಳಗುವುದಕ್ಕೆ ಸಹಾಯವಾಗುತ್ತದೆ.

ಕದ್ರಿ ಜೋಗಿ ಮಠದ ಹದಿನೆರಡು ವರ್ಷಕ್ಕೊಮ್ಮೆ ನಡೆಯುವ ಪರ್ಯಾಯಾಧಿಪತಿಗಳ ಪಟ್ಟಗಟ್ಟುವಿಕೆಯ ಕಾರ್ಯಕ್ರಮವು ತಾ ೧೫ರಲ್ಲು ನಡೆಯಿತು. ಪ್ರತಿಸಲವೂ ಉತ್ತರಹಿಂದೂಸ್ಥಾನದ ಕಡೆಯಿಂದ ಓರ್ವ ಬಾರಾ ಪಂತರಿಗೆ ಈ ಪರ್ಯಾಯ ಸಿಗುವುದು. ಅನೇಕ ಯೋಗಿಗಳು ಈ ಸಂಬಂಧ ಮಂಗಳೂರಿಗೆ ಬಂದಿರುವರು.

ತಾಲೂಕು ಭಾಗಗಳಿಂದ ಬಂದ ವರದಿಗಳಲ್ಲಿ ಮೊನ್ನೆ ತಾ. ೮ರಂದು ಪಾಣೆಮಂಗಳೂರು ಬಂಟ್ವಾಳ ಒಳ ರಸ್ತೆಯ ಬಳಿ ನಡೆದ ಒಂದು ಖೂನಿ ಘಟನೆಯು ವಿಶೇಷವಾದ ವರ್ತಮಾನ. ಪಾಣೆಮಂಗಳೂರಿನ ಪ್ರಸಿದ್ಧ ವ್ಯಾಪಾರಿಗಳೂ, ಕೊಂಗ್ರೆಸ್ ಕೆಲಸಗಾರರೂ ಆದ ಶ್ರೀ. ಕೃಷ್ಣ ಪೈ ಎಂಬವರು ಬಂಟ್ವಾಳ ಕಡೆಯಿಂದ ತಮ್ಮೂರಿಗೆ ಸ್ಯಾಕಲಿನಲ್ಲಿ ಬರುತ್ತಿದ್ದಾಗ ಇರ್ವ ದುರಾತ್ಮರು ಅವರನ್ನು ತಡೆದು ನಿಲ್ಲಿಸಿ ಚೂರಿಗಳಿಂದ ತಿವಿದು, ಓಡಿಹೋದರೆಂದೂ, ನಂತರ ಬಂಟ್ವಾಳ ಆಸ್ಪತ್ರೆಗೆ ಒಯ್ಯಲ್ಪಟ್ಟ ಶ್ರೀಯುತ ಪೈಗಳು ಮರುದಿನ ಈ ತಿವಿತದ ಪರಿಣಾಮವಾಗಿ ಮೃತಪಟ್ಟರೆಂದೂ ತಿಳಿಸಲು ವಿಷಾಧವಾಗುತ್ತದೆ. ಸುಮಾರು ನಡು ಮಧ್ಯಾಹ್ನದ ಸಮಯಕ್ಕೆ ಈ ಖೂನಿ ನಡೆಯಿತು. ಮೃತರು ವೈಯಕ್ತೀಕ ಸತ್ಯಾಗ್ರಹ ಚಳವಳದಲ್ಲಿ ಕಾರಾಗೃಹ ಶಿಕ್ಷೆ ಅನುಭವಿಸಿದ್ದಾರೆ. ಆಗಲೇ ಖೂನಿಕಾರರ ಪತ್ತೆಗೆ ಅಧಿಕಾರಿಗಳು ತೊಡಗಿರುವರೆಂತಲೂ ತಿಳಿದು ಬರುತ್ತದೆ. ಮೃತರು ಘಟನೆಯ ಕುರಿತು ಮರಣ ವಾಗ್ಮೂಲವನ್ನು ಕೊಟ್ಟಿರುವರು. ಸ್ಯಾಕಲಿನಲ್ಲಿ ಬರುವಾಗ ಅವರ ಜೊತೆಯಲ್ಲಿ ಇನ್ನೊರ್ವ ಸ್ಯಾಕಲ್ ತರುಣನೂ, ಮತ್ತು ಖೂನಿ ನಡೆದಾಗ ಓರ್ವ ಹಾಲು ಒಯ್ಯುವ ಬಾಲಕನೂ ನೆರೆಯಲ್ಲಿದ್ದರೆಂದು ವದಂತಿ ಇದೆ. ದಿವಂಗತರ ಆತ್ಮಕ್ಕೂ ಅವರ ದುಃಖಿತ ಕುಟುಂಬಕ್ಕೂ ಶಾಂತಿ ಕೋರುವೆವು.

ಚೊಕ್ಕಾಡಿಯ ಶ್ರೀ. ಗಣಪಯ್ಯ ಭಟ್ ಎಂಬವರು ತಮ್ಮ ಊರಿನ ಆಸುಪಾಸಿನಲ್ಲಿ ಬಹಳ ಹಾವಳಿಯುಂಟುಮಾಡಿದ ಎರಡು ಹುಲಿಗಳನ್ನು ಕೊಂದು ಅಲ್ಲಿನ ನಿವಾಸಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇತರ ಕಡೆಯ ಶಿಕಾರಿಗಳೂ ಉತ್ಸಾಹ ತಾಳಲಿ.

ಉಡುಪಿಯ ಕೈಮಗ್ಗ ಮಾಲಿಕರ ಸಂಘದವರು ತಮ್ಮ ಕೆಲಸಗಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಯೋಜನೆಯನ್ನು ಮಾಡುವರೇ ಸಭೆ ಸೇರಿದ್ದರು. ಆಗಲೇ ಮಗ್ಗ ಮಜೂರರಿಗೆ ಯುದ್ಧ ಪೂರ್ವಕ್ಕಿಂತ ಸೇಕಡಾ ಮೂನ್ನೂರಷ್ಟು ಸಿಗುವಂತೆ ಮಾಡಿರುವರಂತೆ. ಇನ್ನೂ ಹೆಚ್ಚಿಗೆ ಕೊಡಲು ತಯಾರಿಕೆಗಳ ಧಾರಣೆ ಹೆಚ್ಚಿಲ್ಲವಾದುದರಿಂದ ಸರಕಾರದ ಸಲಹೆ ಕೇಳಲು ನಿರ್ಧರಿಸಿರುವರು. ಇಲ್ಲಿಯ ಲೋಹ ಪಾತ್ರೆ ಸಾಮಾನು ವ್ಯಾಪಾರಿಗಳಾದ ಶ್ರೀ. ಕಲ್ಯಾಂಜಿ ವ್ಯಾಸರಾಯರು ತಮ್ಮ ಸಂಸ್ಥೆಯ ರಜತೋತ್ಸವದಂದು ಯೋಗ್ಯ ದಾನ ಬಹುಮಾನಗಳನ್ನು ಹಂಚಿದರು. ಇತರರೂ ಇವರ ಆದರ್ಶ ಅನುಸರಿಸಿದರೆ ಒಳ್ಳೇದಿದೆ.



315
ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು.
ಜಾಂಬಕನ್ನು ಪ್ರತಿ ರಾತ್ರೆ ಮಲಕೊಳ್ಳುವಾಗ ಹಚ್ಚಿರಿ.
ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಕೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು ಬೇಗನೇ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶಮಾಡುತ್ತದೆ.
ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.
ZAM-BUK
ಪ್ರಾಣಿಕೊಬ್ಬು ವಿರಹಿತವಾದುದು.

ಭಾರತ ವಾರಾಂತ್ಯ ವರದಿಗಳು

ಯುದ್ಧ ಖಾತೆಯಲ್ಲಿ ದುರ್ವ್ಯಯ?—ಆದರ್ಶ ಮುಸ್ಲೀಮರು—ಸಿಂಧದ ಭೀಕರ ರಾಜಕಾರಣ—ಖರ್ಚುಮಾಡದ ವೆಚ್ಚ—ಯುದ್ಧ ಧನಸಂಗ್ರಹ ರೀತಿನೀತಿ—ವಾರ್‌ಫ್ರಂಟಿನ ಶ್ರೇಷ್ಠ ಕೆಲಸ

ಸರಕಾರೀ ನೌಕರರ ಅಕ್ರಮ

ಅಲಹಾಬಾದಿನಲ್ಲಿ ಒಂದು ವಿಚಿತ್ರ ಘಟನೆ ಪ್ರಕಾಶಕ್ಕೆ ಬಂದಿದೆ. ಕಳೆದ ತಿಂಗಳ ಮಧ್ಯದಲ್ಲಿ ಅಲ್ಲಿ ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಮಾರುವ ವಾರವನ್ನು ಜರುಗಿಸಲಾಯಿತು. ಯುದ್ಧ ಸಾಲಕ್ಕಾಗಿ ಈ ಹಣವು ಸಂಗ್ರಹ ಮಾಡಲ್ಪಡುತ್ತದೆ. ನಾಯಿಬ್ ತಹಶೀಲ್ದಾರ್ ಎಂಬ ಅಧಿಕಾರಿಗಳು ಸರ್ಜು ಪ್ರಸಾದ್ ಎಂಬವನಿಗೆ ೫೦ ರೂಪಾಯಿಯ ಸರ್ಟಿಫಿಕೇಟು ಕೊಳ್ಳಲು ಹೇಳಿದರು. ತನಗೆ ಅಷ್ಟು ಕೊಳ್ಳಲು ಅನಾನುಕೂಲತೆ ಎಂದು ಶ್ರೀ. ಪ್ರಸಾದರು ತಿಳಿಸಿದಾಗ ತಹಶೀಲ್ದಾರರು ಪ್ರಸಾದರನ್ನು ಬಂಧಿಸಿ ಹಗ್ಗಗಳಿಂದ ಕಟ್ಟಿಹಾಕಿ ಪಾದರಕ್ಷೆಗಳಿಂದ ಹೊಡೆಸಿ ಅಪಮಾನ ಮಾಡಿ ಕಡೆಗೆ ೧೫ ರೂಪಾಯಿಯ ಒಂದು ಸರ್ಟಿಫಿಕೇಟು ಕೊಂಡುಕೊಳ್ಳುವಂತೆ ಒಪ್ಪಿಸಿದರು. ಸಂಯುಕ್ತ ಪ್ರಾಂತ್ಯದ ಕೊಂಗ್ರೆಸ್ ಮುಖಂಡರೂ, ಮಾಜಿ ಕಾಯಿದೆ ಮಂತ್ರಿಗಳೂ ಆದ ಡಾ। ಕೆ. ಎಸ್. ಕಟಿಜು ಅವರು ಪ್ರಾಂತಿಕ ಸರಕಾರದ ಮುಖಾಂತರ ಮೇಲೆ ಹೇಳಿದ ಸರಕಾರೀ ನೌಕರರಿಗೆ ೫ ಸಾವಿರ ರೂಪ್ಯಾ ಮಾನನಷ್ಟಕ್ಕೆ ದಾವೆ ಮಾಡುವ ನೋಟೀಸು ಕಳುಹಿಸಿದ್ದಾರೆ. ಇಲ್ಲವೆ ಪ್ರಸಾದರು ಹೇಳುವ ಸಂಸ್ಥೆಗೆ ಆ ತಹಶೀಲ್ದಾರರು ೨೦೦ ರೂಪ್ಯಾಯನ್ನು ದಾನಕೊಡಲು ಒಪ್ಪಬೇಕು ಎಂದೂ ಶರ್ತ ಹಾಕಿದ್ದಾನೆ. ಸರಕಾರಿ ನೌಕರರ ಈ ವರ್ತನೆಯು ಯುದ್ಧ ಪ್ರಯತ್ನಕ್ಕೆ ತಡೆಯಾಗುವಂತಹದಿರುವುದರಿಂದ ಅವರು ಡಿಫೆನ್ಸ್ ಕಾನೂನು ಮೇರೆಗೆ ಏಕೆ ಬಂಧಿಸಬಾರದು?

ಮುಸ್ಲಿಂ ಗೀತಾ ಪಂಡಿತರು

ಕೇಂದ್ರ ಶಾಸನ ಸಭೆಯ ಸದಸ್ಯರಾದ ವಿ. ಉಮರ್ ಆಲಿಷಾ ಅವರು ಕೆಲವು ಸಮಯ ಹಿಂದೆ ದಿವಂಗತರಾದರು. ಹಿಂದೂ ಮುಸ್ಲಿಂ ಐಕ್ಯತೆಗಾಗಿ ಇವರು ತುಂಬಾ ದುಡಿದವರೆಂಬುದಕ್ಕೆ ಈ ತೆಲುಗು ಮುಸಲ್ಮಾನ ಪ್ರಮುಖರು ಬರೆದ ಭಗವದ್ಗೀತೆಯ ತೆಲುಗು ಭಾಷಾಂತರವೇ ಸಾಕ್ಷಿ. ಇವರು ತೆಲುಗು ಪಂಡಿತರು ಮಾತ್ರವಲ್ಲ ತುಂಬಾ ದೂರದೃಷ್ಟಿಯ ಮತ್ತು ರಾಷ್ಟ್ರೀಯ ಭಾವನೆಯವರಾಗಿದ್ದರು. ಎಲ್ಲರೂ ಇವರ ಆದರ್ಶವನ್ನು ಅನುಸರಿಸಿದರೆ ಅದೆಷ್ಟು ಚೆನ್ನಾಗಿರುತ್ತದೆ.

ಕಲಹದ ಅಂತ್ಯ ಕೊಲೆ

ಸಿಂಧದ ಗೊಂದಲ ಇನ್ನೂ ಮುಗಿದಿಲ್ಲ. ಅದು ಮುಗಿಯುವ ಹಾಗೂ ಕಾಣುವುದಿಲ್ಲ. ಅಲ್ಲಿನ ಮಂತ್ರಿಮಂಡಳದಿಂದ ಹೊರಬಂದ ಗಜದರರ ಪ್ರಕರಣದ ನಂತರ ಈಗ ಅಲ್ಲಿನ ಮುಸ್ಲಿಂ ಲೀಗಿನ ಅಧ್ಯಕ್ಷರೊಳಗೂ, ಪ್ರಧಾನ ಸರ್ ಗುಲಾಮ್ ಹುಸ್ಸೇನ ಹಿದಾಯತುಲ್ಲಾ ಅವರೊಳಗೂ ಕಡುವಾದ ತಿಕ್ಕಾಟಕ್ಕಾರಂಭವಾಗಿದೆ. ಅಲ್ಲಿನ ಲೀಗ್ ಅಧ್ಯಕ್ಷ ಸಯ್ಯದರನ್ನೂ, ದಿವಂಗತ ಅಲ್ಲಾಭಕ್ಷರ ತಮ್ಮಂದಿರಾದ ಮೌಲಾ ಬಕ್ಷರನ್ನೂ ಮತ್ತು ಗಜದರರನ್ನೂ ಕೊಂದು ಹಾಕುತ್ತೇವಾಗಿ ಬೆದರಿಸುವ ಗುಪ್ತ ಪತ್ರಗಳು ಬಂದಿವೆಯಂತೆ. ಹಿಂದೆ ಇದೇ ತರದ ಬೆದರಿಕೆಗಳು ಕೊಡಲ್ಪಟ್ಟು ಅಲ್ಲಾಬಕ್ಷರವರು ಕೊಲೆಮಾಡಲ್ಪಟ್ಟದ್ದು, ಅದರಲ್ಲಿ ತಪ್ಪಿತಸ್ಥರಾಗಿ ವಿಚಾರಣೆಗೆ ಒಳಗಾದ ಖಾನ್ ಬಹುದೂರ್ ಖುರೊ ಅವರು ಸೆಶ್ಯನಿಗೆ ಕಮಿಟ್ ಮಾಡಲ್ಪಟ್ಟಿದ್ದಾರೆ. ಇಂತಹ ಕೊಲೆಯ ವಾತಾವರಣದಲ್ಲಿ ಸಾಮಾನ್ಯ ಜನತೆಯ ಅವಸ್ಥೆಯಾದರೂ ಹೇಗಿರಬೇಕು?

ಸುಂಕವಿಲ್ಲದ ಸಂಕ

ಇದಕ್ಕಿಂತಲೂ ವಿಚಿತ್ರವಾದ ಘಟನೆಗಳು ಬಂಗಾಲ್ ಅಸ್ಸಾಮುಗಳಲ್ಲಿ ಬೆಳಕಿಗೆ ಬಂದಿವೆ. ಯುದ್ಧ ಪ್ರಯತ್ನದ ನೆವನದಲ್ಲಿ ಅಲ್ಲಿನ ಸರಕಾರ ಖಾತೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ವಂಚನೆಯಾಗಿರುವುದು ತಿಳಿದು ಬಂದದ್ದು ಆಗಲೇ ಆ ಕುರಿತು ಕೇಂದ್ರ ಸಭೆಯಲ್ಲಿ ಚರ್ಚೆ ಪ್ರಾರಂಭವಾಗಿದೆ. ಸ್ಯಾಕಲಿನಿಂದ ಹಿಡಿದು ಆನೆಗಳ ತನಕ ಸಜೀವ ನಿರ್ಜೀವ ವಸ್ತುಗಳು ಯುದ್ಧ ಅವಶ್ಯಕತೆಗೆಂದು ಕೊಂಡೊಯ್ಯಲ್ಪಡುತ್ತಿದ್ದು, ಒಂದಕ್ಕೂ ರಶೀದಿಯೂ ಇಲ್ಲ, ಹಣವೂ ಇಲ್ಲವಂತೆ.

ಎಲ್ಲಕಿಂತಲೂ ಸಾರಸ್ಯವಾದ ವಿಷಯವೆಂದರೆ ಅಸ್ಸಾಮಿನಲ್ಲಿನ ಒಂದು ಸೇತುವೆ. ಕೆಲವು ಲಕ್ಷ ರೂಪ್ಯಾ ಖರ್ಚು ಮಾಡಿ ಒಂದು ಸೇತುವೆ ಕಟ್ಟಲು ಮಂಜೂರಾತಿಯಾಗಿದೆ. ಅದು ಕಟ್ಟಲ್ಪಟ್ಟಿದೆಯಾಗಿಯೂ, ನಂತರ ಯುದ್ಧಖಾತೆಯ ಸೂಚನೆ ಮೇರೆಗೆ ಅದು ನಾಶಮಾಡಲ್ಪಟ್ಟಿದೆಯಾಗಿಯೂ ಸರಕಾರಿ ರಿಕಾರ್ಡುಗಳಲ್ಲಿ ಲೆಕ್ಕ ತೋರಿಸಲಾಗಿದೆ. ಆದರೆ ಸೇತುವೆ ಕಟ್ಟಲ್ಪಟ್ಟಿದೆ ಎಂದು ಹೇಳಲಾದ ಸ್ಥಳದಲ್ಲಿ ಅದನ್ನು ಕಟ್ಟಿದ ಇಲ್ಲವೆ ನಾಶಮಾಡಿದ ಕುರುಹುಗಳೇ ಇಲ್ಲವಂತೆ. ಆಡಳಿತದಲ್ಲಿ ಬೆಟ್ಟದಾಕೃತಿಯ ಮೋಸಕೃತ್ಯಗಳು ನಡೆಯುತ್ತಿರುವಾಗ ಜನರು ಉಪವಾಸ ಬೀಳುವುದರಲ್ಲಿ ಆಶ್ಚರ್ಯಪಡಬೇಕಾದಿಲ್ಲ. ಈ ದುರ್ವ್ಯಯದಲ್ಲಿ ಬಂಗಾಲದ ಮಾಜೀ ಗವರ್ನರ್ ಸರ್ ಜಾನ್ ಹರ್ಬರ್ಟ್ ಇವರಿಗೂ ಒಂದು ಕೈಯಿತ್ತೆಂದೂ ಹೇಳಲಾಗಿದ್ದು ಅದು ನಿಜವಲ್ಲವೆಂದು ಅಲ್ಲಗಳೆಯಲ್ಪಟ್ಟಿದೆ.

ರಾಜ್ಯಭಾರ ವೈಶಿಷ್ಟ್ಯ

ಸರಕಾರದ ಪ್ರತಿನಿಧಿಗಳು ಕೆಲವು ಪ್ರಾಂತ್ಯಗಳಲ್ಲಿ ಯುದ್ಧ ಸಾಲ ಮತ್ತಿತರ ರೀತಿಯ ಯುದ್ಧ ಸಹಾಯ ಧನಸಂಗ್ರಹ ಮಾಡುವ ಕೆಲವು ವಿಚಿತ್ರ ವರ್ತನೆಗಳು ಎಸೆಂಬ್ಲಿಯಲ್ಲಿ ಚರ್ಚೆಗೆ ಬಂದಿವೆ. ಬಿಹಾರದಲ್ಲಿ ಮಕ್ಕಳಿದ್ದವರೆಲ್ಲರೂ ಒಬ್ಬೊಬ್ಬ ಮಗುವಿಗೆ ಹತ್ತತ್ತು ರೂಪಾಯಿಯಂತೆ ಯುದ್ಧ ಬೊಂಡ್‌ಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಲಾಗಿದೆ. ತೆಗೆದುಕೊಳ್ಳದಿದ್ದರೆ ಅಂಥವರ ಮಕ್ಕಳಿಗೆ ಶಾಲೆಗಳಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಬಂದೂಕು ಲ್ಯಾಸೆನ್ಸ್ ಇದ್ದವರು ೨೦ರಿಂದ ೫೦ರ ತನಕದ ಯುದ್ಧ ಸಾಲವನ್ನು ವರ್ಷಂಪ್ರತಿ ಕೊಡಬೇಕು. ಒಂದು ರೂಪ್ಯಾ ತೆರಿಗೆ ತೆರುವವರು ೨೦ ರೂಪ್ಯಾಯ ಯುದ್ಧ ಬೊಂಡ್ ತೆಗೆದುಕೊಳ್ಳಲೇ ಬೇಕು. ಒಪ್ಪದಿದ್ದವರಿಗೆ ಸಾಧ್ಯವಿದ್ದ ಎಲ್ಲಾ ರೀತಿಯಲ್ಲೂ ತೊಂದರೆ ಕೊಡಲಾಗುವುದು. ಈ ಸಂಬಂಧ ಒಂದು ನಿದರ್ಶನವೂ ಕೊಡಲಾಗಿದೆ. ರಾಜಮಹಾಲ್ ಎಂಬೂರಿನ ಇರ್ವ ವ್ಯಾಪಾರಿಗಳು ೧೦ ಸಾವಿರದ ಯುದ್ಧ ಬೊಂಡ್‌ಗಳನ್ನು ತೆಗೆದುಕೊಳ್ಳಲೊಪ್ಪದಿದ್ದುದಕ್ಕೆ ಸ್ಪೆಶಲ್ ಡಿವಿಜನಲ್ ಆಫೀಸರರು ಮರುದಿನ ಆ ವ್ಯಾಪಾರಿಗಳು ತಮ್ಮ ಲೆಕ್ಕಪತ್ರಗಳನ್ನು ಸರಕಾರೀ ತಪಾಸಣೆಗೆ ಬಿಟ್ಟುಕೊಡಬೇಕೆಂದು ಆಜ್ಞಾಪಿಸಿದರು. ಇದರ ವಿಚಾರಣೆ ಹೈಕೋರ್ಟಿನ ತನಕ ಹೋಯಿತು. ಜಡ್ಜರು ನಾಗರೀಕರನ್ನು ಇಂತಹ ಅನೀತಿ ಕಾರ್ಯಕ್ರಮಗಳಿಂದ ನಾಗರೀಕರನ್ನು ರಕ್ಷಿಸುವುದು ನ್ಯಾಯಸ್ಥಾನಗಳ ಕರ್ತವ್ಯವೆಂದು ಗಂಭೀರವಾದ ಎಚ್ಚರಿಕೆ ಕೊಟ್ಟಿರುವರು.

ಒಂದು ಕಡೆ ಒಬ್ಬ ಹಾಲು ಮಾರುವವನಿಗೆ ೩ ಸಾವಿರ ರೂಪ್ಯಾ ಕೊಡಲು ಒತ್ತಾಯಪಡಿಸಿದರಂತೆ. ಡಿಲ್ಲಿಯಲ್ಲಿ ಒಂದು ಅನಾಥಾಲಯಕ್ಕೆ ರೇಶನ್ ಕಾರ್ಡು ಕೊಡಬೇಕಾದರೆ ಸೇವಿಂಗ್ಸ್ ಸರ್ಟಿಫಿಕೇಟು ಪಡೆಯಬೇಕೆಂದು ತಿಳಿಸಿದರಂತೆ. ಸಂಯುಕ್ತ ಪ್ರಾಂತ್ಯದಲ್ಲಿ ಯುದ್ಧ ಹಣ ಕೊಡದಿದ್ದುದಕ್ಕೆ ತಲೆ ನೆಲಕ್ಕೆ ತಾಗಿಸಿ ಕೋಳಿಗಳಂತೆ ಕೂತುಕೊಳ್ಳುವ ಶಿಕ್ಷೆಕೊಟ್ಟು ೧೫ ರೂ. ಕೊಡಲು ಒಪ್ಪಿದ ಮೇಲೆ ಅವನನ್ನು ಬಿಡುಗಡೆಮಾಡಿದರು. ಈ ವಿಷಯವನ್ನು ಚರ್ಚೆಗೆ ತಂದವರು ಮುಸ್ಲಿಂ ಲೀಗ್ ಪಕ್ಷದ ಪ್ರತಿನಿಧಿಗಳೆಂಬುದು ಗಮನಿಸಬೇಕಾದ ವಿಷಯ. ಲಿಯಾಖತ್ ಆಲಿ ಖಾನರು "ಇದರಿಂದ ಸರಕಾರವು ತನ್ನ ಶವದ ಪೆಟ್ಟಿಗೆಯನ್ನು ತಾನೇ ಮುಚ್ಚಿಕೊಂಡ ಹಾಗೆ ಆಗುತ್ತದೆ" ಎಂದು ಎಚ್ಚರಿಕೆ ಕೊಟ್ಟರು.

ಕೇಂದ್ರ ಸರಕಾರದ ವತಿಯಿಂದ ಪ್ರಾಂತ್ಯಗಳಲ್ಲಿ ಪ್ರತಿನಿಧಿಗಳನ್ನು ಯುದ್ಧ ಧನ ಸಂಗ್ರಹಕ್ಕಾಗಿ ಕಳುಹಿಸಬೇಕೆಂದು ಯೋಜನೆಯಾಗಿತ್ತೆಂದೂ ಆದರೆ ಪ್ರಾಂತ್ಯ ಸರಕಾರಗಳು ಅದಕ್ಕೆ ಆಕ್ಷೇಪತೆಗೆದರೆಂತಲೂ ಗೃಹಖಾತೆ ಸಚಿವ ಸರ್ ಫ್ರೆನ್ಸಿಸ್ ಮುಡಿಯವರೆಂದುದಕ್ಕೆ ಲಿಯಾಖತ್ ಖಾನರ ಉತ್ತರ "ಪ್ರಾಂತ್ಯ ಪ್ರತಿನಿಧಿಗಳಿಗೆ ತಮ್ಮ ಕಿಸೆಯಲ್ಲಿ ಬೀಳಬಹುದಾದ ಬಹುಮಾನಕ್ಕೆ ಲೋಪಬರಬಹುದೆಂದು ಅವರು ಆಕ್ಷೇಪ ತೆಗೆದದ್ದು" ಹೀಗೆಂದು ತಿಳಿಸಿದರು.

"ಇದರಿಂದ ಯುದ್ಧ ಮಾತ್ರವಲ್ಲ ಯುದ್ಧ ಪ್ರಯತ್ನವು ಕೂಡಾ ಅದೆಷ್ಟು ಅನಿಷ್ಟಕಾರಕವೆಂಬುದು ತಿಳಿಯುತ್ತದೆ" ಎಂದು ಶ್ರೀ. ಭೂಲಾಭಾಯಿ ದೇಸಾಯಿಯವರ ಮಾತುಗಳು ಗಣನೀಯವಾಗಿದೆ.

ಕಿಸೆ ಕಳ್ಳರಿಗೆ ಕೆಲಸ

ರಾಷ್ಟ್ರೀಯ ಯುದ್ಧ ಮುಖ ಇಲ್ಲವೆ ನೇಶನಲ್ ವೊರ್ ಫ್ರಂಟ್ ಎಂಬ ಯುದ್ಧ ಪ್ರಚಾರ ಸಂಸ್ಥೆಯು ಅನೇಕ ರೀತಿಯಲ್ಲಿ ಹಣವನ್ನು ದುರ್ವ್ಯಯ ಮಾಡುತ್ತಿರುವುದಾಗಿ ಎಸೆಂಬ್ಲಿಯಲ್ಲಿ ಆರೋಪಗಳು ತೆಗೆಯಲ್ಪಟ್ಟವು. ಸರ್ ಯಾಮಿನ್ ಖಾನರು ಇವುಗಳನ್ನು ಅಂತ್ಯಗೊಳಿಸಲು ಒಂದು ಸೂಚನೆ ತಂದರು. ಈ ಯುದ್ಧ ಮುಖದ ಉಪಯುಕ್ತತೆಯನ್ನು ಹೊಗಳುತ್ತಾ ಇದಕ್ಕೆ ಸಂಬಂಧಪಟ್ಟ ಬಿಹಾರಿ ಲಾಲ್ ಎಂಬ ಸದಸ್ಯರು "ಯುದ್ಧ ಮುಖದವರು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಒಳ್ಳೇ ಕೆಲಸಗಳಿಗೆ ಖರ್ಚುಮಾಡುತ್ತಿರುವರು. ಈಗ ಈ ಸಂಸ್ಥೆಯಲ್ಲಿ ಕೆಲಸಮಾಡುವ ಕೆಲವರು ನಿರುದ್ಯೋಗಿಗಳಾಗಿರುತಿದ್ದರೆ ಕಿಸೆ ಕಳ್ಳರೂ, ಜಾತೀ ಕಲಹ ಪ್ರೇರಕರೂ ಆಗಿರುತಿದ್ದು ಅಪಾಯಕಾರಿಗಳಾಗುತಿದ್ದರು" ಎಂದು ತಿಳಿಸಿದರು. ದೇಶದಲ್ಲಿನ ಕಿಸೆಕಳ್ಳ ಕಸಬಿನವರು ಸನ್ಮಾನ್ಯ ಉದ್ಯೋಗಕ್ಕಾಗಿ ಯುದ್ಧ ಮುಖದ ಆಶ್ರಯಪಡೆಯಬೇಕೇ?

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾಗಬೇಕಾದರೆ ಪ್ರತಿದಿನ ರಾತ್ರೆ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರನ್ನಾಗಿ ಮಾಡುವುದು.

BILE BEANS

ರಷ್ಯನ್ ಮಾದರಿಗಿಂತಲೂ ಉತ್ತಮ

ಬೊಂಬ್ಯಾ ಮತ್ತು ಗಾಂಧೀ ಯೋಜನೆಗಳು

ಕೈಗಾರಿಕೆ ಮುಖಂಡರ ಸ್ಪಷ್ಟೀಕರಣ

ಆದರೆ ರಾಷ್ಟ್ರೀಯ ಸರಕಾರ ಅತ್ಯಾವಶ್ಯಕ

ಭಾರತದಲ್ಲಿನ ಶ್ರೀಮಂತ ಬಂಡವಾಳಗಾರರೂ, ದೊಡ್ಡ ದೊಡ್ಡ ಕೈಗಾರಿಕೆ ಸಂಸ್ಥೆಗಳ ಒಡೆಯರೂ ಆಗಿರುವ ಟಾಟಾ, ಬಿರ್ಲಾ, ಪುರುಷೋತ್ತಮದಾಸ್, ಠಾಕೂರ್‌ದಾಸ್, ಡಾ। ಜಾನ್ ಮಥ್ಯಾ, ಎ. ಡಿ. ಶ್ರೋಫ್ ಮುಂತಾದವರು ಸೇರಿ ಭಾರತ ಜನತೆಯ ದರಿದ್ರತೆಯನ್ನು ಹೋಗಲಾಡಿಸಿ ಅವನ ಜೀವನ ಮಟ್ಟವನ್ನು ಹೆಚ್ಚಿಸುವಂತಹ ಒಂದು ಹದಿನೈದು ವರ್ಷದ ಕೈಗಾರಿಗೆ ಯೋಜನೆಯನ್ನು ತಯಾರಿಸಿರುವುದು ಆಗಲೇ ಪ್ರಕಟವಾದ ವಿಷಯ. ಸುಮಾರು 12 ಸಾವಿರ ಕೋಟಿಯ ಬಂಡವಾಳವನ್ನು ಎಲ್ಲಾ ತರದ ಕೈಗಾರಿಕೆಗಳ ಮೇಲೆ ವ್ಯಯಿಸಿ ನಮ್ಮ ದೇಶದಲ್ಲಿ ಪ್ರತಿಯೊಂದು ದಿನನಿತ್ಯ ಉಪಯೋಗದ ವಸ್ತುಗಳನ್ನೂ ಯಂತ್ರೋಪಕರಣ, ಮೋಟಾರು ರೈಲು, ವಿಮಾನ ವಾಹನಗಳನ್ನು ತಯಾರಿಸುವುದರ ಮೂಲಕ ಭಾರತೀಯರು ಹೊರದೇಶಗಳ ಮೇಲೆ ಹೊಂದಿಕೊಂಡಿರದಂತೆ ಮಾಡುವುದೇ ಈ ಕೈಗಾರಿಕೆ ಪ್ರಭೃತಿಗಳ ಪ್ರಾಮುಖ್ಯ ಉದ್ದೇಶ.

ಇದೇ ರೀತಿ ಗಾಂಧೀವಾದಿಗಳಾದ ಪ್ರೊಫೆಸರ್ ನಾರಾಯಣ ಅಗರ್‌ವಾಲರು ಗಾಂಧೀ ತತ್ವ ತಳಹದಿಯ ಮೇಲೆ ಆಧರಿಸಿರುವ ಒಂದು ಯೋಜನೆಯನ್ನು ತಯಾರಿಸಿರುವರು. ಬೊಂಬೈ ಯೋಜನೆಯು ಕೈಗಾರಿಕೆಗಳ ಮೂಲಕ ಕೃಷಿ ಉದ್ಯಮಸ್ಥರನ್ನು ಉದ್ಧರಿಸುವಂತಹದ್ದು. ಆದರೆ ಗಾಂಧೀ ಯೋಜನೆಯಲ್ಲಿ ಕೃಷಿ ವ್ಯವಸಾಯಿಗಳ ಶ್ರೇಯಸ್ಸಿಗೇ ಪ್ರಾಧಾನ್ಯ ಕೊಡಲಾಗಿದೆ.

ರಷ್ಯಗಿಂತಲೂ ಮಿಗಿಲು.

ಬೊಂಬ್ಯಾ ಯೋಜನೆಗಾರರು ಕೆಲವು ದಿನಗಳ ಹಿಂದೆ ಒಂದು ಪತ್ರಿಕಾ ಪ್ರತಿನಿಧಿಗಳ ಕೂಟದಲ್ಲಿ ತಮ್ಮ ಉದ್ದೇಶಗಳನ್ನು ವಿವರಿಸಿದರು. ಅವುಗಳ ಸಾರಾಂಶ ಇಲ್ಲಿ ಕೆಳಗೆ ಕೊಡಲಾಗಿದೆ:

ಜೆ. ಆರ್. ಡಿ. ಟಾಟಾರವರು ಹೀಗೆ ವಿವರಿಸಿದರು: ನಮ್ಮ ಯೋಜನೆಯಲ್ಲಿ ಅನೇಕ ವಿಹಂಗಮ ಸಮಸ್ಯೆಗಳು ಇರುವುದರಿಂದ ನಾವು ಅವುಗಳೆಲ್ಲದರ ಪರಿಹಾರೋಪಾಯಗಳನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿಯೇ ಮುಂದರಿಯಬೇಕಾಗಿದೆ. ಪ್ರತಿಯೊಬ್ಬನಿಗೂ ಆದಷ್ಟು ಹೆಚ್ಚು ಜೀವನದ ಅನುಕೂಲತೆ ಕಲ್ಪಿಸಿರುವಂತೆ ಮಾಡುವುದೇ ನಮ್ಮ ಗುರಿ. ಶ್ರೀಮಂತರನ್ನು ಹೆಚ್ಚು ಸಿರಿವಂತರಾಗಿ ಮಾಡುವುದು, ದೀನರನ್ನು ಹೆಚ್ಚು ದರಿದ್ರರನ್ನಾಗಿ ಮಾಡುವುದು ನಮ್ಮ ಗುರಿ ಅಲ್ಲವೇ ಅಲ್ಲ. ಬಂಡವಾಳಶಾಹಿಯ ಒಳಿತು ಕೆಡುಕುಗಳನ್ನು ನಮ್ಮ ಯೋಜನೆಗಾರರು ಸಂಪೂರ್ಣವಾಗಿ ಪರ್ಯಾಲೋಚಿಸಿರುವರು. ನಾವು ಮಧ್ಯಮಾರ್ಗವನ್ನೇ ಅನುಸರಿಸಿದ್ದೇವೆ. ಇದರಿಂದ ಜನತೆಯು ಸಂಕಷ್ಟಗೊಳಗಾಗದಂತೆ, ಶ್ರಮವು ವ್ಯರ್ಥವಾಗದಂತೆ, ಬಂಡವಾಳವು ವ್ರತಾಹಾಳಾಗದಂತೆ, ಯಾವ ಅವ್ಯವಸ್ಥೆ ಗಲಾಟೆಗಳೂ ಉಂಟಾಗದಂತೆ ನಾವು ಕಾರ್ಯಸಾಧಿಸಲೆಳಸುವೆವು. ರಷ್ಯದಲ್ಲಿ ಈ ತರದ ಪಂಚವಾರ್ಷಿಕ ಯೋಜನೆಯು ಜಾರಿಗೆ ತಂದಾಗ ಉಂಟಾದ ಸಂಕಷ್ಟಗಳನ್ನು ನಾವು ಮನಸ್ಸಿನಲ್ಲಿಟ್ಟು ನಮ್ಮ ಯೋಜನೆಯಲ್ಲಿ ಅಂತಹವುಗಳು ಬಾರದಂತೆ ನೋಡಿಕೊಂಡಿದ್ದೇವೆ.

ಸರ್. ಪುರುಷೋತ್ತಮದಾಸ್‌ರು ಹೀಗೆಂದರು: ನಾವೆಲ್ಲರೂ ಕೈಗಾರಿಕೆ ಮುಖಂಡರಿರುವೆವಾದರೂ ಭಾರತದ ಆರ್ಥಿಕ ಅಭಿವೃದ್ಧಿ ಶ್ರೇಯಸ್ಸುಗಳನ್ನೇ ನಮ್ಮ ಧ್ಯೇಯವಾಗಿಟ್ಟುಕೊಂಡು ನಾವು ಈ ಯೋಜನೆ ತಯಾರಿಸಿದ್ದೇವೆ. ಕಾರಣ ಎಲ್ಲರಂತೆ ನಾವೂ ಈ ದೇಶದ ಉಪ್ಪು ತಿನ್ನುವವರು. ನಮ್ಮ ದೇಶದಲ್ಲಿ ನಿಜವಾದ ಮತ್ತು ಸಂಪೂರ್ಣವಾದ ಮತ್ತು ಜನಪ್ರಿಯವಾದ ರಾಷ್ಟ್ರೀಯ ಸರಕಾರ ಸ್ಥಾಪನೆಯಾದರೆ ನಮ್ಮ ಯೋಜನೆಯು ಯಶಸ್ವಿಯಾಗಿ ಸಾಗಲಿಕ್ಕೆ ಯಾವ ಅಭ್ಯಂತರವಿರಲಾರದು.

ಗಾಂಧಿ ಯೋಜನೆಯನ್ನು ತುಲನಾತ್ಮಕವಾಗಿ ವಿಮರ್ಶಿಸುತ್ತಾ ಡಾ. ಜೋನ್ ಮಥ್ಯಾ ಅವರು ಹೀಗೆಂದರು: ಗಾಂಧೀ ಯೋಜನೆ ಪ್ರಕಾರ ದುಡಿಮೆಯ ನೆಲಗಟ್ಟು ಕೃಷಿ ಪ್ರಧಾನವಾಗಿರಬೇಕೆಂದಿದೆ. ಆದರೆ ಬೊಂಬ್ಯಾ ಯೋಜನೆಗಾರರು ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಕೃಷಿಕೈಗಾರಿಕೆಯನ್ನು ಪುನರ್ರಚಿಸಲಿಚ್ಛಿಸುತ್ತಾರೆ. ಕೈಗಾರಿಕೆಗಳು ಸ್ಥಾಪಿತವಾದರೆ ಭೂವ್ಯವಸಾಯದ ಮೇಲೆ ಮಿತಿಮೀರಿ ಹೊಂದಿಕೊಂಡಿರುವ ಜನಸಂಖ್ಯೆಯು ಕಡಿಮೆಯಾಗುತ್ತದೆ; ನಮ್ಮ ದೇಶದ ಕಚ್ಚಾ ಪದಾರ್ಥಗಳಿಗೆ ಸರಿಯಾದ ಬೆಲೆಯೂ ಯೋಗ್ಯ ಉಪಯೋಗವೂ ಆದಂತಾಗುತ್ತದೆ; ಅತೀ ಹೆಚ್ಚು ಪ್ರಮಾಣದಲ್ಲಿ ದಿನನಿತ್ಯದ ವಸ್ತುಗಳನ್ನು ತಯಾರಿಸುವುದರಿಂದ ಜೀವನವೆಚ್ಚವು ಕಡಿಮೆಯಾಗುತ್ತದೆ; ಮತ್ತು ಕೊನೆಯದಾಗಿ ಎಲ್ಲಾ ತರದ ರಾಜಕೀಯ ಪ್ರಗತಿಗೆ ಸಹಾಯಕವಾದ ಸುವ್ಯವಸ್ಥೆ ಶಿಸ್ತುಗಳ ವಾತಾವರಣವುಂಟಾಗುತ್ತದೆ. ಈ ನಾಲ್ಕು ಅನುಕೂಲತೆಗಳು ಒಟ್ಟುಗೂಡುವುದರಿಂದ ಸಹಜವಾಗಿ ದೇಶದಲ್ಲಿ ನೆಲ್ಮೆಯು ಸ್ಥಿರವಾಗುವುದು.

ದೇಶೋಭಿವೃದ್ಧಿಯಲ್ಲಿ ಸ್ತ್ರೀಯರ ಸ್ಥಾನ

ಈ ವಿಷಯದ ಕುರಿತು ಡಾ. ಮಥ್ಯಾಯವರ ಅಭಿಪ್ರಾಯ: ಬೊಂಬ್ಯಾ ಯೋಜನೆಯಲ್ಲಿ ಸ್ತ್ರೀ ದುಡಿಮೆಗಾರರಿಗೆ ಗಮನಕೊಟ್ಟಿಲ್ಲ. ಕಾರಣ ಸಮಾಜದಲ್ಲಿ ನಮ್ಮ ದೇಶದ ಸ್ತ್ರೀಯರ ಸ್ಥಾನವು ತಮ್ಮ ತಮ್ಮ ಗೃಹಗಳಲ್ಲೇ ಹೆಚ್ಚು ಪ್ರಾಧಾನ್ಯದ್ದಿರುತ್ತದೆ.

ಕೈಗಾರಿಯ ಮತ್ತು ಕೃಷಿ ಮಜೂರರ ಆದಾಯದಲ್ಲಿ ಯಾವಾಗಲೂ, ಯಾವ ಯೋಜನೆ ಪ್ರಕಾರವಾದರೂ, ವ್ಯತ್ಯಾಸ ಇದ್ದೇ ಇರಬೇಕಾಗುತ್ತದೆ. ಯಾಂತ್ರೀಕರಣದ ದೆಸೆಯಿಂದ ಕೈಗಾರಿಕೆ ಕೆಲಸಗಾರನ ತಯಾರಿಕೆಗಳು ಕೃಷಿ ಕೆಲಸಗಾರನ ಉತ್ಪತ್ತಿವಸ್ತುಗಳಿಗಿಂತ ಹೆಚ್ಚಾಗಿರುವುದರಿಂದ ಅವನ ಆದಾಯವೂ ಹೆಚ್ಚಾಗಿರಬೇಕಾಗುತ್ತದೆ. ಇದರಿಂದ ಒಂದು ಸಮಾನ ಮಟ್ಟದ ಮಜೂರಿಯನ್ನು ನಿಷ್ಕರ್ಷಿಸುವುದು ಸ್ವಲ್ಪ ಕಷ್ಟದ ಕೆಲಸ. ಆದರೂ ಕೈಗಾರಿಕೆ ಉದ್ಯಮವನ್ನು ನಿರ್ದಿಷ್ಟ ಪ್ರದೇಶಗಳಲ್ಲಿ ಹಂಚಿ ಸ್ಥಾಪಿಸುವುದರಿಂದ ಈ ತೊಂದರೆಗಳನ್ನು ಸುಧಾರಿಸಬಹುದು

ರಷ್ಯದ ತಪ್ಪನ್ನು ಭಾರತದಲ್ಲಿಯೂ ಮಾಡಬಾರದು. ಅಲ್ಲಿ ಎಲ್ಲಾ ತರದ ಕೆಲಸಗಳಿಗೂ ಮಜೂರಿಯನ್ನು ಸಮಾನಮಟ್ಟಕ್ಕೆ ತಂದು ನಿಲ್ಲಿಸಲಾಗಿದೆ. ಆದರೆ ಬುದ್ಧಿ ಸಾಮರ್ಥ್ಯದ ವ್ಯಕ್ತಿಗಳಿಗೆ, ಸಂಶೋಧಕ ಬುದ್ಧಿ ಚತುರರಿಗೆ ಉತ್ತೇಜನ, ಕ್ರಿಯಾತ್ಮಕವಾದ ಸಹಾಯವನ್ನು ಕೊಡುವುದುತ್ತಮ.

ಬೊಂಬ್ಯಾ ಯೋಜನೆಯು ಪ್ರಥಮ ಭಾಗದಲ್ಲಿ ಕೈಗಾರಿಕೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ. ಆದರೆ ಅದರ ಎರಡನೇ ಭಾಗವನ್ನು ಭೂವ್ಯವಸಾಯದ ಸಮಸ್ಯೆಗಳನ್ನು ನೀಗುವುದಕ್ಕೇ ಮೀಸಲಾಗಿರಿಸಿದೆ ಎಂದು ಟಾಟಾ ಅವರು ತಿಳಿಸಿದರು.

ಎಂ. ಎನ್. ರಾಯರ ಟೀಕೆ

ರಷ್ಯನ್ ಯೋಜನೆಗಳ ತುಂಬಾ ಅನುಭವವಿರುವ ಶ್ರೀ. ಎಂ. ಎನ್. ರಾಯರು 'ಬೊಂಬ್ಯಾ ಯೋಜನೆಯು ಬೂದಿಮುಚ್ಚಿದ ಬಂಡವಾಳ ಶಾಹಿತ್ವ'ವೆಂದು ಟೀಕಿಸಿರುವರು. ಅದರ ಎರಡನೇ ಭಾಗದಲ್ಲಿ ಉತ್ಪತ್ತಿ ಹಂಚೋಣದ ಕುರಿತು ಯಾವ ಏರ್ಪಾಡೂ ಮಾಡಲಿಲ್ಲವೆಂದು ಹೇಳಿರುವರು. ಸ್ಥಾಪಿಸಲ್ಪಡುವ ಈ ಕೈಗಾರಿಕೆ ಸಂಸ್ಥೆಗಳು ಹೆಚ್ಚಾಗಿ ಕೆಲವೇ ಜನರ ಸ್ವಂತದವುಗಳಾಗಿರುವುದರಿಂದ ಜನತೆಯು ಈ ದರಿದ್ರತೆಯ ನಡುವಿನಲ್ಲಿ ಈ ಯೋಜನೆಯು ಯಶಸ್ವಿಯಾಗಲಾರದೆಂದು ಅವರ ಅಭಿಪ್ರಾಯ. ತಯಾರಿಸಿದ ವಸ್ತುಗಳ ಮಾರಾಟದ ವ್ಯವಸ್ಥೆ ಏನು, ಎಂಬುದರ ಕುರಿತು ಬೊಂಬ್ಯಾ ಯೋಜನೆಯಲ್ಲಿ ಹೇಳಲ್ಪಟ್ಟಿಲ್ಲವೆಂದೇ ಅವರ ಆಕ್ಷೇಪ. ಶ್ರೀಯುತ್ ರಾಯ್ ಅವರ ಅಭಿಪ್ರಾಯದಲ್ಲಿ ಸರ್ವತೋಮುಖ ಸಮತಾವಾದವೇ ನಮ್ಮ ದೇಶ ಅಭಿವೃದ್ಧಿಗೆ ಒಳ್ಳೆ ಮಾರ್ಗವೆಂದಿದೆ.

TIMES HAVE CHANGED!



ಎಂಕರ್ ಎಸ್ಕೇಪ್‌ಮೆಂಟ್ ಎಂಬೀ ಸೂಕ್ಷ್ಮ ಉಪಕರಣವನ್ನು ಥೋಮಸ್ ಮಡ್ಜ್ ಎಂಬಾತನು ಕಂಡುಹಿಡಿದನು. ೧೯ನೇ ಶತಮಾನದಲ್ಲಿ ಇದನ್ನು ಗಡಿಯಾರಗಳಲ್ಲಿ ಉಪಯೋಗಿಸಲಾಗಿದೆ.

ಕಾಲ ಬದಲಿಸಿದೆ

ಗಡಿಯಾರದಲ್ಲಿ ಉಪಯೋಗಿಸಲ್ಪಡುವ ಉಪಕರಣಗಳಲ್ಲಿ ಚಿತ್ರದಲ್ಲಿ ಕಾಣಿಸಿರುವ ಎಸ್ಕೇಪ್‌ಮೆಂಟ್ ಎಂಕರ್ ಎಂಬುದು ಇತರ ಎಲ್ಲವುಗಳಿಗಿಂತ ಸರಿಯಾದ ಸಮಯ ತೋರಿಸಲು ಸಹಾಯವಾಗುತ್ತದೆ. ಪರಿಪೂರ್ಣ ಗಡಿಯಾರಗಳಲ್ಲಿ ವಿಚಿತ್ರವಾದ ಅನೇಕ ನವೀನ ಯಂತ್ರ ಭಾಗಗಳಿವೆ. ವೆಸ್ಟ್ ಎಂಡ್ ವಾಚುಗಳಲ್ಲಿ ಇವೆಲ್ಲವನ್ನೂ ಅತ್ಯಮೋಘ ರೀತಿಯಲ್ಲಿ ಜೋಡಿಸಲಾಗಿದೆ.

ಸೆಕುಂಡಸ್ ಪೊಕೆಟ್
15 ಜುವೆಲುಗಳದ್ದು
ನಿಕ್ಕಲ್ ಸಿಲ್ವರ್ ತೆರೆದ ಮುಖಭಾಗ ರೋಮನ್ ಇಲ್ಲವೆ ಆರೆಬಿಕ್ ಅಂಕೆಗಳು—ರೂ. 80.

ಅಕೃತದ ತಲ್ಪೋಣದಿಂದ ಜಾಹೀರಾತಿನ ಎಲ್ಲಾ ನಮೂನೆಗಳನ್ನು ಒದಗಿಸಲಾಗದಿದ್ದರೂ ಸಾಧ್ಯವಿರುವಷ್ಟು "ಆರ್ಡರ್" ಪೂರೈಸಲಾಗುವುದು. ಕಾಗದ ನಿರ್ಬಂಧದಿಂದ ಕೆಟಲಾಗನ್ನು ಕಳುಹಿಸಲಾಗದೆಂದು ವಿಷಾದ.

WEST END WATCH Co
Bombay & Calcutta

ದ. ಕ. ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

O. P. 139/44

ಅರ್ನೆಸ್ಟ್ ಜೋನ್ ಅರ್ನೋನೆ—

ಅರ್ಜಿದಾರ.

ಈ ಮೂಲಕ ಸರ್ವರಿಗೂ ತಿಳಿಸುವದೇನೆಂದ್ರೆ:—

ಮಂಗಳೂರು ಶಹರು ಮಿಶ್ಯನ್ ಸ್ಟ್ರೀಟಿನ ಬಳಿಯಲ್ಲಿರುತಿದ್ದ ಪೀಟರ್ ಮಾರ್ಕ್ ಅರ್ನೋನೆ ಎಂಬವರು 1926ನೇ ಯಿಸ್ವಿ ಎಪ್ರೀಲ್ ತಿಂಗಳಿನಲ್ಲಿ ಮೃತಪಟ್ಟಿರುತ್ತಾರೆ. ಮೇಲ್ಕಾಣಿಸಿದ ಅರ್ಜಿದಾರನು ಸದ್ರಿ ಮೃತನ ದತ್ತ ಪುತ್ರನಾಗಿರುವುದರಿಂದ ಮೃತನು "The Bombay assurance" ಕಂಪೆನಿಯಲ್ಲಿ ಒಂದು ಶಾರು ಹೋಲ್ಡರನಾಗಿರುವದರಿಂದ ಈ ಅರ್ಜಿದಾರನು ತನಗೆ ಆ ಬಾಬ್ತು Succession certificate ಕೊಡಬೇಕೆಂತ ವಗೈರೆ ಅರ್ಜಿ ಕೊಟ್ಟಿರುವದರಿಂದ ಸದ್ರಿ ಅರ್ಜಿಯು ತಾ. 21-2-45ನೇ ಬೆಳಿಗ್ಗೆ ಗಂಟೆ 10-30ಕ್ಕೆ ಮೆಲ್ಕಂಡ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತಾರೆ. ಈ ಸಂಮಂಧ ಆಕ್ಷೇಪವುಳ್ಳವರು ಆ ದಿವಸ ತಾವುಸ್ವತಹವಾಗಲೀ ವ, ವಕಾಲತು ಮುಕಾಂತ್ರವಾಗಲೀ ತಕ್ಕದ್ದಾದ ಉದಾಹರಣೆಯನ್ನು ಕೊಡತಕ್ಕದ್ದು ಇಲ್ಲವಾದರೆ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

K. Gopal Rao.
Advocate for petitioner.
ಮಂಗಳೂರು. 18-2-45

ಕೆಲವು ನೋಟಗಳು

ಜರ್ಮನ್ ಸರ್ವಾಧಿಕಾರಿ ಹಿಟ್ಲರನ ಹುಟ್ಟೂರು ಆಸ್ಟ್ರಿಯಾ, ಪೋಲೆಂಡಿನ ಜನಕನಾದ ಗತಿಸಿದ ಸಿಲ್‌ಸೂಡ್ಸ್ಕಿಯ, ಹುಟ್ಟೂರು ಲಿಥುವೆನಿಯಾ. ಟರ್ಕಿಯನ್ನು ಪ್ರಕಾಶಕ್ಕೆ ತಂದ ಕೆಮಾಲ್ ಅಟಾಟರ್ಕನ ಹುಟ್ಟೂರು ಗ್ರೀಸಿನ ಸೋಲನಿಕಾ, ಆಸ್ಟ್ರಿಯಾವು ಹಿಟ್ಲರನಿಂದ ನುಂಗಲ್ಪಟ್ಟ ಸಮಯದಲ್ಲಿ ಅಲ್ಲಿನ ಸರ್ವಾಧಿಕಾರ ಗದ್ದುಗೆಯಲ್ಲಿದ್ದ ಡಾ. ಶೂಸ್‌ನಿಗ್ಗರ ಹುಟ್ಟೂರು ಇಟಲಿಯ ರೀವಾ, ಹಾಗೆನೆ ಡಿ'ವೆಲೆರರು ಆಯರ್ಲೆಂಡಿನವರಲ್ಲ! ಜನನ, ಅಮೆರಿಕಾದ ನ್ಯೂಯೊರ್ಕಿನಲ್ಲಿ, ತಂದೆ ಸ್ಪೆನಿಶ್, ತಾಯಿ ಐರಿಶ್.

* * *

ಕೆಮಾಲನು ಟರ್ಕಿಯ ಜೀವನವನ್ನು ಸುಧಾರಿಸಿದ ಕುರಿತು ಕಥೆಯೊಂದು ಹೀಗಿದೆ:

ಅಟಾಟರ್ಕನ ಆರೋಗ್ಯವು ಸದಾ ನೆಟ್ಟಗಿರಲಿಲ್ಲ. ಆತನು ಮದ್ಯವನ್ನು ಅತಿರೇಖವಾಗಿ ಸೇವಿಸುತ್ತಿದ್ದನು. ಈ ಕಾರಣಗಳಿಂದ ಆತನ ದೇಹದೊಳಗೆ ಆಗಾಗ್ಯೆ ಕಠಿಣ ವೇದನಾತರಂಗಗಳು ಹೊರಡುತ್ತಿದ್ದವು. ಆಗ ಆತನು ಅತ್ಯಂತ ಆವೇಶಿತನಾಗುತ್ತಿದ್ದನು. ವೇದನೆಯ ಆವೇಶದಲ್ಲಿದ್ದಾಗಲೆಲ್ಲಾ ಟರ್ಕಿಯ ಸುಧಾರಣೆಯ ಕುರಿತು ಆತನು ಅತ್ಯಂತ ಆಸಕ್ತನಾಗಿ ಆ ಕೂಡಲೆ ಆಜ್ಞೆಗಳನ್ನು ಹೊರಡಿಸುತ್ತಿದ್ದನಂತೆ. ಪ್ರಾಚ್ಯ ಸಂಸ್ಕೃತಿಯ ಒತ್ತಾಯಕ್ಕೆ ಒಳಗಾಗಿ ಅಂಥ ಶ್ರದ್ಧೆಯಿಂದ ಹಿಂದೆ ಬಿದ್ದಿದ್ದ ಟರ್ಕಿಗೆ ಆತನು ಹೊಸ ಹುರುಪನ್ನು ಕೊಡಿಸಿದ್ದನು. ಟರ್ಕಿಯು ಯುರೋಪದ ಇತರ ಆಧುನಿಕ ರಾಷ್ಟ್ರಗಳ ಜೀವನ ತರದ ಜೀವನವನ್ನು ಪಡೆಯುವಂತೆ, ಯಶಸ್ವಿ ತರದಲ್ಲಿ ಸಾಧಿಸಿ ಬಿಟ್ಟನು. ಸಂಕಟಕ್ಕೆ ಒಳ್ಳೆ ಪ್ರತಿಫಲ. ಸುಧಾರಣೆಗಳು ಯಾವಾಗಲೂ ಹೊರಡುವುದು ಸಂಕಟಗಳಿಂದಲೆ.

ಎಡಕ್ಕೂ ಬಲಕ್ಕೂ ವಾಲದೆ ಟರ್ಕಿಯ ಅಭ್ಯುದಯವನ್ನೆ ಗುರಿಯಾಗಿಟ್ಟು ನೇರಾಗಿ ನಡೆದುಬಿಟ್ಟವನು, ಅಟಾಟರ್ಕನು. ಈ ವಿಚಾರದಲ್ಲಿ ಆತನು ಹಿಟ್ಲರ್ ಮುಸಲೇನಿಯನ್ನು ಹಿಮ್ಮೆಟ್ಟಿಸಿಬಿಟ್ಟಿದ್ದನು.

* * *

ಬಲ್ಗೆರಿಯಾ ಬೊರಿಸ್ಸರು–ಸರಳ ಚಕ್ರವರ್ತಿಯರು, ಪ್ರಜಾವರ್ಗದಿಂದ ಪ್ರೀತರು. ಅವರು ಐಶ್ವರ್ಯವಂತರಲ್ಲ. ರಾಜಠೀವಿಗಳಲ್ಲಿ ಅನಾಸಕ್ತರು. ಬಡ ಬಲ್ಗೆರಿಯಾಕ್ಕೆ ಬೊರಿಸ್ಸರು ಚಕ್ರವರ್ತಿಗಳು.

ನಮ್ಮ ಹಳ್ಳಿಗರು ಅತಿ ದೂರಕ್ಕೆ ನಡೆದು ಹೋಗುತಿದ್ದಾಗ, ಪಾದರಕ್ಷೆಗಳನ್ನು ಅವು ಸವೆದು ಹೋಗದಂತೆ, ಕೈಯಲ್ಲಿ ಹಿಡಿದು ನಡೆಯುವ ರೂಢಿಯಿರುವುದಷ್ಟೆ. ಇದೆ ತರದ ರೂಢಿಯು ಬಲ್ಗೆರಿಯಾದ ಹಳ್ಳಿಗರಲ್ಲೂ ಇರುವುದು.

ಬಲ್ಗರರು ಬಡವರಾದರೂ ಅವರ ನೈತಿಕ ಮಟ್ಟವು ಬಹಳ ಮೇಲಕ್ಕೆಯಿದೆ. ಅವರು ಪ್ರಾಮಾಣಿಕತನದಿಂದ ವರ್ತಿಸುವವರು, ಶುದ್ಧಾಚಾರಿಗಳೂ ಆಗಿರುವರು. ಬಾಲ್ಕನ್ ಪ್ರದೇಶದಲ್ಲಿ ಅವರನ್ನು ಅತ್ಯುತ್ತಮ ಜನರೆಂದು ಕರೆಯಬಹುದು.

ಬಲ್ಗೆರಿಯಾದ ಸರಕಾರಿ ಹುದ್ದೆದಾರರಿಗೆ ದೊರಕುತ್ತಿರುವ ಮಾಸಿಕ ತಲಬುಗಳು ಈ ಕೆಳಗಿನಂತಿವೆ.

ಪ್ರಧಾನ ಮಂತ್ರಿ ರೂ. ೬೦೦, ವಿಶ್ವವಿದ್ಯಾಲಯದ ಮುಖ್ಯಾಧಿಕಾರಿಗಳಿಗೆ ರೂ. ೨೫೫, ಪ್ರೊಫೆಸರರಿಗೆ ೨೫೦; ನ್ಯಾಯಾಧೀಶರಿಗೆ ರೂ. ೯೦ರಿಂದ ೧೫೦ರ ವರೆಗೆ; ಸೇನಾನಿಗಳಿಗೆ ರೂ. ೨೨೫, ಪೋಲಿಸ್ ರೂ. ೪೦; ಧರ್ಮಗುರುಗಳು ಬಿಶೋಪರು ರೂ. ೩೦೦; ಉಪಾಧ್ಯಾಯರಿಗೆ ರೂ. ೧೦೫ (ನಮ್ಮಲ್ಲಿ ಎಲ್. ಟಿ. ಗಳಿಗೆ ಸದ್ಯ ರೂ. ೧೦೦ ದೊರಕುತ್ತಿದೆ.)

ಅಲ್ಲಿ ಭಕ್ಷೀಸ್ ಕ್ರಮವಿಲ್ಲ; ಲಂಚದ ಸುಳಿವಿಲ್ಲ.

* * *

ದೂರ ಪೂರ್ವದ ಹಿಂದೂದೇಶ ಮತ್ತಿತರ ತಮ್ಮ ಅಧೀನ ದೇಶಗಳಿಗೆ ದಾರಿಯನ್ನು ಸುರಕ್ಷಿತವಾಗಿರಿಸಲು ಬ್ರಿಟನು ೧೭೮೮ರಿಂದ ೧೯೨೫ ವರೆಗೆ ೨೦ ಸಮರಗಳನ್ನು ನಡೆಯಿಸಿದೆ.

ಬ್ರಿಟನಿನ ಸರ್ವೈಶ್ವರ್ಯದ ಶೇಕಡಾ ೬೪, ದೇಶದ ಜನಸಂಖ್ಯೆಯ ಶೇಕಡಾ ೨, ಆಗಿರುವರ ಶ್ರೀಮಂತರ ಕೈಗಳಲ್ಲಿದೆ. ಈ ವರ್ಗವೆ ಸಾಮ್ರಾಜ್ಯದ ಆಡಳಿತವನು ನಿರ್ವಹಿಸುತ್ತಿದೆ. ಈ ಆಡಳಿತದಲ್ಲಿ ಅವರ ಅಧಿಕಾರವು ಅತಿ ಭದ್ರವಾಗಿ ಬೇರೂರಿಬಿಟ್ಟಿದೆ. (೧೯೩೬)

ಬ್ರಿಟಿಷ್ ಪಾರ್ಲಿಮೆಂಟಿನ ಕೊಮನ್ಸ ಸಭೆಯ ಸದಸ್ಯತನದಲ್ಲಿ ಹೆಚ್ಚಿನವರು ಶ್ರೀಮಂತವರ್ಗದವರು. ೧೯೩೮ರಲ್ಲಿ ಕೊಮನ್ಸಿನ ೧೮೦ ಸದಸ್ಯರು ಬ್ರಿಟನಿನ ೬೫೦ ಕಂಪೆನಿಗಳಲ್ಲಿ ಡ್ಯಾರೆಕ್ಟರರಾಗಿದ್ದರು. ಒಬ್ಬನು ೩೪ ಕಂಪೆನಿಗಳಲ್ಲಿ ಡ್ಯಾರೆಕ್ಟರನಾಗಿದ್ದನು.

* * *

ಈ ಯುದ್ಧದ ಮೊದಲು, ಇಂಗ್ಲಾಂಡಿನ ಸ್ಥಿತಿಯು ಹೀಗಿತ್ತು:

ಇಂಗ್ಲಾಂಡು ಅತಿ ದೊಡ್ಡ ವ್ಯಾಪಾರಿ ರಾಷ್ಟ್ರವಾಗಿದ್ದರೂ, ಅತಿ ಶ್ರೀಮಂತ ರಾಷ್ಟ್ರವಾಗಿದ್ದರೂ, ದೊಡ್ಡ ಸಾಮ್ರಾಜ್ಯವನ್ನು ಕಟ್ಟಿಕೊಂಡ ರಾಷ್ಟ್ರವಾಗಿದ್ದರೂ, ಶ್ರೀಮಂತರ ಸುತ್ತಲೂ ಭೀಕರ ಬಡತನವು ಆವರಿಸಿಕೊಂಡಿತ್ತು. ಆದರೂ ಕೆಲಸಗಾರರ ಕ್ರಾಂತಿಯು ಅಲ್ಲಿ ನಡೆಯಲಿಲ್ಲ. ಬಡವರು ಬಹಳ ಸಹನೆಯಿಂದ ವರ್ತಿಸುತ್ತಿದ್ದರು. ನಿರುದ್ಯೋಗವು ಬಗೆಹರಿಸಲ್ಪಡದ ಸಮಸ್ಯೆಯಾಗಿತ್ತು. ಆದರೂ ಅದನ್ನು ನೀಗಿಸಿಕೊಳ್ಳಲು ಯತ್ನಗಳು ಅಲ್ಲಿ ನಡೆಯಲಿಲ್ಲ. ಕಾರಣ ಸರಕಾರವು ಹಸಿವೆಯ ಹಬ್ಬುಲಿಯನ್ನು ಅಂಕಿತದಲ್ಲಿಡಲು ವಾರ ಒಂದಕ್ಕೆ ೨೦೦,೦೦೦ ಪವನುಗಳ ನಿಧಿಯನ್ನು ನಿರುದ್ಯೋಗಿಗಳ ಪೋಷಣೆಗಾಗಿ ವ್ಯಯಿಸುತಿತ್ತು. ಹಸಿವಿಗೆ ಲಂಚಕೊಟ್ಟು ದಿನಕಳೆಯುವುದು ಟೋರಿ ಸರಕಾರದ ಧೋರಣೆಯಾಗಿತ್ತು.

'ಸಿವಿಲ್ ಸರ್ವಿಸ್' ಬ್ರಿಟನಿನ ಜೀವಾಳವು. ಅದು ಬೆಳಕಿಗೆ ಕಾಣಿಸಿಕೊಳ್ಳದಿದ್ದರೂ ಸರಕಾರ ಆಡಳಿತಕ್ಕೆ ಸಂಬಂಧಪಟ್ಟ ಸಕಲ ವಿಚಾರಗಳಲ್ಲೂ ಅದರ ಪ್ರಭಾವವುಯಿಲ್ಲದೆ ಇಲ್ಲ. ಸರಕಾರದ ಸೂತ್ರಧಾರಿಯೆನ್ನಬಹುದು ಈ ವರ್ಗವನ್ನು. ಯಾವತ್ತೂ ಮಂತ್ರಿಮಂಡಳಗಳೂ, ಬರಲಿ, ಹೋಗಲಿ, ಈ ವರ್ಗವು ಒಂದಿಷ್ಟು ಅಲುಗಾಡದು. ಕೌತುಕದ ಸಂಗತಿಯೆಂದರೆ, ಈ ವರ್ಗದಿಂದ ವ್ಯಕ್ತಿಗಳು ನಿವೃತ್ತರಾಗಿ ಹೋಗುತ್ತಿದ್ದರೂ, ಅದರ ಸ್ವಭಾವ ಮಾರ್ಪಡದೆ, ಇದ್ದಂತೆ ಇರುವುದು. ಈ ವರ್ಗದ ಅಧಿಕಾರಿಗಳು ನಿವೃತ್ತರಾಗುವ ಮೊದಲು, ತಮ್ಮನ್ನು ಅನುಸರಿಸುವ ಬರುವವರನ್ನು 'ಸಿವಿಲ್ ಸರ್ವಿಸ್' ಸಾಂಪ್ರದಾಯಕ್ಕೆ ತಕ್ಕುದಾಗಿಯೆ ತರಬೇತುಗೊಳಿಸುವರು. ಜೀವಿಕೋಟಿಯು ಪರಂಪರೆಯಾಗಿ ಹುಟ್ಟಿ ಬೆಳೆದು ಸಾಯುವಂತೆ. ಈ ವರ್ಗದ ರಾಗಕ್ಕನೆ ರಾಜಕೀಯ ರಂಗದ ಎಲ್ಲಾ ಕುಣಿದಾಟಗಳು ನಡೆಯುತ್ತಿದ್ದವು.

ಶ್ರೀಮಂತರು ಸರಕಾರದ ಆಡಳಿತದ ಸೂತ್ರದಲ್ಲಿ ತಮ್ಮ ಅಧಿಕಾರವನ್ನು ಶಾಶ್ವತವಾಗಿ ರಕ್ಷಿಸಿಕೊಳ್ಳುವ ತರದಲ್ಲೆ, ಇಂಗ್ಲಾಂಡಿನ ಶಾಸನ ಸಭೆಗಳ ಚುನಾವಣೆಯ ಕ್ರಮವು ಕಲ್ಪಿಸಲಾಗಿದೆ. ಕೆಲಸಗಾರರ ಮತಗಳು ಅಧಿಕವಾಗಿದ್ದರೂ, ಲೇಬರ್ ಸಂಗಡಕ್ಕೆ ಅಧಿಕಾರಕ್ಕೆ ಬರಲು ಈ ಕ್ರಮಗಳಿಂದ ಆಸ್ಪದ ದೊರಕದು. ಈ ಕ್ರಮದಿಂದಲೆ ಅಲ್ಲಿ ಟೋರಿಗಳೆ ಅಧಿಕಾರದಲ್ಲಿ ನಿರಂತರವಾಗಿ ಬಾಳಿ ಬರುತ್ತಿರುವರು. ಲೇಬರ್ ಸಂಗಡವು ಹೆಸರಿಗೆ ಮಾತ್ರ ಸರಕಾರದ ವಿರೋಧ ಪಕ್ಷವು

ಒಂದು ವೇಳೆ ಸರಕಾರದ ನಡುವಳಿಕೆಯ ಕುರಿತು ಅತೃಪ್ತರಾಗಿ, ಲೇಬರ್ ಧುರೀಣರು ರಾಗಯೆಬ್ಬಿಸಿದರೆ, ತಮ್ಮ 'ನಾಡನಿಲಯ'ಕ್ಕೆ ಬಂದು, ಎರಡು ದಿವಸ ಇದ್ದುಕೊಂಡು ಹೋಗಲು ಲಕ್ಷ್ಮೀ ಪುತ್ರರಿಂದ ಅವರಿಗೆ ಆಮಂತ್ರಣವು ಬರುವುದಿತ್ತು. 'ನಾಡನಿಲಯದ' ಪ್ರಭಾವದಿಂದ ಈ ಧುರೀಣರ ಪರಿವರ್ತನೆಯೂ ನಡೆಯುವುದಿತ್ತು. ಯುದ್ಧೋತ್ತರದಲ್ಲಿ ಈ ರೂಪು ಬದಲಾಗುವುದೇ?

ಶ್ರೀಮಂತವರ್ಗವೆ ಇಂಗ್ಲಾಂಡಿನಲ್ಲಿ ಅಧಿಕಾರದಲ್ಲಿದ್ದರೂ.

ಪ್ರಜಾಸತ್ತಾತ್ಮಕ ಮತ್ತು ಸ್ವಾತಂತ್ರ್ಯ ಕಲ್ಪನೆಗಳಿಗೆ ಅಲ್ಲಿ ಅವಕಾಶವಿದೆ.

ವ್ಯವಹಾರಗಳಲ್ಲಿ ಪ್ರಾಮಾಣಿಕತೆಯನ್ನು ಬೋಧಿಸುವ ಕ್ರಿಕೇಟು ಆಟಕ್ಕೆ ಅಲ್ಲಿ ಒಳ್ಳೆ ಗಣ್ಯ ಸ್ಥಾನವಿದೆ.

ಆಡಳಿತವರ್ಗಕ್ಕೆ ದೇಶದ ಕುಂದುಕೊರತೆಗಳನ್ನು ಎತ್ತಿ ತೋರಿಸುವ ಧರ್ಮಗುರುಗಳಿದ್ದಾರೆ.

ಉದ್ಯಾನವನಗಳನ್ನು ಉಪಯೋಗಿಸಲು ಎಲ್ಲರಿಗೂ ಸಮಾನವಾದ ಹಕ್ಕುಗಳಿವೆ. ಲಂಡನಿನ 'ಹ್ಯಾಡ್ ಪಾರ್ಕ್' ಉದ್ಯಾನವನದಲ್ಲಿ ಯಾರಿಗೂ ಪ್ರವೇಶವಿದೆ.

ತಂದೆಯಿಂದ ಮಗನಿಗೆ ಹೋಗುವ ಸಾಂಪ್ರದಾಯವು ರಾಜಕೀಯದಲ್ಲಿದೆ. ವಿನ್‌ಸ್ಟನ್ ಚರ್ಚಿಲರನ್ನು ಅವರ ಮಗನು ಪಾರ್ಲಿಮೆಂಟಿನಲ್ಲಿ ಅನುಸರಿಸಿ ಬರಬಹುದು. ಯಾಕೆ. ಲೇಬರ್ ನಾಯಕ ಆರ್ಥರ್ ಹೆಂಡರಸನ್ನರನ್ನು ಅವರ ಮಗನು ಅನುಸರಿಸಿ ಪಾರ್ಲಿಮೆಂಟನ್ನು ಸೇರಲು ಅಲ್ಲಿ ಅವಕಾಶವಿದೆ. ಇದೆ ತರದ ಅವಕಾಶವು ಪ್ರತಿಯೋರ್ವ ರಾಜಕೀಯ ಮುತ್ಸದ್ಧಿಗಿದೆ.

ಒಳ್ಳೆ ಪ್ರಗತಿಪರ ಸಾಹಿತ್ಯವನ್ನು ಪ್ರಕಟಿಸುವ ಪ್ರಕಟನಾ ಸಂಸ್ಥೆಗಳು ಅಲ್ಲಿವೆ.

ಪತ್ರಿಕೆಗಳಲ್ಲಿ ಪತ್ರವ್ಯವಹಾರಕ್ಕೆ ಆಸ್ಪದವಿದೆ.

ರಾಜಕೀಯ ಸಮಸ್ಯೆಗಳಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸಬೇಕಾಗಿ ಕೆಂಟರ್ ಬರಿಯ ಆರ್ಚ ಬಿಶೋಪರು ಜನವರ್ಗದೊಡನೆ ಮನವಿ ಮಾಡಿಕೊಳ್ಳುವುದು.

'ಇಂಗ್ಲೀಷು ನ್ಯಾಯ' ಅತ್ಯಂತ ಕಠಿಣವಿದೆ.

ಗೌರವ ಬಿರುದಾವಳಿಗೆ ಲಕ್ಷ್ಯಕೊಡದೆ ತರುಣ ಮಿಲಿಟರಿ ಅಧಿಕಾರಿಗಳು ಇರುವರು. ದೃಷ್ಟಾಂತಕ್ಕೆ ಎಡನ್ನರು, ಕೆಪ್ಟನ್ ಬಿರುದನ್ನು ಪಡೆದಿದ್ದರು, ಅವರು ತಮ್ಮ ಹೆಸರನ್ನು ಮಿಸ್ಟರ್ ಎಂತೋನಿ ಎಡೆನ್ನರೆಂದೆ ಬರೆಯುತ್ತಿದ್ದರು.

ಆದರ್ಶ ಸ್ತ್ರೀ ವ್ಯಕ್ತಿಗಳು.

ಪ್ರೊಫೆಸರ್ ಹೆರಾಲ್ಡ್ ಲಾಸ್ಕಿಯವರಂತ ಉತ್ತಮ ಸಾಮ್ಯವಾದಿಗಳು ಅಲ್ಲಿರುವರು.

ಮರಣ ಸುಂಕ.

ಓಕ್ಸ್‌ಫೊರ್ಡ್ ಮತ್ತು ಕೆಂಬ್ರಿಜ್ಜಿನಲ್ಲಿ ಶಿಕ್ಷಣ ಹೊಂದುತ್ತಿರುವ ತರುಣರಲ್ಲಿ ಒಳ್ಳೆ ವಿಶಾಲ ಮನೋಭಾವವು ಇರುವುದು.

ಕೈಗಾರಿಕೆಗಳಲ್ಲಿ ಸಂಯುಕ್ತ ಏರ್ಪಾಡು ಇರುವುದು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ಭಾರತದ ಸ್ವಾತಂತ್ರ್ಯ— ಬ್ರಿಟಿಷ್ ಕೊಮ್ಯುನಿಸ್ಟ ಸೈನಿಕನ ದೃಷ್ಟಿಕೋನ

(೫ನೇ ಪುಟದಿಂದ)

"ನಾವು ಇಲ್ಲಿ ಸೆರೆಯಾಳುಗಳಂತೇ ಸರಿ. ಹಿಂದೀ ಸೈನಿಕ ಶಿಬಿರವನ್ನು ಅಥವಾ ಹಿಂದೀ ಹಳ್ಳಿಯನ್ನು ಹೊಗ ಬಾರದೆಂದೇ ಕುಷ್ಟ ರೋಗಿಗಳಿಗಿರುವಂತೆ ನಮಗೂ ನಿಷೇದಾಜ್ಞೆ ಹಾಕಲಾಗಿದೆ. ಯಾವ ವಿಧದಲ್ಲಿ ಹಿಂದೀ ಜನರ ಪರಿಚಯ ನಮಗಾಗಲೇ ಬಾರದೆಂಬ ಉದ್ದೇಶವಿದೆ. ಹಿಂದೀ ಹಳ್ಳಿಗರಿಗೆ ಜನತೆಯ ಅಥವಾ ಗೊರಿಲ್ಲಾ ಪಡೆಗಳನ್ನು ಸ್ಥಾಪಿಸಲು ಮದ್ದತುಮಾಡಿಕೊಡುವ ಯೋಜನೆಯ ಸುಳಿವನ್ನು ಒತ್ತಟ್ಟಿಗೆ ಇದ್ದಂತೆ ಕಾಣಿಸುವುದು."

ಬೆನ್ನನನ ಇನ್ನೊಂದು ಕಾಗದದಲ್ಲಿ ಇರುವ ಉದ್ರೇಕಪರವಾದ ಮಾತುಗಳಲ್ಲಿ ಕಟು ಸತ್ಯವೇ ಇದೆ.

ಪುಣೆಯ ಬಾರಾಮತಿ ಎಂಬಲ್ಲಿ ಸ್ವಲ್ಪ ಡೊಂಬಿಯಾಗಿತ್ತು... ಸಾಮುದಾಯಿಕ ಜುಲುಮಾನೆಯನ್ನು ಹೊರಿಸಿದ್ದಾರೆಂದು ಈಗ ತಿಳಿಸಿರುತ್ತಾರೆ. **ನೌಕರೀ ಶಾಹಿಯು ಇಡೀ ಜನತೆಯಲ್ಲಿಯೇ ದ್ವೇಷವನ್ನು ಪ್ರಜ್ವಲಿಸುವುದೆಂಬುದಕ್ಕೆ ಇದುವೇ ಅತ್ಯುತ್ತಮವಾದ ದೃಷ್ಟಾಂತವಾಗಿದೆ.**

"ಇಲ್ಲಿಯ ಜನರು ನಮ್ಮನ್ನು ದ್ವೇಷಿಸುವರೆ? ಹೊ, ಇಲ್ಲವೇ ಇಲ್ಲ! ನಾನು ಇದನ್ನು ಗಂಭೀರವಾಗಿ ಹೇಳಬಲ್ಲೆ. ಆದರೆ ಜಪಾನೀಯರು ಬಂದರೆ–ಅಪ್ಪರಲ್ಲಿ ಈ ಸರಕಾರವು ಪಡಿಸಿದ ಹಾನಿಯನ್ನು ತಡೆಯಲು ತಕ್ಕ ಉಪಾಯ ಕೈಕೊಳ್ಳದಿದ್ದರೆ–ನಮಗೆ ದೇವರೇ ಗತಿ. ಈ ವಿಷಯವು ಮೇಲಿಂದ ಮೇಲೆ ಒತ್ತಿ ಹೇಳುವ ಮುಂಜಾಗ್ರತೆಯಂತೆ ನನ್ನ ಕಿವಿಯ ಅಲ್ಲೆಗಳನ್ನು ಕುಕ್ಕುವುದು. ಇದುವೇ ಅನಿವಾರ್ಯವಾದ ಮೂಲ ಮರ್ಮ; ಜಪಾನರನ್ನು ಗೆಲ್ಲಲು ಒದಗಬೇಕಾದ ಒಂದೇ ಒಂದು ಮೊದಲ ಪರಿಸ್ಥಿತಿ. ಸ್ವದೇಶದಲ್ಲಿರುವ ನೀವು ಬ್ರಿಟನನ್ನು ಈ ವಿಷಯದಲ್ಲಿ ಎಚ್ಚರಿಸಿ ಕದಡುವ ಹಾಗೆ ಮಾಡಬೇಕು. ಆಂಗ್ಲ ಭಟರಾದ ನಾವು ಇಲ್ಲಿಗೆ ಬಂದುದು ಜಪಾನಿಯರೊಡನೆ ಕಾದಾಡಲಿಕ್ಕಾಗಿ... ಡಿಲ್ಲಿಯಲ್ಲಿಯೂ, ವ್ಹಾಯಿಟಿ ಹೋಲಿನಲ್ಲಿಯೂ ಇರುವ **ಬ್ರಿಟಿಷ್ ನೌಕರಿ ಶಾಹಿಯಿಂದ ಬೆನ್ನ ಹಿಂದೆ ತಿವಿತ ತಿಂದು ಸಾಯಲು ಆತ್ಮಘಾತದ ಪಡೆಯಾಗಿ ಬಂದಿಲ್ಲ. ಅಮೆರಿ ಮತ್ತು ಕಂಪೆನಿಯ ಉನ್ಮತ್ತತೆಯ ಪ್ರತಿಗಾಮಿ ಧೋರಣೆಯಿಂದಾಗಿ ಕೆರಳಿದ ಹಿಂದೀಯರಿಂದ ಕೊಲ್ಲಲ್ಪಡಲು ನಾವು ಇಲ್ಲಿಗೆ ಬಂದವರಲ್ಲ.**

"ದಿಗ್ವಿಜಯದ ಕೈದಿ"

ಬ್ರೆನ್ನನನು ತನ್ನನ್ನು ಹಿಂದೀಯ ಜನರಿಂದ–ಯಾವ ಹಿಂದೀ ಜನರ ಗೆಳೆತನಕ್ಕೆ ಆತ ಹಾತೊರೆಯುತಿದ್ದನೊ ಆ ಜನರಿಂದ-ಬೇರ್ಪಡಿಸಿದಕ್ಕಾಗಿ ಅವನು ಪಡುವ ಮನೋವ್ಯಾಕುಲತೆಯು ಮರ್ಮ ಭೇಧಕವಾಗಿಯೇ ಇದೆ. ಆದರೆ ಅಧಿಕಾರ ಸ್ಥಾನದಲ್ಲಿ ಪ್ರತಿಷ್ಟಿತರಾದವರು ಅವನಿಗೆ ಯಾವ ಇಂಬನ್ನು ಕೊಡಲಿಲ್ಲ. ಒಂದು ದಿನ ರಾತ್ರೆ ಒಂದು ಹಳ್ಳಿಯನ್ನು ಹಾದು ಹೋಗುವಾಗ ಒಕ್ಕಲಿಗರ ತಂಡ ಒಂದು ನಾಟಕವಾಡುವುದನ್ನು ಬ್ರೆನ್ನನು ನೋಡಿದ್ದನು."ಅಲ್ಲಿಯೇ ತಂಗಿ ಆ ನಾಟಕಃಪ್ರೇಕ್ಷಕನಾಗಲು ನನ್ನಲ್ಲಿ ಎಷ್ಟೊಂದು ಆತುರತೆ ಇದ್ದಿತು. ಆ ಒಕ್ಕಲಿಗರೊಡನೆ ಆ ನಾಟಕದ ವಿಷಯವಾಗಿ ಮಾತುಕತೆ ನಡೆಯಿಸಲು ನನ್ನ ಮನಸ್ಸು ತುಂಬಾ ತವಕಿಸುತಿತ್ತು. ಆದರೆ ನಾವಿರುವ ಲೋಕಗಳೆ ಬೇರೆ ಬೇರೆಯಾಗಿವೆ. ಹೀಗಾಗಿ ನಾನು ನನ್ನ ಬಿಳೀ ಸಾಹೇಬರೊಂದಿಗೆ ಲೋರಿಗಳಲ್ಲಿ ತಂಗದೆ ಮುಂದೆ ಓಡಲೇಬೇಕಾಯಿತು. ಅಕಟಾ, ನಾನೇಕೆ ಇಲ್ಲಿಗೆ ಸೈನಿಕನಾಗಿ ಭಾರತ ವಿಜಯಿಯಾಗಿ ಬಂದೆ! ಇದರಿಂದಾಗಲ್ಲವೆ ನಾನು ದಿಗ್ವಿಜಯದ ಕೈದಿಯಾಗಿರಬೇಕಾಗಿದೆ.

ಅವನು ಕಾವಾರದಲ್ಲಿರುವಾಗ ಒಂದು ಶಾಲೆಯಲ್ಲಿ "ಇಂಗ್ಲೀಷ್ ವಿದ್ಯಾಭ್ಯಾಸ"ದ ಕುರಿತು ಭಾಷಣಮಾಡಿದನು. ಮಕ್ಕಳ ಪ್ರಶ್ನೆಗಳಲ್ಲಿ ಇದು ಒಂದು: "ಬ್ರಿಟಿಷರು ನಮ್ಮನ್ನು ೧೫೦ ವರ್ಷಗಳ ತನಕ ಆಳಿರುವರು. ಭಾರತವು ಇಂಗ್ಲೆಂಡನ್ನು ಗೆದ್ದರೆ ಅದು ಎಷ್ಟು ಕಾಲ ಆಳಬಹುದು? "ಈ ಮಕ್ಕಳ ಚುರುಕಾದ ಬುದ್ಧಿ ಶಕ್ತಿಯು ಶೋಭಾಯಮಾನವಾಗಿಯೇ ಇದೆ" ಎಂದು ಅವನ ಹೇಳಿಕೆ.

ಒಂದು ದಿನ ಒಬ್ಬ ಆಫೀಸರನು ಬ್ರಿಟಿಷ ಸೈನಿಕರಿಗೆ "ನಮಗೇಕೆ ಜಪಾನರೊಡನೆ ಯುದ್ಧ?" ಎಂಬ ವಿಷಯ ವ್ಯಾಖ್ಯಾನ ಕೊಟ್ಟಿದ್ದನು. ಆ ಆಫೀಸರನು ಈ ವಿಷಯ ಕುರಿತುಕೊಟ್ಟ ಉತ್ತರ ಕಾರಣಗಳು ಹೀಗಿದ್ದವೆಂದು ಬ್ರೆನ್ನನನು ತಿಳಿಸುತ್ತಾನೆ:

(೧) ನಮ್ಮ ಸಾಮ್ರಾಜ್ಯವು ಕೆಟ್ಟು ನುಚ್ಚುನೂರಾಗುವುದೆಂಬ ಹಳೆ ಹರಟೆಯನ್ನು ತಪ್ಪೆಂದು ನಿರ್ಧಾರ ಪಡಿಸುವುದು. ನಮ್ಮ ಸಾಮ್ರಾಜ್ಯವು ಇನ್ನೂ ಬಲಾಢ್ಯವಾಗಿಯೇ ಇದೆ ಎಂದು ನಾವು ತೋರಿಸಿಕೊಡುವೆವು. (೨) ಜಪಾನಿಯರ ಬೆದರಿಕೆಗೆ ತುತ್ತಾದ ಆಸ್ಟ್ರೇಲಿಯಃರನ್ನು ನಾವು ಕೈಬಿಡಕೂಡದು. (೩) ಕಳೆದು ಹೋದ ನಮ್ಮ ವಸಾಹತುಗಳನ್ನು ಪುನಃ ಗಳಿಸಿಕೊಳ್ಳಬೇಕಾಗಿದೆ. ಈ ರೀತಿಯ ವಿಚಾರ ಸರಣಿಯಿಂದ ಬ್ರೆನ್ನನಿಗೆ ತುಂಬಾ ಅಸಹ್ಯವೆನಿಸಿವೆ.

ಬ್ರಿಟಿಷ್ ಸೈನ್ಯದಲ್ಲಿದ್ದು ತುಂಬಾ ತಾಕು ತೊಡಕುಗಳಿದ್ದರೂ ಬ್ರೆನ್ನನನು ತಾನು ಇಂಡಿಯಾದಲ್ಲಿದ್ದಾಗ ಅನೇಕ ಭಾರತೀಯರ ಗೆಳೆತನವನ್ನು ಗಳಿಸಿದ್ದನು. ಪುನೆಯ ಕೇಲ್ಕರ್ ಕುಟುಂಬದಂತಹ ಕಲಾವಂತರಲ್ಲಿ ಅವನಿಗೆ ತುಂಬಾ ಸ್ನೇಹ. ಅವನು ಭಾರತೀಯ ಕಲೆಯನ್ನು ಬರೀ ಪುಸ್ತಕ ಮತ್ತು ವ್ಯಾಖ್ಯಾನಗಳಿಂದ ಮಾತ್ರವಲ್ಲ ಹಿಂದೀ ಜೀವನದಲ್ಲಿ ನೈಸರ್ಗಿಕವಾಗಿ ಅಡಕವಾಗಿರುವ ಸೌಂದರ್ಯವನ್ನು ತನ್ನ ಚುರುಕಾದ ಅವಲೋಕನಾಶಕ್ತಿಯಬಲದಿಂದ ಅಭ್ಯಾಸಿದನು–ರೈತನ ಗುಡಿಸಲು ಕಟ್ಟಡಗಳ ಕೆಲಸದಲ್ಲಿ ನಿರತರಾದ ಹೆಂಗಸರು ಲೀಲೆಯಿಂದ ಆಟವಾಡುವ ಮಕ್ಕಳು ಇವನ್ನೆಲ್ಲಾ ವಿಮರ್ಶಿಸಿ ಕಲಾ ಜ್ಞಾನವನ್ನು ಸಂಪಾದಿಸಿದ್ದಾನೆ. ಅದು ಪತ್ರಗಳಲ್ಲಿ ಇರುವುದು. ರಾಜಕೀಯ ಸಮಸ್ಯೆಯು ಮತ್ತು ಭಾರತದ ಸ್ವಾತಂತ್ರ್ಯ ಹಿಂದೀ ಜನ ಸಾಮಾನ್ಯರಲ್ಲಿ ಆತನಿಗೆ ಉಂಟಾದ ಕೃಪೆಗೆ ಸಂಪೂರ್ಣ ಸಹಾನುಭೂತಿ ಮಾತ್ರವಲ್ಲ ಮನುಷ್ಯಯುಕ್ತವಾದ ಪ್ರೀತಿಮಯವಾದ ನಚ್ಚು ಮೆಚ್ಚಿನ ಒಂದು ಹೊಂದಿಕೆಯು ಎಲ್ಲಾ ಪತ್ರಗಳಲ್ಲಿ ವಿದಿತವಾಗಿದೆ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

ಸಿಹಿ ಸುದ್ದಿ ಸಂಗ್ರಹ

ನ್ಯೂಯೋರ್ಕಿನ ಹರ್ಮನ್ ಹಾಸ್ಸೆ ಎಂಬವನು ತನ್ನ ಹೆಣ ಹೊರುವ ನಾಲ್ಕು ಮಂದಿಗಳಿಗೆ ನಾಲ್ಕು ಬಾಟ್ಲಿ ಜಗತ್ತಿನಲ್ಲೇ ಅತ್ಯುತ್ತಮವಾದ ವಿಸ್ಕೀ ಶರಾಬನ್ನು ಕೊಡಬೇಕೆಂದು ಮರಣ ಶಾಸನ ಬರೆದಿಟ್ಟಿದ್ದನು. ಯುದ್ಧ ಕಾಲದಲ್ಲಿ ಅಷ್ಟು ಒಳ್ಳೇ ಶರಾಬು ಸಿಗದ್ದರಿಂದ ಜಡ್ಜರು ಆ ಒಬ್ಬೊಬ್ಬನಿಗೆ ಒಂದೊಂದು ಪವನು ಕೊಡುವಂತೆ ಆಜ್ಞಾಪಿಸಿದರು.

* * *

೧೯೪೨ ಅಮೇರಿಕನ್ ಮಹಿಳೆಯರು ತಮ್ಮ ಪೌಡರ್, ಸ್ನೋ ಮತ್ತು ತುಟಿ ಲೇಪಗಳಿಗೂ ಇತರ ಶರೀರ ಶೃಂಗಾರ ವಸ್ತುಗಳಿಗೂ ೧೨ ಕೋಟಿ ಪವನುಗಳಷ್ಟು ಖರ್ಚುಮಾಡಿರುವರಂತೆ.

* * *

ಅಮೇರಿಕದಲ್ಲಿ ಹೊಸದೊಂದು ತರದ ಸಿಗರೇಟು ತಯಾರಿಸಿರುವರು. ಇದರ ತುದಿಯನ್ನು ಯಾವುದಕ್ಕಾದರೂ ಒರಸಿದೊಡನೆ ಅದು ತನ್ನಷ್ಟಕ್ಕೆ ಉರಿದು ಹೊತ್ತಿಕೊಳ್ಳುತ್ತದೆ.

* * *

ಐದು ಸಾವಿರ ವರ್ಷಗಳ ಹಿಂದೆ ಅಖಿಲ ಚೀನದ ಮೊದಲ ಚಕ್ರವರ್ತಿಯ ರಾಣಿಯಾದ 'ಟ್ಸಾಸೂ' ಎಂಬವಳು ರೇಶ್ಮೆ ಸಿಲ್ಕುಗಳ ತಯಾರಿಕೆಯನ್ನು ಕಂಡುಹಿಡಿದಳು.

* * *

ಗಾಂಧೀಜಿ ತಮ್ಮ ಮೊತ್ತ ಮೊದಲ ಸತ್ಯಾಗ್ರಹ ಪ್ರಾರಂಭಿಸಿದ್ದು ದ. ಆಫ್ರಿಕ ಸರಕಾರದವರು ಪ್ರತಿಯೊಬ್ಬ ಭಾರತೀಯನೂ ತಮ್ಮ ಹೆಬ್ಬೆಟ್ಟು ಸಹಿ ಕೊಡಬೇಕೆಂಬ ಆಜ್ಞೆಯ ವಿರೋಧವಾಗಿ. ಆಗ ಮಹಾತ್ಮಾಜಿಯವರ ವಿಶ್ವಾಸಾರ್ಹ ಅನುಯಾಯಿಗಳಲ್ಲಿ ಓರ್ವ ಪಠಾಣನೂ ಒಬ್ಬನಾಗಿದ್ದ. ಈ ಹೆಬ್ಬೆಟ್ಟು ಆಜ್ಞೆಯನ್ನು ಒಪ್ಪಿ ಹೆಬ್ಬೆಟ್ಟು ಗುರುತು ಕೊಡುವ ಮೊದಲ ಮನುಷ್ಯನಿಗೆ ತಲೆಯ ಮೇಲೆ ಒಂದೇಟು ಕೊಡುವೆನಾಗಿ ಆತ ಶಫಥ ಹಾಕಿಕೊಂಡಿದ್ದ. ಗಾಂಧೀಜಿಯವರು ನಂತರ ತಮ್ಮ ಧೋರಣೆ ಬದಲಾಯಿಸಿ, ಆ ಆಜ್ಞೆಯನ್ನು ತಿರಸ್ಕರಿಸಬೇಕಾದುದು ಸಹಜವಾದುದೆಂತಲೂ ಆದರೆ ತಮ್ಮ ಸ್ವಂತ ಇಚ್ಛೆಯಿಂದ ಬೇಕಾದರೆ ಯಾರಾದರೂ ಹೆಬ್ಬೆಟ್ಟು ಕೊಟ್ಟರೆ ದೋಷವಲ್ಲವೆಂದೂ ತೀರ್ಮಾನಿಸಿ ಗಾಂಧೀಜಿಯವರೇ ಮೊದಲನೇ ಹೆಬ್ಬೆಟ್ಟು ಕೊಟ್ಟರಂತೆ. ಆದರೂ ತನ್ನ ಶಫಥದಂತೆ ಪಠಾಣನು ಏಟು ಕೊಟ್ಟೇ ಬಿಟ್ಟ. ಕೊನೆಗೆ ಅವನಿಗೆ ಆ ವಿಷಯ ಪಶ್ಚಾತ್ತಾಪವೂ ಆಗಿದೆ.

* * *

ಬರ್ಮಾದಲ್ಲಿ ಬರ್ಮಿ ಹೆಂಗಸರೇ ಹೆಚ್ಚಾಗಿ ಅಂಗಡಿ ವ್ಯಾಪಾರವನ್ನು ಮಾಡುವರು.

* * *

ಗಂಗಾ ನದಿಯ ನೀರು ಕೆಲವು ಕಡೆ ಒಂದುತರದ ಅಸಹ್ಯವರ್ಣವುಳ್ಳದ್ದಾಗಿ ಕಾಣಿಸುವುದಾದರೂ ಅದರ ನೀರಿನಲ್ಲಿ ರೋಗಾಣುಗಳು ಉಂಟಾಗುವುದಿಲ್ಲವಂತೆ.

THE BANK OF MANGALORE, Ltd.
MANGALORE.

Interest on Fixed Deposits.

It is notified forthe information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly with effect from 1-1-1945

Office of the Bank, Mangalore, 30th Oct. 1944. By Order H. S. KAMATH, *Manager*.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೋಡಿದು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿ ಇಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ
ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು
ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,
ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.
Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

MISSING
23, FBRUARY

Regd NO.M604

...ಜನ

...ತ್ರಿಗೆ, ಭುಜ,

MISSING
23, FBRUARY

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಖು 2—3—1945 [ಸಂಚಿಕೆ 9]

ರಷ್ಯನ್ ದಿಗ್ವಿಜಯದ ಗುಟ್ಟೇನು?

೧೫ ತಿಂಗಳ ಕೆಲಸ ೧೫ ದಿನಗಳಲ್ಲಿ

ನಾಜೀ ಮೃಗದ ಗವಿಬಳೀ ಬೇಟೆ

ಸ್ಟೇಲಿನ್‌ಗ್ರೇಡ್‌ನಲ್ಲಿ ಒಂದೇ ಒಂದು ಮನೆಯಿಲ್ಲ

ಜರ್ಮನ್ ಸರ್ವಾಧಿಕಾರದ ನಾಜೀ ದಳಗಳನ್ನು ಇಂದು ಹಿಂದಕ್ಕೆ ತಳ್ಳಿ ನಾಜಿ ರಾಜಧಾನಿಯ ಹೊರ ಬಾಗಿಲ ಮುಂದೆ ಕೆಂಪು ಸೈನಿಕನು ಬಂದು ನಿಂತಿರುವನು. ರಷ್ಯದ ಈ ಅಗಾಧ ವಿಜಯದ ಗುಟ್ಟೇನಿರಬಹುದೆಂದು ವಿಚಾರಿಸಿದರೆ ಸಾಮ್ಯವಾದಿಗಳಾದ ಆ ಜನರ ಅಪ್ರತಿಮ ಸಹಿಷ್ಣುತಾ ಶಕ್ತಿಯೂ, ಕರ್ತವ್ಯಪರಾಯಣತೆಯೂ ನಮ್ಮನ್ನು ಸೋಜಿಗಗೊಳಿಸದಿರಲಾರದು. 'ಯುದ್ಧರಂಗದಲ್ಲಿ ನಮ್ಮ ಸೈನಿಕರು ಫೆಸಿಸ್ಟರನ್ನು ಸೋಲಿಸುತಿದ್ದ ಹಾಗೆ ಗೃಹರಂಗದಲ್ಲಿ ನಮ್ಮ ಕೆಲಸಗಾರರು ಸಾಂಪತ್ತಿಕ ಪರಿಸ್ಥಿತಿಯನ್ನು ಹದಕ್ಕೆ ತರಲು ದುಡಿಯುತಿದ್ದಾರೆ' ಹೀಗೆಂದು ಸ್ಟೇಲಿನರು ಹೇಳಿದುದರಲ್ಲಿ ಈ ಗೆಲುವಿನ ಗುಟ್ಟೆಲ್ಲ ಅಡಕವಾಗಿದೆ.

೧೯೩೮ರಲ್ಲಿ ರಷ್ಯಾ ಮತ್ತು ಜರ್ಮನಿಯ ಖನಿಜ ಸಂಪತ್ತಿನ ಅಂಕೆಸಂಖ್ಯೆಗಳನ್ನು ಸ್ವಲ್ಪ ಪರಿಶೀಲಿಸಿರಿ:

	ರಷ್ಯಾ	ಜರ್ಮನಿ
	(ಮಿಲಿಯ ಖಂಡಿಗಳಲ್ಲಿ)	
ಕಲ್ಲಿದ್ದಲು	೫೩.೨	೭೪೪
ಉಕ್ಕು	೭೨	೯೨
ಕಬ್ಬಿಣ	೬೦	೭೨

ಇಷ್ಟೊಂದು ಅನುಕೂಲತೆಯಿಂದಲೂ ಮತ್ತು ತಾನು ಹಿಡಿದ ಇತರ ದೇಶಗಳ ಭೂಸಂಪತ್ತಿನ ಸಹಾಯದಿಂದಲೂ ಹಿಟ್ಲರನು ರಷ್ಯವನ್ನು ಕೆಣಕಲು ಹೊರಟನು.

ಆರೇ ವಾರಗಳಲ್ಲಿ ರಷ್ಯವನ್ನು ಬಗಲೊಳಗೆ ಹಾಕಿಕೊಳ್ಳುವೆನೆಂದು ಅವನು ಭಾವಿಸಿಕೊಂಡಿದ್ದನು. ೧೯೪೨ರೊಳಗೆ ಅವನಿಗೆ ಸ್ವಲ್ಪ ಯಶಸ್ಸು ದೊರಕಿತು. ೬ ಲಕ್ಷ ಚದುರ ಮೈಲುಗಳಷ್ಟು ವಿಸ್ತಾರದ ರಷ್ಯನ್ ಪ್ರದೇಶವು ಅವನ ವಶವಾಯಿತು. ಇದರಿಂದ ರಷ್ಯಕ್ಕೆ ಅಪಾರ ನಷ್ಟವುಂಟಾಯಿತು. ಆ ದೇಶವು ಶೇಕಡಾ ೬೦ರಷ್ಟು ಕಬ್ಬಿಣವನ್ನೂ, ಅಷ್ಟೇ ಉಕ್ಕನ್ನೂ, ಶೇ. ೪೫ರಷ್ಟು ಗೋಧಿಯನ್ನೂ, ಶೇ. ೪೦ರಷ್ಟು ಇತರ ಆಹಾರವಸ್ತುಗಳನ್ನು ಮತ್ತು ಮುಖ್ಯವಾಗಿ ಶೇ. ೪೦ರಷ್ಟು ರೈಲುಮಾರ್ಗಗಳನ್ನೂ ಕಳಕೊಂಡಿತು. ಖಂಡಿತವಾಗಿಯೂ ಇಷ್ಟೊಂದು ನಷ್ಟದಿಂದ ಯಾವ ದೇಶವಾದರೂ ಎದೆಗುಂದುತಿತ್ತು.

ಮಹಾತಜ್ಞರೆನಿಸಿದ ಸಮರ ಪಂಡಿತರು ರಷ್ಯವು ಮುರಿಯಲ್ಪಟ್ಟಿತೆಂದೇ ಅಂದಾಜು ಮಾಡಿಕೊಂಡರು. ಆದರೆ ಉಕ್ಕಿನಂತಹ ನಿರ್ಧಾರಶಕ್ತಿಯ ರಷ್ಯನರು ಮೋಸ್ಕೋ ಬಳಿಯಿಂದ ನಾಜೀ ಪಡೆಗಳನ್ನು ಹಿಂದಕ್ಕೆ ದೂಡಿದರು. ಅವರು ತ್ವರೆಯಾಗಿ ಚೇತರಿಸಿಕೊಂಡರು. ೧೯೪೩ ಮತ್ತು ೪೪ನೇ ವರ್ಷಗಳು ರಷ್ಯದ ಗೆಲುವಿನ ಕಾಲ. ಇಂದು ಅವರು ಹಿಟ್ಲರನನ್ನು ಮೂಲೆಯೊಳಗೆ ಸಿಲುಕಿಸಿದ್ದಾರೆ.

ಈ ಅದ್ಭುತದ ಹಿನ್ನೆಲೆಯಲ್ಲಿ

ಈ ವಿಚಿತ್ರ ಸಂಗತಿಯ ರಹಸ್ಯವು ಅತೀ ಸರಳವಾದುದು.

ಜರ್ಮನ್ ಹಾವಳಿಗೊಳಗಾದ ಪ್ರದೇಶದಲ್ಲಿ ಗಂಡಾಂತರಕ್ಕೊಳಗಾದ ದೊಡ್ಡ ಕೈಗಾರಿಕೆ ಕೇಂದ್ರದ ಯಂತ್ರೋಪಕರಣಗಳು ಭದ್ರವಾದ ಸ್ಥಳಗಳಿಗೆ ರೈಲುಗಳ ಮುಖಾಂತರ ಶೀಘ್ರವಾಗಿ ಒಯ್ಯಲ್ಪಟ್ಟವು. ಲೆನಿನ್‌ಗ್ರೇಡದಲ್ಲಿನ ಕಿರೋವ್ ಟೇಂಕು ಕಾರ್ಖಾನೆಯು ಉರಾಲ್ ಪರ್ವತ ಪ್ರದೇಶಕ್ಕೆ ಸಾಗಿಸಲ್ಪಟ್ಟಿತು. ಅಲ್ಲಿ ಅದರ ಉತ್ಪತ್ತಿಯು ಮೂರುಪಾಲಷ್ಟು ಅಭಿವೃದ್ಧಿ ಮಾಡಲಾಯಿತು.

ಕಾಲುದಳ ಸೈನ್ಯಕ್ಕೆ ಬೇಕಾದ ಉಪಕರಣಗಳನ್ನು ತಯಾರಿಸುವ ಒಂದು ಕಾರ್ಖಾನೆ ಮೊಸ್ಕೋದಲ್ಲಿತ್ತು. ೧೨ ರೈಲುಗಾಡಿಗಳಲ್ಲಿ ತುಂಬಿ ಇದರ ಸಾಹಿತ್ಯಗಳೆಲ್ಲವನ್ನೂ ಬರಿ ಹನ್ನೊಂದು ದಿವಸಗಳಲ್ಲಿ ಅತೀ ಪೂರ್ವದಲ್ಲಿರುವ ಒಂದು ಪ್ರದೇಶಕ್ಕೆ ಸ್ಥಳಾಂತರಗೊಳಿಸಲ್ಪಟ್ಟಿತು. ಆ ಪ್ರದೇಶದಲ್ಲಿಯಾದರೊ ಹೊಸ ಕಟ್ಟಡವು ಇನ್ನೂ ಪ್ರಾರಂಭಿಸಿರಲಿಲ್ಲ. ಆದರೆ ರಷ್ಯನ್ ಕೆಲಸಗಾರರು ಅದರ ರಚನೆಗೆ ಅವಿಶ್ರಾಂತವಾಗಿ ದುಡಿದುದರ ಪರಿಣಾಮವಾಗಿ ೪೫ ದಿವಸಗಳಲ್ಲಿ ದೊಡ್ಡ ಕಾರ್ಖಾನೆ ಕಟ್ಟಡವು ಸಿದ್ಧವಾಯಿತು. ನಂತರ ಒಂದು ತಿಂಗಳಲ್ಲಿ ಯುದ್ಧ ಪೂರ್ವದ ಪ್ರಮಾಣದಲ್ಲಿ ವಸ್ತುಗಳು ತಯಾರಿಸಲ್ಪಡಹತ್ತಿದವು. ಮತ್ತೆ ನಾಲ್ಕು ತಿಂಗಳಲ್ಲಿ ಅದರ ಉತ್ಪತ್ತಿಯು ಹಿಂದಿನ ಒಂದುವರೆ ಪಾಲಷ್ಟು ಪ್ರಮಾಣಕ್ಕೆ ಮುಟ್ಟಿತು.

ಕೀವ್ ಮತ್ತು ಕಾರ್‌ಕೋವ್ ಕಾರ್ಖಾನೆಗಳಲ್ಲಿ ಒಂದು ಲಕ್ಷ ಕೆಲಸಗಾರರಿದ್ದರು. ಅದೇ ಉರಾಲ್ ಪರ್ವತ ತಪ್ಪಲಿಗೆ ಇವರನ್ನು ಖಾಲಿಮಾಡಲಾಯಿತು. ಅಲ್ಲಿ ಬಿಡು ಸಮಯದ ಕೆಲಸಗಾರರು ಎರಡು ವಾರಗಳಲ್ಲಿ ಎರಡು ಕಾರ್ಖಾನೆಯನ್ನು ಕಟ್ಟಿದರು. ಶಾಂತಿ ಕಾಲದಲ್ಲಿ ಇದನ್ನು ಕಟ್ಟಲು ಆರು ತಿಂಗಳುಗಳಾದರೂ ಹಿಡಿಯುತಿತ್ತು.

ಕೆಲವೇ ತಿಂಗಳುಗಳಲ್ಲಿ ಉರಾಲ್ ಪ್ರದೇಶದ ಇನ್ನೊಂದು ಕಡೆ ಒಂದು ಬೃಹದ್ ಕಾರ್ಖಾನೆಯೂ, ಕೆಲಸಗಾರರ ವಸತಿ ಸ್ಥಾನಗಳೂ ಕಟ್ಟಲ್ಪಟ್ಟವು. ಇತರ ಸಮಯದಲ್ಲಿ ಅದಕ್ಕೆ ವರ್ಷಗಳಾಗಬೇಕಾಗುತಿದ್ದವು.

ಇವೆಲ್ಲದರ ಪರಿಣಾಮವಾಗಿ ೧೯೪೨ರ ಉತ್ಪತ್ತಿ ಸಂಖ್ಯೆಯು ಬಹಳ ಉನ್ನತ ಶಿಖರಕ್ಕೆ ಮುಟ್ಟಿತು. ಯುದ್ಧಪೂರ್ವದಲ್ಲಿ ಅಲ್ಲಿ ಪಂಚಮ ವಾರ್ಷಿಕ ಯೋಜನೆ ೧೯೩೭ರಲ್ಲಿ ಅಂತ್ಯವಾದಾಗಲೂ ಅಷ್ಟೊಂದು ಅಗಾಧ ಪ್ರಮಾಣದ ಕಾರ್ಖಾನೆ ಉತ್ಪತ್ತಿಗಳಾಗಿರಲಿಲ್ಲ. ಉಕ್ಕು ಕಬ್ಬಿಣ ಇತರ ಉಪಕರಣಗಳ ಸಂಖ್ಯೆಯೂ ಹೆಚ್ಚಿತು. ೧೯೪೨ರಕ್ಕಿಂತ ೧೯೪೩ರಲ್ಲಿ ೧೬ ಮಿಲಿಯ ಖಂಡಿ ಕಲ್ಲಿದ್ದಲು ಹೆಚ್ಚು ಅಗೆಯಲ್ಪಟ್ಟಿತು.

ಮಜೂರರ ಶ್ರಮ

ಸ್ಥಳಾಂತರಗೊಳಿಸಿದ ಕೈಗಾರಿಕೆ ಕಾರ್ಖಾನೆಗಳನ್ನು ಪುನಃರ್ವ್ಯವಸ್ಥೆಗೊಳಿಸಿದ ಮಾತ್ರದಿಂದಲೇ ಎಲ್ಲಾ ಅನುಕೂಲತೆಗಳು ಉಂಟಾಗಲಿಲ್ಲ. ಅಲ್ಲಿನ ಮಜೂರರೂ ಶ್ರದ್ಧೆಯಿಂದ ಹೆಚ್ಚೆಚ್ಚಾಗಿ ತಮ್ಮ ಸಮಯವನ್ನು ಇವುಗಳಿಗಾಗಿ ವ್ಯಯಿಸುವವರಾದರು. ೧೯೧೦ರಿಂದ ೧೯೪೪ರೊಳಗೆ ವಿಮಾನ ತಯಾರಾಗುವ ವಿಮಾನಗಳ ಸಂಖ್ಯೆ ಶೇಕಡಾ ೪೩ರಷ್ಟು ಹೆಚ್ಚಾಯಿತು. ಇಂತಹರು ಸ್ಟೆಕಾನೊವ್ಯಾಟ್ ಕೆಲಸಗಾರರು ಎಂದೆನಿಸಿಕೊಳ್ಳುವವರು. ಇವರು ಪ್ರತಿ ಕೈಗಾರಿಕೆ ಯೋಚನೆಗಳನ್ನು ಸ್ವತಃ ತಯಾರಿಸಿ ತಾವಾಗಿಯೇ ದೇಶದ ಉತ್ಪತ್ತಿಯನ್ನು ಅವಿಶ್ರಾಂತವಾಗಿ ದುಡಿಯುವ ಪಂಗಡಕ್ಕೆ ಸೇರಿದವರು.

ಹೀಗೆ ಕಾರ್ಖಾನೆಗಳಲ್ಲಿನ ಕೆಲಸಗಾರರು ತಾವು ಕಂಡುಹಿಡಿದ ಹೊಸ ಯೋಜನೋಪಾಯಗಳನ್ನು ಮುಖ್ಯಾಧಿಕಾರಿಗಳಿಗೆ ತಿಳಿಸಬಹುದು. ಕಾರ್ಯರೂಪಕ್ಕೆ ತರಲು ಯೋಗ್ಯವೆಂದಾದರೆ ಕೂಡಲೇ ಹಾಗೆ ಮಾಡಲಾಗುವುದು. ೧೯೪೨ರಲ್ಲಿ ಸುಮಾರು ೨೪ ಸಾವಿರ ಹೊಸ ಸೂಚನೆಗಳು ಬಂದವು. ಅವುಗಳಲ್ಲಿ ೮ ಸಾವಿರದಷ್ಟು ಸ್ವೀಕರಿಸಿ ಕಾರ್ಯರೂಪಕ್ಕೆ ತರಲಾಯಿತು. ಇದರಿಂದ ಸೋವಿಯೆಟ್ ಸರಕಾರಕ್ಕೆ ೧೯೨೦ ಖಂಡಿ ಉಕ್ಕು, ೨೫೯ ಮಿಲಿಯ ರುಬೆಲ್ (ರಷ್ಯನ್ ನಾಣ್ಯ) ಬೆಲೆಯ ಇತರ ಸಾಮಗ್ರಿಗಳೂ ಹಾಳಾಗದೆ ಉಳಿದವು.

ಇಷ್ಟು ಮಾತ್ರ ಮಾಡಿದರೆ ಸಾಲದು. ಹಿಂದೋಡಿಸಲ್ಪಟ್ಟ ಜರ್ಮನಿಯಿಂದ ನಾಶನಾತಲ್ಪಟ್ಟ ಜಮೀನುಗಳನ್ನು ಪುನಃ ಸಾಗುವಳಿ ಯೋಗ್ಯಮಾಡಬೇಕಾದ ಕೆಲಸವೂ ಬಹಳವಿದೆ.

ಉದಾಹರಣೆಗಾಗಿ ಸ್ಟೆಲಿನ್‌ಗ್ರೇಡನ್ನು ತೆಗೆದುಕೊಳ್ಳೋಣ. ಅಲ್ಲಿ ಒಂದೇ ಒಂದು ಮನೆಯಾದರೂ ಉಳಿದಿರಲಲ್ಲ. ನಾಜಿಗಳನ್ನು ಅಲ್ಲಿಂದ ಓಡಿಸಿದ ಮೂರೇ ಮೂರು ತಿಂಗಳುಗಳಲ್ಲಿ ಅರ್ಧಕರ್ಧದಷ್ಟು ನಗರವು ಪುನಃರ್ರಚಿಸಲ್ಪಟ್ಟಿತು. ಇದನ್ನು ಅಲ್ಲಿನ ಜನರು ಆದಿತ್ಯವಾರ ದಿವಸದ ರಜೆಸಮಯದಲ್ಲಿ ಕೆಲಸಮಾಡಿ ಕಟ್ಟಿದರೆಂಬ ಸಂಗತಿ ಆಶ್ಚರ್ಯವನ್ನುಂಟುಮಾಡದಿರರು. ಒಂದು ಕಡೆ ಬರೀ ೫ ತಿಂಗಳಲ್ಲಿ ೨೦ ಲಕ್ಷ ಜನರಿಗೆ ಬೇಕಾಗುವ ವಸತಿ ಸ್ಥಳಗಳನ್ನು ಕಟ್ಟಿಹಾಕಲಾಯಿತು. ಡೆನ್ಯೂಬ್ ನದಿ ಪ್ರದೇಶವನ್ನು ಸ್ವಾಧೀನಮಾಡಿಕೊಂಡ ನಾಲ್ಕು ತಿಂಗಳಲ್ಲಿ ಅಲ್ಲಿನ ಕಲ್ಲಿದ್ದಲು ಗಣಿಗಳನ್ನು ವಿಸ್ತರಿಸಿ ರಷ್ಯನರು ಮುಂಚಿಗಿಂತ ನಾಲ್ಕು ಪಾಲಷ್ಟು ಕಲ್ಲಿದ್ದಲ್ಲನ್ನು ಪಡೆದರು.

ಜೂನ್ ೧೯೪೩ರ ತನಕ ರಷ್ಯನರು ೩೫ ಸಾವಿರ ಬಂದೂಕುಗಳನ್ನೂ, ೩೦ ಸಾವಿರ ಟೇಂಕುಗಳನ್ನೂ ಮತ್ತು ೨೩ ಸಾವಿರ ವಿಮಾನಗಳನ್ನೂ ಕಳಕೊಂಡಿದ್ದರು. ಅಮೇರಿಕಾ ಇಂಗ್ಲೆಂಡಿನಿಂದ ಸುಮಾರು ೧೦ ಸಾವಿರ ವಿಮಾನಗಳು ಬಂದವು. ಸಾವಿರ ಟೇಂಕುಗಳೂ ಸಿಕ್ಕಿದವು. ನಾಜಿಗಳನ್ನು ಓಡಿಸಲು ಮಿಕ್ಕುಳಿದ ಇತರ ಎಲ್ಲಾ ಸಾಧನಗಳನ್ನೂ ರಷ್ಯನರೇ ತಯಾರಿಸಿಕೊಂಡರು.

ಇಂದು ಬರ್ಲಿನಿಗೆ ಸಮೀಪ ಬಂದ ಪ್ರತಿಯೋರ್ವ ಕೆಂಪು ಸೈನಿಕನು ಉತ್ಸಾಹಭರಿತನಾಗಿದ್ದಾನೆ. ಕಾರಣ ಜರ್ಮನಿಗೆ ಕೊನೆಗಾಲವನ್ನು ತರಲು ಕಾರಣವಾದ ಶಸ್ತ್ರಾಸ್ತ್ರಗಳಲ್ಲನೇಕವನ್ನು ತಯಾರಿಸುವುದರಲ್ಲಿ ಸಹಕರಿಸಿದವನಲ್ಲಿ ಅವನೂ ಅವನ ಹತ್ತಿರದ ಸಂಬಂಧಿಕರೂ ಒಬ್ಬರಾಗಿರಬಹುದು.

ಸಮತಾವಾದಿ ತತ್ವಪ್ರಕಾರ ಇಂದು ನಾಶಮಾಡಲ್ಪಟ್ಟು ನಾಳೆ ಪುನಃರ್ರಚಿಸಲ್ಪಡುವ ಪ್ರತಿಯೊಂದರ ಲಾಭವು ಆ ತತ್ವಾನುಯಾಯಿಗಳಿಗೆ ಇಮ್ಮಡಿ ಲಾಭವನ್ನೂ ಸುಖ ಶ್ರೇಯಸ್ಸಾಭಿವೃದ್ಧಿಯನ್ನೂ ಉಂಟುಮಾಡುವುದೆಂದೇ ಉತ್ಸಾಹಭರಿತರಾದ ಆ ರಷ್ಯನರ ಭರವಸೆ.

ಈ ವಾರದ ನೀಳ್ಗತೆ

ಇಪ್ಪತ್ತು ವರ್ಷಗಳ ನಂತರ.....

ತಹಶೀಲ್‌ದಾರ ಮಾಧವರಾಯನಿಗೆ ಮೇಲಧಿಕಾರಿಯ ಕಟ್ಟಪ್ಪಣೆ ಓದಿ ಬಹಳ ದುಃಖವಾಯ್ತು. ಒಂದಲ್ಲ ಎರಡು ಬಾರಿ ಓದಿದಂತೆ ಸಂಕಟ ಹೆಚ್ಚಿತು. ಅದನ್ನು ಮುಂದುಹಾಕಲು ಸಾಧ್ಯವಿಲ್ಲ. ಬೇರೊಬ್ಬರಿಗೆ ವರ್ಗಾಯಿಸಲು ಹುಕುಂ ಇದ್ದಿಲ್ಲ. ತನ್ನ ಊರಲ್ಲಿಯ ಸಾಲ ಪರಿಹಾರದ ವ್ಯಾಜ್ಯ ಮನೆಯ ಯಜಮಾನನೊಬ್ಬನು ಸಾಲಮಾಡಿ ತೀರಿದ್ದಾನೆ. ವಾರೀಸದಾರರಿಲ್ಲ. ಮನೆಯೊಂದು ಇದೆ. ಸಾಲಗಾರನ ಸಾಲ ಸಂದಾಯವಾಗಬೇಕಾದರೆ ಹೊಣೆಯಾಗಿ ನಿಂತಿರುವ ಮನೆಯೊಂದೇ ಹರಾಜಾಗಬೇಕು. ಕೂತಲ್ಲಿಂದ ತೀರ್ಪುಕೊಡುವುದಂತಿರಲಿ, ಕಣ್ಣಾರೆ ಕಂಡು ಪರಾಂಬರಿಸಿಯೇ ತೀರ್ಮಾನವಾಗಬೇಕೆಂಬ ಮೇಲಧಿಕಾರಿಯ ಆಜ್ಞೆ.

ಹೌದು ಹಳ್ಳಿಗೆ ಹೋಗಬೇಕು! ತನ್ನ ಹುಟ್ಟೂರಾದ ಹಳ್ಳಿಗೆ. ಇಲ್ಲಿಗೆ ಬಂದು ಇಪ್ಪತ್ತು ವರ್ಷಗಳಾಗಿದ್ದವು. ಆ ದಿನ ಹಳ್ಳಿಯಿಂದ ವಿದ್ಯಾಭ್ಯಾಸಕ್ಕೆ ಬಂದಾಗ ತಂದೆ ಹೇಳಿದ ಮಾತು ನೆನಪಿಗೆ ಬಂತು. "ಮಾದಣ್ಣ ನೀನು ಪಟ್ಟಣಕ್ಕೆ ಹೋಗಿ ವಿದ್ಯೆಕಲಿತು, ಉದ್ಯೋಗವನ್ನು ಸಂಪಾದಿಸಿ ನಮ್ಮ ಮನೆತನದ ಕೀರ್ತಿ, ಹಿರಿಯರ ಹೆಸರು ಮೇಲಕ್ಕೆ ತರಬೇಕೆಂಬ ಆಶೆ. ಪಟ್ಟಣದ ವಿದ್ಯಾಭ್ಯಾಸವೆಂದರೆ ರಾಶಿಗಟ್ಲೆ ಹಣ ಸುರಿಯಬೇಕು. ನಿನ್ನ ಆಶೆಯೂ ತೀರ ಬೇಕು. ನೋಡು ಮನೆಯ ಸ್ಥಿತಿ. ತಂಗಿಯೊಬ್ಬಳು ಮದುವೆಗೆ ಬೆಳೆಯುತ್ತಾಳೆ. ಅವಳ ಲಗ್ನವೂ ಪೂರ್ಣವಾಗಬೇಕು. ಮನೆಯ ಸ್ಥಿತಿಯೂ ಊರ್ಜಿತವಾಗಬೇಕೆಂಬ ನನ್ನ ಸಂಕಲ್ಪ. ಅದಕ್ಕಾಗಿ ಸಾಲಶೂಲವಾದರೂ ಚಿಂತಿಲ್ಲ ನಿನಗೆ ಹಣ ತೆರುತ್ತೇನೆ. ಮುಂದೆ ಉದ್ಯೋಗದಲ್ಲಿದ್ದು ಈ ಮನೆಯಲ್ಲಿದ್ದು ದೀಪದಂತೆ ಬೆಳಗಬೇಕೆಂಬ ಹಂಬಲ. ಹೋಗು ದೇವರ ಮೇಲೆ ಭಾರವಿಟ್ಟು ಸತ್ಯದಿಂದ ಮನಸ್ಸಿಟ್ಟು ಕಲಿ" ಎಂದು ಪಟ್ಟಣಕ್ಕೆ ಕಲಿಯಲು ಹೊರಟ ಮಗನನ್ನು ಆಶೀರ್ವದಿಸಿ ಆ ದಿನ ತಂದೆ ಕಣ್ಣೀರಿನೊಂದಿಗೆ ಕಳುಹಿದ್ದ. ಇಪ್ಪತ್ತು ವರ್ಷಗಳ ಹಿಂದೆ.

ಮಾಧವ ನಮ್ಮೂರ ಪಟೇಲ ರಂಗಪ್ಪನವರ ಒಬ್ಬನೇ ಮಗ. ಪ್ರೌಢ ವಿದ್ಯಾಭ್ಯಾಸಕ್ಕೆಂದು ಬಂದು ತನ್ನ ಚುರುಕುತನ, ಪ್ರೌಢಿಮೆಯಿಂದ ಬಿ. ಎ. ತನಕ ಕಲಿತು ಸರಕಾರದಲ್ಲಿ ಚಿಕ್ಕದೊಂದು ನೌಕರಿ ಕೈಕೊಂಡು ಕ್ರಮೇಣ ತಹಶೀಲ್‌ದಾರನಾಗಿ ಉದ್ಯೋಗದಲ್ಲಿ ಸ್ಥಿರನಾಗಿದ್ದನು. ನಾಗರಿಕತೆಯ ಥಳಕಿನ ಪ್ರಭಾವವೋ ಪಟ್ಟಣದ ವಾತಾವರಣವೋ ಅವನನ್ನು ಪುನಃ ಹುಟ್ಟೂರಿಗೆ ಹೋಗಬಿಡಲಿಲ್ಲ" ಹಳ್ಳಿಯ ಅನಾಗರಿಕತೆಯ ಮಡಿಲಿಗೆ ಪುನಃ ಕಾಲಿರಿಸುವುದು ಬೇಡವೆನಿಸಿತು. ಹಾಗಾಗಿ ಇಲ್ಲಿಯೇ ಮದುವೆಯಾಗಿ ಯಾರ ಹಂಗೂ ಇಲ್ಲದೆ ಜೀವನ ನಡೆಸತೊಡಗಿದನು. ಮಗನು ಕಲಿಯುತ್ತಿದ್ದಾಗ ತಂದೆ ಬೇಕಾದಷ್ಟು ಹಣ, ಬಟ್ಟೆಬರೆ ಒದಗಿಸಿದ. ಮಗನು ಉದ್ಯೋಗದಲ್ಲಿರುವಾಗ ತನ್ನ ಆಶೆಯು ನೆರವೇರುವ ದಿನ ಬಂತೆಂದು ಉಬ್ಬಿದನು. ಆದರೆ ಮಾಧವನ ಗುಣವೇ ಬದಲಾಗಿತ್ತು ತಂದೆ ಮದುವೆಗೆಂದು ಬಂದಾಗ ಸರಿಯಾದ ಆದರವಿರಲಿಲ್ಲ "ಮಾದಣ್ಣ ನಿನ್ನ ತಂಗಿ ಕಾವೇರಳಿಗೆ ಅತ್ತಿಗೆಯನ್ನು ನೋಡುವ ಆಶೆಯಾಗಿದೆ ಒಮ್ಮೆ ಕರಕೊಂಡು ಬಾ' ಎಂದ ತಂದೆಗೆ ಈಗ ಸಮಯವಿಲ್ಲವಪ್ಪಾ ಇನ್ನೊಂದು ಬಾರಿ ನೋಡೋಣ. ಎಂದು ತಂದೆಗೆ ಹೇಳಿದ್ದ. ಆದರೆ ಕೆಲಸದಲ್ಲಿರುವಾಗ ತಂದೆಗೆ ತಿಂಗಳಿಗೆ ಇಪ್ಪತ್ತೈದು ರೂಪ್ಯಾಯಂತೆ ಕಳುಹ ತೊಡಗಿದ. ತಂದೆಯೋಚಿಸಿದ ಹಣ ಪಡೆಯಲೇ ಬೇಡವೇ ಎಂದು? ಆದರೆ ಮಗಳ ಮಾತಿಗೆ ಒಪ್ಪಿ ಹಾಗೇ ಪಡಕೊಂಡು ಸ್ವಲ್ಪ ಸಾಲಕ್ಕೂ ಸ್ವಲ್ಪ ಮದುವೆಗೂ ಬೇಕಾದಂತೆ ಕೂಡಿಸಿಡುತ್ತ ಬಂದ. ಹಾಗೆ ವರ್ಷಗಳು ಸಾಗಿದವು.

ರಂಗಪ್ಪನು ಮಗಳಾದ ಕಾವೇರಿಯ ಮದುವೆಗೆ ಪೇಚಾಟ ಪಟ್ಟನು" ಐದಾರು ಕಡೆಗಳಲ್ಲಿ ಸಂಭಂದ ನೋಡಿದರೂ ಬಳುವಂ, ವರದಕ್ಷಿಣೆಯ ಪ್ರಶ್ನೆಯೇ ಮುಂದೆ ಬಂದು ಮುರಿದು ಬಿದ್ದವು. ಕಡೆಗೊಂದು ಕಡೆಯಲ್ಲಿ ನಿಶ್ಚಯವಾಯ್ತು. ವರದಕ್ಷಿಣೆ ಬಳುವಳಿಯೂ ಲಗ್ನವಾದ ನಿಶ್ಚಿತ ದಿನಗಳಲ್ಲಿ ತೆರುವುದೆಂದಾಗಿ ಲಗ್ನಕ್ಕೆ ಸಿದ್ಧತೆಯಾಯ್ತು. ಈ ಬಾರಿಯಾದರೂ ಮಗನು ಬರಲೆಂದು ಸವಿಸ್ತಾರವಾಗಿ ಕಾಗ್ದ ಬರೆದನು. ಮಗನಿಂದ ಸಹಾಯವಾದೀತು ಅವನೇ ಬಂದಾನೆಂದು ಮಗಳೂ ತಂದೆಯೂ ಹಾರೈಸಿದರು. ಆದರೆ ಬರುವ ಮಗನ ಸುಳಿವಾಗಲೀ ಪ್ರತ್ಯುತ್ತರವಾಗಲೀ ಬರಲಿಲ್ಲ ತಂದೆಮಗಳಿಬ್ಬರಿಗೂ ಖೇದವಾಯ್ತು. ಲಗ್ನವೂ ನಡೆದು ಕಾವೇರಿ ಗಂಡನ ಮನೆಗೆ ತೆರಳಿದಳು, ಬರಿದಾದ ಮನೆಗೆ ಮಗ ಸೊಸೆಯಾದರೂ ಬಂದಾರೆಂಬ ತಂದೆಯ ಆಶೆ ಫಲಿಸಲಿಲ್ಲ. ತಂದೆ ಬರೆದ ಕಾಗ್ದವು ಮಗನ ಕೈಗೆ ಮುಟ್ಟಲಿಲ್ಲ. ಅವನು ಆಗ ಕಾರ್ಯಾಂತರದಿಂದ ಪರಸ್ಥಳಕ್ಕೆ ಹೋಗಿದ್ದು ಮರಳುವಾಗ ಒಂದುವರೆ ತಿಂಗಳು ಕಳೆಯಿತು. ಕಾಗ್ದ ನೋಡಿ ದುಃಖವಾಯ್ತು. ಊರಿಗೆ ಹೋಗುವ ಸಂದರ್ಭ ತಪ್ಪಿತಲ್ಲಾ ಎಂದು ಕಳವಳ ಪಟ್ಟು, ಒಂದು ಕಾಗದವನ್ನೂ ಸಂಗಡಲೇ ಕಾವೇರಿಗೆಂದು ಐನೂರು ರೂಪಾಯನ್ನೂ ಕಳುಹಿಸಿದ. ಆದರೆ ಹಣ ಬಂದದ್ದು ಯಾವ ಉಪಯೋಗಕ್ಕೂ ಬೀಳಲಿಲ್ಲ ಕಾರಣ ಕಾವೇರಿಯ ಮಾವನು ಸೊಸೆಗೆ ತರಬೇಕಾದ ಬಳುವಳಿ ನಿಶ್ಚಿತ ಸಮಯದಲ್ಲಿ ಬಾರದ್ದರಿಂದ ಮಗನಿಗೆ ಬಿಡುವಂತೆ ಹೇಳಿದ ಅಗ್ನಿ ಸಾಕ್ಷಿಯಾಗಿ ಕೈಹಿಡಿದವಳನ್ನು ಬಿಟ್ಟರೆ ಸಮಾಜಮುಖದಲ್ಲೇ ಉಗುಳದೇ ಎಂದು ಮಗನು ತಂದೆಗೆ ಎದುರಾಡಿದ. ಸರಿ ತಂದೆ ಮಗನಿಗೆ ಮುಖದಲ್ಲಿ ಹೊಗೆಯಾಡಿತು. ಮನೆಯ ಹೊಸ್ತಿಲೊಳಗೆ ಕಾಲಿಟ್ಟ ಒಂದು ತಿಂಗಳಲ್ಲಿ ರಣರಂಪ ತಂದೆ ಮಕ್ಕಳ ಒಕ್ಕಟ್ಟು ಮುರಿಯಬಾರದೆಂದು ಎಣಿಸಿ ಕಾವೇರಿ ಸದ್ದಿಲ್ಲದೆ ತಂದೆ ಮನೆಗೆ ಬಂದಳು. ಮನೆಗೆ ಬಂದ ಮಗಳಿಂದ ಸಂಗತಿ ಅರಿತು "ಮಗೂ, ನೀನು ಬಂದದ್ದು ಚೆನ್ನಾಯ್ತು ನನಗೆ ಗಂಡು ಇದ್ದೂ ಇಲ್ಲದಾಗಿದೆ ನೀನೇ ನನ್ನ ಸರ್ವಸ್ವ ಇಲ್ಲೇ ಇರು ಕಾಲಬಂದಾಗ ನೋಡೋಣ"ವೆಂದು ಸಂತೈಸಿದನು. ಸೊಸೆ ಮನೆಬಿಟ್ಟು ಹೋದದನ್ನು ನೋಡಿ ಗಂಡನೂ ಮಾವನೂ ಸಂತುಷ್ಟರಾದರು. ಆದರೆ ಸುಂದರನಿಗೆ (ಕಾವೇರಿಯ ಗಂಡ) ತನ್ನ ವಯಸ್ಸಿನವರು ಸಂಸಾರಿಗರಾಗಿರುವುದನ್ನು ನೋಡಿ ನಾಚಿ ತಾನೂ ಕಾವೇರಿ ಇದ್ದಲ್ಲಿಗೆ ಬಂದ. ಬಂದ ಗಂಡನನ್ನು ಕಾವೇರಿಯೂ ಮಾವನೂ ಆದರಿಸಿದರು. ಮಗ ಸೊಸೆಯೊಡನೆ ಬಾಳುವ ಭಾಗ್ಯವಿಲ್ಲದೆ ಮಗಳು ಅಳಿಯರೊಡನೆ ಸವಿಯುವ ಸುಖವು ರಂಗಪ್ಪನಿಗೆ ಒದಗಿತು. ಹೀಗೆ ನಾಲ್ಕು ವರ್ಷಗಳು ದಾಟಿದವು.

ಇತ್ತ ಮಾದಣ್ಣ, ನಂತರವೂ ಹಣ ಕಳುಹಿದ. ಮದುವೆಗೆ ಬಾರದ ಮಗ, ಊರಮನೆ ಬೇಡಾದವನಿಗೆ, ಋಣ ತೀರಿಸುವಂತೆ ಕಳುಹಿಸುವ ಹಣ ಮುಟ್ಟಬಾರದೆಂದು ರಂಗಪ್ಪ ಯೋಚಿಸಿ ಹಣಕ್ಕೆ ಮುಟ್ಟಲಿಲ್ಲ. ಆದ್ದರಿ ಕಾವೇರಿ ಹಾಗೆ ಪಡಕೊಂಡು ಇಟ್ಟಳು. ಪ್ರತೀ ತಿಂಗಳಲ್ಲು ಹಾಗೇ ನಡೆಯಿತು. ರಂಗಪ್ಪ ಮಾತ್ರ ಸಾಲದ ಸಂದಾಯಕ್ಕೆ ಒದ್ದಾಡಲಾರಂಭಿಸಿದ. ವೃದ್ಧಾಪ್ಯದ ದೆಸೆಯಿಂದಾಗಿ ಕೆಲಸಬಿಟ್ಟ. ಅಳಿಯನು ದುಡಿಯಲಾರಂಭಿಸಿದ. ಮಾದಣ್ಣನಿಗೆ ಇತ್ತ ಬರಬೇಕೆಂಬ ಮನಸ್ಸಾಗಲೀ ತಂದೆಯ ಯೋಗಕ್ಷೇಮ ಕುರಿತು ವಿಚಾರಿಸುವ ಕೂತೂಹಲಉಂಟಾಗಲಿಲ್ಲ. ತಾನು ಕಳುಹುವ ಹಣದಿಂದ ಸುಖವಾಗಿರಬೇಕೆಂದು ಭಾವಿಸಿದ. ಆದರೆ ಕಾವೇರಿ ಆ ಹಣದ ಒಂದು ಕಾಸನ್ನೂ ವೆಚ್ಚಮಾಡಲಿಲ್ಲ.

ಕಾವೇರಿಯ ಮಾವ, ಮಗ ತನ್ನನ್ನು ಬಿಟ್ಟು ಸೊಸೆಯೊಂದಿಗೆ ಬೀಗನಲ್ಲಿ ಇರುವುದನ್ನು ಕಂಡು ಸೈರಿಸಬಾರದಾದನು. ತನ್ನ ಮಗನ ದುಡಿತದಿಂದ ಅವರು ಜೀವನ ಸಾಗಿಸುವುದು ಹಿತವೆನಿಸಲಿಲ್ಲ. ಏನಾದರೂ ಇದಕ್ಕೆ ಮದ್ದು ಅರೆಯಬೇಕೆಂದು ಯೋಚಿಸಿ, ರಂಗಪ್ಪನು ಇತರರಿಗೆ ಬರಕೊಟ್ಟ ಸಾಲದ ಪತ್ರಗಳನ್ನು ತಾನು ವರ್ಗಾಯಿಸಿಕೊಂಡನು. ಮಾತ್ರವಲ್ಲ ಬಡ್ಡಿಗೂ ಹಣಕ್ಕೂ ತಗಾದೆ ಮಾಡಲಾರಂಭಿಸಿದ. ಆ ಸಾಲವಾದರೋ ಮಗನ ವಿದ್ಯೆಗೆ ಮಾಡಿತ್ತು. ಮನೆಯ ಆಧಾರದ ಮೇಲೆ ಹೊಂದಿತ್ತು. ಹೀಗಾಗಿ ಆ ಮನೆಯ ಪಂಚಾಂಗ ಅಲ್ಲಾಡಿಸಿಬಿಡಬೇಕೆಂಬ ಸಂಕಲ್ಪ. ಆದರೆ ತನ್ನ ಮಗನು ಅಲ್ಲಿರುವುದನ್ನು ನೋಡಿ ಕೊಡಲಿಯ ಕಾವು ಕುಲಕ್ಕೆ ಕೇಡೆಂದು ಬಗೆದು ಬಿಮ್ಮನೆ ಇದ್ದುಬಿಟ್ಟ. ದೈವವು ಅನುಕೂಲವಾಗಿರಬೇಕು. ಸುಂದರನು ವಿಷಮ ಶೀತ ಜ್ವರಕ್ಕೆ ಈಡಾಗಿ ಅಸುನೀಗಿದ. ಕಾವೇರಿ ಆಗ ಎರಡು ಮಕ್ಕಳ ತಾಯಿ. ತಂದೆ ಎದೆಗೆಟ್ಟನು. ಮೊಮ್ಮಕ್ಕಳ ಮುಖ ನೋಡಿ ಮಗಳ ದುಃಖದಲ್ಲಿ ದಿನನೂಕಿದ. ಕಾವೇರಿಗೂ, ಜೀವನದಲ್ಲಿ ಜಿಗುಪ್ಸೆ ಹುಟ್ಟಿತು. ಆತ್ಮಹತ್ಯೆ ಮಾಡುವೆನೆಂದರೆ, ತನ್ನೆರಡು ಕರುಳಿನ ತುಂಡುಗಳು, ಒಲಿದು ಬಂದು ಕೈಹಿಡಿದವನ ವಂಶಕುಡಿಗಳೆರಡು ಕಣ್ಣ ಮುಂದೆ ನಲಿವಾಡುತ್ತಿವೆ. ಅಲ್ಲದೆ ಪ್ರಾಯ ಸಂದ ಸಲಹಿದ ತಂದೆಯೂ ಇರುತ್ತ ತನ್ನ ವಲಂಬನೆಯೊಳಗಾಗಿರುವುದನ್ನು ನೋಡಿ ಆತ್ಮಹತ್ಯಕ್ಕೆ ಮನಸ್ಸು ಒಡಂಬಡಲಿಲ್ಲ. ಇತ್ತ ಸುಂದರನ ತಂದೆ, ರಂಗಪ್ಪನಿಗೆ ಸಾಲಕೊಡುವರೆ ಕೋರ್ಟು ನೋಟೀಸು ಕೊಟ್ಟ. ರಂಗಪ್ಪ ನೋಡಿ ಯೋಚಿಸಿ ಹೋಗಿ ಮಗನನ್ನು ಕೇಳಲೇ ಎಂದೆನಿಸಿತು. ಅಥವಾ ಕಾವೇರನಿಗೆ ಕೊಡುವರೆ ಇದ್ದ ಐನೂರು ರೂಪಾಯಿ ಹಾಗೇ ಉಳಿದಿದ್ದವು ಅವನ್ನು ಮೊದಲುಕೊಟ್ಟು ವ್ಯಾದೆ ಪಡೆಯುವುದೇ ಎಂದು ಯೋಚಿಸಿದನು ಮೊದಲಿನ ಯೋಚನೆಗೆ ಅಭಿಮಾನ ಬಿಡಲಿಲ್ಲ. ಎರಡನೆಯದು ನಡೆಯದೆಂಬ ಅಪಧೈರ್ಯ. ಮನೆಯನ್ನು ಯಾರಿಗಾಗಿ ಬಿಡಿಸುವುದು? ಮಗನಿಗಾಗಿಯೇ ಅವನಿಗೂ ಇದರಲ್ಲಿ ಆಶೆ ಇಲ್ಲ. ಮಗಳಿಗೆಯೆ? ಅವಳು ಕುಲದ ಹೊರಗಿನವಳು ನಾಳೆ ಮಗನು ಮನಸ್ಸುಮಾಡಿ ಬಂದರೆ ಪೀಕಲಾಟವಾಗುವುದಲ್ಲ ಎಂದು ಯೋಚಿಸುತ್ತ ದಿನ ಕಳೆದನು, ಒಂದು ದಿನ ಕೆರೆಗೆ ಹೋಗಿ ಮರಳುವಾಗ ಕಾಲುಜಾರಿ ಬಿದ್ದ. ಬಳಿಯಲ್ಲಿದ್ದವರು ಉಪಚರಿಸಿ ಮನೆಗೆ ತಂದರು. ಅಗಲೇ ಅರ್ಧಜೀವ. ಮಗಳನ್ನು ಕರೆದು ಆ ದಿನದ ಐನೂರು ರೂಪಾಯಿ ಕೊಟ್ಟು ಇದೆಲ್ಲವನ್ನು ನಿನಗೆ ಕೊಟ್ಟಿದ್ದೇನೆ ಮತ್ತೇನನ್ನೋ ನುಡಿದು ಗತಾಸುವಾದನು. ಮಗಳು ಊರವರ ಸಹಾಯದಿಂದ ಅಂತ್ಯಕ್ರಿಯೆ ನೆರವೇರಿಸಿದಳು, ಮಗನಾದ ಮಾಧವನಿಗೂ ವರ್ತಮಾನ ತಿಳಿದು ಬಂತು. ಒಬ್ಬ ವೈದಿಕನನ್ನು ಕರೆದು ಅಪರಕ್ರಿಯೆಗಳನ್ನು ಪರೋಕ್ಷ ತೀರಿಸಿ ಮುಂಚಿನಂತೆ ತನ್ನ ಕಾರ್ಯದಲ್ಲಿ ಮಗ್ನನಾದನು. ರಂಗಪ್ಪ ತೀರಿದ ನಂತರ ಸುಂದರನ ತಂದೆಗೆ ಅನುಕೂಲ ಚೆನ್ನಾಗಿ ಕೂಡಿಬಂತು. ಮಗನುಹೋದ ದುಃಖವಿದ್ದರೂ ತನ್ನಿಂದ ಬೇರೆಯಾಗಲು ಸೊಸೆಯೇ ಕಾರಣವೆಂದರಿತು, ಮಹತ್ವಾದ ಕೆಲಸಕ್ಕೆ ತಳಹದಿ ಹಾಕಿದ. ಅವಳಿರುವ ಮನೆಯಿಂದ ಅವಳನ್ನು ಹೊರಡಿಸಬೇಕು ಇದಕ್ಕೆ ಮನೆಯ ಹರಾಜಾಗಿ ಸ್ವಾಧೀನ ಬಂದರೆ ತಾನೆಣಿಸಿದಂತಾಗುವುದೆಂದು ಯೋಚಿಸಿ ತನ್ನ ಸಾಲಕ್ಕೆ ಹೊಣೆಯಾಗಿರುವ ಮನೆಯಾದರೂ ಹರಾಜಾಗಿ ಹಣ ದೊರಕಬೇಕೆಂಬ ಮನವಿಯನ್ನು ಅಧಿಕಾರಿಗೆ ಕಳುಹಿದ. ಅಧಿಕಾರಿ ಅದನ್ನು ನೋಡಿ ಆ ಕೆಲಸವನ್ನು ತಹಶೀಲ್‌ದಾರ ಮಾಧವರಾಯನಿಗೆ ಕಳುಹಿದ. ಇತ್ತ ಪಟೇಲನಿಗೆ ಆ ಮನೆಯ ಮಾಹಿತಿ ಪಡೆಯುವಂತೆ ಏರ್ಪಡಿಸಿದ. ಪಟೇಲನು ಬಂದು ಎಲ್ಲವನ್ನೂ ವಿಚಾರಿಸಿ ಕಾವೇರಿಗೆ ಅದು ಹರಾಜಾಗುವುದೆಂದೂ ನಂತರ ಅಲ್ಲಿ ನಿಲ್ಲಲಾಗದೆಂದೂ ತಿಳಿಸಿ ಹೋದನು. ಕಾವೇರಿ ನಡುಗಿದಳು. ತಂದೆಯ ಸಾಲವೆಷ್ಟೆಂದು ಗೊತ್ತಿಲ್ಲ. ಅದನ್ನು ತೀರಿಸಬೇಕಾದರೆ ತನ್ನಲ್ಲಿರುವ ಹಣ ಸಾಲದು. ತಂದೆ ತೀರಿ ಎರಡು ವರ್ಷವಾಗಿತ್ತು. ಅಣ್ಣನು ಕಳುಹುವ ಹಣ ನಿಂತಿತ್ತು. ಈ ತನಕ ಕಳುಹಿದ ಹಣ ಹಾಗೇ ಉಳಿದಿದೆ. ಸಾಲದ ಬಡ್ಡಿಗೂ ಬಾರದು ಮನೆ ಹರಾಜಾದರೆ ಮುಂದೆ ತಾನು ಮಕ್ಕಳೊಡನೆ ಎಲ್ಲಿ ಜೀವಿಸಬೇಕು. ಎಂದು ಯೋಚಿಸಿ ಹರಾಜಿನ ಮುಂಚಿನ ದಿನ ಪಟೇಲನಲ್ಲಿಗೆ ತೆರಳಿ "ಅಯ್ಯಾ ನಾನಿರುವ ತನಕ ಆ ಮನೆ ಹರಾಜಾಗ ಬಾರದು. ಈಗ ಇರುವಷ್ಟು ಹಣ ಪಡೆದು ಸ್ವಲ್ಪ ಅವಧಿ ಮಾಡಿಸಿದರೆ ಹೇಗಾದರೂ ಮಾಡಿ ಉಳಿದುದನ್ನು ತೆರುತ್ತೇನೆ" ಎಂದು ಬೇಡಿದಳು. ಪಟೇಲನು ಮನಸ್ಸು ಮಾಡಿದರೆ ಆಗ ಬಹುದಿತ್ತು. ಅವನು ಅವಳ ಮಾವನ ಕೈಕೆಳಗಿನವನು. ಹೀಗಾಗಿ ತನ್ನಿಂದೇನೂ ಸಾಧ್ಯವಿಲ್ಲವೆಂಬ ಕಟುವಾಯಿ ಮಾತನ್ನು ನುಡಿದನು. ಕಾವೇರನಿಗೆ ಮೈಮೇಲೆ ಆಕಾಶ ಕಳಚಿ ಬಿದ್ದಂತಾಯ್ತು. ಒಮ್ಮೆ ಅಣ್ಣನಾರೆಂದು ಹುಡುಕಿ ಎಲ್ಲವನ್ನು ತಿಳಿಯಪಡಿಸಬೇಕೆಂಬ ಆತುರ ಬಂತು. ಆದರೆ, ತಂದೆ, ಮನೆ ಬೇಡವಾದವನಿಗೆ ತಂಗಿಯ ಮಾತು ಹಿಡಿದೀತೆ ಎಂದು ಯೋಚಿಸುತ್ತ, ಮನೆ ಹರಾಜಾಗುವುದು ಖಂಡಿತವೆಂಬ ದುಃಖದಿಂದ ಕೊರಗಿದಳು.

ಮಾಧವನು ಮೇಲಧಿಕಾರಿಯ ಅಪ್ಪಣೆಯನ್ನು ನೋಡಿ ಊರಿಗೆ ಹೋಗಬೇಕಲ್ಲ ಎಂದು ಕೊರಗಿದನು. ತನ್ನ ಬಳಿಗೆ ಬಂದ ರಿಕಾರ್ಡನ್ನು ತೆರೆಯುತ್ತ ವಿವರವನ್ನೆಲ್ಲಾ ಕೂಲಂಕೂಷವಾಗಿ ತಿಳಿಯು

(೧೧ನೇ ಪುಟಕ್ಕೆ ಮುಂದುವರಿದಿದೆ.)

"ನಾನು ಹಿಟ್ಲರನ ಪರವಾಗಿ ವಾದಿಸುವೆ"

ನಾನು ಹಿಟ್ಲರನಿಗಾಗಿ ಅರಿಕೆಮಾಡಿಕೊಳ್ಳುವೆ. ಹೌದು ಈಗ ಜರ್ಮನಿಯ 'ಫ್ಯೂರರ'ನೂ, ಒಂದು ಕಾಲದಲ್ಲಿ ಸಾಮಾನ್ಯ ಸಿಪಾಯಿಯೂ, ಗೋಡೆಗೆ ಬಣ್ಣ ಬಳಿಯುವವನೂ ಆಗಿದ್ದು ದೈವೇಚ್ಛೆಯಿಂದ ಜರ್ಮನಿಯ ಕೊಲೆ ಕೂಟದ ಶ್ರೇಷ್ಠ ನಾಯಕನಾಗಿ ಕ್ರೈಸ್ತ ನಾಗರೀಕತೆಯ ರಕ್ಷಣೆಗಾಗಿ ದೈವಸಂಕಲ್ಪವನ್ನು ಹೊಂದಿದ ಹಿಟ್ಲರನ ಪರವಾಗಿನಾನು ವಾದಿಸುವೆ-ಸ್ಟೇಲಿನನ ಪರವಾಗಿ ಅಲ್ಲ, ತಿಳಿಯಿರಿ.

ಈ ಪ್ರಜಾಪ್ರಭುತ್ವಗಳ ಘೋರ ಅಡವಿಯಲ್ಲಿ ನನ್ನದೊಂದು ಅರಣ್ಯರೋಧನವಾಗಬಹುದು. ಎಲ್ಲಾ ಮಹಿಳೆಯರೂ ಇಂದು 'ಅವನನ್ನು ಗಲ್ಲಿಗೇರಿಸಿರಿ' ಎಂದು ಬೊಬ್ಬಿಡುವಲ್ಲಿ ನನ್ನದೊಂದು ಏಕಾಂತ ರೋಧನವಾಗಿರಬಹುದು.....ಆದರೆ ಸ್ವಲ್ಪ ತಾಳಿರಿ!

ಒಂದು ಕ್ಷಣ ತಾಳಿರಿ. ಈ ಪ್ರಜಾಪ್ರಭುತ್ವಗಳಿಗೆ ಮನೋ ಭ್ರಾಂತಿ ಉಂಟಾಗಿದೆಯೇನು? ಈ ದಿಗ್ವಿಜಯದ ಮಹತ್ವಾಕಾಂಕ್ಷೆಯಲ್ಲಿ ಇವರು ಸತ್ಯಾ ಸತ್ಯ ತಾರತಮ್ಯಗಳ ವಿವೇಕವನ್ನು ಕಳಕೊಂಡಿರುವರೇನು?

ಸ್ಟೇಲಿನರು ಸೈನ್ಯಕ್ಕೆ ಕೊಟ್ಟ ಆಜ್ಞೆಯನ್ನು ನೋಡಿದರೆ ರಷ್ಯನರು ತಡೆಯುವವರಲ್ಲವೆಂದು ತೋರುತ್ತದೆ. ಸೇನಾಪತಿಗಳಾದ ಝುಕೋವ್, ಕೋನಿವ್, ಚೆರ್ನಿಯಾಕೊವ್‌ಸ್ಕಿ ಮತ್ತು ರೊಕೊಸೊವ್ಸ್ಕಿಯವರು ಬರ್ಲಿನಿನ ಹೆಬ್ಬಾಗಿಲನ್ನು ತಟ್ಟುತ್ತಿರುವರು. ಕೆಂಪು ಪಡೆಗಳು ಜರ್ಮನ್ ಕೋಟೆ ಮಾರ್ಗಗಳನ್ನು ಹಾಯುತ್ತಿರುವರು.

ಅಯ್ಯೋ ನಾಸ್ತಿಕ ಪಿಶಾಚಿಗಳಾದ ಬೋಲ್ಶೆವಿಕರು ಬರ್ಲಿನಿನಲ್ಲಿ! ಆ ದೈವದ್ರೋಹಿಗಳು ಓಡರ್ ವಿಶ್ಚುಲಾ ನದಿದ್ರೋಣಗಳನ್ನು ದಾಟಿದರೆ? ಹಾಯ್ ಪವಿತ್ರವಾದ ಸ್ವಸ್ತಿಕದ ಸ್ಥಾನದಲ್ಲಿ ಕುಡುಗೋಲು ಸುತ್ತಿಗೆಯ ಧ್ವಜ ಪತಾಕೆಗಳು ಮೆರೆಯುವವೆ?

ಇಷ್ಟಾದರೂ ನೀವಿನ್ನೂ ಹರ್ಷವದನರಾಗಿರುವಂತೆ ತೋರುತ್ತದೆ. ನಿಜವಾಗಿಯೂ ಆನಂದಕ್ಕೆ ಇದು ಸತ್ಕಾಲವೆ? ಪ್ರಜಾಪ್ರಭುತ್ವ ಮಹಾಶಯನೆ, ನಿನ್ನ ಈ ವಿಜಯವು ಯಾರ ಖರ್ಚಿನಲ್ಲೆಂಬುದನ್ನು ತಿಳಿದಿರುವೆಯಾ? ಹಿಟ್ಲರನಂಥಾ ಅವತಾರಿ ಪುರುಷನು ನರಕಕ್ಕಿಳಿಯುವಾಗ, ನಿಜವಾದ ಸೈತಾನನಾದ ಸ್ಟೇಲಿನನು ಬರ್ಲಿನಿನಲ್ಲಿ ತಳವೂರುವಾಗ ಆತ್ಮ ಸಂತೋಷ ಪಡುವ ಅದಾವ ಜೀವಂತ ಕ್ರೈಸ್ತನಿರುವನು?

◆ ◆ ◆

ಹಾ! ರಕ್ಷಿಸಿರಿ, ರಕ್ಷಿಸಿರಿ! ನಾನು ಹಿಟ್ಲರನ ಪರವಾಗಿ ಅರಿಕೆಮಾಡುತ್ತೇನೆ. ಅವನ ಪೂರ್ವ ಸ್ನೇಹಿತರೇ ನೀವೆಲ್ಲರುವಿರಿ. ಸ್ವಾಮಿ, ಸಾಮವೇಲ್ ಹೋರರೇ ರಕ್ಷಿಸಿರಿ, ಜನರಲ್ ಫ್ರೆಂಕೊ ಮಹಾಶಯನೇ ರಕ್ಷಿಸು. ಚೆಂಬರ್ಲೇನರು ವಿಧಿವಶರಾಗಿರುವರು. ಲೋರ್ಡ್ ಹೆಲಿಫೇಕ್ಸ್ ಸಾಹೇಬರಾದರೊ ಅತೀ ದೂರದಲ್ಲಿ ಹೋಗಿನಿಂತಿದ್ದಾರೆ. ಹೋರ್ ಬೇಲಿಷರು ಬರೀ ಗುಲ್ಲಿನಲ್ಲೇ ತೃಪ್ತಿಪಟ್ಟುಕೊಂಡಿದ್ದಾರೆ. .... ಮತ್ತೆ ಆ ಸೈತಾನನು ಹತ್ತಿರ ಹತ್ತಿರಕ್ಕೆ ಬರುತಿದ್ದಾನೆ. ಆ ಪ್ಲೇಗಿನ ರೋಗಾಣುಗಳು ಗಂಡಾಂತರದ ದೂರದಲ್ಲಿರುವರು.

ನಮ್ಮ ಸೈನ್ಯಗಳು ಆದೆಲ್ಲಿವೆ? ಇನ್ನೂ ಅವು ಸಿಗ್‌ಫ್ರೀಡ್ ಕೋಟೆಯ ಬಳಿ ಕೆದರುತ್ತಿರುವದೆ? ನಮ್ಮ ರಾಜಕೀಯ ಪ್ರಭೃತಿಗಳು ಎಲ್ಲಿರುವರು?..... ವಿಶ್ವಭಕ್ಷಕನಾದ ಹಿಟ್ಲರನು ಜಜ್ಜಲ್ಪಡುವುದೆ?

ನಾನು ಹಿಟ್ಲರನಿಗಾಗಿ ಬೇಡುವೆ. ನಮ್ಮ ರಕ್ಷಕನನ್ನು ನಾವಿಂದು ರಕ್ಷಿಸೋಣ. ಆರ್ಯನಾದ ಎಡೋಲ್ಫಸನು ಕೊಮ್ಯುನಿಸ್ಟರನ್ನೂ ಖೂನಿಕಾರನನ್ನೂ ಅವನು ಕೊಂದುಹಾಕಲಿಲ್ಲವೆ? ಸ್ಟೇಲಿನನ ಹಾಗೆ ಅವನು ಧರ್ಮ ಗುರುಗಳನ್ನು ಸಾವಿರಗಟ್ಲೆಯಲ್ಲೆಂಬಂತೆ ಕೊಂದು ಹಾಕಿಲ್ಲ. ನಮ್ಮ ಧರ್ಮ ಗ್ರಂಥವಾದ ಬ್ಯಾಬಲನ್ನು ದಶ ಸಹಸ್ರಗಳೆಲ್ಲೆಂಬಂತೆ ಸುಟ್ಟು ಹಾಕಿರುವುದಿಲ್ಲ.

ಕ್ರೈಸ್ತ ಧರ್ಮಕ್ಕಾಗಿ ಸ್ಪೈನನ್ನು ಯಾರು ರಕ್ಷಿಸಿದವನು? ಎಡೋಲ್ಫ್ ಹಿಟ್ಲರನು. ಲೀಗ್ ಆಫನೇಶನ್ಸ್ ಎಂಬ ಆ ಹಳೆ ದಾದಿಯನ್ನು ಕೊಂದು ಹಾಕಿದವನು ಜೀವಿಸಲು ಸ್ವಲ್ಪ ಜಾಗಕೊಡಿ ಎಂದ ಹಿಟ್ಲರನೋ, ಚಿಕ್ಕ ಫಿನ್‌ಲೆಂಡನ್ನು ನುಂಗಿದ ಸ್ಟೇಲಿನನೋ?

ಲಂಡನಿನ 'ಪೋಲ್ ಸರಕಾರವನ್ನು ಚೆನ್ನಾಗಿ 'ಅರಿತು' ಕೊಂಡವನು ಯಾರು? ಲಬ್ಲಿನಿನ ರಾಜ್ಯದ್ರೋಹಿಗಳನ್ನು ಪ್ರೋತ್ಸಾಹಿಸುವವರು ಯಾರು? ನಮ್ಮನ್ನು ವಿಮಾನದಾಳಿಯ ರಕ್ಷಣಾ ಗುಹೆಗಳಲ್ಲಿ ಕೊಲ್ಲಲು ಭಯಂಕರ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿರುವಾಗ ನಮ್ಮ ಕಂಪೆನಿಗಳಿಗೆ ಒಳ್ಳೇ ಲಾಭದ ಪಾಲನ್ನು ಹಂಚಿಕೊಟ್ಟವನು ಯಾರು? ಝಾರನ ಕಾಲದಲ್ಲಿ ಆದ ಸಾಲವನ್ನು ಕೊಡುವುದಿಲ್ಲವೆಂದು ಹೇಳಿದವನು ಯಾರು—ಅವನೇ ಸ್ಟೇಲಿನನು.

◆ ◆ ◆

ನಾಜೀಗಳು ನಮಗೆ ತಮ್ಮ ಒಪೆಲ್ ಕಾರ್ಖಾನೆಗಳಲ್ಲಿ ಇಲ್ಲವೆ ಸ್ಕೋಡಾ ಕಬ್ಬಿಣ ಸಂಸ್ಥೆಯಲ್ಲಿ ನಮಗೊಂದು ಪಾಲನ್ನು ಕೊಟ್ಟರೂ ಕೊಡಬಹುದು. ಆದರೆ ಆ ಕೆಂಪು ಮೃಗಗಳು ರುಮೇನಿಯದಲ್ಲಿರುವ ನಮ್ಮ ಎಣ್ಣೆ ಬಾವಿಗಳನ್ನು ಅಪಹರಿಸುತ್ತಿರುವರು. ಇರಾನಿನ ಎಣ್ಣೆ ಗನಿಗಳಲ್ಲೂ ಅವರು ಆಳವಾಗಿ ಕೈಯೂರಿದ್ದಾರೆ.

ನಾಜೀಗಳು ಭೂಭಾರಕರಾದ ಸ್ತ್ರೀ ಪುರುಷರನ್ನಷ್ಟೇ ಕೊಂದರು. ಅನಾವಶ್ಯಕರಾದ ಮಕ್ಕಳನ್ನು ಮಾತ್ರ ಅವರು ಸುಟ್ಟು ಹಾಕಿರುವರು. ಆದರೆ ಆ ಕೊಮ್ಯುನಿಸ್ಟ್ ಪೆಡಂಭೂತಗಳು ಎಲ್ಲಾ ಶತ್ರುಗಳನ್ನೂ ತಾರತಮ್ಯವಿಲ್ಲದೆ ಕೊಲ್ಲುವರು. ಅವರು ತಮ್ಮ ಸ್ವಂತ ಪ್ರದೇಶಗಳನ್ನೇ ಧ್ವಂಸ ಮಾಡಲು ಹಿಂದು ಮುಂದೆ ನೋಡದಂತಾ ಕ್ರೂರಿಗಳು. ಹಿಟ್ಲರನನ್ನು ಹೊಡೆಯುವ ನೆವನದಿಂದ ಅವರು ನಮ್ಮ ಶಸ್ತ್ರಾಸ್ತ್ರ ಗುಂಡು ಮದ್ದುಗಳನ್ನು ಒಳಗೆ ದಾಸ್ತಾನು ಇಟ್ಟರು. ಕಡೆಗೆ ಈಗ ನೋಡಿದರೆ ನಿಜವಾಗಿ ಅವನೊಂದಿಗೆ ಜಗಳಮಾಡುತ್ತಲಿದ್ದಾನೆ!

ಜಪಾನಿಗಳಂತೆ ನಾಜೀಗಳು ತಮ್ಮ ಸೆರೆಯಾಳುಗಳನ್ನು ಚಿತ್ರಹಿಂಸೆ ಮಾಡಿರಬಹುದು, ಇಲ್ಲವೆ ವಿಷಗಾಳಿ ಗುಹೆಗಳಲ್ಲಿ ತೂರಿರಬಹುದು. ಆದರೆ ಈ ರಷ್ಯನರು ಸೆರೆಯಾಳುಗಳಿಗೆ ಅಂತರಾಷ್ಟ್ರೀಯ ಮನ್ನಣೆಗೆ ಅಯೋಗ್ಯವಾದ ರಾಜಕೀಯ ತತ್ವಗಳನ್ನು ಕಲಿಸುತ್ತಾರೆ.

ಯುರೋಪ್ ಕೋಟೆಯ ಶ್ವೇತಾಗಾರಗಳು ಕುಸಿದು ಬೀಳಹತ್ತಿವೆ, ಅಸ್ಯಾದಪುಂಡ ತಂಡಗಳು ಬರ್ಲಿನ್ ಬಳಿ ಇಳಿದಿವೆ. ನಾನು ಹಿಟ್ಲರನಿಗಾಗಿ ಅಂಗಲಾಚಿ ಬೇಡುವೆ. ಯುರೋಪಿನ ಶ್ರೇಷ್ಠ ರಾಜಧಾನಿಯು 'ಕೀಳು ರಕ್ತ'ದವರ ಕೈಸೇರುವುದು. ಹಿಟ್ಲರನು "ನಿಜವಾದ ಪವಿತ್ರಾತ್ಮ ಸ್ವರೂಪಿ" ಏಕಾಗಿರಬಾರದು?

ರಷ್ಯನ್ ತೋಳ ಪಡೆಗಳು ತಮ್ಮ ಕೊಲೆ ಸುಲಿಗೆಯನ್ನಾರಂಭಿಸುವ ಮುಂಚೆ ನಾವು ನಮ್ಮೀ ಸಹೋದರನ ತಪ್ಪನ್ನು ಕ್ಷಮಿಸಬಾರದೇಕೆ?

ಜೋನ್‌ಸನ್

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ· ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

The South Canara Central Co-operative Bank, Ltd., Mangalore.
SEASON DEPOSISTS
of Rs. 10,000/ and above for six months will be accepted at 3¼% up to 31st March 1945.
U. Shantha Rama Rao,
2-12-1944 Secretary

ಜನರಲ್

ಡಿ'ಗೋಲೆಯುವರು

ಡಿ'ಗೋಲೆರವರು ಒಳ್ಳೆ ಭವಿಷ್ಯವಾದಿಗಳು. ಫ್ರಾನ್ಸನ್ನು ಜರ್ಮನ್ ಆಕ್ರಮಣದಿಂದ ರಕ್ಷಿಸುವರೆ ಮೆಜಿನೊ ಗೋಡೆಯ ರಚನೆಯಾಗುತ್ತಿರುವಾಗ, ಫ್ರಾನ್ಸಿನ ಕಾವಲಿಗಾಗಿ ಸೇನಾಬಲವನ್ನು ಭೂಗರ್ಭದೊಳಗೆ ಬಚ್ಚಿಡುವ ಯೋಜನೆಗಳು ನಡೆಯುತ್ತಿರುವಾಗ, ಮುಂದಿನ ಯುದ್ಧವು ಮೋಟಾರ್ ವಾಹನಾದಿ ಯುದ್ಧವಾಗುವುದೆಂದು, ಯಾಂತ್ರಿಕ ಯುದ್ಧವಾಗುವುದೆಂದು, ಡಿ'ಗೋಲೆಯವರು ಆಗ ಅಧಿಕಾರದಲ್ಲಿದ್ದ ಸರಕಾರವನ್ನು ಎಚ್ಚರಿಸಿದ್ದರು. ಆದರೆ ಆಗಿನ ಫ್ರೆಂಚ್ ಧುರೀಣರು ಅವರ ಭವಿಷ್ಯವಾಣಿಗೆ ಕಿವುಡು ಕಿವಿಯನ್ನು ಕೊಟ್ಟರು.

ಡಿ'ಗೋಲೆಯವರ ಅಂದಿನ ಭವಿಷ್ಯವಾಣಿಯು ಎಷ್ಟು ಸತ್ಯತರದಾಯಿತ್ತೆಂಬುದು ಇಂದು ಇಡೀ ಜಗತ್ತಿಗೆನೆ ತಿಳಿದ ವಿಷಯವಾಗಿರುತ್ತದೆ.

ಡಿ'ಗೋಲೆರವರು, ಭವಿಷ್ಯವಾದಿಗಳು ಮಾತ್ರವಲ್ಲ ವ್ಯವಹಾರ ಚತುರರು ಆಗಿರುವರು. ಪೆರಿಸ್ ನಗರವು ಜರ್ಮನ್ ಹಿಡಿತದಿಂದ ವಿಮೋಚಿಸಲ್ಪಟ್ಟ ಒಡನೆ, ಅವರು ಅಲ್ಲಿಗೆ ತೆರಳಿದರು. ಹದಿನೈದು ದಿವಸಗಳ ಸಮಯ, ಗೂಢವಾಗಿ ಕಾರ್ಯಿಸುವ ವಿರೋಧ ಪಕ್ಷಗಳ ಮುಖಂಡರೊಡನೆ ವ್ಯವಹಾರ ನಡೆಯಿಸಿ, ಅವರೊಡನೆ ಒಂದು ಒಪ್ಪಂದದ ಇತ್ಯರ್ಥಕ್ಕೆ ಬರುವವರಾದರು. ಮಹಾಕ್ಷೋಭೆ ಉಂಟಾಗುವುದನ್ನು ತಡೆದರು. ಎಡಪಕ್ಷದ ನೀತಿಗೆ ಸರಿಯಾಗಿ ವರ್ತಿಸುವ ಕುರಿತು ತಮ್ಮ ಸಮ್ಮತಿಯನ್ನು ಸೂಚಿಸಿರುವರು. ಇದು ಬರೆ ಸೂಚನೆ ಅಲ್ಲ. ತಾವು ಮುಂದಕ್ಕೆ ನಡೆಯಿಸಲಿರುವ ಸುಧಾರಣೆಗಳ ಕುರಿತು ಒಂದು ಪಟ್ಟಿಯನ್ನು ಹೊರಡಿಸಿರುವರು. ಈ ಪಟ್ಟಿಯಿಂದ ಎಡಪಕ್ಷದವರ ಕೋರಿಕೆಗಳನ್ನು ತೃಪ್ತಿಪಡಿಸುವ ವಿಷಯಗಳನೇಕ ಕೂಡಿಸಲಾಗಿವೆ.

ಫ್ರಾನ್ಸು ಭಿನ್ನತೆಯ ದೇಶ. ಈ ಭಿನ್ನತೆಗಳಿಂದಲೆ ಅಲ್ಲಿ ಸಾಮಾಜಿಕ ಗದ್ದಲದ ಉತ್ಪಾದನೆಗೆ ಒಳ್ಳೆ ಅವಕಾಶಗಳಿವೆ. ಆದರೂ ಈಗ ಫ್ರಾನ್ಸು ಅತೀ ಶಾಂತವಾಗಿ ವರ್ತಿಸುತ್ತಿದೆ. ಇದಕ್ಕೆ ಕಾರಣ ಡಿ'ಗೋಲೆರವರ ಉತ್ತಮ ವ್ಯಕ್ತಿತ್ವಯಿರಬಹುದು.

ಯುರೋಪದ ಎಡಪಕ್ಷಗಳಂತೆ, ಫ್ರಾನ್ಸಿನ ಎಡಪಕ್ಷಕ್ಕೂ ಫ್ರಾನ್ಸಿನ ವಸಾಹತುಗಳನ್ನು ಮರಳಿ ಪಡಿಯುವ ಬಲವಾದ ಇಚ್ಛೆಯು ಇರುವುದು. ಫ್ರೆಂಚ್ ಸಾಮ್ರಾಜ್ಯವನ್ನು ರಕ್ಷಿಸುವ ಕುರಿತು ಕುತೂಹಲವು ಡಿ'ಗೋಲೆಯವರಲ್ಲಿದೆ. ಫ್ರೆಂಚರು ಸ್ವಾತಂತ್ರ್ಯ ಕುರಿತು ಅವರು ಹೆಣಗಾಡುತಿದ್ದರೂ, ಫ್ರೆಂಚರ ಆಧೀನದಲ್ಲಿರುವ ಸಿರಿಯಾದ ಸ್ವಾತಂತ್ರ್ಯ ಸಮಸ್ಯೆ ಅವರು ಅಷ್ಟು ಮಹತ್ವಕೊಟ್ಟಂತೆ ಕಾಣುವುದಿಲ್ಲ.

ಜರ್ಮನ್ ಆಕ್ರಮಣದ ಕಾರಣವಾಗಿ ಫ್ರಾನ್ಸಿನ ೨,೬೦೦,೦೦೦ ಮತದಾರರು ಜರ್ಮನಿಯಲ್ಲಿರುವರು. ಅವರು ಮರಳಿ ಬರುವ ತನಕ ಯಾವತ್ತು ರಾಷ್ಟ್ರೀಯ ಚುನಾವಣೆಗಳು ಬೇಡವೆಂದು ಜನರಲ್ ಡಿ'ಗೋಲೆರವರ ಸದ್ಯದ ಧೋರಣವು.

ಪ್ರಚಲಿತ ಸಮಾಚಾರಗಳು

ಕೆಲಸ ಹೆಚ್ಚಾಗಬೇಕು, ಕೂಲಿ ಹೆಚ್ಚಾಗಬೇಕು, ಸಿದ್ಧವಾದ ಒಡವೆಗಳು ಕಡಿಮೆ ಧಾರಣೆಯಲ್ಲಿ ಮಾರಾಟವಾಗಬೇಕು. ಈ ಸಿದ್ಧಾಂತವನ್ನು ಅನುಸರಿಸಿ ಕೆಲಸಗಾರರು ಯೂನಿಯನ್ನಿನ ಮೂಲಕ ಮ್ಹಾಲಕರೊಡನೆ ಸಹಕರಿಸಿ, ಅಮೇರಿಕಾದ ಕೈಗಾರಿಕೆಗಳು ನಡೆಯುತ್ತಿವೆ. ಒಡವೆಗಳ ಧಾರಣೆಯು ಕಡಿಮೆಯಾದರೆ ಮಾತ್ರ ತಮ್ಮ ಒಡವೆಗಳಿಗೆ ಭಹೀರ್ ದೇಶಗಳ ಮಾರ್ಕೇಟುಗಳಲ್ಲಿ ಅವಕಾಶ ದೊರಕುವುದೆಂದೂ, ಕೈಗಾರಿಕೆಗಳ ಮ್ಹಾಲಕರೂ, ಕೆಲಸಗಾರರೂ ನಂಬಿರುವರು. ಕೈಗಾರಿಕೆಗಳ ಮೂಲಕ ದೇಶದ ಸಾಂಪತ್ತಿಕ ಸ್ಥಿತಿಯನ್ನು ಉದ್ಧರಿಸಿಕೊಂಡು ತಮ್ಮ ಜೀವನಕ್ರಮದ ಮಟ್ಟವನ್ನು ಏರಿಸಬೇಕೆಂದೂ, ಸಂಯುಕ್ತ ಅಮೇರಿಕಾದ ಉದ್ದೇಶವಿರುವುದು. ಈ ಯುದ್ಧವು ನಡೆಯುತ್ತಿದ್ದ ಹಾಗೆ ಯುದ್ಧೋತ್ತರದ ದಿನಗಳ ವ್ಯಾಪಾರದ ಕುರಿತು ಅವರು ಆಲೋಚಿಸುತ್ತಿರುವರು. ಬ್ರಿಟನಿನಲ್ಲೂ ಇದೇ ತರದ ಭಾವನೆಯು ಮೂಡಿರುತ್ತದೆ. ಅಂತರಾಷ್ಟ್ರೀಯ ಹಿತದೃಷ್ಟಿಯಿಂದಲೆ ಈ ಮುಂದಿನ ವ್ಯಾಪಾರದ ಯೋಜನೆಗಳು ಕೈಗೊಳ್ಳಲಾಗುವುದೆಂದು ಹೇಳಲಾಗಿದೆ. ಅದರೆ ಕೈಗಾರಿಕೆಗಳು ಯಂತ್ರೋಪಕರಣಗಳನ್ನು ಇನ್ನೂ ವೃದ್ಧಿಕರಿಸಿ, ಸಿದ್ಧತೆಯನ್ನು ಅತಿರೇಖ ಹೆಚ್ಚಿಸುವುದರಿಂದ, ಜಗತ್ತಿನ ಸಾಂಪತ್ತಿಕ ಸ್ಥಿತಿಯು ಸಂಪೂರ್ಣ ಕೆಟ್ಟುಹೋಗದೆ? ಯಂತ್ರಗಳನ್ನು ಬಳಸುವುದನ್ನು, ಸಮಾಜಕ್ಕೆ, ಜಗತ್ತಿಗೆ ಘಾತುಕವಾಗದ ತರದಲ್ಲಿ ಅಂಕಿತದಲ್ಲಿಟ್ಟುಕೊಳ್ಳುವ ಕ್ರಮಗಳು ಬೇಡವೆ? ಜನರು ತಮ್ಮ ಜೀವನಕ್ರಮಗಳನ್ನು ಸುಧಾರಿಸಿಕೊಳ್ಳುವುದಕ್ಕೆ ಒಂದು ಮಿತಿ ಬೇಡವೆ? ಅಮೇರಿಕಾವು ಅಮೇರಿಕಕ್ಕಾಗಿಯೆ ಬ್ರಿಟನೂ, ಬ್ರಿಟನಿಗಾಗಿಯೇ ಆಲೋಚಿಸುವ ಬದಲಾಗ ವಿಶಾಲಪಕ್ಷದ ಹಿತದೃಷ್ಟಿಯಿಂದ ವರ್ತಿಸುವುದು ಉತ್ತಮವಲ್ಲವೆ? ಲೋಕದಲ್ಲಿ ಶಾಂತಿಯು ನೆಲೆಗೊಳ್ಳಬೇಕಾದರೆ ವಿಶ್ವಬಾಂಧವ್ಯದ ನೀತಿಯಮೇಲೆ ಹೊಂದಿಕೊಂಡಿರುವ ಸಾಮ್ಯವಾದವು ಬೆಳೆಯುವುದು ಅವಶ್ಯವಲ್ಲವೆ.

* * *

ಸೋವಿಯಟ್ ರಶಿಯಾದಲ್ಲಿ ವೈದ್ಯಕೀಯ ವಿಚಾರದಲ್ಲಿ ಪ್ರಗತಿಯು ತುಂಬಾ ನಡೆದಿದ್ದು, ಪ್ರಕೃತದ ಯುದ್ಧದಲ್ಲಿ ಸೈನಿಕರು ಹೋರಾಟದಲ್ಲಿ ತಮಗೆ ಒದಗಬಹುದಾದ ಗಾಯ, ಪೆಟ್ಟು ಇತ್ಯಾದಿಗಳ ಕುರಿತು ನಿಶ್ಚಿಂತಭಾವದಿಂದ ವರ್ತಿಸುತ್ತಿರುವರು. ತಮಗೆ ಹಾನಿ ಒದಗಿದಲ್ಲಿ ಮೃತ್ಯುವಿನಿಂದ ಪಾರುಮಾಡಲು ಅತ್ಯುತ್ತಮವಾದ ವೈದ್ಯಕೀಯ ವ್ಯವಸ್ಥೆಯು ತಮ್ಮ ಹಿಂದೆ ಕಾದಿದೆ ಎಂಬ ಜ್ಞಾನದಿಂದ ತುಂಬಿದವರಾಗಿ, ಅವರು ಬಹಳ ಹುರುಪಿನಿಂದ ಹೋರಾಡುತ್ತಿರುವರು. ವೈದ್ಯಕೀಯ ವಿಚಾರದಲ್ಲಿ ಅವಿಶ್ರಾಂತ ಪರಿಶೋಧನೆಗಳು ಸೋವಿಯಟ್ ರಷ್ಯದ ಅನೇಕ ಕಡೆಗಳಲ್ಲಿ ಧಾರಾಳ ಮಂದಿ ಪ್ರವೀಣ ವೈದ್ಯಕೀಯ ಜನರಿಂದ ನಡೆಯಿಸಲಾಗಿ, ಮಾನವನ ದೇಹದ ಯಾವತ್ತೂ ಪೀಡೆ, ಹಾನಿಗಳನ್ನು ಅತ್ಯಂತ ಸುಲಭದಲ್ಲಿ, ಖಂಡಿತ ಪರಿಣಾಮಕಾರಿಯಾಗುವಂತೆ, ಔಷಧಿಗಳೂ ಚಿಕಿತ್ಸೆಯ ಕ್ರಮಗಳೂ ಧಾರಾಳ ಸಂಖ್ಯೆಯಲ್ಲಿ ಕಲ್ಪಿಸಲಾಗಿವೆ. ರೋಗಗಳು ತಟ್ಟದಂತೆ ಅವುಗಳನ್ನು ತಡೆಯುವ ಅನೇಕ ಕ್ರಮಗಳು ಕಂಡುಹುಡುಕಲಾಗಿ, ಅವುಗಳು ರೂಢಿಗೆ ತರಲಾಗಿ ರಷ್ಯನರನ್ನು ಉಚ್ಛ ಅರೋಗ್ಯವುಳ್ಳ ದೃಢಕಾಯರನ್ನಾಗಿ ಮಾಡಿಬಿಟ್ಟಿದೆ. ವಿದ್ಯಾಕ್ಷೇತ್ರದಲ್ಲೂ ಮಹಾಪ್ರಗತಿ ನಡೆದ ದೆಸೆಯಿಂದ, ದೃಢಕಾಯರಲ್ಲಿ, ಅತ್ಯಂತ ವಿವೇಕದ ತಿಳುವಳಿಕೆಯು ಉಂಟಾಗಿರುತ್ತದೆ. ಕೆಂಪು ಸೇನೆ ಅಪ್ರತಿಮ ವಿಜಯದ ರಹಸ್ಯವು ಸೋವಿಯಟ್ ರಷ್ಯದ ಸುಧಾರಿತ ಜೀವನದಲ್ಲಿ ಅಡಕವಾಗಿರುತ್ತದೆ.

* * *

ಸೋತ ಜರ್ಮನಿಯ ಕುರಿತು ಅಮೇರಿಕದ ಧೋರಣವು ಯಾವ ತರದಿರಬೇಕೆಂದು, ಎಂಬುದರ ಕುರಿತು ಅಲ್ಲಿನ ಪತ್ರಿಕೆಗಳಲ್ಲಿ ಅನೇಕ ಲೇಖಗಳೂ ಅಭಿಪ್ರಾಯಗಳೂ ಹೊರಡುತ್ತಿವೆ. ಚುಟುಕಿನಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ:

ಜರ್ಮನರಲ್ಲಿ ಅಂಟಿರುವ "ಶ್ರೇಷ್ಟ ನಾವು ಭಾವ"ವು ಸಂಪೂರ್ಣ ಹೋಗಲಾಡಿಸಬೇಕು. ಜರ್ಮನಿಯ ನಿಶಸ್ತ್ರಕರಣವು ಶಾಶ್ವತ ತರದ್ದಾಗುವಂತೆ ಮತ್ತು ಜರ್ಮನ್ ಪ್ರಜೆಗಳಲ್ಲಿ ಅವರು ಸೋತ ಕುರಿತು ವಿಷಯವು ಒಳ್ಳೆ ಮಂದಟ್ಟಾಗುವಂತೆ, ಒಳ್ಳೆ ತರದಲ್ಲಿ ತಮ್ಮ ದೇಶದ ಆಡಳಿತವನ್ನು ನಡೆಯಿಸುವ ಕುರಿತು ಅವರ ಪರಿವರ್ತನವಾಗುವ ತನಕ ಇಡೀ ಜರ್ಮನಿಯೊಳಗೆ ಮಿತ್ರರ ಸೈನ್ಯಗಾವಲು ಇಡಲಾಗಬೇಕು.

ಮಿಲಿಟರಿ ವಿಚಾರಣಾ ಮಂಡಳಗಳ ಎದುರು, ಈ ಎರಡನೆ ಮಹಾಯುದ್ಧಕ್ಕೆ ಕಾರಣರಾದ ಜರ್ಮನ್ ಧುರೀಣರ ವಿಚಾರಣೆಯು ನಡೆದು, ಅವರವರ ತಪ್ಪಿತಗಳಿಗೆ ಸಂಯಾದ ಶಿಕ್ಷೆಗಳು ವಿಧಿಸಲಾಗಬೇಕು.

ಹಿಟ್ಲರನ ಆಜ್ಞೆಯ ಮೇಲೆ ರಷ್ಯದ ಮತ್ತು ಯುರೋಪದ ಇತರ ದೇಶಗಳ ಮೇಲೆ ಕೈಮಾಡಿ, ಅಲ್ಲಿ ಅತ್ಯಂತ ಅಮಾನುಷ ತರದ ಧ್ವಂಸಕಾರ್ಯಗಳನ್ನು ನಡೆಯಿಸಿದ ಕಾರ್ಯಗಳಿಗೆ ಪ್ರಾಯಶ್ಚಿತ್ತವಾಗಿ, ಆ ದೇಶಗಳ ಪುನರ್ರಚನೆಯ ಕಾರ್ಯಕ್ಕೆ ಬೇಕಾದ ಸಕಲ ಸಲಕರಣೆ, ವಸ್ತು ಒಡವೆಗಳನ್ನು ಜರ್ಮನ್ ಕೈಗಾರಿಕೆಯಿಂದ, ಜರ್ಮನರ ದುಡಿತದಿಂದಲೆ ಒದಗಿಸುವಂತೆ ಏರ್ಪಾಡುಗಳಾಗಬೇಕು. ಪ್ರಕೃತದ ಯುದ್ಧಕ್ಕಾಗಿ ಜರ್ಮನರು ಹೇಗೆ ಸಿದ್ಧತೆಯ ಕಾರ್ಯಗಳನ್ನು ನಡೆಯಿಸಿದರೊ, ಅದಕ್ಕಿಂತ ಇಮ್ಮಡಿಯಾಗಿ ಅವರು ತಮ್ಮ ಕೈಗಳಲ್ಲಿ ಲಯ ಹೊಂದಿದ ದೇಶದ ಪುನರ್ರಚನೆಯ ಕಾರ್ಯದಲ್ಲಿ ದುಡಿಯುವಂತೆ ಮಾಡಬೇಕು. ಈ ಕಾರ್ಯಗಳು ಮೋಸ ದೋಷಗಳಿಲ್ಲದೆ ನಡೆಯುವಂತೆ ಈ ಕೈಗಾರಿಕೆಗಳು ಮಿತ್ರರಿಂದ ನೇಮಿಸಲಾದ ಜನರ ಮೇಲ್ತನಿಯಲ್ಲಿ ನಡೆಯತಕ್ಕುದು. ಅಂದರೆ ಜರ್ಮನಿಯ ಮುಂದಿನ ಸಾಂಪತ್ತಿಕ ಮತ್ತು ಹಣದ ವಿಚಾರ ಸಂಪೂರ್ಣ ಮಿತ್ರರ ಹತೋಟಿಯಲ್ಲಿರತಕ್ಕದು.

ಚೀನಾ 'Incident' ಘಟನೆಯು ಬೇಗನೆ ಮುಗಿಸಿಬಿಡಬಹುದೆಂಬ ಭಾವನೆಯಿಂದ ಜಪಾನಿಯರು ಚೀನಾದ ಮೇಲೆ ಕೈಮಾಡಿದ್ದರು. ಆದರೆ ಈ ಘಟನೆ ಪ್ರಾರಂಭವಾಗಿ ೮ ವರ್ಷಗಳು ದಾಟಿದ್ದರೂ, ಅಪಾರ ಧನವ್ಯಯವಾಗಿದ್ದರೂ, ಅಸಂಖ್ಯಾತ ಪ್ರಾಣಗಳು ನಷ್ಟವಾಗಿದ್ದರೂ, ಜಪಾನೀ ಪ್ರಜೆಗಳಿಂದ ಅತ್ಯಂತ ಸಮರ್ಪಣೆಯು ನಡೆದಿದ್ದರೂ, ಸಾಧಿಸಿದ ಫಲ–ಚೀನಾವು ಈಗ ಮರು ಏಟು ಕೊಡುವುದರಲ್ಲಿದೆ. ಅಮೇರಿಕಾವನ್ನು ಕೆಣಕಿದ ಫಲವಾಗಿ ಲಯಭೀರುವ ಅಮೇರಿಕನ್ ಬಲಗಳು ಇಂದು ಜಪಾನ ದ್ವೀಪ ಸಮೂಹವನ್ನು ಸಮೀಪಿಸುತ್ತಿದೆ. ರಾಷ್ಟ್ರ ಗೌರವಕ್ಕಾಗಿ 'ಹರಾಕಿರಿ' ಪ್ರಾಣತ್ಯಾಗ ಮಾಡಲು ಸಿದ್ಧರಿರುವ ಜಪಾನಿಯರು ಇಂದು ತಮ್ಮ 'ಮುಖ'ವನ್ನು ಹೇಗೆ ರಕ್ಷಿಸಿಕೊಳ್ಳುವರೆಂದು ನೋಡಲಿದೆ. ಹರಾಕಿರಿಗಾಗಿ ಅವರು ರಶಿಯಾದ ಮೇಲೆ ಬೀಳಬಹುದು. ಅಥವಾ ಇದೇ ತಕ್ಕ ಸಮಯವೆಂದೆನಿಸಿಕೊಂಡು ದೂರ ಪೂರ್ವದ ತನ್ನ ಪ್ರದೇಶದ ಭದ್ರತೆಗಾಗಿ ಮೊದಲು ಕಳಕೊಂಡ ಇಲ್ಲಿನ ಪ್ರದೇಶಗಳನ್ನು ಹಿಂದೆ ಕಸಗೊಳ್ಳಲು, ಮಂಚೂರಿಯಾದ ಮೇಲೆ ಸ್ಟೈಲೀನನ ಕೆಂಪು ದಳವು ದಂಡೆತ್ತಿ ಹೋಗಬಹುದು. (?) ಸೈಬೇರಿಯಾದ ಯುದ್ಧಯತ್ನದ ಕಾರ್ಖಾನೆಗಳ ಕೆಲಸವು ಪೂರ್ಣವಾಗಿದ್ದು, ದೂರಪೂರ್ವದ ಕೆಂಪು ಬಲದ ವಿಭಾಗಗಳಿಗೆ ಬೇಕಾಗುವ ಪೂರೈಕೆಯನ್ನು ಮಾಡಲು ಸಿದ್ಧವಾಗಿವೆಂದು ತಿಳಿದು ಬಂದಿದೆ. ಅಮೇರಿಕವು ಮಿತ್ರರ ಯುರೋಪದ ಸಮರ ಹೊರೆಯನು ವಹಿಸಿರುವಾಗ, ಸ್ಟೈಲೀನನು ಶಾಂತ ಸಾಗರದಲ್ಲಿ, ಅವರಿಗೆ ನೆರವಾಗಬೇಡವೆ? ಎಂಬ ಪ್ರಶ್ನೆಯು ಅಮೇರಿಕಾದ ಪತ್ರಿಕೆಗಳಲ್ಲಿ ಕೇಳಲಾಗಿದೆ. ಸ್ಟೈಲೀನಿಗಾಗಿ ಐರೋಪ್ಯದ ದ್ವಿತೀಯ ರಂಗವು ತೆರೆಯಲಾಯಿತು. ಜಪಾನಿಗೆ ವಿರೋಧವಾಗಿ ದ್ವಿತೀಯ ರಂಗವು ತೆರೆಯಲ್ಪಡಬೇಡವೆ? ನೋಡಬೇಕು. ಶಾಂತಸಾಗರದಲ್ಲಿ ತಮ್ಮಿಂದ ಆಗತಕ್ಕ ಕೆಲಸವು ತೀರಿತು. ಮುಂದಿನ ಕೆಲಸವನ್ನು ಮಿತ್ರರಾದ ಬ್ರಿಟನೂ ರಶಿಯಾಗಳು ನಡೆಯಿಸಲಿ, ಎಂಬ ಸೂಚನೆಯು ಅಮೇರಿಕಾದ ಒಂದು ಪ್ರಾಮುಖ್ಯ ಪತ್ರಿಕೆಯಿಂದ ಸೂಚಿಸಲಾಗಿದೆ.

* * *

ಸಂಗ್ರಾಮದಸೆಯಿಂದ ಯುರೋಪದ ಹೆಚ್ಚಿನ ಕಡೆಗಳಲ್ಲಿ ಮುಖ್ಯವಾಗಿ, ಇಟಲಿ, ಫ್ರಾನ್ಸು, ಬೆಲ್ಜಿಯಮ್, ಹಾಲ್ಲೆಂಡ್, ಯುಗೋಸ್ಲೇವಿಯಾ ಮತ್ತು ಗ್ರಿಸ್ ದೇಶಗಳಲ್ಲಿ ಕ್ಷಾಮವು ತಲೆದೋರಿರುತ್ತದೆ. ಅಲ್ಲಿ ನಿರುದ್ಯೋಗ ಸಮಸ್ಯೆಗಳು ಬಹಳ ಭೀಕರ ರೂಪವನ್ನು ಹೊಂದುತ್ತಿವೆ. ಈ ಸ್ಥಿತಿಯನ್ನು ಸುಧಾರಿಸುವರೆ, ಮಿತ್ರರ ಹೊಣೆಗಾರಿಕೆಯಿದೆ, ಅದನ್ನು ಕ್ಷಿಪ್ರದಲ್ಲೆ ನಿವಾರಿಸಲು ಮಿತ್ರರ ಕಾರ್ಯಗಳು ನಡೆಯಬೇಕು. ಮಿತ್ರರ ಸದ್ಯದ 'ರೆಡ್‌ಟೆಪ್' ಕ್ರಮದಿಂದ, ಕ್ಷಾಮಪೀಡಿತ ಮೇಲಿನ ದೇಶಗಳಿಗೆ ಉಪಶಮನ ದೊರಕುವುದರಲ್ಲಿ ವಿಳಂಬವಾಗುತ್ತಿದೆ. ಈ ಉಪಶಮನಾ ಕಾರ್ಯಗಳನ್ನು ನಡೆಯಿಸುವ ಬಗ್ಗೆ ಸಂಘಟಿತವಾದ ವ್ಯವಸ್ಥೆಯು (U.N.N.R.A) ಬಿರುಸಾಗಿ ಕಾರ್ಯ ನಿರ್ವಹಿಸುವಂತೆ, ವ್ಯವಸ್ಥೆಗಳಾಗಬೇಕೆಂದು, ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯೊಂದು ಅಗ್ರಲೇಖವನ್ನು ಬರೆದಿರುತ್ತದೆ.

ಈ 'ರೆಡ್ ಟೇಪ್' ಕ್ರಮವು ನಮ್ಮಲ್ಲೂ ಇದ್ದು, ನಮ್ಮ ನಿತ್ಯಜೀವನಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳು ಬಹಳ ಮೆಲ್ಲನೆ ಸುಧಾರಿಸಲ್ಪಡುತ್ತಿವೆ. ಎಲ್ಲಕ್ಕಿಂತ ಮೊದಲು ಈ ರೆಡ್ ಟೇಪ್ ಕ್ರಮವು ನಮ್ಮಲ್ಲಿಂದ ರದ್ದಾಗುವುದು ಅತಿ ಅವಶ್ಯವಿದೆ. (ರೆಡ್‌ಟೇಪ್ ಎಂದರೆ ಒಂದು ವಿಚಾರವು ಬೇಗನೆ ಪೂರೈಸಲ್ಪಡದೆ ಹಾಗೆನೆ ಆಫೀಸರರ ಪುಸ್ತಿಗಳಿಂದ ಪ್ರಸ್ತಿಗಳಿಗೆ ಹೋಗಿ ಕಾಲವಿಳಂಬವಾಗುವುದು.)

* * *

ಮೊನ್ನಿನ ಎಸೆಂಬ್ಲಿಯ ಬಜೇಟ್ ಅಧಿವೇಶನದಲ್ಲಿ ಒಂದು ವಿಚಾರವು ಹೊಳೆದು ಕಾಣಿಸಿಕೊಂಡಿತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಪಕ್ಷದವರ ಕೂಡುವಿಕೆಯಿಂದ ಸರಕಾರವನ್ನು ಅನೇಕ ವಿಚಾರಗಳಲ್ಲಿ ಸೋಲಿಸಿದುದು.

ನ್ಯಾಶನಲ್ ವಾರ್ ಫ್ರಂಟಿನ ರದ್ಧಾತಿ, ಜುಲೂಮಿನಿಂದ ನೇಶನಲ್ ಸೇವಿಂಗ್ ಬಾಂಡುಗಳ ಮಾರಾಟವಾಗದ ಹಾಗೆ ಸೂಚನೆ, ರೈಲ್ವೆಗಳ ಸುಧಾರಣೆ, ಇವೆ ಮೊದಲಾದ ವಿಚಾರಗಳಲ್ಲಿ ಕಾಂಗ್ರೆಸ್ಸೂ, ಲೀಗೂ ಒಮ್ಮತವನ್ನು ಸೂಚಿಸಿ ವರ್ತಿಸಿದುವು. ಇದೆ ತರದಲ್ಲಿ ಕಳೆದ ಭಾರಿಯ ಅಧಿವೇಶನದಲ್ಲೂ ಕಾಂಗ್ರೆಸ್ಸೂ, ಲೀಗೂ ಸಹಕರಿಸಿ ನಡೆದಿವೆ.

ಅಂದರೆ ಕಾಂಗ್ರೆಸ್ಸಿಗೂ, ಲೀಗಿಗೂ ಸಹಕರಿಸಿ ನಡೆಯಲು ಸಾಧ್ಯವಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಈ ಒಮ್ಮತವನ್ನು ಇಲ್ಲಿಂದ ಮುಂದುವರಿಸಿ, ಹಿಂದೂ ಮುಸ್ಲಿಂ ಐಕ್ಯಸಾಧನೆಯಲ್ಲಿ ಯಾಕೆ ಯಶಸ್ವಿ ತರದಲ್ಲಿ ಬಳಸಬಾರದು? ಎಂದೆನಿಸುತ್ತದೆ. ಭೂಲಾಬಾಯಿ,–ಲಿಖಾಯತ್ ಒಪ್ಪಂದ, ಅದರಿಂದ ಕೇಂದ್ರದಲ್ಲಿ ಸರ್ವ ಪಕ್ಷೀಯ ಪ್ರಾತಿನಿಧ್ಯದ ಸರಕಾರದ ರಚನೆ– ಈ ವಿಚಾರಕ್ಕೂ, ಅಸೆಂಬ್ಲಿಯ ಕಾಂಗ್ರೆಸ್ ಲೀಗೂ ಒಮ್ಮತಕ್ಕೆ ಏನಾದರೂ ಸಂಭವವಿದೆಯೆ? ಇದರಿಂದ ಸದ್ಯದ ರಾಜಕೀಯ ಬಿಕ್ಕಟ್ಟು ಬಗೆಹರಿಸಲ್ಪಡುವುದೆ? ಎಂದೆನಿಸುತ್ತದೆ.

ಹಾಗೆ ಆಗಲೂ ಬಹುದು ಎಂದು ಎನಿಸುತ್ತದೆ. ಕಾರಣ ತ್ರಿರಾಷ್ಟ್ರಗಳ ಮುಖಂಡರ ಪರಿಷತ್ತಿನಲ್ಲಿ ಪ್ರಜಾಸತ್ತೆಯನ್ನು ಎತ್ತಿ ಹಿಡಿಯಬೇಕಾಗಿ ದೃಢಸಂಕಲ್ಪವಾಗಿದೆ. ಲಂಡನಿನಲ್ಲಿ ಕಾಮನ್‌ವೆಲ್ತ ಪರಿಷತ್ತಿನಲ್ಲಿ ಹಿಂದೂದೇಶಕ್ಕೆ (ಡೊಮಿನಿಯನ್ ಸ್ಟೇಟಿಸ್ಸಾದರೂ ಕೊಡಲಾಗಬೇಕು, ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಹಿಂದೂದೇಶವೂ ಪರಾಧೀನವಾಗಿರಬಾರದು ಎಂದು ಸರ್ ಜಫ್ರುಲ್ಲಾ ಖಾನರು ಅಂದಮೇಲೆ, ಸದ್ಯದ ರಾಜಕೀಯ ಪರಿಸ್ಥಿತಿ ಪರಿಶೀಲನೆ ಬಗ್ಗೆ ಪಾರ್ಲಿಮೆಂಟಿನ ಸದಸ್ಯರ ಶಿಷ್ಟಮಂಡಳವನ್ನು ಕಳುಹಿಸಿ ಕೊಡುವ ಕುರಿತು ಯತ್ನಗಳೂ, ಅಂತರಾಷ್ಟ್ರೀಯ ಟ್ರೇಡ್ ಯೂನಿಯನ್ ಪರಿಷತ್ತಿನಲ್ಲಿ ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಗೆ ದೊರೆತ ಮಹತ್ವ, ಸಾನ್‌ಫ್ರಾನ್ಸಿಸ್ಕೊದಲ್ಲಿ ಸೇರಲಿರುವ ಜನಾಂಗ ಸಭೆಯಲ್ಲಿ ಹಿಂದೂದೇಶಕ್ಕೆ ಸ್ಥಾನ ದೊರಕಿಸುವ ಪ್ರಯತ್ನಗಳು, ಇವುಗಳಿಂದ ಸದ್ಯದ ಬಿಕ್ಕಟ್ಟಿನ ಪರಿಹಾರವಾಗಬಹುದೆಂದು ಆಶಿಸಡುವಂತಾಗಿದೆ.

ಆದರೆ ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ಕುರಿತು ಅಮೆರಿಯವರ ರಾಗ, ಮೊನ್ನೆ ಗಾಂಧಿಜಿಯವರಿಂದ ಹೊರಟ ಪ್ರಕಟಣೆ, ಚರ್ಚಿಲ್ ಸರಕಾರದ ಸದ್ಯದ ಧೋರಣೆ, ಇವುಗಳನ್ನೆಲ್ಲಾ ನೋಡಿದರೆ, ಬಿಕ್ಕಟ್ಟಿನ ನಿವಾರಣೆಯ ಕುರಿತು ನಿರಾಶೆಯನ್ನು ಹೊಂದಬೇಕಾಗಿದೆ.

ಬಿಕ್ಕಟ್ಟಿನ ಪರಿಹಾರವಾಗಬೇಕಾದರೆ ಮೊದಲು ಕಾಂಗ್ರೆಸ್ಸು ಮುಖಂಡರ ಬಿಡುಗಡೆಯಾಗಬೇಡವೆ? ಅದು ಸದ್ಯ ಆಗುವಂತಿಲ್ಲ ಎಂದು ಕೇಂದ್ರ ಎಸೆಂಬ್ಲಿಯಲ್ಲಿ ನಡೆದ ಪ್ರಶ್ನೋತ್ತರಗಳಿಂದ ತಿಳಿಯಬೇಕಾಗಿಯದೆ. ಕಾಂಗ್ರೆಸ್ ಮುಖಂಡರುಗಳು ಹೊರಗೆಬರುವುದೆ ಬಿಕ್ಕಟ್ಟಿನ ಪರಿಹಾರದಲ್ಲಿ ಪ್ರಥಮ ಹೆಜ್ಜೆ ಎಂದು ತಿಳಿಯಬೇಕು.

ಭಾರತ ವಾರಂತ್ಯ ವರದಿಗಳು

ಅಶ್ವಪ್ರಿಯ ಆಗಾಖಾನರ ಯೋಜನೆ–ವಿಜ್ಞಾನಿಗಳೂ ಎಮೆರಿಯವರು–ರೊಯರಿಗೆ ವ್ಯಾಸ್‌ರಾಯರ ಸಂಬಳ–ಮೈಸೂರ್ ಕಾಂಗ್ರೆಸಿಗರ ಉತ್ಸಾಹ

ಆಗಾಖಾನರ ಐಕ್ಯಯೋಜನೆ

ಅಶ್ವಪ್ರಿಯರಾದ ಈ ಮುಸಲ್ಮಾನ ಧರ್ಮ ಮುಖಂಡರು ಸದ್ಯದಲ್ಲೇ ಹಿಂದೂಸ್ಥಾನಕ್ಕೆ ಬರಲಿದ್ದು ತಮ್ಮ ಷಷ್ಟಾಬ್ಧಿ ಪೂರ್ತಿಯ ಕಾಲದಲ್ಲಿ ಶಿಷ್ಯವರ್ಗವಾದ ಕೋಜಾ ಮುಸಲ್ಮಾನರಿಂದ ವಜ್ರ ತುಲಾಭಾರವನ್ನು ಹೊಂದಲಿರುವರು. ಆದರೆ ಈ ಸಂತೋಷ ಮಧ್ಯದಲ್ಲಿ ಅವರು ತವ್ವೊಡನೆ ಹಿಂದೂ ಮುಸ್ಲಿಂ ಐಕ್ಯದ ಹೊಸ ಯೋಜನೆಯನ್ನು ತರಲಿರುವರೆಂದೂ ತಿಳಿದುಬರುತ್ತದೆ. ಲಕ್ನೋದಲ್ಲಿ ಆಗಾಖಾನ್ ದೊರೆಗಳು ಒಂದು ಹಿಂದೂ ಮುಸ್ಲಿಂ ದುಂಡು ಮೇಜಿನ ಪರಿಷತ್ತು ಸೇರಿಸಲು ಏರ್ಪಡಿಸಿರುವುದಾಗಿಯೂ, ಆ ಕುರಿತು ತಯಾರಿಗಳು ನಡೆಸುವರೇ ತಿಳಿಸಿರುವುದಾಗಿಯೂ ವದಂತಿ ಇವೆ. ಇಂತಹ ಕೆಲಸಕ್ಕೆ ಆಗಖಾನರಷ್ಟು ಸಮರ್ಥರಾದವರು ಹೆಚ್ಚುಮಂದಿಯಿಲ್ಲ. ಎಲ್ಲಾ ಪಕ್ಷದ ಮುಖ್ಯವಾಗಿ ಕೊಂಗ್ರೆಸ್, ಹಿಂದೂ ಮಹಾಸಭೆಯವರು ಖಾನರ ಪ್ರಯತ್ನದಲ್ಲಿ ಸಹಾನುಭೂತಿಯಿಂದ ಸಹಕರಿಸುವುದೆಂದು ಹಾರೈಸಿದರೆ ಹಾನಿಯಿರದು. ಆದರೆ ಮುಸ್ಲಿಂ ಲೀಗಿನ ಕಡೆಯಿಂದ ಜಿನ್ನಾ ಸಾಹೇಬರು ಯಾವ ಹೊಸ ತರ್ಕ ಸರಣಿಯನ್ನು ಆಗಾಖಾನರ ಮುಂದಿಡುವರೊ ಹೇಳಬರುವುದಿಲ್ಲ. ಆದರೆ ಮುಸಲ್ಮಾನರ ಬೆಂಬಲವಿರುವ ಇತರ ಸಂಸ್ಥೆಗಳೂ ಇವೆ. ಅವುಗಳ ಮುಖಂಡರು ಮುಂದೆ ಬರಲು ಆಕ್ಷೇಪಿಸಲಿಕ್ಕಿಲ್ಲವೆಂದು ನಂಬಿಕೆ. ಅವರ ಯತ್ನಗಳು ಯಶಸ್ವಿಯಾದರೆ ಆಗಾಖಾನರು ಬರೀ ಪಂದ್ಯಾಟದ ಕುದುರೆ ಪೋಷಕರು ಮಾತ್ರವಲ್ಲ ಅವರು ಹಲವರಿಂದ ಬಗೆಹರಿಸಲು ಅಸಾಧ್ಯವೆನಿಸಿದ ಈ ತೊಡಕಿನ ಸಮಸ್ಯೆಯನ್ನು ಬಿಡಿಸಿದ ಕೀರ್ತಿಯೂ ಅವರಿಗೆ ಸಲ್ಲುವುದು. ಇತ್ತೀಚೆಗೆ ಈ ವದಂತಿಯು ನಿರಾಧಾರವೆನ್ನಲಾಗಿದೆ–ಎಂತಹ ನಿರಾಶೆ. ಆದರೆ ಭಾರತದಲ್ಲೊಂದು ಅಶ್ವ ಪೋಷಣಾಲಯವನ್ನು ಖಾನರು ತೆರೆಯುವರೆಂಬ ಸುದ್ದಿ ನಿಜವಂತೆ!

ವಿಜ್ಞಾನಿಗಳ ಪ್ರಚಾರ ಪ್ರಯೋಗ

ಅಮೇರಿಕದ ಸಂಯುಕ್ತ ರಾಷ್ಟ್ರದಲ್ಲಿ ಸಂದರ್ಶನ ಸಂಚಾರಕ್ಕಾಗಿ ಹೋದ ಭಾರತೀಯ ವಿಜ್ಞಾನಿಗಳ ಮಂಡಳವು ತಾವು ಹೋದ ಕಡೆಗಳಲ್ಲಿ 'ಭಾರತದ ಅಭಿವೃದ್ಧಿಗಾಗಿ ಅದರ ನೈಸರ್ಗಿಕ ಸಂಪತ್ತನ್ನೆಲ್ಲ ಉಪಯೋಗಿಸಲು ಅನುಕೂಲವಾಗುವಂತೆ ಕೇಂದ್ರ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದು' ಸಾರಿರುವರೆಂದು ಈ ಮಂಡಳಿಯ ಮುಖಂಡರಾದ ಸರ್ ಭಾಟ್‌ನಗರ್ ಅವರು ತಿಳಿಸಿದರು. ವಿಜಯಲಕ್ಷ್ಮಿ ಪಂಡಿತರಂಥ ನಿಸ್ವಾರ್ಥ ದೇಶ ನಾಯಕಿಯರು ಅಮೇರಿಕದ ಜನರಿಗೆ "ಭಾರತವು ವಿಶಾಲವಾದೊಂದು ಬಂಧನ ದೊಡ್ಡಿ" ಎಂದು ಹೇಳಿದುದನ್ನು ಮಿ। ಎಮರಿಯವರು 'ವಿಚಿತ್ರ ಕಲ್ಪನೆ' ಎಂದು ಸೋಜಿಗ ಸೂಚಿಸಿ, 'ನಿಜವಾದ' ಭಾರತ ಪರಿಸ್ಥಿತಿಯ ಕುರಿತು ಅಮೇರಿಕದಲ್ಲಿ ಪ್ರಚಾರಮಾಡಲು ಸುಮಾರು ನಾಲ್ಕೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ನಿರ್ಧರಿಸಿರುವರು. ರಾಜಕೀಯ ವಿಜ್ಞಾನ ಕ್ಷೇತ್ರದ ಮಟ್ಟಿಗೆ ಮೇಲ್ಕಂಡ ವಿಜ್ಞಾನಿ ಶ್ರೇಷ್ಟರಾಗಲೀ, ನೆಹರುಗಳ ಸಹೋದರಿಯಾಗಲಿ ಎಮರಿ ಸಾಹೇಬರಷ್ಟು ಅನುಭವಸ್ಥರಲ್ಲವೆಂದು ಪ್ರಧಾನ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಹೇಳಬಹುದೆಂದು ನಿರೀಕ್ಷಿಸಬಹುದು.

ರೊಯ್ ಮತ್ತು ವ್ಯಾಸ್‌ರಾಯ್ ತಾರತಮ್ಯ

ಈಚೆಗೆ ಭಾರತೀಯ ರಾಜಕಾರಣ ಸಂಬಂಧದಲ್ಲಿ ಅತೀಯಾಗಿ ಚರ್ಚಿಸಲ್ಪಟ್ಟ ವ್ಯಕ್ತಿಗಳಲ್ಲಿ 'ಕೊಮ್ರೇಡ್' ಎಂ. ಎನ್. ರೊಯ್ ಅವರೂ ಒಬ್ಬರು. ಇವರ ಪಕ್ಷಕ್ಕೆ ಕೇಂದ್ರ ಸರಕಾರದ ಪರವಾಗಿ ತಿಂಗಳಿಗೆ ೧೩ ಸಾವಿರ ರೂಪ್ಯಾ ದೊರಕುತ್ತಿದೆ. ಇಷ್ಟೆ ಅಲ್ಲ–ಇನ್ನೆರಡು ಪ್ರಾಂತ್ಯಗಳಿಂದ ಮತ್ತು ಕೆಲವು ಸಾವಿರ ಹೆಚ್ಚಿಗೆ ಸಿಗುತ್ತದಂತೆ. ಹೀಗೆ ರೊಯರಿಗೆ ಸಿಗುತ್ತಿರುವ ಒಟ್ಟು ಸಾವಿರಗಳನ್ನು ಲೆಕ್ಕಹಾಕಿದರೆ ನಮ್ಮ ವ್ಯಾಸ್‌ರಾಯ್ ವೇವಲ್ ಸಾಹೇಬರಿಗೆ ಸಿಗುವ ಸಂಬಳಕ್ಕಿಂತಲೂ ಅದು ಮಿಗುವುದೆಂದು ಒಂದು ಪತ್ರಿಕೆಯು ಲೆಕ್ಕ ಹಾಕಿರುವುದು. ರೊಯರು ಬಂಡವಾಳಕ್ಕೆ ಹೆಚ್ಚು ಪ್ರಾಧಾನ್ಯವಿಲ್ಲದ ರಷ್ಯದಿಂದ ಅಂತರ್ರಾಷ್ಟ್ರೀಯ ಕೊಮ್ಯುನಿಷ್ಟರಾಗಿ ಭಾರತಕ್ಕೆ ಬಂದು ಕೆಲವು ವರ್ಷ ವೇಷಪಲ್ಲಟ ಮಾಡಿ ತಲೆಮರೆಸಿ ಕಡೆಗೆ ಬ್ರಿಟಿಷ್ ಸರಕಾರದ ಕಾರಾಗೃಹ ಅತಿಥಿಗಳಾಗಿದ್ದು, ಮತ್ತೆ ಮೆಲ್ಲನೆ ತಮ್ಮ ಕ್ರಾಂತಿ ಸ್ವಭಾವವನ್ನು ಸಾಧುಗೊಳಿಸಿ ಕೊಂಗ್ರೆಸಿಗೆ ಸೇರಿದರು. ಅಲ್ಲಿ ಅವರಿಗೆ ಸರಿಬೀಳದೆ ಸ್ವಂತ ಡೆಮೊಕ್ರೆಟಿಕ್ ಪಕ್ಷವನ್ನು ಸಂಸ್ಥಾಪಿಸಿ ಯುದ್ಧಾರಂಭದಲ್ಲಿ ಭಾರತೀಯ ಒಂದು ಮಜೂರ ಸಂಘದ ಪರವಾಗಿ ಸರಕಾರದೊಡನೆ ಒಪ್ಪಂದ ಮಾಡಿದ್ದರು. ಅಂದಿನಿಂದ ಅವರ ಪಕ್ಷದ ಸಾಂಪತ್ತಿಕ ಪರಿಸ್ಥಿತಿ ಚೆನ್ನಾಗಿ ಸುಧಾರಿಸಿತು. ಈಗ ಒಂದು ವೇಳೆ ಅವರಿಗೆ ರಷ್ಯಕಿಂತ ಸಾಮ್ರಾಜ್ಯ ಶಾಹೀ ಧೋರಣೆಯಲ್ಲಿ ಅಚಲ ಭರವಸೆಯುಂಟಾದರೆ ಆಶ್ಚರ್ಯವಲ್ಲ.

ಮೈಸೂರಿನಲ್ಲಿ ಮತಗಣನೆ

ಶ್ರೇಷ್ಟ ಕನ್ನಡ ದೊರೆಗಳ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಗಳಿಗೆ ಪ್ರತಿನಿಧಿ ಚುನಾವಣೆಗಳು ನಡೆಯುತ್ತಿರುವವು. ಯುದ್ಧಕಾಲದಲ್ಲಿ ಮತಗಣನೆ ನಡೆಸುವುದು ಅಪಾಯಕರವೆಂದು ಪ್ರಧಾನ ಚರ್ಚಿಲ್ಲರೊಂದು ಸಲ ಸಾರಿದ್ದರು. ಅನಂತರ ಅಮೇರಿಕದಲ್ಲೂ ಈಜಿಪ್ತಿನಲ್ಲೂ ಮಹತ್ವದ ಚುನಾವಣೆಗಳು ಅಪಾಯವಿಲ್ಲದೆ ನಡೆದುವು. ಈಗ ಮೈಸೂರಿನಲ್ಲಿ ಅವು ನಡೆಯುತ್ತಿವೆ. ಅಲ್ಲಿನ ಕೊಂಗ್ರೆಸಿಗರು ಉಮೇದುವಾರಿಕೆಗೆ ಟೊಂಕಕಟ್ಟಿದ್ದು ಆಗಲೇ ಬಹುಮತದಿಂದ ಆರಿಸಲ್ಪಡುತ್ತಿರುವುದು ಗಮನೀಯ ವಿಚಾರ. ದೇಶಿಯ ಸಂಸ್ಥಾನದಲ್ಲಿಯೂ ರಾಷ್ಟ್ರದ ಅಪ್ರತಿಮ ಸಂಸ್ಥೆಯ ಪ್ರಭಾವ ಎಷ್ಟಿದೆ ಎಂದು ಇದರಿಂದ ತಿಳಿದುಬರುತ್ತದೆ. ಅಂದ ಮೇಲೆ ಬ್ರಿಟಿಷ್ ಭಾರತದಲ್ಲಿ ಅದು ಹೇಗಿದೆ ಎಂಬುದನ್ನು ಊಹಿಸಿಕೊಳ್ಳಬಹುದು. ನಿಸ್ಸಂದೇಹವಾದ ಬಹುಮತದಿಂದ ಆರಿಸಿ ಬರಬಹುದಾದ ಮೈಸೂರು ಕೊಂಗ್ರೆಸ್ ಪ್ರತಿನಿಧಿಗಳು ತಾವು ಟೊಂಕಕಟ್ಟಿದ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸುವರೆಂದು ದೇಶವೆಲ್ಲವೂ ನಿರೀಕ್ಷಿಸುತ್ತದೆ. ಈಗಿನ ಉತ್ಸಾಹದಲ್ಲಿ ಒಂದುವೇಳೆ ಹೊಣೆಗಾರಿಕೆಯ ಸ್ಥಾನಪಡೆಯುವವರಾದರೆ ರಾಷ್ಟ್ರ ಸಂಸ್ಥೆಯ ಪ್ರಧಾನ ಧ್ಯೇಯಗಳನ್ನು ಮರೆಯಬಾರದೆಂಬ ವಿಷಯವನ್ನು ಒತ್ತಿಹೇಳುವ ಅವಶ್ಯಕತೆ ಇಲ್ಲ.

ಅಂಬೇಡಕರರೂ ಹಿಂದುಳಿದವರೂ

ಅಖಿಲ ಭಾರತ ಹಿಂದುಳಿದವರ ಸಂಘದಲ್ಲಿ ಡಾ। ಅಂಬೇಡಕರು 'ಹರಿಜನರು ಹಿಂದುಗಳೆಲ್ಲ'ವೆಂದು ಅಪಪ್ರಚಾರ ಮಾಡುತ್ತಿರುವುದನ್ನು ಖಂಡಿಸಲಾಯಿತು. ಮಾತ್ರವಲ್ಲ ವ್ಯಾಸ್‌ರಾಯ್ ವಿರಚಿತ ಈಗಿನ ಇಂಡಿಯಾ ಸರಕಾರದ ಮಂತ್ರಿಗಳಲ್ಲಿ ಒಬ್ಬರಾದ ಮಾನ್ಯ ಡಾಕ್ಟರರು ಪವಿತ್ರವಾದ ವೇದಗಳ ಮೇಲೇ ಕೆಸರೆರಚಲು ಪ್ರಯತ್ನಪಟ್ಟ ವಿಷಯವು ಹಿಂದುಳಿದ ಈ ಹಿಂದೂ ಸಮಾಜಸ್ಥರಿಗೆ ಬಹಳ ಪಶ್ಚಾತ್ತಾಪವನ್ನುಂಟುಮಾಡಿದೆ. ನಮ್ಮ ದೇಶದಲ್ಲಿ ರಾತ್ರೆ ಹಗಲಾಗುವುದರೊಳಗೆ ಒಂದು ವರ್ಗದ ಜನರ ಒಬ್ಬಿಬ್ಬ ಮುಖಂಡರು ತಯಾರಿಸಲ್ಪಡುತ್ತಾರೆ. ಮೇಲ್ಕಂಡ ಸಂಗತಿಯಿಂದ ಮಾನ್ಯ ಅಂಬೇಡಕರು ತಮಗೆ ತಮ್ಮವರಿಂದ ಅದೆಷ್ಟು ಬೆಂಬಲವಿದೆ ಎಂಬೀ ವಿಷಯವನ್ನು ಕೊಂಚ ತಿಳಕೊಂಡ ಹಾಗಾಗುವುದು.

ಕುಂದಾಪುರ ಡಿ. ಮುನ್ಸೀಫ್. ಕೋರ್ಟಿನಲ್ಲಿ

C. S. 1/44. R. E. P. 504/44.

ವಾದಿ— ಮಂಜಯ್ಯ ಸೆಟ್ಟಿ. ಅರ್ಜಿದಾರ.
ಪ್ರತಿವಾದಿ—ಕೃಷ್ಣಮ್ಮ ಸೆಡ್ತಿ. ಮುತ್ತಕ್ಕೆ ಸೆಡ್ತಿ ಮಗಳು. ಕುಂದಾಪುರ ತಾಲ್ಲೂಕು ಕಾಳಾವರ ಗ್ರಾಮದಲ್ಲಿರುವವಳು. ಯದ್ರಿ ಸದ್ರಿ ಪ್ರತಿವಾದಿಳಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದ್ರೆ-

ವಾದಿಯು ಸದ್ರಿ ಪ್ರತಿವಾದಿಗಳ ಮೇಲೆ ಪಡದ ಮೇಲಿನ ಡಿಕ್ರಿ ಸಮಾಧಾನದ ಬಗ್ಗೆ ಪ್ರತಿವಾದಿಳ ಹಕ್ಕು ಸ್ಥಿರಾಸ್ತಿಯನ್ನು ಜಪ್ತುಮಾಡಿಸಿ ಯೇಲಂಮ್ಮಿಗೆ ಅಪೇಕ್ಷಿಸಿರುವುದರಿಂದ ಮೇಲ್ಕಾಣಿಸಿದ ಅಮಲ್ದಾರಿಯಲ್ಲಿ ಯಿಸ್ತಿ ಹಾರಿನ ಶರ್ತ ನಿರ್ಣಯಿಸುವ ಬಗ್ಗೆ ತಾರೀಕು 18–3–45ಕ್ಕೆ ತನ್ಕಿಗೆ ಇಡೋಣಾಗಿಯದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲಾದೀತು.

K. Soorappa Shetty.
Advocate for Petitioner.

ಕುಂದಾಪುರ 28–2–45.

ವಿದೇಶ ವಿಚಾರ ವಿಮರ್ಶೆ

ನಾಜೀ ಮುಖಂಡರ ಭಾರೀ ಭರವಸೆ - ಶಾಂತಿಯ ಫಲ ಷರ್ತದ ಮೇಲೆ – ಶಾಂತಿಯಾಗುವಾಗ ಯುದ್ಧ ಸಾರುವ ಟರ್ಕಿ – ಸಿಂದ್ ಈಜಿಪ್ತ ಸಾಮ್ಯ – ಶತ್ರುವೆಂದು ಮಿತ್ರರನ್ನು ಕೊಂದರು

ನಾಜೀ ಮುಖಂಡರ ಭವಿಷ್ಯವಾಣಿ

ಇನ್ನು ಮೂರೇ ವ[illegible]ಗಳಲ್ಲಿ ಇನ್ನೊಂದು ಭಯಂಕರ ಸಮರಾಗ್ನಿಯು ಉದ್ಭವಿಸುವುದು ಎಂದು ಜರ್ಮನ್ ಪ್ರಚಾರ ಮಂತ್ರಿ ಡಾ। ಗೊಬೆಲ್ಸ್‌ನು ತಿಳಿಸುತ್ತಾನೆ. ಇದರಲ್ಲಿ ಈಗ ಮಿತ್ರರಾಗಿರುವವರು ಮುಂದಿನ ಈ ಯುದ್ಧದಲ್ಲಿ ವಿರೋಧ ಪಕ್ಷದ ಶತ್ರುಗಳಾಗಿ ಕಾದಾಡುವರೊ? ಇಲ್ಲವೆ ಯುರೋಪ್ ಅಮೇರಿಕದ ಬಿಳಿಯರಿಗೂ ಆಸ್ಯಾ ಆಫ್ರಿಕೆಗಳ ವರ್ಣ ಜನಾಂಗದವರಿಗೂ ಇದರಲ್ಲಿ ಘರ್ಷಣೆ ಉಂಟಾಗಬಹುದೊ? ಜರ್ಮನಿಯ ಪತನದ ನಂತರ ಉಳಿದಿರುವ ಮುಂದಿನ ಮಾರ್ಗಗಳು ಇವೇ ಎರಡಾಗಿವೆ. ಅಮೇರಿಕನ್ನರು ಆಗಲೇ ತಮ್ಮ ಖಂಡದ ಭದ್ರತೆಗಾಗಿ ಕಳವಳಗೊಂಡಿದ್ದಾರೆ. ರಷ್ಯನರಂತೂ ಜಗತ್ತಿನ ಅನೇಕ ರಾಷ್ಟ್ರಗಳ ಧೋರಣೆಯ ದಾರಿಯಲ್ಲಿರುವ ಒಂದು ಮುಳ್ಳೇ ಸರಿ.

'ನಮ್ಮ ಇಂದಿನ ಸಂಕಷ್ಟಗಳು ನಮ್ಮಲ್ಲಿ ಉಕ್ಕಿನ ನಿರ್ಧಾರವನ್ನುಂಟುಮಾಡಿವೆ. ಜರ್ಮನ್ ಜನಾಂಗವು ಈ ಬಂಡವಾಳಶಾಹಿ ಪ್ರಜಾಪ್ರಭುತ್ವಗಳ ಶಕ್ತಿಯನ್ನು ಮುರಿದಿಕ್ಕದೆ ಬಿಡದು–ವಿಶ್ವ ಸಂಸ್ಕೃತಿ ನಾಶಕರಾದ ಬೊಲ್ಶೆವಿಸ್ಟ ಯೆಹೂದಿಗಳನ್ನು ಮುರಿದಿಕ್ಕುವುದು. ಮಿತ್ರರು ಬರ್ಚೆಸ್‌ಗೆಡೆನಿನಲ್ಲಿನ ನನ್ನ ಮನೆಯನ್ನು ನಾಶ ಮಾಡುವರಂತೆ. ಜರ್ಮನಿಯೇ ನನ್ನ ಮನೆ. ಅದು ಆಗಲೇ ಹಾನಿಗೊಳಗಾಗಿದೆ. ಇದರ ಪ್ರತಿ ಫಲವೆಂಬಂತೆ ನಮ್ಮನ್ನು ಎದುರಿಸುವ ಇಡೀ ಪ್ರಪಂಚವನ್ನೇ ನುಚ್ಚುನೂರು ಮಾಡುವುದು ನಮ್ಮ ಅಚಲ ನಿರ್ಧಾರ. ದೇವರು ಅಂತ್ಯದಲ್ಲಿ ನಮಗೆ ವಿಜಯವನ್ನು ದಯಪಾಲಿಸದಿರನು" ಹೀಗೆಂದು ಹಿಟ್ಲರನು ಆವೇಶ ಪೂರ್ಣವಾಗಿ ಉದ್ಗರಿಸಿರುವನು. ನಾಜೀ ಮುಖಂಡರ ಈ ಧೈರ್ಯವು ಹಾಸ್ಯಾಸ್ಪದವೂ ರಹಸ್ಯಮಯವೂ ಆಗಿರುತ್ತದೆ.

ಯುದ್ಧ ಸಾರಿದವರಿಗೆ ಮಾತ್ರ ಶಾಂತಿ ಫಲ

ಮಾರ್ಚ್ ೧ನೇ ತಾರೀಕಿನೊಳಗೆ ಜಪಾನ್ ಜರ್ಮನಿಗಳ ಮೇಲೆ ಯುದ್ಧ ಸಾರಿದವರಿಗೆ ಮಾತ್ರ ಮುಂದಿನ ಶಾಂತಿಯೋಜನೆಯಲ್ಲಿ ಸ್ಥಾನ ಸಿಗುವುದು ಎಂದು ತ್ರಿಮೂರ್ತಿಗಳು ಕ್ರಿಮಿಯಾದಲ್ಲಿ ನಿರ್ಣಯಿಸಿದರು. ಈ ಷರ್ತದಲ್ಲಿ ತಾವು ಹಿಂದೆ ಬಿದ್ದರೆ ಮುಂದೆ ತಮ್ಮ ಪಾಡು ಏನಾಗುವುದೊ ಎಂದು ಕಳವಳಗೊಂಡ ಹಾಗೆ ತೋರುವ ಟರ್ಕಿ ಈಜಿಪ್ತಗಳು ತಮ್ಮ ಪಾರ್ಲಿಮೆಂಟುಗಳಲ್ಲಿ ಅಚ್ಚು ರಾಷ್ಟ್ರಗಳ ಮೇಲೆ ಸಮರ ಸಾರುವ ಠರಾವುಗಳನ್ನು ಮಂಜೂರಾತಿ ಮಾಡಿಕೊಂಡಿವೆ. ಇದರಿಂದ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ. ಬ್ರಿಟಿಷರ ಆಶ್ರಯದಲ್ಲಿರುವ ಈಜಿಪ್ತ ಯುಕ್ತ ಕಂಡಾಗ ಸ್ವಂತ ಧೋರಣೆ ಅನುಸರಿಸಲು ಸ್ವತಂತ್ರವುಳ್ಳದ್ದಾಗಿದೆ ಎಂಬುದು ಒಂದು ವಿಷಯ. ಹೆಸರಿಗೆ ಮಾತ್ರ ಕ್ರಿಮಿಯಾ ಪರಿಷತ್ತಿನ ಷರ್ತಗಳನ್ನು ಪೂರೈಸಿಯಾದರೂ ಮುಂದಿನ ಜನಾಂಗ ಸಭೆಯಲ್ಲಿ ಒಂದು ಸ್ಥಾನವನ್ನು ಸಂಪಾದಿಸಬೇಕೆಂಬ ಟರ್ಕಿಯ ಉತ್ಸಾಹ ಇನ್ನೊಂದು ವಿಷಯ. ಇಲ್ಲದಿದ್ದರೆ ಈ ಐದು ವರ್ಷಗಳಿಂದ ತನ್ನ ನಿಜವಾದ ಮಿತ್ರತ್ವ ಯಾರಲ್ಲಿ ಎಂಬುದನ್ನು ತಿಳಿಯಪಡಿಸದ ಟರ್ಕಿ ಇಂದು ಯುದ್ಧ ಸಾರುವುದರ ರಹಸ್ಯವೇನು? ಇಂತಹ ಸಂದರ್ಭದಲ್ಲಿ ಸ್ಪೈನಿನ ಫ್ರೆಂಕೋವಿನ ಧೋರಣೆ ಎಂತಹದಿರಬಹುದು? ಸ್ವೀಡನಿನ ಕತೆಯೇನು?

ಫ್ರೆಂಕೊ ತನ್ನ ಮಿತ್ರ ಹಿಟ್ಲರನ ಮೇಲೆ ಯುದ್ಧ ಹೇಗೆ ಸಾರ ಬಲ್ಲನು. ಹಾಗೆ ಮಾಡದಿದ್ದರೆ ಮುಂದಿನ ಶಾಂತಿ ಪರಿಷತ್ತಿನಲ್ಲಿ ಅವನಿಗೆ ಸ್ಥಾನ ಸಿಗದು. ಇಲ್ಲವೆ ಚರ್ಚಿಲ್ಲರಿಂದ ಬಹಳವಾಗಿ ಶ್ಲಾಘಿಸಲ್ಪಟ್ಟ ಸ್ಪೈನಿನ ಆ ಸರ್ವಾಧಿಕಾರಿಯ ನಿಜರೂಪವನ್ನು ಹೊರಗೆಳೆಯಲು ಸ್ಟೇಲಿನರು ಮುಂದೆ ತಂದ ಒಂದು ಹೊಸ ಯೋಜನೆ ಇದಾಗಿರಬಹುದೆ? ನೋಡಬೇಕು.

ಈಜಿಪ್ತ ನಮ್ಮ ದೇಶದ ಸಿಂಧ್

ಕಳೆದ ವಾರದ ಭೀಕರ ವರದಿಗಳಲ್ಲಿ ಒಂದೆಂದರೆ ಈಜಿಪ್ತಿನ ಮುಖ್ಯ ಮಂತ್ರಿ ಆಮದ್ ಮೆಹರ್ ಪಾಶಾ ಅವರ ಕೊಲೆ. ಅಚ್ಚು ರಾಷ್ಟ್ರಗಳ ಮೇಲೆ ಯುದ್ಧ ಸಾರಿದ ಠರಾವು ಪತ್ರವನ್ನು ಕೈಯಲ್ಲಿ ಹಿಡಿದು ವಿಧಾಯಕ ಸಭೆಯ ಒಂದು ಭವನದಿಂದ ಇನ್ನೊಂದಕ್ಕೆ ಹೋಗುತ್ತಿರುವಾಗ ಓರ್ವ ಪೊಟೋಗ್ರಾಫರನು ಮೇಹರ್ ಪಾಶರ ಚಿತ್ರ ತೆಗೆದನು. ಕೆಮೆರಾಮೇನನ ಹಿಂದಿನಿಂದ ಐದು ಗುಂಡುಗಳು ಎದುರುನಿಂತ ಪ್ರಧಾನರಿಗೆ ಹೊಡೆಯಲ್ಪಟ್ಟವು—ಬಿದ್ದವರು ಮತ್ತೆ ಏಳಲಿಲ್ಲ.

ಈಜಿಪ್ತಿನಲ್ಲಿ ರಾಜಕಾರಣಿಗಳು ರಾಷ್ಟ್ರೀಯ ವಾದಿಗಳೂ ಜಾತಿ ವಾದಿಗಳೂ ಆಗಿರಬೇಕು. ಇಲ್ಲವಿದ್ದರೆ ಅವರಿಗೆ ದುರ್ಮರಣವೇ ಗತಿ. ಹಿಂದೆ ಅಲ್ಲಿ ೧೯೧೦ರಲ್ಲಿ ಬೊಟ್ರೋಸ್ ಪಾಶಾ ಎಂಬ ಮುಖ್ಯ ಮಂತ್ರಿಗಳು ಇದೇ ರೀತಿ ಕೊಲ್ಲಲ್ಪಟ್ಟಿದ್ದರು-ಅವರು ಜಾತಿಯಲ್ಲಿ ಕ್ರೈಸ್ತರು. ಇವರು ರಾಷ್ಟ್ರೀಯ ವಾದಿಗಳಾಗಿದ್ದರೂ ಮುಸಲ್ಮಾನರಲ್ಲವಾದುದರಿಂದ ಅವರಿಗೆ ಆ ದುರ್ಗತಿ. ಮೇಹರ್ ಪಾಶಾ ಅವರು ಮುಸಲ್ಮಾನರಾದರೂ ರಾಷ್ಟ್ರೀಯ ವಾದಿಗಳಲ್ಲ. ಈಜಿಪ್ತಿನ ವಾಫ್ಡ್ ಎಂಬ ಪಕ್ಷವು ಅಲ್ಲಿನ ರಾಷ್ಟ್ರೀಯ ಸಂಸ್ಥೆ-ಹೆಚ್ಚು ಕಡಿಮೆ ನಮ್ಮ ದೇಶದಲ್ಲಿ ಕೊಂಗ್ರೆಸ್ ಇರುವ ಹಾಗೆ. ಸ್ವಲ್ಪ ಸಮಯದ ಹಿಂದೆ ಈ ವಾಫ್ಡ್ ಪಕ್ಷದ ಜನಪ್ರಿಯ ಮುಖಂಡರಾದ ನಾಹಾಸ್ ಪಾಶಾ ಅವರನ್ನು ಅಲ್ಲಿನ ಬ್ರಿಟಿಷ್ ಪ್ರಭಾವಕ್ಕೆ ಸಿಲುಕಿದ ಫರೂಕರು ಈಗ ಕೊಲೆ ಮಾಡಲ್ಪಟ್ಟ ಮೇಹರ್ ಪಾಶಾರವರನ್ನು ಪ್ರಧಾನರಾಗಿ ಮಾಡಿದರು. ನಂತರ ಅಲ್ಲಿ ನಡೆದ ಚುನಾವಣೆಗಳಲ್ಲಿ ವಾಫ್ಡ್ ಪಕ್ಷದವರು ಭಾಗವಹಿಸಲಿಲ್ಲ. ಅಂದಿನಿಂದಲೇ ಈಜಿಪ್ತಿನ ಜನತೆಯಲ್ಲಿ ಮೇಹರ್ ಪಾಶಾ ಮಂತ್ರಿಮಂಡಳದ ಮೇಲೆ ಬಹಳ ಅತೃಪ್ತಿ ಅಸಮಾಧಾನಗಳುಂಟಾಗಿವೆ.

ವಿಚಿತ್ರವೆಂಬಂತೆ ಮೇಹರ್ ಪಾಶಾರವರನ್ನು ಕೊಂದ ವ್ಯಕ್ತಿಯು ಅಚ್ಚು ರಾಷ್ಟ್ರಗಳ ಹಿತೈಷಿಯಂತೆ. ಜರ್ಮನ್ ಏಜೆಂಟನಾಗಿ ಇರಾಕಿನಲ್ಲಿ ಗಲಾಟೆ ಮಾಡಿದ ರಶೀದ್ ಆಲಿಯು ಮಿತ್ರರ ಮೇಲೆ ಯುದ್ಧ ಸಾರಿದಾಗ ಅವನಿಗೆ ಯಶಸ್ಸು ಕೋರುವ ಸಂದೇಶ ಕಳುಹಿಸಿದನಂತೆ. ಈಜಿಪ್ತಿನ ವಾಫ್ಡ್ ಪಕ್ಷದವರು ಯುದ್ಧ ಸಾರುವಿಕೆಗೆ ವಿರೋಧ ಸೂಚಿಸಿರುವರು.

ಸಿಂಧ್ ಪ್ರಾಂತ್ಯದಲ್ಲೂ ಒಂದು ತರದ ಬೆದರಿಕೆಯ ರಾಜಕಾರಣ ನಡೆಯುತ್ತದೆ. ಅಲ್ಲಿ ಮಾತ್ರ ಜಾತೀಯ ವಾದಿಗಳೇ ಆಡಳಿತ ಸ್ಥಾನವನ್ನಿಟ್ಟುಕೊಳ್ಳಲು ಪ್ರಯತ್ನಿಸುವರು. ಈಜಿಪ್ತವು ನ್ಯಾಲ್ ನದಿಯ ವರಪ್ರಧಾನವಾದರೆ, ಸಿಂಧ್ ಸಿಂಧೂನದಿಯ ದಾನ. ಒಂದೇ ತರದ ಪ್ರಕೃತಿ ಲಕ್ಷಣಗಳುಳ್ಳ ದೇಶಭಾಗಗಳಲ್ಲಿ ಸಮಾನ ರಾಜಕೀಯ ಪರಿಸ್ಥಿತಿಗಳುಂಟಾದುದು ಕಾಲಗುಣವೊ ನೆಲದ ಗುಣವೊ ಎಂಬ ಸಂದೇಹವನ್ನು ನಿವಾರಣೆಮಾಡುವಂತೆತೋರುತ್ತದೆ.

ಬಂಧುಹತ್ಯದ ಪರಮಾವಧಿ

ಕಳೆದ ವರ್ಷದ ಒಕ್ಟೋಬರ್ ೨೪ರಲ್ಲಿ ಮಿತ್ರ ಸಬ್ ಮೇರಿನುಗಳು ಫೆಸಿಫಿಕ್‌ನಲ್ಲಿ ಒಂದು ಜಪಾನಿ ಹಡಗವನ್ನು ಮುಳುಗಿಸಿದರು. ಈ ವರದಿಯು ಹಳೇಯದಾದರೂ ಕಳೆದ ವಾರ ಇದರ ಕುರಿತು ಪ್ರಕಟಿಸಲ್ಪಟ್ಟ ಘಟನೆಯು ಅತ್ಯಂತ ವಿಷಾದಕರವಾದುದು. ಕಾರಣ ಮುಳುಗಿಸಲ್ಪಟ್ಟ ಆ ಜಪಾನೀ ಹಡಗದಲ್ಲಿ ಸತ್ತವರು ಬೇರೆ ಯಾರೂ ಇರದೆ ೧೮೦೦ ಅಮೇರಿಕನ್ ಯುದ್ಧಕೈದಿಗಳಂತೆ. ಪುಣ್ಯವಶಾತ್ ಬರೀ ಐದು ಮಂದಿ ಮಾತ್ರ ಉಳಿದರು. ಇದರ ಎರಡು ತಿಂಗಳ ಹಿಂದಿನ ಸಪ್ಟೆಂಬರದಲ್ಲಿ ೭೫೦ ಅಮೇರಿಕನ್ ಕೈದಿಗಳು ಇದೇ ರೀತಿ ಮುಳುಗಿಸಲ್ಪಟ್ಟು ೮೩ ಮಂದಿ ಮಾತ್ರ ಬದುಕಿಸಲ್ಪಟ್ಟರು. ಈಚೇಗೆ ಮುಳುಗಿಸಲ್ಪಟ್ಟ ಅನೇಕಾನೇಕ ಜಪಾನೀ ಯುದ್ಧ ನಾವೆಗಳಲ್ಲಿ ಇಂತಹದೇ ಘಟನೆ ಎಷ್ಟು ಆಗಿರಲಿಕ್ಕಿಲ್ಲವೆಂಬ ಸಂದೇಹ ಉಂಟಾಗದಿರದು. ಅಂತೂ ಮಿತ್ರ ನಾವಿಕರು ಹೆಚ್ಚಿನ ಜಾಗರೂಕತೆ ವಹಿಸುವುದುತ್ತಮ.

ವಿಶೇಷ ವಾರ್ತೆಗಳು

ಮದ್ರಾಸು ಸರಕಾರದ ನೌಕರ ವರ್ಗದ ಠಲಬುಗಳು ಹೆಚ್ಚಿಸಲಾಗುವವು–ಸ್ಟೆಥೀ ಕಮಿಟಿಯ ಸೂಚನೆಗಳು ಸ್ವೀಕರಿಸಲ್ಪಟ್ಟರೆ ಆದರೆ ಉಪಾಧ್ಯಾಯರ ತಲಬಿನಲ್ಲಿ ಮಾತ್ರ ಹೆಚ್ಚಳವಿಲ್ಲ. ಅದರಲ್ಲೂ ಹಳ್ಳಿ ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ತಲಬಿನ ಕುರಿತು ವಿಚಾರವು ಬಾಕಿಯೇ ಉಳಿದಿದೆ.

ಎಂ. ಎನ್. ರಾಯರ, ಇಂಡಿಯನ್ ಲೇಬರ್ ಫೆಢರೇಶನಿನವರಿಗೂ, ಅಖಿಲ ಭಾರತ ಟ್ರೇಡ್ ಯೂನಿಯನ್‌ನವರಿಗೂ, ಲಂಡನಿನಲ್ಲಿ ಜರಗಿದ ಅಂತರ್‌ರಾಷ್ಟ್ರೀಯ ಟ್ರೇಡ್ ಯೂನಿಯನ್ ಪರಿಷತ್ತಿನಲ್ಲಿ ಕಚ್ಚಾಟ ನಡೆಯಿತಂತೆ. ರಾಯರ ಪಕ್ಷದವರು ಟ್ರೇಡ್ ಯೂನಿಯನ್‌ನ ಮೇಲೆ ದೂಷಣೆಗಳನ್ನು ಹೊರಿಸಿ ಪತ್ರಗಳನ್ನು ಮುದ್ರಿಸಿ ಪರಿಷತ್ತಿನಲ್ಲಿ ನೆರದ ಜನರಿಗೆ ಹಂಚಿದರಂತೆ. ಹಿಂದೀಯ ಮಜೂರ ವರ್ಗದವರ ಈ ತರದ ವರ್ತನೆಯಿಂದ ಇತರ ದೇಶದ ಟ್ರೇಡ್ ಯೂನಿಯನ್ ಪ್ರತಿನಿಧಿಗಳಿಗೆ, ಮುಖ್ಯ ರಶಿಯನರಿಗೆ ತುಂಬಾ ಅಸಮಾಧಾನ ಉಂಟಾಗಿದ್ದಂತೆ. ರೋಯರ ಪಕ್ಷದವರು, ಕಾಂಗ್ರೆಸ್ ಕುರಿತು ಅಪಪ್ರಚಾರದಲ್ಲೂ ತೊಡಗಿದ್ದರಂತೆ.

ಟರ್ಕಿಯು ಜರ್ಮನಿಯ ಮೇಲೆ ಯುದ್ಧ ಸಾರಿದೆ. ಇನ್ನು ಜರ್ಮನಿಗೆ ಸೋಲು ಖಂಡಿತವೆಂದೆ ತಿಳಿಯಬೇಕು. ಟರ್ಕಿ ಮಾತ್ರವಲ್ಲ,, ಇಜಿಪ್ತವೂ ಕೂಡ ಜರ್ಮನಿಯ ಮೇಲೆ ಯುದ್ಧ ಸಾರಿತು. ಈ ಯುದ್ಧ ಸಾರಣೆಯು ಇಜಿಪ್ತದ ಶಾಸನಸಭೆಯಲ್ಲಿ ನಡದ ಮರಕ್ಷಣವೇ ಹೊರಗೆ ತೆರಳಿದ ಪ್ರಧಾನ ಮೆಹರ್‌ಪಾಶಾರವರನ್ನು ಕೊಲೆಗಡುಕನೊಬ್ಬನು, ಗುಂಡಿಕ್ಕಿ ಕೊಂದನು.

ರುಮೇನಿಯಾದಲ್ಲಿ ಪೆಸಿಸ್ಟ ವರ್ಗವು ಸದ್ಯ ರಚಿಸಲಾದ ಸರಕಾರದಿಂದ ಹೋಗಿಲ್ಲವೆಂದೂ, ಬೇಗನೆ ಅಲ್ಲಿ ಕೊಮ್ಯುನಿಸ್ಟ ನೀತಿಗಳಿಗೆ, ಜನರಿಗೆ, ಕ್ರಮಗಳಿಗೆ ಆಸ್ಪದ ಕೊಡಲಾಗಬೇಕೆಂದು ರಶಿಯನರ ಎಚ್ಚರಿಕೆಯೊಂದು ರುಮೇನಿಯದ ಪ್ರಕೃತದ ಸರಕಾರಕ್ಕೆ ಕಳುಹಿಸಲಾಗಿದೆ ಎಂದು ತಿಳಿದುಬಂದಿದೆ.

ಪಶ್ಚಿಮರಂಗದಲ್ಲಿ ಎಲ್ಲಾ ಕಡೆಗಳಲ್ಲಿ ಮಿತ್ರರು ಸಿಗ್‌ಫ್ರಿಡ್ ಕೋಟೆಯನ್ನು ಭೇದಿಸಿ ಜರ್ಮನಿಯ ಒಳಗೆ ಬಹಳ ದೂರಕ್ಕೆ ಒಳ ನಡೆದಿರುವರು. ಅತ್ತ ಪೂರ್ವರಂಗದಲ್ಲೂ ರಶಿಯನರು ಬಲವಾದ ಒತ್ತಡವನ್ನು ಹಾಕಿ ಮುಂದುವರಿಯುತ್ತಿರುವರು. ಈ ಎರಡೂ ಬಲಗಳು ಜರ್ಮನಿಯೊಳಗೆ ಕೂಡಿದ ದಿನವೆ ಜರ್ಮನಿಯ ಸೋಲಿನ ದಿನವೆಂದು ಸೇನಾಪತಿ ಐಸನ್‌ಹೋರರ ಅಭಿಪ್ರಾಯವಿರುತ್ತದೆ. ತನ್ನ ದೇಶದ ರಕ್ಷಣೆಗಾಗಿ ಸರ್ವ ಜನರೂ ಉತ್ಸಾಹಪಡುವಂತೆ ಹುರಿದುಂಬಿಸಿ ಹಿಟ್ಲರನ ಭಾಷಣವು ನಡೆದಿದೆ. ಜೆಕೊಸ್ಲೊವೆಕಿಯಾದ ರಂಗದಲ್ಲಿ ಒಂದೆಡೆ ಜರ್ಮನರು ಮರುದಾಳಿಯು ಸ್ವಲ್ಪ ಉಗ್ರವಾಗಿ ನಡೆದ ವಾರ್ತೆಯು ಬಂದಿರುತ್ತದೆ.

ಶ್ವಾಸ ಸಂಬಂಧ ರೋಗ ಕಫ ಮತ್ತು ಉಬ್ಬಸಗಳಿಗೆ ಪರಿಣಾಮಕಾರೀ ಔಷಧ

ನೀವು ಶ್ವಾಸಬಿಡುವಾಗ ಕಂಠ ಮತ್ತು ಶ್ವಾಸಕೋಶದಲ್ಲಿರುವ ಕ್ರಿಮಿಗಳು ತೊಂದರೆ ಕೊಡುವವು. ಆದ್ದರಿಂದ ಅದನ್ನು ಪರಿಹರಿಸಲು ಅತ್ಯಂತ ಆದರ್ಶಕರ ಔಷಧಿಯಾದ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ.

ಪೆಪ್ಸ ಬಾಯಿಗೆ ಹಾಕಿದ ಕೂಡಲೇ ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ ಶ್ವಾಸದೊಡನೆ ಚಿತ್ರದಲ್ಲಿ ತೋರಿಸಿದಂತೆ ಸೇರಿಕೊಳ್ಳುವುದು. (1) ಶ್ವಾಸಕೋಶದೊಳಗೆ ಸೇರುವುದು. (2) ಪೆಪ್ಸ ಹೀಗೆ ಕಂಠನಾಳವನ್ನು ಗುಣಪಡಿಸಿ ನಾಳವನ್ನು ಸರಿಗೊಳಿಸಿ, ಕಫ, ಶೀತ, ಉಬ್ಬಸ ಮೊದಲಾದವುಗಳನ್ನು ಗುಣಪಡಿಸುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಅಕ್ಕಿ ತಲುಪಿಸಿರಿ - ಇಲ್ಲವೇ ಶಿಕ್ಷೆ

ವ್ಯಾಯಾಮ ಪ್ರದರ್ಶನಗಳು

ಹಿಂದೂ ಕಾಯಿದೆಯ ಚರ್ಚೆ

ಫೆಬ್ರವರಿ ತಿಂಗಳು ಮುಗಿಯುತ್ತಾದುದರಿಂದ ವ್ಯವಸಾಯಗಾರರೂ ವರ್ಗದಾರರೂ ತಾವು ಸಲ್ಲಿಸಲಿರುವ ಎರಡನೇ ಬೆಳೆಯ ಉತ್ಪತ್ತಿ ಬೆಳೆ ಮುಂತಾದುವುಗಳ ವಿವರಗಳನ್ನು ತಿಳಿಸಲು ತಪ್ಪಬಾರದೆಂದೂ, ಸಲ್ಲಿಸಬೇಕಾದ ಅಕ್ಕಿ ಅಂಶವನ್ನು ಸಕಾಲದಲ್ಲಿ ಮುಟ್ಟಿಸಬೇಕೆಂದೂ ಸಾರ್ವಜನಿಕರಿಗೆ ಕಲೆಕ್ಟರರು ತಿಳಿಸುತ್ತಾರೆ. ಮೇಲಿನ ಕರ್ತವ್ಯಗಳಲ್ಲಿ ತಪ್ಪಿದವರನ್ನು ಶಿಕ್ಷೆಗೆ ಗುರಿಪಡಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳಲು ನಿರ್ಧರಿಸಲಾಗಿದೆಯೆಂದೂ, ಮಾರ್ಚ್ ಮೊದಲನೇ ವಾರದ ನಂತರ ಇದನ್ನು ಜಾರಿಗೆ ತರುವುದು ಅವಶ್ಯವಿದೆಯಾಗಿ ಕಲೆಕ್ಟರರಿಗೆ ಸರಿದೋರಿದೆಯಾಗಿಯೂ ಒಂದು ಪ್ರಕಟನೆಯು ಎಚ್ಚರಿಸುತ್ತದೆ.

ಮಂಗಳೂರು ರೇಶನ್ ಕ್ಷೇತ್ರದಲ್ಲಿ ಅಕ್ಕಿ ಪ್ರಮಾಣವನ್ನು ಅರ್ಧ ಸೇರಿಗೆ ತಂದು ನಿಲ್ಲಿಸಲಾಗಿದೆ. ಆದುದರಿಂದ ಅಕ್ಕಿ ತಯಾರಕರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅಸಡ್ಡೆ ಮಾಡಿದರೆ ಸಾರ್ವಜನಿಕ ಆಹಾರ ಸರಬರಾಯಿಗೆ ತುಂಬಾ ತೊಡಕುಂಟಾಗುವುದರಲ್ಲಿ ಸಂದೇಹವಿಲ್ಲ.

ಗೋದಿಯನ್ನು ಬೀಸಿ ಕೊಡುವವರು ಸೇರಿಗೆ ಎಂಟು ಪೈಗಳಷ್ಟನ್ನೂ ಮಾತ್ರ ಪಡೆಯಲರ್ಹರೆಂದೂ, ಆ ಕುರಿತು ಅವರು ನೋಟಿಸುಗಳನ್ನು ತೂಗಹಾಕಬೇಕೆಂದೂ ಕಲೆಕ್ಟರರ ಇನ್ನೊಂದು ಪ್ರಕಟನೆ ಇದೆ.

ಗೋದಿಯನ್ನು ಬೀಸಿ ಕೊಡುವುದರ ಕುರಿತು ಅನೇಕ ದೋಷಾರೋಪಗಳು ಕೇಳಿಬರುತ್ತವೆ. ಕೆಲವು ಕಡೆ ತೂಕಮಾಡಿ ತೆಗೆದುಕೊಂಡು, ತೂಕಮಾಡಿ ಹಿಟ್ಟು, ಸಜ್ಜಿಗೆಯನ್ನು ಹಿಂದಕ್ಕೆ ಕೊಡುವ ಕ್ರಮವಿರಲಿಲ್ಲವಂತೆ. ಇಂತಹ ಸಂದರ್ಭದಲ್ಲಿ ವಂಚನೆಗೆ ಎಡೆ ಇರುತ್ತದೆ. ಗೋದಿ ಬೀಸಿಕೊಳ್ಳುವವರು ತೃಪ್ತಿಕರವಾದ ಏರ್ಪಾಡುಗಳಿಲ್ಲದಲ್ಲಿ ಬೀಸಿಕೊಳ್ಳಬಾರದು. ಉದ್ದೇಶಪೂರ್ವಕವಾಗಿ ತೂಕಮಾಡುವ ಏರ್ಪಾಡುಗಳಿಲ್ಲದಿದ್ದರೆ ಆ ಕುರಿತು ಅಧಿಕಾರಿಗಳ ಗಮನಕ್ಕೆ ತರುವುದುಚಿತ. ಯಾವ ವಿಚಾರದಲ್ಲೂ ಮೋಸಕ್ಕೆ ಎಡೆಕೊಡದಂತೆ ನೋಡಿಕೊಳ್ಳುವುದು ನಾಗರೀಕ ಕರ್ತವ್ಯಗಳಲ್ಲಿ ಒಂದಾಗಿರಬೇಕು.

ಇಲ್ಲಿಯ ಶಿವಾಜಿ ಫಿಸಿಕಲ್ ಕಲ್ಚರ್ ಇನ್ಸಿಟ್ಯೂಟ್ ಇವರ ಒಂಬತ್ತನೇ ವಾರ್ಷಿಕೋತ್ಸವವು ಮಾನ್ಯ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜ್ ಬಿ. ಕೋಮನ್ ಐ.ಸಿ.ಎಸ್. ಅವರ ಅಧ್ಯಕ್ಷತೆಯಲ್ಲಿ ತಾ. ೨೫ರಂದು ಜರಗಿಸಲ್ಪಟ್ಟಿತು. ಈ ಸಂಸ್ಥೆಯ ಶಿಕ್ಷಕರಾದ ಶ್ರೀ. ಎ. ಕೆ. ಸಾಲಿಯಾನ್ ಅವರೂ ಮತ್ತು ಅವರ ಶಿಷ್ಯವರ್ಗದವರೂ ತಮ್ಮ ಅಮೋಘ ಕಸರತ್ತು ಮತ್ತು ಅಂಗಸಾಧನೆಗಳಿಂದ ಸಭಿಕರನ್ನು ಆನಂದಗೊಳಿಸಿದರು. ವ್ಯಾಯಾಮ ಪ್ರೇಮಿಗಳು ಬಹುಸಂಖ್ಯೆಯಲ್ಲಿ ನೆರೆದಿದ್ದರು. ಪ್ರದರ್ಶನಕ್ಕೆ ಪ್ರವೇಶವು ಟಿಕೇಟು ಮೂಲಕವಿತ್ತು.

ಪ್ರೊ. ಬಿ. ಆರ್. ಪುತ್ರನ್ ಅವರ ಕೃಷ್ಣಾಂಜನೇಯ ಪ್ರಸಾಧಿಕ ನವಜೀವನ ವ್ಯಾಯಾಮ ಶಾಲೆ ಎಂಬೀ ಇನ್ನೊಂದು ಜನಪ್ರಿಯ ವ್ಯಾಯಾಮ ಸಂಘದ ೧೫ನೇ ವಾರ್ಷಿಕೋತ್ಸವವು ಇದೇ ಮಾರ್ಚ್ ೪ರಂದು ಕೆನರಾ ಹೈಸ್ಕೂಲಿನ ಹ್ಯಾಲೆಂಡ್ಸ್ ಕ್ರೀಡಾರಂಗದಲ್ಲಿ ಜರಗುವುದು. ರಾ. ಬ. ಎಂ. ಕೆ. ನಂಬಿಯಾರ್ ಬಾರ್-ಎಟ್‌ಲೊ ಅವರು ಅಧ್ಯಕ್ಷತೆ ವಹಿಸುವರು. ಸಾರ್ವಜನಿಕರಿಗೆ ಆಮಂತ್ರಣವಿದೆ ಎಂದು ಕಾರ್ಯದರ್ಶಿ ಎಂ. ಎಲ್. ಶೆಟ್ಟಿ ಅವರು ತಿಳಿಸುತ್ತಾರೆ.

ನಮ್ಮ ನಗರದಲ್ಲೂ ಜಿಲ್ಲೆಯ ಹಲವು ಕಡೆಗಳಲ್ಲೂ ಅನೇಕ ವ್ಯಾಯಾಮ ಸಂಸ್ಥೆಗಳಿರುವುದು ತೃಪ್ತಿಯ ವಿಷಯ. ಇಂತಹ ಸಂಸ್ಥೆಗಳು ತಮ್ಮಲ್ಲಿ ಶಿಕ್ಷಣಕ್ಕೆ ಬರುವವರಿಗೆ ಬರೀ ಅಂಗ ಸಾಧನೆಯನ್ನು ಮಾತ್ರವೇ ಕಲಿಸುವುದರಲ್ಲಿ ತೃಪ್ತಿಪಡಬಾರದು. ಅದರೊಂದಿಗೆ ಶರೀರ ಶಾಸ್ತ್ರದ, ಮುಖ್ಯವಾಗಿ ಮಾಂಸಖಂಡ; ಎಲುಬು, ರಕ್ತ ಮತ್ತು ಆಹಾರ ಗುಣದೋಷ, ಪುಷ್ಟಿದಾಯಕ ಆಹಾರಾಭ್ಯಾಸಗಳು, ಶರೀರ ಸ್ವಚ್ಛತೆ, ಶರೀರ, ಮತ್ತು ಮಾನಸೀಕ ಬೆಳವಣಿಗೆಗಳ ಸಂಬಂಧ, ಗಿದುಳುಶಕ್ತಿ, ಬೆಳವಣಿಗೆ, ಗುಣ ನಡತೆಗಳ ತಿದ್ದುಕೊಳ್ಳುವಿಕೆಯ ಅವಶ್ಯಕತೆಗಳು ಮುಂತಾದ ಈ ವಿಷಯಗಳಲ್ಲೂ, ಸಾರ್ವಜನಿಕ ಸೇವೆ, ಆರೋಗ್ಯ ಪ್ರಚಾರದ ಕುರಿತೂ ಯೋಗ್ಯ ಶಿಕ್ಷಣವನ್ನು ಕೊಡಲು ಏರ್ಪಡಿಸಿದರೆ ಅವು ಇಂತಹ ಸಂಸ್ಥೆಗಳ ಧ್ಯೇಯವು ಪರಿಪೂರ್ಣವೆನಿಸುವುದೆಂದು ಸೂಚಿಸ ಬಯಸುವೆವು.

ಶ್ರೀ. ರಜಕ ಕುಲೋದ್ಧಾರಕ ಸಂಘದ ಆಶ್ರಯದಲ್ಲಿ ಜಿಲ್ಲಾ ರಜಕರ (ಮಡಿವಾಳರ) ೭ನೇ ಪರಿಷತ್ತು ಕಳೆದ ಭಾನುವಾರ ಕದ್ರಿ ವಿದ್ಯಾಬೋಧಿನಿ ಶಾಲಾ ಭವನದಲ್ಲಿ ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ರಜಕರೂ ಮತ್ತು ಇಂದು ಅವರಂತೆ ವಿದ್ಯೆಯಲ್ಲಿ ಹಿಂದುಳಿದ ಇತರರೂ ಸಂಘಟಿತರಾಗಿ ತಮ್ಮ ಸಮಾಜದೊಳಗಿನ ಭಾವೀ ಜನಾಂಗದವರಿಗೆ ಯೋಗ್ಯ ಶಿಕ್ಷಣ ಸೌಕರ್ಯಗಳನ್ನು ಒದಗಿಸಿಕೊಡಲು ಪ್ರಯತ್ನಿಸಬೇಕೆಂಬ ಅಧ್ಯಕ್ಷರ ಸೂಚನೆಯು ಯಥಾಯೋಗ್ಯವಾದುದು. ರಜಕರು ಹಿಂದಿನ ಕಾಲದಿಂದಲೂ ತುಂಬಾ ಸಾಂಸ್ಕೃತೀಕ ಸಂಸಾರವಿದ್ದ ಜನರು. ಮಾಚಯ್ಯನೆಂಬ ರಜಕ ಕುಲೋತ್ಪನ್ನನಾದ ಒಬ್ಬ ಕನ್ನಡ ಕವಿಯು ವಚನಕಾರನಾಗಿ ಸಾಹಿತ್ಯ ಸೇವೆ ಮಾಡಿರುವನು ಎಂಬ ವಿಷಯ ಅತೀ ಸಾರಸ್ಯದ್ದು. ಬೊಂಬ್ಯಾಯಲ್ಲೂ ತುಂಬಾ ಮುಂದುವರಿದ ರಜಕ ಸದಸ್ಯರಿದ್ದು ಅಲ್ಲಿಯೂ ಅವರ ಸಂಸ್ಥೆಯೊಂದಿದೆ. ಬೊಂಬಾಯಿಯ ಈ ಸಂಸ್ಥೆಯವರು ವಿದ್ಯಾರ್ಥಿ ವೇತನಕ್ಕೆ ತಮ್ಮವರಿಂದ ಅರ್ಜಿಗಳನ್ನು ನಿರೀಕ್ಷಿಸಿದರೂ ಅವುಗಳ ಅನುಕೂಲತೆಯನ್ನು ಒಬ್ಬರೂ ಪಡೆಯಲಿಲ್ಲವೆಂಬ ಸಂಗತಿ ಈ ಸದ್ರಿ ಸಮಾಜದ ಈಗಿನ ನಿದ್ರಾವಸ್ಥೆಯ ಅರಿವಾಗುತ್ತದೆ. ಈ ಕುರಿತು ಈ ಸಂಸ್ಥೆಯವರು ನಿರಾಶೆಗೊಳ್ಳದೆ ಹೆಚ್ಚಿನ ಉತ್ಸಾಹ ತಳೆಯುವರೆಂದು ಹಾರೈಸುವೆವು.

ಮೂಲ್ಕಿ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇಲ್ಲಿಯ ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾ ಸದನದಲ್ಲಿ ಶ್ರೀ. ಸುರತ್ಕಲ್ ಸುಬ್ರಾವ್, ವಿದ್ವಾನ್ ಅವರು ಕನ್ನಡ ಕಾವ್ಯಗಳ ಸಾರಸ್ವದ ಕುರಿತು ಭಾಷಣ ಕೊಟ್ಟರು. ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯದ ವಿವಿದಾಂಗಗಳ ಕುರಿತು ಭಾಷಣಗಾರರೂ ಅಧ್ಯಕ್ಷರೂ ಸುರಸವಾದ ಉದಾಹರಣೆಗಳಿಂದ ಕೂಡಿದ ಪ್ರವಚಗಳನ್ನಿತ್ತರು.

ನಮ್ಮ ನಗರದಲ್ಲೂ ಕನ್ನಡ ಸಾಹಿತ್ಯೋಪಾಸರನೇಕರಿರುವರು. ಅನೇಕ ಸಾಹಿತ್ಯ ಪ್ರಚಾರ ಸಂಸ್ಥೆಗಳೂ ಇವೆ. ಕನ್ನಡ ಪ್ರಾಚೀನ ಮತ್ತು ಅರ್ವಾಚೀನ ಕಾವ್ಯ, ಪ್ರಭಂದಗಳ ಕುರಿತು ಪ್ರತಿವಾರವೆಂಬಂತೆ ಪರಿಚಯ ಭಾಷಣ, ಪ್ರವಚಾರಗಳನ್ನು ಏರ್ಪಡಿಸಿದರೆ ಕನ್ನಡ ಸಾಹಿತ್ಯ ಪ್ರಚಾರ, ಬೆಳವಣಿಕೆಗಳಿಗೆ ತುಂಬಾ ಸಹಾಯವಾಗುವುದು. ಸಾಹಿತ್ಯ ಪರಿಷತ್ತಿನ ಶಾಖೆಯವರಾದರೂ ಈ ಕುರಿತು ಪರ್ಯಾಲೋಚಿಸಿ ಮುಂದಾಗಲೆಂದು ಹಾರೈಸುತ್ತೇವೆ.

ದ. ಕ. ಜಿಲ್ಲಾ ಹೊಟೇಲ್ ಮಾಲಕರ ಸಂಘದ ಕಾರ್ಯಕಾರಿ ಮಂಡಳದ ಸಭೆ ಕಳೆದ ಆದಿತ್ಯವಾರ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಜರಗಿತು. ಕಲೆಕ್ಟರರು ಹೋಟೇಲುಗಳಿಗೆ ಸೇಕಡಾ ೨೫ರಷ್ಟು ಹೆಚ್ಚು, ಸಕ್ಕರೆ ಪ್ರಮಾಣ ಸರಬರಾಯಿ ಮಾಡಿಕೊಟ್ಟದ್ದಕ್ಕೆ ಕೃತಜ್ಞತೆ ಸೂಚಿಸಿ, ಸಂಘವನ್ನು ರಿಜಿಸ್ಟರ್ ಮಾಡುವರೆ ಪ್ರಯತ್ನಗಳನ್ನು ಮಾಡಬೇಕಾಗಿ ನಿರ್ಧರಿಸಲಾಯಿತು. ಉಪಹಾರ ಗೃಹಗಳಿಗೆ ಸೌಕರ್ಯಗಳು ಸಿಕ್ಕಿದಂತೆ ಈ ಸಂಸ್ಥೆಗಳವರು ತಮ್ಮಲ್ಲಿ ರಾತ್ರಿ ಹಗಲು ದುಡಿಯುವವರ ಆರೋಗ್ಯ, ಅಭಿವೃದ್ಧಿಗಳ ಕುರಿತು ಯೋಗ್ಯ ಸಲವತ್ತುಗಳನ್ನು ಪೂರೈಸಿಕೊಡಲು ಪ್ರಯತ್ನಿಸಬೇಕು.

ಕೆಲವು ದಿನಗಳ ಹಿಂದೆ ಕೆನರಾ ಹೈಸ್ಕೂಲಿನಲ್ಲಿ ಪಂಡೇದೇಶಿಯ ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತು ಶ್ರೀ. ಅಮ್ಮೆಂಬಳ್ ಶ್ರೀನಿವಾಸ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲವು ತಲಾಂತರಗಳ ಹಿಂದೆ ಗೌ. ಸಾ. ಬ್ರಾಹ್ಮಣ ಸಮಾಜಸ್ಥರು ಕೆಲವೊಂದು ಕ್ಷುಲ್ಲಕ ಕಾರಣಗಳಿಗಾಗಿ ತಮ್ಮೊಳಗಿನ ಕೆಲವು ಕುಟುಂಬಗಳನ್ನು ಭ್ರಷ್ಟರೆಂದು ಬಹಿಷ್ಕಾರ ಹಾಕಿ ದೂರವಿಟ್ಟರು. ಈಗಿನ ದೃಷ್ಟಿಯಲ್ಲಿ ಅಂದಿನ ಅವರ ಧೋರಣೆಯು ಸಂದೇಹಾಸ್ಪದ ವಿವೇಕದ್ದೆಂದು ತೋರುತ್ತದೆ. ಅದೇ ಧೋರಣೆಯನ್ನು ಇಂದೂ ಅನುಸರಿಸಿದರೆ ಅದು ಕೇವಲ ಹಾಸ್ಯಾಸ್ಪದವೆನಿಸಿ ಪ್ರತಿಯೊಬ್ಬರೂ ಆ ಬಹಿಷ್ಕಾರದ ಕ್ಷೇತ್ರದೊಳಗೆ ಬಾರದಿರದು. ಈಗಲಾದರೂ ವಿಶಾಲ ದೃಷ್ಟಿಯ ಸಮಾಜ ದುರೀಣರು ನೊಂದ ತಮ್ಮ ಸಮಾಜಸ್ಥರನ್ನು ಕ್ರಮೇಣವಾಗಿಯಾದರೂ ತಮ್ಮೊಳಗೆ ಸಂಘಟಿಸಿಕೊಳ್ಳುವ ವಾತಾವರಣವನ್ನು ಕಲ್ಪಿಸಿ ಅಂದಿಗೆ ಅದೇ ಸರಿ ಇಂದಿಗೆ ಇದೇ ಸರಿ ಎಂಬ ತತ್ವವನ್ನು ಸಿದ್ಧಾಂತ ಮಾಡಲು ಪ್ರಯತ್ನಿಸುವುದೊಳಿತು. ಸಮಾಜ ಧರ್ಮ ಗುರುಗಳಾದ ಮಠಾಧಿಪತಿಗಳೂ ಈ ಕುರಿತು ಸಹಾನುಭೂತಿ ತೋರಿಸಬೇಕು. ಆಗಲೇ ಶ್ರೀ. ಗೋಕರ್ಣ ಮಠಾಧಿಪರು ಮಂಗಳೂರಿಗೆ ಸದ್ಯದಲ್ಲೇ ಚಿತ್ತೈಸಲಿದ್ದಾರೆ. ಅವರ ಬಳಿ ಈ ಸಂಬಂಧದ ಶಿಷ್ಟಮಂಡಳವೊಂದು ಹೋಗಲೆಂದು ನಿರೀಕ್ಷಿಸುವೆವು.

ಸ್ಥಳೀಯ ಮಧ್ವ ಸಿದ್ಧಾಂತ ಪ್ರಚಾರಣೀ ಸಭೆಯವರು, ೧೯೪೬ರಲ್ಲಿ ಜಾರಿಗೆ ತರಲುಪ್ರಯತ್ನಿಗಳಾಗುತ್ತಿರುವ ಸುಧಾರಿತ 'ಹಿಂದೂಕಾಯಿದೆ'ಯ ಕುರಿತು ಚರ್ಚಿಸಲು ಏರ್ಪಾಡುಗಳನ್ನು ಮಾಡಿರುವರು. ಆ ವಿಷಯ ಸ್ಪಷ್ಟವಾದ ಅನುಭವ ಕೊಡುವರೆ ಕೆಲವು ವಕೀಲರನ್ನೂ ವಿನಂತಿಸಿಕೊಳ್ಳಲಾಗಿದೆ. ಈ ಹೊಸ ಕಾಯಿದೆಯು ಹೆಚ್ಚಾಗಿ ಬ್ರಾಹ್ಮಣರಾದವರಿಗೇ ಅನ್ವಯಿಸುವಂತಹದ್ದಿರುವುದರಿಂದ ಹಿಂದೂ ಶಾಸ್ತ್ರ ಸ್ಮೃತಿ ವೇದ ಪುರಾಣ ಪಂಡಿತರುಗಳು ಇದನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ತಮ್ಮ ಸಮಾಜದ ವತಿಯಿಂದ ಯೋಗ್ಯ ಬೆಂಬಲ ಪಡೆದು ಸರಕಾರಕ್ಕೆ ತಮ್ಮ ಅಭಿಪ್ರಾಯವನ್ನು ಕಳುಹಿಸಿ ಕೊಡಬೇಕು. ಹಿಂದೂ ಕಾಯಿದೆಯನ್ನು ಸುಧಾರಿಸಿದರೆ ಉಂಟಾಗುವ ಸಾಮಾಜಿಕ, ನೈತಿಕ, ಕುಂದುಕೊರತೆಗಳೇನೆಂಬುದನ್ನು ಆಧುನಿಕ ವಿಜ್ಞಾನ ತತ್ವದೃಷ್ಟಿಯಿಂದ ಶ್ರುತಪಡಿಸ ಹೆಚ್ಚುವರೆ ಪ್ರಯತ್ನಗಳಾಗಬೇಕು.

ಕಳೆದ ವಾರ ಗ। ಹಾ। ಎ॥ ಟ್ರೈನಿಂಗ್ ಶಾಲಾ ಬಂಟರ ಬೋರ್ಡಿಂಗ್ ಮಂದಿರದವರು ತಮ್ಮ ಸಾಹಿತ್ಯ ಸಂಘದ ವಾರ್ಷಿಕೋತ್ಸವವೂ, ಸೆಕೆಂಡರಿ ಟ್ರೈನಿಂಗ್ ಶಾಲೆಯ ವಾರ್ಷಿಕೋತ್ಸವವೂ ಶ್ರೀ. ಎ. ಬಿ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟವು. ಉಪಧ್ಯಾಯ ಮತ್ತು ವಿದ್ಯಾರ್ಥಿಗಳ ಸಂಘದವರು ಗಾಂಧೀಜಿಯ ೧೪ ರಚನಾತ್ಮಕ ವಿಷಯಗಳನ್ನು ಆದಷ್ಟುಮಟ್ಟಿಗೆ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬಹುದು.

ಈಶ್ವರಾನಂದ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ಕಳೆದ ತಾ. ೨೪ರಲ್ಲಿ ಡಿ. ಸಿ. ಮಿಶನ್ ಶಾಲೆಯಲ್ಲಿ ಮಿ। ಎಂ. ಮಾರ್ಟಿಸರ ಅಧ್ಯಕ್ಷತೆಯಲ್ಲಿ ಜರುಗಿತು. ಹಿಂದುಳಿದ ವರ್ಗದ ಯುವಕರು ಇತರ ಸಾಹಿತ್ಯ ಸಂಘಗಳ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಸಾಮಾಜಿಕ ಸಂಪರ್ಕವನ್ನೂ ಸ್ನೇಹವನ್ನೂ ಹೆಚ್ಚೆಚ್ಚಾಗಿ ಬೆಳೆಸಬೇಕು.

ತಾ. ೨೬ರಂದು ಸಂಜೆ ಸ್ಥಳೀಯ ಮೈದಾನಿನಲ್ಲಿ ದ. ಕ. ಜಿಲ್ಲಾ ಎತ್ಲೆಟಿಕ್ ಎಸೋಶಿಯೇಶನ್ ಇದರ ಕಡೆಯಿಂದ ಜರಗುವ ವರ್ಷಾವಧಿ ಸ್ಪೋರ್ಟ್ಸ್ ಪಂದ್ಯಾಟಗಳು ನಡೆದುವು. ಮಾನ್ಯ ಕಲೆಕ್ಟರ್ ರಾ. ಸಾ. ಪಿ. ರಾಮದಾಸ್ ಅವರು ಅಧ್ಯಕ್ಷತೆವಹಿಸಿದ್ದು ಬಹುಮಾನ, ಪದಕಗಳನ್ನು ಹಂಚಿದರು.

ಮಂಜೇಶ್ವರದ ಮುಸ್ಲಿಂ ಲೀಗ್ ಆಫೀಸಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ "ನಬಿದಿನ" ವಾಚರಿಸಲ್ಪಟ್ಟಿತು. ಜನಾಬ್ ಎ. ಎಚ್. ಮಹಮ್ಮದ್ ಕುಂಞ ಮೌಲವಿಯವರು ಅಧ್ಯಕ್ಷತೆ ವಹಿಸಿದ್ದರು. ಮಹಮ್ಮದ್ ಪೈಗಂಬರರ ಜೀವನ ಚರಿತ್ರೆಯನ್ನು ಪುರಸ್ಕರಿಸಿ ಸಾರಸ್ಯವಾದ ಅಧ್ಯಕ್ಷರ ಭಾಷಣಾನಂತರ ಮೊಗ್ರಾಲ್ ಅಂದುಂಞ ಮೌಲವಿ, ಕೆ. ಇಬ್ರಾಹೀಮ್, ಯಂ. ಮಮ್ಮಂಞ, ಯಂ. ಬಾಪುಂಞ (ಸ್ಥಳೀಯ ಮು. ಲೀಗ್ ಸೆಕ್ರಟರಿ) ಮೊದಲಾದವರ ಭಾಷಣಗಳಾದುವು.

ಎಲ್ಲಾ ಧರ್ಮಸಂಸ್ಥಾಪಕರುಗಳ ಜನ್ಮ ದಿನಾಚರಣೆಗಳನ್ನು ಎಲ್ಲಾ ಮತ ಸಂಸ್ಥೆಯವರು ಆಚರಿಸುವುದರ ಮೂಲಕ ಸರ್ವ ಮತಸ್ಥರು ಪರಸ್ಪರ ಅನ್ಯೋನ್ಯತೆಯನ್ನು ಬೆಳೆಸಬಹುದು.

ಚೈತನ್ಯ ಮತ್ತು ಸೌಂದರ್ಯಯುತರಾಗಿರಬಾರದೇಕೆ?

ಸೌಂದರ್ಯವು ಚರ್ಮದ ಚೆಲುವು ಮಾತ್ರವಲ್ಲ; ಆ ಶುಭ್ರ ಕಣ್ಣುಗಳು ಆ ಸುಂದರ ಶರೀರ ಸೌಂದರ್ಯ ಇವು ಶರೀರದ ಆಂತರೀಕ ನೈರ್ಮಲ್ಯದಿಂದ ದೊರಕುತ್ತವೆ. ಆದ್ದರಿಂದ ಪ್ರತಿರಾತ್ರಿ ಎರಡು ಬೈಲ್‌ಬೀನ್ಸು ಮಾತ್ರೆಗಳನ್ನು ಸೇವಿಸುವ ಸುವರ್ಣ ನಿಯಮವನ್ನು ಅನುಸರಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯದು. ಅವು ಅವಯವಗಳನ್ನು ಸರಿಯಾಗಿಟ್ಟು, ರಕ್ತವನ್ನು ಶುದ್ಧಗೊಳಿಸಿ, ದಿನನಿತ್ಯವೂ ಅಶುದ್ಧ ಆಹಾರವನ್ನು ಹೊರಹಾಕುವವು. ಇದರಿಂದ ಸೌಂದರ್ಯ ಶೋಭೆ ಮನೋಹರತೆಗಳುಂಟಾಗುವವು.

ಬೈಲ್‌ಬೀನು ನಿಮ್ಮನ್ನು ಆರೋಗ್ಯ ಸುಖ ಮತ್ತು ಯೋಗ್ಯತೆಯುಳ್ಳವರಾಗಿ ಮಾಡುವುದು.

BILE BEANS

ಪಾಕಿಸ್ತಾನ ವಿರೋಧಿ ಪಂಜಾಬಿಗಳು

ಜಿನ್ನರ ಸೋಲಿಗೆ ಇವರೇ ಕಾರಣರು

ಚೌದರಿ ಚೋಟು ರಾಮ್—ಒಕ್ಕಲಿಗ ಹುಡುಗ—ಪಕ್ಕಾ ಮಂತ್ರಿ!

ಇಂದಿಗೆ ಸುಮಾರು ಐವತ್ತು ವರ್ಷಗಳ ಹಿಂದೆ ಪಂಜಾಬಿನ ರೊಟಾಕ್ ಜಿಲ್ಲೆಯ ಘಾರಿಸಾಂಪ್ಲಾ ಹಳ್ಳಿಯಲ್ಲಿ ಯಾರಾದರೂ ಹುಡುಗರು ಹೋದರೆ ಅಲ್ಲಿಯ ರಾಮರಿಚ್ಪಾಲ್‌ನೆಂಬ ಒಬ್ಬ ಪೋಕರಿ ಹುಡುಗನ ಕೈಯಲ್ಲಿ ಪೆಟ್ಟು ತಿಂದು ಬರುವುದು ಖಂಡಿತ. ರಾಮನಿಂದ ಬಡಿಯಲ್ಪಡದ ಹುಡುಗರಾರೂ ಆ ಹಳ್ಳಿಯಲ್ಲಿರಲಿಲ್ಲ. ಅವನೊಬ್ಬ ಒಕ್ಕಲಿಗರ ಹುಡುಗ. ಇವನ ತುಂಟತನ ತಡೆಯಲಾರದೆ ತಂದೆ ಸುಖೀರಾಮನು ರಿಚ್ಪಾಲನನ್ನು ಶಾಲೆಗಾದರೂ ಹೋಗಲಿ ಎಂದು ಕಳುಹಿಸಿದರು. ಆದರೆ ಹೆಚ್ಚಿನ ಪೋಕರಿಗಳಂತೆ ಈ ಹುಡುಗ ಮಾತ್ರ ಕಲಿಯುವುದರಲ್ಲಿ ಹಿಂದೆ ಬೀಳುತ್ತಿರಲಿಲ್ಲ. ಇವನೇ ಮುಂದೆ ಪಂಜಾಬಿನ ಅಗ್ರಗಣ್ಯ ವ್ಯಕ್ತಿಗಳಲ್ಲಿ ಒಬ್ಬನಾಗುವನು. ಮತ್ತು ಸರ್ ಚೋಟ್ ರಾಮ್ ಎಂಬ ಪಂಜಾಬಿನ ಮಂತ್ರಿಯಾಗುವನು. ಆ ಪೋಕರಿ ಹುಡುಗನಿಗೆ ಚೋಟು ಅಂದರೆ ಚಿಕ್ಕವ ಎಂದು ಕರೆಯುತಿದ್ದುದೇ ಕೊನೆ ತನಕವೂ ಅದೇ ಹೆಸರು ಬಿತ್ತು.

ಸರ್ ಚೋಟು ರಾಮ್ ಅವರ ಜೀವನವು ಬಹಳ ವೈವಿಧ್ಯತೆಯಿಂದ ಕೂಡಿರುತ್ತದೆ. ವಿದ್ಯೆ ಕಲಿಸಿದರೆ ಹಣ ವ್ಯರ್ಥವಾಗುವುದೆಂಬ ತಂದೆಯ ಅಭಿಪ್ರಾಯಕ್ಕೆನೊಂದು ಮಾವನ ಸಹಾಯದಿಂದ ಎಂ. ಎ. ಕಲಿತು ಚೋಟು ರಾಮನು ಕಾಲಾಕಾಂಕರ್ ಎಂಬ ಚಿಕ್ಕ ದೇಶಿ ಸಂಸ್ಥಾನದ ರಾಜರ ಸಹಾಯ ಕಾರ್ಯದರ್ಶಿಗಳಾದರು. ಜೀವನಕ್ಕೆ ಆಗಿನ ಸಂಬಳ ಸಾಲದೆ ಲಾಹೋರಿಗೆ ಬಂದು ಉಪಾಧ್ಯಾಯರಾದರು. ನಂತರ ಪುನಃ ಮೇಲಿನ ದೇಶಿ ಸಂಸ್ಥಾನದಲ್ಲಿ ಶಿಕ್ಷಣ ಖಾತೆಯ ಮೇಲಾಧಿಕಾರಿಯಾಗಿ ಕೆಲಸ ನೋಡಿದರು. ಕೆಲ ಕಾಲದ ಮೇಲೆ ಆಗ್ರಾ ವಿಶ್ವವಿದ್ಯಾಲಯದ ನ್ಯಾಯ ಶಾಸ್ತ್ರದ ಪ್ರಶಸ್ತಿ ಪಡೆದು ರೊಟಾಕಿನಲ್ಲಿ ವಕೀಲ್ ಆಫೀಸ್ ಇಟ್ಟರು. ಇಷ್ಟಾದರೂ ಅವರ ತಂದೆಗೆ ಮಗ ಪೋಲಿಸ್ ಕಾನ್‌ಸ್ಟೇಬಲನಾಗಲೀ, ಹಳ್ಳೀ ಪಟೇಲನಾಗಲಿ ಆದರೆ ಸಾಕೆಂದಿತ್ತು.

ಕಳೆದ ಯುದ್ಧಕಾಲದಲ್ಲಿ ಗಾಂಧೀಜಿಯಂತೆ ಚೋಟುರಾಮರೂ ಸೈನ್ಯಕ್ಕೆ ಸಿಪಾಯಿಗಳನ್ನು ಸೇರಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡಿ ರಾವ್ ಸಾಹೇಬ್ ಬಿರುದು ಪಡೆದರು. ಆದರೆ ಮರುವರ್ಷ ಕೊಂಗ್ರೆಸಿಗೆ ಸೇರಿ ದೇಶಸೇವೆಗೆ ಸೇರಲು ಶಿಕ್ಷಿತ ಯುವಕರನ್ನು ಪ್ರೇರೇಪಿಸಿದರು. ಕೊಂಗ್ರೆಸು ಅಸಹಕಾರ ಪ್ರಾರಂಭಿಸಿದಾಗ ಅದರಲ್ಲಿ ನಂಬಿಕೆ ಇಲ್ಲದ ಚೋಟು ರಾಮರು ಹೊರಗೆ ಬಂದು ರೈತ ಜನರ ಉದ್ಧಾರವೇ ತನ್ನ ಜೀವನ ಧ್ಯೇಯವೆಂದು ತಿಳಿದು ಇವರು ಜಮಿನ್ದಾರಾ ಲೀಗ್ ಎಂಬ ಕೃಷಿಕರ ಸುಧಾರಣೆಯ ಧ್ಯೇಯವುಳ್ಳ ಸಂಘವನ್ನು ಸ್ಥಾಪಿಸಿ ಕಡೆತನಕವೂ ಅದಕ್ಕಾಗಿ ಅವಿಶ್ರಾಂತವಾಗಿ ದುಡಿದರು.

ಕೊಂಗ್ರೆಸಿಗೆ ಒಬ್ಬ ಗಾಂಧಿ, ಮುಸ್ಲಿಂ ಲೀಗಿಗೆ ಒಬ್ಬ ಜಿನ್ನಾ, ಹಿಂದೂ ಮಹಾಸಭೆಗೆ ಓರ್ವ ಸಾವರಕರ್ ಇರುವಂತೆ ಪಂಜಾಬಿನ ಯೂನಿಯನಿಸ್ಟ್ ಪಕ್ಷಕ್ಕೆ ಒಬ್ಬ ಚೋಟುರಾಮರು. ಒಂದು ಕಾಲದಲ್ಲಿ ಆರ್ಯ ಸಮಾಜಿಗಳಿದ್ದು ಕೊನೆಗೆ ರಾಜಕೀಯದಲ್ಲಿ ಜಾತಿ ಮತ ಪ್ರಶ್ನೆಯು ಅಯೋಗ್ಯಕರ ಲಕ್ಷಣವಲ್ಲವೆಂದು ದೃಢ ನಂಬಿಕೆಯಾಗಿ ಅವರು ಜಮಿನ್ದಾರಾ ಲೀಗನ್ನು ಯೂನಿಯನಿಸ್ಟ್ ಪಾರ್ಟಿಯನ್ನು ಜಾತಿ ಮತ ಭೇಧವಿಲ್ಲದ ಧ್ಯೇಯಗಳಿಂದ ಪರಿಪುಷ್ಟಗೊಳಿಸಿದರು. ೧೯೩೭ರ ಚುನಾವಣೆಯಲ್ಲಿ ಪಾಕಿಸ್ತಾನದ ಪಂಜಾಬಿನಲ್ಲಿ ಮುಸ್ಲಿಂ ಲೀಗಿಗೆ ಯಾವ ಬೆಂಬಲವೂ ಸಿಗದಿರಲಿಕ್ಕೆ ಸರ್ ಚೋಟುರಾಮರ ಯುನಿಯುನಿಸ್ಟ್ ಪರವಾದ ಉದಾತ್ತ ಧ್ಯೇಯ ಪ್ರಚಾರಗಳೇ ಕಾರಣ.

'ಪಾಕಿಸ್ತಾನವೆಂಬ ಈ ಭೂತವನ್ನು ಈಗಲೇ ಹೂಳಿಡದಿದ್ದರೆ ಮುಂದೆ ಅದು ಹಾನಿಕಾರಕವೇ ಸರಿ' ಹೀಗೆಂದು ಹೇಳುತ್ತ ಚೋಟು ರಾಮರು ಜಿನ್ನರ ದಂಡಯಾತ್ರೆಯನ್ನು ತಡೆದರು. ಇವರಲ್ಲದಿದ್ದರೆ ಕೆಲಸಮಯದ ಹಿಂದೆ ಪಂಜಾಬ್ ಪ್ರಧಾನ ಮತ್ತು ಜಿನ್ನರೊಳಗೆ ಉಂಟಾದ ಕಚ್ಚಾಟದಲ್ಲಿ ಜಿನ್ನರೇ ಯಶಸ್ವಿಯಾಗುತ್ತಿದ್ದರು. ಮುಸ್ಲಿಂ ಲೀಗ್ ಮುಖಂಡರು ಪಂಜಾಬಿನಿಂದ ಹತಾಶರಾಗಿ ಓಡಿಬರಲು ಚೋಟು ರಾಮರ ಅಪಾರ ಪ್ರಭಾವ ಬಲವೇ ಕಾರಣವೆನ್ನಬೇಕು.

ಮುಸ್ಲಿಂ ಲೀಗಿಗೆ ಚೋಟುರಾಮರು ತೋರಿಸಿದ ವಿರೋಧವನ್ನು (ಅದು ಇಡೀ ಪ್ರಾಂತ್ಯದ ಮತ್ತು ಭಾರತದ ಹಿತದೃಷ್ಟಿಯದೆಂದು ಅವರ ದೃಢ ವಿಶ್ವಾಸವಿತ್ತು) ಅಲ್ಲಿನ ಕೆಲ ಜಾತೀಯ ಮುಖಂಡರು ಕಡುವಾಗಿ ನೊಂದರು. 'ಈಸ್ಟರ್ನ್ ಟೈಮ್ಸ್' ಎಂಬ ಲೀಗ್ ಧೋರಣದ ಪತ್ರಿಕೆಯು ಪಂಜಾಬಿನ ಈ ಅಗ್ರಗಣ್ಯರ ಮರಣದ ವಾರ್ತೆಯನ್ನು ಕೇಳುತ್ತಲೇ "ಇವರ ಮರಣದಿಂದ ಮುಸ್ಲಿಂ ಜಗತ್ತಿಗೇ ಸುಖವಾಯಿತು" ಎಂಬರ್ಥದ ಅಗ್ರಲೇಖವನ್ನು ಬರೆದು ಪತ್ರಿಕಾವ್ಯವಸಾಯದ ಶಿಷ್ಟ ಸಾಂಪ್ರದಾಯದ ಎಲ್ಲೆಯನ್ನು ಮೀರಿ ಟೀಕಿಸಿತು. ಜಿನ್ನರೊಂದಿಗೆ ಅರ್ಧ ಮನಸ್ಸಿನಿಂದ ಸಹಕರಿಸುತಿದ್ದ ಪಂಜಾಬಿನ ದಿವಂಗತ ಪ್ರಧಾನ ಸಿಕಂದರ್ ಹಯೆತ್ ಖಾನರು ಚೋಟುರಾಮರ ಕುರಿತು ಅವರ ಷಷ್ಟ್ಯಾಬ್ಧಿಪೂರ್ತಿಯ ಸಂದರ್ಭದಲ್ಲಿ 'ಪಂಜಾಬಿನ ಪ್ರಗತಿಗೆ ಆಧಾರಸ್ತಂಭದಂತಿರುವರು' ಎಂದು ಅವರ ಸೇವೆಯನ್ನು ಶ್ಲಾಘಿಸಿರುವರು.

ಅಂತು ಸರ್ ಚೋಟು ರಾಮ್ ಅವರು ನಾವು ನಂಬದ ಧ್ಯೇಯಗಳಿಗಾಗಿ ಮನಃಪೂರ್ವಕ ದುಡಿದು ಮಡಿದರು. ಹಿಂದೂಗಳಾದರೂ ಹಿಂದೂ ಮಹಾಸಭೆಗೆ ಸೇರದೆ, ಕೃಷಿಕ ಜನತೆಯ ಹಿತವಾದಿಗಳಾದರು. ಕೊಂಗ್ರೆಸ್ಸಿಗೂ, ಕಮ್ಯುನಿಷ್ಟ ಪಂಥಕ್ಕೂ ಸೇರದೆ, ಬ್ರಿಟಿಷ್ ಸಾಮ್ರಾಜ್ಯದ ಬಿರುದಾಂಕಿತರಾದರೂ ಸಾಮ್ರಾಜ್ಯಶಾಹಿಯ ಧೋರಣೆ ಯತ್ನ ವಿರೋಧಿಸಿದವರು.

ತಮ್ಮ ಪ್ರಾಂತ್ಯದಲ್ಲಿ ವಿಪರೀತ ಬಡ್ಡಿ ಮೇಲೆ ಹಣ ಸಾಲ ತೆತ್ತು, ಬಡಜನತೆಯನ್ನು ಪೀಡಿಸುವ ಹಣ ಪಿಶಾಚಿಗಳ ಕಾಟವನ್ನು ತುಂಬಾ ಕ್ಷೀಣಿಸಿ ಬಿಟ್ಟರು. ರೈತರ ಸಾಲವನ್ನು ಕಮ್ಮಿ ಮಾಡುವ, ಅವರಿಗೆ ಸುಲಭ ಸಾಲ ಸೌಕರ್ಯಗಳನ್ನೊದಗಿಸುವ ಏರ್ಪಾಡುಗಳನ್ನವರು ಯೋಚಿಸಿದ್ದರು. ಇಂಥವರ ಮರಣದಲ್ಲಿ ಪಂಜಾಬು ಪ್ರಥಮ ಶ್ರೇಣಿಯ ಓರ್ವ ಮುಖಂಡನನ್ನು ಕಳಕೊಂಡಿದೆ.

ಅಕ್ಬರನ ಕಾಲದಲ್ಲಿ ಪತ್ರಿಕೆಗಳು

ಪತ್ರಿಕೋದ್ಯೋಮ ಶಾಲೆಗಳು

ಪತ್ರಿಕೆಯ ಮೂಲಕ ಶಿಕ್ಷಣ

ಮೊಗಲ್ ಅರಸರಲ್ಲಿ ಶ್ರೇಷ್ಠನಾದ ಅಕ್ಬರನ ಕಾಲದಲ್ಲಿ ನಮ್ಮ ದೇಶದ ಪತ್ರಿಕೋದ್ಯೋಮವು ಜನ್ಮ ತಾಳಿತು. ಮೊಗಲರ ಆಸ್ಥಾನದಲ್ಲಿ ವಾಗಿಯಾ ನಾವಿಸ್ (ವರ್ತಮಾನ ವರದಿಕಾರರು) ಎಂಬ ವಾರ್ತಸಂಗ್ರಹಕರಿದ್ದರು. ಇವರು ಸಾಮ್ರಾಜ್ಯದ ಮೂಲೆ ಮೂಲೆಗಳಲ್ಲಿಂದ ವರ್ತಮಾನಗಳನ್ನೂ ಸಂಗ್ರಹಿಸಿ ವಾಕಿಯಾ ಎಂಬ 'ಗಜೇಟ್'ನಲ್ಲಿ ಪ್ರಕಟಿಸುತಿದ್ದರು.

ಈ ಗಜೇಟುಗಳು ಕೈ ಬರಹದಲ್ಲಿ ಬರೆಯಲ್ಪಡುತಿದ್ದವೆಂಬ ವಿಷಯವು ಈಗಿನ ಶಾಲೆಗಳಲ್ಲಿನ ಕೈ ಬರಹ ಪತ್ರಿಕಾ ವಿದ್ಯಾರ್ಥಿ ಉಮೇದುವಾರರಿಗೆ ಉತ್ತೇಜನದ ಸಂಗತಿಯಾಗಿದೆ.

ಬರೆದಾದ ಮೇಲೆ ಈ 'ಗಜೇಟ್' ಪತ್ರಿಕೆಯನ್ನು ಬಾದಶಹರ ಓದುವಿಕೆಗಾಗಿ ಕಳುಹಿಸಲಾಗುತ್ತಿತ್ತು. ರಾಜರು ಇದರ ಮೂಲಕ ರಾಜ್ಯದ ಜನತೆಯ ಪರಿಸ್ಥಿತಿಯನ್ನು ತಕ್ಕ ಮಟ್ಟಿಗೆ ತಿಳಕೊಳ್ಳುತ್ತಿದ್ದರು. ಅಂದಿನ ಆ ಪತ್ರಿಕೆಯು ೮ ಇಂಚು ಉದ್ದವೂ ೪½ ಇಂಚು ಅಗಲವೂ ಇತ್ತು. ಇಂದು ಅದೇ ಪತ್ರಿಕೆಯು ಪ್ರಗತಿಹೊಂದಿ ಭಾರತದಲ್ಲಿ ನಾನಾತರದ ದೈನಿಕ, ವಾರಪತ್ರಿಕೆಗಳೂ ಮಾಸಿಕಗಳೂ ಅಭಿವೃದ್ಧಿ ಹೊಂದಿದೆ.

ಇಷ್ಟಾದರೂ ನಮ್ಮ ದೇಶದಲ್ಲಿನ ವಾರ್ತಾ ಪತ್ರಿಕೆಗಳ ಪ್ರಗತಿಯು ಬಹು ಸಾವಧಾನವಾದುದು. ಇತರ ದೇಶಗಳಲ್ಲಿನ ಜನ ಸಂಖ್ಯೆಯ ದಾಮಾಶಯಲ್ಲಿ ಅಲ್ಲಿ ಎಷ್ಟು ಪತ್ರಿಕೆಗಳಿವೆ ಮತ್ತು ಅದೇ ದಾಮಾಶಯದಲ್ಲಿ ನಮ್ಮ ದೇಶದಲ್ಲಿ ಎಷ್ಟಿವೆ ಎಂಬ ಲೆಕ್ಕವನ್ನು ನೋಡಿದರೆ ನಾವು ಈ ಉದ್ಯಮದಲ್ಲಿ ಎಷ್ಟು ಹಿಂದಕ್ಕೆಬಿದ್ದಿರುತ್ತೇವೆಂಬ ವಿಷಯವು ಕಂಡುಬರುತ್ತದೆ.

ದೇಶ	ಜನಸಂಖ್ಯೆ	ಪತ್ರಿಕೆಗಳು
ಸಂಯುಕ್ತ		
ಅಮೇರಿಕಾ	127 ಮಿಲಿಯ	20,524
ಬ್ರಿಟನು	45 „	5000
ಜಪಾನ್	80 „	4592
ಭಾರತ	800 „	2992

ಈಗ ದೇಶದಲ್ಲಿ ಪತ್ರಿಕೆಗಳ ಮೇಲೆ ಇರುವ ನಿರ್ಬಂಧಗಳು ವಿಪರೀತವಿರುವುದರಿಂದ ಸಹಜವಾಗಿ ಆಗಬೇಕಾದ ಪ್ರಗತಿಗೂ ಇನ್ನಷ್ಟು ಹೆಚ್ಚಿನ ತಡೆಗಳು ಬಂದಿವೆ. ರಾಜಕೀಯದಲ್ಲಿ ಬಹಳ ಹಿಂದೆ ಬಿದ್ದಿರುವ ದೇಶದ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಲು ವೃತ್ತ ಪತ್ರಿಕೆಗಳು ಅತ್ಯಂತ ಸಹಾಯಕಾರಿಯಾದವುಗಳು. ನಿರ್ಬಂಧವಿಲ್ಲದ ಪತ್ರಿಕೋದ್ಯೋಮವು ದೇಶದ ಏಳ್ಗೆಯನ್ನುಂಟುಮಾಡುವುದು. ಆದುದರಿಂದ ನಮ್ಮ ದೇಶದಲ್ಲಿ ಪತ್ರಿಕಾ ವ್ಯವಸಾಯದಲ್ಲಿ ಶಾಸ್ತ್ರೀಯ ಶಿಕ್ಷಣ ಕೊಡುವ ವಿದ್ಯಾಲಯ ಶಾಖೆಗಳಿರಬೇಕಾದುದು ಅವಶ್ಯಕವೆಂದು ಪ್ರಮುಖ ಪತ್ರಿಕೋದ್ಯೋಮಿಗಳು ಅಭಿಪ್ರಾಯ ಸೂಚಿಸಿರುವರು.

ಅಮೇರಿಕದಲ್ಲಿ ಪತ್ರಿಕೋದ್ಯೋಮ ಶಿಕ್ಷಣವು ೧೯೦೮ರಲ್ಲಿ ಪ್ರಾರಂಭಿಸಲ್ಪಟ್ಟಿತು. ಇಂಗ್ಲೆಂಡಿನಲ್ಲಿ ೧೯೧೯ರಲ್ಲಿ. ನಮ್ಮ ದೇಶದಲ್ಲೂ ಅನೇಕ ವಿಶ್ವವಿದ್ಯಾಲಯಗಳವರು ಆ ವಿಷಯ ಕುರಿತು ಇನ್ನೂ ಪರ್ಯಾಲೋಚಿಸುತ್ತಲಿದ್ದಾರೆ. ಈಗ ಪತ್ರಿಕಾ ವ್ಯವಸಾಯದ ಕುರಿತು ಅತ್ಯಾಧುನಿಕ ಪದ್ಧತಿಯ ವೈಜ್ಞಾನಿಕ ರೀತಿಯ ಶಿಕ್ಷಣವನ್ನು ಕೊಡುವ ಒಂದೇ ಒಂದು ಶಿಕ್ಷಣ ಸಂಸ್ಥೆ ವಿದ್ಯಾಲಯವೆಂದರೆ ಪಂಜಾಬ್ ವಿಶ್ವವಿದ್ಯಾಲಯ.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಜಗತ್ತಿನ ಅತೀ ದುಃಖಿತ ಮಹಿಳೆಯರು

ಜಪಾನೀ ಸ್ತ್ರೀಯರ ದೀನ ದುರ್ದಶೆ

ಅವರಲ್ಲೂ 'ಸತಿ' ಪದ್ಧತಿ ಇದೆ

ನಿಪ್ಪೊನ್ ಗಂಡಸರ ಸಂಕುಚಿತ ಭಾವನೆ

ನಮ್ಮ ದೇಶದ ಅನೇಕ ಸಮಾಜಗಳಲ್ಲಿನ ಪುರುಷರು ತಮ್ಮ ಸ್ತ್ರೀಯರನ್ನು ನಿಕೃಷ್ಟವಾದ ದೃಷ್ಟಿಕೋನದಿಂದ ಕಾಣುವಂತೆ ಇಂದು ಪಾಶ್ಚಾತ್ಯ ಮಾದರಿಯ ಮೇಲೆ ಅತೀ ಮುಂದರಿದೆಂದು ಹೇಳಲ್ಪಡುವ ಜಪಾನಿನಲ್ಲಿಯೂ ಅಲ್ಲಿನ ಗಂಡಸರು ತಮ್ಮ ಸ್ತ್ರೀಯರಿಗೆ ಸಮಾಜದಲ್ಲಿ ಬಹಳ ಕೀಳು ತರಗತಿಯ ಸ್ಥಾನವನ್ನುಕೊಟ್ಟು ಒಂದು ವಿಧದ ಸಾಮಾಜಿಕ ದಬ್ಬಾಳಿಕೆಗೆ ಗುರಿಮಾಡುತ್ತಾರೆಂಬ ಸಂಗತಿಯು ವಿಚಿತ್ರವೂ ಕನಿಕರಾಸ್ಪದವಾದುದುದೂ ಆಗಿದೆ. ಜಗತ್ತಿನಲ್ಲಿ ಜಪಾನಿ ಸ್ತ್ರೀಯರದಷ್ಟು ದೀನ ದುರ್ದಶೆಯು ಇನ್ನಾರದೂ ಇಲ್ಲವೆಂಬ ವಿಷಯು ನಿಜವಾಗಿಯೂ ಕನಿಕರಾಸ್ಪದವಾದದ್ದು.

ಇಷ್ಟಾದರೂ ನಾವೊಂದು ಜಪಾನಿ ಮಹಿಳೆಯನ್ನು ಮಾತನಾಡಿಸಿದರೆ ಸುಂದರ ವಿವಿಧವರ್ಣದ ಪೋಷಾಕಿನಿಂದ ಬಣ್ಣದ ಪತಂಗಗಳಂತೆಕಾಣುವ ಅವರು ವಿಶಾಲವಾಗಿ ಅರಳಿಸಿದ ತಮ್ಮ ಮುಗ್ಧ ಮುಖಗಳಲ್ಲಿನ ಮುಗುಳ್ನಗೆಯಿಂದಲೇ ತಮ್ಮ ಗೋಳನ್ನು ಹೇಳಿಕೊಳ್ಳುವುದನ್ನು ನಾವು ಕೇಳಬಹುದು. ಅವರ ಆ ಪುಟ್ಟ ಮನಸ್ಸಿನಲ್ಲಿನ ಸಂಕಷ್ಟಮಯವಾದ ವೇದನೆಯನ್ನು ಆ ಮನಾಕರ್ಷಕ ಮುಗುಳು ನಗೆಯಿಂದ ಮುಚ್ಚಿಕೊಳ್ಳಲು ಅವರು ಪ್ರಯತ್ನಮಾಡುವುದು ಸ್ಪಷ್ಟ ತಿಳಿಯುತ್ತದೆ. ಇದರೊಂದಿಗೆ ಅವರ ಶಿಷ್ಟಾಚಾರ ಪ್ರಧಾನವಾದ ಸವಿನಯ ನುಡಿ ನಡೆವಳಿಕೆಗಳ ಪ್ರದರ್ಶನವೂ ಬಹಳ ಕಾಲ ನಮ್ಮನ್ನು ವಂಚಿಸಲಾರದು. ಕಾರಣ ಇವುಗಳ ಆಳ ಅಂತರ್ಯದಲ್ಲಿ ಹುದುಗಿದ ಅವರ ಸ್ವಯಂನಿಕೃಷ್ಟತ್ವಾಭಾವವು ಗಾಜಿನ ಗೂಡಿನೊಳಗಿನ ಹೊಗೆಯಂತೆಕಾಣಿಸುವುದು.

ಚಿಕ್ಕಪ್ರಾಯದಿಂದಲೇ ಜಪಾನಿ ಬಾಲಕಿಯರಿಗೆ ಈ ಬಾಹ್ಯ ವಿನಯದ ಪ್ರದರ್ಶನದ ತರಬೇತಿಯನ್ನು ಮಾಡಿಸುವರು. ಅತಿಥಿಗಳ ಮತ್ತು ಆಗಂತುಕರ ಎದುರಿನಲ್ಲಿ ಅವರು ತಮ್ಮ ಈ ನುರಿತ ಹಾವಭಾವಗಳನ್ನು ತೋರಿಸುವಾಗ ಅವುಗಳಲ್ಲಿನ ಕೃತ್ರಿಮತೆಯು ಒತ್ತಿ ಹೊಳೆಯುವುದು. ಮೊದಲ ತೋರಿಕೆಗೆ ಬಹಳ ವರ್ಷಗಳ ತರಬೇತಿಯ ಈ ನಟನೆಯು ಅವರ ಪ್ರಾಕೃತೀಕ ಸ್ವಭಾವ ವಿಶಿಷ್ಟಗಳಲ್ಲಿ ಬೆರೆತು ಹೋಗಿರುವ ಒಂದು ಪ್ರಾಚೀನ ಕಲಾ ಸಂಸ್ಕಾರದ ಸುಸಂಸ್ಕೃತ ವ್ಯವಹಾರದಂತೆ ಕಾಣುವುದಾದರೂ ಕೆಲ ಸಮಯದ ನಂತರ ಅವರು ತಮ್ಮ ಪುರುಷರ ಶ್ರೇಷ್ಠ ವ್ಯಕ್ತಿತ್ವದ ಮುಂದೆ ತಾಳುವ ಗಾಂಭೀರ್ಯಭಾವವು ಹೃದಯ ಸ್ಪರ್ಶಿಯಾಗಿರುತ್ತದೆ.

ಜಪಾನಿಯ ಗಂಡನೊಬ್ಬನು ತನ್ನ ಪತ್ನಿಯು ಗೃಹಕೃತ್ಯಗಳನ್ನೂ, ಸಂಸಾರ ವ್ಯವಹಾರವನ್ನೂ ಚೆನ್ನಾಗಿ ಬಲ್ಲವಳಿರಲೇ ಬೇಕೆಂದು ನಿರೀಕ್ಷಿಸುತ್ತಾನೆ. ಶಿಷ್ಟಾಚಾರ ಮನ್ನಣೆಯ ಹಾವಭಾವಗಳಲ್ಲಿಯೂ, ಮನೆ ತೋಟಶೃಂಗಾರಗಳಲ್ಲಿಯೂ, ಮತ್ತು ನಡೆವಳಿಕೆಯಲ್ಲಿಯೂ ಅವಳು ಪರಿಪೂರ್ಣಳಾಗಿರಬೇಕು. ಆದರೆ ಅವಳು ಗಂಡನಿಗಿಂತ ಹೆಚ್ಚು ಜ್ಞಾನವಂತೆಯಾಗಿರಬಾರದು. ಆಕ್ಷೇಪವಿಲ್ಲದ ಆಜ್ಞಾಪಾಲನೆಯೇ ಅವಳ ಪ್ರಥಮ ಪದವಿ. ಇದೇ ಜಪಾನೀ ತರುಣಿಯೋರ್ವಳ ಶಿಕ್ಷಣ ಯೋಜನೆಯ ಅತೀ ಪ್ರಾಮುಖ್ಯವಾದ ಮೂಲ ಮಂತ್ರ. ಅವಳು ತಾನೊಬ್ಬ ಕೀಳು ತರಗತಿಯ ಜೀವಿ ಎಂದು ಸದಾ ಒಪ್ಪಿಕೊಂಡಿರಬೇಕು. ಸ್ಥೂಲದರಲ್ಲಿ ಹೇಳುವುದಾದರೆ ಅವಳೊಂದು ಯಾವ ಹಕ್ಕು ಅಧಿಕಾರವಿಲ್ಲದ ಒಂದು ಒಡವೆ ವಸ್ತು.

ಜಪಾನಿ ಸ್ತ್ರೀಯರ ಮುಂದಿರುವ ಎರಡೇ ಸಾಮಾಜಿಕ ಜೀವನ ಮಾರ್ಗಗಳೆಂದರೆ-ಒಂದೋ ಅವಳು ವಿವಾಹಿತೆಯಾಗಿ ಸಂಸಾರಸ್ಥಳಾಗಿರಬೇಕು, ಇಲ್ಲವೆ ಅವಳು ವ್ಯಭಿಚಾರ ವೃತ್ತಿಯ ಕಡೆಗೆ ಒಲಿಕೊಂಡಿರುವ 'ಘೀಶಾ' ನರ್ತಕಿಯಾಗಿರಬೇಕು. ಅವಳಿಗೆ ಪುರುಷರಿಗಿರುವಷ್ಟು ನಾಗರೀಕ ಹಕ್ಕು ಬಾಧ್ಯತೆಗಳಿಲ್ಲ. ಅವಳು ತನ್ನ ಗಂಡನೊಂದಿಗೆ ವಿವಾಹ ವಿಚ್ಛೇಧನ ಮಾಡಿಕೊಳ್ಳುವ ಅಧಿಕಾರವಿದ್ದವಳಾಗಿಲ್ಲ. ಆದರೆ ಅವಳ ಗಂಡನು ಇಚ್ಛೆಪಟ್ಟಾಗ ಅವಳನ್ನು ತ್ಯಜಿಸಿ ಕಳುಹಿಸಬಿಡಬಹುದು. ಕೆಲವು ವರ್ಷಗಳ ತನಕ ಮಕ್ಕಳಾಗದಿದ್ದರೆ ಅವಳು ತನ್ನ ತೌರುಮನೆಗೆ ಖಂಡಿತವಾಗಿ ಕಳುಹಿಸಲ್ಪಡುವಳು. ಸಂತತಿಯಿಲ್ಲದ ಸ್ತ್ರೀಯು ಜಪಾನೀ ಸಮಾಜದಲ್ಲಿ ಭ್ರಷ್ಟಳೆಂದೆನಿಸಿಕೊಳ್ಳುವಳು. ಹೀಗೆಂದು ಪುರುಷರಿಗೆ ಅವರ ನಪುಸಂಕತ್ವದ ಕುರಿತು ಯಾವ ವೈದ್ಯ ಪರೀಕ್ಷೆಯೂ ನಡೆಸಕೂಡದು.

ಶ್ರೀಮಂತೆಯಾಗಿರಲಿ ಬಡವೆಯಾಗಿರಲಿ ಜಪಾನೀ ಮಹಿಳೆಯ ಬಾಳು ನಿತ್ಯ ಗುಲಾಮಗಿರಿಯದು. ಅವಳು ಪ್ರಾತಃಕಾಲದ ಅತೀ ಬೇಗದ ಹೊತ್ತಿನಲ್ಲಿ ಏಳುವವಳು; ಮಾತ್ರವಲ್ಲ ಅತೀ ಹೊತ್ತಾಗಿ ನಿದ್ರಿಸಲಿಕ್ಕೆ ಹೋಗುವವಳೂ ಅವಳೇ. ಗಂಡನು ಎಷ್ಟು ಹೊತ್ತುಮಾಡಿ ಮನೆಗೆ ಬಂದರೂ ಸಿಟ್ಟೆಂದು ಮಾತಾಡದೇ ಅವಳ ಸಹಜವಾದ ಮುಗುಳ್ನಗೆ ಸನ್ಮಾನ ವಂದನೆಯಿಂದಲೇ ಅವಳು ಅವನನ್ನು ಸ್ವಾಗತೀಕರಿಸಬೇಕು. ಅಸಂತುಷ್ಟಿಯ ಯಾವ ಭಾವವನ್ನೂ ಅವಳು ತೋರಿಸಬಾರದು. ಆಗರ್ಭ ಶ್ರೀಮಂತೆಯರು ಕೂಡಾ ತಮ್ಮ ಪತಿವರ್ಯನಿಗೆ ಸ್ವತಃ ಬಡಿಸಬೇಕು ಮತ್ತು ಮೀಯಿಸಬೇಕು. ಅವನ ಎದುರಿನಲ್ಲಿ ಅವಳು ಕುರ್ಚಿಯ ಮೇಲೆ ಕುಳಿತುಕೊಳ್ಳಲು ಎಂದಿಗೂ ಅರ್ಹಳಾಗಿಲ್ಲ-ಚಳಿಗಾಲದಲ್ಲಿಯೂ ಅವರ ಸ್ಥಾನ ತಣ್ಣಗಾಗಿರುವ ನೆಲವೇ ಆಗಿರುತ್ತದೆ. ಸಂಚಾರಕ್ಕೆ ಹೋದಾಗ ಯಾವಾಗಲೂ ಗಂಡನು ಮುಂದೆ-ಹೆಂಡತಿ ಬುಟ್ಟಿಗಳನ್ನು ಹೊತ್ತು ಸ್ವಲ್ಪ ಹಿಂದಿನಿಂದ ಬರಬೇಕು.

ಜಪಾನಿನ ಗಂಡಸನು ತಮ್ಮ ಹೆಂಗಸಿನ ಕಡೆಗೆ ಅತ್ಯಂತ ಅಲಕ್ಷ್ಯವನ್ನು ತೋರಿಸುತ್ತಾನೆ. ಆದರೂ ಅವಳು ತನ್ನ ಜೀವನವನ್ನೆಲ್ಲ ಪತಿಸೇವೆಯಲ್ಲೇ ಕಳೆಯಬೇಕು. ಅವನ ಸುಖ ಸಂತುಷ್ಟಿಯೇ ಅವಳ ಭಾಗ್ಯದ ವಿಧಿ. ಹದಿನೆರಡು ವರ್ಷಗಳ ತನಕ ಜಪಾನಿ ತಾಯಿಂದಿರು ತಮ್ಮ ಗಂಡುಮಕ್ಕಳನ್ನು ಪ್ರೀತಿಯಿಂದ ಆರೈಕೆ ಮಾಡುತ್ತಾರೆ. ನಂತರ ಆ ಬಾಲಕನು ಮಹಾ ಪುರುಷನೆನಿಸುವನು. ಸ್ತ್ರೀಯರನ್ನು ಕೀಳು ವರ್ತನೆಗೆ ಗುರಿಮಾಡುವ ಬುದ್ಧಿ ಅಂದಿನಿಂದಲೇ ಅವನಲ್ಲಿ ಮೂಡುತ್ತದೆ.

ಅಲ್ಲಿನ ಗಂಡಸರು ಸ್ತ್ರೀಯರಿಗೆ ಯಾವ ತರದ ಶ್ಲಾಘನೆಯನ್ನು ಮಾಡುವವರಲ್ಲ. ಅದು ಅವರ ದರ್ಪಕ್ಕೆ ಕಮ್ಮಿಯೆನಿಸುವ ವಿಷಯ. ಒಂದು ಸಲ ಅನಿವಾರ್ಯವಾಗಿ ಓರ್ವ ಜಪಾನಿ ಸಾಹುಕಾರನು ತನ್ನ ಐರೋಪ್ಯ ಅತಿಥಿ ಮಹಿಳೆಯ ಕುರಿತು ಕೆಲವು ಪ್ರಶಂಸಾನುಡಿಗಳನ್ನು ಉಚ್ಚರಿಸಿದನು. ಆಗ ಭಾಷೆ ತರ್ಜುಮೆಗಾಗಿ ನಿಂತಿದ್ದ ಅವನ ಸೇವಕನು ತನ್ನ ಒಡೆಯನ ಸ್ತ್ರೀಪ್ರಶಂಸಾಪೂರಿತವಾದ ವಾಕ್ಯಗಳನ್ನು ಭಾಷಾಂತರಿಸಿ ಹೇಳುವಾಗ ಸಹಿಸಲಸದಳವಾದ ಲಜ್ಜೆಯಿಂದ ಮುಖ ಮುಚ್ಚಿಕೊಂಡೇ ತನ್ನ ಕರ್ತವ್ಯವನ್ನು ನಿರ್ವಹಿಸಿದನಂತೆ.

ಜಪಾನೀ ಸಮಾಜವು ಪುರುಷ ಪ್ರಾಧಾನ್ಯವಾದುದು. ಪತ್ನಿಗಳಾದವರಿಗೆ ಅದರಲ್ಲಿ ಸ್ಥಾನವಿಲ್ಲ-ಮಕ್ಕಳು ಪಡೆಯುವುದೇ ಅವರ ಪಾಲಿನ ಭಾಗ್ಯ. ಮಕ್ಕಳನ್ನು ಹೆರುವಾಗಲೂ ಜಪಾನೀ ಮಹಿಳೆಗೆ ಯಾವ ಔಷಧೋಪಚಾರದ ಸೌಕರ್ಯವೂ ಕೊಡಲಾಗುವುದಿಲ್ಲ ಮಾತ್ರವಲ್ಲ ಪ್ರಸವ ವೇದನೆಯಿಂದ ಅವಳು ಚಿತ್ಕಾರದ ಒಂದು ಅರ್ಧ ಸ್ವರವನ್ನಾದರೂ ಹೊರಡಿಸಬಾರದು-ಅಲ್ಲಿ ಅದು ಯೋಗ್ಯ ಗೃಹಿಣಿಯ ಲಕ್ಷಣವಾಗಿರುವುದಿಲ್ಲ.

ಪರದೇಶಗಳಿಗೆ ಹೋಗುವ ಜಪಾನಿಯರ ಪತ್ನಿಯರಿಗೆ ಮಾತ್ರ ಅಲ್ಪ ಸಲ್ಪ ಸ್ವಾತಂತ್ರ ದೊರಕುತ್ತದೆ. ಈ ರಿಯಾಯತಿಯನ್ನು ನಿರುಪಾಯವಾಗಿ ಮಾತ್ರ ತೋರಿಸಲಾಗುತ್ತದೆ. ಆದರೆ ಪರದೇಶದಲ್ಲಿ ಕಿಂಚಿತ್ ಸ್ವಾತಂತ್ರ್ಯದ ಸುಖ ಅನುಭವಿಸಿದ ಜಪಾನೀ ಮಹಿಳೆ ಸ್ವದೇಶಕ್ಕೆ ಬಂದೊಡನೆ ಅವಳಿಗೆ ನರಕಯಾತನೆಯೆನಿಸುತ್ತದೆ.

ಇನ್ನು ಸ್ವಲ್ಪ ಸ್ವತಂತ್ರರಾಗಿರಬಲ್ಲ ಸ್ತ್ರೀಯರೆಂದರೆ ಅಲ್ಲಿನ 'ಘೀಶಾ' ಮಹಿಳೆಯವರು. ವ್ಯಭಿಚಾರದಿಂದಲೇ ಇವರು ಜೀವನಮಾಡಿಕೊಂಡಿರುತ್ತಾರೆ. ವಿವಾಹಿತನಾದ ಜಪಾನೀ ಸದ್ಗೃಹಸ್ಥನೊಬ್ಬ ಓರ್ವ 'ಘೀಶಾ' ಸ್ತ್ರೀಯನ್ನು ತನ್ನ ಮನೆಯ ಪಕ್ಕದ ಕೋಣೆಯೊಂದರಲ್ಲೇ ಇಟ್ಟುಕೊಂಡಿರುತ್ತಾನೆ. ಆದರೆ ಇತ್ತೀಚೆಗೆ ಈ ವ್ಯವಹಾರವು ಇಷ್ಟೊಂದು ಪ್ರಕಟವಾಗಿ ನಿರ್ವಹಿಸಲ್ಪಡುವುದಿಲ್ಲ. ಆದರೂ ಪತ್ನಿಯು ತನ್ನ ಗಂಡನ ಈ ಸಲ್ಲಾಪಗಾರ್ತಿಯು ಇರವನ್ನು ಒಪ್ಪಿಕೊಳ್ಳಲೇ ಬೇಕು. ಅವಳಿಗಾಗುವ ಮಕ್ಕಳನ್ನು ದತ್ತಕ್ಕೆ ತೆಗೆದುಕೊಂಡು ಪೋಷಿಸಬೇಕು.

ಅತ್ತೆಯಾದಾಗಲೇ ಜಪಾನೀ ಮಹಿಳೆಗೆ ಜೀವನದಲ್ಲಿ ಕೊಂಚ ಸಮಾಧಾನ ಉಂಟಾಗುತ್ತದೆ. ಮನೆಗೆ ಅವಳ ಕೈಕೆಳಗೆ ಇನ್ನೊಬ್ಬ ಗುಲಾಮಳು ಬಂದಂತಾಗುತ್ತದೆ. ಸೊಸೆಯಾದವಳು ಗಂಡನ ಪರಿಚರ್ಯದೊಡನೆ ಅತ್ತೆಯ ಆರೈಕೆಯನ್ನು ನಿರ್ವಹಿಸಬೇಕು. ಕಾಲ ಅಕಾಲವೆಂದಿಲ್ಲದೆ ಅತ್ತೆಯ ಆಜ್ಞೆಗಳನ್ನು ಅವಳು ಶಿರಸಾವಹಿಸಿ ನಡೆಯಿಸಬೇಕು.

ಇಹಲೋಕದ ಈ ಸಂಕಷ್ಟಗಳಿಂದ ಜಪಾನಿ ಸ್ತ್ರೀಯರು ಮುಕ್ತರಾಗಲಿಕ್ಕಿರುವ ಒಂದೇ ಉಪಾಯವೆಂದರೆ ಆತ್ಮಹತ್ಯೆ. ಅದರಲ್ಲೂ ಭೇದವಿದೆ. ಪುರುಷರು ಹತ್ಯಮಾಡಿಕೊಳ್ಳುವ ವಿಧಾನಗಳನ್ನು ಅವಳು ಅನುಸರಿಸಬಾರದೆಂದು ನಿಷೇಧವಿದೆ. ನೀರಿನಲ್ಲಿ ಮುಳುಗುವುದು ಇಲ್ಲವೆ ಜ್ವಾಲಾಮುಖಿಯಲ್ಲಿ ಬೀಳುವುದೇ ಸರ್ವ ಶ್ರೇಷ್ಟವಾದ ಆತ್ಮಹತ್ಯೋಪಾಯ. ಪತಿಯು ಅಪ್ಪಣೆ ಮೊದಲೇ ಪಡೆದು ಜಪಾನೀ ಸತಿಯೋರ್ವಳು ಸತ್ತ ಗಂಡನೊಡನೇ ಹೂಳಲ್ಪಡಲೂ ಇಲ್ಲವೇ ಸುಡಲ್ಪಡಲೂ ಬಹುದಾಗಿದೆ. 'ವಿದೇಶಿಯರು ಸ್ತ್ರೀಯರಿಗೆ ಆದರ ಮನ್ನಣೆಗಳನ್ನು ತೋರಿಸುವುದು ಆತ್ಮೋವನತಿಯ ವಿಷಯವೆಂದು ತಿಳಿದುಕೊಳ್ಳುವುದಿಲ್ಲ. ಅದು ಅತ್ಯಾವಶ್ಯಕವೆಂದು ಅವರ ಭಾವನೆ." ಹೀಗೆಂದು ಜಪಾನೀ ಶಿಷ್ಟಸಾಂಪ್ರಾದಾಯ ಭೋಧನೆಯ ಒಂದು ಪುಸ್ತಕದಲ್ಲಿ ಉಲ್ಲೇಖವಿದೆ. ಆದುದರಿಂದ ಜಪಾನೀ ಸ್ತ್ರೀಯರ ಮುಗುಳ್ನಗೆಯ ಮರ್ಮವು ಸ್ವಲ್ಪ ತಿಳಿದಂತಾಗುವುದಿಲ್ಲವೆ?

ಸೆಂಟ್ರೆಲ ಎಕ್ಸಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ANNOUNCEMENT

We have pleasure to announce that the following new branches have been opened.

COIMBATORE SALEM
ERODE MADURA

Other Branches at:

Quilon, Alleppey, Ernakulam, Cochin, Calicut, Cannanore, Mangalore, Bangalore, Belgaum, Dharwar, Hubli, Chikmagalur etc. etc.

4 Branches in Bombay City.

Capital 26 lakhs. Reserves 10 lakhs.

(ESTD. 1906)

CANARA BANK LIMITED

Incorporated in British India, liability of Members limited.)

ಪ್ರಾಯದಲ್ಲಿ ಏನಿದೆ?

[illegible]

ಪ್ರಾಯದಲ್ಲಿ ಏನಿದೆ?

ವಿದ್ಯಾರ್ಥಿಗಳಿಗೆ ಗಾಂಧೀಜಿ ಕಾರ್ಯಕ್ರಮ

[illegible]

ಸ್ವಾತಂತ್ರ್ಯವಾದ ನೈತಿಕ ಗುಣ ಶಕ್ತಿಯನ್ನು ಬೆಳೆಸಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕರ್ತವ್ಯಗಳ ಬಗ್ಗೆ ವಿಚಾರದಲ್ಲಿ ನಿಷ್ಠೆ ಅಂಕ ತರ್ಕನೆಯನ್ನು ನಿರ್ವಹಿಸಬೇಕು.

ಕೆಲವು ಅಂಕೆಸಂಖ್ಯೆಗಳು

ಜೀವನದ ಅವಧಿ

	ಗಂಡು	ಹೆಣ್ಣು
ಸಂಯುಕ್ತ ಅಮೇರಿಕಾ	60:60	64:50
ಬ್ರಿಟನು	60:18	64:40
ಜರ್ಮನಿ	59:86	62:81
ಆಸ್ಟ್ರೇಲಿಯಾ	63:48	67:14
ಜಪಾನು	46:92	49:63
ಹಿಂದೂದೇಶ	26:91	26:56

ಹಿಂದೂದೇಶದಲ್ಲಿ ಜನಿಸುತ್ತಿರುವ ಪ್ರತಿ ಸಾವಿರ ಶಿಶುಗಳಲ್ಲಿ ೧೬೭ ಶಿಶುಗಳು ಮೃತವಾಗುತ್ತವೆ. ಈ ವಿಚಾರದಲ್ಲಿ ನಮ್ಮ ದೇಶದಲ್ಲಿ ಜಗತ್ತಿನಲ್ಲಿ ಪ್ರಥಮ ಶ್ರೇಣಿಯಲ್ಲಿದೆ. ದ್ವಿತೀಯ ಸ್ಥಾನದಲ್ಲಿ ಜಪಾನು ಇದೆ (೧೧೪). ಕೆನಡಾ (೬೧), ಜರ್ಮನಿ (೬೦), ಬ್ರಿಟನು (೬೧), ಸಂಯುಕ್ತ ಅಮೇರಿಕಾ (೪೮), ಆಸ್ಟ್ರೇಲಿಯಾ (೩೮).

೧೯೪೧ರಲ್ಲಿ ನಡೆದ ಖಾನೆಸುಮಾರಿ ಪ್ರಕಾರ ಹಿಂದೂದೇಶದಲ್ಲಿ ಶಿಕ್ಷಿತರಾದವರ ಸಂಖ್ಯೆಯು ಶೇ. ೧೨ ಸಲೆಯಂತಿರುವುದು.

೧೯೩೪ರ ಲೆಕ್ಕಪ್ರಕಾರ ಬ್ರಿಟಿಷ್ ಇಂಡಿಯಾದಲ್ಲಿ ಒಟ್ಟು ೧೪೬೦ ನಗರಗಳಿದ್ದವು. ಇವುಗಳಲ್ಲಿ ೨೫೩ ನಗರಗಳಲ್ಲಿ ಮಾತ್ರ ನೀರನ್ನು ಪೂರೈಸುವ ವ್ಯವಸ್ಥೆಗಳಿದ್ದವು.

ಹಿಂದೂದೇಶದಲ್ಲಿರುವ ಆಸ್ಪತ್ರೆಗಳು ಮತ್ತು ಡಿಸ್ಪೆನ್ಸರಿಗಳ ಸಂಖ್ಯೆ ೭೦೦೦. ಡಾಕ್ಟರರ ಸಂಖ್ಯೆ ೪೨,೦೦೦. ಪ್ರತಿ ೯೦೦೦ ಜನರಿಗೆ ಒಬ್ಬ ಡಾಕ್ಟರರಂತೆ. ಜಪಾನು ವಿಸ್ತೀರ್ಣದಲ್ಲಿ ಬಂಗಾಳ ಪ್ರಾಂತ್ಯಕ್ಕಿಂತ ಸಣ್ಣದಾದರೂ, ಅಲ್ಲಿನ ಇದೇ ತರದ ಅಂಕೆಸಂಖ್ಯೆಗಳು ನಮ್ಮ ದೇಶದ ಅಂಕೆಸಂಖ್ಯೆಗಳನ್ನು ಮೀರಿಸುತ್ತವೆ. ಬ್ರಿಟನಿನ ಜನಸಂಖ್ಯೆಯು ಹಿಂದೂದೇಶದ ⅛. ಅಲ್ಲಿ ೧೦೯,೫೦೦ ನರ್ಸುಗಳು, ೬೧,೪೪೩ ಡಾಕ್ಟರರು ಇರುವರು; ಅಂದರೆ ಪ್ರತಿ ೪೫೫ ಜನರಿಗೆ ಒಂದು ನರ್ಸಿನಂತೆ, ಮತ್ತು ಪ್ರತಿ ೭೭೬ ಒಬ್ಬ ಡಾಕ್ಟರರಂತೆ.

THE CANARA BANKING CORPORATION LTD.
(Incorporated in British India with Limited Liability.)
Estd) Head Office: UDIPI S. Kanara. (1906:
Statement of affairs as on 31st December 1944.

CAPITAL AND LIABILITIES	Rs. As. Ps.	PROPERTY AND ASSETS	Rs. As. Ps.
1. Paid up Capital	14,76,535– 0– 0	1. Office Buildings, safes, furniture, etc.	1,04,204– 0– 0
2. Reserves	4,14,302– 3–11	2. Advances	57,53,919– 5– 0
3. Deposits	98,25,162– 6– 6	3. Investments on Govt. Securities etc.	30,18,971–15– 5
4. Bills for collection	6,87,039– 2– 2	4. Bills for collection	6,87,039– 2– 2
5. Branch Adjustments	7,20,593– 3– 0	5. Other Assets	1,07,153– 5– 9
6. Other liabilities	2,86,375– 4– 9	6. Cash on hand and with Bankers at call & in Short Term Deposits	38,79,125– 7– 8
7. Profits for the Current year together with Balance brought forward.	1,40,405–15– 8		
Grand Total Rs.	1,35,50,413– 4– 0	Grand Total Rs.	1,35,50,413– 4– 0

೨೦ ವರ್ಷಗಳ ನಂತರ......

(ಗತ ಸಂಚಿಕೆಯಿಂದ)

ಲೆಂದು ಪರಿಶೋಧಿಸಿದನು: ನಂಬ್ರದ ಜೂರಿ, ಇತಿಹಾಸವನ್ನು ಪರಿಶೀಲಿಸುತ್ತಿರಲು ಹರಾಜಾಗುವ ಮನೆ ತನ್ನ ಹಿರಿಯರದು, ತನ್ನ ತಂದೆಯ ಸಾಲ, ಆ ಸಾಲಕ್ಕಾಗಿ ಈ ಮನೆ ಹರಾಜು ನಿಜವಾದ ಪಾರ್ಟಿಯು ತಾನೆಂದು ತಿಳಿಯದೆ ಸಾಲಕ್ಕಾಗಿ ಮನೆಯೇ ಹರಾಜು ಆಗಬೇಕು. ಅದು ಆಗಬೇಕೆ ಎಂದು ತಿಳಿದು ಬಂತು: ಏನು ನನ್ನ ತಂದೆ ಸಾಲವಾಗಿದ್ದನೇ? ಸಾಲವಾದುದ ಅವಶ್ಯವೇನು? ಅಂಗಳಿಗೆ ಇಷ್ಟತ್ತು ರೂಪಾಯಿ ಸುರಿಯುತ್ತಿದ್ದನಲ್ಲ! ಆಂದು ತೀರಿಸಬೇಕು! ಸಾಲದಕ್ಕೆ ಇದೊಂದು ರಗಳೆ ತಾನು ಸಾಯುವುದಲ್ಲದೆ ಸತ್ತ ಮೇಲೆ ಇದ್ದವರಿಗೆ ಇದೊಂದು ಕತ್ತರಿ. ಎಂದು ಹಳಿಯುತ್ತ, ಊರಿಗೆ ಹೋಗಿ ಆ ಮನೆಯನ್ನೊಮ್ಮೆ ನೋಡಿ ಸಾಲ ತೀರಿಸಿ ಬಂದರೆ ಜನ್ಮಕ್ಕೂ ಅತ್ತ ಹೋಗದೆ ಇರಲಿಕ್ಕಾಯಿತು ಊರನ್ನೊಮ್ಮೆ ನೋಡಿದಂತೆ ಆಯಿತು ಎಂದು ಬಗೆಯುತ್ತಿರುವಾಗ "ತನ್ನ ಮನೆ, ತನ್ನ ಊರಿದು, ತನ್ನ ದೇಶವಿದು ಎನ್ನುತಭಿಮಾನದಿಂ ಕಾಂಬವನೇ ಯೋಗ್ಯಂ, ಧರೆಯಲ್ಲಿ ಮಿಕ್ಕವರೆಲ್ಲರಂಗಗಳ.........", ಎಂಬ ಪದ್ಯವನ್ನು ಅವನ ಮಗನು ಆ ದಿನದ ಪಾಠ ಒಪ್ಪಿಸಲಿಕ್ಕೆ ಉರುಹೊಡೆಯುತ್ತಿದ್ದನು. ಅವನು ಮೇಲಿಂದ ಮೇಲೆ ಹಾಗೆ ಓದುತ್ತಿರುವಾಗ ಆ ಪದ್ಯದಲ್ಲಿ ಶಬ್ದಗಳು ಕಿವಿಯಲ್ಲಿ ತೂರಿದವು. ತೂರಿದಂತೆ ಚೆನ್ನಾಗಿ ಅರ್ಥವಾಗಿ ನಾಟಿದವು. ಅರ್ಥ ಮನನವಾದಂತೆ ಮನಸ್ಸು ಮೃದುವಾಗುತ್ತ ಬಂತು. ಮಗನು ಪುಸ್ತಕ ಕೆಳಗಿರಿಸುವಾಗ ತಂದೆಗೆ ಕಣ್ಣಲ್ಲಿ ನೀರು ಬಂದಿತ್ತು. ತನ್ನ ಬಾಲ್ಯ ತನ್ನ ಮನೆ, ತನ್ನ ತಂದೆ ತಂಗಿ ಎಲ್ಲರೂ ಸ್ಮೃತಿಪಟಲದಲ್ಲಿ ಸುಳಿದರು. ಇಪ್ಪತ್ತು ವರ್ಷಗಳು ಆಗಲೇ ದಾಟಿದ್ದವು. ಅಬ್ಬಾ ಎಂತಹ ದೀರ್ಘ ಸಮಯ. ಮರುದಿನವೇ ತನ್ನ ಊರಿಗೆ ಬೆಳಗಾತ ಹೊರಟು ಬಂದ.

ಮನೆಯ ಹರಾಜು ನಿಶ್ಚಯವಾಗಿತ್ತು. ತಹಶೀಲ್‌ದಾರರು ಬಂದರು. ಗ್ರಾಮಜನ [illegible]

[illegible] ಜನಗಳೇ ಬಹಳವಾಗಿದೆ. [illegible]

ಮ. ನಾರಾಯಣ ಭಟ್.

(ಜಯಂತಿ ಪತ್ರಿಕೆಯಿಂದ ಉದ್ಧೃತ)

ಸಿಡಿ ಸುದ್ದಿ ಸಂಗ್ರಹ

[illegible]

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವೀಸುಗಳನ್ನು ಕಡಿಮೆ ಮಾಡುವುದು ಅಗತ್ಯವಿದ್ದದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬೇರೆ ಅಗತ್ಯಗಳಿಗೆ ಸಾಮಾನ್ಯ ಬಸ್ಸು ಸರ್ವೀಸುಗಳನ್ನು ಪೂರ್ವದಂತೆ ನಡೆಸುವುದು ಅಸಾಧ್ಯವಾಗುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ಪ್ರಯಾಣಿಸಬೇಕಾದದ್ದು, ಇತರ ಸಂದರ್ಭಗಳಲ್ಲಿ ಪ್ರಯಾಣ ಬೇಡವೆನ್ನುವುದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜೆಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

[illegible]

ಕೊಡಗು ಅಡಿಕ್ಕೆ ಇತ್ಯಾದಿ

ಮಡಿಕೇರಿ ತಾ. 10-2-1945

ಕೊಡಗು ಜಿಲ್ಲೆಗೆ ಸೇರಿದ ಸಂಪಾಜೆ ಫಾರೆಸ್ಟಿನಲ್ಲಿರುವ ಈ ಕೆಳಗೆ ಕಾಣಿಸಿದ ಕಡಿದಿರುವ ಮರಗಳನ್ನು ಮಾರ್ಚ್ ತಿಂಗಳ ತಾರೀಖು 5ನೇ ಸೋಮವಾರ ದಿನ 11 ಘಂಟೆಗೆ ಮಡಿಕೇರಿ ಫಾರೆಸ್ಟು ಬಂಗ್ಲೆಯ ಬಳಿ ಬಹಿರಂಗವಾಗಿ ಹರಾಜಿನಲ್ಲಿ ಮಾರಲ್ಪಡುತ್ತದೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಚೀಫ್ ಫಾರೆಸ್ಟು ಆಫೀಸರ್, ಕೊಡಗು, ಮಡಿಕೇರಿ, ಇವರಿಗೆ ಬರೆದು ತಿಳಿದುಕೊಳ್ಳಬಹುದು.

ತೇಗದ ಮರಗಳು	280	= 1455	ಘನ ಅಡಿ.
ನಂದಿ ಮರಗಳು	18	= 720	" " "
ಹೊನ್ನೆ "	2	= 56	" " "
ಬೀಟಿ "	9	= 244	" " "

ಪ್ರಾಯದಲ್ಲಿ ಏನಿದೆ?

ಅವನ ಪ್ರಾಯವೇನು? ಆತನು ಅತಿ ತರುಣನು. ಆತನಿಂದ ಅಷ್ಟು ದೊಡ್ಡ ಕೆಲಸ ಆಗದು. ಆತನು ಮುದುಕನು. ಮುದಿಭ್ರಾಂತಿಯು ಅವನಲ್ಲುಂಟಾಗಿದೆ. ಅವನಿಂದ ಅಷ್ಟು ಇಷ್ಟು ಮಹತ್ತಾದ ಕಾರ್ಯವೆ? ಹೀಗೆ ನಾವು ಆಲೋಚಿಸುವುದುಂಟು.

ನಿಜವಾಗಿಯೂ ಜಾಣತನ, ಪ್ರವೀಣತೆ, ವಿವೇಕತೆ ಇತ್ಯಾದಿ ಉತ್ತಮ ಗುಣಗಳು ಪ್ರಾಯದ ಮೇಲೆ ಹೊಂದಿಕೊಂಡಿವೆಯೆ? ಇಲ್ಲವೆಂಬುದಾಗಿಯೆ ಹೇಳಬೇಕು. ಪ್ರಾಯದಲ್ಲಿ ಏನಿದೆ? ಇದಕ್ಕೆ ದೃಷ್ಟಾಂತಗಳು ಈ ಕೆಳಗೆ ಕೊಡಲಾಗಿವೆ.

ಅಮೇರಿಕದ 'ಸ್ವಾತಂತ್ರ್ಯ ಪ್ರಕಟಣೆ'ಯು ಜೆಫರ್‌ಸನ್ನರು ತಮ್ಮ ೩೩ ವಯಸ್ಸಿನಲ್ಲಿ ಸಿದ್ಧಪಡಿಸಿದರು. ಚಾರ್ಲ್ಸ್ ಡಿಕ್ಕೆನ್ಸ್‌ರೆಂಬವರು ಪ್ರಸಿದ್ಧ ಆಂಗ್ಲ ಸಾಹಿತಿಗಳು (ಅವರ ಹಾಸ್ಯಮಯ ಕಥೆ ಪ್ರಬಂಧಗಳು ಜಗತ್ಪ್ರಸಿದ್ಧವಾಗಿವೆ) ಕೀರ್ತಿಪಡೆದ ಅವರ "ಪಿಕ್‌ವಿಕ್ ಪೇಪರ್ಸ್" ಎಂಬ ಹಾಸ್ಯಮಯ ಲೇಖನಗಳ ಸಂಗ್ರಹವು ಡಿಕ್ಕೆನ್ಸರು ತಮ್ಮ ೨೪ ವಯಸ್ಸಿನಲ್ಲಿ ಹೊರಡಿಸಿದರು. ಹಾಗೆನೆ ಅವರ ಇನ್ನೊಂದು ಪ್ರಸಿದ್ಧ ಕೃತಿಯಾದ "ಓಲಿವರ್ ಟ್ವಿಸ್ಟ್" ಎಂಬ ಕಥೆಯು ಅವರ ಲೇಖನಿಯಿಂದ ಹೊರಡಿದುದು, ಅವರ ೨೫ನೆ ವಯಸ್ಸಿನಲ್ಲಿ! ಭೌತಿಕ ಶಸ್ತ್ರದಲ್ಲಿ ಪ್ರಸಿದ್ಧವೆನಿಸಿಕೊಂಡ ಗುರುತ್ವಾಕರ್ಷಣದ ನಿಯಮಗಳು ನ್ಯೂಟನ್ನಿನಿಂದ ಕಂಡುಹಿಡಿಯಲ್ಪಟ್ಟುದೂ ಅವನ ೨೪ನೇ ವಯಸ್ಸಿನಲ್ಲಿ! ಜಗತ್ತಿಗೆಲ್ಲಾ, ಮುಖ್ಯವಾಗಿ ಅಮೇರಿಕಾಕ್ಕೆ ಮತ್ತು ಹಿಂದೂದೇಶಕ್ಕೆ ವೇದಾಂತ ಪ್ರಸಾರವನ್ನು ಸಾರಿದ ಸ್ವಾಮಿ ವಿವೇಕಾನಂದರ ಚಟುವಟಿಕೆಗಳೆಲ್ಲಾ ನಡೆದುದು ಅವರ ೩೮ನೆ ವಯಸ್ಸಿನೊಳಗೆ.

ಗಾಂಧಿಜಿಯರ ಪ್ರಾಯ ಈಗ ೭೬. ಈಗಲೂ ನಮ್ಮ ದೇಶದ ರಾಜಕೀಯದಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿರುವರು. ಕವಿ ರವೀಂದ್ರರು, ಅತಿ ವೃದ್ಧಾಪ್ಯದಲ್ಲೂ ಏಕೆ, ಮೃತ್ಯುಶಯ್ಯೆಯಲ್ಲಿಯೂ ಕವಿತೆ, ಕವನಗಳನ್ನು ಬರೆದರು. ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರ ಪ್ರಾಯ ೬೩ ನಾಲ್ಕನೆ ಭಾರಿಗೆ ಅಧ್ಯಕ್ಷ ಪದವಿಗೆ ಚುನಾಯಿತರಾಗಿರುವರು. ಈಗಿನ ಮಹಾಯುದ್ಧವನ್ನು ವಿಜಯಿಯಾಗಿ ಕೊನೆಗೊಳಿಸುವ ಮಹಾ ಹೊರೆಯನ್ನು ಹೊತ್ತಿರುವರು. ಚರ್ಚಿಲ್ಲರ ಪ್ರಾಯ ೭೧ ಈ ಮಹಾಯುದ್ಧದಲ್ಲಿ ಬ್ರಿಟನು ಯಶಸ್ಸು ಪಡೆದ ಕೀರ್ತಿಯು ಅವರಿಗೆ ಸಲ್ಲಬೇಕು. ಯುದ್ಧ ಸಮಸ್ಯೆಗಳ ಪರಿಹಾರಕ್ಕಾಗಿ ಅನೇಕ ಪ್ರಯಾಣಗಳನ್ನು ಮಾಡಿರುವರು. ಪ್ರಸಿದ್ಧ ದರ್ಶನಾಶಾಸ್ತ್ರಜ್ಞರಾದ ಇಮ್ಯೆನುವೇಲ ಕೇಂಟರು ೭೮ನೆ ವಯಸ್ಸಿನಲ್ಲಿ ದರ್ಶನ ಶಾಸ್ತ್ರ ವಿಷಯ ಅತ್ಯುತ್ತಮ ಗ್ರಂಥಗಳನ್ನು ಹೊರಡಿಸಿದರು. ಗೋಥೆಯು ಕೀರ್ತಿಪಡೆದ ತನ್ನ 'ಫೊಸ್ಟ್' ಎಂಬ ಗ್ರಂಥವನ್ನು ತನ್ನ ೮೦ನೇ ವಯಸ್ಸಿನಲ್ಲಿ ಬರೆದು ಮುಗಿಸಿದನು. ಟೆನ್ನಿಸನ್ನರು ತಮ್ಮ ೮೦ನೆ ವಯಸ್ಸಿನಲ್ಲಿ ತನ್ನ ಅತ್ಯಂತ ಪ್ರಸಿದ್ಧ ಕವಿತೆಯನ್ನು ಹೊರಡಿಸಿದರು. ಮೈಕಲ ಎಂಜೆಲೊರವರು ೮೧ ವಯಸ್ಸಿನಲ್ಲಿ ತಮ್ಮ ಮಹತ್ತಾದ ಕೃತಿಯನ್ನು ಹೊರಡಿಸಿದರು. ಟಿಟಿಯನ್ ಎಂಬ ಪ್ರಸಿದ್ಧ ಕಲಾಪುರುಷನು, ಮಹಾಕೀರ್ತಿಯನ್ನು ಪಡೆದ ಒಂದು ಚಿತ್ರವನ್ನು ಚಿತ್ರಿಸಿದುದು ತನ್ನ ೯೮ನೆ ವಯಸ್ಸಿನಲ್ಲಿ. ಜಸ್ಟಿಸ್ ಹೊಮ್ಸ ಎಂಬವರು ೯೮ನೇ ವಯಸ್ಸಿನಲ್ಲೂ ಉಜ್ವಲ ಅಭಿಪ್ರಾಯಗಳನ್ನು ಕೊಡುತ್ತಿದ್ದರು. ೮೮ನೇ ವಯಸ್ಸಿನಲ್ಲಿ ಬರ್ನಾಡ್ ಶೊರವರು ಚಿತ್ತಶಕ್ತಿಯು ಯಥಾ ಇದ್ದಂತೆಯಿರುವುದು. ಸದ್ಯದ ರಾಜಕೀಯ ಕುರಿತು ತಮ್ಮ ಅಭಿಪ್ರಾಯಗಳಿರುವ ಒಂದು ಗ್ರಂಥವನ್ನು ನೊನ್ನೆ ಈಚೆಗೆ ಹೊರಡಿಸಿರುವರು.

ಪ್ರಾಯದಲ್ಲಿ ಏನಿದೆ?

ವಿದ್ಯಾರ್ಥಿಗಳಿಗೆ ಗಾಂಧೀ ಕಾರ್ಯಕ್ರಮ

ರಚನಾತ್ಮಕದ ೧೪ ವಿಧಾನಗಳು
'ಐಕ್ಯಮತ್ಯದ ಶಕ್ತಿಯನ್ನು ಬೆಳೆಸಿರಿ'

ಮಹಾತ್ಮಾ ಗಾಂಧಿಯವರು ದೇಶದಲ್ಲಿನ ವಿದ್ಯಾರ್ಥಿಗಳಿಗಾಗಿ ಈ ಕೆಳಗಿನ ಹದಿನಾಲ್ಕು ಕಾರ್ಯಕ್ರಮಗಳನ್ನು ನಿರ್ವಹಿಸಲು ಸೂಚಿಸಿರುವರು:

೧) ನ್ಯಾಯವಾದ ಮತ್ತು ಶಾಂತ ರೀತಿಯಲ್ಲಿ ವಿದ್ಯಾರ್ಥಿಗಳು ಭಾರತ ಸ್ವಾತಂತ್ರ್ಯಕ್ಕಾಗಿ ಹುರುಪಿನಿಂದ ಶ್ರಮಿಸ ಬೇಕಾದರೂ ಸದ್ಯಕ್ಕೆ ಪಕ್ಷ ಪ್ರಧಾನವಾದ ರಾಜಕೀಯದಿಂದ ಅವರು ದೂರವಿರಬೇಕು. ಅವರು ರಾಷ್ಟ್ರೀಯ ಸಮಸ್ಯೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಅಭ್ಯಾಸಿಸಿ ಸ್ವತಂತ್ರವಾದ ರಚನಾತ್ಮಕ ವಿಚಾರಶಕ್ತಿಯನ್ನು ಅಭಿವೃದ್ಧಿಗೊಳಿಸಬೇಕು.

೨) ವಿದ್ಯಾರ್ಥಿ ಸಂಘಗಳು ತಮ್ಮೊಳಗೆ ಕಲಹ ಮಾಡಿಕೊಳ್ಳದೆ ಎಲ್ಲರೂ ಒಕಟ್ಟಿನಿಂದಿರಬೇಕು.

೩) ಅವರು ನಿತ್ಯವೂ ಶರೀರ ವ್ಯಾಯಾಮ ಮಾಡಿ ಆರೋಗ್ಯದಾರ್ಢ್ಯವನ್ನು ಹೊಂದಬೇಕು ಕಾಫಿ, ಚಾ, ಧೂಮ್ರಪಾನ, ಸಿನೇಮಾಗಳ ಚಟವನ್ನು ಅವರು ತ್ಯಜಿಸಬೇಕು. ಪುಷ್ಟಿದಾಯಕವಾದ ಯೋಗ್ಯ ದಾಮಾಶಯದ ಆರೋಗ್ಯಕರ ಆಹಾರಾಂಶಗಳುಳ್ಳ ಆಹಾರವನ್ನೇ ಸೇವಿಸಬೇಕು.

೪) ಅವರು ಖಾದಿ ಉಡುವ ಅಭ್ಯಾಸ ಮಾಡಿ ನಿತ್ಯವು ಸ್ವಲ್ಪ ನೂಲು ತೆಗೆಯಬೇಕು. ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಯ ವಸ್ತುಗಳನ್ನೇ ಅವರು ಉಪಯೋಗಿಸುವ ಕ್ರಮವಿಟ್ಟುಕೊಳ್ಳಬೇಕು.

೫) ರಾಷ್ಟ್ರ ಭಾಷೆ ಹಿಂದೂಸ್ಥಾನಿಯನ್ನವರು ಕಲಿಯ ಬೇಕು.

೬) ದೇಶದ ಮತ್ತು ವಿಶ್ವದ ರಾಜಕೀಯ, ಸಾಮಾಜಿಕ, ಶೈಕ್ಷಣೀಕ, ಮತ್ತು ಆರ್ಥಿಕ ಪರಿಸ್ಥಿತಿಯನ್ನು ಅಭ್ಯಾಸಿಸಲು ಸಹಾಯವಾಗುವಂತೆ 'ಅಭ್ಯಾಸ ಗೋಷ್ಠಿ'ಗಳೆಂಬ ಕೂಟಗಳನ್ನು ಸ್ಥಾಪಿಸಬೇಕು.

೭) ಶಾಲಾ ಕೊಲೇಜುಗಳಲ್ಲಿ ಗ್ರಾಮ ಸೇವಾ ಕೂಟಗಳನ್ನು ರಚಿಸಬೇಕು. ಹಳ್ಳಿ ಪರಿಸ್ಥಿತಿಗಳ ಒಂದು ಸಂಕ್ಷೇಪ ಅಭ್ಯಾಸ ನಡೆಸಿ ಅವರು ನಂತರ ಹಳ್ಳಿಗಳಲ್ಲಿ ಮಕ್ಕಳಿಗೂ, ಪ್ರೌಢರಿಗೂ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕು. ಭಜನೆ ಮಂಡಲಿಗಳನ್ನು ಸ್ಥಾಪಿಸಬೇಕು. ಸ್ವಚ್ಛತೆಯ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಸೆಕೆ ಕಾಲದ ರಜಾ ದಿನಗಳಲ್ಲಿ ಈ ಕೆಲಸವನ್ನು ಹೆಚ್ಚಿನ ಚಟುವಟಿಕೆಯಿಂದ ಮಾಡಬೇಕು. ಪ್ರತಿ ಸಲವೂ ಈ ಕಾರ್ಯಕ್ರಮವನ್ನು ಸುವ್ಯಸ್ಥಿತ ಯೋಜನೆಯಿಂದ ಮಾಡತಕ್ಕದ್ದು.

೮) ರಾಜಕೀಯ ಕೈದಿಗಳ ಕುಟುಂಬಗಳಿಗಾಗಿ ಧನ ಸಂಗ್ರಹ ಮಾಡಬೇಕು. ದಿನಕ್ಕೆ ಒಂದಾಣೆಯನ್ನಾದರೂ ಅವರು ತಮ್ಮ ಖರ್ಚಿನಲ್ಲಿ ಉಳಿತಾಯಮಾಡಿ ಆ ನಿಧಿಗೆ ಸೇರಿಸಬೇಕು.

೯) ಜಾತಿ ವಾದದ ವೈಷಮ್ಯವನ್ನು ತೊಡೆದು ಹಾಕಿ ಅವರು ಹಿಂದೂ ಮುಸ್ಲಿಂ ಐಕ್ಯತೆ, ಸಹಕಾರಕ್ಕಾಗಿ ಪ್ರಯತ್ನಿಸಬೇಕು.

೧೦) ಕೊನೆ ಪಕ್ಷ ಹೊಸ್ಟೆಲುಗಳಲ್ಲಿ ಹರಿಜನ ಸೇವಕರನ್ನು ನಿಲ್ಲಿಸಿ ಅಸ್ಪೃಶ್ಯತಾ ನಿವಾರಣೆಯ ಪ್ರಯತ್ನ ಮಾಡಬೇಕು.

೧೧) ಮಾತೃ ಭಾಷೆಯ ವಾತ್ಸಲ್ಯ ಬೆಳೆಸಿ ಅದು ಶೀಘ್ರವಾಗಿ ಶಿಕ್ಷಣ ಮಾಧ್ಯಮವಾಗುವಂತೆ ಚಳವಳ ಮಾಡಬೇಕು. ಮಾತೃ ಭಾಷೆಯನ್ನು, ಹಿಂದೂಸ್ತಾನಿಯನ್ನೆ ಅವರು ಪತ್ರ ವ್ಯವಹಾರಕ್ಕೆ ಉಪಯೋಗಿಸಿಕೊಳ್ಳಬೇಕು.

೧೨) ಪರದಾ, ಬಾಲ್ಯ ವಿವಾಹ, ಮುಂತಾದ ಸಾಮಾಜಿಕ ಕೆಡುಕುಗಳನ್ನು ತೆಗೆದುಹಾಕಲು ಪ್ರಯತ್ನಿಸಬೇಕು. ಅವರೀ ಆದರ್ಶ ಕಲ್ಪಿಸಬೇಕು.

೧೩) ಎಲ್ಲಾ ಮತಸ್ಥರ ಧರ್ಮ ಗ್ರಂಥಗಳನ್ನು ಅಭ್ಯಾಸಿಸಲು ಅವರು ಪ್ರಯತ್ನಿಸಬೇಕು. ಪರಸ್ಪರ ಮತೀಯ ಸಹಿಷ್ಣುತೆಯನ್ನು ಕಲಿಯಬೇಕು.

೧೪) ಎಲ್ಲದಕಿಂತಲೂ ವಿದ್ಯಾರ್ಥಿಗಳು ಸ್ವಚ್ಛವಾದ ನೈತಿಕ ಗುಣ ಶಕ್ತಿಯನ್ನು ಬೆಳಸಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮೊಳಗಿನ ಪರಸ್ಪರ ವಿಚಾರದಲ್ಲಿ ನಿಷ್ಕಲಂಕ ವರ್ತನೆಯನ್ನು ನಿರ್ವಹಿಸಬೇಕು.

ಕೆಲವು ಅಂಕೆಸಂಖ್ಯೆಗಳು

ಜೀವನದ ಅವಧಿ

	ಗಂಡು	ಹೆಣ್ಣು
ಸಂಯುಕ್ತ ಅಮೇರಿಕಾ	60·60	64·50
ಬ್ರಿಟನು	60·18	64·40
ಜರ್ಮನಿ	59·86	62·81
ಆಸ್ಟ್ರೇಲಿಯಾ	63·48	67·14
ಜಪಾನು	46·92	49·63
ಹಿಂದೂದೇಶ	26·91	26·56

ಹಿಂದೂದೇಶದಲ್ಲಿ ಜನಿಸುತ್ತಿರುವ ಪ್ರತಿ ಸಾವಿರ ಶಿಶುಗಳಲ್ಲಿ ೧೬೭ ಶಿಶುಗಳು ಮೃತವಾಗುತ್ತವೆ. ಈ ವಿಚಾರದಲ್ಲಿ ನಮ್ಮ ದೇಶದಲ್ಲಿ ಜಗತ್ತಿನಲ್ಲಿ ಪ್ರಥಮ ಶ್ರೇಣಿಯಲ್ಲಿದೆ. ದ್ವಿತೀಯ ಸ್ಥಾನದಲ್ಲಿ ಜಪಾನುಯಿದೆ (೧೧೪). ಕೆನಡಾ (೬೧), ಜರ್ಮನಿ (೬೦), ಬ್ರಿಟನು (೬೧), ಸಂಯುಕ್ತ ಅಮೇರಿಕಾ (೪೮), ಆಸ್ಟ್ರೆಲಿಯಾ (೩೮).

೧೯೪೧ರಲ್ಲಿ ನಡೆದ ಖಾನೆಶುಮಾರಿ ಪ್ರಕಾರ ಹಿಂದೂದೇಶದಲ್ಲಿ ಶಿಕ್ಷಿತರಾದವರ ಸಂಖ್ಯೆಯು ಶೇ.೧೨ ಸಲೆಯಂತಿರುವುದು.

೧೯೩೯ರ ಲೆಕ್ಕಪ್ರಕಾರ ಬ್ರಿಟಿಷ್ ಇಂಡಿಯಾದಲ್ಲಿ ಒಟ್ಟು ೧೪೭೧ ನಗರಗಳಿದ್ದವು. ಇವುಗಳಲ್ಲಿ ೨೫೩ ನಗರಗಳಲ್ಲಿ ಮಾತ್ರ ನೀರನ್ನು ಪೂರೈಸುವ ವ್ಯವಸ್ಥೆಗಳಿದ್ದವು.

ಹಿಂದೂದೇಶದಲ್ಲಿರುವ ಆಸ್ಪತ್ರೆಗಳು ಮತ್ತು ಡಿಸ್ಪೆನ್ಸರಿಗಳ ಸಂಖ್ಯೆ ೭೦೦೦. ಡಾಕ್ಟರರ ಸಂಖ್ಯೆ ೪೨,೦೦೦. ಪ್ರತಿ ೯೦೦೦ ಜನರಿಗೆ ಒಬ್ಬ ಡಾಕ್ಟರರಂತೆ. ಜಪಾನು ವಿಸ್ತೀರ್ಣದಲ್ಲಿ ಬಂಗಾಳ ಪ್ರಾಂತ್ಯಕ್ಕಿಂತ ಸಣ್ಣದಾದರೂ, ಅಲ್ಲಿನ ಇದೆ ತರದ ಅಂಕೆಸಂಖ್ಯೆಗಳು ನಮ್ಮ ದೇಶದ ಅಂಕೆಸಂಖ್ಯೆಗಳನ್ನು ಮೀರಿಸುತ್ತವೆ. ಬ್ರಿಟನಿನ ಜನಸಂಖ್ಯೆಯು ಹಿಂದೂದೇಶದ ೬. ಅಲ್ಲಿ ೧೯,೫೦೦ ನರ್ಸುಗಳು, ೬೧,೪೨೦ ಡಾಕ್ಟರರು ಇರುವರು; ಅಂದರೆ ಪ್ರತಿ ೪೩೫ ಜನರಿಗೆ ಒಂದು ನರ್ಸನಂತೆ, ಮತ್ತು ಪ್ರತಿ ೭೭೬ ಒಬ್ಬ ಡಾಕ್ಟರರಂತೆ.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

೨೦ ವರ್ಷಗಳ ನಂತರ......

(೧ನೇ ಪುಟದಿಂದ)

ಲೆಂದು ಪರಿಶೋಧಿಸಿದನು. ನಂಬ್ರದ ಮೂಲ, ಇತಿಹಾಸವನ್ನು ಪರಿಶೀಲಿಸುತ್ತಿರಲು ಹರಾಜಾಗುವ ಮನೆ ತನ್ನ ಹಿರಿಯರದು, ತನ್ನ ತಂದೆಯ ಸಾಲ, ಆ ಸಾಲಕ್ಕಾಗಿ ಈ ಮನೆ ಹರಾಜು ನಿಜವಾದ ವಾರೀಸುದಾರನು ಯಾರೆಂದು ತಿಳಿಯದೆ ಸಾಲಕ್ಕಾಗಿ ಮನೆಯೇ ಏಲಂ ಆಗಬೇಕು. ಅದು ಆಗಿಯೇ ತೀರಬೇಕು ಎಂದು ತಿಳಿದು ಬಂತು. ಏನು ನನ್ನ ತಂದೆ ಸಾಲಮಾಡಿದನೇ? ಸಾಲಮಾಡುವ ಅವಶ್ಯವೇನು? ತಿಂಗಳಿಗೆ ಇಪ್ಪತ್ತೈದು ರೂಪ್ಯಾ ಸುರಿಯುತ್ತಿದ್ದೆನಲ್ಲ? ಉಂಡು ತೇಗಿರಬೇಕು! ಸಾಲದಕ್ಕೆ ಇದೊಂದು ರಗಳೆ ತಾನು ಸಾಯುವುದಲ್ಲದೆ ಸತ್ತ ಮೇಲೆ ಇದ್ದವರಿಗೆ ಇದೊಂದು ಕತ್ತರಿ. ಎಂದು ಹಳಿಯುತ್ತ, ಊರಿಗೆ ಹೋಗಿ ಆ ಮನೆಯನ್ನೊಮ್ಮೆ ಮಾರಿ ಸಾಲ ತೀರಿಸಿ ಬಂದರೆ ಜನ್ಮಕ್ಕೂ ಅತ್ತ ಹೋಗದೆ ಇರಲಿಕ್ಕಾಯಿತು ಊರನ್ನೊಮ್ಮೆ ನೋಡಿದಂತೆ ಆಯಿತು ಎಂದು ಬಗೆಯುತ್ತಿರುವಾಗ "ತನ್ನ ಮನೆ, ತನ್ನ ಊರಿದು, ತನ್ನ ದೇಶವಿದು ಎನ್ನುತಭಿಮಾನದಿಂ ಕಾಂಬವನೇ ಯೋಗ್ಯಂ, ಧರೆಯಲ್ಲಿ ಮನೆಮಾಳಿಗೆಗಳಿರಲಿ. . . ., ಎಂಬ ಪದ್ಯವನ್ನು ಅವನ ಮಗನು ಆ ದಿನದ ಪಾಠ ಒಪ್ಪಿಸಲಿಕ್ಕೆ ಉರುಹೊಡೆಯುತ್ತಿದ್ದನು. ಅವನು ಮೇಲಿಂದ ಮೇಲೆ ಹಾಗೆ ಓದುತ್ತಿರುವಾಗ ಆ ಪದ್ಯದಲ್ಲಿ ಶಬ್ದಗಳು ಕಿವಿಯಲ್ಲಿ ತೂರಿದವು. ತೂರಿದಂತೆ ಚೆನ್ನಾಗಿ ಅರ್ಥವಾಗಿ ನಾಟಿದವು. ಅರ್ಥ ಮನನವಾದಂತೆ ಮನಸ್ಸು ಮೃದುವಾಗುತ್ತ ಬಂತು. ಮಗನು ಪುಸ್ತಕ ಕೆಳಗಿರಿಸುವಾಗ ತಂದೆಗೆ ಕಣ್ಣಲ್ಲಿ ನೀರು ಬಂದಿತ್ತು. ತನ್ನ ಊರು ತನ್ನ ಮನೆ, ತನ್ನ ತಂದೆ ತಂಗಿ ಎಲ್ಲರೂ ಸ್ಮೃತಿಪಟಲದಲ್ಲಿ ಸುಳಿದರು. ಇಪ್ಪತ್ತು ವರ್ಷಗಳು ಆಗಲೇ ದಾಟಿದ್ದವು. ಅಬ್ಬಾ ಎಂತಹ ದೀರ್ಘ ಸಮಯ. ಮರುದಿನವೇ ತನ್ನ ಊರಿಗೆ ಬೆಳಗಾತ ಹೊರಟು ಬಂದ.

ಮನೆಯ ಹರಾಜು ನಿಶ್ಚಯವಾಗಿತ್ತು. ತಹಶೀಲ್‌ದಾರರು ಬಂದರು. ಗ್ರಾಮಚಾವಡಿಯಲ್ಲಿ ಕಛೇರಿ ನಡೆಸಿದರು. ಊರ ಜನಗಳೇ ಬದಲಾಗಿವೆ. ಪರಿಚಯ ಯಾರದೂ ಇಲ್ಲ. ಯಾರಿಗೂ ಅವನ ಪರಿಚಯವಿಲ್ಲ. ಪರಿಚಯವಿದ್ದವರಿಗೆ ತೋರಿಸಿಕೊಳ್ಳಲಿಲ್ಲ. ಅಧಿಕಾರಿಯಲ್ಲವೆ, ಹರಾಜು ಮಧ್ಯಾಹ್ನಕ್ಕೆ ಇಟ್ಟಿತ್ತು. ಆದರೆ ಆ ಸ್ಥಳವನ್ನು ಒಮ್ಮೆ ನೋಡಬಯಸಿದನು. ಅವನು ಹೊರಟಾಗ ದಾರಿ ತೋರಿಸಲು ಮುಂದಾಗಿ ಉಗ್ರಾಣಿ ಹಿಂದೆ ಪಟೇಲನೂ ಶ್ಯಾನುಭೋಗನು ಹಿಂಬಾಲಿಸಿದನು. ನಡೆಯುತ್ತಿರುವಾಗ ಮಾರ್ಗದಲ್ಲಿನ ಕಲ್ಲುಗಳು ಕಾಲಿನ ಬುಡಕ್ಕೆ ತಾಗಿ ಚುಚ್ಚಿ ಹಿಂದಿನ ಬಾಳನ್ನು ನೆನವುಗೊಡುತ್ತಿದ್ದವು. ಮನೆಯ ಮುಂದೆ ಬಂದನು. ಮನೆಯ ಸ್ಥಿತಿಯೇನೋ, ಪಾಳಾಗಿ ಅಂಗಳದಲ್ಲಿ ಕುರುಚಲು ಗಿಡಲುಗಳ ಸಾಮ್ರಾಜ್ಯ ಬೆಳೆದಿದೆ. ಮನೆಬಾಗಿಲಿಗೆ ಬೀಗ. ತಾನು ಹಿಂದೆ ನಟ್ಟು ಬೆಳೆಸಿದ ಗುಲಾಬಿ ಗಿಡವೊಂದು ಬೆಳೆದಿದೆ. ಕೇವಲ ಒಂದೇ ಒಂದು ಹೂ ಅರ್ಧ ಬಾಡಿನಿಂತಿದೆ. ನೋಡುವವರಿಲ್ಲದೆ ಬಡಕಲಾದ ಗಿಡ. ಆ ಹೂವನ್ನು ಮೆಲ್ಲನೆ ಗಿಡದಿಂದ ಹರಿಯುವಷ್ಟರಲ್ಲಿ ಕೆಳಬಿತ್ತು. ಅದನ್ನು ಎತ್ತಿ ಕಣ್ಣಿಗೆ ಒತ್ತಿಕೊಂಡನು. ನೋಡಿದವರಿಗೆ ದಿಗ್ಭ್ರಮೆಯಾಯಿತು. ಹಿಂದಿನ ನೆನಹೊಂದು ನೆನಪಿಗೆ ಬಂತು. ತಾನೂ ತಂಗಿಯೂ ಇದೇ ಗಿಡದ ಬುಡದಲ್ಲಿ ಓಡಾಡಿದ್ದು, ಹೂವು ಹುಟ್ಟಿ ಬಂದಾಗ ಅವುಗಳನ್ನು ಅವಳಿಗೆ ಮುಡಿಸಿ ಆನಂದದಿಂದ ನಲಿದಾಡಿದ್ದ ಆದರೆ ಅಂದಿನ ತಂಗಿ ಎಲ್ಲಿದ್ದಾಳೆ? ಹೂಪಕಳೆ ಹರಿದು ಕೆಳಬಿತು ಕುತ್ತಿಗೆ ಬಿಗಿದು ಬಂತು. ಮನೆಯ ಸುತ್ತೊಮ್ಮೆ ತಿರುಗಿ ಬಂದನು. ಕಂಬನಿ ತುಂಬಿತ್ತು, ಯಾರೂ ಅರಿಯದ ಹಾಗೆ ಒರಸಿ ಬಂದನು. ಸ್ಥಳ ನೋಡಿಯಾಯ್ತು ಚಾವಡಿಗೆ ಹಿಂತಿರುಗಿದನು. ಹರಾಜು ಮೂರುಗಂಟೆಗೆ, ಇನ್ನೂ ಸಮಯವಿದೆ. ಎನ್ನುತ್ತ ತಾನು ಹಿಡಕೊಂಡು ಬಂದಿದ್ದ ಒಂದು ಮಾಸ ಪತ್ರಿಕೆಯನ್ನು ಓದಲು ಹಾಳೆ ತಿರುವಿ ಹಾಕಿದನು.

ಮ. ಸಾಂತಯ್ಯ ಭಟ್.

(ಬರುವ ವಾರಕ್ಕೆ ಮುಂದುವರಿಯುವುದು.)

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

ಸಿಹಿ ಸುದ್ದಿ ಸಂಗ್ರಹ

ಈಜಿಪ್ತ್ ರಾಜ ಕುಟುಂಬಕ್ಕೆ 'ಫ' ಎಂಬ ಅಕ್ಷರವು ಭಾಗ್ಯದಾಯಕವೆಂಬ ನಂಬಿಕೆ ಇದೆ. ಅಲ್ಲಿನ ಅರಸನು ವಂಶದ ಸದಸ್ಯರೆಲ್ಲರ ಹೆಸರು 'ಫ' ಕಾರದಿಂದಲೇ ಪ್ರಾರಂಭವಾಗುವುದು. ಈಜಿಪ್ತದ ಹಿಂದಿನ ಅರಸರನ್ನು ಫಾರೋವಾಗಳೆಂದು ಕರೆಯುತಿದ್ದರು. ಈಗಿನ ಅರಸರ ಹೆಸರು ಫರೂಕ್. ಅವರ ತಂದೆಯ ಹೆಸರು ಫೋಡ್. ಮಗಳ ಹೆಸರು ಫರೀಡ್.

* * *

ಅಮೇರಿಕದ ಮಿಚಿಗಾನ್ ಪ್ರಾಂತದಲ್ಲಿ ಒಬ್ಬ ಮನುಷ್ಯನು ಗ್ರಂಥಾಲಯದಂತೆ ಪಕ್ಷಿ ಸಂಗ್ರಹಾಲಯವನ್ನು ಇಟ್ಟಿರುವನು. ಅನಾರೋಗ್ಯದಿಂದ ನರಳುವವರಿಗೆ ಮಾನಸೀಕ ಶಾಂತಿ ಸಿಗುವಂತೆ ಅವನು ಇಚ್ಛೆಪಟ್ಟ ಪಕ್ಷಿಗಳನ್ನು ಬಾಡಿಗೆಗೆ ಕೊಡುವನು.

* * *

ಅಮೇರಿಕಾ ಖಂಡದಲ್ಲಿರುವ ಅತೀ ದೊಡ್ಡ ಪಕ್ಷಿಯೆಂದರೆ ಕೆಲಿಫೋರ್ನಿಯದ ಕೆಂಡರ್ ಎಂಬ ಕೊಕ್ಕರೆ ಜಾತಿಯದು. ಕೆಲಿಯೋಪ್ ಹಮ್ಮಿಂಗ್ ಬರ್ಡ್ ಎಂಬುದು ಅಲ್ಲಿಯ ಅತೀ ಸಣ್ಣ ಪಕ್ಷಿ. ದೊಡ್ಡ ಪಕ್ಷಿಯು ಈ ಸಣ್ಣ ಪಕ್ಷಿಗಿಂತ ೫ಸಾವಿರ ಪಾಲು ದೊಡ್ಡದಿದೆ.

* * *

ಕಳೆದ ಯುದ್ಧದಲ್ಲಿ ಫ್ರೆಂಕ್‌ಬೋನ್ ಎಂಬ ಸೈನಿಕನಿಗೆ ಹಣೆಯಲ್ಲಿ ಘಾಯವಾದ ಪರಿಣಾಮದಿಂದ ಒಂದು ತೂತು ಉಂಟಾಯಿತು. ಅದರಲ್ಲಿ ಅವನು ಸಿಗರೇಟು ಇಟ್ಟು ಸೇದುತಿದ್ದನು.

* * *

ಬಾಯಿ ಮಾತಿನಲ್ಲೇ ರೇಡಿಯೋ ಪ್ರಚಾರ ಮಾಡಬಹುದು. ಒಂದು ಘಟನೆ ನಡೆದ ಹದಿನೆರಡು ನಿಮಿಷಗಳಲ್ಲಿ ಪ್ರತಿಯೊಬ್ಬನು ಇಬ್ಬಿಬ್ಬರಿಗೆ ತನಗೆ ತಿಳಿದ ವರ್ತಮಾನವನ್ನು ಹೇಳುತ್ತ ಹೋದರೆ ಸೂರ್ಯ ಮೂಡುವುದರೊಳಗೆ ಜಗತ್ತಿನ ಪ್ರತಿಯೊಬ್ಬನಿಗೂ ಅದು ತಿಳಿಯುವಂತಾಗುವುದು.

* * *

೧೮೫೧ರಲ್ಲಿ ಅಚ್ಚಾದ ರಾಜಪುತಾನದ ಮೇವಾರ ಸಂಸ್ಥಾನದ ಒಂದು ಮೋಹರ್ ನಾಣ್ಯದಲ್ಲಿ 'ದೋಸ್ತಿ ಲಂಡನ್' ಎಂಬ ಅಕ್ಷರಗಳಿವೆ. ಬ್ರಿಟಿಷ್-ರಾಜಪುತ್ರ ಮೈತ್ರಿಯ ಕುರುಹು ಇದು.

* * *

ನಮ್ಮ ದೇಶದಲ್ಲಿ ದೊಡ್ಡ ಇಂಗ್ಲಿಷ್ ನಾಯಿಗಳಷ್ಟು ಚಿಕ್ಕವೂ, ಸಣ್ಣ ಆನೆಯಷ್ಟು ಎತ್ತರವೂ ಆದ ಎತ್ತುಗಳು ಇವೆ.

* * *

ಪ್ರಖ್ಯಾತ ಫ್ರೆಂಚ್ ಕಾದಂಬರಿಕಾರನಾದ ಅಲೆಂಗ್ಸಾಂದರ್ ಡುಮಾ (ಕೌಂಟ್ ಆಫ್ ಮೊಂಟೆಕ್ರಿಸ್ಟೊ ಎಂಬ ಗ್ರಂಥ ಬರೆದಾತ) ಅವನ ತಾಯಿಯ ತಾಯಿಯು ಓರ್ವ ನಿಗ್ರೊ ಮಹಿಳೆಯಂತೆ.

* * *

ಹಂಗೇರಿಯಲ್ಲಿ ಮನುಷ್ಯರ ಕೂದಲಿನಿಂದ ಜಮಖಾನುಗಳನ್ನು ಹೆಣೆಯುತ್ತಾರೆ. ಒಬ್ಬನು ಹೊದಿಯುವ ಕಂಬಳಿಯೊಂದನ್ನು ತಯಾರಿಸಲಿಕ್ಕೆ ಸಾವಿರ ಮನುಷ್ಯರ ಕೂದಲುಗಳು ಬೇಕಾಗುವವು. ಇದು ತನಕ ಅಲ್ಲಿ ೨ಸಾವಿರ ರಗ್ಗುಗಳೂ, ೨೫೦೦ ಶಾಲುಗಳೂ, ಸಾವಿರ ಜಮಖಾನುಗಳೂ ತಯಾರಾಗಿವೆ.

* * *

ಅಮೇರಿಕದ ಅಲ್ಬಾಮಾ ಎಂಬ ಊರಿನ ಜನರಿಗೆ ಕೃತಕ ಮೀಸೆಗಳನಿಟ್ಟುಕೊಳ್ಳುವುದೆಂದರೆ ತುಂಬಾ ಪ್ರೀತಿ. ಇಗರ್ಜಿಗೆ ಅಂತಹ ಮೀಸೆ ಕಟ್ಟಿಕೊಂಡು ಬಂದಾಗ ಜನರು ನಗಾಡುವಂತಾದರೆ ಮಾತ್ರ ಅಂತಹರು ಸರಕಾರ ಶಿಕ್ಷೆಗೆ ಒಳಪಡಿಸಲ್ಪಡುವರು.

* * *

ಕೆಪ್ಟನ್ ಅಲ್ಬರ್ಟ್ ಬೇರಿ ಎಂಬ ಅಮೇರಿಕಾನನು ೧೯೧೧ರಲ್ಲಿ ಮೊದಲನೆ ಸಲಕ್ಕೆ ವಿಮಾನ ಕೊಡೆಯನ್ನು ಹಿಡಿದು ಹಾರಿದನು.

* * *

ಜಗತ್ತಿನಲ್ಲಿ ಅತ್ರೀ ಚಿಕ್ಕ ಸ್ವತಂತ್ರ ರಾಜ್ಯವೆಂದರೆ ಪೋಪರ ವೆಟಿಕನ್ ನಗರ. ಅದು ಬರೀ ಮೂರನೇ ಒಂದು ಮೈಲು ವಿಸ್ತೀರ್ಣವಿದೆ.

ಕೊಡಗು ಅರಣ್ಯ ಇಲಾಖೆ

ಮಡಿಕೇರಿ ತಾ. 10-2-1945

ಕೊಡಗು ಜಿಲ್ಲೆಗೆ ಸೇರಿದ ಸಂಪಾಜೆ ಫಾರೆಸ್ಟಿನಲ್ಲಿರುವ ಈ ಕೆಳಗೆ ಕಾಣಿಸಿದ ಕಡಿದಿರುವ ಮರಗಳನ್ನು ಮಾರ್ಚ ತಿಂಗಳ ತಾರೀಕು 5ನೇ ಸೋಮವಾರ ದಿನ 11 ಘಂಟೆಗೆ ಸದ್ರಿ ಫಾರೆಸ್ಟು ಬಂಗ್ಲೆ ಬಳಿ ಬಹಿರಂಗವಾಗಿ ಹರಾಜಿನಲ್ಲಿ ಮಾರಲ್ಪಡುತ್ತದೆಂದು ಈ ಮೂಲಕ ತಿಳಿಸೋಣಾಗಿದೆ.

ಹೆಚ್ಚಿನ ವಿವರಗಳಿಗೆ ಚೀಫ್ ಫಾರೆಸ್ಟು ಆಫೀಸರ್, ಕೊಡಗು, ಮಡಿಕೇರಿ, ಇವರಿಗೆ ಬರೆದು ತಿಳಿದುಕೊಳ್ಳಬಹುದು.

ತೇಗದ ಸರಗಳು	280	= 1455	ಘನ	ಅಡಿ.
ನಂದಿ ಮರಗಳು	18	= 720	,,	,,
ಹೊನ್ನೆ ,,	2	= 56	,,	,,
ಬೀಟಿ ,,	9	= 244	,,	,,

THE BANK OF MANGALORE, Ltd.
MANGALORE.

Interest on Fixed Deposits.

It is notified forthe information of Depositors, that interest on all Fixed Deposits received from this date willbe paid every half year instead of quarterly as hitherto; those received prior to this date will also be paid accordingly with effect from 1-1-1945

Office of the Bank, Mangalore, 30th Oct. 1944.
By Order H. S. KAMATH, Manager.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ವೊಡಿನೆ ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿ ಎಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್
(ಸ್ಥಾಪನೆ: 1908)
ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ
ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
(ಸ್ಥಾಪನೆ: 1910)
ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು
ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,
KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.
Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 9—3—1945 [ಸಂಚಿಕೆ 10]

ರಷ್ಯವು ಜರ್ಮನಿಯನ್ನು ಏನು ಮಾಡುವುದು?

ಹಿಟ್ಲರ್ ಶಾಹಿಯನ್ನು ಧ್ವಂಸ ಮಾಡುವುದು

ರಷ್ಯಕ್ಕೆ ಜರ್ಮನ್ ಕೆಲಸಗಾರರು

೧೯೪೫ರ ಅಂತ್ಯದಲ್ಲಿ ರಷ್ಯಾ-ಜಪಾನ್ ಯುದ್ಧ!

ಜರ್ಮನ್ ಜನರನ್ನಾಗಲೀ ಜರ್ಮನ್ ನಾಡನ್ನಾಗಲೀ ಸಂಪೂರ್ಣವಾಗಿ ಜಜ್ಜಿಬಿಡುವುದು ಮಾರ್ಶಲ್ ಸ್ಟೇಲಿನರ ಉದ್ದೇಶವಿಲ್ಲ. ಆ ನಾಜೀ ದೇಶವನ್ನು ತುಂಡು ತುಂಡಾಗಿ ಕತ್ತರಿಸಿ ಆಸುಪಾಸಿನ ರಾಜ್ಯಗಳಿಗೆ ಹಂಚಿಕೊಡಬೇಕೆಂಬ ಕೆಲವು ಮಿತ್ರ ಮುಖಂಡರ ಸೂಚನೆಗೆ ಸ್ಟೇಲಿನರಾಗಲಿ ಅವರ ಸಹೋದ್ಯೋಗಿಗಳಾಗಲಿ ಒಪ್ಪಲಿಲ್ಲ. ಅಂದಮೇಲೆ ಜರ್ಮನಿಯನ್ನು ಏನು ಮಾಡಬೇಕೆಂದು ಅವರ ನಿರ್ದಿಷ್ಟವಾದ ಉದ್ದೇಶವಿರಬಹುದು?

ತನ್ನೊಂದು ಭಾಷಣದಲ್ಲಿ ಸೋವಿಯಟ್ ಸರ್ವಾಧಿಕಾರಿಯು ರಷ್ಯದ ಧೋರಣೆಯನ್ನು ಸ್ಪಷ್ಟೀಕರಿಸಿದ್ದನು. **ಮೊದಲನೇಯದಾಗಿ ಹಿಟ್ಲರ್ ಶಾಹಿಯನ್ನೂ ಅವನ ಪ್ರೇರೇಪಕರನ್ನೂ ನಾಮಾವಶೇಷ ಮಾಡುವುದು. ಎರಡನೇಯದಾಗಿ ಹಿಟ್ಲರ್ ಶಾಹಿಯನ್ನೂ ಅದರ ಮುಖಂಡರನ್ನೂ ಧ್ವಂಸ ಮಾಡುವುದು. ಮೂರನೇಯದಾಗಿ ಅಸಹ್ಯವಾದ ಹಿಟ್ಲರನ ಆ 'ನೂತನ ವಿಶ್ವ ಧೋರಣೆ'ಯನ್ನು ಯುರೋಪಿನಲ್ಲಿ ಅಂತ್ಯಗೊಳಿಸುವುದು.**

ಈಗ ರಷ್ಯವು ತನ್ನ ಧೋರಣೆಯ ಪ್ರಾಥಮಿಕ ಅಂಕವನ್ನು ಮುಗಿಸಿ ಕೊನೆಯ ಅಂಕಕ್ಕೆ ಪ್ರಯತ್ನಪಡುತ್ತಿರುವುದು. ಪೂರ್ವ ಯುರೋಪಿನಲ್ಲಿ ತನಗೆ ತೃಪ್ತಿಕರವಾದ ಕಾರ್ಯಕ್ರಮವನ್ನು ರಷ್ಯವು ಆಗಲೇ ತಾನು ಹಿಡಿದ ರಾಜ್ಯಗಳ ಸಂಬಂಧದಲ್ಲಿ ಜ್ಯಾರಿಗೆ ತಂದಿರುತ್ತದೆ.—ಪೋಲೆಂಡಿನಲ್ಲಿ ತನ್ನ ಇಚ್ಛೆಯ ಸರಕಾರ, ತನ್ನ ಇಚ್ಛೆಯ ಸರಹದ್ದು, ಮತ್ತು ತನ್ನ ಇಚ್ಛೆಯ ಸೈನ್ಯ ಸಂರಕ್ಷಣೆ ಕ್ರಮಗಳನ್ನು ಸ್ಥಾಪಿಸಿದೆ. ಇದೇ ಧೋರಣೆಯನ್ನು ಇನ್ನಷ್ಟು ಕಠಿಣವಾದ ರೀತಿಯಲ್ಲಿ ಜರ್ಮನಿಯಲ್ಲಿ ನಿರ್ವಹಣೆಗೆ ತರುವುದು ಸ್ಟೇಲಿನರ ಉದ್ದೇಶವಿರುತ್ತದೆಂದು ಈ ಘಟನೆಗಳಿಂದ ತಿಳಿಯಬಹುದು.

ಯುರೋಪ್ ಆಡಳಿತ ಸಲಹಾಮಂಡಳವೊಂದು ಲಂಡನಿನಲ್ಲಿ ಸ್ಥಾಪಿಸಲ್ಪಡುವುದು. ಇದು ಬ್ರಿಟನ್-ಅಮೇರಿಕಾ ಮತ್ತು ರಷ್ಯಾಗಳು ಯುರೋಪನ್ನು ಯಾವ ಸಂಯುಕ್ತ ವಿಧಾನದಲ್ಲಿ ಆಕ್ರಮಣ ಮಾಡಿ ಆಳಬೇಕೆಂಬುದರ ಕುರಿತು ಪರ್ಯಾಲೋಚನೆ ಮಾಡುವುದು.

ಮೊಸ್ಕೊದಿಂದಲೇ ಶಾಂತಿಷರ್ತಗಳು

ಬ್ರಿಟನ್ ಅಮೇರಿಕಗಳಲ್ಲಿ ಕಳೆದ ವರ್ಷ ಸೇರಿದ ಡಂಬಾರ್ಟನ್ ಓಕ್ಸ್ ಮತ್ತು ಬ್ಲೇಕ್‌ಪೂಲ್ ಪರಿಷತ್ತುಗಳಲ್ಲಿ ಭಾವೀ ಶಾಂತಿಯ ಕುರಿತು ಸಮಾಲೋಚನೆ ನಡೆಯಿತು. ಆದರೆ ನಿಜವಾದ ಶಾಂತಿಯೋಜನೆಯು ಅದಕ್ಕಿಂತ ಮೊದಲೇ ಮೊಸ್ಕೊದಲ್ಲಿ ಮಾಡಲ್ಪಟ್ಟಿದೆ. ಪೋಲೆಂಡಿನ ಲಬ್ಲಿನ್ ಸರಕಾರ ಮಂಡಳವನು ಸ್ಥಾಪಿಸಿದ್ದು ಈ ಯೋಜನೆಗೆ ಅನುಗುಣವಾಗಿಯೇ ಇರುತ್ತದೆ. ಇದೇ ಪ್ರಕಾರ ರಷ್ಯವು ತನ್ನ ಸ್ವಂತ ಧೋರಣೆಯಿಂದ ಫಿನ್‌ಲೆಂಡನ್ನು ಯುದ್ಧದಿಂದ ಹೊರಗೆಳೆಯಿತು. ಜೆಕೊಸ್ಲೊವೆಕಿಯಾ, ರುಮೇನಿಯಾ ಮತ್ತು ಹಂಗೇರಿಗಳಲ್ಲಿ ತನ್ನ ಪ್ರಭಾವಕ್ಕೆ ಒಳಗಾದ ಆಡಳಿತಗಳನು ಸ್ಥಾಪಿಸಲು ಏರ್ಪಡಿಸಿತು.

ಜರ್ಮನಿಯನ್ನು ಹರಿದು ಹಂಚಲಾಗುವುದಿಲ್ಲವಾದರೂ ಅದರಲ್ಲಿ ಕೆಲವು ಪ್ರಾದೇಶಿಕ ಬದಲಾವಣೆ, ಪುನಃರ್ರಚನೆಗಳಾಗಬೇಕಾದುದು ಅತ್ಯಾವಶ್ಯಕವೆಂದು ರಷ್ಯವು ಅಭಿಪ್ರಾಯ ಪಡುತ್ತದೆ. ಎಟ್ಲಾಂಟಿಕ್ ಘೋಷಣೆಯ ಪ್ರಕಾರ ಹೀಗೆ ಮಾಡಬಾರದೆಂದಿದ್ದರೂ ಅದರ ಷರ್ತಗಳು ಜರ್ಮನಿಯ ಮಟ್ಟಿಗೆ ಕೊಂಚ ಬದಲಾವಣೆ ಮಾಡಲೇ ಬೇಕೆಂದು ಸ್ಟೇಲಿನರು ಯಾಲ್ಟಾ ಪರಿಷತ್ತಿನಲ್ಲಿ ಒತ್ತಿಹೇಳಿರುವರೆಂದು ತಿಳಿದು ಬರುತ್ತದೆ.

ನಾಜೀ ತತ್ವದ ನಿರ್ನಾಮ

ನಿರಂಕುಶ ವಾದಿಗಳಾದ ಈ ನಾಜೀಗಳು ಜರ್ಮನಿಯ ಸೈನಿಕ ಮನೋವೃತ್ತಿಯ ಪ್ರಶ್ಯಾ ಪ್ರಾಂತಕ್ಕೆ ಸೇರಿದವರು. ಆದುದರಿಂದ ಈ ಪ್ರಶ್ಯಾ ಪ್ರಾಂತ್ಯವನ್ನು ಮಾತ್ರ ತುಂಡರಿಸಿ ಬಿಟ್ಟರೆ ಸಾಕೆಂದು ರಷ್ಯನದ ಅಭಿಪ್ರಾಯ.

ಯುರೋಪನ್ನು ಇಂದು ರಕ್ಷಿಸಿದವರು ತಾವೆಂದು ರಷ್ಯನ್ ಮುಂದಾಳುಗಳು ಸಹಜವಾಗಿ ಭಾವಿಸಿ ಬಂದಿದ್ದಾರೆ. ಅವರು ಮಾಡಿದ ತ್ಯಾಗ ಬಲಿದಾನಗಳಿಂದ ಇಂದು ಇನ್ನೊಂದು ಯುದ್ಧವನ್ನು ತಡೆಗಟ್ಟಲು ಕೈಕೊಳ್ಳಬೇಕಾದ ಧೋರಣೆಯ ಸರ್ವ ಹಕ್ಕೂ ತಮ್ಮದೇ ಆಗಿರುತ್ತದೆ ಎಂದೂ ಅವರು ತಿಳಕೊಂಡಿರುವರು. ಈ ಪ್ರಶ್ಯಾವನ್ನು ವಿಚ್ಛಿನ್ನಗೊಳಿಸದಿದ್ದರೆ ಇನ್ನೊಂದು ಯುದ್ಧವನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದೇ ಅವರ ತರ್ಕ.

ಈ ಪ್ರಶ್ಯಾದ ಒಂದು ಭಾಗವನ್ನು ಪೋಲೆಂಡಿಗೆ ಕೊಡಲಾಗುವುದು. ಇನ್ನೊಂದು ಭಾಗವನ್ನು ಜೊಕೊಸ್ಲೊವೇಕಿಯಕ್ಕೂ ಸೇರಿಸಿಕೊಳ್ಳಲಾಗುವುದು. ಇದರಿಂದ ಆ 'ಪುಂಡ' ಪ್ರಾಂತ್ಯವಾದ ಪ್ರಶ್ಯವು ಪೂರ್ಣ ಹತೋಟಿಗೆ ತಂದಂತಾಗುವುದು.

ಸಾಂಪತ್ತಿಕ ಹಂಚುವಿಕೆ

ಪೂರ್ವ ಪ್ರಶ್ಯಾದ ವಿಶಾಲ ಸಾಗುವಳಿ ಪ್ರದೇಶಗಳು ಪೋಲಿಶ್ ರೈತರಿಗೆ ಹಂಚಲ್ಪಡುವುವು. ಈ ಪ್ರದೇಶದಲ್ಲಿ ಉಕ್ರೇನ್ ಪ್ರದೇಶದಲ್ಲಿನ ಮಿಲಿಯಾಂತರ ರೈತರನ್ನು ತಂದು ನಿಲ್ಲಿಸಲಾಗುವುದು. ಪ್ರಶ್ಯದ ಜರ್ಮನ್ ಜನತೆಯನ್ನು ಇನ್ನೊಂದು ಪ್ರದೇಶಕ್ಕೆ ಒಯ್ಯಲಾಗುವುದು. ಈ ಕೆಲಸವನ್ನು ರಷ್ಯನ್ ಸೈನ್ಯ ಮುಖಂಡರು ನಿರ್ವಹಿಸುವರು.

ನಾಜೀಗಳಿಂದ ರಷ್ಯಕ್ಕೆ ಉಂಟಾದ ನಷ್ಟವನ್ನು ಜರ್ಮನಿಯ ಮೇಲೇ ಸಂಪೂರ್ಣವಾಗಿ ಹೊರಿಸಲಾಗುವುದು: ಜರ್ಮನ್ ಕೈಗಾರಿಕೆ ಕಾರ್ಖಾನೆಗಳಲ್ಲಿನ ವಸ್ತುಗಳನ್ನೂ, ಯಂತ್ರೋಪಕರಣಗಳನ್ನೂ ರಷ್ಯವು ತನ್ನ ಸಾಲದ ಭಾಗವಾಗಿ ವಶಮಾಡಿಕೊಳ್ಳುವುದು. ನಂತರ ಅವುಗಳ ಸಹಾಯದಿಂದ ವಿಮಾನ, ಹಡಗ ಮತ್ತು ಕಚ್ಚಾ ಪದಾರ್ಥಗಳನ್ನು ಒಟ್ಟುಗೂಡಿಸುವುದು.

ರಷ್ಯದಲ್ಲಿ ಮಿಲಿಯಾಂತರ ಕೆಲಸಗಾರರು ಮಡಿದಿರುವುದರಿಂದ ಜರ್ಮನ್ ಕೆಲಸಗಾರರನ್ನು ತಂದು ಕೆಲಸಕ್ಕೆ ಹಚ್ಚಲಾಗುವುದು. ನಾಜೀ ಮುಖಂಡರನ್ನು ವಿಚಾರಣೆಗೆ ಒಳಪಡಿಸಿ ಗಲ್ಲಿಗೇರಿಸಲಾಗುವುದು. ಜರ್ಮನ್ ಸೇನಾಪತಿಗಳನ್ನು ಮಜೂರ ಕೇಂದ್ರಗಳ ಮೇಲಾಧಿಕಾರಿಗಳಾಗಿ ಮಾಡಲಾಗುವುದು.

"ಜರ್ಮನಿಯಲ್ಲಿ ಹಿಟ್ಲರರಂತವರು ಬರುತ್ತಾರೆ ಮತ್ತು ಹೋಗುತ್ತಾರೆ. ಆದರೆ ಜರ್ಮನ್ ಜನತೆಯೂ ನಾಡೂ ಬಾಳಲೇ ಬಾಳುವುದು." ಎಂದು ಸ್ಟೇಲಿನರು ಹೇಳಿದ್ದುದರಲ್ಲಿ ಜರ್ಮನಿಯನ್ನು ನಾಶಮಾಡುವ ಉದ್ದೇಶವಿಲ್ಲ.

"ಜರ್ಮನಿಯನ್ನು ನಾಶಮಾಡುವುದು ಸರ್ವಥಾ ಸಾಧ್ಯವಿಲ್ಲ. ಹೇಗೆ ರಷ್ಯವನ್ನು ನಾಶಮಾಡಲು ಸಾಧ್ಯವಿಲ್ಲವೊ ಹಾಗೇ ಜರ್ಮನಿ ಕೂಡಾ." ಎಂದೂ ದಿಗ್ವಿಜಯದ ಪ್ರಥಮದಲ್ಲಿ ಸ್ಟೇಲಿನರು ತಿಳಿಸಿದ್ದಾರೆ.

ಜಪಾನಿನ ವಿಚಾರವೇನು?

ಸದ್ಯದಲ್ಲೇ ರಷ್ಯವು ಜಪಾನಿನ ಮೇಲೆ ಬೀಳಬಹುದೆಂಬ ಊಹಾಪೋಹೆ ಎದ್ದಿದೆಯಾದರೂ ಸ್ಟೇಲಿನರ ಮನಸ್ಸೇ ಬೇರೆಯಂತೆ. ಎಪ್ರಿಲ್ ೨೫ರಂದು ರಷ್ಯಾ-ಜಪಾನ್ ತಾಟಸ್ಥ್ಯ ಒಪ್ಪಂದದ ಅವಧಿ ಮುಗಿಯುವುದು. ಅದೇ ತಿಂಗಳ ತಾರೀಕ್ಕೇನೇ ಸೆನ್ ಫ್ರೆನ್ಸಿಸ್ಕೋದಲ್ಲಿ ಜನಾಂಗ ಪರಿಷತ್ತು ಸೇರುವುದೆಂದು ಕ್ರಿಮಿಯಾದಲ್ಲಿ ನಿರ್ಣಯವಾಗಿದೆ.

ಜಪಾನ್ ರಷ್ಯಗಳೊಳಗೆ ಯುದ್ಧವಾದರೆ ಆ ಸಮರವು ಮೆಂಚೂರಿಯಾ ಮತ್ತು ಸೈಬಿರಿಯಾಗಳ ೧೯೦೦ ಮೈಲು ರಂಗದಲ್ಲಿ ಹರಡಬಹುದು. ರಷ್ಯದ ಪೂರ್ವ ಕರಾವಳಿಯಿಂದ ಜಪಾನಿನ ರಾಜಧಾನಿಯು ಬರೇ ೪೦ ಮೈಲುಗಳಷ್ಟೇ ಇದೆ. ಅಲ್ಲಿ ವಿಮಾನ ಠಾಣ್ಯ ಮಾಡಿಕೊಂಡು ಜಪಾನನ್ನು ಎಡೆಬಿಡದೆ ದಾಳಿಗೆ ಗುರಿಮಾಡಬಹುದು.

ರಷ್ಯಾ ಜಪಾನುಗಳೆರಡೂ ಏಸಾಖಂಡದ ಜನಾಂಗದವರು ಏಸ್ಯಾಖಂಡದ ನಾಯಕತ್ವದ ಪ್ರಶ್ನೆಯಲ್ಲಿ ಅವರೊಳಗೆ ಘರ್ಷಣೆ ಬರಲು ಎಡೆಯಿದೆ. ಹಾಗೆ ಸಂಭವಿಸಿದರೆ ಮಿತ್ರರ ಕೆಲಸವು ಕೆಲವೇ ತಿಂಗಳುಗಳಲ್ಲಿ ಮುಗಿಯುತ್ತದೆ. ಆ ಸಂದರ್ಭದಲ್ಲೂ ಮಿತ್ರರಿಗಿಂತಲೂ ಶೀಘ್ರವಾಗಿ ಕೆಂಪು ದಳಗಳು ಟೋಕಿಯೊವನ್ನು ಸೇರಲು ಪ್ರಯತ್ನಮಾಡದಿರವು.

ಆದುದರಿಂದ ೧೯೪೫ರ ಅಂತ್ಯದೊಳಗೆ ರಷ್ಯಾ ಜಪಾನುಗಳೊಳಗೆ ಯುದ್ಧವು ಅಸಂಭವವೆನ್ನಲಾಗುವುದಿಲ್ಲ.

ಇಪ್ಪತ್ತು ವರ್ಷಗಳ ನಂತರ......!

(ಹಿಂದಿನ ಕಥಾಭಾಗ)

[ತಂದೆಯು ಮಗನಿಗೆ ಸಾಲಮಾಡಿ ವಿದ್ಯೆ ಕಲಿಸಿ ಅಧಿಕಾರಿಯಾಗುವ ವರೆಗೆ ಇದ್ದು ಸುಖದ ಪ್ರಾಪ್ತಿ ಇಲ್ಲದೆ ತೀರಿದನು. ಮನೆ ಸಾಲಕ್ಕಾಗಿ ಹರಾಜಿಗೆ ನಿಂತಿತು. ಮಗನು ಸಿರಿವಂತನು, ಅಧಿಕಾರಿ. ಆದರೆ ಮನೆಯ ಮೇಲೆ ಪ್ರೀತಿ ಇಲ್ಲದೆ ಮಾರಿಯೇ ತೀರಿಸಬೇಕೆಂದು ಬಗೆದು ಊರಿಗೆ ಬಂದನು. ಮುಂದಿನದನ್ನು ಓದಿರಿ!]

ಮಾಧವನು ಪತ್ರಿಕೆಯನ್ನು ತಿರುವಿದಾಗ ಪ್ರಥಮ ಪುಟದಲ್ಲಿಯೇ ಸ್ವದೇಶ ವಾತ್ಸಲ್ಯವೆಂಬ ಕನ್ನಡದ ಕವಿಯೊಬ್ಬನು ಭಾಷಾಂತರಿಸಿದ ಕವನವನ್ನು ಓದಿದನು.

*ಉಸಿರೆಳೆಯುತಿಹನೇ ಮನುಜ, ಅವನಾತ್ಮವಳಿದು! ಪರದೇಶದೊಳು ಅಲೆದಲೆದು ತನ್ನ ನಾಡಿಗಭಿಮುಖವಾಗಿ ಅವನ ಹೆಜ್ಜೆಯು ತಿರುಗುತಿರೆ। ಒಳಗೊಳಗೆ ತನ್ನೆದೆಯು ಜ್ವಲಿಸದೇ ಇಹನು, ಇದು ನನ್ನದು—ನನ್ನ ತಾಯ್ನಾಡು। ಎಂದು ತನಗೆ ತಾನೊಮ್ಮೆಯುಂ ಪೇಳದಿಹನು.

ಅಂತಹನು, ಉಸಿರೆಳೆಯುತಿರೆ ಸೋ! ಅವನ ಗುರುತಿರಲಿ। ಏಕೆನಲು ಅವನೆದೆಯು ಸಂತಸವು ಹಿಗ್ಗಿಸದು ಅವನ ಬಿರುದು ಉನ್ನತವಾಗಿರಲಿ। ಹೆಸರು ಮಾನವಾಗಿರಲಿ। ಆಸೆ ಬಯಸುವಷ್ಟು ಅವನೈಶ್ವರ್ಯ ಅಪಾರವಿರಲಿ. ಆ ಬಿರುದು, ಅಧಿಕಾರ ಸಂಪತ್ತು ಇದ್ದರೂ। ಪಾಪಿ, ಎಲ್ಲವನು ಸ್ವಾರ್ಥದೊಳಡಗಿಸಿಹನು। ಕರ್ತವ್ಯ ಹೀನನವನು ಅಳಿಯೆ। ಗಳಿಸಿದಾ ಬಿರುದು ಧನ ಕೀರ್ತಿ, ಅಶ್ರು, ಮಾನ, ಹೊಗಳಿಲ್ಲದೆ ತನುವಿನಂತೆ ಮಣ್ಣಿನೊಳಗಡಗುವುದು.

ಆ ಪದ್ಯವು ಮಾಧವನ ಮನಸ್ಸಿನ ಮೇಲೆ ಬಹುಪರಿಣಾಮ ಉಂಟುಮಾಡಿತು. ತಾನು ಇಪ್ಪತ್ತು ವರ್ಷಗಳ ಹಿಂದೆ ಊರು ಬಿಟ್ಟಿದ್ದೆ. ಈಗ ಪುನಃ ಬಂದಿರುತ್ತೇನೆ? ಯಾಕೆ ಮನೆಯ ಮೇಲಿನ ಮೋಹದಿಂದಲೇ ಅಲ್ಲ. ಬೇಕಾದಷ್ಟು ಸಿರಿ ಇದೆ, ಅಧಿಕಾರ ಇದೆ. ಆ ಮನೆಯನ್ನು ಉಳಿಸಬಹುದು! ಯಾರಿಗಾಗಿ, ನನ್ನವರು ಎಂಬವರು ಒಬ್ಬರೂ ಇಲ್ಲ. ತಂಗಿಯೊಬ್ಬಳು ಇರಬೇಕಿತ್ತು, ಅವಳೂ ಇಲ್ಲ. ನಿಜ, ಹೋಗಲಿ ಎಂಬ ತಾತ್ಸಾರವು ಪುನಃ ಹೃದಯದಲ್ಲಿ ಆವರಿಸಿತು. ಸಮಯವಾಯ್ತು. ಚಾವಡಿಯ ಮುಂದೆ ಊರಜನ ನೆರೆಯಿತು. ಪಟೇಲನು ಆ ಮನೆಯ ವಿಶಯವನ್ನೋದಿ ಹರಾಜಿನ ಕಾರಣವನ್ನು ತಿಳುಹಿದನು. ತಹಶೀಲ್ದಾರನಾಗ ಕೆಳಮುಖನಾಗಿ ನೆಲ ನೋಡುತ್ತಿದ್ದನು. ಉಗ್ರಾಣಿ ಒಂದು ಸಂಖ್ಯೆಯನ್ನು ಕೂಗಿದನು. ಒಬ್ಬನು ಹೆಚ್ಚಿಸಿದನು. ಆಗ ಗುಂಪಿನಿಂದ "ಅಯ್ಯೊ ಅಯ್ಯೊ" ಎಂಬ ಕರೆ ಕೇಳಿಬಂತು. ಧ್ವನಿ ಕೇಳಿ ಜನ ದಾರಿಬಿಟ್ಟಿತು. ಹೆಂಗಸೊಬ್ಬಳು ಮುಂದೆ ಬಂದು ತಹಶೀಲ್ದಾರ ಮುಂದೆ ಕೈ ಜೋಡಿಸುತ್ತ "ಸ್ವಾಮಿ ಈ ಬಡವಿಯ ಮನವಿ ಇದೆ. ಆ ಮನೆಯ ಹರಾಜು ಮಾಡುವ ಅವಧಿ ಮುಂದರಿಸಬೇಕು" ಎಂದಳು. ಬೇಡುವ ಹೆಂಗಸನ್ನು ನೋಡಿ ತಹಶೀಲ್ದಾರ್ ಆಶ್ಚರ್ಯಪಡುತ್ತ ಈ ಮನೆಯ ಹರಾಜಿಗೂ ಇವಳಿಗೂ ಸಂಬಂಧವೇನೆಂದು ಯೋಚಿಸುತ್ತ.

"ಅಮ್ಮಾ ಆ ಮನೆ ಹರಾಜು ಮಾಡದೆ ಉಪಾಯವಿಲ್ಲ, ಅದಕ್ಕೆ ವಾರೀಸದಾರರಿಲ್ಲ. ಯಜಮಾನನು ತುಂಬಾ ಸಾಲ ಮಾಡಿದ್ದಾನೆ? ಆ ಹಣ ಸಾಲದವನಿಗೆ ತೀರಬೇಡವೇ"

"ಅಯ್ಯಾ ಅವರ ಸಾಲ ತೀರುವುದ ಬೇಡವೆಂದು ಯಾರೆನ್ನುತ್ತಾರೆ? ಅದಕ್ಕೆ ವಾರೀಸುದಾರರಿಲ್ಲವೆಂದು ಯಾರು ಹೇಳಿದರು, ಸಾಲ ತೀರಿಸಲು ಕಂತಿನಿಂದ ಕೊಡುವ ಸವಲತ್ತು ತೋರಬಹುದಲ್ಲವೆ?

"ಆ ಸಾಲ ತೆರುವ ಪಕ್ಷದಲ್ಲಿ ಅದರೊಂದಿಗೆ ಬಡ್ಡಿಯೂ ಕೊಡಬೇಕಾಗಿದೆ. ಮೂಲಕ್ಕಿಂತ ಬಡ್ಡಿಯೇ ಬೆಳೆದಿದೆಯಲ್ಲಾ ಹೀಗಾಗಿ ಮನೆಯ ಹರಾಜು ಆಗದೆ ನಿರ್ವಾಹವಿಲ್ಲ.

"ಆ ಬಡ್ಡಿಯ ಹಣವೆಷ್ಟೆಂದು ತಿಳಿದು ತೆರುವ ಪಕ್ಷದಲ್ಲಿ ಉಳಿದ ಹಣಕ್ಕೆ ವ್ಯಾದೆ ಸಿಗಬಹುದಲ್ಲವೆ?"

"ಅದೇ ಎರಡು ಸಾವಿರವಾಗಬಹುದು"

"ಅಷ್ಟೆಯೇ? ಅದನ್ನು ತೆತ್ತರೆ ಹರಾಜು ಮುಂದುವರಿಸಬಹುದೇ?"

"ಅಮ್ಮಾ ಹರಾಜು ನಿಲ್ಲಿಸಬಹುದು ನಿಜ, ಅವರ ಮೂಲದ ಹಣ ಹೇಗೆ ತೆರುತ್ತೀ? ವಾರೀಸದಾರರಿಲ್ಲದ ನೀನೇಕೆ ಆ ಭಾರ ವಹಿಸುತ್ತೀ?"

"ಆಯುಷ್ಯವಿದ್ದರೆ ಹೇಗಾದರೂ ಮಾಡಿ ತೀರಿಸುತ್ತೇನೆ, ಆ ಮನೆಯ ನೀರಿನ ಋಣ ಇನ್ನೂ ಮುಗಿದಿಲ್ಲ."

"ಹಾಗೆಂದರೇನಮ್ಮ—ಆ ಮನೆಯ ಯಜಮಾನದಾಗಿದ್ದವನು ನಿಮಗೇನಾಗಬೇಕು?"

"ನಾನು ಅವರ ಮಗಳು ಸ್ವಾಮಿ!"

"ಏನು! ನೀನು ರಂಗಪ್ಪನವರ ಮಗಳೆ?"

"ಹೌದು ಸ್ವಾಮಿ—ಕಾವೇರಿ ಎಂದು ಹೆಸರು!"

ತಹಶೀಲ್ದಾರ ದಿಟ್ಟಿಸಿ ನೋಡಿದ. ಹೆಂಗಸಿನ ಕಣ್ಣಲ್ಲಿ ನೀರು ತುಂಬಿದೆ. ಏನು ಕಂಡಿತೋ "ಪಟೇಲ್, ಹರಾಜು ಮುಂದರಿಸಬೇಕಾಗಿದೆ. ಈಗ ಸಭೆ ಬರಖಾಸ್ತು ಮಾಡಿದ್ದೇನೆ. ಈ ವಾರೀಸದಾರಳಾಗಿ ಬಂದಿರುವ ಹೆಂಗಿಸಿನ ಮನವಿ ಕೇಳುವುದಿದೆ—ಎಲ್ಲರೂ ಹೋಗಿ,''ಎಂದು ಎದ್ದು ಒಳಗೆ ಹೋದ. ಸಭೆಯ ಜನ ಮರಳಿತು. ತಹಶೀಲ್ದಾರ ಒಳಕ್ಕೆ ಹೋಗಿ ಆ ಹೆಂಗಸಿನ ಮುಖ ನೋಡಿದ. ಬರಿದಾದ ಹಣೆ, ಕುಂಕುಮದ ಬೊಟ್ಟಿಲ್ಲ. ಹೌದು ತನ್ನ ತಂಗಿ, ಇಪ್ಪತ್ತು ವರ್ಷಗಳ ಹಿಂದೆ, ಹತ್ತು ವರ್ಷದ ಹುಡುಗಿಯನ್ನು ಅಂದು ಊರು ಬಿಡುವಾಗ ನಗುಮೊಗದಿಂದ ಕಂಡಿದ್ದ. ಇಂದು ಕಣ್ಣೀರಲ್ಲಿ ಕಾಣುತ್ತಿದ್ದೇನೆ, ಮಗನಾದವನು ಮನೆ ಮಾರಲು ಬಂದಾಗ ಮಗಳಾದವಳು ಉಳಿಸಲು ಬಂದಿದ್ದಾಳೆ ಎಂದು ಬರುತ್ತಿರುವ ಕಣ್ಣೀರನ್ನು ತೊಡೆದು ಹೊರ ಬಂದ ಸಂಗತಿಗಳನ್ನು ಕೇಳಬೇಕೆಂದು ಮನಸ್ಸು ಕುತೂಹಲಪಟ್ಟಿತು.

"ಅಯ್ಯಾ ನನಗೆ ಹೋಗಲು ಅಪ್ಪಣೆಯೆ?" "ನಿಲ್ಲು ನಿಲ್ಲು ಹೋಗಬೇಡ ಸ್ವಲ್ಪ ಮಾತಾಡುವುದಿದೆ'' ಎಂದು ಮುಖದ ಭಾವವನ್ನು ಬದಲಾಯಿಸುತ್ತ ''ಅಮ್ಮಾ ನೀವು ರಂಗಪ್ಪನ ಒಬ್ಬಳೇ ಮಗಳೆಂದಿರಲ್ಲ, ಅವರಿಗೆ ಬೇರೆ ಯಾರೂ ಇದ್ದಿಲ್ಲವೇ? ಈ ಸಾಲವಾಗಲು ಕಾರಣವೇನು? ಮತ್ತೆ ನಿಮಗೆ ಅದೇ ಮನೆಯಲ್ಲಿರಬೇಕೆಂಬ ಹಂಬಲವೇಕೆ?' ಎಂಬ ಪ್ರಶ್ನೆಗಳನ್ನುಸುರಿದನು.

"ಸ್ವಾಮಿ, ನಾನು ಅವರ ಮಗಳು. ಅವರಿಗೊಬ್ಬ ಮಗನೂ ಇದ್ದನು, ಅವನೇ ಈ ಮನೆಯ ವಾರಿಸುದಾರನಾಗಬೇಕು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಕಲಿಯಲು ಹೋದವನು ಇನ್ನೂ ಬಂದಿಲ್ಲ. ಚಿಕ್ಕಂದಿನಲ್ಲಿ ನೋಡಿದ ನೆನಪು, ತಂದೆಯ ಸರ್ವಸ್ವವೂ ಅವನೇ ಆಗಿದ್ದನು. ಈ ಸಾಲವು ಅವನ ವಿದ್ಯೆಗಾಗಿಯೂ, ಸ್ವಲ್ಪ ನನ್ನ ಮದುವೆಗಾಗಿಯೂ ಆಗಿತ್ತು. ಅವನು ಈಗ ಎಲ್ಲಿಯೋ ಅಧಿಕಾರಿಯಾಗಿರುವನೆಂದು ಕೇಳಿ ಬಲ್ಲೆ. ಇಲ್ಲಿಯ ಸಂಗತಿಗಳೆಲ್ಲ ಅವನಿಗೆ ತಿಳಿಯುವ ಹಾಗಿದ್ದರೆ ಇದೆಲ್ಲಾ ಎಲ್ಲಿ ಸಂಭವಿಸುತ್ತಿತ್ತು."

"ಮಗನು ಅಧಿಕಾರಿಯಾಗಿದ್ದರೂ ತಂದೆಗೆ ಏನೂ ಸಹಾಯ ಮಾಡದಷ್ಟು ಕೃತಘ್ನನಾಗಿ ಬಿಟ್ಟ ಅಲ್ಲವೇ?"

"ಇಲ್ಲ, ಇಲ್ಲ ತಂದೆಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಕಳುಹುತ್ತಿದ್ದ. ನನ್ನ ಮದುವೆಗೆಂದು ಐನೂರು ರೂಪಾಯಿ ಕಳುಹಿದ್ದ. ಅದೇ ಹಣ ಈಗ ಇಲ್ಲಿರುವುದು."

"ಮಗನ ಹಣ ತಂದೆಗೆ ಬೇಡವಾಯಿತೇ? ಹಾಗಾದರೆ ತಂದೆ ಮಗನ ಮೇಲೆ ಮುನಿಸಿನಿಂದ ಸತ್ತಿರಬೇಕು."

"ಛೇ ಹಾಗೆನ್ನಬೇಡಿ. ಮಗನ ಮೇಲ್ಮೆಯನ್ನು ಕೊನೆಯುಸಿರಿನ ತನಕ ಹಾರೈಸಿದನು. ತಂದೆಗೆ ಮಗನ ಹಣ ಬೇಕಿರಲಿಲ್ಲ. ಪ್ರೀತಿ ಒಲುಮೆ ಬೇಕಾಗಿತ್ತು. ಅದನ್ನು ಪಡೆಯದೆ ಋಣ ರೂಪದಲ್ಲಿ ತೀರುವ ಹಣ ಬೇಕಿರಲಿಲ್ಲ. ಹಾಗಾಗಿ ಹಣ ಖರ್ಚಾಗದೆ ಹಾಗೇ ಉಳಿಯಿತು. ಮದುವೆಗೆ ಕಳುಹಿದ ಹಣ ಸಕಾಲಕ್ಕೆ ಬಾರದೆ ಅದರ ಪ್ರಯೋಜನವೂ ದೊರಕದಾಯ್ತು."

"ನೀನ್ಯಾಕೆ ಆ ಮನೆಗೆ ಒದ್ದಾಡುವುದು?"

"ನನಗೆ ಆ ಮನೆಯ ಮೇಲೆ ಒಂದಿಷ್ಟು ಆಸೆಯೂ ಇಲ್ಲ. ಆ ಮನೆಯ ವಾರಿಸದಾರನು ಇಂದಲ್ಲ ನಾಳೆಯಾದರೂ ಬಂದಾನು. ಆಗ ಒಪ್ಪಿಸಬೇಕು. ಮಗನಿಲ್ಲದ ವೇಳೆಯಲ್ಲಿ ವಿಧವೆ ಮಗಳು ಮನೆ ಮಾರಿ ಬಿಟ್ಟಳು ಎಂದು ಊರು ಮಾತಾಡದೇ? ಅಲ್ಲದೇ ತಂದೆಗೂ ಮಗನು ಬರುವನೆಂಬಹಂಬಲ ಇತ್ತು. ಅದಕ್ಕಾಗಿಯೇ ಇಷ್ಟೆಲ್ಲಾ ಕಷ್ಟ ಪಡುವುದು" ಮಾದಣ್ಣನ ಪ್ರೇಮದ ಅಗ್ನಿ ಹೊತ್ತಿತ್ತು. ಇನ್ನು ಸೈರಿಸಲಾರದಾದನು. ಸ್ವಾರ್ಥದ ಕೊನೆಯ ಮೆಟ್ಟಲಲ್ಲಿದ್ದವನು ತ್ಯಾಗದ ಭೂಮಿಗೆ ಹಾರಿದನು. ತಂದೆಯ ವಿಷಯದಲ್ಲಿ ಮುನ್ನ ಮಾಡಿದ ತಪ್ಪು ಅಭಿಪ್ರಾಯ ಹೋಯ್ತು. ತಾತ್ಸಾರ, ದರ್ಪ ಬಿಂಕ ಹಾರಿತು. ಕಂಠ ಬಿಗಿದು ಬಂದು ಒಮ್ಮಿಂದೊಮ್ಮೆ "ತಂಗೀ"ಎಂದು ಕರೆದ. ಆ ಸ್ವರದಲ್ಲಿ ಕರುಣೆ ಮಿಶ್ರವಾಗಿತ್ತು. ಹೆಂಗಸು ಆಶ್ಚರ್ಯಪಟ್ಟಳು. ಮಾದಣ್ಣ ಅವಳ ಕೈ ಹಿಡಿದು "ತಂಗೀ ಕಾವೇರ, ನಾನೇ ಕಾಣಮ್ಮ ನಿನ್ನ ಪಾಪಿ ಅಣ್ಣ, ಅಧಿಕಾರಿ ಮಾದಣ್ಣ, ರಂಗಪ್ಪನ ಮಗ, ನನ್ನನ್ನು ಗುರುತಿಸಲಾರದಾದೆಯಾ" ಎಂದನು. ಕಂಬನಿಯು ಕಟ್ಟೆಯೊಡೆದು ರಭಸದಲ್ಲಿ ಹೊಮ್ಮಿತು. ಅಣ್ಣನನ್ನು ಅಪ್ಪಿಕೊಂಡಳು. ಇಪ್ಪತ್ತು ವರ್ಷಗಳ ನಂತರ ಅಣ್ಣ ತಂಗಿಯರ ಮಿಲನವಾಗಿ ಹೃದಯ ಭಾರ ಹೋಗುವವರೆಗೆ ಅತ್ತು ಬಿಟ್ಟರು. ಅಣ್ಣನು ತಂಗಿಯ ಬಾಳುವೆಯನ್ನು ವಿಚಾರಿಸಿದನು. ಕಾವೇರ ಮದುವೆಯಾದಂದಿನಿಂದ ನಡೆದುದನ್ನು ಅಳುವಿನಲ್ಲೇ ತಿಳುಹಿದಳು. ತಂದೆ ಪಟ್ಟಪಾಡು ತನ್ನ ಗಂಡನ ಮರಣ ಮಾವನ ಹಠ ಸಾಧನೆ, ತಂದೆಯ ಮರಣ, ತಾನು ದಿನದ ಊಣಿಸಿಗಾಗಿ ಪರರಲ್ಲಿ ದುಡಿಯುವುದು ಎಲ್ಲವನ್ನು ತಿಳುಹಿದಳು. ಮಾದಣ್ಣನ ಹೃದಯ ದ್ರವಿಸಿತು. ತಂದೆ ಪಟ್ಟಪಾಡಿಗೆ ಕೊರಗಿದನು. ತಂಗಿಯ ಬವಣೆಗೆ ಮರುಗಿದನು.

ತಾನು ಅಧಿಕಾರಿಯಾಗಿದ್ದೇನೆ. ತಂದೆಯ ಜೀವನವು ದುರಂತದಲ್ಲಿ ಕೊನೆಗೊಂಡಿತು. ತಂಗಿಯೂ ಅದರ ಬೇಗೆ ಅನುಭವಿಸಿದಳು. ಉಳಿದ ಬಾಳುವೆಯಾದರೂ ಸುಖದಿಂದ ಸಾಗಿದರೂ ತಂದೆಯ ಆತ್ಮಕ್ಕೆ ಶಾಂತಿಯಾಗಲಿಕ್ಕಿಲ್ಲವೇ ಎಂದು ಯೋಚಿಸಿದಾಗ ಹೃದಯ ದ್ರವಿಸಿತು. ಮನಸ್ಸು 'ಕಾರ್ಯಕ್ಕಿಳಿ' ಎಂಬ ಮಾರ್ದನಿ ಕೊಟ್ಟಿತು. ಒಡನೇ ಪಟೇಲನಿಗೂ ಸಾಲಗಾರನಿಗೂ ಹೇಳಿ ಕಳುಹಿಸಿ ಕರೆಸಿದನು. "ಅಯ್ಯಾ? ನಿಮ್ಮ ಸಾಲವೆಷ್ಟು? ಬಡ್ಡಿ ಸಮೇತ ಹೇಳಿ, ಹಣ ಪೂರ್ತಿ ಬರುತ್ತದೆ—ರಶೀದಿಯನ್ನು ಕೊಟ್ಟು ಬಿಡಿ" ಎಂದು ತನ್ನ ಬಕ್ಕಣದೊಳಗಿಂದ ನೋಟುಗಳ ಕಟ್ಟೊಂದನ್ನು ಬಿಚ್ಚಿದನು. ಪಟೇಲನು ಅವಾಕ್ಕಾದನು. ಸಾಲಗಾರನಾದ ಕಾವೇರನ ಮಾವನು ದಂಗು ಬಡಿದಂತಾದನು. ಹಣ ಸಿಕ್ಕುವಾಗ ಬೇಡವೆನ್ನುವುದೆಂತು? ಹಣವನ್ನೆಣಿಸಿ ಪಡೆದು ರಶೀದಿ ಬರೆದನು. ಪಟೇಲನು ಸಾಕ್ಷಿ ಸಹಿ ಹಾಕಿ ಮಾಧವನ ಕೈಗೆ ಒಪ್ಪಿಸಿ ಹೊರಡಲು ಸಿದ್ಧರಾದರು.

"ಅಯ್ಯಾ ನಿಮ್ಮೊಡನೆ ಒಂದು ಮಾತಿದೆ. ಈ ಹೆಂಗಸು ನಿಮ್ಮ ಸೊಸೆಯಲ್ಲವೆ ನಿಮ್ಮ ಮಗನ ಕೈ ಅಗ್ನಿ ಸಾಕ್ಷಿಯಾಗಿ ಈಕೆ ಹಿಡಿದವಳಲ್ಲವೆ? "ಹೌದು" "ಸಾಕು ಇಷ್ಟು. ಇದೊಂದು ನೀವು ಹೂಡಿದ ಆಟ ನಿಮ್ಮ ಮಗನು ನಿಮ್ಮೊಡನೆ ನಿಲ್ಲದೆ ಹೋದನೆಂದು ಅವಳ ಮೇಲಿನ ದ್ವೇಷ ಸಾಧನೆಗೆ ತಂದೆಯ ಸಾಲವೆಂಬ ನೆವದಿಂದ ಹೆಣ್ಣಿನ ಬಾಳನ್ನು ಹಾಳುಮಾಡಬೇಕೆಂಬ ಹಠ. ನಿಮ್ಮ ಮಗನ ಹಕ್ಕಿನ ಪಾಲಿನಲ್ಲಿ ಅವಳ ಮಕ್ಕಳಿಗೂ ಹಕ್ಕು ಇದ್ದರೂ ಅದನ್ನು ಆಶಿಸದೆ, ನಿಮ್ಮೊಡನೆ ಒಂದಿನಿತು ಸಹಾಯ ಕೇಳದೆ ತನ್ನ ಜೀವನವನ್ನು ಪರರ ಮನೆಯಲ್ಲಿ ಜೀತ ಮಾಡಿ ದಿನ ನೂಕುವುದು ನಿಮ್ಮ ದೃಷ್ಟಿಗೂ ಸಹನೆಯಾಗಲಿಲ್ಲ. ಬದಲಾಗಿ ಅವಳಿರುವ ಮನೆಯ ಹರಾಜ ಎಂಬ ನೆವದಿಂದ ಬೀದಿಯ ಬಸವಿ ಮಾಡಬೇಕೆಂಬ ತಂತ್ರವಲ್ಲವೆ? ನಾನು ಯಾರೆಂದು ಭಾವಿಸಿದಿರಿ. ಆ ಮನೆಯ ಯಜಮಾನನಾಗಿದ್ದ ರಂಗಪ್ಪನ ಮಗ ಮಾದಣ್ಣ ವಾರೀಸದಾರ ತಿಳಿಯಿತೇ! ನೀವು ಹಣಕ್ಕೆ ಇಷ್ಟೆಲ್ಲಾ ಕಣ್ಣು ಮುಚ್ಚಾಲೆಯ ಆಟ ಮಾಡಿದ್ದಲ್ಲವೆ? ಇನ್ನು ನಿಮ್ಮಿಂದ ಅವಳಿಗೆ ಬರುವ ಹಕ್ಕಿನಲ್ಲಿ ಏನಾದರೂ ಸಿಗುತ್ತದೋ ಎಂದು ನೋಡುತ್ತೇನೆ. ಹುಂ, ಹೊರಡಿ ಮುಂದಿನ ಅಂಕಕ್ಕೆ ಸಿದ್ಧರಾಗಿರಿ"ಎಂದನು. ಕೋಪವು ಮುಖದಲ್ಲಿ ಉರಿದೇಳುತ್ತಿತ್ತು. ಧ್ವನಿಯಲ್ಲಿ ಸಿಡುಕಿನ ಏರು ಕಂಡು ಬರುತ್ತಿತ್ತು. ಪಟೇಲನೂ ಮಾವನೂ ನಡುಗಿದರು. ಇಬ್ಬರೂ ಕಂಗೆಟ್ಟರು. ಮುಖವು ಕಪ್ಪಿಟ್ಟಿತು. ಏನೋ ಮಾತಾಡಬೇಕೆಂದು ಹೋಗಿ ಬಾಯಿ ಬಾರದೆ ಕೈ ಜೋಡಿಸಿದರು. ಕಣ್ಣಿನಲ್ಲಿ ದೈನ್ಯತೆ ಮೂಡಿತು. ಅವರ ಸ್ಥಿತಿಯನ್ನು

(೧೧ನೇ ಪುಟಕ್ಕೆ ಮುಂದುವರಿದಿದೆ.)

ಚೀನಾದಲ್ಲಿ ಒಂದು ಘಳಿಗೆ

ಆಗಾಗ ಗಲಾಟೆಗಳನ್ನೊಪ್ಪಿಸುತ್ತಿದ್ದ ದಂಗೆ ನಾಯಕರನ್ನು ಚಿಯಾಂಗ್ ಕೈಶೇಕರು ಸಂಪೂರ್ಣ ಅಡಗಿಸಿ ಬಿಟ್ಟು ಚೀನಾವನ್ನು ಒಂದು ಅಖಂಡ ರಾಷ್ಟ್ರವಾಗಿ ಐಕ್ಯಗೊಳಿಸಿರುವರು. ಕೊಮ್ಯುನಿಷ್ಟರೊಡನೆ ಸಹಕರಿಸಿ ನಡೆಯುವ ಸಹನಾ ಶಕ್ತಿಯು ಅವರಲ್ಲುಂಟಾಗಲು ಈ ತನಕ ಅವಕಾಶಗಳು ದೊರಕಲಿಲ್ಲವೆಂದು ಹೇಳಬಹುದು.

ಜಪಾನೀಯ ಪಥಕಗಳು ಶಾಂಘಾಯಿಯಲ್ಲಿ ಇಳಿದಾಗ, ಕರಾವಳಿಯ ಪ್ರದೇಶದ ಚೀನಿಯರಿಗೆ ಚೀನಾದ ಒಳಗಿನ ಪ್ರದೇಶಗಳ ಅರಿವೆಯಿರಲಿಲ್ಲ. ಆ ಯುದ್ಧದಿಂದ ಅಲ್ಲಿ ಎಲ್ಲವೂ ಬದಲಾಗಿಬಿಟ್ಟಿತು. ಪ್ರಜಾಸತ್ತೆಯ ರಕ್ಷಣೆಗಾಗಿ ಚೀನಾದ ಕರಾವಳಿಯಲ್ಲಿ ವಾಸವಾಗಿರುವ ೫೦ ಮಿಲಿಯಗಳಿಗೆ ಮಿಕ್ಕಿದ ಜನರು ಚೀನಾದೊಳಗೆ ನಡೆದುಬಿಟ್ಟರು—ಬಹಳ ಸಮಯದಿಂದ ನಿದ್ರಿತವಾಗಿದ್ದ ಚೀನಾದ ಅಂತರ್ಯದ ಪ್ರದೇಶದೊಳಗೆ ಹುರುಪಿನ ಚಟುವಟಿಕೆಗಳನ್ನು ಹೊರಡಲು ಕಾರಣರಾದರು. ಒಳಗೆ ನಡೆದ ಅವರು ಅಲ್ಲಿಗೆ ತಮ್ಮ ಶಾಲೆಗಳನ್ನೂ, ಕಾಲೇಜುಗಳನ್ನೂ ಮತ್ತು ಯುದ್ಧ ಸಮಯದ ಸರಕಾರವನ್ನೂ ಸ್ಥಾಪಿಸಿದರು. ಸಣ್ಣ ತರದಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದರು.

ಚೀನಾದ ಮುಕ್ಕಾಲಂಶ ದೊಡ್ಡ ಕಾಡುಗಳಿಂದಲೂ ಬಯಲುಗಳಿಂದಲೂ ಕೂಡಿದ ಪರ್ವತಮಯ ಪ್ರದೇಶವು.

ಲಾಭಗಡುಕತನದಿಂದ ವಸ್ತು ಒಡವೆಗಳನ್ನು ಕೂಡಸಿಟ್ಟು ಅವುಗಳನ್ನು ಕಳ್ಳ ಸಂತೆಯಲ್ಲಿ ಅತಿರೇಖ ದರಗಳಲ್ಲಿ ವಿಕ್ರಯಿಸಿದುದಕ್ಕೆ ಮರಣ ಶಿಕ್ಷೆಯನ್ನು ವಿಧಿಸುವ ಕ್ರಮಗಳು ಚೀನಾದ ಕೌಮಿಂಗ್ ಟಾಂಗ್ ಸರಕಾರದಿಂದ ಜ್ಯಾರಿಮಾಡಲಾಗಿವೆ.

ಭಹೀರ್ ದೇಶ ಸಾಮಾನುಗಳನ್ನೆ ಹೆಚ್ಚಾಗಿ ಬಳಸುವ ಹವ್ಯಾಸವು ನಮ್ಮಲ್ಲುಂಟಾದುದರಿಂದ, ಕಳ್ಳಸಂತೆಯ ಲಾಭಗಡುಕರಿಗೆ ಅಪಾರ ಲಾಭ ಸಾಧಿಸಲು ಅನುಕೂಲವಾಯಿತು. ಸ್ವದೇಶಿ ಒಡವೆಗಳನ್ನೆ ಪ್ರೋತ್ಸಾಹಿಸುವ ಅಭ್ಯಾಸ ಬಳೆಸಿಕೊಂಡರೆ 'ಕಳ್ಳಸಂತೆ'ಗಳನ್ನು ಯಶಸ್ವಿಯಾಗಿ ಪ್ರತಿಭಟಿಸಬಹುದು. ಹಳ್ಳಿಗಳ ಕೈವೃತ್ತಿಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು, ಹಳ್ಳಿ ಕೈಗಾರಿಕೆಗಳೂ ದೃಢವಾಗಿ ಸ್ಥಾಪನೆಗೊಳ್ಳುವಂತೆ ಮಾಡಲು ಇದೆ ತಕ್ಕುದಾದ ಸಮಯ. ಚೀನಾವು ಹೊರದೇಶಗಳೊಡನೆ ತನ್ನ ಸ್ಪರ್ಶವನ್ನು ಜಪಾನಿಯರು ತಮ್ಮ ಕರಾವಳಿಯನ್ನು ಹಿಡಿದ ನಿಮಿತ್ತ ಕಳೆದುಕೊಂಡುದರಿಂದ, ಆ ವರೆಗೆ ತಮ್ಮ ನಿತ್ಯ ಬಳಕೆಯ ಅನೇಕ ಒಡವೆಗಳಿಗಾಗಿ ಅನ್ಯ ದೇಶಗಳ ಮೇಲೆ ಹೊಂದಿಕೊಂಡಿರುವ ಚೀನಾವು ಹಳ್ಳಿ ಕೈವೃತ್ತಿಗಳನ್ನು ಪ್ರೋತ್ಸಾಹಿಸಿಯೆ, ಆ ಕೊರತೆಯನ್ನು ನೀಗಿಸಿಕೊಂಡರೂ ಮಾತ್ರವಲ್ಲದೆ, ಸ್ವಾವಲಂಭನೆ ರಹಸ್ಯವನ್ನು ಅರಿತುಕೊಂಡರು ಈಗ ಚೀನಾದ ಯುದ್ಧ ಯತ್ನಗಳಿಗೆ ಬೇಕಾದ ಪೂರೈಕೆಯ ಅಧಿಕಾಂಶವೂ ಈ ಹಳ್ಳಿ ವೃತ್ತಿಗಳಿಂದಲೆ ಸಿದ್ಧವಾಗುತ್ತಿದೆ.

ಹಿಂದೂದೇಶದಲ್ಲಿ ಸದ್ಯದ ಆಹಾರ ಸಮಸ್ಯೆಯು ಉಂಟಾದುದು ಸಂಚಾರದ ಅನುಕೂಲ ಸರಿಯಾಗಿ ಲಭಿಸದುದರಿಂದ. ಸಂಚಾರದ ಅನಾನುಕೂಲತೆಗಳ ದೆಸೆಯಿಂದ ಸಿಂಧದ ಒಳನಾಡುಗಳಲ್ಲಿ ತುಂಬಾ ಅಕ್ಕಿಯು ದಾಸ್ತಾನುಯಿರುವುದೆಂದೂ, ಹಾಗೆನೆ ಪಂಜಾಬದಲ್ಲೂ ತುಂಬಾ ಗೋದಿಯು ಉಪಯೋಗವಿಲ್ಲದೆ ದಾಸ್ತಾನು ಬಿದ್ದಿದೆ ಎಂದು ತಿಳಿದುಬಂದಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ಚೀನಾದಲ್ಲೂ ಇದೇ ತರದ ಕಾರಣಗಳಿಂದ, ಆಹಾರ ಸಮಸ್ಯೆಗಳು ಆಗಿಂದಾಗ್ಗೆ ಉಂಟಾಗುತ್ತವೆ. ಸಂಚಾರದ ಅನುಕೂಲಗಳನ್ನು ಆದಷ್ಟು ಕಲ್ಪಿಸಿಕೊಂಡು, ಆಹಾರದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು, ಹಿಂದೂದೇಶದಲ್ಲೂ, ಚೀನಾದಲ್ಲೂ ಸಂಬಂಧಪಟ್ಟ ಅಧಿಕಾರಿಗಳ ಯತ್ನಗಳು ನಡೆಯುತ್ತಿವೆ. ಆದರೆ ಯುದ್ಧದ ಸಮಯವಲ್ಲವೆ?

ಚೀನಾದಲ್ಲಿ ಉತ್ತರ ಪ್ರದೇಶಗಳಲ್ಲಿ ಕಲ್ಲಿದ್ದಲು, ಎಣ್ಣೆ, ಕಬ್ಬಿಣ ಇತ್ಯಾದಿ ಖನಿಜಗಳ ಧಾರಾಳ ಸಂಗ್ರಹಗಳಿವೆ. ಆಧುನಿಕ ಕೈಗಾರಿಕೆಗಳಿಗೆ ಚೇಕಾದ ಇತರ ಕಾರಣ ಸಾಮಗ್ರಿಗಳು ಅಲ್ಲಿ ಭೂಗರ್ಭದೊಳಗೆ ಇವೆ. ಈ ಕಾರಣದಿಂದಲೆ ಚೀನಾವು ಹಲವರ ಆಸಕ್ತಿಗೆ ಒಳಗಾಗಿರುವುದು.

ಕಬ್ಬಿಣದ ನೇಗಿಲು ಚೀನಾದಲ್ಲಿ ಅತಿ ಪುರಾತನ ಕಾಲದಲ್ಲೂ ಉಪಯೋಗದಲ್ಲಿತ್ತು. ಚೀನಾವು ಕಬ್ಬಿಣದ ನೇಗಿಲುಗಳನ್ನೆ ಉಪಯೋಗಿಸುತ್ತಿರುವ ಪಾಶ್ಚಾತ್ಯದೇಶಗಳಲ್ಲಿ ಮರದ ನೇಗಿಲುಗಳು ಉಪಯೋಗಿಸಲಾಗುತ್ತಿದ್ದವು.

ಚಿತ್ರಗಳ ಮುದ್ರಣದ ಉಪಾಯಗಳು ಚೀನಿಯರು ಬಹಳ ಹಿಂದೆಯೆ ಕಂಡುಹಿಡಿದ್ದರು.

ಚೀನಾದ ರೇಶ್ಮೆ ವ್ಯವಸಾಯ ಅತಿ ಹಿಂದಿನ ಕಾಲದ್ದು. ಚೀನಾದ ರೇಶ್ಮೆಯು ಜಗತ್ಪ್ರಸಿದ್ಧವಾದುದು.

ಚೀನಾದ ಹಳ್ಳಿಗಳಲ್ಲಿ ಈಗಲೂ, ಹಣದ ಸ್ಥಳದಲ್ಲಿ ಹಳ್ಳಿಯ ವೈದಾಸ್ತುಗಳನ್ನು ಉಪಯೋಗಿಸುವ ರೂಢಿಯುಲ್ಲಿದೆ. ರೈತನು ಸರಕಾರ ಸಲ್ಲುವ ಕಂದಾಯವನ್ನು ಧಾನ್ಯದ ರೂಪದಲ್ಲೇ ಸಲಾಯಿಸಬಹುದು. ಧಾನ್ಯವನ್ನು ಕೊಟ್ಟು ತನ್ನ ಆವಶ್ಯಕತೆಗಳನ್ನು ಪಡೆಯಬಹುದು. ಈ ಕಾರಣದಿಂದ ದೇಶದ ಹಣದ ಮೌಲ್ಯದ ಏರಿಳಿತಗಳು ನಡೆಯುವುದಾದರೂ, ಚೀನಾದ ರೈತನ ಸ್ಥಿತಿಯು ಮೇಲೆ ಹೆಚ್ಚಿನ ಪರಿಣಾಮಗಳು ಉಂಟಾದವು. ಈ ಕ್ರಮದಿಂದ ಹಳ್ಳಿಗರ ಸಾಂಪತ್ತಿಕ ಸ್ಥಿತಿಯು, ಒಂದು ಸ್ಥಿಮಿತದಲ್ಲಿಡಲ್ಪಟ್ಟಿದೆ. ಹಣದ ಬೆಲೆಯು ಉಬ್ಬಿದ ಈ ಸಮಯದಲ್ಲಿ, ಈ ಕ್ರಮಗಳನ್ನು ನಮ್ಮ ಹಳ್ಳಿಗಳಲ್ಲೂ ಜ್ಯಾರಿಗೆ ತರಬಾರದೆ?

ಕಬ್ಬಿಣವಿರುವ ಅದರುಗಳು ಅತಿ ದೊಡ್ಡದಾದ ಶೇಖರವು ಚೀನಾದಲ್ಲಿದೆ. ಆದರೆ ಅವುಗಳಿಂದ ಕಬ್ಬಿಣವನ್ನು ಬೇರ್ಪಡಿಸಿ ತೆಗೆಯುವ ಕಾರ್ಖಾನೆಗಳು ಅಲ್ಲಿ ಹೆಚ್ಚು ಸ್ಥಾಪಿಸಲ್ಪಡಲಿಲ್ಲ.

ಈಗ ಚೀನಾದ ಎಲ್ಲಾ ಕೈಗಾರಿಕೆಗಳು ಸರಕಾರದ ಅಂಕಿತದೊಳಗೆ ನಡೆಯುತ್ತಿವೆ. ಇದೂ ಅಲ್ಲದೆ ಅನೇಕ ಕೈಗಾರಿಕೆಗಳು ಸರಕಾರದಿಂದಲೇ ನಡೆಯಿಸಲಾಗುತ್ತಿವೆ.

ಚೀನಾದಲ್ಲಿ ಜಪಾನಿಯರಿಗೆ ವಿರೋಧವಾಗಿ 'ಗುರಿಲ್ಲಾ' ಯುದ್ಧವು ಮಾತ್ರವಲ್ಲ, ಯುದ್ಧ ಯತ್ನಗಳಿಗೆ ಬೇಕಾದ ಸಲಕರಣೆಗಳನ್ನು ಸಿದ್ಧಪಡಿಸುವ ಕೈಗಾರಿಕೆಗಳನ್ನೂ ಗುರಿಲ್ಲಾ ಕ್ರಮದಲ್ಲಿ ನಡೆಯಿಸಲಾಗುತ್ತಿದೆ. ಜಪಾನಿಯರ ಕೈಗಳಿಂದ ತಪ್ಪಿಸಿಕೊಳ್ಳಲು, ಈ ಕೈಗಾರಿಕೆಗಳನ್ನು ಸ್ಥಳಸ್ಥಳದಿಂದ ಒಯ್ಯಲಾಗುತ್ತಿವೆ. ಯುದ್ಧಯತ್ನಕ್ಕೆ ಬೇಕಾದ ವಸ್ತು ಒಡವೆಗಳು ಇವುಗಳಿಂದ ಸಿದ್ಧವಾಗುತ್ತಿವೆ.

ಜಪಾನಿಯರು ಕಾಲಿಟ್ಟ ಪ್ರದೇಶಗಳಿಂದ, ದೇಶಪ್ರೇಮಿಗಳಾದ ಪ್ರಜಾಸತ್ತಾವಾದಿ ಚೀನಿಯರ ಪರಿಶ್ರಮದಿಂದ, ಮಿಲಿಯಗಟ್ಲೆ ಟನ್ನು ಭಾರದ ಕೈಗಾರಿಕೆಗಳಿಗೆ ಸಂಬಂಧಪಟ್ಟ ಯಂತ್ರೋಪಕರಣಗಳು, ಚೀನಾದ ಒಳಪ್ರದೇಶಗಳಿಗೆ ಒಯ್ಯಲಾಗಿವೆ. ಅಲ್ಲೀಗ ನಡೆಯುತ್ತಿರುವ 'ಗುರಿಲ್ಲಾ ಕೈಗಾರಿಕೆ' ಕ್ರಮಗಳಿಂದ ನಿತ್ಯವೂ ಕೈಗಾರಿಕೆಗಳಿಗೆ ಸಂಬಂಧಪಟ್ಟ ಭಾರದ ಯಂತ್ರಗಳು ಅತ್ತಿತ್ತ ಒಯ್ಯಲಾಗುತ್ತಿವೆ. ಸಹಕಾರಿ ಸೂತ್ರಗಳ ಮೇಲೆ ಈ ಕೈಗಾರಿಕೆಗಳು ವ್ಯವಸ್ಥೆಪಡಿಸಲಾಗಿವೆ. ಯುದ್ಧ ಕೊನೆಗೊಂಡ ಮೇಲೂ ಪುನರ್ರಚನೆ ಮತ್ತು ಉದ್ಧಾರಕ್ಕಾಗಿ, ಇದೆ ಕ್ರಮಗಳು ಮುಂದುವರಿಸಲಾಗುವವೆಂದೂ ಹೇಳಲಾಗಿದೆ.

ಸರಿಯಾದ ಅವಕಾಶ, ಸ್ವಾತಂತ್ರ್ಯ ಇತ್ಯಾದಿಗಳು ದೊರಕಿದರೆ ಸೋವಿಯಟ್ ರಶ್ಯದಂತೆ, ಅಥವಾ ಅಮೇರಿಕಾದ ಪ್ರಗತಿಯನ್ನು ಹಿಮ್ಮೆಟ್ಟಿಸುವ ಪ್ರಗತಿಯನ್ನು ಸಾಧಿಸಿಕೊಳ್ಳುವರೆ ಚೀನಾದೊಳಗೆ ಸಕಲ ಅನುಕೂಲತೆಗಳಿವೆ. ಅಲ್ಲಿ ಭೂಗರ್ಭದೊಳಗೆ ಇನ್ನೂ ಸಹಸ್ರಾಧಿ ವರ್ಷಗಳಿಗೆ ಬೇಕಾಗುವಷ್ಟು ಎಣ್ಣೆ, ಕಲ್ಲಿದ್ದಲ್ಲು, ತಾಮ್ರ, ಶೀಸ, ಇತ್ಯಾದಿ ಅನೇಕ ಉಪಯುಕ್ತ ಲೋಹಗಳೂ, ಯಾಕೆ—ಭಂಗಾರವೂ ಕೂಡ, ಧಾರಾಳ ಪ್ರಮಾಣದಲ್ಲಿವೆ. ಈ ಅನುಕೂಲತೆಗಳನ್ನು ಉಪಯೋಗಿಸಿಕೊಂಡು, ಚೀನಾವನ್ನು ಉದ್ಧರಿಸಿ, ಒಂದು ಆದರ್ಶ ಪ್ರಜಾಸತ್ತಾತ್ಮಕ ರಾಷ್ಟ್ರವನ್ನಾಗಿ ಮಾಡುವ ಹೆಬ್ಬಯಕೆಯು, ಚಿಯಾಂಗರದು. ಚೀನಾದ ಈ ಅನುಕೂಲತೆಗಳ ಮೇಲೆ ಇತರ ಸ್ವಾರ್ಥಪರ ರಾಷ್ಟ್ರಗಳು, ಮುಖ್ಯ ಜಪಾನು, ದೃಷ್ಟಿ ಹೊರಳಿರುವುದರಿಂದ, ಚೀನಾದ ಉದ್ಧಾರ ಮಾರ್ಗದಲ್ಲಿ ಅನೇಕ ತೊಡರುಗಳು ಉಂಟಾಗುತ್ತಿವೆ. ಇವುಗಳಲ್ಲಿ ನಿವಾರಿಸಿ ಬಿಟ್ಟು ಮುನ್ನಡೆದು ಬಿಡುವುದೆ ಕೌಮಿಂಗ್ ಟಾಂಗ್ ಸರಕಾರದ ಗುರಿಯಾಗಿರುವುದು. ಸದ್ಯದ ಅಲ್ಲೋಲಕಲ್ಲೋಲ ಪರಿಸ್ಥಿತಿಯಿಂದ ಚೀನಾವು ಯಾವ ರೂಪದಲ್ಲಿ ಮೇಲಕ್ಕೆ ಬರುವುದೆಂದೂ ನೋಡಲಿದೆ. ಹೊರ ರಾಷ್ಟ್ರಗಳನೇಕ ಅಲ್ಲಿ ಕಾಲಿಟ್ಟರೂ, ಚೀನಾವು ಸ್ವತಂತ್ರ ರಾಷ್ಟ್ರವೆ ಇದೆ.

ವಿರಾಮಕಾಲದಲ್ಲಿ ಹತ್ತಿಯಿಂದ ನೂಲುವುದು ಚೀನಿಯ ಜನರಲ್ಲಿ ಒಂದು ರೂಢಿಯಾಗಿರುವುದು. ಹೀಗೆ ಸಿದ್ಧವಾದ ನೂಲು ಕೆಲವು ನಿಯಮಿತ ದಿವಸಗಳಲ್ಲಿ ಮಾರಾಟವಾಗುವುದು. ನೂಲಿನ ಮೌಲ್ಯ ಹಣದ ರೂಪದಲ್ಲೂ, ಹತ್ತಿರೂಪದಲ್ಲೂ ದೊರಕುವುದು.

ಚೀನಿಯರಿಗೆ ಜಪಾನಿಯರ ಬಾಂಬಿನ ದಾಳಿಯನ್ನು ಅತಿ ಶಾಂತಚಿತ್ತರಾಗಿ ವ್ಯವಸ್ಥಿತ ರೀತಿಯಲ್ಲಿ ಎದುರಿಸುವುದರಲ್ಲಿ ಅವರು ತುಂಬಾ ತರಬೇತಾಗಿರುವರು.

ಹ್ಯಾಸ್ಕೂಲುಗಳಿಂದ ನೇರಾಗಿ ಯುನಿವರ್ಸಿಟಿ ಕ್ಲಾಸುಗಳನ್ನು ಸೇರುವ ಕ್ರಮ ಚೀನಾದಲ್ಲಿಲ್ಲ. ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಶಿಕ್ಷಣವನ್ನು ಪಡೆಯಲು ಅರ್ಹರಿರುವರೊ ಎಂದು ನೋಡಲು, ಹ್ಯಾಸ್ಕೂಲು ಅವಧಿಯು ಮುಗಿದು ಹ್ಯಾಸ್ಕೂಲು ಪರೀಕ್ಷೆಯ ನಂತರ ಅವರ ಪರೀಕ್ಷೆಯಾಗಲಿದೆ. ಈ ಪರೀಕ್ಷೆಯ ಕ್ರಮಗಳು ಬಹಳ ಕಠಿಣವಿದ್ದು, ವಿಶ್ವವಿದ್ಯಾಲಯದ ವ್ಯಾಸಂಗವನ್ನು ನಡೆಯಿಸುವರೆ ಯೋಗ್ಯತೆಯುದ್ದವರು ಮಾತ್ರ ತೇರ್ಗಡೆ ಹೊಂದಿಕೊಂಡು ಮೇಲಕ್ಕೆ ಹೋಗುತ್ತಾರೆ. ಈ ಪರೀಕ್ಷೆಗೆ ಕೂತವರಲ್ಲಿ ಪಾಸಾಗುವವರ ಸಂಖ್ಯೆಯು ಯಾವೊಂದು ವರ್ಷದಲ್ಲಾದರೂ ಶೇ. ೧೫ಕ್ಕೆ ಮಿಕ್ಕುವುದಿಲ್ಲ. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗಳು, ತಮ್ಮ ಯೋಗ್ಯತೆಗಳಿಗೆ ತಕ್ಕುದಾದ ಇತರ ಕಸಬುಗಳನ್ನು ಆರಿಸಿ, ಅವುಗಳಲ್ಲಿ ತರಬೇತುಹೊಂದಲು ವ್ಯವಸ್ಥೆಗಳು ಮಾಡಲಾಗಿವೆ.

ಚೀನಾದ ಶಿಕ್ಷಣಕ್ರಮವು ಅಮೇರಿಕನ್ ಕ್ರಮದಂತಿದೆ. ವಿದ್ಯಾರ್ಥಿಯ ತಿಳುವಳಿಕೆಯು ಬಳೆದು ಆತನು ಸಮಾಜದ ಉಪಯುಕ್ತ ಸದಸ್ಯನಾಗುವ ತರದಲ್ಲಿ ಅಲ್ಲಿ ವಿದ್ಯಾಭ್ಯಾಸವು ನಡೆಯುತ್ತದೆ. ಕೆಲಸಕ್ಕೆ ಬಾರದ ಅಲ್ಲಸಲ್ಲದ ವಿಷಯಗಳನ್ನು ವಿದ್ಯಾರ್ಥಿಗಳ ತಲೆಗಳಲ್ಲಿ ತುರುಕಿಸುವ ಪದ್ಧತಿಯು ರದ್ದುಮಾಡಲಾಗಿದೆ. ದೇಶಕಲ್ಯಾಣ ದೃಷ್ಟಿಯಿಂದ, ಉತ್ತಮ ಸಮಾಜ ಕಲ್ಪನೆ ದೃಷ್ಟಿಯಿಂದ, ಸ್ವಾತಂತ್ರ್ಯದ ಮತ್ತು ಪ್ರಜಾಸತ್ತೆಯ ನಿಯಮಗಳಿಗೆ ತಕ್ಕುದಾದ ವಿದ್ಯಾಕ್ರಮಗಳು ಅಲ್ಲಿ ರೂಢಿಗೆ ತರಲಾಗಿವೆ.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಪ್ರಚಲಿತ ಸಮಾಚಾರಗಳು

ಪಶ್ಚಿಮರಂಗದಲ್ಲಿ ಅಮೇರಿಕನ್ ನಾಯಿಯೊಂದು ಭಾರಿ ಕೆಲಸ ನಡೆಯಿಸಿಬಿಟ್ಟಿತು. ನಾಲ್ಕು ಜನ ಜರ್ಮನ್ ಸೈನಿಕರನ್ನು ಸೆರೆಹಿಡಿಯಿತು. ಅದಕ್ಕಾಗಿ ಅಭಿನಂದಿಸಲ್ಪಡುವಾಗ ಜನರಲ್ ಐಸನ್ ಹೋವರ್‌ರವರ ಕೈಯನ್ನು ಕಚ್ಚಿಬಿಟ್ಟಿತು! ಎಷ್ಟಾದರೂ ನಾಯಲ್ಲವೆ.

* * *

ಜರ್ಮನಿಯಲ್ಲಿ ಸದ್ಯದ ಪರಿಸ್ಥಿತಿಯ ಎದುರು ದೇಶರಕ್ಷಣೆಗಾಗಿ ಸ್ತ್ರೀಯರು, ಮಕ್ಕಳುಮರಿಗಳು, ಯುವಕರು ಎಲ್ಲರೂ ಸಮರ ಶ್ರಮ ವಹಿಸಿರುವರು. ಇಷ್ಟೆ ಅಲ್ಲ. ಕಾರಾಗ್ರಹಗಳಲ್ಲಿರುವ ಭಯಂಕರ ಕ್ರಿಮಿನಲ್ ಕೈದಿಗಳೂ ಕೂಡ ಯುದ್ಧರಂಗಕ್ಕೆ ಕಳುಹಿಸಲ್ಪಟ್ಟಿರುವರಂತೆ!

* * *

ನೆಹರುಗಳ ಬಿಡುಗಡೆಯಾಗಬೇಕೆಂದು ಹಿಂದೂದೇಶದಲ್ಲಿ ಮಾತ್ರವಲ್ಲ, ಇಡಿ ಜಗದಲ್ಲೆಲ್ಲಾ ಚಳವಳವು ಪ್ರಾರಂಭವಾಗಿರುವುದು. ಪ್ರಸಿದ್ಧ ಆಂಗ್ಲ ಬರಹಗಾರರಾದ ಎಚ್. ಜಿ. ವೆಲ್ಸ್‌ರು, ಮಿತ್ರರು ಪ್ರಜಾಸತ್ತೆಗಾಗಿ ಹೋರಾಡುತ್ತಿರುವಾಗ ನೆಹರುಗಳಂತ ಉಚ್ಚ ಪ್ರಜಾಸತ್ತವಾದಿಗಳು ಸೆರೆಯಲ್ಲಿರುವುದು ಪ್ರಜಾಸತ್ತಾ ಕಾರಣಕ್ಕೆ ಕಳಂಕ ಪ್ರಾಯವು, ಅವರ ಬಿಡುಗಡೆಯಾಗಲೇ ಬೇಕೆಂದು ಅಭಿಪ್ರಾಯವನ್ನು ಸೂಚಿಸಿ, ಒಂದು ಪತ್ರವನ್ನು ಪತ್ರಿಕೆಗಳ ಮೂಲಕ ಪ್ರಚುರಪಡಿಸಿರುವರು.

* * *

ಹಾಲಿನ ಮಳೆಯ ಕುರಿತು ಕೆಲವು ಮಕ್ಕಳ ಕಥೆಯಲ್ಲಿ ಕೇಳಿರಬಹುದು. ಆದರೆ ಮೊನ್ನೆ ದಿನ ಮುಂಬಾಯಿಯ ಸರಕಾರೀ ಭವನಕ್ಕೆ ತೆರಳುವ ರಸ್ತೆಯ ಚರಂಡಿಗಳಲ್ಲಿ ಟನ್ನುಗಟ್ಲೆ ಹಾಲು ಹರಿದು ಹೋಯಿತು. ಆಕಳುಗಳ ಹಾಲು ಶಿಶುಗಳಿಗೆ, ಗರ್ಭಿಣಿ ಸ್ತ್ರೀಯರಿಗೆ ಮತ್ತು ಅನಾರೋಗ್ಯ ಜನರಿಗಾಗಿ ಮಾತ್ರ ಹಂಚಲ್ಪಡಬೇಕೆಂದೂ, ಅದರ ದರವನ್ನು ಕಂಟ್ರೋಲ್ ಮಾಡಿಯೂ ಹೊರಟ ಸರಕಾರಿ ಹುಕುಮಿನ ಪ್ರತಿಭಟನೆಯಾಗಿ. ಮುಂದಕ್ಕೆ ಸರಕಾರವೆ ಹಾಲಿನ ಪೂರೈಕೆಯ ಕೆಲಸವನ್ನು ಕೈಗೊಳ್ಳಬಹುದಂತೆ.

* * *

ಭೂಲಾಬಾಯಿ ದೇಸಾಯಿಗಳು ಸದ್ಯದ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಗೆಹರಿಸಲು ವೈಸ್ರಾಯರೊಡನೆಯೂ, ಲೀಗ್ ಪಕ್ಷದವರೊಡನೆಯೂ ವ್ಯವಹರಿಸುತ್ತಿದ್ದಾರೆಂದು ತಿಳಿಯಲಾಗಿತ್ತಷ್ಟೆ. ಈ ವ್ಯವಹಾರಗಳಿಗೆ ದೇಸಾಯರದೆ ಉಮೇದು ಹೊರತು, ಅದರಲ್ಲಿ ಗಾಂಧೀಜಿಯರ ಅಥವಾ ಕಾಂಗ್ರೆಸ್ಸಿನ ಸ್ಪರ್ಶವಿಲ್ಲವೆಂದೂ ತಿಳಿದುಬಂದಿದೆ.

* * *

ಹಿಂದೂದೇಶದ ಸಮಸ್ಯೆಗಳನ್ನು ಬಗೆಹರಿಸುವರ ಲಂಡನಿನ ಇಂಡಿಯಾ ಆಫೀಸಿನವರು ತಮ್ಮದೆ ಉಪಾಯಗಳ್ನು ಕಲ್ಪಿಸುವುದರಲ್ಲಿದ್ದಾರೆಂದು, ಅತ್ತ ಕಡೆಗಳಿಂದ ಬಂದ ಕೆಲವು ವಾರ್ತಾ ವರದಿಗಳಿಂದ ಊಹಿಸಬೇಕಾಗಿಯದೆ. ಈ ಸಂಬಂಧ ನಮ್ಮಲ್ಲಿನ ಪರಿಸ್ಥಿತಿಯನ್ನು ಅರಿತುಕೊಂಡು, ನಿವೇಧನೆ ಮಾಡಿಕೊಳ್ಳಲು ಪಾರ್ಲಿಮೆಂಟಿನ ಸದಸ್ಯರಿಂದೊಡಗೂಡಿದ ಒಂದು ಶಿಷ್ಠಮಂಡಳವನ್ನು ಇತ್ತಕಡೆಗೆ ಕಳುಹಿಸುವ ವ್ಯವಸ್ಥೆಗಳಾಗುತ್ತಿವೆ ಎಂದು ಹೇಳಲಾಗಿದೆ. ಅಲ್ಲದೆ ನಮಗಾಗಿ ರಾಜ್ಯಾಂಗ ಶಾಸನ ಒಂದರ ರಚನೆಕಾರ್ಯ ಸಂಬಂಧ ವೈಸ್ರಾಯ ಬೋಧಕ ಮಂಡಳದ ನಾಲ್ವರು ಸದಸ್ಯರು ಲಂಡನಿಗೆ ತೆರಳಬಹುದೆಂದೂ ಹೇಳಲಾಗಿದೆ. ನಮ್ಮ ಹಳ್ಳಿಗಳ ಕುರಿತು ಇಂಡಿಯಾ ಆಫೀಸು ಕುತೂಹಲವಂತವಾಗಿದೆ.

* * *

ಪಂಜಾಬದಲ್ಲಿ ಸೆರೆಸೇರಿಲ್ಪಟ್ಟ ಎಸೆಂಬ್ಲಿಯ ಕಾಂಗ್ರೆಸ್ ಸದಸ್ಯರ ಬಿಡುಗಡೆಯ ಕುರಿತು ಆತುರವು ಹೆಚ್ಚು ಅದರ ನೆರೆ ಪ್ರಾಂತ್ಯವಾದ ವಾಯುವ್ಯ ಸರಹದ್ದು ಪ್ರಾಂತ್ಯದಲ್ಲಿ ಸೆರೆಸೇರಿಸಲ್ಪಟ್ಟ ಎಸೆಂಬ್ಲಿಯ ಕಾಂಗ್ರೆಸ್ ಸದಸ್ಯರನ್ನು ಸೆರೆಯಲ್ಲೆ ಇಡುವ ಕುರಿತು ಮಾತ್ರವಲ್ಲ, ಹೊರಗಿದ್ದವರಲ್ಲಿ ಕೆಲವರನ್ನು ಸೆರೆಸೇರಿಸುವ ಆತುರವು ಕಾಣಿಸುತ್ತಿದೆ. ಪಂಜಾಬಿನ ಆತುರವು ಸದ್ಯದ ಯೂನಿಯನಿಸ್ಟ್ ಸರಕಾರದ ರಕ್ಷಣೆಗಾಗಿ ಸರಹದ್ದಿನ ಆತುರವು ಲೀಗ್ ಸರಕಾರದ ರಕ್ಷಣೆಗಾಗಿ.

* * *

ಸೆಕ್ಷನ್ ೯೩ ಜ್ಯಾರಿಯಲ್ಲಿರದ ಪ್ರಾಂತ್ಯಗಳಲ್ಲಿ ಒಂದಾದ ಸಿಂಧದಲ್ಲಿ ಸ್ಥಾಯಿಯಾದ ಒಂದು ಸರಕಾರದ ಸ್ಥಾಪನೆಮಾಡುವ ಕೆಲಸವು ದೊಡ್ಡದೊಂದು ಸಮಸ್ಯೆಯಾಗಿ ಬಿಟ್ಟಿದೆ. ಲೀಗ್ ಸರಕಾರದ ಭದ್ರತೆಗಾಗಿ ಲೀಗ್ ನಾಯಕ ಜಿನ್ನಾರವರು ಬಹಳ ಯತ್ನ ಪಡುತ್ತಿರುವರು. ಪಾಳ್ಯದೊಳಗೆ ಕಚ್ಚಾಟವೆದ್ದಿದೆ.

* * *

ಜರ್ಮನ್ ಸೇನಾಬಲವು ಅಜೇಯವಾದುದೆಂದು ಮೊದಲು ಹೇಳಲಾಗಿತ್ತು. ಅದನ್ನು ಸೋಲಿಸಿಬಿಟ್ಟು ಅಜೇಯವಾದುದೆಂಬ ಕೀರ್ತಿಯು ಈಗ ಮಿತ್ರರ ಸೇನಾಬಲಕ್ಕೆ ಒದಗಿದೆ. ಈ ಕೀರ್ತಿಯ ಹೆಚ್ಚಿನಂಶವು ರಶಿಯದ ಕೆಂಪು ಬಲ್ಲಕ್ಕೆ ಸಲ್ಲತಕ್ಕದು. ಈ ಅಜೇಯತನದಿಂದ, ಮುಖ್ಯವಾಗಿ ಕೆಂಪು ಸೇನೆಯ ಅಜೇಯತನದಿಂದಲೆ ಯುರೋಪದಲ್ಲಿ ಚಿರಸ್ಥಾಯಿಯಾದ ಶಾಂತಿಯು ಸ್ಥಾಪಿಸಲ್ಪಡುವಂತಾಗುವುದೆ?

* * *

ಸಾಮಾನ್ಯವಾಗಿ ಒಮ್ಮೆಗೆ ಒಬ್ಬಳು ಒಬ್ಬನೊಡನೆ ಮಾತ್ರ ವಿವಾಹವಾಗುವುದು ರೂಢಿಯು. ಡಿ'ಗೊಲೆಯವರು ಸದ್ಯಕ್ಕೆ ಸ್ಟೆಲೀನನೊಡನೆ ಕೈಜೋಡಿಸಿರುವರು. ಈ ಕಾರಣದಿಂದ ಅವರು ಮೊನ್ನೆ ರೂಸ್‌ವೆಲ್ಟರ ಆಮಂತ್ರಣವನ್ನು ನಿರಾಕರಿಸಿರಬಹುದು. ಅಥವಾ ತಮಗೂ ಚರ್ಚಿಲ್–ಸ್ಟೆಲೀನ್–ರೂಸ್‌ವೆಲ್ಟ ಮಂಡಳದಲ್ಲಿ ಸ್ಥಾನ ದೊರಕದಿದ್ದುದಕ್ಕೊ.

* * *

ರಶಿಯಾವು ಬ್ರಿಟನಿನೊಡನೆಯೂ, ಅಮೇರಿಕದೊಡನೆಯೂ ದೊಡ್ಡ ಸಾಲವನ್ನು ಕೇಳಿದ ವಾರ್ತೆಯು ಬಂದಿತ್ತಷ್ಟೆ. ಅಷ್ಟು ದೊಡ್ಡ ಸಾಲವನ್ನು ಕೊಡುವ ಹೊರೆಯನ್ನು ವಹಿಸಿಕೊಳ್ಳಲು ಸದ್ಯಕ್ಕೆ ತಾವು ಸಿದ್ಧರಿಲ್ಲವೆಂದು ಚರ್ಚಿಲ್ಲರು ಹೇಳಿಬಿಟ್ಟರಂತೆ. ಮೊನ್ನೆ ನಡೆದ ಕೂಡುವಿಕೆಯಲ್ಲಿ ಅಮೇರಿಕಾವು ಈ ಸಾಲವನ್ನು ಕೊಡುವ ಕುರಿತು ಸಮ್ಮತಿಯು ರೂಸ್‌ವೆಲ್ಟರಿಂದ ಸೂಚಿಸಲಾಗಿದೆಯಂತೆ. ಯುದ್ಧದ ಧ್ವಂಸ ಪರಿಣಾಮಗಳಿಗೆ ಒಳಗಾದ ತನ್ನ ಪ್ರದೇಶಗಳ ಪರಿಹಾರ ಮತ್ತು ಪುನರ್ರಚನೆಗಾಗಿ ರಶಿಯಕ್ಕೆ ಈ ಹಣದ ಅವಶ್ಯವಂತೆ. ಯುದ್ಧೋತ್ತರದ ಪುನರ್ರಚನೆ ಕಾರ್ಯಗಳ ಸಂಬಂಧ ಅವಶ್ಯಬೀಳುವ ಕಾರಣ ಯಂತ್ರೋಪಕರಣಗಳನ್ನು ಒದಗಿಸಿಕೊಡುವ ರೂಪದಲ್ಲಿ ಈ ಸಾಲವು ಕೊಡಲಾಗುವುದಂತೆ. ಪುನರ್ರಚನೆಯಾದ ಕೈಗಾರಿಕೆಗಳಿಂದ ಸಿದ್ಧವಾಗುವ ಒಡವೆಗಳ ರೂಪದಲ್ಲಿ ಅಮೇರಿಕಾಕ್ಕೆ ಈ ಸಾಲದ ಮರುಪಾವತಿಯಾಗುವುದಂತೆ! ಈ ಸಾಲದ ದೆಸೆಯಿಂದ ಅಮೇರಿಕವು ರಶಿಯಗಿಂತ ಒಂದು ಅಂತಸ್ತು ಮೇಲಕ್ಕೆ ನಿಲ್ಲುವಂತಾಗಬಹುದೆ?

* * *

ಚೀನಾದಲ್ಲಿ ಉಂಟಾದ ಬಿಕ್ಕಟ್ಟಿನ ಪರಿಸ್ಥಿತಿಯು ಇನ್ನೂ ಬಗೆಹರಿಸಲ್ಪಡದೆ ಹಾಗೆನೆ ಉಳಿದಿದೆ. ಸರ್ವ ಪಕ್ಷೀಯ ಪ್ರಾತಿನಿಧ್ಯದ ರಾಷ್ಟ್ರೀಯ ಸರಕಾರ ಮಂಡಳದ ಕುರಿತು ಕೊಮ್ಯುನಿಸ್ಟರಿಗೂ ಕೌಮಿಂಗ್ ಟಾಂಗ್ ಸರಕಾರಕ್ಕೂ ನಡೆದ ಮಾತುಕತೆಗಳು ಮುರಿದು ಬಿದ್ದಿವೆ. ಚಿಯಾಂಗರೂ ತನ್ನ ಏಕನಾಯಕತ್ವವು ಮುಂದಕ್ಕೂ ಇರುವಂತೆ ಬಲವಂತಪಡಿಸಿದುದರಿಂದ ಸಂಧಾನದ ವ್ಯವಹಾರಗಳು ಫಲವಿಲ್ಲದೆ ಮುರಿದುಬಿದ್ದು, ಚುಂಕಿಂಗಿಗೆ ಬಂದ ಕೊಮ್ಯುನಿಸ್ಟ ನಾಯಕರು ತಮ್ಮ ಶಿಭಿರಕ್ಕೆ ಹಿಂತೆರಳಿರುವರು. ಕೊಮ್ಯುನಿಸ್ಟರು- ಜಪಾನಿನ ಹಿಡಿತದಿಂದ ತಮ್ಮ ದೇಶದ ಅನೇಕ ಪ್ರದೇಶಗಳನ್ನು ವಿಮೋಚಿಸಿರುವರು. ಸಾಧಾರಣ ೯೦ ಮಿಲಿಯ ಜನರಿರುವ ಪ್ರದೇಶಗಳು ಅವರ ಪ್ರಭಾವಕ್ಕೆ ಒಳಗಾಗಿವೆ. ಹೀಗೆ ಬೆಳೆಯುತ್ತಿರುವ ಕೊಮ್ಯುನಿಸ್ಟರಿಂದ ತಮ್ಮ ಅಧಿಕಾರಕ್ಕೆ (ಕೌಮಿಂಗ್‌ಟಾಂಗ್ ಸರಕಾರಕ್ಕೆ) ದಕ್ಕೆ ಬರಬಹುದೆಂದು ಚಿಯಾಂಗರಿಗೆ ಭೀತಿಯಿದೆ. ಚೀನಾದ ಕೊಮ್ಯುನಿಸ್ಟರು ಭಹೀರ್ ದೇಶಿಗರ ಅಂದರೆ ರಶಿಯದ ಬೆಂಬಲದಲ್ಲಿ ದುಡಿಯುತ್ತಿರುವರೆಂದೂ ಅದರಿಂದ ಚೀನಾದಲ್ಲಿ ರಶಿಯನರ ಪ್ರಭಾವಕ್ಕೆ ಎಡೆ ದೊರಕಬಹುದೆಂದೂ ಅವರ ಅಭಿಪ್ರಾಯವಿರುತ್ತದೆ. ಚೀನಾದಲ್ಲಿ ರಾಷ್ಟ್ರೀಯ ಐಕ್ಯವನ್ನು ಉಂಟುಮಾಡಿದ ಯಶಸ್ಸು ಚಿಯಾಂಗರಿಗೆ ಸಲ್ಲತಕ್ಕದಾಗಿದ್ದರೂ, ಚೀನಾದ ಅಭ್ಯುದಯವೇ ಅವರ ಗುರಿಯಾಗಿದ್ದರೂ, ಚೀನಾವು ಕೌಮಿಂಗ್‌ಟಾಂಗ್ ನೆರಳಿನಲ್ಲೆ ಸ್ವತಂತ್ರವಾಗಿ ಆರೋಗ್ಯಪಡೆದು ಬೆಳೆಯಬೇಕು ಎಂಬುದು ಅವರ ಸಂಕಲ್ಪವಿರುತ್ತದೆ. ತನ್ನದೆ ನೀತಿಯು ಬೆಳಗಬೇಕೆಂದು ಅವರ ಸದ್ಯದ ಹಠವಿರಬಹುದು. ಹೇಗಾದರೂ ದೇಶದ ಕ್ಷೇಮ ಸಾಧಿಸುವುದರಲ್ಲಿ ಅವರ ಸಹನೆಯಿಲ್ಲ. ಕೊಮ್ಯುನಿಸ್ಟರನ್ನೂ ಜಪಾನಿಯರೊಟ್ಟಿಗೆ ಅಡಗಿಸಿಬಿಡುವ ಉದ್ದೇಶವನ್ನು ಅವರು ತಾಳಿದಂತೆ ಕಾಣುತ್ತದೆ. ಮೊನ್ನೆ ಕೌಮಿಂಗ್‌ಟಾಂಗ ಪಥಕವೊಂದು ಕೊಮ್ಯುನಿಸ್ಟರ ಮೇಲೆ ಮೇಲ್ವಾಯ ಹೋದ ವಾರ್ತೆಯು ಬಂದಿರುತ್ತದೆ. ಚಿಯಾಂಗರ ಈ ತರದ ಅಸಹನಾಭಾವದಿಂದ ಚೀನಾಕ್ಕೆ ಕ್ಷೇಮವಿಲ್ಲ. ಅವರ ಈ ನೀತಿ ಪ್ರಜಾಸತ್ತಾತ್ಮಕ ನಿಯಮಗಳಿಗೆ ವಿರುದ್ಧವಿರುತ್ತದೆ. ನಮಗೆ ತಿಳಿದ ಮಟ್ಟಿಗೆ ಚೀನಾದ ಕೊಮ್ಯುನಿಸ್ಟ ಪಕ್ಷವು ಕೌಮಿಂಗ್ ಟಾಂಗ್ ಸರಕಾರಗಿಂತ ಹೆಚ್ಚು ಪ್ರಜಾಸತ್ತಾತ್ಮವಿರುತ್ತದೆಂದು ಹೇಳಬಹುದು. ಕೊಮ್ಯುನಿಸ್ಟರೊಡನೆ ಚಿಯಾಂಗರು ಸಹಕರಿಸುತ್ತಿದ್ದರೆ ಅದರಿಂದ ಆಸ್ಯಾಖಂಡ ಪ್ರಜಾಸತ್ತಾ ಕಾರಣಕ್ಕೆ ಮಹದುಪಕಾರವಾಗುತಿತ್ತು. ಜಪಾನನ್ನು ಬೇಗನೆ ಸೋಲಿಸಬಹುದಿತ್ತು.

* * *

ಪ್ರೆಂಕೋನನ್ನು ಸ್ಪೆಯಿನಿಂದ ಹೊರಗಟ್ಟಬೇಕೆಂದೂ ಆತನ ಪೆಸಿಸ್ಟ್ ಸರಕಾರದ ಸ್ಥಳದಲ್ಲಿ ಸರ್ವಜನಮಾನ್ಯ ಸರಕಾರವು ಸ್ಥಾಪಿಸಲ್ಪಡಬೇಕೆಂದು ಸ್ಟೆಲೀನನ ಒತ್ತಾಯವಿದೆ ಎಂದು ತಿಳಿದುಬಂದಿದೆ. ಜರ್ಮನಿಯು ಕಡೆಯವಿದ್ದ ದಿವಸ ಪ್ರೆಂಕೊನು ಹಿಟ್ಲರ ಬಳಿಗೆ ಸೇರಿದ್ದನು. ಈಗ ಮಿತ್ರರು ವಿಜಯದ ಸಮೀಪದಲ್ಲಿರುವಾಗ ಬ್ರಿಟನಿನ ನೆರಸೇರುವ ಹಂಚಿಕೆಗಳನ್ನು ನಡೆಯಿಸಿದನು. ಆದರೆ ಅವನಿಗೆ ಬ್ರಿಟನಿನ ಪ್ರೋತ್ಸಾಹವು ದೊರಕದೆಂದು ಹೇಳಬೇಕಾಗಿಯದೆ.

* * *

ಬಾಲ್ಕನ್ ಪ್ರದೇಶ, ಸಮಸ್ತ ಯುರೋಪನ್ನು ಕಂಪಿಸುವ ಗದ್ದಲಗಳನ್ನು ಉತ್ಪಾದಿಸುವ ಕಲಹಗಳ ತವರು ಮನೆಯಾಗಿರುವುದು. ಮೊದಲನೆ ಯುದ್ಧವು ಪ್ರಾರಂಭವಾದುದು ಬಾಲ್ಕನ್ಸ್‌ಗಳಲ್ಲಿ ಉಂಟಾದ ಒಂದು ಕಲಹದಿಂದ. ಎರಡನೆ ಯುದ್ಧಕ್ಕೂ ಕೂಡ ಬಾಲ್ಕನ್ ಕಲಹಗಳು ಕೆಲಮಟ್ಟಿಗೆ ಕಾರಣವಾಗಿವೆ ಎಂದು ಹೇಳಬಹುದು. ಮೂರನೆ ಮಹಾಯುದ್ಧವು ಉಂಟಾಗುವುದಾದರೆ ಈ ಬಾಲ್ಕನ್ಸ್ ಕಲಹಗಳಿಂದಲೆ ಎಂದು ಪ್ರಸಿದ್ಧ ಅಮೇರಿಕನ್ ಬರಹಗಾರರೊಬ್ಬರ ಅಭಿಪ್ರಾಯವಿರುತ್ತದೆ. ಮೂರನೆ ಮಹಾಯುದ್ಧವು ಬಾಲ್ಕನ್ ಪ್ರದೇಶಗಳ ಕುರಿತು ರಶಿಯಾ-ಬ್ರಿಟಿಷ್ ಬಿನ್ನಾಭಿಪ್ರಾಯದಿಂದ ಉಂಟಾಗಬಹುದೆಂದೂ ಅವರಿಂದ ಹೇಳಲಾಗಿದೆ.

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ—ಮಂಗಳೂರು
ನಮ್ಮ ಇತರ ವಿಶೇಷ ತಯಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಆಯ ವೆಚ್ಚದ ಪಟ್ಟಿ

ಕಳೆದ ವಾರ ಹಣಕಾಸಿನ ಮಂತ್ರಿಗಳಾದ ಸರ್ ಜೆರಮಿ ರೈಸ್ ಮೆನರು ೧೯೪೫. ೪೬ರ ಆದಾಯ ವೆಚ್ಚದ ಪಟ್ಟಿಯನ್ನು ಹಾಜರು ಮಾಡಿದರು. ಈ ವರ್ಷದಲ್ಲಿ ಸುಮಾರು ೧೬೪ ಕೋಟಿ ರೂಪಾಯಗಳಷ್ಟು ಹೆಚ್ಚು ಖರ್ಚು ಇದೆ. ಕಳೆದ ವರ್ಷದ ಲೆಕ್ಕ ಪ್ರಕಾರ ಅಷ್ಟೆ ಪ್ರಮಾಣದಷ್ಟು ಕಡಿಮೆ ಇರುವುದರಿಂದ ಹೊಗೆಸೊಪ್ಪಿನ ಮೇಲೂ, ಟಪ್ಪಾಲು ಪಾರ್ಸೇಲುಗಳ ಮೇಲೂ ಮತ್ತು ಟೆಲಿಫೋನ್ ಟೆಲಿಗ್ರಾಫ್‌ಗಳ ಮೇಲೂ ಕರ ಹೆಚ್ಚಿಸಲಾಗುವುದು. ಅತೀ ಲಾಭದ ದ್ರವ್ಯದ ಮೇಲೆ ಯಥಾ ಪ್ರಕಾರ 'ಎಕ್ಸೆಸ್ ಪ್ರೊಫಿಟ್' ಎತ್ತಲಾಗುವುದು.

ಈ ಅತೀ ಹೆಚ್ಚಿನ ಖರ್ಚಿಗೆ ಕಾರಣವೆಂದರೆ ಬರ್ಮಾರಂಗದ ಯುದ್ಧ. ಜಪಾನಿಯರನ್ನು ತಡೆಗಟ್ಟಲು ಹೊರಗಿನಿಂದ ಸೈನ್ಯಗಳನ್ನು ತರಿಸಲಾಗಿದೆ. ಅದರ ಖರ್ಚನ್ನು ಇಂಡಿಯಾ ಸರಕಾರದವರೇ ಹೊರಬೇಕು. "ಆದರೆ ಫ್ರಾನ್ಸಿನಲ್ಲಿ ಮಿತ್ರರು ಮುತ್ತಿಗೆ ಕಾರ್ಯಕ್ರಮ ನಡೆಸಿದ್ದಾಗ ಆ ಖರ್ಚನ್ನು ಫ್ರಾನ್ಸಿನ ಮೇಲೆ ಹೊರಿಸಲಿಲ್ಲ. ಭಾರತದಲ್ಲಿನ ರಕ್ಷಣ ದಳಗಳಿಗಾಗಿ ಇಷ್ಟೊಂದು ಖರ್ಚು ಏತಕ್ಕೆ?" ಹೀಗೆಂದು ಒಂದು ಪತ್ರಿಕೆ ಅಭಿಪ್ರಾಯ ಪಡುತ್ತದೆ. ಇನ್ನೊಂದು: "ಇದರಿಂದ ಭಾರತದ ಪಾರತಂತ್ರ್ಯಾವಸ್ಥೆಯು ತಿಳಿದು ಬರುತ್ತದೆ. ಯುದ್ಧಕ್ಕಾಗಿ ಕಂದಾಯ ಮತ್ತು ತೆರಿಗೆ ಹಣದ ಬಹು ಭಾಗವನ್ನು ಖರ್ಚು ಮಾಡುವಾಗ ನಾಗರೀಕ ಜೀವನ ಸೌಕರ್ಯಗಳ ಕಡೆಗೆ ಗಮನ ಕೊಡದಿರುವುದು ವಿಷಾದದ ಸಂಗತಿ. ಇಂಗ್ಲೆಂಡಿನಲ್ಲಿ ಯುದ್ಧದಿಂದ ನಿರುದ್ಯೋಗದ ಪ್ರಶ್ನೆಯು ನಿವಾರಣೆಯಾಗಿದೆ. ಅಮೇರಿಕದಲ್ಲಿ ಸ್ವತಂತ್ರ ಕೈಗಾರಿಕೆಗಳಿಗೆ ಅತೀ ಹೆಚ್ಚಿನ ಪ್ರೋತ್ಸಾಹ ದೊರಕಿದ್ದು ಜನರ ಜೀವನ ಮಟ್ಟವು ಏರಿರುತ್ತದೆ. ಆದರೆ ಭಾರತದ ಬಂಗಾಳ, ವಿಶಾಖಪಟ್ಟಣಗಳಲ್ಲೂ ಬರಗಾಲವೇ ಜನರನ್ನು ಮೃತ್ಯುವಿಗೀಡುಮಾಡಿದೆಯಲ್ಲದೆ ಇಂದಿನ ಬಜೆಟ್‌ನ ಅಪಾರ ಖರ್ಚಿನಿಂದ ಇಡೀ ಭಾರತದ ಅವಸ್ಥೆ ಏನಾದೀತು?" ಹೀಗೆಂದು ಪ್ರಶ್ನಿಸಿದೆ.

ವೆಚ್ಚದ ವಿಮರ್ಶೆ

ಎಸೆಂಬ್ಲಿ ಮೆಂಬರರು ಕೆಲವರು ಬಜೇಟಿನ ಕುರಿತು ಸಂಕ್ಷೇಪವಾಗಿ ಹೀಗೆ ಹೇಳಿರುವರು:

"ಇವರು ನಮ್ಮ ಹಣದೊಡನೆ ಆಟವಾಡುತಿದ್ದಾರೆ"-ಅಬ್ದುಲ್ ಕೊಯುಮ್.

"ಇದು ಕಠಿಣ ತಲೆನೋವು ಕೊಡುವಂತಹ ಖರ್ಚಿನ ಪಟ್ಟಿ"—ಜಮ್ನಾದಾಸ್ ಮೇಥಾ.

"ಬಜೆಟ್ ಭಾಷಣ ಕೇಳುವಾಗ ನನಗೆ ಸಮರ ಸೇನಾಪತಿಯ ಉದ್ಗಾರಗಳನ್ನು ಕೇಳಿದಂತಾಯಿತು"—ಶ್ರೀ. ಪ್ರಕಾಶ.

"ಈ ಹೊಸ ಆದಾಯ ಖರ್ಚಿನ ಪಟ್ಟಿಯು ಬಂಡವಾಳಗಾರರಿಗೆ ಅನುಕೂಲತೆ ಮಾಡಿಕೊಡುವಂತಹುದು. ಬಡವರ ಕಡೆಗೆ ಅದು ನೋಡುವಂತಹುದಲ್ಲ. ಗ್ರಾಮ ಗುಡಿ ಕೈಗಾರಿಕೆಗಳನ್ನಂತೂ ಅದು ಅಲಕ್ಷಿಸಿದೆ. ಇದರಿಂದ ನಮಗೆ ತಂಬಾಕು ಎಳೆಯದಂತೆ ಸಹಾಯಮಾಡುವಂತಿದೆ." ಸರ್ ಜಿಯಾ ಉದ್ದಿನ್ ಹಮದ್.

"ಜನರ ಮೇಲಿನ ಹೊರೆ ಎಂದಿನಂತೆ ಇದ್ದೆ ಇರುವುದು"-ಟಿ. ಟಿ. ಕೃಷ್ಣಮಾಚಾರಿ.

"ಭಾರತದ ಬಡತನದ ದೃಷ್ಟಿಯಿಂದ ಪರಿಶೀಲಿಸುವಾಗ ಇದೊಂದು ಬೃಹದ್ರಾಕ್ಷಸನಂತೆ ತೋರುವುದು. ಯುದ್ಧ ಖರ್ಚು ೧೯೩೯ರ ಹತ್ತು ಪಾಲಷ್ಟು ಹೆಚ್ಚಾಗಿದೆ"—ಎನ್. ಜಿ. ರಂಗ.

ಭಾರತ ವಾರಾಂತ್ಯ ವರದಿಗಳು

ಆದಾಯಕ್ಕಿಂತ ಖರ್ಚು ಹೆಚ್ಚು— ಬಜೆಟ್ ಅಭಿಪ್ರಾಯಗಳು— ಭೂಲಾಬ್ಯಾ— ವೈಸ್ರಾಯರ ಒಪ್ಪಂದ— ಮಹಾತ್ಮರ ಸಲಹೆ— ನೆಹರುಗಳು ಮಂತ್ರಿಗಳಾಗುವರೆ?

ಸಲಹೆಗಾರರಿಗೆ ಸಲಹೆ

ಕೊಂಗ್ರೆಸ್ ಕಾರ್ಯಕಾರಿ ಮಂಡಳಿಗೆ ರಾಜಕೀಯ ವಕೀಲರಾಗಿದ್ದು ಈಗ ರಾಷ್ಟ್ರೀಯ ಸರಕಾರ ಸ್ಥಾಪಿಸಲು ಪ್ರಯತ್ನಪಡುತ್ತಿರುವರೆಂದು ಹೇಳಲಾದ ಭೂಲಾಭ್ಯಾ ದೇಸಾಯಿಯವರಿಗೆ ಮಹಾತ್ಮರು ಒಂದು ಪತ್ರ ಕಳುಹಿಸಿರುವರು. ಅದರಲ್ಲಿ ಅವರು-ತಾವು ವರ್ಕಿಂಗ್ ಕಮಿಟಿಯೊಡನೆ ವಿಚಾರವಿನಿಮಯ ಮಾಡದೆಸರಕಾರಕ್ಕೆ ಯಾವ ಸೂಚನೆಯನ್ನು ಕೊಡುವುದಿಲ್ಲವೆಂದೂ ಆದರೆ ಮುಂದೆ ಆಗಲಿರುವ ವ್ಯಾಸ್‌ರಾಯ್ – ದೇಸಾಯ್ ಒಪ್ಪಂದವು ದೇಶಹಿತ ದೃಷ್ಟಿಯಿಂದಿದೆಯೆಂದು ಅವರಿಗೆ (ದೇಸಾಯಿಯವರಿಗೆ) ಮನವರಿಕೆ ಆದರೆ ತಾವು (ಗಾಂಧೀಜಿ) ಅದಕ್ಕೆ ಒಪ್ಪುವಂತೆ ವರ್ಕಿಂಗ್ ಕಮಿಟಿಗೆ ಸಲಹೆ ಕೊಡುವುದಾಗಿಯೂ ತಿಳಿಸಿರುವರಂತೆ.

ಗಡಿನಾಡು ಪ್ರಾಂತ್ಯದಲ್ಲಿಯೂ ಒಂದು ಗಲಭೆಯುಂಟಾಗಿದೆ. ಅಲ್ಲಿನ ಮಂತ್ರಿಮಂಡಳವು ಶಾಸನ ಸಭೆಯನ್ನು ಎದುರಿಸಿದರೆ ಸೋತು ಹೋಗುವುದು ಖಂಡಿತವಿರುವುದರಿಂದ ಅಲ್ಲಿನ ಪ್ರಧಾನರು ಶಾಸನ ಸಭೆಯನ್ನೇ ಸೇರಿಸಲಿಲ್ಲದಿರುವುದು ಗಡಿನಾಡ ಗವರ್ನರರಿಗೆ ಹೆಚ್ಚು ಹಿತವೆಂದು ಕಂಡುಬಾರದ್ದರಿಂದ ಅವರು ಕೊಂಗ್ರೆಸ್ ಮಂತ್ರಿ ಮಂಡಳ ರಚನೆಯಾದರೆ ಒಳಿತೆಂಬ ಅಭಿಪ್ರಾಯವಿದ್ದವರಾಗಿರುವರಂತೆ. ಅಂತೇ ಆ ಕಡೆಯಿಂದ ಕೆಲ ಕೊಂಗ್ರೆಸ್ ಪ್ರಮುಖರು ಸೇವಾ ಗ್ರಾಮದಲ್ಲಿ ಮಹಾತ್ಮರನ್ನು ಭೇಟಿಯಾಗಿ ಪರಿಸ್ಥಿತಿ ತಿಳಿಸಿದರು. ಆದರೆ ಮಹಾತ್ಮರು ಸದ್ಯಕ್ಕೆ ಗಡಿನಾಡು ಪ್ರಾಂತ್ಯದಲ್ಲಿ ಕೊಂಗ್ರೆಸಿಗರು ಮಂತ್ರಿಮಂಡಳ ರಚಿಸಬಾರದೆಂದು ಡಾ। ಖಾನ್ ಸಾಹೇಬರಿಗೆ ಪತ್ರ ಕಳುಹಿಸಿರುವಂತೆ. ಇದಕ್ಕೂ ಕಾರಣ ವರ್ಕಿಂಗ ಕಮಿಟಿಯ ಬಂಧನ. ಅವರೊಡನೆ ಚರ್ಚೆ ನಡೆಸದೆ ಯಾವುದೊಂದು ಕೆಲಸ ಮಾಡಲು ಮಹಾತ್ಮರು ಸಿದ್ಧರಿಲ್ಲವೆಂಬ ವಿಷಯವು ಸ್ಪಷ್ಟವಾಗುತ್ತದೆ.

ನೆಹರುಗಳು ಮಂತ್ರಿಗಳಾಗುವರು

ಗೋವಿಂದ್ ವಲ್ಲಬ್ ಪಂತ ಮತ್ತು ಪಂಡಿತ್ ನೆಹುರುಗಳನ್ನು ಅಮದ ನಗರ ಕೋಟೆಯಿಂದ ಯುಕ್ತ ಪ್ರಾಂತ್ಯದ ಜೈಲುಠಾಣ್ಯಕ್ಕೆ ವರ್ಗಾಂತರಗೊಳಿಸಲಾಗಿದೆ. ರಾಜಕೀಯ ಕೇಂದ್ರಗಳಲ್ಲಿ ಇದಕ್ಕೂ ಉಹಾಪೋಹೆ ಕಟ್ಟಿರುವರು. ಗೃಹ ಮಂತ್ರಿಗಳಾದ ಸರ್ ಫ್ರೆನ್ಸಿಸ್ ಮುಡಿಯವರೂ ಅತ್ತಕಡೆ ತೆರಳಿದ್ದರು. ವೆವೆಲ್-ದೇಸಾಯಿ ಮಾತುಕತೆಗಳಲ್ಲಿ ವ್ಯಾಸ್‌ರಾಯರು ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಲ್ಲಿ ಕೆಲವರು ಕೇಂದ್ರ ಸರಕಾರದ ಸಚಿವರಾಗುವುದಾದರೆ ರಾಷ್ಟ್ರೀಯ ಸರಕಾರಕ್ಕೆ ಓಪ್ಪಿಗೆ ಕೊಡುವುದಾಗಿ ಒಂದು ಷರ್ತ ಹಾಕಿರುವಂತೆ ಊಹಿಸಲಾಗಿದೆ. ಅದರ ಸಂಬಂಧವಾಗಿಯೇ ಈ ವರ್ಗಾಂತರವೆಂದೂ, ಹಾಗಾದ ಪಕ್ಷದಲ್ಲಿ ಮುಂದೆ ನೆಹುರುಗಳಿಗೆ ಮಂತ್ರಿಗಳಾಗಲು ವಿನಂತಿಸಿಕೊಳ್ಳಲಾಗುವುದೆಂದೂ ವದಂತಿ ಇದೆ. ಆದರೆ ಅವರು ಒಪ್ಪುವಂತವರೆ?

ವ್ಯಾಸರಾಯರು ವ್ಯಾಟ್ ಹೋಲಿಗೆ

ಎಪ್ರಿಲ್ ತಿಂಗಳ ಅಖೇರಿಗೆ ಮಾನ್ಯ ವೇವೆಲ್ಲರು ಲಂಡನಿಗೆ ತೆರಳಲಿರುವರೆಂದು, ತಿಳಿದು ಬರುತ್ತದೆ. ಇದಕ್ಕಿಂತ ಮೊದಲೇ ಅವರು ಭೂಲಾಭಾಯಿಯವರ ರಾಷ್ಟ್ರೀಯ ಸರಕಾರ ಸ್ಥಾಪಿಸುವ ಪ್ರಯತ್ನಗಳ ಫಲಿತಾಂಶವನ್ನು ಪ್ರಕಟಿಸುವರಂತೆ. ರಾಷ್ಟ್ರೀಯ ಸರಕಾರ ಸ್ಥಾಪಿಸಲು ಅಸಾಧ್ಯವಾಗುವ ಷರ್ತಗಳನ್ನು ಸಾರ್ವಭೌಮ್ಯಪ್ರತಿನಿಧಿಗಳು ಸೂಚಿಸದಿರಲೆಂದು ದೇಶವು ಹಾರೈಸುತ್ತದೆ.

ಸೋಜಿಗದ ಜೈಲುಖಾನೆ

ಒರಿಸ್ಸಾದ ಕೊರಾಪುಟ್ ಬಂಧೀಖಾನೆಯಲ್ಲಿ ಕಳೆದ ಆಗಸ್ಟ್ ಗಲಭೆ ನಂತರ ಇಡಲ್ಪಟ್ಟ ರಾಜಕೀಯ ಕೈದಿಗಳಲ್ಲಿ ಇದು ತನಕ ೩೦ ಮಂದಿಗಳು ಮರಣಪಟ್ಟಿರುವರಂತೆ. ಹೆಚ್ಚಾಗಿ ರಾಜಕೀಯ ಕೈದಿಗಳು ತರುಣರೇ ಆಗಿರುವುದರಿಂದ ಆ ಜೈಲಿನಲ್ಲಿ ಇಷ್ಟೊಂದು ಮಂದಿಗಳು ಸಾಯಲು ಸಂದೇಹದ ಕಾರಣಗಳಿರಬಹುದೆಂದು ಊಹಿಸಬೇಕಾಗುತ್ತದೆ. ಅಲ್ಲಿನ ಸರಕಾರದವರು ಆರೋಗ್ಯಾಕರ ಏರ್ಪಾಡುಗಳನ್ನು ಮಾಡಿ 'ಸರಕಾರದ ಅತಿಥಿಗಳು' ಸುರಕ್ಷಿತವಾಗಿ ತಮ್ಮ ಅಮೂಲ್ಯ ಪ್ರಾಣಗಳನ್ನು ಕಳಕೊಳ್ಳದಂತೆ ನೋಡಿಕೊಳ್ಳುವುದು ಒಳಿತು.

ಹಳೇ ತಳಹದಿಯ ಮೇಲೆ ಹೊಸ ಕಟ್ಟಡ

ನೇಶನಲ್ ವೊರ್ ಫ್ರಂಟ್ ಇಲ್ಲವೇ ರಾಷ್ಟ್ರೀಯ ಯುದ್ಧಮುಖ ಎಂಬ ಯುದ್ಧ ಪ್ರಚಾರ ಸಂಸ್ಥೆಯನ್ನು ಸಂಪೂರ್ಣ ರದ್ದುಗೊಳಿಸಬೇಕೆಂದು ಮುಸ್ಲಿಂ ಲೀಗಿನ ಸರ್ ಯಾಮಿನ್ ಖಾನರು ಎಸೆಂಬ್ಲಿಯಲ್ಲಿ ಒಂದು ಸೂಚನೆ ತಂದರು. ಪ್ರಚಾರ ಖಾತೆಯ ಮಿ। ಬೋಜ್‌ಮೆನ್ ಅವರು 'ಯುದ್ಧ ಪ್ರಚಾರಕ್ಕೆ ಇಂಗ್ಲೆಂಡ್ ಅಮೇರಿಕಗಳಲ್ಲಿ ಅತೀಯಾಗಿ ವೆಚ್ಚಮಾಡಲಾಗುವುದೆಂದು, ಆದರೂ ಈಗಿನ 'ವೋರ್ ಫ್ರಂಟಿನ' ಸ್ಥಾನದಲ್ಲಿ ಮತ್ತೊಂದು ನಮೂನೆಯ ಪ್ರಚಾರ ಸಂಸ್ಥೆಯನ್ನು ಸ್ಥಾಪಿಸಲಾಗುವುದೆಂದೂ ತಿಳಿಸಿದರು.

ಇಂತಹ 'ಸಂಸ್ಥೆ'ಗಳಿಗೆ ಜನತೆಯ ಬೆಂಬಲ ಅತ್ಯಾವಶ್ಯಕವೆಂದು ಲಿಯಾ ಖತ್ ಅಲಿ ಖಾನರು ಹೇಳಿದುದು ಗಮನೀಯ ವಿಚಾರ.

ವಾರ್ಧಾದಲ್ಲಿನ ಸ್ವಾಮಿ ಸತ್ಯಭಕ್ತ ಎಂಬವರು 'ಭಾರತಿಲಿಪಿ' ಎಂಬ ಅಕ್ಷರ ಮಾಲೆಯೊಂದನ್ನು ತಯಾರಿಸಿದ್ದಾರು. ಐದೇ ಮಿನಿಟುಗಳಲ್ಲಿ ಇದನ್ನು ಕಲಿಯಬಹುದು. ಛಾಪಖಾನೆ ಕೆಲಸದಲ್ಲಿ ದೇವನಾಗರಿ ಲಿಪಿ ಉಪಯೋಗಿಸಲ್ಪಡುವಲ್ಲಿ ಇದನ್ನು ಸುಲಭವಾಗಿ ಜೋಡಿಸಿಕೊಳ್ಳಬಹುದು.

ಬೊಂಬಾಯಿಯಲ್ಲಿ ಕೆಲವು ವಾರಗಳ ಹಿಂದೆ ಒಂದು ನಾಯಿಗಳ ಪ್ರದರ್ಶನ ಸ್ಪರ್ಧೆ ನಡೆಯಿತು. ಅಲ್ಲಿ ಬಂದಿದ್ದ ಒಂದು ಅತೀ ಸುಂದರವಾದ ನಾಯಿಗೆ ಮೊರ್ವಿ ಸಂಸ್ಥಾನದ ರಾಜಕುಮಾರರು ೧೦ ಸಾವಿರ ರೂಪ್ಯಾ ಬೆಲೆ ಮಾಡಿದರು.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ಜಪಾನಿನ ಭವಿಷ್ಯ

ಇದು ತನಕ ಪೆಸಿಫಿಕ್‌ನಲ್ಲಿ ಅಮೇರಿಕನ್ನರ ವಿಜಯವು ಅವರನ್ನು ಜಪಾನಿಗೆ ೭೦೦ ಮೈಲುಗಳಷ್ಟು ಹತ್ತಿರ ತಂದಿದೆ. ಆದರೂ ಅವರಿಗೆ ಇನ್ನು ಆ ಹಳದಿ ರಾಷ್ಟ್ರದ ಯುದ್ಧ ಶಕ್ತಿಯನ್ನು ಮುರಿದಿಕ್ಕಲು ಸಾಧ್ಯವಾಗಲಿಲ್ಲವೆಂದು ಮಿ। ಜೋಸೆಫ್ ಗ್ರೂ ಎಂಬ ಅಮೇರಿಕನ್ ರಾಜ್ಯಾಂಗ ಕಾರ್ಯದರ್ಶಿಗಳು ತಿಳಿಸುತ್ತಾರೆ. ಅವರು ಹೀಗೆಂದರು: "ಜಪಾನು ಇನ್ನೂ ಹೆಚ್ಚೆಚ್ಚಾಗಿ ವಿಮಾನ, ಟೇಂಕು, ಮೋಟರು ಮತ್ತು ಯುದ್ಧಾಸ್ತ್ರಗಳನ್ನು ಮಾಡಲು ಶಕ್ಯರಾಗಿದ್ದಾರೆ. ಅವರು ನಾಶ ಮಾಡಲ್ಪಡುತ್ತಿರುವ ತಮ್ಮ ಶಸ್ತ್ರಾಸ್ತ್ರಗಳ ಸಂಖ್ಯೆಗಿಂತ ಮಿಗಿಲಾದವುಗಳನ್ನು ತಯಾರಿಸಲು ಇನ್ನೂ ಶಕ್ಯರಾಗಿದ್ದಾರೆ. ಈಗ ಸಿದ್ಧ ೪೦ ಲಕ್ಷ ಸೈನ್ಯ ಅವರಲ್ಲಿದೆ. ೨೦ ಲಕ್ಷವನ್ನು ಅವರು ಬೇಕಾದಾಗ ಒಟ್ಟುಗೂಡಿಸಬಲ್ಲರು. ಇಷ್ಟೇ ಅಲ್ಲ ೧೭ ಮತ್ತು ೨೦ ವರ್ಷದೊಳಗಿನ ೧೦ ಲಕ್ಷ ಸೈನ್ಯವನ್ನು ಅವರು ಈಗ ಸೇರಿಸಬಹುದು. ವರ್ಷಕ್ಕೆ ೨೫ ಲಕ್ಷ ಸಮರ ಯೋಗ್ಯ ತರುಣರು ಅಲ್ಲಿ ಸಿದ್ಧರಾಗುತ್ತಾರೆ. ಯುದ್ಧದಲ್ಲಿ ವರ್ಷಕ್ಕೆ ಇಷ್ಟೊಂದು ನಷ್ಟವು ಅವರಿಗೆ ಆಗುವುದಿಲ್ಲವೆಂದ ಮೇಲೆ ಜಪಾನಿನ ಶಕ್ತಿಗೆ ಕೊರತೆಯೇ ಬಂದ ಹಾಗೆ ತೋರುವುದಿಲ್ಲ."

ಇದರಿಂದ ಜಪಾನಿನೊಡನೆ ದೀರ್ಘ ಕಾಲದ ಯುದ್ಧ ಮಾಡಿದರೆ ಅದು ಸೋಲುವಂತಿಲ್ಲವೆಂಬ ಸಂಗತಿ ತಿಳಿದು ಬರುತ್ತದೆ.

ತ್ರಿಮೂರ್ತಿ ನಿರ್ಣಯದ ಪರಿಣಾಮ

ಕ್ರಿಮಿಯಾ ಪರಿಷತ್ತಿನ ನಿರ್ಣಯಗಳಲ್ಲಿ ಪೋಲೇಂಡಿಗೆ ಅನ್ಯಾಯ ಮಾಡಲಾಗಿದೆ ಎಂದು ನೊಂದವರ ಪೈಕಿ ಚರ್ಚಿಲ್ ಮಂತ್ರಿ ಮಂಡಳದ ಹಳ್ಳಿ ಮತ್ತು ಪಟ್ಟಣ ರಚನಾ ಖಾತೆಯ ಕಾರ್ಯದರ್ಶಿಗಳಾದ ಮಿ। ಹೆನ್ರಿ ಸ್ಟ್ರೋಸ್ ಅವರೂ ಒಬ್ಬರು. ಅವರು ಈ ಕುರಿತು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುವರು ಅದನ್ನು ಸ್ವೀಕರಿಸುತ್ತಾ ಪ್ರಧಾನ ಚರ್ಚಿಲ್ಲರು 'ಪೋಲೇಂಡ್ ಜನರ ಸ್ವಾತಂತ್ರವೇ ಸಾರ್ವಭೌಮ್ಯ ಸರಕಾರದ ಗುರಿಗಳಲ್ಲಿ ಒಂದೆಂಬ ವಿಷಯವು ನಿಮಗೆ ಮುಂದಿನ ಘಟನೆಗಳಿಂದ ಮನವರಿಕೆಯಾಗುವುದೆಂದು ನಾನು ಹಾರೈಸುತ್ತೇನೆ'. ಅದ್ಯಾವ್ಯಾವ ವಿಷಯಗಳನ್ನು ಗೋಪ್ಯವಾಗಿಡಬೇಕೆಂಬ ವಿಷಯ ಬ್ರಿಟಿಷ್ ಪ್ರಧಾನರಿಗೆ ಗೊತ್ತಿರುವಷ್ಟು ಮತ್ತಾರಿಗೂ ತಿಳಿಯದು.

ದ್ವಿಮೂರ್ತಿಗಳು ಇಂಗ್ಲೆಂಡಿಗೆ

ರೂಸ್‌ವೆಲ್ಟ್ ಸ್ಟೈಲಿನರು ಸದ್ಯದಲ್ಲೇ ಇಂಗ್ಲೆಂಡಿಗೆ ಭೇಟಿ ಕೊಡಬಹುದೆಂದು ಸುದ್ದಿ ಹರಡಿದೆ. ಆದರೆ ಅವರು ಜೊತೆಯಲ್ಲೇ ಬರುವುದಿಲ್ಲ. ಬರುವ ಬೇಸಿಗೆ ಕಾಲದಲ್ಲಿ ರೂಸ್‌ವೆಲ್ಟರು ಬ್ರಿಟಿಷ್ ಅರಸರ ಅತಿಥಿಗಳಾಗಿ ಬರುವರು. ಆದರೆ ಸ್ಟೈಲಿನರು ಯೂರೋಪಿನ ಯುದ್ಧ ಮುಗಿದ ಮೇಲೆ ಬರುವರು. ಅವರು ಬ್ರಿಟಿಷ್ ಸರಕಾರದ ಅತಿಥಿಗಳಾಗುತ್ತಾರೊ ಇಲ್ಲವೇ ಸಾರ್ವಭೌಮ್ಮರ ಅತಿಥಿಗಳಾಗುತ್ತಾರೊ ಈ ವಿಷಯವನ್ನು

ವಿದೇಶ ವಿಚಾರ ವಿಮರ್ಶೆ

ರಾಷ್ಟ್ರವಾದಿ ಅರಬರ ಐಕ್ಯ--ಶಾಂತಿ ಪರಿಷತ್ತಿನಲ್ಲಿ ಭಾರತಕ್ಕೆ ಸ್ಥಾನವಿಲ್ಲ--ಎಲ್ಲಾ ಜಾತಿಗಳ ಸಂಸ್ಥೆಗೆ ಮುಸಲ್ಮಾನ ಅಧ್ಯಕ್ಷ-ಫೆಸಿಸ್ಟರ ಸ್ನೇಹ ಬೇಡ-'ಸರ್'ಗಳ ಸಲಹೆ-ಜಪಾನಿನ ಸೋಲು

ರ್‍ಯಾಟರ್ ಸುದ್ದಿಗಾರನು ತಿಳಿಸುವುದಿಲ್ಲ.

ಅರಬೀ ಐಕ್ಯ

ತಮ್ಮ ಅಂತರಾಜ್ಯ ಐಕ್ಯತೆಗಾಗಿ ಬಹಳ ಕಾಲದಿಂದ ಕನವರಿಸುತ್ತಲಿದ್ದ ಅರಬೀ ಮುಖಂಡರು ಕೆಲವು ದಿನಗಳ ಹಿಂದೆ ಒಂದು ಒಪ್ಪಂದಕ್ಕೆ ಬಂದಿದ್ದು ಒಂದು ಐಕ್ಯತಾ ಸಂಘವನ್ನು ರಚಿಸುವರೆ ಸಹಿ ಹಾಕಿದರು. ಈಜಿಪ್ತಿನ ಅರಸ ಫರೂಕರು ಇದರಲ್ಲಿ ತುಂಬಾ ಶ್ರದ್ಧೆಯಿಂದ ಪ್ರಯತ್ನಗಳನ್ನು ನಡಿಸುತಿದ್ದರು. ಅರಬೀ ಐಕ್ಯತೆ ಎಂದ ಮಾತ್ರಕ್ಕೆ ಮುಸಲ್ಮಾನ ಐಕ್ಯತೆ ಎಂದು ಹೇಳ ಬರುವುದಿಲ್ಲ. ಅವರು ಸಂಘಟಿತರಾದುದು ಒಂದು ರಾಷ್ಟ್ರಕ್ಕೆಸೇರಿದ ಜನದವರಾಗಲ್ಲದೆಒಂದು ಮತಕ್ಕೆ ಸೇರಿದವರಂತೆ ಅಲ್ಲ. ಕಾರಣ ಅರಬರಲ್ಲಿ ಕ್ರೈಸ್ತರೂ ಇದ್ದಾರೆಂಬ ವಿಷಯವನ್ನು ಮರೆಯಬಾರದು. ನಮ್ಮ ದೇಶದ ಕೋಮುವಾದಿಗಳು ಇದರಿಂದ ಒಂದು ಪಾಠ ಕಲಿಯುವುದೊಳಿತು.

ಸೇನ್‌ಫ್ರೆನ್ಸಿಸ್ಕೊ ಸಮ್ಮೇಳನ

ಎಪ್ರಿಲ್ ೨೬ರಂದು ಸೇನ್‌ಫ್ರೆನ್ಸಿಸ್ಕೋ ನಗರದಲ್ಲಿ ಮಿತ್ರ ರಾಷ್ಟ್ರಗಳ ಪರಿಷತ್ತು ಸೇರಬೇಕೆಂದು ಕ್ರಿಮಿಯದಲ್ಲಿ ನಿರ್ಧಾರವಾಗಿದೆ. ಇದರಲ್ಲಿ ಭಾರತಕ್ಕೆ ಮಾತ್ರ ಪ್ರಾತಿನಿಧ್ಯವಿಲ್ಲವಂತೆ. ಭಾರತ ಸರಕಾರದ ಖಜಾನೆಯಿಂದ ಯುದ್ಧಕ್ಕೆಂದು ಅಪಾರ ಹಣವು ಖರ್ಚು ಮಾಡಲ್ಪಡುತ್ತದೆ. ಯುದ್ಧದಲ್ಲಿ ಭಾಗವಹಿಸಿದೆ ಎಂದು ಹೇಳಲ್ಪಡುವವರಿಗೆ ಶಾಂತಿ ಸಮ್ಮೇಳನದಲ್ಲಿ ಸ್ಥಾನಸಿಗುವುದಿಲ್ಲವೆಂಬ ವಿಷಯವು ತುಂಬಾ ಸೋಜಿಗದ್ದಿರುತ್ತದೆ. ಬಹುಷ್ಯ ಬ್ರಿಟಿಷ್ ಸಾಮ್ರಾಜ್ಯಹಿತ ರಕ್ಷಕರಾದ ಚರ್ಚಿಲ್ಲರೇ ಭಾರತದ ಪರವಾಗಿ ಎಲ್ಲವನ್ನು ಮಾತಾಡಲಿರುವರೋ ಏನೊ!

ವಿಶ್ವಾಸಾರ್ಹ ವಾತಾವರಣ ಕಲ್ಪಿಸಿರಿ

ಶ್ರೀಮತಿ ವಿಜಯಲಕ್ಷ್ಮಿಯವರು ಸಂಯುಕ್ತ ಅಮೇರಿಕದಲ್ಲಿ ಭಾರತ ಪ್ರಚಾರ ಚಳವಳಿ ಭಾಷಣಗಳನ್ನಾರಂಭಿಸುತ್ತಾ, ಬ್ರಿಟಿಷರು ಭಾರತೀಯರ ವಿಶ್ವಾಸಕ್ಕೆ ಅರ್ಹವಾದ ವಾತಾವರಣವನ್ನು ಇನ್ನೂ ಕಲ್ಪಿಸಲಿಲ್ಲ. ಹಿಂದೂಗಳು ಮುಸಲ್ಮಾನರು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಸಿಗಬೇಕೆಂಬ ವಿಷಯದಲ್ಲಿ ಒಮ್ಮತದಿಂದಿರುವರು. ಎಲ್ಲಾ ಜಾತಿ ಮತಗಳ ಜನರಿಂದ ಕೂಡಿರುವ ರಾಷ್ಟ್ರೀಯ ಕೊಂಗ್ರೆಸಿನ ಅಧ್ಯಕ್ಷರು ಓರ್ವ ಮುಸಲ್ಮಾನರಾಗಿರುವರು—ಎಂದು ಭಾಷಿಸಿರುವರು. ಇದನ್ನು ಎಮರಿ ಸಾಹೇಬರು ಅಲ್ಲಗಳೆಯುವರೆ?

ಫ್ರೆಂಕೋವಿನ ಸ್ನೇಹ ಧೋರಣೆ

ಸ್ಪೈನಿನ ಸರ್ವಾಧಿಕಾರಿಯು ಗಾಳಿ ಬಂದತ್ತ ಕಡೆ ಹಾಯಿ ಬಿಡಿಸುವ ಧೋರಣೆಯನ್ನು ಅನುಸರಿಸುವಂತೆಕಾಣುತ್ತದೆ. ಯುದ್ಧದ ಪ್ರಾರಂಭ ಕಾಲದಲ್ಲಿ ಅವನು ಗುಪ್ತವಾಗಿ ಅಚ್ಚು ರಾಷ್ಟ್ರಗಳಿಗೆ ತನ್ನ ಸೈನ್ಯಗಳನ್ನು ಕಳುಹಿಸಿ ಕೊಟ್ಟಿರುವನು. ಸ್ಪೇನಿಶ್ ಸಮುದ್ರ ಠಾಣ್ಯಗಳಲ್ಲಿ ಯು ಬೋಟ್‌ಗಳಿಗೆ ಆಶ್ರಯಕೊಟ್ಟಿರುವನು. ಈಗ ಜರ್ಮನಿಯು ಸೋಲುವುದೆಂದು ಆತನಿಗೆ ಖಚಿತವಾಗಿರುವುದರಿಂದ ತನ್ನ ದೇಶದಲ್ಲಿ ಬಂಧಿಸಲ್ಪಟ್ಟ ಮಿತ್ರ ವೈಮಾನಿಕರನ್ನು ಅವನು ಬಂಧ ಮುಕ್ತಗೊಳಿಸಿರುವನು. ಫ್ರಾನ್ಸಿನಿಂದ ಓಡಿಬಂದ ನಾಗರೀಕರಿಗೆ ಆಶ್ರಯ ಸೌಕರ್ಯಗಳನ್ನು ಕೊಡಲು ಏರ್ಪಡಿಸಿರುವನಂತೆ. ಫೆಸಿಸ್ಟರನ್ನು ನಂಬಿ ಯಾವ ಕೆಲಸವೂ ಮಾಡದಿರುವುದು ವಿವೇಕ.

ಸಾಮ್ರಾಜ್ಯವಾದಿಗಳ ಸಲಹೆ

ಲಂಡನಿನಲ್ಲಿ ಸೇರಿದ ವಸಾಹತು ಸಂಬಂಧ ಪರಿಷತ್ತಿಗೆ ಭಾರತೀಯ ಪ್ರತಿನಿಧಿಗಳಾಗಿ ಹೋದ ಸರ್ ಮಹಮ್ಮದ್ ಜಾಫರುಲ್ಲಾ ಖಾನರು ಅಲ್ಲಿನ ತಮ್ಮ ಭಾಷಣದಲ್ಲಿ "ಬ್ರಿಟನು ಬಹಳ ಕಾಲ ಭಾರತೀಯ ಸ್ವಾತಂತ್ರ್ಯವನ್ನು ಹಿಂದಕ್ಕೆ ಎಳೆದಿಡಲು ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಅವಧಿಯೊಳಗೆ ಅದನ್ನು ಕೊಡುವುದಾಗಿ ಅವರು ಘೋಷಿಸದಿದ್ದರೆ ಅನರ್ಥವಾಗುವುದು ಖಂಡಿತ"ವೆಂದು ಸ್ಪಷ್ಟವಾಗಿ ತಿಳಿಸಿದ್ದರು. ಅದೇ ಪರಿಷತ್ತಿಗೆ ಹೋದ ಇನ್ನೊಬ್ಬ ಪ್ರತಿನಿಧಿಗಳೂ ಬಂಗಾಳ ಲೆಜಿಸ್ಲೆಟಿವ್ ಕೌನ್ಸಿಲಿನ ಅಧ್ಯಕ್ಷರೂ ಆದ ಸರ್ ಮಹಾ ರಾಜಾ ಬಿ. ಪಿ. ಸಿಂಗ್ ರೊಯ್ ಅವರು ಲಂಡನಿನ ಒಂದು ಕಿಕ್ಕಿರಿದ ಸಭೆಯಲ್ಲಿ ಭಾಷಣ ಮಾಡುತ್ತಾ "ಭಾರತದಲ್ಲಿ ಕೊಂಗ್ರೆಸ್ ಮುಖಂಡರನ್ನು ಬಂಧ ಮುಕ್ತಗೊಳಿಸದೆ ಯಾವ ರಾಜಕೀಯ ಇತ್ಯರ್ಥವು ಸಾಧ್ಯವಿಲ್ಲ. ಭಾರತೀಯ ಎಲ್ಲಾ ಜನತೆಯ ಪರವಾಗಿ ಮಾತನಾಡಬಲ್ಲ ಒಂದೇ ಸಂಸ್ಥೆ ಎಂದರೆ ಭಾರತ ರಾಷ್ಟ್ರೀಯ ಕೊಂಗ್ರೆಸ್ಸು." ಹೀಗೆಂದು ಹೇಳಿರುವರು. ಮೇಲ್ಕಂಡ ಇರ್ವ ಬ್ರಿಟಿಷ್ ಸಾಮ್ರಾಜ್ಯದ 'ಸರ್' ಪದವೀಧರರು ಕೊಂಗ್ರೆಸಿಗರಲ್ಲ. ಮತ್ತು ಅವರ ಈ ಮಾತುಗಳನ್ನು ಹೇಳಿದ್ದು ಅಮೇರಿಕದ ಅಲ್ಲ-ಎಮೆರಿಯವರು ವಾಸಿಸುವ ರಾಜಧಾನಿಯಲ್ಲೇ ಅವರು ಇವನ್ನು ಉದ್ಘರಿಸಿರುವರು. ಇದಕ್ಕೆ ವಿರೋಧವಾಗಿ ಭಾರತ ಸಚೀವರು ಯಾವ ವಿಶೇಧ ಪ್ರಚಾರ ಕೈಕೊಳ್ಳಲಿರುವರೆ ನೋಡಲಿಕ್ಕಿದೆ.

ಕೋಮಲ ಸೌಂದರ್ಯ ನಿಮಗೆ ಇರಬೇಕೆ

ನಿಮಗೆ ಶುದ್ಧವಾದ ಮತ್ತು ಹಾಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯ ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗಾ ಬೇಕಾದರೆ, ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನುಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕ್ಕೆ ಕೋಮಲತೆಯನ್ನುಂಟು ಮಾಡುವುದು

ಬೈಲ್‌ಬೀನ್ಸುನಮಗೆ ಇಮ್ಮಡಿ ಸೌಂದರ್ಯ ಕೊಡುವುದು.

BILE BEANS

The Oxford University Press will be publishing shortly **The Mind of Mahatma Gandhi** by R. K. Prabhu and U. R. Rao. It is a selection from Mahatma Gandhi's writings and enables the reader to get a glimpse into the working of his mind. There are 35 chapters covering a wide range of subjects including Non-Violence, Indo British relations, Industrialization, Swaraj and Fasting.

ಕೆಲವು ದಿನಗಳ ಹಿಂದೆ ಇಲ್ಲಿಯ ಸ್ಪೈ। ಸಬ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಗಲಾಟೆ ಮಾಡಿದ ಪಂಜಾಬಿನ ಮುರ್ಖಾನಂದ ಸ್ವಾಮಿ ಎಂಬ ಸಾಧುವಿಗೆ ಆರು ತಿಂಗಳ ಕಠಿಣ ಸಜೆಯೂ ೨೫ ರೂ. ಜುಲ್ಮಾನೆಯೂ ವಿಧಿಸಲ್ಪಟ್ಟಿದೆ. ಸೊಕ್ಕಿದ ಸಾಧುವಿಗೆ ತಕ್ಕ ಪ್ರಶಸ್ತಿ ದೊರಕಿದಂತಾಯಿತು.

ಸದ್ಯದಲ್ಲೇ ಡೆವಲಪ್‌ಮೆಂಟ್ ಶಾಖೆಯ ರೂರಲ್ ರಿಕ್ರಿಯೇಶನ್ ಯೋಜನೆ ಮೇರೆಗೆ ದ. ಕ. ಜಿಲ್ಲಾ ಗ್ರಾಮಾಂತರಗಳ ಆಟಪಾಟಗಳ ಸ್ಪರ್ಧೆಯು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಜರಗಿಸಲ್ಪಡುವುದು. ವೊಲಿಬೊಲ್, ಎತ್ತಿನ ಗಾಡಿ ಓಟ, ಗೋಧಿ ಸಿಹಿ ತಿಂಡಿ ತಯಾರಿಕೆ, ನೋಗಕ್ಕೆ ಕಟ್ಟಿ ಓಡಿಸುವುದು, ಚೆಡುಗಾಡು, ಮೇಳನರ್ತನ (ಹುಡುಗಿಯರದು) ಕುಸ್ತಿ ಪಂದ್ಯಾಟ, ಖಡ್ಗ ಕಾಳಗ, ಸ್ತ್ರೀ ಪುರುಷರ ಪ್ರತಪ್ರತ್ಯೇಕ ಸಂಗೀತ ಸ್ಪರ್ಧೆ, ನೂರು, ಇನ್ನೂರುಗಜಗಳ ಓಟ, ಇವೇ ಮುಂತಾದುವುಗಳು ಜರಗಿಸಲಾಗುವುವು. ಗೋದಿ ಸಿಹಿ ತಿಂಡಿ ತಯಾರಿಸಿದವರು ಸ್ಪರ್ಧೆಯ ದಿನ ವಿಮರ್ಶಕರಿಗೆ ಒಪ್ಪಿಸಬೇಕು. ಈ ಆಟಗಳನ್ನೇರ್ಪಡಿಸುವರೊಟ್ಟಿಗೆ ಅವುಗಳಲ್ಲಿ ಹೆಚ್ಚೆಚ್ಚಿನ ಹಳ್ಳಿನಾಡುಗಳ ಜನರು ಭಾಗವಹಿಸುವಂತೆ ಮತ್ತು ಮೇಲೆ ಕಾಣಿಸಿದ ವಿಷಯಗಳಲ್ಲಿ ವಿಶೇಷಮಾಹಿತಿ, ತರಬೇತಿ ದೊರೆಯುವಂತೆ ಮಾಡುವುದೂ ಅತ್ಯಾವಶ್ಯಕ.

ತಾ. ೪ರಂದು ರವಿವಾರ ಉರ್ವದಲ್ಲಿ ಇಲ್ಲಿಯ ಕೆಶ್ಯೂನಟ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ಒಂದು ಸಭೆ ಶ್ರೀ. ಕೃಷ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಸೆಂಟ್ ಶಾಲೆಯ ಸಾಹಿತ್ಯ ಮತ್ತು ಚರ್ಚಾ ಸಂಘದ ವಾರ್ಷಿಕೋತ್ಸವವು ಗ। ಕೊಲೇಜಿನ ಶ್ರೀ. ದೇಜು ಅವರ ಅಧ್ಯಕ್ಷತೆಯಲ್ಲಿ ಜರುಗಿತು. ವಿದ್ಯಾರ್ಥಿನಿಯರು ಸಾಹಿತ್ಯದಲ್ಲಿ ಹೆಚ್ಚೆಚ್ಚಿನ ಅಭಿರುಚಿ ತಾಳುತ್ತಿರುವುದು ಸಂತೋಷದ ವಿಷಯ.

ನಿನ್ನೆ ತಾ. ೮ರಂದು ಗೌ। ಸಾ। ಸಮಾಜದ ಮುಖ್ಯ ಮಠಗಳಲ್ಲಿ ಒಂದಾದ ಶ್ರೀ. ಗೋಕರ್ಣ ಮಠದ ಶ್ರೀ. ದ್ವಾರಕಾನಾಥ ಸ್ವಾಮಿಜಿಯವರು ನಗರಕ್ಕೆ ಚಿತ್ತೈಸಿದರು. ಶಿಷ್ಯ ವೃಂದದವರು ಗುರುವರ್ಯರನ್ನು ವಿಜ್ರುಂಭಣೆಯಿಂದ ಮೆರವಣಿಗೆಯಲ್ಲಿ ಸ್ವಾಗತೀಕರಿಸಿದರು. ಈ ಮಠಾಧಿಪತಿಗಳು ನಾಲ್ಕೈದು ದಿನಗಳ ತನಕ ಉಳಕೊಳ್ಳುವರೆಂದು ತಿಳಿದು ಬರುತ್ತದೆ.

ಕೆಲವು ದಿನಗಳ ಹಿಂದೆ ಬೊಂಬಾಯಿಗೆ ದಯಮಾಡಿಸಿದ ಶ್ರೀ. ಕಾಶೀಮಠಾಧೀಶರಾದ ಶ್ರೀ. ಸುಕೃತೀಂದ್ರ ಸ್ವಾಮಿಜಿಯವರು ಹುಬ್ಬಳ್ಳಿಯ ಶಿಷ್ಯ ವೃಂದದಿಂದ ಸನ್ಮಾನಿತರಾದರು. ಅವರೊಡನೆ ಶಿಷ್ಯರಾದ ಸುಧೀಂದ್ರ ತೀರ್ಥರೂ ಇದ್ದರು. ತಾವು ಹೋಗಿ ಬರುವ ಕಡೆಗಳಲ್ಲಿ ಮಠಾಧಿಪತಿಗಳು ಸಮಾಜದ ಕುಂದುಕೊರತೆ ಬಡತನದ ಕುರಿತು ಪರ್ಯಾಲೋಚಿಸಿ ಅವುಗಳನ್ನು ನಿವಾರಿಸಲು ಸಹಾಯಮಾಡಬೇಕೆಂದು ನಿರೀಕ್ಷಿಸಲಾಗಿದೆ.

ಕಳೆದ ಶನಿವಾರದಂದು ಸಾಯಂಕಾಲ ಸಣ್ಣ ಮೈದಾನಿನಲ್ಲಿ ಪೋಲಿಸರ ವಾರ್ಷಿಕ ಆಟ ವಿನೋದಗಳು ನಡೆದವು. ಕೆಲವೊಂದು ಪಂದ್ಯಾಟಗಳಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರರೂ ಭಾಗವಹಿಸಿದ್ದರು. ಹಿರಿಯರ ಓಟ ಪಂದ್ಯಾಟದಲ್ಲಿ ಕಲೆಕ್ಟರರು ಪ್ರಥಮ ಬಹುಮಾನ ಪಡೆದರು.

ಕೆನರಾ ಹೈಸ್ಕೂಲಿನ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳು ತಾ. ೨ರಂದು ಒಂದು ಸಮಾಜಿಕ ಸಂತೋಷ ಕೂಟವನ್ನೇರ್ಪಡಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ. ಯಶವಂತ ರಾವ್ ಅವರಿಗೊಂದು ಮಾನಪತ್ರವನ್ನರ್ಪಿಸಲಾಯಿತು. ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಸಂದರ್ಭೋಚಿತ ಭಾಷಣಗಳನ್ನು ಮಾಡಿದರು. ಮೆನೇಜರ್ ಶ್ರೀ. ಮಾಧವರಾಯರು ಅಧ್ಯಕ್ಷತೆ ವಹಿಸಿದರು. ವಿದ್ಯಾರ್ಥಿಗಳು ಉಪಾಧ್ಯಾಯರೊಡನೆ ಹೆಚ್ಚಿನ ಸಂಪರ್ಕ ಬೆಳೆಸಬೇಕು.

ತಮ್ಮ ಮನೆಯಲ್ಲಿ ಕಡಿಮೆಯಾದ ಜನರ ಸಂಖ್ಯೆಯನ್ನು ತಿಳಿಸದ್ದಕ್ಕಾಗಿ ರೆಶ್ನಿಂಗ್ ಉತ್ತರ ಕ್ಷೇತ್ರಕ್ಕೊಳಪಟ್ಟ ಬಿ. ವಾಮನ, ವಾಗು, ರುಕ್ಕಯ್ಯ ಆಚಾರಿ, ಸೋಮಕ್ಕೆ, ಗುಲ್ಲಿ, ಪುರುಷೋತ್ತಮ ಪೈ ಮತ್ತು ರೇಶನಿಂಗ್ ಕಾನೂನು ಮೀರಿದ ಮಂಜುನಾಥ ಮತ್ತು ಮುಂಡಪ್ಪ

ಮೂರ್ಖಾನಂದ ಸ್ವಾಮಿಗೆ ಶಿಕ್ಷೆ!

ಹುಲಿಯ 'ಆತ್ಮಹತ್ಯ', ಶಿಖಾರಿ

ಕಲೆಕ್ಟರರಿಗೆ ಪೋಲಿಸ್ ಪಂದ್ಯಾಟ ಬಹುಮಾನ— ಮಂಗಳೂರಲ್ಲಿ ಗೋಕರ್ಣ ಮಠಾಧೀಶರು

ಪುಜಾರಿ ಇವರುಗಳ ಮೇಲೆ ಮೊಕದ್ದಮೆ ಹೂಡಲಾಗಿದೆ.

ಕುದ್ರೋಳಿಯ ಪಳ್ಳಿ ಬ್ಯಾರಿ ಎಂಬವರು ಲೆಸೆನ್ಸ್ ಇಲ್ಲದ ಸುಮಾರು ೮ ಸಾವಿರ ರೂಪ್ಯಾ ಬೆಲೆಯ ಜವಳಿ ಬಟ್ಟೆಯನ್ನು ಇರಿಸಿಕೊಂಡಿದ್ದಕ್ಕೆ ೧ ವರ್ಷದ ಶಿಕ್ಷೆ ವಿಧಿಸಲಾಗಿದೆ. ಅಪೀಲಿನಲ್ಲೂ ಈ ಶಿಕ್ಷೆ ಕಾಯಂ ಆಗಿದೆ. ನಾಗರೀಕರು ಯುದ್ಧ ಕಾಲದ ನಿಯಮಗಳನ್ನು ಪಾಲಿಸಬೇಕಾದುದು ಸುರಕ್ಷಿತವಾದುದು.

ಗೌವರ್ನಮೆಂಟ್ ಕೋಲೆಜ್ ಯೂನಿಯನ್ ಮತ್ತು ಎತ್ಲಟಿಕ್ ಸಂಘದವರ ವಾರ್ಷಿಕೋತ್ಸವಗಳು ಕ್ರಮವಾಗಿ ಶ್ರೀ. ಸೋಮಶೇಖರ ರಾವ್ ವಕೀಲ್, ಮತ್ತು ಶ್ರೀ. ಎ. ಬಿ. ಶೆಟ್ಟಿ ಇವರುಗಳ ಘನ ಅಧ್ಯಕ್ಷತೆಯಲ್ಲಿ ಜರಗಿ ಭಾಷಣ ಬಹುಮಾನ ವಿತರಣಗಳೂ ನಡೆದವು.

ಕಾಗದದ ವಿತರಣೆಯ ಕೆಲಸವನ್ನು ಇನ್ನು ಮುಂದೆ ಕಮ್ಮರ್ಶಿಯಲ್ ಟೇಕ್ಸ್ ಆಫೀಸರರಿಂದ ನಡೆಸಲಾಗುವುದಿಲ್ಲ. ಕಾಗದ ವ್ಯಾಪಾರಸ್ಥರು 'ಕಾಗದ ನಿಯಂತ್ರಣ' ಕಾನೂನಿಗನುಗುಣವಾಗಿ ಎಲ್ಲವನ್ನೂ ನಿರ್ವಹಿಸಬೇಕು. ಪರ್ಮಿಟುಗಳನ್ನು ಕಮ್ಮರ್ಶಿಯಲ್ ಟೇಕ್ಸ್ ಆಫೀಸಿನಿಂದ ಕೊಡಲಾಗುವುದಿಲ್ಲವೆಂದು ಸದ್ರಿ ಆಫೀಸರರು ತಿಳಿಸುತ್ತಾರೆ.

ರೈಲ್ವೆ ಸ್ಟೇಶನಿನಿಂದ ಕಲೆಕ್ಟರರ ಬಂಗಲೆ ತನಕ ಜಟ್ಕಾ ಬಾಡಿಗೆ ಕ್ರಯಪ್ರಕಾರವಾದರೆ ಸುಮಾರು ಹತ್ತು ಹದಿನೆರಡಾಣೆಯಾಗುತ್ತದೆ. ಆದರೆ ನಾರಾಯಣ ಶೆಟ್ಟಿ ಎಂಬ ಜಟ್ಕಾವಾಲನು ಒಂದುವರೆ ರೂಪಾಯಿಯಷ್ಟು ವಸೂಲಿ ಮಾಡಿದಕ್ಕೆ ೧೫ ದಿಂಗಳ ಶಿಕ್ಷೆಗೂ ಐವತ್ತು ರೂಪ್ಯಾ ಜುಲ್ಮಾನೆಗೂ ಒಳಗಾಗಿರುವನು. ನಗರದ ಎಲ್ಲಾ ವಾರ್ಡುಗಳಿಗೂ ಪ್ರಾಮುಖ್ಯ ಸ್ಥಳಗಳಿಂದ ಇಂತಿಷ್ಟೆ ಬಾಡಿಗೆಯಾಗುತ್ತದೆಂದು ಸೂಚಿಸುವ ಒಂದು ಯಾದಿಯನ್ನು ಪ್ರಕಟಿಸಿದರೆ ಗಾಡಿಯವರಿಗೂ ಪ್ರಯಾಣಿಕರಿಗೂ ಸುಲಭವಾಗುವುದು.

ಹಂಪನಕಟ್ಟೆಯ ಸಿಡಿ ಮದ್ದು ಗುಂಡಿನ ವ್ಯಾಪಾರಿಗಳಾದ ಶ್ರೀ. ಕೇಶವ ಮತ್ತು ಮಾಧವ ಕಿಣಿ ಎಂಬವರಿಗೆ ಅತೀ ಲಾಭಕ್ಕಾಗಿ ೩ ತಿಂಗಳ ಸಜೆಯೂ ಒಂದೊಂದು ಸಾವಿರ ಜುಲ್ಮಾನೆಯೂ ಆಗಿದ್ದು ಅಪೀಲಿನಲ್ಲಿ ಸಜೆ ರದ್ದಾಗಿ ಜುಲ್ಮಾನೆ ಕಾಯಂ ಆಯಿತು.

ಕ್ರಯದ ಪಟ್ಟಿ ತೂಗಹಾಕದ್ದಕ್ಕೆ ಸೈಕಲ್ ವ್ಯಾಪಾರಿ ಶ್ರೀ. ಮಾಧವ ಲಚ್ಚಣ್ಣ ಕಾಮತ್ ಎಂಬವರಿಗೆ ೭೫ ರೂ. ಜುಲ್ಮಾನೆ ವಿಧಿಸಲಾಗಿದೆ.

ಶ್ರೀ. ಗಣೇಶ ವಾಚನಾ ಸಂಘದ ಆಶ್ರಯದಲ್ಲಿ ಶ್ರೀಶರವು ಮಹಾಗಣಪತಿ ದೇವಸ್ಥಾನದಲ್ಲಿ ಇದೇ ಮಾರ್ಚ್ ತಾ. ೧೦ನೆಯ ಶನಿವಾರ ಸಾಯಂ ೬ ಗಂಟೆಗೆ ದ. ಕ. ಜಿಲ್ಲಾ ಪ್ರಿನ್ಸಿಪಲ್ ಸಬೋರ್ಡಿನೇಟ್ ಜಡ್ಜರಾದ ಶ್ರೀಮಾನ್ ಎ. ಪರಮೇಶ್ವರ ಅಯ್ಯರ್ ಬಿ. ಎ. ಬಿ. ಎಲ್, ಅವರು ಭಾಷಣಕೊಡಲಿರುವರು. ಎಲ್ಲರಿಗೂ ಸುಸ್ವಾಗತವಿದೆ.

ಕಳೆದೆರಡು ವಾರಗಳಿಂದ ನಗರದಲ್ಲಿನ ಅಂಟುರೋಗಗಳ ಹಾವಳಿಯ ಕುರಿತು ವಿಶೇಷ ಘಟನೆಗಳು ಕೇಳಿಬರುತ್ತಿಲ್ಲ. ಅವು ಆರೋಗ್ಯಾಧಿಕಾರಿಗಳ ಪ್ರಯತ್ನದಿಂದ ಕೊಂಚ ಶಮನಗೊಂಡಂತೆ ಕಂಡುಬರುತ್ತದೆ. ಆದರೆ ನಾಗರೀಕರು ಪ್ರತಿಬಂಧಕ ಇಂಜೆಕ್ಷನ್, ದಾಕುಗಳನ್ನು ಹಾಕಿಕೊಳ್ಳುವುದು ಕ್ಷೇಮಕರ.

ಈಚೇಗೆ ಕೆಲವು ದಿವಸಗಳಿಂದ ನಗರದಲ್ಲೂ ಆಸುಪಾಸಿನಲ್ಲೂ ಮತ್ತು ಸಮುದ್ರ ಕರಾವಳಿಯಲ್ಲೂ ಗಾಳಿ ರಭಸವು ವಿಪರೀತವಾಗಿರುವುದು ಅನುಭವಕ್ಕೆ ಬಂದಿರುತ್ತದೆ. ಸಮುದ್ರದಲ್ಲಿ ಉಳ್ಳಾಲ ಬಳಿ ಕೆಲವು ಮೀನು ದೋಣಿಗಳು ಮುಗುಚಿಬಿದ್ದಿರುವುದಾಗಿ ವದಂತಿ ಇದೆ. ಪ್ರಾಣಹಾನಿ ಆಗಿಲ್ಲ.

ನಗರದ ಸಿಟಿ ಬಸ್ಸಿನ ಚಲಾವಣೆ ಮಾರ್ಗಗಳ ಕುರಿತು ಅಧಿಕಾರಿಗಳು ಸ್ವಲ್ಪ ಬದಲಾವಣೆ ಮಾಡುವರೆ ಯೋಚಿಸುತ್ತಿರುವುದಾಗಿ ಊಹೆಗಳಿವೆ. ರಥಬೀದಿಯು ಇಕ್ಕಟ್ಟೂ ಮತ್ತು ತುಂಬ ಜನಸ್ತೋಮದ ಚಲನವಲನಗಳುಳ್ಳದ್ದೂ ಆಗಿರುವುದರಿಂದ ಉರ್‍ವಕ್ಕೆ ಹೋಗುವ ಹಾದಿಯನ್ನು ಬಂದರ್ ಪೋಲಿಸ್ ಸ್ಟೇಶನ್ ಬಳಿಯಿಂದ ಹಾದು ರಥಬೀದಿಯ ಕೆಳ ಪೇಟೆಯಿಂದ ಹೋಗುವರೆ ಯೋಗ್ಯವೆಂದು ಸೂಚನೆಯಿದೆಯಾಗಿ ಕೇಳಿಬರುತ್ತದೆ.

ಇಲ್ಲಿಯ ಸುಪ್ರಸಿದ್ಧ ವರ್ತಕರೂ, ಧರ್ಮಸೇವಾನಿರತರೂ ಆಗಿರುವ ಶ್ರೀ. ವಿಠಲ್ ಶಾಂತಾರಾಮ್ ಕುಲಕರ್ಣಿ ಅವರ ಧರ್ಮ ಪತ್ನಿಯವರು ಕೆಲವೇ ದಿನಗಳ ಅಸೌಖ್ಯದಿಂದ ತಾ. ೭ರಂದು ನಿಧನ ಹೊಂದಿದರೆಂದು ತಿಳಿಸಲು ವಿಷಾಧಿಸುತ್ತೇವೆ. ನಗರದ ಅನೇಕ ಕಡೆಗಳಲ್ಲಿ ಶ್ರೀ. ಕುಲಕರ್ಣಿಯವರ ಅನೇಕಾನೇಕ ಸಾರ್ವಜನಿಕ ಉಪಯೋಗದ ಸೇವಾ ಕಾರ್ಯಗಳು ಇವೆ. ಈಚೇಗೆ ಲೈನ್ ಮೈದಾನಿನಲ್ಲಿ ಒಂದು ಹೂತೋಟವನ್ನು ಮುನ್ಸಿಪಾಲಿಟಿಯವರು ರಚಿಸುವುದಾದರೆ ತಾವು ೨ ಸಾವಿರ ರೂ.ಗಳನ್ನು ಕೊಡುವುದಾಗಿ ಶ್ರೀಯುತರು ವಾಗ್ದಾನಮಾಡಿದ್ದು ಆ ಯೋಜನೆಯು ಪರ್ಯಾಲೋಚಿಸಲ್ಪಡುತ್ತದೆ. ಈ ಲೋಕಸೇವಾಸಕ್ತರ ದುಃಖದಲ್ಲಿ ಎಲ್ಲರೂ ಭಾಗಿಗಳಾಗಿರುವರು. ಅವರ ಮೃತ ಪತ್ನಿಯವರ ಆತ್ಮಕ್ಕೆ ಶಾಂತಿ ಕೋರುವೆವು.

ಪ್ರೊ। ಬಿ. ಎಲ್. ಪುತ್ರನ್ ಅವರ ಕೃಷ್ಣಾಂಜನೇಯ ಪ್ರಸಾದಿಕ ನವ ಜೀವನ ವ್ಯಾಯಾಮ ಶಾಲೆಯ ೧೫ನೇ ವಾರ್ಷಿಕೋತ್ಸವವು ಇದೇ ಕಳೆದ ೪ರಲ್ಲಿ ಕೆನರಾ ಹೈಸ್ಕೂಲಿನ ಹ್ಯಾಲೆಂಡ್ಸ್ ಕ್ರೀಡಾರಂಗದಲ್ಲಿ ಜರಗಿತು. ರಾ. ಬ. ಎಂ. ಕೆ. ನಂಬಿಯಾರ್ ಅವರು ಅಂದಿನ ಅಧ್ಯಕ್ಷರು. ಶ್ರೀ. ಪುತ್ರನ್ನರು ಮತ್ತು ಅವರ ಶಿಷ್ಯ ವರ್ಗದವರ ಮನಸ್ಸಿಗೆ ಒತ್ತುವಂತಹ ವ್ಯಾಯಾಮ ಕಸರತ್ತು ಆಟಗಳೂ, ಶಕ್ತಿ ಪ್ರದರ್ಶನಗಳೂ ಇದ್ದವು. ಹೆಚ್ಚೆಚ್ಚಾಗಿ ಶಿಕ್ಷಿತ ತರುಣರು ಇಂತಹ ವ್ಯಾಯಾಮ ಶಾಲೆಗಳಿಗೆ ಸೇರಿ ಶಾಸ್ತ್ರೀಯವಾದ ಶರೀರಾರೋಗ್ಯದ ಜ್ಞಾನವನ್ನು ಸಂಪಾದಿಸಬೇಕೆಂದು ಹಾರೈಸುವೆವು.

ಹಜೂರ್ ಕಛೇರಿಯಲ್ಲಿ ಮಾನ್ಯ ಕಲೆಕ್ಟರರ ನೇತೃತ್ವದಲ್ಲಿ ಜಿಲ್ಲಾ ಪಿರಿಯಾಡಿಕಲ್ ಕಾನ್ಫರೆನ್ಸ್ ಜರುಗಿದುದರ ನಿರ್ಣಯಗಳಲ್ಲಿ ಸರಕಾರಿ ಆಫೀಸು ಕೌಂಪಾಂಡು, ರಸ್ತೆಪಕ್ಕ ಮೊದಲಾದ ಕಡೆಯಲ್ಲಿರುವ ಹುಣಿಸೆ ಗಿಡಗಳಿಗೆ ನೀರು ಹಾಕಿಸಿ ಅವನ್ನು ಸಾಕುವ ವಿಚಾರದಲ್ಲಿ ಯಾವತ್ತು ಆಫೀಸರರುಗಳು ಆಸಕ್ತಿವಹಿಸಬೇಕೆಂದು ತಿಳಿಸಲಾಗಿದೆ.

ಕಳೆದ ಫೆಬ್ರುವರಿ ತಾ. ೨೬ರಂದು ಬೆಳಿಗ್ಗೆ ಕಟಪಾಡಿಯ ಕಲ್ಲಂಕ ಬಳಿ ಜನರು ಗುಂಪುಗುಂಪಾಗಿ ನೆರೆದಿದ್ದು ಹತ್ತಿರ ಹೋಗಿ ನೋಡುವಾಗ ಅಲ್ಲಿನ ನೀರಿದ್ದ ಬಾವಿಯಲ್ಲಿ ಓರ್ವ ಹುಲಿರಾಯನು ಈಜಾಡುತಿದ್ದುದು ತೋರಿ ಬಂತು. ಈ ಅಪಾಯಕಾರಕ ಪ್ರಾಣಿಯನ್ನು ಹತ್ತಿರದ ಕಲ್ಲುಗಳಿಂದಲೇ ಹೊಡೆದು ಜನರು ಕೊಂದು ಹಾಕಿದರು. ನಿತ್ಯದ ಬೇಟೆ ಸಂಚಾರಕ್ಕೆ ಬಂದಾಗ ಕಾಲು ತಪ್ಪಿ ನೀರು ಗುಂಡಿಯಲ್ಲಿ ಬಿದ್ದ ಹುಲಿಗೆ ಮೇಲೆ ಬರಲಾಗಲಿಲ್ಲ. ಅಂತೂ ಸುಲಭದಲ್ಲಿ ಸ್ವಲ್ಪ ತೊಂದರೆ ಕಡಿಮೆಯಾಯಿತು.

ಬಾರಕೂರ ಕಡೆಯಲ್ಲೂ ಹುಲಿ ಕಾಟ ತುಂಬಾ ಇದೆ. ಅಲ್ಲಿ ಕೆಲಸಮಯದಿಂದ ಬೊಂಬ್ಬಾಯ ತಮ್ಮ ಕೆಲಸದಿಂದ ನಿವೃತ್ತರಾಗಿ ಬಂದಿರುವ ಮಿ। ಸಿಕೇರಾ ಎಂಬವರು ಇದು ತನಕ ಎಂಟು ಹುಲಿಗಳನ್ನು ಕೊಂದು ಜನರಿಗೆ ಮಹದುಪಕಾರ ಮಾಡಿರುವರು. ಕಳೆದ ತಿಂಗಳಲ್ಲೇ ಎರಡನ್ನು ಪೂರ್ತಿಗೊಳಿಸಿದ್ದಾರೆ. ಶ್ರೀ ಸಿಕೇರರು ನುರಿತ ಶಿಖಾರಿಗಳೆಂಬುದು ನಿಸ್ಸಂದೇಹ. ಅವರಿಗೆ ಅಖಿಲ ಭಾರತ ಕೋವಿ ಲ್ಯಾಸೆನ್ಸ್ ಇದೆ. ಈ ಮಹನೀಯರು ತಮ್ಮ ಅನುಕೂಲ ಸಮಯದಲ್ಲಿ ಹುಲಿ ಕಾಟದ ನಮ್ಮ ಜಿಲ್ಲೆಯ ಇತರ ಕಡೆಗಳನ್ನು ಸಂದರ್ಶಿಸಿದರೆ ಬಹಳ ಚೆನ್ನಾಗಿತ್ತು.

ಉಡುಪಿ ಸಂತೆ ಕಟ್ಟೆಯ ಬಳಿ ಪ್ರಯೋಗಾರ್ಥವಾಗಿ ಒಂದು ಅಂಚೆ ಕಟ್ಟೆಯನ್ನು ತೆರೆಯಲಿರುವರು. ಪ್ರಾಮುಖ್ಯತೆಯಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿಯಾಗುತ್ತಲಿರುವ ಈ ಪಟ್ಟಣಕ್ಕೆ ಶೀಘ್ರವಾಗಿ ಮುಟ್ಟುವ ಟಪ್ಪಾಲು ವ್ಯವಸ್ಥೆಯಿರಬೇಕಾದುದು ಅತ್ಯಾವಶ್ಯಕ. ಕೆಲ ದಿನಗಳ ಹಿಂದೆ ಈ ವಿಷಯ ಕುರಿತು ಪ್ರಮುಖರು ಪೋಸ್ಟ್‌ಮಾಸ್ಟರ್ ಜನರಲ್ ಅವರಲ್ಲಿ ಇದರ ಕುರಿತು ಭಿನ್ನವಿಸಿಕೊಳ್ಳಲಾಗಿ ಅವರು ಟ್ರೆಫಿಕ್ ಬೋರ್ಡಿಗೆ ಮನವಿಮಾಡುವಂತೆ ಸೂಚಿಸಿದರು. ಇಲ್ಲಿಯ ಮುಂದಾಳುಗಳು ತ್ವರಿಯಾಗಿ ಟಪ್ಪಾಲಧಿಕಾರಿಯ ಸೂಚನೆಯಂತೆ ಮಾಡುವರೆಂದು ಹಾರೈಸಲಾಗಿದೆ.

ತಾ. ೧೧ರಂದು ಉಡುಪಿಯಲ್ಲಿ ಬೀಡಿ ಮಜೂರ ಸಂಘ ಮತ್ತು ನೇಕಾರರ ಸಂಘದವರ ಜೊತೆ ಆಶ್ರಯದಲ್ಲಿ ಒಂದು ಮಜೂರ ಸಮ್ಮೇಲನ ಜರಗಲಿದೆ. ಶ್ರೀ. ಎಚ್. ಮಂಜುನಾಥ ನಾಯ್ಕರು ಅಂದಿನ ಅಧ್ಯಕ್ಷರು. ಮಜೂರರು ಶಾಂತಿ ಸಮಾಧಾನ ರೀತಿಗಳಿಂದ ತಮ್ಮ ಕೇಳಿಕೆಗಳನ್ನು ಹೊಂದಲು ಪ್ರಯತ್ನಿಸಬೇಕು.

ಇಲ್ಲಿಯ ನೇಕಾರ ಸಂಘದ ಕಾರ್ಯದರ್ಶಿಗಳು ಸಂಘದ ಕಾರ್ಯಾರ್ಥವಾಗಿ ಹೋಗಿದ್ದಾಗ ಮಗ್ಗಗಳ ಮ್ಹಾಲಕರೊಬ್ಬರು ಅವಮಾನಿಸಿದರಂತೆ. ಮ್ಹಾಲಕರ ಈ ತರದ ವರ್ತನೆಯು ಖಂಡನಾರ್ಹವಿದೆ.

ತಾಲೂಕು ಹರಿಜನ ಪರಿಷತ್ತು

ಕಾಸರಗೋಡು ಟೌನ್ ಲೇಬರ್ ಶಾಲೆಯಲ್ಲಿ ತಾ. ೨೮-೩-'೪೫ರಲ್ಲಿ ತಾಲೂಕು ಹರಿಜನ ಪರಿಷತ್ತು ಹಗಲು ಜರಗಲಿರುವುದು. ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಶ್ರೀ. ಕೆ. ಕಣ್ಣನ್ M. L. A. (Malabar) ಇವರನ್ನು ಕೇಳಿರುತ್ತದೆ. ಹರಿಜನರ ಕಷ್ಟ ಪರಿಸ್ಥಿತಿಯು ಸಂಪೂರ್ಣ ಹಾಲಹವಾಲೆಗಳನ್ನು ಸರಕಾರಕ್ಕೆ ಹೇಳಿಕೊಳ್ಳುವುದೇ ಈ ಪರಿಷತ್ತಿನ ಉದ್ದೇಶವಿರುತ್ತದೆ. ಹರಿಜನ ಬಂಧುಗಳು ಈ ಸತ್ಕಾರ್ಯದಲ್ಲಿ ಭಾಗವಹಿಸುವಂತೆಯೂ, ತಮ್ಮ ಠರಾವು (ನಿರ್ಣಯ)ಗಳಿದ್ದರೆ ಈ ಕೆಳಗಿನ ವಿಳಾಸಕ್ಕೆ ತಾ. ೨೦-೩-೧೯೪೫ರೊಳಗೆ ಕಳುಹಿಸಿಕೊಡುವಂತೆಯೂ, ಸ್ವಾಗತ ಸಮಿತಿಯವರ ಕೋರಿಕೆ.

ವಿಶೇಷ ವಾರ್ತೆಗಳು

ಜಪಾನಿಯರು ತಮ್ಮ ಅನೇಕ ಪ್ರಾಮುಖ್ಯ ಕೈಗಾರಿಕೆ ಕಾರ್ಖಾನೆಗಳನ್ನು ಮಂಚೂರಿಯಾ ಕೊರಿಯಾಗಳ ಪ್ರದೇಶಕ್ಕೆ ಸಾಗಿಸುತ್ತಿರುವರಂತೆ.

* * *

ಬಂಗಾಳದಲ್ಲಿ ನಾತೋರ್ ರಾಜ್ ಎಂಬ ಚಿಕ್ಕ ಜಮಿನ್ದಾರೀ ಸಂಸ್ಥಾನ. ಅಲ್ಲಿನ ಖಜಾನೆಗೆ ಪೇಟೆಯು ೧೯೬ ಸಾವಿರ ರೂಪ್ಯಾ ನೋಟುಗಳ ಕಟ್ಟನ್ನು ಒಯ್ಯುವಾಗ ಒಂದು ದೊಡ್ಡ ಹದ್ದು ಆ ಗಂಟನ್ನು ಎತ್ತಿ ಹಾರಿ ಹೋಯಿತು. ಎಷ್ಟು ಗಲಾಟೆ ಮಾಡಿದರೂ ಹದ್ದು ಸಿಗಲೇ ಇಲ್ಲ. ಕಡೆಗೆ ಕೆಲವು ದಿವಸಗಳ ನಂತರ ಓರ್ವ ಸರಕಾರೀ ಅಧಿಕಾರಿಯ ಮನೆಯ ಮಾಡಿನ ಮೇಲೆ ಆ ಗಂಟು ಸಿಕ್ಕಿತು.

* * *

ಕೊಂಗ್ರೆಸ್ ಮುಖಂಡರನ್ನು ಸದ್ಯಕ್ಕೆ ಅವರವರ ಪ್ರಾಂತ್ಯದ ಜೈಲುಗಳಿಗೆ ಒಯ್ದು ಅಲ್ಲಿ ಅವರನ್ನು ಬಿಡುಗಡೆ ಮಾಡಲಾಗುವುದೆಂದೂ, ವ್ಯಾಸ್‌ರಾಯ್ ದೇಸಾಯಿ ಮಾತುಕತೆಗಳು ಯಶಸ್ವಿಯಾಗಿ, ಸರಕಾರವು ಕೇಂದ್ರದಲ್ಲೂ ಮತ್ತು ಪ್ರಾಂತ್ಯಗಳಲ್ಲೂ ರಾಷ್ಟ್ರೀಯ ಸರಕಾರ ಸ್ಥಾಪನೆಗೆ ಸಹಾನುಭೂತಿಯುಳ್ಳದ್ದಾಗಿದೆ. ಎಂದೂ ರಾಜಕೀಯ ಕೇಂದ್ರಗಳಲ್ಲಿ ನಿರೀಕ್ಷಿಸಲಾಗಿದೆಯಂತೆ.

* * *

[ಮಹಾತ್ಮಾಜಿಯವರ ಪ್ರತಿಭೆ ಮತ್ತು ನೇತೃತ್ವದಿಂದ ಜನ್ಮತಾಳಿದ ಮೂಲ ಶಿಕ್ಷಣ ಪದ್ಧತಿಯು (Basic Educational System) ಈಗ ಸುಮಾರು ೬ ವರ್ಷಗಳ ಬಾಲ್ಯಾವಸ್ಥೆಯನ್ನು ಕಳೆದು, ವಿದ್ಯಾಭಿಜ್ಞರ ಮತ್ತು ದೇಶಾಭಿಮಾನಿಗಳ ಪ್ರಯತ್ನ ಪ್ರಯೋಗಗಳಿಂದ ರೂಪಿತವಾಗಿ ಯುದ್ಧೋತ್ತರ ಶಿಕ್ಷಣ ಮಾರ್ಗದ ದಿಕ್ಸೂಚಿಯಾಗಿ ನಿಂತಿದೆ. ಅಂಥ ನವ ಶಿಕ್ಷಣ ಕ್ರಮದ ತತ್ವಾರ್ಥಗಳೇನೆಂಬುದನ್ನರಿತುಕೊಳ್ಳುವುದು ಸಂದರ್ಭೋಚಿತವಾಗಿದೆ.]

ಶಿಕ್ಷಣ ವಿಚಾರ:

ಮೂಲಶಿಕ್ಷಣದ ತತ್ವಾರ್ಥವೇನು

ಶಿಕ್ಷಣವು ಮೂಲತಃ ಸಮಾಜಬದ್ಧವಾದುದು. ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಈ ಮೂಲೋದ್ದೇಶವೆಲ್ಲೋ ಮೂಲೆಪಾಲಾಗಿದೆ. ಶಿಕ್ಷಣ ಪದ್ಧತಿಯು ಕೋಟಿಗಟ್ಟಳೆಯಲ್ಲಿರುವ ನಮ್ಮ ದೇಶದ ಜನರ -ಸಮಾಜದ- ಯಾವ ಯಾವ ಸ್ಥಿತಿ-ಸಮಸ್ಯೆಗಳನ್ನೂ, ಸೋಲು-ಸಂಕಷ್ಟಗಳನ್ನೂ ವಿಚಾರಿಸಿಕೊಂಡು ಬಗೆಹರಿಸಬೇಕಾಗಿದೆ ಎಂಬುದನ್ನು ಪರಿಶೀಲಿಸುವ. ಜನತೆಯಲ್ಲಿ ಮೌಢ್ಯವೂ, ಅನಕ್ಷರತೆಯೂ ತುಂಬಿದೆ. ಜನ ಸಾಮಾನ್ಯರು ಸಭ್ಯನಾಗರಿಕ ತತ್ವ ಬಾಹಿರರಾಗಿರುವರು; ಬಡತನ, ಅಪೌಷ್ಟಿಕಾಹಾರಗಳಿಂದ ಸೊರಗಿರುವರು; ಸ್ವಚ್ಛತೆ ಮತ್ತು ಶುದ್ಧತೆಗಳ ಕಡೆಗೆ ಉದಾಸೀನರಾಗಿರುವರು; ಆಧುನಿಕ ಉಚ್ಚ ಸಂಸ್ಕಾರ ಜ್ಞಾನ ಹೀನರಾಗಿರುವರು. ಈ ಹಿನ್ನಲೆಯಲ್ಲಿ ಶಿಕ್ಷಣ ಸಮಸ್ಯೆಯನ್ನು ಇರಿಸಿದರೆ ಎರಡು, ಮೂರು ವಿಚಾರಗಳೆದ್ದು ಕಾಣುವುವು. ಮೊದಲನೆಯದು, ಶಿಕ್ಷಣ ಕ್ರಮವು ವಿಸ್ತರಿಸಿ ಜನತೆಯ ಮನೆ ಬಾಗಿಲಿಗೆ ವಿದ್ಯೆಯು ಬಂದುನಿಲ್ಲಬೇಕೆಂದುದು. ಇದಕ್ಕೆ ಹೇರಳ ಹಣವೆಚ್ಚವಿರುವುದೇನೋ ನಿಜ. ಆದರೆ ಇತರ ದೇಶಗಳಂತೆ ನಮ್ಮ ದೇಶದ ಸರ್ಕಾರವು ಕೂಡಾ ಈ ಕಾರ್ಯವನ್ನು ತನ್ನ ಆದ್ಯ ಕರ್ತವ್ಯಗಳಲ್ಲೊಂದು ಎಂದು ಎಣಿಸಿ ವರ್ತಿಸಿದರೆ ಇದು ಸುಲಭ ಸಾಧ್ಯ. ಎರಡನೆಯದಾಗಿ ವಿದ್ಯಾಭ್ಯಾಸದ ಸ್ವರೂಪ. ಯಾವುದಾದರೊಂದು ತರದ ವಿದ್ಯಾಭ್ಯಾಸ ದೊರೆತರಾಯಿತೆಂದರಾಗದು. ಜನತೆಯ ಅಗತ್ಯಗಳಿಗೂ ಆದರ್ಶಗಳಿಗೂ ಸರಿಬೀಳುವಂತೆ ವಿದ್ಯಾಭ್ಯಾಸದ ಕ್ರಮ ಮತ್ತು ತತ್ವಗಳಿರಬೇಕು. ಜನ ಸಾಮಾನ್ಯರ ಜೀವನದ ಅತಿ ಪ್ರಾಮುಖ್ಯ ಸೂತ್ರವೆಂದರೆ "ಕೆಲಸ", (ದುಡಿಮೆ.) ಉದ್ದೇಶಪೂರ್ಣ ದುಡಿತವೇ (ಚಟುವಟಿಕೆಯೇ) ಜನ ಜೀವನದ ಜೀವಾಳ. ಮೂಲ ಶಿಕ್ಷಣ ಸುಧಾರಣೆಗೆ ಇಂಥ ಚಟುವಟಿಕೆ ಅಥವಾ ವೃತ್ತಿಯೇ ಕೇಂದ್ರವಾಗಿರಬೇಕು. ಉಪಯೋಗಕರ ಚಟುವಟಿಕೆಯಿಂದ ವಿದ್ಯಾಭ್ಯಾಸವು ಸಹಜವಾಗಿಯೂ, ಸುಲಭವಾಗಿಯೂ, ಕುಶಲವಾಗಿಯೂ ಸಾಗುವುದೆಂಬುದು ಮನಶ್ಶಾಸ್ತ್ರಜ್ಞರೆಲ್ಲರೂ ಅನುಮೋದಿಸುವ ವಿಷಯ. ಅಲ್ಲದೆ ಉಪಯೋಗಕರ ಕೆಲಸವೇ ಮಾನವ ಜೀವನದ ಅಸ್ತಿವಾರ. ವಿದ್ಯಾಭ್ಯಾಸವು ಜನತೆಯ ಜೀವನ, ಶ್ರಮ ಮತ್ತು ಅನುಭವಗಳ ಸ್ಥಿತಿ-ಸಂದರ್ಭಗಳಿಗೆ ಹೊಂದಿಕೊಂಡಿರಬೇಕಾದರೆ, ಅದು ಉಪಯುಕ್ತ ಕಾರ್ಯಾನುವರ್ತಿಯಾಗಲೇಬೇಕು.

ಆದರೆ ಮನುಷ್ಯ ನಿರ್ಮಿತ ಯಂತ್ರೋದ್ಯೋಗಗಳು ಅವನ ಸಹಜ ಕ್ರಿಯಾಕಲಾಪಗಳಿಗೆ ಪ್ರತಿಕೂಲವಾದಲ್ಲಿ ಅಂಥ ಕೆಲಸವು ನಿಸ್ಸಾರವೂ, ನಿಸ್ತೇಜವೂ ಆಗುವುದು. ಕಾರ್ಯೋತ್ಸಾಹವಿಲ್ಲದ ಕಾರ್ಯಯೋಜನೆ ಯಾವ ಪುರುಷಾರ್ಥದ್ದು? ನವಶಿಕ್ಷಣದ ತತ್ವ ಪ್ರಕಾರ ಶಾಲಾ ಕಾರ್ಯಕ್ರಮದಲ್ಲಿ ಉತ್ಪಾದಕ, ಫಲದಾಯಕ, ಸಾರ್ಥಕ ಮತ್ತು ಉದ್ದೇಶಪ್ರೇರಿತ ಕ್ರಿಯೆಗಳಿಗೆ ಪ್ರಧಾನ ಸ್ಥಾನ ಸಲ್ಲುವುದು. ನಮ್ಮ ಈಗಿನ ಪಾಠಕ್ರಮಗಳಲ್ಲಿ ಮನಶ್ಶಾಸ್ತ್ರ ಮತ್ತು ನೀತಿ ಶಾಸ್ತ್ರಗಳೊಪ್ಪದ ಪಾಠವಿಧಾನ, ಪಾಠಪಟ್ಟಿ, ಶಿಸ್ತು, ಕಾರ್ಯಕ್ರಮ ಮತ್ತು ಮೇಲಾಟಗಳಿಗೆ ಪ್ರಾಶಸ್ತ್ಯವನ್ನು ಕೊಡುವ ಪದ್ಧತಿ ಬೆಳೆದು ಬಂದಿದೆ. ಶಿಕ್ಷಣವು ಉತ್ತಮ ವ್ಯಕ್ತಿ ಮತ್ತು ಉತ್ತಮ ಸಮಾಜ ನಿರ್ಮಾಣ ಕಾರ್ಯದಲ್ಲಿ ಪೋಷಕವೆನಿಸಬೇಕಾದರೆ ಸ್ವಾರ್ಥದ ಬದಲು ಸೇವೆ, ಸ್ಪರ್ಧೆಯ ಬದಲು ಸಹಕಾರ ಹೆಚ್ಚಬೇಕು.

ನವ ಶಿಕ್ಷಣದ ಇನ್ನೊಂದು ತತ್ವವೆಂದರೆ ವಿದ್ಯಾಭ್ಯಾಸದ್ವಾರಾ ಸರಿಯಾದ ದೇಶಪ್ರೇಮವನ್ನು ಕುದುರಿಸುವುದು. ನಮ್ಮ ದೇಶದ ಪ್ರಾಚೀನ ಪರಂಪರೆಗಳ ಮತ್ತು ಐತಿಹಾಸಿಕ ಮಹತ್ವದ ಕುರಿತು ಮಕ್ಕಳು ಅಭಿಮಾನ ತಾಳುವಂತಿರಬೇಕು. ವಿದ್ಯಾ ಪದ್ಧತಿ ತಪ್ಪೇ ಇರಲಿ, ಒಪ್ಪೇ ಇರಲಿ ನಮ್ಮ ದೇಶವೇ ಮೇಲೆಂಬ ಹಟ ಮಾರಿತನಕ್ಕೆಡೆಯಾಗದೆ ಶ್ರೇಷ್ಠ ಮತ್ತು ಯೋಗ್ಯ ವಿಷಯಗಳ ಕಡೆಗೆ ಆದರೂ ಅಲ್ಪ-ಅಯೋಗ್ಯ ಭಾವನೆಗಳ ಕುರಿತು ತಿರಸ್ಕಾರವೂ ಹುಟ್ಟುವಂತೆ ಮಾಡಬೇಕು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಾಮಾಜಿಕ ಮತ್ತು ವಿದ್ಯಾ ಸಂಸ್ಥೆಗಳ ಮೂಲಕ ತನ್ನ ದೇಶ ಒಂದೇ ಶ್ರೇಷ್ಠ ಮತ್ತು ಮಿಗಿಲು ಎಂಬುದನ್ನು ಮುಂದಿಟ್ಟು ಕೊಂಡದ್ದರಿಂದಲೇ ಇಂದಿನ ಯುದ್ಧೋತ್ಪಾದಿ ಅನಾಹುತ ಪರಂಪರೆ ಉದ್ಭವಿಸಿವೆ ಎಂಬುದನ್ನು ಮರೆಯಲಾಗದು.

ಇದನ್ನನುಸರಿಸಿ ಬರುವ ಇನ್ನೊಂದು ವಿಚಾರ ನಮ್ಮ ದೇಶದ ಜನತೆ, ಮತ, ಸಂಸ್ಕೃತಿ, ಭಾಷೆ ಮತ್ತು ಸಮಾಜ, ಇವುಗಳ ರೀತಿ ನೀತಿಗಳಲ್ಲಿ ತೋರುವ ವೈವಿಧ್ಯ. ಈ ವಿವಿದತೆಯ ನಡುವೆ ಐಕ್ಯ ಸೂತ್ರವಿದೆ ಎಂಬುದೂ ಗಮನಾರ್ಹವಾದುದು. ಮೇಲಿಂದ ಮೇಲೆ ತೋರುವ ವ್ಯತ್ಯಾಸಗಳು ನಮ್ಮ ದೇಶದ ಇತಿಹಾಸ ಸಾಗರಕ್ಕೆ ಸೇರಿದ ಭಿನ್ನ ಭಿನ್ನ ಸಂಸ್ಕೃತಿಗಳ ಹೊಳೆಗಳಂತಿವೆ; ದೇಶದ ಸಮಷ್ಟಿ ಸಂಸ್ಕೃತಿಗೆ ವಿಶಿಷ್ಟ ಮಿರುಗನ್ನು ಕೊಟ್ಟಿವೆ. ಆದರೆ ಇದರಿಂದ ವೈರ-ವೈಷಮ್ಯಗಳೂ ಬೆಳೆಯಲವಕಾಶವಾಗಿದೆ. ನವ ಶಿಕ್ಷಣ ಕ್ರಮದಲ್ಲಿ ಮಕ್ಕಳು ತಮ್ಮದಲ್ಲದ ಹಾಗು ಭಿನ್ನವಾದ ಮತೇತ್ಯಾದಿ ವಿಚಾರಗಳನ್ನು ಶಾಂತ-ನಿಷ್ಪಕ್ಷಪಾತ ಬುದ್ಧಿಯಿಂದ ತಿಳಿದು ಗೌರವಿಸುವಂತೆ ಸಹಿಷ್ಣುತೆಯು ಬೆಳೆಯಬೇಕು. ಹಾಗಾಗಾದಲ್ಲಿ ತಿಕ್ಕಾಟಗಳ ಕಿಡಿಯೇ ರಾಷ್ಟ್ರ ಜೀವನವನ್ನು ಸುಡುವ ಪ್ರಬಲಾಗ್ನಿಯಾಗುವುದು. ಇದು ಬರೀ ಹಿಂದು ಮುಸಲ್ಮಾನರ ಐಕ್ಯದ ಮಾತು ಮಾತ್ರವಲ್ಲ ಇದಕ್ಕಿಂತಲೂ ವಿಶಾಲ ಮತ್ತು ಮಹತ್ತರವಾಗಿದೆ. ನಮ್ಮ ದೇಶದ ಸಂಸ್ಕೃತಿಯ ವ್ಯತ್ಯಾಸಗಳನ್ನು ಉದಾರ ಮನಸ್ಸಿನಿಂದ ತಿಳಿಯಲು ಬಾರದ ವ್ಯಕ್ತಿಯು ಶಿಕ್ಷಿತನೆನ್ನಿಸಲಾರನು. ಮುಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಈ ರೀತಿಯ ಸಹನೆ ಬೆಳೆಯಬೇಕಾದರೆ ಬೇರೆ ಬೇರೆ ಮತ ಜನಾಂಗಗಳು ಇತರರಿಂದಲೂ ಈ ದೇಶದ ಅಭಿವೃದ್ಧಿಗೆ ಏನೇನು ಸಹಾಯವಾಗಿದೆ ಎಂಬುದನ್ನು ಕಲಿತುಕೊಳಬೇಕು.

ಜೀವನದಲ್ಲಿ ಕಷ್ಟಕರ ಮತ್ತು ಪ್ರಯತ್ನ ಶ್ರದ್ಧೆಗಳಿಂದ ಪ್ರೇರಿತವಾದ ಕೆಲಸಗಳನ್ನು ಮಾಡಲು ಶಕ್ತರಾಗುವುದು ಅಗತ್ಯವೆಂಬುದನ್ನು ಬಾಲಕ ಬಾಲಕಿಯರೆಲ್ಲರೂ ತಿಳಿದಿರಬೇಕು. ಇಂದಿನ ಸಾಮಾನ್ಯ ಮನೋವೃತ್ತಿ ಹೇಗಿದೆ ಎಂದರೆ "ನಾನು ಹೇಗೆ ಶ್ರೀಮಂತನಾಗಬಲ್ಲೆ? ಮತ್ತು ಹೇಗೆ ಬೇಗ ಮುನ್ನುಗ್ಗಬಲ್ಲೆ? ಸ್ವಲ್ಪ ಶ್ರಮದಿಂದ ಹೆಚ್ಚು ಪ್ರಯೋಜನ ಪಡೆಯುವ ಮರ್ಮ ಯಾವುದು." ಎಂದು ಇಂಥ ಮನೋವೃತ್ತಿಯವರಿಗೆ ಭಾವಿ ಶಿಕ್ಷಣ ಕ್ರಮದಲ್ಲಿ ಸ್ಥಾನವಿಲ್ಲ. ಶ್ರಮವುಳ್ಳ ಕೆಲಸಕ್ಕೆ ಹಿಂಜರಿಯುವ ಬದಲು ಅದನ್ನು ಸ್ಥಿರ ಪ್ರಯತ್ನದಿಂದಲೂ ನಿಷ್ಠೆಯಿಂದಲೂ ಮಾಡುವುದರಲ್ಲಿಯೇ ಜೀವನದ ಸಾರ್ಥಕತೆ ಇದೆ ಎಂದು ನಂಬುವ ಕೆಲಸಗಾರರೂ, ಕಸಬಿನವರೂ, ಕೂಲಿಗಾರರೂ, ಉದಯಿಸಬೇಕಾಗಿದೆ. ನವ ಶಿಕ್ಷಣ ಪದ್ಧತಿಯಿಂದ ಪರಸ್ಪರ ಸಹಾಯದಿಂದ 'ಉದ್ದೇಶ ಪೂರ್ವಕ ಕೆಲಸ ಮಾಡುವುದರಿಂದ ವಿದ್ಯಾರ್ಥಿಗಳಿಗೆ ತಮ್ಮ ಚಟುವಟಿಕೆಯ ಗೊತ್ತು ಗುರಿಗಳನ್ನು ಸಾಧನೋಪಾಯಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಬರೀ ಗಿಳಿಯೋದಿನ ಪಾಠಗಳಿಂದಾದರೂ ಏನು ಪ್ರಯೋಜನ? ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ವತಃ ದುಡಿದುಗಳಿಸಿದ ಜ್ಞಾನವು ನಿಶ್ಚಿತವೂ, ಸ್ಪಷ್ಟವೂ ಆಗುವುದು; ಪರಸ್ಪರ ಸಹಕಾರದಿಂದಲೇ ಮಾನವನ ಏಳಿಗೆ ಎಂಬ ನೀತಿ ಪಾಠವೂ ಮುಂದಟ್ಟಾಗುವುದು.

ಸಮಾಜದ ಅಂಗವೆನಿಸಿ, ಅದರಲ್ಲಿ ಸೇರಿದ ಜನರ ಸುಖ-ದುಃಖಗಳಲ್ಲಿ ಸಹಭಾಗಿಯಾಗುವ ವ್ಯಕ್ತಿಯನ್ನು ರೂಪಿಸುವುದೇ ಈ ಶಿಕ್ಷಣದ ಗುರಿ. ವಿದ್ಯಾವಂತರು ಸಮಾಜದಿಂದ ಸಾಮಾನ್ಯ ಜನತೆಯಿಂದ ದೂರವಾಗಿ ಬೇರೆಯೊಂದು ಮುಡಿ ಕೂಟದವರೆಂಬ ಭಾವನೆ ಬೆಳೆದುದರಿಂದ ಆದ ಹಾನಿ ಅಷ್ಟಿಷ್ಟಲ್ಲ. ತನ್ನ ದೇಶದ ಹಾಗೂ ಭೂಲೋಕದ ಇತರ ಜನ ಜನಾಂಗಗಳೊಡನೆ ಐಕ್ಯ-ಸ್ನೇಹಗಳನ್ನು ನೆಲೆಗೊಳಿಸುವುದು ಮುಖ್ಯವೆಂದು ತಿಳಿಯುವುದು ಪ್ರತಿಯೊಬ್ಬನ ಆದ್ಯ ಕರ್ತವ್ಯ. ಸಹಿಷ್ಣುತೆ ಸಹಾನುಭೂತಿ ನಿಷ್ಕಪಟ ಶ್ರಮ ಜೀವನ ಇವು ಇವನಲ್ಲಿ ಮೊಳೆಯಬೇಕಾದ ಇತರ ಗುಣಗಳು. ಈ ದಾರಿಯಲ್ಲಿ ಸೋವಿಯಟ್ ರಷ್ಯಾವು ಕೈಗೊಂಡ, ಕೈಕೂಡಿಸಿದ ಕೆಲಸವು ಸ್ತುತ್ಯವೂ ಆದರ್ಶವೂ ಆಗಿದೆ. ನಮ್ಮ ದೇಶದಲ್ಲಿಯೂ ಈ ತತ್ವ ಶೋಭಿತ ಮೂಲ ರಾಷ್ಟ್ರೀಯ ಶಿಕ್ಷಣ ಪದ್ಧತಿಯು ಸರ್ವತ್ರ ಸ್ಥಾಪಿತವಾದರೆ ವಿದ್ಯಾ ಕ್ಷೇತ್ರದಂತೆ ಸಾಮಾಜಿಕ ಮತ್ತು ಸಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಇದು ಪ್ರಚಂಡ ಕ್ರಾಂತಿಯನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ.

[೧೯೩೭ರಲ್ಲು ಪೂನೆಯಲ್ಲಾದ ಪ್ರಥಮ ಮೂಲ ರಾಷ್ಟ್ರೀಯ ಶಿಕ್ಷಣ ಪರಿಷತ್ತಿನಲ್ಲಿ ಪ್ರೊ। ಕೆ. ಜಿ. ಸೈಯದೀನರು ಕೊಟ್ಟ "The Ideogoly of Basic Educaion" ಎಂಬ ಭಾಷಣದ ಸಾರಾಂಶ.]

ಅನುವಾದಕ.- "ಕಿಶೋರ"

ಲಂಡನ್ ಮೃಗಾಲಯದ ಪ್ರೊ। ವೀಡ್ ಎಂಬವರು ಮನುಷ್ಯರಂತಿರುವ ಏಪ್ ಎಂಬ ಕೋತಿಗಳಿಗೆ ಬೊಂಬ್‌ಸಿಡಿತದಿಂದಾದ ಹಾವಳಿಯನ್ನು ದುರುಸ್ತಿಮಾಡಲು ಕಲಿಸುವರಂತೆ. ಇದರಿಂದ ಮೃಗಾಲಯಗಳಲ್ಲಿನ ಅನೇಕ ಕೆಲಸಗಾರರಿಗೆ ಸೈನ್ಯಕ್ಕೆ ಸೇರಲು ಆಸ್ಪದ ದೊರಕುವುದು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ॰ ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP

ಹಳ್ಳಿ ಜನತೆಯ ಶಿಕ್ಷಣ ಯೋಜನೆ

ಮಹಿಳೆ, ಮಕ್ಕಳಿಗೆ ವೈದ್ಯಕೀಯ ಸೌಕರ್ಯ

ಕಸ್ತೂರ್‌ಬಾ ಸ್ಮಾರಕ ನಿಧಿ ಉದ್ದೇಶ

ಖಾಧಿ ಮತ್ತು ಕೈಗಾರಿಕೆಗಳಿಂದ ಗ್ರಾಮೋದ್ಧಾರ

ಕಳೆದ ತಾ. ೧೫ರಂದು ಸೇವಾಗ್ರಾಮದಲ್ಲಿ ಕಸ್ತೂರ ಭಾ ಸ್ಮಾರಕ ನಿಧಿಯ ಪ್ರಾಂತಿಕ ಕಾರ್ಯದರ್ಶಿಗಳ ಸಭೆಯಲ್ಲಿ ಮಹಾತ್ಮಾ ಗಾಂಧಿಯವರು ನಿಧಿಯ ಉದ್ದೇಶವನ್ನು ವಿವರಿಸಿದರು. ಹಳ್ಳಿಗಳಲ್ಲಿನ ಹೆಂಗಸು ಮಕ್ಕಳಿಗೆ ವೈದಕೀಯ ಸೌಕರ್ಯಗಳನ್ನೂ, ವಾರ್ಧಾ ಶಿಕ್ಷಣ ಪದ್ಧತಿಯ ಪ್ರಸಾರ ಖಾದಿ ಕೆಲಸ, ಗುಡಿ ಕೈಗಾರಿಕೆಗಳ ಮೂಲಕ ಗ್ರಾಮೋದ್ಧಾರದ ಕಾರ್ಯಕ್ರಮವನ್ನೂ, ನೆರವೇರಿಸಲು ಸದ್ರಿ ನಿಧಿಯ ಕಾರ್ಯಕರ್ತೃಗಳು ಪ್ರಯತ್ನಿಸುವರು.

ಅಂದಿನ ಸಭೆಯಲ್ಲಿ ಈ ಕೆಳಗಿನ ೮ ನಿರ್ಧಾರಗಳು ಮಂಜೂರಾತಿ ಪಡೆದವು:

೧) ಭಾ ನಿಧಿಯ ಗೊತ್ತುಗುರಿಗಳಿಗನುಸಾರವಾಗಿ ದುಡಿಯುವ ಸಂಸ್ಥೆಗಳಿಗೆ ಧನ ಸಹಾಯ ಕೊಡುವುದು. ಇಂತವುಗಳು ಪ್ರಾಂತಿಕ ಇಲ್ಲವೆ ಜಿಲ್ಲಾ ಕಸ್ತೂರ್ ಭಾ ನಿಧಿ ಸಮಿತಿಗಳಿಂದ ಶಿಫಾರಸು ಮಾಡಲ್ಪಟ್ಟವುಗಳಿರಬೇಕು.

೨) ಕೇಂದ್ರ ಸಮಿತಿಯಿಂದ ಧನ ಸಹಾಯ ಕೇಳುವ ಅವಶ್ಯಕತೆ ಇರದಂತಾ ಯೋಜನೆಯೇ ಜಿಲ್ಲಾ ಕ್ಷೇತ್ರಗಳಲ್ಲಿನ ಕಾರ್ಯಕ್ರಮವಿರಬೇಕು.

೩) ಭಾ ನಿಧಿಯ ಆಶ್ರಯದಲ್ಲಿ ಕೆಲಸ ಮಾಡುವ ಸ್ತ್ರೀ ಪುರುಷರಿಗೆಲ್ಲರಿಗೂ ಸಮಾನವಾದ ಮಜೂರಿ ದೊರೆಯಬೇಕು.

೪) ಕೇಂದ್ರ ಸಮಿತಿಯ ಕಛೇರಿಯಿಂದ ಕೆಲಸಗಾರರ ತರಬೇತಿಗಾಗಿ ಹೊರಡಿಸಲ್ಪಟ್ಟ ಯೋಜನೆಯನ್ನು ಆದಷ್ಟು ಬೇಗನೇ ನಿರ್ವಹಣೆಗೆ ತರಲ್ಪಡಬೇಕು. ಪುರುಷ ಕೆಲಸಗಾರರ ತರಬೇತಿಗೆ ಭಾ ನಿಧಿಯಿಂದ ಹಣವು ವೆಚ್ಚಮಾಡ ಬಾರದು.

೫) ನಿಧಿಯ ಸಂಬಂಧವಾಗಿ ನಿರ್ವಹಿಸಲ್ಪಡುವ ಕಾರ್ಯಕ್ರಮಗಳ ಪ್ರಾಮುಖ್ಯ ಉದ್ದೇಶವು ಮಹಿಳೋದ್ಧಾರದ್ದಿರಬೇಕು.

೬) ಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಸ್ವಚ್ಛತೆಯ ಸಂಬಂಧವಾಗಿಯೇ ಕೆಲಸ ನಡೆಯಬೇಕಾದುದು ಪ್ರಾಮುಖ್ಯದ ವಿಷಯ.

೭) ನಿಧಿಯ ಆಶ್ರಯದಲ್ಲಿ ನಡೆಸಲ್ಪಡುವ ಕೆಲಸವು ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು ಮಾತ್ರವಲ್ಲದೆ ಆ ಸಂಕಷ್ಟಗಳ ಮೂಲವನ್ನು ಪರಿಶೋಧಿಸಿ ಅದನ್ನು ನಿವಾರಿಸಲು ಪ್ರಯತ್ನಿಸಬೇಕಾದುದೂ ಅತ್ಯಾವಶ್ಯಕ.

೮) ಗದ್ದೆ ಹೊಲಗಳನ್ನೂ, ಮನೆ ಮಠಗಳನ್ನೂ ಕ್ರಯಕ್ಕೆ ತೆಗೆದುಕೊಳ್ಳಲು ಭಾ ನಿಧಿಯ ಹಣವನ್ನು ವೆಚ್ಚಮಾಡಲಾಗದು.

ಈ ಸಂದರ್ಭದಲ್ಲಿ ಗಾಂಧೀಜಿಯವರು ಒಂದು ಚಿಕ್ಕ ಭಾಷಣ ಮಾಡುತ್ತಾ ಹೀಗೆಂದರು:

ಈ ಕೆಲಸವು ತ್ವರೆಯಾಗಿ ಆಗಬೇಕಾಗಿದ್ದರೂ ಇದರ ಧನವು ಸಿಕ್ಕಾಬಟ್ಟೆ ದುರ್ಮಾರ್ಗಯವಾಗುವ ರೀತಿಯಲ್ಲಿ ಖರ್ಚಾಗಬಾರದು. ಓರ್ವ ಸರಳ ಹೃದಯದ ಅಶಿಕ್ಷಿತ ಮಹಿಳೆಯ ಹೆಸರಲ್ಲಿ ಈ ಹಣವು ಕೂಡಿಸಲ್ಪಟ್ಟಿದೆ. ಅವಳ ಸ್ಮಾರಕವಾಗಿ ನಡೆಸಲ್ಪಡುವ ಕಾರ್ಯವು ನೂರಕ್ಕೆ ನೂರು ಪ್ರಾಮಾಣಿಕತನದ್ದಿರಬೇಕು. ಯೋಗ್ಯರಾದ ಇಬ್ಬರೇ ಕೆಲಸಗಾರರಿದ್ದರೂ ಕಾರ್ಯ ಪ್ರಾರಂಭಿಸಬಹುದು. ಕ್ರಮೇಣ ಇತರ ಯೋಗ್ಯ ಕೆಲಸಗಾರರು ಮುಂದಕ್ಕೆ ಬರದೇ ಬರುವರು. ಪ್ರಾಂತೀಕ ಸಮಿತಿಗಳಲ್ಲಿ ಪುರುಷರಿಗಿಂತಲೂ ಸ್ತ್ರೀಯರೇ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಾಗಿರಬೇಕೆಂದು ನಾನು ಆಶಿಸುವೆ. ಅವರು ಪುರುಷರಿಗಿಂತ ಮಿಗಿಲಾದ ಸಾಮರ್ಥವುಳ್ಳವರಲ್ಲದಿದ್ದರೂ ಅವರಷ್ಟೆ ಸಮರ್ಥರಾದರೂ ಆಗಿರಬೇಕು.

ಏಳು ಲಕ್ಷ ಹಳ್ಳಿಗಳಲ್ಲಿ ಹಂಚಲು ೧ ಕೋಟಿ ೨೫ಲಕ್ಷ ರೂಪಾಯಿಗಳು ಅತೀ ಅಲ್ಪವಾದ ಧನಪ್ರಮಾಣ. ಯುದ್ಧಕ್ಕಾಗಿ ಭಾರತವು ದಿನಕ್ಕೊಂದು ಕೋಟಿಗಿಂತಲೂ ಹೆಚ್ಚಾದ ಹಣವನ್ನು ವೆಚ್ಚಮಾಡುತ್ತದೆ. ಹೆಂಗಸು ಮಕ್ಕಳ ಉದ್ಧಾರಕ್ಕೆ ವ್ಯಯಿಸಲ್ಪಡುವ ಈ ೧ ಕೋಟಿ ೨೫ಲಕ್ಷವು ಕೆಲವರ ತಲೆ ಕೆಳಗಾದ ಅಭ್ಯಾಸದ ಅಭಿಪ್ರಾಯದಲ್ಲಿ ಹೆಚ್ಚೆಂದು ಕಂಡುಬಂದಿದೆ.

ಹೇಗೆ ಹಣ ವ್ಯಯಿಸ ಬೇಕು

ಇದರಲ್ಲಿ ಮೂರು ದಾರಿಗಳಿವೆ. ಹಳ್ಳಿಗಳ ಹೆಂಗಸು ಮಕ್ಕಳಿಗೆ ವೈದಕೀಯ ಸಹಾಯಕ್ಕಾಗಿ ಮೊದಲ ವಿಧಾನ. ರೋಗ ನಿವಾರಣೆಗಿಂತಲೂ ರೋಗಗಳನ್ನು ತಡೆಗಟ್ಟುವುದೇ ಹೆಚ್ಚಿನ ಪ್ರಾಮುಖ್ಯದ ಕೆಲಸ. ಆದುದರಿಂದ ಹಳ್ಳಿಗಳ ಸ್ವಚ್ಛತೆ, ಶುದ್ಧೀಕರಣಕ್ಕಾಗಿ ಹೆಚ್ಚು ಗಮನಕೊಡಬೇಕು. ರೋಗಿಷ್ಟರು ಸಾಯುವುದೆಂದರೆ ಅತೀ ಕನಿಕರದ ವಿಷಯ. ಆದರೆ ಆರೋಗ್ಯವಂತರು ರೋಗಗಳಿಗೆ ಬಲಿಬೀಳುವುದು ಹೃದಯ ದ್ರಾವಕವಾದುದು. ಹಳ್ಳಿಗರಿಗೆ ಆರೋಗ್ಯವಂತ ಶುಚಿತ್ವವನ್ನು ಕಲಿಸಬೇಕು. ಇದಕ್ಕೆಲ್ಲದಕ್ಕೂ ಅತೀ ಮಹತ್ವದ ಕಾರಣಗಳೆಂದರೆ ಬಡತನ ಮತ್ತು ನಿರಕ್ಷರತೆ ಮತ್ತು ಅಜ್ಞಾನಗಳು.

ಹಳ್ಳಿಗಳಲ್ಲಿ ಕೊಡಲ್ಪಡುವ ಶಿಕ್ಷಣವು ಹೊಸ ಪದ್ಧತಿಯದಿರಬೇಕು.

ಹಳ್ಳಿಗರು ತಮ್ಮ ಬಡತನವನ್ನು ಖಾದಿ ಮತ್ತು ಹಳ್ಳಿ ಕೈಗಾರಿಕೆಗಳ ಮೂಲಕ ಸುಧಾರಿಸಿಕೊಳ್ಳಬೇಕು. ಸಂಸಾರದ ಗುಲಾಮಗಿರಿಯಲ್ಲಿರುವುದೇ ಸ್ತ್ರೀಯರ ಜೀವನ ಗುರಿ ಎಂದು ನಮ್ಮಲ್ಲಿ ಹಲವರ ಭಾವನೆ. ಆದರೆ ಮಜೂರಿಗೆ ಹೋದರೆ ಅವ ಪುರುಷರಿಗಿಂತಲೂ ಹೆಚ್ಚು ದುಡಿಯುವರು. ಆದರೆ ಅವರಿಗೆ ಮಜೂರಿ ಕಮ್ಮಿ ಕೊಡಲ್ಪಡುತ್ತದೆ. ಅತೀ ಚಿಕ್ಕ ಪ್ರಾಯದಲ್ಲೇ ಮಕ್ಕಳೂ ಕೆಲಸಕ್ಕೆ ಹೋಗಲು ಬಲಾತ್ಕರಿಸಲ್ಪಡುವರು. ಅನೇಕ ಮಕ್ಕಳು ಹಿರಿಯ ಗಂಡಸರಷ್ಟೆ ಕೆಲಸ ಮಾಡಿದರೂ ಅವರಿಗೆ ಮಜೂರಿ ಮಾತ್ರ ಕಮ್ಮಿ ಕೊಡಲ್ಪಡುತ್ತದೆ. ಇಂತವುಗಳನ್ನು ನಾವು ಅಂತ್ಯಗೊಳಿಸಬೇಕು. ಹಳ್ಳಿ ಮಕ್ಕಳಿಗೆ ಅವರ ಪ್ರದೇಶದ ಕೈಗಾರಿಕೆಗಳಲ್ಲಿ ಶಿಕ್ಷಣ ದೊರೆಯಬೇಕು. ನಗರವಾಸಿಗಳಂತೆ ಹಳ್ಳಿಗರು ಶಿಕ್ಷಣಕ್ಕಾಗಿ ವೆಚ್ಚಮಾಡಲು ಅನುಕೂಲತೆಯಿಲ್ಲದವರಾಗಿದ್ದಾರೆ. ಅವರ ಶಿಕ್ಷಣ ಖರ್ಚು ಅದರಿಂದಲೇ ದೊರೆಯುವಂತಾಗುವ ಕೈಗಾರಿಕೆಗಳನ್ನು ಅವರಿಗೆ ಕಲಿಸಬೇಕು. ಈ ಕೆಲಸವು ಮೂಲ ಕಲ್ಪನೆದೂ ಮತ್ತು ಕಷ್ಟತರವಾದುದೂ ಇದೆ. ಇಂತಹ ಕೆಲಸವನ್ನು ನಿರ್ವಹಿಸಲು ಸಮರ್ಥರಾದವರು ಬಹಳೇ ಕಮ್ಮಿ ಜನರಿದ್ದಾರೆ. ಅನೇಕರಿಗೆ ಇದರಲ್ಲಿ ತರಬೇತಿಹೊಂದಲು ಕೂಡಾ ಇಷ್ಟವಿಲ್ಲ. ಅಂಥವರು ಕಸ್ತೂರ ಭಾ ಸ್ಮಾರಕ ನಿಧಿ ಸಮಿತಿಯ ಸದಸ್ಯರಾಗ ಬಾರದು. ಇಂತಹರು ಆಗಲೇ ಸದ್ರಿ ಸಮಿತಿಯ ಸದಸ್ಯ ಮಂಡಳಿಯಲ್ಲಿದ್ದರೆ ಅವರು **ರಾಜಿನಾಮೆ ಇತ್ತು ಇತರರಿಗೆ ಸ್ಥಾನ ಬಿಟ್ಟುಕೊಡಬೇಕು.**

ಸರ್ವ ಸಾಮಾನ್ಯವಾಗಿ ಹಳ್ಳಿಗಳೆಂದರೆ ೫೦೦ರಿಂದ ೧೦೦೦ರ ತನಕ ಜನ ಸಂಖ್ಯೆ ಇರುವ ಸ್ಥಳಗಳು. ಆದರೆ ಸದ್ಯಕ್ಕೆ ೨ ಸಾವಿರ ತನಕ ಜನರಿರುವ ಹಳ್ಳಿಗಳಲ್ಲೂ ಕೆಲಸ ಪ್ರಾರಂಭಿಸಬಹುದು. **ಕೆಲವು ಹಳ್ಳಿಗಳಲ್ಲಿ ಧನವಂತರೇ ಹೆಚ್ಚಾಗಿ ತಳವೂರಿಕೊಂಡಿದ್ದಾರೆ. ಇಂತಹ ಕಡೆಗಳಲ್ಲಿ ಭಾ ನಿಧಿಯ ಹಣವನ್ನು ವೆಚ್ಚಮಾಡಬಾರದು.**

ಹಳ್ಳಿಗಳ ಅಭಿವೃದ್ಧಿ

ಅನೇಕರು ಮಹಾತ್ಮರಿಗೆ ಪ್ರಶ್ನೆಗಳನ್ನು ಕೇಳಿದರು. ಅವರು ಕೊಟ್ಟ ಉತ್ತರಗಳಿಂದ ತಿಳಿದು ಬಂದ ವಿಷಯಗಳೆಂದರೆ:

ಒಬ್ಬನು ಒಂದು ಹಳ್ಳಿಯಲ್ಲಿ ತೃಪ್ತಿಕರವಾದ ಕೆಲಸ ಮಾಡಿ ತೋರಿಸಿದರೆ ಸಾಕು. ಏಳು ಲಕ್ಷ ಹಳ್ಳಿಗಳಿಗೆ ಅದೇ ಆದರ್ಶವೆನಿಸುವುದು.

ರಾಜಕೀಯ ಕೆಲಸಗಾರರು ರಚನಾತ್ಮಕ ಕೆಲಸವನ್ನೂ ತಮ್ಮ ಚಟುವಟಿಕೆಯಲ್ಲಿ ಸೇರಿಸಬಾರದು. ರಚನಾತ್ಮಕ ಕಾರ್ಯಕ್ರಮವೇ ಎಲ್ಲದಕಿಂತಲೂ ಅತೀ ಪ್ರಾಮುಖ್ಯವಾದುದು.

ಸ್ತ್ರೀ ಕೆಲಸಗಾರರು ಚಟುವಟಿಕೆ ನಡೆಸಲು ಸುರಕ್ಷಿತವಲ್ಲದ (ಸಿಂಧ ಪ್ರಾಂತ್ಯ) ಪ್ರದೇಶಗಳಲ್ಲಿ ಕೆಲಸಮಾಡಲು ಹೆದರಬಾರದು. ಪ್ರಾಣ ಹೋದರೂ ಅತ್ಯಾಚಾರಕ್ಕೆ ಎಡೆಕೊಡುವುದಿಲ್ಲವಾಗಿ ಮಹಿಳೆಯರು ಧೃಡ ಪ್ರತಿಜ್ಞೆಮಾಡಿದರೆ ಅವರಿಗೆ ಎಂತಹ ಸಂದರ್ಭಗಳಲ್ಲೂ ಯಾವ ಹೆದರಿಕೆಯೂ ಇಲ್ಲ. ಸ್ತ್ರೀಯರಲ್ಲಿ ನೈತಿಕ ಶಕ್ತಿಯಿಂದೊಡಕೂಡಿದ ಆತ್ಮ ಸ್ಥೈರ್ಯವನ್ನುಂಟುಮಾಡುವುದು. ಈ ನಮ್ರ ಮಹಿಳೆಯ ಸ್ಮಾರಕ ಉದ್ದೇಶಗಳಲ್ಲಿ ಅತೀ ಮಹತ್ವದ್ದಾಗಿರಬೇಕು.

ಎಂತಹ ಸಂಕಷ್ಟಗಳು ಬಂದರೂ ನಾವು ಅವುಗಳನ್ನು ಎದುರಿಸಲು ಸಿದ್ಧರಿರಬೇಕು. ನಮ್ಮ ಅನೇಕ ಹೆದರಿಕೆಗಳು ಕೇವಲ ಕಾಲ್ಪನಿಕ ಮಾತ್ರವೇ ಆಗಿರುವವು. ಆಸುಪಾಸಿನ ಹಳ್ಳಿಗಳಲ್ಲಿ ಕೆಲಸಗಾರರು ದೊರೆಯುವ ತನಕ ಈಗ ಇದ್ದ ಕೆಲಸಗಾರರು ಒಂದೊಂದೇ ಹಳ್ಳಿಯಲ್ಲೇ ತಮ್ಮ ಕೆಲಸವನ್ನು ತೃಪ್ತಿಕರವಾಗಿ ಪರಿಪೂರ್ಣತೆಗೆ ಮುಟ್ಟಿಸಿದರಷ್ಟೇ ಸಾಕು.

ಸ್ತ್ರೀ ಕೆಲಸಗಾರರು ದೊರಕಬೇಕಾದರೆ ಪುರುಷರು ತಮ್ಮ ಸ್ತ್ರೀಯರ ಮೇಲೆ ಹಾಕಿರುವ ನಿರ್ಬಂಧವನ್ನು ಸಡಿಲು ಮಾಡಬೇಕು.

ಭಾ ನಿಧಿಗೆ ಹಣ ಸಂಗ್ರಹಿಸಿದವರಿಗೆ ಆ ಸಮಿತಿಯ ಸದಸ್ಯರನ್ನಾಗಿ ಮಾಡಲೇಬೇಕೆಂದಿಲ್ಲ. ಸಂಗ್ರಹಮಾಡದವರೂ ನಿಧಿಯ ಉದ್ದೇಶಗಳನ್ನು ನಿರ್ವಹಿಸಲು ಸಮರ್ಥರಾದವರಿದ್ದರೆ ಅವರಿಗೊಂದು ಹೊಣೆಗಾರಿಕೆಯ ಸ್ಥಾನ ದೊರಕಲೇ ಬೇಕು.

ವಿಧಾಯಕ ಕಾರ್ಯಕ್ರಮಕ್ಕೆ ಯೋಗ್ಯರಾಗಿರುವ ರಚನಾತ್ಮಕ ಕೆಲಸದಲ್ಲಿ ಕೈಹಾಕುವುದರ ಮೂಲಕ ತಮ್ಮ ಕಾರ್ಯಸಾಧನೆ ಮಾಡಲೆಳೆಸಿದರೆ ತಪ್ಪಾಗುವುದು. ಅಂತಹವರನ್ನು ತಡೆಗಟ್ಟಲೇಬೇಕು.

ಕೆಲವು ದೇಶಿಯ ಸಂಸ್ಥಾನಗಳಲ್ಲಿ ಸ್ತ್ರೀಯರು ನಿಕೃಷ್ಟವಾದ ಗುಲಾಮಗಿರಿಯಲ್ಲಿರುವರು. ಅಂಥವರು ನನ್ನ ಬಳಿಗೆ ಬರಲಿ. ನಾನು ಅವರ ವಿಷಯ ನೋಡಿಕೊಳ್ಳುವೆ. ಅವರ ಮೂಲ ಹಕ್ಕು ಬಾಧ್ಯತೆಗಳು ಅಲ್ಲಗಳೆಯಲ್ಪಟ್ಟಿದ್ದರೆ ಹಿಂಡು ಹಿಂಡಾಗಿ ಅವರು ನನ್ನ ಬಳಿಗೆ ಬರಲಿ.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ANNOUNCEMENT

We have pleasure to announce that the following new branches have been opened.

COIMBATORE SALEM
ERODE MADURA

Other Branches at:

Quilon, Alleppey, Ernakulam, Cochin, Calicut, Cannanore, Mangalore, Bangalore, Belgaum, Dharwar, Hubli, Chikmagalur etc. etc.

4 Branches in Bombay City.

Capital 26 lakhs. Reserves 10 lakhs.

(ESTD. 1906)

CANARA BANK LIMITED

Incorporated in British India, liability of Members li(ited.m

ಇಂದಿನ ನಾಗರಿಕತೆ ಎಂದುತನಕ ಇದ್ದಿತು

ಆರ್ಯ ದ್ರಾವೀಡ ಸಂಸ್ಕೃತಿಯ ಕುರುಹುಗಳು

ಈಜಿಪ್ತದ ಐದುಸಾವಿರ ವರ್ಷ ಹಿಂದಿನ ಭಗ್ನಾವಶೇಷಗಳು

ಗ್ರೀಕ್ ರೋಮನ್ ಶಿಲಾಮೂರ್ತಿಗಳು

ನಮ್ಮದು ಸಿಮೆಂಟ್ ಮತ್ತು ಕೊಂಕ್ರಿಟಿನ ನಾಗರಿಕತೆ. ಕಬ್ಬಿಣ ಉಕ್ಕು ಮತ್ತಿತರ ನಾಶವಾಗಿ ಹೋಗುವ ಲೋಹಗಳ ಯೆಂತ್ರೋಪಕರಣ ಯುಗದಲ್ಲಿ ನಾವಿಂದು ವಾಸಿಸುತಿದ್ದೇವೆ. ಆದರೆ ನಮ್ಮಿ ನಾಗರಿಕತೆಯ ಕುರುಹು ಅದೆಷ್ಟು ಶತಮಾನಗಳ ತನಕ ಬಾಳಬಹುದು? ಎಂಬ ಪ್ರಶ್ನೆಯು ಆಧುನಿಕ ಇತಿಹಾಸಕಾರರ ಮಿದುಳನ್ನು ಕರಡು ಮಾಡ ಹತ್ತಿರಬೇಕು.

ಭಾರತದಲ್ಲಿಯೂ, ಈಜಿಪ್ತ್, ಗ್ರೀಸ್ ರೋಮ್, ಬೆಬಿಲೋನ್ ಚೀನಾ, ಮಲಯ ಕಡೆಗಳಲ್ಲಿಯೂ ನಾವಿಂದು ಸಾವಿರಾರು ವರ್ಷಗಳ ಹಿಂದಿನ ಜನರ ನಾಗರೀಕತೆಯ ಕುರುಹುಗಳಂತಿರುವ ಕಟ್ಟಡಗಳನ್ನೂ ಶಿಲಾಶಾಸನಗಳನ್ನೂ, ಗೋಪುರಗಳನ್ನೂ, ಮಾನಸ್ತಂಭಗಳನ್ನೂ, ಕಾಣಬಹುದು. ಮೂರು ನಾಲ್ಕು ಸಾವಿರ ವರ್ಷಗಳ ಹಿಂದೆ ಈಜಿಪ್ತಿನ ತ್ರಿಕೋಣಾಕೃತಿಯ ಪಿರಮಿಡ್ ಸಮಾಧಿ ಭವನಗಳಲ್ಲಿ ಆ ಕಾಲದ ಜನರು ತಮ್ಮ ಅತೀ ವೈಭವದ ರಾಜ ಕುಟುಂಬದವರ ಶವಗಳನ್ನು ಕೊಳೆಯದಂತೆ ಇಟ್ಟರು. ಅವು 'ಮಮ್ಮಿ'ಗಳಾಗಿ ಇಂದಿನ ಇತಿಹಾಸ ಪರಿಶೋಧಜ್ಞರ ಕೈಗೆ ಸಿಕ್ಕಿದುವು.

ಗಂಗಾ ನದೀಬಯಲಲ್ಲೂ ಸಿಂಧೂ ನದೀ ಪ್ರದೇಶದಲ್ಲೂ ಆರ್ಯ ದ್ರಾವೀಡ ಜನರ ಕೋಟೆ ಕೊತ್ತಳಗಳ ಕುರುಹುಗಳು ಆ ಕಾಲದ ದಿನನಿತ್ಯ ಜೀವನದಲ್ಲಿ ಉಪಯೋಗಿಸಲ್ಪಡುವ ಅನೇಕ ಒಡವೆ ವಸ್ತುಗಳೂ, ಶಿಲಾಲಿಪಿಗಳು ರಥಗಳೂ, ಬಾಣ ಬತ್ತಳಿಕೆಗಳೂ, ಸಿಕ್ಕಿವೆ. ಸ್ಮರಣೆಗೆ ಮಿಕ್ಕುವ ಕಾಲಾವಧಿಯ ಹಿಂದೆ ಇದ್ದ ಜನರು ರಚಿಸಿದ ವಸ್ತು ವಿಶೇಷಗಳು ಸಹಸ್ರಾರು ವರ್ಷಗಳ ಗಾಳಿ ಮಳೆ ಬಿಸಿಲು ಮಣ್ಣುಗಳ ನಾಶಕಾರರ ಶಕ್ತಿಯನ್ನೂ ಎದುರಿಸಿ ಅಳಿಯದೆ ಉಳಿದಿರುವ ಸಂಗತಿಯು ಅಶ್ಚರ್ಯನ್ನುಂಟು ಮಾಡದಿರದು.

ಗ್ರೀಕ್ ದೇವಾಲಯಗಳೂ. ಕಲಾಕೃತಿಯ ವಿಗ್ರಹಗಳೂ ರೋಮಾಯರ ಶಿಲ್ಪ ವೈಶಿಷ್ಟಗಳೂ ಇಂಚೂ ಪಂಚಭೂತಗಳ ಶಕ್ತಿಯನ್ನು ಹೋದ ಅವುಗಳ ಮೇಲೆ ದಿಗ್ವಿಜಯ ನಡೆಸಿ ನಿಂತಂತೆ ಭವ್ಯವಾಗಿ ನಿಂತಿದ್ದು ಪ್ರೇಕ್ಷಕರನ್ನು ಸ್ಫೂರ್ತಿಗೊಳಿಸುವಂತಿವೆ.

ಆದರೆ ನಮ್ಮ ಇಂದಿನ ನಾಗರೀಕತೆಯ ಫಲವಾದ ಆಧುನಿಕ ವಿಜ್ಞಾನ ದೃಷ್ಟಿಯೆನಿಸಲ್ಪಟ್ಟ ನ್ಯೂಯೋರ್ಕ್ ಲಂಡನಿನ ಕಟ್ಟಡಗಳು, ಈ ರೈಲು ವಿಮಾನಗಳು ಅದೆಷ್ಟು ಕಾಲ ಬಾಳಬಹುದು? ನಾಲವತ್ತು ವರ್ಷ ಹಿಂದಿನ ಮೋಟಾರು ಕಾರುಗಳು ಇಂದು ಮಣ್ಣು ತುಕ್ಕು ಹಿಡಿದಿವೆ. ಕಳೆದ ಯುದ್ಧ ಕಾಲದ ವಿಮಾನಗಳು ಹಳೇಯವಾಗಿ ಆಗಲೇ ವಸ್ತು ಸಂಗ್ರಾಹಲಯಗಳಲ್ಲಿರಿಸಲ್ಪಟ್ಟಿವೆ. ಅಂದ ಮೇಲೆ ಇಂದಿನ ಈ ರೇಡಿಯೋಪಕರಣಗಳೂ, ತಾರು ತಂತಿ ಕಂಭಗಳೂ, ರೈಲುಪಟ್ಟಿಗಳೂ, ಯುದ್ಧನಾವೆಗಳೂ ಚಿರಕಾಲ ಬಾಳಲಾರವು.

ನ್ಯೂಯೋರ್ಕಿನ ನೂರು ಮಹಡಿಯ ಕಟ್ಟಗಳು ಎತ್ತರದಲ್ಲಿ ಈಜಿಪ್ತಿನ ಫಿರಮಿಡ್ಡುಗಳನ್ನೂ ಬೆಬಿಲೋನಿನ ಆಕಾಶ ಚುಂಬಿ ಗೋಪುರಗಳನ್ನು ಮಿಗಿಸುತ್ತವೆ. ನಿಜ, ಆದರೆ ಅವುಗಳಷ್ಟು ಕಾಲ ಇವು ಬಾಳಬಹುದೇ? ಇವುಗಳಲ್ಲಿ ತುಂಬಿದ ಸಿವೆಂಟು, ಕೊಂಕ್ರೀಟು ಮತ್ತು ಉಕ್ಕಿನ ತೋಳುಗಳ ಚೌಕಟ್ಟುಗಳು ಎರಡು ಮೂರು ಶತಮಾನಗಳಲ್ಲಿ ನಿರ್ಬಲವಾಗಿ ಮತ್ತೆ ಅವನ್ನು ಕೆಡವಿ ಪುನಃರ್ರಚಿಸದಿದ್ದರೆ ಅವು ಕುಸಿದು ಬೀಳುವುದು ಖಂಡಿತ. ಅಕಸ್ಮಾತಾಗಿ ಹಾಗೆ ಕುಸಿದು ಬಿದ್ದ ಮೇಲೆ ನಂತರ ಶತಮಾನ ವರೇಗೆ ಅವನ್ನು ಹಾಗೇ ಬಿಟ್ಟರೆ ಅವುಗಳ ಅವಶೇಷಗಳಾದರೂ ಬೀರುಸಾದ ಗಾಳಿ ಮಳೆ ಬಿಸಿಲುಗಳ ಹೊಡೆತವನ್ನು ತಪ್ಪಿಸಲಾರದೆ ಮಣ್ಣು ಪಾಲಾಗುವುವು.

ಒಂದು ದೃಷ್ಟಿಯಿಂದ ಇಂದಿನ ವಿಜ್ಞಾನ ಪ್ರಗತಿಯು ಅತ್ಯದ್ಭುತವಾದುದು. ಹಕ್ಕಿಗಳಿಂತೆ ವಾಯುವೇಗದಿಂದೆಂಬಂತೆ ಹಾರುವ ವಿಮಾನಗಳಲ್ಲಿ ಕೂತು ಕೆಲವೇ ದಿನಗಳಲ್ಲಿ ಪ್ರಯಾಣಕನು ವಿಶ್ವ ಸಂಚಾರ ಮಾಡಿ ಬರಬಹುದು. ಪ್ರಪಂಚದ ಒಂದು ಮೂಲೆಯಿಂದ ಇನ್ನೊಂದಕ್ಕೆ ತಂತಿ ಸಂಚಾರ ಮೂಲಕ ಇಲ್ಲವೆ ತಂತಿ ಇಲ್ಲದ ವಾಯರ್‌ಲೆಸ್ ವಿಧಾನದಿಂದ ಇಷ್ಟಪಟ್ಟವರೊಡನೆ ಕೆಲವೆ ಕ್ಷಣದೊಳಗೆ ಮಾತನಾಡಬಹುದು. ಯುದ್ಧ ದೆಸೆಯಿಂದ ಟೆಲಿವಿಸನ್ ಎಂಬ ವಾಯರ್ಲೆಸ್ ರೇಡಿಯೊ ವಿಧಾನದಿಂದ ಮಹಾ ಸಾಗರದ ಮಧ್ಯದಲ್ಲಿನ ಹಡಗವೊಂದರಿಂದ ಒಬ್ಬ ಗೃಹಸ್ತನು ಭೂಗೋಲದ ಅತೀ ದೂರದಲ್ಲಿನ ಒಂದು ರೇಡಿಯೋ ಕಿರಣ ಪ್ರಸಾರ ಕೇಂದ್ರ ನಿಂತಿರುವ ಸ್ನೇಹಿತನನು ಕಣ್ಣೆದುರಿನ ಪರದೆಯಲ್ಲಿ ನೋಡುತಿದ್ದ ಹಾಗೆ ಸಂಭಾಷಿಸಬಹುದು. ಅತೀ ವೇಗದಲ್ಲಿ ಓಡುವ ವಿಮಾನದಲ್ಲಾದರೂ ಇಲ್ಲವೇ ಮೋಟಾರುಕಾರಿನಲ್ಲಾದರೂ ಕುಳಿತು ಜಗತ್ತಿನ ರೇಡಿಯೋ ಕೇಂದ್ರಗಳಿಂದ ಇಂಪಾದ ಸಂಗೀತವನ್ನು ಒಂದು ಗುಂಡಿವೊತ್ತುವುದರಿಂದ ಕೇಳಿ ಆನಂದ ಪಡಭಹುದು.

ಹತ್ತಿರದ ಭವಿಷ್ಯದಲ್ಲಾದರೂ ಸಾಗರದಡಿಯಲ್ಲಿ ಹಾಕಲ್ಪಟ್ಟ ತುರಂಗ ಮಾರ್ಗಗಳಿಂದ ರೈಲುಗಳು ಒಂದು ಖಂಡದಿಂದ ಇನ್ನೊಂದಕ್ಕೆ ಸಂಬಂಧ ಕಲ್ಪಿಸುವುವು. ಚಂದ್ರ ಲೋಕಕ್ಕೂ ಇತರ ಗ್ರಹಗಳಿಗೂ ದಿನನಿತ್ಯವೆಂಬಂತೆ ಆಕಾಶ ಬಾಣ 'ಸರ್ವೀಸು'ಗಳು ಶಕ್ಯವಾಗಬಹುದು. ರಾತ್ರಿ ಕಾಲದಲ್ಲಿ ತಂಪಾದ ಬೆಳದಿಂಗಳನ್ನು ಕೊಟ್ಟು ಕವಿಗಾವ್ಯಗಾರರ ಅಮೋಘ ಪ್ರಶಂಸೆಗೆ ಪಾತ್ರನಾದ ಆ ಇಂದು ಲೋಕದ ಸೃಷ್ಟಿ ಸುಖವನ್ನು ಅನುಭವಿಸುವ ಸಂದರ್ಭಗಳು ಬರಬಹುದು.

ಹಿಂದಿನ ಕಾಲದಲ್ಲಿನ ಮಹಾ ಮಹಿಮರಾದ ಋಷಿವರ್ಯರು ತಮ್ಮ ದೈವೀಕ ಸಾಧನಗಳಿಂದ ಸಂಪಾದಿಸಿದ ಜ್ಞಾನ ದೃಷ್ಟಿಯಿಂದ ವಿಶ್ವ ವ್ಯವಹಾರವನ್ನು ತಮ್ಮ ದರ್ಭಾಸದ ಮೇಲೆ ಕೂತಲ್ಲಿಂದ ಕಂಡಂತೆ ಈಗಿನವರು ತಮ್ಮ ವಿಜ್ಞಾನಸಾಧನಗಳಿಂದ ಅದನ್ನು ಸಾಧಿಸಲಿರುವರು.

ಇಲ್ಲಿ ಒಂದು ವ್ಯತ್ಯಾಸ ಮಾತ್ರ ಒತ್ತಿ ಕಾಣುತ್ತದೆ. ಪ್ರಾಚೀನರು ತಮ್ಮ ಅಮೋಘ ಜ್ಞಾನ ಭಂಡಾರವನ್ನು ಓಲೆ ಗ್ರಂಥಗಳ ಮೇಲೆ ಬರೆದಿಟ್ಟರೂ ಅವು ಹಾಳಾಗದೆ ಇಂದೂ ಉಳಿದವು. ಅವರು ಕೆತ್ತಿದ ಶಿಲಾ ಲೇಖಗಳು ಮಾಸದಂತೆ ನಮ್ಮ ಕೈ ವಶವಾಗಿವೆ. ಅವರು ಬಂಗಾರವನ್ನು ಆಭರಣಗಳನ್ನಾಗಿ ಮಾತ್ರ ಉಪಯೋಗಿಸಿದುದಲ್ಲ. ಬಂಗಾರ ತಗಡಿದ ಮೇಲೆ ಅತ್ಯಮೋಘವಾದ ಜ್ಞಾನಾನುಭವನ್ನು ಚಿತ್ರ ವಿಚಿತ್ರವಾದ ಲಿಪಿಯೊಂದರ ಮಾಧ್ಯಮದಿಂದ ಬರೆದಿಟ್ಟದೂ ಇಂದೂ ಮೊಹೆಂಜೆದಾರೊ, ಹರಪ್ಪಗಳಲ್ಲೂ ಈಜಿಪ್ತ್ ಸಿರಿಯಗಳಲ್ಲೂ ಇತಿಹಾಸ ಸಂಶೋಧಕರಿಗೆ ಸಿಕ್ಕಿದೆ.

ಐದು ಸಾವಿರ ವರ್ಷಗಳ ನಂತರ ಅಂದರೆ ೧೬೪೫ನೇ ಇಸವಿಯಲ್ಲಿ ನಮ ಈ ವರ್ತಮಾನ ಪತ್ರಿಕೆಗಳೂ ಈ ಮಿಲಿಯಾಂತರ ಗ್ರಂಥಗಳೂ ಈ ಚಲಚಿತ್ರ ಪಟಗಳೂ ಈ ಸಿಲ್ಕ್ ರೇಶ್ಮೆ ಹತ್ತಿಯ ನಾಜೂಕು ಬಟ್ಟೆಗಳೂ ಉಳಿವಾವೇ? ಸಾಧ್ಯವಿಲ್ಲ. ಆಗಿನ ಜನಾಂಗದವರು ತಮ್ಮ ಪ್ರಾಚೀನರಾದ ನಮ್ಮವರ ಕುರಿತು ಯಾವುದೊಂದು ವಿಷಯವನ್ನು ತಿಳಿಯಲಾರರು. ಆದರೆ ನಮ್ಮಗಿಂತಲೂ ಐದು ಸಾವಿರ ವರ್ಷಕ್ಕೆ ಹಿಂದಿನವರಾದ ಗ್ರೀಕ ರೋಮಿಯರ ಆರ್ಯ ಐಗುಪ್ತರ ಕುರಿತು ಅವರಿಗೆ ತಿಳಿಯಲು ಕಾರಣವಿದೆ. ಇಂದು ಇನ್ನೂ ಅಳಿದುಳಿದ ಅವರ ನಾಗರೀಕತೆಯ ಭಗ್ನಾವಶೇಷಗಳು ಆಗಲೂ ಉಳಿಯಬಹುದು. ಅದರೆ ನಮ್ಮ ಕ್ರೂಜರಗಳೂ ರೇಡಿಯೊಗಳೂ ಉಳಿಯಲಾರವು.

BALANCE
AND THE BALANCE WHEEL



ಸರಿಯಾದ ಕಾಲ ಸೂಚಿಸಲು ಹೇರ್ ಸ್ಪ್ರಿಂಗ್ ಮತ್ತು ಬೆಲೆನ್ಸ್ ಚಕ್ರಗಳ ತೂಕವು ಸರಿಯಾದ ದಾಮಾಶಯದಲ್ಲಿರಬೇಕು. ಜಗತ್ತಿನ ನುರಿತ ಕೆಲಸಗಾರರು ವೆಸ್ಟ್ ಎಂಡ್ ವಾಚುಗಳ ಉಪಕರಣಗಳನ್ನು ನಾಜೂಕು ಮಾಡುತ್ತಾರೆ. ಅತ್ಯಾಧುನಿಕ ಗಡಿಯಾರ ವಿಜ್ಞಾನಕ್ಕನುಗುಣವಾಗಿ ವೆಸ್ಟ್ ಎಂಡ್‌ಗಳು ತಯಾರಿಸಲ್ಪಡುತ್ತವೆ. ಅದರ ಶ್ರೇಷ್ಠ ಕಾಮಗಾರಿಕೆ ವಿಶ್ವಾಸಾರ್ಹವಾಗಿದೆ.



ಕಾಗದ ನಿಯಂತ್ರಣ ಆಜ್ಞೆಯಿಂದ ಕೆಟಲಾಗು ಕಳುಹಿಸಲಿಕ್ಕಾಗದಕ್ಕೆ ವಿಷಾದಿಸುತ್ತೇವೆ.

ಅಕೃತದ ಕಲ್ಪೋಣದಿಂದ ಜಾಹೀರಾತಿನ ಎಲ್ಲಾ ನಮೂನೆಗಳನ್ನು ಒದಗಿಸಲಾಗದಿದ್ದರೂ ಸಾಧ್ಯವಿರುವಷ್ಟು "ಆರ್ಡರ್" ಪೂರೈಸಲಾಗುವುದು.

WEST END WATCH Co
BOMBAY CALCUTTA

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

U. Shantha Rama Rao,
Secretary

2-12-1944

೨೦ ವರ್ಷಗಳ ನಂತರ......

(೨ನೇ ಪುಟದಿಂದ ಮುಂದುವರಿದುದು

ನೋಡಿ ಮಾವನೇ ಮಾತಾಡಿದ "ಪಟೇಲ್ ಊರ ನ್ಯಾಯಾಧಿಪತಿಯಂತಿರುವ ನೀನು ಈ ವಿದ್ಯ ಮಾನಗಳನ್ನು ಅರಿತು ಹೀಗೆ ಆಚರಿಸಿದ್ದು ನ್ಯಾಯವೆಂದು ತೋರುವುದೇ? ಹೆಣ್ಣೊಬ್ಬಳು ನಿರಾಧಾರಳಾಗಿ ಕಷ್ಟಪಡುತ್ತಿರಲು ಹೊರೆಯನ್ನು ಕೆಳಗಿರಿಸುವುದರ ಬದಲಾಗಿ ಭಾರ ಮಾಡುವುದೇ?" ಮಾವನ ಕಡೆಗೆ ತಿರುಗುತ್ತ "ಅಯ್ಯಾ ಸೊಸೆ ಎಂಬವಳು ಬಂಗಾರ ಹಾಗೆ ನಿಮಗೆ ಬಾಳಿಸಿಕೊಂಡಿರುವ ಭಾಗ್ಯವಿರಬೇಡವೇ? ತಾನು ಹುಟ್ಟಿದ ಮನೆಗಾಗಿ ಎಷ್ಟು ಪೇಚಾಟ ಪಟ್ಟಳು. ಹಾಗೆಯೇ ಇಂತಹ ಸ್ಥಿತಿ ನಿಮ್ಮ ಮನೆ ತನಕ್ಕೆ ಬಂದರೆ ನಿಮ್ಮಲ್ಲಿದ್ದುದಾದರೆ ಹಾಗೇ ಇರುತ್ತಿದ್ದಾಳೆಂಬುದಕ್ಕೆ ಬೇರೆ ನಿದರ್ಶಬೇಕೆ? ಬದಲಾಗಿ ಹಿಂದಿನ ದ್ವೇಷ ಸಾಧನೆಗಾಗಿ ಆಚರಿಸಿದ ಕಾರ್ಯ ಉಚಿತವೆಂದು ಮನಸ್ಸಿಗೂ ತೋರುವುದೇ?" ಎಂದಾಗ ಇಬ್ಬರ ಮುಖದಲ್ಲೂ ಪಶ್ಚಾತ್ತಾಪ ಮೂಡಿತ್ತು. ಮಾವನು ಕೈ ಜೋಡಿಸುತ್ತ "ಹೌದು ಹಿರಿಯವನಾಗಿ ತಪ್ಪಿ ಬಿದ್ದೆ. ಸೊಸೆಯನ್ನು ಬಾಳಿಸಿಕೊಂಡು ಬರುವ ಭಾಗ್ಯವಿಲ್ಲದ್ದಕ್ಕೆ ನಾಚಿಕೆಯುಂಟಾಗಿದೆ. ಅವಳು ಒಬ್ಬಳು ದೇವತೆಯೇ ಸರಿ, ಕ್ಷಮಿಸಬೇಕು. ಈ ಹಣ ನನ್ನ ಪಾಲಿಗಿರುವ ಆಸ್ತಿ ಎಲ್ಲವೂ ಅವಳ ಮಕ್ಕಳಿಗೆ ಕೊಟ್ಟು ಇಲ್ಲೇ ಇದ್ದು ನೋಡುತ್ತೇನೆ" ಎಂದು ಬೇಡಿದನು. ಪಟೇಲನು ತನ್ನಿಂದಾದಷ್ಟು ಸಹಾಯ ಮಾಡುವೆನೆಂದು ಒಪ್ಪಿದನು. ಹೀಗೆ ಸಮಸ್ಯೆಗಳು ಪಶ್ಚಾತ್ತಾಪದ ಪರ್ಯವಸಾನದಲ್ಲಿ ಕೊನೆಗೊಂಡವು.

ಅಣ್ಣ ತಂಗಿಯರಿಬ್ಬರೂ ಮನೆ ಕಡೆಗೆ ಹೊರಟರು. ಮಾರ್ಗವು ಮೆದುವಾಗಿರುವಂತೆ ಕಂಡಿತು. ಸ್ವತಂತ್ರವಾದ ಮನೆಯನ್ನೊಮ್ಮೆ ಪುನಃ ನೋಡುವುದೆಂಬ ಸಂತಸವು ಮೈಯಲ್ಲಿ ಹರ್ಷವನ್ನುಂಟು ಮಾಡಿತ್ತು. ತಂಗಿಯ ಮುಂದಿನ ಬಾಳ್ವೆಗೂ ಅನುಕೂಲವಾಗುವ ಏರ್ಪಾಡೂ ಇದೆ. ಇನ್ನೇನಾಗಬೇಕು? ಮನೆಯ ಬಾಗಿಲಿಗೆ ಬಂದಾಗ ಹುಡುಗರಿಬ್ಬರು ಯಾರನ್ನೋ ನೀರಿಕ್ಷಿಸುವಂತೆ ತೋರುತ್ತಿತ್ತು. ತಮ್ಮ ತಾಯಿ ಒಬ್ಬ ಅಪರಚಿತನೊಂದಿಗೆ ಬಂದದ್ದನ್ನು ಕಂಡು ಬಳಿಸಾರಲು ಧೈರ್ಯ ಸಾಲದೆ ದೂರ ನಿಂತು ನೋಡುತ್ತಿದ್ದವು. ಮಾದವ ಆ ಹುಡುಗರಿಬ್ಬರನ್ನೂ ಕರೆದು ಅಪ್ಪಿಕೊಂಡನು. ಕಾವೇರ ಮನೆ ಬಾಗಿಲನ್ನು ತೆರೆದು ಅಣ್ಣನನ್ನು ಸ್ವಾಗತೀ ಕರಿಸಿದಳು. ಇದೇ ಮನೆಯನ್ನೊಮ್ಮೆ ತಿರುಗಿದನು. ಸ್ಥಿತಿ ನೋಡಿ ವ್ಯಥೆ ಪಟ್ಟನು. ಬಾಲ್ಯದಲ್ಲಿ ತಾನು ಆಡಿದ ಓಡಿದ ಸ್ಥಳಗಳನ್ನು ಕಂಡು ವ್ಯಥೆ ಹೋಗಿ ಆನಂದವಾಯ್ತು. ಕಡೆಗೊಮ್ಮೆ ಜಗುಲಿಯ ಮೇಲೆ ಬಂದನು. ಅಲ್ಲಿ ಬಂದಾಗ ಕುತ್ತಿಗೆ ಬಿಗಿದು ಮನಸ್ಸು ಅಳುವಿನ ತೆರೆಯನ್ನು ಕರೆಯಿತು. ಹಿಂದೆ ತನಗೊಂದು ಆತ್ಮವು ತನ್ನ ಮೇಲ್ಮೆಗಾಗಿ ಹಾರೈಸಿ ತನ್ನಗಾಗಿ ಹಂಬಲಿಸಿ ಅಗಲಿದುದನ್ನು ನೆನಸಿ ಕಂಬನಿಗೆರದನು. ಅದು ಅವನ ತಂದೆ ರಂಗಪ್ಪನು ಕೂತುಕೊಳ್ಳುವ ಮಲಗುವ ಸ್ಥಳ. ತಂಗಿಯೂ ಅಣ್ಣನನ್ನು ದಿಟ್ಟಿಸಿದಳು. ತಂದೆಯ ಮಧುರಸ್ಮೃತಿ ಇಬ್ಬರಿಗೂ ನೆನಪು ಬಂತು. ಅವಳೂ ಕಂಬನಿಗೆರದಳು ಆ ದಿನ ರಾತ್ರೆ ಅಲ್ಲೇ ಕಳೆದನು. ತಂಗಿ ಚೊಕ್ಕಟವಾದ ಭೋಜನವನ್ನು ಇತ್ತಳು. ಎಂತಹ ಸವಿಯಾಗಿತ್ತು ಆ ಊಟ-ಕಳೆದ ಇಪ್ಪತ್ತು ವರ್ಷಗಳಲ್ಲಿ ಎಂತೆಂತಹ ಊಟ ಮಾಡಿದ್ದ. ಆದರೆ ಇದು ಅವುಗಳನ್ನು ಮೀರಿದ ಮಧುರತೆಯಲ್ಲಿತ್ತು. ತಂಗಿಯ ಪ್ರೀತಿಯು ಬಡಿಸುವುದರಲ್ಲೇ ಸಿಹಿ ಕೂಡಿ ಬಂದಿತ್ತು.

ಮರುದಿನ ಊರಿಗೆ ಊರೇ ಅಲ್ಲೇ ಬಂತು. ನಿನ್ನೆಯ ಸಮಾಚಾರ ಗಾಳಿಯಂತೆ ಹಬ್ಬಿತ್ತು. ತಮ್ಮ ಊರಿನವನು ಅಧಿಕಾರಿಯಾಗಿರುವನು ಎಂಬ ಹೆಮ್ಮೆಯಿಂದ ನೋಡ ಬಂದಿತ್ತು. ಆದರೆ ಮಾದವನಲ್ಲಿ ಹೆಮ್ಮೆ ಇಕಲಿಲ್ಲ. ಅವನು ದೀನನಾಗಿದ್ದನು. ಈಗ ಎಲ್ಲರೂ ಪರಿಚಿತರಾಗಿ ತೋರಿದರು. ಎಲ್ಲರೊಡನೆ ವಿನಯದಿಂದ ವರ್ತಿಸಿ ಸ್ವಾಗತೀಕರಿಸಿದನು. ಇವರನ್ನು ಬಿಟ್ಟು ಹೋಗುವುದಕ್ಕೂ ಮನಸ್ಸಾಗಲಿಲ್ಲ. ಆದರೆ ಕಾರ್ಯದ ಕಡೆಗೆ ಗಮನವು ಸೆಳೆದಾಗ ದುಃಖವಾಯ್ತು. ಮನೆಯ ವ್ಯವಸ್ಥೆಯೊಂದು ಆಗಬೇಕಲ್ಲ. ಇನ್ನಾದರೂ ಬಂದು ನೆಲಸಬಹುದು. ಆದರೆ ಉದ್ಯೋಗದಿಂದ ನಿವೃತ್ತಿಯಾಗಲೂ ಇನ್ನೂ ಸಮಯವಿದೆ ಎಂದು ಯೋಚಿಸಿ "ಕಾವೇರ, ನಾನು ಈ ಮನೆಯ ಸಂಬಂಧ ಕಡಿಯಲು ಬಂದಿದ್ದೆ. ಆದರೆ ಋಣವು ಪುನಃ ಇಲ್ಲೇ ಕರೆಯಿತು. ನಾನು ಮಾರಲು ಬಂದೆ-ನೀನು ಉಳಿಸಿದೆ. ನಾನು ವಾರೀಸದಾರನೆಂಬುದು ನೆವನಕ್ಕೆ. ಮನೆಯ ತಳಹದಿ ಉಳಿಸಲು ಸಾಹಸ ಪಟ್ಟವಳು ನೀನು ನಿಜವಾದ ವಾರೀಸದಾರಳು. ತಂದೆಗೆ ಮಗನು ಸಲ್ಲಿಸುವ ಸೇವೆಗಿಂತ ಮಿಗಿಲಾದ ಸೇವೆ ನೀನು ಅರ್ಪಿಸಿ ಪುಣ್ಯಗಳಿಸಿದ್ದಿ. ಹಾಗೇ ಅವನು ಗಳಿಸಿದ ಮನೆಯೂ ನಿನಗೇ ಆಗಬೇಕು. ಈಗೋ ತಂಗೀ ಈ ಪತ್ರದಲ್ಲಿ ಮನೆ ನಿನ್ನ ಹೆಸರಿಗೆ ಬರೆದಿದ್ದೇನೆ"ಎಂದು ಕಾಗದವನ್ನು ನೀಡಿದನು.

ತಂಗಿ ಅದನ್ನು ಪಡೆಯದೆ "ಅಣ್ಣಾ ನನಗಿನ್ನೇನುಬೇಕು? ನನ್ನ ಜೀವನಕೆ ಸೌಕರ್ಯವನ್ನು ಕಲ್ಪಿಸಿದ್ದು ಸಾಲದೆ ಇನ್ನೂ ಇಲ್ಲಿಯ ಋಣಕ್ಕೆಳಸುವೆಯಾ? ನಾನು ಕುಲದ ಹೊರಗಿನವಳಲ್ಲವೆ? ತಂದೆಯ ಮಾತು ಸತ್ಯವಾದಂತೆ ಅವನ ಆಸೆ ನೇರವೇರಿಸುವ ಕರ್ತವ್ಯವು ಇನ್ನೂ ಇದೆ ಎಂಬುದು ಮರೆತೆಯಾ? ನೀನು ಇಲ್ಲಿ ಒಂದು ಬೆಳಗುವುದಿಲ್ಲವೆ?" ಎಂದು ಉಸಿರಿದಳು. ಆ ಮಾತಿನ ಹಿಂದೆ ಓಲುಮೆ ಪ್ರೀತಿ ಕರುಣೆ ದನಿ ಗೊಂಡಿತ್ತು.

ತಂಗಿಯ ಮೆದು ಮಾತಿನಿಂದ ಆ ತ್ಯಾಗದ ಹಿರಿಮೆ ಮುಂದೆ ಅವನ ಮನಸ್ಸು ತಲೆಬಾಗಿತು. "ಒಳ್ಳೇದು ಹಾಗೇ ಆಗಲಿ. ಕಾವೇರಿ ನನ್ನ, ಉದ್ಯೋಗದಿಂದ ನಿವೃತ್ತಿಯಾದ ಮೇಲೆ ಇಲ್ಲೇ ಬಂದು ನೆಲಸುತ್ತೇನೆ. ತಂದೆಯ ಆಸೆಯೂ ಸಫಲವಾಗಲಿ. ಊರು ಮನೆ ಮರೆಯದೆ ಆಗಾಗ್ಗೆ ಬರುತ್ತಾ ಇರುತ್ತೇನೆ. ನನಗೆ ಮರೆಯಾಗದಂತೆ ಕಾಗದ ಬರೆಯುತ್ತಾ ಇರು. ನೆನಪಿರಲಿ. ನಿಜವಾದ ವಾರೀಸದಾರನು ನಾನಲ್ಲ-ನೀನು. ನಾನು ಬರುವ ತನಕ ಮಕ್ಕಳೊಂದಿಗೆ ಸೌಖ್ಯವಾಗಿ ಬಾಳು ತಂಗೀ" ಎಂದು ತುಂಬು ಎದೆಯಿಂದ ಆಶೀರ್ವದಿಸಿ ಹೊರಟನು. ಊರಿಗೆ ಬರುವಾಗ ತಾತ್ಸಾರದ ಸಿಡುಕಿನ ಸ್ವಾರ್ಥದ ರೂಪವಾಗಿದ್ದನು. ಮರಳುವಾಗ ಪ್ರೇಮದ ಸೌಜನ್ಯದ ತ್ಯಾಗದ ಮೂರ್ತಿಯಂತಾಗಿ ಮರಳಿದನು.

*ಪದ್ಯವು ವಾಲ್ಟರ್ ಸ್ಕೊಟ್‌ನ ಪೆಟ್ರಿಯಾಟಿಸಮ್ (Walter scots' Patriotism) ಎಂಬುದರ ಅನುವಾದ ಸಂದರ್ಭಕ್ಕಾಗಿ ತೆಗೆದಿರುತ್ತದೆ.

ಮ. ಸಾಂತಯ್ಯ ಭಟ್

ಸಿಹಿ ಸುದ್ದಿ ಸಂಗ್ರಹ

ಓರ್ವ ಈಜಿಪ್ತ್ ದೇಶದ ತರುಣಿಯು ತನ್ನ ತಂದೆಯು ತನಗೆ ಸಾರ್ವಜನಿಕದಲ್ಲಿ ಅಪಮಾರ್ಯದೆಯ ಮಾತನ್ನಾಡಿದನೆಂದು ಅವನ ಮೇಲೆ ೧ ಪೈಸ್ಸರ್ (೨ಅಣೆ) ಮಾನನಷ್ಟ ಸಿಗುವಂತೆ ದಾವೆಮಾಡಿರುವಳು.

* * *

ಜಗತ್ತಿನ ಅತೀ ದೊಡ್ಡ ಅಣೆಕಟ್ಟೊಂದನ್ನು ಚೀನದಲ್ಲಿ ಕಟ್ಟಲು ಅಮೇರಿಕದ ಡಾ। ಜೋನ್ ಸೆವೆಜ್ ಎ ಯೋಜನೆ ತಯಾರಿಸಿರುವರು. ಅಣೆಕಟ್ಟೆಯ ಸರೋವರವು ೭೦೦ ಮೈಲು ಉದ್ದವಾಗುವುದು.

* *

ಬತ್ತವನ್ನು ಅದರೊಳಗಿನ ಆರೋಗ್ಯಕರವಾದ ಹೊಟ್ಟು ನಷ್ಟವಾಗದಂತೆ ಅಕ್ಕಿಯಾಗಿ ಮಾಡುವ ಒಂದು ಯಂತ್ರವು ಅಮೇರಿಕನ್ ಕೃಷಿ ಇಲಾಖೆಯವರು ತಯಾರಿಸಿರುವರು.

* * *

ರಷ್ಯದ ತಡೆಯಿಲ್ಲದ ಮುನ್ನಡಯಿಂದ ಯುರೋಪಿನ ಅತೀ ದೊಡ್ಡ ಶ್ರೀಮಂತರು ಕೆಲವರು ರಷ್ಯನ್ ಆಡಳಿತದೊಳಗೆ ಸೇರಿರುವರು. ಇವರು ಸ್ಯಾಲಿಸಿಯಾದಲ್ಲಿನ ಕಲ್ಲಿದ್ದಲ್ಲು ಗನಿಗಳ ಒಡೆಯರು. ಇವರ ೫೦೦ ಮಿಲಿಯ ಪವನುಗಳಷ್ಟು ಸಂಪತ್ತು ರಷ್ಯದ ಕೈ ಸೇರಿದೆ.

* * *

ಹೊಲಿವುಡ್ಡ್ ಪಿಲ್ಮ್ ಕೇಂದ್ರದಲ್ಲಿರುವ ಒಂದು ಹಿಂದೂ ದೇವಾಲಯದಲ್ಲಿ ಕೆಲವು ಪ್ರಖ್ಯಾತ ಬ್ರಿಟಿಷ್ ಸಾಹಿತಿಗಳು ವೇದಾಂತ, ಯೋಗಾಭ್ಯಾಸಗಳನ್ನು ಅಭ್ಯಾಸುತ್ತಿರುವರು. ಅಲ್ಡುವಸ್ ಹಕ್ಸ್ಲಿ, ಐಶರ್‌ವುಡ್, ಡ್ರುಟೆನ್, ಜಿರಾಲ್ಡ್‌ಹರ್ಡ್, ಸೊಮರ್ಸೆಟ್ ಮೌಗಾಮ್ ಎಂಬವರಿಗೆ ಸ್ವಾಮಿ ಪ್ರಭಾನಂದಾ ಎಂಬವರು ಗುರೊಪದೇಶ ಮಾಡುತ್ತಲಿದ್ದಾರೆ.

* * *

ಅಮೇರಿಕದ ಸಿನ್ಸಿನಟಿ ನಗರದ ಒಂದು ಸಿಗರೇಟ್ ಅಂಗಡಿ ಮುಚ್ಚಲ್ಪಟ್ಟಿದೆ. ಅದರ ಬಾಗಿಲಲ್ಲಿ ತೂಗಹಾಕಿದ ಬೋರ್ಡಿನಲ್ಲಿ ಹೀಗೆ ಬರೆದಿದೆ:

"ಸಿಗರೇಟ್ ಮುಗಿದಿದೆ, ಚುಟ್ಟಾ ಮುಗಿದಿದೆ. ಚೊಕೊಲೇಟ್ ಮುಗಿದಿದೆ. ಫಿಲ್ಮ್‌ಗಳು ಮುಗಿದಿವೆ. ಸ್ಟೆಂಪುಗಳು ಮುಗಿದಿವೆ. ನನ್ನ ತಾಳ್ಮೆ ಮುಗಿದಿದೆ. ಅಂಗಡಿಯೇ ಮುಗಿದಿದೆ".

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿಧ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[ಸಂಪುಟ 39] ತಾರೀಕು 16—3—1945 [ಸಂಚಿಕೆ 11]

ಈ ಸಲ ಜಪಾನಿಗೆ ದೈವರಕ್ಷಣೆ ಇಲ್ಲ

ವಾಯುದೇವನ ರಕ್ಷಣೆ ಇದ್ದ ದೇಶ

ಜಪಾನಿಗೆ ಕಾಲ ಹತ್ತಿರ ಬಂದಿದೆ

ಗಂಡಾಂತರ ಕಾಲದಲ್ಲಿ ತಮಗೆ ದೈವ ಸಹಾಯವಿದೆಯೆಂದು ಜಪಾನಿಯರು ಇವತ್ತಿಗೂ ನಂಬಿಕೊಂಡಿದ್ದಾರೆ. ಇದಕ್ಕೆ ಕಾರಣವಿದೆ. ಇಂದಿಗೆ ಸುಮಾರು ೬೬೪ ವರ್ಷಗಳ ಹಿಂದೆ ಅಂದರೆ ೧೨೮೧ನೇ ಇಸವಿಯಲ್ಲಿ ಚೀನದ ಪ್ರಬಲ ಯೋನ್ ವಂಶದ ಜೇಚು ಎಂಬ ಚಕ್ರವರ್ತಿಯು ದೊಡ್ಡ ಹಡಗು ಪಡೆಯೊಂದಿಗೆ ಜಪಾನ್ ದ್ವೀಪಗಳನ್ನು ಮುತ್ತಲು ಪ್ರಯತ್ನಿಸಿದನು. ಆಗ ಅಕಸ್ಮಾತಾಗಿ ಒಂದು ಬಲವಾದ ಬಿರುಗಾಳಿ ಬಂದು ಚೀನಿಯರ ನೌಕೆಯು ಚದರಿ ಚಲ್ಲಾಪಿಲ್ಲಿಯಾಯಿತು. ಪರಿಣಾಮವಾಗಿ ಜಪಾನಿನ ಗಂಡಾಂತರ ತಪ್ಪಿತು. ನಂಬಿಗಸ್ತರಾದ ಆ ಜನರು ಪರಮಾತ್ಮನು ವಾಯುದೇವನನ್ನು ತಮ್ಮ ರಕ್ಷಣೆಗೆ ಕಳುಹಿಸಿದನೆಂದು ತಿಳಕೊಂಡರು. ಅಂತೆಯೇ ಇಂದಿಗೂ ಅವರಿಗೆ ದೈವ ಸಹಾಯದ ಮೇಲೆ ಅಚಲ ವಿಶ್ವಾಸ.

ಆರನೂರ ಅರವತ್ತನಾಲ್ಕು ವರ್ಷಗಳ ನಂತರ ಇಂದು ಜಪಾನು ಪುನಃ ಗಂಡಾಂತರದ ಬಾಯಿಗೆ ಸಿಲುಕಿದೆ. ಆದರೆ ಇಂದಿನ ಅಮೇರಿಕನ್ ಹಡಗುಗಳು ಹಿಂದಿನವುಗಳಂತೆ ಮರದವುಗಳಾಗಿರದೆ ಅವು ಉಕ್ಕಿನ ಕವಚದಿಂದ ಮುಚ್ಚಲ್ಪಟ್ಟವುಗಳು. ನೌಕಾ ಸೈನ್ಯಗಳು ಇಂದು ಬಾಣ ಬತ್ತಳಿಕೆಗಳ ಬದಲಿಗೆ ಗುಂಡು ಬಾಂಬುಗಳಿಂದ ಸಜ್ಜಿತರಾಗಿರುವರು. ಈ ಸಲ ದರ್ಪದ ಆ ಚಿಕ್ಕ ದ್ವೀಪ ದೇಶವು ಗಂಡಾಂತರವನ್ನು ಆಹ್ವಾನಿಸಿಕೊಂಡಿದೆ. ಇಂದು ದೈವ ಚಮತ್ಕಾರವು ಅದರ ಸಹಾಯಕ್ಕೆ ಬರುವಂತಿಲ್ಲ. ಜಪಾನಿನ ಪಾಪದ ಕೊಡವು ಹದಮಿಕ್ಕಿ ತುಂಬಿ ಹೊಮ್ಮುತ್ತಿದೆ.

ತಮ್ಮ ನಂಬಿಕೆಗನುಸಾರವಾಗಿ ಜಪಾನಿಯರು ತಮ್ಮ ವಿಮಾನ ಬಲದ ದಾಳಿಗ ದಳಗಳಿಗೆ 'ಕಾಮಿಕಾಜೆ' ಅಥವಾ 'ದೈವೀಕ ವಾಯು ಬಲ'ವೆಂದು ಹೆಸರಿಟ್ಟಿರುವರು. ಅಮೇರಿಕನ್ನರ ಹಡಗು ಪಡೆಯನ್ನು ನಾಶಮಾಡುವುದೇ ಈ ವಿಮಾನ ಮುಂದಳಗಳ ಸಂಕಲ್ಪಿತ ಉದ್ದೇಶವಾಗಿರುತ್ತದೆ. ಇದರಲ್ಲಿ ಅಂತರ್ರಾಷ್ಟ್ರೀಯ ವಾದಿಗಳಾದ ಜಪಾನಿ ತರುಣರು ಭಾಗವಹಿಸುತ್ತಾರೆ. ದೈವಸಾಕ್ಷಾತ್ಕಾರದ ಈ ವಾಯು ಬಲ ನಿರ್ಮಾಣದಿಂದ ಇಡೀ ಜಪಾನಿ ಜನಾಂಗವೇ ಸ್ಫೂರ್ತಿಗೊಂಡಿದೆ.

ದೈವ ರಕ್ಷಣೆಯೂ ಇಲ್ಲ

ಅಮೇರಿಕನ್ನರು ಪಿಲಿಪ್ಪೈನ್ ದ್ವೀಪಗಳನ್ನು ಮುತ್ತಿದಾಗ ಜಪಾನಿಯರ 'ದೈವ ಸಹಾಯ'ದ ಸತ್ವಪರೀಕ್ಷೆ ನಡೆಯಿತು. ಅವರ 'ದೈವೀಕ ವಾಯು ಬಲ'ದ ಶಕ್ತಿಯು ಮುರಿದು ನುಚ್ಚು ನೂರು ಮಾಡಲ್ಪಟ್ಟಿತು.

ಮೆಕ್ ಆರ್ಥರರು ಈಗ ಮನಿಲಾವನ್ನು ಹಿಡಿದಿದ್ದಾರೆ. ಸದ್ಯದಲ್ಲೇ ಅಮೇರಿಕನ್ ಪಡೆಗಳು ಆಕ್ರಮಿತ ಚೀನದ ಕರಾವಳಿಯನ್ನು ಮುತ್ತಲಿರುವರು. ತಮ್ಮನ್ನು ಈ ಸಲ ಯಾವ ದೈವವೂ ರಕ್ಷಿಸಲಾರದೆಂದು ಜಪಾನೀ ಯುದ್ಧ ಮುಖಂಡರಿಗೆ ಖಚಿತವಾಗಿದೆ. ಗಾಬರಿಗೊಂಡು ಜಪಾನೀ ಜನತೆಯನ್ನು ತಣ್ಣಗಿರಿಸಲು ಮತ್ತು ಆಕ್ರಮಿತ ಪ್ರದೇಶಗಳ ಜನರನ್ನು ಮೆಚ್ಚಿಸಲು ಪ್ರಧಾನ ಕ್ಯೊಸೊ ಅವರು ಈಗ ಚೀನಕ್ಕೆ ಹೊಸ ಆರ್ಥಿಕ ಸವಲತ್ತು'ಗಳನ್ನು ಕೊಡುವುದಾಗಿ ಘೋಷಿಸಿದ್ದಾರೆ.

ರಾತ್ರಿ ಹಗಲು ಎಂಬಂತೆ ಜಪಾನಿ ರೇಡಿಯೋ ಪ್ರಚಾರಕರು ಈ ಹೊಸ ಆರ್ಥಿಕ ಯೋಜನೆಯ ಕುರಿತು ರಾಗಾಲಾಪನೆ ಮಾಡುತ್ತಿದ್ದಾರೆ. ಇದನ್ನು ಕೇಳುವಾಗ ಯುದ್ಧಾರಂಭದಲ್ಲಿ ಜಪಾನಿಗಳು ಎಬ್ಬಿಸಿದ 'ಏಸ್ಯದ ಒಗ್ಗಟ್ಟು' 'ಪರಸ್ಪರ ಶ್ರೇಯಸ್ಸಾಧನೆಯ ಏಸ್ಯಾ ಪ್ರದೇಶಗಳು' ಎಂಬ ಕೂಗಾಟ ಎಲ್ಲಿ ಅಣಗಿತು ಎಂಬ ಪ್ರಶ್ನೆ ಹೊಳೆಯುತ್ತದೆ. ಏನೋ ಒಂದು ಭೀಕರ ಭಯವು ಅವರನ್ನು ಈಗ ಆವರಿಸಿದೆ. ಅವರ ಯೋಜನೆಗಳ ತಳಹದಿಯಲ್ಲಿ ಬಲವಾದ ಬಿರುಕುಂಟಾಗಿದೆ ಎಂಬ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ. ಈಗ ತಾವು ಆಕ್ರಮಿಸಿದ ಪ್ರದೇಶಗಳಲ್ಲಿನ ಚೀನಿಯರು ತಮ್ಮೊಡನೆ ಬಾಂಧವ್ಯದಿಂದ ವರ್ತಿಸುವರೆಂದೂ ಎಲ್ಲವೂ ಸುಗಮವಾಗಿ ಸಾಗುತ್ತಿದೆ ಎಂದೂ ನೆನ್‌ಕಿಂಗ್ ರೇಡಿಯೋವು ಪದಹಾಡುತ್ತಿದೆ. ಇದು ನಿಜವೆ?

ಹೊಸ ಯೋಜನೆಯ ಮರ್ಮವೇನು?

ಎಲ್ಲವೂ ಸುಗಮವಾಗಿ ಸಾಗುತ್ತಿದೆಯಾದರೆ ಹೊಸತೊಂದು ಯೋಜನೆಯ ಗಾಳಹಾಕುವ ಅವಶ್ಯಕತೆ ಏನು? ಅದರಲ್ಲೂ ಆ ಯೋಜನೆಯು ಸಾಂಪತ್ತಿಕ ಅಭಿವೃದ್ಧಿಗೆ ಸಂಬಂಧಪಟ್ಟದ್ದಿರಬೇಕೇಕೆ?

ಇದರ ಉತ್ತರವು ಅತ್ಯಂತ ಸುಲಭವೂ ಸರಳವೂ ಆಗಿದೆ. ಅನೇಕ ವರ್ಷಗಳ ಆಕ್ರಮಣದಿಂದ ಜಪಾನಿಯರು ಒಳ್ಳೇ ಪಾಠವನ್ನೆ ಕಲಿತಿದ್ದಾರೆ. ತಾವು ಲಂಚ ತಿನ್ನಿಸಿ ಕೈಕೆಳಗಿಟ್ಟುಕೊಂಡ ಚೀನಿ ಕೈಗೊಂಬೆಗಳು ಕೂಡಾ ಸುಲಭವಾಗಿ ತಮ್ಮ ರಾಗಕ್ಕೆ ತಾಳಹಾಕುವವರಲ್ಲವೆಂದು ಅವರಿಗೆ ತಿಳಿದಿದೆ. ಇನ್ನು ನೊಂದ ಚೀನಿ ಜನತೆಯ ಕುರಿತು ಪ್ರತ್ಯೇಕ ಹೇಳಬೇಕಾದುದಿಲ್ಲ.

ಹಿಡಿದ ಪ್ರದೇಶಗಳಿಂದ ಸೈನಿಕರನ್ನು ಕೂಡಿಸುವ ಅವರ ಯೋಜನೆಯು ಅದೆಂದೋ ಮಣ್ಣುಪಾಲಾಗಿದೆ.

ತಮ್ಮ ಕೈಕೆಳಗಿನ ಚೀನಿ ಸೈನ್ಯಗಳನ್ನು ಹತೋಟಿಯಲ್ಲಿಡಲು ಸಾಧ್ಯವಿಲ್ಲವೆಂದು ಮನವರಿಕೆಯಾದರೂ ಜಪಾನಿಗಳು ಅಲ್ಲಿನ ಭೂಸಂಪತ್ತನ್ನು ತಮ್ಮ ಯುದ್ಧ ಕೈಗಾರಿಕೆಯ ರಾಕ್ಷಸನ ಮೇವಿಗಾಗಿ ಸುಲಿಗೆ ಮಾಡಬಹುದೆಂದು ವಿಶ್ವಾಸ ತಾಳಿಕೊಂಡಿದ್ದಾರೆ. ಇದಕ್ಕಾಗಿಯೇ ಅವರ ಈ ಹೊಸ ಸಾಂಪತ್ತಿಕ ಯೋಜನೆ.

ಆಕ್ರಮಣಕ್ಕೆ ಮುಂಚಿನಿಂದಲೂ ಜಪಾನಿಯರು ಚೀನೀ ಸಂಪತ್ತನ್ನು ಉಪಾಯದಿಂದ ಸುಲಿಯುತಿದ್ದರು. ಆಕ್ರಮಣಾನಂತರ ಕ್ರೋಧಗೊಂಡ ಚೀನಿ ಜನತೆಯು ಅವರ ಎಲ್ಲಾ ಯೋಜನೆಗಳಿಗೆ ನೀರೆರೆಯಿತು. ಚೀನಿಯರು ಕೂಲಿಗಳಾಗಿ ಕೆಲಸ ಮಾಡಲು ಒಪ್ಪಲಿಲ್ಲ. ಅವರು ಮೌನವಾದ ಮುಷ್ಕರ ಹಿಡಿದರು. ಈಗ ಅವರನ್ನು ಒಲಿಸಿಕೊಳ್ಳದೆ ಉಪಾಯವಿಲ್ಲದಾಗಿದೆ.

ಕೂತ ಮಣೆಯೇ ವಿರೋಧ

ನಿಂತ ನೆಲವೇ ಮುನಿವಂತೆ, ಇಲ್ಲವೇ ಕೂತ ಮಣಯೇ ಎದ್ದು ಬಡಿವಂತೆ ಆಕ್ರಮಿತ ಚೀನದಿಂದ ಜಪಾನು ಇಂದು ಕಠಿಣ ಸಂಕಷ್ಟಕ್ಕೆ ತುತ್ತಾಗಿದೆ. ಆದರೆ ಈ ಸಲ ಅವರು ಸಕ್ಕರೆ ಆವರಣದ ಕಹಿ ಮಾತ್ರೆಯುಣ್ಣಿಸುವಂತೆ ಚೀನಿಯರ ಮುಂದೆ ಹೊಸ ಸಂಪತ್ತಭಿವೃದ್ಧಿಯ ಯೋಜನೆಯನಿಟ್ಟು ತಮ್ಮೊಡನೆ ಸಹಕರಿಸಿದ ಕೆಲ ಚೀನಿ ಅಧಿಕಾರಿಗಳ ಸಹಾಯದಿಂದ ಚಂದದ ಸುಲಿಗೆಯನ್ನು ಮಾಡಬಯಸುತ್ತಾರೆ. ಇದನ್ನು ಬೇನೆಯಾಗದ ಶಸ್ತ್ರಚಿಕಿತ್ಸೆ ಎಂದೂ ಹೇಳಬಹುದು.

ಇಷ್ಟಾದರೂ ಜಪಾನು ತನ್ನ ಉಪಾಯದಲ್ಲಿ ಯಶಸ್ವಿಯಾಗಲಾರದು. ಇಂದಿಗೆ ಏಳು ವರ್ಷಗಳಿಂದ ಅವರು ಒಂದು ಗೊಂಬೆ ಸರಕಾರದಿಂದ ಚೀನಿಯರನ್ನು ಪುಸಲಾಯಿಸಿದರು. ಆದರೆ ಆ ಪ್ರಯತ್ನವು ಅಂತ್ಯದಲ್ಲಿ ಫಲಕಾರಿಯಾಗಲಿಲ್ಲ. ಈಗ ಅದರ ಕೊನೆಯ ಕುಸಿದು ಬೀಳುವಿಕೆಯ ಕಾಲ ಬಂದಿದೆ. ಯಾರೂ ಇದರಿಂದ ಜಪಾನನ್ನು ರಕ್ಷಿಸರು.

ಆಕ್ರಮಿತ ಪ್ರದೇಶದಲ್ಲಿನ ಸಾಂಪತ್ತಿಕ ಅಧಿಕಾರವನ್ನು ತಮ್ಮ ಕೈಗೊಂಬೆಯಂತಿರುವ ಅಲ್ಲಿನ ಚೀನಿ ಸೈನ್ಯಕ್ಕೆ ಒಪ್ಪಿಸಿ ಅವರನ್ನು ಸ್ವಲ್ಪ ಸಮಯದವರೆಗೆ ತೃಪ್ತಿಸಬಹುದು. ಆದರೆ ಹಣ ಕಾಸಿನಮಟ್ಟಿಗೆ ಅವರಿಗೆ ಸ್ವಾತಂತ್ರ್ಯ ಕೊಟ್ಟ ಮಾತ್ರಕ್ಕೆ ಎಲ್ಲವೂ ಮುಗಿದಂತಾಗುವುದೇ? ಇದರ ಇತ್ಯರ್ಥವೇ ಈ ಯುದ್ಧದ ಪರಿಣಾಮವಾಗುವುದು.

ತಮ್ಮ ಕೆಳಗಿನ ಚೀನಿ ಸೈನ್ಯಗಳಿಗೆ ಬೇಕಾದ ಗುಂಡು ಮದ್ದುಗಳನ್ನೂ ಆಹಾರವಸ್ತುಗಳನ್ನೂ ಕೊಡುವುದರಿಂದ ಜಪಾನಿಗೆ ಹೆಚ್ಚಿನ ಸಹಾಯವಾಗಲಾರದು. ಆಧುನಿಕ ಯುದ್ಧಕ್ಕೆ ಬೇಕಾದ ವಿಮಾನಗಳೂ, ಟೇಂಕುಗಳೂ ಮತ್ತಿತರ ಭಾರಯಂತ್ರೋಪಕರಣಗಳು ಜಪಾನಿಗೆ ಎಂದಿಗೂ ದೊರೆಯಲಾರವು.

ಅಂತ್ಯ ಸಮೀಪಿಸಿದೆ

ಇಂದು ಜಪಾನ್ ದ್ವೀಪ, ನಗರಗಳ ಮೇಲೆ ಮಿತ್ರ ವೈಮಾನಿಕರು ಅಗ್ನಿವೃಷ್ಟಿಯನ್ನು ಸುರಿಯುತಿದ್ದಾರೆ. ಈ ಭಯಂಕರ ಅಗ್ನಿ ಸ್ಫೋಟಕ ಜ್ವಾಲೆಗಳು ಜಪಾನಿಯರಿಗೆ ತಮ್ಮ ಭವಿತವ್ಯದ ಅರಿವನ್ನುಂಟು ಮಾಡುತ್ತವೆ.

ವಿಮಾನ ಬಲದ ಕೊರತೆಯಿಂದಾಗಿ ಆಗಲೇ ಬರ್ಮಾರಂಗದಲ್ಲಿ ಜಪಾನಿಯರು ಒಂದೇ ಸಮನೇ ಹಿಂದಕ್ಕೆ ಓಡುತ್ತಿರುವರು. ಪೆಸಿಫಿಕ್ ಸಾಗರದಲ್ಲೂ ಅವರ ಶಕ್ತಿ ತೋಳುಗಳು ಕಳಚಿಹಾಕಲಾಗಿವೆ. ಆಕ್ರಮಿತ ಚೀನದೊಳಗಿನ ಜಪಾನೀ ದಂಡುಗಳು ದಿನ ದಿನೇ ಮಿತ್ರ ಮುತ್ತಿಗೆಯ ರಣಭೇರಿಯ ನಾದವನ್ನು ನಿರೀಕ್ಷಿಸುತಿದ್ದಾರೆ. ಅವರ ಎದೆಗಳು ಭಯದಿಂದ ಬಡಿಯಹತ್ತಿವೆ.

ಯುರೋಪಿನಲ್ಲಿ ಮಿತ್ರರ ಮುತ್ತಿಗೆಯಿಂದ ಹಿಟ್ಲರನಿಗೆ ಉಂಟಾದ ಪಾಡು ಸದ್ಯದಲ್ಲೇ ಚೀನದಲ್ಲಿ ಮುತ್ತಿಗೆಹಾಕುವುದರಿಂದ ಜಪಾನಿಗೆ ಅದೇ ಪಾಡು ಬಂದೇ ಬರುವುದು. ಚೀನಿಯ ಜನರು ಸಂಕೇತವನ್ನು ಎದುರು ನೋಡುತಿದ್ದಾರೆ. ಏಳು ವರ್ಷಗಳಿಂದ ಅವರು ಅನುಭವಿಸುವ ಸಂಕಷ್ಟಗಳು ಎಂದು ಮುಗಿವವೊ ಎಂಬುದೇ ಅವರ ದಿನನಿತ್ಯದ ಹಾರೈಕೆ.

"ಚೀನದಲ್ಲಿ ಪ್ರಾರಂಭವಾದ ಯುದ್ಧವು ಚೀನದಲ್ಲೇ ಮುಗಿಯುವುದು" ಎಂದು ಒಬ್ಬ ಜಪಾನೀ ಮಂತ್ರಿಯು ಕೆಲ ಸಮಯದ ಹಿಂದೆ ಹೇಳಿದ್ದನು. ಚೀನವನ್ನು ಸಂಪೂರ್ಣ ವಶಪಡಿಸುವುದೇ ಅವನ ಮಾತಿನ ಅರ್ಥವಾಗಿದ್ದರೂ ಈ ಸಲ ಚೀನದಲ್ಲಿನ ಯುದ್ಧವನ್ನು ಯಾರು ಮುಗಿಸಲಿರುವರೋ ನೋಡಲಿಕ್ಕಿದೆ. ಅದು ಜಪಾನಿಯರಿಂದ ಸಾಧ್ಯವಿಲ್ಲವೆಂಬ ವಿಷಯವು ಮಾತ್ರ ನೂರಕ್ಕೆ ನೂರು ಸತ್ಯ.

ಸಂತಸವೆನ್ನಲೆ? ದುಃಖವೆನ್ನಲೆ?

(ಲೇ: ಕೆ. ಎಸ್. ರೈ, ವಿಟ್ಲ)

ಲಕ್ಷ್ಮಿಯೆಂದವಳ ಹೆಸರು. ಭಾಗ್ಯಲಕ್ಷ್ಮಿಯಂತೆ, ಐಶ್ವರ್ಯದ ಸವಿಯನ್ನುಣ್ಣುವ ಭಾಗ್ಯವಂತಳವಳಲ್ಲದಿದ್ದರೂ, ಸೌಂದರ್ಯಲಕ್ಷ್ಮಿಯೇನೋ ಅಹುದವಳು. ಗುಣದಲ್ಲೂ ಅದ್ವಿತೀಯಳವಳು-ಲಕ್ಷ್ಮಿಯೆಂದರೆ ಎಲ್ಲರಿಗೂ ಬೇಕಾದವಳು. ಮನೆಯ ಅಜ್ಜಿ ಅನುದಿನವೂ ಅವಳನ್ನು "ಸುಖದಿಂದ ಬಾಳಪ್ಪಾ", ಎಂದು ಹರಸುತ್ತಿದ್ದಳು. ನೆರೆಮನೆಯ ಪಾರ್ವತಿಯ ತಾಯಿ ಲಕ್ಷ್ಮಿಯಂತಹ ಸದ್ಗುಣಿಯಾದ ಪತಿಯೊಬ್ಬನು ಆಕೆಗೆ ದೊರಕಿ,-ಅವರನೊಮ್ಮೆ ಕಣ್ತುಂಬ ನೋಡಿ ಸಾಯಬೇಕೆಂದು ದೇವರಲ್ಲಿ ದಿನಾಲು ಬೇಡುತ್ತಿದ್ದಳಂತೆ.

ಕಾಲಕಳೆಯಿತು-ದಿನಗಳುರುಳಿದವು-ಮಾಸಗಳು ಮಾಸಿದವು-ವರ್ಷವೆರಡೂ ಸಂದುವು-ಇಂದು ಲಕ್ಷ್ಮಿಗೆ ಹದಿಮೂರು ವರ್ಷ ಪ್ರಾಯ-ತುಂಬು ಜವ್ವನದ ಮೊದಲನೆಯ ಮೆಟ್ಟಲಲ್ಲಿ ಕಾಲಿಟ್ಟಿದ್ದಳು. ಲಜ್ಜೆಯು ಮೆಲ್ಲಮೆಲ್ಲನೆ ಅವಳನ್ನು ಸೇರಿದ್ದಿತು—ಈಗೀಗ ಅವಳು ನೆರಿಮನೆಗೆ ಹೆಚ್ಚಾಗಿ ಹೋಗುವುದಿಲ್ಲ—ಮನೆಯಲ್ಲೇ ಕೆಲಸ ಮಾಡುತ್ತಾ ಮಾತೆಗೆ ನೆರವಾಗುತ್ತಿದ್ದಳು-ಸೋಮಯ್ಯನವರ ನಾಲ್ವತ್ತನೇ ವರ್ಷದಲ್ಲಿ, ಸರಸ್ವತಿಗೆ ಹುಟ್ಟಿದ ಒಬ್ಬಳೇ ಮಗಳವಳು-ಅನಂತರ ಅವರಿಗೆ ಮಕ್ಕಳಾಗಲಿಲ್ಲ-ಅವರಿಗೆ ಗಂಡೂ ಅವಳೇ ಹೆಣ್ಣು ಅವಳೇ-ಹಿರಿಯರು ಮಾಡಿಟ್ಟ ಒಂದೆರಡು ಪೈರುಗದ್ದೆಗಳಿವೆ.—ಸ್ವಲ್ಪ ಅಡಿಕೆ ತೋಟವಿದೆ. ಅಂತೂ ಅವರ ನಾಲ್ವರ ಜೀವನವು ಸಂತಸದಿಂದಲೇ, ಕಳೆಯುತ್ತಿದ್ದಿತೆನ್ನಬೇಕು.

ಒಂದು ದಿನ ಬೆಳಿಗ್ಗೆ ಲಕ್ಷ್ಮಿ ಮನೆಗೆ ನೀರು ತರುತ್ತಿದ್ದಳು—ಸೂರ್ಯನ ಹೊಂಬಿಸಿಲು ಎಲ್ಲಾ ಕಡೆಯಲ್ಲಿ ಹಬ್ಬಿತು. ಸೋಮಯ್ಯನವರು ತಾಂಬೂಲವನ್ನು ಜಗಿಯುತ್ತಾ ಮನೆಯೆದುರು ಕುಳಿತಿದ್ದರು. ಎದುರಿಗೇ ಸರಸ್ವತಮ್ಮನವರೂ ಕುಳಿತಿದ್ದರು—ಮಾತಾನಾಡುತ್ತಾ "ಲಕ್ಷ್ಮಿಯ ಪ್ರಾಯ ಕಳೆದುದರ ಅರಿವೇ ಆಗಲಿಲ್ಲ—ಅವಳಿಗೆ ಇನ್ನಾದರು ಒಬ್ಬ ಯೋಗ್ಯ ವರನನ್ನು ಕಂಡು ವಿವಾಹ ಮಾಡಬೇಡವೇ? ಎಂದು ಸೋಮಯ್ಯನವರೇ ಕೇಳಿದರು. "ಅಹುದು ನಾನು ಒಂಬತ್ತನೇ ವರ್ಷದಲ್ಲೆ ವಿವಾಹಿತಳಾಗಿದ್ದೆ. ಮುದ್ದು ಮುದ್ದಾಗಿ ಬೆಳೆದ ಮಗಳೆಂದು —ಮದುವೆ ಮಾಡದೆ ಬಿಡುವುದೇ? ಊರಿನವರೂ ಏನೇನು ಅಂದಾರು" ಆದುದರಿಂದ ಆದಷ್ಟು ಬೇಗನೆ ಒಬ್ಬ ಯೋಗ್ಯ ವರನನ್ನು ನಿಶ್ಚಯಿಸಿದರೆ ಲೇಸು" ಎಂದು ಸರಸ್ವತಮ್ಮ ಹೇಳಿದರು. ಅಷ್ಟರಲ್ಲಿ ಒಳಗಿಂದ "ಅಮ್ಮಾ ಗಂಜಿ ಬೆಂದಿತು." ಎಂದು ಮಗಳು ಕೂಗಲು ತಾಯಿ ಅತ್ತಕಡೆ ಗಮನವಿತ್ತಳು—ಕೆಲದಿನಗಳೆಯಿತು.

ಇಂದು ಸೋಮಯ್ಯನವರ ಮನೆಯಲ್ಲಿ ಬಹಳ ಗದ್ದಲ—ಬೇಂಡಿನ ಸಪ್ಪಳ ಕೇಳಿಸುತ್ತಿದೆ. ಲಕ್ಷ್ಮಿಯ ಮದುವೆಯ ಸಂಭ್ರಮವಿದು—ನೆರೆಯ ಗ್ರಾಮದ ಸುಂದರ ಅವಳ ಕಂಠಕ್ಕೆ ಮಂಗಳಸೂತ್ರವನ್ನು ಕಟ್ಟಿದ—ಮದುವೆ ಮುಗಿಯಿತು—ಜನರೆಲ್ಲರೂ ಆನಂದದಿಂದ ವಧೂವರರನ್ನು ಹರಸಿ ಮನೆಗೆ ತೆರಳಿದರು.

ಲಕ್ಷ್ಮಿಯ ಅಜ್ಜಿ ನಿತ್ಯವೂ ಸುಂದರ ಲಕ್ಷ್ಮಿಯರನ್ನೇ ಹೊಗಳುವಳು. ಯೋಗ್ಯ ವರನನ್ನು ಅವಳಿಗೊದಗಿಸಿದ ದೇವನಿಗೆ ದಿನಾಲೂ ಕೈಯ್ಮುಗಿಯುವಳು. ಎಳೆಂಟು ದಿನ ಕಳೆದ ಬಳಿಕ ತಂದೆತಾಯ್ಗಳನ್ನೂ ಉಳಿದ ಇತರ ಹಿರಿಯರನ್ನೂ ಲಕ್ಷ್ಮಿ ಕಣ್ಣೀರಿನಿಂದ, ತೋಯಿಸಿ ಪತಿಯೊಡನೆ ಅತ್ತೆಯ ಮನೆಗೆ ತೆರಳಿದಳು—ಕಣ್ಣಿಗೆ ಕಾಣುವ ವರೆಗೂ ಅವರನ್ನೇ ದೃಷ್ಟಿಸುತ್ತಾ,-ಕಣ್ಮರೆಯಾದೊಡನೆ ಕಡು ದುಗುಡದಿಂದ ಸರಸ್ವತಮ್ಮ ಮನೆಗೆ, ಬಂದರು.

ಈಗ ಸೋಮಯ್ಯನವರ ಮನೆಯಲ್ಲಿ ತುಂಬಾ ಜನರಿದ್ದಾರೆ. ಕಾರಣ, ಅವರ ತಮ್ಮನಾದ ರಾಮಯ್ಯನವರೂ ಈಗ ಇವರೊಡನೆ ಬಂದು ಕುಳಿತಿದ್ದಾರೆ. ಕೆಲವು-ವರ್ಷಗಳ ಹಿಂದೆ ಅಣ್ಣತಮ್ಮಂದಿರಿಗೆ ಆವುದೋ ವಿಷಯದಿಂದ ವೈಮನಸ್ಸಾಗಿತ್ತು. ಲಕ್ಷ್ಮಿಯ ಮದುವೆಯಲ್ಲಿ ಅವರೀರ್ವರಿಗೂ ರಾಜಿಯಾಯಿತು.

ಸುಂದರ ಚೆನ್ನಾಗಿ ಕಲಿತು ಬಿ. ಎ. ಆದರೂ ಪಾಸಾಗಬೇಕೆಂದಿದ್ದ. ಆದರೆ ವಿವಾಹವೊಂದು ಅವನಿಗಡ್ಡಿಯಾಯಿತು. ಲಕ್ಷ್ಮಿಯಂತಹ ಸುಂದರಿಯೂ ಸಾಧ್ವೀಮಣಿಯೂ ದೊರಕಿದುದು ತನ್ನ ಪೂರ್ವ ಸುಕೃತವೆಂದೇ ಅವನ ಭಾವನೆ—ಮನೆಯಲ್ಲಿ ಅಣ್ಣಂದಿರೂ,—ತಂದೆಯೂ ಕೆಲಸ ಮಾಡುತ್ತಿರುವಾಗ ತಾನು ಸುಮ್ಮನೆ ಕುಳಿತಿರುವುದು ಅವನಿಗೆ ಒಗ್ಗಲಿಲ್ಲ-ಅದಕ್ಕಾಗಿ, ಏನಾದರೂ ನೌಕರಿ ದೊರಕಿದರೆ ಮಾಡೋಣ, ಎಂದು ಮಂಗಳೂರಿಗೆ ಬಂದ—

ಕೆಲವೇ ದಿನಗಳಲ್ಲಿ ತಿಂಗಳಿಗೆ ೫೦ ರೂಪಾಯಿ ವೇತನದ ಕೆಲಸವೊಂದು ದೊರಕಿತು—ಹಂಚಿನ ಕಾರ್ಖಾನೆಯಲ್ಲಿ ಗುಮಾಸ್ತನಾಗಿರಬೇಕು. ಆದಿತ್ಯವಾರ ರಜೆಯಿದೆ—ಸಂಜೆ ೬ರಿಂದ ಬಿಡುವೂ ಇದೆ —ಇದರಿಂದ ಕೆಲಸವೂ ಕಷ್ಟವಾದುದಲ್ಲ—ಹತ್ತಿರದ ಹೋಟೇಲೊಂದರಲ್ಲಿ ಕೆಲಸಮಯಕ್ಕೆ ನಿಂತಿದ್ದ—ಆ ಬಳಿಕ ಹೆಂಡತಿಯನ್ನೂ ಕರೆದುಕೊಂಡು ಬಂದ—ಒಂದು ಚಿಕ್ಕ ಮನೆಯನ್ನು ಬಾಡಿಗೆಗೆ ಪಡಕೊಂಡ ಅಲ್ಲಿ ಅವರೀರ್ವರ ಜೀವನವೂ ಸುಖಮಯವಾಗಿ ಸಾಗುತಿತ್ತು—

ಒಂದು ದಿನ ಸಂಜೆ, ಬಂದವನೆ ಸುಂದರನು, ತನಗೇನೂ ಕೂಡುವುದಿಲ್ಲೆಂದನು—ಲಕ್ಷ್ಮಿಯು ಔತ್ಸುಕ್ಯ ಭಾವದಿಂದ "ಏನಾಯಿತು? ಶೀತವಾಯಿತೆ? ನೀಲಗಿರಿ ತಿಕ್ಕಲೇ ಬಿಸಿನೀರು ಕಾಯ್ಸಿ ಚೆನ್ನಾಗೊಮ್ಮೆ ಮಿಾಯ್ತೀರಾ?"—ಮುಂತಾಗಿ ನೂರಾರು ಪ್ರಶ್ನೆ ಕೇಳಿದಳು—ಬೇಗನೆ ಒಳಗೆ ಹೋಗಿ ಕಾಫಿ ತಂದಿರಿಸಿದಳು—ಕಾಫಿ ಕುಡಿದು, ಹಾಗೆ ಆರಾಮ ಕುರ್ಚಿಯಲ್ಲಿ ಸುಂದರ ಬಿದ್ದುಕೊಂಡ—ಬಳಿಯಲ್ಲೆ ಲಕ್ಷ್ಮಿಯೂ ಕುಳಿತಳು—"ರಾಮನ ಹತ್ತಿರ ಡಾಕ್ಟರರನ್ನು ಕರೆತರ ಹೇಳಲೆ?" ಎಂದಳು—"ಹಾಗೇನೂ ಇಲ್ಲ,—ಡಾಕ್ಟರರೇಕೆ? ಹಾಗೆ ನನಗೇನಾಗಿದೆ?" ಎಂದು ಸುಂದರ ಮಾತಾನಾಡಿದ—

"ಅಲ್ಲ ಜ್ವರಗಿರ ಬರುತ್ತದೆಯೋ?" ಹಣೆ ಮುಟ್ಟಿ ನೋಡಿ ಕಣ್ಣಿಗೆ ಬಿದ್ದಿದ್ದ ಕ್ರಾಪಿನ ಕೂದಲನ್ನು ಸರಿಸಿ, ಅವನನ್ನೇ ನೋಡುತ್ತ ಹತ್ತಿರ ನಿಂತಳು—"ಏನೂ ಇಲ್ಲ ಇಂದೇಕೊ! ನನಗೆ ತುಸು ಜಾಡ್ಯವಾಗುತ್ತಿದೆ". "ಉಂಡದ್ದು ಕರಗಲಿಲ್ಲವೆ?"

ನಕ್ಕು—"ಏನೋ? ಒಂದು ನಮೂನೆ ಈ ದಿನ".

ಲಕ್ಷ್ಮಿಯ ಮನಸ್ಸೇಕೊ ಅಂದು ಕಳವಳಗೊಂಡಿತು—ಕತ್ತಲಾಯಿತು—ಬೆಳಕು ಹರಿಯಿತು—"ನೀವಿಂದು ಆಫೀಸಿಗೆ ಹೋಗಬೇಡಿ"—ಎಂದು ಲಕ್ಷ್ಮಿ ಹೇಳಿದಳು—"ನಾನೂ ಯೋಚಿಸುತ್ತಿದ್ದೇನೆ—ನಾಲ್ಕು ದಿನಕ್ಕೊಮ್ಮೆ ಹೀಗೆ ಆದರೆ ಎಷ್ಟೇ ಒಳಿತು ನಿನ್ನ ಮುಖ ಕಂಡರೆ ಏಳಲು ಮನಸ್ಸಾಗುವುದಿಲ್ಲ"

"ಹಾಗಾದರೆ ಇನ್ನು ಮುಂದೆ ಇಡೀ ದಿನ ಹಾಗೇ ಕುಳಿತುಕೊಳ್ಳಿ".

* * *

ಅಂದಿನ ಸುಂದರನ ಜಾಡ್ಯವು ದಿನೇ ದಿನೇ ಹೆಚ್ಚುತ್ತಾ ಬಂದಿತು—ಜಾಡ್ಯವು ಮಾಯವಾಗಿ ತುಸು ಜ್ವರ ಪ್ರಾರಂಭವಾಯಿತು—ಜ್ವರ ಹೋಗಿ ನ್ಯೂಮೋನಿಯಕ್ಕೆ ಕಾಲಿಟ್ಟಿತು—ಹತ್ತಿರದ ಡಾಕ್ಟರರೊಬ್ಬರು ದಿನಾಲು ಬಂದು ನೋಡುತ್ತಿದ್ದರು. ಪ್ರಯೋಜನವೇನೂ ತೋರಲಿಲ್ಲ—ದಿನದಿನಕ್ಕೆ ಜ್ವರ ಹೆಚ್ಚಿತು—ಲಕ್ಷ್ಮಿ ಮನೆಗೆ ಕಾಗ್ದ ಬರೆದಳು— ಮನೆಯವರು ಗಾಬರಿಯಾದರೆಂದು ಸುಂದರ ಕಾಗ್ದ ಹಾಕಲು ಬಿಡಲೇ ಇಲ್ಲ.

ಮನೆಯಿಂದ ಸುಂದರನ ತಂದೆಯೂ, ಸೋಮಯ್ಯನವರೂ ಬಂದರು—ಇಷ್ಟರ ತನಕ ಕಾಗದ ಬರೆಯಲಿಲ್ಲೇಕೆಂದು ಸೋಮಯ್ಯನವರು, ಮಗಳನ್ನು ಜೋರು ಮಾಡಿದರು. ಸ್ಥಳೀಯ ಪ್ರಸಿದ್ಧ ಡಾಕ್ಟರರೊಬ್ಬರನ್ನು ಕರತಂದು ಪರೀಕ್ಷಿಸಿದರು. ಪ್ರಯೋಜನವಾಗಲಿಲ್ಲ—ಸುಂದರನ ತಂದೆಯನ್ನು ಡಾಕ್ಟರರು ಕರೆದು ನನ್ನಿಂದ ಸಾಧ್ಯವಿಲ್ಲ ಎಂದರು—ಏನು ಮಾಡುವುದಿನ್ನು? ಮದರಾಸಿಗಾದರೂ ಹೋಗಬೇಕೆಂದು ನಿಶ್ಚಯಿಸಿದರು—ಲಕ್ಷ್ಮಿ ಅನುದಿನವೂ ದೇವರ ಕಾಲಿಗೆ ಏಕಾಂತವಾಗಿ ಅಡ್ಡ ಬೀಳುವಳು—ಸ್ವಾಮಿಯನ್ನು ಬದುಕಿಸೆಂದು,—ಅವನಿಗೆ ಕೈಯ್ಮುಗಿಯುವಳು. ಈಗ ಅವಳಿಗೆ ಪತಿಯದೇ ಯೋಚನೆ—

ಸೋಮಯ್ಯನವರೂ, ಸುಂದರನ ತಂದೆಯೂ ಅವನನ್ನೂ ಕರಕೊಂಡು ಮದ್ರಾಸಿಗೆ ತೆರಳಿದರು—ಲಕ್ಷ್ಮಿ ದುಃಖದಿಂದ ಮನೆಗೆ ಬಂದಳು.

ಕಾಗದ ಆಗಾಗ ಮದ್ರಾಸಿನಿಂದ ಬರುತಿತ್ತು—ಆ ಸುಂದರನು ಸ್ವಲ್ಪ ಹುಷಾರಾಗಿದ್ದಾನೆ,—ಆಗುತ್ತಿದ್ದಾನೆ—ಎಂಬ ವರ್ತಮಾನವು ಯಾವಾಗಲೂ ಬರುತಿತ್ತು—ಲಕ್ಷ್ಮಿಯ ದುಗುಡವು ಪತ್ರವನ್ನು ಕಂಡೊಡನೆ ತುಸು ಸಮಾಧಾನವಾಗುತಿತ್ತು—ಕೆಲವು ದಿನಗಳ ಬಳಿಕ ಸೋಮಯ್ಯನವರೂ, ಸುಂದರನ ತಂದೆಯೂ ಊರಿಗೆ ಹಿಂದಿರುಗಿದರು. ಒಮ್ಮೆ ಅವರಿಬ್ಬರನ್ನೆ ಕಂಡ ಎಲ್ಲರಿಗೂ ದಿಗಿಲಾಯಿತು—ಲಕ್ಷ್ಮಿ ಓಡುತ್ತಾ ಬಂದು "ಅವರು ಎಲ್ಲಿದ್ದಾರೆ?" ಎಂದಳು.

"ಸುಂದರ ಈಗ ಕ್ಷೇಮದಲ್ಲಿದ್ದಾನೆ. ಶರೀರದಲ್ಲಿ ಚೆನ್ನಾಗಿಲ್ಲ—ಇನ್ನೆರಡು ತಿಂಗಳು ಕಳೆದು ಬರುತ್ತಾನೆ" ಎಂದರು.

ತಿಂಗಳೊಂದುವರೆ ಕಳೆಯಿತು—ಎರಡು ವರ್ಷಗಳಂತೆ ಎರಡು ತಿಂಗಳೆರಡೂ ಕಳೆದುವು ಲಕ್ಷ್ಮಿ ನಿತ್ಯವೂ ದಾರಿ ನೋಡುತ್ತಿದ್ದಾಳೆ. ಎಂದಿನಂತೆ ಅಂದು ತುಲಸಿಯ ಗಿಡದೆದುರು ಒಬ್ಬಳಾಗಿ, ಭಕ್ತಿಯಿಂದ ನಮಸ್ಕರಿಸಿ, ಎದ್ದಿದ್ದಾಳೆ—ನೋಡುವುದೇನು? ಸುಂದರ ಎದುರು ನಿಂತಿದ್ದಾನೆ—ಎದ್ದ ಲಕ್ಷ್ಮಿ ಅಲ್ಲೆ ನಿಂತು ನೋಡುತ್ತಿದ್ದಾಳೆ: ಆ ದೃಷ್ಟಿಯಲ್ಲಿ ಆವಾವ ಭಾವಗಳಿದ್ದುವೊ? ಅವಳಿಗೇ ಅರಿಯದು. "ಇನ್ನು ನಿನ್ನ ಮುಖವನ್ನು ನಿತ್ಯವು ನೋಡುತ್ತಾ ಕುಳಿತುಕೊಳ್ಳುವೆನು" ಎಂದ ಸುಂದರ—ಅವಳಲ್ಲಿ ಕಿರುನಗೆಯೊಂದು ಮೂಡಿ ಮಾಯವಾಯಿತು. ಕಣ್ಣೀರು ತುಂಬಿದ್ದಿತು—ನಗೆಯು ಹೊರ ಸೂಸುತಿದ್ದಿತು—ಆದುದರಿಂದ ಅದನ್ನು ಸಂತಸವೆನ್ನಲೆ? ದುಃಖವೆನ್ನಲೆ?

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ಜಪಾನು

ಆಸ್ಯಾಖಂಡದಲ್ಲಿ ಪ್ರಜಾಸತ್ತೆಗೆ ಭಂಗ ತಂದ ಪೆಸಿಷ್ಟ ರಾಷ್ಟ್ರವು

ಅದಕ್ಕೀಗ ತಕ್ಕಬುದ್ಧಿ ಪಾಠವಾಗುತ್ತದೆ

ಶಾಂತಸಾಗರದಲ್ಲಿ ಜಪಾನನ್ನು ಸದೆಬಡೆಯುವ ಕಾರ್ಯದಲ್ಲಿ ಮಿತ್ರರಿಗೆ ಯಶಸ್ಸು ಲಭಿಸಿರುತ್ತದೆ. ಜಪಾನಿಯರಿಂದ ಹಿಡಿಯಲಾದ ಅನೇಕ ಪ್ರದೇಶಗಳು ವಿಮೋಚಿಸಲ್ಪಟ್ಟಿವೆ. ಫಿಲಿಪ್ಪಾನು ದ್ವೀಪಗಳ ವಿಮೋಚನೆಯನ್ನು ಪೂರೈಸಿದ ಅಮೇರಿಕನರು, ಜಪಾನೀ ದ್ವೀಪಗಳ ಅಭಿಕ್ರಮಕ್ಕೆ ಉಪಯುಕ್ತ ಮತ್ತು ಅನುಕೂಲವಾಗಿರುವ ದ್ವೀಪಖಂಡಗಳನ್ನು ಹಿಡಿಯುವುದರಲ್ಲಿದ್ದಾರೆ. ಅಲ್ಲದೆ ಬರ್ಮದ ಮೂಲಕವಾಗಿ ದಕ್ಷಿಣ ಚೀನಾವನ್ನು ಪ್ರವೇಶಿಸಿ ಅಲ್ಲಿಂದ ಜಪಾನಿನ ಮೇಲೆ ದಂಡೆತ್ತಿ ಹೋಗಬೇಕೆಂದು ಮಿತ್ರರು ನಿರ್ಣಯಿಸಿ, ಆ ಸಂಭಂದ ಕಾರ್ಯಗಳನ್ನು ಪ್ರಾರಂಬಿಸಿರುವರು. ಜಪಾನಿನ ಮೇಲೆ ದಿನಾಲೂ ಎಂಬಂತೆ ಅಮೆರಿಕನ್ ಹಾರುವ ಕೋಟೆಗಳಿಂದ ಹಲ್ಲೆಗಳು ನಡೆಯುತ್ತಿವೆ. ಮೊನ್ನೆ ಜಪಾನಿನ ರಾಜಧಾನಿ ಟೋಕಿಯೊ ನಗರದ ಮೇಲೆ ನಡೆದ ದಾಳಿಯಿಂದ, ಅಲ್ಲಿ ಮಹಾ ಜ್ವಾಲೆಗಳು ಉಂಟಾಗಿ ಮಹಾ ನಷ್ಟ ಸಂಭವಿಸಿರುವುದಾಗಿ ತಿಳಿದುಬಂದಿದೆ. ಅಮೆರಿಕನರ ಈ ದಾಳಿಗಳಿಂದ ಸಮರಕ್ಕೆ ಬೇಕಾದ ವಿಮಾನಗಳನ್ನೂ, ಶಸ್ತ್ರಗಳನ್ನೂ ತಯಾರಿಸುತ್ತಿದ್ದ ಕಾರ್ಖಾನೆಗಳು ಧ್ವಂಸವಾಗಿದ್ದು, ಯುದ್ಧ ಖಾತೆಗೆ ಬೇಕಾದ ಪೂರೈಕೆಗಳನ್ನು ಮಾಡಲು ತುಂಬಾ ತೊಡಕು ಉಂಟಾಗಿರುವುದೆಂದು ತಿಳಿದುಬಂದಿದೆ. ಜಪಾನಿಗೆ ತಕ್ಕ ಬುದ್ಧಿಪಾಠ ಮಾಡಲು ಬ್ರಿಟಿಷರು ಕೂಡ ಮಹಾ ಸಿದ್ಧತೆಗಳನ್ನು ಮಾಡಿರುವರು. ಮುಂದಕ್ಕೆ ಅಮೆರಿಕನ್ ಬಲದೊಡನೆ ಬ್ರಿಟಿಷ ಬಲವು ಕೂಡ ಕೂಡಿ, ಕಾರ್ಯ ನಿರ್ವಹಿಸುವುದೆಂದು ಹೇಳಲಾಗಿದೆ. ಅತ್ತ ಪೆಸಿಷ್ಟ ಜರ್ಮನಿಯ ಪತನವಾಗುತ್ತಿದ್ದಾಗಲೆ ಇತ್ತ ಅವರ ಆಸ್ವಾದ ಬಂಧುಗಳಾದ ಜಪಾನಿಯರಿಗೆ ತಕ್ಕ ಪ್ರಾಯಶ್ಚಿತವಾಗುತ್ತಾಯಿದೆ. ಮಿತ್ರರು ಜಪಾನನ್ನು ಸುತ್ತುಹಾಕಿ, ಯುರೋಪದಲ್ಲಿ ಇಳಿದಂತೆ ಮಹಾ ಬಲದೊಂದಿಗೆ ಅಲ್ಲಿಳಿದು, ಅದನ್ನು ಅಭಿಕ್ರಮಿಸುವ ಕಾರ್ಯಕ್ರಮವನ್ನು ಹಾಕಿಕೊಂಡು, ಅದರಂತೆ ಈಗ ಒಳ್ಳೆ ಪ್ರಗತಿಯನ್ನು ಪಡೆಯುತ್ತಿರುವರು. ಜಪಾನಿಯರು ಮಿತ್ರರನ್ನುಎದುರಿಸಲು ಭಾರಿ ಸಿದ್ಧತೆಗಳನ್ನು ಮಾಡಿರುವರು. ಈ ಜಪಾನಿಯರ ಕುರಿತು ಸ್ವಲ್ಪ ವಿಚಾರಿಸುವ.

ಜಪಾನಿ ಚಕ್ರಾದಿಪತ್ಯವು ಇವತ್ತಿಗೆ ೨೬೦೦ ವರ್ಷಗಳಿಂದ ಏನೊಂದೂ ಕಂಟಕವಿಲ್ಲದೆ ನಡೆದುಬಂದಿದೆ. ಅಂಥಹ ಚಕ್ರಾದಿಪತ್ಯವು ಕಳಚಿ ಬೀಳುವ ಪ್ರಸಂಗವು ಇಂದು ಉಂಟಾಗಿರುತ್ತದೆ. ಜಪಾನನ್ನು ಅಭಿಕ್ರಯಿಸುವುದರಲ್ಲಿ ಮಿತ್ರರಿಗೆ ಯಶಸ್ಸು ದೊರಕಿಬಿಟ್ಟರೆ, ಆಗ ಜಪಾನಿನ ಚಕ್ರವರ್ತಿಯರು, ಅವರೊಡನೆ ಅಲ್ಲಿನ ಉಚ್ಚ ಪಕ್ಷವು, ಚಿತ್ತೂರಿನ ಪದ್ಮಿನಿಯು ಅಗ್ನಿಪ್ರವೇಶ ಮಾಡಿದಂತೆ, ತನ್ನ 'ಮುಖ' ರಕ್ಷಣೆಗಾಗಿ 'ಹರಾಕಿರಿ'ಯನ್ನು ಮಾಡಿಕೊಳ್ಳುವುದು ಖಂಡಿತವೆಂದೆ ತಿಳಿಯಬೇಕು. ಮಿತ್ರರಿಗೆ ಶರಣು ಬಂದು ವರ್ತಿಸುವ ಸಹನೆ ಅವರಲ್ಲುಂಟಾಗದು. **ಕಾರಣ ತಮ್ಮ ಚಕ್ರವರ್ತಿಯರೆಂದರೆ ದೇವರೆಂದೂ, ಪ್ರಜೆಗಳೆಲ್ಲರೂ ದೇವಾಂಶಗಳೆಂದೂ, ತಮ್ಮದು ದೇವಲೋಕ ಎಂಬ ಮೂಢ ಭಾವನೆಯು ಜಪಾನಿಯರದು! ಈ ದೇವಲೋಕವು, ಮಾನವ ಲೋಕಕ್ಕೆ ಮಣಿಯುವುದೆ!** (ಈ ದೇವಲೋಕದ ಕಾಟವು ಈಗ ಚೀನಾವನ್ನು ಪೀಡಿಸುತ್ತದೆ.)

ಜಪಾನು ೪೦೭೨ರ ದ್ವೀಪಖಂಡಗಳಿರುವ ದ್ವೀಪಸಮೂಹವು ಈ ದ್ವೀಪಗಳಲ್ಲಿ ಜ್ವಾಲಾಮುಖಿಗಳು, ಭೂಕಂಪನಗಳು, ನಿತ್ಯಲೂ ಎಂಬಂತೆ ಕಾಣಿಸಿಕೊಳ್ಳುತ್ತವೆ. ೧೯೪೪ರಲ್ಲಿ ದಶಂಬರ ತಿಂಗಳಲ್ಲಿ ಅಲ್ಲಿ ಭೂಮಿ ೬೦೦ ಭಾರಿ ಕಂಪಿಸಿತು. ಈಗ ಅಲ್ಲಿ ಅಮೆರಿಕನ್ ಬಾಂಬುಗಳಿಂದ ಕಂಪನವು ನಡೆಯುತ್ತಿದೆ.

ಜಪಾನು ನಾಗರಿಕತೆಯನ್ನು ಪಡಕೊಂಡದು ಚೀನಾದಿಂದ. ಬರ್ಬರರಾಗಿದ್ದ ಜಪಾನಿಯರು ಉಚ್ಚ ಜನರಾಗಿ ಪರಿವರ್ತನೆ ಹೊಂದಿದುದು ಚೀನಿಯರ ಸ್ಪರ್ಶದಿಂದ. ಜಪಾನಿಗೆ ಮೊದಲಾಗಿ ಲಿಪಿ ಕಲ್ಪಿಸಿಕೊಟ್ಟವರು ಚೀನಿಯರು. ಜಪಾನಿನೊಳಗೆ ಅನೇಕ ಧರ್ಮಗಳ ಆಗಮನವಾದುದು ಚೀನಿಯರ ದೆಸೆಯಿಂದ ಕುಂಬಾರ ವೃತ್ತಿ, ರೇಶ್ಮೆಕೈಗಾರಿಕೆ, ಕಲಾ ಕೆಲಸಗಳು, ಛಾಪಾವೃತ್ತಿ, ಕವಿತಾರಚನೆ, ಚಾ ಕುಡಿಯುವುದು, ಪಟಾಕಿ ತಯಾರಿಸುವುದು, ಇತ್ಯಾದಿ ಅನೇಕ ವಿಷಯಗಳನ್ನು ಜಪಾನಿಯರು ಚೀನಿಯರಿಂದ ಕಲಿತುಕೊಂಡದು. ಅಂದರೆ ಚೀನಾದಿಂದ ಜಪಾನಿಗೆ, ಕಲೆಸಾಹಿತ್ಯ, ಕೈವೃತ್ತಿ, ಭಾಷೆ, ದರ್ಶನ ಶಾಸ್ತ್ರ ಮೊದಲಾದ ವಿಚಾರಗಳಲ್ಲಿ ಮಹದುಪಕಾರವಾಗಿರುತ್ತದೆ. ಒಬ್ಬನಿಂದ ಉಪಕಾರವಾದ ಮೇಲೆ ಆತನನ್ನು ದ್ವೇಷಿಸುವುದು ಮಾನವ ಸ್ವಭಾವವು. ಹಾಗೆನೆ ತನಗೆ ಉಪಕಾರ ಮಾಡಿದ ಚೀನಾವನ್ನು ಜಪಾನು ದ್ವೇಷಿಸುವಂತಾಯಿತು. ಈ ದ್ವೇಷವು ಅತಿ ದುಷ್ಟ ಸ್ವರೂಪವನ್ನು ತಾಳಿತು.

ಗೌರವಕ್ಕೆ ಕುಂದುಬರುವ ಪ್ರಸಂಗಗಳಲ್ಲಿ ಪ್ರಾಣತ್ಯಾಗ ಮಾಡಿಕೊಳ್ಳುವುದು ಜಪಾನಿಯರ ರೂಢಿಯು. ಸಮರ ರಂಗಕ್ಕೆ ತೆರಳಿದ ಸೈನಿಕನನು ವೈರಿಗಳ ಕೈಗಳಲ್ಲಿ ಬೀಳುವ ಸಂಭವದಲ್ಲಿ ಆತನು ಪ್ರಾಣತ್ಯಾಗ ಮಾಡಿಕೊಳ್ಳುವನು. ಆಯೊಜಿಮಾ ದ್ವೀಪದ ಆಕ್ರಮಣದಲ್ಲಿ, ಜಪಾನಿಯರು ಅಮೇರಿಕನ್ ನೌಕಾ ಬಲಕ್ಕೆ ಬಲವಾದ ವಿರೋಧವನ್ನು ಕೊಟ್ಟು, ಅದರಿಂದ ಕಾರ್ಯ ಸಾಧದೆಯಾಗದುದರಿಂದ, ರಾಶಿರಾಶಿಯಾಗಿ ಪ್ರಾಣತ್ಯಾಗ ಮಾಡಿಕೊಂಡರಂತೆ! ೯ ಮಂದಿ ಜಪಾನಿಯ ಸೈನಿಕರು ಮಾತ್ರ ಸೆರೆಹಿಡಿಯಲ್ಪಟ್ಟರಂತೆ!

ಪೆಸಿಷ್ಟ ರಾಜಕಾರಣವು ಯುರೋಪದ ಕೆಲವು ದೇಶಗಳಲ್ಲಿ ಬೆಳದಂತೆ, ಜಪಾನಿನಲ್ಲೂ ಬೆಳೆಯಿತು. **ಜರ್ಮನಿಯೊಡನೆ ಜಪಾನಿನಿಂದಲೂ ಲೋಕಶಾಂತಿಗೆ ಭಂಗವುಂಟಾಯಿತು.** ಪೆಸಿಷ್ಟ ರಾಜಕಾರಣದ ಆಡಿಕಟ್ಟು ಸಂಗ್ರಾಮ ವರ್ಗ. ಜಪಾನಿನಲ್ಲಿ ಅದು ಆಡಿಕಟ್ಟಲ್ಲದೆ, ಅಲ್ಲಿನ ಸರ್ವಸ್ವವೂ ಆಯಿತು. ಅಲ್ಲಿ ಚಕ್ರವರ್ತಿಗಳಿರುವುದಾದರೂ, ಅವರು ಬರೆ ಕುರುಹಿನಂತಿರುವರು. ಎಲ್ಲಾ ಅಧಿಕಾರವು ಸಂಗ್ರಾಮ ವರ್ಗದೊಡನಿರುವುದು. ನಾಜಿಗಳೆ ಉಚ್ಚ ಫೆಸಿಷ್ಟರು, ಅವರನ್ನೂ ಮಿಾಗಿಸಿಬಿಟ್ಟಿರುವರು ಜಪಾನಿ ಸಂಗ್ರಾಮ ವರ್ಗದವರು. ಅವರ ರಾಗಕ್ಕೆ, ಚಕ್ರವರ್ತಿಗಳು, ಘನವಂತರೂ, ಶ್ರೀಮಂತರೂ, ಸರಕಾರ ಪ್ರಜೆಗಳೂ ಎಲ್ಲರೂ ಕುಣಿಯಬೇಕಾಗಿಯದೆ!

ಜನರಲ್ಲಿರುವ ಅಂಧಶೃದ್ಧೆ ಮತ್ತು ಮೂಢಭಾವನೆಗಳಿಂದ ಜಪಾನಿ ಫೆಸಿಷ್ಟರಿಗೆ ಅಲ್ಲಿನ ಜನವರ್ಗದ ಮೇಲೆ ಸಂಪೂರ್ಣ ಹಿಡಿತವು ದೊರಕಿರುತ್ತದೆ. ಈಗಲಾದರೂ ಆ ಜನರು ಕಣ್ಣು ತೆರೆಯುವಂತಾಗುವುದೆ?

೧೫೪೨ರಲ್ಲಿ ಒಂದು ಅವಘಡದ ದೆಸೆಯಿಂದ ಪೋರ್ತುಗೀಸ ನಾವಿಕರು ಜಪಾನಿ ದ್ವೀಪಗಳಲ್ಲಿ ಕಾಲಿಡುವವರಾದರು. ಜಪಾನಿನಲ್ಲಿ ಪಾಶ್ಚಾತ್ಯ ಆಗಮನವು ಇದೆ ಪ್ರಥಮದ್ದು, ನಂತರ ಪಾಶ್ಚಾತ್ಯದ ಕ್ರೈಸ್ತಮತಪ್ರಸಾರಕು ಅಲ್ಲಿಗೆ ಬರುವವರಾದರು. ಆದರೆ ಕ್ರೈಸ್ತ ಧರ್ಮಕ್ಕೆ ಜಪಾನಿಯರಲ್ಲಿ ಸಹನೆ ದೊರಕದುದರಿಂದ, ಅಲ್ಲಿಂದ ಅವರು ತೆರಳಬೇಕಾಯಿತು. ಫಿಲಿಪ್ಪಾನು ದ್ವೀಪಗಳು ಕ್ರೈಸ್ತಮತ ಪ್ರಸಾರಕರ ದೆಸೆಯಿಂದ ಸ್ಪೈಯಿನಿನ ಒಡೆಯತನಕ್ಕೆ ಒಳಗಾದ ವಿಷಯವು ಅವರಿದುರು ಒಂದು ದೃಷ್ಟಾಂತವಾಗಿ ನಿಂತುದರಿಂದ, ತಮಗೂ ಆ ಗತಿ ಒದಗಬಹುದೆಂಬ ಭೀತಿಯಿಂದ ಅವರು ಕ್ರೈಸ್ತಮತ ಪ್ರಸಾರಕರನ್ನೂ ಅವರೊಡನೆ ಪಾಶ್ಚಾತ್ಯ ಜನರನ್ನೂ ತಮ್ಮ ದೇಶದಿಂದ ಹೊರಗಟ್ಟಿಬಿಟ್ಟರು. ಅಷ್ಟೆ ಅಲ್ಲ, ತಮ್ಮ ದೇಶದೊಳಗೆ ಅನ್ಯರು ಕಾಲಿಡದಂತೆ ಕಠಿಣ ಕ್ರಮಗಳನ್ನು ಹೊರಡಿಸಿ ತಮಗೆ ಬಹೀರ್ ದೇಶಗಳ ಸ್ಪರ್ಶವಾಗದಂತೆ ಮಾಡಿಬಿಟ್ಟರು. ಈ ಕ್ರಮಗಳೂ, ಅಲ್ಲಿ ೨೧೪ ವರ್ಷ ಸಮಯ ರೂಢಿಯಲ್ಲಿದ್ದು, ಜಪಾನು ಆ ಸಮಯದಲ್ಲಿ ಹೊರಲೋಕಸ್ಪರ್ಶವಿಲ್ಲದೆನೆ ಕಾಲಕಳೆಯಿತು.

೧೮೫೩ರಲ್ಲಿ ಅಮೆರಿಕನ್ ನೌಕಾದಿಕಾರಿಗಳೊಬ್ಬರು, ಕಮಾಂಡರ್ ಪೆರ್ರಿ ಎಂಬವರು, ಹಡಗ ಒಡೆದು ಜಪಾನಿ ದ್ವೀಪಗಳ ಮೇಲೆ ಬಿದ್ದ ತಮ್ಮ ನಾವಿಕರ ರಕ್ಷಣೆಯ ನೆವದಿಂದ ಜಪಾನನ್ನು ಪ್ರವೇಶಿಸಿದರು. ಜಪಾನಿಯರು ಪಾಶ್ಚಾತ್ಯದ ಕಡೆ ಒಲಿಯುವಂತೆ ಮಾಡಿದರು. ನಂತರ ಬ್ರಿಟಿಷ್ ನೌಕಾಪಡೆಯು ತಮ್ಮ ಪಿರಂಗಿಗಳ ಬಲತ್ಕಾರದಿಂದ ಪಾಶ್ಚಾತ್ಯರಿಗೆ ಎಲ್ಲಿ ಎಡೆಮಾಡಿಕೊಟ್ಟರು ಆಗ ಪ್ರಾರಂಭವಾದ ಜಪಾನಿನ ಪಾಶ್ಚಾತ್ಯಕರಣವು ಜಗತ್ತನ್ನು ವಿಸ್ಮಯಗೊಳಿಸುವ ರೀತಿಯಲ್ಲಿ ಅತಿ ಅಲ್ಪ ಅವಧಿಯಲ್ಲಿ ಬೆಳೆದುಬಿಟ್ಟಿತು. ಜಪಾನು ಪಾಶ್ಚಾತ್ಯದೊಡನೆ ಪೈಪೋಟಿ ನಡೆಯಿಸಲು ಶಕ್ಯವಾಯಿತು. ಕೆಲವು ವಿಚಾರಗಳಲ್ಲಿ ತಮ್ಮ ಗುರುಗಳಾದ ಪಾಶ್ಚಾತ್ಯರನ್ನು ಹಿಮ್ಮೆಟ್ಟಿಸಿತು! ಆಸ್ಯಾಖಂಡವು ಇರೋಪಖಂಡದಿಂದ ಬಹಳ ಹಿಂದುಳಿದ ಪ್ರದೇಶವು ಎಂಬ ಮಾತನ್ನು ಅಲ್ಲಗಳೆಯಿತು. ಜಪಾನು, ಬ್ರಿಟನ್, ಅಮೆರಿಕಾ, ಜರ್ಮನಿ, ಇಟೆಲಿ, ಪ್ರಾನ್ಸು, ರಾಷ್ಟ್ರಗಳೊಡನೆ ಪ್ರಬಲ ರಾಷ್ಟ್ರವಾಗಿ ಸ್ಥಾನವನು ಪಡೆಯಿತು. ಪಾಶ್ಚಾತ್ಯಕರಣದಿಂದ ಮೇಲೇರಿದ ಜಪಾನಿನಲ್ಲಿ ಇಡಿ ಜಗತ್ತಿನ ಒಡೆಯತನವನ್ನು ದೊರಕಿಸಿಕೊಳ್ಳುವ ಮಹಾತ್ವಾಕಾಂಕ್ಷೆಯು ಉಂಟಾಯಿತು. ಪಾಶ್ಚಾತ್ಯದಿಂದ ಪಾಠಕಲಿತ ಅದು ತಮ್ಮ ಸಾಮ್ರಾಜ್ಯವನ್ನು ಬೆಳೆಯಿಸುವ ಹವ್ಯಾಸದಲ್ಲಿ ತೊಡಗಿತು. **ಯಶಸ್ಸಿನ ಸೋಂಕಿಗೆ ಒಳಗಾದ ಜಪಾನು,—ಇತರರ ಸ್ವಾತಂತ್ರ್ಯದ ಮೇಲೆ ಕೈಮಾಡಿತು.** [ಮುಖ್ಯವಾಗಿ ಚೀನಾದ ಮೇಲೆ] ಪ್ರಮಾಣದಲ್ಲಿ ಅತಿ ಚಿಕ್ಕದಾಗಿದ್ದ ಜಪಾನು, ತನಗಿಂತ ಎಷ್ಟೊ ಪಾಲು ದೊಡ್ಡದಿರುವ ಚೀನಾವನ್ನು ನುಂಗುವ ಕೆಲಸದಲ್ಲಿ ಕೈಹಚ್ಚಿತು. ಈ ಯತ್ನದಲ್ಲೆ ಜಪಾನಿನ ಸೊಕ್ಕು ಅಡಗಬಹುದು. ಬಹಳ ಶೀಘ್ರವಾಗಿ ಪಡೆದ ಯಶಸ್ಸನ್ನು ಅದು ಅಷ್ಟೇ ಶೀಘ್ರವಾಗಿ ಕಳಕೊಳ್ಳುವುದೆ? ನೋಡಬೇಕು.

ಅಷ್ಟು ಕಡು ಪೆಸಿಷ್ಟರಾದ ಜಪಾನಿಯರಲ್ಲೂ ಕೆಲವು ಉತ್ತಮ ಗುಣಗಳಿವೆ. ಪಾಶ್ಚಾತ್ಯರನ್ನು ಅನುಕರಿಸಿ, ಅಲ್ಲಿ ಔದ್ಯೋಗೀಕರಣವು ನಡೆದಿದ್ದರೂ, ಪಾಶ್ಚಾತ್ಯದಲ್ಲಿ ನಡೆದಂತೆ ಔದ್ಯೋಗಿಕರಣವನ್ನು ಅನುಸರಿಸಿ, ಅಲ್ಲಿ ಕೆಲಸಗಾರ ಹೇಯ ನಿವಾಸ'ಗಳ ಉದ್ಭವವಾಗಲಿಲ್ಲ, ಜಪಾನಿಯರಲ್ಲಿ ಶುದ್ಧಿ ಶೌಚಾದಿಗಳ ಕುರಿತು ಆಸಕ್ತಿಯು ಹೆಚ್ಚು. ಈ ಕಾರಣದಿಂದ ಅಲ್ಲಿನ ಕಾರ್ಖಾನೆಗಳೂ, ಕೆಲಸಗಾರರ ನಿವಾಸಗಳೂ ರಸ್ತೆಗಳೂ, ಸಾರ್ವಜನಿಕ ಸ್ಥಳಗಳೂ, ಅತಿ ಶುಚಿಯಾಗಿವೆ. ಶೌಚ್ಯ ಕ್ರಮಗಳ ಕುರಿತು ಜಪಾನು ಬಹಳ ಮುಂದುವರಿದಿದೆ. ಗಾಡಿಗಳಿಗೆ ಕಟ್ಟಿದ ಕುದುರೆಗಳ ಸೆಗಣಿಯು ರಸ್ತೆಗಳಲ್ಲಿ ಬಿದ್ದು ಕೆಸರಾಗದಂತೆ, ಆ ಸೆಗಣಿಯು ಗಾಡಿಯೊಳಗೆ ಕೂಡಿಸಲ್ಪಡುವಂತೆ, ಕುದುರೆಗಳ ಹಿಂಬದಿಯಲ್ಲಿ ಸಣ್ಣ ಬಾಲ್ದಿಗಳನ್ನು ಕಟ್ಟು ಕ್ರಮವು ಅಲ್ಲಿದೆ.

ಜಪಾನಿಯ ಕೆಲಸಗಾರನು ಅತ್ಯಂತ ಕುಶಲನು. ಬಹಳ ಶ್ರದ್ಧೆಯಿಂದ ದುಡಿಯುವವನು. ದೇಶದ ಅಭಿವೃದ್ಧಿಯು ತನ್ನದೆಂದು ಆತನ ಭಾವನೆ. ಈ ಕಾರಣದಿಂದ ಹೊರಗಿನ ಮಾರ್ಕೆಟುಗಳಲ್ಲಿ

(೧೦ನೇ ಪುಟಕ್ಕೆ ಮುಂದುವರಿದಿದೆ)

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಪ್ರಚಲಿತ ಸಮಾಚಾರಗಳು

ಕಳೆದ ಮಹಾಯುದ್ಧದ ಕೊನೆಯ ಅವಧಿಯಲ್ಲಿ ಈ ಜಗತ್ತನ್ನು ಒಂದಾಗಿ ಪುನರ‍್ರಚಿಸುವ ಕುರಿತು ಭಾರಿ ಮಾತುಕತೆಗಳು ನಡೆದವು. ಶಾಂತಿ, ನ್ಯಾಯ, ಸತ್ಯ, ಇವುಗಳ ಬೀಡಾಗಿ ಜಗತ್ತಿನ ಪುನರ್ವ್ಯವಸ್ಥೆಯಾಗಬೇಕೆಂದು ಅಂದು ಸಂಕಲ್ಪಗಳು ನಡೆದಿದ್ದವು. ಜಗತ್ತಿನಲ್ಲಿ ಪ್ರಜಾಸತ್ತೆಗೆ ಹಾನಿ ಬಾರದಂತೆ ಮಾಡಬೇಕೆಂಬ ನಿರ್ಧಾರಗಳಾಗಿದ್ದವು. ಆದರೆ ಆ ಯುದ್ಧವು ಮುಗಿದ ನಂತರ ಜಗತ್ತು ಯಾವ ಮಾರ್ಗದಲ್ಲಿ ನಡೆಯಿತು ಎಂಬ ವಿಚಾರವು ಎಲ್ಲರಿಗೂ ತಿಳಿದಿರುವುದು. ರಷ್ಯದಲ್ಲೇನೂ ಮಹಾ ಕ್ರಾಂತಿಯು ನಡೆದು ಬಿಟ್ಟಿತು. ಕೊಮ್ಯುನಿಶಂ ಅಲ್ಲಿ ಸ್ಥಾಪಿಸಲ್ಪಟ್ಟಿತು. ಆದರೆ ಯುರೋಪದ ಪಶ್ಚಿಮ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಪ್ರಗತಿಪರ ಪ್ರಭಾವಗಳ ಬದಲಿಗೆ ಪ್ರತಿಗಾಮಿ ಪ್ರಭಾವಗಳೆ ಬೆಳೆಯಲಾರಂಭಿಸಿದವು. ಜರ್ಮನಿ ಮತ್ತು ಇಟಲಿ ದೇಶಗಳಲ್ಲಿ ಪೆಸಿಸ್ಟ ಎಂಬ ಹೊಸತೊಂದು ವಿಕಾರವು ತಲೆದೋರಿ ಬೆಳೆದು, ಈ ಎರಡನೆ ಮಹಾಯುದ್ಧವು ಸಂಭವಿಸಿತು. ಎರಡನೆ ಮಹಾಯುದ್ಧಕ್ಕೆ ಪೆಸಿಸ್ಟರು ಎಷ್ಟು ಕಾರಣರೊ ಅಷ್ಟೆ ಪರಿಣಾಮಕಾರಿಯಾಯಿತು ಪ್ರಜಾಸತ್ತೆಯ ಕುರಿತು ಯುರೋಪದ ಪಶ್ಚಿಮ ಪ್ರಜಾಸತ್ತೆಗಳ ಅಲಕ್ಷ್ಯಭಾವ, ಅದರ ರಕ್ಷಣೆಯ ಕಡೆ ಅವುಗಳ ಅಚೇತನ, ಅವರ ಸ್ವಾರ್ಥಮಯ ದೃಷ್ಟಿ. ಜಗತ್ತಿನ ಶಾಂತಿರಕ್ಷಣೆಯ ಮಹಾ ಉದ್ದೇಶದಿಂದ ಮಿತ್ರರಿಂದ ಸ್ಥಾಪಿಸಲಾದ ರಾಷ್ಟ್ರಮಂಡಳವು ಮಿತ್ರರ ಸ್ವಾರ್ಥಪರ ಕಾರ್ಯಗಳಿಂದದ ನಿರ್ಜೀವಿ ಸಂಸ್ಥೆಯಾಯಿತು. ಆದರೆ ಒಂದನೆ ಮಹಾಯುದ್ಧದಿಂದ ಯುರೋಪದಲ್ಲಿ ಔದ್ಯೋಗೀಕರಣದೊಂದಿಗೆ ಬಂದ ಕೆಲವು ವಿಕಾರಗಳ ಪೀಡನೆಯಿಂದ ಈ ಜಗತ್ತು ಸ್ವಲ್ಪಮಟ್ಟಿಗೆ ಸುಧಾರಿಸಿಕೊಂಡಿತು. ಆ ಪ್ರಳಯದಿಂದ ಭೂಮಿಯ ಮೇಲಿನ ಸ್ವಲ್ಪ ಹಾಳು ಕೆಸರು ತೊಳೆದು ಹೋಯಿತು. ಆದರೆ ಹಿಂದುಳಿದ ಕೆಸರಿನಿಂದ ಮುಂದಕ್ಕೆ ಇನ್ನಷ್ಟು ವಿಕಾರಗಳು ಉಂಟಾದವು. ಆ ಕೆಸರನ್ನು ತೊಳೆದು ಬಿಡಲಿಕ್ಕೊ ಎಂಬಂತೆ ಈ ಎರಡನೆ ಮಹಾಪ್ರಳಯವು ಬಂದಿರುತ್ತದೆ. ಈ ಪ್ರಳಯದ ರಭಸವು ಜೋರಾಗಿವಿರುವುದಾದರೂ ಜಗತ್ತನ್ನು ಪೀಡಿಸುವ ಕೆಸರುಗೊಂಪೆಗಳು ಕೆಲವು ಭೂಮಿಯ ಮೇಲೆ ಇನ್ನೂ ಬಲವಾಗಿ ಕುಳಿತುಬಿಡಲು ಯತ್ನಿಸುತ್ತಿವೆ. ಆದರೆ ರೂಸ್‌ವೆಲ್ಟರಂತ, ಸ್ಟೆಲೀನರಂತ, ಚರ್ಚಿಲ್ಲರಂತ ಶುದ್ಧಾಚಾರಿಗಳಿಂದ, ಪ್ರಜಾಸತ್ತೆಯ ರಕ್ಷಣಾಚಾರ್ಯರಿಂದ ಈ ಕೆಸರುಗೊಂಪೆಗಳು ಸಂಪೂರ್ಣ ತೊಳೆದುಬಿಡಲಾಗುವವೆಂದು ಆಶಿಸಲಾಗಿದೆ. ಈ ಭಾರಿ ಆ ಕೆಸರುಗೊಂಪೆಗಳು ಹಾಗೆನೆ ಉಳಿದುಬಿಟ್ಟುವೆಂದರೆ ಆಗ ಇನ್ನೊಂದು ಪ್ರಳಯವು ಬರಲೆಬೇಕಾಗುವುದು.

ಕಳೆದ ಯುದ್ಧದ ನಂತರ ರಶಿಯಾವು ಬಂದು ಕುದಿಯುವ ಕುಲುಮೆಯಾಯಿತು. ಅಲ್ಲಿ ಮಾನವತೆಯ ರೂಪೆ ಬದಲಾಗಿ ಬಿಟ್ಟಿತು. ಅಲ್ಲಿ ಉಂಟಾದ ಕ್ರಾಂತಿಯನ್ನು ಇಡಿ ಜಗತ್ತಿನಲ್ಲೆಲ್ಲಾ ಪ್ರಸರಿಸಬೇಕೆಂಬುದು ಅಲ್ಲಿನ ಕ್ರಾಂತಿಗಾರ ಕೊಮ್ಯುನಿಸ್ಟ ಮೂಲ ಉದ್ದೇಶವಾಗಿದ್ದರೂ, ಸ್ಟೇಲಿನರಂತ ವ್ಯವಹಾರ ಚತುರರಿಂದ ಆ ಉದ್ದೇಶವು ಮತ್ತು ಹಿಂತೆಗೆಯಲಾಯಿತು. ಕೊಮ್ಯುನಿಸ್ಟರು ರಶಿಯಾದಲ್ಲಿ ಬೇರೂರಿ ಬೆಳೆಯುವುದರ ಕುರಿತು ಸಹಿಸದಾದವು. ರಶಿಯಾದಲ್ಲಿ ಚಿಗುರಿದ ಈ ನೂತನ ವೃಕ್ಷವನ್ನು ಕಿತ್ತು ಬಿಸಾಡಲು ಅವರಿಂದ ಅನೇಕ ಪ್ರಯತ್ನಗಳು ನಡೆದಿದ್ದರೂ, ಕೊನೆಗೆ ಇತರ ಸಂಘಟನೆಗಳ ದೆಸೆಯಿಂದ ಅವರು ಆ ಕಾರ್ಯವನ್ನು ಬಿಟ್ಟುಬಿಟ್ಟರು. ಆದರೆ ಕೊಮ್ಯುನಿಷ್ಟರ ಕುರಿತು ಅಸಹನೆಯು ಅವರ ಹೃದಯದೊಳಗೆ ಹಾಗೆನೆ ಉಳಿಯಿತು. ಇದನ್ನು ಮನಗಂಡ ಸ್ಟೆಲೀನರು, ರಷ್ಯಾವು ಜೀವಿಸಿಕೊಂಡಿರಬೇಕಾದರೆ ಸ್ವಸಾಮರ್ಥ್ಯವಾಗಿರಬೇಕು, ಬಲವಂತವಾಗಿರಬೇಕೆಂಬ ಇತ್ಯರ್ಥಕ್ಕೆಬಂದು ಸರ್ವ ವಿಚಾರಗಳಲ್ಲೂ ರಷ್ಯದ ಪ್ರಗತಿಯನ್ನು ಸಾಧಿಸುವ ಬಗ್ಗೆ ಒಂದು ಪಂಚವಾರ್ಷಿಕ ಯೋಜನೆಯನ್ನು ಹೊರಡಿಸಿದನು. ಮಹತ್ತಾದ ಯುದ್ಧದ ಸಿದ್ಧತೆಯಾಗೋಪಾದಿ ಅಲ್ಲಿ ಚಟುವಟಿಕೆಗಳು ಪ್ರಾರಂಭಿಸಲ್ಪಟ್ಟವು. ಅಲ್ಲಿಯ ವರೆಗೆ ಬಹಳ ಹಿಂದುಳಿದ ರಷ್ಯವು, ಅಜ್ಞಾನ ದೆಸೆಯಿಂದಲೊ ಇನ್ನಿತರ ಕಾರಣಗಳಿಂದಲೊ ಈ ಚಟುವಟಿಕೆಗಳಿಂದ ಮಹಾ ಅನ್ಯಾಯಗಳನ್ನೂ, ಕಷ್ಟನಷ್ಟಗಳನ್ನೂ ಅನುಭವಿಸುವಂತಾಯಿತು. ಆದರೆ ಆ ಚಟುವಟಿಕೆಗಳು ರಷ್ಯವನ್ನು ಪ್ರಗತಿಪಥದಲ್ಲಿ ಬಹಳ ಮುಂದಕ್ಕೆ ಕೊಂಡುಹೋದವು. ಜನರಿಗೆ ಅವರು ಅನುಭವಿಸಿದ ಸಂಕಷ್ಟ ಇತ್ಯಾದಿಗಳಿಗೆ ಯೋಗ್ಯ ಪ್ರತಿಫಲವು ದೊರಕಿತು. ಸಾಮ್ಯವಾದ ನೀತಿಯು ಬಳಕೆ ಬಂದು, ಈ ಚಟುವಟಿಕೆಗಳ ಪರಿಣಾಮದಿಂದ ದೃಢವಾಗಿ ಸ್ಥಾಪನೆ ಹೊಂದಿತು. ರಷ್ಯವು ಅಖಂಡ, ಅಬೇಧ್ಯ ಕೊಮ್ಯುನಿಸ್ಟ ರಾಷ್ಟ್ರವಾಗಿ ಜಗತ್ತಿನ ಗಣನೆಗೆ ಒಳಗಾಯಿತು.

ಜರ್ಮನಿಯ ಪೆಸಿಸ್ಟರು (ನಾಜಿಗಳು) ರಷ್ಯವು ಈ ರೀತಿ ಬೆಳೆಯುವುದನ್ನು ಸಹಿಸದಾದರು. ಕೊಮ್ಯುನಿಸ್ಟ ರಷ್ಯವನ್ನು ಅಡಗಿಸದೆ ತಮಗೆ ಮೋಕ್ಷವಿಲ್ಲವೆಂದು ಮನಗಾಣುವವರಾದರು. ಕೊಮ್ಯುನಿಸ್ಟರನ್ನು ಬಹಳ ವಕ್ರದೃಷ್ಟಿಯಿಂದ ಕಂಡರು. ಆದರೆ ರಷ್ಯವು ಎಲ್ಲವೂ ಸಹಿಸಿಯೆ ವರ್ತಿಸಿತು. ಅದಕ್ಕೆ ಸಂತುಷ್ಟಿಯಾಗಿ ಬಾಳಿಕೊಂಡಿರಲು ಶಾಂತಿಯು ಅವಶ್ಯವಾಗಿತ್ತು. ಆದರೆ ತನ್ನ ವೈರಿಗಳಿಂದ ತನಗೆ ಅಪಾಯವಾಗದಂತೆ ಅದು ಭದ್ರತೆಯ ಏರ್ಪಾಡುಗಳನ್ನು ನಡೆಸಿತ್ತು. ಶಾಂತಿಪ್ರಿಯವಾದ ರಷ್ಯವು ಶಾಂತಿಯಿಂದಿರಲು ಯುರೋಪದ ಪಶ್ಚಿಮ ಪ್ರಜಾಸತ್ತೆಗಳೊಡನೆ ಮೈತ್ರಿಯಿಂದ ಕೂಡಿಕೊಂಡಿರಲು ಸಾಧಿಸಿತು. ಅವುಗಳಲ್ಲಿ ಕೆಲವರಿಂದ ಅವರಿಗೆ ಈ ಬಗ್ಯೆ ಪ್ರೋತ್ಸಾಹ ದೊರಕಿದ್ದರೂ, ಹೆಚ್ಚಿನವರು ಅದನ್ನು ದೂರದಲ್ಲೆ ಇರಿಸಿಬಿಟ್ಟರು. ಯುರೋಪದ ಪಶ್ಚಿಮದ ಪ್ರಜಾಸತ್ತೆಗಳಲ್ಲಿ ಪ್ರತಿಗಾಮಿ ಪ್ರಭಾವ ಸಾಮ್ಯವಾದ ವಿರೋಧಿಗಳು ಅನೇಕರಿರುವುದರಿಂದ ರಷ್ಯವನ್ನು ಕೆಣಕಲು ಹಿಟ್ಲರನಿಗೆ ಬಹಳ ಧೈರ್ಯವು ಒದಗಿತು. ಇಂಥಾ ಪ್ರತಿಗಾಮಿಗಳಿಂದಲೇ ಆ ಪ್ರಜಾಸತ್ತೆಗಳು ತನ್ನ ಬದಿಗೆ ಸೇರಲೂ ಬಹುದೆಂದೂ ಆತನು ವಿಶ್ವಾಸಪಡುವವನಾದನು. ಆದರೆ ಸಾಮ್ಯವಾದದ, ಪ್ರಜಾಸತ್ತೆಯ, (ಸತ್ಯ ನ್ಯಾಯದ) ಪ್ರಭಾವಗಳ ಬಲತ್ಕಾರಗಳು ಪೆಸಿಸ್ಟ ಪ್ರಭಾವಗಳಿಗಿಂತ ಅಲ್ಲಿ ಹೆಚ್ಚಿರುವುದ ಯುರೋಪದ ಪಶ್ಚಿಮ ಪ್ರಜಾಸತ್ತೆಗಳು ರಿಂದ, ಅವರೆಲ್ಲಾ ಇಂದು ರಷ್ಯದ ಕೊಮ್ಯುನಿಸ್ಟರೊಡನೆ ನಿಂತು ನಾಜಿಗಳಿಗೆ (ಪೆಸಿಸ್ಟರಿಗೆ) ವಿರೋಧವಾಗಿ ಹೋರಾಡುವವರಾದರು. ಸತ್ಯ, ನ್ಯಾಯ ಮತ್ತು ಶಾಂತಿರಕ್ಷಣೆಗಾಗಿ ಕೊಮ್ಯುನಿಸ್ಟರ ಮೇಲಿರುವ ವೈಶಮ್ಯವನ್ನು ಮರೆತುಬಿಟ್ಟು ವರ್ತಿಸುವವರಾದರು. ಅವರೊಡನೆ ಪ್ರಜಾಸತ್ತಾತ್ಮಕ ತಳದ ಮೇಲೆ ಬೆಳೆದುಕೊಂಡು ಸಂಯುಕ್ತ ಅಮೇರಿಕಾವೂ ಕೂಡಿತು. ಜಗತ್ತಿನ ಶಾಂತಿ ಕೆಡಿಸಿದ ಪೆಸಿಸ್ಟರ ನಾಶವು ಈಗ ಖಂಡಿತವೆಂದಾಗಿದೆ. ಮುಂದೇನು? ಎಂಬ ವಿಚಾರವು ಈಗ ಮೂಡಿದೆ.

ಜಗತ್ತಿನಲ್ಲಿ ಮುಂದಕ್ಕೆ ಯುದ್ಧಗಳೆ ತಲೆದೋರದಂತೆ, ಸಾತ್ವಿಕ ಗುಣಗಳೆ ಬೆಳಕಿಗೆ ಬರುವಂತೆ ಮಾಡಲಾಗುವುದೆಂದು ಮಿತ್ರರಿಂದ ಹೇಳಲಾಗಿದೆ. ಸ್ಟೆಲೀನ್-ರೂಸ್‌ವೆಲ್ಟ-ಚರ್ಚಿಲ್ಲರಲ್ಲಿ ಈ ಕುರಿತು ಒಮ್ಮತವು ಉಂಟಾಗಿರುವುದು. ಆದರೆ ಮೊನ್ನೆ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹಿಂದೂದೇಶದ ಸ್ವಾತಂತ್ರ್ಯದ ಕುರಿತು ಪ್ರಸ್ತಾಪ ಬಂದಾಗ, ಮಿತ್ರರು ಜಗತ್ತಿನಲ್ಲೆಲ್ಲಾ ಶಾಂತಿ ಸ್ಥಾಪಿಸುವ ಉದ್ದೇಶ ಸಾಧನೆಯಲ್ಲಿರುವಾಗ, ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡಬೇಕಲ್ಲವೆ? ಎಂಬ ಪ್ರಶ್ನೆಗೆ ಅಮೆರಿಯವರು ಕೊಟ್ಟ ಉತ್ತರ ಯಾರಿಗೂ ಕೇಳಿಸದಾಯಿತು-ಅದು ಅವರ ಮೌನವೆನೆಂದು ತಿಳಿಯಬೇಕಾಗಿಯದೆ. ವಿಜಯಲಕ್ಷ್ಮಿಪಂಡಿತ, ತನ್ನಅಣ್ಣನವರು ಮಾಡಬೇಕೆಂದು ಉದ್ದೇಶಿಸಿದ ಹಿಂದೂದೇಶದ ಕುರಿತು ಅಮೇರಿಕಾದಲ್ಲಿ ಪ್ರಚಾರ ಯಾತ್ರೆಯಲ್ಲಿರುವವರು ಅಲ್ಲಿಒಂದೆಡೆ ಅಂದಂತೆ, ಮಿತ್ರರು ಜಗತ್ತಿನಲೆಲ್ಲಾ ಶಾಂತಿಸ್ಥಾಪಿಸಬೇಕೆಂಬ ಮಹಾ ಉದ್ದೇಶವನ್ನು ಹಾಕಿಕೊಂಡು, ಪ್ರಜಾಸತ್ತೆ ರಕ್ಷಣೆಗಾಗಿ ಕಂಕಣ ಕಟ್ಟಿರುವಾಗ, ಅವರ ಆ ಮಹಾ ಉದ್ದಿಶ್ಯ ಸಾಧನೆಯಲ್ಲಿ ಹಿಂದೂದೇಶವು ಸ್ವಾತಂತ್ರ್ಯ ರಾಷ್ಟ್ರವಲ್ಲವಾಗಿರುವುದು ಒಂದು ದೊಡ್ಡ ಕೊರತೆ ಎಂದು ತಿಳಿಯಬೇಕಾಗಿದೆ. ನಮ್ಮ ಸ್ವಾತಂತ್ರ್ಯ ಸಮಸ್ಯೆ ಮತ್ತು ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿ ಇವುಗಳೆಲ್ಲಾ ಬಗೆಹರಿಸಲ್ಪಡಬೇಕಾದರೆ, ನಮ್ಮಲ್ಲಿನ ವಿವಿಧ ಕೋಮುಗಳು ಐಕ್ಯಗೊಳ್ಳಬೇಕಂತೆ—ಮುಖ್ಯವಾಗಿ ಹಿಂದೂ ಮುಸ್ಲಿಮರು ಐಕ್ಯಗೊಂಡು ಮುಂದೆ ಬರಬೇಕೆಂದು, ಅಮೆರಿಯವರು, ಮೇಲಿನ ಪ್ರಶ್ನೋತ್ತರಗಳಲ್ಲಿ ಅಂದುಬಿಟ್ಟರು. ಆದರೆ ಹಿಂದೂದೇಶವು ಯಾವತ್ತೊಂದು ನಿರ್ಧಾರಕ್ಕೆ ಬರಬೇಕಾದರೆ ಅದರ ಮುಖಂಡರುಗಳು ಕಲೆತು ವಿಚಾರಿಸಬೇಡವೆ? ಕಾಂಗ್ರೆಸ್ಸು ಮುಖಂಡರುಗಳು ಸೆರೆಯಲ್ಲಿರುವ ತನಕ ಈ ತರದ ಪ್ರಸ್ತಾಪ ನಡೆಯಲು ಸಾಧ್ಯವಿಲ್ಲ ಅವರ ಬಿಡುಗಡೆಯಾಗಬೇಕೆಂದೂ ಮೆಂಚೆಸ್ಟರ ಗಾರ್ಡಿಯನ ಪತ್ರಿಕೆಯು ಶಿಫಾರಸು ಆಗಿರುತ್ತದೆ.

ಜಗತ್ತಿನ ವ್ಯವಹಾರದಲ್ಲಿ ಸ್ಟೆಲಿನ್, ರೂಸ್‌ವೆಲ್ಟ್, ಚರ್ಚಲರೆ ಮೊದಲಾದ ಪ್ರಜಾಸತ್ತೆಯ ನಾಯಕರ ಕೈವಾಡವೆ ನಡೆಯುತ್ತಿರುವಾಗ, ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಗೆ ಯಾಕೆ ಲಕ್ಷ್ಯ ದೊರಕುವುದಿಲ್ಲ? ಹಿಂದೂ-ಮುಸ್ಲಿಮ ಭೇದವು ಬರೆ ಒಂದು ಕ್ಷುಲ್ಲಕ ನೆವವು. ಪ್ರಜಾಸತ್ತೆಯ ನಾಯಕರಾದ ಮಿತ್ರರು ಈ ಸಮಸ್ಯೆ ಕುರಿತು ಲಕ್ಷ್ಯತೋರಿಸಿದ ಕ್ಷಣವೆ ನಮ್ಮ ಸ್ವಾತಂತ್ರ್ಯ ಸಮಸ್ಯೆಯು ಬಗೆಹರಿಸಲ್ಪಡುವುದು. ಹಿಂದೂದೇಶವು ಪರಾಧೀನವಾಗಿಯೆ ಉಳಿಯಬೇಕೆಂದಾದರೆ, ಆಗ ಪ್ರಜಾಸತ್ತೆಗೆ ಬಾಳಲು, ಸಾತ್ವಿಕಗುಣಗಳಿಗೆ ಬೆಳಕಿಗೆ ಬರಲು, ಜಗತ್ತು ಶಾಂತಿಯನಿಲಯವಾಗಲು ಅವಕಾಶ ದೊರಕದೆಂದು ದಾರಳವಾಗಿ ಹೇಳಬೇಕು. ಹಿಂದೂದೇಶದಲ್ಲಿ ಹಾಗೆನೆ ಉಳಿಯುವ ಈ ಕೆಸರುಗೊಂಪೆಯನ್ನು ತೊಳೆದು ಬಿಡಲು, ಇನ್ನೊಂದು ಪ್ರಳಯವು ಅತಿ ಅವಶ್ಯವೆನಿಸುವುದು.

ರಷ್ಯವು ಈ ಯುದ್ಧದ ದೆಸೆಯಿಂದ ಪಶ್ಚಿಮ ಯುರೋಪದ ದೇಶಗಳಲ್ಲಿ ತನ್ನ ಕೆಂಪು ಪ್ರಭಾವವನ್ನು ಹರಡುವಂತಾಯಿತು. ಕೆಂಪು ಬಲವು ಪ್ರವೇಶಿಸಿದ ಪ್ರದೇಶಗಳೆಲ್ಲಾ ಕೆಂಪು ನೀತಿಯನ್ನೆಸ್ವಿಕರಿಸುತ್ತವೆ; ಕೆಂಪು ಬಲದ ವಿಜಯದಿಂದ ಪಶ್ಚಿಮದಲ್ಲಿ ಕೆಂಪು ಪ್ರಭಾವ ಹರಡುತ್ತಿರುವಾಗ, ಬ್ರಿಟನ್, ಅಮೇರಿಕಾ ಮೊದಲಾದ 'ಡೆಮಾಕ್ರೆಸಿ'ಗಳು ಸುಮ್ಮನಿರುವುದೆ, ಕೆಂಪು ಪ್ರಭಾವದ ಬೆಳವಣಿಗೆ ಸರಿಯಾಗಿ ಈ ಡೆಮಾಕ್ರೆಸಿಗಳು ತಮ್ಮ ಪ್ರಭಾವವನ್ನು ಹರಡಿಸಿರಬೇಕೆಂದೂ, ಸೂಚನೆಗಳು ಅಮೇರಿಕಾದಲ್ಲಿ ಇತ್ತೀಚೆಗೆ ಹೊರಟ ರಷ್ಯದ ಕುರಿತು ಒಂದು ಪುಸ್ತಕದಲ್ಲಿ ಮಾಡಲಾಗಿವೆ. ಹಾಗೆನೆ ಆಸ್ಯಾದಲ್ಲಿ ಪೆಸಿಸ್ಟ ಜಪಾನನ್ನು ಅಡಗಿಸುತ್ತಿರುವಾಗ, ಕೆಂಪುರಷ್ಯವು ಅಲ್ಲಿ ಪ್ರಸರಿಸಿಕೊಳ್ಳುವಂತೆ ಜಾಗರೂಕತೆಗಳು ಬೇಡವೆ? ಹೀಗೆ ಪೂರ್ವದಲ್ಲೂ ಪಶ್ಚಿಮದಲ್ಲೂ ಕೆಂಪು ಪ್ರಭಾವಗಳು ಬೆಳೆಯುತ್ತಾ ಹೋದರೆ ಆಗ-?. ಇವೇ ಮೊದಲಾದ ವಿಚಾರಗಳು ಬ್ರಿಟನಿನ ಕೆಲಟೋರಿಗಳಲ್ಲೂ ಅಮೇರಿಕಾದ ಶ್ರೀಮಂತರಲ್ಲೂ ಹೊಳೆಯಲಾರಂಭಿಸಿವೆ. ಈ ತರದ ಮನೋವೃತ್ತಿಯಿಂದ ಮಿತ್ರರು ಪ್ರಕೃತ ಹಾಕಿಕೊಂಡ ಉದ್ದಿಶ್ಯಗಳಿಗೆ ತೊಡಕುಬರಬಹುದು. ಆದರೆ ಇಷ್ಟನ್ನು ಹೇಳಬಹುದು, ಟೋರಿಗಳು, ಲಿಬರಲರು, ರಿಪಬ್ಲಿಕನ್ನರು ಏನೆ ಹೇಳಲಿ, ಯುದ್ಧೋತ್ತರ ಜಗತ್ತಿನಲ್ಲಿ, "ಎಡಪಕ್ಷದ ಪ್ರಭಾವೂ ಪ್ರಜಾಸತ್ತಾತ್ಮಕ ನೀತಿಯೂ ಹೆಚ್ಚು ಮಾನ್ಯವಾಗಲೆ ಬೇಕಾಗುವುದು. ಅವುಗಳ ಮಾನ್ಯವಾಗುವುದು ಖಂಡತ. ಕಾಲಚಕ್ರದ ಉರುಳುವಿಕೆಯಲ್ಲಿ ಉಚ್ಛ ಪ್ರಜಾಸತ್ತಾತ್ಮಕ ಧ್ಯೇಯಗಳು ಮೇಲಕ್ಕೆ ಬರುವುದು ಖಂಡಿತವೆಂದು ತಿಳಿಯಬೇಕು.

ಅಮೇರಿಕಾದಲ್ಲಿ ಸಾಗುವಳಿ ವಿಚಾರದಲ್ಲಿ ಅನೇಕ ಸುಧಾರಣೆಗಳು ನಡೆದುಬಿಟ್ಟಿವೆ. ಹಾಗೆನೆ ಕೈಗಾರಿಕೆಗಳಲ್ಲಿ ಮತ್ತಿತರ ವಿಚಾರಗಳಲ್ಲಿ. ಯುದ್ಧೋತ್ತರದಲ್ಲಿ ಹಿಂದೂದೇಶದ ಉದ್ಧಾರ ಯೋಜನೆಗಳಲ್ಲಿ ಉದ್ಯೋಗಿಸುವರೆ ೫೦೦ ಮಂದಿ ತರುಣರನ್ನು ಅತ್ತಕಡೆಗೆ ತರಬೇತಿಗೆ ಕಳುಹಿಸಬೇಕೆಂಬ ನಿರ್ಣಯವಾಗಿದೆ. ಇಂಡಿಯಾ ಸರಕಾರದಿಂದ ಈ ತರುಣರು ಸಾಗುವಳಿಯ ಮತ್ತು ಕೈಗಾರಿಕೆಗಳ ಕುರಿತೂ ಮಾತ್ರ ಅನುಭವ ಪಡೆಯುವರು ಮಾತ್ರವಲ್ಲದೆ, ಅಲ್ಲಿನ ಜೀವನ ಕ್ರಮಗಳ ಕುರಿತು ನಾಗರೀಕತೆ ಕುರಿತು ಅರಿತು ಬರಬಹುದು. ತಮ್ಮ ಅನುಭವದಿಂದ ನಮ್ಮ ಸಮಾಜ ಸುಧಾರಣೆಯ ಕಾರ್ಯವನ್ನು ಕೈಕೊಳ್ಳಬಹುದು.

(೮ನೇ ಪುಟಕ್ಕೆ ಮುಂದುವರಿದಿದೆ)

ಭಾರತ ವಾರಾಂತ್ಯ ವರದಿಗಳು

ಸೋಲುಗೇಲುಗಳಿಲ್ಲದ ಸರಕಾರ—ಕೊಂಗ್ರೆಸ್ ಲೀಗ್‌ಗಳೆಂದರೆ ಹಿಟ್ಲರ್ ನಾಶಕ ರಷ್ಯನ್ ಸೇನಾಪತಿಗಳಂತೆ-ಜ್ವರ ಇಳಿದರೂ ರೋಗಿ ಸತ್ತ—ಸರಕಾರಿ ವ್ಯಾಪಾರಿ ಸಂಸ್ಥೆ-ಜಿನ್ನರು ಫೈಲ್ ಆಗುವರು-

ಕೊನೆಯಲ್ಲಿ ಅವರಿಗೇ ವಿಜಯ

ಕೇಂದ್ರ ಶಾಸನ ಸಭೆಯಲ್ಲಿ ಸರಕಾರವು ಮೇಲಿಂದ ಮೇಲೆ ಸೋಲನ್ನು ಅನುಭವಿಸಿದೆ. ಆದರೆ ಇಂದಿನ ಕೇಂದ್ರ ಮಂತ್ರಿಮಂಡಳವು ಜನತೆಗೆ ಜವಾಬುದಾರಿಯಿಲ್ಲದ ಸರಕಾರ. ಎಷ್ಟು ಸಲ ಸೋತರೂ ವ್ಯಾಸರಾಯರ ವಿಶೇಷ ಅಧಿಕಾರಗಳ ಸಹಾಯದಿಂದ ಅವರು ಕೊನೆಗಂತೂ ಗೆಲ್ಲುವರು. ಕೇಂದ್ರದಲ್ಲಿ ಸಾರ್ವಭೌಮ್ಯ ಪ್ರತಿನಿಧಿಗಳೂ, ಪ್ರಾಂತ್ಯಗಳಲ್ಲಿ ಗವರ್ನರರುಗಳೂ ಹೊಣೆಗಾರಿಕೆಯುಲ್ಲದ ಕೃತಕ ಮಂತ್ರಿಮಂಡಳಗಳನ್ನು ತಮಗೆ ಇಚ್ಛೆಪಟ್ಟಂತೆ ರಕ್ಷಿಸಿಕೊಳ್ಳುತ್ತಾರೆ.

ಯುದ್ಧಾನಂತರ ಪುನರ‍್ರಚನೆಯ ಕುರಿತು ಚರ್ಚೆಯಾದಾಗ ಆ ಶಾಖೆಯ ಮಂತ್ರಿಗಳಾದ ಸರ್ ಆರ್ದೆಶಿರ್ ದಲಾಲರು "ನಮ್ಮದು ಜನಪ್ರಿಯವಲ್ಲದ ಸರಕಾರವೇನೋ ಹೌದು. ಜನಪ್ರಿಯರಾದವರು ದೂರ ನಿಂತಿದ್ದಾರೆ. ಈಗ ನಾವು ಮಾಡುವ ಯೋಜನೆಗಳಿಂದ ದೇಶದ ಜನತೆಗೆ ಹಿತವಾದರೆ ಆ ಕೀರ್ತಿ ನಮಗೆ ಸಲ್ಲುವುದೆಂದು ಕೊಂಗ್ರೆಸ್ಸಿಗೆ ಹೊಟ್ಟೆಉರಿ. ಆದರೂ ಸರಕಾರ ನಡೆಯಬೇಕಲ್ಲವೆ? ಕೇಂದ್ರ ಕಾರ್ಯಕಾರಿ ಮಂಡಳಿಯವರಾದ ನಮ್ಮ ಯೋಜನೆಗಳ ಮೇಲೆ ಅವಿಶ್ವಾಸ ಠರಾವು ತರುತ್ತೀರಿ. ಕಾರ್ಯನಿರ್ವಾಹಕ ಮಂಡಳಿಯ ಕೆಲಸವನ್ನು ಶಾಸನ ಸಭೆ ಸದಸ್ಯರು ಮಾಡಬಯಸುವುದು ರಚನಾತ್ಮಕ ರಾಜಕೀಯ ಪ್ರಪಂಚದಲ್ಲೇ ಸೋಜಿಗವೆನಿಸುವ ವಿಷಯ" ಎಂದರು.

ಇದಕ್ಕೆ ಮುಸ್ಲಿಂ ಲೀಗಿನ ಲಿಯಾಖತ್ ಖಾನರ ಉತ್ತರ ಹೀಗಿದೆ: "ಕಾರ್ಯನಿರ್ವಾಹಕ ಮಂಡಳಿಯ ಕೆಲಸ ಶಾಸನ ಸಭೆಯ ಪ್ರತಿನಿಧಿಗಳು ಮಾಡಲು ಬಯಸುವುದು ಪ್ರಪಂಚದಲ್ಲಿ ಸೋಜಿಗದ ಸಂಗತಿಯಾಗಿರುತ್ತದೆ ನಿಜ. ಆದರೆ ಅಂತಹ ಕಾರ್ಯವನ್ನು ನಿರ್ವಹಿಸಲು ಅನರ್ಹರೆಂದು ಬಹುಮತದಿಂದ ಎತ್ತಿ ತೋರಿಸಲಾಗಿಯೂ ಅನೇಕ ವೇಳೆ ಸೋತು ಹೋದರೂ ಮತ್ತೂ ರಾಜಿನಾಮೆ ಕೊಡದೆ ತಮ್ಮ ಸ್ಥಾನಕ್ಕೆ ಅಂಟಿಕೊಂಡಿರುವ ಕಾರ್ಯನಿರ್ವಾಹಕ ಮಂಡಳಿಯ ಧೋರಣೆಯೂ ಇನ್ನೂ ಹೆಚ್ಚಿನ ಸೋಜಿಗದ ಸಂಗತಿ."

ರಷ್ಯನ್ ದೃಷ್ಟಾಂತ

ಸರ್ ಆರ್ದೇಶಿರ್ ದಲಾಲರು ಕೇಂದ್ರ ಸಭೆಯಲ್ಲಿ "ಕೊಂಗ್ರೆಸ್ ಮತ್ತು ಲೀಗ್ ಪಕ್ಷದವರು ನನ್ನ ಇಲಾಖೆಯ ಮೇಲೆ ಇಕ್ಕಳ ಪ್ರಯೋಗ ನಡೆಸುತಿದ್ದಾರೆ. ಈ ಇರ್ವ ವಿರೋಧ ಪಕ್ಷದವರು ರಷ್ಯನ್ ಸೇನಾಪತಿಗಳಾದ ಮಾರ್ಶಲ್ ಕೊನಿವ್ ಮತ್ತು ಝುಕೋವ್ ಇದ್ದಹಾಗೆ. ಆದರೆ ಕೆಂಪು ಪಡೆಯ ಆ ಇರ್ವ ಸೇನಾಧಿಪತಿಗಳು ಬರ್ಲಿನನ್ನು ಹಿಡಿಯುವ ತಮ್ಮ ಗುರಿಯಲ್ಲಿ ಭೇದಾಭಿಪ್ರಾಯವಿಲ್ಲದವರಾಗಿದ್ದಾರೆ. ಕೊಂಗ್ರೆಸ್ ಲೀಗುಗಳಲ್ಲಿ ಇನ್ನೂ ವಿಶಾಲವಾದ ಭೇದಗಳಿವೆ" ಎಂದರು.

ಇದಕ್ಕೂ ಉತ್ತರವಾಗಿ ಲೀಗ್ ಪಕ್ಷದ ಲಿಯಾಖತ್ ಆಲಿ ಖಾನರು "ನಮ್ಮನಮ್ಮೊಳಗೆ ಇಷ್ಟೊಂದು ಭೇದವಿದ್ದರೂ ಅಲ್ಲಿ ಕೂತಿರುವ ಆ ಹಿಟ್ಲರರನ್ನು (ದಲಾಲರನ್ನು) 'ಸದೆ ಬಡಿಯ' ಬೇಕೆಂಬುದರಲ್ಲಿ ನಮ್ಮೊಳಗೆ ಏಕಾಭಿಪ್ರಾಯವೇ ಇದೆ." ಎಂದು ಸಭಾಸದನವನ್ನು ನಗಾಡಿಸಿದರು. ಈಗಿನ ಸರಕಾರ ವಿರೋಧವಾಗಿ ಇಷ್ಟೊಂದು ಐಕ್ಯತೆಯಿಂದ ಶಾಸನ ಸಭಾ ಚರ್ಚೆಯಲ್ಲಿ ಒಮ್ಮತ ಪ್ರದರ್ಶನ ಮಾಡುವ ಕೊಂಗ್ರೆಸ್-ಲೀಗ್ ಪಕ್ಷಗಳು ಅದೇ ರೀತಿಯಲ್ಲಿ ಅದರ ಹೊರಗೂ ಒಟ್ಟುಗೂಡಿ ದೇಶದ ಸ್ವಾತಂತ್ರ್ಯಗಳಿಸಲು ಪ್ರಯತ್ನಪಡಬಾರದೆ?

ಇನ್ನೊಂದು ಈಸ್ಟ್ ಇಂಡಿಯಾ ಕಂಪೆನಿ

ಈಗಿನ ಕಂಟ್ರೋಲ್ ಧೋರಣೆಯಿಂದ ಸರಕಾರವು ಎಲ್ಲಾ ವಾಣಿಜ್ಯ ವ್ಯವಹಾರವನ್ನು ತನ್ನ ವಶಪಡಿಸಿಕೊಂಡಿದ್ದರಿಂದ ದೇಶದಲ್ಲಿನ ಸರಕು ಸರಬರಾಯಿಯು ಸರಕಾರದ ಮತ್ತು ಕೆಲವು ಐರೋಪ್ಯ ವ್ಯಾಪಾರಿ ಸಂಸ್ಥೆಗಳಿಗೇ ಲಾಭದೊರಕುವಂತಾಗಿದೆ ಎಂದು ಕೇಂದ್ರ ಸಭೆಯಲ್ಲಿ ಶ್ರೀ ಪ್ರಕಾಶ ಮೊದಲಾದ ಕೆಲವು ಸದಸ್ಯರು ಟೀಕಿಸಿದರು.

ಇದಕ್ಕೆ ಉತ್ತರವಾಗಿ ವಾಣಿಜ್ಯ ಶಾಖೆಯ ಸಚಿವರಾದ ಸರ್ ಅಜಿಜುಲ್‌ಹಾಕ್ ಅವರು "ಕಂಟ್ರೋಲ್ ಧೋರಣೆಯಿಂದ ಸರಕಾರವು ಸರಕುಗಳು ಶೇಕಡಾ ೫೦ ರಷ್ಟು ಕಮ್ಮಿ ಬೆಲೆಗೆ ಜನರಿಗೆ ದೊರಕುವಂತೆ ಮಾಡಿದೆ" ಎಂದರು.

ಪ್ರತ್ಯುತ್ತರವಾಗಿ ಮಿ. ನೌಮಾನ್ ಎಂಬ ಲೀಗ್ ಸದಸ್ಯರು ಹಾಸ್ಯರಸ ಪ್ರಧಾನವಾದ ಒಂದು ಸಾಮ್ಯ ಕೊಟ್ಟರು: "೧೦೫ ಡಿಗ್ರಿ ಜ್ವರ ಇದ್ದ ಒಬ್ಬ ರೋಗಿಗೆ ಡಾಕ್ಟರರೊಬ್ಬರು ಕೊಟ್ಟ ಔಷಧದಿಂದ ಜ್ವರವು ೧೦೨ಡಿಗ್ರಿಗೆ ಇಳಿಸಿದರೂ ಕೊನೆಯಲ್ಲಿ ರೋಗಿಗೆ ಮರಣ ತಪ್ಪಿದ್ದಲ್ಲ."

ಶ್ರೀ ಪ್ರಕಾಶರವರು ಈಗಿನ ಸರಕಾರವು ದೇಶದಲ್ಲಿ ಇನ್ನೊಂದು 'ಈಸ್ಟ್ ಇಂಡಿಯಾ ಕಂಪೆನಿ' ಸ್ಥಾಪಿಸಲು ಪ್ರಯತ್ನಪಡುತ್ತಿರುವರು ಎಂದು ಟೀಕಿಸಿದರು.

ಯುಸೂಫ್ ಹಾರೂನ್ ಎಂಬ ಲೀಗ್ ಸದಸ್ಯರು "ಕಳ್ಳ ಸಂತೆ, ಅತೀ ಲಾಭಖೋರತನ, ಮತ್ತು ಗುಪ್ತ ದಾಸ್ತಾನು ಮಾಡುವುದಕ್ಕೆ ಸರಕಾರದ ಈ ಬಿಗಿಇಲ್ಲದ ಕಂಟ್ರೋಲ್ ಮತ್ತು ಪರ್ಮಿಟ್ ಪದ್ಧತಿಗಳೇ ಕಾರಣ" ಎಂದು ಹೇಳಿದ ವಿಷಯವನ್ನು ಕೇಂದ್ರ ಸರಕಾರವು ಗಮನಿಸಿ ತನ್ನ ಧೋರಣೆಯಲ್ಲಿ ಬದಲಾವಣೆಯನ್ನು ಮಾಡಬಹುದು.

ಬ್ರಿಟಿಷ್ ಸರಕಾರ—ಜಿನ್ನರ ಪರೀಕ್ಷೆ

"ಭಾರತೀಯ ಸಮಸ್ಯೆಯ ಕುರಿತು ಯಾವುದೊಂದು ತರದ ಇತ್ಯರ್ಥವನ್ನು ಮಾಡದೆ ನಿರ್ವಾಹವಿಲ್ಲ. ದಿನದಿಂದ ದಿನಕ್ಕೆ ಭಾರತ ಬ್ರಿಟನ್‌ಗಳೊಳಗಿನ ವ್ಯತ್ಯಾಸವು ವಿಶಾಲವಾಗುತ್ತಿರುವುದು ಗಂಡಾಂತರ ಸೂಚಕವಾದುದು." ಎಂದು ಸರ್ ಜಾಫರುಲ್ಲಾ ಖಾನರ ಸೂಚನೆಯನ್ನು ಬ್ರಿಟಿಷ್ ಸರಕಾರ ಕಡೆಯ 'ಟ್ಯಾಮ್ಸ' ಪತ್ರಿಕೆಯೂ ಸಮರ್ಥಿಸಿದೆ.

ಕೊಂಗ್ರೆಸ್ ಲೀಗ್‌ಗಳೊಳಗಿನ ಸಂಬಂಧದ ಕುರಿತು ಸರ್ ಜಾಫರುಲ್ಲಾ ಅವರ ಅಭಿಪ್ರಾಯವು ಹೀಗಿದೆ: "ಭಾರತ ಸಮಸ್ಯೆಯ ಇತ್ಯರ್ಥವನ್ನು ಮಾಡಲು ತಮಗೆ ತುಂಬಾ ಆಸಕ್ತಿ ಇದೆ ಎಂದು ಬ್ರಿಟಿಷ್ ಸರಕಾರವೂ ಮಿ। ಜಿನ್ನಾ ಅವರೂ ಹೇಳುತ್ತಿರುವುದನ್ನು ಪರೀಕ್ಷೆಮಾಡಲಿಕ್ಕಾದರೂ ಕೊಂಗ್ರೆಸಿನವರು ಸರಿಸಮಾನ ಸಂಖ್ಯೆಯ ಸಧ್ಯರಿಂದ ಕೂಡಿದ ಕೇಂದ್ರ ಸರಕಾರವನ್ನು ರಚಿಸಲು ಒಪ್ಪಬೇಕು" ಈ ವರದಿಯನ್ನು ಫ್ರಿಪ್ರೆಸ್ ಪತ್ರಿಕೆಯ ಲಂಡನ್ ಬಾತ್ಮಿದಾರನು ಕೊಡುತ್ತಾನೆ.

ಆಗಲೇ ಮಿ। ಎಮರಿಯವರು "ಭಾರತದ ಪ್ರಧಾದ ಪಕ್ಷಗಳೊಳಗೆ ಬಿರುಸಾದ ಭೇದಾಭಿಪ್ರಾಯವಿದೆ. ಆದುದರಿಂದ ಸದ್ಯಕ್ಕೆ ಏನನ್ನೂ ಮಾಡಲು ಸಾಧ್ಯವಿಲ್ಲ"ವೆಂದು ಸೇನ್ ಫ್ರೆನ್ಸಿಸ್ಕೊ ಪರಿಷತ್ತಿನಲ್ಲಿ ಭಾರತಕ್ಕೆ ಪ್ರಾತಿನಿಧ್ಯ ಕೊಡುವ ಕುರಿತು ಹೇಳಿರುವರಂತೆ.

ಕೊಂಗ್ರೆಸ್ ಲೀಗಿನೊಡನೆ ಸೇರಿ ರಾಷ್ಟ್ರೀಯ ಸರಕಾರ ರಚಿಸುವುದರಿಂದ ಪರಿಸ್ಥಿತಿಯು ಬದಲಾಗಿ ನಂತರ ಮಿ। ಎಮೆರಿಯವರು ಯಾವ ನೆವನವನ್ನು ಹೇಳಲಿರುವರೊ ನೋಡಬೇಕೆಂಬುದು ಸರ್ ಜಾಫರುಲ್ಲರ ಆಶಯವಿರುವಂತೆ ಇತರರನೇಕರೂ ಹಾಗೇ ನಿರೀಕ್ಷಿಸುವರು.

ಮಹಾತ್ಮರ ಪ್ರೀತಿಯ ಪ್ರದೇಶ

ಬೊಂಬ್ಯಾ ನಗರವೆಂದರೆ ಮಹಾತ್ಮಾ ಗಾಂಧಿಯವರಿಗೆ ಅತ್ಯಂತ ಆದರ. ಬೊಂಬ್ಯಾ ನಾಗರೀಕರ ಮೇಲೆ ಸೇವಾ ಗ್ರಾಮದ ಸಾಧುವಿಗೆ ತುಂಬಾ ಭರವಸೆ. ಸಂದರ್ಭವಶಾತ್ ಬೊಂಬ್ಯಾಯಲ್ಲೂ ಅದರ ಆಸುಪಾಸಿನ ಪ್ರದೇಶಗಳಲ್ಲೂ ಮಹಾತ್ಮರು ಹಲವು ಬಾರಿ ಠಾಣ್ಯಮಾಡಿಕೊಂಡಿದ್ದು ಅನೇಕಾನೇಕ ಮಹತ್ವದ ಮತ್ತು ಐತಿಹಾಸಿಕ ಘಟನೆಗಳು ಆ ಅಂತರಾಷ್ಟ್ರೀಯ ಸಂಸ್ಕೃತಿಗಳ ಮಿಶ್ರವಾದ ನಗರಕ್ಕೆ ಸಂಬಂಧಪಟ್ಟು ಘಟಿಸಿವೆ.

ಬರುವ ತಿಂಗಳಲ್ಲಿ ಮಹಾತ್ಮರು ಬೊಂಬ್ಯಾ ಬಳಿಯ ಬೋರಿವ್ಲಿಯಲ್ಲಿ ಬೇಸಿಗೆಯನ್ನು ಕಳೆಯುವರೆಂದು ತಿಳಿದು ಬರುತ್ತದೆ. ಇತ್ತೀಚೆಗೆ ವಾರ್ಧದಲ್ಲಿ ಬಹಳ ಕಳವಾಸ್ಪದ ದೇಹ ಪ್ರಕೃತಿಯುಳ್ಳವರಾಗಿ ನರಳುತ್ತಿರುವ ಮಹಾತ್ಮರು ವೈದ್ಯ ಸಲಹೆಯನ್ನು ಎಂದೂ ಉಲ್ಲಂಘಿಸುವುದಿಲ್ಲ. ಆದರೆ ತಮ್ಮ ಬೇಸಿಗೆ ಕಾಲದ ಠಾಣ್ಯವನ್ನು ವಿಶಿಷ್ಟ ಚಟುವಟಿಕೆಯೊಂದಿಗೆ ಕಳೆಯಲು ಗಾಂಧೀಜಿ ಏರ್ಪಡಿಸಿರುವುದು ಅವರ ಅವಿಶ್ರಾಂತ ಚೈತನ್ಯಮಯ ಜೀವನದ ಸ್ವಭಾವ. ಬೋರಿವ್ಲಿಯಲ್ಲಿ ಕಸ್ತೂರ್ ಬಾ ನಿಧಿ ಕಾರ್ಯಕ್ರಮದ ಸುಮಾರು ೬೦ ಮಂದಿ ಮಹಿಳಾ ಕೆಲಸಗಾರರು ಅವರ ನೇತೃತ್ವದಲ್ಲಿ ಗ್ರಾಮೋದ್ಧಾರದ ಕೆಲಸದಲ್ಲಿ ತರಬೇತಿ ಪಡೆಯಲಿರುವರು. ಆಗಲೇ ಶ್ರೀ ನಾನಾವತೀ ಎಂಬ ಪ್ರಸಿದ್ಧ ಬೊಂಬ್ಯಾ ಮಿಲಿಯಾಧೀಶರ ಬೋರಿವ್ಲಿ ಬಂಗಲೆಯ ವಠಾರದಲ್ಲಿ ಗಾಂಧಿಗುಡಿಸಲುಗಳನ್ನು ಕಟ್ಟಲು ಹಿಡಿದಿರುವರು. ಪರಮಾತ್ಮನು ಅವರಿಗೆ ದೇಹ ಸೌಖ್ಯವನ್ನು ಕೊಟ್ಟು ಅವರು ತಮ್ಮ ಜೀವನ ಧ್ಯೇಯವು ಪರಿಪೂರ್ಣವಾದುದನ್ನು ನೋಡುವಂತೆ ಕರುಣಿಸಲೆಂದು ದೇಶವು ಪ್ರಾರ್ಥಿಸುತ್ತದೆ.

ಗಂಡಂದಿರ ಕೊರತೆ

ನಮ್ಮಲ್ಲಿ ವರದಕ್ಷಿಣೆ ಮತ್ತು ಜಾತಕಗಳ ಮೇಳಾಮೇಳಿಗೆ ಹೆಚ್ಚಿನ ಮಹತ್ವ ಕೊಟ್ಟುದರ ಫಲವಾಗಿ ಹುಡುಗಿಯರಿಗೆ ಗಂಡಂದಿಯರೆ ಸಿಗದಾಗಿದೆ. ಬ್ರಿಟನಿನ ಗಂಡಂದಿರ ಸಂಖ್ಯೆಯು ಕಡಿಮೆಯಾದುದರಿಂದ ಸ್ತ್ರೀ ವರ್ಗದಲ್ಲಿ ಪ್ರತಿ ಐದು ತರುಣಿಯರಿಗೆ ಒಬ್ಬಳು ಅವಿವಾಹಿತಳಾಗಬೇಕಾದ ಸ್ಥಿತಿಯು ಇಂದಿನದು.

ಇಡೀ ಜಗತ್ತಿನಲ್ಲೆ ಗಂಡಂದಿರ ಕೊರತೆಯು ಉಂಟಾಗಿರುತ್ತದೆ. ಅಮೇರಿಕಾಕ್ಕೆ ಹಿಂದೆ ಗಂಡಂದಿರು ಸಮೃದ್ಧಿಯಾಗುವ ದೇಶವೆಂದು ಪ್ರಸಿದ್ಧಿ ಇತ್ತು. ಅಲ್ಲೂ ಈಗ ಗಂಡಂದಿರ ಕೊರತೆಯು ಉಂಟಾಗಿರುವುದಂತೆ. ಪ್ರತಿ ೭ ತರುಣಿಯರಿಗೆ ಒಬ್ಬಳು ಅವಿವಾಹಿತಳಾಗಿಯೆ ನಿಲ್ಲಬೇಕಾಗಿ ಬಂದದೆಂದು ಅಲ್ಲಿನ ಅಂಕೆಸಂಖ್ಯೆ ಇಲಾಖೆಯವರಿಂದ ಕಂಡುಹಿಡಿಯಲಾಗಿದೆ. ಈಗ ಉಂಟಾದ ಪರಿಸ್ಥಿತಿಯು ಇನ್ನು ಮುಂದರಿದರೆ ಅಮೇರಿಕದಲ್ಲಿ ಸದ್ಯದಲ್ಲೆ ೬೦,೦೦,೦೦೦ ದಿಂದ ೮,೦೦೦,೦೦೦ ಸ್ತ್ರೀಯರು ಅವಿವಾಹಿತರಾಗಿಯೇ ಇರಬೇಕಾಗುವುದು. ವಿಧವೆಯರಿಗೆ ಪುನರ್ವಿವಾಹ ಮಾಡಿಕೊಳ್ಳಲು ಅವಕಾಶವೆ ದೊರಕದು.

ಸ್ವಿಡನ್ ದೇಶದಲ್ಲಿ ಜನನ ಸಂಖ್ಯೆಯು ಜಗತ್ತಿನಲ್ಲಿ ಅತಿ ಕಡಿಮೆಯಿರುತ್ತದೆ. ಇದಕ್ಕೆ ಹಲವು ಕಾರಣಗಳಿದ್ದರೂ ಅಲ್ಲಿನ ಪುರುಷರು ಬಹಳಕಾಲ ಕಳೆದು ವಿವಾಹ ಮಾಡಿಕೊಳ್ಳುವುದು ಅತಿ ಪ್ರಾಮುಖ್ಯ ಕಾರಣವಾಗಿರುತ್ತದೆ.

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

U. Shantha Rama Rao,
Secretary

2-12-1944

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಟರ್ಕಿ ಈಜಿಪ್ಟ್ ಸಿರಿಯಾಗಳ ರಾಜತಂತ್ರ

ಸಿರಿಯಾಕ್ಕೆ ಫ್ರಾನ್ಸಿನ, ಟರ್ಕಿಗೆ ರಷ್ಯದ-ಭಯ

ರಷ್ಯದ ಸಮಯ ಸೇರದ ಅರಬಿ ರಾಷ್ಟ್ರಗಳು

ಅಮೇರಿಕಕ್ಕೆ ಸಿಗುವುದು ಸೊನ್ನೆ

ಇದು ತನಕ ತಾಟಸ್ಥ್ಯ ಧರಿಸಿದ ಮೂರು ರಾಷ್ಟ್ರಗಳು ಮಿತ್ರ ಮಾಲೆಗೆ ಸೇರಿಸಲ್ಪಟ್ಟವು. ಟರ್ಕಿ, ಈಜಿಪ್ಟ್ ಮತ್ತು ಸಿರಿಯಾಗಳು ಅಚ್ಚು ರಾಷ್ಟ್ರಗಳ ಮೇಲೆ ಛಾರಿ ಯುದ್ಧ ಸಾರಿವೆ. ಇವರ ಸಹಾಯ ಅತ್ಯಾವಶ್ಯಕವಿದ್ದಾಗ ಈ ರಾಷ್ಟ್ರಗಳು ದೂರ ನಿಂತು ಮೋಜು ನೋಡಿದವು. ಈಗ ಪಂದ್ಯಾಟದಲ್ಲಿ ಗೆಲ್ಲುವ ಕುದುರೆ ಯಾವುದೆಂದು ಸ್ಪಷ್ಟ ಕಾಣುತಿರುವಾಗ ಇವರು ಗೆಲ್ಲುವವರ ಕಡೆ ತಮ್ಮ ಸಹಾನುಭೂತಿಯ ಮಳೆ ಸುರಿಸಿರುವರು.

ಇಂದಿಗೆ ಐದು ವರ್ಷಗಳಿಂದ ಯುದ್ಧ ಘಟನೆಗಳನ್ನು ಆತುರದಿಂದ ಹಿಂಬಾಲಿಸಿದ್ದವರಿಗೆ ಟರ್ಕಿಯ ಧೋರಣೆ ವಿಚಿತ್ರವಾಗಿ ಕಾಣದಿರದು. ೧೯೩೯ರ ನಂತರ ಆ ಆಧುನಿಕ ಮುಸ್ಲಿಂ ರಾಜ್ಯವು ಜರ್ಮನಿಗೆ ಆವಶ್ಯಕ ಯುದ್ಧಾಸ್ತ್ರ ತಯಾರಿಕೆಯ ವಸ್ತುಗಳನ್ನು ಸರಬರಾಯಿ ಮಾಡುತಿತ್ತು. ೧೯೪೩ರಲ್ಲಿ ಅದರ ಮುಮ್ಮಡಿಯಷ್ಟು ಲಾಭವನ್ನು ಕೊಡುತ್ತೇನೆಂದು ಚರ್ಚಿಲ್ಲರು ಟರ್ಕಿಯನ್ನು ಒಲಿಸಿಕೊಂಡು ಜರ್ಮನಿಗೆ ಕಳುಹಿಸುವ ಸಹಾಯವನ್ನು ಹೇಗೂ ನಿಲ್ಲಿಸಿ ಬಿಟ್ಟರು. ಆಗ ಟರ್ಕಿಗೆ ಜರ್ಮನಿಯ ಭಯ ತುಂಬಾ ಇತ್ತು. ಆದರೆ ಮೂರು ಕಡೆಯಿಂದಲೂ ಹೊಡೆಯಲ್ಪಡುವ ಈಗಿನ ಪರಿಸ್ಥಿತಿಯಲ್ಲಿ ಟರ್ಕಿಗೆ ಆ ಭಯ ತಪ್ಪಿದೆ. ಜರ್ಮನಿಯ ಭಯ ತಪ್ಪಿತೆನ್ನುವಾಗ ಟರ್ಕಿಗೆ ಮೆಲ್ಲಗೆ ಈಗ ರಶ್ಯದ ಭಯ ಸುರುವಾಗಿದೆಯಂತೆ. ಯುದ್ಧದಲ್ಲಿ ಸೇರಿದರೆ ಟರ್ಕಿಗೆ ಶಾಂತಿ ಪರಿಷತ್ತಿನಲ್ಲಿ ಒಂದು ಸ್ಥಾನ 'ರಿಜರ್ವ್' ಆದ ಹಾಗೆಯೇ ಸರಿ. ಅಲ್ಲಿ ರಶ್ಯದ ಕೇಳಿಕೆಗಳನ್ನು ಮಿತ್ರರ ಹಿಂದೆ ನಿಂತು ಬೇಕಾದ ಹಾಗೆ ಎದುರಿಸಬಹುದೆಂದು ಟರ್ಕಿಯು ಆಶೆ ಇರಬಹುದೆಂದು ಕೆಲ ರಾಜಕೀಯ ತಜ್ಞರ ಅಭಿಪ್ರಾಯ. ಅಂತೂ ಒಂದು ಭಯದಿಂದ ತಟಸ್ಥ ನಿಂತ ಟರ್ಕಿ ಇನ್ನೊಂದು ಭಯದಿಂದ ಕೊನೆಕಾಲಕ್ಕೆಂಬಂತೆ ಯುದ್ಧಾಧ್ವರದಲ್ಲಿ ದುಮುಕಿತು.

ಕಳೆದ ಯುದ್ಧದಲ್ಲಿ ಟರ್ಕಿ ಜರ್ಮನ್ ಕಡೆ ಸೇರಿ ತನ್ನ ಸರ್ವಸ್ವವನ್ನು ಕಳೆದುಕೊಂಡಿತು. ಈ ಸಾರಿ ಟರ್ಕಿ ಹಿಂಬಾಲಿಸಿದ ಕುದುರೆ ಗೆಲ್ಲುವಂತಹದೇ. ಜೂಜಿನಲ್ಲಿ ಖಂಡಿತ ಗೆಲ್ಲುವ ಕುದುರೆಯ ಮೇಲೆ ಯಾರು ಪಂಥ ಸ್ವೀಕರಿಸುತ್ತಾರೆ? ಆದರೆ ಬ್ರಿಟನ್ನು ಟರ್ಕಿಯ ಕೈಯನ್ನು ಸ್ವೀಕರಿಸಿದೆ. ಮಧ್ಯ ಪೂರ್ವ ವ್ಯಾಪಾರ ಮಾರ್ಗಗಳು ಭದ್ರವಾಗಿರಬೇಕಾದರೆ ಬ್ರಿಟನಿಗೆ ಅರಬ ರಾಷ್ಟ್ರಗಳ ಸೌಹಾರ್ದ ಬೇಕೇ ಬೇಕು. ಟರ್ಕಿ ಆ ರಾಷ್ಟ್ರಗಳಲ್ಲಿ ಒಂದು. ಅಂತೆಯೇ ಈ ಸ್ನೇಹಸ್ವೀಕಾರ.

ಶಾಂತಿ ಸ್ಥಾಪನೆಯಲ್ಲಿ ಈಜಿಪ್ತಿಗೂ ಒಂದು ಕೈ ಬೇಕಾಗಿದೆ. ೧೯೩೬ರಲ್ಲಿ ಬ್ರಿಟನಿನೊಂದಿಗೆ ಮಾಡಿ ಕೊಂಡ ಒಪ್ಪಂದ ಪ್ರಕಾರ ಟರ್ಕಿ ತಟಸ್ಥ ನಿಂತಿತು. ಆ ಸ್ವಾತಂತ್ರ್ಯ ಅದಕ್ಕಿದ್ದರೂ ಈಜಿಪ್ತಿನ ರಕ್ಷಣೆಯ ಭಾರ ಬ್ರಿಟಿಷರದೆಂದೇ ಆ ಕರಾರಿನಲ್ಲಿ ಒಪ್ಪಲಾಗಿದೆ. ರೊಮೆಲ್ಲನು ಎಲ್ ಎಲಾಮಿನದಲ್ಲಿ ಗುಡುಗುಡಿಸಿದಾಗಲೂ ಈ ಷರ್ತದ ಅನುಕೂಲತೆ ತೆಗೆದು ಕೊಂಡು ಈಜಿಪ್ಟ್ ಸುಮ್ಮನೆ ಕಣ್ಣು ಮುಚ್ಚಿ ನಿಂತಿತು.

"ಈಜಿಪ್ಟ್ ಯುದ್ಧಕ್ಕೆ ಸೇರಿದರೂ ಸೇರದೆ ಇದ್ದರೂ ಒಂದೇ. ಕಾರಣ ನಾಜಿಗಳ ಎದುರಿಗೆ ನಮ್ಮ ಸೈನ್ಯವು ಗಣ್ಯವಾದುದಲ್ಲ" ಎಂಬೀ ತರ್ಕವನ್ನು ಬಿಗುಪ್ತ ರಾಜ ತಂತ್ರ ಪ್ರವೀಣರು ಮಾಡಬಹುದು. ಈಗಲೂ ಯುದ್ಧಕ್ಕೆ ಸೇರಿದಾದರಿಂದ ಮಿತ್ರರಿಗೇನು ವಿಶೇಷ ಲಾಭ ದೊರಕುವಂತಿಲ್ಲ. ಅಂದ ಮೇಲೆ ಈ ಧೋರಣೆಯ ಒಳಗುಟ್ಟೇನು? ಎಂದು ಬ್ಲಿಟ್ಜ್ ಪತ್ರಿಕೆ ಪ್ರಶ್ನಿಸುತ್ತದೆ.

ಸಿರಿಯಾದ ಕುರಿತು ಆ ಪತ್ರಿಕೆ ಹೀಗೆ ಅಭಿಪ್ರಾಯ ಪಡುತ್ತದೆ: ಸಂಪೂರ್ಣ ಸ್ವಾತಂತ್ರ್ಯಗಳಿಸಲು, ಮಿತ್ರಮೈತ್ರಿಯನ್ನು ಹೆಚ್ಚು ಮಾಡಲು ಸಿರಿಯಾವು ಈಗ ಯುದ್ಧ ಸಾರಿದೆ. ಫ್ರಾನ್ಸಿನ ಕೈ ಕೆಳಗಿರುವ ಈ ದೇಶಕ್ಕೆ ಈಗಲೂ ಡಿಗಾಲೆಯವರು ಸಂಪೂರ್ಣ ವ್ಯವಹಾರ ಸ್ವಾತಂತ್ರ್ಯ ಕೊಟ್ಟಿಲ್ಲ. ಟರ್ಕಿಯು ರಷ್ಯಕ್ಕೆ ಹೆದರುವುದಾದರೆ ಸಿರಿಯಾಕ್ಕೆ ಫ್ರಾನ್ಸಿನ ಭಯ.

ಟರ್ಕಿ ಈಜಿಪ್ಟ್ ಸಿರಿಯಾಗಳನ್ನು ಹೆಚ್ಚು ಕಡಿಮೆ ಅರಬ ರಾಷ್ಟ್ರಗಳೆಂದು ಕರೆಯಬಹುದು. ಒಂದೇ ಕಾಲದಲ್ಲಿ ಯುದ್ಧ ಸಾರಿದ ಇವರ ನಮೂನೆ ನೋಡಿದರೆ ಅರಬೀ ಜನಾಂಗದ ಐಕ್ಯತೆಯನ್ನು ಒತ್ತಿ ತೋರಿಸುವ ಉದ್ದೇಶ ಇದರಲ್ಲಿ ಕಾಣುತ್ತದೆ. ಯುದ್ಧಾರಂಭದ ನಂತರದಲ್ಲೂ ಒಂದು ಕಾಲದಲ್ಲಿ ಮಿತ್ರ ವಿರೋಧ ಚಟುವಟಿಕೆಗಳ ಕಾರಸ್ಥಾನವು ಈ ಮಧ್ಯ ಪೂರ್ವದ ಪ್ರದೇಶಗಳಾಗಿದ್ದವು.

ಒಂದು ಕಡೆಯಿಂದ ಈಗ ಯುದ್ಧಕ್ಕೆ ಸೇರಿದ ರಾಷ್ಟ್ರಗಳಿಗೆ ತಮ್ಮ ಸ್ವಂತ ಹಿತಗಳ ಪೂರೈಕೆಯಾಗಬೇಕಾಗಿದೆ. ಅಂತೇ ಅವರ ಯುದ್ಧೋತ್ಸಾಹ. ಇನ್ನೊಂದು ಕಡೆಯಿಂದ ಮಿತ್ರರಿಗೂ ಒಂದು ಸಲಕ್ಕೆ ಅರಬೀ ಪ್ರಪಂಚದಲ್ಲಿ ನೆಮ್ಮದಿ ಸ್ಥಾಪನೆಯಾದರೆ ಸಾಕಾಗಿದೆ. ಹೀಗೆ ಪರಸ್ಪರ ಹಿತೋದ್ದೇಶಗಳೇ ಈ ಹೊಸ ಧೋರಣೆಯ ಅಂತರಾಳದಲ್ಲಿರುವ ಪ್ರಧಾನ ವಿಷಯಗಳು.

BALANCE AND THE BALANCE WHEEL

ಸರಿಯಾದ ಕಾಲ ಸೂಚಿಸಲು ಹೇರ್ ಸ್ಪ್ರಿಂಗ್ ಮತ್ತು ಬೆಲೆನ್ಸ್ ಚಕ್ರಗಳ ತೂಕವು ಸರಿಯಾದ ದಾಮಾಶಯದಲ್ಲಿರಬೇಕು. ಜಗತ್ತಿನ ನುರಿತ ಕೆಲಸಗಾರರು ವೆಸ್ಟ್ ಎಂಡ್ ವಾಚುಗಳ ಉಪಕರಣಗಳನ್ನು ನಾಜೂಕು ಮಾಡುತ್ತಾರೆ. ಅತ್ಯಾಧುನಿಕ ಗಡಿಯಾರ ವಿಜ್ಞಾನಕ್ಕನುಗುಣವಾಗಿ ವೆಸ್ಟ್ ಎಂಡ್‌ಗಳು ತಯಾರಿಸಲ್ಪಡುತ್ತವೆ. ಅದರ ಶ್ರೇಷ್ಠ ಕಾಮಗಾರಿಕೆ ವಿಶ್ವಾಸಾರ್ಹವಾಗಿದೆ.



ಕಾಗದ ನಿಯಂತ್ರಣ ಆಜ್ಞೆಯಿಂದ ಕೆಟಲಾಗು ಕಳುಹಿಸಲಿಕ್ಕಾಗದಕ್ಕೆ ವಿಷಾದಿಸುತ್ತೇವೆ.

ಆಕೃತದ ತಲ್ಪೋಣದಿಂದ ಜಾಹೀರಾತಿನ ಎಲ್ಲಾ ನಮೂನೆಗಳನ್ನು ಒದಗಿಸಲಾಗದಿದ್ದರೂ ಸಾಧ್ಯವಿರುವಷ್ಟು "ಆರ್ಡರ್" ಪೂರೈಸಲಾಗುವುದು.

WEST END WATCH Co
BOMBAY CALCUTTA

ವಿಶೇಶ ವಾರ್ತೆಗಳು

ಕೆಲವು ಸಮಯದ ಹಿಂದೆ ಮದ್ರಾಸ್ ಸೆಶ್ಶನ್ ಕೋರ್ಟಿನಿಂದ ಸರಕಾರ ಹಣ ದುರುಪಯೋಗಕ್ಕಾಗಿ ಶಿಕ್ಷೆಗೆ ಒಳಪಡಿಸಲ್ಪಟ್ಟ ಮಿ। ಸ್ವಾಮಿನಾಥನ್ ಎಂಬ ಐ. ಸಿ. ಎಸ್ ಅಧಿಕಾರಿಯ ಪರವಾಗಿ ಮದ್ರಾಸ್ ಹೈಕೋರ್ಟಿನಲ್ಲಿ ವಾದಿಸಲು ಪ್ರಖ್ಯಾತ ನ್ಯಾಯಶಾಸ್ತ್ರ ಪಟುಗಳಾದ ಸರ್ ತೇಜ ಬಹುದೂರ್ ಸಪ್ರುಗಳು ಮದ್ರಾಸಿಗೆ ಬಂದಿದ್ದು ಆಗಲೇ ತಮ್ಮ ವಾದವನ್ನು ಆರಂಭಿಸಿದ್ದಾರೆ. ಈ ಪ್ರತಿಭಾವಂತ ನ್ಯಾಯ ದುರೀಣರು ವ್ಯವಹರಿಸುವುದನ್ನು ನೋಡಲು ವಕಾಲತು ವೃತ್ತಿಯವರು ಕಿಕ್ಕಿರಿದು ಬಂದಿದ್ದರು.

ವಿಶ್ವ ಭದ್ರತಾ ಸಂಘದ ಲಂಡನ್ ಮತ್ತು ಸೆನ್‌ಫ್ರಾನ್ಸಿಸ್ಕೊ ಪರಿಷತ್ತಿನಲ್ಲಿ ಭಾಗವಹಿಸಲು ಇಂಡಿಯಾ ಸರಕಾರದವರು ಸರ್ ರಾಮಸ್ವಾಮಿ ಮುದಲಿಯಾರ್ ಸರ್ ಫಿರೋಜ ಖಾನ್ ನೂನ್ ಮತ್ತು ಸರ್ ಟಿ. ಕೃಷ್ಣಾಮಾಚಾರಿ ಅವರುಗಳನ್ನು ನೇಮಿಸಿರುವರು. ಈ ಮೂರು ಸರ್‌ಗಳಿಗೆ ಮುದಲಿಯಾರರೇ ಮುಖಂಡರಾಗಿರುವರು.

* * *

ಹತ್ತಿ ಬೀಜದ ಬೆಲೆಯನ್ನು ಹೆಚ್ಚು ಮಾಡಲು ಹತ್ತು ಸಾವಿರ ರೂಪಾಯಿಗಳನ್ನು ಲಂಚಪಡೆದರೆಂಬುದಕ್ಕೆ ಸಿಂಧದ ಸುಕ್ಕುರಿನಲ್ಲಿ ನಾಗರೀಕ ಪೂರೈಕೆ ಖಾತೆಯ ಇನ್ಸ್‌ಪೆಕ್ಟರರಾಗಿದ್ದ ಶ್ರೀ ಬಿ. ಎಲ್. ಕಲ್ಯಾಣ್‌ಪುರ್ ಎಂಬವರಿಗೆ ೧ ವರ್ಷದ ಶಿಕ್ಷೆಯೂ ೧ ಸಾವಿರ ಜುಲ್ಮಾನೆಯೂ ಆಗಿದೆ. ಇವರು ನಮ್ಮ ಜಿಲ್ಲೆಯವರೆ?

* * *

ಶ್ರಿಮತಿ ಸೀತಾಬಾಯಿ ಪ್ರಭು ಎಂಬ ಮಹಿಳೆಯು ಬೆಳಗಾವ ತಾಲೂಕಿನ ಶಾರ್ವೆ ವಿಭಾಗದಿಂದ ಸ್ತ್ರೀಯರ ಸ್ಥಳಕ್ಕೆ ಜಿಲ್ಲಾ ಬೋಡು ಚುನಾವಣೆಗೆ ಹಾರಿಯಲಾಗಿ ನಿಂತಿದ್ದು ವಿರೋಧವಿಲ್ಲದೆ ಚುನಾಯಿತರಾಗಿರುವರು.

* *

NOTICE

Applications are invited for vacancies in the Canara High School (Main), Canara High School Urva Branch, and the Canara Girls' School from Collegiate Secondary trained (or in the case of the last School) Higher Elementary Trained teachers. Application may be sent to any of the following persons (1) The Head master, Canara High School (Main)(2) Headmaster, Canara High School Urva Branch (3) Superintendent, Canara Girls' School so as to reach by the 15th April 1945.

M. Madhava Rau,
Manager
Canara High School
Mangalore. 9-3-1945.

WANTED:—A Managing Agent to be in charge of 4 to 6 food lorries of this Store, who should (1) provide free garage accommodation (2) control and supervise the work of Drivers and Conductors (3) procure loads of others for trips when running without the loads of the Store (4) be responsiblef or the collection fo the hire (5) see to the proper servicing of the vehicles and their up-keep in a fit condition and (6) maintain his own staff to keep and render such accounts as will be prescribed. Apply-Stating experience and offering terms as to commission to be paid, by the 21st March 1945 to:—
The Presidet,
The S. K. Central Cooperative Wholesale Stores Ltd.,
FOOD OFFICE,
Kodiyalbail, Mangalore.

ಮಂಗಳೂರಲ್ಲಿ ಪೆನ್ಸನ್ನರ ಪರಿಷತ್ತು

ಪರ್ತಗಾಳಿ ಮಠಾಧೀಶರ ಕಾರ್ಯಕ್ರಮ

ಮುನ್ಸಿಪಲ್ ಸಭೆಯ ನಿರ್ಣಯಗಳು

ನಗರದಲ್ಲಿ ನೌಕಾ ಪಡೆಯವರ ಕವಾಯತು

೪೯ ಸೇರಿನ ಅಕ್ಕಿನ ಮುಡಿಯ ಪತ್ತೆ

ಕಳೆದ ತಾ. ೪ರಂದು ಮಂಗಳೂರು ನಗರಕ್ಕೆ ಚಿತ್ತೈಸಿದ ಶ್ರೀ ಗೋಕರ್ಣ ಮಠಾಧೀಶರಾದ ಶ್ರೀ ದ್ವಾರಕಾನಾಥ ಸ್ವಾಮಿಜಿಯವರು ರಥಬೀದಿಯಲ್ಲಿನ ಗೋಕರ್ಣ ಮಠದಲ್ಲಿ ಉಳಕೊಂಡಿದ್ದು ಗೌ। ಸಾ। ಸಮಾಜದ ತಮ್ಮ ಅನುಯಾಯಿವೃಂದದ ಅಭೂತ ಪೂರ್ವವಾದ ಭಕ್ತಿ, ಪಾದ ಪೂಜೆ ಮನ್ನಣೆ ಪುರಸ್ಕಾರಗಳನ್ನು ಸ್ವೀಕರಿಸಿದರು. ಸಮಾಜ ಪ್ರಮುಖರು ಸ್ವಾಮಿಜಿಯವರಿಗೆ ಉತ್ಸಾಹ ಪೂರ್ಣ ಸೇವೆಸಲ್ಲಿಸಿ ಗುರುದೇವಾನುಗ್ರಹಕ್ಕೆ ಪಾತ್ರರಾದರು.

ಐದಾರು ದಿನಗಳಲ್ಲಿ ಪರ್ತಗಾಳಿ ಮಠಾಧೀಶರು ಬಿಡುವಿಲ್ಲದ ತುಂಬು ಕಾರ್ಯಕ್ರಮವನ್ನು ನೆರವೇರಿಸಿದರು. ಶ್ರೀ ವೆಂಕಟ್ರಮಣ ದೇವಳದಲ್ಲಿ ಸ್ವಾಮಿಜಿಯವರಿಗೆ ಮಾನಪತ್ರ, ಪಾದ ಪೂಜೆಗಳು ಸಲ್ಲಿಸಲ್ಪಟ್ಟವು. ಇತರ ಅನೇಕಾನೇಕ ಭಕ್ತರೂ, ಗುರುವರ್ಯರಿಗೆ ಸೇವೆ ಸಲ್ಲಿಸಿ ಆಶೀರ್ವದಿಸಲ್ಪಟ್ಟರು. ಸಾಯಂಕಾಲಗಳಲ್ಲಿ ಸಂಸ್ಕೃತ ವಿದ್ವಾಂಸರಾದ ಸ್ವಾಮಿಜಿಯವರು ಶಿಷ್ಯ ವೃಂದಕ್ಕೆ ಪುರಾಣ ಪ್ರವಚನಗಳ ಮೂಲಕ ತತ್ವ ಬೋಧೆ ಮಾಡಿದರು.

ತಾ. ೧೧ರಂದು ಸ್ವಾಮಿಜಿಯವರು ವೆಂಕಟ್ರಮಣ ದೇವಳದ ನಿಗಮಾಗಮ ಸಂಸ್ಕೃತ ಪಾಠ ಶಾಲೆಯನ್ನೂ ತಾ. ೧೨ರಂದು ಶ್ರೀನಿವಾಸ ಸಂಸ್ಕೃತ ಪಾಠ ಶಾಲೆಯನ್ನೂ ಅದರ ಮರು ದಿನ ೧೩ರಂದು ಶ್ರೀಮಧ್ವ ಸಿದ್ಧಾಂತ ಪ್ರಚಾರಿಣಿ ಸಭೆಯನ್ನೂ ಸಂದರ್ಶಿಸಿದರು. ಮಧ್ವ ಸಭೆಯಂದು ವೇದ ವಿದ್ವಾಂಸರಾದ ಬ್ರವೇದ ಶ್ರೀ ರಘುವೀರ ಆಚಾರ್ಯರು 'ವಿಷ್ಣು ಸರ್ವೋತ್ತಮತ್ವ' ಎಂಬ ಬೋಧಪರ ಭಾಷಣವಿತ್ತರು.

ತಾ. ೧೪ರಂದು ಶ್ರೀ ಸ್ವಾಮಿಜಿಯವರು ಗಂಗೊಳ್ಳಿಗೆ ಹಿಂತಿರುಗಿದರು. ದೇಶದಲ್ಲಿ ಬಿರುಸಾಗಿ ಚರ್ಚಿಸಲ್ಪಡುವ ಮತ್ತು ೧೯೪೬ರಲ್ಲಿ ಜಾರಿಗೆ ಬರಲಿದೆ. ಎಂದು ಹೇಳಲ್ಪಡುವ ಹಿಂದೂ ಕಾಯಿದೆ ಸುಧಾರಣೆ ಯೋಜನೆಯ ಕುರಿತು ಮಠ ಮುಖಂಡರು ಸ್ಪಷ್ಟವಾದ ಅಭಿಪ್ರಾಯಗಳನ್ನು ತಮ್ಮ ತಮ್ಮ ಸಮಾಜದ ಪರವಾಗಿ ಪ್ರಾಂತೀಕ ಸರಕಾರಕಾಗಲೀ ಕೇಂದ್ರ ಸರಕಾರಕ್ಕಾಗಲೀ ಕಳುಹಿಸಬೇಕು. ಕಾಮ ಕೋಟಿ ಪೀಠದ ಜಗದ್ಗುರು ಶಂಕರಾಚಾರ್ಯರೇ ಮುಂತಾದ ಅನೇಕ ಧರ್ಮ ಗುರುಗಳು ತಮ್ಮ ನಿರ್ದಿಷ್ಟವಾದ ಅಭಿಪ್ರಾಯಗಳನ್ನು ಈ ಸುಧಾರಣೆಗಳನ್ನು ಯೋಜಿಸಿದ ಸರ್ ಬಿ. ಎನ್. ರಾವ್ ಸಮಿತಿಗೆ ತಿಳಿಸಿರುವರು.

ಇಷ್ಟು ಮಾತ್ರವಲ್ಲದೆ ಸಮಾಜಗಳ ಮೇಲೆ ಪ್ರಭಾವವುಳ್ಳ ಧರ್ಮ ಪೀಠಾಧಿಕಾರಿಗಳಾದವರು ಸಂಬಂಧಪಟ್ಟ ಸಮಾಜದ ಸರ್ವತೋಮುಖ ಏಳ್ಗೆ ಉದ್ಧಾರದ ಕಾರ್ಯಕ್ರಮದಲ್ಲಿ ಸಹಕರಿಸಿ ಮಾರ್ಗದರ್ಶಕರಾಗಿ ಚಟುವಟಿಕೆಗಳನ್ನು ನಿರ್ದೇಶಿಸುವುದರಲ್ಲಿ ನೆರವಾಗಬೇಕಾದುದು ಕಾಲ ಪರಿಸ್ಥಿತಿಯಿಂದಲೂ ಧರ್ಮ ದೃಷ್ಟಿಯಿಂದಲೂ ಯಥಾಯೋಗ್ಯವಾದುದು. ಶಾಸ್ತ್ರೀಯವಾದ ವೇದ ಸಂಸ್ಕೃತ ಶಿಕ್ಷಣಕ್ಕೂ ವಿಶೇಷ ಪ್ರೋತ್ಸಾಹ ಮಠಗಳ ಕಡೆಯಿಂದ ದೊರಕಬೇಕಾದುದೂ ಅತ್ಯಾವಶ್ಯಕ. ಸಮಾಜದ ಬಹು ಸಂಖ್ಯಾತರಾದ ಸಾಮಾನ್ಯ ಜನತೆಯನ್ನು ಹರಸಿ ಆಶೀರ್ವದಿಸುವುದರೊಂದಿಗೆ ಅವರೊಡನೆ ಗುರುಗಳು ಹೆಚ್ಚೆಚ್ಚಿನ ಸಂಪರ್ಕ ಬೆಳಸುವುದರಿಂದ ಅನುಯಾಯಿಗಳಲ್ಲಿ ಧರ್ಮ ಶ್ರದ್ಧೆಯು ಅಭಿವೃದ್ಧಿಗೊಳ್ಳುವುದು.

ಸರಕಾರೀ ಪೆನ್ಶನ್‌ದಾರರಿಗೆ ಮುಖ್ಯವಾಗಿ ಕನಿಷ್ಠ ವೇತನ ಪಡೆಯುವವರಿಗೆ ಈ ಕಷ್ಟದ ಪರಿಸ್ಥಿತಿಯಲ್ಲಿ ಹೆಚ್ಚಿನ ಆರ್ಥಿಕ ಸವಲತ್ತುಗಳನ್ನು ದೊರಕಿಸುವಂತೆ ಮಾಡುವ ಉದ್ದೇಶದಿಂದ ನಗರದಲ್ಲಿನ ಪ್ರಮುಖ ಪೆನ್ಶನ್‌ದಾರರಾ। ಬ। ಡಾ. ಎಂ. ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆ ತಾ. ೭ರಂದು ಕೆನರಾ ಹ್ಯಾಸ್ಕೂಲಿನಲ್ಲಿ ಜರಗಿತು. ಈ ಉದ್ದೇಶ ಪೂರ್ತಿಯ ನಿರ್ಣಯಗಳಾಗಿ ಆ ಕುರಿತು ಸರಕಾರದೊಡನೆ ವ್ಯವಹಾರ ನಡೆಸಲು ಒಂದು ಪ್ರಭಾವಶಾಲಿ ಸಮಿತಿ ನೇಮಕವಾಯಿತು. ಎಲ್ಲಾ ಉದ್ಯಮಗಳಲ್ಲೂ ಜೀವನ ಸವೆಯಿಸಿದ ಕೆಳಗಿನ ವರ್ಗದವರಿಗೆ ಹೆಚ್ಚಿನ ಅನುಕೂಲತೆ ದೊರಕಬೇಕಾದುದು- ಅದರಲ್ಲೂ ನಿವೃತ್ತರಾದ ಮೇಲೆ-ಅತ್ಯಾವಶ್ಯಕ.

ಜಿಲ್ಲಾ ಪತ್ರಿಕೋದ್ಯೋಮಿ ಸಂಘದ ಕಾರ್ಯಕಾರಿ ಸಭೆ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರತಿಕಾ ಉದ್ಯಮದಲ್ಲಿ ದುಡಿವವರಿಗೆ ಇತರ ಉದ್ಯೋಗಳಲ್ಲಿ ದೊರಕುವಂತಹದೇ ಸವಲತ್ತುಗಳು ಸಿಕ್ಕಬೇಕಾದುದು ಪತ್ರಿಕೋದ್ಯೋಮದ ಪ್ರಗತಿ ದೃಷ್ಟಿಯಿಂದ ಮತ್ತು ಆ ಉದ್ಯೋಗಿಗಳ ಆರ್ಥಿಕ ದೃಷ್ಟಿಯಿಂದ ಯಥಾಯೋಗ್ಯವಾದುದು. ಹಕ್ಕಿನ ರಜೆ, ಪ್ರೊವಿಡೆಂಟ್ ಫಂಡ್ ಕೆಲಸದ ಭರವಸೆಮುಂತಾದವುಗಳು ನಾಗರೀಕರೆಲ್ಲರ ಹಕ್ಕು ಬಾಧ್ಯತೆಗಳು. ಈ ವಿಷಯಗಳನ್ನೆಲ್ಲ ಚರ್ಚಿಸಿ ಸದ್ರಿ ಸಂಘದವರು ನಿರ್ಣಯವನ್ನು ಕಲ್ಕತ್ತೆಯ ಭಾರತ ಪತ್ರಿಕೋದ್ಯೋಮಿ ಸಂಘಕ್ಕೆ ಕಳುಹಿಸಲು ನಿರ್ಣಯಿಸಿರುವುದು ಶ್ಲಾಘನೀಯ.

ಹಿಂದೂ ಪತ್ರಿಕೆಯ ಬಾತ್ಮಿದಾರರಾದ ಶ್ರೀ. ಹಿ. ರಾಮರಾಯ ಮಲ್ಯ ಅವರು ಮೇಲ್ಕಂಡ ದಿನ 'ವಾರ್ತಾವರದಿ'ಯ ಕುರಿತು ವಿಚಾರನೀಯ ಭಾಷಣ ಮಾಡಿದರು. ಶ್ರೀಯುತರ ಅನುಭವ ನಿರೂಪಣೆಗಳು ಶೈಕ್ಷಣೀಯವಾಗಿದ್ದವು. ಭಾರತದಲ್ಲಿ ಪತ್ರಿಕಾ ವ್ಯವಸಾಯವು ಅನೇಕ ಕಾರಣಗಳಿಂದ ತುಂಬಾ ಹಿಂದುಳಿದಿದೆ. ಇಂದು ನಮ್ಮ ಪತ್ರಿಕೆಗಳು ಜನತೆಗೆ ಬರೀ ವರದಿಗಳನ್ನು ಒದಗಿಸುವುದರೊಂದಿಗೆ ಅವುಗಳ ಕುರಿತು ಯೋಗ್ಯ ಅಭಿಪ್ರಾಯಗಳನ್ನೂ ಪತ್ರಿಕೋದ್ಯಮ ಶಿಷ್ಟ ಸಾಂಪ್ರದಾಯಕ್ಕೆ ಮಿಕ್ಕದಂತೆ ನಿಷ್ಪಕ್ಷಪಾತ ಮತ್ತು ರಾಷ್ಟ್ರೀಯ ಭಾವನೆಯ ದೃಷ್ಟಿಯಿಂದ ಕೊಡುವುದು ಬೌದ್ಧಿಕವೂ ಶೈಕ್ಷಣೀಕವೂ ಆಗುವುದು. ವರದಿ ನಿರೂಪಣೆ ದಿನ ಪತ್ರಿಕೆಗಳೂ ಅಭಿಪ್ರಾಯ ಪ್ರಕಾಶನಕ್ಕೆ ವಾರಪತ್ರಿಕೆಗಳೂ ಉಪಯೋಗಿಸಬಹುದು.

ಭಾರತ ನೌಕಾ ಪಡೆಯ ಕಮಾಂಡಿಂಗ್ ಅಫೀಸರರು ತಮ್ಮ ನೌಕಾ ಪಡೆ ಸಿಂಬಂದಿಯ ಕವಾಯತು ಪ್ರದರ್ಶನವನ್ನು ನಗರದ ಮುಖ್ಯ ಮಾರ್ಗಗಳಲ್ಲಿ 'ರೋಡ್ ಮಾರ್ಚ್' ಮುಂತಾದ ಕಾರ್ಯಕ್ರಮಗಳಿಂದ ನೆರವೇರಿಸಿದರು. ತಾ. ೧೩ ಮಂಗಳವಾರ ಮತ್ತು ಮರುದಿನದಂದು ಲೈಟ್ ಮೈದಾನಿನಲ್ಲಿಯೂ ಕವಾಯತು ನಡೆಯಿತು. ಯುದ್ಧ ಚಟುವಟಿಕೆಗಳಲ್ಲಿ ಆಸಕ್ತಿಯಿದ್ದ ಶಾಲಾಧಿಕಾರಿಗಳೂ, ಸೈನ್ಯ, ನೌಕಾಬಲಗಳಿಗೆ ಸೇರಿದ ಮತ್ತು ಸೇರಲಿಚ್ಚಿಸುವವರೂ ಅವರ ಹೆತ್ತವರೂ ಈ ಪ್ರದರ್ಶನಕ್ಕೆ ತುಂಬಾ ಸಂಖ್ಯೆಯಲ್ಲಿ ಭಾಗಿಗಳಾಗಿದ್ದರು. ವಿಮಾನಗಳಿಂದ ನೋಟಿಸುಗಳನ್ನು ಬಿಸಾಡಲಾಗಿತ್ತು.

ಮದ್ರಾಸ್ ಪ್ರಾಂತ್ಯದ ನಾಗರೀಕ ಪೂರೈಕೆ ಖಾತೆಯ ಡೆಪ್ಯುಟಿ ಕಮಿಶನರರಾದ ಮಿ। ಎಸ್. ಎಸ್. ಅರುಣಾ ಚಲಂ ಒ. ಬಿ. ಇ. ಐ. ಸಿ. ಎಸ್. ಅವರು ಇಲ್ಲಿಗೆ ಬಂದಿದ್ದು ತಾ. ೧೪ರಂದು ಸಂಜೆ ಕೆನರಾ ಚೇಂಬರ್ ಆಫ್ ಕೋಮರ್ಸ್ ಇವರು ಸಭೆಯಲ್ಲಿ ಭಾಗವಹಿಸಿದರು. ಅಂದಿನ ಚೇಂಬರ್ ಸಭೆಯಲ್ಲಿ ವ್ಯಾಪಾರ ವ್ಯವಹಾರಕ್ಕೂ ಮತ್ತು ಕಂಟ್ರೋಲ್ ಮುಂತಾದ ವಿಷಯಗಳಿಗೂ ಸಂಬಂಧಪಟ್ಟ ವಿಚಾರಗಳು ಸನ್ಮಾನ್ಯ ಅತಿಥಿಗಳ ಮುಂದೆ ಚರ್ಚಿಸಲಾದುವು. ಸರಬರಾಯಿ ಅಧಿಕಾರಿಗಳು ಪ್ರಸ್ತುತದ ಆಹಾರ ಮತ್ತು ಇತರ ವಸ್ತುಗಳ ಕುರಿತು ಮಾಡಿರುವ ಏರ್ಪಾಡುಗಳ ಮತ್ತು ಅವುಗಳ ಅನುಕೂಲತೆಗಳ ಕುರಿತು ವಿವರಿಸಿ ವ್ಯಾಪಾರಸ್ಥರಿಗೆ ಶಕ್ಯವಿದ್ದಷ್ಟು ಸಹಾಯಮಾಡುವುದಾಗಿ ತಿಳಿಸಿದರು.

ಕುಂದಾಪುರ ಬೋರ್ಡು ಹ್ಯಾಸ್ಕೂಲಿನ ಗಣಿತ ಅಧ್ಯಾಪಕರಾಗಿದ್ದ ಶ್ರಿ. ಕೆ. ಎಲ್. ಆಚಾರ್ ಅವರು ಹೃದ್ರೋಗದಿಂದ ಇಲ್ಲಿಯ ಪೆಂಟ್ಲೆಂಡ್ ಪೇಟೆಯ ತಮ್ಮ ಮಾವನ ಮನೆಯಲ್ಲಿ ನಿಧನ ಹೊಂದಿರುವರೆಂದು ತಿಳಿಸಲು ವಿಷಾಧಿಸುತ್ತೇವೆ. ಶ್ರೀಯುತರು ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ವ್ಯವಸಾಯ ಮಾಡಿದ್ದು ಜನಪ್ರಿಯರಾಗಿದ್ದರು. ಹೆಡ್ಮಾಸ್ಟರ್ ಸ್ಥಾನಕ್ಕೂ ಅವರು ತಲ್ಪಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ದುಃಖಿತ ಕುಟುಂಬಕ್ಕೆ ಸಮಧಾನವನ್ನೂ ಕೋರುವೆವು.

ಸ್ಥಳೀಯ ವಕೀಲರಾದ ಶ್ರಿ ಬೈಂದೂರು ನರಸಿಂಗರಾಯರು ಗೇಣಿ ಒಕ್ಕಲುಗಳಿಂದ ಪರ್ಮಿಟಿನ ಮೂಲಕ ಅಕ್ಕಿಯನ್ನು ತರುತ್ತಿರಲು ಮುಡಿಯೊಂದರಲ್ಲಿ ಏಳು ಸೇರು ಅಕ್ಕಿಯು ಹೆಚ್ಚಿಗಿದ್ದುದು ಕಂಡು ಬಂದು, ಉಳಿದ ಮುಡಿಗಳಲ್ಲಿ ಶೋಧಿಸುವಾಗಲೂ ಅಧಿಕ ಅಕ್ಕಿ ದೊರಿತಿದೆಯೆಂದೂ ಆ ವಿಷಯ ಅಧಿಕಾರಿಗಳು ಕಾರ್ಯಕ್ರಮವನ್ನು ಕೈಕೊಂಡಿರುವರೆಂದೂ ತಿಳಿದು ಬರುತ್ತದೆ. ಮುಡಿಕಟ್ಟುವವರ ಕೈತಪ್ಪಿ ಹೆಚ್ಚಿನ ಧಾನ್ಯವು ಸೇರಿರಬಹುದೆ?

ಮಾರ್ಗ ನಿಯಮ ತಪ್ಪಿದವರಿಗೆ ಬೆಂಚ್ ಕೋರ್ಟಿನಲ್ಲಿ ವಿಚಾರಣೆ ನಡೆದು ಜುಲ್ಮಾನೆ ವಿಧಿಸುವ ಕಾರ್ಯಕ್ರಮವು ನಡೆಯುತ್ತಲಿದೆ. ಹಳ್ಳಿಕಡೆಗಳಿಂದ ಬರುವವರೆಲ್ಲರಿಗೂ ಮಂಗಳೂರು ಮಾರ್ಗಗಳ ನಿಯಮದ ತಕ್ಕ ತಿಳುವಳಿಕೆಯ ಪ್ರಚಾರಮಾಡುವುದುತ್ತಮ.

ಮಣದಲ್ಲಿ ಕಂಟ್ರೋಲ್ ದರಗಿಂತ ಎರಡೆರಡು ಪೈಗಳಷ್ಟು ಹೆಚ್ಚಾಗಿ ದರ ವಸೂಲು ಮಾಡಿದರೆಂಬ ಆರೋಪದಿಂದ ಚೆಪ್ಪು ಕಡೆಯ ಮಿ। ರುಜಾರಿಯೋ ಡೆಮೆಲ್ಲೋ ಎಂಬ ಕಟ್ಟೆಗೆ ವ್ಯಾಪಾರಸ್ಥರಿಗೆ ೭೫ ರೂ. ಜುಲ್ಮಾನೆಯಾಗಿದೆ. ದರ ಮೀರಬಾರದೆಂದೇ ವಸ್ತುಗಳಿಗೆ ಕಂಟ್ರೋಲ್ ಹಾಕಿದುದು.

ಮುನ್ಸಿಪಲ್ ಸಭೆಯೊಂದು ಕಳೆದ ತಾ. ೮ರಂದು ಸೇರಿತ್ತು. ವೆಬ್ಬಸ್ಟರ್ ಮಾರ್ಕೆಟಿನ ಒಳ ಭಾಗದ ವ್ಯಾಪಾರವಹಿವಾಟುಗಳು ಆಡಳಿತವನ್ನು ನಗರ ಸಭೆಯವರೇ ನಡೆಸಬೇಕೆಂದೂ, ಮಾಂಸದ ಅಂಗಡಿ, ಪಶು ಸಂಹಾರಕ ಗೃಹ, ಜಟ್ಕಾ ಮತ್ತು ಬಸ್ ಸ್ಟೇಂಡ್ ಇವುಗಳನ್ನು ನಾನ್ ರೆಸಿಡೆನ್ಸಿಯಲ್ ಬಿಲ್ಡಿಂಗ್ ರೆಂಟ್ ಕಂಟ್ರೋಲ್ ಆರ್ಡರಿನ ಶರ್ತಗಳಿಗೊಳಪಡಿಸಿ ಏಲಂ ಮಾಡಬೇಕೆಂದೂ ತೀರ್ಮಾನಗಳು ಅಂದಿನ ಸಭೆಯಲ್ಲಾದುವು.

ನಂತರ ಜರಗಿದ ಸಾಮಾನ್ಯ ಮೀಟಿಂಗಿನಲ್ಲಿ ಇಂಪಿರಿಯಲ್ ಬೇಂಕ್ ಕಾಂಪೌಂಡಿನ ಮೂಲೆಯನ್ನು ಮಾರ್ಗವಾಹನ ಮತ್ತು ಚಲಾವಣೆ ದೃಷ್ಟಿಯಿಂದ ವಿಸ್ತಾರ ಪಡಿಸಲು ಎಕ್ವಾಯರ್ ಮಾಡಬೇಕೆಂದು ಜಿಲ್ಲಾ ಕಲೆಕ್ಟರರು ಬರೆದು ಸೂಚಿಸಿದ್ದನ್ನು ಸಭೆಯವರು ಅಂಗೀಕರಿಸಿದರು.

ಬರುವ ತಾ. ೧೯ರಲ್ಲಿ ಜಿಲ್ಲಾ ಬೋರ್ಡು ಮೀಟಿಂಗು ಸೇರುವುದು. ನಮ್ಮ ಜಿಲ್ಲೆಯ ೨೩ ಗ್ರಾಮುಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಕುರಿತು ಬೋರ್ಡಿನ ಸೂಚನೆಗಳನ್ನು ವಿದ್ಯಾ ಇಲಾಖೆಯ ಡೈರೆಕ್ಟರರು ಅಪೇಕ್ಷಿಸಿರುವಂತೆ ಆ ಕುರಿತೂ ಈ ಸಲದ ಮೀಟಿಂಗಿನಲ್ಲಿ ಚರ್ಚೆಯಾಗಲಿದೆ.

ಕಾಲ್ನಾಡ್ ಗ್ರಾಮವಾಸಿಗಳು ತಮ್ಮಲ್ಲಿ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಪದ್ಧತಿ ಜ್ಯಾರಿಗೆ ತರಬೇಕೆಂದು ವಿದ್ಯಾ ಇಲಾಖೆಗೆ ಅರ್ಜಿ ಮಾಡಿಕೊಂಡಿರುವರೆಂದೂ ತಿಳಿದು ಬರುತ್ತದೆ.

ಕಡ್ಡಾಯವಾದ ಪ್ರಾಥಮಿಕ ಶಿಕ್ಷಣವು ಅನೇಕ ದೇಶಗಳಲ್ಲಿ ಜಾರಿಗೆ ತಂದಿರುವರು.

ಕಾರ್ಕಳ ತಾಲೂಕಿನ ಶಿರ್ಲಾಲ್ ಗ್ರಾಮದ ಗಣಪತಿ ಕಮ್ತಿ ಎಂಬ ೮೦ ವರ್ಷ ಪ್ರಾಯದ ಮುದುಕನು ೨೪ ವರ್ಷದ ತನ್ನ ಮಗಳನ್ನು ಸಿಟ್ಟಿನ ಆವೇಶ ಭರದಲ್ಲಿ ಕೊಂದನೆಂದು ಜಿಲ್ಲಾ ಸೆಶ್ಶನ್ ಜಡ್ಜರಲ್ಲಿ ವಿಚಾರಣೆಗೆ ಬಂದಿದ್ದು, ಆರೋಪಿಯು ನಿರಪರಾಧಿ ಎಂದು ವಾದಿಸಿದರೂ. ಅವನಿಗೆ ೫ ವರ್ಷದ ಕಠಿಣ ಶಿಕ್ಷೆ ವಿಧಿಸಿದರು, ಮುಂದರಿದ ಪ್ರಾಯದಲ್ಲಿ ಭಾವನೆಗಳ ಮೇಲೆ ಹಿಡಿತ ತಪ್ಪುವುದು ಗಂಡಾಂತರವನ್ನು ತಂದೊಡ್ಡದಿರದು.

ಪೂತ್ತೂರು ತಾ. ಆಲೀಟ್ಟಿ ಗ್ರಾಮದ ಕುಡೆಕಲ್ಲು ರಾಮಯ್ಯ ಗೌಡರೆಂಬವರು ಕೆಲವು ದಿನಗಳ ಹಿಂದೆ ದನವೊಂದನ್ನು ಹಿಡಿದು ತಿನ್ನುತಿದ್ದ ಹುಲಿಯೊಂದನ್ನು ತಮ್ಮ ತೋಟಿ ಕೋವಿಯಿಂದ ಹೊಡೆದು ಕೊಂದರು. ಶ್ರೀಯುತರು ಈ ಮುಂಚೆಯೂ ಅನೇಕ ಹುಲಿಗಳನ್ನು ಕೊಂದು ಅಲ್ಲಿನ ಜನತೆಗೆ ತುಂಬಾ ಉಪಕಾರ ಮಾಡಿರುವರು. ಸರಕಾರದವರು ಜಿಲ್ಲೆಯ ಶಿಕಾರಿ ಪ್ರವೀಣರಿಗೆ ಕೋವಿ, ಮದ್ದು ಗುಂಡು ಮತ್ತಿತರ ವಿಷಯಗಳಲ್ಲಿ ಹೆಚ್ಚಿನ ಸವಲತ್ತುಗಳನ್ನು ಕೊಟ್ಟು ಉತ್ತೇಜನಕೊಡಬೇಕು.

ವಿಶೇಷ ವಾರ್ತೆಗಳು

ತನ್ನ ನಾಟಕದ ಕೊನೆಯ ಅಂಕವನ್ನು ಮುಗಿಸುವ ಮೊದಲು ಹಿಟ್ಲರನು ಜಗತ್ತನ್ನೆ 'ನಡುಗಿಸು'ವಂತಹ ಒಂದು ಪಾಶವೀಕೃತ್ಯವನ್ನು ಮಾಡಲು ಸನ್ನಾಹಗಳನ್ನು ನಡೆಸುತ್ತಿರುವನಾಗಿ ಪ್ರಖ್ಯಾತ ಸಮರ ತಜ್ಞರು ಸಂದೇಹ ಪಡುತಿದ್ದಾರೆ. ಅವರ ಶಂಕೆಗೆ ಕಾರಣಭೂತವಾದ ಹಿಟ್ಲರನ ಅದೊಂದು ಹೇಳಿಕೆಯಿದೆಯಂತೆ. ಕೆಲವು ಸಮಯ ಹಿಂದೆ ಜರ್ಮನ್ ರೇಡಿಯೋದಲ್ಲಿ ಹಿಟ್ಲರನು "ಯುದ್ಧದ ಕೊನೆಯ ಎಂಟು ದಿನಗಳಲ್ಲಿ ನಾನು ಮಾಡಲಿರುವ ಕೃತ್ಯಕ್ಕಾಗಿ ದೇವರು ನನ್ನನ್ನು ಕ್ಷಮಿಸಲಿ" ಎಂದು ಹೇಳಿದ ಸಂಗತಿಯನ್ನು ಪ್ರಸರಿಸಿಲಾಗಿತ್ತಂತೆ. ಮಿತ್ರ ಕೇಂದ್ರಗಳಲ್ಲಿ ಈ ಬೆದರಿಕೆಯು ಗಂಭೀರವೂ ಕ್ರೂರವೂ ಆದ ಗರ್ಭಿತಾರ್ಥದಿಂದ ತುಂಬಿದೆಯಾಗಿ ಗ್ರಹಿಸಲಾಗಿದೆ. ವಿಷಗಾಳಿ ಪ್ರಯೋಗವಾಗಲಿ ಇತರ ಭೀಕರ ಗುಪ್ತಾಸ್ತ್ರವಾಗಲಿ ಪ್ರಕಾಶಕ್ಕೆ ಬರಬಹುದೆಂದೂ ಊಹಿಸಲಾಗಿದೆ.

* * *

ಕೆಲವು ಲಂಡನ್ ಮಹಿಳೆಯರು ಒಂದು ಉಪವಾಸ ವ್ರತವನ್ನಾಚರಿಸಿದರು. "ನಾವು ಹಾಲು ತುಪ್ಪಗಳ ಹೊಳೆಯಲ್ಲಿ ತೇಲುತ್ತಿರುವಾಗ ಇಲ್ಲಿಂದ ಕೆಲವೇ ಮೈಲುಗಳ ದೂರದ ಯುರೋಪಿನಲ್ಲಿ ನಮ್ಮ ಮಿತ್ರರೆಷ್ಟೊ ಮಂದಿ ಉಪವಾಸ ಬೀಳುತ್ತಿರುವರು. ಅವರ ಸಹಾನುಭೂತಿಗಾಗಿ ನಾವಿಂದು ಒಂದು ದಿನವಾದರೂ ನೀರಾಹಾರಿಗಳಾಗಿರಬೇಕಾದುದು ಧರ್ಮ"ಎಂದು ಮಿಸೆಸ್ ಫೆಥಿಕ್ ಲಾರೆನ್ಸ್ ಎಂಬ ರಾಜಕಾರಣ ತಜ್ಞೆಯಾದ ಮಹಿಳೆಯೋರ್ವಳು ಖಾಲಿ ಮೇಜಿನ ಮುಂದೆ ಕೂತ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು.

ಬೊಂಬಾಯಿಯ ಮಾಜೀ ನಗರ ಸಭಾಧ್ಯಕ್ಷರೂ, ಪ್ರಖ್ಯಾತ್ ಕೊಂಗ್ರೆಸ್ ಸಮತಾವಾದಿ ನಾಯಕರೂ ಆದ ಬ್ಯಾರಿಸ್ಟರ್ ಯುಸುಫ್ ಮೆಹರಾಲಿಯವರು ಬಂಧನದಿಂದ ಬಿಡುಗಡೆ ಮಾಡಲ್ಪಟ್ಟಿದ್ದು ಈಗ ಠಾಗೂರರ ಶಾಂತಿನಿಕೇತನದಲ್ಲಿ ವಿಶ್ರಾಂತಿ ಪಡೆಯುತಿದ್ದಾರೆ. ಮಿ। ಅಲಿಯವರು ಆ ವಿಶ್ವ ಸಂಸ್ಕೃತಿ ಶಿಕ್ಷಣದ ಶಾಲೆಯಲ್ಲಿ ಚಿತ್ರಕಲಾಭ್ಯಾಸ ಮಾಡುತಿದ್ದಾರೆ.

* * *

ಪ್ರಕಟಣೆ

ಮಂಗಳೂರು ತಾಲೂಕ ಅಮ್ಮುಂಜೆ ಗ್ರಾಮದ ಕಲ್ಪಾಯಲ್ಲಿರುವ ಸೇಕ್ ಬ್ಯಾರಿಯ ಮಗ ಅಚ್ಚ ಬ್ಯಾರಿಯಾದ ನಾನು, ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ— ನನ್ನ ಅಜ್ಜಿ ವಾ ಅಮ್ಮುಂಜೆ ಗ್ರಾಮದ ಕಲ್ಪಾಯಲ್ಲಿರುವ ಮಹಮ್ಮದ್ ಬ್ಯಾರಿಯ ವಿದವೆ, ನನ್ನ ಸಂರಕ್ಷಣೆಯಲ್ಲಿರುವ ಐಸಮ್ಮಳು, ಅವಳ ಬಾಬ್ತು ಅಮ್ಮುಂಜೆ, ಕೊಡಮಾನ್, ಮತ್ತು ಪುದು ಗ್ರಾಮದಲ್ಲಿರುವ ಸರ್ವಾದಿ ಆಸ್ತಿಗಳನ್ನು ನನಗೆ ರಿಜಿಸ್ತ್ರಿ ನಿತಿ ಸೆಟ್ಲಮೆಂಟ್ ಡೀಡು ಮಾಡಿ ಕೊಟ್ಟಿರುತ್ತಾಳೆ. ಆ ಪ್ರಕಾರ ನಾನು ಸದ್ರಿ ಆಸ್ತಿಗಳನ್ನು ಸ್ವಾಧೀನ ಮಾಡಿಕೊಂಡು ಕುದ್ತಳೆ ನನ್ನ ಹೆಸರಿಗೆ ತಖ್ತೀಲ್ ಪಡಿಸಿ ಅನುಭವಿಸಿ ಕೊಂಡು ಬರುತ್ತೇನೆ. ಇದೇ ತಾ. ೬-೩-೪೫ನೆ ಮಂಗಳವಾರ ದಿವಸ ನಾನು ಮಂಗಳೂರಿಗೆ ಬಂದಿರುವ ಸಮಯದಲ್ಲಿ ಉಳ್ಳಾಲ ಗ್ರಾಮದ ಕೆಳಗಿನ ಬೀದಿಯಲ್ಲಿರುವ ಇದ್ದಿ ಬ್ಯಾರಿ ಮಗ ಹಮ್ಮದೆ ಯಾನೆ ಹಮ್ಮಬ್ಬ ಬ್ಯಾರಿಯು ಮೋಟಾರ್ ಏಜಂಟ್ ಮಾಮು ಬ್ಯಾರಿಯು ನನ್ನ ಮನೆಗೆ ಅಕ್ರಮ ಪ್ರವೇಶ ಮಾಡಿ ಐಸಮ್ಮಳ ತಮ್ಮ ಪಟ್ಲ ಹಮ್ಮದೆ ಬ್ಯಾರಿಯು ಕಠಿಣ ಕಾಯಿಲೆಯಲ್ಲಿದ್ದಾರೆಂದು ಸುಳ್ಳು ಹೇಳಿ ಅವಳನ್ನು ಪ್ರೇರೇಪಿಸಿ ಕೆಟ್ಟ ಇರಾದೆಯಿಂದ ಅವಳನ್ನು ಉಳ್ಳಾಲಕ್ಕೆ ಕರಕೊಂಡು ಹೋಗಿರುವರು. ಸದ್ರಿ ಐಸಮ್ಮಳು ಸುಮಾರು ತೊಂಬತ್ತು ವರ್ಷ ಪ್ರಾಯವಾಗಿದ್ದು ದೇಹದಲ್ಲಿ ಕ್ಷೀಣಳಾಗಿಯೂ, ಕಿವಿ ಕೇಳದೆ ದೃಷ್ಟಿ ಸರಿ ಇಲ್ಲದೆ ಬುದ್ಧಿಯೂ ಅಸ್ಥಿರವಾಗಿರುತ್ತದೆ. ಮೇಲ್ಕಾಣಿಸಿದ ಹಮ್ಮಬ್ಬ ಬ್ಯಾರಿಯೂ ಮೋಮು ಬ್ಯಾರಿಯೂ ಪಟ್ಲ ಬ್ಯಾರಿಯೂ, ಐಸಮ್ಮಳಿಂದ ಯಾವುದೊ ರಿಜಿಸ್ತ್ರಿ ನಿತಿ ದಸ್ತಾವೇಜು ಮಾಡುವ ಉದ್ದೇಶದಲ್ಲಿದ್ದಾರೆಂದು ನನಗೆ ತಿಳವಳಿಕೆಗೆ ಬಂದಿರುತ್ತದೆ. ಸದ್ರಿ ಐಸಮ್ಮಳಿಗೆ ಈಗ ಯಾವ ಸ್ಥಿರಾಸ್ಥಿಯೂ ಇರುವುದಿಲ್ಲ, ಮತ್ತು ಯಾವದೊಂದು ದಸ್ತಾವೇಜು ಮಾಡಿದಲ್ಲಿ ಸಿಂಧೂರಾಗತಕದಲ್ಲ—ತಿಳಿದಿರಲಿ.

ಪ್ರಚಲಿತ ಸಮಾಚಾರ

(ಲನೇ ಪುಟದಿಂದ)

ಜಾತೀಯ ಕಲಹ ಸಮಸ್ಯೆಗೆ ಹೆಚ್ಚಿನ ಮಹತ್ವ ದೊರಕುತ್ತಿರುವುದು ಹಿಂದೂದೇಶದಲ್ಲಿ ಮಾತ್ರ. ಎಲ್ಲಾ ಪ್ರಗತಿಪರದೇಶಗಳಲ್ಲಿ ಸಾಂಪತ್ತಿಕ ಸಮಸ್ಯೆಗಳು ಮಾತ್ರ ಪ್ರಭಾವಿತವಾಗುವುದೂ, ಜಾತೀಯ ವಿಷಯಗಳು ಮನೆ ವಿಚಾರವಾಗಿರುವುದೂ ನಮಗೆ ಕಾಣಿಸಿಕೊಳ್ಳುತ್ತಿದೆ. ಚೀನದಲ್ಲಿ ಜಾತೀಯ ವಿಚಾರಗಳಿಗೆ ದೇಶದ ರಾಜಕೀಯದಲ್ಲಿ ಎಡೆಯೆ ಇಲ್ಲ. ಸಾಂಪತ್ತಿಕ ವಿಷಯಗಳಿಗೆನೆ ಹೆಚ್ಚಿನ ಮಹತ್ವಕೊಟ್ಟು ಪಾಶ್ಚಾತ್ಯ ದೇಶಗಳ ಪ್ರಗತಿ ಪಥದಲ್ಲಿ ಮುಂದುವರಿದುದು ನಮಗೆ ಕಾಣಿಸುತ್ತದೆ. ಅದೇ ರೀತಿಯಲ್ಲಿ ಹಿಂದೂದೇಶದಲ್ಲೂ ವಿಶಾಲ ಮನೋಬಾವುಗಳು ಬೆಳೆಯುವುದು ಉತ್ತಮವಿದೆ. ಯುದ್ಧೋತ್ತರದ ಉದ್ಧಾರ ಯೋಜನೆಗಳಲ್ಲಿ, ಹಿಂದೂಸ್ಥಾನದ ನಿರಕ್ಷರತೆಯನ್ನು ಹೊಗಗೊಳಿಸುವರೆ, ಮತ್ತು ಯಾವ ಮತೀಯನಾಗಲಿ ದೇಶದಲ್ಲಿರುವ ಯಾವತ್ತೂ ಧರ್ಮಗಳ ಕುರಿತು ಸಹನುಭಾವವುಳ್ಳವನಾಗಿ ಬೆಳೆಯುವಂತೆ, ಶಿಕ್ಷಣವು ನಡೆಯಿಸುವ ಜ್ಞಾನವನ್ನು ಬೆಳೆಯಿಸುವೊಂದಿಗೆ ಉತ್ತಮ ಸಮಾಜಗಳು ಉದ್ಭವಿಸುವಂತೆ ಶಿಕ್ಷಣ ಪ್ರಚಾರ ಮಾಡುವ ವಿದ್ಯಾಯೋಜನೆಯು ನಮಗೆ ಅತಿ ಅವಶ್ಯವಿದೆ. ಆ ಯೋಜನೆಯು ಯಶಸ್ವಿಯಾಗಿ ನಡೆದು ಬಿಟ್ಟಿತ್ತೆಂದರೆ ಆಗ ಹಿಂದೂದೇಶವನ್ನು ಉದ್ಧಾರಗೊಳಿಸುವ ಸಮಸ್ಯೆಯ ಬಹು ಭಾಗವು ಬಗೆಹರಿಸಲ್ಪಟ್ಟಂತಾಗುವುದು.

ಅದಲ್ಲದೆ ಹಿಂದೂದೇಶದ ಸಾಂಪತ್ತಿಕ ಉದ್ಧರಣೆಯ ಕುರಿತು ಅಮೇರಿಕಾದ, ರಷ್ಯಾದ ಮಾದರಿಗಳನ್ನು ನಾವು ಅನುಸರಿಸಬಹುದು. ನಮ್ಮ ದೇಶವನ್ನು ಅಮೇರಿಕಾದೊಡನೆ ತುಲನೆ ಮಾಡಿ ನೋಡಿದರೆ, ನಮ್ಮಲ್ಲೂ ಅಲ್ಲಿ ನಡೆದ ಕಾರ್ಯಸಾಧನೆಗಳು ನಡೆಯಲು ತುಂಬಾ ಅವಕಾಶವಿದೆ ಎಂದು ಹೊಳೆಯುತ್ತದೆ. ಅಲ್ಲಿ ಕೈಗೊಂಡ ಕಾರ್ಯಸಾಧನೆಯನ್ನು ನಾವು ಕೈಗೊಳ್ಳುವುದಾದರೆ ಯುದ್ಧ ಕೊನೆಗೊಂಡು ಹಿಂತಿರುಗಿ ಬರುವ ೨ ಮಿಲಿಯ ಜನರಿಗೂ, ಈಗ ಯುದ್ಧಯತ್ನಗಳಲ್ಲಿ ದುಡಿಯುತ್ತಿರುವವರಿಗೂ ಉದ್ಯೋಗವನ್ನು ಒದಗಿಸಬಹುದು. ಅಮೇರಿಕವು ಅಷ್ಟು ಉದ್ಧಾರವಾಗಲು ಅತಿ ಮುಖ್ಯ ಕಾರಣವೆಂದರೆ ಊವೆಂದರೆ,–ಅಲ್ಲಿನ ಸರ್ವ ಜನ ಮಾನ್ಯ ಸ್ವತಂತ್ರ ಸರಕಾರವು ಆದುದರಿಂದ ಯಾವತ್ತೂ ಯೋಜನೆಗಳನ್ನು ಕೈಗೊಳ್ಳಬೇಕಾದರೆ ನಮಗೆ ಮೊದಲಿನ ಅವಶ್ಯವು –ಸ್ವಾತಂತ್ರ್ಯ.

ಒಳ್ಳೆ ಉಪಾಯದಿಂದ ರಷ್ಯದ ಭದ್ರತೆಯನ್ನು ಸಾಧಿಸಿಕೊಳ್ಳುವುದು ಸ್ಟೈಲೀನ ಭಹೀರ್ ವ್ಯವಹಾರ ಕುರಿತು ಧೋರಣವು. ಇದೇ ಧೋರಣವನ್ನು ಅವನು ಯುರೋಪದ ಪಶ್ಚಿಮ ರಾಷ್ಟ್ರಗಳ ಕುರಿತು ಕೈಗೊಂಡಿದ್ದನು. ಆದರೆ ಯುದ್ಧ ಸಂಭವಗಳಿಗೆ ಆತನು ಸಿದ್ಧನೆ ಆಗಿದ್ದನು. ಜರ್ಮನಿಗೆ ವಿರೋಧವಾಗಿ ಹೋರಾಡುತ್ತಿರುವಾಗ ಪೂರ್ವದಲ್ಲಿ ಒಂದು ಸಮಸ್ಯೆಯನ್ನು ಕಟ್ಟಿಕೊಳ್ಳಲು ಇಚ್ಛೆಯಿಲ್ಲದುದರಿಂದ, ಜಪಾನಿನೊಡನೆ ಒಪ್ಪಂದವನು ಕಟ್ಟಿಕೊಂಡಿದ್ದನು. ಈಗ ನಾಜಿಬಲದ ಪತನಕಾರ್ಯವು ಪೂರ್ಣವಾಗುತ್ತಿದ್ದು, ಪೂರ್ವದಲ್ಲಿ ರಷ್ಯದ ಭದ್ರತೆಗೆ ಘಾತುಕಪ್ರಾಯಿಯಾಗಿರುವ ಜಪಾನನ್ನು ಹೊಡೆದು ಓಡಿಸುವ ತಮ್ಮ ಕಾರ್ಯದಲ್ಲಿ ಆತನು ಕೈಹಚ್ಚಬಹುದು. ಈಗ ಜಪಾನಿಯರ ಕೈಯಲ್ಲಿರುವ ಪೋರ್ಟ ಆರ್ಥರಿನ ಮೇಲೆ ಕೊಮ್ಯುನಿಷ್ಟರ ದೃಷ್ಟಿಯಿರುವುದು. ಜಪಾನಿನೊಡನೆ ಮಾಡಿಕೊಂಡ ಒಪ್ಪಂದದ ಅವಧಿಯು ಎಪ್ರಿಲ್ ೧೩ಂದು ಮುಗಿಯುತ್ತದೆ. ಅಂದು ಸ್ಟೆಲಿನನು ಜಪಾನಿನ ಮೇಲೆ ಯುದ್ಧಸಾರಬಹುದೆಂದು ಊಹೆಗಳಿವೆ. ಯುದ್ಧ ಸಾರಿದರೆ, ಆ ಯುದ್ಧವನ್ನು ಕೈಗೊಳ್ಳಲು ಪೂರ್ವ ಕಡೆಯಲ್ಲಿ ಕೆಂಪು ಬಲವು ಸದಾ ಸಿದ್ಧವೂ, ಸುಸಜ್ಜಿತವೂ ಆಗಿಕೊಂಡೇ ಇದೆ. ಶಾಂತಸಾಗರದಲ್ಲಿ ಅಮೇರಿಕನ್ ಬಲಗಳು ಯಶಸ್ಸನ್ನು ಪಡೆದು ಮುಂದೆ ನಡೆಯುತ್ತಿದ್ದಾಗ, ಬ್ರಿಟನು ಈಗ ಅಲ್ಲಿ ಪ್ರವೇಶಿಸಲಿರುವಾಗ, ಕೆಂಪು ರಷ್ಯವು ಹಿಂದುಳಿಯುವುದೆ? ಪೂರ್ವದಲ್ಲಿ ಪ್ರಜಾಸತ್ತೆಯ ನಾಯಕರು ಹೇಗೆ ಕೂಡಿ ಬರುವರೆಂದು ನೋಡಬೇಕು.

ಟೋಕಿಯೋದ ಬಿದಿರುಕಾಗದ ಮನೆಗಳು

ಅಲ್ಲಿ 'ದಾಳಿ'ಗಳು ಹೊಸದಲ್ಲ

ಅಮೇರಿಕನರಿಂದ ಕಟ್ಟಿದ ನಗರ

ಅವರಿಂದಲೇ ಹಾಳುಮಾಡಲ್ಪಡುವುದು

ಅರುವತ್ತು ಲಕ್ಷಕ್ಕೂ ಮಿಕ್ಕಿದ ಜನಸಂಖ್ಯೆಯಿದ್ದು ಜಗತ್ತಿನ ದೊಡ್ಡ ನಗರಗಳಲ್ಲಿ ನಾಲ್ಕನೇಯದೆನಿಸಲ್ಪಡುವ ಟೋಕಿಯೊ ನಗರವು ಹೆಚ್ಚಿನವರಿಂದ ತಿಳಕೊಳ್ಳಲ್ಪಟ್ಟಂತೆ ಬರೀ ಬಿದುರು ಗೋಡೆಯ, ಕಾಗದ ಮಾಡಿನ ಕಟ್ಟಡಗಳಿರುವಂತಹುದಲ್ಲವೆಂಬ ವಿಷಯವನ್ನು ಮರೆಯಬಾರದು.

ಟೋಕಿಯೋ ನಗರವು ಇಂದು ಅತ್ಯಾಧುನಿಕ ಕಟ್ಟಡ ಶಿಲ್ಪ ಶೈಲಿಗನುಸಾರವಾಗಿ ಚಂದದ ಉಪವನ, ಸಂಚಾರ ವನಗಳಿಂದ ಕೂಡಿದ ಅತೀ ಸುಂದರ ರಾಜಧಾನಿಯಾಗಿರುತ್ತದೆ. ಇಷ್ಟೊಂದು ಸುಂದರ ನಗರವು ಪುರಾತನ ಕಾಲದಿಂದಲೂ ಭೂಕಂಪದ ನಡುಕಕ್ಕೆ ಪದೇ ಪದೇ ಒಳಗಾಗಿರುತ್ತದೆಯಾದರೂ ಇನ್ನೂ ಸ್ಥಳಾಂತರಗೊಳಿಸಲ್ಪಡದೇ ಇದ್ದಲ್ಲೇ ಇರುವ ವಿಷಯವು ಸೋಜಿಗದು. ಸಹನಾತೀತ ಸಂಕಷ್ಟಗಳ ನಡುವಿನಲ್ಲಿಯೂ ಸುಧೃಡತೆಯಿಂದಲೂ ಅಚಲಿಸದೆಯೂ ನಿಲ್ಲುವ ಜಪಾನೀಯ ಜನರ ಸ್ವಭಾವ ಲಕ್ಷಣದ ಕುರುಹೇ ಈ ಟೋಕಿಯೊ ಆಗಿರುತ್ತದೋ ಎಂದು ತಿಳಿದರೆ ಅತಿಶಯವಲ್ಲ.

ಇದರ ಸತ್ಯಾರ್ಥವನ್ನು ಅರಿಯಬೇಕಾದರೆ ೧೯೨೩ರಲ್ಲಿ ಅಲ್ಲಿ ಉಂಟಾದ ಭೀಕರ ಭೂಕಂಪದ ಪರಿಣಾಮವನ್ನು ಕೊಂಚ ನಾವು ತಿಳಕೊಳ್ಳಬೇಕು. ಆ ಮಹಾ ನಗರದ ೮೬ ಸಾವಿರ ಎಕ್ರೆಗಳಷ್ಟು ಸ್ಥಳವು ಅಂದಿನ ಅದುರುವಿಕೆಯಿಂದ ಭಸ್ಮೀಭೂತವಾಗಿ ಸುಮಾರು ೧೦ ಲಕ್ಷಕ್ಕೂ ಮಿಕ್ಕಿದ ನಾಗರೀಕರು ನೆಲ ಸಮಾಧಿ ಪಡೆದರು. ಇಷ್ಟಾದರೂ ಟೋಕಿಯೋ ಕದಲಲಿಲ್ಲ.

ಇದರಿಂದ ಟೋಕಿಯೋ ಜನರಿಗೆ ಪ್ರಕೃತಿಯೇ ಮುನಿದಂತಿದೆ. ಅಂದಮೇಲೆ ಅವರಿಗೆ ವಿಮಾನ ದಾಳಿಗಳಿಂದಾಗುವ ಹಾನಿಯು ಅತ್ಯಲ್ಪವಾಗಿಯೇ ತೋರುವುದು. ಜಪಾನಿಯರು ಜರ್ಮನ್ ಜನರಿಗಿಂತ ಹೆಚ್ಚು ಶಿಷ್ಟಸಾಂಪ್ರದಾಯ ಸಂಪನ್ನರೂ ಮತ್ತು ಹೆಚ್ಚು ಶಿಸ್ತುಳ್ಳವರೂ ಆದ ಜನರು. ವಿಮಾನ ದಾಳಿ ಸಮಯದಲ್ಲಿ ಜನರು ಯಾವುದೊಂದು ಗಾಬರಿ ಇಲ್ಲದೆಯೂ, ಗೊಂದಲ ಗಡಿಬಿಡಿಯಿಲ್ಲದೆಯೂ, ವರ್ತಿಸುವಂತೆ ಸರಕಾರದವರು ನಾಗರೀಕರಿಗೆ ತರಬೇತು ಮಾಡಿರುವರು.

ಇಂದು ಆ ನಗರದಲ್ಲಿ ಭವ್ಯವೂ ಅತೀ ವಿಶಾಲವಾದವುಗಳೂ ಮತ್ತು ಸುಂದರ ರಚನಾಶೈಲಿಯವೂ ಆದ ಎಂಟುನೂರು ಸಾರ್ವಜನಿಕ ಕಟ್ಟಡಗಳಿವೆ. ಇವೆಲ್ಲವೂ ಭೂಕಂಪದ ಅಲುಗುವಿಕೆಯನ್ನು ತಡೆಯುವಂತಹ ರೀತಿಯಲ್ಲಿ ಕಟ್ಟಲ್ಪಟ್ಟಿರುವುದು ಮತ್ತು ಹಾಗೆ ಕಟ್ಟಲು ಯೋಜನೆಗಳನ್ನು ತಯಾರಿಸಿ ಸ್ವತಃ ಕಟ್ಟಿಸಿದ ವ್ಯಕ್ತಿ ಫ್ರೆಂಕ್ ಲೊಯುಡ್ ರ್‍ಯಾಟ್ ಎಂಬ ಅಮೇರಿಕನ್ ಇಂಜಿನಿಯನೆಂದಾಗ ನಮಗೆ ಕೌತುಕವಾಗದಿರದು.

ಆ ಕಟ್ಟಣ ಶಿಲ್ಪ ಪಂಡಿತನು ಎಂಬತ್ತು ಅಡಿ ಆಳದಲ್ಲಿ ಕೆಲವು ಅಡಿಗಳ ತನಕ ಒದ್ದೆ ಕೆಸರಿನ ತಳವನ್ನು ತಯಾರಿಸಿ ಅದರ ಮೇಲೆ ಪೆನ್ಸಿಲು ಮೊನೆಯಾಕೃತಿಯ ಅನೇಕ ಕೊಂಕ್ರಿಟ್ ಕೊನಗಳನ್ನು ನಿಲ್ಲಿಸಿ ಮತ್ತೆ ಅವುಗಳ ಮೇಲೆ ದೊಡ್ಡದೊಂದು ಕಟ್ಟಡವನ್ನು ನಿರ್ಮಿಸಿದನು. ಇದರ ಗೋಡೆಗಳು ಕೆಳ ಭಾಗದಲ್ಲಿ ಬಹು ದಪ್ಪವಾಗಿದ್ದು ಮೇಲೆ ಹೋಗುತ್ತಾ ತೆಳ್ಳಗಾಗಿರುವಂತಿದೆ. ಇದರಿಂದ ಒಂದು ವೇಳೆ ಕಟ್ಟಡವು ಅಲುಗಾಡಿದರೂ ಈ ಗೋಡೆಗಳು ಅಷ್ಟು ಬೇಗನೇ ಕುಸಿದು ಬೀಳಲಾರವು. ಇಷ್ಟೇ ಅಲ್ಲ. ಕಟ್ಟಡಗಳಿಗೆ ಹಂಚಿನ ಮಾಡುಗಳ ಬದಲು ತಾಮ್ರದ ತಗಡು ಮುಚ್ಚಲಾಗಿದೆ. ಕಾರಣ ಹಂಚಿನಿಂದ ಭೂಕಂಪ ಕಾಲದಲ್ಲಿ ಜನರಿಗೆ ಹೆಚ್ಚು ಅಪಾಯ. ಇನ್ನೊಂದು ವಿಚಿತ್ರ ಏರ್ಪಾಡೆಂದರೆ ಈ ಲೋಹ ಮಾಡುಗಳ ಮೇಲೆ ನೀರು ಸದಾಕಾಲ ಕೆರೆಯಂತೆ ನಿಲ್ಲಲು ಮಾಡಿದ ಏರ್ಪಾಡು. ಇದರಿಂದ ಬೆಂಕಿಯು ಕಟ್ಟಡದಿಂದ ಕಟ್ಟಡಕ್ಕೆ ಬಹುಬೇಗನೇ ಹರಡಲಾರದು.

ಟೋಕಿಯೋದ ಇನ್ನೊಂದು ವೈಶಿಷ್ಟ್ಯವೆಂದರೆ ಅಲ್ಲಿನ ನದಿ ಕಾಲುವೆಗಳು. ಈ ನಗರದಲ್ಲಿ ಅರುವತ್ತಕ್ಕೂ ಮಿಕ್ಕಿ ನದಿ ಕಾಲುವೆಗಳೂ ಅಸಂಖ್ಯಾತ ಸೇತುವೆಗಳೂ ಇದ್ದು ಇದನ್ನು ಪೆರಿಸಿನಂತೆ ನದೀ ಸೇತುವೆಗಳ ನಗರವೆಂದೂ ಕರೆಯಬಹುದು.

ಅಲ್ಲಿ ಕಾಗದದ ಮನೆಗಳು ಇಲ್ಲವೆಂದಿಲ್ಲ. ಆದರೆ ಅವುಗಳಿಗೆ ಪ್ರಾಧಾನ್ಯತೆ ಇಲ್ಲ. ಒಂದು ವೇಳೆ ಅವು ಸುಟ್ಟುಹೋದರೂ ಪುನಃ ಕಟ್ಟಲು ಹೆಚ್ಚು ಹೊತ್ತು ತಗಲುವುದಿಲ್ಲ– ಜಪಾನೀ ಮನೆಗಳಲ್ಲಿ ಆಡಂಭರದ ಹೆಚ್ಚು ಸಾಮಾನುಗಳೂ ಇಲ್ಲ. ಆದುದರಿಂದ ನಾಗರೀಕರಿಗೆ ನಷ್ಟವೂ ಹೆಚ್ಚಾಗುವುದಿಲ್ಲ. ಅವರು ಕೂತುಕೊಳ್ಳುವುದು ಮಲಗುವುದು ಚಾಪೆಗಳ ಮೇಲೆ.

ಅಲ್ಲಿನ ಜನರಿಗೆ ಕಷ್ಟವೆಂದರೆ ಸರಿಯಾದ ಎ. ಆರ್. ಪಿ. ಮತ್ತು ಬೆಂಕಿ ಆರಿಸುವ ಏರ್ಪಾಡುಗಳಿಲ್ಲದಿರುವುದು. ಜಪಾನಿಯರ ಹತ್ತಿರ ಇಂದು ಉಕ್ಕು ಕಬ್ಬಿಣಗಳು ಅವರ ಯುದ್ಧ ತಯಾರಿಕೆಗೆ ಬೇಕಾಗುವಷ್ಟು ಮಾತ್ರ ಇರುತ್ತವೆ. ಯಂತ್ರೋಪಕರಣಗಳ ದುರಸ್ತಿಗೂ, ಮತ್ತು ಹೊಸ ವಿಮಾನ ದಾಳಿ ಸಂರಕ್ಷಣಾಲಯಗಳನ್ನು ಕಟ್ಟಲೂ ಬೇಕಾಗುವ ಹೆಚ್ಚಿನ ಲೋಹಗಳು ಮಾತ್ರ ಸದ್ಯಕ್ಕೆ ದೊರೆಯದಿದ್ದುದೇ ಅವರಿಗಿರುವ ದೊಡ್ಡ ಅನಾನುಕೂಲತೆ.

ಪ್ರಖ್ಯಾತ ಪುಣ್ಯ ಕ್ಷೇತ್ರವಾದ ಪುರಿಯ ಜಗನ್ನಾಥ ದೇವಳಕ್ಕೆ ಈ ಸಲ ಹೋದ ೪೦ ಸಾವಿರ ಯಾತ್ರಿಕರಿಗೆ ದೇವರ ಪ್ರಸಾದವೇ ದೊರಕಲಿಲ್ಲವಂತೆ–ಅಲ್ಲಿನ ದೇವಳದ ಅಡಿಗೆಯವರು ಸಂಬಳ ಹೆಚ್ಚಿಸಬೇಕೆಂದು ಮುಷ್ಕರ ಹಿಡಿದಿರುವರು.

* * *

ನಿಮ್ಮ ಕಂಠ ಮತ್ತು ಶ್ವಾಸಕೋಶಗಳನ್ನು ರಕ್ಷಿಸಿರಿ

ನೀವು ಕಫ, ಶೀತ, ಕಂಠನೋವು ಮತ್ತು ಶ್ವಾಸಕೋಶದ ದುರ್ಬಲತೆಗಳಿಂದ ನರಳುವಿರಾದರೆ, ವಿಷಹಾರೀ ಶ್ವಾಸಯೋಗ್ಯ ಪೆಪ್ಸು ಮಾತ್ರೆಗಳನ್ನು ತೆಗೆದುಕೊಂಡು ತೀವ್ರ ಗುಣಹೊಂದಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವುತ್ತದೆ. ಅದು ನಿಮ್ಮ ಶ್ವಾಸದೊಡನೆ ಶ್ವಾಸಕೋಶಕ್ಕೆ ಸೇರಿ, ಅಲ್ಲಿನ ರೋಗಾಣುಗಳನ್ನು ನಾಶಮಾಡುವುದು. ಎದೆಯ ಅನೇಕ ತರದ ತೊಂದರೆಗಳನ್ನು ನಿವಾರಿಸುವುದು. ಪೆಪ್ಸು ಕಂಠವನ್ನು ಸರಿಗೊಳಿಸುವುದು, ನಿಮ್ಮ ಎದೆ ಮತ್ತು ಶ್ವಾಸಕೋಶಕ್ಕೆ ಒಳ್ಳೆಯ ರಕ್ಷಣೆಯನ್ನೀಯುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸೇನ್‌ಫ್ರೆನ್ಸಿಸ್ಕೋದಲ್ಲಿ ಶಾಂತಿಪರಿಷತ್ತು

ಮುಂದಿನ ಯುದ್ಧಕ್ಕೆ ದಾರಿಕೊಡುವುದು

ಮಿತ್ರಭಾರತಕ್ಕೆ ಪರಿಷತ್ತಿನಲ್ಲಿ ಸ್ಥಾನವಿಲ್ಲ

ಶಾಂತಿ ಯುರೋಪಿಗೆ ಮಾತ್ರವೆ?

ಬರುವ ಎಪ್ರಿಲ್ ೨೬ನೇ ತಾರೀಕು ಇತಿಹಾಸದಲ್ಲಿ ಗಣನೀಯ ದಿನವಾಗಿ ಪರಿಗಣಿಸಲ್ಪಡುವುದು. ಅಂದು ಸುಮಾರು ನಾಲ್ವತ್ತು ಜನಾಂಗಗಳು ಒಟ್ಟುಗೂಡಿ ಶಾಂತಿ ಯೋಜನೆ ಮಾಡಲಿರುವರೆಂದು ತಿಳಿದು ಬರುತ್ತದೆ. ಈಗಿನ ಈ ಭಯಂಕರ ಯುದ್ಧದ ಭೀಕರ ಪರಿಣಾಮಗಳನ್ನು ಅನುಭವಿಸಿದವರು ಮುಂದಿನ ಶಾಂತಿಯು ಶಾಶ್ವತವಾದ ತಳಹದಿಯ ಮೇಲೆ ಕಟ್ಟಲ್ಪಡಬೇಕೆಂದು ಹಾರೈಸದೆ ಇರರು.

ಆದರೆ ಸಾಮ್ರಾಜ್ಯವಾದಿಗಳ ಶಾಂತಿ ಯೋಜನೆಯೇ ಬೇರೆ. ಚಿರ ನೆಮ್ಮದಿಯ ಉಪಾಯಗಳನ್ನು ಕಂಡುಹಿಡಿಯುವ ಬದಲು ತಮ್ಮ ಹಿತಗಳಿಗನುಕೂಲವಾದ ಸ್ವಾರ್ಥದ ಏರ್ಪಾಡುಗಳನ್ನು ಮಾಡಿ ಅವರು ಇನ್ನೊಂದು ಮಹಾ ಯುದ್ಧ ಸನ್ನಾಹ ಮಾಡಿಕೊಳ್ಳುವಂತಹ ನಿರ್ಣಯಗಳನ್ನು ಮಾಡಲಿರುವರೆಂದು ತಿಳಿದು ಬರುತ್ತದೆ. ಜಗತ್ತಿನ ನಾಲ್ಕನೇ ಒಂದಂಶದಷ್ಟು ಜನಸಂಖ್ಯೆಯುಳ್ಳ ವಿಶಾಲ ಭಾರತಕ್ಕೆ ಸೇನ್‌ಫ್ರೆನ್ಸಿಸ್ಕೊ ಪರಿಷತ್ತಿನಲ್ಲಿ ಪ್ರಾತಿನಿಧ್ಯವಿಲ್ಲದಿರುವುದು ಹಾಸ್ಯಾಸ್ಪದ ವಿಷಯ.

ಆದರೆ ಈ ಪರಿಷತ್ತು ಸೇರುವ ಕೆಲವು ದಿನಗಳ ಮೊದಲು ಬ್ರಿಟಿಷ್ ಸಾಮ್ರಾಜ್ಯ ಪ್ರತಿನಿಧಿಗಳ ಒಂದು ಪ್ರಾರಂಭಿಕ ಸಮ್ಮೇಳನ ಜರಗುವುದಂತೆ ಈ ಪ್ರಾರಂಭಿಕ ಚರ್ಚೆ ಸಭೆಯಲ್ಲಿ ಮಾತ್ರ ಭಾರತ ಪ್ರತಿನಿಧಿಗಳಿಗೂ ಒಂದು ಸ್ಥಾನ ಕೊಡಲಾಗುವುದೆಂದು ಪ್ರಕಟವಾಗಿದೆ. ಇದು ಇನ್ನೂ ಹಾಸ್ಯಾಸ್ಪದ; ಕಾರಣ ಭಾರತ ಪ್ರತಿನಿಧಿ ಎಂಬ ಮಾತ್ರಕ್ಕೆ ಅವರು ಯಾರಿಂದ ಚುನಾಯಿಸಿ ಕಳುಹಿಸಲ್ಪಡುವರು ಎಂಬ ವಿಷಯವೇ ಅತೀ ಪ್ರಾಮುಖ್ಯವಾದುದು. "ಬ್ರಿಟಿಷ್ ಸರಕಾರದಿಂದ ನೇಮಿಸಲ್ಪಟ್ಟ ಪ್ರತಿನಿಧಿಯನ್ನೂ ಭಾರತ ಪ್ರತಿನಿಧಿಯೆಂದು ಹೇಳಿದರೆ ಹೆಚ್ಚಿನವರು ನಂಬಲು ಸಿದ್ಧರಿಲ್ಲ. ಭಾರತದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪನೆಯಾಗಿ ಅವರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಿದರೆ ಅಂತವರಿಗೆ ನೇರವಾಗಿ ಸೇನ್ ಫ್ರೆನ್ಸಿಸ್ಕೊ ಪರಿಷತ್ತಿನಲ್ಲೇ ಸ್ಥಾನ ದೊರಕಬೇಕಾದುದು ನ್ಯಾಯವಾಹುದು."

ಈ ಪ್ರಾರಂಭ ಸಾಮ್ರಾಜ್ಯ ಸಮ್ಮೇಳನದಲ್ಲಿ ಕೆನಡವು ಭಾಗವಹಿಸುವುದಿಲ್ಲವಂತೆ. "ಅದರಿಂದ ತಮ್ಮ ದೇಶಕ್ಕೆ ಇರುವ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನೂ ಕಳಕೊಳ್ಳಬೇಕಾದೀತು" ಎಂದು ಆ ದೇಶದವರ ಹೆದರಿಕೆ. ಅಂದ ಮೇಲೆ ಭಾರತ ದೇಶದ ಅಭಿಪ್ರಾಯವಾದರೂ ಬೇರೆ ಇರದು. ಬ್ರಿಟಿಷರು ಫ್ರೆನ್ಸಿಸ್ಕೊ ಪರಿಷತ್ತಿನಲ್ಲಿ ತೆಗೆದುಕೊಳ್ಳುವ ನಿರ್ಣಯಗಳೇ ಅದರ ಎಲ್ಲಾ ವಸಾಹತ್ತು ಸಾಮ್ರಾಜ್ಯ ಪ್ರದೇಶಗಳಿಗೂ ಅನ್ವಯಿಸುವುವು ಎಂದು ಬ್ರಿಟಿಷ ಸರಕಾರ ವತಿಯಿಂದ ಹೇಳಲಾಗಿರುವುದು. ಈ ಪರಿಷತ್ತಿನ ಉದ್ದೇಶಗಳ ಮೇಲೆ ಸಂದೇಹಗಳನ್ನುಂಟು ಮಾಡುವಂತಹದು.

ಸೇನ್ ಫ್ರೆನ್ಸಿಸ್ಕೋದಲ್ಲಿ ಪೌರ್ವಾತ್ಯ ದೇಶಗಳಿಗೆ ಅನ್ವಯಿಸುವ ಯಾವ ವಿಷಯಗಳೂ ಚರ್ಚಿಸಲ್ಪಡುವುದಿಲ್ಲವೆಂದೂ ತಿಳಿದು ಬರುತ್ತದೆ. ಯುದ್ಧದಿಂದ ನೊಂದ ಯುರೋಪವನ್ನು ಸಮಾಧಾನಕ್ಕೆ ತರುವುದೇ ಅದರ ಉದ್ದೇಶ. ಐರೋಪ್ಯ ಜನಾಂಗಗಳು ಪೌರ್ವಾತ್ಯ ದೇಶಗಳ ಮೇಲೆ ಅಧಿಕಾರವಿಟ್ಟುಕೊಳ್ಳುವುದರಿಂದಲೇ ಜಗತ್ತಿನ ನೆಮ್ಮದಿ ಶಾಶ್ವತವಾಗುವುದೆಂದು ಶಕ್ತಿ ರಾಷ್ಟ್ರ ಮುಖಂಡರ ದೃಢಾಭಿಪ್ರಾಯವಿದ್ದಹಾಗೆ ಇದರಿಂದ ಅರ್ಥವಾಗುತ್ತದೆ. ಫ್ರಾನ್ಸು ಸೋತ ಜನಾಂಗವಾದರೂ ಜರ್ಮನಿಯನ್ನು ಆಳುವ ಯೋಜನೆಯಲ್ಲಿ ಅದಕ್ಕೊಂದು ಪ್ರಾಮುಖ್ಯ ಸ್ಥಾನ ಕೊಡಲಾಗುವುದೆಂಬ ಮಿತ್ರ ಮುಖಂಡರ ಯೋಜನೆಯು ಜಗತ್ತನ್ನು ಸಾಮ್ರಾಜ್ಯವಾದಿಗಳಿಗೆ ಭದ್ರವಾಗಿರಿಸುವಂತೆ ಮಾಡುವ ಒಂದು ಉಪಾಯವೆಂದು ಒಂದು ಪತ್ರಿಕೆ ಅಭಿಪ್ರಾಯ ಪಟ್ಟಿದೆ.

ಫ್ರೆನ್ಸಿಸ್ಕೊ ಪರಿಷತ್ತಿನ ಮೊದಲೇ ಒಂದು ಪಕ್ಷಕ್ಕೆ ಯುರೋಪಿನ ಯುದ್ಧವು ಮುಗಿದರೆ ಆಗ ಮಾತ್ರ ಪೆಸಿಫಿಕ್ ಮತ್ತು ದೂರ ಪೂರ್ವದ ಸಮಸ್ಯೆಗಳ ಕುರಿತು ನಿರ್ಣಯಾತ್ಮಕ ಇತ್ಯರ್ಥಗಳನ್ನು ಪರ್ಯಾಲೋಚಿಸಲಾಗುತ್ತದೆಂದೂ, ಅದರಿಂದ ಒಂದುವೇಳೆ ಭಾರತೀಯ ಪ್ರಶ್ನೆಯ ಕುರಿತು ಅಲ್ಲಿ ಚರ್ಚೆ ನಡೆಯದಿದ್ದರೂ ಆ ಇತ್ಯರ್ಥದಿಂದ ಭಾರತಕ್ಕೆ ಮಹತ್ವದ ಪರಿಣಾಮ ಸಿಗುವುದೆಂದೂ ಹೇಳಲಾಗಿದೆ.

ಅಂತು ಇಂತೂ ವಸಾಹತು ದೇಶಗಳ ಸಮಸ್ಯೆಯನ್ನು ಮೂಲೆ ಪಾಲು ಮಾಡಲು ಪ್ರಯತ್ನ ಮಾಡಲಾಗಿದೆ ಎಂಬ ವಿಷಯ ನಿಸ್ಸಂದೇಹ. ಇಂದಿನ ಶಾಂತಿ ಯೋಜಕರು ೧೯೧೮ರ ಮಾದರಿಯನ್ನು ಈ ಸಲವೂ ಅನುಸರಿಸಿದಂತಾಗುವುದು. ಅಂದ ಮೇಲೆ ಅದರ ಫಲವೇ ಮುಂದಿನ ಜನಾಂಗದವರಿಗೆ ಕಟ್ಟಿಟ್ಟಂತಾಯಿತು.

"ವಸಾಹತುಗಳ ಸಮಸ್ಯೆಯು ಜಗತ್ತಿನ ಶಾಂತಿ ವೃಕ್ಷದ ಮೂಲಕ್ಕೇ ಸಂಬಂಧಿಸಿದ ವಿಷಯ. ಇದನ್ನು ಸರಿಪಡಿಸದಿದ್ದರೆ ಶಾಂತಿಗೆ ಮೂಲಾಧಾರವಾದ ಸಂಗತಿಗಳನ್ನೇ ಅಲಕ್ಷ ಮಾಡಿದಂತಾಗುವುದು" ಹೀಗೆಂದು ಮದ್ರಾಸಿನ ಹಿಂದೂ ಪತ್ರಿಕೆಯು ತನ್ನ ಅಗ್ರಲೇಖದಲ್ಲಿ ಬರೆಯುತ್ತದೆ.

ಇಂದಿನ ಬ್ರಿಟಿಷ್ ಆಡಳಿತಗಾರರು ಸಾಮ್ರಾಜ್ಯ ವಾದದಲ್ಲಿ ಆಳವಾದ ವಿಶ್ವಾಸವಿಟ್ಟುಕೊಂಡಿದ್ದಾರೆಂಬುದಕ್ಕೆ ನಿದರ್ಶನಗಳು ಹೇರಳ ಸಿಗುತ್ತದೆ. ಅಮೇರಿಕದಲ್ಲಿ ಒಂದು ರೇಡಿಯೋ ಚರ್ಚೆ ಏರ್ಪಡಿಸಲ್ಪಟ್ಟಿದ್ದು ಅದರಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ ಭಾಗವಹಿಸಿದ್ದರು. ಶ್ರೀಮತಿ ಪಂಡಿತರು "ವಸಾಹತು ಸಾಮ್ರಾಜ್ಯಗಳ ನಿರ್ಮಾಣವೇ ವಿಶ್ವಶಾಂತಿಗೆ ಗಂಡಾಂತರ ತರುವಂತಹದು" ಎಂದು ಹೇಳಿದಾಗ ಮಿ। ರೋಬರ್ಟ್ ಬೂತಿ ಎಂಬ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರು ರೋಮನ್ ಸಾಮ್ರಾಜ್ಯದ ಕೈಕೆಳಗೆ ಮೆಡಿಟರೇನಿಯನ್ ದೇಶಗಳು ಅದೆಷ್ಟು ಪ್ರಗತಿ ಅಭಿವೃದ್ಧಿಯನ್ನು ತಳೆದವೆಂದು ಹೇಳುತ್ತಾ ಸಾಮ್ರಾಜ್ಯ ವಾದವನ್ನು ಸಮರ್ಥಿಸಿದರು.

"ಅವರು ತಮಗನುಕೂಲವಾಗುವಂತೆ ಮರೆತು ಹೋದ ಸಂಗತಿ ಎಂದರೆ ಸಾಮ್ರಾಜ್ಯಗಳನ್ನು ಕಟ್ಟಿ ಕೊಂಡ ಬ್ರಿಟನ್ ಮೊದಲಾದ ಯುರೋಪಿನ ರಾಷ್ಟ್ರಗಳು ಶ್ರೀಮಂತತನದಲ್ಲಿ ಮೆರೆವಾಗ ಅವರನ್ನು ಶ್ರೀಮಂತರನ್ನಾಗಿ ಮಾಡಿದ ವಸಾಹತುಗಳ ಜನರು ನಿಕೃಷ್ಟವಾದ ದರಿದ್ರತೆಯ ಕೂಪದಲ್ಲಿ ಬಿದ್ದು ಹೊರಳಾಡುವಂತಾಗಿದೆ" ಎಂಬ ವಿಷಯ ಹೀಗೆಂದು ಹಿಂದೂ ಪತ್ರಿಕೆಯು ಬರೆಯುತ್ತಿದೆ.

ಮುಂದರಿಸುತ್ತಾ ಅದು ಹೀಗೆ ತಿಳಿಸುತ್ತದೆ; "ವಸಾಹತು ಇದ್ದವರ ಮೇಲೆ ವಸಾಹತು ಇಲ್ಲದವರಿಗೆ ಹೊಟ್ಟೆಕಿಚ್ಚೂ ಅಂತ ರಾಷ್ಟ್ರೀಯ ವೈಷಮ್ಯವೂ ಉಂಟಾಗಿ ಇಂದಿನ ಈ ವಿನಾಶಕಾರಕ ಯುದ್ಧಗಳಿಗೆ ಕಾರಣವಾಯಿತು."

ಕೆಲವು ದಿನಗಳ ಹಿಂದೆ ಅಧ್ಯಕ್ಷ ರೂಸ್‌ವೆಲ್ಟರು ಸೇನ್ ಫ್ರೆನ್ಸಿಸ್ಕೋ ಪರಿಷತ್ತಿನ ಕುರಿತು ಮಾತನಾಡುತ್ತಾ "ಈ ಸಲ ಜಗತ್ತನ್ನು ಪ್ರಭಾವ ಪ್ರದೇಶಗಳಾಗಿ(ಅಂದರೆ ಸಾಮ್ರಾಜ್ಯಗಳ ಪ್ರಶ್ನೆ) ವಿಂಗಡಿಸುವ ಪ್ರಶ್ನೆಯೇ ಇಲ್ಲ. ಎಟ್ಲಾಂಟಿಕ್ ಘೋಷಣೆಯ ತತ್ವಗಳೇ ಶಾಂತಿ ಧೋರಣೆಯನ್ನು ನಿರ್ದೇಶಿಸುವುದರಲ್ಲಿ ಸಹಾಯಕವಾಗುವುವು. ಅಚ್ಚು ರಾಷ್ಟ್ರಗಳ ಹಿಡಿತದಿಂದ ಬೇರ್ಪಡಿಸಲಾಗುವ ದೇಶಗಳ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಇತ್ಯರ್ಥ ಮಾಡಿಸುವ ಭಾರವು ತ್ರಿಮೂರ್ತಿ ರಾಷ್ಟ್ರ ಸರಕಾರಗಳ ಮೇಲೆ ಹೊಂದಿಕೊಂಡಿದೆ." ಎಂದು ಹೇಳಿರುವರು.

ರೂಸ್‌ವೆಲ್ಟರ ಈ ಹೇಳಿಕೆಯ ಸಂದರ್ಭಗಳನ್ನು ಪರ್ಯಾಲೋಚಿಸುವಾಗ ಅದು ಪ್ರಾಮುಖ್ಯವಾಗಿ ಯುರೋಪಿನ ಮಟ್ಟಿಗೆ ಹೇಳಿದ ಸೂಚನೆಯೆಂದು ಅರ್ಥವಾಗುತ್ತದೆ. ಹಾಗಾದರೆ ಬರ್ಮಾ, ಮಲಯಾ, ಮುಂತಾದವುಗಳ ವಿಚಾರವೇನು? ಗ್ರೀಸ್ ಯುಗೊಸ್ಲೇವಿಯಗಳಿಗಿಂತ ಇವುಗಳ ಪರಿಸ್ಥಿತಿಯು ಬೇರೆಯಾಗಿರುವುದೆ?" ಇವುಗಳ ಕುರಿತು ಇತ್ಯರ್ಥ ಮಾಡುವುದು ಹಿಂದೆ ಅವುಗಳನ್ನು ಆಳಿಕೊಂಡಿದ್ದ ರಾಷ್ಟ್ರಗಳ ಹೊಣೆಗಾರಿಕೆ ಎಂದು ಇದರ ಅರ್ಥವಾದರೆ ಎಟ್ಲಾಂಟಿಕ್ ಘೋಷಣೆಯ ಉನ್ನತ ಧ್ಯೇಯಗಳನ್ನು ಸ್ಮರಿಸುವುದರಲ್ಲಿ ಅರ್ಥವೇನಿದೆ" ಹೀಗೆಂದು ಹಿಂದೂ ಪತ್ರಿಕೆ ಪ್ರಶ್ನಿಸುತ್ತದೆ.

ಇದರಿಂದ ವಸಾಹತು ಪ್ರಶ್ನೆಯನ್ನು ಇತ್ಯರ್ಥಿಸುವುದರ ಬದಲಾಗಿ ಅದನ್ನು ಇನ್ನೂ ಕಠಿಣ ಬಿಕ್ಕಟ್ಟಿನಲ್ಲಿ ಹಾಕುವುದೇ ಇಂದಿನ ಶಾಂತಿ ಯೋಜಕರ ಉದ್ದೇಶವೆಂದಾಗುತ್ತದೆ. ಈ ಊಹೆಗೆ ಕಾರಣವಿದೆ. ಸರ್ ಜಾಫರುಲ್ಲಾ ಖಾನರು ಜನಾಂಗೀಕ ಅಸಮಾನತೆಯನ್ನು ತೊಡೆದು ಹಾಕಬೇಕೆಂದಾಗ ಬ್ರಿಟಿಷ್ ಸರಕಾರದವರು "ಆಫ್ರಿಕದ ಹಿಂದೀಯರ ವಿಚಾರವು ಅಲ್ಲಿನ ಸರಕಾರದ ಅಧಿಕಾರದ್ದು. ನಾವು ಅದರಲ್ಲಿ ಕೈ ಹಾಕಲು ಹಕ್ಕುಳ್ಳವರಿಲ್ಲ"ವೆಂದು ವಿವರಿಸಿದರು. "ತಮ್ಮದೇ ಸ್ವಂತ ವಸಾಹತು ರಾಜ್ಯವೊಂದರ ಅನ್ಯಾಯದ ಧೋರಣೆಯಲ್ಲಿ ಕೈ ಹಾಕಲು ಹಿಂಜರಿದವರು ತಮ್ಮ ವಸಾಹತು ಸಮಸ್ಯೆಗಳಲ್ಲಿ ಇತರರಿಗೆ ಕೈಯಾಡಿಸಲು ಬಿಡುವರೆ?" ಎಂದು ಒಂದು ಪತ್ರಿಕೆ ಪ್ರಶ್ನಿಸಿದೆ.

ಭಾರತದ ಪ್ರಶ್ನೆ ಬ್ರಿಟಿಷರ ಜವಾಬುದಾರಿಕೆಯದು; ಅಮೇರಿಕವು ಅದರಲ್ಲಿ ಕೈ ಹಾಕಲು ಹಕ್ಕುಳ್ಳದಾಗಿಲ್ಲವೆಂದೇ ತಿಳಕೊಳ್ಳಬೇಕು. ಭಾರತವು ಯುದ್ಧಕ್ಕೆ ತನುಮನ ಧನಗಳಿಂದ ಸಹಾಯ ಮಾಡಿದೆ. ಆದರೆ ತನ್ನ ಭವಿಷ್ಯವನ್ನು ಸರಿ ಮಾಡಿಕೊಳ್ಳಲಿಕ್ಕೆ ಅದಕ್ಕೆ ಅಧಿಕಾರವಿಲ್ಲದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಭಾರತೀಯರಿಗೆ ದೇವರೇ ಗತಿ.

ANNOUNCEMENT

We have pleasure to announce that the following new branches have been opened.

COIMBATORE SALEM
ERODE MADURA

Other Branches at

Quilon, Alleppey, Ernakulam, Cochin, Calicut, Cannanore, Mangalore, Bangalore, Belgaum, Dharwar, Hubli, Chikmagalur etc. etc.

4 Branches in Bombay City.

Capital 26 lakhs. Reserves 10 lakhs.

(ESTD. 1906)

CANARA BANK LIMITED

Incorporated in British India, liability of Members li(ited .m

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ಪಿ· ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಮುಂದಿನ ಯುದ್ಧ ಅಮೇರಿಕದಲ್ಲಿ

ಅಮೋಘ ಸಂರಕ್ಷಣೆಯ ಏರ್ಪಾಡು

ಅಮೇರಿಕನ್ನರ ಕೈಗಾರಿಕೆ ಏರ್ಪಾಡು

ಯುದ್ಧಕ್ಕೆ ಸದಾ ಸಿದ್ಧರಾಗಿರುವರು

ಮುಂದಿರುವ ಕೆಲವೇ ವರ್ಷಗಳಲ್ಲಿ ಮತ್ತೊಂದು ಭೀಕರ ಯುದ್ಧವು ಪ್ರಾರಂಭವಾಗುವುದಾದರೆ ಅದರಲ್ಲಿ ಮೊದಲ ದಾಳಿಗೆ ಗುರಿಯಾಗುವ ರಾಷ್ಟ್ರವು ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಎಂದು ಥೊಮಸ್ ಎ. ಜೊನ್ಸನ್ ಎಂಬ ಯುದ್ಧ ವರದಿಗಾರರೊಬ್ಬರು ತಿಳಿಸುತ್ತಾರೆ.

ಇಂದು ಜಗತ್ತಿನಲ್ಲಿ ಅತೀ ಸಂಪತ್ಸಮೃದ್ಧಿಯಿಂದ ತುಂಬಿ ತುಳುಕಾಡುವ ಅಮೇರಿಕದ ಈ ಸಂಯುಕ್ತ ರಾಷ್ಟ್ರದ ಮೇಲೆ ಸಾಮ್ರಾಜ್ಯವಾದಿಗಳು ಕಣ್ಣಿಟ್ಟಿದ್ದು ಅದನ್ನು ಮುಂದಿನ ತಮ್ಮ ಕೊಳ್ಳೆಯಾಗಿ ಮಾಡಿ ಕೊಳ್ಳುವ ಸಂಭವವು ಇದೆ. ಇಂದಿನ ನಿರುಂಕುಶಪ್ರಭುತ್ವವಾದಿಗಳಾದ ಫೆಸಿಸ್ಟರಿಗೂ, ಬಂಡವಾಳ ಶಾಹೀಗಳಾದ ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯ ವಾದಿಗಳಿಗೂ ಇಂದು ಪ್ರಜಾಪ್ರಭುತ್ವ ವಾದಿಯಾದ ಅಮೇರಿಕವು ಒಂದು ದೊಡ್ಡ ತೊಡಕು. ಎಟ್ಲಾಂಟಿಕ್ ಘೋಷಣೆಯ ಪೊಳ್ಳುತನವನ್ನು ಅಧ್ಯಕ್ಷ ರೂಸ್‌ವೆಲ್ಟರು ಹೊರಗೆಡವಿದಂದಿನಿಂದ ಬ್ರಿಟನಿಗೆ ಅಮೇರಿಕದ ಮೇಲೆ ಸಹನೆ ಕಡಿಮೆಯಾಗಿದೆ ಎನ್ನಬಹುದು. ಕೆನಾಡವೂ ಇಂದು ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಲ್ಪಡಲು ಒಪ್ಪುವುದಿಲ್ಲ. ಅಲ್ಲಿಯ ತರುಣರು ಬ್ರಿಟಿಷ್ ಧ್ವಜವನ್ನು ಸಾರ್ವಜನಿಕದಲ್ಲಿ ಸುಟ್ಟು ಹಾಕಿದ ಸಂಗತಿಯು ಬ್ರಿಟಿಷ್ ದರ್ಪಕ್ಕೆ ಕಳಂಕ ತಂದ ಹಾಗಿರುತ್ತದೆ.

ಕೆನಡವಾಗಲೀ ಇಲ್ಲವೇ ಉತ್ತರ ಮತ್ತು ದಕ್ಷಿಣ ಅಮೇರಿಕಗಳ ಯಾವುದೇ ರಾಷ್ಟ್ರದ ಮೇಲೆ ಪರದೇಶಿಯರು ಯಾವುದೊಂದು ತರದ ದಬ್ಬಾಳಿಕೆ ನಡೆಸುವ ಪ್ರಯತ್ನ ಮಾಡಿದರೆ ಸಂಯುಕ್ತ ಅಮೇರಿಕವು ತನ್ನ ಸೈನ್ಯ ಬಲದಿಂದ ಅವುಗಳನ್ನು ರಕ್ಷಿಸುವುದೆಂದು ಮುಂಚೆಯೇ ಒಪ್ಪಂದ ಕರಾರುಗಳಾಗಿವೆ.

ಅಮೇರಿಕನ್ನರ ಪ್ರಥಮ ಕರ್ತವ್ಯವೆಂದರೆ ಅಕಸ್ಮಾತ್ ಆಕ್ರಮಣ ಚಟುವಟಿಕೆಗಳನ್ನು ತಡೆಯುವುದು. ಅದಕ್ಕಾಗಿ ಚಾಣಾಕ್ಷ ಗುಪ್ತಚಾರರ ಕೂಟವೊಂದನ್ನು ಅವರು ಸ್ಥಾಪಿಸಿ ಜಗತ್ತಿನ ರಾಜಧಾನಿಗಳಲ್ಲಿನ ಗುಪ್ತವರದಿಗಳನ್ನು ತರಿಸುವರು. ಇಂತಹ ಏರ್ಪಾಡು ಇಲ್ಲದಿದ್ದುದರಿಂದಲೇ ಜಪಾನು ಪರ್ಲ್‌ಹಾರ್ಬರಿನ ಬಳಿ ಅಮೇರಿಕವನ್ನು ಹಿಂದಿನಿಂದ ಬೆನ್ನಿಗೆ ತಿವಿಯಿತು.

"ಯುದ್ಧದಲ್ಲಿ ಯಾವಾಗಲೂ ಬಲವಾದ ಭದ್ರತೆಯೆಂದರೆ ಶತ್ರುಗಳನ್ನು ತಡೆದು ನಿಲ್ಲಿಸುವ ಶಕ್ತಿ. ಇಂತಹ ಶಕ್ತಿಯನ್ನು ಹೊಂದಲು ನಮ್ಮ ಸೈನ್ಯ ಠಾಣ್ಯಗಳು ಶತ್ರು ಶಿಬಿರಗಳ ಅಡಿಪ್ಪು ಹತ್ತಿರದ ಪ್ರದೇಶದಲ್ಲಿ ಸ್ಥಾಪಿಸಲ್ಪಡಬೇಕು. ಕರಾವಳಿ ಉದ್ದಕ್ಕೂ ಚಿಕ್ಕ ಚಿಕ್ಕ ಕೋಟೆ ಕೊತ್ತಳಗಳು ರಚಿಸಲ್ಪಡಬೇಕು." ಎಂದು ಮಿ। ಜೋನ್ಸನ್ನರು ಅಭಿಪ್ರಾಯ ಪಡುತ್ತಾರೆ. ಬ್ರೆಜಿಲ್, ನ್ಯೂಜಿಲೆಂಡ್, ಮುಂತಾದ ೮ ದೇಶಗಳೊಡನೆ ಯೋಗ್ಯ ಒಪ್ಪಂದ ಕರಾರುಗಳನ್ನು ಮಾಡಿಕೊಂಡು ಗಂಡಾಂತರ ಸಮಯದಲ್ಲಿ ಅಲ್ಲಿನ ಪ್ರದೇಶಗಳಲ್ಲಿ ಸೈನ್ಯ ಶಿಬಿರಗಳನ್ನು ಶೀಘ್ರವಾಗಿ ಸ್ಥಾಪಿಸುವ ಏರ್ಪಾಡುಗಳನ್ನು ಮಾಡಬೇಕೆಂದೂ ಅವರ ಸೂಚನೆ. ಪ್ರತಿಯೊಂದು ಕರಾವಳಿ ಮತ್ತು ಶತ್ರು ಪ್ರದೇಶದ ಬಳಿಯ ಪ್ರದೇಶಗಳಲ್ಲಿ ಪರಿಪೂರ್ಣವಾದ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸುವುದರಿಂದ ಶತ್ರು ಕಡೆಯ ಗುಪ್ತ ಮಂತ್ರಾಲೋಚನೆ, ರಹಸ್ಯ ವ್ಯವಹಾರಗಳನ್ನೂ ತಿಳಿದುಕೊಳ್ಳುವರೆ ಏರ್ಪಾಡುಗಳನ್ನೂ ಮಾಡಬೇಕಾಗುವುದು.

ವಿಮಾನ ಬಲವೇ ಮಹತ್ವದ್ದು

ಆಕ್ರಮಣಗಾರರನ್ನು ನಿರುತ್ತೇಜನಗೊಳಿಸುವ ಅತೀ ಶಕ್ತಿಯುಕ್ತವೂ ಪ್ರಭಾವಶಾಲಿಯಾದುದೂ ಆದ ಒಂದೇ ಉಪಾಯವೆಂದರೆ ವಾಯುಬಲವನ್ನು ಅಭಿವೃದ್ಧಿಗೊಳಿಸುವುದು. ಕಳೆದ ಯುದ್ಧ ಕಾಲದ ಐದು ಸಾವಿರ ವಿಮಾನಗಳ ಶಕ್ತಿ ಇಂದಿನ ಒಂದು ಸಾವಿರ ವಿಮಾನಗಳಷ್ಟು ಸರಿಸಮಾನವಾಗುವುದಿಲ್ಲ. ಅದೇ ಪ್ರಕಾರ ಮುಂದೆ ಇನ್ನೂ ಮಹತ್ತರವಾದ ನಾಶಕಾರಕ ಶಕ್ತಿಯುಳ್ಳ ವಿಮಾನಗಳನ್ನು ತಯಾರಿಸಿ ಅಮೇರಿಕನ್ನರು ತಮ್ಮ ಖಂಡವನ್ನು ಶತ್ರು ದಾಳಿಯನ್ನು ಎದುರಿಸುವರು. ಕೆಲವೇ ಕ್ಷಣಗಳ ಎಚ್ಚರಿಕೆಯಿಂದ ಕರಾವಳಿ ಠಾಣ್ಯಗಳಿಂದ ಅತೀ ವೇಗದ ಬೊಂಬರ್ ದಳಗಳು ಸುಸಜ್ಜಿತವಾಗಿ ಆಕ್ರಮಣಗಾರರ ಬಲವನ್ನು ಮೊಳಕೆಯಲ್ಲೇ ಮುರಿದು ಬಿಡಲು ಬಯಸುತ್ತವೆ.

ಹಡಗುಗಳ ಮೇಲಿನ ವಿಮಾನಗಳು ಸದಾ ಸಿದ್ಧವಾಗಿಯೇ ನಿಲ್ಲುವವು. ಕರಾವಳಿಯ ಸಾಗರ ಪ್ರದೇಶಗಳನ್ನು ಇವು ಅವಿಶ್ರಾಂತವಾದ ನಿರೀಕ್ಷಣೆಗೆ ಗುರಿಮಾಡಿ ಶತ್ರುಗಳ ಸುಳಿವಿನ ಸೂಕ್ಷ್ಮ ಚಲನವಲನಗಳನ್ನು ರಾತ್ರಿ ಹಗಲು ಎಂಬಂತೆ ಪಹರೆ ಮಾಡುವವು. ಅಪಾಯಕಾರಕವಾದ ಸೂಚನೆ ಸಿಕ್ಕಿದ ಕೂಡಲೇ ಇವು ನೆಲ ಜಲ ದಳಗಳಿಗೆ ಎಚ್ಚರಿಕೆ ಕೊಡುವವು. ಆಗ ಪ್ರತಿಯೊಂದು ಯುದ್ಧಾಂಗವೂ ಕ್ಷಣದಲ್ಲಿ ಚೇತನಗೊಂಡು ಸಜ್ಜಿತನಾಗಿ ಶತ್ರುವನ್ನು ಮುರಿದಿಕ್ಕುವ ಸಂದರ್ಭವನ್ನು ಎದುರು ನೋಡುತ್ತಿರುವುದು.

ವಿಮಾನ ಬಲದಂತೆ ನೌಕಾ ಪಡೆಯಾದರೂ ಅಷ್ಟೇ ಶಕ್ತಿವಂತವಿರಬೇಕಾದುದು ಅತ್ಯಗತ್ಯವೆಂದು ಅಮೇರಿಕನ್ ಸಮರ ತಜ್ಞರ ಗಮನಕ್ಕೆ ಬಂದಿದೆ. ಶಾಂತಿ ಕಾಲದಲ್ಲಿ ಅವರ ಯುದ್ಧ ನಾವೆಗಳು ಸಮುದ್ರಗಳನ್ನು ಸತತವಾಗಿ ಕಾವಲುಗಾರರಂತೆ ಸಂಚಾರ ಮಾಡುತ್ತಿರುವವು. ೧೫ ಯುದ್ಧ ನಾವೆಗಳೂ, ೩೦ ದಾಳಿಮಾಡುವ ನೌಕೆಗಳೂ (ಇವು ನೌಕಾ ಬಲದ ಮುಂಭಾಗದಲ್ಲಿ ನಿಂತು ಹೋರಾಡುವಂತವುಗಳು) ೭೫ ವಿನಾಶಿಕೆಗಳೂ ಮತ್ತು ೧೫೦ ಜಲಾಂತರ್ಗಾಮಿ ಸಬ್‌ಮೇರಿನುಗಳು ಅಮೇರಿಕದ ಶಾಂತಿ ಕಾಲದ ನೌಕಾ ಬಲವಾಗಿರಬೇಕಾದುದು ಅತ್ಯಾವಶ್ಯಕವಂತೆ. ಇಂತಹ ನೌಕಾ ಪಡೆಯು ಅತ್ಯಾಧುನಿಕ ಜಲ ಸಂಗ್ರಾಮಕ್ಕೆ ತಕ್ಕವುಗಳಾಗಿ ರಚಿಸಲ್ಪಟ್ಟಿದ್ದು, ಜಗತ್ತಿನ ಎಲ್ಲಾ ಜನಾಂಗಗಳ ನೌಕಾ ಬಲಗಿಂತಲೂ ಅತಿಶಯವಾದ ಸಾಹಿತ್ಯೋಪಕರಣಗಳಿಂದ ಇವು ಕೂಡಿರುವುದು. ಇವುಗಳಲ್ಲಿ ಆಹಾರ ಸಂಗ್ರಹಕ್ಕೆ ಹೆಚ್ಚು ಸ್ಥಳವನ್ನು ಏರ್ಪಡಿಸುವುದರಿಂದ ಇವು ತಮ್ಮ ಕರಾವಳಿಯನ್ನು ಬಿಟ್ಟು ಬಹಳ ದೂರದ ತನಕ ಹೋಗಿ ತಮ್ಮ ಕಾರ್ಯ ಸಾಗಿಸಲು ಯೋಗ್ಯವಾಗಿರುವವು.

ಸುವ್ಯವಸ್ಥಿತವಾದ ಸೈನ್ಯ ಬಲ

ಸೋಲಿಸಲ್ಪಡುವ ಜಪಾನು ಜರ್ಮನಿಗಳನ್ನು ನಿಯಂತ್ರಣದಲ್ಲಿ ಇಡಲು ಮಿತ್ರ ಜನಾಂಗಗಳಿಗೆ ಕೆಲವು ಮಿಲಿಯ ಸೈನ್ಯಗಳ ಅವಶ್ಯಕತೆ ಇದ್ದೇ ಇರುತ್ತದೆ. ಇದಲ್ಲದೆ ಅಮೇರಿಕವು ಸ್ವಂತವಾದ ಒಂದು ಪ್ರತ್ಯೇಕ ಸೈನ್ಯವನ್ನು ಇಟ್ಟುಕೊಳ್ಳಬೇಕಾಗುವುದು. ಈ ಸೈನ್ಯದಲ್ಲಿ ಹೆಚ್ಚಿನವುಗಳು ಸ್ವಯಂ ಸೇವಕ ದಳಗಳಾಗಿರುವವು. ಅಮೇರಿಕದ ಗೃಹ ಸಂರಕ್ಷಣೆಗಾಗಿ ಸೈನ್ಯದ ಹೆಚ್ಚಿನ ಶಿಬಂಧಿಯು ತರಬೇತುಗೊಳಿಸಲ್ಪಡುವುದು. ಕರೆದಾಗ ಯುದ್ಧಕ್ಕೆ ಸಿದ್ಧವಾಗಿರುವ ಮಿಲಿಯಗಟ್ಟಲೆ ಜನರನ್ನು ತರಬೇತುಗೊಳಿಸಿ ಶಾಂತಿಕಾಲದಲ್ಲಿ ಅವರನ್ನು ಕೈಗಾರಿಕೆಗಳಲ್ಲಿ ಕೆಲಸಕ್ಕೆ ಹಚ್ಚಬೇಕಾಗುವುದು. ಇವರು ವರ್ಷದ ನಿರ್ದಿಷ್ಟ ಕೆಲವು ಸಮಯದಲ್ಲಿ ಒಟ್ಟು ಸೇರಿ ಸೈನ್ಯಕವಾಯತು, ತರಬೇತಿ, ಯುದ್ಧೋಪಕರಣಗಳ ಉಪಯೋಗಗಳನ್ನು ಅಭ್ಯಾಸಿಸಬೇಕು. ಇಷ್ಟೊಂದು ಸುವ್ಯವಸ್ಥೆ ಇದ್ದರೇನೆ ಅಮೇರಿಕದ ಗಂಡಾಂತರ ತಪ್ಪಿಸಬಹುದು.

ಜಪಾನು

(೩ನೇ ಪುಟದಿಂದ)

ಜಪಾನಿಯ ವಸ್ತು ಒಡವೆಗಳು ಕಡಿಮೆ ಧಾರಣೆಯಲ್ಲಿ ಮಾರಾಟವಾಗುತ್ತಿದ್ದುವು. ಹಿಂದೂ ದೇಶದಿಂದ ಹತ್ತಿಯನ್ನು ಒಯ್ದು, ತಮ್ಮ ದೇಶದಲ್ಲಿ ಅದರಿಂದ ಅರಿವೆಗಳನ್ನು ತಯಾರಿಸಿ ಅವನ್ನು ಮರಳಿ ಹಿಂದೂದೇಶಕ್ಕೆ ತಂದು ಹಿಂದೂದೇಶದಲ್ಲೆ ಸಿದ್ಧವಾಗುತ್ತಿರುವ ಅರಿವೆಗಿಂತ ಕಡಿಮೆ ಧಾರಣೆಯಲ್ಲಿ ವಿಕ್ರಯಿಸಲ್ಪಡುತ್ತಿದ್ದವು. ಅಲ್ಲಿನ ಅರಿವೆ ಗಿರಣಿಗಳಲ್ಲಿ ಅನೇಕ ಸುಧಾರಿತ ಕ್ರಮಗಳು ಆಚರಣೆಗೆ ತರಲಾಗಿವೆ. ಅಲ್ಲಿ ಇತ್ತೀಚೆಗೆ ಕಲ್ಪಿಸಲಾದ ನೇಯುವ ಉಪಕರಣದಿಂದ ೨೦ ಜನರಿಂದ ಆಗುವ ಕೆಲಸವು ಒಂದು ಹುಡುಗಿಯಿಂದ ಪೂರೈಸುವಂತಾಗಿದೆ! ಜಪಾನಿನಲ್ಲಿ ಕೈಗಾರಿಕೆಗಳೆಲ್ಲಾ ಇಡೀ ದೇಶದಲ್ಲಿ ಹಂಚಿದ್ದು ನಡೆಯುತ್ತಿವೆ. ಅಲ್ಲಿ ೯೫,೦೦೦ ಕಾರ್ಖಾನೆಗಳು ಉದ್ಯೋಗಿಸುತ್ತಿದ್ದವು. ಜಪಾನಿನಲ್ಲಿ ನಿರುದ್ಯೋಗ ಸಮಸ್ಯೆಯು ಉಂಟಾಗಲಿಯಿಲ್ಲ. ಅಲ್ಲಿ ಕೆಲಸಗಾರರಿಗೆ ಹೆಚ್ಚಿನ ಸ್ವಾತಂತ್ರ್ಯವಿಲ್ಲ. ಯಂತ್ರಗಳು ದುಡಿದಂತೆ ಅವರು ದುಡಿಯುತ್ತಿರುವರು. ಕೆಲಸಗಾರರ ಅತೃಪ್ತಿ ಸಮಸ್ಯೆಯು ಅಲ್ಲಿ ಕಾಣಿಸಿಕೊಳ್ಳುವುದು ಕಡಿಮೆ. ಯಂತ್ರವು ಸಂಯೋಗಿ ನಡೆಯುವಂತೆ ಅದರ ಐಕ್ಯತೆಯು ನೋಡಲಾಗುವಂತೆ ಕೆಲಸಗಾರರು ಸಂಯೋಗಿ ದುಡಿಯುವಂತೆ, ಅವರಿಂದ ಅತಿ ಹೆಚ್ಚಿನ ಕೆಲಸವು ಆಗುವಂತೆ ಅವರ ಐಕ್ಯತೆಯು ನಡೆಯುತ್ತದೆ. ಜಪಾನಿನಲ್ಲಿ ಎಲ್ಲಾ ವ್ಯವಸ್ಥೆಗಳು ಯಂತ್ರದೋಪಾದಿ ನಡೆಯುತ್ತಿವೆ.

ಜಪಾನಿನ ರಾಜಾಡಳಿತದಲ್ಲಿ ಫೆಸಿಷ್ಟ ತತ್ವಗಳೆ ಹೆಚ್ಚಾಗಿ ಬಳಕಲ್ಪಡುತ್ತಿದ್ದರೂ ಅದರಲ್ಲಿ ಕೊಮುನಿಷ್ಟ ರಷ್ಯಾದ ಕ್ರಮಗಳೂ ಕೆಲವು ಕೂಡಿಕೊಂಡಿವೆ. ಜಪಾನಿ ಸಂಗ್ರಾಮ ವರ್ಗವು ಸಾಮಾನ್ಯ ಜನವರ್ಗದಿಂದ ಬರುವ ಜನರಿಂದ ಕೂಡಿಕೊಂಡಿರುವುದರಿಂದ, ಆ ಸಂಗ್ರಾಮ ವರ್ಗವು ಶ್ರೀಮಂತ ವರ್ಗವನ್ನು ಸಹಿಸುವುದಿಲ್ಲ. ಹೀಗೆಂದೂ ಕೊಮುನಿಷ್ಟ ಕ್ರಮಗಳೂ ಅವರಿಂದ ವಾಸ್ತವತೆಯನ್ನು ಪಡೆಯುವುದಿಲ್ಲ.

ಶಿಕ್ಷಣದ ಕುರಿತು ಜಪಾನಿಯರ ಕೂತೂಹಲವು ಅತ್ಯಂತ ಶ್ಲಾಘನೀಯ. ಅಲ್ಲಿ ಜನಿಸಿದ ಪ್ರತಿಯೊಂದು ಶಿಶುವು ಶಾಲೆಯನ್ನು ಸೇರಲೇಬೇಕೆಂಬ ಕಡ್ಡಾಯದ ಕ್ರಮಗಳಿವೆ. ಅಲ್ಲಿ ಶೇ. ೯೫ ಮಂದಿಗಳು ಶಿಕ್ಷಿತರು.

ಇಷ್ಟಾದರೂ ಜಪಾನಿಯರಲ್ಲಿ ಉಚ್ಚಜ್ಞಾನದ ಬೆಳವಣಿಗೆಯು ಆಗಲಿಲ್ಲ. ಅವರ ಮೂಲ ಸ್ವಭಾವಗಳು ಒಂದಿಷ್ಟು ಮಾರ್ಪಾಡಾಗದೆ ಉಳಿದಿವೆ. ಅವರ ಶ್ರೇಷ್ಠನಾವು'ಭಾವವು ಪಾಶ್ಚಾತ್ಯಕರಣದಿಂದ ಇನ್ನೂ ಬೆಳೆದಿದೆ. **ಅಸ್ಯಾಖಂಡದಲ್ಲಿ ಪ್ರಜಾಸತ್ತೆಗೆ ಆಸ್ಪದ ದೊರಕಬೇಕಾದರೆ, ಜಪಾನಿನ ಪರಿವರ್ತನೆಯಾಗಬೇಕು; ಅವರು ಪ್ರಜಾಸತ್ತೆಗೆ ಮಣಿಯದಿದ್ದರೆ, ಅವರ ಮೇಲೆ ಬಲತ್ಕಾರವು ನಡೆಯಬೇಕು.** ಈ ಕಾರ್ಯದಲ್ಲಿ ಮಿತ್ರರೀಗ ತೊಡಗಿರುವರು.

ಲಕ್ನೋನೀಯ ವಿಷಯು

ಮುಂಬಾಯಿ ಪ್ರಾಂತೀಯ ಉರ್ದು ಪರಿಷತ್ತು ಮೊನ್ನೆ ಮುಂಬಾಯಿಯಲ್ಲಿ ಜರಗಿತ್ತು. ಪ್ರಸಿದ್ಧ ಉರ್ದು ಸಾಹಿತಿಗಳು ಅಲ್ಲಿ ಕೂಡಿ ಬಂದಿದ್ದರು. ಈ ಪರಿಷತ್ತಿಗೆ ಗಾಂಧೀಜಿಯರಿಂದಲೂ ಜಿನ್ನಾರವರಿಂದಲೂ ಶುಭಸಂದೇಶಗಳು ಬಂದಿದ್ದವು.

ಗಾಂಧೀಜಿಯವರ ಸಂದೇಶವು ಅವರ ಕೈಬರಹದಲ್ಲಿ ಉರ್ದುಭಾಷೆಯಲ್ಲಿ ಬಂದಿತು.

ಜಿನ್ನಾರವರ ಸಂದೇಶವು ಇಂಗ್ಲೀಷಿನಲ್ಲಿ ಬರೆದಿದ್ದು, ಇಂಗ್ಲೀಷಿನ ಸಹಿಯಿಂದ ಕೂಡಿದಾಗಿ ಬಂದಿತ್ತು.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಜಪಾನಿನ ಕೆಲವು ನೋಟಗಳು

ಜಪಾನಿಯರು ಪಾಶ್ಚಾತ್ಯ ಕ್ರಮಗಳನ್ನು ಅನುಕರಿಸಿದ್ದರೂ, ಅಲ್ಲಿ ಪಾಶ್ಚಾತ್ಯ ತರದ ನಾಟ್ಯ ಮನೆಗಳೂ, ನಾಟ್ಯವು ಭಹಿಷ್ಕರಿಸಲ್ಪಟ್ಟಿವೆ.

* * *

ಬೆಂಕಿಕಡ್ಡಿಯನ್ನು ಗಿಡ್ಡದುಮಾಡಿ, ಒಂದು ವರ್ಷದಲ್ಲಿ ೯ ಲಕ್ಷ ರೂ ಮೌಲ್ಯದ ಮೊಪಿನ ಉಳಿತಾಯವು ಜಪಾನಿನಲ್ಲಾಗಿದೆ. ನಮ್ಮಲ್ಲೂ ಇದೇ ತರದ ಉಳಿತಾಯವನ್ನು ಯಾಕೆ ಸಾಧಿಸ ಬಾರದು.

* * *

ಮರದ ಗೊಜ್ಜಿನಿಂದ ತಯಾರಿಸಿದ ಬಟ್ಟೆಯನ್ನು ಜಪಾನೀಯ ನಾಗರೀಕರು ಈಗ ಧಾರಳವಾಗಿ ಉಪಯೋಗಿಸುತ್ತಿರುವರು. ಕಾರಣ, ಜಪಾನಿಗೆ ಹತ್ತಿಯು ಪರದೇಶಗಳಿಂದ ಹೋಗಬೇಕಾಗಿತ್ತು. ಈಗ ಅವರಿಗೆ ಅದು ದೊರಕದಾಗಿದೆ.

* * *

ಮಿತ್ರರು ತಮ್ಮ ಸುತ್ತುಹಾಕಿ, ತಮಗೆ ಆಹಾರ ದೊರಕದಂತೆ ಮಾಡಿದರೆ ಜಪಾನೀಯರು ಮೀನು ತಿಂದು ಜೀವಿಸಬಹುದೆಂದು ಹೇಳಲಾಗಿದೆ. ಆದರೆ ಮೀನಿನಿಂದಲೇ ಮೋಕ್ಷದೊರಕುವುದೆ?

* * *

ಟೋಕಿಯೊ ನಗರದಲ್ಲಿ ಅಂಗಡಿಗಳ ಮುಂದುಗಡೆ ತೂಕ ಹಾಕಿರುವ ಹೆಸರಿನ ಪಲಕಗಳು ಜಪಾನೀಯ ಭಾಷೆಯಲ್ಲೇ ಇರಬೇಕೆಂದು ಕಡ್ಡಾಯದ ಕ್ರಮಗಳಿವೆ. ರೈಲ್ವೆ ನಿಲ್ದಾಣದ ಹೆಸರುಗಳೂ, ರಸ್ತೆಯ ಹೆಸರುಗಳೂ ಇತ್ಯಾದಿ ಪಾದಾಚಾರಿಗಳಿಗೆ ಉಪಯುಕ್ತವೆನಿಸುವ ಸೂಚಕಗಳೆಲ್ಲಾ ಜಪಾನೀಯ ಭಾಷೆಯಲ್ಲೇ ಹಾಕಲ್ಪಟ್ಟಿವೆ. ಈ ಕಾರಣದಿಂದ ಅನ್ಯ ಜನಾಂಗೀಕರಿಗೆ ಟೋಕಿಯೊ ನಗರವು ಚಕ್ರಭೀಮಕೋಟೆಯಂತಾಗಿದೆ. ಜಪಾನಿಯನೊಬ್ಬನು ಸಂಗಡವಿರದಿದ್ದರೆ ಆ ನಗರವನ್ನು ಸುತ್ತಾಡುವುದು ಅತೀ ಪ್ರಯಾಸದ ವಿಚಾರ.

ಜಪಾನಿಯರು ಪಾಶ್ಚಾತ್ಯರನ್ನು ಅನುಕರಿಸಿದ್ದರೂ ಅವರ ರಾಷ್ಟ್ರಾಭಿಮಾನವು ಅನ್ಯ ಭಾಷೆಗಳನ್ನು ಸಹಿಸುವುದಿಲ್ಲವೆಂಬುದಕ್ಕೆ ಇದೊಂದು ದೃಷ್ಟಾಂತವು.

* * *

ಕೆಲವು ಜಪಾನೀಯ ಮುಖಂಡರುಗಳ ಹೇಳಿಕೆಗಳು.

"ದೂರ ಪೂರ್ವದ ಪ್ರದೇಶವನ್ನು ಸಂತುಷ್ಟಿಯ ನಾಡು, ಮತ್ತು ಶಾಂತಿ ಸ್ವರ್ಗವಾಗಿ ಪರಿವರ್ತಿಸುವ ಕೆಲಸದಲ್ಲಿ ಇತರರು ಆತಂಕಿಸಿದಂತೆ, ಅವರನ್ನು ಸೋಲಿಸಲು ಬಲವಾದ ನೌಕಾಬಲವನ್ನು ಏರ್ಪಡಿಸಿಕೊಳ್ಳುವುದು ತೀರಾ ಅವಶ್ಯವಿದೆ."

"ಚೀನಾ—ಜಪಾನ್ ಸಮ್ಮಿಲನ ಮತ್ತು ಮಂಚೂರಿಯಾ ಸ್ವಾತಂತ್ರ್ಯ ದೇಶವಾಗಿ ಬೆಳೆವಣೆಗೆ ಈ ಎರಡು ವಿಚಾರಗಳಲ್ಲಿ ಜಪಾನೀಯರ ಅಸಡ್ಡೆಯಾದರೆ ಆಗ ದೂರ ಪೂರ್ವದ ಶಾಂತಿ ರಕ್ಷಣೆಯ ಅಸಾಧ್ಯವಾಗಬಹುದು."

ಈ ಹೇಳಿಕೆಯನ್ನು ಓದಿದೊಡನೆ, "ಬಾಯಿಯಲ್ಲಿ ಮಗ ಮಗ, ಹೊಟ್ಟೆಯಲ್ಲಿ ಭಗ ಭಗ" ಎಂಬ ಮಾತುಗಳ ನೆನಪಾಗುವುದಿಲ್ಲವೆ.

* * *

ಅಮೇರಿಕನ್ ಪತ್ರಿಕಾಪ್ರತಿನಿಧಿಯೊಬ್ಬನು ಜಪಾನಿನಿಂದ ತನ್ನ ಮಿತ್ರನಿಗೆ ಒಂದು ಪತ್ರವನ್ನು ಬರೆದಿದ್ದನು ಅದರಲ್ಲಿ "ಈ ಪತ್ರವು ನಿನಗೆ ತಲಪಬಹುದೊ, ಇಲ್ಲವೊ ನಾನರಿಯೆ. ಕಾರಣ ಜಪಾನಿನ ಸೇನ್ಸರ್ ಇಲಾಖೆಯವರು ಈ ಪತ್ರವನ್ನು ತೆರೆದು ನೋಡಬಹುದು" ಎಂದು ಬರೆದಿದ್ದನು.

ಈ ಪತ್ರ ಕಳುಹಿಸಿಕೊಟ್ಟ ಸ್ವಲ್ಪ ದಿವಸಗಳ ನಂತರ ಜಪಾನಿನ ಅಂಚೆ ಇಲಾಖೆಯವರಿಂದ ಅವನಿಗೊಂದು ಪತ್ರವು ಬಂದಿತು.

"ನೀವು ಸೂಚಿಸಿದ ಅಭಿಪ್ರಾಯವು ತಪ್ಪಿರುತ್ತದೆ. ನಾವು ಪತ್ರಗಳನ್ನು ತೆರೆದು ನೋಡುವುದಿಲ್ಲ" ಎಂದು ಅದರಲ್ಲಿ ಬರೆಯಲಾಗಿತ್ತು.

ಇದರಿಂದ ನೀವು ಏನುತಿಳಿಯುತ್ತೀರಿ?

* * *

"ಇಲ್ಲೊಬ್ಬನಿದ್ದಾನೆ, ದೊಡ್ಡ ದೇಹದ ವೃದ್ಧನು; ಆತನ ಪ್ರಾಯ ನಾಲ್ಕು ಸಾವಿರ ವರ್ಷಗಳು. ಆತನ ಹೆಸರು ಚೀನಾ. ಅತೀ ಪ್ರಾಚೀನ ಕಾಲದಲ್ಲಿ ಪೂರ್ವ ಆಸ್ಯಾದಲ್ಲಿ ಆತನ ಜನನವಾಯಿತೆಂದು ಆತನ ಆತ್ಮಕಥೆಯಿಂದ ತಿಳಿಯಬಹುದು. ಶಿಶುವಾಗಿರುವಾಗ ಆತನು ಹಷನ್ಮುಖನಾಗಿದ್ದು, ಕಾರುಣ್ಯದಲ್ಲಿ ಒಳ್ಳೆ ಪ್ರಗತಿಯನ್ನು ಹೊಂದಿಹೊಂಡನು. ಹಿರಿಯನಾಗುತ್ತಾ ಬರುತ್ತಿದ್ದ ಹಾಗೆ ಆತನಿಂದ ಅನೇಕ ಉತ್ತಮ ಕೆಲಸಗಳು ನಡೆದವು. ಒಳ್ಳೇ ಲಕ್ಷಣವಂತ ತರುಣಿಯೊಡನೆ ಆತನ ವಿವಾಹವು ನಡೆದು ಆತನಿಂದ ವಿಜ್ಞಾನದ, ಕಲೆಯ ಅಮರ ಜ್ಞಾನವನ್ನು ಭೀರುವ ಮಕ್ಕಳು ಜನಿಸಿದವು. ಬರಬರುತ್ತಾ ಆತನು ವೃದ್ಧನಾಗಿ, ಕುಂಟನಾಗಿ, ಕುರುಡನಾಗಿ, ಮುದಿಭ್ರಾಂತಿ ಆತನಲ್ಲಿ ತೋರಿಕೊಂಡಿತು. ಆತನು ಏನೂ ಮಾಡದಾತನಾದನು. ನಮ್ಮ ನೆರೆಯವನಾದ ವೃದ್ಧನ ಈಗಿನ ಶೋಚನೀಯ ಸ್ಥಿತಿಯಿಂದ ನನಗೆ ಅತ್ಯಂತ ವಿಶಾದಯೆನಿಸುತ್ತದೆ."

ಚೀನಾದ ಕುರಿತುಜಪಾನೀಯ ತರುಣನೊಬ್ಬನು ಸೂಚಿಸಿದ ಅಭಿಪ್ರಾಯವಿದು. ಇವತ್ತಿಗೆ ಎಂಟು ವರ್ಷಗಳ ಅವಿಶ್ರಾಂತ ಪರಿಶ್ರಮ ನಡೆದಾಗ್ಯೂ, ವೃದ್ಧ ಚೀನಾವನ್ನು ಹತೋಟಿಗೆ ತರಲಾಗಲಿಲ್ಲ. ವೃದ್ಧನ ಬದಲಿಗೆ ಜಪಾನು ಈಗ ತರುಣ ಚೀನಾವನ್ನು ಎದುರಿಸಬೇಕಾಗಿದೆ.

ಸಿಹಿ ಸುದ್ದಿ ಸಂಗ್ರಹ

ಬೊಂಬೇ ಕ್ರೋನಿಕಲ್ ಪತ್ರಿಕೆಯ ಯುದ್ಧ ವರದಿಗಾರರಾಗಿ ಇಟೇಲಿಗೆ ಹೋಗಿರುವ ಮಿ। ಡಿ. ಎಫ್. ಕಾರಕಾ ಅವರು ಅಲ್ಲಿನ ಗೊರಿಲ್ಲಾ ದಳದವರೊಂದಿಗೆ ಕೆಲವು ದಿನ ಅತಿಥಿಗಳಾಗಿದ್ದರು. ಈ ಇಟೇಲಿಯನ್ ದೇಶಭಕ್ತರು ಮಹಾತ್ಮಾ ಗಾಂಧಿಯವರ ಚಳವಳದ ಕುರಿತು ಆಸಕ್ತಿಯಿಂದ ವಿಚಾರಿಸಿದರು. ಅವರು ಜಿನ್ನರ ವಿಷಯವಾಗಿ ಎಂದೂ ಕೇಳಿದವರಲ್ಲ. ಗಾಂಧಿ ಎಂದರೆ ಜನತೆಯ ಚಳವಳದ ಮೂರ್ತಿಸ್ವರೂಪರೆಂದೇ ಅವರ ತಿಳುವಳಿಕೆ-ಹೀಗೆಂದು ಶ್ರೀ ಕಾರಕಾ ಅವರು ಬರೆದಿದ್ದಾರೆ.

* * *

ಆಫ್ರಿಕದ ಕರಾವಳಿ ನೌಕಾ ಪಡೆಯಲ್ಲಿ ಅಧಿಕಾರಿಯೊಬ್ಬನು ಅಲ್ಲಿಯ ಒಬ್ಬ ನಿಗ್ರೋನಿವಾಸಿಗೆ ಮರದ ಕೆಲವು ಕುರ್ಚಿ ಮೇಜುಗಳನ್ನು ಮಾಡಿಕೊಟ್ಟನು. ಅದಕ್ಕೆ ಪ್ರತಿಯಾಗಿ ಆ ನಿಗ್ರೋವು ತನ್ನ ಮೂರು ಹೆಂಡತಿಯರಲ್ಲಿ ಕಿರಿಯವಳೊಬ್ಬಳನ್ನು ಉಡುಗೊರೆಯಾಗಿ ಅರ್ಪಿಸಿದನಂತೆ. ಆದರೆ ಅಧಿಕಾರಿ ಅದನ್ನು ಸ್ವೀಕರಿಸಲೊಪ್ಪಲಿಲ್ಲ.

* * *

ಘೂರ್ಕಾ ಜನರ ನೇಪಾಲಿನಲ್ಲಿ ಜನರಿಗೆ ನೋಡಲು ಸಿನೆಮಾ ಮಂದಿರಗಳಿಲ್ಲ ಅಲ್ಲಿನ ರಾಜರ ಮತ್ತು ಮುಖ್ಯ ಮಂತ್ರಿಗಳ ಅರಮನೆಯಲ್ಲಿ ಒಂದೊಂದು ಸಿನೆಮಾಯಂತ್ರವಿದೆ. ನೇಪಾಲಿನಲ್ಲಿ ಇಗರ್ಜಿಗಳಿಲ್ಲ, ಟೆಲಿಗ್ರಾಫ್ ಆಫೀಸಿಲ್ಲ. ಟೇಲಿಫೋನುಗಳಿವೆ–ಆದರೆ ಸಾರ್ವಜನಿಕರು ಅದನ್ನು ಉಪಯೋಗಿಸಬಾರದು.

* * *

ಇಂಗ್ಲೆಂಡಿನ ಒಂದು ಹೋಟೆಲಿನ ಬಾಗಿಲಲ್ಲಿ ಈ ರೀತಿಯ ಒಂದು ಬೋರ್ಡು ತೂಗ ಹಾಕಿತ್ತು: "ಓರ್ವ ಪರಿಚಾರಿಕೆ ಬೇಕಾಗಿದ್ದಾಳೆ–ಅಗತ್ಯ ಬಿದ್ದರೆ ವಿವಾಹ ಮಾಡಿ ಕೊಳ್ಳಲಾಗುವುದು."

* * *

ನಾಭಾ ಸಂಸ್ಥಾನದ ಮಾಜಿ ಮೃತ ಮಹಾರಾಜರ ಹಿರಿಯ ರಾಣಿಯು ಅರಮನೆಯ ಬಾಗಿಲ ಮುಂದೆ ಸತ್ಯಾಗ್ರಹ ಮಾಡುತಿದ್ದಾಳೆ. ತನ್ನ ಮಗನಿಗೆ ಪಟ್ಟ ದೊರೆಯಬೇಕೆಂದೂ ಮತ್ತು ತನ್ನ ಜೀವನಾಂಶವನ್ನು ಕೊಡಬೇಕೆಂದೂ ಅವಳ ಕೇಳಿಕೆ.

* * *

ಜಗತ್ತಿನ ಸಮುದ್ರಗಳಲ್ಲಿ ಎಷ್ಟು ಉಪ್ಪು ಇದೆ? ಇಡೀ ಭೂಲೋಕಕ್ಕೆ ಮುಚ್ಚಲಿಕ್ಕಾಗುವ ೪೦೦ ಇಡಿ ದಪ್ಪದ 'ಜಮಖಾನೆ'ಯನ್ನು ಅದರಿಂದ ಮಾಡಬಹುದಂತೆ.

* * *

ಕಲ್ಲಿದಲ್ಲಿನ ಅಭಾವದಿಂದ ನಮ್ಮ ದೇಶದಲ್ಲಿನ ೧೧೦ ಬಟ್ಟೆ ಗಿರಣಿಗಳು ಕಳೆದ ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಮುಚ್ಚಲ್ಪಟ್ಟವು.

* * *

ಗುಡ್ಡ ಕಾಡುಗಳಲ್ಲಿ ಹೋಗಿ ನೆಲೆನಿಂತ ನ್ಯೂಯೋರ್ಕಿನ ಮಿ। ವಿಲ್ಲಿಯಮ್ ಮೊರ್ಲೆಂಡ್ ಎಂಬ ಗೃಹಸ್ಥನಿಗೆ ಯುದವಾಗುತ್ತಿದೆ ಎಂದು ಕೆಲವೇ ದಿನಗಳ ಹಿಂದೆ ತಿಳಿಯಿತಂತೆ. ೧೯೩೨ರಲ್ಲಿ ರೂಸ್‌ವೆಲ್ಟರು ಅಧ್ಯಕ್ಷರಾಗಿ ಆರಿಸಲ್ಪಟ್ಟಾಗ ಈ ಮಹನೀಯರು ನ್ಯೂಯೋರ್ಕನನ್ನು ಬಿಟ್ಟು 'ವಾನ ಪ್ರಸ್ತ' ಹಿಡಿದನಂತೆ. ಈತ ರೂಸ್‌ವೆಲ್ಟ್ ವಿರೋಧಿ.

* * *

ರಟ್ಲೆಂಡ್ ಎಂಬುದು ಇಂಗ್ಲೆಂಡಿನ ಅತೀ ಚಿಕ್ಕ ಜಿಲ್ಲೆ. ಅಲ್ಲಿಯ ಕೋರ್ಟಿನಲ್ಲಿ ಯಾವ ತರದ ಕ್ರಿಮಿನಲ್ ಅಥವಾ ಸಿವಿಲ್ ಕೇಸುಗಳೇ ಬರದಿರುವುದು ಅಲ್ಲಿನ ನಾಗರೀಕರ ಸೌಮ್ಯ ಸ್ವಭಾವದ ಲಕ್ಷಣ ೧೯೩೯ರಲ್ಲಿ ಅಲ್ಲಿನ ಕೋರ್ಟಿನಲ್ಲಿ ಒಂದು ಚಿಕ್ಕ ಸಿವಿಲ್ ಕಟ್ಲೆ ಬಂದಿತ್ತು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ
ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು
ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD.   ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.   1906

[ಸಂಪುಟ 39]   ತಾರೀಕು 23—3—1945   [ಸಂಚಿಕೆ 12]

ನಾಜಿಗಳು ನೆಲದಡಿ ಯುದ್ಧ ಮಾಡುವರು!

ಹಿಟ್ಲರನ ಗುಪ್ತಅಸ್ತ್ರ ಕಾರ್ಖಾನೆ

ಮಿತ್ರ ಪೋಷಾಕಿನಲ್ಲಿ ಜರ್ಮನರು

"ನಾವು ಸೋತ ಮೇಲೂ ಯುದ್ಧವನ್ನು ಮಾಡುವೆವು" ಎಂದು ಹಿಟ್ಲರನು ತನ್ನೊಂದು ಇತ್ತೀಚೆಗಿನ ಭಾಷಣದಲ್ಲಿ ಹೇಳಿರುವನು. 'ಸೋಲುವುದು ಖಂಡಿತವೆಂದು ನಾಜೀ ಮುಖಂಡನಿಗೆ ಖಚಿತವಾಗಿದೆ' ಎಂಬ ವಿಷಯ ಸ್ಪಷ್ಟವಾಗುತ್ತದೆ. ಎಂದು ಮಿತ್ರ ಸಮರ ನಿರೀಕ್ಷಕರು ಅಭಿಪ್ರಾಯಪಟ್ಟಿರುವರಾದರು. ಈ "ಸೋತ ಮೇಲೂ ಯುದ್ಧ"ವೆಂತಹದೆಂಬುದುದರ ಕುರುಹುಗಳು ಮಿತ್ರ ಸೇನಾಧಿಪತಿಗಳಿಗೆ ಸಿಕ್ಕಿವೆ.

ಸೋಲು ಖಂಡಿತವೆಂದರಿತ ನಾಜೀಗಳು ತಮ್ಮ ಚಳವಳವನ್ನು ಗುಪ್ತ ರೀತಿಯಲ್ಲಿ ನೆರವೇರಿಸಲು ಸವಿಸ್ತಾರದ ಯೋಜನೆಗಳನ್ನು ತಯಾರಿಸಿರುವರೆಂದು ಲಂಡನಿನ ಒಂದು ವಾರ್ತಾಸಂಸ್ಥೆಯು ತಿಳಿಸುತ್ತಾ ಆ ಕುರಿತು ಅನೇಕ ಕೌತುಕದ ಸಂಗತಿಗಳನ್ನು ಪ್ರಕಟಿಸಿದೆ.

ಹಿಟ್ಲರ್ ಕೂಟದ ಮುಖಂಡರ ಬಳಿ ಈಗೆರಡು ನಮೂನೆಯ ಸಮರ ಯೋಜನೆಗಳು ಇವೆ. ರಾಷ್ಟ್ರ ಭಾವನೆಯಿಂದ ಅಂಧರಾಗಿರುವ ಕೆಲವು ನಾಜೀ ತರುಣ ದಳಗಳನ್ನು ಗುಡ್ಡ ಕಾಡುಗಳಲ್ಲಿರಿಸಿ ಬಹಿರಂಗವಾದ ಗೋರಿಲ್ಲಾ ಯುದ್ಧವನ್ನು ಮಾಡುವುದೊಂದು ಉಪಾಯ. ಮಿತ್ರರು ಜರ್ಮನಿಯನ್ನು ಆಕ್ರಮಿಸಿದ ನಂತರ ಗುಪ್ತ ರೀತಿಯಲ್ಲಿ 'ನೆಲದಡಿಯ, ಕಾರಸ್ಥಾನಗಳ ಮೂಲಕ ಆಡಳಿತಗಾರರಿಗೆ ನಿರಂತರವಾಗಿ ಹಿಂಸೆಯನ್ನು ಕೊಡುತ್ತಾ ಸಾಕೋ ಸಾಕು ಮಾಡುವ ಉಪಾಯ ಎರಡನೇಯದು. ಬಹಿರಂಗವಾಗಿ ಯುದ್ಧ ಮಾಡುವ ಜರ್ಮನರ ರೀತಿಗಳು ಅದೆಷ್ಟು ಕಠಿಣ ಇವೆಯೆಂದು ತಿಳಿದ ಮೇಲೆ ಅವರ ಗುಪ್ತ ಕಾರ್ಯ ಸಾಧನೆಗಳ ಪರಿಪೂರ್ಣತೆಯನ್ನು ಅಲಕ್ಷದಿಂದ ನೋಡಲಾಗುಗುವುದಿಲ್ಲ.

ಮೊತ್ತ ಮೊದಲು ಹಿಟ್ಲರನೇ ಜರ್ಮನಿಯ ಮೊದಲ 'ವೀರ ಸೈನಿಕತ್ಯಾಗಿ'ಯಾಗಿ ರಹಸ್ಯವಾಗಿರುವ ಒಂದು ಗುಡ್ಡ ಪ್ರದೇಶದಲ್ಲಿ ಅವಿತು ಕೊಳ್ಳುವನು. ಅವನೊಂದು ಸಲ ತನ್ನ ಹತ್ತಿರದ ಆಪ್ತ ಸ್ನೇಹಿತರಲ್ಲಿ "ಅಗತ್ಯವಿದ್ದರೆ ನಾನೂ ಎಂಡ್ರಿಯನ್ ಹೋಫರನಂತೆ ಗುಡ್ಡ ಬೆಟ್ಟಗಳಲ್ಲಿ ಹೋಗಿ ನೆಲಸುವೆ" ಎಂದು ಹೇಳಿರುವನಂತೆ. ಹಿಂದೆ ನೇಪೋಲಿಯನನ್ನು ಎದುರಿಸಿದ ಆಸ್ಟ್ರೀಯದ ರೈತ ಮುಖಂಡನಾದ ಹೋಫರನೂ ಶಿವಾಜಿಯಂತೆ ಗುಡ್ಡ ಕಾಡುಗಳಿಂದಲೇ ತೊಂದರೆ ಕೊಡುತಿದ್ದನಂತೆ. ಇದೇ ತರದ ಯಾವುದಾದರೂ ಬೆಟ್ಟ ಪ್ರಾಂತ್ಯದಲ್ಲಿ ಹಿಟ್ಲರನು ಮಿತ್ರ ಕೈದಿಗಳನ್ನೂ ಇಟ್ಟುಕೊಂಡು ಅವರನ್ನು ಬಲಾತ್ಕಾರದಿಂದ ಕೆಲಸಕ್ಕೆ ಹಚ್ಚಿ ತನಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರಿಸುವನು.

ಮೊದಲನೇ ಯೋಜನೆಯ ಗೋರಿಲ್ಲಾ ದಳಗಳನ್ನು ಒಂದು ವೇಳೆ ಮಿತ್ರ ಕಾವಲು ಸೈನ್ಯಗಳು ನಿರ್ನಾಮಗೊಳಿಸಿದಲ್ಲಿ ನಾಜೀಗಳ ಎರಡನೇ ಯೋಜನೆಯು ಕಾರ್ಯರೂಪಕ್ಕೆ ಬರುವುದು. ಇದಕ್ಕೆ ಡಬ್ಬಲ್ 'ಎನ್' (ಎರಡು 'ನಾ'ಕಾರಗಳುಳ್ಳದ್ದು) ಪ್ಲೇನ್ ಎಂದು ಹೆಸರಿಡಲಾಗಿದೆ. ಈ ಡಬ್ಬಲ್ 'ಎನ್' ಪ್ಲೇನಿನ ಕೆಲವು ರಿಕಾರ್ಡುಗಳು ಸೆರೆ ಹಿಡಿಯಲ್ಪಟ್ಟ ನಾಜೀ ಮುಖಂಡರ ಬಳಿ ದೊರಕಿವೆಯಂತೆ. ಡಬ್ಬಲ್ 'ಎನ್' ಅಂದರೆ 'ನಾಶ ಮಾಡುವ ನಾಜಿ'ಗಳು ಎಂಬರ್ಥದಲ್ಲಿದೆ, ಇಲ್ಲವೆ 'ಸೋಲಿನ ನಂತರ' ಎಂಬ ಭಾವಾರ್ಥವೂ ಇದಕ್ಕಿದೆ. ಜರ್ಮನಿಯನ್ನು ನಿರಂತರವಾದ ದೊಂಬಿ ದಂಗೆ ಪ್ರಕ್ಷೋಭಕ್ಕೆ ಗುರಿಪಡಿಸಿ ಈಗಿನ ನಾಜೀಗಳೇ ಪುನ: ಸುವ್ಯಸ್ಥಿತ ರಾಜಕೀಯ ಪಕ್ಷವಾಗಿ ಮತ್ತೊಂದು ಸಲಕ್ಕೆ ಆಡಳಿತವನ್ನು ವಶಪಡಿಸುವುದೇ ಇದರ ಉದ್ದೇಶ.

ಈಗಾಗಲೇ ಇದಕ್ಕಾಗಿ ನಾಜೀ ಪ್ರವೀಣರು ತಳಹದಿಯನ್ನು ಹಾಕಿರುವರು. ಅಳಿದುಳಿದಿರುವ ನಾಜೀ ಸದಸ್ಯರು ಜರ್ಮನಿಯಲ್ಲಿ ೬೦ ಲಕ್ಷದಷ್ಟಿದ್ದಾರೆ. ಇವರೆಲ್ಲರೂ ತಮ್ಮ ಸ್ವಸ್ತಿಕಾ, ಕಂದು ಬಣ್ಣದ ಉಡುಪುಗಳನ್ನು ಅಡಗಿಸಿಟ್ಟು ನಾಜೀ ಕುರುಹುಗಳು ಮೇಲ್ತೋರಿಕೆಗೆ ಇಲ್ಲದಂತೆ ಮಾಡುವರು. ಬಹಿರಂಗದಲ್ಲಿ ಮಿತ್ರ ಆಡಳಿತಗಾರರಿಗೆ ಅವರು ತೊಂದರೆ ಕೊಡುವುದಿಲ್ಲ; ಅಂತರಂಗದಲ್ಲೀ ಮಿತ್ರರೊಂದಿಗೆ ಸಹಕರಿಸುವ ಜರ್ಮನರನ್ನು ಅವರು ಸುದ್ದಿ ಪತ್ತೆ ಇಲ್ಲದಂತೆ 'ಕಾಣೆ' ಮಾಡುವರು. ಮಿತ್ರ ಆಡಳಿತೆಗಾರರು ಗುಪ್ತರಹಸ್ಯವಾಗಿ ಮಾಯಗೊಳಿಸಲ್ಪಡುವರು. ಮಿತ್ರರ ಅಧಿಕಾರ ಕೈ ಕೆಳಗೆ ಸ್ಥಾಪಿಸಲ್ಪಡುವ ಜರ್ಮನ್ ಸರಕಾರವನ್ನು ಬೆಂಬಲಿಸಿದಂತೆ ನಟಿಸಿ ವೇಷಪಲ್ಲಟಿಸಿದ ನಾಜೀಗಳು ಹಿಂದಿನ ಜರ್ಮನ್ ಸೈನ್ಯವನ್ನು ಟೀಕಿಸಿ 'ನಾಜೀಗಳ ಸೋಲು ಅವರ ವಿಶ್ವಾಸ ಘಾತುಕ ವರ್ತನೆಯಿಂದುಂಟಾಯಿತೆಂದು' ಸಾರುತ್ತಾ ಪುನ: ನಾಜೀಗಳ ಮೇಲೆ ಜನರಿಗೆ ಅಭಿಮಾನವುಂಟಾಗುವಂತೆ ಮಾಡುವರು.

ಹಿಟ್ಲರನ 'ಡಬ್ಬಲ್ ಎನ್' ಯೋಜನೆಯು ಅತ್ಯಂತ ವಿಚಾರ ಪರಿಪೂರ್ಣತೆಯಿಂದ ತಯಾರಿಸಲಾಗಿದೆ. ೧೯೪೩ರಲ್ಲಿ ನಾಜೀ ಪಕ್ಷದವರು ಅಯೋಗ್ಯರೆಂದೂ' ಭಯಗ್ರಸ್ಥರೆಂದೂ, ದ್ರೋಹಿಗಳೂ ಘಾತುಕರೆಂದೂ ಕಂಡು ಬಂದ ಸಾವಿರಾರು ತಮ್ಮ ಸದಸ್ಯರನ್ನು ಪಾರ್ಟಿಯಿಂದ ಹೊರಗೆ ಹಾಕಿ ಅವರನ್ನು ಕನ್ಸಂಟ್ರೇಶನ್ ಶಿಬಿರಗಳಲ್ಲಿ ಸೆರೆ ಇಡಲಾಗಿದೆ. ಇವರನ್ನು ಹಿಟ್ಲರ್ ವಿರೋಧಿಗಳೆಂದು ತಿಳಿದು ಮಿತ್ರರು ಬಂದಮುಕ್ತ ಮಾಡುವರು. ಮಿತ್ರರೊಡನೆ ಸಹಕರಿಸಿದಂತೆ ನಟಿಸುತ್ತಾ ಈ ಬಂಧ ಮುಕ್ತಗೊಳಿಸಲ್ಪಟ್ಟವರು ಮೆಲ್ಲನೆ 'ಡಬ್ಬಲ್ ಎನ್' ಯೋಜನೆಗನುಸಾರವಾಗಿ ಗುಪ್ತ ಕಾರಸ್ತಾನ ನಡೆಸುವರು.

ಇಷ್ಟೇ ಅಲ್ಲ. ಅನೇಕ ನಾಜೀ ಮುಖಂಡರು ಸತ್ತಿರುವರೆಂದು ಜರ್ಮನರು ಬಹಳ ಕಾಲದಿಂದ ಸಾರಿ ಬಂದಿರುವರು ಅವರು ನಿಜವಾಗಿ ಸಾಯಲಿಲ್ಲ: ವೈದ್ಯಕೀಯ ಶಸ್ತ್ರ ಕ್ರಿಯೆಯ ವಿಧಾನಗಳಿಂದ ಅನೇಕರ ಮುಖ ಚರ್ಯೆಯನ್ನು ಬದಲಾಯಿಸಲಾಗಿದೆ. ಅನೇಕರಿಗೆ ನಿಜವಾಗಿ ಸತ್ತವರ ಠಕ್ಕು ಗುರುತು ಪತ್ರಗಳನ್ನೂ ಕೊಟ್ಟು ಹಳ್ಳಿ ಪ್ರದೇಶಗಳಲ್ಲಿ ನಿಲ್ಲಿಸಲಾಗಿದೆ. ಜರ್ಮನ್ ಸೈನ್ಯಖಾತೆಯವರು ಸೆರೆ ಹಿಡಿದ ಸತ್ತ ಮಿತ್ರಸೈನಿಕರ ಸೈನಿಕ ಉಡುಪುಗಳನ್ನು ಒಟ್ಟುಗೂಡಿಸುತಿದ್ದಾರೆ. ಇವುಗಳನ್ನು ಧರಿಸಿ ಇಂಗ್ಲಿಷ್, ಫ್ರೆಂಚ್ ರಷ್ಯನ್ ಭಾಷೆಗಳನ್ನು ಚೆನ್ನಾಗಿ ಅರಿತಿರುವ ನಾಜಿಗಳು ಆಕ್ರಮಿತ ಮಿತ್ರಸೈನ್ಯಗಳೊಂದಿಗೆ ಸೇರಿ ಸಂದರ್ಭಕ್ಕನುಸಾರವಾಗಿ ಒಳಸಂಚು, ಪಿತೂರಿಯನ್ನು ನಡೆಸಲಿದ್ದಾರೆ. ಹೆಸರು ರೂಪ, ಬದಲಿಸಿ ಸಾಮಾನ್ಯ ಸೌಮ್ಯ ಜನರಂತೆ ಸಣ್ಣ ಸಣ್ಣ ಕಾರಕೂನ್, ಬಟ್ಲರ್, ರೈಲ್ವೆ ನೌಕರರ ವೃತ್ತಿಯಲ್ಲಿ ಆಗಲೇ ೧೦ ಸಾವಿರ ನಾಜೀಗಳು ಸೇರಿ ಕೆಲಸ ಮಾಡುತ್ತಿದ್ದರಂತೆ.

ಈಗಿನ ಶಾಂತಿ ಯೋಜನೆಯಂತೆ ಜಗತ್ತಿನಲ್ಲಿ ನೆಮ್ಮದಿ ಸ್ಥಾಪಿಸಲ್ಪಟ್ಟಾಗ ನಾನಾ ರೀತಿಯಲ್ಲಿ ಅವಿತುಕೊಂಡಿರುವ ಈ ಮುಖಂಡರುಗಳು ಆಗಿನ ಜರ್ಮನ್ ತರುಣ ಜನಾಂಗದ ಮುಖಂಡರಾಗಿ ಮುಂದಕ್ಕೆ ಬರುವರು; ಮತೀಯ ಸಂಸ್ಥೆಗಳ ನಾಯಕರಾಗುವರು; ವಿದ್ವಾಂಸರ ಮಂಡಳಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವರು. ಹೀಗೆ ಈಗಿನ ನಾಜೀಗಳು ಮುಂದಿನ 'ನಾಜೀದ್ವೇಷಿ'ಗಳಾಗಿ ಮೆರೆದು ನಾಜೀವಾದವನ್ನು ಸ್ಥಾಪಿಸುವರು.

ನಾಜಿಗಳ ಮುಂದಿನ ಈ ಭೀಕರ ಚಳವಳವನ್ನು ನಿರ್ದೇಶಿಸಲು ದೊಡ್ಡ ದೊಡ್ಡ ನಗರಗಳಲ್ಲಿ ಗುಪ್ತ ಕೇಂದ್ರಗಳು ಸ್ಥಾಪಿಸಲ್ಪಟ್ಟಿದ್ದು ಇದು ತನಕ ಸಾರ್ವಜನಿಕ ದೃಷ್ಟಿಗೆ ಬೀಳದ ಅನೇಕ ಮುಖಂಡರು ಅದರ ಕಾರ್ಯದರ್ಶಿಗಳಾಗಿ ನೇಮಿಸ್ಪಟ್ಟಿರುವರು. ಇವರಿಗೂ ಒಬ್ಬ ಮುಖಂಡನಿರುವನು ಅವನ ಹೆಸರು ಜನರಲ್ ಆರೆಸ್ಟ ಹಿಸ್‌ಮೇಯರ್ ಎಂದು ಈಗಲೂ ನಾಜೀ ಹಿನ್ನಳೆಯಲ್ಲಿ ನಿಂತು ಕೆಲಸ ಮಾಡುತ್ತಿದ್ದು ಬಹಳ ಚಾತುರ್ಯದಿಂದ ತನ್ನ ಖ್ಯಾತಿಯನ್ನು ಮರೆಸಿಕೊಂಡಿರುವನು. ಇವನು ನಾಜೀ ವಿರೋಧಿಗಳನ್ನು ಕೊಲ್ಲುವ ರೀತಿ ಅತ್ಯಂತ ವಿಚಿತ್ರವೂ, ರಹಸ್ಯವೂ ಆಗಿದ್ದು ಇವನಿಂದ ಕೊಲ್ಲಲ್ಪಟ್ಟವರು ಸಹಜವಾಗಿಯೇ ಮಡಿದಿರುವರೆಂದು ಪ್ರಚಾರ ಮಾಡಲಾಗುತ್ತದೆ. ಇವನ ಸ್ವಭಾವವು ಬೂದಿ ಮುಚ್ಚಿದ ಕೆಂಡದಂತೆ. ಅವನ ಆಪ್ತ ಸ್ನೇಹಿತರು ಅವನನ್ನು 'ಮನೋಹರವಾದ ವಿಷವ್ಯಕ್ತಿ' ಎಂದು ಕರೆಯುತ್ತಾರೆ. ಹಿಟ್ಲರನಿಗೆ ವಿರೋಧ ವರ್ತಿಸುವ ಸೈನ್ಯಾಧಿಕಾರಿಗಳನ್ನು ಇವನು ಕ್ಷಣ ಮಾತ್ರದಲ್ಲಿ ಗಲಾಟೆ ಇಲ್ಲದಂತೆ ನಾಶ ಮಾಡಬಲ್ಲನು. ಈ ಹಿಸ್‌ಮೇಯರನು ೫೦ ಕ್ರಾಂತಿ ಚಳವಳ ತರಬೇತಿ ಕೋಲೇಜುಗಳನ್ನು ಮುಖ್ಯ ಕೇಂದ್ರಗಳಲ್ಲಿ ಸ್ಥಾಪಿಸಿರುವನು. ಅವುಗಳಲ್ಲಿ ಪದವಿ ಪಡೆಯುವವರು ದೇಶದಲ್ಲೆಲ್ಲ ಸುವ್ಯವಸ್ಥಿತ ಬಂಡಾಯ ಕೇಂದ್ರಗಳನ್ನು ಸ್ಥಾಪಿಸಿರುವರು.

ಆಕ್ರಮಿಸುವ ಸೈನ್ಯದ ಶಕ್ತಿಯು ಇಂತಿಷ್ಟೇ ಇರಬಲ್ಲದೆಂದು ಈ ಗುಪ್ತ ನಾಜಿಗಳಿಗೆ ಗೊತ್ತಿದೆ. ಆದುದರಿಂದ ಮೇಲಿಂದ ಮೇಲೆ ಭಯಾನಕ ಪುಂಡ ಚಟುವಟಿಕೆಗಳಿಂದ ಅವುಗಳನ್ನು ಸದೆ ಬಡಿಯುಬಹುದೆಂದು ಅವರಿಗೆ ಖಚಿತವಾಗಿದೆ. ೧೯೧೮ ನಂತರವೂ ಅವರು ಹೀಗೇ ಮಾಡಿದರು. ಈ ಸಲವೂ ಅವರು ಅಮೋಘ ಚಾತುರ್ಯ ಪರಿಪೂರ್ಣತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸಿ ನೋಡುವರು. ಆದುದರಿಂದ ಮಿತ್ರ ಸೈನ್ಯಗಳಿಗೆ ಈ ನಾಜಿಗಳ ಮೂಲವನ್ನೇ ನಿರ್ಮೂಲಿಸದೆ ಸುಖವಿಲ್ಲ.

ಮಾಸ್ತರಜೀ

(ಲೇಖಕ:-ಶ್ರೀ ಎಮ್. ವೆಂಕಟೇಶ ಪ್ರಭು)

"ಮಾಸ್ತರಜೀ, ಓ ಮಾಸ್ತರಜೀ" ಹಿಂದಿನಿಂದ ಯಾರೋ ಕರೆದರು. ಮುಂದೆ ಹೋಗುವವರಿಗೆ ಕೇಳಲಿಲ್ಲ. ಹಿಂದಿನ ಸ್ವರ ಪುನಃ ಕರೆಯಿತು—"ಮಾಸ್ತರಜೀ."

ಮಾಸ್ತರಜೀ ನಿಂತರು. ತನ್ನನು ಕರೆದವರಾರು?

ಕರೆದ ವ್ಯಕ್ತಿ ಹತ್ತಿರ ಬಂತು. ಮಾಸ್ತರಜೀಯವರು ಆನಂದದ ಉದ್ಗಾರ ತೆಗೆದರು. "ಓ! ಸುಧಾಕರನೇನು ?."

"ಹೌದು! ಮಾಸ್ತರಜೀ "

"ಏನು, ಸುಧಾ! ಬಾವಿಗೆ ಬಿದ್ದು ಹಾರಿದವನಂತೆ ನನ್ನನ್ನು ಕರೆದಿಯಲ್ಲಾ." ಮಾಸ್ತರಜೀ ತಮ್ಮ ಅನುದಿನದ ಹಾಸ್ಯದ ಮಾತಿನಲ್ಲಿ ಕೇಳಿದರು.

"ನಾನು ತಿಳಿನ ಬಾವಿಗೆ ಬಿದ್ದಿದ್ದೇನೆ ಮಾಸ್ತರಜೀ! ನಿಮ್ಮಿಂದ ಸಹಾಯ ಬೇಕಾಗಿದೆ." ಸುಧಾಕರನ ಸುಧೆಯ ಬಿಂದು ತೋರದ ಮಾತಿನಿಂದ ಹೇಳಿದ. "ನಾವು ಪಾರ್ಕಿನ ಗುಡ್ಡೆಯ ಕಡೆಗೆ ಹೋಗೋಣ. ಅಲ್ಲಿ ಎಲ್ಲವನ್ನು ನಿಮಗೆ ಹೇಳುವೆ"

ಮಾಸ್ತರಜೀ ಒಪ್ಪಿದರು!

"ಮಾಸ್ತರಜೀ, ನಾನೀಗ ಹೇಳುವ ಸಂಗತಿಯನ್ನು ನೀವು ಯಾರೊಡನೆಯೂ ಹೇಳುವುದಿಲ್ಲವೆಂದು ವಾಗ್ದಾನ ಮಾಡಿರಿ." ಸುಧಾಕರ ಗುಡ್ಡೆಯ ಹುಲ್ಲಿನ ಮೇಲೆ ಕುಳಿತು ಹೇಳಿದ.

"ನೋಡು, ಸುಧಾಕರ, ನೀನು ಹೇಳುವ ಮಾತುಗಳು ಅಷ್ಟು ಅಮೂಲ್ಯವಾದರೆ ನೀನೇ ಇಟ್ಟುಕೋ. ಯುದ್ಧದ ಸಮಯವೀಗ—ಅವುಗಳ ಬೆಲೆ ಇನ್ನೂ ಹೆಚ್ಚಾಗಬಹುದು!"

"ಇದುಹಾಸ್ಯಮಾಡುವ ಸಮಯವಲ್ಲ ಮಾಸ್ತರಜೀ, ಇದು ಜೀವನ—ಮರಣದ ಪ್ರಸಂಗವಾಗಿದೆ!"

"ಹಾಂ! ಜೀವನ ಮರಣದ ಪ್ರಸಂಗ! ಎಲ್ಲಿಯಾದರೂ ಮಿಲಿಟರಿಗೆ ಸೇರಿ ಓಡಿ ಬಂದಿಲ್ಲವಲ್ಲಾ, ನೀನು?"

"ಸಾಕು, ಸಾಕು, ನಾನೇ ಹೇಳುತ್ತೇನೆ. ನೋಡಿ. . . ."

"ಏನು ನೋಡಲಿ! ಈ ಗುಡ್ಡದಲ್ಲಿ ಅಂತಹ ರಮಣೀಯ ವಸ್ತು ಏನಿದೆ?" ಮಾಸ್ತರಜೀ ಪುನಹ ಸುಧಾಕರನ ಮಾತಿನಿಂದಲೇ ಅವನನ್ನು ಸೋಲಿಸಿದರು.

"ಮಾಸ್ತರಜೀ ನಾನೀಗ ಒಂದು ಕತೆ ಹೇಳುತ್ತೇನೆ. ಅದರಲ್ಲಿನ ನಾಯಕನು ನೀವೇ ಎಂದು ಭಾವಿಸಬೇಕು. ನನಗೋಸ್ಕರವಾಗಿ ನೀವು ಇದನ್ನು ಭಾವಿಸಲೇಬೇಕು."

"ನಾನು ನಾಯಕ . . . . ? ನಾನು ದುಷ್ಯಂತನಾಗುವ ಕಾಲ ದಾಟಿತು. ಸುಧಾ . . ! ಆಗಲಿ ಹೇಳು. ನಾನೊಬ್ಬ ಕವಿಯಲ್ಲದಿದ್ದರೂ ಈಗ ಭಾವನೆಯ ಮೂರ್ತಿಯಾಗುತ್ತೇನೆ."

"ನೋಡಿ, ಮಾಸ್ತರಜೀ, ನೀವು ಮಧ್ಯದಲ್ಲಿ ಅಡ್ಡ ಪ್ರವೇಶಿಸಲೇ ಬಾರದು." ಸುಧಾಕರನ ದೈನ್ಯತೆಯಿಂದ ಮಾಸ್ತರಜೀ ಆತನ ಶರ್ತಕ್ಕೆ ಒಪ್ಪಿದರು.

"ಮಾಸ್ತರಜೀ, ನೀವು ಒಬ್ಬ ಹುಡುಗಿಯನ್ನು ಪ್ರೀತಿಸಿದಿರಿ. ಪ್ರೀತಿಯ ಆಳ ಹೆಚ್ಚಿತು. ಕಡೆಗೆ ನಿರ್ಮಲ ಜಲದ ಝರಿ ಕೆಸರಿನ ಕೊಂಪೆಯಾಯಿತು. ನಿಮ್ಮ ಪ್ರೇಮದ ಫಲ ಮಗುವಿನ ರೂಪ ಧರಿಸಿ ಜಗತ್ತಿಗೆ ನಿಮ್ಮ ಪಾಪದ ಜಾಗಟೆಯ ಸ್ವರ ಕೇಳಿಸುವಂತೆ ಮಾಡಿದರೆ ನೀವೇನು ಮಾಡುವಿರಿ—ಹೇಳಿ, ಮಾಸ್ತರಜೀ . . ."

"ನಿನಗೆ ಈ ಪರಿಸ್ಥಿತಿ ಒದಗಿದೆಯೇನು?" ಮಾಸ್ತರಜೀ ಕನಿಕರದಿಂದ ಕೇಳಿದರು.

"ಹೌದು . . " ಯುವಕ ತಲೆ ತಗ್ಗಿಸಿ ಉತ್ತರ ಕೊಟ್ಟ.

ಮಾಸ್ತರಜೀ ಮಾತಾಡಲಿಲ್ಲ. ಎರಡು ನಿಮಿಷಗಳು ಕಳೆದುವು. ಪುನಹ ನೀರವ. ಯುವಕನಿಗೆ ಈ ಮೌನ ಅಸಹ್ಯವಾಯಿತು, ಅಶಾಂತಿಯಿಂದ ಮಾಸ್ತರಜೀಯವರ ಕಡೆಗೆ ನೋಡಿದ. ಅವರ ನಿಟ್ಟುಸಿರೊಂದು ಅವನನ್ನು ಮೂಕನನ್ನಾಗಿ ಮಾಡಿತು. ಅಶಾಂತಿ ಇನ್ನೂ ಹೆಚ್ಚಿತು.

"ಕೇಳು ಸುಧಾ, ನನ್ನ ಜೀವನದ ಬಿರುಗಾಳಿಯ ದೃಶ್ಯ ನಾನು ಇದುವರೆಗೂ ಯಾರಿಗೂ ವರ್ಣಿಸಲಿಲ್ಲ. ಇಂದು ನಿನಗೆ ಸಹಾಯ ಹಸ್ತ ನೀಡಬೇಕೆನ್ನುವಾಗ ಬಾಯಿ ಸಡಿಲಾಗಲು ನಿರ್ಧರಿಸುತ್ತದೆ."

ಸುಧಾಕರ ಅವಾಕ್ಕಾದ. ತನ್ನ ಈ ಮಾಸ್ತರಜೀ ರಹಸ್ಯ ವ್ಯಕ್ತಿಯೇನು? ತಾನು ನೀರಸನೆಂದು ಭಾವಿಸಿದ ಈ ವ್ಯಕ್ತಿಯು ಪ್ರೇಮ ಮಾಡಿತ್ತೇ? "ಸುಧಾ! ನೀನು ಹಾಗೆ ನನ್ನನ್ನು ಅವಾಕ್ಕಾಗಿ ನೋಡುವುದೇಕೆ? ಓ! ತಿಳಿಯಿತು. ನಾನೊಬ್ಬ ನೀರಸ ವ್ಯಕ್ತಿಯೆಂದು ನೀನು ಭಾವಿಸಿರಬಹುದು. ಆದರೂ ಕಠಿಣ ಮರುಭೂಮಿಯಲ್ಲಿಯೂ ನೀರಿನ ಪ್ರದೇಶವು ಇದ್ದೇ ಇರುತ್ತದೆ. . . . ."

ಮಾಸ್ತರಜೀ ಪುನಹ ನಿಲ್ಲಿಸಿದರು. ಸುಧಾ ಮಾತಾಡಲಿಲ್ಲ. ಮಂಕು ಮೂಗನಂತೆ ಕುಳಿತು ಅವರ ಮುಖ ನೋಡಿದ.

"ನಾನು ನಿನ್ನಂತೆ ಒಬ್ಬಳನ್ನು ಪ್ರೀತಿಸಿದೆ. ಅವಳ ರೂಪದ ಭಕ್ತನಾಗಿದ್ದೆ. ಅವಳ ತಪ್ಪಿಲ್ಲದಿದ್ದರೂ ಅವಳನ್ನು ಪಾಪದ ಭಾಗಿಯಾಗುವಂತೆ ಯತ್ನಿಸಿದೆ. ಪರಿಣಾಮ ? ಪಾಪವು ಮೂರ್ತಿವೆತ್ತಿತೋ ಅಥವಾ ಪ್ರೇಮದ ಬೀಜ ಫಲವಾಯಿತೋ ತಿಳಿಯದು. ನಾನೂ ಒಬ್ಬ ತಂದೆಯಾದೆ."

ಸುಧಾಕರನ ಹೃದಯದ ಅಶಾಂತಿಯು ಕಲ್ಪನೆಯ ಆ ವೇಗಕ್ಕೆ ಎಡೆ ಮಾಡಿಕೊಟ್ಟಿತು. ಮಾಸ್ತರಜೀ ಮುಂದುವರಿಸಿದರು.

"ನಾನು ತಂದೆಯಾದದ್ದು ನನಗೆ ಹರ್ಷವನ್ನುಂಟು ಮಾಡಲಿಲ್ಲ. ತಲೆತಪ್ಪಿಸಿಕೊಂಡ ಕೈದಿಯಂತಾದೆ. ಜಗತ್ತಿನ ಎದುರು ಬರಲು ನಾಚಿದೆ. ಅವಳ ಮುಖ ನೋಡಬಾರದೆಂದು ಪ್ರತಿಜ್ಞೆ ಮಾಡಿದೆ.."

ಸುಧಾಕರನ ನಿಟ್ಟುಸಿರೊಂದು ಮಾಸ್ತರಜೀಗೆ ಕೇಳಿಸಿತು. ಈ ವ್ಯಕ್ತಿ ಇಷ್ಟು ಮಾತಾಡಬಲ್ಲುದೇ! ಅವನು ಯೋಚಿಸಿದ. ಮಾಸ್ತರಜೀಯವರದ್ದು ಅವನಿಗೆ ಗಾಢ ಪರಿಚಯ. ಗೆಳೆಯರ ತಂಡದಲ್ಲಿ ಮಾಸ್ತರಜೀ ಮೌನ ವ್ಯಕ್ತಿಯಾದರೂ ಎಲ್ಲರ ಆದರದ ಮೂರ್ತಿಯಾಗಿದ್ದರು.

"ಆದರೆ, ಅವಳೇನು ಮಾಡಬೇಕು, ಸುಧಾ? ನನ್ನ ಪಾಪಕ್ಕೆ ಅವಳಿಗೇಕೆ ಶಿಕ್ಷೆ? ಅವಳು ನನ್ನ ಬಳಿ ಬಂದು ಬೇಡಿದಳು. ಸಹಾಯಮಾಡಲು ಪ್ರಾರ್ಥಿಸಿದಳು. ನಾನು ನಿರಾಕರಿಸಿದೆ. ನನಗೆ ಬೇಕಾದದ್ದು ಅವಳ ದೇಹವಲ್ಲದೆ ಮಗುವಾಗಿರಲಿಲ್ಲ.

"ಇತರರಂತೆ ಅವಳು ನನ್ನನ್ನು ಜಗತ್ತಿನ ಎದುರು ನಾಚಿಕೆಗೆ ಗುರಿ ಮಾಡಲಿಲ್ಲ. ತಲೆ ತಗ್ಗಿಸಿ ಹೊರಟು ಹೋದಳು. ಎಲ್ಲಿಗೆಂದು ನನಗೆ ತಿಳಿಯಲಿಲ್ಲ. ೨೦ ವರ್ಷಗಳು ಕಳೆದುವು. ಜಗತ್ತಿನಲ್ಲಿ ಎಷ್ಟೋ ಮಾರ್ಪಾಟುಗಳಾದುವು-ಅವಳ ಸುದ್ದಿಯಿಲ್ಲ. ನಾನು ಆ ಪ್ರಸಂಗ ಮರೆಯದವನಿದ್ದೆ. ಆದರೆ . . . . ."

"ಆದರೇನು?" ಸುಧಾಕರ ನಿದ್ದೆಯಿಂದ ಎಚ್ಚತ್ತವನಂತೆ ಕೇಳಿದ.

"ಆದರೆ ಒಂದು ಸಂಜೆ ಪತ್ರವೊಂದು ನನ್ನ ಕೈ ಸೇರಿತು. ಅದರಲ್ಲಿ ಅವಳು ಬರೆದಿದ್ದಳು: "ಮಾಸ್ತರಜೀ ನೀವು ನನ್ನ ಗುರುವಾದುದರಿಂದ ಹೀಗೆ ಕರೆದೆ, ಕ್ಷಮಿಸಿ. ಜಗತ್ತಿನಲ್ಲಿ ನೀವು ನನಗೆ ಆದರ್ಶ ತೋರಿಸಿದಿರಿ. ಅನ್ಯಾಯಕ್ಕೆ ಗುರಿಯಾದ ಸ್ತ್ರೀಯು ಕೂಲಿಯ ಕೆಲಸದಿಂದಾದರೂ ಜೀವನ ಸಾಗಿಸಿ ತನ್ನ ಮಗುವಿಗೆ ತಂದೆಯ ಹೆಸರಿನ ಆಶ್ರಯ ದೊರೆಯದಂತೆ ಮಾಡಿದರೆ ಮಗು ಖಂಡಿತವಾಗಿಯೂ ತನ್ನ ಕಾಲ ಮೇಲೆ ನಿಲ್ಲಲು ಕಲಿಯುವುದು. ನಾನು ಹಾಗೆಯೇ ಮಾಡಿದೆ. ಇಂದು ನಾನೊಬ ವಿದ್ಯಾವಂತ ಮಗನ ಹೆಮ್ಮೆಯ ತಾಯಿ. ಸಾಕು ಮಾಸ್ತರಜೀ ನಮಸ್ಕಾರ!"

"ಈ ಪತ್ರದಿಂದ ನಾನು ಸಂಪೂರ್ಣ ಪಾಪಿಯೆಂದು ಜಗತ್ತೇ ನನ್ನನು ಕರೆದಂತಾಯಿತು. ಪತ್ರದ ಸಂಭೋದನದಿಂದ ನನಗೆ ತೋರಿದಷ್ಟು ಬೆಳಕು ಇದು ವರೆಗೂ ನನಗೆ ಸಿಗಲಿಲ್ಲ." ಮಾಸ್ತರಜೀ ನಿಲ್ಲಿಸಿದರು.

"ಸುಧಾ, ನೀನು ಪಾಪ ಮಾಡಿದೆಯಲ್ಲವೆ? ಹಾಗಾದರೆ ಅದರ ಫಲ ಅನುಭವಿಸಲೇ ಬೇಕು. ಕೇವಲ ಮಗುವಿನ ತಾಯಿಯ ದೇಹಕ್ಕೆ ಸೋಲಬೇಡ ಸುಧಾ! ಮಗುವನ್ನು ಜಗತ್ತು ನಿನ್ನದೆಂದು ಹೇಳಿದರೆ ನಿನಗೇತರ ನಾಚಿಕೆ?"

"ಆದರೆ ಸಮಾಜಕ್ಕೆ ಹೇಗೆ ಮೋರೆ ತೋರಿಸಲಿ?"

"ಅವಳ ಮನೆಗೆ ತಲೆ ತಗ್ಗಿಸಿ ಹೋಗುವಾಗ ನೀನು ಸಮಾಜಕ್ಕೆ ಮೋರೆ ತೋರಿಸಿದಿಯೇನು? ಅವಳ ದೇಹದ ದಾಸನಾಗುವಾಗ ಸಮಾಜದ ಆಲೋಚನೆ ನಿನಗೆ ಬಂತೆ? ಛೆ! ಹುಚ್ಚುತನ ಬಿಡು! ನಿನ್ನ ಮಗುವನ್ನು ಹಲವು ತಂದೆಯರ ಹೆಸರಿನ ಆಶ್ರಯಕ್ಕೆ ಸಿಲುಕಿಸಬೇಡ." ಮಾಸ್ತರಜೀ ಎದ್ದರು. ಸುಧಾಕರನು ಅವರ ಹಿಂದೆಯೇ ಎದ್ದನು. ಇಬ್ಬರೂ ನಡೆಯುತ್ತಿದ್ದರು. ಸುಧಾಕರನ ಹೆಜ್ಜೆ ಧೃಡತೆಯ ದೃಶ್ಯವನ್ನು ದಾರಿಯ ಮೇಲೆ ಚಿತ್ರಿಸುತ್ತಿದ್ದವು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ತರುಣರಾಗಿಯೂ ಸುಂದರರಾಗಿಯೂ ಯಾಕೆ ಇರಬಾರದು
ಪ್ರತಿದಿನ ರಾತ್ರೆ ಎರಡು ಬೈಲ್‌ಬೀನ್ಸು ಮಾತ್ರೆಗಳನ್ನು ಸೇವಿಸುವ ಸುವರ್ಣ ನಿಯಮವನ್ನಿಟ್ಟು ಕೊಂಡರೆ ನೀವು ಸುಂದರರಾಗಿಯೂ ಆರೋಗ್ಯವಂತರಾಗಿಯೂ ತರುಣರಾಗಿಯೂ ಕಾಣುವಿರಿ. ಬೈಲ್‌ಬೀನ್ಸುಗಳು ಶುದ್ಧ ವನಸ್ಪತಿಯಿಂದ ತಯಾರಿಸಿದ್ದು ಅವು ಜೀರ್ಣವನ್ನುಂಟುಮಾಡುತ್ತದೆ. ರಕ್ತವನ್ನು ಶುದ್ಧಿಗೊಳಿಸುತ್ತದೆ. ದಿನನಿತ್ಯ ಎಲ್ಲಾ ಅಶುದ್ಧ ಆಹಾರವನ್ನು ಹೊರಹಾಕುತ್ತದೆ. ಹೀಗೆ ನಿಮ್ಮ ಆರೋಗ್ಯವನ್ನು ಉತ್ತಮಗೊಳಿಸಿ. ನಿಮ್ಮ ರೂಪವನ್ನು ಸುಂದರಗೊಳಿಸಿ ನೀವು ತರುಣರೂ ಆರೋಗ್ಯವಂತರೂ ಆಗುವಂತೆ ಮಾಡುವವು.

ಬೈಲ್‌ಬೀನ್ಸು ನಿಮ್ಮನ್ನು ಆರೋಗ್ಯವಂತರಾಗಿಯೂ ತರುಣರಾಗಿಯೂ ಮಾಡುವುದು
BILE BEANS

ಚೀನೀ ಸ್ತ್ರೀಯರು

ಜಗತ್ತಿನ ಪ್ರಗತಿಯೊಂದಿಗೆ ಸ್ತ್ರೀಯ ಸುಧಾರಣೆಯು ಆಗುತ್ತಿದೆ. ಒಂದಾನೊಂದು ಕಾಲದಲ್ಲಿ ಮನೆಯ ಪಾಕಶಾಲೆಯಲ್ಲೆ ಹಿಂದುಳಿದ ಸ್ತ್ರೀಯು ಇಂದು ಪುರುಷನೊಡನೆ ಸರಿಸಮಾನವಾದ ಸ್ಥಾನಮಾನಗಳನ್ನು ಪಡೆಯಲು ಯತ್ನಿಸುತ್ತಿರುವಳು; ಜಗತ್ತಿನ ಅನೇಕ ದೇಶಗಳಲ್ಲಿ ಸ್ತ್ರಿಯ ಈ ಯತ್ನಗಳಿಗೆ ಯಶಸ್ಸು ದೊರಕಿರುತ್ತದೆ. ಪೌರ್ವಾತ್ಯದಲ್ಲಿ ಸ್ತ್ರೀಯು ಪುರುಷನಿಗಿಂತ ಕೀಳೆಂಬ ಭಾವನೆಯು ಬಹಳ ಕಾಲದಿಂದ ಒಂದು ಸಂಪ್ರದಾಯವಾಗಿ ಬೆಳೆದು ಬಂದಿತ್ತು. ಹಿಂದೂಗಳ ವೇದ ಪುರಾಣಾದಿಗಳಲ್ಲಿ, ಉಪನಿಷತ್ತುಗಳಲ್ಲಿ ಸ್ತ್ರೀಗೆ ಸಮಾಜದಲ್ಲಿ ಒಳ್ಳೆ ಗೌರವೀಯ ಸ್ಥಾನವು ಕೊಡಲಾಗಿದ್ದರೂ, ಪುರುಷನ ಸ್ವಾರ್ಥದಿಂದ ಸ್ತ್ರೀಯು ಆತನ ಭೋಗದ, ಮತ್ತು ಆತನಿಗಾಗಿ ಗೇಯುವ ವ್ಯಕ್ತಿಯಾಗಿ ಉಳಿದಿದ್ದಳು. ಸ್ತ್ರೀಯು ಪ್ರಗತಿದಾರಿಯಲ್ಲಿ ಕಾಲಿಡದಂತೆ ನಿರ್ಬಂಧಿಸುವ ಕ್ರಮ ಕಟ್ಟಳೆಗಳು ನಮ್ಮ ಸಮಾಜಗಳಲ್ಲಿ ಹೇಗೊ ಶುರುಕಿಸಲ್ಪಟ್ಟು, ಅವು ಬೆಳೆದು ಬಂದಿದ್ದವು. ಆದರೆ ಗಾಂಧೀಜಿಯರ ಆಗಮನದೊಂದಿಗೆ ಸ್ತ್ರೀಗೆ ಪ್ರಗತಿಯ ಬಾಗಿಲುಗಳು ತೆರೆಯಲಾದವು. ಗಾಂಧೀಜಿಯರೊಡನೆ ಇನ್ನಿತರ ಮಹಾ ಪುರುಷರ, ಮಹಿಳೆಯರ ಚಳವಳ ಯತ್ನಗಳಿಂದಾಗಿ, ಸ್ತ್ರೀಯರಿಗೆ ಸಮಾಜದಲ್ಲಿ ಪುರುಷನೊಡನೆ ಸಮಾನವಾದ ಸ್ಥಾನವು ಮಾಡಿಕೊಡಲಾಯಿತು. ಇದರ ಪರಿಣಾಮ—ಕಸ್ತೂರಬಾ, ಕಮಲಾ ನೆಹರು, ಸರೋಜಿನಿ ದೇವಿ, ಕಮಲಾದೇವಿ ಮೊದಲಾದ ಸ್ತ್ರೀರತ್ನಗಳು ದೇಶದ ರಾಜಕೀಯ ನಭೋಮಂಡಳದಲ್ಲಿ ಪ್ರಜ್ವಲಿಸುವಂತಾಯಿತು. ಅವರನ್ನನುಸರಿಸಿ ದೇಶದ ಸ್ತ್ರೀಯರನೇಕರು ತಮ್ಮನ್ನು ಈ ವರೆಗೆ ಬಂದಿಸಿಟ್ಟ ಶೃಂಖಲೆಗಳನ್ನು ಮುರಿದು ಮುಂದೆ ಬಂದು, ದೇಶದ ಹಿತಕಾರ್ಯದಲ್ಲಿ ದುಡಿಯುವಂತಾಯಿತು. ಸ್ತ್ರೀಯು ಇಂದು ನಮ್ಮಲ್ಲಿ ಪುರುಷನೊಡನೆ ಸರಿಸಮಾನವಾದ ಸ್ಥಾನವನ್ನು ಪಡೆಯುವುದರಕಡೆ ಅತಿ ಸಮೀಪವಿರುವಳು. ಹಿಂದೆ ಮನೆಯಲ್ಲೆ ಇರಿಸಲಾಗುತ್ತಿದ್ದ ಹೆಣ್ಣು ಮಕ್ಕಳು, ಗಂಡು ಮಕ್ಕಳೊಡನೆ ವಿದ್ಯಾಭ್ಯಾಸ ಪಡೆಯುತ್ತಿರುವರು. ವಿಶ್ವವಿದ್ಯಾಲಯದ ಹಾದಿ ನಡೆದು ಯಶಸ್ವಿಯಾಗಿ ತೇರ್ಗಡೆ ಪಡೆದು ಜೀವನದ ಹೋರಾಟದಲ್ಲಿ ಪ್ರವೇಶಿಸುತ್ತಿರುವಳು. ಒಂದಾನೊಂದು ಕಾಲದಲ್ಲಿ ಜೀವನಕ್ಕೆ ಪುರುಷನ ಮೇಲೆ ಹೊಂದಿಕೊಂಡಿರುವ ಸ್ತ್ರೀಯರಲ್ಲಿ ಇಂದು ಬಹುಮಂದಿ ಸ್ವತಂತ್ರವಾಗಿ ದುಡಿಯುತ್ತಿರುವರು. ದೇಶದ ಸ್ತ್ರೀಲೋಕದಲ್ಲಿ ಇಂದು ಒಂದು ತರದ ನವಜಾಗೃತಿಯು ಕಾಣಿಸಿಕೊಂಡಿರುತ್ತದೆ. ಹಿಂದೂದೇಶ ಸ್ತ್ರೀಯಂತೆ ಚೀನೀ ಸ್ತ್ರೀಯೂ ಕೂಡ ಬಹಳ ಹಿಂದುಳಿದಿದ್ದಳು. ಈಗ ಚೀನಾದಲ್ಲಿ ನವ ನಾಗರಿಕತೆಯ ಸ್ಪರ್ಶವಾಗಿ ಅದು ಪ್ರಗತಿ ಪಥದಲ್ಲಿ ಬೆಳೆಯುತ್ತಿದ್ದಹಾಗೆ, ಸ್ತ್ರೀಯು ತನ್ನ ಬಂಧನದಿಂದ ಹೊರಬಂದು ದೇಶದ ಪ್ರಗತಿ ಸಾಧನೆಯಲ್ಲಿ ಪುರುಷನೊಡನೆ ಸಮಭಾಗಿಯಾಗುತ್ತಿರುವಳು. ರಷ್ಯದಲ್ಲಿ ಮಹಾ ಕ್ರಾಂತಿಯ ದೆಸೆಯಿಂದ ಅವಳಿಗೆ ಪುರುಷನೊಡನೆ ಸರಿಸಮವಾದ ಹಕ್ಕುಬಾಧ್ಯತೆಗಳೂ, ಸ್ಥಾನಮಾನಗಳು ದೊರಕಿದಂತೆ ಚೀನದಲ್ಲಿ ಸದ್ಯ ನಡೆಯುತ್ತಿರುವ ನೂತನ ರಾಷ್ಟ್ರೀಯ ಚಳವಳದಿಂದ, ಸ್ತ್ರೀಯು ಪ್ರಕಾಶಕ್ಕೆ ಬರುವಂತಾಗಿದೆ. ಈ ಚೀನೀ ಸ್ತ್ರೀಯರ ವಿಮೋಚನೆಯ ಕುರಿತು ಈ ಕೆಳಗೆ ಪ್ರಸ್ತಾಪಿಸಲಾಗಿದೆ.

ಸ್ತ್ರೀಯ ವಿಮೋಚನಾ ಕಾರ್ಯವು ಚೀನಾದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದು, ಆಕೆಯು ತುಂಬಾ ನಾಗರೀಕಳಾಗಿರುವಳು. ಈ ಕಾರಣದಿಂದ ಚೀನೀ ಸ್ತ್ರೀಲೋಕದಲ್ಲಿ ಅನೇಕ ಮಾರ್ಪಟುಗಳು ನಡೆದು ಬಿಟ್ಟಿವೆ. ಹಿಂದೆ ಸೌಂದರ್ಯಕ್ಕಾಗಿ ಉಕ್ಕಿನ ಪಾದರಕ್ಷಗಳನ್ನು ಉಪಯೋಗಿಸಿ ಪಾದಗಳನ್ನು ಗಿಡ್ಡದಾಗಿ ಬೆಳೆಯಿಸುವ ಹವ್ಯಾಸವು ಈಗ ಪೂರ್ಣ ತೊರೆಯಲ್ಪಟ್ಟಿದೆ. ಕೂದಲನ್ನು ಉದ್ದಕ್ಕೆ ಬೆಳೆಯಿಸಿ, ಜೆಡೆಹಣೆದು ತಿರುಗುವ ಸ್ತ್ರೀಯ ಸ್ಥಳದಲ್ಲಿ, ಇಂದು ನವನಾಗರೀಕತೆಯ 'ಬೊಬು ಕಟ್ಟು'ಗಳಿಂದ ಕೂಡಿದ ಸ್ತ್ರೀಯರ ಆಗಮನವಾಗಿರುತ್ತದೆ—ಶೃಂಗಾರಕ್ಕಾಗಿ ಭಂಗಾರ ಇತ್ಯಾದಿ ಆಭರಣದ ವಸ್ತುಗಳ ಉಪಯೋಗವು ಅತೀ ಕಡಿಮೆಯಾಗುತ್ತಾ ಬರುತ್ತಿದೆ. **ಒಟ್ಟಿನಲ್ಲಿ ಸ್ತ್ರೀಯರ, ನಡತೆ, ಉಡುಪು, ನಡುವಳಿಕೆ ಇತ್ಯಾದಿಗಳಲ್ಲಿ ನೂತನ ನವನಾಗರೀಕತೆ ಸ್ಪರ್ಶದ ಪ್ರಭಾವದಿಂದ, ಸರಳತೆಯು ಬಂದಿರುತ್ತದೆ.** ಜನಸಂಚಾರವು ನಿಬಿಡವಾಗಿರುವ ವ್ಯವಹಾರೀ ನಗರಗಳ ರಸ್ತೆಗಳಲ್ಲಿ ಸ್ತ್ರೀಯು ಪುರುಷನೊಡನೆ ಲಜ್ಜೆಯಿಲ್ಲದೆ ಭುಜವರಿಸಿ ಹೋಗುವುದು ಅಲ್ಲಿ ಇಂದು ಸ್ವಾಭಾವಿಕ ದೃಶ್ಯವಾಗಿಬಿಟ್ಟದೆ.

ಅನೇಕ ವಿಚಾರಗಳಲ್ಲಿ ನಮಗೂ ಚೀನಿಯರಿಗೂ ಸಾಮ್ಯವಿದೆ. ನಮ್ಮ ಸಾಂಪ್ರದಾಯಿಕ ಕ್ರಮಕಟ್ಟಳೆಗಳೂ, ಅವರದೂ ಸಾಧಾರಣ ಒಂದೆ ತರದಾಗಿವೆ. ಮನೆಯಲ್ಲಿ ಒಂದು ಹೆಣ್ಣು ಶಿಶುವು ಜನಿಸಿದರೆ ಅಸಂತೋಷವೂ, ಗಂಡಿನ ಆಗಮನವಾದ ಕೂಡಲೆ ಹರುಷವೂ ಉಂಟಾಗುವುದು, ಅಲ್ಲಿ ನಮ್ಮಲ್ಲಿದ್ದಂತೆ ಒಂದು ಸಾಂಪ್ರದಾಯವಾಗಿ ನಡೆದು ಬಂದಿತ್ತು. ಗಂಡಿನಿಂದ ಮುಂದಕ್ಕೆ ಲಾಭವಿದೆ, ಉಪಯೋಗವಿದೆ, ಹೆಣ್ಣಿಗಾಗಿ ಮುಂದಕ್ಕೆ ಚೀಲ ಬಿಚ್ಚಬೇಕು, ಎಂಬುದಾಗಿ, ತಿಳಿವಳಿಕೆಯು ಅವರದಾಗಿತ್ತು. ಮನೆಗೆಲಸದಲ್ಲಿ ತಾಯಿ ಮತ್ತು ಹೆಣ್ಣು ಮಕ್ಕಳು ಮಾತ್ರ ದುಡಿಯುತ್ತಿದ್ದರು. ಅತ್ತೆಕಾಟದ ವಾತಾವರಣದಲ್ಲಿ ಬೆಳೆದ ಸ್ತ್ರೀಯರೂ ಮತ್ತೆ ಅತ್ತೆಯರಾಗಿ ತಮ್ಮ ಮನೆಗಳಲ್ಲಿ ಮೆರೆಯುವವರಾಗುತ್ತಿದ್ದರು. ಹಿಂದೂದೇಶದಲ್ಲಿದ್ದಂತೆ ಚೀನದಲ್ಲೂ ಗೃಹಸ್ಥಾಶ್ರಮದಲ್ಲಿ ಕುಟುಂಬಕ್ಕೆ ಹೆಚ್ಚಿನ ಪ್ರಶಸ್ತಿಯನ್ನು ಕೊಡುವುದು ಒಂದಃ ರೂಢಿಯಾಗಿತ್ತು. ಈ ಕುಟುಂಬದಲ್ಲಿ ದುಡಿಯುತ್ತಾ ಬಂದು ಕೊನೆಗೆ ಸ್ತ್ರೀಗೆ ಕುಟುಂಬದ ಅಜ್ಜಿಯಾಗಿ ಗೌರವದ ಸ್ಥಾನವು ದೊರಕುವುದಿತ್ತು. ಆದರೆ ಸ್ತ್ರೀಯ ಸಾಂಪತ್ತಿಕ ಆಧಾರವು ಪುರುಷನಾದುದರಿಂದ ಅವಳು ಸದಾ ಅವನಿಂದ ಕೆಳ ಮಟ್ಟದಲ್ಲೆ ಇರುವಂತಾಗಿತ್ತು. ಈಗ ಚೀನೀ ಸ್ತ್ರೀಯು ಸ್ವಸಾಮರ್ಥಿಯಾಗಿರುವಳು. ಯಾವತ್ತೂ ವಿರೋಧಗಳಿಲ್ಲದೆ ಮುಂದುವರಿಯುತ್ತಿರುವಳು.

ಮದುವೆ ಇತ್ಯಾದಿ ಶುಭಕಾರ್ಯಗಳ ಸಮಯ ಸ್ತ್ರೀಯರೂ ಪುರುಷರು ಬೇರೆ ಬೇರೆಯಾಗಿ ಕೂಡಿಬರುವುದು ನಮ್ಮ ಕ್ರಮವಾಗಿರುವಂತೆ, ಚೀನಾದಲ್ಲೂ ಕ್ರಮವಾಗಿತ್ತು. ವಿವಾಹವಾಗುವ ಮುಂಚೆ ತರುಣಿಯೊಬ್ಬಳು ತನ್ನ ಗಂಡನನ್ನು ಕಾಣಬಾರದೆಂಬ ನಿರ್ಬಂಧದ ಕ್ರಮಗಳೂ ಅಲ್ಲಿ ಇದ್ದವು. ವಿವಾಹವಾಗುವ ಮೊದಲು ಸಣ್ಣದೊಂದು, ಬಾಲಿಕಾ ಪಾಠಶಾಲೆಯಲ್ಲೊ, ಕಸೂತಿ ಕೆಲಸದಲ್ಲೊ, ಪಗಡೆ ಆಟದಲ್ಲೊ, ಮನೆ ಕೆಲಸದಲ್ಲೊ ಸಮಯ ಕಳೆಯುವುದು ಅಲ್ಲಿನ ತರುಣಿಯರ ಕ್ರಮವಾಗಿತ್ತು. ಇಂದು ಇವುಗಳೆಲ್ಲಾ ಹಳೆಯ ವಿಷಯಗಳಾಗಿ ಬಿಟ್ಟಿವೆ.

ಕಳೆದ ಕಾಲು ಶತಮಾನದ ಚಳವಳಿಯ ಫಲವಾಗಿ ಸ್ತ್ರೀಯು ಇಂದು ಸ್ವತಂತ್ರಳಾಗಿರುವಳು. ಅಲ್ಲುಂಟಾದ ಕ್ರಾಂತಿಯೂ ಸ್ತ್ರೀಯ ಈ ವಿಮೋಚನೆಗೆ ಬಹುಮಟ್ಟಿನ ಕಾರಣವಾಗಿರುತ್ತದೆ. ಈಗ ಗಂಡು, ಹೆಣ್ಣುಗಳ ಶಿಕ್ಷಣವು ಒಟ್ಟಾಗಿ ನಡೆಯುವ ಕ್ರಮಗಳು ಬಂದುಬಿಟ್ಟಿದೆ. ಸ್ತ್ರೀಯರು ವಿಶ್ವವಿದ್ಯಾಲಯ ಶಿಕ್ಷಣವನ್ನು ಪಡೆಯಲು ಧಾರಳ ಸಂಖ್ಯೆಯಲ್ಲಿ ಮುಂದೆ ಬರುತ್ತಿರುವರು. [ನಮ್ಮಲ್ಲೂ ಇದೆ ತರದ ಮಾರ್ಪಾಟುಗಳು ಉಂಟಾಗಿವೆ.] ಚೀನದ ಜಪಾನೀಯ ಆಕ್ರಮಿತ ಯಾ ಸ್ವತಂತ್ರವಾಗಿರುವ ಪ್ರದೇಶದ ಪ್ರಾಮುಖ್ಯ ನಗರಗಳಲ್ಲಿ ಸ್ತ್ರೀಯರು, ಬಸ್ಸು ಕಂಡಕ್ಟರರು ಮೊದಲಾಗಿ ಕ್ಲಾರ್ಕರೂ, ಡಾಕ್ಟರರೂ, ವಕೀಲರೂ, ಇಂಜಿನಿಯರೂ ಇತ್ಯಾದಿ ಉದ್ದಿಮಗಳಲ್ಲಿ ದುಡಿಯುತ್ತಿರುವುದು ಕಾಣಿಸುತ್ತದೆ. [ಈ ವಿಚಾರದಲ್ಲಿ ನಮ್ಮ ಸ್ತ್ರೀಯರು ಅಷ್ಟು ಮುಂದೆ ಬಂದಿಲ್ಲ. ನಮ್ಮ ಕೆಲವು ಸಂಸ್ಥೆಗಳಲ್ಲಿ ಗುಮಾಸ್ತಿಕೆ ಕೆಲಸಗಳಲ್ಲಿ ಸ್ತ್ರೀಯರು ದುಡಿಯುತ್ತಿರುವುದು ಕಾಣಿಸುತ್ತದೆ. ಅದ್ಯಾಪಕೀಯರ ಉದ್ದಿಮವನ್ನು ನಮ್ಮಲ್ಲಿ ಅನೇಕ ಸ್ತ್ರೀಯರು ಕೈಗೊಂಡು ಬಹಳ ದಿವಸಗಳಾದುವು.] ಸ್ತ್ರೀ ಡಾಕ್ಟರರು ನಮ್ಮಲ್ಲಿ ಕೆಲವರಿದ್ದಾರೆ. ಆದರೆ ಸದ್ಯದಲ್ಲೆ ಚೀನೀ ಸ್ತ್ರೀಯಂತೆ ನಮ್ಮ ಸ್ತ್ರೀಯರೂ ಅನೇಕ ಉದ್ಯೋಗಗಳಲ್ಲಿ ಕಾಣಿಸಿಕೊಳ್ಳಬಹುದು. ಹಳ್ಳಿಯ ಗದ್ದೆಗಳಲ್ಲಿ ತಮ್ಮ ಪುರುಷರೊಂದಿಗೆ ಸ್ತ್ರೀಯರು ಗೇಯುತ್ತಿರುವುದು ನಮ್ಮ ಕಣ್ಣುಗಳಿಗೆ ನಿತ್ಯಲೂ ಕಾಣಿಸುತ್ತಿದೆ.] **ಅಲ್ಲಿನ ಕೆಲವು ಪ್ರಾಂತ್ಯಗಳಲ್ಲಿ ಸ್ತ್ರೀಯರ ಹೆಚ್ಚಿನ ಉದ್ಯೋಗಗಳಲ್ಲಿ ಪ್ರವೇಶಿಸಿಕೊಂಡಿದ್ದು, ಅವರ ಮೊದಲಿನ ಸ್ಥಳದಲ್ಲಿ ಪುರುಷರು ಮನೆಯಲ್ಲೆ ಮನೆಕೆಲಸ ಮಾಡುತ್ತಿರುವರು.** ಅಲ್ಲಿ ಎಲ್ಲಾ ವ್ಯವಹಾರಗಳಲ್ಲಿ ಸ್ತ್ರೀಯರೆ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿರುವರು. ಅಷ್ಟಾದರೂ, ಸ್ತ್ರೀಯತ್ವವು ಅವರಲ್ಲಿ ಹಾಳಾಗದೆ ಹಾಗೆನೆ ಉಳಿದಿದೆ.

ಡಾ| ಸನ್ ಯಾಟ ಸನ್, ಚಿಯಾಂಗ್—ಕೈಶೆಕ ಮತ್ತು ಕೊಮ್ಯುನಿಷ್ಠ ಪ್ರಭಾವಗಳಿಂದ, ಭಿನ್ನ ಭಿನ್ನವಾಗಿದ್ದ ಚೀನಾವು ಒಂದು ಅಖಂಡ ರಾಷ್ಟ್ರವಾಯಿತು. ಚೀನೀಯರಲ್ಲಿ ಪ್ರಗತಿಪರ ನವಜಾಗ್ರತಿಯು ಉಂಟಾಯಿತು. ಜಗತ್ತಿನಲ್ಲಿ ತಮಗೊಂದು ಮಾನ್ಯ ಸ್ಥಾನ ದೊರಕಿಸಿಕೊಳ್ಳುವ ಕುರಿತು ಅಲ್ಲಿ ಉತ್ಸಾಹವೂ ಉಂಟಾಯಿತು. ಅದರಲ್ಲೂ ಜಪಾನಿನ ಬಲತ್ಕಾರದ ಆಕ್ರಮಣದ ನಂತರ, ಅಲ್ಲಿ ಉಂಟಾದ ನವಜಾಗ್ರತಿಯೂ ನವಚೇತನವೂ, ಇನ್ನೂ ಹುರುಪನ್ನು ಹೊಂದಿದವು. ಈ ನೂತನ ರಾಷ್ಟ್ರೀಯ ದೃಷ್ಟಿಯಿಂದ ಚೀನಾದ ರಾಷ್ಟ್ರೋದ್ಧಾರಕ್ಕಾಗಿ ಚೀಯಾಂಗರ ಕೌಮಿಂಗ್‌ಟಾಂಗದಲ್ಲಿ (ನಮ್ಮ ಕಾಂಗ್ರೆಸ್ಸಿನಹಾಗೆ ಚೀನೀ ಸಂಸ್ಥೆ) ಕೊಮ್ಯುನಿಸ್ಟರ ಅಡಿಯಲ್ಲೂ, ಜನರು ಕೂಡಿ ಗೇಯುವಂತಾಯಿತು. ಈ ರಾಷ್ಟ್ರೀಯ ಚಳವಳದಿಂದ ಚೀನಾವು ತನ್ನನ್ನು ನೆಲಕ್ಕೆ ಒತ್ತಿಹಿಡಿದ ಅನೇಕ ಹಳೆಯ ಕ್ರಮಗಳನ್ನು ಓಡಿಸಿಬಿಟ್ಟು, ಜೀವನಕ್ಕೆ ಹುರುಪನ್ನು ಕೊಡುವ ಹೊಸ ಕ್ರಮಗಳನ್ನು ಆಚರಿಸಿತು. ಈ ತರದ ಪರಿವರ್ತನೆಯಿಂದ ತಮ್ಮ ಮೇಲೇರಿಬಂದ ಜಪಾನೀಯರನ್ನೂ ಇನ್ನಿತರ ತೊಡಕುಗಳನ್ನೂ ಯಶಸ್ವಿಯಾಗಿ ವಿರೋಧಿಸುತ್ತಿರುವರು. ಸ್ತ್ರೀಯರಿಗೆ ಮಾನ್ಯ ಸ್ಥಾನವು ಕೊಡಲಾದುದು, ಚೀನಾವು ಆಚರಿಸಿದ ಸುಧಾರಣೆಗಳಲ್ಲಿ ಒಂದಾಗಿರುತ್ತದೆ. ಸ್ತ್ರೀಯು ಸ್ವತಂತ್ರಳಾದುದರಿಂದ, ರಾಷ್ಟ್ರೀಯ ಚಳವಳದಲ್ಲೂ ಆಕೆಯ ಪ್ರವೇಶವಾಯಿತು. ರಾಷ್ಟ್ರರಕ್ಷಣೆಯ ಕಾರ್ಯಗಳಲ್ಲಿ ಪುರುಷನೊಡನೆ ಆಕೆಯೂ ಶ್ರಮಗಳನ್ನು ವಹಿಸಿಕೊಂಡಳು. ದೇಶಕ್ಕಾಗಿ ಮಹಾತ್ಯಾಗಗಳನ್ನೂ ಅರ್ಪಣೆಗಳನ್ನೂ ಮಾಡುತ್ತಿರುವಳು.

ಸೋವಿಯಟ್ ರಷ್ಯಾದಲ್ಲಿ ಸ್ತ್ರೀಯು ವಿಮೋಚಿಸಲ್ಪಟ್ಟ ಪರಿಣಾಮವಾಗಿ, ಆಕೆಗೆ ಶಿಕ್ಷಣಕ್ಕೆ, ತರಬೇತಿಗೆ ಒಳ್ಳೆ ಅವಕಾಶಗಳು ಒದಗಿಸಲ್ಪಟ್ಟು, ಆಕೆಯು, ಇಂದು ಸರಕಾರದ ಮುಖ್ಯಾಧಿಕಾರ ಕ್ಷೇತ್ರದಿಂದ ದೇಶದ ಅತಿ ಸಣ್ಣ ಉದ್ಯೋಗಗಳಲ್ಲೂ ದುಡಿಯುವಂತಾಗಿದೆ. ಮಾತ್ರವಲ್ಲದೆ, ನಾಜಿಗಳನ್ನು ಹೊಡೆದೋಡಿಸಿದ ಕೆಂಪು ಬಲದಲ್ಲೂ ಅವರ ಪ್ರವೇಶವಾಗಿರುತ್ತದೆ. **ಅಲ್ಲಿನ ವಿಮಾನ ಪಡೆಗಳಲ್ಲಿ ಕಾಲ್ದಾಳಗಳಲ್ಲಿ, ನೌಕಾ ಪಡೆಗಳಲ್ಲಿ ಸ್ತ್ರೀಯರು ಪುರುಷರಂತೆ ಪ್ರಾಮುಖ್ಯ ಪಾತ್ರಗಳನ್ನು ವಹಿಸಿ ದುಡಿಯುತ್ತಿರುವರು. ಇದೇ ರೀತಿಯಲ್ಲಿ ಚೀನೀ ಸ್ತ್ರೀಯು ವಿದ್ಯಾವಂತಳಾಗಿ ವೈದ್ಯಕೀಯ, ಔದ್ಯೋಗಿಕ, ಮೊದಲಾದ ಕ್ಷೇತ್ರಗಳಲ್ಲಿ ಮಾತ್ರವಲ್ಲ**

(೧೦ನೇ ಪುಟಕ್ಕೆ ಮುಂದುವರಿದಿದೆ)

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ—ಮಂಗಳೂರು
ನಮ್ಮ ಇತರ ವಿಶೇಷ ತಯಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ಪ್ರಚಲಿತ ಸಮಾಚಾರಗಳು

ಸದ್ಯದ ಮಹಾ ಯುದ್ಧವು ಯಾವಾಗ ಕೊನೆಗೊಳ್ಳುವುದೆಂದು ಈಗ ಹೇಳಬರುವುದಿಲ್ಲದಾದರೂ, ಮಿತ್ರರು ವಿಜಯಿಗಳಾಗುವುದು ಖಂಡಿತ, ಮತ್ತು ಈ ಯುದ್ಧವು ಬೇಗನೆ ಕೊನೆಗೊಳ್ಳುವುದೆಂದು ಹೇಳಬಹುದು. ೧೯೧೮ರಲ್ಲಿ ಯುದ್ಧ ವಿಶ್ರಾಂತಿ ಸಾರಲ್ಪಟ್ಟಾಗ ಮಿತ್ರರಾಷ್ಟ್ರಗಳಲ್ಲೂ ಜಗತ್ತಿನ ಇತರ ದೇಶಗಳಲ್ಲೂ ಸಂತೋಷವು ಉಂಟಾಗಿ, ಯುದ್ಧಗಳೇ ಉಂಟಾಗದಂತೆ ಸಾಧಿಸಲು ಈ ಜಗತ್ತನ್ನು ಸುಧಾರಿಸುವ ಆಶ್ವಾಸನೆಯು ಹೊರಟಿದ್ದರೂ, ಈ ಕುರಿತು ಉಂಟಾದ ಉತ್ಸಾಹವೂ ಬರಬರುತ್ತಾ ಕುಗ್ಗಿತು, ಮುಂದಕ್ಕೆ ಲೋಕ ಶಾಂತಿಗೆ ಭಂಗಬಾರದಂತೆ ಕೈಕೊಳ್ಳಬೇಕಾದ ನೀತಿ, ಕಾರ್ಯಗಳ ಕುರಿತು ವಿವೇಕಪರ ಇತ್ಯರ್ಥಗಳಿಗೆ ಮೊದಲೆ ಬಾರದೆ ಮಿತ್ರರು ಸಂದಾನದ ವ್ಯವಹಾರಗಳನ್ನು ನಡೆಯಿಸುವವರಾದರು. ಪರಿಣಾಮ "ಲಿಗ್ ಓಫ್ ನೇಶನ್" ಎಂಬಸಂಸ್ಥೆಯು ಸ್ಥಾಪಿಸಲ್ಪಟ್ಟಿದಾಗ್ಯೂ ಜಾಗತಿಕ ಶಾಂತಿಗೆ ಸಂರಕ್ಷಣೆಯು ಲಭಿಸದಾಯಿತು. ಈ ಭಾರಿ ಈ ತರದ ತಪ್ಪುಗಳು ಉಂಟಾಗದಂತೆ ಯುದ್ಧೋತ್ತರದ ದಿನಗಳ ಕುರಿತು, ಸಂಧಾನ ವ್ಯವಹಾರದ ಕುರಿತು, ಮುಂದಿನ ಶಾಂತಿಯ ಕುರಿತು, ನವಯುಗದ ಕುರಿತು, ಒಮ್ಮತದ ನಿರ್ಧಿಷ್ಟ ಇತ್ಯರ್ಥಗಳಿಗೆ ಬರಲು ಮಿತ್ರರ ನೆರವಿನಲ್ಲಿ ಯತ್ನಗಳು ನಡೆಯುತ್ತಿವೆ. ಡಂಬಾರ್ಟನ್ ಓಕ್ಸ ಪರಿಷತ್ತು, ಬ್ರೆಟನ್‌ವುಡ್ ಹಣಕಾಸಿನ ಪರಿಷತ್ತು, ಮೊದಲಾದ ಪರಿಷತ್ತುಗಳು, ಅಮೇರಿಕದಲ್ಲೂ, ಬ್ರಿಟನಿನಲ್ಲೂ ನಡೆದಿದ್ದು, ಈಗ ಕೊನೆಯ ಇತ್ಯರ್ಥಗಳಿಗೆ ಬರಲು, ತ್ರಿಮೂರ್ತಿಗಳು ಕ್ರಿಮಿಯಾದ ಯಾಲ್ಟಾದಲ್ಲಿ ನಿವೇದಿಸಿದ ಮೆರೆಗೆ, ಅಮೇರಿಕಾದ ಸಾನ್‌ಫ್ರಾನ್ಸಿಸ್ಕೊದಲ್ಲಿ ಮಿತ್ರ ರಾಷ್ಟ್ರಗಳ ಮತ್ತವರ ಬದಿಯಲ್ಲಿರುವ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಕೂಡಿಬಂದು ಒಂದು ಮಹಾ ಪರಿಷತ್ತು ಜರಗಲಿದೆ. ಯುದ್ಧೋತ್ತರದ ಜಗತ್ತಿನಲ್ಲಿ ಪ್ರಗತಿಪರ ನೀತಿಗಳಿಗೆ ಪ್ರಜಾಸತ್ತೆಗೆ, ಸ್ವಾತಂತ್ರಕ್ಕೆ ಅವಕಾಶ ಮಾಡಿಕೊಡುವುದೇ ಮೂಲ ಧೋರಣೆಯಾಗಿಟ್ಟು ಇಲ್ಲಿ ಪರ್ಯಾಲೋಚನೆಗಳಾಗಬೇಕೆಂದು ನಿರ್ಣಯಿಸಲ್ಪಾಗಿದೆ. ಈ ಪರಿಷತ್ತಿಗೆ ಪ್ರಜಾಸತ್ತೆಯ ಕ್ರಮುಗಳಿಗೆ ಸರಿಯಾಗಿ ಹಿಂದೂದೇಶದ ಪರವಾಗಿ ಪ್ರತಿನಿಧಿಗಳ ಆರಿಕೆಯು ಆಗುವ ಬದಲಾಗಿ ಇಂಡಿಯಾ ಸರಕಾರವು ತನ್ನ ಅಧಿಕಾರ ವರ್ಗದ ಮತ್ತು ತನ್ನ ನೆರಳಲ್ಲಿರುವ ವ್ಯಕ್ತಿಗಳನ್ನು ಆರಿಸಿರುವುದು.

ಈ ಪರಿಷತ್ತಿನಲ್ಲಿ ಅನೇಕ ವಿಚಾರಗಳು ಪರ್ಯಾಲೋಚಿಸಲಾಗುವವು. ಪ್ರಜಾಸತ್ತಾನೀತಿಗೆ ಕಳಂಕ ತರುವ, ಲೋಕಶಾಂತಿಗೆ ಮಹಾಕಂಟಕಪ್ರಾಯವೆನಿಸುವ ವರ್ಣಭೇದವನ್ನು ಸಂಪೂರ್ಣ ನಿವಾರಿಸುವರೆ ವರ್ಣೀಯ ಜನರ ಸಂಕಷ್ಟ ನಿವಾರಣಾ ಪರವಾಗಿ ನಿರ್ಣಯವೊಂದು ಅಲ್ಲಿ ಮಂಡಿಸಲಾಗುವುದೆಂದು ತಿಳಿದು ಬಂದಿದೆ. ಪ್ರಜಾ ಸತ್ತೆ ರಕ್ಷಣೆಯ ಕುರಿತು ಇಷ್ಟೆಲ್ಲಾ ಚೇತನವು ಉಂಟಾಗಿದ್ದಾಗ ಹಿಂದೂದೇಶದ ಸ್ವಾತಂತ್ರ್ಯ ಕುರಿತೇನು? ಎಂಬ ವಿಚಾರವು ಹಿಂದೀಯರಲ್ಲಿ ಹೊಳೆಯಬಹುದು. ಹಿಂದೂದೇಶವೂ ಸ್ವಾತಂತ್ರ್ಯ ಪಡೆಯಲು ಇನ್ನೂ ಅರ್ಹವಾಗಿಲ್ಲ, ಇಲ್ಲಿ ಸ್ಥಿರವಾದ ಸರಕಾರವು ರಚನೆಯಾಗುವ ಸ್ಥಿತಿಯು ಈಗಿನದಲ್ಲಿ ಸ್ಥಿರವಾದ ಸರಕಾರವೊಂದು ಸ್ಥಾಪಿಸಲ್ಪಡಬೇಕಾದರೆ ಹಿಂದೂದೇಶದ ಅಂತರ್ಯಶುದ್ಧಿಯಾಗಬೇಕು, ಮೊದಲಾದ ಸಲ್ಲದ ನೆಪಗಳನ್ನು ಹೊರಡಿಸಿ, ಬ್ರಿಟನಿನ ಧುರೀಣರು ಹಿಂದೀಯರ ಸ್ವಾತಂತ್ರ್ಯ ಸಮಸ್ಯೆಯ ಪರಿಹಾರ ವಿಚಾರವು ಮೇಲಕ್ಕೆಬಾರದಂತೆ ಸಾಧಿಸುವುದು ಕಾಣಿಸಿಕೊಳ್ಳುತ್ತದೆ. ಪ್ರಜಾಸತ್ತಾಭಾವನೆಯ ಸಂ. ಅಮೇರಿಕಾದಿಂದ ಹಿಂದೀಯರಿಗೆ ತಮ್ಮಸ್ವಾತಂತ್ರ ಸಾಧನೆಯಲ್ಲಿ ಉಪಕಾರವಾಗುವುದೆಂದು ತಿಳಿಯುವ ಅಂದರೆ, ಅನ್ಯದೇಶಗಳ ರಾಜಕೀಯದಲ್ಲಿ ಕೈಮಾಡದೆ ತನ್ನ ಹಿತದೃಷ್ಟಿಯಿಂದ ವರ್ತಿಸುವ ದೋರಣೆಯು ಅದರದಾಗಿರುತ್ತದೆ. ಆದರೆ ಅಧ್ಯಕ್ಷ 'ರೂಸ್‌ವೆಲ್ಟರು ಉತ್ತಮ ಉದಾರವಾದಿಗಳು. ಅವರ ಪ್ರೇರಣೆ ಮತ್ತು ವಿವೇಕಪರ ಇತ್ಯರ್ಥಗಳಿಂದ ಪ್ರಜಾಸತ್ತೆಗೆ ತಗಲಿದ ಹಿಟ್ಲರಾರಿಷ್ಟವು ನಿವಾರಿಸಲ್ಪಡುವಂತಾಗಿದೆ. ಹಿಂದೂದೇಶಕ್ಕೆ ಸ್ವಾತಂತ್ರವು ಅವರ ಪ್ರೇರಣೆಯಿಂದ ಒದಗಬಹುದೆ?

ನಮ್ಮ ದೇಶದಲ್ಲಿ ಸದ್ಯ ಉಂಟಾದ ಆಹಾರದ ಕೊರತೆ, ಇತ್ಯಾದಿ ಸಂಕಷ್ಟಗಳಿಗೆ ಇತರ ಕಾರಣಗಳೊಡನೆ ದೇಶದ 'ವ್ಯಾಪಾರಿ' ಮನೋವೃತ್ತಿಯೂ ಒಂದಾಗಿರುತ್ತದೆ. ಈ ವ್ಯಾಪಾರೀ ಮನೋವರ್ತನೆಯಲ್ಲಿ ಉತ್ತಮನೀತಿಯು ವಿರಹಿತವು. ಯುದ್ಧೋತ್ತರದಲ್ಲಿ ಜಗತ್ತು, ಎರಡು ಮಹಾಯುದ್ಧಗಳ ಪರಿಣಾಮವಾಗಿ ಉಂಟಾದ ಬೆಳಕಿನಿಂದ ಭವಿಷ್ಯದಲ್ಲಿ ಪ್ರಗತಿಪಥದಲ್ಲೇ ನಡೆಯುವಂತಾಗುವುದೆಂದು ನಿಶ್ಚಯವಾಗಿ ಹೇಳಿಬಿಡುವುದಕ್ಕೆರಾಷ್ಟ್ರಗಳ ವ್ಯಾಪಾರೀ ಮನೋವೃತ್ತಿಯಿಂದ ಸ್ವಲ್ಪ ಹೆದರಬೇಕಾಗಿಯದೆ ಸದ್ಯ ಅಧಿನಾಯಕತ್ವಕ್ಕೆ ಬಂದ ಪ್ರಭುತ್ವದ ರಾಷ್ಟ್ರಗಳಲ್ಲಿ ಪರಭಾವನೆಗಳೊಂದಿಗೆ ಈ ವ್ಯಾಪಾರಿ ಭಾವನೆಯು ಕಲೆತುಕೊಂಡಿರುತ್ತದೆ. ತಮ್ಮ ವ್ಯಾಪಾರೀ ಹಿತಗಳ ಸಂರಕ್ಷಣೆಯು ಭರದಲ್ಲಿ, ಹಿಂದೂದೇಶದ ಸ್ವಾತಂತ್ರ ವಿಚಾರವು ಮರೆತು ಹೋಗಬಹುದು, ಯಾ ವ್ಯಾಪಾರೀ ನೀತಿಗೆ ಸರಿಯಾಗಿ ಬಗೆಹರಿಸಲ್ಪಡಬಹುದು. ಮಿತ್ರರಾಷ್ಟ್ರಗಳ ಧುರೀಣರಿಂದ ಈಗ ಸಾರಲ್ಪಡುವ ನೀತಿಯು ಪೂರ್ಣ ಆಚರಣೆ ಬರುವುದೆಂದಾದರೆ, ಆಗ ಹಿಂದೂದೇಶವು ಜಗತ್ತಿನ ಇತರ ರಾಷ್ಟ್ರಗಳೊಡನೆ ಸ್ವತಂತ್ರವಾಗಲೆಬೇಕು.

ಗಡಿನಾಡಿನಲ್ಲಿ ಡಾ.ಖಾನ್ ಸಾಹೇಬರ ಅಧಿನಾಯಕತ್ವದಲ್ಲಿ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದೆ. ಸೆರೆಸೇರಿಸಲ್ಪಟ್ಟ ಕಾಂಗ್ರೆಸ್ ಜನರ ಬಿಡುಗಡೆಯು ಆಗಿದೆ. ದಿನದಿಂದ ದಿನಕ್ಕೆ ಕೆಡುತ್ತಿರುವ ಪ್ರಾಂತ್ಯದ ಸ್ಥಿತಿಯನ್ನು ಸುಧಾರಿಸುವರೆ ಗಡಿನಾಡಿನ ಕಾಂಗ್ರೆಸ್ ಪಕ್ಷವು ಈ ಇತ್ಯರ್ಥಕ್ಕೆ ಬಂದಿರಬಹುದು. ತಮ್ಮ ಕೈಲಾದ ಮಟ್ಟಿಗೆ ಪ್ರಾಂತ್ಯದ ಸುಧಾರಣೆಯನ್ನು ಮಾಡುವವೆಂದು ಡಾ। ಖಾನ್ ಸಾಹೇಬರಿಂದ ಹೇಳಲಾಗಿದೆ. ಗಡಿನಾಡಿನಲ್ಲಿ ಕಾಂಗ್ರೆಸ್ಸು ಅಧಿಕಾರ ವಹಿಸುವ ಕುರಿತು ಗಾಂಧೀಜಿಯವರ ಅಭಿಪ್ರಾಯವು ಏನಿರುವುದೆಂದು ತಿಳಿದುಬರಲಿಲ್ಲದಿದ್ದರೂ, ಡಾ। ಖಾನ್ ಸಾಹೇಬರಿಗೆಗಾಂಧೀಜಿಯರ ಆಶೀರ್ವಾದವು ದೊರಕಿರುವುದೆಂದು ಹೇಳಲಾಗಿದೆ.

ಗಡಿನಾಡಿನ ಮಾದರಿಯನ್ನನುಸರಿಸಿ, ಇತರ ಕಡೆಗಳಲ್ಲೂ ಅಂದರೆ ಮಾದ್ರಾಸು, ಸಂಯುಕ್ತ ಪ್ರಾಂತ್ಯ, ಬಿಹಾರು, ಮೊದಲಾದ ಕಾಂಗ್ರೆಸ್ಸು ಪ್ರಾಂತ್ಯಗಳಲ್ಲೂ ಅಧಿಕಾರ ಸ್ವಿಕರಿಸಬಹುದೆಂದೂ ಊಹಿಸಲಾಗಿದೆ. ಅದರೊಂದಿಗೆ ಕೇಂದ್ರದಲ್ಲೂ ಮಹತ್ವದ ಬದಲಾವಣೆಗಳು ನಡೆಯಬಹುದೆಂದು ಊಹಿಸಲಾಗಿದೆ. ಭೂಲಾಬ್ಯಾ ದೇಸಾಯಿಗಳ ಯತ್ನಗಳಿಗೆ ಯಶಸ್ಸು ದೊರಕಬಹುದೆಂದೂ ಊಹಿಸಲಾಗಿದೆ. ಮುಸ್ಲಿಂ ಲೀಗಿಗೂ, ಕಾಂಗ್ರೆಸ್ಸಿಗೂ ಬಹುಮಟ್ಟಿಗೆ ಒಮ್ಮತವಿದ್ದುದು ಕೇಂದ್ರ ಅಸೆಂಬ್ಲಿಯ ಈಗಿನ ಅಧಿವೇಶನದಿಂದ ವ್ಯಕ್ತವಾಗಿದೆ. ಕಾಂಗ್ರೆಸ್ಸು ಅಧಿಕಾರ ವಹಿಸುವುದರಿಂದ ದೇಶಕ್ಕೆ ಸದ್ಯದ ಸಂಕಷ್ಟ ಪರಿಸ್ಥಿತಿಯನ್ನು ಎದುರಿಸಿ ಅದನ್ನು ನಿವಾರಿಸಿಕೊಳ್ಳಲು ಹೆಚ್ಚಿನ ಬಲ ಒದಗುವಂತಾಗುವುದು. ದೇಶವು ಭಾವೀ ಉದ್ಧಾರದ ಯೋಜನೆಗಳ ಕಲ್ಪನೆಯಲ್ಲಿ ಕೈಹಚ್ಚುವಂತಾಗುವುದು.

ಬ್ರಿಟಿಷ್ ಸಾಮ್ರಾಜ್ಯದ ರಾಷ್ಟ್ರಗಳ ಕಾಮನ್‌ವೆಲ್ತ ಪರಿಷತ್ತಿನಲ್ಲಿ ಹಿಂದೂದೇಶಕ್ಕೆ ಡೊಮಿನಿಯಸ್ ಸ್ಟೆಟಸ್ಸಿನ ಮಾದರಿಯ ಸ್ವಾತಂತ್ರ್ಯ ಕೊಡಲಾಗಬೇಕೆಂದು ನಡೆದ ಸರ್ ಜಫ್ರುಲ್ಲಾ ಖಾನರ ಭಾಷಣದ ಪರಿಣಾಮವಾಗಿ, ಬ್ರಿಟನಿನ ಉದಾರಿ ಪಕ್ಷದ ಧುರೀಣರು ಹಿಂದೀಯ ಸ್ವಾತಂತ್ರ್ಯ ಸಮಸ್ಯೆಯ ಕುರಿತು ಉತ್ಸಾಹತಾಳುವಂತಾಗಿದೆ. ಬ್ರಿಟಿಷ್ ಲೇಬರ್ ಪಕ್ಷವು ಹಿಂದೂದೇಶದ ಕುರಿತು ಚರ್ಚಿಲ್ ಸರಕಾರದ ಧೋರಣವು ಉದಾರ ರೂಪ ತಾಳುವಂತೆ ಪ್ರೇರೇಪಿಸಬಹುದೆಂದು ಹೇಳಲಾಗಿದೆ. ಯುದ್ಧವು ಮುಗಿದ ಒಂದು ಯಾ ಎರಡು ವರ್ಷದೊಳಗೆ ಹಿಂದೂದೇಶದಲ್ಲಿ ಸ್ವತಂತ್ರ ಸರಕಾರದ ಸ್ಥಾಪನೆಯಾಗುವ ಕುರಿತು ಆಶ್ವಾಸನೆಯು ಕೊಡಲ್ಪಡಬೇಕೆಂದೂ, ಸೂಚನೆಗಳಾಗಿವೆ. ವೈಸ್ರಾಯ ವೇವಲ್ಲರು ಸದ್ಯದಲ್ಲೆ ಲಂಡನಿಗೆ ತೆರಳುವವರಿದ್ದಾರೆ. ಈ ಸಂದರ್ಭದಲ್ಲಿ ಅವರು ಚರ್ಚಿಲ್ಲರನ್ನು ಕಂಡು ಮಾತನಾಡಿ, ಹಿಂದೂದೇಶದ ಕುರಿತು, ಒಂದು ಇತ್ಯರ್ಥವುಂಟಾಗುವಂತೆ ಅವರು ಸಾಧಿಸಬಹುದೆಂದು ಊಹನೆಗಳಿವೆ. ಸದ್ಯದಲ್ಲೆ ಸೆರೆಯಲ್ಲಿದ್ದ ಕಾಂಗ್ರೆಸ್ ಮುಖಂಡರ ವಿಮೋಚನೆಯು ಆಗಬಹುದಂತೆ. ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆಗಳು ಸದ್ಯದಲ್ಲೆ ನಡೆಯಲಿವೆ. ತಮ್ಮ ಅಧಿಕಾರವನ್ನು ರಕ್ಷಿಸುವರೆ ಲೋಕಾಭಿಪ್ರಾಯವನ್ನು ಸಮಜಾಯಿಸಲು ಟೋರಿಗಳು ಹಿಂದೂದೇಶದ ಕುರಿತು ಧೋರಣವು ಸ್ವಲ್ಪ ತಿದ್ದಲ್ಪಡಬಹುದೆಂದು ಹೇಳಲಾಗಿದ್ದರೂ, ಆ ಕುರಿತು ಸೂಚಕಗಳು ಇಷ್ಟರ ತನಕ ಕಾಣಿಸಿಕೊಳ್ಳಲಿಲ್ಲ.

ಸಂ. ಅಮೇರಿಕಾದ ಬಲವು ಜಪಾನನ್ನು ಸಮಿಾಪಿಸುತ್ತಿದ್ದಹಾಗೆ, ಅವರ ಹಾರುವ ಕೋಟೆಗಳಿಂದ ಅದರ ಮೇಲೆ ದಾಳಿಯು ನಡೆಯುತ್ತಿದ್ದ ಹಾಗೆ ಅಲ್ಲಿನ ರಾಜಕಾರಣದಲ್ಲಿ ಸರ್ವಾಧಿಕಾರದಲ್ಲಿದ್ದ ಸಂಗ್ರಾಮಾಧಿಕಾರದ ಹಿಡಿತವು ಸಡಿಲಾಗುತ್ತಿದೆ. ಮೊನ್ನೆ ಅದು ಅಧಿಕಾರವನ್ನು ಪೂರ್ಣ ತ್ಯಜಿಸಿದೆ. ಈಗ ಅಲ್ಲಿ ನಾಗರೀಕ ವರ್ಗವೆ ಅಧಿಕಾರಕ್ಕೆ ಬಂದಿದ್ದು, ಅದೀಗ ಜಪಾನನ್ನು ಮಿತ್ರರ ಅಭಿಕ್ರಮದಿಂದ ಬದುಕಿಸಿಕೊಳ್ಳಲು ಪರಿಶ್ರಮಿಸುತ್ತಿದೆ. ಫಿಲಿಪ್ಪಾನುಗಳಿಂದ ಅಮೇರಿಕನರು ಚೀನಾದೊಳಗೆ ಪ್ರವೇಶಿಸಿ, ಜಪಾನಿಯರನ್ನು ಬೆನ್ನಟ್ಟಿ ಹೋಗಬಹುದು. ರಷ್ಯದ ಕೆಂಪು ಬಲವು ಮೆಂಚ್ಯೂರಿಯದಲ್ಲಿ ಜಪಾನಿನ ಮೇಲೇರಿ ಬರುವಂತೆ ಅಮೇರಿಕವು ಪ್ರೇರೇಪಿಸುತ್ತಿದ್ದು, ಅಮೇರಿಕಾದ ಋಣಕ್ಕೆ ಒಳಗಾದ ರಷ್ಯವು ಶಾಂತಸಾಗರ ಹೋರಾಟದಲ್ಲಿ ಪ್ರವೇಶಿಸಬಹುದೆಂದು ಹೇಳಲಾಗಿದೆ. ಚಿಯಾಂಗರು ಕೊಮ್ಯುನಿಷ್ಟ ಕುರಿತು ವಹಿಸಿದ ಧೋರಣದಲ್ಲಿ ಅಸಮಾಧಾನ ಸೂಚಿಸಿ ಸೋವಿಯಟ್ ಪತ್ರಿಕೆ ಪ್ರವಾಡದಲ್ಲಿ ಒಂದು ಲೇಖವು ಪ್ರಕಟವಾಗಿರುತ್ತದೆ. ದೂರ ಪೂರ್ವದ ವ್ಯವಹಾರದಲ್ಲೂ ಸ್ಟೇಲಿನನೂ ಕುತೂಹಲನಾಗಿರುವನೆಂದು ಇದರಿಂದ ಹೇಳಬಹುದು. ಯುರೋಪದ ಕುರಿತು ಅಟ್ಲಾಂಟಿಕ್ ಚಾರ್ಟರ್ ಒಂದು ಸಂಕಲ್ಪಿಸಲ್ಪಟ್ಟಂತೆ, ಆಸ್ಯಕ್ಕಾಗಿ ಪೆಸಿಫಿಕ್ ಚಾರ್ಟರು ಎಂಬದೊಂದು ಅಮೆರಿಕನ್ ನೆರವಿನಲ್ಲಿ ಸಂಕಲ್ಪಿಸಲಾಗಿದೆ. ಹಿಂದೂದೇಶವೂ, ಚೀನವೂ ಬಹಳ ಹಿಂದುಳಿದ ರಾಷ್ಟ್ರಗಳು. ಅವುಗಳು ಪಾಶ್ಚಾತ್ಯ ರಾಷ್ಟ್ರಗಳ ಮಟ್ಟಕ್ಕೆ ಬರಬೇಕಾದರೆ ಔದ್ಯೋಗೀಕರಣ, ವ್ಯವಸಾಯದ ಉದ್ಧಾರ ಮೊದಲಾ

(೧೧ನೇ ಪುಟಕ್ಕೆ ಮುಂದುವರಿದುದು.)

The South Canara Central Co-operative Bank, Ltd., Mangalore.

SEASON DEPOSISTS

of Rs. 10,000/ and above for six months will be accepted at 3½% up to 31st March 1945.

2-12-1944 U. Shantha Rama Rao, *Secretary*

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ

ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಭಾರತ ವಿಚಾರ ವಿಮರ್ಶೆ

ಗಡಿನಾಡಿನ ಗಾಂಧಿಗಳ ಬಿಡುಗಡೆ—ಕಾಂಗ್ರೆಸ್ಸು ಅಧಿಕಾರಕ್ಕೆ ಬಂತು—ಹಸಿಯುವ ಜನರ ಸಂಕಷ್ಟ ನೋಡಲಿಕ್ಕಾಗುವುದಿಲ್ಲ—ಮಂತ್ರಿಗಳ ಲಂಚದ ಕತೆ

ಜನರ ಸೇವೆಯೇ ಮುಖ್ಯ

'ಗಡಿನಾಡಿನ ಗಾಂಧಿ'ಗಫೂರ ಖಾನರ ಬಿಡುಗಡೆಯಾಯಿತು. ಕಾರಣ ಅಲ್ಲಿ ಕೊಂಗ್ರೆಸ್ ಮಂತ್ರಿಮಂಡಳ ಸ್ಥಾಪನೆಯಾಗಿದೆ. ಅಲ್ಲಿ ಈ ಮೊದಲು ಲೀಗ್ ಮಂತ್ರಿಗಳ ಅಧಿಕಾರವಿತ್ತು. ಅದೂ ಜನಪ್ರಿಯ ಮಂತ್ರಿಮಂಡಳವೆನಿಸಿತ್ತು. ಆದರೆ ಅವರಿಂದ ಪ್ರಾಂತ್ಯದಲ್ಲಿನ ಆಹಾರ ಪರಿಸ್ಥಿತಿಯನ್ನೂ, ಲಂಚದ ಹಾವಳಿಯನ್ನೂ ಸುಧಾರಿಸಲಾಗಲಿಲ್ಲ. ಇಷ್ಟಾದರೂ ಅವರು ರಾಜಿನಾಮೆ ಕೊಡದೆ 'ಆಫೀಸಿಗೇ' ಅಂಟಿಕೊಂಡಿದ್ದರು.

ಧೀರ್ಘಕಾಲದ ಲೀಗ್ ಆಡಳಿತದಿಂದ ಜನತೆಯು ಆಹಾರ ಪರಿಸ್ಥಿತಿಯನ್ನು ಸುಗಮಮಾಡಲ್ಕಾಗದಿದ್ದುದನ್ನು ಕಂಡು, ಯುದ್ಧಾರಂಭದಲ್ಲಿ ತಮ್ಮನ್ನು ಕೇಳದೆ ಬ್ರಿಟಿಷ್ ಸರಕಾರದವರು ಭಾರತವನ್ನು ಯುದ್ಧದಲ್ಲಿ ದೂಡಿದರೆಂದು ಅಧಿಕಾರದ ಹೊಣೆಯನ್ನು ಕೆಳಗಿಟ್ಟು ಹೊರಬಂದ ಕೊಂಗ್ರೆಸ್ಸಿಗರು ಗಡಿನಾಡಿನಲ್ಲಿ ಅಧಿಕಾರ ಸ್ವೀಕರಿಸಬೇಕಾಯಿತು. ಅಲ್ಲಿನ ಮಂತ್ರಿಮಂಡಳವು ಶಾಸನ ಸಭಾಧಿವೇಶನದಲ್ಲಿ ಸೋಲಿಸಲ್ಪಟ್ಟಿತು.

ಗವರ್ನರರು ಡಾ। ಖಾನ್ ಸಾಹೇಬರಿಗೆ ಆಮಂತ್ರಣವಿತ್ತರು—ಅವರು ಸ್ವೀಕರಿಸಿದರು. ಇದರಲ್ಲಿ ಕೆಲವು ಸ್ವಾರಸ್ಯಸಂಗತಿಗಳಿವೆ. ಇತರ ಪ್ರಾಂತ್ಯಗಳಲ್ಲಿ ಕೊಂಗ್ರೆಸ್ ಸಂಸ್ಥೆಯು ನ್ಯಾಯಬಾಹಿರವೆಂದು ಸಾರಲ್ಪಟ್ಟಿದ್ದರೂ ಗಡಿನಾಡಿನಲ್ಲಿ ಅದನ್ನು ಹಾಗೆ ಮಾಡಿರಲಿಲ್ಲ. ೧೯೪೨ರ ಗಲಭೆಗೆ ಕೊಂಗ್ರೆಸ್ಸೇ ಕಾರಣವೆಂದು ಬ್ರಿಟಿಷ್ ಆಡಳಿತಗಾರರ ಮನಸ್ಸಿನಲ್ಲಿದ್ದರೆ ಅವರಿಂದು ಮಂತ್ರಿಮಂಡಳ ಸ್ಥಾಪಿಸಲು ಕೊಂಗ್ರೆಸಿಗರನ್ನೇ ಕರೆಯುತಿದ್ದರೆ?

ಮಹಾತ್ಮಾ ಗಾಂಧಿಯವರಾದರೂ "ಜನರಲ್ಲಿ ನಿಮ್ಮ ಕರ್ತವ್ಯವನ್ನು ನಿರ್ವಹಿಸಿರಿ" ಎಂದು ಸಂದೇಶ ಕಳುಹಿಸಿರುವರಂತೆ. ಮಹಾತ್ಮರ ಈ ಮಾತುಗಳಲ್ಲಿ ತುಂಬಾ ಗರ್ಭಿತಾರ್ಥವಿದೆ. ಜನರ ಸೇವೆ ಮಾಡಲು ಕೊಂಗ್ರೆಸಿಗರು ಬಿಟ್ಟುಕೊಟ್ಟ ಮಂತ್ರಿಮಂಡಳವನ್ನಾದರೂ ಸ್ವೀಕರಿಸಬೇಕಾಗುವುದು. ಇಲ್ಲವೆ ಕೆಲವು ಸಂದರ್ಭಗಳಲ್ಲಿ ಅದನ್ನು ಬಿಟ್ಟು ಬಿಟ್ಟೇ ಆ ಸೇವೆ ಮಾಡಬೇಕು.

ಈಗಿನ ಪರಿಸ್ಥಿತಿಯಲ್ಲಿ ಜನರ ನಿಜವಾದ ಸೇವೆಯನ್ನು ಮಾಡುವವರ ಅವಶ್ಯಕತೆ ಇದೆ. ಪ್ರಾಂತ್ಯ ಸರಕಾರಗಳನ್ನು ಗವರ್ನರರು ಜನತೆಗೆ ಜವಾಬುದಾರರಲ್ಲದ ಸಲಹೆಗಾರರಿಂದ ಆಳುತಿದ್ದಾರೆ. ಕಠಿಣ ಪ್ರಸಂಗಗಳಲ್ಲಿ ಜನಾಭಿಪ್ರಾಯವನ್ನು ಯೋಗ್ಯ ದಾರಿಯಲ್ಲಿ ನಿರ್ದೇಶಿಸಲು, ಸಲಹೆ ಸೂಚನೆ ಕೊಟ್ಟು ನೆಮ್ಮದಿ ಶಾಂತಿಗಳನ್ನು ಸ್ಥಾಪಿಸಲು ಜನಮುಖಂಡರಿಲ್ಲವಾಗಿದ್ದಾರೆ. ದೇಶದ ಆದ್ಯ ಸೇವಾ ಸಂಸ್ಥೆಯ ನಾಯಕರು ಸೆರೆಮನೆಯಲ್ಲಿ ಕಾಲಕಳೆವಂತಾಗಿದೆ.

ಇಂತಹ ದುಃಸ್ಥಿತಿಯಲ್ಲಿ ಡಾ। ಖಾನ್ ಸಾಹೇಬರ ಆದರ್ಶವು ಶ್ಲಾಘನೀಯವಾಗಿದೆ ಎಂದು ಅನೇಕ ರಾಜಕೀಯ ತಜ್ಞರು ಅಭಿಪ್ರಾಯಪಟ್ಟಿರುವರು. ಆದರೆ ಇದೇ ರೀತಿಯಲ್ಲಿ ಬ್ರಿಟಿಷ್ ಸರಕಾರದ ಬಿಗಿ ಧೋರಣೆಯೂ ಸಡಿಲಾಗಬೇಕಾದುದು ಅವಶ್ಯವಿದೆ. ಗಡಿನಾಡಿನಲ್ಲಿ ಕೊಂಗ್ರೆಸ್ಸಿಗರು ಮಂತ್ರಿಮಂಡಳ ರಚಿಸಬಲ್ಲರಾದರೆ ಇನ್ನಿತರ ಪ್ರಾಂತ್ಯಗಳಲ್ಲಿ ಅದೇ ಬದಲಾವಣೆಯನ್ನು ಏಕೆ ಉಂಟುಮಾಡ ಬಾರದು?

ಇದರಿಂದ ಕೊಂಗ್ರೆಸ್ಸಿನ ಗೌರವಕ್ಕಾಗಲೀ ಅಭಿಮಾನಕ್ಕಾಗಲಿ ಕುಂದುಂಟಾಗುವುದೆಂದು ತಿಳಕೊಳ್ಳಬಾರದು. ಕೆಲವು ಸಂದರ್ಭಗಳಲ್ಲಿ ಕಳೆದ ಧೋರಣೆಯನ್ನಾದರೂ ಬಿಟ್ಟು ಆತ್ಮಸಾಕ್ಷಿಗೆ ಚುಚ್ಚುವ ಸಂಕಷ್ಟದಲ್ಲಿ ಬಿದ್ದಂಥಾ ಜನತೆಯನ್ನು ರಕ್ಷಿಸಬೇಕಾಗುತ್ತದೆ. ಪಾರೋಹಿತ್ಯಕ್ಕೆ ಕಂಕಣ ಕಟ್ಟಿದ ವೇಳೆಯಲ್ಲಾದರೂ ಮಡುವಿನಲ್ಲಿ ಬಿದ್ದ ಮಗುವನ್ನು ಬದುಕಿಸಿದರೆ ಯಾವ ಧರ್ಮದೋಷವೂ ಉಂಟಾಗುವುದಿಲ್ಲವೆಂದು ನೀತಿಪ್ರಿಯರಿಗೆಲ್ಲರಿಗೆ ತಿಳಿದಿರುವ ವಿಷಯ.

ಲಂಚ ತಿಂದ ಮಂತ್ರಿಗಳು !

ಕೆಲವು ತಿಂಗಳ ಹಿಂದೆ ಒಮ್ಮೆ ಮಿ। ಜಿನ್ನರು ಪಂಜಾಬಿಗೆ ಲೀಗ್ ಮಂತ್ರಿಮಂಡಳ ಸ್ಥಾಪಿಸುವ ಏರ್ಪಾಡು ಮಾಡಲು ಹೋಗಿದ್ದರು. ಆದರೆ ಪಂಜಾಬಿನಲ್ಲಿ ಲೀಗಿಗೆ ಯಾವ ಬೆಂಬಲವಿಲ್ಲ. ಶಾಸನ ಸಭೆಯ ೧೭೫ ಮಂದಿ ಸದಸ್ಯರಲ್ಲಿ ಅಲ್ಲಿನ ಮುಸ್ಲಿಂ ಲೀಗ್ ಪ್ರತಿನಿಧಿಗಳು ಬರೀ ೨೩ ಎಂದಾಗ ಎಲ್ಲ ವಿಷಯವೂ ತಿಳಿಯುವುದು. ಜಿನ್ನರೊಡನೆ ಸಂಧಾನಮಾಡಿಕೊಂಡು ಲೀಗ್ ಪ್ರಭಾವವನ್ನು ಪಂಜಾಬಿನಲ್ಲಿ ಸ್ಥಾಪಿಸಬೇಕೆಂದು ಅಲ್ಲಿನ ಮಂತ್ರಿಮಂಡಳದ ಸದಸ್ಯರಲ್ಲೊಬ್ಬರಾಗಿದ್ದ ಮಿ। ಶೌಕತ್ ಹಯತ್ ಖಾನರು ತಮ್ಮ ಪ್ರಧಾನ ಮಂತ್ರಿಗಳಾದ ಸರ್ದಾರ್ ಕಿಜೀರ್ ಹಯತ್ ಖಾನ್ ತಿವಾನಾ ಅವರಿಗೆ ಒತ್ತಾಯ ಮಾಡಿದರು. ಆದರೆ ದಿವಂಗತ ಸರ್ ಚೋಟುರಾಮರ ಯೂನಿಯನಿಸ್ಟ್ ಪಕ್ಷದ ಆ ಪ್ರಧಾನಿಗಳು ಜಿನ್ನರ ವಕಾಲತಿಗೆ ಬಲಿ ಬೀಳದೆ ಲೀಗಿನ 'ಸಂಧಾನ'ವನ್ನು ನಿರಾಕರಿಸಿದರು.

ಇದಾದ ಕೆಲವು ಸಮಯದಲ್ಲೇ ಲೀಗಿನ ಪರವಾಗಿ ವಾದಿಸಿದ ಶೌಕತ್ ಹಯತ್ ಖಾನರನ್ನು ಗವರ್ನರರು 'ಡಿಸ್ ಮಿಸ್' ಮಾಡಿದರು. ಗವರ್ನರರ ಈ ವರ್ತನೆಯು ರಾಜ್ಯ ಘಟನೆಗೆ ವಿರೋಧವಾದುದೆಂತಲೂ, ಲೀಗಿಗೆ ಅವರು ವ್ಯಕ್ತಿ ವಿರೋಧ ತೋರಿದರೆಂತಲೂ ದೇಶದಲ್ಲಿ ಅನೇಕ ತರದ ಅಭಿಪ್ರಾಯಗಳು ಮಾಡಲ್ಪಟ್ಟವು.

ನಿಜಸ್ಥಿತಿ

ಶೌಕತ್ ಹಯತ್ ಖಾನರನ್ನು ತೆಗೆದು ಹಾಕಿದ್ದೇಕೆಂದು ಪಂಜಾಬ್ ಎಸೆಂಬ್ಲಿಯಲ್ಲಿ ಪ್ರಶ್ನೆಗಳೇಳಲು ಮುಖ್ಯ ಮಂತ್ರಿ ತಿವಾನರು ನಿಜ ಪರಿಸ್ಥಿತಿಯನ್ನು ಬಯಲಿಗೆಳೆದರು. ಶೌಕತ್ ಖಾನರ ಕುರಿತು ಅವರು ತಿಳಿಸಿದ ವಿಚಿತ್ರ ಸಂಗತಿಗಳು ಹೀಗಿವೆ:

"ತಮ್ಮ ಕಡೆಯೊಬ್ಬ ಮಹಿಳೆಯನ್ನು ಒಂದು ವಿದ್ಯಾ ಸಂಸ್ಥೆಯಲ್ಲಿ ಕೆಲಸದಿಂದ ತೆಗೆದುಹಾಕಿದರೆಂದು—ಅದಕ್ಕೆ ನ್ಯಾಯವಾದ ಕಾರಣವಿದ್ದರೂ—ಹಯತ್ ಖಾನರು ತಮ್ಮ ಅಧಿಕಾರವನ್ನು ದುರುಪಯೋಗಗೊಳಿಸಿ ಆ ವಿದ್ಯಾ ಸಂಸ್ಥೆಯ ಮುಖ್ಯಾಧಿಕಾರಿಣಿಯ ಕೆಲಸ ತೆಗೆದುಹಾಕಲು ಹುಕುಂ ಕೊಟ್ಟರು. ಕೊನೆಗೆ ಈ ದುರ್ವರ್ತನೆಯನ್ನು ಗವರ್ನರರು ಸರಿಪಡಿಸಿದರು.

ನಂತರ ಶೌಕತ್ ಹಯತ್ ಖಾನರು ಕೆಲವು ಹಳ್ಳಿಗರಿಗೆ 'ಸರಕಾರವು ನಿಮ್ಮ ಜಮೀನನ್ನು ಕಮ್ಮಿ ಕ್ರಯಕ್ಕೆ ವಶಪಡಿಸಿಕೊಳ್ಳುವುದು. ಆದುದರಿಂದ ಸ್ವಲ್ಪ ಹೆಚ್ಚು ಕ್ರಯಕ್ಕೆ ನೀವದನ್ನು ನನಗೇ ಕೊಟ್ಟುಬಿಡಿರಿ' ಎಂದು ಸುಳ್ಳು ಬೆದರಿಕೆ ಹಾಕಿ, ಇರ್ವ ವ್ಯಾಪಾರಿ ಬಂಧುಗಳ ಹತ್ತಿರ ಸುಮಾರು ಒಂದು ಲಕ್ಷ ರೂಪ್ಯಾಗಳಷ್ಟು ಸಾಲ ತೆಗೆದುಕೊಂಡು ಆ ಜಮೀನುಗಳ ನಿಜವಾದ ಈಗಿನ ಕ್ರಯಕ್ಕಿಂತ ಬಹಳ ಕಮ್ಮಿ ಬೆಲೆಗೆ ಕೊಂಡುಕೊಂಡರು. ಸಾಲ ತೆಗೆದುಕೊಂಡ ವ್ಯಾಪಾರಸ್ಥರಿಗೆ ಬೇರೆ ವಿಧಾನದಲ್ಲಿ 'ಲಾಭದ' ಸವಲತ್ತುಗಳು ದೊರೆಯುವಂತೆ ಮಾಡಿದರು. ಇದನ್ನು ತಿಳಿದ ಬಡ ರೈತರು ಗವರ್ನರರಿಗೆ ವಿನಂತಿ ಮಾಡಿಕೊಳ್ಳಲು ಶೌಕತ್ ಹಯತ್ ಖಾನರ ವೇಷವು ಬಯಲಾಯಿತು. ಕೂಡಲೇ ಗವರ್ನರರು ಅವರನ್ನು ಡಿಸ್ ಮಿಸ್ ಮಾಡಿ ಮಂತ್ರಿಮಂಳದಿಂದ ತಳ್ಳಿ ಹಾಕಿದರು. ಈಗ ಅದರ ವಿಚಾರಣೆಯು ಕೋರ್ಟಿನಲ್ಲಿ ನಡೆಯುತ್ತಿದೆ. ಸಿಂಧಿನ ಲೀಗ್ ಮಂತ್ರಿಮಂಡಳದ ಓರ್ವ ಮಂತ್ರಿಗಳು ಅಲ್ಲಾಭಕ್ಷರ ಖೂನಿ ಕಟ್ಲೆಯಲ್ಲಿ ಬಂಧಿತರಾಗಿರುವರು. ಪಂಜಾಬಿನಲ್ಲಿ ಜಿನ್ನರ ಪರವಾಗಿ ಸಂಧಾನಮಾಡಬೇಕೆಂದು ವಾದಿಸಿದ ಶೌಕತ್ ಹಯತ್ ಖಾನರ ವಿಚಾರ ಹಾಗಾಯಿತು. ಗಡಿನಾಡಿನಲ್ಲಿ ಸಂಗತಿಯೇ ಬೇರೆ. ಅಸ್ಸಾಮಿನಲ್ಲೂ, ಬಂಗಾಲದಲ್ಲೂ ಸರಕಾರಿ ಖಜಾನೆಯಲ್ಲಿ ದುರುಪಯೋಗವಾದ ಹಣ ಇಂತಿಷ್ಟೇ ಎಂದು ಇನ್ನೂ ಲೆಕ್ಕ ದೊರೆತಿಲ್ಲ. ಹೀಗಾದರೆ ಜನರು ಯಾವ ರೀತಿಯಲ್ಲಿ ಸುಖಿಗಳಾಗಿರಬಹುದು?

ANNOUNCEMENT

We have pleasure to announce that the following new branches have been opened.

COIMBATORE SALEM
ERODE MADURA

Other Branches at

Quilon, Alleppey, Ernakulam, Cochin, Calicut, Cannanore, Mangalore, Bangalore, Belgaum, Dharwar, Hubli, Chikmagalur etc. etc.

4 Branches in Bombay City.

Capital 26 lakhs. Reserves 10 lakhs.

(ESTD. 1906)

CANARA BANK LIMITED

Incorporated in British India, liability of Members li(ited.m

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ಅಮೇರಿಕದ ಸಂಯುಕ್ತ ಪ್ರಾಂತ್ಯಗಳು

ಒಂದು ಜನಾಂಗಕ್ಕೆ ಎರಡು ಸ್ವಾತಂತ್ರ್ಯ

೪೮ ಪ್ರಾಂತ್ಯಗಳ "ಯುನೈಟೆಡ್ ಸ್ಟೇಟ್ಸ್"

ಸಂಯುಕ್ತ ಅಮೇರಿಕ (ಯುನೈಟೆಡ್ ಸ್ಟೇಟ್ಸ್ ಅಥವಾ ಯು. ಎಸ್. ಎ.) ಲ್ಲಿ ಇಂದು ನಾಲ್ವತ್ತೆಂಟು ಪ್ರಾಂತ್ಯ ವಿಭಾಗಗಳಿವೆ. ಒಂದೊಂದು ಪ್ರಾಂತ್ಯವೂ ಸ್ವತಪ್ರತ್ಯೇಕವಾದೊಂದೊಂದು ವಿಚಿತ್ರ ತರದ ರಾಜ್ಯಾಂಗ ವ್ಯವಸ್ಥೆಯಿಂದ ಕೂಡಿದ್ದಾಗಿದ್ದು ಇವಕ್ಕೆ ಸಮಾನ ಲಕ್ಷಣಗಳುಳ್ಳ ರಾಜ್ಯಾಂಗ ಪದ್ಧತಿಯು ಇಂದಿನ ಯುರೋಪಿನಲ್ಲಾಗಲೀ ಪ್ರಾಚೀನ ಜಗತ್ತಿನ ಇತಿಹಾಸದಲ್ಲಾಗಲೀ ಎಂದೂ ಕಂಡೂ ಕೇಳಿರದ ವಿಷಯವಾಗಿದೆ. ಆದರೆ ಇವಕ್ಕೆ ಹತ್ತಿರದ ಸಾಮ್ಯವನ್ನು ಇಂದಿನ ಸ್ವಿಡ್ಜರ್ಲೆಂಡ್ ಎಂಬ ಚಿಕ್ಕ ದೇಶದಲ್ಲಿ ಮಾತ್ರ ಕಾಣಬಹುದು. ಇಂದು ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಸಂ. ಅ. (ಸಂಯುಕ್ತ ಅಮೇರಿಕಾ)ದ ಅಧ್ಯಕ್ಷರೂ, ಮಂತ್ರಿಗಳೂ ಹೆಚ್ಚಾಗಿ ಭಾಗವಹಿಸುವುದರಿಂದ ಯುರೋಪಿನವರು ಈ ಸಂ. ಅ. ದ ರಾಜ್ಯಾಂಗ ಪದ್ಧತಿಯು ಹೆಚ್ಚುಕಡಿಮೆ ತಮ್ಮ ದೇಶದಂತಹದೇ ಆಗಿರುವುದೆಂದು ತಿಳಿದುಕೊಂಡಿದ್ದುದರಿಂದ ಅವರು ಇಲ್ಲಿನ ಪ್ರಾಂತ್ಯರಾಜ್ಯಭಾಗಗಳ ಸರಕಾರ ಪದ್ಧತಿಯನ್ನು ಸಂಪೂರ್ಣವಾಗಿ ಮರೆತು ಅಲಕ್ಷ ಮಾಡಿರುವರು.

ಅಮೇರಿಕಾ ಖಂಡದ ೩ ಸಾವಿರ ಮೈಲು ಅಗಲದಿಂದ ದಾಟಿ ಹೋಗುವ ಐರೋಪ್ಯ ಸಂಚಾರಕನೊಬ್ಬನು ಅನೇಕ ಸ್ವತಂತ್ರಾಡಳಿತದ ಪ್ರಾಂತ್ಯಗಳನ್ನು ಹಾದು ಹೋಗುವನಾದರೂ ಈ ವಿಷಯವನ್ನು ಹೆಚ್ಚಾಗಿ ಗಮನಿಸುವುದಿಲ್ಲ. ಅವನ ಮಟ್ಟಿಗೆ ಒಂದೇ ತರದ ನಾಣ್ಯ ಪದ್ಧತಿ ಒಂದೇ ತರದ ಟಪ್ಪಾಲು ಆಫೀಸು (ಸ್ಟೇಂಪುಗಳು) ಗಳನ್ನೇ ಅವನು ಉಪಯೋಗಿಸುವಂತೆ ತೋರುತ್ತದೆ. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸುಂಕ ನಿರ್ಬಂಧವಿಲ್ಲ; ಪ್ರತ್ಯೇಕ ಉಡುಪು ಶೈಲಿಯ ಅಧಿಕಾರಿಗಳಿಲ್ಲ; ಲಂಡನಿನಿಂದ ಲಿವರ್ ಪೂಲಿಗೆ ಹಾದು ಹೋಗುವಾಗ ಯಾವ ರೀತಿಯ ವ್ಯತ್ಯಾಸ ಕಾಣುವುದಿಲ್ಲವೋ ಅದೇ ರೀತಿ ಇಲ್ಲಿಯೂ ಎಂದು ಅವನು ತಿಳಕೊಳ್ಳುವಂತಾಗುತ್ತದೆ.

ಈ ಅಮೇರಿಕನ್ ಪ್ರಾಂತ್ಯ ವಿಭಾಗಗಳು ಒಂದೇ ಸಂಯುಕ್ತ ರಾಜ್ಯಾಂಗದ ಛತ್ರಿಗೆ ಒಳಪಟ್ಟಿದರೂ ಅದನ್ನು ಮರಿತು ನಾನಾವುಗಳನ್ನು ಪ್ರತ್ಯೇಕ ರಾಜಕೀಯ ವಿಭಾಗಗಳಾಗಿ ದೃಷ್ಟಿಸಲು ಪ್ರಯತ್ನ ಪಡೋಣ.

೧೯೧೨ರಲ್ಲಿ ಎರಡು ಹೊಸ ಪ್ರಾಂತ್ಯಗಳು ಅಸ್ತಿತ್ವಕ್ಕೆ ಬಂದಾಗ ಸಂಯುಕ್ತ ಅಮೇರಿಕದಲ್ಲಿ ಒಟ್ಟಿಗೆ ೪೮ ಆಡಳಿತ ವಿಭಾಗಗಳಾದವು. ಇವುಗಳಲ್ಲಿ ಕೆಲವು ಚಿಕ್ಕವೂ ದೊಡ್ಡವೂ ಇವೆ. ಟೆಕ್ಸಾಸ್ ಎಂಬ ಅತೀ ದೊಡ್ಡ ಪ್ರಾಂತ್ಯ ಫ್ರಾನ್ಸಿನಷ್ಟು ದೊಡ್ಡದಿದ್ದು, ವಿಸ್ತಾರ ೨,೬೫,೭೮೦ ಚದುರ ಮೈಲುಗಳಷ್ಟಿದೆ. ರ್ಹೋಡ್ ಐಲೆಂಡ್ ಎಂಬುದು ಕೊರ್ಸಿಕಾ ದ್ವೀಪಕಿಂತಲೂ ಚಿಕ್ಕದಿದ್ದು ವಿಸ್ತಾರ ೧,೨೪೮ ಚ. ಮೈಲು. ವಿಶಾಲತೆಯಲ್ಲೂ, ಜನನಿಬಿಡತೆಯಲ್ಲೂ ಇಷ್ಟೊಂದು ಅಂತರವಿರಬಹುದೆಂದಾದ ಮೇಲೆ ಈ ಪ್ರಾಂತ್ಯಗಳಲ್ಲಿನ ರಾಜಕೀಯ ಆಡಳಿತದಲ್ಲೂ ವಿಶಾಲ ವ್ಯತ್ಯಾಸವೈಶಿಷ್ಟ್ಯಗಳೂ ಇದ್ದೆ ಇರಬಹುದು.

ಈ ಪ್ರಾಂತ್ಯಗಳಲ್ಲಿ ಐತಿಹಾಸಿಕ ಪ್ರಾಚೀನತೆಯವುಗಳೂ ಇವೆ. ವರ್ಜಿನಿಯಾ ಮತ್ತು ಉತ್ತರ ಕೆರೊಲೀನಾ ಎಂಬವು ಎಷ್ಟು ಪ್ರಾಚೀನ ಪ್ರಾಂತ್ಯಗಳೊ ಅಷ್ಟೇ ಅರ್ವಾಚೀನವಾದವುಗಳು ಮೆಸಾಚುಸೆಟ್ಸ್ ಮತ್ತು ಕನೆಕ್ಟಿಕಟ್ ಎಂಬವುಗಳು. ಇವೆಲ್ಲವುಗಳಿಗಿಂತ ನ್ಯೂಯೋರ್ಕ್, ಪೆನ್ಸಿಲ್ವೇನಿಯಾ ಮತ್ತು ಮೇರಿಲೇಂಡ್ ಎಂಬ ಪ್ರಾಂತ್ಯಗಳು ಬೇರೆ ತರದವುಗಳು. ಇತ್ತೀಚಿಗೆ ಅಲ್ಲಿ ನೆಲೆಹೋಗಿನಿಂತ ಐರೋಪ್ಯರಲ್ಲಿ ಐರೀಶ್ ಜನರು ಕೆಲವಲ್ಲೂ, ಜರ್ಮನರೂ ಇಟೇಲಿಯಾನರೂ ಬೇರೆ ಕೆಲವಲ್ಲೂ ಸ್ವೀಡಿಶ್ ಮತ್ತು ಪೋಲಿಶ್ ಜನರು ಇನ್ನಿತರವುಗಳಲ್ಲೂ ಮನೆ ಮಾಡಿಕೊಂಡರು. ಆದರೆ ಅತೀ ಉಷ್ಣದ ದಕ್ಷಿಣ ಪ್ರಾಂತ್ಯಗಳಲ್ಲಿ ಹೆಚ್ಚಿನವರಾರೂ ತಳವೂರಲಿಲ್ಲ. ಇಲ್ಲಿ ನಿಗ್ರೋ ಜನರೇ ಹೆಚ್ಚು.

ಇಷ್ಟೊಂದು ವ್ಯತ್ಯಾಸಗಳಿರುವವಾದರೂ ಈ ೪೮ ಪ್ರಾಂತ್ಯಗಳ ಸರಕಾರ ಪದ್ಧತಿಯು ಹೆಚ್ಚು ಕಡಿಮೆ ಮುಖ್ಯ ಕಾರ್ಯನಿರ್ವಹಣೆಯಲ್ಲಿ ಒಂದೇ ತರದ್ದಾಗಿದ್ದರೂ ಅಪ್ರಾಧಾನ್ಯವಾದ ಕೆಲವು ಸಣ್ಣ ದೊಡ್ಡ ಉಪಕಾರ್ಯಧೋರಣೆಯಲ್ಲಿ ಮಾತ್ರ ಗಣನೀಯ ವ್ಯತ್ಯಾಸವು ಇದೆ.

ಈ ಪ್ರಭುತ್ವ ವಿಭಾಗಗಳನ್ನು ಮುಖ್ಯವಾಗಿ ಏಳು ಪಂಗಡವಾಗಿ ವಿಂಗಡಿಸಬಹುದು: ಉತ್ತರ; ಮಧ್ಯ; ದಕ್ಷಿಣ ಪ್ರಾಂತ್ಯಗಳು; ಬೆಟ್ಟ ಮತ್ತು ಬಯಲು ಪ್ರಾಂತ್ಯಗಳು; ವಾಯುವ್ಯ ಮತ್ತು ದೂರ ಪಶ್ಚಿಮ ಪ್ರಾಂತ್ಯಗಳು. ಒಂದೊಂದು ಪಂಗಡದ ಪ್ರಾಂತ್ಯಕ್ಕೆ ಒಂದೊಂದು ವೈಶಿಷ್ಟ್ಯವಿದೆ- ಜನ ಲಕ್ಷಣದಲ್ಲಿ, ಸರಕಾರ ಮತ್ತು ರಾಜಕೀಯ ವ್ಯವಹಾರದಲ್ಲಿ. ಈಗಿನಗಿಂತಲೂ ಹಿಂದೆ ಈ ವೈಶಿಷ್ಟ್ಯವು ಹೆಚ್ಚಿನ ವ್ಯತ್ಯಾಸಗಳಿಂದ ಕೂಡಿತ್ತು.

ಜನತೆಯ ಗುಣ ಸ್ವಭಾವ ಆಚಾರ ವಿಚಾರಗಳಲ್ಲೂ ಮತ್ತು ಪ್ರಾದೇಶಿಕ ಗುಣ ಲಕ್ಷಣಗಳಿಂದಲೂ ಆಯಾಯ ಪ್ರಾಂತ್ಯಗಳ ಸರಕಾರ ಧೋರಣೆಯಲ್ಲೂ ರಾಜಕೀಯದಲ್ಲೂ ವ್ಯತ್ಯಾಸಗಳುಂಟಾದವು. ಆ ಪ್ರದೇಶಗಳಿಗೆ ಸಂಯುಕ್ತ ರಾಜ್ಯಾಂಗನೀತಿಗನುಸಾರವಾಗಿ ಕೊಡಲ್ಪಟ್ಟ ಪ್ರಾಂತೀಕ ಸ್ವಾತಂತ್ರ್ಯದಿಂದಲೂ ಈ ವ್ಯತ್ಯಾಸಗಳುಂಟಾಗಿವೆ ಎನ್ನಬಹುದು. ಒಂದು ಪ್ರಾಂತ್ಯವು ಇನ್ನೊಂದರೊಡನೆ ಯಾವುದೇ ತರದ ರಾಜಕೀಯ ಒಪ್ಪಂದ ಕರಾರು ಮಾಡಿಕೊಳ್ಳಲು ಹಕ್ಕುಳ್ಳದ್ದಾಗಿಲ್ಲ. ಒಂದು ಇನ್ನೊಂದರ ಮೇಲೆ ಯಾವ ಬಲಾತ್ಕಾರ, ದಬ್ಬಾಳಿಕೆ ನಡೆಸಲು ಶಕ್ಯವಿಲ್ಲ. ಕೇಂದ್ರದಲ್ಲಿನ ಸಂಯುಕ್ತ ಸರಕಾರವು ಯಾವ ಪ್ರಾಂತ್ಯದ ಮೇಲಾದರೂ ಅಧಿಕಾರ ನಡೆಸಲು ಸಮರ್ಥವಿರುವುದಾದರೂ ಅಂತಹ ಸಂದರ್ಭಗಳು ಬರುವುದೂ ಅಪರೂಪವಾಗಿ. ಈ ಅಧಿಕಾರಕ್ಕೂ ಒಂದು ನಿರ್ದಿಷ್ಟ ದಾರಿ ಇದೆ. ಮಾತ್ರವಲ್ಲ ಅದು ಒಂದು ಪ್ರಾಂತ್ಯದ ಆಂತರೀಕ ರಾಜಕೀಯದಲ್ಲಿ ಕೈಹಾಕಲೇ ಬಾರದು.

ಸಂಯುಕ್ತ ಅಮೇರಿಕದ ಭೂಪಟದಲ್ಲಿ ಅವುಗಳಲ್ಲಿನ ಅನೇಕ ಪ್ರಾಂತ್ಯಗಳ ಗಡಿಗಳು ಸರಳರೇಖೆಯಂತೆ ನೇರವಾಗಿರುವುದನ್ನು ನಾವು ನೋಡಬಹುದು. ರೇಖಾಗಣಿತದ ಆಧಾರದಿಂದ ನೇರವಾದ ಒಂದೇ ಆಯ ಆಕೃತಿಯ ಮಾರ್ಗಗಳುಳ್ಳ ಒಂದು ಆಧುನಿಕ ನಗರವು ಹೇಗೆ ರಚನ ಹೊಂದಿದೆ ಎಂದೂ ತಿಳಿಯುತ್ತದೋ ಅದೇ ರೀತಿಯಲ್ಲಿ ಪ್ರಾಂತ್ಯಗಳೂ ರಚಿಸಲ್ಪಟ್ಟಿವೆ. ಈ ಪ್ರಾಂತ್ಯಗಳ ಗಡಿಗಳು ಪ್ರಕೃತೀಯವಾಗಿ ನಿರ್ಮಿತವಾದುವುಗಳಲ್ಲ. ಒಂದು ದೊಡ್ಡ ಕೈಗಾರಿಕೆ ಕಾರ್ಖಾನೆಯ ಕಟ್ಟಡಗಳು ಹೇಗೆ ಮುಂದಾಲೋಚನೆಯ ಯೋಜನೆಯಿಂದ ನಿರ್ಮಿಸಲ್ಪಡುತ್ತವೊ ಅದೇ ರೀತಿಯಲ್ಲಿ ಒಂದು ದೇಶಾಧಿಕಾರ ಮಂಡಳಿಯವರು ಈ ಪ್ರಾಂತ್ಯಗಳ ಗಡಿಗಳನ್ನು ಕೃತಕವಾಗಿ ಆಡಳಿತಾನುಕೂಲತೆಗೆ ಅನುವಾಗುವಂತೆ ರಚಿಸಿದರು. ಈ ಗಡಿಗಳು ಹೆಚ್ಚಿನ ಕಡೆಗಳಲ್ಲಿ ಗುಡ್ಡಬೆಟ್ಟ ಸಾಲುಗಳಿಂದಾಗಲಿ ಇಲ್ಲವೆ ಐತಿಹಾಸಿಕ ಘಟನೆಯಿಂದಾಗಲೀ ಮಾಡಲ್ಪಟ್ಟಂತಹವುಗಳಲ್ಲ.

ಮೊತ್ತಮೊದಲಿನ ಹದಿಮೂರು ಪ್ರಾಂತ್ಯಗಳ ನಂತರದವುಗಳಲ್ಲಿ ಪ್ರಾಕೃತಿಕವಾದ ಗಡಿ ಮೇರೆಗಳಿರುವ ಒಂದೇ ಪ್ರಾಂತ್ಯವೆಂದರೆ ಕೆಲಿಫೋರ್ನಿಯಾ. ಇದರ ಪೂರ್ವದಲ್ಲಿ ಸಿಯಾರಾ ನೆವಡಾ ಗಟ್ಟಗಳೂ, ಪಶ್ಚಿಮದಲ್ಲಿ ಸಮುದ್ರವೂ ಇದೆ. ಇತ್ತೀಚಿಗಿನ ಈ ಪ್ರಾಂತ್ಯಗಳು ಸ್ವಾಭಾವಿಕವಾಗಿ ಬೆಳೆದು ಬಂದಂತಾ ರಾಜಕೀಯ ಪ್ರಭುತ್ವ ವಿಭಾಗಗಳೂ ಅಲ್ಲ. ಅವು ತೋಟಗಾರರಿಂದ ನಟ್ಟು ಬೆಳೆಸಲ್ಪಟ್ಟ ಮರಗಳಂತಿವೆ. ಪ್ರಾಕೃತಿಕ ಸರಹದ್ದುಗಳಿಲ್ಲದಿರುವುದರಿಂದ ಪ್ರತಿಯೊಂದು ಪ್ರಾಂತ್ಯಕ್ಕೊಂದಂತೆ ಪ್ರತ್ಯೇಕವಾದ ಪ್ರಾಂತೀಕ ಸ್ವಭಾವ ವೈಶಿಷ್ಟ್ಯಗಳಿಲ್ಲ.

ಪ್ರತಿಯೊಂದು ಪ್ರಾಂತ್ಯವು ತನ್ನ ಸ್ವಂತ ರಾಜ್ಯಾಂಗ ಕ್ರಮವನ್ನು ಸಿದ್ಧ ಮಾಡುತ್ತದೆ. ಒಂದು ಪ್ರಾಂತ್ಯದ ಜನರು ಇತರ ಯಾವ ಪ್ರಾಂತ್ಯದ ಇಲ್ಲವೆ ಕೇಂದ್ರ ಸರಕಾರದ ಅಡ್ಡಿ ತಡೆಗಳಿಲ್ಲದೆ ತಮಗೆ ಬೇಕಾದ ರೀತಿಯ ಸರಕಾರ ರಚನೆಯನ್ನು ಕಲ್ಪಿಸಿಕೊಳ್ಳುವರು. ಆದರೆ ಈ ನಿರ್ಮಾಣಕ್ಕೆ ಒಂದೇ ಒಂದು ಷರ್ತ ಮಾತ್ರ ಇದೆ. ರಚಿಸಲ್ಪಡುವ ಆ ಸರಕಾರವು ಪ್ರಜಾಪ್ರಭುತ್ವ ಮಾದರಿಯದಿರಬೇಕು. ಹೊಸತಾಗಿ ರಚನೆಹೊಂದುವ ಪ್ರಾಂತ್ಯಗಳು ಈವೊಂದು ಸ್ಪಷ್ಟವಾದ ದಾರಿಯಲ್ಲಿ ಹಾದು ಹೋಗತಕ್ಕದ್ದು.

ಎಲ್ಲಾ ಪ್ರಾಂತ್ಯಗಳಲ್ಲೂ ರಾಜಕೀಯ ಪಕ್ಷಗಳು ಒಂದೇ ತರದವುಗಳು ಎಲ್ಲಾ ಕಡೆಗಳಲ್ಲೂ ಒಂದೇ ತರದ ಪಕ್ಷದವರ ರಾಜಕೀಯ ತತ್ವಗಳೂ ಸಮಾನ ಧೋರಣೆಯವುಗಳು. ಈ ರೀತಿಯಲ್ಲಿ ಪ್ರಾಂತ್ಯಗಳೆಲ್ಲವುಗಳ ರಾಜಕೀಯ ವಿಚಾರಗಳು ತಮ್ಮ ಪ್ರದೇಶ ಹೊರಗಿನ ಸ್ಫೂರ್ತಿಯವುಗಳಾಗಿದ್ದರೂ ಇಡೀ ದೇಶಕ್ಕೆಲ್ಲ ಸರ್ವಸಾಮಾನ್ಯವೆನಿಸುವುವುಗಳಾಗಿರುತ್ತವೆ. ಆದುದರಿಂದ ಸ್ಥಳೀಯ ರಾಜಕೀಯ ಪಕ್ಷಗಳೂ ಮತ್ತು ಯೋಜನೆಗಳೂ ಒಂದಕ್ಕೊಂನು ಹೊಂದಿಕೊಂಡೇ ಇರುತ್ತವೆ.

ಸ್ವತಂತ್ರ ಆಡಳಿತ ಅಧಿಕಾರದ ಹಕ್ಕು ಭಾದ್ಯತೆಗಳ ಅನೇಕ ವಿಶೇಷ ಲಕ್ಷಣಗಳು ಹೆಚ್ಚಿನ ಪ್ರಾಂತ್ಯಗಳಲ್ಲಿ ಕಂಡು ಬರುತ್ತವೆ. ಸ್ವಂತ ರಾಜ್ಯಾಂಗಕ್ರಮ, ಸ್ವಂತ ಸರಕಾರ ಪ್ರತಿಯೊಂದು ಪ್ರಾಂತ್ಯಕ್ಕೂ ಇದೆ. ಪ್ರಾಂತ್ಯದ ಜನರೇ ತಮ್ಮ ಗವರ್ನರುಗಳನ್ನೂ ಇತರ ಅಧಿಕಾರಿಗಳನ್ನೂ ಚುನಾಯಿಸುತ್ತಾರೆ. ಎರಡು ನ್ಯಾಯ ವಿಧಾಯಕ ಸಭೆಗಳು. ಪ್ರತಿಯೊಂದು ಜಿಲ್ಲೆ, ತಾಲೂಕು, ನಗರ, ಪಟ್ಟಣ ಊರುಗಳಲ್ಲಿಯೂ ಪ್ರತ್ಯೇಕ ಸ್ಥಳೀಕ ಆಡಳಿತಗಳಿವೆ, ಪ್ರಾಂತ್ಯ ಮತ್ತು ಸ್ಥಳೀಕ ತೆರಿಗೆ ವಿಭಾಗಗಳಿವೆ. ವ್ಯಕ್ತಿಗತ, ಸಾಮಾಜಿಕ, ಆಸ್ತಿ ಹಕ್ಕುಭಾದ್ಯತೆಗಳ ಮತ್ತು ಖೂನಿ ಕಟ್ಟಲೆಗಳ ಪ್ರತ್ಯೇಕ ನ್ಯಾಯನಿರ್ವಹಣ ಸ್ಥಾನಗಳೂ ಇವೆ. ಸಂಯುಕ್ತ ರಾಜ್ಯ ಘಟನೆಗೆ ಇಲ್ಲವೆ ಸಂಯುಕ್ತ ಸರಕಾರ ಕಾನೂನಿಗೆ ಸಂಬಂಧಪಟ್ಟ ವಿಷಯಗಳಲ್ಲದೆ ಬೇರೆ ಯಾವ ವ್ಯವಹಾರದಲ್ಲೂ ಹೊರಗಿನ ಉನ್ನತ ನ್ಯಾಯಸ್ಥಾನ ವೆಂತಿಲ್ಲ. ಪ್ರಾಂತ್ಯ ನ್ಯಾಯಸ್ಥಾನವೇ ಅತೀ ಉನ್ನತದ್ದು ಮತ್ತು ಕೊನೆಯದು. ಕೇಂದ್ರ ಸರಕಾರ ನ್ಯಾಯಸ್ಥಾನಕ್ಕೆ ಒಯ್ಯಲ್ಪಡುವ ಬಹುದಾದ ಇನ್ನೊಂದು ವಿಷಯವೆಂದರೆ ನಾಗರೀಕ ಹಕ್ಕು ಭಾದ್ಯತೆಗೆ ತೊಂದರೆ ಬಂದ ವಿಷಯ. ಈ ನಾಗರೀಕ ಹಕ್ಕು ಭಾದ್ಯತೆಗೆ ಸಂಬಂಧಪಟ್ಟ ಮೂರು ವಿಷಯಗಳಿವೆ.

೧. ಒಂದು ಪ್ರಾಂತ್ಯದಲ್ಲಿ ಒಬ್ಬನಿಗೆ ವೋಟು ಕೊಡುವ ನಾಗರೀಕ ಹಕ್ಕು ಭಾದ್ಯತೆ ಸಿಕ್ಕಿದರೇನೇ ಅವನಿಗೆ ಸಂಯುಕ್ತ ಅಮೇರಿಕದ ನಾಗರೀಕನಾಗಲು ಹಕ್ಕು ಬಂದಂತಾಯಿತು. ಆಗಲೇ ಅವನಿಗೆ ರಾಷ್ಟ್ರೀಯ ಅಧ್ಯಕ್ಷ ಚುನಾವಣೆಯಲ್ಲಿ ಹಕ್ಕಿನ ಅಧಿಕಾರ ಬರುತ್ತದೆ. ಅಂದರೆ ಪ್ರಾಂತ್ಯದಲ್ಲಿ ಮತದಾನದ ಹಕ್ಕು ಸಿಕ್ಕಿದರೆ ಸಂಯುಕ್ತ ಘಟನೆಯ ಚುನಾವಣೆಯಲ್ಲಿ ಮತದಾನದ ಹಕ್ಕು ಸಿಕ್ಕಂತೆಯೇ ಸರಿ.

೨. ಪ್ರಾಂತ್ಯ ಸರಕಾರಕ್ಕೆ ತನ್ನಲ್ಲಿನ ಎಲ್ಲಾ ಜಾತಿ ಮತಸ್ಥರ ಮೇಲೆ ಸರ್ವಾಧಿಕಾರವಿರುತ್ತದೆ.

೩. ಪ್ರಜೆಗಳೆಲ್ಲರೂ ತಮ್ಮ ಪ್ರಾಂತ್ಯ ಪ್ರಭುತ್ವಕ್ಕೆ ವಿಧೇಯರಾಗಿರಲೇ ಬೇಕು.

ಈ ತತ್ವಗಳನ್ನು ಅನೇಕ ಐರೋಪ್ಯ ಜನರು ಗ್ರಹಿಸಿಕೊಳ್ಳಲು ಸಮರ್ಥರಾಗುವುದಿಲ್ಲ. ಈ ಹಿಂದೆಯೂ ಈಗಲೂ ಅಮೇರಿಕನ್ ಪ್ರಾಂತ್ಯಗಳು ಸ್ವತಂತ್ರ ಆಡಳಿತಾಧಿಕಾರವಿದ್ದವುಗಳಾಗಿವೆ. ೧೭೭೬ರಲ್ಲಿ ಬ್ರಿಟಿಷ್ ಸರಕಾರಕ್ಕೆ ವಿರುದ್ಧ ದಂಗೆ

(೯ನೇ ಪುಟಕ್ಕೆ ಮುಂದುವರಿದಿದೆ)

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಹೆಚ್ಚಿಗೆ ಗೋದಿ ರಾಗಿ ಮಾರಬಾರದು

ಮಂಗಳೂರಲ್ಲಿ ಕಾಫಿ ವರ್ತಕರ ಸಭೆ

ಬೊಂಬ್ಯಾಯಲ್ಲಿ ಕಾಶೀ ಮಠಾಧೀಶರೂ ಶಿಷ್ಯರೂ

ನಗರದಲ್ಲಿ ಬಯಲಾಟ—ಯಕ್ಷಗಾನ—ಏಕೀಕರಣ

ಮಂಗಳೂರು:—ಗೋದಿಯ ವಿಚಾರ ಮಾನ್ಯ ಜಿಲ್ಲಾ ಕಲೆಕ್ಟರರು ಒಂದು ಪ್ರಕಟನೆ ಹೊರಡಿಸಿರುವರು. ಶಾಸನ ಬದ್ಧವಾದ ರೇಶನ್ ಕ್ರಮವು ಜಾರಿಯಲ್ಲಿದ್ದ ಮಂಗಳೂರು, ಉಡುಪಿ ಮತ್ತು ಕಾಸರಗೋಡುಗಳಲ್ಲಿನ ಯಾವ ವ್ಯಕ್ತಿ ಸಂಸ್ಥೆ ಅಥವಾ ಮನೆವಾಳಿಕರಾಗಲೀ ೩೧—೩—೪೫ರಂದು ತಮ್ಮ ಬಳಿಯಿರುವ ೨ ಮಣಕ್ಕಿಂತ ಹೆಚ್ಚಿನ ಗೋದಿಯನ್ನೂ ೫ ಮಣಕ್ಕಿಂತ ಹೆಚ್ಚಿನ ರಾಗಿಯನ್ನು ರೇಶನಿಂಗ್ ಆಫೀಸರರ ಬರಹ ಮೂಲಕದ ಅಪ್ಪಣೆ ಇಲ್ಲದೆ ಯಾವ ರೀತಿಯಲ್ಲೂ ವಿಲೆವಾಟು ಮಾಡಬಾರದು. ಅಧಿಕೃತರಾದವರಿಗೆ ಇದು ಅನ್ವಯಿಸುವುದಿಲ್ಲ. ೨ಮಣ=೧೬೪೪! ರಾತ್ಲು; ೫ಮಣ=೪೧೧೯! ರಾತ್ಲು. ಮೇಲ್ಕಂಡ ತಾರೀಕು ನಂತರ ಅವುಗಳನ್ನು ದಾಸ್ತಾನು ಇಟ್ಟ ಸ್ಥಳದಿಂದ ಸ್ಥಳಾಂತರ ಮಾಡಲುಬಾರದು, ಹುಕುಮನ್ನುಲ್ಲಂಘಿಸಿದವರ ಮೇಲೆ ಕಾರ್ಯಕ್ರಮ ಕೈಕೊಳ್ಳಲಾಗುವುದು.

ತಾ. ೭—೫—೪೫ರೊಳಗೆ ಮೇಲೆ ಕಾಣಿಸಿದ ಈ ಹುಕುಮಿನಲ್ಲಿ ಕಾಣಿಸಿದಕ್ಕಿಂತ ಹೆಚ್ಚಾಗಿರುವ ಗೋದಿ, ರಾಗಿ ಅಂಶಗಳ ವಿವರವನ್ನು ಬರೆದು ಸಂಬಂಧ ಪಟ್ಟ ರೇಶನ್ ಆಫೀಸರರಿಗೆ ತಲುಪಿಸತಕ್ಕದ್ದು. ಅದು ಈ ಕ್ರಮದಲ್ಲಿ ಬರೆಯತಕ್ಕದ್ದು: ಹೆಸರು ವಿಳಾಸ, ಗೋದಿ ವ ಅಂಶ ಅಳತೆ. ಇದು ತನ್ನದ್ದೊ, ಇತರರದೋ ಇಲ್ಲವೇ ಪಾಲುಗಾರಿಕೆದ್ದೊ ಎಂದು ತಿಳಿಸಬೇಕು. ದಾಸ್ತಾನು ಇರುವ ಸ್ಥಳದ ವಿಳಾಸ. ಇತರರದಾದರೆ ಇಲ್ಲವೇ ಪಾಲುಗಾರಿಕೆಯದಾದರೆ ಅವರ ಹೆಸರು ವಿಳಾಸಗಳನ್ನು ತಿಳಿಸತಕ್ಕದ್ದು.

ಇದರಿಂದ ಜಿಲ್ಲೆಯಲ್ಲಿ ಗೋದಿಗಿಂತ ರಾಗಿಯೇ ಹೆಚ್ಚಾಗಿದೆ ಎಂದಾಗುತ್ತದೆ. ರಾಗಿಯು ಗೋದಿಗಿಂತ ಪುಷ್ಟೀಕರವು ತಂಪೂ ಆಗಿರುವದರಿಂದ ಜನತೆಯು ಅದರ ಉಪಯೋಗವನ್ನೇ ಹೆಚ್ಚಿಸಬಹುದು.

ಇಲ್ಲಿಯ ಮಾರ್ಕೆಟ್ ರಸ್ತೆಯಲ್ಲಿನ ಪ್ರಸಿದ್ಧ ಕಟ್ಲೇರಿ ವ್ಯಾಪಾರಿಗಳ ಸಂಸ್ಥೆಯಾದ ಎಂ. ಎಂ. ಶ್ಯಾನುಭಾಗ (ಮನ್ನಾಸ್ ಎಂದು ಕರೆಯಲ್ಪಡುತ್ತದೆ.) ಎಂಬೀ ಸಂಸ್ಥೆಯ ವ್ಯಾಪಾಲಕರಾದ ಶ್ರೀ ರಾಘವೇಂದ್ರ ಶ್ಯಾನುಭಾಗರನ್ನು ರೂ. ೨-೩-೫ ಕ್ರಯದ ಒಂದು ಡಜನ್ ಬೆಟರಿಗಳನ್ನು ರೂ. ೮ಕ್ಕೆ ಮಾರಿದರೆಂಬ ಆಪಾದನೆಯ ಮೇಲೆ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ೨ ತಿಂಗಳ ಸಾದಾ ಶಿಕ್ಷೆಗೂ ಮತ್ತು ೨ ಸಾವಿರ ಜುಲ್ಮಾನೆಗೂ ಒಳಪಡಿಸಿದರು. ಅಪೀಲುಮಾಡಿದ್ದರಿಂದ ಬಂಧಿತರನ್ನು ಮರುದಿನ ಬಿಡಲಾಗಿದೆ. ನಿಯಂತ್ರಿತ ಬೆಲೆಗಿಂತ ಮೂರು ಪಾಲಷ್ಟು ಹೆಚ್ಚಿಗೆ ದರಕ್ಕೆ ಮಾರಿದುದರಿಂದ ಅರೋಪಿಗಳು ಈ ಶಿಕ್ಷೆಗೆ ಗುರಿಯಾಗುವಂತಾಯಿತು. ಇಂತಹ ಆಕರ್ಷಣೆಯ ಪ್ರಸಂಗಗಳನ್ನು ವ್ಯಾಪಾರಸ್ಥರು ಅಲಕ್ಷಿಸಬೇಕು.

ತಾ. ೧೦ ಮತ್ತೆ ೧೭ರಲ್ಲಿ ಬೆಂಚ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಕಾಲ್ದಾರಿ ನಿಯಮ ಉಲ್ಲಂಘಿಸಿದರೆಂಬವರಿಗೆ ಒಟ್ಟಿಗೆ ೩೮ ಮಂದಿಗಳಿಕೆ ರೂ. ೨—ರಂತೆ ಜುಲ್ಮಾನೆ ವಿಧಿಸಲಾಗಿದೆ. ಅದೇ ಕೋರ್ಟಿನಲ್ಲಿ ರೈಲು ಕಂಬಿಯ ಮಾರ್ಗ ದಾಟಿದಕ್ಕಾಗಿ ೫ ಮಂದಿಗಳಿಗೆ ಅಷ್ಟೇ ಜುಲ್ಮಾನೆ ಆಗಿರುತ್ತದೆ. ವಾಹನ ಚಲಾವಣೆ ಮಾರ್ಗಗಳಲ್ಲಿ ಜನರು ಹೆಚ್ಚಿನ ಜಾಗರೂಕತೆ ವಹಿಸುವಂತೆ ನೋಟೀಸು ಬೋರ್ಡುಗಳನ್ನೂ ಪ್ರಚಾರ ಸಂಕೇತಗಳನ್ನೊ ಪ್ರಾಮುಖ್ಯ ಸ್ಥಳಗಳಲ್ಲಿ ತೂಗ ಹಾಕಬಹುದು. ನಗರ ಸಭೆಯವರಾಗಲೀ, ವೋರ್ ಫ್ರಂಟಿನವರಾಗಲೀ ಈ ಕೆಲಸ ಕೈ ಕೊಳ್ಳಬಹುದು.

ಎಲ್ಲರಿಗೂ ಸುಸ್ವಾಗತರವಿರುವ ಒಂದು ಯಕ್ಷಗಾನ ಪ್ರಸಂಗವು ಶ್ರೀಶರವು ಗಣೇಶ ವಾಚನಾ ಸಂಘದ ಆಶ್ರಯಲ್ಲಿ ತಾ. ೨೫ ಆದಿತ್ಯವಾರ ಏರ್ಪಡಿಸಲಾಗಿದೆ—ಪ್ರಿನ್ಸಿಪಾಲ್ ಸಬ್ ಜಡ್ಜ್ ಶ್ರೀ ಎ. ಪರಮೇಶ್ವರ ಅಯ್ಯರ್‌ರವರು ಅಧ್ಯಕ್ಷತೆಯಲ್ಲಿ. ಯಕ್ಷಗಾನ ವಿದ್ವಾಂಸರನೇಕರು ಪಾತ್ರಧಾರಿಗಳಾಗುವರು. ಇಂತಹ ಜನಪ್ರಿಯ ಸಾಹಿತ್ಯ ಕೂಟಗಳನ್ನು ಆಗಿಂದಾಗ್ಯೆ ನಗರದ ಬೇರೆ ಬೇರೆ ಕಡೆಗಳಲ್ಲಿ ಜರಗಿಸುವುದು ಜನತೆಗೆ ಯೋಗ್ಯ ಮಾನಸಿಕ ವಿಶ್ರಾಂತಿ ಬದಲಾವಣೆಗೆ ಸಹಾಯಕವಾಗುವುದು. ಸಾಹಿತ್ಯ ಅಭಿರುಚಿಯೂ ಬೆಳೆದು ಪ್ರಚಾರವಾಗುವುದು.

ಕಳೆದ ವಾರ ನಗರದ ಗಣಪತಿ ದೇವಸ್ಥಾನ ವಠಾರದಲ್ಲೂ, ಮತ್ತು ಕಂಬಳದ ಬೈಲಿನಲ್ಲೂ ಕಟೀಲು ದುರ್ಗಾ ಪರಮೇಶ್ವರಿ ಬೈಲಾಟ ಕೂಟದವರಿಂದ ಎರಡು ಸಾರಸ್ಯವಾದ ಪುರಾಣ ಕತೆ ಪ್ರಸಂಗಗಳು ಅಭಿನಯಿಸಲ್ಪಟ್ಟುವು. ಇವರ ಪಾತ್ರಧಾರಿಗಳು, ನಿಪುಣ ವೇಷ ಶೃಂಗಾರಕರೂ ಚತುರ ಅರ್ಥ ನಿರೂಪಕಗಾರರೂ ಆಗಿರುವರು. ವೇಷ ಭೂಷಣಗಳಲ್ಲಿ ಇವರು ಪ್ರದರ್ಶಿಸಿದ ಕೆಲವು ಬದಲಾವಣೆಗಳು ತೃಪ್ತಿಕರವಿದ್ದುವು. ಮಾತ್ರವಲ್ಲ ಆಟ ಪ್ರಾರಂಭದ ಸಮಯ ಮತ್ತು ಪಾತ್ರಗಳು ಕಾಲಹರಣದಿಂದ ಬೇಸರಗೊಳ್ಳಲು ಎಡೆಕೊಡದೆ ಸಮಯ ಕ್ಲಪ್ತತೆಯಿಂದ ಬಂದು ಹೋಗುವುದು ಶ್ಲಾಘನೀಯ. ಪ್ರಖ್ಯಾತರಾದ ಬಲಿಪ ಭಾಗವತರು ಪ್ರಸಂಗ ಹಾಡುಗಾರರಾಗಿದ್ದರು. ಒಟ್ಟಿನಲ್ಲಿ ಇವರು ಆಧುನಿಕತ್ವವನ್ನು ತಮ್ಮ ಧೋರಣೆಯಾಗಿಟ್ಟುಕೊಂಡಿದ್ದು ಪ್ರೇಕ್ಷಕರ ಮೆಚ್ಚಿಗೆಯೇ ತಮ್ಮ ಧ್ಯೇಯವಾಗಿಟ್ಟುಕೊಂಡಿರುವುದು ಉತ್ತಮ.

ಪಾಶ್ಚಾತ್ಯದೇಶಗಳಲ್ಲೂ, ಚೀನದಲ್ಲೂ, ಇಂತಹ ಬಹಿರಂಗ ನಾಟಕ, ನಾಟ್ಯ ಪ್ರದರ್ಶನಗಳಿರುತ್ತವೆ. ಆದರೆ ಅಲ್ಲಿ ಆಟಗಾರರು ಜನರನ್ನು ಬೆಳಗಿನ ತನಕ ನಿದ್ದೆ ಕಳಕೊಂಡು ಹೆಚ್ಚಿನ ಶ್ರಮಪಡಲು ಬಿಡುವುದಿಲ್ಲ. ಆಟಗಳನ್ನು ನೋಡಬರುವವರು ಹೆಚ್ಚಾಗಿ ಮಜೂರ ವರ್ಗದವರು ಮತ್ತಿತರ ಸಾಮಾನ್ಯ ವರ್ಗದವರು ಇರುವರು. ಇಡೀ ರಾತ್ರಿ ಕೂತುಕೊಳ್ಳುವುದು ಆರೋಗ್ಯಕ್ಕೆ ಕೆಟ್ಟದ್ದು. ಆಟಗಳ ಅವಧಿಯನ್ನು ಈ ದೃಷ್ಟಿಯಿಂದ ಕಡಿಮೆ ಮಾಡಬೇಕು. ಸುಮಾರು ೧೦ ಗಂಟೆಯಿಂದ ೧ ಗಂಟೆ ತನಕ ಆಟ ನಡೆದರೆ ಸಾಕೆನಿಸುವುದು. ಇದಲ್ಲದೆ ಆಟವನ್ನು ಜರಗಿಸುವ ಪ್ರಮುಖರು ಆಸುಪಾಸಿನಲ್ಲಿ ಅನಾರೋಗ್ಯಕರವಾದ ತಿಂಡಿ ಪಾನೀಯಗಳನ್ನು ಮಾರದಂತೆ ನೋಡುವುದೂ ಒಳಿತಿದೆ.

ಕಳೆದ ತಾ. ೧೧ರಂದು ವಕೀಲ್ ಕ್ಲಾರ್ಕ್ಸ್ ಎಸೋಶಿಯೇಶನಿನಲ್ಲಿ ರಾ. ಸಾ. ರಂಗನಾಥ ಪೂಂಜ ಅವರ ಅಧ್ಯಕ್ಷತೆಯಲ್ಲಿ ಸದ್ರಿ ಸಂಘದ ಸದಸ್ಯರಾದ ದಿವಂಗತ ಕೆ. ಲಕ್ಷ್ಮೀನಾರಾಯಣ ಪ್ರಯ್ಯನವರ ಭಾವಚಿತ್ರ ಅನಾವರಣ ಮಾಡಲಾಯಿತು. ಶ್ರೀಯುತರಾದ ಎಸ್. ಕೇಶವ ನಾಯ್ಕ, ಕೆ. ಪಿ ಭಕ್ತ, ಜೆ. ಎನ್. ಭಟ್ ಅವರುಗಳು ಮೃತರ ಗುಣಕಥನ ಮಾಡಿ ಭಾಷಣ ಮಾಡಿದರು. ಅಧ್ಯಕ್ಷರು ಎಸೋಶಿಯೇಶನಿನಲ್ಲಿ ಗ್ರಂಥಾಲಯವನ್ನು ತೆರೆಯ ಬೇಕೆಂದು ಸೂಚಿಸಿ ಅದಕ್ಕಾಗಿ ಧನಸಹಾಯವನ್ನು ಇತ್ತರು. ಇಂತಹ ಸಂಘದವರು ಒಟ್ಟು ಸೇರಿ ಸಾರ್ವಜನಿಕ ವಾಚನಾಲಯಗಳನ್ನೂ ಅವಶ್ಯವಿದ್ದಲ್ಲಿ ತೆರೆಯಲು ಪ್ರಯತ್ನ ಮಾಡಬಹುದು.

ಪ್ರಸಿದ್ಧ ಗೇರುಬೀಜ ಸಂಸ್ಥೆಯ ಮೆನೇಜರರಾದ ಶ್ರೀ ವಿಜಾರ್ ಗೋವಿಂದ ಪೈಯವರು ತಮ್ಮ ಕಾರ್ಖಾನೆ ಪ್ರದೇಶದಲ್ಲಿರುವ ಬೋಳೂರು ರೂರಲ್ ಎಲಿಮೆಂಟರಿ ಶಾಲೆಗೆ ಬೇಟಿಯಿತ್ತು. ಸಂದರ್ಶಿಸಿದರು. ತಮ್ಮ ಮಜೂರರ ಮಕ್ಕಳ ಮತ್ತು ಸಾಮಾನ್ಯ ವಿದ್ಯಾಭಿವೃದ್ಧಿಗಾಗೆಂದು ಶ್ರೀಯುತರು ರೂ. ೩೦೦ನ್ನು ದಾನ ಮಾಡಿದರು. ಕಾರ್ಖಾನೆ ವ್ಯಾಪಾಲಕರು ತಮ್ಮ ಮಜೂರರ ಶ್ರೇಯಸ್ಸಿಗೆ ವಿಶೇಷ ಸಹಾಯ ಮಾಡಬೇಕಾದುದು ಕರ್ತವ್ಯ.

ದ. ಕ. ಜಿಲ್ಲಾ ಉಪಾಧ್ಯಾಯ ಸಂಘದ (ಟೀಚರ್ಸ್ ಗಿಲ್ಡ್) ಆಶ್ರಯದಲ್ಲಿ ಬರುವ ಎಪ್ರಿಲ್ ೧೫ರಂದು ಜಿಲ್ಲಾ ವಿದ್ಯಾಂಗ ಸಮ್ಮೇಳನ ಜರಗುವುದು. ಉಪಾಧ್ಯಾಯರು ಆಧುನಿಕ ಪದ್ಧತಿಗೂ, ಮತ್ತು ದೇಶ ಪರಿಸ್ಥಿತಿಗೂ ತಕ್ಕುದಾದ ಶಿಕ್ಷಣ ರೀತಿನೀತಿಗಳನ್ನು ಪರ್ಯಾಲೋಚಿಸಬೇಕು. ತಮ್ಮಂತಹ ಜಗತ್ತಿನಲ್ಲಿ ಅತೀ ಘನಸ್ತಿಕೆಯ ವೃತ್ತಿಗಾರರಿಗೆ ಯೋಗ್ಯ ಸವಲತ್ತುಗಳು ಸಿಗುವಂತೆಯೂ ಸಂಘಟಿತ ಚಳವಳ ಮಾಡಬೇಕು.

ಇಲ್ಲಿಯ ಒರಿಯಂಟಲ್ ಕ್ಲಬ್ಬಿನವರು 'ಕೃಷ್ಣಪ್ಪ ಸ್ಮಾರಕ' ಬೆಡಮಿಂಟನ್ ಪಂದ್ಯಾಟಗಳನ್ನು ನೆರವೇರಿಸಿದರು. ಅದರಲ್ಲಿ ಸದ್ರಿ ಕ್ಲಬ್ಬಿನ 'ಸಿ' ಟೀಮಿಗೆ, ಪ್ರಥಮ. ಮತ್ತು ಪೆಂಟ್ಲೆಂಡ್ ಪೇಟಾ 'ಸಿ' ಟೀಮಿಗೆ ದ್ವಿತೀಯ ಬಹುಮಾನಗಳನ್ನು ತಾ. ೧೪ರಲ್ಲಿ ಜರಗಿದ ಸಂತೋಷ ಕೂಟದ ಅಧ್ಯಕ್ಷ ಶ್ರೀ. ಜೆ. ವಿ. ಪೈ ಅವರು ಕೊಟ್ಟರು. ಪ್ರಸಿದ್ಧ ಆಟಗಾರರಾದ ದಿವಂಗತ ಕೃಷ್ಣಪ್ಪನವರ ಹೆಸರಲ್ಲಿ ಇನ್ನಿತರ ಅನೇಕ ಆಟ ಪಂದ್ಯಾಟಗಳನ್ನು ಜರುಗಿಸಿ ಜಿಲ್ಲೆಯ ಯುವಕರ ಕ್ರೀಡಾ ಚಾತುರ್ಯವನ್ನು ಬೆಳಗಿಸಲು ಕ್ರೀಡಾಭಿಮಾನಿಗಳು ಪ್ರೋತ್ಸಾಹ, ಪ್ರಯತ್ನಗಳನ್ನು ವಹಿಸಬೇಕು.

ನಗರದ ಶಾಲಾ ಕೋಲೇಜುಗಳಲ್ಲಿ ಸರಕಾರಿ ಪರೀಕ್ಷೆಗಳಾರಂಭವಾಗಿವೆ.

ನಗರದಲ್ಲಿ ಬೇಸಿಗೆಕಾಲದ ಸೆಕೆಯ ಅನುಭವವಾಗಹತ್ತಿದೆ. ಈಸಲ ಉತ್ತರ ಹಿಂದೂಸ್ಥಾನದಲ್ಲಿ ವಿಪರೀತ ಚಳಿಯಿದ್ದಂತೆ ಅಲ್ಲಿ ವಿಪರೀಪ ಸೆಕೆಯೂ ಉಂಟಾಗಿದೆ. ಅದರಂತೆ ಈ ಕಡೆಗಳಲ್ಲೂ ಉಷ್ಣತೆ ತುಂಬಾ ಇದೆ. ಬೇಸಿಗೆಯಲ್ಲಿ ನಗರದಲ್ಲಿ ಮತ್ತು ಜಿಲ್ಲೆಯ ಇತರ ಕಡೆಗಳಲ್ಲಿ ನೀರಿನ ಅಭಾವದ ಸಂಕಷ್ಟಗಳುಂಟಾಗುವುದರಿಂದ ನಗರ ಸಭೆ ಮತ್ತು ಡಿ. ಬೋರ್ಡಿನವರು ನೀರಿನ ಸರಬರಾಯಿ ವ್ಯವಸ್ಥೆಗಳನ್ನು ಶೀಘ್ರವಾಗಿ ಕೈಕೊಳ್ಳಬೇಕು. ನಗರದಲ್ಲಿ ಅಂಟುರೋಗಗಳ ಹಾವಳಿಯ ಸುದ್ದಿ ಕೇಳಿ ಬರುವುದಿಲ್ಲ.

ಕಾಫಿ ಕಂಟ್ರೋಲರಾದ ದಿ. ಬ. ವಿ. ಎಂ. ವೆಲ್ಲೋಡಿ ಅವರ ನೇತೃತ್ವದಲ್ಲಿ ಕಾಫಿ ಸಾಹುಕಾರರ ಮತ್ತು ಬೆಳೆಸುವವರ ಸಭೆ ತಾ. ೧೨ರಂದು ಅವರ ಸಂಘದ ಕಾರ್ಯಾಲಯದಲ್ಲಿ ಜರಗಿತು. ಓರ್ವ ಕಾಫಿ ವ್ಯಾಪಾರಿಗಳು ಕಂಟ್ರೋಲರರ ಅವಗಾಹನೆಗೆ ಒಂದು ಮೆಮೊರೆಂಡಮ್ ಅರ್ಪಿಸಿದರು: ಚಿಲ್ಲರೆ ವ್ಯಾಪಾರಿಗಳಿಗೆ ಕಾಫಿ ರಖಂ ವ್ಯಾಪಾರಿಗಳ ಮೂಲಕವೇ ಬಟ್ವಾಡೆಯಾಗಬೇಕು. 'ರೀಲಿಜ್' ಮಾಡುವ ಕಾಫಿಯ ಗುಣ ಮತ್ತು ಪ್ರಮಾಣಗಳ ಕುರಿತು ವ್ಯಾಪಾರಿಗಳ ಸಲಹೆ ಕೇಳಬೇಕು. ಕನಿಷ್ಟ ತರಗತಿಯ ಕಾಫಿ ಬೀಜವನ್ನು ಏಲಂ ಮಾಡುವುದನ್ನು ರದ್ದು ಮಾಡಬೇಕು. ಇದನ್ನು ರಖಂದಾರರಿಗೇ ಮಾರಾಟ ಮಾಡಬೇಕು. ಲೈಸೆನ್ಸ್ ರದ್ದು ಮಾಡುವ ಮೊದಲು ಡೀಲರರಿಂದಲೂ, ಸ್ಥಳೀಯ ಮಾರ್ಕೆಟಿಂಗ್ ಸಂಘದ್ದೂ ಸಲಹೆ ಕೇಳಬೇಕು. ಇದರಲ್ಲಿ ರಖಂ ವ್ಯಾಪಾರಿಗಳ ಮೂಲಕ ರೀಲಿಜ್ ಮಾಡಬೇಕಾದ ಸೂಚನೆಯನ್ನು ಕಂಟ್ರೋಲರರು ಸ್ವಾಗತಿಸಿ, ರಖಂದಾರರು ಚಿಲ್ಲರೆಯವರೊಡನೆ ಹೆಚ್ಚೆಚ್ಚಿನ ಸಂಪರ್ಕವಿಟ್ಟುಕೊಂಡು ತಮಗೆ ಬೇಕಾದ ಪ್ರಮಾಣ ತಿಳಿಸಬೇಕಾಗಿ ಸೂಚಿಸಿದರು. ಅಂತೂ ಚಿಲ್ಲರೆ ವ್ಯಾಪಾರಿಗಳಿಗೆ ಯಾವ ತೊಂದರೆಯಾಗದಂತಾಗಲಿ.

ತಮ್ಮ ಬಳಿ ಬಂದ ಅನೇಕ ಅರಿಕೆಗಳನ್ನು ಪರ್ಯಾಲೋಚಿಸಿ ಮಾನ್ಯ ಜಿಲ್ಲಾ ಕಲೆಕ್ಟರರು ಬತ್ತ ರೂಪವಾಗಿ ಗೇಣಿ ಸಲ್ಲಿಸುವ ಕ್ರಮವಿದ್ದ ಕಾಸರಗೋಡು ತಾಲೂಕಿನ ಪ್ರದೇಶಗಳಮಟ್ಟಿಗೆ ಎರಡನೇ ಬೆಳೆಯ ಬತ್ತವನ್ನು ತಲ್ಪಿಸುವ ಕೊನೆ ತಾರೀಕನ್ನು ೩೧—೩—೪೫ ಎಂದು ಮುಂದರಿಸಿರುವರು. ಈ ಅವಧಿಯೊಳಗೆ ಬೆಲೆ ಕಮ್ಮಿಕೊಡಲಾಗುವುದಿಲ್ಲ.

ಬೊಂಬಾಯಿಗೆ ಕಳೆದ ತಾ. ೭ರಂದು ಮಧ್ಯಾಹ್ನ ತಲುಪಿದ ಶ್ರೀ. ಕಾಶೀಮಠಾಧೀಶ ಶ್ರೀ. ಸುಕೃತೀಂದ್ರ ತೀರ್ಥರ ಮತ್ತು ಶಿಷ್ಯರನ್ನು ಅಲ್ಲಿನ ಮಠಾನುಯಾಯಿಗಳಿಂದಲೂ ಇತರರಿಂದಲೂ ಮೆರವಣಿಗೆಯಲ್ಲಿ ವಾಲ್ಕೇಶ್ವರದ ಮಠಕೆ ಕರೆದೊಯ್ದರು. ಬೊಂಬಾಯಿ ನಗರ ಮಧ್ಯದಲ್ಲಿ ಬೇಂಡು ವಾದ್ಯ ಘೋಷಗಳಿಂದ ಕೂಡಿದ ಈ ಮೆರವಣಿಗೆಯ ಉತ್ಸವವು ಆಕರ್ಷಕವಾಗಿತ್ತು. ಮಠಕ್ಕೆ ತಲ್ಪಿದ ನಂತರ ಸ್ವಲ್ಪ ಸಮಯದಲ್ಲಿ ಕೆಲ ಪುಂಡರು ಮೆರವಣಿಗೆಯಲ್ಲಿಭಾಗವಹಿಸಿದ ಕೆಲವರ ಮೇಲೆ ಕೈಮಾಡಿದರೆಂದೂ, ಸಮಾಧಾನಗೊಳಿಸಲು ಪ್ರಯತ್ನಪಟ್ಟ ಶ್ರೀ. ಪಾಂಡುರಂಗ ಭಕ್ತರಿಗೆ ಚೂರಿ ತಿವಿತಗಳಾಗಿ ಆಸ್ಪತ್ರೆಗೆ ಒಯ್ಯಲಾಯಿತೆಂದೂ ತಿಳಿದುಬರುತ್ತದೆ.

ಸ್ವಾಮಿಜಿಗಳಿಗೆ ಸ್ವಾಗತ ಮಾಡುವ ವಿಷಯದಿನ ಬಗ್ಗೆ ಭೇದಾಭಿಪ್ರಾಯಗಳಾಗಿ ಎರಡು ಪಕ್ಷಗಳುಂಟಾಗಿದ್ದು, ತಮಗೆ ಯೋಗ್ಯ ಸೇವಾಭಾಗ್ಯ ಭಾಗವು ದೊರಕಲಿಲ್ಲವೆಂದೆಣಿಸಲ್ಪಟ್ಟ ಒಂದು ಪಕ್ಷದವರು ವಿಶೇಷ ಆಸಕ್ತಿವಹಿಸಿದ ಇನ್ನೊಂದರ ಸದಸ್ಯರ ಮೇಲೆ ಮುನಿದು ಕೆಲ ಕುಡುಕ ಮೊವಾಲಿಗಳ ಸಹಾಯದಿಂದ ಗಲಾಟೆ ಮಾಡ ನೋಡಿದುದರ ಪರಿಣಾಮವಿದೆಂದು ಆ ಕಡೆಯಿಂದ ಬಂದ ಕೆಲವರ ಅಭಿಪ್ರಾಯ.

ತಮ್ಮ ಸ್ವಾಗತ ಕಾರ್ಯದಲ್ಲಿ ಒಡಕುಂಟಾಗದಿದ್ದ ಪಕ್ಷದಲ್ಲಿ ಮಾತ್ರ ಸ್ವಾಗತವನ್ನು ಸ್ವೀಕರಿಸುವುದಾಗಿ ಸಮಾಜದ ಮಾನ್ಯ ಮುಖಂಡರು ಪೂರ್ವಷರ್ತವಾಗಿ ಮಾಡಿಕೊಂಡರೆ ಐಕ್ಯ ಸಾಧನೆಯಾಗುವುದು.

ಥಿಯೋಸೊಫಿಕಲ್ ಲೋಜಿನಲ್ಲಿ ಕರ್ನಾಟಕ ಏಕೀಕರಣ ಸಂಬಂಧವಾಗಿ ಒಂದು ಸಭೆ ಶ್ರೀ. ಶಿವರಾಮಕಾರಂತರ ಅಧ್ಯಕ್ಷತೆಯಲ್ಲಿ ತಾ. ೧೫ರಂದು ಸಂಜೆ ಸೇರಿತ್ತು. ಅಲ್ಲಿ ಅಂದು ದ. ಕ. ಜಿಲ್ಲಾ ಏಕೀಕರಣ ಸಂಘವು ರಚಿಸಲ್ಪಟ್ಟಿತ್ತು. ಶ್ರೀಗಳಾದ ಎ. ಬಿ. ಶೆಟ್ಟಿ ಅಧ್ಯಕ್ಷ; ರಾಮಕೃಷ್ಣಮಲ್ಲಿ ಕಾ. ದರ್ಶಿ. ಎ. ಎನ್. ಶಾಸ್ತ್ರಿ ಕೋಶಾಧಿಕಾರಿ, ಮತ್ತು ಶ್ರೀಗಳಾದ ಜಿನರಾಜ ಹೆಗ್ಡೆ ಶಿವರಾಮ ಕಾರಂತ, ಹಿ. ರಾಮರಾಯಮಲ್ಯ ಸದಸ್ಯರು. ಇದರ ಕಾರ್ಯ ಚಳವಳವು ಭರದಿಂದ ಸಾಗಲಿ.

ಸುರತ್ಕಲದ ವಿದ್ಯಾದಾಯಿನಿ ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ. ೩೧—೩—೪೫ರ ಶನಿವಾರ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರಗುವುದು.

ತಾ. ೧೧ರಂದು ಉಡುಪಿಯ ಮಜೂರರ ಪ್ರಥಮ ಸಮ್ಮೇಲನ ಶ್ರೀ. ಎಚ್. ಮಂಜುನಾಥರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಮಜೂರರ ಶ್ರೇಯಸ್ಸಭಿವೃದ್ಧಿಗೆ ಮಾಲಕರುಗಳು ಯೋಗ್ಯ ಸವಲತ್ತುಗಳನ್ನು ಕಲ್ಪಿಸಿ ಸಹಕರಿಸುವಂತೆ ಪ್ರಯತ್ನಮಾಡಬೇಕೆಂಬ ನಿರ್ಣಯಗಳಾದುವು.

ನೋರ್ದನ್ ಇಂಟರ್‌ಸ್ಕೂಲ್ ಎತ್ಲೆಟಿಕ್ ಸಂಘದವರು ಡಾ। ಟಿ. ಮಾಧವ ಪೈ ಅವರ ಅಧ್ಯಕ್ಷತೆಯಲ್ಲಿ ಇನಾಮು ಹಂಚೋಣದ ಸಮಾರಂಭ ಜರಗಿಸಿದರು. ಬಹುಮಾನ ಶೀಲ್ಡು ಬೋರ್ಡ್ ಶಾಲೆಗೂ, ಕಪ್‌ಗಳು ಕ್ರಿಶ್ಚಿಯನ್ ಶಾಲೆಗೂ ಸಿಕ್ಕಿದವು. ಅಂದಿನ ಅಧ್ಯಕ್ಷರು ೫೦ ರೂ. ದಾನಕೊಟ್ಟರೆಂದೂ ತಿಳಿದು ಬರುತ್ತದೆ.

ಮೂಲ್ಕಿ:—ಸ್ಥಳೀಕ ಬಪ್ಪನಾಡು ಶ್ರೀ। ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಜಾತ್ರೆಯು ಈ ವರ್ಷ ಈ ಕೆಳಗಿನಂತೆ ಜರಗಲಿರುವುದು. ಭಕ್ತಾದಿಗಳು ಎಂದಿನಂತೆ ಬಂದು ಶ್ರೀ। ಸನ್ನಿಧಿಯ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಶ್ರೀ। ದೇವಿಯ ಕೃಪಾಪಾತ್ರರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆಂದು ಸದ್ರಿ ದೇವಳದ ಮೆನೇಜರ್ ಶ್ರೀ। ಯಂ. ಸಿದ್ದು ಶೆಟ್ಟು ತಿಳಿಸುತ್ತಾರೆ.

ಇದೇ ಮಾರ್ಚ್ ೨೭ಕ್ಕೆ ಧ್ವಜಾರೋಹಣ, ೨೮ಕ್ಕೆ ಅಯನೋತ್ಸವ, ೨೯ಕ್ಕೆ ಪೇಟೆಸವಾರಿ, ೩೦ಕ್ಕೆ ಕೊಪ್ಪಲಸವಾರಿ, ೩೧ಕ್ಕೆ ಬಾಕಿಮಾರು ದೀಪ. ಎಪ್ರಿಲ್ ೧ಕ್ಕೆ ಕೆರೆ ದೀಪ, ೨ಕ್ಕೆ ರಥಾರೋಹಣ, (ಹಗಲು) ೩ಕ್ಕೆ ಅವಭೃತ. (ರಾತ್ರಿ)

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ಗಾಬರಿಯಿಂದಲೇ ಹೆಚ್ಚಿನ ಗಂಡಾಂತರ

'ಬೆಂಕಿ! ಬೆಂಕಿ!--ಆದರೂ ಗಾಬರಿ ಪಡಬೇಡಿರಿ

ಗಾಬರಿ—ಪ್ರಾಣಭಯ—ಸುಗ್ಗಾಳಿ—ಪ್ರಾಣನಷ್ಟ

ಬರೀ ಹೊಗೆ ಕಂಡಾಗ ೫೦೦ ಜನ ಸತ್ತರು

ಗಾಬರಿ! ನೀವು ಗಾಬರಿ ಪಡದಿರುವುದು ಹಿತಕರ. ಗಾಬರಿ-ಭಯದಿಂದ ಕಕ್ಕಾಬಿಕ್ಕಿಯಾಗಿ ಸಿಕ್ಕಿದ ಕಡೆ ದಾರಿ ಕಾಣದೆ ಕಂಗಾಲಾಗುವ ಅದೊಂದು ವಿಚಿತ್ರ ಪರಿಸ್ಥಿತಿ! ಮೊಗಲರು ಪ್ರಥಮತಃ ಸಿಡಿ ಗುಂಡುಗಳನ್ನು ಉಪಯೋಗಿಸಿ ಡಿಲ್ಲಿಯನ್ನು ಗೆದ್ದರು. ಸ್ಫೋಟಕ ಗುಂಡುಗಳ ಸಿಡಿತಕ್ಕೆ ಇಬ್ರಾಹಿಂಲೋಡಿಯ ಸೈನ್ಯ ಸಮೂಹವು ಗಾಬರಿ ಗೊಂಡು ಚಲ್ಲಾಪಿಲ್ಲಿಯಾಗಿ ಚದರಿ ಓಡಿತು. ಗಾಬರಿಗೊಳಗಾದ ಮನೋವೃತ್ತಿಯ ಮೊದಲ ಪ್ರವೃತ್ತಿಯೆಂದರೆ ಪ್ರಾಣ ಭಯ-ಪ್ರಾಣ ಉಳಿಸಲು ದಿಕ್ಕು ಕಾಣದೆ ನುಗ್ಗುವುದು. ಕಿಕ್ಕಿರಿದ ಜನಸ್ತೋಮವು ಪ್ರಾಣ-ಭಯದಿಂದೋಡುವಾಗ ಕುಸಿದು ಬೀಳುವರೆಷ್ಟೊ, ನುಸುಳಿ ನುಚ್ಚಾಗುವರೆಷ್ಟೊ, ಜಜ್ಜಿ ಚಟ್ನಿ'ಯಾಗುವರೆಷ್ಟೊ.

ಸ್ತ್ರೀಯರು ಸ್ವಾಭಾವಿಕವಾಗಿ ಭೀತಿ ಮನಸ್ಕರು. 'ಜಿರಳೆ! ಜಿರಳೆ!' ಎಂದರೆ ಸಾಕು—ಸರಸಮ್ಮನವರು, ಲಚ್ಚಮ್ಮನವರು, ಎಲ್ಲರೂ ಹಾ ಹಾರುವರು. ಕಿಕ್ಕಿರಿದ ಸಭಾ ಸದನದಲ್ಲಿ 'ಬೆಂಕಿ ಬೆಂಕಿ' ಎಂದು ಬೊಬ್ಬೆ ಕೇಳಿದರೆ ಸಾಕು—ಸಭೆಗೆ ಸಭೆಯೇ ಗಾಬರಿ ಗೊಂಡು ದ್ವಾರಗಳ ಕಡೆ ನುಗ್ಗುವುದು. ಮನೋಸ್ಥೈರ್ಯವಿಲ್ಲದೆ ಎಲ್ಲರೂ ಒಂದೇ ಬಾಗಿಲಿನಿಂದ ನುಗ್ಗುವರು, ಮತ್ತೆ ಪರಿಣಾಮ—ಅನೇಕರ ಮರಣ—ಬೆಂಕಿಯಿಂದಲ್ಲ ನುಗ್ಗಾಟದಿಂದ, ತಿಕ್ಕಾಟದಿಂದ—ಅದು ಗಾಬರಿ.

ಹಾವು ಕಚ್ಚಿ ಸತ್ತ ಅನೇಕ ಸಂದರ್ಭಗಳಲ್ಲಿ ಮರಣವು ಹೆಚ್ಚಾಗಿ ಗಾಬರಿಯಿಂದಲೇ ಸಂಭವಿಸಿದೆಯಲ್ಲದೆ ವಿಷದಿಂದಲ್ಲ ವಿಷವಿಲ್ಲದ ಹಾವು ಕಡಿದರೂ ಗಾಬರಿಯಿಂದಲೇ ಸತ್ತವರನೇಕರಿದ್ದಾರೆ. ಅಕಸ್ಮಾತಾಗಿ ಹತ್ತಿರದಿಂದ ಹರಿದು ಹೋಗುವ ಹಾವಿಗೆ ನೋಡಿ ಯಾರಾದರೂ 'ಹಾವು ಹಾವು' ಎಂದರೆ ಸಾಕು—ಏನು ನೆಗೆದಾಟ, ಏನು ಕಕ್ಕಾಬಿಕ್ಕಿ; ಕಡೆಗೆ ಕಾಲಿಡುವುದು ಆ ವಿಷ ಜಂತುವಿನ ಶರೀರದ ಮೇಲೆ. ಅದೂ ಗಾಬರಿ ಗೊಂಡು ತನ್ನ ಸ್ವಾಭಾವಿಕವಾದಪ್ರಾಣಿಸ್ವಭಾವದಿಂದ ಕಚ್ಚುವುದು.

ಈಚೆಗೆ ಲಂಡನಿನಲ್ಲಿ ಒಂದು ಸಂಗತಿ ನಡೆಯಿತು. ತುಂಟ ನಾಜೀವಿಮಾನಗಳು ಬಂದುವೆಂದು 'ಸೈರಿನು'ಗಳು 'ಎಚ್ಚರಿಕೆ' ಕೊಟ್ಟವು. ಜನರು ಬೊಂಬು ಸಂರಕ್ಷಣಾಲಯಗಳಿಗೆ ಧಾವಿಸಿದರು. ಒಂದು 'ಶೆಲ್ಟರ'ನ್ನು ಇಳಿಯುವಾಗ ಓರ್ವ ಮಹಿಳೆ ಕಾಲು ತಪ್ಪಿ ಬಿದ್ದಳು. ಇನ್ನೊರ್ವಳು ಗಾಬರಿಯಿಂದ ಬೊಬ್ಬಿಟ್ಟಳು. ಒಳಗಿದ್ದವರು ಬಾಗಿಲ ಬಳಿಯಲ್ಲೇ ಬೊಂಬೊಂದು ಇರುವುದಾಗಿ ಭಾವಿಸಿ ಗಾಬರಿ ಗೊಂಡರು. ಸರಿ ಒಳಗಿದ್ದವರು ಹೊರಬರಲಿಕ್ಕೂ ಹೊರಗಿನವರು ಒಳಗೆ ನುಗ್ಗಲಿಕ್ಕೂ ಪ್ರಯತ್ನಪಟ್ಟರು—ಫಲಿತಾಂಶ-೧೭೮ ಮಂದಿ ಜಜ್ಜಿ ಮೃತರಾದರು.

ಅಮೇರಿಕದ ಕೆಲುವೆಂಟ್ ಎಂಬ ಪಟ್ಟಣದಲ್ಲಿ ಒಂದು ವಿಹಾರಕೂಟ ಸೇರಿದಾಗಓರ್ವ ಮಹಿಳೆ ಮೂರ್ಛೆ ಬಿದ್ದಳು. ಹತ್ತಿರ ಇದ್ದವರು ದೂರದ ಬಟ್ಲರನಿಗೆ 'ನೀರು, ನೀರು! ಎಂದು ಬೊಬ್ಬಿಟ್ಟರು. ಕೆಲವು ಪುಕ್ಕ ಮನಸ್ಕರು 'ಬೆಂಕಿ' ಎಂದು ತಿಳಿದು ಬಾಗಿಲ ಕಡೆಗೆ ಓಡ ತೊಡಗಿದರು—ಭಯಂಕರ ನುಗ್ಗಾಟ—ಫಲಿತಾಂಶ ೭ ಮಂದಿ ಸತ್ತರು. ಆದರೂ ಅಲ್ಲಿ ಬೆಂಕಿ ಇರಲಿಲ್ಲ.

ಶಾಲಾ ಕೋಣೆಗಳಿಗೆ ಹೆಚ್ಚಾಗಿ ಒಂದೆರಡು ಬಾಗಲುಗಳಿರುವುದು. ಒಕ್ಲಾಹೊಮ ನಗರದ (ಅಮೇರಿಕ) ಒಂದು ಶಾಲೆಯ ದೊಡ್ಡ ಕ್ಲಾಸು ಕೋಣೆಯಲ್ಲಿ ಒಂದು ಕ್ರಿಸ್‌ಮಸ್ ಸಂತೋಷ ಸಮಾರಂಭಕೂಟ ಸೇರಿತ್ತು. ಐರೋಪ್ಯರ ಕ್ರಿಸ್‌ಮಸ್ ಕೂಟಗಳಲ್ಲಿ ಸಾಂಟಾ ಕ್ಲೋಸ್ ಎಂಬ ಉದ್ದ ಗಡ್ಡದ ಮುದುಕನೊಬ್ಬನು ದೇವರಂತೆ ಬಂದು ನಾನಾ ತರದ ಚೇಷ್ಟೆ, ಉಪದೇಶಗಳನ್ನು ಕೊಟ್ಟು ಹರಸುವ ಒಂದು ಕಾರ್ಯಕ್ರಮವಿದೆ. ಅಂದು ಸಾಂಟಾ ಕ್ಲೋಸ್ ಆದ ವ್ಯಕ್ತಿ ಹತ್ತಿಯ ಗಡ್ಡ ಕಟ್ಟಿಕೊಂಡಿದ್ದು ಅದಕ್ಕೆ ಕೈಯಲ್ಲಿ ಹಿಡಿದ ಮೇಣದ ಬತ್ತಿಯ ಜ್ವಾಲೆ ತಗಲಿ ಬೆಂಕಿ ಹಿಡಿಯಿತು. ನಂತರದ ಗಾಬರಿ ಗಲಿಬಿಲಿಯಲ್ಲಿ ಕುರ್ಚಿ ಮೇಜುಗಳು ಮಗುಚಿ ಬಿದ್ದವು. ಪುನಃ 'ಬೆಂಕಿ ಬೆಂಕಿ' ಎಂಬ ಬೊಬ್ಬೆ ಎದ್ದು ಎಲ್ಲರೂ ಪ್ರವೇಶದ್ವಾರದ ಕಡೆ ಓಡಿದರು. ಪುನಃ . . . ಫಲಿತಾಂಶ-೩೭ ಹೆಣಗಳು.

ಜನಸ್ತೋಮದ ಸಭೆಯಲ್ಲಿ ಗಾಬರಿ ಎಂಬುದಿದು ಯಾವಾಗಲೂ ಇರುವುವೊಂದುನಿರತ ಗಂಡಾಂತರ. ಇದರ ಕುರಿತು ಚೆನ್ನಾಗಿ ಯೋಚಿಸಿರಿ.

ಬೊಸ್ಟನ್ ನಗರದಲ್ಲಿ ದೊಡ್ಡ ಸರ್ಕಸ್ ಆಟ ನಡೆಯುತಿದ್ದಾಗ ಬೆಂಕಿಕಸರತ್ ಮಾಡುವವರ ಕೈತಪ್ಪಿ ಎಲ್ಲೊ ಒಂದು ಕಡೆ ಸ್ವಲ್ಪ ಬೆಂಕಿ ತಗಲಿತು. ಆಗ ಜನರು ಗಾಬರಿ ಗೊಳ್ಳದೆ ವರ್ತಿಸಬೇಕಿತ್ತು. ಅದಕ್ಕೆ ವಿರೋಧ ವರ್ತಿಸಿದಾಗ-೫೦೦ ಪ್ರೇಕ್ಷಕರು ಪರಂಧಾಮಕ್ಕೈದಿದರು.

ಗಾಬರಿಯಿಂದ ಗಂಡಾಂತರವಿದೆ ಎಂದರೆ ನಿಮಗೆ ಸಂದೇಹವಾಗಬಹುದು. ನಮ್ಮ ನಗರಗಳಲ್ಲೂ ಸೇರುವ ಮದುವೆ ಮುಂಜಿ ಕೂಟಗಳನ್ನೂ ಸಿನೇಮಾ ನಾಟಕ ಮಂದಿರಗಳನ್ನು, ಹೋಟೇಲು ಉಪಹಾರ ಗೃಹಗಳನ್ನೂ ನೋಡಿರಿ. ಕೆಲವಲ್ಲಿ ಬಿದಿರು ತೆಂಗಿನ ಗರಿಗಳ ಚಪ್ಪರಗಳು. ಕೆಲವಲ್ಲಿ ಹತ್ತಿ ಬಟ್ಟೆ ರೇಶ್ಮೆ ಬಟ್ಟೆಯ ಪರದೆಗಳು; ಮತ್ತೆ ಕೆಲವಲ್ಲಿ ಸದಾ ಉರಿಯುತ್ತಿರುವ ಒಲೆ ಬೆಂಕಿಗಳು—ಹೆಜ್ಜೆ ಹೆಜ್ಜೆಗೂ ಅನಾಹುತ ಸಂಭವಿಸಬಹುದಾದ ಸಾಧನಗಳು ಲಂಡನ್ ನ್ಯೂಯೋರ್ಕ್ ನಗರಗಳಲ್ಲಿ ಯೂ ಮನರಂಜಕ ಮಂದಿರಗಳಲ್ಲಿ ಜನಸ್ತೋಮ ಸೂಜಿ ಹಾಕುವಷ್ಟು ಎಡೆ ಇಲ್ಲದಂತೆ ತೂರಿಕೊಂಡಿರುತ್ತವೆ. ಶರಾಬು ಕುಡಿದು ಮತ್ತನಾದ 'ಪೋಕರಿ'ಯೊಬ್ಬನು ಭ್ರಮೆ ಗೊಂಡು 'ಬೆಂಕಿ' ಎಂದು ಒದರಿದರೆ ಪರಿಣಾಮವೇನಾಗಬಹುದೆಂದು ಊಹಿಸಬಲ್ಲಿರಾ?

ಹೋಟೇಲುಗಳಲ್ಲಿ 'ಚತುರ' ಗಿರಾಕಿಗಳು ಆರಾಮವಾಗಿ ತಿಂದು, 'ಬಿಲ್ಲು' ಕೊಡದೆ ಹೊರಬೀಳಬಹುದುದೆಂದು ಇಕ್ಕಟ್ಟಾದ ಒಂದೆರಡು ಬಾಗಿಲುಗಳನ್ನೇ ತೆರೆದಿದುತ್ತಾರೆ. ಗಾಬರಿ ಘಟನೆಯಾಗಲಿಕ್ಕೆ ಇದು ಎಷ್ಟೊಂದು ಅನುಕೂಲ ವಾತಾವರಣ!

ಎಲ್ಲಾ ತರದ ಗಂಡಾಂತರಗಳನ್ನು ಎದುರಿಸುವ ಸಾಧನಗಳಿಂದಲೂ ಸುವ್ಯವಸ್ಥಿತ ಸಾರ್ವಜನಿಕ ಸಭೆಗಳ ಕಾನೂನು ಗಳಿಂದಲೂ, ಭದ್ರವಾಗಿರುವ ಐರೋಪ್ಯಅಮೇರಿಕಾಗಳ ನಗರಗಳಲ್ಲಿ ಮೇಲೆ ವಿವರಿಸಿದಂತಹ ಘಟನೆಗಳು ಸಂಭವಿಸುತ್ತವೆಂದ ಮೇಲೆ ಅಂತಹ ಏರ್ಪಾಡುಗಳು ಹೆಸರಿಗೆ ಮಾತ್ರ ಇರುವ ನಮ್ಮ ಕಡೆಗಳಲ್ಲಿ 'ಗಾಬರಿ' ಪ್ರಸಂಗದಲ್ಲಿನ ಗತಿಯೇನು?

ಕಟ್ಟಡಗಳೂ ಮಾಡುಗಳೂ ಬೆಂಕಿ ತಗಲದಂತಹುಗಳಾಗಿ ರಚಿಸಲ್ಪಡುತ್ತವೆ ನಿಜ. ಅಂತೆಯೇ ಜನರು ಗಾಬರಿ ವಿರೋಧವಾಗಿ ಮನೋಸ್ಥೈರ್ಯವುಳ್ಳವರಿದ್ದಾರೆಂದು ಹೇಳಬರುವುದಿಲ್ಲ. ನುಗ್ಗಾಟಕೆ ಸಿಕ್ಕಿ ನಾವೂ ನೀವೂ ಜರ್ಝರಿತರಾಗುವುದಿಲ್ಲವೆಂಬುದಕ್ಕೇನಾದರೂ 'ಗೇರಂಟಿ' ಇದೆಯೇ?

ಬೆಂಕಿಯು ಗಾಬರಿಯನ್ನುಂಟು ಮಾಡಲು ಒಳ್ಳೇ ಸಾಧನವಿದ್ದರೂ ಹಾಗೆ ಗಾಬರಿಗೊಳ್ಳುವ ಅವಶ್ಯಕತೆಯೇ ಇಲ್ಲವೆಂದು ತಿಳಕೊಳ್ಳಬೇಕು.

ಈ ವಿಚಾರವಾಗಿ ನೀವು ಗಂಭೀರವಾಗಿ ಯೋಚಿಸಿದರೆ ನಿಮಗೇನೂ ಕಷ್ಟವಾಗದು. ಆದರೆ ನೀವು ಇದನ್ನೂ ಪ್ರಶಾಂತತೆಯಿಂದ ವರ್ತಿಸುವುದನ್ನೂ ಕಲಿಯಬಹುದು. ಒಂದು ಸಲ ಎಲ್ಲಿಯಾದರೂ ನೀವು ಇಂತಹ ಪ್ರಸಂಗದಲ್ಲಿ ಅಕಸ್ಮಾತ್ ಸಿಕ್ಕಿದಾಗ ನಿಮಗೆ ಮತ್ತೆ ಅಲ್ಲಿ ಯೋಚಿಸಲು ಬಿಡು ಸಿಗುವುದಿಲ್ಲ. ಆದುದರಿಂದ ನಿಮಗಾಗಿ ಈ ಕೆಳಗಿನ ಸೂಚನೆಗಳನ್ನು ಕೊಡಲಾಗಿದೆ.

೧. ಸಾರ್ವಜನಿಕ ಸಭಾ ಸದನದಲ್ಲಿ ಕೂತಾಗ ತಪ್ಪಿಸಿ ಹೋಗುವ ಉಪ ದ್ವಾರಗಳನ್ನು ಮೊದಲು ನೋಡಿ ಇಡಬೇಕು. ಜನರು ಹೆಚ್ಚಾಗಿ ಬಂದ ದಾರಿಯಿಂದಲೇ ಹೊರ ಹೋಗಲು ಪ್ರಯತ್ನಿಸುವರು. ಆದುದರಿಂದ ಅದನ್ನು ಬಿಟ್ಟು ನೀವು ಬೇರೊಂದು ದಾರಿಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳಿ. ಚಿಕಾಗೋದ ಒಂದು ನೃತ್ಯ ಮಂದಿರವೊಂದಕ್ಕೆ ಬೆಂಕಿ ಹಿಡಿದಾಗ ಅಲ್ಲಿ ಹದಿನೆರಡು ಉಪದ್ವಾರಗಳಿದ್ದರೂ ಜನರು ಮುಖ್ಯ ದ್ವಾರದ ಕಡೆಗೇ ನುಗ್ಗಿದರು—ಹೀಗೆ ೫೭೫ ಮಂದಿ ಮೃತ್ಯುವಿಗೀಡಾದರು.

೨. ಒಂದು ಗಾಬರಿಯ ನುಗ್ಗಾಟ ಪ್ರಾರಂಭವಾದಾಗ ಕೆಲವು ಕ್ಷಣ ಕೂತಲ್ಲೇ ಕುಳಿತು ಪರಿಸ್ಥಿತಿಯನ್ನು ಶಾಂತತೆಯಿಂದ ಅಭ್ಯಾಸಿಸಿರಿ. ಗಂಡಾಂತರದ ಸ್ವರೂಪ ಶೀಘ್ರತೆ ಮತ್ತು ಜನಗಳು ಧಾವಿಸುವ ದಿಕ್ಕು ಇವುಗಳನ್ನು ತಿಳಿದು ಅದಕ್ಕನುಕೂಲವಾಗಿ ಮತ್ತೆ ತಕ್ಕುದಾಗಿ ವರ್ತಿಸಿರಿ.

೩. ಪ್ರಸಂಗಾವಧಾನವುಳ್ಳ ಶಾಂತ ಮನೋಭಾವದ ವ್ಯಕ್ತಿಯೊಬ್ಬನು ಕುರ್ಚಿಯ ಮೇಲೆದ್ದು ನಿಂತು 'ಹೆದರಬೇಡಿ ಗಾಬರಿ ಇಲ್ಲ. ಗಂಡಾಂತರವಿಲ್ಲ. ಶಿಸ್ತಿನಿಂದ ಶಾಂತ ರೀತಿಯಲ್ಲಿ ವರ್ತಿಸಿರಿ' ಎಂದು ಹೇಳಿದ್ದರಿಂದ ಅನೇಕ ಭೀಕರ ಪರಿಣಾಮಗಳು ತಪ್ಪಿವೆ. ಅಮೇರಿಕದ ಲೂಸಿಯಾನಾ ನಗರದ ಸಿನೇಮಾ ಮಂದಿರದಲ್ಲಿ ಬೆಂಕಿ ಬಿದ್ದಾಗ ಮೆನೇಜರರು 'ಪ್ರೇಕ್ಷಕರು ಸಮಾಧಾನದಿಂದ ಶಿಸ್ತಿನಲ್ಲಿ ಹೊರಗೆ ಹೋಗಿರಿ. ಗಾಬರಿಯಿಲ್ಲ' ಎಂದಾಗ ಜನರು ಹಾಗೇ ವರ್ತಿಸಲು ಯಾವ ದುರ್ಘಟನೆಯೂ ನಡೆಯಲಿಲ್ಲ. ಆದರೆ ಅದೇ ಸಿನೇಮಾಮಂದಿರದ ಮಹಡಿಯಲ್ಲಿ ಒಬ್ಬನು ಹೊಗೆ ನೋಡಿ ಬೊಬ್ಬೆ ಹೊಡೆದನು.....೨೫ ಜನರು ಆಹುತಿಯಾದರು.

೪. ಬೆಂಕಿ ಹಿಡಿದು ಹೊಗೆ ತುಂಬಿದ ಮಂದಿರದೊಳಗಿದ್ದಾಗ ಬಗ್ಗಿ (ಮೂಗು ನೆಲದಿಂದ ೩ ಅಡಿ ಎತ್ತರವಿರುವಂತೆ) ನಡೆಯಿರಿ. ಕೆಲವು ವಿಷ ವಾಯುಗಳು ಭಾರವಿದ್ದೂ ನೆಲದ ಮೇಲಕ್ಕೂ, ಕೆಲವುಐದಾರು ಅಡಿ ಎತ್ತರದಲ್ಲೂ ವ್ಯಾಪಿಸುತ್ತವೆ.

೫. ಕೈಗೆ ಹತ್ತಿರವಿಲ್ಲದ 'ಬೇಗ್' ಕೊಟು 'ಹೇಟು' ತೆಗೆಯಲು ಪ್ರಯತ್ನಿಸಬೇಡಿ ಒಂದು ಸಲ ಹೊರ ಬಂದ ಮೇಲೆ ಮತ್ತೆ ಒಳಗೆ ಹೋದರೆ ಗಂಡಾಂತರಕ್ಕೆ ತುತ್ತಾಗಲೂಬಹುದು.

ಕೊನೆಯಾದಾಗಿ ನೀವು ಇಂತಹ ಗಾಬರಿ ಪ್ರಸಂಗಗಳನ್ನೂ ತಪ್ಪಿಸಲು ಮಾಡಬಹುದಾದ ಒಂದು ಮಹತ್ವದ ಕೆಲಸವಿದೆ. ಅಪಾಯಕ್ಕೆ ಆಸ್ಪದವಿರುವ ಸಾರ್ವಜನಿಕ ಮಂದಿರ, ಅಂಗಡಿ, ಹೋಟೇಲುಗಳ ಮಾಲೀಕರಿಗೆ ವಿನಯಪೂರ್ವಕವಾಗಿ ಯೋಗ್ಯ ಏರ್ಪಾಡುಗಳನ್ನು ಮಾಡಲು ವಿನಂತಿಸಿಕೊಳ್ಳಿರಿ. ಆದಾಗದಿದ್ದರೆ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ಅದನ್ನು ತನ್ನಿರಿ. ಸರಿಯಾದ ಭದ್ರತೆಯ ವ್ಯವಸ್ಥೆ ಇಲ್ಲದಿದ್ದರೆ ನಿಮ್ಮ ಪ್ರಾಣವು ಗಂಡಾಂತರದಲ್ಲಿದೆ ಎಂದೇ ತಿಳಕೊಳ್ಳಬೇಕು.

ಡಾಕ್ಟರರೂ ದಾದಿಗಳೂ ಜಾಂಬಕನ್ನೇ ಉಪಯೋಗಿಸಲು ಹೇಳುತ್ತಾರೆ

ಪ್ರಸಿದ್ಧ ವಿಷಹಾರೀ ಚರ್ಮಲೇಪ

ಜಾಂಬಕ್ ಅರ್ಧ ಶತಮಾನಗಳಿಂದ ಜಗತ್ ಪ್ರಸಿದ್ಧವಾಗಿದ್ದು ಗಾಯ ಮತ್ತು ಹೊಡೆತಗಳಿಗೆ ಇದು ಆದರ್ಶ ಪ್ರಥಮ ಚಿಕಿತ್ಸೆಯಾಗಿದೆ. ಡಾಕ್ಟರರೂ ದಾದಿಯರೂ ಇದನ್ನು ತುರಿ ಕಜ್ಜಿ, ಬಾವು ವಿಷಪೂರ್ಣ ಗಾಯ, ಕಾಲುನೋವು, ಮೂಲವ್ಯಾಧಿ ಮೊದಲಾದುವುಗಳಿಗೆ ಉಪಯೋಗಿಸ ಹೇಳುತ್ತಾರೆ. ಜಾಂಬಕಿನಲ್ಲಿರುವ ಅತ್ಯುತ್ತಮ ವನಔಷಧಿ ಸತ್ವವು ಸುಲಭವಾಗಿ ಚರ್ಮಕ್ಕೆ ಎಳೆಯಲ್ಪಟ್ಟು ನೋವನ್ನು ಕಡಿಮೆಮಾಡಿ ಬಾವನ್ನು ಗುಣಪಡಿಸಿ, ರಸಿಯನ್ನು ನಾಶಮಾಡುವುದು. ಜಾಂಬಕ್ ಕಲೆಯುಳಿಯದಂತೆ ಗುಣಪಡಿಸುವುದು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಸಂಯುಕ್ತ ಅಮೇರಿಕದ ಪ್ರಾಂತ್ಯಾಡಳಿತ

(೬ನೇ ಪುಟದಿಂದ)

ಎದ್ದು ಸರ್ವ ಸ್ವತಂತ್ರವಾದವುಗಳು ಮೊದಲಿನ ಹದಿಮೂರು ಪ್ರಾಂತ್ಯಗಳು. ೧೭೭೮ರ ಸಂಯುಕ್ತ ಘಟನೆ ಸೇರಿದಾಗ ಇವು ತಮ್ಮಲ್ಲಿನ ಸ್ವಲ್ಪ ಅಧಿಕಾರವನ್ನು ಕೇಂದ್ರಕ್ಕೆ ಬಿಟ್ಟುಕೊಟ್ಟವು. ಆದರೂ ಆಂತರೀಕ ಆಡಳಿತ ಮಟ್ಟಿಗೆ ಇಂದಿಗೂ ಅವು ಸ್ವತಂತ್ರವೇ ಆಗಿವೆ. ಅಂದರೆ ಪ್ರಾಂತ್ಯಗಳ ಈ ಸ್ವಾತಂತ್ರ್ಯ ಸ್ವಂತಗಳಿಸಿಕೊಂಡದ್ದಲ್ಲದೇ ಅದು ಯಾರಿಂದಲೂ ದಾನವಾಗಿ ಕೊಟ್ಟು ಬಂದುದಲ್ಲ. ಸ್ವತಂತ್ರವಾದ ಸರಕಾರವೊಂದಕ್ಕಿರಬಹುದಾದ ಎಲ್ಲಾ ಹಕ್ಕು ಸ್ವಾತಂತ್ರ್ಯಗಳೂ ಅದಕ್ಕಿವೆ. ಇಂದು ಕೆಲವು ಹಕ್ಕು ಅಧಿಕಾರಗಳು ಪ್ರಾಂತ್ಯಗಳಿಲ್ಲವಾದರೆ ಅವನ್ನು ಅವುಗಳ ಸ್ವಂತ ಸಮ್ಮತಿಯಿಂದ ಬಿಟ್ಟುಕೊಟ್ಟಂತವುಗಳು. ಅಲ್ಲಿನಕೇಂದ್ರದಲ್ಲಿನ ಸಂಯುಕ್ತ ಸರಕಾರಕ್ಕೆ ಹೆಚ್ಚಿನ ಹಕ್ಕು ಅಧಿಕಾರಗಳು ಇವೆಯಾದರೆ ಅವನ್ನು ಅದು ಪ್ರಾಂತ್ಯಗಳಿಂದ ಪಡೆದಂತವುಗಳು.

ಹಾಗಾದರೆ ಈ ಪ್ರಾಂತ್ಯಾಧಿಕಾರಗಳೆಂಬವು ಯಾವ್ಯಾವವು? ಅವಕ್ಕೆ ಸರಕಾರವೊಂದಕ್ಕಿರ ಬೇಕಾದ ಎಲ್ಲಾ ಹಕ್ಕು ಅಧಿಕಾರಗಳೂ ಇವೆ.

ಅವಕ್ಕೆ ಇಲ್ಲದ ಕೆಲವು ಅಧಿಕಾರಗಳೆಂದರೆ:

ಸಂಯುಕ್ತ ಪ್ರಭುತ್ವ ಸಂಬಂದವನ್ನು ಕಡಿದುಕೊಳ್ಳಲು ಅಧಿಕಾರವಿಲ್ಲ. ವಿದೇಶ ಸರಕಾರಗಳೊಡನೆ ಸ್ವತಂತ್ರ ವ್ಯವಹಾರ ನಡೆಸುವ ಅಧಿಕಾರವಿಲ್ಲ.

ಸಂಯುಕ್ತ ಸರಕಾರಕ್ಕಿರುವ ಅಧಿಕಾರ ತಳೆಯಲು ಹಕ್ಕಿಲ್ಲ.

ಕೆಲವು ವಿಶೇಷ ಸಂದರ್ಭಗಳಲ್ಲಿ ಕೇಂದ್ರಸರಕಾರವು ತನ್ನ ಕಾರ್ಯದಲ್ಲಿ ತಪ್ಪಿದಾಗ ಮಾತ್ರ ಪ್ರಾಂತ್ಯಗಳು ಕೇಂದ್ರದ ಅಧಿಕಾರದಂತೆ ವರ್ತಿಸಬಹುದಲ್ಲದೆ ಯಾವ ಸಂದರ್ಭದಲ್ಲೂ ಅವುಗಳು ಕೇಂದ್ರ ಆಡಳಿತದ ಕಾರ್ಯಕ್ರಮವನ್ನು ಮಿಕ್ಕಿ ಹೋಗಬಾರದು.

ಈ ಹಕ್ಕು ಭಾದ್ಯತೆಗಳು ಪರಸ್ಪರ ನಾಗರೀಕರೊಳಗಿನ, ಮತ್ತವರ ಸರಕಾರದೊಳಗಿನ ಸಂಬಂಧವನ್ನು ಸಂಪೂರ್ಣವಾಗಿ ಆವರಿಸಿಕೊಂಡಿವೆ. ಪ್ರಾಂತ್ಯ ಇಲ್ಲವೆ ಸ್ಥಳೀಕ ಆಡಳಿತಗಳು ತಮ್ಮ ಆಡಳಿತಾಂಗಕ್ರಮದಂತೆ ನಾಗರೀಕನೊಬ್ಬನ ಜನನವನ್ನು ದಾಖಲು ಮಾಡಿಕೊಳ್ಳುವುದು. ಅವನ ಸಂರಕ್ಷರನ್ನು ನಿಯಮಿಸುವುದು. ಅವನ ಶಿಕ್ಷಣ ಖರ್ಚನ್ನು ನೋಡಿಕೊಳ್ಳುವುದು. ಅವನ ತಂದೆಯ ಆಸ್ತಿಯಲ್ಲಿ ಅಧಿಕಾರಕೊಡುವುದು. ಮದುವೆ ಮಾಡಿಸುವುದು, ಮದುವೆ ಬೇಡವಾದರೆ ವಿಚ್ಛೇದನ ಕೂಡಾ ಮಾಡಿಸುವುದು. ಅವನ ಮೇಲೆ ಕಾನೂನು ಕಟ್ಟಿ ನಡೆಸುವುದು. ಮನೆ ಮಾರ್ಗಗಳನ್ನು ಪಹರೆ ಮಾಡುವ ಪೋಲಿಸ್ ಖಾತೆಯೂ, ಮಾರ್ಗ ರಸ್ತೆಗಳ ಕುರಿತೂ, ಶಾಲೆ, ಕಾಲುವೆಗಳ ಕುರಿತೂ ಸರಬರಾಯಿ ಮಾಡುವ ಸ್ಥಳೀಕ ಮುನ್ಸಿಪಾಲಿಟಿಗಳಂತಹ ಸ್ಥಳೀಕ ಸಂಸ್ಥೆಗಳು ಅಧಿಕಾರವನ್ನು ಪ್ರಾಂತ್ಯ ಸರಕಾರದಿಂದ ಪಡೆಯುತ್ತವೆ.

ನಾಗರೀಕನೊಬ್ಬನ ರಕ್ಷಣೆಯ ಕುರಿತು ಪ್ರಾಂತ್ಯ ಸರಕಾರವೇ ಹೆಚ್ಚಾಗಿ ನೋಡಿಕೊಳ್ಳುವುದಾದರೂ, ಸಂಯುಕ್ತ ಇಲ್ಲವೇ ದೇಶ ಸರಕಾರವು ಅವನ ಭಾವನೆಗಳನ್ನು ಆಳುವುದು. ರಾಷ್ಟ್ರ ಸರಕಾರದೊಂದಿಗೆ ಅವನ ಸಂಬಂಧವು ಬಹಳ ಕಡಿಮೆ ಎಂದ ಮಾತ್ರಕ್ಕೆ ಅದರಲ್ಲಿ ಅವನಿಗೆ ಹೆಚ್ಚಿನ ಆಸಕ್ತಿಯಿಲ್ಲವೆಂದು ತಿಳಿದುಕೊಳ್ಳಲಾಗದು. ದೇಶದ ಮತ್ತು ಪ್ರಾಂತೀಕ ಸರಕಾರ ಕಾರ್ಯವನ್ನು ಹಂಚಿಕೊಳ್ಳುವಾಗ ಪ್ರಾಂತ್ಯಕ್ಕೆ ಹೆಚ್ಚಿನ ಹೊಣೆಗಾರಿಕೆ ಸಿಕ್ಕಿದರೂ ಹೆಚ್ಚಿನ ಮನ್ನಣೆಯು ದೇಶಕ್ಕೇ ದೊರಕುವುದು. ಇದರಿಂದ ಇವೆರಡರ ಮೇಲಿನ ಗೌರವವು ಸಮ ತೂಕವಾಗುವುದು.

ಹೀಗೆ ಪ್ರತಿಯೊಬ್ಬ ಅಮೇರಿಕನನು ದ್ವಿದಳ ಇಲ್ಲವೆ ಎರಡು ಗೌರವ ಭಾವನೆಗಳಿಂದಿರುತ್ತಾನೆ. ಈ ಅನುಭವ ಸ್ವಿಡ್ಜರ್‌ಲೆಂಡಿನ ಜನರನ್ನು ಬಿಟ್ಟರೆ ಬೇರೆ ಯಾವ ಐರೋಪ್ಯರಿಗೂ ಇರುವುದಿಲ್ಲ. ಅಮೇರಿಕನನು ಎರಡು ಸರಕಾರಗಳ ಎರಡು ನ್ಯಾಯ ಶಾಸನಗಳ ಕೆಳಗೆ ವಾಸಿಸುತ್ತಾನೆ. ಅವನು ಎರಡು ದೇಶ ಭಕ್ತಿಗಳಿಂದ ಸ್ಫೂರ್ತಿಗೊಳ್ಳುತ್ತಾನೆ. ಅವನು ಎರಡು ಕಡೆಗಳಿಗೆ ತನ್ನ ವಿಧೇಯತ್ವವನ್ನು ತೋರಿಸುತ್ತಾನೆ. ಈ ಎರಡು ಭಾವನೆಗಳು ಸಹಾಶಕ್ತಿಯುಕ್ತವಾಗಿ ಕುಂದದೇ ಇರುವುದು ಅದೊಂದು ಪರಮಭಾಗ್ಯವೆಂದೇ ಹೇಳಬೇಕು. ಈ ವಿಶಿಷ್ಟ ಗುಣಭಾವವು ದೀರ್ಘ ಸ್ವಭಾವಾನುಭವದಿಂದಲೂ ಕುಶಲ ಸಹಿಷ್ಣುತೆಯಿಂದಲೂ ಬೆಳೆಸಿ ತಂದುದು. ಈ ಎರಡು ಸರಕಾರಗಳನ್ನು ಚುನಾಯಿಸುವ ಎರಡು ವೋಟುಗಳ ಅಧಿಕಾರವಿರುವ ವ್ಯಕ್ತಿಗಳು ಒಂದೇ ತರದವರು. ಅವರು ಪರಸ್ಪರ ಸೌಹಾರ್ದತೆಯಿಂದಿರುವುದರಿಂದಲೇ ಆ ಎರಡು ಸರಕಾರಗಳೂ ಪರಸ್ಪರ ಸಮ್ಮಿಲ ಸಹಕಾರದಿಂದಿರುವವು. ಅವೆರಡರ ತತ್ವಗಳು ಒಂದೇ. ಒಬ್ಬರ ಭದ್ರತೆಗೆ ಮತ್ತೊಬ್ಬರ ಸಹಾಯ ಬೇಕೇ ಬೇಕು. ಪ್ರಾಂತ್ಯಗಳಿಗೆ ರಾಷ್ಟ್ರ ಸರಕಾರವು ಮೂಲಾಧಾರಸ್ತಂಭಗಳಂತೆ. ರಾಷ್ಟ್ರ ಸರಕಾರವು ಪ್ರಾಂತ್ಯಗಳ ರಕ್ಷಕನಂತೆ ಇವೆ.

ಪ್ರಾಂತ್ಯ ಸರಕಾರಗಳ ಶಾಸನ ಕಾನೂನುಗಳನ್ನು ಅಲ್ಲಿನ ಜನರೇ ಮಾಡಿದರು. ಇಷ್ಟಪಟ್ಟಾಗ ಅವರೇ ಅದನ್ನು ಬದಲಾಯಿಸಲೂ ಬಲ್ಲರು. ಈ ಕಾನೂನುಗಳನ್ನು ಬದಲಾಯಿಸುವ ಅಧಿಕಾರ ಜನರಿಗಲ್ಲದೆ ಅವರ ಪ್ರತಿನಿಧಿಗಳಿಗಿಲ್ಲ. ಪ್ರತಿನಿಧಿಗಳು ಇದ್ದ ಕಾನೂನಿನಂತೆ ಆಡಳಿತ ನಿರ್ವಹಿಸಬೇಕು. ಕಾನೂನನ್ನೇ ತಿದ್ದಬೇಕಾದರೆ ಹೊಸ ಚುನಾವಣೆಗಳನ್ನು ನಡೆಸಬೇಕು.

ಸಂಯುಕ್ತ ಅಮೇರಿಕದ ಪ್ರಜಾ ಶಾಸನಗಳ ಮೇಲೆ ಅಮೇರಿಕನ್ ಕೊಂಗ್ರೆಸ್ ಸಭೆಗೆ ಅಧಿಕಾರವಿಲ್ಲ. ಹಾಗೇ ಪ್ರಾಂತ್ಯ ಶಾಸನಗಳ ಮೇಲೆ ಪ್ರಾಂತ್ಯ ವಿಧಾಯಕ ಸಭೆಗಳಿಗೆ ಅಧಿಕಾರವಿಲ್ಲ. ಅಲ್ಲಿ ಶಾಸನವು ಶಾಸನ ಸಭೆಗಿಂತ ಮಿಗಿಲಾದುದು. ಅದನ್ನು ತಿದ್ದಲೂ, ರಚಿಸಲು ಅಧಿಕಾರವಿರುವುದು ಜನರಿಗೆ ಮಾತ್ರ. ಶಾಸನ ಮತ್ತು ನ್ಯಾಯವಿಧಾಯಕ ಸಭೆಯವರು ಜನರಿಂದ ರಚಿಸಲ್ಪಟ್ಟ ಶಾಸನ ಕಾನೂನುಗಳಿಗೆ ಮಿಕ್ಕಿ ಮಾಡಿದ ಯಾವ ಬೇರೆ ಶಾಸನಗಳೂ ನ್ಯಾಯಬದ್ಧವೆನಿಸುವುದಿಲ್ಲ.

ಪ್ರಾಂತ್ಯಗಳ ರಾಜ್ಯಾಂಗ ಶಾಸನಗಳು ಅಮೇರಿಕದ ರಾಜಕೀಯ ಇತಿಹಾಸದಲ್ಲಿ ಅತೀ ಹಿಂದಿನವು. ಅತೀ ಪ್ರಾಚೀನ ಕಾಲದಲ್ಲಿ ಅಲ್ಲಿ ನೆಲೆ ನಿಲ್ಲಲು ಬಂದ ಆಂಗ್ಲ ಜನರು ರಚಿಸಿದ ರಾಜಶಾಸನಗಳನ್ನು ಆದರಿಸಿಯೇ ಅವು ರಚಿಸಲ್ಪಟ್ಟಂತವುಗಳು. ಆ ಶಾಸನಗಳ ಸಹಾಯದಿಂದಲೇ ಅಮೇರಿಕರು ಅನೇಕ ಸ್ಥಳೀಕ ಆಡಳಿತಗಳನ್ನು ಸ್ಥಾಪಿಸಿದ್ದರು.

ಕೆಲವು ನೋಟಗಳು

ಯುರೋಪದ ಬಾಲ್ಕನ್ಸ ದೇಶಗಳ ಅಂದರೆ ಯುಗೊಸ್ಲೆವಿಯಾ, ಬಲ್ಗೆರಿಯಾ ಮೊದಲಿದ ದೇಶಗಳ ಸಾಂಪತ್ತಿಕ ಸ್ಥಿತಿಯು ಹೀನ ಸ್ಥಿತಿಯಲ್ಲಿರುವುದರಿಂದ ಅಲ್ಲಿನ ಜನರು ಬಹಳ ಹಿಂದುಳಿದಿರುವರು. ಈ ಕಾರಣದಿಂದ ಅನ್ಯ ದೇಶಗಳ ಬಾಂಡವಾಳಿಗರ ಪ್ರಭಾವಗಳು ತಮ್ಮ ತಮ್ಮ ಲಾಭ ಸಾಧನೆಗಾಗಿ, ಅಲ್ಲಿ ಪ್ರವೇಶಿಸುವಂತಾಯಿತು. ಈ ಕಾರಣದಿಂದ ಆ ಬಾಂಡವಾಳಗಾರರಿಗೆ ಸಂಭಂದಪಟ್ಟ ರಾಷ್ಟ್ರಗಳು ಬಾಲ್ಕನ್ ಪ್ರದೇಶದ ರಾಜಕೀಯದಲ್ಲಿ ಕೈಹಚ್ಚುವಂತಾಗಿ ಅವರೊಳಗೆ ಘರ್ಷಣೆಗೆ ಕಾರಣವಾಗುವುದು ರೂಢಿಯಾಗಿ ಬಿಟ್ಟಿದೆ. ಯುರೋಪದಲ್ಲಿ ನಡೆಯುವ ಹೆಚ್ಚಿನ ಯುದ್ಧಗಳಿಗೆ ಈ ಬಾಲ್ಕನ್ಸ್ ಪ್ರಕರಣಗಳೇ ಕಾರಣಗಳೆನ್ನಬಹುದು.

ಯುರೋಪದಲ್ಲಿ ಸ್ಥಿರವಾದ ಶಾಂತಿಯು ನೆಲೆಗೊಳ್ಳುವಂತೆ ಬಾಲ್ಕನ್ಸ್ ಪ್ರದೇಶಗಳ ಸಾಂಪತ್ತಿಕ ಸ್ಥಿತಿಯು ಉದ್ಧರಿಸಲ್ಪಡಬೇಕು. ಸಾಂಪತ್ತಿಕ ವಿಚಾರದಲ್ಲಿ ಅವುಗಳ ಸುಧಾರಣೆಯಾದರೆ, ಆಗ ಅಲ್ಲಿನ ಜನರ ಜೀವನ ಮಟ್ಟವು ಏರಿಸಲ್ಪಟ್ಟು ಒಳ್ಳೇ ಪ್ರಗತಿಪರ ನೀತಿಗಳಿಗೆ ಅಲ್ಲಿ ನೆಲೆಯಲು ಅವಕಾಶದೊರಕುವುದು. ಬಾಲ್ಕನ್ಸ್ ಪ್ರದೇಶದ ರಾಷ್ಟ್ರಗಳ ಸ್ಥಿತಿಯು ಹೀಗೆ ಸುಧಾರಿಸಲ್ಪಟ್ಟು, ಅವುಗಳಲ್ಲಿ ಸ್ವಯಂ ನಿರ್ಣಯದ ಯೋಗ್ಯತೆಗಳು ಬೆಳೆಯಿಸಲ್ಪಟ್ಟು, ಅವು ಯುರೋಪದ ಇತರ ಮುಂದರಿದ ರಾಷ್ಟ್ರಗಳೊಡನೆ ಸ್ಥಾನವನ್ನು ಪಡೆದರೆ ಮಾತ್ರ ಬಾಲ್ಕನ್ಸ್‌ಗಳಿಂದ ಯುರೋಪಿನ ಶಾಂತಿ ಭಂಗವಾಗುವ ಕಾರಣಗಳು ನಿವಾರಿಸಲ್ಪಡುವವು. ಹೀಗೆಂದು ಅಮೇರಿಕಾದ ಸ್ಟೇಟ್ಸ್ ಸೆಕ್ರೆಟರಿಗಳಾಗಿದ್ದ ಸಮ್ನರ್ ವೆಲ್ಲಸ್ಸರ ಇತ್ಯರ್ಥದ ಸಮಯ ಎಂಬ ಪುಸ್ತಕದಲ್ಲಿ ಅಭಿಪ್ರಾಯ ಸೂಚಿಸಲಾಗಿದೆ.

ಹಾಗೆನೆ ಮಧ್ಯಪೂರ್ವದ ರಾಷ್ಟ್ರಗಳು, ಹಿಂದೂದೇಶ, ಶಾಂತಸಾಗರದ ರಾಷ್ಟ್ರಗಳು, ಚೀನಾ ಇವುಗಳೂ ಹಿಂದುಳಿಯುವ ತರದಲ್ಲಿ ಭಾವಿ ಶಾಂತಿ ಯೋಜನೆಗಳು ಕಲ್ಪಿಸಲ್ಪಟ್ಟರೆ, ಆ ಬಗ್ಗೆ ನಡೆದ ಪರಿಶ್ರಮಗಳೆಲ್ಲಾ ನೀರಿನಲ್ಲಿ ಹೋಮವಾಗುವವು. ಸಮ್ನರ್ ವೆಲ್ಲಿಸ್ಸರು ಹೇಳುವಂತೆ ಈ ದೇಶಗಳು ಸುಧಾರಿಸಲ್ಪಟ್ಟು, ಅಲ್ಲಿನ ಜನರ ಜೀವನಮಟ್ಟವು ಏರಿಸಲ್ಪಟ್ಟು, ಅವುಗಳು ಸ್ವತಂತ್ರವಾಗಿ, ರಾಷ್ಟ್ರಗಳ ವಿಶ್ವಬಾಂಧವ್ಯದಲ್ಲಿ ಸಹಕರಿಸಿ ನಡೆಯುವಂತಾದರೆ ಮಾತ್ರ-ಆಗ ಜಗತ್ತಿನಲ್ಲಿ ಶಾಂತಿಯು ನೆಲೆನಿಲ್ಲಬಹುದು.

* * *

ಸದ್ಯದ ಜಗತ್ತಿನ ವ್ಯವಹಾರಗಳ ಪರಿಶೀಲನೆಗಳ ಮಾಡಿದಲ್ಲಿ ಪ್ರಗತಿಪರ ರಾಷ್ಟ್ರಗಳಲ್ಲಿ ರಾಜಕೀಯದಲ್ಲಿ ಜನರು ಸಾಂಪತ್ತಿಕ ವಿಚಾರಗಳಿಗೆ ಮಾತ್ರ ಮಹತ್ವವನ್ನು ಕೊಟ್ಟು ವರ್ತಿಸುವುದು ಕಾಣಿಸಿಕೊಳ್ಳುತ್ತದೆ. ಮಧ್ಯಪೂರ್ವದ ಅರಬಿ ರಾಷ್ಟ್ರಗಳೂ ಧಾರ್ಮಿಕ ವಿಚಾರಗಳಿಗೆ ಮಹತ್ವವನ್ನು ಕೊಡುವ ಬದಲಾಗಿ, ಈಗ ಸಾಂಪತ್ತಿಕ ವಿಚಾರಗಳಿಗೂ ಹೆಚ್ಚಿನ ಲಕ್ಷ್ಯವನ್ನು ಕೊಡುತ್ತಿರುವರು ಆದರೆ ನಮ್ಮಲ್ಲಿ ಮಾತ್ರ ಧಾರ್ಮಿಕ ವಿಚಾರಗಳಿಗೆ ಅತಿರೇಖ ಮಹತ್ವವು ಕೊಡಲಾಗುತ್ತಿದ್ದು, ರಾಷ್ಟ್ರದ ಉದ್ಧಾರಕ್ಕೆ ಅತಿಅವಶ್ಯವೆನಿಸುವ ಸಾಂಪತ್ತಿಕವಿಚಾರಗಳಿಗೆ ಹೆಚ್ಚಿನ ಮಹತ್ವವು ದೊರಕದಿರುವುದು ಒಂದು ಘಟವಾಗಿ ಬಿಟ್ಟಿದೆ. ಧರ್ಮಗಳೇ ಒಂದು ರಾಷ್ಟ್ರವನ್ನು ಮುಂದೆ ತೆಗೆದುಕೊಂಡು ಹೋಗವು ಎಂದು ಮನಗಂಡು, ಟರ್ಕಿಯ ಕೆಮಾಲ್ ಅಟಾರ್ಟಕರು, ಧರ್ಮಕ್ಕೆ ಸಂಬಂಧಪಟ್ಟ ಅಂದಶ್ರದ್ಧೆಯನ್ನು ತೊಡೆದುಹಾಕುವರೆ ಶಾಸನಕ್ರಮಗಳನ್ನು ಹೊರಡಿಸಿ, ಟರ್ಕಿಯನ್ನು ಪರಿಶುದ್ಧಗೊಳಿಸಿ, ನೂತನ ಯುಗದ ಪ್ರಗತಿಪರ ದೃಷ್ಟಿಯ ಸುಧಾರಣೆಗಳನ್ನು ಕೈಗೊಂಡು ತಮ್ಮ ರಾಷ್ಟ್ರವನ್ನು ಪ್ರಗತಿಪಥ ತುಂಬಾ ಮುನ್ನಡೆಯಿಸಿದರು. ಧರ್ಮ ವಿಚಾರವು ಜನರ ಖಾಸಗಿ ಸೊತ್ತಾಗಿರಬೇಕು ವಿನಹ, ದೇಶದ ರಾಜಕೀಯದಲ್ಲಿ ಅವುಗಳ ಪ್ರವೇಶವಾಗುವುದರಿಂದ ಅನರ್ಥಗಳು ಉಂಟಾಗುವವು.

ಒಂದು ರಾಷ್ಟ್ರದಲ್ಲಿ ಧಾರ್ಮಿಕ ಭಾವಗಳೆ ಬೆಳೆಯುವುದರಿಂದ ಜನರ ದೃಷ್ಟಿಕೋನವು ಸಂಕೋಚವಾಗಿ, ಅವರಿಗೆ ಪ್ರಗತಿಗೆ ಅವಶ್ಯವಿರುವ ವಿಚಾರಗಳೆ ಕಾಣಿಸವು.

* * *

ಸಂ. ಅಮೇರಿಕಾಕ್ಕೆ ಹೋಗಿ ನೆಲೆನಿಲ್ಲುವ ಹಿಂದೀಯರಿಗೆ ಅಲ್ಲಿನ ನಾಗರೀಕ ಹಕ್ಕು ಬಾಧ್ಯತೆಗಳನ್ನು ಕೊಡುವ ಪದ್ಧತಿಯು ಈವರೆಗೆ ಇದ್ದಿಲ್ಲಾ. ಮುಂದಕ್ಕೆ ಹಿಂದೀಯರಿಗೆ ಈ ಹಕ್ಕು ಬಾಧ್ಯತೆಗಳನ್ನು ಒದಗಿಸುವ ತರದ ಶಾಸನಕ್ರಮವು ಅಲ್ಲಿ ಸದ್ಯದಲ್ಲೆ ಜ್ಯಾರಿಯಾಗಲಿದೆ. ಅಧ್ಯಕ್ಷ ರೂಸ್‌ವೆಲ್ಟರು ಈ ಶಾಸನಕ್ಕೆ ತಮ್ಮ ಅನುಮತಿಯನ್ನು ಕೊಟ್ಟಿರುವರಾಗಿ ತಿಳಿದು ಬಂದಿದೆ.

* * *

ಅಮೇರಿಕಾದ ಮಜೂರ ಸಂಘ ಚಳುವಳಿಯು ತುಂಬಾ ಮುಂದುವರಿದಿದೆ. ರಾಷ್ಟ್ರದ ಉದ್ಧಾರ ಸಾಧಿಸುವ ಪ್ರಭಾವಗಳಲ್ಲಿ ಅದು ಮಹತ್ವದ ಸ್ಥಾನವನ್ನು ಪಡೆದಿದೆ. ಮಜೂರರ ಉತ್ಪನ್ನ ಕೆಲಸದ ಸಮಯ, ಇತ್ಯಾದಿಗಳ ಕುರಿತೇ ಮಾತ್ರವಲ್ಲ, ಕೆಲಸವು ಉತ್ತಮ ಫಲಕಾರಿಯಾಗುವಂತೆ, ಮಜೂರನಲ್ಲಿ ಹೊಣೆಗಾರಿಕೆಯ ಭಾವನೆಯು ಉಂಟಾಗುವಂತೆ ಈ ಚಳವಳವು ಪರಿಶ್ರಮವಹಿಸಿ ನಡೆಯುತ್ತಿದೆ. ಈ ಕಾರಣಗಳಿಂದ ಒಡೆಯರೂ, ಮಜೂರರು, ಘರ್ಷಣೆಯಿಲ್ಲದೆ ಪರಸ್ಪರ ಹಿತ ಸಾಧಿಸುವಂತಾಗಿದೆ. ಈ ಪದ್ಧತಿಗಳು ಸೋವಿಯಟ್ ರಷ್ಯಾದ ಕ್ರಮಗಳಿಗೆ ಸಮೀಪಿಸಿವೆ. ಕಾರ್ಖಾನೆಗಳಲ್ಲಿ ಕೆಲಸ ಮಾಡದೆ ಸಮಯ ಕಳೆಯುವುದು ಕ್ರಿಮಿನಲ್ ತಪ್ಪಿತವಾಗಿ ಪರಿಗಣಿಸುವುದು. ರಷ್ಯಾದ ಕೊಮ್ಯುನಿಷ್ಟರ ಕ್ರಮವು. "ಕೆಲಸಮಾಡದವನಿಗೆ ಅನ್ನವಿಲ್ಲ" ಎಂಬುದು ಅವರ ಧ್ಯೇಯವು.

ಮಜೂರರು ತಮ್ಮ ಉದ್ಯೋಗಗಳಲ್ಲಿ ಇನ್ನಷ್ಟು ಉತ್ಸಾಹ ತಾಳುವಂತೆ, ಅವರ ವೇತನವನ್ನು ವಾರ್ಷಿಕವಾಗಿ ಗಣಿಸುವ ಪದ್ಧತಿಯು ಅಮೇರಿಕಾದಲ್ಲಿ ಆಚರಿಸಲಾಗಿದೆ. ಈ ಕ್ರಮದಿಂದ ಮಜೂರರಿಗೆ ಉದ್ಯೋಗದ ದೃಢತೆಯು ದೊರಕುವುದು. ವ್ಯಾಪಾರ ಮಂದವಿರುವಾಗಲೂ ಅವರಿಗೆ ವೇತನ ದೊರಕುವಂತಾಗಿದೆ. ಈ ನೂತನ ಪದ್ಧತಿಯಿಂದ ಅಲ್ಲಿನ ಕೈಗಾರಿಕೆಗಳು ಬಹಳ ಹುರುಪನ್ನು ಪಡೆದ ಕುರಿತು ವಾರ್ತೆಗಳು ಬಂದಿವೆ.

* * *

ಟ್ಯಾಪ್ ರ್ಯಾಟಿಂಗ್ ಯಂತ್ರಗಳನ್ನು ೧೭೧೪ರಲ್ಲಿ ಮೊದಲಿನ ಸಲಕ್ಕೆ ಹೆನ್ರಿ ಹಿಲ್ ಎಂಬ ಇಂಗ್ಲಿಷ್ ಯಾಂತ್ರಿಕನು ಪರಿಪೂರ್ಣಗೊಳಿಸಿ ಮಾರಲಿಕ್ಕಿಟ್ಟನು.

ಚೀನೀ ಸ್ತ್ರೀಯರು

(೩ನೇ ಪುಟದಿಂದ)

ಜಪಾನೀಯರ ಬಲವನ್ನು ವಿರೋಧಿಸುವ ಕಾರ್ಯದ ಹೊರೆಯನ್ನು ವಹಿಸಿರುವಳು. ಜಪಾನಿಯರ ಚಿತ್ತಶಾಂತಿಯನ್ನು ಕೆಡಿಸುವ ಚೀನೀಯರ ಗೋರಿಲ್ಲಾ ಯುದ್ಧ ಚಟುವಟಿಕೆಗಳಲ್ಲಿ ಚೀನೀ ಸ್ತ್ರೀಯರು ಧಾರಳ ಸಂಖ್ಯೆಯಲ್ಲಿ ಪರಿಶ್ರಮಿಸುತ್ತಿರುವರು. ಜಪಾನೀಯರ ಕೈಗಳಲ್ಲಿ ಹೇಯಶಿಕ್ಷೆ, ಇತ್ಯಾದಿಗಳನ್ನು ಅನುಭವಿಸುತ್ತಿರುವರು. ರಷ್ಯಾದ ನಂತರ ಸಮರ ರಂಗದಲ್ಲಿ ಸ್ತ್ರೀಯರು ಅಧಿಕ ಪ್ರಯಾಣದಲ್ಲಿ ದುಡಿದುದೆಂದರೆ ಚೀನಾದಲ್ಲಿ. ಈಗ ಬ್ರಿಟನಿನಲ್ಲೂ, ಅಮೇರಿಕದಲ್ಲೂ ಸ್ತ್ರೀಯರನ್ನು ಯುದ್ಧ ಯೋಧನಿಯರಾಗಿ ಕೂಡಿಸುವ ಕ್ರಮಗಳು ಜ್ಯಾರಿಗೆ ತರಲಾಗಿವೆ. ನಮ್ಮಲ್ಲೂ ಈ ತರದ ಚಟುವಟಿಕೆಗಳು ಪ್ರಾರಂಭವಾಗಿವೆ.

ಯುದ್ಧದ ದೆಸೆಯಿಂದ ಇನ್ನಷ್ಟು ಚೇತನವನ್ನು ಪಡೆದು ಮುನ್ನಡೆದ ಸ್ತ್ರೀ ವಿಮೋಚನಾ ಚಳವಳದಿಂದ ಚೀನೀ ಸ್ತ್ರೀಯ ಜೀವನದಲ್ಲಿ ಅನೇಕ ಸುಧಾರಣೆಗಳು ನಡೆದುಬಿಟ್ಟವು. ಅಲ್ಲಿನ ತರುಣಿಯರು ತಮಗೆಬೇಕಾದ ವರರನ್ನು ತಾವೆ ಚುನಾಯಿಸುತ್ತಿರುವರು. ಯುದ್ಧದ ದಸೆಯಿಂದ ಅಲ್ಲಿನ ಕುಟುಂಬ ಸಾಂಪ್ರದಾಯವು ಬಹಳ ಮಟ್ಟಿಗೆ ಮುರಿದು ಹೋಗಿದೆ. ಬೇರೆಯಾಗಿ ಬಿಡಾರ ಮಾಡಿಕೊಳ್ಳುವ ಶರ್ತದಲ್ಲಿ ತರುಣಿಯರು ಈಗ ಅಲ್ಲಿ ವಿವಾಹವಾಗುತ್ತಿರುವರು. ಕುಟುಂಬದ ಮನೆಯಲ್ಲಿ ಸುಖದಿಂದ ಜೀವನ ಸಾಗಿಸಲು ಅನುಕೂಲವಿದ್ದರೂ, ಆ ಸುಖವನ್ನು ಅವರು ಬಯಸುವುದಿಲ್ಲ. ವಿವಾಹವಾದ ಮೇಲೂ ಸ್ತ್ರೀಯರು ಮೊದಲು ತಾವಿದ್ದ ಉದ್ಯೋಗವನ್ನು ತೊರೆಯುವುದಿಲ್ಲ. ಈ ಕಾರಣದಿಂದ ಮನೆಯ ಕೆಲಸದಲ್ಲಿ ಪುರುಷನು ಸ್ತ್ರೀಯ ಅರ್ಧಾಂಗಿಯಾಗಬೇಕಾಗಿಯದೆ. ಈಗಿನ ದಿವಸಗಳಲ್ಲಿ ಅಲ್ಲಿ ಓರ್ವ ಮಡದಿಗೆ ತನ್ನದೆ ಉತ್ಪಾದನೆಯಿರುವುದಲ್ಲದೆ ತನ್ನದೆ ಎಂಬ ಆಸ್ತಿಯನ್ನು ಪಡೆಯಲು ಅವಕಾಶವಿದೆ. ಎಲ್ಲಾ ತರದ ಆಟಗಳಲ್ಲಿ, ವಿನೋದಗಳಲ್ಲಿ, ವಿಹಾರ ಚಟುವಟಿಕೆಗಳಲ್ಲಿ, ಸಂಧ್ಯಾಟಗಳಲ್ಲಿ, ಸಂಚಾರ ಕೂಟಗಳಲ್ಲಿ ಸ್ತ್ರೀಯು ಈಗ ಪುರುಷರೊಡನೆ ಬೆರೆಯುತ್ತಿರುವಳು.

ಪಾಶ್ಚಾತ್ಯ ದೇಶಗಳಲ್ಲಿ ಮುಖ್ಯವಾಗಿ ಸಂಯುಕ್ತ ಅಮೇರಿಕಾದಲ್ಲಿ ನವನಾಗರೀಕತೆಯಿಂದ ಸ್ತ್ರೀಯರು ಸ್ವತಂತ್ರರಾಗಿ ಮುಂದುವರಿದಂತೆ ವಿವಾಹ ವಿಚ್ಛೇದನಗಳ ಸಂಖ್ಯೆಯು ಹೆಚ್ಚಿದೆ. ವಿವಾಹ ವಿಚ್ಛೇದನ ಹಕ್ಕುಗಳು ಪ್ರಜಾಸತ್ತಾತ್ಮಕ ನೀತಿಯೊಳಗೊಂಡಿವೆ ನಿಜ. ಆದರೆ ಆ ಕಾರಣದಿಂದಲೆ ವಿವಾಹ ವಿಚ್ಛೇದನ ಘಟನೆಗಳು ಹೆಚ್ಚಿದರೆ ಅವು ಉತ್ತಮ ಸಮಾಜದ ಲಕ್ಷಣಗಳಲ್ಲ. ಚೀನಾದಲ್ಲಿ ಸ್ತ್ರೀಯರು ನಾಗರೀಕತೆಯನ್ನು ಸವಿದು ಮುಂದುವರಿದಿದ್ದರೂ ಅಲ್ಲಿನ ಶಾಸನದಲ್ಲಿ ವಿವಾಹ ವಿಚ್ಛೇದನ ಕ್ರಮಗಳು ಕೂಡಿಸಲ್ಪಟ್ಟಿದ್ದರೂ, ಅಲ್ಲಿ ವಿವಾಹವಿಚ್ಛೇದನಗಳು ನಡೆಯುವುದು ತೀರಾ ಕಡಿಮೆ ಎಂದು ಹೇಳಬೇಕು.

ಯುದ್ಧದ ದೆಸೆಯಿಂದ ಚೀನಾದೊಳಗೆ ಅನೇಕ ಕೊರತೆಗಳುಂಟಾಗಿವೆ. ಈ ಕೊರತೆಗಳನ್ನು ನೀಗಿಸಿಕೊಳ್ಳುವರೆ ಚೀನೀಯರು ಬಹಳ ಸಾಹಸ ಶಕ್ತಿಯನ್ನೂ ತ್ಯಾಗ ಭಾವವನ್ನೂ ತಾಳಿ ವರ್ತಿಸುತ್ತಿರುವರು. ತನ್ನ ನಿತ್ಯ ಜೀವನ ಬೇಡಿಕೆಗಳನ್ನು ಅನೇಕ ಕಡಿಮೆ ಮಾಡಿಕೊಂಡಿರುವರು. ಉಡುಪಿನ ವಿಷಯದಲ್ಲಿ ಭೂಷಣಾಲಂಕಾರಗಳನ್ನು ಬಿಟ್ಟು ಸರಳವಾದ ಉಡುಪುಗಳನ್ನೇ ಧರಿಸುತ್ತಿರುವರು. ಈ ವಿಚಾರದಲ್ಲಿ ಚೀನೀಯ ಸ್ತ್ರೀಯರು ಅವರ ಪುರುಷರಿಗೆ ಮಾರ್ಗದರ್ಶಕರಾಗಿರುವರು [ನಮ್ಮ ಸ್ತ್ರೀಯೂ ಗಮನಿಸಬೇಕಾದ ವಿಚಾರವಿದು.]

ಚೀನೀ ಸ್ತ್ರೀಯರಲ್ಲಿ ವಾಚನಾಭಿರುಚಿಯು ತುಂಬಾ ಬೆಳೆದಿದ್ದು, ಅವರು ಕಥೆಗಳಿಂದ ಅತ್ಯಂತ ಘನವಾದ ವಿಚಾರಗಳಿರುವ ಪುಸ್ತಕಗಳನ್ನು ವಾಚಿಸುತ್ತಿರುವರು. ಬರೆ ವಾಚನದಿಂದಲೆ ಚೀನೀ ಸ್ತ್ರೀಯರಿಗೆ ತೃಪ್ತಿಯಾಗದೆ, ಅವರು ಅನೇಕಕಥೆಗಳನ್ನೂ, ಉಪನ್ಯಾಸಗಳನ್ನೂ ಬರೆದು ಪ್ರಚುರಪಡಿಸುತ್ತಿರುವರು. ಚೀನೀ ಸ್ತ್ರೀಯರಲ್ಲಿ ಉತ್ತಮಶ್ರೇಣಿಯ ಸಾಹಿತಿಗಳು ಅನೇಕರಿರುವರು.

ತಮ್ಮ ದೇಶಕ್ಕೆ ಬಂದೊದಗಿದ ಯುದ್ಧ ವಿಪತ್ತಿನಲ್ಲಿ ಚೀನೀಯ ಸ್ತ್ರೀಯರೇನೂ ಹಿಂದುಳಿದಿಲ್ಲವೆಂದು ಮೊದಲೆ ಹೇಳಲಾಗಿದೆ. ಯೋಧರನ್ನು ಸಮಾಜಾಯಿಸಲು ಅವರು ಯುದ್ಧರಂಗಕ್ಕೆ ತೆರಳುತ್ತಿರುವರು. ಯುದ್ಧರಂಗದಲ್ಲಿ ದುಡಿಯುತ್ತಿರುವ ಯೋಧನ ಮನಾನಂದಕ್ಕಾಗಿ ದುಡಿಯುವ ನಾಟಕ ವ್ಯವಸ್ಥೆಗಳಲ್ಲಿ ಸ್ತ್ರೀಯರೆ ಅಧಿಕ ಸಂಖ್ಯೆಯಲ್ಲಿ ದುಡಿಯುತ್ತಿರುವರು. ಯುದ್ಧದ ದೆಸೆಯಿಂದ ಮಾತಾಪಿತರನ್ನು ಕಳಕೊಂಡ ಅನಾಥ ಮಕ್ಕಳ ಆರೈಕೆಯು ಚೀನೀಯ ಸ್ತ್ರೀಯ ಕೈಗಳಲ್ಲಿರುವುದು. ದೇಶೋಧ್ಧಾರ ಕಾರ್ಯಗಳ ಬಗ್ಗೆ ನಡೆಯುತ್ತಿರುವ ಪ್ರಚಾರ ಕಾರ್ಯಗಳಲ್ಲೂ ಸ್ತ್ರೀಯರು ಭಾಗಿಗಳಾಗಿರುವರು. ಅಲ್ಲಿನ ಕೌಮಿಂಗ್‌ಟಾಂಗ್ ಸಂಸ್ಥೆಯು ಬೆಳೆಯಲು ನಡೆದ ಪ್ರಾರಂಭದ ಪ್ರಚಾರ ಚಳವಳಿಯಲ್ಲಿ ಸ್ತ್ರೀಯರ ಪರಿಶ್ರಮವು ತುಂಬಾ ನಡೆದಿರುವುದು. ಸಮಸ್ತ ಚೀನವನ್ನು ಐಕ್ಯಗೊಳಿಸಿದ ಶ್ರೇಯಸ್ಸು ಚೀನೀಯ ಸ್ತ್ರೀಯರಿಗೆ ಸೇರತಕ್ಕದ್ದು.

ಚಿಕ್ಕದಾಗಿ ಹೇಳುವುದಿದ್ದರೆ **ಸ್ತ್ರೀಯರು ಭಾಗವಹಿಸದೆ ನಡೆಯುವ ಚಟುವಟಿಕೆಗಳು ಚೀನಾದಲ್ಲಿ ನಡೆಯುವುದೇ ಇಲ್ಲವೆಂದು ಹೇಳಬಹುದು.** ಚೀನೀಯ ಸ್ತ್ರೀಯು ನಿಜವಾಗಿಯೂ ಪುರುಷನೊಡನೆ ಅರ್ಧಾಂಗಿ, ಆದರೆ ಸಮಭಾಗಿಯಾಗಿರುವಳು. **ನಮ್ಮಲ್ಲಿ?**

(ಆಧಾರ ದಾರುವಾಲಾರವರ "The Chinese Exodus")

ಮರಳಿನಿಂದ ಕೃತಕ ರಬ್ಬರನ್ನು ತಯಾರಿಸುವ ವಿಧಾನವನ್ನು ಕೆಲವು ಅಮೇರಿಕನ್ ರಾಸಾಯನಿಕ ಪಂಡಿತರು ಕಂಡು ಹಿಡಿದಿದ್ದಾರೆ. ಮರದ ರಬ್ಬರಿಗಿಂತಲೂ ಇದು ಹೆಚ್ಚು ಜಿಗಟಿದೆ.

* * *

ಕೆಲಸ ತೆಗೆಸುವ ಶಿಪಾರಸು ಪತ್ರಗಳು.

ದೈವ ಭಕ್ತಿಯ ಠಕ್ಕ ವಂಚಕ.

ಈಸ್ಟ್ ಇಂಡಿಯಾ ಕಂಪೆನಿಯ ಕಾಲದಲ್ಲಿ ಬೊಂಬಾಯಿ ದೊಡ್ಡ ಹಡಗು ಬಂದರವಾಗಿ ರಚಿಸಲ್ಪಟ್ಟಿತು. ಉಗಿಹಡಗಗಳು ಅಲ್ಲಿ ಬಂದೊಡನೆ ಅನೇಕ ಕೆಲಸಗಾರರು ಅಲ್ಲಿಗೆ ಧಾವಿಸುತ್ತಿದ್ದರು. ಆದರೆ ಬಂದರು ಅಧಿಕಾರಿಯಿಂದ ಶಿಫಾರಾಸು ಪತ್ರ ತರದೆ ಅವರಿಗೆ ಹಡಗದಲ್ಲಿ ಪ್ರವೇಶ ಸಿಕ್ಕುತ್ತಿರಲಿಲ್ಲ. ಬಿಳಿ ಅಧಿಕಾರಿಗಳು ತಮಗೆ ಚೆನ್ನಾಗಿ ಪರಿಚಯ ಇದ್ದವರಿಗೆ ಇದ್ದ ಹಾಗೆ ಅವರ ಯೋಗ್ಯತೆಯನ್ನು ತಮ್ಮ ಅನುಭವಕ್ಕೆ ಬಂದ ಹಾಗೆ ಬರೆದು ತಿಳಿಸುತ್ತಿದ್ದರು. ಓದು ಬರಹಬಲ್ಲದ ಆ ಕೂಲಿಯವರು ಹಡಗು ಅಧಿಕಾರಿಗಳಿಗೆ ಅದನ್ನು ತೋರಿಸಿ ಕೆಲಸ ಪಡೆಯಲು ಪ್ರಯತ್ನಿಸುತ್ತಿದ್ದರು.

ಒಬ್ಬ ರಾತ್ರೆ ಪಹರೆಯವನಿಗೆ ಕೊಟ್ಟ ಶಿಫಾರಾಸು ಪತ್ರ ಹೀಗಿತ್ತು.:–"ನಿದ್ದೆ ಮಾಡಲು ಇವನಷ್ಟು ಗಟ್ಟಿಗರನ್ನು ನಾನು ಕಾಣಲಿಲ್ಲ." ಅಬ್ದುಲ್ ಕರೀಮನೆಂಬ ಅಡಿಗೆ ಬಟ್ಲರನಿಗೆ ಸಿಕ್ಕಿದ ಶಿಫಾರಸು ಪತ್ರ:–"ಈತ ನಾಲ್ಕು ತಿಂಗಳು ನನ್ನಲ್ಲಿ ಕೆಲಸ ಮಾಡಿದ್ದಾನೆ. ನನ್ನ ಖರ್ಚಿನ ರೊಕ್ಕವನ್ನು ಮತ್ತು ರೊಕ್ಕದ ಲೆಕ್ಕ ಇವನೇ ಮಾಡುತ್ತಿದ್ದ–ರೊಕ್ಕವನ್ನು ಅವನೇ ಇಟ್ಟುಕೊಳ್ಳುತ್ತಿದ್ದ: ಅವನ ದೇವರ ಭಕ್ತಿಯು ನಿಸ್ಸಂದೇಹವಾದದ್ದು. ದಿನದ ಹೆಚ್ಚಿನ ಕಾಲವೆಲ್ಲ ಅವನು ಪ್ರಾರ್ಥನೆಯಲ್ಲೇ ಮಗ್ನನಾಗಿರುತ್ತಿದ್ದ. ಅವನಿಗೆ ಪುರುಸತ್ತು ಇದ್ದಾಗ ಐದು ಸಾರಿ ದಿನಕ್ಕೆ ಪ್ರಾರ್ಥನೆ ಜರಗಿಸುತ್ತಾನೆ. ಮನುಷ್ಯನ ಉಚ್ಛ ಧ್ಯೇಯಗಳಲ್ಲಿ ದೈವಭಕ್ತಿ ಮೊದಲು ನಂತರ ಶುದ್ಧಾಚಾರವೆಂಬ ತತ್ವವನ್ನು ಈತ ಅಕ್ಷರಷಃ ಪಾಲಿಸಿ, ಶರೀರ ಸ್ವಚ್ಛತೆಗೆ ಇವನ ಜೀವನದಲ್ಲಿ ಎರಡನೇ ಸ್ಥಾನ ಕೊಡುತಿದ್ದ". ಹೀಗೆಂದು ಟಿ. ಎಲ್. ಪೆನೆಲ್ ಎಂಬ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಯ ಡೈರಿಯಲ್ಲಿ ಬರೆಯಲ್ಪಟ್ಟಿತ್ತು.

ಕ್ಷಣದ ಆಲಸ್ಯದಿಂದ ಸಾಮ್ರಾಜ್ಯವೇ ಕುಸಿದು ಬಿತ್ತು.

ಔರಂಗಜೇಬನ ಅನುಭವ.

ಆಗ್ರಾದಲ್ಲಿ ಔರಂಗಜೇಬನು ಶಿವಾಜಿಯನ್ನು ಬಂಧನದಲ್ಲಿಟ್ಟನಷ್ಟೆ. ಚಾಣಕ್ಯನಾದ ಆ 'ಬೆಟ್ಟದ ಇಲಿ' ಎನಿಸಿದ ಮರಾಟ ಸಾಮ್ರಾಜ್ಯಸ್ಥಾಪಕನು ಕೌತುಕದ ರೀತಿಯಲ್ಲಿ ಲಾಡು ಗುಡಾಣಗಳಲ್ಲಿ ಅವಿತುಕೂತು ತಪ್ಪಿಸಿಕೊಂಡನು. ಈ ವರ್ತಮಾನವು ಔರಂಗಜೇಬನಿಗೆ ಮರಣ ಪರ್ಯಂತ ವ್ಯಸನ ಕೊಟ್ಟಿತು. ಮೊಗಲ್ ಚಕ್ರವರ್ತಿಯು. ತನ್ನ ಮರಣ ಶಾಸನದಲ್ಲಿ ಈ ಕೆಳಗಿನ ಸೂಚನೆಯನ್ನು ಕೊಟ್ಟಿರುವನು: ರಾಜ್ಯದಲ್ಲಿ ನಡೆಯುವ ಅತೀ ಸೂಕ್ಷ್ಮ ಘಟನೆಗಳ ವಿಷಯವಾಗಿಯೂ ಗುಪ್ತಸಮಾಚಾರವನ್ನು ತಿಳಿದುಕೊಳ್ಳುವುದು ಸರಕಾರ ಆಡಳಿತದ ದೊಡ್ಡ ಆಧಾರ ಸ್ತಂಭಗಳಲ್ಲಿ ಒಂದು. ಒಂದೇ ಕ್ಷಣದ ಆಲಸ್ಯದಿಂದ ಜೀವನಾಂತ್ಯ ತನಕದ ಅವಮರ್ಯಾದೆ ಉಂಟಾಗಲು ಸಾಧ್ಯವಿದೆ. ಅಜಾಗರೂಕತೆಯ ಪರಿಣಾಮದಿಂದ ಆ ದೂರ್ತ ಶಿವನು ತಪ್ಪಿಸಿ ಓಡಿದನು. ಆದುದರಿಂದ ನನಗೆ ಮರಣ ಪರ್ಯಂತ ಯುದ್ಧದ ಕಳವಳವು ತಪ್ಪಲಿಲ್ಲ.



ಪ್ರಚಲಿತ ಸಮಾಚಾರ

(೮ನೇ ಪುಟದಿಂದ)

ದ ಉದ್ಧಾರದ ಯೋಜನೆಗಳು ನಡೆಯಬೇಕಾಗಿದೆ. ಈ ದೇಶಗಳ ಭೂಗರ್ಭದೊಳಗೆ ಅಪಾರ ಸಂಪತ್ತು (ಲೋಹ, ಎಣ್ಣೆ ಇತ್ಯಾದಿ) ಇರುವುದಾಗಿ ಕಂಡುಹಿಡಿಯಲಾಗಿದೆ. ಬಹಳ ಜನಸಂಖ್ಯೆ ಇರುವ ವಿಶಾಲ ಪ್ರದೇಶಗಳು ಇವೆರಡು. ಇವುಗಳೊಡನೆ ಸಹಕಂಸಿ ತಮ್ಮ ವ್ಯಾಪಾರದ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವರೆ, ಸಂಯುಕ್ತ ಅಮೇರಿಕಾಕ್ಕೂ, ಬ್ರಿಟನಿಗೂ ಬಲವಾದ ಆಶೆಗಳಿವೆ. ರಷ್ಯಕ್ಕೂ ಚೀನದಲ್ಲಿ ತನ್ನ ಹಿತವನ್ನು ಬೆಳೆಯಿಸಿಕೊಳ್ಳಬೇಕೆಂಬ ಇಚ್ಛೆಯೂ ಇದೆ.

ಸಂ. ಅಮೇರಿಕಾವು, ದಕ್ಷಿಣ ಅಮೇರಿಕಾದ ದೇಶಗಳೊಡನೆ ಮೊದಲು ಸ್ವಾರ್ಥ ದೃಷ್ಟಿಯಿಂದ ವರ್ತಿಸಿ ಕೊನೆಗೆ ಬರಬರುತ್ತ, ಅವರೊಡನೆ ಪರಸ್ಪರ ಹಿತ ಸಾಧಿಸುವ ಧೋರಣವನ್ನು ಕೈಗೊಂಡಿರುತ್ತದೆ. ಈ ಧೋರಣಕ್ಕೆ ಅಧ್ಯಕ್ಷ ರೂಸ್‌ವೆಲ್ಟರ ಉದಾರ ಭಾವವೇ ಬಹುಮಟ್ಟಿಗೆ ಕಾರಣವಾಗಿರುತ್ತದೆ. ಮೆಕ್ಸಿಕೊ ಮತ್ತು ದಕ್ಷಿಣ ಅಮೇರಿಕಾದ ಲೆಟಿನ್ ರಾಷ್ಟ್ರಗಳ ಮೇಲೆ ಸಪಲಕರಣೆಯನ್ನು ನಡೆಯಿಸುವ ಧೋರಣವನ್ನು ಸಂ. ಅಮೆರಿಕಾದಿಂದ ತ್ಯಜಿಸಿಬಿಟ್ಟುದರಿಂದ, ಅವುಗಳೆಲ್ಲಾ ಅದರಲ್ಲಿ ವಿಶ್ವಾಸತೋರಿ, ಅದರಡಿ ಕೂಡಿರುವವು. ಇದೇ ತರದ ಧೋರಣದಿಂದ ಬ್ರಿಟನೂ ಅಮೆರಿಕವೂ ಹಿಂದೂ ದೇಶದೊಡನೆಯೂ ಚೀನಾದೊಡನೆಯೂ ರಷ್ಯಾವು ಚೀನಾದೊಡನೆಯೂ ವರ್ತಿಸಿದರೆ ಆಸ್ಯಾದಲ್ಲೂ, ಮಿತ್ರರು ಆಶಿಸುವ ಲೋಕಶಾಂತಿಗೆ ಹಾದಿಮಾಡಿಕೊಟ್ಟಂತಾಗುವುದು.

ಇಂಡೋ ಚೀನಾದ ಮೂಲಕ ಅಮೇರಿಕನ್ ಬಲಗಳ ಪ್ರವೇಶವಾಗುವುದೆಂಬ ಭೀತಿಯಿಂದ ಜಪಾನಿಯರು ಅದರೊಳಗೆ ನಡೆದುಬಿಟ್ಟಿರುವರು. ಅಲ್ಲಿದ್ದ ಫ್ರೆಂಚ್ ಬಲವು ಸಣ್ಣದಿದ್ದರೂ, ಅದು ಜಪಾನಿಯರಿಗೆ ಬಲವಾದ ವಿರೋಧವನ್ನುಕೊಟ್ಟಿತು. ಚೀನಾವನ್ನು ಆಕ್ರಮಿಸಿದ ಜಪಾನೀಯರು ಚೇತನವನ್ನುತಾಳಿರುವರು. ಮಿತ್ರರನ್ನು ಚೀನಾದೊಳಗೆ ವಿರೋಧಿಸಲು ಮಹಾಸಿದ್ಧತೆಗಳನ್ನುಮಾಡುತ್ತಿರುವರು. ಮಿತ್ರರು ಹೀಗೆ ಜಪಾನಿನ ಮೇಲೆ ಮೇಲ್ಮಾಯ್ದು ಬರುವುದರಲ್ಲಿದ್ದಾಗ ಚೀನಿಯರು ಜಪಾನಿಯರಿಗೆ ವಿರೋಧವಾಗಿ ಚಟುವಟಿಕೆಗಳನ್ನು ಪ್ರಾರಂಭಿಸಿರುವರು.

ಪಶ್ಚಿಮರಂಗದಲ್ಲಿ ಮಿತ್ರರು ಯಶಸ್ವಿನಿಂದ ಮುಂದರಿಯುತ್ತಿರುವರು. ಅವರ ಕಾರ್ಯಕಲಾಪಗಳು ನಿಧಾನವಾಗಿ ನಡೆಯುತ್ತಿರುವುದಾದರೂ ಅವುಗಳು ಖಂಡಿತ ಪರಿಣಾಮಕಾರಿಯಾಗಿ ನಡೆಯುತ್ತಿವೆ. ರ್‍ಯಾನ್ ನದೀ ಬಯಲಿನ ಕಾರ್ಖಾನೆಗಳಿರುವ ಪ್ರದೇಶಗಳು ಮಿತ್ರರ ವಶವಾಗುತ್ತಿವೆ. ಒಂದೆಡೆಯಲ್ಲಿ ಮಿತ್ರರು ರ್‍ಯಾನ್ ನದಿಯನ್ನು ದಾಟಿಬಿಟ್ಟಿರುವರು. ಹಂಗೇರಿಯಲ್ಲಿ ಜರ್ಮನಿಯ ವಿರೋಧವು ಸ್ವಲ್ಪ ಬೆಳೆದಿದೆ. ಪೂರ್ವರಂಗದಲ್ಲಿ ಕೆಂಪು ಬಲವು ಅನೇಕ ಕಡೆಗಳಲ್ಲಿ ಮುಂದೆ ಸಾಗಿದೆ.

ಈ ಕಾರಣಗಳಿಂದ ಜರ್ಮನಿಯೊಳಗೆ ಪರಿಸ್ಥಿತಿಯು ತೀರಾ ಕೆಟ್ಟಿರುವುದು. ಈ ಕಠಿಣ ಸ್ಥಿತಿಯಿಂದ ಪಾರಾಗಲು, ಸಂಧಾನ ಸಾಧಿಸಲು ಜರ್ಮನರು ಸ್ವಲ್ಪ ಸಮಯದ ಹಿಂದೆ ಯತ್ನಿಸಿದುದು ನಿಜವೆಂದು ಈಗ ತಿಳಿದುಬಂದಿದೆ. ನಾಜೀ ನೀತಿಯು ಧ್ವಂಸವಾಗದೆ ಮುಂದಕ್ಕೆ ಜಗತ್ತಿಗೆ ಸುಖವಿರದು ಎಂದು ಮನಗಂಡು ನಾಜಿಶಾಹಿಯನ್ನು ಸಂಪೂರ್ಣ ನಾಶವಾಗುವ ವರೆಗೆ ಈ ಯುದ್ಧವನ್ನು ನಡೆಯಿಸಬೇಕೆಂದು ಮಿತ್ರರ ದೃಢನಿರ್ಧಾರವಾಗಿರುವುದು.

ರುಮೇನಿಯದಲ್ಲಿ ಪೆಸಿಷ್ಟ ಪ್ರಭಾವಗಳು ತಲೆಯೆತ್ತಿದ ಪರಿಣಾಮವಾಗಿ ಸ್ವಲ್ಪ ಗೊಂದಲವು ಉಂಟಾಗಿ, ಈ ಪ್ರಭಾವಗಳು ಕೆಂಪು ಬಲದಿಂದ ಅಡಗಿಸಲಾಗಿ, ಈಗಲ್ಲಿ ಸರ್ವಜನಮಾನ್ಯ ಪ್ರಜಾಸತ್ತಾತ್ಮಕ ಸರಕಾರದ ಸ್ಥಾಪನೆಯಾಗಿರುವುದು. ಪಿನ್‌ಲೆಂಡದಲ್ಲಿ ಸದ್ಯದಲ್ಲೆ ಚುನಾವಣೆ ನಡೆಯಲಿವೆ. ಈ ಚುನಾವಣೆಗಳ ಮೂಲಕ ಮತ್ತೊಮ್ಮೆ ಪೆಸಿಷ್ಟ ಪ್ರಭಾವಗಳ ಅಧಿಕಾರಕ್ಕೆ ಬರಲು ಯತ್ನಿಸುತ್ತಿರುವುದು, ರಷ್ಯಕ್ಕೆ ಕಾಣಬಂದಿದ್ದು, ಪೆಸಿಷ್ಟರಿಗೆ ಹಾಗೆ ಅವಕಾಶ ಮಾಡಿಕೊಡಬಾರದಾಗಿ, ಎಚ್ಚರಿಕೆಯು ಪಿನ್‌ಲೆಂಡಿಗೆ ಕೊಡಲಾಗಿದೆ.

ಸಿಹಿ ಸುದ್ದಿ ಸಂಗ್ರಹ

ಕೆಲಿಫೋರ್ನಿಯವು ಅಮೇರಿಕದ ಸಮುದ್ರ ಕರಾವಳಿ ಪ್ರಾಂತ್ಯ. ಆ ಕರಾವಳಿಯಲ್ಲಿ ವಿಕ್ಟರ್ ಪೆಟರ್ಸ್‌ನ್ ಎಂಬವನು ಮನೆಮಾಡಿಕೊಂಡಿದ್ದ. ತೀರವು ಕುಸಿದು ನೀರುಪಾಲಾಗಬಹುದೆಂಬ ಹೆದರಿಕೆಯಿಂದ ಅವನ ಹೆಂಡತಿ ನಾಲ್ಕು ಮಕ್ಕಳನ್ನು ಕಟ್ಟಿಕೊಂಡು ಹೇಳದೆ ಕೇಳದೆ ದೂರದ ಬೆಟ್ಟದ ಮನೆಗೆ ಹೋಗಿ ನಿಂತಳು. ಗಂಡನು ಮಕ್ಕಳನ್ನು ತನ್ನ ವಶ ಕೊಡಬೇಕೆಂದು ದಾವೆ ಮಾಡಿದ್ದಾನೆ.

* * *

ಇಟೆಲಿಯಲ್ಲಿ ಬ್ರಿಟಿಷ್ ಸೈನ್ಯದ ಸಾಮಾನು ಹೊರುವ ಒಂದು ಹೇಸರ ಕತ್ತೆಯು ಸತ್ತುಹೋಯಿತು. ಅದನ್ನು ಪ್ರೀತಿಯಿಂದ ಸಾಕಿದ ಕೆಲವು ಸೈನಿಕರು ಅದನ್ನು ಸಮಾಧಿ ಮಾಡಿ ಈ ಕೆಳಗಿನ ಬರಹಗಳಿರುವ ಕಲ್ಲನ್ನು ಅಲ್ಲಿ ಇಟ್ಟಿರುವರು: "ತನ್ನ ಜೀವನದಲ್ಲಿ ಓರ್ವ ಸೇನಾಪತಿಯನ್ನೂ, ಇರ್ವ ಕರ್ನಲರನ್ನೂ, ನಾಲ್ಕು ಮೇಜರರನ್ನೂ, ಹತ್ತು ಕೆಪ್ಟನರನ್ನೂ, ೨೩ ಲೆಪ್ಟನೆಂಟರನ್ನೂ, ೪೨ ಸಾರ್ಜೆಂಟರನ್ನೂ, ೬೦ ಸೈನಿಕರನ್ನೂ, ೮೩೬ ಸೈನ್ಯ ಕೂಲಿಗಳನ್ನೂ ಮತ್ತು ಒಂದು ಬೊಂಬನ್ನೂ ಒದೆದ 'ಪೆಗ್ಗಿ'ಯ ಸ್ಮಾರಕವಿದು."

* * *

ಪ್ರತಿ ತಿಂಗಳು ಲಂಡನಿನ ರೈಲು, ಟ್ರೇಮ್, ಬಸ್ಸುಗಳಲ್ಲಿ ೧೦೦೦ ರೇಶನ್ ಪುಸ್ತಕಗಳೂ, ಕಾರ್ಡುಗಳೂ ಮರೆತು ಬಿಡಲ್ಪಡುತ್ತವೆ.

* * *

ಎಡಗಾಲು ಬಲಗಾಲಿಗಿಂತ ಸ್ವಲ್ಪ ದೊಡ್ಡದಾಗಿರುತ್ತದೆ ಎಂಥು ಶರೀರ ವಿಜ್ಞಾನಿಗಳ ಶೋಧ.

* * *

ಸಾಮುವೇಲ್ ಓಟ್‌ಮೇನರೆಂಬ ಸ್ವೀಡನಿನ ಪ್ರೊಫೆಸರರೊಬ್ಬರಿಗೆ ಅಕಸ್ಮಾತಾಗಿ ಶೀತದ ಹೆದರಿಕೆಯುಂಟಾಗಿ ೨೩ ವರ್ಷ ಅವರು ಮನೆಯಿಂದ ಹೊರಬೀಳದೆ ಹಾಸಿಗೆ ಮೇಲೇ ಕಳೆದರು. ಒಂದು ದಿನ ಚಳಿಗಾಲದಲ್ಲಿ ಒಬ್ಬ ಮುದಿ ರೈತನನ್ನು ನೋಡಿ ಗಾಬರಿಯಾಗಿ ಪ್ರೊಫೆಸರನ ಪ್ರಾಣ ಹೋಯಿತಂತೆ–ರೈತನ ಹೇಟಿನ ಮೇಲೆ ಹಿಮದಗಡ್ಡೆಗಳಿದ್ದುವಂತೆ.

* * *

ಕರಾಚಿಯ ೫ ವರ್ಷದ ರೇಜಿಯಾ ಸುಲ್ತಾನಾ ಎಂಬ ಮುಸಲ್ಮಾನ್ ತರುಣಿಯು ಕೊರಾನಿನ ೩೪ ಅಧ್ಯಾಯಗಳನ್ನು ಬಾಯಿಪಾಠ ಹೇಳಿ ವಿದ್ವಾಂಸರನ್ನು ಚಕಿತಗೊಳಿಸಿರುವಳು. ಒಂದುವರೆ ತಿಂಗಳಲ್ಲಿ ಅವಳು ಅದನ್ನು ಕಲಿತಳಂತೆ. ಅದರ ಇಂಗ್ಲಿಷ್ ಭಾಷಾಂತರವನ್ನೂ ಅವಳು ಹೇಳುತ್ತಾಳೆ. ಹಿಂದೆ ಡಿಲ್ಲಿಯನ್ನು ರೇಜಿಯಾಳೆಂಬ ಒಬ್ಬಳೇ ಮುಸಲ್ಮಾನ ರಾಣಿ ಆಳಿ ಪ್ರಖ್ಯಾತಿ ಹೊಂದಿರುವಳು.

* * *

ಗುಂಡು ತೋಟೆಗಳು ಕಡಿಮೆಯಾದಾಗ ಜರ್ಮನರು ಮರದ ತೋಟೆಗಳನ್ನು ಉಪಯೋಗಿಸುವರಂತೆ. ದೇಹದೊಳಗೆ ಹೋದ ಈ ಮರದ 'ಗೋಳಿ'ಗಳು ಚೂರು ಚುರಾಗಿ ಎಕ್ಸ್‌ರೇ ಪರಿಶೋಧನೆಗೂ ಸಿಗುವುದಿಲ್ಲ. ನೂರು ಗಜದಷ್ಟು ದೂರದಲ್ಲಿ ಮಾತ್ರ ಇವನ್ನು ಹಾರಿಸಬಹುದು.

ಸೂರತದಲ್ಲಿ ದೊಡ್ಡದೊಂದು ಬೆಂಕಿ ಪೆಟ್ಟಿಗೆ ಕಾರ್ಖಾನೆ ಇದೆ. ಕೆಲವು ಕಾಲದಿಂದ ಇಲ್ಲಿ ಸಿಗರೇಟ್ 'ಕ್ಷಾಮ' ಬಂದಿತ್ತು. ಈಗ ಬೆಂಕಿ ಕಡ್ಡಿಗೂ ಅದು ಹತ್ತಿದೆಯೆಂದು ತಿಳಿದುಬರುತ್ತದೆ.

* * *

ಪೆಸಿಷ್ಟರ ಪ್ರಾಮುಖ್ಯ ಆಧಾರವಾಗಿದ್ದ ಜರ್ಮನಿಯ ನಾಜೀಪಕ್ಷವು ಮುರಿದು ಬೀಳುತ್ತಿದ್ದರೂ, ಏನೋ ಆಶೆಯಿಂದ ಯುರೋಪದ ಇತರ ಪೆಸಿಷ್ಟ ಪ್ರಭಾವಗಳು ತಮ್ಮ ರಕ್ಷಣೆಗಾಗಿ ಯತ್ನಗಳನ್ನು ನಡೆಯಿಸುವುದು ಕಾಣಿಸಿಕೊಂಡದೆ. ಇವುಗಳಲ್ಲಿ ಸ್ಪೆಯಿನಿನ ಫ್ರೆಂಕೋನು ಒಬ್ಬನು. ಇತರ ಕಾರಣಗಳಿಂದ ಫ್ರೆಂಕೊನನ್ನು ಮಿತ್ರರು ಇಷ್ಟರ ತನಕ ಸಹಿಸಿದ್ದರೂ ಇನ್ನು ಅವರು ಅವನನ್ನು ಸಹಿಸುವ ಹಾಗಿಲ್ಲ. ಸ್ಪೆಯಿನಿನಲ್ಲೂ ಪೆಸಿಜಂ ತ್ಯಜಿಸಲ್ಪಟ್ಟು ಪ್ರಜಾಸತ್ತೆಯು ಅಧಿಕಾರಕ್ಕೆ ಬರಬಹುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

NOTICE

In the Court of the District Munsiff of Mangalore.

S. C. 529/44.

K. Kunhamboo cloth merchant market road Mangalore Town—Plff.

AND

B. Laxmana proprietor of Laxmana Vilas Weaving factory Cannanar Chouva Post North Malabar—Deft.

Please take notice the suit stands posted to 7-4-45 for your appearance and in default of your appearance on the day before mentioned, the suit will be heard and determined in your absence.

Mangalore 20–3–45 } M. Gopalakrishna, Advocate for Plaintiff.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidrj and Padubidri.

ಹುಳುಕ್ಕಡಿ ಮದ್ದು

AMRUTANJAN DEPOTS · BOMBAY · MADRAS · CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ಧೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 30—3—1945 [ಸಂಚಿಕೆ 13]

ಅಮೇರಿಕದಲ್ಲಿ ಸಹಕಾರಿ ಸಂಘಗಳು

ಸಹಕಾರವೇ ದೇಶದ ಆರ್ಥಿಕ ನೆಲಗಟ್ಟು

ಪಟ್ಟಣವನ್ನೇ ಪಡಕೊಳ್ಳುವ ಸಹಕಾರಿಗಳು

ಸಹಕಾರಿ ಪದ್ಧತಿಯನ್ನು ಜನಾಂಗೋತ್ಪತಿಯ ಸಾಧನವಾದ ರೀತಿಯಲ್ಲಿ ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸಿದ ಕೀರ್ತಿಯು ಹೊಲೆಂಡ್ ದೇಶಸ್ಥರಿಗೆ ಸಲ್ಲುವುದಾದರೂ, ಆ ಪದ್ಧತಿಯನ್ನು ಹೆಚ್ಚಿನ ಪ್ರಗತಿಗೊಳಿಸಿ ಅತ್ಯಾಧುನಿಕ ಆರ್ಥಿಕಶಾಸ್ತ್ರ ತತ್ವಗಳಿಗನುಸಾರವಾಗಿ ಪರಿಪೂರ್ಣತೆಗೆ ಮುಟ್ಟಿಸಲು ಅಮೇರಿಕನರ ಸಂಯುಕ್ತ ರಾಷ್ಟ್ರದವರು ಪ್ರಯತ್ನಿಸುತ್ತಿರುವರು.

೧೯೪೪ರ ಬೇಸಗೆಯಲ್ಲಿ ಚಿಕಾಗೋ ನಗರದಲ್ಲಿ ಅಮೇರಿಕನ್ ಸಹಕಾರಿಗಳ ಭಾರಿ ಪರಿಷತ್ತು ಜರಗಿತು. ಈ ಸಹಕಾರಿ ಪರಿಷತ್ತು ಎರಡು ವರ್ಷಕೊಮ್ಮೆ ಸೇರುವುದು. ಆಗ ಅವರು ತಮ್ಮ ಮುಂದಿನ ಕಾರ್ಯ ಧೋರಣೆಯನ್ನೂ ಮಾರ್ಗಗಳನ್ನು ಕೆತ್ತಿಕೊಳ್ಳುವರು. ಮೊನ್ನೆಯ ಪರಿಷತ್ತಿನಲ್ಲಿ ಅವರು ಯುದ್ಧಾನಂತರದ ತಮ್ಮ ಯೋಜನೆಗಳನ್ನು ಚರ್ಚಿಸಿ ಕೊಂಡರು.

ಮುಂದಿನ ಈ ಯೋಜನೆಗಳು ಎರಡು ಪ್ರಾಮುಖ್ಯ ತರದವುಗಳಾಗಿರುವವು. ಯುದ್ಧದಿಂದ ಜರ್ಝರಿತವಾದ ಎಲ್ಲಾ ದೇಶಗಳ ಸಹಕಾರ ಸಂಸ್ಥೆಗಳ ಸಹಾಯದಿಂದ ಹಿಂದಿನಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅಂತರ್ರಾಷ್ಟ್ರಿಯ ವ್ಯಾಪಾರವನ್ನು ಸಹಕಾರಿ ಪದ್ಧತಿಯ ಮೇರೆಗೆ ನಿರ್ವಹಿಸುವುದು ಒಂದು ಯೋಜನೆ. ಅಮೇರಿಕದ ದೊಡ್ಡ ದೊಡ್ಡ ನಗರಗಳಲ್ಲಿ ಸಹಕಾರ ಮಾದರಿಯ ಮೇಲೆ ವಾಣಿಜ್ಯ ವ್ಯವಹಾರ ಕ್ಷೇತ್ರಗಳನ್ನು ವಿಸ್ತರಿಸುವುದು ಎರಡನೇ ಯೋಜನೆ.

ಮೊದಲು ಒಂದು ಅಂತಃರಾಷ್ಟ್ರಿಯ ವ್ಯಾಪಾರದ ಮತ್ತು ಕೈಗಾರಿಕೆಯ ಸಹಕಾರಿ ಸಂಸ್ಥೆಯೊಂದು ಸ್ಥಾಪಿಸಲ್ಪಡುವುದು. ಬ್ರಿಟಿಷ್ ಮತ್ತು ಅಮೇರಿಕನ್ ಸಹಕಾರಿ ಮುಂದಾಳುಗಳು ಇದರ ಮೂಲ ಯೋಜನೆಗಳನ್ನು ತಯಾರಿಸುವರು. ಕೆನೆಡಾ ಮತ್ತು ಯುನೈಟೆಡ್ ಸ್ಟೇಟ್ಸಿನ ಸಹಕಾರಿ ಸಂಸ್ಥೆಗಳು ಈ ಅಂತರಾಷ್ಟ್ರಿಯ ಸಂಘ ನಿರ್ಮಾಣಕ್ಕೆ ಬೇಕಾಗುವ ಮೂಲಧನದ ಪಾಲುಗಳನ್ನು ಶೇಖರಿಸುವರು. ಪ್ರಥಮದಲ್ಲಿ ಪೆಟ್ರೋಲು ಆಹಾರ ವಸ್ತುಗಳು, ಕೃಷಿ ತಯಾರಿಕೆಗಳು ಮತ್ತು ಸಾಲ ಕೊಡುವ ವಿಚಾರಗಳಲ್ಲಿ ವ್ಯವಹಾರ ಪ್ರಾರಂಭಿಸಲಾಗುವುದು.

ಈ ಹೊಸ ಅಂತರಾಷ್ಟ್ರಿಯ ಸಂಸ್ಥೆಯ ಕಾರ್ಯ ಕಲಾಪಗಳ ಕುರಿತು ಸಂಕ್ಷೇಪವಾಗಿ ತಿಳಿಸುತ್ತಾ ಅಮೇರಿಕದ ಕೇಂದ್ರ ಸಹಕಾರಿ ಸಂಘದ ಅಧ್ಯಕ್ಷ ಮಿ। ಮುರೆ ಡಿ. ಲಿಂಕನ್ ಅವರು "ಅಂತರಾಷ್ಟ್ರಿಯ ಪರಸ್ಪರ ಸಹಕಾರ ಉದ್ಯಮದ ವಿಸ್ತರತೆಯ ಭಾಗವಾಗಿ ಮೊದಲು ಇಲ್ಲಿಂದ ಯುರೋಪಿಗೆ ದೊಡ್ಡ ಎಣ್ಣೆ ಉಗ್ರಾಣದ ಹಡಗುಗಳಲ್ಲಿ ಪೆಟ್ರೋಲನ್ನು ಕಳುಹಿಸಲಾಗುವುದು. ಇಲ್ಲಿಯ ಸಹಕಾರಿಗಳು ಯುರೋಪಿನ ಜನಾಂಗಗಳು ತಯಾರಿಸಿದ ವಸ್ತುಗಳನ್ನು ಪ್ರತಿಯಾಗಿ ಕೊಳ್ಳುವರು." ಹೀಗೆಂದು ವಿವರಿಸಿದರು.

ಯುದ್ಧಕ್ಕೆ ಮೊದಲು ಕೆನ್ಸಾಸ್ ನಗರದ ಒಂದು ರಖಂ ಸಹಕಾರಿ ಸಂಸ್ಥೆಯು ಸ್ಕೊಟ್ಲೆಂಡ್, ಬೆಲ್ಜಿಯಂ, ಫ್ರಾನ್ಸ್, ಮತ್ತು ಹೊಲೆಂಡುಗಳಿಗೆ ಪೆಟ್ರೋಲನ್ನು ಕಳುಹಿಸುತಿತ್ತು. ಆಗ ಸಹಕಾರಿ ಸಂಸ್ಥೆಗಳ ಅಧೀನದಲ್ಲಿ ನೆಲದಿಂದ ತೆಗೆದ ಕಲ್ಲೆಣ್ಣೆಯನ್ನು ಶುದ್ಧವಾದ ಪೆಟ್ರೋಲಾಗಿ ಪರಿವರ್ತಿಸುವ ಕಾರ್ಖಾನೆಗಳಿರಲಿಲ್ಲ. ೧೯೪೦ರಲ್ಲಿ ಅಮೇರಿಕನ್ ಸಹಕಾರಿ ಸಂಸ್ಥೆಯವರು ಅಂತಹ ಒಂದು ಶುದ್ಧೀಕರಣದ ಕಾರ್ಖಾನೆಯನ್ನು ಪಡಕೊಂಡರು. ಈಗ ಅವರ ಕೈ ಕೆಳಗೆ ಅಂತಹ ೧೦ ಕಾರ್ಖಾನೆಗಳಿವೆ. ಮಾತ್ರವಲ್ಲ ೨೯೬ ಎಣ್ಣೆಗನಿಗಳನ್ನು ಅವರು ಸ್ಥಾಪಿಸಿದ್ದಾರೆ. ವರ್ಷಕ್ಕೆ ಇವುಗಳಿಂದ ೪೦೦ ಮಿಲಿಯ ರೂಪಾಯಿಯ ಎಣ್ಣೆ ಸಿದ್ಧವಾಗುತ್ತದೆ.

ಜರ್ಮನ್ ಆಕ್ರಮಣದಿಂದ ಮುಕ್ತಗೊಳಿಸಲ್ಪಟ್ಟ ದೇಶಗಳ ಸಹಕಾರಿ ವಹಿವಾಟನ್ನು ಅಭಿವೃದ್ಧಿಗೊಳಿಸಲು ಒಂದು ಅಂತರಾಷ್ಟ್ರೀಯ ಸಾಲತೆರೋಣದ ಶಾಖೆಯೂ ನಿರ್ಮಿಸಲಾಗುವುದು. ಈಗಾಗಲೇ 'ಸ್ವಾತಂತ್ರ್ಯ ನಿಧಿ' ಎಂಬ ಒಂದು ಧನ ಶೇಖರಿಕೆಯ ಕಾರ್ಯವು ನಡೆಯುತ್ತಲಿದೆ. ಅಮೇರಿಕನ್ ಸಹಕಾರಿ ಸಂಘಗಳು ಇದಕ್ಕೆ ಚಂದಾ ಹಣವನ್ನು ದಾನ ಮಾಡುತ್ತಲಿದ್ದಾರೆ. ಈ ಧನವನ್ನು ಯುರೋಪಿನ ಅರ್ಥಿಕ ದುರ್ದಶೆಯ ದೇಶಗಳಿಗೆ ಬಡ್ಡಿ ಇಲ್ಲದೆ ಅಥವಾ ಕಮ್ಮಿ ಬಡ್ಡಿಯಲ್ಲಿ ಮುಂಗಡ ಸಾಲ ಕೊಡಲು ಉಪಯೋಗಿಸಲಾಗುವುದು.

ಅಮೇರಿಕದಿಂದ ಸಾಮಾನು ಸಲಕರಣೆಗಳನ್ನು ಕೊಂಡು ವಿಕ್ರಯಿಸುವ ಯುರೋಪಿನ ದೇಶಗಳಿಗೆ ಆರ್ಥಿಕ ರೀತಿಯ ಸಹಾಯ ಮಾಡಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಅಮೇರಿಕನ್ ಸಹಕಾರಿ ಸಂಸ್ಥೆಯ ಉಪಶಾಖೆಯಾದ ಸಹಕಾರಿ ಪುನಃರ್ರಚನಾ ಮಂಡಳಿಯ ಅಧ್ಯಕ್ಷರು ಅಂದಿನ ಪರಿಷತ್ತಿನಲ್ಲಿ ತಿಳಿಸಿದರು.

ಯುರೋಪಿನ ನಾಲ್ಕನೇ ಒಂದಂಶದಷ್ಟು ದೇಶಗಳು ಪರದೇಶ ವಸ್ತುಗಳನ್ನು ತರಿಸಿ ಮಾರುವವರು. ಇಂಥವರಿಗೆ ಆದಷ್ಟು ಶೀಘ್ರದಲ್ಲಿ ಆಹಾರ ಸರಬರಾಯಿ ಮಾಡುವ ಪ್ರಯತ್ನಗಳು ನಡೆಸಲ್ಪಡುತ್ತವೆ.

ಪೂರೈಕೆಗಳನ್ನು ಹಂಚಲು ಸಹಾಯ

ಯುದ್ಧದಲ್ಲಿ ಸಂಕಷ್ಟ ಪಡುವ ದೇಶಗಳಿಗೆ ಪರಿಹಾರ ಮತ್ತು ಆರ್ಥಿಕ ಸಹಾಯ ಕೊಡುವುದಕ್ಕಾಗಿ ಸಂಯುಕ್ತ ಅಮೇರಿಕದಲ್ಲಿ ಒಂದು ಪ್ರತ್ಯೇಕ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಯು. ಎನ್. ಆರ್. ಆರ್. ಎ. ಎಂದು ಸಂಕ್ಷೇಪವಾದ ಹೆಸರಿದೆ. ಇದನ್ನು ಇಂಗ್ಲಿಷಿನಲ್ಲಿ "ಯುನ್ರಾ" (U. N. R. R. A.) ಎಂದೂ ಉಚ್ಚರಿಸಬಹುದು.

ಈ ಯುನ್ರಾ ಸಂಸ್ಥೆಯ ಡೈರೆಕ್ಟರರಾದ ಜನರಲ್ ಹರ್ಬರ್ಟ ಲೇಮೆನ್ ಸಹಕಾರಿ ಪರಿಷತ್ತಿನಲ್ಲಿ ಹೀಗೆ ತಿಳಿಸಿದರು:

"ಸಹಕಾರಿ ತತ್ವ ಧೋರಣೆಗಳನ್ನು ಸ್ಥಾಪಿಸುವುದರ ಮೂಲಕ ಚಿರಶಾಂತಿಯನ್ನು ನೆಲೆಗೊಳಿಸಬಹುದು.. ನಮ್ಮ 'ಯುನ್ರಾ' ಸಂಸ್ಥೆಯಿಂದ ಸಹಾಯವನ್ನು ಸ್ವೀಕರಿಸುವ ಯುರೋಪಿನ ದೇಶಗಳು ನಾವು ಕಳುಹಿಸುವ ಸರಬರಾಯಿ ವಸ್ತುಗಳನ್ನು ತಮ್ಮ ಸಹಕಾರಿ ಸಂಘಗಳ ಮೂಲಕ ದೇಶದೊಳಗೆಲ್ಲ ಹಂಚುವ ಏರ್ಪಾಡು ಮಾಡುವರೆಂದು ಆಶಿಸಲಾಗಿದೆ. ಜಾತಿ, ಜನಾಂಗ, ವರ್ಣ ಭೇದಗಳಿಲ್ಲದೆ, ಕೆಲವೇ ಜನರು ಹೆಚ್ಚು ಜನರನ್ನು ಸುಲಿಗೆಗೆ ಒಳ ಮಾಡದೆ, ಸಹಕಾರ ನೀಡುವ ಅಮೇರಿಕನ್ ಸಹಕಾರಿ ಸಂಘದ ತತ್ವವನ್ನೇ ನಮ್ಮ 'ಯುನ್ರಾ' ಸಂಸ್ಥೆಯೂ ಅನುಸರಿಸುವುದು."

'ಸಹಕಾರದ' ಪ್ರಯೋಗ ಶಾಲೆ ಡೆನ್ಮಾರ್ಕ್

ಡೆನ್ಮಾರ್ಕಿನಲ್ಲಿ ಹಿಂದೆ ಅಮೇರಿಕನ್ ರಾಯಭಾರಿಗಳಾಗಿದ್ದ ರೂತ್ ಬ್ರ್ಯಾನ್ ಎಂಬ ಮಹಿಳೆಯು ಸಹಕಾರಿಗಳ ಸಭೆಯಲ್ಲಿ ಹೀಗೆ ಹೇಳಿದರು:

"ತಮ್ಮ ಅಭಿವೃದ್ಧಿಗೆ ಸಹಾಯಕವಾಗುವ ಅನೇಕ ವ್ಯವಹಾರ ವಹಿವಾಟುಗಳನ್ನು ಡೆನ್ಮಾರ್ಕಿನ ಜನರೇ ತಮ್ಮ ನಿಯಂತ್ರಣದಲ್ಲಿಟ್ಟು ಕೊಂಡದ್ದು ಆ ದೇಶದ ಶ್ರೇಯಸ್ಸಿನ ಮೂಲ ಕಾರಣವೆನ್ನಬೇಕು. ಸಾಮಾನ್ಯ ಅಲ್ಲಿನ ಒಬ್ಬ ರೈತನು ಎಂಟತ್ತು ವ್ಯಾಪಾರ ವಹಿವಾಟು ನಿರ್ವಾಹಕ ಮಂಡಳಗಳ ಸದಸ್ಯನಾದರೂ ಆಗಿರುತ್ತಾನೆ. ಹಾಲು ಬೆಣ್ಣೆ ಮಾರುವ ಸಹಕಾರಿ ಸಂಘ, ಮೊಟ್ಟೆ, ಮಾಂಸ ಮಾರುವ ಸ. ಸಂಘ, ಕೃಷಿ ವಸ್ತು ಪೂರೈಕೆಯ ಸ. ಸಂಘ, ಸಾಲತೆರುವ ಸ. ಸಂಘ, ಯಂತ್ರೋಪಕರಣ ಮಾರುವ-ಕೊಳ್ಳುವ ಸ. ಸಂಘ ಇವೇ ಮುಂತಾದುವುಗಳಲ್ಲಿ ಡೆನ್ಮಾರ್ಕಿನ ರೈತನು ಸದಸ್ಯನಾಗಿರುವನು.

ಡೆನ್ಮಾರ್ಕಿನಲ್ಲಿ ಶೇಕಡಾ ೯೦ರಷ್ಟು ರೈತರು ಸಹಕಾರಿ ಸಂಘಗಳ ಸದಸ್ಯರಾಗಿರುವರು. ನಗರಗಳಲ್ಲೂ ಬಹು ಸಂಖ್ಯಾತರೆಲ್ಲರೂ ಅವುಗಳೊಂದಿಗೆ ಸಂಬಂಧವಿದ್ದವರಾಗಿದ್ದಾರೆ. ಯುದ್ಧಾನಂತರ ಆ ದೇಶವು ಪುನಃ ಸರ್ವ ಸ್ವತಂತ್ರವಾದಾಗ ಅಲ್ಲಿ ಸಹಕಾರಿ ಪದ್ಧತಿಯು ಮತ್ತೆ ಶೀಘ್ರದಲ್ಲಿ ಪುನ: ಸ್ಥಾಪಿಸಲ್ಪಡುವುದು.

ಜೆಕೋಸ್ಲೊವೇಕಿಯದ ಅಧ್ಯಕ್ಷರಾದ ಡಾ। ಬೆನಿಶರ ಅಣ್ಣಂದಿರಾದ ವ್ರೊಟ್ಸಾ ಬೆನಿಶರೂ ಪ್ರಖ್ಯಾತ ಸಹಕಾರಿ ಚಳವಳ ಮುಖಂಡರು. ಅವರು ತಮ್ಮ ದೇಶದ ನ್ಯಾಯ ವಿಧಾಯಕ ಸಭೆಯ ಓರ್ವ ಸನ್ಮಾನ್ಯ ಸದಸ್ಯರು ಚಿಕಾಗೋ ಸಹಕಾರಿ ಸಮ್ಮೇಳನದಲ್ಲಿ ಅಂತರ್ರಾಷ್ಟ್ರಿಯ ಸಹಕಾರ ಧೋರಣೆಯ ಕುರಿತು ಅವರು ಭೋದಪರ ಸಲಹೆ ಕೊಟ್ಟರು

"ನಾವು ಒಂದು ಅಂತರ್ರಾಷ್ಟ್ರಿಯ ವ್ಯವಹಾರದ ಜಗತ್ತನ್ನು ನಿರ್ಮಿಸಬೇಕಾದರೆ ನಾವದನ್ನು 'ಸಾಮಾನ್ಯ ಜನತೆ'ಯ ಸುತ್ತಲೂ ಮೊದಲು ಕಟ್ಟಲು ಪ್ರಾರಂಭಿಸಬೇಕು. ಬರೀ ರಾಜಕೀಯ ಮುತ್ಸದ್ದಿಗಳ ನಡುವಿನಲ್ಲಿ ಅದನ್ನು ಕಟ್ಟಿದರೇ ಸಾಲದು. ಜನಾಂಗಗಳಲ್ಲಿನ ಸಹಕಾರಿ ಚಳವಳಗಳೊಳಗೆ ಸಹಕಾರಗಳಿದ್ದರೇನೇ ಇದು ಸಾಧ್ಯವಿದೆ. ಸಹಕಾರಿ ಮುಖಂಡರು ರಾಜಕೀಯ ಮುತ್ಸದಿಗಳ ದಾರಿಯಲ್ಲೇ ಕೆಲಸ ಮಾಡುತ್ತ ಬರಬೇಕು. ಅದು ಅವರ ಕರ್ತವ್ಯವಾಗಿರುತ್ತದೆ." ಇವು ಗಣನೀಯ ಮಾತುಗಳು.

ಅಮೇರಿಕದಲ್ಲಿ ಸಹಕಾರಿ ಚಳವಳಾರಂಭವಾಗಿ ಬರೀ ೨೫ ವರ್ಷಗಳಾದರೂ ಅಮೇರಿಕನರು ಅದರಲ್ಲಿ ತೋರಿಸಿದ ಶ್ರದ್ಧಾ ಸಕ್ತಿಗಳು ಅನುಸರಣೀಯವಿದೆ.

ದೇಶದ ಆರ್ಥಿಕ ಪ್ರಗತಿಗೆ ಸಹಕಾರ

ಅಮೇರಿಕದ ಆರ್ಥಿಕ ಶ್ರೇಯಸ್ಸಿಗೆ

(೯ನೇ ಪುಟಕ್ಕೆ ಮುಂದುವರಿದಿದೆ)

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳುಕ್ಕಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡಪಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸನ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 30—3—1945 [ಸಂಚಿಕೆ 13]

ಅಮೇರಿಕದಲ್ಲಿ ಸಹಕಾರಿ ಸಂಘಗಳು

ಸಹಕಾರವೇ ದೇಶದ ಆರ್ಥಿಕ ನೆಲಗಟ್ಟು

ಪಟ್ಟಣವನ್ನೇ ಪಡಕೊಳ್ಳುವ ಸಹಕಾರಿಗಳು

ಸಹಕಾರಿ ಪದ್ಧತಿಯನ್ನು ಜನಾಂಗೋತ್ಪತಿಯ ಸಾಧನವಾದ ರೀತಿಯಲ್ಲಿ ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸಿದ ಕೀರ್ತಿಯು ಹೊಲೆಂಡ್ ದೇಶಸ್ಥರಿಗೆ ಸಲ್ಲುವುದಾದರೂ, ಆ ಪದ್ಧತಿಯನ್ನು ಹೆಚ್ಚಿನ ಪ್ರಗತಿಗೊಳಿಸಿ ಅತ್ಯಾಧುನಿಕ ಆರ್ಥಿಕಶಾಸ್ತ್ರ ತತ್ವಗಳಿಗನುಸಾರವಾಗಿ ಪರಿಪೂರ್ಣತೆಗೆ ಮುಟ್ಟಿಸಲು ಅಮೇರಿಕನರ ಸಂಯುಕ್ತ ರಾಷ್ಟ್ರದವರು ಪ್ರಯತ್ನಿಸುತ್ತಿರುವರು.

೧೯೪೪ರ ಬೇಸಗೆಯಲ್ಲಿ ಚಿಕಾಗೋ ನಗರದಲ್ಲಿ ಅಮೇರಿಕನ್ ಸಹಕಾರಿಗಳ ಭಾರಿ ಪರಿಷತ್ತು ಜರಗಿತು. ಈ ಸಹಕಾರಿ ಪರಿಷತ್ತು ಎರಡು ವರ್ಷಕೊಮ್ಮೆ ಸೇರುವುದು. ಆಗ ಅವರು ತಮ್ಮ ಮುಂದಿನ ಕಾರ್ಯ ಧೋರಣೆಯನ್ನೂ ಮಾರ್ಗಗಳನ್ನು ಕೆತ್ತಿಕೊಳ್ಳುವರು. ಮೊನ್ನೆಯ ಪರಿಷತ್ತಿನಲ್ಲಿ ಅವರು ಯುದ್ಧಾನಂತರದ ತಮ್ಮ ಯೋಜನೆಗಳನ್ನು ಚರ್ಚಿಸಿ ಕೊಂಡರು.

ಮುಂದಿನ ಈ ಯೋಜನೆಗಳು ಎರಡು ಪ್ರಾಮುಖ್ಯ ತರದವುಗಳಾಗಿರುವವು. ಯುದ್ಧದಿಂದ ಜರ್ಝರಿತವಾದ ಎಲ್ಲಾ ದೇಶಗಳ ಸಹಕಾರ ಸಂಸ್ಥೆಗಳ ಸಹಾಯದಿಂದ ಹಿಂದಿನಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅಂತರ್ರಾಷ್ಟ್ರಿಯ ವ್ಯಾಪಾರವನ್ನು ಸಹಕಾರಿ ಪದ್ಧತಿಯ ಮೇರೆಗೆ ನಿರ್ವಹಿಸುವುದು ಒಂದು ಯೋಜನೆ. ಅಮೇರಿಕದ ದೊಡ್ಡ ದೊಡ್ಡ ನಗರಗಳಲ್ಲಿ ಸಹಕಾರ ಮಾದರಿಯ ಮೇಲೆ ವಾಣಿಜ್ಯ ವ್ಯವಹಾರ ಕ್ಷೇತ್ರಗಳನ್ನು ವಿಸ್ತರಿಸುವುದು ಎರಡನೇ ಯೋಜನೆ.

ಮೊದಲು ಒಂದು ಅಂತಃರಾಷ್ಟ್ರಿಯ ವ್ಯಾಪಾರದ ಮತ್ತು ಕೈಗಾರಿಕೆಯ ಸಹಕಾರಿ ಸಂಸ್ಥೆಯೊಂದು ಸ್ಥಾಪಿಸಲ್ಪಡುವುದು. ಬ್ರಿಟಿಷ್ ಮತ್ತು ಅಮೇರಿಕನ್ ಸಹಕಾರಿ ಮುಂದಾಳುಗಳು ಇದರ ಮೂಲ ಯೋಜನೆಗಳನ್ನು ತಯಾರಿಸುವರು. ಕೆನಡಾ ಮತ್ತು ಯುನೈಟೆಡ್ ಸ್ಟೇಟ್ಸಿನ ಸಹಕಾರಿ ಸಂಸ್ಥೆಗಳು ಈ ಅಂತರಾಷ್ಟ್ರಿಯ ಸಂಘ ನಿರ್ಮಾಣಕ್ಕೆ ಬೇಕಾಗುವ ಮೂಲಧನದ ಪಾಲುಗಳನ್ನು ಶೇಖರಿಸುವರು. ಪ್ರಥಮದಲ್ಲಿ ಪೆಟ್ರೋಲು ಆಹಾರ ವಸ್ತುಗಳು, ಕೃಷಿ ತಯಾರಿಕೆಗಳು ಮತ್ತು ಸಾಲ ಕೊಡುವ ವಿಚಾರಗಳಲ್ಲಿ ವ್ಯವಹಾರ ಪ್ರಾರಂಭಿಸಲಾಗುವುದು.

ಈ ಹೊಸ ಅಂತರಾಷ್ಟ್ರಿಯ ಸಂಸ್ಥೆಯ ಕಾರ್ಯ ಕಲಾಪಗಳ ಕುರಿತು ಸಂಕ್ಷೇಪವಾಗಿ ತಿಳಿಸುತ್ತಾ ಅಮೇರಿಕದ ಕೇಂದ್ರ ಸಹಕಾರಿ ಸಂಘದ ಅಧ್ಯಕ್ಷ ಮಿ। ಮುರೆ ಡಿ. ಲಿಂಕನ್ ಅವರು "ಅಂತರಾಷ್ಟ್ರಿಯ ಪರಸ್ಪರ ಸಹಕಾರ ಉದ್ಯಮದ ವಿಸ್ತರತೆಯ ಭಾಗವಾಗಿ ಮೊದಲು ಇಲ್ಲಿಂದ ಯುರೋಪಿಗೆ ದೊಡ್ಡ ಎಣ್ಣೆ ಉಗ್ರಾಣದ ಹಡಗುಗಳಲ್ಲಿ ಪೆಟ್ರೋಲನ್ನು ಕಳುಹಿಸಲಾಗುವುದು. ಇಲ್ಲಿಯ ಸಹಕಾರಿಗಳು ಯುರೋಪಿನ ಜನಾಂಗಗಳು ತಯಾರಿಸಿದ ವಸ್ತುಗಳನ್ನು ಪ್ರತಿಯಾಗಿ ಕೊಳ್ಳುವರು." ಹೀಗೆಂದು ವಿವರಿಸಿದರು.

ಯುದ್ಧಕ್ಕೆ ಮೊದಲು ಕೆನ್ಸಾಸ್ ನಗರದ ಒಂದು ರಖಂ ಸಹಕಾರಿ ಸಂಸ್ಥೆಯು ಸ್ಕೊಟ್ಲೆಂಡ್, ಬೆಲ್ಜಿಯಂ, ಫ್ರಾನ್ಸ್, ಮತ್ತು ಹೊಲೆಂಡುಗಳಿಗೆ ಪೆಟ್ರೋಲನ್ನು ಕಳುಹಿಸುತಿತ್ತು. ಆಗ ಸಹಕಾರಿ ಸಂಸ್ಥೆಗಳ ಅಧೀನದಲ್ಲಿ ನೆಲದಿಂದ ತೆಗೆದ ಕಲ್ಲೆಣ್ಣೆಯನ್ನು ಶುದ್ಧವಾದ ಪೆಟ್ರೋಲಾಗಿ ಪರಿವರ್ತಿಸುವ ಕಾರ್ಖಾನೆಗಳಿರಲಿಲ್ಲ. ೧೯೪೦ರಲ್ಲಿ ಅಮೇರಿಕನ್ ಸಹಕಾರಿ ಸಂಸ್ಥೆಯವರು ಅಂತಹ ಒಂದು ಶುದ್ಧೀಕರಣದ ಕಾರ್ಖಾನೆಯನ್ನು ಪಡಕೊಂಡರು. ಈಗ ಅವರ ಕೈ ಕೆಳಗೆ ಅಂತಹ ೧೦ ಕಾರ್ಖಾನೆಗಳಿವೆ. ಮಾತ್ರವಲ್ಲ ೨೯೬ ಎಣ್ಣೆಗನಿಗಳನ್ನು ಅವರು ಸ್ಥಾಪಿಸಿದ್ದಾರೆ. ವರ್ಷಕ್ಕೆ ಇವುಗಳಿಂದ ೪೦೦ ಮಿಲಿಯ ರೂಪಾಯಿಯ ಎಣ್ಣೆ ಸಿದ್ಧವಾಗುತ್ತದೆ.

ಜರ್ಮನ್ ಆಕ್ರಮಣದಿಂದ ಮುಕ್ತಗೊಳಿಸಲ್ಪಟ್ಟ ದೇಶಗಳ ಸಹಕಾರಿ ವಹಿವಾಟನ್ನು ಅಭಿವೃದ್ಧಿಗೊಳಿಸಲು ಒಂದು ಅಂತರಾಷ್ಟ್ರೀಯ ಸಾಲತೆರೋಣದ ಶಾಖೆಯೂ ನಿರ್ಮಿಸಲಾಗುವುದು. ಈಗಾಗಲೇ 'ಸ್ವಾತಂತ್ರ್ಯ ನಿಧಿ' ಎಂಬ ಒಂದು ಧನ ಶೇಖರಿಕೆಯ ಕಾರ್ಯವು ನಡೆಯುತ್ತಲಿದೆ. ಅಮೇರಿಕನ್ ಸಹಕಾರಿ ಸಂಘಗಳು ಇದಕ್ಕೆ ಚಂದಾ ಹಣವನ್ನು ದಾನ ಮಾಡುತ್ತಲಿದ್ದಾರೆ. ಈ ಧನವನ್ನು ಯುರೋಪಿನ ಆರ್ಥಿಕ ದುರ್ದಶೆಯ ದೇಶಗಳಿಗೆ ಬಡ್ಡಿ ಇಲ್ಲದೆ ಅಥವಾ ಕಮ್ಮಿ ಬಡ್ಡಿಯಲ್ಲಿ ಮುಂಗಡ ಸಾಲ ಕೊಡಲು ಉಪಯೋಗಿಸಲಾಗುವುದು.

ಅಮೇರಿಕದಿಂದ ಸಾಮಾನು ಸಲಕರಣೆಗಳನ್ನು ಕೊಂಡು ವಿಕ್ರಯಿಸುವ ಯುರೋಪಿನ ದೇಶಗಳಿಗೆ ಆರ್ಥಿಕ ರೀತಿಯ ಸಹಾಯ ಮಾಡಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು ಎಂದು ಅಮೇರಿಕನ್ ಸಹಕಾರಿ ಸಂಸ್ಥೆಯ ಉಪಶಾಖೆಯಾದ ಸಹಕಾರಿ ಪುನಃರ್ರಚನಾ ಮಂಡಳಿಯ ಅಧ್ಯಕ್ಷರು ಅಂದಿನ ಪರಿಷತ್ತಿನಲ್ಲಿ ತಿಳಿಸಿದರು.

ಯುರೋಪಿನ ನಾಲ್ಕನೇ ಒಂದಂಶದಷ್ಟು ದೇಶಗಳು ಪರದೇಶ ವಸ್ತುಗಳನ್ನು ತರಿಸಿ ಮಾರುವವರು. ಇಂಥವರಿಗೆ ಆದಷ್ಟು ಶೀಘ್ರದಲ್ಲಿ ಆಹಾರ ಸರಬರಾಯಿ ಮಾಡುವ ಪ್ರಯತ್ನಗಳು ನಡೆಸಲ್ಪಡುತ್ತವೆ.

ಪೂರೈಕೆಗಳನ್ನು ಹಂಚಲು ಸಹಾಯ

ಯುದ್ಧದಲ್ಲಿ ಸಂಕಷ್ಟ ಪಡುವ ದೇಶಗಳಿಗೆ ಪರಿಹಾರ ಮತ್ತು ಆರ್ಥಿಕ ಸಹಾಯ ಕೊಡುವುದಕ್ಕಾಗಿ ಸಂಯುಕ್ತ ಅಮೇರಿಕದಲ್ಲಿ ಒಂದು ಪ್ರತ್ಯೇಕ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಯು. ಎನ್. ಆರ್. ಆರ್. ಎ. ಎಂದು ಸಂಕ್ಷೇಪವಾದ ಹೆಸರಿದೆ. ಇದನ್ನು ಇಂಗ್ಲಿಷಿನಲ್ಲಿ "ಯುನ್ರಾ" (U. N. R. R. A.) ಎಂದೂ ಉಚ್ಚರಿಸಬಹುದು.

ಈ ಯುನ್ರಾ ಸಂಸ್ಥೆಯ ಡೈರೆಕ್ಟರರಾದ ಜನರಲ್ ಹರ್ಬರ್ಟ ಲೇಮೆನ್ ಸಹಕಾರಿ ಪರಿಷತ್ತಿನಲ್ಲಿ ಹೀಗೆ ತಿಳಿಸಿದರು:

"ಸಹಕಾರಿ ತತ್ವ ಧೋರಣೆಗಳನ್ನು ಸ್ಥಾಪಿಸುವುದರ ಮೂಲಕ ಚಿರಶಾಂತಿಯನ್ನು ನೆಲೆಗೊಳಿಸಬಹುದು. ನಮ್ಮ 'ಯುನ್ರಾ' ಸಂಸ್ಥೆಯಿಂದ ಸಹಾಯವನ್ನು ಸ್ವೀಕರಿಸುವ ಯುರೋಪಿನ ದೇಶಗಳು ನಾವು ಕಳುಹಿಸುವ ಸರಬರಾಯಿ ವಸ್ತುಗಳನ್ನು ತಮ್ಮ ಸಹಕಾರಿ ಸಂಘಗಳ ಮೂಲಕ ದೇಶದೊಳಗೆಲ್ಲ ಹಂಚುವ ಏರ್ಪಾಡು ಮಾಡುವರೆಂದು ಆಶಿಸಲಾಗಿದೆ. ಜಾತಿ, ಜನಾಂಗ, ವರ್ಣ ಭೇದಗಳಿಲ್ಲದೆ, ಕೆಲವೇ ಜನರು ಹೆಚ್ಚು ಜನರನ್ನು ಸುಲಿಗೆಗೆ ಒಳ ಮಾಡದೆ, ಸಹಕಾರ ನೀಡುವ ಅಮೇರಿಕನ್ ಸಹಕಾರಿ ಸಂಘದ ತತ್ವವನ್ನೇ ನಮ್ಮ 'ಯುನ್ರಾ' ಸಂಸ್ಥೆಯೂ ಅನುಸರಿಸುವುದು."

'ಸಹಕಾರದ' ಪ್ರಯೋಗ ಶಾಲೆ ಡೆನ್ಮಾರ್ಕ್

ಡೆನ್ಮಾರ್ಕಿನಲ್ಲಿ ಹಿಂದೆ ಅಮೇರಿಕನ್ ರಾಯಭಾರಿಗಳಾಗಿದ್ದ ರೂತ್ ಬ್ರ್ಯಾನ್ ಎಂಬ ಮಹಿಳೆಯು ಸಹಕಾರಿಗಳ ಸಭೆಯಲ್ಲಿ ಹೀಗೆ ಹೇಳಿದರು:

"ತಮ್ಮ ಅಭಿವೃದ್ಧಿಗೆ ಸಹಾಯಕವಾಗುವ ಅನೇಕ ವ್ಯವಹಾರ ವಹಿವಾಟುಗಳನ್ನು ಡೆನ್ಮಾರ್ಕಿನ ಜನರೇ ತಮ್ಮ ನಿಯಂತ್ರಣದಲ್ಲಿಟ್ಟು ಕೊಂಡದ್ದು ಆ ದೇಶದ ಶ್ರೇಯಸ್ಸಿನ ಮೂಲ ಕಾರಣವೆನ್ನಬೇಕು. ಸಾಮಾನ್ಯ ಅಲ್ಲಿನ ಒಬ್ಬ ರೈತನು ಎಂಟೆತ್ತು ವ್ಯಾಪಾರ ವಹಿವಾಟು ನಿರ್ವಾಹಕ ಮಂಡಳಿಗಳ ಸದಸ್ಯನಾದರೂ ಆಗಿರುತ್ತಾನೆ. ಹಾಲು ಬೆಣ್ಣೆ ಮಾರುವ ಸಹಕಾರಿ ಸಂಘ, ಮೊಟ್ಟೆ, ಮಾಂಸ ಮಾರುವ ಸ. ಸಂಘ, ಕೃಷಿ ವಸ್ತು ಪೂರೈಕೆಯ ಸ. ಸಂಘ, ಸಾಲತೆರುವ ಸ. ಸಂಘ, ಯಂತ್ರೋಪಕರಣ ಮಾರುವ-ಕೊಳ್ಳುವ ಸ. ಸಂಘ ಇವೇ ಮುಂತಾದುವುಗಳಲ್ಲಿ ಡೆನ್ಮಾರ್ಕಿನ ರೈತನು ಸದಸ್ಯನಾಗಿರುವನು.

ಡೆನ್ಮಾರ್ಕಿನಲ್ಲಿ ಶೇಕಡಾ ೯೦ರಷ್ಟು ರೈತರು ಸಹಕಾರಿ ಸಂಘಗಳ ಸದಸ್ಯರಾಗಿರುವರು. ನಗರಗಳಲ್ಲೂ ಬಹು ಸಂಖ್ಯಾತರೆಲ್ಲರೂ ಅವುಗಳೊಂದಿಗೆ ಸಂಬಂಧವಿದ್ದವರಾಗಿದ್ದಾರೆ. ಯುದ್ಧಾನಂತರ ಆ ದೇಶವು ಪುನಃ ಸರ್ವ ಸ್ವತಂತ್ರವಾದಾಗ ಅಲ್ಲಿ ಸಹಕಾರಿ ಪದ್ಧತಿಯು ಮತ್ತೆ ಶೀಘ್ರದಲ್ಲಿ ಪುನ: ಸ್ಥಾಪಿಸಲ್ಪಡುವುದು.

ಜೆಕೋಸ್ಲೊವೇಕಿಯದ ಅಧ್ಯಕ್ಷರಾದ ಡಾ। ಬೆನಿಶರ ಅಣ್ಣಂದಿರಾದ ವೊಟ್ಜಾ ಬೆನಿಶರೂ ಪ್ರಖ್ಯಾತ ಸಹಕಾರಿ ಚಳವಳ ಮುಖಂಡರು. ಅವರು ತಮ್ಮ ದೇಶದ ನ್ಯಾಯ ವಿಧಾಯಕ ಸಭೆಯ ಓರ್ವ ಸನ್ಮಾನ್ಯ ಸದಸ್ಯರು ಚಿಕಾಗೋ ಸಹಕಾರಿ ಸಮ್ಮೇಳನದಲ್ಲಿ ಅಂತರ್ರಾಷ್ಟ್ರಿಯ ಸಹಕಾರ ಧೋರಣೆಯ ಕುರಿತು ಅವರು ಭೋದಪರ ಸಲಹೆ ಕೊಟ್ಟರು

"ನಾವು ಒಂದು ಅಂತರ್ರಾಷ್ಟ್ರಿಯ ವ್ಯವಹಾರದ ಜಗತ್ತನ್ನು ನಿರ್ಮಿಸಬೇಕಾದರೆ ನಾವದನ್ನು 'ಸಾಮಾನ್ಯ ಜನತೆ'ಯ ಸುತ್ತಲೂ ಮೊದಲು ಕಟ್ಟಲು ಪ್ರಾರಂಭಿಸಬೇಕು. ಬರೀ ರಾಜಕೀಯ ಮುತ್ಸದ್ಧಿಗಳ ನಡುವಿನಲ್ಲಿ ಅದನ್ನು ಕಟ್ಟಿದರೇ ಸಾಲದು. ಜನಾಂಗಗಳಲ್ಲಿನ ಸಹಕಾರಿ ಚಳವಳಗಳೊಳಗೆ ಸಹಕಾರಗಳಿದ್ದರೇನೇ ಇದು ಸಾಧ್ಯವಿದೆ. ಸಹಕಾರಿ ಮುಖಂಡರು ರಾಜಕೀಯ ಮುತ್ಸದಿಗಳ ವಾರಿಯಲ್ಲೇ ಕೆಲಸ ಮಾಡುತ್ತ ಬರಬೇಕು. ಅದು ಅವರ ಕರ್ತವ್ಯವಾಗಿರುತ್ತದೆ." ಇವು ಗಣನೀಯ ಮಾತುಗಳು.

ಅಮೇರಿಕದಲ್ಲಿ ಸಹಕಾರಿ ಚಳವಳಾರಂಭವಾಗಿ ಬರೀ ೨೫ ವರ್ಷಗಳಾದರೂ ಅಮೇರಿಕನರು ಅದರಲ್ಲಿ ತೋರಿಸಿದ ಶ್ರದ್ಧಾ ಸಕ್ತಿಗಳು ಅನುಸರಣೀಯವಿದೆ.

ದೇಶದ ಆರ್ಥಿಕ ಪ್ರಗತಿಗೆ ಸಹಕಾರ

ಅಮೇರಿಕದ ಆರ್ಥಿಕ ಶ್ರೇಯಸ್ಸಿಗೆ

(೯ನೇ ಪುಟಕ್ಕೆ ಮುಂದುವರಿದಿದೆ)

ನಮ್ಮದಷ್ಟು ಸುಂದರವಾದದ್ದು ನಗರ ದೇಶದಲ್ಲೆ ಹಲವಿರಲಿಲ್ಲ. ಅತ್ಯಾಧುನಿಕ ಶಿಲ್ಪ ಶೈಲಿಯ ಕಟ್ಟಡಗಳೂ, ಮಾರ್ಗಗಳೂ, ಕೊಂಕ್ರಿಟಿನ ಕಾಲುದಾರಿಗಳೂ, ದಾಮಾರು ರಸ್ತೆಗಳು. ಉಪವನಗಳು ವಿಹಾರವನಗಳು. ಸರಕಾರಿ ಕಟ್ಟಡಗಳು, ಮುನ್ಸಿಪಲ್ ಕಛೇರಿಗಳು; ಆದರೆ ಚಂದ್ರನಲ್ಲಾದರೂ ಕಲೆಗಳಿರುವಂತೆ ನಮ್ಮ ನಗರದ ಅಂತ್ಯದಲ್ಲಿ ಕೆಂಪನಬೀಡು ಎಂಬದೊಂದು ಕೊಳಕು ವಟಾರವಿತ್ತು. ಅಲ್ಲಿನ ಮುರುಕು ಗುಡಿಸಲುಗಳೂ, ಕೊಳಕು ಗಲ್ಲಿಗಳೂ, ಯಾವ ನಗರ ಸಭೆಗೂ ಕೀರ್ತಿ ತರುವಂತವುಗಳಲ್ಲ. ಹೆಚ್ಚಾಗಿ ಅತೀ ಕೆಳಗಿನ ಮಾನವ ಸಮಾಜದವರೇ ಅಲ್ಲಿ ವಾಸಿಸುವುದರಿಂದ ನಾಗರೀಕತೆಯ ಗಾಳಿಯು ಆ ಕಡೆ ಇನ್ನೂ ಸರಿಯಾಗಿ ಬೀಸಿದ್ದಿಲ್ಲವೆನ್ನಬಹುದು.

ಕೆಂಪನ ಬೀಡಿನಂತೇ ಅಲ್ಲಿಯ ಜನರೂ ಕೂಡಾ ತೀರ ಮಂದಪ್ರಗತಿಯವರು. ನಗರದ ಉಚ್ಚ ತರಗತಿಯ ಸಭ್ಯರು ಈ ಜನರನ್ನು ಒಂದೂ ಕೆಲಸಕ್ಕೆ ಹಚ್ಚಬೇಕು ಇಲ್ಲವೆ ಗಡಿಪಾರುಮಾಡಿ. ಆ ಬೀಡನ್ನು ಸುಟ್ಟುಬಿಡಬೇಕು ಇಲ್ಲವೆ ನೆಲಸಮ ಮಾಡಬೇಕೆಂದೇ ಅಭಿಪ್ರಾಯಪಟ್ಟುಕೊಂಡಿದ್ದರು.

ನಗರದ ಅನೇಕ ಕಾರ್ಖಾನೆಗಳಲ್ಲಿ ಕುಂಟರಿಗೂ, ತುಂಟರಿಗೂ ಕೆಲಸಗಳು ದೊರೆಯುತಿದ್ದರೂ ಕೆಂಪನ ಬೀಡಿನ ಜನರು ಮಾತ್ರ ಆಲಸ್ಯದಲ್ಲೇ ಕಾಲಕಳೆಯುತಿದ್ದರು. ಅಲ್ಲಿನ ಹೆಂಗಸರು ಕೂಲಿ ಕೆಲಸಕ್ಕೆ ಹೋಗುವ ಬದಲು ಚಿಕ್ಕ ಚಿಕ್ಕ ಹೊಲಿಗೆ ಕೆಲಸಕ್ಕೊ, ಇಲ್ಲವೆ ಬಟ್ಟೆ ಒಗೆಯಲಿಕ್ಕೆ–ಇವೇ ಮುಂತಾದ ಚಿಲ್ಲರೆಕೆಲಸಕ್ಕೆ ಹೋಗುತಿದ್ದರೂ, ಗಂಡಸರು ತಿರುಗಿ ತಿನ್ನುವುದೇ ತಮ್ಮ ಜೀವನದಧ್ಯೇಯವಾಗಿಮಾಡಿಕೊಂಡಿದ್ದರು. ಕಾರ್ಖಾನೆ ಕೆಲಸ ಅಂದರೆ ಅವರಿಗೆ ಅಷ್ಟು ಜಿಗುಪ್ಸೆ.

ಇಂಥವರಲ್ಲಿ ಚೆನ್ನರಡ್ಡಿ ಒಬ್ಬನು. ಹಬ್ಬದ ಸಮಯದಲ್ಲಿ ಬೀಡಾ ಬೀಡಿ ಮಾರುವುದು, ಉತ್ಸವದ ಸಮಯದಲ್ಲಿ ಗಿರಿಗಿಟಿ, ನೆಲಕಡಲೆ ಮಾರುವುದು ಇವನ ಕೆಲಸ. ತನ್ನ ವ್ಯಾಪಾರಕ್ಕೆ ಬೇಕಾದುದಕಿಂತಲೂ ಹೆಚ್ಚಿನ ಮಾತುಗಳನ್ನುಗಿರಾಕಿಗಳೊಡನೆ ಇವನೇ ಖರ್ಚುಮಾಡುತಿದ್ದ. ಹರಿದು ಕೂದಲು ಹೊರ ಬೀಳುವ ಮುಂಡಾಸು, ಕೊಳೆಯಿಂದ ದಪ್ಪವಾದ ಕೋಟು, ಧೂಳಿನಿಂದ ಬಣ್ಣಬಂದ ಧೋತಿ ಇವನ ಉಡುಪುಗಳಾಗಿದ್ದವು. ಕಾಲತಪ್ಪಿದ ರಾತ್ರಿಯಲ್ಲಿ ನೋಡಿದರೆ ಬೆಂಟಿಕ್‌ನ ಕಾಲದ ಠಕ್ಕನಂತೆ ರೆಡ್ಡಿ ಕಾಣುತಿದ್ದ. ಶುದ್ಧವಾದ, ಉಡುಪು ತೊಡುಪುಗಳುಳ್ಳ ತನ್ನ ಸ್ವಂತ ಜನರ ನಡುವೇ ಅವನಿಗೆ ಇರಲು ಏನೋತೋರುತಿತ್ತು.

ರೆಡ್ಡಿಗೆ ಶ್ರೀಮಂತರನ್ನು ಕಂಡರೆ ಇಲ್ಲದ ಹೊಟ್ಟೆ ಉರಿ. ಅವರ ತಳಕಿನ ಮಾತುಗಳು, ವ್ಯಾಪಾರದಲ್ಲಿ ಅವರು ಮಾಡುವ ಮೋಸ, ವಂಚನೆಗಳು, ದಾನ ಧರ್ಮ ಮಾಡಲು ಅವರಿಗಿಲ್ಲದ ಮನಸ್ಸು, ಸಂಬಂಧಿಕರನ್ನು ಕಡೆಗಾಣಿಸುವ ಅವರ ಜಂಬ, ಧನವಿದ್ದರೂ ಹೊಟ್ಟೆಗೆ ತಿನ್ನದ ಅವರ ಕೃಪಣತ್ವ ಇವುಗಳೊಂದೂ ನಮ್ಮ ರೆಡ್ಡಿಗೆ ಸಹಿಸಲಾಗದ ಗುಣಗಳು. ಸಂಜೆಗೆ ಒಂದು 'ಡೋಸ್' ಹಾಕಿ ಬಂದನೆಂದರೆ ಕೆಂಪನ ಬೀಡಿನ ಬಳಿಯ ಕೆಲವೇ ಶ್ರೀಮಂತರ ಮನೆ ಎದುರು ನಿಂತು ಬೈಗಳ ಸುರಿಮಳೆಯನ್ನೇ ಸುರಿಸುವನು. ಕಡೆಗೆ 'ಕೆಂಪುಟೋಪಿ'ಯವರು ಬಂದು ಒಯ್ಯುವ ತನಕ ಅವನ ಸರತಿ.

ವಿದ್ಯಾವೇತನ

ಲೇಖಕ: 'ಕಲಾಗಾರ'

ರೆಡ್ಡಿಯ ಹೆಂಡತಿಯೂ ಹೊಲಿಗೆ ಕೆಲಸಕ್ಕೆ ಹೋಗುತಿದ್ದಳು. ಪರ ಪರ ಮಾತಾಡುವುದರಲ್ಲಿ ನಿಜವಾಗಿಅವಳನ್ನು ರೆಡ್ಡಿಯ ಅರ್ಧಾಂಗಿಯೆನ್ನಬಹುದು. ಬಡತನವೇ ಅವಳ ಭಾಷಣದ ಮುಖ್ಯ ವಿಷಯ–ಮನೆಯಲ್ಲಿ ಚಿಕ್ಕಾಸು ಇಲ್ಲ—ಒಂದು ಕಾಳು ಅಕ್ಕಿಯಿಲ್ಲ-ಉಡಲು ಸೀರೆಯಿಲ್ಲ.

"ನಿನ್ನೆ ಹಬ್ಬಕ್ಕೆ ನಿನ್ನ ಗಂಡನಿಗೆ ತುಂಬಾ ವ್ಯಾಪಾರ ಆಗಿದೆ. ಮೊನ್ನೆ ನಾನು ಅವನ ಹತ್ತಿರ ೨೦ರೂಪಾಯಿಗಳದ್ದು ಹಳೇ ಸಾಮಾನುಗಳನ್ನು ತೆಗೆದುಕೊಂಡಿದ್ದೇನೆ" ಎಂದು ಯಾರಾದರೂ ಹೇಳಿದರೆ, ಅವಳು: "ಅದರಲ್ಲಿ ನಾನೊಂದು ಚಿಕ್ಕಾಸೂ ನೋಡಲಿಲ್ಲ. ಆ ಗಿರಿಯಪ್ಪನ ಗಡಂಗಿನಲ್ಲೇ ಅವರದನ್ನು ಸುರಿದಿರಬೇಕು." ಎನ್ನುವಳು.

ಕೆಸರು,ಕೊಳಕುನೀರಿನಲ್ಲಿ ಬೆಳೆಯುವ ತಾವರೆಯಂತೆ ರೆಡ್ಡಿ ದಂಪತಿಗಳಿಗೆ ಚಿನ್ನಮ್ಮನೆಂಬ ಹುಡುಗಿ. ನೋಡಲು ಹುಡುಗಿ ಸುಲಕ್ಷಣ. ಸೌಮ್ಯ ಗುಣ ವರ್ತನೆಗಳು. ಆದರೆ ಅವಳ ಬಟ್ಟೆಗಳು ತಂದೆತಾಯಿಗಳಂತೇ ಕೊಳಕಾಗಿದ್ದುವು. ಹಂದಿಗಳ ನಡುವೆ ಬಿಸುಟ ಅದೊಂದು ರತ್ನವೆಂದರೂ ಚಿನ್ನಮ್ಮನ ಗುಣಕ್ಕೆ ಅತೀ ಕಮ್ಮಿಯ ಶ್ಲಾಘನೆ. ಅವಳ ಆಕರ್ಷಕ ಸ್ವಭಾವಕ್ಕಾಗಿ ಹೆಚ್ಚಿನವರು ರೆಡ್ಡಿಗಳ ಮೇಲಿನ ತಮ್ಮ ತಿರಸ್ಕಾರವನ್ನು ಕಮ್ಮಿಮಾಡಿಕೊಳ್ಳುತಿದ್ದರು.

ಚಿನ್ನಮ್ಮ ಶಾಲೆಗೆ ಹೋಗುತಿದ್ದಳು. ನಗರದ ಶಾಲೆಯಲ್ಲಿ ಉತ್ತಮ ವರ್ಗದ ಸ್ವಚ್ಛ ಉಡುಪು ತೊಡುಪಿನ ಸಂಗಾತಿಗಳ ಜೊತೆಯಲ್ಲಿರುವಾಗ ಅವಳಿಗೆ ಇಲ್ಲದ ಮನೋವೇದನೆಯಾಗುತಿತ್ತು. ಆದರೆ ನಿಗರ್ವಿಯಾದ ಅವಳ ಭಾವವು ತನ್ನ ಕೊಳಕು ಉಡುಪಿಗಿಂತಲೂ ಶುದ್ಧವಾದ ವಿದ್ಯೆಯನ್ನೆ ಗಳಿಸುವುದರಲ್ಲಿ ತನ್ನ ಮುಂದಿನ ಸೌಭಾಗ್ಯವಿದೆ ಎಂಬ ವಿಷಯವನ್ನು ಸೂಚಿಸುತಿದ್ದಿತು. ನಗರದಲ್ಲಿ ನಡೆಯುವ ಸಮಾಜ ಕೂಟಗಳಲ್ಲಿ ಅವಳಿಗೆ ಆಮಂತ್ರಣವಿಲ್ಲದಿದ್ದರೆ ಅವಳಿಗೆ ಬೇಸರವಿಲ್ಲ. ಆ ಸಮಯವನ್ನು ಅವಳು ತನ್ನ ಪಾಠಗಳ ಅಭ್ಯಾಸದಲ್ಲಿ ಕಳೆಯುವಳು. ತನ್ನ ದುರವಸ್ಥೆಗೆ ಕಾರಣರು ತನ್ನ ಸ್ವಂತ ಮಾತೃಪಿತೃಗಳಲ್ಲದೆ ಔತಣಕ್ಕೆ ಆಮಂತ್ರಿಸದ ಶ್ರೀಮಂತರಲ್ಲವೆಂಬ ತಿಳುವಳಿಕೆ ಮಾಡಿಕೊಳ್ಳುವಷ್ಟು ವಿವೇಕ ಅವಳಲ್ಲಿತ್ತು.

ಅಂತೂ ಕೋಲೆಜ್ ಕಲಿಯಲಿಕ್ಕೆ ಚಿನ್ನಮ್ಮನಿಗೆ ಸರಕಾರಿ ವಿದ್ಯಾ ವೇತನ ದೊರಕಿದಾಗ ಯಾರಿಗೂ ಆಶ್ಚರ್ಯವಾಗಲಿಲ್ಲ. ಅವಳ ಬಡತನಕ್ಕೆ ಕನಿಕರಪಟ್ಟುಕೊಳ್ಳುವವರು ಅವಳ ಸಾಮರ್ಥ್ಯಕ್ಕೆ ಹೆಮ್ಮೆ ಪಟ್ಟರು. ಕೀಳುದರ್ಜೆಯ ಅವಳ ಜನ್ಮಕ್ಕೆ ಜಿಗುಪ್ಸೆಗೊಂಡವರು ಸರಕಾರದ ಧೋರಣೆಯನ್ನು ಖಂಡಿಸುವವರಾದರೂ ಅವಳ ಜೊತೆಯಲ್ಲಿ ಕಲಿತ ತಮ್ಮ ಹೆಮ್ಮಕ್ಕಳ ಮಂದಬುದ್ಧಿ ಶಕ್ತಿಗೆ ತಿರಸ್ಕಾರ ತೋರಿಸುವವರಾದರು.

ಚಿನ್ನಮ್ಮ ಕೋಲೇಜಿಗೆ ಹೋಗಲಾರಂಭಿಸಿದಂದಿನಿಂದ ಚೆನ್ನರೆಡ್ಡಿಯ ಜೀವನದಲ್ಲಿ ವಿಶಿಷ್ಟ ಮಾರ್ಪಾಡುಗಳುಂಟಾದುದು ಜನರನ್ನುಆಶ್ಚರ್ಯಗೊಳಿಸಿತು. 'ರೆಡ್ಡಿ ಚೆನ್ನನ ಮಗಳೂ ಕೋಲೇಜಿಗೆ' ಹೋಗುತ್ತಾಳೆ ಎಂಬ ವರ್ತಮಾನಆಸುಪಾಸಿನಲ್ಲಿ ಹರಡಿದಂದಿನಿಂದ ಚೆನ್ನರಡ್ಡಿಯ ಸಮಾಜ ದೃಷ್ಟಿ ಬದಲಿಸಿತು. ಅವನು ಶುದ್ಧ, ಸ್ವಚ್ಛ ಬಟ್ಟೆಗಳನ್ನೇ ಉಡತೊಡಗಿದ. ಪಕ್ಷಕ್ಕೊಂದು ಬಾರಿ ಕ್ಷೌರಕಾಣುವ ಅವನ ಮುಖ ಎರಡು ದಿನಗಳಿಗೊಮ್ಮೆ ಶುಭ್ರವಾಗತೊಡಗಿತು. ಓಣಿಗಳಲ್ಲಿ, ಸಂದಿಗಳಲ್ಲಿ, ಗಲ್ಲಿಗಳಲ್ಲಿ ತಿರುಗಾಡುವುದನ್ನು ಅವನು ಇತರ ತಿರುಕರಿಗೆ ಬಿಟ್ಟುಕೊಟ್ಟ. ಕಡ್ಲೆಕಾಯಿ ಮಾರುವ ಚೀಲದ ಸ್ಥಾನದಲ್ಲಿ ಕಾಯಿಪಲ್ಯ ತರುವ ಗೃಹಸ್ಥನ ಶೈಲಿಯು ಅಲಂಕೃತವಾಯಿತು.

ಯಾರಾದರೂ ಆಗಂತುಕರು ಸಿಕ್ಕಿದರೆ ಅವರಲ್ಲಿ 'ನನ್ನ ಮಗಳು ಕೋಲೇಜಿನಲ್ಲಿ ಕಲಿಯುತ್ತಾಳೆ' ಎಂದು ಹೆಮ್ಮೆಯಿಂದ ಹೇಳುವನು ರೆಡ್ಡಿ. ಮಾತ್ರವಲ್ಲ ಆ ವರ್ತಮಾನ ಬಂದಿದ್ದ ಪತ್ರಿಕೆಯ ತುಂಡನು ತೆಗೆದು ತೋರಿಸುವನು.

ನೆಲಗಡಲೆ ಮಾರುವುದನ್ನು ಬಿಟ್ಟು ರೆಡ್ಡಿ ಈಗ ಮಿಲ್ಲಿನಲ್ಲಿ ಕೆಲಸಕ್ಕೆ ನಿಂತಿದ್ದಾನೆ. ಈಗ 'ತಲೆಯಿಟ್ಟು' ಕೆಲಸಮಾಡುತ್ತಾನೆ. ಒಬ್ಬ ಹಳೇ ಪರಿಚಿತ ಅವನಿಗೆ ಒಂದು ದಿನ ಕೆಣಕಿಯೇ ಬಿಟ್ಟ. "ಏನು ಮಹಾರಾಯಾ! ಕೆಲಸಮಾಡುವುದು ನಾಚಿಕೆ ಎಂದು ತಿಳಕೊಂಡಿದ್ದಿಯಾ. ಜಗತ್ತು ಆಲಸ್ಯಿಯಾದ ನಿನ್ನನ್ನು ಪೋಷಿಸಬೇಕಿತ್ತೆಂದು ಆಶಿಸಿದ್ದಿಯಾ. ಈಗೇನು ಬಂತು ನಿನಗೆ?"

ರೆಡ್ಡಿ ಎಂದ: "ಜಗತ್ತು ಬದಲಾಯಿಸಿದೆ ಕಣಪಾ. ಕೋಲೇಜಿನಲ್ಲಿ ಕಲಿಯುವ ನನ್ನ ಮಗಳಿಗೆ ನನ್ನಿಂದ ಅವಮರ್ಯಾದೆಯಾಗಬಾರದೆಂಬುದೇ ನನ್ನ ಇಚ್ಛೆ."

* * *

ಚಿನ್ನಮ್ಮ ಬಿ. ಎ. ಆದಳು—ಅವಳು ಫಸ್ಟ್ ಕ್ಲಾಸ್ ಪಾಸ್. ಒಂದು ಹುಡುಗಿಯರ ಶಾಲೆಯಲ್ಲಿ ಅವಳಿಗೆ ಕೆಲಸವೂ ದೊರಕಿತು. ಕೆಲವೇ ವರ್ಷಗಳಲ್ಲಿ ಅವಳು ಬಟ್ಟೆಗಿರಣಿಯ ಹೆಡ್ ಕ್ಲಾರ್ಕನನ್ನೂ ಮದುವೆಯಾದಳು. ಅವನು ತನ್ನ ಸ್ವಂತ ಸಾಮರ್ಥದಿಂದ ಅನೇಕ ಗಿರಣಗಳ ಚಾಲಕನಾದ.

ಈಗ ಕೆಂಪನ ಗುಂಡಿಗೆ ಹೋದರೆ ಯಾರಿಗಾದರೂ ಆಶ್ಚರ್ಯವಾಗಬಹುದು. ಕೊಂಪೆ ಗುಡಿಸಲುಗಳ ಬದಲಿಗೆ ಕೊಂಕ್ರಿಟಿನ ಚಿಕ್ಕ ವಸತಿಗಳು. ವನ್ಯಲತೆಗಳು ಕಾಡು ಬೆಳೆದಲ್ಲಿ ನಾಡ ಕೃಷೀ ಹೂಗಳ ಬಳ್ಳಿಗಳು ವೃತ್ತಾಕಾರದ ಬಿದಿರು ಕಮಾನುಗಳಲ್ಲಿ ತೂಗಿ ಕರೆಯುತಿದ್ದುವು. ಮೂಗು ಹಿಡಿಸುವ ಬೀದಿಗಳು ಕಣ್ಣು ಕೆರಳಿಸುತಿದ್ದುವು. ಅಲ್ಲಿ ಹೋಗಿ ಇಷ್ಟೊಂದು ಬದಲಾವಣೆಗೆ ಕಾರಣಭೂತರಾದವರಾರೆಂದು ವಿಚಾರಿಸಿದರೆ ಕೆಂಪನ ಬೀಡಿನವರು ಬೇಲಿ ಮೇಲೆ ಕೂತ ಒಬ್ಬ ತತ್ವಜ್ಞಾನಿಯ ಕಡೆಗೆ ಬೊಟ್ಟು ಮಾಡಿತೋರಿಸುವರು. ಅವನೇ ನಮ್ಮ ರೆಡ್ಡಿ.

ರೆಡ್ಡಿಯ ಜೀವನದಲ್ಲಿ ಆದ ಬದಲಾವಣೆ ನಂಬಲಸಾಧ್ಯವಾದುದು. ಈಗವನ ಕೂದಲು ನರೆದು ಬಿಳಿಟೋಪಿಯಂತೆ ಕಾಣಿಸುತ್ತದೆ. ತರುಣರ ಗುಂಪೊಂದು ಸುತ್ತ ನಿಂತಿದ್ದ ರೆಡ್ಡಿ ನಗುತ್ತ ಅವರೊಡನೆ ಸಂಭಾಷಿಸುತಿದ್ದ. ಒಂದು ಕಾಲದಲ್ಲಿ ಶ್ರೀಮಂತರನ್ನು ಕಂಡರೆ ಸಿಡಿಗೇಳುತಿದ್ದ ರೆಡ್ಡಿಚೆನ್ನ ಇಂದು ಮಾನವ ಪ್ರೇಮದ ಸಂದೇಶವನ್ನು ಸಾರುತ್ತಾನೆ.

ಚಿನ್ನಮ್ಮ ಕೋಲೇಜಿಗೆ ಹೋದಂದಿನಿಂದ ಅವನು ತನ್ನ ಜೀವನಕ್ರಮಗಳನ್ನೂ ಸ್ವಭಾವಗಳನ್ನೂ ಬದಲಾಯಿಸಿದ್ದ. ಶ್ರಮಪಟ್ಟು, ಆಲಸ್ಯಬಿಟ್ಟು, ಬೆವರಿಟ್ಟು, ಹಟತೊಟ್ಟು ಕೆಲಸಮಾಡಿದ ರೆಡ್ಡಿಯು ನಗರ ಪಿತಾಮಹರ ಗಮನಕ್ಕೆ ಬಂದ. ಅವನ ಗಿರಣಿಯವರು ತಮ್ಮ ಕೆಲಸಗಾರರು ಬೆಳೆಸುವ ಸುಂದರ ತೋಟಗಳಿಗೆ ಇನಾಮು ಇಟ್ಟಿದ್ದರು. ರೆಡ್ಡಿಯು ಕೆಂಪನ ಬೀಡನ್ನು ತನ್ನ ಜೀವನದಂತೇ ಮಾರ್ಪಾಡುಮಾಡಿ ಸುಂದರ ಉಪವನವನ್ನಾಗಿ ಮಾಡಿದ. ಗಿರಣಿಯವರು ಮಜೂರ ವಸತಿಗಳನ್ನು ಪುನಃರ್ರಚಿಸುವ ಕೆಲಸ ರೆಡ್ಡಿಗೇ ಕೊಟ್ಟರು. ರೆಡ್ಡಿಯ ಮೇಲೆ ಹೊಣೆಗಾರಿಕೆಯ ಭಾರಬಿತ್ತು. ಅವನು ಜವಾಬುದಾರಿ ಸಮಾಜ ಸದಸ್ಯನಾದ. ಸುಟ್ಟುಬಿಡಿರಿ ಎಂದು ಕೂಗಾಡುತಿದ್ದವರು ಸುಡಬೇಡಿರಿ ಎನ್ನುವವರಾದರು. ಇಷ್ಟೆಲ್ಲ ಹೇಗಾಯಿತು. ಚಿನ್ನಮ್ಮನಿಗೆ ವಿದ್ಯಾವೇತನ ದೊರಕಿದರ ಪರಿಣಾಮವಲ್ಲವೆ?

ಅಮೇರಿಕದ ಕೆಲವು ಹೆದ್ದಾರಿಗಳ ಕಾವಲು ಮೋಟಾರು ಕಾರುಗಳಿಗೆ ಪೊಟೊ ಕೆಮರಾಗಳನ್ನು ಜೋಡಿಸಿರುತ್ತಾರೆ. ಇದರಿಂದ ವಿಪರೀತ ವೇಗದಲ್ಲಿ ಓಡುವ ಕಾರುಗಳ ನಂಬ್ರವನ್ನೂ, ವೇಗವನ್ನೂ ತಿಳಕೊಳ್ಳಬಹುದು.

* * *

The South Canara Central Co-operative Bank, Ltd., Mangalore.

SEASON DEPOSITS

of Rs. 10,000/ and above for six months will be accepted at 3½% up to 31st March 1945.

U. Shantha Rama Rao,
Secretary

2-12-1944

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಚೀನದ ದುರವಸ್ಥೆ

ಇಲ್ಲಿ ಕೊಂಗ್ರೆಸ್-ಅಲ್ಲಿ ಕುವೊಮಿಟಾಂಗ್

ಹರಿದು ಹಂಚಿಹೋದ ಪ್ರಾಂತ್ಯಗಳು

ಚೀನಾ ಜಪಾನು ಯುದ್ಧವು ಈಗ ಏಳು ವರ್ಷಗಳನ್ನು ದಾಟಿತು. ಆಧುನಿಕ ಯುದ್ಧೋಪಕರಣಗಳಿಂದ ಕೂಡಿದ ಬಲಿಷ್ಠ ಜಪಾನಿನ ಸೈನ್ಯಗಳನ್ನು ಈಗ ಏಳು ವರ್ಷಗಳಿಂದ ನಿಶ್ಶಸ್ತ್ರರಾದ ಚೀನೀಯರು ಪ್ರತಿಭಟಿಸಿಕೊಂಡು ಬಂದು–ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಸಂತೋಷದಿಂದ ಪ್ರಾಣಾರ್ಪಣೆಯನ್ನು ಮಾಡುತ್ತಾ–ಶಾಶ್ವತ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದಾರೆ. ೧೯೪೨ರಲ್ಲಿ ಫಿಲಿಪ್ಪೈನು, ಬರ್ಮಾ, ಸಿಂಗಪೂರಗಳಲ್ಲಿ ಒಂದು ಕ್ಷಣವಾದರೂ ಆಂಗ್ಲ ಅಮೇರಿಕದ ಸೈನ್ಯಗಳು ಜಪಾನಿನ ಎದುರಿಗೆ ನಿಲ್ಲಲು ಶಕ್ತರಾಗದೆ ಪಲಾಯನವನ್ನು ಮಾಡಿದ್ದನ್ನು ಆಲೋಚಿಸುವಾಗ ಈ ಏಳುವರ್ಷಗಳಲ್ಲಿ ಎಂತಹ, ಶೌರ್ಯದಿಂದ ಚೀನೀಯರು ಹೋರಾಡುತ್ತಿದ್ದಾರೆಂಬುದನ್ನು ನಾವು ತಿಳಿಯಬಹುದು. ಜಪಾನಿನ ಸೈನಿಕರಿಗೆ ಚೀನೀಯರೆಂದರೆ ತುಚ್ಛೀಕಾರವಿದ್ದುದರಿಂದ ಅವರು ಚೀನೀಯರ ಪಟ್ಟಣಗಳನ್ನು ಹಿಡಿದಲ್ಲೆಲ್ಲಾ ಚೀನೀಯರ ಮೇಲೆ ಪೈಶಾಚಿಕ ಅತ್ಯಾಚಾರಗಳನ್ನು ನಡೆಸಿದರು. ನಿಶ್ಶಸ್ತ್ರರಾದ ಬಾಲವೃದ್ಧರನ್ನು ಕರುಣೆಯಿಲ್ಲದೆ ಕೊಂದು, ಹೆಂಗಸರ ಮೇಲೆ ಅವರ ಸಂಬಂಧಿಕರ ಎದುರಿನಲ್ಲಿಯೇ ಬಹಿರಂಗವಾಗಿ ಅತ್ಯಾಚಾರಗಳನ್ನು ನಡೆಯಿಸಿ, ಚೀನೀಯರನ್ನು ಸಿಕ್ಕಿದಲ್ಲೆಲ್ಲಾ ಕ್ರೂರ ಹಿಂಸೆಗೆ ಗುರಿಮಾಡಿದರೂ ಚೀನೀಯರು ಎದೆಗೆಡಲಿಲ್ಲ. ಅವರು ಜಪಾನೀ ಸೈನ್ಯಗಳಿರುವ ಪಟ್ಟಣಗಳಿಂದ ದೂರಕ್ಕೆ ತಮ್ಮ ಕೈಗಾರಿಕೆ, ವಿದ್ಯೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳನ್ನು ಕೇಂದ್ರ ಸರಕಾರದೊಂದಿಗೆ ಒಯ್ದು ಚೀನದ ದುರ್ಗಮಪರ್ವತ ಪ್ರದೇಶದಲ್ಲಿರುವ ಶಂಗ್‌ಕಿಂಗಿನಲ್ಲಿ ರಾಜಧಾನಿಯನ್ನು ಸ್ಥಾಪಿಸಿಕೊಂಡು, ಜಪಾನೀಯರೊಡನೆ ಹೋರಾಟವನ್ನು ಹಲವು ಚತುರೋಪಾಯಗಳಿಂದ ಮಾಡುತ್ತಾ ಜಪಾನಿನ ಸಾಮ್ರಾಜ್ಯತೃಷ್ಣೆಯು ನಿರರ್ಥಕವಾಗುವಂತೆ ಮಾಡಿದರು.

ಚೀನೀಯರ ಈ ಅದ್ಭುತ ಹೋರಾಟದಿಂದ ಜಪಾನಿನ ಹಾವಳಿಯು ಆಸ್ಯಖಂಡದಲ್ಲಿ ಇತರ ಕಡೆ ವಿಸ್ತರಿಸಲಿಕ್ಕೆ ತಡೆಗಟ್ಟಿದಂತಾಯಿತು; ಹಿಂದುಸ್ಥಾನವು ಯುದ್ಧದ ಅತ್ಯಂತ ಭೀಕರ ಕಷ್ಟಗಳಿಂದ ಪಾರಾಗಿ ಉಳಿಯಿತು. ಈ ಅದ್ಭುತ ಹೋರಾಟದಲ್ಲಿ ಸ್ವದೇಶ ರಕ್ಷಣೆಗಾಗಿ ಜಪಾನಿಯರನ್ನು ಪ್ರತಿಭಟಿಸುವ ಕಾರ್ಯದಲ್ಲಿ ಚೀನದ ಕುವೊಮಿಂಟಾಂಗ್ ಪಕ್ಷದವರೊಡನೆ ಸಮಾಜವಾದೀ ಪಕ್ಷವು ಸಂಪೂರ್ಣ ಸಹಕರಿಸಿ ಶಂಗಕ್ಯಾಶೇಕರನ್ನು ಚೀನದ ಸರ್ವಾಧಿಕಾರಿಯಾಗಿ ಒಪ್ಪಿಕೊಂಡಿತು. ಏಳು ವರ್ಷಗಳಿಂದ ಬಾಳಿಕೊಂಡು ಬಂದ ಚೀನದ ಈ ಒಕ್ಕಟ್ಟು ಈಗ ಮುರಿದಂತೆ ತೋರುತ್ತದೆ. ಸಮಾಜವಾದೀ ಪಕ್ಷದ ಮುಖಂಡರು ಈಗ ಶಂಗಕ್ಯಾಶೇಕರ ನಾಯಕತ್ವವನ್ನು ಧಿಕ್ಕರಿಸಿ, ಅವರನ್ನು ಸರ್ವಾಧಿಕಾರಿ ಸ್ಥಾನದಿಂದ ತಪ್ಪಿಸಬೇಕೆಂಬ ಪ್ರಯತ್ನದಲ್ಲಿದ್ದಾರೆಂದು ಚೀನದಿಂದ ಇತ್ತೀಚೆಗೆ ಬಂದ ವೃತ್ತಾಂತ ಪತ್ರಿಕೆಗಳಿಂದ ತಿಳಿದು ಬರುತ್ತದೆ.

ಜಪಾನಿನೊಡನೆ ಬಲಿಷ್ಠ ಅಮೇರಿಕವು ಹೋರಾಟ ಪ್ರಾರಂಭಿಸಿದೊಡನೆ ಚೀನದ ಒಕ್ಕಟ್ಟು ಮುರಿದು ಶಂಗಕ್ಯಾಶೇಕರ ಬಲವು ತಗ್ಗಿದ್ದು ಬಹಳ ಚಿಂತಾಸ್ಪದವನ್ನೀಯುವ ಸಂಗತಿಯಾದರೂ ಹಾಗೆ ಸಂಭವಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಚೀನದ ಕುವೊಮಿಂಟಾಂಗ್ ಪಕ್ಷವೂ ಸಮಾಜವಾದೀ ಪಕ್ಷವೂ ಸನ್‌ಯಾತಸೇನರ ತತ್ವಗಳನ್ನೆ ಮನ್ನಿಸುವ, ಚೀನೀ ಸ್ವಾತಂತ್ರ್ಯವನ್ನಪೇಕ್ಷಿಸುವ ಪಕ್ಷಗಳಲ್ಲದೆ ಅವುಗಳಲ್ಲಿ ಹೊರಗಿನ ಒಡೆತನವನ್ನು ಒಪ್ಪುವ ಪಕ್ಷಗಳ್ಯಾವವೂ ಇಲ್ಲ. ಸನ್‌ಯಾತಸೇನರು ಚೀನದ ಉನ್ನತಿಗೆ ಬೇಕಾದ ರಾಜ್ಯಾಂಗ ರಚನಾಕ್ರಮಗಳಿಗೆ ಮೂರು ತತ್ವಗಳನ್ನು ತಳಹದಿಯಾಗಿಟ್ಟುಕೊಳ್ಳಬೇಕೆಂದು ಹೇಳುತ್ತಾರೆ. ದೇಶದ ಸಂಪೂರ್ಣ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಜನತೆಯ ಆರ್ಥಿಕ ನೆಮ್ಮದಿಗಳೇ ಈ ಮೂರು ತತ್ವಗಳಾಗಿರುತ್ತವೆ. ಈ ತತ್ವಗಳನ್ನು ಚೀನದ ಉಭಯಪಕ್ಷದವರೂ ಒಪ್ಪಿಕೊಂಡರೂ ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅವರೊಳಗೆ ಮತಭೇದವಿದೆ.

ಚೀನದಲ್ಲಿ ಪ್ರಾಚೀನದಿಂದ ನಡೆದು ಬರುತ್ತಿದ್ದ ಚಕ್ರಾಧಿಪತ್ಯದ ಕ್ರಮವನ್ನು ಸನ್‌ಯಾತಸೇನರು ೧೯೧೨ರಲ್ಲಿ ಅಂತ್ಯಗೊಳಿಸಿ, ಪ್ರಜಾಪ್ರಭುತ್ವದ ರಿಪಬ್ಲಿಕನ್ನು ಪ್ರಭುತ್ವದ ರಿಪಬ್ಲಿಕಿಗೆ ಚೀನದಲ್ಲಿ ಅನೇಕ ಕಡೆಗಳಿಂದ ವಿರೋಧಿಗಳೆದ್ದು ಚೀನವು ಹಲವು ಸ್ವತಂತ್ರ ಪ್ರಾಂತ್ಯಗಳಾಗಿ ಛಿದ್ರವಾಗುವದೋ ಎಂಬ ಭೀತಿಯು ತೋರಿಬಂದಿತ್ತು. ಕುವೊಮಿಂಟಾಂಗಿನೊಳಗೆ ಶ್ರೀಮಂತರು ಮತ್ತು ಭಂಡವಾಳಶಾಹಿಗಳೇ ಪ್ರಬಲರಾಗಿ ಪ್ರಜಾಪ್ರಭುತ್ವದ ಮಾತು ಹಿಂದೆ ಹಿಂದೆ ಬೀಳುತ್ತಾ ಬರುತ್ತಿತ್ತು. ಕುವೊಮಿಂಟಾಂಗಿನ ನಾಯಕತ್ವವನ್ನು ಶಂಗಕ್ಯಾಶೇಕರು ಸ್ವೀಕರಿಸಿದ ಬಳಿಕ ಹೊರಗಿನ ವಿರೋಧಿಗಳ ಬಲವು ತಗ್ಗಿ ಚೀನದಲ್ಲಿ ಒಂದುತರದ ಒಕ್ಕಟ್ಟಾಯಿತು. ಆದರೆ ಸನ್‌ಯಾತಸೇನರು ಅಷ್ಟರಲ್ಲಿ ಕಾಲಾಧೀನರಾದ್ದರಿಂದ ಒಳಗಿನ ಛಿದ್ರಗಳು ಬಲವಾಗುತ್ತಾ ಬಂದವು. ಕುವೊಮಿಂಟಾಂಗಿನಲ್ಲಿಯೂ ಚೀನಾದೇಶದಲ್ಲಿಯೂ ಸಮಾಜವಾದೀ ಪಕ್ಷವೊಂದು ತಲೆದೋರಿ ಅದು ಪ್ರಜಾಪ್ರಭುತ್ವದ ಕಾರ್ಯಗಳನ್ನು ಸಾಮಾನ್ಯ ಜನರ

ಜರ್ಮನ್ ವಿಮಾನ ಹಾವಳಿಯಿಂದ ಇಂದು ಬ್ರಿಟನಿನಲ್ಲಿ ಒಂದು ಮನೆಯಾದರೂ ಜಖಂ ಆಗದೆ ಉಳಿದಿಲ್ಲ. ಪ್ರತಿ ೩ರಲ್ಲಿ ಒಂದು ಮನೆ ಸಂಪೂರ್ಣ ನಾಶವಾಗಿದೆ. ಯುದ್ಧಾನಂತರ ಅಲ್ಲಿ ಕಟ್ಟಿಸಲ್ಪಡುವ ಉಕ್ಕು ಚೌಕಟಿನ ಅಂದರೆ ಅತೀ ಕಮ್ಮಿ ಇಟ್ಟಿಗೆ ಇರುವ ಮಾದರಿ ಮನೆಯ ದೃಶ್ಯ.

ಚೀನದಲ್ಲಿ ಸ್ಥಾಪಿಸ ನಿಶ್ಚೈಸುವಾಗ, ಚೀನೀಯರಲ್ಲಿ ರಾಷ್ಟ್ರಜ್ಞಾನವು ಸಾಕಷ್ಟಿಲ್ಲದ್ದರಿಂದ ಪ್ರಕೃತ ಜನತೆಯಲ್ಲಿ ರಾಷ್ಟ್ರಜ್ಞಾನವನ್ನು ಕಲ್ಪಿಸುತ್ತಾ ಜನತೆಯ ಬಗ್ಗೆ ಕುವೊಮಿಂಟಾಂಗ್ ಸಂಸ್ಥೆಯು ರಾಜ್ಯಾಧಿಕಾರವನ್ನು ನಡೆಯಿಸಬಹುದಾಗಿ ಅವರು ವಿಧಿಸಿದ್ದರು. ಕುವೊಮಿಂಟಾಂಗ್ ಸಂಸ್ಥೆಯಲ್ಲಿ ಸನ್‌ಯಾತಸೇನರ ಧೋರಣೆಯನ್ನು ಸ್ವೀಕರಿಸಿದ ಎಲ್ಲರೂ ಸೇರಿದ್ದರು. ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಹೇಗೆ ಭಂಡವಾಳಶಾಹಿ, ಸಮಾಜವಾದಿಗಳೂ ಶ್ರೀಮಂತ ಬಡವರೂ ಕೃಷಿಕಕೂಲಿಯಾಳುಗಳೂ ವಿದ್ವಾಂಸಪಾಮರರೂ ಸೇರಿಕೊಂಡಿದ್ದಾರೋ ಹಾಗೆಯೇ ಚೀನೀ ಸ್ವಾತಂತ್ರ್ಯವನ್ನು ಅಪೇಕ್ಷಿಸುವ ಎಲ್ಲಾ ಪಕ್ಷಗಳ ಜನರೂ ಕುವೊಮಿಂಟಿಂಗ್‌ನಲ್ಲಿ ಸೇರಿಕೊಂಡಿದ್ದಾರೆ.

೧೯೧೨ರಲ್ಲಿ ಚಕ್ರಾಧಿಪತ್ಯವು ಚೀನದಿಂದ ಅಡಗಿಹೋದರೂ ೧೯೧೨ರಿಂದ ೧೯೨೭ರ ತನಕ ಸನ್‌ಯಾತಸೇನರ ಪ್ರಜಾ ಆರ್ಥಿಕ ಉನ್ನತಿಯಸಾಧನೆಯನ್ನೂ ಸನ್‌ಯಾತಸೇನರ ಧೋರಣೆಯಂತೆ ವೇಗದಿಂದ ಕಾರ್ಯರೂಪಕ್ಕೆ ತರುವ ಫಲವನ್ನು ಕೈಕೊಂಡಿತು. ಈ ಪಕ್ಷವು ಅಲ್ಪಸಂಖ್ಯಾತವಾದರೂ ಅದಕ್ಕೆ ಸೇರಿದ ಜನರೆಲ್ಲಾ ನಿಸ್ವಾರ್ಥವೀರರಾದ್ದರಿಂದ ಅವರ ಕಾರ್ಯಕ್ರಮಗಳು ವೇಗಗತಿಯಿಂದ ಮುಂದರಿಯ ಪ್ರಾರಂಭಿಸಿದವು. ಕುವೊಮಿಂಟಾಂಗಿನಲ್ಲಿ ಬಹುಸಂಖ್ಯಾತರಾದ ಶ್ರೀಮಂತ ಭಂಡವಾಳಶಾಹೀ ಪಕ್ಷದವರಿಗೆ ಇದು ಹಿತವಾಗದ್ದರಿಂದ ಈ ಸಮಾಜವಾದಿಗಳು ಕುವೊಮಿಂಟಾಂಗಿನಿಂದ ಬಹಿಷ್ಕೃತರಾದರು. ಕುವೊಮಿಂಟಾಂಗಿನ ಬಹು ಪಕ್ಷದ ಕಡೆಯಿಂದ ಶಂಗಕ್ಯಾಶೇಕರು ಈ ಬಹಿಷ್ಕೃತಸಮಾಜವಾದೀ ಪಕ್ಷದವರನ್ನು ನಿರ್ಮೂಲ ಮಾಡ ಪ್ರಯತ್ನಿಸಿ ಅವರನ್ನು ಮಧ್ಯ, ದಕ್ಷಿಣ ಚೀನಗಳಿಂದ ಹೊರ ಅಟ್ಟಿದರು. ಸಂಪೂರ್ಣನಾಶ ಒದಗುವ ಗಂಡಾಂತರದ ಆ ಕಷ್ಟ ಕಾಲದಲ್ಲಿಸಮಾಜವಾದೀ ಪಕ್ಷದವರು ಪಶ್ಚಿಮ ಚೀನದ ಪರ್ವತಪ್ರದೇಶಗಳಿಗೆ ಪಲಾಯನರಾಗಿ ಅಲ್ಲಿ ೧೯೩೧ರಲ್ಲಿ ಸೋವಿಯಟ್ ಚೀನ ರಿಪಬ್ಲಿಕ್ ಎಂಬ ಹೆಸರಿನಿಂದ ತಮ್ಮ ಪ್ರತ್ಯೇಕ ಅಧಿಕಾರವನ್ನು ಸ್ಥಾಪಿಸಿದರು. ಅಲ್ಲಿಯೂ ಅವರ ಬೆನ್ನನ್ನು ಶಂಗಕ್ಯಾಶೇಕರು ಬಿಡದ್ದರಿಂದ ೧೯೩೭ರ ತನಕ ಚೀನದ ಎರಡು ಪಕ್ಷಗಳಲ್ಲಿಯೂ ನಿರಂತರ ಹೋರಾಟಗಳು ಒದಗಿ ಜಪಾನಿಗೆ ಚೀನದಲ್ಲಿ ತನ್ನ ಬಲವನ್ನು ವೃದ್ಧಿಗೊಳಿಸಲಿಕ್ಕೆ ಚೆನ್ನಾಗಿ ಎಡೆದೊರೆಯಿತು. ಈ ಹೋರಾಟಗಳ ನಡುವೆ ಶಂಗಕ್ಯಾಶೇಕರನ್ನೇ ಸಮಾಜವಾದೀ ಪಕ್ಷದವರು ಸೆರೆಹಿಡಿದರು. ಆದರೆ ಹಾಗೆ ಸೆರೆ ಹಿಡಿದಾಗ ಶಂಗಕ್ಯಾಶೇಕರ ಅದ್ಭುತ ಗುಣ, ದೇಶಪ್ರೇಮಗಳು ಸಮಾಜವಾದೀ ಪಕ್ಷದವರಿಗೆ ವ್ಯಕ್ತವಾದ್ದರಿಂದ ಹೋರಾಟಗಳು ನಿಂತು ಒಪ್ಪಂದವಾಯಿತು. ಜಪಾನಿನ ದರ್ಪವನ್ನು ತಗ್ಗಿಸಿ, ಜಪಾನನ್ನು ಚೀನದಿಂದ ಹೊರ ಅಟ್ಟುವ ಕಾರ್ಯವನ್ನು ಶಂಗಕ್ಯಾಶೇಕರು ಕೈಕೊಂಡು, ಸಮಾಜವಾದೀ ಪಕ್ಷದವರು ಅವರ ನಾಯಕತ್ವವನ್ನು ಸ್ವೀಕರಿಸಿ, ಅವರೊಡನೆ ಸಹಕರಿಸಬೇಕೆಂದು ನಿಶ್ಚಯವಾಯಿತು. ಈ ಒಕ್ಕಟ್ಟಿನ ಬಲದಿಂದ ಶಂಗಕ್ಯಾಶೇಕರು ೧೯೩೭ರಲ್ಲಿ ಜಪಾನನ್ನು ಪ್ರತಿಭಟಿಸ ಶಕ್ತರಾಗಿ ಈಗಿನ ಚೀನೀ ಜಪಾನ್ ಯುದ್ಧವು ಆ ವರ್ಷ ಪ್ರಾರಂಭಿಸಿತು.

ಆದರೆ ಈ ಏಳು ವರ್ಷಗಳಲ್ಲಿ ಉಭಯಪಕ್ಷದ ಸೇನೆಗಳೂ ನಿರಂತರ ಜಪಾನಿನೊಡನೆ ಹೋರಾಡುತ್ತಿದ್ದರೂ ಅವರಲ್ಲಿ ಸಂಪೂರ್ಣ ಒಕ್ಕಟ್ಟಾಗಲಿಲ್ಲ. ಸಮಾಜವಾದೀ ಪಕ್ಷದವರು ಶಂಗಕ್ಯಾಶೇಕರ ಗುಣಗಳನ್ನೊಪ್ಪಿ ಅವರ ನಾಯಕತ್ವವನ್ನು ಸಂತೋಷದಿಂದ ಸ್ವೀಕರಿಸಿದರೂ ಕೇಂದ್ರ ಸರಕಾರದ ಅಧಿಕಾರ ಸ್ಥಾನಗಳಲ್ಲಿ ಶ್ರೀಮಂತ ಪಕ್ಷದವರೇ ಇದ್ದುದರಿಂದ ಸಮಾಜವಾದೀ ಪಕ್ಷದವರಿಗೆ ಕುವೊಮಿಂಟಾಂಗಿನ ಆಳಿಕೆಯು ಹಿತವಾಗಲಿಲ್ಲ. ತಮ್ಮ ಸೋವಿಯಟ್ ಸಂಸ್ಥೆಗಳನ್ನೆಲ್ಲಾ ಅವರು ರದ್ದುಪಡಿಸಿ ಕೇಂದ್ರ ಸರಕಾರದ ಆಡಳಿತೆಯನ್ನು ತಾವಿರುವ ಪ್ರಾಂತ್ಯಗಳಲ್ಲಿಯೂ ಒಪ್ಪಿಕೊಂಡರೂ ತಮ್ಮ ಸೇನೆಯನ್ನು ಸಂಪೂರ್ಣ ಕುವೊಮಿಂಟಾಂಗ್ ಸೈನ್ಯದೊಡನೆ ಮಿಲನವಾಗಿ ಹೋಗಲಿಕ್ಕೆ ಅವರು ಬಿಡಲಿಲ್ಲ. ತಮ್ಮ ಪಕ್ಷದ ನಾಯಕರ ತಮ್ಮ ಪಕ್ಷದ ಸೇನಾಪತಿಗಳ ಕೈಕೆಳಗೆ ತಮ್ಮ ಸೇನೆಗಳನ್ನಿಟ್ಟು ಶಂಗಕ್ಯಾಶೇಕರ ಆಜ್ಞೆಗಳನ್ನು ಪಾಲಿಸುತ್ತಾ ಬಂದರು.

ಈ ಕಾರಣಗಳಿಂದಾಗಿ ಕುವೊಮಿಂಟಾಂಗ್ ಪಕ್ಷದ ಅಧಿಕಾರಿಗಳು ಸಮಾಜವಾದೀ ಪಕ್ಷದ ಸೇನೆಗಳಿಗೆ ಬೇಕಾದ ಅನುಕೂಲತೆಗಳು ಒದಗದಂತೆ ಪ್ರಯತ್ನಿಸತೊಡಗಿದರು. ಆಂಗ್ಲ ಅಮೇರಿಕಗಳು ಕುವೊಮಿಂಟಾಂಗ್ ಪಕ್ಷದ ಸರಕಾರವೇ ಚೀನದ ಸರಕಾರವೆಂದು ಒಪ್ಪಿ ತಮ್ಮ ಸಾಮಗ್ರಿ ಸಹಾಯಗಳನ್ನು ಶಂಗಕಿಂಗೆ ಮುಟ್ಟಿಸುತ್ತಿದ್ದರು. ಶಂಗಕಿಂಗಿನ ಅಧಿಕಾರಿಗಳು ಆ ಸಾಮಗ್ರಿಗಳಲ್ಲಿ ಒಂದನ್ನೂ ಸಮಾಜವಾದೀ ಪಕ್ಷದ ಸೇನೆಗಳಿಗೆ ಹೋಗ ಬಿಡದ್ದರಿಂದಲೂ, ತಮ್ಮ ಕೈಕೆಳಗಿರುವ ಆಯುಧ ತಯ್ಯಾರಿಯ ಕಾರ್ಖಾನೆಗಳಿಂದ ಸಮಾಜವಾದೀ ಪಕ್ಷದ ಸೈನ್ಯಗಳಿಗೇನೂ ಸಹಾಯವನ್ನು ಮಾಡದ್ದರಿಂದಲೂ ಸಮಾಜವಾದೀ ಪಕ್ಷದವರಲ್ಲಿ ಅಸಂತುಷ್ಟಿಯು ಬಲವಾಗಿ, ಸಮಾಜವಾದೀ ಪಕ್ಷದ ಸೇನೆಗಳು ಶಂಗಕ್ಯಾಶೇಕರ ಆಜ್ಞೆಗಳನ್ನು ಪರಿಪಾಲಿಸುವದನ್ನು

(೧೦ನೇ ಪುಟಕ್ಕೆ ಮುಂದುವರಿದಿದೆ)

ನಿರಕ್ಷರತೆ ನಿವಾರಣೆಯ ಮಹತ್ವ

ಪಾಶ್ಚಾತ್ಯ ದೇಶಗಳಲ್ಲಿ, ಮುಖ್ಯವಾಗಿ ಬ್ರಿಟನು, ಫ್ರಾನ್ಸು ಜರ್ಮನೀ ದೇಶಗಳಲ್ಲಿ, ಅಕ್ಷರತೆಯು ಬೆಳೆದುದರ ಫಲವಾಗಿ ಪ್ರತಿಯೊರ್ವನಿಗೆ ಎಂಬಂತೆ ಓದು ಬರೆಯಲು ಬರುತ್ತಿದೆ. ಈ ಕಾರಣದಿಂದ ಪುಸ್ತಕ ವಾಚನದ ಕುರಿತು ಜನರಲ್ಲಿ ಒಳ್ಳೆ ಅಭಿರುಚಿಯು ಉಂಟಾಗಿರುತ್ತದೆ ಇದರ ಪರಿಣಾಮವಾಗಿ ಪತ್ರಿಕೆಗಳ ಮತ್ತು ಪುಸ್ತಕಗಳ ಪ್ರಸಾರವು ಅತಿರೇಖವಾಗಿ ಹೆಚ್ಚಿರುತ್ತದೆ. ಇಂಗ್ಲಿಷ್, ಫ್ರೆಂಚ್, ಮತ್ತು ಜರ್ಮನ್ ಭಾಷೆಗಳಲ್ಲಿ ಈ ಯುದ್ಧ ಪೂರ್ವದ ದಿನಗಳಲ್ಲಿ ವರ್ಷಂಪ್ರತಿ ಸಾಧಾರಣ ೪೦,೦೦೦ತರದ ಪುಸ್ತಕಗಳು ಹೊರಡುತ್ತಿದ್ದವು. ಪತ್ರಿಕೆಗಳ ಮತ್ತು ಪುಸ್ತಕ ಪ್ರಸಾರವು ಹೆಚ್ಚಿದುದರಿಂದ ಅಮೇರಿಕದಲ್ಲೂ ಯುರೋಪ ಖಂಡದ ಸ್ಕೆಂಡಿನೇವಿಯನ್ ಪ್ರದೇಶದಲ್ಲೂ ಅನೇಕ ಕಾಗದದ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟು ಅವು ಒಳ್ಳೆ ಲಾಭದಾಯಕ ರೀತಿಯಲ್ಲಿ ನಡೆಯುವಂತಾಯಿತು. ಪತ್ರಿಕಾ ವ್ಯವಸಾಯ, ಪುಸ್ತಕಾ ಪ್ರಕಟಣೆ ಉದ್ದಿಮ, ಇವುಗಳು, ಅರಿವೆ, ಮತ್ತು ಉಕ್ಕಿನ ಕೈಗಾರಿಕೆಗಳಂತೆ ದೊಡ್ಡ ಕೈಗಾರಿಕೆಗಳಂತೆ ನಡೆಯುತ್ತಿದ್ದು ಜನರಿಗೆ ಉದ್ಯೋಗ ದೊರಕುವಂತಾಯಿತು.

ಹೀಗೆ ಪ್ರಗತಿಹೊಂದಿದ ಈ ದೇಶಗಳಲ್ಲಿ ಹಿಂದೂದೇಶದಲ್ಲಿದ್ದಷ್ಟು, ಜನಸಂಖ್ಯೆಯು ಇರುವುದಿಲ್ಲ. ಸಂ. ಅಮೇರಿಕದ ಪ್ರಾಂತ್ಯಗಳ, ಒಟ್ಟು ವಿಸ್ತಾರವು ನಮ್ಮ ದೇಶದ ಎರಡು ಪಾಲಷ್ಟಿದ್ದರೂ ಅಲ್ಲಿನ ಒಟ್ಟು ಜನಸಂಖ್ಯೆಯು ನಮ್ಮ ಜನಸಂಖ್ಯೆಯ ಅರ್ಧದಷ್ಟಾಗಿರುತ್ತದೆ. ಹಿಂದೂದೇಶವು ೪೦೦ ಕೋಟಿ ಜನರ ನಿಲಯವಾಗಿದ್ದು, ಇಲ್ಲಿ ಸದ್ಯಕ್ಕೆ ಅಕ್ಷರತೆಯು ಶೇಕಡಾ ೬ರ ಜನರಲ್ಲಿ ಮಾತ್ರ ಹರಡಿರುತ್ತದೆ. ನಮ್ಮ ದೇಶವೂ ಅಕ್ಷರತೆಯಲ್ಲಿ ರದಲ್ಲಿ ಅಮೇರಿಕಾದಂತೆ ಮುಂದುವರಿದುದಾದರೆ, ಆಗ ಪತ್ರಿಕಾ ವ್ಯವಸಾಯ ಮತ್ತು ಪುಸ್ತಕ ಪ್ರಕಟಣಾದಂದೆಗಳಿಗೆ ಪ್ರೋತ್ಸಾಹವು ಹೆಚ್ಚಿ ನಮ್ಮಲ್ಲೂ ಅವುಗಳು ದೊಡ್ಡ ವ್ಯವಸಾಯಗಳಾಗಬಹುದು. ಅನೇಕರಿಗೆ ಉದ್ಯೋಗವನ್ನು ಒದಗಿಸಬಹುದು. ನಮ್ಮ ಕಾಗದ ಕೈಗಾರಿಕೆ ಅತಿರೇಖ ಅಭಿವೃದ್ಧಿಯಾಗಬಹುದು. ಕಾಗದ ವಿಚಾರದಲ್ಲಿ ಸ್ವಸಾಮರ್ಥಿಯಾಗಲು ನಮ್ಮ ದೇಶದಲ್ಲಿ ಒಳ್ಳೆ ಅನುಕೂಲಗಳಿವೆಯಾಗಿ ಕಂಡು ಹಿಡಿಯಲಾಗಿದೆ.

ಚೀನಾದೊಳಗೆ ಅಮೇರಿಕನ್ನರ ಪ್ರವೇಶ

ಫಿಲಿಪ್ಪಾಯಿನ್ ದ್ವಿಪಗಳನ್ನು ವಿಮೋಚಿಸುವ ಕಾರ್ಯವು ಈಗ ಪೂರ್ಣವಾಗುತ್ತ ಬರುತ್ತಿದ್ದು, ಜಪಾನನ್ನು ಸೋಲಿಸಲು ಮುಂದಿನ ಹೋರಾಟವು ಚೀನಾದಲ್ಲಿ ನಡೆಯಿಸುವ ನಿರ್ಧಾರಕ್ಕೆ ಬಂದಿರುವರು,–ಅಮೇರಿಕನರು. ಚೀನಾದಲ್ಲಿ ನಡೆಯಬೇಕಾದ ಈ ಹೋರಾಟವು ಜಪಾನನ್ನು ಸೋಲಿಸುವುದರಲ್ಲಿ ಖಂಡಿತಪರಿಣಾಮಕಾರಿಯಾಗಬೇಕಾದುದರಿಂದ,ಅಮೇರಿಕನ್ನರು ಈ ಹೋರಾಟಕ್ಕಾಗಿ ಮಹಾ ಸಿದ್ಧತೆಯ ಕಾರ್ಯಗಳಲ್ಲಿ ತೊಡಗಿರುವರು. ಚೀನೀಯರೊಡನೆ ಸಹಕರಿಸಿ ಈ ಹೋರಾಟವು ನಡೆಯಬೇಕೆಂದೂ ನಿರ್ಧಾರವಾದುದರಿಂದ, ಚೀನಿಯ ಸೈನಿಕರಿಗೆ ಅಮೇರಿಕನ್ ಸಂಗ್ರಾಮತಜ್ಞರ ಕೈಗಳಲ್ಲಿ ಆಧುನಿಕ ಯುದ್ಧ ಕ್ರಮಗಳಲ್ಲಿ ತರಬೇತು ಈಗ ನಡೆಯುತ್ತಿದೆ. ಚೀನಿಯ ಸೈನಿಕನ ಪರಿಪಾಠವು ಸರಿ

ಪ್ರಚಲಿತ ಸಮಾಚಾರಗಳು

ಯಾಗಿ ಆಗುವಂತೆ ಆತನಿಗೆ ಇಂಗ್ಲಿಷ್ ಭಾಷಾ ಜ್ಞಾನವು ಅತಿ ಬೇಗನೆ ಮಾಡಿಕೊಡಲಾಗುತ್ತಿದೆ. ಆಧುನಿಕ ಯುದ್ಧೋಪಕರಣಗಳ ಉಪಯೋಗದಲ್ಲಿ ಚೀನಿಯರ ತರಬೇತು ಅತಿ ಸ್ವಲ್ಪ ಸಮಯದಲ್ಲಿ ನಡೆಯುವಂತೆ ವ್ಯವಸ್ಥೆಗಳು ಮಾಡಲಾಗಿವೆ. ಹೀಗೆ ಚೀನಿಯ ಬಲವನ್ನು ಸುಧಾರಿಸಿಕೊಂಡು ಅಮೇರಿಕನ್ ಆಧುನಿಕ ಬಲವು ಅದರೊಡನೆ ಸೇರಿ, ಚೀನದ ಜಪಾನೀ ಬಂಧನಕ್ಕೆ ಒಳಗಾದ ಪ್ರದೇಶಗಳ ವಿಮೋಚನಾ ಕಾರ್ಯವು ಕೈಗೊಳ್ಳಲಾಗುವುದು. ಜಪಾನೀಯರ ಚೀನಾದ ಮೇಲಿನ ಹಿಡಿವು ಸಡಿಲಾದ ವಿನಹ ಯಶಸ್ಸು ದೊರಕದೆಂಬ ಅಭಿಪ್ರಾಯಕ್ಕೆ ಬಂದವರಾಗಿ ಮಿತ್ರರು ಈಗಿನ ನಿರ್ಧಾರಕ್ಕೆ ಬಂದಿರುವರು. ಫ್ರಾನ್ಸಿನ ಕರಾವಳಿಯಲ್ಲಿಳಿದಂತೆ ಚೀನಾದ ಜಪಾನೀ ಆಕ್ರಮಿತ ಕರಾವಳಿ ಪ್ರದೇಶದಲ್ಲೊಂದೆಡೆ ಇಳಿಯಲು, ಮಿತ್ರರು ಬೇಕಾದ ಸಿದ್ಧತೆಗಳನ್ನು ಮಾಡುತ್ತಿರುವರು.

ಕಳೆದ ಸೆಪ್ಟಂಬರ್ ೩ರಂದು ಮಿತ್ರ ಸೈನ್ಯಗಳು ಬೆಲ್ಜಿಯಮ್ಮಿನ ಬ್ರುಸೆಲ್ಸ್ ನಗರವನ್ನು ಹೊಕ್ಕಿದವು. ಈ ಚಿತ್ರದಲ್ಲಿ ಮಿತ್ರ ಟೆಂಕುಗಳು ನಗರ ಪ್ರವೇಶ ಮಾಡುವಾಗ ಜರ್ಮನ್ ಕೈದಿಗಳು ತಲೆಯ ಮೇಲೆ ಕೈಯಿಟ್ಟು ಕೂತಿರುವುದನ್ನು ಕಾಣಬಹುದು.

ದಕ್ಷಿಣ ಅಮೇರಿಕಾದಲ್ಲಿ ನಾಜೀ ಹಂಚಿಕೆ

ಹಿಟ್ಲರನ ನಾಶದೊಡನ್ನೆ, ಜರ್ಮನಿಯ ನಾಜೀ ಪೆಸಿಷ್ಟ ನಿರುಂಕುಶಪ್ರಭುತ್ವವಾದೀ ಪ್ರಭಾವಗಳ ನಾಶವಾಗುವ ಕುರಿತು ತುಂಬಾ ಸಂದೇಹಗಳುಂಟಾಗಿವೆ. ಕಾರಣ ಈ ಯುದ್ಧದಲ್ಲಿ ಸೋತ ಸಂಭವದಲ್ಲಿ ನಮ್ಮ ಮೂಲ ಉದ್ಧೇಶಗಳ ಸಾಧನೆಗಾಗಿ ನಾಜಿಗಳು ಬೇರೆ ಒಂದು ಯೋಜನೆಯನ್ನು ಈ ಮೊದಲೇ ಕಲ್ಪಿಸಿ ಬಿಟ್ಟ ವಿಷಯ ಈಗ ತಿಳಿದು ಬಂದಿರುತ್ತದೆ. ಯುರೋಪಿನ ಅಭಿಕ್ರಮವು ಯಶಸ್ವಿಯಾಗುವುದರಲ್ಲಿ ಜರ್ಮನರ 'ಪಂಚಮದಳ' ಚಟುವಟಿಕೆಗಳು ನಡೆದಂತೆ, ಯುದ್ಧೋತ್ತರದಲ್ಲಿ ನಾಜೀ ರಕ್ಷಣೆ ಮತ್ತು ಕ್ರಮೇಣ ಅವರ ಬೆಳವಣಿಗೆಗೆ, "ಷಷ್ಠಿದಳ"ವು ಹಿಂದೆಯೆ ವ್ಯವಸ್ಥೆ ಹೊಂದಿದೆ. ಈ ಷಷ್ಠಿದಳದ ಚಟುವಟಿಕೆಗಳು ಪ್ರೆಂಕೋನ ಸಹಾನುಭೂತಿಯಿಂದ ಸ್ಪೇಯಿನಿನ ಮೂಲಕ್ಕ ದಕ್ಷಿಣ ಅಮೇರಿಕಾದ ಲೆಟಿನ್ ರಿಪಬ್ಲಿಕ್‌ಗಳಲ್ಲಿ ದಾರಳವಾಗಿ ನಡೆಯುತ್ತಿದ್ದವು. ದಕ್ಷಿಣ ಅಮೇರಿಕಾದ ಅರ್ಜೆಂಟಿನಾ, ಬ್ರಿಟಿಷ್, ಬೊಲೀವಿಯಾ, ಪೆರು, ಉರಾಗೇ ಮೊದಲಾದ ಕಡೆಗಳಲ್ಲಿ ಕಳೆದ ಮಹಾಯುದ್ಧದ ನಿವೃತ್ತ ಜರ್ಮನ್ ನಂತರ ಸಂಗ್ರಾಮಧಿಕಾರಿಗಳು ಈ ಚಟುವಟಿಕೆಗಳಲ್ಲಿ ಪರಿಶ್ರಮಗಳನ್ನು ವಹಿಸಿದ ಕುರಿತು ವಾರ್ತೆಗಳು ಬಂದಿವೆ. ಈ ಚಟುವಟಿಕೆಗಳಿಗೆ ಬೇಕಾದ ಹಣವು ಜರ್ಮನ್ 'ದೊಡ್ಡ ವ್ಯಾಪಾರಿ'ಗಳಿಂದ ಒದಗಿಸಲಾಗಿತೆಂದೂ ಈ ಹಣವು ದಕ್ಷಿಣ ಅಮೇರಿಕದ ವಿವಿಧ ಪ್ರಾಂತ್ಯಗಳಲ್ಲಿರುವ ಬೇಂಕುಗಳಲ್ಲಿ ಠೇವಣಾತಿಯಲ್ಲಿರಿಸಲಾಗಿತೆಂದೂ ಹೇಳಲಾಗಿದೆ. ಅಲ್ಲಿನ ಸಾಂಪತ್ತಿಕ ಮತ್ತು ರಾಜಕೀಯ ವಿಚಾರಗಳಲ್ಲಿ ತಮ್ಮ ಪ್ರೇರಣೆಯು ನಡೆಯುವಂತೆ ನಾಜಿ ಯತ್ನಗಳು ಅಲ್ಲಿ ಧಾರಾಳ ನಡೆದಿದ್ದವು.

ಈ ಮಹಾ ಯುದ್ಧವು ಪ್ರಾರಂಭವಾಗುವುದರೊಳಗೆ, ವ್ಯಾಪಾರಿಗಳ ಸೋಗಿನಲ್ಲಿ, ಕೆಲಸಗಾರರ ಮತ್ತು ಇನ್ನಿತರ ಸೋಗಿನಲ್ಲಿ ದಕ್ಷಿಣ ಅಮೇರಿಕಾದ ಪ್ರಾಂತ್ಯಗಳಲ್ಲಿ ಜರ್ಮನ್ ನಾಜಿಗಳ ಪ್ರವೇಶವು ಆಗಿ, ಅವರಲ್ಲಿ ಬಲವಾಗಿ ತಳವೂರಿರುವರು. ಅಲ್ಲಿನ ರಾಜಕೀಯದಲ್ಲಿ ಹಿಡಿತವನ್ನು ಪಡೆಯಲು ಯತ್ನಗಳು ನಡೆದಿವೆ. ತಮಗೆ ಈ ಯುದ್ಧದಲ್ಲಿ ಸೋಲು ಒದಗುವುದಾದರೂ ಅದು ಸಂಯುಕ್ತ ಅಮೇರಿಕಾದ ದೆಸೆಯಿಂದ ಎಂದು ತಿಳಿದ ನಾಜಿಗಳು ಇನ್ನೊಮ್ಮೆ ಕಲಹವೆಬ್ಬಿಸಬೇಕಾದರೆ ಸಂ. ಅಮೇರಿಕಾದ ಬಲವನ್ನು ಕುಂದಿಸಲೋಸುಗ, ದಕ್ಷಿಣ ಅಮೇರಿಕಾದ ರಿಪಬ್ಲಿಕನ್ ಪ್ರಾಂತ್ಯಗಳಲ್ಲಿ ಅದಕ್ಕೆ ವಿರೋಧವನ್ನು ಬೆಳೆಯಿಸಲು ಪ್ರೇರೇಪಿಸದೆ ಇರರು. ದಕ್ಷಿಣ ಅಮೇರಿಕಾದ ನಾಜಿಗಳ ಈ ಚಟುವಟಿಕೆಗಳಿಗೆ ಜನರಲ್ ಪ್ರೆಂಕೋನ ಮೂಲಕವಾಗಿ ಸ್ಪೇಯಿನಿನ್ ಕೆಲ ಪ್ರಭಾವಗಳ ಸಹಾಯ ಸಹಾನುಭೂತಿಗಳು ಧಾರಳ ಪ್ರಮಾಣದಲ್ಲಿ ದೊರಕಿವೆ. ದಕ್ಷಿಣ ಅಮೇರಿಕಾದ ಜನರ ಮೂಲವು ಸ್ಪೆನಿಶ್. ಈ ಜನರ ಮಾತೃನಾಡಿನ ಮೇಲಿನ ಮಮತೆಯನ್ನು ತಮ್ಮ ಉದ್ದಿಶ್ಯ ಸಾಧನೆಯಲ್ಲಿ ನೆರವಾಗುವಂತೆ ನಾಜಿಗಳು ಯತ್ನಿಸಿದರು.

ದಕ್ಷಿಣ ಅಮೇರಿಕದಲ್ಲಿ ನಾಜೀ ಚಟುವಟಿಕೆಗಳ ಕೇಂದ್ರವೆಂದರೆ ಅರ್ಜೆಂಟೀನಾ ಈ ಕಾರಣದಿಂದಲೆ ಅದು ಸಂ. ಅಮೇರಿಕಾಕ್ಕೆ ವಿರೋಧವಾದ ಧೋರಣೆಯಿಂದ ವರ್ತಿಸಿದುದು. ಭಾವೀ ಲೋಕಶಾಂತಿಯು ರಕ್ಷಿಸಲ್ಪಡಬೇಕಾದರೆ ದಕ್ಷಿಣ ಅಮೇರಿಕಾದಲ್ಲಿ ತಳವೂರಿದ ನಾಜೀ ಪ್ರಭಾವಗಳನ್ನು ಬೇರು ಸಮೇತ ಕಿತ್ತೆಗೆದು ಬಿಸಾಡುವುದು ಅತಿ ಅವಶ್ಯವಿದೆ. ಹೀಗೆ ಮನಗಂಡ ಸಂ. ಅಮೇರಿಕಾದ ರಿಪಬ್ಲಿಕ್‌ಗಳು ಉತ್ತಮ ಸ್ನೇಹಿತರಾಗುವ ತರದ ಧೋರಣವನ್ನು ಕೈಗೊಳ್ಳಲು ಕಾರಣವು. ಸಂ. ಅಮೇರಿಕಾದ ಈ ಧೋರಣದಿಂದ ಉತ್ತಮಪರಿಣಾಮಗಳು ಉಂಟಾಗಿವೆಯಾಗಿಯೂ, ದಕ್ಷಿಣ ಅಮೇರಿಕಾದ ಪ್ರಾಂತ್ಯಗಳು, ಯಾವತ್ತೂ ವ್ಯವಹಾರಗಳಲ್ಲಿ ಸಂ. ಅಮೇರಿಕಾದೊಡನೆ ಕೂಡಿ ನಡೆಯುವ ಧೋರಣವನ್ನು ವಹಿಸಿರುವರಾಗಿ ತಿಳಿದು ಬಂದಿದೆ. ಸಂ. ಅಮೇರಿಕಾವು ಈ ನಾಡುಗಳ ಹಿತರಕ್ಷಣೆಯ ಭಾರವನ್ನು ವಹಿಸಿಕೊಂಡಿರುವುದು. ಈ ಪ್ರಾಂತ್ಯಗಳು ಸಂ. ಅಮೇರಿಕಾದ ಹಿತಗಳನ್ನು ರಕ್ಷಿಸುವವು. ಯುರೋಪದಲ್ಲಿ ನಾಜಿಗಳ ನಾಶವಾದ ಮೇಲೆ, ಅವರು ದಕ್ಷಿಣ ಅಮೇರಿಕಾದಲ್ಲಿ ಕಾಲೂರಿ,ಪುನರ್ವ್ಯವಸ್ಥೆ ಹೊಂದದಂತೆ ಸಂ. ಅಮೇರಿಕಾವು ಜಾಗರೂಕವಾಗಿದೆ. ಇನ್ನೊಂದು ಮಹಾ ಯುದ್ಧವು ಉಂಟಾಗದಂತೆ ದಕ್ಷಿಣ ಅಮೇರಿಕಾದಲ್ಲಿ ನಾಜೀಗಳ ಚಟುವಟಿಕೆ ಬೆಳೆಯದಂತೆ ಮಾಡುವುದು ಅತಿ ಅವಶ್ಯವಿದೆ. ಈ ಕಾರ್ಯದಲ್ಲಿ ಸಂ. ಅಮೇರಿಕಾಕ್ಕೆ ಯಶಸ್ಸು ದೊರಕಿದರೆ ಮಾತ್ರ ನಾಜಿಗಳ ರೆಕ್ಕೆಗಳಿಗೆ ಕೊಡಲಿ ತಗಲಬಹುದು. ದಕ್ಷಿಣ ಅಮೇರಿಕಾದಲ್ಲಿ ಮಾತ್ರವಲ್ಲ ಸಂ. ಅಮೇರಿಕಾದಲ್ಲಿ ವಲಸೆನಿಂತ ಜರ್ಮನರ ಕುರಿತು ಲೋಕಶಾಂತಿಯ ಹಿತದೃಷ್ಟಿಯಿಂದ, ಸಂ. ಅಮೇರಿಕಾವು ಎಚ್ಚರವನ್ನು ವಹಿಸಿರುವದು.

ದಕ್ಷಿಣ ಅಮೇರಿಕಾದ ಸ್ಪೆನಿಶ್ ದೇಶಗಳ 'ಡಾಲ್ಲರ್' ಸಾಮ್ರಾಜ್ಯಶಾಹಿತ್ವದ ವಿರೋಧವನ್ನೂ ಸ್ಪೆನಿಶ್ ಅನುರಾಗವನ್ನೂ ತಮ್ಮನ್ನು ಊರ್ಜಿತ ಸ್ಥಿತಿಯಲ್ಲಿರಿಸಿಕೊಳ್ಳಲು ಬಳಸಲು ಸಾಧ್ಯವಾಗದಂತೆ ದಕ್ಷಿಣ ಅಮೇರಿಕಾದ ಪ್ರಾಂತ್ಯಗಳು ಲೋಕಮಾನ್ಯ ಪ್ರಜಾ ಸತ್ತೆಗಳಾಗಿ ಬೆಳೆಯುವಂತಾಗಬೇಕು. ಅದರಂತೆಯೇ ಸ್ಪೆಯಿನಿನಲ್ಲೂ ಪೆಸಿಷ್ಟ ನಿರಂಕುಶ ಪ್ರಭುತ್ವವನ್ನು ಕೆಡವಿ ಹಾಕಿ ಅಲ್ಲೂ ಲೋಕಮಾನ್ಯ ಪ್ರಜಾಸತ್ತೆಗೆ ಆಸ್ಪದ ಮಾಡಿಕೊಡಲೆಬೇಕು. ಯುರೋಪದಿಂದ ಅಟ್ಟಲ್ಪಟ್ಟ ನಾಜೀ ಶಾಹಿಯನ್ನು ಸಂಯುಕ್ತ ರಾಷ್ಟ್ರಗಳು ದಕ್ಷಿಣ ಅಮೇರಿಕಾದಲ್ಲೂ ಬೆನ್ನಟ್ಟಿ ಹೋಗಬೇಕು. ಅಲ್ಲಿ ನಾಜೀ ಪೆಸಿಷ್ಟ ಪ್ರಭಾವಗಳಿಗೆ ಅವಕಾಶ ದೊರಕದಂತೆ ಸಾಧಿಸಬೇಕು.

ಹಿಟ್ಲರನ ಯುದ್ಧದ ಪರಿಣಾಮ

ಹಿಟ್ಲರನು ತಂದೊಡ್ಡಿದ ಈ ಯುದ್ಧದಿಂದ ಉಂಟಾದ ಅನರ್ಥಗಳ ರಾಶಿಯು ದೊಡ್ಡದಿರುವುದಾದರೂ ಅದರಿಂದ

(೧೧ನೇ ಪುಟಕ್ಕೆ ಮುಂದುವರಿದುದು.)

ಸಿನ್‌ಕಿಯಾಂಗ್-ಚೀನ, ರಶ್ಯಗಳ ಗಡಿನಾಡಿನ ಪ್ರಾಂತ್ಯ

ರೈಲು ಮೋಟಾರುಗಳಿಲ್ಲದ ಪ್ರದೇಶ ★ ರಶ್ಯಾ ಜಾಪಾನು ಧೋರಣೆ ಏನು? ★ ಚೀನದಲ್ಲಿ ಸ್ಟೇಲಿನನ ಗುಪ್ತಯೋಜನೆ

ನಮ್ಮ ವಾಯವ್ಯಗಡಿಯಲ್ಲಿರುವ ಚೀನದ ಸಿನ್‌ಕಿಯಾಂಗ್ ಪ್ರಾಂತ್ಯವು ಆಧುನಿಕ ನಾಗರೀಕತೆಯ ಸೋಂಕು ಇನ್ನೂ ತಟ್ಟದ ಅಸ್ಯದ ಪ್ರದೇಶಗಳೊಲ್ಲೊಂದಾಗಿದೆ. ಇದು ಚೀನ ಚಕ್ರಾಧಿಪತ್ಯದಲ್ಲಿ ಪ್ರಾಚೀನ ಕಾಲದಿಂದ ಸೇರಿಕೊಂಡಿದ್ದರೂ ಅಲ್ಲಿ ಚೀನದ ರಾಜ್ಯಾಧಿಕಾರದ ಪ್ರಭೆಯು ಬಹಳ ಮಂದತರವಾಗಿದ್ದು, ಜನರು ಚೀನಿ ಸಂಸ್ಕೃತಿ, ನಾಗರೀಕತೆಯಲ್ಲಿ ಬಹಳ ಹಿಂದುಳಿದವರಾಗಿದ್ದಾರೆ. ಉತ್ತರ ಭಾಗದಲ್ಲಿ ಕೃಷಿಗೆ ಅಯೋಗ್ಯ ಹುಲ್ಲುಗಾವಲಿನ ಎತ್ತರ ಮೈದಾನು ಸ್ಥಳ ದಕ್ಷಿಣ ಭಾಗದಲ್ಲಿ ಮರುಭೂಮಿ ಹೀಗಿದ್ದರೂ ದಕ್ಷಿಣದ ಮರುಭೂಮಿಯ ನಡುವೆ ಕೃಷಿ ಸಂಪತ್ತಿನಿಂದ ಶೋಭಿಸುವ ಸಣ್ಣ ನೀರಾಶ್ರಯ ಸ್ಥಳಗಳು ಅಲ್ಲಲ್ಲಿ ಕಣ್ಣನ್ನು ರಂಜಿಸುತ್ತವೆ. ಒಟ್ಟಾರೆ ದೇಶವು ಸ್ವಾಭಾವಿಕ ಸಂಪತ್ತಿನದ್ದಲ್ಲ. ಈ ಸಿನ್‌ಕಿಯಾಂಗಿಗೂ ಹಿಂದೂಸ್ಥಾನಕ್ಕೂ ನಡುವೆ ಸಾಮಲ್, ಕಾರಕೋರಂ ಮತ್ತು ಹಿಮಾಲಯ ಪರ್ವತಶ್ರೇಣಿಗಳು ಭದ್ರವಾದ ಗೋಡೆಯಂತಿದ್ದು ಅವುಗಳು ಆಧುನಿಕ ಯುದ್ಧೋಪಕರಣಗಳನ್ನೊಡಗೂಡಿದ ಸೇನೆಯನ್ನು ದಾಟಲಿಕ್ಕೆ ಬಿಡುವುದಿಲ್ಲ. ರಶ್ಯ, ಚೀನ, ಹಿಂದೂಸ್ಥಾನಗಳೊಟ್ಟಾಗುವ ಈ ಚೀನದ ದೂರದ ಪ್ರಾಂತ್ಯವು ಹಿಂದಿನಿಂದ ಬ್ರಿಟಿಷ್ ಮತ್ತು ರಷ್ಯದ ಸಾಮ್ರಾಜ್ಯದ ಪಿಪಾಸೆಯ ಕುಟಿಲ ತಂತ್ರಗಳ ರಂಗಭೂಮಿಯಾಗಿದೆ. ರಶ್ಯದಲ್ಲಿ ಜ್ಞಾರನು ಹೋಗಿ ಸೋವಿಯಟ್ ಪ್ರಭುತ್ವವು ಸ್ಥಾಪಿತವಾದ ಬಳಿಕವೂ ರಶ್ಯದ ದೃಷ್ಟಿಯು ಸಿನ್‌ಕಿಯಾಂಗಿನ ಮೇಲಿಂದ ತಪ್ಪಿರುವುದಿಲ್ಲ. ಹೀಗಾಗಿ ಯಾವ ಸ್ವಸಂಪತ್ತು ಇಲ್ಲದ ಈ ಸಿನ್‌ಕಿಯಾಂಗ್ ರಾಜಕೀಯ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದಿರುವ ಸ್ಥಳವಾಗಿರುತ್ತದೆ.

ಹಿಂದೂಸ್ಥಾನದಿಂದ ಚೀನಕ್ಕೆ ಈಗ ಅಸ್ಸಾಂ, ಬರ್ಮಗಳಿಂದಾಗಿ ಸಾಗಲಿಕ್ಕೆ ಹೊಸ ರಸ್ತೆಗಳನ್ನು ಮಾಡಿರುತ್ತಾರೆ. ಈ ರಸ್ತೆಗಳು ಈಗ ನಡೆಯುವ ಯುದ್ಧದ ನಡುವೆ ಯುದ್ಧದ ಅವಶ್ಯಕತೆಗಳಿಂದಾಗಿ ಅಸಂಖ್ಯಾತ ಚೀನಿಯರ ಕಾಯ ಕಷ್ಟದಿಂದಲೂ ಅಮೇರಿಕದ ಅಪರಿಮಿತ ದ್ರವ್ಯವ ಇಂಜಿನಿಯರಿಂಗ್ ಕುಶಲತೆಯ ಸಹಾಯದಿಂದಲೂ ತಲೆದೋರಿದವು. ಹಿಂದೂಸ್ಥಾನದ ಅತೀ ಸಮೀಪ ದೇಶವಾದ ಚೀನಕ್ಕೆ ಪ್ರಾಚೀನ ಕಾಲದಿಂದ ಈ ರಸ್ತೆಗಳು ನಿರ್ಮಾಣವಾಗುವ ತನಕ ನೆಲದಾರಿಯಾಗಿ ಹೋಗುವುದಿದ್ದರೆ ಸುತ್ತಾಗಿ ಸಿನ್‌ಕಿಯಾಂಗನ್ನು ದಾಟಿಕೊಂಡೇ ಹೋಗಬೇಕಿತ್ತು. ಚೀನವು ಪೂರ್ವ ಮುಖವಾಗಿ ಅದರ ಅತ್ಯಂತ ಫಲವತ್ತಾದ ಜನನಿಬಿಡತೆಯ ಪ್ರದೇಶಗಳು ಪೂರ್ವ ಸಮುದ್ರಕ್ಕೆ ಕೂಡುವ ಅವರ ಮೂರು ನದಿಗಳ ಇಕ್ಕಡೆಗಳಲ್ಲಿವೆ. ಪಶ್ಚಿಮ ದಿಕ್ಕಿನಲ್ಲಿ ಪರ್ವತಶ್ರೇಣಿಗಳೂ, ಮರುಭೂಮಿಗಳೂ ತುಂಬಿದ್ದು ಅಲ್ಲಿ ಇಂದಿನ ತನಕವೂ ರೈಲ್ವೆ, ಮೋಟಾರು ಸಂಚಾರವಿಲ್ಲ. ಮೊದಲಿಂದ ಅಲ್ಲಿ ಕುದುರೆ, ಒಂಟೆಗಳೇ ವ್ಯಾಪಾರದ ಸರಕುಗಳನ್ನು ಅತ್ತಿತ್ತ ಕೊಂಡುಹೋಗಲಿಕ್ಕೂ ಮನುಷ್ಯನ ಸವಾರಿಗೂ ಸಾಧನಗಳಾಗಿವೆ. ಈಗಿನ ರಸ್ತೆಗಳಾಗುವ ತನಕ ಚೀನದಿಂದ ಹೊರಟ ಪ್ರವಾಸಿಯೂ ಗೋಬಿ ಮರುಭೂಮಿಯ ಬದಿಗಾಗಿ ಪಶ್ಚಿಮಕ್ಕೆ ಹೋಗಿ ಸಿನ್‌ಕಿಯಾಂಗಿನಿಂದ ದಕ್ಷಿಣಕ್ಕೆ ಇಳಿದು ಕಾಶ್ಮೀರ್ ದಾರಿಯಿಂದಾಗಲೀ ಪೇಶಾವರ ದಾರಿಯಿಂದಾಗಲೀ ಹಿಂದೂಸ್ಥಾನವನ್ನು ಸೇರಬೇಕಿತ್ತು. ಹೀಗಾಗಿ ಸಿನ್‌ಕಿಯಾಂಗು ಒಂದು ತರದ ಹೆದ್ದಾರಿಯಾಗಿದ್ದು ಅಲ್ಲಿ ಹಿಂದಿನಿಂದ ಹಿಂದೂಸ್ಥಾನದೊಡನೆ ವ್ಯಾಪಾರ ನಡೆಸುವ ಯಾರಖಂಡ್ ಕಾಶಗರ್ ಪಟ್ಟಣಗಳು ಪ್ರಖ್ಯಾತಿಯನ್ನು ಹೊಂದಿದ್ದಾವೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಯುರೋಪಿನ ಬಿಳೇ ಜನರು ಭೂಲೋಕದಲ್ಲೆಲ್ಲಾ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾ ಹೋಗುವಾಗ ರಶ್ಯವೂ ಪೂರ್ವ ದಿಕ್ಕಿನಲ್ಲಿ ಶಾಂತಾಸಾಗರ ತನಕ ಹರಡಿ ಅವರ ಈಗಿನ ಪರಿಮಾಣವನ್ನು ಹೊಂದಿತ್ತು. ದಕ್ಷಿಣ ದಿಕ್ಕಿನಲ್ಲಿ ಆಗ ಚೀನ ಚಕ್ರಾಧಿಪತ್ಯದ ಬಲವು ದಿನೇ ದಿನೇ ಕುಗ್ಗುತ್ತಾ ಹೋಗುತ್ತಿದ್ದುದರಿಂದ ರಶ್ಯವನ್ನು ಆಗ ಪ್ರತಿಭಟಿಸ ಸಮರ್ಥರಾದವರ್‍ಯಾರೂ ಇರಲಿಲ್ಲ. ದಕ್ಷಿಣಕ್ಕೆ ಹರಡುತ್ತಾ ರಶ್ಯವು ಹಿಂದೂಸ್ಥಾನದ ಸಾಮಿಪ್ಯವನ್ನು ಈ ಸಿನ್‌ಕಿಯಾಂಗಿನ ಬಳಿ ಸೇರಿದ್ದರಿಂದ ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲೆಲ್ಲಾ ರಶ್ಯಕ್ಕೂ ಬ್ರಿಟ್ಟನಿಗೂ ಕಡು ವೈರ ಮತ್ಸರಗಳು ತಲೆದೋರಿ ಅಫಘಾನಿಸ್ಥಾನಿನಲ್ಲಿ ಬ್ರಿಟಿಷರು ಪ್ರವೇಶವಾಗಲಿಕ್ಕೆ ಕಾರಣವಾದುವು. ಅದೇ ಸಮಯದಲ್ಲಿ ಸಿನ್‌ಕಿಯಾಂಗಿನಲ್ಲಿಯೂ ರಶ್ಯದ ಮತ್ತು ಬ್ರಿಟಿಷ್ ಗೂಢ ಸಂಚಾರರ ಸುಳಿವು ಕೆಲವು ಕಾಲ ಪ್ರಬಲವಾಯಿತು. ಆಗಿನ ರಷ್ಯದ ದರ್ಪವು ೧೯೦೪ರ ರಶ್ಯ ಜಪಾನು ಯುದ್ಧದಲ್ಲಿ ನಾಶವಾಗಿ ರಶ್ಯವು ಅಸ್ಯದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಆಶೆಯನ್ನು ಬಿಟ್ಟು ತನ್ನ ಒಳ ಸಂಕಷ್ಟಗಳ ಗಲಾಟೆಗಳ ಕಡೆ ದೃಷ್ಟಿಯನ್ನಿಡಬೇಕಾಯಿತು. ಸಿನ್‌ಕಿಯಾಂಗ್ ದಾರಿಯಿಂದ ಹಿಂದುಸ್ಥಾನಕ್ಕೆ ಭಾರದ ತುಫಾಕಿಗಳನ್ನು ಕೊಂಡುಹೋಗಲಿಕ್ಕೆ ಎಡೆಯಿಲ್ಲವೆಂದು ತಿಳಿದ ಬಳಿಕ ಬ್ರಿಟಿಷರ ದೃಷ್ಟಿಯೂ ಸಿನ್‌ಕಿಯಾಂಗಿನ ಮೇಲೆ ಸ್ವಲ್ಪ ಕಡಿಮೆಯಾಯಿತು.

ಹೀಗಾಗಿ ೧೯೧೨ಲ್ಲಿ ಚಕ್ರಾಧಿಪತ್ಯವ ನಾಶವಾಗಿ ಸನ್‌ಯಾತ ಸೇನರ ಪ್ರಜಾಪ್ರಭುತ್ವದ ರಿಪಬ್ಲಿಕ್ ಸ್ಥಾಪಿಸಲ್ಪಡುವಾಗ ಸಿನ್‌ಕಿಯಾಂಗು ಬ್ರಿಟಿಷ್ ವ ರಶ್ಯದ ಸಾಮ್ರಾಜ್ಯದ ಪಿಪಾಸೆಯ ದೃಷ್ಟಿಯಿಂದ ಹೊರಗೆ ಬಿದ್ದುಕೊಂಡು ಚೀನದ ಕಷ್ಟಕಾಲದಲ್ಲಿಯೂ ಚೀನದ ಕೆಳಗೆ ಉಳಿಯಿತು.

೧೯೩೧ರ ಬಳಿಕ ಜಪಾನು, ಉತ್ತರ ಚೀನ, ಮಾಂಚುಕೋಗಳಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ, ಅಸ್ಯದ ಒಡೆತನವನ್ನು ಸಂಪಾದಿಸುವ ಕಾರ್ಯಗಳನ್ನು ಕೈಕೊಂಡ ಮೇಲೆ ಸಿನ್‌ಕಿಯಾಂಗು ಪುನಃ ಸಾಮ್ರಾಜ್ಯಶಾಹಿ ತಂತ್ರಗಳ ರಂಗಭೂಮಿಯಾಗ ತೊಡಗಿತು.

ಈಗ ಜಪಾನು ರಶ್ಯಗಳಲ್ಲಿ ನಿಜವಾದ ಸಹಾನುಭೂತಿ, ಮೈತ್ರತ್ವಗಳೇನೂ ಇಲ್ಲ. ಪೂರ್ವ ಆಶ್ಯದಲ್ಲಿರುವ ರಶ್ಯದ ಸಾಮ್ರಾಜ್ಯದಿಂದ ಜಪಾನಿಗೆ ಸ್ವಾಭಾವಿಕ ಗಂಡಾಂತರಗಳಿವೆ. ಜಪಾನಿನ ಮೇಲೆ ರಶ್ಯವು ತನ್ನ ೧೯೦೪ರ ಸೋಲಿನ ಸೇಡನ್ನು ತೀರಿಸಿಕೊಳ್ಳಲಿಕ್ಕೆ ಸಂದರ್ಭವನ್ನು ನೋಡಿಕೊಂಡಿದೆ. ಉತ್ತರ ಚೀನದಲ್ಲಿ ಜಪಾನು ಮುಂದುವರಿಯಲಿಕ್ಕೂ, ಮಾಂಚುಕೋ ಒಳಮೊಂಗೊಲಿಯಗಳಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲಿಕ್ಕೂ ಈ ಮುಂದಣ ಕುರುಕ್ಷೇತ್ರದ ಭೀತಿಯೇ ಕಾರಣವಾಗಿಯದೆ. ಜಪಾನಿನ ಅತ್ಯಂತ ಉತ್ಕೃಷ್ಟತೆಯ ಸೈನ್ಯವು ಈಗಲೂ ಮಾಂಚುಕೋ, ಒಳಮೊಂಗೊಲಿಯಗಳಲ್ಲಿ ರಶ್ಯದ ಮೇಲೆ ದೃಷ್ಟಿಯನ್ನಿಟ್ಟುಕೊಂಡು ಸಮರ ಸಿದ್ಧತೆಯಲ್ಲಿಯೇ ಇದೆ. ತಾನಾಗಿ ಬೀಳುವ ಮರಕ್ಕೆ ಕೊಡಲಿ ಯಾಕೆಂಬ ಜಾಣತನದಿಂದ ಸ್ಟೈಲಿನನು ಈ ತನಕ ಜಪಾನಿನ ಕಡೆ ತಟಸ್ಥ ಭಾವದಿಂದಿರುತ್ತಾನಲ್ಲದೆ ಜಪಾನಿನ ಮೇಲೆ ಪ್ರೀತಿಯಿಂದ ಅಮೇರಿಕ ಇಂಗ್ಲಾಂಡುಗಳೊಡನೆ ಸೇರಿರುವುದಿಲ್ಲ. ಈ ಸಾಮ್ರಾಜ್ಯಶಾಹೀ ಭಂಡವಾಳಶಾಹೀ ರಾಷ್ಟ್ರಗಳಾದ ಜಪಾನು ಅಮೇರಿಕಾ ಇಂಗ್ಲಾಂಡುಗಳು ಹೋರಾಟದಿಂದ ನಾಶವಾದರೆ ಯಾ ಕುಗ್ಗಿದರೆ ಸ್ಟೈಲಿನ್ನನಿಗೆ ಕಣ್ಣೀರು ಬರಲಿಕ್ಕೆ ಕಾರಣವಿಲ್ಲ. ಆಂಗ್ಲ ಅಮೇರಿಕಾಗಳೊಡನೆ ಸೇರಿ ತಾನೂ ಜಪಾನಿನ ಮೇಲೆ ಬೀಳುವುದರಿಂದ ರಶ್ಯಕ್ಕೆ ಸಿಕ್ಕಬಹುದಾದ್ದೇನೂ ಇಲ್ಲವಾದುದರಿಂದ ಮಾತ್ರ ಸ್ಟೈಲಿನ್ನನೀಗ ಜಪಾನಿನ ಕಡೆ ತನ್ನ ಉದ್ದೇಶವನ್ನು ಪ್ರಕಟಿಸದೆ ಇನ್ನೂ ಮೌನದಲ್ಲಿ ಕಾಲಹರಣ ಮಾಡುತ್ತಿದ್ದಾನೆ.

೧೯೩೭ಲ್ಲಿ ಚೀನ ಜಪಾನುಗಳಲ್ಲಿ ಈಗಲೂ ನಡೆಯುತ್ತಿರುವ ಮಹಾಯುದ್ಧವು ಪ್ರಾರಂಭವಾದಾಗ ಆಂಗ್ಲ ಅಮೇರಿಕಗಳು ಚೀನಕ್ಕೇನೂ ಸಹಾಯ ಮಾಡುತ್ತಿರಲಿಲ್ಲ. ಸಮರ ಶಕ್ತಿಯನ್ನು ಬೆಳೆಸಿಕೊಂಡ ಜಪಾನಿನ ಎದುರು ಚೀನವು ಒಂದು ತಿಂಗಳಾದರೂ ಹೋರಾಡಿತೆಂಬ ಭರವಸೆಯೂ ಆಗ ಯಾರಲ್ಲಿಯೂ ಇರಲಿಲ್ಲ. ನಿಶಸ್ತ್ರ ಚೀನಕ್ಕೆ ಆ ಕಷ್ಟ ಕಾಲದಲ್ಲಿ ಯುದ್ಧ ಸಾಮಗ್ರಿಗಳನ್ನು ಸ್ವಲ್ಪ ಮಟ್ಟಿಗಾದರೂ ಒದಗಿಸಿ ಸಹಾಯ ಮಾಡಿದ್ದೆಂದರೆ ಸೋವಿಯಟ್ ರಶ್ಯವಾಗಿರುತ್ತದೆ. ಸೋವಿಯಟ್ ರಶ್ಯದಿಂದ ಚೀನಕ್ಕೆ ದಾರಿಯು ಬಹಳ ಕಷ್ಟತರದ್ದಾದ್ದರಿಂದ ಈ ಸಹಾಯವು ಅತೀ ಸ್ವಲ್ಪದ್ದಾದರೂ ಚೀನವು ಆಗ ತೀರಾ ನಿರಾಶೆಯಾಗದಂತೆ ಅದನ್ನು ಅದು ಕಾಪಾಡಿತ್ತು. ಸಿನ್‌ಕಿಯಾಂಗು ಆಗ ಸೋವಿಯಟ್ ರಶ್ಯದಿಂದ ಚೀನಕ್ಕೆ ಯುದ್ಧ ಸಾಮಾಗ್ರಿಗಳನ್ನು ಮುಟ್ಟಿಸುವ ಹೆದ್ದಾರಿಯಲ್ಲಿದ್ದುದರಿಂದ ಜಪಾನಿನ ದೃಷ್ಟಿಯು ಅದರ ಮೇಲೆ ಬಿದ್ದಿತ್ತು. ಚೀನದ ವಾಯವ್ಯ ಪ್ರಾಂತ್ಯಗಳಲ್ಲಿ ನಮ್ಮ ವಾಯವ್ಯ ಪ್ರಾಂತ್ಯಗಳಂತೆಯೇ ಮುಸ್ಲಿಮ್ ಮತಾನುಯಾಯಿಗಳ ಸಂಖ್ಯೆಯು ಹೆಚ್ಚಾಗಿರುತ್ತದೆ. ಈ ಮುಸ್ಲಿಮ್ ಪ್ರಾಂತ್ಯಗಳಲ್ಲಿರುವ ಸೇನಾನಾಯಕರೂ ಪ್ರಾಂತಿಕ ಅಧಿಕಾರಿಗಳೂ ಚೀನದ ಕೆಲವು ಅಧಿಕಾರದಿಂದ ತಪ್ಪಿಸಿಕೊಂಡು ಸ್ವಾತಂತ್ರ ಸಂಗ್ರಾಮವನ್ನು ಮಾಡಬೇಕೆಂದು ಜಪಾನು ಅನೇಕ ಕುಟಿಲ ತಂತ್ರಗಳನ್ನು ನಡೆಸಿತು. ಅಲ್ಲಿ ಮುಸ್ಲಿಮ್ ಸ್ವಾತಂತ್ರದ ರಾಷ್ಟ್ರವೊಂದನ್ನು ಸ್ಥಾಪಿಸಿ ಉತ್ತರದಲ್ಲಿ ಒಳಮೊಂಗೊಲಿಯಾ ಮಂಚಿಕೋಗಳನ್ನು ಪಶ್ಚಿಮದಲ್ಲಿ ಈ ಮುಸ್ಲಿಮ್ ರಾಷ್ಟ್ರಗಳನ್ನೂ ರಶ್ಯ ಚೀನಗಳ ನಡುವೆ ಚೀನಕ್ಕೆ ಯಾರಸಹಾಯವೂ ಮುಟ್ಟದಂತೆ ಮಾಡಬೇಕೆಂಬುದೇ ಜಪಾನಿನ ಉದ್ದೇಶವಾ

(೬ನೇ ಪುಟಕ್ಕೆ ಮುಂದುವರಿದಿದೆ)

ಅಭಿವೃದ್ಧಿ ತೋರಿಸುವ ಪಟ್ಟಿ

	1940	1942	1944
	ರೂಪ್ಯಾ	ರೂಪ್ಯಾ	ರೂಪ್ಯಾ
ತೆತ್ತ ಭಂಡವಾಳ	8,98,000	14,96,000	26,84,000
ಕ್ಷೇಮನಿಧಿ	4,50,000	4,50,000	10,84,000
ಠೇವಣಾತಿಗಳು	86,72,000	1,45,51,000	2,80,69,000
ಸರಕಾರೀ ಭದ್ರತೆಗಳು	11,19,000	68,17,000	1,17,98,000
ಲಾಭಾಂಶ	72,000	1,58,000	2,75,000
ಜುಮ್ಲಾ ಸಂಪತ್ತು	1,08,44,000	2,07,85,000	8,46,46,000

ಸಂಖ್ಯೆಗಳೆಲ್ಲಾ ಸಾವಿರಗಳಿಗೆ ಸರಿಪಡಿಸದವುಗಳು

ನಮ್ಮ ಶಾಖೆಗಳು

ಕ್ವಿಲನ್	ಮಂಗಳೂರು	ಮಧುರಾ
ಅಲಪ್ಪೆ	ಬೆಂಗಳೂರು	ಸೇಲಮ್
ಎರ್ನಾಕುಲಮ್	ಬೆಳಗಾಂವ್	ಇರೋಡ್
ಕೊಚ್ಚಿನ್	ಧಾರವಾಡ	ಕೊಯಮುತ್ತೂರು
ಕಲ್ಲಿಕೋಟೆ	ಹುಬ್ಬಳ್ಳಿ	ಇತ್ಯಾದಿ, ಇತ್ಯಾದಿ.
ಕಣ್ಣಾನೂರು	ಚಿಕ್ಕಮಗಳೂರು	

ಮುಂಬಾಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪ್ಯಾ 26 ಲಕ್ಷ. ಕ್ಷೇಮನಿಧಿ ರೂಪ್ಯಾ 10 ಲಕ್ಷ.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

(Incorporated in British India, liability of Members limited.)

ಸಿನ್‌ಕಿಯಾಂಗ್-ಚೀನ, ರಶ್ಯಗಳ ಗಡಿನಾಡಿನ ಪ್ರಾಂತ್ಯ

(ಹಿನೇ ಪುಟದಿಂದ)

ಗಿತ್ತು. ಸಿನ್‌ಕಿಯಾಂಗಿನಲ್ಲಿಯೂ ಜಪಾನು ಈ ತರದ ಪ್ರಯತ್ನಗಳನ್ನು ಮಾಡದೆ ಬಿಡಲಿಲ್ಲ. ಆದರೆ ಸ್ಟೇಲಿನನು ಜಪಾನಿನ ಮೇಲೆ ಅನಾವಶ್ಯವಾಗಿ ಯುದ್ಧಮಾಡಲಿಕ್ಕೆ ಹಿಂಜರಿದರೂ ಜಪಾನಿನ ಕುಟಿಲ ತಂತ್ರಗಳ್ಯಾವವೂ ರಶ್ಯದ ಗಡಿಯಲ್ಲಿ ಫಲಿಸದಂತೆ ಜಾಗ್ರತೆಯನ್ನಿಟ್ಟು ಕೊಂಡಿದ್ದದರಿಂದ ಜಪಾನನ್ನು ವಾಯುವ್ಯ ಪಶ್ಚಿಮ ದಿಕ್ಕುಗಳಲ್ಲಿ ತಡೆಗಟ್ಟಿ ಚೀನಕ್ಕೆ ಆ ದಾರಿಯಿಂದ ಸಹಾಯ ಬರುವ ದಾರಿಯನ್ನು ಕಾಪಾಡಿದನು. ಜಪಾನಿನ ಆಶೆಗಳೆಲ್ಲವೂ ಈ ಪ್ರಾಂತ್ಯದಲ್ಲಿ ನಿಷ್ಫಲವಾದವು.

ಚೀನದ ಅತೀ ಕಷ್ಟಕಾಲದಲ್ಲಿ ಸ್ಟೇಲಿನ್ನನು ಸದ್ದಿಲ್ಲದೆ ಸಿನ್‌ಕಿಯಾಂಗಿನ ಪೂರ್ವಗಡಿಯಲ್ಲಿ ತನ್ನದೊಂದು ಸೈನ್ಯವನ್ನಿಟ್ಟಿದ್ದನೆಂದೂ ಅದನ್ನು ಮೊನ್ನೆ ಇತ್ತೀಚೆಗೆ ಹಿಂತೆಗೆದನೆಂದೂ ಈಗ ತಿಳಿದು ಬರುತ್ತದೆ. ಸಿನ್‌ಕಿಯಾಂಗಿನಲ್ಲಿ ಚೀನದ ಅಧಿಕಾರವನ್ನು ಒಪ್ಪುವ ಪ್ರಾಂತಿಕ ಗವರ್ನರನ ಕೈಬಲವು ಬೆಳೆಯುವ ತನಕ ರಶ್ಯದ ಬಲವನ್ನು ಚೀನದ ಬೆಂಬಲಕ್ಕೆ ಕೊಟ್ಟು ಅದರ ಬಳಿಕ ತನ್ನ ಸೈನ್ಯವನ್ನು ಹಿಂತೆಗೆದು-ಸ್ಟೆಲಿನ್ನನು ತನ್ನ ಆಸ್ಯ ಖಂಡದ ಧೋರಣೆಯನ್ನು ಪ್ರಕಟಿಸಿದ್ದಾನೆಂದು ಈಗ ರಾಜಕಾರಣ ನಿಪುಣರು ಹೇಳುತ್ತಾರೆ. ಆಸ್ಯದಲ್ಲಿ ಚೀನವು ಪ್ರಬಲ ರಾಷ್ಟ್ರವಾಗುವದರಲ್ಲಿ ಸ್ಟೆಲಿನ್ನನಿಗೆ ವಿರೋಧವಿಲ್ಲ. ಜಪಾನಿನ ನಾಶವನ್ನು ಬಲಿಷ್ಠ ಅಮೇರಿಕವೂ ಈಗ ಕೈಕೊಂಡಿದ್ದರಿಂದ ಅವರಲ್ಲಿ ರಶ್ಯದ ಜನಧನವ್ಯಯಗಳನ್ನು ಮಾಡದೆ ಯುರೋಪಿನ ಯುದ್ಧದಿಂದಾಗಿ ರಶ್ಯಕ್ಕೆ ಸಂಭವಿಸಿದ ಆರ್ಥಿಕ ದುರವಸ್ಥೆಯನ್ನು ನೆಟ್ಟಗೆ ಪಡಿಸುವ ಕಾರ್ಯದ ಕಡೆ ಈಗ ತಾನು ಗಮನವನ್ನಿತ್ತು—ಯುರೋಪಿನ ಯುದ್ಧದಲ್ಲಿ ದಣಿದ ತನ್ನ ರಶ್ಯದ ಕೆಲವು ಸೈನ್ಯಕ್ಕೆ ಕೆಲವು ಕಾಲ ವಿಶಾಂತ್ರಿಯನ್ನು ಕೊಟ್ಟು ಮುಂದಣ ಪ್ರಸಂಗಗಳ ಕಡೆ ಜಾಗರೂಕತೆಯಲ್ಲಿದ್ದು ಕೊಂಡಿರುವುದೇ ತನ್ನ ಈಗಿನ ಕರ್ತವ್ಯವೆಂದು ಸ್ಟೇಲಿನ್ನನು ಚಿಂತಿಸುವಂತೆ ತೋರುತ್ತದೆ.

ಆರ್ಥಿಕ ಬಲ ಸೈನ್ಯ ನೌಕಾ ವಿಮಾನ ಪಡೆಗಳ ಬಲಗಳು ಅಮೇರಿಕದೊಡನೆ ತುಂಬಿವೆ. ರಶ್ಯವು ಜಪಾನ್ ಯುದ್ಧದಲ್ಲಿ ಅಮೇರಿಕದೊಡನೆ ಸೇರಿದರೆ ಜಪಾನು ಶೀಘ್ರದಲ್ಲಿ ನಾಶವನ್ನು ಹೊಂದಿ ಅಮೇರಿಕದ ಬಲಗಳೆಲ್ಲವೂ ಹಾಗೆಯೇ ಉಳಿದು ಭೂಲೋಕದಲ್ಲಿ ರಶ್ಯಕ್ಕೆ ಮುಂದೆ ಭಂಡವಾಳ ಶಾಹಿ ರಾಷ್ಟ್ರಗಳ ಭೀತಿಯು ತಪ್ಪುವುದಿಲ್ಲ. ಜಪಾನಿನೊಡನೆ ಹೋರಾಡಲಿಕ್ಕೆ ಆಂಗ್ಲ ಅಮೇರಿಕಗಳನ್ನು ಮಾತ್ರ ಬಿಟ್ಟು ಆ ಹೋರಾಟದ ನಡುವೆ ತನ್ನ ಬಲವನ್ನು ವೃದ್ಧಿಗೊಳಿಸಿ, ಆಂಗ್ಲ ಅಮೇರಿಕಗಳು ಬಲ ಕುಂದಿ ದಣಿಯುವಾಗ ರಶ್ಯವನ್ನು ಪ್ರಥಮ ಸ್ಥಾನಕ್ಕೇರಿಸಬಹುದೆಂದು ಸ್ಟೇಲಿನ್ನನು ಚಿಂತಿಸುತ್ತಿರಬಹುದೇ.

ಸ್ಟೇಲಿನ್ನನಿಗೆ ಈಗ ಆಸ್ಯದಲ್ಲಿ ನಿಜವಾಗಿಯೂ ಬೇಕಾದುದೇನು? ಸೈಬೀರಿಯದಲ್ಲಿ ಇನ್ನೂ ಕೃಷಿ ಕೈಗಾರಿಕೆಗಳ ವಿಸ್ತರಣೆಗೆ ಅನಂತ ವಿಶಾಲತೆಯ ಜಾಗವಿದೆ. ವರ್ಷದ ನಡುವೆ ಎಂದೂ ಹಿಮುಗಟ್ಟದ ಸಮುದ್ರ ಪ್ರದೇಶದಲ್ಲಿ ಬಂದರವೊಂದು ಮಾತ್ರ ರಶ್ಯಕ್ಕೆ ಪೂರ್ವಕರಾವಳಿಯಲ್ಲಿ ಸಿಕ್ಕಿದರೆ ಸ್ಟೇಲಿನ್ನನಿಗೆ ಪೃಕತ ತೃಪ್ತಿಯಾಗಬಹುದು. ೧೯೩೯ರಲ್ಲಿ ಜಪಾನು ಕಸುಕೊಂಡ ಪೋರ್ಟು ಆರ್ಥರು ರಶ್ಯಕ್ಕೆ ಪುನಃ ಲಭಿಸಿವರೆ ಆಗಿನ ಸೇಡೊಂದು ತೀರಿಸದಂತೆಯೂ ಆಯಿತು; ಬೇಕಾದ ತರದ ಬಂದರು ಸಿಕ್ಕಿದಂತೂ ಆಯಿತು. ಪೋರ್ಟ್ ಆರ್ಥರಿನಿಂದ ವ್ಲಾಡಿವೊಸ್ಟೊಕಿನ ತನಕದ ಕರಾವಳಿಯನ್ನು ಹೇಗಾದರೂ ಸ್ಟೇಲಿನನು ಈ ಜಪಾನು ಅಮೇರಿಕ ಯುದ್ಧದ ನಡುವೆ ಆಕ್ರಮಿಸದಿರನು. ಹಿಂದೆ ಜರ್ಮನಿಯೊಡನೆ ಸಂಧಾನವನ್ನು ಬೆಳೆಸಿ ಅರ್ಧ ಪೋಲೆಂಡನ್ನು ಆಕ್ರಮಿಸಿದಂತೆ ಈ ಕಾರ್ಯವನ್ನು ಆತನು ಸದ್ದಿಲ್ಲದೆ ಮಾಡಶಕ್ತನು. ಜಪಾನಿನ ಬಲವನ್ನು ತಗ್ಗಿಸಲಿಕ್ಕೆ ಜಪಾನಿನೊಡನೆ ಪ್ರತ್ಯೇಕ ಹೋರಾಟವೇಕೆ? ಹೋರಾಟದ ನಡುವೆ ರಕ್ತಚಲ್ಲದೆ ಸ್ಟೇಲಿನನು ತನ್ನ ಉದ್ದಿಶ್ಯವನ್ನು ಸಂಪಾದಿಸಿಕೊಳ್ಳದಿರನು.

ಭಾರತ ವಾರಾಂತ್ಯ ವರದಿಗಳು

ವ್ಯಾಸ್‌ರಾಯರು 'ಸ್ವರಾಜ್ಯ' ತರುವರು-ಕೊಂಗ್ರೆಸ್ಸು ಮಂತ್ರಿಗಳು ಬರುವರೇ—ಮಹಾತ್ಮರ ಮೌನ-ಜಿನ್ನರ ಆರೋಪ ಫ್ರಿಸ್ಕೊ ಪರಿಷತ್ತಿನ ಫಾರ್ಸು

ಕಳೆದ ವಾರದ ಅತೀ ಮಹತ್ವದ ವರ್ತಮಾನಗಳಲ್ಲಿ ಮಾನ್ಯ ವ್ಯಾಸ್‌ರಾಯರು ಲಂಡನ್ನಿಗೆ ಹೋದ ವಿಚಾರವು ಬಹಳ ಸಂಕೇತಕವಾದುದು. ಭಾರತೀಯ ಬಿಕ್ಕಟ್ಟನ್ನು ಬಿಡಿಸಲು ಭೂಲಾಭಾಯಿ ದೇಸಾಯಿಯವರ ಯೋಜನೆಯನ್ನು ಎಮರಿ ಸಾಹೇಬರಲ್ಲಿ ಮೊಕ್ತಾ ಚರ್ಚಿಸಿ ಮನವರಿಕೆ ಮಾಡಲು ಅವರು ಹೋಗಿರುವರೆಂದು ಕೆಲವರೂ, ಯುರೋಪಿನ ಸೈನ್ಯ ಚಟುವಟಿಕೆಯ ನಾಯಕತ್ವವನ್ನು ವಹಿಸಲು ಅವರಿಗೆ ಆಮಂತ್ರಣ ಬಂದಿರುವುದರಿಂದ ಅದಕ್ಕಾಗಿ ಎಂದು ಕೆಲವರೂ; ಊಹಾಪೋಹ ನಡೆಸಿದ್ದಾರೆ.

ಜಪಾನಿನ ಮೇಲೆ ಕೊನೆಯ ಸೋಲನ್ನುಂಟು ಮಾಡುವ ದಾಳಿ ನಡೆಸುವ ಕುರಿತು ಚರ್ಚಿಲ್ಲರೊಂದಿಗೆ ಪರ್ಯಾಲೋಚನೆ ನಡೆಸಲೆಂದು ಸರಕಾರೀ ಕೇಂದ್ರಗಳಲ್ಲಿ ಹೇಳಲಾಗಿದೆ. ಭಾರತದ ರಾಜಕೀಯ ಗೊಂದಲದಿಂದ ಜಿಗುಪ್ಸೆಗೊಂದು ಲಾರ್ಡ್ ವೇವಲ್ಲರು ವಿಶ್ರಾಂತಿಗಾಗಿ ಅತ್ತ ತೆರಳಿರುವರೆಂದೂ ಬೇರೆ ಕೆಲವು ರಾಜಕೀಯ ಕೇಂದ್ರಗಳಲ್ಲಿ ತರ್ಕ ವಿತರ್ಕಗಳು ನಡೆಸಲಾಗಿದೆ.

ದೇಸಾಯಿ ಯೋಜನೆಯಂತಹ ಮತ್ತೊಂದು ತರದ ರಾಜಕೀಯ ಘಟನೆ ಉಪಾಯವನ್ನು ಲಂಡನಿನ ಇಂಡಿಯಾ ಕಚೇರಿಯವರು ಸಿದ್ಧಗೊಳಿಸಿದ್ದು ಅದನ್ನು ಅಭ್ಯಾಸಿಸಲೂ ಮತ್ತು ಕಾರ್ಯರೂಪಕ್ಕೆ ತರಲೂ ವ್ಯಾಸ್‌ರಾಯ ವೇವಲ್ಲರು ತಮ್ಮ ಅಕಸ್ಮಾತ್ ಪ್ರಯಾಣ ಕೈಕೊಂಡರೆಂಬ ಸುದ್ದಿ ಲಂಡನಿನಿಂದ ಬಂದಿರುತ್ತದೆ. ಇವೆಲ್ಲವುಗಳು ಬರೀ ಕಲ್ಪನಾತಿಕವಾದ ಊಹೆಗಳಲ್ಲದೆ ನಿಜವಾದ ಸಂಗತಿ ಇನ್ನೂ ಹೊರ ಬೀಳಬೇಕಾಗಿದೆ.

ಗಾಂಧೀಜಿಯವರ ಧೋರಣೆ ಏನು?

ವ್ಯಾಸ್‌ರಾಯರು ಲಂಡನ್ನಿಗೆ ಹೋಗುವ ವರ್ತಮಾನ ಒಂದು ತಿಂಗಳ ಹಿಂದಿನಿಂದ ಗಾಳಿಯಲ್ಲಿ ತೇಲಾಡುತಿದ್ದಿತು. ಅಂದಿನಿಂದಲೇ ಮಹಾತ್ಮ ಗಾಂಧಿಯವರೂ ಹೆಚ್ಚೆಚ್ಚು ಮೌನವನ್ನೂ ತಾಳಿದ್ದು ರಚನಾತ್ಮಕ ಕಾರ್ಯದ ವಿಷಯವಾಗಲ್ಲದೆ ರಾಜಕೀಯದ ಕುರಿತು ಅವರು ಯಾವ ಅಭಿಪ್ರಾಯವನ್ನೂ ಪ್ರಕಟಿಸುವುದಿಲ್ಲವೆಂದಿದ್ದಾರೆ. ಮೌನವು ಆರೋಗ್ಯ ದೃಷ್ಟಿಯಿಂದ ಕೈಕೊಂಡಿರಲಾಗಿದೆ. ಆಪರೂ ಗಡಿನಾಡಿನ ಡಾ। ಖಾನ್ ಸಾಹೇಬರಿಗೆ ಅವರು ಕಳುಹಿಸಿದ ಪತ್ರವು ಪತ್ರಿಕೆಗಳಲ್ಲಿ ಬಹಳವಾಗಿ ಚರ್ಚಿಸಲ್ಪಟ್ಟಿದೆ. ಗಡಿನಾಡಿನಲ್ಲಿ ಅಧಿಕಾರ ಸ್ವೀಕರಿಸಲು ಅವರು ಒಪ್ಪಿರುವರೆಂದು ಕೆಲವು ಪತ್ರಿಕೆಗಳೂ, ಒಪ್ಪಲಿಲ್ಲವೆಂದೂ ಕೆಲವು ವರ್ತಮಾನ ಸಂಸ್ಥೆಗಳೂ ತಮ್ಮ ಸ್ವಂತ ತರ್ಕಗಳಿಂದ ಪುಷ್ಟೀಕರಿಸಿರುವರು.

ಜಿನ್ನರ ಮನೋವ್ಯಥೆ.

ಲಂಡನಿಗೆ ಹೋಗುವ ಮುನ್ನ ಸಾರ್ವಭೌಮ್ಯ ಪ್ರತಿನಿಧಿಗಳು ಕೆಲ ಪ್ರಾಮುಖ್ಯ ವ್ಯಕ್ತಿಗಳಿಗೆ ಭೇಟಿಯಿತ್ತು ಚರ್ಚಿಸಿರುವರು. ಅವರು ಲೀಗಿನ ಜಿನ್ನಾ ಸಾಹೇಬರನ್ನೂ ಕಾಣುವವರಿದ್ದರು. ಆದರೆ ಅಕಸ್ಮಾತ್ ಕಾಯಿಲೆ ಬಿದ್ದು ವೈದ್ಯರಿಂದ ವಿಶ್ರಾಂತಿ ಪಡೆಯಲು ಸಲಹೆ ಕೊಡಲ್ಪಟ್ಟ ಲೀಗ್ ಮುಖಂಡರಿಗೆ ವ್ಯಾಸ್‌ರಾಯರನ್ನು ಕಾಣಲಾಗಲಿಲ್ಲ.

ಇನ್ನೂ ಸರಿಯಾಗಿ ಗುಣಮುಖರಾಗದಿದ್ದರೂ ಸಿಂಧ್ ಗಡಿನಾಡು, ಅಸ್ಸಾಮ್ ಬಂಗಾಳಗಳಲ್ಲಿನ ವಿಚಿತ್ರದ ಲೀಗ್ ಚಟುವಟಿಕೆಗಳಿಂದ ಕೋದೆ ಅಜಾಮರಿಗೆ ನೆಮ್ಮದಿ ಇಲ್ಲದಾಗಿದೆ. ಪಂಜಾಬದಲ್ಲಿ ದಿನದಿಂದ ದಿನಕ್ಕೆ ಲೀಗ್ ಸದಸ್ಯರು ಯೂನಿಯನ್ ಪಕ್ಷಕ್ಕೆ ಸೇರುತ್ತಿರುವರು. ಅಲ್ಲಿ ಕೆಲಸಮಯ ಹಿಂದೆ ಮಂತ್ರಿಗಳಾಗಿದ್ದ ಲೀಗ್ ಕಡೆಯ ಶೌಕತ್ ಹಯಾತ್ ಖಾನರು ಲಂಚದ ಆರೋಪದಲ್ಲಿ ಕೋರ್ಟ ಕಟ್ಲೆಗೆ ಒಳಗಾಗಿರುವರು. ಗಡಿನಾಡಿನಲ್ಲಿ ಲೀಗ್ ಮಂತ್ರಿ ಮಂಡಳ ಸೋಲಿಸಲ್ಪಟ್ಟಿತು. ಜಿನ್ನರ ಮಾತುಗಳಲ್ಲೇ ಹೇಳುವುದಾದರೆ ಅಲ್ಲಿ 'ಲೀಗಿನ ಬದ್ಧ ವೈರಿಯಾದ ಕೊಂಗ್ರೆಸ್ಸು ಮಂತ್ರಿ ಪದವಿಗೆ ಬಂದಿದೆ'

ಪಶ್ಚಿಮ ಪೂರ್ವ 'ಪಾಕಿಸ್ಥಾನದಲ್ಲಿ'

ಅಸ್ಸಾಮಿನಲ್ಲಿ ಸರ್ ಸಾದುಲ್ಲಾ ಅವರ ಲೀಗ್ ಮಂತ್ರಿ ಮಂಡಳ 'ಕರಗಿಸಲ್ಪಟ್ಟು' ಕೊಂಗ್ರೆಸ್ಸಿನ ಬೆಂಬಲವಿರುವ ಸಂಯುಕ್ತ ಮಂತ್ರಿಮಂಡಳ ರಚಿತವಾಗಿದೆ.

ಬಂಗಾಲದಲ್ಲಿ ಆಹಾರಕ್ಕೆ ಬರಗಾಲ ಮಾತ್ರವಲ್ಲ ಬಟ್ಟೆಗೂ ತುಟ್ಟಿಯುಂಟಾಗಿದ್ದು ನಗ್ನ ಸ್ತ್ರೀಪುರುಷರ ಮೆರವಣಿಗೆ ಅಲ್ಲಿ ಮೆರಿಯುತ್ತಿದೆ. ಒಂದು ಕಾಲದಲ್ಲಿ ಯುರೋಪಿನ ರಾಜಕುಟುಂಬಗಳಿಗೆ ಅತ್ಯಂತ ನಾಜೂಕಿನ ಮಸ್ಲಿನ್ ಬಟ್ಟೆಯನ್ನು ಪೂರೈಸಿ ಕೊಡುವ ಪ್ರಾಂತ್ಯದಲ್ಲಿ ಜನರು ಉಡುಪುಗಳಿಲ್ಲದೆ ಮರೆಯಾಗಿರಬೇಕಾಗಿದೆ. ಕೇಂದ್ರ ಎಸೆಂಬ್ಲಿಯಲ್ಲಿ ಈ ಕುರಿತು ಪ್ರಶ್ನೆ ಕೇಳಿದಾಗ ಸರಕಾರ ಮೆಂಬರರು "ನಾವು ಬೇಕಾದಷ್ಟು ಬಟ್ಟೆಯನ್ನು ನಮ್ಮ ಇಲಾಖೆಯಿಂದ ಬಂಗಾಲಕ್ಕೆ ಕಳುಹಿಸಿದ್ದೇವೆ. ಅದನ್ನು ಅಲ್ಲಿಂದ ಜನರಿಗೆ ಸರಬರಾಯಿ ಮಾಡುವ ಹೊಣೆಗಾರಿಕೆ ಬಂಗಾಲ ಸರಕಾರದ್ದು" ಎಂದರು. ಆದರೆ ಜನರಿಗೆ ಮಾತ್ರ ಹೊಟ್ಟೆಗೆ ಮೊದಲೇ ಇಲ್ಲ, ಬಟ್ಟೆಗೂ ಇಲ್ಲದಾಯಿತು.

ಸಿಂಧದಲ್ಲಿ ಸರ್ ಗುಲಾಮ್ ಹುಸ್ಸೇನ್ ಹಿದಾಯಿತುಲ್ಲಾ ಅವರು ಮೌಲಾ ಬಕ್ಷರಿಗೆ ಆಶೆಯ ವಚನ ಕೊಟ್ಟು ಮತ್ತೆ ಕೈ ಬಿಟ್ಟು ಪುನ: ಲೀಗ್ ಮಂತ್ರಿ ಮಂಡಳವನ್ನು ಸ್ಥಾಪಿಸಿರುವರು. ಅಲ್ಲಿ ಹೂರರ ಹಾವಳಿ ಇನ್ನೂ ನಿಲ್ಲಲಿಲ್ಲ, ಮಜೂರರ ಪರಿಸ್ಥಿತಿಯ ಕುರಿತು ಚಳವಳವಾಗುತ್ತಲಿದೆ.

"ಇದೆಲ್ಲ ಕಾರಣಗಳಿಂದ ನೊಂದ ಜಿನ್ನಾ ಸಾಹೇಬರು ನಿರಾಶಾಜನಕವೂ, ಕ್ರೋಧಯುಕ್ತವೂ ಆದೊಂದು ಪ್ರಕಟನೆಯನ್ನು ಹೊರಡಿಸಿರುವರು." ಅದರಲ್ಲಿ ಮ। ಅಲಿ ಜಿನ್ನರು ಕೊಂಗ್ರೆಸ್ಸನು "ತನ್ನ ತತ್ವವನ್ನು ಗಾಳಿಗೆ ಬಿಸುಟು ಲೀಗಿಗೆ ವಿರೋಧ ಕೆಲಸ ಮಾಡಹತ್ತಿದೆ" ಎಂದು ಆರೋಪಿಸಿರುವರು. ಗಾಂಧಿಜಿಯವರು ಅಧಿಕಾರ ಸ್ವೀಕಾರಕ್ಕೆ ಒಪ್ಪಿಗೆ ಕೊಟ್ಟಿರುವರೆಂದೇ ಎಲ್ಲರೂ ಅಭಿಪ್ರಾಯಪಟ್ಟಂತೆ ತೋರುತ್ತದೆ. ಆದರೆ ಖಾನ್ ಸಾಹೇಬರಿಗೆ ಕಳುಹಿಸಿಕೊಟ್ಟ ಅವರ ಆ ಪತ್ರವು ಪ್ರಕಾಶಕ್ಕೆ ಬಂದಾಗ ಎಲ್ಲ ಸತ್ಯವಿಚಾರವೂ ತಿಳಿಯುವುದು.

ಫ್ರಿಸ್ಕೊ ಪರಿಷತ್ತು

ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಸೇನ್ ಫ್ರೆನ್ಸಿಸ್ಕೊ ಪರಿಷತ್ತಿನ ವಿಚಾರವೂ ಚರ್ಚೆಗೆ ಬಂತು. ಈ ಪರಿಷತ್ತು ಸೇರುವುದೆಂದು ಎರಡು ವರ್ಷಗಳ ಮೊದಲೇ ಪಂಡಿತ್ ಜವಾಹರಲಾಲ್ ನೆಹುರುಗಳು ತಿಳಿಸಿರುವರೆಂದು ಶ್ರೀ. ಟಿ. ಟಿ. ಕೃಷ್ಣಮಾಚಾರ್ ಅವರು ತಿಳಿಸಿ "ಅಂಥವರು ಇಂದು ಆ ಸಮ್ಮೇಳನಕ್ಕೆ ಕಳುಹಿಸಲ್ಪಡುವುದರ ಬದಲು ಬಂಧಿಖಾನೆಯಲ್ಲಿಡಲ್ಪಟ್ಟಿದ್ದಾರೆ" ಎಂದು ಸಂತಾಪ ಸೂಚಿಸಿದರು.

ಇನ್ನೊಬ್ಬ ಕೌನ್ಸಿಲ್ ಸದಸ್ಯರು ಲೀಗ್ ಕೊಂಗ್ರೆಸ್ ಪ್ರತಿನಿಧಿಗಳನ್ನು ಏತಕ್ಕೆ ಕಳುಹಿಸಲಿಲ್ಲವೆಂದು ಕೇಳಿದಾಗ ಮತ್ತೊಬ್ಬ ಮೆಂಬರರು ಕೊಟ್ಟ ಉತ್ತರವು ಸ್ವಾರಸ್ಯವಾಗಿದೆ: "ಈಗಿನ ವ್ಯಾಸ್‌ರಾಯರ ಸಲಹಾಮಂಡಳವು ಹೊಣೆಗಾರಿಕೆ

(ಲನೇ ಟಕ್ಕೆ ಮುಂದುವರಿದಿದೆ)

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

...ಡಿ। ಬೋರ್ಡುಸಭೆ ಕಳೆದ ತಾ. ೧೮ರಂದು ಅದರ ಅಧ್ಯಕ್ಷರ ನೇತೃತ್ವದಲ್ಲಿ ಜರಗಿತು. ಬೋರ್ಡಿನ ಟ್ರೆವಲರ್ಸ್ ಬಂಗಲೆಗಳಲ್ಲಿ ಬೋರ್ಡು ನೌಕರರು ಬಾಡಿಗೆ ಇಲ್ಲದೆ (ಕೆಲಸದ ಮೇಲೆ ಸಂಚಾರ ಹೋದಾಗ ಮಾತ್ರ) ಉಳಕೊಳ್ಳಬಹುದೆಂದು ನಿರ್ಣಯಿಸಲಾಯಿತು. ಈ ಹಿಂದೆ ಅವರು ಬಾಡಿಗೆ ಕೊಟ್ಟೇ ಇರಬೇಕೆಂದು ಠರಾಯಿಸಲ್ಪಟ್ಟಿತ್ತು. ಉಡುಪಿಯ ಬೋರ್ಡು ಹ್ಯಾಸ್ಕೂಲಿಗೆ ಧನಸಹಾಯಮಾಡಲು ಅಲ್ಲಿಯ ನಗರ ಸಭೆಯವರು ಅಸಮರ್ಥರಿರುವರೆಂದು ತಿಳಿಸಲ್ಪಟ್ಟಿರುವುದರಿಂದ ಸದ್ರಿ ಹ್ಯಾಸ್ಕೂಲನ್ನು ಮುಚ್ಚುವರೆ ಸೂಚನೆಗಳಾದುವು. ಆದರೂ ಮತ್ತೊಂದು ಸಲ ನಗರಸಭೆಯೊಂದಿಗೆ ಭಿನ್ನವಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

ಮದ್ರಾಸ್ ಸರಕಾರದವರು ಐದು ವರ್ಷಗಳಲ್ಲಿ ಪ್ರಾಂತ್ಯದಲ್ಲೆಲ್ಲಾ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಸ್ಥಾಪಿಸಬೇಕೆಂದಿರುವ ಯೋಜನೆಗನುಗುಣವಾಗಿ ನಮ್ಮ ಜಿಲ್ಲೆಗೂ ಆ ಸಂಬಂಧ ಸುಮಾರು ೫೦ ಸಾವಿರದ ಧನಸಹಾಯ ದೊರಕಲಿರುವುದರಿಂದ ೨೩ ಗ್ರಾಮವನ್ನೊಳಗೊಂಡ ೯ ಕೇಂದ್ರಗಳಲ್ಲಿ (ಸುರತ್ಕಲ್, ಪಣಂಬೂರು, ಮಲ್ಪೆ, ಮೂಡಬಿದ್ರಿ, ಅನಗಳ್ಳಿ, ಗಂಗೊಳ್ಳಿ, ಹೊಸದುರ್ಗ, ಮಂಜೇಶ್ವರ ಮತ್ತು ವಿಟ್ಲ) ಅದನ್ನು ಪ್ರಾರಂಭಿಸಲು ಸಾಧ್ಯವಿದೆಯಾಗಿ ಸರಕಾರಕ್ಕೆ ತಿಳಿಸುವ ನಿರ್ಣಯ ಬೋ। ಸಭೆಯಲ್ಲಾಯಿತು. ಈ ಕೇಂದ್ರಗಳಲ್ಲಿನ ಶಾಲೆಗಳು ಹೆಚ್ಚು ಕಡಿಮೆ ಯಾವ ವಿದ್ಯಾರ್ಥಿಗೂ ಒಂದು ಮೈಲು ದೂರಗಿಂತಲೂ ಹೆಚ್ಚು ಅಂತರದವುಗಳಿಲ್ಲ. ಇಲ್ಲಿಯ ಮಕ್ಕಳು ಶಾಲೆಗೆ ಕಳುಹಲ್ಪಡದಿದ್ದರೆ ಹೆತ್ತವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು. ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಏರ್ಪಾಡು ಧರ್ಮಾರ್ಥಮಾಡಲಾಗುವುದು. ಸರಕಾರವು ಇನ್ನೂ ಹೆಚ್ಚಿನ ಖರ್ಚುವಹಿಸಲು ಸಿದ್ಧವಿದ್ದಲ್ಲಿ ಇತರ ಕಡೆಗಳಲ್ಲೂ ಕಡ್ಡಾಯ ಶಿಕ್ಷಣಕ್ರಮ ಜಾರಿಗೆ ತರಬಹುದೆಂದೂ ನಿರ್ಣಯವಾಯಿತು.

ಜಿಲ್ಲೆಯ ಕೆಲವು ಕಾನ್ವೆಂಟ್ ಶಾಲೆಗಳಲ್ಲಿ ಕ್ಷಯರೋಗಿಷ್ಟರಾದ ಉಪಾಧ್ಯಾಯಿನಿಯರಿರುವರೆಂಬ ದೂರು ಬಂದಿದ್ದು ಅದರ ಕುರಿತು ಯೋಗ್ಯ ಎಚ್ಚರ ತೆಗೆದುಕೊಳ್ಳುವುದಾಗಿ ಜಿಲ್ಲಾ ಹೆಲ್ತಾಫೀಸರರು ತಿಳಿಸಿದರು.

ನಗರಗಳಲ್ಲೂ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವುದು ಯೋಗ್ಯವಿದೆ ಎಂದೊಂದು ಬಾತ್ಮಿ.

ಪ್ರಾಂತೀಯ ಸಹಕಾರಿ ರಿಜಿಸ್ತ್ರಾರರಾದ ಶ್ರೀ· ಸತ್ಯನಾಥನ್ ಅವರು ಪರಿಶೀಲನಾ ಸಂಚಾರ ಕಾರ್ಯಕ್ರಮಕ್ಕನುಗುಣವಾಗಿ ಇಲ್ಲಿಗೂ ಬಂದಿದ್ದು ಸಹಕಾರಿ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟರು. ಮಾನ್ಯ ರಿಜಿಸ್ತ್ರಾರರು ಕೆನರಾ ಹೈಸ್ಕೂಲಿನ ಸಹಕಾರಿ ಸೊಸೈಟಿಯವರಿಂದಲೂ ಸತ್ಕಾರ ಸ್ವೀಕರಿಸಿದರು. ಅಂದು ಜಿಲ್ಲಾ ಕಲೆಕ್ಟರರೂ ದಯಮಾಡಿಸಿದ್ದು ಆಹಾರ ಪರಿಸ್ಥಿತಿಯು ಬದಲಾವಣೆ ಹೊಂದಿದರ ವಿಷಯ ತಿಳಿಸಿದರು. ಸಹಕಾರಿ ಖಾತೆಯ ಅಧಿಕಾರಿಗಳು ಜಿಲ್ಲೆಯ ಸಹಕಾರಿ ಚಳವಳಿಕ್ಕೆ ಅಮೋಘ ಶ್ಲಾಘನೆಯನ್ನು ಮಾಡಿ ದೇಶದಲ್ಲಿ ಅದು ಪ್ರಥಮ ಶ್ರೇಣಿಯದೆಂದು ನಿರೂಪಿಸಿದರು.

ಈ ಸಂಚಿಕೆಯ ಇತರ ಪುಟಗಳಲ್ಲಿ ಅಮೇರಿಕ ಡೆನ್ಮಾರ್ಕಗಳಲ್ಲಿನ ಸಹಕಾರ ವ್ಯವಸ್ಥೆರೂಪರೇಖೆಯನ್ನೂ ಕೊಡುವ ಲೇಖನವನ್ನೂ ವಾಚಕರು ಓದಿದರೆ ಸಹಕಾರಿ ಚಳವಳದ ಮಹತ್ವ ತಿಳಿಯುವುದು.

ಶ್ರೀ. ಶರವು ಗಣಪತಿ ದೇವಸ್ಥಾನದ ಮಹಡಿಯಲ್ಲಿ ಪ್ರಸಿದ್ಧ ಯಕ್ಷಗಾನ ಪ್ರವೀಣರು ರಸವತ್ತಾದ ಪ್ರಸಂಗವನ್ನು ನಟಿಸಿದರು. ಪ್ರಿ। ಸ। ಜಡ್ಜ್. ಶ್ರೀ. ಪರಮೇಶ್ವರ ಅಯ್ಯರ್ ಅವರು ಅಧ್ಯಕ್ಷತೆವಹಿಸಿದ್ದರು. ಕನ್ನಡ ಬಲ್ಲ ಜಡ್ಜ್ ಅಯ್ಯರರು ಅಂದಿನ ಪಾತ್ರಧಾರಿಗಳ ವಾಕ್ಚಾತುರ್ಯವನ್ನು ಕಂಠೋಕ್ತ ಪ್ರಶಂಸಿಸಿದರು.

ಸದ್ರಿ ದೇವಸ್ಥಾನದ ಎದುರಿನ ಧರ್ಮಶಾಲೆಯ ಬಳಿ ಶ್ರೀ. ಲಡ್ಡು ಭಾವಾಜಿಯವರ ಕ್ಷೇತ್ರವಿದ್ದು ಶ್ರೀ. ಭಾವಾಜಿಯವರ ಹೆಸರಿನಲ್ಲಿ ಅಲ್ಲೊಂದು ಭಜನಮಂಡಳಿ ಸ್ಥಾಪಿತವಾಗಿ ೧೨ ವರ್ಷಗಳಿಂದ ಸೇವೆಸಲ್ಲಿಸಿದೆ. ಈಚೆಗೆ ಅನೇಕ ಮಹನೀಯರು ಈ ಮಂಡಳಿಯನ್ನು ಆರ್ಥಿಕ ದೃಷ್ಟಿಯಿಂದ ಪುಷ್ಟಿಕರಿಸಲು ಪ್ರಯತ್ನಿಸುತಿದ್ದು, ಆಸ್ಪತ್ರೆಯಲ್ಲಿ ಸಾಯುವ ಅನಾಥ ಹಿಂದುಗಳ ಶವ ಸಂಸ್ಕಾರಮಾಡಲು ಈ ಧನ ಸಂಗ್ರಹದ ಒಂದಂಶವು ಉಪಯೋಗಿಸುವುದಾಗಿ ನಿರ್ಣಯವಾಗಿದೆ ಎಂದು ತಿಳಿದುಬರುತ್ತದೆ. ಭಜನೆ ಕೇಂದ್ರಗಳು ನೈತೀಕ ವಿಚಾರಗಳಲ್ಲಿ ಸಮಾಜಕ್ಕೆ ಆದರ್ಶದಾಯಕವಿರುವಂತೆ ಪ್ರಯತ್ನಗಳಾಗಬೇಕು.

ಕೆಲವು ದಿನಗಳ ಹಿಂದೆ ಬೊಕ್ಕಪಟ್ಟಣದ ಕೆಲವು ಕಡೆಗಳಲ್ಲಿ ಪ್ಲೇಗು ಸೊಂಕಿನ ಸುದ್ದಿ ತಿಳಿದುಬಂದಿದೆ. ಎರಡು ಮರಣಗಳೂ ಸಂಭವಿಸಿವೆಯೆಂದೂ ವರದಿ ಇದೆ. ಶುಚಿತ್ವ ಸಾಕಷ್ಟಿಲ್ಲದ ಕಡೆಗಳಲ್ಲಿ ಇಂತಹ ರೋಗಗಳು ಉದ್ಭವಿಸುವುದೂ, ಹರಡುವುದೂ ಬಹುಬೇಗ. ಈ ಕಡೆಗಳವರು ಯೋಗ್ಯ ನಿವಾರಣೋಪಾಯಗಳನ್ನು ಶೀಘ್ರದಲ್ಲಿ ಕೈಕೊಳ್ಳಬೇಕು.

ಕಾಫಿಬೀಜ ಬೆಳೆಸುವ ವ್ಯವಸಾಯಗಾರರಾದ ಜಮೀನು ಮಾಲಕರು ಇಷ್ಟರತನಕ ತಮ್ಮ ಜಮೀನುಗಳನ್ನು ರಿಜಿಸ್ತ್ರಿಮಾಡಿಕೊಂಡಿಲ್ಲವಾದರೆ ಅದನ್ನು ಶೀಘ್ರವಾಗಿ ಮಾಡಬೇಕೆಂದೂ, ತಪ್ಪಿದವರಿಗೆ ಜುಲ್ಮಾನೆ ವಿಧಿಸಲಾಗುವುದೆಂದೂ ಕಾಫಿ ಕಂಟ್ರೋಲರ್ ಆಫೀಸರರು ತಿಳಿಸುತ್ತಾರೆ.

ನಗರದಲ್ಲಿ ಔಷಧಗಳ ಅಭಾವವಿರುವುದರಿಂದ ಗ್ಲುಕೋಸ್ ಮೊದಲಾದ ಅತೀ ಹೆಚ್ಚಾಗಿ ಅವಶ್ಯವಿರುವ ಮದ್ದುಗಳನ್ನು ಡಾಕ್ಟರರ ಪತ್ರಗಳಿಲ್ಲದೆ ವಿಕ್ರಯಿಸಬಾರದಾಗಿ ಜಿ. ಕಮ್ಮರ್ಶಿಲ್ ಟಿ. ಆಫೀಸರರು ತಿಳಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಚಿಕ್ಕ ದೊಡ್ಡವರ ಶರೀರಾರೋಗ್ಯಕ್ಕೆ ಅತ್ಯಾವಶ್ಯಕವಾದ ಮದ್ದು, ಇಂಜಕ್ಷನ್‌ಗಳನ್ನು ಅಧಿಕ ಪ್ರಮಾಣದಲ್ಲಿ ತರಿಸುವ ಪ್ರಯತ್ನಗಳನ್ನು ಮಾಡುವುದೂ ಅವಶ್ಯ.

ರೂ. ೫ ಸಾವಿರಕ್ಕೆ ಮೀರುವ ಕೃಷಿ ಬೇಸಾಯ ಉತ್ಪನ್ನ ಆದಾಯದ ಮೇಲೆ ಮದ್ರಾಸ್ ಸರಕಾರದವರು ಸದ್ಯದಲ್ಲೇ ತೆರಿಗೆ ಹೊರಿಸುವುದಕ್ಕೆ ಯೋಜನೆಯನ್ನು ತಯಾರಿಸಿರುವರು. ಆಗಲೇ ಸರ್. ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಸರ್ ಎ. ಪಿ. ಪತ್ರೋ ಮುಂತಾದ ನ್ಯಾಯ ಶಾಸ್ತ್ರ ಪಟುಗಳು ಅದನ್ನು ವಿರೋಧಿಸಿ ಅಭಿಪ್ರಾಯ ವ್ಯಕ್ತಮಾಡಿರುವರು. ಕೃಷಿ ಪ್ರಧಾನವಾದ ನಮ್ಮ ಜಿಲ್ಲೆಯ ನ್ಯಾಯವ್ಯವಹಾರ ದುರೀಣರು ಈ ಕುರಿತು ಮೇ ತಿಂಗಳೊಳಗೆ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ಕಳುಹಿಸುವರೆಂದು ನಿರೀಕ್ಷಿಸಲಾಗಿದೆ.

ತಾ, ೨೪ರಂದು ಪ್ರಗತಿಶೀಲ ಲೇಖಕ ಸಂಘದ ಆಶ್ರಯದಲ್ಲಿ ಎಲೋಶಿಯಸಿಯನ್ ಕೋಲೇಜು ಪಂಡಿತರಾದ ಶ್ರೀ ಸೆಡಿಯಾಪು ಕೃಷ್ಣ ಭಟ್ ಅವರು ನಮಗೆ ಯಾವ ಸಾಹಿತ್ಯಬೇಕು? ಎಂಬ ವಿಷಯದ ಕುರಿತು ಭಾಷಣ ಮಾಡಿದರು.

ಪ್ರಾಚೀನ ಸಾಹಿತಿಗಳು ತಮ್ಮ ಕಾಲದ ಜ್ಞಾನಾಯಭವ್ಯವನ್ನು ಕಾಲ ದೇಶ ಆಚಾರ ವಿಚಾರಗಳನ್ನೂ, ಭಾಷಾ ಶೈಲಿ ಶಾಸ್ತ್ರಗಳನ್ನೂ ಬರೆದಿಟ್ಟು ನಮಗೆ ಅಖಂಡ ಆಧಾರಗಳನ್ನು ಕಲ್ಪಿಸಿ ಕೊಟ್ಟಿರುವರು ಆ ಪ್ರಾಚೀನ ಸಾಹಿತ್ಯದ ಆದರ್ಶದಿಂದ ಆಧುನಿಕ ಬಹು ಸಾಂಸ್ಕೃತಿಕ ವಿಚಾರಗಳನ್ನು ಕೃತಿಯಲ್ಲಿಳಿಸಿದರೆ ಹಿಂದಿನದನ್ನೂ ಪ್ರಗತಿಗೊಳಿಸಿ ಮುಂದಿನವರಿಗೆ ಹೆಚ್ಚಿನ ವಸ್ತು ವಿಷಯಗಳ ಭಂಡಾರವನ್ನು ಮಾಡಿಟ್ಟಂತಾಗುವುದು.

ಮಂಗ್ಳೂರು ಕೇಂದ್ರದಲ್ಲಿ ಹೆಡ್ಡಾಫೀಸುಗಳಿರುವ ಇರ್ವ ಅಸಿ. ಕಮ್ಮರ್ಶಲ್ ಟೇಕ್ಸು ಆಫೀಸರರು ನೇಮಕ ಹೊಂದಿರುವರು. ಒಬ್ಬರು ಮಂಗಳೂರು ನಗರಕ್ಕೆ ಸಂಬಂಧ ಪಟ್ಟವರು, ಇನ್ನೊಬ್ಬರು ಮಂಗಳೂರು ಮತ್ತು ಕಾರ್ಕಳ ತಾಲೂಕು ಇವೆರಡಕ್ಕೂ ಸಂಬಂಧಪಟ್ಟವರು.

ಮಿಶನ್ ಹ್ಯಾಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವು ಮುನ್ಸಿಪಲ್ ಕಮಿಶನರ್ ಶ್ರೀ ಸೂರ್ಯನಾರಾಯಣ ರಾವ್ ಎಂ. ಎ. ಅವರ ಅಧ್ಯಕ್ಷತೆಯಲ್ಲಿ ತಾ. ೨೫ರಂದು ಸಾಯಂಕಾಲ ಜರಗಿಸಲ್ಪಟ್ಟಿತು. ಅಸಿ। ಪ। ಪ್ರೊಸಿಕ್ಯೂಟರ್ ಶ್ರೀ ಪಿ. ರಾಮಚಂದ್ರ ರಾವ್ ಬಿ. ಎ. ಎಲ್. ಅವರು ಶ್ರೀಯ. ಪ್ರಾರ್ಥನೆ ಮಾಡಿದರು. ನಂತರ ವರದಿ ವಾಚನ ಅಧ್ಯಕ್ಷರ ಭಾಷಣ ಮತ್ತು ನಾಟಕ ಪ್ರವರ್ಗನಗಳಿದ್ದುವು.

ಜಿಲ್ಲಾ ಹೆಲ್ತ್ ಆಫೀಸರರಿಗೆ ಕಂಟ್ರೋಲ್ ಬೆಲೆಗಿಂತ ಹೆಚ್ಚಿಗೆ ದರಕ್ಕೆ 'ಫೇನ್ ಬೆಲ್ಟ್'ನ್ನು ಮಾರಿದ ಬಲ್ಮಠದ ರಿಚಾರ್ಡ್ ಎ. ಪಿಂಟೋ ಎಂಬವರಿಗೆ ಸಬ್। ಡಿ। ಮೆಜಿಸ್ಟ್ರೇಟ್‌ರು ೫೦೦ ರೂ. ಜುಲ್ಮಾನೆ ವಿಧಿಸಿರುವರು.

ಹೆಚ್ಚಿನ ಬೆಲೆಗೆ ಬೆಟರಿ ಮಾರಿದ್ದಕ್ಕೆ ಕಮಗಾದ ೨ ತಿಂಗಳ ಸಜೆ. ೨೦೦೦ ಸಾವಿರ ರೂ. ಜುಲ್ಮಾನೆಗೆ ಎಂ. ಎಂ. ಶಾನುಬೊಗ್ ಎಂಡ್ ಸನ್ಸ್ ಇದರ ಮ್ಯಾಲಕ ಎಂ. ಆರ್. ಶ್ಯಾನುಭಾಗರು ಸೆಶ್ಯನ್ ಕೋರ್ಟಿನಲ್ಲಿ ಅಪೀಲುದಾಖಲು ಮಾಡಿದ್ದರಿಂದ ಶಿಕ್ಷೆಯಾದ ಮರುದಿನ ಬಿಡುಗಡೆ ಹೊಂದಿದ್ದಾರೆ.

ಮಂಗಳೂರು ಗಾಯನ ಮಂಡಳಿ ಎಂಬ ಸಂಸ್ಥೆಯ ಸಹಾಯರ್ಥವಾಗಿ ಇದೇ ತಾ. ೧ನೇ ಆದಿತ್ಯವಾರ ಇಲ್ಲಿಗೆ ಬರುವ ಬರೋಡ ದರ್ಬಾರ್ ಸಂಗೀತ ವಿದ್ವಾನ್ ಉಸ್ತಾದ್ ನಿಸ್ಸಾರ್ ಹುಸ್ಸೇನ್ ಖಾನ್ ಅವರ ಒಂದು ಕಚೇರಿ ಸ್ಥಳೀಯ ಸೆಂಟ್ರಲ್ ಟೋಕಿಸ್ ಮಂದಿರದಲ್ಲಿ ರಾತ್ರಿ ೯-೩೦ಕ್ಕೆ ನಡೆಯುವುದು. ಖಾನರೊಂದಿಗೆ ತಬ್ಲಾವಾದನಕ್ಕೆ ಬೊಂಬಾಯಿ ಖ್ಯಾತಿಯ ಮಂಗ್ಳೂರು ತಾರನಾಥ ರಾಯರು ಕೂಡುವರು.

ಪ್ರಖ್ಯಾತ ಸಂಗೀತಗಾರರ ಗಾನಮಾದರಿಯನ್ನು ಜನತೆಯೆಲ್ಲವೂ ತಿಳಕೊಳ್ಳಲು ಸಹಾಯವಾಗುವಂತೆ ನಗರದಲ್ಲಿನ ಕಲಾಭಿಮಾನಿಗಳು ಸಂಗೀತ ಶಾಲೆಗಳನ್ನು ಪ್ರೋತ್ಸಾಹಿಸಿ ತರುಣರಲ್ಲಿ ಶಾಸ್ತ್ರೀಯ ಸಂಗೀತ ಅಭಿರುಚಿಯನ್ನುಂಟು ಮಾಡಲು ಪ್ರಯತ್ನಿಸಬೇಕು. ಆಗಲೇ ಹಲವಾರು ಸಂಗೀತತಜ್ಞರೂ ಪ್ರೋತಾಹವಿಲ್ಲದೆ ಇಲ್ಲಿರುವರು. ಅವರ ಸಹಕಾರವನ್ನು ಪಡೆಯಬಹುದು.

ಮಂಗಳೂರು ಫಾಯರ್ ಸರ್ವಿಸಿನವರು ತಾ. ೨೪ರ ಮಧ್ಯರಾತ್ರೆಯ ಸುಮಾರಿಗೆ ಎರಡು ಬೆಂಕಿ ಹಿಡಿತಗಳನ್ನು ನೊಂದಿಸಿದರು. ಮೈದಾನಿನ ಬಳಿಯ ತಾಜ್‌ಮಹಾಲ್ ರೆಸ್ಟೋರೆಂಟಿನ ಉಗ್ರಾಣ ಕೋಣೆಯ ಅಟ್ಟಕ್ಕೆ ಅಗ್ನಿ ಸ್ಪರ್ಶವಾಗಿದ್ದು ಅಕಸ್ಮಾತ್ ಅಲ್ಲಿಯ ಹಿತ್ತಲಿನ ಬಾವಿಗೆ ನೀರು ಸೇದಲು ಬಂದಿದ್ದ ಓರ್ವ ಹುಡುಗನ ಗಮನಕ್ಕೆ ಅದು ಬಂತು. ಅವನ ಸಕಾಲದ ಕೂಗಾಟದಿಂದ ಫಾಯರ್ ಸರ್ವಿಸಿಗೆ ಫೋನ್ ಸುದ್ದಿ ಕಳುಹಲಾಯಿತು. ಗಮನೀಯ ನಷ್ಟದ ಸಂಭವಿಸಲಿಲ್ಲ. ವಿದ್ಯುತ್ ಸರಿಗೆಗಳಲ್ಲುಂಟಾದ ಯಾವುದೊ ಅಸ್ತವ್ಯಸ್ಥತೆಯಿಂದ ಬೆಂಕಿ ಉಂಟಾದುದೆಂದು ಒಂದು ವರದಿ ತಿಳಿಸುತ್ತದೆ.

ಮೇಲಿನ ಸ್ಥಳದ ನೊಂದಿಸುವಿಕೆಯನ್ನು ಪೂರ್ತಿಗೊಳಿಸಿ ಫಾಯರ್ ಸರ್ವಿಸಿನವರು ಹೊರಡಲುದ್ಯುಕ್ತರಾಗುವುದರೊಳಗೆ ಉಳ್ಳಾಲ ಸಂಕದ ಬಳಿ ಒಂದು ಕಡೆ ಬೆಂಕಿ ತಗಲಿದೆಯಾಗಿ ಸುದ್ದಿ ಬರಲು ಅಲ್ಲಿಗೆ ಅಗ್ನಿ ವಿರೋಧಕ ದಳದವರು ಧಾವಿಸಿದರು.

ವಿಪರೀತ ಉಷ್ಣ ಹವಾಗುಣದ ಕಾಲದಲ್ಲಿ ಬೆಂಕಿ ಹರಡಲು ಅನುಕೂಲ ವಾತಾವರಣವಿರುವುದರಿಂದ ಜನರು ಆ ಸಂಬಂಧ ಅತೀ ಹೆಚ್ಚಿನ ಜಾಗರೂಕತೆಯಿಂದಿರುವುದು ಒಳಿತು.

"ಅ ಪೌರುಷೇಯವಾದ ವೇದ ಸ್ಮೃತಿಶಾಸ್ತ್ರ ವಾತಾನುಸಾರ ಯುಗಾಂತರಗಳಿಂದ ನಡೆದು ಬಂದ ಹಿಂದೂ ಶಾಸನ ನೀತಿಗಳನ್ನು ಬದಲಾಯಿಸಲು ಯಾರಿಗೂ ಅಧಿಕಾರವಿಲ್ಲ. ಅದರಲ್ಲೂ ಜನತೆಯ ನ್ಯಾಯವಿದ್ದ ಪ್ರತಿನಿಧಿಗಳಲ್ಲದವರಿಗಂತೂ ಅದನ್ನು ಸುಧಾರಿಸುವ ಯಾವ ಹಕ್ಕು ಇಲ್ಲ ಆದುದರಿಂದ ಅದಕ್ಕೆ ನಮ್ಮ ವಿರೋಧವಿದೆ." ಎಂಬರ್ಥದ ಪತ್ರವನ್ನು ಇಲ್ಲಿಯ ಶ್ರೀ. ವೆಂಕಟ್ರಮಣ ದೇವಳದ ಮಧ್ವಸಿದ್ಧಾಂತ ಪ್ರಚಾರಿಣಿ ಸಭಾ ಅವರು ವ್ಯಾಸ್ ರಾಯರಿಗೂ ರಾವಕಮಿಟಿಗೂ ವಿರೋಧ ಸೂಚಕ ಪತ್ರಗಳನ್ನು ಕಳುಹಿಸಿರುವರು.

ಉಡುಪಿಯಲ್ಲಿನ ಬೋರ್ಡು ಶಾಲೆಯ ಮುಂದುವರಿಕೆಯು ಇನ್ನೂ ಅನಿಶ್ಚಿತವಾಗಿರುವಾಗಲೇ ಅಲ್ಲಿಯ ಕೆಲ ಪ್ರಮುಖರು ಮೂರು ಹ್ಯಾಸ್ಕೂಲ್‌ಗಳಿರುವ ತಮ್ಮ ಕ್ಷೇತ್ರ ಪಟ್ಟಣದಲ್ಲಿ ಎರಡು ಲಕ್ಷ ರೂಪ್ಯಾ ಅವಶ್ಯವಿರುವ ಒಂದು ಸೆಕೆಂಡ್‌ಗ್ರೇಡ್ ಕೊಲೇಜನ್ನು ತೆರೆಯುವರೇ ನಿರ್ಣಯಿಸಿರುವರು. ಬೋರ್ಡು ಸಭಾಪತಿಶ್ರೀ. ಆರೂರುಲಕ್ಷ್ಮೀನಾರಾಯಣರಾಯರು ಅಧ್ಯಕ್ಷ, ಡಾ। ಎಸ್.ಆರ್. ಪೈ, ಮತ್ತು ಮಿ। ಸಿ. ಜಿ. ರೆಗೊ ವಕೀಲ್ ಇವರು ಉಪಾಧ್ಯಕ್ಷರೂ ಮತ್ತು ಡಾ। ಟಿ. ಎಂ. ಎ. ಪೈ ಅವರು ಕಾರ್ಯದರ್ಶಿ-ಕೋಶಾಧಿಕಾರಿಗಳಾಗಿರುವ ಒಂದು ಸಮಿತಿ ರಚಿಸಲ್ಪಟ್ಟಿದೆ. ಕಾರ್ಯದರ್ಶಿಗಳು ಆಗಲೇ ತಾವು ೧೦ ಸಾವಿರ ರೂ. ದಾನ ಕೊಡುವುದಾಗಿ ವಾಗ್ದಾನವಿತ್ತಿರುವರೆಂದು ತಿಳಿದುಬರುತ್ತದೆ.

ದುಸ್ಸಂಗ ದುರ್ವ್ಯಸನಗಳಿಂದ ವ್ಯಭಿಚಾರಾದಿ ಅನಾಚಾರಗಳಿಗೆ ಬಲಿಬೀಳುವ ಅನಾಥ ಅಬಲೆಯರನ್ನು ರಕ್ಷಿಸಲು ಯೋಗ್ಯವಾದ ಸಂಸ್ಥಾಲಯಗಳನ್ನು ನಗರದಲ್ಲಿ ತೆರೆಯಬೇಕಾಗಿ ವಿನಂತಿಸಿದ ಮಾನ್ಯ ಕಲೆಕ್ಟರರ ಪತ್ರವನ್ನು ಉಡುಪಿ ನಗರ ಸಭೆಯವರು ಪರ್ಯಾಲೋಚಿಸಿ ಸರಕಾರದವರ ಧನಸಹಾಯವಿತ್ತರೆ ಅದನ್ನು ಕೈಕೊಳ್ಳಬಹುದೆಂದೊಪ್ಪುವ ನಿರ್ಣಯವಾಯಿತೆಂದು ಒಂದು ವರದಿ ತಿಳಿಸುತ್ತದೆ. ಇಂತಹ ಕಾರ್ಯಗಳು ಕ್ಷೇತ್ರ ಸ್ಥಳಗಳ ಪವಿತ್ರತೆಗೆ ಸಾಧಕವಾದವುಗಳು.

ಮಾರ್ಗಗಳಿಗೆ ನೀರು ಹಾಕಲು ಲೋರಿಗಳನ್ನು ಕೊಳ್ಳುವುದಕ್ಕೆ ಸರಕಾರದಿಂದ ಕಂತು ವಾಯಿದೆ ಸಾಲವನ್ನು ವಿನಂತಿಸಲೂ ಉಡುಪಿ ನಗರ ಪಿತಾಮಹರು ನಿರ್ಣಯಿಸಿದುದು ಸ್ತುತ್ಯ. ಮಂಗಳೂರಲ್ಲಿ ಆ ಕುರಿತು ಕೆಲವು ವರ್ಷಗಳಿಂದ ಪ್ರಯತ್ನಗಳು ನಡೆಯುತ್ತಲಿವೆ.

ಕಟಪಾಡಿಯಲ್ಲಿ ಇದೇ ಜೂನ್ ತಿಂಗಳಿಂದ Iರಿಂದ IVರ ವರೆಗಿನ ಫೋರ್ಮುಗಳಿರುವ ಒಂದು ಹ್ಯಾಸ್ಕೂಲು ತೆರೆಯಲ್ಪಡುವುದೆಂದು ತಿಳಿದುಬರುತ್ತದೆ. ಅಲ್ಲಿಯ ಶ್ರೀ. ವೆಂಕಟರಮಣ ಸ್ವಾಮಿ ವಿದ್ಯಾವರ್ಧಕ ಸಂಘದವರ ಆಡಳಿತದ ವರೆಗೆ ಆ ಕುರಿತು ವಿದ್ಯಾ ಇಲಾಖೆಯ ಅನುಮತಿ ದೊರಕಿದೆ.

ನಗರದಲ್ಲಿ ಬೇಕಾದ ಮಿಲ್ಲು ದೋತಿಗಳೂ, ಇತರ ನಾಜೂಕು ವಸ್ತ್ರಗಳೂ ಸಿಗುತ್ತಿಲ್ಲವಾಗಿ ವದಂತಿ ಇದೆ. ಈ ವಿಷಯ ಅಧಿಕಾರಿಗಳ ಗಮನ ಸೆಳೆಯಬಯಸುತ್ತೇವೆ.

ಈ ಸಂದರ್ಭದಲ್ಲಿ ಕಲ್ಕತ್ತಾದಲ್ಲಿನ ಅಧಿಕಾರಿಗಳು ೩೦೦೦ ಅಂಗಡಿಗಳ ಮೇಲೆ 'ದಾಳಿ' ನಡೆಸಿ ಸಾವಿರಾರು ಕಡೆಗಳಲ್ಲಿನ ಅನಧಿಕೃತ ಬಟ್ಟೆಯನ್ನು 'ಸೀಲು' ಮಾಡಿರುವರು. ಹಾಗೆ ಮಾಡದೆ ಬಟ್ಟೆ ಸರಿಯಾಗಿ ಹೊರಬರಲಾರದೆಂದೇ ಪರಿಸ್ಥಿತಿ ತಿಳಿಸುತ್ತದೆ.

ಕೊಚ್ಚಿಯಂತಹ ಚಿಕ್ಕ ಸಂಸ್ಥಾನದಲ್ಲಿ ಪ್ರತಿ ಮೂರು ಮೈಲಿಗೊಂದು ಹ್ಯಾಸ್ಕೂಲು ಇದೆ ಎಂಬ ಸಂಗತಿಯು ಅತಿ ಸಾರಸ್ಯವಾದುದು. ನಮ್ಮ ಜಿಲ್ಲೆಯಲ್ಲೂ ವಿದ್ಯಾಭಿಮಾನಿಗಳು ಹಾಗೇ ಮಾಡಬಹುದು. ಈ ಸಂಚಿಕೆಯ ಬೇರೆ ಪುಟಗಳಲ್ಲಿ ನ್ಯೂಯೋರ್ಕಿನ ಒಂದು ಹ್ಯಾಸ್ಕೂಲಿನ ಕುರಿತಾದ ಲೇಖನದ ಕಡೆಗೆ ವಿದ್ಯಾಭಿಮಾನಿಗಳ ಗಮನ ಸೆಳೆಯುತ್ತೇವೆ. ನಮ್ಮ ಜಿಲ್ಲೆಯಲ್ಲೂ ಅಂತಹದೊಂದು ಸ್ಕೂಲು ಆಗಲೆಂದು ಹಾರೈಸುತ್ತೇವೆ.

ಪುತ್ತೂರು ತಾಲೂಕಿನ ವಿಶೇಷ ಪರಿಸ್ಥಿತಿಗಳನ್ನು ಪರ್ಯಾಲೋಚಿಸಿ ಕಲೆಕ್ಟರರ ಅಲ್ಲಿನ ಸುಗ್ಗಿ ಅಕ್ಕಿಯನ್ನು ತಲಪಿಸಬೇಕಾದ ತಾರೀಕನ್ನು ೧೫-೪-೪೫ಕ್ಕೆ ಮುಂದರಿಸಿರುವರು. ಆಗಲೇ ಬತ್ತ ಒಪ್ಪಿಸುವವರಿಗೆ ೩೧-೩-೪೫ ತನಕ ಅವಧಿಕೊಡಲಾಗಿದೆ.

ಮಂಜೇಶ್ವರ ಮು. ಲೀಗ್ ಆಶ್ರಯದಲ್ಲಿ ಪಾಕಿಸ್ಥಾನವಾರ ಸಂಬಂಧ ಸಭೆ ಒಂದು ತಾ. ೨೩ರಲ್ಲಿ ಜಿ. ಎಂ. ಎ. ಎಂ. ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿ ಪಾಕಿಸ್ತಾನದಲ್ಲೂ ಮತ್ತು ಮಿ। ಎಂ. ಎ. ಜಿನ್ನಾ ಅವರಲ್ಲೂ ವಿಶ್ವಾಸ ವ್ಯಕ್ತ ಮಾಡಿದರು.

ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣ ಯೋಜನೆ

ಉಡುಪಿಯಲ್ಲಿ ಕೊಲೇಜು—ಕಟ್ಪಾಡಿ ಹೈಸ್ಕೂಲು

ಜಿಲ್ಲೆಯಲ್ಲಿ ಸಹಕಾರಿ ಚಳವಳ—ದೇಶದಲ್ಲೆ ಆದರ್ಶ ಸಹಕಾರಿ ರಿಜಿಸ್ಟ್ರಾರರು – ಬರೋಡಾ ಸಂಗೀತಗಾರರು – ಎರಡು ಬೆಂಕಿ ಅವಘಡ

ಚಲಚಿತ್ರದ ಚುರುಕು ಚೂರುಗಳು ತಿಳಿಯದವರಿಗೆ

ನಮ್ಮ ದೇಶದಲ್ಲಿ ಮೊದಲನೇ ಚಲಚಿತ್ರ ತಯಾರಾದುದು ೧೯೧೩ರಲ್ಲಿ-ಹೆಸರು 'ರಾಜಾ ಹರಿಶ್ಚಂದ್ರ'-ತಯಾರಕರು ದಿ। ದಾಧಾಸಾಹೇಬ ಫಾಲ್ಕೆ. ಫಾಲ್ಕೆಯವರು ಭಾರತೀಯ ಚಲಚಿತ್ರ ಪಿತಾಮಹರು. ಇವರು ಪಡಿಯಚ್ಚು ಕೆಲಸವನ್ನು ಮಾಡುತಿದ್ದು ಚಲಚಿತ್ರದಲ್ಲಿ ಅಭಿರುಚಿ ಹುಟ್ಟಿದವರಾಗಿ ಯುರೋಪಿನಿಂದ ಯಂತ್ರೋಪಕರಣಗಳನ್ನು ತರಿಸಿ ಕೆಲಸ ಆರಂಭಿಸಿದರು. ಇವರ ಎರಡನೇ ಚಿತ್ರ 'ಶ್ರೀಕೃಷ್ಣ ಜನನ' ಅತೀ ಪ್ರಖ್ಯಾತವಾಗಿ ಹೆಚ್ಚು ಹಣ ಸಂಗ್ರಹಿಸಿತು. ಇದು ಬರೀ ೭೦೦೦ಅಡಿ ಉದ್ದವಿದ್ದು, ಆ ಕಾಲದಲ್ಲಿದ್ದ ಬರೀ ೫೦ ಸಿನೇಮಾಗೃಹಗಳಲ್ಲಿ ಇದರ ೨೦೦ಪ್ರತಿಗಳು ಪ್ರದರ್ಶಿತವಾದವು- ೩ಲಕ್ಷ ರೂಪಾಯಿ ಲಾಭತಂದಿತು. ಫಾಲ್ಕೆಯವರ ಜೀವನವು ದುರಾದೃಷ್ಟಪೂರ್ಣವಾದುದು. ಚಲಚಿತ್ರ ಬಿಟ್ಟು ಅವರು ನಾಟಕ ಕಂಪೆನಿಇಟ್ಟರು. ಅದರಲ್ಲೂ ವಿಧಿ ಅವರನ್ನು ಹಾಳುಮಾಡಿತು. ನಂತರ ಅವರು ಮೆಜಿಕ್, ಇಂದ್ರಜಾಲ ಪ್ರದರ್ಶನ ಮಾಡಿ ತಿರುಗಾಡಿದರು. ಅದನ್ನು ಬಿಟ್ಟು ಮತ್ತೆ ಕಬ್ಬಿಣಸಾಮಾನು ತಯಾರಿಕೆಯಲ್ಲಿ ಪ್ರಯೋಗ ಮಾಡಿ ಅದರಲ್ಲೂ ಯಶಸ್ವಿಯಾಗದೇ ನಿಕೃಷ್ಟಾವಸ್ಥೆಯಲ್ಲಿ ಜೀವನದ ಅಂತ್ಯವನ್ನು ಕಂಡರು.

o o o o

ಶಾಂತಾರಾಮರು ಸ್ವತಃ ನಟಿಸುವ 'ಡಾ ಕೊಟ್ನಿಸ್' ಚಿತ್ರ ತಯಾರಿಕೆಯಲ್ಲಿದೆ. ಈ ಪ್ರಖ್ಯಾತ ದಿಗ್ದರ್ಶಕರು ನಟರಾಗುವುದು ಇದೇ ಮೊದಲನೇ ಸಲವಾದರೂ ಅದ್ಭುತ ಕಲಾಪ್ರೌಢಿಮೆಯನ್ನು ತಮ್ಮ ಕೃತಿಗಳಲ್ಲಿ ತುಂಬಿರುವರಂತೆ. ಡಾ। ಕೊಟ್ನಿಸರು ಚೀನಕ್ಕೆ ಹೊರಡುವಾಗ ತಮ್ಮ ತಾಯಿಗೆ ವಂದನೆಮಾಡುವಾಗ ಅವರ ಹೃದಯವು ಉಕ್ಕೇರಿ ಕಣ್ಣೀರು ಸುರಿಯುವ ಸನ್ನಿವೇಶದ ಫಿಲ್ಮ್ ತೆಗೆದಾದ ಮೇಲೂ ಶಾಂತಾರಾಮರು ಆ ಭಾವನೆಯಿಂದಲೇ ಕೂಡಿದವರಾಗಿದ್ದು ಎರಡು ಮಿನಿಟುಗಳ ತನಕ ಅತ್ತಿರುವರಂತೆ.

o o o o

ಕಲ್ಕತ್ತಾದ ನ್ಯೂಥಿಯೇಟರ್ಸಿನಲ್ಲಿ ಪ್ರಖ್ಯಾತಿಗೆ ಬಂದ ಪಂಜಾಬೀ ಸೈಗಲನು ಕೆಲ ಸಮಯ ಬೊಂಬಾಯಿಯ 'ರಂಜಿ'ತಿಗೆ ಸೇರಿ ಮತ್ತೆ 'ನನ್ನ ತಂಗಿ' ಎಂಬ ಕಲ್ಕತ್ತಾ ಚಿತ್ರದಲ್ಲಿ ಭಾಗವಹಿಸಿ, ಪುನಃ ಈಗ ಆ ಕಾಳಿಕಾದೇವಿಯ ಪಟ್ಟಣದಿಂದ ಮುಂಬಾ ದೇವಿಯ ಜಯಂತ ದೇಸಾಯಿ ಚಿತ್ರ ಸಂಸ್ಥೆಗೆ ಸೇರಿರುವನು. ನಟನಾಗುವ ಮೊದಲು ಈತ ಪ್ರೇಮ ಅದೀಬನಂತೆ ಇನ್ಶೂರ್ ಏಜೆಂಟನಾಗಿದ್ದ. ಬಾಬುರಾವ್ ಪೆಂಡಾರಕರನು ಮೋಟಾರುಕಾರು ಏಜೆಂಟನಾಗಿದ್ದ, ಅವನ ತಮ್ಮ ವಿನಾಯಕ ಮಾಸ್ತರನಾಗಿದ್ದ.

ಬೆಳೆಯುವ ಮಗು ಕೈಗೆ ಸಿಕ್ಕಿದ್ದನ್ನು ತಿನ್ನಲು ಪ್ರಯತ್ನಿಸುವಂತೆ ಪ್ರಖ್ಯಾತ ಚಲಚಿತ್ರ ವ್ಯಕ್ತಿಗಳು ಚಿಕ್ಕ ಪುಟ್ಟ ದಂಧೆಗಳಲ್ಲಿ ಜೀವನವನ್ನಾರಂಭಿಸಿದವರು.

o o o o

ಚಲಚಿತ್ರ ತಾರೆಗಳ ವೇತನ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಈಗ ಸಾವಿರಗಳಿಂದ ಲಕ್ಷಕ್ಕೆ ಮುಟ್ಟಿದೆ. ಶಾಂತಾ ಆಪ್ಟೆಗೆ ಲಕ್ಷದ ಆಹ್ವಾನಗಳು ಬಂದಿವೆ. ಕನನ್ ಬಾಲಗಳಿಗೆ ಒಂದು ಕಂಪೆನಿಯಿಂದ 'ಕೃಷ್ಣ ಲೀಲಾ'ದಲ್ಲಿ ರಾಧೆ ಪಾತ್ರ ವಹಿಸಲು ೨ ಲಕ್ಷದ ಕರೆ ಬಂದಿದೆ.

o o o o

ಬಂಕೀಮಚಂದ್ರರ 'ಕೃಷ್ಣಕಾಂತನ ಉಯಿಲು' ಎಂಬ ಕಾದಂಬರಿಯನ್ನು ನ್ಯೂಥಿಯೇಟರ್ಸಿನವರು ಎತ್ತುವರು. ಅದಕ್ಕಾಗಿ ಅವರು ಒಬ್ಬ ಶ್ರೀಮಂತನಿಂದ ಚೀನದಲ್ಲಿ ತಯಾರಾದ ಒಂದು ಕೆತ್ತನೆ ಕೆಲಸದ ಮಲಗುವ ಮಂಚವನ್ನು ೩೦ ಸಾವಿರಕ್ಕೆ ಕೊಂಡಿರುವರು.

o o o o

ಹೆಚ್ಚಿನ ಚಲಚಿತ್ರ ನಟನಟಿಯರು ತಮ್ಮ ಆರಾಮ ಕಾಲವನ್ನು ಕುದುರೆ 'ರೇಸ್'ಗಳಲ್ಲಿ ಕಳೆಯುತ್ತಾರಾದರೆ ನಟಿ ಉಲ್ಹಾಸ್‌ನು ಪಂದ್ಯಾಟದ ಕುದುರೆಗಳನ್ನು ಓಡಿಸುವ ಸ್ಥಳವನ್ನೇ ಇದು ತನಕ ನೋಡಿಲ್ಲವಂತೆ.

o o o o

ದ. ಭಾರತದ ಪ್ರಖ್ಯಾತ ನಟಿ ಸುಬ್ಬುಲಕ್ಷ್ಮಿಯನ್ನು ಹಿಂದೀ ಚಿತ್ರಗಳಲ್ಲಿ ಸೇರಿಸಲು ಪ್ರಯತ್ನಗಳೂ ಸೂಚನೆಗಳೂ ಇದ್ದರೂ ಕಮಾಲಾ ಕೊಟ್ನಿಸ್ ಎಂಬ ತೆಲುಗು ಚಿತ್ರ ನಟಿಯನ್ನು ಪ್ರಭಾತ್ ಕಂಪೆನಿಯವರು ಸಹಿಮಾಡಿಕೊಂಡಿರುವರು.

o o o o

ಪ್ರಖ್ಯಾತ ದಕ್ಷಿಣ ಭಾರತದ ನಟಿ ನಿಜವಾದ ಪ್ರಣಯ ಕತೆಯೊಂದರ ನಾಯಕಿಯಾಗಿದ್ದಾಳೆ. ತಾನು ಮದುವೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ ಅವಳ ಪ್ರೀತಿಯ ಶ್ರೀ. ವೆಂಕಯ್ಯ ಎಂಬವರು ಆಕಸ್ಮಾತ್ ಮರಣಪಟ್ಟದ್ದರಿಂದ ಕಾಂಚನ್ ಮಾಲಳಿಗೆ ಈಗ ಸ್ವಲ್ಪ ಹುಚ್ಚು ಹಿಡಿದಿದೆಯಂತೆ.

o o o o

ಆಗಾಖಾನ್ ಅರಮನೆಯಿಂದ ಬಿಡುಗಡೆಯಾಗಿ ಜುಹುದಲ್ಲಿದ್ದಾಗ ಮಹಾತ್ಮರು ಮೊದಲಿನ ಸಲಕ್ಕೆ ರಶ್ಯನರ ಸಾಹಸದ ಒಂದು ಚಲಚಿತ್ರ ನೋಡಿದರು. ಚಲಚಿತ್ರಗಳ ಕಡೆಗೆ (ಅದರಿಂದಾಗುವ ಅನ್ಯೆತಿಕ ಪರಿಣಾಮಗಳಿಗಾಗಿ) ಇಷ್ಟು ತಿರಸ್ಕಾರ ದೃಷ್ಟಿಯಿರುವ ಮಹಾತ್ಮರ ಜೀವನ ಚರಿತ್ರೆಯನ್ನೇ ಚಲಚಿತ್ರದಲ್ಲಿ ತೆಗೆಯಲು ರಾಜ ಕಮಲದ ಶಾಂತಾರಾಮರು ಯೋಚಿಸಿರುವರೆಂದೂ ಅದಕ್ಕೆ ಮಹಾತ್ಮರ ಅಪ್ರತ್ಯಕ್ಷ ಒಪ್ಪಿಗೆ ಇದೆ ಎಂದೂ ಒಂದು ಗುಜರಾತಿ ಪತ್ರಿಕೆ ತಿಳಿಸುತ್ತದೆ.

ಜಪಾನಿ ಸಾಮ್ರಾಜ್ಯದಲ್ಲಿ ಹಿಂದೂ ಸಂಸ್ಕೃತಿ

ಹಿಂದಿನ ಕಾಂಬೋಜ ಇಂದಿನ ಕೆಂಬೊಡಿಯೆ.

ಫ್ರೆಂಚ್ ವಸಾಹತಿನಲ್ಲಿ ವಿಷ್ಣು ದೇವಳ.

ಸಯಾಮಿನ ಹತ್ತಿರ ಫ್ರೆಂಚ್ ಇಂಡೋ ಚೈನಾ ಎಂಬ ವಸಾಹತು ಇದೆ. ಇದೀಗ ಜಪಾನೀ ಪ್ರಭಾವದೊಳಗೆ ಬಂದಿರುತ್ತದೆ. ಚೀನೀ ಜನಾಂಗ ಮೂಲದ ಜನರಿಂದ ತುಂಬಿರುವ ಈ ರಾಜ್ಯಗಳಲ್ಲಿ ಬೌಧ ಮತವು ಹೆಚ್ಚಾಗಿ ಪ್ರಚಾರದಲ್ಲಿದೆಯಾದರೂ ಒಂದು ಕಾಲದಲ್ಲಿ ಹಿಂದೂ ರಾಜರು ಈ ಪ್ರದೇಶಗಳನ್ನು ಆಳಿಕೊಂಡಿದ್ದರೆಂಬುದಕ್ಕೆ ಫ್ರೆಂಚು ಇಂಡೋ ಚೀನದ ಕೆಂಬೋಡಿಯಾ ಎಂಬ ಪಾಂತ್ಯದಲ್ಲಿನ ಪ್ರಾಚೀನ ಕುರುಹುಗಳಿಂದ ತಿಳಿದು ಬರುತ್ತದೆ.

ಇಂದಿನ ಈ ಕೆಂಬೋಡಿಯವು ಪುರಾಣ ಕಾಲದ ಕಾಂಬೋಜವಾಗಿದೆ. ಈಗಿನ ಇದರ ರಾಜಧಾನಿ ಅಂಕರ್ ಎಂಬುದು ಹಿಂದಿನ ನಗರಾವತ (ನಗರದ ದೇವಸ್ಥಾನ) ಎಂದಿತ್ತು. ಇಲ್ಲಿ ಪ್ರಖ್ಯಾತವಾದ ವಿಷ್ಣು ದೇವಸ್ಥಾನವಿದೆ. ಇದರ ಗೋಡೆಗಳ ಮೇಲೆ ರಾಮಾಯಣ ಮಹಾಭಾರತದ ಚಿತ್ರಗಳು ಕೆತ್ತಲ್ಪಟ್ಟಿರುವುದನ್ನು ಈಗಲೂ ನೋಡಬಹುದು.

ಕ್ರಿಸ್ತಶಕ ಒಂದನೇ ಶತಮಾನದಲ್ಲಿ ಭಾರತದಿಂದ ಅನೇಕ ಹಿಂದೂ ಜನರು ಈ ಕಾಂಬೋಜ ದೇಶಕ್ಕೆ ಹೋಗಿ ನೆಲೆನಿಂತರು. ಆಗ ಅಲ್ಲಿ ಬತ್ತಲೆ ಅಲೆಯುವ ಕಾಡು ನಿವಾಸಿಗಳಿದ್ದರು. ಹಿಂದುಗಳು ಅವರನ್ನು ನಾಗರೀಕರನ್ನಾಗಿ ಮಾಡಿದರು. ಕಂಭೂ ಸ್ಥಯಂಭುವ ಎಂಬ ಹಿಂದೂ ಅರಸನು ಕಾಂಬೋಜವೆಂಬ ರಾಜ ಪಾರಂಪರ್ಯೆಯನ್ನು ಸ್ಥಾಪಿಸಿದನು. ಅವನ ವಂಶಸ್ಥರು ೫೦೦ ವರ್ಷಗಳವರೆಗೆ ಆಳಿಕೊಂಡಿದ್ದರು.

ಏಳನೇ ಶತಮಾನದಲ್ಲಿ ಇಲ್ಲಿಯ ಹಿಂದೂ ಅರಸರ ವೈಭವವು ಉನ್ನತ ಶ್ರೇಷ್ಠತೆಗೆ ಮುಟ್ಟಿತು. ಚಾಣಕ್ಯನ ಅರ್ಥ ಶಾಸ್ತ್ರದಲ್ಲಿನ ರಾಜ ನೀತಿಗನುಸಾರವಾಗಿ ಇವರು ರಾಜ್ಯಾಂಗ ಕ್ರಮವನ್ನು ಸ್ಥಾಪಿಸಿದರೆಂಬ ಸಂಗತಿಯು ಆ ಗ್ರಂಥದ ಶ್ರೇಷ್ಠತೆಯನ್ನು ತಿಳಿಸುವುದು.

ಕೆಂಬೋಡಿಯಾದ ಇಂದ್ರ ವರ್ಮನ್ ಎಂಬ ದ್ರಾವಿಡ ಜನಾಂಗ ಮೂಲದ ಅರಸನು ಸ್ಮಾರ್ಥಮತ ಸಂಸ್ಥಾಪಕರಾದ ಶ್ರೀ ಶಂಕರಾಚಾರ್ಯರ ಬಳಿ ಶಾಸ್ತ್ರಗಳನ್ನು ಅಭ್ಯಾಸಿಸಿದನೆಂದು ಒಂದು ಶಿಲಾಶಾಸನದಲ್ಲಿ ಉಲ್ಲೇಖವಿದೆ.

ಇಮ್ಮಡಿ ಸೂರ್ಯವರ್ಮನ್ ಎಂಬ ಅರಸನು ಯಶೋಧರಪುರ ಅಥವಾ ಇಂದು ಅಂಕೋರ್ ಎಂದು ಕರೆಯಲ್ಪಡುವ ರಾಜಧಾನಿಯನ್ನು ಕಟ್ಟಿಸಿದನು. ಈ ನಗರದಲ್ಲಿ ಕಿರೀಟಧಾರಿಗಳಾದ ತ್ರಿಮೂರ್ತಿಗಳ ಮುಖಗಳಂತೆ ತೋರುವ ಗೋಪುರಗಳುಳ್ಳ ದೇವಸ್ಥಾನಗಳು ಜಗತ್ತಿನ ಅದ್ಭುತಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿವೆ. ಕ್ರಮೇಣ ಈ ಹಿಂದೂ ರಾಜ್ಯವು ಬೌಧ ಅರಸು ಮನೆತನದವರ ವಶವಾಯಿತು.

ಕೆಂಬೋಡಿಯ ಇಲ್ಲವೆ ಕಾಂಭೋಜ ಸಾಮ್ರಾಜ್ಯದಲ್ಲಿ ರಾಜವಿಹಾರವೆಂಬ ದೊಡ್ಡ 'ಕೋಲೇಜ್' ಇದ್ದು ಅದರಲ್ಲಿ ೯೭೦ ವಿದ್ಯಾರ್ಥಿಗಳೂ ೪೫ 'ಪ್ರೊಫೆಸರ'ರೂ ಇದ್ದರು. ಮಾತ್ರವಲ್ಲ ೭೯೮ ದೇವಾಲಯಗಳೂ, ೧೦೨ ಆಸ್ಪತ್ರೆಗಳೂ ಅಲ್ಲಿ ರಚಿಸಲ್ಪಟ್ಟ ಸಂಗತಿ ಸಾರಸ್ಯವೂ ಸೋಜಿಗದ್ದೂ ಆಗಿದೆ.

ಅಲ್ಲಿನ ರಾಜರ ಆಳ್ವಿಕೆಯ ಧರ್ಮತತ್ವವು ಹಿಂದೂ ಸಂಸ್ಕೃತಿಯ ಸಾರವನ್ನೇ ತಿಳಿಸುವಂತಹದು. "ಶರೀರ ವ್ಯಾಧಿಯು ಸಹಿಸಲಸದಳವಾಗುವ ಮಾನಸಿಕ ವೇದನೆಯನ್ನುಂಟು ಮಾಡುವುದು. ಪ್ರಜೆಗಳ ಸಂಕಷ್ಟಗಳೇ ರಾಜನೊಬ್ಬನ ವೇದನೆ." ಎದೊಂದು ಶಿಲಾಶಾಸನವಲ್ಲಿದೆ.

ಭಾರತದ ವಾರಾಂತ್ಯ ವರದಿಗಳು

(೬ನೇ ಪುಟದಿಂದ)

ಯದಲ್ಲ. ಜನರ ಪ್ರತಿನಿಧಿಗಳಿಗೆ ಸರಕಾರ ರಚಿಸಲು ಸಂದರ್ಭಗಳು ಒದಗಿಸಲಿಲ್ಲ. ಅಂದಮೇಲೆ ಹೊಣೆಗಾರಿಕೆ ಇಲ್ಲದ ಸರಕಾರದ ಕಡೆಯಿಂದ ಹೊಣೆಗಾರಿಕೆ ಇಲ್ಲದ ಪ್ರತಿನಿಧಿಗಳೇ ಫ್ರಿಸ್ಕೊ ಪರಿಷತ್ತಿಗೆ ಕಳುಹಿಸಲ್ಪಟ್ಟದರಲ್ಲಿ ಆಶ್ಚರ್ಯವಿಲ್ಲ. ಇಲ್ಲಿ ಅಧಿಕಾರ ಸ್ವೀಕರಿಸಲು ನಿರಾಕರಿಸಿದ ಕೊಂಗ್ರೆಸ್-ಲೀಗುಗಳು ಅಲ್ಲಿ ಪ್ರತಿನಿಧಿಗಳಾಗಿ ಹೋಗಲಿಚ್ಛಿಸುವುದೇಕೆ?"

ಇನ್ನೊಬ್ಬರೆಂದರು "ಜನರ ಪ್ರತಿನಿಧಿಗಳಲ್ಲದವರನ್ನು ಕಳುಹಿಸಿ ಅವರು ಜನಾಭಿಪ್ರಾಯಕ್ಕೆ ವಿರೋಧವಾದ ಅಭಿಪ್ರಾಯವನ್ನೇ ಅಲ್ಲಿ ಸೂಚಿಸುವುದಕ್ಕಿಂತ ಯಾರನ್ನೂ ಕಳುಹಿಸದಿರುತಿದ್ದರೆ ಚೆನ್ನಾಗಿತ್ತು" ಎಂದರು.

BALANCE AND THE BALANCE WHEEL

ಸರಿಯಾದ ಕಾಲ ಸೂಚಿಸಲು ಹೆರ್ ಸ್ಪ್ರಿಂಗ್ ಮತ್ತು ಬೆಲೆನ್ಸ್ ಚಕ್ರಗಳ ತೂಕವು ಸರಿಯಾದ ದಾಮಾಶಯದಲ್ಲಿರಬೇಕು. ಜಗತ್ತಿನ ನುರಿತ ಕೆಲಸಗಾರರು ವೆಸ್ಟ್ ಎಂಡ್ ವಾಚುಗಳ ಉಪಕರಣಗಳನ್ನು ನಾಜೂಕು ಮಾಡುತ್ತಾರೆ. ಅತ್ಯಾಧುನಿಕ ಗಡಿಯಾರ ವಿಜ್ಞಾನಕ್ಕನುಗುಣವಾಗಿ ವೆಸ್ಟ್ ಎಂಡ್‌ಗಳು ತಯಾರಿಸಲ್ಪಡುತ್ತವೆ. ಅದರ ಶ್ರೇಷ್ಠ ಕಾಮಗಾರಿಕೆ ವಿಶ್ವಾಸಾರ್ಹವಾಗಿವೆ.



ಕಾಗದ ನಿಯಂತ್ರಣ ಆಜ್ಞೆಯಿಂದ ಕೆಟಲಾಗು ಕಳುಹಿಸಲಿಕ್ಕಾಗದಕ್ಕೆ ವಿಷಾದಿಸುತ್ತೇವೆ.

ಅಕ್ಷಮದ ತಲ್ಪೋಣದಿಂದ ಜಾಹೀರಾತಿನ ಎಲ್ಲಾ ನಮೂನೆಗಳನ್ನು ಒದಗಿಸಲಾಗದಿದ್ದರೂ ಸಾಧ್ಯವಿರುವಷ್ಟು "ಆರ್ಡರ್" ಪೂರೈಸಲಾಗುವುದು.

WEST END WATCH Co
BOMBAY CALCUTTA

ಅಮೇರಿಕದಲ್ಲಿ ಸಹಕಾರಿ ಸಂಘಗಳು

(೧ನೇ ಪುಟದಿಂದ)

ಸಹಕಾರ ಚಳವಳವು ಅತ್ಯಂತ ಸಹಾಯಕವಾಗಿದೆ. ಮಿಲಿಯಾಂತರ ಜನರು ಅಲ್ಲಿ ಒಂದಲ್ಲ ಒಂದು ರೀತಿಯ ಸಹಕಾರಿ ಸಂಘದಲ್ಲಿ ಭಾಗಿಗಳಾಗಿರುವರು. ಅಟ್ಲಾಂಟಿಕ್ ಕರಾವಳಿಯಿಂದ ಪೆಸಿಫಿಕ್ ತೀರದ ತನಕದ ಕೃಷಿ ಪ್ರದೇಶಗಳಲ್ಲಿ ಸಹಕಾರ ಪದ್ಧತಿಯು ತಲೆಯೆತ್ತಿದ್ದು ಜನಾಂಗದ ವ್ಯಾಪಾರ ಭದ್ರತೆಗೆ ಅದೊಂದು ಪ್ರಾಮುಖ್ಯ ಸಾಧನವಾಗಿದೆ.

ಅಮೇರಿಕದಲ್ಲೂ ಹೆಚ್ಚಿನ ಸಹಕಾರಿ ಸದಸ್ಯರು ರೈತರೇ ಆಗಿರುವರು. ಒಂದು ಐದನೇ ಅಂಶದಷ್ಟು ಮಾತ್ರ ನಗರ ವಾಸಿಗಳು ಪ್ರತಿ ೮ ರೈತರಲ್ಲಿ ಮೂವರು ಸಹಕಾರಿ ಸಂಘಗಳ ಸದಸ್ಯರಾಗಿರುವರು. ಅಂದರೆ ಡೆನ್ಮಾರ್ಕಿನಲ್ಲಿ ಶೇಕಡಾ ೯೦ ರೈತರು ಸಹಕಾರಿಗಳಾಗಿದ್ದರೆ ಅಮೇರಿಕದಲ್ಲಿ ಅಂತಹರು ಶೇಕಡಾ ೬೦ರಷ್ಟಿರುವರು, ಇನ್ನು ಸದ್ಯದಲ್ಲೇ ಅಮೇರಿಕನರು ಡೆನ್ಮಾರ್ಕಿನ ದಾಖಲೆಯನ್ನು ಹಿಂದಕ್ಕೆ ಹಾಕಲು ಸಾಧ್ಯವಿದೆ.

೧೯೪೩ರಲ್ಲಿ ಅಮೇರಿಕದ ಕೃಷಿಕ ಸಹಕಾರಿ ಸಂಘದ ರೈತರು ಪರದೇಶಕ್ಕೆ ಕಡ ಒತ್ತಿಕಾಯಿದೆ ಪ್ರಕಾರ ಕಳುಹಿಸಲ್ಪಟ್ಟ ಆಹಾರ ಪ್ರಮಾಣದಲ್ಲಿ ಮೂರನೇ ಎರಡಂಶವನ್ನು ಇವರು ಪೂರೈಸಿಕೊಟ್ಟರೆಂಬ ಸಂಗತಿಯು ಆ ದೇಶದ ಸಹಕಾರಿ ಚಳವಳದ ಅಮೋಘ ಯಶಸ್ಸಿನ ಒಂದು ದೃಷ್ಟಾಂತ.

ಅಲ್ಲಿನ ಕೃಷಿ ಉತ್ಪತ್ತಿಯ ಆರನೇ ಒಂದಂಶದಷ್ಟನ್ನು ಸಹಕಾರಿ ಸಂಘಗಳು ನಿರ್ವಹಿಸುತ್ತವೆ. ಅಲ್ಲಿ ೨೮೦೦ ಸಹಕಾರಿ 'ಸ್ಟೋರ್ಸು'ಗಳಿದ್ದು ಅವರು ೫೦೦ ಸಾವಿರ ಕುಟುಂಬಗಳಿಗೂ, ೧೨೦೦ ಆಹಾರ ಪದಾರ್ಥ ಮಾರುವ ಅಂಗಡಿಗಳಿಗೂ ತರತರದ ವಸ್ತುಗಳನ್ನು ಸರಬರಾಯಿ ಮಾಡುತ್ತಾರೆ. ಈ ವಸ್ತುಗಳು ಶ್ರೇಷ್ಠ ತರಗತಿಯವಿದ್ದು ಗಿರಾಕಿಗಳಿಗೆ ಆರೋಗ್ಯವನ್ನೊದಗಿಸಲು ಸಹಾಯವಾಗುತ್ತದೆ. ಬೆಲೆಗಳೂ ಬಹಳ ಕಮ್ಮಿಯಿರುವುದು ಸ್ವಾರಸ್ಯದಸಂಗತಿ. ಗಿರಾಕಿಗಳೇ ಪಾಲುದಾರರಾಗಿರುವ ವಿಮಾ ಕಂಪೆನಿಗಳಲ್ಲಿ ೩ ಲಕ್ಷ ಜನರು ಜೀವ ವಿಮೆಯನ್ನೂ, ಮನೆ, ಮೋಟಾರುಕಾರು ಇತರ ಮೌಲ್ಯದ ವಸ್ತುಗಳನ್ನೂ ಭದ್ರಗೊಳಿಸಿರುವರು. ೬೦ ಲಕ್ಷ ರೈತರು ತಮ್ಮ ಜಮೀನುಗಳನ್ನು ಇಂತಹ ಕಂಪೆನಿಗಳಲ್ಲಿ ವಿಮೆ ಇಳಿಸಿರುವರು. ಈ ಸಹಕಾರಿಗಳದ್ದೇ ಇಲೆಕ್ಟ್ರಿಕ್ ಕಂಪೆನಿಗಳಿದ್ದು ೧೦ ಲಕ್ಷ ರೈತರ ಮನೆಗಳಿಗೆ ವಿದ್ಯುತ್ ಪ್ರಕಾಶವು ಪೂರೈಸಲ್ಪಡುತ್ತದೆ.

ರಾಷ್ಟ್ರೀಯ ಸಹಕಾರಿಗಳ ಸಂಘವು ಅಲ್ಲಿ ೧೯೩೭ರಲ್ಲಿ ಸ್ಥಾಪಿತವಾಯಿತು. ಈಗ ಸಂ. ಅಮೇರಿಕದಲ್ಲಿ ಅವರ ೧೫ ಪ್ರಾಂತ್ಯಶಾಖೆಗಳೂ, ಕೆನಡದಲ್ಲಿ ಎರಡೂ ಇವೆ. ೧೯೪೩ರಲ್ಲಿ ಅವರೊಂದು ಶೃಂಗಾರ ವಸ್ತು ತಯಾರಕ ಮತ್ತು ಹಾಲು ಯಂತ್ರದ ಕಾರ್ಖಾನೆಗಳನ್ನು ಪಡಕೊಂಡು ಮೊದಲನೇ ವರ್ಷದಲ್ಲಾದ ಲಾಭದಿಂದಲ್ಲೇ ಮೂಲಧನದ ಸಾಲವನ್ನು ತೀರಿಸಿದರು. ೧೯೪೪ರಲ್ಲಿ ಅವರ ವ್ಯಾಪಾರ ೨೦ ಮಿಲಿಯ ರೂಪಾಯಿಗಳಷ್ಟಿದ್ದು, ೧೯೪೩ರಲ್ಲಿ ಅದು ರೂ. ೪೯.೬ ಮಿಲಿಯದಷ್ಟಾಯಿತು.

ರಾಷ್ಟ್ರೀಯ ಸಹಕಾರಿ ಸಂಸ್ಥೆಯು ಈಚೆಗೆ ಒಂದು ದೊಡ್ಡ ಪಟ್ಟಣವನ್ನೇ ಕೊಂಡುಕೊಂಡರು. ಬುಕಾರ್ಟ್ ಎಂಬಲ್ಲಿ ನಷ್ಟದಲ್ಲಿ ನಡೆಯುತಿದ್ದ ಆ ಕಾರ್ಖಾನೆಯನ್ನು ಕೊಂಡು ರಾ. ಸ. ಸಂಸ್ಥೆಯವರು ಕ್ರಮವಾಗಿ ತಮ್ಮ 'ಸರಪಣಿ ಸಂಘ'ಗಳ ಮೂಲಕ ಅದರ ವಸ್ತುಗಳನ್ನು ಮಾರಾಟ ಮಾಡಿ ಅಲ್ಲಿಯ ಕೆಲಸಗಾರರಲ್ಲಿ ನೆಮ್ಮದಿಯನ್ನು ಉಂಟುಮಾಡಿದರು.

ಅಮೇರಿಕದಲ್ಲಿ ಇಂದು ರೈತರೂ ಮಜೂರರು, ವಿದ್ಯಾವಂತರೂ, ಉನ್ನತ ಉದ್ಯೋಗಿಗಳು ಎಲ್ಲರೂ ಸಹಕಾರಿ ಸಂಘಗಳಿಗೆ ಸೇರುತ್ತಿರುವರು. ಜಗತ್ತಿನಲ್ಲೆಲ್ಲೂ ಹೀಗೇ ಆದರೆ ಚಿರಶಾಂತಿಯೂ ಮಾನವ ಸೌಹಾರ್ದವೂ ತೊಡಕಿಲ್ಲದೆ ಸ್ಥಾಪಿತವಾಗುವುದು.

ನಮ್ಮ ದೇಶದಲ್ಲಿಯೂ ಸಹಕಾರಿ ಚಳವಳವು ಭರದಿಂದ ಸಾಗಬೇಕು. ನಮ್ಮ ಜಿಲ್ಲೆಯ ಸಹಕಾರಿ ಚಟುವಟಿಕೆಗಳು ಪ್ರಾಂತ್ಯದಲ್ಲೇ ಶ್ರೇಷ್ಟ ತರಗತಿಯದೆಂದು ಅಧಿಕಾರಿಗಳಿಂದ ಶ್ಲಾಘಿಸಲ್ಪಟ್ಟಿದೆ. ಅಮೇರಿಕನ್ ಪದ್ಧತಿಯನ್ನು ಅಭ್ಯಾಸಿಸಿ ಯೋಗ್ಯ ಕಂಡ ರೀತಿಯಲ್ಲಿ ಅನುಸರಿಸಲು ಪ್ರಯತ್ನ ಮಾಡಿದರೆ ದೇಶಕ್ಕೆ ಆದರ್ಶ ಕಲ್ಪಿಸಿದಂತಾಗುವುದು.

ಹುಡುಗ ವಿಜ್ಞಾನಿಗಳ ಹ್ಯಾಸ್ಕೂಲು

ನ್ಯೂಯೋರ್ಕಿನ ಆದರ್ಶ ವಿದ್ಯಾಸಂಸ್ಥೆ

೮ ಮಿಲಿಯ ಜನರಿಗೆ ಹುಡುಗರ ರೇಡಿಯೋ ಭಾಷಣ

೫೦ ಕ್ಲಾಸುಗಳೂ ೧೫ ಲೆಬೊರೆಟರಿಗಳೂ

ನೂರಿಪ್ಪತ್ತು ಮಹಡಿಯ ಕಟ್ಟಡಗಳಿರುವ ನ್ಯೂಯೋರ್ಕ್ ನಗರದಲ್ಲಿ ಜಗತ್ತಿನ ಅತೀ ವಿಚಿತ್ರ ನಾಗರೀಕ ಜೀವನದ ಮಾದರಿಗಳು ನೋಡ ಸಿಗುತ್ತವೆ. ಅವುಗಳಲ್ಲಿ ಆರು ವರ್ಷಗಳ ಹಿಂದೆ ಅಲ್ಲಿ ಸ್ಥಾಪಿಸಲ್ಪಟ್ಟ ವಿಚಿತ್ರ ಹುಡುಗ ವಿಜ್ಞಾನಿಗಳ ಹ್ಯಾಸ್ಕೂಲು ಒಂದು. ಹ್ಯಾಸ್ಕೂಲುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಕೆಲವರು ಅಮೋಘ ಬುದ್ಧಿ ಶಕ್ತಿಯವರಿರುವರು. ಅಂಥವರಿಗೆ ನ್ಯೂಯೋರ್ಕಿನ ಈ ವಿಜ್ಞಾನ ಶಾಲೆಯು ಎಲ್ಲಾ ತರದ ಸೌಕರ್ಯಗಳನ್ನು ಒದಗಿಸುವುದು.

ಈ ಹ್ಯಾಸ್ಕೂಲಿನಲ್ಲಿ ೨ ಸಾವಿರ ವಿದ್ಯಾರ್ಥಿಗಳಿದ್ದಾರೆ. ಪ್ರಾಯ ೧೩ರಿಂದ ೧೮ರ ಒಳಗೆ. ತಮ್ಮ ಅಭಿರುಚಿಗೊಪ್ಪುವ ವೈಜ್ಞಾನಿಕ ವಿಷಯಗಳಲ್ಲಿ ಹುಡುಗರು ಬೇಕಾದ ಪರಿಶೋಧನೆಗಳನ್ನು ಇಲ್ಲಿ ನಡೆಸಬಹುದು. ಇದರಂತೆ ನ್ಯೂಯೋರ್ಕಿನಲ್ಲಿ ಸಂಗೀತ, ಚಿತ್ರಕಲೆ, ಮತ್ತು ವಿಮಾನ ಶಾಲೆಗಳೂ ಇವೆ.

ಈ ಹ್ಯಾಸ್ಕೂಲಿನಲ್ಲಿ ವಿದ್ಯಾರ್ಥಿಗಳು ನಾಲ್ಕು ವರ್ಷಗಳ ತನಕ ಇರಬೇಕಾಗುವುದು. ವಿಜ್ಞಾನ ವಿಷಯಗಳಲ್ಲಿ ವಿಶೇಷ ಅನುಭವ ದೊರಕಿಸಿ ಕೊಡುವುದರೊಂದಿಗೆ ಅವರಿಗೆ ಸಾಹಿತ್ಯ, ಸಮಾಜಶಾಸ್ತ್ರ, ಮತ್ತು ವಿದೇಶಿ ಭಾಷಾ ಜ್ಞಾನವೂ ಮಾಡಿಕೊಡಲಾಗುವುದು. ಮೊದಲನೇ ವರ್ಷ ಹುಡುಗರಿಗೆ ವಿಜ್ಞಾನದ ಸರ್ವ ಸಾಮಾನ್ಯ ಮೂಲತತ್ವಗಳ ಪರಿಚಯವು ಕಲಿಸಲ್ಪಡುವದು. ನಂತರದ ಮೂರು ವರ್ಷಗಳಲ್ಲಿ ಅವರಿಗೆ ಶರೀರ ಶಾಸ್ತ್ರ, ಭೌತಿಕ ವಿಜ್ಞಾನ, (Physics) ಮತ್ತು ರಾಸಾಯನಿಕ ವಿಜ್ಞಾನ (Chemistry) ಇವುಗಳನ್ನು ಸವಿಸ್ತಾರವಾಗಿ ಕಲಿಸಲಾಗುವುದು. ಇದಲ್ಲದೆ ಹುಡುಗರು ರೇಡಿಯೋ, ವಿಮಾನ, ಗಣಿತ, ಮತ್ತು ಪ್ರಯೋಗಶಾಲೆಯ ವಿಷಯಗಳನ್ನು ಇಚ್ಛೆ ಪಟ್ಟರೆ ಅಭ್ಯಾಸಿಸಬಹುದು.

ಈ ಶಾಲೆಗೆ ಸೇರುವ ವಿದ್ಯಾರ್ಥಿಗಳಿಗೆ ಮೊದಲೊಂದು ಪರೀಕ್ಷೆ ನಡೆಸಲಾಗುವುದು. ಗಣಿತ ತರ್ಕಶಕ್ತಿ, ಓದಿ ಗ್ರಹಣ ಮಾಡಿಕೊಳ್ಳುವ ಶಕ್ತಿ, ವಿಜ್ಞಾನ ಅಭಿರುಚಿ ಇವುಗಳನ್ನು ಪರೀಕ್ಷಿಸಿ ಹೆಚ್ಚು ಮಾರ್ಕುಗಳು ಸಿಕ್ಕಿದವರಿಗೆ ಮಾತ್ರ ಚುನಾಯಿಸಲಾಗುವುದು. ಇಲ್ಲಿ ಕಲಿತ ಹುಡುಗರಲ್ಲಿ ಶೇಕಡಾ ೯೮ರಷ್ಟು ಮಂದಿಗಳು ಕೋಲೇಜ್ ತರಗತಿಗೆ ಹೋಗಿ ಡಾಕ್ಟರರೂ, ಇಂಜಿನಿಯರರೂ, ವಿಜ್ಞಾನ, ಲೆಕ್ಕ ಪತ್ರ ಪರಿಶೋಧಕರೂ ಮತ್ತು ಪತ್ರಿಕೋದ್ಯೋಮಿಗಳೂ ಆಗುವರು.

ಇಲ್ಲಿಯ ಪ್ರಥಮ ಶ್ರೇಣಿಯಲ್ಲಿ ನಿಲ್ಲುವವರಿಗೆ ಕೋಲೇಜ್ ಶಿಕ್ಷಣಕ್ಕೆ ವಿದ್ಯಾರ್ಥಿವೇತನವನ್ನು ಕೊಡಲಾಗುವುದು. ಕಳೆದ ವರ್ಷ ೪೫ ವಿದ್ಯಾರ್ಥಿಗಳು ಇದನ್ನು ಹೊಂದುವವರಾದರು.

ನ್ಯೂಯೋರ್ಕಿನ ಉಪ ನಗರ ಭಾಗವೊಂದರಲ್ಲಿ ಈ ಶಾಲೆಯಿರುವುದು. ೫೦ ಕ್ಲಾಸು ಕೋಣೆಗಳೂ. ೧೫ ವಿಜ್ಞಾನ ಪಾಠ ಪ್ರಯೋಗ ಶಾಲೆಗಳೂ (Laboratories) ಇದರಲ್ಲಿವೆ. ಗ್ರಂಥಾಲಯ, ಶರೀರ ವ್ಯಾಯಮ ಶಾಲೆ ಮತ್ತು ಉಪಹಾರ ಗೃಹಗಳು ಪ್ರತ್ಯಪ್ರತ್ಯೇಕವಾಗಿದೆ. ವಿದ್ಯಾರ್ಥಿಗಳು ತಮ್ಮ ವಾರಪತ್ರಿಕೆಯನ್ನೂ ಕೈಪಿಡಿಯನ್ನೂ ಮತ್ತೊಂದು ವಾರ್ಷಿಕ ಪತ್ರಿಕೆಯನ್ನೂ ಪ್ರಕಟಿಸುತ್ತಾರೆ. ಇದಲ್ಲದೆ ನಾಟಕ, ಆಟಗಳ ಸೌಕರ್ಯಗಳೂ ಇಲ್ಲಿವೆ.

ಪೆನಿಸಿಲಿನ್ ಎಂದು ಇತ್ತೀಚೆಗೆ ಬಹಳ ಉಪಯುಕ್ತ ಸಂಜೀವಿನಿ ಎಂದು ಪ್ರಚಾರವಾದ ಒಂದು ಔಷಧವನ್ನು ತಯಾರಿಸುವ, ಸಿದ್ಧಗೊಳಿಸುವ ವಿಧಾನವನ್ನು ಈ ಹ್ಯಾಸ್ಕೂಲಿನ ವಿದ್ಯಾರ್ಥಿಗಳು ಕಂಡು ಹಿಡಿಯಲು ಪ್ರಯತ್ನಿಸಿ ಯಶಸ್ವಿಯಾಗಿರುವರೆಂಬ ವಿಷಯವು ಅತೀ ಸೋಜಿಗದು. ಇಲ್ಲಿಯ ಉಪಾಧ್ಯಾಯರು ಸೈನ್ಯಖಾತೆಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿರುವರು.

ಉಚ್ಚ ಪದವಿಧರರಾದ ನೂರು ಉಪಾಧ್ಯಾಯರು ೨ ಸಾವಿರ ತಮ್ಮ ಚತುರ ವಿದ್ಯಾರ್ಥಿಗಳಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ಇವರಲ್ಲಿ ೨೮ ಮಂದಿಗಳಿಗೆ ಪಿ. ಎಚ್. ಡಿ ಡಿಗ್ರಿ ಇದೆ. ೬೦ ಮಂದಿಗಳು ಎಂ. ಎ. ಡಿಗ್ರಿದಾರರು ತಾವು ಕಲಿತ ವಿಶ್ವವಿದ್ಯಾಲಯಗಳಲ್ಲಿನ ವಿಜ್ಞಾನ ರೀತಿನೀತಿಗಳನ್ನು ಅವರುಕಲಿಸುವರು.

ಕಳೆದ ಮೂರು ವರ್ಷಗಳಿಂದ ಪತ್ರಿವಾರವೆಂಬಂತೆ ಈ ಶಾಲೆಯ ವಿದ್ಯಾರ್ಥಿಗಳು 'ವಿಜ್ಞಾನ ಕಾರ್ಯಕ್ಷೇತ್ರ' ಎಂಬ ವಿಷಯದ ಕುರಿತು ರೇಡಿಯೋ ಭಾಷಣ ಕೊಡುತಿದ್ದು ೮೦ ಲಕ್ಷ ಜನರು ಪ್ರತಿವಾರ ಅವರನ್ನು ಕೇಳುತ್ತಲಿದ್ದಾರೆ.

ಈಗ ನಮ್ಮ ಅನೇಕ ಹಳೇ ವಿದ್ಯಾರ್ಥಿಗಳು ಸೈನ್ಯದಲ್ಲೂ ನೌಕಾ ಪಡೆಯಲ್ಲೂ ಸೇರಿದ್ದರು. ಹ್ಯಾಸ್ಕೂಲಿನ ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳು ಏನೇನು ಮಾಡಬಹುದೆಂದು 'ನಮ್ಮ ಶಾಲೆಯು ತೋರಿಸಕೊಟ್ಟಿರುತ್ತದೆ. ಕೋಲೇಜಿಗೆ ಹೋದ ನಮ್ಮ ವಿದ್ಯಾರ್ಥಿಗಳು ತಮ್ಮ ಶ್ರೇಷ್ಟತೆಯನ್ನು ತೋರಿಸಿರುವರು' ಹೀಗೆಂದು ಹೆಡ್‌ಮಾಸ್ಟರರಾದ ಮಿ। ಮೊಸ್ಟರರು ತಿಳಿಸುತ್ತಾರೆ. ದೊಡ್ಡ ದೊಡ್ಡ ವಿಶ್ವ ವಿದ್ಯಾಲಯಗಳಲ್ಲಿ ನ್ಯೂಯೋರ್ಕಿನ ಈ ವಿಜ್ಞಾನ ಶಾಲೆಯ ವಿದ್ಯಾರ್ಥಿಗಳು ಕಠಿಣ ವಿಜ್ಞಾನಾಂಗಗಳ ಪರಿಶೋಧಕರಾಗಿ ಚುನಾಯಿಸಲ್ಪಟ್ಟಿರುವರು.

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ
ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ
ನಸ್ಯ
ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.
ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್
ರಥಬೀದಿ—ಮಂಗಳೂರು
ನಮ್ಮ ಇತರ ವಿಶೇಷ ತಯಾರಿಕೆಗಳ
ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ
ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ದಿನವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಆರ್ಥಿಕ ಸ್ವಾತಂತ್ರ್ಯವೇ ಪ್ರಜಾಪ್ರಭುತ್ವದ ಧ್ಯೇಯ

ದೊಡ್ಡ ಉದ್ಯಮಗಳು ಚಿಕ್ಕವರನ್ನು 'ನುಂಗ'ದಂತೆ ತಡೆ

ಎಲ್ಲಾ ದಂಧೆಗಳಿಗೂ ಸಮಾನ ಸಂದರ್ಭ

ಸೊಕೊನಿ ಪೆಟ್ರೋಲ್ ಕಂಪೆನಿ ಎಂದು ಕೇಳಿದ್ದೇವೆ. ಇದು ಅಮೇರಿಕದ ದೊಡ್ಡ ಪೆಟ್ರೋಲ್ ತಯಾರಕ ಸಂಸ್ಥೆ. ಜಗತ್ತಿನ ಹೆಚ್ಚಿನ ದೇಶಗಳಿಗೆ ಮೋಟಾರ್ ಪೆಟ್ರೋಲ್ ಮತ್ತು ಅದಕ್ಕೆ ಸಂಬಂಧಿಸಿದ ಉಪವಸ್ತುಗಳನ್ನು ಈ ಕಂಪೆನಿಯವರು ಒದಗಿಸುತ್ತಾರೆ. ಆದರೆ ೧೯೪೦ರಲ್ಲಿ ಸಂ. ಅಮೇರಿಕದ ಸರಕಾರದವರು ಈ ಸೋಕೋನಿ ಕಂಪೆನಿಯ ಮೇಲೆ ಒಂದು ಕಟ್ಲೆ ಹೂಡಿದರು. ಇವರು ಅಮೇರಿಕದೊಳಗಿನ ಚಿಕ್ಕ ಚಿಕ್ಕ ಇತರ ಪೆಟ್ರೋಲ್ ಕಂಪೆನಿಗಳೊಡನೆ ಒಪ್ಪಂದ ಮಾಡಿಕೊಂಡು ಅವರಲ್ಲಿ ತಯಾರಾಗುವ ಎಲ್ಲಾ ಪೆಟ್ರೋಲನ್ನು ತಾವೇ ತೆಗೆದುಕೊಂಡು ಜಗತ್ತಿನಲ್ಲಿ ಅತೀ ಹೆಚ್ಚು ಬೆಲೆಗೆ ಮಾರುತ್ತಿದ್ದರು. ಇದು ಅಮೇರಿಕದ ಶರ್ಮನ್ ಶಾಸನದ ಪ್ರಕಾರ ದೊಡ್ಡ ತಪ್ಪಾಗುತ್ತದೆ.

ಒಂದು ಉದ್ಯಮವನ್ನು ಒಂದು ಕಂಪೆನಿಯವರೇ ಮಾಡಬೇಕೆಂಬ ಉದ್ದೇಶದಿಂದ ದೊಡ್ಡ ಕಂಪೆನಿಯವರು ಸಣ್ಣ ಕಂಪೆನಿಗಳನ್ನೆಲ್ಲ ಒಪ್ಪಂದ ಕರಾರು ಮೂಲಕ ತಮ್ಮ ಅಧೀನದಲ್ಲಿಟ್ಟುಕೊಂಡು ತಮ್ಮ ಎಲ್ಲಾ ತಯಾರಕ ವಸ್ತುಗಳಿಗೇ ಸಾರ್ವಜನಿಕದಿಂದ ಅತೀ ಹೆಚ್ಚಿನ ಬೆಲೆ ಸುಲಿದು ಲಾಭಹೊಂದಲು ಪ್ರಯತ್ನಪಡುವುದರಿಂದ ಸಣ್ಣ ಉದ್ಯಮಗಳು ಪ್ರಗತಿಹೊಂದದೆ ದೇಶದ ಪ್ರಾಮುಖ್ಯ ವ್ಯಾಪಾರವಹಿವಾಟುಗಳು ಕೆಲವೇ ಕೈಗಾರಿಕೆ ಮುಖಂಡರ ಕೈಯಲ್ಲಿರುವಂತಾಗುತ್ತದೆ. ಇದರಿಂದ ಒಂದು ಕಡೆಯಿಂದ ಸಾರ್ವಜನಿಕರಿಗೆ ನಷ್ಟ. ಇನ್ನೊಂದು ಕಡೆಯಿಂದ ಮಜೂರವರ್ಗದವರ ಮೇಲೆ ಒಂದೇ ಸಂಸ್ಥೆಯವರು ಸರ್ವಾಧಿಕಾರತೋರಿಸುವಂತಾಗಿ ಮಜೂರ ಕೇಳಿಕೆಗಳನ್ನು ಮಾನಿಸುವವರಿಲ್ಲವಾಗುತ್ತದೆ. ಇದಕ್ಕಾಗಿ ೧೮೯೦ರಲ್ಲಿ ಸಂ. ಅ. ದ ಪ್ರಜಾಪ್ರತಿನಿಧಿ ಮಿ। ಶರ್ಮನ್ ಎಂಬವರು ಇಂತಹ ಅನೀತಿ ಒಪ್ಪಂದಗಳನ್ನು ತಡೆಹಾಕಲು ಒಂದು ಶಾಸನವನ್ನು ಜ್ಯಾರಿಗೆ ತರಿಸಿದರು. ಅದೇ ಶರ್ಮನ್ ಕಾಯಿದೆ.

ಶರ್ಮನ್ ಶಾಸನ ಪ್ರಕಾರ ಸೊಕೋನಿ ಪೆಟ್ರೋಲ್ ಕಂಪೆನಿಯವರ ಒಪ್ಪಂದಕರಾರುಗಳು ನ್ಯಾಯಬದ್ಧವಲ್ಲವಾಗಿ ತೀರ್ಮಾನವಾಯಿತು.

ಅದೇ ಪ್ರಕಾರ ಪುಲ್‌ಮೇನ್ ಕಂಪೆನಿ ಎಂಬ ರೈಲುಗಾಡಿ ತಯಾರಕ ಸಂಸ್ಥೆಯವರೂ ಇತರ ಚಿಕ್ಕ ಚಿಕ್ಕ ರೈಲುಗಾಡಿ ತಯಾರಕ ಕಂಪೆನಿಗಳೊಡನೆ ಒಪ್ಪಂದ ಮಾಡಿಕೊಂಡು ಅವರ ತಯಾರಿಕೆಗಳನ್ನು ತಾವೇ ಕೊಂಡುಕೊಂಡು ಅತೀ ಹೆಚ್ಚು ಬೆಲೆಗೆ ಅಲ್ಲಿನ ರೈಲು ಕಂಪೆನಿಗಳಿಗೆ ಮಾರುತ್ತಿದ್ದರು. ಮಾತ್ರವಲ್ಲ ರೈಲುಕಂಪೆನಿಗಳವರು ಚಿಕ್ಕ ಚಿಕ್ಕ ಯಾವ ಕಂಪೆನಿಯೊಡನೆಯೂ ಗಾಡಿಗಳನ್ನು ಕೊಂಡುಕೊಳ್ಳದಂತೆಯೂ ಕರಾರು ಮಾಡಿಕೊಂಡರು. ಹೀಗೆ ಆ ಪ್ರತ್ಯೇಕ ಉದ್ಯಮವೊಂದು ಪುಲ್‌ಮೇನ್ ಕಂಪೆನಿಯವರದೇ ಕೈಯೊಳಗೆ ಬಂತು. ಹಾಗಾದರೆ ಇತರರಿಗೆ ಯಾವ ಸಮಾನ ಸಂದರ್ಭಗಳ ಆಶೆಯೂ ಇಲ್ಲದಂತಾಯಿತು. ಸಂ. ಅ. ದ ಸರಕಾರದವರು ಇವರ ಮೇಲೂ ಕಟ್ಲೆ ಮಾಡಿ ಚಿಕ್ಕ ಕಂಪೆನಿಗಳನ್ನು ಆ ಅನೀತಿ ವ್ಯವಹಾರದಿಂದ ಮುಕ್ತ ಮಾಡಿದರು. ಇದರಿಂದ ರೈಲು ಕಂಪೆನಿಗಳಿಗೂ ಯಾರೊಡನೆಯೂ ವ್ಯವಹಾರ ನಡೆಸಲು ಸ್ವಾತಂತ್ರ್ಯವೂ ದೊರಕಿತು.

ಯಾವೊಬ್ಬ ವ್ಯಕ್ತಿಯಾಗಲೀ ಸಂಸ್ಥೆಯಾಗಲೀ ಒಂದು ಪ್ರತ್ಯೇಕ ಉದ್ಯಮ ಇಲ್ಲವೆ ಉದ್ಯಮಗಳ ಲಾಭವನ್ನು ತಾವೊಬ್ಬರೇ ಪಡೆಯುವ ಉದ್ದೇಶದಿಂದ ಯಾವದೊಂದು ಕರಾರು ಷರ್ತಗಳನ್ನಾಗಲೀ, ಇತರ ಯೋಜನೆಗಳನ್ನಾಗಲೀ ಕೈಕೊಳ್ಳಬಾರದೆಂಬುದೇ ಶರ್ಮನ್ ಶಾಸನದ ಮೂಲೋದ್ದೇಶ.

ಈ ಶಾಸನವನ್ನು ಮೀರುವುದು ಖೂನಿ ಸಮಾನವಾದ ದ್ರೋಹವಾಗುವುದು. ಅಂತವರಿಗೆ ಸಜೆಯೂ ಶಿಕ್ಷೆಯೂ ವಿಧಿಸಲ್ಪಡುವುದು. ಈ ಶಾಸನ ಮೀರಿ ನಡೆದುದರ ಪರಿಣಾಮವಾಗಿ ಯಾರಿಗಾದರೂ ಯಾವರೀತಿಯಲ್ಲೂ ನಷ್ಟಗಳು ಸಂಭವಿಸಿದರೆ ತಪ್ಪುಗಾರರು ಅದನ್ನು ತುಂಬಿಸಿ ಕೊಡಬೇಕಾಗುವುದು.

ಇದೇ ರೀತಿಯಲ್ಲಿ ವಿದೇಶಗಳೊಡನೆ ವ್ಯಾಪಾರ ಮಾಡುವ ದೊಡ್ಡ ದೊಡ್ಡ ಸಂಸ್ಥೆಗಳು ಹೆಚ್ಚು ಲಾಭ 'ಹೊಡೆಯುವ' ಉದ್ದೇಶದಿಂದ ಅದೇ ಕ್ಷೇತ್ರದಲ್ಲಿನ ಇತರರೊಡನೆ ಒಪ್ಪಂದಗಳ ಮೂಲಕ ಒಟ್ಟು ಸೇರಬಾರದಾಗಿದೆ.

ವ್ಯಾಪಾರ ಉದ್ಯಮವು ಒಬ್ಬರ ಕೈಯೊಳಗಾದ ಕೂಡಲೇ ಕಚ್ಚಾ ಪದಾರ್ಥಗಳ ಮಾಲಕರು ಅದನ್ನು ಕಮ್ಮಿ ಬೆಲೆಗಲ್ಲದೆ ಯೋಗ್ಯ ಬೆಲೆಗೆ ಮಾರಲು ಸಾಧ್ಯವಾಗುವುದಿಲ್ಲ. ಮಜೂರರು ನ್ಯಾಯವಾದ ಮಜೂರಿಗಾಗಿ ಒತ್ತಾಯಮಾಡುವ ಹಾಗಿಲ್ಲ. ಒಟ್ಟಿನಲ್ಲಿ ಇದೊಂದು ವ್ಯಾಪಾರೀ ನಿರಂಕುಶತ್ವವಾಗುತ್ತದೆ.

ಅಮೇರಿಕದ ದೊಡ್ಡ ಸಿಗರೇಟು ಕಂಪೆನಿಯವರೂ ಹಾಗೇ ಮಾಡಿದರು. ತಮ್ಮೊಡನೆ ಪೈಪೋಟಿ, ಸ್ಪರ್ಧೆ ನಡೆಸುವ ಎಲ್ಲಾ ಕಂಪೆನಿಗಳ ಮ್ಹಾಲುಗಳನ್ನೂ, ಸರಕು ಯಂತ್ರಗಳನ್ನೂ, ಆಸ್ತಿಪಾಸ್ತಿಗಳನ್ನೂ ಕ್ರಯಕ್ಕೆ ಪಡೆದು 'ಒಳಕ್ಕೆ' ಹಾಕಿದರು. ಕೊನೆಗೆ ಅವರೊಂದಿಗೆ ಪೈಪೋಟಿ ನಡೆಸಲು ಯಾರು ಇಲ್ಲದಾಯಿತು-ಅವರು ಹೇಳಿದ್ದೇ ಬೆಲೆ. ಸರಕಾರದವರು ಇವರ ಮೇಲೂ ಶರ್ಮನ್ ಶಾಸನ ಪ್ರಯೋಗ ಮಾಡಿದರು. ಕರಾರುಗಳು ಒಡೆಯಲ್ಪಟ್ಟವು. ಮತ್ತೆ ಚಿಕ್ಕ ಸಂಸ್ಥೆಗಳಿಗೆ ಉಸಿರಾಡಲು ಸಾಧ್ಯವಾಯಿತು. ಮಜೂರರ ಕೇಳಿಕೆಗೂ ಶಕ್ತಿ ಬಂತು.

ಚೀನದ ದುರವಸ್ಥೆ

(೩ನೇ ಪುಟದಿಂದ)

ಬಿಟ್ಟು, ಜಪಾನೀ ಸೈನ್ಯಗಳೊಂದಿಗೆ ತಮ್ಮ ಪ್ರತ್ಯೇಕ ಹೋರಾಟವನ್ನು ನಡೆಸುತ್ತಿದ್ದವು. ಈ ಸ್ಥಿತಿಯು ಬಲವಾಗುತ್ತಾ ಹೋಗಿ ಕೊನೆಗೆ ಅಮೇರಿಕದ ದೃಷ್ಟಿಯನ್ನು ಸೆಳೆಯಿತು. ಅಮೇರಿಕದ ರಾಷ್ಟ್ರಪತಿಗಳಿಂದ ಶಂಗಕ್ಯಾಶೀಕರಿಗೆ ಚೀನದ ಒಕ್ಕಟ್ಟನ್ನು ಸ್ಥಾಪಿಸಿ, ಅಂತಃಕಲಹಗಳನ್ನು ನಿಲ್ಲಿಸಿ ಜಪಾನಿನೊಡನೆ ಯುದ್ಧಕ್ಕೆ ಸಂಪೂರ್ಣ ಮನಸ್ಸನ್ನು ಕೊಡಬೇಕಾಗಿ ಸೂಚನೆಗಳು ಬರತೊಡಗಿದವು. ಶಂಗಕ್ಯಾಶೀಕರು ಈ ಸೂಚನೆಗಳಿಂದಾಗಿ ಜನರಲ್ ಸ್ಟಿಲ್‌ವೆಲ್ಲರೊಡನೆ ವೈಮನಸ್ಸನ್ನು ತೋರಿಸಿದ್ದರಿಂದ ರುಜವೆಲ್ಟರು ಸ್ಟಿಲ್‌ವೆಲ್ಲರನ್ನು ಚೀನದಿಂದ ಹಿಂದಕ್ಕೆ ಕರೆಕೊಳ್ಳಬೇಕಾಯಿತು. ಆದರೆ ಅದೇ ಸಮಯ ಶಂಗಕ್ಯಾಶೀಕರು ಸಮಾಜವಾದೀ ಮುಖಂಡರೊಡನೆ ಹಲವು ತರದಿಂದ ಸಂಧಾನವನ್ನು ಬೆಳಿಸ ಪ್ರಯತ್ನಿಸಿದರು.. ಈ ಪ್ರಯತ್ನಗಳ್ಯಾವವೂ ಫಲಕಾರಿಯಾಗಲಿಲ್ಲ.

ಯುದ್ಧದ ನಡುವೆ ರಾಜ್ಯಾಂಗ ರಚನಾಕ್ರಮಗಳಲ್ಲಿ ಪರಿವರ್ತನೆಯನ್ನು ಮಾಡುವದು ಅಸಾಧ್ಯವಾದ್ದರಿಂದ ಈಗ ಪ್ರಕೃತಕ್ಕೆ ತಾನೇ ಸರ್ವಾಧಿಕಾರಿಯಾಗಿದ್ದು ಯುದ್ಧ ಮುಂದರಿಸುವದೇ ಸರಿಯೆಂದು ಶಂಗಕ್ಯಾಶೀಕರ ಅಭಿಪ್ರಾಯವಾಗಿದೆ; ಅವರು ಇದೇ ಬರುವ ನವಂಬರ ತಿಂಗಳಲ್ಲಿ ಚೀನದ ಎಲ್ಲಾ ಜನರ ಪ್ರತಿನಿಧಿಗಳ ಸಭೆಯನ್ನು ಕೂಡಿಸಿ ರಾಷ್ಟ್ರಾಂಗ ರಚನೆಯ ಕಾರ್ಯವನ್ನು ಪ್ರಾರಂಭಿಸುವುದಾಗಿ ಹೇಳಿದ್ದಾರೆ. ಆದರೆ ಸಮಾಜವಾದಿಪಕ್ಷದವರು ಅದಕ್ಕೆ ಒಪ್ಪುವುದಿಲ್ಲ. ಈಗಲೇ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ರಾಷ್ಟ್ರಾಂಗ ರಚನೆಯಾಗಬೇಕು, ಹಾಗೆ ರಚನೆಯಾಗುವುದರಿಂದ ಜನತೆಯಲ್ಲಿ ಉತ್ಸಾಹ, ತಿಳುವಳಿಕೆಗಳು ಬಂದು ಅವರ ಹುರುಪಿನ ಸಹಾಯವು ಯುದ್ಧಕಾರ್ಯಗಳಿಗೆ ಒದಗುತ್ತದೆಂದು ಸಮಾಜವಾದೀ ಪಕ್ಷದವರ ಹೋರಾಟ.

ಒಂದು ಸಲಕ್ಕೆ ದೊಡ್ಡ ಕಂಪೆನಿಗಳು ಸರ್ವಾಧಿಕಾರಿಗಳಾದ ಮೇಲೆ ಅವರು ಅತೀ ಕೀಳು ತರಗತಿಯ ವಸ್ತುಗಳನ್ನು ತಯಾರಿಸಿ ಅತೀ ಹೆಚ್ಚು ಬೆಲೆ ವಸೂಲಿ ಮಾಡತೊಡಗುವರು. ಇದಕ್ಕಾಗಿ ಶರ್ಮನ್ ಶಾಸನವು ಕೃಷಿಗಾರಿಕೆ, ಮೀನುಗಾರಿಕೆ ಮತ್ತು ಇತರ ಸಹಕಾರಿ ಪದ್ಧತಿಯ ಉದ್ಯಮಗಳಿಗೂ ಸ್ವಲ್ಪಮಟ್ಟಿನಲ್ಲಿ ಅನ್ವಯಿಸುತ್ತದೆ. ಆದರೆ ಸಹಕಾರಿ ಪದ್ಧತಿಯಿಂದ ಸಾರ್ವಜನಿಕರಿಗೆ ಶ್ರೇಷ್ಠ ತರಗತಿಯ ಸರಕುಗಳು ಕಮ್ಮಿ ಬೆಲೆಗೆ ಸಿಗುವಂತಾಗುವುದರಿಂದ ಅವುಗಳಿಗೆ ಬೇರೊಬ್ಬರ ಉದ್ಯಮವನ್ನು ಹಾಳುಗೆಡೆಯಬೇಕೆಂಬ ಉದ್ದೇಶವಿರುವುದಿಲ್ಲ.

ನಮ್ಮ ದೇಶದಲ್ಲೂ ಇಂತಹ ಒಪ್ಪಂದ ಕರಾರಿನ ಅನೇಕ ಉದ್ಯಮಗಳು ನಡೆಯುತ್ತವೆ. ಅಮೇರಿಕದ ಶರ್ಮನ್ ಕಾನೂನಿನಂತಹದೊಂದು ಶಾಸನವನ್ನು ಮಾಡಿ ಇಂತಹ ಪ್ರಕೃತಿಗಳನ್ನು ತಡೆಯದಿದ್ದರೆ ವ್ಯಕ್ತಿಗಳ ವ್ಯಾಪಾರ ದಂಧೆಗಳಿಗೆ ಅಪಾರದಕ್ಕೆ ಉಂಟಾಗಿ ದೇಶದ ಪ್ರಗತಿ ಅಭಿವೃದ್ಧಿಗಳಿಗೆ ತೊಂದರೆಯುಂಟಾಗುತ್ತದೆ.

ಚೀನದಲ್ಲಿ ಏಳು ವರ್ಷದಿಂದ ನಡೆಯುವ ಯುದ್ಧದಿಂದಾಗಿ ಆರ್ಥಿಕ ಸ್ಥಿತಿಯು ತೀರಾ ಕೆಟ್ಟು ಹೋಗಿಯದೆ. ಇನ್ನು ಕೃಷಿಯೋಗ್ಯವಾದ ಭೂಮಿಯನ್ನೆಲ್ಲಾ ಕೃಷಿಮಾಡುವ ರೈತರ ಮಾಲಕತನಕ್ಕೆ ಬಿಟ್ಟರೇನೇ ಕೃಷಿಯಾಗಬಹುದಲ್ಲದೆ ಇನ್ನೂ ಶ್ರೀಮಂತರ ಮಾಲೀಕತನವನ್ನು ಸರಕಾರದವರು ಸ್ಥಾಪಿಸ ನೋಡಿದರೆ ಚೀನದ ಭೂಮಿಗಳೆಲ್ಲಾ ಹಡಿಲುಬಿದ್ದು ಆರ್ಥಿಕ ಸ್ಥಿತಿಯು ಇನ್ನೂ ಹಾಳಾಗಬಹುದೆಂದು ಸಮಾಜವಾದೀ ಪಕ್ಷದವರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯಕ್ಕೆ ಬಲವಿದೆಯಾದರೂ ಕುವೊಮಿಂಟಾಂಗಿನ ಭಂಡವಾಳಶಾಹಿಗಳು ಅದನ್ನು ಒಪ್ಪುವುದಿಲ್ಲ. ಶಂಗಕ್ಯಾಶೀಕರು ಆ ಭಂಡವಾಳಶಾಹಿಗಳ ಕಾಟವನ್ನು ತಗ್ಗಿಸಿ, ಪ್ರಜಾಪ್ರಭುತ್ವವನ್ನು ಸ್ಥಾಪಿಸಿ, ಸಾಮಾನ್ಯ ಜನರ ಕಷ್ಟಗಳನ್ನು ನಿವಾರಿಸುವ ಕಾರ್ಯಗಳಲ್ಲಿ ಸಂಪೂರ್ಣ ಮನಸ್ಸನ್ನು ಕೊಡದ್ದರಿಂದ ಸಮಾಜವಾದೀ ಪಕ್ಷದವರು ಈಗ ಪುನಃ ಪ್ರತ್ಯೇಕ ತಮ್ಮ ಅಧಿಕಾರದ ಸ್ವತಂತ್ರ ಪ್ರಾಂತ್ಯಗಳನ್ನು ನಿರ್ಮಿಸಬೇಕೆಂದಿದ್ದಾರೆ. ಯುದ್ಧ ಮುಗಿಯದೆ ಒಳರಾಜ್ಯಭಾರದ ಕ್ರಮಗಳಲ್ಲಿ ಮಾರ್ಪಾಡನ್ನು ಮಾಡಲಿಕ್ಕೆ ಒಪ್ಪದ ಶಂಗಕ್ಯಾಶೀಕರಿಗೂ ಈಗಲೇ ಅಂಥಾ ಮಾರ್ಪಾಡನ್ನು ಮಾಡದಿದ್ದರೆ ಜನರು ತೀರಾ ನಿರ್ಬಲರಾಗಿ ಯುದ್ಧವನ್ನು ಮಾಡುವದು ಅಸಾಧ್ಯವಾಗಬಹುದೆಂದು ಹೇಳುವ ಸಮಾಜವಾದೀ ಪಕ್ಷದವರಿಗೂ ಈಗ ವಿರೋಧಗಳು ಬಲವಾಗುತ್ತಾ ಬರುತ್ತಿವೆ. ಚೀನದ ಮುಂದಣ ಗತಿಯೇನೆಂದು ಹೇಳ ಸಾಧ್ಯವಿಲ್ಲ.

ಇತ್ತಟ್ಟಿನವರೂ ಮನ್ನಿಸುವ ನಮ್ಮ ಜವಹಾರಲಾಲರಂತಹ ನಿಷ್ಪಕ್ಷಪಾತದ ಚಾಣಾಕ್ಷರು ಬೇಗನೇ ಈ ವಿವಾದವನ್ನು ಮುಗಿಸಿ ಚೀನಕ್ಕೆ ಒಕ್ಕಟ್ಟನ್ನು ಸಂಪಾದಿಸಿ ಕೊಡದಿದ್ದರೆ ಆಸ್ಯದ ಪುನರುತ್ಥಾನವು ಒಂದು ಶತಮಾನದಷ್ಟುಕಾಲ ಹಿಂದಕ್ಕೆ ಬೀಳಬಹುದು. ದೈವ ಚಿಂತೆಯು ಹೇಗಿದೆಯೋ ಯಾರು ಹೇಳಬಲ್ಲರು. 'K'

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps.
1. Paid up Capital	14,76,535- 0- 0	1. Office Buildings, safes, furniture, etc.	1,04,264- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 8
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Grand Total Rs.	1,35,50,413- 4- 0

ಪ್ರಚಲಿತ ಸಮಾಚಾರ

(೪ನೇ ಪುಟದಿಂದ)

ಲೋಕಕ್ಕೆ ಉಪಕಾರವೂ ಆಗಿರುತ್ತದೆ. ನಿರಂಕುಶ ಪ್ರಭುತ್ವದ ಸ್ಥಳದಲ್ಲಿ ಪ್ರಜಾನುರಾಗದ ಪ್ರಜಾಸತ್ತೆಗಳಿಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಹಿಟ್ಲರನು ಹಿಡಿತದಿಂದ ವಿಮೋಚಿಸಲ್ಪಟ್ಟ ದೇಶಗಳೆಲ್ಲಾ ಪ್ರಗತಿಪರ ಪ್ರಜಾನುರಾಗದ ಪ್ರಭಾವಗಳೆ ಮೇಲಕ್ಕೆ ಬರುತ್ತಿವೆ. ಫ್ರಾನ್ಸು, ಬೆಲ್ಜಿಯಮ್, ಹೊಲ್ಲೆಂಡ್, ಇಟೇಲಿ, ಹಂಗೇರಿ, ಯುಗೊಸ್ಲೇವಿಯಾ, ಪೋಲೆಂಡು, ಫಿನ್‌ಲೆಂಡ್, ಬಲ್ಗೇರಿಯಾ ಮೊದಲಾದ ದೇಶಗಳಲ್ಲಿ ಕೆಲವು ಈ ಮೊದಲು ನಿರಂಕುಶ ಪ್ರಭುತ್ವದೊಳಗಿದ್ದವುಗಳು ಈಗಲ್ಲಿ ಲೋಕಮಾನ್ಯ ಪ್ರಜಾಸತ್ತಾತ್ಮಕ ರಾಜಾಡಳಿತಕ್ರಮಗಳು ಅಲ್ಲಿ ರೂಢಿಗೆ ಬರುತ್ತಿವೆ. ಸೋವಿಯಟ್ ರಷ್ಯದ ಕೆಂಪು ಬಲವು ನಡೆಯುವ ಕಡೆಗಳಲ್ಲೆಲ್ಲಾ, ದುಡಿವ ವರ್ಗವೂ, ರೈತರು, ಪ್ರಶಸ್ತಿಗೆ ಬರುತ್ತಿರುವರು. ಹಳೇಯ ಪ್ರತಿಗಾಮಿ ಕ್ರಮ ಕಟ್ಟಳೆಗಳು ತ್ಯಜಿಸಲ್ಪಟ್ಟು ಪ್ರಗತಿಪರ ಲೋಕಮಾನ್ಯ ಪ್ರಜಾಸತ್ತಾತ್ಮಕ ಚಟುವಟಿಕೆಗಳು ಅಲ್ಲಿನಡೆಯಲು ಪ್ರಾರಂಭವಾಗಿವೆ. ಲೋಕಮಾನ್ಯ ಪ್ರಜಾಸತ್ತಾತ್ಮಕನೀತಿಯ ಸರಕಾರಗಳೇ ಅಲ್ಲಿ ಸ್ಥಾಪಿಸಲ್ಪಡುತ್ತಿವೆ. ಪೆಸಿಷ್ಟ ಪ್ರೆಂಕೊನು ಕೂಡ ಪ್ರಜಾಸತ್ತೆ ಎಡೆಮಾಡಿಕೊಟ್ಟು ಹೊರ ನಡೆಯಬೇಕಾದ ಪ್ರಸಂಶಗಳು ಒದಗಿವೆ.

ಮಧ್ಯ ಪೂರ್ವದ ಅರಬರಾಷ್ಟ್ರಗಳು, ಈಜಿಪ್ತ ಇತ್ಯಾದಿಗಳು ಕಳೆದ ಮಹಾಯುದ್ಧದ ನಂತರ ಸ್ವಾತಂತ್ರವಾಗಬೇಕೆಂದೂ ಮಾತುಗಳು ನಡೆದಿದ್ದರೂ, ಫ್ರೆಂಚ್ ಮತ್ತು ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ಪಿಪಾಸೆಯ ಸೊತ್ತಾಗಿ ಉಳಿದು ಸೊರಗುತ್ತಿದ್ದವು, ಹಿಟ್ಲರನ ಈ ಯುದ್ಧದಿಂದ ಸ್ವಾತಂತ್ರ್ಯ ಪಡೆಯುವ ದಾರಿಯಲ್ಲಿದ್ದಾವೆ. ಲೋಕಮಾನ್ಯ ರಾಷ್ಟ್ರೀಯ ಪ್ರಭಾವಗಳು ಈ ದೇಶಗಳಲ್ಲಿ ಬೆಳೆಯುತ್ತಿದ್ದು ಅರಬರಾಷ್ಟ್ರಗಳು ಸ್ವತಂತ್ರವಾಗಿ ಒಂದು ಪೆಡರೇಶನಿನ ಅಡಿಯಲ್ಲಿ ಸಂಯುಕ್ತಗೊಳ್ಳುವುದರಲ್ಲಿದ್ದಾವೆ. ಇದಕ್ಕೆ ಬ್ರಿಟನಿನ ಪ್ರೋತ್ಸಾಹವೂ ಇದಕ್ಕೆ ದೊರಕಿರುತ್ತದೆ.

ಹಿಟ್ಲರನ ಯುದ್ಧದಿಂದ ಹಿಂದೂದೇಶದ ರಾಜಕೀಯದಲ್ಲೂ ಅನೇಕ ಮಹತ್ತರದ ಘಟಣೆಗಳು ನಡೆಯುವಂತಾಯಿತು. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಇದರಿಂದ ಹೆಚ್ಚಿನಹುರುಪೂ ದೊರಕುವಂತಾಯಿತು.ಕಾಂಗ್ರೆಸ್ಸು ಯಾವ ನೀತಿಗಾಗಿ ಇಂದು ಪರಿಶ್ರಮಿಸುತ್ತಿದೊ ಅದೇ ನೀತಿಯು ಇಂದು ಲೋಕ ಹಲವು ಕಡೆಗಳಲ್ಲಿ ಖ್ಯಾತಿಗೆ ಬರುತ್ತಿದೆ, ಜಗತ್ತಿನ ಇತರ ಕಡೆಗಳಲ್ಲಿ ನಡೆಯುವ ಪ್ರಗತಿಪರ ಘಟಣೆಗಳಿಂದ ಹಿಂದೂದೇಶದಲ್ಲೂ ಅದೇ ತರದ ಪ್ರಗತಿಪರ ಪ್ರಭಾವಗಳು ಪ್ರಕಾಶಕ್ಕೆ ಬಾರದೆ ನಿಲ್ಲವು.

ಚೀನಾವು ಜಪಾನಿನ ಹೊಡೆತದ ಯಾತನೆಗೆ ಒಳಗಾಗಿ ಇಂದಿಗೆ ಹದಿನೆರಡು ವರುಷಗಳು ಸಂದವು. ಹಿಟ್ಲರನ ಯುದ್ಧದಿಂದ ಈಗ ಅಮೇರಿಕಾವೂ, ಸೋವಿಯಟ್ ರಷ್ಯವುಅದಕ್ಕೆ ಸಹಾಯಕಹಾಗಿ ಜಪಾನಿಗೆ ವಿರೋಧವಾಗಿ ಬಲ ಇಳಿಸುವಂತಾಗಿದೆ. ಸೋವಿಯಟ್ ರಷ್ಯವು ಮತ್ತು ಅಮೇರಿಕಾದ ಪ್ರವೇಶದಿಂದ ಚೀನದಲ್ಲೂ ಪ್ರಗತಿಪರ ಲೋಕಮಾನ್ಯ ಪ್ರಜಾಸತ್ತಾತ್ಮ ನೀತಿಗಳಿಗೆ ಅವಕಾಶ ಮಾಡಿಕೊಡಲಾಗುವುದೆಂದು ನಂಬಲಾಗಿದೆ.

ಹಿಟ್ಲರಾರಿಷ್ಟವು ಪರಿಹರಿಸಲ್ಪಡಬೇಕು ನಂತರ ಈಗ ಪ್ರಾರಂಭವಾದ ಲೋಕ ಪರಿವರ್ತನಾಕಾರ್ಯವು ಇನ್ನಷ್ಟು ಹುರುಪಿನಿಂದ ನಡೆಯಬಹುದು. ಸದ್ಯದ ಯುದ್ಧದ ಅನುಭವದಿಂದ ಮುಂದಕ್ಕೆ ಯಾರಿಗೂ ಯುದ್ಧಗಳೆ ಬೇಡವಾಗಿವೆ. ಸಂ. ಅಮೇರಿಕಾದ ಮತ್ತು ಸಂಯುಕ್ತ ಸೋವಿಯಟ್ ರಾಜಾಡಳಿತ ವ್ಯವಸ್ಥೆಗಳ ಮಾದರಿಯಲ್ಲಿ ಲೋಕದ ಎಲ್ಲಾ ರಾಷ್ಟ್ರಗಳು ಪರಸ್ಪರ ಹಿತದೃಷ್ಟಿಯಿಂದ ವರ್ತಿಸುವಂತೆ ಆಗಬಹುದೆಂದು ಹೇಳಬಹುದು.

ಆದರೆ ಮನುಷ್ಯ ಸ್ವಭಾವವಲ್ಲವೆ. ಮಾನವನು ತನ್ನ ಸ್ವಾರ್ಥವನ್ನು ಗೆಲ್ಲುವನೆ? ಮಾನವೀ ವಿಪರ್ಯಾಸಗಳು ಲೋಪಗೊಳಿಸಲಾಗುವುವೆ? ಎಂಬುದನ್ನು ಮಾತ್ರ ಕಾದಿದ್ದು ನೋಡಬೇಕು.

ಸಿಹಿ ಸುದ್ದಿ ಸಂಗ್ರಹ

೧೯೪೨ರಲ್ಲಿ ಷಾಜಾನಪುರದಿಂದ ಕಳುಹಿಸಲ್ಪಟ್ಟ ಟಪ್ಪಾಲು ಕಾರ್ಡೊಂದು ಕಳೆದ ತಿಂಗಳು ೪೫ ಮೈಲು ದೂರದ ಬೆರೇಲಿ ಪಟ್ಟಣಕ್ಕೆ ಮುಟ್ಟಿತು. ಅದರ ವೇಗ ವರ್ಷಕ್ಕೆ ೧೫ ಮೈಲು.

* * *

ಹಿಂದಿನ ಕಾಲದ ರಷ್ಯನರು ತುಂಬಾ ಮೂಢ ನಂಬಿಗಸ್ತರಾಗಿದ್ದರು. ಸತ್ತವರು ಸ್ವರ್ಗಕ್ಕೆ ಹೋಗುವರೆಂಬುದು ಸಹಜವಾದ ನಂಬಿಕೆ. ಸ್ವರ್ಗದ ಬಾಗಿಲಲ್ಲಿ ಯೇಸು ಕ್ರಿಸ್ತನ ಪಟ್ಟಶಿಷ್ಯನಾದ ಸೈಂಟ್ ಪೀಟರನು ಕುಳಿತಿರುವನೆಂದೂ ಅವರ ಮತೀಯ ನಂಬಿಗೆ. ಆದುದರಿಂದ ಸತ್ತವರಿಗೆ ತೊಂದರೆ ಇಲ್ಲದೆ ಸ್ವರ್ಗ ಸೀಮೆಗೆ ಪ್ರವೇಶ ಸಿಗುವಂತೆ ಆಗಿನ ರಷ್ಯನರು ಹೆಣಗಳನ್ನು ಹೂತಿಡುವ ಮೊದಲು ಅವುಗಳ ಕೈಯಲ್ಲಿ ಸತ್ತವನ ಗುಣಶೀಲಗಳನ್ನು ಹೊಗಳುವ ಒಂದು ಸರ್ಟಿಫಿಕೇಟು ಬರೆದು ಕೊಡುತಿದ್ದರಂತೆ.

* * *

ಪ್ರಾಚೀನ ಹವಾಗುಣ ಶಾಸ್ತ್ರಕ್ಕನುಗುಣವಾಗಿ ನಾಯಿಗಳು ನೆಲವನ್ನು ಆಳವಾಗಿ ಕೆದರಿದರೆ ಮಳೆ ಬರುವ ಲಕ್ಷಣವಾಗಿತ್ತು.

* * *

ಈಚೆಗೆ ಜಪಾನೀಯ ಸೈನ್ಯದಳದವರು ತಮ್ಮ ಹೆಂಗಸರನ್ನು ಯುದ್ಧರಂಗಕ್ಕೆ ಕರಕೊಂಡು ಬರುತ್ತಿದ್ದಾರೆಂದು ತೋರುತ್ತದೆ. ಈಗಲೂ ಜಪಾನಿಯರು ಸಾಯುವತನಕ ಹೋರಾಡುತ್ತಾರೆ. ಸ್ವಾರಸ್ಯವೆಂದರೆ ಅವರು ತಮ್ಮ ಹೆಂಗಸರನ್ನೆಲ್ಲ ಕಟ್ಟಿಕೊಂಡು ಯುದ್ಧಕ್ಕೆ ಬರುತ್ತಾರೆ. ಈ ಮೊನ್ನೆ ಸೆರೆ ಹಿಡಿಯಲ್ಪಟ್ಟ ಜಪಾನಿ ಸೇನಾಧಿಪತಿಯೋರ್ವನ ಬಳಿ ಅವನ ಹೆಂಡತಿ ಅಲ್ಲದೆ ಐವರ ವೇಶ್ಯೆಯುವರಿದ್ದರು.

* * *

ನ್ಯೂಯೋರ್ಕಿನ ಅಂಗಡಿಯೊಂದರಲ್ಲಿ ಗಿರಾಕಿಗಳನ್ನು ಮೆಚ್ಚಿಸುವ ಒಂದು ತರದ ಉಪಾಯ ಹುಡುಕಲಾಗಿದೆ. ಅಲ್ಲಿ ಒಬ್ಬ ಮೇಲ್ವಿಚಾರಣೆ ನೋಡುವ 'ಮೆನೇಜರ'ನಿದ್ದಾನೆ. ಗಿರಾಕಿಗಳು ಅತೃಪ್ತಿಪಟ್ಟು ಕೋಪಗೊಂಡು ದೂರು ಕೊಟ್ಟರೆ ಕೂಡಲೇ ಮ್ಹಾಲಕರು ಈ 'ಮೇನೇಜರ'ನನ್ನು ಕರೆದು ಅವನನ್ನು ಅಯೋಗ್ಯನೆಂದು ಬೈದು 'ಡಿಸ್‌ಮಿಸ್' ಮಾಡುವರು. ಅವನು ಕೂಡಲೇ ರೇಗಿಕೊಂಡವನಂತೆ ನಟಿಸಿ ಎದುರಿನ ಹೋಟೇಲಿಗೆ ಹೋಗಿ ಕಾಫಿ ಕುಡಿದು ಗಿರಾಕಿ ಹೋದ ನಂತರ ಮತ್ತೆ ಇನ್ನೊಂದು ಸಲದ 'ಡಿಸ್‌ಮಿಸ್'ಗೆ ತಯಾರಾಗುವನು.

* * *

ಇಂಗ್ಲೆಂಡಿನ ಹಡಗು, ದೋಣಿಗಳ ಒಂದು ಹಾಯಿ ಮರಕ್ಕೆ ಒಂದು ಕಸಬರಿಕೆ ತೂಗ ಹಾಕಿದ್ದರೆ ಅದು ಮಾರಾಟ ಮಾಡುವಂತಹುದೆಂದು ತಿಳಿಯಬೇಕು.

* * *

ಬ್ರಹ್ಮಚಾರಿಯೆಂದು ಪ್ರಖ್ಯಾತನಾದ ಹಿಟ್ಲರನು ಕೆಲವೇ ವರ್ಷಗಳ ಹಿಂದೆ ಒರ್ವ ನರ್ತಕಿಯನ್ನು ಗಾಂಧರ್ವ ವಿವಾಹ ಮಾಡಿಕೊಂಡಿದ್ದು ಅವಳಲ್ಲಿ ಎರಡು ಹೆಣ್ಣು ಮಕ್ಕಳು ಹುಟ್ಟಿವೆಯಂತೆ ಅವಳಿಗೆ ಒಂದು ಗಂಡು ಮಗು ಹುಟ್ಟಿದ ಕೂಡಲೇ ಅವನು ಬಹಿರಂಗವಾಗಿ ಮತ್ತೆ ಅವಳನ್ನು ಪಾಣಿಗ್ರಹಣ ಮಾಡಿಕೊಳ್ಳಲೆಳಿಸುವನೋ ಎಂದು ಅನೇಕ ಜರ್ಮನರು ಊಹಿಸಿರುವರು.

* * *

ಇಂಗ್ಲೆಂಡಿನಲ್ಲಿ ಮೊದಲ ಪತ್ರಿಕೆ ಜಾಹೀರಾತು ೧೬೪೨ರಲ್ಲಿ ಪ್ರಕಟಿಸಲ್ಪಟ್ಟಿತು. ಇಂದು ಜಾಹೀರಾತು ವಾಣಿಜ್ಯ ವ್ಯವಹಾರದ ಒಂದು ಪ್ರಾಮುಖ್ಯ ಅಂಗವಾಗಿದೆ.

* * *

ನೀರಿನಡಿಯಲ್ಲಿ ಸರಿಯಾಗಿ ಚಲಿಸುವ ಸಬ್‌ಮೇರಿನನ್ನು ಮೊದಲು ತಯಾರಿಸಿದವನು ಪೆರಿಸಿನ ರೊಬರ್ಟ್ ಫುಲ್ಟನ್ ಎಂಬ ಯಾಂತ್ರಿಕನು–೧೮೦೧ರಲ್ಲಿ-

* * *

ಅಮೇರಿಕವು ಸ್ವತಂತ್ರವಾಗುವ ಮೊದಲು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಲಂಡನಿನ ನಂತರ ಅತೀ ದೊಡ್ಡದು ಫಿಲಿಡೆಲ್ಫಿಯಾ ನಗರವಾಗಿತ್ತು–ಈಗ ಕಲ್ಕತ್ತಾ.

* * *

ಯುದ್ಧ ಕಾಲದ ಅತೀ ಭೀಕರ ಖೂನಿ ಪ್ರಕರಣ ಇಂಗ್ಲೆಂಡಿನಲ್ಲಿ ನಡೆಯಿತು. ೨೨ ವರ್ಷದ ಕಾರ್ಲ್ ಗುಸ್ಟಾವ್ ಹಲ್ಟನ್ ಎಂಬ ಅಮೇರಿಕನ್ ಸೈನಿಕನು ಶಿಬಿರದಿಂದ ತಲೆತಪ್ಪಿಸಿ ಎಲಿಜಬೆತ್ ಜೋನ್ಸ್ ಎಂಬ ಬತ್ತಲೆ ನಾಟ್ಯಗಾರ್ತಿಯೊಬ್ಬಳ ಸಹಾಯದಿಂದ ೬ ದಿವಸಗಳಲ್ಲಿ ೨೯ ಖೂನಿ ಕಟ್ಲೆಗಳನ್ನುಮಾಡಿರುವನು. ಇದರಲ್ಲಿ ಒಬ್ಬ ಕಾರು ಡ್ರೈವರನನ್ನು ಅವರು ಕೊಂದುದಕ್ಕೆ ಹಲ್ಟನನಿಗೆ ತಾ. ೮ರಂದು ಫಾಸಿಯಾಯಿತು. ಹುಡುಗಿಗೆ ಜೀವಾಂತ ಸಜೆ.

* * *

ಗಡಿನಾಡಿನ ಅತೀ ವೃದ್ಧರಿಬ್ಬರು ಮರಣಪಟ್ಟರು. ಒಂದು ತಿಂಗಳ ಹಿಂದೆ ಅಮೀರ್ ಮುಲ್ಲಾ ಜಾನ್ ಎಂಬ ಮೊಮ್ಮದ್ ಪಂಗಡದ ೧೩೦ ವರ್ಷದ ಮುಖಂಡನು ಸತ್ತನು. ಕೆಲವು ದಿನಗಳ ಹಿಂದೆ ಅದೇ ಪಂಗಡದ ಗುಲ್ಜಾರ್ ಬಾಬಾ ಎಂಬವನು ೧೨೭ನೇ ವಯುಸ್ಸಿನಲ್ಲಿ ತೀರಿ ಹೋದನು. ಇವನು ತನ್ನ ೧೨೩ನೇ ವಯಸ್ಸಿನಲ್ಲಿ ಮಕ್ಕಾ ಯಾತ್ರೆ ಮಾಡಿದ್ದಾನೆ. ಇವನಿಗೆ ೮ ಮಂದಿ ಗಂಡು ಮಕ್ಕಳೂ ೪೮ ಮೊಮ್ಮಕ್ಕಳೂ ಇರುವರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.   The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡಪಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 6—4—1945 [ಸಂಚಿಕೆ 14]

ನಾವೇ ಜನತೆ–ನಾವೇ ನಾಯಕರು.

ಪ್ರತಿಯೊಬ್ಬನೂ ನೆಹರು-ಗಾಂಧಿಗಳಾಗಲಿ – ಲಾಭ ಬಡಕರಿಗೆ ಕಳ್ಳಸಂತೆಯೇ ದೇವರು – ನಾವು ಜಪಾನಿನ ಪರರಲ್ಲ

ಕೊಂಗ್ರೆಸ್ಸೇ ಭಾರತ

ನಾವು ಮಹತ್ವದ ಘಟನೆಗಳು ಸಂಭವಿಸುವ ಕಾಲದಲ್ಲಿ ಜೀವಿಸಿಕೊಂಡಿದ್ದೇವೆ. ವಿಚಿತ್ರ ಸಂಗತಿಗಳು, ಅದ್ಭುತ ಪರಿಶೋಧನೆಗಳು, ನಂಬಲಸಾಧ್ಯವಾದ ವಿಷಯಗಳು ದಿನೇ ದಿನೇ ನಮ್ಮ ಅವಗಾಹನೆಗೆ ಬರುತ್ತವೆ.

ಪ್ರತಿ ಪ್ರಾತ:ಕಾಲದ ಸಮಯಕ್ಕೆ ಹೊಸ ಹೊಸ ಸಂಗತಿಗಳನ್ನು ಕೇಳುತ್ತಾ ನಾವು ದಿನಚರಿಯನ್ನು ಆರಂಭಿಸುತ್ತೇವೆ. ಹೊಸ ಪ್ರಪಂಚದಿಂದ ನೂತನ ಸುದ್ದಿಗಳು ನಮ್ಮನ್ನು ದಿಗಿಲುಗೊಳಿಸುತ್ತವೆ.

ಆದರೆ ಗಡಿನಾಡು ನಮಗೇನು ಹೊಸ ಪ್ರಪಂಚವಲ್ಲ. ಕುಖ್ಯಾತಿಯ ಬಿವರ್ಲಿ ನಿಕೋಲಸನು 'ನಿತ್ಯ ಜಗಳದ ಹಿಂಸಾ ಪ್ರಾಂತ್ಯ'ವೆನ್ನಲ್ಪಟ್ಟ ಈ ಪ್ರದೇಶದಲ್ಲಿ ಸತ್ಯ ಅಹಿಂಸಾತ್ಮಕ ಪ್ರತಿಜ್ಞಾಬದ್ಧವಾದ ನಮ್ಮ ಕೊಂಗ್ರೆಸಿಗರು ಮಂತ್ರಿಮಂಡಳ ಸ್ಥಾಪಿಸಿದರೆಂಬ ವರ್ತಮಾನ ಪ್ರಾತ:ಕಾಲದ ಪತ್ರಿಕೆಗಳಲ್ಲಿ ಓದಿದಾಗ ಸಂದೇಹದ ಭಾವವು ನಮ್ಮಲ್ಲುಂಟಾಯಿತು. ದೀನರ ಕೊಂಗ್ರೆಸು ಜನರಿಂದ ಜನರಿಗಾಗಿ ಆಳಲು ಅಲ್ಲಿ ಕಂಕಣ ಕಟ್ಟಿದೆ.

ಇದರ ಸಂಖೇತಾರ್ಥವೇನು

ಕೊಂಗ್ರೆಸು ಅತೀ ಉತ್ತರದ–ಅದರಲ್ಲೂ 'ಪಾಕಿಸ್ಥಾನ'ದ–ಪ್ರಾಂತ್ಯ ಒಂದರಲ್ಲಿ ಅಧಿಕಾರ ಸ್ವೀಕರಿಸಿದ ಘಟನೆ ಸಾಮಾನ್ಯರಾದ ನಮಗೆ ಯಾವ ಕುರುಹನ್ನು ತೋರಿಸುತ್ತದೆ? ಇದೊಂದು ಅಖಿಲಭಾರತಕ್ಕೆ ಸಂಬಂಧ ಪಡದಿರುವ ಒಂದು ಸಂಗತಿಯೆಂದು ತಿಳಿಯಬೇಕೆ, ಇಲ್ಲವೆ ಇದಕ್ಕೆ ಮಹತ್ವದ ಬೇರೆ ಸಂಖೇತಗಳ ವೈಶಿಷ್ಟವಿದೆಯೆ?

ಡಾ। ಖಾನ್ ಸಾಹೇಬರು ಮಂತ್ರಿಗಳಾದದ್ದು ಬರೀ ಒಂದು ರಾಜಕೀಯ ಅಕಸ್ಮಾತವೆ? ಅಥವಾ ಇದು ಮೇಲಿಂದ ಮೇಲೆ ವಿಶದೀಕರಿಸಲ್ಪಟ್ಟರೂ ಸರಿಯಾಗಿ ಅರ್ಥ ಮಾಡಿಕೊಳ್ಳಲಾರದ ಒಂದು ಧೋರಣೆಯ ಭಾಗವಾಗಿದೆಯೆ? ಅದು ಕೇವಲ ಗಾಳಿ ಸಂಖೇತವೊ? ಅಥವಾ ಆಶಾಜನಕ ವಾತಾವರಣದ ಉದಯ ಕಿರಣವೊ?

೧೯೪೨ರಲ್ಲಿ ಇಲ್ಲಿಗೆ ಬಂದ ಕ್ರಿಪ್ಸರು ನಿರಾಶಾವಾದಿ ರಾಯಭಾರನಿರ್ವಾಹಕರೂ ಅಲ್ಲ, ಇಲ್ಲವೆ ದಿವಾಳಿಯಾಗಲಿರುವ ಬೇಂಕಿನ ಚೆಕ್ಕಿಗೆ ಸಹಿ ಮಾಡಿಸಿಕೊಳ್ಳಲು ಬಂದವರೂ ಅಲ್ಲವೆಂದು ಬ್ರಿಟಿಷ್ ಮುತ್ಸದಿಗಳು ಸ್ಪಷ್ಟವಾಗಿ ಸೂಚಿಸಿದರು. ಬ್ರಿಟಿಷರು ಏನಂದರೂ ಅವರ ಸಾಮ್ರಾಜ್ಯಕ್ಕೆ ಜಪಾನೀ ಗಂಡಾಂತರವು ಹೆಚ್ಚಿದಂತೆ ಅವರ 'ಉದಾರತ್ವ'ವೂ ಹೆಚ್ಚುತ್ತಾ ಹೋಯಿತೆಂಬ ವಿಚಾರವು ಜಗತ್ತಿಗೇ ತಿಳಿದಿರುವುದು.

ಇತಿಹಾಸದ ಪುನರಾವರ್ತನೆ

ಕ್ರಿಪ್ಸರು ಅಯಶಸ್ವಿಯಾದ ಕೂಡಲೇ ಕೋಪಗೊಂಡ ಚಿಕ್ಕ ಶಾಲಾಬಾಲಕನಂತೆ ಬ್ರಿಟಿಷ್ ಸರಕಾರದವರು ಭಾರತಕ್ಕೆ ತಮ್ಮ ಸ್ವಂತ ಯೋಜನೆಗಳನ್ನು ಅನ್ವಯಿಸ ತೊಡಗಿದರು. "ಸಾಧ್ಯವಿದ್ದರೆ ಭಾರತದ ಸಹಾಯದಿಂದಲೂ, ಅವಶ್ಯವಿದ್ದರೆ ಆ ಸಹಾಯವಿಲ್ಲದೆಯಾದರೂ ಜಪಾನನ್ನು ಸೋಲಿಸುವೆವು" ಎಂದು ಸಾರಲಾಯಿತು.

ಕಳೆದ ಮೂರು ವರ್ಷಗಳ ಇತಿಹಾಸವು ಮೇಲಿನ ನಿರೀಕ್ಷಣೆಯ ಪೊಳ್ಳುತನವನ್ನು ಹೊರಗೆಡವಿತು.

ಉತ್ತರದ ಆ ಪ್ರಾಂತ್ಯವು ಪುನ: ಪ್ರಜಾಪ್ರಭುತ್ವದ ಕಡೆಗೇ ಧಾವಿಸಿರುವುದನ್ನು ನೋಡಿದರೆ ಜನರ ಸಹಾಯವಿಲ್ಲದೆ ಜಪಾನನ್ನು ಸೋಲಿಸುವುದು ಕಷ್ಟಕರವೆಂದೇ ಎಂತಹ ಅಂಧ ರಾಜಕಾರಣಿಗಾದರೂ ತಿಳಿಯದಿರದು. ಕೊನೆಯ ವಿಜಯಕ್ಕೆ ಜನರ ನಿಜವಾದ ಪ್ರತಿನಿಧಿಗಳ ಸಹಕಾರವು ಅತ್ಯಾವಶ್ಯಕ.

ಕೊಂಗ್ರೆಸ್ಸೇ ಭಾರತ

ಕೊಂಗ್ರೆಸ್ಸೇ ಭಾರತವಲ್ಲವೆಂದು ಪಾರ್ಲಿಮೆಂಟ್ ಕಟ್ಟಡಗಳ ತುದಿಯಿಂದ ಒದರಿ ಸಾರುತಿದ್ದ ಚರ್ಚಿಲ್, ಎಮೆರಿ, ಲಿನ್‌ಲಿತ್‌ಗೋ ಅವರುಗಳ ವಾದವು ಅದೆಂತಹ ಪೊಳ್ಳುತನದ್ದೆಂದು ಡಾ। ಖಾನ್ ಸಾಹೇಬರು ಒಂದು ಕ್ಷಣದೊಳಗೆ ತೋರಿಸಿ ಕೊಟ್ಟರು. ಕೊಂಗ್ರೆಸು ಜಪಾನೀ ಸಹಾನುಭೂತಿಯದೆಂದು ನಿಜವಾಗಿದ್ದರೆ ಗಡಿನಾಡಿನ ಗವರ್ನರರು ಕೊಂಗ್ರೆಸ್‌ವಾಲರನ್ನು ಮಂತ್ರಿಮಂಡಳ ರಚನೆಗೆ ಆಹ್ವಾನಿಸುತಿದ್ದರೆ? ಎಲೈ ಕಾಲನೇ ನಿನದೆಂತಹ ವಂಚಕನು!

ಇಂಗ್ಲಿಷ್ ಬಂಧುಗಳೇ, ಅಂತಹ ಈ ಕೊಂಗ್ರೆಸನ್ನು ನೀವು ೧೯೪೨ರಲ್ಲಿ ಅದೆಂತಹ ಕೀಳು ಅಪವಾದಕ್ಕೆ ಗುರಿಮಾಡಿದಿರಿ? ಎಂತೆಂತಹ ಕ್ಷುದ್ರ ಆರೋಪಗಳನ್ನು ಅದರ ಮೇಲೆ ಹೊರಿಸಿದಿರಿ?

ಅಂದು ಭಾರತೀಯ ರಾಜಕಾರಣದ ನೀರನ್ನು ಕಲಂಕಿಸಿ ಕೆಡಿಸಲು ಪ್ರಯತ್ನಿಸುತಿದ್ದವರೆಲ್ಲಿ ಮಾಯವಾದರು? ದೇಶವನ್ನು ವಿಭಾಗಿಸುವ ಗರ್ಜನೆಯು ಅದೆಲ್ಲಿ ಅಣಗಿದೆ? ಸ್ವಾರ್ಥ ಸಾಧಕರಾಗಿ ದೊಡ್ಡ ಸಂಬಳದ ಕೆಲಸ ದೊರಕಿಸಿ ಕೊಳ್ಳುವ ಆ ಪ್ರತಿಗಾಮಿಗಳು ಇಂದೆಲ್ಲಿ ಅಡಗಿ ಕೂತಿರುವರು.

ಕಾರ್ಯ ಸಾಧನೆಗೆ ಇದೇ ಕಾಲ

ಗಡಿನಾಡಿನ ಘಟನೆಯಿಂದ ಆಳುವವರು ಮಾತ್ರವಲ್ಲ ಆಳಲ್ಪಡುವ ನಾವೆಲ್ಲರೂ ತುಂಬಾ ಹರ್ಷಿತರಾಗಿದ್ದೇವೆ. ರಾಷ್ಟ್ರಿಯವಾದಿಗಳಿಗೆಲ್ಲಾ-ಮುಖ್ಯವಾಗಿ ಕೊಂಗ್ರೆಸ್ಸಿಗೆ–ಅದೊಂದು ಪಾಠ. ಈಗಾದರೂ ಎಲ್ಲರಿಗೆ ತಿಳಿದಂತಾಯಿತು. ವಿಜಯವು ನ್ಯಾಯನೀತಿಗಳಿಗಲ್ಲದೆ ಶಕ್ತಿ ದಬ್ಬಾಳಿಕೆಗಲ್ಲವೆಂಬುದು. ಕೊಂಗ್ರೆಸ್ಸನ್ನು ಹೊಡೆದರೂ, ಬಡಿದರೂ, ಬಂಧಿಸಿದರೂ, ಗುಂದಿಸಿದರೂ,–ಆದರೂ ಕಾಣಬೇಕಾದುದು ಕಂಡೇ ಬಂತು.

ಆದರೂ ಅದರ ಶಕ್ತಿ ಕುಗ್ಗುವುದರ ಬದಲಿಗೆ ಇನ್ನೂ ಹಿಗ್ಗಿತು. ಮಹಾತ್ಮರು "ಕೊಂಗ್ರೆಸ್ಸು ದಬ್ಬಾಳಿಕೆಯಿಂದಲೇ ಬೆಳೆಯುತ್ತದೆ" ಎಂದು ಹೇಳಿದ್ದು ಅಕ್ಷರಶ: ಸತ್ಯವಾಯಿತು. ಈ ಶಕ್ತಿ ಎಲ್ಲಿಂದ? ಈ ಚೇತನ್ಯ ಯಾರು ಪೂರೈಸಿ ಕೊಡುತ್ತಾರೆ? ಕೊಂಗ್ರೆಸು ಬಾಳುವುದು ಮಾತ್ರವಲ್ಲ ಬೆಳೆಯುವುದು ಕೂಡಾ ಹೇಗೆ?

ಸ್ವಾತಂತ್ರ್ಯಕ್ಕೆ ಮಾಡಿದ ಈ ಹೋರಾಟವು ಅತ್ಯಂತ ವೇದನಾಮಯವಾದ ವಿಚಾರ. ಆದರೆ ಅದರಿಂದ ಆತ್ಮ ಶುದ್ಧಿಯೂ ಘನಸ್ಥಿಗೆಗಳೂ ಹೆಚ್ಚಿದವು. ಈಗ ಈ ಬಡ ಭಾರತದ ಪ್ರತಿಯೊಬ್ಬ ಸ್ತ್ರಿ ಪುರುಷನೂ ತನ್ನ ಶಕ್ತಿ ಸಾಮರ್ಥಗಳನ್ನು ಅಪ್ರತ್ಯಕ್ಷವಾಗಿಯಾದರೂ ಪ್ರದರ್ಶನ ಮಾಡಿ ತೋರಿಸಬೇಕಾಗಿದೆ. ಒಬ್ಬಬ್ಬರೂ ನಾಯಕತ್ವ ವಹಿಸಬೇಕಾಗಿರುವ, ಇನ್ನು ಮುಂದೆ ಮಾಡಬೇಕಾಗಿರುವ ಕೆಲವು, ಯೋಜನೆಗಳೂ ತುಂಬಾ ಇವೆ.

ಎಲ್ಲಾ ರಂಗಳಲ್ಲೂ ನಾವಿಂದು ಹೋರಾಡಬೇಕಾಗಿದೆ–ಆಹಾರ, ಬಟ್ಟೆ, ಅಧಿಕಾರ, ದಬ್ಬಾಳಿಕೆ. ನಮ್ಮ ಸಹಜವಾದ ಮುಖಂಡರು ಇಂದು ನಮ್ಮಿಂದ ತಪ್ಪಿಸಲ್ಪಟ್ಟಿರುವರು. ನಮ್ಮ ಮೋಕ್ಷವನ್ನು ನಾವು ಅದನ್ನು ಅಪಹರಿಸಿಕೊಂಡವರಿಂದ ಪುನ: ಪಡೆಯಬೇಕು ಮಾತ್ರವಲ್ಲ ನಮ್ಮ ಪರಿಸ್ಥಿತಿಯ ಅನುಕೂಲತೆ ಪಡೆದು ಲಾಭ ಹೊಂದುವ ನಮ್ಮ ಕೆಲವರನ್ನೂ ನಾವು ಅಣಗಿಸಬೇಕಾಗಿದೆ.

ಒಳನಿಂತು ಸೇವೆ ಮಾಡೋಣ

ನಮ್ಮ ಬಂಧಿತ ಮುಖಂಡರು ತಮ್ಮ ಬಂಧಿಖಾನೆಯಿಂದಲೇ ನಮ್ಮ ಸೇವೆ ಮಾಡುತ್ತಿರುವರೆಂದು ತಿಳಿದು ನಾವು ಕಾರ್ಯ ಪ್ರವರ್ತರಾಗಬೇಕು. ಈಗಲೇ ನಾವು ಜನಾಂಗದ ಸ್ಫೂರ್ತಿ ವಿಶ್ವಾಸಗಳನ್ನು ಹೆಚ್ಚಿಸಬೇಕು.

ಹೊರಗಿರುವುದಕ್ಕಿಂತ ಮುಖಂಡರು ಜೈಲಿನೊಳಗಿಂದಲೇ ಹೆಚ್ಚಿನ ಪ್ರಭಾವಬೀರುವರು. ಅವರ ಸಾಹಸ ಸೇವೆ ಸ್ವಾರ್ಥ ತ್ಯಾಗ ಬಲಿದಾನಗಳು ನಮ್ಮನ್ನು ಸ್ಫೂರ್ತಿದಾಯಕವಾಗಿ ಹುರಿದೆಬ್ಬಿಸಲು ಸಹಾಯಕವಾಗಿದೆ.

ಅವರ ಸ್ವಾತಂತ್ರ್ಯ ಅಪಹರಿಸಲ್ಪಟ್ಟರೂ ನಾವು ಸುಮ್ಮಗಿರಬಾರದು. ಪ್ರತಿಯೊಬ್ಬ ಯುವಕನೂ ಒಬ್ಬೊಬ್ಬ ಗಾಂಧಿ–ಜವಾಹರನಾಗಿ ವರ್ತಿಸಲಿ, ಪ್ರತಿಯೊಬ್ಬ ನಾರಿಯು ಒಬ್ಬೊರ್ವ ಕಸ್ತೂರ್‌ಬಾ ಸರೋಜಿನಿಗಳಾಗಲಿ. ನಾವು ಪವಿತ್ರವಾದ ಕಾರ್ಯವೊಂದರ ಉತ್ತರಾಧಿಕಾರಿಗಳು. ನಮ್ಮ ಪ್ರಿಯರು ಸಂಕಷ್ಟಗಳನ್ನನುಭವಿಸುವುದರ ಮೂಲಕ ಹೋರಾಡುತ್ತಾರೆ. ನಮಗಾಗಿ ಅವರು ತನು ಮನ ಧನಗಳನ್ನು ಅರ್ಪಿಸಿರುವರು. ಇದನ್ನು ಬಿಟ್ಟು ನಾವು ಆಟರಂಗಗಳೂನ್ನ ನೃತ್ಯ ಮಂದಿರಗಳನ್ನೂ ತುಂಬುವುದು ಎಂದೂ ಯಥಾರ್ಥವಾದುದಲ್ಲ.

ಅವರೇಕೆ ಸಂಕಷ್ಟ ಪಡುವರು?

ಗಾಂಧೀಜಿಯವರು ಉಪವಾಸ ವ್ರತಗಳನ್ನು ಮಾಡಿ ಉನ್ನತ ರಾಜಕೀಯ ಧ್ಯೇಯಗಳನ್ನನುಸರಿಸುವುದು ಕಳ್ಳಸಂತೆಗಾರರ ಮತ್ತು ಲಾಭಬಡಕರ ಪ್ರೋತ್ಸಾಹಕ್ಕಲ್ಲ. ಲಾಭಬಡಕರಿಗೆ ಕಳ್ಳಸಂತೆಯೇ ದೇವಮಂದಿರ.

ಅಬುಲ್ ಕಲಾಂ ಅಜಾದರು ಸೆರೆಮನೆಯಲ್ಲಿ ಕೊಳೆಯುತ್ತಿರುವುದು ಕೆಲವೊಂದು ಸ್ವಾರ್ಥ ಸಾಧಕರು ನವದಿಲ್ಲಿಯ ಕೈ ಗೊಂಬೆಗಳಾಗಿ, ವ್ಯಾಸ್ ರಾಯ್ ಭವನ ಗೋಡೆ ಚಿತ್ರಗಳಾಗಿ ಮೆರೆಯಬೇಕೆಂದಲ್ಲ. ಸ್ವಾತಂತ್ರ್ಯದ ಪವಿತ್ರವಾದ ಜ್ವಾಲಾಗ್ನಿಯು ಸತತ ಉರಿದು ಪ್ರಕಾಶಿಸಲೆಂದೇ ನಮ್ಮ ಆಪ್ತ ಮುಖಂಡರು ನಮಗಾಗಿ ಬಂಧಿಖಾನೆಯನ್ನು ಸೇರಿರುವರು. ಸಮಯವು ಬಂದಾಗ ಜನತೆಯಾದ ನಾವು ಬ್ರಿಟಿಷ್ ಮಾದರಿಯ ಪ್ರಜಾಪ್ರಭುತ್ವವು ಅಯಶಸ್ವಿಯಾಯಿತು. ಆದುದರಿಂದ ನಮ್ಮ ಬಲವನ್ನು ಹೆಚ್ಚಿಸಿಕೊಳ್ಳೋಣವೆಂದು ಘಂಟಾಘೋಷವಾಗಿ ಜೈಜೈಕಾರ ಮಾಡೋಣ.

'ಬ್ಲಿಟ್ಜ್'ನಲ್ಲಿ ಶ್ರೀ ಬಿ. ಎಂ. ಜಾಪೆತಾ ಅವರು ಬರೆದ ಲೇಖನದ ಆಧಾರದಿಂದ.

ಹಿರೋ ನಂಬರ್......1

[ಲೇಖಕ:- ಶ್ರೀ ಎಮ್. ವೆಂಕಟೇಶ ಪ್ರಭು]

"ನಮಸ್ಕಾರ, ಅತ್ತೆ!"

"ಓ! ಲಿಲ್ಲಿಯೇನು?" ರಾಧಮ್ಮನವರು ತಮ್ಮ ಮಲ್ಲಿನ ಕರವಸ್ತ್ರದಿಂದ 'ಡಾಲ್ಡಾ ವನಸ್ಪತಿ'ಯಂತಹ ವಸ್ತುವನ್ನು ಮೂಗಿನಿಂದ ತೆಗೆದರು. ಈ ವನಸ್ಪತಿ ಹೊರಬಂದಾಗ ಮೂಗಿನಿಂದ ಎ. ಆರ್. ಪಿ. ಸ್ಯಾರನಿನಂತಹ ಧ್ವನಿಯಾಯಿತು.

"ಬಹಳ ಶೀತವಾಗಿದೆ ಲಿಲ್ಲಿ!" ರಾಧಮ್ಮನವರು ಸಿಂಬಳ ತೆಗೆದೂ ತೆಗೆದೂ ಕೆಂಪಾದ ಮೂಗನ್ನು ಸವರುತ್ತಾ ಹೇಳಿದರು.

ಲಿಲ್ಲಿ ನಸುನಕ್ಕಳು. ರಾಧಮ್ಮನವರು ಲಿಲ್ಲಿಯ ಪ್ರಾಯಗಿಂತ ಮೂರು ಪಾಲಿನಷ್ಟು ಹಿರಿಯರಾದರೂ ತರುಣಿಯಂತೆ ಇರುತ್ತಿದ್ದರು. ಇದು ಲಿಲ್ಲಿಗೆ ಯಾವಾಗಲೂ ವಿನೋದ ಮಾಡುವ ಪ್ರಸಂಗವಾಗಿದ್ದಿತು.

"ಲಿಲ್ಲಿ, ನೀನು ಚಂದ್ರಕಾಂತನನ್ನು ನೋಡಲಿಲ್ಲವೇ?" ರಾಧಮ್ಮನವರು ಕೇಳಿದರು.

"ಇಲ್ಲ-ಅವರ ವಿಷಯು ನಿಮ್ಮ ಬಾಯಿಯಿಂದ ಹಲವು ಬಾರಿ ಕೇಳಿದ್ದೇನೆ" ಲಿಲ್ಲಿ ತನ್ನ ಕರವಸ್ತ್ರಧ ಸಹಾಯ ಪಡೆದಳು. ಸಿಂಬಳ ಒರೆಸಲು ಅಲ್ಲ! ನಗು ತಡೆಯಲು!

"ಇದು ಬಹಳ ಕೆಟ್ಟ ವಿಷಯ" ರಾಧಮ್ಮನವರ ಮೂಗಿನಿಂದ ಪುನಹ ಹಂದಿ ಕೂಗುವಂತಹ ಶಬ್ದವಾಯಿತು.

"ಯಾವುದು ಕೆಟ್ಟ ವಿಷಯ ಅತ್ತೆ?" ಲಿಲ್ಲಿ ಕೇಳಿದಳು.

"ಚಂದ್ರಕಾಂತನನ್ನು ನೀನು ನೋಡಲಿಲ್ಲವೆಂದರೆ!" ತಮ್ಮ ಮಗನನ್ನು ಯಾರಾದರೂ ನೋಡಲಿಲ್ಲವೆಂದರೆ! ಅವರಿಗೆ ಎಷ್ಟು ಬೇಸರವಾಗಬೇಡ!

"ಅವನೊಬ್ಬ ರತ್ನ! ನನ್ನ ಮಗನೆಂದು ಹಾಗೆ ಹೇಳಲಿಲ್ಲ." ರಾಧಮ್ಮನವರು ಹೇಳಿದರು. ಲಿಲ್ಲಿಯು ಹಲವು ಬಾರಿ ತನ್ನ ತಂದೆಯು ವಿಷ್ಣು ಸ್ತೋತ್ರ ಮಾಡುವುದನ್ನು ಕೇಳಿದ್ದಳು. ಆದರೆ ಜಗತ್ತಿನಲ್ಲಿ ಮಗನ ಸ್ತೋತ್ರ ಮಾಡುವ ತಾಯಿಯರೂ ಹಲವರಿರುವರೆಂದು ಅವಳಿಗೆ ತಿಳಿದಿಲ್ಲವಿತ್ತು. "ರತ್ನವೆ?" ಲಿಲ್ಲಿಯ ಸ್ವರದಲ್ಲಿ ವ್ಯಂಗವಿತ್ತು-ಅದು ರಾಧಮ್ಮನವರಿಗೆ ತಿಳಿಯಲಿಲ್ಲ.

"ಹೌದು ತಾಜಾರತ್ನ! ಇಮಿಟೇಶನ್ ಅಲ್ಲ! ನಮ್ಮ ಹುಡುಗ ಇದು ವರೆಗೆ ಒಬ್ಬ ಹುಡುಗಿಯನ್ನು ಕಣ್ಣೆತ್ತಿ ನೋಡಲಿಲ್ಲ. ಒಂದು ಸಿಗರೇಟು ಎಳೆಯಲಿಲ್ಲ. . . " ರಾಧಮ್ಮನವರು ಉತ್ಸಾಹದ ಭರದಿಂದ ಹೇಳಿದರು.

"ಬೀಡಿ . . ." ಕೇಳಿದಳು ಲಿಲ್ಲಿ!

ಥೆ! ಬೀಡಿ! ಬೀಡಿಯೇಕೆ? ಬೀಡಿಯ ತುಂಡನ್ನು ಕೂಡಾ ಎಳೆಯಲಿಲ್ಲ!" ರಾಧಮ್ಮನವರು ವಾಗ್ವಾದಕ್ಕೆ ನಿರತ ವೀರರಂತೆ ಹೇಳಿದರು.

"ಗ್ಲೋ!" ಎಂದಳು ಲಿಲ್ಲಿ. ಕರವಸ್ತ್ರ ಅವಳ ಕೈಯಿಂದ ಜಾರಿ ಬಿತ್ತು. ಲಿಲ್ಲಿ ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದಳು.

"ಏಕೆ, ನಗುತ್ತಿ ಲಿಲ್ಲಿ?" ರಾಧಮ್ಮನವರು ಅವಾಕ್ಕಾಗಿ ಕೇಳಿದರು.

"ಏನೂ ಇಲ್ಲ. ನಿಮ್ಮ ಶಿಲ್ಪಿನ ಮೇಲೆ ವಸ್ತ್ರ ಒಗೆಯುವ ಬಾಲ್ಪಿ ನೋಡಿ ನಗು ಬಂತು." ಲಿಲ್ಲಿ ವಿಷಯ ತಿರುಗಿಸಲು ಯತ್ನಿಸಿದಳು.

"ಓ! ಇದು ಚಂದ್ರನ ಕೆಲಸ. ಎಷ್ಟು ಸಾರಿ ಹೇಳಿದೆ ಅವನಿಗೆ-ತಣ್ಣೀರು ಮಿಾಯಬೇಡ ಎಂದು ಶೀತವಾದರೆ ನೋಡುವವರಾರು? ಇವತ್ತು ಬೆಳಿಗ್ಗೆ ಓವಲ್‌ಟೀನನ್ನೂ ಕುಡಿಯಲಿಲ್ಲ." ರಾಧಮ್ಮನವರು ಪುನಹ "ಸುರ್" ಎಂದು ಸಿಂಬಳ ತೆಗೆದರು.

ಲಿಲ್ಲಿ ರಾಧಮ್ಮನವರ ಗೆಳೆತಿಯ ಪುತ್ರಿ. ಅವಳ ತಂದೆಗೆ ಮೊನ್ನೆ ತಾನೇ ರಾಧಮ್ಮನವರಿರುವ ಊರಿಗೆ ವರ್ಗವಾಗಿದ್ದಿತು. ಲಿಲ್ಲಿ ರಾಧಮ್ಮನವರನ್ನು "ಅತ್ತೆ"ಯೆಂದು ಕರೆಯುತ್ತಿದ್ದಳು. ಪ್ರತಿದಿನ ಅವಳು ಚಂದ್ರಕಾಂತನ ವರ್ಣನೆ ಕೇಳಿ ಅವನೊಬ್ಬ "ಅಜ್ಜಿ ಸಾಕಿದ ಮಗು"ವಾಗಿರಬೇಕೆಂದು ಯೋಚಿಸುತ್ತಿದ್ದಳು.

"ಮಮ್ಮಿ! ಡೀಯರ್!" ವ್ಯಕ್ತಿಯೊಂದು ದೂರದಿಂದ ಕರೆಯುವುದು ಕೇಳಿಸಿತು. ಲಿಲ್ಲಿ ಕಣ್ಣೆತ್ತಿ ನೋಡಿದಳು. ಪಾಯಜಾಮೆ ಧರಿಸಿ ಸುಂದರ ಮುಖವುಳ್ಳ ತರುಣನೊಬ್ಬನು ಪ್ರವೇಶಿಸಿದನು.

"ಚಂದ್ರೂ; My Dear!" ರಾಧಮ್ಮ ಪ್ರೇಮದ ಆವೇಗದಿಂದ ಹೇಳಿದಳು. ಯುವಕನು ತನ್ನ ತಾಯಿಯ ಬಳಿಯಲ್ಲಿ ನಿಂತ ಈ ಸುಂದರ ತರುಣಿಯಾರೆಂದು ತಲೆ ತುರಿಸಿದ-ಅವಳನ್ನೇ ನೋಡುತ್ತಾ ನಿಂತ.

"ಇವಳು ಲಿಲ್ಲಿ!—ನನ್ನ ಗೆಳತಿಯ ಮಗಳು, ಇವ ನನ್ನ ಮಗ ಚಂದ್ರಕಾಂತ' ಆಂಗ್ಲ ಪದ್ಧತಿಯೆಂದರೆ ಪ್ರಾಣ ಬಿಡುತಿದ್ದ ರಾಧಮ್ಮ ಆಂಗ್ಲ ರೀತಿಯಲ್ಲಿಯೇ ಪರಸ್ಪರ ಪರಿಚಯ ಮಾಡಿಸಿಕೊಟ್ಟಳು.

ಲಿಲ್ಲಿ ಚಂದ್ರಕಾಂತನನ್ನು ನೋಡಿದಳು. ಚಂದ್ರಕಾಂತ ಲಿಲ್ಲಿಯನ್ನು ನೋಡಿದ. ಆಯಿತು. ಈಗಿನ ತರುಣಿ ತರುಣರೊಳಗೆ ಪ್ರೇಮವಾಗಲೂ ಎಷ್ಟು ಸಮಯ ಬೇಕು? ಮೊದಲ ದರ್ಶನದಿಂದಲೇ ಚಂದ್ರಕಾಂತ ಹಣ್ಣಾದ. ಈಗಿನ ಚಿತ್ರಗಳನ್ನು ನೋಡುತಿದ್ದ ಆಸಾಮಿಯಾತ. ಕೂಡಲೇ ಆತನ ಮೈ ಬೆವರಿತು. ತುಟಿಗಳು ಕಂಪಿಸಿದವು. ಲಿಲ್ಲಿ ತಲೆ ತಗ್ಗಿಸಿದಳು-ಅವಳ ಹೃದಯವೂ ಕಂಪಿಸಿತು. ಕವಿಗಳು ಅಲ್ಲಿರುತ್ತಿದ್ದರೆ ಪತ್ರಿಕೆಗಳಿಗೆ ಕೊಡುವ ಒಂದು ಕವಿತೆ ಅಲ್ಲಿ ಕೂಡಲೇ ಸಿದ್ಧವಾಗ ಬಹುದಿತ್ತು.

ಲಿಲ್ಲಿ ರಾಧಮ್ಮನವರು ವರ್ಣಿಸದ ವ್ಯಕ್ತಿಯನ್ನು ಪುನಹ ಮನಸ್ಸಿಗೆ ತಂದುಕೊಂಡಳು. ಇಮಿಟೇಶನ್ ರತ್ನವಾಗಿರದೆ ತಾಜಾ ರತ್ನವಾಗಿರುವ, ಬೀಡಿಯೇಕೆ ಬೀಡಿಯ ತುಂಡನ್ನೂ ಕೂಡಾ ಎಳೆಯದ, ತಣ್ಣೀರು ಮಿಂದರೆ ಶೀತವಾಗುವ, ಬೆಳಿಗ್ಗೆ ಓವಲ್‌ಟಿನ್ ಕುಡಿಯುವ ಚಂದ್ರಕಾಂತನು ಇವನೇ ಏನೋ? ಲಿಲ್ಲಿ ಪುನಹ ಕದ್ದು ಆತನ ಕಡೆಗೊಮ್ಮೆ ನೋಡಿದಳು. ಅವಳಿಗೆ ಚಂದ್ರಕಾಂತನು ಮೇಲಿನ ವರ್ಣನೆಯ ವ್ಯಕ್ತಿಯಾಗಿ ಕಂಡು ಬರಲಿಲ್ಲ.

ಚಂದ್ರಕಾಂತನು ಕಳವಳಗೊಂಡಿದ್ದನು. ಎದೆಯ ಮೇಲೆ ಆತನ ಕೈ ಇರುವುದನ್ನು ನೋಡಿದರೆ ಮೊದಲ ಪ್ರೇಮದಿಂದ ಆತನ ಹೃದಯವು ಸಿನಿಮಾ ನಾಯಕರ ಎದೆಯಂತೆ ಒಡೆಯುವ ಸ್ಥಿತಿಗೆ ಬಂದಿದೆಯೆಂದು ಭಾಸವಾಗುತಿತ್ತು. 'ಚಂದ್ರೂ' ರಾಧಮ್ಮನವರು ಹತ್ತಿರ ಬಂದು ಕರೆದರು.

"ಅರೆ! ನಿನ್ನ ಬಾಯಿಂದ ಬೀಡಿಯ ವಾಸನೆ ಬರುತ್ತಿದೆಯಲ್ಲಾ!" ರಾಧಮ್ಮನವರು ಸಿಟ್ಟಿನಿಂದ ಬೆಂಕಿಯಾಗಿ ಕೇಳಿದರು. ಚಂದ್ರಕಾಂತ ಒಮ್ಮೆ ಲಿಲ್ಲಿಯ ಕಡೆಗೆ ನೋಡಿದ. ಅವಳು ನಗು ತಡೆಯಲು ಮುಖ ತಿರುಗಿಸಿದಳು.

"ಚಂದ್ರೂ, ನೀನು ಬೀಡಿ ಸೇದುತ್ತಿಯೇನು? ಹೊಗೆಸೊಪ್ಪು ಜೀವನಕ್ಕೆ ಅಪಾಯಕಾರಿ. ಅದರಿಂದ ಕ್ಷಯ, ವಾತ, ತಲೆಸಿಡಿತ, ಹುಚ್ಚು ಕಳ್ಳತನ, ಬೇಡುವಿಕೆ . . . ." ಸಿಟ್ಟಿನ ಆವೇಶದಿಂದ ರಾಧಮ್ಮನವರ ಬಾಯಿಂದ ಮಾತು ಹೊರಡಲಿಲ್ಲ.

"ಮಮ್ಮಿ . . . . ನಾನು . . . ."

"ಥತ್! ಮಾತಾಡಬೇಡ" ರಾಧಮ್ಮನವರು ಕೈದಿಯ ಜೇಬನ್ನು ಪೋಲಿಸ್ ಆಫೀಸರನು ಹುಡುಕುವಂತೆ ಚಂದ್ರಕಾಂತನ ಜೇಬಿಗೆ ಕೈ ಹಾಕಿದರು. ಬೀಡಿಯ ಕಟ್ಟೊಂದು ಹೊರಬಂತು.

"ಅವರಂಗಜೇಬ್ ಬೀಡಿಗಳು! ಹುಂ! ಏನು ಹೆಸರು!" ರಾಧಮ್ಮನವರು ಬೀಡಿಯ ಕಟ್ಟನ್ನು ಬಿಸಾಡುತ್ತಾ ಹೇಳಿದರು. "ಮಮ್ಮಿ ನಾನು" . , . ಚಂದ್ರಕಾಂತನ ಮಾತು ಪೂರ್ಣವಾಗುವುದರೊಳಗೆ ರಾಧಮ್ಮನವರು ಸಿಟ್ಟಿನಿಂದ ಒಳನಡೆದರು. ಲಿಲ್ಲಿ ನಿಂತಿರುವಳೆಂಬ ವಿಷಯ ಕೂಡಾ ಅವರಿಗೆ ಮರೆತು ಹೋಯಿತು.

ಚಂದ್ರಕಾಂತ ಲಿಲ್ಲಿಯ ಕಡೆಗೆ ನೋಡಿದ. ಅವಳು ಮುಗುಳ್ನಗುತ್ತಾ ಹೊರಟಳು.

"Oh! Lilly of the Valley! Why are you so lovely! " ಚಂದ್ರಕಾಂತ ಅಲ್ಲಿ ಹೋದ ಹಾದಿಯ ಕಡೆಗೆ ನೋಡುತ್ತಾ ನಿಟ್ಟುಸಿರು ಬಿಟ್ಟು ಹೇಳಿದ.

ಲಿಲ್ಲಿ ಹಾದಿಯುದ್ದಕ್ಕೂ ಯೋಚಿಸಿದಳು. ಚಂದ್ರಕಾಂತನು "ಅಜ್ಜಿ ಸಾಕಿದ ಮಗು" ವಲ್ಲ. ಆತನಲ್ಲಿಯೂ ಮನುಷ್ಯತ್ವವಿದೆ!

ಆ ದಿನದ ಕಣ್ಣಿನ ಆಟ ಪ್ರೇಮದ ರೂಪ ಧರಿಸಿತು. ೨೦ನೇ ಶತಮಾನದಲ್ಲಿ ಪ್ರೇಮ ಉದ್ಭವಿಸಲು ಸಮಯಬೇಕೆ? ಒಂದು ದಿನ ಚಂದ್ರಕಾಂತನು ಲಿಲ್ಲಿಯೊಡನೆ ಕೇಳಿದ. ತನ್ನ ಎದೆಯು ಪುರಾತನ ಡ್ಯಾನೊಮೊದಂತೆ ಶಬ್ದಮಾಡುತ್ತಿದ್ದರೂ ಧೈರ್ಯದಿಂದ ಕೇಳಿಯೇ ಬಿಟ್ಟ.

"ಲಿಲ್ಲಿ! ನೀನು ನನ್ನನ್ನು ಮದುವೆಯಾಗುತ್ತಿಯೇನು?"

"ನೋಡು ಚಂದ್ರಕಾಂತ, ಮದುವೆಯ ವಿಷಯದಲ್ಲಿ ತಂದೆ, ತಾಯಿಯವರು ನನಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಆದರೆ....."

"ಆದರೇನು?" ಚಂದ್ರಕಾಂತ ಉತ್ಸುಕತೆಯಿಂದ ಕೇಳಿದ.

"ಆದರೆ ನಾನು ಪ್ರೇಮಿಸುವ ಯುವಕನನ್ನೇ ನಾನು ಮದುವೆಯಾಗುತ್ತೇನೆ."

ಚಂದ್ರಕಾಂತನಿಗೆ ಕಣ್ಣು ಕತ್ತಲು ಬಂದಂತಾಯಿತು. ಹೃದಯದ ಡೈನೊಮೊ ಒಂದು ನಿಮಿಷಕ್ಕೆ ನಿಂತಿತು. ದುಃಖದ ಭರದಲ್ಲಿ ಒಂದು ಹಾಡನ್ನು ಹಾಡಲೇ ಎಂದು ಯೋಚಿಸಿದನಾತ.

ಲಿಲ್ಲಿಯು ಯಾರನ್ನು ಪ್ರೀತಿಸುತ್ತಿರುವಳು? ಹಾಯ! ಚಂದ್ರಕಾಂತನು ಆಕಾಶದ ಕಡೆಗೆ ನೋಡಿದ. ರಾತ್ರಿಯಾಗುತ್ತಿದ್ದರೆ ಪ್ರೇಮವ ಭರವನ್ನು ಹೆಚ್ಚಿಸಲು ಚಂದ್ರನಾದರೂ ಸಹಾಯಮಾಡುತ್ತಿದ್ದ. ಪ್ರೇಮಗೀತೆ ಹಾಡುವ ಪಕ್ಷಿಗಳಾದರೂ ಇವೆಯೆ? ಎಂದು ಸುತ್ತಲೂ ನೋಡಿದನಾತ. ಇಲ್ಲ. ಅದು ಬೇಸಿಗೆಯ ಮಧ್ಯಾಹ್ನವಾದುದರಿಂದ ಪಕ್ಷಿಗಳೇ ಅಲ್ಲಿದ್ದಿಲ್ಲ.

ಚಂದ್ರಕಾಂತ ನಿರಾಶೆಯಿಂದ ಕೇಳಿದ- "ಆ ಭಾಗ್ಯಶಾಲಿ ಯಾರೆಂದು ನಾನು ತಿಳಿಯಬಹುದೆ?"

"ತಿಳಿದರೇನು ಮಾಡುವಿ? ಸ್ಟಂಟ್ ನಾಯಕನಾಗಿ ವಿಲನಿನ ಕುತ್ತಿಗೆ ಹಿಚುಕುವಿಯೇನು?" ಲಿಲ್ಲಿ ನಗುವಿನಿಂದ ಕೇಳಿದಳು.

"ಲಿಲ್ಲಿ! ನನ್ನ ಹೃದಯ ಬೆಣ್ಣೆಯಿಂದ ತಯಾರಿಸಿದ ವಸ್ತುವೆಂದು ನಿನಗೆ ಹೇಗೆ ಹೇಳಲಿ?"

"ಹೇಳುವುದು ಬೇಡ! ಅದನ್ನು ಡೆನ್‌ಮಾರ್ಕಿನ ಡೈರಿ ಫಾರ್ಮಿಗೆ ಕಳುಹಿಸು!"

"ಲಿಲ್ಲಿ! ನೀನು ಪ್ರೇಮದಿಂದ ಸಾಯುವವನಿಗೆ ಹಾಸ್ಯದ ವಿಷ ಕೊಡುತ್ತಿ!"

"ಕವಿ, ಚಂದ್ರಕಾಂತ! ನಾನು ಮದುವೆಯಾಗುವುದಾದರೆ ಒಬ್ಬ "ಹೀರೊ"ನನ್ನು! ಬೆಳಿಗ್ಗೆ ಓವಲ್‌ಟೀನ್ ಕುಡಿಯದ, ತಣ್ಣೀರು ಮಿಂದರೆ ಶೀತವಾಗದ, ಹುಡುಗಿಯರ ಕಡೆಗೆ ನೋಡುವ ಮತ್ತು ಬೀಡಿ ಎಳೆಯಲು ಹಿಂಜರಿಯದ ಯುವಕನನ್ನು ಮದುವೆಯಾಗುತ್ತೇನೆ. ಮನುಷ್ಯನಲ್ಲಿ ದೇವತ್ವವಿದ್ದರೆ ಆತನು ಕಲ್ಲಾಗುವನಲ್ಲವೆ?"

"ಓ! ನನ್ನಲ್ಲಿ ಆ ಗುಣಗಳಿಲ್ಲವೆಂದು ಹೇಳಿದವರಾರು?"

"ನಿನ್ನ ತಾಯಿ!"

"ಅದು ಸುಳ್ಳಾದರೆ......?"

"ಇರಬಹುದು. ಆದರೆ ನೀನು "ಹೀರೋ" ಅಲ್ಲ."

ಚಂದ್ರಕಾಂತ ಮಾತಾಡಲಿಲ್ಲ. ನಿರಾಶೆಯಿಂದ ಆತನು ವೀಳ್ಯದೆಲೆಗೆ ತಾಗಿಸುವ ವಸ್ತುವಾಗಿದ್ದನು.

(೧೧ನೇ ಪುಟಕ್ಕೆ ಮುಂದುವರಿದಿದೆ)

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಪೂರ್ವ ಆಸ್ಯದ ಡಚ್, ಫ್ರೆಂಚ್ ಸಾಮ್ರಾಜ್ಯಗಳು

ಕ್ಷೀಣವಾಗುತ್ತಿರುವ ಪಾಶ್ಚಾತ್ಯರ ಪ್ರಭಾವ

ಹಿಂದೂ ಬೌಧರ ಫ್ರೆಂಚ್ ವಸಾಹತುಗಳು

ಆಸ್ಯದ ಜನರಲ್ಲಿ ಜಾಗೃತಿಯುಂಟಾಗಿದೆ

ಈ ಯುದ್ಧ ಪ್ರಾರಂಭದಲ್ಲಿ ಈ ಭೂಲೋಕದ ಸ್ಥಿತಿಗತಿಗಳು ಹೇಗಿತ್ತೆಂಬುದನ್ನು ನಾವು ಭೂಪಟದಲ್ಲಿ ನೋಡಿದರೆ ಪೂರ್ವ ಆಸ್ಯದಲ್ಲಿ ಡಚ್ಚರಿಗೂ ಫ್ರೆಂಚರಿಗೂ ಇರುತ್ತಿದ್ದ ಸಾಮ್ರಾಜ್ಯಗಳ ಸಂಗತಿಗಳು ನಮ್ಮಲ್ಲಿ ಆಶ್ಚರ್ಯವನ್ನುಂಟು ಮಾಡದಿರವು. ಮಾತೃಭೂಮಿಯಿಂದ ಐದು ಸಾವಿರ ಮೈಲುಗಳಿಗಿಂತಲೂ ದೂರ, ಮಾತೃ ಭೂಮಿಯ ೬೦ ಪಾಲಿನಷ್ಟು ವಿಸ್ತೀರ್ಣದ ಸರ್ವಸಂಪತ್ತಿನಿಂದ ಒಡಗೂಡಿದ ದ್ವೀಪ ಸಾಮ್ರಾಜ್ಯವೊಂದು ಆಗ ಡಚ್ಚರಿಗಿತ್ತು. ಆ ದ್ವೀಪ ಸಾಮ್ರಾಜ್ಯವು ಹಿಂದೂ ಸಾಗರವು ಶಾಂತ ಸಾಗರದೊಡನೆ ಬೆರೆಯುವಲ್ಲಿದ್ದು ಜಾವಾ ಸುಮಾತ್ರಾ, ಬೊರ್ನಿಯೋ ಮೊದಲಾದ ದ್ವೀಪಗಳನ್ನೊಳಗೊಂಡು ಡಚ್ಚರಿಗೆ ಎಂದೂ ಬತ್ತಿಹೋಗದ ಸಂಪತ್ತಿನ ಧಾರೆಯನ್ನೀಯುತಿತ್ತು. ಫ್ರೆಂಚರ ಸಾಮ್ರಾಜ್ಯವು ಇನ್ನೂ ದೂರದಲ್ಲಿ ಆಸ್ಯದ ಭೂಪ್ರದೇಶದಲ್ಲಿ ಚೀನದಿಂದ ದಕ್ಷಿಣಕ್ಕೆ ಥೈಲಾಂಡಿನಿಂದ ಪೂರ್ವಕ್ಕೆ "ಹಿಂದೀ ಚೀನ" ಎಂಬ ಹೆಸರಿನಿಂದ ಮೆರೆಯುತಿತ್ತು. ಈ ಹಿಂದೀ ಚೀನ ಸಾಮ್ರಾಜ್ಯವು ಫಲವತ್ತಾದ ಪ್ರದೇಶಗಳಿಂದ ಕೂಡಿ ಫ್ರಾನ್ಸಿಗಿಂತಲೂ ಹೆಚ್ಚು ವಿಸ್ತೀರ್ಣವಾಗಿದ್ದುದರಿಂದ ಅದು ಫ್ರೆಂಚ್ ಸಾಮ್ರಾಜ್ಯದ ಪ್ರಭೆಯನ್ನು ಜಗತ್ತಿನಲ್ಲಿ ಇನ್ನೂ ಹೆಚ್ಚಿಸುತ್ತಿತ್ತು.

ಪೂರ್ವ ಆಸ್ಯದ ಈ ಡಚ್ಚ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಜನರು ಶಾಂತಿಪ್ರಿಯರೂ ದೀನರೂ ಆಗಿದ್ದುದರಿಂದ ಅಲ್ಲಿ ಸಾಮ್ರಾಜ್ಯಗಳನ್ನು ಸ್ಥಾಪಿಸಲಿಕ್ಕೆ ಡಚ್ಚರಿಗಾಗಲೀ ಫ್ರೆಂಚರಿಗಾಗಲೀ ಕಷ್ಟವಾಗಲಿಲ್ಲ. ಜನರಲ್ಲಿ ವಿದ್ಯಾಪ್ರಚಾರ ಆರ್ಥಿಕೋನ್ನತಿಗಳ ಸಾಧನೆಗಳ್ಯಾವವನ್ನೂ ಫ್ರೆಂಚರಾಗಲಿ ಡಚ್ಚರಾಗಲಿ ಕೈಕೊಳ್ಳದೆ ಅವರು ದೇಶದ ಸಂಪತ್ತಿನಲ್ಲಿ ಮಾತ್ರ ಪಾಲನ್ನು ಪಡೆದು ಸಾಮ್ರಾಜ್ಯಗಳನ್ನು ಸುಲಭದಿಂದ ಆಳಿಕೊಂಡು ಬರುತ್ತಿದ್ದರು. ಪ್ರಾಚೀನ ಕಾಲದಿಂದ ಈ ಸಾಮ್ರಾಜ್ಯಗಳ ಜನರು ಹಿಂದುಸ್ಥಾನದೊಡನೆ ಮತ, ವಾಣಿಜ್ಯ, ಸಾಂಸ್ಕೃತಿಕ ಬಾಂಧವ್ಯಗಳಲ್ಲಿದ್ದರೂ ಹಿಂದುಸ್ಥಾನವು ಸ್ವಾತಂತ್ರ್ಯವನ್ನು ಕಳಕೊಂಡ ಮೇಲೆ ಆ ಬಾಂಧವ್ಯಗಳ ಗಂಟೆಲ್ಲಾ ಸಡಿಲಾಗಿ ಹೋಗಿದ್ದರಿಂದ ಮೊನ್ನೆಯ ತನಕ ಆ ಜನರಿಗೆ ಹೊರಗಿನ ಸಂಪರ್ಕಗಳೆಲ್ಲಾ ತಪ್ಪಿ, ಸ್ವಬಲವನ್ನು ವೃದ್ಧಿಪಡಿಸಿಕೊಳ್ಳಲಿಕ್ಕೆ ಯಾವ ದಾರಿಯೂ ಸಿಕ್ಕದೆ ಅವರು ನಾಗರೀಕತೆಯಲ್ಲಿ ತೀರಾ ಹಿಂದೆ ಬಿದ್ದುಕೊಂಡಿದ್ದರು.

ಜಪಾನು ೧೯೦೫ರಲ್ಲಿ ರಶ್ಯವನ್ನು ಶಾಂತಸಾಗರದಲ್ಲಿ ಸೋಲಿಸಿ ಆಸ್ಯ ಖಂಡದಲ್ಲಿ ತನ್ನ ಸಾಮ್ರಾಜ್ಯಸ್ಥಾಪನೆಯ ಕಡೆ ಮನಸ್ಸನ್ನಿಟ್ಟ ಮೇಲೆ ಹಿಂದುಳಿದಿದ್ದ ಫ್ರೆಂಚ ಡಚ್ಚ ಸಾಮ್ರಾಜ್ಯಗಳ ಜನರಲ್ಲಿ ನಿರಂತರ ಜಾಗೃತಿಯನ್ನುಂಟು ಮಾಡುವ ಗುಪ್ತ ಕಾರ್ಯಗಳನ್ನು ಪ್ರಾರಂಭಿಸಿತು. ಈ ಜಾಗೃತಿಯಿಂದಾಗಿ ಫ್ರೆಂಚ್, ಡಚ್ ಸಾಮ್ರಾಜ್ಯಗಳಲ್ಲಿಯೂ ಚೀನ ಹಿಂದುಸ್ಥಾನಗಳಲ್ಲಿ ನಡೆಯುವ ಸ್ವಾತಂತ್ರ್ಯ ಸಾಧನೆಗಳ ಅರಿವು ಮುಟ್ಟಿ ಜನರಲ್ಲಿ ದಿನೇ ದಿನೇ ಪಾಶ್ಚಾತ್ಯ ದರ್ಪದ ಕಡೆ ದ್ವೇಷವನ್ನು ಪ್ರಬಲಗೊಳಿಸಪ್ರಾರಂಭಿಸಿತು. ಪಾಶ್ಚಾತ್ಯ ದಬ್ಬಾಳಿಕೆಯನ್ನು ಪ್ರತಿಭಟಿಸುವ ಸಂಘಟಿತ ಕಾರ್ಯಭಾಗಗಳು ಎರಡು ಸಾಮ್ರಾಜ್ಯಗಳಲ್ಲಿಯೂ ಈ ಯುದ್ಧ ಪ್ರಾರಂಭದ ಮೊದಲೇ ತಲೆದೋರಿದ್ದವು.

ಫ್ರೆಂಚ್ ಹಿಂದೀ ಚೀನದ ಜನರು ಹೆಚ್ಚಿನವರು ಮೊಂಗೋಲ್ ರಕ್ತಕ್ಕೆ ಸೇರಿದವರಾಗಿದ್ದು ಜನರಲ್ಲಿ ಬೌದ್ಧ ಮತವೇ ಈಗ ಪ್ರಬಲವಾದರೂ ಕ್ರಿಸ್ತಶಕ ಪ್ರಾರಂಭದಿಂದ ಹತ್ತು ಹನ್ನೆರಡು ಶತಮಾನಗಳ ಕಾಲ ಇಲ್ಲಿ ಹಿಂದೂ ರಾಜರೇ ಆಳುತ್ತಿದ್ದುದರಿಂದ ಈಗಲೂ ಅಲ್ಲಲ್ಲಿ ಹಿಂದೂ ಮತಾಲಯಗಳು ಇದ್ದು ಹಿಂದೂ ಸಂಸ್ಕೃತಿಯ ಕುರುಹುಗಳು ಪ್ರಬಲವಾಗಿವೆ. ಹಿಂದಿನ ಹಿಂದೂ ರಾಜ್ಯಗಳಾದ ಕಾಂಭೋಜ, ಚಂಪಾ ರಾಷ್ಟ್ರಗಳು ಈಗಿನ ಫ್ರೆಂಚ್ ಹಿಂದೀ ಚೀನದಲ್ಲಿ ಸೇರಿಕೊಂಡಿವೆ. ಡಚ್ಚ್ ಹಿಂದೀ ದ್ವೀಪಗಳಲ್ಲಿ ಈಗ ಮುಸ್ಲಿಮ್ ಮತಾನುಯಾಯಿಗಳೇ ಹೆಚ್ಚಾದರೂ ಅವರಲ್ಲಿ ಹಿಂದಿನ ಹಿಂದೂ ಸಂಸ್ಕೃತಿಯು ಇನ್ನೂ ಉಳಿದಿದೆ.

ಫ್ರೆಂಚ್ ಡಚ್ಚ್ ಸಾಮ್ರಾಜ್ಯಗಳೆರಡರಲ್ಲಿಯೂ ಫ್ರಾನ್ಸ್, ಹೊಲ್ಲಾಂಡಿನಿಂದ ನೇಮಕಪಟ್ಟ ಗವರ್ನರ ಜನರಲನೊಬ್ಬನು ಕೌನ್ಸಿಲ್‌ಸಭೆಯ ಸಹಾಯದಿಂದ ಕಾರ್ಯ ಭಾರಗಳನ್ನು ನಡೆಸುತ್ತಿದ್ದನು. ಎರಡು ಸಾಮ್ರಾಜ್ಯಗಳಲ್ಲಿಯೂ ಸ್ಥಳೀಯ ಸಂಗತಿಗಳ ಕುರಿತು ಆಡಳಿತೆಯನ್ನು ನೋಡುವ ಆಶ್ರಿತ ರಾಜರಿರುತ್ತಿದ್ದರು.

ಶಾಂತಸಾಗರದಲ್ಲಿ ಜಪಾನು ಪ್ರಬಲವಾಗುತ್ತಾ ಬರುವಾಗ ಫ್ರೆಂಚ ಡಚ್ಚರಿಗೆ ತಮ್ಮ ಸಾಮ್ರಾಜ್ಯಕ್ಕೆ ಜಪಾನಿನಿಂದ ಗಂಡಾಂತರವು ಬರುವದು ನಿಶ್ಚಯವೆಂದು ತೋರಿ ಅವರು ಆಂಗ್ಲರ ಮೈತ್ರತ್ವವನ್ನು ಸಾಧಿಸಿ ಆಂಗ್ಲ ನೌಕಾ ಬಲದ ಮೇಲೆ ಭರವಸೆಯನ್ನಿಟ್ಟು ಕೊಂಡು ಬರುತ್ತಿದ್ದರು. ಹತ್ತು ವರ್ಷ ಹಿಂದೆ ಆಂಗ್ಲರು ಸಿಂಗಪೂರಿನಲ್ಲಿ ಕೋಟ್ಯಾನುಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಭದ್ರ ದುರ್ಗಮ ನೌಕಾ ಕೋಟೆಯನ್ನು ಸ್ಥಾಪಿಸಿದ ಬಳಿಕ ಡಚ್ಚ ಫ್ರೆಂಚರಿಗೆ ತಮ್ಮ ಪೂರ್ವ ಆಸ್ಯದ ಸಾಮ್ರಾಜ್ಯದ ಚಿಂತೆಗಳು ಕಡಿಮೆಯಾದವು.

ಆದರೆ ಈಗ ನಡೆಯುವ ಯುದ್ಧದ ಮೊದಲು ಪಾಶ್ಚಾತ್ಯರಿಗೆಲ್ಲಾ ಜಪಾನಿನ ಬಲವು ಎಷ್ಟರದ್ದೆಂಬುದು ತಿಳಿದಿರಲಿಲ್ಲವಾದರಿಂದ ಅವರು ಹೀಗೆ ನಿಶ್ಚಿಂತರಾಗಿರಲು ಸಾಧ್ಯವಾಯಿತು. ಅಮೇರಿಕ ಆಂಗ್ಲದೇಶಗಳು ೧೯೪೧ರಲ್ಲಿ ಜಪಾನಿನ ಬಲವನ್ನು ತಿಳಿದರು. ಜಪಾನಿನ ಸೈನ್ಯಗಳೆದುರಾಗಲಿ ನೌಕಾ ಬಲದೆದುರಿಗಾಗಲಿ ಆಂಗ್ಲ ಅಮೇರಿಕಗಳ ಸೈನ್ಯ ನೌಕಾ ಪಡೆಗಳು ನಿಲ್ಲಲಾರದೆ ಹಿಮ್ಮೆಟ್ಟಬೇಕಾಯಿತು. ಡಚ್ಚ ಸಾಮ್ರಾಜ್ಯವಿಡೀ ಜಪಾನಿನ ಕೈವಶವಾಯಿತು. ಫ್ರೆಂಚರ ಹಿಂದೀ ಚೀನದ ಸರಕಾರವು ಜಪಾನಿನ ಶರಣನ್ನು ಬೇಡಿ ಜಪಾನಿನ ಯುದ್ಧ ಕಾರ್ಯಗಳಿಗೆ ಸಹಾಯಕವಾಯಿತು. ಅಮೇರಿಕ ಇಂಗ್ಲಾಂಡುಗಳಿಗೆ ಸೇರಿದ ಫಿಲಿಪ್ಪೈನ್ ಹೊಂಗಕೊಂಗುಗಳನ್ನು ಜಪಾನಿನವರು ಸ್ವಾಧೀನಪಡಿಸಿ ಕೊಂಡದ್ದರಿಂದ ಆಸ್ಯದಲ್ಲೆಲ್ಲಾ ಪಾಶ್ಚಾತ್ಯರ ಭಾಗ್ಯಸೂರ್ಯನು ಅಕ್ರಮಿಸಿದಂತೆ ತೋರಿತು. ಪಾಶ್ಚಾತ್ಯದ ಸ್ಥಿತಿಯು ಹೀಗೆ ತುಚ್ಛಾವಸ್ಥೆಯಲ್ಲಿರುವಾಗ ಅಮೇರಿಕವು ಬಲಿಷ್ಠ ನೌಕಾ ವಿಮಾನ ಪಡೆಗಳನ್ನು ಬೆಳೆಸಿಕೊಂಡು ಜಪಾನನ್ನು ಹಣ್ಣಿಗೊಳಿಸುವ ಕಾರ್ಯಕ್ಕಿಳಿದ್ದದರಿಂದ ೧೯೪೪ರ ಅಂತ್ಯದ ಮೊದಲೇ ಪೂರ್ವ ಆಸ್ಯದಲ್ಲಿ ಸ್ಥಿತಿಗತಿಗಳೆಲ್ಲಾ ಮಾರ್ಪಾಡನ್ನು ಹೊಂದಿದವು. ಜಪಾನು ಪಾಶ್ಚಾತ್ಯದಿಂದ ಸ್ವಾಧೀನಪಡಿಸಿದ ಸಾಮ್ರಾಜ್ಯವನ್ನು ಈಗ ಅಮೇರಿಕವು ಜಪಾನಿನ ಕೈಯಿಂದ ಬಿಡಿಸಿಕೊಳ್ಳುತ್ತಿದೆ. ಈಗ ಅಮೇರಿಕವು ಜಪಾನಿನ ಬಲವನ್ನು ಸಂಪೂರ್ಣ ನಾಶಪಡಿಸಿ ಜಪಾನನ್ನು ನಿರ್ನಾಮ ಮಾಡಲೆತ್ನಿಸುವದು ತೋರಿಬರುತ್ತದೆ.

ಆದರೆ ಜಪಾನಿನ ನಾಶದ ಬಳಿಕವೂ ಪೂರ್ವ ಆಸ್ಯದ ಕಷ್ಟಗಳು ಮುಗಿಯುವಂತಿಲ್ಲ.

ಈ ಯುದ್ಧದಿಂದಾಗಿ ಈಗ ಪೂರ್ವ ಆಸ್ಯದಲ್ಲಿ ಸ್ಥಿತಿಗತಿಗಳೆಲ್ಲಾ ಸಂಪೂರ್ಣ ಮಾರ್ಪಾಡನ್ನು ಹೊಂದಿರುತ್ತವೆ. ಈ ಯುದ್ಧದಲ್ಲಿ ಜರ್ಮನಿ ಜಪಾನುಗಳು ಸೋತು, ಮಿತ್ರ ರಾಷ್ಟ್ರಗಳ ಸೇಡಿಗೊಳಗಾಗಿ ಸಂಪೂರ್ಣ ನಾಶಹೊಂದಿದರೂ, ಈ ನಾಲ್ಕು ವರ್ಷಗಳ ನಡುವೆ ಅವರು ಮಾಡಿದ ಕಾರ್ಯ ಭಾಗಗಳೆಲ್ಲಾ ಅಳಿಸಿಹೋಗುವ ಹಾಗಿಲ್ಲ. ಜರ್ಮನಿ, ಜಪಾನ್ ಯುದ್ಧದಿಂದಾಗಿ ಆಂಗ್ಲ, ಫ್ರೆಂಚ, ಡಚ್ಚರ ಸ್ಥಿತಿಗತಿಗಳೆಲ್ಲಾ ಈಗ ಬೇರೆಯಾಗಿದೆ. ಯುದ್ಧಪ್ರಾರಂಭದಲ್ಲಿ ಜಗತ್ತಿನ ಎಲ್ಲಾ ಸಾಗರಗಳಲ್ಲಿಯೂ ದರ್ಪದಿಂದ ಸುತ್ತಾಡುತ್ತಿದ್ದ ಆಂಗ್ಲ ನೌಕಾ ಪಡೆಯು ಈಗ ಅಮೇರಿಕದ ಪ್ರಚಂಡ ನೌಕಾ ಪಡೆಗೆ ಪ್ರಥಮ ಸ್ಥಾನವನ್ನಿತ್ತು. ಅದರ ಶೋಭೆಯು ಮುಂದೆ ತನ್ನ ಪ್ರಭೆಯನ್ನು ಕಳಕೊಂಡಂತಿದೆ.

ಚಕ್ರಾಧಿಪತ್ಯಕ್ಕೆ ಸೇರಿದ ಆಸ್ಟ್ರೇಲಿಯ ಕೆನೆಡಗಳು ಈಗ ಆಂಗ್ಲರಿಂದ ಸ್ವಲ್ಪ ದೂರವಾಗಿ ಅಮೇರಿಕದ ಮೈತ್ರತ್ವವನ್ನೂ ಅಮೇರಿಕದ ಆಶ್ರಯವನ್ನೂ ಸಾಧಿಸ ಪ್ರಾರಂಭಿಸಿವೆ. ಈ ಯುದ್ಧದ ಖರ್ಚಿನಿಂದಾಗಿ ಆಂಗ್ಲರ ಆರ್ಥಿಕ ಬಲವು ಮಾಯವಾಗ್ಯಮುಂದಿನ ಪುನಃರ್ರಚನೆಯ ಕಾರ್ಯಗಳಿಗೆ ಆಂಗ್ಲರು ಅಮೇರಿಕದ ಸಹಾಯವನ್ನಪೇಕ್ಷಿಸಬೇಕಾಗಿದೆ. ಅತ್ತ ಯುರೋಪಿನಲ್ಲಿ ಸೋವಿಯಟ್ ರಶ್ಯವು ಈ ತನಕ ಯಾವ ರಾಷ್ಟ್ರವೂ ಅನುಭವಿಸದ ಭೀಕರ ಬಲವನ್ನು ಸಂಪಾದಿಸಿಕೊಂಡು ಪ್ರಬಲವಾಗಿರುವದರಿಂದ ಆಂಗ್ಲರಿಗಿನ್ನು ಯುರೋಪಿನಲ್ಲಿ ತಮ್ಮ ಸಾಮ್ರಾಜ್ಯ ರಕ್ಷಣೆಗೆ ಎಂದಿನಂತೆ ಕುಟಿಲ ತಂತ್ರಗಳನ್ನು ಹೂಡಲಿಕ್ಕಾಗಲಿ ತಮ್ಮ ವಾಣಿಜ್ಯ ವ್ಯಾಪಾರ ವಹಿವಾಟುಗಳನ್ನು ಬೆಳೆಸಲಿಕ್ಕಾಗಲಿ ಸಂದರ್ಭಗಳು ದೊರಕುವಂತಿಲ್ಲ.

ಒಟ್ಟಾರೆ ಈ ಯುದ್ಧದಿಂದಾಗಿ ಆಂಗ್ಲ ಚಕ್ರಾಧಿಪತ್ಯವು ಬಾಹ್ಯದಲ್ಲಿ ರೂಪಾಂತರವನ್ನು ಹೊಂದಿದ್ದರೂ ಅದು ಒಳಗಿನ ಬಲವನ್ನೆಲ್ಲಾ ಕಳಕೊಂಡು ನಿಶ್ಶೇಷ್ಪತೆಯನ್ನು ಹೊಂದಿ ಅಮೇರಿಕಗಳನ್ನು ಪ್ರತಿಭಟಿಸುವ ಶಕ್ತಿಯಿಲ್ಲದೆ ಅವುಗಳ ಮೈತ್ರತ್ವವನ್ನು ದೈನ್ಯತೆಯಿಂದ ಸಾಧಿಸಿಕೊಂಡು ಬರಬೇಕಾಗಿದೆ. ಫ್ರೆಂಚ್, ಡಚ್ಚ ಚಕ್ರಾಧಿಪತ್ಯಗಳಿಗೆ ಈ ತರದ ಬಾಳು ಕೂಡಾ ಇನ್ನುಳಿದಿದೆಯೆಂದು ನಂಬಸಾಧ್ಯವಿಲ್ಲ ಫ್ರೆಂಚರ ಆಸ್ಯಖಂಡದ ಸಾಮ್ರಾಜ್ಯದಲ್ಲಿ ಹಿಂದೀ ಚೀನವು ಈಗ ಜಪಾನಿನ ಸಂಪೂರ್ಣ ಕೈವಶವಾಗಿಯದೆ; ಸೀರಿಯಾ ಲೆಬೆನೆನುಗಳಲ್ಲಿ ಫ್ರೆಂಚರ ಆಳಿಕೆಯನ್ನು ಒಳಗಿಂದ ಆಂಗ್ಲೆಯರೂ ಹೊರಗಿಂದ ಅರಬ್ಬರೂ ಪ್ರತಿಭಟಿಸುತ್ತಿದ್ದಾರೆ. ಅದು ಇನ್ನು ಹೆಚ್ಚು ಕಾಲ ಅಲ್ಲಿ ಬೆಳೆದು ಹಿಂದು ಸ್ಥಾನದಲ್ಲಿ ಅಲ್ಲಲ್ಲಿ ಚದರಿಕೊಂಡಿರುವ.

(೧೦ನೇ ಪುಟಕ್ಕೆ ಮುಂದುವರಿದುದು.)

ಅಭಿವೃದ್ಧಿ ತೋರಿಸುವ ಪಟ್ಟಿ

	1940	1942	1944
	ರೂಪ್ಯಾ	ರೂಪ್ಯಾ	ರೂಪ್ಯಾ
ತೆತ್ತ ಭಂಡವಾಳ	3,93,000	14,96,000	26,34,000
ಕ್ಷೇಮನಿಧಿ	4,50,000	4,50,000	10,34,000
ಠೇವಣಾತಿಗಳು	86,72,000	1,45,51,000	2,30,69,000
ಸರಕಾರೀ ಭದ್ರತೆಗಳು	11,19,000	68,17,000	1,17,93,000
ಲಾಭಾಂಶ	72,000	1,53,000	2,75,000
ಜುಮ್ಲಾ ಸಂಪತ್ತು	1,03,44,000	2,07,85,000	3,46,46,000

ಸಂಖ್ಯೆಗಳೆಲ್ಲಾ ಸಾವಿರಗಳಿಗೆ ಸರಿಪಡಿಸದವುಗಳು

ನಮ್ಮ ಶಾಖೆಗಳು

ಕ್ವಿಲನ್	ಮಂಗಳೂರು	ಮಧುರಾ
ಅಲಪ್ಪೆ	ಬೆಂಗಳೂರು	ಸೇಲಮ್
ಎರ್ನಾಕುಲಮ್	ಬೆಳಗಾಂವ್	ಇರೋಡ್
ಕೊಚ್ಚಿನ್	ಧಾರವಾಡ	ಕೊಯಮುತ್ತೂರು
ಕಲ್ಲಿಕೋಟೆ	ಹುಬ್ಬಳ್ಳಿ	ಇತ್ಯಾದಿ, ಇತ್ಯಾದಿ.
ಕಣ್ಣಾನೂರು	ಚಿಕ್ಕಮಗಳೂರು	

ಮುಂಬಾಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪ್ಯಾ 26 ಲಕ್ಷ. ಕ್ಷೇಮನಿಧಿ ರೂಪ್ಯಾ 10 ಲಕ್ಷ.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

(Incorporated in British India, liability of Members limited.)

ನೀರಾವರಿ ಯೋಜನೆಗಳಿಂದ ದೇಶದ ಉದ್ಧಾರ

ಹಿಂದೂದೇಶವು ಪ್ರಾಮುಖ್ಯವಾಗಿ ಸಾಗುವಳಿ ನಾಡು. ಸಾಗುವಳಿ ಉದ್ಧಾರದಲ್ಲೆ ದೇಶದ ಉದ್ಧಾರವಿದೆ. ಸಾಗುವಳಿಯಲ್ಲಿ ಆಧುನಿಕ ಕ್ರಮುಗಳು ನಮ್ಮಲ್ಲಿ ಬಳಕೆ ಬಂದದು ತೀರಾ ಕಡಿಮೆ. ಈಗಿನ ಯುದ್ಧದ ದೆಸೆಯಿಂದ ಆಹಾರದ ಸಮಸ್ಯೆಯು ಉಂಟಾದುದರ ಪರಿಣಾಮವಾಗಿ ಸಾಗುವಳಿಯ ಕಡೆಗೆ ಸ್ವಲ್ಪ ಲಕ್ಷ್ಯವು ಹರಿದಿರುತ್ತದೆ. ಆದರೆ ಸಂ. ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ, ಸೋವಿಯಟ್ ರಶ್ಯಾ ಮೊದಲಾದ ಸಾಗುವಳಿ ದೇಶಗಳಲ್ಲಿ ನಡೆಯುವ ಸಾಗುವಳಿಯ ಚಟುವಟಿಕೆಗಳೊಡನೆ ತುಲನೆ ಮಾಡಿದರೆ, ನಾವೂ ಚೀನಿಯರೂ ಬಹಳ ಹಿಂದುಳಿದಿರುವ ವಿಚಾರವು ಹೊಳೆಯುತ್ತದೆ. ಸೋವಿಯಟ್ ರಶ್ಯವೂ ಕಾಲು ಶತಮಾನದ ಹಿಂದೆ ಸಾಗುವಳಿ ವಿಚಾರ ನಮ್ಮ ಹಾಗೆ ಇದ್ದುದು, ಈಗ ಸ್ಟೆಲೀನನ ಉದ್ಧಾರ ಯೋಜನಾ ಚಟುವಟಿಕೆಗಳಿಂದ ಬಹಳ ಮುಂದಕ್ಕೆ ಬಂದಿದೆ. ಅಲ್ಲಿ ಸಾಗುವಳಿಯೂ, ಆಧುನಿಕ ಕ್ರಮುಗಳಾಚರಣೆಯಿಂದ ನಡೆಯುತ್ತಿದೆ. ಸಂ. ಅಮೇರಿಕಾದಲ್ಲುಂಟಾದಷ್ಟೆ ಉತ್ತಮ ಪರಿಣಾಮಗಳು ಅಲ್ಲಿ ಉಂಟಾಗಿವೆ.

ಅಮೇರಿಕಾದ ಹಲವು ಪ್ರದೇಶಗಳೂ ಒಂದಾನೊಂದು ಕಾಲದಲ್ಲಿ ಸಾಗುವಳಿಗೆ ಅಯೋಗ್ಯವೆನಿಸಿಕೊಂಡು, ಬಂಜರು ಬಿದ್ದವುಗಳು ಆಧುನಿಕ ವಿಜ್ಞಾನೀಕ್ರಮುಗಳ ಆಚರಣೆಯಿಂದ ಇಂದು ಫಲವತ್ತಾದ ನಾಡುಗಳಾಗಿವೆ. ಅಮೇರಿಕಾದ ಜನರಿಗೆ ಬೇಕಾದ ದವಸಧಾನ್ಯಗಳನ್ನು, ಹಣ್ಣುಹಂಪಲುಗಳನ್ನು ಧಾರಾಳ ಪ್ರಮಾಣದಲ್ಲಿ ಒದಗಿಸಿಕೊಡುವಂತವುಗಳಾಗಿವೆ ಅಷ್ಟೆ ಅಲ್ಲ-ಅಮೇರಿಕಾವು ಜಗತ್ತಿನ ಇತರ ದೇಶಗಳಿಗೆ ಬೇಕಾದ ಆಹಾರದ ಪೂರೈಕೆಯನ್ನು ಮಾಡುವಂತಾಗಿದೆ. ಇದರ ರಹಸ್ಯವಾದರೂ ಏನು?

ಸಾಗುವಳಿಯಲ್ಲಿ ನೀರಾವರಿ ಕೆಲಸಗಳಿಗೆ ಅತಿ ಪ್ರಾಮುಖ್ಯ ಸ್ಥಾನವಿದೆ. ನೀರಿನ ಪೂರೈಕೆಯಿದ್ದರೆ ಮಾತ್ರ ಪಸಲು ಬೆಳೆಯುವುದು. ಪ್ರಕೃತಿಯಿಂದ ಸುರಿಸಲಾದ ನೀರು ಬಚ್ಚಿಟ್ಟು ಅದನ್ನು ಬೇಕಾದಾಗ ಉಪಯೋಗಿಸುವಂತಾಗಬೇಕು. ದೊಡ್ಡ ನದಿಗಳ ನೀರು ಹರಿದು ಸಮುದ್ರಕ್ಕೆ ಸೇರುವ ಬದಲು ಅದನ್ನು ಕೃಷಿಕಾರ್ಯಗಳಲ್ಲಿ ಉಪಯೋಗಿಸುವುದರಿಂದ ಒಳ್ಳೆ ಲಾಭವಿದೆ. ಮೈಸೂರಿನ ಕೃಷ್ಣರಾಜೇಂದ್ರ ಸಾಗರದಲ್ಲೂ, ಮದ್ರಾಸಿನ ಮೆಟ್ಟೂರಿನಲ್ಲೂ, ಕಾವೇರಿ ನದಿಯ ಮೇಲೆ ಅಣೆಕಟ್ಟನ್ನು ಕಟ್ಟಿ, ಒಂದು ಸಮಯ ಹಾಳು ಬಿದ್ದ ಸಾವಿರಾರು ಎಕ್ರೆಸ್ಥಳಗಳು ಇಂದು ಉತ್ತಮ ಕೃಷಿ ಕ್ಷೇತ್ರಗಳಾಗಿ ಮಾರ್ಪಟ್ಟಿವೆ. ಮೈಸೂರಿನ ಮತ್ತು ಮದ್ರಾಸಿನ ಸಂಪತ್ತನ್ನು ಹೆಚ್ಚಿಸಿವೆ. ಹೀಗೆ ಪಂಜಾಬದಲ್ಲೂ, ಸಿಂಧದಲ್ಲೂ ಅಣೆಕಟ್ಟುಗಳನ್ನು ಕಟ್ಟಿ ವಿಸ್ತಾರವಾದ ಬಂಜರು ಪ್ರದೇಶಗಳನ್ನು ಕೃಷಿ ಉತ್ಪನ್ನದ ಪ್ರದೇಶಗಳಾಗಿ ಮಾರ್ಪಡಿಸಲಾಗಿವೆ. ಅಣೆಕಟ್ಟಿನಿಂದ ನೀರನ್ನು ಶೇಖರಿಸಿ ಅದನ್ನು ಕಾಲುವೆಗಳ ಮೂಲಕ ಬೇಕಾದ ಪ್ರದೇಶಗಳಿಗೆ ಬೇಕಾದ ಸಮಯ ಒಯ್ದು ಕೃಷಿ ಕೆಲಸಗಳನ್ನು ನಡೆಯಿಸಲು ಸಾಧ್ಯವಾಗಿದೆ. ಇದರಿಂದ ಸಾಗುವಳಿ ಮಾತ್ರವಲ್ಲ ಇತರ ಕೈಗಾರಿಕೆಗಳಿಗೂ ಆಸ್ಪದವೂ ಉತ್ತೇಜನವೂ ದೊರಕಿರುತ್ತದೆ. ಮೈಸೂರಿ ಮಂಡ್ಯಾ ಎಂಬಲ್ಲಿ, ಕೃಷ್ಣರಾಜೇಂದ್ರ ನೀರಾವರಿ ಯೋಜನೆಯಿಂದ ಕಬ್ಬಿನ ಬೇಸಾಯವು ನಡೆಯುವಂತಾಗಿದೆ. ದೊಡ್ಡದೊಂದು ಸಕ್ಕರೆ ಕಾರ್ಖಾನೆಯು ಸ್ಥಾಪಿತವಾಗಿ ನಡೆಯುತ್ತದೆ. ಈಗ ತುಂಗಭದ್ರೆಯ ಅಣೆಕಟ್ಟಿನ ಕೆಲಸದಲ್ಲಿ ಮದ್ರಾಸು ಸರಕಾರವು ಕೈಹಚ್ಚಿರುವುದು. ಇದರಿಂದ ಅನಂತಪುರ, ಬಳ್ಳಾರಿ ಮೊದಲಾದ ಈ ಮೊದಲು ಕೃಷಿಗೆ ಯೋಗ್ಯವಲ್ಲದ ನಾಡುಗಳು ಸಂತುಷ್ಟ ನಾಡುಗಳಾಗಿ ಮಾರ್ಪಡಿಸಲಾಗುವವು.

ಪ್ರಚಲಿತ ಸಮಾಚಾರಗಳು

ಅಮೇರಿಕಾದಲ್ಲಿ ಮತ್ತು ರಶ್ಯದಲ್ಲಿ ನೀರಾವರಿಯ ದೊಡ್ಡ ಯೋಜನೆಗಳು ಮಾತ್ರವಲ್ಲದೆ, ಸಣ್ಣ ಯೋಜನೆಗಳೂ ನಡೆಯಿಸಲಾಗಿವೆ. ಮಳೆಯ ನೀರು ಗುಡ್ಡ ಬಯಲುಗಳಲ್ಲಿ ಬಿದ್ದು ಹರಿದು ಹೋಗುವುದನ್ನು ತಡೆದು, ಅದನ್ನು ಕೂಡಿಸಿಟ್ಟು, ಅವಶ್ಯಬಿದ್ದಾಗ ವಿನಿಯೋಗಿಸಿ ಕೃಷಿ ಕಾರ್ಯಗಳು ನಡೆಯುತ್ತವೆ. ಹಿಂದೂದೇಶದಲ್ಲಿ ಸದ್ಯಕ್ಕೆ ಈ ತರದ ಯೋಜನೆಗಳು ತೀರಾ ಕಡಿಮೆ ಸಂಖ್ಯೆಯಲ್ಲಿರುವವು. ನಮ್ಮ ಜಿಲ್ಲೆಯಲ್ಲಿ ಈ ತರದ ಯೋಜನೆಗಳನ್ನು ಕೈಗೊಂಡು, ನಮ್ಮ ಕೃಷಿ ಸಂಪತ್ತನ್ನು ವೃದ್ಧಿಸಿಕೊಳ್ಳುವರೆ ಸಾಧ್ಯವಿದೆ.

ಯುದ್ಧೋತ್ತರದಲ್ಲಿ, ಹಿಂದೂದೇಶದ ಸಾಗುವಳಿಯ ಉದ್ಧಾರದ ಬಗ್ಗೆ ನೀರಾವರಿ ಯೋಜನೆಗಳು ಧಾರಳವಾಗಿ ನಡೆಯುವಂತಾಗಬೇಕು. ಇದರಿಂದ ಯುದ್ಧೋತ್ತರದಲ್ಲಿ ಉಂಟಾಗಬಹುದಾದ ನಿರುದ್ಯೋಗ ಸಮಸ್ಯೆಯು ನಿವಾರಿಸಲ್ಪಡುವುದು, ಮಾತ್ರ ನಮ್ಮ ಸಾಗುವಳಿಗೆ ಉತ್ತಮ ಭವಿಷ್ಯವನ್ನು ಕಲ್ಪಿಸಿಕೊಟ್ಟಂತಾಗುವುದು.

ಈ ಬಗ್ಗೆ ಅನುಭವ ಪಡೆಯಲು ನಮ್ಮಲ್ಲಿಂದ ನೀರಾವರಿ ಇಂಜಿನಿಯರರನ್ನು ಅಮೇರಿಕಾಕ್ಕೂ, ರಶ್ಯಕ್ಕೂ ಕಳುಹಿಸಲಾಗಬೇಕು. ನೀರಾವರಿ ಯೋಜನೆಗಳಿಂದ ವಿದ್ಯುತ್ತನ್ನು ಪಡೆಯುವ ಕಾಮಗಾರಿಕೆಯಲ್ಲಿ ನುರಿತ ಅಮೇರಿಕನ್ ತಜ್ಞರೊಬ್ಬರು ಇಂಡಿಯಾ ಸರಕಾರದ ಅಡಿಯಲ್ಲಿ ನೇಮಕ ಹೊಂದಿರುವರು. ಹೀಗೆ ಇನ್ನೂ ಹಲವರನ್ನು ಇಲ್ಲಿಗೆ ಬರಮಾಡಿಕೊಂಡು, ರಶ್ಯಾದಲ್ಲಿ ನಡೆದಂತೆ, ಬೇಸಾಯದ ಉದ್ಧಾರಕ್ಕಾಗಿ ಪಂಚವಾರ್ಷಿಕ ಯೋಜನೆಗಳು ನಡೆಯಿಸಲಾಗಬೇಕು.

ಸಾಗುವಳಿಯ ಅಭಿವೃದ್ಧಿಯೊಂದಿಗೆ ಹಳ್ಳಿಗಳ ಅಭಿವೃದ್ಧಿಯೂ, ಅದರಿಂದ ಹಳ್ಳಿಗರ ಉದ್ಧಾರವೂ ನಡೆಯುವಂತಾಗಬೇಕು. ಹಿಂದೂದೇಶವೂ, ರಶ್ಯಾ, ಅಮೇರಿಕಾದೊಡನೆ, ಆದರ್ಶ ಸಾಗುವಳಿ ದೇಶವೆಂದು ಪ್ರಶಸ್ತಿ ಪಡೆಯುವಂತೆ ಕಾರ್ಯ ಸಾಧನೆಯು ಆಗಬೇಕು.

ನೀರಾವರಿ ಕೆಲಸಗಳಿಂದ ಸಂ. ಅಮೇರಿಕಾದ ಮರುಳು ಪ್ರದೇಶಗಳೂ ಕೂಡಾ ಸುಂದರ ವೃಂದಾವನಗಳಿಗೆ ಪರಿವರ್ತಿಸಲ್ಪಟ್ಟ ಕುರಿತು ಅಧಾರನೀಯ ವರದಿಗಳು ತುಂಬಾ ನಮ್ಮೆದುರಿವೆ. ಪಂಜಾಬದ ಕೆಲಮಂದಿ ಶಿಖ ಜನರು ಅಮೇರಿಕಾದ ಕೆಲಪೋರ್ನಿಯಾಕ್ಕೆ ತೆರಳಿ ಅಲ್ಲಿ ನೆಲೆನಿಂತು, ನೀರಾವರಿಯ ಕಾಮಗಾರಿಕೆಗಳನ್ನು ರಚಿಸಿ, ಏನೂ ಬೆಳೆಯದ ಆ ಸ್ಥಳದಲ್ಲಿ ರುಚಿಕರವಾದ ಹಣ್ಣು ಹಂಪಲುಗಳನ್ನೂ, ಅಕ್ಕಿ ಮೊದಲಾದ ದವಸ ದಾನ್ಯಗಳನ್ನು ಬೆಳೆಯಿಸುತ್ತಿದ್ದಾರೆ. ಕಳೆದ ಮಹಾ ಯುದ್ಧದ ನಂತರ ಅಲ್ಲಿಗೆ ತೆರಳಿದ ಜನರು ಈ ಪ್ರದೇಶದಲ್ಲಿ ಅವಿಶ್ರಾಂತಿವಾಗಿ ದುಡಿದು, ಅದನ್ನು ಕೃಷಿ ನಾಡಾಗಿ ಮಾಡಿರುವರು. ಒಳ್ಳೆ ಸಂತುಷ್ಟಿಯನ್ನು ಪಡೆದಿರುವರು.

ಲೋಕಶಾಂತಿಯು ಉಂಟಾಗಬೇಕಾದರೆ, ಜಗತ್ತಿನ ಮಾನವತೆಯು ಒಂದಾಗಬೇಕು

ಜಗತ್ತಿನ ಮಾನವತೆಯು ಒಂದಾಗಬೇಕಾದರೆ, ಒಂದು ರಾಷ್ಟ್ರದ ಜನರು ಇನ್ನೊಂದು ರಾಷ್ಟ್ರದ ಜನರನ್ನು ಸರಿಯಾಗಿ ತಿಳಿಯುವಂತಾಗಬೇಕು, ಹೀಗೆ ಜಗತ್ತಿನ ರಾಷ್ಟ್ರಗಳ ಜನರೊಳಗೆ ಪರಸ್ಪರ ಸಂಭಂದಗಳು ಉಂಟಾಗಿ ಬೆಳೆದರೆ, ಆಗ ರಾಷ್ಟ್ರಗಳೊಳಗೆ ಕ್ಲೇಶಗಳು ಉಂಟಾಗದು, ಘರ್ಷಣೆಯು ಉಂಟಾಗದು, ಯುದ್ಧದ ಕಾರಣಗಳು ಉಂಟಾಗವು.

ಹೀಗೆ ಜಗತ್ತಿನ ವಿವಿಧ ರಾಷ್ಟ್ರಗಳ ಜನರೊಳಗೆ ಪರಸ್ಪರ ಸಂಪರ್ಕ ಮತ್ತು ಕೂಡುವಿಕೆ ಆಗಬೇಕಾದರೆ, ಒಂದು ಅಂತರಾಷ್ಟ್ರೀಯ ವ್ಯವಸ್ಥೆಯಾಗಬೇಕು. ವಿಶ್ವಬಾಂಧ್ಯವ್ಯ ನೀತಿಯ ತಳದ ಮೇಲೆ ಈ ವ್ಯವಸ್ಥೆಯು ಕಟ್ಟಲ್ಪಡಬೇಕು. ಹೀಗಾದರೆ ಮಾತ್ರ ಮುಂದಕ್ಕೆ ಲೋಕಶಾಂತಿಯನ್ನು ಕಾಣ ಬಹುದು.

ಹೀಗೆಂದು ಓರ್ವ ಅಮೇರಿಕನ್ ಬರಿಹಗಾರರ ಅಭಿಪ್ರಾಯವಿರುತ್ತದೆ. ಇವರು ಹೇಳುವಂತೆ, ಒಂದು ರಾಷ್ಟ್ರದ ಜನರು ಇನ್ನೊಂದು ರಾಷ್ಟ್ರದ ಜನರನ್ನು ತಿಳಿದುಕೊಳ್ಳುವ ಕೆಲಸವು ಸಾಂಗವಾಗಿ ನಡೆಯುವುದಾದರೆ, ರಾಷ್ಟ್ರಗಳ ಪತ್ರಿಕೆಗಳ ಮೂಲಕ. ಆ ಪತ್ರಿಕೆಗಳು ತಮ್ಮಲ್ಲಿನ ವಿದ್ಯಮಾನಗಳನ್ನು ಇತರ ರಾಷ್ಟ್ರಗಳ ವಿದ್ಯಮಾನಗಳನ್ನು ಹೋಲಿಸಿ ಚರ್ಚಿಸುವಂತೆ ಆತಂಕಗಳು ಇರಬಾರದೆಂದು ಅವರ ಅಭಿಪ್ರಾಯ. ಅಮೇರಿಕಾದ ಮತ್ತು ಬ್ರಿಟಿಷರ ಜನರ ಸಂಭಂದಗಳು ಪತ್ರಿಕೆಗಳ ವ್ಯವಹಾರದಿಂದಲೆ ಸುಧಾರಿಸಲ್ಪಟ್ಟಿವೆಂದು ಇವರು ಹೇಳುತ್ತಿರುವರು. ಆದರೆ ಹಿಂದೂದೇಶದ ಜನರಿಗೂ, ಅಮೇರಿಕಾದ ಜನರೊಡನೆ ಯಾ ಬ್ರಿಟನಿನ ಜನರೊಡನೆ ಈ ತರದ ಸಂಭಂದಗಳನ್ನು ನಡೆಯುವರೆ ಅವಕಾಶಗಳು ಮಾತ್ರ ಇರುವುದಿಲ್ಲ. ನಮ್ಮಲ್ಲಿ ಅತ್ತಕಡೆಯ ವಾರ್ತೆಗಳ ಪ್ರಚಾರವಾಗುತ್ತಿದ್ದರೂ, ನಮ್ಮ ಕುರಿತು, ಮುಖ್ಯವಾಗಿ ನಮ್ಮ ರಾಷ್ಟ್ರೀಯ ಚಳವಳದ ಕುರಿತು, ವಾರ್ತೆಗಳು ಆ ದೇಶಗಳಲ್ಲಿ ಸರಿಯಾಗಿ ಪ್ರಚಾರವಾಗುತ್ತಿಲ್ಲ. ಕೆಲವೊಂದು ವಾರ್ತೆಗಳು ಕೆಲವು ಸೂತ್ರಧಾರಿಗಳ ಅಂಕಿತದಲ್ಲಿ ಆ ದೇಶಗಳಲ್ಲಿ ಪ್ರಚಾರವಾಗುತ್ತಿವೆ. ಈ ಕಾರಣದಿಂದಲೆ, ಅಮೇರಿಕಾದ ಹೆಚ್ಚಿನ ಜನರಿಗೆ ಹಿಂದೀಯರ ನಿಜವಾದ ಅರಿವೆ ಆಗದೆ, ಅವರು ನಮ್ಮ ಕುರಿತು, ನಮ್ಮ ಉತ್ಕಾಂಕ್ಷೆಗಳ ಕುರಿತು ಏನೂ ಉತ್ಸಾಹವನ್ನು ತೋರಿಸುವುದಿಲ್ಲವಾಗಿರಬಹುದು. ನಮ್ಮ ಕುರಿತು ಅಮೇರಿಕಾದ ಜನರಿಗೆ ಸರಿಯಾದ ಜ್ಞಾನ ಮಾಡುವುದರಲ್ಲಿ ವಿಜಯ ಲಕ್ಷ್ಮಿ ಪಂಡಿತರು ಸದ್ಯ ಅಮೇರಿಕಾದಲ್ಲಿ ಶ್ರಮಿಸುಸುತ್ತಿರುವರು. ಅವರ ಶ್ರಮುಗಳಿಂದ ಅಮೇರಿಕಾ-ಹಿಂದೂದೇಶಗಳೊಳಗೆ ಉತ್ತಮ ಸಂಭಂದಗಳೂ, ತಿಳುವಳಿಕೆಯೂ ಉಂಟಾಗಬಹುದು.

ಜಗತ್ತಿನ ರಾಷ್ಟ್ರಗಳೊಳಗಿನ ಪರಸ್ಪರ ಸಂಭಂದಗಳು ಉತ್ತಮುಗೊಳ್ಳುವರೆ, ಆಧುನಿಕ ಕಾಲದ ವಿದ್ಯುತ್ ಉಪಕರಣಗಳಿಂದ ಸುಲಭ ಸಾಧ್ಯವಾಗಿದೆ. ಮಿಂಚಿನ ವೇಗದಲ್ಲಿ ಒಂದು ದೇಶದಿಂದ ಅತೀ ದೂರ ಇನ್ನೊಂದು ದೇಶಕ್ಕೆ ವಾರ್ತೆಗಳನ್ನು ಕಳುಹಿಸಲು ಇಂದು ಸಾಧ್ಯವಿದೆ. ಈ ಅನುಕೂಲತೆಗಳನ್ನು ಬಳಸಿ, ಇಡೀ ಜಗತ್ತನ್ನೇ ಒಂದು ದೊಡ್ಡ ಕುಟುಂಬವಾಗಿ ಮಾಡಲು ಪಂಶ್ರಮುಗಳು ನಡೆಯಬೇಕು. ನೂತನ ಜಗತ್ತು ರಚಿಸಲ್ಪಡಬೇಕು. ಹೀಗೆ ಜಗತ್ತಿನ ರಾಷ್ಟ್ರಗಳೊಳಗೆ ಪರಸ್ಪರ ಸಂಭಂದಗಳುಂಟಾಗಿ ಒಂದು ರಾಷ್ಟ್ರದ ಜನರ ಜೀವನ ಕ್ರಮುಗಳನ್ನು ಇನ್ನೊಂದು ರಾಷ್ಟ್ರದ ಜನರು ಅರಿತುಕೊಂಡು, ಒಬ್ಬರ ಪ್ರವೀಣತೆಯು ಕುಶಲತೆ, ಬುದ್ಧಿವಂತಿಕೆಗೆ ಇತ್ಯಾದಿ ಇನ್ನೊಬ್ಬರಿಗೆ ತಿಳಿದು ಒಬ್ಬರ ಗುಣ ಇನ್ನೊಬ್ಬರಿಗೆ ತಿಳಿದು,-ಒಂದು ಕುಟುಂಬದಲ್ಲಿ, ಹೆಂಡತಿ ಗಂಡನನ್ನು, ತಂದೆ ಮಕ್ಕಳನ್ನು, ಅಕ್ಕ ತಂಗಿಯರನ್ನೂ, ತಿಳಿಕೊಂಡು, ಸಂತುಷ್ಟವಾಗಿ ನಡೆಯುವಂತೆ, ಜಗತ್ತಿನ ಐದು ಖಂಡಗಳ ವಿವಿಧ ರಾಷ್ಟ್ರಗಳೊಳಗೆ ಪರಸ್ಪರ ಸಂಭಂದಗಳು ಬೆಳೆಯಬೇಕೆಂದು, ಅಮೇರಿಕಾದಲ್ಲೂ, ಬ್ರಿಟನಿನಲ್ಲೂ, ರಶ್ಯಾದಲ್ಲೂ ಸಾರಲಾಗುತ್ತಿದೆ.

ನಮ್ಮನ್ನು ಜಗತ್ತಿನ ಇತರ ಜನರು ಸರಿಯಾಗಿ ತಿಳಿಯುತ್ತಿದ್ದರೆ, ನಮ್ಮ ರಾಷ್ಟ್ರೀಯ ಸದೀಚ್ಛೆಗಳು ನೆರವೇರಿಸಲ್ಪಡುತ್ತಿದ್ದವು. ವಿಶ್ವ ಬಾಂದವ್ಯದ ಕುರಿತು ದೊಡ್ಡ ದೊಡ್ಡ ರಾಷ್ಟ್ರಗಳ ಮುಖಂಡರ ಬಾಯಿಗಳಿಂದಲೂ, ಬರೆಹಗಾರರಿಂದಲೂ ಮಾತಿನ ಸುರಿಮಳೆ, ಲೇಖನಗಳ ರಾಶಿ ಹೊರಡುತ್ತಿದ್ದರೂ, ಲೋಕದಲ್ಲಿ ಮಾನವನಿಗೆ ಸಾಮಾಜಿಕ ಸಮಾನ ಹಕ್ಕುಬದ್ಧತೆಗಳತ್ತು ಕೊಡುವ ಪ್ರಜಾಸತ್ತೆಯ ಎತ್ತಿಹಿಡಿಯುವರೆ ಪ್ರಭುತ್ವದ ಜನಾಂಗಗಳು ಯತ್ನಗಳಲ್ಲಿ ನಿರತರಾಗಿದ್ದಾಗ್ಯೂ, ಹಿಂದೂದೇಶಕ್ಕೆ ಮಾತ್ರ ಅವು ಅನ್ವಯಿಸಿದುದನ್ನು ನೋಡಿದರೆ, ಮೇಲಿನ ಶ್ರಮುಗಳಿಂದ ಪ್ರಜಾಸತ್ತೆಯ ರಕ್ಷಣೆ ಹೆಚ್ಚಿನ ಉಪಕಾರವಾದೀತೆಂದು ಹೇಳಬರುವುದಿಲ್ಲ. ಪ್ರಭುತ್ವದ ರಾಷ್ಟ್ರಗಳು ತಮಗೆ ಲಭಿಸಿದ ಉನ್ನತ ಸ್ಥಾನಗಳನ್ನು ರಕ್ಷಿಸಿಕೊಳ್ಳುವರೆ, ಈ ಚಟುವಟಿಕೆಗಳೆಲ್ಲಾ ಒಂದು ಸೋಗೆ ಎಂಬ ಸಂದೇಹವು ಉಂಟಾಗುತ್ತಿದೆ.

ಬ್ರಿಟಿಷ್ ಪಾರ್ಲಿಮೆಂಟ್ ಚುನಾವಣೆ

ಬ್ರಿಟನಿನ ಪಾರ್ಲಿಮೆಂಟಿನ ಚುನಾವಣೆಯು ಸದ್ಯದಲ್ಲೆ ನಡೆಯಬಹುದೆಂದು ಹೇಳಲಾಗಿದೆ. ಅಲ್ಲಿನ ಮತ ವಿಧಾನ ಕ್ರಮದಿಂದ ಕಾನ್ಸರ್‌ವೇಟಿವ್‌ಗಳಾದ ಟೋರಿ ಪಕ್ಷಕ್ಕನೆ ನಿರಂತರವೂ ಅಧಿಕ ಸ್ಥಾನಗಳು ದೊರಕುತ್ತಾ ಬಂದಿದೆ. ಮುಂದಿನ ಚುನಾವಣೆಯ ನಿಮಿತ್ತ ಬ್ರಿಟನಿನ ರಾಜಕೀಯದಲ್ಲಿ ಬದಲಾವಣೆ ಆಗಬಹುದೆಂದು ಹೇಳಲಾಗಿದ್ದರೂ ಪ್ರಕೃತ ಯುದ್ಧ ಸಮಯದಲ್ಲಿ ರಚಿಸಲಾದ ಮಿಶ್ರಪಕ್ಷ ಸರಕಾರ ಪದ್ಧತಿಯನ್ನು ಯುದ್ಧೋತ್ತರದಲ್ಲೂ ಆಚರಿಸುವ ಇಚ್ಛೆಯು ಚರ್ಚಿಲ್ಲರ ಮೊನ್ನಿನ ಒಂದು ಭಾಷಣದಲ್ಲಿ ಸೂಚಿತವಾಗಿದೆ. ಯುದ್ಧೋತ್ತರದಲ್ಲಿ ಬ್ರಿಟ

(೯ನೇ ಪುಟಕ್ಕೆ ಮುಂದುವರಿದಿದೆ)

ಆಧುನಿಕ ರಶ್ಯಾದ ಕೆಲ ದೃಶ್ಯಗಳು

ಸ್ಟೇಲಿನನ ನಾಯಕತ್ವದಲ್ಲಿ ಸೋವಿಯಟ್ ರಶ್ಯಾವು, ಪಾಶ್ಚಾತ್ಯದ ಇತರ ರಾಷ್ಟ್ರಗಳಿಗಿಂತ ಒಂದು ಶತಮಾನ ಹಿಂದೆ ಉಳಿದಿದ್ದದು, ಬರೆ ೨೦ ವರ್ಷಗಳ ಪರಿಶ್ರಮದಿಂದ,-ಪಂಚವಾರ್ಷಿಕ ಯೋಜನೆಗಳಿಂದ-ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳನ್ನು ಬೆಳೆಯಿಸಿ, ಬೇಸಾಯವನ್ನು ಉದ್ಧರಿಸಿ, ಅಕ್ಷರತೆಯನ್ನು ಪ್ರಸರಿಸಿ, ಜ್ಞಾನವನ್ನು ಬೆಳೆಯಿಸಿ, ಮುಂದುವರಿಯಿತು. ಜರ್ಮನ್ ಬಲವನ್ನು ಬಹಳ ಯಶಸ್ವಿತರವಲ್ಲಿ ವಿರೋಧಿಸಿತು. ಅದನ್ನು ತಮ್ಮ ಪ್ರದೇಶದಿಂದ ಹಿಂದಟ್ಟಿ, ಜರ್ಮನಿಯೊಳಗೆ ಬೆನ್ನಟ್ಟಿಕೊಂಡು ನಡೆಯುತ್ತಿದೆ. ಸ್ಟೇಲಿನನು ಕ್ರಮುಗಳು ಅತ್ಯಂತ ಕಟುವಾದುದೆಂದು ಹೇಳಲಾಗಿದ್ದರೂ, ಅದರಿಂದ ರಶ್ಯಾದ ಜನರೊಳಗೆ ರಾಷ್ಟ್ರೀಯ ಭಾವವು ಉತ್ಪಾದಿಸಲ್ಪಟ್ಟಿತು. ರಶ್ಯದ ರೂಪನ್ನೆ ಬದಲಾಯಿಸಿಬಿಟ್ಟಿತು.

ರಶ್ಯಾವು ಜರ್ಮನಿಯ ಹೊಡೆತದಿಂದ ರಕ್ಷಿಸಲ್ಪಟ್ಟಿದ್ದಾದರೂ ಸ್ಟೇಲಿನನ ಪ್ಲೇನುಗಳಿಂದ. ಈ ಪ್ಲೇನುಗಳಿಲ್ಲದಿರುತ್ತಿದ್ದರೆ ರಶ್ಯಾದ ನಾಮನಾಶವಾಗುತಿತ್ತು. ನಾಜೀ ಜರ್ಮನಿಯು ಅದನ್ನು ನುಂಗಿಬಿಡುತಿತ್ತು. ರಶ್ಯವು ಇಂದು ಜಗತ್ತಿನಲ್ಲಿ ಪ್ರಶಸ್ತಿಯ ಸ್ಥಾನವನ್ನು ಪಡೆದದ್ದಾದರೂ, ಮುಂದಕ್ಕೆ ಅದು ಖ್ಯಾತಿಯಿಂದ ಬಾಳುವುದಾದರೂ, ಸ್ಟೇಲಿನನ ಪ್ಲೇನುಗಳ ದಸೆಯಿಂದ.

ಈ ಪ್ಲೇನುಗಳಿಂದ ರಶ್ಯದ ಜನರು ಅನೇಕ ನೋವುಗಳನ್ನು, ಕಷ್ಟತೊಂದರೆಗಳನ್ನೂ ಅನುಭವಿಸಿದ್ದರೂ-ಯಾರೂ ಅದರ ಕುರಿತು ದೂರೆತ್ತುವುದಿಲ್ಲ. ಬದಲಾಗಿ, ನಮ್ಮ ದೇಶವು ಜರ್ಮನಿಯಿಂದ ರಕ್ಷಿಸಲ್ಪಟ್ಟುದರ ಕುರಿತು, ಜಗತ್ತಿನಲ್ಲಿ ತಮಗೊಂದು ಶ್ರೇಷ್ಠ ಪದವಿ ದೊರಕಿದುದರ ಕುರಿತು, ಮಹಾ ಗೌರವ ಪಡುತ್ತಿರುವರು. ಸ್ಟೇಲಿನನು ಕಠೋರನಿದ್ದರೂ ತಮ್ಮ ಉದ್ಧಾರ ಮಾಡಿದ ಅಧಿದೇವತೆ ಎಂದು ಅವರ ಭಾವನೆ ಇರುವುದು.

* * *

ಯುದ್ಧದ ಯತ್ನಗಳಿಗಾಗಿ ರಶ್ಯದ ಮಜೂರ ವರ್ಗವು ಮಹಾ ತ್ಯಾಗವನ್ನು ಮಾಡುತ್ತಿದೆ. ಮಜೂರರು ಒಂದು ದಿನದಲ್ಲಿಎಂಟು ತಾಸುಗಳಿಗೆ ಮಿಕ್ಕಿ ದುಡಿಯಬಾರದೆಂದು ಸೋವಿಯಟ್ ನಿಯಮವು ಇದ್ದರೂ, ಸದ್ಯ ತಮ್ಮ ರಾಷ್ಟ್ರಕ್ಕೆ ಬಂದೊದಗಿದ ಸಂಕಟದಿಂದ ಪಾರಾಗಲು ಅವರು ದಿನ ಒಂದರ ಹದಿನೆರಡು ತಾಸು ಸಮಯಕ್ಕೂ ಮಿಕ್ಕಿ ದುಡಿಯುತ್ತಿರುವರು.

ಯುದ್ಧ ಕಾರ್ಯಗಳ ಪೂರೈಕೆಗೆ ಹೆಚ್ಚಿನ ಮಹತ್ವವು ಕೊಡಲಾಗುತ್ತಿದೆ. ಜನರು ತಮ್ಮ ವಸ್ತ್ರದ ಆವಶ್ಯಕತೆಗಳನ್ನು ಬಹಳ ಕಡಿಮೆಮಾಡಿ, ತಮ್ಮೊಡನೆ ಸದ್ಯ ಇದ್ದ ಬಟ್ಟೆಬರೆಗಳನ್ನು ಹೊಲಿದು ಉಪಯೋಗಿಸುತ್ತಿರುವರು. ಹಳೇಯ ಪಾದರಕ್ಷೆಗಳನ್ನೇ ಉಪಯೋಗಿಸುತ್ತಿರುವರು. ಯುದ್ಧವು ಬಹಳ ದೀರ್ಘ ಸಮಯಕ್ಕೆ ನಡೆದು, ಅರಿವೆಯ ಕೊರತೆಯು ಉಂಟಾಗದಂತೆ ತಮ್ಮೊಡನಿದ್ದ ಬಟ್ಟೆ ಬರೆಗಳನ್ನು ಬಹಳ ಜಾಗರೂಕತೆಯಿಂದ ಜೋಪಾಸನೆ ಮಾಡುತ್ತಿರುವರು.

* * *

ರಶ್ಯನರಲ್ಲಿ ಶಿಸ್ತು ಕಡಿಮೆ ಎಂಬುದಾಗಿ ಹಲವರ ಅಭಿಪ್ರಾಯವಿದ್ದಿತು. ಅದು ಈಗಲ್ಲ, ಹಳೇಯ ಕಥೆಯದು. ಮಹಾ ಕ್ರಾಂತಿಯ ಮೊದಲು, ಅದು ಪ್ರಾರಂಭವಾದ ಸ್ವಲ್ಪ ಸಮಯ ವರೆಗೂ, ಈ ಮಾತು ಒಪ್ಪುವಂತಾದಾಗಿತ್ತು. ಆದರೆ ಈಗ ಸ್ಟೇಲಿನನ ಮೂರು ನಾಲ್ಕು ಯೋಜನೆಗಳು ನಡೆದ ನಂತರ-ರಶ್ಯನರಲ್ಲಿ ಶಿಸ್ತಿನ ಅಭ್ಯಾಸಗಳು ಉಂಟಾಗಿವೆ. ಸೈನ್ಯದಲ್ಲಿ ಕಾರ್ಖಾನೆಗಳಲ್ಲಿ, ಬೀದಿಗಳಲ್ಲಿ, ಶಾಲೆಗಳಲ್ಲಿ, ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ರಶ್ಯನರು ಈಗ ಅತ್ಯಂತ ಶಿಸ್ತಿನಿಂದ ವರ್ತಿಸುತ್ತಿರುವರು. ಶಿಸ್ತು ನಿಷ್ಠೆಗಳಿಲ್ಲದಿದ್ದರೆ ಒಂದು ರಾಷ್ಟ್ರಕ್ಕೆ ಬಾಳಿಕೊಂಡಿರಲು ಸಾಧ್ಯವಿಲ್ಲವೆಂಬುದು ಅವರು ಮನಗಂಡಿರುವರು.

* * *

ಸೋವಿಯಟ್ ರಶ್ಯದ ಬಾಲಕ ವರ್ಗವಾದರೂ-ಚೇತನದಿಂದ, ಹುರುಪಿನಿಂದ, ಉತ್ಸಾಹದಿಂದ, ತುಂಬಿ ತುಲುಕಾಡುತ್ತಿದೆ. ಬಾಲಕ ವರ್ಗವು ಭವಿಷ್ಯ ಜನಾಂಗದ ತಳಹದಿಯು, ಈ ಕಾರಣದಿಂದ ಅವರು ದೃಢಕಾಯರಾಗಿ, ವಿವೇಕಿಗಳಾಗಿ ಕೃತ್ಯಮ್ಯ ನಿಷ್ಠರಾಗಿ, ಉಚ್ಚ ಸಮತಾವಾದಿಗಳಾಗಿ, ಉಪಯುಕ್ತ ಜೀವಿಗಳಾಗಿ, ಬೆಳೆಯುವಂತೆ ಶ್ರಮವು ವಹಿಸಲಾಗಿದೆ. ರಶ್ಯದ ನಗರಗಳ ವೃಂದಾವನಗಳು ಮಕ್ಕಳಿಂದ ತುಂಬಿ ಅವರ ಆಟ ಚಟುವಟಿಕೆಗಳು ಪ್ರೇಕ್ಷಕರನ್ನು ಆನಂದಗೊಳ್ಳಿಸುತ್ತವೆ. ಅವರ ಚಟುವಟಿಕೆಗಳಲ್ಲಿ ಜೀವಕಳೆಯು ಹೊಳೆದು ಕಾಣುತ್ತದೆ. ಅವರು ಬೆಳೆಯುತ್ತಿದ್ದ ಹಾಗೆ, ಅವರನ್ನು ದೇಶರಕ್ಷಣೆಯ ಕಾರ್ಯಗಳಲ್ಲಿ ತರಬೇತು ಮಾಡಲಾಗುತ್ತಿದೆ. ಗೂರಿಲ್ಲಾ ಯುದ್ಧ ಕ್ರಮುಗಳಲ್ಲೂ ಅವರನ್ನು ತರಬೇತು ಗೊಳಿಸುತ್ತಿದ್ದಾರೆ. ಈತರಬೇತೆಲ್ಲಾ ರಣರಂಗದಲ್ಲಿ ಕೀರ್ತಿ ಪಡೆದ ಯೋಧರ ನೆರವಿನಲ್ಲೇ ನಡೆಯುತ್ತಿದೆ.

ರಶ್ಯದ ಜನಸಂಖ್ಯೆಯು ಅತಿರೇಖ ಹೆಚ್ಚುತ್ತಿರುವುದು ನಾಜೀ ನಾಯಕ ಹಿಟ್ಲರನಿಗೆ ತಲೆಸಿಡಿತಕ್ಕೆ ಕಾರಣವಾಗಿದ್ದು ತಮ್ಮ ಆಕಾಂಕ್ಷೆಗಳಿಗೆಲ್ಲಾ ಅದೊಂದು ದೊಡ್ಡ ಅಡ್ಡಿ ಎಂಬ ಅಭಿಪ್ರಾಯವು ನಾಜೀಗಳನ್ನು ಬಲವಾಗಿ ಕಾಡುತ್ತಿತ್ತು. ಈ ಕಾರಣದಿಂದ ತಮ್ಮ ಜನಸಂಖ್ಯೆಯನ್ನು ವೃದ್ಧಿಸುವ ಕಾರ್ಯದಲ್ಲಿ ಅವರು ಕೈಹಚ್ಚಿದರು. ಈಕುರಿತು ಬಲವಾದ ಪ್ರಚಾರವನ್ನು ಕೈಕೊಂಡಿದ್ದರು. ಜನರು ಬೇಗನೆ ವಿವಾಹ ಮಾಡಿಕೊಳ್ಳುವಂತೆ ಪ್ರೋತ್ಸಾಹ, ಮಕ್ಕಳು ಪಡೆದವರಿಗೆ ಸರಕಾರದಿಂದ ವರಮಾನಗಳನ್ನು ಕೊಡುವುದು, ಮೊದಲಾದ ಉಪಾಯಗಳಿಂದಲೂ, ಜನರು ಮಕ್ಕಳನ್ನು ಪಡೆಯುವುದರಲ್ಲಿ ಉತ್ಸಾಹ ಹೊಂದುವಂತೆ ಸಾಧಿಸಲಾಯಿತು. ಆದರೆ ರಶ್ಯನ್ ಸ್ತ್ರೀಯರ ಶಿಶುಧಾರಣ ಶಕ್ತಿಯು ಜರ್ಮನಿ ಸ್ತ್ರೀಯ ಶಿಶುಧಾರಣ ಶಕ್ತಿಗಿಂತ ಹೆಚ್ಚಿಗೆ ೧೯೩೩ರಲ್ಲಿ ಜರ್ಮನಿಯ ಜನನ ಸಂಖ್ಯೆಯು ಸಾವಿರಕ್ಕೆ ೧೪.೧ ಆಗಿತ್ತು. ೧೯೩೪ರಲ್ಲಿ ರಶ್ಯದ ಬಾಕು ಎಂಬ ಪ್ರಸಿದ್ಧ ಎಣ್ಣೆ ನಾಡಿನ ಜನನ ಸಂಖ್ಯೆಯು ಸಾವಿರಕ್ಕೆ ೩೩.೯ ಆಗಿತ್ತು.

* * *

ಸ್ಟೆಲಿನನ ಪಂಚ ವಾರ್ಷಿಕ ಯೋಜನೆಗಳ ಕಠಿಣತನದಿಂದ ರಶ್ಯನರ ಮೊದಲಿನ ಬೊಜ್ಜು ಉತ್ತಮ ಶಕ್ತಿಯಾಗಿ ಪರಿವರ್ತಿಸಲ್ಪಟ್ಟಿತು. ರಶ್ಯವು ಅಮೇರಿಕಾದಂತೆ ಚೇತನಾಮಯ ಪ್ರದೇಶವಾಯಿತು.

* * *

ಸೋವಿಯಟ್ ರಶ್ಯದ ನೂತನ ಕ್ರಮಗಳಿಂದ, ಜನರು ತಮ್ಮ ಜೀವನವನ್ನು ಬಹಳ ಮಟ್ಟಿಗೆ ಶುದ್ಧಿಕರಿಸಿರುವರು. ಹಿಂದೆ ಧೂಮಸೇವನೆಯು ಪ್ರತಿಯೋರ್ವ ರಶ್ಯನನನ್ನಲ್ಲಂಬಂತೆ ಅಂಟಿಕೊಂಡಿತ್ತು. ಬಾಲಕರಲ್ಲೂ ಸ್ತ್ರೀಯರಲ್ಲೂ ಈ ಹವಾಸ್ಯವು ಕೂಡಿತ್ತು. ಕಾಲೇಜು ಹುಡುಗಿಯರಲ್ಲಿ, ಪೆಕ್ಟರಿ ಹುಡುಗಿಯರಲ್ಲಿ ಧೂಮಸೇವನೆಯು ಕ್ರಾಂತಿಕರ ಕೃತ್ಯವೆಂಬ ಅಭಿಪ್ರಾಯವು ಉಂಟಾಗಿತ್ತು. ಶಾಲೆ ಕಾಲೇಜುಗಳ ಕೋಣೆಗಳ, ನಾಟಕ ಮಂದಿರಗಳೂ ಸಿಗರೇಟಿನ ಸುಟ್ಟ ತುಂಡುಗಳಿಂದ ತುಂಬುತ್ತಿದ್ದವು. ಈಗ ಅಲ್ಲಿ ಧೂಮಸೇನೆಯ ಕುರಿತು ಅಸಹನಾಭಾವವು ಉಂಟಾಗಿರುವುದು. ಬಹುತೇಕ ಮಂದಿಗಳೂ, ಮುಖ್ಯವಾಗಿ ಯುವಕ, ಯುವತಿಯರು, ಈ ದುರಭ್ಯಾಸವನ್ನು ತ್ಯಜಿಸಿ ಬಿಟ್ಟಿರುವರು. ಪ್ರಾಯಭರಿತರಲ್ಲೂ ವೃದ್ಧರಲ್ಲೂ ಕೆಲವರು ಈ ದುರಭ್ಯಾಸವನ್ನು ತ್ಯಜಿಸಿರು. ದೂಮಸೇವನೆಯ ಕುರಿತು ಲವಲವಿಕೆಯು ಅಲ್ಲಿನ ತರುಣ ವರ್ಗದಲ್ಲಿ ಈಗ ಕಾಣಿಸಿಕೊಳ್ಳುವುದಿಲ್ಲ. ಸ್ಟೇಲಿನನ ಪಂಚವಾರ್ಷಿಕ ಉದ್ಧಾರ ಯೋಜನೆಗಳಿಂದಲೂ, ಯುದ್ಧದ ನಿಮಿತ್ತವೂ, ಅಲ್ಲಿನ ಸಮಾಜದಲ್ಲಿ ಅನೇಕ ಲಕ್ಷ್ಯನೀಯ ಸುಧಾರಣೆಗಳು ನಡೆದು ಬಿಟ್ಟಿವೆ. ಶುದ್ಧ ಜೀವನದ ಕುರಿತು ಉತ್ಸಾಹವೂ ಉಂಟಾಗಿರುತ್ತದೆ. ಇದೆ ತರದಲ್ಲಿ ಮದ್ಯ ಸೇವನೆಯು ಕುರಿತು ಜನರಲ್ಲಿ ಅಸಹನೆಯು ಉಂಟಾಗಿರುವುದು. ಪಾನನಿರೋಧದ ಕ್ರಮುಗಳು ಜ್ಯಾರಿಯಲ್ಲಿರದಿದ್ದರೂ, ರಶ್ಯನರ 'ವೊಡ್ಕಾ' ಎಂಬ ಮದ್ಯಪಾನವು, ಆಳುಗಡ್ಡೆ, ಮತ್ತಿತರ ಧವಸ ದಾನ್ಯಗಳಿಂದ ಸಿದ್ಧವಾಗುತ್ತಿದ್ದುದು, ಈಗಿನ ಯುದ್ಧ ಸ್ಥಿತಿಯಿಂದ, ಇವುಗಳು, ಮದ್ಯ ತಯಾರಿಕೆಗೆ ದೊರಕದುದರಿಂದಲೂ, ತಯಾರಾದ ಮದ್ಯವು ಯುದ್ಧೋಪಯೋಗಕ್ಕೆ ಬೇಕಾದ ಕೃತಕ ರಬ್ಬರ್ ಇತ್ಯಾದಿಗಳನ್ನು ತಯಾರಿಸಲು ಅವಶ್ಯವಿರುವುದರಿಂದಲೂ, ಜನರು ಮದ್ಯ ಸೇವನೆಯನ್ನು ಬಹು ಮಟ್ಟಿಗೆ ವರ್ಜಿಸಬೇಕಾಗಿ ಬಂದಿದೆ. ಅಷ್ಟೆ ಅಲ್ಲ. ಶುದ್ಧ ಜೀವನ ಕ್ರಮುಗಳ ಕುರಿತು ನಡೆದ ಪ್ರಚಾರದ ಕಾರಣದಿಂದ ಜನರು ಮದ್ಯವನ್ನು ವರ್ಜಿಸುವ ನಿರ್ಧಾರಕ್ಕೆ ಬರುವಂತಾಗಿದೆ. ಸ್ತ್ರೀಯರು ಮದ್ಯಪಾನವನ್ನು ಮಾಡಲೆ ಬಾರದೆಂಬ ನೂತನ ದೃಷ್ಟಿಯು ರಶ್ಯನ್ ಸ್ತ್ರೀಯರಲ್ಲಿ ಉಂಟಾಗಿರುತ್ತದೆ.

ಹೀಗೆ ರಶ್ಯದ ತರುಣ ವರ್ಗವು ಬಹು ಮಟ್ಟಿಗೆ ವಿವೇಕವಂತವಾಗಿದೆ.

* * *

ಹಳೇಯ ರಶ್ಯದಲ್ಲಿ ಪುರುಷರು ಗಡ್ಡ ಬೆಳೆಯಿಸುತ್ತಿದ್ದರು. ಹಿಂದೆ ಅದು ಗೌರವದ ಕುರುಹಾಗಿತ್ತು. ತಾತಂದಿರು, ಅಜ್ಜಂದಿರು, ಮತಗುರುಗಳು, ಅದ್ಯಾಪಕರು, ವ್ಯಾಪಾರಿಗಳು, ಸಾಮಾನ್ಯವಾಗಿ ಎಲ್ಲರೂ, ಗಡ್ಡವನ್ನು ಬೆಳೆಸುತ್ತಿದ್ದರು. ಗಡ್ಡಯಿದ್ದ ಪ್ರಸಿದ್ಧ ರಶ್ಯನ್ ಸಾಹಿತ ಟೋಲ್‌ಸ್ಟಾಯಿಯವರ ಚಿತ್ರವನ್ನು ನಮ್ಮಲ್ಲಿ ಅನೇಕರು ಕಾಣಿರಬಹುದು. ಅಮೇರಿಕಾದಲ್ಲಿ ಒಂದಾನೊಂದು ಕಾಲದಲ್ಲಿ ಗಡ್ಡ ಬೆಳೆಯಿಸಿದವನ್ನು ರಶ್ಯನನೆಂದು ತಿಳಿಯುವ ರೂಢಿಯು ಇತ್ತು. ಈ ಗಡ್ಡವು ಈಗ ಮಾಯವಾಗಿಬಿಟ್ಟಿದೆ. ಸಿತ್ಯಲೂ ಗಡ್ಡ ಬೋಳಿಸುವ ಅಭ್ಯಾಸವು ಅಲ್ಲೀಗ ಉಂಟಾಗಿರುತ್ತತೆ. ಹಾಗೆನೆ ಮೀಸೆಯು ಕೂಡ ಗಡ್ಡವನ್ನು ಅನುಸರಿಸಿದೆ. ಆಧುನಿಕ ರಶ್ಯದ ಯಾವತ್ತು ಹಳ್ಳಿಗಳಲ್ಲಾಗಲೀ, ನಗರದಲ್ಲಾಗಲಿ, ಗಡ್ಡ ಮೀಸೆಯುಳ್ಳವರು ಅತಿ ವಿರಳವೆಂದೆ ಹೇಳಬಹುದು-ಬ್ರಿಟನಿನ ಜನರಂತೆ, ಅಮೇರಿಕನರಂತೆ, ರಶ್ಯನರು ಗಡ್ಡ ಮೀಸೆಗಳನ್ನು ಬೋಳಿಸಿ, ಶುಭ್ರ ಮುಖದಿಂದ ಕೂಡಿದವರಾಗಿ ಕಾಣಿಸಿಕೊಳ್ಳುತ್ತಿರುವರು.

(ಆದಾರದಿಂದ ಬರೆಯಲ್ಪಟ್ಟದ್ದು)

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.
1. Paid up Capital	14,76,535-0-0
2. Reserves	4,14,302-3-11
3. Deposits	98,25,162-6-6
4. Bills for collection	6,87,039-2-2
5. Branch Adjustments	7,20,593-3-0
6. Other liabilities	2,86,375-4-9
7. Profits for the Current year together with Balance brought forward.	1,40,405-15-8
Grand Total Rs.	1,35,50,413-4-0

PROPERTY AND ASSETS	Rs. As.Ps
1. Office Buildings, safes, furniture, etc.	1,04,204-0-0
2. Advances	57,53,919-5-0
3. Investments on Govt. Securities etc.	30,18,971-15-5
4. Bills for collection	6,87,039-2-2
5. Other Assets	1,07,153-5-9
6. Cash on hand and with Bankers at call & in Short Term Deposits	38,79,125-7-0
Garnd Total Rs.	1,35,50,413-4-8

ದೇಶ ಭಕ್ತನ ವೀರ ವಾಣಿ

ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಕೊಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಭೂಲಾಭಾಯ್ ದೇಸಾಯ್ ಅವರು ಮಾಡಿದ ಅಮೋಘವೂ ಸ್ಫೂರ್ತಿದಾಯಕವೂ ಆದ ಭಾಷಣದ ಸಂಕ್ಷೇಪ ವಿವರವನ್ನು ಇಲ್ಲಿ ಕೊಡಲಾಗಿದೆ:

"ಸೆನ್‌ಫ್ರಾನ್ಸಿಕೊ ಪರಿಷತ್ತಿಗೆ ನಮ್ಮ ನಿಜವಾದ ಸ್ನೇಹಿತರಾಗಲೀ ಪ್ರತಿನಿಧಿಗಳಾಗಲೀ ಹೋದರೆ ಅಲ್ಲಿ ಅವರು ಪ್ರಥಮ ಪ್ರಾರಂಭದಲ್ಲೇ ಈ ವಿಷಯವನ್ನು ಕೇಳುವರು: ಬ್ರಿಟನು ತನ್ನ ಸ್ವತಂತ್ರವಾದ ಸ್ವಂತ ಮನಿಸ್ಸಿನಿಂದ ಭಾರತವನ್ನು ಸ್ವತಂತ್ರ ದೇಶವನ್ನಾಗಿ ಘೋಷಿಸದಿದ್ದರೆ ನಾವು ಇಲ್ಲಿ ಒಂದು ಕ್ಷಣವು ಇರಲಾರೆವು ಎಂದು ಒತ್ತಾಯ ಮಾಡಬೇಕು. ಆ ಪರಿಷತ್ತಿನಲ್ಲಿ ಗಹನವಾದ ಸಮಸ್ಯೆಗಳು ಇತ್ಯರ್ಥಿಸಲ್ಪಡಲಿವೆ ಎಂದು ನನಗೆ ತಿಳಿದು ಬರುತ್ತದೆ. ಭಾರತದ ಸ್ವತಂತ್ರ ಜನರ ನಿಜವಾದ ಪ್ರತಿನಿಧಿಗಳು ಅಲ್ಲಿ ಹಾಜರಿದ್ದರೆ ಯಾರಿಗೂ ಯಾವ ನಷ್ಟವೂ ಆಗಲಾರದೆಂಬ ಸಂಗತಿಯನ್ನು ಜಗತ್ತು ತಿಳಿಯಬೇಕು. ರ್‍ಯಾನ್ ನದಿ ದಾಟಿದ ಮಿತ್ರ ಸೈನ್ಯಗಳಿಗೆ ಮಿ। ಚರ್ಚಿಲ್ಲರು ಸಂದೇಶ ಕೊಟ್ಟಿರುವರು ಅದು ಹೀಗಿದೆ:- 'ಮಾನವ ಸ್ವಾತಂತ್ರ್ಯಕ್ಕಾಗಿಯೂ, ನಮ್ಮ ಆಪ್ತವಾದ ಜೀವನಕ್ಕಾಗಿಯ್ಕೂ ಮತ್ತು ಚಕ್ರವರ್ತಿಗಳಿಗಾಗಿಯೂ ನಾವು ಕೈಕೊಂಡ ಈ ಶಸ್ತ್ರಸಾಹಸಕೆ ದೇವರು ಶ್ರೇಯಸ್ಸನುಂಟು ಮಾಡಲಿ' ಮಾನವ ಸ್ವಾತಂತ್ರ್ಯಕ್ಕಾಗಿ ಅಲ್ಲವೆ? ನಿಜ. ಮಾನವ ಸ್ವಾತಂತ್ರ್ಯದ ಹೆಸರಿನಲ್ಲಿ ಹೋರಾಡುವಂತೆ ನಮಗೆ ಮಾಡಿಯೂ, ಹೇಳಿಯೂ ಇರುವರೆಂಬ ಸಂಗತಿಯನ್ನು ಪೂರ್ಣವಾಗಿ ತಿಳಿದಿರುವ ಚರ್ಚಿಲ್ಲರು ಮೇಲಿನ ಈ ಮಾತುಗಳನ್ನು ಆತ್ಮಸಾಕ್ಷಿಗೆ ಸರಿಯಾಗಿ ಹೇಳಿರುವರೆ? ನಾವು ಮಾನವರೆಂದು ಪರಿಗಣಿಸಲ್ಪಡುವ ತನಕ ನಮಗೆ ಸ್ವಾತಂತ್ರ್ಯವಿಲ್ಲವೆ? ಮಾನವ ಕೋಟಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಲ್ಪಡುವ ಯುದ್ಧವಿದು. ಜನಧನಗಳ ಅನುಕೂಲತೆಗಳಿಲ್ಲದೆ ನಾವಿದನ್ನು ಹೋರಾಡಬೇಕಾಗಿದೆ, ಯಾರ ಒಳಿತಿಗಾಗಿ ನಾವಿದನ್ನು ಮಾಡಬೇಕು? ಮಾನವ ಸ್ವಾತಂತ್ರ್ಯಕ್ಕಾಗಿಯೇ? ಹಾಗಾದರೆ ನಾನೊಬ್ಬ ಮಾನವ. ನಾನು ನನ್ನ ದೇಶಬಾಂಧವರೂ ಮಾನವರೇ ಆಗಿರುವರು. ಅಲ್ಲಿ ಕೂತಿರುವ ಆ ಸದ್ಗೃಹಸ್ಥರು 'ನೀವು ಮಾನವರಲ್ಲ' ಆದುದರಿಂದ ನೀವು ಸ್ವಾತಂತ್ರ್ಯಕ್ಕೆ ಅರ್ಹರಲ್ಲ'ವೆಂದು ಹೇಳಲಿ. ನಮಗೆ ತತ್ವ ಶಿಲಾಶಾಸನಗಳು ಬೇಕಿಲ್ಲ . . . ನಾವು ಸತ್ಯವಂತರಾಗೋಣ . . . 'ಚರ್ಚಿಲ್ಲರು ಹೇಳುತ್ತಿರುವುದು ಅಸತ್ಯ. ಯಾಕೆಂದರೆ ಈ ಹೋರಾಟವು ಮಾನವ ಸ್ವಾತಂತ್ರ್ಯಕ್ಕಾಗಿ ಅಲ್ಲ'ವೆಂದು ಸರಕಾರ ಪಕ್ಷದ ನಾಯಕರು ಜಗತ್ತಿಗೆ ಸಾರಲೆಂದು ನಾನು ಹಾರೈಸುತ್ತೇನೆ. ಒಂದು ವೇಳೆ ಫ್ರಿಸ್ಕೊ ಪರಿಷತ್ತಿಗೆ ನಾವು ಹೋಗಿ 'ನೀವು ಯಾರ ಭದ್ರತೆಗಾಗಿ ಈ ಜಗತ್ತನ್ನು ಶಾಂತಿಯುಕ್ತವಾಗಿ ಮಾಡುತ್ತೀರಿ' ಎಂದು ಕೇಳಿದೆವೆಂದು ಭಾವಿಸೋಣ. ಇಂಗ್ಲೆಂಡ್, ಅಮೇರಿಕಾ, ರಷ್ಯ ಮತ್ತು ಒಂದು ಪಕ್ಷಕ್ಕೆ ಚೀನಾ ಕೂಡಾ (ಈ ವಿಷಯ ಸಂದೇಹವಿದೆ) ಇವುಗಳು ಮಾತ್ರ ಸ್ವತಂತ್ರವಾಗಿರುವಂತೆ ಅವರು ಶಾಂತಿ ಯೋಜನೆಗಳನ್ನು ಮಾಡುತ್ತಿರುವುದಾದರೆ ನಾವು ಅಲ್ಲಿಗೆ ಹೋಗಲಾರೆವು. ಅದಕ್ಕಾಗಿಯೇ ಭಾರತವು ತನ್ನ ರಕ್ತವನ್ನು ಸುರಿದಿದೆ. ನಮ್ಮನ್ನು ಯುದ್ಧದಲ್ಲಿ ಭಾಗವಹಿಸುವಂತೆ ಮಾಡಿ ಕೊನೆಗೆ 'ಇದು ನಿಮಗೆ ಸ್ವಾತಂತ್ರ ಸಿಗುವಂತಹ ಯುದ್ಧವಲ್ಲ!' ಎಂದು ಅವರು ಹೇಳಲು ಸಾಧ್ಯವಿಲ್ಲ. ಈ ಯುದ್ಧದ ಧ್ಯೇಯ ಉದ್ದೇಶಗಳೇನೆಂದು ಪ್ರಶ್ನಿಸಿದ ಕೊಂಗ್ರೆಸಿನ ಕೇಳಿಕೆಯನ್ನು ನಾನು ಪುನಹ ಕೇಳ ಬಯಸುತ್ತೇನೆ. ಆದುದರಿಂದ ನಮ್ಮ ಸ್ಥಾನಮಾನಗಳು ಎಲ್ಲಿ ಇವೆ ಎಂಬುದರ ಕುರಿತು ಈಗ ನಾವು ತುಂಬಾ ಜಾಗರೂಕರಾಗಿದ್ದೇವೆ. ಕಳೆದ ಯುದ್ಧಾನಂತರ ಭಾರತದಿಂದ ಕೆಲವು 'ಪ್ರತಿನಿಧಿ'ಗಳನ್ನು ಜನಿವಾ ಪರಿಷತ್ತಿಗೆ ಒಯ್ದು ಶಾಂತಿ ಒಪ್ಪಂದಕ್ಕೆ ಸಹಿಮಾಡಿಸಲಾಯಿತು. ಸ್ವಲ್ಪ ಸಮಯದಲ್ಲೇ ಲಂಡನಿನಿಂದ ಘೋಷಣೆಯೊಂದು ಹೊರಟಿತು. 'ಜನಿವಾದಲ್ಲಿ ನಡೆಯುವ ಪರ್ಯಾಲೋಚನೆಗಳು ಎರಡು ಸ್ವತಂತ್ರ ದೇಶಗಳ ನಡುವೆಯಲ್ಲದೆ ಒಂದು ಸ್ವತಂತ್ರ ಮತ್ತೊಂದು ಪಾರತಂತ್ರ ದೇಶಗಳೊಳಗಲ್ಲ' ವಿದೇಶಶಾಂಗ ವ್ಯವಹಾರ ಖಾತೆಯ ಅಧಿಕಾರಿಗಳು ಉಪಯೋಗಿಸಿದ ಭಾಷೆಯದು. ಈಗಿನ ಅಧಿಕಾರಿಗಳಾದ ಸರ್ ಒಲಾಫ್‌ಕೆರೊ ಅವರು "ನೀವು ಯುದ್ಧದಲ್ಲಿ ನಮ್ಮೊಡನೆ ಸಹಕರಿಸಲಿಲ್ಲ. ಆದುದರಿಂದ ನೀವು ನಮ್ಮ ಪಾಲುಗಾರರಾಗಲು ಅರ್ಹರಲ್ಲ" ಎಂದು ಹೇಳಿರುವರು. ನಿಮಗೆ ಯುದ್ಧ ಮಾಡಬೇಕೆಂದು ಮನಸ್ಸಿದ್ದರೆ ನಿಮ್ಮ ದೇಶದಿಂದಲೇ ಧನ ಸಂಗ್ರಹಿಸಿ ಯುದ್ಧ ಮಾಡಿರಿ. ಅದನ್ನು ನನ್ನಿಂದ ಕಿತ್ತುಕೊಂಡು ನಾನು ಆ ವಿಷಯ ಹೆಮ್ಮೆಪಡಬೇಕೆಂದು ನಿರೀಕ್ಷಿಸಬೇಡಿರಿ. ಚರ್ಚಿಲ್ಲರ ವಿಜಯಸಂದೇಶವು ನಿಮ್ಮ ಸ್ವಾತಂತ್ರ್ಯಕ್ಕಾಗಿ ಮತ್ತು ನಮ್ಮ ಗುಲಾಮಗಿರಿಗಾಗಿರುತ್ತದೆ. ಮಾನವರೇ ನೀವ್ಯಾರು ಹೆಮ್ಮೆಪಟ್ಟುಕೊಳ್ಳುವಂತಹ ವಿಜಯ ಸಂದೇಶವಲ್ಲವದು. ಮೊನ್ನೆಯ ಬಿ. ಬಿ. ಸಿ. ರೇಡಿಯೋದಲ್ಲಿ ಬರ್ಲಿನ್ ನಗರವು ಪರಿಶುದ್ಧವಾಗಲು ಉರಿಯುತ್ತಿದೆ ಎಂದು ಸಾರಲಾಗಿತ್ತು. ಇಂಗ್ಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸಲು ಪ್ರಯತ್ನಿಸಿದ ಪಾಪಕ್ಕಾಗಿ ಬರ್ಲಿನು ಪರಿಶುದ್ಧವಾಗ ಬೇಕಾಗಿದ್ದರೆ, ಇಂಗ್ಲೆಂಡು ಅಂತಹ ಅನೇಕ ಪಾಪಗಳಿಗಾಗಿ ಪರಿಶುದ್ಧತೆ ಹೊಂದಬೇಕಾಗುವುದು. ಪಶ್ಚಾತ್ತಾಪವು ಕಾರ್ಯರೂಪದಲ್ಲಿ ತೋರಿಸುವ ಕಾಲವು ಬಂದಿದೆ ಎಂದು ನಾನು ನಂಬಿದ್ದೇನೆ. ನಮ್ಮ ಈ ದೇಶದ ವ್ಯವಹಾರವನ್ನು ನಾವೂ ಮತ್ತು ನಮ್ಮ ದೇಶದ ಪ್ರತಿನಿಧಿಗಳೂ ಚಲಾಯಿಸಲೆಂದೇ ನಮ್ಮ ಹೆಬ್ಬಯಕೆ.

ಭಾರತದ "ರಾಜಧಾನಿ" ಸೇವಾಗ್ರಾಮ

ಸ್ವರಾಜ್ಯ ಸಾಧನೆಯ ಕೇಂದ್ರ ಶಿಬಿರ

ಇತಿಹಾಸದ ಅತೀ ದೊಡ್ಡ ಸಾಮ್ರಾಜ್ಯದೊಡನೆ ಹೋರಾಟ

ಗ್ರಾಮರಾಜ್ಯದಲ್ಲಿ ಗಾಂಧಿ—ಮತ್ತವರ ಸಂಸಾರ

"ಈಗ ಬೊಂಬ್ಯಾಯಲ್ಲಿರುವ ಮಹಾತ್ಮರು ಮತ್ತೆ ಕೆಲವೇ ದಿನಗಳಲ್ಲಿ ಎರಡು ತಿಂಗಳ ಸೆಕೆಕಾಲದ ವಿಶ್ರಾಂತಿಗಾಗಿ ಸಂಚವಟಿ ಇಲ್ಲವೆ ಪಂಚಗನಿಗೆ ತೆರಳಬಹುದು. ಗ್ರಾಮರಾಜ್ಯದ ಅನಭಿಶಕ್ತ 'ರಾಜನಿಗೆ' ತನ್ನ ಕಚೇರಿಯ ಅನುಮತಿ ಪಡೆಯಬೇಕೊ ಇಲ್ಲವೊ ನನಗೆ ತಿಳಿದಿಲ್ಲ. ಆದರೆ ಒಂದುಸಲಕ್ಕೆ ಬೆಂದು ಬಿರಿಯುವ ಆ ವಾರ್ಧಾಪುರಿಯಿಂದ ಹೊರಬಿದ್ದರೆ ಗಾಂಧಿ ಬಳಗದವರೆಲ್ಲರಿಗೂ ಕೊಂಚ ಆನಂದವಾಗದಿರದು. ಮತ್ತೆ ಒಂದು ಯುಗಕ್ಕೆ ಅವರು ಪುನಃ ಆ ಉಷ್ಣ 'ವಲಯ'ಕ್ಕೆ ಹಿಂತಿರುಗಲು ಬಯಸಲಾರರು" ಹೀಗೆಂದು ಜವಾಹರಲಾಲರ ನೇಶನಲ್ ಹೆರಾಲ್ಡ್ ಪತ್ರಿಕೆಯ ಸಂಪಾದಕರಾದ ಶ್ರೀ. ಕೆ. ರಾಮರಾಯರು ಒಂದು ಲೇಖನದಲ್ಲಿ ಬರೆಯುತ್ತಾರೆ: 'ಕಾಗದ ಕೊರತೆ'ಯಿಂದ ಕೇಂದ್ರ ಸರಕಾರದವರು ಆ ಪತ್ರಿಕೆಯನ್ನು ನಿಲ್ಲಿಸಿರುವುದರಿಂದ ಶ್ರೀ. ರಾಯರು ಸೇವಾಗ್ರಾಮದಲ್ಲಿ ಗಾಂಧಿ ಚಟುವಟಿಕೆಗಳನ್ನಭ್ಯಸಿಸುತ್ತಲಿದ್ದರು. ಅದರ ಕುರಿತು ಅವರು ಹೀಗೆ ಬರೆಯುತ್ತಾರೆ:

ಜೈಲಿನಿಂದ ಮಹಾತ್ಮರು ಹೊರಬಂದ ಹತ್ತು ತಿಂಗಳಲ್ಲಿ ದೇಶದ ಎಲ್ಲಾ ಪಕ್ಷದ ರಾಜಕೀಯ ಚಟುವಟಿಕೆಗಳಿಗೆ ಹೊಸ ಚಿಗುರು ಬಂದಿರುತ್ತದೆ. ಪ್ರಕಾಶದಂತೇ ಪ್ರತಿಬಿಂಬವಿರುವುದು. ಮಹಮ್ಮದ್‌ಅಲಿ ಜಿನ್ನರೂ ತಮ್ಮ ಪಾಕಿಸ್ಥಾನದ ಅನಾರೋಗ್ಯಕರ ಹಾಸಿಗೆಯ ಮೇಲಿಂದ ಲೀಗಿನ ಯಮಸ್ವರೂಪ ಮೃತ್ಯುವಾದ ಕೊಂಗ್ರೆಸಿನ ಮೇಲೆ ತಮ್ಮ ದಿನನಿತ್ಯದ ಅಭ್ಯಾಸದಂತೆ ದೋಷದೂಷಣೆಗಳ ಸುರಿಮಳೆಗೆರೆಯಲು ಮರೆಯಲಿಲ್ಲ. ಜಿನ್ನರು ತಮ್ಮಗಿಂತ ಶ್ರೇಷ್ಠ ವಿಖ್ಯಾತಿಯ ವಿರೋಧಿಗಳಿಗೆ ಕೊಡುವ ಅಭಿಮಾನಪೂರ್ವಕವಾದ ಶ್ಲಾಘನೆಯ ರೀತಿಯದು.

ಇತೀಹಾಸದ ಅತೀ ದೊಡ್ಡ ಸಾಮ್ರಾಜ್ಯದೊಡನೆ ಎಂಬತ್ತೈದು ರಾತ್ಲ ಭಾರದ ವ್ಯಕ್ತಿಯೊಬ್ಬನು ಹೋರಾಡುತಿದ್ದಾನೆಂದು ಓರ್ವ ಅಮೇರಿಕನ್ ಪತ್ರಿಕೋದ್ಯೋಮಿಯು ಗಾಂಧಿಯವರ ಕುರಿತು ವರ್ಣಿಸಿದ್ದನು. ಅದು ಸುಮಾರು ಹದಿನೈದು ವರ್ಷಗಳ ಹಿಂದಿನ ಮಾತು. ಇಂದು ಆ ವೃದ್ಧ ಶರೀರದಲ್ಲಿ ಇನ್ನೂ ಕೆಲವೊಂದು ರಾತ್ಲುಗಳು ಹೆಚ್ಚುಕಡಿಮೆಯಾಗಿರಬಹುದು. ಆದರೆ ಅದರೊಳಗೆ ಅಡಗಿಕೊಂಡಿರುವ ಆತ್ಮಬಲದ ತೂಕವು ಅಸಮಾನ ಭಾರದ್ದಿರುತ್ತದೆಂಬುದು ನಿಸ್ಸಂದೇಹ.

ವಾತಾವರಣದ ಶೀತೋಷ್ಣ ಪರಿಸ್ಥಿತಿಯಿಂದ ಉಷ್ಣಮಾಪಕ ಯಂತ್ರದಲ್ಲಿನ ದ್ರಾವಕದಲ್ಲಿ ಏರಿಳಿತಗಳುಂಟಾಗುವಂತೆ ಜೈಲಿನಲ್ಲಿದ್ದಾಗ ಮೂಟೆ ಪ್ರಮಾಣದಲ್ಲಿ ಬಾಕಿ ಉಳಿದ ಕೆಲಸವನ್ನು ಅವರು ತಮ್ಮ ತೀಕ್ಷ್ಣ ಆರೋಗ್ಯ ಪತ್ರಿಕ್ರಿಯಾಜ್ಞಾನದಿಂದ ವಿಶ್ರಾಂತಿ ಪಡಕೊಳ್ಳುವುದರ ಮೂಲಕ ಸರಿಪಡಿಸಿಕೊಂಡರು. ಆರೋಗ್ಯದ ಕುರಿತು ಅವರು ಇಷ್ಟೊಂದು ಆಸಕ್ತಿ ತೋರಿಸಲು ಕಾರಣವೂ ಇದೆ.

ಒಂದುಕಾಲು ಶತಮಾನದ ತನಕ ಬದುಕುವ ತಮ್ಮ ಬಯಕೆಯ ಕುರಿತು ಅವರು ಎಲ್ಲರೊಡನೆ ಹೇಳುತ್ತ ಬಂದಿದ್ದಾರೆ. ಹಾಗಾಗಲೆಂದೇ ನಮ್ಮೆಲ್ಲರ ಹೃತ್ಪೂರ್ವಕ ಪ್ರಾರ್ಥನೆ. **ಕಾರಣ ಆ ಅವಧಿಯೊಳಗೆ ಅವರು ನಮ್ಮನ್ನು ಸ್ವರಾಜ್ಯದ ಗುರಿಗೆ ಮುಟ್ಟಿಸುವರು**

(೮ನೇ ಟಕ್ಕೆ ಮುಂದುವರಿದಿದೆ)

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ದಿನವಹಿ ಉಪಯೋಗದ ಲೋಹದ ಪಾತ್ರಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಯಾಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ನಗರದಲ್ಲಿ ಸೊಳ್ಳೆಕಾಟ ನಿವಾರಣೆ

ಜಟ್ಕಾಸಾಡಿಗಳ ಮುಷ್ಕರ

ಲೋರಿ ಕಂಡಕ್ಟರನ ಶೋಚನೀಯ ಮರಣ

ಅವಲಕ್ಕಿ ಇಲ್ಲ—ವ್ಯಾಯಾಮ ಉಪಮಂದಿರ—ಹಿಂದೂಹೋಟೆಲಲ್ಲಿ ಹಿಂದುಗಳಿಗೆ ಅಪಮಾನ—ಕ್ರಿಕೆಟ್ ಆಟದ ಬಯಲು—ಸ್ಮಶಾನದಲ್ಲಿ ಸಮಾನತೆ

ಹಂಚಿನ ಮಜೂರ ಸಂಘದ ವಾರ್ಷಿಕ ಮಹಾಸಭೆಯೊಂದು ಕಳೆದ ತಾ. ೨೬ರಂದು ಮೈದಾನಿನಲ್ಲಿ ಶ್ರೀ. ಕೆ. ಕೆ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕೇರಳ ಕಿಸಾನ್ ಸಭಾಧ್ಯಕ್ಷ ಶ್ರೀ. ಇ. ಕಣ್ಣನ್ ಎಂ. ಎಲ್. ಎ. ಅವರು ಮಜೂರರ ಐಕ್ಯದ ಅವಶ್ಯಕತೆ ಕುರಿತು ಭಾಷಣಮಾಡಿದರು. ಮಜೂರರ ಆರ್ಥಿಕ ಪರಿಸ್ಥಿತಿಯನ್ನು ಕಾರ್ಖಾನೆ ಮಾಲಕರು ಸುಧಾರಿಸಬೇಕು, ಕೊಂಗ್ರೆಸು ಮಂತ್ರಿಮಂಡಳಿಗಳಾಗಬೇಕು ಮತ್ತು ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕು ಎಂಬ ಠರಾವುಗಳೂ ಆದುವು. ಮುಂದಿನ ವರ್ಷದ ಸಮಿತಿಗೆ ಶ್ರೀ।ಗಳಾದ ಎ. ಕೃಷ್ಣಶೆಟ್ಟಿ—ಅಧ್ಯಕ್ಷ; ಕೊರಗಪ್ಪ, ಸಾಮ್ಯುವೇಲ್ ಸೋನ್ಸ್ ಕಾ. ದರ್ಶಿಗಳು; ಶಾಂತಾರಾಮ ಪೈ-ಕೋಶಾಧ್ಯಕ್ಷ.

ಅಕ್ಕಿ ಮುಡಿ ತುಂಬಿದ 'ಸ್ಪೋರ್ಸಿನ ಲೋರಿ'ಯೊಂದು ಗೂಡ್ಸ್ ಆಫೀಸಿನ ಬಳಿಯಲ್ಲಿ ತಿರುಗುವಾಗ ಹಿಂದೆ ಮುಡಿಗಳ ಮೇಲೆ ಕೂತ ಓರ್ವ ಕ್ರೈಸ್ತಮತದ ಕಂಡಕ್ಟರನು ಎರಡು ಮುಡಿಗಳ ಸಮೇತ ತೆಗೆದೊಯ್ಯಲ್ಪಟ್ಟು ಹತ್ತಿರದ ಕಬ್ಬಿಣದ ಬೇಲಿಗೆ ಅಪ್ಪಳಿಸಲ್ಪಟ್ಟು ಶಿರ ಶರೀರಕ್ಕೂ ಘಾತ ಹೊಂದಿದುದರ ಪರಿಣಾಮವಾಗಿ ಅಲ್ಲೇ ಮೃತಪಟ್ಟನು. ಶವವು ಆಸ್ಪತ್ರೆಗೆ ಒಯ್ಯಲಾಯಿತು. ಭಾರದ ಹೊರೆಯನ್ನು ಒಯ್ಯುವಾಗ ವಾಹನಗಳು ತಿರುಗು ಮಾರ್ಗಗಳಲ್ಲಿ ಜಾಗ್ರತೆಯಿಂದ ತಿರುಗಿಸಿದರೆ ಅಪಘಡಗಳಿಗೆ ಆಸ್ಪದವಿರಲಾರದು.

ಕೆಲವು ದಿನಗಳ ಹಿಂದೆ ನಗರದ ಜಟ್ಕಾವಾಲರು ಮುಷ್ಕರ ಹಿಡಿದಿದ್ದರು. ನಗರದಲ್ಲಿ ಸುಮಾರು ೧೬೦ ಗಾಡಿಗಳಿರಬಹುದು. ಇವುಗಳಲ್ಲಿ ಸುಮಾರು ೧೩೦ ಕೆಲವು ಸಾಹುಕಾರರ ಸ್ವಂತ ಉಪಯೋಗದವು- ಅವಶ್ಯವಿಲ್ಲದಾಗ ಇವು ಬಾಡಿಗೆಗೆ ಹೋಗುವವು. ಮತ್ತೆ ೪೦ ಜಟ್ಕಾ ಓಡಿಸುವವರದೇ ಆಗಿವೆ. ಕುದುರೆಗಳನ್ನು ಸಾಕುವುದಕ್ಕೆ ವಿಪರೀತ ಖರ್ಚು ತಗಲುವುದೆಂದೂ, ಹಸಿಹುಲ್ಲು ಮಾರುವವರು ವಿಪರೀತ ಬೆಲೆ ಏರಿಸಿರುವರೆಂದೂ, ಹುರುಳಿ ಅಕ್ಕಿ ಹೊಟ್ಟುಗಳಿಗೂ ವಿಪರೀತ ಬೆಲೆ ಇರುವುದೆಂದೂ ಹೇಳಲಾಗಿದೆ. ಈಗಿನ ಜಟ್ಕಾಗಾಡಿ ಬಾಡಿಗೆ ನಿಯಂತ್ರಣದಿಂದಲೂ ಅವರಿಗೆ ಸ್ವಲ್ಪ ಅನಾನುಕೂಲತೆಯಾಗಿಯೂ ತಿಳಿದು ಬರುತ್ತದೆ. ಅಂತೂ ಅಧಿಕಾರಿಗಳು ಸಂಬಂಧಪಟ್ಟವರನ್ನು ಕರೆಸಿ ಪರ್ಯಾಲೋಚಿಸಿ ಸಂಕಷ್ಟಗಳಿದ್ದರೆ ನಿವಾರಣೆಮಾಡಲು ಪ್ರಯತ್ನಪಡಬಹುದು.

ಕೇರಳ ಕಿಸಾನ್ ಸಭೆಯ ಅಧ್ಯಕ್ಷರೂ ಎಂ. ಎಲ್. ಎ. ಗಳೂ ಆದ ಶ್ರೀ. ಇ. ಕಣ್ಣನ್ ಅವರು ಇಲ್ಲಿಯ ದೊಡ್ಡ ಹೋಟೆಲೊಂದಕ್ಕೆ ಉಪಹಾರಕ್ಕಾಗಿ ಹೋದಾಗ ಸದ್ರಿ ಹೋಟೇಲಿನವರು ಹರಿಜನರಾದ ಶ್ರೀಯುತರಿಗೆ ಗದರಿಸಿ ಅಪಮಾನ ಪಡಿಸಿದರೆಂದು ತಿಳಿಸಲು ವಿಷಾಧಿಸುತ್ತೇವೆ. ಸರ್ವಸಾಮಾನ್ಯವಾಗಿ ಉಪಹಾರ ಗೃಹಗಳು ಸಾರ್ವಜನಿಕ ಸಂಸ್ಥೆಗಳು. ಸಂಸ್ಕೃತಿಯಲ್ಲೂ, ಶಿಕ್ಷಣದಲ್ಲೂ ಮುಂದುವರಿದ ಇಲ್ಲಿಯವರು ಇಂತಹ ಕ್ಷುದ್ರ ಧೋರಣೆಗೆ ಆಸ್ಪದ ಕೊಡಬಾರದು. ಹಿಂದೂ ಉಪಹಾರ ಗೃಹಗಳಲ್ಲಿ ಹಿಂದೂಗಳಿಗೆ ಪ್ರವೇಶವಿಲ್ಲದಿರುವುದು ಸೋಜಿಗದ ಸಂಗತಿ. ಇತರ ಹೋಟೇಲುಗಳು ಮೇಲಿನವರ ಆದರ್ಶವನ್ನು ಅನುಸರಿಸಬಾರದೆಂದು ನಮ್ಮ ವಿನಂತಿ.

ನಗರದ ಹಸಿಹುಲ್ಲು ಮಾರುವವರು ತಮ್ಮ ಸಂಕಷ್ಟನಿವಾರಣೆ ಪ್ರಯತ್ನಗಳಿಗಾಗಿ ೧೬೫ ಮಂದಿ ಸದಸ್ಯರುಳ್ಳ ಒಂದು ಸಂಘವನ್ನು ಸ್ಥಾಪಿಸಿಕೊಂಡ ಸುದ್ದಿಯು ಶ್ಲಾಘನೀಯವಾದುದು. ದೀನರಾದ ಇವರಿಗೆ ನಾಗರೀಕರು ಹೆಚ್ಚೆಚ್ಚಿನ ಸಹಾನುಭೂತಿ ಸಹಕಾರ ನೀಡಬೇಕು.

ಮದ್ರಾಸ್ ಸರಕಾರದವರು ಪ್ರಾಂತ್ಯದ ಅನೇಕ ಕೇಂದ್ರಗಳಲ್ಲಿ ಜಿಲ್ಲಾ ಕೈಗಾರಿಕೆ ಮೇಲ್ತನಿನೋಡಿಕೊಳ್ಳುವ ಅಧಿಕಾರಿಗಳನ್ನು ನೇಮಿಸಿರುವರು. ನಮ್ಮ ಮತ್ತು ಮಲಬಾರ್ ಜಿಲ್ಲೆಗೆ ಶ್ರೀ. ಎಸ್. ದತ್ತಾತ್ರೇಯ ಅವರು ಅಧಿಕಾರಿಗಳು-ಸಣ್ಣ ದೊಡ್ಡ ಎಲ್ಲಾ ಕೈಗಾರಿಕೆಯವರು ತಮ್ಮ ಅವಶ್ಯಕತೆಯ ಕಬ್ಬಿಣ, ಉಕ್ಕು ಮತ್ತಿತರ ವಸ್ತು ಉಪಕರಣಗಳಿಗಾಗಿ ಸದ್ರಿ ಆಫೀಸರರ ಕಛೇರಿಗೆ ('ದ್ವಾರಕಾ' ಇವೆಸ್ಸ್ ರೋಡ್ ಕೆಲಿಕಟ್,) ಬರಕೊಳ್ಳಬಹುದು.

ತಾ. ೩೧ರಂದು ಸ್ಥಳೀಯ ಗವರ್ನಮೆಂಟ್ ಕೋಲೇಜಿನಲ್ಲಿ ಮದ್ರಾಸ್ ಸೆಕ್ರೆಟೇರಿಯಟ್ ಪಾರ್ಟಿಯವರು 'ಆಗ್ರಹ' ಎಂಬ ಕನ್ನಡ ನಾಟಕವೊಂದನ್ನು ಹಾಡಿದರು. ಮಾನ್ಯ ಕಲೆಕ್ಟರರು ಅಂದಿನ ಅಧ್ಯಕ್ಷತೆವಹಿಸಿದ್ದು ಕಿಕ್ಕಿರಿದ ಪ್ರೇಕ್ಷಕವರ್ಗವಿತ್ತು. ಸುಮಾರು ಆರು ಸಾವಿರ ರೂಪ್ಯಾ ಸಂಗ್ರಹವಾಗಿದ್ದು ಅದರಲ್ಲಿ ಸ್ವಲ್ಪ ಅಂಶವು ಯುದ್ಧ ನಿಧಿಗೂ, ಸ್ವಲ್ಪ ಅಂಶ ರಾಮಕೃಷ್ಣ ಮಿಶನಿಗೂ ಕೊಡಲಾಗುವುದೆಂದು ತಿಳಿದು ಬಂದಿದೆ. ಶ್ರೀ. ಬಾಬು ಶೆಟ್ಟಿ ಮತ್ತವರ ಧರ್ಮಪತ್ನಿಯವರು ಕ್ರಮವಾಗಿ ಭೀಮ ಮತ್ತು ದ್ರೌಪದಿಯ ಪಾತ್ರವಹಿಸಿದ್ದರು.

ಬೋಳಾರದಲ್ಲಿನ ಶ್ರೀ. ರಾಮಮಂದಿರದಲ್ಲಿ ಇದೇ ತಾ. ೧೩ರಿಂದ ೨೧ರ ತನಕ ರಾಮಜನ್ಮೋತ್ಸವವು ಜರಗಿಸಲಾಗುವುದು. ರಾಮಾಯಣ ವಾಚಕ ಭಜನೆ ಪೂಜೆ ಇತ್ಯಾದಿಗಳ ಕಾರ್ಯಕ್ರಮಗಳಿವೆ. ಇಂತಹ ಉತ್ಸಾಹಗಳು ಹೆಚ್ಚಲಿ.

ಯುದ್ಧ ಶಿಪಾಯಿಗಳ ಸುಮಾರು ೨೦೦ ಕುಟುಂಬಗಳ ೫೦೦ ಸ್ತ್ರೀಪುರುಷ ಮಕ್ಕಳು-ಕುಲಶೇಖರಲ್ಲಿ ತಾ. ೧ರಂದು ನಡೆದ ಸತ್ಕಾರ ಕೂಟಕ್ಕೆ ನೆರೆದಿದ್ದರು. ತುಳು, ಕೊಂಕಣಿ ಮತ್ತು ಕನ್ನಡ ಭಾಷಣಗಳಾದವು.

ಕಳೆದ ೧ರಂದು ಸ್ಥಳೀಯ ಸೆಂಟ್ರಲ್ ಟೋಕಿಸ್ ಮಂದಿರದಲ್ಲಿ ರಾತ್ರೆ ೧೦ಕ್ಕೆ ಬರೋಡ ಸಂಗೀತಗಾರ ನಿಸ್ಸಾರ್ ಹುಸೇನರ ಗಾಯನ ಕಛೇರಿ ಇತ್ತು. ಪ್ರಮುಖ ಸಂಗೀತಾಭಿಮಾನಿಗಳು ನೆರೆದಿದ್ದರು. ಮಂಗಳೂರಿನ ಶ್ರೀ. ಎಚ್. ತಾರಾನಾಥರಾಯರು ತೃಪ್ತಿಕರವಾಗಿ ತಬಲಾ ವಾದನ ಮಾಡಿದರು. ನಗರದ ಸಂಗೀತ ಶಾಲೆಗಳಿಗೆ ಯೋಗ್ಯ ಪ್ರೋತ್ಸಾಹ, ಸಹಾಯಗಳನ್ನು ಸಂಗೀತಗಾರ ಆಹ್ವಾನಮಂಡಳಿಯವರು ಕೊಡಲು ಪ್ರಯತ್ನಿಸಬೇಕು.

ಆಹಾರವಸ್ತು ಮಾರಾಟದ ಸರಿಯಾದ ಲೆಕ್ಕಪತ್ರಗಳನ್ನಿಡದಕ್ಕೆ ಹೆಜ್ಮಾಡಿಯ ಶ್ರೀ. ಎಚ್. ಶ್ರೀನಿವಾಸ್ ಶ್ಯಾನುಭಾಗರೆಂಬವರಿಗೆ ೩ ತಿಂಗಳ ಸಜೆ, ೫೦೦ರೂ. ಜುಲ್ಮಾನೆ ಸ। ಡಿ। ಮೇಜಿಸ್ಟ್ರೇಟರು ವಿಧಿಸಿರುವರು. ಶ್ರೀಯುತರಿಗೆ 'ಬಿ' ಕ್ಲಾಸ್ ಸವಲತ್ತು ಕೊಡಲಾಗಿದೆ.

ಪಜೀರ್ ಗ್ರಾಮದ ಕುಞ ಬ್ಯಾರಿ ಎಂಬವರು ಹೆಚ್ಚಿನ ಬೆಲೆಗೆ ಅಕ್ಕಿ ಮಾರಿದರೆಂಬದಕ್ಕೆ ೩ ತಿಂಗಳ ಶಿಕ್ಷೆಗೂ ೩೦೦ರೂ. ಜುಲ್ಮಾನೆಗೂ ಒಳಗಾಗಿರುವರು.

ಅವಲಕ್ಕಿಯನ್ನು ರೇಶನ್ ಪದ್ದತಿಯಿಂದ ಪ್ರತ್ಯೇಕಿಸಿ ಅದನ್ನು ತಯಾರಿಸುವರೆ ನಿರಾತಂಕವಾಗಿ ಬತ್ತ ಪೂರೈಸಬೇಕೆಂಬ ನಗರ ಸಭೆಯವರ ಸೂಚನೆಯನ್ನು 'ಅದು ಸಾಧ್ಯವಿಲ್ಲ'ವೆಂದು ಸರಕಾರದ ಉತ್ತರ ಬಂದಿದೆಯಾಗಿಯೂ, ಮತ್ತು ಹಂಪನಕಟ್ಟೆಯಲ್ಲಿ ಬಸ್‌ಸ್ಟೆಂಡ್ ಕಟ್ಟಿಸುವರೆ ಬೇಕಾಗುವ ಸಿಮೆಂಟ್ ಮುಂತಾದವುಗಳನ್ನು ಒದಗಿಸಿಕೊಡುವುದಾಗಿಯೂ ತಿಳಿಸಲಾಗಿದೆ. ಅಗ್ಗದ ಆಹಾರ ವಸ್ತುಗಳಲ್ಲಿ ಒಂದಾಗಿರುವ ಅವಲಕ್ಕಿ ಚರಮುರಿಗಳನ್ನೂ ತಯಾರಿಸಲು ಅನುಮತಿಕೊಟ್ಟರೆ ಅವಕ್ಕೆ ಬೇಕಾಗುವ ಬತ್ತದಿಂದ ಮುಖ್ಯ ಆಹಾರವಸ್ತು ಪೂರೈಕೆಗೆ ಅನಾನುಕೂಲವಾಗುವುದಾದರೂ ನಿರ್ದಿಷ್ಟ ಒಂದು ಕಮ್ಮಿ ಪ್ರಮಾಣದಲ್ಲಾದರೂ ಅದರ ತಯಾರಿಕೆಗೆ ಸಹಾಯಮಾಡುವುದನ್ನು ಆ ವೃತ್ತಿಯಿಂದ ಜೀವನಮಾಡುತಿದ್ದವರು ಈಗ ನಿರುದ್ಯೋಗಿಗಳಾಗಿದ್ದಾರೆಂಬ ದೃಷ್ಟಿಯಿಂದಾದರೂ ಸಹಾನುಭೂತಿಯಿಂದ ಕಾಣಬಹುದು.

ನಾಗರೀಕರಿಗೆ ರೇಶನ್ ಪಡಿಯಲ್ಲಿ ಒಂದಂಶದಷ್ಟು ಬತ್ತವನ್ನು ಪೂರೈಸಿದರೆ ಅವರು ಸ್ವತಂತ್ರವಾಗಿ ಅವಲಕ್ಕಿ ಮಾಡಿಸಿಕೊಳ್ಳಲಿಕ್ಕಾಗುವುದೆಂದೂ ಓರ್ವ ಬಾತ್ಮಿದಾರರು ಅಭಿಪ್ರಾಯಪಡುತ್ತಾರೆ.

ಸ್ಥಳೀಯ ಮಾರ್ಕೇಟು ಸ್ಥಳಗಳ ಮೇಲ್ತನಿಗಾಗಿ ಓರ್ವ ಅಧಿಕಾರಿಯನ್ನು ನಿರ್ಮಿಸಬೇಕೆಂದು ಸ್ಥಳೀಯ ಸಂಸ್ಥೆಗಳ ಇಲಾಖೆಯಿಂದ ಬಂದ ಸೂಚನೆಯನ್ನು ನಿರ್ವಹಿಸಲು ನಗರ ಸಭೆಯವರು ಒಪ್ಪಿರುವರು. ಅಂತೇ ಸದ್ಯದಲ್ಲಿ ಓರ್ವ ಮಾರ್ಕೇಟು ಸುಪರಿಂಟೆಂಡೆಂಟರೂ ನೇಮಕ ಹೊಂದಲಿರುವರು.

ಫ್ಲೆಂಟ್ಲೆಂಡ್ ಪೇಟಾದ ಹಳೇ ಕೊರಂಟ್ಯಾನ್ ಬಳಿಯ ಮೈದಾನನ್ನು ಕ್ರಿಕೆಟ್ ಆಟದ ಬಯಲನ್ನಾಗಿ ಮಾಡಲು ನಗರಸಭೆಯವರು ರೂ. ೧೫೦೦ರನ್ನು ಮಂಜೂರಾತಿ ಮಾಡಿರುವರು. ಕ್ರಿಕೆಟಿಗೆ ಸೆಂಟ್ರಲ್ ಮೈದಾನೇ ಯೋಗ್ಯ ಸ್ಥಳ. ಅದು ಹಂಚಿನ ದಾಸ್ತಾನು ಇಡಲು ಉಪಯೋಗಿಸಲ್ಪಡುತ್ತದೆ. ಪೆಂಟ್ಲೆಂಡ್ ಮೈದಾನಿನಲ್ಲೂ ವರ್ಷದ ಅನೇಕ ತಿಂಗಳುಗಳಲ್ಲಿ ಮಿಲಿಟರಿ ಲೋರಿಗಳು ತಂಗುತ್ತವೆ. ಖರ್ಚುಮಾಡಿಯೂ ಉಪಯೋಗಕ್ಕೆ ಬೀಳದಿದ್ದಲ್ಲಿ ಮತ್ತೆ ವಿಷಾಧಿಸಬೇಕಾಗುವುದು.

ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೂ ಡಿ. ಸಿ. ಮಿಶನಿಗೂ ಕ್ರಮವಾಗಿ ೫೦೦ ಮತ್ತು ೧೫೦ರೂ.ಗಳನ್ನು ಕೊಡಲು ನಗರಸಭೆಯವರು ಮಂಜೂರಾತಿಮಾಡಿರುವರು. ಹರಿಜನ ಬಾಂಧವರ ಉದ್ಧಾರಕ್ಕೆ ಇನ್ನಷ್ಟು ಹೆಚ್ಚುಕೊಟ್ಟರೂ ಹೆಚ್ಚಾಗುತ್ತಿರಲಿಲ್ಲ.

ನಗರದಲ್ಲಿ ನುಸಿಗಳ ಕಾಟವು ಬಹಳಮಟ್ಟಿಗೆ ಕಡಿಮೆಯಾಗಬಹುದೆಂದು ಭರವಸೆ ತಾಳಬಹುದು. ಕಾರಣ ನಗರಸಭೆಯವರು ಆ ಕಾರ್ಯಕ್ಕಾಗಿ ಓರ್ವ ತಜ್ಞರನ್ನು ತರಿಸಿ ನಗರಸಭೆಯವರು ಸೊಳ್ಳೆ ಮತ್ತು ಮಲೇರಿಯಾ ಪೀಡೆಯನ್ನು ನಿವಾರಿಸಲು ಪ್ರಯತ್ನಮಾಡಲು ನಿರ್ಧರಿಸಿದ್ದು ಸ್ತುತ್ಯ.

ಈಚೆಗೆ ಬಹಳವಾಗಿ ಹರಡಿದ ಆನೆಕಾಲಿನ ಜಾಡ್ಯಕ್ಕೂ ತಕ್ಕ ಪರಿಹಾರವನ್ನು ಸಾಧಿಸಿ ಪ್ರಚಾರಿಸುವುದು ಒಳಿತು. ನಾಗರೀಕರೂ ತಮ್ಮ ವಸತಿ ವಠಾರಗಳಲ್ಲಿ ಹೆಚ್ಚಿನ ನಿರ್ಮಲತ್ವವನ್ನು ಇಡಲು ಪ್ರಯತ್ನಿಸಿದರೆ ಮಹಾಭಾಗ್ಯವಾಗಿರುವ ಆರೋಗ್ಯಲಾಭವು ಅಭಿವೃದ್ಧಿಗೊಳ್ಳುವುದು.

ಸ್ಥಳೀಯ ಹಿಂದೂ ಸ್ಮಶಾನದಲ್ಲಿ ದಹನ ಮತ್ತು ದಫನ ಕಾರ್ಯಗಳನ್ನು ಹಿಂದೂಗಳಾದವರೆಲ್ಲರೂ ಜಾತಿ ಭೇದವಿಲ್ಲದೆ ನಡೆಸಬಹುದೆಂಬ ಸೂಚನೆಗೆ ನಗರಸಭೆಯವರು ಮಂಜೂರಾತಿ ಕೊಟ್ಟಿರುವುದು ಶ್ಲಾಘನೀಯ. ಮೃತ್ಯುವು ಸಮಾನತೆಯನ್ನುಂಟುಮಾಡುವಂತಾದ್ದು ಎಂಬ ತತ್ವವು ಬಹಳಮಟ್ಟಿಗೆ ಸ್ವೀಕರಿಸಿದ ಹಾಗಾಯಿತು.

ಸಂಕ್ಷೇಪ ಸುದ್ದಿ ಸಾರ

ಚಿಮೂರ ಅಷ್ಟಿ ಕೈದಿಗಳಿಗೆ ಚಕ್ರವರ್ತಿಗಳು ದಯೆ ತೋರಿಸಲು ನಿರಾಕರಿಸಿದರು. 'ಉದ್ರೇಕಗೊಂಡ ಜನತೆಯಿಂದ ಮಾಡಲ್ಪಟ್ಟ ಅಕೃತ್ಯಕ್ಕಾಗಿ ಗಲ್ಲಕ್ಕೇರಿಸುವುದು ಕಾನೂನಿನ ಹೆಸರಲ್ಲಿ ಮಾಡುವ ಕೊಲೆಯೇ ಸರಿ' ಎಂಬರ್ಥದ ಹೇಳಿಕೆಯನ್ನು ಕೊಡುತ್ತಾ ಮಹಾತ್ಮರು ಸದ್ಯದಲ್ಲೇ ಫಾಸಿಯಾಗಲಿರುವ ಆ ಕೈದಿಗಳಿಗೆ ಮಾಫಿ ಸಿಗಬೇಕೆಂದು ಹಾರೈಸಿರುವರು.

° ° ° °

'ಶಾಸನ ಸಭೆಗಳ ಬಹು ಸಂಖ್ಯಾಕಪಕ್ಷದ ನಾಯಕರು ಪ್ರಧಾನಿಗಳಾಗಿ ಎಲ್ಲಾ ಅಲ್ಪ ಸಂಖ್ಯಾತರ ಕಡೆಯಿಂದ ಒರ್ವೋರ್ವ ಮಂತ್ರಿಗಳನ್ನು ಚುನಾಯಿಸಬೇಕು. ಇಂತಹ ಸಂಯುಕ್ತ ರಾಷ್ಟ್ರೀ ಸರಕಾರ ಕೇಂದ್ರದಲ್ಲೂ, ಪ್ರಾಂತ್ಯಗಳಲ್ಲೂ ಸ್ಥಾಪಿಸಲ್ಪಡಬೇಕು.' ಎಂಬ ಸಾರಾಂಶವಿರುವ ಸೂಚನೆಯನ್ನು ಸಪ್ರು ಕಮಿಟಿಯವರು ಲಂಡನಿನಲ್ಲಿರುವ ವ್ಯಾಸ್‌ರಾಯ್ ವೇವಲ್ಲರಿಗೆ ತಂತಿ ಕಳುಹಿಸಿರುವರು.

° ° ° °

ಪೋಲೆಂಡಿನ ವಿಚಾರದಲ್ಲಿ ಸೆನ್‌ಫ್ರೆನ್ಸಿಸ್ಕೊದಲ್ಲಿ ಸೇರಲಿರುವ ತ್ರಿಮೂರ್ತಿಗಳಲ್ಲಿ ಭೇದಾಭಿಪ್ರಾಯ ಉಂಟಾಗಿದೆಯೆಂದೂ, ಪರಿಣಾಮವಾಗಿ ರಷ್ಯವು ಸದ್ರಿ ಪರಿಷತ್ತಿಗೆ ಹಾಜರಾಗುವುದು ಅಸಂಭವವೆಂದೂ, ಇಲ್ಲವೆ ಅದು ಮುಂದುವರಿಯಬಹುದೆಂದೂ ತಿಳಿದು ಬರುತ್ತದೆ. ವಾರ್ಸೊದಲ್ಲಿ ರಷ್ಯನರಿಂದ ಸ್ಥಾಪಿಸಲ್ಪಟ್ಟ ಪೋಲಿಶ್ ಸರಕಾರದ ಪ್ರತಿನಿಧಿಗಳನ್ನು ಸ್ಟೇಲಿನರು ಫ್ರಿಸ್ಕೊ ಪರಿಷತ್ತಿಗೆ ಆಹ್ವಾನಿಸಿದ್ದನ್ನು ಅಮೇರಿಕನ್ ಸರಕಾರದವರು ಕಡುವಾಗಿ ವಿರೋಧಿಸಿರುವರು.

ವೋಟು ಕೊಡುವ ವಿಚಾರದಲ್ಲಿಯೂ ಇವರೊಳಗೆ ಭಿನ್ನಾಭಿಪ್ರಾಯ ಉಂಟಾಗಿದೆಯಾಗಿಯೂ ತಿಳಿದು ಬರುತ್ತದೆ.

° ° ° °

ಜರ್ಮನಿಯ ಕೊನೆಯ ಅಂಕವು ಸಮಾಪಿಸಿದಂತೆ ವರದಿಗಳು ಬರುತ್ತಿವೆ. ನಾಜೀ ಸೇನಾಪತಿಗಳು ಹಿಟ್ಲರ್‌ಕೂಟವನ್ನು ಹಿಡಿದು ಮಿತ್ರರಿಗೆ ಒಪ್ಪಿಸಿ ರಾಜಿ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಿದರೆಂದೂ, ಹಿಟ್ಲರನು ಅದಕ್ಕೆ ಒಪ್ಪಲಿಲ್ಲವೆಂದೂ ಹೇಳಲಾಗಿದೆ. ಯುದ್ಧ ಮುಂದರಿಸಲು ಸಾಧ್ಯವಿಲ್ಲವೆಂದೂ ಜರ್ಮನ್ ಸೇನಾನಿಗಳು ಸ್ಪಷ್ಟ ತಿಳಿಸಿರುವರೆಂದು ವದಂತಿ. ಸೋತ ಮೇಲೂ ಯುದ್ಧ ಮಾಡಲು ಹಿಟ್ಲರ್‌ಮಂಡಳಿಯವರು ಯೋಜಿಸಿರುವುದಾಗಿಯೂ ತಿಳಿದು ಬರುತ್ತದೆ. ಎಪ್ರೀಲ್ ಅಖೇರಿಯೊಳಗೆ ಯುದ್ಧ ಕೊನೆಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

° ° ° °

ಕೆಂಬ್ರಿಜ್ ವಿಶ್ವವಿದ್ಯಾಲಯದ ಭಾರತೀಯ ಮತ್ತು ಆಂಗ್ಲ ವಿಧ್ಯಾರ್ಥಿಗಳು ಒಂದು ಸಭೆಯಲ್ಲಿ 'ಭಾರತೀಯ ಮುಖಂಡರನ್ನು ಕೂಡಲೇ ಬಿಡುಗಡೆ ಮಾಡಬೇಕು?' ಎಂದು ಠರಾವು ಮಾಡಿರುವರು.

° ° ° °

ಬಿಡುಗಡೆ ಮಾಡಲ್ಪಟ್ಟದ್ದರಿಂದ ಅಬ್ದುಲ್ ಗಫೂರ್ ಖಾನರಿಗೆ ತುಂಬಾ ಅನಾನುಕೂಲವಾಗಿದೆ, ಜೈಲಿನಲ್ಲಿ ಅವರು ತಮ್ಮ ಆತ್ಮಕಥೆಯನ್ನು ಬರೆದಿದ್ದು ಅದನ್ನು ಸಂಪೂರ್ಣಗೊಳಿಸಲು ಇನ್ನೂ ಸ್ವಲ್ಪ ಉಳಿದಿದೆಯಂತೆ.

ಮಾಜಿ ಚಕ್ರವರ್ತಿಗಳು ನಿಗ್ರೋಗಳ ಸಹಾಯಕ್ಕೆ

ಕೆಲವೇ ವರ್ಷಗಳ ಹಿಂದೆ 'ಸೂರ್ಯ ನಸ್ತಮಿಸದ ಬ್ರಿಟಿಷ್' ಸಾಮ್ರಾಜ್ಯ ಸಾಮ್ರಾಟರಾಗಿದ್ದು ಹನ್ನೊಂದು ತಿಂಗಳಲ್ಲಿ ಜನಪ್ರಿಯರಾಗಿ ಆಳಿ ಮತ್ತೆ ತನ್ನ 'ಹೃದಯದ ಪ್ರೀತಿಯ' ಸಾಮಾನ್ಯ ಮಹಿಳೆಯೊಬ್ಬಳ ಪ್ರೇಮಕ್ಕಾಗಿ ತನ್ನ ಚಕ್ರಾಧಿಪತ್ಯದ ಪಟ್ಟವನ್ನು ತೊರೆದು ಕೊನೆಗೆ ಬ್ರಿಟಿಷರಿಗೆ ಸೇರಿದ ಪ್ರಶಾಂತವಾದ ಬಹಮಾ ಎಂಬ ಫೆಸಿಫಿಕ್ ದ್ವೀಪವೊಂದರಲ್ಲಿ ಗವರ್ನರರಾಗಿ ಐದು ವರ್ಷಗಳ ಆಳಿಕೊಂಡಿದ್ದ ಮಾಜಿ ಎಂಟನೇ ಎಡ್ವರ್ಡರಾಗಿದ್ದ ಎಂಡ್ಸರಿನ ಡ್ಯೂಕರು ತಮ್ಮ ಕೆಲಸಕ್ಕೆ ರಾಜಿನಾಮೆ ಇತ್ತರು.

ರಾಜಿನಾಮೆಗೆ ಕಾರಣವೆಂದರೆ ಅವರು ಅಲ್ಲಿನ ನಿಗ್ರೊ ಮತ್ತಿತರ ವರ್ಣ ಜನಾಂಗದ ಜನರಿಗೆ ತೋರಿಸಿದ ಸಹಾನುಭೂತಿ. ೨೫೦ ವರ್ಷಗಳ ಹಿಂದೆ ಕೆಲ ಬ್ರಿಟಿಷ್ ಜಮೀನ್ದಾರರು ಬಹಮಾ ದ್ವೀಪದಲ್ಲಿ ನೆಲೆನಿಂತು ನಿಗ್ರೋ ಗುಲಾಮರನ್ನು ಕೆಲಸಕ್ಕೆ ಹಚ್ಚಿ ತಮ್ಮ ಆಸ್ತಿಪಾಸ್ತಿಗಳನ್ನು ವ್ಯವಸಾಯಮಾಡಿ ತುಂಬಾ ಶ್ರೀಮಂತರಾದರು. ಮೊನ್ನೆ ಅಮೇರಿಕನ್ ಮಿಲಿಟರಿ ಕಂಟ್ರಾಕ್ಟರುಗಳು ಅಲ್ಲಿ ಬಂದು ಸೈನ್ಯಕ್ಕೆ ಬೇಕಾದ ಮರಮಟ್ಟುಗಳನ್ನೂ ಹಣ್ಣುಹಂಪಲುಗಳನ್ನೂ ಬೆಳೆಸಲು ನಿಗ್ರೋ ಕೆಲಸಗಾರರನ್ನೂ ಉದ್ಯಮಕ್ಕೆ ಹಚ್ಚಿ ಅವರಿಗೆ ಅಮೇರಿಕನ್ ಮಟ್ಟದ ಮಜೂರಿಯನ್ನು ಕೊಟ್ಟರು. ಇದು ಅಲ್ಲಿನ ಬ್ರಿಟಿಷ್ ಜಮೀನ್ದಾರರಿಗೆ ಸಹನೆಯಾಗದೆ ಅವರು ಪಿತೂರಿ ನಡೆಸಿದಾಗ ಭಯಂಕರ ದಂಗೆ ಲೂಟಿಗಳುಂಟಾದುವು. ನಿಗ್ರೋಗಳ ಪರಿಸ್ಥಿತಿಯನ್ನು ಸುಧಾರಿಸಲು ಅವಿಶ್ರಾಂತವಾಗಿ ದುಡಿದ ವಿಂಡ್ಸರರು ಬಿಳಿ ಓಡೆಯರ ಸೊಕ್ಕನ್ನು ಬಹಳಮಟ್ಟಿಗೆ ಮುರಿದರು. ಕೊನೆಗೆ ಮತ್ಸರಗೊಂಡ ಆ ಆಸ್ತಿವಂತರು ನಾನಾತರದ ಕಿರುಕುಳ ತೊಂದರೆಗಳಿಂದ ಡ್ಯೂಕರನ್ನು ಬೇಸರಗೊಳಿಸಲು ಆ ಮಾಜಿ ಸಾರ್ವಭೌಮ್ಮರು ಕೆಲಸಕ್ಕೆ ರಾಜಿನಾಮೆ ಇತ್ತರು. ಅಂತೂ ನಿಗ್ರೋ ಮಜೂರರ ಹೃದಯದಲ್ಲಿ ಅವರು ಅಮೋಘ ಪರಿಣಾಮನ್ನುಂಟುಮಾಡಿ ಕೀರ್ತಿಗೊಳಗಾಗಿದ್ದಾರೆ.

ಭಾರತ 'ರಾಜಧಾನಿ' ಸೇವಾಗ್ರಾಮ

(೬ನೇ ಪುಟದಿಂದ)

ಮಾತ್ರವಲ್ಲ ಸಮತಾವಾದದ ಕಡೆಗೂ ನಮ್ಮನ್ನು ಒಯ್ಯುವರು.

ಇನ್ನೊಂದು ಧೀರ್ಘಕಾಲ ಬದುಕಬೇಕೆಂಬ ಅವರ ಈ ಕಾಂಕ್ಷೆಯು ಬ್ರಿಟಿಷ್ ಸಾಮ್ರಾಜ್ಯಕ್ಕೇ ಧಕ್ಕೆವುಂಟುಮಾಡುವಂತಹದೆಂದು ನನಗೆ ಹೇಗೊ ಭಾಸವಾದಂತಾಗುತ್ತದೆ. ಯೋಗಿ ಮತ್ತು ಯೋಗಪುರುಷರಂತೆ ಅವರು ಉದ್ದೇಶಪೂರ್ವಕವಾಗಿ ತಮ್ಮ ಜೀವಮಾನ ಅವಧಿಯನ್ನು ಉದ್ದವಾಗಲು ಬಯಸುತ್ತಾರೆ. ಅಷ್ಟರಲ್ಲಿ ಸ್ವರಾಜ್ಯಕ್ಕೆ ವಿರೋಧಿಗಳಾದವರನ್ನು ಸಂಪೂರ್ಣ ಪರಿವರ್ತಿಸಿಕೊಂಡು ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ಕುರುಹುಗಳನ್ನೂ ನಾಮಾವಶೇಷಮಾಡಲು ಅವರು ಹಾರೈಸುತ್ತಾರೆ.

-ಮತ್ತೊಮ್ಮೆ ಸೇವಾಗ್ರಾಮದ ಸಾಧುಗಳು ತಮ್ಮ ಬಹುಮುಖದ ವ್ಯಕ್ತಿತ್ವವನ್ನು ಬೀರಿದ್ದಾರೆ. ಮಾಯಾದಂಡವನ್ನು ಹಿಡಕೊಂಡು ಈ ಚಿಕ್ಕ ಹಳ್ಳಿಯಲ್ಲಿ ಕೂತು ಅವರು ಭಾರತೀಯ ರಾಜಕೀಯ ದಿಗಂತವನ್ನು ಕೋಟೆ ಕಾವಲಿನ ಬೇಹುಗಾರನಂತೆ ಈಕ್ಷಿಸುತಿದ್ದಾರೆ. ಸಮಯ ಬಂದೊಡನೆ ತಮ್ಮ ಜನರಿಗೆ ಕಾರ್ಯಸಾಧನೆಯ ಕರೆಯ ಸಂಕೇತವನ್ನು ಕೊಡುವರು. ಅವರ ಕರೆ ಅದೇನು ಸಾಮಾನ್ಯವಾದುದಲ್ಲ. ಒಂದು ಕ್ಷಣದಲ್ಲಿ ಜಗತ್ತಿನ ಅತ್ಯದ್ಭುತವಾದ ಸ್ವಯಂಸೇವಕ ದಳವು ರಂಗಸ್ಥಳಕ್ಕೆ ಇಳಿಯುವುದು. ಶಾಂತಿಕಾಲದಲ್ಲಿ ರಚನಾತ್ಮಕ ಚಟುವಟಿಕೆಗಳಲ್ಲೂ, ವಿಪತ್ಕಾಲದಲ್ಲಿ ಆತ್ಮಸ್ಥೈರ್ಯದ ಕದನಕ್ಕೂ ಆ ಸೈನಿಕರು ಕ್ಷಣದ ಅವಧಿಯಲ್ಲಿ ಸಿದ್ಧರಾಗುವರು.

ಸ್ವರಾಜ್ಯಹೊಂದುವ ಕಾರ್ಯ

ಈ ರಚನಾತ್ಮಕ ಚಳವಳವು ಬರೀ ನಮ್ಮನ್ನು ಸ್ವಾವಲಂಭಿಗಳನ್ನಾಗಿ ಮಾಡುವುದು ಮಾತ್ರವಲ್ಲ ಸ್ವರಾಜ್ಯವನ್ನು ಪಡೆದ ಸಂದರ್ಭದಲ್ಲಿ ದೇಶವನ್ನು ಆಳಲು ಬೇಕಾದ ಆಡಳಿತ ನಿರ್ವಹಣದ ತರಬೇತಿಯನ್ನು ನಮಗೆ ಇದರಿಂದ ದೊರಕುವುದು.

ಕೊಂಗ್ರೆಸ್ಸನ್ನು ಬಿಟ್ಟರೆ ಇತರ ಎಲ್ಲಾ ರಾಜಕೀಯ ಸಂಸ್ಥೆಗಳು ಬರೀ ರಾಜಕೀಯ ಧ್ಯೇಯ ಸಾಧನೆಗಾಗಿ ಮಾತ್ರ ಶ್ರಮಿಸುವಂತಹುಗಳು. ಆದರೆ ಕೊಂಗ್ರೆಸ್ಸು ಬಹುವಿಧ ಚಟುವಟಿಕೆಗಳನ್ನು ಕೈಕೊಳ್ಳುವಂತಹದು.

ಈಗಿನ ಪರಿಸ್ಥಿತಿಯಲ್ಲಿ ಸೇವಾಗ್ರಾಮದ ರಾಜಕೀಯ ದೃಷ್ಟಿಕೋನವು ಯಾವ ಕಡೆ ಮಾಲಿದೆ? ಅದನ್ನು ಸರಳರೀತಿಯಲ್ಲಿ ತಿಳಿಸಬಹುದು: ರಾಜಕೀಯ ಕ್ಷೀರ ಪಾತ್ರೆಯೊಳಗಿನ ಕೆನೆಯನ್ನು ಬ್ರಿಟಿಷರು ಯಾವ ರೀತಿಯಲ್ಲಿ ನಾಶಮಾಡಿದರೂ, ರಾಜಕೀಯ ಜೀವನವನ್ನು ಯಾವ ನಿರ್ದಾಕ್ಷಿಣ್ಯಕಾಠಿಣ್ಯದಿಂದ ದಂಗುಬಡೆಯಲು ಸಾಧಿಸಿದರೂ, ಇತಿಹಾಸದ ಕಾಲಚಕ್ರವು ಅವರ ವಿರೋಧವಾಗಿಯೇ ತಿರುಗುತ್ತದೆ. ಅವರ ಅವಧಿಯಾಯಿತು. ಶೀಘ್ರದಲ್ಲಿ ಅವರು ತಾವು ಜೈಲಿನಲ್ಲಿಟ್ಟವರೊಡನೇ ರಾಜಿ ಒಪ್ಪಂದ ಮಾಡಿಕೊಳ್ಳಬೇಕಾಗುವುದು.

• ಕೊಂಗ್ರೆಸ್ಸಿನ ಭವಿಷ್ಯ

ಗಡಿನಾಡಿನಲ್ಲಿ ಮಂತ್ರಿಮಂಡಳ ರಚಿಸಲು ಒಂದು ತರದ ನಕಾರಾತ್ಮಕ ಸಮ್ಮತವನ್ನು ಅವರು ಕೊಟ್ಟಿದ್ದು ಬ್ರಿಟಿಷ್ ಸರಕಾರಕ್ಕೆ ಸ್ವಲ್ಪ ದಾರಿಮಾಡಿ ಕೊಟ್ಟಿರುವರು. ನಿರಾಶೆ ಸೋಲುಗಳ ಕಗ್ಗತ್ತಲಲ್ಲಿ ದಿಕ್ಕುಕಾಣದೆ ಬಳಲಿರುವ ಕೊಂಗ್ರೆಸಿಗರಿಗೆ ಪ್ರಕಾಶವಂತ ಸೂರ್ಯನು ನೆತ್ತಿಯ ಮೇಲೆ ಕಾಣಸಿಕೊಂಡಂತಾಗಿದೆ.

ಮುಸ್ಲಿಂ ಲೀಗ್ ಮತ್ತು ಅದರ ಸರ್ವಾಧಿಕಾರಿಗಳ ಅಂತ್ಯವು ಸಮೀಪಿಸಿದೆ ಎಂಬ ವಿಶ್ವಾಸವು ಎಲ್ಲಾ ಕಡೆಗಳಲ್ಲೂ ಬೇರೂರಿದೆ. ಲೀಗ್ ಪ್ರಾಂತ್ಯಗಳೆನಿಸಿಕೊಂಡ ಪ್ರದೇಶಗಳ ಗವರ್ನರರು ಅವರಿಗೆ ಬೇಕಾದ ಸವಲತ್ತುಗಳನ್ನು ಕೊಟ್ಟು ಕೊಟ್ಟು ದಣಿದಿರುವರು. ಅಸ್ವಚ್ಛವಾದ ಪಾತ್ರೆಯೊಳಗಿಂತ ಸ್ವಚ್ಛವಾದ ಪಾತ್ರೆಯೊಳಗೆ ನೀರು ಬೇಗ ಕುದಿಯುವುದೆಂದೇ ಕೊಂಗ್ರೆಸಿನ ನಂಬಿಕೆ.

ಲೀಗ್ ವಿರೋಧ ಮಂತ್ರಿಮಂಡಳಗಳು ಎಲ್ಲಾ ಪ್ರಾಂತ್ಯಗಳಲ್ಲಿ ಸ್ಥಾಪಿಸಲ್ಪಟ್ಟರೆ ಜಿನ್ನಾ ಸಾಹೇಬರಿಗೆ ಮನೋಭ್ರಾಂತಿ ಪ್ರಾರಂಭವಾಗದಿರದು. ಸದ್ಯದಲ್ಲೇ ಸರ್ ಸಪ್ರೂಗಳು ಅವರಿಗೆ ತಮ್ಮ ಸಮಿತಿಯ ಪರವಾಗಿ ಹೊಸ 'ಕಷಾಯ'ವೊಂದನ್ನು ಕೊಡಲಿದ್ದಾರೆ. ಅದು ಕಹಿಯಾಗಿಯೇ ತೋರುವುದಾದರೂ ಜಿನ್ನರು ಅದನ್ನು ನುಂಗದೆ ಉಪಾಯವಿಲ್ಲ.

ಗಡಿನಾಡು ಅಸ್ಸಾಮುಗಳನ್ನು ಜಿನ್ನರು ಕಳಕೊಂಡರು. ಸಿಂಧದ ರಾಜಕೀಯ ಕಟ್ಟಡವು ಮರಳಿನ ಪಂಚಾಂಗದ ಮೇಲೆ ನಿಂತಿದೆ. ಅಲ್ಲಿನ ರಾಜಕೀಯ ಪ್ರಹಾಹವು ಒಂದಲ್ಲ ಒಂದು ದಿನ ಉಕ್ಕೇರಿ ಅದು ಕುಸಿದು ಬೀಳದಿರದು. ಗುಲಾಮ್ ಹುಸೇನರು ಅದರಲ್ಲಿ ಖಂಡಿತ ಕೊಚ್ಚಿ ಹೋಗುವರು. ಪಂಜಾಬದ ಯೂನಿಯನಿಸ್ಟ್ ಪಕ್ಷದ ಆನೆಯು ಲೀಗ್ ಹುಲಿಯನ್ನು ಪ್ರಸಂಗಾವಧಾನತೆಯಿಂದ ಎದುರಿಸಿ ಸೋಲಿಸಿದೆ. ಬಂಗಾಲದಲ್ಲಿ ನಿಜಾಮುದ್ದೀನರ ಲೀಗ್ ಮಂತ್ರಿಮಂಡಳವು ಸೋತುಹೋಗಿ ಈಗ ಸರಕಾರವು ೯೩ ಕಲಮಿನನ್ವಯ ಗವರ್ನರರ ಅಧೀನವಾಗಿದೆ. ಇನ್ನು ಜಿನ್ನರಿಗೆ ಉಳಿದಿರುವುದೊಂದು-ದ್ರಾಕ್ಷೆ ಬೆಳೆಯುವ ಬಲೂಚಿಸ್ಥಾನ. ಅಲ್ಲಿಯ ಕ್ವೆಟ್ಟಾದಲ್ಲಿ ಲೀಗ್ ಬ್ಯಾರಿಸ್ಟರರು ಹೊಸ ಬಂಗಲೆ ಕಟ್ಟಿಸಿ ಇರುವುದೊಂದೇ ಉಪಾಯ. ಪಾಕಿಸ್ತಾನ ಪ್ರದೇಶಗಳಲ್ಲಿ ಉಳಿದಿರುವುದು ಅದೊಂದೇ. ಮಿಕ್ಕುಳಿದ ದಾಕ್ಷೆಗಳು 'ಹುಳಿ'ಯಾಗಿವೆ.

ಭಾರತದ ರಾಜಧಾನಿ ಗ್ರಾಮ

ಸೇವಾಗ್ರಾಮ ನೋಡದವರಿಗೆ ಎಲ್ಲಿ ಅದೆಂತಹ ಜೀನು ಚಟುವಟಿಕೆ ನಡೆಯುತ್ತದೆಂಬುದರ ಅಂದಾಜು ಆಗಲಿಕ್ಕಿಲ್ಲ. ಕಠಿಣ ಹವಾ ಪರಿಮಾಣಕ್ಕೊಳಗಾದದ್ದಾದರೂ ಈ ಹಳ್ಳಿಯು ನವದಿಲ್ಲಿಗಿಂತ ಹೆಚ್ಚು ಚೈತನ್ಯಯುಕ್ತವಾಗಿದೆ. ದೇಶದ ಅರ್ಧ ಡಜನ್ ಪ್ರಾಂತ್ಯಗಳ ರಾಜಧಾನಿಗಳಲ್ಲಿನ ಒಟ್ಟು ಚಟುವಟಿಕೆಗಳಿಗಿಂತ ಹೆಚ್ಚು ಭರವು ಇಲ್ಲಿ ತೋರುತ್ತಿದೆ. ಅದೊಂದು ಸೈನ್ಯಶಿಬಿರ ಕೇಂದ್ರ, ಒಂದು ವಿವಿಧ ರಾಜ್ಯಾಂಗ ಪರಿಷತ್ತು ಪ್ರದೇಶ, ಇಲ್ಲವೆ ಸಕಲ ಮತಧರ್ಮ ಸಮ್ಮೇಳನ ಸ್ಥಾನವೆಂದರೂ ಅತಿಶಯವಲ್ಲ. ಅದು ಶಿಕ್ಷಣದ ಪ್ರಯೋಗ ಶಾಲೆಯೂ, ವಸ್ತ್ರ ಕೈಗಾರಿಕೆ ಪರಿಶೋಧನಾಲಯವೂ, ಗ್ರಾಮ ಕೈಗಾರಿಕೆಗಳ ಜೇನುಗೂಡೂ, ಗೋವು ಸಂರಕ್ಷಣಾಲಯವೂ ಆಗಿದೆ ಎನ್ನಲೂಬಹುದು. ಇವುಗಳೆಲ್ಲದರಲ್ಲೂ ಮಹಾತ್ಮಾ ಗಾಂಧಿಯವರು ಸ್ವಂತ ಅಭಿರುಚಿಯನ್ನು ವಹಿಸಿದ್ದಾರೆ.

ಖಾಧಿ ಕಾರ್ಯಕ್ಕೆ ಹೊಸ ಅರ್ಥವನ್ನು ಕೊಡಲಾಗಿದೆ. ಅದನ್ನು ದರಿಸುವವರು ನೂಲಬೇಕು, ನೂಲುವವರು ಅದನ್ನು ಧರಿಸಬೇಕು. ದೇಶದ ಪ್ರಗತಿಶೀಲ ರಾಜಕೀಯದಲ್ಲಿ ಸ್ಥಾನಗಳಿಸಲಿಚ್ಛಿಸುವವರು ಕೊಂಗ್ರೆಸ್ಸಿನ ಈ ಸಂಕೇತ ಉಡುಪನ್ನು ಧರಿಸಬೇಕು:- ಸೈನ್ಯವನ್ನೆ ಸೇರುವವನು ಕಾಕೀಯನ್ನು ತೊಡುವಂತೆ. ಖಾದ್ಧರಿಗೆ ಉಜ್ವಲ ಭವಿಷ್ಯವು ಬಂದೊದಗಿದೆ. ಅದು ದೇಶದ ಜನತೆಯ ಪೋಷಾಕು ವಸ್ತ್ರವಾಗುವುದು. ಅದರ ಸ್ಥಾನವು ಭದ್ರವಾಯಿತು.

ಹೊಸ ರೀತಿಯ ವಾರ್ಧಾ ಶಿಕ್ಷಣ ಪದ್ಧತಿಯೆಂಬ ಮಗು ಹಲ್ಲು ಬಿಟ್ಟು ಹರಿಯುತ್ತಲಿದೆ. ಪ್ರಚಾರವಾದಲ್ಲಿ ಅದು ಆಳವಾದ ಭರವಸೆಯನ್ನುಂಟುಮಾಡುತ್ತದೆ. 'ಕಲಿಯುವಾಗ ದುಡಿಯಿರಿ' ಎಂಬುದು ಬರೀ ಒಂದು ಘೋಷವಲ್ಲ, ಶಿಕ್ಷಣವು ಅದರಿಂದ ಸುಲಭವೂ ಕಮ್ಮಿ ಖರ್ಚಿನದೂ ಆಗುವುದು. ಅದು ಮುಂದಿನ ಕೈಗಾರಿಕೆಗಳ ಅಡಿಗಟ್ಟಾಗಿರುವುದು.

ಸರಿಯಾದ ರಾಜಕೀಯ ಅಧಿಕಾರಗಳ ಸಹಾಯವಿರುತಿದ್ದರೆ ಈ ಮೂಲ ಶಿಕ್ಷಣದ ವಾರ್ಧಾಪದ್ಧತಿಯು ಅದೆಂತಹ ಅದ್ಭುತಗಳನ್ನು ಮಾಡಿತೋರಿಸುತಿತ್ತೆಂದು ಹೇಳಬರುತಿದ್ದಿಲ್ಲ. ಕೊಂಗ್ರೆಸು ಅಧಿಕಾರ ಸ್ವೀಕರಿಸಬೇಕೆಂದು ಹೇಳುವವರ ಒಂದು ಉದ್ದೇಶವು ಇದೇ ಆಗಿರುತ್ತದೆ.

ಹಿಂದೀ ಉರ್ದು ಒಪ್ಪಂದ

ಈತೀಚೆಗೆ ವಾರ್ಧಾದಲ್ಲಿ ಮಹಾತ್ಮರ ನೇತೃತ್ವದಲ್ಲಿ ನಡೆದ ಹಿಂದೂಸ್ತಾನಿ ಪ್ರಚಾರಿಣಿ ಸಭೆಯ ಸಮ್ಮೇಲನದಲ್ಲಿ ಗಹನ ವಿಚಾರಗಳು ನಿರ್ಣಯಿಸಲ್ಪಟ್ಟವು. ಸದ್ಯದಲ್ಲೇ ದೇಶದ ಅಗ್ರಗಣ್ಯ ಹಿಂದೀ ಉರ್ದು ವಿದ್ವಾಂಸರುಗಳಿಂದ ಬರೆಯಲ್ಪಡುವ ಅತೀ ಸುಲಭದ ಭಾಷಾಸರಣಿಯ ಪುಸ್ತಕಗಳು ಪ್ರಕಟಿಸಲ್ಪಡುತ್ತವೆ. ಸರಳ ವ್ಯಾಕರಣ, ಸರಳ ಶೈಲಿ, ಸರಳ ಶಬ್ದಗಳಲ್ಲಿ ನಾವು ಇನ್ನು ಮುಂದೆ ಹಿಂದೀ ಕಲಿಯಲು ಸಾಧ್ಯವಾಗುವಂತೆ ಮಾಡುವರು. ಈ ಹೊಸ ಯೋಜನಾನಾಕೆಯ ನಾಯಕತ್ವದಲ್ಲಿ ಓರ್ವ ಅಸಾಧಾರಣ ಅನುಭವದ 'ಕೆಪ್ಟನ್'ನಿರುವನು.

ಮಗನ್‌ವಾಡಿಯ ಕೈಗಾರಿಕೆ

ಸೇವಾಗ್ರಾಮದಿಂದ ಐದು ಮೈಲು ದೂರದಲ್ಲಿ ಅಖಿಲ ಭಾರತ ಗ್ರಾಮ ಕೈಗಾರಿಕೆ ಸಂಘದ ಕೇಂದ್ರವಿದೆ. ಪ್ರತಿಯೊಂದು ಗ್ರಾಮಗುಡಿ ಕೈಗಾರಿಕೆಗಳ ಕುರಿತು ಇಲ್ಲಿ ಅಮೂಲ್ಯ ಪ್ರಯೋಗ ಪರಿಶೋಧನೆಗಳು ನಡೆಯುತ್ತವೆ. ಪ್ರೇಕ್ಷಕರಿಗೆ ಇದೊಂದು ಅತ್ಯಂತ ಆಕರ್ಷನೀಯವಾದ ಸ್ಥಳ. ಅನೇಕ ಮೃತ ಕೈಗಾರಿಕೆಗಳು ಇಲ್ಲಿ ಪುನರುಜ್ಜೀವನಗೊಳಿಸಲ್ಪಡುತ್ತವೆ.

ನೀವು ವಾರ್ಧಾಕ್ಕೆ ಹೋಗುವುದಾದರೆ ಮಗನ್‌ವಾಡಿಗೆ ಹೋಗಲು ಮರೆಯದಿರಿ. ಅಲ್ಲಿ ತಯಾರಾಗುವ ಬಿಸ್ಕಿಟುಗಳನ್ನು ತಿನ್ನಿರಿ. ಪಾಶ್ಚಾತ್ಯ ತಯಾರಿಕೆಗಳಿಗಿಂತ ಹೆಚ್ಚಿನ ಶ್ರೇಷ್ಟತೆಯಿರುವ ಮತ್ತು ಕಮ್ಮಿ ಬೆಲೆಯ ಅವುಗಳನ್ನು ತಿಂದಾಗ ಪರದೇಶಿಯರೂ ಬೆರಗಾಗದಿರರು.

ಲಾಹೋರಿನಲ್ಲಿ ಓರ್ವ ಹಠಯೋಗಿಯು ೨೪ ತಾಸುಗಳ ತನಕ ನೆಲದಡಿಯಲ್ಲಿ ಹುಗಿದಿರಿಸಿಕೊಂಡು ಮೇಲಕ್ಕೆ ಬಂದಾಗ ಅವನ ನಾಡಿ ಹೊಡೆತವು ರಕ್ತ ಚಲನೆಯು ಆರೋಗ್ಯಕರವಾಗಿದ್ದವು ನಮ್ಮ ಜಿಲ್ಲೆಯ ಕರ್ನಲ್ ವಿರಾಜ್‌ಕರರು ಅವನನ್ನು ಪರೀಕ್ಷಿದರು. ಅವನು ಬಿಲ್ಲು ಬಾಣ ವಿದ್ಯೆಯಲಲ್ಲ ನುರಿತವನಾಗಿದ್ದನು.

ಕರಾಚಿಯಲ್ಲಿ ಒಂದು ಸಿಗರೇಟಿನಿಂದ ೫೦ ಸಾವಿರ ರೂಪ್ಯಾ ನಷ್ಟವಾಗಿದೆ. ಹಾದಿಹೋಕನೊಬ್ಬನು ಆರಿಸದ ಸಿಗರೇಟೊಂದನ್ನು ಅಲಕ್ಷ್ಯದಿಂದ ಬಿಸಾಡಿದ ಪರಿಣಾಮವಾಗಿ ಒಂದು ಅರಳೆ ಉಗ್ರಾಣಕ್ಕೆ ಬೆಂಕಿ ಹತ್ತಿ ಅಷ್ಟು ನಷ್ಟ ಸಂಭವಿಸಿತು.

* * *

ಕೋಳಿ ಸಾಕುವ ಬಗ್ಗೆ ಒಕ್ಕಲಿಗರಿಗೆ ಧನಸಹಾಯ ಮಾಡುವ ೨ ವರ್ಷದ ಯೋಜನೆಯೊಂದನ್ನು ಮುಂಬಯಿ ಸರಕಾರದವರು ತಯಾರಿಸಿದ್ದಾರೆ.

* * *

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ ಕಡಿತವುಂಟಾದರೆ ವಿಷವು ನಮ್ಮ ಚರ್ಮದೊಳಗೆ ಸೇರಿಬಿಡುವುದು. ಅದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ. ಅದರಿಂದ ನೋವು ಕಡಿಮೆಯಾಗುತ್ತದೆ. ಕಿಶಿಗೆ ಒಣಗುತ್ತದೆ. ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶವಾಗುತ್ತದೆ.

ಯಾವಾಗಲೂ ಜಾಂಬಕನ್ನು ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ನಿರಹಿತವಾದುದು

ಪ್ರಚಲಿತ ಸಮಾಚಾರ

(೪ನೇಪುಟದಿಂದ)

ನು ಅನೇಕ ಸುಧಾರಣೆಗಳನ್ನು ಕೈಗೊಳ್ಳಬೇಕಾದ ಅವಶ್ಯಬಿದ್ದುದರಿಂದ, ಈ ಸುಧಾರಣೆಗಳನ್ನು ಉದ್ದಿಶ್ಯವಾಗಿಟ್ಟವರನ್ನು ಮಾತ್ರ ಚುನಾಯಿಸಬೇಕೆಂದೂ ಜನರೊಡನೆ ಕೇಳಿಕೊಳ್ಳಲಾಗಬಹುದು. ಟೋರಿ ಲೇಬರ್, ಲಿಬರಲ್ ಮೊದಲಾದ ಪಕ್ಷದವರು ಯುದ್ಧೋತ್ತರದ ಉದ್ಧಾರ ಬಗ್ಗೆ ಯೋಜನೆಗಳ ಪಟ್ಟಿಗಳನ್ನು ಕಲ್ಪಿಸಿ ಚುನಾವಣೆಗೆ ಹೊರಡಬಹುದು. ಚುನಾವಣೆ ಮಹಾ ಗದ್ದಲವು ನಡೆಯಬಹುದು ಫಲಿತಾಂಶ-ಬ್ರಿಟನು ಟೋರಿ ರಾಜ್ಯವಾಗಿಯೆ ಉಳಿಯುವುದು. ಇಂಗ್ಲಾಂಡಿನಲ್ಲಿ ಕನ್ಸರ್ ವೇಟವ್‌ರಾಗಲಿ, ಲೇಬರ್ ಪಕ್ಷವಾಗಲಿ, ಲಿಬರಲರಾಗಲಿ ಎಲ್ಲರೂ ಟೋರಿ ವರ್ಣದವರೆ. ಟೋರಿ ಕ್ರಮದಲೆ ಬ್ರಿಟನು ಮುಂದಕ್ಕೆ ಹೆಜ್ಜೆಯಿಟ್ಟು ನಡ್ಲೆಯುವುದು.

ಆಧುನಿಕ ಜಗದಲ್ಲಿ ಎಣ್ಣೆಯ ಸ್ಥಾನ

ಎಣ್ಣೆ-ಪೆಟ್ರೊಲ್, ಸೀಮೆ ಎಣ್ಣೆ ಮೊದಲಾದುವುಗಳನ್ನು ಕೊಡುವ ಪದಾರ್ಥ-ಅಮೇರಿಕಾದಲ್ಲಿ ದಾರಳವಾಗಿ ದೊರಕುತಿದ್ದುದು, ಈಗ ನಾಜಿಗಳ ಪತನದ ಬಗ್ಗೆ ವಿನಿಯೋಗಿಸಲ್ಪಡುತ್ತಿದೆ. ಎಣ್ಣೆ ಬಲವು ಹೆಚ್ಚಿದ್ದ ಕಡೆಗೆನೆ ವಿಜಯವು ಲಭಿಸುವುದು ಖಂಡಿತ. ನಾಜೀ ಜರ್ಮನಿಯು ತನಗೆ ಬೇಕಾದ ಪೆಟ್ರೋಲ್ ಇತ್ಯಾದಿಗಳನ್ನು ಕೃತಕ ರೀತಿಯಿಂದ ತಯಾರಿಸುವ ವಿಧಾನಗಳನ್ನು ಕೈಕೊಂಡಿದ್ದರೂ ಆಧುನಿಕ ಯುಧ್ಧ ವಿಮಾನಗಳಿಗೆ ಯೋಗ್ಯವೆನಿಸುವ ಮಹಾ ಶಕ್ತಿಯುತ ಪೆಟ್ರೋಲನ್ನು ಈ ವಿಧಾನಗಳ ಮೂಲಕ ಧಾರಳ ಪ್ರಮಾಣದಲ್ಲಿ ತಯಾರಿಸಲು ಸಾಧ್ಯವಿಲ್ಲ. ನಾಜೀ ಜರ್ಮನಿಯು ಯುದ್ಧ ಹೂಡುವ ಮೊದಲು ದಾರಳ ಎಣ್ಣೆ ಶೇಖರವನ್ನು ಕಟ್ಟಿಕೊಂಡಿದ್ದರೂ, ಅದೆಲ್ಲಾ ಈಗ ಬರಿದಾಗುತ್ತಾ ಬಂದಿದ್ದು, ಅವರ ಎಣ್ಣೆ ಬಲವು ಕುಂದುತ್ತಾ ಬರುತ್ತಿದೆ. ಈ ಬಲವನ್ನು ವೃದ್ಧಿಸಿಕೊಳ್ಳಲು, ಮಿತ್ರರ ಸಾಗರ ಕಾವಲು ವ್ಯವಸ್ಥೆಯಿಂದ ಅಸಾಧ್ಯವೆನಿಸಿದೆ. ಜರ್ಮನಿಯೊಳಗೆ ಎಣ್ಣೆಯ ಸ್ಥಳಗಳು ಇಲ್ಲದಿದ್ದು ಅದಕ್ಕೆ ಅವಶ್ಯವಿರುವ ಎಣ್ಣೆ ಮತ್ತು ಎಣ್ಣೆ ಪದಾರ್ಥಗಳು ಹೊರಗಿಂದಲೇ ಬರಬೇಕು. ಈ ಒಂದು ಕಾರಣದಿಂದಲೇ ಜರ್ಮನಿಯ ಸೋಲು ಖಂಡಿತವೆಂದೆ ತಿಳಿಯಬೇಕು.

ಪಾಶ್ಚಾತ್ಯ ಜಗತ್ತಿನ ಜೀವನದ ಮುಖ್ಯ ಆಧಾರವೆನಿಸಿದೆ ಎಣ್ಣೆಯು. ಸಂಯುಕ್ತ ಅಮೇರಿಕಾದೊಳಗಿನ ಚಲನವಲನಗಳು ಈ ಎಣ್ಣೆಯಿಂದಲೆ ನಡೆಯುತ್ತಿವೆ. ಈ ಎಣ್ಣೆಯಿಂದ ಸಾಗರದ ಜಹಜುಗಳು ನಡೆಯುತ್ತಿವೆ. ಮಿತ್ರ ವಿಮಾನಗಳು ಈ ಎಣ್ಣೆಯ ಮೇಲೆಯೆ ಹೊಂದಿಕೊಂಡಿವೆ. ೧೯೪೩ರಲ್ಲಿ ಸಂಯುಕ್ತ ಅಮೇರಿಕಾದ ಎಲ್ಲಾ ಪ್ರದೇಶಗಳಿಂದ ಮೇಲಕ್ಕೆ ಹೀರಲ್ಪಟ್ಟ ಎಣ್ಣೆ - ೨೪,೫೦೦,೦೦೦,೦೦೦ ಬೆರಲ್ಲುಗಳು ಇದಲ್ಲದೆ,ಯುದ್ಧ ಕಾರ್ಯಗಳಿಗಾಗಿ ೨೦,೦೦೦,೦೦೦,೦೦೦ ಬೆರಲ್ ಜಿಡೆಣ್ಣೆಯು ಜೋಪಾಸನೆಯಲ್ಲಿಡಲಾಗಿದೆ. ಈಗ ಅಮೇರಿಕಾದಲ್ಲಿ ೪೧೫,೦೦೦ ಎಣ್ಣೆ ಬಾವಿಗಳಿವೆ.

ಸಂ. ಅಮೇರಿಕಾದ ಎಣ್ಣೆ ಉತ್ಪತ್ತಿಯು ಈಗಿನ ಯುದ್ಧದಲ್ಲಿ ಉಪಯೋಗಿಸಲ್ಪಡುತ್ತಿದ್ದು, ಅಲ್ಲಿನ ಕೆಲವು ಬಾವಿ ಬತ್ತಲು ಹತ್ತಿವೆ. ಈ ಕಾರಣದಿಂದ ತನ್ನ ಭವಿಷ್ಯ ದಿನಗಳಿಗಾಗಿ, ಜಗತ್ತಿನ ಎಣ್ಣೆಯಿರುವ ಇತರ ಪ್ರದೇಶಗಳನ್ನು ಕೊಂಡುಕೊಳ್ಳುವ ಕಡೆಗೆ ಅದರ ದೃಷ್ಟಿಯು ಸರಿದಿರುತ್ತದೆ. ಬ್ರಿಟೀಷರಿಗೆ ಬೇಕಾದ ಎಣ್ಣೆಯ ಪೂರೈಕೆಯು ಆಗುತ್ತಿರುವುದು ಮಧ್ಯಪೂರ್ವದ ಅರಬ ದೇಶಗಳಿಂದ. ಈ ದೇಶಗಳಲ್ಲಿ ಇನ್ನೂ ಎಣ್ಣೆ ಶೇಖರವು ಇದೆ. ಈ ಎಣ್ಣೆ ಪ್ರದೇಶಗಳಿಗಾಗಿ ಅಮೇರಿಕಾವು ಅತ್ತ ಕಡೆಗೆ ನಡೆಯುವ ಸಂಭವಗಳಿವೆ. ಒಂದು ರಾಷ್ಟ್ರದ ದೃಢತೆಯು ಎಣ್ಣೆ ಬಲದ ಮೇಲೆ ಹೊಂದಿಕೊಂಡಿರುವುದೆಂದು ಈ ಮೊದಲೆ ಹೇಳಿದ ಪ್ರಕಾರ ಜಗತ್ತನ್ನು ನಾಜೀ ಕಾಟದಿಂದ ತಪ್ಪಿಸಿದ ಸಂಯುಕ್ತ ರಾಷ್ಟ್ರಗಳು-ಮುಖ್ಯವಾಗಿ, ಅಮೇರಿಕಾ, ಬ್ರಿಟನು, ರಶ್ಯಾ-ಎಣ್ಣೆ ಮಧ್ಯಪೂರ್ವದ ಅರಬ ದೇಶಗಳಲ್ಲಿ ಕೂಡಿ ಬರುವ ಖಂಡಿತವೆಂದು ಹೇಳಬಹುದು.

ಎಣ್ಣೆ ಒದಗಿಸುವ ಶಾಂತಸಾಗರದ ದ್ವೀಪಗಳನೇಕ, ಜಾವಾ, ಸುಮತ್ರಾ, ಬೋರ್ನಿಯೊ, ಇತ್ಯಾದಿಗಳು ಈಗ ಜಪಾನಿಯರ ವಶದಲ್ಲಿವೆ. ಚೀನಾದ ಮೆಂಚೂರಿಯಾ, ಮತ್ತಿತರ ಕಡೆಗಳಲ್ಲೂ, ಜಗತ್ತಿಗೆ ಇನ್ನೂ ಹಲವು ಸಾವಿರ ವರ್ಷಗಳಿಗೆ ಬೇಕಾಗುವಷ್ಟು ಎಣ್ಣೆಯು ಒದಗಿಸಿ ಕೊಡುವ ಪ್ರದೇಶಗಳು ಇವೆಯಾಗಿ ಹೇಳಲಾಗಿದೆ. ಈ ಎಣ್ಣೆಯಿಂದಲೆ ಚೀನಾವು ಮುಂದಕ್ಕೆ ಪ್ರಸಸ್ತಿಗೆ ಬರಬಹುದು. ಅದು ಆಸ್ಯಾದಲ್ಲಿ ಅತ್ಯಂತ ಪ್ರಬಲ ರಾಷ್ಟ್ರವಾಗಬಹುದು. ಆಸ್ಯಾಖಂಡದ ರಾಷ್ಟ್ರಗಳಲ್ಲಿ ಅಧಿನಾಯಕತ್ವವನ್ನು ವಹಿಸಬಹುದು.

ಬರ್ಮಾದ ಪ್ರಾಮುಖ್ಯತೆಯು ಎಣ್ಣೆಯಿಂದಲೆ ಈ ಎಣ್ಣೆಯ ದಸೆಯಿಂದಲೇ ಬರ್ಮಕ್ಕೆ ಭವಿಷ್ಯದಲ್ಲಿ ಒಳಿತಿದೆ. ಎಣ್ಣೆಯಿಂದಲೆ ಅದಕ್ಕೆ ಮಾನ್ಯತೆಯು ದೊರಕಬಹುದು. ಹಿಂದೂದೇಶಕ್ಕೆ ಬೇಕಾದ ಎಣ್ಣೆ ಮತ್ತು ಎಣ್ಣೆ ಪದಾರ್ಥಗಳೆಲ್ಲಾ ಬರ್ಮದಿಂದಲೆ ಬರುತ್ತಿದ್ದವು. ಬರ್ಮಾದ ಜಗತ್ತಿನಲ್ಲಿ ಖ್ಯಾತಿಪಡೆದ ಬರ್ಮಾಶೆಲ್ ಸಂಸ್ಥೆಯ ಕಾರ್ಯಕ್ಷೇತ್ರವು.

ಹಿಂದೂದೇಶದಲ್ಲೂ ಎಣ್ಣೆ ಒದಗಿಸುವ ಪ್ರದೇಶಗಳು ದೊರಕಿವೆ. ಈ ಪ್ರದೇಶಗಳಿಂದ, ಬರ್ಮಾದ ಸಂಪರ್ಕವು ನಮಗೆ ಕಡಿದು ಹೋದಾಗ, ಸ್ವಲ್ಪ ಮಟ್ಟಿನ ಪೂರೈಕೆಯು ನಡೆದಿರುತ್ತದೆ. ಎಣ್ಣೆಗಾಗಿ ಹಿಂದೂದೇಶದ ಭೂಶೋಧವಾಗಲಿದೆ. ಚೀನಾದಲ್ಲಿದ್ದಂತೆ ಹಿಂದೂದೇಶದಲ್ಲೂ ಎಣ್ಣೆ ಪ್ರದೇಶಗಳು ಇರಬಹುದು.

ಸೋವಿಯಟ್ ರಷ್ಯವು ಇಂದು ಅಗ್ರಗಣ್ಯ ಸ್ಥಾನಕ್ಕೆ ಬಂದಿರುವುದಾದರೂ, ಈ ಎಣ್ಣೆಯ ದೆಸೆಯಿಂದಲೆ. ಮುಂದು ಅದು ಪ್ರಬಲ ರಾಷ್ಟ್ರವಾಗಿ ಬಾಳಿಕೊಳ್ಳಬಹುದಾದರೂ ಎಣ್ಣೆಯ ದೆಸೆಯಿಂದಲೆ. ಅಮೇರಿಕಾದಲ್ಲಿದ್ದಂತೆಯೆ ಎಣ್ಣೆ ಒದಗಿಸುವ ಪ್ರದೇಶಗಳು ರಷ್ಯದಲ್ಲಿ ದಾರಳ ಇವೆ. ಎಣ್ಣೆ ಕೈಗಾರಿಕೆಯು ಬಹಳವಾಗಿ ವೃದ್ಧಿಸಲ್ಪಟ್ಟಿದೆ. ಸೋವಿಯಟ್ ರಶ್ಯಾದ ಸರ್ವೋಮುಖ ಅಭಿವೃದ್ಧಿಗೆ ಎಣ್ಣೆ ಕೈಗಾರಿಕೆಯ ಮೂಲ ಆಧಾರವಾಗಿರುತ್ತದೆ. ಈ ಎಣ್ಣೆ ಸಂಪತ್ತಿನಿಂದಲೆ ರಶ್ಯವು ಅಮೇರಿಕಾ ಮಾದರಿಯಲ್ಲಿ ಬೆಳೆದಿದೆ. ರಶ್ಯಾದ ಎಣ್ಣೆಯು ರಶ್ಯಕ್ಕೆ ಮಾತ್ರವಲ್ಲ, ಜಗತ್ತಿನ ಇತರ ರಾಷ್ಟ್ರಗಳ ಉದ್ಧಾರಕ್ಕೂ ನೆರವಾಗಬಹುದು.

ಒಂದು ಬೆರಲ್ ಜಿಡ್ಡಣ್ಣೆ-೪೨ ಗೆಲನುಗಳು-ಇದರಿಂದ ಒದಗುವ ಪದಾರ್ಥಗಳು, ವಿಮಾನ ಉಪಯೋಗದ ಶಕ್ತಿದಾಯಕ ಪೆಟ್ರೊಲ್ ೪॥ ಗೆಲನು, ಮೋಟಾರು ವಾಹನಗಳಲ್ಲಿ ಉಪಯೋಗಿಸಲ್ಪಡುವ ಪೆಟ್ರೊಲ್-೧೧॥ ಗೆಲನು, ಕೈಗಾರಿಕೆಗಳಲ್ಲಿ ದುಡಿಯುವ ಡಿಸೆಲ್ ಇತ್ಯಾದಿ ಇಂಜಿನುಗಳಲ್ಲಿ ಉಪಯೋಗಿಸಲ್ಪಡುವ ಕ್ರೂಡ್ ಆಯಿಲ್ ೨೦॥ ಗೆಲನು; ಒಂದಲ್ಲದೆ ೫॥ ಗೆಲನು ಇತರ ಪದಾರ್ಥಗಳು ಕೃತಕ ರಬ್ಬರನ್ನು ತಯಾರಿಸ ಬೇಕಾಗುವ ಪದಾರ್ಥವೂ, ಬಾಂಬು ಇತ್ಯಾದಿ ಸ್ಫೋಟಕಗಳಲ್ಲಿ ಉಪಯೋಗಿಸಲ್ಪಡುವ ಒಂದು ದ್ರವವು ದೊರಕುತ್ತವೆ.

ಆಧುನಿಕ ಜಗತ್ತಿನ ಬೆಳವಣಿಗೆಗೆ ಎಣ್ಣೆಯು ಮುಖ್ಯ ಕಾರಣವಾಗುತ್ತದೆ. ಈ ಎಣ್ಣೆಯು ಲೋಪವಾಗಿ ಬಿಟ್ಟರೆ ಜಗತ್ತು ತಟಸ್ಥವಾಗಬಹುದು. ಎಣ್ಣೆ ಒದಗಿಸುವ ಭೂಪ್ರದೇಶಗಳು ಬರಿದಾದ ನಂತರ, ಕೃತಕ ರೀತಿಯಿಂದಲಾದರೂ ಈ ಎಣ್ಣೆಯನ್ನು ಒದಗಿಸಿಕೊಳ್ಳುವ ಯತ್ನಗಳನ್ನು ಮಾನವನು ಮಾಡದೆ ಇರನು.

ನಮಗೊಂದು ಮಾದರಿ

ಭೂವ್ಯವಸಾಯದಲ್ಲಿ ಯಾಂತ್ರಿಕ ಉಪಕರಣಗಳನ್ನು ಉಪಯೋಗಿಸುವ ಕ್ರಮ ಪ್ರಥಮವಾಗಿ ಆಚರಿಸಲ್ಪಟ್ಟದ್ದು ಸಂ. ಅಮೇರಿಕಾದಲ್ಲಿ ಔದ್ಯೋಗಿಕರಣದೊಂದಿಗೆ ಭೂವ್ಯವಸಾಯವೂ ಉದ್ಧಾರದಾರಿಯಲ್ಲಿ ನಡೆದ ಉತ್ತಮ ದೃಷ್ಟಾಂತಗಳು ಅಲ್ಲಿ ದಾರಳ ಇವೆ. ಭೂವ್ಯವಸಾಯದ ಉದ್ಧಾರಕ್ಕಾಗಿ ವಿಜ್ಞಾನ ಸಹಾಯದಿಂದ ಅನೇಕ ಆಧುನಿಕ ಕ್ರಮುಗಳು ಕಲ್ಪಿಸಲ್ಪಟ್ಟಿವೆ. ಮಹಾ ಕ್ರಾಂತಿಯ ನಂತರ ಸೋವಿಯಟ್ ರಷ್ಯವೂ ಸಂ. ಅಮೇರಿಕಾವನ್ನು ಅನುಸರಿಸಿ, ಭೂವ್ಯವಸಾಯ ಆಧುನಿಕ ಕ್ರಮುಗಳನ್ನು ಆಚರಿಸಿ ಮಹಾ ಲಾಭವನ್ನು ಪಡೆಯಲು ಕಲಿಯಿತು. ಇಂದು ಔದ್ಯೋಗಿಕರಣ ಮತ್ತು ವ್ಯವಸಾಯದ ವಿಚಾರಗಳಲ್ಲಿ ಸೋವಿಯಟ್ ರಷ್ಯಾವು, ಸಂ. ಅಮೇರಿಕಾದಂತೆ ಉದ್ಧಾರ ದಾರಿಯಲ್ಲಿ ನಡೆಯುತ್ತಿದೆ.

ಅಮೆರಿಕದ ಪ್ರತಿಯೊಂದು ಕೃಷಿ ಕ್ಷೇತ್ರದಲ್ಲಿ ಎಂಬಂತೆ, ಒಂದು ಮೋಟಾರುಕಾರು, ಬೆಣ್ಣೆ ತೆಗೆಯುವ ಯಂತ್ರ ಒಂದು ಟ್ರೆಕ್ಟರ್ (ಅಂದರೆ ಗದ್ದೆಉಳುವ ಯಂತ್ರ) ಒಂದು ರೇಡಿಯೊ ಪೆಟ್ಟಿಗೆ ಇದ್ದೇ ಇದೆ. ಕೃಷಿ ಕ್ಷೇತ್ರಗಳಲ್ಲಿ ಯಂತ್ರಗಳು ತುಂಬಾ ಉಪಯೋಗಿಸಲಾಗುತ್ತಿದೆ.

ಅಮೇರಿಕಾದ ನಾಡುಗಳಲ್ಲಿ ಅವಿದ್ಯಾವಂತ ಜನರ ಸಂಖ್ಯೆಯು ಅತಿ ಕಡಿಮೆಯೆಂದೇ ಹೇಳಬೇಕು. ಪ್ರತಿ ರೈತನ ಮನೆಯಲ್ಲಿ ಒಂದು ದೈನಿಕ ಪತ್ರಿಕೆ, ಇತ್ತೀಚೆಗೆ ಹೊರಟ ಒಂದು ಪುಸ್ತಕ, ಕೆಲವು ಮಾಸಪತ್ರಿಕೆ ಯಾವಾಗಲೂ ಇದ್ದೇ ಇದೆ.

ಅಲ್ಲಿ ದನಗಳನ್ನು ಮಾಂಸಗೋಸ್ಕರವೂ ಹಾಲಿಗೋಸ್ಕರವೂ ಸಾಕುತ್ತಿದ್ದಾರೆ. ಗೋವ್ಯವಸಾಯವು ಒಂದು ದೊಡ್ಡ ಉದ್ಯೋಗವಾಗಿ ನಡೆಯುತ್ತಿದೆ. ಹಾಲಿನ ಪೂರೈಕೆಯು ಬಹಳ ಹೆಚ್ಚಿದುದರಿಂದ ಅದು ಮನುಷ್ಯನ ಸೇವನೆಗೆ ಹೆಚ್ಚಾಗಿ, ಉಳಿದುದರಿಂದ ತಿಂಡಿ ಪದಾರ್ಥಗಳನ್ನೂ 'ಬೆಕ್‌ಲ್ಯಾಟ್' ಎಂಬ ಪದಾರ್ಥವನ್ನೂ (ಇದನ್ನು ವಿದ್ಯುತ್ ಸ್ವಿಚ್ ಇತ್ಯಾದಿಗಳನ್ನು ತಯಾರಿಸುವುದರಲ್ಲಿಯೂ, ಮಾನವನಿಗೆ ಉಪಯುಕ್ತ ಬೀಳುವ ಕೆಲವು ವಸ್ತುಗಳನ್ನು ಮಾಡಲು ಉಪಯೋಗಿಸುತ್ತಾರೆ) ತಯಾರಿಸುತ್ತಾರೆ. ಹಾಲು ಕೊಡುವುದನ್ನು ನಿಲ್ಲಿಸಿದ ದನಗಳನ್ನೂ, ಮಾಂಸಗೋಸ್ಕರವೂ ಚರ್ಮಕ್ಕಾಗಿಯೂ ಮಾರುತ್ತಿದ್ದಾರೆ. ದಿನ ಎಂದರ ೩ ಯಾಳ ಮಣ ಹಾಲನ್ನು ಕೊಡುವ ದನದ ಜಾತಿಯನ್ನು ಕಲ್ಪಿಸಿರುವರು. ರಷ್ಯಾದಲ್ಲೂ ಇದೇ ಮಾದರಿಯಲ್ಲಿ ಗೋವ್ಯವಸಾಯ ಉದ್ಧಾರವಾಗಿರುತ್ತದೆ. ದನಗಳಿಂದ ಹಾಲು ವಿದ್ಯುತ್ ಯಂತ್ರಗಳ ಮೂಲಕ ಕರೆಯಲಾಗುತ್ತಿದೆ. ಆಧುನಿಕ ಶೌಚ್ಯಾಧಿ ಕ್ರಮುಗಳು ಆಚರಿಸಲ್ಪಟ್ಟು ಗೋಶಾಲೆಗಳು ನಡೆಯುತ್ತವೆ.

ಅಮೇರಿಕಾದಲ್ಲಿ ಕೈಗಾರಿಕೆಗಳೂ, ಬೇಸಾಯವೂ ಒತ್ತತ್ತಾಗಿ ನಡೆಯುವ ಪ್ರದೇಶಗಳು ಅನೇಕ ಇದೆ.

ಅಮೇರಿಕಾದಲ್ಲಿ ರೈತನ ಮೇಲೆ ಒತ್ತಾಯ ನಡೆಯಿಸುವ ಶಾಸನ ಕ್ರಮುಗಳನ್ನು ಉಪಯೋಗಿಸಲ್ಪಡದಿದ್ದರೂ, ರೈತನ ಕುರಿತು ಆತನ ಉತ್ಪತ್ತಿಯಿಂದ ಆತನಿಗೆ ಲಾಭವಾಗುವ ರೀತಿ ವಿಕ್ರಯಿಸುವರೆ, ಆತನ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸುವರೆ ಕ್ರಮುಗಳನ್ನು ಆಚರಿಸುವರೆ ಪೆಡರಲ್ ಸರಕಾರವು ಆಗಿಂದಾಗ್ಯೆ ಪ್ರೇರೇಪಿಸುತ್ತದೆ. ಅಮೇರಿಕನ್ ರೈತನು ಎಲ್ಲಾ ದೃಷ್ಟಿಯಲ್ಲಿಯೂ ಸ್ವತಂತ್ರನಾಗಿಯೆ ಇರುವನು.

A REWARD of Rs. 10-0-0 will be paid to any person who delivers to the undersigned one cash memo book containing 30 duplicates of memos bearing Nos. 874 to 903 issued from 20-12-1944 to 1-4-1945 and 70 printed blank forms with duplicates, lost on or about the 1st April 1945.

M. Raghavendra Pai & Co.,
Bunder, Mangalore.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಪೂರ್ವ ಆಸ್ಯದ ಡಚ್, ಫ್ರೆಂಚ್ ಸಾಮ್ರಾಜ್ಯಗಳು

(೩ನೇ ಪುಟದಿಂದ)

ಫ್ರೆಂಚ್ ಠಾಣ್ಯಗಳು ಸಂಪೂರ್ಣ ಆಂಗ್ಲ ಆಜ್ಞಾಪಾಲಕರಾಗಿರುವವಾದ್ದರಿಂದ ಹಿಂದೂಸ್ಥಾನವ ಮೇಲೆ ಆಂಗ್ಲರ ಆಳ್ವಿಕೆಯ ಕ್ರಮಗಳು ಯಾವ ರೀತಿ ಮಾರ್ಪಾಟನ್ನು ಹೊಂದಬಹುದೋ ಅದೇ ರೀತಿ ಅಲ್ಲಿಯೂ ಮಾರ್ಪಡನ್ನು ಹೊಂದುವವು. ಸ್ವತಂತ್ರ ಹಿಂದೂಸ್ಥಾನದಲ್ಲಿ ಫ್ರೆಂಚರಿಗಾಗಲೀ ಪೋರ್ತುಗೀಸರಿಗಾಗಲೀ ಯಾವ ತರದ ಅಧಿಕಾರಗಳನ್ನೂ ಪ್ರದರ್ಶಿಸಲಿಕ್ಕೆ ಎಲ್ಲಿಯೂ ಎಡೆ ಉಳಿಯದು. ಡಚ್ಚರ ಮಾತೃಭೂಮಿಯಾದ ಹೊಲ್ಲಾಂಡು ಇನ್ನೂ ಹಿಟ್ಲರನ ಕೈಯಿಂದ ಸಂಪೂರ್ಣ ವಿಮೋಚನೆಯನ್ನು ಹೊಂದಿರುವುದಿಲ್ಲ. ಸ್ವದೇಶವೇ ಕೈಯಿಂದ ತಪ್ಪಿಹೋದ ಡಚ್ಚರಿಗೆ ಸಾಮ್ರಾಜ್ಯದ ಆಶೆಯು ಇನ್ನೂ ಉಳಿದಿರುವಂತೆ ತೋರಿದರೂ ಅಂಥಾ ಆಶೆಗಳೆಲ್ಲಾ ಇನ್ನೂ ಕನಸಾಗಿಯೇ ಉಳಿಯುವಂತಿದೆ. ಆಸ್ಯದ ಇತರ ಭಾಗಗಳಲ್ಲಿ ಹೇಗೆ ಈಗ ದೇಶಭಕ್ತಿ, ಸ್ವಾತಂತ್ರ್ಯದಾಶೆ, ಸ್ವಾಭಿಮಾನಗಳು ಬಲವಾಗಿ ಬರುತ್ತವೊ ಹಾಗೆಯೇ ಪೂರ್ವ ಆಸ್ಯದಲ್ಲಿಯೂ ಬಲವಾಗುತ್ತಿರುವುದರಿಂದ ಅಲ್ಲಿ ಪುನಃ ಪಾಶ್ಚಾತ್ಯರು ಒಡೆತನವನ್ನು ಸ್ಥಾಪಿಸುವುದು ಸುಲಭವಾಗದು; ಒಂದು ವೇಳೆ ಅಂಥಾ ಒಡೆತನವನ್ನು ಅವರು ಸ್ಥಾಪಿಸಿದರೂ ಅದು ಇನ್ನು ಹೆಚ್ಚು ಕಾಲ ಬಾಳದು.

ಇವೆಲ್ಲಾ ಕಾರಣಗಳಿಂದ ಯುದ್ಧ ತೀರಿ ಮಿತ್ರರಾಷ್ಟ್ರಗಳು ವಿಜಯಿಗಳಾದ ಬಳಿಕ ಹಿಂದೀ ಚೀನ, ಜಾವಾ, ಸುಮಾತ್ರಾ, ಬೊರ್ನಿಯೋ ಮಲಯ ಇವುಗಳ ಮುಂದಿನ ಗತಿಯೇನೆಂದು ನಿಶ್ಚಿಸುವುದು ಮಿತ್ರರಾಷ್ಟ್ರಗಳಿಗೆ ಬಹಳ ಕಷ್ಟದ ಕಾರ್ಯವಾಗಬಹುದು. ಜಪಾನನ್ನು ನಾಶ ಪಡಿಸಿದರೂ ಆಸ್ಯದ ಜನರ ಪ್ರೀತಿ, ಭಕ್ತಿಗಳಿಲ್ಲದೆ ಆಸ್ಯದಲ್ಲಿ ಪಾಶ್ಚಾತ್ಯರು ಸಾಮ್ರಾಜ್ಯವನ್ನು ಆಳಿಕೊಂಡು ಬಾಳುವುದು ಸಾಧ್ಯವಿಲ್ಲ. ಚೀನ, ಹಿಂದುಸ್ಥಾನಗಳಲ್ಲಿ ಒಳಗಿನ ಪಕ್ಷಭೇದಗಳೆಷ್ಟಿದ್ದರೂ ಪಾಶ್ಚಾತ್ಯರ ದರ್ಪವನ್ನು ಪ್ರತಿಭಟಿಸಿ ದೇಶದಲ್ಲಿ ಸ್ವಜನಾಧಿಕಾರವನ್ನೇ ಸ್ಥಾಪಿಸಬೇಕೆಂಬುವುದರಲ್ಲಿ ಪಕ್ಷಬೇಧಗಳಿಲ್ಲ. ಇಂದಲ್ಲ ನಾಳೆಯಾದರೂ ಚೀನ ಹಿಂದೂಸ್ಥಾನಗಳ ಜನರು ಪಾಶ್ಚಾತ್ಯರ ಕೈಯಿಂದ ಸಂಪೂರ್ಣ ಸ್ವಾತಂತ್ರವನ್ನು ಪಡೆಯುವರೆಂಬುದರಲ್ಲಿ ಸಂಶಯವಿಲ್ಲ. ಪೂರ್ವ ಆಸ್ಯದ ಫ್ರೆಂಚ್, ಡಚ್ಚ ಸಾಮ್ರಾಜ್ಯಗಳ ಜನರು ರಕ್ತದಲ್ಲಿಯೂ ಸಂಸ್ಕೃತಿ ನಾಗರೀಕತೆಗಳಲ್ಲಿಯೂ, ಹಿಂದೂಸ್ಥಾನ ಚೀನದ ಜನರ ಬಂಧುಗಳಾದ್ದರಿಂದ ಚೀನ ಹಿಂದೂಸ್ಥಾನಗಳ ಪುನರುತ್ಥಾನದ ಸಮಯ ಅವರು ತಮ್ಮ ಹಿಂದಿನ ಭಾಂಧವ್ಯವನ್ನು ನೆನಸಿ ಚೀನ ಹಿಂದೂಸ್ಥಾನಗಳ ಮಿತ್ರತ್ವವನ್ನು ಸಾಧಿಸದಿರರು.

ಆಸ್ಯದಲ್ಲಿ ಪಾಶ್ಚಾತ್ಯರು ದುರಾಶೆಯಿಂದ ಇನ್ನೂ ಸಾಮ್ರಾಜ್ಯ ಪಿಪಾಸೆಯನ್ನು ವ್ಯಕ್ತ ಪಡಿಸಿದರೆ ಜನರ ಬೀಕರ ದ್ವೇಷವನ್ನು ಸಂಪಾದಿಸಿ, ಆಸ್ಯದಲ್ಲಿ ಮುಂದೆ ವಾಣಿಜ್ಯ, ಸಾಂಸ್ಕೃತಿಕ ಸಂಪರ್ಕಗಳನ್ನು ಕೂಡಾ ಅವರು ಕಳಕೊಳ್ಳಬಹುದು.

ಆಂಗ್ಲ ಮಿತ್ರತ್ವದಲ್ಲಿ ಹಿಂದೂಸ್ಥಾನಕ್ಕೆ ಅಮೇರಿಕದ ಮಿತ್ರತ್ವದಲ್ಲಿ ಚೀನಕ್ಕೆ—ಸಂಪೂರ್ಣ ಒಕ್ಕಟ್ಟಿನ, ನಿಜಸ್ವಾತಂತ್ರದ ಬಲಗಳು ಒದಗಿ,—ಈ ಫ್ರೆಂಚ್, ಡಚ್ಚ ಸಾಮ್ರಾಜ್ಯಗಳೆಲ್ಲಾ ಒಂದೇ ಫೆಡರೇಶನಿಗೆ ಸೇರಿ, ಚೀನ ಹಿಂದೂಸ್ಥಾನಗಳೊಡನೆ ಪರಸ್ಪರ ಸಹಾಯದ ಸಂಧಾನಗಳನ್ನು ಬೆಳೆಸಿದರೆ ಆಸ್ಯದಲ್ಲಿ ಶಾಂತಿಯು ಶಾಶ್ವತವಾಗಿ ನೆಲೆಗೊಳ್ಳಲಿಕ್ಕೂ, ಬಲಿಷ್ಠ ಆಸ್ಯದೊಡನೆ ವಾಣಿಜ್ಯ ಸಾಂಸ್ಕೃತಿಕ ಸಂಪರ್ಕ ಬೆಳೆಸಿ ಪಾಶ್ಚಾತ್ಯರು ನಿಶ್ಚಿಂತರಾಗಿ ಜೀವನವನ್ನು ನಡೆಸಲಿಕ್ಕೂ ಕಾರಣವಾಗಬಹುದು.

ಸೆನ್‌ಫ್ರಾನ್ಸಿಸ್ಕೊ ಸಮ್ಮೇಳನದಲ್ಲಿ ಈ ಫ್ರೆಂಚ್, ಡಚ್ಚ ಸಾಮ್ರಾಜ್ಯಗಳ ಕುರಿತು ಏನು ನಿಶ್ಚಯವಾಗುವದೋ ನೋಡಲಿಕ್ಕಿದೆ.

ಹಿಂದೀ ಕುರಿತು ಗಾಂಧೀಜಿ

೧. ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ, ಮುಸಲ್ಮಾನರಿಂದ ಮಾತನಾಡಲ್ಪಡುವ ಮತ್ತು ದೇವನಾಗರಿ ಇಲ್ಲವೆ ಪರ್ಶಿಯನ್ ಲಿಪಿಯಲ್ಲಿ ಬರೆಯಲ್ಪಡುವ ಒಂದೇ ಭಾಷೆಯು ಹಿಂದೀ, ಹಿಂದೂಸ್ಥಾನಿ ಇಲ್ಲವೆ ಉರ್ದು ಎಂದು ಕರೆಯಲ್ಪಡುತ್ತದೆ;

೨. ಹಿಂದೂ ಮತ್ತು ಮುಸಲ್ಮಾನರಿಂದ ಉಪಯೋಗಿಸಲ್ಪಡುತಿದ್ದ ಈ ಭಾಷೆಗೆ ಉರ್ದು ಎಂದು ಹೆಸರು ಪ್ರಚಾರದಲ್ಲಿ ಬರುವ ಮೊದಲು ಹಿಂದೀ ಎಂದೇ ಹೆಸರಿತ್ತು.

೩. ಹಿಂದೂಸ್ಥಾನಿ ಎಂಬೀ ಹೆಸರು ಕೂಡಾ ನಂತರ ಪ್ರಚಾರಕ್ಕೆ ಬಂದುದು; (ಸರಿಯಾದ ಕಾಲ ನನಗೆ ತಿಳಿದಿಲ್ಲ.)

೪. ಉತ್ತರದ ಬಹುಸಂಖ್ಯಾಕ ಜನತೆಯು ತಿಳಿದುಕೊಳ್ಳುವ ಭಾಷೆಯನ್ನೇ ಎಲ್ಲಾ ಹಿಂದೂ, ಮುಸಲ್ಮಾನರೂ ಮಾತನಾಡ ಕಲಿಯಬೇಕು;

೫. ಈ ಹಿಂದೀ ಭಾಷೆಯಲ್ಲಿ ಹಿಂದೂಗಳು ಸಂಸ್ಕೃತ ಶಬ್ದಗಳನ್ನೂ, ಮುಸಲ್ಮಾನರು ಉರ್ದು ಇಲ್ಲವೆ ಅರಬೀ ಶಬ್ದಗಳನ್ನೂ ಉದ್ದೇಶ ಪೂರ್ವಕವಾಗಿ ಉಪಯೋಗಿಸುವರು. ಇರ್ವರಲ್ಲಿ ಪರಸ್ಪರ ವಿಶ್ವಾಸ ಸೌಹಾರ್ದ ಸಂಪರ್ಕಗಳು ಇಲ್ಲದಿರುವ ತನಕ ನಾವಿದನ್ನು ಸಹಿಸಬೇಕು;

೬. ಕೊನೆಗೆ ನಮ್ಮ ಹೃದಯದೊಳಗೆ ಐಕ್ಯಭಾವನೆಯುಂಟಾಗಿ ನಾವು ಪ್ರಾಂತ್ಯಗಳಿಗಿಂತಲೂ ದೇಶದ ವಿಷಯವಾಗಿ ಹೆಮ್ಮೆಯುಳ್ಳವರಾದಾಗ ಮತ್ತು ಒಂದೇ ಸ್ಫೂರ್ತಿಮೂಲದಿಂದ ಎಲ್ಲಾ ಮತಗಳೂ ಉಂಟಾದುವೆಂಬ ವಿಷಯವನ್ನು ತಿಳಕೊಂಡವರಾಗಿ ಅವುಗಳಂತೆ ಆಚರಿಸತೊಡಗಿದಾಗ—ಬೇರೆ ಬೇರೆ ಮರಕ್ಕೆ ಹುಟ್ಟಿದ ಹಣ್ಣುಗಳನ್ನು ತಿಳಕೊಂಡು ನಾವು ಅವುಗಳ ರುಚಿಯನ್ನು ಸವಿಯುವಂತೆ—ನಾವು ಒಂದೇ ಸರ್ವಸಾಮಾನ್ಯ ಲಿಪಿಯುಳ್ಳ ಸರ್ವಸಾಮಾನ್ಯ ಭಾಷೆಯ ಗುರಿಯನ್ನು ಮುಟ್ಟುವೆವು; ಪ್ರಾಂತೀಕ ಭಾಷೆಗಳನ್ನು ಪ್ರಾಂತ್ಯವ್ಯವಹಾರಕ್ಕೆ ಮಾತ್ರ ಇಟ್ಟುಕೊಳ್ಳುವೆವು;

೭. ಹಿಂದೀಭಾಷೆಯ ಒಂದೇ ಲಿಪಿಯನ್ನಾಗಲೀ, ಇಲ್ಲವೆ ಒಂದೇ ರೂಪವನ್ನಾಗಲೀ ಯಾವ ವೊಂದೇ ಪ್ರಾಂತ್ಯ ಇಲ್ಲವೆ ಜಿಲ್ಲೆಯ ಜನರ ಮೇಲೆ ಒತ್ತಾಯಪೂರ್ವಕವಾಗಿ ಹೊರಿಸಲು ಪ್ರಯತ್ನಿಸುವುದು ದೇಶಹಿತಕ್ಕೆ ಬಾಧಕವಾದುದು;

೮. ಸರ್ವಸಾಮಾನ್ಯ ಭಾಷಾಸಮಸ್ಯೆಯನ್ನು ಮತೀಯ ಭಿನ್ನತೆ ಭೇಧಾಭೇಧಗಳ ದೃಷ್ಟಿಯಿಂದಲೇ ಕಾಣಬಾರದು;

೯. ಇಂಗ್ಲಿಷ್ ಅಥವಾ ರೋಮನ್ ಲಿಪಿಯು ಭಾರತದ ಸರ್ವಸಾಮಾನ್ಯ ಲಿಪಿಯಾಗಲಾರದು, ಆಗಬಾರದು.

ಮಹಾತ್ಮಾಗಾಂಧಿ.

ಹಿಂದೀ, ಹಿಂದುಸ್ತಾನಿ, ಉರ್ದು ಎಂಬವು ಒಂದೇ

ಸಂಸ್ಕೃತ ಭಾಷೆಯೇ ಮಾತೃಭಾಷೆ

ಜನ್ಮದಿಂದಾಗಲೀ, ಅನುಸರಣೆಯಿಂದಾಗಲೀ ಸಂಸ್ಕೃತ ಭಾಷೆಯ ಮಕ್ಕಳಂತಿರುವ ಭಾರತೀಯ ಭಾಷೆಗಳಿಗೆ ಒಂದೇ ಲಿಪಿಯನ್ನು ಪ್ರಚಾರಕ್ಕೆ ತರಬೇಕೆಂಬ ಚಳವಳವು ಬಹುಕಾಲದಿಂದ ನಡೆಯುತ್ತದೆ. ಕಡುವಾದ ಪ್ರಾಂತೀಕ ಪ್ರೇಮದ ಈ ಕಾಲದಲ್ಲಿ ಎಲ್ಲಾ ಭಾಷೆಗಳಿಗೆ ಒಂದೇ ಲಿಪಿಯಾಗಬೇಕೆಂಬ ಸಲಹೆಯು ಅಧಿಕಪ್ರಸಂಗತನದ್ದೆಂದೆನಿಸಲ್ಪಡದಿರದು. ಆದರೆ ಇಂದು ದೇಶದಲ್ಲೆಲ್ಲ ನಡೆಯುವ ಶಿಕ್ಷಣ ಚಳವಳವು ಒಂದೇ ಭಾಷೆಯ ಪ್ರಶ್ನೆಯನ್ನು ಸ್ವಲ್ಪಮಟ್ಟಿಗಾದರೂ ಲಕ್ಷಿಸಬೇಕಾಗುತ್ತದೆ. ಒಂದೇ ಲಿಪಿಯಾಗಬೇಕೆನ್ನುವವರಲ್ಲಿ ನಾನೂ ಒಬ್ಬನು. ದಕ್ಷಿಣ ಆಫ್ರಿಕದಲ್ಲಿದ್ದಾಗ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಗುಜರಾತಿಗಳೊಡನೆ ಪತ್ರವ್ಯವಹಾರವನ್ನು ನಾನು ದೇವನಾಗರಿ ಲಿಪಿಯಲ್ಲೇ ನಡೆಸುತಿದ್ದುದು ನನಗೆ ನೆನಪಿದೆ.

ಇದರಿಂದ ಅಂತರ್‌ಪ್ರಾಂತೀಯ ವ್ಯವಹಾರಕ್ಕೆ ತುಂಬಾ ಸಹಾಯವಾಗುವುದು. ಮಾತ್ರವಲ್ಲ ವಿವಿಧ ಪ್ರಾಂತ್ಯ ಭಾಷೆಗಳನ್ನು ಕಲಿಯಲೂ ಅತ್ಯಂತ ಸುಲಭವಾಗುತ್ತದೆ. ದೇಶದಲ್ಲಿ ಸುಶಿಕ್ಷಿತ ಜನರು ಈ ಕುರಿತು ಒಟ್ಟುಗೂಡಿ ಪರ್ಯಾಲೋಚನೆ ಮಾಡಿ ಒಂದೇ ಸಾಮಾನ್ಯ ಲಿಪಿಯನ್ನು ಒಪ್ಪಿಕೊಂಡಲ್ಲಿ ಮತ್ತೆ ಅದನ್ನು ಸಾರ್ವತ್ರಿಕವಾಗಿ ಅನುಸರಣೆಗೆ ತರುವುದು ಸುಲಭವಾಗುತ್ತದೆ.

ಮಿಲಿಯಾವಧಿ ಅಶಿಕ್ಷಿತರಿಗೆ ಯಾವ ಲಿಪಿಯನ್ನು ಅನುಸರಿಸಹೇಳಿದರೂ ಅವರಿಗೆ ಅದೊಂದು ಮಹತ್ವದ ವಿಷಯವೆಂದು ತೋರದು. ಈ ಸಂತೋಷದ ಸೂಚನೆಯು ಕಾರ್ಯರೂಪಕ್ಕೆ ಬಂದರೆ ಭಾರತದಲ್ಲಿ ಎರಡೇ ಲಿಪಿಗಳು ಉಂಟಾಗುವುವು. ದೇವನಾಗರಿ ಮತ್ತು ಉರ್ದು. ಆಗ ರಾಷ್ಟ್ರೀಯವಾದಿಯಾದ ಪ್ರತಿಯೊಬ್ಬನು ಈ ಎರಡು ಲಿಪಿಗಳನ್ನು ಕಲಿಯುವುದು ತನ್ನ ಕರ್ತವ್ಯವೆಂದು ತಿಳಕೊಳ್ಳುವನು.

ನಾನು ಎಲ್ಲಾ ಭಾರತೀಯ ಭಾಷಾಪ್ರೇಮಿಯು. ಶಕ್ಯವಿದ್ದಷ್ಟು ಲಿಪಿಗಳನ್ನು ನಾನು ಕಲಿಯಲು ಪ್ರಯತ್ನಮಾಡಿದ್ದೇನೆ. ಎಪ್ಪತ್ತೈದು ವರ್ಷ ದಾಟಿದ ಈ ಪ್ರಾಯದಲ್ಲೂ ನನಗೆ ಬಿಡುವಿದ್ದರೆ ಇನ್ನೂ ಹೆಚ್ಚಿನ ಭಾರತೀಯ ಭಾಷೆಗಳನ್ನು ಕಲಿಯುವಷ್ಟು ಚೇತನ್ಯ ನನ್ನಲ್ಲಿದೆ. ಅದು ನನಗೊಂದು ಮಾನಸೀಕ ವಿಶ್ರಾಂತಿ ವ್ಯಾಯಾಮವಾಗುವುದು. ನನ್ನಲ್ಲಿ ಹಲವು ಭಾಷಾಪ್ರೇಮವಿಷ್ಟಿದ್ದರೂ ನಾನು ಅವುಗಳೆಲ್ಲದ ಲಿಪಿಯನ್ನು ಕಲಿಯಲಿಲ್ಲವೆಂಬುದಕ್ಕೆ ವ್ಯಥೆಪಡುತ್ತೇನೆ. ಆದರೆ ಈ ಭಗಿನಿ ಭಾಷೆಗಳೆಲ್ಲ ಒಂದೇ ಲಿಪಿಯಲ್ಲಿ ಬರೆಯಲ್ಪಟ್ಟರೆ ಪ್ರಾಂತ್ಯಗಳೆಲ್ಲದ ಪ್ರಾಮುಖ್ಯ ಭಾಷೆಗಳ ಜ್ಞಾನವನ್ನು ಅಲ್ಪಾವಧಿಯಲ್ಲಿ ಸ್ವಲ್ಪಸ್ವಲ್ಪವಾಗಿಯಾದರೂ ನಾವು ಹೆಕ್ಕಿಕೊಳ್ಳುತಿದ್ದೆ.

ಆಕೃತಿ ಸೌಂದರ್ಯಗಳಲ್ಲಿ ದೇವನಾಗರಿ ಲಿಪಿಯು ಯಾವುದಕ್ಕೂ ಕಡಿಮೆಯಾದುದಲ್ಲ. ಶಿಕ್ಷಣ ಪ್ರಚಾರ ಚಳವಳದಲ್ಲಿ ನಿರತರಾದವರು ನನ್ನ ಈ ಸೂಚನೆಯ ಕಡೆಗೆ ಸ್ವಲ್ಪ ಗಮನಕೊಡುವರೆಂದು ಹಾರೈಸುತ್ತೇನೆ. ಅವರು ದೇವನಾಗರಿ ಲಿಪಿಯನ್ನು ಅನುಕರಣೆಗೆ ತಂದರೆ ಮುಂದಿನ ಜನಾಂಗಕ್ಕೆ ಅವರು ಅಪಾರ ಶ್ರಮವನ್ನು ಕಡಿಮೆಮಾಡಿದಂತಾಗಿ ಅವರ ಹರಸುವಿಕೆಗೆ ಪಾತ್ರರಾಗುವರು.

'ಗಾಂಧೀಜಿ'

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾಗಬೇಕಾದರೆ ಪ್ರತಿದಿನ ರಾತ್ರೆ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

BILE BEANS

ಬೈಲ್ ಬೀನ್ಸ್ ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು

ಸಿಹಿ ಸುದ್ದಿ ಸಂಗ್ರಹ

ಪ್ರಾಚೀನ ಕಾಲದ ಗ್ರಂಥಾಲಯಗಳಲ್ಲಿಯೂ ಓದುಗರು ಪುಸ್ತಕ ಕದ್ದುಕೊಂಡು ಹೋಗುತಿದ್ದರು. ಗ್ರೀಸಿನ ಎಥೆನ್ಸ್ ನಗರದ ಪ್ರಾಚೀನ ಗ್ರಂಥಾಲಯದಲ್ಲಿ ಸಿಕ್ಕಿದ ಎರಡು ಸಾವಿರ ವರ್ಷ ಹಿಂದಿನ ಒಂದು ದಾಖಲೆಯಲ್ಲಿ "ಇಲ್ಲಿ ಓದಲು ಬರುವವರಿಗೆ ಪುಸ್ತಕಗಳನ್ನು ಮನೆಗೊಯ್ಯಲು ಕೊಡಬಾರದು" ಎಂದು ಬರೆದಿರುವ ನಿಯಮವು ಕಂಡುಬಂದಿದೆ.

* * *

ಪಂಜಾಬ್ ವಿಶ್ವವಿದ್ಯಾಲಯದ ಶಾಲಾ ಕೋಲೇಜುಗಳಲ್ಲಿ ಯೋಗಾಭ್ಯಾಸ ಶಿಕ್ಷಣಕೊಡಬಹುದೆಂದು ಸರಕಾರದ ವ್ಯಾಯಾಮ ಇಲಾಖೆಯವರು ಅನುಮತಿ ಇತ್ತಿದ್ದಾರೆ. ಆಗಲೇ ಎರಡು ಕೋಲೇಜುಗಳಲ್ಲಿ ಅದು ಪ್ರಾರಂಭಿಸಲ್ಪಟ್ಟಿದೆ.

* * *

ಪೋಪರ ವೆಟಿಕನ್ ೩ ಮೈಲು ವಿಸ್ತೀರ್ಣದ ಜಗತ್ತಿನ ಅತೀ ಚಿಕ್ಕ 'ರಾಜ್ಯ'. ೧೫೦೦ ಜನಸಂಖ್ಯೆ. ಅಲ್ಲಿ ಎಂದೂ ಉಪಯೋಗಿಸಲ್ಪಡದ ರೆಲ್ವೇ ಸ್ಟೇಶನಿದೆ. ವಾಯರ್ಲೆಸ್ ಕೇಂದ್ರವಿದೆ. ಒಂದು ಬೇಂಕು, ಕೋರ್ಟು, ಜೈಲು, ಟಪ್ಪಾಲಾಫೀಸುಗಳೂ ಇವೆ. ಆದರೆ ಅಲ್ಲಿ ಹೋಟೆಲು ಮಾತ್ರ ಇಲ್ಲ. ಎರಡು ಸಣ್ಣ ಅಂಗಡಿಗಳಿವೆ. ಹೂತೋಟವಿದೆ, ಆದರೆ ಅದರಲ್ಲಿ ಯಾರೂ ಕಾಲು ಚಾಚಿ ಒರಗಬಾರದು.

* * *

ಮೋಟಾರು ಕೈಗಾರಿಕೆ ಪ್ರಾರಂಭವಾದಂದಿನಿಂದ ಅಮೇರಿಕದ ಕಾರ್ಖಾನೆಗಳಿಂದ ೨೨೦೦ ಬೇರೆ ಬೇರೆ ವಿಧದ ಮತ್ತು ಹೆಸರಿನ ಕಾರುಗಳು ತಯಾರಿಸಲ್ಪಟ್ಟಿವೆ. ಕ್ಲೀವ್‌ಲೆಂಡ್ ನಗರವೊಂದರ ಕಾರ್ಖಾನೆಗಳಲ್ಲೇ ೮೦ ನಮೂನೆಯ ಬೇರೆ ಬೇರೆ ಕಾರುಗಳು ತಯಾರಾಗುತ್ತವೆ.

* * *

ಬ್ರಿಟನಿನ ಯೋರ್ಕ್ ಇಗರ್ಜಿಯಲ್ಲಿ ಅತೀ ದೊಡ್ಡ ಕಿಟಿಕಿಯೊಂದಿದೆ. ಅದರ ಉದ್ದ ೭೫ಅಡಿ, ಅಗಲ ೩೨ ಅಡಿ.

* * *

ಪ್ರಖ್ಯಾತ ಮೋಟಾರು ಕಾರ್ಖಾನೆ ಮಾಲಕನಾದ ಹೆನ್ರಿಪೋರ್ಡನು ತನ್ನ ಸ್ವಂತ ಪ್ರವಾಸಕ್ಕೆ ಬೇರೆ ಕಂಪೆನಿಯ ಕಾರುಗಳನ್ನೇ ಉಪಯೋಗಿಸುತ್ತಾನೆ. ಮಿನರ್ವಾ ಎಂಬ ಜರ್ಮನ್ ತಯಾರಿಕೆಯ ಕಾರೊಂದು ಅವನ ಮೆಚ್ಚಿನದಂತೆ.

* * *

೧೭೮೩ರಲ್ಲಿ ಪ್ರಿನ್ಸ್‌ಟನ್ ಎಂಬ ನಗರವು ನಾಲ್ಕು ತಿಂಗಳಮಟ್ಟಿಗೆ ಸಂಯುಕ್ತ ಅಮೇರಿಕದ ರಾಜಧಾನಿಯಾಗಿತ್ತು. ಈಗ ವೊಶಿಂಗ್ಟನ್.

* * *

ಎಪ್ರಿಲ್ ತಿಂಗಳಲ್ಲಿ ಉಂಟಾಗುವ ಗುಡುಗು ಪೈರು ಬೆಳೆಗಳಿಗೆ ಪುಷ್ಟಿದಾಯಕವಾಗಿರುತ್ತದೆ.

* *

ರಶ್ಯನರಿಗೆ ಭಾರತೀಯ ಸಂಸ್ಕೃತಿ ತತ್ವಜ್ಞಾನ ವಿಷಯಗಳನ್ನು ಭಾಷಣ ಮೂಲಕ ಪ್ರಚಾರಿಸಲು ಸೋವಿಯಟ್ ಸರಕಾರದವರು ಸುಮಾರು ನೂರು ಮಂದಿ ಭಾರತೀಯ ವಿವಿಧ ಮತ ತತ್ವಜ್ಞಾನಿಗಳನ್ನು ಆಹ್ವಾನಿಸಿದ್ದು, ಕೆಲವರು ಆಗಲೇ ಅಲ್ಲಿಗೆ ಹೋಗಿರುವರು.

* * *

ರಷ್ಯನ್ ಸಾಹಿತ್ಯ ಪ್ರಚಾರ ಇಲಾಖೆಯವರು ಸಂಪೂರ್ಣ ರಾಮಾಯಣವನ್ನು ತಮ್ಮ ಭಾಷೆಯಲ್ಲಿ ಸಂಪಾದಿಸಿ ಪ್ರಕಟಿಸಿರುವರು.

* * *

ಕುತ್ತಿಗೆಯ ಹತ್ತಿರದ ಒಂದೇ ಅಳತೆಯು ಸಿಕ್ಕಿದರೆ ಇತರ ಎಲ್ಲಾ ಅಂಗಾಂಗಗಳಿಗೆ ಸರಿಯಾಗಿ ಒಪ್ಪುವ ಉಡುಪುಗಳನ್ನು ತಯಾರಿಸುವ ಒಂದು ಯಂತ್ರವನ್ನು ಇಂಗ್ಲೆಂಡಿನ ಲಿಡ್ಸ್ ನಗರದ ಒಬ್ಬ ದರ್ಜಿಯು ಕಂಡುಹಿಡಿದಿರುವನು.

* * *

ಗಾಜಿನ ಇಟ್ಟಿಗೆಗಳ ಮನೆಗಳನ್ನು ಕಟ್ಟುವುದಕ್ಕೆ ದ. ಆಫ್ರಿಕದ ಸರಕಾರದವರು ಯೋಚಿಸಿರುವರು. ಗಾಜಿನ ಇಟ್ಟಿಗೆಯ ಮನೆಗಳು ಸೆಕೆಕಾಲದಲ್ಲಿ ತಂಪಾಗಿಯೂ, ಚಳಿಗಾಲದಲ್ಲಿ ಬೆಚ್ಚಗಾಗಿಯೂ ಇರುತ್ತವಂತೆ. ಇಟ್ಟಿಗೆಗಳು ಪಾರದರ್ಶಕವಲ್ಲ.

ಹೀರೋ ನಂಬರ್....1

(೨ನೇ ಪುಟದಿಂದ)

ಮರುದಿನ ಬೇಸರ ಕಳೆಯಲು ಚಂದ್ರಕಾಂತನು "Love's comedy" ಚಲಚಿತ್ರ ನೋಡಲು ಹೋದ. ತಾನು ಹೇಗೆ ಹೀರೋ ಆಗಲಿ ಎಂದೇ ಆತನ ತಲೆಯಲ್ಲಿ ಆಲೋಚನೆ ಏಳುತಿತ್ತು.

ಚಿತ್ರವು ಆಂಗ್ಲ ಭಾಷೆಯ ಮಾರಾಮಾರಿ ಚಿತ್ರವಾಗಿತ್ತು. ನಾಯಕಿಯ ಪ್ರೇಮಕ್ಕಾಗಿ ನಾಯಕನು ಹಲವರ ಹಲ್ಲು ಉದುರಿಸಿ, ಹಲವರನ್ನು ನೆಲಕ್ಕೆ ಕೆಡಹಿ ಕೊನೆಗೆ ಅವಳನ್ನು ಚುಂಬಿಸಿದಾಗ ಚಂದ್ರಕಾಂತನಿಗೆ ತನ್ನ ಜೀವನವೂ ಒಂದು ಸಿನಿಮಾವಾಗಬಾರದೇಕೆ ಎಂದು ತೋರಿತು.

ಚಿತ್ರ ಅಂತ್ಯವಾಯಿತು. ಎಲ್ಲರೂ ಥಿಯೇಟರಿನಿಂದ ಹೊರ ಬಂದರು. ಚಂದ್ರಕಾಂತನು ಆಲೋಚನೆಯ ಗುಂಗಿನಲ್ಲಿ ನಡೆಯುತ್ತಿದ್ದ. ದೂರದಲ್ಲಿ ಹುಡುಗನೊಬ್ಬನು ಹುಡುಗಿಯೊಬ್ಬಳನ್ನು ಹಿಂಬಾಲಿಸುವುದನ್ನು ಆತನು ನೋಡಿದ. ಆತನು ಅದನ್ನು ಮನಸ್ಸಿಗೆ ತಂದುಕೊಳ್ಳಲಿಲ್ಲ.

ಜನರೆಲ್ಲರೂ ಚದರುತ್ತಾ ಬಂದರು. ಹುಡುಗಿ ಹಿಂದೆ ಹಿಂದೆ ನೋಡುತ್ತಾ ಭೀತಿಯಿಂದ ನಡೆಯುತ್ತಿದ್ದಂತೆ ಚಂದ್ರಕಾಂತನಿಗೆ ತೋರಿತು. ಆ ಹಾದಿಯಲ್ಲಿ ದೀಪಗಳಿಲ್ಲದ್ದುದ್ದರಿಂದ ಚಂದ್ರಕಾಂತನಿಗೆ ಅವಳ ಮುಖ ತೋರಲಿಲ್ಲ. ಆತನಿಗೆ ಸಂಶಯ ಬಂದುದರಿಂದ ಆತನೂ ಬೇಗ ಬೇಗನೆ ಹೆಜ್ಜೆಹಾಕುತ್ತಾ ಮುಂದುವರಿದ.

ಹುಡುಗಿಯನ್ನು ಹಿಂಬಾಲಿಸಿದ ತರುಣನು ತನ್ನ ಉದ್ದೇಶ ಸಾಧಿಸಲು ಫಕ್ಕನೆ ಹುಡುಗಿಯ ಹತ್ತಿರ ಹೋದಂತೆ ಚಂದ್ರಕಾಂತನಿಗೆ ತೋರಿತು.

ಕೂಡಲೇ ಆತನು ಧಾವಿಸಿ ಆ ಸ್ಥಳಕ್ಕೆ ಬಂದ. ಯುವಕ ಹುಡುಗಿಯ ಕೈಹಿಡಿಯುವವನಿದ್ದ. ಕೂಡಲೇ ಚಂದ್ರಕಾಂತ ಟನ್ನನೇ ಜಿಗಿದು ಆ ಯುವಕನ ಕೆನ್ನೆಗೆ ಒಂದೇಟು ಕೊಟ್ಟ.

ಈ ಏಟು ಬಿದ್ದದ್ದೇ ಹುಡುಗ ಜೀವ ಇದ್ದರೆಬೇಡಿ ತಿಂದೇನೆಂದು ಓಡಿದ. ಚಂದ್ರಕಾಂತ ಈಗ ನಡುಗುತ್ತಿದ್ದ ಹುಡುಗಿಯ ಕಡೆಗೆ ನೋಡಿದ. ಅರೆ! ಅವಳು ಲಿಲ್ಲಿ!

"ಲಿಲ್ಲಿ! ರಾತ್ರಿಯ ಹೊತ್ತು ನೀನೇಕೆ ಒಬ್ಬಳೇ ಚಿತ್ರನೋಡಲು ಬಂದಿ! ಸ್ತ್ರೀಗೆ ಸ್ವಾತಂತ್ರ್ಯ ದೊರೆತರೆ ಗಾಮನ ಅವತಾರವಾಗುವಳೆಂದು ಭಾವಿಸಿದೆಯೇನು?"

ಲಿಲ್ಲಿ ಮಾತಾಡಲಿಲ್ಲ.

"ಮನೆಗೆ ಹೋಗುವಾ!" ಎಂದ ಚಂದ್ರಕಾಂತ.

"My Hero!" ಲಿಲ್ಲಿ ಮೃದು ಸ್ವರದಿಂದ ಹೇಳಿದಳು.

"ಬರೇ ಹಿರೋನಲ್ಲ. ಹಿರೋ ನಂಬರ್ ವನ್ ಎಂದು ಹೇಳು" ಎಂದ ಚಂದ್ರಕಾಂತ. ಇಬ್ಬರೂ ನಕ್ಕರು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 69/1945.

ಅರ್ಜಿದಾರು:—1. ಗಿರಿಜಯಾನೆ ಪದ್ಮಾವತಿ ಅಮ್ಮ. 2. ರಮಾಯಾನೆ ಕೃಷ್ಣಾಬಾಯಿ.

ಎದ್ರಿ:—ಮ್ಯಾನರ್ ಮನೋರಮಾ (ಸುಮಾರು 7 ವರ್ಷ) ಗುಂಡುಯಾನೆ ಶಂಕರನಾರಾಯಣ ಭಟ್ಟರ ಮಗಳು ಈಕೆಯ ಗಾರ್ಡಿಯನ್ ಬಿ. ಮಂಜುನಾಥ ಭಟ್ಟ. ರಾಯಭಟ್ಟರ ಮಗ ತೀರ್ಥಹಳ್ಳಿಕಸಬೆ, ಶಿವಮೊಗ್ಗ ಡಿಸ್ಟ್ರಿಕ್ಟ್ ಮೈಸೂರು ಪ್ರೊವಿನ್ಸ್.

ಸದ್ರಿ 1ನೇ ಅರ್ಜಿದಾರಳ ತನ್ನ ವ 2ನೇ ಅರ್ಜಿದಾರಳ ಅಣ್ಣ ಮೃತ ವೆಂಕಟೇಶ ಭಟ್ಟರು "The Bombay Life Assurance Company Limited Bombay" ಈ ಕಂಪೆನಿಯಲ್ಲಿ ಪೋಲಿಶ್ ನಂಬ್ರ 103215 ನೇಗೆ ತೆಗೆದ ಇನ್ಶೂರೆನ್ಸಿನ ಪ್ರಕಾರ ಬರತಕ್ಕ ರೂ. 1000—0—0ವು ಪಡೆದುಕೊಳ್ಳುವ ಹಾಗೆ ತಮಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಅದುದರಿಂದ ಆ ಸಂಬಂಧವಾಗಿ ಯಾರಾದರೂ ಆಕ್ಷೇಪ ಹೇಳುವವರಿದ್ದರೆ ತಾರೀಕು 19—4—45ನೇ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹಿರು ಮಾಡಿಕೊಳ್ಳುವಲ್ಲಿ ತಪ್ಪಿದರೆ ಸದ್ರಿ ಅರ್ಜಿಯ ಮುಂದಿನ ಹುಕುಂ ನಡಿಯಲಾಗುವುದೆಂಬ ಸಂಗ್ತಿಯನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಎಲ್ಲರಿಗೂ ತಿಳಿಸೋಣಾಗುತ್ತದೆ.

K. Raghunath Shenai
Pleader for Petitioners.

ಕುಂದಾಪುರ 29—3—45.

FOR SALE

At Falnir a Compound of about 40 cents with two big houses well and fruit bearing trees. Healthy Locality Price Rs. 8000 or there about. Apply at once in pers on or by letter for further particulars to Mr. A. M. Abreao, near Kankanady convent, Falnir Road, Kankanady P. O.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೆನೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳುಕ್ಕಡಿ ಮದ್ದು

AMRUTANJAN DEPOTS LTD. BOMBAY MADRAS CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 13—4—1945 [ಸಂಚಿಕೆ 15]

ವಧೂವರರಿಗೆ ಗಾಂಧೀಜಿ ಸಂದೇಶ

ಸುಖೋಪಭೋಗವೇ ನಮ್ಮ ಗುರಿಯಲ್ಲ

ದಂಪತಿಗಳು ಜೀವನ ಸಾತಿಗಳು

ಗಾಂಧೀ–ಕಸ್ತೂರ್‌ಬಾ ಅವರ ನಿದರ್ಶನ

ಬರೆದವರು:- ಮ. ಗಾಂಧೀ

ನಮ್ಮನ್ನು ಕರ್ತವ್ಯ ಪರಾಯಣರನ್ನಾಗಿ ಮಾಡದ ಯಾವ ಸಮಾರಂಭಗಳಲ್ಲೂ ನನಗೆ ನಂಬಿಕೆ ಇಲ್ಲ. ನಾನು ಸ್ವಂತವಾಗಿ ವಿಚಾರ ಮಾಡಲು ಸಮರ್ಥನಾದಂದಿನಿಂದ ನನ್ನಲ್ಲಿ ಈ ಅಭಿಪ್ರಾಯವುಂಟಾಗಿದೆ. ಸಮಾರಂಭಗಳಲ್ಲಿ ಉಪಯೋಗಿಸಲ್ಪಡುವ ಮಂತ್ರಗಳೆಲ್ಲವೂ ಸಂಸ್ಕೃತದಲ್ಲಿವೆ. ಅವುಗಳ ಅರ್ಥವನ್ನು ನಾವು ಸ್ಪಷ್ಟವಾಗಿ ತಿಳಕೊಳ್ಳಲು ಪ್ರಯತ್ನಿಸಬೇಕು. ಸಂಸ್ಕೃತದ ಪ್ರತಿಯೊಂದು ಶಬ್ದದಲ್ಲೂ ಮನಮೋಹಕವಾದ ಆಕರ್ಷಣೆಯೊಂದಿದೆ.

ಲಗ್ನ ಸಮಾರಂಭದಲ್ಲಿ ಉಪಯೋಗಿಸಲ್ಪಡುವ ಒಂದು ಶ್ಲೋಕದಲ್ಲಿ ಗಂಡನು ತನ್ನ ಪತ್ನಿಯು ಆರೋಗ್ಯವಂತನೂ ಗುಣವಂತನೂ ಆದ ಮಗನನ್ನು ಪಡೆಯಲೆಂದು ಹಾರೈಸುತ್ತಾನೆ. ಇದು ಯೋಗ್ಯವಾದ ಹಾರೈಕೆಯು. ಮಗುವನ್ನು ಪಡೆಯಬೇಕೆಂಬ ಉದ್ದೇಶವಿದ್ದರೆ ಶುದ್ಧ ಶಾಸ್ತ್ರೋಕ್ತ ರೀತಿ ಭಾವದಲ್ಲಿ ನೆರವೇರಿಸಲ್ಪಡುವ ವಿವಾಹವು ಅತ್ಯಾವಶಕ. ಲೈಂಗೀಕ ತೃಪ್ತಿಗಾಗಿ ಮಾಡಿಕೊಳ್ಳಲ್ಪಡುವ ವಿವಾಹವು ಎಂದಿಗೂ ವಿವಾಹವೆನಿಸದು. ಅದು ವ್ಯಭಿಚಾರವೆಂದೆನಿಸುವುದು. ಅದು ಕಾಮೇಚ್ಛೆ ಪ್ರಧಾನವಾದುದು. ವಿವಾಹ ಮಾಡಿಕೊಳ್ಳುವ ಇಬ್ಬರಲ್ಲಿ ಮಗುವನ್ನು ಪಡೆಯಬೇಕೆಂಬ ಸದುದ್ದೇಶವಿದ್ದಲ್ಲಿ ಮಾತ್ರ ಲೈಂಗೀಕ ವ್ಯವಹಾರವು ನೈತೀಕವಾಗುವುದು. ಇದು ಪರಮ ಪವಿತ್ರವಾದ ಭಾವನೆಯು. ಆದುದರಿಂದ ಅಂತಹ ಕಾರ್ಯವನ್ನು ಪ್ರಾರ್ಥನಾಪೂರ್ವಕವಾಗಿ ನೆರವೇರಿಸಬೇಕಾದುದು ಅತ್ಯಾವಶ್ಯಕ.

ಶಾರೀರಿಕವಾಗಿಯೂ ಮಾನಸಿಕ ನೈತೀವಾಗಿಯೂ ಆರೋಗ್ಯವಂತರಾಗಿ ಇರದವರಿಬ್ಬರು ಎಂದೂ ಲಗ್ನಬಂಧನದಲ್ಲಿ ಒಟ್ಟುಕೂಡಬಾರದು. ಅದು ವ್ಯಭಿಚಾರವೆನಿಸುವುದು. ಕಾಮೇಚ್ಛೆಯೇ ಅದರ ಮೂಲ. ನಮ್ಮಲ್ಲಿನ ಮೃಗೀಯ ಕೋರಿಕೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಮದುವೆ ಮಾಡಿಕೊಳ್ಳುವುದೆಂಬ ಪುರಾತನ ಅಭಿಪ್ರಾಯಗಳನ್ನು ನಾವು ಕಿತ್ತೊಗೆಯಬೇಕು. ಅದು ಕೇವಲ ಮೂಢ ನಂಬಿಕೆ. ಲಗ್ನ ಸಮಾರಂಭವು ಅಗ್ನಿಯ ಮುಂದೆ ಜರಗಿಸಲ್ಪಡುವುದು. ಆ ಪವಿತ್ರವಾದ ಬೆಂಕಿಯು ನಮ್ಮಲ್ಲಿನ ಕಾಮ ಕೋರಿಕೆಗಳನ್ನು ಸುಟ್ಟು ಹಾಕಲಿ.

ಸಂಯಮನ ತಾಳಿ ಲೈಂಗೀಕ ವ್ಯವಹಾರದಿಂದ ದೂರವಿರುವುದು ಅಸ್ವಾಭಾವಿಕವಾದುದೆಂಬ ಮೂಢನಂಬಿಕೆಯು ನಮ್ಮ ಕೆಲವರಲ್ಲಿ ಬೇರೂರಿದೆ. ಇದಕ್ಕಿಂತಲೂ ಹೆಚ್ಚಿನ ಆತ್ಮನಾಶಕವಾದ ಮೂಢ ನಂಬಿಕೆ ಬೇರೆ ಇಲ್ಲ. ನಿಮ್ಮ ಮನಸ್ಸುಗಳು ದುರ್ಬಲವಾಗಿರುತ್ತವೆಂಬ ಮಾತ್ರಕ್ಕೆ ಬ್ರಹ್ಮಚರ್ಯದ ಪವಿತ್ರತೆಯನ್ನು ಕೀಳು ಮಾಡಬೇಡಿರಿ. ಅಪವಿತ್ರತೆಯನ್ನು ಪವಿತ್ರತೆಯನ್ನಾಗಿ ಭಾವಿಸದಿರಿ. ಲೈಂಗೀಕ ವ್ಯವಹಾರವನ್ನು ಮಿತದಲ್ಲಿಟ್ಟುಕೊಳ್ಳುವುದೇ ನಿಜವಾದ ಮದುವೆಯ ಉದ್ದೇಶವಾಗಿರುತ್ತದೆ. ಇದರ ಹೊರತಾಗಿ ಮದುವೆಯ ಉದ್ದೇಶಗಳು ಬೇರೆ ಇದ್ದರೆ ಅದಕ್ಕೆ ಪವಿತ್ರತೆ ಇಲ್ಲವೇ ಇಲ್ಲ.

ನೀವು ವಿವಾಹದಲ್ಲಿ ಬಂಧಿತರಾಗುವುದು ಸಮಾನ ಸ್ನೇಹಿತರಾಗಿ—ಪತಿಯು ಸ್ವಾಮಿಯಾದರೆ ಪತ್ನಿಯು ಸ್ವಾಮಿನಿಯೇ ಸರಿ. ಒಬ್ಬರು ಇನ್ನೊಬ್ಬರ ಯಜಮಾನರು, ಒಬ್ಬರು ಇನ್ನೊಬ್ಬರ ಸಹಾಯಕರು ಮತ್ತು ಜೀವನ ಪಾಲುಗಾರರು.

ಗಂಡಂದಿರಲ್ಲಿ ಹೆಚ್ಚಿನ ವಿವೇಕವಿದ್ದರೆ ಅವರು ತಮ್ಮ ಅರ್ಧಾಂಗಿಯಲ್ಲಿ ಅದನ್ನು ತುಂಬಲು ಪ್ರಯತ್ನಿಸಬೇಕು. ನಿಜವಾದ ಗುರುಗಳು ಸಹಾಯ ಮಾಡುವವರಲ್ಲದೆ ಸಂಕಷ್ಟವನ್ನುಂಟು ಮಾಡುವವರಲ್ಲ. ಅವರಿರ್ವರೊಳಗೆ ಮನಸ್ಸು, ಮಾತು ಕಾರ್ಯಗಳಲ್ಲಿ ಸಂಪೂರ್ಣ ಸಹಕಾರವಿರಬೇಕು. ಅವರೊಳಗೆ ಪರಸ್ಪರ ಗುಟ್ಟುಗೋಪ್ಯಗಳಿರಬಾರದು—ಅವರ ಆತ್ಮವು ಒಂದೇಯಾಗಿರಬೇಕು.

ಠಕ್ಕು ವಂಚನೆಗಾರರಾಗಬೇಡಿರಿ. ನಿಮ್ಮಿಂದ ಸಾಧ್ಯವಾಗದನ್ನು ಪ್ರಯತ್ನಿಸಿ ನಿಮ್ಮ ಆರೋಗ್ಯವನ್ನು ಕಳಕೊಳ್ಳಬೇಡಿರಿ. ಸಂಯಮನದಿಂದ ಒಬ್ಬನ ಆರೋಗ್ಯಕ್ಕೆ ಹಾನಿಯುಂಟಾಗದು. ಹೊರಗಿಂದ ಬ್ರಹ್ಮಚರ್ಯವನ್ನು ಪ್ರದರ್ಶಿಸಿ ಒಳಗೊಳಗೆ ಕಾಮೇಚ್ಛೆಗಳಿಗೆ ಮನಸ್ಸನ್ನು ಸಡಿಲು ಬಿಡುವವರ ಆರೋಗ್ಯ ಮಾತ್ರ ಖಂಡಿತ ಕೆಡುವುದು. ಸಂಯಮಿಯಾದ ಬ್ರಹ್ಮಚಾರಿಯ ಮನೋಶಕ್ತಿಯು ದಿನೇ ದಿನೇ ಅಭಿವೃದ್ಧಿಗೊಳ್ಳುವುದು, ಅವರಲ್ಲಿ ಸಾಕ್ಷಾತ್ಕಾರವಾಗುವುದು.

ಸಂಯಮಿಗಳಾಗಿರಬೇಕಾದರೆ ಮೊದಲು ಮನಸ್ಸನ್ನೇ ಬಿಗಿ ಹಿಡಿಯಬೇಕು ನಿಮ್ಮ ನಿಮ್ಮ ಸಾಮರ್ಥದ ಮಿತಿಯನ್ನು ತಿಳಕೊಂಡವರಾಗಿ ಅದಕ್ಕೆ ತಕ್ಕಂತೆ ಸಾಧ್ಯವಿದ್ದಷ್ಟನ್ನೇ ಮಾಡಿರಿ. ಯಜ್ಞೋಪವೀತಧಾರಣೆಯಿಂದ ಶೂದ್ರನಾಗಿದ್ದ ಹುಡುಗನು ಹೊಸ ಜನ್ಮತಾಳಿ ಬ್ರಾಹ್ಮಣನಾಗುವಂತೆ ಮದುವೆಯೂ ಹೊಸ ಜನ್ಮಜನ್ಮವನ್ನುಂಟು ಮಾಡುವಂತಹ ಪವಿತ್ರವಾದ ವಿಷಯ. ಆದುದರಿಂದ ನಿಮ್ಮ ಯೋಜನೆಗಳನ್ನು ಶುದ್ಧೀಕರಣ ಮಾಡಿಕೊಳ್ಳಿರಿ. ಇದು ಸರ್ವತೋಮುಖ ಶ್ರೇಯೋಭಿವೃದ್ಧಿಯದು. ಈ ಜಗತ್ತೇ ಅಗಾಧವಾದ ಯೋಜನೆಯ ಪರಿಣಾಮದಿಂದ ಉದ್ಭವಿಸಿದುದಾಗಿದೆ. ಪವಿತ್ರವಾದ ಧ್ಯೇಯಗಳನ್ನು ಇಟ್ಟುಕೊಳ್ಳಿರಿ. ಅಂದರೆ ನಿಮಗೆ ಯಾವುದರ ಹಾನಿಯೂ ಎಟಕದು.

ಮಕ್ಕಳನ್ನು ಪಡೆಯುವ ಇಚ್ಛೆ ಇಲ್ಲದ್ದರೆ ಮದುವೆ ಮಾಡಿಕೊಳ್ಳುವ ಆವಶ್ಯಕತೆಯೇ ಇಲ್ಲ. ಆತ್ಮಶಾಂತಿಗಾಗಿ ಮಾಡಿಕೊಳ್ಳುವ ಮದುವೆಗಳು ನನಗೆ ಮೆಚ್ಚುವುದಿಲ್ಲ. ಲೈಂಗೀಕ ವ್ಯವಹಾರ ಇಚ್ಛೆ ಇಲ್ಲದೆ ಕೆಲವರು ಸ್ತ್ರೀಯರನ್ನು ರಕ್ಷಣೆ ಮಾಡುವುದಕ್ಕೆಂದು ಮದುವೆ ಮಾಡಿಕೊಳ್ಳುತ್ತಾರೆ. ಆದರೆ ಇಂತಹ ಸಂದರ್ಭಗಳು ಬಹಳ ಅಪರೂಪವಾಗಿ ಬರುತ್ತವೆ.

ಮಹಾಭಾರತದಲ್ಲಿ ವ್ಯಾಸನು ನಿಯೋಗವನ್ನು ಅಭ್ಯಾಸ ಮಾಡುತಿದ್ದನಂತೆ. ಕುರೂಪಿಯೂ, ಭಯಂಕರನೂ, ಆಗಿದ್ದ ಆತನು ಯಾರಿಗಾದರೂ ಪಿಂಡದಾನ ಮಾಡುವ ಪ್ರಸಂಗದಲ್ಲಿ ಮೈಗೆ ತುಪ್ಪವನ್ನು ಸವರಿ ಮತ್ತೆ ಸಂಭೋಗವನ್ನು ಕೊಡುತಿದ್ದನಂತೆ. ಅದು ಸಂತತಿ ದಾನಕ್ಕಾಗಿ ಮಾಡುವ ಕಾರ್ಯ. ಸಂತತಿ ಪಡೆಯುವ ಇಚ್ಛೆಯು ಸ್ವಾಭಾವಿಕವಾದುದು. ಒಂದು ಸಲಕ್ಕೆ ಸಂತತಿಯುಂಟಾದರೆ ಮತ್ತೆ ಲೈಂಗೀಕ ಲೀಲೆಯಲ್ಲಿ ಮಗ್ನನಾಗಬಾರದು.

ಶಾಸ್ತ್ರಕಾರನಾದ ಮನುವು ಮೊದಲನೇ ಪುತ್ರನನ್ನು ಧರ್ಮಜನೆಂದೂ ಕರೆಯುತ್ತಾನೆ. ನಂತರದವರು ಕಾಮಜರು ಅಂದರೆ ಕಾಮೇಚ್ಛೆಯ ಫಲವಾಗಿಯೇ ಜನ್ಮ ತಾಳಿದವರು. ಇದರಿಂದ ಲೈಂಗೀಕ ವ್ಯವಹಾರದ ಸಂಕ್ಷೇಪ ನೀತಿಸೂತ್ರವು ತಿಳಿದಂತಾಗುವುದು. ದೇವರೆಂದರೆ ಈ ನೀತಿ ಸೂತ್ರವೇ ಆಗಿರುತ್ತದೆ. ಇದಕ್ಕೆ ಮಣಿದಿರುವುದೇ ದೇವರಿಗೆ ವಿಧೇಯರಾಗಿದ್ದಂತೆಯೇ ಸರಿ. ಲಗ್ನಕಾಲದಲ್ಲಿಯಾವ ವಿಧಾನದಲ್ಲಿಯೂ ನಾವು ಈ ಸೂತ್ರಗಳನ್ನು ಮಿಕ್ಕುವುದಿಲ್ಲವೆಂದು ನಿಮ್ಮಿಂದ ಮೂರು ಸರ್ತಿ ಹೇಳಿಸಲ್ಪಡುತ್ತದೆ. ಇಂತಹ ಪೂಜ್ಯವಾದ ನೀತಿ ಸೂತ್ರಗಳನ್ನು ಅನುಸರಿಸುವ ಕೆಲವೇ ಸ್ತ್ರೀ ಪುರುಷರಿದ್ದರೂ ಮುಂದೆ ಅವರು ಜಗತ್ತಿನ ಪವಿತ್ರ ಜನಾಂಗವೊಂದರ ಮೂಲ ಪುರುಷರಾಗದಿರರು.

ನಾನು ಕಸ್ತೂರ್‌ಬಾಳ ಮೇಲಿನ ಕಾಮ ದೃಷ್ಟಿಯನ್ನು ತೊಡೆದು ಹಾಕಿದ ಮೇಲೆಯೇ ನನಗೆ ನಿಜವಾದ ವಿವಾಹ ಸುಖವುಂಟಾಯಿತೆಂಬ ವಿಷಯವನ್ನು ಮರೆಯದಿರಿ. ತಾರುಣ್ಯದ ಭರದಲ್ಲಿದ್ದಾಗ ನಾನು ಬ್ರಹ್ಮಚರ್ಯದ ಪ್ರತಿಜ್ಞೆಯನ್ನು ಕೈಕೊಂಡೆ. ನಾವೆಲ್ಲರೂ ಪವಿತ್ರವಾದೊಂದು ಕಾರ್ಯಕ್ಕೆ ಜನ್ಮವೆತ್ತಿದ್ದೇವೆ ಎಂಬುದನ್ನು ನಾವು ಮರೆಯಬಾರದು. ವಿವಾಹವು ಈ ಪವಿತ್ರ ಕಾರ್ಯಕ್ಕೆ ನೆರವಾಗುವ ಒಂದು ವಿಷಯವೆಂಬುದು ನನಗೆ ಅರಿವಾಗಿದೆ. ಇದನ್ನು ತಿಳಕೊಂಡರೆ ನಿಜವಾದ ಧರ್ಮದ ಜ್ಞಾನವಾಗುವುದು. ಕಸ್ತೂರ್‌ಬಾ ಅವಳು ನನ್ನ ಕಾಮೇಚ್ಛೇಗೆ ಬಲಿ ಬೀಳುತ್ತಿದ್ದರೆ ಇಂದು ಅವಳು ಇಷ್ಟೊಂದು ಚಟುವಟಿಕೆಯ ಕೆಲಸಗಳನ್ನು ಮಾಡಲಾರಳು.

ಇಷ್ಟಾದರೂ ನನ್ನಲ್ಲಿ ಈ ಜಾಗೃತಿಯು ಬಹಳ ಕಾಲದನಂತರ ಉಂಟಾಯಿತೆಂಬುದಕ್ಕೆ ವಿಷಾಧಿಸುತ್ತೇನೆ. ನಿಮಗಾದರೂ ಸಕಾಲದಲ್ಲಿ ಈ ಕುರಿತು ಬೋಧನೆ ದೊರಕುವಂತಾಯಿತೆಂಬುದಕ್ಕೆ ಸಂತೋಷಿಸುತ್ತೇನೆ. ನಾನು ಮದುವೆಯಾದ ಸಮಯವು ಸುಧಾರಣೆಗಳಿಗೆ ತಕ್ಕುದಾದದಾಗಿರಲಿಲ್ಲ. ನಿಮಗಾದರೂ ಈಗಿನದು ಬಹಳ ಯೋಗ್ಯಕಾಲ. ಆದರೆ ನನ್ನನ್ನು ಕವಚದಂತೆ ರಕ್ಷಿಸಿದ ಒಂದು ವಿಷಯವೆಂದರೆ ನನ್ನ ಸತ್ಯಪ್ರೇಮ. ಸತ್ಯವೇ ನನ್ನ ಜೀವನದ ಭದ್ರವಾದ ತಳಹದಿ. ಬ್ರಹ್ಮಚರ್ಯ ಅಹಿಂಸೆಗಳು ಅದರಿಂದಲೇ ಹುಟ್ಟಿದವು. ನೀವು ಎಂತಹ ಮಾರ್ಗವನ್ನುವಲಂಭಿಸಿದರೂ ಸತ್ಯವನ್ನು ಮಾತ್ರ ಮರೆಯದಿರಿ. ನಿಮ್ಮ ಸ್ವತಂತ್ರ ಕಲ್ಪನೆಗಳನ್ನು ಮರೆಮಾಡಿರಿ. "ಮರೆ ಮಾಡುವುದು ಅವಮಾನಕರವಾದರೆ ಅವುಗಳ ಕುರಿತು ಯೋಚಿಸುವುದು ಇನ್ನೂ ಹೆಚ್ಚಿನ ನಾಚಿಕೆಗೇಡಿನದು."

ಪೇಶಾವರದ ಮುನ್ಸಿಪಲ್ ಆಫೀಸಿನಲ್ಲಿ ನಿಂತು ಪ್ರಧಾನಿ ಡಾ॥ ಖಾನ್‌ಸಾಹೇಬರು ರೇಶನ್ ಕಾರ್ಡು ಇದ್ದವರಿಗೆ ಸ್ವತಃ ಬಟ್ಟೆಗಳನ್ನು ಹಂಚಿದರು.

o o o

ವಾರದ ಕತೆ

ಆಧುನಿಕ ಪ್ರಥ್ವಿರಾಜ್

ಲೇಖಕರು:—ಶ್ರೀ ಪಿ. ಗಣಪತಿ ಭಟ್, ಕಲ್ಮಡ್ಕ

ತರುಣಿ ವಾಣಿಯು ಭಾಸ್ಕರನ ಮೋಟಾರು ಸೈಕಲ್ಲು ಶಬ್ದ ಕೇಳಿ ಮಹಡಿಯ ಕಿಟಕಿಯಿಂದ ಪ್ರೇಮ ನಗೆ ನಕ್ಕಳು. ಆಗಲೇ ಮಹಡಿ ಕೋಣೆಗೆ ಸಾಧಾರಣ ೩೦ ವರ್ಷ ಪ್ರಾಯದ ಸ್ತ್ರೀಯೊಬ್ಬಳು ಕಾಲಿಟ್ಟಳು. ಬಹು ದಿಟ್ಟಿಸಿ "ವಾಣೀ" ಎಂದಳು. ಆ ತರುಣಿಗೆ ಒಮ್ಮೆ ಜಿಗ್ಗನ್ನಿಸಿತು. ಬೀದಿಯ ಕಡೆಗೆ ನಟ್ಟ ತನ್ನ ದೃಷ್ಟಿಯನ್ನು ಛಕ್ಕನೆ ಹಿಂದೆಗೆದು ತಿರುಗಿ ನೋಡಿದಳು. "ಓ" ಎಂದು ಸ್ವಲ್ಪ ನಾಚಿದಳು. ಕೈಯಲ್ಲಿದ್ದ ಬಿಳಿ ರಟ್ಟಿನಂತಹ ಕಾಗದ ತುಂಡೊಂದನ್ನು ತಲೆಕೆಳಕ್ಕೆ ಕೌಚಿಹಾಕಿ ಕೂತುಬಿಟ್ಟಳು. ಆಗ ಸ್ತ್ರೀಯು ಕೋಪದಿಂದ ದೊಡ್ಡ ಚಂಡಿಕಾಸ್ವರೂಪವನ್ನಾಡಿಕೊಂಡು ಹತ್ತಿರ ಬಂದಳು. "ವಾಣೀ, ಮಾರ್ಗದ ಕಡೆಗೆ ನೀನು ಯಾವಾಗಲೂ ಭಾಸ್ಕರನ ಸವಾರಿಯಾಗುವಾಗ ನೋಡಿ ಮಂದಹಾಸವನ್ನು ಬೀರುತ್ತೀರುವೆ. ಅವನ ಮೋಟಾರ್ ಸೈಕಲ್ಲು ದೂರ ದೂರ ಹೋದ ಹಾಗೆಲ್ಲಾ ಮುಖವು ಮಲಿನವಾಗುತ್ತಿರುವುದು. ಕೈಯಲ್ಲಿ ಕಾಗದವನ್ನು ಹಿಡಿಕೊಂಡು ಕೆಲವು ದಿವಸಗಳಿಂದ ಏನನ್ನೋ ಕೊಚ್ಚುತ್ತಿರುವೆಯಲ್ಲಾ. ಅದು ಏನನ್ನು? ಮಾಳಿಗೆಯಲ್ಲಿ ಬೇರೇನೂ ಕೆಲಸವಿಲ್ಲದೆ ಹೀಗೂ ಕುಳಿತಿರುವುದೇ? ಆ ರಟ್ಟನ್ನು ಇತ್ತಕೊಡು ನೋಡೋಣ" ಎಂದು ಗದರಿಸಿ ಕೇಳಿದಳು. ವಾಣಿಯು ಸಾಧುಸ್ವರದಿಂದ "ಅಮ್ಮಾ! ನಾನು ಮೋಟಾರ್ ಸೈಕಲ್ಲು ಹೋಗುವಾಗ ಅದರ ಚಂದವನ್ನೂ ಸ್ಪೀಡನ್ನೂ ಕಂಡು ಆನಂದದಿಂದ ನಗುತ್ತೇನಷ್ಟೇ ಹೊರತು ಆ ಭಾಸ್ಕರನ ಅಂದಚಂದಕ್ಕೆ ಮರುಳಾಗಿ ನೋಡಿ ನಗುವುದಿಲ್ಲ. ನನ್ನ ಮೇಲೆ ತಪ್ಪಭಿಪ್ರಾಯವನ್ನು ಮಾಡಬೇಡ" ಎಂದಳು. "ತಪ್ಪು ಗಿಪ್ಪು ಗೊತ್ತುಂಟು! ಮೋಟಾರ್ ಸೈಕಲ್ಲಿನ ಚಂದವನ್ನು ನೋಡಲಿಕ್ಕೆ ನೀನೇನು ಸಣ್ಣ ಕೂಸೇ? ಮೊದಲು ನೋಡಿಲ್ಲವೇ? ಎಲ್ಲಾ ಗೊತ್ತಾಯಿತು! ಹಾಗಾದರೆ ಭಾಸ್ಕರನು ಯಾಕೆ ನಿನ್ನ ಕಡೆಗೆ ನೋಡಿ ಮಂಗನಂತೆ ಹಲ್ಲುಬಿಟ್ಟನು? ನಾನು ನೋಡಿಲ್ಲವೆಂದು ಭಾವಿಸಿದೆಯಾ? ಸಾಕು! ರಟ್ಟನ್ನೀಯದೆ ಹೇಳು" ಎನ್ನುತ್ತಾ ವಾಣಿಯ ತಾಯಿ ಗಂಗಮ್ಮನು ಮಗಳ ಕಿವಿಯನ್ನು ಹಿಡಿದು ಮೇಲಕ್ಕೆತ್ತಿ ಆ ರಟ್ಟನ್ನು ತೆಗೆದು ನೋಡಿದಳು. ಧುರುಧುರನೆ ನೋಡಿದಳು. ಕಣ್ಣು ಕೆಂಪು ಕೆಂಡದಂತಾಯಿತು. ಗರಗರನೆ ತಿರುಗಿತು. ಚುಟಿಯ ರೌದ್ರದಿಂದ ಅಲುಗಲಾರಂಭಿಸಿತು. ಛೀ ಕರವೇ ಛೀಕರ! ಜಗತ್ತನ್ನೇ ನುಂಗಿದರು ಎನ್ನುವ ಸಂದೇಹವು ಅನ್ನರಿಗೆ ಹೋಳೆಯುವ ಸಂದರ್ಭ! "ದುಷ್ಟೇ ಆ ಮೂರ್ಖನ ಸ್ನೇಹವು ನಿನಗಿಲ್ಲವೆನ್ನುವೆಯಾ? ಹಾಗಿದ್ದರೆ ಇದೇಕೆ ಬೈಸ್ಕಲ್ಲಿನಲ್ಲಿ ಕುಳಿತುಕೊಂಡು ಮಾರ್ಗದಿಂದ ಇತ್ತ ಓರೆನೋಟ ನೋಡುವ ನಿನ್ನಂಥ ದುರಾತ್ಮನ ಚಿತ್ರವನ್ನು ಬಿಡಿಸಿದೆ? ಹರೆಯದ ಹದಿನೈದಕ್ಕೆ ಕಾಲಿಟ್ಟಿತೆನ್ನುವಾಗಲೇ ವರನನ್ನು ಆರಿಸುವ ಹವ್ಯಾಸಕ್ಕೆ ತೊಡಗಿದೆಯಾ? ಅಬ್ಬಾ! ಕಷ್ಟವೇ.....! ಈಗಿನ ತರುಣಿಯರಿಗೆಲ್ಲಾ ಗಂಡಂದಿರನ್ನು ನಾಡಿಕೊಡಬೇಕಾದ ಮಾತಾಪಿತೃಗಳು ಬೇಕಾಗಿಲ್ಲ. ಅವರವರೇ ನೋಡಿಕೊಳ್ಳುವರು. ಅವರವರೇ ಪತ್ರಗಳನ್ನೋ ಅವರ ಚಿತ್ರಗಳನ್ನೋ ಅತ್ತಿತ್ತ ಮಾಡಿಕೊಳ್ಳುವುದು. ಕಡೆಗೆ ಪ್ರೀತಿಮಾಡಿಕೊಳ್ಳುವುದು. ಅದಕ್ಕೆಂದು ವಿಧಿಯೂ ಇಲ್ಲ. ವಿವಾಹವು ಇಲ್ಲ. ಈಗ ಬೇಕಾದರೆ ರಿಜಿಸ್ಟರ್ ಮದುವೆ ಎಂಬೊಂದು ಕಾನೂನೂ ಇದೆಯಲ್ಲ. ಅಬ್ಬಾ!...ಕಲಿಕಾಲವೇ? ಏನೆಂದು ಹೇಳಲಿ? ತಂದೆತಾಯಿಗಳು ಕಷ್ಟದಿಂದ ಹುಡುಕಿ ವರನನ್ನು ನಿಶ್ಚೈಸಿದರೆ ಅವನಿಗೆ ಕ್ರಾಫ್ ಇಲ್ಲ. ಇವನಿಗೆ ರಿಷ್ಟು ವಾಚಿಲ್ಲ. ಮತ್ತೊಬ್ಬನಿಗೆ ಸಿಗರೇಟು ಸೇದಲಿಕ್ಕೂ ತಿಳಿಯುವುದಿಲ್ಲ. ಇನ್ನೊಬ್ಬನು ಹಳ್ಳಿಯವ. ಎಲ್ಲಾ ಬಗೆಯು ಸರಿಯಾಗಿದ್ದರೆ ಕಡೆಗೆ ಧನವಿಲ್ಲ, ವಿದ್ಯೆಯಿಲ್ಲ ಎನ್ನುವ ಕೊರತೆ ಇರುವುದು. ನವಯುವತಿಯರ ಪಾಡಿಗೆ ಸರಿಯಾಗಿ ಈಗ ಕೆಲವು ಗಂಡಸರೂ ಇರುವರು. ಹುಡುಗಿಯೊಂದು ಸಿಕ್ಕುವವರೆಗೆ ಅವರ ಡ್ರೆಸ್ಸು ಅವರ ಕ್ರಾಫ್, ಅವರ ನಡೆಯುವಿಕೆ, ಅವರ ವಾಚು, ಇನ್ನು ಇಂಗ್ಲಿಷ್ ಬೆರೆತ ಕನ್ನಡ ನುಡಿ, ಮುಗುಳ್ನಗೆ, ಓರೆನೋಟ ಇತ್ಯಾದಿ ಚೆಯೆಯಿಂದ ತರುಣಿಯರ ಅಂತಃಕರಣವನ್ನು ಕದಡುವರು. ತರುಣರ ಈ ರೀತಿಯ ವೇಷ ಭೂಷಣಗಳೆಲ್ಲಾ ನಮ್ಮಂಥವರ ಕಣ್ಣಿಗೆ ಮಣ್ಣೆರಚಲಿರುವುದೆಂದು ಈ ಹುಡುಗಿಯರಿಗೆ ತಿಳಿಯುವುದೇ? ಪಾಪಿಗಳು ಕಡೆಗೆ ಅವರ ಕೈಗೆ ಸಿಕ್ಕಿ ಗಿಡುಗನು ಕರಗತವಾದ ಪಾರಿವಾಳದ ಮರಿಯಂತಾಗುವರು. ಹುಡುಗಿಗೆ ಅಪ್ಪಾದರೆ ಸಾಕು. ಮತ್ತೆ ಅವರ ತಲೆಯ ಕ್ರಾಪ್ ಬೈಹುಲ್ಲಿನಂತೆ ಬಿದ್ದುಹೋಗಿ ಅದರಲ್ಲಿ ಜೇಡನು ಬಲೆಕಟ್ಟಿದರೂ ಆಯಿತು. ರಿಷ್ಟ್ ವಾಚು ಮುಂಗೈಯನ್ನು ಶೃಂಗರಿಸುವುದರ ಬದಲು ಸುಣ್ಣದ ಅಂಡೆಯಾಗಿ ವೀಳ್ಯದ ತಟ್ಟೆಯನ್ನು ಅಲಂಕರಿಸಿದರೂ ಆಯಿತು. ಅಷ್ಟೂ ಸಾಲದಿದ್ದರೆ ಕುಡುಕತನ, ಸೂಳೆಗಾರಿಕೆ, ಜುಗಾರಿ! ವಾಣೀ ಸ್ವಲ್ಪ ಜತನದಿಂದಿರು. ದುಡ್ಡಿಗೆ ಕೈ ಹಚ್ಚಬೇಡ. ಕಡೆಗೆ ಕೇಡಾದೀತು. ಈ ಸಂಗತಿಯು ನಿನ್ನ ಪಿತಾಜಿಯವರಿಗೆ ತಿಳಿದರೆ ಪ್ರಾಣವನ್ನೇ ತೆಗೆದಾರು ಬಲ್ಲೆಯಾ? ಸೋದರಳಿಯನಾದರೂ ಭಾಸ್ಕರನು ಅವರ ಎಣ್ಣೆಸೀಗೆಯಂತಿದ್ದಾರೆ. ಎಷ್ಟು ಮಾತ್ರಕ್ಕೂ ಅವನಿಗೆ ನಿನ್ನನ್ನು ಕೊಡಲಾರರು ತಿಳಿದಿರಲಿ!" ಎಂದು ಹೇಳುತ್ತಾ ಗಂಗಮ್ಮನ ಸವಾರಿ ಹೋಯಿತು. ಮಾತೆಯ ಮಾತನ್ನು ಕೇಳಿ ವಾಣಿಯ ಶಿರವು ಬಾಳೆಯ ಗೊನೆಯಂತೆ ಬಾಗಿತು. ಅಕ್ಷಿಗಳಿಂದ ಬೆಚ್ಚಗಾದ ತುಂತುರುಗಳು ಪಟಪಟನೆ ನೆಲಕ್ಕುದುರುತ್ತಿದ್ದುವು. ತಾಯಿ ಹೋದೊಡನೆ ಕಣ್ಣುಗಳನ್ನೊರೆಸುತ್ತ ವಾಣಿಯು ಭಾಸ್ಕರನ ಚಿತ್ರಪಟವನ್ನು ತೆಗೆದು ಪೆಟ್ಟಿಗೆಯೊಳಗಿಟ್ಟು ನಿಟ್ಟುಸಿರು ಬಿಡುತ್ತಾ ನೆಲದ ಮೇಲೆ ಬಿದ್ದುಕೊಂಡಳು.

ಸ್ವಲ್ಪ ಅಮಲಿನ ಅಭ್ಯಾಸವಿದ್ದ ನಾರಾಯಣ ರಾಯರಿಗೂ ಭಾಸ್ಕರನಿಗೂ ಮಾರ್ಗದಲ್ಲಿ ಒಂದು ದಿನ ಜಗಳವಾಗಿ, ಪೆಟ್ಟು ತಿಂದ ಭಾಸ್ಕರನು ದಾವೆಮಾಡಲು ನಾರಾಯಣರಾಯರಿಗೆ ೩ ತಿಂಗಳ ಸಜೆಯಾಗಿತ್ತು. ಅದೇ ಅವರ ವಿರೋಧ.

ವಿರೋಧವಾಗಿ ಇಂದಿಗೆ ೭ ವರ್ಷಗಳಾದುವು. ಒಂದು ದಿನ ಭಾಸ್ಕರನ ಜನ ಒಂದು ನಾರಾಯಣರಾಯರ ಮನೆಗೆ ಬಂತು. "ನಿನ್ನ ಮಗಳನ್ನು ಭಾಸ್ಕರನು ಇಚ್ಛಿಸುತ್ತಾನೆ. ಮೊದಲೇ ಅಳಿಯನಾಗಬೇಕಷ್ಟೆ? ಇನ್ನು ಮಗಳನ್ನು ಕೊಟ್ಟು ನಮ್ಮೊಳಗೆ ರಾಜಿಯಾಗಿ ಹಿಂದೆ ನಡೆದುಕೊಂಡಂತೆ ಇನ್ನು ಮುಂದೆ ವರ್ತಿಸಬೇಕೆಂದು ಕೇಳಿಕೊಳ್ಳುತ್ತೇನೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿತು. "ನನ್ನ ಮಗಳನ್ನು ಕೈಹಿಡಿಯುವ ಯೋಗ್ಯತೆಯು ಆ ದುಷ್ಟನಿಗಿಲ್ಲ. ವೃಥಾ ದೊಡ್ಡಮರದ ಹಣ್ಣಿಗಾಗಿ ಕುಳ್ಳನು ಹಾರಿದಂತೆ ಅವನು ಪೇಚಾಡಬೇಕಾಗಿಲ್ಲ." ಎಂದು ನಾರಾಯಣರಾಯರು ಹೇಳಿದರು. ಬಂದ ವ್ಯಕ್ತಿಯು ಹಿಂದಕ್ಕೆ ಹೋಯಿತು.

ಓದುಗರೇ! ಅದೇ ದಿನ ಸಾಯಂಕಾಲ ಆದ ಘಟನೆಯನ್ನು ನೀವು ಈ ಕತೆಯ ಆದಿಯಿಂದ ವಾಚಿಸಿರುವಿರಿ. ಇರಲಿ! ಉಪ್ಪರಿಗೆಯಲ್ಲಿ ದುಃಖದಿಂದ ಬಿದ್ದಿದ್ದ ವಾಣಿಯು ಭಾಸ್ಕರನ ಬೈಸ್ಕಲ್ಲು ಹಿಂದಕ್ಕೆ ಬರುವ ಘಡುಗುಡು ಶಬ್ದ ಕೇಳಿ ಎದ್ದಳು. ಮೆಲ್ಲನೆ ಅತ್ತಿತ್ತ ನೋಡಿದಳು. ಮಾಳಿಗೆಯಿಂದ ಕೆಳಗಿಳಿದಳು. ತಂದೆಯು ಒಳಗೆ ಕಾಫಿ ಕುಡಿಯುತ್ತಿರುವುದನ್ನೂ ತಾಯಿಯು ಪುಟ್ಟ ಮಕ್ಕಳಿಗೆ ಕಾಫಿ ತಿಂಡಿ ಹಂಚುತ್ತಿರುವುದನ್ನೂ ನೋಡಿ ಸಂತಸಗೊಂಡು ಹೊರಬಾಗಿಲಿಗೆ ಬಂದಳು. ಕೂಡಲೇ ಮೋಟಾರ್ ಸೈಕಲ್ಲು ಟಂಮ್ಮನೆ ನಿಂತಿತು. ವಾಣಿಯು ಓಡಿ ಹೋಗಿ ಸೈಕಲ್ಲಿನ ಹಿಂಭಾಗದಲ್ಲಿ ಕುಳಿತಳು. ಒಡನೆಯೇ ಒಂದು ನಿಮಿಷವೂ ಅಲ್ಲಿ ನಿಲ್ಲದೆ ಬೈಸ್ಕಲ್ಲು ಓಡಿತು. ಮನೆಯವರಾರೂ ಕಂಡದ್ದೂ ಇಲ್ಲ. ಕಾಫಿಗೆ ತಾಯಿಯು ಮಗಳನ್ನು ಕರೆದದ್ದೂ ಇಲ್ಲ. ಅಂತು ಹೊತ್ತು ಮುಳುಗಿ ಕತ್ತಲಾಯಿತು. ದಿನಾಲೂ ಮುಸ್ಸಂಜೆಯಾದೊಡನೆ ದೇವರ ಕೋಣೆಗೆ ಹೋಗಿ ದೀಪಕ್ಕೆ ಅಡ್ಡ ಬೀಳುವ ವಾಣಿ ಎಂದರೆ ಇಂದವಳ ಸುಳಿವಿಲ್ಲ.

ಸುದ್ದಿ ಇಲ್ಲ. ಗಂಗಮ್ಮನು ಆದರೂ ಲಕ್ಷಿಸಲಿಲ್ಲ. ತನ್ನ ಗಂಡನನ್ನು ಮೂರು ತಿಂಗಳು ಜೈಲಲ್ಲಿಟ್ಟ ಭಾಸ್ಕರನ ಮೇಲಿನ ಸಿಟ್ಟು ಇಂದು ಅವನನ್ನು ಪ್ರೀತಿಸಲಿಕ್ಕೆ ತೊಡಗಿದ, ಅವನ ಅಂದಚಂದವನ್ನು ಚಿತ್ರಿಸಿದ ತನ್ನ ಮಗಳಲ್ಲಿ ತೋರಿತು. ತಾನೇ ಹೆತ್ತುದೆಂಬ ಭಾವನೆಯು ಅವಳ ಮನೋಮಾರ್ಗದಲ್ಲಿ ಹೊಳಪಿಗೆ ಬರಲಿಲ್ಲ.

ಅಂದು ರಾತ್ರೆ ಊಟವಾದ ಮೇಲೆ ಕೋಪಗೊಂಡ ಗಂಗಮ್ಮನು ಬಾಯಿಗೆ ಬಂದಂತೆ ಬೈಯಹತ್ತಿದಾಗಲೇ ನಾರಾಯಣರಾಯರಿಗೆ ಮಗಳ ವಿಚಾರ ತಿಳಿದದ್ದು. ತಮ್ಮ ಶತ್ರುವಾದ ಭಾಸ್ಕರನೊಡನೆ ಅನುರಾಗ ಬೇಡವೆಂದು ಹೇಳಿದಕ್ಕೆ ವಾಣಿ ಕೋಪಿಸಿ ಊಟಕ್ಕೆ ಬಾರದೆ ಮಹಡಿಯ ಮೇಲಿರುವಳೆಂದು ಹೇಳಿದಾಗ ರಾಯರು ಅವಳನ್ನು ಕರೆದರು. ಗಂಗಮ್ಮನಿಗೂ ಸತ್ಯಸ್ಥಿತಿ ತಿಳಿದಿಲ್ಲ. ಕೊನೆಗೆ ಇದು ಆ ದೂರ್ತ ಭಾಸ್ಕರನ ಕೆಲಸವೆಂದು ತಿಳಿಯಿತು.

ನಾರಾಯಣರಾಯರಿಗೆ ವಾಣೀ ಎಂದರೆ ಪ್ರಾಣ! ಎಲ್ಲಾ ಮಕ್ಕಳಿಗಿಂತಲೂ ಅವಳಲ್ಲಿ ಹೆಚ್ಚು ಮಮತೆ. ಅವಳನ್ನು ಚಿಕ್ಕ ವಯಸ್ಸಿನಲ್ಲಿಯೇ ವಿದ್ಯಾಭ್ಯಾಸಕ್ಕೆ ಕಳುಹಿಸಿ S. S. L. C. ಯವರೆಗೆ ಓದಿಸಿದ್ದರು. ಮರುದಿನ ನಾರಾಯಣರಾಯರು ಮನೆಯ ಎದುರು ಚಾವಡಿಯಲ್ಲಿ ಕುಳಿತಿದ್ದರು. ಸಾಧಾರಣ ೧೦ ಘಂಟೆಯ ಸಮಯವಿರಬಹುದು. ಕಾರೊಂದು ಬಂದು ಮನೆಯ ಎದುರು ಮಾರ್ಗದಲ್ಲಿ ನಿಂತಿತು. ಅದರಲ್ಲಿ ಭಾಸ್ಕರನೂ ವಾಣಿಯೂ ಬಹಳ ಅಲಂಕರಿಸಲ್ಪಟ್ಟವರಾಗಿ ಕುಳಿತಿದ್ದರು. ನಾರಾಯಣರಾಯರಿಗೆ ಅಲ್ಲಿಂದಲೇ ಇಬ್ಬರೂ ಎರಡು ನಮಸ್ಕಾರ ಕೊಟ್ಟರು. ಕಾರು ಹೊರಟು ಹೋಯಿತು. ರಾಯರ ಮುಖಕಾಂತಿಯು ಮುಳುಗಿಹೋಯಿತು.

1944ನೇ ಮೈಸೂರು ದಸರಾ ಪ್ರದರ್ಶನದಲ್ಲಿ ಸುವರ್ಣ ಪದಕ ಪಡೆದ ಮಂಗಳೂರು ನಾಮಾಂಕಿತ

ನಸ್ಯ

ಆರ್ಡರುಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು.

ಕರ್ನಾಟಕ ಸ್ನಫ್ ಎಂಡ್ ಬೀಡಿ ವರ್ಕ್ಸ್

ರಥಬೀದಿ—ಮಂಗಳೂರು

ನಮ್ಮ ಇತರ ವಿಶೇಷ ತಯಾರಿಕೆಗಳ

ಕಸ್ತೂರಿ ಅಗರ ಬತ್ತಿಗಳು ಕಸ್ತೂರಿ ದಶಾಂಗ

ಒಮ್ಮೆ ಪರೀಕ್ಷಿಸಿದರೆ ಇದರ ಮಹತ್ವವನ್ನು ಮನಗಾಣುವಿರಿ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಸಾಮ್ರಾಜ್ಯಲಾಲಸೆ ಇಲ್ಲದ ಸರ್ವಾಧಿಕಾರಿ

ದೇವರ ಪ್ರತಿನಿಧಿಯನ್ನು ಓಡಿಸಿದ ಜನತಾ ಮೂರ್ತಿ

ಅಜ್ಞಾನದ ಪರದೆಯನ್ನು ಕಿತ್ತುಹಾಕಿದ ಉಪಾಧ್ಯಾಯ

ಘಾಝಿ, ಮುಸ್ತಾಫಾ, ಅಟಾಟರ್ಕ್, ಕೆಮಲ್, ಕಮಾಲ್ ಪಾಶಾ

ಇಂದಿನ ಟರ್ಕಿಯು ಒಂದು ಆಧುನಿಕ ಅದ್ಭುತ. ೧೯೧೮ರ ಟರ್ಕಿಗೂ ೧೯೪೫ರ ಟರ್ಕಿಗೂ ಅಜಗಜಾಂತರ ವ್ಯತ್ಯಾಸ. ಕರಾಳಾಂಧಕಾರದ ಗವಿಯಿಂದ ಜಳ್ಳನೆ ಝಳಪಿಸುವ ಸೂರ್ಯ ಪ್ರಕಾಶದ ಪ್ರದೇಶಕ್ಕೆ ಬಂದಂತಾಗುವುದು—ಇಂದಿನ ಟರ್ಕಿಯನ್ನು ನೋಡಿದರೆ, ಬಗ್ದಾದಿನ ಖಲೀಫನ ಮಾದರಿಯ ಗೋಳ ಗೋಪುರಗಳ, ಚಾರ್‌ಮಿನಾರುಗಳ ತುರ್ಕಿಸ್ಥಾನವು ಐರೋಪ್ಯ ಮಾದರಿಯ ಎನಟೋಲಿಯಾ ಎಂಬ ಟರ್ಕಿಯಾಗಿದೆ. ಕೇವಲ ಕಾಲು ಶತಮಾನದಲ್ಲಿ ಇಷ್ಟೊಂದು ಭಾರಿ ಬದಲಾವಣೆಗಳನ್ನು ಮಾಡಿದ ಆ ಕೆಮಾಲ್ ಪಾಶಾನು ಅದೆಂತಹ ಅಗಾಧ ಶಕ್ತಿ ಸಾಮರ್ಥ್ಯಗಳ ವ್ಯಕ್ತಿಯಿರಬಹುದು?

ಸಾಮಾನ್ಯ ಸುಂಕದಧಿಕಾರಿಯೊಬ್ಬನ ಮಗ ಮುಸ್ತಾಫಾ ಕೆಮಾಲ್ ಶಾಲೆಯಲ್ಲಿ ಕೊರಾನ ಶ್ಲೋಕಗಳ ಮೂಲಕ ವಿದ್ಯಾಭ್ಯಾಸ ಕೊಡುತಿದ್ದ ಕೋಜಾಉಪಾಧ್ಯಾಯರನ್ನು ತನ್ನ ಅದ್ಭುತ ಬುದ್ಧಿಶಕ್ತಿ ಪ್ರೌಢಿಮೆಯಿಂದ ಬೆರಗುಗೊಳಿಸಿದ. "ಪ್ರಚಂಡ ಮಿದುಳು ಶಕ್ತಿ ಬುದ್ಧಿಶಕ್ತಿಯ ಈ ಜಗಳಗಂಟ ಸ್ವಭಾವದ ವಿದ್ಯಾರ್ಥಿಯೊಡನೆ ಸ್ನೇಹ ಮಾಡುವುದೇ ಕಷ್ಟ"ವೆಂದು ಅವನ ಗುರುಗಳೇ ಅಭಿಪ್ರಾಯಪಟ್ಟಿದ್ದರು.

ತುಂಟತನಕ್ಕನುಗುಣವಾಗಿ ಅವನಿಗೆ ತುರುಕರ ಸೇನೆಯಲ್ಲಿ ಶಿಪಾಯಿ ಕೆಲಸ ದೊರಕಿತು. ಅಲ್ಲಿಯೂ ಅದ್ವಿತೀಯ ಸೇನಾನಾಯಕತ್ವದ ಪ್ರತಿಷ್ಠೆಯನ್ನು ಬೀರಿ ಕೆಮಾಲನು ಸೇನಾಧಿಪತಿಯಾದ. ಆದರೆ ೧೯೧೪ರ ಯುದ್ಧದಲ್ಲಿ ಟರ್ಕಿ ಸಾಮ್ರಾಟನು ಸೋಲುವ ಜರ್ಮನಿಯ ಕಡೆ ನಿಂತು ಹೋರಾಡುವ ದೊಡ್ಡ ತಪ್ಪನ್ನು ಮಾಡಿದ. ಟರ್ಕಿಯು ಮಿತ್ರ ಶಕ್ತಿರಾಷ್ಟ್ರಗಳ ಕಠಿಣ ಸೋಲು ಷರ್ತಗಳಿಗೆ ಬಗ್ಗಿ ಮುರಿಯಿತು. ಪರಿಣಾಮವಾಗಿ ಟರ್ಕಿ ಸಾಮ್ರಾಜ್ಯವು ಹರಿದು ಹಂಚಾಗಿ ಹೋಗಿ ಈಜಿಪ್ಟ್, ಗ್ರೀಸ್, ಆಲ್ಬೇನಿಯಾಗಳು ಸ್ವತಂತ್ರವಾದವು. ಆದರೂ ಸಾಮ್ರಾಜ್ಯದ ಸುಲ್ತಾನನೂ ಮುಸಲ್ಮಾನರ ಏಕಚಕ್ರಾಧಿಪತಿಯಾದ ಖಾಲೀಫನೂ ಅವನೊಬ್ಬನೇ ಆಗಿದ್ದುದರಿಂದ ಆಗಿನ ಟರ್ಕಿಯ ಸುಲ್ತಾನ್ ಮೆಹಮ್ಮದನು ತನ್ನ ಕೈಕೆಳಗಿನ ಜನರ ಧರ್ಮಾಂಧತೆಯ ಅನುಕೂಲತೆಯನ್ನು ಹೊಂದಿ, ಮಿತ್ರ ರಾಷ್ಟ್ರಗಳ ವಿಧೇಯನಾಗಿ, ಮಿತ್ರ ಸೇನಾನಿಗಳಿಗೆ ಸಲಾಂ ಹೊಡೆದು ಆಳ ಪ್ರಯತ್ನಿಸಿದನು.

ಆದರೆ ಸುಲ್ತಾನನ ಈ ವರ್ತನೆಯು ಅಪ್ರತಿಮ ಸ್ವಾಭಿಮಾನಿಯಾದ ಕೆಮಲ್ ಪಾಶಾನಿಗೆ ಸಹಿಸಲಿಲ್ಲ. ಸುಲ್ತಾನನ ಅತ್ಯಂತ ಆಪ್ತ ಮಿತ್ರನಾಗಿದ್ದರೂ ಅವನು ಸೈನಾಧಿಪತಿತ್ವದ ತನ್ನ ಹುದ್ದೆ ಬಿರುದಾವಳಿಗಳಿಗೆ ತಿಲಾಂಜಲಿಯನ್ನು ತೆತ್ತು ಅಂಕಾರಾ (ಇಂದಿನ ಟರ್ಕಿಯ ರಾಜಧಾನಿ) ಪಟ್ಟಣಕ್ಕೆ ಬಂದು ಅಲ್ಲಿ ನಮ್ಮ ದೇಶದ ಕೊಂಗ್ರೆಸಿನಂತಹ ಒಂದು ರಾಷ್ಟ್ರೀಯ ಟರ್ಕರ ಮಂಡಳಿಯನ್ನು ಸ್ಥಾಪಿಸಿದನು. "ಸ್ವತಂತ್ರವಾದ ರಾಷ್ಟ್ರೀಯ ಭಾವನೆಯ ಸರಕಾರವನ್ನು, ಹೊರಗಿನ ಯಾರ ಕೈವಾಡವಿಲ್ಲದಂತೆ ಸ್ಥಾಪಿಸುವುದೇ ನಮ್ಮ ಗುರಿ" ಎಂದು ಘೋಷಿಸಲಾಯಿತು.

ಜನತೆಯಲ್ಲಿ ರಾಷ್ಟ್ರೀಯ ಭಾವನೆಗಳುಂಟಾದುದು ಜಯಶೀಲರಾದ ಮಿತ್ರ ಜನಾಂಗದವರಿಗೂ, ಅವರ ಬಲೆಯೊಳಗೆ ಬಿದ್ದ ಟರ್ಕಿಯ ಸುಲ್ತಾನನಿಗೂ ಸಹಿಸಲಿಲ್ಲ. ಒಂದು ಕಡೆಯಿಂದ ಟರ್ಕರನ್ನು ಸಂಪೂರ್ಣ ನಿಶ್ಶಸ್ತ್ರರನ್ನಾಗಿ ಮಾಡಬೇಕೆಂದು ಇತರ ಶಕ್ತಿ ರಾಷ್ಟ್ರಗಳೂ, ಕೆಮಾಲನ ರಾಷ್ಟ್ರೀಯ ವಾದಿಗಳಿಗೆ ಸರಿಯಾದ ಪಾಠಕಲಿಸಬೇಕೆಂದು ನಿರ್ಧರಿಸಿದರು. ಮಿತ್ರರು ಕೆಮಾಲನ ಪಕ್ಷವನ್ನೂ ಮುರಿಯಲು ಗ್ರೀಕರ ಸೈನ್ಯವನ್ನು ಕಳುಹಿಸಿದರು. ಇತ್ತ ಸುಲ್ತಾನನೂ ಒಂದು ಸೈನ್ಯವನ್ನು ಸಿದ್ಧಮಾಡಿದನು. ಆದರೆ ಅವ್ಯವಸ್ಥಿತವಾದ ಸೈನಿಕರಿಂದೊಡಗೂಡಿದ ದಳಗಳನ್ನುಕಟ್ಟಿಕೊಂಡು ಕೆಮಾಲ್ ಪಾಶನು ಇಪತ್ತೆರಡು ದಿನಗಳಲ್ಲಿ ಗ್ರೀಕರನ್ನು ಸೋಲಿಸಿ ಓಡಿಸಿದನು. ಸುಲ್ತಾನನ ಪಡೆಗಳೂ ಸೋತವು.

ಗ್ರೀಕರ ಆಕ್ರಮಣದಿಂದ ಟರ್ಕಿಯ ಜನರಲ್ಲಿ ಅನೀರಿಕ್ಷಿತವಾದ ಒಗ್ಗಟ್ಟು ಉಂಟಾಯಿತು. ಜನರು ಕೆಮಾಲನಿಗೆ ತಮ್ಮ ಸರ್ವತೋಮುಖ ಬೆಂಬಲವನ್ನು ಕೊಡುವಂತಾಯಿತು. ಈ ಬೆಂಬಲ ಶಕ್ತಿಯಿಂದ ಕೆಮಾಲನ ಆಶೆ ಆಕಾಂಕ್ಷೆಗಳಿಗೆ ಧೈರ್ಯ ಸ್ಫೂರ್ತಿಗಳು ದೊರಕಿದಂತಾಯಿತು. ಕ್ರಮೇಣ ಅವನು ತನ್ನ ಕಾರ್ಯನಿರ್ವಹಣದಲ್ಲಿ ತೊಡಗಿದನು.

ಮೊದ ಮೊದಲು ಅವನು ತನ್ನ ಸುಲ್ತಾನನು ಕ್ರಮವಾದ ರಾಜ್ಯಘಟನಾಕ್ರಮದಂತೆ ರಾಜ್ಯವಾಳುವಂತೆ ಒತ್ತಾಯಪಡಿಸಿದನು. ಆದರೂ ತನ್ನ ಸುಲ್ತಾನಗಿರಿಯೊಂದಿಗೆ ಧರ್ಮಗುರುವಿನ ಅಧಿಕಾರವೂ ಇದ್ದ ಸುಲ್ತಾನ್ ಮಹಮ್ಮದನಿಗೆ ಕೆಮಲನು ಹೇಳಿದಷ್ಟು ದೂರ ಸರಿಯಲು ಸಾಧ್ಯವಿಲ್ಲದಾಯಿತು. ೧೯೨೦ರ ಸುಮಾರಿಗೆ ಕೆಮಾಲನು ಅಲ್ಲಿಯ ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನು ಬೆದರಿಸ ತೊಡಗಿದನು. ಸ್ವಲ್ಪ ಸಮಯದಲ್ಲಿ ಸುಲ್ತಾನನನ್ನೂ ತಳ್ಳಿಹಾಕುವ ಮಸೂದೆಯು ಶಾಸನ ಸಭೆಯಲ್ಲಿ 'ಬಹುಮತ'ದಿಂದ ಮಂಜೂರಾತಿ ಪಡೆಯಿತು.

ಶಾಸನ ಸಭೆಯಲ್ಲಿ ಕೆಮಾಲನು ತನ್ನಿಚ್ಛೆಯ ಒಂದು ಮಸೂದೆ 'ಪಾಸ್'ಮಾಡುವ ನಮೂನೆ ಬಹಳ ಸಾರಸ್ಯವಾಗಿದೆ. ವೋಟ್ ತೆಗೆಯುವ ಸಮಯದಲ್ಲಿ ಅವನು ಒಂದು ಕಣ್ಣನ್ನು ಶಾಸನಸಭಾಧ್ಯಕ್ಷರ ಮೇಲೂ ಇನ್ನೊಂದನ್ನು ಸದಸ್ಯರ ಮೇಲೂ ಇಡುವನು. ಆಗ ಅವನಿಗೆ 'ಬಹುಮತ'ವೇ ಸಿಗುವುದು. ಪ್ರತಿನಿಧಿಗಳು ತರ್ಕವಿತರ್ಕ ಮಾಡಿದಾಗ ಒಂದು ಸಲ ಅವನು ಹೀಗೆ ಹೇಳಿದನು: "ಚರ್ಚೆಯಿಂದ ರಾಜ್ಯಭಾರ ಮಾಡಲು ಸಾಧ್ಯವಿಲ್ಲ. ಅವಶ್ಯಬಿದ್ದರೆ ಕೆಲವರ ತಲೆಗಳನ್ನಾದರೂ ಕಡಿಯಲು ನಾನು ಹಿಂಜರಿಯುವವನಲ್ಲ." ಮತ್ತೆ ಹೆದರಿಕೆ ಹುಟ್ಟಿತು.

ಆದರೆ ಸರ್ವಾಧಿಕಾರವೇ ಅವನ ಉದ್ದೇಶವಲ್ಲ. ಕಾರಣ ಒಂದು ಸಲ ಅವನು "ಹತ್ತದಿನ್ನೈದು ವರ್ಷಗಳ ತನಕ ಟರ್ಕಿ ಎಂಬೀ ಮಗುವನ್ನು ನಾನು ಕೈಹಿಡಿದು ನಡೆಸುವೆನು. ಮತ್ತೆ ಎಲ್ಲರೂ ತಮಗೆ ಬೇಕಾದ ಹಾಗೆ ಮಾತಾಡುವಂತೆ ಬಿಡುವೆನು" ಎಂದಿದ್ದನು. ಇದಕ್ಕಾಗಿ ಅವನು ಅಜ್ಞಾನದಲ್ಲಿ ಮುಳುಗಿದ ಟರ್ಕಿಯನ್ನು ಶಿಕ್ಷಣಮಾರ್ಗದಲ್ಲಿ ಒಯ್ಯಲು ಪ್ರಯತ್ನಪಟ್ಟನು.

ಶಿಕ್ಷಣಕ್ಕೆ ಮೊದಲು ಅರಬೀ ಲಿಪಿಯಲ್ಲಿದ್ದ ತುರ್ಕಿ ಭಾಷೆಗೆ ಐರೋಪ್ಯರ ರೋಮನ್ ಲಿಪಿಯೊಂದನ್ನು ಜಾರಿಗೆ ತಂದನು. ಇದಕ್ಕೆ ಮತೀಯ ಭಾವನೆಯ ಶ್ರೀಮಂತ ವರ್ಗದವರು ಆಕ್ಷೇಪ ತೆಗೆದಾಗ ಇಸ್ಲಾಮ ಮತದ ಪೀಠವೆನಿಸಿದ ಕಿಲಾಫತ್‌ನ್ನು ಅವನು ರದ್ದುಮಾಡಿದನು. ತುರ್ಕರೆಲ್ಲರೂ ಐರೋಪ್ಯ ಉಡುಪನ್ನೇ ಧರಿಸಬೇಕೆಂದನು. ಸಾರ್ವಜನಿಕದಲ್ಲಿ ಯಾರೂ ಮತೀಯ ಉಡುಪುಗಳನ್ನು ಧರಿಸಿ ತಿರುಗಬಾರದೆಂದು ಶಾಸನವಾಯಿತು. ತುರ್ಕರ ಫೆಜ್ ಎಂಬ ಕೆಂಪು ಟೋಪ್ಪಿಗೂ ಮುಂಡಾಸಿಗೂ ನಿರ್ಬಂಧ ಬಂತು. ಒಮ್ಮೆ ಈಜಿಪ್ಟ್ ಅರಸನರಾಯಭಾರಿಯು ಒಂದು ಔತಣ ಸಮಾರಂಭಕ್ಕೆ ಕೆಂಪು ಟೊಪ್ಪಿ ಇಟ್ಟು ಬಂದಿದ್ದಾಗ ಕೆಮಾಲನು ಅವನಿಗೆ ರಪ್ಪನೆ ಕೆನ್ನೆಗೆ ಬಡಿದು ತನ್ನ ಕ್ರಮುಕ್ಕೆ ಭಂಗತರುವ ಆ ರಾಯಭಾರಿಗೆ ಚೆನ್ನಾಗಿ ಬೈದನಂತೆ.

ಹಳ್ಳಿ ಹಳ್ಳಿಗೂ ಕೆಮಾಲನು ಬೋರ್ಡು ಚೋಕುಗಳನ್ನು ಒಯ್ದು ರೈತರಿಗೆ ರೋಮನ್ ಲಿಪಿಯಲ್ಲಿ ತುರ್ಕಿ ಭಾಷೆಯನ್ನು ಓದಲೂ ಬರೆಯಲೂ ಸ್ವತಃ ಕಲಿಸಿದನು. "ಕಲಿಸುವವರಿಗೂ, ಕಲಿಯುವವರಿಗೂ ಅವನೇ ಕಲಿಸುವವನಾದನು".

ತುರ್ಕಿಯ ಮುಸಲ್ಮಾನರು ತಮ್ಮ ಹೆಂಗಸರನ್ನು ಪರದೆಗಳಿಂದ ಮುಚ್ಚುತಿದ್ದರು. ಸ್ತ್ರೀಯರಿಗೆ ಸಮಾನ ಹಕ್ಕುಗಳು ಸಿಗದೆ ತನ್ನ ಕೆಲಸ ಸಾಧಿಸದೆಂದು ಧೃಢವಾಗಿ ನಂಬಿದ ಕೆಮಾಲನು ಪರದೆಯ ವಿರೋಧ ಶಾಸನವನ್ನು ತರಲು ಹಿಂಜರಿಯಲಿಲ್ಲ. ಇಡೀ ದೇಶದ ಮೇಲೆ ಆಚ್ಛಾದಿಸಲ್ಪಟ್ಟ ಅಜ್ಞಾನದ ಪರದೆಯನ್ನು ಕಿತ್ತೊಗೆದ ಆತನಿಗೆ ಅದನ್ನು ಸ್ತ್ರೀಯರ ಮುಖದಿಂದ ತೆಗೆಯಲು ಬಹಳ ಹೊತ್ತು ಹಿಡಿಯಲಿಲ್ಲ. ಸ್ತ್ರೀಪುರುಷರ ಕಾಲೇಜುಗಳನ್ನು ಅತ್ಯಾಧುನಿಕ ಐರೋಪ್ಯ ಮಾದರಿಯ ಮೇಲೆ ನಿರ್ಮಿಸಿದನು. ಇಂದು ತುರ್ಕಿ ಸ್ತ್ರೀಯರು ಸೈನ್ಯದಲ್ಲೂ, ಸಾರ್ವಜನಿಕ ಆಫೀಸುಗಳಲ್ಲೂ ಕೆಲಸಮಾಡುತ್ತಾರೆ. ತುರ್ಕಿ ವಿದ್ಯಾರ್ಥಿಗಳು ಪಾಶ್ಚಾತ್ಯ ವಿಶ್ವವಿದ್ಯಾಲಯಗಳಲ್ಲಿ ಉಚ್ಚ ಶಿಕ್ಷಣ ಪಡೆದು ಹಿಂತಿರುಗುತ್ತಾರೆ. ಓರ್ವ ಸ್ತ್ರೀಯು ತುರ್ಕಿಯ ಅಧ್ಯಕ್ಷೆಯಾಗಲೂ ಪ್ರಯತ್ನಿಸಿದಳಂತೆ. ಆತ್ಮವೇ ಇಲ್ಲವೆಂದು ಭಾವಿಸಲ್ಪಟ್ಟ ತುರ್ಕಿ ಸ್ತ್ರೀಯರು ಇಂದು ಐರೋಪ್ಯ ಉಡುಪಿನಲ್ಲಿ ಮೆರೆಯುತಿದ್ದಾರೆ. ಅವರಿಗೆ ವೋಟಿನ ಹಕ್ಕೂ ಇದೆ. ಅವರ ಪ್ರತಿನಿಧಿಗಳು ಶಾಸನ ಸಭೆಯಲ್ಲಿ ಬಹಳ ಮಂದಿ ಇದ್ದಾರೆ.

ಹೀಗೆ ಸಾಮ್ರಾಜ್ಯದ ಆಶೆಯನ್ನು ಕಿತ್ತೊಗೆದು, ಮತೀಯ ಮುಖಂಡತ್ವವನ್ನು ಕಳಚಿ ಹಾಕಿ, ಅಜ್ಞಾನದ ಪರೆಯನ್ನು ಸೀಳಿ ಹಾಕಿ, ರೋಗಿಷ್ಟವೆನಿಸಿದ ಟರ್ಕಿಯನ್ನು ಐರೋಪ್ಯರು ಆಶ್ಚರ್ಯಪಡುವ ರೀತಿಯಲ್ಲಿ ಪರಿವರ್ತನಗೊಳಿಸಿದ ಘಾಜಿಮುಸ್ತಾಫಾ ಕೆಮಾಲ್ ಅಟಾಟರ್ಕ್ ಕಮಲ್ ಪಾಶಾ ಅವನನ್ನು ಇತಿಹಾಸವು ಎಂದೆಂದಿಗೂ ಮರೆಯದು. ೧೯೩೮ರಲ್ಲಿ ಈ ಮಹಾಪುರುಷನು ಪರಂಧಾಮವನ್ನೈದಿದನು. ಅಷ್ಟರಲ್ಲಿ ಅವನ ಜೀವನ ಧ್ಯೇಯವು ಬಹುಮಟ್ಟಿಗೆ ಸಾಧಿಸಿತ್ತು.

"ಪ್ರೀತಿ ಮತ್ತು ಸತ್ಯವೆಂಬುದೇ ಮತ" ಹೀಗೆಂದು ಗಫೂರ್ ಖಾನರು ಒಂದು ಭೇಟಿಯಲ್ಲಿ ತಿಳಿಸಿ "ಪಂಜಾಬಿನಲ್ಲಿ ಬದಲಾವಣೆಯಾಗಲಿಲ್ಲ. ಆದುದರಿಂದ, ಗಡಿನಾಡಿನಲ್ಲಾದ ಬದಲಾವಣೆಯಿಂದ ಪ್ರಯೋಜನವೇನು? ಆದರೂ ಮೂರು ವರ್ಷಗಳಿಂದ ಜನರಿಗೆ ಸಾಕೋ ಸಾಕಾಗಿ ಹೋದ ಮಂತ್ರಿ ಮಂಡಳದ ಆಡಳಿತವೊಂದು ಕೊನೆಗೊಂಡಂತಾಯಿತು" ಎಂದರು. ಮಹಾತ್ಮರನ್ನು ಬೊಂಬಾಯಿಯಲ್ಲಿ ಕಂಡರು.

○ ○ ○ ○

ಅಭಿವೃದ್ಧಿ ತೋರಿಸುವ ಪಟ್ಟಿ

	1940	1942	1944
	ರೂಪಾಯಿ	ರೂಪಾಯಿ	ರೂಪಾಯಿ
ತೆತ್ತ ಭಂಡವಾಳ	8,93,000	14,96,000	26,34,000
ಕ್ಷೇಮನಿಧಿ	4,50,000	4,50,000	10,34,000
ಠೇವಣಾತಿಗಳು	86,72,000	1,45,51,000	2,30,69,000
ಸರಕಾರೀ ಭದ್ರತೆಗಳು	11,19,000	68,17,000	1,17,93,000
ಲಾಭಾಂಶ	72,000	1,53,000	2,75,000
ಜುಮ್ಲಾ ಸಂಪತ್ತು	1,03,44,000	2,07,35,000	3,46,46,000

ಸಂಖ್ಯೆಗಳೆಲ್ಲಾ ಸಾವಿರಗಳಿಗೆ ಸರಿಪಡಿಸದವುಗಳು

ನಮ್ಮ ಶಾಖೆಗಳು

ಕ್ವಿಲನ್	ಮಂಗಳೂರು	ಮಧುರಾ
ಅಲಪ್ಪೆ	ಬೆಂಗಳೂರು	ಸೇಲಮ್
ಎರ್ನಾಕುಲಮ್	ಬೆಳಗಾಂವ್	ಇರೋಡ್
ಕೊಚ್ಚಿನ್	ಧಾರವಾಡ	ಕೊಯಮುತ್ತೂರು
ಕಲ್ಲಿಕೋಟೆ	ಹುಬ್ಬಳ್ಳಿ	ಇತ್ಯಾದಿ, ಇತ್ಯಾದಿ.
ಕಣ್ಣಾನೂರು	ಚಿಕ್ಕಮಗಳೂರು	

ಮುಂಬಾಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪಾಯಿ 26 ಲಕ್ಷ. ಕ್ಷೇಮನಿಧಿ ರೂಪಾಯಿ 10 ಲಕ್ಷ.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

(Incorporated in British India, liability of Members limited.)

ಸಪ್ರೂ ಸಮಿತಿಯ ತೀರ್ಮಾನ ಸೂಚನೆಗಳ ಸಂಕ್ಷಿಪ್ತವಾದಿಯು ಪ್ರಕಟವಾಗಿದೆ. ಹಿಂದುಗಳೊಳಗೆ ಮತ್ತು ದಳಿತ ವರ್ಗದವರೊಳಗೂ ಮತ್ತು ಎಲ್ಲಾ ಹಿಂದೂ ಮತ್ತು ಮುಸಲ್ಮಾನರೊಳಗೂ ಒಂದು ಒಪ್ಪಂದವಾಗುವುದರ ಮೂಲಕ ಸಂಯುಕ್ತ ರಾಜ್ಯ ಘಟನೆಯನ್ನು ಸ್ಥಾಪಿಸಬೇಕೆಂದು ಸಮಿತಿಯವರು ಸೂಚಿಸಿದ್ದಾರೆ.

ಸಪ್ರೂ ಸಮಿತಿಯು ಪಾಕಿಸ್ಥಾನಕ್ಕೆ ಸಂಪೂರ್ಣ ವಿರೋಧ ಸೂಚಿಸಿದೆ.

ಮೇಲಿನಂತೆ ಸಂಯುಕ್ತ ರಾಜ್ಯ ಘಟನೆ ಸ್ಥಾಪಿಸಲ್ಪಟ್ಟ ಮೇಲೆ ಬ್ರಿಟಿಷ್ ಸಾರಭೌಮಾಧಿಕಾರವನ್ನು ಅದಕ್ಕೆ ಬಿಟ್ಟುಕೊಡಬೇಕೆಂದೂ, ಅಲ್ಪ ಸಂಖ್ಯಾಕರ ಪರಿಸ್ಥಿತಿಯನ್ನು ವಿಚಾರಿಸಲು ಪ್ರತ್ಯೇಕ ಸಮಿತಿಯೊಂದು ರಚಿಸಲ್ಪಡಬೇಕೆಂದೂ ತಿಳಿಸಲಾಗಿದೆ. ದೇಶಿ ಸಂಸ್ಥಾನಗಳೊಡನೆ ವ್ಯವಹರಿಸುವ, ಮೂರು ಸಂಸ್ಥಾನ ಪ್ರತಿನಿಧಿಗಳು ಸಹಾಯಕರಾಗಿರುವ ಒಂದು ಪ್ರತ್ಯೇಕ ಮಂತ್ರಿ ಖಾತೆಯು ನಿರ್ಮಾಣವಾಗಬೇಕು.

ಸವಿಸ್ತಾರದ ರಾಜ್ಯ ಘಟನೆಯನ್ನು ನಿರ್ಮಿಸಲು ಈ ಕೆಳಗಿನ ಪ್ರತಿನಿಧಿಗಳಿರುವ ಒಂದು ಸಮಿತಿಯು ಸ್ಥಾಪಿತವಾಗಬೇಕು. ಹಿಂದುಗಳು ೫೧; ಮುಸ್ಲಿಮರು ೫೧; ಹಿಂದುಳಿದ ವರ್ಗದವರು ೨೦; ಕ್ರೈಸ್ತರು ೭, ಸಿಕ್ಕರು ೮, ಗುಡ್ಡ ಕಾಡು ಜನರು ೩, ಎಂಗ್ಲೊ ಇಂಡಿಯನ್ಸ್ ೨, ಯುರೋಪಿಯನ್ ೧, ಪಾರ್ಸಿ ೧. ಇತರರು ೧, ಸ್ತ್ರೀಯರ, ಕೈಗಾರಿಕೆ, ವಾಣಿಜ್ಯ, ಜಮೀನ್ದಾರ, ವಿಶ್ವವಿದ್ಯಾಲಯಗಳ ಕಡೆಯಿಂದ ಒಟ್ಟು ೧೫, ಹೀಗೆ ೧೬೦ ಪ್ರತಿನಿಧಿಗಳು.

ಪತ್ರಿಕಾಭಿಪ್ರಾಯಗಳು.

"ದೇಶವನ್ನು ವಿಭಾಗಿಸುವುದಕ್ಕೆ ಸಪ್ರೂ ಸಮಿತಿಯವರು ವಿರೋಧ ಸೂಚಿಸಿದರೂ ಕೇಂದ್ರ ಸರಕಾರದಲ್ಲಿ ಮುಸಲ್ಮಾನರಿಗೆ ಕೊಟ್ಟ ಅರ್ಧಕ್ಕರ್ಧ ಪ್ರಾತಿನಿಧ್ಯವನ್ನು ನೋಡಿದರೆ ಮುಸ್ಲಿಂ ಲೀಗಿನ ಕೇಳಿಕೆಯನ್ನು ಅಪ್ರತ್ಯಕ್ಷವಾಗಿ ಪೂರೈಸಿದಂತಾಗಿದೆ" ಎಂದು ಒಂದು ಪತ್ರಿಕೆಯ ಅಭಿಪ್ರಾಯ ಪಡುತ್ತದೆ.

"ಜಾತಿ ಮತಗಳ ಭೇದಾಭಿಪ್ರಾಯಗಳನ್ನು ನಿವಾರಿಸಲು ಸಪ್ರೂ ಸಮಿತಿಯವರು ಯಾವ ಸಾಧನ ಮಾಡಿದಂತೆ ತೋರುವುದಿಲ್ಲ. ಭಿನ್ನಾಭಿಪ್ರಾಯದ ಪಕ್ಷಗಳಿಗೆ ಬೇರೆ ಬೇರೆ ಪ್ರಾತಿನಿಧ್ಯ ಕೊಟ್ಟು 'ಅದರೊಳಗೆಲ್ಲದರಿಂದ ಮಂತ್ರಿಗಳನ್ನು ಚುನಾಯಿಸಬೇಕೆಂದು ಹೇಳಿದರೆ ಹೀಗೆ ಚುನಾಯಿಸಲ್ಪಟ್ಟ ಮಂತ್ರಿಗಳು ಐಕ್ಯಮತದಿಂದ ಇರುವವರಾದರೂ ಹೇಗೆ? ಅವರು ತಮ್ಮ ತಮ್ಮ ಪಕ್ಷದ ಧ್ಯೇಯ ಧೋರಣೆಗಳಂತೇ ದೇಶಾಡಳಿತವಾಗಬೇಕೆಂದರೆ ಮಂತ್ರಿಮಂಡಳದಲ್ಲಿ ಒಡಕುಂಟಾಗದಿರುವಂತಾಗುವುದು ಹೇಗೆ? ಇಂತಹ ಒಡಕನ್ನು ಒಟ್ಟುಗೂಡಿಸುವುದಾದರೂ ಹೇಗೆ?" ಎಂದು ಮುದ್ರಾಸಿನ ಒಂದು ಪ್ರಧಾನ ಪತ್ರಿಕೆಯು ಪ್ರಶ್ನಿಸುತ್ತದೆ.

ಹಿಂದೂ ಮಹಾಸಭೆಯವರಂತೂ ಜನ ಸಂಖ್ಯೆಯ ಮೇಲೇ ಸರಕಾರದಲ್ಲಿ ಪ್ರಾತಿನಿಧ್ಯಕೊಡಬೇಕೆಂದು ಚರ್ಚಿಲ್ಲರಿಗೆ ತಂತಿ ಕಳುಹಿಸಿರುವರು.

ಮುಖಂಡರ ಹೇಳಿಕೆಗಳು.

ಮಿ! ಜಿನ್ನರು 'ಇದು ಮುಸ್ಲಿಂ ಲೀಗನ್ನು ಒಡೆದು ಹಾಕಲು ತಯಾರಿಸಿದ ಒಂದು ಬಾಂಬು' ಎಂದು ಹೇಳಿರುವರು.

ಪ್ರಚಲಿತ ಸಮಾಚಾರಗಳು

ಹಿಂದುಳಿದ ವರ್ಗದವರು ಜನಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಮುಸಲ್ಮಾನರಷ್ಟೇ ಇರುವಾಗ ತಮಗೆ ಬರೇ ೨೦ ಪ್ರತಿನಿಧಿಗಳ ಹಕ್ಕು ಕೊಟ್ಟದ್ದಕ್ಕೆ ಮುನಿದಿರುವರೆಂದು ಒರ್ವ ಹರಿಜನ ಕೊಂಗ್ರೆಸ್ ಮುಖಂಡರ ಹೇಳಿಕೆಯಿಂದ ತಿಳಿದು ಬರುತ್ತದೆ.

ಫ್ರಿಸ್ಕೊ ಪ್ರಹಸನ

ಎಪ್ರಿಲ್ ಇಪ್ಪತ್ತಾರಕ್ಕೆ ಇದು ಸೇನ್ ಫ್ರೆನ್ಸಿಸ್‌ಕೊ ನಗರದಲ್ಲಿ ಸೇರುವುದೆಂದೂ ಹೇಳಲಾಗಿದೆ. ಆದರೆ ಈಗಾಗಲೇ ತ್ರಿಮೂರ್ತಿಗಳಲ್ಲಿ ಪರಸ್ಪರ ಭೇದಾಭಿಪ್ರಾಯವೆದ್ದಿರುವುದಾಗಿ ಸುದ್ದಿ. ಪರಿಣಾಮವಾಗಿ ಅದು ಸೇರುವ ಮೊದಲೇ ಮುಂದರಿಸಲ್ಪಡುವುದೆಂದೂ, ಒಂದು ವೇಳೆ ಕೂಡಿ ಬಂದರೂ ಅದು ಕೇವಲ ಒಂದು ಶಕ್ತಿರಾಷ್ಟ್ರಗಳ ಕಪಟತನದ ಪ್ರಹಸನವಾಗಿ ಅಂತ್ಯಗೊಳ್ಳುವುದೆಂದೂ ಇಂಗ್ಲೆಂಡ್ ಅಮೇರಿಕದ ಪ್ರಮುಖ ಪತ್ರಿಕೆಗಳು ಅಭಿಪ್ರಾಯಪಟ್ಟಿವೆ.

ಮಿತ್ರರಲ್ಲಿನ ಈ ಒಡಕಿಗೆ ಅನೇಕ ಕಾರಣಗಳು ಊಹಿಸಲಾಗಿವೆ. ಅಲ್ಲಿ ಇತ್ಯರ್ಥಗಳಿಗೆ ಬರುವ ನಿರ್ಣಯಗಳು ೪೬ ಜನಾಂಗಗಳ ಬಹುಮತದಿಂದ ಮಂಜೂರಾತಿಪಡೆಯಬೇಕೆಂದಿದೆ. ಪ್ರತಿಯೊಂದು ನಿರ್ಣಯದ ಚರ್ಚೆಯ ಅಂತ್ಯದಲ್ಲಿ ವೋಟು ತೆಗೆಯಲಾಗುವುದು.

ಚಿಕ್ಕ ಚಿಕ್ಕ ಜನಾಂಗಗಳಿಗೆ ಒಂದೊಂದೇ ವೋಟು. ಕೆಲವಕ್ಕೆ ವೋಟಿನ ಹಕ್ಕೇ ಇಲ್ಲ. ಆದರೂ ಬ್ರಿಟನಿಗೆ ಮತ್ತು ಅದರ ವಸಾಹತುಗಳಿಗೆ ಆರು ವೋಟುಗಳು ಸಿಗಬೇಕೆಂದು ಚರ್ಚಿಲ್ಲರೂ, ತನಗೆ ಮೂರು ವೋಟುಗಳ ಹಕ್ಕು ಇರಬೇಕೆಂದು ರಷ್ಯವೂ ವಾದಿಸಿದ್ದಾರೆ. ಕೆಲವು ದಿನಗಳ ಹಿಂದೆ ಅಮೇರಿಕಕ್ಕೂ ಮೂರು ವೋಟಿನ ಅಧಿಕಾರ ಕೊಡಬೇಕೆಂದು ರೂಸ್‌ವೆಲ್ಟರೂ ಚರ್ಚಿಸಿದರು. ಕಡೆಗೆ ಅವರು ತಮಗೆ ಒಂದೇ ಸಾಕೆಂದು ಸುಮ್ಮಗಾದರು.

ರಷ್ಯದ ಶಕ್ತಿ ಒತ್ತಾಯ

ರಷ್ಯವು ಈಗ ತಾನು ಬೆಂಬಲಕೊಟ್ಟು ಸ್ಥಾಪಿಸಿದ ಪೊಲೆಂಡಿನ ಪರವಾದ ಲಬ್ಲಿನ್ ಸರಕಾರಕ್ಕೂ ಪ್ರಾತಿನಿಧ್ಯಸಿಗುವಂತಾಗಬೇಕೆಂದು ಸ್ಟೇಲಿನರು ಒತ್ತಾಯ ಮಾಡಹತ್ತಿರುವರು. ಹೀಗೆ ಮಾಡಿದರೆ ಯುರೋಪಿನಲ್ಲಿ ರಷ್ಯದ ಕೈಯೇ ಮೇಲಾಗುವುದೆಂದು ಅನೇಕ ಜನಾಂಗದವರಿಗೆ ಕಳವಳವುಂಟಾಗಿದೆ ಎಂದು ಅಲ್ಲಿನ ಸುದಿ ಸಂಸ್ಥೆಗಳು ಸಾರುತ್ತವೆ.

ಜರ್ಮನಿಯ ಕೊನೆಗಾಲವು ಸಮೀಪಿಸಿದ್ದು ಆ ರಂಗದಲ್ಲಿ ರಷ್ಯದ ಶ್ರಮವು ಲಘುವಾಗಿ ಬರಹತ್ತಿದೆ. ಆದುದರಿಂದ ತನ್ನ ವಿಜಯದಿಂದ ಮತ್ತರಾಗಿ ಸ್ಟೇಲಿನರು ಎಲ್ಲರನ್ನೂ ಬೆದರಿಸಹತ್ತಿರುವರೆಂದು ಅನೇಕ ಜನಾಂಗಗಳು ಪಿಸುಗುಟ್ಟ ಹತ್ತಿವೆಯಂತೆ. ಇಷ್ಟಾದರೂ ಚರ್ಚಿಲ್ಲರು ರಷ್ಯದ ಉದ್ದೇಶಕ್ಕೆ ಯಾವ ರೀತಿಯಲ್ಲೂ ವಿರೋಧ ಸೂಚಿಸುವ ಬದಲು ಇನ್ನೂ ಅವರ ಬೆನ್ನು ಚಪ್ಪರಿಸುವುದಲ್ಲೇ ಇದ್ದಾರೆಂದು ರಷ್ಯದ ಒತ್ತಾಯದ ಧೋರಣೆಗೆ ಕ್ರೋಧಗೊಂಡ ಅಮೇರಿಕನ್ ಪತ್ರಿಕೆಗಳು ಬರೆದಿವೆ.

ಜರ್ಮನಿಯಲ್ಲೆ ಬ್ರಿಟಿಷ್ ಸೇನಾಪತಿ

ಫಿಲ್ಡ್ ಮಾರ್ಶಲ್ ಮೊಂಟ್‌ಮರಿಯವರು ಜರ್ಮನ್ ಪ್ರದೇಶದ ಮೇಲೆ ಕಾಲಿಟ್ಟದ್ದು ಒಂದು ಹಳ್ಳಿಯಲ್ಲಿ ಆದ್ಯಕ್ಷವಿದು.

ಜರ್ಮನಿಯಿಂದ ಜಪಾನಿಗೆ

ಎಪ್ರಿಲ್ ೧೩ರಂದು ಐದು ವರ್ಷದ ರಷ್ಯಾ ಜಪಾನ್ ತಾಟಸ್ಥ್ಯ ಒಪ್ಪಂದವು ಕೊನೆಗೊಳ್ಳುವುದು. ಆಗಲೇ ರಷ್ಯದ ರಾಜಕಾರಣಿಗಳೊಬ್ಬರು ಜಪಾನು ಅಂತರಂಗದಲ್ಲಿ ಜರ್ಮನಿಗೆ ಸಹಾಯ ಮಾಡಿ ತಟಸ್ಥ ಷರ್ತಕ್ಕೆ ದ್ರೋಹ ಬಗೆದಿದೆಯಾಗಿ ಆರೋಪಿಸಿರುವರು.

ಇದರಲ್ಲಿ ದೊಡ್ಡದೊಂದು ಸಂಕಷ್ಟವೊದಗಿವೆ. ಈ ತಾಟಸ್ಥ ಒಪ್ಪಂದವು ಮುಗಿಯುವ ಒಂದು ವರ್ಷದ ಮೊದಲೇ ಇದಕ್ಕೆ ಸಹಿಹಾಕಿದ ಯಾವುದಾದರೊಂದು ಕಡೆಯವರು ಇನ್ನೊಬ್ಬರಿಗೆ ಸಕಾರಣವಾದ ಎಚ್ಚರಿಕೆಯನ್ನು ಕೊಡದಿದ್ದರೆ ಈ ಒಪ್ಪಂದವು ತನ್ನಷ್ಟಕ್ಕೇ ಮತ್ತೆ ಐದು ವರ್ಷಗಳಿಗೆ ಮುಂದರಿಯುತ್ತದೆ. ಈಗ ಇಂತಹ ಎಚ್ಚರಿಕೆಯನ್ನು ಇತ್ತಂಡದವರೂ ಕೊಡಲಿಲ್ಲ. ಆದುದರಿಂದ ಇದರಿಂದ ತಪ್ಪಿಸಿಕೊಳ್ಳನೋಡುವವರು ತಪ್ಪುಗಾರರಾಗುವರು. ಅಂದಮೇಲೆ ಕೂಡಲೇ ಘರ್ಷಣೆಯು ಅನಿವಾರ್ಯ.

ಆಗಲೇ ಜಪಾನಿನ ಅಪಾರ ಸೈನ್ಯ ಸಮೂಹಗಳು ರಷ್ಯದ ಪಶ್ಚಿಮ ಗಡಿನಾಡಾದ ಮಂಚೂರಿಯದಲ್ಲಿ ಶೇಖರಿಸಲ್ಪಟ್ಟಿವೆ. ಒಂದು ಕಡೆಯಿಂದ ಗುಪ್ತವಾಗಿ ರಷ್ಯನರು ಚೀನಿ ಕೊಮ್ಯುನಿಸ್ಟರಿಗೆ ಸಹಾಯಮಾಡುವರಾಗಿ ಜಪಾನ್ ರೇಡಿಯೋದಲ್ಲಿ ಆರೋಪಿಸಲಾಗಿದೆಯಂತೆ.

ಜಪಾನಿನಲ್ಲಿ ಕಳವಳ

ಅಂತೂ ಜರ್ಮನಿಯ ಆಟಮುಗಿದೊಡನೆ ಜಪಾನಿನ ಮೇಲೆ ಬಿದ್ದು ಆ ಹಳದಿ ರಾಷ್ಟ್ರವನ್ನು ಹದಗೈಯಲು ಯೋಗ್ಯ ಸಂದರ್ಭ ಕೂಡಿಬಂದಿದೆಯಾಗಿ ಮಿತ್ರ ಕೇಂದ್ರಗಳಲ್ಲಿ ಆಶಾದಾಯಕ ಭಾವವನ್ನು ತಾಳಲಾಗಿದೆ.

ಒಂದು ಕಡೆಯಿಂದ ಜನರಲ್ ಮೆಕ್ ಆರ್ಥರರ ಪ್ರಗತಿಯು ದಿನೇ ದಿನೇ ಜಪಾನಿನ ಗಂಡಾಂತರವನ್ನು ಹೆಚ್ಚಿಸುತ್ತದೆ. ಆಗಲೇ ಅಲ್ಲಿ ಮಂತ್ರಿಮಂಡಳದಲ್ಲಿ ಬಿಕ್ಕಟ್ಟುಂಟಾಗಿ ಎಪ್ಪತ್ತೇಳು ವರ್ಷದ ಸುಜೂಕಿಯವರು ಪ್ರಧಾನರಾಗಿದ್ದಾರೆ. ಇವರಾದರೊ ಕುಖ್ಯಾತಿಯ ಕೆಲ ಶಿಸ್ತು ಪರಿಪೋಷಕರಾದ ಕಠಿಣ ಮಾಜಿ ಸೈನ್ಯ ಅಧಿಕಾರಿಗಳನ್ನು ಮಂತ್ರಿಮಂಡಳದಲ್ಲಿ ತೆಗೆದುಕೊಂಡು ಐಕ್ಯಕ್ಕಾಗಿ ಜನಾಂಗಕ್ಕೆ ವಿನಂತಿ ಮಾಡಿರುವರು. 'ಶತ್ರು'ವನ್ನು ನಾಶಮಾಡಿಯೇ ಮಾಡುವೆವು ಎಂದೂ ಸುಜೂಕಿಯವರು ಸಾರಿದ್ದನ್ನು ನೋಡಿದರೆ 'ಹೊಸ ಮಂತ್ರಿಗಳು ಶಾಂತಿಪ್ರಯತ್ನಮಾಡುವ'ರೆಂಬ ಕೆಲವರ ಊಹೆಗಳು ಗಾಳಿಪಾಲಾಗದಿರವು.

Buy the Best

CASHEW SHELL OIL

We havegreat pleasure toannounce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಸ್ವಯಂ ಸೇವಕ ಶಾಲಾ ಹುಡುಗರು

ನ್ಯೂಯೊರ್ಕ್ ಬಾಲಕರ ಪ್ರಶಂಸನೀಯ ಕಾರ್ಯ

ಪುಂಡ ಹುಡುಗರು ಪರಿವರ್ತಿಸಲ್ಪಟ್ಟರು

ಓರ್ವ ಮಹಿಳೆಯ ಸಾರ್ವಜನಿಕ ಸೇವಾದರ್ಶ

ಆರು ವರ್ಷಗಳ ಹಿಂದೆ ನ್ಯೂಯೋರ್ಕಿನಲ್ಲಿ ಸಾಬ್ರಾಹೊಲ್ ಬ್ರೂಕ್ ಎಂಬ ಮಹಿಳೆಯ ಹೆಸರು ಯಾರಿಗೂ ಗೊತ್ತಿರಲಿಲ್ಲ: ಇಂದು ಸಂಯುಕ್ತ ಅಮೇರಿಕದ ಶಿಕ್ಷಣ ಪ್ರಪಂಚದಲ್ಲೆಲ್ಲಾ ಅವಳ ಹೆಸರು ಜನಜನಿತವಾಗಿದೆ: ಅನೇಕ ಶಾಲಾ ಆಡಳಿತ ಕಡೆಗಳಿಂದ ಅವಳಿಗೆ ಆಮಂತ್ರಣಗಳು ಬರುತ್ತಿವೆ: ಅವಳು ಜಗತ್ತಿನಲ್ಲೇ ಹೊಸದಾದ ಶಾಲಾಬಾಲಕರ ಒಂದು ಸಾರ್ವಜನಿಕ ಸ್ವಯಂಸೇವಕ ದಳವನ್ನು ಸ್ಥಾಪಿಸಿ ನಿರ್ದೇಶಿಸುತಿದ್ದಾಳೆ.

ಅಮೇರಿಕದಲ್ಲಿ ಚುನಾವಣೆಗಳು ನಡೆದ ಸಮಯದಲ್ಲೆಲ್ಲ ಬಹಳವಾಗಿ ಚರ್ಚಿಸಲ್ಪಡುವ ವಿಷಯವೆಂದರೆ ವೋಟಿನ ಇಲ್ಲವೆ ಮತದಾನದ ಹಕ್ಕಿನ ಕುರಿತು: ಅಲ್ಲಿ ಪ್ರಾಯಭರಿತರಾದವರಿಗೆ ಮಾತ್ರ ಮತದಾನದ ಹಕ್ಕಿದೆ: ಪ್ರಾಯಭರಿತರಾದವರೂ ಶಿಕ್ಷಿತರಾಗಿದ್ದರೆ ಮಾತ್ರ 'ವೋಟು' ಕೊಡಬಹುದು. ಇದಕ್ಕೊಂದು ಚಿಕ್ಕ ಪರೀಕ್ಷೆ ನಡೆಸಲ್ಪಡುತ್ತದೆ: ಅದರಲ್ಲಿ ಪಾಸಾದರೆ ಸಂಪೂರ್ಣ ಹಕ್ಕು ಬಂದಂತಾಗುವುದು:

ನ್ಯೂಯೋರ್ಕಿನ ಒಂದು ತೋಟದಲ್ಲಿ ಒಂದು ಹ್ಯಾಸ್ಕೂಲಿನ ಕೆಲ ವಿದ್ಯಾರ್ಥಿಗಳು "ಎಲ್ಲರಿಗೂ ವೋಟಿನ ಹಕ್ಕು ಬರುವಂತೆಯೂ ಪ್ರಜಾಪ್ರಭುತ್ವ ಪದ್ಧತಿಯಂತೆ ಪ್ರಾಯಭರಿತರಿಗೆ ಓಟು ಕೊಡಲು ಸಾಧ್ಯವಾಗುವಂತೆ ಏನು ಮಾಡೋಣ" ಎಂದು ಪರ್ಯಾಲೋಚಿಸಿದರು. ಮರುದಿನ ನ್ಯೂಯೋರ್ಕಿನ ಕೆಲ ಅಂಗಡಿಗಳ ಪಕ್ಕದ ಗೋಡೆಯಲ್ಲಿ ಜಾಹೀರಾತುಗಳು ಅಂಟಿಸಲಾಗಿತ್ತು. ಅದರಲ್ಲಿ "ಓಟು ಕೊಡುವ ಹಕ್ಕಿನ ಪರೀಕ್ಷೆ ಪಾಸಾಗಲಿಚ್ಛಿಸುವುದಾದರೆ ನಂಬ್ರ ೬೬ನೇ ಹ್ಯಾಸ್ಕೂಲಿನ ೧೧೫ನೇ ನಂಬ್ರದ ಕೋಣೆಗೆ ಮಧ್ಯಾಹ್ನ ಮೂರು ಗಂಟೆಯ ನಂತರ ಬನ್ನಿರಿ" ಎಂದಿತ್ತು.

ತರುಣ ನಾಗರೀಕರು ಕಾರ್ಯಪ್ರವರ್ತರಾದ ನಿದರ್ಶನವು ಇಲ್ಲಿ ಕಾಣಬಹುದು. ನಮ್ಮ ನಗರಗಳಲ್ಲೂ ಅನೇಕ ಹ್ಯಾಸ್ಕೂಲಗಳಿವೆ— ಅನೇಕ ವಿಧ್ಯಾರ್ಥಿಗಳೂ ಇದ್ದಾರೆ. ಅವರಿಗೆ ವರ್ಷದಲ್ಲಿ ಅನೇಕ ದಿನಗಳ ರಜೆಯೂ ಸಿಗುತ್ತದೆ. ನಮ್ಮ ಹುಡುಗರೂ ನ್ಯೂಯೋರ್ಕಿನ ಬಾಲಕರಿಗಿಂತಲೂ ಹೆಚ್ಚಿನ ಕೆಲಸವನ್ನು ಮಾಡಲು ಅನೇಕಾನೇಕ ಸಂದರ್ಭಗಳೂ ಇವೆ. ಅದರ ಸದುಪಯೋಗವನ್ನು ಅವರು ಮಾಡಿಕೊಳ್ಳಬೇಕು. ಹಿರಿಯ ಮುಂದಾಳುಗಳೂ ಉಪಾಧ್ಯಾಯ ಪ್ರೊಫೆಸರರುಗಳೂ ತಮ್ಮ ವಿದ್ಯಾರ್ಥಿಗಳಿಗೆ ಇಂತಹ ಸೇವಾ ಚಟುವಟಿಕೆಗಳಲ್ಲಿ ಪ್ರೋತ್ಸಾಹಿಸಬೇಕು:

ನ್ಯೂಯೋರ್ಕಿನ ಹುಡುಗರಿಗೆ ಈ ರೀತಿಯ ಪ್ರೋತ್ಸಾಹವನ್ನು ಕೊಡಲು ಮುಂದೆ ಬಂದವರಲ್ಲಿ ಸಾರಾಹೋಲ್ ಬ್ರೂಕ್ ಮಹಿಳೆಯು ಅಗ್ರಗಣ್ಯಳು. ಅಲ್ಲಿನ ೯೬ನೇ ನಂಬ್ರ ಹ್ಯಾಸ್ಕೂಲ್ ಹುಡಗರ ಉತ್ಸಾಹವನ್ನು ಅವಳು ಯೋಗ್ಯರೀತಿಯಲ್ಲಿ ನಿದೇಶಿಸಲು ಕಂಕಣ ತೊಟ್ಟಿದಳು. ಅವಳು ವಾಸರ್ ವಿದ್ಯಾಲಯದ ಪದವೀಧರಳೂ, ಶ್ರೀಮಂತಳೂ ಆಗಿದ್ದು ಈ ನೂತನ ಚಟುವಟಿಕೆಯಿಂದ ಜಗತ್ತಿನ ಅತೀ ದೊಡ್ಡ ನಗರದ ನಾಗರೀಕರ ಗಮನವನ್ನು ಸೆಳೆದಳು:

ನ್ಯೂಯೋರ್ಕಿನ ಮಾರ್ಗಗಳಲ್ಲಿ ಗತಿ ಗೋತ್ರವಿಲ್ಲದ ತುಂಟ ಹುಡುಗರ ತಂಡಗಳಿವೆ. ಅವರು ನಾನಾ ತರದ ಪೋಕರಿ ಕೆಲಸಗಳಲ್ಲೂ, ಕದಿಯುವುದರಲ್ಲೂ ತಮ್ಮ ಕಾಲವನ್ನು ಕಳೆಯುತಿದ್ದರು. ಪೋಲಿಸರಿಗೆ ಅವರಿಂದ ಭಯಂಕರ ತೊಂದರೆಗಳಾಗುತಿದ್ದುವು. ಸೇವಾದಳದ ಬಾಲಕರು ಒರ್ವ ಪೋಲೀಸನ ಸಹಾಯದಿಂದ ಒಂದು ಹಳೇ ಇಗರ್ಜಿಯ ಕೋಣೆಯೊಂದರಲ್ಲಿ ಒಂದು ವಾಚನಾಲಯವನ್ನು ತೆರೆದರು. ಅಲ್ಲಿನ ಅಂಗಳದಲ್ಲಿ ಆಟಗಳನ್ನು ಏರ್ಪಡಿಸಿದರು. ಅವರ ಕೆಲಸಗಳ ಮೇಲ್ತನ್ನಿ ನೋಡಲು ಕೆಲವು ಹಿರಿಯ ಹೆತ್ತವರು ಒಪ್ಪಿಕೊಂಡರು. ಅನೇಕ ತುಂಟ ಹುಡುಗರು ಅಲ್ಲಿಗೆ ಬರತೊಡಗಿ ಕೆಲವೇ ದಿನಗಳಲ್ಲಿ ಆ ವಟಾರದಲ್ಲಿ ಹುಡುಗರ ತುಂಟತನಗಳೇ ಇಲ್ಲವಾಯಿತು.

ಸಾಬ್ರಾಹೊಲ್ ಬ್ರೂಕಳ ಕಾರ್ಯ ಕ್ಷೇತ್ರವು ವಿಸ್ತಾರವಾಗುತ್ತಾ ಬಂದಹಾಗೆ ನ್ಯೂಯೋರ್ಕಿನ ಶಿಕ್ಷಣ ಖಾತೆಯವರೂ ಅವಳಿಗೆ ತಕ್ಕ ಪ್ರೋತ್ಸಾಹ ಕೊಡತೊಡಗಿದರು. ಅನೇಕ ಶ್ರೀಮಂತರೂ ಅವಳನ್ನು ಶ್ಲಾಘಿಸಿ ಧನ ಸಹಾಯವನ್ನು ನೀಡಿದರು.

ಈ ಸಣ್ಣ ಹುಡುಗರು ಜಾತಿ ಮತ ವರ್ಣ ಭೇಧವಿಲ್ಲದೆ ತಮ್ಮ ಸೇವಾ ಕಾರ್ಯವನ್ನು ಮುಂದರಿಸಿದರು. ಬಡವ ಶ್ರೀಮಂತ, ಕಪ್ಪು ಬಿಳಿ ಎಂಬ ಭೇದವಿಲ್ಲದೆ ಅವರು ಆಗಿಂದಾಗ್ಗೆ ಚಿಕ್ಕ ಔತಣಗಳನ್ನು ಏರ್ಪಡಿಸಿ ತುಂಟ ಹುಡುಗರನ್ನು ಆಹ್ವಾನಿಸಿದರು. ಈ ಪ್ರೀತಿ ಪ್ರದರ್ಶನದಿಂದ ಎಂತಹ ಪೋಕರಿ ಹುಡುಗನಾದರೂ ಪರಿವರ್ತನೆ ಹೊಂದದಿರನು.

ನಗರದ ಅನೇಕ ಕಡೆಗಳಲ್ಲಿ ಅವರು ಸಂಘಗಳನ್ನು ರಚಿಸಿದರು. ನಮ್ಮಲ್ಲಿಯೂ ಅನೇಕ ಸೇವೆ ಉದ್ದೇಶದ ಸಂಘಗಳಿವೆ. ಆದರೆ ಇವುಗಳು ಯಾವ ಸಾರ್ವಜನಿಕ ಪ್ರಯೋಜನದ ಕಾರ್ಯಮಾಡಿದ್ದು ಕಂಡುಬರುವುದಿಲ್ಲ. ಇದು ಬಹಳ ಶೋಚನೀಯ ಪರಿಸ್ಥಿತಿ. ನಿಸ್ವಾರ್ಥ ಕೆಲಸಗಾರರಿಲ್ಲದಿರುವುದೇ ನಮ್ಮ ಅನೇಕ ಸಂಘಗಳು ನಿಷ್ಪ್ರಯೋಜಕವಾಗಿ ಹೆಸರಿಗೆ ಮಾತ್ರ ಸೇವಾಸಂಘವಾಗಿ ಉಳಿಯುತ್ತವೆ.

ನ್ಯೂಯೋರ್ಕಿನ ಉತ್ತರ ಪ್ರದೇಶದ ಒಂದು ಕಡೆಯಲ್ಲಿ ವಿದ್ಯಾರ್ಥಿಸೇವಕ ಸಂಘದವರಿಗೆ ಒಂದು ಆಡುವ ಸ್ಥಳವು ಬೇಕಾಯಿತು. ಆ ಕಡೆಯ ಕೆಲ ಪುಂಡ ಹುಡುಗರಿಗೆ ಒಂದು ಕ್ರೀಡಾರಂಗ ನಿರ್ಮಿಸಬೇಕೆಂದೇ ಅವರ ಉದ್ದೇಶವಾಗಿತ್ತು. ಕೂಡಲೇ ಅವರು ಮುನ್ಸಿಪಲ್ ಅಧ್ಯಕ್ಷರಿಗೆ ಪತ್ರ ಬರೆದು ಅಲ್ಲಿನ ನದೀ ಬಳಿಯ ಪ್ರದೇಶವನ್ನು ತಮಗೆ ಬಿಟ್ಟುಕೊಟ್ಟರೆ ತಾವದನ್ನು ಚೊಕ್ಕಟವಾಗಿ ಮಾಡುವುದಾಗಿ ತಿಳಿಸಿದರು. ನಗರ ಸಭೆಯ ಅನುಮತಿ ದೊರಕಿದೊಡನೆ ಸ್ವಯಂಸೇವಕರು ಅಲ್ಲಿನ ಕಲ್ಲು ಕಸಗಳನ್ನು ತೆಗೆದು ಹಾಕಿ ಸುತ್ತಲೂ ಮರದ ಬೇಲಿ ಇಟ್ಟು ಒಂದು ಸೊಗಸಾದ ಆಟದ ಬಯಲನ್ನು ತಯಾರಿಸಿ ಪುಂಡ ಹುಡುಗರನ್ನು ಆಕರ್ಷಿಸಿದರು. ಕೆಲವು ದಿನಗಳಲ್ಲಿ ಆ ವಟಾರದಲ್ಲಿ ಮತ್ತೆ ಹೆಚ್ಚು ಪೋಕರಿ ಕೆಲಸಗಳು ನಡೆಯಲಿಲ್ಲ.

ಒಂದು ಕಡೆ ಕೆಲವು ಜೀನಸು ಸ್ಟೋರುಗಳು ತಮ್ಮ ಗಿರಾಕಿಗಳಿಗೆ ಸರಿಯಾಗಿ ಸಾಮಾನುಗಳನ್ನು ಸರಬರಾಯಿಮಾಡುತ್ತಿರಲಿಲ್ಲ: ಇದು ಹುಡುಗ ಸ್ವಯಂಸೇವಕ ಸಂಘದ ಗಮನಕ್ಕೆ ಬಂತು: ಅಲ್ಲಿನ ಕೆಲ ವ್ಯಾಪಾರಿಗಳೂ ಕಂಟ್ರೋಲ್ ಬೆಲೆಯ ಪಟ್ಟಿಯನ್ನೂ ತೂಗಹಾಕುತ್ತಿರಲಿಲ್ಲ: ಸಾಬ್ರಾಹೊಲ್ ಬ್ರೂಕಳ ಸಹಾಯದಿಂದ ಆ ಸ್ಟೋರುಗಳ ಮಾಲಕರೊಡನೆಯೂ, ಸರಕಾರದ ಅಧಿಕಾರಿಗಳೊಡನೆಯೂ ಚರ್ಚಿಸಿದ ನಂತರ ಮತ್ತೆ ಎಲ್ಲವೂ ಸರಿಪಡಿಸಲ್ಪಟ್ಟಿತು.

ಈ ಚತುರ ಹುಡುಗರು ಅನೇಕ ಸಂದರ್ಭಗಳಲ್ಲಿ ಮಹತ್ವದ ಕೆಲಸಗಳನ್ನು ತಮ್ಮ ಉಪಾಧ್ಯಾಯರ ಮೂಲಕ ಮಾಡಿಸುವರು: ಇವರಲ್ಲಿ ಕೆಲವರು ನ್ಯೂಯೋರ್ಕಿಗೆ ಬರುವ ದೊಡ್ಡ ದೊಡ್ಡ ಗೌರವಾರ್ಹ ವ್ಯಕ್ತಿಗಳೊಡನೆಯೂ, ಕಾರ್ಖಾನೆ ಮಾಲಕರೊಡನೆಯೂ, ಭೇಟಿಗಳನ್ನೇರ್ಪಡಿಸಿ ತಮ್ಮ ಕೆಲಸಕ್ಕೆ ಬೇಕಾದ ಸಲಹೆ ಸಹಾಯಗಳನ್ನು ಪಡೆಯುವರು. ಇವರ ಆದರ್ಶವನ್ನು ಅನುಸರಿಸಿ ಇಂದು ಅಮೇರಿಕದ ಎಲ್ಲಾ ಕಡೆಯ ಹ್ಯಾಸ್ಕೂಲುಗಳಲ್ಲಿ ಸುಮಾರು ೪೫೦೦ ಇಂತಹ ಸ್ವಯಂ ಸೇವಕರಿದ್ದಾರೆ. ಇವರಿಗೆಲ್ಲರಿಗೂ ಸಾರಾಹೋಲ್ ಬ್ರೂಕಳೇ ಮುಖಂಡಳು.

ಅನೇಕ ಶಾಲಾ ಆಡಳಿತಗಾರರು ಇಂದು ತಮ್ಮ ಉಪಾಧ್ಯಾಯರಿಗೆ ಹೊಲ್ ಬ್ರೂಕಳ ಬಳಿಗೆ ಅನುಭವ ಪಡೆಯಲು ಕಳುಹಿಸುತ್ತಿರುವರು. ನಮ್ಮದೇಶದಲ್ಲೂ ಅನೇಕ ತರದ ರಚನಾತ್ಮಕ ಚಟುವಟಿಕೆಗಳಿಗಾಗಿ ಚಳವಳ ನಡೆಯುತ್ತಿದೆ. ದೇಶದ ಅಗ್ರಗಣ್ಯ ಮುಖಂಡರುಗಳ ಬೆಂಬಲ ಆಶೀರ್ವಾದಗಳು ಈ ಕೆಲಸಕ್ಕೆ ಇವೆ. ನಮ್ಮವರೂ ಒಂದು ಆದರ್ಶವನ್ನು ಏಕೆ ಕಲ್ಪಿಸಬಾರದು?

ಇದು ಮಗುವಿನ ಚರ್ಮವನ್ನು ತಂಪಾಗಿಯೂ; ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ- ಅಷ್ಟು ಚರ್ಮ ಮೃದುಕರ-

ಕುಟಿಕೂರ ಟಾಲ್ಕಮ್ ಪೌಡರ್

CUTICURA TALCUM POWDER

ಕೋಮಲ ಸೌಂದರ್ಯ ನಿಮಗೆ ಇರಬೇಕೆ?

ನಿಮಗೆ ಶುದ್ಧವಾದ ಮತ್ತು ಹಾಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯು ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನು ಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕ್ಕೆ ಕೋಮಲತೆಯನ್ನುಂಟುಮಾಡುವುದು.

BILE BEANS

ಬೈಲ್‌ಬೀನ್ಸ್ ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು

ಸಾಮ್ರಾಜ್ಯಶಾಹಿಯೇ ಯುದ್ಧಗಳ ಕಾರಣ

ಅದನ್ನು ಸದೆಬಡಿಯಬೇಕು

ಚೆಂಗ್‌ಕೈಶೇಕರ ಅಮೋಘ ಗ್ರಂಥ

ಚೀನದ ದುರಂತಮಯ ಪ್ರಾರಬ್ಧ

ಈ ಸಂದಿಗ್ಧ ಸಮಯದಲ್ಲಿ ಚೀನದ ಭವಿತವ್ಯದ ಕೊನೆಯ ತೀರ್ಮಾನವಾಗಲಿದೆ. ಸದ್ಯದಲ್ಲೇ ಉಂಟಾಗುವ ದಬ್ಬಾಳಿಕೆಯ ಅಚ್ಚು ರಾಷ್ಟ್ರಗಳ ಅಧಃಪತನವಾಗುತ್ತಲೆ ನೂತನವೂ ಸರ್ವಸ್ವತಂತ್ರವೂ ಆದೊಂದು ಜಗತ್ತಿನ ನಿರ್ಮಾಣವಾಗಲಿರುವುದು. ಮಿತ್ರ ರಾಷ್ಟ್ರಗಳ ಸೈನಿಕರು ಯಾವ ಧ್ಯೇಯಗಳಿಗಾಗಿ ಕಾದಾಡಿ ಪ್ರಾಣದಾನ ಮಾಡಿರುವರೊ ಆ ತತ್ವಗಳ ಸತ್ವ ಪರೀಕ್ಷೆ ಇಂದು ಚೀನದಲ್ಲಾಗಬೇಕಾಗಿದೆ.

ಚೀನದ ಭಾವೀ ಕಲ್ಯಾಣವು ವಿಶಾಲ ವಿಶ್ವದ ಪ್ರಾರಬ್ಧ ವಿಧಿಯೊಂದಿಗೆ ಸಂಯೋಜಿಸಲ್ಪಟ್ಟಿದೆ. ಎಟ್ಲಾಂಟಿಕ್ ಘೋಷಣೆಯ ತತ್ವಗಳನ್ನು ಹೃತ್ಪೂರ್ವಕವಾಗಿ ಕಾರ್ಯತೊಪಕ್ಕೆ ತರುವುದರಲ್ಲೇ ಪ್ರಜಾಪ್ರಭುತ್ವದ ಅಮೋಘ ತತ್ವಗಳ ಸೋಲುಗೇಲುಗಳೂ, ಅಳಿವು ಉಳಿವುಗಳೂ ಹೊಂದಿಕೊಂಡಿವೆ. ಚೀನವು ಪ್ರಜಾಪ್ರಭುತ್ವವಾದಿಗಳೆನಿಸಿದವರ ಗೊತ್ತುಗುರಿಗಳ ಅಗ್ನಿ ಪರೀಕ್ಷೆಯಾಗಲಿರುವ ಪ್ರಯೋಗಶಾಲೆಯಾಗಿರಬೇಕೆಂದು ವಿಧಿಲಿಖಿತವಿದ್ದಂತಿದೆ.

ಚೀನವು ತನ್ನ ಜನಾಂಗವನ್ನು ರಕ್ಷಿಸಲೂ ತನ್ನ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲೂ ಯುದ್ಧ ಮಾಡುತ್ತಿರುವುದು. ಮಾತ್ರವಲ್ಲ ಚಿಕ್ಕ ದೊಡ್ಡ ಎಲ್ಲಾ ಜನಾಂಗಗಳಿಗೂ ಸ್ವಾತಂತ್ರ್ಯ ಸಿಗಬೇಕೆಂಬುದೇ ಚೀನದ ಮಹದಾಶೆ. ಇದೇ ಕೊನೆಯ ಯುದ್ಧವಾಗಲೆಂದು ಚೀನವು ಬಯಸುತ್ತದೆ. ಕಾರಣ ಇಂದು ದಬ್ಬಾಳಿಕೆಗಾರರಿಂದ ಚೀನವು ನೊಂದಷ್ಟು ಇನ್ನಾವ ರಾಷ್ಟ್ರವೂ ನೊಂದುಕೊಂಡಿಲ್ಲ. ಇಂದಿಗೆ ಒಂದು ಶತಮಾನದಿಂದ ಚೀನವು ಸಾಮ್ರಾಜ್ಯಶಾಹೀ ರಾಷ್ಟ್ರಗಳ ಆಹಾರ ಕೊಳ್ಳೆಯಾಗಿರುತ್ತದೆ. ಎಲ್ಲಾ ಜನಾಂಗಗಳ ಸಂಪೂರ್ಣ ಸ್ವಾತಂತ್ರ್ಯದಿಂದಲೂ, ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಪರಸ್ಪರ ಮನ್ನಣೆ ಆದರಗಳಿಂದಲೂ, ಮಾತ್ರವೇ ಚಿರಶಾಂತಿಯು ನೆಲೆಗೊಳ್ಳಲಾರದೆಂದು ಚೀನವು ತಿಳಕೊಂಡಿವೆ.

ಸಾಮ್ರಾಜ್ಯಶಾಹಿಯೇ ಮೂಲಕಾರಣ

ಯುದ್ಧದ ಮೂಲಕಾರಣವೇನು? ನಿರ್ದಾಕ್ಷಿಣ್ಯವಾಗಿ ಹೇಳುವುದಾದರೆ ಸಾಮ್ರಾಜ್ಯಶಾಹೀ ತತ್ವವೇ ಇದರ ಕಾರಣ. ಸ್ವಾತಂತ್ರ್ಯ ಸಮಾನತೆಗಳಿಗಾಗಿ ನಾವು ಮಾಡಿಕೊಂಡ ವಿನಂತಿ ಅರಿಕೆಗಳು ಅತ್ಯಂತ ವ್ಯಾಕುಲತೆಯಿಂದ ಮಾಡಿಕೊಂಡವುವೆಂದು ತಿಳಿಯಬೇಕು. ನಮ್ಮ ಕೆಲವು ಮಿತ್ರರು ತಿಳಕೊಂಡಂತೆ ಆಸ್ಯಾಖಂಡದ ಮುಖಂಡರು ನಾವೇ ಆಗಬೇಕೆಂಬ ಬಯಕೆಯು ನಮ್ಮ ಈ ವ್ಯಾಕುಲತೆಗೆ ಕಾರಣವಲ್ಲ.

ಈ ಸಂದರ್ಭದಲ್ಲಿ ನಮ್ಮ ಜನರೂ ಮತ್ತು ಇತರ ಜನಾಂಗಿಕರೂ ಎರಡು ಪ್ರಾಮುಖ್ಯ ವಿಷಯಗಳನ್ನು ಸ್ಪಷ್ಟವಾಗಿ ತಿಳಕೊಳ್ಳಬೇಕು. ಚೀನವು ಸ್ವತಂತ್ರವೂ ಶಕ್ತಿವಂತವೂ ಆದ ಮೇಲೆ ಅದು ಹೊರಬೇಕಾಗಿ ಬರುವ ಸಂಕಷ್ಟಗಳ ಹೊರೆಯನ್ನು ಬೇರೆ ಯಾವ ಜನಾಂಗಗಳ ಮೇಲೂ ಹೇರಲು ಬಯಸುವುದಿಲ್ಲವೆಂಬ ವಿಷಯ ಮೊದಲನೇಯದು. ಜಪಾನೀ ಸಾಮ್ರಾಜ್ಯವಾದಿಗಳ ಮಾರ್ಗವನ್ನು ಅದು ಎಂದಿಗೂ ಅನುಸರಿಸಲಿಚ್ಛಿಸುವುದಿಲ್ಲ. ಚೀನವು ತನ್ನ ಸ್ವಂತ ಶಕ್ತಿಯ ಮೂಲಕವೇ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಇಚ್ಛಿಸುತ್ತದೆಂಬ ವಿಷಯವು ಎರಡನೇಯದು. ನಮ್ಮ ರಾಷ್ಟ್ರದ ಸಂರಕ್ಷಣೆ ಆರ್ಥಿಕ ಸ್ಥಿತಿಗಳನ್ನೂ, ದೇಶಾಡಳಿತ ಸಂಸ್ಕೃತಿ ನಾಗರೀಕತೆಗಳನ್ನೂ ಸುಧಾರಿಸಿ ಪ್ರಗತಿಗೊಳಿಸಲು ನಾವು ಶತಪ್ರಯತ್ನ ಮಾಡಬೇಕಾಗಿದೆ.

ಚೀನದ ಈ ಕೋರಿಕೆಯು ಯಾವ ಸ್ವಾರ್ಥದ್ದೂ ಅಲ್ಲ. ಮಾನವಕೋಟಿಯನ್ನು ಸಂಕಷ್ಟದಿಂದುದ್ಧರಿಸುವ ಮತ್ತು ಜಾಗತ್ತಿಕ ಶಾಂತಿಯನ್ನು ರಕ್ಷಿಸಿಕೊಳ್ಳುವ ಹೊಣೆಗಾರಿಕೆಯಲ್ಲಿ ಭಾಗವಹಿಸಲಿಚ್ಛಿಸುವುದೇ ನಮ್ಮ ಸರಳ ಆಶಯ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಾಮ್ರಾಜ್ಯ ಶಾಹಿಯು ಬಾಳಿಕೊಂಡಿರುವುದಕ್ಕೆ ಚೀನವು ವಿರೋಧ ಸೂಚಿಸುತ್ತದೆ. ಅದು ಎಷ್ಟು ಮಾತ್ರಕ್ಕೂ ಸಾಮ್ರಾಜ್ಯಶಾಹಿಯು ನಡೆದಲ್ಲಿ ಅಡಿಯಿಡಲಿಚ್ಛಿಸುವುದಿಲ್ಲ.

ಆಸ್ಯಾಖಂಡದ ಇತರ ಜನಾಂಗಿಕರಿಗೂ ಸ್ವಾತಂತ್ರ್ಯ ಸಮಾನತೆಯ ಸಂದರ್ಭಗಳು ದೊರಕಿಸಿ ಕೊಡುವುದೂ ಚೀನದ ಉದ್ದೇಶವಾಗಿದೆ. ಒಂದು ಶತಮಾನದಿಂದ ಸಾಮ್ರಾಜ್ಯಶಾಹಿಗಳ ಕೈಕೆಳಗೆ ಸಂಕಷ್ಟಗಳನುಭವಿಸಿದ ನಾವು ಆಸ್ಯಾಖಂಡದ ನಮ್ಮ ನೆರೆ ಜನಾಂಗಿಕರು ದೌರ್ಭಾಗ್ಯದಲ್ಲಿ ಕೊಳೆಯುವುದನ್ನು ನಾವು ತಿರಸ್ಕಾರ ದೃಷ್ಟಿಯಿಂದ ಕಾಣಬಯಸುವುದಿಲ್ಲ. ಈ ಆಸ್ಯಾಖಂಡವು ಅದೆಷ್ಟು ವಿಶಾಲವೂ ಅಮೋಘ ಭವಿತವ್ಯವುಳ್ಳದ್ದೂ ಎಂಬ ವಿಷಯವನ್ನು ನೀವು ಬಲ್ಲಿರಾ? ಆಸ್ಯಾಖಂಡವು ಇಡೀ ಭೂಗೋಲದ ನಾಲ್ಕನೇ ಒಂದಂಶದಷ್ಟು ವಿಸ್ತಾರವುಳ್ಳದ್ದಾಗಿದೆ. ನಮ್ಮೀ ಖಂಡದ ಜನಸಂಖ್ಯೆಯಾದರೂ ಇಡೀ ವಿಶ್ವದ ಮೂರನೇ ಒಂದು ಪಾಲಷ್ಟು ಇದೆ. ಆದರೂ ಆಸ್ಯದ ಹೆಚ್ಚಿನ ಜನಾಂಗಗಳೆಲ್ಲವೂ ಚೀನದಷ್ಟೇ ಸಂಕಷ್ಟಗಳನ್ನನುಭವಿಸಿವೆ. ಚೀನವು ಸ್ವತಂತ್ರವಾಗಲು ಸಾಧ್ಯವಾಗದಿದ್ದರೆ ಆಸ್ಯದ ಇತರ ಎಲ್ಲಾ ಜನಾಂಗಗಳೂ ಜಪಾನಿನ ಕ್ರೂರ ದಬ್ಬಾಳಿಕೆಗೊಳಗಾಗುವುದು ಖಂಡಿತ. ಪರಿಣಾಮವಾಗಿ ಶಾಶ್ವತವಾದ ವಿಶ್ವಶಾಂತಿಯನ್ನು ಗಳಿಸಲು ಸಾಧ್ಯವಾಗದು. ಆದುದರಿಂದ ಚೀನದ ಸ್ವಾತಂತ್ರ್ಯವೆಂದರೆ ಶಾಂತಿಭರಿತವಾದ ಆಸ್ಯಾಖಂಡವೆಂದರ್ಥವಾಗುತ್ತದೆ. ಆಸ್ಯಾಖಂಡದ ಸ್ವಾತಂತ್ರ್ಯ ಸಮಾನತೆಯಿಂದಲೇ ಜಾಗತ್ತಿಕ ಶಾಂತಿಯು ಭದ್ರತೆಯನ್ನು ಕೊಡುವಂತಹುಗಳು.

ಚೀನಿಯರಾದ ನಾವು ಇಂದು ಸಾಮ್ರಾಜ್ಯ ಶಾಹಿತ್ವವನ್ನು ದ್ವೇಷಿಸುತ್ತೇವೆಂದು ಹೇಳುವಾಗ ನಾವು ನಿಜವಾದ ಅನುಭವದಿಂದ ಈ ಮಾತುಗಳನ್ನು ಆಡುತ್ತೇವೆಂದು ತಿಳಿಯಬೇಕು. ನೂರು ವರ್ಷಗಳಿಗೂ ಮಿಕ್ಕಿದ ಅವಧಿಯ ತನಕ ನನ್ನಮಾತೃ ಭೂಮಿಯು ಸಾಮ್ರಾಜ್ಯಶಾಹಿಯ ಮತ್ತು ದಬ್ಬಾಳಿಕೆಯ ಕ್ರೂರ ಶೃಂಖಲೆಗಳಿಂದ ಬಿಗಿಯಲ್ಪಟ್ಟಿತು.

ಚೀನವು ಜಗತ್ತಿನ ಮೀನು ಬೇಟೆಯ ಸರೋವರವಾಯಿತು. ಚಿಕ್ಕ ದೊಡ್ಡ ಹೊರ ಜನಾಂಗಗಳು ನಮ್ಮ ದೇಶದ ಮೇಲೆ, ನಮ್ಮ ಸಂಪತ್ತಿನ ಮೇಲೆ, ನಮ್ಮ ರಾಷ್ಟ್ರಐಕ್ಯತೆಯ ಜೀವನದ ಮೇಲೆ ತಮ್ಮ ಬಲೆಗಳನ್ನು ಬೀಸಿದರು. ಅವರು ನಮ್ಮರಾಷ್ಟ್ರೀಯ ಸ್ವಾತಂತ್ರ್ಯವನ್ನು ಕೀಳುಗಾಣಿಸಿ ನಮ್ಮ ಜನರನ್ನು ಶ್ರಮ ಸುಲಿಗೆಗೊಳಪಡಿಸಿ ಅಪಾರ ಸಂಪತ್ತನ್ನು ಗಳಿಸಿಕೊಂಡರು. ಸಾಮ್ರಾಜ್ಯಶಾಹಿಯ ಮತ್ತು ಶಕ್ತಿಯುಕ್ತವಾದ ಕುಟಿಲ ರಾಜನೀತಿಯನ್ನು ಎಂದೂ ಅರಿತಿರದ ನಮ್ಮ ಜನರು ಸುಲಭವಾಗಿ ಸಾಮ್ರಾಜ್ಯ ಶಾಹಿಗಳ ಕೊಳ್ಳೆಯಾದರು.

“ಒಪ್ಪಂದ ಕರಾರುಗಳು” ಇಲ್ಲವೆ ಬಂಧನ

ಎಂದು ನಾವು ಕೆಲವು ಅಸಮಾನತೆಯ “ಕರಾರು”ಗಳಿಗೆ ಸಹಿ ಹಾಕಿದೆವೊ ಅಂದೇ ಚೀನದ ರಾಷ್ಟ್ರೀಯ ಅವಮಾನವೂ ಪಾರತಂತ್ರ್ಯ ಬಂಧನವೂ ಉಂಟಾಯಿತು. ಇದು ಚೀನಾ ಮತ್ತು ಬ್ರಿಟನ್ ಗಳೊಳಗಾದ ‘ನೆನಕಿಂಗ್‌ಕರಾರು’ ಎಂಬ ಒಪ್ಪಂದ. ಹಿಂದೆ ಅಫೀಮು ಯುದ್ಧದಿಂದ ಉಂಟಾದ ಪರಿಣಾಮವಿದು. ಈ ಒಪ್ಪಂದದ ಪ್ರಕಾರ ಚೀನವು ಬ್ರಿಟಿಷರಿಗೆ ಹೊಂಕೊಂಗ್ ದ್ವೀಪವನ್ನು ಬಿಟ್ಟುಕೊಡಬೇಕಾಯಿತು. ಮಾತ್ರವಲ್ಲ ವಿದೇಶಿಯರ ವಾಣಿಜ್ಯ ವಸಾಹತಿಗಾಗಿ ಐದು ಇತರ ಬಂದರು ಸ್ಥಳಗಳನ್ನೂ ದಾನ ಮಾಡಬೇಕಾಯಿತು. ಅವು ಯಾವದೆಂದರೆ ಕೆಂಟನ್, ಎಮ್ಯೊ, ಫೊಚೊ, ನಿಂಗ್ಪೊ ಮತ್ತು ಶಾಂಘ್ಯಾಗಳು. ಇಷ್ಟೇ ಅಲ್ಲ, ವಿಶೇಷ ಪ್ರಾಂತ್ಯಾಡಳಿತದ ಅಧಿಕಾರವುಳ್ಳ ರಾಯಭಾರಿಗಳನ್ನು ನೇಮಿಸುವ ರಿಯಾಯತಿಯನ್ನೂ ಚೀನವು ಬ್ರಿಟನಿಗೆ ಕೊಡಬೇಕಾಯಿತು. ವಿದೇಶಿ ಜನರಿಗೆ ಎಲ್ಲೆ ಮೀರಿದ ವಾಣಿಜ್ಯ ವ್ಯವಹಾರದ ಅಧಿಕಾರ ಕೊಡಲ್ಪಟ್ಟಿತು.

ಕ್ರಮೇಣ ಆ ಕಾಲದಲ್ಲಿ ಆಳುತಿದ್ದ ಚಿಂಗ್ ರಾಜಮನೆತನದ ರಾಜ್ಯಾಡಳಿತಗಾರರ ಅಜ್ಞಾನ ಅವಿವೇಕತನದ ವಿಶೇಷಾನುಕೂಲತೆ ಪಡೆದು ಬ್ರಿಟನ್ ಪ್ರಾನ್ಸ್ ಮತ್ತಿತರ ರಾಷ್ಟ್ರಗಳು ತಮಗೆ ದೊರೆತ ಸವಲತ್ತುಗಳನ್ನು ಇನ್ನು ಹೆಚ್ಚು ವಿಸ್ತರಿಸಿಕೊಂಡರು.

ಚೀನವು ಒಪ್ಪಲು ವಿನಂತಿಸಿಕೊಳ್ಳುವ ಮೊದಲೇ ಈ ವಿದೇಶಿಯರ ರಿಯಾಯತಿಗಳು ಸಂದು ಹೋದ ಸಂಗತಿಗಳಾದುದು ಒಂದು ನಿದರ್ಶನ ನೆನ್‌ಕಿಂಗ್ ಒಪ್ಪಂದದಿಂದ ಕೊಡಲ್ಪಟ್ಟ ಅನೇಕ ಸವಲತ್ತುಗಳಲ್ಲಿ ಇದೊಂದಾಗಿದೆ.

ಇದರ ಪರಿಣಾಮವೇನಾಯಿತು? ಚೀನದ ವ್ಯಾಪಾರ ಮತ್ತು ವಹಿವಾಟುಗಳೂ ಮತ್ತು ಯಾಂಗ್‌ಸ್ಟೇ ನದೀ ಪ್ರಹಾವ ಪ್ರದೇಶದ ಆಡಳಿತವೂ ವಿದೇಶಿಯರ ಅಧಿಕಾರ ನಿರ್ದೇಶದೊಳಗೆ ಬಂದುದರಿಂದ ಅವರು ತಮ್ಮ ಕೈಗಾರಿಕೆ ವಸ್ತು ಚೀನದಲ್ಲಿ ತುಂಬಿಸ ಹತ್ತಿದರು. ಚೀನದೊಳಗಿನ ಕೈಗಾರಿಕೆ ವಸ್ತುಗಳನ್ನು ಯಾಂಗ್‌ಸ್ಟೇ ನದಿ ಮೂಲಕ ಸಾಗಿಸಲು ಚೀನಿಯರು ಪಾಶ್ಚಾತ್ಯರ ಹಡಗುಗಳ ಅನುಕೂಲ ಸಮಯವನ್ನು ಕಾದು ನಿಲ್ಲಬೇಕಾಗಿಯೂ ಬಂತು.

ಇಷ್ಟು ಅವಧಿಯಲ್ಲಿ ಈ ವಿದೇಶಿ ಶಕ್ತಿ ರಾಷ್ಟ್ರಗಳು ಅನೇಕಾನೇಕ ವಸತಿ ವ್ಯವಹಾರ ರಿಯಾಯಿತಿಗಳನ್ನು ಚೀನಿಯ ಸರಕಾರದ ಅನುಮತಿ ಪಡೆಯುವುದನ್ನು ಅಲಕ್ಷಿಸಿ ಸ್ಥಾಪಿಸಿ ಕೊಂಡರು. ಇಂತಹ ಸ್ವಕಲ್ಪಿತ ರಿಯಾಯಿತಿಗಳಲ್ಲಿ ಅಂತರಾಷ್ಟ್ರೀಯ ವಸತಿ ಪ್ರದೇಶ ಮತ್ತು ಶಾಂಘ್ಯಾಯಲ್ಲಿನ ಫ್ರೆಂಚ್ ವಸತಿ ಸ್ಥಳಗಳು, ಮಿಂಗ್ಪೋ, ಹೆಂಕೋ ನತ್ಯಸಿಯಾಂಗ್ ಚಿಂಕಿಯಾಂಗ್, ಎಮೊ, ಟಿಸ್ಟಿನ್ ಕೆಂಟನ್, ಮತ್ತು ಚೆಫೂಗಳಲ್ಲಿರುವ, ಬ್ರಿಟಿಷ್ ಮತ್ತು ವಸಾಹತುಸ್ಥಾನಗಳು ಕೆಲವು ವಿದೇಶಿ ರಾಯಭಾರಿಗಳಿಗೆ ಕೊಟ್ಟ ಅಧಿಕಾರದ ಮೂಲ ಉದ್ದೇಶವು ಆ ಪ್ರದೇಶಗಳ ಜನರ ಆಡಳಿತದ ನೋಡಲಿಕ್ಕಲ್ಲದೆ ಆ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಕೊಟ್ಟ ಪರವಾನಿಗೆ ಅಲ್ಲ. ಆದರೆ ವಸಾಹತುಗಳು ಸ್ಥಾಪಿಸಲ್ಪಟ್ಟ ಹಾಗೆ ಈ ರಿಯಾಯಿತಿಯ ಅರ್ಥವೂ ಬದಲಾಯಿಸಲ್ಪಟ್ಟಿತು. ಅಲ್ಲಿಂದ ವಿದೇಶಿಗಳವರು ಈ ಸ್ಥಳಗಳಲ್ಲಿ ಸ್ವಯಂ ಅಧಿಕಾರವನ್ನು ತಾಳಿಕೊಂಡರು. ಇದರಿಂದಾಗಿ ಚೀನದೊಳಗೆ ಅನೇಕ ಚಿಕ್ಕ ಚಿಕ್ಕ ದೇಶ ವಿಭಾಗಗಳು ಸ್ಥಾಪಿಸಲ್ಪಟ್ಟಂತಾಯಿತು.

ಇದೇ ಒಪ್ಪಂದ ಕರಾರುಗಳ ಪ್ರಕಾರ ವಿದೇಶಿಯ ಯುದ್ಧ ನಾವೆಗಳಿಗೆ ಚೀನಿ ಸಮುದ್ರದಲ್ಲಿ ಸಂಚರಿಸಲೂ, ಚೀನಿ ಬಂದರುಗಳಲ್ಲಿ ತಳವೂರಲೂ ಸಮ್ಮತಿ ಕೊಡಲಾಗಿತ್ತು. ಇದರ ಮುಂಚಿನಿಂದಲೂ ವಿದೇಶಿ ಯುದ್ಧ ನಾವೆಗಳು ಚೀನೀ ನದಿ ಸಮುದ್ರಗಳಲ್ಲಿ ಓಡಾಡುತಿದ್ದುವು. ಆದರೆ ಟಿನ್‌ಸ್ಟಿನ್ ಒಪ್ಪಂದದಲ್ಲಿ ಅದಕ್ಕೆ ಹಕ್ಕು ಬಾಧ್ಯತೆಯ ಸಮ್ಮತಿಗೆ ಸಹಿ ಹಾಕಲಾಯಿತು. ಈ ರೀತಿ ಕರಾವಳಿ ಪ್ರದೇಶದ ಸಂರಕ್ಷಣೆಯ ಅನುಕೂಲತೆಯು ಚೀನಕ್ಕೆ ಇಲ್ಲವಾಯಿತು. ಹೀಗಾಗಿ ನಮ್ಮ ದೊಡ್ಡ ದೊಡ್ಡ ಬಂದರುಗಳೂ ನಗರಗಳೂ ವಿದೇಶಿ ಸಾಮ್ರಾಜ್ಯಶಾಹಿಯ ‘ಫಿರಂಗಿ ನಾವೆ’ಗಳ ಧೋರಣೆಗೆ ಒಳಗಾದುವು.

ಉಷ್ಣ ಕಾಲದಲ್ಲಿ ನಿಮ್ಮ ಕಂಠದ ಕುರಿತು ಜಾಗ್ರತೆ ತೆಕ್ಕೊಳ್ಳಿರಿ
ಶ್ವಾಸಯೋಗ್ಯ ಮಾತ್ರೆ ಪೆಪ್ಸುಗಳನ್ನು
ಪೆಪ್ಸು ನಿಮ್ಮ ಬಾಯಲ್ಲಿ ಹಾಕಿದ ಕೂಡಲೇ ಕರಗಿ ಅತ್ಯುತ್ತಮ ಔಷಧಿ ರಸವನ್ನು ಹೊರಗೆಡವುದು. ಅದರಿಂದ ಕಂಠಬೇನೆ, ಉರಿಶೀತ, ಎದೆ ನೋವು ಮೊದಲಾದ ಶೀತಬಾಧಿಗಳು ಗುಣಹೊಂದುವುದು.

ಪೆಪ್ಸು ತೆಕ್ಕೊಳ್ಳಿರಿ
PEPS
ವಿಷಹಾರೀ ಸ್ವಾಶಯೋಗ್ಯ ಮಾತ್ರೆಗಳು

ಎಸೆಂಬ್ಲಿಯಲ್ಲಿ ದ. ಕ. ಜಿಲ್ಲೆಯ ಚರ್ಚೆ

ಜಿಲ್ಲೆಯಲ್ಲಿ ನರಭಕ್ಷಕ ಹುಲಿಹಾವಳಿ

ರೈಲು ಕಂಬಿಯ ಬಳಿ ಮರಣ

ವ್ಯಾಯಾಮ ಮಂಡಳ ಉದ್ಘಾಟನೆ—ಅಕ್ಕಿ ಗಿರಣಿ ಪ್ರಕಟಣೆ—ಕಂಟ್ರೋಲ್ ಕಟ್ಲೆಗಳು—ಪರ್ಶಿಯಾಕ್ಕೆ ದ. ಕ. ಜಿಲ್ಲಾ ವಸ್ತುಗಳು—ಪುತ್ತೂರಿನ ವೈಮಾನಿಕರು—ಅಡಿಕೆ ಬೇಸಾಯಿಗಳ ತಂತಿ

ಇರಾನಿನಲ್ಲಿ (ಪರ್ಶಿಯಾ) ಭಾರತೀಯ ಕೈಗಾರಿಕೆ ವಸ್ತುಗಳ ಮಾರಾಟ ಪ್ರಚಾರಗಳಿಗಾಗಿ ಅಲ್ಲಿಯ ರಾಜಧಾನಿಯಾದ ಟೆಹರಾನಿನಲ್ಲಿ ಇಂಡಿಯಾ ಸರಕಾರದ ವಾಣಿಜ್ಯ ಶಾಖೆಯ ಕಮಿಶನರರ ಕಾರ್ಯಾಲಯಕ್ಕೆ ಸಂಬಂಧಿಸಿ ಒಂದು ವಸ್ತು ಪ್ರದರ್ಶನಾಲಯವೊಂದು ತೆರೆಯಲಾಗುವುದು. ಆ ದೇಶದಲ್ಲಿ ತಮ್ಮ ತಯಾರಿಕೆ ವಸ್ತುಗಳನ್ನು ಪ್ರಚಾರ ಮಾಡಲೆಳಸುವ ಮಲಬಾರು ಮತ್ತು ದ. ಕನ್ನಡದ ಕೈಗಾರಿಕೆ ಮ್ಹಾಲಕರು ತಮ್ಮ ಪದಾರ್ಥಗಳ ಮಾದರಿಗಳನ್ನು ‘ಮಲಬಾರ್ ಮತ್ತು ದ. ಕನ್ನಡ ಜಿಲ್ಲಾ ಇಂಡಸ್ಟ್ರಿಸ್ ಆಫೀಸರ್’, ಇವೆನ್ಸ್ ರೋಡ್, ಕಲ್ಲಿಕೋಟೆ’ ಇವರಿಗೆ ಕಳುಹಿಸಿಕೊಡಬೇಕು. ಇಲ್ಲಿಯ ಸಾಬೂನು ಕಾರ್ಖಾನೆಯವರು ಬೇಗನೇ ತಮ್ಮ ಕಾರ್ಖಾನೆಯ ವಿವರ, ಉತ್ಪತ್ತಿ ಪ್ರಮಾಣ, ‘ಕೊಲಿಟಿ’, ೧೯೪೪ರಲ್ಲಿ ಅವರು ತಯಾರಿಸಿದ ಮತ್ತು ಮಿಲಿಟರಿಗೂ, ನಾಗರೀಕರಿಗೂ ಮಾರಿದ ಪ್ರಮಾಣ ಇವನ್ನೂ ಸದ್ರಿ ಆಫೀಸರರಿಗೆ ತಿಳಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗಳೂರು, ಮೂಲ್ಕಿ, ಬಂಟ್ವಾಳ, ಕಾಸರಗೋಡು, ಹೊಸದುರ್ಗ, ಪುತ್ತೂರು, ಬೆಳ್ತಂಗಡಿ, ಕಾರ್ಕಳ, ಉಡ್ಪಿ, ಕುಂದಾಪುರ, ಬೈಂದೂರುಗಳಲ್ಲಿ ಜೀವಂತ ಕುರಿ, ಆಡುಗಳ ಬೆಲೆ ೧೦೦ ಪೌಂಡಿನವಕ್ಕೆ ರೂ. ೨೨ ಎಂದು ಬೆಲೆ ನಿರ್ಧರಿಸಲಾಗಿದೆ. ಇದನ್ನು ಮೀರಿದವರಿಗೆ ಸಜೆ ಜುಲ್ಮಾನೆ ಇಲ್ಲವೆ ಎರಡೂ ವಿಧಿಸಲಾದೀತು ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ.

ಗೂಡ್ಸ್ ಆಫೀಸಿನ ಮೊದಲಿನ ಗೇಟಿನ ಬಳಿ ಅಂದರೆ ಬೋಳಾರಕ್ಕೆ ಹೋಗುವ ರೈಲ್ವೆ ಸಂಧಿಯ ಬಳಿ ನಡುಪ್ರಾಯ ದಾಟಿದವನೊಬ್ಬನ ರುಂಡ ಮುಂಡಗಳು ಬೇರೆಯಾಗಿ ಬಿದ್ದಿರುವುದು ತಾ. ೧೧ರಂದು ಬೆಳಗ್ಗೆ ಕಂಡು ಬಂತು. ಅವಘಡವೊ ಆತ್ಮಹತ್ಯವೊ ಇಲ್ಲವೆ ಕೊಲೆ ಖೂನಿಯೊ ಎಂದು ಸ್ಪಷ್ಟ ತಿಳಿದು ಬಂದಿಲ್ಲ.

ಕಳೆದ ಶನಿವಾರ ಗೌಟ್ರೆಡ್ ಸ್ಕೂಲ್ಸ್ ಇದರ ಹೊಸ್ತಲಿನ ವಾರ್ಷಿಕ ದಿನಾಚರಣೆಯನ್ನು ಮಾನ್ಯ ಕಲೆಕ್ಟರ್ ರಾ। ಸಾ। ರಾಮದಾಸ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಈ ಟ್ರೇಡ್ ಸ್ಕೂಲ್ ಅಥವಾ ಕಾಮಗಾರಿ ಶಿಕ್ಷಣ ಶಾಲೆಯಲ್ಲಿ ಮೋಟರ್ ಎಂಜಿನಿಯರಿಂಗ್, ಫಿಟ್ಟಿಂಗ್ ಮರಕೆಲಸ ಮುಂತಾದ ಕಸಬುಗಳನ್ನು ಕಲಿಸುತ್ತಾರೆ. ಸುಮಾರು ೧೯೬ ವಿದ್ಯಾರ್ಥಿಗಳಿಗೆ ಕಲಿಸಲು ವ್ಯವಸ್ಥೆಯಿದೆ. ಈಗ ೧೬೩ ಮಂದಿಗಳು ಮಾತ್ರ ಇದ್ದಾರೆ.

ಮೇಲ್ಕಂಡ ಸಮಾರಂಭದಂದು ವಿಶೇಷ ಅತಿಥಿಗಳಾಗಿದ್ದ ಐ. ಎ. ಎಫ್. ವೈಮಾನಿಕ ದಳದ ಫ್ಲಾಯಿಂಗ್ ಆಫೀಸರರಾಗಿರುವ ಪುತ್ತೂರಿನ ಶ್ರೀ ಎಸ್. ಕೆ. ಎಂ. ಭಟ್ ಅವರು ವೈಮಾನಿಕ ಶಿಕ್ಷಣದ ಮಹತ್ವವನ್ನು ತಾವು ಯುದ್ಧದಲ್ಲಿ ಭಾಗವಹಿಸಿ ಪಡೆದ ರೋಮಾಂಚಕವೂ ಸಾರಸ್ಯವೂ ಆದ ಅನುಭವನನ್ನೂ ತಿಳಿಸಿ ಇಂತಹ ಯಂತ್ರ ಶಿಕ್ಷಣದಿಂದ ವಿಮಾನ ದಳಕ್ಕೆ ಆಗಬೇಕಾದ ಉಪಯುಕ್ತತೆಯನ್ನು ವಿಶದಪಡಿಸಿದರು.

ಕೆಂಜಾರು ಗ್ರಾಮದ ಹೋಟೇಲಿನವರಾದ ಐತಪ್ಪ ಬಂಗೇರ ಎಂಬವರು ಯೋಗ್ಯ ಪರ್ಮಿಟು ಇಲ್ಲದೆ ೪॥ ಮಣ ಕಲ್ಲು ಸಕ್ಕರೆಯನ್ನು ತೋಮನೆಂಬವರ ದೋಣಿಯಲ್ಲಿ ಬೇರೆ ಕಡೆಗೆ ಸಾಗಿಸಲು ಪ್ರಯತ್ನಪಟ್ಟದ್ದಕ್ಕಾಗಿ ಮೊದಲಿನವರಿಗೆ ೧೫೦ ರೂಪಾಯಿಯನ್ನೂ, ದೋಣಿಯವರಿಗೆ ೫೦ ರೂಪಾಯಿಯನ್ನೂ ಜುಲ್ಮಾನೆಯಾಗಿ ಫಸ್ಟ್‌ಕ್ಲಾಸ್ ಎಡಿಶನಲ್ ಮೆಜಿಸ್ಟ್ರೇಟರು ವಿಧಿಸಿದ್ದಾರೆ.

ಬಂಟ್ವಾಳದ ಶ್ರೀ ವಾಸುದೇವ ಪೈ ಎಂಬವರು ೫ ಮುಡಿ ಅಕ್ಕಿಯನ್ನು ಕಂಟ್ರೋಲ್ ಬೆಲೆಗಿಂತ ಮಿಕ್ಕಿ (೧೫ ರೂ. ಯಂತೆ) ಮಾರಿದರೆಂದು ವಿಚಾರಣೆಗೆ ಒಳಗಾಗಿ ೨ ತಿಂಗಳ ಸಾದಾ ಶಿಕ್ಷೆಗೂ, ೩೦೦ ರೂ. ಜುಲ್ಮಾನೆಗೂ ಒಳಗಾಗಿರುವರು.

ಕಾಸರಗೋಡಿನ ಅಬ್ದುಲ್ ಖಾದರ್, ಅಬ್ದುಲ್ ಕುಂಜ, ರಜಾಕ್ ಎಂಬೀ ಮೂವರು ಅರಳೆ ಬಟ್ಟೆ ಮತ್ತು ನೂಲಿನ ನಿಯಂತ್ರಣ ಆಜ್ಞೆ ಉಲ್ಲಂಘಿಸಿದರೆಂಬ ಆರೋಪಕ್ಕೆ ಮೊದಲನೇಯವರಿಗೆ ೨ ತಿಂಗಳ ಕಠಿಣ ಸಜೆ, ೨೦೦ ರೂ. ಜುಲ್ಮಾನೆಯೂ, ಮೂರನೆಯವರಿಗೆ ೨ ತಿಂಗಳ ಕಠಿಣ ಸಜೆ ಮಾತ್ರವೂ ವಿಧಿಸಲಾಗಿದೆ.

ಕಟ್ಟಿಂಗೇರಿ ಆಸುಪಾಸಿನಲ್ಲಿ ನರರಕ್ತಕ್ಕೆ ಸೊಕ್ಕಿದ ಹುಲಿಯೊಂದರ ಕಾಟವು ವಿಪರೀತ ಹಾವಳಿ ಕಳವಳಕ್ಕೆ ಆಸ್ಪದವುಂಟು ಮಾಡಿದೆ. ಎಂದು ತಿಳಿದು ಬರುತ್ತದೆ.

ಕಳೆದ ತಾ. ೩೧ರಂದು ಕತ್ತಲಾಗುವ ಸಂಜೆ ಹೊತ್ತಿನ ಸಮಯಕ್ಕೆ ಕಟ್ಟಿಂಗೆರಿಯ ಒರ್ವ ಹೆಂಗಸು ೯ ವರ್ಷದ ಬಾಲಕನನ್ನು ಮಿಠಾಯಿಸಿ ಮನೆಗೆ ಕಳುಹಿಸಿದೊಡನೆ ಹುಲಿಯು ಅವನನ್ನು ಎತ್ತಿಕೊಂಡು ಹೋಯಿತು. ಆದರೆ ಆ ಮನೆಯ ನಾಯಿಯು ಹುಲಿಯ ಮೇಲೆ ಬಿದ್ದು ತಡೆಯಲು ಬಾಲಕನನ್ನು ಬಿಟ್ಟು ಅದು ಓಡಿ ಹೋಯಿತು. ಆದರೆ ಬಾಲಕನು ಮೃತಪಟ್ಟಿದ್ದನು. ಅಂದು ಪೊಲೀಸರು ತನಿಖೆ ನಡೆಸಿದರು.

ಮರುದಿನ ಸಾಯಂಕಾಲವೇ ಹುಲಿಯು ಮತ್ತೊಂದು ಸಾಹಸಕ್ಕೆ ಕೈಯೊಡ್ಡಿತು. ನೆರೆಗ್ರಾಮದ ಹೊಲತಿಯೊಬ್ಬಳನ್ನು ಎತ್ತಿಕೊಂಡೇ ನಡೆದು ಬಿಟ್ಟಿತು. ಜನರು ಬೊಬ್ಬೆ ಕೂಗಾಟಗಳನ್ನೆಬ್ಬಿಸಿದಾಗ ಭಯಂಕರ ಘಾಯಗಳಿಂದ ಕೂಡಿದ ಹೊಲತಿಯ ದೇಹವನ್ನು ಬಿಟ್ಟು ಮತ್ತೆ ಓಡಿ ಹೋಯಿತು. ಜಿಲ್ಲೆಯ ಶಿಕಾರಿ ಪ್ರವೀಣರ ಗಮನವು ಇತ್ತ ಸೆಳೆಯುವುದೆಂದು ನಿರೀಕ್ಷಿಸುವೆವು.

ಮಂಗಳೂರು ರೇಷನ್ ಪ್ರದೇಶದೊಳಗೆ ಬತ್ತ ಕುಟ್ಟಿ ಅಕ್ಕಿ ಮಾಡಿಕೊಡುವಾಗ ಕ್ರಮವಾದ ಲೆಕ್ಕ ಪತ್ರಗಳನ್ನಿಡಬೇಕು. ಈ ಪ್ರದೇಶದ ಹೊರಗಿನವರ ಲೆಕ್ಕ ಪತ್ರಗಳನ್ನೂ ಪ್ರತ್ಯೇಕವಿಡಬೇಕು. ಈ ಲೆಕ್ಕದಲ್ಲಿ ಪರ್ಮಿಟು ನಂಬ್ರ, ಬತ್ತ ತಂದವರ ಹೆಸರು ವಿಳಾಸ, ಬತ್ತದ ಪ್ರಮಾಣ, ತಯಾರಾದ ಅಕ್ಕಿಯ ಪ್ರಮಾಣ, ಇಷ್ಟಿರಬೇಕು—

ರೇಶನ್ ಕ್ಷೇತ್ರದ ಒಳಗಿನ ಅಕ್ಕಿ ಗಿರಣಿಗಳಿಗೆ ಬತ್ತ ತರುವವರು ಆ ಬಗ್ಗೆ ಆಫೀಸರರಿಂದ ಯೋಗ್ಯ ಪರ್ಮಿಟು ಪಡೆಯ ತಕ್ಕದ್ದು. ಆ ಬತ್ತದಿಂದಾದ ಅಕ್ಕಿಯನ್ನು ಹೊರ ಒಯ್ಯುವಾಗ ರೇಷನ್ ಚೌಕಿಯಲ್ಲಿ ಸದ್ರಿ ಪರ್ಮಿಟುಗಳನ್ನು ತೋರಿಸ ತಕ್ಕದ್ದು. ಪರ್ಮಿಟಿನ ಹಿಂದೆ ಅಕ್ಕಿಯ ಪ್ರಮಾಣವನ್ನು ಗಿರಣಿ ಮಾಲಕರು ಬರೆಯಬೇಕು. ಅಸ್ತಿಗಾರರು ಹೊರಗಿನಿಂದ ತಮ್ಮ ಗೇಣಿಯ ಉತ್ಪತ್ತಿಯನ್ನು ರೇಷನ್ ಕ್ಷೇತ್ರದಲ್ಲಿ ತರಬೇಕಾದರೆ ರೇಷನ್ ಆಫೀಸರರ ಪರ್ಮಿಟು ಪಡೆದಿದ್ದರೆ, ಮತ್ತೆ ಆ ಬತ್ತವನ್ನು ಗಿರಣಿಗೆ ಕೊಟ್ಟು ಅಕ್ಕಿ ಮಾಡಿಸಬೇಕಾದರೆ ತಹಶೀಲ್ದಾರ್, ರೇ. ಆಫೀಸರರ ಪರ್ಮಿಟು ಪಡೆಯಬೇಕು. ರಖಂ ವ್ಯಾಪಾರಿಗಳು ಕೂಡಾ, ಆಹಾರ ಧಾನ್ಯ ಕಂಟ್ರೋಲ್ ನಿಯಮ ಮೇರೆಗೆ ಹೊಂದಿದ್ದ ಲ್ಯಾಸೆನ್ಸು ಯಾ ಇತರ ಅಪ್ಪಣೆ ಮೇರೆಗೆ ಅದೇ ಪ್ರಕಾರ ವರ್ತಿಸ ಬಹುದು.

ಈ ನಿಯಮಗಳು ಗೋದಿ ಪುಡಿ ಮಾಡುವ ಗಿರಣಿಗಳೂ ಇತರ ಧಾನ್ಯಗಳಿಗೂ ಅನ್ವಯಿಸುವವು. ಹೀಗೆಂದು ಮಂಗಳೂರು ರೇಷನ್ ಆಫೀಸರರು ತಿಳಿಸುತ್ತಾರೆ.

ನಮ್ಮ ಜಿಲ್ಲೆಯ ಎಸೆಂಬ್ಲಿ ಮೆಂಬರರಾದ ಶ್ರೀ ಜಿನರಾಜ ಹೆಗ್ಡೆ ಅವರು ಕೆಲವು ದಿನಗಳ ಹಿಂದೆ ಎಸೆಂಬ್ಲಿಯಲ್ಲಿ ದ. ಕನ್ನಡದ ಹಸುಗೆ ಏರ್ಪಾಡಿನ ಅವ್ಯವಸ್ಥೆಯ ಕುರಿತು ಆಹಾರ ಖಾತೆಯ ಸಚಿವರಿಗೆ ಪ್ರಶ್ನಿಸಿದರು.

ಸಾಗುವಳಿದಾರರಿಗೆ ಕೊರ್ಟು ಕಟ್ಲೆಯ ಭೀತಿಯನ್ನು ಹುಟ್ಟಿಸಿ ಇತಿಮಿತಿ ಇಲ್ಲದೆ ಅಕ್ಕಿ ಭತ್ತಗಳನ್ನು ಸಂಗ್ರಹಿಸಿ ಹಳ್ಳಿಯ ಜನರು ವಾರಕ್ಕೆರಡು ದಿನ ಉಪವಾಸ ಬೀಳುವಂತೆ ಮಾಡಿದ ವಿಚಾರವಾಗಿ ಶ್ರಿ. ಹೆಗ್ಡೆಯವರು ನಿಲುವಳಿ ಸೂಚನೆಯೊಂದನ್ನು ಮುಂದೆ ತಂದರು. ಆಹಾರ ಸಚಿವ ಸರ್ ಶ್ರಿವಾತ್ಸವರು ಇದನ್ನು ವಿರೋಧಿಸಿ ‘ರಿಕ್ವಿಜಿಶನ್’ ಅಂದರೆ ಮುಖ್ಯ ಆಹಾರ ಧಾನ್ಯ ಸಂಗ್ರಹಣಕ್ಕಾಗಿ ಪ್ರಾಂತಿಕ ಸರಕಾರಗಳು ಕೈಕೊಂಡ ಒಂದು ವಿಧಾನ, ಕೇಂದ್ರ ಸರಕಾರಕ್ಕೆ ಇದರಲ್ಲಿ ಸಂಬಂಧವಿಲ್ಲ, ಭೀತಿ ಹುಟ್ಟಿಸಿ ಅಕ್ಕಿ ಸಂಗ್ರಹಿಸುತ್ತಾರೆಂಬುದು ಅತಿಶಯದ ಸಂಗತಿ ಎಂದು ತಿಳಿಸಿದರು. ದ. ಕ. ದಲ್ಲಿ ಯಾರೂ ಉಪವಾಸ ಬೀಳುವಂತಾಗಲಿಲ್ಲವೆಂದು ಮಾನ್ಯ ಸಚಿವರು ಭರವಸೆ ಇತ್ತರು.

ವಾರದ ಎಲ್ಲಾ ದಿನಗಳಲ್ಲೂ ದ. ಕನ್ನಡದ ಕಡೆಯ ಜನರು ರೇಷನ್ ಪಡೆಯುತ್ತಾರೊ ಎಂದು ಕೊಂಗ್ರೆಸ್ ಪಕ್ಷದ ಅಬ್ದುಲ್ ಕೊಯಾಮರು ಕೇಳಿದಾಗ ಆಹಾರ ಸಚಿವರು “ವಾರಕ್ಕೆ ಬೇಕಾದಷ್ಟು ಅವರಿಗೆ ಸಿಗುತ್ತದೆ” ಎಂದು ಉತ್ತರ ಕೊಟ್ಟರು

ವಾರದಲ್ಲಿ ಜನರು ಐದೇ ದಿನ ಮಾತ್ರ ಹಸುಗೆ ಪಡೆಯುತ್ತಾರಾದರೂ ಆ ಐದು ದಿನಗಳಲ್ಲಿ ಪಡೆದ ಆಹಾರ ಪ್ರಮಾಣವು ಏಳು ದಿವಸಕ್ಕೂ ಸಾಕಾಗುತ್ತದೆ ಎಂದು ಇದರ ಅರ್ಥವಾಗುತ್ತದೆ. ಹೀಗಾದರೆ ಹಳ್ಳಿಗಳಲ್ಲಿ ತಲಾ ಒಬ್ಬನಿಗೆ ದಿನ ಒಂದಕ್ಕೆ ಕೊಡಲ್ಪಡುವ ಪ್ರಮಾಣಕ್ಕೂ ಶಾಸನಬದ್ಧ ರೇಷನ್ ಜಾರಿಯಲ್ಲಿದ ಮಂಗಳೂರು ಕಾಸರಗೋಡು ಉಡುಪಿಗಳಲ್ಲಿ ತಲಾ ಒಬ್ಬನಿಗೆ ೧ ದಿವಸಕ್ಕೆ ಕೊಡಲ್ಪಡುವ ಪ್ರಮಾಣಕ್ಕೂ ಹೆಚ್ಚು ಕಮ್ಮಿ ಇರಬೇಕಲ್ಲವೆ? ಅರ್ಧ ಸೇರು ಪ್ರಕಾರ ೭ ದಿವಸಗಳಿಗೆ ಒಬ್ಬನಿಗೆ ೩॥ ಸೇರು ಹಳ್ಳಿಗಳಲ್ಲಿ ೫ ದಿವಸಗಳಲ್ಲಿ ಸಿಗುತ್ತದೆಯೋ? ಇದಕ್ಕೆ ಉತ್ತರವನ್ನು ಸಂಬಂಧಪಟ್ಟ ಪ್ರದೇಶದವರು ಕೊಡುವರೆಂದು ನಿರೀಕ್ಷಿಸಲಾಗಿದೆ.

ದ. ಕ. ಜಿಲ್ಲೆಯ ಅಡಿಗೆ ಬೇಸಾಯಗಾರರಿಗೆ ಕೂಲಿಗಳಿಗೆ ಕೊಡುವ ಅಕ್ಕಿ ಪ್ರಮಾಣವನ್ನು ಸಂಗ್ರಹಿಸಿ ಇಡಲು ಸಮ್ಮತಿ ಸಿಗಲಿಲ್ಲವೆಂಬ ಅರ್ಥದ ತಂತಿಯನ್ನು ಸದ್ರಿ ಬೇಸಾಯಕಾರರ ಸಂಘದ ಪರವಾಗಿ ಶ್ರಿ ಗೋವಿಂದ ಭಟ್ಟರು ಆಹಾರ ಸಚಿವರಿಗೆ ಕಳುಹಿಸಿರುವರು. ಎಸೆಂಬ್ಲಿ ಚರ್ಚೆಯಲ್ಲಿ ಶ್ರಿ ಜಿನರಾಜ ಹೆಗ್ಡೆಯವರ ಒಂದು ಪ್ರಶ್ನೆಗೆ ಉತ್ತರವಾಗಿ ಸದ್ರಿ ಸಮ್ಮತಿ ಸಿಕ್ಕಿದೆಯಾಗಿ ಸರಕಾರ ಕಡೆಯಿಂದ ಹೇಳಲಾದುದನ್ನು ವಿರೋಧಿಸಿ ಈ ತಂತಿ ಕಳುಹಿಸಲಾಗಿದೆ. ಎಂದು ತಿಳಿದು ಬರುತ್ತದೆ.

ಸ್ಥಳೀಯ ಶ್ರಿ ಬಾಲ ಮಾರುತಿ ವ್ಯಾಯಮ ಮಂಡಳದ ವಾರ್ಷಿಕೋತ್ಸವವು ಇದೇ ಬರುವ ೨೯ನೇ ಆದಿತ್ಯವಾರ ಜರಗುವುದು. ಅಂದು ಮಂಡಳದವರು ಹೊಸದಾಗಿ ಕಟ್ಟಿಸಿದ ಕುಸ್ತಿ ಸಾಧನೆ, ವ್ಯಾಯಾಮ ಸಾಧನೆ ಮತ್ತು ಸ್ನಾನ ಗೃಹಗಳನ್ನೊಳಗೊಂಡ ಮಂದಿರದ ಉದ್ಘಾಟನೆಯೂ ನೆರವೇರಿಸಲ್ಪಡುವುದು. ಬೆಳಿಗ್ಗೆಯೂ ಸಾಯಂಕಾಲವೂ ಪ್ರತಪ್ರತ್ಯೇಕ ಕಾರ್ಯಕ್ರಮಗಳಿವೆ ಎಂದು ತಿಳಿದು ಬರುತ್ತದೆ. ತರುಣ ವ್ಯಾಯಾಮ ಉತ್ಸಾಹಿಗಳು ಈ ವಿಸ್ತರಿಸಿದ ಅನುಕೂಲತೆಗಳ ಯೋಗ್ಯ ಲಾಭ ಪಡೆಯಲೆಂದು ಹಾರೈಸುತ್ತೇವೆ.

ಪ್ರಮುಖ ಸರಕಾರೀ ಅಧಿಕಾರಿಗಳೂ ಇತರ ಪ್ರಭಾವಶಾಲಿ ನಾಗರೀಕ ಮುಖಂಡರೂ ಸದಸ್ಯರಾಗಿರುವ ಒಂದು ಪ್ರಾಣಿದಯಾ ಸಂಘವು ಕಳೆದ ತಾ. ೨೯ರಲ್ಲು ಗವರ್ನಮೆಂಟ್ ಕೊಲೇಜ್‌ನಲ್ಲಿ ಸೇರಿದ ಸಭೆಯಲ್ಲಿ ಸ್ಥಾಪಿಸಲ್ಪಟ್ಟಿತು.

ಹಂಪನಕಟ್ಟೆಯ ಬಸ್‌ಸ್ಟೆಂಡ್ ಬಳಿಯ ಬಾವಿಯಲ್ಲಿ ಹಗ್ಗಕ್ಕೆ ತೂಗಾಡುವ ಒಂದು ಹೆಣ ಕಂಡು ಬಂದಿದೆ. ಮೃತನು ತಿರುಕನೊ, ಕೂಲಿಯವನೊ ಇರಬಹುದು—ಪ್ರಾಯ ಸುಮಾರು ೬೦.

ಪೆರ್ಡಾಲ ಹೈಸ್ಕೂಲಿಗೆ ಇದೇ ಜೂನ್ ತಿಂಗಳಲ್ಲಿ IV ಫೋರ್ಮನ್ನು ತೆರೆಯುವರೆ ಪ್ರಾಂತೀಕ ವಿದ್ಯಾಧಿಕಾರಿಗಳ ಅನುಮತಿ ದೊರೆತಿದೆ. ಬೇಸಿಗೆ ರಜೆ ಮುಗಿದು ಈ ಶಾಲೆಯು ಇದೇ ಬರುವ ಜೂನ್ 4ನೇ ತಾರೀಕಿಗೆ ಪುನಃ ಪ್ರಾರಂಭವಾಗಲಿದೆ.

ಅನ್ನ ಮೊಗ್ರು ಮಹೋತ್ಸವವು ಇದೇ ತಾ. ೨೦ರಿಂದ ೨೬ರ ತನಕ ಕೊಟೇರಗುತ್ತಿನ ನರಹರಿ ಪರ್ವತದಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯದಲ್ಲಿ ವಾಸ್ತುಬಲಿ, ರಕ್ಷೋಘ್ನ ಹೋಮ, ಧ್ವಜಾರೋಹಣ, ಅಂಕುರಾರ್ಪಣ, ನವಕಲಶ, ಅವಭೃತ ಇತ್ಯಾದಿ ಕಾರ್ಯಕ್ರಮಗಳು ಜರಗಲಿವೆ. ನಡುವೆ ಪುರಾಣ ವಾಚನ, ಸಂಗೀತ, ಹರಿಕತೆ, ಪ್ರವಚನ ಮುಂತಾದ ಕಾರ್ಯಕ್ರಮಗಳು ಜರಗಲಿವೆ. ಮತ್ತು ತಾ ೨೩ಕ್ಕೆ ಸೋಮವಾರ ರಾತ್ರಿ ೯-೩೦ ಗಂಟೆಗೆ ರಾವ್ ಬಹದ್ದೂರ್ ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳಿಂದೊಡಗೂಡಿದ ‘ಭೀಷ್ಮಾರ್ಜುನ ಕಾಳಗ’ ಎಂಬ ಯಕ್ಷಗಾನವೂ ಜರಗಲಿವೆ.

ಸಂಕ್ಷೇಪ ಸುದ್ದಿ ಸಾರ

ಇಟಿಲಿಯಲ್ಲಿಯೂ ಮಧ್ಯ ಪೂರ್ವದಲ್ಲಿ (ಇರಾನಿನಲ್ಲಿ)ಯೂ ಇರುವ ಭಾರತೀಯ ಸೈನಿಕರಿಗೆ ತೃಪ್ತಿಕರವಾದ ಓದುವ, ವಿನೋದದ, ಉಡುಪುಗಳ ಸೌಕರ್ಯ ಏಕೆ ಕೊಡಲಾಗುವುದಿಲ್ಲವೆಂಬ ವಿಷಯದ ಕುರಿತು ಕೇಂದ್ರ ಎಸೆಂಬ್ಲಿಯಲ್ಲಿ ಚರ್ಚೆಗೆ ಬಂತು. ವರ್ಣಭೇದದ ಧೋರಣೆ ಅಲ್ಲಿಯೂ ಕೆಲವು ವಿಷಯಗಳಲ್ಲಿ ಅನುಸರಿಸಲಾಗಿದೆ. ಎಂದೂ ಹಿಂದುಸ್ತಾನ್ ಸ್ಟೆಂಡಾರ್ಡ್ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಇಟಲಿಗೆ ಹೋದ ಪ್ರತಿನಿಧಿಗಳು ತಮ್ಮ ಪತ್ರಿಕೆಗಳಲ್ಲಿ ಬರೆದಿರುವರು.

ಯುದ್ಧ ಖಾತೆಯ ಕಾರ್ಯದರ್ಶಿ ಮಿ। ತ್ರಿವೇಡಿಯವರು ಭಾರತೀಯ ಸೈನಿಕರಿಗೆ ಆಟಪಾಠಗಳ, ಸಂಗೀತ ನಾಟ್ಯ ಸಿನೇಮಾಗಳ, ಪ್ರಾಂತೀಯ ಭಾಷೆಗಳ ಪತ್ರಿಕೆಗಳ ಸೌಕರ್ಯವನ್ನು ಕೊಡಲಾಗಿದೆ ಎಂದೂ ತಿಳಿಸಿ, ಎಸೆಂಬ್ಲಿ ಮೆಂಬರರು ಸೂಚಿಸಿದ ವಿಷಯಗಳನ್ನು ಆದಷ್ಟು ಮಟ್ಟಿಗೆ ಹಿಂದೀ ಸೈನಿಕರಿಗೆ ಪೂರೈಸಲು ತಮ್ಮ ಖಾತೆಯ ಮೂಲಕ ಪ್ರಯತ್ನಿಸಲಾಗುವುದೆಂದು ತಿಳಿಸಿದರು. ಇದಕ್ಕೆ ಕೊಂಗ್ರೆಸ್ ಪ್ಷಕದ ಶ್ರಿ ಕೃಷ್ಣಮಾಚಾರಿಯವರು “ಯುದ್ಧ ಕಾರ್ಯದರ್ಶಿಯ ಇಲಾಖೆಯವರು ನಮ್ಮ ಸೂಚನೆಗಳನ್ನು ಪೂರೈಸುವುದಕ್ಕಾಗಿ ಈ ಯುದ್ಧವು ಇನ್ನು ಎರಡು ವರ್ಷ ಮುಂದರಿಸಬೇಕಾಗುವುದೇನು?” ಎಂದು ಹಾಸ್ಯ ಧಾಟಿಯಲ್ಲಿ ನುಡಿದರು.

The Ammembal Subbarao Pai Memorial Fund.

Applications for loan stipends from the above Fund should reach the Hon. Secretary, of the Fund on or before the 15th June 1945. While granting stipends, first preferences will be given to those who are already under going course with aid from this Fund. If funds are available after awarding the above said stipends applications for **Technical courses** will be considered. Applications for Art Course will be considered in cases of exceptional merit. Only GOWDA SARASWAT BRAHMINS need apply.

Application forms will be supplied free of cost on application to the Hon Secretary, The A. Subbarao Pai Memorial Fund, Post Box 13, Mangalore. While applying for forms please state if application is for renewal or for a fresh one.

J. Vasudeva Pai.
Hon. Secretary.

Mangalore.
10th April 1945.

WARDEN INSURANCE CO., LTD.,
MANGALORE BRANCH.

NOTICE

This is to inform the public, our policy-holders, agents and organizers that on account of the rapid expansion of business of the Branch our Office has been shifted from Diamond Building Hampankatta to:.

JAYANT BUILDING, Maidan Road, Mangalore.

All future correspondence should be addressed to the above.

ಫ್ರಿಸ್ಕೊ ಪರಿಷತ್ತಿಗೆ ಗಾಂಧೀ ನೆಹರುಗಳು

ನಾವು ಬೇರೆಯೇ ಪರಿಷತ್ತು ಸೇರಿಸಬೇಕು

ಸಾಮ್ರಾಜ್ಯವಾದಿಗಳೂ-ಅವರ ವಿರೋಧಿಗಳೂ

ಬೊಂಬಾಯಿಯ ಪ್ರಸಿದ್ಧ ರಾಜಕೀಯ ವಿಚಾರ ದುರೀಣರಾದ ಮಿನೂಮಾಸಾನಿಯವರು ಒಂದು ಭೇಟಿಯಲ್ಲಿ ಫ್ರಿಸ್ಕೊ ಪರಿಷತ್ತಿನ ಭವಿಷ್ಯವನ್ನು ತರ್ಕಿಸಿದರು: ಇವರು ತಮ್ಮ ೩೯ ವಯಸ್ಸಿನಲ್ಲಿ ಪ್ರಖ್ಯಾತ ಗ್ರಂಥಕಾರರೂ ಬೊಂಬಾಯಿಯ ಮಾಜಿ ಮೇಯರರೂ ರಾಜಕೀಯ ಮುತ್ಸದ್ದಿಗಳೂ ಎನಿಸಿದ್ದು ಇವರ ಅಭಿಪ್ರಾಯಗಳು ಗಣನೀಯವಾಗಿವೆ.

ಈ ಪರಿಷತ್ತು ನಿಜವಾದ ವಿಶ್ವ ಶಾಂತಿಯ ಉದ್ದೇಶಕ್ಕಾಗಿ ಸೇರುವುದಾದರೆ ಇದರಲ್ಲಿ ತಟಸ್ಥ ರಾಷ್ಟ್ರಗಳಾದ ಸ್ವೀಡನ್, ಸ್ವಿಟ್ಜರ್‌ಲೆಂಡ್ ಮತ್ತು ಆಯರ್‌ಲೆಂಡ್ ಈ ದೇಶಗಳನ್ನು ಏಕೆ ಆಹ್ವಾನಿಸಲಿಲ್ಲ? ಗೌರವನೀಯ ರಾಷ್ಟ್ರಗಳ ಶ್ಲಾಘನೀಯವಾದ ಶಾಂತಿಪ್ರಿಯತೆಯನ್ನು ತೋರಿಸಿದಂತಹುಗಳು:

ಮಾರ್ಚ್ ೩೧ರೊಳಗೆ ಯುದ್ಧ ಹೂಡಿದರೆ ಮಾತ್ರ ಫ್ರಿಸ್ಕೊದಲ್ಲಿ ಸ್ಥಾನ ಸಿಗುವುದೆಂದು ತಟಸ್ಥರಾಗಿದ್ದ ಈಜಿಪ್ತ್, ಟರ್ಕಿಗಳಿಗೆ ಹೆದರಿಕೆ ಹುಟ್ಟಿಸಿದುದು ಏಕೆ? ಇದರಿಂದ ತ್ರಿಮೂರ್ತಿಗಳಲ್ಲಿ ಶಾಂತಿಯ ಆಸಕ್ತಿ ಇದ್ದಂತೆ ತೋರುವುದಿಲ್ಲ.

ಕಳೆದ ತಿಂಗಳ ೧೫ರಂದು ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ "ನಾವು ಯಾಲ್ಟಾ ಪರಿಷತ್ತಿನಲ್ಲಿ ಸಣ್ಣ ಮತ್ತು ದೊಡ್ಡ ರಾಷ್ಟ್ರಗಳೆಂಬ ಭೇದವನ್ನು ಉದ್ದೇಶಪೂರ್ವಕವಾಗಿ ಮಾಡಿದ್ದೇವೆ" ಎಂಬ ಅರ್ಥದಲ್ಲಿ ಮಾತಾಡಿದುದರ ಉದ್ದೇಶವೇನು?

ಶಸ್ತ್ರ ಶಕ್ತಿಯೇ ನ್ಯಾಯವೆಂದು ಅವರು ನಂಬಿರುವರು. ಅಲ್ಲವೆ? ಈ ತತ್ವವನ್ನು ನಾಶ ಮಾಡಲಿಕ್ಕೆ ಅಲ್ಲವೆ ಈ ಯುದ್ಧವು ಹೋರಾಡಲ್ಪಟ್ಟದ್ದು? ಅಂದ ಮೇಲೆ ಅದರ ಪುನಃರಾವರ್ತನೆ ಏಕೆ? ರಷ್ಯವು ಸಣ್ಣ ರಾಷ್ಟ್ರಗಳಿಗೆ ಘೋಷಣೆ ಕೊಡುತ್ತ "ತ್ರಿಮೂರ್ತಿಗಳಲ್ಲೇ ನೀವು ಭರವಸೆಯನ್ನು ಇಡಬೇಕು" ಎಂದು ಸೂಚಿಸಿದ್ದುದರ ಅಭಿಪ್ರಾಯವೇನು?

* * *

"ತ್ರಿಮೂರ್ತಿಗಳ ಮೇಲಿನ ನಿಮ್ಮ ಸಂದೇಹಕ್ಕೆ ಕಾರಣವೇನೆಂದು" ಕೇಳಿದಾಗ ಮಿ। ಮಾಸಾನಿಯವರೆಂದರು: "ಅವರ ಪ್ರತಿಯೊಂದು ಕೆಲಸವೂ ಸಂದೇಹಾಸ್ಪದವಾದದ್ದು. ಉದಾ:

(೧) ರಷ್ಯವು ಪೋಲೆಂಡಿನ ಭಾಗಗಳನ್ನು ತನ್ನದಾಗಿ ಮಾಡಿ ಕೊಂಡದ್ದು:

(೨) ಬ್ರಿಟನ್ನು ಮೆಡಿಟರೇನಿಯನ್ ಸಮುದ್ರದಲ್ಲಿ ತನ್ನ ಪ್ರಭಾವಕ್ಕೆ ತಡೆ ಬಾರದಂತೆ ಗ್ರೀಸಿನ ಮೇಲಿನ ಹಿಡಿತವನ್ನು ಬಿಗಿ ಮಾಡಿದ್ದು.

(೩) ಡಾರ್ಡನಲ್ಸ್ ಜಲಸಂಧಿಯನ್ನು ತನಗೆ ಕೊಡಬೇಕೆಂದು ರಷ್ಯವು ಟರ್ಕಿಗೆ ಒತ್ತಾಯ ಮಾಡುತ್ತಿರುವುದು.

(೪) ಉತ್ತರ ಇರಾನಿನಲ್ಲಿ ಅಮೇರಿಕಾ ಬ್ರಿಟನ್, ರಷ್ಯದೊಳಗೆ ಎಣ್ಣೆ ಬಾವಿಗಳಿಗಾಗಿ ನಡೆಯುತ್ತಿರುವ ಕಚ್ಚಾಟ:

(೫) "ಬ್ರಿಟನ್; ರಷ್ಯಾ; ಮತ್ತು ಅಮೇರಿಕಗಳು ಒಟ್ಟು ಸೇರಿದರೆ ೨೫ ರಿಂದ ೫೦ ವರ್ಷಗಳ ತನಕ ವಿಶ್ವ ಶಾಂತಿ ಕಾಪಾಡ ಬಲ್ಲರು" ಎಂದು ಮಿ। ಏಂಟನಿ ಈಡನ್ನರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದು: ಇವೆಲ್ಲ ನಿದರ್ಶನಗಳು ಸಂದೇಹದ

ಸ್ಫುರಿಟು ಮಾಡುವಂತಹವಲ್ಲವೆ? ಇದು ಮೂರನೇ ಜಾಗತ್ತಿಕ ಯುದ್ಧಕ್ಕೆ ತಳಹದಿ ಹಾಕಿಕೊಳ್ಳುವುದೆಂದರೆ ಅತಿಶಯವಲ್ಲ.

* * *

ಡಂಬಾರ್ಟನ್ ಓಕ್ಸ್ ಪರಿಷತ್ತಿನಲ್ಲಿ ಒಪ್ಪಿಕೊಂಡ ನಿರ್ಣಯಗಳಂತೆ ಒಂದು ದೊಡ್ಡ ಶಕ್ತಿ ರಾಷ್ಟ್ರವು ಚಿಕ್ಕ ರಾಷ್ಟ್ರವೊಂದರ ಮೇಲೆ ದಾಳಿ ಮಾಡಿದರೆ ದಾಳಿ ಮಾಡಿದ ರಾಷ್ಟ್ರದ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಜನಾಂಗ ಭದ್ರತಾ ಸಭೆಯಲ್ಲಿ ಆ ದೊಡ್ಡ ರಾಷ್ಟ್ರದ ಪ್ರತಿನಿಧಿಗಳು ತಮ್ಮ ರಾಷ್ಟ್ರದ ಧೋರಣೆಗೆ ವಿರೋಧವಾಗಿ ವೋಟು ಕೊಟ್ಟರೆ ಮಾತ್ರ ಸಾಧ್ಯವಾಗುವುದೆಂದದೆ. ಯಾವ ರಾಷ್ಟ್ರದ ಪ್ರತಿನಿಧಿಗಳಾದರಾಗಲಿ ಅವರು ತಮ್ಮ ರಾಷ್ಟ್ರದ ಧೋರಣೆಯು ತಪ್ಪೆಂದು ಒಪ್ಪಿಕೊಳ್ಳುವರೆ? ಹಿಂದಿನ ಜನಾಂಗ ಸಭೆಯಲ್ಲಿ ಯಾರಾದರೂ ಹಾಗೆ ಒಪ್ಪಿಕೊಂಡದ್ದುಂಟೆ? ಈ ತರದ ವಿವೇಕ ಹೀನ ಷರ್ತಗಳಿರುವ ಯಾವ ಪರಿಷತ್ತಿನಿಂದ ಶಾಂತಿ ಸ್ಥಾಪಿಸಲು ಸಾಧ್ಯ?"

* * *

ಭಾರತವು ಈ ಪರಿಷತ್ತಿನಲ್ಲಿ ಯಾವ ಪಾತ್ರವಹಿಸಬಹುದು? ಎಂದು ಕೇಳಲ್ಪಟ್ಟಾಗ ಮಾಸಾನಿಯವರು ಹೀಗೆ ಉತ್ತರಿಸಿದರು:

"ಪಾರತಂತ್ರ್ಯದಲ್ಲಿರುವ ಭಾರತವು ಶಕ್ತಿ ರಾಷ್ಟ್ರಗಳ ಸೇವೆ ಮಾಡುವ ಪಾತ್ರಕಿಂತ ಬೇರೆ ಯಾವುದನ್ನು ಮಾಡಲು ಸಾಧ್ಯವಿಲ್ಲ.

ಭಾರತದಿಂದ ಮೂರು ಮಂದಿ ಪ್ರತಿನಿಧಿಗಳು ಈ ಪರಿಷತ್ತಿಗೆ ಕಳುಹಿಸಲ್ಪಟ್ಟದು ನ್ಯಾಯವೇ ಸರಿ: ಹೀಗೆ ಹೇಳುವಾಗ ನಿಮಗೆ ಆಶ್ಚರ್ಯವಾಗಬಹುದು. ಅವರು ಜನರ ಪ್ರತಿನಿಧಿಗಳಲ್ಲವೆಂಬ ನಿಮ್ಮ ಭಾವನೆಯು ನ್ಯಾಯವಾದದ್ದು.

ಆದರೆ ಈ ಪರಿಷತ್ತು ಜನರ ಇಲ್ಲವೆ ಜನಾಂಗಗಳ ಪರಿಷತ್ತಲ್ಲವೆಂಬುದನ್ನು ಮರೆಯಬಾರದು. ಇದು ಕೆಲವು ಸರಕಾರಗಳ ಪರಿಷತ್ತು. ಅಲ್ಲಿಗೆ ಇಂತಹರೆ ಹೋಗಬೇಕು ಸರಕಾರಿ 'ಗಿಳಿಗಳೇ' ಅಲ್ಲಿ ಯೋಗ್ಯರು.

* * *

ಗಾಂಧಿ ನೆಹರುಗಳು ಫ್ರಿಸ್ಕೊ ಶಾಂತಿ ಪರಿಷತ್ತಿಗೆ ಹೋಗುವುದರ ಕುರಿತು ಅವರು ಹೀಗೆಂದರು:

"ಗಾಂಧಿ ನೆಹರುಗಳನ್ನು ಈಗ ಇಂತಹ ಪರಿಷತ್ತಿಗೆ ಕಳುಹಿಸಬಾರದು: ಕಾರಣ ಅವರು ನಿಜವಾದ ಶಾಂತಿ ಪರಿಷತ್ತಿಗೆ ಹೋಗಲರ್ಹರಲ್ಲದೆ ಇಂತಹ ಪ್ರಹಸನದಲ್ಲಿ ಅವರಿಗೆ ಸ್ಥಾನಸಿಗದು."

ಲೀಗ್ ಆಫ್ ನೇಶನ್ಸ್ ಅಥವಾ ಜನಾಂಗ ಸಭೆಯನ್ನು ಲೆನಿನರು ಒಂದು ಸಲ "ಕಳ್ಳರ ಅಡಿಗೆ ಮನೆ"ಯೆಂದಾಗಿ ವರ್ಣಿಸಿದ್ದರು. ಗತಿಸಿದ ಮಾಜಿ ಅಮೇರಿಕನ್ ಅಧ್ಯಕ್ಷರೂ; ಶ್ರೇಷ್ಠ ತತ್ವ ಧ್ಯೇಯವಾದಿಗಳೂ ಆದ ಪ್ರೆಸಿಡೆಂಟ್ ವಿಲ್ಸನ್ನರು ಸ್ಥಾಪಿಸಿದ ಜನಾಂಗ ಸಭೆಗೆ ಇಂತಹ ಹೆಸರು ಕೊಡಲ್ಪಟ್ಟ ಮೇಲೆ ಫ್ರಿಸ್ಕೊ ಪರಿಷತ್ತಿಗೆ ಏನೆಂದು ಹೆಸರು ಕೊಡಬಹುದೆಂದು ನೀವೇ ಯೋಚಿಸಿಕೊಳ್ಳಬಹುದು.

ಇಂತಹ ಪರಿಷತ್ತಿಗೆ ಹೋಗಬೇಕೆಂದು ಗಾಂಧಿ ನೆಹರುಗಳಿಗೆ ಹೇಳುವುದು. ಕೂಡಾ ಅಪಮಾನಕರವೇ ಸರಿ. ಸಾಮ್ರಾಜ್ಯ ರಕ್ಷಿಸಿಕೊಳ್ಳುವ ಸ್ವಾರ್ಥ ಸಾಧಕರ ನಡುವಿನಲ್ಲಿ ಸಾಮ್ರಾಜ್ಯವಾದ ವಿರೋಧಿಗಳು ಹೇಗೆ ಇರಬಲ್ಲರು?

ಕೊನೆಗೆ ಮಾಸಾನಿಯವರು ಹೀಗೆಂದರು:

"ಜಗತ್ತಿನ ಶಾಂತಿಯು ಸೈನ್ಯ ಬಲದಿಂದ ಕಾಯ್ದು ಕೊಳ್ಳಲು ಸಾಧ್ಯವಿಲ್ಲ. ಸೈನ್ಯ ಶಕ್ತಿಯನ್ನು ತ್ಯಜಿಸುವುದರಿಂದಲೇ ಚಿರಶಾಂತಿಯು ನೆಲೆಗೊಳ್ಳುವುದು.

ಆದುದರಿಂದ ಸುಲಿಗೆಗೂ ದಬ್ಬಾಳಿಕೆಗೂ ಒಳಗಾದ ಕಪ್ಪು, ಕಂದು, ಹಳದಿ ಮತ್ತು ಬಿಳಿ ಜನಾಂಗದ ಎಲ್ಲಾ ಸ್ತ್ರೀಪುರುಷರು ಬೇಕಿಯೋ ಚಿರದಿಂದ ಪರಿಷತ್ತನ್ನು ಸೇರಿಸಬೇಕು"

ಭಾರತದ ವಾರಾಂತ್ಯ ವರದಿಗಳು

ಬೊಂಬಾಯಿಗೆ ಮಹಾತ್ಮರನ್ನು ಕಾಣ ಬಂದ ವರ್ಕಿಂಗ್ ಕಮಿಟಿ ಸದಸ್ಯರಾದ ಡಾ। ಪ್ರಫುಲ್ಲ ಚಂದ್ರ ಘೋಷರು ಪ್ರಸ್ತುತದ ರಾಜಕೀಯ ಪರಿಸ್ಥಿತಿ ಕುರಿತು ಕೆಲವು ಎಚ್ಚರಿಕೆಗಳನ್ನು ಕೊಟ್ಟರು.

ಗಡಿನಾಡಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಳ ರಚನೆಯಾದುದರ ಕುರಿತು ಅವರು "ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿಯವರಿಗೆ ಅದು ಅವಶ್ಯವೆಂದು ತೋರಬಹುದು. ಯಾವುದಕ್ಕೂ ವರ್ಕಿಂಗ್ ಕಮಿಟಿಯವರೇ ಅದರ ಕುರಿತು ಯೋಗ್ಯ ಇತ್ಯರ್ಥ ಹೇಳಬಲ್ಲರು: ಅಲ್ಲಿ ಹಾಗೆ ಆಯಿತೆಂಬುದರ ಮೇಲೆ ಕಾಂಗ್ರೆಸ್ ಧೋರಣೆ ಪರಿವರ್ತನೆ ಹೊಂದಿದೆ ಎಂದು ತಿಳಕೊಳ್ಳಲಾಗದು" ಎಂದರು:

ಭೂಲಾಭಾಯಿ-ಲಿಯಾಕತ್-ವೇವೆಲ್

ಭೂಲಾಭಾಯಿ ದೆಸಾಯಿಯವರೂ ಲೀಗಿನ ಲಿಯಾಕತ್ ಖಾನರೂ ಒಂದು ಒಪ್ಪಂದಕ್ಕೆ ಬಂದಿದ್ದು ಅವರ ಒಮ್ಮತದ ಯೋಜನೆಯನ್ನು ವೈಸ್‌ರಾಯ್ ವೇವೆಲ್ಲರು ಚರ್ಚಿಲ್-ಎಮೆರಿಗಳೂ ಪರ್ಯಾಲೋಚಿಸಲು ಇಂಗ್ಲೆಂಡಿಗೆ ಒಯ್ದಿರುವರೆಂದು ಇದ್ದ ಊಹಾಪೋಹೆಗಳ ಕುರಿತು ಡಾ। ಘೋಷರು "ಎಂತಹ ಇತ್ಯರ್ಥ ನಿರ್ಣಯ; ಯೋಜನೆಗಳಾಗಲೀ, ವರ್ಕಿಂಗ್ ಕಮಿಟಿಯು ಅದನ್ನು ಒಪ್ಪದಿದ್ದರೆ ಅದು ಕಾಂಗ್ರೆಸ್ಸಿನದೆನಿಸುವುದಿಲ್ಲ" ಎಂದು ಅಭಿಪ್ರಾಯಪಟ್ಟರು

ಅಸ್ಸಾಮಿನಲ್ಲಿ ಕಾಂಗ್ರೆಸ್ ಪಕ್ಷದವರು ಸಂಯುಕ್ತ ಮಂತ್ರಿಮಂಡಳವೊಂದಕ್ಕೆ ಬೆಂಬಲ ಕೊಟ್ಟ ವಿಷಯವನ್ನು ವರ್ಕಿಂಗ್ ಕಮಿಟಿಯವರೇ ಪರ್ಯಾಲೋಚಿಸಬೇಕಾಗುವುದು ಎಂದು ಮಾನ್ಯ ಡಾಕ್ಟರರು ತಿಳಿಸಿದರು.

ಕಾಂಗ್ರೆಸೂ ಕಮ್ಯುನಿಸ್ಟರೂ

ಈಚೆಗೆ ಬಹಳವಾಗಿ ಚರ್ಚಾಸ್ಪದವಾದ ವಿಷಯವೆಂದರೆ ಕಾಂಗ್ರೆಸ್ ಕಮ್ಯುನಿಸ್ಟ್ ಭೇದ ಈ ಕುರಿತು ಡಾ। ಘೋಷರ ಅಭಿಪ್ರಾಯ ಬಹಳ ಸ್ಪಷ್ಟವಾಗಿದೆ

"ರಷ್ಯವು ಯುದ್ಧಕ್ಕೆ ಮಿತ್ರ ಪರವಾಗಿ ಸೇರಿದಂದಿನಿಂದ ಇಲ್ಲಿಯ ಕಮ್ಯೂನಿಸ್ಟರು ಇದು 'ಜನರ ಯುದ್ಧ'ವೆಂದು ಸಾರಿರುವರೆಂದು ಅವರೇ ತಿಳಿಸುತ್ತಾರೆ. ಇದು ವಸ್ತುಸ್ಥಿತಿಗೂ ಮತ್ತು ಕಾಂಗ್ರೆಸಿನಿಂದ ಘಂಟಾ ಘೋಷವಾಗಿ ಸಾರಲ್ಪಟ್ಟ ಧೋರಣೆಗೂ ಬದ್ಧವಿರೋಧವಾದುದು. ಈ ವಿಚಾರದಲ್ಲಿ ಅವರು ಕಾಂಗ್ರೆಸಿಗೆ ವಿರೋಧವಾಗಿ ನಡೆದಿದ್ದಾರೆಂಬ ವಿಷಯವು ಅಲ್ಲಗಳೆಯಲು ಸಾಧ್ಯವಿಲ್ಲ. ಅದಕ್ಕೆ ಅದೆಂತಹ ಗಹನವಾದ ಕಾರಣಗಳೇ ಇರಲಿ; ಜರಿದು ಸರಿಸ್ಥಿತಿಯರಿದೆನಿಸಲ್ಪಡುವ ಯಾವ ಸಂಯುಕ್ತ ಕೂಟದಲ್ಲಿಯಾದರೂ ಪರಸ್ಪರ ವಿರೋಧ ಧ್ಯೇಯಗಳಿಗೆ ಕಂಕಣ ತೊಟ್ಟ ಇರ್ವ ಪಕ್ಷದವರು ಇರಲಾಗುವುದಿಲ್ಲ."

ರಚನಾತ್ಮಕವೇ ನಮ್ಮ ಗುರಿ

ರಚನಾತ್ಮಕ ಕಾರ್ಯಕ್ಕಾಗಿ ಅನೇಕ ಪ್ರಾಂತ್ಯಗಳಲ್ಲಿ ಸಮಿತಿಗಳು ರಚಿಸಲ್ಪಟ್ಟಿವೆ: ಅವರು ತಮಗೆ ಬೇಕಾದ ಸದಸ್ಯರನ್ನು ಚುನಾಯಿಸಿ ಕೊಳ್ಳಲು ಸ್ವತಂತ್ರರಾಗಿರುವರು. ತಮ್ಮ ಕೆಲಸಕ್ಕೆ ಬೇಕಾದರೆ ಅವರು ಯಾರನ್ನಾದರೂ ಇಡಲೂ ಬಿಡಲೂಬಹುದು. ಈ ರೀತಿಯ ಸೂಚನೆಯನ್ನು ಡಾ। ಘೋಷರು ರಚನಾತ್ಮಕ ಕಾರ್ಯಕ್ರಮ ಕುರಿತಾಗಿ ತಿಳಿಸಿ ಕೊನೆಗೆ "ನನಗೆ ರಚನಾತ್ಮಕ ಕಾರ್ಯದಲ್ಲಿ ಅಗಾಧ ವಿಶ್ವಾಸವಿದೆ. ದೇಶದ ಜನತೆಯೆಲ್ಲವೂ ಇದನ್ನು ಶ್ರದ್ಧೆಯಿಂದ ವಹಿಸಿಕೊಂಡರೆ ಸ್ವಾತಂತ್ರ್ಯವು ಬಹಳ ಹತ್ತಿರ ಬಂದಂತಾಗುವುದು."

೧೯೪೨ರ ಒಗಸ್ಟ್ ಗಲಭೆ

ಇದರ ಕುರಿತು ಡಾ. ಘೋಷರು ಹೀಗೆಂದರು: "೧೯೪೨ರ ಒಗಸ್ಟ್ ೮ರ ಕಾಂಗ್ರೆಸ್ ಠರಾವಿಗನುಗುಣವಾಗಿ ಅಹಿಂಸಾತ್ಮಕ ಚಳವಳವಾಗಬೇಕಾದುದು ಸಹಜವಾದ ಪರಿಣಾಮ. ಅನೇಕ 'ಸ್ತ್ರೀ' ಪುರುಷರು ಯಾರಿಗೂ ಒಂದಿಷ್ಟು ನೋಯಿಸದೆ ಗುಂಡಿಗೆ ಎದೆ ಕೊಟ್ಟಿರುವರೆಂಬ ಸಂಗತಿಯನ್ನು ನಾನು ಕೇಳಿದ್ದೇನೆ. ಅವರ ಸ್ಥೈರ್ಯಕ್ಕೆ ನಾನು ತುಂಬಾ ಮನ್ನಣೆ ಪುರಸ್ಕಾರಗಳನ್ನೀಯುತ್ತೇನೆ. ಗಾಂಧೀಜಿ ಮತ್ತಿತರ ಮುಖಂಡರ ಬಂಧನ ನಂತರ ಭಯಂಕರ ಹಿಂಸಾ ಘಟನೆಗಳುಂಟಾದುವೆಂದು ಪತ್ರಿಕೆಗಳಲ್ಲಿ ಸರಕಾರ ಪ್ರಕಟನೆಗಳು ಬಂದಿರುವುದನ್ನು ನೋಡಿದ್ದೇನೆ. ಹಿಂಸಾತ್ಮಕ ಮತ್ತು ಅಹಿಂಸಾತ್ಮಕ ಕಾರ್ಯಗಳಾವಾವುವೆಂದು ತಿಳಕೊಳ್ಳಲು ಕೆಲವರಿಗೆ ಅಸಾಧ್ಯವಾಗಿರಬಹುದು. ತಪ್ಪು ಮಾಡಲು ಎಲ್ಲಾ ಸಂದರ್ಭಗಳಲ್ಲೂ ಎಡೆ ಸಿಗುತ್ತದೆ: ಆದರೆ ಜನರು ಉದ್ದೇಶಪೂರ್ವಕವಾಗಿ ಹಿಂಸಾತ್ಮಕ ಕೆಲಸಗಳನ್ನು ಮಾಡಿದರೆಂದು ಸರಕಾರಿ ಕಡೆಯಿಂದ ಹೇಳಲಾಗಿದೆ. ಹಾಗೆ ಮಾಡಿದವರ್‍ಯಾರೆಂದು ತೋರಿಸಿ ಕೊಡದೆ ಈ ವಿಷಯದಲ್ಲಿ ನ್ಯಾಯವಾದ ತೀರ್ಮಾನ ಕೊಡಬರುವುದಿಲ್ಲ: ಇಂಥಹ ವ್ಯಕ್ತಿಯೇ ಇಂಥಿಂತಹ ಅಕೃತ್ಯಗಳನ್ನು ಮಾಡಿರುವರೆಂದು ಆಯಾ ವ್ಯಕ್ತಿಯ ಬಳಿ ಕೇಳಿ ತಿಳಕೊಳ್ಳದೆ ಜ್ಞಾನವಿದ್ದ ಯಾವ ವ್ಯಕ್ತಿಯೂ ಹೇಳಲಾರನು. ಕಾಂಗ್ರೆಸ್ಸು ಶುದ್ಧವಾದ ಅಹಿಂಸೆಗೆ ಕಂಕಣಬದ್ಧವಾಗಿದೆ ಎಂಬ ವಿಷಯವನ್ನು ಯಾರೂ ಮರೆಯಬಾರದು."

ಕೆಲವೇ ವಾರಗಳ ಹಿಂದೆ ಓರ್ವ ಜರ್ಮನ್ ಸರಕಾರ ಅಧಿಕಾರಿಯು ಇಂಗ್ಲೆಂಡಿನಲ್ಲಿದ್ದನಂತೆ. ಹಿಂದೆ ಹೆರ್ ಹೆಸ್‌ನೆಂಬವನು ಅಕಸ್ಮಾತಾಗಿ ಇಂಗ್ಲೆಂಡಿನಲ್ಲಿಳಿದು ಮತ್ತೆ ಕೈದಿಯಾದನು: ಅವನು ರಾಜಿ ಪ್ರಸ್ತಾಪದಕ್ಕಾಗಿ ಬಂದಿದ್ದನೆಂದು ಹೇಳಲಾಗಿತ್ತು: ಈ ಸಲ ಬಂದವನು ಹೆರ್ ಕ್ರೋಸ್ ನೆಂಬವನು. ಇವನಿಗೆ ಸರಕಾರದ ಕಡೆಯಿಂದ ವಿಶೇಷ ಆತಿಥ್ಯ ಸತ್ಕಾರಗಳನ್ನು ಮಾಡಲಾಗಿದೆ ಎಂದು ವರ್ತಮಾನವಿದ್ದುದರಿಂದ ಪಾರ್ಲಿಮೆಂಟಿನಲ್ಲಿ ಈ ಕುರಿತು ಸಿದ್ಧದಲ್ಲೇ ಚರ್ಚೆ ನಡೆಯುತಿದೆ.

ಮನುಷ್ಯನ ಮೂಲಸ್ಥಾನವಾವುದು?

ಆಸ್ಟ್ರೇಲಿಯಾ-ಜಗತ್ತಿನ ಪ್ರಾಚೀನ ಖಂಡ

ಬರೋಡದ ಒಂದುವರೆ ಅಡಿ ಮನುಷ್ಯ

ಬಿಳಿಯರ ಮೂಲ ಪುರುಷರು ಕಪ್ಪು

ಸುಮಾರು ಎರಡು ಶತಮಾನ ಹಿಂದೆ ಕಂಡು ಹಿಡಿಯಲ್ಪಟ್ಟ ಖಂಡಗಳಲ್ಲಿ ಅತೀ ಚಿಕ್ಕದೂ ಆದರೂ ಆಸ್ಟ್ರೇಲಿಯವು ಜಗತ್ತಿನ ಅತೀ ಪ್ರಾಚೀನ ಪ್ರದೇಶವೆಂದು ಭೂಶಾಸ್ತ್ರ ಪರಿಶೋಧಜ್ಞರು ಅಭಿಪ್ರಾಯ ಪಡುತ್ತಾರೆ. ಇವರ ಊಹನೆಗೆ ಅನೇಕಾನೇಕ ಆಧಾರಗಳೂ ಇವೆ. ಆಸ್ಟ್ರೇಲಿಯದಲ್ಲಿ ವಾಸಿಸುವ ಕಪ್ಪು ಬಣ್ಣದ ಮೂಲನಿವಾಸಿಗಳು ಜಗತ್ತಿನ ಮೂಲ ಮನುಷ್ಯರ ರೂಪಾಕೃತಿಗಳುಳ್ಳವರೆಂದೂ ಕಂಡು ಬಂದಿದೆ. ಇತರ ಕಪ್ಪು, ಕೆಂಪು, ಹಳದಿ ಮತ್ತು ಕೆಂಪು ವರ್ಣದ ಜನರು ಯಾವುದಾದರೊಂದು ನಿರ್ದಿಷ್ಟರೂಪ ವೈಶಿಷ್ಟ್ಯಗಳುಳ್ಳವರಾಗಿರುವರು. ಬಿಳಿ ಜನರು ಮೂಲ ಮಾನವ ಕೋಟಿಯ ರೂಪರಚನೆಗಳಿಂದ ಬಹಳವಾಗಿ ಕೂಡಿದ್ದು ದೇಶ ಪ್ರಕೃತಿ ವಾತಾವರಣಗಳ ಪರಿಣಾಮದಿಂದ ಇಂದು ಜಗತ್ತಿನ ಶಕ್ತಿವಂತ ಮತ್ತು ಮುಂದರಿದ ಜನರಾಗಿರುವರು.

ಚಪ್ಪಟೆ ಮೂಗಿನ ಮಂಗೋಲಿಯನ್ ಇಲ್ಲವೆ ಹಳದಿ ಜನಾಂಗಿಕರ ಮೂಲ ಸ್ಥಾನವು ಚೀನದ ಅತೀ ವಾಯುವ್ಯದಲ್ಲಿರುವ ಮಂಗೋಲಿಯಾ ಮತ್ತು ಟಾರಿಮ ನದಿ ಪ್ರದೇಶಗಳು. ಇವರ ಒಂದು ಶಾಖೆಯು ಆಸ್ಯಾಖಂಡದ ಅತೀ ಈಶಾನ್ಯತುದಿಯಿಂದ ಉತ್ತರ ಅಮೇರಿಕಾಕ್ಕೂ ಹೋಗಿತ್ತೆಂದು ನಂಬಲಾಗಿದೆ.

ಈ ಮಂಗೋಲ ಪ್ರದೇಶದ ನೆರೆಕರೆಯಲ್ಲಿ ಆಲ್ಟೇ ಪರ್ವತ ಪ್ರದೇಶದ ತಪ್ಪಲಲ್ಲಿ ಒಂದು ತರದ ಹಳೇ ಜನಾಂಗೀಕರು ವಾಸಿಸಿದ್ದು ಇಂದವರ ವಂಶಜರು ಪಶ್ಚಿಮ ಆಸ್ಯದ ಭಾಗಗಳಲ್ಲಿ ಕಾಣಿಸಿರುವರು. ಲೆಪಲೆಂಡಿನವರೂ, ಫಿನ್‌ಲೆಂಡಿನವರೂ, ಇಸ್ತೊನಿಯಾ, ಲಿತ್ವೇನಿಯದವರೂ ತುರ್ಕರೂ ಈ ಜನಾಂಗ ಮೂಲಕ್ಕೆ ಸೇರಿದವರು. ನಮ್ಮ ದೇಶದ ದ್ರಾವಿಡ ಜನರೂ ಈ ಮೂಲಕ್ಕೆ ಸೇರಿದವರೆಂದು ಕೆಲವು ವಿಜ್ಞಾನಿಗಳು ಹೇಳುತ್ತಾರೆ.

ಇಂದು ದೊಡ್ಡ ಮರುಳು ಕಾಡಾಗಿರುವ ಶಹಾರಾ ಮರುಭೂಮಿಯು ಒಂದು ಕಾಲದಲ್ಲಿ ಶ್ರೇಷ್ಠ ನಾಗರೀಕತೆಯ ಜನರ ವಾಸಸ್ಥಾನವಾಗಿತ್ತೆಂದೂ ಇಂದಿನ ಅರಬಿ ಐಗುಪ್ತ ಮತ್ತು ಭೂಮಧ್ಯ ಪ್ರದೇಶದಲ್ಲಿರುವ ಸ್ಪೇನ್ ಮತ್ತು ಯೆಹೂದಿ ಜನರು ಇಲ್ಲಿಂದ ಹೋಗಿ ನೆಲೆ ನಿಂತವರೆಂದೂ ಕೆಲವರು ತರ್ಕಿಸುತ್ತಾರೆ.

ಬಿಳೀ ಜನರ ಮೂಲ ಸ್ಥಾನದ ಕುರಿತು ಈಗಲೂ ಅನೇಕ ಭೇದಾಭಿಪ್ರಾಯಗಳಿವೆ. ಅಫಘಾನಿಸ್ತಾನದಿಂದಲೇ ಬಿಳಿ ಜನರ ಸಂಚಾರಗಳಾದುವು ಎಂದು ಕೆಲವು ಪರಿಶೋಧಕರೂ, ರಷ್ಯದ ಉಕ್ರೇನ್ ಪ್ರದೇಶದಿಂದೆಂದು ಮತ್ತೆ ಕೆಲವರೂ, ಇನ್ನು ಕೆಲವರು ಇಂಗ್ಲೆಂಡ್, ನೋರ್ವೆ ಸ್ವೀಡನ್ ಪ್ರದೇಶಗಳಿಂದೆಂತಲೂ ವಾದಿಸುತ್ತಾರೆ.

ಮಲಾಯನ್ ಎಂಬ ಜನರು ಜಗತ್ತಿನ ಅತೀ ಪ್ರಾಚೀನ ನಾಗರೀಕತೆಯ ಜನಾಂಗದವರೆಂತಲೂ ಅವರು ಆಫ್ರಿಕದ ದಕ್ಷಿಣದಲ್ಲಿರುವ ಮಡಗಾಸ್ಕರ್‌ದಲ್ಲಿಯೂ ಮತ್ತಿತರ ಪೆಸಿಫಿಕ್ ದ್ವೀಪಗಳಲ್ಲಿಯೂ ನೆಲೆತಿದ್ದರೆಂದೂ ಸಾಧಾರವಾಗಿ ತಿಳಿದು ಬರುತ್ತದೆ.

ಪ್ರಾಚೀನ ಜನಾಂಗ ಮೂಲದ ಕುರುಹುಗಳು

ರಷ್ಯದ ಸ್ಯಾಬೀರಿಯದಲ್ಲಿ ಅತೀ ಪ್ರಾಚೀನ ಜನರ ಒಂದು ತಂಡವಿತ್ತು. ಅದರ ವಂಶದ ಮಿಯೊಟ್ಜೆ ಎಂಬ ಜನರು ಚೀನಿಯರ ಮೂಲ ವಂಶಸ್ಥರೆಂದೂ ಹೇಳಲಾಗಿದೆ. ಇವರು ಅತೀ ಕುಳ್ಳಗಾಗಿದ್ದು ಉತ್ತರ ಜಪಾನಿನ ದ್ವೀಪಗಳಲ್ಲೂ, ಚುಕ್ಕಿತ, ಗಿಲ್ಯಾಕ್ಸ್, ಮತ್ತು ಯುಶಾಘಿರ್ಸ್ ಎಂಬ ಹೆಸರಿನಿಂದ ಕರೆಯಲ್ಪಡುತಿದ್ದರು.

ಮುಂಡಾ ಎಂಬ ಜನರು ಭಾರತದ ಮೂಲ ನಿವಾಸಿಗಳು. ಈ ಜನರಿಗೆ ಸಮಾಜ ಕ್ರಮದಲ್ಲಿ ತಾಯಿಯೇ ಕುಟುಂಬದ ಮುಖ್ಯಸ್ಥಳಾಗಿರುತಿದ್ದಳು. ಈ ಕ್ರಮವು ಈಗಲೂ ಕೆಲವು ಜಾತಿಗಳಲ್ಲಿ ರೂಢಿಯಲ್ಲಿದೆ. ವೆಡ್ಡರೆಂಬ ಜನರು ಸಿಂಹಳ ದ್ವೀಪದಲ್ಲಿ ಅತೀ ಪ್ರಾಚೀನ ಕಾಲದಲ್ಲಿದ್ದರು. ಬಂಗಾಳ ಕೊಲ್ಲಿಯಲ್ಲಿನ ದ್ವೀಪಗಳ ಮತ್ತು ಅಂಡಮಾನ್ ದ್ವೀಪಗಳಲ್ಲಿ ವಾಸಿಸುವ ಕೆಲವು ಕಾಡು ಜನರಿಗೆ ಇಂದಿಗೂ ಬೆಂಕಿ ಮಾಡುವ ವಿಧಾನ ಗೊತ್ತಿಲ್ಲವಂತೆ. ಫಿಲಿಪ್ಪಾಯನ್ ದ್ವೀಪಗಳಲ್ಲಿ ಇಟಾತ್ಸ್ ಎಂಬ ಕುಳ್ಳ ಹಳೇ ಜನರ ವಂಶಸ್ಥರಿದ್ದಾರೆ. ಇಂದಿನ ಸಯಾಮಿನ ಮೂಲ ಜನರೂ ಕುಳ್ಳ ಜನಾಂಗಿಕರಾಗಿಯೇ ಇದ್ದರು.

ಈ ಕುಳ್ಳ ಜನರ ಎತ್ತರವು ಮೂರರಿಂದ ಅರು ಅಡಿಯ ತನಕ ಹೆಚ್ಚು ಕಡಿಮೆಯಾಗಿರುತ್ತದೆ. ಇವರಂತೆ ದ. ಅಮೇರಿಕದ ಬ್ರೆಜಿಲಿನ ಪುರಿ ಮತ್ತು ಬಾರ್‍ರಿ ಜನರೂ, ಆಫ್ರಿಕದ ಕೊಂಗೊ ನದಿ ಪ್ರದೇಶದ ಬಾಟ್ವಾ ಮತ್ತು ಹೊಟೆಂಟೊಟ್ಸ್ ಜನರೂ ಕುಳ್ಳರೇ ಆಗಿರುವರು.

ದ. ಅಮೇರಿಕದಲ್ಲಿ ನಾಕಕೊಮತ್ತು ಇಂಜೆ-ಇಂಜೆ ಎಂಬ ಕುಳ್ಳರಾದ ಬೇರೆ ಕೆಲ ಜನಾಂಗೀಕರಿರುವರು. ಇವರ ಭಾಷೆಯಲ್ಲಿ ಕೆಲವೊಂದು ಶಬ್ದಗಳು ಮಾತ್ರ ಇವೆ. ರ್‍ಯಾನ್ ನದೀ ಪ್ರದೇಶದ ಉತ್ತರ ಭಾಗದ ಹಿಂದಿನ ಕಾಲದಲ್ಲಿ ಒಂದು ತರದ ಕುಳ್ಳ ಜನರಿಂದಲೇ ನೆಲೆಸಲ್ಪಟ್ಟಿತೆಂದು ಸ್ವಿಟ್ಜರ್‌ಲೆಂಡಿನ ಪ್ರಖ್ಯಾತ ಮಾನವ ಅಸ್ಥಿಪಂಜರಶಾಸ್ತ್ರ ಪ್ರವೀಣರಾದ ಪ್ರೊ। ಕೊಲ್‌ಮಾನ್ ಅವರು ತಿಳಿಸುತ್ತಾರೆ. ಅಸ್ಸಿಯದಲ್ಲಿ ೧೯೩೦ರಲ್ಲಿ ಸಿಕ್ಕಿದ ಒಂದು ಅಸ್ಥಿಪಂಜರದ ಉದ್ದವು ಬರೀ ನಾಲ್ಕಡಿ ಇತ್ತಂತೆ.

ಬರೋಡಾ ಸಂಸ್ಥಾನದ ವಾಡ್‌ನಗರ್ ಎಂಬಲ್ಲಿ ೧೯೩೫ರಲ್ಲಿ ಅತೀ ಪ್ರಾಚೀನ ಕಾಲದ ಒಂದು ಅಸ್ಥಿಪಂಜರವು ದೊರಕಿದ್ದು ಅದು ಬರೀ ೧೫ ಇಂಚು ಎತ್ತರದ ಮನುಷ್ಯನದು ಎಂದು ಕಂಡು ಹಿಡಿಯಲಾಯಿತು. ಸುಮಾರು ೨೫೦೦ ವರ್ಷಗಳ ಹಿಂದೆ ಪೆಸ್ಸಿಯಾನ್ ಎಂಬ ಗ್ರೀಕ್ ದೇಶದ ವೈದ್ಯ ವಿಜ್ಞಾನಿಯೊಬ್ಬನು ಹಿಂದೂ ದೇಶದ ಮಧ್ಯ ಪ್ರದೇಶದಲ್ಲಿ ಕುಳ್ಳ ಜನಾಂಗಿಕರ ಪ್ರದೇಶವೊಂದಿದೆ ಎಂದು ಹೇಳಿದನ್ನು ಮೇಲಿನ ಅಸ್ಥಿಪಂಜರವು ಸಿದ್ಧಾಂತ ಮಾಡುತ್ತದೆ.

ಯುರೋಪಿನ ಪೂರ್ವಜರು

ಹೊಲೆಂಡ್ ಮತ್ತು ದಕ್ಷಿಣ ಜರ್ಮನಿಯ ಪ್ರದೇಶದಲ್ಲಿ ವಾಸಿಸಿ ಕೊಂಡಿದ್ದ ಹಿಮಕಾಲದ(ಅನೇಕ ಸಹಸ್ರಾರು ವರ್ಷಗಳ ಹಿಂದೆ ಯುರೋಪಿನ ಭಾಗವು ಹಿಮದಿಂದಲೇ ತುಂಬಿದ ಕಾರಣ ಅದನ್ನು ಹಿಮಕಾಲವೆಂದು ಕರೆಯುತ್ತಾರೆ.) ಜನರ ಅಸ್ಥಿಪಂಜರಗಳು ದೊರಕಿದ್ದು ಅವು ಐದು ಅಡಿಗಿಂತಲೂ ಹೆಚ್ಚು ಉದ್ದವಿರಲಿಲ್ಲ. ಇಂತಹ ಸಮಾನ ಲಕ್ಷಣದ ಅಸ್ಥಿಪಂಜರಗಳು ಆಫ್ರಿಕದಲ್ಲೂ ದೊರಕಿದ್ದುದರಿಂದ ಅಲ್ಲಿನ ಹೊಟೆಂಟೊಟ್ಸ್ ಎಂಬ ಕುಳ್ಳ ನಿಗ್ರೊಗಳು ಯುರೋಪಿನ ಹಿಮ ಪ್ರದೇಶದಲ್ಲಿ ವಾಸಿಸ ಹೋದರೋ, ಇಲ್ಲವೆ ಜರ್ಮನಿಯ ಬಳಿಯ ಹಿಮಕಾಲದ ಜನರು ಆಫ್ರಿಕಕ್ಕೆ ಹೋದರೂ ನಿರ್ಧಿಷ್ಟವಾಗಿ ಹೇಳ ಬರುವುದಿಲ್ಲ.

ಯುರೋಪಿನಲ್ಲಿ ಹಿಮಕಾಲವು ಕಳೆಯುತ್ತಾ ಬಂದು ಆ ಪ್ರದೇಶಗಳ ವಾತಾವರಣವು ಉಷ್ಣಮಯವಾಗ ಹತ್ತಿದಂದಿನಿಂದ ಆಸ್ಯಾ ಖಂಡದ ಕೆಲವು ಜನಗದವರು ಅತ್ತಕಡೆ ಸರಿದವೆಂದು ಹೇಳಬಹುದು. ಕ್ರೊಮಾಗ್ನನ್ ಎಂಬ ಅಸ್ಯಾಖಂಡೀಯ ಜನರ ಅಸ್ಥಿಪಂಜರಗಳು ಫ್ರಾನ್ಸಿನ ಕೆಲವು ಶಿಲಾಗುಹೆಗಳಲ್ಲಿ ದೊರಕಿರುವುದೇ ಈ ಊಹೆಗೆ ಆಧಾರನಾಗಿರುತ್ತದೆ. ಈ ಜನರ ಅಂಗಾಂಗಗಳು ಪರಿಪೂರ್ಣ ಬೆಳವಣಿಕೆಯದ್ದು ಅತೀ ಗಟ್ಟಿಯಾಗಿರಬೇಕೆಂದು ಅವುಗಳ ಮೂಳೆಗಳಿಂದ ತಿಳಿದು ಬರುತ್ತದೆ.

ಯುರೋಪಿನ ಬಿಳೀ ಜನರಲ್ಲಿ ಶುದ್ಧ ಜನಾಂಗ ಮೂಲವಿದ್ದವರು ಇಟೇಲಿಯ ಬಳಿಯ ಆಲ್ಬೇನಿಯದ ಜನರ ಮೂಲ ವಂಶದವರೆಂದು ತಿಳಿದು ಬರುತ್ತದೆ. ಶಿಲಾಯುಗದ ಕಾಲದಲ್ಲಿ ಇವರು ಬಾಲ್ಕನ್ ಪ್ರದೇಶದಲ್ಲಿ ನೆಲೆನಿಂತರೆಂದೂ ತಿಳಿಯುತ್ತದೆ. ಇವರ ಹೆಲೆನಿಸ್ ಎಂಬ ಪಂಗಡದವರು ಗ್ರೀಸ್ ದೇಶದಲ್ಲಿ ನೆಲೆ ನಿಂತು ತುಂಬಾ ನಾಗರೀಕತೆ ಪಡೆದರು. ರೋಮನ್ ಚಕ್ರವರ್ತಿಗಳ ಕಾಲದಲ್ಲಿ ಆಲ್ಬೇನಿಯದ ಜನರನ್ನು ಸೈನ್ಯಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದರು. ಈ ಸೈನಿಕ ಗುಣ ಲಕ್ಷಣಗಳಿಂದ ಇಂದು ಅವರು ಪರಸ್ಪರ ಕಾದಾಟ ಜಗಳದಲ್ಲಿ ನಿರತರಾಗಿರುವುದನ್ನು ಕಾಣಬಹುದು. ಇಂದೂ ಬಹಳ ಹಿಂದುಳಿದ ಈ ಜನರ ಒಂದು ಪಂಗಡ ಗ್ರೀಸಿನಲ್ಲಿ ನಿಂತು ತುಂಬಾ ನಾಗರೀಕರಾದರೆಂಬ ಸಂಗತಿ ಸಾರಸ್ಯವಾದುದು.

ಆಲ್ಬೇನಿಯರಂತೆ ಬಾಸ್ಕ್ ಎಂಬ ಜನರೂ ಗುಡ್ಡ ಕಾಡು ನಿವಾಸಿಗಳಾಗಿದ್ದು ಸ್ಪೈನಿನ ಪಿರನೀಸ್ ಪರ್ವತ ಪ್ರದೇಶದಲ್ಲಿದ್ದಾರೆ. ಇಂದು ಜಗತ್ತಿನ ಅತೀ ಚಿಕ್ಕ ರಾಷ್ಟ್ರಗಳಲ್ಲಿ ಒಂದೆನಿಸಿದ ಇಟಲಿಯಲ್ಲಿನ ಅಂಡೋರಾ ಎಂಬ ದೇಶ ಪ್ರಾಂತ್ಯವು ಈ ಜನರಿಗೆ ಸೇರಿದ್ದಾಗಿರುತ್ತದೆ. ಈ ಜನರು ಇಂದು ಹಿಟ್ಲರ್ ಮುಸೋಲಿನಿಗಳು ದ್ವೇಷಿಸಿದ ಯೆಹೂದಿ ಜನಾಂಗ ಮೂಲಕ್ಕೆ ಸೇರಿದರೆಂದರೆ ಸೋಜಿಗವೆನಿಸುವುದು. ಕೊಕಸಸ್ ಪರ್ವತ ಪ್ರದೇಶದಲ್ಲೂ ಹರಡಿದ್ದ ಈ ಜನರ ನೆರೆಕರೆಯಲ್ಲೇ ವಾಸಿಸಿಕೊಂಡಿದ್ದ ಬೇರೆ ಕೆಲ ಜನಾಂಗೀಕರೇ ಯುರೋಪಿಯಾನ್‌ರ ಜನಾಂಗಿಕರ ಮೂಲ ಪುರುಷರೆಂದು ಹೇಳಬಹುದು.

ಮೇಲೆ ಬಾಸ್ಕ್ ಎಂದು ಹೇಳಲ್ಪಟ್ಟ ಜನರು ತಮ್ಮ ಕವಿತೆಗಳಲ್ಲಿ ರೋಮಾಯರದಾಳಿಗಳ ಕುರಿತು ವರ್ಣಿಸಿರುವರು. ಅಂತೆಯೇ ಪ್ರಾಪ್ತಭುಕ್ತ ಪದ್ಧತಿಯಂತೆ ರಾಜ್ಯವಾಳಿಕೊಂಡಿದ್ದರು. ಈಗಲೂ ಅವರು ಹಳೇ ಕಾಲದ ಎರಡು ಚಕ್ರದ ಗಾಡಿಗಳನ್ನು ಉಪಯೋಗಿಸುತ್ತಾರೆ. ಬೆಸ್ತರಾಗಿದ್ದ ಈ ಜನರ ಒಂದು ಪಂಗಡವು ಮೀನು ಹಿಡಿಯುತ್ತಾ ಅಮೇರಿಕಾ ಖಂಡಕ್ಕೂ ಹೋಗಿರುವುದಂತೆ. ಇವರ ಪಿಂಜಾರೊ ಎಂಬ ಮುಖಂಡನು ದ. ಅಮೇರಿಕದ ಪೆರು ರಾಜ್ಯವನ್ನು ಗೆದ್ದನಂತೆ. ಅಮೇರಿಕದವರು ಹೊರ ದೇಶದವರ ಮೇಲೆ ನಿರ್ಬಂಧ ಹೊರಿಸುವ ಮೊದಲು ಈ ಜನರು ಬಹು ಸಂಖ್ಯೆಯಲ್ಲಿ ಆ ನೂತನ ಖಂಡಕ್ಕೆ ಹೋಗಿ ನೆಲೆಸಿ ಸಮರ್ಥ ಕೆಲಸಗಾರರೆಂದು ಪ್ರಖ್ಯಾತಿ ಪಡೆದರು. ಇವರೇ ಐರೋಪ್ಯರ ಮೂಲ ಜನಾಂಗದವರು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As. Ps.
1. Paid up Capital	14,76,535- 0- 0
2. Reserves	4,14,302- 3-11
3. Deposits	98,25,162- 6- 6
4. Bills for collection	6,87,039- 2- 2
5. Branch Adjustments	7,20,593- 3- 0
6. Other liabilities	2,86,375- 4- 9
7. Profits for the Current year together with Balance brought forward.	1,40,405-15- 8
Grand Total Rs.	1,35,50,413- 4- 0

PROPERTY AND ASSETS	Rs. As. Ps
1. Office Buildings, safes, furniture, etc.	1,04,204- 0- 0
2. Advances	57,53,919- 5- 0
3. Investments on Govt. Securities etc.	30,18,971-15- 5
4. Bills for collection	6,87,039- 2- 2
5. Other Assets	1,07,153- 5- 9
6. Cash on hand and with Bankers at call & in Short Term Deposits	38,79,125- 7- 0
Garnd Total Rs.	1,35,50,413- 4- 8

ಜಪಾನೀ ಕೈದಿಗಳೊಡನೆ ಮಾತುಕತೆ

ಅವರ ಅಂಧ ರಾಜಭಕ್ತಿ ಪ್ರದರ್ಶನ

'ಜಪಾನೇ ಕೊನೆಗೆ ಗೆಲ್ಲುವು'ದಂತೆ

ಚಕ್ರವರ್ತಿ ತತ್ವವೇ-ಜಪಾನಿ ತತ್ವ

ಫಿಲಿಪ್ಪಾನಿನ ಒಂದು ಜಪಾನಿ ಕೈದಿ ಕೇಂದ್ರದಲ್ಲಿ ಓರ್ವ ಅಮೇರಿಕನ್ ಸೈನ್ಯ ಪತ್ರಿಕೆಯ ಪ್ರತಿನಿಧಿಯು ಕೆಲ ಜಪಾನೀ ಸೆರೆಯಾಳುಗಳನ್ನು ಕಂಡು ಅವರೊಡನೆ ಅನೇಕ ವಿಚಾರಗಳ ಕುರಿತು ಪ್ರಶ್ನೋತ್ತರ ನಡೆಸಿದನು. ಅದರ ವಿವರವನ್ನು ಈ ಕೆಳಗೆ ಸಂಕ್ಷೇಪವಾಗಿ ಕೊಡಲಾಗಿದೆ.

ಒಬ್ಬ ಕೊಡೆ ವೈಮಾನಿಕ ದಳದ ನಾಯಕನು ಬಂಧಿಸಲ್ಪಟ್ಟದ್ದರಿಂದ ತುಂಬಾ ಅವಮಾನಿತನಾಗಿದ್ದು ತನಗೆ ಸಿಕ್ಕುವ ಮೊದಲನೇ ಸಂದರ್ಭದಲ್ಲೇ ಆತ್ಮ ಹತ್ಯ ಮಾಡಿಕೊಳ್ಳುವುದಾಗಿ ಹೇಳುತಿದ್ದನು, ಮೊದಲನೇ ಪ್ರಶ್ನೋತ್ತರ ಇತನೊಡನಾಯಿತು.

ಪ್ರಶ್ನೆ-ನಿನ್ನ ಜನ್ಮ ಸ್ಥಾನ ಯಾವುದು?

ಉತ್ತರ-ಒಸಕಾ ಪಟ್ಟಣ.

ಪ್ರ-ಸೈನ್ಯಕ್ಕೆ ಸೇರಿ ಎಷ್ಟು ಕಾಲವಾಯಿತು?

ಉ-ಐದು ವರ್ಷ.

ಪ್ರ-ಸ್ವಂತ ಇಚ್ಛೆಯಿಂದ ಸೇರಿದೆಯೊ?

ಉ-ಹೌದು.

ಪ್ರ-ಹೀಗೆ ಯಾಕೆ ಸ್ವಯಂ ಸೇವಕನಾದೆ?

ಉ-ಸೈನ್ಯ ಜೀವನದಲ್ಲಿ ಪುರುಷತ್ವವಿದೆ ಅದು ನನಗೆ ಒಪ್ಪುತ್ತದೆ.

ಪ್ರ-ನೀನು ಆತ್ಮ ಹತ್ಯ ಮಾಡಿ ಕೊಳ್ಳಬೇಕೆಂದಿರುವೆ. ಏಕೆ?

ಉ-ಸೆರೆ ಸಿಕ್ಕಿ ನನಗೆ ಅವಮರ್ಯಾದೆಯಾಗಿದೆ. ದೇಶಕ್ಕೆ ಹಿಂತಿರುಗುವಂತಿಲ್ಲ.

ಪ್ರ-ನಿನಗೆ ಸಂಸಾರವಿದೆಯೆ?

ಉ-ಓರ್ವ ತಾಯಿ ಮತ್ತು ತಂಗಿ ಇದ್ದಾರೆ.

ಪ್ರ-ನೀನು ಯುದ್ಧ ಮಾಡುವುದು ಏತಕ್ಕಾಗಿ?

ಉ-ಚಕ್ರವರ್ತಿಗಾಗಿ. (ಚಕ್ರವರ್ತಿ ಎಂಬ ಶಬ್ದ ಉಚ್ಚರಿಸುವಾಗ ಅವನು ನೆಟ್ಟಗೆ ನಿಲ್ಲುವನು.)

ಪ್ರ-ಚಕ್ರವರ್ತಿಗಾಗಿ ಮಾತ್ರವೊ ಇನ್ನಾವುದಕ್ಕೊ?

ಉ-ಇನ್ನಾವುದಕ್ಕೂ ಅಲ್ಲ. (ಪುನಃ ನೆಟ್ಟಗೆ ನಿಲ್ಲುವನು.)

ಪ್ರ-ಜಪಾನು ಯಾತಕ್ಕೆ ಈ ಯುದ್ಧ ಮಾಡುತ್ತಿರುವುದು?

ಉ-ಜಗತ್ತನ್ನು ಆಳಲಿಕ್ಕೆ.

ಪ್ರ-ಜಪಾನೇಜಗತ್ತನ್ನೇಕೆ ಆಳಬೇಕು?

ಉ-ಕಾರಣ ಜಪಾನು ಎಲ್ಲಾ ದೇಶಗಳಿಗಿಂತಲೂ ಶ್ರೇಷ್ಠವಾದುದು.

ಪ್ರ-ಅದು ಹೇಗೆ ಹೇಳುವೆ?

ಉ-ಜಪಾನಿಗೆ ಬೇಕಾದ ವಸ್ತುಗಳು ಸಿಕ್ಕುತ್ತವೆ. ಅದಕ್ಕೆ ಶಕ್ತಿಯಿದೆ.

ಪ್ರ-ನೀನು ಬೇರೆ ದೇಶಗಳ ಕುರಿತು ತುಂಬಾ ಓದಿರುವೆಯಾ?

ಉ-ಇಲ್ಲ.

ಪ್ರ-ಜಪಾನು ಯುದ್ಧ ಮಾಡುವುದು ನ್ಯಾಯವೊ? ಯಾಕೆ?

ಉ-ಹೌದು ಜಪಾನು ಯುದ್ಧ ಮಾಡುವುದು ನ್ಯಾಯ. ನಮ್ಮ ಚಕ್ರವರ್ತಿ ಜಗತ್ತಿನ ದೇವರು.

ಪ್ರ-ನಿಮ್ಮ ದೇಶದಲ್ಲಿ ಜನರಿಗೆ ಸಾಕಷ್ಟು ಆಹಾರವಿದೆಯೇ?

ಉ-ಇದೆ.

ಪ್ರ-ಯುದ್ಧದ ಕುರಿತು ಅವರಿಗೆ ಭಯ ಕಳವಳಗಳು ಇಲ್ಲವೆ?

ಉ-ಸ್ವಲ್ಪ ಹೆದರಿಕೆ ಇದೆ.

ಪ್ರ-ಜಪಾನು ಯುದ್ಧ ಗೆಲ್ಲುವುದೆ?

ಉ-ಹೌದು, ಪ್ರತೀ ಜಪಾನಿಯನೂ ಹಾಗೇ ತಿಳಕೊಂಡಿರುವನು.

ಪ್ರ-ಜಪಾನಿಗೆ ಅನೇಕ ರಂಗಗಳಲ್ಲಿ ಸೋಲಾದುದು ನಿನಗೆ ಗೊತ್ತಿದೆಯೇ?

ಉ-ಅಲ್ಲಿ ನಡೆದದ್ದು ಬರೀ ಜಗಳಗಳು, ಯುದ್ಧವನ್ನು ಕೊನೆಗೆ ನಾವೇ ಗೆಲ್ಲುವೆವು.

* * *

ಕಳೆದ ಒಕ್ಟೋಬರ್ ನೌಕಾ ಕದನದಲ್ಲಿ ಮುಳುಗಿಸಲ್ಪಟ್ಟ ಜಪಾನೀ ಯುದ್ಧ ಹಡಗದ ಒಬ್ಬ ಚಿಕ್ಕ ಅಧಿಕಾರಿಯ ಪ್ರಶ್ನೋತ್ತರ.

ಪ್ರ-ಯುದ್ಧಕ್ಕೆ ಸೇರುವ ಮೊದಲು ಏನಾಗಿದ್ದೆ?

ಉ-ತಂದೆಯೊಟ್ಟಿಗೆ ಸಾಗುವಳಿ ಮಾಡುತಿದ್ದೆ.

ಪ್ರ-ಯುದ್ಧ ಯಾಕೆ ನಡೆಯುತ್ತಿದೆ ಎಂದು ನಿನಗೆ ಹೇಳಿದ್ದಾರೊ?

ಉ-ಶಾಶ್ವತ ಶಾಂತಿಗೆಂದು ಹೇಳಿದ್ದಾರೆ.

ಪ್ರ-ನೀನು ಅಮೇರಿಕನರನ್ನು ದ್ವೇಷಿಸುತ್ತಿಯೊ?

ಉ-ನನಗೆ ಗೊತ್ತಿಲ್ಲ.

ಪ್ರ-ಹಾಗಾದರೆ ಯುದ್ಧ ಮಾಡಿ ಅಮೇರಿಕನರನ್ನು ನೀವು ಏಕೆ ಕೊಲ್ಲ ಪ್ರಯತ್ನಿಸುತ್ತೀದ್ದಿರಿ?

ಉ-ಚಕ್ರವರ್ತಿಯ ಸಲುವಾಗಿ (ಈ ಶಬ್ದ ಹೊರಡಿಸುವಾಗ ಅವನು ಸನ್ಮಾನ ಪೂರ್ವಕವಾಗಿ ಬಿಗಿಯಾಗಿ ನೆಟ್ಟಗೆ ನಿಲ್ಲುವನು.)

ಪ್ರ-ಚಕ್ರವರ್ತಿ ಎಂದರೆ ದೇವರೆಂದು ನಿನ್ನ ನಂಬಿಕೆಯೇ.

ಉ-ಹೌದು.

(ಈ ಪ್ರಶ್ನೆಗೆ ಎಲ್ಲ ಜಪಾನಿಯರು ಹೌದೆಂದೇ ಉತ್ತರ ಕೊಡುವರು. ಅದು ಸತ್ಯವೆಂದೇ ಅವರ ದೃಢ ನಂಬಿಕೆ. ಅದೇ ಅವರ ಜೀವನದ ಸ್ಫೂರ್ತಿಯಂತೆ.)

* * *

ನಂತರ ಒಬ್ಬ ವೈಮಾನಿಕನೊಡನೆ ಪ್ರಶ್ನೋತ್ತರ ನಡೆಯಿತು.

ಪ್ರ-ನೀನು ವಿಮಾನ ಕೆಲಸ ಕಲಿತು ಎಷ್ಟು ಸಮಯವಾಯಿತು?

ಉ-ನಾಲ್ಕು ತಿಂಗಳು.

ಪ್ರ-ನಿನಗೂ ಬಂಧಿತವಾಗಿ ನಾಚಿಕೆಯಾಗಿದೆಯೇನು?

ಉ-ಹೌದು.

ಪ್ರ-ಹಾಗಾದರೆ ನೀನೇಕೆ ನಮ್ಮವರ ಕೈಗೆ ಸಿಕ್ಕಿದೆ?

ಉ-ನನಗೆ ಆಗ ಸ್ವಲ್ಪ ಅಸೌಖ್ಯವಿತ್ತು.

ಪ್ರ-ನಿನ್ನಲ್ಲಿ ಪಿಸ್ತೂಲು ಇತ್ತಲ್ಲವೆ? ನೀನೇಕೆ ಆತ್ಮ ಹತ್ಯ ಮಾಡಿಕೊಳ್ಳಲಿಲ್ಲ?

ಉ-ಅದಕ್ಕೆ ಮಣ್ಣು ಹಿಡಿದಿತ್ತು.

ಪ್ರ-ಯುದ್ಧದಲ್ಲಿ ನಿನ್ನ ಉದ್ದೇಶವೇನು

ಉ-ಶತ್ರುಗಳನ್ನು ನಾಶ ಮಾಡುವುದು.

ಪ್ರ-ಯಾಕೆ?

ಉ-ಚಕ್ರವರ್ತಿಗಾಗಿ (ಇವನೂ ನೆಟ್ಟಗೆ ನಿಲ್ಲುವನು.)

ಪ್ರ-ಚಕ್ರವರ್ತಿಗಳು ಈ ಯುದ್ಧವನ್ನು ಯಾಕೆ ಮಾಡಿಸುತ್ತಾರೆ?

ಉ-ಶಾಶ್ವತ ಶಾಂತಿಗಾಗಿ.

ಪ್ರ-ಜಪಾನು ಗೆಲ್ಲುವುದೆ?

ಉ-ಹೌದು.

* * *

ನಂತರ ಪ್ರಶ್ನೋತ್ತರ ಓರ್ವ ಜಪಾನೀ ಡಾಕ್ಟರನೊಡನೆ ನಡೆಯಿತು;

ಪ್ರ-ಡಾಕ್ಟರರೇ ವೈದ್ಯಕೀಯ ವಿಚಾರವಾಗಿ ನೀವು ತುಂಬಾ ಓದಿದ್ದೀರಿ. ವೈದ್ಯಕೀಯ ಪ್ರಪಂಚದಲ್ಲಿ ಅಮೇರಿಕದ ಶ್ರೇಷ್ಠತೆ ಹೇಗೆ?

ಉ-ಅದು ಅತೀ ಮಹತ್ವದ್ದೆಂದು ಹೇಳಬಹುದು.

ಪ್ರ-ಅಮೇರಿಕನ್ ಮತ್ತು ಜಪಾನೀ ಡಾಕ್ಟರರುಗಳನ್ನು ಸಮ ಹೋಲಿಸಿದರೆ ಹೇಗೆ?

ಉ-ಜಪಾನಿ ಡಾಕ್ಟರರೇ ಪ್ರಥಮ ಶ್ರೇಣಿಯವರು.

ಪ್ರ-ಈ ಯುದ್ಧವನ್ನು ಯಾರು ಗೆಲ್ಲುವರು?

ಉ-ಜಪಾನೇ ಗೆಲ್ಲುವುದು.

ಪ್ರ-ಹಾಗಾದರೆ ಈಚೆಗೆ ನಿಮಗೆ ಸೋಲುಗಳಾಗುತ್ತಿವೆ ಏಕೆ?

ಉ-ನಮಗೆ ಸೋಲಾಗಲಿಲ್ಲ. ಸಮಯ ಬಂದಾಗ ನಾವು ಹೊಡೆದೇ ಬಿಡುತ್ತೇವೆ.

ಪ್ರ-ಸರಿಯಾದ ತತ್ವ ಯಾವುದು?

ಉ-ಚಕ್ರವರ್ತಿ ತತ್ವ.

ಪ್ರ-ಚಕ್ರವರ್ತಿಗಳು ಹೇಳಿದ್ದನ್ನು ಏನನ್ನಾದರೂ ನೀವು ಮಾಡಲು ಸಿದ್ಧರಿದ್ದೀರಾ?

ಉ-ಖಂಡಿತವಾಗಿ.

ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

ವನ್ಯ ಜಂತುಗಳ ವಿವೇಕ

ಯಜಮಾನನ ಪ್ರಾಣ ರಕ್ಷಿಸಿದ ಕರಡಿ

ಆಮೆಯ ಚತುರ ಉಪಾಯ

ಕಾಡುಬೆಕ್ಕಿನ ಭವಿಷ್ಯ ಸೂಚನೆ

ಜೇನುಗಳು ಗೂಡು ಕಟ್ಟುವುದು, ಚಿಟ್ಟೆ ಹುಳವು ಸಿಲ್ಕ್ ನೂಲನ್ನು ತಯಾರಿಸುವುದು-ಈ ಜೀವಿಗಳಲ್ಲಿ ಪ್ರಕೃತೀಯವಾಗಿ ಇರುವ ಸ್ವಾಭಾವ ಗುಣಗಳು ಇವೆಂದು ನಂಬಲಾಗಿದೆ. ಆದರೆ ಬಾಯಾರಿದ ಕಾಗೆಯು ಹೂಜಿಯೊಳಗಿನ ನೀರನ್ನು ಮೇಲಕ್ಕೆ ತರಲು ಕಲ್ಲುಗಳನ್ನು ಅದರಲ್ಲಿ ತುಂಬಿಸಿತೆಂಬ ಕತೆಯನ್ನು ಮಕ್ಕಳ ಪುಸ್ತಕದಲ್ಲಿ ಓದುತ್ತೇವೆಯಾದರೂ ಕೆಲವು ವಿಶೇಷ ಸಂದರ್ಭಗಳಲ್ಲಿ ವನ್ಯ ಜಂತುಗಳಲ್ಲೂ ಸೋಜಿಗಗೊಳಿಸುವ ಬುದ್ಧಿ ಚಾತುರ್ಯ ಕಂಡು ಬರುತ್ತದೆಂಬುದಕ್ಕೆ ಈ ಕೆಳಗಿನ ನಿಜವಾಗಿ ನಡೆದ ಘಟನೆಗಳನ್ನು ಓದಿದರೆ ತಿಳಿಯುವುದು.

ಚಿಕ್ಕ ಪ್ರಾಣಿ—ದೊಡ್ಡ ಪ್ರಾಣ ಉಳಿಸಿತು.

ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸ್ ಎಂಬಲ್ಲಿ ಮಿ। ಕೊಗ್ಲೆ ಎಂಬವರು ಕೊಲಾ ಎಂಬ (ಕರಡಿ ಮರಿಗಳಂತೆ ತೋರುವ) ಪ್ರಾಣಿಯೊಂದನ್ನು ಸಾಕಿದ್ದರು. ಒಂದು ಸಲ ಅವರು ಹತ್ತಿರದ ಪೊದರು ಪ್ರದೇಶಕ್ಕೆ ಸಂಚಾರಕ್ಕೆ ಹೋಗಿ ಮರುಳುವಾಗ ಅಲ್ಲಿನ ಪೊದರುಗಳಿಗೆಲ್ಲ ಬೆಂಕಿ ಹಿಡಿದಿದ್ದು ಪ್ರದೇಶವೆಲ್ಲವೂ ಭಯಂಕರ ಉಷ್ಣದಿಂದ ಬೇಯ ಹತ್ತಿತು. ಆಗ ಅವರ ಬಳಿಯಿದ್ದ ಆ ಕೋಲಾ ಎಂಬ ಚಿಕ್ಕ ಪ್ರಾಣಿಯು ಅತ್ತಿತ್ತ ಓಡಿ ಕಡೆಗೆ ತನ್ನ ಯಜಮಾನನ ಉಡುಪನ್ನು ಎಳೆ ಎಳೆದು ಒಂದು ದಿಕ್ಕಿಗೆ ಬರುವಂತೆ ಸೂಚಿಸಿತು. ಆ ಕಡೆಗೆ ಸ್ವಲ್ಪ ದೂರ ಹೋಗುವಾಗ ಒಂದು ಚಿಕ್ಕ ಸರೋವರ ಇತ್ತು. ಇವರು ಅದರಲ್ಲಿ ದುಮುಕಿ ಬೆಂಕಿಯು ಬೇಗೆ ಕಡಿಮೆಯಾಗುವ ತನಕ ಅಲ್ಲೇ ಉಳಿದರು. ಕ್ಲಪ್ತ ಕಾಲದಲ್ಲಿ ಆ ಪ್ರಾಣಿ ಸೂಚನೆ ಕೊಡದಿದ್ದರೆ ಅದರ ಯಜಮಾನನು ಬದುಕುತಿದ್ದಿಲ್ಲ.

ಓಟದಲ್ಲಿ ಉರುಳಿಸಿದ ಆವೆ.

ಕೆಲಿಫೊರ್ನಿಯದ ಒಂದು ಚಿಕ್ಕ ಅರಿಹೋದ ಮಡುವಿನ ಬಳಿ ಎರಡು ಆಮೆಗಳಿವೆ. ಎಲ್ಸ್‌ವರ್ತಜ್ಞಾನ್ ಎಂಬವರು ನಿತ್ಯವೂ ಅಲ್ಲಿ ಸಂಚಾರಕ್ಕೆ ಹೋಗುತಿದ್ದು ಆಮೆಗಳಿಗೆ ಏನಾದರೂ ತಿನ್ನಲಿಕ್ಕೆ ಕೊಡುತಿದ್ದರು. ಎಂದಿನಂತೆ ಒಂದು ದಿನ ಅವರು ಆಹಾರ ತೆಗೆದುಕೊಂಡು ಹೋಗಿದ್ದಾಗ ದೂರದಲ್ಲಿ ಬಿದ್ದುಕೊಂಡಿದ್ದ ಆಮೆಗಳು ಅವರೆಡೆಗೆ ಧಾವಿಸತೊಡಗಿದವು. ಎರಡೂ ಒಂದೇ ವೇಗದಲ್ಲಿ ಬರುತಿದ್ದವು. ಆಗ ಅವುಗಳಲ್ಲಿ ಬಲಗಡೆಯಲ್ಲಿದ್ದ ಒಂದು ಇನ್ನೊಂದಕ್ಕೆ ತನ್ನ ಕಾಲನ್ನು ಅಡ್ಡವಾಗಿ ಇಟ್ಟು ಬೀಳಿಸಿ ತಾನು ಆಹಾರದ ಸ್ಥಳಕ್ಕೆ ಬಂದು ಅದನ್ನು ಸಾವಧಾನವಾಗಿ ತಿನ್ನ ಹತ್ತಿತು. ಉರುಳಿದ ಆಮೆ ಪುನಃ ಸರಿಪಡಿಸಿ ಬರುವಾಗ ಮುಕ್ಕಾಲು ಪಾಲು ಆಹಾರವನ್ನು ಮೊದಲಿನ 'ಚಿಪ್ರಿಗನು' ತಿಂದು ಹಾಕಿದ್ದನು.

ಕಾಡು ಬೆಕ್ಕಿನ ಮರಿ ಪ್ರೇಮ.

ಅಮೇರಿಕದಲ್ಲಿ ಒಂದು ಸಲ ಎನಾನೀಲ್‌ಸನ್ ಎಂಬ ಮಹಿಳೆಯ ಮನೆಗೆ ಒಂದು ದಿನ ಬೆಳಿಗ್ಗೆ ಒಂದು ಬೆಕ್ಕು ಬಂತು. ಅದು ಒಂದು ಕಾಲದಲ್ಲಿ ಎಲ್ಲೋ ಮನೆಯಲ್ಲಿ ಸಾಕಿದ ಬೆಕ್ಕಾಗಿದ್ದು ಕೊನೆಗೆ ಆಹಾರ ಸೊಕ್ಕಿನಿಂದ ಕಾಡಿನಲ್ಲಿ ವಾಸಿಸುತಿತ್ತು. ಎನ್ನಾ ಮಹಿಳೆಯನ್ನು ದುರದುರುನೆ ನೋಡುತ್ತಾ ಬೆಕ್ಕು ಸ್ವಲ್ಪ ಮುಂದೆ ಹೋಯಿತು. ಮತ್ತೆ ಪುನಃ ಹಿಂದಕ್ಕೆ ಬಂದು ಮಿಯೊಂ ಎಂದು ಕೂಗುತ್ತಾ ಪುನಃ ನೋಡುವುದು. ಪುನಃ ಹೋದಂತೆ ಮಾಡುವುದು. ಎನ್ನಾಳು ಅದನ್ನು ಹಿಂಬಾಲಿಸಿದಳು. ಆಗ ಹಿಂದಕ್ಕೆ ತಿರುಗಿ ನೋಡುತ್ತಾ ಬೆಕ್ಕು ದಾರಿ ಸಾಗಿತು. ಸ್ವಲ್ಪ ದೂರದ ಹೊಲ ಪ್ರದೇಶದಲ್ಲಿ ಹಾಳು ಬಿದ್ದ ಒಂದು ಗುಡಿಸಲಿನ ಬಳಿ ಬೆಕ್ಕು ನಿಂತು ಕೆಲವು ಕ್ಷಣದ ಮೇಲೆ ಅದನ್ನು ಹೊಕ್ಕಿತು. ಅಲ್ಲಿ ನೋಡಲು ಆಗ ತಾನೇ ಇಕ್ಕಿದ ಕೆಲವು ಮರಿಗಳಿದ್ದವು. ಮರಿಗಳನ್ನು ಬಹಳ ಜಾಗ್ರತೆಯಿಂದ ಅಡಗಿಸಿಡುವ ಬೆಕ್ಕಿನ ಈ ವರ್ತನೆ ಮೊದಲು ಆ ಮಹಿಳೆಗೆ ಅರ್ಥವಾಗಲಿಲ್ಲ. ಮರುದಿನ ಪುನಃ ಅದೇ ಸ್ಥಳಕ್ಕೆ ಹೋದಾಗ ತಾಯಿ ಬೆಕ್ಕು ಮಡಿದು ಹೋಗಿ ಬಿದ್ದು ಕೊಂಡಿತ್ತು. ಮರುದಿನ ತಾನು ಸಾಯುವೆನೆಂದು ಅದಕ್ಕೆ ಹೇಗೆ ತಿಳಿಯಿತೋ! ಆದರೂ ತನ್ನ ಮರಿಗಳ ರಕ್ಷಣೆಯ ಭಾರವನ್ನು ಅದು ಓರ್ವ ದಯಾಳು ಮಹಿಳೆಗೆ ವಹಿಸಿ ಕೊಟ್ಟ ರೀತಿಯು ಕೌತುಕವನ್ನುಂಟು ಮಾಡದಿರದು.

ವ್ಯಾಸ್‌ರಾಯ್ ವೆವೆಲ್ಲರಿಗೂ ರಶ್ಯಕ್ಕೂ ನಿಕಟ ಸಂಬಂಧವಿದೆ. ಅವರಿಗೆ ರಶ್ಯನ್ ಭಾಷೆಯು ಸ್ಪಷ್ಟವಾಗಿ ಬರುತ್ತದೆ. ರಶ್ಯಕ್ಕೆ ಅವರು ಸೈನ್ಯ ರಾಯಭಾರದ ಪ್ರತಿನಿಧಿಗಳಾಗಿ ಹೋಗಿದ್ದರು. ರಶ್ಯದಲ್ಲಿ ಒಂದು ಸೈನ್ಯ ಕವಾಯತು ಪ್ರದರ್ಶನ ನೋಡುತಿದ್ದಾಗ ಒಂದು ಗುರಿ ತಪ್ಪಿದ ಗುಂಡಿನಿಂದ ಅವರ ಕಣ್ಣೊಂದು ನಷ್ಟವಾಗಿ ಹೋಯಿತು. ಬ್ರಿಟಿಷ್ ಸೇನಾಪತಿಗಳಲ್ಲಿ ಜರ್ಮನರಿಂದ ಅತಿಯಾಗಿ ಹೆದರಲ್ಪಡುವವರೆಂದರೆ ವೆವೆಲ್ಲರು.

* * *

ಸಿಹಿ ಸುದ್ದಿ ಸಂಗ್ರಹ

೧೫ನೇ ಶತಮಾನದ ಯುರೋಪಿನಲ್ಲಿ "ಹುಚ್ಚರ ಹಬ್ಬ"ವನ್ನು ಎಪ್ರಿಲ್ ತಿಂಗಳಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸುತಿದ್ದರು. ಯೇಸುಕ್ರಿಸ್ತನು ಸವಾರಿಮಾಡಿದ ಕತ್ತೆಯ ಗೌರವಾರ್ಥವಾಗೆಂದು ಅದು ಆಚರಿಸಲ್ಪಡುತಿತ್ತು.

* * *

ಮಾರ್ಚ್-ಎಪ್ರಿಲ್ ತಿಂಗಳಲ್ಲಿ ಹಿಂದೂಗಳ ಹೊಸ ವರ್ಷಾರಂಭ ಬರುತ್ತದೆ. ೧೫೬೪ರ ತನಕ ಫ್ರಾನ್ಸಿನಲ್ಲಿ ಎಪ್ರಿಲ್ ೧ನೇ ತಾರೀಕಿಗೇ ಹೊಸ ವರ್ಷಾವನ್ನಾರಂಭಿಸುವ ಕ್ರಮವಿತ್ತು. ಈಗಲೂ ಬ್ರಿಟಿಷ್ ಇಂಡಿಯಾದಲ್ಲಿ ಸರಕಾರದ ಆಯವ್ಯಯದ ವರ್ಷವು ಎಪ್ರಿಲ್ ಒಂದರಿಂದಲೇ ಆರಂಭವಾಗುತ್ತದೆ.

* * *

ನೆಲಗಡಲೆಗೆ ಐರೋಪ್ಯರು 'ಮಂಗಕಾಯಿ' ಎನ್ನುತ್ತಾರೆ. ಇದು ಬ್ರಿಟಿಷ್ ವಸಾಹತುಗಳಲ್ಲೂ ಅಮೇರಿಕದಲ್ಲೂ ಬೆಳೆಯುತ್ತದೆ. ಕಳೆದ ವರ್ಷ ಇಲ್ಲಿ ಒಟ್ಟು ೩೨ ಮಿಲಿಯ ಖಂಡಿ ನೆಲಗಡಲೆಯಾಯಿತು. ಇದರ ಎಣ್ಣೆಯನ್ನು ತಿನ್ನಲಿಕ್ಕೂ ಸಾಬೂನಿಗೂ, ಯಂತ್ರಗಳಿಗೂ ಉಪಯೋಗಿಸುವರು.

* * *

ನೆಲಗಡಲೆಯಿಂದ ಎಡ್ರಿಲ್ ಎಂಬ ರಾಸಾಯನಿಕ ಕೃತಕ ದಾರಗಳನ್ನು ತೆಗೆದು ಉಣ್ಣೆ, ಹತ್ತಿ ನೂಲಿನೊಂದಿಗೆ ಬೆರಸಿ ಬಟ್ಟೆ ಮಾಡುತ್ತಾರೆ. ಇಂತಹ ಬಟ್ಟೆಗಳು ಹುಳಗಳಿಂದ ತಿನ್ನಲ್ಪಡುವುದಿಲ್ಲ, ಎಣ್ಣೆಗಿಂತಲೂ ಬೆಚ್ಚಗಿರುತ್ತವೆ, ಮಾತ್ರವಲ್ಲ ನೆರಿಬಿದ್ದು ಮುದಚಿಹೋಗುವುದಿಲ್ಲ.

* * *

ಎಸೆಂಬ್ಲಿ ಚರ್ಚೆಯ ವರದಿಗಳಲ್ಲಿ ಮನುಸುಬೇದಾರರ ಹೆಸರನ್ನು ನಾವು ಪದೇ ಪದೇ ಕೇಳುತ್ತಿರುತ್ತೇವೆ. ಇವರು ಈಗ ಬೊಂಬಾಯಿಯ ದೊಡ್ಡ ಶ್ರೀಮಂತರಾಗಿದ್ದು ಅನೇಕ ವ್ಯಾಪಾರ, ಕೈಗಾರಿಕೆ ಸಂಸ್ಥೆಗಳ ಚಾಲಕರಾಗಿದ್ದಾರೆ. ಪ್ರಾಯ ೫೪. ೨೩ ವಯಸ್ಸಿನಲ್ಲಿ ವಿಲಾಯತಿಯಲ್ಲಿ ವಕಾಲತು ಪಾಸುಮಾಡಿ, ೨೬ ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರೊಫೆಸರರಾಗಿದ್ದರು. ಸುಗಂಧಮಿಶ್ರಿತ ಅಡಿಕೆ ವೀಳ್ಯದೆಲೆ ತಿನ್ನುವುದೆಂದರೆ ಸುಭೇದಾರರಿಗೆ ತುಂಬಾ ಪ್ರೀತಿ. ಯುರೋಪು ಸಂಚಾರಕ್ಕೆ ಹೋಗುವಾಗಲೂ ಒಂದು ಪೆಟ್ಟಿಗೆ ತುಂಬಾ ತಾಂಬೂಲವನ್ನು ಒಯ್ಯುವರು. ಇವರ ಇಂಗ್ಲಿಷ್ ಭಾಷಣ ಮತ್ತು ಲೇಖನ ವೈಖರಿಯು ಬಹಳ ಶ್ರೇಷ್ಠ ತರಗತಿಯದು. ಇವರು ಭಗವತ್ ಗೀತೆಯ ಅರ್ಥ ಭಾಷಾಂತರವನ್ನು ಅದ್ಭುತ ಶೈಲಿಯಲ್ಲಿ ಬರೆದಿದ್ದಾರೆ.

* * *

ಪಂಡಿತ ನೆಹರುಗಳು ತಮ್ಮ ಬಂಧನ ಅವಧಿಯಲ್ಲಿ ೧೧೦೦ ಪುಸ್ತಕಗಳನ್ನು ಓದಲು ಸಂಗ್ರಹಿಸಿ ಇಟ್ಟಿರುವರು. ಅಜಾದ ಬಳಿ ೮೦೦ ಇವೆ.

* * *

ಅಮೇರಿಕ ಖಂಡವು ಕಂಡು ಹಿಡಿಯಲ್ಪಟ್ಟಾಗ ಅಲ್ಲಿಯ ಮೂಲ ನಿವಾಸಿಗಳಾದ ರೆಡ್ ಇಂಡಿಯಾನರ ಬಳಿ ವಿಪುಲವಾದ ಬಂಗಾರ ಗಟ್ಟಿಗಳಿದ್ದವು. ಅವರಿಗೆ ಅದರ ಬೆಲೆ ತಿಳಿದಿರಲಿಲ್ಲ. ಮತ್ತೆ ಅಲ್ಲಿ ನೆಲೆ ನಿಲ್ಲಲು ಬಂದ ಸ್ಪೆನೀಶ್ ಜನರು ಅದರ ಬೆಲೆ ಏರಿಸಿದರು.

* * *

ಒಂದು ಕಾಲದಲ್ಲಿ ದಕ್ಷಿಣ ಆಫ್ರಿಕದ ನಿಗ್ರೊ ಮೂಲ ನಿವಾಸಿಗಳ ಹತ್ತಿರ ಅಸಂಖ್ಯಾತ ವಜ್ರಗಳಿದ್ದವು. ಅವರು ಅದನ್ನು ಹಕ್ಕಿಗಳಿಗೆ ಕಾಳುಗಳಂತೆ ಎಸೆಯುತ್ತಿದ್ದರು. ಮತ್ತು ಹಗ್ಗದ ಕವಣೆಗಳಲ್ಲಿಟ್ಟು ಹಕ್ಕಿಗಳಿಗೆ ಹೊಡೆಯಲು ಉಪಯೋಗಿಸುತಿದ್ದರಂತೆ. ಬಿಳಿ ಜನರು ಬಂದ ಮೇಲೆ ಅವುಗಳ ಮೌಲ್ಯ ಏರಿತು.

* * *

ಬಂಗಾಲದಲ್ಲಿ ವರ್ಷಕ್ಕೆ ಸುಮಾರು ೪ ಲಕ್ಷ ಜನರು ಮಲೇರಿಯಾದಿಂದ ಸಾಯುತ್ತಾರೆ. ಒಂದು ವರ್ಷ ೫ ಸಾವಿರ ಜನರು ಅಲ್ಲಿ ಕಾಡು ಮೃಗಗಳಿಂದ ಕೊಲ್ಲಲ್ಪಟ್ಟಿದ್ದಾರೆ.

* * *

ಕಳೆದ ಯುದ್ಧದಲ್ಲಿ ಮಡಿದವರ ಸಂಖ್ಯೆ ೧ ಕೋಟಿ. ಆ ಮಹಾಯುದ್ಧದ ಪರಿಣಾಮವಾಗಿ ಆನಂತರ ಉಂಟಾದ ವಿಷಮ ಜ್ವರದ ಹಾವಳಿಯಿಂದ ಮತ್ತೆ ೧ ಕೋಟಿ ಜನರು ಯುರೋಪಿನಲ್ಲಿ ಮೃತಪಟ್ಟರು.

ವಿಜಯ ಲಕ್ಷ್ಮಿಯರು ಫ್ರಿಸ್ಕೊಗೆ

ಭಾರತ ಪ್ರಚಾರಿಣಿಯ ಸಾಹಸ ಅಮೇರಿಕನ್ನರಿಗೆ ಮಾರ್ಗದರ್ಶಿಗಳಾದರು.

ರಾಷ್ಟ್ರೀಯ ವಾದಿ ಭಾರತದ ಕಡೆಯಿಂದ ಅಮೇರಿಕನ್ನರಿಗೆ ಈ ದೇಶದ ಸತ್ಯ ಸ್ಥಿತಿ ಸಾರುತ್ತಿರುವ ವಿಜಯ ಲಕ್ಷ್ಮಿ ಪಂಡಿತರು ಆ ದೇಶದ ಪ್ರಗತಿಶೀಲ ಭಾವನೆಯ ಜನತೆಯ ಮೇಲೆ ಪ್ರಚಂಡ ಪರಿಣಾಮ ಮಾಡಿರುವರು. ಫ್ರಿಸ್ಕೊ ಪರಿಷತ್ತಿನ ಸಮಯಕ್ಕೆ ಶ್ರೀಮತಿಯವರ ಭಾಷಣಗಳು ಸೆನ್ ಫ್ರೆನ್ಸಿಸ್ಕೊ ನಗರದಲ್ಲಿ ಏರ್ಪಡಿಸಲಾಗಿದೆ. ಆದರೆ ಸಮಯದಲ್ಲಿ ಅವರಿಗೆ ಅಲ್ಲಿಗೆ ಹೋಗಲು ರೈಲು ಸೌಕರ್ಯಗಳು ಕೊಡಲಾಗುವುದಿಲ್ಲವೆಂದು ತಿಳಿಸಲಾಗಿದೆ. ಕಾರಣ ಆ ಸಮಯದ ರೈಲುಗಳು ಫ್ರಿಸ್ಕೊ ಪರಿಷತ್ತಿಗೆ ಸಂಬಂಧಿಸಿದ ಸರಕಾರ ಪಕ್ಷದವರಿಗೆ ಮೀಸಲಾಗಿಡಲಾಗಿವೆ ಆದರೂ ಧೀರೆಯಾದ ಆ ನೆಹರು ಭಗಿನಿಯು ಮೋಟಾರು ಬಸ್ ಮಾರ್ಗವಾಗಿ ಅಲ್ಲಿಗೆ ತಲ್ಪುವರು.

ಭಾರತದ ಸ್ಥಿತಿಗತಿಗಳನ್ನು ಆಶೆ ಆಕಾಂಕ್ಷೆಗಳನ್ನು ವಿವರಿಸಿ ಶ್ರೀಮತಿ ಪಂಡಿತರು ಒಂದು ಸಣ್ಣ ಪುಸ್ತಕವನ್ನು ಅಚ್ಚು ಮಾಡಿಸಿ ಫ್ರಿಸ್ಕೊ ಪರಿಷತ್ತಿನ ಪ್ರತಿನಿಧಿಗಳಿಗೆಲ್ಲ ಹಂಚುವರಂತೆ.

ನೂರು ವರ್ಷದ ರೂಢಿ ಮುರಿದರು.

ಬಾಲ್ಟಿಮೊರ್ ನಗರದಲ್ಲಿ ವಿಜಯ ಲಕ್ಷ್ಮಿ ಅವರಿಗೆ ಅಭೂತಪೂರ್ವ ಸ್ವಾಗತ ಕೊಡಲಾಯಿತು. ಅಲ್ಲಿಯ ಪೌರಸಭಾಧ್ಯಕ್ಷರು ಅವರಿಗೆ ಭಿನ್ನವತ್ತಳೆಯನ್ನರ್ಪಿಸಿದರು. ಒಂದು ದೊಡ್ಡ ಸಾರ್ವಜನಿಕ ಸಭಾ ಮಂದಿರದಲ್ಲಿ ಅವರ ಭಾಷಣವೇರ್ಪಡಿಸಲ್ಪಟ್ಟಿತು. ಆದರೆ ಇಂದಿಗೆ ನೂರು ವರ್ಷಗಳಿಂದ ಆ ಸಭಾ ಮಂದಿರದೊಳಗೆ ನಿಗ್ರೋ ನಾಗರೀಕರಿಗೆ ಮಾತ್ರ ಪ್ರವೇಶವಿದ್ದಿಲ್ಲ. ಶ್ರೀಮತಿ ಪಂಡಿತರು ತಮ್ಮ ಭಾಷಣಕ್ಕೆ ನಿಗ್ರೋಗಳಿಗೂ ಬರಮಾಡಬೇಕೆಂದು ವಿನಂತಿ ಮಾಡಿಕೊಂಡಾಗ ವಿಶಾಲ ಹೃದಯದಿಂದ ಪುರಪ್ರಮುಖರು ತಮ್ಮ ಗೌರವನ್ನೀಯ ಭಾರತೀಯ ಅತಿಥಿಯ ಮಾತನ್ನು ಮನ್ನಿಸಿದರು. ನಿಗ್ರೊಗಳು ಅಂದು ಬಹು ಸಂಖ್ಯೆಯಲ್ಲಿ ನೆರೆದಿದ್ದು ಅತ್ಯಾತುರತೆಯಿಂದ ಅವರ ಭಾಷಣವನ್ನು ಕೇಳಿದರು.

ಒಳ್ಳೆಯದು ಕೆಲವೇ ಇದ್ದರೆ ಸಾಕು.

ಸ್ಕಾಟರಿಗೆ ವ್ಯಾಸ್‌ರಾಯರ ಸಲಹೆ.

ಗಾಂಧೀಜಿಯವರ ಅಭಿಪ್ರಾಯವು ಇದೇ.

ಡಿಲ್ಲಿಯ ಸ್ಕಾಟು ಸಮಾರಂಭವೊಂದರಲ್ಲಿ ಭಾಗವಹಿಸಿದ ಹಂಗಾಮಿ ವೈಸರಾಯರಾದ ಸರ್ ಜೋನ್‌ಕೊಲ್‌ವಿಲ್ಲರು ಭಾರತದಲ್ಲಿ ಸ್ಕಾಟು ಚಳವಳಕ್ಕಾಗಿ ತುಂಬಾ ಶ್ರಮಿಸಿದ ಸರ್ ತೇಜ್ ಬಹದ್ದೂರ್ ಸಪ್ರೂ ಮೊದಲಾದವರ ಸೇವೆಯನ್ನು ಶ್ಲಾಘಿಸಿದರು.

ಈ ಸಂದಂರ್ಭದಲ್ಲಿ ಮಾನ್ಯ ವ್ಯಾಸ್‌ರಾಯರು ಸ್ಕಾಟರನ್ನು ಉದ್ದೇಶಿಸಿ: "ಸಂಖ್ಯೆಯಿಂದ ಯಾವ ಸಾರ್ಥಕತೆಯೂ ಆಗದು. ಯೋಗ್ಯರೂ ಒಳ್ಳೆಯವರೂ ಶ್ರದ್ಧಾಳುಗಳೂ ಆದ ಹತ್ತು ಮಂದಿ ಸ್ಕಾಟರು ಹಾಗಿಲ್ಲದ ಸಾವಿರ ಮಂದಿಗಳಿಗೆ ಸಮಾನರು" ಎಂದು ಸ್ಕಾಟ್ ಧ್ಯೇಯಗಳನ್ನು ವಿವರಿಸಿದರು.

ಮಹಾತ್ಮ ಗಾಂಧಿಯವರು ರಚನಾತ್ಮಕ ಕಾರ್ಯಕ್ರಮ ಕುರಿತು ಹಿಂದೆ: "ಭಾರತದಲ್ಲಿ ಏಳು ಲಕ್ಷ ಹಳ್ಳಿಗಳಿದ್ದರೂ, ಸರಿಯಾದ ಕೆಲಸವು ಮೊದಲು ಒಂದೇ ಹಳ್ಳಿಯಲ್ಲಿ ಪರಿಪೂರ್ಣವಾಗಿ ಆದರೆ ನನಗೆ ಅಷ್ಟೇ ಸಂತೋಷ" ಎಂದ ಮಾತುಗಳು ಅನೇಕರಿಗೆ ನೆನಪಿಗೆ ಬಾರದಿರವು.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ವೊಡಿಮೆ ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಬಾ, ಮದರಾಸು, ಕಲ್ಕತ್ರ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 20—4—1945 [ಸಂಚಿಕೆ 16]

ಕ್ರಾಂತಿಕಾರ ವೀರ ಸಾವರ್‌ಕರ್

ಲಂಡನಿನಲ್ಲಿ ಭಾರತೀಯ ತರುಣರು

ಸಮುದ್ರದಲ್ಲಿ ದುಮುಕಿದ ಸಾಹಸಿ ಬ್ಯಾರಿಸ್ಟರ್

ಡಾ। ರಾಜನ್‌ರು ಕ್ರಾಂತಿಕಾರ ಕೂಟದಲ್ಲಿ

೧೯೦೮ರಲ್ಲಿ ಸರ್ ಕರ್ಜನ್ ವ್ಯಾಲಿ ಎಂಬ ಬ್ರಿಟಿಷ್ ಆಡಳಿತಗಾರರೊಬ್ಬರನ್ನು ಕೊಂದುದಕ್ಕಾಗಿ ಮದನ್‌ಲಾಲ್ ಧಿಂಗ್ರಾ ಎಂಬ ಕ್ಷತ್ರಿಯ ಯುವಕನನ್ನು ಗಲ್ಲಿಗೇರಿಸಲಾಯಿತು. ಆ ಸಮಯದಲ್ಲಿ ಲಂಡನಿನಲ್ಲಿ ಕೆಲವು ಸಾಹಸಿ ಭಾರತೀಯ ತರುಣರು ವಿಧ್ಯಾಭ್ಯಾಸ ಮಾಡಿಕೊಂಡಿದ್ದರು. ಇವರಲ್ಲಿ ಅಗ್ರಗಣ್ಯರಾದವರೆಂದರೆ ವಿ. ಎಸ್. ಎಸ್. ಅಯ್ಯರರು ಮತ್ತು ವಿನಾಯಕ್ ಸಾವರಕರರು. ಇವರು 'ಸ್ವತಂತ್ರ ಭಾರತ ಸಂಘ' ಎಂಬ ಕೂಟವೊಂದನ್ನು ಸ್ಥಾಪಿಸಿ ಭಾರತದ ಪರವಾಗಿ ಲೇಖನ ಭಾಷಣಗಳ ಮೂಲಕ ಪ್ರಚಾರ ಮಾಡುತಿದ್ದರು.

ಮೇಲಿನ ಕೊಲೆ ಪ್ರಕರಣದ ನಂತರ ಅಯ್ಯರರ ಕೂಟದ ಮೇಲೆ ಇಂಗ್ಲೆಂಡಿನ ಗುಪ್ತ ಪೋಲೀಸ ಖಾತೆಯವರಾದ ಸ್ಕೊಟ್ಲೆಂಡ್‌ಯಾರ್ಡಿನವರು ರಾತ್ರೆ ಹಗಲು ಕಣ್ಣಿಟ್ಟುಕೊಂಡಿದ್ದರು. ವಿ. ಎಸ್. ಎಸ್. ಅಯ್ಯರರ ನಿರ್ದೇಶತ್ವದಲ್ಲಿ ಅನೇಕ ಭಾರತೀಯ ತರುಣರು ಲಂಡನಿನಲ್ಲಿ ಕ್ರಾಂತಿ ಪಾಠ ಕಲಿತರು. ಮದ್ರಾಸಿನ ಮಾಜಿ ಕೋಂಗ್ರೆಸ್ ಮಂತ್ರಿಗಳಾಗಿದ್ದ ಡಾ. ಟಿ. ಎಸ್. ಎಸ್. ರಾಜನ್ ಅವರು ಆಗ ಅಲ್ಲಿ ಉಚ್ಛ ವೈದ್ಯ ಶಿಕ್ಷಣ ಪಡೆಯುತಿದ್ದು ಅಯ್ಯರರ ಸ್ಫೂರ್ತಿದಾಯಕ ಕೂಟಕ್ಕೆ ಅವರೂ ಸೇರಿಕೊಂಡು ತನ್ನಿಂದಾದಷ್ಟು ಕೆಲಸಮಾಡುತಿದ್ದರು. ವೀರ ಸಾವರ್‌ಕರರು ಆಗ ಬ್ಯಾರಿಸ್ಟರ್ ಆಗಲು ವಕಾಲತು ಅಭ್ಯಾಸ ಮಾಡುತಿದ್ದರು. ಶಿವಾಜಿಯ ಜನಾಂಗಕ್ಕೆ ಸೇರಿದವರಾದ ಅವರಿಗೂ ಅಯ್ಯರರಿಗೂ ಪರಸ್ಪರ ಸ್ನೇಹ ಬೆಳೆಯಲು ಹೆಚ್ಚುಸಮಯ ಹಿಡಿಯಲಿಲ್ಲ.

ಹೀಗಿರುವಾಗ ೧೯೧೦ರ ಸುಮಾರಿಗೆ ನಾಸಿಕದಲ್ಲಿ ಜೆಕ್ಸನ್ ಎಂಬ ಐ.ಸಿ.ಎಸ್. ಅಧಿಕಾರಿಯೊಬ್ಬರ ಕೊಲೆಯಾಯಿತು. ಪೋಲೀಸ್ ಪರಿಶೋಧನೆ ನಡೆದಾಗ ಲಂಡನಿನಲ್ಲಿರುವ ಸಾವರಕರ್ ಎಂಬ ತರುಣನು ನಾಸಿಕದಲ್ಲಿ ಜೆಕ್ಸನನ್ನು ಹೊಡೆದ ತರುಣನಿಗೆ ಒಂದು ಪಿಸ್ತೂಲನ್ನು ಕಳುಹಿಸಿಕೊಟ್ಟಿರುವುದಾಗಿ . ಕಂಡುಹಿಡಿಯಲಾಯಿತು. ಸರಿ, ಮೊದಲೇ ಗುಪ್ತ ಪೋಲೀಸರಿಂದ ಕಣ್ಣಿಡಲ್ಪಟ್ಟ ಅಯ್ಯರರ ಸ್ವತಂತ್ರ ಭಾರತ ಸಂಘದ ಮೇಲೆ ಲಂಡನ್ ಪೋಲಿಸ್ ಅಧಿಕಾರಿಗಳು ರೇಗಿಕೊಂಡರು.

ಸಾವರಕರರ ಮೇಲೆ ಒಂದು ವಾರಂಟು ಜಾರಿ ಮಾಡಲ್ಪಟ್ಟಿತು. ಆದರೆ ಅಷ್ಟರಲ್ಲಿ ಅವರು ಪೆರಿಸಿಗೆ ನುಸುಳಿಕೊಂಡಿದ್ದರು. ಪೆರಿಸಿನಲ್ಲೂ ಲಂಡನ್ ಸಿ. ಐ. ಡಿ. ಗಳು ಅವರನ್ನು ನೆರಳಿನಂತೆ ಹಿಂಬಾಲಿಸುತಿದ್ದರು. ವಾರಂಟಿನ ಸಂಗತಿ ಮಾತ್ರ ಅಯ್ಯರ ಕೂಟದವರಿಗಾರಿಗೂ ತಿಳಿದಿರಲಿಲ್ಲ. ಸಾವರಕರರಿಗೂ ಇದು ಗೊತ್ತಿರಲಿಲ್ಲ. ಒಂದು ದಿನ ಅಯ್ಯರರು ಸಾವರಕರರಿಗೆ ಲಂಡನಿಗೆ ಬರಲು ತಂತಿ ಮಾಡಿದಂತೆ ಅವರು ಹೊರಟು ಬಂದು ಇಂಗ್ಲೆಂಡಿನ ತೀರದಲ್ಲಿಳಿದೊಡನೆ ಕೈದು ಮಾಡಲ್ಪಟ್ಟರು.

ಸಾವರಕರರ ಬಂಧನದಿಂದ ಲಂಡನಿನ ಭಾರತೀಯ ತರುಣರಲ್ಲಿ ವಿಪರೀತ ಕ್ರೋಧ ಕಳವಳಗಳುಂಟಾದುವು. ಹೇಗಾದರೂ ಅವರನ್ನು ಬಿಡಿಸಬೇಕೆಂದು ಅಯ್ಯರರು ನಿರ್ಧರಿಸಿಕೊಂಡರು. ಅಯ್ಯರ ಕೂಟದ ಚಟುವಟಿಕೆಗಳನ್ನುಗುಪ್ತ ಪೋಲೀಸರು ಹೆಚ್ಚಿನ ಕಾವಲಿಟ್ಟು ಪರಾಮರ್ಶಿಸ ತೊಡಗಿದರು.

ಈ ಸಮಯದಲ್ಲಿ ಮೆಡೆಮ್ ಕಾಮಾ ಎಂಬ ಓರ್ವ ಬೊಂಬಾಯಿ ಪಾರ್ಸಿ ಶ್ರೀಮಂತನ ಪತ್ನಿಯು ಲಂಡನಿನಲ್ಲಿ ವಾಸಿಸುತಿದ್ದಳು. ಇವಳು ಭಾರತ ಸ್ವಾತಂತ್ರ್ಯಕ್ಕಾಗಿ ತುಂಬಾ ಹಾತೊರೆಯುತಿದ್ದವರಲ್ಲಿ ಓರ್ವಳಾಗಿದ್ದಳು. ಅಂದ ಮೇಲೆ ಅಯ್ಯರ ಕೂಟದ ಸಂಪರ್ಕವು ಅವಳಿಗೆ ಬಹು ಬೇಗನೇ ಉಂಟಾಯಿತು. ಸಾವರಕರರನ್ನು ಬಿಡಿಸಲು ಪರ್ಯಾಲೋಚಿಸಿದವರಲ್ಲಿ ಇವಳೂ ಒಬ್ಬಳು. ಕಡೆಗೆ ಅಯ್ಯರರೂ ಕಾಮಾ ಮಹಿಳೆಯೂ ಒಂದು ಉಪಾಯವನ್ನು ಹುಡುಕಿ ಈರ್ವರೂ ಪೆರಿಸಿಗೆ ತೆರಳಿದರು.

ಪೆರಿಸಿಗೆ ಹೋಗಲು ಕಾರಣವೇನು? ಸಾವರಕರರು ಜೇಕ್ಸನ್ ಕೊಲೆಗಾಗಿ ಪಿಸ್ತೂಲು ಕಳುಹಿಸಿಕೊಟ್ಟ ಸಂಗತಿಯನ್ನು ಪೂರ್ಣ ವಿಚಾರಣೆ ಮಾಡುವುದಕ್ಕಾಗಿ ಅವರನ್ನು ಭಾರತಕ್ಕೆ ಕಳುಹಿಸುವುದೆಂದಾಯಿತು. ಲಂಡನಿನಿಂದ ಭಾರತಕ್ಕೆ ಹೊರಟ ಸ್ಟೀಮರು ಭೂಮಧ್ಯ ಸಮುದ್ರದಲ್ಲಿರುವ ಫ್ರಾನ್ಸಿನ ಮರ್ಸೆಲಿಸ್ ಬಂದರದಲ್ಲಿ ಕೆಲಹೊತ್ತು ನಿಲ್ಲುವುದೆಂದು ಅಯ್ಯರರಿಗೂ ಸಾವರಕರರಿಗೂ ಗೊತ್ತಿತ್ತು.

ಹಡಗವು ಮಾರ್ಸೆಲಿಸ್ ಬಂದರಕ್ಕೆ ಮುಟ್ಟಿದಾಗ ಇನ್ನೂ ಸೂರ್ಯೋದಯವಾಗಿರಲಿಲ್ಲ. ಶಸ್ತ್ರಧಾರಿಗಳಾದ ಇಂಗ್ಲಿಷ್ ಪೋಲೀಸರ ಪಹರೆಯಲ್ಲಿ ಸಾವರಕರರು ಆ ಹಡಗದಲ್ಲಿರಿಸಲ್ಪಟ್ಟಿದ್ದರು. ಅಂದು ಅವರು ತನಗೆ ನಿತ್ಯದ ಅಭ್ಯಾಸದಂತೆ ಸ್ನಾನ ಮಾಡಲು ಬಿಡಬೇಕೆಂದು ಕೇಳಿಕೊಂಡಾಗ ಈರ್ವರು ಗಾರ್ಡುಗಳು ಅವರನ್ನು ಹಡಗಿನ ಸ್ನಾನ ಗೃಹಕ್ಕೆ ಒಯ್ದು ಒಳಗೆ ಬಿಟ್ಟರು.

ಹಡಗಿನ ಪ್ರತಿಯೊಂದು ಕೋಣೆಗಿರುವಂತೆ ಸ್ನಾನದ ಕೋಣೆಗೂ ಉರುಟಾದ ಒಂದು ಗಾಳಿ ಕಿಟಿಕಿ ಇತ್ತು. ತರುಣ ಸಾವರಕರರಿಗೆ ಅದರಷ್ಟು ಹೆಚ್ಚಿನ ಆಕರ್ಷಣ ಬೇರೆ ಬೇಕಾಗಿರಲಿಲ್ಲ. ಇನ್ನು ಕೆಳಗೆ ದುಮುಕುವುದೇ ಖಂಡಿತ. ಎಲ್ಲಾ ಉಡುಪನ್ನು ಅಲ್ಲೆ ತೆಗೆದಿಟ್ಟು ಒಂದು ಕೌಪೀನದಂತಹ ಗಿಡ್ಡದಾದ ಒಳ ಚಲ್ಲಣವನ್ನು ಮಾತ್ರ ಧರಿಸಿ ಉಳಿದರೆ ಬಾಳಬೇಕು, ಸತ್ತರೆ ಸ್ವರ್ಗವೆಂದು ಸಾಹಸಿ ಬ್ಯಾರಿಸ್ಟಾರರು ದುಮುಕಿಯೇ ಬಿಟ್ಟರು. ಹಡಗ ಸ್ಥಳದಿಂದ ದಂಡೆಗೆ ಸ್ವಲ್ಪ ದೂರವಿತ್ತು. ಅಂದು ಸಮುದ್ರವೂ ಸ್ವಲ್ಪ ಬಿರುಸಾಗಿಯೇ ಇತ್ತು. ಆದರೆ ಮರಾಠಿ ವೀರನಿಗೆ ಅದೇನು ದೊಡ್ಡತೊಡಕಿನದಲ್ಲ.

ಅರೆಬತ್ತಲೆ ಈಜುತ್ತಿರುವ ಓರ್ವ ವ್ಯಕ್ತಿಯನ್ನು ಹಡಗದ ಮೇಲೆ ಗಾಳಿ ಸೇವನೆಗೆ ನಿಂತಿದ್ದ ಈರ್ವ ದಂಪತಿಗಳು ನೋಡಿ ತಮಾಷೆಯಾಗಿ ಮಾತನಾಡಿಕೊಳ್ಳುತಿದ್ದರು. ಇತ್ತ ಸ್ನಾನ ಕೋಣೆಯ ಹೊರನಿಂತ ಕಾವಲುಗಾರರು 'ಪಸಲ್' ಎಂಬ ಶಬ್ದವನ್ನು ಕೇಳಿ ಏನೋ ವಿಪರೀತವಿರಬೇಕೆಂದು ಸಂದೇಹಪಟ್ಟರು. ಬಾಗಿಲು ಬಡಿದಾಗ ಉತ್ತರವಿಲ್ಲ. ಇನ್ನೊಂದು ಕಡೆಯಿಂದ ಯಾರೋ ಸಮುದ್ರದಲ್ಲಿ ಈಜಾಡಿ ಹೋಗುತ್ತಿರುವ ಸುದ್ದಿಯು ಬಂದೊಡನೆ ಪಹರೆಯವರಿಗೆ ಮತ್ತೆ ಸಂಶಯವಾಗಲಿಲ್ಲ—ಅವನು ಸಾವರ್‌ಕರನೇ ಇರಬೇಕೆಂದು ಅವರು ದೊಪ್ಪನೆ ದುಮುಕಿದರು. ಆದರೆ ಚೆಂಡಿನಂತಿದ್ದ ಪಹಿಲವಾನ್ ಸಾವರಕರರ ಬೆನ್ನು ಹಿಡಿಯಲಿಕ್ಕೆ ಅವರು ತಪಸ್ಸು ಮಾಡಿದರೂ ಸಾಧ್ಯವಿಲ್ಲವೇನೊ ಖಂಡಿತ; ಆದರೆ ದಂಡೆಯ ಮೇಲಿನ ಫ್ರೆಂಚ್ ಪಹರೆ ಪೋಲೀಸರು ತಮಗೆ ಸಹಾಯ ಮಾಡದಿರರೆಂದು ಅವರಿಗೆ ಖಂಡಿತ ತಿಳಿದಿದ್ದು ಅಂತೆಯೇ ಅವರು 'ಹಿಡಿಯಿರಿ, ತಡೆಯಿರಿ, ಕಳ್ಳ, ಖೂನಿಕಾರ ಎಂದು ಈಜುತ್ತಿರುವ ಇಂಗ್ಲಿಷ್ ಕಾವಲುಗಾರರು ಸಮುದ್ರದಿಂದಲೇ ಬೊಬ್ಬಿಟ್ಟರು.

ಈ ಬೊಬ್ಬೆಯನ್ನು ಕೇಳಿ ಫ್ರೆಂಚ್ ಪೋಲೀಸರಿಗೆ ಕುತೂಹಲವಾಯಿತು. ಅವರು ದಂಡೆ ಮುಟ್ಟಿದ ಸಾವರಕರರನ್ನು ಹಿಡಿದೇಬಿಟ್ಟರು. ಅದೇ ಸಮಯಕ್ಕೆ ಅಯ್ಯರರೂ ಕಾಮಾ ಮಹಿಳೆಯೂ ಅಲ್ಲೇ ಇದ್ದರು. ಅವರಿಗೆ ತಿಳಿದಿತ್ತು. ಅಂದು ಸಾವರಕರರು ಹೇಗಾದರೂ ದಡಮುಟ್ಟುವರೆಂದು. ಆದರೆ ದೈವೇಚ್ಛೆಯು ಬೇರೆಯಾದಂತೆ ಆ ಫ್ರೆಂಚ್ ಪೋಲೀಸರು ತಮ್ಮ ಬಿಳಿ ನೆರೆಕರೆಯವರಾದ ಆಂಗ್ಲ ಪೋಲೀಸರಿಗೆ ಕೈದಿ ಸಾವರಕರರನ್ನು ಒಪ್ಪಿಸಿಬಿಟ್ಟರು.

ನಿಜವಾಗಿ ಫ್ರೆಂಚ್ ಪೋಲೀಸರ ಆ ಕೆಲಸವು ಅಂತರ್ರಾಷ್ಟ್ರೀಯ ಕಾನೂನು ಪ್ರಕಾರ ನ್ಯಾಯದ್ದಾಗಿರಲಿಲ್ಲವೆಂದು ಅಯ್ಯರರು ವಾದಿಸಿದರು. ಅವರು ವಿನಂತಿಸಿಕೊಂಡರು. ಬೇಡಿದರು. ಫ್ರೆಂಚ್ ಪ್ರದೇಶದಲ್ಲಿರುವ ಬೇರೆ ದೇಶದ ಕೈದಿಯನ್ನು ಹಿಂದಕ್ಕೆ ಒಪ್ಪಿಸುವ ಅಧಿಕಾರ ಫ್ರೆಂಚ್‌ಪೋಲೀಸರಿಗಿಲ್ಲ. ಇಂಗ್ಲೆಂಡಿನಲ್ಲಿ ಅವರು ತಪ್ಪಿತಸ್ಥರಾದರೆ ಫ್ರಾನ್ಸಿನಲ್ಲಿ ಅವರು ಅನ್ಯಾಯ ಮಾಡಿರುವರೇ? ಭಾರತೀಯನೊಬ್ಬನನ್ನು ಅವರು ನ್ಯಾಯವನ್ನು ಲೆಕ್ಕಿಸದೆ ಬಿಟ್ಟು ಕೊಟ್ಟರೆಂದು ಓರ್ವ ಜರ್ಮನನನ್ನಾಗಲೀ, ಜಪಾನಿಯನನ್ನಾಗಲಿ ಹಾಗೆ ಮಾಡಲು ಅವರು ಧೈರ್ಯಪಡುತಿದ್ದರೆ?

ಅಯ್ಯರರಿಗೆ ಇಲ್ಲದ ದುಃಖವಾಯಿತು. ಅವರು ಅಂತರಾಷ್ಟ್ರೀಯ ನ್ಯಾಯಸಭೆಗೆ ಅರ್ಜಿಮಾಡಿಕೊಂಡಾಗ ಅಲ್ಲಿಯೂ ಫ್ರೆಂಚ್ ಪೋಲೀಸರ ಕೃತ್ಯವು ನ್ಯಾಯವಿರೋಧವಾದುದಲ್ಲವೆಂದು ತೀರ್ಮಾನವಾಯಿತು. ಸಾವರ್‌ಕರರು ಭಾರತಕ್ಕೆ ಒಯ್ಯಲ್ಪಟ್ಟರು. ವಿಚಾರಣೆಯೂ ಆಯಿತು. ಅಂಡಮಾನದಲ್ಲಿ ಜೀವಾವಧಿ ಕರಿನೀರಿನ ಶಿಕ್ಷೆಯೂ ಅವರಿಗೆ ವಿಧಿಸಲ್ಪಟ್ಟಿತು.

ಇತ್ತ ಒಂದು ವರ್ಷದ ತನಕ ವಿ. ಎಸ್. ಎಸ್. ಅಯ್ಯರರು ಪೆರಿಸಿನಲ್ಲಿ ಕಳೆದರು. ಇಂಗ್ಲೆಂಡಿಗೆ ಹೋದರೆ ಇನ್ನು ಅವರನ್ನು ಕೈದುಮಾಡುವುದರಲ್ಲಿ ಸಂದೇಹವಿಲ್ಲ. ಅವರು ಮೆಲ್ಲನೆ ಗಡ್ಡ ಬೆಳಿಸತೊಡಗಿದರು. ಅತೀ ಉದ್ದ ಬೆಳೆದಾಗ ಅವರು ಕೆಂಪು ಟೊಪ್ಪಿ ಮುಂಡಾಸು, ಉದ್ದ ಅಂಗಿ ಹಾಕಿ ಓರ್ವ ಮುಸಲ್ಮಾನ ಫಕೀರರಾದರು. ಹಿಂದುಸ್ತಾನಿಯನ್ನು ಅವರು ಸ್ವಚ್ಛ ಮುಸಲ್ಮಾನರಂತೆ ಮಾತಾಡಬಲ್ಲವರಾಗಿದ್ದರು. ಕೈಯಲ್ಲಿ ಜಪಮಾಲೆ ಹಿಡಿಯುತ್ತಾ ಒಂದು ದಿನ ಹಡಗು ಹತ್ತಿ ಅವರು ಪಾಂಡುಚೇರಿಗೆ ಬಂದು ತಲ್ಪಿದರು.

(ಡಾ। ರಾಜನರ ಟಮಿಳು ಲೇಖನ ಮಾಲೆಯಿಂದ ಅನುವಾದಿಸಿದು.)

ವಾರದ ಕತೆ

ಜೀವನ

ಲೇಖಕ: ಮಾದಣ್ಣ, ಮಂಜೇಶ್ವರ

ಜನನ ಮರಣಗಳು ಮಾನವನಿಗಿರುವುದು ಪ್ರಕೃತಿ ಸಹಜವೇ ಆಗಿರುತ್ತದೆ. ಜನನ,-ಅದು ಹೇಗೊ ಆಗಲಿ; ಆದರೆ ಯಾವ ಮಾನವನು ತನ್ನ ಸಾವಿನ ಸನಿಯದಲ್ಲಿರುವಾಗ, ಅವನ ಜರ್ಝರಿತವಾದ ಶರೀರಕ್ಕೆ ಯಾರಾದರೊಬ್ಬನ ಪ್ರೇಮಪೂರಿತ ಹಸ್ತಸ್ಪರ್ಶವಾಗುತಿದ್ದರೆ, ಅವನು ನಿಜವಾಗಿಯೂ ಭಾಗ್ಯಶಾಲಿಯು.

ಆದರೆ ಆ ಭಾಗ್ಯ, ಭಾಸ್ಕರನ ಹಣೆಯಲ್ಲಿ ಬರೆದಿರಲಿಲ್ಲ; ಅಂತೆಯೇ ಅವನ ಜೀವನವು ದುಸ್ಸಹದುರಂತವಾಗಿ ಕೊನೆಗಂಡಿತು.

ನಮ್ಮೂರಿನ ವ್ಯಾಪಾರಸ್ಥರಲ್ಲೊಬ್ಬರಾದ ಕೇಶವರಾಯರಿಗೆ ಇಬ್ಬರು ಗಂಡು ಮಕ್ಕಳು; ಇವರಲ್ಲಿ ಹಿರಿಯವನೇ ಭಾಸ್ಕರ; ಕಿರಿಯವನು ವೈಕುಂಠ. ಎಂಟನೆಯ ಈಯತ್ತೆಯನ್ನು ಇಬ್ಬರೂ ಪಾಸು ಮಾಡಿದ ನಂತರ, ಕೇಶವರಾಯರು ಅವರನ್ನು ತನ್ನ ಅಂಗಡಿಗೆ ಸೇರಿಸಿಕೊಂಡರು.

ಭಾಸ್ಕರನು ಉದಾರ ಸ್ವಭಾವದವನಾಗಿ, ತನ್ನಿಂದಾದಷ್ಟು ಸಹಾಯವನ್ನು ಇತರರಿಗೆ ಮಾಡುತಿದ್ದನು.

ಇದಾಗಿ, ಐದು ಸಂವತ್ಸರಗಳು ಕಳೆದವು; ಪರಿಸ್ಥಿತಿ ಹೀಗಿರುವಾಗ, ಭಾಸ್ಕರನ ಜೀವನದಲ್ಲಿ ಉಲ್ಲೇಖನೀಯವಾದ ಒಂದು ಘಟನೆಯು ಘಟಿಸಿತು.

ಕೇಶವರಾಯರು ಸ್ವಲ್ಪ ಲೋಭತನದ ಹಾಗೂ ನಿಷ್ಠುರ ಸ್ವಭಾವದವರಾಗಿದ್ದರು. ತಮ್ಮ ಪ್ರಾಯಭರಿತ ಹುಡುಗರ ಅವಶ್ಯಕತೆಗಳನ್ನು ಕೂಡಾ ಅವರು ಪೂರ್ತಿಯಾಗಿ ಒದಗಿಸುತಿದ್ದಿಲ್ಲ. ಇದರಿಂದಾಗಿ ಹುಡುಗರು ಸಮಯವರಿತು, ತಮ್ಮ ಅವಶ್ಯಕತೆಗಳಿಗಾಗಿ ಆಗಾಗ ಹಣವನ್ನು ಕದ್ದರೆ ಅದೊಂದು ಆಶ್ಚರ್ಯದ ವಿಷಯವಾಗಿರಲಿಲ್ಲ.

ಒಂದು ಸಾರಿ ಭಾಸ್ಕರನ ಕಳ್ಳತನದ ಸುಳಿವು ಕೇಶವರಾಯರಿಗೆ ಸಿಕ್ಕಿತು; ಮಾತ್ರವಲ್ಲ, ಆದರ ಪರಿಣಾಮವು ತುಸು ಕಠಿಣವಾಯಿತು. ಭಾಸ್ಕರನನ್ನು ಅಂಗಡಿ ಹಾಗೂ ಮನೆಯಿಂದ ಹೊರದೂಡಲಾಯಿತು.

ಭಾಸ್ಕರನು ಅತ್ತನು; ಇನ್ನೆಂದೂ ಹಾಗೆ ಮಾಡುವುದಿಲ್ಲವೆಂದು, ಪರಿಪರಿಯಿಂದ ಹೇಳಿ ನೋಡಿದನು; ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕೋಪವಶರಾದ ಕೇಶವರಾಯರು, ಕಡೆಯವರೆಗೂ ಕೇಳಲೇ ಇಲ್ಲ.

ನಿಜವಾಗಿಯೂ ಭಾಸ್ಕರನ ದುರ್ಭಾಗ್ಯ! ಇಲ್ಲದಿದ್ದರೆ, ಕೇಶವರಾಯರು ಸ್ವಂತ ಮಗನನ್ನೇ ಮನೆಯಿಂದ ಹೊರದೂಡುತಿದ್ದರೇ? ಅನುಕೂಲ ಸ್ಥಿತಿಗತಿಗಳಿದ್ದರೂ ಕೂಡ, ಅವನ ನ್ಯಾಯವಾದ ಎಲ್ಲಾ ಅವಶ್ಯಕತೆಗಳನ್ನು ಅವರು ಪೂರ್ಣವಾಗಿ ಒದಗಿಸದೆ, ಅವನ ಕಳ್ಳತನಕ್ಕೆ ತಾವೇ ಪರೋಕ್ಷವಾಗಿ ಪ್ರೋತ್ಸಾಹಿಸುತಿದ್ದುದನ್ನು ಕೇಶವರಾಯರು, ಅರಿಯದಿರುತಿದ್ದರೇ?

ಭಾಸ್ಕರನು ಒಬ್ಬಿಬ್ಬರು ಗೃಹಸ್ಥರೊಡನೆ ಮಾತನಾಡಿ, ತನ್ನ ತಂದೆಗೆ ಅವರಿಂದ ಹೇಳಿಸಿ ನೋಡಿದನು. ಆದರೆ ಅದರ ಫಲಿತಾಂಶವು ಕೂಡಾ ಮುಂಚಿನಂತೆಯೇ ಸಂಭವಿಸಿತು.

ನಂತರ ಭಾಸ್ಕರನು ಊರಿನಲ್ಲಿ ಎಲ್ಲಿಯಾದರೂ ಬರಿಯುವ ಇಲ್ಲವೆ, ಇತರ ಯಾವುದಾದರೊಂದು ತರದ ಕೆಲಸ ದೊರಕಬಹುದೋ ಎಂದು ವಿಚಾರಿಸಿದನು. ಯಾರೂ ಅವನನ್ನು ಕೆಲಸಕ್ಕೆ ನಿಲ್ಲಿಸಲಿಲ್ಲ.

ಭಾಸ್ಕರನಿಗೆ ಆಗಿನ್ನೂ ಕೇವಲ ಇಪ್ಪತ್ತು ವರುಷ ಪ್ರಾಯವಷ್ಟೆ. ಪ್ರಕೃತಿ ಸಹಜವಾದ ಜೀವನದ ಆಸೆ ಹುರುಪುಗಳು ಅವನಿಗಿದ್ದುವು; ಎಲ್ಲರಂತೆ ತಾನೂ ಒಬ್ಬ ಸಭ್ಯನಾಗಿ, ಹತ್ತು ಜನರೊಡನೆ ಸೇರಬೇಕೆಂಬ ಅಭಿಲಾಷೆಯೂ ಇತ್ತು; ಆದರೆ ಈಗ ಅವುಗಳೆಲ್ಲವೂ ಆಕಾಶಗೋಪುರಗಳಂತಾಗುವ ಪರಿಸ್ಥಿತಿಯೊದಗಿತ್ತು.

ಅವನು ತೆಳ್ಳಗಿನ ದೇಹ ಪ್ರಕೃತಿಯವನಾದ್ದರಿಂದ, ಹೊರೆ ಹೊತ್ತು ದಿನ ನೂಕಲು, ಅವನಿಂದ ಆಗುತ್ತಿರಲಿಲ್ಲ. ಆಗಾಗ ತನ್ನ ತಾಯಿಯಿಂದಾದರೂ ಪ್ರಯೋಜನ ಪಡೆಯುವಾ ಎಂದರೆ, ಕೆಲವು ವರ್ಷಗಳ ಮೊದಲೇ ತೀರಿಹೋಗಿದ್ದಳು. ಸಂದರ್ಭ ದೊರಿತಾಗಲೆಲ್ಲ ತನ್ನ ತಮ್ಮನಿಂದ, ಎರಡಾಣೆ ನಾಲ್ಕಾಣೆಗಳನ್ನು ಭಾಸ್ಕರನು ಇಸುಕೊಳ್ಳುತಿದ್ದನು. ಕೆಲವು ಸಮಯದ ನಂತರ, ವೈಕುಂಠನು ದುಡ್ಡುಕೊಡುವುದನ್ನು ವಿರಳ ವಿರಳ ಮಾಡುತ್ತ, ಕಡೆಗೊಂದು ದಿನ ಅದನ್ನು ನಿಲ್ಲಿಸಿಬಿಟ್ಟನು.

ನಂತರ ಭಾಸ್ಕರನು ಏನು ಮಾಡಬಹುದು?

ಭಾಸ್ಕರನು ಊರ ಶಂಕರನಾರಾಯಣ ದೇವಳದಲ್ಲಿ, ಪ್ರತೀದಿನ ಮಧ್ಯಾಹ್ನ ಜರಗುವ ಸಮಾರಾಧನೆಯಲ್ಲಿ ಅವನಿಗೂ ಒಂದು ಬಿಡಿಸಿದ ಎಲೆಯು ಸಿಗುವಂತೆ, ಏರ್ಪಾಡನ್ನು ಮಾಡಿಕೊಂಡನು.

ಹೌದು, ಸರಿ; ಒಂದು ಊಟವೇನೋ ಸಿಗುತಿತ್ತು. ಆದರೆ ಪ್ರತೀ ದಿನ ಎರಡು ಹೊತ್ತು ಊಟ ಹಾಗೂ, ಮೂರು ಹೊತ್ತು ಕಾಫಿ ಕುಡಿಯುವ ಅಭ್ಯಾಸವಾಗಿದ್ದ ಅವನಿಗೆ, ಈ ರೀತಿಯಾಗಿ ದಿನ ನೂಕುವುದು, ಬಹು ಕಷ್ಟವಾಗಿತ್ತು.

ಅವನು ದೇವಳದ ಅಂಬಲ (ಯಾತ್ರಿಕರು ಇಳಿದುಕೊಳ್ಳುವ ಸ್ಥಳ)ದಲ್ಲಿ ಕೂತುಕೊಂಡು, ಮಧ್ಯಾಹ್ನ ದೇವಳದ ಕೆರೆಯಲ್ಲಿ ಸ್ನಾನ ತೀರಿಸಿ, ಆ ಪುಕ್ಕಟೆಯ ಊಟ ಮುಗಿಸಿ, ಅಲ್ಲಿಯೇ ತುಸು ಮಲಗಿ, ನಂತರ ಪೇಟೆಗೆ ಹೋಗಿ ಹೀಗೆಯೇ ತಿರುಗಾಡಿಗೊಂಡು ಬರುತಿದ್ದನು.

ಅವನ ಮಿತ್ರರಲ್ಲಿ ಕೆಲವರು ಆಗಾಗ ಅವನಿಗೆ, ಒಂದಾಣೆ ಎರಡಾಣೆಯನ್ನು ಕೊಡುತಿದ್ದರು. ಆ ರೀತಿ ದುಡ್ಡು ಸಿಗದಿದ್ದ ದಿನವೂ ಇದೆ. ದುಡ್ಡು ಸಿಕ್ಕಿದ ದಿನ, ಬಹು ಮಿತವ್ಯಯದಿಂದ ಖರ್ಚುಮಾಡಿ, ಸಿಕ್ಕಿದುದರಲ್ಲಿಯೇ ಸಂತುಷ್ಟನಾಗುತ್ತಿದ್ದನು; ಸಿಗದಿದ್ದ ದಿನ, ನೀರು ಕುಡಿದು, ಹಸಿವನ್ನು ಹಿಂಗಿಸಲು ಪ್ರಯತ್ನಮಾಡಿ, ಹೊಟ್ಟೆಗೆ ಸುತ್ತಿದ ವಸ್ತ್ರವನ್ನು ಇನ್ನಷ್ಟು ಬಿಗಿದು, ಮಲಗುತಿದ್ದನು.

ಈ ರೀತಿ ಸಾಗುತಿತ್ತು, ಭಾಸ್ಕರನ ಜೀವನ್ಮೃತಾವಸ್ಥೆಯ ದಿನಚರಿ! ಕೆಲವು ತಿಂಗಳುಗಳು ಕಳೆದವು; ಭಾಸ್ಕರನ ನಿಯಮರಹಿತವಾದ ಜೀವನದಿಂದ ಅವನ ದೇಹವು ನಿಧಾನವಾಗಿ ಅನಾರೋಗ್ಯಮಯವಾಯಿತು. ಕೆಲವು ಸಾರಿ ಜಡ್ಡಾಗಿಯೂ ಮಲಗಿದನು.

ಹಿಂದೆ ಅವನಿಂದ-ಅಲ್ಪವಾದರೂ ಆಗಲೊಲ್ಲದೇಕೆ?-ಉಪಕಾರವನ್ನು ಹೊಂದಿದವರು, ಭಾಸ್ಕರನು ಜಡ್ಡಾಗಿ ಮಲಗಿದ ಸಂದರ್ಭಗಳಲ್ಲಿ,-ಪ್ರತ್ಯುಪಕಾರವೆಂದಲ್ಲ, ತಮ್ಮಲ್ಲಿಯೂ ಮನುಷತ್ವವಿದೆಯೆಂಬುದನ್ನಾದರೂ ತೋರಿಸುವುದಕ್ಕೋಸ್ಕರ, ಅವನಿಗೆ ಸಹಾಯ ಮಾಡಬಹುದಿತ್ತು.

ಆದರೆ ಸಹಾಯ ಮಾಡಿದರೇ? ಇಲ್ಲ; ಕೆಲವರು ಕಣ್ಣೆತ್ತಿಯೂ ನೋಡಲಿಲ್ಲ; ಉಳಿದವರು ಅವನು ದೀನ ಮುಖಮುದ್ರೆಯಿಂದ ಕಣ್ಣೀರಿಡುತ್ತ 'ನೋಡಿ, ನಾನು ನಿಮ್ಮ ಹಾಗೆ ಮನುಷ್ಯನಲ್ಲವೇ? ನನಗೆ ಸ್ವಲ್ಪವಾದರೂ ಚಿಂತಿಲ್ಲ, ಸಹಾಯ ಮಾಡಿ,' ಎಂದು ಗೋಳಿಡುವಾಗ, ಅದನ್ನು ಕೇಳಿಯೂ ಕೇಳದವರಂತೆ, ನೋಡಿಯೂ ನೋಡದವರಂತೆ, ತೆರಳುತಿದ್ದರು.

ಅವರು ಹೋದೊಡನೆ ಭಾಸ್ಕರನು ತನ್ನ ಮುಖವನ್ನು ಮತ್ತೊಂದು ಬದಿಗೆ ಹೊರಳಿಸಿ, 'ಅಯ್ಯೊ, ಹೇ, ಶಂಕರನಾರಾಯಣಾ, ನನಗೆ ಇನ್ನೂ ಯಾಕೆ ನೀನು ಮರಣವನ್ನು ಕೊಡಲೊಲ್ಲೆ,' ಎಂದು ಕಣ್ಣೀರ ಕೋಡಿಯನ್ನೇ ಹರಿಯುತಿದ್ದನು.

ಹಾ, ಮಾನುಷ ಜೀವನ!

ಕೆಲವರು ಅವನ ಈ ಹೃದಯ ವಿದಾರಕ ಪರಿಸ್ಥಿತಿಯನ್ನು ನೋಡಿ, ಕೇಶವರಾಯರಿಗೆ ತಿಳಿಸಿದರು. ಅದಕ್ಕವರು ಹೇಳಿದರು, 'ಸತ್ತರೆ ಸಾಯಲಿ; ಅವನು ಆ ರೀತಿ ಸಾಯುವುದಿದ್ದರೆ, ಅದನ್ನು ತಪ್ಪಿಸಲಿಕ್ಕೆ ಯಾರಿಂದಲೂ ಆಗುವುದಿಲ್ಲ.'

ಕಿರಿಯರಿಂದ ಅರಿತಾಗಲಿ, ಅರಿಯದೆಯಾಗಲಿ, ಆಗಾಗ ತಪ್ಪುಗಳು ಸಂಭವಿಸುವುದು ಸಹಜವೇ ಆಗಿದೆ. ಹಿರಿಯರು ಮನುಷತ್ವವನ್ನು ತಳೆದು, ಅವರನ್ನು ಕ್ಷಮಿಸುವುದು ಇಬ್ಬಣಕ್ಕೂ ಹಿತಕಾರಿಯಾಗಿರುತ್ತದೆ. ಆದರೆ ಕೇಶವರಾಯರಿಗಿರುವ ಆ ಹೃದಯ ಕಾಠಿಣ್ಯತೆಯೂ ಕ್ಷಮಾಹೀನತೆಯೂ ತಂದೆಯೆನಿಸಿಕೊಳ್ಳುವ ಯಾವ ಮನುಷ್ಯನಿಗೂ ಯೋಗ್ಯವಲ್ಲ.

ದೇವಳಕ್ಕೆ ಹೊಸತಾಗಿ ಮದುವೆಯಾದ ವಧೂವರರು ಬಂದಾಗ ಭಾಸ್ಕರನು ಯೋಚಿಸುತಿದ್ದನು; 'ತಾನು ಸಭ್ಯತೆಯಿಂದಿದ್ದರೆ, ಇಷ್ಟರೊಳಗೆ ಒಂದು ಚಲೋ ಹೆಣ್ಣನ್ನು ಮದುವೆಯಾಗಿ ಹತ್ತು ಜನರಂತೆ, ತಾನೂ ಒಬ್ಬನಾಗಿ ಇರಬಹುದಾಗಿತ್ತು; ತನಗೇಕೆ ಈ ಕದಿಯುವ ದುರ್ಬುದ್ಧಿ ಹುಟ್ಟಿತು?' ಎಂದು ಮರುಗುತಿದ್ದನು.

ಒಂದೊಂದು ತಡವೆ ರಾತ್ರೆ ಮಲಗಿದ್ದಲ್ಲಿಯೇ ಭಾಸ್ಕರನು ಕಣ್ಣೀರನ್ನು ಸುರಿಸುತ್ತ, ತನ್ನಷ್ಟಕ್ಕೆ ಹೇಳಿಕೊಳ್ಳುತಿದ್ದನು: 'ನಾನು ಏನು ಮಾಡಿದ್ದೇನೆ? ನನಗೇಕೆ ಈ ತರದ ಶಿಕ್ಷೆ? ನನಗೆ ಅಗತ್ಯವಿದ್ದದಕ್ಕೆ ಹಣವನ್ನು ಕೊಡುತಿದ್ದರೆ, ನಾನು ಕದಿಯುತಿದ್ದೆನೋ? ಅಯ್ಯೋ ನನ್ನ ಅವಸ್ಥೆ ಹೀಗಾಗಬೇಕೆ?'

ಬೇಸಿಗೆ ಕಾಲದ ಕಡು ಉಷ್ಣತೆಯಲ್ಲಿ, ಮಳೆಗಾಲದ ಆ ಗಾಳಿಮಳೆಯಲ್ಲಿ, ಮತ್ತು ಚಳಿಗಾಲದ ಚಳಿಯಲ್ಲಿ ಭಾಸ್ಕರನು ಆ ಅಂಬಲದಲ್ಲಿಯೇ ಮಲಗಿ ಎರಡು ಸಂವತ್ಸರಗಳನ್ನು ಕಳೆದನು.

ಕೊಡುವವರಾದರೂ ಎಷ್ಟುದಿನ ಕೊಟ್ಟು ಪೂರೈಸಬಹುದು? ನಂತರ, ಭಾಸ್ಕರನಿಗೆ ಯಾರೂ ಏನನ್ನೂ ಕೊಡದಾದರು; ಅವನ ಬಟ್ಟೆಗಳು ಮಲೀನವಾಗಿ ಚಿಂದಿಯಾದವು; ತಲೆ ಹಾಗೂ ಗಡ್ಡ ಮೀಸೆಗಳು ಬೆಳೆದು ನೋಡುವವರಿಗೆ ಬೈರಾಗಿಯ ನೆನಪನ್ನು ಹುಟ್ಟಿಸತೊಡಗಿತು.

ಯುದ್ಧದ ಪರಿಸ್ಥಿತಿಯಿಂದಾಗಿ, ದೇವಳದ ಆಡಳಿತದವರು, ದೇವಳಕ್ಕೆ ಸಮ್ಮಂಧಪಟ್ಟ ಖರ್ಚನ್ನು ಮಿತಿಗೊಳಿಸತೊಡಗಿದರು. ಇದರ ಪರಿಣಾಮವಾಗಿ, ಭಾಸ್ಕರನಿಗೆ ಸಿಗುವ ಆ ಒಂದು ಊಟವೂ ಕೊನೆಗೊಂಡಿತು.

ಜೀವನದ ಪ್ರತಿಯೊಂದು ಕ್ಷುಲ್ಲಕ ಅವಶ್ಯಕತೆಗೂ ಕೂಡ, ಪರರ ಮೇಲೆ ಹೊಂದಿಕೊಂಡು, ದಿನ ನೂಕುವುದಕ್ಕಿಂತ,-ಆತ್ಮಹತ್ಯೆಯು ಅದೆಷ್ಟು ನಿಷಿದ್ಧ ಕರ್ತವ್ಯವೇ ಆಗಲಿ,-ಯಾವದಾದರೊಂದು ವಿಧದಿಂದ ಪ್ರಾಣಬಿಡುವುದು, ಅದೆಷ್ಟೋ ಮೇಲೆಂದೆನಿಸಿಕೊಳ್ಳುತ್ತಿದೆ.

ಭಾಸ್ಕರನಿಗೂ ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂದು ತೋಚಿತು, ಆದರೆ ಆ ಹರೆಯದ ಜೀವಕ್ಕೆ ಭೀತಿ ಬಡೆಯಿತು.

ಊರ ಹಿರಿಯರೂ' ಸಮಾಜ ಸುಧಾರಕರೆನಿಸಿಕೊಂಡು, ಉದ್ದುದ್ದ ಭಾಷಣವನ್ನು ಮಾಡುವವರೂ ದೇವಳಕ್ಕೆ ಬರುತಿದ್ದರು. ಪರಂತು ಭಾಸ್ಕರನ ಕಡೆಗೆ ನೋಡುತ್ತಿರಲಿಲ್ಲ. ಯಾರಾದರೂ ಆ ಕುರಿತು ಅವರೊಡನೆ ಪ್ರಸ್ತಾವ ತೆಗೆದರೆ ಅವರು ಹೇಳುತ್ತಿದ್ದರು 'ಎಲ್ಲಾ ಅವನ ಪ್ರಾರಬ್ಧ; ಅದಕ್ಕೆ ನಾವೇನು ಮಾಡಬಹುದು?'

ಆಗಲೇ ಭಾಸ್ಕರನು ಬರೇ ನೀರನ್ನು ಕುಡಿದು, ಮೂರು ದಿನಗಳನ್ನು ಕಳೆದಿದ್ದನು; ಅದರೊಂದಿಗೆ ಅವನ ಆರೋಗ್ಯವೂ ಕೆಟ್ಟಿತು.

ಭಾಸ್ಕರನನ್ನು ನೋಡಿದಾಗಲೆಲ್ಲ, ದೇವಳದ ಆಡಳಿತಗಾರರು, ತಮ್ಮ ಹತ್ತರ ಇದ್ದವರೊಡನೆ ಹೇಳುತ್ತಿದ್ದರು: 'ದೇವಳಕ್ಕೆ ಸ್ವಲ್ಪ ಖರ್ಚುಮಾಡಿಸಲಿಕ್ಕೆ ಭಾಸ್ಕರನು ಸಿದ್ಧತೆ ಮಾಡುತಿದ್ದಾನೆ'

ಪರಂತು, ಆ ಹಿರಿಯರಾಗಲಿ, ಸುಧಾರಕರಾಗಲಿ, ಆ ಆಡಳಿತಗಾರರೇ ಆಗಲಿ, ಭಾಸ್ಕರನ ಹಸಿವನ್ನು ಹಿಂಗಿಸುವ ಕಾರ್ಯಕ್ಕೆ ಉದ್ಯುಕ್ತರಾಗಲಿಲ್ಲ.

ಇಷ್ಟೊಂದು ಸುಶಿಕ್ಷಿತ ವಿದ್ಯಾವಂತ ಹಾಗೂ ಸಂಸ್ಕೃತಿ ಪಡೆದ ಸಮಾಜದ ಓರ್ವ ವ್ಯಕ್ತಿ ಭಾಸ್ಕರನಾಗಿದ್ದರೂ ಕೂಡ ಅವನು ಹೊಟ್ಟೆಗಿಲ್ಲದೆ, ಪ್ರತಿದಿನ ಇನಿತು ಇನಿತಾಗಿ ಕ್ಷಯಿಸುತ್ತ ಪ್ರಾಣಬಿಡಬೇಕೆ?

ಹಾ, ಕ್ರೂರ ಸಮಾಜ!

ಸಂಕಪ್ಪ, ಜಾತಿಯಲ್ಲಿ ಶೂದ್ರ; ಸ್ವಲ್ಪ ಅನುಕೂಲವಿದ್ದ ವ್ಯಕ್ತಿಯಾಗಿ ದೇವರಲ್ಲಿ ತುಂಬಾ ಶ್ರದ್ಧೆಯುಳ್ಳವನಾಗಿದ್ದನು; ಪ್ರತೀದಿನ ಸಾಯಂಕಾಲ ದೇವಳಕ್ಕೆ ಬರುತಿದ್ದನು.

ಭಾಸ್ಕರನ ವಿಷಯವೆಲ್ಲವೂ ಅವನಿಗೆ ತಿಳಿಯಿತು. ಸಂಕಪ್ಪನು ಯೋಚಿಸಿದನು; ದೇವರು ತನಗೆ ಸಾಕಷ್ಟು ಅನುಕೂಲತೆಯನ್ನು ಕೊಟ್ಟಿದ್ದಾನೆ; ಏಕಾಗಕೂಡದು? ಒಂದು ಮನುಷ್ಯ ಪ್ರಾಣಿಯ ಪ್ರಾಣವು ತನ್ನಿಂದಾಗಿ ಉಳಿಯುವಂತಿದ್ದರೆ, ತಾನೇಕೆ ಉಳಿಸಲು ಪ್ರಯತ್ನಿಸಬಾರದು?

ಸಂಕಪ್ಪನು ತಡಮಾಡದೆ, ಭಾಸ್ಕರನ ಸಮಾಜದವರ ಹತ್ತರ ಹೋಗಿ ಹೇಳಿದನು, 'ನಾನು ಎಲ್ಲಾ ತರದ ಸಾಹಿತ್ಯವನ್ನು ಒದಗಿಸುವೆ; ದಯಮಾಡಿ; ಭಾಸ್ಕರನಿಗೆ ಅನ್ನಮಾಡಿ ಹಾಕುವಿರೋ?'

ಒಬ್ಬೊಬ್ಬರು ಒಂದೊಂದು ತರದ ಸುಳ್ಳು ನೆವಗಳನ್ನು ಹೇಳಿ ಜಾರಿಕೊಂಡರು;

(೧೧ನೇ ಪುಟಕ್ಕೆ ಮುಂದುವರಿದಿದೆ)

ರಷ್ಯದ ದಷ್ಟಿಯಲ್ಲಿ ಭಾರತ

ಗಾಂಧೀಜಿಯ ಅದ್ವಿತೀಯ ಸೇವಾದರ್ಶ

ಕೊಂಗ್ರೆಸ್ಸೇ ಜಾತಿಮತ ಭೇದವಿಲ್ಲದ ಪಕ್ಷ

ರಾಜಕೀಯ ಹಿಂದುಳಿತವೇ ದುಃಸ್ಥಿತಿಗೆ ಕಾರಣ

ಬಹಳ ವರ್ಷಗಳ ನಂತರ ಇದೀಗ ಒಂದು ರಷ್ಯನ್ ಪತ್ರಿಕೆಯು ಭಾರತದ ಪರಿಸ್ಥಿತಿಯ ಕುರಿತು ಅಧಿಕಾರಯುಕ್ತವಾದ ವಿಮರ್ಶೆ ವರದಿಯೊಂದನ್ನು ಪ್ರಕಟಿಸಿದೆ. ಇಲ್ಲಿಯ ಸ್ಥಿತಿಗತಿಗಳನ್ನು ಸಿಂಹಾವಲೋಕನ ಮಾಡಿ ಲೇಖನ ರೂಪವಾಗಿ ಬರೆದವರು ರಾಜಕೀಯ ಪಂಡಿತರಾದ ಎ. ಡಾಯಕೋವ್ ಎಂಬವರು. ಆ ವರದಿಯಲ್ಲಿ ಒತ್ತಿ ಹೇಳಲ್ಪಟ್ಟ ವಿಷಯಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಕೊಡಲು ಪ್ರಯತ್ನಿಸಿದೆ:-

ಜಗತ್ತಿನ ಅತೀ ಶ್ರೇಷ್ಠವೂ ಅತೀ ಪ್ರಾಚೀನವೂ ಎನಿಸಿದ ದೇಶವಿಂದು ಇತಿಹಾಸದಲ್ಲೇ ಅತಿ ದೊಡ್ಡದೆನಿಸುವ ವಸಾಹತು ಪ್ರದೇಶವಾಗಿದೆ. ಒಂದು ಕಾಲದಲ್ಲಿ ಜ್ಞಾನಕ್ಷೇತ್ರದಲ್ಲಿ ಅತೀ ಮುಂದರಿದ ದೇಶವಿಂದು ಆರ್ಥಿಕ ಪರಿಸ್ಥಿತಿಯಲ್ಲಿ ಅತೀ ಹಿಂದುಳಿದಿದೆ. ದೇಶದ ಹತ್ತರಲ್ಲಿ ಒಂಬತ್ತು ಅಂಶದಷ್ಟು ಪ್ರದೇಶವು ಹಳೇಯ ಸಾಗುವಳಿ ಪದ್ಧತಿಯಲ್ಲಿ ಕೃಷಿಮಾಡಲ್ಪಡುತ್ತದೆ. ಕೈಗಾರಿಕೆಗಳು ಅಲ್ಲಿ ಪ್ರಗತಿ ಹೊಂದಿಲ್ಲ, ಯಂತ್ರಗಳಿಲ್ಲ, ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳಿಲ್ಲ. ಅಲ್ಲಿ ದೊಡ್ಡ ಉಕ್ಕಿನ ಒಂದು ಕಾರ್ಖಾನೆಯಿದ್ದರೂ ಸಾಮಾನ್ಯ ಹೊಲೆಂಡ್ ದೇಶದಲ್ಲಿ ತಯಾರಾಗುವ ಪ್ರಮಾಣದ ಉಕ್ಕು ಅಲ್ಲಿ ತಯಾರಿಸಲ್ಪಡುವುದಿಲ್ಲ. ಅಂದಮೇಲೆ ಕೃಷಿ ಸಾಗುವಳಿಗಳ ಕಡೆಗೆ ಯಾವ ಗಮನವೂ ಆಧುನಿಕ ಸೌಕರ್ಯವೂ ಒದಗಿಸಲ್ಪಡದ್ದು ಆಶ್ಚರ್ಯವಲ್ಲ.

ಭಾರತ ದೇಶದ ಸಂಪತ್ತು, ಅಲ್ಲಿನ ಜನಸಂಖ್ಯೆ, ಇವುಗಳನ್ನು ನೋಡುವಾಗ ಇಂದು ಆ ದೇಶವು ಜಗತ್ತಿನಲ್ಲಿ ಪ್ರಥಮ ಶ್ರೇಣಿಯಲ್ಲಿ ಮೆರೆಯಬೇಕಿತ್ತು. ಅದರ ಹಿಂದಿನ ಸಂಸ್ಕೃತಿ ಜ್ಞಾನ ವೈಶಿಷ್ಟಗಳೇನು? ಇಂದಿನ ಅಲ್ಲಿನ ಪರಿಸ್ಥಿತಿ ಎಂತಹುದು? ಇಂದು ಆ ದೇಶವು ಜಗತ್ತಿನ ನಾಗರೀಕತೆಗೆ ಯಾವ ತರದ ಸಹಾಯವನ್ನೂ ಮಾಡಲು ಸಮರ್ಥವಾಗಿಲ್ಲವೆಂದು ತೋರುತ್ತದೆ. ಅತೀ ಚಿಕ್ಕ ದೇಶಗಳಾದ ನೋರ್ವೆ ಸ್ವೀಡನ್‌ಗಳಲ್ಲಿ ಪ್ರಖ್ಯಾತರಾದಷ್ಟು ಸಾಹಿತಿಗಳೂ ವಿಜ್ಞಾನಿಗಳೂ ಈ ವಿಶಾಲ ದೇಶದಲ್ಲಿಲ್ಲದಿರುವುದು ತುಂಬಾ ಕನಿಕರಾಸ್ಪದವಾದ ಸ್ಥಿತಿ. ಕಲೆಯಲ್ಲೂ, ವಾಙ್ಮಯದಲ್ಲೂ ಅದು ಈಚೀಗೆ ಗಣನೀಯವಾದ ಯಾವ ಕೀರ್ತಿಯನ್ನೂ ಹೊಂದಲಿಲ್ಲ. ಜಗತ್ಪ್ರಸಿದ್ಧರಾದ ಕೆಲವೇ ಜ್ಞಾನ ಪಂಡಿತರು ಮಾತ್ರ ಅಲ್ಲಿಂದ ಬೆಳಕಿಗೆ ಬಂದಿರುವರು.

ರಾಜಕೀಯ ದುಃಸ್ಥಿತಿ

ಇಪ್ಪತ್ತನೇ ಶತಮಾನದಲ್ಲಿಯೂ ಅದು ಬ್ರಿಟಿಷರ ವಸಾಹತು ರಾಜ್ಯವಾಗಿ ಉಳಿದಿರುವುದು ಆ ದೇಶದ ಜನತೆಯ ರಾಷ್ಟ್ರೀಯ ಭಾವನೆಯ ಬಿಗಿಯನ್ನೂ ಇಂದಿನ ಅದರ ಸಾಂಸ್ಕೃತಿಕ ಮತ್ತು ಆರ್ಥಿಕ ದುಃಸ್ಥಿತಿಗಳ ಕಾರಣವನ್ನೂ ತಿಳಿಸುವ ಸಂಗತಿಯಾಗಿದೆ. ಈ ಯುದ್ಧಕ್ಕೆ ಮುಂಚೆ ಯುರೋಪಿನೊಳಗಿನ ಯಾವ ದೇಶವೂ ಅನುಭವಿಸಿರದ ರಾಜಕೀಯ ದುಃಸ್ಥಿತಿಯಲ್ಲಿ ಇಂದು ಭಾರತೀಯರು ನರಳುತಿದ್ದಾರೆ. ಈ ರಾಜಕೀಯ ದುಃಸ್ಥಿತಿಯೇ ಆ ಜನರನ್ನು ಪ್ರಗತಿ ಮಾರ್ಗದಲ್ಲಿ ತಡೆಯುವಂತಹದಿದೆ.

ಭಾರತದೊಳಗಿನ ವಿಚಿತ್ರ ರಾಜಕೀಯ ದುಃಸ್ಥಿತಿಗನುಗುಣವಾಗಿ ಅಲ್ಲಿಯ ರಾಜಕೀಯ ಪಕ್ಷಗಳೂ ಬಹಳ ಸೋಜಿಗದವುಗಳು. ರಾಷ್ಟ್ರೀಯ ಕೊಂಗ್ರೆಸು ಅಲ್ಲಿನ ಅತೀ ದೊಡ್ಡ ರಾಜಕೀಯ ಪಕ್ಷ. ಬಡವರೂ ಬಲ್ಲಿದರೂ, ವ್ಯವಸಾಯಿಗಳೂ, ಭೂಮ್ಯಾಲಕರೂ, ಕೂಲಿಗಳೂ, ಕೈಗಾರಿಕೆ ಮುಖಂಡರೂ, ವ್ಯಾಪಾರಿಗಳೂ, ವಹಿವಾಟುದಾರರೂ ಮಾತ್ರವಲ್ಲ ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವುಳ್ಳ ಪ್ರತಿಯೊಂದು ಚಿಕ್ಕ ದೊಡ್ಡ ಪಕ್ಷಗಳೆಲ್ಲವೂ ಕೊಂಗ್ರೆಸಿನಲ್ಲೇ ಸೇರಿಕೊಂಡಿವೆ.

ಸ್ವತಂತ್ರ ಶ್ರೀಮಂತ ಉದ್ಯೋಗಿಗಳ ಲಿಬರಲ್ ಪಾರ್ಟಿ ಎಂಬದೊಂದು ಪಕ್ಷವಿದೆ. ಇದೂ ಕೊಂಗ್ರೆಸಿನಂತೆ ಜಾತಿಮತ ಪಕ್ಷಪಾತವಿಲ್ಲದಂತಹ ಸಂಸ್ಥೆ. ಆದರೂ ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಸಾಮಂತ ಇಲ್ಲವೆ ಬ್ರಿಟಿಷ್ ಸರ್ವಸಾಮಾನ್ಯ ಜನಾಂಗಮಂಡಳದ ಸದಸ್ಯರಾಗಿರುವ ರಾಜ್ಯ ಘಟನೆಯನ್ನು ಹೊಂದುವುದೇ ಇವರ ಧ್ಯೇಯ.

ಇನ್ನೂ ಹಿಂದೂ ಜನರ ಮತ್ತು ಜಮೀನ್ದಾರರ ಹಿತಗಳನ್ನು ರಕ್ಷಿಸಲು ಹಿಂದೂ ಮಹಾಸಭೆ ಎಂಬ ಸಂಸ್ಥೆಯೂ, ಮುಸ್ಲಿಮ್ ಜನತೆಯ ಮತ್ತು ಜಮೀನ್ದಾರರ ಪರವಾಗಿ ಎಂದು ಹೇಳಲ್ಪಟ್ಟ ಮುಸ್ಲಿಂ ಲೀಗ್ ಎಂಬ ಪಕ್ಷಗಳೂ ಅಲ್ಲಿವೆ. ಇವು ಜಾತಿಮತ ಪ್ರಧಾನವಾದುವುಗಳು.

ಕೊಂಗ್ರೆಸ್ಸು ನಿಸ್ಸಂದೇಹವಾಗಿ ಒಂದು ಪ್ರಗತಿಶೀಲವಾದ ಸಂಸ್ಥೆ. ಮಹಾತ್ಮಾ ಗಾಂಧಿಯವರು ಇದರ ಅಪ್ರತಿಮರೂ ಪ್ರಭಾವಶಾಲಿಗಳೂ ಆದ ಮುಖಂಡರು. ಇವರು ದೇಶಕ್ಕೆ ಸಲ್ಲಿಸಿದ ಸೇವೆ ಶ್ರಮಗಳ ಕುರಿತು ಇವರ ವಿರೋಧಿಗಳು ಕೂಡಾ ಅಲ್ಲಗಳೆಯುವುದಿಲ್ಲ. ದೇಶ ವಿದೇಶಗಳಲ್ಲಿ ಇವರು ದೇಶ ಸೇವೆಗಾಗಿ ಪ್ರಖ್ಯಾತಿಹೊಂದಿದವರು. ಇವರು ತಮ್ಮ ಆದರ್ಶನೀಯವಾದ ಶಿಸ್ತು ಜೀವನದಿಂದ ದೇಶದ ರೈತ ಜನತೆಯಲ್ಲಿ ಅವರ ಸ್ವಂತ ಭಾಷೆಯಿಂದಲೇ ಮಾತಾಡಿ ರಾಜಕೀಯ ಜಾಗೃತಿಯನ್ನುಂಟುಮಾಡಿರುತ್ತಾರೆ.

ಆದರೆ ಆಧುನಿಕ ದೇಶಗಳಲ್ಲಿ ದೊಡ್ಡ ರಾಜಕೀಯ ಪಕ್ಷಗಳು ನಿರ್ಧಿಷ್ಟಕಾರ್ಯಕ್ರಮವನ್ನನುಸರಿಸಿದಂತೆ ಒಂದೇ ತರದ ಉದ್ದೇಶಸಾಧನೆಗಾಗಿ ಈ ಕೊಂಗ್ರೆಸು ಪಕ್ಷವು ಪ್ರಯತ್ನಮಾಡುವುದಿಲ್ಲ. ಗಾಂಧಿ ತತ್ವಜ್ಞಾನಿಗಳು ಆಧುನಿಕ ಜಗತ್ತಿನ ಗಹನವಾದ ರಾಜಕೀಯ ಸಮಸ್ಯೆಗಳನ್ನು ಪರಾಂಭರಿಸಲು ಪ್ರಯತ್ನಪಡುವುದಿಲ್ಲ. ಅಲ್ಲಿನ ರಾಜಕೀಯದಂತೆ ಕೊಂಗ್ರೆಸ್ಸಿನ ಧ್ಯೇಯ ಭಾವನೆಗಳೂ ಬಹಳ ಹಿಂದಿನವು ಆಗಿವೆ. ಗಾಂಧಿಯ ಅಹಿಂಸಾತ್ಮಕ ಧೋರಣೆಯು ಆ ದೇಶದ ಗುಲಾಮಗಿರಿಯನ್ನು ಪ್ರತಿಬಿಂಬಿಸುವಂತಿದೆ. ಇಂದಿನ ಸಮಸ್ಯೆಗಳಿಗೆ ಅದು ತಕ್ಕುದಾದುದಲ್ಲ.

ದೊಡ್ಡ ಯಂತ್ರ ಕೈಗಾರಿಕೆಗಳು ಅಭಿವೃದ್ಧಿಹೊಂದದೆ ಯಾವ ಆಧುನಿಕ ರಾಷ್ಟ್ರವೂ ಶ್ರೇಯಸ್ಕರವಾಗಿ ಬಾಳಲಾರದು. ಆದರೆ ಗಾಂಧಿತತ್ವದ ಪ್ರಕಾರ ದೊಡ್ಡ ಯಂತ್ರಗಳು ಬಹಿಷ್ಕಾರ ಯೋಗ್ಯವಾದವುಗಳೆಂದೆಣಿಸಿವೆ. ಸ್ವಾತಂತ್ರ್ಯಕ್ಕೆ ಹೋರಾಡುವ ಸಂಸ್ಥೆಯೊಂದಕ್ಕೆ ಇಂತಹ ತದ್ವಿರೋಧ ಧ್ಯೇಯ ಧೋರಣೆಗಳಿರಬಾರದಿತ್ತು.

ಇನ್ನು ಮತೀಯ ಪಕ್ಷಗಳ ರಾಜಕೀಯ ಗೊತ್ತುಗುರಿಗಳು ಇನ್ನೂ ಹೆಚ್ಚಿನ ಪುರಾತನ ದೃಷ್ಟಿಯನ್ನು ಪ್ರದರ್ಶಿಸುತ್ತವೆ. ಇವರಿಗೆ ದೇಶಗಿಂತ ಜಾತಿಮತವೇ ಪ್ರಧಾನ ವಿಷಯವಾಗಿದೆ. ಅನೇಕ ಜಾತಿ ಪಂಗಡಗಳಿರುವುದರಿಂದ ಅಸ್ಪೃಶ್ಯರೆಂಬ ಜನರು ತಮ್ಮ ಬೇರೆ ಸಂಸ್ಥೆಯೊಂದನ್ನೇ ಮಾಡಿಕೊಳ್ಳುವಂತಹರಾದರು.

ಭಾರತವು ಪ್ರಜಾಪ್ರಭುತ್ವದ ಹಾದಿಯಲ್ಲಿ ನಡೆಯದಂತೆ ತಡೆಯುವ ಇನ್ನೊಂದು ಸ್ವತಂತ್ರವಲ್ಲದಿದ್ದರೂ ಪ್ರಧಾನವಾದ ಪಕ್ಷವೆಂದರೆ ದೇಶಿಯ ರಾಜರುಗಳು. ಮಧ್ಯಕಾಲದ ಪಾಳಯಗಾರ ಪದ್ಧತಿಯನ್ನೇ ಶಾಶ್ವತಗೊಳಿಸುವುದು ಇವರಿಗೆ ಅತೀ ಪ್ರಿಯವೆಂದು ಅನೇಕ ನಿದರ್ಶನಗಳಿಂದ ತೋರಿ ಬರುತ್ತದೆ.

ಕ್ರಿಪ್ಸ್ ಕೊಡುಗೆ

೧೯೩೫ರಲ್ಲಿ ಜಾರಿಗೆ ತರಲ್ಪಟ್ಟ ಹೊಸ ರಾಜ್ಯಾಂಗ ಘಟನೆಯಿಂದ ದೇಶದ ಸ್ಥಾನಮಾನದಲ್ಲಿ ಯಾವ ಸುಧಾರಣೆಯಾದಂತಿಲ್ಲ. ಭಾರತಕ್ಕೆ ಯುದ್ಧದಲ್ಲಿ ಭಾಗವಿದೆ ಎಂದು ಸಾರಲ್ಪಟ್ಟಾಗ ಬೇರೆ ಬೇರೆ ಪಕ್ಷಗಳು ಬೇರೆ ಬೇರೆ ತರದಲ್ಲಿ ನೊಂದುಕೊಂಡವು. ದೇಶಿ ರಾಜರೂ ಮತ್ತು ಲಿಬರಲ್ ಪಕ್ಷದವರು ಮಾತ್ರ ಬ್ರಿಟನಿಗೆ ತಮ್ಮ ಹೃತ್ಪೂರ್ವಕ ಬೆಂಬಲವನ್ನು ಕೊಟ್ಟರು.

ಸಂಪೂರ್ಣ ಅಧಿಕಾರವುಳ್ಳ ರಾಷ್ಟ್ರೀಯ ಸರಕಾರ ಕೊಡಬೇಕೆಂದು ಕೊಂಗ್ರೆಸು ಕೇಳಿದಾಗಲೇ ಕ್ರಿಪ್ಸ್ ಸಾಹೇಬರ ಪ್ರಯತ್ನಗಳು ಅಪಯಶಸ್ವಿಯಾದವು. ಅಂದಿನಿಂದ ಸರಕಾರ ಮತ್ತು ಕೊಂಗ್ರೆಸಿನೊಳಗಿನ ಬಿಕ್ಕಟ್ಟು ವಿಶಾಲವಾಗುತ್ತಾ ಹೋಗಿದೆ. ಕಳೆದ ಓಗಸ್ಟಿನಲ್ಲಿ ಕೊಂಗ್ರೆಸಿಗರು ಮಾಡಿದ ನಿರ್ಣಯದಿಂದ ಕೊಂಗ್ರೆಸ್ ಮುಖಂಡರು ಜೈಲು ಸೇರುವಂತಾಯಿತು. ಒಂದು ಸಾಮೂಹಿಕ ಚಳವಳವೂ ಆರಂಭವಾಯಿತು. ಅಚ್ಚು ರಾಷ್ಟ್ರಗಳವರು ಏಕಕಾಲದಲ್ಲಿ ಹರಡಿದ ಈ ಚಳವಳದ ಯೋಗ್ಯ ಅನುಕೂಲತೆಯನ್ನು ಪಡೆಯಲೂ ಪ್ರಯತ್ನಪಟ್ಟರು. ದೇಶವಿಶಾಲಕ್ಕೂ ಹರಡಿರದ ಈ ಚಳವಳದ ಲಕ್ಷಣವು ಕೆಲವು ಪ್ರಾಮುಖ್ಯ ಕಡೆಗಳಲ್ಲಿ ಮಾತ್ರ ತಲೆಯೆತ್ತಿದುದರಿಂದ ಬಹುಬೇಗನೇ ಕಡಿಮೆಯಾಯಿತು.

೧೯೪೪ರ ಸೆಪ್ಟೆಂಬರದಲ್ಲಿ 'ವೊಶಿಂಗ್ಟನ್ ಪೋಸ್ಟ್' ಎಂಬ ಅಮೇರಿಕನ್ ಪತ್ರಿಕೆಯು 'ಈ ಯುದ್ಧವು ತನ್ನದೆಂದು ಹೇಳಿಕೊಳ್ಳಲು ಭಾರತಕ್ಕೆ ಯೋಗ್ಯ ಕಾರಣಗಳೇ ಹೆಚ್ಚಾಗಿ ಇಲ್ಲ' ಎಂಬರ್ಥದ ಅಭಿಪ್ರಾಯವನ್ನು ಪ್ರಕಟಮಾಡಿತು. ೧೯೪೨ರ ಓಗಸ್ಟ್ ನಂತರ ಭಾರತ ರಾಜಕೀಯ ರಂಗದಲ್ಲಿ ಉಂಟಾದ ಸ್ತಬ್ಧತೆಯು ನಿರಾಶಾದಾಯಕವೂ ಅತೃಪ್ತಿಕರವೂ ಆಗಿ ಪರಿಣಮಿಸಿತು.

ಆರೋಗ್ಯಕರವಾದ ರಾಜಕೀಯ ಸುಸ್ಥಿತಿ ಇಲ್ಲದಿರುವುದೇ ಭಾರತದೊಳಗಿನ ಇಂದಿನ ಜಾತಿಮತ ಕಲಹಗಳಿಗೆ ಕಾರಣವಾಗಿರುತ್ತದೆಂದು ಹೇಳಬಹುದು. ಪ್ರತ ಪ್ರತ್ಯೇಕ ಮತದಾನದ ಹಕ್ಕು, ಸೈನ್ಯ ಮತ್ತು ಐ. ಸಿ. ಎಸ್ ಖಾತೆಗಳಿಗೆ ಜಾತಿವಾರು ಪದ್ಧತಿಯಲ್ಲಾಗುವ ಚುನಾವಣೆ ಇವುಗಳೂ ಉದ್ವೇಗಗೊಳ್ಳುವ ಕೋಮು ಕಲಹಕ್ಕೆ ಬೇರೆ ಕಾರಣಗಳು. ಗಾಂಧಿ—ಜಿನ್ನಾ ಮಾತುಕತೆಗಳು ಯಶಸ್ವಿಯಾಗುವ ಸಂಭವ ಕಂಡುಬಂದಾಗ ಬ್ರಿಟನಿನ ಪ್ರಾಮುಖ್ಯ ಸರಕಾರ ಅಭಿಪ್ರಾಯ ಸೂಚಿಸುವ ಟ್ಯಾಮ್ಸ್ ಪತ್ರಿಕೆಯು ಸಕಾಲದಲ್ಲಿ ಮತ್ತೆ ಈ ಕೆಳಗಿನಂತೆ ಕೋಮು ಕಲಹದ ಕುರಿತು ಭವಿಷ್ಯ ಹೇಳಿತು: "ಹಿಂದೂ ಮುಸಲ್ಮಾನರೊಳಗೆ ಒಪ್ಪಂದವಾದರೂ ಬಿಕ್ಕಟ್ಟು ಸುಲಭವಾಗಿ ಪರಿಹಾರವಾದಂತಾಗುವುದಿಲ್ಲ. ಕಾರಣ ಇನ್ನೂ ಸಿಕ್, ಅಸ್ಪೃಶ್ಯ ಮತ್ತು ದೇಶಿ ರಾಜರ ಸಮಸ್ಯೆಗಳು ಅಲ್ಲೇ ಇತ್ಯರ್ಥಗೊಳ್ಳದೆ ಕೊಳೆಯುತ್ತಿವೆ" ಇದು ಕಲಹಕ್ಕೆ ಹೆಚ್ಚಿನ ಉತ್ತೇಜಕವಾದ ಅಭಿಪ್ರಾಯವು.

ಪ್ರಜಾಪ್ರಭುತ್ವದ ಅವಶ್ಯಕತೆ

ಭಾರತದ ವಸಾಹತು ಪರಿಸ್ಥಿತಿಯಿಂದ ಅಲ್ಲಿ ಇಂದು ಅನೇಕ ರೀತಿಯ ಸಮಸ್ಯೆಗಳು ಉದ್ಭವಿಸಿವೆ. ಅದು ಬಹು ಜನಾಂಗ ಮಿಶ್ರಿತ ದೇಶ. ಜಾತಿಮತ ಭಾವನೆಯು ಅಲ್ಲಿಯ ರಾಜಕೀಯದಲ್ಲಿ ಬಹುಮಟ್ಟಿನ ದುಷ್ಪರಿಣಾಮವನ್ನುಂಟುಮಾಡುತ್ತವೆ. ಕೆಲವು ಪ್ರಭಾವಶಾಲಿ ವರ್ಗಗಳು ಅಲ್ಲಿ ರಾಜಕೀಯ ಮತ್ತು ಮತೀಯ ಭೇದಾಭೇದಗಳನ್ನು ಶಾಶ್ವತಮಾಡಲು ಪ್ರಯತ್ನಿಸುತ್ತಿವೆ. ಅಲ್ಲಿನ ಸಮಸ್ಯೆಯನ್ನು ಬಿಡಿಸುವುದು ಕಷ್ಟಕರವೇ ಸರಿ. ಆದರೂ ಯಾವುದಾರೊಂದು ಇತ್ಯರ್ಥಕ್ಕೆ ಅನೇಕರು ಹಾತೊರೆಯುವರು. ಭಾರತದ ರಾಜಕೀಯ ಹಿಂದುಳಿತವನ್ನು ಸುಧಾರಿಸುವುದರಲ್ಲೇ ಯಶಸ್ವಿಯಾದ ಸಮಸ್ಯೆ ಇತ್ಯರ್ಥಕ್ಕೆ ಸಾಧನವಾದ ಮಾರ್ಗವಾಗಿದೆ.

ಯೋಗ್ಯ ಪ್ರಜಾಪ್ರಭುತ್ವ ತತ್ವವನ್ನು ಅಲ್ಲಿ ಜಾರಿಗೆ ತರುವುದು ಅತ್ಯಾವಶ್ಯಕವಿದೆ. ಜಾತಿಮತ, ಜನಾಂಗ ಭೇದವಿಲ್ಲದ ತತ್ವ ಧೋರಣೆಯನ್ನು ಅನುಸರಿಸಿ ಒಂದು ರಾಜ್ಯಾಂಗ ಘಟನೆಯನ್ನು ಅಲ್ಲಿ ಸ್ಥಾಪಿಸಿದರೆ ಆ ದೇಶವು ತನ್ನ ದುಃಸ್ಥಿತಿಯಿಂದ ಬಹು ಬೇಗನೇ ತಲೆ ಎತ್ತಿ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಿ ಜಗತ್ತಿನ ಸ್ವತಂತ್ರ ಜನಾಂಗಗಳ ಶ್ರೇಣಿಯಲ್ಲಿ ಅದು ಶೀಘ್ರದಲ್ಲಿ ಒಂದು ಸ್ಥಾನ ಪಡೆಯುವುದರಲ್ಲಿ ಸಂದೇಹವಿಲ್ಲ.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು.

ಪ್ರಚಲಿತ ಸಮಾಚಾರಗಳು

ಭಾಷ್ಪಾಂಜಲಿ

ಜಗತ್ತಿನ ಆದ್ಯಂತವೆಲ್ಲಾ ಇಂದು ದಿವಂಗತ ಅಮೇರಿಕನ್ ಅಧ್ಯಕ್ಷರ ಗುಣ ಕಥನ, ವ್ಯಕ್ತಿಪ್ರಭಾವ, ಶ್ರೇಷ್ಠತೆಗಳಿಗೆ ಗೌರವನೀಯ ಶ್ಲಾಘನೆ ಸಲ್ಲಿಸುವುದರಲ್ಲಿ ಮಗ್ನವಾಗಿದೆ. ಶತ್ರುಮಿತ್ರರೆಲ್ಲರೂ ಅವರ ಅಕಾಲ ನಿಧನಕ್ಕಾಗಿ ಶೋಕ ಪ್ರದರ್ಶಿಸಿದ್ದು ಅವರ ವರ್ಚಸ್ಸು ಕೀರ್ತಿಗಳಿಗೆ ಅಭೂತಪೂರ್ವ ಸನ್ಮಾನಗಳನ್ನು ಪ್ರಕಟಿಸಿರುವರು.

ಆಧುನಿಕ ಇತಿಹಾಸದ ವಿಶ್ವ ರಾಜಕಾರಣದಲ್ಲಿ ಅಸಮಾನ ಸಹಾನುಭೂತಿ ಸಹಕಾರವನ್ನು ನೀಡಿ ಮಾನವಕೋಟಿಗೇ ಎಂಬಂತೆ ಶಾಂತಿ ನೆಮ್ಮದಿಗಳಿಸಲು ತಮ್ಮ ಜನಾಂಗವನ್ನು ಶಸ್ತ್ರಧಾರಣೆಗೆ ಪ್ರೇರೇಪಿಸಲೂ ಹಿಂದುಮುಂದು ನೋಡದ ಆ ಸಂಯುಕ್ತ ಅಮೇರಿಕದ ಮೂವತ್ತೆರಡನೆಯ ಅಧ್ಯಕ್ಷರು ಅಜರಾಮರ ಕೀರ್ತಿಯನ್ನು ಗಳಿಸಿದರು. ರೂಸ್‌ವೆಲ್ಟ್ ಎಂಬ ಹೆಸರು ಜನಜನಿತವಾಗಿತ್ತು.

ಕತ್ತಲೆಯ ಆಫ್ರಿಕದಲ್ಲೂ, ಹಿಮಮಯವಾದ ಫಿನ್‌ಲೆಂಡಿನಲ್ಲೂ, ನಿರಂಕುಶ ಪ್ರಭುತ್ವದ ಹೈದರಾಬಾದಿನಂತಹ ಭಾರತೀಯ ದೇಶಿಸಂಸ್ಥಾನದಲ್ಲೂ ಅವರ ನಿಧನಕ್ಕಾಗಿ ಕೋರ್ಟು ಕಛೇರಿಗಳಿಗೆ ಒಂದು ದಿನದ ರಜೆಯು ಕೊಡಲ್ಪಟ್ಟಿತು. ಅವರು ಇನ್ನು ಜೀವಂತವಿರುತಿದ್ದರೆ ಅದೆಂತಹ ವಿಶ್ವೋದ್ಧಾರದ ಕಾರ್ಯಗಳನ್ನು ಮಾಡುತಿದ್ದರೊ ಹೇಳಬರುವುದಿಲ್ಲ.

◆ ◆ ◆

ಶತ್ರು ದೇಶಗಳಲ್ಲಿ

ಇಂದು ಅಮೇರಿಕದ ಕಡುವೈರಿಗಳಾದ ಜರ್ಮನ್ ಜಪಾನುಗಳಲ್ಲಿಯೂ ಕೀರ್ತಿಶೇಷ ರೂಸ್‌ವೆಲ್ಟರಿಗೆ ಮನ್ನಣೆ ದೊರಕಿದೆ ಎಂಬ ವಿಷಯವು ಗಣನೀಯವಾದುದು.

ಜಪಾನಿ ಪ್ರಧಾನ ಮಂತ್ರಿ ಸುಜುಕಿಯವರು 'ಅಮೇರಿಕನ್ ಅಧ್ಯಕ್ಷರ ಮರಣದಿಂದ ಅವರ ಪ್ರಜೆಗಳಿಗೆ ಉಂಟಾದ ಸಂತಾಪದಲ್ಲಿ ತಮ್ಮ ಸಹಾನುಭೂತಿ'ಯನ್ನು ವ್ಯಕ್ತಪಡಿಸಿದರಂತೆ. ಅದರ ಕೊನೆಯಲ್ಲಿ ಹೀಗೆ ಹೇಳಿದರು: 'ಅಧ್ಯಕ್ಷ ರೂಸ್‌ವೆಲ್ಟರ ನಾಯಕತ್ವವು ಬಹಳ ಪರಿಣಾಮಕಾರಿಯಾಗಿದ್ದು ಇಂದಿನ ಅವರ ಇಷ್ಟೊಂದು ಪ್ರಗತಿಗೆ ಕಾರಣವಾಗಿದೆ ಎಂದು ಒಪ್ಪಲೇ ಬೇಕು. ಆದರೆ ಬ್ರಿಟಿಷ್ ಅಮೇರಿಕನ್ನರು ಸಂಯುಕ್ತ ಶಕ್ತಿಬಲದಿಂದ ಜಗತ್ತನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳಬಯಸುದುದರ ವಿರೋಧವಾಗಿ ನಾವು ಏಷ್ಯದಲ್ಲಿ ಪರಸ್ಪರ ಪ್ರಭಾವದ ಕ್ಷೇತ್ರಗಳನ್ನು ಸ್ಥಾಪಿಸಿ, ಪರಸ್ಪರ ಸಹಾಯಕ ಜನಾಂಗಗಳಾಗಿ ಬಾಳಬೇಕೆಂಬ ನಿರ್ಧಾರವನ್ನು ಮಾತ್ರ ನಾವು ಕಡಿಮೆ ಮಾಡುವಹಾಗಿಲ್ಲ.'

ಇತ್ತೀಚೆಗೆ ಪ್ರಧಾನ ಪದವಿಗೇರಿಸಲ್ಪಟ್ಟ ೭೭ ವರ್ಷದ ಈ ಜಪಾನೀ ರಾಜಕಾರಣಿಗಳು ಶಾಂತಿ ಷರ್ತಗಳನ್ನು ಮುಂದೆ ತಂದು ಯುದ್ಧ ಸಮಾಪ್ತ ಮಾಡಬಹುದೆಂಬ ನಿರೀಕ್ಷೆ ಅನೇಕರಲ್ಲಿತ್ತು. ಆದರೆ ಇಂದಿನ ಅವರ ಧೋರಣೆಯನ್ನು ಪರಿಶೀಲಿಸಿದರೆ ಅದಕ್ಕೆ ಯಾವ ಆಧಾರವೂ ಕಂಡುಬರುವುದಿಲ್ಲ.

◆ ◆ ◆

ಜರ್ಮನ್ ರೇಡಿಯೋ ಕೂಗು

ಮಾತಿನ ಶೈಲಿಯಿಂದ ಜರ್ಮನರ ಕುಂಟುಕಾಲಿನ ಪ್ರಚಾರ ಮಂತ್ರಿ ಡಾ। ಗೊಬೆಲ್ಸನೇ ಬರೆದು ಕೊಟ್ಟಂತಿರುವ ಒಂದು ಟೀಕೆಯು ಬರ್ಲಿನ್ ರೇಡಿಯೊ ವಕ್ತಾರನು ಘೋಷಿಸಿದನು:—"ಹಿಟ್ಲರನನ್ನು ಪಾರು ಮಾಡಿದ ಮಹಾ ಶಕ್ತಿ ಮೃತ್ಯುವು ಈ ಯುದ್ಧ ಪರಿಶೋಧನಗಾರನನ್ನು ಕೊಂಡು ಹೋಯಿತು. ಎರಡನೇ ಮಹಾ ಯುದ್ಧಕ್ಕೆ ಮುಖ್ಯ ಕಾರಣಭೂತನಾದ ವ್ಯಕ್ತಿಯು ಅದರ ಅಂತ್ಯವನ್ನು ಕಾಣಲು ಉಳಿಯದಿದ್ದುದು ನಮಗೆ ತುಂಬಾ ಸಮಾಧಾನವನ್ನುಂಟು ಮಾಡಿದೆ."

ಈ ಮಾತುಗಳಿಂದ ಜರ್ಮನ್ ರೇಡಿಯೋ ಪ್ರಚಾರಕರು ಅಂತಃರಾಷ್ಟ್ರೀಯ ರೇಡಿಯೋ ಶಿಷ್ಟಸಾಂಪ್ರದಾಯದ ಕಟ್ಟಳೆಯನ್ನು ಮುರಿದಿರುವರು ಎಂದು ಅಮೇರಿಕದ ವಾರ್ತಾ ಸಂಸ್ಥೆಗಳು ಟೀಕಿಸಿವೆ.

◆ ◆ ◆

ಅಧ್ಯಕ್ಷರೂ ಅವರ ಧ್ಯೇಯವೂ

ಇಷ್ಟೊಂದು ಅಪಾರ ಕೀರ್ತಿಗೆ ಕಾರಣವಾದ ಅಮೇರಿಕನ್ ಅಧ್ಯಕ್ಷರ ಜೀವನ ಧ್ಯೇಯವಾದರೂ ಹೇಗಿತ್ತು? ಜಗತ್ತಿನ ನೊಂದ ಜನತೆಗಾಗಿ ಅವರ ಹೃದಯದಲ್ಲಿ ಸಹಾನುಭೂತಿ ಮಾನವೀಯತೆಯ ಸ್ಥಾನಗಳಿದ್ದುವು. ನಿರ್ಮಲ ಪ್ರಜಾಪ್ರಭುತ್ವವಾದಿಗಳಾದ ಅವರು ಬದುಕಿದ್ದರೆ ಸಾಮ್ರಾಜ್ಯವಾದಿಗಳನ್ನು ಪರಿವರ್ತಿಸಿ, ವರ್ಣ ಜನಾಂಗದ ತಾರತಮ್ಯಗಳನ್ನು ಕೊನೆಗೊಳಿಸಿ ಚಿಕ್ಕ ದೊಡ್ಡ ಎಲ್ಲಾ ಜನಾಂಗಗಳೂ ಸ್ವಾತಂತ್ರ್ಯ ಸೌಹಾರ್ದದಿಂದಿರುವಂತೆ ಮಾಡುತಿದ್ದರೆಂಬುದಕ್ಕೆಯಾರೂ ಸಂದೇಹ ಪಡುವಂತಿಲ್ಲ.

ಆದುದರಿಂದ ಇಂದು ಇಂತಹ ಉನ್ನತ ಧ್ಯೇಯವಾದಿಗಳ ಮರಣದಲ್ಲಿ ಸಂತಾಪ ಶೋಕ ಸೂಚಿಸಿದವರು ಅವರ ಉದಾತ್ತ ತತ್ವಗಳನ್ನು ಪರಿಪೂರ್ಣಗೊಳಿಸುವುದಕ್ಕೆ ಪ್ರಯತ್ನ ಪಡುವರೆಂದು ಹಾರೈಸಿದರೆ ಅತಿಶಯವಲ್ಲ. ಬರೀ ಬಾಯಿ ಮಾತಿನಿಂದ ಕೀರ್ತಿ ಶೇಷ ಅಧ್ಯಕ್ಷರನ್ನು ಹೊಗಳುವುದಕ್ಕಿಂತ ಕಾರ್ಯರೂಪದಲ್ಲಿ ಅವರ ಜೀವನ ಧ್ಯೇಯಗಳನ್ನು ಜಗತ್ತಿನಲ್ಲಿ ಪರಿಪೂರ್ಣಗೊಳಿಸುವುದರಲ್ಲಿ ಮುಂದಿನ ಅವರ ಮಿತ್ರರ ಕರ್ತವ್ಯವು ಅಡಗಿಕೊಂಡಿದೆ.

◆ ◆ ◆

ಫ್ರಿಸ್ಕೊ ಯಶಸ್ವಿಯಾಗಲಿ

ರೂಸ್‌ವೆಲ್ಟರ ವ್ಯಕ್ತಿತ್ವಕ್ಕೆ ಯೋಗ್ಯವಾದ ಮನ್ನಣೆ ಕೊಡುವುದೆಂದರೆ ಫ್ರಿಸ್ಕೊ ಶಾಂತಿ ಪರಿಷತ್ತನ್ನು ಯಶಸ್ವಿಯಾಗಿಯೂ ತೃಪ್ತಿಕರವಾಗಿಯೂ ನಿರ್ವಹಿಸುವುದು. ಹೊಸ ಅಧ್ಯಕ್ಷರು ಆಗಲೇ ಅದಕ್ಕಾಗಿ ಸರ್ವ ಪ್ರಯತ್ನಗಳನ್ನು ಮಾಡಲೇರ್ಪಡಿಸಿದ್ದಾರೆ. ರೂಸ್‌ವೆಲ್ಟರ ಅತೀ ಹತ್ತಿರದ ರಾಜಕೀಯ ತಜ್ಞರನ್ನೂ ಅಧ್ಯಕ್ಷ ಟ್ರುಮಾನರು ಹತ್ತಿರ ಕರೆಸಿರುವರು.

ರಷ್ಯವು ಫ್ರಿಸ್ಕೊ ಪರಿಷತ್ತಿಗೆ ಮೊದಲು ತನ್ನ ಅಮೇರಿಕನ ರಾಯಭಾರಿಯನ್ನು ಹೋಗುವಂತೆ ಏರ್ಪಡಿಸಿತ್ತು. ಆದರೆ ಅಧ್ಯಕ್ಷ ಟ್ರೂಮಾನರು ಸ್ಟೇಲಿನರಿಗೆ ವಿನಂತಿಸಿ ರಷ್ಯದ ವಿದೇಶಾಂಗ ಮಂತ್ರಿ ಮೊಲೊಟೊವರನ್ನು ಕಳುಹಿಸುವಂತೆ ಕೇಳಿಕೊಂಡರು. ಅದಕ್ಕೆ ಸ್ಟೇಲಿನರೂ ಒಪ್ಪಿರುವರು.

ಆ ಪರಿಷತ್ತಿಗೆ ಪ್ರತಿ ನಿಧಿಗಳಾಗಿ ಕಳುಹಿಸಲ್ಪಡುವವರು ಆಯಾ ದೇಶದ ವಿದೇಶಾಂಗ ಮಂತ್ರಿಯ ಸಮಾನ ಅಧಿಕಾರವಿದ್ದವರಿದ್ದಾರೆ. ಆದರೆ ಭಾರತದಿಂದ ಬ್ರಿಟಿಷ್ ಸರಕಾರ ನೇಮಿತ ಮೂವರು ಮಾತ್ರ ಕಳುಹಿಸಲ್ಪಟ್ಟಿದ್ದಾರೆ. ಇವರಿಗೆ ಸ್ವತಂತ್ರ ಅಧಿಕಾರವೂ, ಧೋರಣೆಯೂ, ದೇಶದ ಜನತೆಯ ಪರವಾದ ಪ್ರಾತಿನಿಧ್ಯವೂ ಇಲ್ಲವೆಂದು ಅನೇಕ ರಾಷ್ಟ್ರೀಯವಾದಿ ಮುಖಂಡರೂ ಪ್ರತಿಕೆಗಳೂ ಟೀಕಿಸಿವೆ. ಸಕಾಲದಲ್ಲಿ ಈ ಕೊರತೆಯನ್ನು ಪ್ರಜಾಪ್ರಭುತ್ವ ಪ್ರಿಯರಾದ ಬ್ರಿಟಿಷ್ ಸರಕಾರದವರು ನೀಗುವರೇ?

◆ ◆ ◆

ಆತ್ಮಹತ್ಯವೇ ಗತಿ

ಫಿಲಿಪ್ಪಾನಿನಲ್ಲಿ ತಮ್ಮ ಪ್ರಜೆಗಳ ಮೇಲೆ ಕ್ರೂರವಾದ ರೀತಿಯಲ್ಲಿ ಜಪಾನಿಗಳು ದಬ್ಬಾಳಿಕೆ ನಡೆಸಿದರೆಂದೂ ಅವರಿಗೂ ತಟಸ್ಥರಿಗೆ ಸಲ್ಲಬೇಕಾದ ಸೌಯರ್ಕಗಳು ಒದಗಿಸಲಿಲ್ಲವೆಂಬ ಕಾರಣದಿಂದ ಸ್ಪೈನು ಜಪಾನಿನ ತನ್ನ ಸಂಬಂಧವನ್ನು ಕಡಿದುಕೊಂಡಿತು.

"ಈ ದುಡುಕು ತನದ ಧೋರಣೆಗಾಗಿ ಸ್ಪೈನು ಸಕಾಲದಲ್ಲಿ ಮರುಗಬೇಕಾಗುವುದು" ಎಂದು ಜಪಾನೀ ರೇಡಿಯೋದಲ್ಲಿ ಟೀಕಿಸಲಾಗಿದೆ. ಮಾತ್ರವಲ್ಲ ಇದು ತನಕ ಸ್ಪೆನೀಶ್ ಪ್ರಜೆಗಳಿಗೆ ಸಿಗುತಿದ್ದ ಅನುಕೂಲತೆಗಳಿಗೂ ಮಟ್ಟುಗೋಲು ಹಾಕಲಾಗುವುದೆಂದೂ ತಿಳಿಸಲಾಗಿದೆ.

ಈ ಸಂಬಂಧ ಮೆಡ್ರಿಡಿನಲ್ಲಿ ಜನರಲ್ ಫ್ರೆಂಕೋವಿನೊಂದಿಗೆ ಮಾತುಕತೆ ನಡೆಸುತಿದ್ದ ಜಪಾನಿ ರಾಯಭಾರಿಯು ತನ್ನ ಪ್ರಯತ್ನವು ಅಪಯಶಸ್ವಿಯಾದುದಕ್ಕೆ ತಾನು ಆತ್ಮ ಹತ್ಯ ಮಾಡಿಕೊಳ್ಳುವುದಾಗಿ ತಿಳಿಸಿರುವನಂತೆ. ಅವನ ಸುತ್ತ ಈಗ ಪಹರೆ ಇಡಲಾಗಿದೆ!



ನಾಜೀಗಳನ್ನು ಹೊಡೆವ ಭಾರತೀಯರು

ಪಂಚಮಸೇನೆಯ ಭಾರತೀಯ ಫಿರಂಗಿ ದಳದವರು ಜರ್ಮನಿಯ ದಕ್ಷಿಣ—ಪಶ್ಚಿಮದಲ್ಲಿರುವ ಬೊಲೊಸ್ನ್ ಬೆಟ್ಟ ಪ್ರದೇಶದಲ್ಲಿ ಕಾರ್ಯ ಮಗ್ನರಾಗಿರುವ ದೃಶ್ಯ—ಅಲ್ಲಿನ ಹಿಮ ಹೇಗಿದೆ!

ಅಭಿವೃದ್ಧಿ ತೋರಿಸುವ ಪಟ್ಟಿ

	1940	1942	1944
	ರೂಪಾಯಿ	ರೂಪಾಯಿ	ರೂಪಾಯಿ
ತೆತ್ತ ಭಂಡವಾಳ	8,98,000	14,96,000	26,84,000
ಕ್ಷೇಮನಿಧಿ	4,50,000	4,50,000	10,84,000
ಠೇವಣಾತಿಗಳು	86,72,000	1,45,51,000	2,80,69,000
ಸರಕಾರೀ ಭದ್ರತೆಗಳು	11,19,000	68,17,000	1,17,98,000
ಲಾಭಾಂಶ	72,000	1,58,000	2,75,000
ಜುಮ್ಲಾ ಸಂಪತ್ತು	1,08,44,000	2,07,85,000	8,46,46,000

ಸಂಖ್ಯೆಗಳೆಲ್ಲಾ ಸಾವಿರಗಳಿಗೆ ಸರಿಪಡಿಸಿದವುಗಳು

ನಮ್ಮ ಶಾಖೆಗಳು

ಕ್ವಿಲನ್	ಮಂಗಳೂರು	ಮಧುರಾ
ಅಲಪ್ಪೆ	ಬೆಂಗಳೂರು	ಸೇಲಮ್
ಎರ್ನಾಕುಲಮ್	ಬೆಳಗಾಂವ್	ಇರೋಡ್
ಕೊಚ್ಚಿನ್	ಧಾರವಾಡ	ಕೊಯಮುತ್ತೂರು
ಕಲ್ಲಿಕೋಟೆ	ಹುಬ್ಬಳ್ಳಿ	ಇತ್ಯಾದಿ, ಇತ್ಯಾದಿ.
ಕಣ್ಣಾನೂರು	ಚಿಕ್ಕಮಗಳೂರು	

ಮುಂಬಾಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪಾಯಿ 26 ಲಕ್ಷ. ಕ್ಷೇಮನಿಧಿ ರೂಪಾಯಿ 10 ಲಕ್ಷ.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited.)

೧೪ ಕೋಟಿ ಜನರ ಮುಖಂಡ

ಶ್ರೇಷ್ಠ ಅಮೇರಿಕನನೊಬ್ಬನ ಮರಣ

ಯುದ್ಧ ಗೆದ್ದವ—ಶಾಂತಿಕಾಣದಾದ

ಶತ್ರುಗಳಿಂದ ಗೌರವಿಸಲ್ಪಟ್ಟ ಮಹಾವ್ಯಕ್ತಿ

ಲಂಡನಿನ ನಡು ರಾತ್ರೆಯಲ್ಲಿ ಅಮೇರಿಕದ ಅಧ್ಯಕ್ಷರ ಮಗನೊಬ್ಬನು ಸ್ನೇಹಿತರೊಂದಿಗೆ ಸಂಭಾಷಿಸುತಿದ್ದಾಗ ಹಾಡುತಿದ್ದ ರೇಡಿಯೊ ಪಕ್ಕನೇ ನಿಂತಿತು. ಮರುಕ್ಷಣದಲ್ಲಿ "ಅಧ್ಯಕ್ಷ ರೂಸ್‌ವೆಲ್ಟರು ಇಂದು ೩ ಗಂಟೆಗೆ ಮರಣ ಪಟ್ಟರು" ಎಂಬ ಗಂಭೀರ ಮಾತಿನ ವಾರ್ತೆಯು ಕೇಳಿಬಂತು. "ಇದು ನಂಬಲಸಾಧ್ಯ—ಇಲ್ಲ ಇದು ಸಾಧ್ಯವಿಲ್ಲ" ಎಂದು ಗದ್ಗದ ಕಂಠದಲ್ಲಿ ಉದ್ಗರಿಸುತ್ತಾ ಮಗ ಯಿಲಿಯಟ್ ರೂಸ್‌ವೆಲ್ಟನು ಹತ್ತಿರದ ವಿಮಾನ ನಿಲ್ದಾಣಕ್ಕೆ ಹೋಗಲನುವಾದನು.

ಹೌದು! ನಂಬಲು ಸಾಧ್ಯವಿಲ್ಲದಂತಹ ವರ್ತಮಾನವಿದು. ಯಾರೂ ಕನಸು ನೆನಸಿನಲ್ಲಿ ನೆನಸದಂತಹ ವಿಷಯ. ಆದರೆ ವಿಧಿ ಲೀಲೆಯು ವಿಚಿತ್ರವಾದುದಲ್ಲವೆ?

ಸಂಯುಕ್ತ ಅಮೇರಿಕದ ಜೋರ್ಜಿಯಾ ಪ್ರಾಂತ್ಯದ ಒಂದು ಬೆಟ್ಟದ ವಿರಾಮ ಗೃಹದಲ್ಲಿ ವಿಶ್ರಾಂತಿ ಪಡೆಯಲೆಂದು ಹೋದ ಅಧ್ಯಕ್ಷ ರೂಸ್‌ವೆಲ್ಟರು ಅಂದು (ತಾ. ೧೨) ಮಧ್ಯಾಹ್ನ ಒಂದು ಕಾಲು ಘಂಟೆಯ ತನಕ ಆರೋಗ್ಯವಂತರಾಗಿದ್ದರು. ಓರ್ವ ಕಲಾಗಾರನು ಅವರ ಚಿತ್ರವನ್ನು ಬರೆಯುತಿದ್ದ. ಇರ್ವ ಮಹಿಳೆಯರು ಅಡಿಗೆ ಕೋಣೆಯ ಏರ್ಪಾಡಿನಲ್ಲಿದ್ದರು.

ಪಕ್ಕನೆ ಅಧ್ಯಕ್ಷರೆಂದರು: "ಭಯಂಕರ ತಲೆ ನೋವುಉಂಟಾಗಿದೆ ನನಗೆ" ಅದೇ ಅವರ ಕೊನೆಯ ಮಾತುಗಳು. ರಕ್ತನಾಳಗಳ ಪ್ರಹಾವ ತಡೆಯುವ ಪರೆಗಳು ಒಂದೇ ಸವನೆ ಹರಿದು ಹೋದಂತಾಗಿ ರಕ್ತವು ಭಯಂಕರ ರಭಸದಿಂದ ಮಿದುಳಿಗೆ ಹರಿಯ ತೊಡಗಿದುದೇ ಆ ತಲೆ ನೋವಿಗೆ ಕಾರಣ.

ಅಧ್ಯಕ್ಷರು ಮತ್ತೆ ಮಾತಾಡಲಿಲ್ಲ. ಅವರ ವೈದ್ಯರು ಬಂದರು. ಸ್ವಂತ ಕಾರ್ಯದರ್ಶಿಗಳು ಬಂದರು. ೩ ಗಂಟೆ ೪೫ ನಿಮಿಷಕ್ಕೆ ಮೃತ್ಯುವು ಅಮೇರಿಕದ ೧೪ ಕೋಟಿ ಜನರ ಅಧ್ಯಕ್ಷರನ್ನು ವಶಪಡಿಸಿ ಕೊಂಡಿತು.

ನಾಲ್ಕು ಜನ ಮಕ್ಕಳು ಯುದ್ಧ ರಂಗದ ನಾಲ್ಕು ಕಡೆಗಳಲ್ಲಿ; ಹೆಂಡತಿ ರಾಜಧಾನಿ ವೊಶಿಂಗ್ಟನ್ನಿನಲ್ಲಿ. ಇಬ್ಬರು ಮಕ್ಕಳು ಜರ್ಮನ್ ರಂಗದಲ್ಲೂ ಇಬ್ಬರು ಜಪಾನ್ ರಂಗದಲ್ಲೂ ಅಮೇರಿಕನ್ ದಳಗಳೊಂದಿಗೆ ಇದ್ದರು.

ಜರ್ಮನ್ ರೇಡಿಯೊ "ಈ ಮಹಾ ವ್ಯಕ್ತಿಗಳು ಅನಾವಶ್ಯಕವಾಗಿ ಯುರೋಪಿನ ಯುದ್ಧದಲ್ಲಿ ಕೈಯೊಡ್ಡಿ ತಮ್ಮ ಶ್ರೇಷ್ಠತೆಗೆ ಕುಂದು ತಂದು ಕೊಂಡರು." ಎಂದಿತು.

ಟೋಕಿಯೋ ರೇಡಿಯೊವು ಅಧ್ಯಕ್ಷರ ಮರಣವನ್ನು ಸಾರುತ್ತಾ: "ಆ ಮಹಾಪುರುಷನ ಗೌರವಾರ್ಥವಾಗಿ ವಿಶೇಷ ಸಂಗೀತ ಕಾರ್ಯಕ್ರಮವನ್ನು ಪ್ರಚಾರಿಸುತ್ತೇವೆ" ಎಂದಿತು.

ಇಂದಿಗೆ ಅರುವತ್ತಮೂರು ವರ್ಷಗಳ ಹಿಂದೆ ಶ್ರಿಮಂತ ಕುಟುಂಬವೊಂದರಲ್ಲಿ ಜನಿಸಿ ಹರ್‌ವಾರ್ಡ್ ವಿಶ್ವವಿದ್ಯಾಲಯದ ಪದವೀಧರರಾಗಿ, ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವಕಾಲತು ಪಾಸು ಮಾಡಿದರು. ಹುಟ್ಟೂರಾದ ನ್ಯೂಯೋರ್ಕಿನಲ್ಲಿ ವಕಾಲತು ವೃತ್ತಿ ಸ್ಥಾಪಿಸಿದರು.

ಮೆಲ್ಲನೆ ರಾಜಕೀಯರ ಕಡೆಗೆ ಆಕರ್ಷಿಸಲ್ಪಟ್ಟು ೨೮ನೇ ವಯಸ್ಸಿನಲ್ಲಿ ಶಾಸನ ಸಭಾ ಸದಸ್ಯರಾಗಿ ಚುನಾಯಿತರಾದರು. ೩೧ನೇ ಪ್ರಾಯದಲ್ಲಿ ನೌಕಾ ಖಾತೆಯ ಉಪಕಾರ್ಯದರ್ಶಿಗಳಾಗಿ ೧೯೨೦ರ ಕೆಲಸ ಮಾಡಿ ಜನ ಪ್ರಿಯರಾದರು.

ಮೊದಲು ನ್ಯೂಯೋರ್ಕಿನ ಗವರ್ನರರಾದರು. ನಂತರ ಅಧ್ಯಕ್ಷ ಪದವಿಗೂ ನಿಂತರು. ಆಗ ಅವರ ಒಂದು ಕಾಲು ವಾತದಿಂದ ನಿಷ್ಪ್ರಯೋಜಕವಾಗಿ ಹೋಗಿತ್ತು. ಆದರೂ ಅಂದಿನ ಚುನಾವಣೆಪ್ರಚಾರದಲ್ಲಿ ಎಂಟು ನೂರಕ್ಕೂ ಮಿಕ್ಕಿದ ಭಾಷಣಗಳನ್ನು ಮಾಡಿ ತಮ್ಮ ದೇಹ ಶಕ್ತಿಯ ಅಮೋಘ ಪ್ರದರ್ಶನ ಮಾಡಿದರು.

೧೯೩೩ರಲ್ಲಿ ಜರ್ಮನಿಯಲ್ಲಿ ಹಿಟ್ಲರನು ಅಧಿಕಾರಕ್ಕೆ ಬಂದಾಗಲೇ ಅಮೇರಿಕದಲ್ಲಿ ರೂಸ್‌ವೆಲ್ಟರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಭಯಂಕರ ನಿರುದ್ಯೋಗ ಆರ್ಥಿಕದುಃಸ್ಥಿಯ ಕಾಲವದು. ಆದರೂ ಸಾಮಾನ್ಯ ಜನರ ಮತ್ತು ಕೆಲಸಗಾರರ ಮೇಲೆ ಸಹಾನುಭೂತಿ ಭಾವವಿದ್ದ ಅವರು ತಮ್ಮ ದೇಶದ ಆಡಳಿತದಲ್ಲಿ ಪರಿಣಾಮಕಾರಿ ಸುಧಾರಣೆಗಳನ್ನು ತಂದು ಕೀರ್ತಿ ಪಡೆದರು.

ನಂತರ ೧೯೩೬ರಲ್ಲಿ ಮತ್ತೆ ಚುನಾವಣೆಗಳಾಗಲು ಪುನ: ಅವರೇ ಆರಿಸಿ ಬಂದರು. ತಿರುಗಿ ೧೯೪೦ರಲ್ಲೂ ಅವರಿಗೆ ಬಹುಮತ ದೊರಕಿತು. ಬ್ರಿಟನಿಗೆ ಯುದ್ಧದಲ್ಲಿ ಸಹಾಯ ಹಸ್ತವನ್ನು ನೀಡುತ್ತಾ ಬಂದಿದ್ದು ಕೊನೆಗೆ ಅವರೇ ಯುದ್ಧ ಜ್ವಾಲೆಯಲ್ಲಿ ದುಮುಕಬೇಕಾಗಿ ಬಂತು. ಒಪ್ಪಂದಚರ್ಚೆಗಳು ನಡೆಯುತಿದ್ದಾಗಲೇ ೧೯೪೧ರ ಡಿಸೆಂಬರದಲ್ಲಿ ಜಪಾನರು. ಪರ್ಲ್ ಹಾರ್ಬರ್ ಬಂದರದ ಮೇಲೆ ಒಂದೇ ಸವನೆ ಧಾಳಿಯಾರಂಭಿಸಿದರು.

೧೯೪೪ರಲ್ಲಿ ಪುನ: ಅಧ್ಯಕ್ಷ ಪದವಿಗೆ ಆರಿಸಿ ಬಂದರು. ಭಾರತದಲ್ಲಿ ಜವಾಹರಲಾಲ್ ನೆಹುರುಗಳು ಮೂರು ಭಾರಿ ಇಲ್ಲಿಯ ಕೊಂಗ್ರೆಸ್ ಅಧ್ಯಕ್ಷರಾಗಿದ್ದರೆ ರೂಸ್‌ವೆಲ್ಟರು ನಾಲ್ಕನೇ ಬಾರಿ ಅಲ್ಲಿಯ ಕೊಂಗ್ರೆಸಿನ ಅಧ್ಯಕ್ಷರಾದರು.

ಇಷ್ಟೊಂದು ಜನಪ್ರಿಯತೆಗೆ ಅವರ ಅನಾಸಕ್ತ ರಾಜಕೀಯ ಧೋರಣೆ, ಪ್ರಾಮಾಣಿಕ ಅಂತರ್‌ರಾಷ್ಟ್ರೀಯ ವ್ಯವಹಾರ ಪ್ರಿಯತೆ, ಶಾಂತಿ ಪ್ರಿಯತೆ ಮತ್ತು ಪ್ರಜಾಪ್ರಭುತ್ವದಲ್ಲಿನ ಆಳ ವಿಶ್ವಾಸಗಳೇ ಕಾರಣ. ರೂಸ್‌ವೆಲ್ಟರಲ್ಲದಿದ್ದರೆ ಇಂದು ಅಚ್ಚು ರಾಷ್ಟ್ರಗಳನ್ನು ಸೋಲಿಸುವುದು ವಿಪರೀತ ಕಷ್ಟಸಾಧ್ಯವಿತ್ತು.

ಕೊನೆಗೆ ತಮ್ಮ ತನುಮನಧನಗಳಿಂದ ಸರ್ವ ಶಕ್ತಿಯನ್ನು ಮಿತ್ರ ವಿಜಯಕ್ಕಾಗಿ ವರ್ಜಿಸಿ, ಹಿಟ್ಲರನ ಸೋಲನ್ನು ಇನ್ನು ಕೆಲವೇ ದಿನಗಳ ವಿಷಯವೆಂಬ ಪರಿಸ್ಥಿತಿಗೆ ತಂದಿದ್ದು, ಸೆನ್‌ಫ್ರೆನ್ಸಿಸ್ಕೊ ಪರಿಷತ್ತಿನಲ್ಲಿ ವಿಶ್ವದಲ್ಲಿ ಚಿರಶಾಂತಿಸ್ಥಾಪನೆಗಾಗಿ ಪ್ರಯತ್ನಿಸಬೇಕೆಂಬ ಮಹಾತ್ವಕಾಂಕ್ಷೆ ಮೃತಪಟ್ಟ ಅಮೇರಿಕನ್ ಅಧ್ಯಕ್ಷರಿಗಿತ್ತು. ಆದರೆ ಅವರ ಉಚ್ಚ ಧ್ಯೇಯಗಳ ದಾರಿಯಲ್ಲಿ ಮಿತ್ರ ಜನಾಂಗ ಮುಖಂಡರೆಲ್ಲರೂ ನಡೆದು ಅವರ ಪ್ರಿಯ ಧ್ಯೇಯಗಳನ್ನು ಜಗತ್ತಿನಲ್ಲಿ ಸ್ಥಾಪಿಸುವರೆಂದು ಆಶಿಸಲಾಗಿದೆ.

ಸ್ವಿಟ್ಜರ್‌ಲೆಂಡಿನ ಬೆಟ್ಟಗಳಲ್ಲಿ ಪ್ರಶಾಂತತೆ ನೆಲೆಸಿದೆ. ಕೆಳಗಿನ ಕಣಿವೆ ಪ್ರದೇಶಗಳ ಚಿಕ್ಕ ಊರುಗಳಲ್ಲಿ ಜನರು ಜಗತ್ತಿನ ಅತ್ಯುತ್ತಮ ಗಡಿಯಾರಗಳನ್ನು ತಯಾರಿಸುತ್ತಾರೆ. ಈಗ ಅವು ವೆಸ್ಟ್ ಎಂಡ್ ಮಾದರಿಗಳು ಕಳುಹಿಸಿ ಕೊಡಲ್ಪಡಲು ಕಾಯುತಿವೆ.

ಆಸುಪಾಸಿನ ಸಮರ ಸಾಗರದಲ್ಲಿ ಏರಿಳಿತಗಳು ಆಗುತ್ತಲೇ ಇವೆ. ಅನೇಕ ಮುಕ್ತ ದೇಶಗಳಲ್ಲಿ ಇನ್ನು ಸರಿಯಾದ ವಾಹನ ಚಲಾವಣೆ ವ್ಯವಸ್ಥೆಯಾಗಿಲ್ಲ.

ತೃಪ್ತಿಕರ ಪರಿಸ್ಥಿತಿ ಸ್ಥಾಪಿಸಲ್ಪಡುವ ತನಕ ಜನಪ್ರಿಯ ನಮ್ಮ ತಯಾರಿಕೆಗಳನ್ನು ಮುಟ್ಟಿಸುವುದು ಅಸಂಭವ ಈಗಿನ ದಾಸ್ತಾನುಗಳು ಅತ್ಯಲ್ಪವಾಗಿವೆ.

ಆದರೂ ನಾವು ಸರ್ವ ಪ್ರಯತ್ನಗಳನ್ನು ಮಾಡುತಿದ್ದೇವೆ. ನಮಗೆ ಈಗ ತಾತ್ಕಾಲಿಕ ವಸ್ತು ಕೊರತೆಯ ಕಾಲ ಬಂದಿದೆ. ನಮ್ಮಿಂದ ತಡೆಯಲು ಸಾಧ್ಯವಿಲ್ಲದೆ ಪರಿಸ್ಥಿತಿಯಿಂದ ಹೀಗಾಗಿರುತ್ತದೆಂದು ನಮ್ಮ ಗಿರಾಕಿಗಳು ತಿಳಕೊಳ್ಳುವರಾಗಿ ನಾವು ನಂಬುತ್ತೇವೆ.

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಾಯಿ, ಕಲ್ಕತ್ತಾ.

WEST END WATCH Co
BOMBAY . CALCUTTA

Makers of Quality Watches for over 75 Years.

ಅಮೇರಿಕದ ಅನಿರೀಕ್ಷಿತ ಅಧ್ಯಕ್ಷ

ಗದ್ದೆ ಹುಡುಗನಿಗೆ ಉನ್ನತ ಗದ್ದುಗೆ

ಶಾಸನ ಸಭೆಯಿಂದ-ವಿಶ್ವ ಪರಿಷತ್ತಿಗೆ

ತ್ರಿಮೂರ್ತಿಗಳಲ್ಲೊಬ್ಬರಾದ ನಮ್ರ ವ್ಯಕ್ತಿ

ದಿವಂಗತ ಅಧ್ಯಕ್ಷ ರೂಸ್‌ವೆಲ್ಟರುಕೀರ್ತಿ ಖ್ಯಾತಿಗಳಅದೆಷ್ಟು ಜಾಜ್ವಲ್ಯ ಮಾನವಾದ ಪ್ರಭಾಕಿರಣಗಳ ಶೋಭೆಯಲ್ಲಿ ಮೆರಿಯುತಿದ್ದರೊ, ಹೆರಿ ಟ್ರುಮಾನರು ರಹಸ್ಯದ ಕತ್ತಲಲ್ಲಿ ಅಷ್ಟೇ ಮುಚ್ಚಿಕೊಂಡಿದ್ದು, ವಿಶ್ವ ವಾರ್ತಾ ರಂಗದಲ್ಲಿ ಹೆಚ್ಚಿನವರಾರೂ ಅರಿಯದ ವ್ಯಕ್ತಿಗಳಾಗಿದ್ದರು.

ಅಮೇರಿಕದ ಅಧ್ಯಕ್ಷರಾಗಿ ಒಂದು ಸಲ ಚುನಾಯಿತರಾದವರು ನಾಲ್ಕು ವರ್ಷಗಳ ತನಕ ಆ ಸ್ಥಾನದಲ್ಲಿರುವರು. ಅಕಸ್ಮಾತ್ ಅಧ್ಯಕ್ಷರು ಮರಣಪಟ್ಟರೆ ಕೂಡಲೇ ಅವರ ಅವಧಿಯ ತನಕ ಉಪಾಧ್ಯಕ್ಷರೇ ಆ ಸ್ಥಾನಕ್ಕೆ ಅರ್ಹರಾಗುವರು.

ಹೆರಿ ಟ್ರುಮಾನರಿಗೆ ಅನಿರೀಕ್ಷಿತವಾಗಿಯೂ, ಅನಪೇಕ್ಷಿತವಾಗಿಯೂ ಅಧ್ಯಕ್ಷ ಪದವಿ ದೊರಕಿದೆ. ಅವರು ರೂಸ್‌ವೆಲ್ಟರಂತೆ ವಿಶ್ವವಿದ್ಯಾಲಯದ ಪದವಿ ಧರರೂ ಅಲ್ಲ. ದೊಡ್ಡ ರಾಜಕೀಯ ಪಂಡಿತರೂ ಅಲ್ಲ. ಸರಳ ಜೀವನ ಪ್ರಿಯರೂ, ಶಾಂತಿ ಪ್ರಿಯರೂ ಆಗಿರುವ ಸ್ವಚ್ಛ ಅಮೇರಿಕನ್ ಕುಟುಂಬವೊಂದಕ್ಕೆ ಸೇರಿದ ಸಾಮಾನ್ಯ ನಾಗರೀಕರವರು.

೧೯೩೪ರ ತನಕ ಅವರಿಗೆ ಯಾವ ದೊಡ್ಡ ಹುದ್ದೆಯೂ ದೊರಕಲಿಲ್ಲ. ಪ್ರಜಾಪ್ರಭುತ್ವ ಪಕ್ಷದ ಪರವಾಗಿ ಹೋರಾಡಿ ಇವರಿಗೆ ನಾಗರೀಕ ಆಡಳಿತದಲ್ಲಿ ಸಣ್ಣ ಪುಟ್ಟ ನೌಕರಿ ದೊರಕುತಿತ್ತು. ೧೯೪೦ರಲ್ಲಿ ಪುನಃ ಇವರು ಶಾಸನ ಸಭಾಧ್ಯಕ್ಷರಾದಾಗ, ಯುದ್ಧ ಸಾಮಾಗ್ರಿ ತಯಾರಿಕೆ ಕಾರ್ಯದಲ್ಲಿ ಬಹಳ ಅನಾವಶ್ಯಕ ಹಣ ವ್ಯರ್ಥವಾಗುತ್ತದೆಂದು ತಿಳಿದು ಬಂದು ಇವರು ೨೦ ಸಾವಿರ ಮೈಲು ಸಂಚಾರ ಮಾಡಿ ಒಂದು ವರದಿ ತಯಾರಿಸಿ ಹಣ ದುರ್ವ್ಯಯವಾಗುವ ದಾರಿಗಳನ್ನು ನಿಲ್ಲಿಸಿಬಿಟ್ಟರು.

ಅಂದಿನಿಂದ ಇವರು ಅಲ್ಲಿಯಮಟ್ಟಿಗೆ ಪ್ರಖ್ಯಾತಿಹೊಂದಿದರು. ಮೊನ್ನೆಯ ಚುನಾವಣೆಯಲ್ಲಿ ಅವರು ಉಪಾಧ್ಯಕ್ಷರಾದರು. ಇವರು ಕೋಲೇಜು ಕಲಿಯದಿದ್ದರೂ ಬಹಳ ಯೋಚನಾಪರವೂ ಅರ್ಥಪೂರ್ಣವೂ ಆದ ಭಾಷಣಗಳನ್ನು ಮಾಡಬಲ್ಲರು. ಸ್ವತಃ ಬಹಳ ವಿಷಯಗಳನ್ನು ಅಭ್ಯಾಸಮಾಡಿದ್ದಾರೆ. ಅಮೇರಿಕನ್ ಶಾಸನ ಸಭೆಯಲ್ಲಿ, ಆಡಳಿತ ವಿಭಾಗಗಳ ಎಲ್ಲಾ ತರದ ಸಂಖ್ಯೆ ಸಂಗತಿಗಳನ್ನು ಬಲ್ಲವರೆಂದರೆ ಹೆರಿಟ್ರುಮಾನರೇ ಸರಿ.

ಅಧ್ಯಕ್ಷರಾಗಿ ಪ್ರತಿಜ್ಞೆ ತೆಗೆದು ಕೊಂಡೊಡನೆ ಪತ್ರಿಕಾ ಪ್ರತಿನಿಧಿಗಳನ್ನು ಕಂಡಾಗ ಇವರು: "ನೀವು ದೇವರ ಪ್ರಾರ್ಥನೆ ಎಂಬದೊಂದನ್ನು ಮಾಡುವುದೆಂತ ಇದ್ದರೆ, ಇನ್ನೂ ಮುಂದೆ ನನಗಾಗಿ ಪ್ರಾರ್ಥಿಸಿರಿ" ಎಂದರು. "ಈ ಹೊಣೆಗಾರಿಕೆಯು ಭಯಂಕರ ಭಾರವಾದುದು" ಎಂದು ಅವರ ಅಭಿಪ್ರಾಯ.

ಒಬ್ಬ ಪತ್ರಿಕೆ ಮಾರುವ ಹುಡುಗನು ಅವರನ್ನು ಕಂಡು "ಅಧ್ಯಕ್ಷ ಮಹಾಶಯರಿಗೆ ವಂದನೆಗಳು" ಎಂದಾಗ ಟ್ರುಮಾನರು ಸಳ್ಳನೇ ಕಣ್ಣೀರಿಳಿಸುತ್ತಾ "ನನಗೆ ಈ ಪದವಿ ಬಾರದಿರುತಿದ್ದರೆ ಚೆನ್ನಾಗಿತ್ತು" ಎಂದರಂತೆ.

ಭಾರತದ ಪಾರ್ಲಿಮೆಂಟ್ನ ವರದಿಗಳು

ಕೊಂಗ್ರೆಸ್ಸು ಯುದ್ಧಮಾಡುವುದು-ಆದರೆ ಸ್ವಾತಂತ್ರ್ಯಸಿಗಬೇಕು-ಸುಲಿಗೆ ಆಳ್ವಿಕೆ ನಿಲ್ಲಬೇಕು-ಚರ್ಚಿಲ್ಲರಿಗೆ ಗಡಿನಾಡಿನ ಉತ್ತರ

ಯುದ್ಧವು ಯಾರಿಗಾಗಿ?

"ಕೇವಲ ನಮ್ಮ ಶತ್ರುಗಳನ್ನು ಮಾತ್ರ ಜಯಿಸಿದರೆ ಮಾತ್ರ ಸಾಲದು. ನಮ್ಮೊಳಗಿನ ಪರಸ್ಪರ ಸಂಶಯ, ಭಯ, ಅಜ್ಞಾನ, ಲೋಭ ಇವುಗಳನ್ನು ನಾವು ಸರ್ವಶಕ್ತಿಯಿಂದ ಗೆಲ್ಲಬೇಕು."

ಇವು ದಿವಂಗತ ಅಧ್ಯಕ್ಷ ರೂಸ್ವೆಲ್ಟರ ಮಾತುಗಳು. ಲಾಹೋರಿನಲ್ಲಿ ನಾಗರೀಕ ಹಕ್ಕು ಸ್ವಾತಂತ್ರ್ಯ ಸಂಘದಲ್ಲಿ ಭಾಷಣ ಮಾಡುತ್ತಾ ಇಂದು ರಾಜಕೀಯ ಕ್ಷೇತ್ರದಲ್ಲಿ ಮಹತ್ವದ ಊಹಾಪೋಹೆಗಳಿಗೂ ಸುದ್ದಿ ನಿರೀಕ್ಷೆಗಳಿಗೂ ಗುರಿಯಾದ ಶ್ರೀ. ಭೂಲಾಭ್ಯಾ ದೇಸಾಯಿಯವರು ಅಮೇರಿಕನ್ ಅಧ್ಯಕ್ಷರ ಮೇಲಿನ ಗಣನೀಯ ಮಾತುಗಳನ್ನು ನೆನಪಿಗೆ ತಂದು ಭಾರತ ಸ್ವಾತಂತ್ರ್ಯದ ಕುರಿತು ಗಂಭೀರ ಭಾಷಣ ಮಾಡಿದರು.

ಅವರೆಂದರು: "ರೂಸ್‌ವೆಲ್ಟರ ಈ ಮಾತುಗಳಲ್ಲಿ ಯಾವುದಾದರೂ ಅರ್ಥವಿದ್ದರೆ ಅದು ಆಳಲ್ಪಡುವ ಜನಾಂಗಗಳು ಇನ್ನೂ ಆಳುವವರ ಕೈಕೆಳಗೆ ಇರುವಂತಾದರೆ ಈ ಯುದ್ಧಕ್ಕೆ ಸುರಿಸಲ್ಪಟ್ಟ ರಕ್ತವು ನಿರರ್ಥಕವಾದಂತೇ ಸರಿ ಹೀಗಿರುತ್ತದೆ."

"ಈ ಯುದ್ಧಾನಂತರ ಜಾವಾ ಸುಮಾತ್ರಾಗಳು ಡಚ್ಚರ ಕೈಕೆಳಗೂ, ಇಂಡೋಚೀನವು ಫ್ರಾನ್ಸಿನ ಆಳ್ವಿಕೆಗೂ ಒಳಗಾಗಿ, ಮತ್ತು ಬರ್ಮವು ಪರಸ್ವಾಧೀನವಾಗಿದ್ದು, ಭಾರತವು ಎಂದಿನಂತೆ ಬ್ರಿಟಿಷ್ ಸಾರ್ವಭೌಮ್ಯರ ಕಿರೀಟದ ಅತ್ಯುತ್ಕೃಷ್ಟ ಮಾಣಿಕ್ಯವಾಗಿ ಉಳಿಯುವುದಾದರೆ ಪ್ರಾಮಾಣಿಕ ಪುರುಷರಾಗಿ ನಮಗೆ ನಿಜವಾಗಿ ಈ ಯುದ್ಧದಲ್ಲಿ ಯಾವ ಆಸಕ್ತಿಯೂ ಇಲ್ಲ. ಸುಸಂಸ್ಕೃತ ಯಾವ ರಾಜನೀತಿ ಮುತ್ಸದಿಗೂ ಇದರಲ್ಲಿ ಅಭಿರುಚಿ ಇರದು." ಹೀಗೆಂದು ದೇಸಾಯಿಯವರು ಸ್ಪಷ್ಟೀಕರಿಸಿದರು.

ನಿಜವಾದ ನಾಗರೀಕ ಹಕ್ಕು ಬಾಧ್ಯತೆಯ ಲಕ್ಷಣವನ್ನು ವಿವರಿಸುತ್ತಾ ಆ ಕೊಂಗ್ರೆಸ್ ವಕೀಲರು ಹೀಗೆಂದರು: "ಒಂದು ಜನಾಂಗವು ಇನ್ನೊಂದರಿಂದ ಸುಲಿಗೆ ಮಾಡಲ್ಪಡದೆ ಸ್ವತಂತ್ರವಾಗಿರುವುದೇ ನಿಜವಾದ ನಾಗರೀಕ ಸ್ವಾತಂತ್ರ್ಯದ ತಳಹದಿ."

ಕೊಂಗ್ರೆಸ್ ಧೋರಣೆ ಏನು?

"ಭಾರತ ಸ್ವಾತಂತ್ರ್ಯ ಪ್ರಶ್ನೆಯೇ ಅತ್ಯಂತ ಮಹತ್ವದ ಪ್ರಶ್ನೆ. ಪರಿಶುದ್ಧ ಸ್ವಾತಂತ್ರ್ಯದ ಮೇಲೆ ಶಾಂತಿ ಕಟ್ಟ ಬಯಸುವುದಾದರೆ ಆಳು ಜನಾಂಗಗಳ ಸ್ವಾತಂತ್ರ್ಯ ಸಮಸ್ಯೆಯನ್ನು ಬಗೆಹರಿಸಬೇಕು." ಹೀಗೆಂದು ವಿಶದೀಕರಿಸುತ್ತಾ ಶ್ರೀ. ದೇಸಾಯಿಯವರು ಮುಂದರಿಸಿ ಕೊಂಗ್ರೆಸ್ ಧೋರಣೆಯನ್ನು ಸ್ಪಷ್ಟೀಕರಿಸಿದರು:

"**ಜರ್ಮನಿಯ ಮೇಲೆ ಯುದ್ಧಕ್ಕೆ ಹೋಗಲು ಕೊಂಗ್ರೆಸು ಸಿದ್ಧವಿತ್ತು. ಆದರೆ ಜರ್ಮನಿಯೊಡನೆ ಯುದ್ಧ ಮಾಡಿದ ಮೇಲೆ ಇಂಗ್ಲೆಂಡು ಸ್ವತಂತ್ರವಾಗಿದ್ದು ಭಾರತವು ಪರಾಧೀನವಾಗಿರುವುದಾದರೆ ಆ ಶ್ರಮವು ನಮಗ್ಯಾಕೆ?**"

"ಮೊದಲು ನಮಗೆ ನಮ್ಮ ದೇಶವನ್ನಾಳಲು ಸ್ವಾತಂತ್ರ ಸಿಗಲಿ, ಮತ್ತೆ ನಾವು ನಾಗರೀಕ ಹಕ್ಕು ಭಾದ್ಯತೆಗಳ ಕುರಿತು ಯೋಚಿಸೋಣ."

"ಇದಕ್ಕಾಗಿ ನಾವು ನಮ್ಮ ಮುಖಂಡರಿಗೆ ಮೊದಲು ಸ್ವಾತಂತ್ರ ಸಿಗಲೆಂದು ಬಯಸುವುದು. ಭಾರತ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವುದಕ್ಕಾಗಿ ನಾವು ನಮ್ಮ ಜಾತಿ, ಮತ, ಧ್ಯೇಯಗಳ ಭೇಧಾಭೇಧಗಳನ್ನು ಮರೆಯೋಣ."

ಭಾಷಣಾಂತ್ಯದಲ್ಲಿ ದೇಸಾಯಿಯವರು ಶಸ್ತ್ರಗಳಿಂದ ಶಾಂತಿ ರಕ್ಷಿಸುವ ಯೋಜನೆಗಳ ಕುರಿತು ಹೇಳುತ್ತಾ: "ಇನ್ನು ಮುಂದೆ ಯಾವ ಜನಾಂಗವೂ ಬೇರೆಯವರಿಂದ ಆಳಲ್ಪಡಲು ಇಚ್ಛಿಸಲಾರದು. ಈ ಶಸ್ತ್ರಗಳೆಲ್ಲವೂ ಸ್ವಾತಂತ್ರ್ಯಕ್ಕೆ ಕಾತರಿಸುವ ಜನಾಂಗಗಳ ಮೇಲೆಯೇ ಉಪಯೋಗಿಸಲ್ಪಡಲಿ–ನೋಡೋಣ" ಎಂದು ಮುಗಿಸಿದರು.

ಅಯ್ಯಾ ದಯೆ ದೋರಿರಿ

ಕೆಲವು ದಿನಗಳ ಹಿಂದೆ ಮಹಾತ್ಮಾಜಿಯವರು ಚಿಮೂರ್ ಕೈದಿಗಳ ಕುರಿತು ತಮಗೆ ಬರೆದ ಹೃದಯ ದ್ರಾವಕವಾದ ಪತ್ರವನ್ನು ಶ್ರೀ. ಭೂಲಾಭ್ಯಾಯವರು ಹಂಗಾಮಿ ವ್ಯಾಸ್‌ರಾಯ ಮಾನ್ಯ ಕೊಲ್‌ವಿಲ್ಲರಿಗೆ ತೋರಿಸಿದರಂತೆ. ಅದರಲ್ಲಿ ಮಹಾತ್ಮರು: "ಈ ತರುಣ ಜೀವರುಗಳ ತೂಗಿಸುವಿಕೆಯನ್ನು ನಿಲ್ಲಿಸದೆ ಯಾವ ರಾಜಕೀಯ ಇತ್ಯರ್ಥವೂ ಪ್ರಯೋಜನಕಾರಿಯಾಗದು. ಅತ್ತಿ ಚಿಮೂರ್ ಆರೋಪಿಗಳು ಗಲ್ಲಿಗೇರಿಸಲ್ಪಟ್ಟ ನಂತರ ರಾಷ್ಟ್ರೀಯ ಸರಕಾರವೊಂದು ಸ್ಥಾಪಿಸಲ್ಪಟ್ಟರೆ ಅದರಿಂದ ಹೆಚ್ಚಿನ ಒಳಿತಿಲ್ಲ." ಹೀಗೆಂದು ಸೂಚಿಸಿರುವರಂತೆ. ದೇಸಾಯ್‌ಜಿಯವರು ವ್ಯಾಸರಾಯರಲ್ಲಿ ಮತ್ತೊಂದು ಸಲ ಅರಿಕೆ ಮಾಡಲಿರುವರೆಂದು ತಿಳಿದು ಬರುತ್ತದೆ.

ಚರ್ಚಿಲ್ಲರಿಗೆ ಗಡಿನಾಡು ಮುಖಂಡರ ಉತ್ತರ

ಹಿಂದೆ ಒಂದು ಸಲ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ: "ನಾನು ನಮ್ಮರಸರ ಪ್ರಧಾನ ಮಂತ್ರಿಯಾದುದು ಬ್ರಿಟಿಷ್ ಸಾಮ್ರಾಜ್ಯವನ್ನು ಕರಗಿಸಿ ದಿವಾಳಿ ಮಾಡಲಿಕ್ಕಲ್ಲ" ಎಂದು ಹೇಳಿದನ್ನು ಜ್ಞಾಪಿಸುತ್ತಾ ಗಡಿನಾಡಿನ ಕೊಂಗ್ರೆಸ್ ಮುಖಂಡರಾದ ರಾಯ್ ಬಹುದ್ದೂರ್ ಮೆಹರ್‌ಚಂದ್ ಖಾನ್ನಾ ಅವರು ಒಂದು ಭಾಷಣದಲ್ಲಿ: "ಡಾ। ಖಾನ್ ಸಾಹೇಬರು ಮಂತ್ರಿ ಮಂಡಳ ರಚಿಸಲು ಒಪ್ಪಿದ್ದು ಗಡಿನಾಡನ್ನು ಬ್ರಿಟಿಷ್ ಸರಕಾರದವರಿಗೆ ಭದ್ರವಾಗಿ ಮಾಡಿಕೊಡಲೂ ಅಲ್ಲ" ಎಂದು ಹೇಳಿದರು.

ಬ್ರಿಟಿಷರ ಮಾತಿನ ಬೆಲೆ

"ಫ್ರಿಸ್ಕೋ ಪರಿಷತ್ತಿನಲ್ಲಿ ಚಿಕ್ಕ ಸಾಮಂತ ರಾಜ್ಯವಾದ ನ್ಯೂಜಿಲೆಂಡಿಗೂ ಸ್ವತಂತ್ರ ಪ್ರತಿನಿಧಿಗಳನ್ನು ಕಳುಹಿಸಲು ಹಕ್ಕು ಕೊಟ್ಟಿರುವಾಗ, ಅದೇ ಹಕ್ಕು ಭಾರತಕ್ಕೆ ಕೊಡದಿದ್ದದನ್ನು ನೋಡಿದಾಗ ಬ್ರಿಟಿಷರು ಸ್ವಾತಂತ್ರ್ಯದ ವಿಷಯ ಕೊಡುವ ವಾಗ್ದಾನಗಳಲ್ಲಿ ನಂಬಿಗೆ ಇಟ್ಟವರ ಕಣ್ಣುಗಳನ್ನು ತೆರೆಯುವಂತಾಗಲಿ. ಜಗತ್ತಿನ ಐದನೇ ಒಂದಂಶದಷ್ಟು ಜನರ ವೋಟುಗಳನ್ನು ಬ್ರಿಟಿಷ್ ಸರಕಾರದ ರಾಯಭಾರಿಗಳಾದ ಲೋರ್ಡ್ ಹೆಲಿಫೆಕ್ಸರು ತಮ್ಮ ಕಿಸೆಯಲ್ಲಿಟ್ಟುಕೊಳ್ಳುವರು." ಎಂದು ರಾಯ್ ಬಹುದ್ದೂರ್ ಖಾನ್ನಾ ಅವರು ಸ್ಫೂರ್ತಿದಾಯಕವಾಗಿ ನುಡಿದರು.

ಶಾಲಾ ಹುಡುಗರ ಕೃಷಿ ವ್ಯವಸಾಯ

೭ ಲಕ್ಷದ ಕಾಯಿಪಲ್ಯದ ಬೆಳೆ

ಸಿಂಹಳ ದ್ವೀಪದ ಶಾಲೆಗಳ ಆದರ್ಶ

"ಹೆಚ್ಚಾಗಿ ಆಹಾರ ಬೆಳೆಸಿರಿ" ಎಂಬ ಪ್ರಚಾರದ ಯೋಗ್ಯ ಅನುಕೂಲತೆಯನ್ನು ಸಿಲೋನಿನ ಶಾಲಾ ಮಕ್ಕಳು ಪರಿಣಾಮಕಾರಿಯಾಗಿ ಅನುಸರಿಸಿಕೊಂಡರು. ಅಲ್ಲಿಯ ೫ ಸಾವಿರ ಶಾಲೆಗಳಲ್ಲಿನ ಮಕ್ಕಳು ಕಳೆದ ವರ್ಷದಲ್ಲಿ ೩೬ ಸಾವಿರ ಖಂಡಿ ಕಾಯಿಪಲ್ಯಗಳನ್ನು ಬೆಳೆಸಿದ್ದರು. ಇದರಿಂದ ಆ ದ್ವೀಪದ ಆಹಾರ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸಲು ಸಾಧ್ಯವಾಯಿತು.

ಶಾಲಾ ಪಾಠ ಸಮಯದ ನಂತರ ವಿದ್ಯಾರ್ಥಿಗಳು ತಮ್ಮ ಶಾಲೆಗಳ ಸುತ್ತಮುತ್ತಲಿನ ತಮ್ಮ ಸ್ವಕಲ್ಪಿತ ತೋಟಗಳಲ್ಲಿ ಕೆಲಸ ಮಾಡುವರು. ಅವರಿಗೆ ಬೇಕಾದ ಉಪಕರಣಗಳನ್ನು ಸರಕಾರದವರು ಒದಗಿಸಿಕೊಟ್ಟರು. ಇವುಗಳಿಗೆಲ್ಲಾ ಒಟ್ಟು ಖರ್ಚು ಬರೀ ೭೫ ಸಾವಿರ ರೂಪ್ಯಾ. ಆದರೆ ಆ ೩೬ ಸಾವಿರ ಖಂಡಿ ಕಾಯಿಪಲ್ಯಗಳನ್ನು ಮಾರಿ ಬಂದ ಬೆಲೆ ೭ ಲಕ್ಷ ರೂಪ್ಯಾ ಎಂದಾಗ ಯಾರಿಗೂ ಕೌತುಕವಾಗದಿರಲಿಕ್ಕಿಲ್ಲ. ಆರು ಕಾಲು ಲಕ್ಷ ರೂಪ್ಯಾ ಲಾಭವಾಯಿತು-ಬರೀ ಶಾಲಾಮಕ್ಕಳಿಂದ.

ಈ ಉದ್ಯಮದಲ್ಲಿ ಅಲ್ಲಿಯ ವಿದ್ಯಾರ್ಥಿಗಳ ಅನುಭವಕ್ಕೆ ಬಂದ ಕೆಲವು ತೊಡಕುಗಳೆಂದರೆ ನೀರಿನ ಅಭಾವ, ಕಾಯಿಪಲ್ಯ ಕದ್ದು ಹೋಗದಂತೆ ಮಾಡಬೇಕಾದ ವ್ಯವಸ್ಥೆ—ಇವುಗಳು.

ನಮ್ಮ ಜಿಲ್ಲೆಯಲ್ಲಿ ಆಹಾರ ಬೆಳವಣಿಗೆಗೆ ತುಂಬಾ ಅನುಕೂಲ ವಾತಾವರಣವಿದೆ. ಹೆಚ್ಚಿನ ಶಾಲೆಗಳು ಹಳ್ಳಿ ವಠಾರದಲ್ಲಿಯೇ ಇವೆ. ಸಿಲೋನಿನ ವಿದ್ಯಾರ್ಥಿಗಳ ಯೋಜನೆಯನ್ನು ಮದ್ರಾಸ್ ಸರಕಾರದವರೂ ಜಾರಿಗೆ ತರಲು ಯೋಚಿಸಿರುವರು. ನಮ್ಮ ಕಡೆಯ ಶಾಲಾ ಮಕ್ಕಳೂ ಉಪಾಧ್ಯಾಯರೂ ಹೃತ್ಪೂರ್ವಕ ಈ ಉಪಯುಕ್ತ ಚಟುವಟಿಕೆಗಳನ್ನು ಕೈಕೊಳ್ಳುವರೆಂದು ಹಾರೈಸಲಾಗಿದೆ.



ಆರಕಾನದಲ್ಲಿ ಅಮೇರಿಕನ್ ಸಿಡಿಲು ಮರಿಗಳು

ಮೇಲೆ ಕಾಣುವ ವಿಮಾನ ಸಾಲುಗಳು ಬರ್ಮಾರಂಗದ ಒಂದು ಮಿತ್ರ ವಿಮಾನ ಠಾಣ್ಯದವುಗಳು ಗುಡುಗು ಬಾಣಗಳೆಂಬರ್ಥದ ಹೆಸರುಳ್ಳ ಈ ಆಕಾಶ ಯಾನಗಳು ಶತ್ರು ನಾಶಕ್ಕೆ ಸದಾಸಿದ್ಧವಾಗಿದೆ. ಮೂರು ವಿಮಾನಗಳು ಆಗ ತಾನೇ ತಮ್ಮ ಕೆಲಸ ಮುಗಿಸಿ ಹಿಂತಿರುಗಿದವು.

ನಗರದಲ್ಲಿ ಉಪಾಧ್ಯಾಯ ಸಮ್ಮೇಳನ

ಬೆಳ್ತಿಗೆ ಅಕ್ಕಿಯ ಮೇಲೆ ನಿರ್ಬಂಧ

ಮಂಜೇಶ್ವರ ಬಜಪೆಗಳಲ್ಲಿ ಹ್ಯಾಸ್ಕೂಲುಗಳು

ಬೆಂಕಿ ಅನಾಹುತ–ಬೊಂಬೆಯಾಟ–ಬೈಲಾಟ–ಇಸ್ಪೀಟ್ ಪೆಟ್ಟಿಗೆ ಜುಲ್ಮಾನೆ–ಕೊಡೆಗಳ ಅಭಾವ

ಕಳೆದ ಆದಿತ್ಯವಾರ ಸ್ಥಳೀಯ ಕೆನೆರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ದ. ಕ. ಜಿಲ್ಲಾ ಉಪಾಧ್ಯಾಯರ ಒಂದು ಸಮ್ಮೇಲನವು ಸೇರಿತ್ತು. ಶ್ರೀ. ಎ. ಬಿ. ಶೆಟ್ಟಿ ಅವರು ಅಂದಿನ ಪ್ರಾತಃಕಾಲ ಸಮ್ಮೇಲನವನ್ನು ಉದ್ಘಾಟಿಸಿದರು. ಶ್ರೀ. ವಾಸುದೇವ ಭಟ್. ಬಿ. ಎ. ಬಿ. ಟಿ ಅವರು "ನಮ್ಮತ್ತ ಕಡೆಯ ಇಂದಿನ ಮತ್ತು ಮುಂದಿನ ಶಿಕ್ಷಣ" ಎಂಬ ವಿಷಯದ ಲೇಖನವೊಂದನ್ನು ಓದಿದರು. ಅದರಲ್ಲಿ ಭಾರತದ ವಿಶೇಷ ಸಂದರ್ಭ ಪರಿಸ್ಥಿತಿಗಳಲ್ಲಿ ನಡೆಯುತ್ತಿರುವ ಶಿಕ್ಷಣ ಪದ್ಧತಿ, ಮುಂದೆ ಜಾರಿಗೆ ಬರಿಸಲು ಪ್ರಯತ್ನಗಳಾಗುವ ಸಾರ್ಜೆಂಟ್ ಯೋಜನೆ, ವಾರ್ಧಾ ಯೋಜನೆ ಮುಂತಾದವುಗಳನ್ನು ಸಂಕ್ಷೇಪವಾಗಿ ವಿವರಿಸಲಾಯಿತು

ಅಂದು ಸಾಯಂಕಾಲದಲ್ಲಿ ಶಿಕ್ಷಣ ಯೋಜನೆಗಳ ಕುರಿತು ಚರ್ಚೆಯಾಯಿತು. ನಂತರ ಬೆಸೆಂಟ್ ಶಾಲಾ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳ ಪ್ರದರ್ಶ ಸಮಾರಂಭವು ಕೊನೆಗೊಂಡಿತು.

ವಿದ್ಯಾಭಿಮಾನಿಗಳು ವಾರ್ಧಾ ಮೂಲ ಶಿಕ್ಷಣ ಪದ್ಧತಿಯನ್ನು ಸರಿಯಾಗಿ ಅಭ್ಯಾಸಿಸಿ ಅದನ್ನು ಯೋಗ್ಯ ರೀತಿಯಲ್ಲಿ ನಮ್ಮ ಶಾಲೆಗಳಲ್ಲಿ ಅನುಸರಿಸಲಾಗುವಂತೆ ಪ್ರಯತ್ನ ಪಡಬಹುದು. ಎಂಟನೇ ತರಗತಿಯ ತನಕ ಶಿಕ್ಷಣವು ಕಡ್ಡಾಯವಾಗಿ ಕೊಡಿಸಬೇಕಲ್ಲದೆ, ಸ್ಥಳೀಕ ಕಸಬು ಕೈಗಾರಿಕೆಗಳ ಮೂಲಕ ಅದು ಕೊಡಲ್ಪಟ್ಟರೆ ಅದು ಸ್ವಾವಲಂಬಿಯೂ ಆಗಿ ಅದಕ್ಕೆ ವ್ಯಯಿಸಲ್ಪಡುವ ದ್ರವ್ಯವು ಸಾರ್ವಜನಿಕ ಇತರ ಕೆಲಸಗಳಿಗೆ ಹೆಚ್ಚಾಗಿ ಉಪಯೋಗಿಸಲು ಅನುಕೂಲವಾದಂತೆಯೂ ಆಗುವುದು. ಈ ಸಂಚಿಕೆಯ ಬೇರೆ ಪುಟಗಳಲ್ಲಿ ಸಿಲೋನ್ ದ್ವೀಪದ ವಿದ್ಯಾರ್ಥಿಗಳು ಬರೀ ೭೫ ಸಾವಿರ ರೂಪ್ಯಾಗಳ ಖರ್ಚಿನಿಂದ ೭ ಲಕ್ಷದ ಕಾಯಿಪಲ್ಯ ತರಕಾರಿಗಳನ್ನು ಉತ್ಪತ್ತಿಸಿ ಮಾಡಿದ ಲಾಭದ ಒಂದು ವರದಿಯು ಕೊಡಲ್ಪಟ್ಟಿದೆ. ನಮ್ಮ ವಿದ್ಯಾರ್ಥಿಗಳ ಹೆಚ್ಚಿನ ಸಮಯವು ನಿಷ್ಪ್ರಯೋಜನವಾಗಿ ಆಟ, ಆಲಸ್ಯಗಳಲ್ಲಿ ಕಳೆದುಹೋಗುವುದನ್ನು ಯೋಗ್ಯದಾರಿಗಳಲ್ಲಿ ಅದನ್ನು ಉಪಯೋಗಿಸಿಕೊಂಡರೆ ಶಾಲಾಡಾಳಿತಗಳಿಗೆ ತುಂಬಾ ಸಾಂಪತ್ತಿಕ ಸಹಾಯವೂ, ವಿದ್ಯಾರ್ಥಿಗಳಿಗೆ ವಿಶೇಷ ಪ್ರತ್ಯಕ್ಷ ಜ್ಞಾನಾನುಭವಗಳೂ ದೊರಕಿದಂತಾಗುವುದು.

ಆಹಾರ ಧಾನ್ಯ ಕಂಟ್ರೋಲ್ ಆಜ್ಞೆ ಮೇರೆಗೆ ಲೈಸೆನ್ಸ್ ಪಡೆಯುವವರೆಲ್ಲರೂ ಇನ್ನು ಮುಂದೆ ಗೊತ್ತಪಡಿಸಲಾಗಿರುವ "ಸಿ" ಫಾರ್ಮಿನಲ್ಲಿ ತಮ್ಮ "ತಿಂಗಳ ಸ್ಟಾಕಿನ ರಿಟರ್ನ್"ಗಳನ್ನು ಭರಾಯಿಸಿ ಪ್ರತಿ ತಿಂಗಳ ತಾ. ೧೦ರೊಳಗೆ ಜಿ. ಕ. ಟೇಕ್ಸ್ ಆಫೀಸಿಗೆ ಮುಟ್ಟಿಸಬೇಕಾಗಿದೆ. ತಿದ್ದುಪಡಿ ಮಾಡಿದ ಇಂತಹ "ಸಿ" ಫಾರ್ಮುಗಳನ್ನು ೩ಪೈ ಬೆಲೆಗೆ ಚೇಂಬರ್ ಆಫ್ ಕೊಮರ್ಸ್ ಮಂಗಳೂರು; ಇವರಿಂದ ಪಡೆಯಬಹುದು-ಹೀಗೆಂದು ಸಪ್ಲೈ ಅಧಿಕಾರಿಗಳು ತಿಳಿಸುತ್ತಾರೆ.

ಕೆಲವು ದಿನಗಳ ಹಿಂದೆ ಅಖಿಲ ಮೈಸೂರು ಸಂಸ್ಥಾನದ ಹಿಂದೀ ಪ್ರಚಾರಕ ಸಭೆಯ ವ್ಯವಸ್ಥಾಪಕರಾದ ಶ್ರೀ. ಹಿರಣ್ಣಯ್ಯ ಅವರು ಮಂಗಳೂರಿಗೆ ದಯಮಾಡಿಸಿದ್ದು, ಹಿಂದೀ ಪ್ರೇಮಿಗಳು ಅವರನ್ನು ಉರ್ವದಲ್ಲಿನ ಕೆನೆರಾ ಹ್ಯಾಸ್ಕೂಲ್ ಶಾಖೆಯಲ್ಲಿ ಸತ್ಕರಿಸಿ ಗೌರವಿಸಿದರು. ದ. ಕನ್ನಡದಲ್ಲಿ ಹಿಂದೀ ಶಿಕ್ಷಣದ ವಿಚಾರದಲ್ಲಿ ಪುನರ್ ವ್ಯವಸ್ಥೆಯಾಗುವುದು ಅಪೇಕ್ಷಣೀಯವವೆಂದು ಅಂದಿನ ಅತಿಥಿಗಳು ಅಭಿಪ್ರಾಯಪಟ್ಟರು. ಮದ್ರಾಸ್ ಸರಕಾರದವರು ಈಚೆಗೆ ಶಾಲೆಗಳಲ್ಲಿ ಹಿಂದಿಯನ್ನು ಇಚ್ಛೆ ಇದ್ದವರು ಮಾತ್ರ ಕಲಿಯಬಹುದು, ಅದನ್ನು ಕಡ್ಡಾಯವಾಗಿ ಕಲಿಸುವುದು ಅವಶ್ಯವಿಲ್ಲವೆಂದು ಮಾಡಿದ ಆಜ್ಞೆಯು ಇಲ್ಲಿಯ ಹಿಂದೀ ಚಳವಳಿಕ್ಕೆ ಸ್ವಲ್ಪ ತೊಡಕಿನದಿರುವುದು. ಕೊಂಗ್ರೆಸ್ ಸರಕಾರದವರು ಹ್ಯಾಸ್ಕೂಲುಗಳಲ್ಲಿ ಹಿಂದೀ ಕಡ್ಡಾಯವಾಗಿ ಮಾಡಿದ್ದು ಪರಿಣಾಮವಾಗಿ ಸ್ವತಂತ್ರವಾಗಿ ರಾತ್ರಿ ಶಾಲೆಗಳ ಮೂಲಕ ಹಿಂದೀ ಪ್ರೇಮಿಗಳು ಪಡುತಿದ್ದ ಶ್ರಮಕ್ಕೆ ಸ್ವಲ್ಪ ಬಿಡುಸಿಕ್ಕಿದಂತಾಗಿ ಈಚೆಗೆ ನಗರದಲ್ಲಿ ಅವು ಸಂಪೂರ್ಣ ಮಾಯವಾದಂತಿದ್ದವು. ಇನ್ನಾದರೂ ಸ್ವತಂತ್ರವಾಗಿ ಬಿಡು ಸಮಯದಲ್ಲಿ ಕಲಿಸಲ್ಪಡುವ ಇಂತಹ ಶಾಲೆಗಳೂ ಹೆಚ್ಚೆಚ್ಚಾಗಿ ತೆರೆಯಲ್ಪಡಲೆಂದೂ, ಮಾತ್ರವಲ್ಲ ವಿದ್ಯಾರ್ಥಿಗಳೂ ಕೆಳಗಿನ ೧, ೨, ೩ನೇ ಫಾರ್ಮುಗಳಲ್ಲಾದರೂ ಹಿಂದೀಯನ್ನು ಕಲಿಯುವಂತೆ ಮನಸ್ಸು ಮಾಡಬೇಕೆಂದೂ ಹಾರೈಸಲಾಗಿದೆ.

ಸ್ಟೋರುಗಳಿಂದ ಕ್ರಯಕ್ಕಾಗಲೀ ಇಲ್ಲವೆ ಬದಲಾಯಿಸಿ ಆಗಲೀ ಆದಷ್ಟು ಹೆಚ್ಚು ಬೆಳ್ತಿಗೆ ಅಕ್ಕಿಯನ್ನು ಶೇಖರಿಸಿ ಇಟ್ಟುಕೊಳ್ಳುವ ಮನೋಭಾವವು ಹೆಚ್ಚುತ್ತಿರುವುದರಿಂದ ೩೧-೫-೪೫ರ ತನಕದ ಅಕ್ಕಿ ಶೇಖರಿಸುವಿಕೆಯ ಕಾರ್ಯವು ಮುಗಿಯುವ ತನಕ ಬೆಳ್ತಿಗೆ ಅಕ್ಕಿಯಮಟ್ಟಿಗೆ ಪ್ರತಿ ತಾಲೂಕಿಗೆ ಆಯಾ ತಾಲೂಕಿನಲ್ಲಿ ಉತ್ಪತ್ತಿಯಾದಷ್ಟೆ ಅಂತಹ ಅಕ್ಕಿಯನ್ನು ಮಾತ್ರ ಹಂಚಬೇಕಲ್ಲದೆ ಒಂದು ತಾಲೂಕಿನಿಂದ ಅದನ್ನು ಇನ್ನೊಂದಕ್ಕೆ ರವಾನಿಸಬಾರದಾಗಿ ಜಿಲ್ಲಾ ಕಲೆಕ್ಟರರು ದ. ಕ. ಸೆಂಟ್ರಲ್ ಹೋಲ್ ಸೇಲ್ ಸ್ಟೋರ್ಸ್ ಅಧ್ಯಕ್ಷರಿಗೆ ತಿಳಿಸಿರುವರು.

೩೧–೫–೪೫ರ ನಂತರ ಬೆಳ್ತಿಗೆ ಅಕ್ಕಿಯ ಹಂಚುವಿಕೆಯನ್ನು ಜಿಲ್ಲಾ ಕಲೆಕ್ಟರರು ಮಾತ್ರ ನಿರ್ದೇಶಿಸಿದಂತೆ ಏರ್ಪಡಿಸಬೇಕು. ಈ ಕುರಿತು ರೆವಿನ್ಯೂ ಡಿವಿಜನಲ್ ಆಫೀಸರರ ಆಜ್ಞೆಯನ್ನೂ ಮನ್ನಿಸುವ ಹಾಗಿಲ್ಲ.

ಕಾರ್ಕಳ ತಾಲೂಕಿನಲ್ಲಲ್ಲದೆ ಇತರ ತಾಲೂಕುಗಳಲ್ಲಿ ಬೆಳ್ತಿಗೆ ಅಕ್ಕಿಯನ್ನು ತಹಶೀಲ್ದಾರ್ ಇಲ್ಲವೆ ತಾಲೂಕು ಸಪ್ಲೈ ಆಫೀಸರರ ಕೇಳಿಕೆಯ ಮೇರೆಗೆ ಆಯಾ ತಾಲೂಕಿನ ಉತ್ಪತ್ತಿಯ ದಾಮಾಶಯ ಪ್ರಕಾರ ಆ ತಾಲೂಕಿನೊಳಗೆ ಹಂಚಬಹುದು. ಫಿರ್ಕಾ ಸಪ್ಲೈ ಆಫೀಸರರ ಕೇಳಿಕೆಗಳನ್ನು ಪೂರೈಸಬಾರದು–ಹೀಗೆಂದು ಸ್ಟೋರ್ಸ್ ಅಧ್ಯಕ್ಷರ ಪತ್ರ ತಿಳಿಸುತ್ತದೆ.

ಮಂಗಳೂರು ಟೌನಿನಲ್ಲಿ ಮಾರಾಟಕ್ಕಿರುವ ನಾಲ್ಕು ತರದ ಸಕ್ಕರೆಗಳಿಗೆ ರಾತ್ಲಿಗೆ ಕ್ರಮವಾಗಿ ಎರಡು ತರದವುಗಳಿಗೆ ೩ ಆಣೆ ೧೦ ಪೈ; ಇನ್ನೊಂದಕ್ಕೆ ೩ಆ. ೧೧ಪೈ. ಮೋತಿಪುರ್ ಸಕ್ಕರೆ ಮಾತ್ರ ೪ಆಣೆ. ಜಿಲ್ಲೆಯ ಇತರ ಕಡೆಗಳಲ್ಲಿ ಇಂತಹ ಸಕ್ಕರೆಗಳಿಗೆ ೪ ಆಣೆಯಿಂದ ಅತೀ ಹೆಚ್ಚೆಂದರೆ ೪ ಆಣೆ ೫ಪೈ ತನಕ ಬೆಲೆ ನಿರ್ಧರಿಸಲಾಗಿದೆ ಎಂದು ಕಲೆಕ್ಟರ್ ಆಫೀಸಿನ ಒಂದು ಪ್ರಕಟಣೆ ತಿಳಿಸುತ್ತದೆ.

ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸಬ್ ಕೋರ್ಟುಗಳಿಗೆ ಆಗಲೇ ತಾ. ೨೧ರಿಂದ ರಜೆ ಕೊಡಲಾಗಿದೆ. ಇಂದಿನಿಂದ ಜಿಲ್ಲೆಯ ಎಲ್ಲಾ ಮುನ್ಸಿಫ್ ಕೋರ್ಟುಗಳಿಗೂ ಸೆಕೆಕಾಲದ ರಜೆ ಪ್ರಾರಂಭವಾಗುತ್ತದೆ. ಎಲ್ಲವೂ ಜೂನ್ ೨ಕ್ಕೆ ತೆರೆಯಲ್ಪಡುವವು.

ಇಲ್ಲಿಂದ ಚಿತ್ತೂರಿಗೆ ವರ್ಗಾಯಿಸಲ್ಪಟ್ಟ ಜಿಲ್ಲಾ ಸೆಶ್ಶನ್ ಜಡ್ಜ ಶ್ರೀ ಬಿ. ಸಿ. ಕೋಮನರ ಸ್ಥಾನದಲ್ಲಿ ತಿನ್ನವೆಲ್ಲಿಯಲ್ಲಿದ್ದ ಶ್ರೀ ಕೆ. ಶ್ರೀನಿವಾಸನ್ ಐ. ಸಿ. ಎಸ್, ಅವರು ಸೆಶ್ಶನ್ ಜಡ್ಜರಾಗಿ ನೇಮಕ ಹೊಂದಿರುವರು.

ಹದಿನೆರಡು ಆಣೆಯ ಕಂಟ್ರೋಲ್ ಬೆಲೆಯ ಇಸ್ಪೀಟ್ ಪೆಟ್ಟಿಗೆಯನ್ನು ರೂ. ೪|ಗೆ ಮಾರಿದರೆಂದು ಕಾರ್ಕಳದ ಪ್ರಮುಖ ವ್ಯಾಪಾರಿಗಳೊಬ್ಬರಾದ ಶ್ರೀ ಬಿ. ಗೋಪಾಲ ಕೃಷ್ಣ ಶೆಣೈ ಅವರಿಗೆ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ರೂ. ೨೫೦ ಜುಲ್ಮಾನೆ ವಿಧಿಸಿರುವರು.

ಮಹಿಳಾ ರಾಷ್ಟ್ರೀಯ ಶಿಕ್ಷಣ ಸಮಾಜದವರ ಆಶ್ರಯದಲ್ಲಿ ವಸಂತೋತ್ಸವವು ತಾ. ೧೩-೧೪ರಲ್ಲಿ ಬೆಸೆಂಟ್ ಶಾಲಾ ವಠಾರದಲ್ಲಿ ಜರಗಿಸಲ್ಪಟ್ಟಿತು. ಸಾರಸ್ಯವಾದ ವಿವಿಧ ಕಾರ್ಯಗಳಿದ್ದು ಉತ್ಸವ ಪ್ರಾರಂಭವನ್ನು ರಾವ್ ಸಾಹೇಬ್ ರಾಮದಾಸ್ ಅವರು ಜರಗಿಸಿದರು.

ಕಳೆದ ವಾರದಲ್ಲಿ ಒಂದೆರಡು ಲಘು ಮಳೆಗಳು ಬಿದ್ದಿದ್ದು, ನಗರದ ಸೆಕೆಯನ್ನು ಇನ್ನಷ್ಟು ಹೆಚ್ಚಿಸಲು ಮತ್ತೂ ಅಲ್ಪಸ್ವಲ್ಪವಿದ್ದ ಅನೇಕ ಬಾವಿಗಳಲ್ಲಿನ ನೀರನ್ನೂ ಬತ್ತಿಸಲೂ ಸಹಾಯ ಮಾಡಿದಂತಿದೆ. ನಗರ ಸಭೆಯವರು ಸ್ಥಾಪಿಸಬೇಕೆಂದಿರುವ ನೀರು ಸರಬರಾಯಿ ವ್ಯವಸ್ಥೆಯ ಯೋಜನೆಯು ಶೀಘ್ರವಾಗಿ ಕಾರ್ಯರೂಪಕ್ಕೆ ಬಂದಷ್ಟು ಹಿತವೆಂದು ಒಂದು ಬಾತ್ಮಿ.

ತಾ. ೧೮ರಂದು ಡೊಂಗರಕೇರಿಯ ವೈಶ್ಯ ಸಮಾಜದವರ ಶ್ರೀ ವೆಂಕಟರಮಣ ದೇವಳದ ತೆಂಗಿನ ಗರಿ ಮಡಲು ಮಂಟಪಕ್ಕೆ ಅಕಸ್ಮಾತ್ ಬೆಂಕಿ ತಗಲಿದ್ದು ಫಾಯರ್ ಸರ್ವಿಸ್‌ನವರ ಸಕಾಲ ಆಗಮನದಿಂದ ಶಮನಗೊಳಿಸಲಾಯಿತು.

ಬೊಂಬೆಯಾಟ ಪ್ರಖ್ಯಾತಿಯ ಶ್ರೀ ಮಂಗಳೂರು ನಾರಾಯಣ ಮಲ್ಯರು 'ಗಿರಿಜಾಕಲ್ಯಾಣ' ವೆಂಬ ಆಟವನ್ನು ಉರ್ವದ ಬಡವರ ಬಂಧು ಕೋಲನಿಯಲ್ಲಿ ಇದೇ ಬರುವ ತಾ. ೨೮ರಂದು ಪ್ರದರ್ಶಿಸುವರೆಂದು ಪ್ರಕಟವಾಗಿದೆ. ಈ ಪ್ರತ್ಯೇಕ ಕಲೆಯಲ್ಲಿ ಮೂರು ನಾಲ್ಕು ದಶಮಾನಗಳಿಂದ ದುಡಿದ ಮಲ್ಯರು ಈಗ ವೃಧ್ಯಾಪದ ದೆಸೆಯಿಂದ ತಮ್ಮ ಈ ಉಪಉದ್ಯಮದಿಂದ ನಿವೃತ್ತರಾಗಲು ಯೋಚಿಸಿರುವರು. ಇವರಲ್ಲಿ ಅಭಿರುಚಿಯಿದ್ದ ಇತರ ಬೊಂಬೆಯಾಟ ರಸಿಕರು ಶ್ರೀ ಮಲ್ಯರ ಶ್ರಮವನ್ನು ಮುಂದುವರಿಸಲು ಪ್ರಯತ್ನ ಪಡುವರೆಂದೂ ಅವರಿಗೆ ತಕ್ಕ ಪ್ರೋತ್ಸಾಹ ದೊರಕಲೆಂದೂ ಹಾರೈಸುತ್ತೇವೆ.

ಸ್ಥಳೀಯ ವೆಂಕಟರಮಣ ದೇವಸ್ಥಾನದಲ್ಲಿ ರಾಮನವಮಿ ಸಂಬಂಧದಲ್ಲಿ ಹೊನ್ನಾವರದ ಶ್ರೀ ಶ್ರೀಧರ ಶೆಣೈ ಅವರು 'ರಾಮಾಯಣ' ಹರಿಕಥಾ ಕಾಲಕ್ಷೇಪವನ್ನು ಯಶಸ್ವಿಯಾಗಿ ಜರಗಿಸುತ್ತಿರುವರು. ಬಹು ವಿಧದ ಅಲಂಕಾರಗಳಿಂದ ದಿನದಿನವೂ ಕಥಾ ರಂಗವು ಶೃಂಗರಿಸಲ್ಪಡುತಿದ್ದು ಕಥಾ ಕ್ಷೇಪವು ಬಹು ಜನಾಕರ್ಷಿತವಾಗಿದೆ. ಶ್ರೀಯುತರು ಕುಂದಾಪುರದ ಬಳಿ ಒಂದು ಶಾಂತಿ ಆಶ್ರಮಕ್ಕಾಗಿ ಧನ ಸಂಗ್ರಹಿಸುತಿದ್ದು ಪ್ರೋತ್ಸಾಹಕರ್ಹರಿದ್ವಾರೆ.

ನಗರದ ಹ್ಯಾಸ್ಕೂಲು ಕೋಲೇಜುಗಳಿಗೆ ಸೆಕೆಕಾಲದ ರಜೆ ದೊರಕಿದೆ. ಮುನ್ಸಿಪಲ್ ಮತ್ತು ಇತರ ಕೆಲವು ಎಲಿಮೆಂಟರಿ ಶಾಲೆಗಳಿಗೆ ಈ ತಿಂಗಳ ಆಖೇರಿಗೆ ರಜೆ ಸಿಗುವುದು.

ಮಳೆಗಾಲ ಸದ್ಯದಲ್ಲೇ ಪ್ರಾರಂಭವಾಗಲಿರುವುದರಿಂದ ನಗರದಲ್ಲಿ ಕೊಡೆಗಳ ಅಭಾವವು ತುಂಬಾ ಇದೆ. ಹೊಸ ಕೊಡೆಗಳು ಬಹು ಸಮಯದಿಂದ ಸಿಗುವುದೇ ಅಪರೂಪವಾಗಿದೆ. ಅಧಿಕಾರಿಗಳು ಆ ಸಂಬಂಧ ಯೋಗ್ಯ ಏರ್ಪಾಡು ಮಾಡಿ ಕಲ್ಲಿಕೋಟೆ ಮುಂತಾದ ಸ್ಥಳಗಳಲ್ಲಿ ವ್ಯಕ್ತಿಗೆ ಒಂದರಂತೆ ಸಿಕ್ಕುವಂತೆ ಮಾಡಿದ ಏರ್ಪಾಡನ್ನು ಇಲ್ಲಿಯೂ ಮಾಡಲು ಪ್ರಯತ್ನ ಮಾಡಬಹುದೆಂದು ಒಂದು ಬಾತ್ಮಿ.

ಮಂಜೇಶ್ವರ ಟೆಂಪಲ್ ಹಾಯರ್ ಎಲಿಮೆಂಟರಿ ಶಾಲೆಯನ್ನು ಹ್ಯಾಸ್ಕೂಲನ್ನಾಗಿ ಮಾಡಲು ಸರಕಾರದ ಅನುಮತಿ ದೊರಕಿದ್ದು ಇದೇ ಜೂನ್‌ನಿಂದ ೪ನೇ ಫೋರ್ಮು ತೆರೆಯಲ್ಪಡುವುದೆಂದು ತಿಳಿದು ಬರುತ್ತದೆ.

ವಿದ್ಯಾರ್ಥಿಯ ಹಂಬಲ

ಗತಿಸಿದಿಪ್ಪತ್ತೈದನೆಯಕ್ರೈಸ್ತ ವರುಷಮೇ।
ತಿಥಿ ಷಷ್ಠಿದಿನದಿ ವಿದ್ಯಾದಾನವೆಂಬ ಜಗ।
ಹಿತಕೆ ಶ್ರೀ ಮದ್ದನಂತೇಶ್ವರಾಹ್ವಯ
ದೇಗುಲಾಧಿಕಾರಿಗಳಿಂದಲಿ॥
ಅತಿ ಸಣ್ಣದೆನಿಸಿ ಮಂಜುಳ ಪುರದಿಮಠವ ಸ್ಥಾ।
ಪಿತ ಮಾಡಿ ಕಾಲಕ್ರಮೇಣ ವದನತ್ಯುಚ್ಚ।
ಸ್ಥಿತಿಗೇರಿಸುತ ವೇದಸಹಸ್ರ ರೂಪಾಯಿಗಳ
ನೊಂದಬ್ದ ತಿಕ್ಕಿ ವ್ಯಯಿಸಿ ॥೧॥
ವಿದ್ಯಾಸಮಿತಿಯ ಸರ್ವಾಧಿಕಾರಿಗಳಲ್ಲಿ।
ಶ್ರದ್ಧೆಯಿಂ ಯತ್ನಗೈವುತ್ತ ಮಂಜೂರಾತಿ।
ಸದ್ಯದೆನಲೇಳೆಂಟು ವರುಷಕಿಂತಲೆ ಮೊದಲು
ಗೈವುತೀದಿನದ ವರೆಗೆ॥
ವಿದ್ಯಾಪ್ರಚಾರ ಕಾರ್ಯಗಳೆಲ್ಲ ಶಕ್ತಿಯೆನಿ।
ತಿದ್ದನಿತು ನಡಸೆ 'ಹೈಸ್ಕೂಲೆ'ಂಬ ಮಾರ್ಪಾಟ।
ಸದ್ಯಬಹುದೆಂಬ ಸೂಚನೆ ಜನತೆ ಸಂತೊಷತರ
ಮೆನಿಪುದದರಿಂದಲಿ ॥೨॥
ಹನಿಕೂಡಿ ಹಳ್ಳವೆಂಬದರಂತೆ ಜನರದನು।
ಮನದೆ ನೆನವುದ ಶಕ್ತಿಗನುಸರಿಸಿ ತಂತಮ್ಮ।
ತನುಮಾನಧನಗಳಿಂದ ಶಾಲಾಭಿವೃದ್ಧಿಗೆ
ಸಹಾಯವೆಸಗಲೆನುತ್ತಲಿ॥
ಪನಸಪಾಡಿಯ ಮೂಸಬೇಹಾರಿಯರ ತನುಜ।
ನೆನೆಸಿಪ್ಪ ತನ್ಮಠದ ವಿದ್ಯಾರ್ಥಿಯಿಬ್ರಾಹಿ।
ಮನು ಬೇಡುತಿಹ ಮಾನ್ಯ ಜನರಲ್ಲಿ ತ್ರೈಕರಣ
ಪೂರ್ವಕದ ಭಾವದಿಂದ ॥೩॥

ಬಿ. ಎಮ್. ಇಬ್ರಾಹಿಮ್, (ಮಂಜೇಶ್ವರ)

ಸಂಕ್ಷೇಪ ಸುದ್ದಿ ಸಾರ

ಪೇಶಾವರದ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ರಾಯ್ ಬಹದ್ದೂರ್ ಮೇಹರ್ ಚಂದ್ ಖಾನ್ನಾ ಅವರು: "ಈಗ ನನ್ನ ಕಣ್ಣುಗಳು ತೆರೆದಿವೆ. ನಿರರ್ಥಕ ವಾಗ್ದಾನಗಳಿಗೆ ಇನ್ನು ಮುಂದೆ ಭಾರತೀಯರು ಮನ ಸೋಲಲಾರರೆಂದು ನಾನು ಎಮೆರಿ ಮಹಾಶಯರಿಗೆ ತಿಳಿಸ ಬಯಸುತ್ತೇನೆ" ಎಂದರು. ಖಾನ್ನಾ ಅವರು ಒಂದು ಕಾಲದಲ್ಲಿ ಬ್ರಿಟಿಷ್ ಸರಕಾರದ ಬೆಂಬಲಿಗರಾಗಿದ್ದು ರಾಯ್‌ಸಾಹೇಬ್ ಬಿರುದು ಪಡೆದಿದ್ದಾರೆ. ಅವರು ಅದೇ ಭಾಷಣದಲ್ಲಿ ಮತ್ತೆ ಹೀಗೆಂದರು: "ಬ್ರಿಟಿಷ್ ಸರಕಾರದವರು ಕೊನೆಯಲ್ಲಿ ನಮಗೆ ಎಂತಹ ಬಹುಮಾನವನ್ನು ಕೊಟ್ಟರು? ಬಂಗಾಲವು ಬರಗಾಲದ ಬೇಗೆಯಿಂದ ಹೊತ್ತಿತು. ಆಫ್ರಿಕದಲ್ಲಿ ಹೋರಾಡಿ ನಮ್ಮ ಸೈನಿಕರು ಮಾರ್ಶಲ್ ಸ್ಮಟ್ಸ್‌ರನ್ನು ಬದುಕಿಸಿತು. ಆದರೆ ಅವರು ಭಾರತೀಯರಿಗೆ ತಾರತಮ್ಯ ಕಾನೂನು ಕೊಟ್ಟರು. ಅಸ್ಟ್ರೇಲಿಯದ ರಕ್ಷಣೆಗಾಗಿ ನಮ್ಮವರು ಯುದ್ಧ ಮಾಡಿದರು. ಆದರೆ ಅಲ್ಲಿ ಇನ್ನೂ ಬಿಳಿಯರ ಮೇಲ್ತನವೇ ಆಳುತ್ತಿದೆ. ಭಾರತದ ಸ್ವಾತಂತ್ರ್ಯವೇ ಈಗಿನ ನಮ್ಮ ಗುರಿ. ಇದು ದೊರೆಯುವ ತನಕ ಈ ತಾರತಮ್ಯ ದ್ವೇಷಾಸೂಯೆಗಳು ಮುಂದುವರಿಯುವುವು."

ಂ ಂ ಂ ಂ

ಈಗ ಸ್ವತಃ ಹಿಟ್ಲರನೇ ಗಡ್ಡ ಬೆಳೆಸಿಕೊಂಡು ಎಲ್ಲೋ ಅವಿತಿರುವನೆಂದು ಸುದ್ದಿ ಇದೆ. ಅವನ ಅಧಿಕಾರ ಸ್ಥಾನವನ್ನು ಉಕ್ಕಿನ ಹೃದಯದ ಹಿಮ್ಲರನು ತೆಗೆದುಕೊಂಡಿರುವನೆಂದೂ ಈ ಚೇಗೆ ಅವನೇ ಎಲ್ಲಾ ಶಾಸನಾಜ್ಞೆಗಳನ್ನು ಹೊರಡಿಸುತ್ತಿರುವನೆಂದೂ ಹೇಳಲಾಗಿದೆ.

ಇದರ ನಂತರ ಈಗ ಹರ್ ವಿಾಸ್‌ನರ್ ಎಂಬ ಹಿಟ್ಲರ್ ಸ್ನೇಹಿತನೊಬ್ಬನು ಮೇಲಿನ ಇರ್ವರನ್ನೂ ಮೂಲೆಗೊತ್ತಿ ತಾನು ಅಧಿಕಾರಕ್ಕೆ ಬರಲು ಪ್ರಯತ್ನಮಾಡುತ್ತಿರುವನಾಗಿ ತಿಳಿದು ಬರುತ್ತದೆ. ಅಂತೂ ಕುರುಹುಗಳು ಸೋಲುವ ಜರ್ಮನಿಯ ಅಂತ್ಯ ಲಕ್ಷಣಗಳನ್ನು ತೋರಿಸುತ್ತದೆ.

ಂ ಂ ಂ ಂ

ಜರ್ಮನಿಯ ಅಂತ್ಯ ಸಮೀಪಿಸಿದಂತೆ ಇಂಗ್ಲೆಂಡಿನ ಮಂತ್ರಿಮಂಡಳದಲ್ಲೂ ಒಡಕುಂಟಾಗಿದೆ. ಮಜೂರ ಪಕ್ಷದಿಂದ ಮಂತ್ರಿಮಂಡಳದ ಸದಸ್ಯರಾಗಿದ್ದ ಮಿ। ಬೆವಿನ್ನರು ಯುದ್ಧಾನಂತರ ಇಂಗ್ಲೆಂಡಿನಲ್ಲಿ ಸಂಯುಕ್ತ ಮಂತ್ರಿಮಂಡಳವಾಗಬಾರದೆಂದೂ, ರಾಷ್ಟ್ರೀಯ ಮಂಡಳವಾಗಬೇಕೆಂದೂ ಇರುವ ತಮ್ಮ ಪಕ್ಷದ ಅಭಿಪ್ರಾಯ ಪ್ರಕಟಿಸಿದಾಗ, ಹಳೇ ಸಾಂಪ್ರದಾಯವಾದಿಗಳಾವ ಟೋರಿ ಪಕ್ಷದ ಪರವಾಗಿ ಮಿ। ಬ್ರೆಕನ್‌ರೆಂಬ ಮಂತ್ರಿಗಳು ಅದಕ್ಕೆ ಪ್ರತ್ಯುತ್ತರ ಕೊಟ್ಟರು. ಹೀಗೆ ಅಲ್ಲಿನ ಸಾರ್ವಜನಿಕದಲ್ಲಿ ದೊಡ್ಡದೊಂದು ರಾಜಕೀಯ ಗುಲ್ಲು ಗಲಾಟೆ ನಡೆಯುತ್ತದೆ. ಚರ್ಚಿಲ್ಲರು ಸ್ವತಃ ಬೆವಿನ್ನರ ಭಾಷಣವನ್ನು ಖಂಡಿಸಿರುವರು. ಅಂತೂ ಮಜೂರ ಪಕ್ಷದವರ ಬಲವು ಹೆಚ್ಚಾಗಿ ಚರ್ಚಿಲ್ಲರು ರಾಜಿನಾಮೆ ಕೊಡುವ ಪ್ರಸಂಗ ಬರಬಹುದೆಂದೂ ಊಹಿಸಲಾಗಿದೆ. ಮತ್ತೆ ಅವರು ಪ್ರಧಾನರಾಗುವುದು ಕಷ್ಟತರವೆಂದೇ ಭಾವನೆ.

ಂ ಂ ಂ ಂ

ಲಕ್ನೋ ಸೆಂಟ್ರಲ್ ಜೈಲಿನಲ್ಲಿ ಒಂದು ಸಾರಸ್ಯ ಘಟನೆ ನಡೆಯಿತು. ಅಲ್ಲಿ ಏಳು ವರ್ಷದ ಸಜೆ ಅನುಭವಿಸುತಿದ್ದ ತಿವಾರಿ ಎಂಬ ಕೈದಿ ಇದ್ದ. ಒಂದು ದಿನ ಯಾರೊ ಜೈಲು ಅಧಿಕಾರಿಗಳಿಗೆ ಮೇಲಧಿಕಾರಿಯಿಂದ ಒಂದು ಬಿಡುಗಡೆ ಪತ್ರ ತಂದುಕೊಟ್ಟಾಗ ಆ ತಿವಾರಿಯನ್ನು ಬಿಡಲಾಯಿತು. ಕೊನೆಗೆ ಆ ಪತ್ರವು ಮೋಸದ್ದೆಂದು ತಿಳಿಯಿತು. ಈಗ ಇರ್ವರ ಪತ್ತೆಗೂ ಪ್ರಯತ್ನಗಳಾಗುತ್ತವೆ.

ಅದೇ ಪ್ರಕಾರ ಬಜಪೆಯಲ್ಲಿಯೂ ಹ್ಯಾಸ್ಕೂಲ್ ತರಗತಿ ತೆರೆಯಲು ಅನುಮತಿ ದೊರಕಿದೆಯೆಂದೂ ಅಲ್ಲು ೪ನೇ ಫೋರ್ಮನ್ನು ತೆರೆಯುವರೆಂದು ಗೊತ್ತಾಗಿದೆ.

ಪಣಂಬೂರಿನಲ್ಲಿ ಕದ್ರಿ ಮೇಳದವರು ತಾ. ೧೬ರಂದು 'ರಾಮಾಯಣ' ದಶಾವತಾರ ಪ್ರದರ್ಶನಗಳನ್ನು ಪ್ರಾರಂಭಿಸಿದ್ದು ಜನಾಕರ್ಷಕವಾಗಿ ಮುಂದುವರಿಯುತ್ತದೆಂದು ತಿಳಿದು ಬರುತ್ತದೆ.

ಜಪಾನಿನ ಕಾಳಸರ್ಪ ಸಂಚುಗಾರರು

ಯುದ್ಧಕ್ಕೆ ಹುರಿ ದುಂಬಿಸುವ ದ್ರೋಹಿಗಳು

ಬಿಳಿಯರನ್ನು ಓಡಿಸುವುದೇ ಅವರ ಧ್ಯೇಯ

ಜಪಾನಿನ ವಿಚಿತ್ರವಾದ ಪಂಚಮದಳ

ತಮ್ಮ ದೇಶವನ್ನು ನಿರಂತರ ಯುದ್ಧ ಪಿತೂರಿ, ಕ್ರಾಂತಿಗಳಲ್ಲಿ ಮುಳುಗಿಸುವುದೇ ಧ್ಯೇಯವಾಗಿಟ್ಟುಕೊಂಡ ಒಂದು ಗುಪ್ತ ಸಂಚುಗಾರರ ಕೂಟವು ಜಪಾನಿನಲ್ಲಿದೆ. ಬ್ಲೇಕ್ ಡ್ರೆಗನ್ ಸೊಸ್ಯಾಟಿ ಎಂಬ ಅಂಕಿತ ನಾಮದ ಈ ಸಂಘವನ್ನು ನಮ್ಮ ಕಡೆಯ ಮಾತಿನಲ್ಲಿ ಅರ್ಥ ಮಾಡಿಕೊಳ್ಳುವುದಾದರೆ 'ಕಾಳ ಸರ್ಪ ಕೂಟ'ವೆನ್ನಬಹುದು.

ಈ ಕ್ರೂರ ಕೂಟದ ಸದಸ್ಯರು ಬರೀ ೧೨ ಸಾವಿರ ಮಂದಿಯಿದ್ದು ದೇಶ ವಿಸ್ತಾರವಾದ ಚಟುವಟಿಕೆಗಳನ್ನು ಅವರು ನಿರ್ದೇಶಿಸುವರು. ಜಪಾನಿನಲ್ಲೇ ಮಾತ್ರವಲ್ಲ ಇಡೀ ಆಸ್ಯವನ್ನೇ ತಮ್ಮ ಕಾರಸ್ಥಾನವಾಗಿ ಮಾಡಿಕೊಳ್ಳುವುದು ಇವರ ಉದ್ದೇಶ. ಇದರ ಸದಸ್ಯರು ಎಲ್ಲಾ ಉದ್ಯಮಗಳಿಗೆ ಸೇರಿದವರಿದ್ದು ಅಲ್ಲಿನ ಸರಕಾರವನು ಹೆಚ್ಚೆಚ್ಚಿನ ದಬ್ಬಾಳಿಕೆಯ ಧೋರಣೆ ವಹಿಸುವಂತೆ ಮಾಡುವುದೇ ಇವರ ಜೀವನದ ಗುರಿಯಾಗಿರುತ್ತದೆ. ಅಂತ್ಯದಲ್ಲಿ ಜಪಾನನ್ನು ಆಸ್ಯದ ಸರ್ವಾಧಿಕಾರಿಯನ್ನಾಗಿ ಮಾಡಿದಾಗಲೇ ಇವರ ಧ್ಯೇಯೋದ್ದೇಶಗಳು ಪರಿಪೂರ್ಣಗೊಂಡಂತಾಗುವುವು.

ಈ ಕಾಳಸರ್ಪ ಕೂಟವೇ ಅಲ್ಲಿನ ಮೊತ್ತಮೊದಲಿನ ಗುಪ್ತ ರಾಜಕೀಯ ಕೂಟವಲ್ಲ. ಇದಕ್ಕೂ ಮೊದಲು 'ಗೆನ್ಯೋಶಾ' ಎಂಬ ಮತ್ತೊಂದು ಮೂಲ ಸಂಘವೊಂದಿದ್ದು ಈಗಿನದು ಅದರ ಒಂದು ರೂಪಾಂತರ ಮಾತ್ರ. ಈ ಮೂಲ ಗೆನ್ಯೋಶಾ ಕೂಟದ್ದೂ ಮತ್ತು ನಂತರದ ಕಾಳಸರ್ಪ ಕೂಟದ್ದೂ ನಿರಂಕುಶ ನಾಯಕನಾಗಿದ್ದ ವ್ಯಕ್ತಿ ಬಹಳ ವಿಚಿತ್ರ ಜೀವ ಇತಿಹಾಸವುಳ್ಳದ್ದು. ಮಿಟ್ಸುರಾ ಟೊಯೊಮಾ ಎಂದು ಆತನ ಹೆಸರು. ಅತೀ ವೃದ್ಧನಾಗಿ ಕಳೆದ ವರ್ಷದ ಒಕ್ಟೋಬರ್ ತಿಂಗಳಲ್ಲಿ ಆತನು ಮರಣ ಪಟ್ಟನು. ಸನ್ಯಾಸಿಯಂತೆ ಆತನು ಜೀವನ ನಡೆಸಿ ಕೊಂಡು ಬಂದಿದ್ದನಾದರೂ ಜಪಾನಿನ ಅತೀ ಉನ್ನತ ರಾಜಕೀಯ ಮತ್ತು ಸಮಾಜ ಕೇಂದ್ರಗಳಲ್ಲಿ ಆತನಿಗೆ ಮಾನ ಮನ್ನಣೆಗಳು ದೊರಕುತಿದ್ದವು.

ತನ್ನ ತೊಂಬತ್ತು ವರ್ಷದ ಆಯುಷ್ಯದಲ್ಲಿ ಸಂಚುಗಾರ ಟೊಯಮನು ೭೫ ವರ್ಷಗಳ ತನಕ ಅಲ್ಲಿ ನಡೆದ ಯುದ್ಧ, ಪಿತೂರಿ, ದಂಗೆ, ಕೊಲೆ ಖೂನಿಗಳಲ್ಲಿ ಒಂದಲ್ಲ ಒಂದು ರೀತಿಯ ಕೈವಾಡವಿದ್ದವನಾಗಿದ್ದನು. ಈ ಗುಪ್ತ ಕಾರಸ್ಥಾನಿಯು 'ಜಪಾನಿನ ರಾಕ್ಷಸಿ' ಎಂದು ಪ್ರಖ್ಯಾತಳಾದ ಟಾಕಾಗಾ ಎಂಬ ವೀರ ಮಹಿಳೆಯಿಂದ ಶಿಕ್ಷಣ ಪಡೆದಿದ್ದನು. ಅವಳು ನೋಡಲು ಓರ್ವ ಹಿಡಿಂಬೆಯಂತಿದ್ದು, ಪುರುಷರಂತೆ ಉಡುಪು ಹಾಕಿ ಸೊಂಟದ ಇಕ್ಕಡೆಗಳಲ್ಲಿ ಎರಡು ಖಡ್ಗಗಳನ್ನು ಧರಿಸಿ ಕೊಂಡವಳಾಗಿ ಯಾರ ಹೆದರಿಕೆಯು ಇಲ್ಲದಂತೆ ತಿರುಗುತಿದ್ದಳು. ಅಂದ ಮೇಲೆ ಟೊಯಮನು ಕಾರಭಾರಿಯಾದುದರ ಮರ್ಮವು ಸ್ವಲ್ಪ ಮಟ್ಟಿಗೆ ತಿಳಿದಂತಾಯಿತು. ಅವನ ವಿಷಯವಾಗಿ ಅನೇಕ ವಿಚಿತ್ರ ಕಟ್ಟು ಕತೆಗಳೂ ಅಲ್ಲಿ ಪ್ರಚಾರದಲ್ಲಿವೆ.

ಪೂರ್ವಾತ್ಯ ದೇಶಗಳಲ್ಲಿ ಜಪಾನೀ ಅಧಿಕಾರವನ್ನು ಸ್ಥಾಪಿಸಿ ಬಿಳೀ ಜನರನ್ನು ಈ ಕಡೆಗಳಿಂದ ಓಡಿಸುವುದೇ ಇವರು ಜೀವ ಮಾನದಲ್ಲೆಲ್ಲ ಪ್ರಚಾರ ಮಾಡಿ ಬಂದ ವಿಷಯ.

ಟೊಯಮನು ಮುಖಂಡನಾಗಿರುವ 'ಕಾಳಸರ್ಪ' ಕೂಟದ ಕಂಕಣ ಬದ್ಧವಾದ ಪ್ರತಿಜ್ಞೆಗಳು ಮೂರು: ಜಪಾನ್ ಚಕ್ರವರ್ತಿ ಕುಟುಂಬದ ದೈವೀಕ ಪವಿತ್ರತೆಯನ್ನು ರಕ್ಷಿಸುವುದು; ದೇಶವನ್ನು ಶತ್ರುಗಳಿಂದ ರಕ್ಷಿಸುವುದು; ಸಾಮಾನ್ಯ ಜನತೆಯ ಹಿತವನ್ನು ಕಾಯ್ದುಕೊಳ್ಳುವುದು.

ಈ ಮೂರರಲ್ಲಿ ಕೊನೆಯದನ್ನು ಕಾಳ ಕೂಟದವರು ಸಂಪೂರ್ಣ ಮರೆತಿರುವರು ಎರಡನೆಯದನ್ನು ಸಂದರ್ಭಕ್ಕನುಸಾರವಾಗಿ ಬದಲಾಯಿಸುವರು. ಆದರೆ ಮೊದಲನೆಯ ತತ್ವವು ಅಲ್ಲಿಯ ಎಲ್ಲಾ ರಾಜಕೀಯ ಮತ್ತು ಕ್ರಾಂತಿಕಾರ ಸಂಸ್ಥೆಗಳನ್ನು ಸ್ಫೂರ್ತಿಗೊಳಿಸುವಂತಹದು.

ಪಂಚಮ ದಳದ ಚಟುವಟಿಕೆಗಳು

ಜಪಾನು ಕೊರಿಯವನ್ನು ಹಿಡಿದಾಗ ಟೊಯಮನ ಕೂಟದವರು ಅಲ್ಲಿ ಮೊತ್ತ ಮೊದಲಿನ ಗುಪ್ತ ಕಾರಸ್ಥಾನ ನಡೆಸಿದರು. ೧೮೭೩ರಲ್ಲಿ ಟಕಾವೊರಿ ಸ್ಯಾಗೊ ಎಂಬವನು ಕೊರಿಯವನ್ನು ಆಕ್ರಮಿಸಬೇಕೆಂದು ಸಾರಿದ್ದಾಗ ಟೊಯಮನು ಅವನಿಗೆ ಬೆಂಬಲ ಕೊಟ್ಟನು. ಈ ದೊರೆಗೆ ವಿರೋಧವಾಗಿ ಕೊರಿಯದ ಜನರು ದಂಗೆ ಎಬ್ಬಿಸಲು ಜಪಾನು ಸರಕಾರವು ಒಂದು ಒಪ್ಪಂದ ಮಾಡಿ ಕೊಂಡಿತು. ಇದರಿಂದ ಟೊಯಮನ ಚಳವಳಕ್ಕೆ ಸ್ವಲ್ಪ ದಕ್ಕೆಯುಂಟಾಯಿತಾದರೂ ಅವನು ಮತ್ತೊಂದು ಸಲ ತನ್ನ ಪ್ರಯತ್ನಗಳನ್ನು ಮುಂದರಿಸಿ ಕೊರಿಯದ ಸ್ವಾತಂತ್ರ ಅಪಹರಣಕ್ಕಾಗಿ ಗಲಾಟೆ ಎಬ್ಬಿಸಿದನು.

ಜಪಾನು-ರಷ್ಯಾ ಘರ್ಷಣೆಯಾಗುವ ಮೊದಲು ಟೊಯಮನ ಕಡೆಯ ೧೭ ವರ್ಷದ ರ್ಯೊಹೀ ಉಬೆಡಾ ಎಂಬ ತರುಣನು ರಷ್ಯದ ಗಡಿನಾಡಿನಲ್ಲಿ ಹೊಂಚುಗಾರನಾಗಿ ಪಂಚಮದಳ ಚಟುವಟಿಕೆ ನಡೆಸಿ ರಷ್ಯದ ಸೈನ್ಯ ಠಾಣ್ಯಗಳ ಗುಟ್ಟನ್ನು ಅರಿತುಕೊಂಡನು. ರಷ್ಯದ ಸೈನ್ಯ ಚಟುವಟಿಕೆಗಳು ಅಪಾಯಕಾರಕವೆಂದು ಸಾರಿ ಟೊಯಮನು ಆ ದೇಶದ ಮೇಲೆ ಯುದ್ಧ ಸಾರುವಂತೆ ಹುರಿದುಂಬಿಸತೊಡಗಿದನು.

ರಷ್ಯಾ ಯುದ್ಧದ ತನಕ ಗೆನ್ಯೋಶಾ ಎಂದು ಹೆಸರು ವಾಸಿಯಾದ ಟೊಯಮನ ಕೂಟವು ಮತ್ತೆ 'ಕಾಳಸರ್ಪ ಸಂಘ'ವಾಗಿ ನಾಮಾಂಕಿತವಾಗಿ ಪುನ:ರ್ವ್ಯವಸ್ಥೆ ಮಾಡಲಾಯಿತು. ಫಿಲಿಪ್ಯಾನಿನ ಜನರು ಅಮೇರಿಕದ ಬಿಳಿಯರ ವಿರೋಧವಾಗಿ ದಂಗೆಗಳನ್ನು ಪ್ರಾರಂಭಿಸಲು ಟೊಯಮನು ತನ್ನ ಸಹಾಯ ಹಸ್ತವನ್ನು ಅವರಿಗೆ ನೀಡಿದನು. ೧೯೦೪ರಲ್ಲಿ ಸಾರಲ್ಪಟ್ಟ ರಷ್ಯಾ-ಜಪಾನ್ ಯುದ್ಧಕ್ಕೆ ಟೊಯಮನೇ ಕಾರಣನು. ಆಗ ಜಪಾನೀ ಮುಖ್ಯ ಮಂತ್ರಿಯಾಗಿದ್ದ ರಾಜಕುಮಾರ ಇಟೊನಿಗೆ ಟೊಯಮನು ಬೆದರಿಕೆಯ ಪತ್ರ ಬರೆದು 'ಯುದ್ಧ ಸಾರದಿದ್ದರೆ ನಿನ್ನನ್ನು ಕೊಲ್ಲುವೆವು' ಎಂದು ತಿಳಿಸಿದ್ದನು.

ಯುದ್ಧ ಮತ್ತು ಕೊಲೆ.

ಕಾಳಸರ್ಪ ಕೂಟದ ಸದಸ್ಯರಾಗಿದ್ದವರಲ್ಲಿ ಜಪಾನಿನ ಅತೀ ಶ್ರೇಷ್ಟ ರಾಜಕೀಯ ಮುಖಂಡರಿದ್ದರೆಂಬ ಸಂಗತಿಯು ಆಶ್ಚರ್ಯವನ್ನುಂಟು ಮಾಡದಿರದು. ಟೋಜೊ ಕೊನ್ಯೊ, ಇಟಗಾಗಿ, ಹಿರೊಹಿಟಾ, ಸುಗಿಯಾಮ ಮೊದಲಾದ ಮುಖ್ಯ ಮತ್ತು ಉಪ ಮಂತ್ರಿಗಳು ಇದರ ಸದಸ್ಯರಾಗಿದ್ದರು. ಕಳೆದ ವರ್ಷ ರಾಜಿನಾಮೆ ಕೊಟ್ಟ ಟೋಜೊನೂ ಟೊಯಮನೂ ಸೇರಿ ೧೯೩೧ರಲ್ಲಿ ಮೆಂಚೂರಿಯಾದ ಒಂದು 'ರೈಲು ಸ್ಫೋಟದ ಪಿತೂರಿ ನಡೆಸಿ ಚೀನಾ ಜಪಾನ್ ಯುದ್ಧಕ್ಕೆ ತಳಹದಿ ಹಾಕಿದರು.

ತಮ್ಮ ಧೋರಣಕ್ಕೆ ವಿರೋಧಿಗಳಾದವರನ್ನು ಕಾಳಸರ್ಪ ಕೂಟದವರು ಕೊಲೆ ಮಾಡಿಯೇ ಸೇಡು ತೀರಿಸಿಕೊಳ್ಳುವರು. ಇಸುಕೇ ಮತ್ತು ಹಾರಾ ಎಂಬ ಮುಖ್ಯ ಮಂತ್ರಿಗಳನ್ನೂ, ಸ್ಯಾಟೊ ಎಂಬ ನೌಕಾಧಿಪತಿಯನ್ನೂ, ಒಕುಮಾ ಎಂಬ ವಿದೇಶಾಂಗ ಮಂತ್ರಿ ಮತ್ತಿತರ ಕೆಲ ಉಪ ಮಂತ್ರಿಗಳನ್ನು ಟೊಯಮನ ಕಡೆಯವರು ಕ್ರೂರ ರೀತಿಯಲ್ಲಿ ಕೊಲೆ ಮಾಡಿರುವರು. ಇಂದಿನ ಯುದ್ಧಕ್ಕೂ ಕಾಳಸರ್ಪ ಕೂಟದವರೇ ಕಾರಣರೆಂದೂ ಸುಮಾರು ಒಂದು ವರ್ಷದಿಂದ ಅವರು ಅಮೇರಿಕಕ್ಕೆ ವಿರೋಧವಾಗಿ ಭಾಷಣಗಳನ್ನೂ, ಲೇಖನಗಳನ್ನೂ ಪ್ರಚಾರ ಮಾಡುತ್ತಿದ್ದರಂತೆ.

ಟೊಯಮನು ಭಾರತೀಯ ಕ್ರಾಂತಿಕಾರರಾದ ರಾಶ್ ಬಿಹಾರಿ ಘೋಶ್ ಮುಂತಾದವರಿಗೆ ಆಶ್ರಯ ಕೊಟ್ಟಿರುವನೆಂಬ ಸಂಗತಿಯು ಸೋಜಿಗವನ್ನುಂಟು ಮಾಡದಿರದು. ಅಮೇರಿಕದ ವಿರೋಧ ಚಳವಳ ಮಾಡಿದ ಫಿಲಿಪ್ಯಾನಿನವರಿಗೆ ಸಹಾಯವಿತ್ತಂತೆ ಟೊಯಮನು ಬ್ರಿಟಿಷರ ವಿರೋಧ ಕ್ರಾಂತಿ ನಡೆಸ ಪ್ರಯತ್ನಿಸಿದ ಭಾರತೀಯರಿಗೂ ಆಶ್ರಯ ಕೊಟ್ಟಿರಬಹುದು. ಅಂತೂ ಅವನೊಬ್ಬ ವಿಚಿತ್ರ ವ್ಯಕ್ತಿ.

ಇತ್ತೀಚೆಗಿನ ಒಂದು ಜರ್ಮನ್ ಪ್ರಕಟನೆಯಲ್ಲಿ ನಾಜೀ ಪಕ್ಷವನ್ನು ಸರಕಾರ ಆಡಳಿತದಿಂದ ಪ್ರತ್ಯೇಕಿಸಲಾಗಿದೆ ಎಂದು ತಿಳಿಸಲಾಯಿತು. ಕುಸಿದು ಬೀಳುತ್ತಿರುವ ಹಿಟ್ಲರನ ನಾಜೀ ಯಂತ್ರದ ಉಪಕರಣಗಳೆಲ್ಲವೂ ಒಂದೊಂದಾಗಿ ಸಡಿಲಾಗಹತ್ತಿವೆ. ಯುದ್ಧಾರಂಭದಲ್ಲಿ ಹಿಟ್ಲರನ ಬಲಗೈಯಂತಿದ್ದ ಹೆರ್ ಹೆಸನು ಇಂಗ್ಲೆಂಡಿಗೆ ಬಂದಿದ್ದು ಈಗ ತಲೆಕೆಟ್ಟು ಹುಚ್ಚರ ಆಸ್ಪತ್ರೆಯಲ್ಲಿದ್ದಾನೆ.

ಕೆಲವು ತಿಂಗಳ ಹಿಂದೆ ಅನೇಕ ಪ್ರಖ್ಯಾತ ಜರ್ಮನ್ ಸೇನಾನಿಗಳು ಒಂದೊ ಮಡಿದರು. ಕೊಲ್ಲಲ್ಪಟ್ಟರು ಇಲ್ಲವೆ ಸೆರೆಯಾಳುಗಳಾದರು. ಗೋರಿಂಗನು ಎಲ್ಲೊ ವಿಮಾನ ಅಪಘಡದಲ್ಲಿ ಸತ್ತನೆಂದೂ ಪ್ರಕಟವಾಗಿದೆ.

○ ○ ○ ○

ದಿನವಹಿಂ ಉಪಯೋಗದ ಲೋಹದ
ಪಾತ್ರಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಈ ಪ್ರಖ್ಯಾತ ಲೇಪವು ಕಲೆ
ಉಳಿಯದಂತೆ ಗುಣ
ಪಡಿಸುತ್ತದೆ

ಈ ಜಾಂಬಕ್ ಪೆಟ್ಟಿಗೆ
ಪತ್ರಿಯೊಂದು ಮನೆ
ಯಲ್ಲಿಯೂ ಇರ
ತಕ್ಕದ್ದು

ನೀವೆಷ್ಟೇ ಜಾಗರೂಕರಾಗಿದ್ದರೂ, ಮನೆಯಲ್ಲಿ ಕೆಲಕೆಲವು ಅಪಾಯಗಳು ಸಂಭವಿಸಿಯೇ ಬಿಡುತ್ತದೆ. ಗಾಯ, ಮೊಣಕಾಲು ಬೇನೆ, ಬಾವು ಇತ್ಯಾದಿಗಳಾಗಿ ಮಕ್ಕಳು ಆಗಾಗ ಬಹಳ ತೊಂದರೆಕೊಡುತ್ತವೆ.

ಅಂಥಾ ಗಾಯಗಳು ಒಳಗಡೆ ವಿಷಕ್ರಿಮಿ ಹೋಗದಿದ್ದರೆ ಯಾವಾಗಲೂ ಅಪಾಯಕಾರಿಗಳಲ್ಲ. ಅದಕ್ಕಾಗಿಯೂ ನೀವು ಆಗ ಜಾಂಬಕ ತಾಗಿಸಬೇಕು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವನ್ನು ಚರ್ಮವು ಬೇಗನೇ ಹೀರಿಕೊಂಡು, ನೋವನ್ನು ಗುಣಮಾಡಿ, ಬಾವನ್ನು ಕಡಿಮೆಮಾಡಿ ರೀತಿ ಇತ್ಯಾದಿಗಳನ್ನು ಒಣಗಿಸುವುದು.

ಯಾವಾಗಲೂ ಜಾಂಬಕನ್ನೇ ಸವರಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಸ್ವಾತಂತ್ರ್ಯ ಸಂದೇಶದ ಪ್ರತಿಬಿಂಬ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್

ಕೊಂಗ್ರೆಸ್ಸಿನ ಅಧ್ಯಕ್ಷರಾಗುವರೆ?

ನೆಹರು ಕುಟುಂಬದ ಇನ್ನೊಂದು ಆದರ್ಶ

"...ಮಾತೃಭೂಮಿಯ ಸಂಕಷ್ಟ ಕಾಲದಲ್ಲಿ ತಮ್ಮ ಮನೆಗಳ ಆಶ್ರಯವನ್ನು ತ್ಯಜಿಸಿ, ಅಚಲ ಧೈರ್ಯ ಮತ್ತು ಸಹನಶೀಲತೆಯಿಂದ ಭಾರತದ ರಾಷ್ಟ್ರೀಯ ಸೈನ್ಯದಲ್ಲಿ ಗಂಡಸರೊಡನೆ ಭುಜಕ್ಕೆ ಭುಜ ತಾಗಿಸಿ ಭಾಗವಹಿಸಿ, ಸ್ವಾತಂತ್ರ್ಯ ಹೋರಾಟದ ವಿಜಯ—ತ್ಯಾಗಗಳಲ್ಲಿ ಅವರೊಡನೆ ಭಾಗಿಗಳಾದದಕ್ಕೆ ನಾವು ಭಾರತದ ಮಹಿಳಾವೃಂದಕ್ಕೆ ನಮ್ಮ ಆದರ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ...."—

ಜನವರಿ ೨೬, ೧೯೪೧ರ ಸ್ವಾತಂತ್ರ್ಯ ನೆನವಿನ ಠರಾವಿನ ವಾಕ್ಯವದು. ಹೀಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರಲ್ಲಿ ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತ—ಅವರು ಒಬ್ಬರು—ಪ್ರಮುಖರು! ಈ ಸ್ವಾತಂತ್ರ್ಯ ಸಂದೇಶದ ಪ್ರತಿಬಿಂಬ.!

ಗಾಂಧಿಜೀಯವರಿಂದ ರೂಪಗೊಂಡು...!

"ಗಾಂಧಿಜೀಯವರು ಅದ್ಭುತ ಕಾರ್ಯಗಳನ್ನು ಸಾಧಿಸಬಲ್ಲರು, ಸ್ತ್ರೀ ಸಮಾಜಕ್ಕೆ ಒಂದು ಸನ್ಮಾನಿತ ಸ್ಥಾನವನ್ನು—ಪುರುಷರೊಡನೆ ಸಮಸ್ಥಾನವನ್ನು, ಪ್ರಮುಖ ಸ್ಥಾನವನ್ನು ಕೊಟ್ಟು—ಭಾರತದ ನವನಿರ್ಮಾಣವನ್ನು ಮಾಡಿದವರವರು" ಎಂದು ಅಮೇರಿಕದಲ್ಲಿ ಭಾಷಣ ಮಾಡಿ ಸತ್ಯವನ್ನು ಪ್ರಕಾಶಕ್ಕೆ ತಂದರು—ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್, ಅವರು. ಗಾಂಧೀವಾದದ ಪ್ರಭಾವ—ಪ್ರತಿಭೆಯಿಂದ ರೂಪಗೊಂಡ ನವ-ಸ್ತ್ರೀತ್ವದ ಪ್ರತಿರೂಪ—ಶ್ರೀಮತಿಯವರು!

ರಶ್ಮಿ—ರಜನಿ...

ಸದ್ಯದಲ್ಲೇ ಪ್ರಕಟವಾಗಲಿರುವ, ಶ್ರೀಮತಿಯವರ ಆತ್ಮಕಥೆಯಲ್ಲಿ ಭಾರತದ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳನ್ನು ಸಾಧಿಸುವ ಪ್ರಯತ್ನಗಳು; ಭಾರತದ ಮಹಿಳೆಯರು ತಮ್ಮ ಜನ್ಮಭೂಮಿಗಾಗಿ ಮಾಡಿದ ಮಹಾತ್ಯಾಗಗಳು, ಹಾಕಿಕೊಟ್ಟ ಉಚ್ಛ ಧ್ಯೇಯಗಳು ತೆರೆಯಮರೆಯಿಂದ ಹೊರಬರುವವು...

ಅಹುದು...ಶ್ರೀಮತಿಯವರ ಜೀವನವು ರಶ್ಮಿ ರಜನಿಗಳ ಒಂದು ಚಿತ್ರ—ಭಾರತದ ರಾಜಕೀಯ ಸ್ಥಿತಿಗತಿಯೊಡನೆ ಸಾಂಕೇತಿಕವಾಗಿ ಮುಂದೆ ಸಾಗುವ ಚಿತ್ರ!...ನಹರೂ ಕುಟುಂಬದ ನಿವಾಸಸ್ಥಾನವಾಗಿದ್ದ 'ಆನಂದ ಭವನವು' ಮರುಭೂಮಿಯ ಸದೃಶವಾದ ಅನೇಕ ವೇಳೆಗಳಿವೆ—ಎಲ್ಲ ನೆಹರೂ ಹಿರಿಯರು ಬಂಧಿತರಾದಾಗ!...ಶ್ರೀಮತಿಯವರು ಅಸಹನೀಯ ವಿಯೋಗ ದು:ಖವನ್ನು ಸಹಿಸಿಯೂ, ವಿದೇಶದಲ್ಲಿ ಭಾರತದ ಏಳ್ಗೆಗಾಗಿ ಪ್ರಚಾರ ಮಾಡುವುದೆಂದರೆ ತಮ್ಮ ಕರ್ತವ್ಯವನ್ನು ಮನಗಂಡಂತೆ.... ದೇಶಸೇವೆಯೇ ತಮ್ಮ ಅತ್ಯುನ್ನತ ಸಾಧನೆ, ಪ್ರಮುಖ ಕರ್ತವ್ಯ ಎಂದು ತಿಳಿದಂತೆ! ಎಂತಹ ಅಲೌಕಿಕ ಆದರ್ಶ ಶ್ರೀಮತಿಯವರದು!

ಸ್ವಯಂ ಶಕ್ತಿಯಿಂದ...!

ನೆಹರೂ ಕುಟುಂಬವು ಜಗತ್ತಿನ ಪ್ರಸಿದ್ಧ ರಾಜಕೀಯ ಕುಟುಂಬಗಳಲ್ಲೊಂದು. ಆದರೆ ಶ್ರೀಮತಿಯವರು ತಮ್ಮ ಕುಟುಂಬದ ಸಂಯೋಗಿಕ ಹಿನ್ನೆಲೆಯಿಂದಲ್ಲ—ತಮ್ಮ ಸ್ವಂತ ಪ್ರತಿಭೆಯಿಂದ, ಸ್ವಯಂ ಶಕ್ತಿ ಪ್ರಭಾವದಿಂದ ಭಾರತದ ರಾಜಕೀಯ ರಂಗದಲ್ಲಿ ಒಂದು ಹಿರಿಯ ಸ್ಥಾನವನ್ನು—ಪ್ರಮುಖ ಸ್ಥಾನವನ್ನು ಗಳಿಸಿದ್ದು! ನೆಹರುಗಳು ಸ್ವಭಾವತ: ಧುರೀಣರ ಪದವನ್ನೇರಲು ಅರ್ಹರು. ಸಾಹಿತ್ಯ, ಕಲೆ, ಸಂಸ್ಕೃತಿ, ಸ್ವದೇಶಾಭಿಮಾನ, ಅಂತರಾಷ್ಟ್ರೀಯತೆ—ಇವುಗಳ ನಿವಾಸಸ್ಥಾನವಾದ 'ಆನಂದ ಭವನ'ದ ವಾತಾವರಣದ ಸುಪ್ರಭಾವವೇನೋ ಅದು!

ಹುಟ್ಟು ಪ್ರಚಾರಕರು...

ನೆಹರೂ ಕುಟುಂಬದ ಸದಸ್ಯರು ಹುಟ್ಟು ಪ್ರಚಾರಕರು; ತಮ್ಮ ವ್ಯಕ್ತಿತ್ವದ ಮುದ್ರೆಯನ್ನು ಜನರಲ್ಲಿ ಒತ್ತಿ ಅವರನ್ನು ಒಂದು ನಿರ್ಣಯದೆಡೆಗೆ ಸಾಗಿಸುವವರು.

ಮೋತಿಲಾಲ್ ನೆಹರೂರವರು ಸ್ವರಾಜ್ಯ ಪಾರ್ಟಿಗಾಗಿ ಚುನಾವಣೆಗಳನ್ನು ಗೆದ್ದದ್ದು ಎಲ್ಲರಿಗೂ ಗೊತ್ತಿದ್ದ ವಿಷಯ.

ಕಳೆದ ಕೊಂಗ್ರೆಸ್ ಚುನಾವಣೆಯಲ್ಲಿ ಜವಾಹರಲಾಲ್ ನೆಹರೂಗಳ ವಿಶೇಷ ಪರಿಶ್ರಮ—ಪ್ರಚಾರವನ್ನು ಯಾರೂ ಮರೆಯಲಿಲ್ಲ.

ಇನ್ನು ಶ್ರೀಮತಿಯವರು ಹಿಂದುಳಿಯುವರೇ?—ಕಾಂಗ್ರೆಸ್ ಮಂತ್ರಿಗಳಾಗಿದ್ದಾಗ ಕಾಲ್ನಡೆಯಿಂದಲೇ ಜನತೆಯಲ್ಲಿ ಪ್ರಚಾರಕಾರ್ಯ ಮಾಡಿದ ವೀರ ಮಹಿಳೆ ಅವರು. ನಂತರ ಬಂಗಾಲ ದುರಂತದ ಹೊಣೆಗಾರಿಕೆಯ ವಿಷಯ ಅವರು ಮಾಡಿದ ಪ್ರಚಾರ ಕಾರ್ಯವನ್ನು ಮರೆಯುವುದು ಅಸಾಧ್ಯ!

ಮತ್ತೀಗ?...ಅಮೇರಿಕದಲ್ಲಿ ಹಿಂದುಸ್ಥಾನದ ಕುರಿತಾಗಿ ಅವರ ಪ್ರಚಾರವು ಕ್ಷಿತಿಜಕ್ಕೆ ಮುಟ್ಟಿದೆ, ಅವರ ಪ್ರಚಾರ ನಿಪುಣತೆಯನ್ನು ಜಗತ್ತಿಗೆ ಎತ್ತಿ ತೋರಿಸಿದೆ!

ಕಾಂಗ್ರೆಸ್ ಮಂತ್ರಿಯಾಗಿದ್ದಾಗ...

ಯು. ಪಿ. ಯಲ್ಲಿ ಕಾಂಗ್ರೆಸ್ ಸರಕಾರದ ಮಂತ್ರಿಗಳಾಗಿದ್ದಾಗ ಶ್ರೀಮತಿಯವರು ಎಲ್ಲ ಮಂತ್ರಿಗಳಿಗಿಂತ ಹೆಚ್ಚಿನ ಮನ್ನಣೆ—ಮೆಚ್ಚುಗೆಗೆ ಪಾತ್ರರಾಗಿದ್ದರು. ಪ್ರಶ್ನೋತ್ತರ ಸಮಯದಲ್ಲಿ ಮಿಂಚು ಸುಳಿದಂತೆ ವೇಗದಿಂದ ಉತ್ತರ ಕೊಡುತಿದ್ದರು. 'ಈ ವಿಷಯದಲ್ಲಿ ಸರಕಾರವು ಯಾವ ಧೋರಣೆಯನ್ನು ಕೈಗೊಳ್ಳುವುದು' ಎಂಬ ಪ್ರಶ್ನೆಗೆ ಅದಾಗಲೇ ಶ್ರೀಮತಿಯವರ ಉತ್ತರ ಸಿದ್ಧವಿತ್ತು—"ಚೆಂಬರಲೇನರ ಸಂತೈಸುವ ಧೋರಣೆ!" ಮ್ಯುನಿಚ್ ಪ್ರಕರಣದ ಕಾಲವಾಗಿತ್ತಾಗ!

ಮತ್ತೀಗ....ಅಮೇರಿಕದಲ್ಲಿ ಪ್ರಚಂಡ ಪ್ರಚಾರ!

ಅಮೇರಿಕದಲ್ಲಿ ಶ್ರೀಮತಿಯವರ ಪ್ರಚಾರ—ಪ್ರವಾಸವು ಇನ್ನೂ ಮಹತ್ವದ್ದು. "ತಮ್ಮ ಮಹಿಳೆಯರಿಗೆ ಮನ್ನಣೆ ಕೊಡಲು ತಿಳಿಯದಿರುವ ಭಾರತೀಯರು ಸ್ವಾತಂತ್ರ್ಯ ಪಡೆಯಲು ಅನರ್ಹರು"—ಎಂದು ಭಾರತದ ವಿರುದ್ಧ ಅಪಪ್ರಚಾರ ಮಾಡುವವರನ್ನು ಹೊಡೆದೆಬ್ಬಿಸಲು—ಅವರ ಸುಳ್ಳಿನ ಸಂತೆಗಳನ್ನು ಬಯಲಿಗೆಳೆಯಲು ಶ್ರೀಮತಿಯವರು ಮುಂಬರಿದಿದ್ದಾರೆ. ಓ! ಅಮೇರಿಕನರೇ!—ಕಣ್ತೆರೆಯಿರಿ!..

ಮತ್ತವರ ಭಾಷೆ?...

ಶ್ರೀಮತಿಯವರ ಮಾತುಗಾರಿಕೆಯಲ್ಲಿ ಒಂದು ಜಾದು ಇದೆ, ಪ್ರವಾಹವಿದೆ. ಅವರಿಗೆ ಇಂಗ್ಲೀಷಿನ ಮೇಲೆ ಒಂದು ವರ್ಚಸ್ಸಿದೆ—ಧಾರಾವಾಹಿಯಾಗಿ ಮಾತನಾಡಬಲ್ಲರು; ಚೆನ್ನಾದ ನುಡಿಕಟ್ಟಿನಲ್ಲಿ ಬರೆಯಬಲ್ಲರು. ಶ್ರೀಮತಿಯವರ ಹಿಂದೂಸ್ಥಾನಿ ಭಾಷೆಯು ಶುದ್ಧವಿದೆ, ಸರಲವಿದೆ. ಜವಾಹರಲಾಲ್‌ರ ಭಾಷೆಯ ಬಿಗುಪನ್ನು ಹೋಲುತ್ತದೆ. ಪತ್ರ ಬರೆಯುವ ಕಲೆಯನ್ನು ಶ್ರೀಮತಿಯವರು ಮನೋಹರವನ್ನಾಗಿ ಮಾಡಿದ್ದಾರೆ. ಸಿ. ಐ. ಡಿಗಳು ಅವರ ಪತ್ರಗಳನ್ನೊಡೆದು ತಪ್ಪು ಲಕ್ಕೋಟೆಗಳಲ್ಲಿ ಅವುಗಳನ್ನು ಹಾಕಿದ್ದು ಶ್ರೀಮತಿಯವರ ತಪ್ಪಲ್ಲ...

ಭಾರತಕ್ಕೆ ಹಿಂದಿರುಗಿ ಬರಲು...?

ಭಾರತಕ್ಕೆ ಹಿಂದಿರುಗಿ ಬರಲು ಅವರ ವ್ಯಕ್ತಿತ್ವವು ನೂರ್ಮಡಿ ಬೆಳಗುವುದು... ತಮ್ಮ ಎಲ್ಲ ಸಮಯವನ್ನು ಸಾರ್ವಜನಿಕ ಸೇವೆಗಾಗಿ ವಿನಿಯೋಗಿಸಬಲ್ಲರು. ಕೊಂಗ್ರೆಸಿನ ಸರ್ವಶ್ರೇಷ್ಠ ಪದವಿಯು ಅವರ ಯೋಗ್ಯತೆಯನ್ನು ಮೀರಿದಿಲ್ಲ....ಮಹಿಳೆಯನ್ನು ಕೊಂಗ್ರೆಸಿನ ಅಧ್ಯಕ್ಷ ಪದವಿಯಿಂದ ಸನ್ಮಾನಿಸಿ ಬಹು ಸಮಯವಾಯಿತಷ್ಟೆ....?

ರಾಷ್ಟ್ರೀಯ ನಿರ್ಣಯವದು!

"ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಇವರು ಭಾರತ ಕೇಳಿಕೆಯನ್ನು ಅಮೇರಿಕದಲ್ಲಿ ಪ್ರಚಾರಿಸಿದ ಒಳ್ಳೆ ಕಾರ್ಯವನ್ನು" ಮೆಚ್ಚಿ, "ಯುದ್ಧದಲ್ಲಿ ವಿಜಯಗಳಿಸಿ, ಚಿರಶಾಂತಿ ಸ್ಥಾಪಿಸಲು, ಜಗತ್ತಿನ ಸ್ವಾತಂತ್ರ್ಯಪ್ರಿಯ ಸ್ತ್ರೀಯರು ಭಾರತದ ಸ್ವಾತಂತ್ರ್ಯ ಕೇಳಿಕೆಯನ್ನು ಪೂರ್ಣ ಹೃದಯದಿಂದ ಒಪ್ಪುವರು" ಎಂದು ಶ್ರೀಮತಿಯವರ ವಿಶ್ವಾಸವನ್ನು ಶ್ಲಾಘಿಸುವ ಠರಾವನ್ನು ಅಖಿಲಭಾರತ ಮಹಿಳಾ ಪರಿಷತ್ತಿನಲ್ಲಿ ಸರ್ವಾನುಮತದಿಂದ ಸ್ವೀಕರಿಸಿದರು. ಅದು ಮಹಿಳಾ ಪರಿಷತ್ತಿನ ಸದಸ್ಯರು ತಮ್ಮ ಸಹೋದ್ಯೋಗಿ ತಂಗಿಯೊಬ್ಬಳನ್ನು ಸನ್ಮಾನಿಸಿದ ನಿರ್ಣಯವಲ್ಲ—ಇಡೀ ಭಾರತದ ನಿರ್ಣಯ—ರಾಷ್ಟ್ರೀಯ ನಿರ್ಣಯ!

ಗಡಿಯಾರದಂತೆ ಕೈಗೆ ಕಟ್ಟಿಕೊಳ್ಳಬಹುದಾದ ರೇಡಿಯೋ ಉಪಕರಣಗಳು ಸದ್ಯದಲ್ಲೇ ಉಪಯೋಗಕ್ಕೆ ಬರಬಹುದು. ಇಂಗ್ಲೆಂಡಿನ ರೇಡಿಯೋ ಕೈಗಾರಿಕೆ ಸಂಸ್ಥೆಯೊಂದರ ಅಧ್ಯಕ್ಷರಾದ ಮಿ. ಆಲ್ಫ್ರೆಡ್ ಕ್ಲಾರ್ಕ್ ಎಂಬವರು ಈ ವಿಷಯವನ್ನು ಮೊನ್ನೆ ಒಂದು ಸಭೆಯಲ್ಲಿ ತಿಳಿಸಿದರು. ಇಂಗ್ಲೆಂಡಿನಲ್ಲಿ ಮೊದಲು ಫೊನೊಗ್ರಾಫಗಳನ್ನು ತಂದವರು ಈ ಮಹನೀಯರೆ.

ಹಿಟ್ಲರನು ಗಡ್ಡ ಬೆಳೆಸಿರುವನೆಂದೂ, ಜರ್ಮನಿಯಿಂದ ತಪ್ಪಿಸಿಕೊಂಡು ಹೋಗಲು ಇದೊಂದು ಉಪಾಯವೆಂದೂ, ಅವನ ಸೇನಾಪತಿಗಳು ಅವನಿಗೆ ಆತ್ಮಹತ್ಯ ಮಾಡಿಕೊಳ್ಳಲು ಕೆಲವು ದಿವಸದ ಅವಧಿ ಕೊಟ್ಟಿರುವರೆಂದೂ ವರ್ತಮಾನ ಬಂದಿತಷ್ಟೆ.

ಈಚೆಗೆ ಓರ್ವ ಇಂಗ್ಲಿಷ್ ಪತ್ರಿಕೋದ್ಯೋಮಿಯು ಗುಪ್ತವೇಷದಿಂದ ಹೆಸರು ಪಲ್ಲಟಿಸಿ ಬರ್ಲಿನ್ ನಗರದಲ್ಲಿ ಕೆಲವು ದಿನವಿದ್ದು ಹಿಂದಕ್ಕೆ ಬಂದಿರುವನು. ಅವನು ತಿಳಿಸಿದ ಸಂಗತಿಯ ಪ್ರಕಾರ ಹಿಟ್ಲರನು ತನ್ನ ಬೆಟ್ಟದ ಕೋಟೆಯಲ್ಲಿ ತಂಗಿರುವನೆಂದೂ ಅಲ್ಲಿಂದ ಕೊನೆಯ ಯುದ್ಧಕ್ಕೆ ಎಲ್ಲ ಸಿದ್ಧತೆಯನ್ನು ಅವನು ಮಾಡಿರುವನೆಂದೂ ಆ ಸಿದ್ಧತೆಯ ಏರ್ಪಾಡುಗಳೆಲ್ಲದರ ಮೇಲೆ ಅವನು ಬಹಳ ಸೂಕ್ಷ್ಮವಾದ ಜಾಗರೂಕತೆಯನ್ನಿಟ್ಟು ಕೊಂಡಿರುವನೆಂದೂ ಗೊತ್ತಾಗಿದೆ. ಬರ್ಲಿನ್ ನಾಗರೀಕರು ಬಹಳ ಕಳವಳಾಸ್ಪದ ಪರಿಸ್ಥಿತಿಯಲ್ಲಿರುವರೆಂದೂ ಅವನು ತಿಳಿಸಿರುವನು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As. Ps.	PROPERTY AND ASSETS	Rs. As. Ps.
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 0
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Garnd Total Rs.	1,35,50,413- 4- 8

ನಾವು ಅಂಧ ಆಚಾರ ನಂಬಿಕೆಗಳ ಗುಲಾಮರು

ತಾಯಿಯ ಮಡಿಲಲ್ಲೇ ಮಡಿಯುವೆ

ಹೇಡಿತನವೇ ನಮ್ಮ ದೊಡ್ಡ ದೋಷ ಮಹಿಳೆಯರಿಗೆ ಮಹಾತ್ಮರ ಉಪದೇಶ

ಭಾರತೀಯ ಜನಾಂಗದ ಗುಣ ದೋಷಗಳ ಕುರಿತು ಪ್ರಶ್ನಿಸಿದಾಗ ಬೋರಿವ್ಲಿ ಕಸ್ತೂರ್‌ಬಾ ಸ್ಮಾರಕ ನಿಧಿ ಕೆಲಸಗಾರರ ಪರಿಶ್ರಮಾಲಯದ ಮಹಿಳೆಯರ ಸಭೆಯಲ್ಲಿ ಕೊಟ್ಟ ಭಾಷಣದಲ್ಲಿ ಮಹಾತ್ಮರು ಹೀಗೆ ನುಡಿದರು:

ಭಾರತೀಯ ಜನಾಂಗದಲ್ಲಿ ದೋಷಗಳಿಗಿಂತ ಗುಣಗಳೇ ಹೆಚ್ಚು. ನಮ್ಮಲ್ಲಿ ದೋಷಗಳುಂಟಾಗಲು ನಮ್ಮ ಗುಲಾಮಗಿರಿಯೇ ಕಾರಣವೆನ್ನಬಹುದು. ಬ್ರಿಟಿಷರು ಈ ದೇಶವನ್ನು ವಶಪಡಿಸುವ ಎಷ್ಟೊ ಮೊದಲು ಇದು ಗುಲಾಮಗಿರಿಯಲ್ಲಿ ಬಿದ್ದಿದೆ. ಅಂಧ ಶ್ರದ್ಧಾಚಾರ ಮೂಢ ನಂಬಿಕೆಗಳಿಗಿಂತ ದೊಡ್ಡ ಗುಲಾಮಗಿರಿ ಬೇರೆ ಇಲ್ಲ. ಆದರೂ ಭಾರತದಲ್ಲಿ ಅನುಭವಕ್ಕೆ ಬರುವಷ್ಟು ಶಾಂತಿ ನೆಮ್ಮದಿಗಳು ಬೇರೆ ಎಲ್ಲೂ ಕಂಡು ಬರುವುದಿಲ್ಲ. ನಾನು ಇಂಗ್ಲೆಂಡ್ ಆಫ್ರಿಕಗಳಲ್ಲಿ ಬಹಳ ಕಾಲ ವಾಸಿಸಿ ಕೊಂಡಿದ್ದೆ. ಆದರೆ ಆ ದೇಶಗಳನ್ನು ನನ್ನದನ್ನಾಗಿ ಮಾಡಿಕೊಳ್ಳಲು ನನಗೆ ಆಗಲಿಲ್ಲ. ನನ್ನ ಮಾತೆಯ ತೊಡೆಯ ಮೇಲೇ ಸಾಯಬೇಕೆಂದು ನನ್ನ ಬಯಕೆ. ಕೃಶಾಂಗಳಾಗಿದ್ದ ನನ್ನ ಸ್ವಂತ ತಾಯಿಯು ಬಹಳ ದಿನಗಳ ಹಿಂದೆ ಮೃತಳಾಗಿರುವಳು.

ಆದರೆ ಭಾರತ ಮಾತೆಯ ಕಡೆಯಿಂದ ಎಂಬತ್ತು ಕೋಟಿ ಕೈಕಾಲುಗಳೂ ನಾಲ್ವತ್ತು ಕೋಟಿ ಬಾಯಿಗಳೂ ನನ್ನನ್ನು ಮುಕ್ತ ಕಂಠದಿಂದ ಕರೆದಾಗ ಆ ಕರೆಯನ್ನು ಮೀರಲು ನನ್ನಿಂದಾಗಲಿಲ್ಲ. ಇಂದು ಈ ಪವಿತ್ರಳಾದ ತಾಯಿಯು ವ್ಯಾಧಿಗ್ರಸ್ತಳಾಗಿದ್ದರೆ ಅದರಿಂದಾಗುವುದೇನು? ಭಾರತದ ಗುಣ ಪವಿತ್ರತೆಯನ್ನು ನಾನು ಸಾರಿ ಹೇಳಬೇಕಾಗಿಲ್ಲ. ಮಾತೆಯ ಸಂಕಷ್ಟಗಳ ಕುರಿತು ನಾನು ಆಫ್ರಿಕದಿಂದ ಬಂದಾಗಿನಿಂದ ಘಂಟಾ ಘೋಷವಾಗಿ ಒದರುತಿದ್ದೇನೆ ಭಾರತದ ಅಂತಹ ದೊಡ್ಡ ದೋಷವೇನೆಂದು ಯಾರಾದರೂ ಒತ್ತಾಯ ಪೂರ್ವಕವಾಗಿ ಕೇಳಿದರೆ 'ಹೇಡಿತನವೇ ಆ ದೋಷ'ವೆಂದು ನಾನು ಹೇಳ ಬಯಸುತ್ತೇನೆ"

ಮಹಿಳೆಯರು ಪವಿತ್ರ ಜೀವನದವರಿರಬೇಕು

ಕೊಳೆಯಿಂದ ಕೊಳೆ ತೊಳೆಯಲು ಸಾಧ್ಯವಿಲ್ಲ

ಕಸ್ತೂರ್‌ಬಾ ಸ್ಮಾರಕ ನಿಧಿಯ ಕಾರ್ಯಕರ್ತೃರುಗಳಾದ ಮಹಿಳೆಯರು ಹಳ್ಳಿಗಳಿಗೆ ಹೋಗಿ ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂಬುದರ ಕುರಿತು ಕೇಳಿದ ಪ್ರಶ್ನೆಗೆ ಉತ್ತರವಾಗಿ ಮಹಾತ್ಮರು ಹೀಗೆ ತಿಳಿಸಿದರು:

"ಈ ಕಾರ್ಯಕರ್ತೃರುಗಳ ತರಬೇತಿ ಶಿಬಿರದಲ್ಲಿ ನೀವು ಪ್ರಥಮತಃ ಕಲಿಯಬೇಕಾಗಿರುವ ವಿಷಯವೆಂದರೆ—ನಿಮ್ಮನ್ನು ದುಃಸ್ಥಿತಿಗೆ ತಳ್ಳಿ ನಿಮ್ಮ ಅಭಿವೃದ್ಧಿ ಪ್ರಗತಿಗಳನ್ನು ತಡೆ ಗಟ್ಟಿದ ಸಾಮಾಜಿಕ ನಿಯಮಗಳನ್ನು ಮುರಿಯುವುದು. ಇದರ ಅರ್ಥವೆಂದರೆ ಎಲ್ಲಾ ನೈತಿಕ ಆಚಾರಗಳನ್ನು ಸೂತ್ರಗಳನ್ನು ತೊಡೆದು ಹಾಕುವುದೆಂದಲ್ಲ.

ಈಗಿನ ಕಾಲದಲ್ಲಿ ಸಮಾಜದ ಪುರುಷರ ನೀತಿ ವಿಚಾರಗಳು ಕನಿಷ್ಠಾವಸ್ಥೆಯ ಕಡೆಗೆ ವಾಲಿಕೊಂಡಿವೆ. ಏಕ ಪತ್ನಿತ್ವವನ್ನು ನ್ಯಾಯಶಾಸನದ ಮೂಲಕ ಒತ್ತಾಯ ಪಡಿಸಬೇಕೆಂದೆಳೆಸುವವರನೇಕರು ಕೂಡಾ ಅದನ್ನು ಕಾರ್ಯ ರೂಪದಲ್ಲಿ ಪ್ರದರ್ಶಿಸಲು ಪ್ರಯತ್ನ ಪಡುವುದಿಲ್ಲ.

ಸ್ತ್ರೀಯರಲ್ಲೂ ಇದೇ ತರದ ಲಕ್ಷಣಗಳು ಕಾಣಬರುತ್ತಿವೆ. ಶಿಕ್ಷಿತ ಕೆಲ ಮಹಿಳೆಯರು ಪತ್ನಿಯು ಜೀವಂತವಾಗಿರುವ ಪುರುಷನೊಬ್ಬನನ್ನು ಮದುವೆ ಮಾಡಿಕೊಳ್ಳುವಾಗ ಯಾವ ಯೋಚನೆಯನ್ನೂ ಮಾಡುವುದಿಲ್ಲ. ಇದು ಕೀಳಾವಸ್ಥೆಗೆ ಮುಟ್ಟಿದ ಸ್ತ್ರಿಯತ್ವದ ಲಕ್ಷಣವಾಗಿದೆ. ಇಂತಹ ವಿಷಯಗಳನ್ನು ಸಮಾಜ ಸುಧಾರಣೆಗೆ ಇಲ್ಲವೆ ದುಷ್ಟಾಚಾರಗಳನ್ನು ಕಿತ್ತೊಗೆಯುವಂತಹದೆನಿಸುವುದಿಲ್ಲ. ಮಹಿಳೆಯರ ಉದ್ಧಾರವಾಗುವುದೆಂದರೆ ಅವರು ಈ ವಿಷಯಗಳಲ್ಲಿ ಪುರುಷರಂತೆ ವರ್ತಿಸುವುದೆಂರ್ಥವೆ? ನಿಜವಾಗಿಯೂ ಹಾಗಲ್ಲ.

ಇಂತಹ ವರ್ತನೆಗಳಿಂದ ನನ್ನ ಕಲ್ಪನೆಯ ಸ್ವರಾಜ್ಯವನ್ನೆಂದಿಗೂ ಪಡೆದುಕೊಳ್ಳಲು ಸಾಧ್ಯವಿಲ್ಲ. ಸಾಮಾಜಿಕ ಸ್ವಾತಂತ್ರ್ಯವನ್ನು ಸ್ಥಾಪಿಸಬೇಕಾದರೆ ಉಜ್ವಲವಾದ ನೈತೀಕ ಜೀವನ ಸ್ವಚ್ಛತೆ ಇರಲೇ ಬೇಕು. ಸ್ವಚ್ಛವಾದ ಜೀವ ಪವಿತ್ರತೆಗಳಿಲ್ಲದವರು ಸಾಮಾಜಿಕ ಕುಂದು ಕೊರತೆಗಳನ್ನು ಹೋಗಲಾಡಿಸುವ ಹೋರಾಟದಲ್ಲಿ ಭಾಗವಹಿಸಲು ಅರ್ಹರಲ್ಲ.

ಕಸ್ತೂರ್‌ಬಾ ನಿಧಿಯೂ ಶ್ರೀಮಂತರೂ

ಅವರು ಬಂಗಾರದ ಮೊಟ್ಟೆ ಇಡುವ ಪಕ್ಷಿಗಳಂತೆ ಮೊದಲು ನಾವು ಪರಿಶುದ್ಧರಾಗಬೇಕು

ಕಸ್ತೂರ್‌ಬಾ ನಿಧಿಗೆ ಶ್ರಿಮಂತರೇ ಹೆಚ್ಚಿನ ಧನವನ್ನು ಕೊಟ್ಟಿರುವುದರಿಂದ ಆ ನಿಧಿಯ ಕಾರ್ಯದಲ್ಲಿ ಶ್ರಿಮಂತರ ಕೈವಾಡವೇ ಮೇಲಾಗುವುದೋ ಎಂಬ ಸಂಶಯಕ್ಕೆ ಉತ್ತರವಾಗಿ ಮಹಾತ್ಮರು ಬೋರಿವ್ಲಿ ಸಭೆಯಲ್ಲಿ ಹೇಳಿದ ಮಾತುಗಳಿವು:

"ಶ್ರಿಮಂತರೊಡನೆ ಹಣವನ್ನು ಪಡೆಯುವಾಗ ಅವರು ಹೇಳಿದಂತೆ ನಾನು ಕೇಳುವೆನೆಂದು ಅವರಿಗೆ ವಾಗ್ದಾನ ಮಾಡಿಲ್ಲ. ಆದುದರಿಂದ ಆ ಹೆದರಿಕೆಯನ್ನು ಯಾರೂ ಇಟ್ಟುಕೊಳ್ಳಬಾರದು. ಅವರಾದರೂ ತಮ್ಮ ಇಚ್ಛೆಯಂತೆ ಕಾರ್ಯ ನಡಿಸಲು ನನಗೆ ನಿರೂಪಿಸಲೂ ಇಲ್ಲ. ಇದರ ಆಡಳಿತ ಮಂಡಳದಲ್ಲಿ ಹೆಚ್ಚಾಗಿ ಶ್ರಿಮಂತರೇ ಇರುವರು ನಿಜ. ಅದರ ಅರ್ಥವೆಂದರೆ ಅವರು ಈ ನಿಧಿಯ ಇಲ್ಲವೆ ಸಂಸ್ಥೆಯ ಮೇಲೆ ಸರ್ವಾಧಿಕಾರ ನಡೆಸ ಬಯಸುತ್ತಾರೆಂದು ಅರ್ಥವಲ್ಲ.

ಈ ನಿಧಿಯ ನಿರ್ಧರಿತ ಧನ ಸಂಗ್ರಹವಾದೊಡನೆ ಅವರು ಇದರ ಆಡಳಿತ ಸಮಿತಿಯಿಂದ ರಾಜಿನಾಮೆ ಕೊಟ್ಟು ಹೋಗುವವರಿದ್ದರು. ಆದರೆ ನಾನೇ ಅವರನ್ನು ತಡೆದಿದ್ದೇನೆ ಅವರ ಹಣ ಮಾತ್ರವಲ್ಲ. ಅವರ ಸೇವೆಯೂ ಚಾತುರ್ಯ ಸಲಹೆಗಳೂ ನನಗೆ ಬೇಕೆಂದು ತೋರಿದ್ದರಿಂದ ನಾನು ಅವರನ್ನು ಇರ ಹೇಳಿದ್ದೇನೆ. ಆದುದರಿಂದಲೇ ಅವರು ಈ ಕಾರ್ಯಕಾರಿ ಮಂಡಳಿಯಲ್ಲಿ ಇಂದು ತಮ್ಮ ಸದಸ್ಯತನವನ್ನು ಇಟ್ಟು ಕೊಂಡಿದ್ದಾರೆ.

ಬಡವರ ವರ್ಗ, ಮಧ್ಯಮ ತರಗತಿಯ ವರ್ಗ, ಮಜೂರರ ವರ್ಗಗಳಿರುವಂತೆ ಶ್ರಿಮಂತರದೂ ಒಂದು ವರ್ಗವಿದೆ. ಆದರೆ ಎಲ್ಲಾ ವರ್ಗದವರಲ್ಲಿರುವಂತೆ ಅವರಲ್ಲೂ ಒಳ್ಳೆಯವರೂ ಕೆಟ್ಟವರೂ ಇದ್ದೇ ಇದ್ದಾರೆ. ಈ ಜಗತ್ತಿನಲ್ಲಿ ಪ್ರತಿಯೊಬ್ಬನೂ ಒಳ್ಳೆಯ ಪರಿಪೂರ್ಣತೆಯವನಾಗಿರುವುದಿಲ್ಲ. ಇತರರನ್ನು ಟೀಕಿಸಲು ನನ್ನಲ್ಲಿಯೇ ಅದೆಷ್ಟು ದೋಷಗಳಿವೆ ಎಂದು ನನಗೆ ಚೆನ್ನಾಗಿ ತಿಳಿದಿದೆ. ನನ್ನ ಅಹಿಂಸಾ ತತ್ವ ಪ್ರಕಾರ ನಾನು ಮೊದಲು ನನ್ನಲ್ಲಿನ ದೋಷಗಳ ಕುರಿತಾಗಿಯೇ ಹೆಚ್ಚು ಲಕ್ಷ್ಯದಿಂದಿರಬೇಕಾಗುತ್ತದೆ. ಈ ದೃಷ್ಟಿಯಿಂದ ನಾವು ಇತರರನ್ನು ಸಹಾನುಭೂತಿಯಿಂದ ವಿಮರ್ಶಿಸಬೇಕು. ನನ್ನ ದೋಷಗಳನ್ನು ನಾನು ತೆಗೆದು ಹಾಕಿದರೆ ಸಾಕು. ಇತರರ ಗುಣ ದೋಷಗಳ ಕಡೆಗೆ ಬೆಳಕನ್ನು ತೋರಿಸುವುದಕ್ಕಿಂತ ನನ್ನೊಳಗಿನ ದೋಷಗಳನ್ನೇ ನಾನು ನೋಡಿಕೊಂಡು ತಿದ್ದಿಕೊಂಡರೆ ಶ್ರಿಮಂತ ವರ್ಗದವರ ಮೇಲೂ ಅದರ ಪ್ರಕಾಶವು ಬೀಳುತ್ತದೆ.

ಆದುದರಿಂದ ಶ್ರಿಮಂತರಿಗೆ ನಾನು 'ನೀವು ನಿಮ್ಮ ಎಲ್ಲಾ ಸಂಪತ್ತನ್ನು ತ್ಯಜಿಸದೇ ನನ್ನ ಬಳಿಗೆ ಬರ ಬೇಡ' ಎಂದು ಹೇಳಲು ನನಗೆ ಸಾಧ್ಯವಿಲ್ಲ. ಅಲ್ಪ ಸಂಪತ್ತು ಇದ್ದವರಿಗೆ 'ನಿಮ್ಮ ಇದ್ದದನ್ನು ತ್ಯಜಿಸಿರಿ' ಎಂದು ಹೇಳಿದರೆ ಅದು ಬಹುಮಂದಿಗೆ ಕಷ್ಟತರದ್ದೆನಿಸುವುದು. ಅಂದ ಮೇಲೆ ಅಪಾರ ಸಿರಿಸಂಪತ್ತುಗಳಿದ್ದವರು ಹೇಗೆ ಒಪ್ಪಿಕೊಂಡಾರು.!

'ಶ್ರಿಮಂತರು ತಮ್ಮ ಸಂಪತ್ತನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡು ಅದರ ಧರ್ಮದರ್ಶಿಗಳಾಗಿದ್ದು ಅದನ್ನು ಸಮಾಜ ಸೇವೆಗಾಗಿ ಉಪಯೋಗಿಸಬೇಕು. ಇದಕ್ಕಿಂತಲೂ ಹೆಚ್ಚಿನದನ್ನು ಮಾಡಬೇಕೆಂದು ಹೇಳುವುದೆಂಥರೆ ಚಿನ್ನದ ಮೊಟ್ಟೆ ಇಡುವ ಬಾತುಕೋಳಿಯನ್ನು ಕೊಂದ ಅವಿವೇಕವಾಗುವುದು.'

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಸದ್ಯದಲ್ಲೇ ಮುಖಂಡರ ಬಿಡುಗಡೆ

ವ್ಯಾಸ್‌ರಾಯರ ಹೊಸ ಘೋಷಣೆ

ಸದ್ಯದಲ್ಲೇ ವ್ಯಾಸ್‌ರಾಯ ವೆವಲ್ಲರು ಲಂಡನಿನಿಂದ ಹಿಂದಿರುಗುವರೆಂದೂ, ಕೇಂದ್ರ ಶಾಸನ ಸಭೆಯಲ್ಲಿ ಅವರು ಭಾರತೀಯ ರಾಜಕಾರಣದ ಸಂಬಂಧ ಮಹತ್ವದ ಘೋಷಣೆಯನ್ನು ಮಾಡಲಿರುವರೆಂದೂ ನವ ಡಿಲ್ಲಿಯ ರಾಜಕೀಯ ಕೇಂದ್ರಗಳಲ್ಲಿನ ಮಾತು ಕತೆಗಳಿಂದ ತಿಳಿದು ಬರುತ್ತದಾಗಿ ಬ್ಲಿಟ್ಜ್ ಪತ್ರಿಕೆಯ ಬಾತ್ಮಿದಾರರು ತಿಳಿಸುತ್ತಾರೆ.

ಲಂಡನಿಗೆ ಹೋದ ವೆವೆಲ್ಲ ಸಾಹೇಬರು ತೃಪ್ತಿಕರವಾಗಿ ತಮ್ಮ ಕಾರ್ಯವನ್ನು ಸಾಧಿಸಿರುವಂತೆ. ಪಾರ್ಲಿಮೆಂಟಿನ ಭಾರತೀಯ ಇತ್ಯರ್ಥದ ವಿರೋಧಿಗಳನ್ನು ಅವರು ಸಮಾಧಾನ ಮಾಡಿರುವರು. ದೇಸಾಯಿ ಲಿಯಾಖತರ ೪೦ ಹಿಂದೂ, ೪೦ ಮುಸ್ಲಿಂ ೨೦ ಇತರ ಪ್ರತಿನಿಧಿಗಳ ಸಂಯುಕ್ತ ಸರಕಾರ ಯೋಜನೆಯು ಅನೇಕರಿಗೆ ಮನವರಿಕೆಯಾಗಿದೆಯಂತೆ. ಅದರ ಮೇಲೆಯೇ ಹೊಸ ಘೋಷಣೆಯು ಹೊಂದಿಕೊಂಡಿರಬಹುದೆಂದು ಹೇಳಲಾಗಿದೆ.

ಬಿಡುಗಡೆ

ಇನ್ನೂ ಕೆಲವೇ ದಿನಗಳಲ್ಲಿ ಭಾರತೀಯರು ಬಂಧನದಲ್ಲಿದ್ದ ತಮ್ಮ ಪ್ರೀಯ ಮುಖಂಡರನ್ನು ಕಾಣಬಹುದು. ಕಾರಣ ಬರುವ ವಾರದೊಳಗೆ ಅಜಾದ್, ನೆಹರು, ಪಟೇಲ್ ಮೊದಲಾದವರ ಬಿಡುಗಡೆಗೆ ಆಜ್ಞೆ ಕೊಡಲಾಗುವುದೆಂದು ಊಹಿಸಲಾಗಿದೆ.

ವ್ಯಾಸರಾಯರನ್ನ ಮುಂಬರುವ ಘೋಷಣೆಯನ್ನು ಇವರು ಸುಸ್ವಾಗತವೀಯಬೇಕೆಂದು ನಿರೀಕ್ಷಿಸಲಾಗಿದೆ. ಆದರೆ ಕೊಂಗ್ರೆಸ್ ಮುಖಂಡರು ಶರಣಾಗತರಾಗುವ ಪರಿಸ್ಥಿತಿ ಬಂದರೆ ಅದನ್ನು ಸ್ವಾಗತೀ ಕರಿಸುವರೋ ಇಲ್ಲವೊ ಎಂಬುದು ಸಂದೇಹಾಸ್ಪದ ವಿಷಯ.

ಇದಕ್ಕಾಗಿ ಕೊಂಗ್ರೆಸ್ ಮುಖಂಡರ ಬಿಡುಗಡೆಯನ್ನು ಇನ್ನು ಕೆಲವು ದಿವಸಗಳ ತನಕ ಹಿಂದಕ್ಕೆ ಹಾಕಬಹುದೆಂದು ಬೇರೆ ಕೆಲ ಮಂದಿಗಳ ಅಭಿಪ್ರಾಯವಿದೆ.

ಜರ್ಮನರ ಯು ಮತ್ತು ಈ ಬೋಟುಗಳು ಕಳೆದ ತಿಂಗಳಲ್ಲಿ ವಿಪರೀತ ಹಾನಿ ಮಾಡಲು ಪ್ರಯತ್ನಿಸಿವೆ ಎಂದೂ ಆದರೆ ಹೆಚ್ಚಿನದನ್ನು ಮಾಡಲು ಅವುಗಳಿಂದ ಸಾಧ್ಯವಾಗಲಿಲ್ಲವೆಂತಲೂ ಮಿತ್ರ ಯುದ್ಧ ಕ್ಷೇತ್ರದ ಒಂದು ಪ್ರಕಟನೆ ತಿಳಿಸುತ್ತದೆ. ವಿ-೨ ರೆಕ್ಕೆ ಬೊಂಬುಗಳ ಸ್ಥಾನದಲ್ಲಿ ಜರ್ಮನರು ಬೇರೆ ಹೊಸ ಗುಪ್ತಾಸ್ತ್ರಗಳನ್ನು ಉಪಯೋಗಿಸಲು ಮೂಲ ಪ್ರಯೋಗ ನಡೆಸುತ್ತಿರುವಂತೆ ಕುರುಹುಗಳು ಕಂಡು ಬಂದಿವೆ. ಸ್ವೀಡನಿನಲ್ಲಿ ಬಿಸಿಲಿನಷ್ಟು ಪ್ರಕಾಶವುಳ್ಳ ಕೆಲವು ಅಗ್ನಿ ಗೋಲಗಳು ಕಂಡು ಬಂದಿದ್ದು ಅವು ಜರ್ಮನಿಯ ಕಡೆಯಿಂದ ಕಳುಹಿಸಲ್ಪಟ್ಟವಾಗಿ ಊಹಿಸಲಾಗಿದೆ.

ಜೀವನ

(೨ನೇ ಪುಟದಿಂದ)

ಸಂಕಪ್ಪನಿಗೆ ಅನಿವಾರ್ಯ ಸಿಟ್ಟುಬಂದಿತು "ತಾವು ಸ್ವತಹ ಅನ್ನ ಹಾಕುವುದಿಲ್ಲ; ಬೇರೆಯವರು ಸಾಹಿತ್ಯ ಒದಗಿಸಿಕೊಟ್ಟರೂ ಇವರು ಮಾಡಿಹಾಕುವುದಿಲ್ಲ; ಆಹಾ, ಇವರ ಸಮಾಜವೇ? ಭಾಸ್ಕರರಾಯರನ್ನು ನಾನೇ ಮನೆಗೆ ಕರಕೊಂಡು ಹೋಗುತ್ತೇನೆ.' ಎಂದು ಹೇಳುತ್ತ ದೇವಳದ ಕಡೆಗೆ ನಡೆದನು.

ಸಂಕಪ್ಪನು ಮಾತುಗಳನ್ನು ಕೇಳಿದ ಭಾಸ್ಕರನ ಸಮಾಜದ ವ್ಯಕ್ತಿಗಳು, ಅದನ್ನು ಕೇಳದವರಂತೆ ನಟಿಸಿದರು. ಕೇಶವರಾಯರು ಆಗ ಊರಲ್ಲಿರಲಿಲ್ಲ; ಇದ್ದರೂ ಕೂಡ ಪ್ರಯೋಜನವಾಗುವಂತೆಯೂ ಇರಲಿಲ್ಲ.

ಸಂಕಪ್ಪನು ಎಲ್ಲ ವಿಷಯವನ್ನು ಭಾಸ್ಕರನಿಗೆ ತಿಳಿಸಿ, ತನ್ನ ಮನೆಗೆ ಬರುವರೆ ಕೇಳಿಕೊಂಡನು.

ಭಾಸ್ಕರನು ತುಸು ಯೋಚಿಸಿದನು; ಹೌದು ಸಂಸ್ಕೃತಿಪಟ್ಟ ಸಮಾಜವಾದರೂ ಆಗಲೊಲ್ಲದೇಕೆ?—ಆ ಸಮಾಜದಲ್ಲಿದ್ದುಕೊಂಡು ಹಸಿವಿನಿಂದ ಸಾಯುವುದಕ್ಕಿಂತ, ಬೇರೆ ಯಾವದಾದರೊಂದು ಸಮಾಜ,-ಅದು ಎಷ್ಟೇ ಹೀನವಾದ ಸಮಾಜವಾಗಿರಲಿ,—ಆ ಸಮಾಜವು ಒಂದಿಷ್ಟು ಗಂಜಿನೀರನ್ನು ಹೊಟ್ಟೆಗೆ ಕೊಡುತಿದ್ದರೆ, ಅದರಷ್ಟು ಶ್ರೇಷ್ಠ ಸಮಾಜವು ಯಾವುದೂ ಇಲ್ಲವೆಂದು, ಹಸಿವಿನಿಂದ ಕಂಗೆಟ್ಟ, ಭಾಸ್ಕರನು ನಿರ್ಧಾರಮಾಡಿದನು.

ಅವನ ನಿರ್ಧಾರವು ಸತ್ಯತೆಯನ್ನು ಪೂರ್ಣ ಒಳಗೊಂಡಿತ್ತು!

ಭಾಸ್ಕರನಿಂದ ನಡೆಯಲಾಗಲಿಲ್ಲ; ಸಂಕಪ್ಪನು ಅವನನ್ನು ಹೊರಿಸಿ, ತನ್ನ ಮನೆಗೆ ಕರಕೊಂಡು ಬಂದನು. ಅದಲ್ಲದೆ ಅವನನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ, ಮದ್ದನ್ನೂ ಕೊಡಿಸಿದನು.

ಆದರೆ ಸಂಕಪ್ಪನ ಪ್ರಯತ್ನಗಳಿಗೆ ಯಶಸ್ಸು ಬರಲಿಲ್ಲ; ಭಾಸ್ಕರನು ನರಳುತ್ತ ಆರುದಿನಗಳ ನಂತರ, ಪ್ರಾಣವನ್ನು ತೊರೆದನು. ಆದರೆ ಪ್ರಾಣವನ್ನು ಬಿಡುವಾಗ, ಆತ್ಮೀಯತೆಯ ಯಾವ ಪ್ರೇಮ ಹಸ್ತದ ಸ್ಪರ್ಶವಾದರೂ ಭಾಸ್ಕರನಿಗಾಗಲಿಲ್ಲ.

ಭಾಸ್ಕರನ ದಹನ ಕ್ರಿಯೆಯ ಸಮಸ್ಯೆಯು, ಸಂಕಪ್ಪನನ್ನು ಬಾಧಿಸಿತು. ಅವನು ಭಾಸ್ಕರನ ಸಮಾಜದವರೊಡನೆ, ಹೇಳಿದನು 'ಕಟ್ಟಿಗೆಯನ್ನು ನಾನು ಒದಗಿಸುತ್ತೇನೆ. ದಯವಿಟ್ಟು ಅವನ ದಹನ ಕಾರ್ಯವನ್ನು ಮಾಡುವಿರೋ?'

ಭಾಸ್ಕರನ ಸಮಾಜವು, ಆ ಕಾರ್ಯವನ್ನು ಮಾಡಲಾರದು; ಯಾಕೆಂದರೆ, ಭಾಸ್ಕರನಿಗೆ ಜಾತಿಯಿಲ್ಲ.

ಅವರು ಹೇಳಿದರು: 'ಸಂಕಪ್ಪ, ನಿನ್ನ ಮನೆಯಲ್ಲಿ ಅವನಿದ್ದನು; ಅವನಿಗೆ ಜಾತಿಯಿಲ್ಲ; ಜಾತಿಯಿಲ್ಲದ ಮನುಷ್ಯನನ್ನು ನಾವು ಹೇಗೆ ಸುಡುವುದು?'

ಭಾಸ್ಕರನಿಗೆ ಜಾತಿ ಇಲ್ಲವೆಂದಿಟ್ಟುಕೊಳ್ಳೋಣ; ಆದರೆ ಅವನ ಜಾತಿ ಹೋಗಲಿಕ್ಕೆ ಪರೋಕ್ಷವಾಗಿ, ತಾವೇ ಜವಾಬ್ದಾರರಾಗಿದ್ದರೆಂದು, ಆ ಜಾತಿ ವರ್ಗವು ಆಲೋಚಿಸಲೇ ಇಲ್ಲ.

'ನಿಮ್ಮ ಜಾತಿಗೆ ಬೆಂಕಿಬೀಳಲಿ,' ಎಂದು ಹೇಳುತ್ತ ಸಂಕಪ್ಪನು ತನ್ನವರ ಸಹಾಯದಿಂದ, ಬಡ ಭಾಸ್ಕರನ ದಹನ ಕ್ರಿಯೆಯನ್ನು ಮುಗಿಸಿದನು.

ವಿದ್ಯಾವಂತ, ಉಚ್ಚ, ಮತ್ತು ಸುಸಂಸ್ಕೃತ ಸಮಾಜವು ತಮ್ಮದೆಂಬ ಅಭಿಮಾನವಿದ್ದವರು, ಭಾಸ್ಕರನ ಜೀವನದ ಕಡೆಗೆ ಒಂದು ಸಾರಿ, ಒಂದೇ ಸಾರಿ ನೋಡಲಿ; ಆದರೆ, ನೋಡುವರೇ?

ವಿದ್ಯಾವಂತ, ಉಚ್ಚ, ಮತ್ತು ಸುಸಂಸ್ಕೃತ ಸಮಾಜವು ತಮ್ಮದೆಂಬ ಅಭಿಮಾನವಿದ್ದವರು, ಭಾಸ್ಕರನ ಜೀವನದ ಕಡೆಗೆ ಒಂದು ಸಾರಿ, ಒಂದೇ ಸಾರಿ ನೋಡಲಿ; ಆದರೆ, ನೋಡುವರೇ?

ಇಲ್ಲ ನೋಡಲಾರರು; ಯಾಕೆಂದರೆ ಅವರ ದೃಷ್ಟಿ ಕುರುಡಾಗಿದೆ; ಕಿವಿ ಕಿವುಡಾಗಿದೆ; ಲೋಕವು ಅವರ ಪಾಲಿಗೆ ನಿರ್ನಾಮವಾಗಿದೆ!

ಸಿಹಿ ಸುದ್ದಿ ಸಂಗ್ರಹ

ನಿದ್ದೆಯು ಕಮ್ಮಿ ಬಿದ್ದಹಾಗೆ ಸ್ವಪ್ನಗಳು ಹೆಚ್ಚು ಬೀಳುವವು. ಸ್ತ್ರೀಯರಿಗೆ ನಿದ್ದೆ ಕಮ್ಮಿ ಆದುದರಿಂದ ಅವರು ಹೆಚ್ಚೆಚ್ಚು ಸ್ವಪ್ನಗಳನ್ನು ಅನುಭವಿಸುವರು. ಬಾಲ್ಯದಲ್ಲಿ ಹೆಚ್ಚು ಭಾರವಾದ ನಿದ್ದೆ ಬೀಳುವುದರಿಂದ ಸ್ವಪ್ನಾನುಭವ ಕಡಿಮೆ. ತಾರುಣ್ಯದಲ್ಲಿ ಅದು ಅತೀ ಹೆಚ್ಚಾಗಿ ಮತ್ತೆ ಪುನಃ ಕಡಿಮೆಯಾಗುವುದು. ಪ್ರಾಯ ಹೋಗುತ್ತಲೇ ಮನುಷ್ಯನಿಗೆ ನಿದ್ರೆಯೂ ಕಡಿಮೆಯಾಗುತ್ತದೆ. ಪುರುಷರಿಗೆ ಹೆಚ್ಚು ಸ್ವಪ್ನಗಳೂ, ಭಾರವೂ ದೀರ್ಘವೂ ಆದ ನಿದ್ರೆಯು ಹತ್ತುವುದು. ಹೀಗೆಂದು ಓರ್ವ ನಿದ್ರಾವಿಜ್ಞಾನಿಗಳು ತಿಳಿಸುತ್ತಾರೆ.

* * *

ಉಬ್ಬಸವು ಒಂದು ರೋಗವಲ್ಲ. ಅದು ಬೇರೆ ಒಂದು ರೋಗದ ಒಂದು ಲಕ್ಷಣ—ತಲೆನೋವು ಇದ್ದಂತೆ. ಇದಕ್ಕೆ ಔಷಧ ಮಾಡುವ ಮೊದಲು ಇದರ ರೋಗ ಕಾರಣವನ್ನು ಕಂಡುಹಿಡಿಯಬೇಕು. ವೈದ್ಯರು ರೋಗಿಗೆ ಕೊಡುವ ಭರವಸೆಯಿಂದಲೇ ಈ ಲಕ್ಷಣವು ಕಡಿಮೆಯಾಗುತ್ತದಂತೆ. ಸರಿಯಾಗಿ ಇದರ ತೊಂದರೆಯನ್ನು ಶೇಕಡಾ ೮೦ರಷ್ಟು ಕಮ್ಮಿಮಾಡುವ ಒಂದೇ ಒಂದು ಚಿಕಿತ್ಸೆ ಇದುತನಕ ಕಂಡುಹಿಡಿಯಲ್ಪಟ್ಟಿಲ್ಲವಂತೆ.

* * *

ಅಮೇರಿಕದಲ್ಲಿ ಆದಷ್ಟು ಕಮ್ಮಿ ಲೋಹಗಳನ್ನು ನಾಗರೀಕರು ಉಪಯೋಗಿಸಬೇಕೆಂದು ಯುದ್ಧ ಖಾತೆಯವರ ಪ್ರಚಾರವಾಗುತ್ತದೆ. ಅಂತೇ ಅಲ್ಲಿನ ಇಲಿನ್ವೊಸ್ ಪ್ರಾಂತ್ಯದವರು ಮೋಟಾರುಗಳ ನಂಬ್ರ ಬರೆಯುವುದಕ್ಕೆ ಲೋಹದ ಹಲಗೆ ಬದಲಿಗೆ ಸೋಯಾ ಬೀನ್ಸ್ ಎಂಬ (ಇದು ಅಲ್ಲಿ ಹೆಚ್ಚು ಬೆಳೆಯುತ್ತದೆ) ಅವರೆಕಾಯಿಯ ಅಂಟು ಹುಡಿಯಿಂದ ಮಾಡಲ್ಪಟ್ಟ ಹಲಗೆಗಳನ್ನು ಉಪಯೋಗಿಸಲು ಶಾಸನ ಮಾಡಲಾಯಿತು. ಆದರೆ ಅಲ್ಲಿಯ ನಾಯಿಗಳಿಗೆ ಅವರೆ ಕಾಯಿಯ ಹಲಗೆಗಳು ಬಿಸ್ಕುಟಿನಂತೆ ರುಚಿಸಹತ್ತಿ ಈಗ ಸಿಕ್ಕಿದಲ್ಲಿ ನಾಯಿಗಳು ಮೋಟಾರು ಗಾಡಿಗಳ ಬರವನ್ನು ಕಾಯುತ್ತಿವೆಯಂತೆ. ಆಗಲೇ ಅನೇಕ ಅಂತಹ ಹಲಗೆಗಳನ್ನು ಅವು ತಿಂದುಹಾಕಿವೆ.

* * *

ಆಸ್ಟ್ರೇಲಿಯದಲ್ಲಿ ಹದಿನೆರಡು ಅಡಿ ಉದ್ದದ ಎರೆಹುಳಗಳಿವೆ.

* * *

ನಾಯಿಗಳ ಕಣ್ಣಿಗೆ ಬಣ್ಣಗಳು ಕಾಣುವುದಿಲ್ಲ. ಅವಕ್ಕೆ ಎಲ್ಲವೂ ಕಪ್ಪು ಬಿಳಿಯಾಗಿ ಮಾತ್ರ ಕಾಣಿಸುವುದು. ಆದರೆ ಅವುಗಳ ಕಿವಿಗಳು ನಮಗಿಂತಲೂ ಹದಿನೈದು ಪಾಲು 'ಹರಿತ'ವಾಗಿವೆ.

* * *

ಕೆಲವು ಫಿಲಿಪ್ಪಾಯ್ನ್ ದ್ವೀಪಗಳ ಬಳಿಯಲ್ಲಿ ಪೆಸಿಫಿಕ್ ಸಾಗರವು ಎಷ್ಟು ಆಳವಾಗಿದೆ ಎಂದರೆ, ೨೯ ಸಾವಿರ ಅಡಿ ಎತ್ತರದ ಹಿಮಾಲಯವನ್ನು ಅದರೊಳಗೆ ಬಿಟ್ಟರೆ ಮತ್ತೆ ಆರು ಸಾವಿರ ಅಡಿಗಳಷ್ಟು ನೀರು ಮೇಲೆ ಉಳಿಯುವುದು.

* * *

ರಾಜಪುತಾನದಲ್ಲಿನ ಸಾಂಬಾರ್ ಉಪ್ಪಿನ ಸರೋವರವು ಪ್ರಕೃತಿಯ ಅದ್ಭುತಗಳಲ್ಲಿ ಒಂದು. ಕಾರಣ ಸಾಮಾನ್ಯವಾಗಿ ಉಪ್ಪು ಸಮುದ್ರ ಇಲ್ಲವೆ ನೆಲದಲ್ಲಿ ಮಾತ್ರ ಸಿಗುವುದಾದರೆ ರಾಜಪುತಾನದ ಈ ಸರೋವರವು ಬೇಸಿಗೆ ಕಾಲದಲ್ಲಿ ಆರಿ ಹೋಗಿ ೭೦ ಚದುರ ಮೈಲು ವಿಸ್ತಾರದ ಉಪ್ಪಿನ ಹೊಲವೊಂದು ಉಂಟಾಗುವುದು. ಈ ಸರೋವರದ ಸುತ್ತುಮುತ್ತಲಿನ ಬೆಟ್ಟಗಳ ಅಡಿ ಭಾಗದಲ್ಲಿ ಉಪ್ಪಿನ ಗನಿಗಳಿದ್ದು ಮಳೆಗಾಲದಲ್ಲಿ ಅದು ಸರೋವರದ ನೀರಿನಲ್ಲಿ ಸೇರಿಕೊಂಡು ಅದನ್ನುಕಡು ಉಪ್ಪಾಗಿಮಾಡುವುದು.

* * *

೧೫ನೇ ಶತಮಾನದ ಜರ್ಮನಿಯ ವುರ್ಟೆಮ್‌ಬರ್ಗ್ ಎಂಬ ಪ್ರಾಂತ್ಯದ ಬೊರಿಂಗ್ಗೀಮ್ ಎಂಬ ಪಟ್ಟಣದಲ್ಲಿ ಓರ್ವಳು ೫೩ ಮಕ್ಕಳನ್ನು ಹೆತ್ತಿದಳೆಂದು ತಿಳಿಸುವ ಒಂದು ಶಿಲಾಶಾಸನವು ಅಲ್ಲಿ ಸಿಕ್ಕಿದೆ–೩೮ ಗಂಡು-೧೫ ಹೆಣ್ಣು.

* * *

೧೯೨೬ರಲ್ಲಿ ಸ್ಪೈನಿನ ವಾಲ್ಲಾಡೊಲಿಡ್ ಎಂಬ ಊರಲ್ಲಿ ೬೮ ವರ್ಷ ಪ್ರಾಯ ಓರ್ವ ಮುದುಕಿಯು ತನ್ನ ೨೯ನೇ ಮಗುವನ್ನು ಹೆತ್ತಳಂತೆ.

* * *

ಹೆಚ್ಚು ಅವಳಿ ಮಕ್ಕಳನ್ನು ಒಂದೇ ಸಲ ಹೆತ್ತವರಲ್ಲಿ ಈಜಿಪ್ತಿನ ಓರ್ವ ಮಹಿಳೆಯ ದಾಖಲೆ ಇದೆ. ೧೯೨೮ರಲ್ಲಿ ಅವಳು ೪ ಗಂಡು, ೨ ಹೆಣ್ಣು ಮಕ್ಕಳನ್ನು ಒಂದೇ ಸಲ ಹೆತ್ತಳು. ೧೯೩೪ರಲ್ಲಿ ಡಿಯೊನೆ ಎಂಬ ಕೆನೆಡಿಯನ್ ಮಹಿಳೆಯು ೫ ಹೆಣ್ಣು ಮಕ್ಕಳನ್ನು ಹೆತ್ತು ಆ ಮಕ್ಕಳಿಂದೂ ಪುಷ್ಟವಾಗಿ ಬೆಳೆದು ವಿಪುಲ ಧನವನ್ನು ಪ್ರದರ್ಶನದ ಮೂಲಕ ಸಂಗ್ರಹಿಸಿವೆ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

AMRUTANJAN DEPOTS BOMBAY. MADRAS. CALCUTTA.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 27—4—1945 [ಸಂಚಿಕೆ 17]

ರಾಷ್ಟ್ರೀಯ ಶಿಕ್ಷಣದ ಪ್ರಯೋಗ ಶಾಲೆ

ಇಂದ್ರಪ್ರಸ್ತದ ಬಳಿ ಮುಸ್ಲಿಂ ವಿದ್ಯಾಸಂಸ್ಥೆ

ಡಾ। ಜಾಖೀರ್ ಹುಸ್ಸೇನ್ ಮತ್ತು ಗಾಂಧೀಜಿ

ಡಿಲ್ಲಿಯಿಂದ ಕೆಲವೇ ಮೈಲುಗಳ ದೂರದಲ್ಲಿ, ಪ್ರಾಚೀನ ಇಂದ್ರಪ್ರಸ್ತದ ಬಳಿ ಜಾಮಾ ಮಿಲ್ಲಿಯಾ ಇಸ್ಲಾಮಿಯಾ ಇಲ್ಲವೆ ರಾಷ್ಟ್ರೀಯ ಮುಸ್ಲಿಮ್ ವಿಶ್ವವಿದ್ಯಾಲಯವೊಂದಿದೆ. ಇಂದಿಗೆ ಅದು ಸ್ಥಾಪಿತವಾಗಿ ಇಪ್ಪತ್ತೈದು ವರ್ಷಗಳಾದುವು.

ಈ ಮುಸ್ಲಿಂ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಮಹಾತ್ಮಾಗಾಂಧಿಯವರೂ ಸಹಾಯಮಾಡಿರುವರೆಂಬ ಸಂಗತಿಯು ಸ್ವಾರಸ್ಯವಾದುದು. ೧೯೨೦ರಲ್ಲಿ ಮೌಲಾನಾ ಮಹಮ್ಮದ್ ಆಲಿಯವರೂ ಮಹಾತ್ಮರೂ ಇದನ್ನು ರೂಪುಗೊಳಿಸಿದರು. ಈ ಶಾಲೆಯು ಒಂದು ಹಳ್ಳಿ ವಟಾರದಲ್ಲಿದ್ದು ಆಸುಪಾಸಿನ ಬಡ ಜನತೆಯ ನಡುವಿನಲ್ಲಿ ಶಿಕ್ಷಣ ಸೇವೆ ಮಾಡುತ್ತದೆಂಬ ವಿಷಯವೂ ಗಣನೀಯವಾದುದು.

ಪ್ರಾರಂಭದಲ್ಲಿ ರವಿಂದ್ರನಾಥಟಾಕೂರರ ಶಾಂತಿನೀಕೇತನದಂತೆ ಮರದ ನೆರಳಲ್ಲಿ ಪಾಠಗಳನ್ನು ಇಲ್ಲಿ ಕಲಿಸುತಿದ್ದರು. ಸರಕಾರದ ಪ್ರಭಾವವೇ ಹೆಚ್ಚಾಗಿರುವ ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯದ ಧೋರಣೆಗೆ ದಂಗೆ ಎದ್ದ ಎಲ್ಲಾ ರಾಷ್ಟ್ರೀಯವಾದಿ ಮುಸಲ್ಮಾನರು ಈ ಶಾಲೆಗೆ ತನುಮನಧನಗಳಿಂದ ಪ್ರೋತ್ಸಾಹಿಸಿದುದರ ಪರಿಣಾಮವಾಗಿ ಇಂದು ಅದು ಸರ್ವತೋಮುಖವಾಗಿ ಅಭಿವೃದ್ಧಿಹೊಂದಿದೆ. ಒಂದು ಶಾಲೆ, ಕೋಲೇಜು, ಗ್ರಂಥಾಲಯ, ಸಾಹಿತ್ಯ ಪರಿಶೋಧನಾಲಯ, ಭಾಷಾಂತರ ಪ್ರಕಟನಾಲಯ, ಇಷ್ಟೊಂದು ಇಲಾಖೆಗಳು ಅಂದಿನ ಆ ಸಣ್ಣ ಶಾಲೆಗೆ ಇಂದು ಹೊಂದಿಕೊಂಡಿವೆ.

ವಿಚಿತ್ರವೆಂದರೆ ಈ ದೇಶದಲ್ಲಿ ಯಾವ ಪ್ರಾಂತ್ಯ ಸರಕಾರದವರೂ ಆ ಮುಸ್ಲಿಂ ವಿದ್ಯಾಲಯದ 'ಡಿಗ್ರಿ'ಗಳನ್ನು ಒಪ್ಪಿಕೊಳ್ಳುವುದಿಲ್ಲವಾದರೂ, ಅಲ್ಲಿಯ ವಿದ್ಯಾರ್ಥಿಗಳಿಗೆ ಯುರೋಪ್ ಅಮೇರಿಕಾಗಳ ವಿಶ್ವವಿದ್ಯಾಲಯಗಳಲ್ಲೂ ಪೌರ್ವಾತ್ಯ ಸಾಹಿತ್ಯ ಶಿಕ್ಷಣಾಲಯಗಳಲ್ಲೂ ಕೆಲಸ ಕೊಡುತ್ತಾರೆ. ಇನ್ನೊಂದು ಸ್ವಾರಸ್ಯದ ಸಂಗತಿ ಎಂದರೆ ಈ ಶಾಲೆಯಲ್ಲಿ ವಿದ್ಯಾರ್ಥಿಗಳು ನೂಲುವುದು ನೇಯುವುದನ್ನೂ ಇತರ ಅನೇಕ ಕೈಗಾರಿಕೆಗಳನ್ನೂ ಕಲಿಯುತ್ತಾರೆ; ಮಾತ್ರವಲ್ಲ ಎಲ್ಲರೂ ಖಾಧಿಯನ್ನೂ ಧರಿಸುತ್ತಾರೆ.

ಈ ಜಾಮಿಯಾದ ಭಾಷಾಂತರ ಶಾಖೆಯವರು ಮಹಾತ್ಮಾಗಾಂಧಿ ಮತ್ತು ಜವಾಹರಲಾಲರ ಆತ್ಮಕಥೆಗಳನ್ನೂ ಉರ್ದು ಭಾಷೆಗೆ ತರ್ಜುಮೆ ಮಾಡಿ ಪ್ರಕಟಿಸಿರುವರು.

ಡಾಕ್ಟರ್ ಜಾಖೀರ್

ಇಂದಿಗೆ ಇಪ್ಪತ್ತೈದು ವರ್ಷಗಳಿಂದ ಕೈಗಾರಿಕೆ ಮೂಲಕ ಶಿಕ್ಷಣಕೊಟ್ಟು ಅದು ಸ್ವಾವಲಂಭಿ (ಅಂದರೆ ವಿದ್ಯಾರ್ಥಿಗಳು ಕೈಗಾರಿಕೆ ಮೂಲಕ ತಯಾರಿಸಿದ ವಸ್ತುಗಳಿಂದಲೇ ಅವರ ಶಿಕ್ಷಣ ವೆಚ್ಚವು ನಡೆಸುವುದು) ಯಾಗುವಂತೆ ಪ್ರಯತ್ನಪಟ್ಟ ಇಂದ್ರಪ್ರಸ್ತದ ಆ ಮುಸ್ಲಿಂ ವಿಶ್ವ ವಿದ್ಯಾಲಯದ ಪ್ರಧಾನಾದ್ಯಾಪಕರು ಡಾ। ಜಾಖೀರ್ ಹುಸೇನ್ ಅವರು. ಇವರು ಪ್ರತಿಭಾವಂತ ಜ್ಞಾನಪಟುಗಳೂ, ಅದ್ವಿತೀಯ ಭಾಷಣಕಾರರೂ, ಸುಪ್ರಸನ್ನ ಸೌಂದರ್ಯ ವ್ಯಕ್ತಿತ್ವವಿದ್ದವರೂ, ಆಗಿದ್ದು ಯಾವ ಸರಕಾರದಲ್ಲೂ ಪ್ರಧಾನ ಮಂತ್ರಿಗಳಾಗಿರಲು ಅರ್ಹರಾಗಿದ್ದಾರೆ.

ಜಾಖೀರ ಸಾಹೇಬರ ಸೇವೆಗೆ ಮಹಾತ್ಮಾಗಾಂಧಿಯವರು ಮೆಚ್ಚಿ ಅವರಿಗೆ ತಮ್ಮ ಶಿಕ್ಷಣ ಸಲಹಾಗಾರರನ್ನಾಗಿ ಮಾಡಿ ಅವರ ಶ್ರಮಕ್ಕೆ ರಾಷ್ಟ್ರಮನ್ನಣೆಯನ್ನೂ ಕೊಟ್ಟರು. ಇಂದು ಆ ಶ್ರದ್ಧಾವಂತ ಮುಸಲ್ಮಾನ್ ಗೃಹಸ್ಥರು ವಾರ್ಧಾ ಸಾಧುವಿನ ಶಿಕ್ಷಣ 'ಮಂತ್ರಿ'ಗಳಾಗಿದ್ದಾರೆ. ವಾರ್ಧಾ ಶಿಕ್ಷಣ ಪದ್ಧತಿ, ಕೈಗಾರಿಕೆಗಳ ಮೂಲಕ ಶಿಕ್ಷಣ ಎಂಬೀ ನೂತನ ರಾಷ್ಟ್ರೀಯ ಶಿಕ್ಷಣದ ಮೂಲ ಸಲಹೆಗಾರರೂ ಡಾ। ಜಾಖೀರ ಹುಸೇನ್ ಸಾಹೇಬರೇ ಆಗಿರುವರು ಎಂಬ ವಿಷಯವನ್ನೂ ಮರೆಯುವಂತಿಲ್ಲ. ರಾಷ್ಟ್ರವು ಅವರಿಗೆ ತುಂಬಾ ಆಭಾರಿಯಾಗಿರುತ್ತದೆ.

ಈ ಶತಮಾನದ ಗ್ರಂಥ 'ಮಹಾತ್ಮಾಗಾಂಧೀಯವರ ಮನಸ್ಸು' ಬರೆಯಲು ಹದಿನೆರಡು ವರ್ಷಗಳು ಹಿಡಿದಿದೆ

ಶ್ರೀ. ಆರ್. ಕೆ. ಪ್ರಭು ಮತ್ತು ಶ್ರೀ. ಯು. ಆರ್. ರಾವ್ ಎಂಬೀರ್ವ ಕನಡಿಗರು ಈ ಶತಮಾನದಲ್ಲೇ ಅತ್ಯಮೋಘವೂ ಅಪ್ರತಿಮವೂ ಜಗತ್‌ಮಾನ್ಯವಾಗುವಂತಹುದೂ ಆದೊಂದು ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವರೆಂಬ ಸಂಗತಿಯು ಕನ್ನಡಿಗರಿಗೆಲ್ಲರಿಗೂ ಹೆಮ್ಮೆಯ ವಿಷಯವಾದರೂ, ಅದು "ಮಹಾತ್ಮಾ ಗಾಂಧಿಯವರ ಮನಸ್ಸು" ಎಂಬದಾಗಿರುವುದರಿಂದ ಇಡೀ ದೇಶವೇ ಮಾತ್ರವಲ್ಲ ಸಕಲ ವಿಶ್ವವೇ ಅಭಿಮಾನ ಪಡಬೇಕಾದ ವಿಷಯವೂ ಆಗಿರುತ್ತದೆ. ಸದ್ಯದಲ್ಲೇ ಅದು ಪ್ರಕಾಶಕ್ಕೆ ಬರಲಿದೆ.

ಅಚ್ಚಿಗೆ ಹೋಗುವ ಮೊದಲು ಅದನ್ನು ಓದಿದವರು "ಇದೊಂದು ಹೊಸ ಗೀತೆ, ಹೊಸ್ ಬೈಬಲ್" ಎಂದು ಉದ್ಗಾರಿಸಿರುವರು. ಗಾಂಧೀಜಿಯವರ ಲೇಖನ ಭಾಷಣಗಳ ಆಧಾರದಿಂದ ಬರೆಯಲ್ಪಟ್ಟ ಈ ಗ್ರಂಥಕ್ಕೆ ಹದಿನೆರಡು ವರ್ಷಗಳ ಶ್ರಮ ಹಿಡಿದಿದೆ. ಸೇವಾಗ್ರಾಮದ ಸಾಧುವಿನ ಎಲ್ಲಾ ತತ್ವಜ್ಞಾನ ಭೋಧೆಯ ಕುರಿತಾದ ಎಲ್ಲಾ ವಿಚಾರಗಳೂ ಅದರಲ್ಲಿ ಸವಿಸ್ತಾರವಾಗಿ ವಿವರಿಸಿ ತರ್ಕಿಸಲ್ಪಟ್ಟಿವೆಯಂತೆ.

ಓರ್ವ ಪ್ರಮುಖ ಇಂಗ್ಲಿಷ್ ಪ್ರಕಾಶನಾ ಸಂಸ್ಥೆಯವರಾದ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ಸಿನವರು ಇದನ್ನು ಪ್ರಕಟಗೊಳಿಸಲು ಹೊಣೆಗಾರಿಕೆ ತೆಗೆದುಕೊಂಡದ್ದರಿಂದ ಈ ಗ್ರಂಥದ ಜಗತ್ತಿನ ಎಲ್ಲಾ ಭಾಷೆಯ ಭಾಷಾಂತರಗಳೂ ಆಗಲಿವೆಯೆಂಧು ತಿಳಿದುಬರುತ್ತದೆ.

ಗಾಂಧಿ ಸುವಾರ್ತೆ

ಆ ಗ್ರಂಥದಿಂದ ಕೆಲವು ಅಮೂಲ್ಯ ನೀತಿರತ್ನಗಳನ್ನು ಈ ಕೆಳಗೆ ಕೊಡಲಾಗಿದೆ:—

ಸಂತನಲ್ಲ: "ಯಾವ ರೂಪ ಆಕೃತಿಗಳಲ್ಲೂ ನನ್ನಲ್ಲಿ ಸಂತತನವಿದೆಯೆಂದು ನನಗೇ ತಿಳಿದುಬರುವುದಿಲ್ಲ. ನನ್ನಲ್ಲಿ ಅನೇಕ ತರದ ಕುಂದುಕೊರತೆಗಳಿದ್ದರೂ ನಾನೊಬ್ಬ ಸತ್ಯಪೂಜಕನೆಂಬ ವಿಷಯವು ಮಾತ್ರ ನನಗೆ ತಿಳಿದಿದೆ...... ಇತರ ಸಹಮಾನವರಂತೆ ನಾನೂ ತಪ್ಪುಮಾಡಲರ್ಹನಿದ್ದೇನೆ.

ಸಾಮಾನ್ಯ ಲೌಕಿಕ: "ತಪ್ಪುಮಾಡುವವನೊಬ್ಬನನ್ನು ನೋಡುವಾಗ ನಾನೂ ತಪ್ಪು ಮಾಡುವವನೆಂದು ನನಗೆ ನಾನೇ ಹೇಳಿಕೊಳ್ಳುತ್ತೇನೆ. ಕಾಮುಕನೊಬ್ಬನನ್ನು ನೋಡಿದಾಗ ನಾನೂ ಒಂದು ಸಮಯದಲ್ಲಿ ಹಾಗಿದ್ದೆನೆಂದು ಹೇಳಿ ಕೊಳ್ಳುತ್ತೇನೆ. ಹೀಗೆ ಜಗತ್ತಿನ ಪ್ರತಿಯೊಬ್ಬನೊಡನೆ ಬಾಂಧವ್ಯವಿದ್ದ ಹಾಗೆ ನಾನು ತಿಳಿಯುತ್ತೇನೆ. ನಮ್ಮಲ್ಲಿನ ಅತೀ ಕನಿಷ್ಠರೂ ನಮ್ರರೂ ಆಗಿರುವವರು ಸಂತೋಷ ನೆಮ್ಮದಿಯಲ್ಲಿರದಿದ್ದರೆ ನಾನೂ ಹರ್ಷದಿಂದಿರಲಾರೆ"

ಸತ್ಯವೇ ಮೇಲು: "ಸತ್ಯವಲ್ಲದೆ ಆರಾಧಿಸಲು ನನ್ನ ಬಳಿ ಬೇರೆ ದೇವರಿಲ್ಲ..... ನಾನು ಸತ್ಯಕ್ಕಲ್ಲದೆ ಬೇರೆ ಯಾವುದಕ್ಕೂ ಉಪಾಸನೆ ಮಾಡುವುದಿಲ್ಲ. ನನ್ನ ಆಚಾರ ವಿಚಾರ ಶಿಸ್ತುಗಳೆಲ್ಲವೂ ಸತ್ಯಕ್ಕೇ ಸಂಬಂಧಿಸಿದವು.

ಪರಮ ಧರ್ಮ: "ನನ್ನ ವಿಶ್ವಾಸದ ಪ್ರಥಮ ನೀತಿ ಸೂತ್ರವೇ ಅಹಿಂಸೆ. ಅದು ನನ್ನ ಮತದ ಕೊನೆಯ ಸೂತ್ರವೂ ಆಗಿದೆ. ಅಹಿಂಸೆಯು ಋಷಿ ಸಂತರಿಗೆ ಮಾತ್ರ ಹೇಳಿದ್ದಲ್ಲ. ಜನ ಸಾಮಾನ್ಯರೆಲ್ಲರಿಗೂ ಅದು ಅನ್ವಯಿಸುತ್ತದೆ. ಕ್ರೂರವಾದ ಕಾಡುಪ್ರಾಣಿಗಳಿಗೆ ಹಿಂಸೆಯು ಹೇಗೆ ಜೀವನ ನಿಯಮವಾಗಿರುತ್ತದೊ ಮಾನವರಾದ ನಮ್ಮ ವರ್ಗಕ್ಕೆ ಅಹಿಂಸೆಯೇ ಜೀವನ ನೀತಿಯಾಗಿದೆ.

ಮಾನಿನಿಯರೇ ಎಚ್ಚೆತ್ತೇಳಿರಿ: "ನಾನು ಸ್ತ್ರೀಯಾಗಿ ಹುಟ್ಟಿದ್ದರೆ, ನಾರಿಯು ತನ್ನ ಆಟದ ವಸ್ತುವೆಂದು ತಿಳಿದು ನಟಿಸುವ ಮನುಷ್ಯನ ವಿರೋಧವಾಗಿ ದಂಗೆ ಏಳುತಿದ್ದೆ."

ಮಾನವ ಹಕ್ಕು: "ಆಲಸ್ಯದಿಂದ ಉಪವಾಸ ಬಿದ್ದು ಕೊಳೆಯುವ ಜನರಿಗೆ ದೇವರು— ಕೆಲಸ ಮತ್ತು ಸರಿಯಾದ ಜೀವನಾಧಾರದ ಮಜೂರಿ ರೂಪದಲ್ಲಿ—ಪ್ರತ್ಯಕ್ಷನಾಗಬಲ್ಲನಲ್ಲದೆ ಬೇರೆ ಹೇಗೂ ಕಾಣಿಸನು. ತನ್ನ ಆಹಾರಕ್ಕಾಗಿ ದುಡಿಯಲು ದೇವರು ಮನುಷ್ಯನನ್ನು ಸೃಷ್ಟಿಸಿದನು. ಕೆಲಸ ಮಾಡದೆ ತಿನ್ನುವವರು ಕಳ್ಳರೆಂದು ದೇವರು ಹೇಳುತ್ತಾನೆ. ಜೀವನಾವಶ್ಯಕತೆಗಳನ್ನು ಹೊಂದಲು ಪ್ರತಿಯೋರ್ವನಿಗೂ ಸಮಾನಹಕ್ಕು ಬಾಧ್ಯತೆಗಳಿವೆ.

ಧನ, ಧನಿಕ: "ಬಂಡವಾಳ ಧನದ ಮೇಲೆ ನನಗೆ ಅಸಹ್ಯವಿಲ್ಲ. ನಾನು ಬಂಡವಾಳಶಾಹಿಯ ವಿರೋಧ ಹೋರಾಡುವವನು. ಅಹಿಂಸಾತ್ಮಕ ವಿಧಾನದಿಂದ ನಾವು ಬಂಡವಾಳಗಾರನನ್ನು ನಾಶಮಾಡಲು ಬಯಸುವುದಿಲ್ಲ; ಬಂಡವಾಳಶಾಹಿ ತತ್ವವನ್ನು ನಾಶಮಾಡುವುದು ನಮ್ಮ ಗುರಿ.

ಯಂತ್ರ ಮತ್ತು ಮನುಷ್ಯ: "ಯಂತ್ರಗಳನ್ನು ನಾನು ದ್ವೇಷಿಸುವುದಿಲ್ಲ. ಯಂತ್ರಮಯವಾಗಿ ಮಾಡುವುದಕ್ಕೆ ಹಾತೊರೆಯುವುದನ್ನು ನಾನು ಆಕ್ಷೇಪಿಸುತ್ತೇನೆ......ಮಾನವನ ಕುರಿತೇ ನಮ್ಮ ಉಚ್ಚ ಯೋಜನೆಗಳಿರಬೇಕು. ....ನ ಯಂತ್ರವು ಮನುಷ್ಯನ ಅಂಗಾಂಗಗಳನ್ನು ನಿಷ್ಪ್ರಯೋಜಗೊಳಿಸಬಾರದು. ಅನೇಕರನ್ನು ಸುಲಿಗೆ ಮಾಡಿ ಕೆಲವರೇ ಸಂಪತ್ತನ್ನು ಶೇಖರಿಸುವಂತಾಗುವ ಯಂತ್ರವ್ಯವಸ್ಥೆಯ ಉದ್ದೇಶವನ್ನು ನಾನು ತಪ್ಪೆಂದು ಭಾವಿಸುತ್ತೇನೆ."

ಭಾರತ: "ಯುರೋಪಿನ ಕಾಲಬುಡದಲ್ಲಿ ಅಡ್ಡ ಬೀಳುವ ಭಾರತವು ಮಾನವಕೋಟಿಗೆ ಆಶಾಸೂಚಕವಾದುದಲ್ಲ. ಎಚ್ಚೆತ್ತ ಸ್ವತಂತ್ರ ಭಾರತವೇ ನರಳುವ ಈ ಜಗತ್ತಿಗೆ ಶುಭಶಾಂತಿಯ ಮತ್ತು ಸೌಹಾರ್ದದ ಸಂದೇಶವನ್ನು ಕೊಡಬಲ್ಲುದು.

ವಿರೋಧ, ಸೌಹಾರ್ದ: "ನಾನು ಬ್ರಿಟಿಷರ ವಿರೋಧಿಯಲ್ಲ...... ಆದರೆ ನಾನು ಅಸತ್ಯದ ವಿರೋಧಿ; ವಂಚನೆಯ ವಿರೋಧಿ. ಅನೀತಿ ಅನ್ಯಾಯಗಳ ವಿರೋಧಿಯಾಗಿರುತ್ತೇನೆ."

ಗಾಂಧೀಜಿ

ಶೂರನಾದ ಷೂರಾ
ಸೋವಿಯಟ್ ರಶ್ಯದ 'ಶಿವಾಜಿ'
ರಶ್ಯದ ವೀರ ಬಾಲಕ ಚೆಕಾಲಿನ್

ಭೀಕರ ಜರ್ಮನ್ ದಂಡಗಳು ಮೊಸ್ಕೋ ಕಡೆಗೆ ಸಾಗುತ್ತಿರುವ ಕಾಲವದು. ಅವ್ಯಾಹತವಾಗಿ ಮುಂದೂಡುತಿದ್ದ ನಾಜೀ ಯುದ್ಧ ಯಂತ್ರವು ರಶ್ಯದ ಕೆಂಪು ಸೈನ್ಯ ಬಲವನ್ನು ಮುಗ್ಗರಿಸಿ ಮುರಿದು ಬಿಟ್ಟಿತಾಗಿ ಯುದ್ಧ ನಿರೀಕ್ಷಿಕರು ಅಭಿಪ್ರಾಯಪಟ್ಟರು. ಮೊಸ್ಕೋಗೆ ಇನ್ನು ಕೆಲವೆ ಮೈಲುಗಳ ದೂರ ಸ್ವಲ್ಪ ಅವಧಿಯಲ್ಲೇ ಕೆಂಪು ರಾಜಧಾನಿಯು ಹಿಟ್ಲರನ ಪಾದಾಕ್ರಾಂತವಾಗುವುದು. ರಶ್ಯನ್ ಅಬಾಲ ವೃದ್ಧರೆಲ್ಲರೂ ಜೀವದ ಹಂಗು ತೊರೆದು ಪ್ರತಿ ಅಂಗುಲ ಸ್ಥಳವನ್ನು ಅಮೋಘ ಛಲಹಾಸದಿಂದ ಕಾದಾಡುತಿದ್ದಾರೆ. ಗುಡ್ಡ ಕಾಡುಗಳಲ್ಲಿ ಗೊರಿಲ್ಲಾ ದಳಗಳು ನಾಜೀ ವಿಜಯಪಥದಲ್ಲಿ ಮುಳ್ಳಿನಂತೆ ಕಂಟಕಪ್ರಾಯವಾಗಿ ಪರಿಣಮಿಸಿವೆ.

ಎಷ್ಟೆಂದರೂ ನಾಜಿಗಳಿಗೆ ರಶ್ಯನ್ ಗೊರಿಲ್ಲಾ ದಳಗಳೆಂದರೆ ಕನಸ್ಸಿನಲ್ಲೂ ಉಸಿರುಕಟ್ಟಿಸುವ ಭಯವನ್ನುಂಟು ಮಾಡುತ್ತವೆ. ಅವರು ಶಸ್ತ್ರಸುಸಜ್ಜಿತ ದೊಡ್ಡ ದೊಡ್ಡ ತಂಡಗಳಾಗಲ್ಲದೆ ಕೆಲವೇ ಮಂದಿಗಳು ಎಂದೂ ಮೊಸ್ಕೊ ಬಳಿಯ ಅರಣ್ಯಗಳನ್ನು ನುಗ್ಗಲು ಧೈರ್ಯ ಪಡುವಂತಿಲ್ಲ. ಆ ಪ್ರದೇಶದಲ್ಲೆಲ್ಲಾದರೂ ಓರ್ವ ಜರ್ಮನ್ ಕೊಡೆ ವೈಮಾನಿಕನು ದಾರಿ ತಪ್ಪಿ ಇಳಿದನೆಂದರೆ ಅಲೆಗ್ಝಾಂಡರ್ ಚೆಕಾಲಿನನ ಗುಂಡಿನೇಟಿಗೆ ಬಲಿಬೀಳುವುದು ಖಂಡಿತ.

ಅಲೆಗ್ಝಾಂಡರ್ ಚೆಕಾಲಿನನ ಹೆಸರು ಇಂದು ವೀರ ರಶ್ಯನ್ ಇತಿಹಾಸದಲ್ಲಿ ಅಜರಾಮರ ಕೀರ್ತಿಗೆ ಪಾತ್ರವಾಗಿದೆ. ತರುಣ ರಶ್ಯದ ಅದ್ವಿತೀಯ ದೇಶ ಭಕ್ತಿ ವಾತ್ಸಲ್ಯ ತ್ಯಾಗ ಬಲಿದಾನ, ಅಸಾಮಾನ್ಯ ಸಾಹಸ ಶಕ್ತಿಯ ಅಮರ ನಿದರ್ಶನ ಅವನದು. ರಶ್ಯನರ ವೀರಾವೇಶ ಕಡು ಪ್ರತಿಭಟನೆಯ ಸವಿಯನ್ನು ಕ್ರೂರ ನಾಜೀ ಪುಂಡರಿಗೆ ಉಣಿಸಿದ ಕೀರ್ತಿ ಚೆಕಾಲಿನನೆಂಬ ಹದಿನಾರು ವರುಷದ ಆ ಟುಲಾ ಪ್ರಾಂತ್ಯದ ಪೆಸ್ಕೊಪೊಡ್‌ಸ್ಕೊಯೀ ಎಂಬ ಸಣ್ಣ ಊರಿನ ತರುಣನಿಗೆ ಸಲ್ಲುವುದು ಆ ಊರಿಗೆ ಈಗ ಷೂರಾ ಚೆಕಾಲಿನ್ ಎಂದೂ ನಾಮಕರಣ ಮಾಡಲಾಗಿದೆ.

ಅಲೆಗ್ಝಾಂಡರ್ ಚೆಕಾಲಿನನನ್ನು ಷೂರಾ ಚೆಕಾಲಿನ್ ಎಂದು ಅವನ ಹೆತ್ತವರು ಕರೆಯುತಿದ್ದರು. ಜರ್ಮನರು ಅವನನ್ನು ಆ ಊರಿನ ನಡು ಪೇಟೆಯಲ್ಲಿ ತೂಗಿಸಿ ಗಲ್ಲಿಗೇರಿಸದಿರುತಿದ್ದರೆ ಇಂದವನು ತನ್ನ ಹೆಸರಿನ ಆ ಇತಿಹಾಸ ಪ್ರಸಿದ್ಧ ಗ್ರೀಕ್ ಸೇನಾಪತಿಯ ಶೌರ್ಯ ಸಾಹಸವನ್ನು ಮಿಗಿಸುತಿದ್ದನು. ಷೂರಾನು ಗ್ರೀಕ್ ಅಲೆಗ್ಝಾಂಡರನಂತೆ ಶೂರನೂ ಚತ್ರಪತಿ ಶಿವಾಜಿಯಂತೆ ಸಾಹಸಿಯೂ ಅದ್ಭುತ ಸ್ಥೈರ್ಯಶಾಲಿಯಾಗಿಯೂ ಆಗಿದ್ದನು.

ಆದರೆ ಅವನ ಪ್ರಾಯ ಬರೀ ಹದಿನಾರು ವರ್ಷ. ಇನ್ನೂ ಹ್ಯಾಸ್ಕೂಲಿನಲ್ಲಿ ಓದುತಿದ್ದನು. ಅವನ ತಂದೆ ರೈತ, ತಾಯಿ ಹಳ್ಳಿ ಪಂಚಾಯತ್ ಬೋರ್ಡಿನ ಅಧ್ಯಕ್ಷೆ. ಆ ಹಳ್ಳಿ ಊರಲ್ಲಿ ಅವರದು ಬಹಳ ಜನಪ್ರಿಯವಾದ ಸಂಸಾರ. ಬಾಲ್ಯದಿಂದ ಚೆಕಾಲಿನನು ಅದ್ಭುತ ಬುದ್ಧಿ ಶಕ್ತಿ ಸಾಹಸಗಳನ್ನು ಪ್ರದರ್ಶಿಸುತಿದ್ದನು. ಚಿಕ್ಕಂದಿನಿಂದ ಬಂದೂಕನ್ನು ಹಿಡಿಯ ಕಲಿತುದರಿಂದ ಆ ಪ್ರದೇಶದಲ್ಲಿ ಅವನಷ್ಟು ಚತುರ ಶಿಖಾರಿಗಳು ಯಾರೂ ಇರಲಿಲ್ಲ. ಹತ್ತಿರದ ಕಾಡುಗಳಿಗೆ ಬೇಟೆಗೆ ಒಬ್ಬನೇ ಹೋಗಿ ಕ್ಷಣ ಮಾತ್ರದಲ್ಲಿ ಕೆಲವೊಂದು ಮೃಗ ಪಕ್ಷಿಗಳನ್ನು ಹೊಡೆದು ತರುತಿದ್ದನು. ತಮ್ಮ ವಿಟ್ಯಾ ಚೆಕಾಲಿನನೊಂದಿಗೆ ಮೀನು ಹಿಡಿಯಲಿಕ್ಕೂ ಜೇನು ತರಲಿಕ್ಕೂ ಹೋಗುವುದೆಂದರೆ ಅವನಿಗೆ ಅಪರಿಮಿತ ಸಂತೋಷ.

ಅವನ ಚಿತ್ರವನ್ನು ನೋಡಿದರೆ ಅಂಗಾಂಗ ಲಕ್ಷಣಗಳೆಲ್ಲವೂ ಸಾಹಸದ ಪ್ರತೀಕವಾಗಿಯೇ ಇದ್ದುವು. ಉರುಟಾದ ಕೆಳದವಡೆಯ ವಿಶಾಲವಾದ ಮುಖ ಪ್ರದೇಶದ ಇಬ್ಬದಿಗಳಲ್ಲಿ ಲಾಕ್ಷಣೀಕ ಕಿವಿಗಳೆರಡು, ಕೊದಲಿನಂತೇ ಕಣ್ಣು ಗೋಲಗಳೂ ಕಪ್ಪಾಗಿದ್ದು ಸತ್ ಸ್ವಭಾವ ಶೀಲತೆಯನ್ನು ಪ್ರತಿಬಿಂಬಿಸುತ್ತಿವೆ. ನಿರ್ಧಾರ ಸೂಚಕವಾಗಿ ಒತ್ತಲ್ಪಟ್ಟ ತುಟಿಗಳು, ಅಗಲವಾದ ಶರೀರ ವ್ಯಾಯಾಮಿಗಳಿರುವಂತೆ ಚಪ್ಪಟೆಯಾಗಿಯೂ ಚೌಕಟ್ಟಿನಂತೆಯೂ ಇರುವ ಎದೆ ಭಾಗ. ಬಾವಿಯಿಂದ ನೀರು ಕೊಡಗಳನ್ನು ಹಿಡಿದು ಬರುತಿದ್ದಾಗ ಅವನ ವಿಶಾಲವಾದ ಬೆನ್ನು ಭಾಗವೂ ಅಖಂಡ ಶಕ್ತಿ ಸಾಮರ್ಥ್ಯ ಸೂಚಕವಾಗಿ ತೋರುತಿದ್ದು ಹೆಗಲಿನ ಮಧ್ಯದಲ್ಲಿ ಗ್ರೀಕ್ ಪ್ರತಿಮೆಯಲ್ಲಿ ಕೆತ್ತಿಟ್ಟಂತೆ ಇದ್ದ ಕತ್ತು ಅತ್ಯಾಕರ್ಷಕ ಶರೀರ ಸೌಂದರ್ಯವನ್ನು ಪ್ರದರ್ಶಿಸುತಿದ್ದವು.

ಎಲ್ಲಾ ತರದ ಆಟಗಳಲ್ಲಿ ಚೆಕಾಲಿನನು ಸಮರ್ಥನಿದ್ದಂತೆ ಪಾಟಗಳಲ್ಲೂ ಮಹಾ ಪ್ರವೀಣತೆಯನ್ನು ತೋರಿಸುತಿದ್ದನು. ಒಂದೇ ಸಲ ಓದುವುದರೊಳಗೆ ಎಂತಹ ಕಠಿಣ ವಿಷಯವಾದರೂ ಅವನ ಮಿದುಳು ಗ್ರಹಣ ಮಾಡಿಕೊಳ್ಳುವ ಶಕ್ತಿಯದಿತ್ತು. ಟೊಲ್‌ಸ್ಟೊಯ್, ಗೊರ್ಕಿ ಮೊದಲಾದವರ ಕಾದಂಬರಿಗಳನ್ನು ಓದುವುದೆಂದರೆ ಅವನಿಗೆ ಅಂತ್ಯವಿಲ್ಲದ ಅಭಿರುಚಿ ಉತ್ಸಾಹ.

ಚಿಕ್ಕ ಚಿಕ್ಕ ಯಂತ್ರಗಳನ್ನೂ, ಉಪಕರಣಗಳನ್ನೂ ಬಿಡಿಸಿ ದುರುಸ್ತಿ ಮಾಡಿ ಪುನಃ ಜೋಡಿಸುವುದೆಂದರೆ ಅವನಿಗೆ ಒಂದು ಆಟದಂತೆಯೇ ಇತ್ತು. ತನ್ನ ಹಳ್ಳಿಯಲ್ಲಿ ಯಾರ ಎಂತಹ ಯಂತ್ರಗಳಾದರೂ ಹಾಳಾದರೆ ಅವುಗಳನ್ನು ಬಹು ಚತುರತೆಯಿಂದ ದುರುಸ್ತಿ ಮಾಡಿ ಕೊಡುತಿದ್ದನು.

ಹೀಗೆ ನಾನಾ ವಿಧದ ಅಭಿರುಚಿಯ ಉದ್ಯಮಗಳಲ್ಲಿ ಎಂದೂ ಕಮ್ಮಿ ಆಗದ ಆಸಕ್ತಿಯಿಂದ ಕೂಡಿದವನಾಗಿದ್ದು ಸದಾ ತನ್ನ ಹಳ್ಳಿ ಊರಿನ ಹುಡುಗರೊಂದಿಗೆ ತನ್ನ ಮನೆಯಲ್ಲಿ ನಕ್ಕು ನಲಿದಾಡಿ ಸಂತೋಷದಿಂದಿರುತಿದ್ದ ಚೆಕಲಿನನಿಗೆ ಭಯವೆಂಬದೇನೆಂದು ತಿಳಿದಿರಲಿಲ್ಲ. ಎಂತಹ ತುಂಟ ಕುದುರೆಯನ್ನೂ ಅವನಿಗೆ ಕೊಟ್ಟರೂ ಅವನು ಜೀನು ಹಾಕದೆ ಅದರ ಬರೀ ಬೆನ್ನ ಮೇಲೆ ಹಾರಿ ಕೂತು ನಾಗಾಲೋಟದಿಂದ ಓಡಿ ಹೋಗುತಿದ್ದನು. ಇಷ್ಟಾದರೂ ಒಂದು ಅಪಘಡವೂ ಅವನಿಗೆ ಆಗಿರಲಿಲ್ಲ.

ಚೆಕಾಲಿನನು ಹೆತ್ತವರ ಮುದ್ದಿನವನೂ ನೆರೆಯವರ ನೆಚ್ಚಿನವನೂ, ಸ್ನೇಹಿತರ ಸಂತೋಷದ ಸಂಗಾತಿಯೂ, ತಮ್ಮ ವಿಟ್ಯಾನ ಪ್ರೀತಿಯ ಅಣ್ಣನೂ ಆಗಿ ಸ್ವತಂತ್ರವಾದ ಆತಂಕ ಅಡ್ಡಿ ತಡೆಗಳಿಲ್ಲದ ಸಾಹಸಮಯ ಜೀವನದಿಂದ ಎಲ್ಲರಿಗೂ ಬೇಕಾದವನಾಗಿ, ಸುಗುಣಶಾಲಿಯಾಗಿ ಬೆಳೆದು ಹದಿನಾರು ವರ್ಷಕ್ಕೆ ಮುಟ್ಟಿದಾಗಲೇ ಯುದ್ಧದ ಕಾರ್ಮೋಡಗಳು ಅವನ ಮಾತೃಭೂಮಿಯನ್ನು ಆವರಿಸಿದ್ದವು.

ಸೈನಕ್ಕೆ ಸೇರಲು ಚೆಕಾಲಿನನಿಗೆ ಇನ್ನು ಹದಿನೇಳುವರೆ ವರ್ಷಗಳಾಗಬೇಕು. ಆದರೂ ತಂದೆಯೊಂದಿಗೆ ಜರ್ಮನರನ್ನು ಕಾದಾಡುವುದಕ್ಕೆ ಹೋಗುವೆನೆಂದಾಗ ಮೊದಲಿನ ಸಲಕ್ಕೆ ಅವನ ತಾಯಿಗೆ ಇಲ್ಲದ ವ್ಯಥೆಯಾಯಿತು. ಆದರೂ ಗ್ರಾಮ ಪಂಚಾಯತಿನ ಅಧ್ಯಕ್ಷೆಯಾದ ಅವಳು ಇತರರನ್ನು ದೇಶ ರಕ್ಷಣೆಗಾಗಿ ಹುರಿದುಂಬಿಸುವ ಕರ್ತವ್ಯವನ್ನೂ ನಿರ್ವಹಿಸ ಬೇಕಾದುದರಿಂದ ತನ್ನ ಸ್ವಂತ ಮಗನ ವಿಚಾರದಲ್ಲಿ ಅವಳು ಹೇಗೆ ಸ್ವಾರ್ಥ ಪ್ರದರ್ಶಿಸ ಬಲ್ಲಳು. ಅವಳು ಮಾತನಾಡಲಿಲ್ಲ.

ತೀಕ್ಷ್ಣಗುರಿ ನೋಟವುಳ್ಳವನಾದುದರಿಂದ ಷೂರಾ ಚೆಕಾಲಿನನು ತನ್ನ ತಂದೆಯೊಡನೆ ಒಂದು ಸ್ವಯಂಸೇವಕ ದಳವನ್ನು ಸೇರಿದನು. ಕಾಡು ಬೆಟ್ಟಗಳಲ್ಲಿ ಅವಿತುಕೊಂಡಿರುವ ಜರ್ಮನ್ ವೈಮಾನಿಕರನ್ನೂ ಗುಪ್ತಚಾರರನ್ನೂ, ಮುಂದಳದ ಸೈನಿಕರನ್ನೂ ಹುಡುಕಿ ತೆಗೆದು ನಿರ್ನಾಮ ಮಾಡುವುದೇ ಅವನ ಕೂಟದವರ ಕೆಲಸ.

ಜರ್ಮನರು ತೀವ್ರ ಗತಿಯಿಂದ ಮುನ್ನಡೆಯುತಿದ್ದರು. ತನ್ನ ಮಟ್ಟಿಗೆ ಚೆಕಾಲಿನನು ಬಹು ಮಂದಿ ಜರ್ಮನರನ್ನು ಗುರಿಯಿಟ್ಟು ಕೊಂದನು. ಅವನ ಸಾಹಸವೇ ಸಾಹಸ. ಕೆಲವು ಸಮಯ ಅರಣ್ಯದಲ್ಲಿ ತಂಗಿದ್ದ ತನ್ನ ಕೂಟದವರನ್ನು ತೊರೆದು ಅವನು ದೂರದ ಮರಗಳಲ್ಲಿ ಜೇನುಗೂಡನ್ನು ಹುಡುಕಿ ಹೋಗುತಿದ್ದನು. ಮರಗಳ ಪೊಟರೆಯಿಂದ ಜೇನನ್ನು ತೆಗೆಯಲು ಅವನು ತನ್ನ ತಂದೆಯಿಂದ ಕಲಿತಿದ್ದನು. ಬರುವಾಗ ಜೇನನ್ನೂ, ಕೊಂದ ಜರ್ಮನರ ಉಡುಪು ಬಂದೂಕಗಳನ್ನೂ ತಂದು ತನ್ನ ಸಂಗಾತಿಗಳನ್ನು ಕೌತುಕಗೊಳಿಸುತಿದ್ದನು. ಎಂತಹ ಕಠಿಣ ಪ್ರಸಂಗದಲ್ಲಾದರೂ ಅವನ ಬಂದೂಕು ಅವನನ್ನು ಮೋಸ ಮಾಡುತ್ತಿರಲಿಲ್ಲ. ಚಾಣಾಕ್ಷ ಜರ್ಮನ್ ಸೈನಿಕರು ಅವನಿಗೆ ಗುರಿ ಇಡುವಷ್ಟರಲ್ಲಿ ಚೆಕಾಲಿನನು ಅವರಲ್ಲನೇಕರನ್ನು ತನ್ನ ಗುಂಡಿನಿಂದಲೂ, ಕೈಯೊಳಗಿನ ಸಿಡಿ ಬಾಂಬುಗಳಿಂದಲೂ ಯಮಲೋಕಕ್ಕಟ್ಟುತಿದ್ದನು.

ಒಂದು ದಿನ ಅರಣ್ಯದಲ್ಲಿ ಅವನಿಗೊಂದು ಕಾಗದವು ಬಂತು–ಅವನ ತಾಯಿಯು ಕಳುಹಿಸಿಕೊಟ್ಟದ್ದು. ಅದರಲ್ಲಿ ಆ ಮಹಿಳೆಯು ಒಂದು ಸಲ ತನ್ನನ್ನು ಕಂಡು ಹೋಗಬೇಕೆಂದು ಬರೆದಿದ್ದಳು. ಚೆಕಾಲಿನನು ಇದರ ಕಾರಣವನ್ನರಿಯದವನಾಗಿದ್ದರೂ ಹೇಗೂ ತಾಯಿಯಿದ್ದಲ್ಲಿಗೆ ಬಂದನು. ಆ ಊರಿನ ನಿವಾಸಿಗಳೆಲ್ಲರೂ ಹಿಂದಕ್ಕೆ ಸರಿಯಬೇಕೆಂದು ಸೇನಾ ಶಿಬಿರದಿಂದ ಆಜ್ಞೆಯಾಗಿತ್ತು. ಅವಳಲ್ಲಿ ಏನೋ ಒಂದು ತರದ ಕಳವಳವು ಉಂಟಾಗಿದ್ದು ತನ್ನ ಮಗನಿಗೆ ಏನಾದರೂ ಆಪತ್ತು ಸಂಭವಿಸಬಹುದೆಂದು ಅವಳಿಗೆ ಹೇಗೊ ಸೂಚನೆಯಾದ ಹಾಗೆ ಭಾಸವಾಗಿತ್ತು. ಅವಳು ಕಣ್ಣೀರಿಟ್ಟು ಮಗನನ್ನು ಅಪ್ಪಿದಳು. ಶಿಕ್ಷಿತೆಯಾದ ತನ್ನ ತಾಯಿಯ ಅಧೈರ್ಯತನವನ್ನು ಅವನು ಟೀಕಿಸಿ ವಿಶ್ವಾಸ ಭರವಸೆಯಿಂದಿರುವಂತೆ ಸಂತೈಸಿದನು. "ಮಗೂ ನೀನು ಎಚ್ಚರಿಕೆಯಿಂದಿರು. ನೀನೇನು ತರಬೇತು ಹೊಂದಿದ ಸೈನಿಕನಲ್ಲ" ಎಂದಳಾ ವೀರಮಾತೆ. ಧೈರ್ಯದಿಂದಿರಬೇಕಾದುದು ಅವಳ ಕರ್ತವ್ಯ.

"ಚಿಂತಿಸಬೇಡಮ್ಮ, ತರಬೇತಾದವರಿಗಿಂತ ನನ್ನ ಗುಂಡು ನೋಟವು ತೀಕ್ಷ್ಣವಾಗಿದೆ" ಎಂದನು–ಧೀರ ಬಾಲಕ ಚೆಕಾಲಿನನು. ತಾಯಿ ಮಗ ಅಪ್ಪಿಕೊಂಡರು. ಕಡೆಗೆ ತಾಯಿಯು ಹಿಂದಿನ ಒಂದು ವಸತಿ ಶಿಬಿರಕ್ಕೂ; ಮಗನು ತನ್ನ ಅರಣ್ಯ ಠಾಣ್ಯಕ್ಕೂ ಹಿಂತಿರುಗಿದರು. ಒಂದು ಸಲ ಚೆಕಾಲಿನನು ಹತ್ತಿರದ ಒಂದು ಹಳ್ಳಿಗೆ ಹೋಗಬೇಕೆಂದೆಣಿಸಿದನು. ಆದರೆ ಸುತ್ತಲಿನ ಪ್ರದೇಶವೆಲ್ಲವೂ ಜರ್ಮನರಿಂದ ಸುಳಿದಾಡಲ್ಪಡುತಿತ್ತು. ತಮ್ಮ ಬಳಿಯಲ್ಲಿದ್ದ ಕೊಂದ ಜರ್ಮನ್ ಸೈನಿಕರ ಉಡುಪನ್ನು ಧರಿಸಿ ಅವನೂ ಅವನ ಕೆಲ ಸಂಗಾತಿಗಳೂ ಹತ್ತಿರದ ಹಳ್ಳಿಗೆ ಮೆಲ್ಲಗೆ ನುಸುಳಿದರು. ಅಲ್ಲಿ ಅವನ ಸಂಬಂಧಿಕರ ಮನೆಯಿತ್ತು. ಅವರು ಸಂತೋಷದಿಂದ ಚೆಕಾಲಿನನ ಕೂಟವನ್ನು ಬರಮಾಡಿಕೊಂಡು ಊಟ ಉಪಚಾರಗಳಿಂದ ಸತ್ಕರಿಸಿದರು.

ಆದರೆ ನಡುರಾತ್ರೆ ಸುಮಾರಿಗೆ ಕೆಲವು ಜರ್ಮನ್ ಸೈನಿಕರು ಆ ಮನೆಗೆ ಅಕಸ್ಮಾತ್ ಬರುವವರಾದರು. ಕೂಡಲೇ ಚೆಕಾಲಿನನೂ ಅವನ ಸಂಗಾತಿಗಳೂ ನೆಲದ ಮೇಲೆ ಸ್ವಸ್ಥವಾಗಿ ಮಲಗಿಕೊಂಡು ಗಾಢ ನಿದ್ರೆ ನಟಿಸಿದರು. ಜರ್ಮನರು ಮನೆಯೆಲ್ಲವನ್ನೂ ಶೋಧಿಸಿ ಮಲಗಿದ್ದವರು ಯಾರೆಂದು ಕೇಳಿದರು. "ಅವರು ನಿಮ್ಮವರೇ, ದಣಿದು ನಿದ್ರಿಸುತ್ತಾರೆ" ಎಂದರು–ಆ ಬಡ ರೈತರು. ಮತ್ತೆ ನಾಜಿಗಳು ಅವರನ್ನು ಎಬ್ಬಿಸಲು ಮನಸ್ಸು ಮಾಡದೇ

(೧೧ನೇ ಪುಟಕ್ಕೆ ಮುಂದುವರಿದಿದೆ)

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಬೌದ್ಧ ಸನ್ಯಾಸಿಯಾದ ಇಂಗ್ಲಿಷ್ ಸಾಧು
ಹಿಮಾಲಯದಲ್ಲಿ ಅದ್ಭುತ ಯೋಗ್ಯಾಭ್ಯಾಸ
ಜುಗಾರಿ ಆಡುವ ಕಳ್ಳ ಖೂನಿಕಾರ ಸ್ವಾಮಿಗಳು
ಯುದ್ಧವು ಕ್ರೈಸ್ತ ತತ್ವ ವಿರೋಧವಾದುದು

ರಂಗೂನ್ ಬಳಿಯ ಅರಣ್ಯ ಪ್ರದೇಶವೊಂದರಲ್ಲಿ ಒಂದು ಚಿಕ್ಕ ಗುಡಿಸಲು ಇದೆ. ಅದರಲ್ಲಿ ಓರ್ವ ವಿಚಿತ್ರ ಬೌಧ ಸನ್ಯಾಸಿಯು ವಾಸಿಸುತಿದ್ದಾನೆ. ಈಗ ಆ ಪ್ರದೇಶವು ಜಪಾನಿಗಳ ವಶವಾದ್ದುದರಿಂದ ಆತನ ಪರಿಸ್ಥಿತಿಯು ಹೇಗಿದೆ ಎಂದು ತಿಳಿದು ಬರುವುದಿಲ್ಲವಾದರೂ, ಯುದ್ಧಕ್ಕೆ ಮುಂಚೆ ಆತನು ಪ್ರಶಾಂತ ಜೀವನವನ್ನು ಅಲ್ಲಿ ನಡೆಸುತಿದ್ದನು.

ಭಿಕ್ಷು ಪ್ರಜಾನಂದನೆಂದು ಹೆಸರು ಇಟ್ಟುಕೊಂಡ ಆ ಸನ್ಯಾಸಿಯು ಮೇಜರ್ ಚಾರ್ಲ್ಸ್ ಜೆ. ಫ್ಲೆಚರ್ ಎಂಬ ಇಂಗ್ಲಿಷ್ ಸೇನಾಧಿಕಾರಿಯಾಗಿದ್ದ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ತತ್ವ ಶಾಸ್ತ್ರಾಭ್ಯಾಸ ಮಾಡುತಿದ್ದು ಕಡೆಗೆ ಅದನ್ನು ಬಿಟ್ಟು ಯಂತ್ರ ಶಿಲ್ಪಕಲಿತು ಎಂಜಿನಿಯರನಾದ. ಕಳೆದ ಯುದ್ಧದಲ್ಲಿ ಸೈನ್ಯದ ಯಂತ್ರ ಶಾಖೆಯ ಮುಖ್ಯಾಧಿಕಾರಿಯಾಗಿ ಅವನು ಕೆಲಸಮಾಡುತಿದ್ದು ಆ ಯುದ್ಧದ ಭಯಂಕರ ಹತ್ಯಾಖಾಂಡದಿಂದ ಅವನ ಹೃದಯವು ಪರಿವರ್ತನಗೊಂಡಿತು.

ಪ್ರಖ್ಯಾತ ತತ್ವಜ್ಞಾನಿಯೂ ಮತ ಭೋದಕಳೂ ಆಗಿದ್ದ ಎನಿ ಬೆಸೆಂಟ್ ಮಹಿಳೆಯ ಪ್ರಭಾವಕ್ಕೆ ಆಕರ್ಷಿಸಲ್ಪಟ್ಟವನಾಗಿ ಎಂಜಿನಿಯರ್ ಫ್ಲೆಚರನು ಭಾರತಕ್ಕೆ ಬಂದು ಅವಳ ಅನುಯಾಯಿಯಾದನು. ೧೯೨೨ರಲ್ಲಿ ಬೆಸೆಂಟಮ್ಮನವರು ತಿಬೆಟ್ ದೇಶಕ್ಕೆ ಒಂದು ತತ್ವ ಶಾಸ್ತ್ರಾಭ್ಯಾಸದ ಶಿಷ್ಯಮಂಡಳವನ್ನು ಕಳುಹಿಸಲು ಅಪಾರ ಹಣವನ್ನು ಕೂಡಿಸಿದಳು. ತಿಬೆಟಿನ ಬೌಧ ಧರ್ಮ ಗುರುವಾದ ಡಾಲೇ ಲಾಮನಿಗೆ ಅರ್ಪಿಸಲು ಒಂದು ಅಮೂಲ್ಯ ರತ್ನಾಭರಣಗಳ ಸಂಗ್ರಹವೂ ಸಿದ್ಧವಾಯಿತು. ಅಂದು ತಿಬೆಟಿಗೆ ಹೊರಟ ಐವತ್ತು ಮಂದಿ ಉತ್ಸಾಹಿಗಳಲ್ಲಿ ಮಿ। ಫ್ಲೆಚರನೂ ಒಬ್ಬನಾಗಿದ್ದನು.

ಆದರೆ ಅನೇಕ ಸಂಕಷ್ಟಗಳ ಕಾರಣದಿಂದ ತಿಬೆಟಿಗೆ ಹೊರಟ ಐವತ್ತು ಮಂದಿಗಳಲ್ಲಿ ೪೮ ಜನರು ಹಿಂದಕ್ಕೆ ಉಳಿದು ಬಿಟ್ಟು ತಮ್ಮ ಯತ್ನವನ್ನು ಬಿಟ್ಟು ಬಿಟ್ಟರು. ಆದರೆ ಮೆಕ್‌ಗವರ್ನ್ ಎಂಬ ಸ್ಕೊಟ್ಲೆಂಡಿನ ಗೃಹಸ್ಥನೊಡನೆ ಫ್ಲೆಚರನು ಆ ಪ್ರವಾಸವನ್ನು ಮುಂದರಿಸಿದನು. ತಿಬೆಟಿನ ರಾಜಧಾನಿಯಾದ ಲ್ಹಾಸಾ ಪಟ್ಟಣದ ಬುಡಕ್ಕೆ ತಲ್ಪಿದಾಗಲೇ ಇರ್ವ ಬಿಳಿ ಸಂಚಾರಿಗಳಿಗೂ ಎಚ್ಚರಿಕೆ ಕೊಡಲ್ಪಟ್ಟಿತು. ಡಾಲೆ ಲಾಮನು ವಿದೇಶಿಗಳನ್ನು ಸ್ವೀಕರಿಸುವುದಿಲ್ಲವೆಂದು ಬೌಧ ಭಿಕ್ಷುಗಳು ಅವರಿಗೆ ತಿಳಿಸಿದರು.

ಮೆಕ್‌ಗವರ್ನನು ಚೀನೀ ಕೂಲಿಯಂತೆ ವೇಷ ಪಲ್ಲಟಿಸಿ ಲ್ಹಾಸಾ ಪಟ್ಟಣವನ್ನು ಹೊಕ್ಕಾಗ ಹಿಡಿಯಲ್ಪಟ್ಟು ತುರಂಗಕ್ಕೆ ತಳ್ಳಲ್ಪಟ್ಟನು. ಫ್ಲೆಚರನು ಕೆಲ ಬೌಧ ಸನ್ಯಾಸಿಗಳೊಡನೆ ಸ್ನೇಹ ಬೆಳಸಿ ಅಲ್ಲಿಯ ಒಂದು ಮಠದಲ್ಲಿ ಹದಿನೆರಡು ತಿಂಗಳು ಕಳೆದನು.

ಲ್ಹಾಸಾದಲ್ಲಿ ಭಯಂಕರ ದಂಗೆಯೊಂದು ಪ್ರಾರಂಭವಾಗಿ ದಿನೇ ದಿನೇ ಅದು ಅಪಾಯಕಾರಕವಾಗಿ ಹರಡ ಹತ್ತಿದರಿಂದ ಸನ್ಯಾಸಿಗಳು ಫ್ಲೆಚರನನ್ನೂ ಅಲ್ಲಿಂದ ಹೊರಟು ಹೋಗುವಂತೆ ಎಚ್ಚರಿಸಿದರು. ಮಹಾ ಸಂಕಷ್ಟಗಳನ್ನನುಭವಿಸಿ ಆತನು ಡಾರ್ಜಿಲಿಂಗಿಗೆ ಮುಟ್ಟಿದನು ಅಲ್ಲಿನ ಹಿಮಾಲಯದ ಗುಹೆಯೊಂದರಲ್ಲಿ ಅವನಿಗೆ ಒಬ್ಬ ವಿಚಿತ್ರ ಸಾಧುವಿನೊಬ್ಬನ ಸಂಪರ್ಕವಾಯಿತು.

ಫ್ಲೆಚರನಿಗೆ ಸಿಕ್ಕಿದ ಹಿಮಾಲಯದ ಸಾಧುವು ದೊಡ್ಡ ಹಟಯೋಗಿಯಾಗಿದ್ದನು. ಮುಂದೆ ಫ್ಲೆಚರನ ಜೀವನವನ್ನೇ ಬದಲಿಸಿ ಅವನಿಗೆ ಅಧ್ಯಾತ್ಮಿಕ ಶಾಂತಿ ಸಮಾಧಾನವನ್ನು ಕೊಟ್ಟ ಹಿಂದೂ ಮತದ ಆ ವಿಚಿತ್ರ ಯೋಗ ಸಾಧನದ ಪಾಠವು ಅವನಿಂದ ಕೊಡಲ್ಪಟ್ಟಿತು. ಅದರ ಕುರಿತು ಪ್ರಜಾನಂದ ಫ್ಲೆಚರನು ಹೀಗೆ ಬರೆದಿದ್ದಾನೆ:

"ಅದೊಂದು ಅಮೋಘ ದೇಹಿಕ ಸಾಧನೆ. ಹೆಚ್ಚಿನವರು ತಿಳಕೊಂಡಂತೆ ಅದೇನು ಬರೀ ಶಾರೀರಿಕ ಶಕ್ತಿ ಸಾಮಾರ್ಥ್ಯದ ಕಸರತ್ತಲ್ಲ. ನಮ್ಮೊಳಗಿನ ಕಾಮ ಲೋಭ, ಮದ ಮಾತ್ಸರ್ಯಾದಿ ಹೀನ ಮನೋ ಗುಣಗಳನ್ನು ಅದರಿಂದ ಸ್ತಿಮಿತದಲ್ಲಿಟ್ಟುಕೊಳ್ಳಬಹುದು. ಆಹಾರವಿಲ್ಲದೆ ಎಷ್ಟು ದಿನಗಳಾದರೂ ದೇಹವನ್ನು ನಿರಪಾಯವಾಗಿಟ್ಟುಕೊಳ್ಳುವ ಸಾಧನೆಯು ಅದರಲ್ಲಿ ಅಡಗಿ ಕೊಂಡಿದೆ. ಯಾವ ರೀತಿಯಲ್ಲಿ ವನಸ್ಪತಿಗಳು ಮಣ್ಣಿನಿಂದಲೂ, ಸೂರ್ಯನ ಬಿಸಿಲಿನಿಂದಲೂ, ಮತ್ತು ಗಾಳಿ ನೀರುಗಳಿಂದಲೂ ತಮ್ಮ ಬೆಳವಣಿಗೆಗೆ ಬೇಕಾದ ಪೋಷಕ ಪದಾರ್ಥಗಳನ್ನು ಹೀರಿಕೊಳ್ಳುತ್ತವೊ ಅದೇ ರೀತಿಯಲ್ಲಿ ಯೋಗಸಾಧನೆಯಿಂದ ದೇಹ ಬೆಳವಣಿಗೆಯ ಆಹಾರ ದ್ರವ್ಯಗಳನ್ನು ಪಂಚಭೂತಗಳಿಂದ ಶೇಖರಿಸಿಕೊಳ್ಳಬಹುದಾಗಿದೆ.

"ಇದರಿಂದ ನನ್ನ ದೇಹಿಕ ಶಕ್ತಿಯು ಅಭಿವೃದ್ಧಿಗೊಂಡಿತು. ಅದರೊಂದಿಗೆ ಮಾನಸೀಕ ಬಲವೂ ಹೆಚ್ಚಾಯಿತು."

ಈ ಸಾಧನೆಯ ನಂತರ ಫ್ಲೆಚರನು ಅಖಿಲ ಭಾರತ ಪ್ರವಾಸಕ್ಕೆ ಹೊರಟನು. ಕೈಯಲ್ಲೊಂದು ಚೆತ್ತವನ್ನೂ ಭಿಕ್ಷಾಪಾತ್ರವನ್ನೂ ಹಿಡಿದು ಅವನು ಕಲ್ಕತ್ತಾ, ಬೊಂಬ್ಯಾ ಮತ್ತು ಸಿಲೋನ್ ದ್ವೀಪಗಳನ್ನು ಮೂರು ವರ್ಷದ ತನಕ ಸಂಚರಿಸಿದನು. ಈ ಪ್ರವಾಸ ಅವಧಿಯಲ್ಲಿ ಅವನು ಕೆಲ ಶ್ವೇತಾಂಬರ ಜೈನ ಸನ್ಯಾಸಿಗಳ ಜೊತೆಯಲ್ಲಿದ್ದು ಅವರ ಮತ ನೀತಿಗಳನ್ನು ಅಭ್ಯಾಸಿಸಿದನು. "ಅವರು ಕಡು ಸಸ್ಯಹಾರಿಗಳು. ಸೇದುವ ಗಾಳಿಯಲ್ಲಿನ ಸೂಕ್ಷ್ಮ ಜೀವಾಣುಗಳು ಮೂಗಿನೊಳಗೆ ಹೋಗಿ ಕೊಲ್ಲಲ್ಪಡದಂತೆ ಅವರು ಮೂಗಿನ ದ್ವಾರದಲ್ಲಿ ಬಿಳೀ ಬಟ್ಟೆಯೊಂದನ್ನು ಮುಚ್ಚುವರು. ನೀರನ್ನು ಶೋಷಿಸದೆ ಕುಡಿಯರು."

ಅವರನ್ನು ಬಿಟ್ಟು ಫ್ಲೆಚರನು ನಂತರ ಕೆಲ ದಿಗಂಬರ ಜೈನ ಸನ್ಯಾಸಿಗಳ ಗುಂಪಿನಲ್ಲಿ ಸೇರಿ ಕೊಂಡನು. "ದೇಹಕ್ಕೆಲ್ಲಾ ಬರೀ ಬೂದಿ ಬಳಕೊಂಡು ನಗ್ನರೂಪಿಯಾಗಿ ನಾನು ಅವರೊಂದಿಗೆ ಸಂಚರಿಸಿದೆ. ಬುದ್ದನು ಹೇಳಿದಂತೆ ಈ ವಿಧಾನಗಳೆಲ್ಲದರಿಂದ 'ಸೆಗಣಿ ರಾಶಿಯ ಮೇಲೆ ನಡೆದು ಮೋಕ್ಷವನ್ನು ಸೇರಿದಂತೆ' ಎಂದು ನನಗೂ ತೋರಿತು. ಆದುದರಿಂದ ಎಲ್ಲಾ ಮತ ವಿಚಾರಗಳಿಗಿಂತಲೂ ಬೌಧ ಧರ್ಮ ನೀತಿಯೇ ಅತ್ಯಂತ ಪ್ರಗತಿಶೀಲವಾದುದೆಂದು ನನಗೆ ಖಚಿತವಾಯಿತು." ಹೀಗೆಂದು ಅವನು ಬರೆದಿದ್ದಾನೆ.

೧೯೩೦ರಲ್ಲಿ ಫ್ಲೆಚರ್ ಸನ್ಯಾಸಿಯು ಬರ್ಮಾ ದೇಶಕ್ಕೆ ಒಂದು ಮಂಡಾಲೆಯ ಒಂದು ಬೌಧ ಮಠದಲ್ಲಿ ಉಳಕೊಂಡನು. ಆನಂತರದ ವರ್ಷಗಳಲ್ಲಿ ಅವನು ಒಂದೆರಡು ಸಲ ಯುರೋಪಿಗೂ, ಅಮೇರಿಕಕ್ಕೂ ಹೋಗಿ ಬಂದಿದ್ದನು. ಕೊನೆಗೆ ಬಹು ಸಮಯ ಅವನು ಆ ಬೌಧ ಮಠದಲ್ಲೇ ಉಳಿದನು.

"ಈಗಿನ ನಿಮ್ಮ ಜೀವನದಿಂದ ನಿಮಗೆ ಶಾಂತಿ ಸಂತೃಪ್ತಿಗಳು ದೊರಕಿದವೆಯೇ" ಎಂದು ಪ್ರಶ್ನಿಸಲ್ಪಟ್ಟಾಗ ಫ್ಲೆಚರನ ಉತ್ತರ ಹೀಗಿತ್ತು;

"ಖಂಡಿತವಾಗಿಯೂ ಈಗ ನನಗೆ ಸ್ವಲ್ಪ ಆತ್ಮಶಾಂತಿ ದೊರಕಿದೆ. ಇದು ಯಾರಿಗೂ ಸಿಗುವಂತಹುದಲ್ಲ. ನಿಮ್ಮ ಕ್ರೈಸ್ತ ನಾಗರೀಕತೆಯಿಂದ ನಿಮಗೇನು ದೊರಕಿದೆ? ನಿಮ್ಮ ಬಡತನ, ಸಂಕಷ್ಟ, ಮತ್ತು ಈ ಯುದ್ಧಗಳನ್ನು ನೋಡಿರಿ?"

ಬೌಧ ಮತಾನುಯಾಯಿಗಳಾದ ಜಪಾನಿಯರೂ ಇಂದು ರಕ್ತ ಪ್ರವಾಹಗೈಯುತ್ತಿರುವರಲ್ಲಾ ಎಂದು ತಿಳಿಸಲ್ಪಟ್ಟಾಗ ಫ್ಲೆಚರನ ಉತ್ತರ ಗಮನೀಯವಿತ್ತು:

"ಜಪಾನೀಯರ ವಿಚಾರವೇಕೆ? ಇಲ್ಲಿಯ ಬೌಧ ಮಠಗಳನ್ನೇ ಪರಿಶೀಲಿಸಿದರೆ ಇಲ್ಲಿನ ಹತ್ತರಲ್ಲಿ ಒಂಬತ್ತು ಮಂದಿಗಳು ಶುದ್ಧ ವಂಚಕರು. ತಪಸ್ಸು ಪ್ರಾರ್ಥನೆ ಉಪವಾಸಗಳಲ್ಲಿ ದಿನಗಳನ್ನು ಕಳೆಯುವುದರ ಬದಲು ಅವರು ಹೆಂಡ ಕುಡಿಯುವುದರಲ್ಲೂ, ಜುಗಾರಿ ಆಟದಲ್ಲೂ ಮತ್ತಿತರ ಐಹಿಕ ಸುಖೋಪಭೋಗಗಳಲ್ಲೂ

HINDUSTAN CO-OPERATIVE INSURANCE SOCIETY LTD

CALCUTTA. (ESTD. 1907)

BUSINESS IN 1943 Exceeds 5 Crores

APPLICATIONS

for Agencies on liberal Commission are invited for South Kanara & Coorg. Intending Applicants may interview the undersigned at Dr. P. R. Nayak, M.B.B.S., Hospital Road, Udipi on 28th, 29 & 30th April 1945

K. S. Apremaya
Inspector of Agencies.

ಆರೋಗ್ಯ ಭಾಗ್ಯ

ಇಂದು ಮನುಷ್ಯನ ಪ್ರಾಣವನ್ನಪಹರಿಸುವ ಅನೇಕ ಸಾಧನಗಳು ಕಂಡುಹಿಡಿಯಲ್ಪಟ್ಟದ್ದು ಯುದ್ಧದಲ್ಲಿ ಮಿಲಿಯಾಂತರ ಮಾನವ ಜೀವಗಳು ಆಹುತಿಯಾಗುತ್ತಿವೆಯಾದರೂ ವಿಶ್ವ ಇತಿಹಾಸದಲ್ಲಿ ಎಂದಿಗಿಂತಲೂ ದೀರ್ಘ ಅವಧಿಯ ತನಕ ಮನುಷ್ಯನ ಆಯುಷ್ಯವು ಮುಂದುವರಿಸಲ್ಪಟ್ಟಿದೆ ಎಂಬ ಊಹೆಗೆ ಅನೇಕ ಆಧಾರಗಳು ಸಿಗುತ್ತವೆ.

ರಾಮಾಯಣ ಮಹಾಭಾರತ ಕಾಲದಲ್ಲಿ ಜನರು ಸಾವಿರಗಟ್ಲೆ ವರ್ಷ ಬದುಕುತಿದ್ದರೆಂಬ ವಿಷಯದ ಸತ್ಯಾ ಸತ್ಯತೆ ಹೇಗೂ ಇರಲಿ, ತೃಪ್ತಿಕರವಾದ ವಾತಾವರಣದಲ್ಲಿ ವಾಸಿಸುವ ಇಂದಿನ ಮನುಷ್ಯನು ಕೆಲವು ಶತಮಾನಗಳ ಹಿಂದಿನವರಿಗಿಂತಲೂ ಇಂದವನ ಜೀವಾವಧಿಯೂ ಉದ್ದವಾಗಿದೆ ಎಂಬುದಕ್ಕೆ ವೈಜ್ಞಾನಿಕ ಮತ್ತೂ ಇತರ ಅಂಕೆ ಸಂಖೆಗಳ ಪ್ರಮಾಣಗಳಿವೆ.

ಸರ್ವಸಾಮಾನ್ಯವಾಗಿ ಯಾವನಾದರೊರ್ವ ಮನುಷ್ಯನು ಹೆಚ್ಚು ಕಾಲ ಬಾಳಲಾರದೆ ಅಲ್ಪಾವಧಿಯಲ್ಲಿ ಸತ್ತನಾದರೆ ಅಂತಹ ಅಕಾಲ ನಿಧನಕ್ಕೆ ಹೆಚ್ಚು ಸಂದರ್ಭಗಳಲ್ಲಿ ಆ ಮನುಷ್ಯನ ಅಜ್ಞಾನ ಭರಿತವಾದ ಜೀವನಭ್ಯಾಸಗಳೇ ಕಾರಣವೆನ್ನಬೇಕಲ್ಲದೆ ಅದಕ್ಕೆ ಪ್ರಗತಿ ಹೊಂದಿದ ಮತ್ತು ವಿಕಾಸಗೊಂಡ ಆಧುನಿಕ ನಾಗರೀಕತೆಯ ದೋಷಗಳೇ ಕಾರಣವೆನ್ನಲಾಗುವುದಿಲ್ಲ. ಈ ಪ್ರತ್ಯೇಕ ಕ್ಷೇತ್ರದಲ್ಲಿ ಬಹಳ ವರ್ಷಗಳಿಂದ ಪ್ರಯೋಗಗಳನ್ನು ನಡೆಸಿದ ಓರ್ವ ಅಮೇರಿಕನ್ ತಜ್ಞರು ಈ ಕೆಳಗಿನ ಸಾಕ್ಷ್ಯವನ್ನು ಕೊಡುತ್ತಾರೆ:

೧೯೧೦ರಿಂದೀಚೆ ಅಮೇರಿಕನ್‌ನೊಬ್ಬನ ಸರಾಸರಿ ಜೀವನ ಅವಧಿಯು ೧೭ ವರ್ಷಕ್ಕೆ ದೀರ್ಘವಾಗಿದೆ. ಇದು ಅದ್ಭುತ ಸಂಗತಿ. ಅಲ್ಲಿ ಇಂದು ೬೫ ವರ್ಷಕ್ಕೆ ಮಿಕ್ಕಿದವರು ಅಲ್ಲಿನ ೧೪ ಕೋಟಿ ಜನ ಸಂಖ್ಯೆಯಲ್ಲಿ ೧ ಕೋಟಿಯಷ್ಟು ಮಂದಿ ಇದ್ದಾರೆ.

ಈ ವಿಷಯ ಹೇಗೂ ಇರಲಿ. ಇಂದಿನ ವೈದ್ಯಕೀಯ ವಿಜ್ಞಾನದ ಗುರಿ ಏನಿರುವುದೆಂದು ಕೇಳಿದರೆ ಅದು ನಿಮ್ಮ ಜೀವನಕ್ಕೆ ವರ್ಷಗಳನ್ನು ಕೂಡಿಸುವುದು ಮಾತ್ರವಲ್ಲ, ನಿಮ್ಮ ವಯಸ್ಸಿಗೆ ಜೀವನವನ್ನು ತುಂಬುವುದೂ ಅದರ ಮಹತ್ವದ ಧ್ಯೇಯವಾಗಿದೆ.

ಪಾಶ್ಚಾತ್ಯ ವೈದ್ಯರು ಇಂದು ವೃದ್ಧಾಪ್ಯದಲ್ಲಿ ಜನರು ನರಳುತ್ತಿರುವ ರೋಗಗಳನ್ನು ಪರಿಹಾರ ಮಾಡುವುದಕ್ಕಾಗಿ ಪ್ರಯತ್ನಿಸುತ್ತಾರೆ. ಆದರೆ ೫೦, ೬೦, ೭೦ ವರ್ಷಗಳ ನಂತರ ಆರೋಗ್ಯವಂತರಾಗಿರಬೇಕಾದರೆ ತಾರುಣ್ಯದಲ್ಲೇ ನಿಮ್ಮ ಆರೋಗ್ಯದ ಎಚ್ಚರಿಕೆಯನ್ನು ತೆಗೆದು ಕೊಳ್ಳಿರೆಂದು ವೈದ್ಯರು ಒತ್ತಿ ಹೇಳಬಯಸುತ್ತಾರೆ.

ವೃದ್ಧಾಪದಲ್ಲಿ ತೋರಿ ಬರುವ ರೋಗ ಕಾಯಿಲೆಗಳು ಪಕ್ಕನೆ ಅಕಸ್ಮಾತಾಗಿ ಉಂಟಾದುವುಗಳಲ್ಲ. ಅವು ತಾರುಣ್ಯದಲ್ಲಿ ಉದ್ಭವಿಸಿ ಕ್ರಮೇಣ ನಡು ಪ್ರಾಯದಿಂದ ಬೆಳೆದು ಬಂದಂಥವುಗಳು–ವಯಸ್ಸು ಹೋದಂತೆ ಪ್ರಭಲಗೊಂಡು ಪಕ್ಕನೆ ಹೊರ ಬೀಳುತ್ತವೆ.

ಆದುದರಿಂದ ವೃದ್ಧಾಪ್ಯವನ್ನು ಸೇರುವ ಮೊದಲೇ ಆರೋಗ್ಯವಂತ ಅಭ್ಯಾಸಗಳನ್ನು ಪ್ರಾರಂಭಿಸಿರಿ. ತಾರುಣ್ಯವೇ ಅದಕ್ಕೆ ತಕ್ಕ ಸಮಯ. ಆಗಿಂದಾಗ್ಗೆ ನಿಮ್ಮ ದೇಹವನ್ನು ಯೋಗ್ಯ ವೈದ್ಯರಿಂದ ಪರಿಶೀಲಿಸಿ ಕೊಳ್ಳಿರಿ. ಅವರು

(೧೦ನೇ ಪುಟಕ್ಕೆ ಮುಂದುವರಿದುದು.)

ಪ್ರಚಲಿತ ಸಮಾಚಾರ

ನಾಜೀ ಮುಖಂಡರ ಭವಿಷ್ಯ

ಬರ್ಲಿನು ಸುತ್ತುಗಟ್ಟಲ್ಪಟ್ಟಿದೆ. ಇನ್ನು ಬರೀ ಕೆಲವೇ ತಾಸುಗಳಲ್ಲಿ ನಾಜೀ ರಾಜಧಾನಿಯು ವಿಜಯಶಾಲಿ ಕೆಂಪು ದಳಗಳ ಕೈವಶವಾಗುವುದು. ಅಲ್ಲಿಗೆ ಐದು ವರ್ಷಗಳ ಪ್ರಚಂಡ ವಿಶ್ವ ಯುದ್ಧ ಯಾಗವೊಂದು ಕೊನೆಗೊಂಡಂತಾಗುವುದು. ಜಗತ್ತಿನ ಮಹಾ ನಿಪುಣ ವಿಜ್ಞಾನಿಗಳೆನಿಸಿದ ಜರ್ಮನ್ ಜನರು ಆರ್ಯ ಜನಾಂಗತ್ವದ ಶ್ರೇಷ್ಠತೆಯಿಂದ ಮತ್ತರಾಗಿ ಪ್ರಪಂಚವನ್ನು ಗೆಲ್ಲ ಹೊರಟರು. ಜರ್ಮನ್ ಜನಾಂಗವನ್ನು ಭಯಂಕರ ಗೋಳಿಗೆ ಗುರಿಮಾಡಿದ ಆ ನಾಜೀಮುಖಂಡ ಪಾಡೇನಾಗುವುದು? ಈ ಕುರಿತು ಸ್ವಲ್ಪ ಯೋಚಿಸೋಣ.

ನಾಜಿ ನಾಯಕರ ಕುರಿತು ಸುಲಭವಾಗಿ ಈಗ ಭವಿಷ್ಯ ಹೇಳ ಬರುತ್ತದೆ. ಕಾರಣ ಅವರಲ್ಲಿ ಅಗ್ರಗಣ್ಯರಾದವರ ಗುಣವೈಶಿಷ್ಟ್ಯ, ಸ್ವಭಾವ ವಿಶೇಷಗಳು ಜಗತ್ತಿಗೆ ತಿಳಿಯದೆ ಇಲ್ಲ.

ಗೋರಿಂಗ್: ವೇಷ ಭೂಷಣಾಲಂಕಾರ ಪ್ರಿಯನಾದ ಈ ನಾಜೀ ವಿಮಾನ ದಳಾಧಿಪತಿಯು ಗಾತ್ರದಲ್ಲಿ ತನ್ನವರೆಲ್ಲರನ್ನೂ ಮೀಗಿಸುತ್ತಾನೆ. ತನ್ನ ಅಗಾಧ ಶರೀರಾಂಗವನ್ನು ರಕ್ಷಿಸಿಕೊಳ್ಳುವುದಕ್ಕಿಂತ ಹೆಚ್ಚಿನ ಪ್ರೀತಿಯ ವಿಷಯ ಇವನಿಗೆ ಬೇರೆ ಇಲ್ಲ. ಸ್ವಾಭಾವಿಕ ಹೇಡಿಯಾದ ಇತನು ಸ್ವಂತ ಜೀವ ರಕ್ಷಿಸಿಕೊಳ್ಳಲು ಆಗಲೇ ಎಲ್ಲಿಗೊ ತಟಸ್ಥ ದೇಶಕ್ಕೆ ಪರಾರಿಯಾಗಿರುವನಂತೆ. ಅದು ಮುಂಚೆಯೇ ನಿರೀಕ್ಷಿಸಲ್ಪಟ್ಟಿತ್ತು.

ಗೊಬೆಲ್ಸ್: ಇದ್ದುದರಲ್ಲಿ ಧೈರ್ಯವಂತನೆಂದರೆ ಬಾತುಕೋಳಿಯಂತೆ ಮುರುಟು ಕಾಲಿನ ಈ ಪ್ರಚಾರ ಮಂತ್ರಿಯೇ ಸರಿ. ಏನು ವಿಪತ್ತು ಬಂದರೂ ತಾನು ಬರ್ಲಿನ್ ಬಿಟ್ಟುಹೋಗುವುದಿಲ್ಲವೆಂದು ಈತ ಘಂಟಾ ಘೋಷವಾಗಿ ಸಾರಿದ್ದಾನೆ. ವಿಮಾನ ದಾಳಿಯಾಗುವ ಪ್ರದೇಶಕ್ಕೆ ಸ್ವತಃ ಹೋಗಿ ನಾಗರೀಕರನ್ನು ಹುರುಪಿನ ಭಾಷಣದಿಂದ ಇವನು ಹುರಿದುಂಬಿಸುವುದನ್ನು ಅನೇಕರು ಕಂಡಿರುವರು. ರಾಜಧಾನಿಯನ್ನು ಸಂರಕ್ಷಣೆ ಮಾಡುವುದಕ್ಕೆ ಇವನು ಕಡೆ ತನಕ ಹೋರಾಡಿ ಸಾಯುವನು.

ಡಾ| ಲೇ: ಇವನು ಹಿಟ್ಲರನ ಮಜೂರ ಮಂತ್ರಿ. ಸದಾ ಉಚ್ಚ ತರಗತಿಯ ಸಾರಾಯಿಗಳನ್ನು ಕುಡಿದು ಮತ್ತನಾಗಿ ಮಿತ್ರ ಸೆರೆಯಾಳುಗಳನ್ನು ಮೃಗಗಳಂತೆ ಕೆಲಸ ಮಾಡಿಸುವುದರಲ್ಲಿ ಪ್ರಖ್ಯಾತಿ ಪಟ್ಟಿರುವನು. ಕುಡಿತದ ಭರದಲ್ಲೇ ಇವನು ಯಾರೊಂದಿಗಾದರೂ ಜಗಳ ಕೆಣಕಿ ಮಡಿದರೆ ಕೌತುಕವಲ್ಲ.

ರಿಬನ್‌ಟ್ರಾಪ್: ಯುದ್ಧಾರಂಭದಲ್ಲಿ ಇಂಗ್ಲೆಂಡಿನಲ್ಲಿ ಜರ್ಮನ್ ರಾಯಭಾರಿಯಾಗಿದ್ದು ಒಂದು ಕಾಲದಲ್ಲಿ ರಶ್ಯದೊಂದಿಗೆ ರಾಜಿಒಪ್ಪಂದ ಮಾಡಿ ಕೊಂಡ ಇವನು ಕುಡುಕನಲ್ಲದಿದ್ದರೂ ಇವನಿಗೆ ಮಾದಕ ಪದಾರ್ಥಗಳ ದೊಡ್ಡ ವಹಿವಾಟು ಇತ್ತು. ಇಷ್ಟಾದರೂ ಇವನಿಗಿರುವ ಒಂದೇ ಒಂದು ಹೆದರಿಕೆ ಎಂದರೆ ರಶ್ಯನರದು. ಹಿಂದೆ ಹರ್ ಹೆಸ್ಸನು ಇಂಗ್ಲೆಂಡಿಗೆ ಓಡಿ ಬಂದು ರಶ್ಯದ ಮೇಲೆ ಬೀಳುವಂತೆ ಇಂಗ್ಲೆಂಡನ್ನು ಪ್ರೋತ್ಸಾಹಿಸಿದಂತೆ ರಿಬನ್ ಟ್ರಾಪನೂ ಪ್ರಯತ್ನ ಮಾಡಬಹುದು.

ಹಿಮ್ಲರ್: ಹಿಟ್ಲರನಿಂದ ಮಹಾ ಕ್ರೂರ ಕೃತ್ಯಗಳನ್ನು ಮಾಡಿಸಲು ಇವನೇ ಕಾರಣನೆಂದು ಹೇಳಲಾಗಿದೆ. ನಾಜೀ ಪೋಲಿಸ್ ಮುಖ್ಯಾಧಿಕಾರಿಯಾಗಿದ್ದ ಈತನು ಇತ್ತೀಚೆಗೆ ಹಿಟ್ಲರನನ್ನು ಹಿಂದಕ್ಕೆ ತಳ್ಳಿ ಸರ್ವಾಧಿಕಾರತ್ವವನ್ನು ನಡೆಸುತ್ತಿರುವಂತೆ ವರದಿ ಇದೆ. ಈಗ ಸೋಲುವ ಪ್ರಸಂಗದಲ್ಲಿ ಇವನೊಂದು ಸ್ಪೆಶಲ್ ವಿಮಾನದಲ್ಲಿ ದಕ್ಷಿಣ ಅಮೇರಿಕಕ್ಕೆ ಪರಾರಿಯಾಗುವುದನ್ನು ಖಂಡಿತವಾಗಿ ಹೇಳಬಹುದು.

ಹಿಮ್ಲರನ ವಿಷಯವಾಗಿ ಇನ್ನೊಂದು ಊಹೆಯನ್ನು ಮಾಡಬಹುದು. ಕೆಲವು ಪುಂಡ ನಾಜೀಗಳನ್ನು ಒಟ್ಟು ಸೇರಿಸಿ ಇವನು ಮಿತ್ರ ಆಕ್ರಮಣ ಸೈನ್ಯಗಳ ಮೇಲೆ ಬಂಡಾಯ ನಡೆಸಬಹುದು. ಕೊನೆಗೆ ಜರ್ಮನರಿಗೇ ಇವನ ಕಾಟವು ಸಾಕೋ ಸಾಕಾಗಿ ಅವರೇ ಇವನನ್ನೂ ಇವನ ಪುಂಡ ತಂಡವನ್ನೂ ಹುಚ್ಚು ನಾಯಿಗಳಂತೆ ಸಿಕ್ಕ ಸಿಕ್ಕಲ್ಲಿ ಹೊಡೆದು ಕೊಂದು ಹಾಕಬಹುದು.

ನಾಭ್ಯಾಸಗಳನ್ನೂ ಮಾನಸೀಕ ವೃತ್ತಿಯನ್ನೂ ಚೆನ್ನಾಗಿ ಅಭ್ಯಸಿಸಿದವರು ಅವನು ಎಂದಿಗೂ ಆತ್ಮಹತ್ಯ ಮಾಡಿಕೊಳ್ಳಲಾರನೆಂದು ಹೇಳುತ್ತಾರೆ. ಆದರೂ ಸದ್ಯದಲ್ಲೇ ನಾವು ಹಿಟ್ಲರನು ಸ್ವಹತ್ಯಮಾಡಿ ಕೊಂಡ ವರ್ತಮಾನವನ್ನು ಕೇಳಿದರೆ ಆಶ್ಚರ್ಯ ಪಡುವ ಹಾಗಿಲ್ಲ. ಈ ಆತ್ಮಹತ್ಯದ ರೀತಿಯೂ ಅತೀ ವಿಚಿತ್ರ ತರದ್ದಾಗಿರುವುದರಲ್ಲಿ ಸಂದೇಹವಿಲ್ಲ-ಜರ್ಮನರು ಅದೊಂದು ದೈವೀಕ ಲೀಲೆ ಎಂದು ನಂಬುವಷ್ಟರ ಮಟ್ಟಿಕೆ ಆ ಕೃತ್ಯವು ನಿರ್ವಹಿಸಲ್ಪಡಬಹುದು.

ಅಥವಾ ಬೇರೆ ಯಾವ ವಿಧಾನದಿಂದಾದರೂ ಅವನು ತಪ್ಪಿಸಿಕೊಂಡು ಹೋಗಬಹುದೆ? ಆಗಲೇ ಹಿಟ್ಲರನು ತನ್ನಂತೇ ರೂಪಾಕೃತಿಗಳಿರುವ ಹತ್ತಿಪ್ಪತ್ತು ಜನರನ್ನು ಇಟ್ಟು ಕೊಂಡಿದ್ದಾನೆಂದು ಕೇಳಿ



ಜಪಾನರ ಮೃತ್ಯುರಂಗ

ಚಿತ್ರದಲ್ಲಿ ಕಾಣುವಂತಹ ಅಗಾಧ ಗಾತ್ರದ ಫಿರಂಗಿಗಳನ್ನಿಟ್ಟು 14 ನೇ ಸೈನ್ಯದವರು ಸುತ್ತು ಮುತ್ತಲಿನ ಶತ್ರುಗಳಿಗೆ ಮೃತ್ಯುಪ್ರಾಯರಾದರು. ಅವರ ಸಾಹಸವು ಇತಿಹಾಸವನ್ನೇ ಕಲ್ಪಿಸಿದಂತಾಗಿದೆ.

ಹಿಟ್ಲರ್: ಇದು ತನಕ ಮಹಾ ವಿವೇಕಿಯೆಂದು ಪ್ರಖ್ಯಾತನಾದ ಈ ನಾಜೀ ದೈವಸಂಭೂತನು ನಿಜವಾಗಿ ಬುದ್ಧಿವಂತನಾದರೆ ಯಾವುದಾದರೂ ಗುಪ್ತ ಸ್ಥಳದಲ್ಲಿ ಅಡಗಿಕೊಳ್ಳಬೇಕು. ಒಂದು ಕಾಲದಲ್ಲಿ ಪ್ರಚಂಡ ಪ್ರಭಾವದಿಂದ ಅತೀ ಶ್ರೇಷ್ಠ ನಾಗರೀಕತೆಯ ಜರ್ಮನ್ ಜನಾಂಗವನ್ನೇ ಯಾಂತ್ರಿಕ ಶಿಸ್ತಿನಿಂದ ಸೈನೀಕರಣಕ್ಕೆ ಪರಿವರ್ತಿಸಿ ವಿಶ್ವ ಇತಿಹಾಸದಲ್ಲಿ ಅತ್ಯದ್ಭುತದ ಸೈನ್ಯ ವಿಜಯಗಳನ್ನು ನಂಬಲಸಾಧ್ಯವಾದ ಘಟನಾವಳಿಗಳಿಂದ ಸಾಧಿಸಿದ ಫ್ಯೂರರನ ಗುಪ್ತ ಅವಿತುಕೊಳ್ಳುವಿಕೆಯಿಂದ ಭಾವಿ ಜರ್ಮನ್ ಜನಾಂಗವು ಸ್ಫೂರ್ತಿಗೊಳ್ಳುವಂತಾಗಬಹುದು.

ಇಲ್ಲವೆ ಮಿತ್ರ ದಂಡುಗಳಿಂದ ಸುತ್ತಗಟ್ಟಲ್ಪಟ್ಟಾಗ ಜರ್ಮನಿಯನ್ನು ಬೊಲ್ಶೆವಿಕ್ ಪೆಡಂಭೂತದ ಪ್ರಭಾವದಿಂದ ಕಾಪಾಡಲು ಅವತರಿಸಿರುವನೆಂದು ಹೇಳಿಕೊಂಡ ಈ ಆಸ್ಟ್ರೀಯದ ಬಣ್ಣಗಾರನು ತನ್ನ ಸ್ವಂತ ಕಾವಲಿನ ಸೈನ್ಯದೊಂದಿಗೆ ಕೊನೆಯ ಹೋರಾಟ ನಡೆಸಿ ಪ್ರಾಣಾರ್ಪಣ ಮಾಡಲೂಬಹುದು.

ಹಿಟ್ಲರನ ಹಾವಭಾವಗಳನ್ನು ಜೀವದ್ದೇವೆ. ಈಗ ತನ್ನ ತುಂಡು ಮೀಗು ಮೀಸೆಗಳನ್ನು ಕತ್ತರಿಸಿ ಅವನು ಒಂದು ವರ್ಷದ ತನಕ ತಲೆ ತಪ್ಪಿಸಿಕೊಂಡಿದ್ದು ಮತ್ತೆ ರಹಸ್ಯವಾಗಿ ಆತ್ಮಹತ್ಯ ಮಾಡಿಕೊಂಡರೆ ಯಾರಿಗೆ ತಾನೆ ಗುರುತು ಹಿಡಿಯಬಲ್ಲುದು.

ಇತರರು: ಇತರ ಸಣ್ಣ ದೊಡ್ಡ ನಾಜೀ ಮುಖಂಡರು ಏನಾಗುವರು? ಬಹುಶ್ಯ ಅವರು ಮಿತ್ರರಿಗೆ ತಾವಾಗಿ ಸೆರೆಯಾಳುಗಳಾಗಿ ಬಂಧಿವಾಸವನ್ನೊ, ಮರಣ ದಂಡನೆಯನ್ನೊ ಅನುಭವಿಸುವರು. ಹಾಗೆ ಮಾಡದಿದ್ದರೆ ಅವರು ಕಡೆಗೆ ತಮ್ಮ ಸ್ವಂತ ಜನರ ಕೋಪಾಗ್ನಿಗೆ ತುತ್ತಾಗಿ ಜೀವಂತ ಸುಡಲ್ಪಡಲೂ ಬಹುದು ಇಲ್ಲವೆ ಸುಲಿಯಲ್ಪಡಲೂ ಬಹುದು.

ಈಗಾಗಲೇ ನಾಜಿಗಳೊಳಗೆ ಒಡಕುಂಟಾಗಿದೆ. ಅವರು ಒಬ್ಬರನ್ನೊಬ್ಬರು ಕೊಂದು ರಕ್ತಪಾತವನ್ನು ಮಾಡಿಕೊಳ್ಳಬಹುದಾಗಿದೆ. ಹಿಟ್ಲರನು ತನ್ನ ಆಪ್ತರೆಂಬವರ ಮೇಲೇ ಅತ್ಯಂತ ಸಂದೇಹ ದೃಷ್ಟಿಯಿಟ್ಟುಕೊಂಡಿರುವನಂತೆ. ಒಂದು ದಿನ ಅನೀರಿಕ್ಷಿತವಾಗಿ ಯಾವನಾದರೂ ಅವನ ವಿರೋಧ ಪಕ್ಷದ ನಾಜಿಯು ಕೆಲವು ಸಂಗಾತಿಗಳೊಡನೆ ಬರ್ಜೆಸ್ ಗೆಡನ್ ಭವನವನ್ನು ಹೊಕ್ಕು ಹಿಂದೆ ಹಿಟ್ಲರನ ಆಜ್ಞೆಯಿಂದ ಕೊಲ್ಲಲ್ಪಟ್ಟ ಆಸ್ಟ್ರೀಯದ ಸರ್ವಾಧಿಕಾರಿ ಡೊಕ್ಟರ್ ಡೊಲ್ಫಸನಂತೆ ಕೂತ ಮೇಜ ಬಳಿಯಲ್ಲಿ ಪಿಸ್ತೂಲ್ ಗುಂಡುಗಳಿಗೆ ಬಲಿಯಾಗಲೂ ಬಹುದು. ಅಂತೂ ನಾಜಿಗಳ ಅಂತ್ಯ ಸಮೀಪಿಸಿದೆ.

ಫೆಸಿಫಿಕ್ ದ್ವೀಪಗಳ ಬಳಿಯಲ್ಲಿರುವ ಕ್ರೆಕಟೊವಾ ಎಂಬ ಜ್ವಾಲಾಮುಖಿ ಪರ್ವತವು ಸ್ಫೋಟವಾದಾಗ ಅದರೊಳಗಿನಿಂದ ಕೆಸರು ಮತ್ತು ಕರಗಿದ ಲೋಹಗಳು ೩೦ ಮೈಲುಗಳ ಎತ್ತರಕ್ಕೆ ಹಾರಿಸಲ್ಪಟ್ಟವಂತೆ. ಸ್ಫೋಟದ ಶಬ್ದವು ೨೨೫೦ ಮೈಲುಗಳ ದೂರ ಕೇಳಿಸಿತು.

* * *

ಅರೇಬಿಯದ ಮರಳು ಕಾಡಿನ ಪ್ರದೇಶದಲ್ಲಿರುವ ಒಂದು ಜಾತಿಯ ಇಲಿಯು ಜಗತ್ತಿನ ಅತೀ ಚಿಕ್ಕ ಚತುಷ್ಪಾದದ ಪ್ರಾಣಿ. ಅದರ ಎತ್ತರವು ೧ ಅಂಗುಲಗಿಂತಲೂ ಚಿಕ್ಕದು. ಅಮೇರಿಕದ ಇಕ್ವಾಡೊರ್ ದೇಶದಲ್ಲಿ ಹಮ್ಮಿಂಗ್ ಬರ್ಡ್ ಎಂಬ ಪಕ್ಷಿ ಅತೀ ಚಿಕ್ಕದು-ಒಂದು ಜೇನುನೊಣದಷ್ಟಿದೆ.

* * *

THE SARASWATHI PRINTING WORKS, LTD, MANGALORE.

NOTICE

Notice is hereby given that the Ordinary Annual General Meeting of the shareholders of the Company will be held at the Registered Office of the Company at Mangalore, on Sunday the 13th May 1945 at 3 P. M., to transact the following business:–

1. To receive, consider and adopt the Directors' Report and the audited Balance Sheet as at 31st March 1945, the Trading and Profit & Loss Account for the year ending 31st March 1945.
2. To declare a dividend.
3. To elect two Directors in the place of the Directors, viz: Messrs B.Chidanand Rao and K Ramesh Rao, who retire by rotation but are eligible for re-election (under Articles Nos. 118, 119 and 120.)
4. To appoint an Auditor for the year 1945-46 and to fix his remuneration. The last year's Auditor Mr. A. Umanatha Rao, B. A., G. D. A., R. A., is eligible for re-election and is willing to accept the Office.
5. To fix the remuneration of Director for attending the meetings of the Board of Directors or Committee of Directors (under Article No. 99).

It is requested that you will be kind enough to attend the Meeting. If it should be inconvenient for you to do so, you may appoint another shareholder of the Company as your proxy.

The proxy form should be duly filled in and stamped with two one anna revenue stamps, bear your signature and should be deposited at the Registered Office of the Company by 3 P. M., on 10th May 1945.

Notice is also given that the Register of Members of the Company will remain closed from 7th May 1945 to 20th May 1945 (both days inclusive) during which period no transfer of shares will be registered.

(By order of the Board)

(*Sd*). U. Ganesh Shenai,
Manager

Office of the S. P. Works, Ltd.,
Mangalore, 22nd April 1945.

ಕೊಟ್ಟಭಾಷೆಗೆ ತಪ್ಪಬಾರದು

ಸರಕಾರಕ್ಕೆ ಬ್ರಿಟಿಷ ಮಂತ್ರಿಗಳ ಎಚ್ಚರಿಕೆ

ಭಾರತವನ್ನು ನೋಯಿಸಬೇಡಿರಿ

ಭಾರತಕ್ಕೆ ಸ್ವಾತಂತ್ರ್ಯಕೊಡುವುದೇ ಕ್ಷೇಮ

“ಅಧಿಕಾರವನ್ನು ಭಾರತೀಯರಿಗೆ ಬಿಟ್ಟು ಕೊಡುವುದರಲ್ಲೇ ನಮ್ಮ ಸದುದ್ದೇಶಗಳ ಪ್ರದರ್ಶನವನ್ನು ಮಾಡಿ ತೋರಿಸಬಹುದು.” ಹೀಗೆಂದು ಭಾರತ ಉಪ ಮಂತ್ರಿಗಳಾದ ಲೋರ್ಡ್ ಲಿಸ್ಟೊವೆಲ್ ಅವರು ಇಂಗ್ಲೆಂಡಿಗೆ ಪೀಟರ್ಸ್‌ಬೊರೊದಲ್ಲಿ ಜರುಗಿದ ಒಂದು ಯುವಕ ಸಮ್ಮೇಲನದಲ್ಲಿ ತಿಳಿಸಿದರು.

ಸ್ವತಂತ್ರದೇಶಗಳಾದ ರಷ್ಯ ಚೀನಗಳು ತಮ್ಮ ದೇಶಕ್ಕಾಗಿ ಅದೆಂತಹ ಅಮೋಘಶೌರ ಸಾಹಸಗಳನ್ನುತೋರಿರುವರೆಂದು ತಿಳಿಸುತ್ತಾ ಲಿಸ್ಟೊವೆಲ್ ಸಾಹೇಬರು “ಸಕಾರಾತ್ಮಕವೂ ನಿರಾಶಜನಕವೂ ಆದ ಪರಿಸ್ಥಿತಿಯಿಂದ ಭಾರತೀಯರನ್ನು ರಚನಾತ್ಮಕ ರಾಜಕೀಯದ ಕಡೆಗೆ ನಿರ್ಧರಿಸುವ ಭಾರವು ನಮ್ಮದಾಗಿದೆ' ಎಂದು ತಿಳಿಸಿದರು.

ಲೋರ್ಡ್ ಲಿಸ್ಟೊವೆಲ್ಲರು ಮೂರು ಸೂಚನೆಗಳನ್ನು ಕೊಟ್ಟಿರುವರು.

೧. ಭಾರತ ಸರಕಾರದ ಆಡಳಿತ ಜವಾಬುದಾರಿಕೆಯನ್ನು ಬ್ರಿಟಿಷ್ ಮಂತ್ರಿಮಂಡಳದ ಕೈಯಿಂದ ಹೊಣೆಗಾರ ಭಾರತೀಯ ಜನತಾ ಪ್ರತಿನಿಧಿಗಳಿಗೆ ಮಾರ್ಪಡಿಸಬೇಕು.

೨. ರಾಜಕೀಯ ಅಧಿಕಾರವನ್ನು ಬ್ರಿಟನ್ನು ಭಾರತಕ್ಕೇ ಆದಷ್ಟು ಶೀಘ್ರದಲ್ಲಿ ಬಿಟ್ಟು ಕೊಡಬೇಕು. ವೃಥಾ ಕಾಲಹರಣೆ ಮಾಡಿದರೆ ಭಾರತದೊಂದಿಗೆ ನಮ್ಮ ಸಂಬಂಧವು ವಿಷಭರಿತವಾಗುವುದು.

೩. ಭಾರತೀಯ ಮುಖಂಡರೂ ಈ ಉಚ್ಚ ಹೊಣೆಗಾರಿಕೆಯನ್ನು ಸ್ವೀಕರಿಸಲು ಹಿಂದೆ ಸರಿಯಬಾರದು. ತಕ್ಕ ಸಮಯದಲ್ಲಿ ಅವರು ಒಂದು ಒಪ್ಪಂದ ಮನೋಭಾವದಿಂದ ಮುಂದೆ ಬಂದು ದೇಶದ ಜನತೆಯ ಸಂಕಷ್ಟಗಳನ್ನೂ ನೀಗಲೂ ಯತ್ನಿಸಬೇಕು.

ಆಯರ್ಲೆಂಡಿನ ದೃಷ್ಟಾಂತವನ್ನು ತೋರಿಸುತ್ತಾ ಭಾರತ ಉಪಮಂತ್ರಿಗಳು: ‘ಆಯರ್ಲೆಂಡಿಗೆ ನಾವು ಕೊಟ್ಟದ್ದು ಅಲ್ಪ, ಅದನ್ನೂ ಹೊತ್ತು ಮೀರಿ ಕೊಟ್ಟೆವು' ಎಂದು ತಿಳಿಸುತ್ತಾ ಭಾರತದ ವಿಚಾರದಲ್ಲೂ ಹಾಗಾಗ ಬಾರದೆಂದು ಹಾರೈಸಿರುವರು.

“ಭಾರತೀಯರಿಗೆ ನಾವು ಸಿದ್ಧ ಮಾಡಿ ಇಟ್ಟ ರಾಜಕೀಯ ಘಟನೆಯ ಉಡುಪನ್ನು ತೊಡಿಸಲು ಪ್ರಯತ್ನಿಸುವುದಕ್ಕಿಂತ ಅವರಾಗಿಯೇ ತಮಗೆ ಬೇಕಾದ ರೀತಿಯ, ರೂಪಿನ ಮತ್ತು ನಮೂನೆಯ ಉಡುಪನ್ನೇ ಕತ್ತರಿಸಿಕೊಳ್ಳಲಿ.”

ವೆವಲ್ ಮಾತುಕತೆ.

ಪ್ರಾಂತ್ಯಗಳಲ್ಲಿ ಗವರ್ನರ ನಿರಂಕುಶ ಆಡಳಿತೆಯು ಇನ್ನೊಂದು ವರ್ಷದ ತನಕ ಮುಂದುವರಿಸುವಂತೆ ಎಮೆರಿ ಸಾಹೇಬರು ಪಾರ್ಲಿಮೆಂಟಿನ ಅನುಮತಿಯನ್ನು ಕೇಳಿದ ಸಂಗತಿಯಿಂದ ಬ್ರಿಟಿಷ್ ಸರಕಾರಕ್ಕೆ ಭಾರತೀಯ ಬಿಕ್ಕಟನ್ನು ಬಿಡಿಸಲು ಹೆಚ್ಚಿನ ಉತ್ಸಾಹವಿಲ್ಲವೆಂದು ರಾಜಕೀಯ ನೀರೀಕ್ಷಕರು ಅಭಿಪ್ರಾಯಪಟ್ಟುಕೊಂಡಿದ್ದಾರೆ.

ವ್ಯಾಸ್‌ರಾಯ ವೆವಲ್ ಸಾಹೇಬರು ಇನ್ನು ಬ್ರಿಟಿಷ್ ಮಂತ್ರಿಗಳೊಡನೆ ಬಿಕ್ಕಟ್ಟು ಬಗೆ ಹರಿಸುವ ವಿಧಾನಗಳನ್ನು ಚರ್ಚಿಸುತ್ತಿರುವರೆಂದು ಊಹಾಪೋಹಗಳಿವೆ.

ಭಾರತ ರಾಜಕೀಯ ಪರಿಸ್ಥಿತಿಯಲ್ಲಿ ಆಶಾಜನಕ ಮಾರ್ಪಾಟುಗಳಾಗ ಬಹುದೆಂದು ಮಿ. ಎಮರಿಗಳು ಒಂದು ಕಡೆ ತಿಳಿಸಿರುವುದನ್ನು ಬದಲಾಗುತ್ತಿರುವ ಧೋರಣೆಯ ಕುರುಹಾಗಿ ಕೆಲವರು ತೆಗೆದುಕೊಂಡಿರುವರು.

ರಾಷ್ಟ್ರೀಯ ಸರಕಾರ

ಏನಾದರೂ ಇತ್ಯರ್ಥ ಮಾಡುವ ಉದ್ದೇಶದಿಂದ ಭಾರತ ಮಂತ್ರಿಗಳು ರಾಜಕೀಯ ಕೈದಿಗಳೊಂದಿಗೆ ವಿಚಾರ ವಿನಿಮಯ ಮಾಡಲು ಮನಸ್ಸುಳ್ಳವರಾಗಿದ್ದಾರೊ ಎಂದು ಪಾರ್ಲಿಮೆಂಟಿನಲ್ಲಿ ಕೇಳಲ್ಪಟ್ಟಾಗ “ಆ ವಿಷಯ ಕುರಿತು ಇನ್ನು ಆಲೋಚಿಸಬೇಕಾಗಿದೆ.' ಎಂದು ಎಮರಿಯವರು ಕೊಟ್ಟ ಉತ್ತರವು ನಿರಾಶಾದಾಯಕವಾಗಿದ್ದರೂ ಇನ್ನೊಂದು ಪ್ರಶ್ನೆಗೆ ಅದೇ ಸಭೆಯಲ್ಲಿ ಅವರು ವಿಧಾಯಕ ಮಂತ್ರಿಮಂಡಳ ಸ್ಥಾಪನೆಗೆ ತಕ್ಕ ಸಂದರ್ಭಗಳನ್ನು ಕಂಡಾಗ ಆಯಾ ಪ್ರಾಂತ್ಯದ ಗರ್ವನರರು ತಮ್ಮ ಪ್ರಾಂತ್ಯಗಳಲ್ಲಿ ಮಂತ್ರಿ ಮಂಡಳ ಸ್ಥಾಪಿಸಲು ಪ್ರಯತ್ನ ಪಡಬೇಕಾದುದು ಕರ್ತವ್ಯವಾಗಿದೆ' ಎಂದೂ ಹೇಳಿರುವರು.

ಪತ್ರಿಕಾಭಿ ಪ್ರಾಯ

‘ಯಾವ ಪರಿಣಾಮಕಾರಿಯಾದ ಧೋರಣೆಯನ್ನು ವಹಿಸಲಿಕ್ಕೂ ಕೊಂಗ್ರೆಸ್ ಮುಖಂಡರನೇಕರು ಇನ್ನು ಸೆರೆ ಮನೆಯಲ್ಲಿದ್ದಾರೆಂಬ ವಿಷಯವನ್ನು ಗರ್ವನರರು ಲಕ್ಷಿಸಬೇಕು. ಅವರ ಬಿಡುಗಡೆಯಾಗದೆ ವಿಧಾಯಕ ಸಭೆಯಲ್ಲಿ ಬಹುಮತವಿರುವ ಕೊಂಗ್ರೆಸ್ ಪಕ್ಷದವರು ಯಾವ ಧೋರಣೆಯನ್ನೂ ಪರ್ಯಾಲೋಚಿಸಲಾರರು” ಹೀಗೆಂದು ಹಿಂದೂ ಪತ್ರಿಕೆಯ ಅಗ್ರಲೇಖದಲ್ಲಿ ಬರೆದಿದೆ.

ಗಾಂಧಿಜೀಯ ಗುಪ್ತ ಪತ್ರ.

ಕೊಂಗ್ರೆಸು ಅಧಿಕಾರ ಸ್ವೀಕರಿಸಬೇಕೆಂಬ ಅಭಿಪ್ರಾಯ ಪಟ್ಟ ಆಗ್ರಲೇಖವೊಂದನ್ನು ಬರೆದ ಮದ್ರಾಸಿನ ಆ ಪ್ರಮುಖ ದೈನಿಕವು ಗಾಂಧೀಜಿಯವರು ಭೂಲಾಭ್ಯಾ ದೇಸಾಯಿಯವರಿಗೆ ಬರೆದು ಕಳುಹಿಸಿದ ಗುಪ್ತ ಪತ್ರದಲ್ಲಿ ವಿಧಾಯಕ ಚಟುವಟಿಕೆಗಳ ನಿಷ್ಪ್ರಯೋಜಕತೆಯನು ತಿಳಿಸಿರುವರೆಂಬ ಊಹೆಯ ಕುರಿತು ಹೀಗೆ ಬರೆದಿದೆ: ‘ವಿಧಾಯಕ ಚಟುವಟಿಕೆಗಳ ಕುರಿತಾಗಿ ಲಜ್ಜೆ ಪಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದು ಶ್ರೀ ದೇಸಾಯಿಯವರೇ ತಿಳಿಸುತ್ತಾ ಅದಕ್ಕೆ ಸಕಾರಣಗಳನ್ನು ಕೊಟ್ಟಿರುವರು. ವರ್ಕಿಂಗ್ ಕಮಿಟಿಯ ಸದಸ್ಯರು ಬಿಡಲ್ಪಟ್ಟರೆ ಅವರೂ ಶ್ರೀ ದೇಸಾಯಿಯವರಂತೆ ಹೊಸ ಸಂದರ್ಭ, ಪರಿಸ್ಥಿತಿಗಳ ದೃಷ್ಟಿಕೋನದಿಂದ ರಾಜಕೀಯ ಕ್ಷೇತ್ರವನ್ನು ಈಕ್ಷಿಸುವರೆಂದು ನಮ್ಮ ನಂಬಿಕೆ.'

ರೂಸ್‌ವೆಲ್ಟರ ಶವ ಸಂಸ್ಕಾರಕ್ಕೆ ಹೋಗಲಿಲ್ಲದುದಕ್ಕಾಗಿ ಕೆಲವು ಅಮೇರಿಕನ್ ಪತ್ರಿಕೆಗಳು ಚರ್ಚಿಲ್ಲರನ್ನು ಕಡುವಾಗಿ ಟೀಕಿಸಿರುವರು.

೦ ೦ ೦ ೦

(ಜೀವನ ಚಿತ್ರ)

ಜನತೆಯ ‘ಭಾಯಿ'-ಭೂಲಾಭಾಯ್!

ಮಾನವತೆಯ ನ್ಯಾಯಾಲಯದಲ್ಲಿ

“ಒಂದು ಜನಾಂಗವು ಇನ್ನೊಂದರ ಸುಲಿಗೆಗೊಳಗಾಗದೆ ಸ್ವತಂತ್ರವಾಗಿರುವುದೇ ನೈಜ್ಯ ನಾಗರೀಕ ಸ್ವಾತಂತ್ರ್ಯದ ಅಡಿಗಲ್ಲು”-ಶ್ರೀ ಭೂಲಾಭಾಯ್ ದೇಸಾಯಿಯವರ ಬಾಯಿಂದ ಹೊರಟ ಮೌಕ್ತಿಕಗಳಿವು ಕೇವಲ. ಲಾಹೋರಿನಲ್ಲಿ ನಾಗರೀಕ ಹಕ್ಕು ಸ್ವಾತಂತ್ರ್ಯ ಸಂಘದಲ್ಲಿ ಶ್ರೀಯುತರು ಹೇಳಿದ ಮಾತುಗಳಲ್ಲಿ— ಮಾನವತೆಯ ನ್ಯಾಯಾಲಯದಲ್ಲಿ ಆ ಕೊಂಗ್ರೆಸ್ ವಕೀಲರ ಭಾಷಣದ ಸಾರವದು!

ರೂಸ್‌ವೆಲ್ಟರ ಆಶೆಯಂತೆ . . .

ಅಹುದು ಶ್ರೀಯುತರು ದಿವಂಗತ ಅಧ್ಯಕ್ಷ ರೂಸ್‌ವೆಲ್ಟರಂತೆ ಮಾನವತೆಯ ತಳಹದಿ ಮೇಲೆ ತಮ್ಮ ತತ್ವಗಳನ್ನು ಕಟ್ಟುವರು. ಆದುದರಿಂದಲೇ ರೂಸ್‌ವೆಲ್ಟರ “ನಮ್ಮ ವೈರಿಗಳನ್ನು ಜಯಿಸಿದಲ್ಲಿ ಮಾತ್ರ ಸಾಲದು ನಮ್ಮಲ್ಲಿರುವ ಪರಸ್ಪರ ಸಂಶಯ, ಭಯ ಅಜ್ಞಾನ, ಲೋಭ ಇವುಗಳನ್ನು ನಾವು ಸರ್ವ ಶಕ್ತಿಯಿಂದ ಜಯಿಸಬೇಕು.” ಈ ಆಶೆಯನ್ನು ಸ್ವಿಕ್ಟೀಕರಿಸುತ್ತ ಶ್ರೀಯತರು ಅಂದು—“ರೂಸ್‌ವೆಲ್ಟರ ಈ ಮಾತುಗಳಲ್ಲಿ ಏನಾದರೂ ಅರ್ಥವಿದ್ದರೆ ಅದು ಆಳಲ್ಪಡುವ ರಾಷ್ಟ್ರಗಳು ಇನ್ನು ಆಳುವವರ ಕೈ ಕೆಳಗೆ ಇರುವಂತಾದರೆ ಈ ಯುದ್ಧಕ್ಕೆ ಸುರಿಸಲ್ಪಟ್ಟ ರಕ್ತವು ನಿರರ್ಥಕವಾದಂತೇ ಸರಿ, ಹೀಗಿರುತ್ತದೆ.”

ಜನತೆಯಲ್ಲಿ-ಜನತೆಗಾಗಿ

ಇನ್ನೂ ಬಾಲಕನಾಗಿರುವಾಗ ಶ್ರೀಯುತ ಭೂಲಾಭಾಯ್ ದೇಸಾಯಿಯವರು ಗುಜರಾತಿ ಮೂಲಾಕ್ಷರಗಳನ್ನು ಕಲಿಯಲು ದಿನಾಲೂ ಐದು ಮೈಲುಗಳಷ್ಟು ನಡೆಯಬೇಕಿತ್ತು. ಆದುದರಿಂದ ಆಗಿಂದಲೇ ಜನತೆಯೊಡನೆ ಅವರ ಸಂಪರ್ಕವಿತ್ತು; ಮಾನವತೆಯ ಪ್ರೇಮ ಬೆಳೆಯಿತು; ಮುಂದವರು ಬಾರ್ಡೋಲಿ ಕಿಸಾನರೊಡನೆ ಹೇಳಲು ಬಾಧ್ಯರಾದರು: “ನಾನು ಗರೀಬ ಕೃಷಿಕರಲ್ಲಿ ಜನಿಸಿದ್ದು. ನಾನು ಜನತೆಗಾಗಿ ಇರುವೆನು; ಜನತೆಯಲ್ಲಿ ಜೀವಿಸಿರುವೆನು.”

ಆಗ ಶಾಲಾ ರಂಗ ಭೂಮಿ ಈಗ . . . . ?

ಸಾಲೆಯಲ್ಲಿ ಕಲಿಯುತ್ತಿದ್ದಾಗ ಬಾಲಕ ದೇಸಾಯಿಯು ನಾಟಕದಲ್ಲಿ ಪಾತ್ರ ವಹಿಸುತಿದ್ದನು; ಎಷ್ಟೊ ಜನರನ್ನು ಮುಗ್ಧಗೊಳಿಸುತಿದ್ದನು.

ದೇಸಾಯಿಯವರು ಈಗಲು ಅಭಿನಯಿಸುತ್ತಿರುವರು-ಆಗ ಶಾಲಾ ರಂಗ ಭೂಮಿಯಲ್ಲಿ ಅವರ ಅಭಿನಯ. ಈಗವರ ರಂಗ ಭೂಮಿ ಭಾರತ ಭೂಮಿ; ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾಯಕತನದ ಪಾತ್ರ ವಹಿಸಿದ್ದಾರೆ, ವಹಿಸುವರು.

ಬಾಲಕನಾಗಿರುವಾಗ ಶ್ರೀಯುತರ ನಟನೆಯನ್ನು ನೋಡಿ ಬ್ರಿಟಿಷ್ ಮೆಜಿಸ್ಟ್ರೇಟರು ಕೂಡ ತಲೆದೂಗಿರುವರಂತೆ ಈಗ . . . . ?

ಬಿ. ಎ. . . . . ಐ. ಸಿ. ಎಸ್.

ನೋ!

ವಿದ್ಯೆಯಲ್ಲಿ ವಿಶೇಷ ಅಭಿರುಚಿ ಇತ್ತು ಶ್ರೀಯುತರಿಗೆ. ಇತಿಹಾಸದಲ್ಲಿ ಮೊದಲನೇ ಶ್ರೇಣಿಯಲ್ಲಿ ಬಿ. ಎ. ಉತ್ತೀರ್ಣರಾದರು. ಮುಂದೆ ಐ. ಸಿ. ಎಸ್. ಓದ

(೩ನೇ ಪುಟಕ್ಕೆ ಮುಂದುವರಿದಿದೆ)

In the



Swiss Mountains

ಸ್ವಿಟ್ಜರ್‌ಲೆಂಡಿನ ಬೆಟ್ಟಗಳಲ್ಲಿ ಪ್ರಶಾಂತತೆ ನೆಲೆಸಿದೆ. ಕೆಳಗಿನ ಕಣಿವೆ ಪ್ರದೇಶಗಳ ಚಿಕ್ಕ ಊರುಗಳಲ್ಲಿ ಜನರು ಜಗತ್ತಿನ ಅತ್ಯುತ್ತಮ ಗಡಿಯಾರಗಳನ್ನು ತಯಾರಿಸುತ್ತಾರೆ. ಈಗ ಅವು ವೆಸ್ಟ್ ಎಂಡ್ ಮಾದರಿಗಳು ಕಳುಹಿಸಿ ಕೊಡಲ್ಪಡಲು ಕಾಯುತ್ತಿವೆ.

ಆಸುಪಾಸಿನ ಸಮರ ಸಾಗರದಲ್ಲಿ ಏರಿಳಿತಗಳು ಆಗುತ್ತಲೇ ಇವೆ. ಅನೇಕ ಮುಕ್ತ ದೇಶಗಳಲ್ಲಿ ಇನ್ನು ಸರಿಯಾದ ವಾಹನ ಚಲಾವಣೆ ವ್ಯವಸ್ಥೆಯಾಗಿಲ್ಲ.

ತೃಪ್ತಿಕರ ಪರಿಸ್ಥಿತಿ ಸ್ಥಾಪಿಸಲ್ಪಡುವ ತನಕ ಜನಪ್ರಿಯ ನಮ್ಮ ತಯಾರಿಕೆಗಳನ್ನು ಮುಟ್ಟಿಸುವುದು ಅಸಂಭವ ಈಗಿನ ದಾಸ್ತಾನುಗಳು ಅತ್ಯಲ್ಪವಾಗಿವೆ.

ಆದರೂ ನಾವು ಸರ್ವ ಪ್ರಯತ್ನಗಳನ್ನು ಮಾಡುತಿದ್ದೆವೆ. ನಮಗೆ ಈಗ ತಾತ್ಕಾಲಿಕ ವಸ್ತು ಕೊರತೆಯ ಕಾಲ ಬಂದಿದೆ. ನಮ್ಮಿಂದ ತಡೆಯಲು ಸಾಧ್ಯವಿಲ್ಲದೆ ಪರಿಸ್ಥಿತಿಯಿಂದ ಹೀಗಾಗಿರುತ್ತದೆಂದು ನಮ್ಮ ಗಿರಾಕಿಗಳು ತಿಳಕೊಳ್ಳುವರಾಗಿ ನಾವು ನಂಬುತ್ತೇವೆ.

ವೆಸ್ಟ್‌ಎಂಡ್ ವಾಚ್ ಕಂಪೆನಿ ಬೊಂಬ್ಯಾ, ಕಲ್ಕತ್ತಾ.

QUALITY WATCHES

WEST END WATCH Co
BOMBAY . CALCUTTA

Makers of Quality Watches for over 75 Years.

ಜನತೆಯ 'ಬಾಯಿ'— ಭೂಲಾಭಾಯಿ!

(ಹಿಂದಿನ ಪುಟದಿಂದ)

ಲು ಸುಯೋಗವು ದೊರಕುತ್ತು. ಆದರೆ ದೇಸಾಯಿಯವರ ವಾಕ್ಚಾತುರ್ಯದ ವರು ಕೇಳಬೇಕಲ್ಲ. "ಐ. ಸಿ. ಎಸ್. ಓದುವ ಆಶೆಯನ್ನು ಬಿಟ್ಟರೆ ನೀನು ಇನ್ನು ಯೋಗ್ಯ ರೀತಿಯಿಂದ ಜೀವನ ನಡೆಸುವಿ"—ದೇಸಾಯಿಯವರಿಗೆ ವಾತೆ ಯವರ ಉಪದೇಶ.

ಅಕುದು ಹ್ಯಾಕೋರ್ಟ್ ನ್ಯಾಯಾಧಿ ಶರಾಗಲು ಮನವಿಗಳು; Executive Councillorship ನ ಸುಯೋಗ; ನಂತರ ಭಾರತದ ಸರಕಾರದ Law membership—ಸಿವಿಲ್ ಸರ್ವಿಸ್‌ಗಿಂತ ಎಷ್ಟೋ ಮೇಲು!

ಆಗೇ ಕದಮ್

ಮುಂದೆ 'ಆಗೆ ಕದಮ್'. ಭೂಲಾ ಭ್ಯಾ ದೇಸಾಯಿಯವರು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ವಿರೋಧ ಪಕ್ಷದ ಮುಖಂಡರಾಗಿ ಬಂದರು. ಅಲ್ಲಿ ಅವರ ಪ್ರಭೆ ಎಷ್ಟು? ಪ್ರತಿಷ್ಠೆ ಎಷ್ಟು? ಭಾಷಣದ ವಾಗ್ಝರಿ ಎಷ್ಟು—ಪ್ರವಾಹದಂತೆ! ಅವರ ಭಾಷಣಗಳಲ್ಲಿ ಭಾವನೆಯಿದೆ—ಭಾವನೆ ಇದೆ. ಅವರ ಕಾರ್ಯ ಭಾಷಣಗಳು ಮನಸ್ಸಿನ ಮಣ್ಣನ್ನು ಸೇರಲು ಸಮರ್ಥವಾಗಿವೆ.

ಭೂಲಾ ಲಾಯಿ—ವಲ್ಲಭ ಭಾಯಿ

ದೇಸಾಯಿಯವರು ಉದಾರವಾದಿಗಳು. ಕೊಂಗ್ರೆಸಿನಲ್ಲಿ ಅವರ ಪೂರ್ಣ ವಿಶ್ವಾಸ ವಚನಬದ್ಧವಾದದ್ದು. ಅವರು ತೀವ್ರವಾದಿಗಳಲ್ಲಿ ಭೂಲಾ ಬಾಯ್‌ಗಳು ಕ್ರಾಂತಿಯ ಮುಂಚೆ ಬರುವರು; ತಮ್ಮ ಹೆಸರುಗಳಿಂದ ಅದನ್ನು ಪವಿತ್ರಗೊಳಿಸುವರು. ವಲ್ಲಭಭಾಯ್‌ಗಳು ಕ್ರಾಂತಿಯನ್ನು ಕೆರಳಿಸುವರು; ಅದನ್ನು ಅನುಸರಿಸುವರು. ಅದರ ಇಬ್ಬರ ಸಂದೇಶವೂ ಒಂದೇ—ಸ್ವಾತಂತ್ರ್ಯ; ಧ್ಯೇಯ ಒಂದೇ—ಸ್ವಾತಂತ್ರ್ಯ; ಕರ್ತವ್ಯ ಒಂದೇ—ಸ್ವಾತಂತ್ರ್ಯಕ್ಕಾಗಿ ಹೋರಾಡುವುದು!

ಭಾವನಾಮಯಿ ಭೂಲಾ ಭಾಯಿ

ರಾಜಕೀಯದ ಕಠಿಣ ಸಂಗ್ರಾಮದಲ್ಲಿದ್ದರೂ ಶ್ರೀಯುತರ ಹೃದಯವು ಪಾಷಾಣದಂತಾಗಿಲ್ಲ; ಭಾವನೆಗೆ ಅದರಲ್ಲಿ ಎಡೆಯುಂಟು—ಶ್ರೀಯುತರು ಕವಿತಾ ಪ್ರೇಮಿಗಳು, ಪ್ರತಿಷ್ಠೆ—ಪ್ರಶಂಸೆಯು ಒಂದು ಕಾಸು, ಹೆಸರಿಲ್ಲದ ನಿರ್ವಾಸಿತ ಜೀವನ ವಿಡಿ-ಗಿಂತ ಒಳ್ಳೇ ಮೇಲು—ಭಾವನಾಮಯಿ ದೇಸಾಯಿಯವರ ಭಾವನೆ ಅದು!

ವ್ಯಾಕೋಲೆಯ ನೆನಪೇ?

"ಮಹಾಗಟ್ಟಲೆ ಪಟ್ಟಗಳಿಗಿಂತ ಒಂದು ಔನ್ಸ್ ದೈವವಾದವು ಅಧಿಕ ಮೌಲ್ಯದ್ದು" ಶ್ರೀಯುತರು ಭಾರತದಲ್ಲಿ ಸೈಮನ್ ಕಮಿಶನ್ "ಸ್ವಾಗತ" ಪಡೆಯುತ್ತಿದ್ದಾಗ ವಿದ್ಯಾರ್ಥಿಗಳಿಗೆ ಹೇಳಿದ ಸಂದೇಶವದು. ಶ್ರೀಯುತರ ಈ ಸಂದೇಶವನ್ನು ಓದುವಾಗ ಸುಪ್ರಸಿದ್ಧ ವ್ಯಾಕೋಲೆಯು ಒಮ್ಮೆ ಹೇಳಿದ್ದು ನೆನಪಿಗೆ ಬರುವುದು—"ಮಿತ ಲಗೆಸ್ಸಿನ ಒಂದು ಎಕ್ರೆಯು ಸ್ವಪ್ನ ಸಾಮ್ರಾಜ್ಯದ ಸಾಮ್ರಾಜ್ಯದಿಂದಗಿಂತ ಒಳ್ಳೇದು."

ಮುಂದೆ ವಾಸಿಕ ಜೇಲಿನಲ್ಲಿ ಶ್ರೀಯುತರು ತಮ್ಮ ಸಂದೇಶವನ್ನು ಕಾರ್ಯರೂಪಕ್ಕೆ ತಂದರು—ಕಾರಣ ಶ್ರೀಯುತ ಭೂಲಾ ಭಾಯ್—ಜನತೆಯ 'ಬಾಯಿ'—ಭಾಯಿ.

('Forum' ಆಧಾರದ ಮೇಲೆ)

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭವಲ್ಲಿತಿಯಾಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾದರೆ ಬೇಕಾದರೆ ಪ್ರತಿದಿನ ರಾತ್ರೆ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು

BILE BEANS

ಭಾರತದ ವಾರಾಂತ್ಯ ವರದಿಗಳು

ಎರಡು ಜನಾಂಗ ತತ್ವ ತಪ್ಪು—ಬೇಗನೆ ಸ್ವಾತಂತ್ರ್ಯ ಸಿಗುವುದು—ಗಡಿನಾಡಿನ ಬಾದಶಾ—ಸಲಹೆಗಾರರಿಗೆ ಮಾಜಿ ಕೊಂಗ್ರೆಸ್ ಮಂತ್ರಿಗಳ ಸಲಹೆ—ಕೃಷಿ ತೆರಿಗೆ ತಪ್ಪು—ನಮ್ಮ ರೈತರು ಬಡವರು

ಕೊಂಗ್ರೇಸು ನಿರ್ಬಲವಾಗಲಿಲ್ಲ.

೧೯೪೨ರ ಒಗಸ್ಟ್ ನಂತರ ಪ್ರಥಮ ಸಲಕ್ಕೆ ಅಖಿಲ ಗಡಿನಾಡು ಪ್ರಾಂತೀಕ ರಾಜಕೀಯ ಪರಿಷತ್ತು ವರ್ಕಿಂಗ್ ಕಮಿಟಿ ಸದಸ್ಯರಾದ ಡಾ. ಸಯ್ಯದ್ ಮಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಭೂಲಾ ಭ್ಯಾ ದೇಸಾಯಿಯವರೂ ಭಾಗವಹಿಸಿದ್ದರು.

ಭಾರತವು ಸ್ವತಂತ್ರವಾಗದಿದ್ದರೆ ಮೂರನೇ ಮಹಾ ಯುದ್ಧವು ಖಂಡಿತವಾಗಿ ಸಂಭವಿಸುವುದೆಂದು ಹೇಳುತ್ತಾ ಡಾ. ಮಹಮ್ಮದರು "ಹಿಂದೂ ಮುಸಲ್ಮಾನರು ಎರಡು ಜನಾಂಗಗಳೆಂಬ ತತ್ವವು ಶುದ್ಧ ತಪ್ಪಾದುದು. ಮುಗಲರ ಕಾಲದಿಂದಲೂ ಈ ಎರಡು ಮತೀಯರು ಸಾಮರಸ್ಯದಲ್ಲಿ ಬಾಳಿಕೊಂಡಿದ್ದರೆಂಬುದಕ್ಕೆ ಅನೇಕ ಇತಿಹಾಸಿಕ ನಿದರ್ಶನಗಳಿವೆ." ಎಂದರು.

೧೯೪೨ರ ಗಲಭೆ ಕುರಿತು ಮಾತನಾಡುತ್ತ ಡಾ. ಮಹಮ್ಮದವರು "ಈಗ ಕೊಂಗ್ರೆಸು ನಿರ್ಬಲವಾಗಿದೆ. ಅಥವಾ ಮಡಿದು ಹೋಗಿದೆ ಎಂದು ತಿಳಕೊಂಡವರು ಮೂರ್ಖರ ನಡುವಿನಲ್ಲಿ ವಾಸಿಸುತಿದ್ದಾರೆ" ಎಂಬರ್ಥವನ್ನು ಸೂಚಿಸಿದರು.

ಸ್ವಾತಂತ್ರ ಹತ್ತಿರವಾಗಿದೆ

ಗಡಿನಾಡು ಪರಿಷತ್ತಿನಲ್ಲಿ ಧ್ವಜಾರೋಹಣ ಸಮಾರಂಭವನ್ನು ನೆರವೇರಿಸುತ್ತಾ ಭೂಲಾ ಭ್ಯಾ ಅವರು; "ಅನೇಕರು ಎಣಿಸಿರುವುದಕ್ಕಿಂತ ಶೀಘ್ರದಲ್ಲೇ ನಾವು ಸ್ವತಂತ್ರರಾಗುತ್ತೇವೆ." ಎಂದು ಉದ್ಗರಿಸಿದರು.

ತಮ್ಮ ಮತ್ತು ವ್ಯಾಸ್ ರಾಯರೊಳಗಿನ ಮಾತುಕತೆಗಳ ಕುರಿತು ತಿಳಿಸುತ್ತಾ ಶ್ರೀ ದೇಸಾಯಿಯವರು ಹೀಗೆಂದರು. ತತ್ಕಾಲಿಕ ಸರಕಾರವೊಂದರ ಸ್ಥಾಪನೆ ಕುರಿತಾದ ಸಲಹೆಗಳು ಬ್ರಿಟಿಷ್ ಸರಕಾರದ ಮುಂದಿಡಲ್ಪಟ್ಟಿವೆ. ನಿಜ, ಸರಕಾರವೂ ನಮ್ಮ ಸ್ನೇಹಿತರೂ ಇದನ್ನು ಸ್ವೀಕರಿಸಿ ಸಹಕರಿಸುವರೆಂದು ನನ್ನ ಹಾರೈಕೆ. ಆದರೆ ಅಂತಹ ಸರಕಾರವು ಸ್ಥಾಪಿಸಲ್ಪಟ್ಟರೆ ಬ್ರಿಟಿಷರು ಭಾರತೀಯ ಪ್ರತಿನಿಧಿಗಳಿಗೆ ಪ್ರತಿಯೊಂದು ಪರಿಷತ್ತು ಸಭೆ ಅಧಿವೇಶನಗಳಲ್ಲಿ ಇತರ ಜನಾಂಗಗಳಿಗಿದ್ದಷ್ಟೇ ಸಮಾನತೆ ಸ್ವಾತಂತ್ರಗಳನ್ನು ಸಾರಬೇಕು."

ಬಾದಶಾ ಗಫೂರ್ ಖಾನ್

ಗಡಿನಾಡಿನ ಗಾಂಧಿ ಗಫೂರ್ ಖಾನ್‌ರನ್ನು "ಬಾದಶಾ ಖಾನ್" ಎಂದು ಸಂಬೋಧಿಸುತ್ತಾ ಭೂಲಾಬ್ಯಾಯವರು: "ಗಾಂಧೀಜಿ ಮತ್ತು ಖಾನರ ವ್ಯಕ್ತಿತ್ವಗಳು ದೇಶದ ಜನತೆಗೆ ಸ್ಫೂರ್ತಿದಾಯಕವಾದವುಗಳು. ಕ್ರಮ ಕ್ರಮವಾಗಿ ನಾವು ನಮ್ಮ ಉದ್ದೇಶ ಗುರಿಗಳನ್ನು ಮುಟ್ಟಲು ಸಾಧಿಸಬೇಕು ಎಂದರು.

ಗಫೂರ್ ಖಾನರು ಒಂದು ಅರ್ಥಪೂರ್ಣ ಭಾಷಣದಲ್ಲಿ "ಸಂಪೂರ್ಣ ಸ್ವಾತಂತ್ರವೇ ನಮ್ಮ ಗುರಿ. ಆದರೆ ಯುದ್ಧದಲ್ಲಿ ಸೇನಾಪತಿಯು ಪರಿಸ್ಥಿತಿಗನುಸಾರವಾಗಿ ಹಿಂದು ಮುಂದೆ ಸರಿಯುವಂತೆ ನಮ್ಮ ಕಾರ್ಯಕ್ರಮವು ಬೇರೆ ಬೇರೆ ಸಂದರ್ಭಗಳಲ್ಲಿ ಬದಲಾವಣೆಯಾಗಬಹುದು. ಇದುತನಕ ನಾವು ನಮ್ಮ ಧ್ಯೇಯ ಗುರಿಯನ್ನು ತಲುಪಿರದಿದ್ದರೂ ಅದರ ಹತ್ತಿರ ಹತ್ತಿರ ಬಂದಿದ್ದೇವೆಂಬ ಸಂಗತಿಯು ಖಂಡಿತವಾಗಿಯೂ ನಿಜವಾದುದು. ಅಂದಿನ ಪರಿಷತ್ತಿನಲ್ಲಿ ಮಹಾತ್ಮ ಗಾಂಧೀಯವರ ಮುಂದಾಳುತನದಲ್ಲಿ ಭರವಸೆ ವಿಶ್ವಾಸಗಳನ್ನು ಸೂಚಿಸಲಾಯಿತು.

◆ ◆ ◆

ಕೃಷಿ ತೆರಿಗೆ ತಪ್ಪು—ಡಾ. ರಾಜನ್

ಮದ್ರಾಸು ಗರ್ವನರರ ಸಲಹೆಗಾರರಾದ ಸರ್ ನೊರ್ಮನ್ ಸ್ಟ್ರೇಥಿ ಅವರು ತಿರುಚನಾಪಳ್ಳಿಯ ಜಮೀದ್ದಾರರೊಡನೆ ಮುಂದೆ ಜಾರಿಗೆ ತರಬೇಕೆಂದು ಯೋಜಿಸಿರುವ ಕೃಷಿ ತೆರಿಗೆಯ ಕುರಿತು ಪರ್ಯಾಲೋಚಿಸಿದರು.

ಅಂದಿನ ಸಭೆಯಲ್ಲಿ ಮಾಜಿ ಕೊಂಗ್ರೆಸ್ ಮಂತ್ರಿಗಳಾಗಿದ್ದ ಡಾ. ಟಿ. ಎಸ್. ಎಸ್. ರಾಜನ್ ಅವರೂ ಭಾಗವಹಿಸಿದ್ದರು. ಅಂದು ನಡೆದ ಚರ್ಚೆಯಲ್ಲಿ ಗಹನವಾದ ವಿಚಾರಗಳು ಬೆಳಕಿಗೆ ಬಂದು ಡಾ. ರಾಜನರು ಬಡ ರೈತರಪರವಾಗಿ ಸಲಹೆಗಾರರಿಗೆ ಎಚ್ಚರಿಕೆ ಕೊಟ್ಟರು.

"ಜಗತ್ತಿನಲ್ಲಿ ಅತೀ ಹೆಚ್ಚಿನ ಸಂಕಷ್ಟಕ್ಕೆ ಒಳಗಾದ ವ್ಯಕ್ತಿ ಎಂದರೆ ಭಾರತೀಯ ರೈತ. ಅವನ ಆತ್ಮತೃಪ್ತಿಯು ಶೀಕಡಾ ೫೦ ರಷ್ಟು ತೆರಿಗೆ ರೂಪದಲ್ಲಿ ಒಯ್ಯಲ್ಪಡುವುದು. ಇಷ್ಟಿರುವಾಗ ಇನ್ನು ತೆರಿಗೆಯ ಹೊರೆಯನ್ನು ಅವನ ಮೇಲೆ ಹೊರಿಸ ನೋಡುವುದು ಅನ್ಯಾಯವೇ ಸರಿ. ದ. ಭಾರತದ ವ್ಯವಸಾಯಿ ಕೃಷಿಕರು ಜಗತ್ತಿನ ಅತೀ ಬಡ ವ್ಯಕ್ತಿಗಳು. ಅಂಥವರ ಮೇಲೆ ತೆರಿಗೆ ಹೊರಿಸುವಾಗ ಆ ಕುರಿತು ಅವರ ಸ್ಪಷ್ಟ ಅಭಿಪ್ರಾಯವನ್ನು ಪಡೆಯಲಾಗಿದೆಯೋ?" ಎಂದು ಡಾ. ರಾಜನರು ಮಾನ್ಯ ಸಲಹೆಗಾರರನ್ನು ಪ್ರಶ್ನಿಸಿದಾಗ ಅವರು ತಂಜಾವೂರಿನ ರೈತರು ಈ ಯೋಜನೆಯನ್ನು ಸುಸ್ವಾಗತೀಕರಿಸಿರುವರೆಂದು ಅಲ್ಲಿಯ ಜಮೀನ್ದಾರರು ತಿಳಿಸಿರುವುದಾಗಿ ಹೇಳಿದರು.

ಇದು ಬೆಕ್ಕಿನ ಬಾಯಿಗೆ ಬೀಗ ಇಲಿಗೆ ಸಮ್ಮತಿ ಇರುವಂತೆಯೇ ಸರಿ ಎಂಬರ್ಥದಲ್ಲಿ ಮಾತನಾಡುತ್ತಾ ಡಾ. ರಾಜನ್ ಅವರು ಅನೇಕ ಪ್ರತಿಬಂಧಕಾಜ್ಞೆಗಳಿಂದ ತಂಜಾವೂರ ರೈತರ ಧ್ವನಿಯನ್ನು ಉಸಿರು ಕಟ್ಟಿಸಲಾಗಿದೆ ಎಂದೂ, ಆ ಕುರಿತು ಸಿದ್ಧಾಂತ ಮಾಡಿ ತೋರಿಸಲು ತಾವು ಸಿದ್ಧರಿರುವುದಾಗಿಯೂ ಡಾಕ್ಟರ್ ಮಹಾಶಯರು ತಿಳಿಸಿದರು.

WANTED

For the Secondary School at Bajpe South Kanara to be newly opened from June 1945.

1. B. A. L. T. (one)
2. Physical Instructor, preferably secondary trained—one.
3. Drawing Teacher with diploma, preferably higher elementary trained-one.
4. Two Seccondary trained teachers.

Apply sharp, stating salary required.

Correspondent,
Bajpe School,
Post Bajpe, S. K.

ಸಮುದ್ರಾಕ್ರಮಣದ ವಿಚಿತ್ರ ಘಟನೆ

ಕನ್ನಡ ಪ್ರಬಂಧಕ್ಕೆ ಪಾರಿತೋಷಕ—ಪೋಲಿಸ್ ಲೈನ್ ಬಾವಿಯಲ್ಲಿ ತಾಯಿಮಕ್ಕಳ ಶವ—ಶಾಲಾಮಕ್ಕಳಿಗೆ ಊಟ—ಗೇರುಬೀಜ ಕಾರ್ಖಾನೆ ತೊಂದರೆ—ಮುನ್ಸಿಪಲ್ ಸಭೆ—ಹವಾಮಾನ—ರಾಮನವಮಿ ಹನುಮಜಯಂತಿ

ಮಂಗಳೂರು: ಈ ಕೆಳಗೆ ಕಾಣಿಸಿದ ೪೩ ಮಜೂರ ಶಾಲೆಗಳಲ್ಲಿ ಸರಕಾರದವರು ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ಧರ್ಮಾರ್ಥವಾಗಿ ಕೊಡುವುದಾಗಿ ಮಂಜೂರು ಮಾಡಿರುವರು. ತಲಾ ಅರ್ಧಪಾವು ಅಕ್ಕಿಯೂ, ಮತ್ತು ತರಕಾರಿ ಇಲ್ಲವೆ ಧಾನ್ಯದ ಪದಾರ್ಥವೂ ಒಟ್ಟು ಒಂದಾಣೆಗೆ ಮಿಗದಂತೆ ಖರ್ಚು ಮಾಡಲಾಗುವುದು. ಈ ಊಟಗಳನ್ನು ಪೂರೈಸಿ ಕೊಡಲು ಜವಾಬುದಾರಿಕೆ ವಹಿಸಲಿಚ್ಚಿಸುವವರು ಅಂದಾಜ ಖರ್ಚು ಪಟ್ಟಿ ಸಮೇತ ಜಿಲ್ಲಾ ಮಜೂರ ಅಧಿಕಾರಿಗೆ ಟೆಂಡರನ್ನು ಬರುವ ಮೇ ತಾ. ೧೦ರೊಳಗೆ ತಲ್ಪಿಸಬೇಕು. ಆ ಶಾಲೆಗಳು ಕಾಸರಗೋಡು ತಾಲೂಕಿನಲ್ಲಿ: ಪಿಲಿಕೊಡೆ, ತಿರಿಬಾಗಿಲು, ಮಂಜೇಶ್ವರ, ಕುಂಬಳೆ, ಹೊಸದುರ್ಗ ಬಾಡೆ, ದಕ್ಷಿಣ ತ್ರಿಕಾರಪುರ, ಕೊಡಕಾಟ್, ಬೇಲಾ, ಮಂಗಲ್ಪಾಡಿ, ನೀಲೇಶ್ವರ್, ಚೆರ್ವತ್ತೂರ್, ಕಾಸರಗೋಡ್, ಕುದ್ರೆಕೋಡು, ಸರಂಪಾಡಿ, ಕುನ್ನಿಯೆ, ಕೆಜಂಪಾಡಿ, ಎಲೆರಿ.

ಮಂಗಳೂರು ತಾಲೂಕು: ಬೋಳೂರು, ಬೋಳಾರು, ಹಳೆಂಗಡಿ, ಮೂಲ್ಕಿ, ಪಡುಪಣಂಬೂರು, ಕನೋರಿ, ಸೂಟರ್ ಪೇಟೆ, ಕರಿಕಾಡು.

ಉಡುಪಿ: ಆದಿಉಡುಪಿ, ಬ್ರಹ್ಮಾವರ, ಮಲ್ಪೆ, ಬಾರಕೂರು, ಕೊಡವೂರು, ಹಂಗಾರಕಟ್ಟೆ, ತೊಟ್ಟಂ, ಬಡಾನಿಡಿಯೂರು.

ಕುಂದಾಪುರ: ಪೊಡೇರ್ ಹೊಸ್ಕ, ಬೈಂದೂರು, ಗಂಗೊಳ್ಳಿ, ನಾಗೊಡೆ.

ಕಾರ್ಕಳ: ಮೂಡಬಿದ್ರಿ, ಬೈಲೂರು, ಮುಂಡಕೊಡೆ.

ಪುತ್ತೂರು: ಸುಳ್ಯ, ಉಪ್ಪಿ, ವಿಟ್ಲ, ಬಾಗಿಕುಡೆಲು, ಕಾವ್ಯಟೆ.

ನಾಸಿಕ ತ್ರ್ಯಂಬಕಗಳಲ್ಲಿ ಸಧ್ಯದಲ್ಲೇ ಜರಗುವ ಜಾತ್ರೆಗೆ ಯಾತ್ರಿಕರು ರೈಲಿನಲ್ಲಿ ಹೋಗುವುದನ್ನು ಮುಂಬಾಯಿ ಸರಕಾರವು ನಿಷೇಧಿಸಿದೆ. ಆ ಕಾರಣ ನಮ್ಮ ಜಿಲ್ಲೆಯಿಂದ ಹೋಗಲಿರುವ ಯಾತ್ರಿಕರು ಗಮನಿಸಲಿ ಎಂದು ಎಚ್ಚರಿಕೆಯ ಪ್ರಕಟಣೆಯನ್ನು ಜಿಲ್ಲಾ ಕಲೆಕ್ಟರರು ಪ್ರಕಟಿಸಿರುವರು.

ಸ್ಥಳೀಯ ಗೋಕರ್ಣ ದೇವಸ್ಥಾನದ ವಠಾರದಲ್ಲಿ ದ. ಕ. ಜಿಲ್ಲಾ ಮೊಲ್ಯರ ಯಾನೆ ಶ್ರೀ ರಾಮ ಸೇವಾಭಾತೃಭ್ಯುದಯ ಸಂಘದ ೨೦ನೇ ವಾರ್ಷಿಕ ಮಹಾಸಭೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ. ಆರೂರು ವಕೀಲರ ಅಧ್ಯಕ್ಷತೆಯಲ್ಲಿ ಜರುಗಿತು. ಸಮಾಜದ ಕುಶಲ ಕೆಲಸಗಾರರು ತಯಾರಿಸಿದ ಪಾತ್ರೆಗಳ ಮಣ್ಣಿನ ಒಡವೆ ಸಾಮಾನುಗಳ ಆಕರ್ಷಕ ಪ್ರದರ್ಶನವು ಅಂದು ಏರ್ಪಡಿಸಲ್ಪಟ್ಟಿತ್ತು.

ಶಿವ ಕಾಶಿ ನಗರ ಸಭೆಯಲ್ಲಿ ಸುಪರ ವೈಜರಾಗಿದ್ದ ಶ್ರೀ. ರಾಜ ಗೋಪಾಲನ್ ಅವರು ಮಂಗಳೂರು ಮುನ್ಸಿಪಾಲಿಟಿಯ ಜೂನಿಯರ್ ಟೌನ್ ಪ್ಲೆನಿಂಗ್ ಆಫೀಸರರಾಗಿ ಚಾರ್ಜುವಹಿಸಿದರು.

ಕಳೆದ ತಾ. ೧೬ರಂದು ಸೇರಿದ ನಗರಸಭೆಯಲ್ಲಿ ಬೋಳೂರಿನ ವಿಜಾಕರ್ ಗೇರುಬೀಜ ಕಾರ್ಖಾನೆಯ ಸಂಬಂಧವಾಗಿ ಚರ್ಚೆ ನಡೆಯಿತು. ಸದ್ರಿ ಕಾರ್ಖಾನೆಯಿಂದ ಹೊರಬೀಳುವ ಹೊಗೆಯು ಆಸುಪಾಸಿನ ನಿವಾಸಿಕರಿಗೆ ಅಸಹನೀಯವೂ ಅನಾರೋಗ್ಯಕರವೂ ಆಗಿದೆ ಎಂದು ಬಂದ ಅರ್ಜಿಗಳ ಕುರಿತು ಪರ್ಯಾಲೋಚಿಸಲಾಯಿತು. ಆ ಕಾರ್ಖಾನೆಯ ಹೊಗೆ ಕಂಭವು ಈಗಿನದಕ್ಕಿಂತ ಹೆಚ್ಚು ಉದ್ದವಾಗಬೇಕೆಂದೂ, ಕಾರ್ಖಾನೆಯಲ್ಲಿ ಬೀಜ ಸುಡಲು ಕಟ್ಟಿಗೆಯನ್ನಲ್ಲದೆ ಗೇರು ಸಿಪ್ಪೆಯನ್ನು ಉಪಯೋಗಿಸಬಾರದೆಂದೂ ಸೂಚಿಸುವ ನಿರ್ಣಯಗಳಾಗಿ ಈ ಷರ್ತಗಳ ಸಹಿತವೇ ಲೈಸೆನ್ಸ್ ಕೊಡಬೇಕೆಂದು ನಿರ್ಧರಿಸಲಾಯಿತು.

ಮಂಗಳೂರಿನ ಸುಪ್ರಸಿದ್ಧ ವರ್ತಕರಲ್ಲೊಬ್ಬರಾಗಿದ್ದ ಶ್ರೀ. ಉಳ್ಳಾಲ ಸುಬ್ರಾಯ ಪಾಯ್ಸರು ಕಂಬಳದ ಬಳಿಯ ತಮ್ಮ ಮನೆಯಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ವಯಸ್ಸು ೭೩ ಆಗಿತ್ತು. ಅವರ ದುಃಖಿತ ಕುಟುಂಬಕ್ಕೆ ಶಾಂತಿಯನ್ನು ಕೋರುವೆವು.

ನಗರದ ಹವಾಮಾನವು ಉಷ್ಣತೆಯ ಪರಮಾವಧಿಯನ್ನು ತಲುಪಿದಂತೆ ಅನುಭವವಾಗುತ್ತದೆ. ಕೆಲವು ದಿನಗಳ ಹಿಂದೆ ಅಲ್ಪ ಸ್ವಲ್ಪ ಮಳೆಯೂ ಬಿದ್ದಿತ್ತು. ಶ್ವೇಗಿನ ವಾರ್ತೆಯೂ ಕೇಳಿ ಬರುವುದಿಲ್ಲ. ಆದರೆ ಎಪ್ರಿಲ್ ೧೪ಕ್ಕೆ ಅಂತ್ಯವಾಗುವ ವಾರದಲ್ಲಿ ಮೂವರಿಗೆ ಸಿಡುಬು ತಗಲಿದ್ದು ಒಂದು ಮರಣ ಸಂಭವಿಸಿತ್ತಾಗಿ ತಿಳಿದು ಬರುತ್ತದೆ.

ಇದೇ ತಿಂಗಳ ತಾ. ೨೯ರಲ್ಲಿ ಸೆಂಟ್ರೆಂಡ್ ಪೇಟೆಯ ಮೈದಾನಿನಲ್ಲಿ ಸಾಯಂಕಾಲ ೭ ಗಂಟೆಗೆ ಯುದ್ಧ ಪ್ರಚಾರಕ ಸಮಿತಿಯವರು ವಿವಿಧ ಕಾರ್ಯಕ್ರಮದ ಒಂದು ಸಭೆಯನ್ನು ಜರಗಿಸಲಿರುವರೆಂದು ತಿಳಿದು ಬರುತ್ತದೆ.

ಕಸ್ತೂರ್ ಬಾ ನಿಧಿ ಸಮಿತಿಯ ಆಶ್ರಯದಲ್ಲಿ ಹಳ್ಳಿಗಳಲ್ಲಿ ಸೇವಾಕಾರ್ಯ ಮಾಡಲಿಚ್ಚಿಸುವ ಮಹಿಳೆಯರಿಗಾಗಿ ಒಂದು ತರಬೇತಿ ಶಿಬಿರವು ಮೇ ತಿಂಗಳಲ್ಲಿ ಧಾರವಾಡಿನ ಒಂದು ಹಳ್ಳಿಯಲ್ಲಿ ಪ್ರಾರಂಭವಾಗಲಿರುವುದು. ಈ ಜಿಲ್ಲೆಯಿಂದ ನಾಲ್ಕೈದು ಮಹಿಳೆಯರನ್ನು ಸದ್ರಿ ತರಬೇತಿಗಾಗಿ ಆರಿಸಲಾಗುವುದು. ಸೇವಾಸಕ್ತ ಮಹಿಳೆಯರು ಈ ಶ್ಲಾಘನೀಯ ಕಾರ್ಯದಲ್ಲಿ ಮುಂದೆ ಬಂದು ನಿಧಿಯ ಉದ್ದೇಶವನ್ನು ಪೂರೈಸುವರಾಗಿ ಆಶಿಸಲಾಗಿದೆ.

ಗಣಪತಿ ದೇವಸ್ಥಾನ ರಸ್ತೆಯಲ್ಲಿನ ತಮ್ಮ ಮನೆಯಲ್ಲಿ ಹರಿಕೀರ್ತನ ಪ್ರಖ್ಯಾತ ಶ್ರೀ. ಶಿವಾನಂದ ಭಟ್‌ಜಿ ಅವರು ರಾಮನವಮಿ ಮತ್ತು ಹನುಮಂತ ಜಯಂತಿ ಉತ್ಸವಗಳನ್ನು ಯಥಾ ಸಾಂಗವಾಗಿ ನೆರವೇರಿಸಿದರು. ಶ್ರೀ. ಭಟ್‌ಜೀಯವರು ಈ ಉತ್ಸವಗಳನ್ನು ಕೀರ್ತನೆ, ಪಾಠ, ಸಂಗೀತ, ನಾಟ್ಯ, ನಾಟಕ ಕಥೆ, ಉತ್ಸವಾದಿ ರಸವತ್ತಾದ ಕಾರ್ಯಕ್ರಮಗಳಿಂದ ಭಕ್ತವೃಂದವನ್ನು ಸಂತೋಷ ಸಂತೃಪ್ತಿಗಳಿಂದ ತಣಿಸುವುದರೊಂದಿಗೆ ಕಲಾ ಸೇವೆಯನ್ನೂ ಮಾಡುತ್ತಿರುವುದು ಶ್ಲಾಘನೀಯ. ಸದ್ರಿ ಉತ್ಸವಗಳಲ್ಲಿ ಭಾಗವಹಿಸುವವರು ಶ್ರೀಯುತರಿಗೂ ಮತ್ತವರ ಮಂಡಳಿಯವರಿಗೂ ತನುಮನಧನ ಪ್ರೋತ್ಸಾಹಗಳನ್ನು ಕೊಟ್ಟು ಅವರ ಕಾರ್ಯಕ್ರಮವು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಹೊಂದುವಂತೆ ಸಹಕರಿಸುವುದು ಯಥಾ ಯೋಗ್ಯವೆನಿಸುತ್ತದೆ.

ಪಾರಿತೋಷಕ

ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲ್ ಇದರ ಮುಖ್ಯೋಪಾಧ್ಯಾಯರಾದ ಶ್ರೀ. ಎಂ. ವಾಸುದೇವ ರಾವ್, ಎಂ. ಎ. ಎಲ್. ಟಿ ಅವರು ಬರೆದ "ದಕ್ಷಿಣ ಭಾರತದ ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು" ಎಂಬ ಲೇಖನ ಪ್ರಬಂಧಕ್ಕೆ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಪುಸ್ತಕ ಪ್ರೋತ್ಸಾಹನ ಪಾರಿತೋಷಕ ಸಮಿತಿಯವರು ರೂ. ೭೫೦ ಬಹುಮಾನ ಕೊಟ್ಟಿರುವರೆಂದು ತಿಳಿಸಲು ಸಂತೋಷಿಸುತ್ತೇವೆ.

ಕೆಲವು ದಿನಗಳ ಹಿಂದೆ ಉಳ್ಳಾಲದ ಬಳಿಯ ಸಮುದ್ರ ಭಾಗವು ಭರತಿಯ ವೇಳೆ ದಂಡೆ ಮೀರಿ ಉಕ್ಕಿ ಬಂದುದರ ಪರಿಣಾಮವಾಗಿ ಮೊಗವೀರರ ಅನೇಕ ಗುಡಿಸಲುಗಳು ಕೊಚ್ಚಿಕೊಂಡು ಹೋಗಿವೆ ಎಂದು ತಿಳಿದು ಬರುತ್ತದೆ. ಕೆಲವು ಕಡೆ ಗದ್ದೆ ಹೊಲಗಳಲ್ಲೂ ಸ್ವಲ್ಪ ಹಾನಿಯುಂಟಾಗಿದೆಯಾಗಿ ವದಂತಿ.

ಕಳೆದ ತಾ. ೩೩ರಂದು ಮಂಜೇಶ್ವರ ಆಸುಪಾಸಿನಲ್ಲೂ ವಿಪರೀತವಾದ ಸಮುದ್ರಾಕ್ರಮಣವಾಗಿತ್ತು. ಆದರೆ ವಿಶೇಷ ಹಾನಿ ಸಂಭವಿಸಿದ ವರ್ತಮಾನ ಇಲ್ಲ.

ಕುಂಬಳೆಯ ಬಳಿಯಲ್ಲಿಯೂ ಇದೇ ರೀತಿಯಲ್ಲಿ ಸಮುದ್ರವು ಉಕ್ಕಿ ಬಂದು ಬಹಳ ದೂರದ ವರೇಗಿನ ಬೈಲು ಗದ್ದೆ ಹೊಲಗಳನ್ನು ಮುಂಚಿತ್ತಾಗಿ ವದಂತಿ. ಕೆಲವು ಮನೆಮಾರುಗಳು ನಷ್ಟವಾಗಿವೆ.

ಮಂಜೇಶ್ವರದಲ್ಲಿ ತಾ. ೨೦ರಂದು ಶನಿವಾರ ಸಾಯಂಕಾಲ ಅನಿರೀಕ್ಷಿತವಾದ ಘೋರ ಮಳೆ ಸಿಡಿಲುಗಳುಂಟಾಗಿ ಜರುಗಾದ ಸುಂಟರ ಗಾಳಿಯೂ ಇದ್ದುದರಿಂದ ಇಲ್ಲಿನ ಅನೇಕ ಕಡೆಗಳ ರಸ್ತೆ ದಾರಿಗಳಲ್ಲಿ ಮರಗಳು ಉರುಳಿ ಬಿದ್ದಿದ್ದುವು. ಸ್ವಲ್ಪ ಸಮಯದ ವರೆಗೆ ಗಾಡಿ ವಾಹನ ಚಲಾವಣೆಗೆ ಅತಂಕವಾಯಿತೆಂದು ಓರ್ವ ಬಾತ್ಮಿದಾರರು ತಿಳಿಸುತ್ತಾರೆ.

ಮಂಜೇಶ್ವರದವರಾದ ಮಿ॥ ಕೆ. ದೈವಿದ್ ಕುಂಞ ಅವರು ಪೋಲಿಸ್ ಸಬ್ ಇನ್ಸ್‌ಪೆಕ್ಟರರ ತರಬೇತಿ ಮುಗಿಸಿ ಮಲಬಾರಿನ ಕೊಲ್ಲಂಗೋಡ್ ಎಂಬಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಸಂಕ್ಷೇಪ ಸುದ್ದಿ ಸಾರ

ಕೆಲವು ದಿನಗಳ ಹಿಂದೆ ವಾರ್ಧಾದಿಂದ ಬೊಂಬಾಯಿಗೆ ಬರುತ್ತಿರುವ ಮಹಾತ್ಮಾಗಾಂಧಿಯವರ ರೈಲು ಗಾಡಿಯು ಒಂದು ರೈಲ್ವೇ ಜಂಕ್ಷನ್‌ನಲ್ಲಿ ನಿಂತಾಗ ಕಲ್ಕತ್ತಕ್ಕೆ ಹೋಗುತ್ತಿರುವ ಅಮೇರಿಕನ್ ಸೈನಿಕರ ಸ್ಪೆಶಲ್ ರೈಲುಗಾಡಿಯೂ ಅದೇ ಜಂಕ್ಷನ್‌ನಲ್ಲಿ ನಿಂತಿತು. 'ಗಾಂಧಿ ಕೂಟದ ಗಾಡಿ' ಎಂದು ಜೋರ್ದು ಕೂಗುಹಾಕಿದ್ದನ್ನು ನೋಡಿ ಅಮೇರಿಕನ್ ಸೈನಿಕರು ಬಹಳ ಕುತೂಹಲಗೊಂಡು "ಬನ್ನಿರೊ, ಜೀವಮಾನದಲ್ಲಿ ಇದೊಂದು ಅಪರೂಪ ಸಂದರ್ಭ, ಇನ್ನು ಸಿಗಲಾರದು ಗಾಂಧಿಯನ್ನು ನೋಡೋಣ" ಎಂದು ಮಾತಾಡಿಕೊಳ್ಳುತ ಗಾಂಧೀಜಿಯ ಗಾಡಿಯ ಎದುರಾಗಿ ತಮ್ಮ ಗಾಡಿಯನ್ನು ನಿಲ್ಲಿಸಿದರು. ಮಹಾತ್ಮರನ್ನು ನೋಡಿದ ಕೂಡಲೇ ಅವರು ಸಂತೋಷದಿಂದ ಜೈ ಜೈಕಾರ ಮಾಡಿದರು. ಕೆಲ ಸೈನಿಕರು ಗಾಂಧಿಯೊಡನೆ ಸಂಭಾಷಣೆ ಆರಂಭಮಾಡಿದರು:

"ನೀವು ಗಾಂಧಿಯವರೊ?"

"ಹೌದು, ನನ್ನಿಂದೇನು ಸೇವೆಯಾಗಬೇಕು?"

"ನಿಮಗೆ ಇಂಗ್ಲಿಷ್ ಬರುತ್ತದೊ?"

"ಸ್ವಲ್ಪ ತಿಳಿಯುತ್ತದೆ"

ಕಡೆಗೆ ಗಾಂಧೀಜಿ ಸೈನಿಕರಿಗೆ ಪ್ರಶ್ನಿಸಿದರು: "ನಿಮಗೆ ಹಿಂದೂಸ್ಥಾನಿ ಬರುತ್ತದೊ?"

ಒಬ್ಬಿಬ್ಬರು ಅಮೇರಿಕನರು ತಾವು ಕಲಿತ ಹಿಂದೂಸ್ಥಾನಿಯಲ್ಲಿ ಮಾತಾಡ ಪ್ರಯತ್ನಿಸಿದರು. "ಆಪ್ ಕಾ ನಾಮ್ ಕ್ಯಾಹೈ" ಇದಕ್ಕಿಂತಲೂ ಹೆಚ್ಚು ಅವರಿಂದಾಗುವುದಿಲ್ಲ.

ಅಷ್ಟರಲ್ಲಿ ಒಂದು ರೈಲು ಚಲಿಸತೊಡಗಿತು. ಗಾಂಧೀಜಿ ಕೇಳಿದರು "ನಾವು ಚಲಿಸುತ್ತೇವೊ ಅಥವಾ ನೀವು?" ಈ ಪ್ರಶ್ನೆಯಲ್ಲಡಕವಾದ ತತ್ವಾರ್ಥವು ಅಮೇರಿಕನ್ನರಿಗೆ ತಿಳಿಯಲಿಲ್ಲ. ಪುನಃ ಗಾಡಿ ಮೊದಲಿನ ಸ್ಥಳಕ್ಕೇ ಹಿಂದಕ್ಕೆ ಬಂತು. ಸೈನಿಕರೆಂದರು: "ಚಲಿಸಿದ್ದು ನಾವು"

ಗಾಂಧೀಜಿ: "ನೀವು ಇಲ್ಲಿಗೇಕೆ ಬಂದಿರಿ?"

ಸೈನಿಕರು: "ಕೆಲವು ಜಪಾನಿಗಳನ್ನು ಹಿಡಿಯಲು"

ಗಾಂಧಿ: "ಹಾಗಾದರೆ ನೀವು ಬರ್ಮಾಕ್ಕೆ ಹೋಗುವವರೇನು?"

ಸೈ: "ಅದು ಮಿಲಿಟರಿ ರಹಸ್ಯ."

ಅಷ್ಟರಲ್ಲಿ ಗಾಂಧೀಜಿಯ ರೈಲು ಹೊರಟಿತು. ಅಮೇರಿಕನರೆಲ್ಲರೂ "ನಮಸ್ತೆ, ನಮಸ್ತೆ" ಎಂದು ಘೋಷಿಸಿದರು.

○ ○ ○ ○

ನ್ಯೂಯೋರ್ಕಿನ ಒಂದು ಭಾಷಣದಲ್ಲಿ ಶ್ರೀಮತಿ ವಿಜಯಲಕ್ಷ್ಮಿ, ಪಂಡಿತರು ಭಾರತದಲ್ಲಿ ಬ್ರಿಟಿಷ್ ಆಡಳಿತ ಪದ್ಧತಿಯನ್ನು ಖಂಡಿಸುತ್ತಾ "ಭಾರತವು ಸ್ವಸಂತೋಷದಿಂದ ಯುದ್ಧದಲ್ಲಿ ಸೇರಿಲ್ಲ. ಹೀಗೇಕೆ ಈ ರೀತಿಯ ಪರಿಸ್ಥಿತಿಯಾಗಿರುವುದೆಂದು ಅಮೇರಿಕನ್ನರು ಊಹಿಸಿಕೊಳ್ಳಬಹುದು. ನೈತಿಕ ವಿಜಯವಿಲ್ಲದೆ ಶಕ್ತಿಯ ವಿಜಯಕ್ಕೆ ಯಾವ ಅರ್ಥವೂ ಇಲ್ಲ. ಜಗತ್ತಿನಲ್ಲಿ ಹೆಚ್ಚು ಸೌಹಾರ್ದ ಸ್ಥಾಪಿಸುವ ಇಚ್ಛೆಯಿಂದಲೇ ನಾನು ಸ್ಯಾನ್ ಫ್ರಾನ್ಸಿಸ್ಕೊ ಪರಿಷತ್ತಿಗೆ ಹೊರಟಿದ್ದೇನೆ" ಎಂದು ಹೇಳಿದರು.

○ ○ ○ ○

ಮಹಾಬಲೇಶ್ವರದಲ್ಲಿ ಕೃಷ್ಣಾ ನದಿಯು ಉಗಮ ಸ್ಥಾನದ ಬಳಿಯ ಒಂದು ದೇವಸ್ಥಾನವನ್ನು ಸಂದರ್ಶಿಸುವಿರಾ ಎಂದು ಕೇಳಲ್ಪಟ್ಟಾಗ ಮಹಾತ್ಮಾಗಾಂಧಿಯವರು "ಹರಿಜನರಿಗೆ ಪ್ರವೇಶವಿಲ್ಲದ ದೇವಳಕ್ಕೆ ನಾನೆಂದಿಗೂ ಹೋಗಲಾರೆ" ಎಂದರು.

○ ○ ○ ○

ಭಾರತ ಇತ್ಯರ್ಥದ ವಿಷಯದಲ್ಲಿ ಲೋರ್ಡ್ ವೇವಲ್ಲ್ ಮತ್ತು ಎಮೆರಿ ಸಾಹೇಬರೊಳಗೆ ತೀವ್ರವಾದ ಅಭಿಪ್ರಾಯ ಭೇದವುಂಟಾಗಿದೆ ಎಂದು ತಿಳಿದು ಬರುತ್ತದೆ. ಇದರಿಂದ ಲಂಡನ್ ಭಾರತೀಯ ಕೇಂದ್ರಗಳಲ್ಲಿ ನಿರಾಶಾಜನಕ ವಾತಾವರಣವುಂಟಾಗಿದೆ.

○ ○ ○ ○

ಮದುವೆಯಾದ ತರುಣಿಯೋರ್ವಳ ಮೇಲೆ ಅತ್ಯಾಚಾರಮಾಡಿದುದಕ್ಕಾಗಿ ಕಲ್ಕತ್ತದಲ್ಲಿ ಓರ್ವ ಬ್ರಿಟಿಷ್ ನಾವಿಕನಿಗೆ ೧೦ ವರ್ಷದ ಶಿಕ್ಷೆ ವಿಧಿಸಲಾಗಿದೆ.

○ ○ ○ ○

ತಾಯಿಮಗುವಿನ ಶವ

ಕೆಲವು ದಿನಗಳ ಹಿಂದೆ ಕಾರ್ಕಳದ ಪೋಲೀಸ್ ಲೈನಿನ ಬಾವಿಯಲ್ಲಿ ಬ್ರಾಹ್ಮಣ ಜಾತಿಯ ಓರ್ವ ಹೆಂಗಸಿನ ಮತ್ತು ಮಗುವಿನ ಶವಗಳು ಇದ್ದುವು. ಗಂಡನ ಮನೆಯಿಂದ ಬಂಗಾರದ ಆಭರಣವೊಂದನ್ನು ಕಳವು ಮಾಡಿ ತಾಯಿ ಮನೆಗೆ ಹೋಗಿರುವಳೆಂದು ಮೃತಳ ಮೇಲೆ ಪೋಲೀಸ್ ಫಿರ್ಯಾದು ಮಾಡಿದ ಪ್ರಕಾರ ಕಾರ್ಕಳ ಸ್ಟೇಶನ್ ಪೋಲಿಸರು ಆ ಮಹಿಳೆಯನ್ನು ಕೈದು ಮಾಡಿ ತಂದಿದ್ದರೆಂದು ತಿಳಿದು ಬರುತ್ತದೆ. ಪೋಲಿಸ್ ಕೈದಿನಲ್ಲಿದ್ದ ಆಕೆ ಬಾವಿಗೆ ಬೀಳುವಂತೆ ಹೇಗಾಯಿತೆಂಬುದು ರಹಸ್ಯವಾಗಿದ್ದು ಪೋಲಿಸ್ ಸುಪರಿಂಟೆಂಡೆಂಟರೂ ಆ ಕುರಿತು ತನಿಖೆ ನಡೆಸಿರುವರಂತೆ. ಅಧಿಕೃತವಾಗಿ ಯಾವುದೂ ತಿಳಿದು ಬಂದಿಲ್ಲ.

ಮುಲ್ಕಿ

ಮುಲ್ಕಿ ಗೌಡಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿ ಸಹಾಯಕ ಫಂಡಿನ ರಜತ ಮಹೋತ್ಸವವು ಇದೇ ಬರುವ ಮೇ ತಾ. ೭ನೇ ಮಂಗಳವಾರ ದಿವಸ ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ವಠಾರದಲ್ಲಿ ಮಂಗಳೂರು ಎಡ್ವೊಕೇಟ್ ಶ್ರೀ ಕಾರ್ಕಳ ಸದಾಶಿವರಾವ್ ಎಲ್. ಎಲ್. ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿಸುವದಾಗಿ ನಿಶ್ಚಯಿಸಿಯದೆ. ಸದರಿ ಸಮಾರಂಭಕ್ಕೆ ವಿದ್ಯಾಭಿಮಾನಿಗಳೆಲ್ಲರೂ ಸಂಸ್ಥೆಗೆ ಧನ ಸಹಾಯ ಮಾಡಿದ ಮಹನೀಯರೂಗಳೆಲ್ಲರೂ ದಯವಿಟ್ಟು ಬರಬೇಕಾಗಿ ವಿನಂತಿ.

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ವಿಶ್ವ ಪರಿಷತ್ತು ಪ್ರತಿನಿಧಿಗಳು

ಹಿಂದಿನ ವರ್ಸೆಲಿಸ್ ಇಂದಿನ ಫ್ರಿಸ್ಕೊ

ಒಂದು ಕಡೆ ಜಾಲಿಯನ್ ವಾಲಾಭಾಗ್

ಇನ್ನೊಂದು ಕಡೆ ಶಾಂತಿ ಸಂಧಾನ

"ಹಿಂದಿನ ಮಹಾ ಯುದ್ಧಾನಂತರ ಶಾಂತಿ ಪರಿಷತ್ತು ವರ್ಸೆಲಿಸ್‌ನಲ್ಲಿ ಜರಗಿತು. ೧೯೧೮ರ ನವೆಂಬರ ೧೧ರಲ್ಲಿ ಆ ಯುದ್ಧವು ಕೊನೆಗೊಂಡಿತು. ಅನಂತರದ ಶಾಂತಿ ಸಂಧಾನಕ್ಕೆ ೩೦ ಜನಾಂಗಗಳು ೧೯೧೯ರ ಜೂನ್ ೨೮ರಂದು ಒಟ್ಟು ಸೇರಲು ನಿರ್ಧರಿಸಿದರು. ಇಂದು ೧೯೪೫ರಲ್ಲಿ ಎಪ್ರಿಲ್ ೨೫ರಂದು ೪೧ ಜನಾಂಗಗಳು ಸೇನ್ ಫ್ರಾನ್ಸಿಸ್‌ಕೊದಲ್ಲಿ ಸಭೆ ಸೇರಲಿವೆ. ಆದರೆ ಮಧ್ಯಂತರದ ಈ ಇಪ್ಪತ್ತಾರು ವರ್ಷಗಳಲ್ಲಿ ಜಗತ್ತಿನ ಹಲವು ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾದ ಅದ್ಭುತ ಘಟನೆಗಳು ನಡೆದವೆಯಾದರೂ ಶಕ್ತಿ ರಾಷ್ಟ್ರಗಳ ಧೋರಣೆಯಲ್ಲಿ ಯಾವ ಮಾರ್ಪಾಟವೂ ತೋರಿ ಬರುವುದಿಲ್ಲ." ಹೀಗೆಂದು ಬೊಂಬಾಯಿಯ ಪ್ರಸಿದ್ಧ ಲೇಖನವಟುಗಳೂ ಸಿನೆಮಾ ಕಥಾ ಲೇಖಕರೂ, ವಿಮರ್ಶಕರೂ ಆದ ಅಹಮದ್ ಅಬ್ಬಾಸ್ ಅವರು ಒಂದು ಲೇಖನದಲ್ಲಿ ಫ್ರಿಸ್ಕೊ ಪರಿಷತ್ತಿನ ಕುರಿತು ವಿಚಾರಪರ ಸಾಧ್ಯಾಸಾಧ್ಯತೆಗಳನ್ನು ತರ್ಕಿಸಿರುತ್ತಾರೆ.

ವರ್ಸೇಲಿಸ್ ಒಪ್ಪಂದಕ್ಕೆ ಭಾರತದ ಕಡೆಯಿಂದ ಲೋರ್ಡ್ ಸಿನ್ಹಾ ಸಾಹೇಬರೂ ಬಿಕಾನಿರಿನ ಮಹಾರಾಜರೂ ಪ್ರತಿನಿಧಿಗಳಾಗಿ ಹೋದರು. "ಅವರು ಬ್ರಿಟಿಷರ ಪರವಾಗಿ ಬರಿ ವೋಟು ಕೊಡಲು ಹೋದರಲ್ಲದೆ ಭಾರತದ ರಾಜಕೀಯ ಅಭಿವೃದ್ಧಿಗಾಗಿ ಪಿಟ್ಟೆಂಬ ಶಬ್ದವನ್ನು ಅವರೆತ್ತಲಿಲ್ಲ" ಹೀಗೆಂದು ಅಬ್ಬಾಸರು ಬರೆಯುತ್ತಾರೆ. "ವರ್ಸೇಲೀಸ್ ಪರಿಷತ್ತಿಗೆ ಏರ್ಪಾಡುಗಳು ಫ್ರಾನ್ಸಿನಲ್ಲಾಗುತಿದ್ದಾಗ ಇತ್ತ ಜನರಲ್ ಒಡ್ವಾಯರರು ಮಾರ್ಚ್ ೧೯. ೧೯೧೯ರಂದು ಭೀಕರ ಜಾಲಿಯನ್ ವಾಲಾ ಭಾಗ್ ಹತ್ಯಾ ಕಾಂಡವನ್ನು ಮಾಡಿ ವಿಶ್ವ ಶಾಂತಿಯಿಂದ ಭಾರತಕ್ಕೆ ಮುಂದೆ ಸಿಗಲಿರುವ ಸುಧಾರಣೆಗಳ 'ಸೆಂಪಲ'ನ್ನು ತೋರಿಸುವವರಾದರು."

"ಇತ್ತ ಅಮೃತ ಸರದ ಮಾರ್ಗಗಳಲ್ಲಿ ನಮ್ಮ ಭಾರತೀಯರು ಮಾರ್ಗದಲ್ಲಿ ಹೊರಲಾಡಿ ಹರಿದು ಹೋಗುತ್ತಿರುವಾಗ ಅತ್ತ ಜೂನ್ ೨೮ರಂದು ಭಾರತದ 'ಪರವಾಗಿ' ಭಾರತದ ಪ್ರತಿನಿಧಿಗಳು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು" ಹೀಗೆಂದು ಅಬ್ಬಾಸರು ಬರೆಯುತ್ತಾರೆ.

ಇಂದಿನವರ ಯೋಗ್ಯತೆ ಏನು?

ಫ್ರಿಸ್ಕೊ ಪರಿಷತ್ತಿಗೆ ಇಂದು ವ್ಯಾಸ್ ರಾಯರಿಂದ ಭಾರತದ ಪ್ರತಿನಿಧಿಗಳೆಂದು ಚುನಾಯಿಸಲ್ಪಟ್ಟವರಲ್ಲಿ ಸರ್ ರಾಮಸ್ವಾಮಿ ಮೊದಲಿಯಾರರೇ ಪ್ರಮುಖರು. ಇವರು ಮದ್ರಾಸಿನವರು. ಕೊಂಗ್ರೆಸ್ ವಿರೋಧಿಯಾಗಿ ಬ್ರಾಹ್ಮಣ ಅಬ್ರಾಹ್ಮಣ ಭೇದಾ ಭೇದದ ಮೇಲೆ ಕಟ್ಟಲ್ಪಟ್ಟ ಜಸ್ಟಿಸ್ ಪಾರ್ಟಿಯ ಪ್ರಾರಂಭಕರಲ್ಲಿ ಇವರೊಬ್ಬ ಅಗ್ರಗಣ್ಯರು. ಎಡ್ವೊಕೇಟರಾಗಿ ಅಭ್ಯಾಸ ಮಾಡುತ್ತಿದ್ದು ಬ್ರಿಟಿಷ್ ಸರಕಾರದ ಪ್ರಭಾವಪೂರ್ಣ ಬೆಂಬಲಿಗರು. ಪರಿಣಾಮವಾಗಿ ಹುದ್ದೆಯಿಂದ ಹುದ್ದೆಗೆ ಏರಿಸಲ್ಪಟ್ಟು ಇಂದಿನ ಪ್ರತಿನಿಧಿ ಮುಖಂಡರಾಗಿದ್ದಾರೆ ಎಂದು ಅಬ್ಬಾಸರು ಬರೆಯುತ್ತಾರೆ.

ಫಿರೋಜ್ ಖಾನರು

ಇವರು ಆಲಿಘರ್ ಮುಸ್ಲಿಂ ವಿಶ್ವ ವಿದ್ಯಾಲಯದ ವಕೀಲ ವಿದ್ಯಾರ್ಥಿಗಳು ಮೊದಲಿಯಾರರಂತೆ ಈ ಪಂಜಾಬಿಗಳು ವಕಾಲತು ವೃತ್ತಿ ಸಾಗಿಸುತಿದ್ದು ಬ್ರಿಟಿಷ್ ಸಾಮ್ರಾಜ್ಯದ ದೊಡ್ಡ ಹಿತ ಚಿಂತಕರಾಗಿ ಬ್ರಿಟಿಷರ ಒಳ್ಳೇ ನಡತೆಯ ಶಿಫಾರಸು ಪುಸ್ತಕದಲ್ಲಿ ಗಣಿಸಲ್ಪಟ್ಟರು. ಅಲ್ಲಿಂದ ಮತ್ತೆ ಹಿರಿಯಹುದ್ದೇದಾರರಾಗಿ ಇಂಗ್ಲೆಂಡಿನಲ್ಲಿ ಭಾರತದ ಹ್ಯಾಕಮಿಶನರಾಗಿದ್ದು ಮತ್ತೆ ವ್ಯಾಸ್ ರಾಯರ ಸಲಹೆಗಾರರಾಗಿ ಕರೆಯಲ್ಪಟ್ಟರು.

ಕೆಲವು ಕಾಲ ಫಿರೋಜ ಖಾನ್‌ರವರು ಜಿನ್ನರ ಮುಸ್ಲಿಂ ಲೀಗಿನ ಧ್ಯೇಯ ಧೋರಣೆಗಳಿಗೆ ಬಹಳ ಧೈರ್ಯದ ಸಮರ್ಥನೆ ಕೊಟ್ಟು ಮಾತಾಡಿದರು. ಆದರೆ ಲೀಗಿನ ಧ್ಯೇಯ ಧೋರಣೆಗೆ ವಿರೋಧವಾಗಿ ಇಂಡಿಯಾ ಸರಕಾರದಲ್ಲಿ ಹುದ್ದೆ ಸ್ವೀಕರಿಸಿದ ನಂತರ ಜಿನ್ನರಿಗೂ ಇವರಿಗೂ ಸ್ವಲ್ಪ ಅಪ್ಪಸ್ಪೇ.

ಮೇಲಿನವರಂತೆ ಸರ್ ಟಿ. ಟಿ. ಕೃಷ್ಣಮಾಚಾರರು ಬರೋಡದ ದಿವಾನರಾಗಿಯೂ ಇತರ ಅನೇಕ ಸರಕಾರಿ ಸಮಿತಿಗಳಲ್ಲೂ ಕೆಲಸ ಮಾಡಿ ಬ್ರಿಟಿಷ್ ಸಾಮ್ರಾಜ್ಯದ ಬಿರುದುಂಕಿತರಾಗಿದ್ದಾರೆ.

"ಈ ಮೂವರು ಎಂದೂ ದೇಶ ಭಕ್ತಿಯವರೆಂದು ಆರೋಪಿಸಲ್ಪಟ್ಟವರಲ್ಲ. ಚುನಾವಣೆಗೆ ಕೂಂಗ್ರೆಸ್ ವಿರೋಧವಾಗಿ ನಿಂತು ಸರ್ ಮೊದಲಿಯಾರರು ಸೋತು ಹೋದವರು ಭಾರತದ ರಾಜಕೀಯದಲ್ಲಿ ಬ್ರಿಟಿಷ್ ಸರಕಾರದ ಸಹಾನುಭೂತಿಯಿಂದಲ್ಲದೆ ಬೇರೆ ಯಾವ ಹಕ್ಕು ಭಾಧ್ಯತೆಯಿಂದ ಇವರು ಜನರ ಪರವಾಗಿ ಮಾತನಾಡಲರ್ಹರಲ್ಲ" ಹೀಗೆಂದು ಅಬ್ಬಾಸರ ಅಭಿಪ್ರಾಯ.

ಅಮೇರಿಕದಲ್ಲಿ ಚಳವಳ

ಸೇನ್ ಫ್ರಾನ್ಸಿಸ್‌ಕೊ ನಗರದಲ್ಲಿ ಡಾಕ್ಟರ್ ಅನೂಪ್ ಸಿಂಗ್ ಅವರು ಶ್ರೀಮತಿ ವಿಜಯಿ ಲಕ್ಷ್ಮಿಯವ ಸಾರ್ವಜನಿಕ ಭಾಷಣವನ್ನು ಏರ್ಪಡಿಸಿರುವರು. "ಇಂದು ಫ್ರಿಸ್ಕೊ ಪರಿಷತ್ತಿಗೆ ಭಾರತದ ಪರವಾಗಿ ಕಳುಹಲ್ಪಟ್ಟ ಈ ಮೂವರು ಚುನಾವಣೆಗೆ ನಿಂತಿದೆ ಸಾಮಾನ್ಯ ಕೊಂಗ್ರೆಸಿಗರ ಎದುರಿನಲ್ಲಿ ಸಂಪೂರ್ಣ ಸೋಲುವರು" ಹಿಂಗೆಂದು ಡಾಕ್ಟರ್ ಸಿಂಗರು ಹೇಳುತ್ತಾರೆ. "ನಾನೂ ಶ್ರೀಮತಿ ಪಂಡಿತರೂ ಭಾರತದ ಪರಿಸ್ಥಿತಿ ಅಪಾಯಕಾರಕವಾಗಿದೆ' ಎಂದು ಜ್ಞಾಪಿಸಲು ಪ್ರಯತ್ನಿಸುತ್ತೇವೆ ಎಂದು ಅವರು ಅಂದಿರುವರು. "ಇಂಥಹ ಪ್ರಾತಿನಿಧ್ಯವನ್ನು ಕಳುಹಿಸುವುದರ ಬದಲಿಗೆ ಪ್ರಾತಿನಿಧ್ಯವಿಲ್ಲದಿರುತಿದ್ದರೇ ಹೆಚ್ಚು ಒಳ್ಳೆದಿತ್ತು." ಎಂದು ಸಂಕ್ಷೇಪವಾಗಿ ಮಹಾತ್ಮರು ಫ್ರಿಸ್ಕೊ ಕುರಿತು ಹೇಳಿದ ಅಭಿಪ್ರಾಯವೆಂದು ಸಾರಿರುವರು.

ಅಂತೂ ಅನೂಪಸಿಂಗರು ಹೇಳಿದಂತೆ "ಅವರಿಗೆ ಲಂಡನಿನಿಂದ ಸೂಚನೆಗಳು ಬರುತ್ತವೆ. ಬ್ರಿಟಿಷ್‌ರು ಬೇಡವೆಂದುದಕ್ಕೆ ಅವರು ಎಂದಿಗೂ ವಿರೋಧ ವೋಟು ಕೊಡರು' ಭಾರತದ ಪ್ರತಿನಿಧಿಗಳು ಹಾಗೆ ಮಾಡದಿರಲೆಂದು ಒಂದು ಪತ್ರಿಕೆ ಹಾರೈಸುತ್ತದೆ.

ಜಿಲ್ಲಾ ಸಮಾಚಾರ

ಮುನ್ಸಿಪಲ್ ಕೌನ್ಸಿಲ್ ಮೀಟಿಂಗ್

ಕಳೆದ ಸೋಮವಾರ ಸಂಜೆ ಮುನಿಸಿಪಲ್ ಸಭೆ ಅದರ ಕಾರ್ಯಾಲಯದಲ್ಲಿ ಮು. ಚೆಯರ್‌ಮ್ಯಾನರ ಅಧ್ಯಕ್ಷತೆಯಲ್ಲಿ ಸೇರಿತ್ತು. ಇದೊಂದು ವಿಶೇಷ ಸಭೆಯಾಗಿತ್ತು.

ಹಿಂದಿನ ಮು। ಕೌ। ಮೀಟಿಂಗಿನಲ್ಲಿ ಇಲ್ಲಿಯ ಮೆ. ಮಿಜಾರ್‌ಕಾರರ ಗೇರುಬೀಜ ಕಾರ್ಖಾನೆಗೆ ಲೈಸನ್ಸ್ ಕೊಡುವ ಕುರಿತೂ ಆ ಕಾರ್ಖಾನೆಯಿಂದ ಹೊರಬರುವ ಹೊಗೆಯಿಂದ ನಿವಾಸಿಗಳಿಗೆ ಉಂಟಾಗುವ ತೊಂದರೆಗಳ ಸಂಬಂಧವಾದ ದೂರಿನ ಕುರಿತೂ ಚರ್ಚೆ ನಡೆದು ಯಾವ ಶರ್ತಗಳ ಮೇಲೆ ಲ್ಯಾಸನ್ಸ್ ಕೊಡಬಹುದೆಂಬೀ ವಿಚಾರದಲ್ಲಿ ಕೌನ್ಸಿಲು ಒಂದು ಠರಾವು ಮಂಜೂರು ಮಾಡಿತ್ತು. ಆದರೆ ಈ ಠರಾವನ್ನು ಜಾರಿಗೆ ತರುವಲ್ಲಿ ತನಗಿರುವ ಸಂಶಯಗಳನ್ನು ಮು॥ ಹೆಲ್ತ್ ಆಫೀಸರರು ಸೂಚಿಸಿದ ಕಾರಣವೂ ಆ "ಠರಾವು ಕ್ರಮವಾಗಿಲ್ಲ" ವೆಂದು ಅವರು ತಿಳಿಸಿದ ಕಾರಣವೂ ಅವನ್ನು ವಿಚಾರಿಸಿ ತೀರ್ಮಾನಿಸಲು ಈ ಸ್ಪೆಶಲ್ ಮೀಟಿಂಗ್ ಕರೆಯಲಾಗಿತ್ತು.

ಮೀಟಿಂಗಿನ ಚರ್ಚೆಯಲ್ಲಿ ಹಲವು ಮಂದಿ ಸದಸ್ಯರು ಭಾಗವಹಿಸಿದ್ದರು. ಹಿಂದೆ ಮಾಡಿದ ಆ "ಠರಾವು ಕ್ರಮವಾಗಿದೆ" ಎಂಬ ಕುರಿತಾಗಿ ಮಿ. ಸಿ. ಎಲ್. ಲೋಬರು ತಂದ ಇನ್ನೊಂದು ಠರಾವು ಮಂಜೂರಾಗುವ ಮುನ್ನ ಮು॥ ಹೆಲ್ತ್ ಆಫೀಸರರು ಹಿಂದಿನ ಠರಾವನ್ನು ಜಾರಿಗೆ ತರುವಲ್ಲಿ ತಮಗಿರುವ ಅಡಚಣೆಗಳನ್ನು ವಿವರಿಸಿ ಆ ಸಂದೇಹ ನಿವೃತ್ತಿಗಾಗಿ ಹೆಲ್ತ್ ಶಾಖೆಯ ಡೈರೆಕ್ಟರರಿಗೆ ಬರೆದುಕೊಂಡಿದ್ದೇವೆಂದೂ ಲ್ಯಾಸನ್ಸ್ ಕೊಡುವಾಗ ಶರ್ತಗಳನ್ನು ಕೊಡುವ ಅಥವಾ ಬಿಡುವ ಅಧಿಕಾರ ಸಂಪೂರ್ಣ ಹೆಲ್ತ್ ಆಫೀಸರರದೇ–ಕೌನ್ಸಿಲಿನದಲ್ಲ. ಆಪೀಲ್ ಮಾಡಿಕೊಂಡಾಗ ಮಾತ್ರ ಈ ಅಧಿಕಾರ ಕೌನ್ಸಿಲಿಗೆ ಬರುತ್ತಿದೆ ಎಂದೂ ಮುಂತಾಗಿ ತಿಳಿಸಿದರು.

ಕೊನೆಗೆ ಹಿಂದಿನ ಠರಾವಿನಲ್ಲಿದ್ದ "ಕಂಡಿಶನ್ಸ್" (ಶರ್ತ) ಎಂಬುದರ ಬದಲಾಗಿ "ಡೈರೆಕ್ಶನ್ಸ್" (ಸೂಚನೆ) ಎಂದಿರಬೇಕಾದುದು ಹೆಚ್ಚು ಯೋಗ್ಯವೆಂದು ಶ್ರೀ ಬಿ. ಜಿ. ದಾಸರು ತಿದ್ದುಪಡಿ ಸೂಚಿಸಿದರು. ಅವುಗಳಲ್ಲಿ ಯಾವು ಶಬ್ದವಿರಬೇಕೆಂಬ ಬಗ್ಗೆ ಚರ್ಚೆ ನಡೆದು ಮತ ತೆಗೆಯಲಾಗಿ ಶ್ರೀ ದಾಸರ ಅಭಿಪ್ರಾಯಕ್ಕೆ ಬಹುಮತದ ಓಡು ದೊರೆತು ಹಿಂದೆ ಮಾಡಿದ್ದ ಠರಾವು ಊರ್ಜಿತಕ್ಕೆ ಬರಲಿಲ್ಲ, ಇಂದು ಮುಂದೆ ತರಲಾದ ಠರಾವು ಮುಂದೆ ಹೋಗಲಿಲ್ಲ.

ಪಳ್ಳಿಕೆರೆಯ ಮಮ್ಮುಞ್ಞಾಯೆಂಬಾತನು ಅಲ್ಲಿನ ಒಂದು ಹೊಗೆಸೊಪ್ಪಿನ ಅಂಗಡಿಯನ್ನು ಮುರಿದು ಸುಮಾರು ರೂ. ೬೦ ಬೆಲೆ ಬಾಳುವ ಹೊಗೆಸೊಪ್ಪನ್ನು ಕದ್ದಿರುವನೆಂಬ ಅಪಾದನೆಯ ಮೇಲೆ ಕಾಸರಗೋಡಿನ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾದ ಜನಾಬ್ ಬಿ ಎಂ. ಹುಸೇನರು ದಸ್ತಗಿರಿಮಾಡಿರುವರು.

ಕಫ, ಶೀತ ಮತ್ತು ಎದೆ ನೋವುಗಳನ್ನು ದಿನಂಪ್ರತಿ ಪೆಪ್ಸ್ ತೆಗೆದುಕೊಳ್ಳುವುದರಿಂದ ಗುಣಪಡಿಸಿರಿ.

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾನಂದವನ್ನು ಕೆಡಿಸುವುದು. ಕೆಲವು ಪೆಪ್ಸುಗಳನ್ನು ಕೈಯ್ಯಲ್ಲಿ ತೆಗೆದುಕೊಳ್ಳಿ. ಅಗತ್ಯ ಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸ್ ಮಾತ್ರೆಗಳು ಉತ್ತಮ ಔಷಧಿ ಸತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶಕ್ಕೆ ತಲಪಿಸುವುದು. ಹೀಗೆ ಶ್ವಾಸಕೋಶದ ನೋವನು ಪೆಪ್ಸ್ ಗುಣಗೊಳಿಸಿ ಕಫವನ್ನು ನಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು. ಕೆಮ್ಮು, ಶೀತ, ಇನ್ಫ್ಲುಯೆಂಜಾ, ಕಫ, ಮೊದಲಾದುವುಗಳಿಗೆಲ್ಲ ಇದು ಅತ್ಯುತ್ತಮ ಔಷಧ.



ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೇಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ. ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಸೂರ್ಯೋದಯ ದೇಶ-ಜಪಾನ್

ಶ್ರಮದಿಂದ ಸಾಧಿಸಿದ ಅಭಿವೃದ್ಧಿ

ಹಿಂದಿನ ಕಾಲದಿಂದಲೂ ಸಾಮ್ರಾಜ್ಯವಾದಿ

ಜಪಾನನ್ನು ಆಳುವ ಕುಟುಂಬಗಳು

ಜಪಾನ್ ಸರಕಾರವು ಬಹಳ ದಕ್ಷತೆಯಿಂದ ತನ್ನ ದೇಶದ ವಾಣಿಜ್ಯ ವ್ಯವಹಾರವನ್ನೂ ಕೈಗಾರಿಕೆಗಳನ್ನೂ ಅಭಿವೃದ್ಧಿಗೊಳಿಸಲು ಪ್ರಯತ್ನಪಟ್ಟಿದೆ. ಅಲ್ಲಿನ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳು ತಮ್ಮ ಕೆಲಸಗಾರರಿಗೆ ಬಹಳ ಕನಿಷ್ಟ ದರ್ಜೆಯ ಮಜೂರಿಯನ್ನೂ, ನಿಕೃಷ್ಟಾವಸ್ಥೆಯ ಜೀವನನಾನುಕೂಲತೆಗಳನ್ನೂ ಕೊಟ್ಟಾದರೂ ದೇಶದ ಅಂತರಾಷ್ಟ್ರೀಯ ವ್ಯವಹಾರವನ್ನು ಶ್ರೇಯಸ್ಕರವಾಗಿರಿಸುವುದಕ್ಕೆ ಪ್ರಯತ್ನ ಪಟ್ಟಾಗಲೂ ಅಲ್ಲಿನ ಸರಕಾರದವರು ಮಜೂರವರ್ಗಕ್ಕಾದ ಈ ಅಸಂತುಷ್ಟಿಯನ್ನು ಮೌನದಿಂದ ಸಹಿಸಿದೆ.

ಜಪಾನಿಯರು ಸ್ವಾಭಾವಿಕವಾಗಿ ತುಂಬಾ ಶ್ರಮ ಶ್ರದ್ಧಾಳುಗಳೂ, ಸಂಕಷ್ಟಸಹಿಷ್ಣತೆಯುಳ್ಳವರೂ ಆಗಿರುವುದು ಅಲ್ಲಿನ ಅಪಾರ ಕೈಗಾರಿಕೆ ಪ್ರಗತಿಗೆ ಇನ್ನೊಂದು ಕಾರಣವೆನ್ನಬೇಕು. ಆ ದೇಶದ ಭೂಸಂಪತ್ತೂ ಇತರ ದೊಡ್ಡ ಕೈಗಾರಿಕೆ ದೇಶಗಳಿಗಿಂತ ತುಂಬಾ ಕನಿಷ್ಟ ಪರಿಮಾಣದ್ದಿದೆ. ಅಗಾಧ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದುವ ಒಂದು ದೇಶಕ್ಕೆ ಅದು ಎಷ್ಟು ಮಾತ್ರಕ್ಕೂ ಸಾಲದ್ದಾಗಿರುತ್ತದೆ. ಆದುದರಿಂದಲೇ ಜಪಾನು ಕ್ರಮವಾಗಿ ನೆರೆಕೆರೆಯ ಪ್ರದೇಶಗಳ ಮೇಲೆ ಶಿಸ್ತಿನಿಂದ ದಾಳಿಯಾರಂಭಿಸಿ ಅಂದಿನಿಂದ ಅದರ ಸಾಮ್ರಾಜ್ಯ ಲಾಲಾಸೆಗೆ ಕಾರಣವಾಯಿತೆನ್ನಬಹುದು.

ಇತರ ದೇಶಗಳಲ್ಲಿ ಕೈಗಾರಿಕೆಗಳು ಹೆಚ್ಚು ಕಡಿಮೆ ಸರಕಾರದ ನಿರ್ದೇಶತ್ವದಲ್ಲೇ ಬೆಳೆಯುತ್ತಿವೆಯಾದರೂ ಜಪಾನಿನ ಕೈಗಾರಿಕೆಗಳು ಹೆಚ್ಚಾಗಿ ದೊಡ್ಡ ಶ್ರೀಮಂತರ ಅಧೀನದಲ್ಲಿವೆ. ಮಿಟ್ಸುಯಿ, ಮಿಟ್ಸುಬಿಶಿ, ಮುಂತಾದವರು ನಮ್ಮ ದೇಶದ ಬಿರ್ಲಾ, ಟಾಟಾ, ವಾಲ್‌ಚಂದ್ ಮುಂತಾದ ಶ್ರೀಮಂತ ಕುಟುಂಬಗಳಿದ್ದಂತೆ. ಮಿಟ್ಸುಯಿ ಕುಟುಂಬದವರು ಸುಮಾರು ಶೇಕಡಾ ೧೫ರಷ್ಟು ಜಪಾನೀ ಕೈಗಾರಿಕೆಗಳ ವ್ಯಾಪಾಲಕರಾಗಿರುವರು. ಇವರಿಗೆ ಸರಕಾರ ಆಡಳಿತದಲ್ಲೂ, ವಾಣಿಜ್ಯ ಧೋರಣೆ, ಅಂತರಾಷ್ಟ್ರೀಯ ಸಂಬಂಧದಲ್ಲೂ ಪ್ರಭಾವಪೂರ್ಣವಾದ ಕೈವಾಡವಿದೆ. ಜಪಾನು ಕಠಿಣವಾದ ಸೈನ್ಯ ಧೋರಣೆ ಅನುಸರಿಸಲಿಕ್ಕೂ ಇವರೇ ಕಾರಣರೆನ್ನಬಹುದು.

ಜಪಾನಿನ ಮಜೂರ ವರ್ಗ

ಮೇಲೆ ಹೇಳಿದ ಕೈಗಾರಿಕೆ ವ್ಯಾಪಾಲಕ ಮುಖಂಡರೂ, ಸೈನ್ಯ ನೌಕಾ ಇಲಾಖೆಗಳಲ್ಲೂ, ಪ್ರಾಂತ್ಯ ಆಡಳಿತದಲ್ಲೂ ಇರುವ ಅಧಿಕಾರಿಗಳೂ ಜಪಾನಿನ ಆಡಳಿತ ವರ್ಗವೆನ್ನಬಹುದು. ಕೆಲವು ರಾಜಕೀಯ ಮುತ್ಸದಿಗಳೂ ಈ ವರ್ಗಕ್ಕೆ ಸೇರಿರುತ್ತಾರೆ. ಇವರನ್ನು ಬಿಟ್ಟರೆ ಉಳಿದ ಅಲ್ಲಿನ ಜನಸಂಖ್ಯೆಗೆ ಯಾವ ರಾಜಕೀಯ ಅಧಿಕಾರವೂ ಇಲ್ಲ. ಚೀನದಲ್ಲಿ ೧೯೩೭ರಲ್ಲಿ ಯುದ್ಧವಾರಾಂಭವಾದಂದಿನಿಂದ ಜಪಾನಿನ ಉದ್ಯೋಗ ಪರಿಸ್ಥಿತಿಯಲ್ಲಿ ಗಮನಾರ್ಹವಾದ ಬದಲಾವಣೆಯಾಗಿದೆ. ಜಪಾನಿನ ಜನರಲ್ಲಿ ಶೇಕಡಾ ೪೪ರಷ್ಟು ಮಂದಿ ಕೃಷಿ ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಕೈಗಾರಿಕೆಯಲ್ಲಿ ದುಡಿಯುವವರ ಸಂಖ್ಯೆ ಶೇಕಡಾ ೨೪. ವಾಣಿಜ್ಯ ವ್ಯವಹಾರದಲ್ಲಿ ಅಲ್ಲಿನ ಶೇಕಡಾ ೧೯ರಷ್ಟು ಜನರು ಶ್ರಮಿಸುತ್ತಾರೆ. ಮೀನುಗಾರಿಕೆಯಿಂದ ಜೀವನ ಮಾಡುವವರು ಬರೀ ಶೇಕಡಾ ೪. ಸರಕಾರಿ ಕೆಲಸ ವಕಾಲತು, ವೈದ್ಯ ಮುಂತಾದ ಸ್ವತಂತ್ರ ವೃತ್ತಿಯಿಂದ ಜೀವನ ನಡೆಸುವವರು ಶೇಕಡಾ ೯ರಷ್ಟು ಇದ್ದಾರೆ.

ಅಲ್ಲಿನ ಜನಸಂಖ್ಯೆಯ ಶೇಕಡಾ ೧ರಷ್ಟು ಮಾತ್ರ ಖನಿಜ ಉತ್ಪತ್ತಿಯಲ್ಲಿ ಹೊಂದಿಕೊಂಡಿದ್ದಾರೆಂಬ ವಿಷಯವು ಅಲ್ಲಿನ ಭೂಸಂಪತ್ತಿನ ಬಡತನವನ್ನು ತೋರಿಸುತ್ತದೆ. ಈಗಲೂ ಕೃಷಿ ವ್ಯವಸಾಯವೇ ಜಪಾನಿನ ಪ್ರಾಮುಖ್ಯ ಕಸಬುಗಾರಿಕೆಯಾಗಿದೆ ಎಂಬುದು ಗಣನೀಯವಾದ ಸಂಗತಿ. ಆದರೂ ಕೃಷಿ ಉತ್ಪತ್ತಿಯಿಂದ ಜಪಾನಿನ ರಾಷ್ಟ್ರೀಯ ಸಂಪಾದನೆಯು ಬರೀ ಶೇಕಡಾ ೨೦ರಷ್ಟು ಮಾತ್ರ ಉಂಟಾಗುತ್ತಿರುವಾಗ ಕೈಗಾರಿಕೆ ವಾಣಿಜ್ಯದಿಂದ ಅಲ್ಲಿನ ರಾಷ್ಟ್ರೀಯ ಸಂಪಾದನೆಯು ಶೇಕಡಾ ೭೦ರಷ್ಟು ಇದೆ ಎಂದಾಗ ಕೈಗಾರಿಕೆ ವಾಣಿಜ್ಯದ ಅಗಾಧ ಪ್ರಗತಿಯೆಷ್ಟೆಂಬುದು ಗೊತ್ತಾಗುತ್ತದೆ. ಕೃಷಿ, ಕೈಗಾರಿಕೆಗಳೊಳಗೆ ಇರುವ ಈ ಬೃಹದ್ ಸ್ಥಿತ್ಯಂತರವು ಜಪಾನಿನ ಕೃತಕ ಅಭಿವೃದ್ಧಿ ನಿರ್ಬಲತ್ವಗಳ ಕುರುಹಾಗಿದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಾರೆ.

ಅಕ್ಕಿಯೇ ಜಪಾನಿನ ಪ್ರಧಾನ ಬೆಳೆ. ಅಲ್ಲಿ ಕೆಲವೇ ಬೇರೆ ಬೇರೆ ಬೆಳೆಗಳು ಮಾತ್ರ ಬೆಳೆಸಲ್ಪಡುತ್ತವೆ. ಹೆಚ್ಚಿನ ರೈತರು ಜಮೀನು ಇಲ್ಲದವರಿದ್ದರಿಂದ ಅವರು ಕೈಗಾರಿಕೆ ಪಟ್ಟಣಗಳಿಗೆ ಬಂದು ಮಜೂರರ ಕೀಳಾವಸ್ಥೆಯ ಜೀವನವನ್ನಾದರೂ ನಡೆಸಲು ಇಷ್ಟಪಡುವರು. ಇದರಿಂದ ಕೈಗಾರಿಕೆ ವ್ಯಾಪಾಲಕರಿಗೆ ಮಜೂರರನ್ನು ಬೇಕಾದ ಹಾಗೆ ಕಮ್ಮಿ ಮಜೂರಿಯಲ್ಲಿ ಕೆಲಸಕ್ಕಿಟ್ಟುಕೊಳ್ಳಲು ಆಗುತ್ತದೆ.

ಹಳ್ಳಿ ಕಡೆಯಿಂದ ಪಟ್ಟಣಗಳ ಕಡೆಗೆ ಬಂದ ಜನಸಂಖ್ಯೆಯ ಲೆಕ್ಕಾಚಾರವನ್ನು ನೋಡಿದರೆ ಜಪಾನಿನ ಕೈಗಾರಿಕೆ ಕೆಲಸಗಾರರ ಪರಿಸ್ಥಿತಿಯು ಹೇಗಿದೆ ಎಂದು ತಿಳಿಯಬಹುದು. ೧೯೨೦ರಲ್ಲಿ ಅಲ್ಲಿನ ಪಟ್ಟಣ ಪ್ರದೇಶದಲ್ಲಿ ೨ ಕೋಟಿ ಜನರೂ, ಹಳ್ಳಿ ಪ್ರದೇಶದಲ್ಲಿ ೪ ಕೋಟಿ ಜನರೂ ಇದ್ದರು. ೧೯೪೦ರಲ್ಲಿ ಪಟ್ಟಣ ಪ್ರದೇಶದಲ್ಲಿನ ಜನರ ಸಂಖ್ಯೆ ೪ ಕೋಟಿ. ಹಳ್ಳಿಗಳಲ್ಲಿನ ಜನರ ಸಂಖ್ಯೆ ೪ ಕೋಟಿ ಹೀಗೆ ಒಂದೇ ಪ್ರಮಾಣವಾಗಿದೆ. ಅಲ್ಲಿನ ಆರು ದೊಡ್ಡ ಕೈಗಾರಿಕೆ ನಗರಗಳಲೇ ಸುಮಾರು ೧॥ಕೋಟಿ ಜನರು ಇರುವರು.

ಜನಸಂಖ್ಯೆಯ ಸಮಸ್ಯೆ

ಬೆಳೆಯುತ್ತಿರುವ ಜನಸಂಖ್ಯೆಯ ದೃಷ್ಟಿಯಿಂದ ತಾವು ಮಾಡುವ ವಿದೇಶಿ ಆಕ್ರಮಣಗಳು ನ್ಯಾಯಬದ್ಧವಾದುವೆಂದು ಜಪಾನಿ ಮುಖಂಡರ ಹೇಳಿಕೆ. ಆದರೆ ಇದೊಂದು ಸುಳ್ಳು ನೆಪವೆನ್ನಬಹುದು. ಕಾರಣ ಆ ದೇಶದ ಜನಸಂಖ್ಯೆಯು ಈಗಿನಗಿಂತ ಎಷ್ಟೊ ಪಾಲು ಕಮ್ಮಿ ಇದ್ದಾಗಲೇ ಅವರ ದಬ್ಬಾಳಿಕೆಗಳು ಪ್ರಾರಂಭವಾಗಿವೆ ಎಂಬುದಕ್ಕೆ ದಾಖಲೆಗಳಿವೆ. ತಮ್ಮ ಚಿಕ್ಕ ದೇಶದ ಉತ್ಪತ್ತಿಯು ಕಿಕ್ಕಿರಿದ ತಮ್ಮ ಜನಸಂಖ್ಯೆಗೆ ಸಾಕಾಗುವುದಿಲ್ಲ, ಮತ್ತು ತಮ್ಮ ಜನರಿಗೆ ಹೊರದೇಶಗಳಲ್ಲಿ ವಸತಿಮಾಡಲು ಯಾರೂ ಒಪ್ಪುವುದಿಲ್ಲವೆಂಬ ಇನ್ನೊಂದು ನೆಪವನ್ನು ಜಪಾನಿ ಸೈನ್ಯ ಮುಖಂಡರು ಜಗತ್ತಿಗೆ ಸಾರಿರುವರು. ಇದೂ ನಿರಾಧಾರವಾದ ಇನ್ನೊಂದು ತರ್ಕ. ಕಾರಣ ತಮ್ಮ ಜನಸಂಖ್ಯೆಗೆ ಬೇಕಾದುದಕಿಂತಲೂ ಹೆಚ್ಚಿನ ಪ್ರದೇಶಗಳನ್ನೂ (ಮಂಚೂರಿಯಾ, ಕೋರಿಯಾ) ಹಿಡಿದ ಮೇಲೂ ಜಪಾನು ಅವಿಶ್ರಾಂತವಾಗಿ ಸೈನ್ಯ ಸಿದ್ಧತೆಯನ್ನು ಮಾಡಿ ಉದ್ದೇಶಪೂರ್ವಕವಾಗಿ ನಿರ್ಬಲ ಚೀನದ ಮೇಲೆ ಬೀಳಲು ಪ್ರಯತ್ನಿಸಿದೆ.

ಇಷ್ಟಾದರೂ ಜನಸಂಖ್ಯೆಯ ಸಮಸ್ಯೆಯು ಜಪಾನಿನ ಒಂದು ಪ್ರಾಮುಖ್ಯವಾದ ಪ್ರಶ್ನೆಯೇ ಆಗಿದೆ. ಅದನ್ನು ಬಗೆಹರಿಸದೆ ಅಲ್ಲಿಯ ರಾಜಕೀಯ ಶಾಂತಿ ಸಮಾಧಾನಗಳು ಶಾಶ್ವತವಾಗಿ ಬಾಳಲಾರವು. ಅಲ್ಲಿನ ಜನಸಂಖ್ಯೆ ನಿಬಿಡತೆಯಲ್ಲಿ ಇಂಗ್ಲೆಂಡ್ ಬೆಲ್ಜಿಯಂಗಳಷ್ಟು ಇಲ್ಲವಾದರೂ, ಉತ್ಪತ್ತಿ ಮತ್ತು ಕೃಷಿ ಪ್ರಧಾನ ಪ್ರದೇಶಗಳ ದಾಮಾಶಯದಲ್ಲಿ ಅಲ್ಲಿ ಚದುರ ಮೈಲಿಗೆ ೩ ಸಾವಿರದಂತೆ ಜನಸಂಖ್ಯೆ ಇದೆ.

ತಮ್ಮ ಜನರಿಗೆ ಬೇಕಾದ ಪ್ರಾಮುಖ್ಯ ವಸ್ತು ಪದಾರ್ಥಗಳಾದ ಹತ್ತಿ, ಉಣ್ಣೆ, ಪೆಟ್ರೋಲು, ಕಬ್ಬಿಣ, ಉಕ್ಕು ಮೊದಲಾದುವುಗಳಿಗೆ ಜಪಾನು ಹೊರ ದೇಶಗಳ ಮೇಲೇ ಹೊಂದಿಕೊಂಡಿರಬೇಕಾಗಿದೆ. ತಮ್ಮ ಜನಾಂಗದ ಉಪಯೋಗಕ್ಕೂ ಮತ್ತು ತಮ್ಮ ಸೈನ್ಯ ವಿಮಾನ, ನೌಕಾ ಬಲದ ವಿಕಾಸಕ್ಕೂ ಬೇಕಾದ ಎರಡು ಪ್ರತಪ್ರತ್ಯೇಕ ಅವಶ್ಯಕತೆಗಳನ್ನು ಪೂರೈಸಲು ಅಲ್ಲಿನ ಸರಕಾರವು ಬಹಳ ಕಷ್ಟವನ್ನನುಭವಿಸತ್ತಲಿತ್ತೆಂಬ ಸಂಗತಿಯು ನಿರ್ವಿವಾದ. ಇದರಿಂದಾಗಿ ಅಲ್ಲಿನ ಮುಂದಾಳುಗಳು ೧೯೩೦ರಿಂದ ತಮ್ಮ ದಬ್ಬಾಳಿಕೆಯ ಧೋರಣೆಯನ್ನು ಮುಂದೊತ್ತಿದರು. (ಸಶೇಷ)

ಮೂರು ವಾರಗಳ ಹಿಂದೆ ಹಿಟ್ಲರನು ಓರ್ವ ಚಲಚಿತ್ರ ನಟಿಯನ್ನು ಮದುವೆಯಾಗಿರುವನೆಂದೂ, ಆ ಸಂಬಂಧವಾಗಿ ಅವನೊಂದು ಔತಣ ಸಮಾರಂಭವನ್ನು ಜರಗಿಸಿದನೆಂದೂ ವಾರ್ತೆ ಇದೆ. ಕೆಲ ಸಮಯದ ಹಿಂದೆ ನಾಜೀ ಮುಖಂಡನಿಗೆ ಮೂರು ವರ್ಷಗಳ ಹಿಂದೆ ಗುಪ್ತ ವಿವಾಹವಾಗಿದ್ದು ಎರಡು ಹೆಣ್ಣು ಮಕ್ಕಳು ಇದ್ದಾವೆಂದೂ ಒಂದು ವಾರ್ತೆ ಬಂದಿತ್ತು.

* * *

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್', ರಥಬೀದಿ, ಮಂಗಳೂರು

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906·

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 0
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Garnd Total Rs.	1,35,50,413- 4- 8

ಆರೋಗ್ಯ ಭಾಗ್ಯ

(೩ನೇ ಪುಟದಿಂದ)

ಕಾಲಹರಣ ಮಾಡುತಿದ್ದಾರೆ. ಇಂಥವರಿಗಾಗಿ ಆ ಬುದ್ಧ ದೇವನು ಈ ಮಠಗಳನ್ನು ಸ್ಥಾಪಿಸಬೇಕೆಂದನೆ? ಅದರಲ್ಲಿ ಅನೇಕರು ಕಳ್ಳರೂ, ಖೂನಿಕಾರರೂ, ದರೋಡೆ ಖೋರರೂ ಇದ್ದಾರೆ.

"ಕೆಲವು ನಿಷ್ಠಾವಂತರೂ ಇದ್ದಾರೆಂಬ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ."

ಜಪಾನಿಗಳ ಕುರಿತು ಪ್ರಜಾನಂದ ಪ್ಲೇಚರನ ಅಭಿಪ್ರಾಯ ಹೀಗಿದೆ:

"ಬರ್ಮಾದಲ್ಲಿನ ಬುದ್ಧ ಮತವು ಜಗತ್ತಿನಲ್ಲಿ ಇಂದು ಅತೀ ಶುದ್ಧವಾದುದು. ಅವರು ಹೀನಯಾನ ಪಂಥಕ್ಕೆ ಸೇರಿದವರು. ಆದರೆ ಜಪಾನಿಗಳು ಮಹಾಯಾನ ಎಂಬ ಪಂಥದವರು. ಅದು ಅಶುದ್ಧವಾದ ಪಂಥ. ಜಪಾನಿಗಳು ತಾವು ಅತೀ ಪ್ರಾಚೀನ ಕಾಲದಿಂದ ನಂಬಿ ಬಂದ ಶಿಂಟೊ ಎಂಬ ಪ್ರಕೃತಿಆರಾಧನೆಯ ಮತವನ್ನು ಬೌಧ ತತ್ವದೊಳಗೆ ಬೆರಸಿ ಕೊಂಡಿದ್ದಾರೆ. ನಿಜವಾಗಿ ಅವರಿಗೆ ಬೌಧ ತತ್ವದ ತಿರುಳೇನೆಂದು ಇಂದಿನ ತನಕ ತಿಳಿದಿಲ್ಲ. ಅವರ ಶಿಂಟೋ ಮತ ಪ್ರಭಾವವಿರುವ ತನಕ ಅವರಿಗೆ ಎಂದಿಗೂ ಬೇರೆ ಯಾವ ಮತ ತತ್ವವೂ ತಿಳಿಯಲಾರದು."

ಪ್ರಜಾನಂದನು ದಿನನಿತ್ಯ ತನ್ನ ಜೋಳಿಗೆಯನ್ನು ಹಿಡಿದು ಭಿಕ್ಷೆಗಾಗಿ ಹೋಗುವನು. ಆಸುಪಾಸಿನ ನಿವಾಸಿಗಳು ಆತನಿಗೆ ಸಹಾನುಭೂತಿಯಿಂದ ಕಾಣುವರು. ಬೇಕಾದಷ್ಟು ದೊರಕಿದೊಡನೆ ಅವನು ತನ್ನ ಗುಡಿಸಲು ಮಠಕ್ಕೆ ಹಿಂದಿರುವನು. ಅಕ್ಕಿಯೇ ಅವನ ಪ್ರಾಮುಖ್ಯ ಆಹಾರ ಪದಾರ್ಥ. "ಈ ಜಡ ಪೆಟ್ಟಿಗೆಯು ಚಲಿಸಲು ನನಗೆ ಬಹಳ ಸ್ವಲ್ಪ ಆಹಾರವಿದ್ದರೆ ಸಾಕು." ಎಂದು ಅವನು ತಿಳಿಸುತ್ತಾನೆ.

ನಿಮ್ಮ ತಪ್ಪುದೋಷಗಳನ್ನು ಸರಿಪಡಿಸುವ ಕುರಿತು ಸಲಹೆ ನೀಡಲಿ.

ವರ್ಷಗಳು ಉರುಳಿದಂತೆ ಈ ವೈದಕೀಯ ಸಲಹೆಗಳು ನಿಮಗೆ ಆರೋಗ್ಯವಂತರೂ, ಹರ್ಷವಂತರೂ ಆಗಿರಲು ಸಹಾಯ ಮಾಡುತ್ತೇವೆ.

ಯಾವಾಗಲೂ ಮನಸ್ಸನ್ನು ಹೊಸ ಹೊಸ ವಿಚಾರಗಳಿಗಾಗಿ ತೆರೆದಿಡಿರಿ. ಮಾನಸಿಕ ಬದಲಾವಣೆ ಮತ್ತು ಶಾರೀರಿಕ ವ್ಯಾಯಾಮ ಕೊಡುವ ಯಾವುದಾದರೂ ಅಭಿರುಚಿ ಸಾರಸ್ಯಗಳುಳ್ಳ ವಿರಾಮ ಕಾಲದ ಉದ್ಯಮವನ್ನು ಕೈಕೊಳ್ಳಿರಿ. (ತೋಟಗಾರಿಕೆ, ಕಟ್ಟಿಗೆ ಒಡೆಯುವುದು, ಮರದ ಕೆಲಸ ಇತ್ಯಾದಿ.)

ವಯಸ್ಸು ಹೆಚ್ಚಿದಂತೆ ನಿಮ್ಮ ಆಹಾರ ಸೇವನೆಯ ಪ್ರಮಾಣವೂ ಕಮ್ಮಿಯಾಗುವುದು. ಆದರೆ ಆಹಾರ ಪದಾರ್ಥಗಳನ್ನು ಜಾಗರೂಕತೆಯಿಂದ ಚುನಾಯಿಸಬೇಕು. ಕ್ರಮವಾದ ತೊಂದರೆ ಇಲ್ಲದ ನಿದ್ರೆಯು ಅತ್ಯಾವಶ್ಯಕ. ಶಕ್ಯವಿದ್ದಷ್ಟು ಹೆಚ್ಚು ನೀರನ್ನು ಕುಡಿಯಿರಿ. ಬಿಸಿಲು, ಶುದ್ಧ ಗಾಳಿ ಮತ್ತು ಅಲ್ಪ ವ್ಯಾಯಾಮಗಳನ್ನೂ ಪ್ರತಿದಿನ ತೆಗೆದುಕೊಳ್ಳುವ ಅಭ್ಯಾಸವನ್ನಿಟ್ಟುಕೊಳ್ಳಿರಿ.

ಯಾವ ವಯಸ್ಸಿನಲ್ಲಾದರೂ ಒಳ್ಳೇ ಆರೋಗ್ಯವು ಅತ್ಯಮೂಲ್ಯವೆನಿಸುವುದು. ಅದನ್ನು ಯಾವ ರೀತಿಯಿಂದಾದರೂ ಕಾಪಾಡಿ ಕೊಳ್ಳಿರಿ.

ಈ ಸಂಗತಿಯನ್ನು ನಾವು ತರುಣರಾಗಿರುವಾಗ ಅಸಡ್ಡೆ ಮಾಡಲು ಸಾಧ್ಯವಿಲ್ಲ. ಮತ್ತೆ ಪ್ರಾಯ ಮೀರಿ ಹೋದ ಮೇಲೆ ಅದಕ್ಕಾಗಿ ಪ್ರಯತ್ನ ಪಟ್ಟು ನಿರಾಶರಾಗಬಾರದು. ಈಗ ಆದದ್ದು ಆಗಿ ಹೋಯಿತು. ಇನ್ನಾದರೂ ನಿಮ್ಮ ಆರೋಗ್ಯವಂತ ವೃದ್ಧಾಪ್ಯಕ್ಕೆ ಈಗಲೇ ಸಿದ್ಧ ಮಾಡಿಕೊಳ್ಳಿರಿ.

ಅಭಿವೃದ್ಧಿ ತೋರಿಸುವ ಪಟ್ಟಿ

	1940	1942	1944
	ರೂಪಾಯಿ	ರೂಪಾಯಿ	ರೂಪಾಯಿ
ಶೇರ್ ಭಂಡವಾಳ	8,98,000	14,96,000	26,84,000
ಕ್ಷೇಮನಿಧಿ	4,50,000	4,50,000	10,84,000
ಠೇವಣಾತಿಗಳು	86,72,000	1,45,51,000	2,80,69,000
ಸರಕಾರೀ ಭದ್ರತೆಗಳು	11,19,000	68,17,000	1,17,98,000
ಲಾಭಾಂಶ	.72,000	1,58,000	2,75,000
ಜುಮ್ಲಾ ಸಂಪತ್ತು	1,08,44,000	2,07,85,000	3,46,46,000

ಸಂಸ್ಥೆಗಳಿಗೂ ಸಾರ್ವಜನಿಕರಿಗೆ ಸರಿಹೊಂದಿಸಿದವುಗಳು

ನಮ್ಮ ಶಾಖೆಗಳು

ಕೈಲಸ್	ಮಂಗಳೂರು	ಮಧುರಾ
ಆಲಪ್ಪೆ	ಬೆಂಗಳೂರು	ಸೇಲಮ್
ಎರ್ನಾಕುಲಮ್	ಬೆಳಗಾಂವ್	ಇರೋಡ್
ಕೊಚ್ಚಿನ್	ಧಾರವಾಡ	ಕೊಯಮುತ್ತೂರು
ಕಲ್ಲಿಕೋಟೆ	ಹುಬ್ಬಳ್ಳಿ	ಇತ್ಯಾದಿ, ಇತ್ಯಾದಿ.
ಕಣ್ಣಾನೂರು	ಚಿಕ್ಕಮಗಳೂರು	

ಮುಂಬಾಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪಾಯಿ 26 ಲಕ್ಷ. ಕ್ಷೇಮನಿಧಿ ರೂಪಾಯಿ 10 ಲಕ್ಷ.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited.

ಸಿಂಧದ ಸೋಜಿಗದ ಗೊಂದಲ

ಲಾಭ ಲಂಚಖೋರತನದ ಆದರ್ಶ

ಜನತೆಯ ಹಿತಕ್ಕೆ ದುಡಿದ ಲೀಗ್ ಮುಖಂಡ

ಸಿಂಧದಲ್ಲಿ ಲೀಗ್ ಮಂತ್ರಿಮಂಡಳ ಕೊನೆಗೊಂಡಿತು

ರಾಜಕೀಯದಲ್ಲಿ ಸಿಂಧ್ ಪ್ರಾಂತ್ಯದಲ್ಲಿ ನಡೆದಷ್ಟು ವಿಚಿತ್ರ ಘಟನೆಗಳು ಪ್ರಾಂತ್ಯದಲ್ಲೂ ಸಂಭವಿಸಲಿಲ್ಲ. ಬಹು ಸಂಖ್ಯಾಕರ ಮಂತ್ರಿಮಂಡಲ ಸ್ಥಾಪಿಸಲ್ಪಟ್ಟಿದೆ ಎಂದು ಹೇಳಲ್ಪಟ್ಟ ಆ ಪ್ರಾಂತ್ಯದಲ್ಲಿ ೧೮ನೇ ಶತಮಾನದ 'ಠಕ್ಕರ' ಹಾವಳಿಯಂತಿರುವ ಹೂರಂಭ ಪುಂಡ ಜನರ ಚೌರ್ಯ ಚಟುವಟಿಕೆಗಳನ್ನು ಇನ್ನೂ ತಡೆಗಟ್ಟಲಾಗಲಿಲ್ಲ.

ಸಿಂಧದಲ್ಲಿ ಶೇಕಡಾ ೭೦ರಷ್ಟು ಜನರು ಮುಸಲ್ಮಾನರು. ನಿರಕ್ಷರಕುಕ್ಷಿಗಳಾದ ಅಲ್ಲಿನ ಜನತೆಯು ಶ್ರೀಮಂತ ಜಮೀನ್ದಾರರ ಕೈಕೆಳಗೆ ಶತಮಾನಗಳಿಂದ ಗುಲಾಮಗಿರಿಯ ಸಂಕಷ್ಟಗಳನ್ನನುಭವಿಸಿದರೂ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಎಂದೂ ಪ್ರಯತ್ನ ಪಟ್ಟವರಲ್ಲ.

ಗೋಳಾಡುತ್ತಿರುವ ಜನತೆಯೊಡನೆ ಸಂಪರ್ಕ ಬೆಳೆಸಲು ಪ್ರಯತ್ನ ಪಟ್ಟ ಮುಸಲ್ಮಾನ ಅಗ್ರಗಣ್ಯರಲ್ಲಿ ಸಿಂಧದ ಮಿ। ಜಿ. ಎಮ್. ಸಯ್ಯದ್ ಎಂಬವರು ಒಬ್ಬರು. ಕೋಮುವಾರು ಸಂಸ್ಥೆ ಮೂಲಕ ಬಹು ಸಂಖ್ಯಾಕರಾದ ಸಿಂಧ ಮುಸಲ್ಮಾನ ರೈತರೊಡನೆ ಸಂಪರ್ಕ ಬೆಳಸುವುದೇ ಯೋಗ್ಯ ಸಾಧನ ಮಾರ್ಗವೆಂದು ಯೋಚಿಸಿಯೋ ಏನೊ ಸಯ್ಯದರು ಮುಸ್ಲಿಂ ಲೀಗಿನ ಸದಸ್ಯರಾಗಿ ತಮ್ಮ ಉದ್ದೇಶ ಸಾಧನೆಗಾರಂಭಿಸಿದರು. ಸಿಂಧ್ ಪ್ರಾಂತೀಯ ಮುಸ್ಲಿಂ ಲೀಗಿನ ಅಧ್ಯಕ್ಷರೂ ಅವರಾದರು.

ಜನತೆಯೊಡನೆ ನೇರವಾದ ಸಂಬಂಧ ಕಲ್ಪಿಸಲು ಲೀಗ್ ಸಂಸ್ಥೆಯು ಪ್ರಯತ್ನ ಪಟ್ಟದ್ದು ಸಿಂಧದಲ್ಲಿಯೇ ಎಂದು ಹೇಳಬಹುದು. ಪ್ರಾಯಸ್ಥರಾದ ೧೨ ಲಕ್ಷ ಸಿಂಧಿ ಮುಸಲ್ಮಾನ ಜನಸಂಖ್ಯೆಯಲ್ಲಿ ೨ ಲಕ್ಷ ಮಂದಿಗಳನ್ನು ಸಯ್ಯದರು ಲೀಗಿನ ಸದಸ್ಯರನ್ನಾಗಿ ಮಾಡಿದರು.

ರೈತರ ಮಧ್ಯದಲ್ಲಿ ಲೀಗ್

ನಲ್ವತ್ತೆರಲ್ಲಿ ಮೂವತ್ತೆರಡು ಲಕ್ಷ ಜನರು ಇಂದು ಸಿಂಧದಲ್ಲಿ ರೈತರಾಗಿದ್ದಾರೆ. ಅಲ್ಲಿನ ಜಮೀನ್ದಾರರು ಸಾಧ್ಯವಿರುವ ಎಲ್ಲಾ ವಿಧಾನಗಳಿಂದಲೂ ತಮ್ಮ ಒಕ್ಕಲುಗಳನ್ನು ಸುಲಿಗೆ ಮಾಡುತ್ತಿರುವರು. ಆಡಳಿತದಲ್ಲಿ ಜಮೀನ್ದಾರಿ ಪ್ರತಿನಿಧಿಗಳದ್ದೇ ಕೈ ಮೇಲಾಗಿರುವುದರಿಂದ ರೈತರ ಸಂಕಷ್ಟಗಳು ಪರಿಹಾರವಾಗುವ ಮಾರ್ಗವೇ ಇಲ್ಲ.

ಸಿಂಧದ ಸಯ್ಯದರು ನೊಂದ ರೈತರ ಪರವಾಗಿ ಕೆಲಸಮಾಡತೊಡಗಿದಂದಿನಿಂದ ಶ್ರೀಮಂತ ಜಮೀನ್ದಾರೀ ಹಿತ ವರ್ಗದವರು ಅವರಿಗೆ ವಿರೋಧವಾಗಿಯೇ ಕಾರ್ಯನಡೆಸುತ್ತಾ ಬಂದರು.

ಜನತೆಯ ಉದ್ಧಾರಕ್ಕಾಗಿ ಸಯ್ಯದರು ಲೀಗನ್ನು ಸೇರಿದ್ದರೆ ಜಮೀನ್ದಾರರ ರಕ್ಷಣೆಗಾಗಿ ಸರ್ ಗುಲಾಮ್ ಹುಸ್ಸೇನ್ ಹಿದಾಯಿತುಲ್ಲಾ ಅವರೂ ಲೀಗಿನ ಆಶ್ರಯ ಪಡೆದರು. ಇಲ್ಲಿಂದ ಸಿಂಧ್ ಲೀಗ್ ಸಂಸ್ಥೆಯಲ್ಲಿ ಅಂತ್ಯವಿಲ್ಲದ ಪಿತೂರಿ ಕಚ್ಚಾಟ ಅಂತಃಕಲಹಗಳಿಗಾರಂಭವಾಯಿತು. ರೈತರಿಗೆ ಅನುಕೂಲವಾಗುವ ಕೃಷಿ ಕಾನೂನುಗಳನ್ನು ಶಾಸನ ಸಭೆಯಲ್ಲಿ ಮಂಜೂರು ಮಾಡಿಕೊಳ್ಳಲು ಸಯ್ಯದ್ ಪಕ್ಷದವರು ಪಟ್ಟ ಪ್ರಯತ್ನಗಳನ್ನು ಹಿದಾಯಿತುಲ್ಲಾ ಕೂಟಗಾರರು ಕವಚಿಹಾಕುವುದರಲ್ಲಿ ಯಶಸ್ಸನ್ನು ಪಡೆದರು. ಸ್ವತಂತ್ರ ಪಕ್ಷದ ಅಲ್ಲಾ ಬಕ್ಷರು ಸಿಂಧದಲ್ಲಿ ಸರ್ವ ಪಕ್ಷೀಯ ಮಂತ್ರಿಮಂಡಲ ರಚಿಸಿ ನಾಡೋದ್ಧಾರಕ್ಕೆ ಪ್ರಯತ್ನಪಟ್ಟಾಗ ಲೀಗ್ ಪಕ್ಷ ಮಾತ್ರವಲ್ಲ ಬ್ರಿಟಿಷ್ ಆಡಳಿತಗಾರರೂ ಅವರಿಗೆ ಪ್ರತಿ ಕಕ್ಷಿಗಳಾಗಿ ಅವರನ್ನು ಸ್ಥಾನಚ್ಯುತ ಮಾಡಿದರು. ರಾಜನಾಮೆ ಇತ್ತ ಮೇಲೂ ಅಲ್ಲಾ ಬಕ್ಷರು ಪ್ರಗತಿ ವಿರೋಧಿಗಳಾಗಿ ಹಿದಾಯತುಲ್ಲಾ ಪಕ್ಷವನ್ನು ತಳ್ಳಿಹಾಕಲು ಪ್ರಯತ್ನಮಾಡುತ್ತಿದ್ದಾಗ ಅವರು ಕೊಲೆ ಮಾಡಲ್ಪಟ್ಟದ್ದು ಆಧುನಿಕ ಭಾರತೀಯ ರಾಜಕೀಯದಲ್ಲಿ ನಡೆದ ಭೀಕರ ಘಟನೆಗಳಲ್ಲಿ ಒಂದು.

ಕ್ರಮೇಣ ಜನತೆಯ ಕಷ್ಟ ನಿವಾರಣೆ ಮಾಡಲು ಪ್ರಯತ್ನಿಸುವ ಸಯ್ಯದರೊಳಗೂ, ಜಮೀನ್ದಾರರ ಹಿತರಕ್ಷರಾದ ಹಿದಾಯಿತುಲ್ಲಾ ಅವರೊಳಗೂ ಬಿರುಕು ಬಿದ್ದು ಅಗಲವಾಗಿ ಫೆಬ್ರುವರಿ ೧೯ರಂದು ಸಯ್ಯದ ಪಕ್ಷದ ಬಹುಮತದಿಂದ ಹಿದಾಯತುಲ್ಲರು ಶಾಸನ ಸಭೆಯಲ್ಲಿ ಸೋತು ಹೋಗಲು ಗವರ್ನರರು ಸಭೆಯನ್ನು ಮುಂದರಿಸಿ ಪರಿಸ್ಥಿತಿಯನ್ನು ರಕ್ಷಿಸಿ ಸೋತ ಪ್ರಧಾನಿಗಳಿಗೆ ಉಸಿರಾಡಲು ಬಿಡುವು ಕೊಟ್ಟರು.

ಇಷ್ಟರಲ್ಲಿ ಚಾಣಾಕ್ಷರಾದ ಹಿದಾಯಿತುಲ್ಲರು ಅಲ್ಲಾಬಕ್ಷರ ತಮ್ಮ ಮೌಲಾಬಕ್ಷರನ್ನು ಗಾಳಹಾಕಿ ಸ್ವತಂತ್ರವಾಗಿರಬಹುದೆಂಬ ಶರ್ತದ ಮೇಲೆ ಮಂತ್ರಿಯಾಗಲೊಪ್ಪಿಸಿ ಅವರ ಕಡೆಯವರ ಬೆಂಬಲ ಇದೆಯೆಂದು ಗವರ್ನರರಿಗೆ ರುಜುಮಾಡಿಸಿದರು.

ಲೀಗ್ ಮಂತ್ರಿಮಂಡಳದಲ್ಲಿ ಸ್ವತಂತ್ರ ಪಕ್ಷದವರನ್ನು ಸೇರಿಸಿಕೊಂಡದ್ದು ಲೀಗ್ ಸರ್ವಾಧಿಕಾರಿ ಜಿನ್ನರಿಗೆ ಒಪ್ಪಿಗೆಯಾಗಲಿಲ್ಲ. ಜನಹಿತಕ್ಕಾಗಿ ದುಡಿದ ಸಯ್ಯದರ ಮೇಲೆ ಜಿನ್ನರು ಮುನಿದು ಬಿದ್ದರು. ಜನಹಿತವಾಗದಿದ್ದರೂ ಚಿಂತೆಯಿಲ್ಲ ಲೀಗ್ ಮಂತ್ರಿಮಂಡಳವೇ ಸಿಂಧದಲ್ಲಿರ ಬೇಕು, ಅಂದರೆ ಮಾತ್ರ ಅಖಿಲ ಭಾರತ ಲೀಗಿನ ಗೌರವ ಉಳಿಯುವುದೆಂದು ಕ್ವೈದೇ ಅಜಾಮರು ಗರ್ಜಿಸಿದಾಗ ಹಿದಾಯಿತುಲ್ಲರೂ ಸಯ್ಯದರೂ ಸ್ವಲ್ಪ ಭಯಪಟ್ಟರೊ ಎಂಬಂತೆ ಕೂಡಲೇ ಒಟ್ಟುಸೇರಿದರು. ಹಿದಾಯಿತುಲ್ಲರು ತಮ್ಮ ಇಡೀ ಮಂತ್ರಿ ಮಂಡಳದ ರಾಜಿನಾಮೆ ಕೊಟ್ಟು ಪುನಃ ಹೊಸ ಶುದ್ಧ ಲೀಗ್ ಮಂಡಳವೊಂದನ್ನು ರಚಿಸಿ ಮೌಲಾಬಕ್ಷರನ್ನು ಹೊರಹಾಕಲಾಯಿತು.

ಸಿಂಧಿನ ಗೊಂದಲ ಅಲ್ಲಿಗೆ ನಿಲ್ಲಲಿಲ್ಲ. ಈಗ ಹೊಸ ಮಂಡಳದ ಮೇಲೆ ಪುನಃ ಅವಿಶ್ವಾಸಕ ಠರಾವು ಮುಂಡಿಸಲ್ಪಟ್ಟಿದೆ.

ಶುದ್ಧ ಲೀಗ್ ಮಂತ್ರಿಮಂಡಳವಾಗಬೇಕೆಂಬ ಅವರ ಆಶ್ರಯ ನೆರವೇರಲಿಲ್ಲ. ಹಿಂದೂ ಪಕ್ಷದವರ ಸಹಾಯವಿಲ್ಲದೆ ತಮ್ಮ ಮಂಡಳಕ್ಕೆ ಭದ್ರತೆ ಇಲ್ಲವೆಂದು ಮನಗಂಡು ಈರ್ವ ಸ್ವತಂತ್ರ ಹಿಂದೂಗಳನ್ನು ಮಂತ್ರಿಮಂಡಳದಲ್ಲಿ ತೆಗೆದುಕೊಂಡರು. ಅಲ್ಲಿಗೆ ಸಿಂಧದಲ್ಲಿ ಲೀಗ್ ಆಡಳಿತ ಹೋಗಿ ಹಿಂದೂ ಮುಸ್ಲಿಂ ಮಿಶ್ರ ಆಡಳಿತ ಪ್ರಾರಂಭವಾಯಿತು.

ಶೂರನಾದ ಷೂರ

(೨ನೇ ಪುಟದಿಂದ)

ಹೊರಟು ಹೋದರು. ಬೆಳಗಾಗುತ್ತಲೇ ಹೇಗಾದರೂ ಅವರು ತಮ್ಮ ಶಿಬಿರವನ್ನು ಸೇರಿದರು.

ಅರಣ್ಯದಲ್ಲಿ ಬಹಳ ಕಾಲ ವಾಸ ಮಾಡಿದ್ದರಿಂದ ಚೆಕಾಲಿನ ಆರೋಗ್ಯ ಕೆಟ್ಟಿತು. ಸಮಯಕ್ಕೆ ಸ್ನಾನವಿಲ್ಲ, ಊಟವಿಲ್ಲ, ಮಲಗಲು ಬೆಚ್ಚಗಾದ ಹಾಸಿಗೆ ಇಲ್ಲ. ಸೊಳ್ಳೆ ಪರದೆಗಳಿಲ್ಲ, ಸ್ವಚ್ಛವಾಗಿ ಉಡುಪುಗಳನ್ನು ಬದಲಾಯಿಸುವಂತಿಲ್ಲ. ಅವನಿಗೆ ಕಾಡು ಜ್ವರವು ಹಿಡಿಯಿತು. ಆದರೂ ಕೆಲವು ದಿನ ಹೇಗೂ ತಳ್ಳಿದನು. ಆದರೆ ದೇಹದಲ್ಲಿ ಅನಾರೋಗ್ಯವನ್ನು ಬಚ್ಚಿಟ್ಟು ಎಂತಹ ದೇಹದಾರ್ಢ್ಯದ ವ್ಯಕ್ತಿಯಾದರೂ ಎಷ್ಟು ದಿನ ತಳ್ಳಬಹುದು. ಗುಂಡು ಗುಂಡಾಗಿ, ದಷ್ಟ ಪುಷ್ಟವಾಗಿದ್ದ ಅವನ ಶರೀರವು ಕೃಶವಾಗತೊಡಗಿತು. ಕಣ್ಣುಗಳಲ್ಲಿ ನೆರಿಗಳು ಬಿದ್ದು ಕಪ್ಪಾಯಿತು. ಮುಖವು ಹಳದಿ ವರ್ಣಕ್ಕೆ ಎಡೆ ಕೊಟ್ಟಿತು. ಗೆರಿಲ್ಲಾ ಜೀವದಿಂದ ಅವನು ಕಂಗೆಟ್ಟನು. ಅಲ್ಲಿ ವೈದ್ಯರಿಲ್ಲ. ಕೆಲವು ರೆಡ್ ಕ್ರೊಸ್ ದಾದಿಗಳಿದ್ದರು. ಅವರು ಘಾಯಕ್ಕೆ ಮದ್ದು ಹಚ್ಚಿ ಕಟ್ಟುತ್ತಿದ್ದರಲ್ಲದೆ ಅವರಿಗೆ ಹೊಟ್ಟೆಯೊಳಗೆ ಔಷಧಿ ಕೊಡಲೂ, ನಾಡಿ ಪರೀಕ್ಷೆಯೂ ತಿಳಿದಿರಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಹೋಗುವುದಾದರೂ ಎಲ್ಲಿಗೆ? ಸುತ್ತಲೂ ಜರ್ಮನರಿಂದ ನಿಬಿಡವಾದ ಯುದ್ಧರಂಗ. ಗುಂಡು ಫಿರಂಗಿ, ಬೊಂಬುಗಳ ಗುಡುಗಾಟವು ಕ್ಷಣ ಕ್ಷಣಕ್ಕೆ ರೋಮಾಂಚವನ್ನುಂಟು ಮಾಡುತ್ತದೆ. ಇಷ್ಟಾದರೂ ಇನ್ನೂ ಅಸಡ್ಡೆ ಮಾಡಲು ಸಾಧ್ಯವಿಲ್ಲ. ಮುಂದೆ ಆರೋಗ್ಯವಂತನಾಗಿದ್ದರೆ ಮತ್ತೂ ಶತ್ರುಗಳೊಂದಿಗೆ ಕಾದಾಡ ಬಹುದು. ಅವನ ಸಂಗಾತಿಗಳು ಅವನನ್ನು ಮನೆಗೆ ಕಳುಹಿಸಲು ಏರ್ಪಡಿಸಿದರು.

ವೇಷ ಪಲ್ಲಟಿಸಬೇಕಾಯಿತು. ಕಾರಣ ಷೂರಾ ಚೆಕಾಲಿನನು ಪ್ರಖ್ಯಾತ ಗೆರಿಲ್ಲಾ ಸೈನಿಕನೆಂದು ಜರ್ಮನರೆಲ್ಲರಿಗೂ, ಅವನ ಗುರುತು ಗೊತ್ತಿತ್ತು. ಅವರು ರಷ್ಯನ್ ಪತ್ರಿಕೆಗಳಲ್ಲಿ ಅವನ ಚಿತ್ರವನ್ನು ನೋಡಿದ್ದಾರೆ. ಅವರ ಗುಪ್ತಚಾರರು ಚೆಕಾಲಿನನ ಸಾಹಸದ ವರದಿಗಳನ್ನೂ ಸೇನಾಪತಿಗಳಿಗೆ ಕಳುಹಿಸಿದ್ದಾರೆ. ಅವರು ಅವನನ್ನು ಹಿಡಿಯಬೇಕೆಂದು ರಾತ್ರೆ ಹಗಲು ಬಿಗಿಯಾದ ಕಾವಲಿನಿಂದಲೂ, ಜಾಗರೂಕತೆಯ ನಿರೀಕ್ಷಣೆಯಿಂದಲೂ ಹವಣಿಸುತಿದ್ದಾರೆ. ಇಂತಹ ಸಮಯದಲ್ಲಿ ಚೆಕಾಲಿನನು ತನ್ನ ಹಳೇ ಮನೆಯನ್ನು ಮುಟ್ಟಿದನು.

ಮನೆಯಲ್ಲಿ ತಾಯಿಯೂ ಹತ್ತು ವರ್ಷದ ತಮ್ಮನೂ ಇರಲಿಲ್ಲ. ಅವರು ಹಿಂದಕ್ಕೆ ಬೇರೆ ಸ್ಥಳಕ್ಕೆ ಹೋಗಿದ್ದರು. ಅವನು ತನ್ನ ಸಮ್ಮಂಧಿಕರ ಮನೆಯೊಂದಕ್ಕೆ ಹೋದನು. ಅವನ ಅನಾರೋಗ್ಯಾವಸ್ಥೆಯನ್ನು ನೋಡಿ ಅವರಿಗೆ ಕಡು ಮರುಕವಾಯಿತು. ಕೂಡಲೇ ಬೆಚ್ಚಗಾದ ಸ್ಥಳದಲ್ಲಿ ಅವನನ್ನು ಮಲಗಿಸಿ ಶುಷ್ರೂಸೆ ಮಾಡಿದರು. ಆ ಹಳ್ಳಿಯಲೆಲ್ಲ ಜರ್ಮನರು ತುಂಬಿಕೊಂಡಿದ್ದರು. ಗುಪ್ತಚಾರರು ವರದಿ ತಂದರು. ಪುಂಡ ಗೆರಿಲ್ಲಾ ಚೆಕಾಲಿನನು ಅಲ್ಲೇ ಇದ್ದಾನೆಂದು ತಿಳಿಯಿತು.

ಸರಿ, ಸುಸಜ್ಜಿತರಾದ ನಾಜೀ ಸೈನಿಕರ ಒಂದು ಪಡೆ ಅವನಿದ್ದ ಮನೆಯ ಕಡೆ ಬರುತಿತ್ತು, ಚೆಕಾಲಿನನಿಗೆ ಅದು ತಿಳಿದೊಡನೆ, ಅವನು ಎದೆಗುಂದಲಿಲ್ಲ. ತಪ್ಪಿಸಿಕೊಂಡು ಹೋಗಲು ಕೊನೆ ಪ್ರಯತ್ನವೊಂದನ್ನು ಮಾಡಿದನು. ತನ್ನಲ್ಲಿದ್ದ ಒಂದು ಚಿಕ್ಕ ಕೈ ಬೊಂಬನ್ನು ಬರುತ್ತಿರುವ ಸೈನಿಕರ ಮೇಲೆ ಬಿಸಾಡಿದನು. ಆದರೆ ದುರಾದೃಷ್ಟವಶಾತ್ ಅದು ಸಿಡಿಯಲಿಲ್ಲ. ರೇಗಿಕೊಂಡ ಜರ್ಮನರು ರಭಸದಲ್ಲಿ ಮತ್ತೆ ಮನೆ ನುಗ್ಗಿ ಅವನನ್ನು ಬಂಧಿಸಿದರು.

ಜ್ವರ ಪೀಡಿತನೂ ತರುಣನೂ ಆದ ಚೆಕಾಲಿನನು ತಮಗೆ ಬೇಕಾದ ಗುಟ್ಟನ್ನು ತಿಳಿಸುವನೆಂದೂ ಜರ್ಮನ್ ಕೆಪ್ಟನನು ನಂಬಿದ್ದನು. ಆದರೆ ಆ ವೀರ ರಷ್ಯನ್ ಬಾಲಕನು ಮಾತ್ರ ಅಂಥಹ ದೇಶದ್ರೋಹಿ ಅಲ್ಲ. ಅವನನ್ನು ಹೊಡೆದರು, ಬಡಿದರು, ಅವರಿಗೆ ತನ್ನ ಸಂಗಾತಿಗಳಿರುವ ಸ್ಥಳ, ಅವರ ಚಟುವಟಿಕೆಗಳನ್ನು ಅವನು ಜೀವ ಹೋದರೂ ಹೊರಗೆಡಹುವವನಲ್ಲ. ಕೋಪಗೊಂಡ ಒರ್ವ ಜರ್ಮನನು ತನ್ನ ಬಂದೂಕ್ಕೆ ಸಿಕ್ಕಿಸಿದ ಚೂರಿಯಿಂದ ಅವನ ಕಾಲಿಗೆ ಕುಕ್ಕಿದನು. ದಪ್ಪವಾದ ಬೂಟ್ಸುಗಳಿಂದ ರಕ್ತವು ಹರಿಯ ತೊಡಗಿತು. ಒಂದು ಚೀತ್ಕಾರವನ್ನೂ ಮಾಡದೇ ಹಲ್ಲುಗಳನ್ನು ಕಚ್ಚುತ್ತಾ ಮಹಾ ವೇದನೆಯಿಂದ ನೊಂದ ಆ ವೀರ ಗೊರಿಲ್ಲನು ಬಾಯಿ ಬಿಡಲೊಲ್ಲ. ಮತ್ತೆ ಒದೆದರು, ಇಲ್ಲ, ಇಲ್ಲ, ಎಂದೆಂದಿಗೂ ಇಲ್ಲ. 'ಅವನನ್ನು ಊರಿನ ಮಧ್ಯ ಮಾರ್ಗದಲ್ಲಿ ತೂಗ ಹಾಕಿರಿ' ಎಂದು ನಿರಾಶೆಗೊಂಡ ಕೆಪ್ಟನನು ಆಜ್ಞೆ ಕೊಟ್ಟ.

ಪ್ರಶಾಂತವಾದ ಮೌನದಿಂದ ಚೆಕಾಲಿನನು ಕೇಳಿದನು. ಇನ್ನು ಕೆಲವೇ ಕ್ಷಣಗಳಲ್ಲಿ ತನ್ನ ಮರಣವು ಸಿದ್ಧ. ತಾಯಿಯ ಕಳವಳದ ಸಂಚೇತವು ಅವನಿಗೆ ನೆನಪಾಯಿತು. ತಂದೆಯನ್ನು ನೆನದು ಕೊಂಡನು. ತಮ್ಮ ವಿಟ್ಯಾನ ಜ್ಞಾಪಕ ಬಂತು. ತನ್ನ ಬಾಲ್ಯ ಸಹಪಾಠಿಗಳ, ತನ್ನ ಸಂಬಂಧಿಕರ ನೆನಪು ಬಂತು. ಆದರೆ ತನ್ನ ದೇಶವನ್ನು ಮನಸ್ಸಿಗೆ ತಂದು ಕೊಂಡು ಆ ಧೀರ ಸಾಹಸಿಯು ಮೃತ್ಯುವನ್ನು ಎದುರಿಸುವವನಾದನು.

ಚೂರಿಯಿಂದ ಚುಚ್ಚಲ್ಪಟ್ಟ ಕಾಲಿನಿಂದ ನಡೆಯುವುದಕ್ಕಾಗುವುದಿಲ್ಲ. ಕುಂಟುತ್ತಾ ಹೋದನು. ಆದರೂ ಕಣ್ಣಿನಲ್ಲಿ ಒಂದು ಬೊಟ್ಟೂ ಉದರಲಿಲ್ಲ. ಚಿಕ್ಕಂದಿನಿಂದ ನೋಡಿದ ರೈತರೆಲ್ಲರೂ ಅಲ್ಲಿ ಬರಬೇಕೆಂ ಆಜ್ಞೆ ಮಾಡಲಾಯಿತು. 'ಗೊರಿಲ್ಲನಿಗೆ ಸಿಕ್ಕುವ ಶಿಕ್ಷೆ ಇದೇ" ಎಂದು ಬರೆಯಬೇಕೆಂದೂ ಒಂದು ಹಲಗೆ ಅವನ ಕೈಗೆ ಕೊಟ್ಟರು. ಮರಣಕ್ಕೆ ಎದೆಯೊಡ್ಡಿದ ಅವನು ಇದಕ್ಕೆ ಒಪ್ಪುವನೇ? ಕಡೆಗೊಬ್ಬ ಜರ್ಮನನೇ ಅದನ್ನು ಬರೆದು ಅವನಿಗೆ ಕೊರಳಿಗೆ ತೂಗ ಹಾಕಿದನು. ಕೊನೆಗೆ ಜರ್ಮನರನ್ನು ಉದ್ದೇಶಿಸಿ ಚೆಕಾಲಿನನೆಂದ 'ನೀವು ನಮ್ಮೆಲ್ಲರನ್ನು ಗಲ್ಲಿಗೇರಿಸಲಾರಿರಿ. ನಾವು ಇನ್ನೂ ಬಹಳ ಮಂದಿ ಇದ್ದೇವೆ. ತಿಳಿಯಿರಿ.'

ಅವನ ಕುತ್ತಿಗೆಗೆ ಹಗ್ಗ ಬಿಗಿಯಲಾಯಿತು. ಆಗಲೂ ಶೂರ ಷೂರಾನು ಕಳವಳ ಗೊಳ್ಳಲಿಲ್ಲ. ರಷ್ಯನ್ ರಾಷ್ಟ್ರಗೀತೆಯನ್ನು ಹಾಡಲಾರಂಭಿಸಿದನು. ಭಲೇ ಚೆಕಾಲಿನ್! ಭಲೇ ವೀರ ಯುವಕ! ಹಗ್ಗವು ಕೊರಳನ್ನು ಬಿಗಿಯುತ್ತ ಉಸಿರು ಕಟ್ಟುವ ವರೇಗೂ ರಾಷ್ಟ್ರ ಗೀತದ ಸ್ಫೂರ್ತಿದಾಯಕ ರಾಗದ ಕೊನೆಯ ಪಲ್ಲವಿಯ ಸೊಲ್ಲು ಅವನ ತುಟಿಯಿಂದ ಹೊರ ಬಿದ್ದು ಅತ್ಯಂತವಾಯಿತು. ಅಲ್ಲೊಬ್ಬ ರಷ್ಯನ್ ವೀರನ ಅಂತ್ಯವೂ ಆಯಿತು. "ಗೊರಿಲ್ಲನ ಸಮಾಪ್ತಿ" ಎಂಬ ಹಲಗೆಯನ್ನು ಬರೆದು ಜರ್ಮನರು ಅಲ್ಲಿ ಮತ್ತೆ ತೂಗ ಹಾಕಿದರು.

ಸಿಹಿ ಸುದ್ದಿ ಸಂಗ್ರಹ

ಭೂಮಿಯ ಮೇಲೆ ಬೀಳುವ ಸೂರ್ಯನ ಬಿಸಿಲಿನ ಉಷ್ಣವನ್ನು ಒಟ್ಟುಗೂಡಿಸಿದರೆ ಒಂದು ಮಿನಿಟಿನಲ್ಲಿ ೧೮೬೦೦೦ ಖಂಡಿ ಭಾರದ ನೀರನ್ನು ಕುದಿಸಬಹುದು. ಇಡೀ ಭೂಮಿಯನ್ನು ೧೧೮ಅಡಿ ದಪ್ಪದ ಹಿಮಗಡ್ಡೆಯ ಪದರಿನಿಂದ ಮುಚ್ಚಿದರೆ ೯೨ ಮಿಲಿಯ ಮೈಲು ದೂರದ ತನ್ನ ಬಿಸಿಲಿನಿಂದ ಸೂರ್ಯನು ಅದನ್ನು ೧ವರ್ಷದೊಳಗೆ ಕರಗಿಸಿ ಬಿಡುವನು. ಸೂರ್ಯನ ಪ್ರಕಾಶವು ಚಂದ್ರನಕಿಂತ ೫೬೦ಸಾವಿರ ಪಾಲಷ್ಟು ಹೆಚ್ಚು ಪ್ರಕಾಶದ್ದಿದೆ.

* * *

ಧ್ರುವಸಾಗರದ ಬಳಿಯ ಅತ್ಯಂತ ಚಳಿ ಪ್ರದೇಶದಲ್ಲಿರುವ ಐಸ್‌ಲೆಂಡ್‌ನಲ್ಲಿ ಕುದಿಯುವ ನೀರಿನ ಬುಗ್ಗೆಗಳಿವೆ. ಅಲ್ಲಿಯ ಜನರು ಆಹಾರ ಬೇಯಿಸಲಿಕ್ಕೂ ವಸ್ತ್ರ ಮಡಿಮಾಡಲಿಕ್ಕೂ ಅದನ್ನು ಉಪಯೋಗಿಸುತ್ತಾರೆ.

* * *

೧೯೨೩ರಲ್ಲಿ ಜಪಾನಿನ ಟೊಕಿಯೊ ಮತ್ತು ಯೊಕೊಹಾಮಾ ನಗರಗಳಲ್ಲಿ ಭೂಕಂಪವುಂಟಾಗಿ ೧೪೨೮೦೦ ಜನರು ನಾಶವಾದರು. ೧೦೩೭೩೩ ಜನರು ಘಾಯಗೊಂಡರು. ೫ ಲಕ್ಷ ಮನೆಗಳು ಹಾಳಾಗಿ ಹೋಗಿ ಸುಮಾರು ೨೦ ಲಕ್ಷ ಜನರು ಮನೆಮಾರು ಇಲ್ಲದವರಾದರು. ಆ ಭೂಕಂಪದಿಂದ ಜಪಾನಿಗೆ ೫೫೦ಲಕ್ಷ ಪವನಿನ ಸೊತ್ತು ನಷ್ಟವಾಗಿದೆ.

* * *

ಸಹಾರಾ ಮರುಭೂಮಿಯು ಜಗತ್ತಿನ ಅತೀ ದೊಡ್ಡ ಮರಳು ಕಾಡು. ಅದರ ವಿಸ್ತಾರವು ಯುರೋಪ್ ಖಂಡಕ್ಕಿಂತಲೂ ಹೆಚ್ಚಾಗಿದೆ. ಅಲ್ಲಿನ ಉಷ್ಣವು ೧೪೦ ಡಿಗ್ರಿಗಳಿಗೂ ಮಿಕ್ಕಿರುತ್ತದೆ—ಪೇಶಾವರದ ಉಷ್ಣತೆ ೧೧೦ಡಿಗ್ರಿ.

* * *

ಮುತ್ತುಗಳ ಹೊಳಪಿನ ಮೇಲ್ಭಾಗವು ತೆಳ್ಳಗಿನ ಒಂದು ಪರೆಯಂತಿದೆ. ಅದನ್ನು ಕೆತ್ತಿ ತೆಗೆದರೆ ಮತ್ತೆ ಒಳಗಡೆ ಉಳಿಯುವುದು ಬರೀ ಸುಣ್ಣದ ಕಲ್ಲು. ೧೬೩೩ರಲ್ಲಿ ಒಬ್ಬ ಪರ್ಶಿಯಾದೇಶದ ಅರಸನು ದೊಡ್ಡ ಮುತ್ತೊಂದಕ್ಕೆ ೬೪ಸಾವಿರ ಪವನು ಬೆಲೆ ಕೊಟ್ಟನಂತೆ.

* * *

ವಾಯುಮಂಡಲದ ಅತೀ ಎತ್ತರಕ್ಕೆ ಹೋದವರು ಅಮೇರಿಕದ ಕೆಪ್ಟನ್ ಸ್ಟಿವನ್ಸ್ ಮತ್ತು ಕೆಪ್ಟನ್ ಎಂಡರ್ಸನ್ ಎಂಬವರು. ಇವರು ೧೪ ಮೈಲು ತನಕ ಹೋಗಿರುವರು.

* * *

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 4—5—1945 [ಸಂಚಿಕೆ 18]

ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣ

ಈ ವರ್ಷದಲ್ಲಿ ಪ್ರಾಂತ್ಯದ ಪ್ರತಿಯೊಂದು ಜಿಲ್ಲೆಯಲ್ಲಿನ ಕೆಲವು ಗ್ರಾಮಗಳಲ್ಲಾದರೂ ಐದು ವರ್ಷಗಳ ಮೂಲ ವಿದ್ಯಾಭ್ಯಾಸವನ್ನು ಎಲ್ಲ ಜಾತಿಯ ಹುಡುಗ ಹುಡುಗಿಯರಿಗೆ ಕೊಡಲೇಬೇಕೆಂಬ ನಿರ್ಬಂಧವನ್ನು ಮದರಾಸು ಸರಕಾರದವರು ಜ್ಯಾರಿಗೆ ತರಲು ಇಪ್ಪತ್ತು ಲಕ್ಷ ರೂಪಾಯಿ ವಿಂಗಡಿಸಿಟ್ಟಿದ್ದಾರೆ; ಮಾತ್ರವಲ್ಲ ಕಡ್ಡಾಯ ಶಿಕ್ಷಣವಿರುವ ಸ್ಥಳಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಮಧ್ಯಾಹ್ನ ಊಟ ಕೊಡಲಿಕ್ಕೆಂದು ಇನ್ನೂ ಇಪ್ಪತ್ತು ಲಕ್ಷ ರೂಪಾಯಿ ವಿಂಗಡಿಸಿಟ್ಟಿದ್ದಾರೆ.

ಕಡ್ಡಾಯ ಶಿಕ್ಷಣ ಜ್ಯಾರಿಗೆ ತರುವ ಅಧಿಕಾರ ಆಯಾ ಜಿಲ್ಲೆಯ ಡ್ರಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಯದೆ. ಆದರೆ ಸರಕಾರವು ಸಾಕಷ್ಟು ಧನ ಸಹಾಯ ಕೊಡುವುದರಿಂದ ಪ್ರತಿಯೊಂದು ಜಿಲ್ಲೆಯ ಬೋರ್ಡಿನವರೂ ಈ ಯೋಜನೆಯನ್ನು ಮಾನ್ಯ ಮಾಡಿದ್ದಾರೆ.

ನಮ್ಮ ಜಿಲ್ಲಾ ಬೋರ್ಡು ಸಹಾ ಜಿಲ್ಲೆಯ ಇಪ್ಪತ್ತೇಳು ಗ್ರಾಮಗಳಲ್ಲಿ ಕಡ್ಡಾಯ ಶಿಕ್ಷಣಆರಂಭಿಸಬೇಕೆಂದು ನಿರ್ಧರಿಸಿಯದೆ. ಬೈಂದೂರು ಪಂಚಾಯತ್ ಗಡಿ, ಮುಲ್ಕಿ ಪಂಚಾಯತ್ ಗಡಿ, ಗಂಗೊಳ್ಳಿ, ಆನೆಗಳ್ಳಿ, ಬಸರೂರು, ಕೋಣಿ, ಕಿದಿಯೂರು, ಮಾರ್ಪಾಡಿ, ಪ್ರಾಂತ್ಯ, ಪುತ್ತಿಗೆ, ಸುರತ್ಕಲ್, ಇಡ್ಯ, ಹೊಸಬೆಟ್ಟು, ಪಣಂಬೂರು, ಬೈಕಂಪಾಡಿ, ಕುಳಾಯಿ, ತಣ್ಣೀರ್ ಬಾವಿ, ಕೊಡವೂರು, ಹೊಸದುರ್ಗ, ಉತ್ತರ ತ್ರಿಕಾರಪುರ, ದಕ್ಷಿಣ ತ್ರಿಕಾರಪುರ, ಹೊಸಬೆಟ್ಟು (ಮಂಜೇಶ್ವರ), ವಿಟ್ಲ, ವಿಟ್ಲ ಮೂಡ್ನೂರು, ವಿಟ್ಲ ಪಡ್ನೂರು, ಚಮ್ನಾಡು, ಕೋಳ್ನಾಡು- ಇವು ಆರಿಸಲ್ಪಟ್ಟ ಊರುಗಳು.

ಜಿಲ್ಲೆಯಲ್ಲಿನ ಎಂಟುನೂರು ಗ್ರಾಮಗಳಲ್ಲೂ ಕಡ್ಡಾಯ ಶಿಕ್ಷಣ ಬರಬೇಕಾದರೆ ಈ ಇಪ್ಪತ್ತೇಳರಲ್ಲಿ ಅದು ತೃಪ್ತಿಕರವಾಗಿ ಜ್ಯಾರಿಗೆ ಬರಬೇಕು. ಆದುದರಿಂದ ಅಧಿಕಾರಿಗಳೂ ಊರವರೂ ಈ ಹೊಸ ಯೋಜನೆಯಲ್ಲಿ ಉತ್ಸಾಹದಿಂದ ಕೆಲಸ ಮಾಡಬೇಕು. ಕಡ್ಡಾಯ ಶಿಕ್ಷಣದ ಪ್ರತಿ ಗ್ರಾಮದಲ್ಲಿ ಊರ ಅಧ್ಯರೂ ಗ್ರಾಮದಲ್ಲಿನ ಶಾಲೆಗಳ ಮುಖ್ಯೋಪಾಧ್ಯಾಯರೂ ಇಲಾಖಾ ಅಧಿಕಾರಿಗಳೂ ಸೇರಿದ ಸಮಿತಿಗಳು ಸ್ಥಾಪಿಸಲ್ಪಡುವ ಕ್ರಮವಿದೆ. ಸಮಿತಿಯವರು ಊರ ಹಿರಿಯರಿಗೆ ಬೋಧೆ ಕೊಟ್ಟು ಮಕ್ಕಳು ಸರಿಯಾಗಿ ಶಾಲೆಗೆ ಬರುವಂತೆಯೂ ಮಕ್ಕಳಿಗೆ ಅನುಕೂಲವಾಗುವಂತೆ ಶಾಲೆಗಳನ್ನು ವಿಸ್ತರಿಸುವಂತೆಯೂ ಮಧ್ಯಾಹ್ನ ಊಟದ ವ್ಯವಸ್ಥೆ ಸರಿಯಾಗಿ ನಡೆಯುವಂತೆಯೂ ನೋಡಿಕೊಳ್ಳಬೇಕು. ಸರಕಾರದವರು ಬೋರ್ಡಿನ ಮೂಲಕ ಮಧ್ಯಾಹ್ನ ಊಟಕ್ಕೆಂದು ಮಗುವಿಗೆ ದಿನಕ್ಕೆ ಒಂದಾಣೆ ದರದಲ್ಲಿ ಕೊಡಬಹುದು. ಇದು ಸಾಲದಿದ್ದುದರಿಂದ ಉಳಿದ ಹಣ ಊರ ಜನರ ವಂತಿಗೆಯಿಂದ ಭರ್ತಿಯಾಗಬೇಕು. ಸಮಿತಿಯ ಹಿತೋಕ್ತಿಯನ್ನು ಕೇಳದ ಮಕ್ಕಳನ್ನು ಶಾಲೆಗೆ ಕಳುಹಿಸದ ಹಿರಿಯರನ್ನು ದಂಡಿಸುವ ಪ್ರಶ್ನೆ ಸಹ ಸಮಿತಿಯ ಮುಂದೆ ಬರುವುದು.

ಊರ ಮುಖಂಡರ ಸಹಕಾರವೇ ಈ ಯೋಜನೆಯ ಮೂಲಾಧಾರವಾಗಿದ್ದರೂ ಅದರ ಮೇಲ್ವಿಚಾರಕ್ಕೂ ಸುವ್ಯವಸ್ಥೆಗೂ ತಕ್ಕ ಸಿಬಂದಿಯಿರಬೇಕೆಂಬುದನ್ನು ಯಾರು ಮರೆಯಬಾರದು. ಈಗ ಡಿ. ಬೋರ್ಡು ಶಾಲೆಗಳ ಆಡಳಿತೆಗೆಂದು ಒಬ್ಬ ಡಿ. ಬಿ. ಇ. ಒ. ಅವರೂ ಆರೇಳು ಮಂದಿ ಗುಮಾಸ್ತರೂ ಇದ್ದಾರೆ. ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಾಲೆಗಳಿಗೆಂದು ವೆಚ್ಚವಾಗುವ ಆರೇಳು ಲಕ್ಷ ರೂಪಾಯಿಗಳು ದುರ್ವ್ಯಯವಾಗದಂತೆ ನೋಡುವ, ಪ್ರತಿ ಶಾಲೆಯ ಉಪಾಧ್ಯಾಯರಿಗೆ ಸಕಾಲದಲ್ಲಿ ಸಂಬಳ ತೆರುವ, ಪ್ರತಿ ಶಾಲೆಯ ಏರಿಳಿತಗಳಿಗೆ ಲಕ್ಷ್ಯಕೊಟ್ಟು ಅವನು ಪಾಲಿಸಿ ಬರುವ, ಉಪಾಧ್ಯಾಯರ ವರ್ಗಾವರ್ಗಿ ಮತ್ತು ನೇಮಕ ಮಾಡುವ- ಇಂಥ ಕೆಲಸಗಳಲ್ಲೇ ಮಗ್ನರಾಗಿರುವ ಈಗಿನ ಸಿಬಂದಿಯನ್ನು ಹೆಚ್ಚಿಸದೆ ಹೊಸ ಯೋಜನೆಯು ತಕ್ಕ ರೀತಿಯಲ್ಲಿ ನಡೆಯಲಿಕ್ಕಿಲ್ಲವೆಂದು ನಮ್ಮ ಅಭಿಪ್ರಾಯ.

ಕಡ್ಡಾಯ ಶಿಕ್ಷಣವಿರುವಲ್ಲಿನ ೨೦ಯಾ ೨೫ ಶಾಲೆಗಳಿಗೊಬ್ಬರಂತೆ ಯೋಗ್ಯ ಸುಪರ್‌ವಾಯ್ಜರರಿದ್ದು ಅವರೆಲ್ಲ ಡಿ. ಬೋರ್ಡಿನ ಮೇಲ್ವಿಚಾರದಲ್ಲಿದ್ದರೆ ಪ್ರತಿಯೊಂದು ಕಡೆಯಲ್ಲೂ ಆಗಾಗ್ಗೆ ಹೋಗಿ ಊರವರ ಸಹಾಯ ಸಂಪಾದಿಸಲಿಕ್ಕೂ ಶಾಲೆಗಳು ಸರಿಯಾಗಿ ನಡೆಯುವಂತೆ ನೋಡಲಿಕ್ಕೂ ಸಾಧ್ಯವಾಗುವುದು. ಇಲ್ಲದಿದ್ದರೆ ಬರೇ ಒಂದಿಷ್ಟು ರೂಪಾಯಿಗಳನ್ನು ಚೆಲ್ಲಿದರೆ ವಿದ್ಯೆಯೇನು ಚಿಗುರಿ ಬರಲಿಕ್ಕಿಲ್ಲ. ನಮ್ಮ ಜನರಲ್ಲಿ ಹೊಸ ಹೊಸ ಸಂಸ್ಥೆಗಳನ್ನು ಸ್ಥಾಪಿಸುವ ಆತುರವಿದ್ದರೂ ಅವುಗಳು ಸರಿಯಾಗಿ ನಡೆಯುವಂತೆ ನೋಡಲು ತಕ್ಕ ಸಿಬಂದಿ ನೇಮಕ ಮಾಡುವ ಮನಸ್ಸು ಅನೇಕರಲ್ಲಿ ಕಂಡುಬಾರದಿದ್ದುದರಿಂದ ಈ ಪ್ರಶ್ನೆ ಎತ್ತುವ ಕಾರಣವಾಯಿತು.

ಒಟ್ಟಾರೆ ಯೋಗ್ಯ ರೀತಿಯಲ್ಲಿ ಈ ಯೋಜನೆ ನಡೆದು ಸಫಲವಾಗಿ ಕ್ಷಿಪ್ರದಲ್ಲೆ ಇಡೀ ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣ ಬರಲೆಂದು ಹಾರೈಸುತ್ತೇವೆ.

"ವಿದ್ಯೋದಯ"

ಯುದ್ಧದ ಅತ್ಯಾಚಾರಿಗಳಿಗೆ ನ್ಯಾಯ ಸಲ್ಲಬೇಕು

ಮಿತ್ರರಾಷ್ಟ್ರಗಳ ಮುಂದಿರುವ ಹಲವು ಪ್ರಶ್ನೆಗಳಲ್ಲಿ, ಮೇಲಿನ ಪ್ರಶ್ನೆಗೆ ಬಹಳ ಪ್ರಶಸ್ತಿಯು ಕೊಡಲಾಗಿದೆ. ಅಕ್ಷರಾಷ್ಟ್ರಗಳು—ಜರ್ಮನ್-ಜಪಾನೀ ಬಲಗಳು- ತಮ್ಮಿಂದ ಆಕ್ರಮಿಸಲ್ಪಟ್ಟ ಪ್ರದೇಶಗಳಲ್ಲಿ ಅತ್ಯಂತ ಕ್ರೂರತನದಲ್ಲಿ ಮಾನವತೆಗೆ ಸಲ್ಲದ ತರದಲ್ಲಿ ಭಯಾನಕ ಕೃತ್ಯಗಳನ್ನು ನಡೆಯಿಸಿರುವರು. ನಾಜೀ ಪ್ರಭಾವಿತ ಜರ್ಮನ್ ಬಲಗಳು "ಶ್ರೇಷ್ಠ ನಾವು ಭಾವ"ದಿಂದ ಉದ್ರೇಕಗೊಂಡು ರಶ್ಯನರನ್ನು ಕೀಳು ಜನರೆಂದು ಪರಿಗಣಿಸಿ ಅವರನ್ನು ಕಿತ್ತೋಗೆದು-ಅವರ ಪ್ರದೇಶಗಳನ್ನು ವಶಪಡಿಸಲು ಮಾಡಿದ ಯತ್ನದಲ್ಲಿ ನಡೆಯಿಸಿದ ಅತ್ಯಾಚಾರಗಳು ಸುಲಭದಲ್ಲಿ ಮರೆತುಹೋಗುವ ಹಾಗಿಲ್ಲ. ಹಾಗೆನೆ ತಮ್ಮಿಂದ ಆಕ್ರಮಿಸಲ್ಪಟ್ಟ ಇತರ ದೇಶಗಳಲ್ಲೂ ಜರ್ಮನರು ತುಂಬಾ ಅತ್ಯಾಚಾರಗಳನ್ನು ನಡೆಯಿಸಿರುವರು. ಇದೆತರದಲ್ಲಿ ಜಪಾನಿಯರು ಚೀನಾದ ಆಕ್ರಮಣದಲ್ಲಿ, ಬರ್ಮಾ, ಮಲೆಯಾ ಇತ್ಯಾದಿ ಶಾಂತಸಾಗರದ ಇತರ ಪ್ರದೇಶಗಳಲ್ಲಿ ಅತ್ಯಂತಕ್ರೂರಿಗಳಾಗಿ, ವರ್ತಿಸಿರುವರು. ಅಕ್ಷರಾಷ್ಟ್ರಗಳ ಈ ವರ್ತನಗಾಗಿ ಅವರಿಗೆ ನ್ಯಾಯಸಲ್ಲಬೇಕು,-ಈ ಯುದ್ಧದಲ್ಲಿ ಅತ್ಯಾಚಾರಗಳನ್ನು ನಡೆಯಿಸಿದ ಕ್ರಿಮಿನಲ್ ವ್ಯಕ್ತಿಗಳನ್ನು ಕೂಡಿಸಿ ವಿಚಾರಣೆ ನಡೆದು ಅವರಿಗೆ ನ್ಯಾಯಸಲ್ಲಬೇಕು, ಎಂದು ಮಿತ್ರರಾಷ್ಟ್ರಗಳ ನಿರ್ಧಾರವಾಗಿರುತ್ತದೆ. ಈ ವಿಚಾರಣೆಗಾಗಿ ಅಂತರಾಷ್ಟ್ರೀಯ ನ್ಯಾಯಮಂಡಳವೊಂದು ಚುನಾಯಿತವಾಗಬಹುದು. ಈ ಮಂಡಳದ ತೀರ್ಮಾನಗಳಿಗೆ ಸರಿಯಾಗಿ ತಪ್ಪಿತಸ್ಥರಿಗೆ ಸಲ್ಲಬೇಕಾದ ಶಿಕ್ಷೆಗಳು ವಿಧಿಸಲಾಗುವುದು.

ಹೀಗೆ ಅತ್ಯಾಚಾರಿಗಳ ವಿಚಾರಣೆ ನಡೆಯದೆ ಅವರನ್ನು ಹಾಗೆನೆ ಬಿಟ್ಟುಬಿಟ್ಟರೆ, ಅದರಿಂದ ಭಾವಿಲೋಕ ಶಾಂತಿಬೇಕಾದ ವಾತಾವರಣವು ಉಂಟಾಗದು, ಜರ್ಮನಿ ಇಟಲಿ, ಜಪಾನ್ ಮೊದಲಾದ ಪೆಸಿಷ್ಟ ರಾಷ್ಟ್ರಗಳು ತಮ್ಮ ಮೊದಲಿನ ಭಾವನೆಗಳನ್ನು ತಿದ್ದಿಕೊಂಡು ಪರಿವರ್ತನವು ನಡೆಯದು. ಈ ಜಗತ್ತನ್ನು ಶಾಂತಿನಿಲಯವಾಗಿ ಮಾಡುವ ಮಿತ್ರರ ಉದ್ದೇಶಕ್ಕೆ ಅದರಿಂದ ತುಂಬಾ ಹಾನಿಯು ಒದಗಬಹುದೆಂದು ಹೇಳಲಾಗಿದೆ.

ಯಾಲ್ಟಾದಲ್ಲಿ ನಿರ್ಣಯಿಸಿದಂತೆ, ಸಂಧಾನ ನಡೆಯಬೇಕಾದರೆ, ಜರ್ಮನ್ ಜನರು ಮೊದಲು ನಮ್ಮ ದೇಶದಲ್ಲಿರುವ ನಾಜೀ ಮುಖಂಡರನ್ನೂ, ಮಿತ್ರರಿಗೆ ಒಪ್ಪಿಸಲೆ ಬೇಕೆಂಬ, ಶರ್ತವು ಮಾಡಲಾಗಿದೆ. ಹಾಗೆನೆ ತಟಸ್ಥ ರಾಷ್ಟ್ರಗಳು ಈ ಯುದ್ಧಕ್ಕೆ ಕಾರಣವಾದ ಪೆಸಿಷ್ಟ ವ್ಯಕ್ತಿಗಳಿಗೆ ತಮ್ಮಲ್ಲಿ ಆಸ್ಪದ ಕೊಡದಂತೆ ಎಚ್ಚರಿಸಲಾಗಿದೆ.

ಈ ಯುದ್ಧವು ಮುಗಿದ ನಂತರ ಎರಡು ಪ್ರಾಮುಖ್ಯ ಘಟಣೆಗಳು ನಡೆಯಲಿವೆ. ಯುದ್ಧದಲ್ಲಿ ಅತ್ಯಾಚಾರಗಳನ್ನು ನಡೆಯಿಸಿದ ಜನರ ವಿಚಾರಣೆ ಶಾಂತಿಯು ಚಿರವಾಗಿ ನೆಲೆಸಿಲ್ಲುವಂತೆ ಸಾಧಿಸಲು ಒಂದು ಅಂತರ್ರಾಷ್ಟ್ರೀಯ ಸಂಘಟಣೆ. ಅತ್ಯಾಚಾರಿ ವಿಚಾರಣೆಗೆ ಬಹಳ ದೀರ್ಘಸಮಯ ತಗಲಬಹುದು. ಅತ್ಯಾಚಾರಿಗಳಿಗೆ ದೊರಕುವ ಪ್ರಾಯಶ್ಚಿತ್ತದಿಂದ ಭವಿಷ್ಯದಲ್ಲಿ ಈ ತರದ ಪ್ರಭಾವಗಳು ಜಿಗುರದಂತಾಗಿರಬಹುದು.

ಯುದ್ಧದಲ್ಲಿ ಅತ್ಯಾಚಾರ ನಡೆಯಿಸಿದವರಿಗೆ ತಕ್ಕ ಪ್ರಾಯಶ್ಚಿತ್ತವಾಗುವ ತರದಲ್ಲಿ ಅಂತರ್ರಾಷ್ಟ್ರೀಯ ನ್ಯಾಯ ಕ್ರಮದಲ್ಲಿ ಕೆಲವು ನೂತನ ಸೂತ್ರಗಳನ್ನು ಕೂಡಿಸಬೇಕಾಗಿ ಸೂಚನೆಗಳಾಗಿವೆ. ಸಂಯುಕ್ತ ರಾಷ್ಟ್ರಗಳು ಕ್ರಿಮಿನಲ್ ನ್ಯಾಯ ಪ್ರವೀಣರು, ಈ ಕಾರ್ಯದಲ್ಲಿ ಈಗ ತೊಡಗಿರುವರು.

ಮುಂದಕ್ಕೆ ಯುದ್ಧಗಳೆ ಉಂಟಾಗದಂತೆ ಸಾಧಿಸಲು, ಈ ತರದ ವಿಚಾರಣೆ ನಡೆದು ಶಿಕ್ಷೆ ವಿಧಿಸುವುದು ಅತೀ ಅವಶ್ಯವೆಂದು ಸಂಯುಕ್ತ ರಾಷ್ಟ್ರಗಳ ಮುಖಂಡರುಗಳು ಮನಗಂಡಿರುವರು.

ಕಟ್ ಬಳೆ

ಬರೆದವರು:- ಶ್ರೀ ಎಮ್. ವೆಂಕಟೇಶ ಪ್ರಭು

"ರಮೂ"!

"ಏನು?"

"ನಾನು ಬೊಂಬಾಯಿಗೆ ಹೋಗುವ ಆಲೋಚನೆ ಮಾಡಿದ್ದೇನೆ". ನಾನು ರೋಹಿಣಿಯ ಕಡೆಗೆ ನೋಡದೆ ಹೇಳಿದೆ.

"ಬೊಂಬಾಯಿ!" ಅವಳು ಆಶ್ಚರ್ಯದಿಂದ ಕೇಳಿದಳು.

"ಹೌದು ಬೊಂಬಾಯಿಗೆ. ಮಂಗೂಳೂರಿನವರಲ್ಲಾ ಅಲ್ಲಿ ಹೋಗಿ ಅಲ್ಲಿಯ ಜನಸಂಖ್ಯೆ ಹೆಚ್ಚು ಮಾಡಿರುವಾಗ ನಾನೇಕೆ ಅಲ್ಲಿಯ ಸಂಖ್ಯೆ ಹೆಚ್ಚು ಮಾಡಬಾರದು?" ಎಂದೆ.

"ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ"! ಎಂದು ಬಸ್ ಕಂಪೆನಿಯವರು ತಮ್ಮದೆ ಆದ ಕನ್ನಡದಲ್ಲಿ ಜಾಹೀರಾತು ಮಾಡಿದುದನ್ನು ನೀವು ನೋಡಲಿಲ್ಲವೆ?"

"ರಮೂ! ನಿನ್ನ ಹಾಸ್ಯ ಸಾಕು. ನೀನು ಸದ್ಯಕ್ಕೆ ಈಗ ವೀರಣ್ಣನ ಅವತಾರವಾಗುವುದು ಬೇಡ. ಬೊಂಬಾಯಿ ಅಂದರೆ ಬೊಂಬಾಯಿ! ನಾನು ಅಂದರೆ ನಾನು. ಹೋಗುವುದೆಂದರೆ ಶೀದಾ ಹೋಗುವುದೇ" ಎಂದೆ.

"ವಿಷಯವೇನು?" ಎಂದಳು.

"ವಿಷಯ! ಕಟ್ಟಿಗೆ ಡಿಪೊದಿಂದ ಹಿಡಿದು ಬೀಡಾ ಬೀಡಿ ಅಂಗಡಿಯವನೊಡನೆ ಕೂಡಾ ಸಾಲ ಮಾಡಿದ್ದೇನೆ. ಇದೆಲ್ಲಾ ನನಗೋಸ್ಕರವೆಂದು ತಿಳಿದಿದೆಯೇನು?"

"ಮತ್ತಾರಿಗೆ? ನನಗೋಸ್ಕರವೇ? ಮದುವೆಯಾಗಿ ಇಷ್ಟು ವರ್ಷವಾಯಿತು. ನೀವು ನನಗಾಗಿ ತಂದುದೇನು?" ಎಂದಳು.

ನಾನು ತಣ್ಣಗಾದೆ. ನಾನು ತಂದುದ್ದೇನು? ತಲೆ ತುರಿಸಿದೆ. ಡ್ರಿಲ್ ಮಾಸ್ತರರು "ನನ್ನ ಲೆಕ್ಕಕ್ಕೆ ಕಾಫಿ ಕುಡಿ" ಎಂದು "you drink coffee in my mathematics" ಎಂದು ಹೇಳಿ "ಲೆಕ್ಕ" ಶಬ್ದಕ್ಕೆ ಕೊಟ್ಟ ಅರ್ಥವನ್ನು ಮನಸ್ಸಿನಲ್ಲಿ ತಂದೆ. ಇಲ್ಲ, ಇವತ್ತು ನಾನು ಲೆಕ್ಕ ಮಾಡುವಂತಿಲ್ಲ. ರಮೂವಿನ ವಾಗ್ಬಾಣಕ್ಕೆ ಮರ್ಮಾಹತನಾದೆ.

"ಮಾತಾಡುವುದಿಲ್ಲವೇಕೆ? ಮನೆಗೆ ಕಟ್ಟಿಗೆ ತಂದದ್ದು ನನಗೋಸ್ಕರವಲ್ಲ. ನೀವು ಸಿಗರೇಟು ಎಳೆದು ಸಾಲ ಮಾಡುವುದೂ ನನಗೋಸ್ಕರವಲ್ಲ. ನನಗೆ 'ರವಕೆಗೆ ವಸ್ತ್ರ ತರುವುದು ನನ್ನ ಮೇಲಿನ ಮಮತೆಯಿಂದಲ್ಲ........"

'ಹಾಂ!' ಎಂದೆ ನಾನು! 'ರಮಾ! ಗೀರ್ವಾಣ ಭಾಷೆಯಲ್ಲಿ ಮಾತಾಡುತ್ತಿಯೇನು? ನಿನಗಾಗಿ ವಸ್ತ್ರ ತರುವುದು ನಿನಗೋಸ್ಕರವಲ್ಲವಂತೆ. ಮತ್ಯಾರಿಗೆ? ನನಗೋಸ್ಕರವೇ?' ತಣ್ಣಗಾಗಿ ಕೇಳಿದೆ ನಾನು.

'ಹೌದು; ನಿಮಗೋಸ್ಕರವೇ. ನಿಮ್ಮ ರಾಣಿಯು ಹರಿದ ವಸ್ತ್ರ ಹಾಕಿದರೆ ನಿಮ್ಮ ತಲೆಯು ಕೆಳಗೆ ಹೋಗುವುದೆಂದು ನೆನಸಿಯೇ ನೀವು ವಸ್ತ್ರ ತರುವುದು' ಎಂದಳು.

ನಾನು ಅವಕ್ಕಾದೆ, ಬೆವರಿದೆ. ನನ್ನ ರಮೂ ಇಷ್ಟು ಮಾತಾಡಲು ಕಲಿತಳೇನು? ಹೆಂಗಸರ ಪ್ರಪಂಚದಿಂದ ದೂರವಿರು ಎಂದು ಮಹಾತ್ಮ ಅರಿಸ್ಟಾಟಲನು ಹೇಳಿದ್ದು ಸುಳ್ಳಲ್ಲವೆಂದು ನನಗೆ ತೋರಿತು.

'ರಮೂ! ನಾನು ತಂದ ಹಣ ಎಲ್ಲಾ ತಿಂಗಳು ತಿಂಗಳಿಗೆ ಖರ್ಚಾಗುವುದು ನಿಜವೆ?' ಎಂದೆ.

'ಝುಗ್!' ಎಂದು ಶಬ್ದವಾಯಿತು. ನಾನು ಏನೆಂದು ನೋಡಿದೆ. ಪೆಟ್ಟಿಗೆಯ ಬೀಗದ ಕೈ ರಮೂವಿನ ಕೋಪದ ರಭಸಕ್ಕೆ ನನ್ನ ಬಳಿಯಲ್ಲಿ ಬಿತ್ತು.

'ನಾಳೆಯಿಂದ ಮನೆಯ ಖರ್ಚನೆಲ್ಲಾ ನೀವೆ ನೋಡಿ! ನನಗೇಕೆ ಪಾರುಪತ್ಯ! ಹಾಗೆ ಪೈ ಪೈ ಲೆಕ್ಕ ಇಡಲಿಕ್ಕೆ ನಾನೇನು ಸರಕಾರದ ಆರ್ಥಿಕ ಮಂತ್ರಿಯಲ್ಲ.'

'ಸರಕಾರದ ಆರ್ಥಿಕ ಮಂತ್ರಿ ಹಣದ ಪೈ ಪೈ ಲೆಕ್ಕ ಇಡುತ್ತಾರೆಂದು ಯಾರು ಹೇಳಿದ್ದು ನಿನಗೆ?' ನಾನು ನಗುವ ಪ್ರಯತ್ನಮಾಡಿ ಕೇಳಿದೆ.

ರಮೂ ಮಾತಾಡಲಿಲ್ಲ. ಕೋಪದಿಂದ ಕೆಂಪಾಗಿ ನೀಲವಾಗಿ ಈಗ ಕಪ್ಪಾಗಿದ್ದಳು.

'ರಮೂ!' ಎಂದೆ ಪ್ರೀತಿಯಿಂದ.

ಇಲ್ಲ, ಮಾತಿಲ್ಲ.

'ಕೋಪವೇಕೆ ರಮೂ ನೀನು ನನ್ನ ಮನೆಗೆ ಬಾರದಿರುತಿದ್ದರೆ ಬೊಂಬಾಯಿ ಫೂಟ್‌ಪಾತಿನ ಗೆಳೆತನ ನನಗೆ ಯಾವಾಗಲೊ ಆಗುತಿತ್ತು.' ಎಂದೆ.

ಕೊಂಚ ಮುಗುಳ್ನಕ್ಕಳು ರಮೂ!

'ನಿಮ್ಮಲ್ಲಿ ಕೊಂಚ ಪುಂಡುತನವಿದೆ.' ಎಂದಳು.

"ಪುಂಡುತನ! ರಾಷ್ಟ್ರೀಯ ಯುದ್ಧ ಮುಖದ ಅವಸಾನವಾದ ಮೇಲೆ ನೀನು ಇದನ್ನು ಹೇಳಿದ್ದು ಒಳ್ಳೇದಾಯಿತು. ಇಲ್ಲದಿದ್ದರೆ 'ಪುಂಡರನ್ನು ಓಡಿಸಿ'ರೆಂದು ಹೇಳಿ ನನ್ನನ್ನು ಯಾವಾಗ ಓಡಿಸುತ್ತಿದ್ದರೋ ಏನೊ!'

'ನನಗೆ! ಕಟ್ ಬಳೆ ಬೇಕು' ಎಂದಳು. ಅವಳ ಕೆನ್ನೆ ನನ್ನ ಭುಜದ ಮೇಲಿತ್ತು.

'ಇದೆಂತಹ ಹೊಸರೋಗ!' ಎಂದೆ.

'ಕಟ್ ಬಳೆ ಎಂದರೆ ಗೊತ್ತಿಲ್ಲವೇನು?' ಎಂದೊಮ್ಮೆ ನಕ್ಕಳು.

'ಇಲ್ಲ ಗೊತ್ತಿಲ್ಲ. ಇದು ವರೆಗೆ ಒಂದು ಮಾವಿನ ಹಣ್ಣನ್ನು ಕೂಡಾ ನನ್ನ ಕೈಯಿಂದ ಕಟ್ ಮಾಡದ ನನ್ನಂಥಾ ಅಹಿಂಸಾವಾದಿಗೆ ಅದು ತಿಳಿಯುವುದು ಹೇಗೆ?' ಎಂದು ಕನ್ನಯಲಾಲ ಮುನ್ಷಿಯವರಂತೆ ಕೊಂಚ ಹೂಂಕರಿಸಿದೆ.

'ರಬ್ಬರು ಬಳೆಗಳಿಗೆ ಬಂಗಾರದ ಕಟ್ಟುಗಳನ್ನಿಟ್ಟರೆ ಅದು 'ಕಟ್ ಬಳೆ' ಯಾಗುವುದು' ಎಂದು ದೊಡ್ಡ ಸಿದ್ಧಾಂತವೊಂದನ್ನು ಕೆಲವೇ ಶಬ್ದಗಳಲ್ಲಿ ವಿವರಿಸುವಂತೆ ಹೇಳಿದಳು.

'ಈ ಬಳೆ ಹಾಕದಿದ್ದರೆ ಪ್ರಾಣಕ್ಕೆ ಏನೂ ಅಪಾಯವಿಲ್ಲವಷ್ಟೆ!' ಎಂದೆ.

'ದೇವಾ! ಗಂಡಸರಿಗೆ ಹೃದಯವಿಲ್ಲ.' ಎಂದು ಕಣ್ಣೀರಿಲ್ಲದೇನೇ ಅಳುವ ಪ್ರಯತ್ನ ಮಾಡಿದಳು.

'ಆದರೆ ಹಣವೆಲ್ಲಿದೆ? ಸಾಲದಿಂದ ನಾನು ಸುಣ್ಣವಾದದ್ದು ಗೊತ್ತುಂಟು ನಿನಗೆ?' ಚಿಕ್ಕ ಧ್ವನಿಯಲ್ಲಿ ಹೇಳಿದೆ ನಾನು.

'ಸಾಲ ಎಲ್ಲರಿಗೂ ಉಂಟು ಆಚೆ ಮನೆ ಕುಸುಮೂ, ಅವಳ ತಂಗಿ.....'

'ಸಾಕು ನಿನ್ನ ಕುಸುಮನ ಭಾಗವತ! ಎಲ್ಲರೂ ಸಾಯುತ್ತಾರೆಂದು ನೀರಿಲ್ಲದ ಬಾವಿಗೆ ಹಾರುವುದು ನನಗೆ ಸಾಧ್ಯವಿಲ್ಲ' ಎಂದು ಪುನಹ ಹೂಂಕರಿಸಿದೆ.

'ಹಣಕ್ಕೆ ನೀವು ಹೆದರಬೇಕಾಗಿಲ್ಲ. ನೀವು ಕೊಟ್ಟ ಹಣದಲ್ಲಿ ಉಳಿಸಿ ಇಟ್ಟಿದ್ದೇನೆ.' ಎಂದು ಮಂದ ಹಾಸ ಬೀರಿದಳು.

'ಆರ್ಥಿಕ ಮಂತ್ರಿಯೆ! ಕಟ್ಟಿಗೆ ಭಟ್ಟರಿಗೆ ಮತ್ತು ಬೀಡದಂಗಡಿ ಕ್ಯಾಂಪನಿಗೆ ನಾನು ಕೊಡಬೇಕೆಂದರೆ ನಿನ್ನ ಹತ್ತಿರ ಹಣವಿಲ್ಲ. ನಿನಗೆ ಕಟ್, ಪಟ್, ಲಟ್ ಬಳೆ ಮಾಡಬೇಕೆಂದರೆ ಹಣ ಉಂಟು.'

'ಒಂದು ದಿನವಾದರೂ ನನ್ನ ಮಾತು ನೀವು ಕೇಳಿದುದಿಲ್ಲ. ನಾನೆಂದರೆ ಬೀದಿಯಕಸ!' ಎಂದು ಈಗ ಕಣ್ಣೀರು ಇಳಿಸಿ ಕೂಗಿದಳು.

ರಮೂವಿನ ಕಣ್ಣೀರೆಂದರೆ ನಾನು ಬರ್ಫನಂತಾಗುವುದೇ ಖಂಡಿತ. ಕೂಡಲೇ ಹಿಮದಂತೆ ಕರಗಿದೆ.

'ಅಳಬೇಡ ರಮೂ! ಕೊಡು ನಿನ್ನ ಹಣ! ನಾಳೆಯೇ ಮಾಡಿಸಿ ತರುತ್ತೇನೆ. ಮುಖ್ಯ ನೀನು ಕೂಗಬಾರದು! ಮನೆಗೆ ಅವಲಕ್ಷಣವದು!' ಎಂದು ಹೇಳಿದೆ. ಬಿಸಾಡಿದ ಬೀಗವ ಕೈಯನ್ನು ತೆಗೆದು ರಮೂ ನೋಟುಗಳನ್ನು ಎಣಿಸಿಕೊಟ್ಟಳು.

ಮರುದಿನ ನಮ್ಮೂರಿನ ಹೆಂಗಸರಲ್ಲಿ ಹೊಸ ಹೊಸ ಫೇಶನಿನ ಜಾಡ್ಯ ಹಬ್ಬಿಸುವ ಅಕ್ಕಸಾಲಿಗನಲ್ಲಿ ಹೋಗಿ ಆತನ ಬೆನ್ನು ಸವರಿ ಬಳೆ ಮಾಡಿಸಿ ತಂದೆ.

'ರಮೂ!' ಮನೆಯ ಮೆಟ್ಟಲೇರುವಾಗಲೇ ಕರೆದೆ.

'ಬಳೆ ತಂದರೇನು?'

'ಹೌದು ಈ ಲಟಿಪಿಟಿ ಬಳೆಯ ಬಾಳ್ವೆ ನಿಮಿಷದೆಂದು ತಿಳಿದರೂ ತಂದೆ. ನಿನ್ನ ಕಣ್ಣೀರಿಗೆ ಹೆದರ ಬೇಕಾಯಿತಲ್ಲ.'

'ಚ್ಚಿ! ಎಷ್ಟು ಚಂದವಾಗಿದೆ!' ಎಂದು ಬಿಸಿಲಿಗೆ ನಾನು ಬಂದವನೆಂದು ಮರೆತು ಬಳೆ ತೋರಿಸುವುದಕ್ಕೆ ಕುಸುಮಳ ಬಳಿ ಓಡಿದಳು.

'ಬಳೆ ಒಳ್ಳೇದಾಗಿದೆಯೆಂದು ಕುಸುಮಾ ಹೇಳಿದಳು.' ಹರ್ಷದಿಂದ ನಲಿಯುವ ಜಿಂಕೆಯ ಮರಿಯಂತೆ ರಮಾ ನುಳಿದಳು.

'ಸಾಕು! ನಿನಗೆ ಸರ್ಟಿಫಿಕೇಟು ಕೊಡಲು ಅವಳೊಬ್ಬಳು.'

'ಹೋಗಿರಿ!' ಎಂದಳು.

'ಹೋಗಿರಿ! ಖಂಡಿತವಾಗಿಯೂ ಹೋಗುವುದೆ? ಬಿಸಿಲಿಂದ ನನಗೆ ತಲೆ ತಿರುಗುತ್ತದೆ. ಅವಳು 'ಹೋಗಿರಿ' ಅಂತೆ.'

ರಮೂ ಪ್ರಸನ್ನತೆಯಿಂದ ಮುಗುಳ್ನಕ್ಕು ಒಳ ನಡೆದಳು.

ಮರುದಿನ ನಾನು ಮನೆಗೆ ಬರುವಾಗ ರಮೂ ಚಿಕ್ಕ ಮಗುವಿನಂತೆ ಅಳುತಿದ್ದಳು.

'ಏನಾಯಿತು ರಮೂ!' ಎಂದು ಗಾಬರಿಯಿಂದ ಕೇಳಿದೆ.

'ನನ್ನ ಅದೃಷ್ಟ! ಎಂದು ಪುನಹ ವಾದ್ಯ ಬಾರಿಸಿದಳು.

'ಅದೃಷ್ಟ ನಿನ್ನದೇ! ಆಯಿತೇನೆಂದು ಹೇಳು'

'ಕುಸುಮಳ ಮಗು ಇಲ್ಲಿ ಬಂದಿತ್ತು. ಅದರೊಡನೆ ಆಡುವಾಗ ಹೊಸ ಬಳೆ ನೋಡಿ.....' ಪುನಹ ಅಳು.

'ಹೊಸ ಬಳೆ ನೋಡಿ ಅದು ನುಂಗಿತೆ?' ಎಂದೆ.

'ಅಯ್ಯೋ ನಿಮಗೆ ಪ್ರಾಣ ಹೋಗುವಾಗಲೂ ಹಾಸ್ಯವೇ?' ಎಂದು ಪುನಹ ಸ್ವರ ದೊಡ್ಡದು ಮಾಡಿ ಅತ್ತಳು.

'ಏನಾಯಿತು ರಮೂ!'

'ಮಗು ಅತ್ತಿತೆಂದು ಬಳೆ ತೆಗೆದು ಅದರ ಕೈಗೆ ಕೊಟ್ಟು ನಾನು ಹಿಂದಿರುಗುವಷ್ಟರಲ್ಲಿ ಮಗು ಬಳೆಯನ್ನು ತುಂಡು ಮಾಡಿತ್ತು.' ಎಂದು ಮಗುವಿನಿಂದ ಅಗಲಿದ ತಾಯಿಯಂತೆ ರೋಧಿಸಿದಳು.

'ಒಳ್ಳೇಯದೇ ಆಯಿತು. ಕಟ್ಟಿಗೆ ಭಟ್ಟರ ಮತ್ತು ಬೀಡದಂಗಡಿಯವನ ಶಾಪ ತಗಲಿತು. ಅದಕ್ಕೆ ಈಗ ನೀನು ರಂಭಾಟ ಮಾಡುವುದೇಕೆ? ಪುನಹ ಒಂದು ಜೋಡು ತರಲು ನಿನ್ನ ಗುಲಾಮ ಇದ್ದಾನಲ್ಲ ಇಲ್ಲಿ!'

'ನನಗೆ ಅಂತಹ ಬಳೆಯೇ ಬೇಡ.' ಎಂದಳು.

'ಆಚೆ ಮನೆ ಕುಸುಮಾ, ಅವಳ ತಂಗಿ ....'ರಮೂವನ್ನು ಕೆಣಕಿದೆ.

'ಅವರ ಸುದ್ದಿಯನ್ನು ಎತ್ತಬೇಡಿ' ಎಂದಳು.

'ಹಾಗಾದರೆ ಆ ಬಳೆಯ ಬಂಗಾರ ತೆಗೆದು ಮಾರಿ ಬಂದ ಹಣದಿಂದ ಸಾಲ ತೀರಿಸುವೆನು?'

'ಹುಂ!' ಎಂದಳು.

'ನಾನು ಮನೆಗೆ ಕಟ್ಟಿಗೆ ತಂದದ್ದು ನಿನಗೋಸ್ಕರವಲ್ಲ.'

'ನನ್ನನ್ನು ಕೆಣಕಬೇಡಿ!' ಎಂದಳು.

'ನಾನು ಸಿಗರೇಟು ಎಳೆದು ಸಾಲ ಮಾಡಿದ್ದು ನಿನ.....'

'ನೋಡಿ, ಪುನಹ ಕೋಪ ಬರುತ್ತದೆ. ನನಗೆ!' ಎಂದು ಕೋಪದ ಲಕ್ಷಣ ತೋರಿಸದೆ ಹೇಳಿದಳು.

'ಹಾಗಾದರೆ ಲಟಿ ಪಿಟಿ ಬಳೆ ಬೇಡವಲ್ಲವೇ'

'ಬೇಡ!'

'ರಮೂ! ಮೇರಿ ಮಲಿಕಾ! ನಿನ್ನಂಥಾ ಪತ್ನಿಯಿದ್ದರೆ ಸಾನ್‌ಫ್ರಾನ್ಸಿಸ್ಕೊ ಪರಿಷತ್ತಿಗೆ ನಾನೇ ನಾಯಕನಾಗಬಹುದು.' ಎಂದೆ.

'ಸಾಕು ನಿಮ್ಮ ಹಾಸ್ಯ' ಎಂದಳು.

'ನನ್ನ ರಮೂ!' ಎಂದು ಹೇಳುವಷ್ಟರಲ್ಲಿ ರಮೂ ಪಲಾಯನ ಮಾಡಿದಳು.

'ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ' ಎಂದು ಕ್ರಿಸ್ತ ಪೂರ್ವದ ಪದ್ಯವೊಂದನ್ನು ಹೇಳುತ್ತಾ ಒಳನಡೆದೆ.

ದಿನವಹಿ ಉಪಯೋಗದ ಲೋಹದ ಪಾತ್ರಸಾಮಾನುಗಳು

ಬಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಫ್ರಾಂಕ್ಲಿನ್ ಡಿಲಾನೊ ರೂಸವೆಲ್ಟ್
ಹೆರ್ರಿ ಎಸ್. ಟ್ರುಮೆನ್

ಕಳೆದ ೧೨ ವರ್ಷಗಳಿಂದ ಅಮೇರಿಕದ ಅಧ್ಯಕ್ಷರಾಗಿದ್ದು ಮೊನ್ನೆ ತಾನೆ ಕಣ್ಮರೆಯಾದ ರೂಸವೆಲ್ಟ್ ಮತ್ತು ಅಂದೇ ಗದ್ದುಗೆಯೇರಿದ ಉಪಾಧ್ಯಕ್ಷ ಟ್ರುಮೆನ್-ಇವರಿಬ್ಬರ ನಿತ್ಯ ಜೀವನದ ಕೆಲವು ನೋಟಗಳು ಇಲ್ಲಿ ಕೊಡಲ್ಪಟ್ಟಿವೆ. ಈ ಐತಿಹಾಸಿಕ ಪುರುಷರ ವ್ಯಕ್ತಿತ್ವವು ಹೇಗೆ? ಅವರ ಹುಚ್ಚು ಮೆಚ್ಚುಗಳೇನು? ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ.

ಏಪ್ರಿಲ್ ೧೨, ೧೯೪೫. ಮುಸ್ಸಂಜೆಯ ಹೊತ್ತು. ವಾಷಿಂಗ್‌ಟನ್ನಿನ ಶ್ವೇತ ಭವನದಲ್ಲಿ ಹೆರ್ರಿ. ಎಸ್. ಟ್ರುಮೆನರು ಅಧಿಕಾರ ಪ್ರತಿಜ್ಞೆಯನ್ನು ತೆಗೆದುಕೊಂಡು, ಅಮೇರಿಕದ ಮೂವತ್ತಮೂರನೆಯ ಅಧ್ಯಕ್ಷರಾದರು. ಆಗ ಅಲ್ಲಿ ನೆರೆದ ಜನಸ್ತೋಮ ಕಿರಿಯದು. ಆದರೆ ನೆರೆದವರಲ್ಲಿ ಹಲವರ ಕಣ್ಣುಗಳು ಕಂಬನಿದುಂಬಿದ್ದುವು. ಕಾರಣ, ಕೇವಲ ಒಂದುವರೆ ತಾಸು ಮುಂಚೆ, ಕಳೆದ ೧೨ ವರ್ಷಗಳಿಂದ ಅಧ್ಯಕ್ಷ ಪದವಿಯಲ್ಲಿ ರಾಜಿಸುತಿದ್ದ ರೂಸವೆಲ್ಟ್‌ರ ಆಕಸ್ಮಿಕ ಮರಣ ವಾರ್ತೆಯು ಹರಡಿತ್ತು. ಅಮೇರಿಕದ-ಏಕೆ ಇಡಿ ಪ್ರಪಂಚದ- ಇತಿಹಾಸದಲ್ಲಿ ಮಹತ್ವಪೂರ್ಣವಾದ ಈ ಘಟನೆಯ ನಾಯಕರು ಅರ್ಥಾತ್, ರೂಸವೆಲ್ಟ್-ಟ್ರುಮೆನರು ಸ್ವಭಾವತಃ ಎಂತಹ ವ್ಯಕ್ತಿಗಳೆಂದು ತಿಳಿಯಲು ಎಲ್ಲರೂ ಆತುರಪಡಬಹುದು. ಅದಕ್ಕಾಗಿಯೇ ಅವರೀರ್ವರ ವ್ಯಕ್ತಿ ಚಿತ್ರಗಳನ್ನಿಲ್ಲಿ ಕೊಡಲಾಗಿದೆ.

ರೂಸವೆಲ್ಟ್‌ರು

ಎಂತಹರೊಡನೆಯೂ ಅಲ್ಪ ಕಾಲದಲ್ಲೇ ಸಲಿಗೆಯಿಂದ ಕೂಡಿ-ಕಲೆವುದರಲ್ಲಿ ರೂಸವೆಲ್ಟ್‌ರು ಅಪ್ರತಿಮರಾಗಿದ್ದರು. ಹೀಗಾಗಿ ಅವರಿಗೆ ಜನತೆಯ ಮೇಲೆ ಪ್ರೀತಿ, ಜನರಿಗೆ ಅವರ ಮೇಲೆ ಗೌರವ, ವಿಶ್ವಾಸ ತುಂಬಿತ್ತು.

ರೂಸವೆಲ್ಟ್‌ರು ಸದಾ ಕಾರ್ಯಾತುರರಾಗಿದ್ದರು. ವಿರಾಮ ಕಾಲದಲ್ಲಿಯೂ ಅವರಿಗೆ ಹಲವು ಕುಶಲ ವೃತ್ತಿಗಳಿದ್ದುವು. ಹಡಗಿನಲ್ಲಿ ಕುಳಿತುಕೊಂಡು, ಆಳವಾದ ಸಮುದ್ರದಲ್ಲಿಯ ಮೀನುಗಳನ್ನು ಹಿಡಿಯುವುದೆಂದರೆ ಅವರಿಗೆ ಆನಂದ ಅಷ್ಟಿಷ್ಟಲ್ಲ. ಹೀಗೆ ತನ್ನ ಮೋಜಿಗಾಗಿ ನೌಕಾಪಡೆಯ ಹಡಗುಗಳನ್ನು ಉಪಯೋಗಿಸುವುದು ಸರಿಯಲ್ಲವೆಂದು ಎಷ್ಟೋ ಸರಕಾರಿ ವಿರುದ್ಧ ಪತ್ರಿಕೆಗಳು ಟೀಕಿಸಿದುದುಂಟು; ತಮ್ಮ ಟೀಕೆಯ ಸಮರ್ಥನೆಗಾಗಿ ಅಂತಹ ಹಡಗುಗಳಲ್ಲಿ ಕುಳಿತ ರೂಸವೆಲ್ಟ್‌ರ ಚಿತ್ರಗಳನ್ನೂ ಅವರು ಪ್ರಕಟಿಸಿದುದುಂಟು. ರೂಸವೆಲ್ಟರಾದರೊ, ಅವುಗಳ ಕಡೆಗೆ ಲಕ್ಷ್ಯವೀಯದೆ ಆಗಾಗ ಮೀನು ಹಿಡಿಯಲು ಹೋಗುತಿದ್ದು, ಅದರಿಂದ ವಿರಾಮ ಪಡೆದು, ಹೊಸ ಹುರುಪಿನೊಂದಿಗೆ ಶ್ವೇತ ಭವನಕ್ಕೆ ಬಂದು ತನ್ನ ಕೆಲಸವನ್ನು ಪ್ರಾರಂಭಿಸುತಿದ್ದರು. ಕೆಲಸದಲ್ಲಿ ಅವರಿಗೆ ಎಷ್ಟು ಆಸಕ್ತಿಯೆಂದರೆ ಪದೇ ಪದೇ ಅವರ ವೈದ್ಯರು ಎಚ್ಚರಿಸಿದರೂ ಆ ಎಚ್ಚರಿಕೆಗಳಿಗೆ ಅವರು ಕಿವಿಗೊಡುತ್ತಿರಲಿಲ್ಲ.

ರೂಸವೆಲ್ಟರ ದಿನಚರಿಯು ಮುಂಜಾನೆ ೮ ಗಂಟೆಗೆ ಪ್ರಾರಂಭವಾಗುತಿತ್ತು. ಮುಂಜಾನೆಯ ಊಟದ ಸಮಯದಲ್ಲಿ ಅವರ ಸುತ್ತಲೂ ವಾರ್ತಾಪತ್ರಿಕೆಗಳು ಬಿದ್ದಿರುತಿದ್ದುವು. ೧೦ ಗಂಟೆಗೆ ಅವರು ಪೋಷಾಕುಗಳನ್ನು ಧರಿಸಿ, ಸೈನಿಕ ಹಾಗೂ ನೌಕಾ ಮಂಡಲದ ಸಲಹೆಗಾರರನ್ನು ಕರೆಸಿ, ಅವರಿಂದ ಯುದ್ಧಗತಿಯನ್ನು ಸವಿಸ್ತರವಾಗಿ ತಿಳಿದುಕೊಳ್ಳುತಿದ್ದರು. ಆ ಬಗ್ಗೆ ಅವರು ಶ್ವೇತ ಭವನದಲ್ಲಿಯೇ ಯುದ್ಧದ ಪ್ರಗತಿಯನ್ನು ಬಾಣದ ಗುರುತುಗಳಿಂದ ಸೂಚಿಸುವ ಎಷ್ಟೋ ಭೂಪಟಗಳನ್ನು ಕಾಣಿಸುವುದು ವಾಡಿಕೆಯಾಗಿತ್ತು.

೧೦-೩೦ರಿಂದ ಸಂಜೆ ೫-೩೦ರ ವರೆಗೆ ಅವರು ತನ್ನ ಅಧ್ಯಕ್ಷಸ್ಥಾನದ ಎಲ್ಲ ಕೆಲಸಗಳನ್ನು ನಿರ್ವಹಿಸುತಿದ್ದರು. ಮಧ್ಯದಲ್ಲಿ, ಸುಮಾರು ೧೨ ಗಂಟೆಗೆ ಫಲಾಹಾರದ ಹೊರತು ಬೇರಾವುದಕ್ಕೂ ಅವರಿಗೆ ಬಿಡುವಿರಲಿಲ್ಲ.

ಅವರು ತನ್ನ ಸಹೋದ್ಯಮಿಗಳೊಂದಿಗೆ ಕೂಡಿ ಮಾತನಾಡುವಾಗ, ಪ್ರತಿಯೊಂದು ಪ್ರಶ್ನೆಗೆ ಉತ್ತರವೀಯುವ ಮೊದಲು ತಲೆಯನ್ನು ತುಸು ಅಲ್ಲಾಡಿಸುವುದು, ಬಾಯಲ್ಲಿ ಒಂದು ಸಿಗರೇಟು ಮುಗಿದೊಡನೆ ಮತ್ತೊಂದನ್ನು ಇಡುವುದು, ಸಂಭಾಷಣೆಯ ನಡುವೆ ಆಗಾಗ ಗೊಳ್ಳೆಂದು ನಗುವುದು-ಇವೆಲ್ಲ ದೃಶ್ಯಗಳನ್ನು ಅವರ ಒಡನಾಡಿಗಳು ಎಂದೂ ಮರೆಯಲಿಕ್ಕಿಲ್ಲ. ಈ ಸಮ್ಮೇಲನದ ಕೋಣೆಯಲ್ಲಿ, ತನ್ನ ಅಚ್ಚುಮೆಚ್ಚಿನ ನಾಯಿ 'ಫಲ್ಲಾ' ಒಳಗೂ ಹೊರಗೂ ಬಂದು ಹೋಗುವಂತೆ ರೂಸವೆಲ್ಟ್‌ರ ಅನುಮತಿಯಿತ್ತು.

ವಾರಕ್ಕೆ ಮೂರು ಸಲ ಅವರು ಶ್ವೇತ ಭವನದ ಕೆರೆಗೆ ಹೋಗಿ ಈಜಾಡುವುದೂ, ಸಾಧ್ಯವಿದ್ದ ದಿನಗಳಲ್ಲಿ, ಊಟದ ಮೊದಲು ಒಂದು ಸಣ್ಣ ನಿದ್ದೆ ಮಾಡುವುದೂ ಅವರ ಅಭ್ಯಾಸವಾಗಿತ್ತು. ಸಾಯಂಕಾಲವೂ ಅವರಿಗೆ ಪುರುಸೊತ್ತಿರಲಿಲ್ಲ. ಆಡಳಿತೆಯ ಅಧಿಕಾರಿಗಳಿಗೆ ಭೇಟಿಕೊಡುವುದು, ಯಾ ವಿದೇಶೀಯ ಪ್ರತಿನಿಧಿಗಳನ್ನು ಕಾಣುವುದು, ವರದಿಗಳನ್ನೋದುವುದು, ಸರಕಾರದ ಇತರ ಕೆಲಸಗಳನ್ನು ಮಾಡುವುದರಲ್ಲೇ ಅವರ ಸಂಜೆಯ ಹೊತ್ತು ಕಳೆದು ಹೋಗುತಿತ್ತು.

ರಾತ್ರಿ ಬಹಳ ಹೊತ್ತಿನ ವರೆಗೂ ಅವರ ಕೋಣೆಯಲ್ಲಿ ದೀಪ ಉರಿಯುತ್ತಲ್ಲೇ ಇರುತಿತ್ತು.

ಯುದ್ಧದ ಮುಂಚಿನ ದಿನಗಳಲ್ಲಿ ಅವರ ದಿನಚರಿಯು ಸ್ವಲ್ಪ ಬೇರೆಯಾಗಿತ್ತು. ಸಂಜೆ ಹೊತ್ತಿನಲ್ಲಿ ಓದುವುದು, ಯಾ ತಾನು ಕೂಡಿಟ್ಟ ಅಂಚೆಚೀಟುಗಳ ಅಥವಾ ಹಡಗುಗಳ ಚಿತ್ರ ಯಾ ಮಾದರಿಗಳ ಸಂಗ್ರಹದ ಕಡೆಗೆ ಗಮನವಿಡುವ ಪದ್ಧತಿಯೂ ಇತ್ತು.

ರೂಸವೆಲ್ಟ್‌ರಿಗೆ ಹರಟೆ ಹೊಡೆಯುವುದರಲ್ಲಿಯೂ ಅಭಿರುಚಿಯಿತ್ತು. ಒಮ್ಮೊಮ್ಮೆ ಹ್ಯಾಡ್ ಪಾರ್ಕಿನ ಕೊಳಕು ರಸ್ತೆಗಳಲ್ಲಿ, ವಾಹನದಲ್ಲಿ ತಿರುಗಾಟಕ್ಕೆ ಹೋಗಿ, ಮರಗಳನ್ನು ಯಾ ಬೇಲಿಗಳನ್ನು ಪರೀಕ್ಷಿಸುವ ಹುಚ್ಚು ಅವರಿಗಿತ್ತು. ರವಿವಾರ ಮುಂಜಾನೆ ಅವರು ದೇವಾಲಯಕ್ಕೆ ಹೋಗಿ ಅದರ ಪಾರುಪತ್ಯ ವಹಿಸುತಿದ್ದರು.

ಎಲ್ಲಕ್ಕಿಂತಲೂ ಮಿಗಿಲಾಗಿ ಹಾಸ್ಯಭರಿತ ಕತೆಗಳೆಂದರೆ ಅವರಿಗೆ ಪ್ರಾಣ. ಆ ಕತೆಗಳು ತನ್ನನ್ನು ಕುರಿತಾಗಿಯೇ ಇದ್ದರೆ ಮತ್ತೆ ಹೇಳಬೇಕೆಂದಿಲ್ಲ.

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಸಂಜೆ ಅವರು ಪತ್ರಿಕಾಪ್ರತಿನಿಧಿಗಳನ್ನು ಬರಮಾಡಿಸಿ ಅವರೊಂದಿಗೆ ಸಲ್ಲಾಪವಾಡುವದಂತೂ ಎಲ್ಲರಿಗೂ ತಿಳಿದ ವಿಷಯವೇ. ಅವರ ಅಧಿಕಾರದ ಅವಧಿಯಲ್ಲಿ ಇಂತಹ ೩೩೭ ಕೂಟಗಳನ್ನು ಕೂಡಿಸಿದ್ದರಲ್ಲದೆ ಇಂತಹ ಕೂಟಕ್ಕೆ ಪ್ರತಿಸಲ ನೂರಿನ್ನೂರು ಪ್ರತಿನಿಧಿಗಳು ಬರುವ ಕ್ರಮವಿತ್ತು. ಕಳೆದ ಚುನಾವಣೆಯಲ್ಲಿ ಡ್ಯೂಯಿಯವರನ್ನು ಗೆದ್ದ ನಂತರ ಕೂಡಿದ ಕೂಟವೇ ಅವರು ಜರಗಿಸಿದ ಇಂತಹ ಕೂಟಗಳಲ್ಲಿ ಕೊನೆಯದು. ಇದರಲ್ಲಿ ತಮಾಷೆಯೆಂದರೆ,-ಪತ್ರಿಕೆಗಳು ಮತ್ತು ಪತ್ರಿಕಾಕರ್ತರಲ್ಲಿ ಸೇ. ೮೮ ಮಂದಿ ರೂಸವೆಲ್ಟರ ವಿರುದ್ಧ ಪಕ್ಷದವರಾಗಿದ್ದರೂ, ಅವರ ಕೂಟದಲ್ಲಿ ಭಾಗಿಗಳಾಗುತಿದ್ದ ಪ್ರತಿನಿಧಿಗಳಲ್ಲಿ (ಬಾತ್ಮಿದಾರರು) ಸೇ. ೮೦ ಮಂದಿ ಅವರ ಕಡೆಗೇನೆ ಸೇರುತಿದ್ದರು. ರೂಸವೆಲ್ಟರ ಜನಪ್ರಿಯತೆಗೆ ಬೇರೆ ನಿದರ್ಶನ ಬೇಕೇ?

ಟ್ರುಮೆನರು

ಪ್ರಪಂಚವ್ಯಾಪಿ ಮಹಾ ಯುದ್ಧದಲ್ಲಿ ತಮ್ಮ ಕಡೆಗೆ ವಿಜಯವು ಸನ್ನಿಹಿತವಾಗುವ ಈ ಶುಭ ಸಂದರ್ಭದಲ್ಲೇ ರೂಸವೆಲ್ಟರು ಕಣ್ಮರೆಯಾದರು. ಈಗ ಅವರ ಸ್ಥಾನದಲ್ಲಿ ಗದ್ದುಗೆಯೇರಿದ ವ್ಯಕ್ತಿಯು ಹೆರ್ರಿ. ಎಸ್. ಟ್ರುಮೆನ್-ರೂಸವೆಲ್ಟರಿಗೆ ಸಮಬಲರೂ, ಸಮರ್ಥರೂ ಆಗಿದ್ದಾರೆ. ಸ್ವಭಾವದಲ್ಲಾದರೋ ಅವರು ತೀರ ಸೌಮ್ಯ ಪ್ರಕೃತಿಯವರು. ವಿನಯಸಂಪನ್ನರು. ಕಾರ್ಯದಕ್ಷರು. ಮೇಲಾಗಿ, ಸಂಯುಕ್ತ ರಾಷ್ಟ್ರಗಳ ಸೆನೆಟಿನಲ್ಲಿ ೧೦ ವರ್ಷಗಳ ಸದಸ್ಯತ್ವದ ಅನುಭವವಿದ್ದವರು. ಮನಸ್ಸಾಕ್ಷಿಗೆ ಸರಿಯಾಗಿ ನಡೆಯುವವರೆಂದೂ, ದೂರದರ್ಶಿಗಳೆಂದೂ, ಘನವಂತರೆಂದೂ ಅವರು ಪ್ರಸಿದ್ಧಿ ಪಡೆದಿದ್ದಾರೆ.

ಯುದ್ಧದಲ್ಲಿ ಅಮೇರಿಕವು ಸೇರದೆ ನಿರ್ವಾಹವಿಲ್ಲವೆಂದೂ ಶಾಶ್ವತವಾದ ಶಾಂತಿ ಸ್ಥಾಪನೆಗಾಗಿ ಅಮೇರಿಕವು ಪ್ರಾಮುಖ್ಯ ಭಾಗವನ್ನು ವಹಿಸಬೇಕೆಂದೂ ಮೊತ್ತಮೊದಲಿಂದ ಹೇಳುತ್ತ ಬಂದವರಲ್ಲಿ ಅವರೊಬ್ಬರು.

ಟ್ರುಮೆನರು ಮಿಸೂರಿ ಪ್ರಾಂತ್ಯದಲ್ಲಿ ಹುಟ್ಟಿದರು. ಅವರಿಗೀಗ ೬೦ನೇ ವರ್ಷ ನಡೆಯುತಿದ್ದು, ಇದೇ ಮೇ. ೮ರಂದು ೬೧ ತುಂಬುವುದು. ಅವರ ಕೂದಲು ಹಣ್ಣಾಗಿದೆ. ಹಸನ್ಮುಖಿಗಳು ಕೊಂಬಿನ ಚೌಕಟ್ಟಿನ ಕನ್ನಡಕವನ್ನು ಧರಿಸುತ್ತಾರೆ.

ಕಳೆದ ಹತ್ತು ವರ್ಷಗಳಿಂದಲೂ ಸೆನೆಟಿನಲ್ಲಿದ್ದುದೇ ಅಲ್ಲದೆ, ೧೯೪೧ರಲ್ಲಿ ಇವರ ಸಲಹೆಗನುಸಾರವಾಗಿಯೇ ಸ್ಥಾಪಿತವಾದ 'ಟ್ರುಮೆನ್ ಕಮಿಟಿ'ಯಲ್ಲಿ ದುಡಿದು, ಯುದ್ಧ ಕೈಗಾರಿಕೆಗಳಲ್ಲಿ ಜನ-ಧನ-ಯಾ ಸಾಮಗ್ರಿಗಳು ಒಂದಿಷ್ಟೂ ಅನಾವಶ್ಯಕವಾಗಿ ಹಾಳಾಗದಂತೆ ಉತ್ತಮ ಸಲಹೆಗಳನ್ನು ಅವರು ಕೊಡುತ್ತ ಬಂದಿದ್ದಾರೆ. ಅವರು ತನ್ನ ಕೆಲಸದಲ್ಲಿ ಹಲವು ಮುಖಂಡರೊಡನೆ ಅಂಕೆ ಸಂಖ್ಯೆಗಳನ್ನು ಕೇಳುವಾಗ, ಮೊದಮೊದಲು ಬಹಳ ವಿನಯದಿಂದ ಕೇಳುತಿದ್ದರು. ಕೆಲವರು ಅವರ ಈ ಸೌಜನ್ಯವನ್ನು ಹೇಡಿತನವೆಂದೇ ಭಾವಿಸಿದರು. ಆದರೆ ಕ್ರಮೇಣ ಟ್ರುಮೆನರು ತನ್ನಲ್ಲಿರುವ ಅಧಿಕಾರವನ್ನು ಉಪಯೋಗಿಸಲು ಒಂದಿಷ್ಟೂ ಹಿಂಜರಿಯಲಿಲ್ಲ. ಅವರು ತನಗೆ ಬೇಕಾದ ಮಾಹಿತಿಯನ್ನು ನಿರ್ದಾಕ್ಷಿಣ್ಯವಾಗಿ ಪಡೆದೇ ಬಿಟ್ಟರು. ಆಗ ತಾನೆ ಅವರ ಧೈರ್ಯಸ್ಥೈರ್ಯಗಳು ಸಂಪೂರ್ಣ ಬೆಳಕಿಗೆ ಬಂದುವು.

ಟ್ರುಮೆನರ ಧೀನ ಸ್ವಭಾವಕ್ಕೆ ಮತ್ತೊಂದು ನಿದರ್ಶನವಿದೆ. ಒಮ್ಮೆ ಕಾಂಗ್ರೆಸ್ ಮುಖಂಡರ ಮಾಹಿತಿ ಪುಸ್ತಕಕ್ಕೆ ಆತ್ಮವೃತ್ತವೊಂದನ್ನು ಕೊಡಬೇಕೆಂದು ಅವರಿಗೆ ಕೇಳಿಕೆ ಬಂತು. ಆಗ ಅವರು ಅಚ್ಚಿನಲ್ಲಿ ಮೂರೇ ಗೆರೆಗಳಲ್ಲಿ ಹಿಡಿಯುವಷ್ಟು ಸಣ್ಣ ಚರಿತ್ರೆಯನ್ನು ಬರೆದು ಕೊಟ್ಟರಂತೆ.

ಟ್ರುಮೆನರು ಪಿಯಾನೊ ಬಾರಿಸಬಲ್ಲರು. 'ಪೋಕರ್' ಎಂಬ ಇಸ್ಪೇಟ್ ಆಟದಲ್ಲಿ ಅವರಿಗೆ ತುಂಬಾ ಪ್ರೀತಿ. ನೋಡಲಿಕ್ಕೆ ಬಹಳ ಸಾಧುವೆಂಬಂತೆ ತೋರಿದರೂ ಅವರು ಬಡಪಾಯಿಗಳೆಂದೇ ತಿಳಿದು ತುಂಬಾ ಜನರು ಮೋಸ ಹೋಗಿದ್ದಾರೆ.

ಅವರಿಗೆ ೧೯೧೯ರಲ್ಲಿ ವಿವಾಹವಾಯಿತು. ಚಿಕ್ಕಂದಿನಿಂದ ಅವರ ಪ್ರೀತಿಗೆ ಪಾತ್ರಳಾಗಿದ್ದ ಬೆಸ್. ವಾಲೆಸಳೇ ಅವರ ಹೆಂಡತಿ. ಈಗ ಅವರಿಗೆ ಒಬ್ಬಳು ಮಗಳಿದ್ದಾಳೆ. ಅವಳ ಹೆಸರು ಮೇರಿ ಮಾರ್ಗರೆಟ್ ಟ್ರುಮೆನ್ ಎಂದು. ಟ್ರುಮೆನರ ಹೆಂಡತಿಯೂ ಸದ್ದಿಲ್ಲದೆ ದುಡಿಯುವ-ಗಂಡಸಿಗೆ ಕೆಲಸದಲ್ಲಿ ನೆರವಾಗುವ-ಹೆಂಗಸು. ಉಪಾಧ್ಯಕ್ಷ ಚುನಾವಣೆಗಾಗಿ ಗಂಡನು ಸಂಯುಕ್ತ ರಾಷ್ಟ್ರಗಳಲ್ಲೇ ಸಂಚಾರಮಾಡುತಿದ್ದಾಗ ಆಕೆಯೂ ಗಂಡನ ಜತೆಯಲ್ಲೇ ಇದ್ದು, ಹೊರಗೆ ಕಾಣಿಸದಂತೆ- ಎಂದರೆ ಭಾಷಣಾದಿಗಳನ್ನು ಮಾಡದೇನೆ-ಅವರಿಗೆ ಗುಪ್ತರೀತಿಯಲ್ಲಿ ಸಹಾಯಮಾಡುತಿದ್ದಳು.

ವಾಷಿಂಗಟನ್ನಿನಲ್ಲಿ ಇಲ್ಲದ ವೇಳೆ ಅವರು ಮಿಸೋರಿಯಲ್ಲೇ ಸ್ವತಂತ್ರವಾಗಿ ಜೀವಿಸುತ್ತಾರೆ. ಏಕೆಂದರೆ ಮಿಸೋರಿಯ ಒಂದು ರೈತ ಕುಟುಂಬದಲ್ಲೇ ಟ್ರುಮೆನರ ಜನನವಾಯಿತು. ಅವರು ಸ್ವಲ್ಪ ಕಾಲ ಒಂದು ಬೇಂಕಿನಲ್ಲಿ ಗುಮಾಸ್ತರಾಗಿದ್ದರೂ, ಆ ಕೆಲಸವನ್ನು ಬಿಟ್ಟು ಮರಳಿ ಮಿಸೋರಿಗೆ ಹೋದರು. ಅವರ ೩೮ನೇ ಪ್ರಾಯದಲ್ಲಿ ನ್ಯಾಯಾಧೀಶರಾಗಿ ಚುನಾಯಿಸಲ್ಪಟ್ಟರು. ಎಲ್ಲರ ಮಿತ್ರರಾಗಿದ್ದು ಸದ್ದಿಲ್ಲದೆ, ಧೈರ್ಯದಿಂದ, ವರ್ತಿಸಬಲ್ಲ ಟ್ರುಮೆನರ ಮೇಲೆ ಜನರಿಗಿದ್ದ ವಿಶ್ವಾಸವು ಹೆಚ್ಚಿತು. ಅವರು ೧೯೩೪ರಲ್ಲಿ ಟ್ರುಮೆನರನ್ನು ಸೆನೆಟಿಗೆ ಚುನಾಯಿಸಿದರು. ಅಂದಿನಿಂದ ಅವರು ಸೆನೆಟಿಗೆ ಸದಸ್ಯರಾಗಿಯೇ ಇದ್ದು, ೧೯೪೪ರಲ್ಲಿ ಉಪಾಧ್ಯಕ್ಷ ಪದವಿಗೆ ಆರಿಸಲ್ಪಟ್ಟರು.

ಟ್ರುಮೆನರು ಕಳೆದ ೧೯೧೭-೧೮ನೆಯ ಯುದ್ಧದಲ್ಲಿ, ರಾಷ್ಟ್ರರಕ್ಷಕ ದಳವನ್ನು ದಲಪತಿಯಾಗಿ ಕಾದಾಡಿದ್ದಾರೆ. ಈ ಸಲವೂ, ಯುದ್ಧ ಪ್ರಾರಂಭವಾದೊಡನೆ ಅವರಿಗೆ ಸೇನೆಗೆ ಸೇರಬೇಕೆಂಬ ಮನಸ್ಸಿತ್ತು. ಆದರೆ ಸೇನೆಯ ಅಧಿಕಾರಿಗಳು 'ನೀವು ಅದಕ್ಕಿಂತ ಸೆನೆಟಿನಲ್ಲೇ ಇದ್ದು ಹೆಚ್ಚಿನ ಸೇವೆಯನ್ನು ಸಲ್ಲಿಸಬಹುದ' ಎಂದು ಹೇಳಿದರು. ಅವರ ಭವಿಷ್ಯವಿಂದು ಸಂಪೂರ್ಣ ನಿಜವಾಗಿದೆ.

ಅಧ್ಯಕ್ಷ ರೂಸವೆಲ್ಟರ ಹೆಜ್ಜೆಗಳಲ್ಲೇ ತಾನು ಕೂಡಾ ಮುಂಬರಿದು, ವಿಜಯವನ್ನು ಗಳಿಸುವೆನೆಂದು ಪಣತೊಟ್ಟು, ಅವರು ಕಾರ್ಯಾರಂಗಕ್ಕಿಳಿದಿದ್ದಾರೆ.

ಸಾನ್‌ಫ್ರಾನಿಸ್ಕೊ ಪರಿಷತ್ತು

ಭಾವೀ ಲೋಕ ಶಾಂತಿಗಾಗಿ ಒಂದು ವ್ಯವಸ್ಥೆಯನ್ನು ರಚಿಸುವ ಸಂಕಲ್ಪದಿಂದ ಈ ಪರಿಷತ್ತು ಈಗ ನಡೆಯುತ್ತಿದೆ. ಅಕ್ಷರಾಷ್ಟ್ರಗಳ ಸೊಕ್ಕು ಮುರಿದ ಸಂಯುಕ್ತ ರಾಷ್ಟ್ರಗಳ ನಾಯಕತ್ವದಲ್ಲಿ ಜಗತ್ತಿನ ಇತರ ರಾಷ್ಟ್ರಗಳು ಈ ಪರಿಷತ್ತಿನಲ್ಲಿ ಭಾಗವಹಿಸಿವೆ.

ಸೋವಿಯಟ್ ರಷ್ಯಾ, ಬ್ರಿಟನು, ಅಮೇರಿಕಾಗಳ ನಡುವೆ ಅನೇಕ ವಿಚಾರಗಳ ಕುರಿತು, ಮುಖ್ಯವಾಗಿ ಪೋಲೆಂಡಿನ ಸಮಸ್ಯೆಯ ಕುರಿತು ಭಿನ್ನಾಭಿಪ್ರಾಯಗಳಿದ್ದು, ಸಾನ್‌ಫ್ರಾನಿಸ್ಕೊ ಪರಿಷತ್ತು ಮುರಿದು ಬೀಳಬಹುದೆಂದು ಊಹೆಗಳಿದ್ದರೂ, ಪೋಲೆಂಡಿನ ಸಮಸ್ಯೆಯು ಬಿಟ್ಟು ಇತರ ವಿಚಾರಗಳ ಕುರಿತು ಇದ್ದ ಈ ಭಿನ್ನಾಭಿಪ್ರಾಯಗಳು ಬಹುಮಟ್ಟಿಗೆ ನಿವಾರಿಸಲ್ಪಟ್ಟು ಮಿತ್ರರೊಳಗೆ ಸಮ್ಮತವು ಉಂಟಾಗಬಹುದೆಂದು ಹೇಳಲಾಗಿದೆ.

ಪೋಲೆಂಡಿನ ಸಮಸ್ಯೆಯ ಕುರಿತು ಸೋವಿಯಟ್ ನಾಯಕ ಸ್ಟೇಲಿನನು ತನ್ನ ಸದ್ಯದ ಧೋರಣವನ್ನು ಬದಲಾಯಿಸಲು ಸಿದ್ಧವಿದ್ದಂತೆ ಕಾಣುವುದಿಲ್ಲ. ಕಾರಣ ತನ್ನ ಸೂತ್ರಗಾರಿಕೆಯಲ್ಲಿ ರಚನೆ ಹೊಂದಿದ ಪೋಲೆಂಡಿನ ಲಬ್ಲಿನ್ ಸರಕಾರದೊಡನೆ ಸೋವಿಯಟ್ ರಷ್ಯವು ೨೦ ವರ್ಷ ಅವಧಿಯ ಒಂದು ಕರಾರನ್ನು ಮಾಡಿರುತ್ತದೆ.

ಹೀಗೆಂದು ಜಗಳತನವನ್ನೆ ಬೆಳೆಯಿಸಿಕೊಂಡು ಹೋಗುವುದರಲ್ಲಿ ಸ್ಟೇಲಿನನಿಗೆ ಆಸಕ್ತಿಯಿಲ್ಲ. ಕಾರಣ, ನಾಜಿಗಳನ್ನು ವಿರೋಧಿಸಿದ ದಣುವಾರಿಸಲು ರಷ್ಯಕ್ಕೆ ವಿರಾಮದ ಅವಶ್ಯವಿದೆ. ನಾಜಿಗಳ ಧ್ವಂಸ ಕಾರ್ಯಗಳಿಗೆ ಒಳಗಾದ ರಷ್ಯನ್ ಪ್ರದೇಶಗಳ ಪುನರ್ರಚನೆಯು ಈಗ ಬೇಕಾಗಿಯದೆ. ಆದುದರಿಂದ ಸ್ಟೇಲಿನನು ಅತ್ಯಂತ ಉಪಾಯದಿಂದ ವರ್ತಿಸುತ್ತಿರುವನು. ಮಿತ್ರರನ್ನು ನೋಯಿಸದೆ, ತಮಗೆ ನಷ್ಟವಾಗದ ತರದಲ್ಲಿ, ತಮ್ಮ ಸುರಕ್ಷತೆಯನ್ನು ಕಾಯ್ದುಕೊಳ್ಳುವ ತರದ್ದು ಆಗಿರುವುದು, ಸೋವಿಯಟ್ ರಷ್ಯದ ಬಹೀರ್ ವ್ಯವಹಾರದ ಧೋರಣವು.

ಜಗತ್ತಿನ ವ್ಯಾಪಾರದ ವಿಷಯಗಳಲ್ಲಿ ಬ್ರಿಟನು, ಮತ್ತು ಅಮೇರಿಕವು ಮುಖಮುಖ ನೋಡದೆ ಇರುವ ಸಂಗತಿಗಳು ಅನೇಕಯಿವೆ. ಇತರ ಹಲವು ವಿಚಾರಗಳಲ್ಲಿ ಬ್ರಿಟನಿಗೂ ಅಮೇರಿಕಕ್ಕೂ ಒಮ್ಮತವು ಕಾಣಬರುತ್ತಿರುವುದಾದರೂ, ವ್ಯಾಪಾರದ ವಿಚಾರದಲ್ಲಿ ಅವರೊಳಗೆ ಸಮ್ಮತದ ಕೊಡುವಿಕೆಯು ನಡೆಯುವುದು ಅಸಂಭವನೀಯ ಬದಲಾಗಿ ರಷ್ಯದಿಂದ ತಮ್ಮಗೆ ಲಾಭವಾಗುವುದೆಂದು ಅಮೇರಿಕಾವು ತಿಳಿದಂತೆ ಕಾಣುತ್ತದೆ. ಈಚೆಗಿನ ವಿದ್ಯಮಾನಗಳನ್ನು ಪರಿಶೀಲಿಸಿದರೆ, ಅಮೇರಿಕಾವು ರಷ್ಯವನ್ನು ಸಮೀಪ ಸೆಳೆಕೊಳ್ಳುವುದರಲ್ಲಿ ಆಸಕ್ತಿಯು ತೋರಿಸುವುದು ಕಾಣಬರುತ್ತಿದೆ. ರಷ್ಯನಂಗೂ ಅಮೇರಿಕವೆಂದರೆ ಒಳ್ಳೆ ಅಭಿಮಾನವು ಇದೆ. ಪಶ್ಚಿಮದ ತಮ್ಮ ವಿರೋಧಿಗಳು ಮೇಲೇರಿ ಬಂದು ಪೋಲೆಂಡು ಮಧ್ಯವರ್ತಿಯಾಗದಂತೆ ನೋಡುವುದು ಸೋವಿಯಟ್ಟಿನ ಉದ್ದೇಶವಿರುತ್ತದೆ.

ಜಗತ್ತಿನ ಇತರಚಿಕ್ಕ ರಾಷ್ಟ್ರಗಳ ಸಮಸ್ಯೆ ವಲಸೆ ರಾಷ್ಟ್ರಗಳ ಸಮಸ್ಯೆ ಆಶ್ರಿತ ರಾಷ್ಟ್ರಗಳ ಸಮಸ್ಯೆ ಸಾನ್‌ಫ್ರಾನಿಸ್ಕೊದಲ್ಲಿ ನಿಷ್ಕರ್ಷಗೆ ಬಾರದೆಂದು ಈ ಮೊದಲೇ ಹೇಳಲಾಗಿದೆ. ಭಾವಿಜಗತ್ತಿನಲ್ಲಿ ಶಾಂತಿಯು ನೆಲೆನಿಲ್ಲಬೇಕಾದರೆ, ಈ ಸಮಸ್ಯೆಗಳು ಪ್ರಜಾಸತ್ತಾತತ್ವಗಳಿಗೆ ಸರಿಯಾಗಿ ಬಗೆಹರಿಸಲ್ಪಡಬೇಕು. ಈ ಸಮಸ್ಯೆಗಳ ಕುರಿತು ಈಗ ಪ್ರಾರಂಭದಲ್ಲೆ ಇಷ್ಟು ಅಲಕ್ಷ್ಯವಾದುದು; ಲೋಕಶಾಂತಿಗೆ ಶುಭಸೂಚಕವಲ್ಲ. ಇದು ರೋಗದ ಮೂಲಕಾರಣವನ್ನು ಲೋಪಗೊಳಿಸದೆ, ರೋಗಿಗೆ ಇತರ ಉಪಶಮಶಮನಾ ಔಷಧಿಗಳ ಪ್ರಯೋಗವಾದಂತಾಗುವುದು. ರೋಗಿಯ ಅಂತರ್ಯದಲ್ಲಿರುವ ರೋಗವು ಒಂದು ದಿನ ಮೇಲೇಳದೆನಿಲ್ಲದು.

ಪ್ರಚಲಿತ ಸಮಾಚಾರಗಳು

ಒಂದನೆ ಮಹಾ ಯುದ್ಧದ ನಂತರ ರಚನೆಯಾದ ಜನಾಂಗ ಮಂಡಳವು ಪ್ರಭಾವಕಾರಿಯಾಗಿ ಕಾರ್ಯಿಸದಿರಲು ಕಾರಣವೇನೆಂದು, ಸದ್ಯ ಸಾನ್‌ಫ್ರಾನಿಸ್ಕೊದಲ್ಲಿ ಕೂಡಿ ಬಂದಿರುವ ಜಗತ್ತಿನ ವಿವಿಧ ರಾಷ್ಟ್ರಗಳ ಮುತ್ಸದ್ಧಿಗಳಿಗೆ ಅನುಭವಸಿದ್ಧವಾಗಿ ತಿಳಿದವಿಷಯವಿರುತ್ತದೆ. ಅವರು ಬೆಳಕು ಕೂಡು ವರ್ತಿಸಲೆಂದು ತಮ್ಮ ಆಸೆ

ನಮ್ಮ ದೇಶದ ಔದ್ಯೋಗಿಕರಣ

ನಮ್ಮ ಭಾವೀ ಉದ್ಧಾರಕ್ಕಾಗಿ ನಿಯೋಜಿಸಲ್ಪಟ್ಟ (ಇಂಡಿಯಾ ಸರಕಾರದಿಂದ) ಯೋಜನೆಗಳಲ್ಲಿ, ಔದ್ಯೋಗಿಕರಣಕ್ಕೆ ಒಳ್ಳೆ ಮಹತ್ವದ ಸ್ಥಾನವು ಕೊಡಲಾಗಿದೆ. ಪ್ರಾಮುಖ್ಯವಾಗಿರುವ ಇಪ್ಪತ್ತು ಕೈಗಾರಿಕೆಗಳು ಸರಕಾರದ ಅಧೀನದಲ್ಲಿ ನಡೆಯಬೇಕೆಂದು ನಿರ್ಣಯವಾದುದರ ಕುರಿತು ಕೇಂದ್ರ ಸರಕಾರದ ಪ್ರಕಟಣೆಯೊಂದು ಹೊರಡಿರುತ್ತದೆ. ಈ ಕಾರಣದಿಂದ, ಉಕ್ಕಿನ ಕೈಗಾರಿಕೆ, ಅರಿವೆ ಗಿರಣಿಗಳು, ವಿದ್ಯುತ್ತನ್ನು ಸಂಗ್ರಹಿಸಿ, ಹಂಚುವ ಕೈಗಾರಿಕೆ, ಕಲ್ಲಿದ್ದಲ್ಲಿನ ಕೈಗಾರಿಕೆ, ಸಂಚಾರದ ವ್ಯವಸ್ಥೆಗಳು ಮೊದಲಾದುವುಗಳನ್ನು ಸರಕಾರವೇ ನಡೆಯಿಸುವಂತಾಗುವುದು. ಇಂಗ್ಲಾಂಡಿನಲ್ಲಿ ಈ ಕ್ರಮಕ್ಕೆ ಉದ್ಯೋಗಗಳ ರಾಷ್ಟ್ರೀಕರಣವೆನ್ನುತ್ತಾರೆ.

ಕಳೆದ ಮಹಾ ಯುದ್ಧದ ನಂತರ ನಮ್ಮ ದೇಶದಲ್ಲಿ ಕೆಲವು ಕೈಗಾರಿಕೆ ಖಾಸಗಿ ಜನರ ನೆರವಿನಲ್ಲಿ ಸ್ಥಾಪನೆಯಾಗಿ, ನಡೆಯುವಂತಾದುವು. ಈ ಕಾರಣದಿಂದ ನಮ್ಮ ದೇಶದ ಕಲ್ಕತ್ತ, ಮುಂಬ್ಯಾ, ಮದ್ರಾಸು, ಕಾನ್ಪುರ ಇತ್ಯಾದಿ ಕಡೆಗಳಲ್ಲಿ ಉಕ್ಕಿನ ಕಾರ್ಖಾನೆಗಳೂ, ಕಾಗದ ಕಾರ್ಖಾನೆಗಳೂ, ಇರಿವೆ ಗಿರಣಿಗಳೂ ನಡೆಯುವಂತಾಯಿತು. ಅನೇಕ ಜನರಿಗೆ ಉದ್ಯೋಗವು ಲಭಿಸಿತು. ನಮ್ಮಲ್ಲೂ ಕ್ರೋಢಪತಿಗಳ ಆಗಮನವಾಗಲು ಕಾರಣವಾಯಿತು.

ಅದು ಹಿಂದಿನ ಕಥೆ. ಆಗ ಕೈಗಾರಿಕೆ ನಡೆಯುತ್ತಿರುವುದು ಬಂಡವಾಳಿಗನ ಬೊಕ್ಕಸಗಳನ್ನು ತುಂಬಿಸಲೋಸುಗವಾಗಿತ್ತು. ಈ ಕಾರಣದಿಂದ ಮಜೂರ ವರ್ಗದ ಹಿತಗಳಿಗೆ ಹೆಚ್ಚು ಲಕ್ಷವು ದೊರಕುತ್ತಿರಲಿಲ್ಲ. ಆದರೆ ಈಗ, ಈ ಪ್ರಗತಿಪರ ದಿನಗಳಲ್ಲಿ, ಒಂದು ಕೈಗಾರಿಕೆಯು ನಡೆಯುವುದರಿಂದ, ಜನಸಾಮಾನ್ಯರಿಗೆಲ್ಲಾ ಒಳಿತು ಉಂಟಾಗಬೇಕೆಂದು ನಿರ್ಧರಿಸಲಾಗಿದೆ. ಕೈಗಾರಿಕೆಗಳ ಸಂತುಷ್ಟವಾಗಿ ನಡೆಯಬೇಕಾದರೆ, ಜನಸಾಮಾನ್ಯರು ಸಂತುಷ್ಟರಾಗಿ ಇರುವುದು ಅತೀ ಅವಶ್ಯವು. ಕೈಗಾರಿಕೆಗಳಿಂದ ಒಡವೆಗಳನ್ನು ತಯಾರಿಸುವುದಷ್ಟೆ ಮುಖ್ಯವು ಅವುಗಳ ಹಂಚುವಿಕೆಯಾಗಿರುತ್ತದೆ. ಅವುಗಳು ಲಾಭದಾಯಕ ರೀತಿಯಲ್ಲಿ ಹಂಚಲ್ಪಡಬೇಕಾದರೆ, ಜನಸಾಮಾನ್ಯರಲ್ಲಿ ಕೊಂಡುಕೊಳ್ಳುವ ಶಕ್ತಿಯು ಇರಬೇಕು. ಜನಸಾಮನ್ಯರ ಸಾಂಪತ್ತಿಕ ಸ್ಥಿತಿಯು ನೆಟ್ಟಗಾಗಿದ್ದರೆ ಮಾತ್ರ ಅವರಲ್ಲಿ ಕೊಂಡುಕೊಳ್ಳುವ ಶಕ್ತಿಯು ಇರುವುದು. ಖಾಸಗಿ ಬಾಂಡವಾಳಿಗರಲ್ಲಿ, ಮಜೂರ ವರ್ಗದ ಕೈಗಳಲ್ಲಿ ಹಿತವು ಸುರಕ್ಷಿತವಾಗಿರದೆಂದು, ಅನುಭವದಿಂದ ತಿಳಿದುಬಂದಿದೆ. ಈ ಕಾರಣದಿಂದ, ಅಮೇರಿಕಾ, ಇಂಗ್ಲಾಂಡು ಇತ್ಯಾದಿ ದೇಶಗಳಲ್ಲಿ ಕೈಗಾರಿಕೆಗಳನ್ನು ಸರಕಾರವು ನಡೆಯಿಸಬೇಕಾಗಿ ನವೀನ ಅಭಿಪ್ರಾಯವು ಉಂಟಾಗಿದ್ದು, ಆ ಕುರಿತು ಬಲವಾದ ಚಳವಳವೂ ಉಂಟಾಗಿರುವುದು.

ಕೈಗಾರಿಕೆಗಳಲ್ಲಿ ಪ್ರಗತಿಪರ ನೂತನ ಕ್ರಮಗಳು ರೊಢಿಗೆ ಬಂದರೆ ಅದರಿಂದ ತುಂಬಾ ಲಾಭವಿದೆ. ಪ್ರಗತಿಪರ ಕ್ರಮಗಳ ಆಚರಣೆಯಿಂದ, ದೊರಕುವ ಬಿಡುವನ್ನು ಲಾಭವನ್ನೂ, ಸಮಾಜದ ಉದ್ಧಾರದ ದೃಷ್ಟಿಯಿಂದ, ಮನುಷ್ಯನ ಜ್ಞಾನ ಬೆಳವಣಿಗೆಯಲ್ಲಿ ಉಪಯೋಗಿಸಬಹುದು. ಹೀಗೆ ನೂತನ ಕ್ರಮಗಳು ಕಂಡುಹಿಡಿಯಲ್ಪಡಬೇಕಾದರೆ, ಪ್ರಯೋಗ ಶಾಲೆಗಳು ಸ್ಥಾಪನೆಯಾಗಿ, ಅವುಗಳಲ್ಲಿ ಸಂಶೋಧನಾ ಕಾರ್ಯಗಳು ನಡೆಯಬೇಕು. ನುರಿತ ವಿಜ್ಞಾನಿಗಳು, ಇಲ್ಲಿ ದುಡಿಯುವಂತಾಗಬೇಕು. ಇವೆಲ್ಲಾ ಕಾರ್ಖಾನೆಗಳ ಆಶ್ರಯದಲ್ಲಿ, ಮತ್ತು ಖರ್ಚಿನಲ್ಲಿ ನಡೆಯಬೇಕು. ಆದರೆ ಕೈಗಾರಿಕೆಗಳೆನ್ನು ನಡೆಯಿಸುತ್ತಿರುವ ಖಾಸಗಿ ಭಾಂಡವಾಳಿಗರಿಗೆ ಇದು ಸಲ್ಲದ ವಿಷಯವು. ಕಾರಣ ಅದರಿಂದ ಅವರಿಗೆ ದೊರಕುವ ಲಾಭದಲ್ಲಿ ಕಡಿತವಾಗುವುದು. ಆದರೆ ಸರಕಾರವು ಕೈಗಾರಿಕೆಗಳನ್ನು ನಡೆಯಿಸುವುದಾದರೆ, ಲಾಭದ ಕಡೆಗೆ ಹೆಚ್ಚಿನ ಲಕ್ಷ್ಯಕೊಡುವ ಬದಲು, ಮಾನವನ ಸಂತುಷ್ಟಿಯ ಕಡೆಗೆ ಹೆಚ್ಚಿನ ಲಕ್ಷ್ಯ ದೊರಕುವಂತಾಗುವುದೆಂದು ನಂಬಲಾಗಿದೆ.

ಹೀಗೆ ಉದ್ಯೋಗಗಳ ರಾಷ್ಟ್ರೀಕರಣದಿಂದ ಸಮಾಜಕ್ಕೆ ಉಪಕಾರವಿದೆ ನಿಜ. ಆದರೆ ಆ ಸರರಾಷ್ಟ್ರ ಹಿತವನ್ನು ಬಯಸುವ ಸರ್ವಜನಶೂನ್ಯ ಪ್ರಜಾಸತ್ತಾತ್ಮಕ ಸರಕಾರಗಳು ಇವುಗಳ ಆಡಳಿತವನ್ನು ನಿರ್ವಹಿಸುವುದು ಆವಶ್ಯವಿದೆ. ನಮ್ಮಲ್ಲಿ ಸದ್ಯ ರೂಢಿಯಲ್ಲಿರುವ ಸರಕಾರೀ ಕ್ರಮದಿಂದ, ರಾಷ್ಟ್ರೀಕರಣದಿಂದ ನಮಗೆ ಹೆಚ್ಚಿನ ಉಪಕಾರವಾದೀತೆಂದು ಹೇಳಬರುವುದಿಲ್ಲ.

ನಮ್ಮ ದೇಶದ ಬೇಸಾಯ

ಔದ್ಯೋಗಿಕರಣದಿಂದಲೆ ನಮಗೆ ಸಾಂಪತ್ತಿಕ ಮೋಕ್ಷವು ದೊರಕುವಹಾಗಿಲ್ಲ. ಸಾಗುವಳಿಯು ನಮ್ಮಲ್ಲಿ ಹೆಚ್ಚಿನವರಮುಖ್ಯ ವೃತ್ತಿಯಾಗಿರುವುದು. ಈ ಕಾರಣದಿಂದ, ಸಾಗುವಳಿಯೇ ನಮ್ಮ ಮುಖ್ಯ ಆಧಾರವು. ಆದುದರಿಂದ ನಮ್ಮ ದೇಶದ ಉದ್ಧಾರವಾಗಬೇಕಾದರೆ ನಮ್ಮ ರೈತನ ಸ್ಥಿತಿಯು ಸುಧಾರಿಸಲ್ಪಡಬೇಕು.

ನಮ್ಮ ಸಾಗುವಳಿಯು ಪ್ರಾಚ್ಯ ಕ್ರಮದಲ್ಲೆ ಈಗಲೂ ನಡೆಯುತ್ತಿದೆ. ರೈತನು ಮಳೆಗೋಸ್ಕರ ಹವಾಸ್ಥಿತಿಯ ಮೇಲೆ ಹೊಂದಿಕೊಂಡಿದ್ದು ಬೇಸಾಯದ ಕಾರ್ಯಗಳನ್ನು ನಡೆಯಿಸಬೇಕಾದುದರಿಂದ ಮಳೆಯಿಲ್ಲದ ಸಮಯದಲ್ಲಿ, ಆತನು ಉದ್ಯೋಗವಿಲ್ಲದೆ ಸಮಯ ಕಳೆಯುತ್ತಿರುವನು. ಗೊಬ್ಬರಕ್ಕಾಗಿ ಆತನು ಹಳೆಯ ಕ್ರಮಗಳನ್ನು ಆಚರಿಸುವುದರಿಂದ ಆತನ ಬೆಳೆಗೆ ಬೇಕಾದ ಪುಷ್ಟಿಯು ದೊರಕದಾಗಿದೆ. ಆತನ ಮರದ ನೇಗಿಲಿಂದ ಭೂಮಿಯು ಸರಿಯಾಗಿ ಅಗೆಯಲ್ಪಡದೆ, ಬೆಳೆಗೆ ಬೇಕಾದ ಮಣ್ಣಿನ ಸಾರವು ದೊರಕದಾಗಿದೆ. ವಿಜ್ಞಾನದ ಉಪಯೋಗದಿಂದ ಬಗೆಯಲ್ಪಟ್ಟ ಸುಧಾರಿತ ಸಾಗುವಳಿಯ ಕ್ರಮಗಳಿಂದ, ಈ ಕೊರತೆಗಳೆಲ್ಲಾ ನಿವಾರಿಸಲ್ಪಟ್ಟಿವೆ. ಕಬ್ಬಿಣ ನೇಗಿಲಿನ ಉಪಯೋಗ, ಯಾಂತ್ರಿಕ ಉಪಕರಣ ಉಪಯೋಗ, ಕೃತಕಗೊಬ್ಬರಗಳ, ಉಪಯೋಗ ನೀರಾವರಿಯ ಸಣ್ಣದೊಡ್ಡ ಯೋಜನೆಗಳು, ಇವೆ ಮೊದಲಾದ ನೂತನ ಕ್ರಮಗಳಿಂದ ರೈತನು ತನ್ನ ಬೆಳೆಯ ಫಲವನ್ನು ಅನೇಕ ಪಾಲು ಹೆಚ್ಚಿಸುವಂತಾಗಿದೆ. ಬೇಸಾಯವು ಅತ್ಯಂತ ಲಾಭಕರ ತರದಲ್ಲಿ ನಡೆಯುವಂತಾಗಿದೆ.

ಬೇಸಾಯದಲ್ಲಿ ನೂತನ ಕ್ರಮಗಳು ಆಚರಿಸಲ್ಪಟ್ಟದು ಮೊದಲು ಅಮೇರಿಕಾದಲ್ಲಿ. ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ, ಮಳೆಯನೀರು ಹರಿದು ಹೋಗುವುದನ್ನು ಶೇಖರಿಸಿಡುವ ಕಾಮಗಾರಿಗಳನ್ನು ರಚಿಸಿ, ಯಂತ್ರಗಳನ್ನು ಉಪಯೋಗಿಸಿ, ಕೃತಕಗೊಬ್ಬರಗಳನ್ನು ಉಪಯೋಗಿಸಿ, ಸುಧಾರಿತ ಕ್ರಮಗಳನ್ನಾಚರಿಸಿ ಅಲ್ಲಿನ ಬೇಸಾಯವು ನಡೆಯುತ್ತಿದೆ. ಈ ಕಾರಣದಿಂದ ಅಮೇರಿಕಾದ ಸಾಂಪತ್ತಿಕ ಸ್ಥಿತಿಯಲ್ಲಿ ಒಳ್ಳೆ ವೃದ್ಧಿಯು ನಡೆದುಬಿಟ್ಟದೆ. ಬೇಸಾಯದೊಡನೆ ಕೈಗಾರಿಕೆಗಳೂ ಕೂಡ ಒಳ್ಳೆ ವ್ಯವಸ್ಥಿತರೀತಿಯಲ್ಲಿ ನಡೆಯುತ್ತಿದ್ದು, ಅಮೇರಿಕಾವು ಜಗತ್ತಿನಲ್ಲಿ ಅಗ್ರ

(೯ನೇ ಪುಟಕ್ಕೆ ಮುಂದುವರಿದಿದೆ)

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಯುದ್ಧ ಕೊನೆಯ ಪರಿಚ್ಛೇದ

ರಷ್ಯದ ಸ್ಟಾಲಿನ್‌ಗ್ರಾಡಿನಲ್ಲಿ ಹಂಗೇರಿಯ ಬುಡಾಪೆಸ್ಟಿನಲ್ಲಿ ನಡೆದ ಕದನಗಳಂತೆ, ಜರ್ಮನ್ ರಾಜಧಾನಿ ಬರ್ಲಿನ್ ನಗರದಲ್ಲಿ ಈಗ ಕದನವು ನಡೆಯುತ್ತಿದೆ. ನಗರದ ಪ್ರತಿಯೊಂದು ಬೀದಿಗೆಂಬಂತೆ ಕದನವು ನಡೆಯುತ್ತಿದೆ. ರಸ್ತೆಗಳಲ್ಲಿ ಮುಷ್ಟಾಮುಷ್ಟಿ ಜಗಳಗಳು ನಡೆಯುತ್ತಿವೆ. ಈ ಕದನವನ್ನು ಈ ಮಹಾ ಯುದ್ಧದ ಕೊನೆಯ ಪರಿಚ್ಛೇದವೆಂದು ಗಣಿಸಲಾಗಿದೆ. ಅಲ್ಲೀಗ ನಾಜಿಶಾಹಿಯ ನಾಮನಾಶವಾಗುತ್ತಿದೆ ನಾಜಿಗಳ ದರ್ಪವು ಬೆಂಕಿಪಾಲಗುತ್ತದೊ ಎಂಬಂತೆ, ಬರ್ಲಿನ್ ನಗರದಲ್ಲೆಲ್ಲಾ ಮಹಾ ಜ್ವಾಲೆಗಳು ಉರಿಯುತ್ತಿವೆ. ಸ್ಟೈಲಿನ್‌ಗ್ರಾಡಿನಿಂದ ಜರ್ಮನರನ್ನು ಹಿಂದಟ್ಟಲು ಕೆಂಪುಸೈನ್ಯಕ್ಕೆ ಸಾಧ್ಯವಾದಂತೆ, ಬರ್ಲಿನ್ ನಗರವನ್ನು ರಕ್ಷಿಸಿಕೊಳ್ಳಲು ನಾಜಿಗಳಿಗೆ ಯಾವ ದಾರಿಯು ಇಲ್ಲದಾಗಿದೆ.

ಜರ್ಮನಿಯ ಇನ್ನೊಂದು ಕಡೆಯಲ್ಲಿ ರ್‍ಯಾನ್ ಪ್ರದೇಶದ ಲೈಪಿಗ್ಸದಿಂದ ೩೦ ಮೈಲು ದೂರದಲ್ಲಿ ಅಮೆರಿಕನ್ ದಳಗಳು ಪೂರ್ವದಿಂದ ಮುಂಬರಿದು ಬಂದ ಕೆಂಪು ದಳಗಳೊಡನೆ ಕೂಡಿವೆ. ನಾಜೀ ಪಕ್ಷದ ಹುಟ್ಟೂರಾದ ಮ್ಯೂನಿಕ್ ನಗರದೊಳಗೆ ಅಮೆರಿಕನ್ ಬಲಗಳ ಪ್ರವೇಶವಾಗಿರುತ್ತದೆ. ಹಿಟ್ಲರ ಪರ್ವತ ನಿಲಯವಿರುವ ಬೆಶ್ಚರ್‌ಗೆಡನ್ ಪ್ರದೇಶದ ಸುತ್ತಲೂ ಮಿತ್ರರು ಮುತ್ತಿಗೆ ಹಾಕಿ ಮುನ್ನಡೆಯುತ್ತಿರುವರು.

ಪೂರ್ವ ಪ್ರಸ್ಸಿಯೂದ ರಂಗದಲ್ಲಿ ರಶ್ಯನರು ಸ್ಟೆಟಿಟಿನ್ ಬಂದರವನ್ನು ಆಕ್ರಮಿಸಿ ಡಾಜಿಂಗ್ ಪ್ರದೇಶದ ಕರಾವಳಿ ಪ್ರದೇಶವನ್ನು ಹಿಡಿದು ಮುಂದೆ ಆಕ್ರಮಿಸಿರುವರು ಜೆಕೆಸ್ಲೆವೆಕಿಯಾದಲ್ಲೂ ಕೆಂಪು ಬಲಗಳು ತುಂಬಾ ಮುನ್ನಡೆದಿವೆ.

ಹೀಗೆ ಎಲ್ಲಾ ದಿಕ್ಕುಗಳಿಂದಲೂ ಒತ್ತಲ್ಪಟ್ಟು, ಜರ್ಮನ್ ಸೇನಾ ಬಲವು ಉಭಯಸಂಕಟಕ್ಕೆ ಒಳಗಾಗಿರುತ್ತವೆ. ನಾಜಿಶಾಹಿಯ ಅಧಿಕಾರವು ಕುಂದುತ್ತಾ ಬರುತ್ತಿದೆ. ಅನೇಕ ಕಡೆಗಳಲ್ಲಿ ಜರ್ಮನ್ ಸೇನಾಪತಿಗಳು ಮೇಲಿಂದ ಬಂದ ಆಜ್ಞೆಗಳನ್ನು ನಿರಾಕರಿಸಿ, ಮಿತ್ರರಿಂಗೆ ಶರಣು ಬಂದ ವಾರ್ತೆಗಳು ಬಂದಿವೆ. ನಾಜಿಮುಖಂಡರುಗಳು ದಿಗ್ಭ್ರಾಂತರಾಗಿ, ದಿಕ್ಕುಕಾಣದವರಾಗಿರುತ್ತಾರೆ. ಜನರಲ್ ಗೋರಿಂಗನು ತನ್ನ ಅಧಿಕಾರವನ್ನು ತ್ಯಜಿಸಿಬಿಟ್ಟ ವಾರ್ತೆಗಳು ಬಂದಿವೆ. ಬರ್ಲಿನ್ ನಗರದ ಕದನದ ನಾಯಕತ್ವವನ್ನು ಹಿಟ್ಲರನು ಸ್ವತಹ ವಹಿಸಿದ ವಾರ್ತೆಯು ಬಂದಿದ್ದು, ಆತನು ತೀರಿಕೊಂಡಿರುವನೆಂದು ವಾರ್ತೆಯು ಬಂದಿದೆ.

ಹಾಲ್ಲೆಂಡ್, ಬೆಲ್ಜಿಯಮ್ ಪ್ರದೇಶಗಳು ಜರ್ಮನ ಬಲಗಳ ಕೈ ಬಿಟ್ಟುಹೋಗುತ್ತಿವೆ. ಮಿತ್ರರನ್ನು ಎದುರಿಸುವುದರಲ್ಲಿ ಯಶಸ್ಸು ದೊರಕದೆ ಹತಾಶರಾದ ಜರ್ಮನರು ಹಾಲ್ಲೆಂಡನ್ನು ಬಿಟ್ಟು ತೆರಳುತ್ತಿರುವಾಗ, ಸಮುದ್ರವನ್ನು ತಡೆಯಲು ಹಾಕಿದ 'ಡ್ಯಾಕ್ಸ್' ಎಂಬ ಕಾಮಗಾರಿಕೆಗಳನ್ನು ಕೆಡವಿ ಹಾಕಿರುತ್ತಾರೆ. ಈ ಕಾರಣದಿಂದ ಈ ಮೊದಲು ಸಾರವತ್ತಾಗಿ, ಸಂತುಷ್ಟ ಪ್ರದೇಶವಾಗಿ ಬಾಳಿಕೊಂಡಿರುವ ಹಾಲ್ಲೆಂಡಿನ ಲಕ್ಷಗಟ್ಲೆ ಎಕ್ರೆ ಪ್ರದೇಶವು ಸಮುದ್ರಪಾಲಾಗಿರುತ್ತದೆ. ಹಾಲ್ಲೆಂಡಿನ ಕರಾವಳಿಯಲ್ಲಿ ಭೂಪಟ್ಟವು ಸಮುದ್ರ ಮಟ್ಟಕ್ಕಿಂತ ಕೆಳಗಿರುವುದು ಎಲ್ಲರಿಗೂ ತಿಳಿದ ವಿಷಯವು.

ಕದನವು ತಮಗೆ ಸೋಲುಪ್ರಾಯವಾಗಿ ನಡೆಯುತ್ತಿರುವಾಗ, ನಾಜಿಗಳು ತಮ್ಮನ್ನು ರಕ್ಷಿಸಿಕೊಳ್ಳುವ ದೃಷ್ಟಿಯಿಂದ, ಬ್ರಿಟನು ಮತ್ತು ಅಮೆರಿಕಳೊಡನೆ ಸಂಧಾನ ಬಯಸಿ ಸಂಪೂರ್ಣ ಶರಣಿಗೆ ಹೋಗಿರುವ ಸ್ವೀಡಿನ್ ಮೂಲಕ ಸಂದೇಶ ಕಳುಹಿಸಿಕೊಟ್ಟಿರುವರಾಗಿಯೂ, ಆದರೆ ಜರ್ಮನ್ ಬಲವು ಮೂರು ಮಿತ್ರರಾಷ್ಟ್ರಗಳಿಗೆ ಪೂರ್ಣ ಮಣಿಯದೆ ಯಾವ ಸಂಧಾನವು ಇಲ್ಲವೆಂದೂ, ತಿಳಿದುಬಂದಿದೆ.

ಕಳೆದ ಮಹಾ ಯುದ್ಧದಲ್ಲಿ ಜರ್ಮನಿಗೆ ಸೋಲು ಲಭಿಸಿದಾದರೂ, ಜರ್ಮನಿಯು ಸುರಕ್ಷಿತವಾಗಿತ್ತು. ಕೆಲವರ ವಿಶ್ವಾಸ ಘಾತುಕತನದಿಂದ ತಾವು ತಲೆ ಮಣಿಯಬೇಕಾಗಿ ಬಂತು, ಯುದ್ಧ ಕೊನೆ ಕೊನೆಗೊಂಡ ತಮ್ಮ ಶಕ್ತಿಯು ಕುಂದದೆ ಹಾಗೆನೆ ಇತ್ತೆಂದು ಜರ್ಮನ್ ಮಿಲಿಟರಿ ಅಧಿಕಾರಿಗಳು ಆಗಿಂದಾಗ್ಯೆ ಜಂಭ ಕೊಚ್ಚಿಕೊಳ್ಳುತ್ತಿದ್ದರು. ಈ ಭಾರಿ ಜರ್ಮನ್ ಸೇನಾಧಿಕಾರಿಗಳಿಂದ ಈ ತರದಮಾತುಗಳೆ ಹೊರಡದಂತೆ, ಜರ್ಮನ್‌ಸೇನಾ ಬಲವು ಪೂರ್ಣ ಮುರಿದುಬಿದ್ದು ಅದು ಶರಣುಬರುವ ವರೆಗೆ ಯುದ್ಧವುನಡೆಯಿಸಬೇಕೆಂದು ಕ್ರಿಮಿಯಾ ಪರಿಷತ್ತಿನಲ್ಲಿ ನಿರ್ಣಯವಾಗಿರುತ್ತದೆ.

ಜರ್ಮನಿಯೊಳಗೆ ಸ್ಥಿತಿಯು ಹೀಗಿರುವಾಗ ದಕ್ಷಿಣ ಇಟಲಿಯ ಜರ್ಮನ್ ಆಕ್ರಮಿತನಾಡುಗಳಲ್ಲಿ, ದೇಶಪ್ರೇಮಿ ಇಟಲಿಯನ ಜನರ ದಂಗೆ ಎಬ್ಬಿರುವರು. ಮಿತ್ರರ ಎಂಟನೆ ದಳವು ತನ್ನ ಆಕ್ರಮಣವು ಮುಂದುವರಿಸಿದೆ. ಅಲ್ಲಿ ತಳವೂರಿದ ಜರ್ಮನ್ ಬಲಗಳಲ್ಲಿ ಅನೇಕ ತಮ್ಮ ಕಾಲಿಗೆ ಬುದ್ಧಿ ಹೇಳಿದ ಕುರಿತು ವಾರ್ತೆಗಳು ಬಂದಿವೆ. ಈ ಪ್ರದೇಶದಲ್ಲಿ ಒಂದೆಡೆ ಮುಸಲೇನಿಯು ಸೆರೆಹಿಡಿಯಲ್ಪಟ್ಟು ದೇಶದ ಪ್ರೇಮಿಗಳು ಗುಂಡಿಗೆ ಆಹುತಿಯಾಗಿರುವರಾಗಿ ತಿಳಿದು ಬಂದಿದೆ.

ಇರೋಪದಲ್ಲಿ ಮಿತ್ರರು ವಿಜಯಪಥದಲ್ಲಿ ನಡೆದು ತಮ್ಮ ಗುರಿಯನ್ನು ಸಮೀಪಿಸುತ್ತಿರುವಾಗ, ಶಾಂತಸಾಗರದ ಅವರ ಕಾರ್ಯಕಲಾಪಗಳಿಗೆ ಯಾವತ್ತೂ ಕುಂದುಬರಲಿಲ್ಲ. ಜಪಾನಿನ ಸಮೀಪದಲ್ಲಿರುವ ಸಣ್ಣ ದ್ವೀಪಗಳನ್ನು ಆಕ್ರಮಿಸುವ ಕಾರ್ಯದಲ್ಲಿ ಅಮೇರಿಕನ್ ಬಲಗಳಿಗೆ ಒಳ್ಳೆ ಯಶಸ್ಸು ದೊರಕುತ್ತಿದೆ. ಈ ಕಾರಣದಿಂದ ಅಮೆರಿಕನ್ ವಿಮಾನ ಬಲಕ್ಕೆ ಜಪಾನಿನ ಸಮೀಪದಲ್ಲಿ ತಳಗಳು ದೊರತ್ತಿದ್ದು, ಜಪಾನಿನ ಮೇಲೆ ವಾಯುವಾಕ್ರಮಣ ನಡೆಯಿಸಲು ಅನುಕೂಲವಾಗಿದೆ. ಅಮೆರಿಕನ್ ಹಾರುವ ಕೋಟೆಗಳು, ನಿತ್ಯಲೂ ಎಂಬಂತೆ, ದಾರಳ ಸಂಸಂಖ್ಯೆಯಲ್ಲಿ ಹಾರಾಡಿ, ಜಪಾನಿಗೆ ತೆರಳಿ ಅಲ್ಲಿನ ಪ್ರಾಮುಖ್ಯ ಕೈಗಾರಿಕೆಗಳಿರುವ ನಾಡುಗಳನ್ನು ಹಾಳುಗೆಡುಹುತ್ತಿದ್ದಾವೆ. ಯುರೋಪದ ಕದನ ಸಮಾಪ್ತಿಯು ಈಗಆಗುತ್ತಿದ್ದು, ಶಾಂತಸಾಗರದ ಕದನಕ್ಕಾಗಿ ಬ್ರಿಟಿಷ್ ನೌಕಪಡೆಯ ಒಂದಂಶವನ್ನುಇತ್ತಕಡೆಗೆ ಕಳುಹಿಸಿಕೊಡುವ ಏರ್ಪಾಡುಗಳು ನಡೆದಿವೆ. ಈ ಕಾರಣದಿಂದ ಜಪಾನೀಯ ನೌಕಾಬಲವು ಸದ್ಯದಲ್ಲೆ ಎರಡು ಪ್ರಚಂಡ ನೌಕಾಬಲಗಳ ವಿರೋಧಿಸಿ ಹೋರಾಡಬೇಕಾಗಿ ಬರುವುದು. ರಷ್ಯಕ್ಕೂ ಜಪಾನಿಗೂ ನಡುವೆಯಿದ್ದ ಒಪ್ಪಂದದ ಕುರಿತು ಈಗ ರಡ್ಯಾದಿಂದ ನಿರಾಕರಿಸಲ್ಪಟ್ಟಿದ್ದು, ರಷ್ಯಾವು ಮುಂಚೂರಿಯಾ ಕಡೆಯಿಂದ ಜಪಾನಿನ ಮೇಲೆ ಯುದ್ಧ ಸಾರಬಹುದೆಂದು ಬಲವಾದ ಊಹೆಗಳಿವೆ. ಭೂಮಾರ್ಗವಾಗಿ ಜಪಾನಿಯರನ್ನು ಬೆನ್ನಟ್ಟಿ ಓಡಿಸಲು ಅಮೇರಿಕನ್ನರು ಚೀನಾದೊಳಗೆ ಸರ್ವಸಿದ್ಧತೆಗಳನ್ನು ಮಾಡುತ್ತಿರುವರು. ಅಮೆರಿಕನ್ ವಾಯುಬಲದ ಮತ್ತು ನೌಕಾಪಡೆಯ ಹೊಡೆತಗಳ ಕಾರಣದಿಂದ ಜಪಾನು, ಬೇಗನೆ ಮಿತ್ರರಿಗೆ ಶರಣು ಹೋಗಬಹುದೆಂದು ಕೆಲವೆಡೆಗಳಲ್ಲಿ ನಂಬಲಾಗಿದೆ.

ಇತ್ತ ಬರ್ಮಾದಲ್ಲಿ ಮಿತ್ರರ ೧೪ನೇ ದಳವು ಮಹಾಕಾರ್ಯಸಾಧನೆಯನ್ನು ಮಾಡಿರುತ್ತದೆ. ಸದ್ಯದಲ್ಲೆ ರಂಗೂನು ಮಿತ್ರರ ಕೈಸೇರಬಹುದು. ಬರ್ಮಾದ ಎಣ್ಣೆ ಪ್ರದೇಶಗಳೆಲ್ಲಾ ಮಿತ್ರರ ವಶವಾಗಿವೆ.

ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಮಿತ್ರರಿಗೆ ಯಶಸ್ಸು ದೊರಕಿದುದು ಕಾಣಿಸುತ್ತದೆ. ಜರ್ಮನಿಯು ಶರಣುಬರುವ ಸಮಯ ತೀರ ಸಮೀಪವಿದೆ. ಈ ಕಾರಣದಿಂದಲೆ ಸಂಧಾನ ಶರ್ತಗಳನ್ನು ರಚಿಸುವ ಕುರಿತು ಕಾರ್ಯಕಲಾಪಗಳು ಸಾನ್ ಫ್ರಾನಿಸ್ಕೊ ಈಗಲೆ ಪ್ರಾರಂಭವಾಗಿವೆ.

ಸಂಕ್ಷೇಪ ಸುದ್ದಿಸಾರ

ಇಟಲಿಯ ಫೆಸಿಸ್ಟ್ ಮುಖಂಡನು ತನ್ನ ಜನರಿಂದಲೇ ಕೊಲ್ಲಲ್ಪಟ್ಟಾಗ ಇತ್ತ ನಾಜೀ ಮುಖಂಡ ಹಿಟ್ಲರನೂ ಬಹುಕಾಲ ವ್ಯಾಧಿಗ್ರಸ್ತನಾಗಿದ್ದು ಈಗ ಪರಂಧಾಮವನ್ನೈದಿದನೆಂದು ಸುದ್ದಿ ಪ್ರಕಟವಾಗಿದೆ. ನಾಜೀ ಮುಖಂಡರನೇಕರು ಪಲಾಯನಗೈದಿರುವರು. ಅನೇಕರು ಸೆರೆಹಿಡಿಯಲ್ಪಟ್ಟಿರುವರು. ಫೆಸಿಸ್ಟರ ಅವಸ್ಥೆಯೂ ಹಾಗೇ ಆಗಿದೆ. ಈಗ ಸೋತವರು ನಾಜೀಗಳೋ ಅಥವಾ ಜರ್ಮನ್ ಜನಾಂಗವೊ ಎಂಬುದರ ಕುರಿತು ಮಿತ್ರ ಕೇಂದ್ರಗಳಲ್ಲಿ ಚರ್ಚೆ ನಡೆಯುತ್ತದೆ.

* * *

ಸೇನ್‌ಫ್ರೆನ್ಸಿಸ್‌ಕೊದಲ್ಲಿ ನಾಲ್ಕು ಸಾವಿರ ಅಮೇರಿಕನ್ ನಾಗರೀಕರ ಕಿಕ್ಕಿರಿದ ಸಭೆಯಲ್ಲಿ ಮೆಡೇಮ್ ವಿಜಯಲಕ್ಷ್ಮೀ ಪಂಡಿತರು ಭಾರತದ ನೈಜಸ್ಥಿತಿಯ ಕುರಿತು ಅಮೋಘ ಭಾಷಣ ಮಾಡಿದರು. "ಫ್ರಿಸ್ಕೊ ಪರಿಷತ್ತಿಗೆ ಪ್ರತಿನಿಧಿಗಳೆಲ್ಲರೂ ಯಾವ ಉದ್ದೇಶಕ್ಕಾಗಿ ಬಂದಿರುವರೊ ಅದನ್ನೇ ಪೂರೈಸುವಂತೆ ಭಾರತವು ಕೇಳುತ್ತಿದೆ" ಎಂದರು ಪಂಡಿತರು. ಓರ್ವ ಅಮೇರಿಕನ್ ಭಾಷಣಗಾರರೆಂದರು: "ಎಲ್ಲಾ ಕಡೆಗಳಲ್ಲಿ ಸ್ವಾತಂತ್ರ್ಯ ಇರದಿದ್ದರೆ ಅದು ಕೆಲವೇ ಕಡೆಗಳಲ್ಲಿ ಮಾತ್ರ ಇರಲಾರದು" ಇದು ಅರ್ಥಗರ್ಭಿತ ಮಾತು.

* * *

HINDUSTAN CO-OPERATIVE INSURANCE SOCIETY LTD

CALCUTTA. (ESTD. 1907)

BUSINESS IN 1943 Exceeds 5 Crores

APPLICATIONS

for Agencies on liberal Commission are invited for South Kanara & Coorg. Intending Applicants may interview the undersigned at Udipi Sri Krishna Bhavan, Mangalore.

K. S. Apremaya
Inspector of Agencies

ಈ ಪ್ರಖ್ಯಾತಲೇಪವು ಕಲೆ ಉಳಿಯದಂತೆ ಗುಣ ಪಡಿಸುತ್ತದೆ.

ಈ ಜಾಂಬಕ್ ಪೆಟ್ಟಿಗೆ ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದು.

ನೀವಷ್ಟೇ ಜಾಗರೂಕರಾಗಿದ್ದರೂ, ಮನೆಯಲ್ಲಿ ಕೆಲಕೆಲವು ಅಪಾಯಗಳೂ ಸಂಭವಿಸಿಯೇ ಬಿಡುತ್ತವೆ. ಗಾಯ ಮೊಣಕಾಲು ಬೇನೆ, ಬಾವು ಇತ್ಯಾದಿಗಳಾಗಿ ಮಕ್ಕಳು ಆಗಾಗ ಬಹಳ ತೊಂದರೆ ಕೊಡುತ್ತವೆ. [illegible] ಗಾಯಗಳು ಒಳಕಡೆ ವಿಷಕ್ರಿಮಿ ಹೋಗದಿದ್ದರೆ ಯಾವಾಗಲೂ ಅಪಾಯಕಾರಿಗಳಲ್ಲ. ಅದಕ್ಕಾಗಿಯೂ ನೀವು ಆಗ ಜಾಂಬಕ ತಾಗಿಸಬೇಕು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವನ್ನು ಚರ್ಮವು ಬೇಗನೆ ಹೀರಿಕೊಂಡು, ನೋವನ್ನು ಗುಣಮಾಡಿ, ಬಾವನ್ನು ಕಡಿಮೆಮಾಡಿ ರಿಶಿ ಇತ್ಯಾದಿಗಳನ್ನು ಒಣಗಿಸುವುದು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಸೂರ್ಯೋದಯ ದೇಶ-ಜಪಾನ್
ಹಿಂದಿನ ಕಾಲದಿಂದಲೂ ಸಾಮ್ರಾಜ್ಯವಾದಿ

(ಕಳೆದ ಸಂಚಿಕೆಯಿಂದ)

ಜನಾಂಗ ಲಕ್ಷಣ

ಜಪಾನಿಯನು ಸಾಮಾನ್ಯವಾಗಿ ಬಹಳ ಹಿಂದಿನ ಕಾಲದಿಂದಲೂ ವ್ಯಕ್ತಿಗತ ಜೀವಿಯಲ್ಲ. ತನ್ನ ಸಮಾಜ ದೇಶಗಳ ಶ್ರೇಯಸ್ಸೇ ಅವನಿಗೆ ಎಲ್ಲದಕಿಂತಲೂ ಪ್ರಿಯವಾದ ವಸ್ತು. ಅವನು ವ್ಯಕ್ತಿಶಃ ಬಹಳ ಶಿಸ್ತುಪ್ರಿಯನೂ, ಕಷ್ಟಸಹಿಷ್ಣುವೂ, ಕಠಿಣ ಶ್ರಮಾಳುವೂ ಆಗಿರುವನು. ಅವನ ಜೀವನಕ್ರಮವೂ ಬಹಳ ಸರಳವಾದುದೂ ಕಮ್ಮಿ ಖರ್ಚಿನದೂ ಆಗಿರುತ್ತದೆ. ಶಿಷ್ಟಸಾಂಪ್ರದಲ್ಲಿ ಅವನಿಗೆ ಬಹಳ ಆದರ ಮನ್ನಣೆಗಳಿದ್ದು ಅವನೊಬ್ಬ ಹುಟ್ಟು ಕಲಾಪ್ರೇಮಿಯೆಂಬ ವಿಷಯವು ಅವನ ಶೃಂಗಾರಪ್ರಿಯತೆ, ತೋಟಸೌಂದರ್ಯ ರಚನೆಗಳಿಂದ ತಿಳಿಯುತ್ತದೆ.

ಇಂದು ಪಾಶ್ಚಾತ್ಯ ಮಾದರಿಯಲ್ಲಿ ಬಹಳ ಮುಂದರಿದಿರುವರೆಂದು ತಿಳಿಯಲ್ಪಡುವ ಜಪಾನಿಯರು ತಮ್ಮ ಹಳೇ ಸಾಂಪ್ರದಾಯಗಳಲ್ಲಿ ತುಂಬಾ ಶ್ರದ್ಧಾಸಕ್ತಿಯುಳ್ಳವರಾಗಿದ್ದಾರೆ. ಅವರು ತಮ್ಮ ಪ್ರಾಚೀನರನ್ನೂ, ಪ್ರಕೃತಿಯ ಮರಗಿಡ ನದಿ ತೊರೆಗಳನ್ನೂ ಆರಾಧಿಸುವುದರಲ್ಲಿ ಪಾರಮಾರ್ಥಿಕ ಸಂತುಷ್ಟಿ ಪಡೆಯುತ್ತಾರೆ. ಹಿಂದಿನ ಪಾಳೆಯಗಾರ ಆಡಳಿತ ಪದ್ಧತಿಯನ್ನು ಅವರು ಇಂದಿಗೂ ಸಂಪೂರ್ಣವಾಗಿ ತೊಡೆದು ಹಾಕಿಲ್ಲ.

ಜಪಾನೀಗಳ ಮತ

ಹಿಂದಿನ ಕಾಲದಲ್ಲಿ ಬೌದ ಮತವು ಜಪಾನಿನಲ್ಲಿ ಪ್ರಸರಿಸಲ್ಪಟ್ಟಾಗ ಅದು ಅಲ್ಲಿನ ಜನರನ್ನು ನಾಗರೀಕರನ್ನಾಗಿ ಮಾಡಲು ತುಂಬಾ ಸಹಾಯಮಾಡಿತು. ಇಂದು ಮಿಲಿಯಾಂತರ ಜಪಾನೀಯರು ಒಂದಲ್ಲ ಒಂದು ತರದ ಬೌದ್ಧ ಪಂಥಕ್ಕೆ ಸೇರಿದವರಿರುತ್ತಾರೆ. ಇಷ್ಟಾದರೂ ಆ ಉಚ್ಚ ಮತದ ತತ್ವಸಾರವನ್ನು ಆ ಜನರು ಸರಿಯಾಗಿ ಹೀರಿಕೊಂಡಂತೆ ತೋರಿ ಬರುವುದಿಲ್ಲ.

ಇಷ್ಟಾದರೂ ಜಪಾನು ಒಂದು ಬೌದ್ಧ ದೇಶವೆಂದು ಹೇಳಬರುವುದಿಲ್ಲ. ಪ್ರಾಚೀನ ಆಚಾರ ವಿಚಾರಗಳ ಪ್ರಭಾವವೇ ಅಲ್ಲಿ ಬಹಳವಾಗಿ ಬೇರೂರಿರುತ್ತದೆ. ಜಪಾನೀಯರಿಗೆ ಯಾವುದಾದರೊಂದು ನಿರ್ದಿಷ್ಟ ಮತವಿದೆ ಎಂದು ಹೇಳುವುದಾದರೆ ಅದು ಅವರ ಶಿಂಟೊ ಮತವೆಂದೇ ಹೇಳಬೇಕು. ಅದು ದೇವರ ನೀತಿ ಮಾರ್ಗವೆಂದೆನ್ನಲ್ಪಡುವಂತಹುದು. ಆದರೂ ಸರಿಯಾಗಿ ವಿಮರ್ಶಿಸಿದರೆ ಅದೊಂದು ಮತವಲ್ಲ. ಅದರಲ್ಲಿ ಯಾವುದಾದರೊಂದು ವಿಶ್ವ ಸತ್ಯ ತತ್ವಗಳು ಪ್ರತಿಪಾದಿಸಲ್ಪಡಲಿಲ್ಲ. ಅದನ್ನು ಜಪಾನೀಯರೇ ಅನುಸರಿಸಬೇಕಲ್ಲದೆ ಜಗತ್ತಿನ ಇತರ ಜನಾಂಗದವರಾರೂ ಅದನ್ನು ಅಪ್ಪಿಕೊಳ್ಳುವಂತಹ ಆಕರ್ಷಣೆಯದಲ್ಲ. ಹಿರಿಯರಿಗೆ ಗೌರವ ಮನ್ನಣೆ ಸಲ್ಲಿಸುವುದನ್ನೇ ಅದು ಬೋಧಿಸುತ್ತದೆ. ಅದರಲ್ಲಿ ಅಧ್ಯಾತ್ಮಿಕ ವಿಷಯಸಾರವಿಲ್ಲದಿದ್ದುದರಿಂದಲೇ ಆ ಶಿಂಟೊ ಮತವು ಅಲ್ಲಿನ ರಾಜಮತವಾಗಿದ್ದು ಆಡಳಿತ ಧೋರಣೆಯಲ್ಲಿ ಬೇಕಾದ ಹಾಗೆ ಪರಿವರ್ತಿಸಿಕೊಳ್ಳಲು ಬರುತ್ತದೆ.

ಕ್ರೈಸ್ತ ಮತದ ವಿಚಾರವಾದರೂ ಅದೇ ಪ್ರಕಾರ ಮೊದಲು ಒಂದು ಕಾಲದಲ್ಲಿ ಜಪಾನಿಯರು ಸರ್ವತ್ರವಾಗಿ ಕ್ರೈಸ್ತ ಮತವನ್ನೇ ಒಪ್ಪಿಕೊಳ್ಳುವುದೆಂದು ನಿರ್ಧರಿಸಿದರು. ಆದರೆ ಶಿಂಟೋ ನೀತಿ ಪ್ರಭಾವದಿಂದ ಅದು ಸಾಧ್ಯವಾಗಲಿಲ್ಲ. ಆದರೂ ಕ್ರೈಸ್ತಮತವನ್ನು ಪಾಶ್ಚಾತ್ಯದ ತಮ್ಮ ಅನುಕರಣೆಯ ಕುರುಹಾಗಿ ಸರ್ವತ್ರ ಮತಾಂತರಗೊಳ್ಳಲು ಆ ಜನರು ಒಂದು ಕಾಲದಲ್ಲಾದರೂ ಮನಸ್ಸು ಮಾಡಿದರೆಂಬ ಸಂಗತಿಯು ಜಪಾನೀಗಳಲ್ಲಿ ಸ್ವಂತ ಪ್ರೇರಣೆಯ ಬೇರೆ ಯಾವ ಮತ ಪದ್ಧತಿ ಇರಲಿಲ್ಲವೆಂಬ ಸಂಗತಿಯನ್ನು ಸೂಚಿಸುತ್ತದೆ.

ಆಧುನಿಕ ಐರೋಪ್ಯ ಮಾದರಿಯ ಮೇಲೆ ಸುಧಾರಣೆ ಹೊಂದಲಾರಂಭಿಸಿದ ನಂತರ ಜಪಾನಿಯ ಮುಖಂಡರು ಪ್ರಜಾಪ್ರಭುತ್ವ, ಸಮತಾವಾದ, ಸಾಮ್ಯವಾದ ಮುಂತಾದ ರಾಜಕೀಯ ತತ್ವಗಳನ್ನೇ ರಾಷ್ಟ್ರೀಯ ಮತವಾಗಿ ಅನುಕರಣೆ ಮಾಡಲು ಯೋಚಿಸಿದರೆಂಬ ಸಂಗತಿಯು ಅತ್ಯಂತ ಸಾರಸ್ಯವಾದುದು. ಇದನ್ನು ಆ ಶಿಂಟೋ ತತ್ವ ಕವಚದಿಂದ ಆಚ್ಛಾದಿಸಲು ಅವರು ಪ್ರಯತ್ನಪಟ್ಟರು.

ಇಂದು ಜಪಾನಿನಲ್ಲಿ ಕ್ರೈಸ್ತ ಮತವನ್ನು ಸಂಶಯದಿಂದ ಕಾಣುತ್ತಾರೆ. ಅದು ಪಾಶ್ಚಾತ್ಯ ಸಹಾನುಭೂತಿಯದು ಇರುವುದೆಂದೂ ಬಿಳೀ ಜನಾಂಗಿಕರೊಡನೆ ಯುದ್ಧಮಾಡಲು ಬೇಕಾದ ರಾಷ್ಟ್ರೀಯ ಐಕ್ಯತೆಯು ಅದರಿಂದ ಸಾಧ್ಯವಿಲ್ಲವೆಂತಲೂ ಅವರು ಭಾವಿಸಿರುವರು. ಆದರೂ ಸರಕಾರವು ಕ್ರೈಸ್ತ ಮತವನ್ನು ಬಹಳ ಮಟ್ಟಿಗೆ ತಮ್ಮ ರಾಜಕೀಯ ರೀತಿ ನೀತಿಗಳನ್ನು ಗುರಿ ಮುಟ್ಟಿಸುವುದಕ್ಕಾಗಿ ಉಪಾಯಾಂತರದಿಂದ ಉಪಯೋಗಿಸಿಕೊಳ್ಳಲು ಪ್ರಯತ್ನ ಪಟ್ಟಿತು. ಕ್ರೈಸ್ತ ಮತಾವಲಂಬಿಗಳಾದ ರಾಜಕೀಯ ಮುತ್ಸದಿಗಳು ರಾಯಭಾರ ಕಾರ್ಯಕ್ಕಾಗಿ ರೋಮ್, ಇಂಗ್ಲೆಂಡ್, ಅಮೇರಿಕಾಗಳಿಗೆ ಕಳುಹಲ್ಪಟ್ಟರು. ಜಪಾನೀ ಕ್ರೈಸ್ತ ಪ್ರಚಾರಕರು ಚೀನಿ ಕ್ರೈಸ್ತರಲ್ಲಿ ಜಪಾನೀಯರ ಮೇಲೆ ಸಹಾನುಭೂತಿ ಹುಟ್ಟಿಸುವಂತೆ ಮಾಡಿ ಚೀನದಲ್ಲಿ ಒಡಕ್ಕನುಂಟು ಮಾಡಲು ಪ್ರಯತ್ನಿಸಿದರವರು.

ಶಿಕ್ಷಣ ಪದ್ಧತಿ

ಪ್ರಾಚೀನ ಕಾಲದಿಂದಲೂ ಜಪಾನೀಯರು ವಿದ್ಯಾರ್ಜನೆಗೆ ಅನುಪಮ ಗೌರವಾದಗಳನ್ನು ಕೊಟ್ಟು ಅಭಿಮಾನದಿಂದ ಜ್ಞಾನ ಸಂಪಾದನೆಗೆ ಜೀವನದಲ್ಲಿ ಪ್ರಥಮ ಸ್ಥಾನಕೊಟ್ಟಿರುವರು. ೧೮೬೮ರಲ್ಲಿ ಸಾರಲ್ಪಟ್ಟ ರಾಜ ಘೋಷಣೆಯಲ್ಲಿ "ವಿಶ್ವದ ಎಲ್ಲಾ ಕಡೆಗಳಿಂದಲೂ ಜ್ಞಾನಾರ್ಜನೆಗೈದು ನಮ್ಮ ಸಾಮ್ರಾಜ್ಯದ ಶ್ರೇಯಸ್ಸನ್ನುಂಟುಮಾಡಬೇಕು" ಎಂದು ಉಲ್ಲೇಖಿತವಾಗಿದೆ. ಅಂದಿನಿಂದಲೇ ಜಪಾನಿ ಆಡಳಿತವು ಪ್ರಗತಿಶೀಲವಾದ ಶಿಕ್ಷಣ ಧೋರಣೆಯನ್ನು ತಾಳಿತು.

ದೇಶಕ್ಕೆ ಸೇವೆಸಲ್ಲಿಸುವಂತಾಗುವ ಪ್ರಜೆಗಳನ್ನು ಸಿದ್ಧಮಾಡುವ ಶಿಕ್ಷಣವೇ ಯಥಾಯೋಗ್ಯವಾದುವೆಂದು ಜಪಾನೀ ಮುಂದಾಳುಗಳು ತಿಳಕೊಂಡು ಅಂತೆಯೇ ೧೮೭೨ರಲ್ಲಿ ಒಂದು ಶಿಕ್ಷಣ ಶಾಸನವನ್ನು ಜಾರಿಗೆ ತಂದರು. ಪ್ರಜೆಯಾದ ಪ್ರತಿಯೊಬ್ಬನೂ ತನ್ನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದೇ ಮಹತ್ವದ ಕರ್ತವ್ಯವೆಂದು ತಿಳಿಯ ತಕ್ಕದೆಂದು ಸಾರಲಾಯಿತು. ಈ ದೃಷ್ಟಿಯಿಂದ ಶಿಕ್ಷಣದಮಟ್ಟಿಗೆ ಜಪಾನೀ ಸರಕಾರವು ಬಡವ ಶ್ರೀಮಂತ, ಆಳು ಯಜಮಾನನೆಂಬ ಭೇದಾಭೇದವನ್ನು ಗಣನೆಗೆ ತೆಗೆದುಕೊಳ್ಳದೆ ಮುಂದುವರಿದದ್ದು ಗುಮನಾರ್ಹವಾದ ವಿಚಾರ.

ಇಂತಹ ಸಮಾನಾನುಕೂಲತೆಯ ಕಡ್ಡಾಯ ಶಿಕ್ಷಣ ಧೋರಣೆಯಿಂದ ಅಲ್ಲಿ ಬಹು ಹಿಂದಿನ ಕಾಲದಿಂದ ನಡೆದುಬಂದ ಸೈನಿಕ ಜಾತಿ, ರೈತ ಜಾತಿ, ಕೈಗಾರಿಕೆ ಜಾತಿ, ವ್ಯಾಪಾರಿ ಜಾತಿಗಳೆಂಬ ವರ್ಗಾವರ್ಗ ತಾರತಮ್ಯಗಳು ಕಡಿಮೆಯಾಗಿ ಒಂದು ತರದ ಸಮಾನ ಸ್ಥಾನಮಾನಗಳ ಸಮಾಜ ವರ್ಗವು ಉಂಟಾಗಲು ಕಾರಣವಾಯಿತು.

ಚಕ್ರವರ್ತಿಗೂ ಹಿರಿಯರಿಗೂ ಮನ್ನಣೆ ವಿಧೇಯತ್ವವನ್ನು ಸಲ್ಲಿಸಲು ಕಲಿಸುವುದು ಜಪಾನೀ ಶಿಕ್ಷಣದ ಇನ್ನೊಂದು ಲಾಕ್ಷಣಿಕ ವೈಶಿಷ್ಟ. ಅದೆಷ್ಟು ವಿದ್ಯಾವಂತ ಜಪಾನಿಯನೂ ಇರಲಿ, ಅವನು ಯಾವ ಮತದವನೂ ಇರಲಿ, ಚಕ್ರವರ್ತಿಯನ್ನು ಜಗತ್ತಿನ ದೇವರೆಂದೇ ಅವನು ನಂಬುತ್ತಾನೆ. ಚಕ್ರವರ್ತಿಗೆ ಅತೃಪ್ತಿಯಾಗುವ ಕೆಲಸ ಮಾಡಿದನೆಂದು ತಿಳಿದುಬಂದರೆ ಅವನು ಹರಿಕಾರಿ ಎಂಬ ಆತ್ಮಹತ್ಯದ ಧೋರಣೆಯನ್ನು ಅನುಸರಿಸುವುದು ಖಂಡಿತ.

ಕೈಗಾರಿಕೆ ಯಂತ್ರ ಶಿಕ್ಷಣ ಮುಂತಾದುವನ್ನು ಜಪಾನಿಯರು ಜಗತ್ತಿನ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಬಹಳ ಶ್ರಮಪಟ್ಟು ಕಲಿತು ತಮ್ಮ ದೇಶದ ಪ್ರಗತಿಗೆ ಕಾರಣಭೂತರಾಗಿದ್ದಾರೆ. ಪ್ರತಿಯೊಂದು ದೇಶದ ಭಾಷೆ, ಸಾಹಿತ್ಯ, ಚರಿತ್ರೆ, ಭೌಗೋಲಿಕ ಸಾಮಾಜಿಕ ಪರಿಸ್ಥಿತಿಗಳನ್ನು ಅವರು ಅಭ್ಯಾಸಮಾಡಿದ್ದು ಯೋಗ್ಯ ರೀತಿಯಲ್ಲಿ ಅದರ ಉಪಯೋಗವನ್ನು ಮಾಡಿಕೊಂಡಿರುವರು.

ಭವಿಷ್ಯದಲ್ಲೇನು

ಜಪಾನನ್ನು ಸೋಲಿಸಿದ ಮೇಲೆ ಮಿತ್ರ ರಾಷ್ಟ್ರಗಳು ಅಲ್ಲಿನ ಸೈನ್ಯ ಧೋರಣೆಯ ರಾಜಕೀಯ ಮನೋಭಾವದ ವರ್ಗವನ್ನು ನಾಶಮಾಡಲು ಪ್ರಯತ್ನಮಾಡಬೇಕು. ಆಗಲೇ ಯುದ್ಧ ಪೂರ್ವದಲ್ಲಿ ವಿಶಾಲ ಧೋರಣೆಯ ಶಾಂತಿಪ್ರಿಯ ಕೆಲ ಸಂಸ್ಥೆಗಳು ಅಲ್ಲಿ ಇದ್ದುವು. ಆದರೆ ಸಾಮ್ರಾಜ್ಯ ಲಾಲಸೆಯ ಆಡಳಿತಗಾರರ ದಬ್ಬಾಳಿಕೆಯಿಂದ ಅವು ಮೇಲಕ್ಕೆ ಬರಲಿಲ್ಲ. ಮಿತ್ರರು ವಿಜಯಿಗಳಾಗಿ ಅಲ್ಲಿ ಹೋದಾಗ ಇಂತಹ ಸಂಸ್ಥೆಗಳಿಗೆ ಮೇಲ್ಕೈಯನ್ನು ಕೊಟ್ಟು ಪ್ರೋತ್ಸಾಹಿಸಬೇಕು. ಅವರ ಸಹಕಾರದಿಂದ ಒಂದು ಸಲಕ್ಕೆ ಅಲ್ಲಿನ ಸಂಕುಚಿತ ರಾಷ್ಟ್ರಭಾವನೆಯನ್ನು ಜನತೆಯಲ್ಲಿ ವಿಕಾಸಗೊಳಿಸಿದರೆ ಜಪಾನು ಎಂದಿಗೂ ದಬ್ಬಾಳಿಕೆಯ ರಾಷ್ಟ್ರವಾಗಿ ವಿಶ್ವಶಾಂತಿಗೆ ಕಂಟಕಪ್ರಾಯವಾಗಲಾರದು.

ಜರ್ಮನಿಯಲ್ಲಿ ಇರುವಂತೆ ಜಪಾನಿನಲ್ಲಿ ಗುಪ್ತ ಕ್ರಾಂತಿಕಾರರ ಚಳವಳವು ಅಷ್ಟೊಂದು ಬಿರುಸಾಗಿಲ್ಲ. ೧೯೨೦ರಿಂದ ೧೯೩೦ರ ವರೇಗೆ ಅಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ಜನಪ್ರಿಯವಾಗತೊಡಗಿತ್ತು. ಯುದ್ಧಾನಂತರ ಇದನ್ನು ಪುನಃ ಪ್ರೋತ್ಸಾಹಿಸಬೇಕು. ಆ ದೇಶಕ್ಕೆ ಎಲ್ಲಾ ತರದ ಆರ್ಥಿಕ ಸೌಲಭ್ಯತ್ತುಗಳನ್ನು ಕೊಡಬೇಕು. ಸಾಮಾನ್ಯ ಜನತೆಯ ಬಡತನವನ್ನು ನೀಗಬೇಕು. ದೇಶಾಡಳಿತದ ಹೊಣೆಗಾರಿಕೆಯನ್ನು ಅವರಿಗೇ ಬಿಟ್ಟು ವಿಶ್ವಭ್ರಾಂದವ್ಯದ ಭರವಸೆಯನ್ನುಂಟು ಮಾಡುವುದರಲ್ಲೇ ಮಿತ್ರರು ಪ್ರಯತ್ನಿಸಿ ಜಪಾನನ್ನು ಪರಿವರ್ತಿಸಬೇಕಾಗಿದೆ.

ಧೂಳು ಶ್ವಾಸಕೋಶಕ್ಕೆ ರೋಗವನ್ನು ಒಯ್ಯುವುದು

ಶ್ವಾಸಯೋಗ್ಯ ಮಾತ್ರೆ ಪೆಪ್ಸು ತೆಕ್ಕೊಳ್ಳಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿಯೋಗ್ಯ ರಸವನ್ನು ಹೊರಗೆಡವುದು; ಅದರಿಂದ ಶೀತ, ಇಂಪ್ಲುಯೆಂಜಾ, ಮೊದಲಾದ ಬಾಧೆಗಳು ಕೂಡಲೆ ಗುಣವಾಗುವುದು.

ಪೆಪ್ಸು ಸೇವಿಸಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

FACTS about

The City Bus Conductors

Sorry Sir, the Bus is full. Will you please get down.

"But I am Late. I must travel by this Bus . . ."

"Very sorry Sir, you will have to wait for the next Bus– I cannot permit more than four standing passengers on our New Buses and three on old Buses. It is against the rules. Don't detain the Bus, please get down."

Very disappointing to the passenger but the Bus cannot take an extra load with Safety and it is the conductor's unpleasant duty to politely enforce the simple regulations made for better transport. Co-operate with him.

He Is Trained For His Job

Help Him To Help You.

Issued by the Mangalore Automobiles Limited to enlist your co-operation.

ಕೃಷಿ ತೆರಿಗೆ ಭೂಮ್ಹಾಲಿಕ ವಿರೋಧ
ಜಿಲ್ಲಾ ಆಹಾರ ಸಮಿತಿಯ ಮಹತ್ವದ ನಿರ್ಣಯಗಳು
ಮಂಗಳೂರಲ್ಲಿ ಅ. ಭಾ. ಆಯುರ್ವೇದ ಸಮ್ಮೇಳನ
ಸಕ್ಕರೆ ಬೆಲೆ-ಅಕ್ಕಿಯ ವಿವರ-ಬೇಸಾಯಗಾರರ ದುಸ್ಥಿತಿ-ಸಂಗೀತ ಕಚೇರಿ -ಸ್ಕೌಟ್ ಶಿಬಿರ-ಕಟ್ಟಡ ಸಾಮಾನುಗಳಿಗಾಗಿ

ಕಲ್ಲಿಕೋಟೆಯಲ್ಲಿ ಸೆಶ್ಶನ್ ಜಡ್ಜರಾಗಿದ್ದ ಶ್ರೀ ಎಂ. ಎ. ಟಿ. ಕೊಯಿಲೊ ಅವರು ತಾ. ೨೯ರಂದು ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ರಜೆಯ ಮೇಲಿದ್ದು ಸ್ವಲ್ಪ ಸಮಯದಿಂದ ಕಾಯಿಲೆ ಇದ್ದರು. ಇವರು ಮಂಗಳೂರಿನವರು. ಸ್ಥಳೀಯ ಎಲೋಶಿಯಸ್ ಕೋಲೆಜಿನಲ್ಲಿ ಕಲಿತಿದ್ದರು. ಮದ್ರಾಸಿನಲ್ಲಿ ೧೯೩೭ರ ತನಕ ಎಡ್ವೋಕೇಟರಾಗಿ ವೃತ್ತಿ ಮಾಡುತಿದ್ದು ಮತ್ತೆ ಜಡ್ಜರಾಗಿ ನೇಮಕ ಹೊಂದಿದರು. ಮೃತರ ಆತ್ಮಕ್ಕೆ ಶಾಂತಿ ಕೋರುವೆವು.

ಸ್ಥಳೀಯ ಬಾಲ ಮಾರುತಿ ವ್ಯಾಯಾಮ ಮಂಡಳದ ವಾರ್ಷಿಕ ದಿನಾಚರಣೆಯು ತಾ. ೨೯ರಂದು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಅಂದು ಪ್ರಾತಃಕಾಲ ಶ್ರೀ ಅಮ್ಮೆಂಬಳ್ ಶ್ರೀನಿವಾಸ್ ಪೈ ಅವರು ಮಂಡಳದ 'ಸುಕೃತ ಭವನ' ವೆಂಬ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ ನೆರವೇರಿಸಿದರು. ಸಾಯಂಕಾಲ ಶ್ರೀ ಎಂ. ವಾಮನ ಕುಡ್ವಾ ಅವರ ಅಧ್ಯಕ್ಷತೆಯಲ್ಲಿ ವಿವಿಧ ತರದ ವ್ಯಾಯಾಮ ಶಕ್ತಿ ಪ್ರದರ್ಶನವೂ, ವರದಿ ವಾಚನ ಬಹುಮಾನ ವಿತರಣಗಳು ನಡೆದುವು. ಅಂದು ರಾತ್ರೆ ಮಿತ್ರ ಭೋಜನಕ್ಕೆ ಬಹು ಮಂದಿ ನಾಗರೀಕರು ಬಂದಿದ್ದು ಆಹಾರ ಪದಾರ್ಥಗಳು ಶ್ಲಾಘನೀಯ ಅಭಿರುಚಿಯವಿದ್ದುವು. ಶ್ರೀ ಕಸ್ತೂರಿ ಸರ್ವೋತ್ತಮ ಪೈ ಅವರ ಅವಿಶ್ರಾಂತ ಪ್ರಯತ್ನದಿಂದ ಮಂಡಳಕ್ಕೆ ಹೊಸ ಶರೀರ ವ್ಯಾಯಾಮ, ಕುಸ್ತಿ, ಪಂದ್ಯಾಟ, ಮತ್ತು ಸ್ನಾನ ಗ್ರಹಗಳನ್ನೊಳಗೊಂಡ 'ಸುಕೃತ ಭವನ'ವು ಪ್ರಾಪ್ತವಾಯಿತು. ಮಂಡಳದವರು ಶ್ರೀಯುತರಿಗೆ ಮಾನ ಪತ್ರವನ್ನರ್ಪಿಸಿ ಆಭಾರ ಸೂಚಿಸಿದರು.

ಬೊಕ್ಕಪಟ್ಣ ಮುನ್ಸಿಪಲ್ ಹಾಯರ್ ಎಲಿಮೆಂಟರಿ ಶಾಲೆಯ ಹಿಂದೂಸ್ಥಾನ್ ಸ್ಕೌಟ್ ಶಿಬಿರ ಸಮಾರಂಭವು ಕಳೆದ ಆದಿತ್ಯವಾರ ಶ್ರೀ ಏಕಾಂಬರ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಸದ್ರಿ ಶಾಲೆಯ ಸ್ಕೌಟರು ತಮ್ಮ ವಿವಿಧ ಚಟುವಟಿಕೆಗಳನ್ನು ಪ್ರದರ್ಶಿಸಿ ಸಭಿಕರನ್ನು ಆನಂದ ಪಡಿಸಿದರು.

ಕೆಲವು ದಿನಗಳ ಹಿಂದೆ ಸೇರಿದ ಜಿಲ್ಲಾ ಭೂಮಾಲಿಕರ ಸಂಘದಲ್ಲಿ ಕೆಲವು ಮಹತ್ವದ ನಿರ್ಣಯಗಳಾದುವು. ಒಂದು ನಿರ್ಣಯದಲ್ಲಿ ಸಂಘದವರು ಮದ್ರಾಸ್ ಸರಕಾರದವರು ಕೃಷಿ ಆದಾಯದ ತೆರಿಗೆಯನ್ನು ಯೋಚಿಸಿದುದರ ಕುರಿತು ಭೀತಿಯನ್ನು ವ್ಯಕ್ತ ಪಡಿಸುವುದಲ್ಲದೆ ಭಾರವಾದ ತೆರಿಗೆಗಳನ್ನು ಆಗಲೇ ಹೊರುತ್ತಿರುವ ಬೇಸಾಯಗಾರರಿಗೆ ಅದರಿಂದ ಕಳವಳವುಂಟಾಗಿದೆ ಎಂದು ಸೂಚಿಸಲಾಯಿತು. ನಮ್ಮ ಜಿಲ್ಲೆಯ ರೈತರು ಸಾಲದಿಂದ ಮುಳುಗಿರುವನು. ಸಂಕಷ್ಟ ಪರಿಸ್ಥಿತಿಯಿಂದ ಅವರ ಆಸ್ತಿಗಳು ಅನೇಕ ಮಾರಲ್ಪಟ್ಟಿವೆ. ತೀರ್ವೆಯನ್ನು ಇತ್ತೀಚೆಗೆ ಏರಿಸಲಾಗಿದೆ. ಅಡಿಕೆ, ಚಾ, ಕಾಫಿ, ಹೊಗೆಸೊಪ್ಪು ವ್ಯವಸಾಯಿಗಳು ಅಬ್ಕಾರಿ ಸುಂಕದ ದೆಸೆಯಿಂದ ಬಳಲುತಿದ್ದಾರೆ. ಯುದ್ಧದಿಂದ ಜೀವನ ವೆಚ್ಚ ಸಹಿಸಲು ಸಾಧ್ಯವಾಗಿದೆ. ಸರಕಾರಕ್ಕೆ ನಿಗಿತಾಯದ ಆಯವಿರುವಾಗ ಈ ತೆರಿಗೆಯನ್ನು ಹೊರಿಸುವುದು ಅಸಂಗತ ಹೀಗೆಂದು ಭೂಮಾಲಿಕರ ನಿರ್ಣಯದ ಅಭಿಪ್ರಾಯವಿದೆ.

ಪ್ರಾಂತ್ಯದ ಪ್ರಮುಖ ನ್ಯಾಯಪಟುಗಳೂ, ಆರ್ಥಿಕ ಶಾಸ್ತ್ರ ಪಟುಗಳೂ, ಮಾತ್ರವಲ್ಲ ರಾಷ್ಟ್ರೀಯ ಭಾವನೆಯ ಮುಖಂಡರೂ ಮದ್ರಾಸ್ ಸರಕಾರದ ಈ ತೆರಿಗೆ ಯೋಜನೆಯನ್ನು ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ವಿರೋಧಿಸಿ ಅಭಿಪ್ರಾಯ ಸೂಚಿಸಿರುವರು. ನಿರ್ದಿಷ್ಟ ಯಾವ ಉದ್ದೇಶವಿಲ್ಲದೆ ಯಾವ ಆಡಳಿತಾಧಿಕಾರಿಗಳೂ ತೆರಿಗೆಯನ್ನು ಹೊರಿಸುವುದು ಆಧುನಿಕ ರಾಜ್ಯನೀತಿಗೆ ವ್ಯತಿರಿಕ್ತವಾದುದು ಎಂದೂ ಹೇಳಲಾಗಿದೆ. ಮದ್ಯಪಾನ ನಿರೋಧವನ್ನು ತೆಗೆದು ಹಾಕಿದ್ದರಿಂದ ಅದರಿಂದಾಗುವ ನಷ್ಟವನ್ನು ಭರ್ತಿ ಮಾಡಲು ಎತ್ತುತಿದ್ದ 'ಸೇಲ್ ಟೇಕ್ಸ್' ತೆರಿಗೆಯಿಂದ ಈಗ ಸರಕಾರಕ್ಕೆ ಇಮ್ಮಡಿ ಆದಾಯವಿದೆ. ಆದುದರಿಂದ ಈ ಎಲ್ಲಾ ವಿಷಯಗಳನ್ನು ಸರಿಯಾದ ದೃಷ್ಟಿ ಕೋನದಿಂದ ವಿಮರ್ಶಿಸಿ ಸರಕಾರವು ಈ ಹೊಸ ಯೋಜನೆಗೆ ಕೈಯಿಕ್ಕಬೇಕೆಂದು ಬಹುರೀಕ ಜನರು ನಿರೀಕ್ಷಿಸುತ್ತಾರೆಂದು ಹೇಳಬಹುದು.

ಆಹಾರ ಪರಿಸ್ಥಿತಿಯನ್ನು ಭೂಮಾಲಿಕರ ಸಂಘದವರು ಸೂಕ್ಷ್ಮವಾಗಿ ಪರಿಶೀಲಿಸಿದಂತೆ ತೋರುತ್ತದೆ. ಆ ಕುರಿತು ಅವರ ನಿರ್ಣಯಗಳಲ್ಲಿ 'ಉತ್ಪತ್ತಿಯನ್ನು ಸರಿಯಾಗಿ ಎಣಿಸಿ ಕೊಳ್ಳದೆಯೂ, ಬೇಸಾಯಗಾರನ ಅವಶ್ಯಕ ಖರ್ಚಿಗೆ ಬೇಕಾದುದನ್ನು ಸರಿಯಾಗಿ ನಿರ್ಧರಿಸದೆಯೂ ಅಧಿಕ ರಿಕ್ವಿಜಿಶನ್ (ಸ್ವಾಧೀನ ಪಡಿಸಿಕೊಳ್ಳುವಿಕೆ) ಆಗುತ್ತದೆ. ಆಕ್ಷೇಪಣೆಯ ಅರ್ಜಿಗಳನ್ನು ಗಮನಿಸುವುದೇ ಇಲ್ಲ.' ಸರಿಯಾದ ಪರಿಶೀಲನೆ ಇಲ್ಲದೆ ಆಜ್ಞೆ ಉಲ್ಲಂಘನೆಗಾಗಿ ಶಿಕ್ಷೆಗಳಾದರೆ ತುಂಬಾ ಸಂಕಷ್ಟವಾಗುವುದು. ಅಧಿಕ ರಿಕ್ವಿಜಿಶನಿನಿಂದ ಮುಂದಿನ ಮಳೆಗಾಲದಲ್ಲಿ ಹಳ್ಳಿಗಳಲ್ಲಿ ಅಕ್ಕಿ ಅಭಾವವುಂಟಾಗ ಬಹುದು. ಆಗಲೇ ಅನೇಕ ಕಡೆಗಳಿಂದ ಬೇಸಾಯ ಕೆಲಸದವರು ಪಟ್ಟಣದ ಕಡೆಗೆ ಹೆಚ್ಚು ಕೂಲಿ ಮತ್ತು ಆಹಾರ ವಸ್ತು ಸೌಕರ್ಯಕ್ಕಾಗಿ ಬರುತ್ತಿರುವರು. ಪರಿಣಾಮವಾಗಿ ಕೃಷಿ ಪ್ರದೇಶಗಳು ಬಂಜರು ಬೀಳಬಹುದು. ಮುಂದಿನ ಬೆಳೆಗೆ ಸಂಗ್ರಹಿಸಿಟ್ಟ ಬೀಜವನ್ನು ಒಕ್ಕಲುಗಳು ಮಳೆಗಾಲದಲ್ಲಿ ಉಪಯೋಗಿಸುವ ಸಂದರ್ಭವೂ ಅಸಂಭವವಲ್ಲ. ಅಧಿಕ ಪ್ರಮಾಣದಲ್ಲಿ ರಿಕ್ವಿಜಿಶನ್ ಆದರೂ ಜಿಲ್ಲೆಗೆ ಬೇಕಾದಷ್ಟು ಅಕ್ಕಿ ಸಾಲದೆ ಹೋಗುತ್ತದೆ. ಆದುದರಿಂದ ಸರಕಾರದವರು ಹೊರಗಿನಿಂದ ಅಕ್ಕಿ ತರಿಸುವರೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಸಂಘದವರು ಮುಂಜಾಗೃತೆ ಕೊಟ್ಟಿರುವರು.

ಆಹಾರ ಮುಖ್ಯ ವಸ್ತುವಿನ ಕುರಿತು ಭೂಮಾಲಿಕರಿಗಿಂತ ಹೆಚ್ಚಿನ ಅನುಭವ ಇನ್ನಿತರಿಗೆ ಇರದು. ಆದರೂ ಮುಂದಿನ ರಿಕ್ವಿಜೀಶನ್ ಮಾಡುವಾಗ ತಜ್ಞ ಭೂಮಾಲಿಕ ಪ್ರತಿನಿಧಿಗಳು ಬೇಸಾಯಗಾರರ ಆವಶ್ಯಕತೆಯ ಪ್ರಮಾಣದ ಕುರಿತು ನಿಷ್ಪಕ್ಷಪಾತದ ಮತ್ತು ತರ್ಕ ಬದ್ಧವಾದ ಪ್ರಮಾಣದ ಕುರಿತು ಆಡಳಿತೆಗಾರರಿಗೆ ಸಲಹೆ ಕೊಡಲು ಮುಂದೆ ಬಂದರೆ, ಹೊರಗಿನಿಂದ ಆದಷ್ಟು ಕಮ್ಮಿ ಅಂಶದಲ್ಲಿ ಅಕ್ಕಿ ತರಿಸುವಂತಾಗುವಂತೆ ಸಹಕರಿಸಿದರೆ ಸರಕಾರಕ್ಕೂ ಆ ಪ್ರತ್ಯೇಕ ವಿಷಯದಲ್ಲಿ ತೊಂದರೆಗಳು ಕಮ್ಮಿಯಾಗಿ ತಕ್ಕ ಏರ್ಪಾಡು ಮಾಡಲನುಕೂಲವಾಗುತ್ತದೆ.

ಮಿಗುವ ಅಕ್ಕಿ ಬತ್ತಗಳನ್ನು ಸೆಂಟ್ರಲ್ ಕೋಪರೇಟಿವ್ ಸ್ಟೋರುಗಳಿಗೇನೇ ವಿಕ್ರಯಿಸ ತಕ್ಕದೆಂದು ೨೧–೩–'೪೪ರಲ್ಲಿ ತಾವು ಹೊರಡಿಸಿದ ಆಜ್ಞೆಯನ್ನು ರದ್ದುಗೊಳಿಸಿ ಈಗ ಅಂತಹ ಮಿಗಿತಾಯದ ಅಕ್ಕಿ ಬತ್ತಗಳನ್ನು ಜಿಲ್ಲಾ ಕಲೆಕ್ಟರರಿಗೆ ಇಲ್ಲವೇ ಅವರ ನೇಮಿಸುವ ಏಜಂಟರಿಗೇನೇ ವಿಕ್ರಯಿಸ ತಕ್ಕುದೆಂಬ ಹೊಸ ಪ್ರಕಟಣೆಯನ್ನು ಜಿಲ್ಲಾ ಕಲೆಕ್ಟರರು ಹೊರಡಿಸಿರುವರು. ರಾಗಿಯ ವಿಚಾರದಲ್ಲೂ ಇದೇ ತಿದ್ದು ಪಡಿಯನ್ನು ಮಾಡಲಾಗಿದೆ.

ಕೆಲವು ದಿನಗಳ ಹಿಂದೆ ಸೇರಿದ ಹೊಟೇಲು ಮ್ಹಾಲಕರ ಸಂಘದ ಸಭೆಯಲ್ಲಿ ಮುಂದಿನ ವರ್ಷದ ಹೊಸ ಕಾರ್ಯಕಾರಿ ಸಮಿತಿ ಚುನಾಯಿಸಲಾಯಿತು. ಕೃಷ್ಣಭವನದ ಶ್ರೀ ವೆಂಕಟರಮಣ ಭಟ್ಟರೇ ಅಧ್ಯಕ್ಷತನವನ್ನು ಮುಂದರಿಸಬೇಕಾಂದಾಯಿತು.

ಮಲಬಾರ್ ದ. ಕನ್ನಡ ಜಿಲ್ಲೆಗಳಲ್ಲಿ ಕಟ್ಟಡ ಇತ್ಯಾದಿಗಳನ್ನು ಕಟ್ಟಿಸುವವರು ತಮ್ಮ ಅವಶ್ಯಕತೆಗಳಿಗಾಗಿ ವಿವರಗಳನ್ನು ಜಿಲ್ಲಾ ಇಂಡಸ್ಟ್ರೀಸ್ ಆಫೀಸರ್, ಇವಾನ್ಸ್ ರೋಡ್ ಕಲ್ಲಿಕೋಟೆ, ಇವರಿಗೆ ಬರೆದುಕೊಳ್ಳಬೇಕೆಂದು ಸದ್ರಿ ಆಫೀಸರರು ಪ್ರಕಟಿಸಿದ್ದಾರೆ. ಕೈಗಾರಿಕೆ ಕಾರ್ಖಾನೆ ಮತ್ತಿತರ ಮನೆ ಕಟ್ಟಡಗಳ ಸಂಬಂಧವಾಗಿ ಕಬ್ಬಿಣ ಮತ್ತು ಉಕ್ಕಿನ ಸರಬರಾಯಿಯ ಪರಿಶೀಲನೆ ನಡೆಸುವುದಕ್ಕಾಗಿ ಈ ಸೂಚನೆ.

೧. ಮಾಜೊಲಿಯೊ, ೨. ಪದ್ರೋಸಾ, ೩. ಚಂಪಾತಿಯ ೪. ಮೋತಿಪುರ್ ಎಂಬ ನಾಲ್ಕು ನಮೂನೆಯ ಸಕ್ಕರೆಗಳು ನಮ್ಮ ಜಿಲ್ಲೆಯಲ್ಲಿ ಮಾರಾಟಕ್ಕೆ ಸರಬರಾಯಿ ಮಾಡಲಾಗಿದೆ. ಮಂಗಳೂರಿನಲ್ಲಿ ರಾತ್ಲಿಗೆ ಮೊದಲಿನೆರಡು ತರದವುಗಳಿಗೆ ೩ ಆ. ೧೧ ಪೈ. ನಂತರದ ಎರಡು ತರದವುಗಳಿಗೆ ೪ ಆಣೆ. ಜಿಲ್ಲೆಯ ಇತರ ಕಡೆಗಳಲ್ಲಿ ಆ ಸ್ಥಳಗಳ ದೂರದ ಲೆಕ್ಕದಲ್ಲಿ ಕೆಲವು ಪೈಗಳು ಹೆಚ್ಚಿಗಿವೆ. ಬಂಟ್ವಾಳದಲ್ಲಿ ಕ್ರಮವಾಗಿ ೪–೧; ೪–೧; ೪–೨; ೪–೩. ಕಾಸರಗೋಡು ೪–೨ ೪–೨; ೪–೩; ಹೊಸದುರ್ಗ ೪–೨; ೪–೨; ೪–೩; ೪–೪; ಪುತ್ತೂರು ಕಾಸರಗೋಡು ಅಷ್ಟೇ ಬೆಲೆ ಬೆಳ್ತಂಗಡಿಯಲ್ಲೂ ಅಷ್ಟೇ ಉಡುಪಿ ೪–೩; ೪–೩; ೪–೪; ೪–೪; ಕುಂದಾಪುರ ೪–೪; ೪–೪; ೪–೫; ೪–೫. ಕಾರ್ಕಳ ೫–೨ ಕಾಸರಗೋಡಿನಷ್ಟೆ. ಹಿಂದಿನ ಬೆಲೆಗಳೆಲ್ಲಾ ರದ್ದು ಮಾಡಲಾಗಿದೆ.

ಜಿಲ್ಲಾ ಆಹಾರ ಸಮಿತಿ:–ತಾ ೨೮–೪–೪೫ರಲ್ಲು ಕಲೆಕ್ಟರರ ಆಫೀಸಿನಲ್ಲಿ ಮೇಲ್ಕಂಡ ಸಮಿತಿಯ ಸಭೆ ಸೇರಿತ್ತು. ಮಾನ್ಯ ಕಲೆಕ್ಟರರು ಸಂಗ್ರಹಿಸಲ್ಪಟ್ಟ ಅಕ್ಕಿಯ ಪ್ರಮಾಣ ಈಗ ದಾಸ್ತಾನಿರುವ ಪ್ರಮಾಣಗಳ ಅಂಕೆ ಸಂಕೆಗಳನ್ನು ತಿಳಿಸಿ ಅಕ್ಕಿ ಶೇಖರಿಸುವಿಕೆಯ ಕೆಲಸವು ತೃಪ್ತಿಕರವಾಗಿಯೂ ಸುವ್ಯವಸ್ಥಿತವಾಗಿಯೂ ಆಗುತ್ತಿರುವುದನ್ನು ನಿರೂಪಿಸಿದರು. ಕಳೆದ ವರ್ಷಕ್ಕಿಂತದ ವರ್ಷದ ಇಮ್ಮಡಿ ಅಕ್ಕಿ ಶೇಖರಿಸಲಾಗಿದೆ ಎಂದೂ ತಿಳಿಯಲಾಯಿತು. ಇಷ್ಟಾದರೂ ವಿಪರೀತ ಪ್ರಮಾಣದಲ್ಲಿ ಅಕ್ಕಿಯ ಖರ್ಚಾಗುವುದರಿಂದ ರೇಶನ್ ಪಡಿಯನ್ನು ಸ್ವಲ್ಪ ಕಡಿಮೆ ಮಾಡಬೇಕಾಗುವುದು ಎಂದೂ ತಿಳಿಸಿದರು. ಆದರೆ ಎಂ. ಎಲ್ ಎ.ಗಳಾದ ಶ್ರೀ ಜನರಾಜ ಹೆಗ್ಗಡೆ ಅವರು ಮದ್ರಾಸು ಪ್ರಾಂತ್ಯಕ್ಕೆ ಪೂರೈಸುವಷ್ಟು ಆಹಾರವಸ್ತು ದಾಸ್ತಾನುಗಳು ಇಂಡಿಯೂ ಸರಕಾರದ ಬಳಿಯಲ್ಲವೆ ಎಂದು ಆದಾದರದಿಂದ ರೇಶನ್ ಪಡಿಯನ್ನು ಕಮ್ಮಿ ಮಾಡುವ ಅವಶ್ಯಕತೆ ಇಲ್ಲವೆಂದು ಸೂಚಿಸಿದರು. ನೆರೆಕೆರೆಯ ಮಲಬಾರಿನಲ್ಲಿ ಅಂತಹ ಇಳಿತ ಮಾಡಲಿಲ್ಲವಾದುದರಿಂದ ಇಲ್ಲಿ ಅದನ್ನು ಮಾಡುವುದು ಶಕ್ಯವಿಲ್ಲವೆಂದು ಸಮಿತಿಯವರು ಅಭಿಪ್ರಾಯ ಪಟ್ಟರು. ಆ ಕುರಿತು ಸಮಿತಿಯಲ್ಲಿ ಠರಾವು ಮಾಡಲಾಯಿತು.

ನವೆಂಬರದ ತನಕ ನಮ್ಮ ಜಿಲ್ಲೆಗೆ ಕಮ್ಮಿ ಬೀಳಬಹುದಾದ ಸುಮಾರು ೫ಲಕ್ಷ ಮುಡಿಗಳಷ್ಟು ಅಕ್ಕಿಯನ್ನು ಮತ್ತು ಕಾಲು ತರದಷ್ಟು ಗೋಧಿ ರಾಗಿಗಳನ್ನು ಹೊರಗಿನಿಂದ ಸರಬರಾಯಿ ಮಾಡುವುದು ಅನಿವಾರ್ಯವೆಂದೂ ನಿರ್ಣಯಿಸಲಾಲಾಯಿತು. ದೀವೀ ದ್ವೀಪಗಳಿಗೆ ಕಳುಹಿಸುವ ಅಕ್ಕಿಯನ್ನು ಸರಕಾರದವರು ನಮ್ಮ ಜಿಲ್ಲೆಯಿಂದ ಸಾಗಿಸದೆ ಅವನ್ನು ಹೊರಗಿನಿಂದ ತರಿಸಬೇಕೆಂದೂ ನಿರ್ಣಯಿಸಲಾಯಿತು. ರಾಗಿ ಗೋದಿಗಳ ಪೂರೈಕೆಯು ಸಕಾಲದಲ್ಲೂ, ಬೇಕಾದಷ್ಟು ಪ್ರಮಾಣದಲ್ಲೂ ಆಗದಿರುವುದನ್ನೂ ಕಲೆಕ್ಟರರು ತಿಳಿಸಿ ಅದರ ಪರಿಣಾಮ ಅಕ್ಕಿಯೇ ಇನ್ನಷ್ಟು ಹೆಚ್ಚಾಗಿ ಖರ್ಚಾಗುವಂತಾಯಿತೆಂದು ತಿಳಿಸಿದಾಗ ಆ ಕುರಿತು ಅವರು ರೆವಿನ್ಯೂ ಬೋರ್ಡಿನವರೊಡನೆ ವ್ಯವಹಾರ ಕೈಕೊಳ್ಳಬೇಕೆಂದು ಆಹಾರ ಸಮಿತಿಯವರು ನಿರ್ಣಯಿಸಿದರು.

ಬೇಸಾಯಗಾರರು ಹೆಚ್ಚಿನ ಜಾಗರೂಕತೆಯಿಂದ ಬೀಜ ಬತ್ತವನ್ನು ಉಪಯೋಗಿಸುವಂತೆ ಆಹಾರ ಸಮಿತಯವರು ಪ್ರಚಾರ ಕೈಕೊಳ್ಳಬೇಕೆಂದು ವಿನಂತಿಸಿಕೊಳ್ಳಲಾಯಿತು.

ಕೆಲವು ಜಮೀನ್ದಾರರ ದುರಾಲೋಚನೆಗೆ ಬಿದ್ದು ಕೆಲ ಸರಕಾರಿ ಆಫೀಸರರು ಬೇಸಾಯಗಾರರ ಆವಶ್ಯಕತೆಯ ಅಕ್ಕಿಬತ್ತಗಳ ಪ್ರಮಾಣವನ್ನು ಬಹಳ ತಪ್ಪುಮಾಡಿರುವ ಸಂಗತಿಯು ಕಲೆಕ್ಟರರಿಗೂ, ಸ್ಟೋರುಗಳ ಅಧ್ಯಕ್ಷರರಿಗೂ ತಿಳಿದುಬಂದುದನ್ನು ಸಮಿತಿಗೆ ವಿವರಿಸಲಾಯಿತು.

ಜಿಲ್ಲಾ ಆಹಾರ ಸಮಿತಿ ಇದ್ದಂತೆ ತಾಲೂಕು ಆಹಾರ ಸಮಿತಿಗಳೂ ಆಯಾ ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ನೇಮಿಸಲಾಲಾಗಿದೆ. ಮತ್ತು ಅಲ್ಲಲ್ಲಿನ ದೂರು ದೋಷಗಳನ್ನು ಈ ಸಮಿತಿಗಳಿಗೆ ಅರಿಕೆ ಮಾಡಿಕೊಳ್ಳಬಹುದೆಂದು ತಿಳಿಸಲಾಯಿತು.

ಕಾಸರಗೋಡಿಯಲ್ಲಿ ರೇಶನ್ ಪಡಿಯನ್ನು ಕಮ್ಮಿ ಮಾಡಿದ ಸಂಗತಿಯು ತಿಳಿಸಲ್ಪಟ್ಟಿತು.

ಅಕ್ಕಿ ಬತ್ತ ತಲ್ಪಿಸಿದವರಿಗೆ ಅದರ ಬೆಲೆ ತೆರುವಾಗ ಕಾಲ ವಿಳಂಬವಾಗುತ್ತಿರುವುದೆಂಬ ಆಕ್ಷೇಪವು ಅಧಿಕಾರಿಗಳ ಗಮನಕ್ಕೆ ಬಾರದಿದ್ದುದರಿಂದ ಈಗ ಚೆಕ್ಕು ಮೂಲಕ ಬೆಲೆ ಕೊಡುವ ಪದ್ಧತಿಯನ್ನೇ ಮುಂದರಿಸವುದೆಂದಾಯಿತು.

ಗೇಣಿಯನ್ನು ಸ್ವಾಧೀನ ಮಾಡಿಕೊಳ್ಳುವ ಮೊದಲು ಒಕ್ಕಲುಗಳಿಗೆ ಅವರ ಖರ್ಚಿನ ಅಂಶವನ್ನು ಬಿಟ್ಟು ಬಿಡುವುದು, ಅದೆಷ್ಟು ಆವಶ್ಯಕವೆಂದು ಮಿ. ಸಿ. ಎಲ್. ಲೋಬೋ ಅವರು ಸೂಚಿಸಿದಾಗ ಆ ಕುರಿತು ಮುಂದಿನ ಶೇಖರಿಸುವಿಕೆಯ ಕಾಲದಲ್ಲಿ ಪರ್ಯಾಲೋಚಿಸುವುದಾಗಿ ತಿಳಿಸಲಾಯಿತು.

ತಾ ೨೯ರಂದು ಇಲ್ಲಿಯ ಥಿಯೋಸೊಫಿಕಲ್ ಭವನದಲ್ಲಿ ದ. ಕ. ರೆಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ ಆಶ್ರಯದಲ್ಲಿ ಬೆಂಗಳೂರಿನ ಮೈಸಿಂಡಿಯಾ ಪತ್ರಿಕಾ ಸಂಪಾದಕರೂ, ಮಿರತ ಒಳ ಸಂಚಿನ ಕೈದಿಯಾಗಿದ್ದ, ಫಿಲಿಫ್ ಸ್ಪ್ರೇಟ್ ಅವರು 'ಸ್ವತಂತ್ರ ಭಾರತ ರಾಜ್ಯಾಂಗ ರಚನೆ' ಎಂಬ ವಿಷಯದ ಕುರಿತು ಬೋಧಪರ ಭಾಷಣವಿತ್ತರು.

ಬರುವ ದಶಂಬರ ತಿಂಗಳಲ್ಲಿ ಮಂಗಳೂರಲ್ಲಿ ಅಖಿಲ ಭಾರತ ಆರ್ಯುವೇದ ಸಮ್ಮೇಲನವು ಜರಗಲಿರುವುದು ಶ್ರೀ ಆರೂರು ಲಕ್ಷ್ಮಿನಾರಾಯಣರಾಯರ ಅಧ್ಯಕ್ಷತೆಯಿಂದೊಡಗೂಡಿದ ಒಂದು ಪ್ರಭಾವಶಾಲಿ ಸ್ವಾಗತಸಮಿತಿಯು ರಚಿಸಲ್ಪಟ್ಟಿದೆ. ಶ್ರೀ. ಎಂ. ವಿ. ಶಾಸ್ತ್ರಿಗಳು ಉಪಾಧ್ಯಕ್ಷರು, ಶ್ರೀ. ಎಂ. ಆರ್. ಭಟ್ ಅವರು ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ಎಡ್ವೊಕೇಟ್ ಪುಟ್ಟುಸ್ವಾಮಿ ಅವರು ಕೋಶಾಧ್ಯಕ್ಷರು. ಕಾರ್ಯಕಾರಿ ಸಮಿತಿಯಲ್ಲಿ ಶ್ರೀಯುತರುಗಳಾದ ಉಳ್ಳಾಲ ದೇವರಾವ್, ಪಿ. ಉಮಾನಾಥ ಭಂಡಾರಿ, ಮಿಜಾರು ಗೋವಿಂದ ಪೈ, ಮಣೇಲ್ ಶ್ರೀನಿವಾಸನ್ನಾಕ್, ಬಿ. ವೈಕುಂಠ ಬಾಳಿಗ, ಎಂ. ಕೆ. ದೇವರಾಜ್, ಎಸ್. ನರ್ಸಪ್ರಯ್ಯಾ, ಎಂ. ಎ. ಪೆರಿಸ್, ಎಬ್ನರ್ ಸೋನ್ಸ್ ಡೆನಿಸ್ ಪಿಂಟೊ, ಪೆಲಿಕ್ಸ್ ಅಲ್ಬುಕರ್ಕ್, ಪಂಡಿತ್ ಗಜಾನನ ರಾವ್ ಇವರೇ ಮೊದಲಾದವರಿದ್ದಾರೆ.

ಹೆಚ್ಚು ಕಮ್ಮಿ ಸರ್ವ ಪಕ್ಷೀಯ ಸಮಿತಿಯಂತಿರುವ ಮೇಲ್ಕಂಡ ಪ್ರಮುಖರ ಮತ್ತು ಸಾರ್ವಜನಿಕರ ಉಧಾರತೆಯಿಂದ ಆರ್ಯುವೇದ ಸಮ್ಮೇಳನವು ಯಶಸ್ವಿಯಾಗಿ ಜರುಗಿ ಆ ಪ್ರಾಚೀನ ವೈದ್ಯ ಶಾಸ್ತ್ರದ ಶಾಸ್ತ್ರೀಯ ಜ್ಞಾನ ಪ್ರಚಾರವು ಜನತೆಯಲ್ಲಿ ಉಂಟಾಗಿ ಅದರ ದಿವ್ಯ ಫಲವೂ ಜನಸಮುದಾಯಕ್ಕೆ ದೊರಕಲೆಂದು ಹಾರೈಸುತ್ತೇವೆ.

ಸಂಕ್ಷೇಪ ಸುದ್ದಿ ಸಾರ

ಕಳೆದ ಶುಕ್ರವಾರ ವಿಜಯಲಕ್ಷ್ಮಿಯವರು ಸೇನ್‌ಫ್ರೆನ್ಸಿಸ್‌ಕೋದಲ್ಲಿ ೨೦೦ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಭಾಷಣಮಾಡುತಿದ್ದಾಗ ಗಡ್ಡದ ಒಬ್ಬ ಭಾರತೀಯನು ನಡುವೆ ಬಾಯಿ ಹಾಕಿ ೧೯೪೨ರ ಹಿಂಸಾತ್ಮಕ ಘಟನೆಗಳಿಗೆ ಕೊಂಗ್ರೆಸಲ್ಲದೆ ಬೇರೆ ಯಾರು ಕಾರಣರು ಎಂದು ಕೇಳಿದನು. "ಸರಕಾರದವರು ಒಂದು ಲಕ್ಷ ಕೊಂಗ್ರೆಸ್ಸಿಗರನ್ನು ಕೈದು ಮಾಡಿದುದರಿಂದಲೇ ಜನತೆ ಉದ್ವೇಗಗೊಂಡುದರ ಪರಿಣಾಮವದು" ಎಂದು ಶ್ರೀಮತಿಯವರು ತಿಳಿಸಿದರು. ಮತ್ತೆ ಆ ಗಡ್ಡದ ಆಗಂತುಕನ ಪರಿಚಯವನ್ನು ಕೇಳಿದಾಗ ಅವನು ಪತ್ರಿಕಾ ಪ್ರತಿನಿಧಿ ಅಲ್ಲವೆಂದು ತಿಳಿದು ಬಂದು ಅವನನ್ನು ಹೊರತಳ್ಳಲಾಯಿತು.

* * *

ನಂತರದ ವರದಿ ಪ್ರಕಾರ ಆ ಆಗಂತುಕನು ಸರ್ ಫಿರೋಜ್ ಖಾನ್‌ನೂನರ ಕಾರಕೂನನೆಂದೂ ಒಳಸಂಚಿನಿಂದ ಕಳುಹಿಸಲ್ಪಟ್ಟವನೆಂದೂ ತಿಳಿಯಿತು. ಫ್ರಿಸ್ಕೋಗೆ ಬ್ರಿಟಿಷ್ ಸರಕಾರ ಚುನಾಯಿತರಾಗಿ ಭಾರತೀಯ "ಪ್ರತಿನಿಧಿ"ಗಳಾಗಿ ಹೋದವರು ಇಂತಹ ಅಸಹ್ಯ ಘಟನೆಗಳೊಂದಿಗೆ ತಮ್ಮ ಪ್ರಖ್ಯಾತ ಹೆಸರು ಸಂಬಂಧಿಸದಂತೆ ಎಚ್ಚರದಿಂದಿರುವುದು ಹಿತಕರವೆಂದು ಕೆಲ ಅಮೇರಿಕನ್ ಪತ್ರಿಗಳು ಸೂಚಿಸಿವೆ.

* * *

ಗೊವೆಯಲ್ಲಿ ಆಹಾರ ಕೊರತೆಯು ಅತಿ ತೀಕ್ಷ್ಣವಾಗುತ್ತಾ ಬರುವುದರಿಂದ, ಅಲ್ಲಿನ ನಿವಾಸಿಕರು ಆ ಪ್ರದೇಶವನ್ನು ತ್ಯಜಿಸಿ ಆಹಾರ ಇದ್ದೆಡೆಗೆ ನಡೆಯಬಹುದೆಂದು ಗಾಂಧೀಜಿಯರಿಂದ ಸೂಚಿಸಲಾಗಿದೆ.

* * *

ಕೆಲವು ನೋಟಗಳು

ಆಂಧ್ರ ಪ್ರಾಂತ್ಯದಲ್ಲಿ ಕೊಮ್ಯುನಿಸ್ಟ್ ಕಾಂಗ್ರೆಸ್ ಅಭಿಪ್ರಾಯ ಭೇದದ ಕಾರಣವಾಗಿ ಜನರು ಕೈ ಕೈ ಹಚ್ಚುವಂತಾಗುತ್ತಿದೆ. ನಡುರಾತ್ರಿ ಸಮಯ ಒಂದು ಸಭೆಯಿಂದ ಹಿಂತಿರುಗುತ್ತಿರುವ ಕಾಂಗ್ರೆಸ್ ಕಿಸಾನರನ್ನು ಕೊಮ್ಯುನಿಸ್ಟ್ ಕಿಸಾನರು ಬಡಿದರೆಂದು ಶ್ರೀ. ಎನ್. ಜಿ. ರಂಗರವರ ದೂರು. ಅವರ ಈ ದೂರಿಗೆ ಕೊಮ್ಯುನಿಸ್ಟರ ಉತ್ತರವು ಒಂದು ಹೊರಡಿರುತ್ತದೆ.

ಂ ಂ ಂ ಂ

ಹಿಂದೂ ದೇಶದಲ್ಲಿ ಅಮೆರಿ ಮತ್ತು ಚರ್ಚಿಲ್ ಸೂತ್ರಚಾಲಕತ್ವದಲ್ಲಿ ನಡೆಯುತ್ತಿರುವ ಸರಕಾರವು ಕೈಗಾರಿಕೆಯ ರಾಷ್ಟ್ರೀಕರಣದ ಕುರಿತು ಉತ್ಸಾಹತೋರಿಸುತ್ತಿರುವಾಗ, ಬ್ರಿಟನಿನಲ್ಲಿ, ಇದೇ ಅಮೆರಿ-ಚರ್ಚಿಲ್ ಪ್ರಭಾವವು ಯುದ್ಧ ಸಮಯದಲ್ಲಿ ಸರಕಾರದ ಕಂಟ್ರೋಲಿಗೆ (ಅಂಕಿತಕ್ಕೆ) ಒಳಗಾದ ಕೈಗಾರಿಕೆಗಳು ವಿಮೋಚಿಸಲ್ಪಡಬೇಕು, ಕೈಗಾರಿಕೆಗಳ ರಾಷ್ಟ್ರೀಕರಣವು ಬೇಡವೆಂಬ ಚಳವಳವನ್ನು ಹೂಡಿಸಿರುವುದು. ನಮ್ಮ ಕೈಗಾರಿಕೆಗಳ ರಾಷ್ಟ್ರೀಕರಣದ ಕುರಿತು ಬ್ರಿಟನಿನಲ್ಲಿ ತುಂಬಾ ಉತ್ಸಾಹವು ಉಂಟಾಗಿರುತ್ತದೆ.

ಂ ಂ ಂ ಂ

ಸಾನ್ ಫ್ರಾನಿಸ್ಕೊದಲ್ಲಿ ಜರಗಿದ ಅಂತರಾಷ್ಟ್ರೀಯ ಪರಿಷತ್ತು ನಡೆಯುವುದಾದರೂ ಮಿತ್ರರು ಹಿಂದಿಸಿದ ಅಟ್ಲಾಂಟಿಕ್ ಘೋಷಣೆಯಲ್ಲಿ ಸೂಚಿಸಿದ ನೀತಿಯನ್ನು ಕಾರ್ಯರೂಪಕ್ಕೆ ತರುವರೆ ಒಂದು ಅಂತರ್ರಾಷ್ಟ್ರೀಯ ಸಂಘಟನೆಯನ್ನು ವ್ಯವಸ್ಥೆಪಡಿಸುವ ಉದ್ದೇಶದಿಂದ ಜಗತ್ತಿನ ರಾಷ್ಟ್ರಗಳೆಲ್ಲಾ ಸ್ವತಂತ್ರವಾಗಿ ಬಾಳಬೇಕು, ಪ್ರಜಾಸತ್ತೆಯ ರೀತಿಯು ರಕ್ಷಿಸಲ್ಪಡಬೇಕು, ಎಂಬ ತತ್ವವು ಈ ಘೋಷಣೆಯಲ್ಲಿ ಅಡಕವಾಗಿದ್ದರೂ, ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಗೆ ಮಾತ್ರ ಲಕ್ಷ್ಯವು ದೊರಕಿಲ್ಲ. ಅಲ್ಲಿಗೆ ತೆರಳಿದ ಇಂಡಿಯಾ ಸರಕಾರದ ಪ್ರತಿನಿಧಿಗಳು ಕೂಡ ಈ ಕುರಿತು ಮಾತೆತ್ತಬಾರದೆಂಬ ಸಂಕಲ್ಪವನ್ನಾಡಿದಂತೆ ಕಾಣುತ್ತದೆ.

ಂ ಂ ಂ ಂ

ಬ್ರಿಟನಿನಲ್ಲಿ ರಷ್ಯದಲ್ಲಿ ಜರ್ಮನರಿಂದ ಹಾಳುಗೆಡವಲ್ಪಟ್ಟ ಸ್ಥಳಗಳ ಪುನರ್ರಚನೆಗೆ ಬೇಕಾದ ಸಾಹಿತ್ಯೋಪಕರಣಗಳು ಜರ್ಮನಿಯಿಂದಲೇ ಒದಗಿಸಿಕೊಳ್ಳಬೇಕಾಗಿ, ಮಿತ್ರರಾಷ್ಟ್ರಗಳ ನಿರ್ಣಯವಾಗಿರುತ್ತದೆ.

ಂ ಂ ಂ ಂ

"ನಾನು ಜೀವಂತನಾಗಿರುವ ವರೆಗೆ ಇನ್ನೊಂದು ಮಹಾ ಯುದ್ಧವನ್ನು ನೋಡುವ ಇಚ್ಛೆಯು ನನಗಿಲ್ಲ" ಎಂಬುದಾಗಿ ದಿವಂಗತ ರೂಸ್‌ವೆಲ್ಟರು, ಕ್ರಿಮಿಯಾ ಪರಿಷತ್ತಿನಿಂದ ಹಿಂತೆರಳಿ ಅಮೆರಿಕನ್ ಕಾಂಗ್ರೆಸ್ಸಿನ ಸಮಕ್ಷಮ ಮಾಡಿದ ವರದಿಯಲ್ಲಿ ಅಂದಿದ್ದರು.

ಂ ಂ ಂ ಂ

ಸ್ಪೈಯಿನಿನ ಫ್ರೆಂಕೊನು ಈಗ ತನ್ನ ವರ್ಣವನ್ನು ಬದಲಾಯಿಸುವುದರಲ್ಲಿ ತೊಡಗಿರುವನು. ಪೆಸಿಸ್ಟ್ ನಾಯಕ ಮಿತ್ರರ ವರ್ಣದಲ್ಲಿ ಹೊಳೆಯುವುದರಲ್ಲಿ ಲಾಭವಿದೆ ಎಂದು ಆತನು ಮನಗಂಡಂತೆ ಕಾಣುತ್ತದೆ. ಆದರೆ ಸ್ಪೈಯಿನಿನಲ್ಲಿ ಈ ಪೆಸಿಸ್ಟ್ ವಿಷಬೀಜವು ಹಾಗೆಯೇ ಬಿಟ್ಟುಬಿಡುವುದು ಭಾವಿ ಲೋಕಶಾಂತಿಗೆ ಕ್ಷೇಮಕರವೆ?

ಂ ಂ ಂ ಂ

ವಿಶೇಷ ವಿದ್ಯಮಾನಗಳು

ಮೊಸ್ಕೊವಿನ ನೆರವಿನಲ್ಲಿ ರಚನೆಯಾದ ಪೋಲೆಂಡಿನ ತಾತ್ಕಾಲಿಕ ಸರಕಾರಕ್ಕೆ ಫ್ರಿಸ್ಕೊ ಪರಿಷತ್ತಿನಲ್ಲಿ ನಿರೂಪಿಸಲಾಗುವ ಅಂತರಾಷ್ಟ್ರೀಯ ಪ್ರಾತಿನಿಧ್ಯ ಮಂಡಲದಲ್ಲಿ ಒಂದು ಸ್ಥಾನವನ್ನು ಕೊಡುವ ವಿಚಾರವು ಬಿಕ್ಕಟ್ಟಿಗೆ ಕಾರಣವಾಗಿರುವುದಾಗಿ ತಿಳಿದುಬಂದಿದೆ. ಮಾಲ್ಟಾದಲ್ಲಿ ಇತ್ಯರ್ಥವಾದಂತೆ ಮೊಸ್ಕೊ ನೆರವಿನ ಈ ತಾತ್ಕಾಲಿಕ ಸರಕಾರ ಮಂಡಳದ ಬದಲಾವಣೆಯಾಗದೆ, ಅದಕ್ಕೆ ಸ್ಥಾನಕೊಡಲು ಸಾಧ್ಯವಿಲ್ಲವೆಂದೂ, ಸಂ. ಅಮೇರಿಕಾವೂ, ಬ್ರಿಟನೂ ಒಟ್ಟುಗೂಡಿ ವಾದಿಸುತ್ತಿವೆ. ಇವರಿಗೆ ಅಲ್ಲಿ ನೆರೆದ ೪೬ ರಾಷ್ಟ್ರಗಳಲ್ಲಿ ಅಧಿಕ ಬೆಂಬಲವಿರುವುದೆಂದು ಹೇಳಲಾಗಿದೆ. ದಕ್ಷಿಣ ಅಮೇರಿಕಾದ ಅರ್ಜೆಂಟೀನಾಕ್ಕೆ ಪ್ರಾತಿನಿಧ್ಯ ಕೊಡುವುದಾದರೆ, ಪೋಲೆಂಡಿಗೂ ಪ್ರಾತಿನಿಧ್ಯ ಕೊಡಬೇಕೆಂದು, ಮೊಲೊಟೊವ್‌ರವರ ವಾದವಿರುತ್ತದೆ. ಇದೊಂದು ಸಮಸ್ಯೆ. ಅರಬಿಯಹೂದಿ ಪ್ರಶ್ನೆಯು ಬಿಕ್ಕಟ್ಟಿಗೆ ಕಾರಣವಾಗಬಹುದೆಂದೂ ಫ್ರಿಸ್ಕೊದಲ್ಲಿ ನೆರೆದ ಅರಬೀ ರಾಷ್ಟ್ರಗಳು, ಮುಂದಕ್ಕೆ ಪೆಲೆಸ್ತೀನದಲ್ಲಿ ಯಹೂದಿಯರ ಪ್ರವೇಶವೆ ಆಗದಂತೆ ಮಾಡುವ ಸಾಧನೆಯಲ್ಲಿರುವರೆಂದೂ, ಯಹೂದಿಯರ ಪರವಾಗಿ ವಾದಿಸಲು ಪ್ರಮುಖ ಯಹೂದಿ ನಾಯಕರು ಸಿದ್ಧರಿರುವರೆಂದೂ ತಿಳಿದು ಬಂದಿದೆ.

* * *

ಉತ್ತರ ಇಟಲಿಯಲ್ಲಿ ಮುಸಲೀನಿಯೊಡನೆ ಅನೇಕ ಪೆಸಿಸ್ಟ ನಾಯಕರು ಸೆರೆಹಿಡಿಯಲ್ಪಟ್ಟಿರುವರೆಂದೂ, ಅವರಲ್ಲಿ ಇಂಡಿಯಾ ಸೆಕ್ರಟರಿ ಅಮರಿಯವರ ಪುತ್ರರು ಒಬ್ಬರಾಗಿರುವರೆಂದೂ ತಿಳಿದುಬಂದಿದೆ.

* * *

ವೈಸ್ರಾಯ ವೆವಲ್ಲರು, ಇಂಡಿಯಾ ಆಫೀಸಿನೊಡನೆ ಮತ್ತು ಬ್ರಿಟಿಷ ಸರಕಾರದೊಡನೆ ಮಾಡುತ್ತಿರುವ ವ್ಯವಹಾರವೆಲ್ಲವೂ ಅತಿ ರಹಸ್ಯದಿಂದ ನಡೆಯುವುದರಿಂದ ಅವರ ಕುರಿತು ಯಾರಿಗೂ ಯಾವತರದ್ದೂ ಅರಿವೆ ಆಗಲಿಲ್ಲವೆಂದೂ, ಸದ್ಯ ಹೊರಡಿರುವ ಉಹಾಪೂಹೆಗಳ ಆಧಾರನೀಯವಲ್ಲವೆಂದೂ ಹೇಳಲಾಗಿದೆ. ಸರ್ ಸ್ಟಾಪರ್ಡ್ಸ್ ಕ್ರಿಪ್ಸ್‌ರೂ ವೈಸ್ರಾಯರೊಡನೆ ಸಹಕರಿಸಿರುವರಾಗಿಯೂ ತಿಳಿದು ಬಂದಿದೆ. ವೈಸ್ರಾಯ ವೆವೆಲ್ಲರ ಅನೇಕ ದಿನಗಳ ಪರಿಶ್ರಮದ ಫಲವಾಗಿ ಉತ್ತಮ ಪರಿಣಾಮ ಉಂಟಾಗಬಹುದೆಂದು ಅಧಿಕೃತ ಸ್ಥಳಗಳಿಂದ ಹೇಳಲಾಗಿದೆ. ಭೂಲಾಬ್ಯಾ-ರಾಜಗೋಪಲಾಚಾರಿ, ಇತ್ಯಾದಿ ಮಹನೀಯರು ಕಲ್ಪಿಸಿದಂತೆ, ನಮ್ಮ ದೇಶದ ರಾಜಕೀಯದಲ್ಲಿ ಮಹತ್ವಪೂರ್ಣ ಘಟನೆಗಳು ಸದ್ಯದಲ್ಲೇ ನಡೆಯಬಹುದು.

ಆದರೆ ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕೆ ಯಾವತ್ತೊಂದು ನಿರ್ದಿಷ್ಟ ಇತ್ಯರ್ಥಕ್ಕೆ ಬಾರದೆನೆ, ಇಂಡಿಯಾ ಸರಕಾರವು ದೇಶದ ಔದ್ಯೋಗೀಕರಣ ಕುರಿತು ಹೇಳಿಕೆಯನ್ನು ಹೊರಡಿಸಿದುದನ್ನು ನೋಡಿದರೆ, ಬಿಕ್ಕಟ್ಟಿನ ಪರಿಹಾರದ ಕುರಿತು ನಿರಾಶೆಹೊಂದಬೇಕಾಗಿಯದೆ, ಎಂದು ಶ್ರೀ. ಗಿರಿಯವರ ಅಭಿಪ್ರಾಯವಿರುತ್ತದೆ.

* * *

ಶತ್ರುವಿನಿಂದ ವಿಮೋಚಿಸಲ್ಪಟ್ಟ ಪ್ರದೇಶಗಳ ಕುರಿತು ಯಾವತ್ತು ವ್ಯವಹಾರವು, ಸಂಯುಕ್ತ ರಾಷ್ಟ್ರಗಳು ಒಟ್ಟಾಗಿದ್ದು ನಡೆಯಬೇಕೆಂದು ಮೊದಲು ತೆಹರಾನಿನಲ್ಲಿ ನಂತರ ಮಾಲ್ಟಾದಲ್ಲಿ ನಡೆದ ತ್ರಿಮೂರ್ತಿಗಳ ಕೂಡುವಿಕೆಗಳಲ್ಲಿ ನಿರ್ಣಯವಾಗಿದ್ದರೂ ಸೋವಿಯಟ್ ರಶ್ಯಾವು ತನ್ನಿಂದ ವಿಮೋಚನೆ ಹೊಂದಿದ, ಮತ್ತು ಆಕ್ರಮಿಸಲ್ಪಟ್ಟ ಪ್ರದೇಶಗಳಲ್ಲಿ ತನ್ನದೆ ಧೋರಣವನ್ನು ನಡೆಯಿಸುವ ಸಂಕಲ್ಪ ಮಾಡಿರುವುದೆಂದೂ ತನ್ನ ಮಿತ್ರರು ಇದೇ ತರದಲ್ಲಿ ವರ್ತಿಸುವುದರಲ್ಲಿ ಅದಕ್ಕೆ ಸಮ್ಮತವಿದೆಯೆಂದೂ ಹೇಳಲಾಗಿದೆ.

ರಶ್ಯನ್-ಬ್ರಿಟಿಷ್ ಅಮೇರಿಕಾ ಭಿನ್ನಾಭಿಪ್ರಾಯಗಳು ಫ್ರಿಸ್ಕೊ ಪರಿಷತ್ತಿನಲ್ಲಿ ಮಾತ್ರವಲ್ಲ, ಯುದ್ಧ ಕೈದಿಗಳ ವಿಚಾರದಲ್ಲೂ ಉಂಟಾಗಿರುವುದೆಂದು ವಾರ್ತೆಯೊಂದು ಬಂದಿದೆ.

ಫ್ರಿಸ್ಕೊದಲ್ಲಿ, ಅಮೇರಿಕಾ ಬ್ರಿಟನುಗಳ ವರ್ತನೆಯಿಂದ ಮೊಲೊಟೊವ್‌ರವರಿಗೆ ಅಸಮಾಧಾನ ಉಂಟಾಗಿರುವುದಂತೆ.

ಗಾಜಿನ ಟಾಯರುಗಳು

ಅಮೇರಿಕನ್ ವಿಜ್ಞಾನಿಗಳ ಪರಿಶೋಧನಾ ಪರಿಶ್ರಮಗಳ ಫಲವಾಗಿ ರಬ್ಬರಿನಂತೆ ಟಾಯರು ಇತ್ಯಾದಿಗಳನ್ನು ತಯಾರಿಸಲು ಉಪಯೋಗ ಬೀಳುವ ಗಾಜಿನ ಪದಾರ್ಥವೊಂದು ಕಂಡುಹಿಡಿಯಲಾಗಿದೆ ಎಂದು ತಿಳಿದು ಬಂದಿದೆ. ಈ ಶೋಧವು ಪರಿಪೂರ್ಣವಾದ ನಂತರ ಮೆತ್ತಗೆ ಗಾಜಿನಿಂದ ಮೋಟಾರು ವಾಹನಗಳಿಗೆ, ವಿಮಾನಗಳಿಗೆ ಬೇಕಾದ ಟಾಯರುಗಳು ಸಿದ್ಧವಾಗಬಹುದೆಂದು ಹೇಳಲಾಗಿದೆ.

ಗಾಜಿನಿಂದ ಟಾಯರುಗಳು ಮಾತ್ರವಲ್ಲ, ಭವಿಷ್ಯದಲ್ಲಿ, ಉಕ್ಕಿನ ಸ್ಥಳದಲ್ಲಿ, ಮೋಪಿನ ಸ್ಥಳದಲ್ಲಿ ಗಾಜಿನ ಪದಾರ್ಥವು ಉಪಯೋಗಿಸಲ್ಪಡಬಹುದೆಂದೂ, ಗಾಜಿನ ಚೂರಿ ಕತ್ತರಿಗಳೂ ಬರಬಹುದೆಂದೂ ಹೇಳಲಾಗಿದೆ.

ಅಷ್ಟೆ ಅಲ್ಲ ಗಾಜಿನಿಂದಲೆ ತಯಾರಾದ ಅರಿವೆಯು ಬರಬಹುದು. ಮುಂದಿನ ಯುಗವು ಗಾಜಿನ ಯುಗವಾಗಬಹುದು.

ಈ ಮೊದಲು ಅಮೇರಿಕಾಕ್ಕೆ ಮತ್ತು ಬ್ರಿಟನಿಗೆ ಮಾತ್ರ ಶರಣು ಹೋಗಲು ಸಿದ್ಧವಿದ್ದ ಜರ್ಮನ್ ಬಲವು ರಶ್ಯಕ್ಕೂ ಶರಣುಹೋಗುವ ಕುರಿತು ಮುಂದೆ ಬರಬಹುದೆಂದೂ, ಈ ಕಾರಣದಿಂದ ಯುರೋಪದ ಯುದ್ಧವು ಸದ್ಯದಲ್ಲೇ ಕೊನೆಗೊಳ್ಳಬಹುದೆಂದು ತಿಳಿದು ಬಂದಿದೆ.

ಮಹಾಕ್ರಾಂತಿಯಿಂದ ಶುದ್ಧಿಕರಿಸಲ್ಪಟ್ಟ ರಷ್ಯದಲ್ಲಿ ಬರಬರುತ್ತ ಕ್ರಾಂತಿಯ ಮೂಲ ನೀತಿಯ ಬದಲಾವಣೆಯಾದುದು ಕಾಣುತ್ತದೆ. ಅಲ್ಲಿ ಖಾಸಗಿ ಭಾಂಡವಾಳಶಾಹಿಗೆ ಮತ್ತೊಮ್ಮೆ ಅವಕಾಶ ದೊರಕುವ ಸಂಭವಗಳು ಇಲ್ಲದಿದ್ದರೂ, ಹಿಂದೊಮ್ಮೆ ತ್ಯಜಿಸಿಬಿಟ್ಟ ರಾಷ್ಟ್ರೀಯ ಭಾವನೆಗಳೆಲ್ಲಾ ಈಗ ಪ್ರಕಾಶಕ್ಕೆ ಬಂದಿವೆ.

ಂ ಂ ಂ ಂ

ಹಿಂದೀಯ ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕಾಗಿ ವೈಸ್ರಾಯ ವೆವಲ್ಲರು ಮಾಡಿದ ಪ್ರಯತ್ನಗಳಿಗೆ ಯಶಸ್ಸು ದೊರಕಿದಂತೆ ಕಾಣುವುದಿಲ್ಲ. ಅಮೆರಿ ಮತ್ತು ಚರ್ಚಿಲ್ಲರು ಹಿಂದೂದೇಶದ ಕುರಿತು ತಾವು ಈ ಮೊದಲು ಆಚರಿಸಿದ ಧೋರಣವನ್ನು ಬದಲಾಯಿಸಲು ಸಿದ್ಧರಿಲ್ಲವೆಂದೂ, ತಮ್ಮ ಸಲಹೆಗಳು ಮಾನ್ಯವಾಗದಿದ್ದರೆ, ವೆವಲ್ಲರು ತಮ್ಮ ಹುದ್ದೆಗೆ ರಾಜಿಕೊಡುವ ಕುರಿತು ಒಂದು ಎಚ್ಚರಿಕೆಯನ್ನು ಕೊಟ್ಟಿರುವರಾಗಿ ತಿಳಿದುಬಂದಿದೆ. ಹಿಂದೂದೇಶದ ಸಮಸ್ಯೆಯು ಬೇಗನೆ ತೀರ್ಮಾನವಾಗಬೇಕೆಂದು ಬ್ರಿಟನಿನ ಲೇಬರ್ ಪಕ್ಷದ ಉತ್ಸಾಹವಿದೆಯೆಂದು ವೆವಲ್ಲರ ಈ ಪಕ್ಷದರಿಗೆ ಸಹಾನುಭೂತಿಯು ಇದೆ ಎಂದು ತಿಳಿದು ಬಂದಿದೆ.

ಂ ಂ ಂ ಂ

ಜೀವನ ಚಿತ್ರ

ವಿಜ್ಞಾನ ವಿಭೂತಿ ಸರ್ ಸಿ. ವಿ. ರಾಮನ್

ಮಾರ್ಕೋನಿ.........ಸಿ. ವಿ. ರಾಮನ್

"Marconi can be claimed as a great international figure of all times-one of whom the whole world could ever remain proud. His greatness as a scientist would inspire countless future generations"

'ಮಾರ್ಕೊನಿಯನ್ನು ಅಂತರ್ರಾಷ್ಟ್ರೀಯ ಒಬ್ಬ ಮಹಾ ವ್ಯಕ್ತಿಯನ್ನಾಗಿ ಗಣಿಸಬಹುದು ವಿಶ್ವವಿಡೀ-ಸದಾಕಾಲ ಗರ್ವಪಡತಕ್ಕ ವ್ಯಕ್ತಿ. ಅವನು ವೈಜ್ಞಾನಿಕನಾದ್ದುದರ ಮಹತ್ವವು ಭಾವೀ ಅಗಣಿತ ಸಂತಾನಗಳನ್ನು ಸುಪ್ರೇರಿಸುವುದು' ಗತಿಸಿದ ಮಹಾ ವಿಜ್ಞಾನಿ ಮಾರ್ಕೋನಿ ದಿನಾಚರಣೆಯ ಸಂಬಂಧದಲ್ಲಿ ಸ್ಮಾರಕ ಭಾಷಣದಲ್ಲಿ ಶ್ರೀ ಸಿ. ವಿ. ರಾಮನ್-ಇವರು ರೂಪಗೊಟ್ಟ ಮಾತಗಳಿವು.

ಸರ್ ಸಿ. ವಿ. ರಾಮನ್ ಇವರು ಕೂಡಾ ಮಾರ್ಕೋನಿಯಷ್ಟೇ ಪ್ರತಿಭಾ ಸಂಪನ್ನ ವಿಜ್ಞಾನಿಗಳು. ಆದುದರಿಂದ ಅವರ ಈ ಮಾತುಗಳು ಮೌಕ್ತಿಕಗಳು-ತಮ್ಮ ಸ್ವಂತ ಜೀವನವನ್ನು ಪ್ರತಿಬಿಂಬಿಸುತ್ತಿವೆ. ಅಲಂಕರಿಸುತ್ತವೆ; ಕಾರಣ-ಸಿ. ವಿ. ರಾಮನರೂ ವಿಜ್ಞಾನ ವಿಭೂತಿಗಳು-ಇಡೀ ವಿಶ್ವದಆದರ ಮೆಚ್ಚುಗೆಗೆ, ಗರ್ವಕ್ಕೆಪಾತ್ರರಾಗಿದ್ದವರು, ಪಾತ್ರರಾಗುವವರು; ಭಾವೀ ಜನಾಂಗದ ಪಥ ಪ್ರದರ್ಶಿಕರು, ಪ್ರಭಾವ ಪ್ರವರ್ತಕರು.

ಹುಡುಗರು ಕಾದಂಬರಿಗಳನ್ನು ಡುತಿದ್ದಾಗ....

೧೮೮೮ರಲ್ಲಿ ತಿರುಚಿನಾಪಳ್ಳಿಯಲ್ಲ ಶ್ರೀಯುತರ ಜನ್ಮವಾಯಿತು. ಬಾಲ್ಯದಿಂದಲೂ ಶ್ರೀಯುತರಿಗೆ ವಿಜ್ಞಾನದಲ್ಲಿ ವಿಶೇಷ ಶ್ರದ್ಧೆ; ಅಚಲ ಅಭಿರುಚಿ. ಸಮವಯಸ್ಕ ಸಹಪಾಠಿಗಳು ಕಾದಂಬರಿಗಳನ್ನು ಓದುತಿದ್ದಾಗ ಬಾಲಕ ಸಿ. ವಿ. ರಾಮನು ವಿಜ್ಞಾನ ಸಂಬಂಧಿತ ಪುಸ್ತಕಗಳನ್ನು ಪಠನ ಮಾಡುತಿದ್ದನು; ಅವುಗಳಲ್ಲೆ ಮಗ್ನನಾಗುತಿದ್ದನು.

ಅಪೂರ್ವ ದಾಖಲೆಗಳು!

ತಮ್ಮ ೧೬ನೇ ವರುಷದಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಬಿ. ಎ. ಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು; ಫಿಸಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಪಡೆದರು.

ನಂತರ M. A. Physics ನಲ್ಲೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು.

೧೮ನೇ ವರ್ಷ ಪ್ರಾಯದಲ್ಲಿ ಅಖಿಲ ಭಾರತ ಆರ್ಥಿಕ ವಿಭಾಗದ ಉಚ್ಚ ಪರೀಕ್ಷೆಯಲ್ಲಿ ಪಾಸಾಗಿ ಡೆಪ್ಯೂಟಿ ಎಕೌಂಟಂಟ್ ಜನರಲ್ ಆಗಿ ನೇಮಕವಾದರು.

ವಿಜ್ಞಾನದ ವೇದಿಯಲ್ಲಿ.....!

ಮೊದಲು ಅವರಿಗೆ ಕಲ್ಕತ್ತದಲ್ಲಿ ಕೆಲಸವಾಯ್ತು. ಸರಕಾರಿ ಕೆಲಸದ ಮಧ್ಯದಲ್ಲಿಯೂ ಅವರು ವಿಜ್ಞಾನವನ್ನು ಮರೆಯಲಿಲ್ಲ. ವಿಜ್ಞಾನದ ಕರೆಯನ್ನು ಅಲಕ್ಷಿಸಲಿಲ್ಲ. 'ಸಂಶೋಧ ಸೌಕರ್ಯಕ್ಕಾಗಿ ಅಲ್ಲಿಯ ವಿಜ್ಞಾನದ ಉನ್ನತಿಯನ್ನು ಸಾಧಿಸುವ ಭಾರತೀಯ ಒಂದು ಸಂಘದ ಸದಸ್ಯರಾದರು. ಸಂಘದ ಕ್ರಿಯಾ ಶಾಲೆ (Loboratory) ಯಾವಾಗಲೂ ಶ್ರೀಯುತರಿಗೆ ತೆರೆದಿತ್ತು.

ಕಲ್ಕತ್ತದಿಂದ ರಂಗೂನಿಗೆ, ಅಲ್ಲಿಂದ ನಾಗಪೂರಿಗೆ, ತಿರುಗಿ ಕಲ್ಕತ್ತದಲ್ಲಿ-Accountant General of posts and Telegraphs ರಾಗಿ ಇಂತಹ ಉನ್ನತ ಹುದ್ದೆಗೂ ಶ್ರೀಯುತರೂ ರಾಜಿನಾಮೆ ಕೊಟ್ಟರು-ಸಹರ್ಷದಿಂದ!-ಕಾರಣ ಶ್ರೀಯುತರು ವಿಜ್ಞಾನದ ಉಪಾಸಕರು ಅವರ ಜೀವನವು ವಿಜ್ಞಾನದ ಸೇವೆಗಾಗಿ ವಿಜ್ಞಾನದ ವೇದಿಯಲ್ಲಿ ಮುಂದೆ ಕಲ್ಕತ್ತದ ವಿಶ್ವವಿದ್ಯಾಲಯದಲ್ಲಿ ಭಾತಿಕ ಶಾಸ್ತ್ರದ ಪ್ರೊಫೆಸರರಾದರು; ಯುರೋಪಿನಲ್ಲಿ ತರಬೇತಿಹೊಂದಿದ್ದರೂ ಭೌತಿಕ ಶಾಸ್ತ್ರದ ಆಚಾರ್ಯ ಪದವಿಯು ಅವರಿಗೆ ಕೊಡಲ್ಪಟ್ಟಿತು.

ಪ್ರೊಫೆಸರ್ ರಾಮನ್‌ರು ಒಳ್ಳೇ ಸಫಲತೆಯನ್ನು ಸಂಪಾಧಿಸಿದರು. ಅನೇಕ ಯುವಕ ವಿಜ್ಞಾನಿಗಳನ್ನು ತರಬೇತು ಮಾಡಿದರು.

ಆಲ್ಲಿಂದ....! ಎಲ್ಲೆಲ್ಲೂ ಅವರ ಹೆಸರು! ಶ್ರೀಯುತರ ವೈಜ್ಞಾನಿಕ ಪರಿಶೋಧನೆಗಳು ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದುವು. ವಿಜ್ಞಾನದ ವಿದ್ಯಾರ್ಥಿಗಳಲ್ಲಂತೂ ಅವು ಹೊಸ ಹಾದಿ ಹೊಸ ಗುರುತು ಹಾಕಿ ಕೊಟ್ಟುವು.

ಉನ್ನತಿಯಿಂದ ಮಹೋನ್ನತಿ!

ನಂತರ ಶ್ರೀಯುತರು ರೊಯಲ್ ಸೊಸೈಟಿಯ 'ಫೆಲೊ' ಆದರು ವಿಶ್ವದ ಪಯಣವೊಂದರಲ್ಲಿ ಎಲ್ಲೆಲ್ಲೂ ಅವರ ಮೇಲೆ ಪ್ರಶಂಸೆ ಪದವಿಗಳ ಸುರಿ ಮಳೆ ಆಯ್ತು. ೧೯೩೦ರಲ್ಲಿ ಫಿಸಿಕ್ಸ್‌ಗೆ ಅವರಿಗೆ ನೊಬೆಲ್ ಬಹುಮಾನ ದೊರಕಿತು. ಅದಾಗಲೇ Indian Science Congress ನ ಅಧ್ಯಕ್ಷ ಪದವಿಯೂ, ಸರ್ ಪದವಿಯೂ ೧೯೨೯ರಲ್ಲಿ ಅವರಿಗೆ ಸಿಕ್ಕಿದ್ದುವು.

ಮತ್ತೀಗ......

ಈಗ ಶ್ರೀಯುತರು ಬೆಂಗಳೂರಿನ ವಿಜ್ಞಾನಸಂಸ್ಥೆ (InstituteofScience) ಯ ಭೌತಿಕ ಶಾಸ್ತ್ರ ವಿಭಾಗದ ವ್ಯವಸ್ಥಾಪಕರು, "Indian Journal of Physics" ಎಂಬ ಪತ್ರಿಕೆಯನ್ನು ನಡಿಸುತ್ತಾರೆ.

ಫಲಾಕಾಂಕ್ಷೆಯಿಂದಲ್ಲ.....

ಶ್ರೀಯುತರು ವಿಜ್ಞಾನದ ಉನ್ನತಿಯನ್ನು ಯಾವುದೊಂದು ಫಲಕಾಂಕ್ಷೆಯಿಂದಲ್ಲ-ಕೇವಲ ವಿಜ್ಞಾನ ಪ್ರೇಮಕ್ಕಾಗಿ-ಸಾಧಿಸುವವರು. ಆದುದರಿಂದಲೇ ಅವರಿಗೆ ಸಫಲತೆ ಸಿಕ್ಕಿತು.

ವಿಶ್ವ ವ್ಯಕ್ತಿಗಳಲ್ಲಿ......

ವಿಶ್ವದ ಮಹಾವ್ಯಕ್ತಿಗಳಲ್ಲಿ ಶ್ರೀಯುತರಿಗೆ ಯಾವಾಗಲೂ ಪ್ರಮುಖ ಸ್ಥಾನ ಉಂಟು-ಶ್ರೀಯುತರೇ 'ಹೇಳಿದಂತೆ "Science knows no barriers of nationalities" ಅರ್ಥಾತ್ ವಿಜ್ಞಾನವು ಜನಾಂಗಿಕ ಬಂಧನಗಳಿಗೊಳಗಾಗಲಿಲ್ಲ;-ಶ್ರೀಯುತರು ಕೇವಲ ಭಾರತದ ಪ್ರಮುಖ ವ್ಯಕ್ತಿಗಳಲ್ಲ-ವಿಶ್ವದ ಮಹಾ ವ್ಯಕ್ತಿಗಲ್ಲೊಬ್ಬರು!

ಸಾವಿರಗಟ್ಲೆಯಲ್ಲಿ ತಲಬುದೊರಕುವ ಸಿವಿಲ್ ಸರ್ವಿಸ್ ವರ್ಗದವರಿಗೂ ಶೇ. ೧೮ಕ್ಕೆ ಕಡಿಮೆಯಾಗದ ತುಟ್ಟಿಭತ್ತೆ ಕೊಡುವ ಏರ್ಪಾಡುಗಳಾಗಿದ್ದರೂ, ಉಪಾಧ್ಯಾಯರಾಗಿ ಗೇಯುವವರ ಕುರಿತು ನಿಗಾ ತೆಗೆದುಕೊಂಡದು ಕಾಣುವುದಿಲ್ಲ.

ಂ ಂ ಂ ಂ

ಪ್ರಚಲಿತ ಸಮಾಚಾರ

(೮ನೇ ಪುಟದಿಂದ)

ಗಣ್ಯ ಸ್ಥಾನಕ್ಕೆ ಬಂದಿರುತ್ತದೆ. ಕೆಲ ವರ್ಷಗಳ ಹಿಂದೆ ಅಲ್ಲಿನಬೇಸಾಯದ ಸ್ಥಿತಿಯು ನಮ್ಮಲ್ಲಿದ್ದಂತೇ ಇತ್ತು ಬೇಸಾಯದ ವಿಚಾರದಲ್ಲಿ ಅಮೇರಿಕಾದಲ್ಲಿ ಉತ್ಕೃಷ್ಟ ಮಾದರಿ ಎಂದು ಹೇಳಬಹುದು.

ಕ್ರಾಂತಿಯ ಮೊದಲು ರಷ್ಯದ ರೈತನ ಸ್ಥಿತಿಯು ಅತಿ ಶೋಚನಿಯವಿತ್ತು. ನಮ್ಮ ರೈತನ ಈಗಿನ ಗೋಳೆ ಆಗಲ್ಲಿತ್ತು ಭೂವಿ ಹಿಡುವಳಿಗಳು ಹಂಚಿ ಹರಿದು ಸಣ್ಣ ಸಣ್ಣ ತುಂಡುಗಳಾಗಿ ರೈತನಿಗೆ ಲಾಭವಿಲ್ಲದಾಗಿ ಸಾಗುವಳಿಯು ನಡೆಯುತಿತ್ತು. ರೈತನ ಸಾಲದ ಹೊರೆಯು ಅತಿ ದೊಡ್ಡದಿತ್ತು ರಶ್ಯದ ಅಂದಿನ ಹಳ್ಳಿಗಳು ಸಂಕಟದ ಬೀಡುಗಳಾಗಿದ್ದವು. ಆದರೆ ಕ್ರಾಂತಿಯ ನಂತರ, ಔದ್ಯೋಗಿಕರಣವು ಕೊಮ್ಯುನಿಷ್ಟ ಪಕ್ಷದ ಮುಖ್ಯ ಗುರಿಯಾಗಿದ್ದರೂ, ರೈತನ ಮೋಕ್ಷವಾಗದೆ ರಷ್ಯಕ್ಕೆ ಮೋಕ್ಷವಿಲ್ಲೆಂದು ಸೋವಿಯಟ್ ನಾಯಕ ಸ್ಟೇಲಿನನು ಮನಗಂಡು ತಾನು ನೆಡೆಯಿಸಿದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಬೇಸಾಯಕ್ಕೆ ಮಹತ್ವದಸ್ಥಾನವನ್ನು ಕೊಟ್ಟನು. ಹಿಡುವಳಿಗಳು ಖಾಸಗಿ ಜನರ ಕೈಗಳಲ್ಲಿದ್ದದನ್ನು ಕೂಡಿಸಿ, ಕೃಶಿಕ್ಷೇತ್ರಗಳನ್ನು ವ್ಯವಸ್ಥೆ ಪಡಿಸಿ, ಅಮೇರಿಕಾದ ಮಾದರಿಯಲ್ಲಿ, ಸುಧಾರಿತ ಬೇಸಾಯ ಕ್ರಮಗಳನ್ನು ಆಚರಣೆಗೆ ತಂದು ಬೆಳೆಯ ಫಲವನ್ನು ವೃದ್ಧಿ ಕರಿಸಿ ರೈತವರ್ಗಕ್ಕೆ ಸಂತುಷ್ಟಿಯನ್ನು ಒದಗಿಸಿಕೊಟ್ಟನು. ಅಲ್ಲಿನ ಸಾಗುವಳಿಯ 'ಕಲೆಕ್ಟಿವ್ ಫಾರ್ಮು' ಗಳಿಂದ ಅಂದರೆ ಕೂಡಿಸಿದ ಹಿಡುವಗಳ ವ್ಯವಸ್ಥೆಯಿಂದ ತಮ್ಮ ಮೇಲೇರಿ ಬಂದ ನಾಜೀ ಬಲಗಳನ್ನು ಅತ್ಯಂತ ಯಶಸ್ವಿ ತರದಲ್ಲಿ ಎದುರಿಸಲು ಸಾಧ್ಯವಾಯಿತು. ಕೆಂಪು ಬಲಕ್ಕೂ, ನಾಗರೀಕರಿಗೂ ಬೇಕಾದ ಆಹಾರವನ್ನು ಕೊರತೆಯಿಲ್ಲದೆ ಒದಗಿಸಲು ಸಾಧ್ಯವಾಯಿತು. ರಷ್ಯವು ಸಮರದ ಮಹಾ ಹೊರೆಯ ಕೆಯನ್ನು ವಹಿಸಿದಾಗ್ಯೂ ಅಲ್ಲಿ ಆಹಾರದಸಮಸ್ಯೆಯು ಉಂಟಾಗದಿರಲು ಕಾರಣವಾಯಿತು.

ನಮ್ಮಲ್ಲಿ ಬೇಸಾಯವು ಬಹಳ ಹಿಂದುಳಿದುದರಿಂದಲೆ ಆಹಾರದ ಪೂರೈಕೆಯು ಬಂದು ಮಹಾ ಸಮಸ್ಯೆಯಾಗಿ ಬಿಟ್ಟದೆ. ಯುದ್ಧ ಪೂರ್ವದಲ್ಲಿ ಬರ್ಮ ಮೊದಲಾದ ಪರದೇಶಗಳಿಂದ ಆಹಾರ ಪದಾರ್ಥಗಳು ನಮಗೆ ಬರುತ್ತಿದ್ದುದರಿಂದ, ಆಗ ಅದೊಂದು ಕೊರತೆಯು ನಮಗೆ ಕಾಣಿಸಿಕೊಳ್ಳಲಿಲ್ಲ. ಸದ್ಯದ ಯುದ್ಧಪರಿಸ್ಥಿತಿಯಿಂದಲಾದರೂ ನಮಗೊಂದು ಪರಿಪಾಠವಾಗಿದೆ. ರಷ್ಯದ ಮಾದರಿಯೂ, ಅಮೇರಿಕಾದ ಮಾದರಿಯೂ, ನಮ್ಮ ಮುಂದೆ ಪ್ರಜ್ವಲಿಸುತ್ತಿವೆ. ನಮ್ಮ ರೈತನ ಉದ್ಧಾರವಾಗಬೇಕು. ಬೇಸಾಯದಲ್ಲಿ ಸುಧಾರಿತ ಕ್ರಮಗಳು ರೂಢಿಗೆ ಬರಬೇಕು. ಸಾಗುವಳಿಯ ಉಧ್ಧಾರದಲ್ಲಿ ನಮ್ಮ ಉದ್ಧಾರವಿದೆ. ಅಂದರೆ ನಮ್ಮ ಹಳ್ಳಿಗಳ ಉದ್ಧಾರವನ್ನೆ ಮುಖ್ಯ ಗುರಿಯಾಗಿಟ್ಟು ಮುಂದಿನ ಯಾವತ್ತೂ ಯೋಜನೆಗಳು ನಡೆಯಬೇಕಾಗಿವೆ.

ಗಾಂಧೀಜಿಯವರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳ ಕುರಿತು ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿರುವರು. ಅವರ ಈಗಿನ ಚಟುವಟಿಕೆಗಳೆಲ್ಲಾ ಇವುಗಳ ಸುತ್ತಲೆ ನಡೆಯುತ್ತಿರುವವು. ಹಿಂದೂದೇಶದ ವಿಮೋಚನೆಯಾಗಬೇಕಾದರೆ, ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳಿಗೆ ಯಶಸ್ಸು ದೊರಕಬೇಕೆಂದು ಅವರು ಒತ್ತಿ ಸಾರುತ್ತಿರುವರು. ಚರಕದ ಸಂದೇಶವು ಹಿಂದೂದೇಶದ ಪ್ರತಿ ಮೂಲೆಗೂ ಪ್ರಸರಿಸಬೇಕೆಂದು ಅವರ ದೀಕ್ಷೆಯಿರುವುದು. ನಮಗೆ ನಿತ್ಯ ಮೋಕ್ಷವು ದೊರಕುವುದಾದರೂ ರಚನಾತ್ಮಕ ಕಾರ್ಯಕ್ರಮಗಳಿಂದ ಎಂದು ಗಾಂಧೀಜಿಯವರ ವಿಶ್ವಾಸವಿರುವುದು.

ಂ ಂ ಂ ಂ

ಅಭಿವೃದಿ ತೋರಿಸುವ ಪಟ್ಟಿ

	1940	1942	1944
	ರೂಪಾ	ರೂಪಾ	ರೂಪಾ
ತೆತ್ತ ಭಂಡವಾಳ	3,93,000	14,96,000	26,34,000
ಕ್ಷೇಮನಿಧಿ	4,50,000	4,50,000	10,34,000
ಠೇವಣಾತಿಗಳು	86,72,000	1,45,51,000	2,30,69,000
ಸರಕಾರೀ ಭದ್ರತೆಗಳು	11,19,000	63,17,000	1,17,93,000
ಲಾಭಾಂಶ	72,000	1,53,000	2,75,000
ಜುಮ್ಲಾ ಸಂಪತ್ತು	1,03,44,000	2,07,35,000	3,46,46,000

ಸಂಖ್ಯೆಗಳೆಲ್ಲಾ ಸಾವಿರಗಳಿಗೆ ಸರಿಪಡಿಸಿದವುಗಳು

ನಮ್ಮ ಶಾಖೆಗಳು

ಕ್ವಿಲನ್	ಮಂಗಳೂರು	ಮಧುರಾ
ಆಲಪ್ಪೆ	ಬೆಂಗಳೂರು	ಸೇಲಮ್
ಎರ್ನಾಕುಲಮ್	ಬೆಳಗಾಂವ್	ಇರೋಡ್
ಕೊಚ್ಚಿನ್	ಧಾರವಾಡ	ಕೊಯಮುತ್ತೂರು
ಕಲ್ಲಿಕೋಟೆ	ಹುಬ್ಬಳ್ಳಿ	ಇತ್ಯಾದಿ, ಇತ್ಯಾದಿ.
ಕಣ್ಣಾನೂರು	ಚಿಕ್ಕಮಗಳೂರು	

ಮುಂಬಾಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪಾಯ 26 ಲಕ್ಷ. ಕ್ಷೇಮನಿಧಿ ರೂಪಾಯ 10 ಲಕ್ಷ.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited.

ಬೆಕ್ಕುಗಳ ಕುರಿತು–

ಪ್ರಾಚೀನ ಐಗುಪ್ತದಲ್ಲಿ—ಹಾಗೂ ಹಳೆಯ ಇಂಗ್ಲಾಂಡಿನ ಜನರಲ್ಲಿದ್ದ ಕೆಲವು ವಿಚಿತ್ರ ಭಾವನೆಗಳು

ಏನಾದರೊಂದು ಶುಭ ಕಾರ್ಯಕ್ಕೆ ಹೋಗುವಾಗ ದಾರಿಯಲ್ಲಿ ಬೆಕ್ಕು ಅಡ್ಡ ಬಂದರೆ ಅದೊಂದು ದೊಡ್ಡ ಅಪಶಕುನವೆಂಬುದಾಗಿ ಹಿಂದೂಗಳಲ್ಲಿ ಭಾವನೆಯಿದೆಯಷ್ಟೆ! ಬೆಕ್ಕುಗಳನ್ನು ಕುರಿತು ಹಿಂದೂದೇಶದಲ್ಲೇನೆ ಅಲ್ಲ; ಹಿಂದೆ ಐಗುಪ್ತ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿಯೂ ನಾನಾ ತರದ ಭಾವನೆಗಳು ಇದ್ದವು. ಕೆಲವು ಕಡೆಗಳಲ್ಲಿ, ಬೆಕ್ಕನ್ನು ಭಕ್ತಿಯಿಂದ ಪೂಜಿಸುತಿದ್ದರಾದರೆ, ಬೇರೆ ಕಡೆಗಳಲ್ಲಿ ಅದರ ಹೆಸರು ಕೇಳಿದೊಡನೆ ಗಡಗಡ ನಡುಗುತಿದ್ದರು ಮತ್ತೆ ಕೆಲವೆಡೆ ಅದರ ಉಪಯುಕ್ತತೆಯಲ್ಲಿ ಜನರಿಗೆ ತುಂಬಾ ನಂಬಿಕೆಯಿತ್ತು.

ಉದಾಹರಣೆಗಾಗಿ, ಈಗಲೂ ಹಿಟ್ಲರನಿಗೆ ಬೆಕ್ಕುಗಳನ್ನು ಕಂಡರಾಗುವುದಿಲ್ಲವಂತೆ. ಒಮ್ಮೆ ನೆಪೋಲಿಯನನು ತನ್ನ ಕೋಣೆಯ ಪರದೆಯಿಂದ ಆಚೆಕಡೆ ಇಣಿಕಿನೋಡುತ್ತ ಹೆದರಿಕೆಯಿಂದ ಮೈಯೆಲ್ಲ ಬೆವತುಕೊಂಡಿದ್ದು, ಸಹಾಯಕ್ಕಾಗಿ ಜನರನ್ನು ಕರೆದನಂತೆ. ಜನರು ಬಂದು ನೋಡಿದಾಗ, ಚಕ್ರವರ್ತಿಯು ಬರೇ ಒಂದು ಬೆಕ್ಕನ್ನು ಕಂಡು ಅಷ್ಟು ಕಂಗಾಲಾದನೆಂದು ತಿಳಿದರಂತೆ. ಹೀಗೆ ಅಲ್ಲಲ್ಲಿ ಅನೇಕ ವ್ಯಕ್ತಿಗಳಿಗೆ ಬೆಕ್ಕನ್ನು ಕಂಡು ಹೆದರಿಕೆಯಾಗುತಿದ್ದುದರಿಂದಲೋ ಏನೋ ಪ್ರಾಚೀನ ಐಗುಪ್ತ ದೇಶದ ಜನರು ಬೆಕ್ಕನ್ನು ದೇವರೆಂದೇ ಭಾವಿಸುತಿದ್ದರೆಂದು ನಾವು ತಿಳಿಯುತ್ತೇವೆ. ಜನರಲ್ಲಾರಾದರೊಬ್ಬನು ಒಂದು ಬೆಕ್ಕನ್ನು ಕೊಂದುದೇಯಾದರೆ, ಉಳಿದವರೆಲ್ಲ ಒಟ್ಟುಗೂಡಿ ಆ ಪವಿತ್ರ ಜೀವಿಯನ್ನು ಕೊಂದ ಪ್ರಾಯಶ್ಚಿತ್ತಕ್ಕಾಗಿ, ವಿಚಾರಣೆಯೊಂದು ಇಲ್ಲದೆ ಅವನನ್ನು ಚಿತ್ರಹಿಂಸೆಗೆ ಗುರಿಮಾಡುತಿದ್ದರು. ಅಲ್ಲದೆ, ಈ ಬೆಕ್ಕುಗಳಿಗೆ ಉತ್ಕೃಷ್ಟವಾದ ಆಹಾರ, ವಸತಿಗಳನ್ನು ಅವರು ಒದಗಿಸಿಕೊಡುತಿದ್ದರು. ಒಂದು ಬೆಕ್ಕು ಸತ್ತಾಗ, ಅದರ ಶವವನ್ನು ಅತ್ಯಂತ ವಿಜೃಂಭಣೆಯಿಂದ ಕೊಂಡೊಯ್ಯುವುದೂ, ಅದರ ಹಿಂದೆಯೇ ಹಲವರು ಅಳುತ್ತಾ, ತಮ್ಮ ಎದೆಗಳನ್ನು ಬಡಿದುಕೊಂಡು ಹೋಗುವುದೂ, ಗಂಭೀರ ರೀತಿಯಲ್ಲಿ ಅದರ ದಹನಮಾಡುವುದೂ ಕಟ್ಟಳೆಯಾಗಿತ್ತು. ಬೆಕ್ಕನ್ನು ಕಳೆದುಕೊಂಡ ಕುಟುಂಬದವರೆಲ್ಲ 'ಗೋಳೋ' ಎಂದು ಬಹಳಕಾಲ ಬೊಬ್ಬಿಡುವುದೂ ಇತ್ತು.

ಇಂಗ್ಲಾಂಡಿನಲ್ಲಾದರೋ ಬೆಕ್ಕಿಗೆ ಇದರ ತೀರ ವಿರುದ್ಧ ರೀತಿಯ ಗೌರವವು ಸಲ್ಲುತಿತ್ತು. ಏಕೆಂದರೆ ಬೆಕ್ಕು ಮಾಟಗಾರ್ತಿಯರ ಸಂಗಾತಿಯೆಂದೂ ರೋಗಗಳನ್ನು ಗುಣಮಾಡುವ ಶಕ್ತಿ ಅದರಲ್ಲಿದೆಯೆಂದೂ ಅಲ್ಲಿಯ ಜನರ ಭಾವನೆಯಾಗಿತ್ತು. ಉದಾ: ಹೆಂಪಶಾಯರಿನಲ್ಲೊಂದು ನಂಬಿಕೆಯಿತ್ತು—ಕಪ್ಪು ಬೆಕ್ಕಿನ ಬಾಲದ ಒಂದು ರೋಮವನ್ನು, ಶುಕ್ಲಪಕ್ಷದ ಮೊದಲನೆಯ ರಾತ್ರಿ, ಒಂಬತ್ತು ಸಲ ಕಣ್ಣಿನ ರೆಪ್ಪೆಗಳಿಗೆ ತಿಕ್ಕುವುದರಿಂದ ರೆಪ್ಪೆಯ ಬದಿಗಳು ಬಾತುಹೋಗುವ ರೋಗವು ವಾಸಿಯಾಗುವುದು ಎಂಬುದಾಗಿ ಅಲ್ಲಿಯ ಜನರ ತಿಳುವಳಿಕೆಯಾಗಿತ್ತು. ಕಪ್ಪು ಬೆಕ್ಕಿನ ಬಾಲದ ರಕ್ತದಿಂದ ಸೊಂಟದಲ್ಲಾಗುವ ಒಂದು ಚರ್ಮರೋಗವನ್ನೂ, ಅದರ ಚರ್ಮದಿಂದ ಗಂಟಲಿನ ರೋಗಗಳನ್ನೂ ನಿಶ್ಚಿತವಾಗಿ ಗುಣಪಡಿಸಬಹುದೆಂದೂ ಅವರ ಅಭಿಪ್ರಾಯವಾಗಿತ್ತು.

ಇಂಗ್ಲೆಂಡಿನಲ್ಲಿ ಈಗಲೂ ಕಪ್ಪು ಬೆಕ್ಕುಗಳು ದಾರಿಯಲ್ಲಿ ಸಿಗುವುದು ಶುಭವೆಂದೇ ಭಾವನೆಯಿದೆ. ಆದರೆ ಅದೇ ಬೆಕ್ಕಿನೊಟ್ಟಿಗೆ ಜಲ ಪ್ರಯಾಣ ಮಾಡುವುದು ಹಾನಿಕರವೆಂದೂ, ಹಡಗಿನಲ್ಲಿರುವ ಬೆಕ್ಕನ್ನು ಕೊಂದುಬಿಟ್ಟರಂತೂ ಏನಾದರೂ ಅವಘಡವು ನಿಶ್ಚಿತವೆಂದೂ ಅವರು ತಿಳಿಯುತ್ತಾರೆ. ಬಿರುಗಾಳಿ, ಮಳೆಗಳನ್ನು ತರಿಸುವವರೂ ಬೆಕ್ಕುಗಳೆಂಬ ನಂಬುಗೆ ಮುಂಚೆ ಅವರಲ್ಲಿತ್ತು. ಆದುದರಿಂದ ಬಿರುಗಾಳಿಯುಂಟಾಗುವ ಚಿಹ್ನೆಗಳು ತೋರಿದೊಡನೆ, ಎಲ್ಲ ಬೆಕ್ಕುಗಳನ್ನು ಒಟ್ಟುಗೂಡಿಸಿ, ಅವುಗಳ ಮೇಲೆ ಲೋಹದ ಗುಡಾಣಗಳನ್ನು ಕವುಚಿ ಹಾಕಿ, ಬೆಕ್ಕುಗಳು ತಮ್ಮ ಅಮಾನುಷ ಶಕ್ತಿಯಿಂದ ಆ ಬಿರುಗಾಳಿಯನ್ನು ನಿಲ್ಲಿಸುವ ತನಕ ಅವುಗಳನ್ನು ಹೊರಬಿಡುತ್ತಿರಲಿಲ್ಲ.

ಕೇವಲ ಕಪ್ಪು ಬೆಕ್ಕುಗಳನ್ನು ಕುರಿತಾಗಿಯೇ ಮೂಢ ನಂಬಿಕೆಗಳಲ್ಲಿ ಬೇರೆ ಬಣ್ಣದ ಬೆಕ್ಕುಗಳಿಗೂ ಮಾಯಕ ಶಕ್ತಿಗಳಿವೆಯೆಂಬ ನಂಬಿಕೆಯೂ ಇತ್ತು. ಉದಾ: ಮೂರು ಬಣ್ಣಗಳಿಂದ ಕೂಡಿದ ಬೆಕ್ಕು, ಬೆಂಕಿಯ ಅನಾಹುತಗಳಿಂದ ರಕ್ಷಣೆಯನ್ನುಂಟುಮಾಡುವ ಶಕ್ತಿಯುಳ್ಳುದಂತೆ.

ನ್ಯೂ ಇಂಗ್ಲೆಂಡಿನಲ್ಲಿ, ವಾತ ಸಂಬಂಧ ರೋಗಿಗಳು ತಾವು ರಾತ್ರಿ ಮಲಗುವಾಗ ಜತೆಯಲ್ಲೇ ಒಂದು ಬೆಕ್ಕನ್ನು ಮಲಗಿಸುವುದಿತ್ತು. ಕಾರಣ, ಅದರಿಂದ ತಮ್ಮ ರೋಗನಿವಾರಣೆಯಾಗುವುದೆಂದು ಅವರು ತಿಳಿದಿದ್ದರು. ಆದರೆ ಲೆಂಕೆಷಾಯರಿನಲ್ಲಿ ಬೆಕ್ಕನ್ನು ಹಾಸಿಗೆಯಲ್ಲಿ ಮಲಗಲು ಬಿಡುವುದರಿಂದ ರೋಗನಿವಾರಣೆಯ ಬದಲು ರೋಗಬರುವುದೆಂಬ ಕಲ್ಪನೆಯೂ ಇತ್ತು.

ಇವೆಲ್ಲ ಪ್ರಾಚೀನ ಇಂಗ್ಲಿಷರಲ್ಲಿನ ಭಾವನೆಗಳು. ಈಗಲಾದರೋ ಇಂಗ್ಲೆಂಡಿನಲ್ಲಿ ಜನರು ಬೆಕ್ಕೆಂಬುದು ಸಾಕುಪ್ರಾಣಿಯೆಂದಿಷ್ಟೇ ತಿಳಿದು, ಮನೆ ಮನೆಗಳಲ್ಲಿ ಅದನ್ನು ಪ್ರೀತಿಯಿಂದ ಸಾಕುತ್ತಾರೆ. ತಮ್ಮ ಮಗುವಿನಂತೆಯೇ ಕಾಣುತ್ತಾರೆ.

ಕ್ರಿಪ್ಸ್ ಸಲಹೆಗಳನ್ನು ಸ್ವೀಕರಿಸಿ, ೯೩ ಸೆಂಕ್ಶನ್ ಜ್ಯಾರಿಯಲ್ಲಿರುವ ಪ್ರಾಂತ್ಯಗಳಲ್ಲಿ ೧೯೩೫ ರಾಜಶಾಸನವು ರೂಢಿಗೆ ಬರುವಂತಾಗಿ ಕೇಂದ್ರದಲ್ಲೂ ವಿವಿಧ ತೋಪುಗಳ ಒಡಂಬಡಿಕೆಯ ಸರಕಾರವನ್ನು ಸ್ಥಾಪಿಸಿ, ಸದ್ಯ ದೇಶದ ಮುಂದಿರುವ ಮಹಾ ಸಮಸ್ಯೆಗಳನ್ನು ಬಗೆಹರಿಸಬೇಕೆಂದು, ಶ್ರೀ ಕೆ. ಎಂ. ಮುನ್ಶಿಯವರು, ಮದ್ರಾಸಿನಲ್ಲಿ ಒಂದೆಡೆ ಮಾಡಿದ ಭಾಷಣದಲ್ಲಿ ಅಭಿಪ್ರಾಯ ಸೂಚಿಸಿದರು.

o o o o

ಸೆಕ್ಷನ್ ೯೩ ಜ್ಯಾರಿಯಲ್ಲಿರುವ ಇದು ಪ್ರಾಂತ್ಯಗಳಲ್ಲಿ ಕಾಂಗ್ರೆಸನ್ನು ಅಧಿಕಾರಕ್ಕೆ ಕರೆದು, ನಂತರ ಕಾಂಗ್ರೆಸ್ ನಾಯಕರ ಬಿಡುಗಡೆಯಾಗುವಂತೆ, ವರ್ಕಿಂಗ್ ಕಮಿಟಿಯ ಸದಸ್ಯರು ಅಹಮ್ಮದಾಬಾದಿನಲ್ಲಿದ್ದವರನ್ನು ಅವರವರ ಪ್ರಾಂತ್ಯಗಳಿಗೆ ವರ್ಗಾಯಿಸಲ್ಪಟ್ಟಿರುವರೆಂದೂ, ಹೀಗೆ ಕಾಂಗ್ರೆಸ್ ಮುಖಂಡರ ಬಿಡುಗಡೆಯ ನಂತರ ಹಿಂದೀಯ ರಾಜಕೀಯ ಸಮಸ್ಯೆಯ ಕುರಿತು ವಿಚಾರವಿನಿಮಯ ಪ್ರಾರಂಭವಾಗಬಹುದೆಂದು, ಒಂದು ಉಹೆಯು ಇದೆ.

o o o o

ಈ ಯುದ್ಧದಲ್ಲಿ ಸ್ತ್ರೀಯರ ಪಾತ್ರ

ಒಂದು ಸಮಯದಲ್ಲಿ ಮನೆಯಲ್ಲಿ ಹಿಂದುಳಿದ ಸ್ತ್ರೀಯು, ಇಂದು ಮುಂದೆ ಬಂದು, ಸಮಾಜ ಸೇವೆಯ ಹೊರೆಯನ್ನು ವಹಿಸಿಕೊಳ್ಳುವುದು, ಜಗತ್ತಿನ ಎಲ್ಲೆಡೆಗಳಲ್ಲೂ ಕಾಣಿಸಿಕೊಳ್ಳುತ್ತಿದೆ. ಸಮಾಜ ಸೇವೆಯಲ್ಲಿ ಮಾತ್ರವಲ್ಲ, ಈ ಯುದ್ಧದ ಶ್ರಮವನ್ನು ವಹಿಸಿಕೊಂಡ ಅನೇಕ ನಿದರ್ಶನಗಳು ನಮ್ಮ ಮುಂದೆ ಕಾಣಸಿಕೊಳ್ಳುತ್ತಿವೆ. ಈ ವಿಚಾರದಲ್ಲಿ ರಷ್ಯದ ಸ್ತ್ರೀಯು ಪ್ರಜ್ವಲಿತ ನಿದರ್ಶನವೆಂದು ಹೇಳಬೇಕಾಗಿಯದೆ.

೧೯೧೭ರ ಮಹಾಕ್ರಾಂತಿಯ ನಂತರ, ರಷ್ಯದ ಸಮಾಜದಲ್ಲಿ ಸ್ತ್ರೀಗೆ ಪುರುಷನೊಡನೆ ಸಮಾನ ಸ್ಥಾನವು ಕೊಡಲಾಯಿತು. ಸ್ತ್ರೀಯು ಪುರುಷನೊಡನೆ, ಎಲ್ಲಾ ಉದ್ಯೋಗಗಳಲ್ಲಿ ದುಡಿಯುವಂತಾಯಿತು. ರಶ್ಯಾದಲ್ಲಿ ಸ್ಟೇಲಿನ ಪಂಚವಾರ್ಷಿಕ ಯೋಜನೆಗಳ ಪ್ರಕಾರ ಸ್ಥಾಪಿಸಲ್ಪಟ್ಟ ಕಾರ್ಖಾನೆಗಳಲ್ಲಿ ಸ್ತ್ರೀಯರು ಪುರುಷರೊಡನೆ ಸರಿಸಂಖ್ಯೆಯಲ್ಲಿ ದುಡಿಯುವಂತಾಯಿತು. ಸ್ತ್ರೀಯರು ವಿದ್ಯಾವಂತರಾಗಿ ಪುರುಷನಂತೆ ಪ್ರಗತಿಹೊಂದುವಂತಾಯಿತು. ಸೋವಿಯಟ್ ರಶ್ಯಾ ಅಧಿಕಾರ ವರ್ಗದಲ್ಲೂ ಸ್ತ್ರೀಗೆ ಸ್ಥಾನಮಾನಗಳು ದೊರಕುವಂತಾಯಿತು. ರಶ್ಯಾದ ಉದ್ಧಾರ ಬಗ್ಗೆ ಹೊರಡಿಸಲ್ಪಟ್ಟ ಯೋಜನೆಗಳಲ್ಲಿ ಸ್ತ್ರೀಯರೂ ಅವಿಶ್ರಾಂತಿ ದುಡಿಯುವಂತಾಯಿತು. ಕೊಮ್ಯುನಿಷ್ಟ ಪಾರ್ಟಿಗಾಗಿ ನಡೆದ ಪ್ರಚಾರ ಕಾರ್ಯದಲ್ಲಿ ಸ್ತ್ರೀಯರು ಹೆಚ್ಚಿನ ಶ್ರಮವನ್ನು ವಹಿಸಿರುವರು. ರಷ್ಯಾದ ಕೆಂಪು ಪಡೆಗಳಲ್ಲಿ ಸ್ತ್ರೀಯರೂ ಯೋಧರಾಗಿ ಸೇರಿರುವರು. ನಾಜಿ ಬಲಗಳನ್ನು ಕೂಡಿದ ರಷ್ಯದ ಗುರಿಲ್ಲಾ ಪಂಗಡಗಳಲ್ಲಿ ಸ್ತ್ರೀಯರೂ ಮತ್ತು ಮಕ್ಕಳು, ತುಂಬಾ ಮಡಿದಿರುವರು.

ಬ್ರಿಟನಿನಲ್ಲಿ ಪುರುಷರು ಸಾಮ್ರಾಜ್ಯ ರಕ್ಷಣೆಗಾಗಿ, ದೇಶ ರಕ್ಷಣೆಗಾಗಿ ಯೋಧರಾಗಿ ಹೊರಟುಹೋದಾಗ, ಯುದ್ಧಗಳಿಗೆ ಬೇಕಾದ ಶಸ್ತ್ರ ಸಿಡಿಮದ್ದು ಇತ್ಯಾದಿಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ, ಪುರುಷರ ಸ್ಥಳದಲ್ಲಿ ಸ್ತ್ರಿಯರೂ ದುಡಿಯಲು ಮುಂದೆ ಬಂದರು. ರಶ್ಯಾದ ಸ್ತ್ರೀಯರಂತೆ ಬ್ರಿಟನಿನ ಸ್ತ್ರೀಯರೂ ಯೋಧರಾಗಿ ಯುದ್ಧರಂಗಕ್ಕೆ ತೆರಳದಿದ್ದರೂ, ಗಾಯಗೊಂಡವರಿಗೆ ಶಮನ ಕೊಡಲು, ರೋಗಗ್ರಸ್ತರ ಆರೈಕೆಮಾಡಲು, ಇತ್ಯಾದಿ ಯೋಧರ ಸಂಕಷ್ಟ ನಿವಾರಣಾ ಕೆಲಸಗಳಲ್ಲಿ ದಾರಳ ಸಂಖ್ಯೆಯಲ್ಲಿ ಸೇರಿರುವರು. ಸ್ವದೇಶ ರಕ್ಷಣೆಗಾಗಿ ವ್ಯವಸ್ಥೆ ಹೊಂದಿದ ರಕ್ಷಣ ಪಡೆಯಲ್ಲಿ ಸ್ತ್ರೀಯರು ದಾರಳ ಸಂಖ್ಯೆಯಲ್ಲಿ ಸೇರಿರುವರು. ಯುದ್ಧದ ಕುರಿತು ಜನರಲ್ಲಿ ಉತ್ಸಾಹಉಂಟಾಗುವಂತೆ ನಡೆಯುವ ಪ್ರಚಾರಕಾರ್ಯದಲ್ಲಿ ಬ್ರಿಟನಿನ ಸ್ತ್ರೀಯರು ಒಳ್ಳೆ ಪರಿಶ್ರಮವನ್ನು ವಹಿಸುತ್ತಿರುವರು. ಯುದ್ಧನಿಧಿಯನ್ನು ಕೂಡಿಸುವರೆ, ಸೇವಿಂಗ್ಸ್ ಬಾಂಡುಗಳ ಮಾರಾಟದಲ್ಲಿ ಸರಕಾರಕ್ಕೆ ಸಹಾಯವನ್ನು ನೀಡುತ್ತಿರುವರು. ಅಮೇರಿಕಾದಲ್ಲೂ ಸ್ತ್ರೀಯರೂ ಇದೆ ತರ ಮುಂದೆ ಬಂದು ದುಡಿಯುತ್ತಿರುವರು.

ನಮ್ಮ ದೇಶದಲ್ಲೂ, ನಮ್ಮ ಸ್ತ್ರೀಯರು ಹಿಂದುಳಿಯಲಿಲ್ಲ. ರಶ್ಯಾದಲ್ಲಿ, ಅಮೇರಿಕಾದಲ್ಲಿ, ಬ್ರಿಟನಿನಲ್ಲಿ ರಾಷ್ಟ್ರಸೇವೆಯ ಕಾರ್ಯದಲ್ಲಿ ಸ್ತ್ರೀಯರು ಮುಂದೆ ಬಂದಂತೆ ನಮ್ಮವರು ಮುಂದೆ ಬಂದಿರುವರು ಅವರು ಇನ್ನೂ ಹೆಚ್ಚಿನ ಹುರುಪನ್ನೂ, ಉತ್ಸಾಹವನ್ನೂ ತಾಳಬೇಕಾಗಿಯೆದೆ.

THE CANARA BANKING CORPORATION LTD.

(Incorporated inBritish India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3- 0	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 0
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Garnd Total Rs.	1,35,50,413- 4- 8

ಸಿಹಿ ಸುದ್ದಿ ಸಂಗ್ರಹ

ಬ್ರಿಟಿಷರಿಗೂ ಜಪಾನಿಯರಿಗೂ ಒಂದು ಲೆಕ್ಕದಲ್ಲಿ ವಿಶೇಷ ಹೋಲಿಕೆ ಇದೆ. ಆಸ್ಪದ ಕರಾವಳಿ ಬಿಟ್ಟು ಸ್ವಲ್ಪ ದೂರದಲ್ಲಿ ಜಪಾನಿ ದ್ವೀಪಗಳಿವೆ. ಯುರೋಪದ ಕರಾವಳಿ ಬಿಟ್ಟು ಸ್ವಲ್ಪ ದೂರ ಬ್ರಿಟಿಷ್ ದ್ವೀಪಗಳಿವೆ. ಬ್ರಿಟಿಷರ ರಾಜ್ಯ ಘಟನಾ ಮಾದರಿಯ ಮೇಲೆ ಜಪಾನಿ ರಾಜ್ಯ ಘಟನೆ ರಚಿಸಲ್ಪಟ್ಟಿದೆ. ಬ್ರಿಟಿಷರಲ್ಲಿ ಲೋರ್ಡ್, ಅರ್ಲ್, ವ್ಯಾಕೌಂಟ್, ಬೆರೊನ್ ರುಗಳಿರುವಂತೆ ಜಪಾನಿನಲ್ಲೂ ಇದ್ದಾರೆ. ಪಾರ್ಲಿಮೆಂಟ್ ಕ್ರಮವೂ ಒಂದೇ.

* * *

ಆರನೇ ಜೋರ್ಜರಿಗಿರುವಂತೆ ಜಪಾನೀ ಚಕ್ರವರ್ತಿಗೂ ವಿಧವೆ ತಾಯಿ ಇದ್ದಾಳೆ. ಜೋರ್ಜ್‌ರು ಪ್ರೀತಿ ವಿವಾಹ ಮಾಡಿಕೊಂಡಂತೆ ಜಪಾನಿನ ಹಿರೋಹಿಟೋ ಅವರೂ ಚಕ್ರವರ್ತಿ ಪದ್ಧತಿ ವಿರೋಧವಾಗಿ ಪ್ರೀತಿ ವಿವಾಹ ಮಾಡಿಕೊಂಡರು. ಇಬ್ಬರ ಮೊದಲಿನ ಎರಡು ಮಕ್ಕಳು ಹುಡುಗಿಯರು.

ಜಪಾನ್ ಚಕ್ರವರ್ತಿ ಸೂರ್ಯಪುತ್ರನೆನಿಸಿಕೊಳ್ಳುತ್ತಾರೆ. ಸಾಮಾನ್ಯರು ಅವನನ್ನು ನೋಡಿದರೆ ಕಣ್ಣು ಕುರುಡಾಗುವುದೆಂದು ಜಪಾನಿಗಳ ಬಾವನೆ. ಎತ್ತರ ಪ್ರದೇಶದಿಂದ ಚಕ್ರವರ್ತಿಗಳನ್ನು ನೋಡದಂತೆ ರಾಜ ಮೆರವಣಿಗೆ ಕಾಲದಲ್ಲಿ ಮಹಡಿಗಳ ಬಾಗಲುಗಳೆಲ್ಲ ಅಲ್ಲಿ ಮುಚ್ಚುತ್ತಾರೆ.

* * *

ಮೆಡೆಮ್ ಚಾಂಗ್ ಕೈಶೇಕಳು ಚೀನಿ ಸರ್ವಾಧಿಕಾರಿಯ ಎರಡನೆ ಹೆಂಡತಿ. ಶೆಂಗ್ ಕೇಶರಿಗೆ ೧೫ನೇ ಪ್ರಾಯದಲ್ಲಿ ಗಿಡ್ಡ ಪಾದಗಳ ಒರ್ವ ಹಳ್ಳಿ ಹುಡುಗಿಯೊಡನೆ ವಿವಾಹವಾಗಿದ್ದು ೧೯೨೧ರಲ್ಲಿ ವಿಚ್ಛೇದವಾಯಿತು. ಮೊದಲನೇ ಹೆಂಡತಿಯಿಂದ ೩೩ ವರ್ಷದ ಮಗನೊಬ್ಬನಿದ್ದಾನೆ. ಮೊದಲನೇ ಹೆಂಡತಿಯನ್ನು ಬಿಟ್ಟಿದ್ದರೂ ಶೆಂಗರೂ ಅವಳಿಗೆ ಪೋಷಣೆ ಖರ್ಚನ್ನು ಕೊಡುತ್ತಾರೆ.

ಶೆಂಗ್‌ಕೆಶೇಕರ ೧ನೇ ಹೆಂಡತಿಯ ಮಗನ ಹೆಸರು ಶೆಂಗ್ ಕೂವೊ ಎಂದು ಅವನ ವಿದ್ಯಾಭ್ಯಾಸ ರಷ್ಯದಲ್ಲಾಗಿ ಅಲ್ಲಿಯೇ ಅವರು ಎಂಜನೀಯರ್ ಕೆಲಸದಲ್ಲಿದ್ದು ಒರ್ವ ರಷ್ಯನಳನ್ನು ಮದುವೆಯಾಗಿದ್ದಾನೆ. ಅನೇಕ ಸಲ ತನ್ನ ತಂದೆಯ ಧೋರಣೆಯನ್ನು ಖಂಡಿಸಿದ್ದಾನೆ. ಕಡೆಗೆ ೧೯೩೭ರಲ್ಲಿ ತಂದೆ ಮಗನಿಗೆ 'ರಾಜಿ'ಯಾಗಿ ಈಗ ಚೀನಿ ಸರಕಾರದಲ್ಲಿ ಅವನಿಗೆ ದೊಡ್ಡ ಹುದ್ದೆ ಕೊಡಲಾಗಿದೆ.

* * *

ದೇವರು ಮೈ ಮೇಲೆ ಬಂದು ದರ್ಶನ ಬರುತ್ತದೆಂಬ ಒಂದು ಭಾವನೆಯು ಈ ಕಡೆಗಳಲ್ಲಿರುವಂತೆ ಪ್ರಾಚೀನ ಗ್ರೀಸ್ ಜನರಲ್ಲೂ ಇತ್ತು. ಅವರು ಸಂಕಷ್ಟ ಕಾಲದಲ್ಲಿ ದರ್ಶನ ಪಾತ್ರಿಯೊಡನೆ ಉಪಾಹರಣೆ ಕೇಳುತಿದ್ದರು. ಈಗಲೂ ತಿಬೆಟ್ ದೇಶದಲ್ಲಿ ಕೆಲವು ಬೌಧ ಸನ್ಯಾಸಿಗಳಿಗೆ ಈ ತರದ ಆವೇಶ ಬರುತ್ತದೆ. ಮಠ ದೇವಾಲಯಗಳ ಆಡಳಿತ ಕುರಿತು

ಅಮೇರಿಕದಲ್ಲಿ ವಿಜಯಲಕ್ಷ್ಮಿ ಪಂಡಿತರು

ಹಿಂದೂದೇಶದ ಕುರಿತು ಬಹೀರ್ ದೇಶಗಳಲ್ಲಿ ಅಂದರೆ ಪಾಶ್ಚಾತ್ಯದ ದೇಶಗಳಲ್ಲಿ, ಅಮೇರಿಕದಲ್ಲಿ, ಸರಿಯಾದ ಪ್ರಚಾರವು ನಡೆಯದುದರ ಪರಿಣಾಮವಾಗಿ ಆ ದೇಶಗಳೆಲ್ಲಾ, ನಮ್ಮ ಕುರಿತು ತಪ್ಪು ಅಭಿಪ್ರಾಯಗಳು ತುಂಬಿಹೋಗಿವೆಯೆಂದು, ಅಲ್ಲಿ ಪ್ರವಾಸಿಸಿ ಬಂದ ನಮ್ಮ ಅನೇಕ ಮುಖಂಡರುಗಳ ಅಭಿಪ್ರಾಯವಿರುತ್ತದೆ. ಹಿಂದೂದೇಶನ ಕುರಿತು, ಸರಿಯಾದ ಪ್ರಚಾರವನ್ನು ಮಾಡುವರೆ, ಅತ್ತಕಡೆಗೆ ಪ್ರವಾಸ ಬೆಳೆಸಬೇಕೆಂದು, ಜವಾಹರಲಾಲರು ಸೆರೆಸೇರುವ ಮೊದಲು ಬಗೆದಿದ್ದರು. ಅವರುಮಾಡಬೇಕೆಂದಿದ್ದ ಈ ಕಾರ್ಯವನ್ನು ಅವರ ತಂಗಿಯರಾದ ವಿಜಯಲಕ್ಷ್ಮೀ ಪಂಡಿತರು, ಈಗ ಅಮೇರಿಕಾದಲ್ಲಿ ನಡೆಯಿಸುತ್ತಿರುವರು. ಅವರ ಈ ಕಾರ್ಯದಿಂದ ಅಮೇರಿಕಾದಲ್ಲಿ ಕಾರ್ಯಿಸುತ್ತಿರುವ ಬ್ರಿಟಿಷ್ ಪ್ರಚಾರ ಶಾಕೆಯವರಿಗೆ ಸ್ವಲ್ಪ ಹೊಟ್ಟೆ ಉರಿಗೆ ಕಾರಣವಾಗಿರುತ್ತದೆ.

ವಿಜಯಲಕ್ಷ್ಮಿ ಪಂಡಿತರಿಗೆ, ಹೊದೆಡೆಗಳೆಲ್ಲಾ ಒಳ್ಳೆ ಸ್ವಾಗತವೂ ದೊರಕಿರುತ್ತದೆ. ಹಿಂದೂದೇಶದ ಸಮಸ್ಯೆಗಳ ಅರಿವನ್ನು ಮಾಡಿಕೊಳ್ಳಲು ಅಲ್ಲಿ ಅನೇಕ ಕಡೆಗಳಲ್ಲಿ ತುಂಬಾಉತ್ಸಾಹವನ್ನು ತೋರಿಬಂದಿರುತ್ತದೆ. ಅಮೇರಿಕಾದ ಪ್ರಗತಿಪರ ವ್ಯಕ್ತಿಗಳು, ವಿಜಯಲಕ್ಷ್ಮಿಯರಿಗೆ ಈ ಪ್ರಚಾರ ಕಾರ್ಯದಲ್ಲಿ ಒಳ್ಳೆ ಸಹಕಾರವನ್ನು ಕೊಡುತ್ತಿರುವರು. ಹಿಂದೂದೇಶದ ಸ್ವಾತಂತ್ರದ ಕುರಿತು ಅಲ್ಲಿನ ಅನೇಕ ದೊಡ್ಡ ವ್ಯಕ್ತಿಗಳುಆಶಕ್ತಿಯನ್ನು ತೋರಿಸಿರುವರು.

ತೊಂದರೆ ಬಂದಾಗ ಅವರು ದರ್ಶನದಲ್ಲಿ ಪ್ರಶ್ನೆ ಕೇಳುತ್ತಾರೆ.

* * *

ತಿಬೆಟಿನಬೌದ ಬಿಕ್ಷುಗಳು ಒಂದು ಕಾಲದಲ್ಲಿ ಎಷ್ಟು ಜ್ಞಾನಿಗಳಾಗಿದ್ದರೂ ಅಷ್ಟೇ ಮೂಡ ನಂಬಿಕೆಯವರು ಇಂದಿನ ತಿಬೆಟ್ ಜನರು ಅವರ ಶಾಸ್ತ್ರಗಳ ಮಂತ್ರಗಳನ್ನು ತಿರುಗುವ ಡೋಲಿನ ಮೇಲೆ ಬರೆದಿಟ್ಟಿದ್ದಾರೆ. ಅರ್ಚಕರಿಗೆ ಒಂದಿಷ್ಟು ಹಣಕೊಟ್ಟು ಆ ಡೋಲನ್ನು ಸಾವಿರ ಸುತ್ತು ತಿರುಗಿಸಿದರೆ ಸಾವಿರ ಜಪ ಮಾಡಿದ ಹಾಗಾಯಿತೆಂದು ನಂಬಿಕೆ. ರಾಮನಾಮ ಜಪಿಸುವವರಿಗೆ ಇದೊಂದು ಉತ್ತಮ ಸೂಚನೆ.

ಈಗ ಸಾನ್‌ಪ್ರಾನಿಸ್ಕೊದಲ್ಲಿ ಲೋಕ ಶಾಂತಿಗಾಗಿ, ಅಂತರಾಷ್ಟ್ರೀಯ ವ್ಯವಸ್ಥೆಯೊಂದನ್ನು ಏರ್ಪಡಿಸುವ ಕುರಿತು ಪ್ರಾರಂಭದ ಸಭೆಯು ನಡೆಯುತ್ತಿರುವಾಗ ವಿಜಯಲಕ್ಷ್ಮೀಯವರು ಅತ್ತಕಡೆಗೆ ತೆರಳಿ, ಹಿಂದೂದೇಶದ ಸ್ವಾತಂತ್ರ್ಯ ಸಮಸ್ಯೆಯ ಕುರಿತು ಪ್ರಚಾರ ಭಾಷಣವನ್ನು ನಡೆಯಿಸುತ್ತಿರುವರು. ಅವರುಈ ಸಂದರ್ಭದಲ್ಲಿ ಅವರು ಅಲೊಂದು ಪತ್ರಿಕ ಪ್ರತಿನಿಧಿಗಳ ಕೂಟ ಜರಗಿಸಿದ್ದರು. ಈ ಕೂಟಕ್ಕೆ ಪತ್ರಿಕಾ ಪ್ರತಿನಿಧಿಗಳು ಬಹು ಸಂಖ್ಯೆಯಲ್ಲಿ ಬಂದು ಕೂಡಿದ್ದರಾಗಿ ತಿಳಿದುಬಂದಿದೆ. ಅಲ್ಲಿ ಈಗ ನಡೆಯುತ್ತಿರುವ 'ಪ್ರೆಸ್‌ಕೂಟ'ಗಳಲ್ಲಿ, ರಷ್ಯದ ಮೊಲೊಟೊವ್‌ರವರು ಕೂಡಿಸಿದ ಕೂಳದ ನಂತರ, ವಿಜಯಲಕ್ಷ್ಮಿಯರು ನಡೆಯಿಸಿದ ಕೂಟವೆ ದೊಡ್ಡದೆಂದು ಹೇಳಲಾಗಿದೆ.

ಲಂಡನಿನಲ್ಲಿ ಲಾರ್ಡ್ ವೆವಲ್ಲರು

ವೈಸ್ರಾಯರ ವೆವಲ್ಲರು ಲಂಡನಿಗೆ ತೆರಳಿ ಒಂದು ಮಾಸಕ್ಕಿಂತ ಹೆಚ್ಚಿನ ಸಮಯವು ದಾಟಿತು. ಅವರು ಇಂಡಿಯಾ ಸೆಕ್ರಟರಿಯವರನ್ನು ಕಂಡು ಮಾತನಾಡುತ್ತಿರುವರೆಂದೂ, ಪ್ರದಾನ ಮಂತ್ರಿ ಚರ್ಚಿಲ್ಲರನ್ನು ಕಂಡು, ಹಿಂದೂದೇಶ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯ ನಿವಾರಣೆಯ ಮಾತೆತ್ತಿದರಾಗಿಯೂ ತಿಳಿದು ಬಂದಿದೆ. ಅವರು ಅತ್ತಕಡೆಗೆ ತೆರಳಿದ ಕಾರ್ಯದ ಫಲದ ಕುರಿತು ಉಹಾಪುಹೆ ಅನೇಕ ಪ್ರಕಾರ ಚರ್ಚಿಲ್ಲರಿಗೆ ಹಿಂದೂದೇಶ ರಾಜಕೀಯ ಬಿಕ್ಕಟನ್ನು ಬಗೆಹರಿಸಲು ಹೆಚ್ಚಿನ ಉತ್ಸಾಹವಿಲ್ಲ, ಈ ಮೊದಲು ಕಳುಹಿಸಿದ ಕ್ರಿಪ್ಸ್ ಸಲಹೆಗಳನ್ನು ಅವರು ಮಗದೊಮ್ಮೆ ಮುಂದೆ ಹಾಕಿ, ಪ್ರಕರಣವನ್ನು ಮುಗಿಸಿ ಬಿಟ್ಟಿರುವರಾಗಿ ಹೇಳಲಾಗಿದೆ. ಇಂಡಿಯಾ ಸೆಕ್ರಟರಿ ಅಮೆರಿಯವರು ಹಿಂದೂದೇಶದ ಕುರಿತು ತಮ್ಮ ಧೋರಣದಲ್ಲಿ ಬದಲಾವಣೆಗಳನ್ನು ಮಾಡಲು ಸಿದ್ಧರಿಲ್ಲವೆಂದೂ ಆದರೂ ವೈಸ್ರಾಯ ವೆವಲ್ಲರು ಹತಾಶರಾಗಲಿಲ್ಲವೆಂದೂ ಸಪ್ರೊ ಸೂಚನೆಗಳ ಪ್ರಕಾರ, ಭೂಲಾಬ್ಯಾ ಲಿಖಾಯತ್ ಸಲಹೆಗಳ ಪ್ರಚಾರ ಕಾಂಗ್ರೆಸಿನೊಡನೆ ಒಪ್ಪಂದಕ್ಕೆ ಬರುವ ತರದಲ್ಲಿ, ಕಾಂಗ್ರೆಸ್ ಮುಖಂಡರುಗಳ ಬಿಡುಗಡೆಯಾಗಿ, ನಂತರ ಅವರೊಡನೆ ರಾಜಕೀಯ ಪರಿಸ್ಥಿತಿಯ ನಿವಾರಣೆಯ ಕುರಿತು ವ್ಯವಹಾರಿಸಲು ಆಗುವಂತೆ ಯತ್ನ ಪಡುತ್ತಿರುವರೆಂದೂ ಹೇಳಲಾಗಿದೆ. ವೆವಲ್ಲರು ಈ ರೀತಿಯ ಯತ್ನಮಾಡುತ್ತಿರುವಾಗ, ನಮ್ಮ ಹಿತಗಳಿಗೆ ದಕ್ಕೆ ಬಾರದಂತೆ, ಹಿಂದೂದೇಶದ ಆಶ್ರಿತ ರಾಜರು ಮುಂಬ್ಯಾಯಲ್ಲಿ ಕೂಡಿ, ತಮ್ಮ ಬೇಡಿಕೆಗಳನ್ನು ಅರಿಕೆಮಾಡಿಕೊಳ್ಳಬೇಕಾಗಿ ನಿರ್ಣಯಿಸಿಕೊಂಡಿರುವರು. ಮುಸ್ಲಿಂಲೀಗಿಗೆ ಮಹತ್ವಕೊಡದೆ ಯಾವ ಒಪ್ಪಂದವು ಸಲ್ಲದು, ಎಂದು ಜಿನ್ನಾರವರ ಅಂಭೋಣವು ಹೊರಡಿರುತ್ತದೆ.

ಸೆಂಟ್ರೆಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಆಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[ಸಂಪುಟ 39] ತಾರೀಕು 11—5—1945 [ಸಂಚಿಕೆ 19]

ನಾಜೀಗಳ ಅವತಾರ ಮುಗಿಯಿತು

ಜರ್ಮನ್ ಜನಾಂಗದ ಅಧಿದೇವತೆ

ಜರ್ಮನ್ ಜನಾಂಗದ ಅಧಿ ದೇವತೆಯಂತಿದ್ದ ಆ ಹಿಟ್ಲರನು ಮಡಿದನು. ಇಂದಿನ ಈ ಭೀಕರ ಮಾನವ ಹತ್ಯಾಕಾಂಡಕ್ಕೆ ಕಾರಣಭೂತರಾದ ನಾಜೀಗಳು ಪರಾನ್ಮುಖರಾದರು. ಅವರೊಂದಿಗೆ ಅವರ ವಿಶ್ವಭಕ್ಷಕ ತತ್ವವೂ ಜನಾಂಗೀಕ ವರ್ಣಶ್ರೇಷ್ಠತೆಯೂ ನಾಮಾಶೇಷವಾಗಲಿ.

"ಮೇ ೧ನೇ ತಾರೀಕಿನಂದು ನಾಜೀ ಫ್ಯೂರರನು ತನ್ನ ಯುದ್ಧ ನಿರ್ದೇಶಕತ್ವದ ಕರ್ತವ್ಯವನ್ನು ಸಾಗಿಸುತ್ತಾ ಮಧ್ಯಾಹ್ನದ ಹೊತ್ತಿಗೆ ಹತನಾದನು".-ಆತ್ಮಹತ್ಯವೆಂದು ಕೆಲವರೂ, ರೋಗಿಷ್ಠನಾಗಿದ್ದುದರಿಂದ ಅತಿ ರಕ್ತಪ್ರವಾಹ ದೆಸೆಯಿಂದೆಂದು ಮತ್ತೆ ಕೆಲವರೂ ಅನ್ನುತ್ತಿರುವರು.

ಮತ್ತೆ ರಷ್ಯನರನ್ನು ಕೇಳಿದರೆ 'ಹಿಟ್ಲರ್ ಪಿಶಾಚಿಯು ನೆಲದಡಿಯಲ್ಲೆಲ್ಲೊ ಅಡಗಿರುವನು' ಎಂದು ಹೇಳುತ್ತಿದ್ದಾರೆ. ಅವರಿಗೆ ಪ್ರತ್ಯಕ್ಷ ನಿದರ್ಶನವಾಗಿ ಅವನ ಹೆಣವು ಇನ್ನೂ ಸಿಗಲಿಲ್ಲ. ಒಂದುವೇಳೆ ತುಂಡು ಮೀಸೆಯುವನೊಬ್ಬ ಜರ್ಮನನ ಶವವು ದೊರಕಿದರೆ ಅದು ಹಿಟ್ಲರನಿರಬಹುದೆ? ಆ ಮಾಯಾವಿಯು ತನ್ನಂತಹ ಹತ್ತಿಪ್ಪತ್ತು ಜನರನ್ನು ಇಟ್ಟುಕೊಂಡಿದ್ದನಂತೆ.

ಹಿಟ್ಲರ್ ಪ್ರಭಾವ

ಒಟ್ಟಿನಲ್ಲಿ ಹಿಟ್ಲರನೆಂದರೆ ಯುದ್ಧಾಕಾಂಕ್ಷಿ ಜರ್ಮನರಿಗೆ ಒಂದು ಸ್ಫೂರ್ತಿ ಸಂಕೇತವಷ್ಟೇ ಆಗಿತ್ತು. ಯಾವನಾದರೊಬ್ಬನು ರೇಡಿಯೋದಲ್ಲಿ ಉನ್ನತ ಧಾಟಿಯಲ್ಲಿ ಆವೇಶಭರದಿಂದ ಬೊಬ್ಬಿಟ್ಟರೆ ಅದೇ ಹಿಟ್ಲರ್: ದೈವದ ಆಕಾಶವಾಣಿಯೆಂದೆನಿಸುತ್ತಿತ್ತು. ಅದೇ ದೈವಸಂಭೂತನ ಅಶರೀರವಾಣಿಯಾಗುತ್ತಿತ್ತು – ವಿಶ್ವಾಸಭರಿತ ಜರ್ಮನರಿಗೆ.

ತನ್ನ ಅಂತ್ಯ ಸಮೀಪಿಸುತ್ತಲೇ ಹಿಟ್ಲರನು ಉತ್ತರಾಧಿಕಾರಿಯಾಗಿ ನೌಕಾಧಿಪತಿ ಡೊನಿಟ್ಜನನ್ನು ಸರ್ವಾಧಿಕಾರಿಯಾಗಿ ನೇಮಿಸಿದನು. ಹಾಗಾದರೆ ಪರಮ ಆಪ್ತನಾದ ಆ ಹಿಮ್ಲರನ ಸಮಾಚಾರವೇನು? ಸಾಯುವಾಗ ನಾಜೀ ನಾಯಕನು ತನ್ನ ಪ್ರಿಯ ಜನಾಂಗಕ್ಕೆ ಒಂದು ಸಂದೇಶವನ್ನು ಏಕೆ ಕೊಡಲು ಮರೆತನು?

ಹೊಸ ಸರ್ವಾಧಿಕಾರಿ

ಡೊನಿಡ್ಜನು ಪಟ್ಟಕ್ಕೆ ಬಂದೊಡನೆ ಹಾಡಿದ ರಾಗವೇ ಬೇರೆ. 'ಜರ್ಮನ್ ಜನಾಂಗವನ್ನು ಬೊಲ್ಶೆವಿಕರ (ರಷ್ಯನರ) ಬಾಯಿಯಿಂದ ತಪ್ಪಿಸುವುದೇ ನನ್ನ ಮೊದಲ ಕರ್ತವ್ಯ; ಇದಕ್ಕಾಗಿಯೇ ಹೋರಾಟವು ಮುಂದರಿಸಲ್ಪಡುವುದು.'

ಮೂರು ಜನ ಸಂಘಟಿತ ಮಿತ್ರರಲ್ಲಿ ಇರ್ವರನ್ನು ಬಿಟ್ಟು ಮೂರನೇಯವನೊಬ್ಬನೊಡನೆ ಮಾತ್ರ ಕಾದಾಡುವುದೆಂದರೆ ಅರ್ಥವೇನು? ಬ್ರಿಟಿಷ್ ಅಮೇರಿಕನರು ಇದಕ್ಕೆ ಹೇಗೆ ಒಪ್ಪುವರು? ಆದರೂ ಮಿತ್ರರ ಶಿಬಿರದೊಳಗೆ ಕೊನೆಯ ಅವಧಿಯಲ್ಲಾದರೂ ಬಿಕ್ಕಟ್ಟುಂಟುಮಾಡಲು ಚತುರ ನಾಜಿಗಳು ಪ್ರಯತ್ನ ಮಾಡಿದ ಒಂದು ಉಪಾಯವಿದೆಂದು ಯಾರೂ ತಿಳಿಯದಿರಲಿಲ್ಲ. ಕಡೆಗಂತೂ ಅಂತ್ಯವು ಸಮೀಪಿಸಿತು. ಸುಳ್ಳು ನೆವಗಳಿಗೂ ಪೊಳ್ಳು ಬೆದರಿಕೆಗಳಿಗೂ ತ್ರಿಮೂರ್ತಿ ರಾಷ್ಟ್ರದ ಸೇನೆಗಳು ಸೊಪ್ಪುಹಾಕುವರೆ?

ವಿಜಯಾಚರಣೆ

ಯುರೋಪಿನ ಮಟ್ಟಿಗೆ ವಿಜಯವು ಉಂಟಾದೊಡನೆ ಕಾರ್ಯವು ಕೊನೆಗಂಡಂತಿಲ್ಲ. ಪಶ್ಚಿಮದಲ್ಲಾದಂತೆ ಇನ್ನು ಪೂರ್ವದಲ್ಲಿ ಭಯಂಕರ ಹೋರಾಟವು ಕಾದುನಿಂತಿದೆ. ನಾಜೀ ತತ್ವದ ಸಹೋದರ ತತ್ವವಾದ ಫೆಸಿಜಂ ತತ್ವಾನುಯಾಯಿಯಾದ ಜಪಾನನ್ನು ಮುರಿಯಬೇಕು.

ಲಂಡನಿನಲ್ಲಿ ಆಗಲೇ ವಿಜಯೋತ್ಸವವು ಬಹು ಸಂಭ್ರಮದಿಂದ ಜರಗಿತು. ಸ್ವಾತಂತ್ರ್ಯಪ್ರಿಯ ಎಲ್ಲಾ ದೇಶಗಳಲ್ಲೂ ಅದು ಆಚರಿಸಲ್ಪಡುವುದು. ಆದರೆ ಈ ಸಂತೋಷ ಕಾಲದಲ್ಲಿ ಮಿತ್ರರು ತಾವು ಪ್ರತಿಜ್ಞಾಬದ್ಧರಾದ ಮಾನವಸ್ವಾತಂತ್ರ್ಯದ ಉನ್ನತ ಧ್ಯೇಯಗಳನ್ನು ಮರೆಯದಿರಲಿ ಎಂದು ದೇಶದ ಅನೇಕ ಪತ್ರಿಕೆಗಳು ಗಂಭೀರ ವಾಣಿಯಿಂದ ಸಾರುತ್ತಿವೆ.

'ಈ ಮಹಾ ಯಾಗದೊಳಗೆ ಸುರಿಯಲ್ಪಟ್ಟ ಮಿಲಿಯಾಂತರ ತರುಣ ದೇಹಗಳ ರಕ್ತ ಬಲಿದಾನಗಳು ನಿರರ್ಥಕವಾಗದಿರಲಿ. ಜಗತ್ತು ಪ್ರಜಾಪ್ರಭುತ್ವಕ್ಕೆ ಭದ್ರವಾಗಲಿ.' ಆಗಲೇ ಫ್ರಿಸ್ಕೊದಲ್ಲಿ ಉಂಟಾದ ತಿಕ್ಕಾಟವು ಅಷ್ಟಕ್ಕೇನೇ ಕೊನೆಗೊಂಡು ಚಿರಶಾಂತಿಯಾಗಿ ಬಾಳಲೆಂದು ಮಾನವ ಕೋಟಿಯು ಆಶಿಸುವುದು.

ಸೆನ್‌ಫ್ರೆನ್ಸಿಸ್‌ಕೊ-ಮುಂದಿನ ಕಲಹಕೇಂದ್ರ

ಶಾಂತಿ ಯುದ್ಧಗಳ ಪರಿಷತ್ತು ಸ್ಥಾನ

ಇಂದು ನೆಲ, ಜಲ, ಆಕಾಶ ಮಾರ್ಗಗಳಿಂದ ಬಿಡುವಿಲ್ಲದೆ ವಾಹನಗಳು ಪ್ರೇಕ್ಷಕರನ್ನು ಉತ್ತರ ಅಮೇರಿಕದ ಪಶ್ಚಿಮ ಕರಾವಳಿಯ ಈ ಪ್ರಖ್ಯಾತ ನಗರಕ್ಕೆ ತಂದು ತುಂಬತ್ತಿವೆ. ಪ್ರತಿಯೊಂದು ಜನಾಂಗದ ವಿಮಾನಗಳನ್ನು ಅಲ್ಲಿನ ನಿಲ್ದಾಣದಲ್ಲಿ ನೋಡಬಹುದು. ಅವಿಶ್ರಾಂತವಾಗಿ ಬರುವ ಹೋಗುವ, ಹಾರುವ ಈ ರೆಕ್ಕೆ ಯಂತ್ರಗಳ ಚಟುವಟಿಕೆಗಳನ್ನು ನೋಡುವಾಗ ಜೇನು ನೊಣದ ಗೂಡಿನ ಭಾವನೆಯುಂಟಾಗುತ್ತದೆ.

ಇನ್ನು ಯಾರಾದರೂ ಅನಿರೀಕ್ಷಿತವಾಗಿ ಫ್ರಿಸ್ಕೊಗೆ ಹೋದರೆ ಸಂಕಷ್ಟದಲ್ಲೇ ಬೀಳಬೇಕಾಗುತ್ತದೆ. ಅಲ್ಲಿನ ಒಂದು ಮನೆ, ಹೋಟೇಲು, ಇಲ್ಲವೆ ವಿಶ್ರಾಂತಿ ಗೃಹದಲ್ಲಾದರೂ ನಿದ್ರಿಸಲು ಒಂದು ಮಂಚವೂ ಸಿಗಲಿಕ್ಕಿಲ್ಲ. ಒಂದು ಪಡಿ ಹೆಚ್ಚಿನ ರೇಶನೂ ದೊರೆಯಲಾರದು.

ಸುಮಾರು ೪೬ ಜನಾಂಗಗಳ ೨೦೦ ಪ್ರತಿನಿಧಿಗಳೂ, ಅವರ ೯೦೦ ಕಾರಕೂನರೂ ಸಹಾಯಕರೂ, ೩೦೦ ಪರಿಷತ್ಮಂದಿರದ ಗುಮಾಸ್ತರೂ, ಮತ್ತು ೧೨೦೦ ಪತ್ರಿಕಾ ಪ್ರತಿನಿಧಿಗಳೂ ಅಮೇರಿಕನ್ ಸರಕಾರದ ವಿಶೇಷ ಅತಿಥಿಗಳಾಗಿದ್ದಾರೆ.

ಇಂದು ಆ ನಗರವು ಯಾವ ಜನಾಂಗಕ್ಕೆ ಸೇರಿದ್ದೆಂದು ಹೇಳಬರುವುದಿಲ್ಲ. ಪ್ರತಿಯೊಂದು ಜನಾಂಗದ ರಾಜತಂತ್ರ ನಿಪುಣರೂ, ಗುಪ್ತ ಪೋಲಿಸರೂ, ವಕೀಲರೂ ಸಲಹೆಗಾರರೂ ನಗರವನ್ನು ಮುತ್ತಿದ್ದಾರೆ.

ಪರಿಷತ್ತು ಭವನದ ಸುತ್ತಲೂ, ಸಾವಿರಾರು ವರ್ತಮಾನ ವರದಿಗಾರರೂ, ಚಲಚಿತ್ರ, ಛಾಯಾಚಿತ್ರಗ್ರಾಹಕರೂ, ಪತ್ರಿಕೆ ಮಾರುವ ಹುಡುಗರೂ, ಇತರ ಪ್ರೇಕ್ಷಕರೂ, ಚಿಲ್ಲರೆ ವ್ಯಾಪಾರಿಗಳೂ ಕಿಕ್ಕಿರಿಯುತ್ತಾರೆ.

ಅಧಿವೇಶನದ ವರ್ತಮಾನವನ್ನು ಗಂಟೆ ಗಂಟೆಗೂ ದೊಡ್ಡ ಶಿರೋನಾಮದಲ್ಲಿ ಪ್ರಕಟಿಸುವ ಪತ್ರಿಕೆಗಳು ಪ್ರತಿಯೊಬ್ಬರ ಕೈಯಲ್ಲಿ ಕಾಣಬಹುದು. ಸಿನೇಮಾ, ನಾಟಕ, ನಾಟ್ಯ, ಸಂಗೀತ ಮಂದಿರಗಳು ಸಾಯಂಕಾಲದ ಹೊತ್ತಿಗೆ ಅಳತೆ ಮೀರಿ ತುಂಬುತ್ತವೆ.

ಅಮೇರಿಕನ್ ಪೋಲಿಸರು ಡಿಟೆಕ್ಟೀವರುಗಳೂ ಕಿಸೆಕಳ್ಳರ ಮತ್ತು ಸಂದರ್ಭ ಕಾಯುವ ಚಾಣಾಕ್ಷ ದರೋಡೆಖೋರರ ಮೇಲೆ ಕಣ್ಣಿಟ್ಟು ರಾತ್ರೆ ಹಗಲು ಕಾವಲಿದ್ದಾರೆ ಸರಕಾರ ರೇಶನ್ ಆಹಾರ ವಸ್ತುಗಳನ್ನು ತರುವ ಲೋರಿಗಳು ಸಾಲುಸಾಲಾಗಿ ಪ್ರತ್ಯೇಕ ಮಾರ್ಗಗಳಿಂದ ಆಹಾರ ಸಂಗ್ರಹಾಲಯಕ್ಕೆ ಬರುತ್ತಿವೆ.

ಸಾವಿರಾರು ಅಮೇರಿಕನ್ ಬಾಲಕ ಬಾಲಕಿಯರು ಪ್ರಸಿದ್ಧ ವ್ಯಕ್ತಿಗಳ 'ದಸ್ಕತ್ತು' (ಒಟೊಗ್ರಾಫ್) ಪಡೆಯಲು ಊಟ ತಿಂಡಿಯಿಲ್ಲದೆ ಬೇಟಿ ನಡೆಸುತ್ತಿದ್ದಾರೆ. ಅನೇಕರು ಬೇರೆ ಬೇರೆ ದೇಶದ ಪ್ರತಿನಿಧಿಗಳು ತಮ್ಮೊಡನೆ ತಂದ ಅವರ ದೇಶದ ನಾಣ್ಯಗಳನ್ನು ಸಂಗ್ರಹಿಸಲು ಪ್ರಯತ್ನಪಡುತ್ತಾರೆ.

ಪರಿಷತ್ತಿನ ವ್ಯವಹಾರ ಭಾಷೆ ಇಂಗ್ಲಿಷ್ ಎಂದು ಒಪ್ಪಲಾಗಿದೆ. ನಾಣ್ಯ ಚಲಾವಣೆಗೆ ಅಮೇರಿಕನ್ ಡೊಲ್ಲರ್, ಆದರೂ ಫ್ರೆಂಚರ ಫ್ರೆಂಕುಗಳೂ ರಷ್ಯದ ರೂಬೆಲುಗಳೂ ಅಲ್ಲಿ ಹೇರಳವಾಗಿ ಬದಲಾವಣೆಗೆ ಸಿಗುತ್ತಿವೆ.

ಮಾರ್ಗದಲ್ಲಿ ಹತ್ತೈವತ್ತು ನಮೂನೆಯ ಭಾಷೆಗಳು ಕೇಳಿಬರುತ್ತವೆ. ನಿಗ್ರೋ ಚೀನಿ ಭಾಷೆಗಳಿಂದ ಹಿಡಿದು, ಹಿಂದೀ ಉರ್ದು, ಟಮಿಳು ಭಾಷೆಗಳೂ, ಸ್ಪೆನಿಶ್ ಪೋರ್ತುಗೀಸ್, ಮತ್ತು ಇತರ ಲೆಟಿನ್ ಮಾತುಕತೆಗಳೂ ಕಿವಿಯನ್ನು ಕುಕ್ಕುತ್ತವೆ.

ರೂಸ್‌ವೆಲ್ಟರು ಫ್ರಿಸ್ಕೊವನ್ನೇ ಏಕೆ ಶಾಂತಿ ಪರಿಷತ್ತಿನ ಕೇಂದ್ರವನ್ನಾಗಿ ಚುನಾಯಿಸಿದರು? ಅದು ಹಿಂದಿನಿಂದಲೂ ಹಲವು ಜನಾಂಗಿಕರ ಮಿಶ್ರನಗರ. ಆಹಾರ ಮತ್ತಿತರ ಸೌಕರ್ಯಗಳು ಫ್ರಿಸ್ಕೊದಲ್ಲಿ ಇತರ ನಗರಗಳಿಗಿಂತ ಅನುಕೂಲವಾಗಿವೆ. ಮುಂದೆ ಜಪಾನಿನ ಮೇಲೆ ಕೊನೆಯ ಯುದ್ಧವನ್ನು ನಿರ್ದೇಶಿಸಲು ಇದರಷ್ಟು ಅನುಕೂಲವಾದ ಕರಾವಳಿ ನಗರವಿಲ್ಲ. ಇಲ್ಲಿಂದಲೇ ಜಪಾನು ಯುದ್ಧಕ್ಕೆ ಬೇಕಾಗುವ ಶೇಕಡಾ ೬೫ ರಷ್ಟು ಸರಕು ಸೈನ್ಯಗಳು ಸರಬರಾಯಿ ಮಾಡಲ್ಪಡುತ್ತವೆ. 'ಇಷ್ಟು ಯುದ್ಧ ಸಾಮಾಗ್ರಿಗಳನ್ನು ರವಾನಿಸಲ್ಪಡುವ ಈ ನಗರವು ವಿಶ್ವ ಭದ್ರತಾ ಸಮ್ಮೇಳನ ಪ್ರತಿನಿಧಿಗಳಿಗೆ ಸೌಕರ್ಯ ಕೊಡಲಾಪದೆ?' ಎಂದು ಓರ್ವ ಅಲ್ಲಿನ ಚಿಕ್ಕ ವ್ಯಾಪಾರಸ್ಥನೆಂದ.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

AMRUTANJAN DEPOTS VELLORE BOMBAY MADRAS CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್‌ನ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 11—5—1945 [ಸಂಚಿಕೆ 19]

ನಾಜೀಗಳ ಅವತಾರ ಮುಗಿಯಿತು

ಜರ್ಮನ್ ಜನಾಂಗದ ಅಧಿದೇವತೆ

ಜರ್ಮನ್ ಜನಾಂಗದ ಅಧಿ ದೇವತೆಯಂತಿದ್ದ ಆ ಹಿಟ್ಲರನು ಮಡಿದನು. ಇಂದಿನ ಈ ಭೀಕರ ಮಾನವ ಹತ್ಯಾಕಾಂಡಕ್ಕೆ ಕಾರಣಭೂತರಾದ ನಾಜೀಗಳು ಪರಾನ್ಮುಖರಾದರು. ಅವರೊಂದಿಗೆ ಅವರ ವಿಶ್ವಭಕ್ಷಕ ತತ್ವವೂ ಜನಾಂಗೀಕ ವರ್ಣಶ್ರೇಷ್ಟತೆಯು ನಾಮಾಶೇಷವಾಗಲಿ.

"ಮೇ ೧ನೇ ತಾರೀಕಿನಂದು ನಾಜೀ ಫ್ಯೂರರನು ತನ್ನ ಯುದ್ಧ ನಿರ್ದೇಶಕತ್ವದ ಕರ್ತವ್ಯವನ್ನು ಸಾಗಿಸುತ್ತಾ ಮಧ್ಯಾಹ್ನದ ಹೊತ್ತಿಗೆ ಹತನಾದನು". ಆತ್ಮಹತ್ಯವೆಂದು ಕೆಲವರೂ, ರೋಗಿಷ್ಟನಾಗಿದ್ದುದರಿಂದ ಅತಿ ರಕ್ತಪ್ರವಾಹ ದೆಸೆಯಿಂದೆಂದು ಮತ್ತೆ ಕೆಲವರೂ ಅನ್ನುತ್ತಿರುವರು.

ಮತ್ತೆ ರಷ್ಯನರನ್ನು ಕೇಳಿದರೆ 'ಹಿಟ್ಲರ್ ಪಿಶಾಚಿಯು ನೆಲದಡಿಯಲ್ಲೆಲ್ಲೋ ಅಡಗಿರುವನು' ಎಂದು ಹೇಳುತಿದ್ದಾರೆ. ಅವರಿಗೆ ಪ್ರತ್ಯಕ್ಷ ನಿದರ್ಶನವಾಗಿ ಅವನ ಹೆಣವು ಇನ್ನೂ ಸಿಗಲಿಲ್ಲ.. ಒಂದುವೇಳೆ ತುಂಡು ಮೀಸೆಯವನೊಬ್ಬ ಜರ್ಮನನ ಶವವು ದೊರಕಿದರೆ ಅದು ಹಿಟ್ಲರನಿರಬಹುದೆ? ಆ ಮಾಯಾವಿಯು ತನ್ನಂತಹ ಹತ್ತಿಪ್ಪತ್ತು ಜನರನ್ನು ಇಟ್ಟುಕೊಂಡಿದ್ದನಂತೆ.

ಹಿಟ್ಲರ್ ಪ್ರಭಾವ

ಒಟ್ಟಿನಲ್ಲಿ ಹಿಟ್ಲರನೆಂದರೆ ಯುದ್ಧಾಕಾಂಕ್ಷಿ ಜರ್ಮನರಿಗೆ ಒಂದು ಸ್ಫೂರ್ತಿ ಸಂಕೇತವಷ್ಟೇ ಆಗಿತ್ತು. ಯಾವನಾದರೊಬ್ಬನು ರೇಡಿಯೋದಲ್ಲಿ ಉನ್ನತ ಧಾಟಿಯಲ್ಲಿ ಆವೇಶಭರದಿಂದ ಬೊಬ್ಬಿಟ್ಟರೆ ಅದೇ ಹಿಟ್ಲರ್ ದೈವದ ಆಕಾಶವಾಣಿಯೆಂದೆನಿಸುತಿತ್ತು. ಅದೇ ದೈವಸಂಭೂತನ ಅಶರೀರವಾಣಿಯಾಗುತಿತ್ತು - ವಿಶ್ವಾಸಭರಿತ ಜರ್ಮನರಿಗೆ.

ತನ್ನ ಅಂತ್ಯ ಸಮೀಪಿಸುತ್ತಲೇ ಹಿಟ್ಲರನು ಉತ್ತರಾಧಿಕಾರಿಯಾಗಿ ನೌಕಾಧಿಪತಿ ಡೊನಿಟ್ಜನನ್ನು ಸರ್ವಾಧಿಕಾರಿಯಾಗಿ ನೇಮಿಸಿದನು. ಹಾಗಾದರೆ ಪರಮ ಆಪ್ತನಾದ ಆ ಹಿಮ್ಲರನ ಸಮಾಚಾರವೇನು? ಸಾಯುವಾಗ ನಾಜೀ ನಾಯಕನು ತನ್ನ ಪ್ರಿಯ ಜನಾಂಗಕ್ಕೆ ಒಂದು ಸಂದೇಶವನ್ನು ಏಕೆ ಕೊಡಲು ಮರೆತನು?

ಹೊಸ ಸರ್ವಾಧಿಕಾರಿ

ಡೊನಿಡ್ಜನು ಪಟ್ಟಕ್ಕೆ ಬಂದೊಡನೆ ಹಾಡಿದ ರಾಗವೇ ಬೇರೆ. 'ಜರ್ಮನ್ ಜನಾಂಗವನ್ನು ಬೊಲ್ಶೆವಿಕರ (ರಷ್ಯನರ) ಬಾಯಿಯಿಂದ ತಪ್ಪಿಸುವುದೇ ನನ್ನ ಮೊದಲ ಕರ್ತವ್ಯ; ಇದಕ್ಕಾಗಿಯೇ ಹೋರಾಟವು ಮುಂದರಿಸಲ್ಪಡುವುದು.'

ಮೂರು ಜನ ಸಂಘಟಿತ ಮಿತ್ರರಲ್ಲಿ ಇರ್ವರನ್ನು ಬಿಟ್ಟು ಮೂರನೇಯವನೊಬ್ಬನೊಡನೆ ಮಾತ್ರ ಕಾದಾಡುವುದೆಂದರೆ ಅರ್ಥವೇನು? ಬ್ರಿಟಿಷ್ ಅಮೇರಿಕನರು ಇದಕ್ಕೆ ಹೇಗೆ ಒಪ್ಪುವರು? ಆದರೂ ಮಿತ್ರರ ಶಿಬಿರದೊಳಗೆ ಕೊನೆಯ ಅವಧಿಯಲ್ಲಾದರೂ ಬಿಕ್ಕಟ್ಟುಂಟುಮಾಡಲು ಚತುರ ನಾಜಿಗಳು ಪ್ರಯತ್ನ ಮಾಡಿದ ಒಂದು ಉಪಾಯವಿದೆಂದು ಯಾರೂ ತಿಳಿಯದಿರಲಿಲ್ಲ. ಕಡೆಗಂತೂ ಅಂತ್ಯವು ಸಮೀಪಿಸಿತು. ಸುಳ್ಳು ನೆವಗಳಿಗೂ ಪೊಳ್ಳು ಬೆದರಿಕೆಗಳಿಗೂ ತ್ರಿಮೂರ್ತಿ ರಾಷ್ಟ್ರದ ಸೇನೆಗಳು ಸೊಪ್ಪುಹಾಕುವರೆ?

ವಿಜಯಾಚರಣೆ

ಯುರೋಪಿನ ಮಟ್ಟಿಗೆ ವಿಜಯವು ಉಂಟಾದೊಡನೆ ಕಾರ್ಯವು ಕೊನೆಗಂಡಂತಿಲ್ಲ. ಪಶ್ಚಿಮದಲ್ಲಾದಂತೆ ಇನ್ನು ಪೂರ್ವದಲ್ಲಿ ಭಯಂಕರ ಹೋರಾಟವು ಕಾದುನಿಂತಿದೆ. ನಾಜೀ ತತ್ವದ ಸಹೋದರ ತತ್ವವಾದ ಫೆಸಿಜಂ ತತ್ವಾನುಯಾಯಿಯಾದ ಜಪಾನನ್ನು ಮುರಿಯಬೇಕು.

ಲಂಡನಿನಲ್ಲಿ ಆಗಲೇ ವಿಜಯೋತ್ಸವವು ಬಹು ಸಂಭ್ರಮದಿಂದ ಜರಗಿತು. ಸ್ವಾತಂತ್ರ್ಯಪ್ರಿಯ ಎಲ್ಲಾ ದೇಶಗಳಲ್ಲೂ ಅದು ಆಚರಿಸಲ್ಪಡುವುದು. ಆದರೆ ಈ ಸಂತೋಷ ಕಾಲದಲ್ಲಿ ಮಿತ್ರರು ತಾವು ಪ್ರತಿಜ್ಞಾಬದ್ಧರಾದ ಮಾನವಸ್ವಾತಂತ್ರ್ಯದ ಉನ್ನತ ಧ್ಯೇಯಗಳನ್ನು ಮರೆಯದಿರಲಿ ಎಂದು ದೇಶದ ಅನೇಕ ಪತ್ರಿಕೆಗಳು ಗಂಭೀರ ವಾಣಿಯಿಂದ ಸಾರುತ್ತಿವೆ.

'ಈ ಮಹಾ ಯಾಗದೊಳಗೆ ಸುರಿಯಲ್ಪಟ್ಟ ಮಿಲಿಯಾಂತರ ತರುಣ ದೇಹಗಳ ರಕ್ತ ಬಲಿದಾನಗಳು ನಿರರ್ಥಕವಾಗದಿರಲಿ. ಜಗತ್ತು ಪ್ರಜಾಪ್ರಭುತ್ವಕ್ಕೆ ಭದ್ರವಾಗಲಿ.' ಆಗಲೇ ಫ್ರಿಸ್ಕೊದಲ್ಲಿ ಉಂಟಾದ ತಿಕ್ಕಾಟವು ಅಷ್ಟಕ್ಕೇನೇ ಕೊನೆಗೊಂಡು ಚಿರಶಾಂತಿಯಾಗಿ ಬಾಳಲೆಂದು ಮಾನವ ಕೋಟಿಯು ಆಶಿಸುವುದು.

ಸೇನ್‌ಫ್ರೆನ್ಸಿಸ್‌ಕೋ-ಮುಂದಿನ ಕಲಹಕೇಂದ್ರ

ಶಾಂತಿ ಯುದ್ಧಗಳ ಪರಿಷತ್ತು ಸ್ಥಾನ

ಇಂದು ನೆಲ, ಜಲ, ಆಕಾಶ ಮಾರ್ಗಗಳಿಂದ ಬಿಡುವಿಲ್ಲದೆ ವಾಹನಗಳು ಪ್ರೇಕ್ಷಕರನ್ನು ಉತ್ತರ ಅಮೇರಿಕದ ಪಶ್ಚಿಮ ಕರಾವಳಿಯ ಈ ಪ್ರಖ್ಯಾತ ನಗರಕ್ಕೆ ತಂದು ತುಂಬುತ್ತಿವೆ. ಪ್ರತಿಯೊಂದು ಜನಾಂಗದ ವಿಮಾನಗಳನ್ನು ಅಲ್ಲಿನ ನಿಲ್ದಾಣದಲ್ಲಿ ನೋಡಬಹುದು. ಅವಿಶ್ರಾಂತವಾಗಿ ಬರುವ ಹೋಗುವ, ಹಾರುವ ಈ ರೆಕ್ಕೆ ಯಂತ್ರಗಳ ಚಟುವಟಿಕೆಗಳನ್ನು ನೋಡುವಾಗ ಜೇನು ನೊಣದ ಗೂಡಿನ ಭಾವನೆಯುಂಟಾಗುತ್ತದೆ.

ಇನ್ನು ಯಾರಾದರೂ ಅನಿರೀಕ್ಷಿತವಾಗಿ ಫ್ರಿಸ್ಕೊಗೆ ಹೋದರೆ ಸಂಕಷ್ಟದಲ್ಲೇ ಬೀಳಬೇಕಾಗುತ್ತದೆ. ಅಲ್ಲಿನ ಒಂದು ಮನೆ, ಹೋಟೇಲು, ಇಲ್ಲವೆ ವಿಶ್ರಾಂತಿ ಗೃಹದಲ್ಲಾದರೂ ನಿದ್ರಿಸಲು ಒಂದು ಮಂಚವೂ ಸಿಗಲಿಕ್ಕಿಲ್ಲ. ಒಂದು ಪಡಿ ಹೆಚ್ಚಿನ ರೇಶನೂ ದೊರೆಯಲಾರದು.

ಸುಮಾರು ೪೬ ಜನಾಂಗಗಳ ೨೦೦ ಪ್ರತಿನಿಧಿಗಳೂ, ಅವರ ೯೦೦ ಕಾರಕೂನರೂ ಸಹಾಯಕರೂ, ೩೦೦ ಪರಿಷತ್ಕಾರ್ಯಾಲಯದ ಗುಮಾಸ್ತರೂ, ಮತ್ತು ೧೨೦೦ ಪತ್ರಿಕಾ ಪ್ರತಿನಿಧಿಗಳೂ ಅಮೇರಿಕನ್ ಸರಕಾರದ ವಿಶೇಷ ಅತಿಥಿಗಳಾಗಿದ್ದಾರೆ.

ಇಂದು ಆ ನಗರವು ಯಾವ ಜನಾಂಗಕ್ಕೆ ಸೇರಿದ್ದೆಂದು ಹೇಳಬರುವುದಿಲ್ಲ. ಪ್ರತಿಯೊಂದು ಜನಾಂಗದ ರಾಜತಂತ್ರ ನಿಪುಣರೂ, ಗುಪ್ತ ಪೋಲಿಸರೂ, ವಕೀಲರೂ ಸಲಹೆಗಾರರೂ ನಗರವನ್ನು ಮುತ್ತಿದ್ದಾರೆ.

ಪರಿಷತ್ತು ಭವನದ ಸುತ್ತಲೂ, ಸಾವಿರಾರು ವರ್ತಮಾನ ವರದಿಗಾರರೂ, ಚಲಚಿತ್ರ, ಛಾಯಾಚಿತ್ರಗ್ರಾಹಕರೂ, ಪತ್ರಿಕೆ ಮಾರುವ ಹುಡುಗರೂ, ಇತರ ಪ್ರೇಕ್ಷಕರೂ, ಚಿಲ್ಲರೆ ವ್ಯಾಪಾರಿಗಳೂ ಕಿಕ್ಕಿರಿಯುತ್ತಾರೆ.

ಅಧಿವೇಶನದ ವರ್ತಮಾನವನ್ನು ಗಂಟೆ ಗಂಟೆಗೂ ದೊಡ್ಡ ಶಿರೋನಾಮದಲ್ಲಿ ಪ್ರಕಟಿಸುವ ಪತ್ರಿಕೆಗಳು ಪ್ರತಿಯೊಬ್ಬರ ಕೈಯಲ್ಲಿ ಕಾಣಬಹುದು. ಸಿನೇಮಾ, ನಾಟಕ, ನಾಟ್ಯ, ಸಂಗೀತ ಮಂದಿರಗಳು ಸಾಯಂಕಾಲದ ಹೊತ್ತಿಗೆ ಅಳತೆ ಮೀರಿ ತುಂಬುತ್ತವೆ.

ಅಮೇರಿಕನ್ ಪೋಲಿಸರು ಡಿಟೆಕ್ಟೀವರುಗಳೂ ಕಿಸೆಕಳ್ಳರ ಮತ್ತು ಸಂದರ್ಭ ಕಾಯುವ ಚಾಣಾಕ್ಷ ದರೋಡೆಖೋರರ ಮೇಲೆ ಕಣ್ಣಿಟ್ಟು ರಾತ್ರೆ ಹಗಲು ಕಾವಲಿದ್ದಾರೆ ಸರಕಾರ ರೇಶನ್ ಆಹಾರ ವಸ್ತುಗಳನ್ನು ತರುವ ಲೋರಿಗಳು ಸಾಲುಸಾಲಾಗಿ ಪ್ರತ್ಯೇಕ ಮಾರ್ಗಗಳಿಂದ ಆಹಾರ ಸಂಗ್ರಹಾಲಯಕ್ಕೆ ಬರುತ್ತಿವೆ.

ಸಾವಿರಾರು ಅಮೇರಿಕನ್ ಬಾಲಕ ಬಾಲಕಿಯರು ಪ್ರಸಿದ್ಧ ವ್ಯಕ್ತಿಗಳ 'ದಸ್ಕತ್ತು' (ಒಟೊಗ್ರಾಫ್) ಪಡೆಯಲು ಊಟ ತಿಂಡಿಯಿಲ್ಲದೆ ಬೇಟೆ ನಡೆಸುತಿದ್ದಾರೆ. ಅನೇಕರು ಬೇರೆ ಬೇರೆ ದೇಶದ ಪ್ರತಿನಿಧಿಗಳು ತಮ್ಮೊಡನೆ ತಂದ ಅವರ ದೇಶದ ನಾಣ್ಯಗಳನ್ನು ಸಂಗ್ರಹಿಸಲು ಪ್ರಯತ್ನಪಡುತ್ತಾರೆ.

ಪರಿಷತ್ತಿನ ವ್ಯವಹಾರ ಭಾಷೆ ಇಂಗ್ಲಿಷ್ ಎಂದು ಒಪ್ಪಲಾಗಿದೆ. ನಾಣ್ಯ ಚಲಾವಣೆಗೆ ಅಮೇರಿಕನ್ ಡೊಲ್ಲರ್, ಆದರೂ ಫ್ರೆಂಚರ ಫ್ರೆಂಕುಗಳೂ ರಷ್ಯದ ರೂಬೆಲ್ಲುಗಳೂ ಅಲ್ಲಿ ಹೇರಳವಾಗಿ ಬದಲಾವಣೆಗೆ ಸಿಗುತ್ತಿವೆ.

ಮಾರ್ಗದಲ್ಲಿ ಹತ್ತೈವತ್ತು ನಮೂನೆಯ ಭಾಷೆಗಳು ಕೇಳಿಬರುತ್ತವೆ. ನಿಗ್ರೋ ಚೀನಿ ಭಾಷೆಗಳಿಂದ ಹಿಡಿದು, ಹಿಂದೀ ಉರ್ದು, ಟಮಿಳು ಭಾಷೆಗಳೂ, ಸ್ಪೆನಿಶ್ ಪೋರ್ತುಗೀಸ್, ಮತ್ತು ಇತರ ಲೆಟಿನ್ ಮಾತುಕತೆಗಳೂ ಕಿವಿಯನ್ನು ಕುಕ್ಕುತ್ತವೆ.

ರೂಸ್‌ವೆಲ್ಟರು ಫ್ರಿಸ್ಕೊವನ್ನೇ ಏಕೆ ಶಾಂತಿ ಪರಿಷತ್ತಿನ ಕೇಂದ್ರವನ್ನಾಗಿ ಚುನಾಯಿಸಿದರು? ಅದು ಹಿಂದಿನಿಂದಲೂ ಹಲವು ಜನಾಂಗಿಕರ ಮಿಶ್ರನಗರ. ಆಹಾರ ಮತ್ತಿತರ ಸೌಕರ್ಯಗಳು ಫ್ರಿಸ್ಕೊದಲ್ಲಿ ಇತರ ನಗರಗಳಿಗಿಂತ ಅನುಕೂಲವಾಗಿವೆ. ಮುಂದೆ ಜಪಾನಿನ ಮೇಲೆ ಕೊನೆಯ ಯುದ್ಧವನ್ನು ನಿರ್ದೇಶಿಸಲು ಇದರಷ್ಟು ಅನುಕೂಲವಾದ ಕರಾವಳಿ ನಗರವಿಲ್ಲ. ಇಲ್ಲಿಂದಲೇ ಜಪಾನು ಯುದ್ಧಕ್ಕೆ ಬೇಕಾಗುವ ಶೇಕಡಾ ೬೫ ರಷ್ಟು ಸರಕು ಸೈನ್ಯಗಳು ಸರಬರಾಯಿ ಮಾಡಲ್ಪಡುತ್ತವೆ. 'ಇಷ್ಟು ಯುದ್ಧ ಸಾಮಾಗ್ರಿಗಳನ್ನು ರವಾನಿಸಲ್ಪಡುವ ಈ ನಗರವು ವಿಶ್ವ ಭದ್ರತಾ ಸಮ್ಮೇಳನ ಪ್ರತಿನಿಧಿಗಳಿಗೆ ಸೌಕರ್ಯ ಕೊಡಲಾಪದೆ?' ಎಂದು ಓರ್ವ ಅಲ್ಲಿನ ಚಿಕ್ಕ ವ್ಯಾಪಾರಸ್ಥನೆಂದ.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವೃಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 11—5—1945 [ಸಂಚಿಕೆ 19]

ನಾಜೀಗಳ ಅವತಾರ ಮುಗಿಯಿತು

ಜರ್ಮನ್ ಜನಾಂಗದ ಅಧಿದೇವತೆ

ಜರ್ಮನ್ ಜನಾಂಗದ ಅಧಿ ದೇವತೆಯಂತಿದ್ದ ಆ ಹಿಟ್ಲರನು ಮಡಿದನು. ಇಂದಿನ ಈ ಭೀಕರ ಮಾನವ ಹತ್ಯಾಕಾಂಡಕ್ಕೆ ಕಾರಣಭೂತರಾದ ನಾಜೀಗಳು ಪರಾನ್ಮುಖರಾದರು. ಅವರೊಂದಿಗೆ ಅವರ ವಿಶ್ವಭಕ್ಷಕ ತತ್ವವೂ ಜನಾಂಗೀಕ ವರ್ಣಶ್ರೇಷ್ಟತೆಯು ನಾಮಾಶೇಷವಾಗಲಿ.

"ಮೇ ೧ನೇ ತಾರೀಕಿನಂದು ನಾಜೀ ಫ್ಯೂರರನು ತನ್ನ ಯುದ್ಧ ನಿರ್ದೇಶಕತ್ವದ ಕರ್ತವ್ಯವನ್ನು ಸಾಗಿಸುತ್ತಾ ಮಧ್ಯಾಹ್ನದ ಹೊತ್ತಿಗೆ ಹತನಾದನು''-ಆತ್ಮಹತ್ಯವೆಂದು ಕೆಲವರೂ, ರೋಗಿಷ್ಟನಾಗಿದ್ದುದರಿಂದ ಅತಿ ರಕ್ತಪ್ರವಾಹ ದೆಸೆಯಿಂದೆಂದು ಮತ್ತೆ ಕೆಲವರೂ ಅನ್ನುತ್ತಿರುವರು.

ಮತ್ತೆ ರಷ್ಯನರನ್ನು ಕೇಳಿದರೆ 'ಹಿಟ್ಲರ್ ಪಿಶಾಚಿಯು ನೆಲದಡಿಯಲ್ಲೆಲ್ಲೊ ಅಡಗಿರುವನು' ಎಂದು ಹೇಳುತಿದ್ದಾರೆ. ಅವರಿಗೆ ಪ್ರತ್ಯಕ್ಷ ನಿದರ್ಶನವಾಗಿ ಅವನ ಹೆಣವು ಇನ್ನೂ ಸಿಗಲಿಲ್ಲ.. ಒಂದುವೇಳೆ ತುಂಡು ಮೀಸೆಯವನೊಬ್ಬ ಜರ್ಮನನ ಶವವು ದೊರಕಿದರೆ ಅದು ಹಿಟ್ಲರನಿರಬಹುದೆ? ಆ ಮಾಯಾವಿಯು ತನ್ನಂತಹ ಹತ್ತಿಪ್ಪತ್ತು ಜನರನ್ನು ಇಟ್ಟುಕೊಂಡಿದ್ದನಂತೆ.

ಹಿಟ್ಲರ್ ಪ್ರಭಾವ

ಒಟ್ಟಿನಲ್ಲಿ ಹಿಟ್ಲರನೆಂದರೆ ಯುದ್ಧಾಕಾಂಕ್ಷಿ ಜರ್ಮನರಿಗೆ ಒಂದು ಸ್ಫೂರ್ತಿ ಸಂಕೇತವಷ್ಟೇ ಆಗಿತ್ತು. ಯಾವನಾದರೊಬ್ಬನು ರೇಡಿಯೋದಲ್ಲಿ ಉನ್ನತ ಧಾಟಿಯಲ್ಲಿ ಆವೇಶಭರದಿಂದ ಬೊಬ್ಬಿಟ್ಟರೆ ಅದೇ ಹಿಟ್ಲರ್ ದೈವದ ಆಕಾಶವಾಣಿಯೆಂದೆನಿಸುತಿತ್ತು. ಅದೇ ದೈವಸಂಭೂತನ ಅಶರೀರವಾಣಿಯಾಗುತಿತ್ತು - ವಿಶ್ವಾಸಭರಿತ ಜರ್ಮನರಿಗೆ.

ತನ್ನ ಅಂತ್ಯ ಸಮೀಪಿಸುತ್ತಲೇ ಹಿಟ್ಲರನು ಉತ್ತರಾಧಿಕಾರಿಯಾಗಿ ನೌಕಾಧಿಪತಿ ಡೊನಿಟ್ಜನನ್ನು ಸರ್ವಾಧಿಕಾರಿಯಾಗಿ ನೇಮಿಸಿದನು. ಹಾಗಾದರೆ ಪರಮ ಆಪ್ತನಾದ ಆ ಹಿಮ್ಲರನ ಸಮಾಚಾರವೇನು? ಸಾಯುವಾಗ ನಾಜೀ ನಾಯಕನು ತನ್ನ ಪ್ರಿಯ ಜನಾಂಗಕ್ಕೆ ಒಂದು ಸಂದೇಶವನ್ನು ಏಕೆ ಕೊಡಲು ಮರೆತನು?

ಹೊಸ ಸರ್ವಾಧಿಕಾರಿ

ಡೊನಿಡ್ಜನು ಪಟ್ಟಕ್ಕೆ ಬಂದೊಡನೆ ಹಾಡಿದ ರಾಗವೇ ಬೇರೆ. 'ಜರ್ಮನ್ ಜನಾಂಗವನ್ನು ಬೊಲ್ಶೆವಿಕರ (ರಷ್ಯನರ) ಬಾಯಿಯಿಂದ ತಪ್ಪಿಸುವುದೇ ನನ್ನ ಮೊದಲ ಕರ್ತವ್ಯ; ಇದಕ್ಕಾಗಿಯೇ ಹೋರಾಟವು ಮುಂದರಿಸಲ್ಪಡುವುದು.'

ಮೂರು ಜನ ಸಂಘಟಿತ ಮಿತ್ರರಲ್ಲಿ ಇರ್ವರನ್ನು ಬಿಟ್ಟು ಮೂರನೇಯವನೊಬ್ಬನೊಡನೆ ಮಾತ್ರ ಕಾದಾಡುವುದೆಂದರೆ ಅರ್ಥವೇನು? ಬ್ರಿಟಿಷ್ ಅಮೇರಿಕನರು ಇದಕ್ಕೆ ಹೇಗೆ ಒಪ್ಪುವರು? ಆದರೂ ಮಿತ್ರರ ಶಿಬಿರದೊಳಗೆ ಕೊನೆಯ ಅವಧಿಯಲ್ಲಾದರೂ ಬಿಕ್ಕಟ್ಟುಂಟುಮಾಡಲು ಚತುರ ನಾಜಿಗಳು ಪ್ರಯತ್ನ ಮಾಡಿದ ಒಂದು ಉಪಾಯವಿದೆಂದು ಯಾರೂ ತಿಳಿಯದಿರಲಿಲ್ಲ. ಕಡೆಗಂತೂ ಅಂತ್ಯವು ಸಮೀಪಿಸಿತು. ಸುಳ್ಳು ನೆವಗಳಿಗೂ ಪೊಳ್ಳು ಬೆದರಿಕೆಗಳಿಗೂ ತ್ರಿಮೂರ್ತಿ ರಾಷ್ಟ್ರದ ಸೇನೆಗಳು ಸೊಪ್ಪುಹಾಕುವರೆ?

ವಿಜಯಾಚರಣೆ

ಯುರೋಪಿನ ಮಟ್ಟಿಗೆ ವಿಜಯವು ಉಂಟಾದೊಡನೆ ಕಾರ್ಯವು ಕೊನೆಗಂಡಂತಿಲ್ಲ. ಪಶ್ಚಿಮದಲ್ಲಾದಂತೆ ಇನ್ನು ಪೂರ್ವದಲ್ಲಿ ಭಯಂಕರ ಹೋರಾಟವು ಕಾದುನಿಂತಿದೆ. ನಾಜೀ ತತ್ವದ ಸಹೋದರ ತತ್ವವಾದ ಫೆಸಿಜಂ ತತ್ವಾನುಯಾಯಿಯಾದ ಜಪಾನನ್ನು ಮುರಿಯಬೇಕು.

ಲಂಡನಿನಲ್ಲಿ ಆಗಲೇ ವಿಜಯೋತ್ಸವವು ಬಹು ಸಂಭ್ರಮದಿಂದ ಜರಗಿತು. ಸ್ವಾತಂತ್ರ್ಯಪ್ರಿಯ ಎಲ್ಲಾ ದೇಶಗಳಲ್ಲೂ ಅದು ಆಚರಿಸಲ್ಪಡುವುದು. ಆದರೆ ಈ ಸಂತೋಷ ಕಾಲದಲ್ಲಿ ಮಿತ್ರರು ತಾವು ಪ್ರತಿಜ್ಞಾಬದ್ಧರಾದ ಮಾನವಸ್ವಾತಂತ್ರ್ಯದ ಉನ್ನತ ಧ್ಯೇಯಗಳನ್ನು ಮರೆಯದಿರಲಿ ಎಂದು ದೇಶದ ಅನೇಕ ಪತ್ರಿಕೆಗಳು ಗಂಭೀರ ವಾಣಿಯಿಂದ ಸಾರುತ್ತಿವೆ.

'ಈ ಮಹಾ ಯಾಗದೊಳಗೆ ಸುರಿಯಲ್ಪಟ್ಟ ಮಿಲಿಯಾಂತರ ತರುಣ ದೇಹಗಳ ರಕ್ತ, ಬಲಿದಾನಗಳು ನಿರರ್ಥಕವಾಗದಿರಲಿ. ಜಗತ್ತು ಪ್ರಜಾಪ್ರಭುತ್ವಕ್ಕೆ ಭದ್ರವಾಗಲಿ.' ಆಗಲೇ ಫ್ರಿಸ್ಕೊದಲ್ಲಿ ಉಂಟಾದ ತಿಕ್ಕಾಟವು ಅಷ್ಟಕ್ಕೇನೇ ಕೊನೆಗೊಂಡು ಚಿರಶಾಂತಿಯಾಗಿ ಬಾಳಲೆಂದು ಮಾನವ ಕೋಟಿಯು ಆಶಿಸುವುದು.

ಸೇನ್ ಫ್ರೆನ್ಸಿಸ್ ಕೊ-ಮುಂದಿನ ಕಲಹಕೇಂದ್ರ

ಶಾಂತಿ ಯುದ್ಧಗಳ ಪರಿಷತ್ತು ಸ್ಥಾನ

ಇಂದು ನೆಲ, ಜಲ, ಆಕಾಶ ಮಾರ್ಗಗಳಿಂದ ಬಿಡುವಿಲ್ಲದೆ ವಾಹನಗಳು ಪ್ರೇಕ್ಷಕರನ್ನು ಉತ್ತರ ಅಮೇರಿಕದ ಪಶ್ಚಿಮ ಕರಾವಳಿಯ ಈ ಪ್ರಖ್ಯಾತ ನಗರಕ್ಕೆ ತಂದು ತುಂಬತ್ತಿವೆ. ಪ್ರತಿಯೊಂದು ಜನಾಂಗದ ವಿಮಾನಗಳನ್ನು ಅಲ್ಲಿನ ನಿಲ್ದಾಣದಲ್ಲಿ ನೋಡಬಹುದು. ಅವಿಶ್ರಾಂತವಾಗಿ ಬರುವ ಹೋಗುವ, ಹಾರುವ ಈ ರೆಕ್ಕೆ ಯಂತ್ರಗಳ ಚಟುವಟಿಕೆಗಳನ್ನು ನೋಡುವಾಗ ಜೇನು ನೊಣದ ಗೂಡಿನ ಭಾವನೆಯುಂಟಾಗುತ್ತದೆ.

ಇನ್ನು ಯಾರಾದರೂ ಅನಿರೀಕ್ಷಿತವಾಗಿ ಫ್ರಿಸ್ಕೊಗೆ ಹೋದರೆ ಸಂಕಷ್ಟದಲ್ಲೇ ಬೀಳಬೇಕಾಗುತ್ತದೆ. ಅಲ್ಲಿನ ಒಂದು ಮನೆ, ಹೋಟೇಲು, ಇಲ್ಲವೆ ವಿಶ್ರಾಂತಿ ಗೃಹದಲ್ಲಾದರೂ ನಿದ್ರಿಸಲು ಒಂದು ಮಂಚವೂ ಸಿಗಲಿಕ್ಕಿಲ್ಲ. ಒಂದು ಪಡಿ ಹೆಚ್ಚಿನ ರೇಶನೂ ದೊರೆಯಲಾರದು.

ಸುಮಾರು ೪೬ ಜನಾಂಗಗಳ ೨೦೦ ಪ್ರತಿನಿಧಿಗಳೂ, ಅವರ ೯೦೦ ಕಾರಕೂನರೂ ಸಹಾಯಕರೂ, ೩೦೦ ಪರಿಷತ್ತ್ಮಂದಿರದ ಗುಮಾಸ್ತರೂ, ಮತ್ತು ೧೨೦೦ ಪತ್ರಿಕಾ ಪ್ರತಿನಧಿಗಳೂ ಅಮೇರಿಕನ್ ಸರಕಾರದ ವಿಶೇಷ ಅತಿಥಿಗಳಾಗಿದ್ದಾರೆ.

ಇಂದು ಆ ನಗರವು ಯಾವ ಜನಾಂಗಕ್ಕೆ ಸೇರಿದ್ದೆಂದು ಹೇಳಬರುವುದಿಲ್ಲ. ಪ್ರತಿಯೊಂದು ಜನಾಂಗದ ರಾಜತಂತ್ರ ನಿಪುಣರೂ, ಗುಪ್ತ ಪೋಲಿಸರೂ, ವಕೀಲರೂ ಸಲಹೆಗಾರರೂ ನಗರವನ್ನು ಮುತ್ತಿದ್ದಾರೆ.

ಪರಿಷತ್ತು ಭವನದ ಸುತ್ತಲೂ, ಸಾವಿರಾರು ವರ್ತಮಾನ ವರದಿಗಾರರೂ, ಚಲಚಿತ್ರ, ಛಾಯಾಚಿತ್ರಗಾಹಕರೂ, ಪತ್ರಿಕೆ ಮಾರುವ ಹುಡುಗರೂ, ಇತರ ಪ್ರೇಕ್ಷಕರೂ, ಚಿಲ್ಲರೆ ವ್ಯಾಪಾರಿಗಳೂ ಕಿಕ್ಕಿರಿಯುತ್ತಾರೆ.

ಅಧಿವೇಶನದ ವರ್ತಮಾನವನ್ನು ಗಂಟೆ ಗಂಟೆಗೂ ದೊಡ್ಡ ಶಿರೋನಾಮದಲ್ಲಿ ಪ್ರಕಟಿಸುವ ಪತ್ರಿಕೆಗಳು ಪ್ರತಿಯೊಬ್ಬರ ಕೈಯಲ್ಲಿ ಕಾಣಬಹುದು. ಸಿನೇಮಾ, ನಾಟಕ, ನಾಟ್ಯ, ಸಂಗೀತ ಮಂದಿರಗಳು ಸಾಯಂಕಾಲದ ಹೊತ್ತಿಗೆ ಅಳತೆ ಮೀರಿ ತುಂಬುತ್ತವೆ.

ಅಮೇರಿಕನ್ ಪೋಲಿಸರು ಡಿಟೆಕ್ಟೀವರುಗಳೂ ಕಿಸೆಕಳ್ಳರ ಮತ್ತು ಸಂದರ್ಭ ಕಾಯುವ ಚಾಣಾಕ್ಷ ದರೋಡೆಖೋರರ ಮೇಲೆ ಕಣ್ಣಿಟ್ಟು ರಾತ್ರೆ ಹಗಲು ಕಾವಲಿದ್ದಾರೆ ಸರಕಾರ ರೇಶನ್ ಆಹಾರ ವಸ್ತುಗಳನ್ನು ತರುವ ಲೋರಿಗಳು ಸಾಲುಸಾಲಾಗಿ ಪ್ರತ್ಯೇಕ ಮಾರ್ಗಗಳಿಂದ ಆಹಾರ ಸಂಗ್ರಹಾಲಯಕ್ಕೆ ಬರುತ್ತಿವೆ.

ಸಾವಿರಾರು ಅಮೇರಿಕನ್ ಬಾಲಕ ಬಾಲಕಿಯರು ಪ್ರಸಿದ್ಧ ವ್ಯಕ್ತಿಗಳ 'ದಸ್ಕತ್ತು' (ಒಟೊಗ್ರಾಫ್) ಪಡೆಯಲು ಊಟ ತಿಂಡಿಯಿಲ್ಲದೆ ಬೇಟೆ ನಡೆಸುತಿದ್ದಾರೆ. ಅನೇಕರು ಬೇರೆ ಬೇರೆ ದೇಶದ ಪ್ರತಿನಿಧಿಗಳು ತಮ್ಮೊಡನೆ ತಂದ ಅವರ ದೇಶದ ನಾಣ್ಯಗಳನ್ನು ಸಂಗ್ರಹಿಸಲು ಪ್ರಯತ್ನಪಡುತ್ತಾರೆ.

ಪರಿಷತ್ತಿನ ವ್ಯವಹಾರ ಭಾಷೆ ಇಂಗ್ಲಿಷ್ ಎಂದು ಒಪ್ಪಲಾಗಿದೆ. ನಾಣ್ಯ ಚಲಾವಣೆಗೆ ಅಮೇರಿಕನ್ ಡೊಲ್ಲರ್, ಆದರೂ ಫ್ರೆಂಚರ ಫ್ರೆಂಕುಗಳೂ ರಷ್ಯದ ರೂಬೆಲ್ಲುಗಳೂ ಅಲ್ಲಿ ಹೇರಳವಾಗಿ ಬದಲಾವಣೆಗೆ ಸಿಗುತ್ತಿವೆ.

ಮಾರ್ಗದಲ್ಲಿ ಹತ್ತೈವತ್ತು ನಮೂನೆಯ ಭಾಷೆಗಳು ಕೇಳಿಬರುತ್ತವೆ. ನಿಗ್ರೋ ಚೀನಿ ಭಾಷೆಗಳಿಂದ ಹಿಡಿದು, ಹಿಂದೀ ಉರ್ದು, ಟಮಿಳು ಭಾಷೆಗಳೂ, ಸ್ಪೆನಿಶ್ ಪೋರ್ತುಗೀಸ್, ಮತ್ತು ಇತರ ಲೆಟಿನ್ ಮಾತುಕತೆಗಳೂ ಕಿವಿಯನ್ನು ಕುಕ್ಕುತ್ತವೆ.

ರೂಸ್‌ವೆಲ್ಟರು ಫ್ರಿಸ್ಕೊವನ್ನೇ ಏಕೆ ಶಾಂತಿ ಪರಿಷತ್ತಿನ ಕೇಂದ್ರವನ್ನಾಗಿ ಚುನಾಯಿಸಿದರು? ಅದು ಹಿಂದಿನಿಂದಲೂ ಹಲವು ಜನಾಂಗಿಕರ ಮಿಶ್ರನಗರ. ಆಹಾರ ಮತ್ತಿತರ ಸೌಕರ್ಯಗಳು ಫ್ರಿಸ್ಕೊದಲ್ಲಿ ಇತರ ನಗರಗಳಿಗಿಂತ ಅನುಕೂಲವಾಗಿವೆ. ಮುಂದೆ ಜಪಾನಿನ ಮೇಲೆ ಕೊನೆಯ ಯುದ್ಧವನ್ನು ನಿರ್ದೇಶಿಸಲು ಇದರಷ್ಟು ಅನುಕೂಲವಾದ ಕರಾವಳಿ ನಗರವಿಲ್ಲ. ಇಲ್ಲಿಂದಲೇ ಜಪಾನು ಯುದ್ಧಕ್ಕೆ ಬೇಕಾಗುವ ಶೇಕಡಾ ೬೫ ರಷ್ಟು ಸರಕು ಸೈನ್ಯಗಳು ಸರಬರಾಯಿ ಮಾಡಲ್ಪಡುತ್ತವೆ. 'ಇಷ್ಟು ಯುದ್ಧ ಸಾಮಾಗ್ರಿಗಳನ್ನು ರವಾನಿಸಲ್ಪಡುವ ಈ ನಗರವು ವಿಶ್ವ ಭದ್ರತಾ ಸಮ್ಮೇಳನ ಪ್ರತಿನಿಧಿಗಳಿಗೆ ಸೌಕರ್ಯ ಕೊಡಲಾಪದೆ?' ಎಂದು ಓರ್ವ ಅಲ್ಲಿನ ಚಿಕ್ಕ ವ್ಯಾಪಾರಸ್ಥನೆಂದ.

ಒಂದು ಅನುದಿನದ ಕತೆ

ಬೀಳ್ಕೊಡುವಾಗ

ಬರೆದವರು:- ಬಿ. ಯಂ. ಇದಿನಬ್ಬ, ಮಂಗಳೂರು

ನಮ್ಮ ಆಪ್ತ ಗೆಳೆಯನೊಬ್ಬನು ನೌಕರಿಯ ನಿಮಿತ್ತ ಕೊಯಂಬುತ್ತೂರಿಗೆ ಹೋಗುವವನಿದ್ದ. ಅದಕ್ಕಾಗಿ ಬೇಕಾದ ಸಿದ್ಧತೆಗಳನ್ನು ಮೊದಲನೆ ದಿವಸವೇ ಮಾಡಲಾಗಿತ್ತು. ಪೆಟ್ಟಿಗೆ ಬೆಡ್ಡಿಂಗ್ ಮೊದಲಾದ ಎಲ್ಲವನ್ನೂ ಸಿದ್ಧಪಡಿಸಿ ಬೆಳಿಗ್ಗೆ ಏಳುಗಂಟೆಗೆ ಸರಿಯಾಗಿ ಕಾಫಿಯ ಸೇವೆ ತೀರಿಸಿಕೊಂಡು ರೈಲು ಆಫೀಸಿಗೆ ಹೋದುದಾಯಿತು. ನಮ್ಮ ಅಚ್ಚುಮೆಚ್ಚಿನ ನೆಚ್ಚಿನ ಗೆಳೆಯ. ಒಟ್ಟಿಗೆ ಕಲೆತು ಬೆರೆತವರು. ಪ್ರೀತಿಯಿಂದ ಹರುಷದಿಂದ ಹಿಗ್ಗಿ ಕುಣಿದವರು. ನಿಷ್ಕಳಂಕ ಮನಸ್ಸಿನಿಂದ ಒಂದೆ ತಾಯಿ ಮಕ್ಕಳಂತೆ ಆಟಕೂಟಗಳಲ್ಲಿ ಭಾಗಿಗಳಾದವರು. ಅವನೀಗ ಪರವೂರಿಗೆ ನೌಕರಿಯ ಮೇಲೆ ಹೋಗುವಾಗ ನಾವೆಲ್ಲರೂ ಅವನನ್ನು ಹಿಂಬಾಲಿಸಿ ರೈಲು ಆಫೀಸು ವರೆಗಾದರೂ ಹೋಗಲೇ ಬೇಕಿತ್ತು. ಹಾಗೆಯೇ ಎಲ್ಲರೂ ಮುಗುಳು ನಗುತ್ತಾ ಹಲವು ವಿಚಾರಗಳನ್ನು ವಿಮರ್ಶಿಸುತ್ತಾ ಅಲ್ಲಿ ಹೋಗಿದ್ದೆವು.

ರೈಲು ಸರಿಯಾಗಿ ಎಂಟುಗಂಟೆಗೆ ಹೊರಡಲಿದೆ. ನಾವು ನಮ್ಮ ಗೆಳೆಯನನ್ನು ರೈಲಿನಲ್ಲಿ ಕುಳ್ಳಿರಿಸಿ ಬಳಿಯಲ್ಲೆ ನಿಂತಿದ್ದೆವು. ಇದೇ ರೀತಿಯಾಗಿ ಎಷ್ಟೋ ಜನರು ಪ್ರಯಾಣ ಬೆಳೆಸುವವರು ಮುನ್ನುಗ್ಗಿ ಬರುತ್ತಿದ್ದರು. ತಮ್ಮ ತಮ್ಮ ಪೆಟ್ಟಿಗೆ ಟ್ರಂಕುಗಳನ್ನು ಜೋಪಾನವಾಗಿರಿಸುವುದರಲ್ಲಿ ಹಲವರು ಚಡಪಡಿಸುತ್ತಿದ್ದರು. ಕೂಲಿಯವರೊಡನೆ ಮಜೂರಿಯ ಚರ್ಚೆಯಲ್ಲಿ ಕೆಲವರು ವಾದ ಹೂಡುತ್ತಿದ್ದರು. ಟಿಕೇಟು ಪಡಕೊಂಡು ತೀವ್ರ ಬಂದು ಕುಳಿತುಕೊಳ್ಳಬೇಕೆಂದು ಇನ್ನೂ ಕೆಲವರು ತಮ್ಮ ಅವಸರವನ್ನು ವ್ಯಕ್ತಪಡಿಸುತ್ತಿದ್ದರು. ರೈಲಿನಲ್ಲಿ ಕುಳಿತುಕೊಳ್ಳುವ ಗಡಿಬಿಡಿಯಲ್ಲಿ ಕೆಲವರ ಕಾಲು ಮೆಟ್ಟಿಹೋಗಿ ಅವರು ಬೈದರೂ ಮರು ಉತ್ತರ ಕೊಡದೆ ಓಡುವವರಿಗೂ ಅಲ್ಲಿ ಕಡಿಮೆ ಇರಲಿಲ್ಲ. ಸಾಮಾಗ್ರಿಗಳನ್ನು ತರುವಾಗ ಕೈ ತಪ್ಪಿ ಬಿದ್ದುಹೋದುದನ್ನು ಹೆಕ್ಕಿ ತೊಡಕಿನಲ್ಲಿ ಸಿಲುಕುವವರೂ ಅಲ್ಲಿ ಹಲವರಿದ್ದರು. ತಮ್ಮ ಅವಸರದ ಕಾತುರತೆಯ ಎಡೆಯಲ್ಲಿ 'ಸ್ವಾಮಿ ಧರ್ಮ' ಎಂದು ಬೊಬ್ಬಿಡುವ ಭಿಕ್ಷುಕರ ಬಾಧೆಗೆ ಸೋಲುವವರೂ, ಅವರನ್ನು ಕಣ್ಣು ಕೆರಳಿಸಿ ಓಡಿಸಿಬಿಟ್ಟು ಗೆಲ್ಲುವವರೂ ಅಲ್ಲಿ ಧಾರಾಳವೇ ಇದ್ದರು. ತಮ್ಮನ್ನೆಲ್ಲಾ ಕಳಿಸಿಕೊಡಲು ಬಂದ ಗೆಳೆಯರೊಡನೆ ನಲ್ನುಡಿಗಳನ್ನಾಡಿ, ಎಲ್ಲರ ವದನಗಳನ್ನು ಪ್ರೀತಿಯಿಂದ ನೋಡಿ ಬೇದಪಡುವವರನ್ನೂ ಅಲ್ಲಿ ಕಾಣಬಹುದು.

ಗೆಳೆಯನಿಗೆ ಹಸ್ತಲಾಘವನ್ನಿತ್ತು, "ಬೇಸರಿಸಬಾರದು, ಅಗಲಬೇಕಾಗಿದೆ. ಎಲ್ಲಿದ್ದರೂ ನಮ್ಮ ಸೊಲ್ಲಿಲ್ಲ ಒಂದೇ ತಿಳಿದಿರಲಿ. ಪತ್ರಗಳನ್ನು ಆಗಾಗ ಬರೆಯುತ್ತಿರುತ್ತೇನೆ. ನನ್ನ ನಿಮ್ಮ ಪ್ರೀತಿ, ಒಲುಮೆಯ ಗುರಿ ಎಂದಿಗೂ ಅಳಿಯಲಾರದು" ಎನ್ನುವ ತಿಳಿಮನಸ್ಸಿನವರಿಗೂ ಅಲ್ಲಿ ಕಡಿಮೆಯಿರಲಿಲ್ಲ.

ಇನ್ನು ಇಪ್ಪತ್ತು ನಿಮಿಷಗಳಲ್ಲಿ ರೈಲು ಹೊರಡಲಿದೆ. ಅಲ್ಲಿ ಒಂದು ಬದಿಯಲ್ಲಿ ರೈಲ್ಲಲ್ಲಿ ಓರ್ವ ಕುಳಿತಿದ್ದನು. ತೀರ್ಗಡೆಯ ಉದ್ಯೋಗದ ಮೇಲೆ ಕಲ್ಕತ್ತೆಗೆ ಹೋಗುವವನಿರಬೇಕು. ಅವನ ತಮ್ಮಂದಿರೂ ಓರ್ವ ತಂಗಿಯೂ ಅಲ್ಲಿ ಸಿಂತಿದ್ದರು. ಸಿಂತವರ ಮುಖಗಳು ಬೇದದಿಂದ-ದುಃಖದಿಂದ ಬಾಡಿಹೋಗಿತ್ತು. ಆತನಿಗೂ ದುಃಖ ಉಕ್ಕುತ್ತಿತ್ತು. ಇವರನ್ನೆಲ್ಲಾ ಅಗಲಿ ಬಹುದೂರ ಹೋಗುವವನಿದ್ದಾನೆ. ಇನ್ನು ಯಾವಾಗ ಕಂಡು ಮಾತಾಡುವ ಸ್ನುಯೋಗವೋ ಬಲ್ಲವರಾರು? ತಮ್ಮಂದಿರೂ, ತಂಗಿಯೂ ಅಳುತ್ತಿದ್ದರು. ಬಿಕ್ಕಿಬಿಕ್ಕಿ ಬಿಗಿದುಬರುವ ಕಂಠವನ್ನು ತಡೆಯಲು ಹವಣಿಸುತ್ತಿರುವರು. ರೈಲಲ್ಲಿ ಕುಳಿತುಕೊಂಡವನು ತಮ್ಮಂದಿರನ್ನು ಬಳಿ ಕರೆದು ಮೈಸವರುತ್ತಾ 'ಮಕ್ಕಳೇ ಅಳಬೇಡಿರಿ. ಇಷ್ಟು ಸಮಯ ನನಗೆ ಇಲ್ಲಿಯೇ ಉದ್ಯೋಗವಿತ್ತು. ಆದರೆ ಈಗ ಹೆಚ್ಚು ಸಂಬಳದ ಮೇಲೆ ಪರವೂರಿಗೆ ಹೋಗಬೇಕಾಗಿದೆ. ನಿರ್ವಾಹವಿಲ್ಲ. ಹೊಟ್ಟೆಯಲ್ಲವೇ? ಅಳುವುದು ಯುಕ್ತವಲ್ಲ. ಪತ್ರಗಳನ್ನು ವಾರಕ್ಕೊಮ್ಮೆ ಬರೆಯುವೆನು ಮುದ್ದುಗಳೆ! ಎಲೆಂಟು ತಿಂಗಳಲ್ಲಿ ನಿಮ್ಮನು ನೋಡಿ ಹೋಗಲು ಹೇಗೂ ಬಾರದಿರಲಿಕ್ಕಿಲ್ಲ! ಶಾಲೆಗೆ ತಪ್ಪದೆ ಹೋಗಬೇಕು. ಚೆನ್ನಾಗಿ ಕಲಿತು ಗಟ್ಟಿಗರಾಗಬೇಕು ಚಿನ್ನಗಳೆ! ದುಃಖಿಸುವುದೇಕೆ? ಯಾರೊಡನೆಯೂ ಜಗಳವಾಡದೆ, ಕೆಟ್ಟ ಚಾಳಿಗಳಿಗೆ ಬಲಿ ಬೀಳದೆ ಅನ್ಯೋನ್ಯ ಮೈತ್ರಿಯಿಂದ ಸಂತೋಷದಿಂದ ಇರಬೇಕು! ಏನು!' ಎನ್ನುತ್ತಾ ಮುಗುಳು ನಗುವನು. ಆಗಲೇ ಕಂಬನಿಯ ತೊಟ್ಟುಗಳು ಆತನಿಗೆ ತಿಳಿಯದಂತೆ ತಾನಾಗಿ ಅಂಗೈಯ ಮೇಲೆ ಟಪ ಟಪನೆ ಬೀಳುವುದು. ತಂಗಿಯನ್ನು ಬಳಿ ಕರೆದು ಇದೇ ಮಾತುಗಳನ್ನಾಡಿ 'ಮಗೂ! ನೀನು ನಿನ್ನ ಅಣ್ಣಂದಿರೊಡನೆ ಕಲಹವಾಡಬೇಡ! ಶಾಲೆಗೆ ಹೋಗುವುದರಲ್ಲಿ ಕಳ್ಳಾಟಿಕೆ ತೋರಿಸಬೇಡ! ನಾನು ಇಲ್ಲಿಗೆ ವರ್ಗಾಯಿಸಿಕೊಳ್ಳಲು ಪ್ರಯತ್ನ ಮಾಡುತ್ತೇನೆ! ಅಳಬೇಡಮ್ಮ! ಬೇಡ!' ಎನ್ನುತ್ತ ಗಲ್ಲವನ್ನು ಸವರುವ. ಮತ್ತೊಂದು ಕಡೆ ತರುಣನೊಬ್ಬನು ಕಲಿತಕ್ಕಾಗಿ ಬಹಳ ದೂರ ಹೋಗುವವ! ಅವನ ಹೆಂಡತಿಯೂ, ಭಾವನೂ ಅಲ್ಲಿ ದುಃಖಿಸುತ್ತಿದ್ದರು. ಮದುವೆಯಾಗಿ ವರುಷವೊಂದು ಕಳೆದಿರಲಿಲ್ಲ. ಹೆಂಡತಿಯನ್ನು ಅಗಲಿ ಹೋಗಲು ಸಿದ್ಧನಾಗಿದ್ದಾನೆ! ಅವಳ ಮುಖವು ಕೆಂಬಣ್ಣದಿಂದ ಊದಿಕೊಂಡಿತು. ಉಮ್ಮಳಿಸಿ ಅಳುತ್ತಿದ್ದಳು. ಕಣ್ಣುಗಳು ಕಂಬನಿಯಿಂದ ಕೂಡಿ ಊದಿಕೊಂಡಿದ್ದುವು. ತುಟಿಗಳು ತರತರ ನಡುಗುತ್ತಿದ್ದುವು. ಪಾಪ! ಗಂಡನನ್ನು ಹೇಗೆ ಅಗಲಿ ಇರಬೇಕು. ಸಣ್ಣಪ್ರಾಯದ ಜವ್ವನೆ! ಅವಳೇನು ಮಾಡಬೇಕು? ದುಃಖವು ಮಿಕ್ಕದೆ ಇದ್ದೀತೆ? ಗಂಡನಿಗೂ ಕಳವಳವಾಗಿತ್ತು.

ಕರವಸ್ತ್ರದಿಂದ ತನ್ನ ಕಣ್ಣುಗಳನ್ನೊಮ್ಮೆ ಒರಸಿಕೊಂಡು, ಧಾರೆಯಾಗಿ ಹರಿಯುವ ಮಡದಿಯ ಕಣ್ಣೀರನ್ನೂ ತನ್ನ ಕರವಸ್ತ್ರದಿಂದಲೇ ಭೀತಿಯಿಲ್ಲದೆ ಒರಸಿದನು. ಅವಳನ್ನೇ ಎವೆಯಿಕ್ಕದೆ ನೋಡುತ್ತಿದ್ದನು. ಒಮ್ಮೊಮ್ಮೆ ಕಣ್ಣುಗಳನ್ನು ಮುಚ್ಚಿಕೊಂಡು ಯೋಚಿಸುವನು! ಕಡೆಗೆ ಮಡದಿಯೊಡನೆ 'ನೋಡು! ಚಿಂತಿಸಿ ದುಃಖಿಸಿ ಏತಕ್ಕೆ ಆಯಾಸಪಡುವೆ! ಕಲಿಯಲಾಗಿ ಹೋಗಲೇಬೇಕಾಗಿದೆ. ಒಮ್ಮೊಮ್ಮೆ ನಿನ್ನನ್ನು ನೆನೆಸುವಾಗ ಬೇಡವೇ ಬೇಡವೆಂದು ಕಂಡರೂ ಮುಂದಿನ ಏಳಿಗೆಗಾಗಿ, ಅಭಿವೃದ್ಧಿಗಾಗಿ ನಾನು ತ್ವರಿತ ಹೋಗಲೇ ಬೇಕಲ್ಲವೇ? ಒಂದು ವರುಷದೊಳಗೆ ಮರಳಿ ಬರುವೆನು. ಅಷ್ಟರಲ್ಲಿ ಎಷ್ಟು ಪತ್ರಗಳ ರಾಶಿ ನಿನ್ನ ಕೈಸೇರಿತು ಎಂಬುದನ್ನು ಲೆಕ್ಕವಿಡಲು ಸಾಧ್ಯವಿಲ್ಲ! ತಿಳಿಯಿತೇ?' ಎನ್ನುವ ಮಾತುಗಳೊಡನೆ ಕರವಸ್ತ್ರವನ್ನು ಮುಖಕ್ಕೆ ಒತ್ತಿಕೊಂಡನು.

ಇದೇ ರೀತಿಯಾಗಿ ಅಲ್ಲಲ್ಲಿ ಹಲವು ವಿಧಗಳಲ್ಲಿ ಬೀಳ್ಕೊಡುತ್ತಿದ್ದರು. ಪ್ರತಿಯೊಂದು ದೃಶ್ಯವನ್ನೂ ಹೇಳುತ್ತಾ ಹೋಗುವುದಾದರೆ ಹೇಳಿ ಮುಗಿಸಲು ಅಸಾಧ್ಯವೇ ಸರಿ. ನಿಜವಾಗಿಯೂ ಬೀಳ್ಕೊಡುವ ಸಮಯ ಅದೆಷ್ಟು ಬೇಸರ. ಬೇಸರ ಮಾತ್ರವಲ್ಲ ಹಲವರು ಹರುಷದಿಂದ ಬೀಳ್ಕೊಡುತ್ತಿದ್ದರು. ಹೇಗಿದ್ದರೂ ಅದೊಂದು ವಿಚಾರಗಳ ಹೊತ್ತಗೆಯೇ ಸರಿ; ತಮ್ಮ ತಮ್ಮ ಬಂಧು ಬಳಗದವರು, ಆಪ್ತಮಿತ್ರರು, ಹತ್ತಿರದ ನೆರೆಕರೆಯವರು, ಅಣ್ಣತಮ್ಮಂದಿರು, ತಂದೆ ಮಕ್ಕಳು ಇವರು ಒಬ್ಬರನೊಬ್ಬರು ಅಗಲುವಾಗ ಮನಸ್ಸಿನಲ್ಲಿ ಏನೇನು ವಿಚಾರಗಳು ಬಂದಾವು ಎಂಬುದನ್ನು ಹೇಳುವುದು ಶಕ್ಯವಿಲ್ಲ.

ಇರಲಿ, ನಾವು ಸಹ ರೈಲು ಆಫೀಸಿನಲ್ಲಿ ಗೆಳೆಯನನ್ನು ಕೊಯಂಬುತ್ತೂರಿಗೆ ಕಳಿಸುವವರಿದ್ದೆವು. ನಾವು ಸಹ ಹಲವು ಬೀಳ್ಕೊಡುವ ಸನ್ನಿವೇಶಗಳನ್ನು ಆಗ ತಾನೆ ಕಣ್ಣಾರೆ ಕಂಡಿದ್ದೆವು. ನಮಗೂ ಮನಸ್ಸಿನಲ್ಲಿ ಕಳವಳದ ತಳಮಳವು ತಿದ್ದೇಳುತಿತ್ತು! ಪ್ರೀತಿಯ, ಸ್ನೇಹದ, ಒಲುಮೆಯ, ಅಂತಃಕರಣ ಶುದ್ಧಿಯ, ಭಕ್ತಿಯ ಅಳವೆಷ್ಟೆಂದು ಆಗ ಮನಸ್ಸಿನಲ್ಲಿ ನರ್ತನವಾಡುತಿತ್ತು. ಮನುಷ್ಯರೊಳಗಿರುವ ಪ್ರೇಮ ಸೌಹಾರ್ದದ ಸಣ್ಣ ಸಣ್ಣ ದೃಷ್ಟಾಂತಗಳನ್ನು ಕಣ್ಣಮುಂದೆ ಕಟ್ಟಿದಂತಾಗುತಿತ್ತು. ಅನ್ಯೋನ್ಯ ಮೈತ್ರಿಯ ಸಣ್ಣ ಪಾಟವೊಂದನ್ನು ಸ್ವಾಭಾವಿಕ ರೀತಿಯಲ್ಲಿ ಆ ರೈಲು ಬಂಡಿ ಹೊರಡುವಲ್ಲಿ ನಾವು ಕಂಡೆವು. ತರುಣಿಯರು, ಹೆಂಗಸರು, ಅಣ್ಣಂದಿರು, ತಮ್ಮಂದಿರು ಈ ರೀತಿಯಾಗಿ ಒಬ್ಬರೊಬ್ಬರು ತಮ್ಮ ತಮ್ಮ ಮನಸ್ಸಿನ ವ್ಯಥೆಯನ್ನೋ, ಸಂತೋಷವನ್ನೋ ಅಲ್ಲಿ ಪ್ರದರ್ಶಿಸುತ್ತಿದ್ದರು. ನಾವೂ ಗೆಳೆಯನಿಗೆ ಹಸ್ತಲಾಘವನ್ನಿತ್ತು ಶುಭವನ್ನು ಕೋರಿದೆವು. 'ಪತ್ರಗಳಲ್ಲಿ ಒಬ್ಬರನ್ನೊಬ್ಬರು ಕಾಣುವೆನಂತೆ! ನಮ್ಮ ಪ್ರೀತಿಗೆ ಅಳಿವಿಲ್ಲ. ನಮ್ಮ ಗೆಳೆತನ ಅಚ್ಚಳಿಯದೆ ಉಳಿಯಲಿ' ಎನ್ನುವಷ್ಟರಲ್ಲೆ ರೈಲು ಬಂಡಿಯು 'ಬುಸ್ಸು ಬುಸ್ಸೆಂ'ದು-ಆರ್ಭಟಿಸುತ್ತಾ ಹೊರಡಿತು. ಹೊರಟಂತೆಯೇ ರೈಲಿನಲ್ಲಿ ಕುಳಿತವರೂ, ಅಲ್ಲಿ ಅವರನ್ನು ಬೀಳ್ಕೊಡುವವರೂ, ನಮಸ್ಕಾರ, ಸಲಾಂ ಗುಡ್‌ಬೈ ಎಂಬ ಹಾ ಹಾಕಾರದೊಡನೆ ಕೈಗಳನ್ನೆತ್ತಿ ಶುಭವನ್ನು ಬಯಸುತ್ತಿದ್ದರು ಆಗಲೇ ನಾಲ್ಕು ಕಣ್ಣುಗಳ ಮಿಲನಗಳು ಸಮೀಪದಿಂದ ದೂರದೂರವಾಗಿ ಅದೃಶ್ಯವಾಗುವುದು. ಅಲ್ಲಿ ನಿಂತವರು ತಮ್ಮ ತಮ್ಮ ಮನಸ್ಸಿನ ಆಸೆ, ನಿರಾಶೆಗಳೊಡನೆ ಮತ್ತೆ ಮರಳಿದರು. ನಾವೂ ಬಂದಂತೆಯೇ ಮರಳಿದೆವು-

'ಪರಿಷತ್ತು' ಎಂಬ ಶಬ್ದದ ಅರ್ಥವನ್ನು ಓರ್ವ ಪತ್ರಿಕೋದ್ಯೋಗಿಗಳು ಹೀಗೆ ಕೊಡುತ್ತಾರೆ: "ಒಬ್ಬ ವ್ಯಕ್ತಿಯು ಮಾಡಲಾಗದ ಕೆಲಸವನ್ನು ಹಲವು ವ್ಯಕ್ತಿಗಳು ಸೇರಿ 'ಏನು ಮಾಡಲೂ ಸಾಧ್ಯವಿಲ್ಲ'ವೆಂದು ನಿರ್ಣಯಿಸುವುದು."

* * *

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December 1944.

CAPITAL AND LIABILITIES	Rs. As.Ps.	PROPERTY AND ASSETS	Rs. As.Ps
1. Paid up Capital	14,76,535- 0- 0	1. Office Buildings, safes, furniture, etc.	1,04,204- 0- 0
2. Reserves	4,14,302- 3-11	2. Advances	57,53,919- 5- 0
3. Deposits	98,25,162- 6- 6	3. Investments on Govt. Securities etc.	30,18,971-15- 5
4. Bills for collection	6,87,039- 2- 2	4. Bills for collection	6,87,039- 2- 2
5. Branch Adjustments	7,20,593- 3-	5. Other Assets	1,07,153- 5- 9
6. Other liabilities	2,86,375- 4- 9	6. Cash on hand and with Bankers at call & in Short Term Deposits	38,79,125- 7- 0
7. Profits for the Current year together with Balance brought forward.	1,40,405-15- 8		
Grand Total Rs.	1,35,50,413- 4- 0	Garnd Total Rs.	1,35,50,413- 4-.8

ಸಂಸ್ಕೃತವು ಮೃತಭಾಷೆಯಲ್ಲ

ವಿಶ್ವಭಾಷೆಗಳ ಮಾತೃಭಾಷೆ ಅದು
ಎಲ್ಲರ ಬಾಯಲ್ಲೂ ಇರುವ ಭಾಷೆ ಮೃತವೆ?
ಗೀರ್ವಾಣ ಭಾಷೆಯನ್ನು ಪ್ರೋತ್ಸಾಹಿಸಿರಿ

ಭಾಷೆಗಳ ತಾಯಿ

ದೇವಭಾಷೆಯೆಂದೆನಿಸಿದ ಸಂಸ್ಕೃತವು ಹೆಚ್ಚಿನವರ ಅಭಿಪ್ರಾಯದಲ್ಲಿ 'ಮೃತಭಾಷೆ' ಎಂದು ತಿಳಿಯಲ್ಪಟ್ಟಿದೆ. ಅದು ಅಮರರ ಭಾಷೆಯಾಗಿರುವುದರಿಂದ ಅದಕ್ಕೆ ಮೃತ್ಯುವಿಲ್ಲ, ಅದು ಹಲವು ಭಾಷೆಗಳ ಮಾತೃ ಭಾಷೆಯೂ ಮೂಲ ಭಾಷೆಯೂ ಆಗಿದ್ದು ಅಮೃತ ಸಂಜೀವಿನಿಯಂತೆ ಪರಿಪೋಷಕ ಭಾಷೆಯಾಗಿರುವುದರಿಂದ ಅದನ್ನು ವಿಶ್ವಭಾಷೆಎಂದೆನ್ನಬಹುದು. ಗೆಲ್ಲುಗೊಂಚಲುಗಳೂ, ಎಲೆ ಚಿಗುರುಗಳೂ ದಟ್ಟವಾಗಿ ಬೆಳೆದು ಕಾಂಡವು ಮುಚ್ಚಿ ಕಾಣದೆ ಇದ್ದ ವೃಕ್ಷವನ್ನು ಸತ್ತುಹೋಗಿದೆ ಎಂದು ಭಾವಿಸುವುದು ಸರಿಯಾದರೆ ಸಂಸ್ಕೃತವು ಮೃತಭಾಷೆ ಹೌದೆನ್ನಬಹುದು.

ಆಂಗ್ಲನೊಬ್ಬನು 'ಮದರ್' 'ಫಾದರ್' ಎನ್ನುವಾಗಲೂ, ಫ್ರೆಂಚನೊಬ್ಬನು 'ಪಾದ್ರಿ', 'ಮಾದ್ರಿ' ಎನ್ನುವಾಗಲೂ, ಇಲ್ಲವೆ ಗ್ರೀಕನೊಬ್ಬನು 'ಪೆಟರ್', 'ಮೆಟರ್' ಎನ್ನುವಾಗಲೂ ಅವರು ಸಂಸ್ಕೃತ ಮೂಲದ ಶಬ್ದಗಳನ್ನು ಉಚ್ಚರಿಸುತ್ತಾರೆಂಬ ಸಂಗತಿಯು ಅವರಿಗೆ ತಿಳಿದಿರಲಿಕ್ಕಿಲ್ಲ.

ಮುಂದಿನ ರಾಣಿ— ಬ್ರಿಟಿಷ್ ಸಾರ್ವಭೌಮ್ಯರಿಗೆ ಇನ್ನೂ ಗಂಡು ಸಂತತಿ ಹುಟ್ಟದಿದ್ದರೆ ಮುಂದೆ ಪಟ್ಟಕ್ಕೆ ಅಧಿಕಾರಿಣಿ ಮೇಲಿನ ಪ್ರಿನ್ಸೆಸ್ ಎಲಿಜಬೇತ್. ಇವರ ಅಜ್ಜನ ಕಾಲದಲ್ಲಿ (೫ನೇ ಜೋರ್ಜರ) ಕಾಲದಲ್ಲಿ ಯುದ್ಧವಾಯಿತು. ಇವರ ತಂದೆ ಕಾಲದಲ್ಲೂ ಆಯಿತು ಇನ್ನು ಇವರ ಆಳ್ವಿಕೆಯಲ್ಲಿ ಅದು ಆಗದಿರಲಿ

ಆದರೂ ಅದು ನಿಜವಾದುದು. ಜೀವನ ಮೂಲದಿಂದಲೇ ಅವರ ಮಕ್ಕಳು ಕಲಿಯುವ ಆ ಪ್ರಾರಂಭ ಶಬ್ದಗಳೇ ಸಂಸ್ಕೃತದ 'ಪಿತೃ ಮಾತೃ'ಗಳೆಂಬ ಶಬ್ದದ ರೂಪಾಂತರಗಳು.

ಇತರ ಭಾರತೀಯ ಭಾಷೆಗಳಲ್ಲಿ ಉಪಯೋಗಿಸಲ್ಪಡುವ ಶಬ್ದಗಳು ಇತಿ ಮಿತಿಯಿಲ್ಲದಷ್ಟಿವೆ. ಆರ್ಯ ಭಾಷೆಗಳ ಲಿಪಿಗಳಲ್ಲಿ ಸಂಸ್ಕೃತದ ದೇವ ನಾಗರಿಯು ಮೆರೆಯುತ್ತದೆ. ಇತರ ದ್ರಾವಿಡ ಭಾಷೆಗಳ ಅಕ್ಷರಗಳಲ್ಲೂ ಸ್ವರ ಶಾಸ್ತ್ರಗಳಲ್ಲೂ ಅದರ ಪ್ರಭಾವವು ಒಂದಲ್ಲ ಒಂದು ರೀತಿಯಿಂದ ಇದ್ದೇ ಇದೆ. ನಾವು ದಿನನಿತ್ಯದಲ್ಲಿ ಉಪಯೋಗಿಸುವ ಹೆಚ್ಚಿನ ಶಬ್ದಗಳು ಸಂಸ್ಕೃತದ ತದ್ಭವಗಳೇ ಆಗಿರುತ್ತವೆ. ನಮ್ಮ ಶಾಸ್ತ್ರಗಳೂ, ವ್ಯಾಕರಣಗಳೂ ಸಂಸ್ಕೃತ ಮೂಲದ ಮೇಲೇ ಕಟ್ಟಲ್ಪಟ್ಟವುಗಳಿರುತ್ತವೆ. ಇತ್ತ ಚೀನ, ಜಪಾನು, ಸುಮಾತ್ರಾ, ಜಾವಾಗಳಲ್ಲೂ ಆ ಭಾಷೆಯ ಪ್ರಭಾವವಿದ್ದೇ ಇದೆ. ಬೌದ್ಧರು ಪಾಲಿ ಗ್ರಂಥಗಳ ಮೂಲಕ ಅದನ್ನು ಅಲ್ಲಿಗೆ ಒಯ್ದರು.

ಋಷಿಗಳ ಸಂಶೋಧ

ಇನ್ನೊಂದು ದೃಷ್ಟಿಯಲ್ಲಿ ವಿಚಾರಿಸೋಣ. ಮಾತನಾಡ ಕಲಿತ ಮನುಷ್ಯನು ಕಾಡನ್ನು ನಾಡನ್ನಾಗಿ ಮಾಡಿ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದ ಹಾಗೆ ಅವನ ಮಿದುಳು ಶಕ್ತಿ ಬೆಳೆಯಿತು. ದೈವ ಸಾಕ್ಷಾತ್ಕಾರದಿಂದ ದೇವ ಸಮಾನರಾದ ಋಷಿ ಮುನಿಗಳು ಅಮೋಘ ಜ್ಞಾನ ತಪಸ್ಸಿನ ಮೂಲಕ ನಾಭಿಯಿಂದ ಬಾಯಿಯ ಮೂಲಕ ಹೊರಬರುವ ಶಬ್ದ ಸ್ವರಗಳಿಗೆ ಶಾಸ್ತ್ರ ಕಲ್ಪಿಸಿ ನಾಗರೀ ಸಂಜ್ಞೆಯಲ್ಲಿ ಲಿಪಿಯನ್ನು ಕಲ್ಪಿಸಿದರು. ಉಚ್ಚರಿಸಿದುದನ್ನು ಬರೆಯುವಂತೆ ಬರೆದುದನ್ನು ಓದುವಂತೆ ಮಾಡಿದ ಆ ಮಹಾ ಮೇಧಾವಿಗಳ ಅಮೋಘ ಪಾಂಡಿತ್ಯವು ಅಮರವಾದಂತೆ ಅವರು ಸೃಜಿಸಿದ ಭಾಷೆಯೂ ಚಿರಂಜೀವಿಯೇ ಸರಿ.

ಇಂದು ನಾವು ಆಕಾಶದಲ್ಲಿ ಹಾರುವ ಯಂತ್ರವನ್ನು ನೋಡಿ ಬೆರಗಾಗುತ್ತೇವೆ. ರೇಡಿಯೋ ವಾಣಿಯನ್ನು ಕೇಳಿ ಕೌತುಕಗೊಳ್ಳುತ್ತೇವೆ. ಅವುಗಳನ್ನು ಕಂಡು ಹಿಡಿದವರ ವಿಷಯವಾಗಿ ತುಂಬಾ ಅಚ್ಚರಿಯನ್ನೂ ಬೆರಗನ್ನೂ ಪಡುತ್ತೇವೆ. ಆದರೆ ಸಹಸ್ರಾರು ವರ್ಷಗಳ ಹಿಂದೆ ಹೆಚ್ಚಿನ ಜನಾಂಗಗಳೆಲ್ಲವೂ ವನ್ಯ ಪಶುಗಳಂತಿರುವಾಗ ಆರ್ಯಾವರ್ತದ ಒಂದು ನಿರ್ದಿಷ್ಟ ಪ್ರದೇಶದ ಜನರು ಆ ಪ್ರದೇಶದ ದಿವ್ಯ ವಾತಾವರಣದ ಪ್ರಭಾವದಿಂದಲೊ, ಇಲ್ಲವೆ ಅವರುಂಡ ಆಹಾರಗಳನ್ನು ಬೆಳೆಸಿದ ಆ ಪವಿತ್ರ ಮಣ್ಣಿನ ಶಕ್ತಿಯಿಂದಲೊ ಎಂಬಂತೆ ಅನನ್ಯವಾದ ಜ್ಞಾನ ಸಂಸ್ಕಾರವನ್ನು ಹೊಂದಿ ಪ್ರಾಕೃತ ಇಲ್ಲವೆ ಸಂಸ್ಕೃತವೆಂಬ ನುಡಿಯೊಂದನ್ನು ಕಂಡುಹಿಡಿದರು. ಅದನ್ನು ಸರಿಯಾಗಿ ಯೋಚಿಸಿ ನೋಡದಿದ್ದರೆ ನಮಗೆ ಸಾಮಾನ್ಯವಾಗಿ ಯಾವ ಬೆರಗಾಗಲೀ, ಅಚ್ಚರಿಯಾಗಲೀ ಉಂಟಾಗದಿರುವುದು ಸಹಜ.

ಇಷ್ಟು ಮಾತ್ರವಲ್ಲ ಶಬ್ದ ಸ್ವರವಿಜ್ಞಾನದಲ್ಲಿ ಪ್ರಯೋಗಗಳನ್ನು ನಡೆಸಿ ಆ ಮಹಿಮಾವಂತರು ಜ್ಞಾನ ಭಾಂಡಾರಗಳಂತಿರುವ, ಅಪೌರುಷೇಯವೆನಿಸಿದ ವೇದಗಳನ್ನು ಬರೆದರು. ಇಂದಿನ ಮುಂದರಿದ ಮಾನವರಿಂದ ಒಂದೇ ಒಂದು ಅಕ್ಷರವನ್ನಾಗಲೀ ಶಬ್ದವನ್ನಾಗಲೀ, ಒತ್ತನ್ನಾಗಲೀ ಮಾರ್ಪಡಿಸಲಾಗದ ರೀತಿಯಲ್ಲಿ ಬರೆದಿಟ್ಟರು.

ಜ್ಞಾನ ಕಾಮಧೇನು

ಅವನ್ನು ಆ ಸುರ ಭಾಷೆಯಲ್ಲಿ ಬರೆದಿಟ್ಟ ಸತ್ಯಸೂತ್ರಗಳು, ಸೃಷ್ಟಿ ಶಾಸ್ತ್ರಗಳು, ಅದೇಕೆ ಮಾನವ ವಿಜ್ಞಾನದ, ಭೌಗೋಲ ನಿಯಮದ ಮೂಲ ಸಿದ್ಧಾಂತಗಳು ಜಗತ್ತಿನ ಮೂಲೆಗಳಿಗೆ ಪಸರಿದಂತಾಗಿ ಜನಾಂಗಗಳನ್ನು ಎಚ್ಚರಿಸಿ ಜ್ಞಾನ ಸಂಗ್ರಹದ ದಿಶೆಯಲ್ಲಿ ಚೇತರಿಸಿದವು.

ಅದು ಭಾಷೆಗಳದ್ದೇ ಮೂಲವೆಂದು ಹೇಳಿದ ಮೇಲೆ ಇತರ ಹಲವಾರು ಕ್ಷೇತ್ರಗಳಲ್ಲಿ ಅದರ ಪ್ರತಿಭೆ ಪ್ರಭಾವದ ವರ್ಣನೆಯನ್ನು ಪ್ರತ್ಯೇಕ ಮಾಡಬೇಕಾಗಿಲ್ಲ. ಈ ಖಗೋಲ ಶಾಸ್ತ್ರಗಳೂ, ಈ ಗಣಿತ ಶಾಸ್ತ್ರಗಳೂ, ಈ ಭೌತಿಕ ಮತ್ತು ರಾಸಾಯನಿಕ ತತ್ವಗಳೂ, ಲೋಹ ವಿಜ್ಞಾನಗಳೂ ಸಂಸ್ಕೃತ ಭಾಷೆಗೆ ಏನು ಹೊಸತೆ? ಜಗತ್ತಿನ ತತ್ವಜ್ಞಾನ ಮತ ಸಿದ್ಧಾಂತಗಳು ಆ ಆರ್ಯ ಗ್ರಂಥಗಳಲ್ಲಿ ಇಲ್ಲದವುಗಳೆ?

"ಭಾರತೀಯ ಸಂಸ್ಕೃತಿಯಲ್ಲಿ ಯಾವುದೋ ಒಂದು ಗುಣ ವಿಶೇಷವು ತಲೆತಲಾಂತರದಿಂದ ನಮ್ಮ ರಕ್ತನಾಳಗಳಲ್ಲಿ ಹರಿದು ನಮ್ಮ ಸ್ವಭಾವದಲ್ಲಿಯೇ ಅಂತರ್ಗತವಾಗಿದೆ. ಕನ್ಯಾಕುಮಾರೀ ಕ್ಷೇತ್ರದಿಂದ ಸೂರ್ಯೋದಯವನ್ನೂ, ಆಗುಂಬೆ ಬೆಟ್ಟದಿಂದ ಸೂರ್ಯಾಸ್ತವನ್ನೂ ಅಥವಾ ಕಾಮನಬಿಲ್ಲನ್ನೇ ಕಂಠಾಭರಣವನ್ನಾಗಿ ಮಾಡಿಕೊಂಡಿರುವ ಸಮಯಗಳಲ್ಲಿ ಗೇರುಸೊಪ್ಪೆ ಜಲಪಾತವನ್ನೂ ನೋಡುವಾಗ ನನಗಂತೂ ಗಾಯತ್ರಿ ಮಂತ್ರದ ಅಕ್ಷರಗಳನ್ನು ಉಚ್ಚರಿಸದೆ ಇದ್ದಾಗ್ಯೂ ಅದರ ಅಂತರಾರ್ಥವು ಮನವನ್ನು ಪ್ರಚೋದಿಸುತ್ತದೆ. ಹಾಗೆಯೇ ಯಾರಾದರೂ ಗೀರ್ವಾಣ ಭಾಷೆಯಲ್ಲಿ ಮಾತನಾಡುತ್ತಿರುವುದನ್ನು ಕೇಳಿದರೆ ಅಥವಾ ಸುಸಂಸ್ಕೃತರಾದವರು ವೇದಪಠಣವನ್ನು ಮಾಡುವುದನ್ನು ಕೇಳಿದರೆ ನಿಜವಾದ ಆನಂದವಾಗುವುದು. ಇದೇ 'ದೇವಭಾಷೆ'ಯಾದ ಸಂಸ್ಕೃತದ ಶಕ್ತಿ; ಇದೇ ವೇದ ವಿದ್ಯೆಯ ತಿರುಳು" ಹೀಗೆಂದು ಮೈಸೂರು ಮಹಾರಾಜರ ಮಂತ್ರಿಗಳಾದ ಶ್ರೀಮಾನ್ ಎಂ. ಎ. ಶ್ರೀನಿವಾಸನ್ ಅವರು ಮೇಲು ಕೋಟೆಯಲ್ಲಿ ಜರುಗಿದ ಅಖಿಲ ಕರ್ನಾಟಕ ಸಂಸ್ಕೃತ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ನಿವೇದಿಸಿದರು.

ಸಂಸ್ಕೃತವೇ ಸಂಸ್ಕೃತಿ

ಹೀಗಿದ್ದಾಗ್ಯೂ ಸಂಸ್ಕೃತವು ಮುಂದರಿಯದೆ ಇರುವುದಕ್ಕೂ ಪಂಡಿತರಿಗೆ ಪ್ರತಿಫಲ ಸಾಕಷ್ಟು ದೊರೆಯದೆ ಇರುವುದಕ್ಕೂ ಕಾರಣವಾದರೂ ಏನು ಎಂಬ ಪ್ರಶ್ನೆಯ ಕುರಿತು ಆ ಮಂತ್ರಿವರ್ಯರು: "ಇಂತಹ

ನಾಜೀ ದೈವ ಮಾಯವಾಗಿದೆ.

ಅಮೂಲ್ಯ ವಿದ್ಯೆಯನ್ನು ಮುಂದೆ ಬರುವ ಭಾರತೀಯ ವಂಶಪರಂಪರೆಗಾಗಿ ಕಾದಿಟ್ಟು, ಸಂಸ್ಕೃತ ವಿದ್ಯೆಯು ಅನುಗ್ರಹಿಸಿರುವ ಜ್ಞಾನ ಜ್ಯೋತಿಯು ಆರದಂತೆ ಎಚ್ಚರದಿಂದ ನೋಡಿಕೊಳ್ಳುತ್ತಿರುವ ತಮಗೆ ಉತ್ತಮೋತ್ತಮ ಸೇವೆಮಾಡಿದ ತೃಪ್ತಿಗಿಂತ ಹೆಚ್ಚಾದ ಪ್ರತಿಫಲವನ್ನು ಯಾರುತಾನೆ ಕೊಡಬಲ್ಲರು?" ಎಂದು ನಿರೂಪಿಸಿದರು.

"ಆಧುನಿಕ ಪಾಶ್ಚಾತ್ಯ ವಿದ್ಯೆಗೂ, ಪ್ರಾಚೀನ ಸಂಸ್ಕೃತ ವಿದ್ಯೆಗೂ ಇರುವ ಮುಖ್ಯ ವ್ಯತ್ಯಾಸವನ್ನು ನಾವು ಮರೆಯಬಾರದು. ಆಧ್ಯಾತ್ಮಿಕ ಜೀವನ ಸಾಮ್ರಾಜ್ಯ ಸುಖವನ್ನು ಅನುಗ್ರಹಿಸಿ ನಮ್ಮನ್ನು ಉದ್ಧಾರ ಮಾಡುವುದಕ್ಕಾಗಿ ನಿರ್ಮಿತವಾದುದು ಗೀರ್ವಾಣ ಭಾಷೆ.... ಜನತೆಗೆ ಬೇಕಾದ ವಸ್ತು ನಿರ್ಮಾಣ, ಕೈಗಾರಿಕೆ ವ್ಯಾಪಾರ ಇವರಿಂದ ಹೆಚ್ಚು ಹೆಚ್ಚಾಗಿ ಲಾಭ ಪಡೆಯುವ ಮಾರ್ಗಗಳು, ಆ ಸಂಬಂಧವಾದ ಜಗಳಗಳು ಮೊದಲಾದ ಐಹಿಕ ವ್ಯವಹಾರಗಳಿಗೆ ಗಮನಕೊಡುವಂತಹದು ಈ ಆಧುನಿಕ ವಿದ್ಯೆ."

ಇಂತಹ ವಿದ್ಯೆಯನ್ನು ಪ್ರಸರಿಸಿದಂತಾ ಸಂಸ್ಕೃತವು ಮೃತ ಭಾಷೆಯೇ?

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಜರ್ಮನ್ ಸೈನ್ಯಶಕ್ತಿಯ ಸೋಲು

ಮಿತ್ರ ಸೇನಾನಿಗಳ ಚಾತುರ್ಯ ಶ್ರೇಷ್ಠತೆ

ನಾಜೀಗಳು ಹೇಗೆ ಹಿಂಜರಿದರು?

ಸಂಖ್ಯೆಯೇ ಮುಖ್ಯವಲ್ಲ—ಸಾಮರ್ಥ್ಯ ಬೇಕು

ಒಂದು ನಿರ್ಣಯಾತ್ಮಕ ಸಂದಿಗ್ಧ ಸ್ಥಾನದಲ್ಲಿ ಸೈನ್ಯ ಶಕ್ತಿಯನ್ನು ಕೇಂದ್ರೀಕರಿಸುವುದು ಯುದ್ಧವನ್ನು ಯಶಸ್ವಿಗೊಳಿಸುವ ಕಲೆಯ ಒಂದು ಅವಿಚ್ಛಿನ್ನ ತಂತ್ರೋಪಾಯವೆಂದು ಸಮರ ಶಾಸ್ತ್ರವು ತಿಳಿಸುತ್ತದೆ. ಈ ಎರಡನೇ ವಿಶ್ವಸಮರವನ್ನು ಜರ್ಮನಿಯು ತನ್ನ ಬಹುಸಂಖ್ಯಾ ಸೈನ್ಯಬಲದಿಂದ ಪ್ರಾರಂಭಿಸಿ, ತನ್ನ ವಿವಿಧ ಯಾಂತ್ರಿಕ ಶಸ್ತ್ರಗಳ ಸಹಾಯದಿಂದ ಪ್ರಾರಂಭದಲ್ಲಿ ಗೆಲುವನ್ನು ಪಡೆಯಿತು. ಆದರೆ ಅವರಿಂದ ತಿರಸ್ಕಾರ ದೃಷ್ಟಿಯಿಂದ ನೋಡಲ್ಪಟ್ಟ ಮಿತ್ರ ಸೈನ್ಯಾಧಿಪತಿಗಳು ಅವರ ದೇಶಮೇರೆಯೊಳಗೇ ಯಶಸ್ವಿಯಾದುದನ್ನು ನೋಡುವ ದೀನಾವಸ್ಥೆಯೂ ಹೆಮ್ಮೆಯ ಜರ್ಮನರಿಗೆ ತಪ್ಪಲಿಲ್ಲ.

ಸೈನ್ಯ ಸಂಖ್ಯೆಗಿಂತ ಸೈನ್ಯ ಚಾಲಕತ್ವವು ಹೆಚ್ಚಿನ ಮಹತ್ವದೆಂಬ ಸಂಗತಿಯು ಈ ಯುದ್ಧದಿಂದ ಸ್ಪಷ್ಟವಾಗುತ್ತದೆ. ಸಕಾಲದಲ್ಲಿ ಸಂದಿಗ್ಧಸ್ಥಾನದಲ್ಲಿ ಸೈನ್ಯಗಳನ್ನು ಮೇಳಾಯಿಸುವುದು, ಮತ್ತು ಅಲ್ಲಿಂದ ಆ ಶಕ್ತಿಯನ್ನು ಅತ್ಯಂತ ಅನುಕೂಲತೆಯಿಂದ ಉಪಯೋಗಿಸಿಕೊಳ್ಳುವುದು, ಅವಶ್ಯಬಿದ್ದಲ್ಲಿ ಅಪಾಯಕರ ಪರಿ

ಇದರಿಂದ ಜರ್ಮನ್ ಸೇನಾ ನಾಯಕತ್ವವು ಕಮ್ಮಿ ದರ್ಜೆಯದೆಂದು ತಿಳಕೊಳ್ಳಬಾರದು. ಹಾಗಿದ್ದರೆ ಮಿತ್ರನಾಯಕರಿಗೆ ಅದರಿಂದ ಹೆಚ್ಚಿನ ಶ್ಲಾಘನೆ ಸಲ್ಲುವಹಾಗಿಲ್ಲ. ೧೯೩೯ರಲ್ಲಿ ಜರ್ಮನಿಯು ಇತಿಹಾಸದಲ್ಲೇ ಅತ್ಯಮೋಘವೂ ಪ್ರಥಮ ಶ್ರೇಷ್ಠತೆಯದೂ ಆದ ಯುದ್ಧ ಯಂತ್ರವೊಂದನ್ನು ಸಿದ್ಧಗೊಳಿಸಿತ್ತೆಂಬ ವಿಷಯವನ್ನು ಮರೆಯಲಾಗದು. ನಾಲ್ಕು ವರ್ಷಗಳ ಅವ್ಯಾಹತ ಬಲಾಬಲ ಪ್ರದರ್ಶನದ ಮೇಲಾದರೂ ಅವರದು ಅತ್ಯಂತ ಬಲಾಢ್ಯವಾಗಿಯೇ ಇತ್ತೆನ್ನಬಹುದು. ಆದರೆ ಡನ್‌ಕರ್ಕಿನಿಂದ ಮಿತ್ರಸೇನೆಯನ್ನು ಓಡಿಸಿದ ನಂತರ ಹಿಟ್ಲರನು ಬ್ರಿಟನನ್ನು ಮುತ್ತುವುದಕ್ಕೆ ಸಾಹಸ ಪಡಲಿಲ್ಲ. ಅಷ್ಟು ಸ್ಥೈರ್ಯವು ಅವನಿಗೆ ಇಲ್ಲದೆ

ರು ಇನ್ನೂ ಹೆಚ್ಚಿನ ಲೋಪದೋಷಗಳನ್ನು ಮಾಡಿದರು. ಅತೀ ಶೀಘ್ರದ ದಾಳಿಯಿಂದ ವಿರೋಧಿಗಳನ್ನು ಸದೆಬಡಿಯುವುದಕ್ಕಾಗಿ ಜರ್ಮನ್ ಯುದ್ಧ ಯಂತ್ರವು ಸಿದ್ಧಗೊಳಿಸಲ್ಪಟ್ಟಿತ್ತು,

ಆದರೆ ಅವರು ತಮ್ಮ ಮೊದಲ ಇಕ್ಕುಳ ದಳಗಳ ಯಶಸ್ಸಿನಿಂದ ಮತ್ತರಾಗಿ ಮತ್ತೆ ಆ ಕೊಮ್ಯುನಿಸ್ಟ್ ರಾಜ್ಯದ ವಿಶಾಲ ಪ್ರದೇಶಗಳನ್ನು ಸೈನ್ಯಾಕ್ರಮಣ ಮತ್ತು ವಿಸ್ತರಣ ರೀತಿಯಿಂದ ಹಿಡಿಯಲು ಪ್ರಯತ್ನಿಸಿದರು. ಈ ಧೋರಣೆಯು ರಷ್ಯಕ್ಕೆ ಅನುಕೂಲದ್ದಾಯಿತು. ಅವರು ತಮ್ಮ ಅಪಾರ ಸಂಖ್ಯೆಯ ಸೈನ್ಯಬಲದಿಂದ ನಾಜೀ ಶತ್ರುವಿಗೆ ಕಾದಾಟಕೊಟ್ಟು ಅವನ ಕೊನೆಯ ಅಂತ್ಯವನ್ನು ಸಮೀಪಕ್ಕೆ ತಂದರು.

೧೯೪೪ರ ಸುಮಾರಿಗೆ ಪಶ್ಚಿಮ ಯುರೋಪಿನಲ್ಲಿ ಜರ್ಮನ್ ಸೇನೆಗಳು ಹಂ

ನಿರ್ದೇಶಕತ್ವದಲ್ಲಿ ಜರ್ಮನರನ್ನು ಪ್ರತಿಯೊಂದು ಮಹತ್ವ ಸ್ಥಾನದಲ್ಲಿ ಸದೆಬಡಿದರು. ಅಲೆಗ್ಝಾಂಡರ್ ಮತ್ತು ಮೊಂಟ್‌ಗೋಮರಿ ಸೇನಾನಿಗಳು ಇವರ್ರೀ ಇಡೀ ಜರ್ಮನ್ ಯುದ್ಧ ಯಂತ್ರದ ಬುದ್ಧಿಸಾಮರ್ಥವನ್ನು ಮಿಗಿಸಿಬಿಟ್ಟರು.

ನಂತರ ಜನರಲ್ ಅಲೆಗ್ಝಾಂಡರರು ಇಟೆಲಿಯಲ್ಲಿ ತಮ್ಮ ಕೈವಾಡನ್ನು ತೋರಿಸಿದರು. ಸಂಖ್ಯೆಯೇ ಯಶಸ್ವಿಗೆ ಕಾರಣಭೂತವಲ್ಲವೆಂಬುದನ್ನು ಅವರು ತೋರಿಸಿಕೊಟ್ಟರು

ಕೊನೆಯ ಅಂಕದಲ್ಲಂತೂ ಜರ್ಮನ್ ಸೇನಾನಾಯಕತ್ವವು ಇನ್ನು ಹೆಚ್ಚಿನ ಅಧೋಗತಿಗೆ ಇಳಿದಂತಾಯಿತು; ಇದಕ್ಕೆ ಅವರನ್ನೇ ಸಂಪೂರ್ಣ ಹೊಣೆಗಾರರನ್ನಾಗಿ ಮಾಡುವುದು ನ್ಯಾಯವಲ್ಲ. ಕಾರಣ ಜರ್ಮನಿಯ ವಿಮಾನಬಲದ ನಿಕೃಷ್ಟತೆಯೂ ಇದಕ್ಕೆ ಇನ್ನೊಂದು ಕಾರಣ. ಕೆಲವು ಮೂಢ ನಾಜೀ ನಾಯಕರು ಅನಾವಶ್ಯಕವಾಗಿ ರಾಜಕೀಯ ವ್ಯವಹಾರದಲ್ಲಿ ಕೈಹಾಕಿದ್ದರಿಂದಲೂ ಜರ್ಮನ್ ಸೇನಾನಿಗಳಿಗೆ ತುಂಬಾ ತೊಂದರೆಯಾಯಿತು.

ಯುದ್ಧಗಳ ಇತಿಹಾಸದಲ್ಲೇ ಅದ್ವಿತೀಯವೆನಿಸುವ ಈ 'ದ್ವಿತೀಯರಂಗ'ದ ಕಾರ್ಯನಿರ್ವಹಣವು ಹಿಟ್ಲರನ ವಿಷಾಧಕರ ಅಂತ್ಯವನ್ನು ಸಂಪೂರ್ಣಗೊಳಿಸಿತು. ಈ ಯುದ್ಧದಷ್ಟು ಶೋಭಾಯಮಾನವಾದ ಅಂಕವು ಇತಿಹಾಸದಲ್ಲೇ ಅಪರೂಪ. ಮಿತ್ರ ನಾಯಕತ್ವವು ಸಮರ ಚರಿತೆಯು ಎಂದೂ ಕಂಡೂ ಕೇಳದ ಯಶಸ್ಸನ್ನು ಗಳಿಸಿಕೊಂಡರು.

ಜರ್ಮನ್ ವಿಮಾನ ದಳದ ಶಕ್ತಿಯನ್ನು ಕುಗ್ಗಿಸಬೇಕಾದರೆ ಮಿತ್ರರಿಗೆ ಪ್ರಚಂಡ ಸ್ಥೈರ್ಯ ಸಾಹಸಗಳ ಮತ್ತು ಸಂಪೂರ್ಣವಾದ ಬುದ್ಧಿಸಾಮರ್ಥ್ಯದ ಯೋಜನೆಗಳು ಬೇಕಾದುವು. ೧೯೩೯ರಲ್ಲಿ ಜರ್ಮನಿಯ ಹತ್ತಿರ ಶ್ರೇಷ್ಠ ವೈಮಾನಿಕ ಸೈನ್ಯವು ಸಿದ್ಧವಾಗಿದ್ದಾಗ ಮಿತ್ರರ ಹತ್ತಿರ ಅಂತಹದ್ದೇನೂ ಇನ್ನೂ ತಯಾರಾಗಿರಲಿಲ್ಲ. ಮತ್ತೆ ಇವರು ಕೊಡೆ ವೈಮಾನಿಕ ದಳವನ್ನು ರಚಿಸಿದ್ದು ಮಿತ್ರ ನಾಯಕತ್ವದ ಅಮೋಘ ಶ್ರಮ ಸಾಹಸದ ನಿದರ್ಶವಾಗಿದೆ.

ತಾವು ಸೋತದಕ್ಕೆ ಜರ್ಮನ್ ಸೈನ್ಯ ತಜ್ಞರು ಅನೇಕ ನೆವಗಳನ್ನು ತೋರಿಸುಕೊಡಬಲ್ಲರೇನೊ ನಿಜ. ಆದರೆ ನಿಜವಾದ ಸಂಗತಿಯನ್ನವರು ಎಂದಿಗೂ ಹೊರಗೆಡಹಲಿಕ್ಕಿಲ್ಲ. ಎಲ್ಲಾ ವಿಷಯಗಳಲ್ಲೂ ಮಿತ್ರ ನಾಯಕರು ಅವರನ್ನು 'ಹಿಂದಕ್ಕೆ' ಹಾಕಿದರೆಂಬುದು ನಿರ್ವಿವಾದ.



ಸರ್ವಾಧಿಕಾರಿಯ ಅಂತ್ಯ— ಹೊಲೆಂಡಿನ ಜನರ ಕೈಗೆ ಹಿಟ್ಲರನು ಸಿಗುತಿದ್ದರೆ ಹೀಗೆ ತೂಗಾಡಿಸುತ್ತಿದ್ದರು. ಮೇಲಿನ ಹಳ್ಳಿಯವರು ನಾಜೀ ಪ್ಯೂರರನ ಗೊಂಬೆಯೊಂದನ್ನು ಗಲ್ಲಿಗೇರಿಸಿಯಾದರು ಸಂತೋಷಪಟ್ಟರು.

ಬಾಯಲ್ಲಿ ಚುರುಟು ಇಲ್ಲದಿದ್ದರೂ ಹಿಟ್ಲರನಿಗೆ ಇವರ ಗುರ್ತ ಚೆನ್ನಾಗಿ ಹಿಡಿಯುತ್ತದೆ.

ಸ್ಥಿತಿಯಲ್ಲಾದರೂ ಸಂದರ್ಭಕ್ಕನುಸಾರವಾಗಿ ದಾಳಿ ನಡೆಸುವುದು, ಎಲ್ಲಿ ಮತ್ತು ಯಾವ ಕಾಲದಲ್ಲಿ ಹಿಂದಕ್ಕೆ ಸರಿಯಬೇಕೆಂಬುದರ ನಿರ್ದಿಷ್ಟ ಪರಿಜ್ಞಾನ, ಇವಿಷ್ಟು ಚತುರ ಸೇನಾನಿಯಲ್ಲಿ ಕಾಣಬಹುದಾದ ಸಾಮರ್ಥ್ಯದ ಲಕ್ಷಣಗಳು.

ಬ್ರಿಟಿಷ್ ಮಂದಾಳುಗಳು ಯುದ್ಧವನ್ನಾರಂಭಿಸಿದ ಕಾಲವು ಬಹಳ ಅಶುಭಸೂಚಕವಾಗಿತ್ತೇನೊ ನಿಜ. ಆದರೆ ಯುದ್ಧರಂಗದಲ್ಲೇ ಅವರು ಮುಂದಾಲೋಚನೆಯನ್ನು ಒಂದು ಕಡೆಯಿಂದಲೂ, ಹಿಂದಿನಿಂದ ಬರಬೇಕಾದ ಸರಬರಾಯಿಯ ಯೋಜನೆಯನ್ನು ಇನ್ನೊಂದು ಕಡೆಯಿಂದಲೂ ಅವರು ಬಹಳದಕ್ಷತೆಯಿಂದ ಮಾಡಿ ಯಶಸ್ವಿಯಾದರು.

ಮೊದಮೊದಲು ಮಿತ್ರ ಸೈನ್ಯಗಳು ಶತ್ರುವಿನ ನಿಕೃಷ್ಟ ಸೈನ್ಯಬಲಗಳನ್ನು ಎದುರಿಸಬೇಕಾಯಿತು. ಸ್ವಲ್ಪ ನಂತರ ಮಧ್ಯಮ ತರಗತಿಯ ಮತ್ತು ಅತಿ ಶ್ರೇಷ್ಠ ದರ್ಜೆಯ ಶತ್ರು ಸಮೂಹವನ್ನು ಅವರು ವಿರೋಧಿಸಲೂ ಬೇಕಾಯಿತು.

ಹೋಯಿತು

ಹೀಗಿರುವಾಗ ಬ್ರಿಟನಿನ ಅವಸ್ಥೆಯಾದರೂ ಹೇಗಿತ್ತು? ದೇಶದಲ್ಲಿ ಸರಿಯಾದ ಒಂದೇ ಒಂದು ಸಂಪೂರ್ಣ ತರಬೇತಿಯ ದಳವು ಇರಲಿಲ್ಲ. ಇದ್ದ ಅಲ್ಪ ಸ್ವಲ್ಪ ಯುದ್ಧವಾಹನಗಳು, ಟೇಂಕುಗಳು ಆಫ್ರಿಕಾ ರಂಗಕ್ಕೆ ಕಳುಹಿಸಲ್ಪಟ್ಟಿದ್ದು ಇಂಗ್ಲೆಂಡು ಗಂಡಾಂತರದ ಬಾಯಿಯೊಳಗೆಂಬಂತೆ ಇತ್ತು.

ಭೂಮಧ್ಯ ಸಮುದ್ರ ರಂಗದ ಪ್ರಾಮುಖ್ಯತೆಯು ಆಗ ಬಹಳ ಕಳವಳಸ್ಪದವಾಗಿತ್ತು. ಅದನ್ನು ಬ್ರಿಟಿಷ್ ನಾಯಕರು ತಿಳಿದಿದ್ದರು. ಈಜಿಪ್ತನ್ನು ವಶಪಡಿಸಿಕೊಳ್ಳುವ ಭಾರವನ್ನು ಮುಸ್ಸೊಲಿನಿಗೆ ವಹಿಸಿ ಜರ್ಮನರು ಅಲ್ಲಿಂದ ತೆರಳಿದರು. ಇದೇ ಅವರು ಮಾಡಿದ ದೊಡ್ಡ ತಪ್ಪು.

೧೯೪೧ರಲ್ಲಿ ರಷ್ಯವನ್ನು ಮುತ್ತಿದ್ದು ಜರ್ಮನಿಯು ಇನ್ನೊಂದು ದೊಡ್ಡ ತಪ್ಪು. ಇದಕ್ಕೆ ಹಿಟ್ಲರನೇ ಹೊಣೆಗಾರನಲ್ಲದೆ ಅವನ ಸೇನಾನಿಗಳಲ್ಲ. ರಷ್ಯಾ ದಾಳಿಯನ್ನು ನಿರ್ವಹಿಸುವುದರಲ್ಲಂತೂ ಜರ್ಮನ

ಚಿಹಾಕಲ್ಪಟ್ಟಿದ್ದವು. ತಮ್ಮ ಅಮಿತ ಶಕ್ತಿಬಲವನ್ನು ಕೇಂದ್ರೀಕರಿಸುವುದರ ಕಡೆಗೆ ಅವರು ಅಲಕ್ಷ್ಯ ತಾಳಿದ್ದರ ಅನುಕೂಲತೆ ಪಡೆದು ಬ್ರಿಟಿಷ್ ಸೇನಾನಿಗಳು ತಮ್ಮ ಅಲ್ಪಸ್ವಲ್ಪ ಸೈನ್ಯಗಳನ್ನು ಒಂದೇಕಡೆಯಲ್ಲಿ ಮೇಳಾಯಿಸಿ ಮುಂದಕ್ಕೆ ತಳ್ಳಿದರು. ಇದೇ ಪ್ರಕಾರ ವಿಮಾನ ದಳವೂ ಕೇಂದ್ರೀಕರಿಸಲ್ಪಟ್ಟಿತು.

ಆದರೆ ಅಷ್ಟೇ ಸಾಲದಾಯಿತು. ರೋಮೆಲನ ಬಳಿ ಆಗ ಬೇಕಾದಷ್ಟು ಸೈನ್ಯ ಸಂಗ್ರಹವಿತ್ತು. ಅವನಲ್ಲಿ ಕುಂದದ ಆತ್ಮ ಭರವಸೆಯೂ ಇತ್ತು. ಇಷ್ಟಾದರೂ ಕೇವಲ ಆರು ತಿಂಗಳ ಹೋರಾಟದೊಳಗೆ ಅವನು ಸಂಪೂರ್ಣ ಸೋಲಿಸಲ್ಪಟ್ಟನು. ಸೇನಾನಿಗಳಾದ ಅಲೆಗ್ಝಾಂಡರ್, ಮೊಂಟ್ ಗೊಮರಿ ಮತ್ತು ಟೆಡ್ಡರ್ ಅವರು ಜನರಲ್ ಐಸನ್ ಹಾವರ ಅಮೋಘ

ಆಸ್ಟ್ರೇಲಿಯದಲ್ಲಿ ಒಂದು ಕಡೆ ಮೊಲಗಳನ್ನು ತಡೆಗಟ್ಟಲು ೧೦೩೨ ಮೈಲಿನ ಜಗತ್ತಿನ ಅತೀ ಉದ್ದದ ಬೇಲಿಯನ್ನು ಹಾಕಿರುತ್ತಾರೆ.

* * *

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಮರ, ಎಣ್ಣೆ, ಧಾನ್ಯಗಳಿಂದ ರಬ್ಬರು

ಮಲಯಾ ಶತ್ರುವಶವಾದಂದಿನಿಂದ ಮಿತ್ರ ರಾಷ್ಟ್ರಗಳಿಗೆ ಹೊರಗಿನ ರಬ್ಬರು ಸರಬರಾಯಿ ನಿಂತಂತೆಯೇ ಸರಿ. ಆದರೆ ಬಟಾಟೆ, ಗೋದಿ ಮಂತಾದ ಕೃಷಿ ಉತ್ಪನ್ನಗಳಿಂದಲೂ ರಬ್ಬರನ್ನು ಅವರೀಗ ತಯಾರಿಸುತಿದ್ದಾರೆ. ಕಾರಣ, ರಬ್ಬರಿನಷ್ಟು ಯುದ್ಧೋಪಯೋಗಿ ವಸ್ತು ಬೇರೊಂದಿಲ್ಲ

ಮಲಯಾ ಮತ್ತು ಡಚ್ಚ್ ಈಸ್ಟ್ ಇಂಡೀಸ್ ದ್ವೀಪಗಳನ್ನು ಜಪಾನಿಯರು ವಶಪಡಿಸಿಕೊಂಡಂದಿನಿಂದ ಪ್ರಪಂಚದ ನೈಸರ್ಗಿಕ ರಬ್ಬರಿನ ಅಧಿಕಾಂಶವು ಅವರಿಗೆ ದೊರೆತಂತಾಯಿತು. ಈಗ ಜಪಾನಿನವರಿಗೆ, ಅವರಿಗೆ ಬೇಕಾದುದಕ್ಕಿಂತಲೂ ಅಧಿಕ ರಬ್ಬರಿದೆ. ಅವರ ಮಿತ್ರರಾಷ್ಟ್ರವಾದ ಜರ್ಮನಿಗೆ ಆ ರಬ್ಬರು ಅಗತ್ಯವಿತ್ತಾದರೂ ಅದನ್ನು ಅಲ್ಲಿಗೆ ಸಾಗಿಸಲಿಕ್ಕೆ ಸಾಧ್ಯವಿಲ್ಲದೆ ಹೋಗಿದೆ. ಹೀಗಾಗಿ, ಮಲಯಾದಲ್ಲಿ ಒಂದೆರಡು ವರ್ಷಗಳಿಂದ ರಬ್ಬರಿನ ಬೆಲೆ ರಾತ್ತಲಿಗೆ ಬರೀ ಅರ್ಧಾಣೆಯಾಗಿದೆಯಂತೆ – ಎಂದರೆ ಮುಂಚಿನ ಬೆಲೆಯ ಸೇಕಡಾ ೫ರಷ್ಟು ಎನ್ನಬಹುದು. ಮಿತ್ರರಾಷ್ಟ್ರಗಳಿಗಾದರೊ ರಬ್ಬರಿನ ಅವಶ್ಯಕತೆಯು ಅಷ್ಟಿಷ್ಟಲ್ಲ. ಅದುಕಾರಣ ಅವರು ಈಗ ಕೃತಕ ರೀತಿಯಲ್ಲಿ ರಬ್ಬರನ್ನು ತಯಾರಿಸುತಿದ್ದಾರೆ.

ಸುಮಾರು ೩೦ ವರ್ಷಗಳ ಹಿಂದೆ – ಎಂದರೆ ಮೋಟರುಕಾರುಗಳು ತಯಾರಾಗುವ ಮುಂಚೆ, ರಬ್ಬರನ್ನು ಕೇಳುವವರಿದ್ದಿಲ್ಲ. ೧೯೧೦ರಲ್ಲಿ ಪ್ರಪಂಚದಲ್ಲಿ ೧೧,೦೦೦ ಟನ್ನು ರಬ್ಬರು ಉತ್ಪತ್ತಿಯಾಯಿತು. ೧೯೨೮ರಲ್ಲಿ ಪ್ರಪಂಚದ ರಬ್ಬರು ಉತ್ಪತ್ತಿಯು ೫೬೭,೦೦೦ ಟನ್ನುಗಳಿಗೆ ಏರಿತು. ಅನಂತರ, ರಬ್ಬರ ಉತ್ಪತ್ತಿಯಲ್ಲಾದ ಉತ್ಪತ್ತಿಯು ಅಪಾರವಾದುದು. ಸೈನ್ಯದಲ್ಲಿ ಯಂತ್ರೋಪಕರಣಗಳನ್ನು ಹೆಚ್ಚೆಚ್ಚಾಗಿ ಉಪಯೋಗಿಸಿದಂತೆ, ಮತ್ತು ಯುದ್ಧಪ್ರಾರಂಭವಾದಂದಿನಿಂದ ರಬ್ಬರಿನ ಉತ್ಪತ್ತಿಯು ಮತ್ತೂ ಹೆಚ್ಚಾಗತೊಡಗಿದೆ. ಹೀಗಾಗಿ, ೧೯೧೦ರಲ್ಲಿ ರಾತ್ತಲಿಗೆ ೯ ರೂಪಾಯಿಯಿದ್ದ ರಬ್ಬರಿನ ಬೆಲೆ ೧೯೨೧ರಲ್ಲಿ ೧॥ ರೂಪಾಯಿ ಅನಂತರ ೧೨ ಅಣೆಗೂ ಇಳಿಯಿತು.

ರಬ್ಬರಿನ ಉಪಯೋಗವನ್ನು ಮೊತ್ತಮೊದಲು ಕಂಡುಹಿಡಿದ ಕೀರ್ತಿಯು ಕೊಲಂಬಸ್ ಎಂಬವನಿಗೇ ಸಲ್ಲತಕ್ಕದು. ಕೊಲಂಬಸನು ೧೪೯೬ರಲ್ಲಿ ದಕ್ಷಿಣ ಅಮೇರಿಕದ ಎಮಝೂನ್ ನದಿಯ ಕಣಿವೆಯಲ್ಲಿನ ಜನರು ನೀರಿನ ಪಾತ್ರೆಗಳನ್ನು ಅಚ್ಚಿನಲ್ಲಿ ಮಾಡಲಿಕ್ಕೆ ಒಂದು ಜಾತಿಯ ಮರದ ಅಂಟನ್ನು ಉಪಯೋಗಿಸುವುದನ್ನು ಕಂಡನು. ಕೊಲೊಂಬಸನ ದೇಶಸ್ಥರಾದ ಸ್ಪೆಯಿನ್‌ನವರು ಆ ಅಂಟನ್ನು ಅಲ್ಲಿಂದ ತಮ್ಮ ದೇಶಕ್ಕೂ ಕೊಂಡೊಯ್ದರು. ಆದರೆ ಸುಮಾರು ೧೫೦ ವರ್ಷಗಳ ವರೆಗೆ ಅದರ ಪ್ರತ್ಯಕ್ಷ ಪ್ರಯೋಜನಗಳು ಅಲ್ಲಿ ಯಾರಿಗೂ ತಿಳಿದಿರಲಿಲ್ಲ. ಆ ಮೇಲೆ ಯಾರೋ ಒಬ್ಬನು ಪೆನ್ಸಿಲಿನಿಂದ ಬರೆದುದನ್ನು ಉಜ್ಜಿ ತೆಗೆಯಲಿಕ್ಕೆ ಅದನ್ನುಪಯೋಗಿಸಬಹುದೆಂಬುದನ್ನು ಕಂಡುಹಿಡಿದನು. ಆಗ ತಾನೇ ರಬ್ಬರಿಗೆ ತುಸು ಮಹತ್ವವುಂಟಾಯಿತು. ಉಜ್ಜಲಿಕ್ಕಾಗುವ ವಸ್ತುವಾದ ಕಾರಣ ಅದಕ್ಕೆ "ರಬ್ಬರ್" ಎಂದು ನಾಮಕರಣವಾಯಿತು.

ನೈಸರ್ಗಿಕ ರಬ್ಬರು ತಣ್ಣಗಿರುವಾಗ ಪೆಡಸಾಗಿರುವುದು. ಬೆಚ್ಚಗಿರುವಾಗ ಹಿಟ್ಟಿನ ಅಂಟಿನಂಟಾಗುವುದು. ರಬ್ಬರನ್ನು ಸ್ಥಿತಿಸ್ಥಾಪಕ ಗುಣವನ್ನು ಹೊಂದುವಂತೆಯೂ, ಶೀತೋಷ್ಣಗಳಿಗೆ ಕೆಡದಂತೆಯೂ ಅದನ್ನು ಸುಧಾರಿಸುವ ರೀತಿಯು ೧೮೪೪ರಲ್ಲಿ ಬೆಳಕಿಗೆ ಬಂತು. ಇದಕ್ಕೆ vulcanization ಎಂದು ಹೇಳುತ್ತಾರೆ. ಚೂರುಚೂರಾದ ರಬ್ಬರನ್ನು ಗಂಧಕದೊಂದಿಗೆ ಕಾಯಿಸುವುದೇ ಇದರ ತತ್ವ. ಈ ವಿಧಾನದಿಂದ ರಬ್ಬರಿನಲ್ಲಿ ಮೇಲೆ ಹೇಳಿದ ಗುಣಗಳುಂಟಾಗುತ್ತವೆ.

ಈಗೀಗ ಎಲ್ಲ ರಬ್ಬರನ್ನು ಹೀಗೆ ಸುಧಾರಿಸುವುದು ಕಂಡುಬರುತ್ತದೆ. ಗಂಧಕದೊಂದಿಗೆ ಕಾಯಿಸದೆ ಉಪಯೋಗಿಸುವ ರಬ್ಬರಿನಲ್ಲಿ ವಿದ್ಯುನ್ನಿರೋಧಕಗಳಿಗೆ ಉಪಯೋಗಿಸುವ ಟೇಪುಗಳು, ಮತ್ತು ರಬ್ಬರ್ ಮೆಟ್ಟುಗಳ ಅಡಿಗೆ ಉಪಯೋಗಿಸುವ 'crepe' ಕ್ರೇಪ್, ರಬ್ಬರ್ ಸಿಮೆಂಟ್— ಇವೇ ಮುಖ್ಯಜಾತಿಯವುಗಳಾಗಿವೆ.

ಉಷ್ಣವಲಯದಲ್ಲಿ ಬೆಳೆಯುವ ಸಾವಿರಕ್ಕಿಂತಲೂ ಮಿಕ್ಕಿದ ಸಸಿಗಳ ಬೇರು, ಕಾಂಡ, ಕೊಂಬೆ, ಎಲೆ, ಕಾಯಿಗಳಲ್ಲಿರುವ (latex) 'ಲೆಟೆಕ್ಸ್' ಎಂಬ ಹಾಲಿನಂತಹ ರಸದಿಂದ ರಬ್ಬರನ್ನು ತಯಾರಿಸುತ್ತಾರೆ. 'ಲೆಟೆಕ್ಸ್' ಎಂಬುದು ಹಸಿಯಾಗಿರುವಾಗ ದನದ ಹಾಲಿನಂತಿರುತ್ತದೆ. ಇದನ್ನು ತಕ್ಕ ರಸಾಯನಿಕ ವಸ್ತುಗಳೊಂದಿಗೆ ಬೆರೆಸಿದಾಗ, ಬ್ರೆಡ್ಡಿನ ಹಿಟ್ಟಿನಂತೆ ಒಂದು ವಸ್ತುವು ಮೇಲೆ ತೇಲು

ತಯಾರಿಸುತ್ತಾರೆ. ಹೀಗೆ ತೋಟಗಳಿಂದ ಬಂದ ರಬ್ಬರು ಒಣಕಲಾಗಿ, ಸ್ವಚ್ಛವಾಗಿ ಉತ್ತಮ ತರದ್ದಾಗಿದ್ದುದರಿಂದ ಕ್ರಮೇಣ ಜನರು ಅದನ್ನೇ ಹೆಚ್ಚಾಗಿ ಮೆಚ್ಚತೊಡಗಿದರು. ಆದುದರಿಂದ ಎಮಝೂನ್ ಕಣಿವೆಯಿಂದ ಬರುತಿದ್ದ ಒರಟು ಜಾತಿಯ ರಬ್ಬರಿನ ಸರಬರಾಯಿಯೇ ನಿಂತುಹೋಯಿತೆನ್ನಬಹುದು.

ರಬ್ಬರ ಗಿಡವು ರಬ್ಬರನ್ನು ಕೊಡಬೇಕಾದರೆ ಸುಮಾರು ೬ ವರ್ಷ ಬೆಳೆಯಬೇಕು. ರಬ್ಬರು ಮರದ ಜೀವಿತಾವಧಿಯನ್ನು ನಿಶ್ಚಿತವಾಗಿ ಹೇಳಲಿಕ್ಕೆ ಸಾಧ್ಯವಿಲ್ಲವಾದರೂ, ಮರವು ೩೫ ವರ್ಷವಾದರೂ ಬಾಳಬಲ್ಲುದೆಂದು ತಿಳಿದುಬಂದಿದೆ. ಹೆಚ್ಚಿನ ಮರಗಳು ವರ್ಷಕ್ಕೆ ४—೫ ರಾತ್ತಲು ರಬ್ಬರನ್ನು ಕೊಡಬಲ್ಲುವು. ಆದರೆ ಕೆಲವು ಮರಗಳಿಂದ ೩೦ ರಾತ್ತಲುಗಳಷ್ಟು ಹೆಚ್ಚು ಸಿಗಬಲ್ಲುದು.

'ಹೌದು, ಅದೇ ಹಿಟ್ಲರನ ಬರ್ಜೆಸ್‌ಗೆಡನ್'— ಎಂದು ಜನರಲ್ ಹೊರಿಸ್ಸರು ನಡುವಿನಲ್ಲಿ ನಿಂತಿದ್ದ 'ಮೊಂಟಿ' (ಮೊಂಟ್‌ಗೊಮರಿ)ಯವರಿಗೆ ನಕಾಶೆಯನ್ನು ತೋರಿಸುತಿದ್ದಾರೆ.

ವುದು. ಇದರ ಪದರನ್ನು ಒಣಗಿಸಿ, ಹಾಳೆಯಾಗಿ ಮಾಡಿದಾಗ, ಸ್ಥಿತಿಸ್ಥಾಪಕ ಗುಣದಿಂದ ಕೂಡಿದ ಘನಪದಾರ್ಥವಾಗುವುದು. ಇದೇ ರಬ್ಬರಿನ ಮೊದಲ ರೂಪ.

ಅನೇಕ ಜಾತೀಯ ಮರಗಳಿಂದ 'ಲೀಟೆಕ್ಸ್' ದೊರೆಯುವುದಾದರೂ ರಬ್ಬರ್ ಕೈಗಾರಿಕೆಯಲ್ಲಿ ಸುಮಾರು ೫೦ ಜಾತಿಯ ಮರಗಳನ್ನು ಮಾತ್ರ ಉಪಯೋಗಿಸುತ್ತಾರೆ. ಇತ್ತೀಚಿಗಿನ ವರೆಗೆ ಅಧಿಕಾಂಶ ರಬ್ಬರು, ದಕ್ಷಿಣ ಅಮೇರಿಕದ ಬ್ರೆಜೀಲಿನಲ್ಲಿರುವ ಒಂದು ಜಾತಿಯ ಮರದಿಂದಲೇ ಬರುತಿತ್ತು. ಆದರೆ ರಬ್ಬರಿನ ಅವಶ್ಯಕತೆಯು ಹೆಚ್ಚಿ, ಅದರ ಬೆಲೆ ಏರತೊಡಗಿದಂತೆ ಜನರು ಬೇರೆ ದೇಶಗಳಲ್ಲಿಯೂ ರಬ್ಬರಿನ ಮರಗಳನ್ನು ತೋಟಗಳಲ್ಲಿ ಬೆಳೆಯಿಸತೊಡಗಿದರು. ಈಗ ಮಲಯಾ ಡಚ್ ಈಸ್ಟ್ ಇಂಡೀಸ್, ಮತ್ತು ಸಿಲೋನಿನಲ್ಲಿ ರಬ್ಬರಿನ ತುಂಬಾ ತೋಟಗಳಿವೆ. ಅಲ್ಪಸ್ವಲ್ಪ ರಬ್ಬರನ್ನು ನಮ್ಮ ದೇಶದಲ್ಲಿಯೂ, ಸಯಾಮ್ ಮತ್ತು ಫ್ರೆಂಚ್ ಇಂಡೋಚೀನದಲ್ಲಿಯೂ

ರಬ್ಬರನ್ನು ಅತಿ ಹೆಚ್ಚಾಗಿ ಉಪಯೋಗಿಸುವ ದೇಶವೆಂದರೆ ಅಮೇರಿಕದ ಸಂಯುಕ್ತರಾಷ್ಟ್ರಗಳು. ಆದುದರಿಂದ ಅಮೇರಿಕದ ರಬ್ಬರು ಕಂಪೆನಿಗಳು, ಕಳೆದ ಕೆಲವು ವರ್ಷಗಳಿಂದ ಫಿಲಿಪ್ಪೈನ್ ದ್ವೀಪಗಳಲ್ಲಿ, ಲೈಬಿರಿಯಾ, ಮತ್ತು ದಕ್ಷಿಣ ಅಮೇರಿಕಗಳಲ್ಲಿ ರಬ್ಬರು ತೋಟಗಳನ್ನು ಮಾಡಿದ್ದಾರೆ. ಆದರೆ ವ್ಯಾಪಾರ ದೃಷ್ಟಿಯಿಂದ ಯಶಸ್ವಿಯೆನಿಸುವಷ್ಟು ರಬ್ಬರು ಈ ತೋಟಗಳಿಂದ ಇನ್ನೂ ಸಿಕ್ಕಿಲ್ಲ; ಕಾರಣ ಮರಗಳು ಇನ್ನೂ ಎಳೆಯವು. ಆದರೆ ಕ್ರಮೇಣ, ಅವುಗಳ ಉತ್ಪತ್ತಿಯು ಹೆಚ್ಚಿದಾಗ ಅಮೇರಿಕವು ರಬ್ಬರಿಗಾಗಿ ಮಲಯಾವನ್ನು ಹೊಂದಿಕೊಂಡಿರಬೇಕೆಂದಿಲ್ಲ.

ಯಂತ್ರೋಪಕರಣಗಳಿಂದ ಸುಸಜ್ಜಿತವಾದ ಸೈನ್ಯಕ್ಕೆ ರಬ್ಬರಿನ ಅವಶ್ಯಕತೆಯಿರುವುದರಿಂದಲೂ, ಮಲಯಾದ ರಬ್ಬರು ಸರಬರಾಯಿ ನಿಂತಿರುವುದರಿಂದಲೂ ಅಮೇರಿಕದಲ್ಲಿ ರಬ್ಬರಿನ ಪರಿಸ್ಥಿತಿಯು ಬಹಳ ಕೆಟ್ಟಿದೆ. ಆದುದರಿಂದ ರಬ್ಬರನ್ನು ಬೇರೆ–ಎಂದರೆ ರಾಸಾಯನಿಕ–ವಿಧಾನಗಳಲ್ಲಿ ತಯಾರಿಸಲು ಅಲ್ಲಿ ಪ್ರಾರಂಭವಾಗಿದೆ. ಈಗ ಹೆಚ್ಚಿನಂಶ ರಬ್ಬರು ಹೀಗೆಯೇ ತಯಾರಾಗುತ್ತಿದೆ.

'ಪೆಟ್ರೋಲಿಯಮ್' ಎಂದು ಕರೆಯಲ್ಪಡುವ ಜಿಡ್ಡೆಣ್ಣೆಯಿಂದಲೂ ರಬ್ಬರನ್ನು ತಯಾರಿಸಬಹುದಂತೆ. ಆದರೆ ಅದಕ್ಕೆ ಬಹಳ ಖರ್ಚು ಬೇಕು. ಅಲ್ಲದೆ ಪೆಟ್ರೋಲಿಯಮ್ಮು ರಬ್ಬರಿನಷ್ಟೇ ಮುಖ್ಯವಾದ ಪೆಟ್ರೋಲ್, ಚಿಮಿಣಿಎಣ್ಣೆ ಇತ್ಯಾದಿಗಳನ್ನು ತಯಾರಿಸಲು ಅಗತ್ಯ. ನೈಸರ್ಗಿಕವಾಗಿ ಮಾತ್ರ ಸಿಗುವ ಇಂತಹ ಅಮೂಲ್ಯ ಎಣ್ಣೆಯನ್ನೆಲ್ಲ ರಬ್ಬರನ್ನು ತಯಾರಿಸಲು ಉಪಯೋಗಿಸಿದರೆ ಹೇಗೆ? ಆದುದರಿಂದ ಜಿಡ್ಡೆಣ್ಣೆಯಿಂದ ರಬ್ಬರನು ತಯಾರಿಸುವುದು ಯಾವ ರೀತಿಯಲ್ಲಿಯೂ ಅನುಕೂಲವಲ್ಲ.

ಮದ್ಯಸಾರ (Alcohol) ದಿಂದಲೂ ಸಂಯೋಜಿತ (Synthetic) ರಬ್ಬರನ್ನು ತಯಾರಿಸಬಹುದು. ಹೀಗೆ ಗದ್ದೆಯಲ್ಲಾಗುವ ಬೆಳೆಗಳಿಂದ ಮದ್ಯಸಾರವನು ತಯಾರಿಸಬಹುದು. ಇತ್ತೀಚೆಗೆ ನಿರ್ಮಿತವಾದ ಒಂದು ಯಂತ್ರ ಸಹಾಯದಿಂದ, ಗೋದಿ, ದವಸಧಾನ್ಯಗಳೇ ಕೃಷಿ ಉತ್ಪನ್ನಗಳಿಂದ ಮದ್ಯಸಾರವನ್ನು ತಯಾರಿಸದೇನೆ ನೇರಾಗಿ ರಬ್ಬರನ್ನು ಪಡೆಯಲು ಸಾಧ್ಯವಾಗಿದೆಯಂತೆ. ಸೋವಿಯೆಟ್ ರಶಿಯಾದಲ್ಲಿ ಪ್ರಕೃತ ಅಧಿಕಾಂಶ ರಬ್ಬರು ಹೀಗೆ ಕೃಷಿ ಉತ್ಪನ್ನಗಳಿಂದಲೇ ತಯಾರಾಗುತ್ತಿದೆ. ಅಮೇರಿಕದಲ್ಲಿ ಹೀಗೆ ದವಸದಾನ್ಯಗಳಿಂದ ರಬ್ಬರನ್ನು ಕೃತಕರೀತಿಯಲ್ಲಿ ತಯಾರಿಸುವ ಬಟ್ಟಿಗಳಿಂದ ಕೂಡಿದ ಕಾರ್ಖಾನೆಗಳಲ್ಲಿ ವರ್ಷಕ್ಕೆ ೨೦೦,೦೦೦ ಟನ್ನು ರಬ್ಬರು ತಯಾರಾಗಬಲ್ಲುದಂತೆ. ಧಾನ್ಯಗಳಿಂದ ಅಗ್ಗವಾಗಿ ಸಿಗುವ ರಬರಿನ ಪಮಾಣವು ಕೂಡ ಕಡಿಮೆಯಲ್ಲ! ಒಂದು ಬುಟ್ಟಿ ಧಾನ್ಯಗಳಿಂದ ಸುಮಾರು ೬॥ ರಾತ್ತಲು ರಬ್ಬರು ಸಿದ್ಧವಾಗುವುದೆಂದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ!

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು
ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು
CUTICURA SOAP

ಮೇ 10 ಮಹತ್ವದ ತಾರೀಕು

ಯುದ್ಧ ಘಟನಾವಳಿಗಳ-ಇತಿಹಾಸ

ಜರ್ಮನಿಯ ಇಳಿತ ಭರಿತಗಳು

1939

ಸೆಪ್ಟಂಬರ್ 1.—ಜರ್ಮನಿಯು ಪೋಲೆಂಡನ್ನು ಮುತ್ತಿದ್ದು.

ಸೆಪ್ಟ. 3.—ಬ್ರಿಟನ್ ಫ್ರಾನ್ಸುಗಳು ಜರ್ಮನಿಯ ಮೇಲೆ ಯುದ್ಧಸಾರಿದ್ದು.

ಸೆಪ್ಟ. 17.—ರಷ್ಯನರೂ ಪೋಲೆಂಡನ್ನು ನುಗ್ಗಿದರು.

ಸೆಪ್ಟ. 27.—ವಾರ್ಸೋ ಜರ್ಮನರಿಗೆ ಶರಣಾಗತವಾದುದು.

ನವೆಂಬರ್, 30.—ಫಿನ್‌ಲೆಂಡಿಗೆ ರಷ್ಯದ ಮುತ್ತಿಗೆ.

1940

ಮಾರ್ಚ್, 12,—ರಶ್ಯಾ-ಫಿನ್‌ಲೆಂಡ್ ಯುದ್ಧ ನಿಂತಿತು.

ಎಪ್ರಿಲ್, 9.—ಜರ್ಮನಿಯು ಡೆನ್ಮಾರ್ಕ್ ನೊರ್‍ವೆಗಳನ್ನು ಆಕ್ರಮಿಸಿತು.

ಮೇ. 10.—ಜರ್ಮನಿಯು ಹೊಲೆಂಡ್, ಡೆನ್ಮಾರ್ಕ್‌ಗಳನ್ನು ಆಕ್ರಮಿಸುವುದು. **ಚರ್ಚಿಲ್ಲರು ಚೆಂಬರ್ಲೀನರ ಸ್ಥಾನ**ದಲ್ಲಿ ಬ್ರಿಟಿಷ್ ಪ್ರಧಾನರಾದುದು.

ಮೇ, 14.—ಹೊಲೆಂಡ್ ಶರಣಾಗತಿ.

ಮೇ, 28.—ಬೆಲ್ಜಿಯಂ ಶರಣಾಗತಿ.

ಮೇ. 29.—ಡನ್‌ಕರ್ಕ್ ಪ್ರಕರಣ.

ಜೂನ್. 10.—ಇಟೆಲಿ ಯುದ್ಧಕ್ಕೆ ಸೇರಿದುದು.

ಜೂನ್, 14.—ಪೆರಿಸ್ ಪತನ.

ಜೂನ್, 20.—ಜರ್ಮನ್ ಫ್ರೆಂಚ್ ಒಪ್ಪಂದ, ಪಿಟೈನ್‌ರ ಪ್ರವೇಶ.

ಒಗಸ್ಟ್, 4.—ಲಂಡನಿನ ಮೇಲೆ ವಿಮಾನ ದಾಳಿಯಾರಂಭ.

ಸೆಪ್ಟಂಬರ್, 27,—ಜಪಾನು ಅಚ್ಚುರಾಷ್ಟ್ರಗಳೊಂದಿಗೆ ಸೇರುವುದು.

ಒಕ್ಟೋಬರ್, 27,—ಇಟೆಲಿ ಗ್ರೀಸನ್ನು ಆಕ್ರಮಿಸುವುದು.

1941

ಜನವರಿ, 10,—ಜರ್ಮನಿ-ರಷ್ಯಾ ಒಪ್ಪಂದ.

ಮಾರ್ಚ್, 11,—ರೂಸ್‌ವೆಲ್ಟರು ಕಡ ಒತ್ತಿ ಕಾಯಿದೆಗೆ ಸಹಿ ಹಾಕುವರು.

ಎಪ್ರಿಲ್, 17,—ಯುಗೊಸ್ಲೇವಿಯವು ಜರ್ಮನಿಗೆ ಬಾಗುವುದು.

ಎಪ್ರಿಲ್, 27,—ಜರ್ಮನರು ಗ್ರೀಸ್ ರಾಜಧಾನಿ ಹಿಡಿಯುವರು.

ಮೇ, 10,—ಹರ್ ಹೆಸ್ಸನು ಇಂಗ್ಲೆಂಡಿಗೆ ಓಡಿ ಬಂದುದು.

ಜೂನ್, 22,—ರಶ್ಯಾ-ಜರ್ಮನಿ ಒಪ್ಪಂದ ಮುರಿದು, ಹಿಟ್ಲರನು ರಶ್ಯದ ಮೇಲೆ ಯುದ್ಧ ಸಾರಿದ್ದು.

ಒಗಸ್ಟ್, 14,—**ಎಟ್ಲಾಂಟಿಕ್ ಘೋಷಣೆಗೆ ಸಹಿಹಾಕಿದ್ದು.** (ಈಚೆಗೆ ಇದು ಸುಳ್ಳೆಂದು ಹೇಳಲಾಗಿದೆ.)

ಡಿಸೆಂಬರ್, 7,—ಜಪಾನ್ ಪರ್ಲ್‌ಹಾರ್ಬರ್ ಬಂದರದ ಮೇಲೆ ದಾಳಿ ನಡೆಸಿ, ಯುದ್ಧ ಸಾರಿದ್ದು.

1942

ಜನವರಿ, 2,—ಮನಿಲಾ ಜಪಾನ್ ವಶವಾಯಿತು.

ಫೆಬ್ರುವರಿ, 15,—ಸಿಂಗಾಪೂರ್ ಪತನ.

ಮಾರ್ಚ್, 9,—ರಂಗೂನ್ ಪತನ.

ಮೇ. 10.—ರಷ್ಯನರು ಕಾರ್ಕೋವ್ ಮೇಲೆ ದಾಳಿಯಾರಂಭಿಸಿದ್ದು.

ಮೇ, 30,—1000 ಮಿತ್ರ ವಿಮಾನಗಳು ಜರ್ಮನಿಯನ್ನು ದಾಳಿ ಮಾಡಿದ.

ಒಕ್ಟೋಬರ್, 23,—ಎಲ್ ಎಲಾಮೀನ್‌ದಲ್ಲಿ ಕದನ.

ನವೆಂಬರ್, 8,—ಮಿತ್ರರು ಉತ್ತರ ಆಫ್ರಿಕದಲ್ಲಿಳಿಯುವರು.

ಡಿಸೆಂಬರ್, 24,—ಡಾರ್ಲನ್‌ರ ಕೊಲೆ.

1943

ಜನವರಿ, 18,—ರಶ್ಯನರು ಸ್ಟೆಲಿನ್‌ಗ್ರೇಡಿನಿಂದ ಶತ್ರುಗಳನ್ನು ಓಡಿಸಿದ್ದು.

ಜನವರಿ, 26,—ಕೆಸಬ್ಲಾಂಕಾದಲ್ಲಿ ಚರ್ಚಿಲ್ ರೂಸ್‌ವೆಲ್ಟರು 'ಷರ್ತ ರಹಿತ ಶರಣಾಗತಿ'ಯ ಪ್ರತಿಜ್ಞೆಗೆ ಸಹಿ ಹಾಕುವರು.

ಮೇ, 10,-11,-12,—ಚರ್ಚಿಲ್ಲರು ಅಮೇರಿಕನ್ ರಾಜಧಾನಿಗೆ ಹಾರಿದ್ದು-ಆಫ್ರಿಕಾದಲ್ಲಿ ಶತ್ರುಗಳ ಪರಾಭವ.

ಜೂಲೈ, 10,—ಮಿತ್ರರು ಸಿಸಿಲಿಯಲ್ಲಿಳಿದದ್ದು.

ಜೂಲೈ, 25,—ಮುಸ್ಸೋಲಿನಿಯು ರಾಜಿನಾಮೆ ಕೊಟ್ಟು-ಬೊಡೋಗ್ಲಿಯೋ ಪ್ರಧಾನಿಯಾದುದು.

ಒಗಸ್ಟ್, 24,—ಚರ್ಚಿಲ್ ರೂಸ್‌ವೆಲ್ಟರು ಕ್ವಿಬೆಕಿನಲ್ಲಿ ಒಟ್ಟುಗೂಡಿದ್ದು.

ಸೆಪ್ಟೆಂಬರ್, 3,—ಮಿತ್ರರು ಇಟೆಲಿಯನ್ನಾಕ್ರಮಿಸುವರು.

ಸೆಪ್ಟಂಬರ್, 10,—ಜರ್ಮನರು ರೋಮನ್ನು ಹಿಡಿಯುವರು.

ಸೆಪ್ಟಂಬರ್, 12,—ಮುಸ್ಸೋಲಿನಿಯನ್ನು ನಾಜಿಗಳು ಮಿತ್ರ ಬಂಧನದಿಂದ ತಪ್ಪಿಸಿ ಒಯ್ದುದು.

ಒಕ್ಟೋಬರ್, 18,—ಹೊಸ ಇಟೆಲಿ ಮಂತ್ರಿಮಂಡಳವು ಜರ್ಮನಿಯ ಮೇಲೆ ಯುದ್ಧ ಸಾರುವುದು.

ನವೆಂಬರ್, 6,—ರಶ್ಯನರು ಉಕ್ರೇನ್ ರಾಜಧಾನಿ ಕೀವ್‌ನ್ನು ಶತ್ರುಗಳಿಂದ ಕಿತ್ತುಕೊಳ್ಳುವರು.

ದಶಂಬರ್, 4,—ತ್ರಿಮೂರ್ತಿಗಳ ಟೆಹರಾನ್ ಪರಿಷತ್ತು.

ದಶಂಬರ, 24,—ಐಸನ್‌ಹಾವರು ಮಿತ್ರ ಸೇನಾಪತಿಯಾದುದು.

1944

ಮಾರ್ಚ್, 20,—ಜರ್ಮನರು ಹಂಗೆರಿಯನ್ನು ಆಕ್ರಮಿಸುವರು.

ಮೈ, 1,—ಮೆಡಿಟರೇನಿಯನಿನಲ್ಲಿ ಅಮೇರಿಕನ್ ಹಡಗ ಮುಳುಗಿಸಲ್ಪಟ್ಟು 498 ಜನರ ಮರಣ.

ಮೇ, 10,-12,—ಸೆಬೆಸ್ಟಪೋಲ್‌ನ್ನು ರಶ್ಯನರು ಕಿತ್ತುಕೊಂಡದ್ದು-ಕ್ರಿಮಿಯಾದ ನಾಜೀಗಳ ನಾಶ.

ಜೂನ್, 4,—ಮಿತ್ರರು ರೋಮ್ ನಗರವನ್ನು ವಶಪಡಿಸಿದ್ದು.

ಜೂನ್, 6,—**ದ್ವಿತೀಯ ರಂಗಾರಂಭ**-ನೋರ್ಮಂಡಿಯಲ್ಲಿ ಮಿತ್ರ ಇಳಿತ.

ಜೂನ್, 16,—ಮೊದಲನೇ ರೆಕ್ಕೆ ಬೊಂಬಿನ ಹಾವಳಿ.

ಜೂಲೈ, 4,-5,-5000 ಮಿತ್ರ ವಿಮಾನಗಳು, ಫ್ರಾನ್ಸನ್ನು ಬೆಳಗಿಂದ ಸಂಜೆ ತನಕ ದಾಳಿ ಮಾಡಿದ್ದು-ಹಿಟ್ಲರನು ಶರಣಾಗತನಾಗುವುದಿಲ್ಲವೆಂದು ಸಾರಿದ್ದು.

ಜುಲೈ, 20,-ಜರ್ಮನ್ ಸೇನಾನಿಗಳು ಹಿಟ್ಲರನ ಕೊಲೆ ಪ್ರಯತ್ನ ನಡೆಸಿದ್ದು.

ಒಗಸ್ಟ್, 25,—ಪೆರಿಸನ್ನು ಮುಕ್ತಗೊಳಿಸಿದ್ದು.

ಸೆಪ್ಟಂಬರ್, 11,-ಅಮೇರಿಕಾನರು ಜರ್ಮನಿಯನ್ನು ಆಕ್ರಮಿಸುವರು.

ಒಕ್ಟೋಬರ್, 21,-ಸ್ಟೆಲಿನ್ ಚರ್ಚಿಲ್ಲರು ಶಾಂತಿ ಚರ್ಚೆಗಾಗಿ ಒಟ್ಟು ಸೇರಿದ್ದು.

ನವೆಂಬರ್, 7,—ರೂಸ್‌ವೆಲ್ಟರು 4ನೇ ಸಲಕ್ಕೆ ಅಧ್ಯಕ್ಷರಾದುದು.

ದಶಂಬರ್, 5,-ಬ್ರಿಟಿಷ್ ಸೈನಿಕರು ಗ್ರೀಕ್ ದೇಶಭಕ್ತರ ಮೇಲೆ ಗುಂಡುಹಾರಿಸಿದ್ದು.

ದಶಂಬರ್, 20,—ರೂನ್ ಸ್ಟೆಡನು ವೀರಾವೇಶದಿಂದ ಮಿತ್ರರನ್ನು ಹಿಂದೂಡಿದ್ದು.

ದಶಂಬರ್, 31,—ರಶ್ಯವು ಲಬ್ಲಿನ್ ಸರಕಾರವನ್ನು ಸ್ಥಾಪಿಸಿದ್ದು.

1945

ಜನವರಿ, 17,—ರಶ್ಯನರು ವಾರ್ಸೋವನ್ನು ಹಿಡಿದದ್ದು.

ಫೆಬ್ರುವರಿ, 2,—ಯಾಲ್ಟಾ ಪರಿಷತ್ತು.

ಮಾರ್ಚ್, 31—ಮಿತ್ರರು ರ್‍ಹೈನ್ ನದಿ ದಾಟಿ 66 ಮೈಲು ಮುಂದರಿದದ್ದು.

ಎಪ್ರಿಲ್, 24,—ಹಿಟ್ಲರನು ಸ್ವತಃ ಬರ್ಲಿನ್ ರಕ್ಷಣೆಗಾಗಿ ಸಿದ್ಧನಾದುದು.

ಎಪ್ರಿಲ್, 27, -ಮುಸ್ಸೋಲಿನಿಯು ಕೊಲ್ಲಲ್ಪಟ್ಟದ್ದು.

ಎಪ್ರಿಲ್, 29,-ಹಿಟ್ಲರನ ಮರಣ ವಾರ್ತೆ.

ಮೇ, 1,-ಜರ್ಮನ್ ರೇಡಿಯೊ ಹಿಟ್ಲರನ ಮರಣ ಸಾರಿದ್ದು—ಜನರಲ್ ಡೊನಿಟ್ಜರು ಅಧಿಕಾರ ವಹಿಸಿದ್ದು.

ಮೇ, 2.—ಬರ್ಲಿನ್ ಪತನ.

ಮೇ, 3-ರಂಗೂನ ಮಿತ್ರ ವಶವಾದುದು.

ಮೇ, 7,-ಜರ್ಮನ್ ಶರಣಾಗತಿ.

ಮೇ, 9, 10,—ವಿಜಯೋತ್ಸವ.

ಅವರ ರೆಕ್ಕೆ ಬೋಂಬಿಗೆ ಇವರ ಪ್ರವಾಹ— ಪಶ್ಚಿಮ ಯುರೋಪಿನಲ್ಲಿ ಮಿತ್ರ ಸೈನಿಕರು ಈ ಹೊಸ ಬೆಂಕಿಯನ್ನೇ ಕಾರುವ ಅಸ್ತ್ರಗಳನ್ನುಪಯೋಗಿಸಿದ ಚಿತ್ರ.

ಆಫ್ರಿಕಾ ವಿಜಯದ ಹಿಂದೀ ಸೈನ್ಯ

ವ್ಯಾಸರಾಯರು ಸೇನಾಪತಿಗಳಾಗಿದ್ದಾಗ

ರೊಮೆಲ್ಲನನ್ನು ಓಡಿಸಿದ ಹಿಂದೀ ದಳಗಳು

ಜರ್ಮನಿಯನ್ನು ಸೋಲಿಸುವ ಮೊದಲು ಆಫ್ರಿಕದಲ್ಲಿನ ನಾಜೀ ಮತ್ತು ಫೆಸಿಸ್ಟ್ ವರ್ಚಸ್ಸುಗಳನ್ನು ಪ್ರಭಾವವನ್ನು ನಿರ್ಮೂಲಗೊಳಿಸಬೇಕಾದುದು ಅತ್ಯಾವಶ್ಯಕವೆನಿಸಿತು. ನಂತರ ಜರ್ಮನಿಯ ಮೇಲೆ ಹಾದುಹೋದ ಮಿತ್ರ ವಿಜಯದ ಸುಂಟರ ಗಾಳಿಯು ಮೊದಲು ಆಫ್ರಿಕವನ್ನು ಬಳಿಸಿಹೋಯಿತು. ಈಜಿಪ್ತಿನ ನ್ಯಾಲ್ ನದೀ ಕಣಿವೆಯಲ್ಲಿ ಒಂದು ಧೀರ ಸೈನ್ಯವು ೧೯೪೦ರಲ್ಲಿ ಜಮೆಯಾಯಿತು. ಈ ಧೀರ ಸೈನ್ಯವೇ ಜಗತ್ತನ್ನು ಗೆಲ್ಲಲು ಕನಸುತ್ತಿರುವ ನಾಜೀಗಳ ನಾಶಕ್ಕೆ ಕಾರಣವಾಯಿತು.

ಈ ಧೀರರು ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಮೂಲೆಗಳಿಂದಲೂ ಬಂದವರಿದ್ದರು. ಭಾರತೀಯರು, ಬ್ರಿಟಿಷರು, ಆಸ್ಟ್ರೇಲಿಯಾನರು, ನ್ಯೂಜಿಲೆಂಡ್‌ನವರು, ದ.ಆಫ್ರಿಕಾನರು, ಮತ್ತು ಇತರರು. ಇವರೆಲ್ಲರೂ ಸೇರಿ ಜರ್ಮನರಿಗೂ ಮತ್ತು ಇಟೆಲಿಯನರಿಗೂ ಆಫ್ರಿಕದಲ್ಲಿ ಬಲವಾದ ತಡೆಹಾಕಿದರು.

ಈ ಪುಷ್ಟಕಾಯದ ಸೈನ್ಯಗಳಲ್ಲಿ ಅತೀ ಹೆಮ್ಮೆಗೆ ಪಾತ್ರರಾದವರೆಂದರೆ ಬಾರತದಿಂದ ಬಂದ ೪ನೇ ಮತ್ತು ೫ನೇ ದಳದವರು.

೧೯೪೦ರ ಬೇಸಗೆಯಲ್ಲಿ ವಿಶ್ವಖ್ಯಾತಿಯ ದಿಗಂತದಲ್ಲಿ ಮೆರೆದವು. ಇಟೆಲಿ ಎಂಬ ನರಿಯು ಅಸಾಹಕ ಫ್ರಾನ್ಸಿನ ಮೇಲೆ ಹಾರಿದಾಗ ಜನರಲ್ ವ್ಯಾಸಾರಾಯ(ರು) ವೇವೆಲ್ಲರ ನಾಯಕತ್ವದಲ್ಲಿ ಈ ದಳಗಳು ಇಟೆಲಿಯ ಜನರಲ್ ಗ್ರೆಜೀಯಾನಿಯ ಕೈಕೆಳಗಿದ್ದ ೫೫೦ ಸಾವಿರ ಸೈನ್ಯಕ್ಕೆ ಪ್ರತಿಭಟನೆ ಕೊಟ್ಟವು. ೬೫ ಮಿನಿಟುಗಳಲ್ಲಿ ನಮ್ಮ ನಾಲ್ಕನೆ ದಳದವರು ಶತ್ರುಗಳ ಒಂದು (ನಿಬಿವಾ) ಕೇಂದ್ರ ಶಿಬಿರವನ್ನು ಹಿಡಿದು ಬಿಟ್ಟರು. ಅಪಾರಶಸ್ತ್ರಾಸ್ತ್ರಗಳೂ ದೊರಕಿದವು.

ಸೀದೀ ಬಾರಾನಿಯಲ್ಲಿ ಇಟೆಲಿಯಾನರಿಗೆ ಭಯಂಕರ ಸೋಲು ಉತ್ಪನ್ನವಾಯಿತು. ೧೯೪೦ರ ದಶಂಬರದಲ್ಲಿ ೨೦ ಸಾವಿರ ಇಟೆಲಿಯನ್ ಸೈನ್ಯಗಳು ಶರಣಾಗತವಾದವು. ಆಗಲೇ ಇಟೆಲೀ ಸಾಮ್ರಾಜ್ಯದ ವಿಧಿಯೂ ನಿಷ್ಕರ್ಷಿಸಲ್ಪಟ್ಟಿತು. ನಂತರ ಸೊಲ್ಲಂ, ಬಾರ್ಡಿಯಾ, ಟೊಬ್ರುಕ್ ಮತ್ತು ಬೆಂಗಾರ್ಝಿಗಳು ಹಿಂಬಾಲಿಸಿದವು.

(೮ನೇ ಪುಟಕ್ಕೆ ಮುಂದುವರಿದಿದೆ)

ಹಿಂದೊಸ್ಥಾನ್ ಕೋಪರೇಟಿವ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಕಲ್ಕತ್ತ — ಸ್ಥಾಪನೆ 1907.

ಪ್ರಥಮ ಶ್ರೇಣಿಯ ವಿಮಾ ಸಂಸ್ಥೆ.

೧೯೪೩ನೇ ಇಸ್ವಿಯ ವೇಲ್ಯುಯೇಶನ್ ಉಳಿತಾಯ-೩೫,೬೭೦೦೦

೧೯೪೪ರ ವ್ಯವಹಾರ ೧೮ ಕೋಟಿ ಮೀರಿದೆ.

ಧಾರಾಳವಾದ ಕಮಿಷನ್ ಮೇಲೆ ಪ್ರತಿಭಾ ಶಾಲಿಗಳಾದ ಎಜಂಟರೂ, ಮತ್ತು ಸ್ಪೆಶಲ್ ಏಜಂಟರುಗಳೂ ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕೊಡಗು ಪ್ರಾಂತ್ಯಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

K. S. Apremaya
Inspector of Agencies.
(Hindustan Co-operative Ins. Society Ltd., Mangalore.)

ಮಂಗಳೂರಲ್ಲಿ ವಿಜಯೋತ್ಸವ

ಕುಂಬ್ಳೆ ಮಿಲಿಟರಿ ಸ್ಥಳ ವಿಚಾರ

ಬೆಳ್ತಂಗಡಿ ಕಡೆ ಬೆಳೆಗೆ ಹುಳದ ಹಾನಿ

ಮುನ್ಸಿಪಲ್ ಸಭೆ-ಗೇರುಬೀಜ ಕಾರ್ಖಾನೆ ಚರ್ಚೆ-ಆಸ್ತಿ ಅಡವು ಬೇಂಕು

ಯುದ್ಧ ಖಾತೆಯ ಕಾರ್ಯದರ್ಶಿ ಶ್ರೀ. ರಾಮಚಂದ್ರ ಅವರಿಗೆ ಒಂದು ಪತ್ರವನ್ನು ಬರೆಯುತ್ತಾ ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆಯವರು ಕುಂಬಳೆ ಬಳಿ ವಶಪಡಿಸಿಕೊಂಡ ಮಿಲಟರಿ ಪ್ರದೇಶದಲ್ಲಿನ ದೇವಸ್ಥಾನಗಳ ಪರಿಸ್ಥಿತಿಯ ಕುರಿತು ಚರ್ಚಿಸಿರುವರು. "ಈ ಸೀಮೆಯೊಳಯಲ್ಲಿರುವ ದೇವಾಲಯಗಳಲ್ಲಿ ಅರ್ಚನೆ ನಡೆಯುವುದಿಲ್ಲ—ಎಂಬುದು ಖಾತ್ರಿಯಾಗಿ ನನಗೆ ಗೊತ್ತಿದೆ." ಹೀಗೆಂದು ಅವರು ತಿಳಿಸಿದ್ದಾರೆ. ತ್ರಿಕಾಲದಲ್ಲಿ ಪೂಜೆ ನಡೆಯ ಬೇಕಾದುದರಿಂದ ಅರ್ಚಕರ ವಸತಿಗಳು ಈ ದೇವಸ್ಥಾನದ ಬಳಿಯಲ್ಲಿರಬೇಕಾದುದು ಅವಶ್ಯಕವೆಂದೂ, ಪೂಜಾ ಕಾಲದಲ್ಲಿ ಭಜಕರು ದರ್ಶನಕ್ಕೆ ಬರುವ ರೂಢಿಯಿರುವುದಾದರೂ ಸ್ವಾಧೀನ ಪಡಿಸಿಕೊಂಡ ಈ ಪ್ರದೇಶಗಳಲ್ಲಿ 'ಯಾರಿಗೂ ಪ್ರವೇಶವಿಲ್ಲ' ಎಂಬ ನೋಟಿಸು ಬೋರ್ಡುಗಳನ್ನು ಹಚ್ಚಲಾಗಿದೆ ಎಂದೂ ಶ್ರೀ. ಹೆಗ್ಡೆಯವರು ಆಕ್ಷೇಪಿಸಿರುವರು. "ಅರ್ಚನೆಯ ಬಗ್ಗೆ ಪ್ರವೇಶನಕ್ಕಾಗಿ ಮಾಡಿಕೊಂಡ ಮನವಿಗಳಿಗೆ ಉತ್ತರವಿಲ್ಲ. ಅರ್ಚಕರನ್ನು ಇಷ್ಟರಲ್ಲೇ ಸಕುಟುಂಬವಾಗಿ ಈ ಪ್ರದೇಶದಿಂದ ಹೊರಗೆ ಕಳುಹಿಸಲಾಗಿದೆ." ಎಂದು ಬರೆಯುತ್ತಾ ಮಾನ್ಯ ಎಂ. ಎಲ್. ಎ. ಅವರು: "ಸಮ್ಮತಿ ಪತ್ರಗಳ ಮೂಲಕ ಪ್ರವೇಶನಕೊಡಲಾಗುತ್ತಿದೆ' ಎಂಬ ಉತ್ತರವು ಎಸೆಂಬ್ಲಿಯಲ್ಲಿ ದೊರಿತ ಬಳಿಕವೇ ಜನರಿಗೆ ಈ ಸಮ್ಮತಿ ಪತ್ರಗಳ ವಿಚಾರ ಗೊತ್ತಾದುದು." ಎಂದು ತಿಳಿಸುತ್ತಾರೆ. ಅವರ ಕುರಿತು ಶ್ರೀ. ಹೆಗ್ಡೆಯವರು: "ಅರ್ಚಕರಿಗೆ ಮಾತ್ರ ಸಮ್ಮತಿ ಪತ್ರ ದೊರೆತರೆ ಸಾಲದು. ಅರ್ಚನೆ ನಡೆಯಬೇಕಾದರೆ ಪಾತಾಳಿ ಪದಾರ್ಥಿ ಮೊದಲಾದವರೂ ಬೇಕು." ಎಂದು ಸೂಚಿಸುತ್ತಾರೆ. ಇದೇ ವಿಚಾರ ಕುರಿತು ಅವರು: "ಮುಖ್ಯವಾಗಿ ಸಾರ್ವಜನಿಕರೇ ಇಲ್ಲವೆಂದಾದ ಮೇಲೆ ಅರ್ಚನೆ ಹೇಗೆ ಸಾಧ್ಯ?" ಎಂಬ ನ್ಯಾಯವೂ ಸಹಜವೂ ಆದ ಪ್ರಶ್ನೆಯನ್ನು ಕೇಳುತ್ತಾರೆ.

ಕೊನೆಯಲ್ಲಿ ಆ ಪ್ರದೇಶದಲ್ಲಿನ ಅಧಿಕಾರಿಗಳ ವ್ಯವಹಾರದ ಕುರಿತು ಶ್ರೀಮಾನ್ ಹೆಗ್ಡೆಯವರು ಹೀಗೆ ಬರಕೊಂಡಿದ್ದಾರೆ: "ಅಧಿಕಾರಿಗಳು ಕೆಲವೆಡೆ ಅನಾವಶ್ಯಕ ದರ್ಪದಿಂದ ವರ್ತಿಸುತ್ತಾರೆ. ಪರ್ಮಿಟುಗಳ ಮೂಲಕ ಯಾರಿಗೂ ಪ್ರವೇಶನವಿದೆ ಎನ್ನುವುದು ಕೇವಲ ತಪ್ಪು. ಅರ್ಜಿಮಾಡಿಕೊಂಡಲ್ಲಿ ಪರ್ಮಿಟ್ ಕೊಡಲಿಲ್ಲ. ಮದ್ರಾಸಿನ ಮೈಲ್ ಪತ್ರಿಕೆಯಲ್ಲೂ ಈ ವಿಚಾರವಾದ ದೂರು ಪ್ರಕಟವಾಗಿತ್ತು. ಆದರೂ ಕಿವಿಗೊಟ್ಟವರಿಲ್ಲ....ಹಿಂದೂಗಳ ಹಿತದ ಕಡೆ ಲಕ್ಷ್ಯ ಕೊಡುವವರಿಲ್ಲ. ಈ ವಿಚಾರವಾಗಿ ತಮಗೆ ಬಂದ ಮಾಹಿತಿಯು ಕೇವಲ ತಪ್ಪು. ದೇವಸ್ಥಾನಗಳನ್ನು ಸ್ವಾಧೀನಪಡಿಸಿಕೊಂಡಿಲ್ಲವೆಂದಾದರೆ ಅರ್ಚಕರನ್ನೇಕೆ ಹೊರಗೆ ಕಳುಹಿಸಲಾಯಿತು? ಅವರನ್ನು ದೂರಕ್ಕೆ ಕಳುಹಿಸಿದರೆ ಕಾಲ ಕಾಲಕ್ಕೆ ಪೂಜೆ ನಡೆಯುವ ಬಗೆ ಹೇಗೆ? ವಿಚಾರಗಳನ್ನೆಲ್ಲ ಮದ್ರಾಸಿನ ಹಿಂದೂ ದೇವಸ್ಥಾನಗಳ ಎಂಡೋಮೆಂಟ್ ಬೋರ್ಡಿನವರೊಡನೆ ವಿಚಾರಿಸಿ ತಕ್ಕ ವ್ಯವಸ್ಥೆ ಮಾಡಬೇಕು.'

ಶ್ರೀಮಾನ್ ಹೆಗ್ಗಡೆಯವರ ಈ ವಿನಂತಿಗೆ ಜಿಲ್ಲೆಯ ಸಾರ್ವಜನಿಕರ ಬೆಂಬಲವಿರುವುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಹಿಂದೂಗಳು ತಮ್ಮ ಸುಸಂಸ್ಕೃತಿಗೆ ತಕ್ಕುದಾಗಿ ತುಂಬಾ ಸಹಿಷ್ಣುತೆ ತಾಳ್ಮೆಗಳುಳ್ಳವರು. ಈ ವಿಜಯದ ಮೇಲಾದರೂ ಕುಂಬಳೆ ಕಡೆಯವರಿಗಾದ ಮತೀಯ ಅನಾನುಕೂಲತೆಯನ್ನು ಆಡಳಿತಗಾರರು ಸರಿಪಡಿಸುವರೆಂದು ನಿರೀಕ್ಷಿಸಲಾಗಿದೆ.

* * *

ಹಳ್ಳಿಯ ಕಡೆಯ ಹೆಚ್ಚಿನ ಮಾರ್ಗಗಳು ಹೆಚ್ಚಾಗಿ ಎತ್ತಿನ ಗಾಡಿಯ ಚೂಪಾದ ಕಬ್ಬಿಣ ಬಳೆಯ ಚಕ್ರಗಳಿಂದ ಹಾಳಾಗುವುದರಿಂದ ಎತ್ತಿನ ಗಾಡಿಗಳ ಮೇಲೆ ತೆರಿಗೆ ಹೊರುವ ಯೋಜನೆಯನ್ನು ಮದ್ರಾಸ್ ಸರಕಾರವು ಮಾಡುತ್ತಿದೆ. ಸಾಗಿಸುವಿಕೆಗೆ ಎತ್ತಿನ ಗಾಡಿಗಳೇ ಹೆಚ್ಚಾಗಿ ಉಪಯೋಗಿಸಲ್ಪಡುವ ನಮ್ಮ ಜಿಲ್ಲೆಯವರಿಗೆ ಇದರಿಂದ ತುಂಬಾ ದಕ್ಕೆಯಾಗಬಹುದು. ಎಂತಹ ಚಕ್ರಗಳಿಂದಲೂ ಹಾಳಾಗದಂತಹ ಮಾರ್ಗಗಳನ್ನು ತಯಾರಿಸುವುದು ಇನ್ನೊಂದು ಪ್ರಗತಿಪರ ಯೋಜನೆ.

ಬೆಳ್ತಂಗಡಿ ನೆರೆಗ್ರಾಮಗಳಾದ ಮೇಲುತಬೆಟ್ಟು, ಮುಂಡೂರು ಕೂಲೆಟ್ಟು, ಪಡುಗುಡಿ ಪೋಡಿರ್‌ನಾಳ್ ಮುಂತಾದ ಗ್ರಾಮಗಳಲ್ಲಿ ಒಂದು ತರದ ಕಂಬಳಿ ಹುಳಗಳಂತಿರುವ ಕಂದು ಬಣ್ಣದ ಹುಳಗಳು ಮೊನ್ನೆಯ ಮಳೆಯ ನಂತರ ತಮ್ಮಷ್ಟಕ್ಕೆ ಉತ್ಪನ್ನವಾಗಿ ಸುಮಾರು ಸೇಕಡಾ ೫೦ರಷ್ಟು ನೇಜಿಯು ಇವುಗಳಿಂದ ಹಾಳಾಗಿ ಹೋಗಿದೆ. ಬೇರೆ ನೇಜಿ ಹಾಕಲು ಬೀಜವಿಲ್ಲದೆ ಸಂಕಷ್ಟವಾಗಿದೆ. ಈ ಹುಳಗಳ ಸಂಖ್ಯೆ ದಿನ ದಿನಕ್ಕೆ ಕಮ್ಮಿಯಾದ ಹಾಗೆ ತೋರುವುದಿಲ್ಲ.

ಈ ಹುಳಗಳು ವಿಚಿತ್ರ ತರದ ಆಹಾರ ಅಭ್ಯಾಸದವುಗಳು. ದಿನವೆಲ್ಲ ಗದ್ದೆಯ ಮಣ್ಣಿನಡಿಯಲ್ಲಿ ಅವಿತುಕೊಂಡಿರುತ್ತವೆ. ರಾತ್ರೆ ಹೊತ್ತಿನಲ್ಲಿ ರಾಶಿ ರಾಶಿ ಕಟ್ಟೆಯಲ್ಲಿ ಹಿಂಡು ಹಿಂಡಾಗಿ ಬಂದು ಗಿಡದ ಮೇಲೆ ಹತ್ತಿ ಮೇಲಿಂದ ಕೆಳಗೆ ತಿನ್ನುತ್ತಾ ಬರುತ್ತವೆ. ಎರಡೇ ರಾತ್ರೆಯಲ್ಲಿ ಎಷ್ಟು ವಿಶಾಲ ಗದ್ದೆಯೊಳಗಿನ ನೇಜಿಯನ್ನಾದರೂ ಬರಿದು ಮಾಡಬಲ್ಲವು. ಇವುಗಳ ಹಾವಳಿಯನ್ನು ಈಗಲೇ ತಡೆಯದಿದ್ದರೆ ಈ ಕಡೆಗಳಲ್ಲಿ ಬರಗಾಲವು ಬರುವುದೂ ಅಸಂಭವನಲ್ಲ ಎಂದು ಬೇಸಾಯಗಾರರು ಅಭಿಪ್ರಾಯಪಡುತ್ತಾರೆ. ನೀರೊಳಗೂ ಈ ಹುಳಗಳು ಜೀವಿಸಬಲ್ಲುವೆಂದ ಮೇಲೆ ಮಳೆಗಾಲದಲ್ಲೂ ಇವುಗಳ ತೊಂದರೆ ನಿಲ್ಲುವಂತಿಲ್ಲ. ಕೃಷಿ ಇಲಾಖೆಯವರು ಮುಖ್ಯವಾಗಿ ಈ ವಿಪರೀತ ಸ್ಥಿತಿಯ ಕುರಿತು ತಕ್ಕ ವ್ಯವಸ್ಥೆ ಕೈಕೊಳ್ಳುವರಾಗಿ ಹಾರೈಸಲಾಗಿದೆ.

* * *

ಮದ್ರಾಸು ಕೇಂದ್ರದ ಭೂಮಿ ಅಡವು ಸಹಕಾರಿ ಬೇಂಕಿನ ಇದರ ಉಪಾಧ್ಯಕ್ಷ ಶ್ರೀ। ವಿ. ರಾಮಮೂರ್ತಿ ಪಂತುಲು ಅದರ ಸಹಾಯಕ ಕಾರ್ಯದರ್ಶಿ ಶ್ರೀ। ಕೆ. ರಂಗಶೇಷ ಅಯ್ಯಂಗಾರ ಮತ್ತು ಪಶ್ಚಿಮ ಕರಾವಳಿಯ ಅಡವಿನ ಬೇಂಕ್‌ಗಳ ಡಿಪ್ಯುಟಿ ರಿಜಿಸ್ಟ್ರಾರರಾದ ಶ್ರೀ। ಸಿ. ಕಣ್ಣನ್ ನಾಯರ್ ಇವರು ಕೆಲವು ದಿನಗಳ ಹಿಂದೆ ಮಂಗಳೂರಿಗೆ ಬಂದಿದ್ದರು. ಇಲ್ಲಿಯ ಸೆಂಟ್ರಲ್ ಸಹಕಾರಿ ಬೇಂಕಿನಲ್ಲಿ ಸೇರಿದ ಸಹಕಾರಿ ಬಂಧುಗಳ ಸಭೆಯಲ್ಲಿ ಅತಿಥಿಗಳು ಪಶ್ಚಿಮ ಕರಾವಳಿಯಲ್ಲಿ ಸಹಕಾರಿ ಭೂಮಿ ಅಡವಿನ ಬೇಂಕುಗಳು ಸುವ್ಯವಸ್ಥಿತವಾಗಿ ನಡೆಯದಿರಲು ಕಾರಣಗಳನ್ನು ಪರಿಶೀಲಿಸಿ ಅದಕ್ಕಿರುವ ತೊಡಕುಗಳನ್ನು ಬಗೆಹರಿಸುವ ಕುರಿತಾಗಿ ಚರ್ಚೆ ನಡೆಯಿತು.

ಈ ಬೇಂಕುಗಳಲ್ಲಿ ಈಗ ನಡೆಯುತ್ತಿರುವ ಬಡ್ಡಿದರವನ್ನು ಕಡಿಮೆ ಮಾಡುವರೆ ಸರಕಾರಕ್ಕೆ ಮನವಿಮಾಡಬೇಕು. "ಮೂಲಗೇಣಿ ಒಕ್ಕಲುಗಳಿಗೆ ಅವರ ಮೂಲಗೇಣಿ ಹಕ್ಕಿನ ಮೇಲೆ ಸಾಲ ಕೊಡಲಾಗುವುದು. ಭೂಮಿಯನ್ನು ಸುಧಾರಿತ ರೀತಿಯಲ್ಲಿ ಕೃಷಿಮಾಡಲು, ದುರುಸ್ತಿಪಡಿಸಲು ಅಥವಾ ಹಳೇ ಸಾಲ ತೀರಿಸಲು ೨೦ ವರ್ಷದ ಸುಲಭ ಕಂತುಗಳಿಂದ ಮರುಪಾವತಿ ಮಾಡುವ ಷರ್ತಗಳ ಮೇಲೆ ರೂ. ೧೫ ಸಾವಿರ ತನಕ ಒಬ್ಬ ಪಟ್ಟಾದಾರನಿಗೆ ಆಸ್ತಿ ಜವಾಬುದಾರಿಯ ಮೇಲೆ ಸಾಲಕೊಡಲಾಗುವುದು" ಎಂದು ಶ್ರೀ ರಾಮಮೂರ್ತಿ ಪಂತುಲು ಅವರು ತಿಳಿಸಿದರು.

"ನಮ್ಮ ಜಿಲ್ಲೆಯಲ್ಲಿ ಕೆಲವು ಭೂಮಿಗಳ ಮೇಲೆ ಸಾಲಕೊಡಲು ಕೆಲವು ತೊಡಕುಗಳಿವೆ. ಅಶಾನಾರ್ಥದ ಜವಾಬುದಾರಿಕೆ, ದೇವತಾ ವಿನಿಯೋಗದ ಹೊಣೆಗಾರಿಕೆ, ಇವುಗಳು ಆ ತೊಡಕುಗಳಲ್ಲಿ ಕೆಲವು. ಇವನ್ನು ಬಗೆಹರಿಸಲು ಸರಕಾರವನ್ನು ವಿನಂತಿಸಿಕೊಳ್ಳಲಾಗುವುದು" ಎಂದೂ ಅವರು ತಿಳಿಸಿದರು.

ಈ ಸಂಬಂಧ ಮಂಗಳೂರು ಮತ್ತು ಉಡುಪಿ ಕೇಂದ್ರಗಳಲ್ಲಿ ಪ್ರತ್ಯೇಕ ಸೂಪರ್‌ವೈಜರುಗಳನ್ನು ಮಾಡುವಂತೆಯೂ ಆ ಕುರಿತು ಎಲ್ಲಾ ಖರ್ಚನ್ನೂ ಕೇಂದ್ರ ಬೇಂಕಿನವರೇ ನೋಡಿಕೊಳ್ಳುವರೆಂದೂ ಸೂಚಿಸಲಾಯಿತು.

ವ್ಯವಸಾಯಗಾರರು ಈ ಬೇಂಕಿನ ಸದುಪಯೋಗ ಪಡೆಯುವುದಕ್ಕೆ ಪ್ರಯತ್ನಪಡುವರೆಂದು ನಿರೀಕ್ಷಿಸಲಾಗಿದೆ.

* * *

ವಿಜಯದ ವಾರ್ತೆ ಬಂದಕೂಡಲೇ ಜಿಲ್ಲಾ ಕಲೆಕ್ಟರರು ತಾ. ೯, ೧೦ ರಜಾದಿನಗಳಾಗಿ ಸಾರಿದರು. ಕಛೇರಿಗಳೂ ಬೆಂಕುಗಳೂ ಮುಚ್ಚಲ್ಪಟ್ಟಿದ್ದವು. ತಾ. ೧೦ರಂದು ನಗರದ ಅನೇಕ ಅಂಗಡಿಗಳೂ, ಪೇಟೆಗಳೂ ಮುಚ್ಚಲ್ಪಟ್ಟಿದ್ದವು. ಮೆರವಣಿಗೆಗಳೂ, ಸಭೆಗಳು ಜರುಗಿಸಲ್ಪಟ್ಟವು. ಆದಿತ್ಯವಾರದಂದು ಬಡಬಗ್ಗರಿಗೆ ಊಟವಿದೆಎಂದೂ ವದಂತಿ ಇದೆ. ಸೋಮವಾರ ಪೂರಾ ರಜಾ ದಿನವಾಗಿದೆ.

ತಾ. 7ನೇ ಸೋಮವಾರ ನಡೆದ ಮುನಿಪಲ್ ಮೀಟಿಂಗಿನಲ್ಲಿ ಹಲವೊಂದು ಬಿರುಸಾದ ಚರ್ಚೆಗಳು ನಡೆದವು. ಹಲವೊಂದು ಬಿಲ್ಲುಗಳೂ ಅಂದಾಜುಗಳೂ ಮಂಜೂರಾದವು. ಮಿಜಾರ್‌ಕಾರರ ಕಾರ್ಖಾನೆ ಕುರಿತು ವಾಗ್ಯುದ್ಧಗಳಾದುವು. ಮಿ। ಸಿ. ಎಲ್ ಲೋಬೊ ಅವರು ಸದ್ರಿ ಕಾರ್ಖಾನೆಯಿಂದ ಆಸುಪಾಸಿನವರಿಗಾಗುವ ತೊಡಕು ತೊಂದರೆಗಳನ್ನು ವಿವರಿಸಿ ಅದರಲ್ಲಿನ ಯಾವತ್ತು ಬೆಂಕಿ ಉರಿಸುವ ಕೆಲಸ ಕಾರ್ಯಗಳನ್ನು ನಿಲ್ಲಿಸಿಬಿಡುವ ಕಾರ್ಯಕ್ರಮ ಕೈಕೊಳ್ಳುವಂತೆ ನಗರ ಸಭೆಗೆ ಒತ್ತಾಯ ಮಾಡಿದರು. ಅವರ ಠರಾವು ಬಹುಮತದಿಂದಲೂ ಪಾಸಾಯಿತು. ಶ್ರೀಗಳಾದ ಮುಕುಂದ ನಾಕ್, ರಾಮಚಂದ್ರಪ್ಪೈ, ಮತ್ತು ನರಸಿಂಹಪ್ಪೈ ಇವರು ಮೂವರು ಮಾತ್ರ ವಿರೋಧ ಸೂಚಕರು.

ಸದ್ರಿ ಗೇರುಬೀಜ ಕಾರ್ಖಾನೆಯಿಂದ ನಿಜವಾಗಿ ಯಾವಾವ ಭಾಧಕಗಳು ನೆರೆಕೆರೆಯವರಿಗೆ ಆಗುತ್ತವೆಂಬುದರ ಕುರಿತು ಯೋಗ್ಯ ಆರೋಗ್ಯ ತಜ್ಞರಿಂದ ಪರಿಶೀಲನೆ ನಡೆಸಿ ಅವರ ಸಲಹೆಗಳ ಮೇಲೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಯಾವ ಸಾರ್ವಜನಿಕ ಆಡಳಿತಕ್ಕೂ ತಕ್ಕುದಾದ ಮಾರ್ಗ. ಒಂದು ಸಮಯಕ್ಕೆ ದೇವಾಲಯಗಳ ಗಂಟೆ ಸ್ವರದಿಂದ ಆಸುಪಾಸಿನವರಿಗೆ ತೊಂದರೆಯಾಗುತ್ತಿದೆ ಎಂದು ಅರ್ಜಿಗಳು ಸರಕಾರಕ್ಕೆ ಹೋದರೆ ಅವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವರೆ? ಯಾವುದಕ್ಕೂ ತಜ್ಞರ ಮತ್ತು ನಿಷ್ಪಕ್ಷಪಾತಿ ಸದಸ್ಯರುಗಳ ಸಮಿತಿಗಳಿಂದ ಇಂತಹ ಚರ್ಚಾಸ್ಪದ ವಿಷಯಗಳನ್ನು ಸ್ಫುಟಗೊಳಿಸುವುದು ಕೇವಲ ಚರ್ಚೆಗಿಂತ ಸಮರ್ಪಕವಾದ ಧೋರಣೆ. ಕಾರ್ಖಾನೆಯವರೇ ಆ ಕುರಿತು ಯೋಗ್ಯ ತಪಾಸನೆ ನಡೆಸಿ ಅವಶ್ಯಕ ಮಾರ್ಪಾಟುಗಳನ್ನು ಮಾಡಲೂ ಪ್ರಯತ್ನಪಡಬಹುದು.

ಮಂಗಳೂರಲ್ಲಿ ಮೇ ೧ನೇ ತಾರೀಕಿನಂದು ಮೇ ದಿನವನ್ನು ಆಚರಿಸಲಾಯಿತು. ಮಜೂರ ಸಂಘಗಳೂ ಸದಸ್ಯರು ಪ್ರಭಾತಫೇರಿ ಮೆರವಣಿಗೆಯನ್ನು ಮಾಡಿ, ಸಾಯಂಕಾಲ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆಸೇರಿತ್ತು.

ಸ್ವಾತಂತ್ರ್ಯ ದಿನಾಚರಣೆಯಂದು ಕೈದು ಮಾಡಲ್ಪಟ್ಟಿದ್ದ ಲಿಂಗಪ್ಪ ಸುವರ್ಣ ಮತ್ತು ಮಂಜುನಾಥ ಎಂಬಿಬ್ಬರ ವಿಚಾರಣೆಯು ಸ್ಪೆ. ಸಬ್ ಮೇಜಿಸ್ಟ್ರೇಟರಲ್ಲಿ ನಡೆದು ಇವರಿಗೂ ಎರೆಡೆರಡು ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ.

ಬುದ್ಧಿವಂತ ಆದರೂ ಮೂರ್ಖ-ಮುಸ್ಸೋಲಿನಿ ಸ್ವಂತನಾಶಕ್ಕೆ ಸಹಿಹಾಕಿದ.

ಇವನು ಘಜನಿಯ ಘೋರಿಯಲ್ಲ, ಜರ್ಮನಿಯ ಗೋರಿಂಗ್-ಮಾನವ 'ಗೋರಿಲ್ಲಾ'

ಕೋಮಲ ಸೌಂದರ್ಯ ನಿಮಗೆ ಇರಬೇಕೆ?

ನಿಮಗೆ ಶುದ್ಧವಾದ ಮತ್ತು ಹಾಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯು ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುಪು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನು ಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕ್ಕೆ ಕೋಮಲತೆಯನ್ನುಂಟುಮಾಡುವುದು.

BILE BEANS

ಬೈಲ್ ಬೀನ್ಸು ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು.

ಆಫ್ರಿಕಾ ವಿಜಯದ ಹಿಂದೀ ಸೈನ್ಯ

(೬ನೇ ಪುಟದಿಂದ)

ಇಷ್ಟಾಗುತ್ತಿರುವಾಗ ೫ನೇ ದಳವು ಸುಸಜ್ಜಿತವಾಗುತಿತ್ತು. ಆಫ್ರಿಕದ ಪಶ್ಚಿಮದಲ್ಲಿ ಒಂದು ಕಡೆ ಇಟಲಿಯ ೨೫೦ ಸಾವಿರ ಸೈನ್ಯಗಳು ಅವರ ಹೊಡೆತದ ಸವಿಯನ್ನನುಭವಿಸುತಿದ್ದರು.

೫ನೇ ದಳದ ಈ ಪರಾಕ್ರಮವನ್ನು ಸರಿಗಟ್ಟುವ ಇನ್ನೊಂದು ಹಿಂದೀದಳವೆಂದರೆ ಆಗಲೇ ಭಾರತದಿಂದ ತರಿಸಲ್ಪಟ್ಟ ೧೧ನೇ ಸೈನ್ಯವಿಭಾಗ. ೧೯೪೧ರ ಮೇ ತಿಂಗಳಲ್ಲಿ ಅವರು ಶತ್ರುವಿನೊಡನೆ ಭಯಂಕರ ಕಾದಾಟದಲ್ಲಿ ಮಗ್ನವಾಗಿದ್ದರು. ಮಿತ್ರರ ಹೊಟ್ಟೆಗೆ ಒಂದು ಚೂರಿಯಂತೆ ಅಪಾಯಕರವಾಗಿದ್ದ ಪ್ರದೇಶವನ್ನು ಹತೋಟಿಯಲ್ಲಿ ತಂದ ಅಮರ ಕೀರ್ತಿಗೆ ಅವರು ಪಾತ್ರರಾದರು.

ಇರಾಕನ್ನು ವಶಪಡಿಸಿಕೊಂಡ ಕೂಡಲೇ ಸಿರಿಯಾದಲ್ಲಿ ಜರ್ಮನ್ನ್ ಪ್ರಭಾವವು ಹೆಚ್ಚತೊಡಗಿತು. ಅತ್ತ ವಿಚೀ ಸರಕಾರದವರು ನಾಜೀಗಳಿಗೆ ಎಲ್ಲಾ ತರದ ಸಹಾಯವನ್ನೊದಗಿಸಿ ಮಿತ್ರರಿಗೆ ತೊಡಕನ್ನುಂಟುಮಾಡುತಿದ್ದರು. ಈ ಗಂಡಾಂತರ ಕಾಲದಲ್ಲೇ ಮಿತ್ರರು ಮುಂದಡಿ ಇಡುವವರಾದರು.

ಮತ್ತೊಂದು ಸಲಕ್ಕೆ ಈ ಹತ್ತನೇ ದಳವು ಸಿದ್ಧವಾಗಿ ನಿಂತಿತು. ಈ ಸಲ ಇರಾಕಿನಲ್ಲಿ ಅಲ್ಲಿಯ ಮರುಭೂಮಿ ಪ್ರದೇಶದ ಮೇಲೆ ನೂರಾರು ಮೈಲು ಪ್ರಯಾಣ ಮಾಡಬೇಕಾಯಿತು. ಪಶ್ಚಿಮ ಸಿರಿಯದ ಡಿಯರೆಜ್ ಜೋರ್ ಎಂಬ ಕೇಂದ್ರವನ್ನು ಹಟಸಾಧನೆಯಿಂದ ವಶಪಡಿಸಿಕೊಂಡರು.

ಇಷ್ಟರಲ್ಲಿ ಈಜಿಪ್ತಿನಿಂದ ನಾಲ್ಕನೇ ಮತ್ತು ಐದನೇ ದಳಗಳು ಇರಾಕಿಗೆ ತರಲ್ಪಟ್ಟವು. ಸ್ವತಂತ್ರ ಫ್ರೆಂಚ್ ಸೈನ್ಯದೊಂದಿಗೆ ಅವರು ಸಿರಿಯದ ರಾಜಧಾನಿಯಾದ ಡೆಮಸ್ಕಸ್ ನಗರದ ಕಡೆಗೆ ಧಾವಿಸಿದರು. ೧೯೪೧ರ ಒಗಸ್ಟ್ ತಿಂಗಳ ೪ ದಿನದ ಮಿಂಚಿನ ದಾಳಿಯಲ್ಲಿ ಎಂಟನೇ ಮತ್ತು ಹತ್ತನೇ ಹಿಂದೀ ದಳಗಳು ಮಹತ್ವದ ಭಾಗವಹಿಸಿದ್ದವು. ಹಾಗೆ ಮಾಡದಿದ್ದರೆ ಪರ್ಶಿಯಾದಿಂದ ನಾಜೀ ಪ್ರಭಾವವನ್ನು ಕಿತ್ತೊಗೆಯಲಾಗುತ್ತಿರಲಿಲ್ಲ. ದಕ್ಷಿಣ ಪರ್ಶಿಯದ ಎಣ್ಣೆ ಗನಿಗಳು ಅವರ ವಶವಾದುವು. ಜರ್ಮನ್ ನಾಯಕತ್ವದಲ್ಲಿ ಶತ್ರುಗಳು ತಮ್ಮ ಸ್ಥಾನವನ್ನು ಬಿಗಿಯಾಗಿ ಹಿಡಿದು ನಿಂತವು. ಆದರೆ ಹಿಂದೀಯ ದಳಗಳು ಪ್ರತಿಯೊಂದು ಅವರ ಎಡೆಗಳಲ್ಲಿ ಬಿರುಕನ್ನುಂಟುಮಾಡಿದವು. ಉತ್ತರಕ್ಕೆ ಮುನ್ನುಗ್ಗಿದ ಬ್ರಿಟಿಷ್ ದಳಗಳು ಮೊದಲನೇ ಸಲಕ್ಕೆ ಈ ರಂಗದಲ್ಲಿ ಕೆಸ್ಪಿಯನ್ ಸಮುದ್ರದ ಬಳಿ ಒಟ್ಟು ಸೇರುದುವು.

ಕೆಸ್ಪಿಯನ್ ಸಮುದ್ರ ಪ್ರದೇಶದ ಸಂಧಿ ಸ್ಥಳಗಳನ್ನು ಜರ್ಮನರು ಹಿಡಿದಿದ್ದರಿಂದ ರಷ್ಯಕ್ಕೆ ಸರಬರಾಯಿ ಕಳುಹಿಸಲು ಅವಸರದ ಮಾರ್ಗ ಕಂಡು ಹಿಡಿಯಬೇಕಾಯಿತು. ಈ ಪರಿಶ್ರಮದಲ್ಲಿ ಹಿಂದೀ ದಳಗಳು ಹೆಚ್ಚಿನ ಸಹಾಯ ಮಾಡಿದವು. ಅಲ್ಲಿಂದ ಮುಂದೆ ಅವರು ಯುರೋಪಿನೊಳಗಿನ ಜರ್ಮನರ ಮೇಲೇರಿ ಹೋಗಲು ಸಮರ್ಥರಾದರು.

ಉಚೆ ಈಜಿಪ್ತಿನಲ್ಲಿ ರೊಮೆಲ್ಲನ ಪಡೆಗಳು ಹಿಂದೂಡಲ್ಪಟವು. ೧೯೪೩ರ ಫೆಬ್ರವರಿಯ ವರೆಗೂ ಅವನ ಹಿನ್ನಡೆತವು ಮುಂದರಿಯಿತು. ಮೆರೆತ್ ಲ್ಯಾನಿನ ಬಳಿ ಅವನು ಪುನಃ ತಳವೂರಲು ಪ್ರಯತ್ನ ಪಟ್ಟನು. ಆದರೆ ಹಿಂದೀಯರ ಎಂಟನೇ ದಳವ ಎದುರಿನಲ್ಲಿ ಅವನ ವಿರೋಧವು ಕುಗ್ಗಿತು. ಅವನು ಮತ್ತೂ ಹಿಂದಕ್ಕೆ ಸರಿದನು. ವಾಡಿ ಅಕಾರಿತ್, ಸ್ಫಾಕ್ಸ್ ಗಾರ್ಸಿ ಕಡೆಗಳಲ್ಲಿಂದಲೂ ಶತ್ರುಗಳು ಅಟ್ಟಲ್ಪಟ್ಟರು. ಈ ಕೆಲವು ಕಡೆಗಳಲ್ಲಿ ಹಿಂದೀ ಸೈನಿಕರಲ್ಲಿ ಕೆಲವರು ತಮ್ಮ ಅಸಾಮಾನ್ಯ ಸಾಹಸದಿಂದ ವಿಕ್ಟೋರಿಯಾ ಕ್ರೊಸ್ ಪದಕವನ್ನು ಬಿರುದಾಗಿ ಪಡೆದರು.

ಕೊನೆಗೆ ೪ನೇ ದಳವು ಬ್ರಿಟಿಷರು ೧ನೇ ದಳದೊಂದಿಗೆ ಒಂದು ಕಡೆ ಒಟ್ಟು ಸೇರಿತು. ಅಲ್ಲಿಂದ ಸ್ವಲ್ಪ ಸಮಯದಲ್ಲೇ ಇರ್ವ ದಳಗಳೂ ಟ್ಯೂನಿಸಿನ ಹೆಬ್ಬಾಗಿಲುಗಳನ್ನು ಮುರಿದಿಕ್ಕಿದರು. ರೊಮೆಲ್ಲನು ಜರ್ಮನಿಗೆ ಹಿಂದಕ್ಕೆ ಕರೆಯಲ್ಪಟ್ಟಿದ್ದು ಅವನ ಸ್ಥಾನವನ್ನು ವೊನ್ ಆರ್ನೀಮನು ವಹಿಸಿದ್ದನು. ಆದರೆ ಹಿಂದೀಯ ೪ನೇ ದಳಕ್ಕೆ ಅವನು ಶರಣಾಗತನಾಗಬೇಕಾಯಿತು.

ಸಾವಿರಾರು ಮೈಲುಗಳ ದಾರಿಯನು ಈ ಹಿಂದೀ ದಳಗಳು ತುಳಿದಿವೆ. ಜರ್ಮನ್ ಬಿರುಗಾಳಿಯನ್ನು ಆಫ್ರಿಕದಿಂದ ಓಡಿಸಿದಂದಿನಿಂದ ಅದು ಯುರೋಪದ ಕಡೆ ತಿರುಗುವಂತಾಯಿತು. ಅವರ ಸಾಹಸ ಕೃತಿಗಳು ಅವರ್ಣನೀಯವಿವೆ. ಹಲವು ವಿಕ್ಟೋರಿಯಾ ಪದಕಗಳು ಹಿಂದೀ ಸೈನಿಕರಿಗೆ ಸಿಕ್ಕಿದವು. ಬೊಂಬ್ಯಾಯಿಯ ಪ್ರೇಮೇಂದ್ರ ಸಿಂಗರಿಗೆ ಅಬಿಸೀನಿಯದಲ್ಲಿ ಅವರ ಸಾಹಸಕ್ಕೆ ಎಲ್ಲರಿಗಿಂತಲೂ ಹೆಚ್ಚಿನ ಬಹುಮಾನ ಪದಕಗಳು ದೊರೆತವು ಕರೆವಿನಲ್ಲಿ ಸುಬೇದಾರ್ ರಿಚ್‌ಪಾಲ್ ಸಿಂಗರ ಮರಣಾಂತ ಸಾಹಸಕ್ಕೆ ಅವರ ಕುಟುಂಬಸ್ಥರಿಗೆ ಪದಕಗಳು ಕೊಡಲ್ಪಟ್ಟವು.

ANNOUNCEMENT

The Board of Directors of

The PRABHAKARA BANK Ltd.,

beg to announce the formal opening of their Head Office at Mudabidri on the 9th of May 1945 at 6 p. m.

Sri. A. B. SHETTY M. L. A. (MADRAS)

Ex. Parliamentary Secretary,

has kindly consented to preside on the occasion.

K. S. Kamath B. A., Cert. A. I. I. B.
Managing Director,

Mudabidri, 6—5—'45

P. Dasa Kini,
Secretary.

ಹೊನ್ನಿನ ನಾಡು-ಕನ್ನಡ ನಾಡು

ಕೋಲಾರದ ಚಿನ್ನದ ಗನಿಗಳು

ಇಂದಿನ ಮೈಸೂರಿನ ಪ್ರಗತಿಗೆ ಕಾರಣವಾದ ಅನೇಕ ಬೃಹದ್ ಯೋಜನೆಗಳಿಗೆ ಟಿಪ್ಪು ಸುಲ್ತಾನನ ಕಾಲದಲ್ಲಿಯೇ ತಳಹದಿ ಹಾಕಲ್ಪಟ್ಟಿತ್ತೆಂಬ ಸಂಗತಿಯು ಅನೇಕರನ್ನು ವಿಸ್ಮಯಗೊಳಿಸದಿರಲಿಕ್ಕಿಲ್ಲ. ಉದಾಹರಣೆಗಾಗಿ ಕನ್ನಂಬಾಡಿಯ ಕೃಷ್ಣರಾಜ ಸಾಗರ ಅಣೆ ಕಟ್ಟನ್ನು ರಚಿಸಲು ಆ ಮೈಸೂರು 'ಹಾಲಿ'ಯು ಯೋಚಿಸಿ ಅದಕ್ಕೆ ಅನ್ವೃತ ಕಾಲದಲ್ಲಿ ಅದರ ಶಂಕುಸ್ಥಾಪನೆ ಮಾಡಿದನೆಂಬುದಕ್ಕೆ ಅವನ ಕಾಲದ ಒಂದು ಉರ್ದು ಶಾಸನವು ದಾಖಲೆ ತೋರಿಸುತ್ತದೆ.

ಕೋಲಾರದ ಚಿನ್ನದ ಗನಿಗಳೂ ಟಿಪ್ಪು ಸುಲ್ತಾನನ ಕಾಲದಿಂದಲೂ ಅಸ್ತಿತ್ವದಲ್ಲಿದ್ದುವು. ಇದಲ್ಲದೆ ಬೇರೆ ಅನೇಕ ಕಡೆಗಳಲ್ಲೂ ಚಿನ್ನವನ್ನು ಅಗೆದು ತೆಗೆಯಲು ಪ್ರಯತ್ನ ಮಾಡಿದುದರ ಅವಶೇಷಗಳೂ ಕಂಡು ಬಂದಿವೆ. ಕೆಲವು ಕಡೆ ನೆಲವನ್ನು ಅಗೆದು ಚಿನ್ನವನ್ನು ತೆಗೆಯುತಿದ್ದರು. ಆದರೆ ಮುಖ್ಯವಾಗಿ ಕೆಲವು ನದಿಗಳಲ್ಲಿ ಮರಳನ್ನೂ ತೊಳೆದು ಅದರಲ್ಲಿ ಚಿನ್ನವನ್ನು ತೆಗೆಯುವುದೇ ಬಹಳ ಹೆಚ್ಚಾಗಿ ರೂಢಿಯಲ್ಲಿದ್ದಿತು.

ಟಿಪ್ಪುವಿನ ಮರಣಾನಂತರ ಕೆಲಬ್ರಿಟಿಷ್ ಖನಿಜ ತಜ್ಞರು ಸಂಸ್ಥಾನದ ಲೋಹ ಪ್ರದೇಶಗಳ ಪರಿಶೀಲನೆ ನಡೆಸಿ ಒಂದು ವರದಿ ತಯಾರಿಸಿದರು. ೧೮೭೩ರಲ್ಲಿ ಕೋಲಾರ ಚಿನ್ನದ ಗಣಿಯಲ್ಲಿ ಬಂಗಾರ ತೆಗೆಯಲು ಕೆಲವು ಕಂಪೆನಿಗಳಿಗೆ ಹಕ್ಕನ್ನು ಕೊಡಲಾಯಿತು.

೧೮೮೦ರಿಂದ ೧೮೮೪ರ ವರೆಗಿನ ಅವಧಿಯಲ್ಲಿ ನಾಲ್ಕು ಕಂಪೆನಿಗಳವರು ಚಿನ್ನ ತೆಗೆಯುವ ಉದ್ಯಮವನ್ನು ಕೈಕೊಂಡರು. ಆದರೆ ಕೆಲವೆಡೆ ೨೦೦ ಅಡಿಗಳ ವರೆಗೂ ಅಗೆದರೂ ಯಾವ ಪ್ರಯೋಜನವು ಆಗಲಿಲ್ಲ. ಕಂಪೆನಿಗಳ ಬಂಡವಾಳವೆಲ್ಲಾ ಖರ್ಚಾಗುತ್ತಾ ಬರುವಾಗ ೧೮೮೫ರಲ್ಲಿ ಈಗಿನ 'ಚಾಂಪಿಯನ್' ಗಣಿಯು ದೊರೆಯಿತು. (೮½ ಕೋಟಿ ಪವನು ಬೆಲೆ ಬಾಳುವ ಚಿನ್ನವನ್ನು ಕೊಟ್ಟ ಗಣಿ ಇದು.) ಇದರಿಂದ ಪ್ರೋತ್ಸಾಹಿತರಾಗಿ ಮತ್ತೆ ಬೇರೆ ಗಣಿಗಳಲ್ಲೂ ಕೆಲಸವು ಪ್ರಾರಂಭಿಸಲ್ಪಟ್ಟಿತು.

ಇದೇ ಸಮಯದಲ್ಲಿ ಜಗತ್ತಿನ ಬೇರೆ ಚಿನ್ನದ ಗಣಿಗಳಲ್ಲಿ ಚಿನ್ನದ ಉತ್ಪತ್ತಿ ಕಡಿಮೆಯಾಗ ತೊಡಗಿದ್ದಾಗ ಮೈಸೂರಿನ ಗಣಿಗಳು ಗಣನೀಯ ಪ್ರಮಾಣದಲ್ಲಿ ಈ ಶ್ರೇಷ್ಠ ಲೋಹದ ಅದುರುಗಳನ್ನು ಕೊಟ್ಟವು. ೧೮೯೦ರಲ್ಲಿ ೧೫ ಕಂಪೆನಿಗಳು ಈ ಉದ್ಯಮದಲ್ಲಿ ನಿರತವಾಗಿದ್ದುವು. ಆದರೆ ಅವುಗಳಲ್ಲಿ ಬರೀ ೫ ಮಾತ್ರ ಕೆಲಸ ಮಾಡುತಿದ್ದು ತಮ್ಮ 'ಶೇರು'ಗಳ ಮೇಲೆ ಡಿವಿಡೆಂಡನ್ನು ಕೊಡುತಿದ್ದು, ಉಳಿದುವು. ಚಿನ್ನವನ್ನೂ ತೆಗೆಯುತ್ತಿರಲಿಲ್ಲ, ಡಿವಿಡೆಂಡನ್ನೂ ಕೊಡುತ್ತಿರಲಿಲ್ಲ. ಕ್ರಮೇಣ ಇವೆಲ್ಲ ನಿಂತು ಹೋಗಿ ಆ ೫ ಕಂಪೆನಿಗಳು ಮಾತ್ರ ಉಳಿದು ೫೦ ವರ್ಷಗಳ ವರೆಗೆ ಚಿನ್ನ ತೆಗೆದವು. ಈಗ ನಾಲ್ಕು ಕಂಪೆನಿಗಳು ಕೆಲಸ ಮಾಡುತ್ತವೆ.

ಗಣಿಗಳಲ್ಲಿ ಚಿನ್ನವು ಮೇಲೆ ಮಾತ್ರ ದೊರೆಯುವುದು, ಆಳದಲ್ಲಿ ಅದು ಸಿಗಲಾರದೆಂಬ ಭಾವನೆಯು ಈಗ ಅಳಿಸಿ ಹೋಗಿದೆ. ಕಾರಣ ಈಗ ಹೆಚ್ಚು ಕಡಿಮೆ ೧೦ ಸಾವಿರ ಅಡಿ (ಸುಮಾರು ೧½ ಮೈಲು) ಗಳಷ್ಟು ಆಳದಲ್ಲಿ ಚಿನ್ನವು ತೆಗೆಯಲ್ಪಡುತ್ತದೆ.

ಈ ಚಿನ್ನದ ಗಣಿಗಳ ಉತ್ಪತ್ತಿ ಸಂಖ್ಯೆಯು ಬಹಳ ಸೋಜಿಗದಿದ್ದು ಮೊದಲಿನ ಕಂಪೆನಿಗಳಿಗೆ ನಿರಾಶಾಜನಕವಾಗಿದ್ದುವು ೧೮೭೩ರಲ್ಲಿ ಈ ಪ್ರದೇಶದಲ್ಲಿ ಬರೀ ೯ ಔನ್ಸುಗಳಷ್ಟು ಮಾತ್ರ ಚಿನ್ನ ಸಿಕ್ಕಿತು. ಹಿಮಾಲಯವನ್ನು ಅಗೆದು ಇಲಿಯನ್ನು ಹೊರ ತೆಗೆದಂತಾಯಿತು. ಆದರೆ ಪ್ರಯತ್ನಕ್ಕೆ ತಕ್ಕ ಫಲವೆಂಬಂತೆ ೧೯೦೫ರಲ್ಲಿ ೫½ ಲಕ್ಷ ಔನ್ಸು (ಸುಮಾರು ೨೩½ ಲಕ್ಷ ಪವನುಗಳಷ್ಟು) ಸುವರ್ಣ ಲೋಹವು ದೊರಕಿತು ೧೯೪೩ರಲ್ಲಿ ೫೦½ ಕೋಟಿ ರೂಪ್ಯಾ ಬೆಲೆ ಬಾಳುವಷ್ಟು ದೊರಕಿತು. ಮೈಸೂರು ಸರಕಾರಕ್ಕೆ ಅದೇ ವರ್ಷ ಚಿನ್ನದ ಸುಂಕ ರೂಪವಾಗಿ ೨ ಕೋಟಿ ರೂಪ್ಯಾಗಳು ಸಿಕ್ಕಿವೆ. ಮತ್ತೆ ಇತರ ರೂಪದಲ್ಲಿ ೨೧ ಲಕ್ಷ ಆದಾಯವಾಗಿದೆ.

ಪ್ರಾರಂಭದಿಂದ ೧೯೪೩ರ ತನಕ ಚಿನ್ನ ಅಗೆಯುವ ಕಂಪೆನಿಗಳು ಮೈಸೂರಿನ ಗಣಿಗಳಿಂದ ಸುಮಾರು ೧೧ ಕೋಟಿ ಪವನುಗಳಷ್ಟು ಚಿನ್ನ ಅಗೆದಿವೆ.

ಚಿನ್ನ ತೆಗೆಯು ವಿಧಾನ

ಕ್ವಾರ್ಟ್ಸ್ ಎಂಬ ಶಿಲೆಯ ನಡುವೆ ಚಿನ್ನದ ಅದುರು ಇರುತ್ತದೆ. ಇವನ್ನು ಯಂತ್ರಗಳಲ್ಲಿ ಪುಡಿ ಮಾಡಿ ಮರಳಿನಂತೆ ಮಾಡುತ್ತಾರೆ. ನಂತರ ರಂಧ್ರದದ ಬಲೆಗಳಲ್ಲಿ ಶೋಧಿಸಿ ಚಿನ್ನವನ್ನೂ ಕಲ್ಲನ್ನೂ ಆದಷ್ಟು ಪ್ರತ್ಯೇಕಿಸುತ್ತಾರೆ. ಕೊನೆಗೆ ಪಾದರಸದೊಡನೆ ಚಿನ್ನವನ್ನು ಬೆರಸಿ, ಕರಗಿಸಿ ಪ್ರತಪ್ರತ್ಯೇಕವಾದ ಚಿನ್ನದ ಗಟ್ಟಿಗಳನ್ನಾಗಿ ಮಾಡುತ್ತಾರೆ. ರಾಸಾಯನಿಕ ದ್ರವ್ಯಗಳನ್ನುಪಯೋಗಿಸಿ ಚಿನ್ನವನ್ನು ಪ್ರತ್ಯೇಕಿಸುವ ವಿಧಾನವೂ ಇದೆ.

ಬುಲಿಯನ್ ಚಿನ್ನದ ಪ್ರತೀ ಸಾವಿರ ಭಾಗಗಳಲ್ಲಿ ೯೦೦ ಶುದ್ಧ ಚಿನ್ನ, ೯೦ ಬೆಳ್ಳಿ ಮತ್ತೆ ಇತರ ಅಂಶಗಳಷ್ಟು ಬೇರೆ ಲೋಹಗಳು ಇರುತ್ತವೆ.

ಕೂಲಿಗಾರರು

೧೯೩೫ನೇ ಇಸವಿಯ ವರೆಗೆ ಚಿನ್ನದ ಗಣಿಗಳಲ್ಲಿ ಎಲ್ಲಾ ಸುರಂಗಗಳ ಒಟ್ಟು ಉದ್ದ ೫೨½ ಮೈಲುಗಳಷ್ಟಿತ್ತು. ಒಂದು ಕಡೆ ಒಂದೇ ಸುರಂಗವು ೩೪ ಮೈಲು ಉದ್ದಕ್ಕೆ ತೋಡಲ್ಪಟ್ಟಿದೆ.

ಈ ಗಣಿಗಳಲ್ಲಿ ಸುಮಾರು ೨೧ ಸಾವಿರ ಕೆಲಸಗಾರರಿರುತ್ತಾರೆ. ಇವರಲ್ಲಿ ೨೧೮ ಮಂದಿ ಯುರೋಪಿಯನರೂ, ೪೦೩ ಎಂಗ್ಲೊ ಇಂಡಿಯೂನರೂ ಇದ್ದು ಉಳಿದವರು ಭಾರತೀಯರು. ೯೨ ಮೈಲು ದೂರದ ಶಿವಸಮುದ್ರದಿಂದ ಇಲ್ಲಿಗೆ ವಿದ್ಯುಚ್ಛಕ್ತಿಯನ್ನು ತರಲಾಗಿದೆ. ಕೆಲಸಗಾರರಿಗೆ ಮನೆಗಳನ್ನೂ, ಆಸ್ಪತ್ರೆಗಳನ್ನೂ, ಅವರ ಮಕ್ಕಳಿಗೆ ಶಾಲೆಗಳನ್ನು ಕಟ್ಟಲಾಗಿದೆ.

ಕೆಲವು ವರ್ಷಗಳ ಹಿಂದೆ ನಿರ್ಜನವಾಗಿದ್ದ ಪ್ರದೇಶದಲ್ಲಿ ಈಗ ೧ ಲಕ್ಷದ ೩೪ ಸಾವಿರ ಪ್ರಜೆಗಳಿದ್ದಾರೆ.

ಯುದ್ಧದ ಸೋಜಿಗ ಸಂಗತಿಗಳು

ಈಗ ಕೊನೆಗೊಂಡ ಯುರೋಪು ಯುದ್ಧವು ನಿಜವಾಗಿ ಪ್ರಾರಂಭವಾದುದು ಎಬಿಸೀನಿಯದಲ್ಲಿ. ಅಲ್ಲಿ ಮೊದಲಿನ ಸಲಕ್ಕೆ ಫೆಸಿಸ್ಟ್ ಸಾಮ್ರಾಜ್ಯವಾದಿಗಳು ತಮ್ಮ ಧೋರಣೆ ಪ್ರದರ್ಶನ ಮಾಡಿದರು. ನಿರ್ಬಲ ಹಬಸಿಗಳನ್ನು ಸೋಲಿಸಲು ಸರ್ವಾಧಿಕಾರಿ ಮುಸೋಲಿನಿಯು ವಿಷವಾಯುವನ್ನು ಉಪಯೋಗಿಸಲೂ ಹಿಂಜರಿಯಲಿಲ್ಲ. ಭಯಂಕರ ಆಧುನಿಕ ಯುದ್ಧಾಸ್ತ್ರಗಳೂ ಬೊಂಬುಗಳೂ ಆ ಜನರ ಗುಡಿಸಲುಗಳನ್ನು ನಾಶಮಾಡಲು ಉಪಯೋಗಿಸಲ್ಪಟ್ಟವು. ಕಪ್ಪು ಖಂಡದ ಕಪ್ಪು ಜನರಿಗೆ ನಾಗರಿಕತೆ ಕಲಿಸಲು ಇಟಲಿಯನ್ ಫೆಸಿಸ್ಟರು ಪ್ರಯತ್ನಪಟ್ಟಾಗ ಜಗತ್ತು ಕೈಕಟ್ಟಿ ನಿಂತಿತು. ಇದರ ಹಿನ್ನೆಲೆಯಲ್ಲಿ ಬೆಂಬಲವಾಗಿ ನಿಂತವನೂ ಹಿಟ್ಲರನೇ.

* * *

ಸ್ಪೈನಿನಲ್ಲಿ ಅಂತಃಕಲಹವಾಗಿ ಪ್ರಜಾಪ್ರಭುತ್ವವು ಮಣ್ಣು ಮುಕ್ಕಿಸಲ್ಪಡುವಾಗಲೂ ಜಗತ್ತು ದೊಡ್ಡ ಕೋಪವನ್ನು ನಟಿಸಿ ಬಾಯಿಯಿಂದ ಮಾತ್ರ 'ಬೊಂಬು' ಬಿಟ್ಟು ತೆಪ್ಪಗೆ ಕುಳಿತುಬಿಟ್ಟರು. ಅದರಲ್ಲೂ ಹಿಟ್ಲರನ ಕೈವಾಡವೇ ನಡೆಯಿತು.

* * *

ಕೈದಿಯಾದ ನಾಜೀ—ಸೆರೆಸಿಕ್ಕಿದ ಓರ್ವ ಜರ್ಮನ್ ಸೈನಿಕನಿವನು-ಒಬ್ಬನನ್ನು ನೋಡಿದರೆ ಹಲವರನ್ನು ನೋಡಬೇಕಿಲ್ಲ.

ಮತ್ತೆ ಒಂದೊಂದಾಗಿ ದೇಶಗಳು ಅಪಹೃಸಲ್ಪಟ್ಟಾಗಲೂ ಬ್ರಿಟನು ಅಮೇರಿಕಗಳು 'ಶಾಂತಿ ಮೌನ' ತಾಳಿದರು ಮಾತ್ರವಲ್ಲ ಚೆಂಬರ್ಲೀನರು ತಮ್ಮ ಕೊಡೆಯ ಹಿಂದೆ ಮುಖ ಮುಚ್ಚಿಕೊಂಡರು. ಆಗಲೂ 'ಬೋಲ್ಶೆವಿಸಮ'ನ್ನು ನಾಶಮಾಡ ಹೊರಟ ಹಿಟ್ಲರನೇ ಮುಖ್ಯ ಪಾತ್ರಧಾರಿ. ಕೆಲವು ದೇಶಗಳು ಅವನಿಗೆ ವಾರೆ ಎರೆದು ಕೊಡಲ್ಪಟ್ಟವು. ಆದರೂ ಅವನ ಸಾಮ್ರಾಜ್ಯ ತೃಷೆ ಆರಲಿಲ್ಲ.

* * *

ಒಂದು ಕಾಲದಲ್ಲಿ ಎಲ್ಲರಿಗೂ ರಶ್ಯದ ಸಮತಾವಾದ ಬೇಡವೆಂದು ತೋರಿತು. ಕೆಲವರಿಗೆ ಅದು ವಿಶ್ವಶಾಂತಿಗೆ ಕಂಟಕಪ್ರಾಯವೆಂದೆನಿಸಿತು.

ಚರ್ಚಿಲ್ ಸಾಹೆಬರೇ ಅದನ್ನು 'ಜಗತ್ತಿನ ಕೊಳೆ, ಕೆಸರು' ಎಂದು ಗರ್ಜಿಸಿದರಂತೆ. ಅದನ್ನು ಸದೆಬಡಿಯಲು ಕಂಕಣತೊಟ್ಟ ಹಿಟ್ಲರನಿಗೆ ಸಹಾಯ ಮಾಡುವುದು ಕರ್ತವ್ಯವೆಂದು ಅಪ್ರತ್ಯಕ್ಷವಾಗಿ ಅನೇಕ ಬ್ರಿಟಿಷ್ ಮುತ್ಸದಿಗಳು ತಿಳಕೊಂಡರು. ಅಂತೇ ಅವನ ಯುದ್ಧಯಂತ್ರವು ರಚಿಸಲ್ಪಟ್ಟಿತು.

* * *

ಎಬಿಸೀನಿಯದಂತಹ ಕಪ್ಪು ಜನಾಂಗದ ಸ್ವಾತಂತ್ರ್ಯವನ್ನು ಅಪಹರಿಸಿದಾಗ ಕೈಯೆತ್ತದ ಮಿತ್ರರು ಸಾಮಾನ್ಯ ಬಿಳಿ ಪೊಲೆಂಡಿನ ಮೇಲೇರಿ ಹೋದ ಜರ್ಮನಿಯ ಮೇಲೆ ಯುದ್ಧ ಸಾರಿದರು. ಒಂದು ದಿನ ರಷ್ಯಾ ಜರ್ಮನಿ ಒಪ್ಪಂದವಾಯಿತೆಂದು ವರ್ತಮಾನ ಬಂದಾಗ ಜಗತ್ತು ತಬ್ಬಿಬ್ಬಾಯಿತು—ಕಡು ಶತ್ರುಗಳೊಳಗೆ ಒಪ್ಪಂದವೆ?

* * *

ದೇಶಗಳ ಮೇಲೆ ದೇಶಗಳು ಕೆಲವೇ ದಿನಗಳ ಅವಧಿಯಲ್ಲಿ ನಾಜೀ ಯಂತ್ರದ ಪಾದಾಕ್ರಾಂತವಾದವು. ಇಷ್ಟಾದರೂ ಹಿಟ್ಲರನ ಮಿತ್ರನಾದ ಮುಸ್ಸೊಲಿನಿಯು ತನ್ನ ಆಸ್ತನ ಪರವಾಗಿ ಯುದ್ಧಸಾರಲು ಒಂದು ವರ್ಷ ತೆಗೆದನು. ಸಾವಿರಾರು ಮೈಲು ದೂರದ ಎಬೀಸಿನಿಯವನ್ನು ಗೆದ್ದವನಿಗೆ ಕೆಲವೇ ಮೈಲುಗಳ ಅಂತರದ ಗ್ರೀಸನ್ನು ಮೂರು ತಿಂಗಳಾದರೂ ಹಿಡಿಯಲ್ಲಿಕ್ಕಾಗಲಿಲ್ಲ. ಅಲ್ಲಿ ಸರಿಯಾಗಿ ಏಟು ತಿಂದ ಮೇಲೆ ಜರ್ಮನ್ ಸೈನ್ಯವು ಅವನ ಸಹಾಯಕ್ಕೆ ಕಳುಹಿಸಲ್ಪಟ್ಟಿತು—ಕೆಲವೇ ದಿನಗಳಲ್ಲಿ ಗ್ರೀಸ್ ಮತ್ತೆ ಶರಣಗತವಾಯಿತು.

* * *

ಪ್ರಾರಂಭದಲ್ಲಿ ತೋರಿಸಿದ ಶೌರಸಾಹಸವನ್ನು ಹಿಟ್ಲರನ್ನು ಅಂತ್ಯದಲ್ಲಿ ತೋರಿಸದಾದನು. ಲಂಡನ್ ಪುಡಿಯಾಯಿತೆ ಹೊರತು ಇಂಗ್ಲೆಂಡನ್ನು ಆಕ್ರಮಣ ಮಾಡಲು ಸಾಧ್ಯವಾಗಲಿಲ್ಲ. ಯುಬೋಟು ಹಾವಳಿಗೆ ಪ್ರಾರಂಭವಾಯಿತು. ಒಂದು ಕಾಲಕ್ಕೆ ನೆಪೋಲಿಯನನ ದಾಖಲೆಯನ್ನೂ ಹಿಟ್ಲರನು ಮೀರಿಸಿದನು.

* * *

ರಶ್ಯದೊಡನೆ ಒಪ್ಪಂದವಾದಷ್ಟೇ ಕೌತುಕ ರೀತಿಯಲ್ಲಿ ಯುದ್ಧವೂ ಸಾರಲ್ಪಟ್ಟಿತು. ಅಷ್ಟು ಹೊತ್ತಿಗೆ ಯುರೋಪಿನ ಯುದ್ಧ ಆಫ್ರಿಕಕ್ಕೆ ಒಯ್ಯಲ್ಪಟ್ಟಿತು. ಇಂಗ್ಲಿಷ್ ಸಮುದ್ರದ ಕಾಳಗ ಭೂಮಧ್ಯ ಸಮುದ್ರಕ್ಕೆ ಸಾಗಿತು-ಅಸ್ಸಾಮಿನ ತನಕ ಜಪಾನಿಗಳು ಬಂದಂತೆ ಇರಾನಿನ ತನಕ ನಾಜಿಗಳು ಬಂದಿದ್ದರು.

* * *

ಮೊಸ್ಕೋದ ಮಟ್ಟಿಗೆ ನೆಪೋಲಿಯನನ ಅವಸ್ಥೆಯೇ ಹಿಟ್ಲರನಿಗೂ ಒದಗಿತು. ಮೊಸ್ಕೋ ಸರಕಾರವು ಕ್ಯುಬಿಶೆವಿಗೂ ಒಯ್ಯಲ್ಪಟ್ಟಿತು. ಕಡೆಯ ತನಕ ಮೊಸ್ಕೊವನ್ನು ಬಿಟ್ಟು ಕದಲದವರೆಂದರೆ ಸ್ಟೇಲಿನರು ಮಾತ್ರ. ನಿಜವಾಗಿಯೂ ಉಕ್ಕಿನ ಮನುಷ್ಯನೆಂಬ ತಮ್ಮ ಕೀರ್ತಿಯನ್ನು ಅವರು ಕಾಪಾಡಿದರು.

* * *

ಎರಡುವರೆ ವರ್ಷದ ರಶ್ಯನರ ಯುದ್ಧ ಚೈತನ್ಯದಿಂದ ಜರ್ಮನರು ಹತಾಶರಾದರು. ರಶ್ಯನರದು ಮೇಲ್ಕೈಯಾಯಿತು. ಮತ್ತೆ ಹಿಂದಕ್ಕೆ ಸರಿಯ ತೊಡಗಿದ ನಾಜಿ ದಳಗಳು ಬರ್ಲಿನಿನಲ್ಲಿ ಅಸ್ತ್ರಗಳನ್ನು ಕೆಳಗಿಟ್ಟರು. ಇತ್ತ ಖಂಡಾಕ್ರಮಣದಿಂದ ಬ್ರಿಟಿಷ್ ಅಮೇರಿಕನ್ನರೂ ಮುಂದಕ್ಕೆ ಒತ್ತಿದರು. ಬರ್ಲಿನಿಗೆ ಅವರು ಇನ್ನೊಂದು ಕಡೆಯಿಂದ ಬಂದರು.

* * *

ಹಿಂದಿನ ಯುದ್ಧದ ಶಾಂತಿ ಪರಿಷತ್ತು ಯುದ್ಧಾನಂತರ ವರ್ಸೇಲಿಸ್‌ನಲ್ಲಿ ಸೇರಿತು. ಈ ಸಲ ಯುದ್ಧಕ್ಕೆ ಮೊದಲೇ ಅದು ಕೂಡಿಬಂತು. ರೆಕ್ಕೆ ಬೊಂಬುಗಳಿಂದಲೂ ಹಿಟ್ಲರನಿಗೆ ಯುದ್ಧಗೆಲ್ಲಲು ಸಾಧ್ಯವಿಲ್ಲವೆಂಬ ಸಂಗತಿಯು ಖಚಿತವಾಗಿತ್ತು.

* * *

. ಕೊನೆಯದಾಗಿ ಒಂದು ಮಾತು. ಬ್ರಿಟಿಷ್ ಅಮೇರಿಕನರ ಮಿತ್ರ ರಶ್ಯ. ಆದರೂ ಜಪಾನ್ ರಶ್ಯಾದೊಳಗೆ ಯುದ್ಧವಿಲ್ಲ. ಜಪಾನಿನ ಮಿತ್ರ ಜರ್ಮನಿ—ಆದರೂ ರಶ್ಯದ ಮೇಲೆ ಜಪಾನ್ ಬೀಳಲಿಲ್ಲ. ಚೀನಕ್ಕೆ ಎಲ್ಲರೂ ಮಿತ್ರರೇ. ಆದರೂ ಸಹಾಯ ಬೇಕಾದಷ್ಟು ಇಲ್ಲ.

* * *

ಪೋಲೆಂಡಿನ ಸ್ವಾತಂತ್ರ್ಯವನ್ನು ಜರ್ಮನಿ ಅಪಹರಿಸಿದಕ್ಕೆ ಈ ಯುದ್ಧ ಸಾರಲ್ಪಟ್ಟಿತು. ಈಗ ಪೋಲೆಂಡಿನ ಸ್ವಾತಂತ್ರ್ಯ ರಶ್ಯದ ಕೈಯೊಳಗಿದೆ—ಆದರೂ ಶಾಂತಿ ಪರಿಷತ್ತು ನಡೆಯುತ್ತಿದೆ. ಭಾರತಕ್ಕೂ 'ಪ್ರತಿನಿಧಿ'ಗಳಿರುವಾಗ ಪೋಲೆಂಡಿಗೆ ಏಕೆ ಇರಬಾರದೆಂದು ಮೊಲೊಟೊವರ ವಾದ.

ಜ್ವರದಿಂದ ಬುದ್ಧಿ ಬದಲುತ್ತದೆ

ಲಂಡನಿನಲ್ಲಿ ಕನ್ನಡಿಗ ವೈದ್ಯರ ಶೋಧೆ

ಕತ್ತಿ 'ಕೊಯ್ಯುವ' ಕ್ಷೌರಿಕ

"ಬೆನ್ನೆಲುಬಿನ ಮೂಳೆಗಳಲ್ಲಿ ಉತ್ಪನ್ನವಾಗುವ ಒಂದು ತರದ ಜ್ವರಗಳಿಂದ ಅನೇಕರು ವಿಚಿತ್ರ ರೀತಿಯ ವರ್ತನೆಗಳನ್ನು ಪ್ರದರ್ಶಿಸಿರುವರು. ಅವರ ಸ್ವಭಾವ ಗುಣ ವೈಶಿಷ್ಟ್ಯಗಳೇ ಬದಲಾದ ಅನೇಕ ಸೋಜಿಗದ ನಿದರ್ಶನಗಳಿವೆ" ಹೀಗೆಂದು ದಕ್ಷಿಣ ಕನ್ನಡಿಗರಾದ ಡಾ। ಎಂ ನರಸಿಂಹ ಪೈ ಅವರು ಬ್ರಿಟಿಷ್ ಮೆಡಿಕಲ್ ಜರ್ನಲ್ ಎಂಬ ಲಂಡನ್ ಪತ್ರಿಕೆಯಲ್ಲಿನ ಒಂದು ಲೇಖನದಲ್ಲಿ ತಿಳಿಸುತ್ತಾರೆ. ಡಾಕ್ಟರರು ಲಂಡನಿನ ಮಿಲ್‌ಹಿಲ್ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ಅವರು ಕೊಟ್ಟ ಕೆಲವು ವಿಚಿತ್ರ ಸಂಗತಿಗಳು ಈ ಕೆಳಗೆ ಸಂಕ್ಷೇಪಿಸಲಾಗಿದೆ:

ತಾನು ಒಂದು ಸಲ ಮಲಗಿಬಿಟ್ಟರೆ ಮತ್ತೆ ಏಳಲಿಕ್ಕಿಲ್ಲವೆಂಬ ಸಂದೇಹದಿಂದ ಒಬ್ಬನು ಅನೇಕ ದಿನಗಳನ್ನು ಕುರ್ಚಿಯ ಮೇಲೆ ಒರಗಿ ಜಾಗರಣ ಕುಳಿತು ಕಳೆದನಂತೆ.

ವಿಮಾನ ದಳದ ಒಬ್ಬ ಮುಖ್ಯಸ್ಥನಿಗೆ ಜ್ವರ ಬಂದು ಅವನ ಬುದ್ಧಿಯೇ ಬದಲಾಯಿತು. ಅವನು ತನ್ನ ಮೇಲಾಧಿಕಾರಿಗಳನ್ನು ಧಿಕ್ಕರಿಸ ತೊಡಗಿದನು. ಅವಿಧೇಯತ್ವ ತೋರಿಸ ಹತ್ತಿದನು. ಕಡೆಗೆ ೨ ರಾತ್ರಿ ಮಿಠಾಯಿ ಕದ್ದು ಶಿಕ್ಷೆಗೆ ಗುರಿಯಾದನು.

ಚರ್ಚಿಲ್ಲರ ನಂತರ ಇವರೇ-ಚಿಕ್ಕ ತ್ರಿಮೂರ್ತಿಗಳಲ್ಲಿ ಮೊಲೊಟೊವ್, ಸ್ಟೆಟಿನಸ್ ಒಬ್ಬರಾದ ಈಡನ್

ಒಂದು ಸಲ ಒಬ್ಬ ಅನುಭವಸ್ಥ ಕ್ಷೌರಿಕನಿಗೆ ಕ್ಷೌರ ಕತ್ತಿಯ ಹೆದರಿಕೆ ಹಿಡಿಯಿತು. ತಾನು ಇನ್ನೊಮ್ಮೆ ಬಾಳು ಕೈಯಲ್ಲಿ ಹಿಡಿದರೆ ಅದೆಂತಹ ಅನರ್ಥ ಸಂಭವಿಸಬಹುದೆಂದು ಹೇಳಬರುವುದಿಲ್ಲ. ಎಂದು ಅವನು ಅಂದುಕೊಳ್ಳುತಿದ್ದನು—ಅವನ ಬಳಿ ಮತ್ತೆ ಯಾರೂ ಕ್ಷೌರಕ್ಕೆ ಹೋಗುತ್ತಿರಲಿಲ್ಲ.

ಜ್ವರದಿಂದೆದ್ದ ಒಬ್ಬ ಪೀಟೀಲುವಾದನಗಾರನಿಗೆ ತನ್ನ ಸಂಗೀತದಲ್ಲಿ ಅಭಿರುಚಿ ಕೆಟ್ಟುಹೋಯಿತು. ಹಿಂದೆ ಗಂಟೆ ಕಟ್ಟಲೆಯಲ್ಲಿ ಬಾರಿಸುತಿದ್ದ ಅವನು ಈಗ ಕೆಲವು ಮಿನಿಟುಗಳಲ್ಲೇ ನಿಲ್ಲಿಸುತ್ತಾನೆ.

೧೯೩೪ರಲ್ಲಿ ಸೈನ್ಯದಲ್ಲಿ ಜವಾಬುದಾರಿ ಕೆಲಸ ಕೊಡಲ್ಪಟ್ಟ ಓರ್ವ ಉಪಾಧ್ಯಾಯನು ಈ ಜ್ವರ ಬರುವ ವರೆಗೆ ಸರಿಯಾದ ಕೆಲಸ ಮಾಡಿದನು- ಮತ್ತೆ ಸಿಕ್ಕಾಬಟ್ಟೆ ವರ್ತಿಸಿದನು. ಕಡೆಗೆ ಅವನ ಜ್ಞಾಪಕಶಕ್ತಿಗೆ ದೋಷವುಂಟಾಗಿ ಕೆಲಸದಿಂದ ತೆಗೆದು ಹಾಕಲ್ಪಟ್ಟನು.

ಇಂತಹ ವ್ಯಾಧಿ ಪೀಡಿತರಿಗೆ ಡಾ। ಪೈಯವರ ಸಲಹೆ ಹೀಗಿದೆ: "ನಿಮ್ಮಿಂದ ಯಶಸ್ವಿಯಾಗಿ ಮಾಡಲಾಗುವ ಕೆಲಸಗಳಲ್ಲೇ ಉದ್ಯುಕ್ತರಾಗಿರಿ ಅಂದರೆ ನಿಮ್ಮ ಪರಿಸ್ಥಿತಿ ಸುಧಾರಿಸುವುದು."

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಯಾಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ

ಬುದ್ಧಿಶಕ್ತಿ ಪರೀಕ್ಷೆಯ ಯಂತ್ರ

ಕಳ್ಳ-ಖೂನಿಕಾರರನ್ನು ಕಂಡು ಹಿಡಿಯುತ್ತದೆ

ಮನೋವಿಜ್ಞಾನಿಗಳ ಅದ್ಭುತ ಶೋಧೆ

ಮಿದುಳಿನಿಂದಲೂ ಅಲೆಗಳು ಹೊರಡುತ್ತವೆಯೋ ಎಂದು ಆಶ್ಚರ್ಯ ಪಡಬೇಡಿ—ಆ ಅಲೆಗಳನ್ನು ಬರೆದಿಡಬಲ್ಲುದು ಈ. ಈ. ಜಿ. ಎಂಬ ಅದ್ಭುತ ಯಂತ್ರ. ಆಧುನಿಕ ಮನೋವಿಜ್ಞಾನಿಗಳ ಈ ಶೋಧದಿಂದ ಆಗ ಬಹುದಾದ ಪ್ರಯೋಜನಗಳು ಎಷ್ಟಿವೆಯೊ ಏನೊ!

ನಮ್ಮಲ್ಲಿ ನಿದ್ರೆಯಿಲ್ಲದೆ ಬಳಲುವವರು ಅನೇಕರಿದ್ದಾರೆ. ಆದರೆ ಎಂತಹ ನಿದ್ರೆಯಿಲ್ಲದವನೂ, ನಿಜವಾಗಿ ನೋಡಿದರೆ, ಅರ್ಧಾಂಶ ಸಮಯ ನಿದ್ರೆ ಮಾಡುತ್ತಿರುತ್ತಾನೆಂದು ಇತ್ತೀಚೆಗೆ ಒಬ್ಬ ಮನೋವಿಶ್ಲೇಷಕರು (psychiatrist) ಕಂಡು ಹಿಡಿದಿದ್ದಾರೆ. ಅವರೆನ್ನುವಂತೆ, 'ನಿದ್ರೆಯಿಲ್ಲ'ವೆಂದು ಗೊಣಗುವ ಮನುಷ್ಯನ ಮಿದುಳು ೨-೩ ಸೆಕುಂಡ ನಿದ್ರಿಸುವುದೆಂದೂ ಮತ್ತಿನ ೨-೩ ಸೆಕುಂಡ ಜಾಗ್ರತವಾಗುವುದೆಂದೂ, ಹೀಗೆ 'ನಿದ್ರೆ' ಮತ್ತು 'ಜಾಗ್ರತಾವಸ್ಥೆ'ಗಳ ಪರ್ಯಾಯವುಂಟಾಗುವುದರಿಂದ ಮನುಷ್ಯನು ತಾನು ನಿದ್ರಿಸುತಿಲ್ಲವೆಂದು ಭಾವಿಸುತ್ತಾನೆಂದೂ ತಿಳಿಯಬೇಕಾಗಿದೆ. 'ಸಂಪೂರ್ಣ ನಿದ್ರೆ ಬಂತು' ಎಂಬ ಅನುಭವವುಂಟಾಗಬೇಕಾದರೆ, ಬಿಡದೆ ೧೦ ಸೆಕುಂಡಗಳ ವರೆಗೆ ಮಿದುಳು ನಿದ್ರಿಸಬೇಕಂತೆ.

ಈ ಸ್ವಾರಸ್ಯಮಯವಾದ ಶೋಧಕ್ಕೆ ಭಾವನಾತರಂಗಗಳನ್ನು ಬರೆದಿಡಬಲ್ಲ ಒಂದು ಹೊಸ ಯಂತ್ರವೇ ಕಾರಣವಾಗಿದೆ. ಈ ಯಂತ್ರದ ಸಹಾಯದಿಂದ, ಒಬ್ಬ ವ್ಯಕ್ತಿಯ ಮಿದುಳಿನಿಂದ ಹೊರಟ ಭಾವನಾತರಂಗಗಳನ್ನು ಒಂದು ಕಾಗದದ ಮೇಲೆ ಬರೆದಿಟ್ಟು, ಅವನ ಮಿದುಳಿನ ಕಾರ್ಯರೀತಿಯನ್ನು ಸರಿಯಾಗಿ ತಿಳಿಯಬಹುದಂತೆ. ಆದರೆ ಆ ವ್ಯಕ್ತಿಯ ಮಿದುಳಿನಲ್ಲಿ ಹೊಳೆದ ಎಲ್ಲ ಮಹದಾಲೋಚನೆಗಳನ್ನು ಈ ಯಂತ್ರದಿಂದ ಸಂಗ್ರಹಿಸಲಿಕ್ಕಾಗುವುದಿಲ್ಲ. ಮಿದುಳು ವಿಶ್ರಾಂತಿಯಲ್ಲಿರುವಾಗ ತಾನೆ ಮಿದುಳಿನ ತರಂಗಗಳನ್ನು ಬರೆದಿಡಬಹುದು. ಇಂತಹ ಯಂತ್ರಗಳು ಬ್ರಿಟನ್ ಮತ್ತು ಅಮೇರಿಕಗಳಲ್ಲಿ ಪ್ರಸಿದ್ಧಿಗೆ ಬಂದಿವೆ.

ನರಗಳ ಚೈತನ್ಯದಿಂದ ಬಹಳ ಸೂಕ್ಷ್ಮವಾದ ವಿದ್ಯುತ್ಪ್ರವಾಹಗಳು ಹೊರಡುತ್ತವೆಂದು ವಿಜ್ಞಾನಿಗಳಿಗೆ ಮುಂಚಿನಿಂದಲೂ ಗೊತ್ತಿತ್ತು. ಆದರೆ 'ರೇಡಿಯೋ' ನಿರ್ಮಾಣವಾದ ಬಳಿಕವೇ ಇಂತಹ ಸೂಕ್ಷ್ಮಪ್ರವಾಹಗಳನ್ನು ವರ್ಧಿಸುವ ಉಪಾಯವು ಕಂಡುಹಿಡಿಯಲ್ಪಟ್ಟಿತು. ಈಗ ಅದನ್ನೇ ಅನುಸರಿಸಿ, ಮಿದುಳಿನಿಂದ ಹೊರಡುವ ಸೂಕ್ಷ್ಮರೂಪದ ವಿದ್ಯುತ್ಪ್ರವಾಹಗಳನ್ನು ಈ ಯಂತ್ರದ ಸಹಾಯದಿಂದ ತುಂಬಾ ವರ್ಧಿಸಿ, ಒಂದು ಗ್ರಮಫೋನ್ ರೆಕಾರ್ಡಿನ ಮೇಲೆ ನಾದವನ್ನು ಸಂಗ್ರಹಿಸಿಡುವಂತೆ, ಕಾಗದದ ಮೇಲೆ ಆ ಮಿದುಳಿನ ತರಂಗಗಳನ್ನು ಸಂಗ್ರಹಿಸಬಹುದಾಗಿದೆ. ಈ ಯಂತ್ರಕ್ಕೆ ಈ. ಈ. ಜಿ. ಎಂದು ಸಣ್ಣ ಹೆಸರು. (Electro-encephalograph) ಇಲೆಕ್ಟ್ರೋ ಎನ್ಸ್ ಫೆಲೋಗ್ರಾಫ್ ಎಂಬುದು ಇದರ ಸಂಪೂರ್ಣ ಹೆಸರು.

ಈ. ಈ. ಜಿ. ಯ ಸಹಾಯದಿಂದ ತರಂಗಗಳನ್ನು ಬರೆದಿಡುವುದು ಕಷ್ಟವಲ್ಲವಂತೆ. ಆದರೆ ಅವುಗಳ ಅರ್ಥಮಾಡುವುದು ಸ್ವಲ್ಪ ಕಷ್ಟಸಾಧ್ಯ. ಈ ಕೆಲಸದಲ್ಲಿ ಚೆನ್ನಾಗಿ ನುರಿತವರು ಕೂಡಾ ತಾವು ಇನ್ನೂ ತುಂಬಾ ಕಲಿಯಲಿಕ್ಕಿದೆಯೆಂದು ಹೇಳುತ್ತಾರೆ.

ಅಮೇರಿಕದಲ್ಲಿ, ಈ ಯಂತ್ರವನ್ನು ಮೊತ್ತಮೊದಲು ಮಿದುಳಿಗೆ ತಗಲಿದ ಪೆಟ್ಟುಗಳನ್ನು ತಿಳಿಯಲಿಕ್ಕಾಗಿಯೇ ಉಪಯೋಗಿಸುತ್ತಿದ್ದರು. ಮಿದುಳಿನ ಯಾವ ಭಾಗದಲ್ಲಿ 'ಪೆಟ್ಟು' ಯಾ 'ನೋವು'ಆಗಿದೆಯೆಂಬುದನ್ನು ಎಕ್ಸ್‌ರೇಗಳಿಗಿಂತಲೂ ಈ. ಈ. ಜಿ. ಯಂತ್ರವು ಹೆಚ್ಚು ಸ್ಪಷ್ಟವಾಗಿ ತೋರಿಸುತ್ತಿತ್ತು. ಈಗ ಅದೇ ಯಂತ್ರವನ್ನು ಇತರ ಹಲವು ಸ್ವಾರಸ್ಯದ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆ. ಉದಾ: ಸಾಮಾನ್ಯ ಒಬ್ಬ ವ್ಯಕ್ತಿಯು ವಿಶ್ರಾಂತಿಯಲ್ಲಾಗಲೀ ನಿದ್ರೆಯಲ್ಲಾಗಲೀ ಇರುವಾಗ ಅವನ ಮಿದುಳಿನಿಂದ ಹೊರಟ ತರಂಗಗಳು ಸೌಮ್ಯವಾಗಿರುತ್ತವೆ. ಅಲ್ಲದೆ ಸಣ್ಣವಾಗಿ ಕ್ರಮಬದ್ಧವಾಗಿರುತ್ತವೆ. ಕೆಲವು ತರದ ಹುಚ್ಚರು ಜಾಗ್ರತಾವಸ್ಥೆಯಲ್ಲಿರುವಾಗ, ಅವರ ಮಿದುಳಿನ ಅಲೆಗಳು ಕಂಡಾಬಟ್ಟೆಯಾಗಿ ಕ್ರಮ ತಪ್ಪಿರುತ್ತವೆ. ಈ ಶೋಧದಿಂದ 'ಉನ್ಮಾದ'ದ ಕಾರಣವನ್ನು ತಿಳಿಯಲಿಕ್ಕಾಗುವುದಿಲ್ಲವಾದರೂ, ಒಬ್ಬ ವ್ಯಕ್ತಿಯು ಉನ್ಮತನು, ಹೌದೋ ಅಲ್ಲವೋ ಎಂಬುದನ್ನಾದರೂ ತಿಳಿಯಬಹುದಷ್ಟೆ!

ಅಪಸ್ಮಾರ (epilepsy) ದಿಂದ ಬಳಲುವವರ ಮಿದುಳಲೆಗಳಲ್ಲಿ ಒಂದು ಪ್ರತ್ಯೇಕ ವೈಶಿಷ್ಟ್ಯವಿದೆಯಂತೆ. ಅದರಲ್ಲಿಯೂ ಮತ್ತೊಂದು ಸ್ವಾರಸ್ಯವೆಂದರೆ ಅಪಸ್ಮಾರ ರೋಗಿಗಳ ಸಮೀಪದ ಸಂಬಂಧಿಕರು ಸ್ವತಃ ನಿರೋಗಿಗಳಾಗಿದ್ದರೂ ಅವರ ಮಿದುಳಿನ ಅಲೆಗಳಲ್ಲಿಯೂ ಆ ಲಕ್ಷಣಗಳು ಕಾಣಿಸುತ್ತವೆಯಂತೆ. ಇದರಿಂದ ಗೊತ್ತಾಗುವುದೇನೆಂದರೆ, ಆ ರೋಗಿಯ ಸಂಬಂಧಿಕರಲ್ಲಿ ಅಪಸ್ಮಾರ ಚಿಹ್ನೆಗಳಿಲ್ಲದಿದ್ದರೂ ಅವರು ತಮ್ಮ ಹಾಗೆಯೇ ಇರುವವರನ್ನು ವಿವಾಹವಾದರೆ ಅವರಿಗೆ ಹುಟ್ಟುವ ಮಕ್ಕಳಿಗೆ 'ಅಪಸ್ಮಾರ' ಬರುವ ಸಂಭವವಿದೆ. ಈ ಶೋಧದಿಂದ ಗಂಡಹೆಂಡಿರಾಗುವವರು ತಮ್ಮ ಮಕ್ಕಳು ಅಪಸ್ಮಾರದಿಂದ ಬಳಲದಂತೆ ಮೊದಲೇ ಮುಂಜಾಗ್ರತೆ ತೆಗೆದುಕೊಳ್ಳಲು ಸಾಧ್ಯವಿದೆ. ಇದೊಂದು ದೊಡ್ಡ ಅನುಕೂಲತೆಯೇ ಸರಿ, ಏಕೆಂದರೆ, ಪ್ರಪಂಚದ ಹೆಚ್ಚಿನ ಕಳ್ಳರು, ಖೂನಿಖೋರರು ಅಪಸ್ಮಾರ ಪೀಡಿತರಾಗಿದ್ದು, ಅವರ ದುಷ್ಕೃತ್ಯಗಳಿಗೆ ಅವರಲ್ಲಿರುವ ಅನಾರೋಗ್ಯವೇ ಕಾರಣವೆಂಬುದಾಗಿ ಇಂದಿನ ಮನಶ್ಶಾಸ್ತ್ರಜ್ಞರ ಅಭಿಮತ. ಆದುದರಿಂದ ಅಪಸ್ಮಾರ ರೋಗಿಗಳು ಕಡಿಮೆಯಾದಷ್ಟು ದುಷ್ಕೃತ್ಯಗಳೂ ಕಡಿಮೆಯಾಗಲೇ ಬೇಕಲ್ಲವೆ?

ಕೆಲವು ಪಾಶ್ಚಾತ್ಯ ನ್ಯಾಯ ಸ್ಥಾನಗಳಲ್ಲಿ, ಕೊಲೆಯ ಮೊಕದ್ದಮೆಗಳ ವಿಚಾರಣೆಯಲ್ಲಿ ಈ. ಈ. ಜಿ. ಯ ಸಹಾಯದಿಂದ ದೊರೆತ ರುಜುವಾತು ಕೋರ್ಟಿನಿಂದ ಸ್ವೀಕೃತವಾಗಿದೆಯಂತೆ. ದುರ್ನಡತೆಯ ಮಕ್ಕಳ ಹಾಗೂ ಕಳ್ಳರು-ಖೂನಿಖೋರರ ಮನೋವೃತ್ತಿಯನ್ನು ಈ ಯಂತ್ರದ ಸಹಾಯದಿಂದ ಗೊತ್ತು ಹಚ್ಚಿ, ಅದರ ನಿವಾರಣೆಗೆ ತಕ್ಕ ಉಪಾಯಗಳನ್ನು ಕೈಕೊಳ್ಳಬಹುದು.

ಇನ್ನೊಂದು ತಿಂಗಳು ಬದುಕುತಿದ್ದರೆ? ಎರಡು ಶಾಂತಿಗಳನ್ನು ಕಾಣುತಿದ್ದರು.

ಈ ಶೋಧದಿಂದ ತಿಳಿದು ಬಂದ ಮತ್ತೊಂದು ವಿಷಯವೇನೆಂದರೆ— ಶುದ್ಧ ರಕ್ತನಾಳಗಳು ಗಟ್ಟಿಹೊಂದಿದ ವ್ಯಕ್ತಿಗಳ ಮಿದುಳಿನ ಅಲೆಗಳಲ್ಲಿ ಭಯಂಕರವಾದ ಅಕ್ರಮಗಳು ಕಂಡುಬರುತ್ತವೆಯಂತೆ. ಆದುದರಿಂದ ರಕ್ತನಾಳಗಳು ಗಟ್ಟಿಕಟ್ಟುವ ರೋಗದ ಚಿಹ್ನೆಗಳನ್ನು ಬಹಳ ಸಮಯ ಮುಂಚಿತವಾಗಿಯೇ ತಿಳಿದುಕೊಂಡು, ಆ ರೋಗ ನಿವಾರಣೆಗೂ ತಕ್ಕ ಉಪಶಮನಗಳನ್ನು ಸುಲಭವಾಗಿ ಕೈಕೊಳ್ಳಬಹುದಷ್ಟೆ! ಮಿದುಳಿನ ಅಲೆಗಳ ಪರೀಕ್ಷೆಯಿಂದ ವ್ಯಕ್ತಿಯ ಮಿದುಳಿನ ಪ್ರಾಯವನ್ನು ಕೂಡಾ ತಿಳಿಯಬಹುದಾಗಿದೆ. ಒಬ್ಬ ಸರಕಾರಿ ನೌಕರನು ಯಾವಾಗ ನಿವೃತ್ತಿ ಹೊಂದಬೇಕೆಂಬುದನ್ನು ಸರಿಯಾಗಿ ನಿರ್ಧರಿಸಲಿಕ್ಕೆ ಈ ಮಾಹಿತಿಯು ಸಹಕಾರಿಯಾಗಬಲ್ಲುದು. ಈ. ಈ. ಜಿ. ಯ ಸಹಾಯದಿಂದಲೇ ಪ್ರಾಯವು ನಿರ್ಣಯಿಸಲ್ಪಟ್ಟು, ನೌಕರರೆಲ್ಲ ನಿವೃತ್ತಿ ಹೊಂದಬೇಕಾಗುವ ಅದೊಂದು ಕಾಲವೂ ಬರಲಿಕ್ಕೆ ಸಾಕು.

[illegible] ವರ್ಷಗಳಲ್ಲಿ

ದಿಲ್ಲಿಯಲ್ಲಿನ ಸೂರ್ಯ ಮಹಾಲ್ ಎಂಬ ಮೊಗಲರ ಒಂದು ಅರಮನೆಯು ಈಗ ಹುಡುಗಿಯ ಶಾಲೆಯಾಗಿ ಉಪಯೋಗಿಸಲ್ಪಡುತ್ತದೆ. ಚೀನಿ ಚಕ್ರವರ್ತಿಗಳ ದರ್ಬಾರು ಭವನವು ಶಾಲಾ ಮಕ್ಕಳ ಮಧ್ಯಾಹ್ನ ಊಟದ ಕೋಟೆಯಾಗಿ ಪರಿವರ್ತಿಸಲ್ಪಟ್ಟಿದೆ. ರಶ್ಯದ ಚಕ್ರವರ್ತಿಯ ಕ್ರೆಮಲಿನ್ ಅರಮನೆಯು ರಾಜಭವನವು ಕೊಮ್ಯೂನಿಸ್ಟ್ ಪ್ರತಿನಿಧಿಗಳ ವಿಶ್ರಾಂತಿ ಗೃಹವಾಗಿದೆ.

* * *

೨೦ ಸಾವಿರ ವರ್ಷಗಳ ಹಿಂದೆ ಕಟ್ಟಲ್ಪಟ್ಟ ಒಂದು ಹಳೇ ನಗರದ ಕುರುಹುಗಳನ್ನು ತಾವು ಮಧ್ಯ ಆಫ್ರಿಕದ ಪ್ರದೇಶದಲ್ಲಿ ಕಂಡುಹಿಡಿದಿರುವುದಾಗಿ ಪ್ರೊ. ಎಲ್. ಎಸ್. ಬಿ. ಲೀಕೀ ಎಂಬವರು ೧೯೩೫ರಲ್ಲಿ ತಿಳಿಸಿ ಇತಿಹಾಸ ಪರಿಶೋಧಕರನ್ನು ಬೆರಗುಗೊಳಿಸಿದರು. ಆದರೆ ಅನೇಕರು ಪ್ರೊಫೆಸರರ ಹೇಳಿಕೆಯ ಕುರಿತು ಈಗಲೂ ಸಂದೇಹದಲ್ಲಿದ್ದಾರೆ.

* * *

ಮುಂದಾಲೋಚನೆ

ಶಾಂತಿಕಾಲದ ಕುರಿತು ಆಲೋಚಿಸಿ, ತಕ್ಕ ಯೋಜನೆಗಳನ್ನು ಮಾಡಲು ಇದೀಗ ತಕ್ಕ ಸಮಯ ಏಕೆಂದರೆ, ಯುದ್ಧಕಾಲದ ಸಮಸ್ಯೆಗಳಿಗಿಂತ ಶಾಂತಿಕಾಲದವುಗಳು ಕಷ್ಟತಮ.

ಮುಂಬರುವ ದಿನಗಳು ಅನಿಶ್ಚಿತ. ಅವುಗಳಿಂದ ನಿರುಪಾಯವಾಗಿ ಪಾರಾಗಲು ಜಾಣ್ಮೆ, ಅನುಭವ ಮತ್ತು ಜ್ಞಾನ ಇವುಗಳೇ ಸಹಾಯಕವಾಗುವುವು. ತಮ್ಮ ಮೂವತ್ತೊಂಬತ್ತು ವರ್ಷಗಳ ಅನುಭವದಲ್ಲಿ ಎರಡು ಜಾಗತಿಕ ಯುದ್ಧಗಳನ್ನೂ ಎರಡು ವ್ಯಾಪಾರಿ ಮುಗ್ಗಟ್ಟುಗಳನ್ನೂ ಕಂಡ ಕೆನರಾ ಬ್ಯಾಂಕಿನವರು—ಆರ್ಥಿಕ ವಿಷಯಗಳಲ್ಲಿ ನಿಮಗೆ ಮಾರ್ಗದರ್ಶಕರಾಗಬಲ್ಲರು. ಅವರಲ್ಲಿ ವಿಶ್ವಾಸವಿಡಲು ಸಂಕೋಚಪಡಬೇಕಿಲ್ಲ. ವಿಲಂಬಿಸಬೇಡಿ.

ಮುಂಬರುವ ದಿನಗಳಲ್ಲಿ ನಿಮಗೆ ಸಹಾಯಕರಾಗಲು ಅವರು ಸಮರ್ಥರು.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

Incorporated in British India, liability of Members limited.

ಸಿಹಿ ಸುದ್ದಿ ಸಂಗ್ರಹ

ನಾಜೀಗಳಿಂದ ಬಿಡುಗಡೆ ಮಾಡಲ್ಪಟ್ಟ ಪೆರಿಸಿನಲ್ಲಿ ಕಳೆದ ತಿಂಗಳಲ್ಲಿ ಪ್ರಥಮ ಸಲಕ್ಕೆ ಒಂದು ವಸ್ತು ಪ್ರದರ್ಶನ ನಡೆಯಿತು. ಅದರಲ್ಲಿ ಪ್ರದರ್ಶಿತವಾದ ನೂತನ ಶೋಧೆಯ ವಸ್ತುಗಳಲ್ಲಿ ಮರದ ನಾರಿನಿಂದ ತಯಾರಿಸಲ್ಪಟ್ಟ ಬಟ್ಟೆಗಳು ಇಡಲ್ಪಟ್ಟಿದ್ದವು. ಕೆಲವು ಬಟ್ಟೆಗಳು ಮರದ ನಾರಿನೊಡನೆ ಕುರಿ ಉಣ್ಣೆಯನ್ನು ಮಿಶ್ರಮಾಡಿ ನೂತ ನೂಲಿನಿಂದ ಹೆಣೆದವುಗಳಾಗಿದ್ದವು.

* * *

ನಾಜೂಕಾದ ಉಕ್ಕಿನ ದಾರಗಳಿಂದ ಮಾಡಲ್ಪಟ್ಟ ಕಾಲು ಚೀಲಗಳು ಯುದ್ಧಾನಂತರ ಉಪಯೋಗಕ್ಕೆ ಬರಬಹುದೆಂದು ಅಮೇರಿಕದ 'ಸ್ಟೋರ್' ಎಂಬ ಕೈಗಾರಿಕೆ ಸಂಬಂಧ ಪತ್ರಿಕೆಯೊಂದು ತಿಳಿಸುತ್ತದೆ. ಅದರ ಕುರಿತು ಆಗಲೇ ಯೋಜನೆಗಳೂ, ಪ್ರಯೋಗಗಳೂ ಉಕ್ಕಿನ ಕಾರ್ಖಾನೆ ಮಾಲಕರು ಸಿದ್ಧಪಡಿಸಿರುವರಂತೆ.

* * *

ಈಗ ಓಡುವ ವಾಹನಗಳ 'ಬ್ರೇಕು'ಗಳು ಅಷ್ಟೊಂದು 'ಪರಿಪೂರ್ಣತೆಯವು'ಗಳಲ್ಲ. ಆದರೆ ಅಮೇರಿಕದ ಯಂತ್ರವಿಜ್ಞಾನಿಗಳು ೬೦ ಮೈಲು ವೇಗದಲ್ಲಿ ಓಡುವ ಮೋಟಾರುಗಳನ್ನು ಒಂದೆರಡು ಅಡಿಗಳಲ್ಲೇ ಪಕ್ಕನೆ ನಿಲ್ಲಿಸಿಬಿಡುವ 'ಬ್ರೇಕು'ಗಳನ್ನು ಕಂಡುಹಿಡಿದಿದ್ದು ಸದ್ಯದಲ್ಲೇ ಅವು ಪ್ರತಿಯೊಂದು ತರದ ವಾಹನಗಳಿಗೆ ಜೋಡಿಸಲ್ಪಡಲಿರುವುವೆಂದು 'ಸಾಯಂಟಿಫಿಕ್ ಅಮೇರಿಕನ್' ಎಂಬ ಪತ್ರಿಕೆ ತಿಳಿಸುತ್ತದೆ.

* * *

ಬಾವಲಿ-ಗಬ್ಬಿಲಗಳ ಸ್ವಭಾವ ಲಕ್ಷಣಗಳು ಇನ್ನೂ ಪ್ರಕೃತಿ ವಿಜ್ಞಾನಿಗಳಿಗೆ ಸಂಪೂರ್ಣ ತಿಳಿದುಬರಲಿಲ್ಲ. ಬಾವಲಿಗಳು ತಮ್ಮ ಮರಿಗಳಿಗೆ ಹಾರುವುದಕ್ಕೆ ಕಲಿಸುವುದನ್ನು ಇದು ತನಕ ಯಾರೂ ನೋಡಿಲ್ಲ. ಪ್ರಖ್ಯಾತ ಪ್ರಾಣಿ ವಿಜ್ಞಾನಿಗಳಾದ ಬ್ರಿಯನ್ ಫಿಟ್ಜೆರಾಲ್ಡ್ ಅವರು "ಬಹುಶ್ಯ ಬಾವಲಿಮರಿಗಳು ಪ್ರಕೃತಿಯವೂ ಸಹಜವೂ ಆದ ಸ್ವಂತ ಬುದ್ಧಿ ಶಕ್ತಿಯಿಂದ ಹಾರಾಡ ಕಲಿಯುತ್ತವೆ" ಎಂದು ತಿಳಿಸುತ್ತಾರೆ.

* * *

ಯಾಲ್ಟಾ ಪರಿಷತ್ತಿಗೆ ಹೋಗುವ ಮೊದಲು ಚರ್ಚಿಲ್ಲರು ಅಲ್ಪಸ್ವಲ್ಪ ರಶ್ಯನ್ ಭಾಷೆಯನ್ನು ಕಲಿತರಂತೆ. ಆದರೆ ಸ್ಟೇಲಿನರನ್ನು ಭೇಟಿಯಾದೊಡನೆ ಅವರು ಉಚ್ಚರಿಸಿದ ರಶ್ಯನ್ ಶಬ್ದಗಳ ಅರ್ಥವೇ ಸೊವಿಯಟ್ ಸರ್ವಾಧಿಕಾರಿಗೆ ಆಗಲಿಲ್ಲವಂತೆ. ಅಂತೂ ಬಹಳ ಹೊತ್ತು ಸ್ಟೆಲಿನ್ ಚರ್ಚಿಲ್ಲರು ಅಲ್ಲಿನ ತೋಟದಲ್ಲಿ ವಿನೋದವಾಗಿ ಸಂಚರಿಸಿದರು.

* * *

ಅದೇ ಸಮಯದಲ್ಲಿ ಚರ್ಚಿಲ್ ಕೂಟದ ಕೆಲ ಬ್ರಿಟಿಷ್ ಅಧಿಕಾರಿಗಳಿಗೆ ಲಿಂಬೆ ಹಣ್ಣುಗಳು ಬೇಕಾದಾಗ ಯಾಲ್ಟಾದಲ್ಲಿ ಬರಿ ಮೂರು ಮಾತ್ರ ಸಿಕ್ಕಿದವು. ಆದರೆ ಮರುದಿನ ಸ್ಟೇಲಿನರು ನೂರಾರು ಹಣ್ಣುಗಳಿರುವ ಲಿಂಬೆ ಮರವನ್ನೇ ಮೊಸ್ಕೋದಿಂದ ಲೋರಿಯಲ್ಲಿ ತರಿಸಿದಾಗ ಎಲ್ಲರಿಗೂ ಕೌತುಕವಾಯಿತು.

* * *

ಸೆನ್‌ಫ್ರಾನ್ಸಿಸ್ಕೊ ಪರಿಷತ್ತಿನ ಪ್ರತಿನಿಧಿಗಳ ಆರೋಗ್ಯ ಸೌಕರ್ಯಗಳಿಗಾಗಿ ಅಲ್ಲಿ ನಾಲ್ಕು ತಾತ್ಕಾಲಿಕ ಆಸ್ಪತ್ರೆಗಳನ್ನೂ ಶುಶ್ರೂಷಾಲಯಗಳನ್ನೂ ತೆರೆದಿರುವರು.

* * *

ಆಧುನಿಕ ಕೋಟೆ ಕೊತ್ತಳಗಳಲ್ಲಿ ಫ್ರಾನ್ಸಿನ ಗಡಿಯಲ್ಲಿ ಕಟ್ಟಲ್ಪಟ್ಟ ಮೆಜಿನೋ (ಟ್) ಲ್ಯಾನ್ ಎಂಬ ನೆಲಪಡಿ ಕೋಟೆಯು ಯಾಂತ್ರಿಕ ಕಲಾಕೌಶಲ್ಯದ ಮತ್ತು ಸಂಪೂರ್ಣ ಸಮರ ಶಾಸ್ತ್ರದ ಒಂದು ಅದ್ಭುತ. ಇದನ್ನು ಕಟ್ಟಲು ೧೫೦ ಕೋಟಿ ಪವನುಗಳು ವ್ಯಯಿಸಲ್ಪಟ್ಟಿವೆ. ಕೆಲವು ಕಡೆಗಳಲ್ಲಿ ೪೦೦ ಅಡಿಗಳ ಆಳದ ವರೆಗೂ ಇದು ಹರಡಿರುತ್ತದೆ.

* * *

ಸರಕು ಹೊರುವುದಕ್ಕೆ ಉಪಯೋಗಿಸುವ ಪ್ರಾಣಿಗಳಲ್ಲಿ ಆನೆಯು ಗಾತ್ರದಲ್ಲಿಯೂ, ಬಲದಲ್ಲಿಯೂ, ಮತ್ತು ಬುದ್ಧಿ ಶಕ್ತಿಯಲ್ಲಿಯೂ ಇತರ ಎಲ್ಲಾ ಪ್ರಾಣಿಗಳಿಗಿಂತಲೂ ಶ್ರೇಷ್ಠವಾದುದು. ಆದರೆ ಒಂಟೆ ಹೊರುವಷ್ಟು ಭಾರದ ಸರಕುಗಳನ್ನು ಆನೆ ತನ್ನ ಬೆನ್ನ ಮೇಲೆ ಹೊರಲಾರದು. ಕಾರಣ ಹೊರಗಿನಿಂದ ದಪ್ಪವಾಗಿ ಕಂಡರೂ ಆನೆಯ ಬೆನ್ನ ಭಾಗದ ಚರ್ಮವು ಬಹಳ ಬೇಗ ಸವೆದು ಹೋಗಿ ಘಾಯ ಉಂಟಾಗುವುದು. ಮಾತ್ರವಲ್ಲ ಆನೆಗಳಿಗೆ ಕಾಲಿನ ಅಡಿ ಭಾಗದಲ್ಲಿ ವ್ರಣಗಳು ಆಗಿಂದಾಗ್ಗೆ ಉಂಟಾಗುತ್ತವೆ.

* * *

ಪ್ರಾಚೀನ ಚೀನದಲ್ಲಿ ಮಾರ್ಗಗಳು ನೇರವಾಗಿರದೆ ಹಾವಿನ ಚಲನದಂತೆ ಓರೆಕೋರೆಯಾಗಿದ್ದವು. ಈಗಲೂ ಅನೇಕವು ಹಾಗೇ ಇವೆ. ಪ್ರಯಾಣಿಕರನ್ನು ಕೆಟ್ಟ ದೆವ್ವಗಳಿಂದ ತಪ್ಪಿಸಲು ಈ ಯೋಜನೆಯಂತೆ. ಕೆಟ್ಟ ಭೂತ ಪಿಶಾಚಿಗಳು ನೇರವಾದ ಮಾರ್ಗದಲ್ಲಿ ಮಾತ್ರ ಚಲಿಸಲು ಸಮರ್ಥವಾಗಿದ್ದವೆಂದೂ ಅಡ್ಡತಿಡ್ಡ ಮಾರ್ಗದಲ್ಲಿ ಪ್ರಯಾಣಿಕರು ಅವುಗಳಿಂದ ತಪ್ಪಿಸಿಕೊಳ್ಳಬಹುದೆಂದೂ ಆಗಿನ ಚೀನಿಯರ ಭಾವನೆ.

ಮಹಿಳೆಯರ ನಿಜವಾದ ಆಭರಣಗಳು

ಲೋಹಗಳೂ ಕಲ್ಲುಗಳೂ ಅಲಂಕಾರಗಳಲ್ಲ

ಮಹಿಳೆಯರಿಗೆ ಗಾಂಧೀಜಿಯ ಉಪದೇಶ

'ಪರಿಶುದ್ಧವಾದ ಜೀವನ ಮತ್ತು ಸುಗುಣ ಶೀಲತೆಗಳೇ ಸ್ತ್ರೀಯರೆಲ್ಲರ ನಿಜವಾದ ಆಭರಣಗಳು. ಲೋಹ ಮತ್ತು ಕಲ್ಲುಗಳು ಎಂದಿಗೂ ನಿಜವಾದ ಆಭರಣಾಲಂಕಾರಗಳಾಗವು. ಇಂದು ಸಾವಿತ್ರಿ ಸೀತಾ ಮತ್ತು ದಮಯಂತಿಗಳ ಹೆಸರು ನಮಗೆ ಪವಿತ್ರವೆಂದೆನಿಸುತ್ತಿವೆ ಅವರ ಜೀವನ ನಿರ್ಮಲತೆಯಿಂದಲ್ಲದೆ ಅವರು ತೊಟ್ಟ ಆಭರಣಗಳಿಂದಲ್ಲ. ನಾನು ನಿಮ್ಮ ಹತ್ತಿರ ಆಭರಣಗಳನ್ನು ಬೇಡುತ್ತಿರುವುದಕ್ಕೆ ಇನ್ನೂ ವಿಶಾಲವಾದ ಸಂಕೇತಾರ್ಥವಿದೆ. ಅನೇಕ ಮಹಿಳೆಯರು ಆಭರಣಗಳನ್ನು ತೊಡೆದು ಹಾಕಿದಾಗ ಹೆಚ್ಚಿನ ತೃಪ್ತಿಹೊಂದಿದ್ದಾರೆಂದು ನನಗೆ ತಿಳಿಸಿದ್ದಾರೆ"

ಹೀಗೆಂದು ಮಹಾತ್ಮಾಗಾಂಧಿಯವರು ತಮ್ಮ ಹರಿಜನ ಪ್ರವಾಸದ ಕಾಲದಲ್ಲಿ ಮೈಸೂರ್ ಮಹಿಳೆಯರ ಸಭೆಯಲ್ಲಿ ಕೊಟ್ಟ ಒಂದು ಭಾಷಣದಲ್ಲಿ ತಿಳಿಸಿದರು. ಆಭರಣಗಳಿಗೆ ಪ್ರತ್ಯೇಕವಾದ ಸದುಪಯೋಗವಿದೆ ಎಂದೂ ಅವರು ಸೂಚಿಸಿದರು.

"ತನ್ನ ಆಭರಣ ಒಡವೆಗಳ ಒಂದು ಗಣನೀಯ ಅಂಶವನ್ನು ದೀನ ದರಿದ್ರರಿಗೂ, ಅಸಹಾಯಕರಿಗೂ ನೀಡದೆ ಯಾವ ಸ್ತ್ರೀಪುರುಷನೂ ಒಡವೆಗಳನ್ನು ಇಟ್ಟುಕೊಳ್ಳಲು ಹಕ್ಕುಳ್ಳವನಲ್ಲ. ಭಗವತ್ ಗೀತೆಯಲ್ಲಿ ಇದಕ್ಕೆ ತ್ಯಾಗವೆನ್ನಲಾಗಿದೆ. ಇದೊಂದು ಸಾಮಾಜಿಕ ಮತ್ತು ಧಾರ್ಮಿಕವಾದ ಧರ್ಮಕಾರ್ಯ. ಯಾರು ತ್ಯಾಗ ಮಾಡುವುದಿಲ್ಲವೊ ಅವನು ಕಳ್ಳನೆನಿಸುವನು. ಗೀತೆಯಲ್ಲಿ ಅನೇಕ ತರದ ತ್ಯಾಗಗಳನ್ನು ಬೋಧಿಸಲಾಗಿದೆ. ಆದರೆ ದೀನ ದರಿದ್ರರಿಗೆ ಸಹಾಯಮಾಡುವುದಕ್ಕಿಂತ ಹೆಚ್ಚಿನ ತ್ಯಾಗ ಬೇರೆ ಯಾವುದಿದೆ?"

ಮಾನವನ ಸಮಾನತೆಯನ್ನು ಒಪ್ಪಿಕೊಂಡು ಕೀಳು ಮೇಲು ಎಂಬ ಭಾವನೆಯನ್ನು ಮರೆತು ಬಿಡುವುದಕ್ಕಿಂತ ಹೆಚ್ಚಿನ ತ್ಯಾಗವು ಬೇರೊಂದಿಲ್ಲವೆಂದು ತಿಳಿಸುತ್ತಾ ಮಹಾತ್ಮರು: "ಹೃದಯವನ್ನು ಪರಿಶುದ್ಧಗೊಳಿಸಿ ಆತ್ಮ ಸೌಂದರ್ಯವನ್ನು ಹೆಚ್ಚಿಸುವುದರಲ್ಲೇ ಶೃಂಗಾರ ಅಲಂಕಾರಗಳ ಗೂಢವು ಅಡಗಿದೆಯಲ್ಲದೆ ದೇಹದ ಮೇಲೆ ಲೋಹ ಮತ್ತು ಕಲ್ಲುಗಳನ್ನು ಹೊರುವುದರಲ್ಲಿಲ್ಲ ಎಂಬ ವಿಷಯವನ್ನು ಭಾರತ ಮಹಿಳೆಯರಿಗೆ ತಿಳಿಸಲು ನಾನು ಆಶಿಸುತ್ತೇನೆ" ಎಂದರು.

ಆಂಧ್ರ ದೇಶದ ಮಹಿಳೆಯರಲ್ಲಿ ಮೊದಲ ಆದರ್ಶವನ್ನು ಕಲ್ಪಿಸಿದ ಶ್ರೀಮತಿ ಅನ್ನಪೂರ್ಣ ದೇವಿ ಎಂಬ ಮಹಿಳೆಯ ಕುರಿತು ತಿಳಿಸುತ್ತಾ ಮಹಾತ್ಮರು ಹೀಗೆಂದರು:

'ನನ್ನನ್ನು ಭೇಟಿಯಾದ ಮೊದಲನೇ ದಿವಸವೇ ಅವಳು ತನ್ನ ಆಭರಣಗಳನ್ನು ತೆಗೆದುಹಾಕಿದಳು.—ಒಂದಲ್ಲ ಎಲ್ಲವನ್ನೂ ತೆಗೆದುಹಾಕಿದಳು. ಅದನ್ನು ನೋಡಿದ ಇತರ ಮಹಿಳೆಯರು ಬಹಳ ಕೌತುಕಪಟ್ಟುಕೊಂಡರು. ಅವಳೆಲ್ಲಿ ಆಭರಣಗಳ ರಾಶಿಯೇ ಒಟ್ಟುಗೂಡಿತು. ಆಭರಣಗಳನ್ನು ತೆಗೆದುಹಾಕಿದ ಮಾತ್ರದಿಂದ ಅವಳ ಸೌಂದರ್ಯವು ಕಡಿಮೆಯಾಯಿತೆಂದು ನೀವು ತಿಳಕೊಳ್ಳುತ್ತೀರಾ? ನನಗೆ ಅವಳು ಹೆಚ್ಚಿನ ಸೌಂದರ್ಯವತಿಯಾಗಿ ತೋರಿದಳು. ಇಂಗ್ಲಿಷ್ ಭಾಷೆಯಲ್ಲಿ ಒಂದು ನಾಣ್ಣುಡಿ ಇದೆ: 'ಚಂದದ ಕೆಲಸವನ್ನು ಮಾಡುವುದೇ ಚಂದ.'

—ಮಹದೇವ ದೇಸಾಯಿ

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು, ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿವಸಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜೆಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಬಿಡಿ ಸಂಚಿಕೆ ಬೆಲೆ 0—1—0 ತಾರೀಕು 11—5—1945 Regd ON.M604

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 18—5—1945 [ಸಂಚಿಕೆ 10]

ಯುದ್ಧದಲ್ಲಿ ಭಾರತದ ಭಾಗ

ಮಿತ್ರ ಸಹಾಯಕ್ಕೆ ಹಿಂದೀಯ ಸೈನ್ಯ

ಹಿಟ್ಲರನ ಬಂಗ್ಲೆಯಲ್ಲಿ ಮೈಸೂರ ವಿಮಾನ

ಭಾರತವು ಈ ಯುದ್ಧಕ್ಕೆ ಬಹಳ ಅನುಕೂಲ ಸ್ಥಾನವಾಗಿತ್ತು. ಬರ್ಮವನ್ನು ಮುಕ್ತಗೊಳಿಸಲು ಭಾರತವು ಒಂದು ಪ್ರಥಮ ಸೋಪಾನ. ಅದು ಸರಬರಾಯಿ ಕೇಂದ್ರವೂ ಆಗಿದೆ. ಇಲ್ಲಿಂದ ಬ್ರಿಟಿಷ್, ಹಿಂದೀ, ಅಮೇರಿಕನ್ ಮತ್ತು ಚೀನಿಯ ಸೈನ್ಯಗಳು ಜಪಾನನ್ನೂ ಹೊಡೆದೋಡಿಸಲು ಸುಲಭವಾಯಿತು.

ಪರ್ಶಿಯನ್ ಕೊಲ್ಲಿಯ ಪೂರ್ವಕ್ಕಿರುವ ಭಾರತದಿಂದ ಸೋವಿಯಟ್ ರಶ್ಯಕ್ಕೆ ಸರಬರಾಯಿ ಕಳುಹಿಸಲು ಸಹಾಯಕವಾಯಿತು.

ಒಂದು ಕಡೆ ಸಿಲೋನ್ ಮತ್ತು ಆಸ್ಟ್ರೇಲಿಯ ಕಡೆಗೂ, ಇನ್ನೊಂದು ಕಡೆ ದಕ್ಷಿಣ ಮತ್ತು ಪೂರ್ವ ಆಫ್ರಿಕದ ಕಡೆಗೂ ಸೇರಿದ ಭಾರತೀಯ ಸಮುದ್ರಗಳು ಜಪಾನನ್ನು ಜರ್ಮನಿಯಿಂದ ದೂರವಿರಿಸಲು ಭದ್ರವಾದ ನೌಕಾ ಠಾಣ್ಯವಾಯಿತು.

ಹಿಂದೀಯ ಸೈನ್ಯ

ಯುದ್ಧಕ್ಕೆ ಮುಂಚೆ ಭಾರತ ಸೈನ್ಯ-೧೮೨,೦೦೦. ಇಂದು ೨೦ ಲಕ್ಷಕ್ಕೂ ಮಿಕ್ಕಿದೆ. ಎಲ್ಲವೂ ಸ್ವಂತ ಇಚ್ಛೆಯಿಂದ ಸೇರಿದವರು.

ತಿಂಗಳಿಗೆ ಸುಮಾರು ೬೦ ಸಾವಿರದಂತೆ ಜನರು ಇಲ್ಲಿ ಯುದ್ಧಕ್ಕೆ ಸೇರಿರುವರು.

ಐದನೇ ವರ್ಷದಲ್ಲಿ ಈ ಸಂಖ್ಯೆಯು ಅರ್ಧಕ್ಕೆ ಇಳಿಯಿತು.

ಭಾರತೀಯ ಸಮರ ಶಿಕ್ಷಣಾಲಯದಲ್ಲಿ ತರಬೇತಿ ಹೊಂದುತಿದ್ದ ಸೈನಾಧಿಕಾರಿಗಳಾಗುವವರ ಸಂಖ್ಯೆ ೨೦೦ರಿಂದ ೬೦೦ಕ್ಕೆ ಏರಿಸಲಾಗಿದೆ. ಯುದ್ಧಾರಂಭದಲ್ಲಿ ಬರೀ ೪೦೦ ಹಿಂದೀ ಸೈನಾಧಿಕಾರಿಗಳಿದ್ದವರು ಈಗ ೧೦ ಸಾವಿರ ಮಂದಿ ಇದ್ದಾರೆ. ಭಾರತೀಯ ನೌಕಾಧಿಕಾರಿಗಳಲ್ಲಿ ಶೇಕಡಾ ೪೫, ಸೈನ್ಯಾಧಿಕಾರಿಗಳಲ್ಲಿ ಶೇ. ೪೮, ವಿಮಾನಾಧಿಕಾರಿಗಳಲ್ಲಿ ನೂರಕ್ಕೆ ನೂರು ಅಧಿಕಾರಿಗಳು ಭಾರತೀಯರು.

ಯುದ್ಧಾಸ್ತ್ರ ತರಬೇತಿ

ಈಚೆಗೆ ಹೆಚ್ಚೆಚ್ಚು ಭಾರತೀಯರು ಯುದ್ಧಾಸ್ತ್ರಗಳನ್ನೂ, ಯಂತ್ರ ವಾಹನಗಳನ್ನೂ, ಫಿರಂಗಿ, ವಿಮಾನ ಗುಂಡುಗಳನ್ನೂ ಉಪಯೋಗಿಸಲು ತರಬೇತಿಹೊಂದಿರುವರು. ಅವುಗಳಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣಾಲಯಗಳೂ ತೆರೆಯಲಾಗಿದೆ. ಯಾಂತ್ರಿಕ ದಳಗಳು ಬರ್ಮಾರಂಗದಲ್ಲಿ ಶ್ಲಾಘನೀಯ ಸಾಹಸವನ್ನು ಪ್ರದರ್ಶಿಸಿರುವರು.

ಆಫ್ರಿಕಾ, ಬರ್ಮಾ, ಸಿಸಿಲಿ, ಮತ್ತು ಇಟೆಲಿಗಳಲ್ಲಿ ಭಾರತೀಯ ಫಿರಂಗಿ ದಳಗಳು ಸಿಡಿಗುಂಡುಗಳನ್ನು ಚತುರತೆಯಿಂದ ನಿರ್ವಹಣ ಮಾಡಿರುವರು.

ಯಂತ್ರ ದುರಸ್ತಿಮಾಡುವ ದಳದಲ್ಲಿ ೮೦ ಸಾವಿರ ಹಿಂದೀಯರೂ ೧೮೦೦ ಹಿಂದೀ ಅಧಿಕಾರಿಗಳೂ ಇದ್ದಾರೆ. ಇವರು ತಮ್ಮ ಉದ್ಯಮದಲ್ಲಿ ತುಂಬಾ ನುರಿತವರೆಂದೆನಿಸಿಕೊಂಡಿದ್ದಾರೆ.

ಪ್ರತಿ ತಿಂಗಳಲ್ಲಿ ಒಂದು ಸಾವಿರ ಭಾರತೀಯ ತರುಣರು ಮೂರು ಬೇರೆ ಬೇರೆ ಕೇಂದ್ರಗಳಲ್ಲಿ ಯಂತ್ರ ವಿಭಾಗದ ೪೩ ಪ್ರತಪ್ರತ್ಯೇಕ ಇಲಾಖೆಗಳಲ್ಲಿ ತರಬೇತಿ ಹೊಂದಿ ತಯಾರಾಗುತ್ತಾರೆ. ಇವರು ಯುದ್ಧದ ಎಲ್ಲಾ ರಂಗಗಳಲ್ಲೂ ಕೆಲಸಕ್ಕೆ ಕಳುಹಿಸಲ್ಪಡುತ್ತಾರೆ.

ವರದಿಗಾರರು

ಸೈನ್ಯದಲ್ಲಿ ಟೆಲಿಗ್ರಾಫ್ ಮತ್ತು ವಾಯರ್ಲೆಸ್ ಮೂಲಕ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುದ್ದಿ, ಆಜ್ಞೆ, ಸಲಹೆಗಳನ್ನು ಕಳುಹಿಸಲು ವರದಿಗಾರರು ಅತ್ಯಾವಶ್ಯಕ. ಹಿಂದೀ ಸೈನ್ಯದಲ್ಲಿ ಈಗ ಇಂತಹ ೫೦ ಸಾವಿರ ಮಂದಿ ಇದ್ದಾರೆ. ಇವರಲ್ಲಿ ಹೆಚ್ಚಿನವರು ದೇಶದಲ್ಲೇ ಉಪಯೋಗಿಸಲ್ಪಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಇವರು ಬಂದೂಕು ಯುದ್ಧವನ್ನು ಮಾಡಿರುವರು.

ವೈದಕೀಯ ದಳ

ಸ್ಥಾಪನೆ: ೧೯೪೩. ಆ ವರ್ಷ ೩೦೦ ಪ್ರತಪ್ರತ್ಯೇಕ ವೈದ್ಯಕೀಯ ದಳಗಳು ಪ್ರಾರಂಭಿಸಲ್ಪಟ್ಟವು. ಹಿಂದೀ ಸೈನ್ಯವಿದ್ದಲ್ಲಿ ಅವರು ಸಹಾಯಕರಾಗಿರುತ್ತಾರೆ. ಸ್ತ್ರೀಯರೂ ಈ ದಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೆಗೆದುಕೊಳ್ಳಲ್ಪಡುತ್ತಾರೆ. ಇವರ ಶ್ರಮದಿಂದ ಅಸ್ಸಾಮಿನಲ್ಲಿ ಮಲೇರಿಯಾ ಹಾವಳಿಯು ಅರ್ಧಕರ್ಧಕ್ಕೆ ಕಡಿಮೆಯಾಯಿತು.

ಇತರ ದಳಗಳು

ಯುದ್ಧಕ್ಕೆ ಸಂಬಂಧಪಟ್ಟ ಅನೇಕ ಇತರ ಇಲಾಖೆಗಳಲ್ಲಿ ನೂರಾರು ತರದ ಭಾಷೆ ಉಪಭಾಷೆಗಳನ್ನಾಡುವ ೫೫ ಸಾವಿರ ಸೇವಕ ದಳಗಳಿವೆ. ಇವರು ೨ ಸಾವಿರ ಯುದ್ಧ ಸೈನ್ಯಗಳೊಂದಿಗೆ ಸಹಕರಿಸುತ್ತಾರೆ. ಇವರಲ್ಲಿಯೂ ೧೬೦೦ ಮಂದಿ ಯುದ್ಧ ಕೈದಿಗಳಾಗಿದ್ದಾರೆ. ಹೊಸದಾಗಿ ಸ್ಥಾಪಿಸಲ್ಪಟ್ಟ ದಳಗಳಲ್ಲಿ ಹೊರ ದೇಶ ದಳ, ಕರಾವಳಿ ದಳ, ಶಿಬಿರ ದಳ, ಗುಪ್ತಚಾರರ ದಳ, ಮತ್ತು ಪತ್ರವ್ಯವಹಾರ ಪರೀಕ್ಷಕ ದಳಗಳು ಕೆಲವು. ಇವುಗಳಲ್ಲೇ ೧೧ ಸಾವಿರ ಮಂದಿ ಇದ್ದಾರೆ.

ಮಹಿಳಾ ದಳಗಳು

ಇವರ ಸಂಖ್ಯೆ ಹತ್ತು ಸಾವಿರ. ಇವರಲ್ಲಿ ೧ ಸಾವಿರ ಅಧಿಕಾರಿಗಳು. ಇವರ ಸಹಾಯದಿಂದ ಅನೇಕ ಪುರುಷರು ಯುದ್ಧರಂಗಕ್ಕೆ ಕಳುಹಿಸಲು ಸಹಾಯವಾಯಿತು. ಇವರು ಇಲೆಕ್ಟ್ರಿಕ್ ಇಲಾಖೆಯಲ್ಲೂ, ವಾಯರ್ಲೆಸ್, ಮತ್ತು ಆಸ್ಪತ್ರೆಗಳಲ್ಲೂ ಕೆಲಸ ಮಾಡುತ್ತಾರೆ.

ಹೊರಕ್ಕೆ ಕಳುಹಿಸಲ್ಪಟ್ಟವರು

ಸುಮಾರು ೪½ ಲಕ್ಷ ಭಾರತೀಯರು ದೇಶದ ಹೊರಗೆ ಕಳುಹಿಸಲ್ಪಟ್ಟಿರುವರು. ಇವರಲ್ಲಿ ೧೮ ಜನರಿಗೆ ವಿಕ್ಟೋರಿಯಾ ಪದಕಗಳು ದೊರಕಿವೆ. ೧೪೨ ಮಂದಿಗಳಿಗೆ ಸಾಹಸ ಪದಕಗಳು ಸಿಕ್ಕಿವೆ. ಇತರ ಪ್ರಶಸ್ತಿಗಳು ಸಾವಿರಕ್ಕೂ ಮಿಕ್ಕಿದವರಿಗೆ ಸಿಕ್ಕಿವೆ. ಇದು ತನಕ ಹಿಂದೀ ಸೈನ್ಯಗಳವರಿಗೆ ೨೪೬೮ ನಾನಾತರದ ಪಾರಿತೋಷಕಗಳು ಸಿಕ್ಕಿವೆ.

ಇಂಗ್ಲೆಂಡನ್ನು ಬಿಟ್ಟರೆ ಸಾಮ್ರಾಜ್ಯದಲ್ಲಿ ಅತೀ ಹೆಚ್ಚು ಪದಕಗಳು ದೊರಕಿದ್ದು ಭಾರತೀಯರಿಗೆ.

ನೌಕಾ ದಳ

ಇದರಲ್ಲಿ ೩೦ ಸಾವಿರ ನಾವಿಕ ಸೈನ್ಯವೂ, ೧೨೦೦ ಅಧಿಕಾರಿಗಳೂ ಇದ್ದಾರೆ. ೧೯೪೩ರಿಂದ ೪೪ರ ಒಳಗೆ ಭಾರತ ನೌಕೆಯವರು ೧,೭೫೦,೦೦೦ ಮೈಲು ಸಂಚಾರ ಮುಗಿಸಿದ್ದಾರೆ. ೨ ದೊಡ್ಡ ಮತ್ತು ೩ ಸಣ್ಣ ನೌಕಾ ಠಾಣ್ಯಗಳು ಕಟ್ಟಲ್ಪಟ್ಟವೆ. ಇಲ್ಲಿ, ದುರಸ್ತಿ ಕೆಲಸವು ಭರದಿಂದಲೂ ಶ್ರೀಘ್ರದಲ್ಲಿಯೂ ನಡೆಯುತ್ತದೆ.

ಬಂಗಾಳ ಕೊಲ್ಲಿಯಲ್ಲಿ ಹಾವಳಿ ಮಾಡುತಿದ್ದ ಚಿಕ್ಕ ಚಿಕ್ಕ ಅನೇಕ ಜಪಾನಿ ದಾಳಿಗ ಹಡಗುಗಳನ್ನು ಮುಳುಗಿಸಿದಲ್ಲದೆ ಬರ್ಮಾದಿಂದ ೪೦ ಸಾವಿರ ಜನರನ್ನು ಭಾರತ ನೌಕಾ ಪಡೆಯವರು ಸುರಕ್ಷಿತವಾಗಿ ಸಾಗಿಸಿದ್ದಾರೆ.

ವಿಮಾನ ದಳ

ಯುದ್ಧಾರಂಭದಲ್ಲಿ ಇದ್ದ ೨೦೦ ವೈಮಾನಿಕ ದಳ ಕೆಲಸಗಾರರಿಂದ ಈಗ ಆ ಸಂಖ್ಯೆ ೨೭ ಸಾವಿರಕ್ಕೆ ಮುಟ್ಟಿದೆ. ೧೭ ವಿಮಾನ ತರಬೇತಿ ಶಾಲೆಗಳು ಸ್ಥಾಪಿಸಲ್ಪಟ್ಟಿವೆ. ಕೆನಡಾದಲ್ಲೂ ಇಂಗ್ಲೆಂಡಿನಲ್ಲೂ ಭಾರತೀಯರು ವಿಮಾನ ತರಬೇತಿಹೊಂದಿ ಮರಳುತಿದ್ದಾರೆ. ಕರಾವಳಿ ಕಾವಲನ್ನೂ, ಬರ್ಮಾ ದಾಳಿಯನ್ನೂ ಹಿಂದೀ ವಿಮಾನದಳದವರು ದಿನನಿತ್ಯವೆಂಬಂತೆ ಮಾಡುತಿದ್ದಾರೆ.

ಎಲ್ಲಾ ಭಾರತೀಯ ವಿಶ್ವ ವಿದ್ಯಾಲಯಗಳಲ್ಲೂ ವಿದ್ಯಾರ್ಥಿಗಳಿಗೆ ವೈಮಾನಿಕ ಶಿಕ್ಷಣ ಕೊಡಲೇರ್ಪಡಿಸಿದೆ.

ಸಂಸ್ಥಾನಗಳಿಂದ

ಇದು ತನಕ ದೇಶಿ ಸಂಸ್ಥಾನಗಳಿಂದ ೩೭೫,೦೦೦ ಜನರು ಯುದ್ಧಕ್ಕೆ ಸೇರಿರುವರು. ಪಾಟಿಯಾಲಾದಿಂದಲೇ ೩೩ ಸಾವಿರ ಮಂದಿ ಸೇರಿರುವರು. ಎಲ್ಲಾ ಸಂಸ್ಥಾನಗಳ ಸ್ವಂತ ಸೈನ್ಯಗಳು ಯುದ್ಧಕ್ಕೆ ಕಳುಹಿಸಲ್ಪಟ್ಟಿವೆ. ನೇಪಾಲದಿಂದ ೮ ಸಾವಿರ ಘೂರ್ಕರು ಭಾರತ ಸೈನ್ಯಕ್ಕೆ ಕಳುಹಿಸಲ್ಪಟ್ಟಿದ್ದಾರೆ. ಕೆಲವು ರಾಜರು ವಿಮಾನಗಳನ್ನೂ ಕೊಟ್ಟಿರುವರು.

ಈಚೆಗೆ ಹಿಟ್ಲರನ ವಾಸಸ್ಥಾನವಾದ ಬರ್ಚೆಸ್ ಗೆಡನನ್ನು ಹಿಡಿಯುವುದಕ್ಕೆ ಮುಂದಾಗಿ ಹೋದವರು ಮೈಸೂರು ರಾಜರು ಕೊಟ್ಟ ವಿಮಾನದಳದವರು.

ಇದಲ್ಲದೆ ದೇಶಿ ರಾಜ್ಯಗಳು ಬಟ್ಟೆ, ಕಂಬಳಿ, ಕಬ್ಬಿಣ, ಉಕ್ಕು, ಔಷಧಿಗಳು, ರಬ್ಬರು, ಮರಮುಟ್ಟುಗಳನ್ನು ದಾರಾಳವಾಗಿ ಕೊಟ್ಟಿವೆ. ಯುದ್ಧ ಸಾಲಕ್ಕೂ ಸಂಸ್ಥಾನಿಕರು ಅಪಾರ ಸಹಾಯಮಾಡಿರುವರು.

ಯುದ್ಧ ಕೈದಿಗಳು

ಜರ್ಮನರ ಬಳಿ ಸುಮಾರು ಹತ್ತು ಸಾವಿರ ಹಿಂದೀ ಕೈದಿಗಳಿದ್ದರು. ಜಪಾನರ ಬಳಿಯಲ್ಲಿ ದಾಖಲೆಗೆ ಸಿಕ್ಕಿದ ೪೨,೩೬೪ ಮಂದಿಗಳೂ, ಊಹಿಸಲ್ಪಟ್ಟ ೨೨,೦೩೬ ಮಂದಿಗಳೂ ಕೈದಿಗಳಾಗಿದ್ದಾರೆ. ಇಟೆಲಿಯಲ್ಲಿ ೫೧೧೦ ಹಿಂದೀ ಕೈದಿಗಳಿದ್ದರು.

ಶತ್ರು ಕೈದಿಗಳು

ಸುಮಾರು ೩೦ ಸಾವಿರ ಶತ್ರು ಕೈದಿಗಳು ಭಾರತದಲ್ಲಿದ್ದಾರೆ. ಇವರಲ್ಲಿ ೬ ಮಂದಿಗಳು ಮಾತ್ರ ಜರ್ಮನರು.

೪ ಲಕ್ಷ ಭಾರತೀಯರು ಬರ್ಮಾದಿಂದಲೂ, ೫ ಸಾವಿರ ಮಲಯಾದಿಂದಲೂ ಭಾರತಕ್ಕೆ ಓಡಿ ಬಂದವರಿದ್ದಾರೆ. ಯುದ್ಧ ಕಾಲದಲ್ಲಿ ಬರ್ಮಾದಲ್ಲಿ ಹತ್ತು ಲಕ್ಷ ಮತ್ತು ಮಲಯಾದಲ್ಲಿ ೮ ಲಕ್ಷ ಭಾರತೀಯ ನಿವಾಸಿಗಳಿದ್ದರು.

ಸೌಕರ್ಯಗಳು

ಯುದ್ಧ ಭಾಗಿಗಳಾದ ಸೈನಿಕರಿಗೂ ಇತರ ಕೆಲಸದವರಿಗೂ ಎಲ್ಲಾ ತರದ ಆಟಪಾಟ, ವಿನೋದ, ಸಂಗೀತ, ನಾಟ್ಯ, ನೋಟ, ಸಂಚಾರದ ಸೌಕರ್ಯಗಳು ಒದಗಿಸಲಾಗುತ್ತದೆ. ಅದಕ್ಕೆ ಪ್ರತ್ಯೇಕ ಇಲಾಖೆಗಳಿವೆ. ಇವಲ್ಲದೆ ರೆಡ್ ಕ್ರಾಸ್ ಮತ್ತಿತರ ಸ್ವತಂತ್ರ ಸೈನಿಕ ಸೌಕರ್ಯ ಒದಗಿಸುವ ಸಂಸ್ಥೆಗಳೂ ಸಹಾಯ ಮಾಡುತ್ತಿವೆ.

ಟ್ರೊನ್

[ಯುರೋಪಿನ ೧೯ನೇ ಶತಮಾನದ ಸಣ್ಣ ಕತೆಗಾರರಲ್ಲಿ ಅತೀ ಶ್ರೇಷ್ಠನೆನಿಸಿದ ಮಾಪಸಾಂತನು ಈ ಕತೆಯ ಮೂಲ ಲೇಖಕರು ಜೀವನ ಚಿತ್ರಗಳನ್ನು ಮುಚ್ಚುಮರೆ ಇಲ್ಲದೆ, ಅದರ ಅಶ್ಲೀಲತೆಗಳನ್ನು ಕಾಳಿದಾಸನ ಗಾಂಭೀರ್ಯದಿಂದ ವರ್ಣಿಸುವುದರಲ್ಲಿ ಅಸಮಾನ ಪ್ರತಿಭೆಯುಳ್ಳ ಈ ಫ್ರೆಂಚ್ ಸಾಹಿತ್ಯ ಕಲಾವಂತಿಕೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ವಾಚಕರ ಮುಂದಿರಿಸಲು ಕೆಲವುವಾರಗಳ ತನಕ ಅವನ ಕತೆಗಳನ್ನು ಕೊಡುವುದರ ಮೂಲಕ ಪ್ರಯತ್ನಮಾಡಲಾಗುವುದು.]

ಹತ್ತು ಮೈಲು ವಿಸ್ತಾರ ಪ್ರದೇಶದಲ್ಲಿ ಆ ದಪ್ಪ ದಾಂಡಿಗ ಟ್ರೊನನನ್ನು ಅರಿಯದವರು ಯಾರೂ ಇಲ್ಲ. ಅವನು 'ಟೂರ್ನಮೆಂಟ್' ಹೋಟೇಲಿನ ಮ್ಹಾಲಕನಾದ ಎಂಟ್ರೊನ್ ಮೆಕೆಬ್ಲ್.

ಸಮುದ್ರದ ವರೆಗೆ ಚಾಚಿರುವ ಪರ್ವತಗಳ ಕಣಿವೆ ಪ್ರದೇಶದಲ್ಲಿರುವ ಆ ಹಳ್ಳಿಯನ್ನು ಅವನು ಕೀರ್ತಿಗೆ ತಂದಿದ್ದನು. ಅದೊಂದು ಬಡ ರೈತರ ಹಳ್ಳಿ. ಕಾಡುಗಳಿಂದಲೂ ಕಣಿವೆಗಳಿಂದಲೂ ಆವರಿಸಲ್ಪಟ್ಟ ಹತ್ತಾರು ಮನೆಗಳಿದ್ದುವಲ್ಲಿ. ಹಕ್ಕಿಗಳು ಗುಡ್ಡದ ಬಿರುಕಿನಲ್ಲಿ ಅವಿತುಕೊಳ್ಳುವಂತೆ ಆ ಹಳ್ಳಿಯ ಮನೆಗಳು ಆ ಕಣಿವೆಯಲ್ಲಿ ಹತ್ತಿರದ ಸಮುದ್ರದ ಉಪ್ಪುಗಾಳಿಗೆ ಮರೆಯಾಗಿ ಆ ಕಣಿವೆಹೊಂಡದಲ್ಲಿ ಹತ್ತಿರ ಹತ್ತಿರವಾಗಿ ನೀಡಿಕೊಂಡಿದ್ದವು.

ಆ ಕಿರುಹಳ್ಳಿ ಎಲ್ಲವೂ ಟ್ರೊನನ ಸ್ವಂತ ಆಸ್ತಿಯಿದ್ದಂತೆ ಕಾಣುತ್ತಿತ್ತು. ಟ್ರೊನನ ಮಾತು ರೀತಿಯೇ ಒಂದು ವಿಶಿಷ್ಟ ತರದಾಗಿದ್ದುದರಿಂದ ಜನರು ಅವನನ್ನು 'ಏ, ನನ್ನ ಚಲೋ ಟ್ರೊನ್' ಎಂದು ಕರೆಯುತ್ತಿದ್ದರು. ಅವನಿಗೊಂದು ಹೊಟೇಲೂ ಇದ್ದಿತು. ಅದನ್ನವನು ನಗರಗಳಲ್ಲಿನ ಇಂದ್ರಭವನವೆಂದೇ ತಿಳಕೊಂಡಿದ್ದನು. ಅನೇಕ ಸಲ 'ನನ್ನ ಫೈನ್ (ಹೋಟೆಲು) ಫ್ರಾನ್ಸಿನಲ್ಲೇ ಅತ್ಯುತ್ತಮವಾದುದು' ಎಂದು ಜಂಬಕೊಚ್ಚುತ್ತಿದ್ದ. ಅವನ ಹೊಟೇಲೆಂದರೆ ಚಿಕ್ಕದೊಂದು ಗುಡಿಸಲೆಂಬುದನ್ನು ಮರೆಯದಿರಿ. ಅದೊಂದು ಸಾರಾಯಿ ಗಡಂಗು ಎಂದೂ ಕರೆಯಬಹುದು. ಈ ಶೇಂದಿಖಾನೆಯ ನೀರನ್ನು ಇಂದಿಗೆ ಇಪ್ಪತ್ತು ವರ್ಷಗಳಿಂದ ಆ ಪ್ರದೇಶದವರಿಗೆ ಅವನು ಕುಡಿಸುತ್ತಾ ಬಂದಿದ್ದಾನೆ. ತನ್ನ ಗಿರಾಕಿಗಳಿಗೆ ಉಪಚರಿಸುತ್ತಾ ಅವನು: 'ಅದು ಹೊಟ್ಟೆಯನ್ನು ಬೆಚ್ಚಗೆಮಾಡಿ, ತಲೆಯನ್ನು ಶುದ್ಧಮಾಡುತ್ತದೆ; ನಿಮ್ಮ ಆರೋಗ್ಯಕ್ಕೆ ಇದಕ್ಕಿಂತಲೂ ಮಿಗಿಲಾದ ದಿನ್ನೊಂದಿಲ್ಲ ಮಕ್ಕಳೇ' ಅನ್ನುತಿದ್ದನು. ಪ್ರತಿಯೊಬ್ಬರಿಗೂ ಅವನು 'ನನ್ನ ಮಗನೇ' ಎಂದೇ ಕರೆಯುತ್ತಿದ್ದ. ಸ್ವಾರಸ್ಯದ ಸಂಗತಿಯೆಂದರೆ ಅವನಿಗೆ ತನ್ನ ಸ್ವಂತದವನೆನಿಸಿದ ಒಬ್ಬ ಮಗನೂ ಇರಲಿಲ್ಲ.

ಹಾ! ಸರಿ, ಆ ಗ್ರಾಮದಲ್ಲಿ ಅತೀ ದಾಂಡಿಗನಾದ ಅವನನ್ನು ಪ್ರತಿಯೊಬ್ಬರೂ ಅರಿತಿದ್ದರು. ಅವನ ಗಾತ್ರದ ದಾಮಾಶಯಕ್ಕೆ ಅವನಿರುವ ಮನೆಯು ಅತೀ ಚಿಕ್ಕದಾಯಿತೆನ್ನಬೇಕು. ಅವನು ತನ್ನ ಮನೆಬಾಗಿಲಲ್ಲಿ ನಿಂತಾಗ ಅವನು ಅದನ್ನು ಹೇಗೆ ಹೊಕ್ಕುವನೆಂಬುದೇ ಎಲ್ಲರಿಗೂ ಕೌತುಕದ ವಿಷಯವಾಗಿತ್ತು. ದಿನದಲ್ಲಿ ಬಹಳ ಹೊತ್ತು ಅವನು ಅಲ್ಲೇ ನಿಂತಿರುತಿದ್ದ. ಒಬ್ಬೊಬ್ಬ ಗಿರಾಕಿ ಬಂದಾಕ್ಷಣ ಒಂದೊಂದು ಸಲ ಅವನು ತನ್ನ ಹೋಟೆಲ್ ಮನೆಯೊಳಗೆ ನುಗ್ಗುತಿದ್ದ. ಅವನಲ್ಲಿ ಕುಡಿಯಲಿಕ್ಕೆ ಬಂದವರ ಹತ್ತಿರ ಅವನೂ ಒಂದೊಂದು ಗ್ಲಾಸು ಕುಡಿಯುತಿದ್ದ—ಅವರ ಲೆಕ್ಕದಲ್ಲಿ.

ಅವನ 'ಕೆಫೆ'ಯ ಹೆಸರು 'ಗೆಳೆಯರ ಗುಪ್ತಮಂದಿರ'ವೆಂದಿತ್ತು, ನಿಜವಾಗಿಯೂ ಮುದುಕ ಟ್ರೊನನು ಸುತ್ತಮುತ್ತಲಿನ ಹಳ್ಳಿ ಜನರ ಸ್ನೇಹಿತನಾಗಿದ್ದ; ಫೆಕೆಂಪ್, ಮೊಂಟಿವಿಲಿಯರ್ಸ್ ಮುಂತಾದ ಕಡೆಗಳಿಂದ ಜನರು ಇವನ ಹರಟೆ ವಿನೋದ, ಕತೆಗಳನ್ನು ಕೇಳಲು ಆಗಿಂದಾಗ್ಗೆ ಬರುತಿದ್ದರು—ಅವನು ತನ್ನ ನಟನೆಯಿಂದ ಕಲ್ಲು ಮರಗಳನ್ನೂ ನಗಿಸಬಲ್ಲ. ಯಾರಿಗೂ ದೂರದೆ ಅವನು ವಿನೋದ ಮಾಡಬಲ್ಲ, ಹೇಳಲು ಧೈರ್ಯವಿಲ್ಲದ ಕೆಲವು ವಿಷಯಗಳನ್ನು ಅವನು ಕಣ್ಣು ರೆಪ್ಪೆ ಒತ್ತುವುದರ ಮೂಲಕ ತಿಳಿಸುವನು. ಎದುರಿನವರು ನಗಾಡದಿದ್ದರೆ, ಅವರ ಹೊಟ್ಟೆಗೊ, ಪಕ್ಕಕ್ಕೊ, ಬೆರಳಿನಿಂದ ಕುಕ್ಕಿ ಅವರನ್ನು ನಗಿಸುತಿದ್ದ. ಅವನು ಕುಡಿಯುವುದನ್ನು ನೋಡುವುದು ಒಂದು ಸಾರಸ್ಯ ವಿಷಯ. ಪ್ರತಿ ಗಿರಾಕಿಯೂ ಕೊಟ್ಟ ಶೇಂದಿಯನ್ನು ಅವನು ಸಂತೋಷದಿಂದ ನುಂಗುವನು. ನುಂಗುವಾಗ ಅವನ ಕಣ್ಣುಗಳಲ್ಲಿ ಎರಡು ಬಗೆಯ ಸಂತೋಷಗಳು ಮೂಡಿ ಕಾಣುತಿದ್ದವು-ಅವರು ಕೊಟ್ಟ ಶೇಂದಿಯಿಂದ ಹೊಟ್ಟೆತುಂಬಿತೆಂಬ ಸಂತೋಷ ಒಂದು, ತಾನೂ ಅವರೂ ಕುಡಿದದಕ್ಕೆ ಅವರೇ ಹಣ ಕೊಡುವುದರಿಂದ ತನಗೇ ತುಂಬಾ ಲಾಭವಾಗುತ್ತದೆಂಬ ಸಂತೋಷ ಎರಡು. ಕೆಲವು ತುಂಟ ಗ್ರಾಮಸ್ಥರು ಟ್ರೊನನಿಗೆ ಮಕ್ಕಳಾಗಲಿಲ್ಲವೇಕೆಂದು ಆಶ್ಚರ್ಯಪಡುತಿದ್ದು, ಒಂದು ದಿನ ಅವನಿಗೆ ಕೇಳಿಯೇ ಬಿಟ್ಟರು. ಒಂದು ಖೂಳ ನೋಟದಿಂದ ಅವನೆಂದನು: 'ನನ್ನಂತಹ ಸುಂದರ ವ್ಯಕ್ತಿಗೆ ಬೇಕಾದಷ್ಟು ಆಕರ್ಷಿತಳಾದ ನನ್ನ ಹೆಂಡತಿಯಿಲ್ಲ.'

ಈ ಮೂವತ್ತು ವರ್ಷಗಳನ್ನು ಟ್ರೊನ್ ದಂಪತಿಗಳು ಜಗಳವಾಡಿಯೇ ಕಳೆದರು. ಅವರ ಗಡಂಗಿನ ವಿನೋದದಲ್ಲಿ ಮಾತ್ರವಲ್ಲ ಆ ಗಂಡಹೆಂಡಿರ ಜಗಳದಲ್ಲೂ ಶೇಂದಿ ಗಿರಾಕಿಗಳು ಅಭಿರುಚಿ ತಾಳುತಿದ್ದರು. ಟ್ರೊನನು ಮಾತ್ರ ಸದಾ ಸಂತೋಷಚಿತ್ತನಾಗಿರುತಿದ್ದ. ಆದರೆ ಅವನ ಹೆಂಡತಿ ಮಾತ್ರ ಸಿಡಿದು ಬೀಳುತಿದ್ದಳು. ಅವಳು ಎತ್ತರವಾಗಿ ತೆಳ್ಳಗಿರುವ ಓರ್ವ ರೈತ ಹೆಂಗಸು. ಚಪ್ಪಟೆಯಾದ ಅವಳ ಉದ್ದದ ದೇಹದ ಮೇಲೆ ಗೂಗೆಯಂತಿರುವ ಒಂದು ತಲೆ, ನಡೆಯುವಾಗ ರಕ್ಕಸನ ಹೆಜ್ಜೆ ಹಾಕುತಿದ್ದಳು. ಅವಳು ತನ್ನ ಸಮಯವನ್ನೆಲ್ಲಾ ತಮ್ಮ ಗಡಂಗಿನ ಹಿಂದಿನ ಹಿತ್ತಿಲಲ್ಲಿ ಕೋಳಿ ಸಾಕಲು ಕಳೆಯುತಿದ್ದಳು. ಕೋಳಿಗಳನ್ನು ಕೊಬ್ಬಿಸುವುದರಲ್ಲಿ ಅವಳು ಪ್ರಖ್ಯಾತಿ ಪಡೆದಿದ್ದಳು.

ಫೆಕೆಂಪ್ ಗ್ರಾಮದಲ್ಲಿ ದೊಡ್ಡ ಔತಣವಾದರೆ ಅತಿಥಿಗಳಿಗೆ ಟ್ರೊನ್ ಮಹಿಳೆಯ ಕೊಬ್ಬಿದ ಕೋಳಿ ಪದಾರ್ಥಗಳನ್ನು ಬಳಸದಿದ್ದರೆ ತೃಪ್ತಿಯಾಗುತಿದ್ದಿಲ್ಲ.

ಆದರೆ ಹುಟ್ಟುವಾಗಲೇ ಅವಳೊಂದು ಹೀನ ಮನೋಭಾವದವಳಾಗಿ ಜನಿಸಿದ್ದಳು. ಪ್ರತಿಯೊಂದು ವಿಷಯದಲ್ಲೂ ಅತೃಪ್ತಿಪಟ್ಟುಕೊಂಡೇ ಅವಳು ಜೀವನ ಮಾಡುತಿದ್ದಳು. ಪ್ರತಿಯೊಬ್ಬರೊಡನೆ, ಮುಖ್ಯವಾಗಿ ತನ್ನಗಂಡನೊಡನೆ, ಅವಳು ಸದಾ ಕುಪಿತಳಾಗಿಯೇ ಇರುತಿದ್ದಳು. ಅವನ ವಿನೋದ, ಜನಪ್ರಿಯತೆ, ಧೃಡಾರೋಗ್ಯಗಳ ಕುರಿತು ಅವಳು ಧಿಕ್ಕರಿಸುತಿದ್ದಳು. ಅವನು ದುಡಿಯದೆ ಸಂಪಾದಿಸುವವನೆಂತಲೂ, ಹತ್ತು ಮಂದಿಯಷ್ಟು ಉಣ್ಣುವವನೆಂತಲೂ ಅವಳು ಅವನನ್ನು ತುಚ್ಛೀಕಾರದಿಂದ ನೋಡುತಿದ್ದಳು. ಅವನು ಹಂದಿಗಳಂತಿರುವುದರಿಂದ ಅವುಗಳ ಕೊಟ್ಟಿಗೆಯಲ್ಲಿ ಕಟ್ಟಲ್ಪಡಲು ಯೋಗ್ಯನೆಂದೂ, ಅವನೊಂದು ಕೊಳಕು ಮಾಂಸದ ಮುದ್ದೆಯಂತಿದ್ದುದರಿಂದ ಅವಳಲ್ಲಿ ವಾಕರಿಕೆ ಹುಟ್ಟಿಸುತ್ತದೆಂದೂ ಅವಳು ಸಾರಿದ್ದಳು. 'ತಾಳಿ! ಸ್ವಲ್ಪ ತಾಳಿ! ಒಂದು ದಿನ ಈ ಸಿಮ್ಮ ಗಾಳಿ ತುಂಬಿದ ಹೊಟ್ಟೆ ಗೋದಿಚೀಲ ಬಿಚ್ಚಿದಂತೆ ಹರಿದುಹೋಗಲಿಕ್ಕಿದೆ' ಎಂದು ಅವನ ಮುಖದ ಮೇಲೆ ಕಿರಚುತಿದ್ದಳು.

ಬೆಲ್ಲ ತುಂಬಿದ ಭರಣಿ ಕುಲುಕಾಡುವಂತೆ ಟ್ರೊನನು ತನ್ನ ಹೊಟ್ಟೆಯ ಮೇಲೆ ಹೊಡೆಹೊಡೆದು ನಗುತ್ತಾ 'ಎಲೇ ನನ್ನ ಮುದಿ ಹೇಟೆಯೇ, ನಿನ್ನ ಕೋಳಿಗಳಲ್ಲೊಂದನ್ನು ನನ್ನಷ್ಟು ದಪ್ಪವಾಗಿ ಬೆಳೆಯಿಸು ನೋಡೋಣ' ಅನ್ನುತಿದ್ದನು.

ಶರ್ಟಿನ ಕೈಗಳನ್ನು ಮೇಲೆ ಬಿಗಿಯುತ್ತಾ ಅವನು ತನ್ನ ಹಳದಿ ಬಣ್ಣದ ತೋಳುಗಳನ್ನು ತೋರಿಸುತ್ತ:'ಇದೊನೋಡು ಆಗಲೇ ಗರಿಗಳು ಮೂಡಿಲ್ಲವೇ?' ಎಂದಾಗ ಅಲ್ಲಿ ಸೇರಿದ್ದ ಅವನ ಗಿರಾಕಿಗಳೆಲ್ಲರೂ ನಕ್ಕು ನಕ್ಕು, ಮೇಜು ತಟ್ಟಿ, ನೆಲಕ್ಕೆ ಹೊಡೆದು ಉಗಿದು ಬಿಡುತಿದ್ದರು.

ಇದರಿಂದ ಅತಿರೇಕ ಕೋಪಗೊಂಡವಳಾದ ಅವಳು ಶ್ವಾಸಕೋಶ ಒಡೆಯುವಂತೆ ಗರ್ಜಿಸಿ 'ಸ್ವಲ್ಪ ತಾಳಿ, ನಿಮ್ಮ ಟ್ರೊನ್ ಫ್ಯಾನನು ಗೋದಿಗೋಣಿ ಚೀಲದಂತೆ ಒಡೆದುಹೋಗಲಿಕ್ಕಿಲ್ಲವೆ?' ಎಂದು ಕೂಗುವಳು.

ಇದಕ್ಕೂ ಆ ಕುಡುಕ ಗಿರಾಕಿಗಳು ಗಟ್ಟಿಯಾಗಿ ನಗಲು ರೌದ್ರ ತಾಳಿದವಳಾಗಿ ಹುಚ್ಚಳಂತೆ ಅಲ್ಲಿಂದ ಹೊರಕ್ಕೆ ಓಡಿಹೋಗುವಳು.

ನಿಜವಾಗಿಯೂ ಟ್ರೊನನುಒಂದು ವಿಚಿತ್ರ ಜೀವಿ. ದಪ್ಪನೆ ಕೆಂಪಾಗಿ ಬೆಳೆದದ್ದರಿಂದ ಅವನಿಗೆ ಉಸಿರು ಕಟ್ಟಿದಂತಾಗುತಿತ್ತು. ಮೃತ್ಯುವು ಕೂಡಾ ಇಂತಹ ಜೀವಿಗಳೊಂದಿಗೆ ವಂಚನೆಯ ವಿನೋದವನ್ನೂ, ತಮಾಷೆಯನ್ನೂ, ಸಲ್ಲಾಪವನ್ನೂ, ವಿನಾಶಕ ಹಾಸ್ಯವನ್ನೂ ಮಾಡುತಿದ್ದು, ತನ್ನ ನಾಶಕಾರಕ ಶಕ್ತಿಯನ್ನೂ ವಿನೋದಾನಂದದಿಂದ ಹಗುರಮಾಡಿಕೊಳ್ಳುತಿತ್ತೊ ಎಂದು ತೋರುತಿತ್ತು. 'ಅಯ್ಯೋ, ದೇವರೆ ಇವನು ಹೀಗೇಕೆ ಸುಕ್ಕಿ ಸೊರಗಿದ್ದಾನೆ' ಎಂದು ಹೇಳುವಂತೆ ಮಾಡುವ ಬಿಳಿ ಕೂದಲಿನ ಇಳಿಮುಖದ, ಕೃಶವಾದ ಅಂಗಾಂಗಗಳ ನಿರ್ಬಲ ವ್ಯಕ್ತಿಯನ್ನಾಗಿ ಮಾಡುವ ಬದಲು ಮೃತ್ಯುವು ಟ್ರೊನನನ್ನು ಇನ್ನೂ ಕೊಬ್ಬಿಸಿ ಸಂತೋಷಪಡುತಿತ್ತು. ಅವನನ್ನು ಒಂದು ಅಮಾನುಷ್ಯ ಆರೋಗ್ಯವನ್ನು ಕೊಟ್ಟು ವಿಪರೀತ ಕೆಂಪುಮುಖದ ಕಾಡು ಕೋಡಗನಂತೆ ಮೃತ್ಯು ದೇವತೆಯು ಅವನಿಗೆ ಹರಸಿದಂತೆ ಕಾಣುತಿತ್ತು. ಅವನು ಬೇರೆಯವರಿಗೆ ಮಾಡುತಿದ್ದ ಸಕಲ ಹಾಸ್ಯ ಶರೀರ ಊನತೆಗಳು ಅವನಿಗಿರುತಿದ್ದರೆ ತುಂಬಾ ಕನಿಕರ ಹುಟ್ಟಿಸುತಿದ್ದವು.

ತನ್ನ ಕೋಳಿಗಳಿಗೆ ಧಾನ್ಯಗಳನ್ನು ಹಾಕುತ್ತಾ ಟ್ರೊನ್ ಮಹಿಳೆಯು; "ಸ್ವಲ್ಪ ತಡೆಯಿರಿ, ಸ್ವಲ್ಪ ತಡೆಯಿರಿ, ಏನೆಲ್ಲ ಸಂಭವಿಸುತ್ತದೆಂದು ನೋಡೋಣ" ಅನ್ನುತಿದ್ದಳು.

ಒಂದು ಸಲ ಅಕಸ್ಮಾತಾಗಿ ಟ್ರೊನನಿಗೆ ನಾಡಿಸೆಳೆತವಾಗಿ ವಾತರೋಗದ ಜಾಡ್ಯ ಬಡೆಯಿತು. ಅವರೆಲ್ಲರೂ ಅವನನ್ನು ಗಡಂಗಿನ ಹಿಂದಿನ ಭಾಗದ ಕೋಣೆಗೆ ಒಯ್ದರು. ದೇಹದಲ್ಲಿ ಪೀಡಿತನಾಗಿದ್ದರೂ ಅವನ ತಲೆಯೂ ಯಾವಾಗಲೂ ಸ್ವಚ್ಛವಾಗಿರುವುದರಿಂದ ಈಚೆ ಕಡೆ ನಡೆಯುವ ವಿನೋದವನ್ನಾದರೂ ಕೇಳಿ ಅವನು ಆನಂದ ಪಡಲೆಂದು ಅವನ ಗಿರಾಗಿಗಳ ಆಶೆ. ಸ್ವಲ್ಪ ಅವಧಿಯಲ್ಲೇ ಅವನು ಚೇತನ ಹೊಂದಿ ಹಿಂದಿನ ತನ್ನ ವಿನೋದ ಜೀವನಕ್ಕೆ ಬರಲೆಂದು ಅವನ ಹಿತೈಷಿಗಳೆಲ್ಲರೂ ಕೋರಿದರು. ಆದರೆ ಆ ಆಶೆಯು ಬರಿದಾಯಿತು. ಟ್ರೊನನು ಹಾಸಿಗೆ ಹಿಡಿದೇ ಬಿಟ್ಟನು. ವಾರಕ್ಕೊಂದಾವರ್ತಿ ಅವನ ಸ್ನೇಹಿತರು ಅವನನ್ನು ನಾಲ್ಕೂ ಕೈಕಾಲುಗಳಿಗೆ ಹಿಡಿದು ಎತ್ತಿ ಒಂದುಸಾರಿ ಹಾಸಿಗೆ ಮಗುಚಿಸಿ ಪುನಃ ಮಲಗಿಸುತಿದ್ದರು. ಇಷ್ಟಾದರೂ ಅವನು ಹರ್ಷಚಿತ್ತನಾಗಿಯೇ ಇದ್ದನು. ಆದರೆ ಈ ಸಲದ ಅವದ ವಿನೋದವು ಬೇರೆಯೇ ತರದ್ದಾಗಿತ್ತು. ದಿನವೆಲ್ಲ ಬೈದಾಡುತ್ತಿರುವ ಪತ್ನಿಯ ಮುಂದೆ ಅವನೊಂದು ಚಿಕ್ಕ ಮಗುವಿನಂತೆ ಭಯಾನಕ ನಮ್ರತೆಯಿಂದ ಇದ್ದು ಅವನ ಸ್ಥಿತಿಯು ಕನಿಕರವನ್ನುಂಟುಮಾಡುತಿತ್ತು. "ಇಗೊಳ್ಳಿ! ಕೆಲಸಕ್ಕೆ ಬಾರದ ಕೊಳಕು ಆಲಸ್ಯಿ, ಕತ್ತೆ ಅಲ್ಲಿ ಮಲಗಿದ್ದಾನೆ ನೋಡಿ!" ಎಂದು ಗರ್ಜಿಸುತಿದ್ದಳವಳು. ಹಾಸಿಗೆಯಲ್ಲಿ ಒಂದು ಪಕ್ಕಕ್ಕೆ ತಿರುಗುತ್ತಾ ಅವಳ ಬೆನ್ನ ಹಿಂದೆ ರೆಪ್ಪೆ ಮಡಚುತ್ತಾ ಅವನು ಪ್ರತ್ಯುತ್ತರವಿಲ್ಲದೆ ಸುಮ್ಮಗೆ ಬಿದ್ದುಕೊಳ್ಳುತಿದ್ದನು. ಅವನಿಂದ ಬೇರೇನೂ ಸಾಧ್ಯವಿದ್ದಿಲ್ಲ. ಅವನ ಈ ಬದಲಾವಣೆಯನ್ನು ಅವನು "ಒಂದು ಸಲ ಉತ್ತರಕ್ಕೆ ತಿರುಗುವುದು ಮತ್ತೊಂದು ಸಲ ದಕ್ಷಿಣಕ್ಕೆ" ಎನ್ನುತಿದ್ದನು. ಅವನ ಈಗಿನ ಒಂದೇ ಒಂದು ಸರಸಲ್ಲಾಪವೆಂದರೆ ತನ್ನ ಕೋಣೆಯಾಚೆ ಗಡಂಗಿನಲ್ಲಿ ನಡೆಯುತಿದ್ದ ಸಂಭಾಷಣೆಯನ್ನು ಕೇಳುವುದು. ಯಾವನಾದರೂ ಸ್ನೇಹಿತನ ಧ್ವನಿಯನ್ನು ಗುರುತಿಸಿದರೆ ಅವನು "ಎಲೇ, ಸೆಲೆಸ್ಟಿನನೇನು, ಎಲೇ ನನ್ನ ಮಗನೇ!" ಎಂದು ಒದರುತಿದ್ದನು.

(೯ನೇ ಪುಟಕ್ಕೆ ಮುಂದುವರಿದಿದೆ)

ಅಮೇರಿಕದ 'ವಿಚಿತ್ರ ನಗರ' ನ್ಯೂಯಾರ್ಕ್

ಸಂಪತ್ತಿನ ಆಗರ, ಸ್ವಾತಂತ್ರ್ಯದ ತವರ್ಮನೆ

ನ್ಯೂಯಾರ್ಕ್; ನೂರಾರು ಜನಾಂಗಗಳ ಮಿಶ್ರಣ ಗಗನ ಮುಟ್ಟುವ ಸೌಧಗಳಿಂದ ರಾಜಿಸುತ್ತಿದೆ ಆ ನಗರ. ಆಂಗ್ಲ ಪತ್ರಿಕೆಯೊಂದರ ಲೋಕ ಸಂಚಾರಿ ಪ್ರತಿನಿಧಿಯೋರ್ವನು ತನ್ನ ಪತ್ರಿಕೆಗೆ ಬರೆದ ಪತ್ರವಿದು; ನ್ಯೂಯಾರ್ಕಿನ ಭಾಗಗಳ-ಜನಜೀವನದ-ಬಣ್ಣನೆಯನ್ನು ನೀವಿಲ್ಲಿ ಕಾಣುವಿರಿ

ನಾನೀಗ ನ್ಯೂಯಾರ್ಕಿನಲ್ಲಿದ್ದೇನೆ. ಜಿರಾಫೆಯೊಂದನ್ನು ಮೊದಲನೆಯ ಸಲ ಕಂಡ ಹೆಂಗಸಿನಂತೆ—ನನ್ನನ್ನೇ ನಾನು ನಂಬಲಾರೆ. ಈ ನಗರವನ್ನು ವರ್ಣಿಸಬಲ್ಲ ಒಂದು ಶಬ್ದವಿದ್ದರೆ ಅದು 'ಕಲ್ಪನಾತೀತ'.

ಇಲ್ಲಿಯ ಜನಸಂಖ್ಯೆ ೭,೫೦೦,೦೦೦. ಅದರಲ್ಲಿ ಸೇ. ೭೩ರಷ್ಟು ವಿದೇಶದಿಂದ ಇಲ್ಲಿಗೆ ಬಂದವರು ಯಾ ಅವರ ಮಕ್ಕಳು ಮೊಮ್ಮಕ್ಕಳು. ಕಳೆದ ೧೫ ದಿನಗಳಲ್ಲಿ, ನನ್ನ ಕೋಣೆಗೆ ಬಂದು ಹೋದ ಜರ್ಮನಿ, ಆಲ್ಬನಿಯ, ಟರ್ಕಿ ಮುಂತಾದ ಐರೋಪ್ಯ ದೇಶಗಳ ಜನರು ಅಷ್ಟಿಷ್ಟಲ್ಲ. ಅವರಲ್ಲಿ ಎಲ್ಲರೂ ತಮ್ಮ ದೇಶಗಳ ಕುರಿತು ಪ್ರಶ್ನಿಸುವವರೇ! ಈ ವಿದೇಶೀಯರನ್ನು ನಗರದಿಂದ ಗಡಿಪಾರುಮಾಡಿದರೆ ಮತ್ತೆ ಉಳಿಯುವುದು ಪ್ರಾಯಶಃ ಒಂದು ಮರುಭೂಮಿ. ಆಗ ೨೫ ಪರದೇಶೀ ಭಾಷೆಗಳು ಮೌನವಾದಂತಾಗುವುದು. ೨೦೦ಕ್ಕಿಂತ ಮೇಲ್ಪಟ್ಟ ವಿದೇಶೀ ಭಾಷೆಗಳ ಪತ್ರಿಕೆಗಳು ಮಾಯವಾಗುವುವು. ನಗರದ ೧೯೦೦೦ ಪೋಲಿಸರಲ್ಲಿ ಅಧಿಕ ಸಂಖ್ಯಾಕರಾದ ಐರಿಶ್ ಜನರನ್ನು ಐಯರ್‌ಲೆಂಡಿಗೆ ಕಳುಹಿಸಬೇಕಾಗುವುದು. ೨ ಮಿಲಿಯಕ್ಕೆ ಮಿಕ್ಕಿದ ಯೆಹೂದ್ಯರು ತಮ್ಮನ್ನು ತುಚ್ಛೀಕರಿಸುವ ದೇಶಗಳಿಗೆ ಮರಳಿ ಹೋಗಬೇಕಾಗುವುದು. ಏಕೆಂದರೆ, ನ್ಯೂಯಾರ್ಕಿನ ಕುರಿತು ಹೇಳುವುದಾದರೆ ಅದು ನಾನಾ ಜನಾಂಗಗಳಿಂದ ಕೂಡಿದ ಒಂದು ಸಣ್ಣ ಪ್ರಪಂಚವೇ ಆಗಿದೆ.

ಹಂಗೇರಿಯವನೊಬ್ಬನು ಇಲ್ಲಿಗೆ ಬಂದರೆ ಅವನನ್ನು ಸ್ವಾಗತಿಸಲು ೧೧೫,೦೦೦ ಹಂಗೇರಿಯನರಿದ್ದಾರೆ. ರುಮಾನಿಯದವನೊಬ್ಬ ಬಂದರೆ ಅವನ ಭಾಷೆಯಲ್ಲೇ ಕರೆದು ಸ್ವಾಗತಿಸುವ ೯೫,೦೦೦ ರುಮಾನಿಯನರಿದ್ದಾರೆ. ಸ್ಕಾಟ್‌ಲೆಂಡಿನವನು ಬಂದರೆ ೭೧,೦೦೦ ಸ್ಕಾಟರಿದ್ದಾರೆ. ಐಸ್‌ಲೆಂಡಿನಷ್ಟು ಚಿಕ್ಕ ದ್ವೀಪದ ನಿವಾಸಿಯೊಬ್ಬನು ಬಂದರೂ ಹಿಂದೆ ಹೋಗಲು ಕಳವಳಪಡಬೇಕೆಂದಿಲ್ಲ. ಕಾರಣ ಅವನಿಗೆ ಸಂಭ್ರಮದ ಸ್ವಾಗತವೀಯಲು ೧೫೦ ಅವನ ಊರವರೇ ಇದ್ದಾರೆ. ಹೀಗೆ ಎಲ್ಲ ಜನಾಂಗಗಳ-ಎಲ್ಲ ಮತಗಳ-ಎಲ್ಲ ಬಣ್ಣದ ಜನರ ಸಮ್ಮಿಶ್ರಣ ನ್ಯೂಯಾರ್ಕ್. ಆದರೆ ಅವರೆಲ್ಲರೂ ಸ್ವತಂತ್ರರು, ನಿರ್ಭೀತರು; ಹಿಟ್ಲರ್ ಶಾಹಿಯ ವಿರೋಧಿಗಳು. 'ಜನತೆಯ ಸರಕಾರ, ಜನತೆಯಿಂದ ನಡೆಯಿಸಲ್ಪಡುವ ಸರಕಾರ, ಜನತೆಗಾಗಿ ಸರಕಾರ' ಎಂಬ ತತ್ವದಲ್ಲಿ ನಂಬಿಕೆಯುಳ್ಳವರು.

ನ್ಯೂಯಾರ್ಕಿನ ಹಾರ್ಲೆಮ್ ಎಂಬುದು ಕಪ್ಪು ಜನರಾದ ನಿಗ್ರೋಗಳ 'ಸ್ವರ್ಗ'. ಪ್ರಾಯಶಃ ಇಲ್ಲಿರುವಷ್ಟು ದಟ್ಟ ಜನಸಂದಣಿ ಪ್ರಪಂಚದ ಬೇರೆಲ್ಲಿಯೂ ಇಲ್ಲ. ಒಂದುವರೆ ಚದರ ಮೈಲಿನೊಳಗೆ ೫೦೦,೦೦೦ ಜನರು ಹೇಗೆ ವಾಸಿಸುತ್ತಾರೋ ದೇವರೇ ಬಲ್ಲ. ಇವರಲ್ಲಿ ಅರೆವಾಸಿ ಜನರು ಸದಾ ದುಃಖಿತರು. ಉಳಿದವರ ಕುಟುಂಬವೊಂದರ ವಾರದ ಆದಾಯ ಬರೇ ೨ ಪೌಂಡುಗಳು. ಈ ನಿಗ್ರೋಗಳ ಅಚ್ಚುಮೆಚ್ಚಿನ ಪಾನೀಯ 'ಕಿಂಗ್‌ಕೊಂಗ್' ಎಂಬುದು; ಒಂದು ಡ್ರಾಮಿಗೆ ಎರಡುವರೆ ಪೆನ್ನಿ ಬೆಲೆಯಷ್ಟೆ. ಆದರೂ ಜಪಾನಿನ 'ವಿಸ್ಕಿ'ಗಿಂತಲೂ ಇದರ ಪ್ರಭಾವ ಹೆಚ್ಚೆಂದು ನನಗೆ ತಿಳಿಯಿತು. ಹಾರ್ಲೆಮ್‌ನಲ್ಲಿ 'ಹಿಟ್ಲರ'ನ ಮಾದರಿಯ ಒಬ್ಬ ನಿಗ್ರೋ ತಲೆದೋರಿದ್ದ. ದಕ್ಷಿಣ ಆಫ್ರಿಕದಲ್ಲಿ ತನ್ನ ಏಕಛತ್ರಾಧಿಪತ್ಯವನ್ನು ಸ್ಥಾಪಿಸಬೇಕೆಂದು ಇವನು ನಿಗ್ರೋಗಳಿಗೆಲ್ಲ ಬೋಧಿಸಲು ಹೊರಟಿದ್ದ. ಈಗೇನೋ ಅವನು ಸುಮ್ಮನಾಗಿದ್ದಾನೆ.

ಈ ನಗರದ ಮತ್ತೊಂದು ವಿಚಿತ್ರವೆಂದರೆ ಆಕಾಶ ಚುಂಬಿ (Skyscrapers) ಎನಿಸುವ ಎತ್ತರದ ಮನೆಗಳು. ನಗರದ ನಟ್ಟನಡುವಿನ ರೋಕ್‌ಫೆಲ್ಲರ ಕಟ್ಟಡಗಳ ಕೇಂದ್ರವೇ ಇವೆಲ್ಲ ಕಟ್ಟಡಗಳಿಗೆ ಅಲಂಕಾರಪ್ರಾಯವಾದುದು. ಈ ಕೇಂದ್ರದ ಅತಿ ಎತ್ತರದ ಕಟ್ಟಡದಲ್ಲಿ ಒಂದರ ಮೇಲೊಂದು ೭೦ ಮಾಳಿಗೆಗಳಿವೆ, ಅದು ೮೧೫ ಅಡಿ ಎತ್ತರವಾಗಿದೆ. ಇವಕ್ಕಿಂತಲೂ ಎತ್ತರವಾದ ಮನೆಗಳು ಈ ನಗರದಲ್ಲಿ ತುಂಬ ಇದ್ದರೂ ಈ ರೋಕ್ ಫೆಲ್ಲರ್ ಕೇಂದ್ರವೇ ಎಲ್ಲರಿಗೆ ಅತಿ ಆಕರ್ಷಣೀಯವಾಗಿ ತೋರುತ್ತದೆ. ಈ ಕೇಂದ್ರ ತಯಾರಿಗೆ ೧೨೫,೦೦೦ ಟನ್ ಉಕ್ಕು ತಗಲಿದೆಯಂತೆ. ಇವೆಲ್ಲ ಕಟ್ಟಡಗಳ ಒಟ್ಟು ಬೆಲೆ ೧೧,೦೦೦,೦೦೦ ಪೌಂಡುಗಳಾಗಬಹುದು. ಇವುಗಳಿಂದ ವರ್ಷಂಪ್ರತಿ ಸಿಗುವ ಬಾಡಿಗೆ ೭೦೦,೦೦೦ ಪೌಂಡುಗಳು. ಈ ಕಟ್ಟಡಗಳ ನೆಲಗಳ ಚದರಳತೆ ೪,೫೦೦,೦೦೦ ಚದರಡಿಗಳು, ಎರಡು ಮೈಲುಗಳಷ್ಟು ಉದ್ದಕ್ಕೂ ಅಂಗಡಿಗಳು ಇದರಲ್ಲಿವೆ. ನ್ಯೂಯಾರ್ಕ್ ನಗರದೊಳಗಿನ ಈ ಪುಟ್ಟ ನಗರವೊಂದನ್ನೇ ನಡೆಯಿಸಲು ೧೨೦೦ಕ್ಕೆ ಮೇಲ್ಪಟ್ಟ ಶಿಬಂದಿಯಿದೆ. ಆ ಶಿಬಂದಿಯಲ್ಲಿ ೨೫ ಜನರ ಕೆಲಸ-ಮಳೆ, ಬಿಸಿಲೆನ್ನದೆ ಪ್ರತಿದಿನ ೨೩,೫೦೦ ಕಿಟಕಿಗಳನ್ನು ತೊಳೆಯುವುದೊಂದೇಯೆನ್ನುವಾಗ ಈ ಕೇಂದ್ರವು ಎಷ್ಟು ದೊಡ್ಡದೆಂದು ನೀವೇ ಊಹಿಸಿರಿ.

ರೊಕ್‌ಫೆಲ್ಲರ್ ಕೇಂದ್ರದಲ್ಲಿ ಜನರನ್ನು ಉಪ್ಪರಿಗೆಗಳಿಗೆ ಒಯ್ಯಲಿಕ್ಕೆ ೧೭೫ ಲಿಫ್ಟು (ಎತ್ತಣೆ)ಗಳಿವೆ. ಇವುಗಳು, ಕೇಂದ್ರಕ್ಕೆ ಸೇರಿದ ೧೩ ಕಟ್ಟಡಗಳಲ್ಲಿ ಉಪ್ಪರಿಗೆಗಳ ಮೇಲೆ-ಕೆಳಗೆ ಹೋಗುವ ೨೪,೦೦೦ ಕಾಯಂ ನಿವಾಸಿಗಳನ್ನು ಮತ್ತು ೧೨೨,೦೦೦ ದೈನಿಕ ಸಂದರ್ಶಕರನ್ನು ಹಾಗೆ ಒಯ್ಯುವ ಕೆಲಸ ನಿರ್ವಹಿಸುತ್ತವೆ. ಇವುಗಳಲ್ಲಿ ನಿಮಿಷಕ್ಕೆ ೧೪೦೦ ಅಡಿಯಷ್ಟು ವೇಗದಲ್ಲಿ ಚಲಿಸುವಂತಹವೂ ಇವೆ. ಅಂತಹ ಒಂದು ಲಿಫ್ಟಿನಲ್ಲಿ (ಎತ್ತಣೆಯಲ್ಲಿ) ಮೇಲಕ್ಕೆತ್ತಲ್ಪಡುವಾಗ ವ್ಯಕ್ತಿಯ ಹೊಟ್ಟೆಯಲ್ಲಿ ಏನೋ ಒಂದು ವಿಚಿತ್ರ ತಳಮಳವಾಗುವುದು. ಈವೊಂದು ಕೇಂದ್ರದ ಎತ್ತಣೆಗಳೆಲ್ಲ ವರ್ಷವೊಂದಕ್ಕೆ ೮೨೪,೦೦೦ ಮೈಲುಗಳಷ್ಟು (ಎಂದರೆ ಭೂಲೋಕದ ಮೂವತ್ತಮೂರು ಸುತ್ತು ತೆಗೆದಷ್ಟು) ಚಲಿಸುತ್ತವೆಂದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ? ಆದರೆ ರೋಕಫೆಲ್ಲರ್ ಕೇಂದ್ರವೆಂಬುದು ಅಂತಹ ಹಲವು ಕೇಂದ್ರಗಳಲ್ಲಿ ಒಂದೆಂಬುದು ಜ್ಞಾಪಕವಿರಲಿ.

ನ್ಯೂಯೋರ್ಕಿನ ಐಶ್ವರ್ಯದ ಕುರಿತು ಏನೆನ್ನಲಿ? ಈ ನಗರ ವಾಸಿಗಳಲ್ಲಿ ಸೇ. ೨೦ ಮಂದಿಯ ವಾರ್ಷಿಕ ಆದಾಯ ೧೦೦೦ ಪೌಂಡುಗಳಿಗಿಂತಲೂ ಹೆಚ್ಚು. ಇಡಿ ನಗರದ ಒಟ್ಟು ಆದಾಯ ವರ್ಷಕ್ಕೆ ೧,೨೫೦,೦೦೦,೦೦೦ ಪೌಂಡುಗಳು. ನಗರದ ವಾರ್ಷಿಕ ವೆಚ್ಚ ಯುರೋಪಿನ ಸಣ್ಣ ಸಣ್ಣ ದೇಶಗಳಲ್ಲಿ ಯಾವುದಾದರೊಂದರ ವೆಚ್ಚಕ್ಕಿಂತ ಹೆಚ್ಚು. ಇಲ್ಲಿ ನನಗೆ ತೋರುವ ಮತ್ತೊಂದು ವೈಶಿಷ್ಟ್ಯವೆಂದರೆ .೦೦,೦೦೦ ಎಕ್ರೆ ವಿಸ್ತಾರವಾಗಿದ್ದು, ೧,೮೭೨,೯೪೮ ಸಂಸಾರಗಳನ್ನೊಳಗೊಂಡ ಇಷ್ಟುದೊಡ್ಡ ನಗರದಲ್ಲಿ ಒಂದೇ ಒಂದು ವಿಷವಾಯು ಮುಖವಾಡ (gas mask) ಯಾ ವಿಮಾನದಾಳಿ ಆಶ್ರಯ (air raid shelter) ಯಾ—ಒಬ್ಬನಾದರೂ ಎ. ಆರ್. ಪಿ. ವಾರ್ಡನ್ ಇಲ್ಲದಿರುವುದಾಗಿದೆ. (೧೯೪೦ರಲ್ಲಿ ಹೀಗೆ ಬರೆದುದು).

ಇಲ್ಲಿಯ ಜನಜೀವನದ ವಿಚಾರದಲ್ಲಿ, ನನಗೆ ವಿಶೇಷವಾಗಿ ತೋರುವ ಎರಡು ಸಂಗತಿಗಳಿವೆ-ಇಲ್ಲಿಯ ಅವಸರ ಯಾವೇಗ ಮತ್ತು ಇಲ್ಲಿಯ ಜನರಿಗೆ ಫೆಸಿಸ್ಂ ಮೇಲಿರುವ ದ್ವೇಷ. ನಗರದ ಎಲ್ಲಿ ನೋಡಿದರಲ್ಲಿ ಜನರ ಅವಸರವನ್ನು ವರ್ಣಿಸಲಿಕ್ಕಾಗದು. ಇಲ್ಲಿಯ ನಗರ ಸಭೆಯ ಅಧ್ಯಕ್ಷರ ಕಾರಿನಲ್ಲೇ ರೇಡಿಯೊ ಟೆಲಿಫೋನಿನ ಜೋಡಣೆಯಿದೆ. ಅವರು ಕಾರಿನಲ್ಲಿ ಕುಳಿತು ಹೋಗುತ್ತಿರುವಾಗಲೂ, ಯಾರೊಡನೆಯೂ ಮಾತನಾಡಲಿಕ್ಕಾಗುವಂತೆ ಇಷ್ಟೆಲ್ಲ ವ್ಯವಸ್ಥೆ. ಇಲ್ಲಿಯ ವಾಹನಗಳ ವೇಗವೂ ಅಸಾಮಾನ್ಯವಾದುದು. ಲಂಡನಿನಲ್ಲಾದರೆ ಪ್ರಾಯಶಃ ಎಲ್ಲ ಡ್ರೈವರುಗಳೂ ವೇಗದ ಮಿತಿ ಮೀರಿದುದಕ್ಕಾಗಿ ಬಂಧಿಸಲ್ಪಡುತಿದ್ದರೋ ಏನೊ! ಇಲ್ಲಿಯ ಉದ್ಯೋಗಸ್ಥರು (businessmen) ಹತ್ತೇ ನಿಮಿಷಗಳಲ್ಲಿ ತಮ್ಮ ಉಪಾಹಾರವನ್ನು ತೀರಿಸಿ, ಒಂದು ಗಂಟೆಯವರೆಗೆ ಯುರೋಪಿನ ಸಮಾಚಾರಗಳನ್ನು ಚರ್ಚಿಸುತ್ತ ಕುಳಿತಿರುತ್ತಾರೆ.

ನ್ಯೂಯಾರ್ಕಿನ ಅಂಗಡಿಗಳಲ್ಲಿ ಜರ್ಮನ್ ಮ್ಹಾಲುಗಳು ಸಿಗುವುದೇ ಇಲ್ಲ. ನ್ಯೂಯಾರ್ಕಿನ ಜನತೆಯು ಜರ್ಮನ್ ವಸ್ತುಗಳನ್ನು ಕೊಂಡುಕೊಳ್ಳುವುದೇ ಇಲ್ಲ. ಅವರ ಪಾಲಿಗೆ ಜರ್ಮನಿ ಸತ್ತಂತೆಯೇ ಸರಿ. ಇಲ್ಲಿಯ ಎಲ್ಲ ನಿವಾಸಿಗಳಿಗೂ ತಾರೆಗಳಿಂದ ಕೂಡಿದ ಅಮೇರಿಕನ್ ಧ್ವಜದ ಮೇಲೆ ತುಂಬ ಅಭಿಮಾನವಿದೆ; ಗೌರವವಿದೆ, ಯುರೋಪಿನಲ್ಲಿ ಯುದ್ಧ ಪ್ರಾರಂಭವಾದಂದಿನಿಂದ, ಶಾಂತಿ, ಸಂತೃಪ್ತಿಗಳ ಸ್ಮರಿಸುವ ನೂರಾರು ಜನಾಂಗಗಳು ದೇಶಪ್ರೇಮದ ಸಂಕೇತವಾದ ಆ ಧ್ವಜದ ಮೇಲಿನ ಗೌರವವು ಮತ್ತಷ್ಟು ಹೆಚ್ಚಿದೆ. ವಾಕ್‌ಸ್ವಾತಂತ್ರ್ಯ, ಆಲೋಚನಾಸ್ವಾತಂತ್ರ್ಯ, ಸಮತೆ, ನಿರ್ಭೀತಿ-ಎಲ್ಲವುಗಳ ಚಿಹ್ನೆಯೇ ಅಮೇರಿಕನ್ ಧ್ವಜ.

ನ್ಯೂಯಾರ್ಕಿನ ಜನಸಂಖ್ಯೆ ೧೯೦೦ರಲ್ಲಿದ್ದುದರ ಇಮ್ಮಡಿಯಾಗಿದೆ ಈಗ. ಇಲ್ಲಿಯ ಹೆಂಗಸರು ವರ್ಷಕ್ಕೆ ೭೦,೦೦೦,೦೦೦ ಪೌಂಡುಗಳನ್ನು ಬರೇ ವಸ್ತ್ರಕ್ಕಾಗಿ ಖರ್ಚುಮಾಡುತ್ತಾರೆ. ಆದರೆ ಇವೆಲ್ಲಕ್ಕಿಂತಲೂ ಮಿಗಿಲಾಗಿ ತಾವು ಸ್ವತಂತ್ರರೆಂಬ ಸಂಗತಿಯೇ ಅವರಲ್ಲಿ ಹೆಮ್ಮೆಯನ್ನುಂಟುಮಾಡುತ್ತಿದೆ. ನ್ಯೂಯಾರ್ಕಿನ ಜನರಲ್ಲಿ ಸ್ವಾತಂತ್ರ್ಯದ ಮೇಲೆ ಪ್ರೀತಿ, ಅಭಿಮಾನಗಳು ಎಷ್ಟಿವೆಯೆಂಬುದಕ್ಕೆ ಮೊನ್ನೆ ನಡೆದ ಸಂಗತಿಯನ್ನು ಹೇಳುತ್ತೇನೆ. ನಾನು ರಸ್ತೆಯ ಮೇಲೆ ಹೋಗುತಿದ್ದಾಗ ತನ್ನ ಆಂಗ್ಲ ಉಚ್ಚಾರವನ್ನು ಕಂಡುಹಿಡಿದ ಒಬ್ಬ ಪೋಲಿಸನು ನನಗೆ ಹೀಗೆಂದ 'ಅಯ್ಯಾ ಇದು ಲಂಡನಿನ ಹಾಗೆಯೇ ಎಂದು ತಿಳಿಯಿರಿ. ನಡತೆ ಸರಿಯಿದ್ದರಾಯಿತು. ನಿಮ್ಮ ಸ್ವೇಚ್ಛೆಯಂತೆ ನೀವಿರಬಹುದು.' ಲಂಡನಿನಲ್ಲಿ ಆಕಾಶಚುಂಬಿಗಳಿಲ್ಲದಿರಬಹುದು. ಆದರೆ ಲಂಡನ್, ನ್ಯೂಯಾರ್ಕ್—ಎರಡೂ ಏಕರೀತಿಯಲ್ಲಿ ಸ್ವಾತಂತ್ರ್ಯದ ತವರುಮನೆಗಳೆಂದರೂ ತಪ್ಪಾಗದು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906

Statement of affairs as on 31st December 1944.

CAPITAL AND LIABILITIES	Rs. As.Ps.
1. Paid up Capital	14,76,535- 0- 0
2. Reserves	4,14,302- 3-11
3. Deposits	98,25,162- 6- 6
4. Bills for collection	6,87,039- 2- 2
5. Branch Adjustments	7,20,593- 3-
6. Other liabilities	2,86,375- 4- 9
7. Profits for the Current year together with Balance brought forward.	1,40,405-15- 8
Grand Total Rs.	1,35,50,413- 4- 0

PROPERTY AND ASSETS	Rs. As.Ps
1. Office Buildings, safes, furniture, etc.	1,04,204- 0- 0
2. Advances	57,53,919- 5- 0
3. Investments on Govt. Securities etc.	30,18,971-15- 5
4. Bills for collection	6,87,039- 2- 2
5. Other Assets	1,07,153- 5- 9
6. Cash on hand and with Bankers at call & in Short Term Deposits	38,79,125- 7- 0
Garnd Total Rs.	1,35,50,413- 4- 8

ಬ್ರಿಟನಿನ ನೌಕಾಶಕ್ತಿಯ ಪ್ರಖರತೆ

ಮೊದಲು ಸೋತರೂ—ಮತ್ತೆ ಗೆದ್ದರು.

ವ್ಯಾಸ್‌ರಾಯರು ಸೇನಾಪತಿಗಳಾಗಿದ್ದಾಗ

ಯುದ್ಧದ ಯಶಸ್ಸಿಗೆ ಕಾರಣ ಭೂತವಾದ ಮಿತ್ರ ಸಮರೋಪಾಯಗಳು ಕಡುವಾದ ಟೀಕೆಗೆ ಒಳಗಾಗದಿರವು.

ಯುದ್ಧ ತಂತ್ರವನ್ನು ಪ್ರಾಮುಖ್ಯವಾಗಿ ಎರಡು ವಿಧಾನವಾಗಿ ವಿಂಗಡಿಸಬಹುದು. ಯಾವ ಸ್ಥಾನದಲ್ಲಿ ಹೇಗೆ ಶಕ್ತಿಯನ್ನು ಉಪಯೋಗಿಸಿ ಯಾವ ತರದಲ್ಲಿ ನಿರ್ಣಯಾತ್ಮಕ ಫಲವನ್ನು ಪಡೆಯಬಹುದೆಂಬ ಯೋಜನೆ ಒಂದು. ಇದು ಪ್ರಾಮುಖ್ಯವಾದುದು. ನಂತರದ ತಂತ್ರವೆಂದರೆ ಯೋಚಿಸಲ್ಪಟ್ಟ ವಿಧಾನವನ್ನು ನಿಷ್ಕರ್ಷಿಸಲ್ಪಟ್ಟ ಸ್ಥಾನದಲ್ಲಿ ಯೋಗ್ಯ ರೀತಿಯಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸುವುದು.

ಪ್ರಾರಂಭದಲ್ಲಿ ಬ್ರಿಟನಿಗೆ ದಕ್ಕೆಗಳ ಮೇಲೆ ದಕ್ಕೆ ಉಂಟಾಗಿ ಗಂಡಾಂತರದ ಪರಿಸ್ಥಿತಿ ಉಂಟಾಯಿತು. ತನ್ನ ಅಪಾರ ನೌಕಾ ಶಕ್ತಿಯ ಹಿನ್ನೆಲೆಯಲ್ಲಿ ತನ್ನ ನೆಲ ಸೈನ್ಯವನ್ನು ಸಂಪೂರ್ಣ ಶಸ್ತ್ರೀಕರಿಸುವುದು ಮೊದಲು ಬ್ರಿಟನಿಗೆ ಸಾಧ್ಯವಾಗಲಿಲ್ಲ. ಒಂದು ವೇಳೆ ಹಾಗೆ ಮಾಡಿದ್ದರೆ ಅದು ವಿಶ್ವದ ಯಾವ ಭಾಗದಲ್ಲಾದರೂ ಇಚ್ಛಿತ ಫಲವನ್ನು ಪಡೆಯುದಂತೆ ಅಂತಹ ಸೈನ್ಯವನ್ನು ಉಪಯೋಗಿಸಿಕೊಳ್ಳಬಹುದಿತ್ತು.

ಆದರೆ ಆಕಸ್ಮಾತಾಗಿ ಯುದ್ಧ ಜ್ವಾಲೆಯು ಯುರೋಪನ್ನು ಮುತ್ತಿದ್ದರಿಂದ ಫ್ರಾನ್ಸಿನ ಸಹಾಯಕ್ಕೆ ತನ್ನ ಅರ್ಧಕ್ಕರ್ಧ ಶಸ್ತ್ರಾಸ್ತ್ರ ಸಜ್ಜಿತ ಸೈನ್ಯವನ್ನು ಬ್ರಿಟನ್ನು ಕಳುಹಿಸಬೇಕಾಗಿ ಬಂತು. ಈ ಯೋಜನೆಯು ಫ್ರಾನ್ಸಿನ ಸಂಪೂರ್ಣ ಸೋಲಿನೊಡನೆ ನಿರ್ನಾಮವಾಯಿತು. ೧೯೪೦ರ ಡನ್‌ಕರ್ಕ್ ಪ್ರಕರಣವು ಅದರ ಭಯಂಕರ ಪರಿಣಾಮ ಅಲ್ಲಿಂದ ತಪ್ಪಿಸಿಕೊಂಡದ್ದು ಒಂದು ದೈವ ಚಮತ್ಕಾರವೇ ಸರಿ.

ಡನ್‌ಕರ್ಕ್ ನಂತರ ಬ್ರಿಟನ್ನು ಕಣ್ಣು ತೆರೆಯಿತು. ಅಲ್ಲಿಂದ ಅವಿಶ್ರಾಂತ ಶ್ರಮಕ್ಕೆ ಆರಂಭವಾಯಿತು. ಅಲ್ಲಿಂದ ಮುಂದೆ ಜರ್ಮನಿಗೆ ಮತ್ತೆ ಬ್ರಿಟನ್ನು ಬೇಕಾದ ಹಾಗೆ ಮಾಡಲು ಬಿಡಲಿಲ್ಲ.

ಆ ವರ್ಷದಲ್ಲಿ ಬ್ರಿಟಿಷ್ ಕಾರ್ಖಾನೆಗಳಿಂದ ಅತ್ಯಲ್ಪ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳು ತಯಾರಾಗುತಿದ್ದುವು. ಒಂದು ಕಡೆ ಜರ್ಮನ್ ಅಕ್ರಮಣದ ಭಯ; ಇನ್ನೊಂದು ಕಡೆ ಇದ್ದ ಅಲ್ಪ ಸ್ವಲ್ಪ ಶಸ್ತ್ರಾಸ್ತ್ರಗಳನ್ನು ಇತರ ಕಡೆಯ ಮಿತ್ರರಿಗೆ ಕಳುಹಿಸಿ ಕೊಡಬೇಕಾದ ಧರ್ಮ ಸಂಕಟ. ಇವುಗಳ ನಡುವಿನಲ್ಲಿ ಗೋಳಾಡುತಿದ್ದಾಗಲೇ ಬ್ರಿಟನ್ನು ದೇಶ ರಕ್ಷಣೆಯ ಭಾರವನ್ನು ನೌಕಾಪಡೆಗೂ ವಿಮಾನ ದಳಕ್ಕೂ ವಹಿಸಿ ಕೊಟ್ಟಿತು. ಶಸ್ತ್ರ ತಯಾರಿಕೆಗಳೆಲ್ಲವು ಈಜಿಪ್ತಿನತ್ತ ರವಾನಿಸಲ್ಪಟ್ಟವು.

ಈ ನಿರ್ಣಯವೇ ಕೊನೆಗೆ ಯುದ್ಧ ತಂತ್ರದ ಅಮೋಘ ನಿದರ್ಶನವಾಗಿ ಪರಿವರ್ತನ ಹೊಂದಿತು. ಪ್ರಧಾನ ಯೋಜನೆಯ ದೃಷ್ಟಿಯಿಂದ ಯುರೋಪ ಖಂಡದಲ್ಲೇ ಶತ್ರುವನ್ನು ಎದುರಿಸುವುದು ತಕ್ಕ ಮಾರ್ಗವೆಂದು ನಿರ್ಧರಿಸಲಾಯಿತು. ಚಿಕ್ಕ ಯೋಜನೆಯ ಮೇರೆಗೆ ಲೋರ್ಡ್ ವೇವಲ್ಲರು (ವ್ಯಾಸ್‌ರಯ್) ತಮ್ಮ ಕೈ ಕೆಳಗಿನ ಚಿಕ್ಕ ಚಿಕ್ಕ ದಳಗಳನ್ನು ಈಜಿಪ್ತಿನಲ್ಲಿ ಬಹು ಚಾಣಕ್ಯದಿಂದ ಉಪಯೋಗಿಸಿ ಯಶಸ್ಸನ್ನುಗಳಿಸುವವರಾದರು. ಎಬಿಸೀನಿಯದಲ್ಲೂ ವೇವಲ್ಲರ ದಳಗಳಂತೆ ಇನ್ನೂ ಅನೇಕ ಸೈನ್ಯ ಸಂಗ್ರಹವಿತ್ತು.

ಆದರೆ ವೇವಲ್ಲ ಸಾಹೇಬರು ಶತ್ರುವಿನ ಎರಡು ಕಡೆಯ ಚಿಮ್ಮಟಿಕೆಯ ಹೊಡೆತಕ್ಕೆ ಬೀಳದಂತೆ ಜಾಗರೂಕರಾಗಿದ್ದರು.

ಪಶ್ಚಿಮದಲ್ಲಿ ರೊಮೆಲ್ಲನು ಅಲೆಂಗ್ಸಾಂಡ್ರಿಯದ ಕಡೆ ಮುಂದರಿಯುತಿದ್ದನು. ಪೂರ್ವದಲ್ಲಿ ಇಟೇಲಿಯಾನರು ಮಾರ್ಶಲ್ ಗ್ರೆಜಿಯೊನಿಯವರ ನಾಯಕತ್ವದಲ್ಲಿ ಮುಂದೊತ್ತುತಿದ್ದರು. ಈಜಿಪ್ತಿನಲ್ಲಿ ಒಂದಿಷ್ಟು ಸೈನ್ಯವನ್ನು ಇಳಿಬಿಟ್ಟು ಅವರು ಇಟೇಲಿಯವರ ಕಡೆಗೆ ಸಾಗಿ ಹೋದರು. ಅವರ ನಿರ್ಬಲ ಸ್ಥಾನಗಳನ್ನು ಕಂಡು ಹಿಡಿದು ಅಲ್ಲಿಯೇ ಬಲವಾದ ಏಟುಗಳನ್ನು ಬಿಟ್ಟು ಅವರನ್ನು ನಿರ್ಮೂಲಿಸಿದರು. ಕೆಲವೇ ವಾರಗಳೊಳಗೆ ಲಿಬಿಯಾದಲ್ಲಿನ ಇಟೇಲಿಯಾನ್ ಸೈನ್ಯವು ನಾಮಾಶೇಷವಾಯಿತು. ನಂತರ ಅಬಿಸೀನಿಯದ ಕಡೆ ತಿರುಗಿ ಅಷ್ಟೇ ಅಮೋಘ ವಿಜಯಮಾಲೆಗಳನ್ನು ಸಂಪಾದಿಸಿದರು.

ಈ ಸಮಯದಲ್ಲಿ ಅತ್ತ ಗ್ರೀಸ್‌ನಲ್ಲಿ ಇಟಲಿಯ ದಬ್ಬಾಳಿಕೆಖೋರ ಸರ್ವಾಧಿಕಾರಿಯು ಚಿಕ್ಕ ಗ್ರೀಕ್ ಸೈನ್ಯವನ್ನು ಮುರಿಯುಲಾರದೆ ಹೊಡೆತಗಳನ್ನು ತಿನ್ನುತ್ತಿದ್ದನು. ಬಲ್ಗೇರಿಯದ ಆ ಕುತಂತ್ರ ನರಿಯೂ ಅವನೊಡನೆ ಸೇರಿದ್ದನು. ಗ್ರೀಸಿಗೆ ಬ್ರಿಟಿಷರು ಭರವಸೆ ಕೊಟ್ಟದ್ದರಿಂದ ಅಲ್ಲಿಗೆ ತ್ವರೆಯಾಗಿ ವೇವೆಲ್ಲರ ಒಂದು ದಳವನ್ನು ಕಳುಹಿಸಲಾಯಿತು. ಮತ್ತೆ ಇಟಲಿಯ ಪರವಾಗಿ ರಂಗಕ್ಕಿಳಿದ ಬಲಾಢ್ಯ ಜರ್ಮನರೆದುರಿನಲ್ಲಿ ಯಾರ ಕೈವಾಡವು ಸಾಗದಿದ್ದರೂ ಬ್ರಿಟಿಷರು ಎಂತಹ ಸಂಕಷ್ಟ ಸಮಯದಲ್ಲಾದರೂ ಕೊಟ್ಟ ಮಾತು ನಡೆಸುವರೆಂಬುದನ್ನು ತೋರಿಸಿ ಕೊಟ್ಟರು.

೧೯೪೦ರ ನವೆಂಬರ ತಿಂಗಳಲ್ಲಿ ಹಿಟ್ಲರನು ವಿಶ್ವಾಸ ಘಾತದಿಂದ ರಷ್ಯದ ಮೇಲೆ ಬೀಳುವವನಿದ್ದನು. ಆದರೆ ಕ್ರೀಟದಲ್ಲಿ ಬ್ರಿಟಿಷರ ಬಲವಾದ ವಿರೋಧದಿಂದ ಅವನ ಯೋಜನೆಗಳು ಆರುವಾರುಗಳಿಗೆ ಮುಂದರಿದುದರ ಪರಿಣಾಮವಾಗಿ ರಷ್ಯಕ್ಕೆ ಉಸಿರು ಬಿಡಲು ಸಮಯವು ಸಿಕ್ಕದ ಹಾಗೆ ಆಯಿತು.

ನಂತರದ ೧೮ ತಿಂಗಳು ಕಾಲದಲ್ಲಿ ಬ್ರಿಟನು ತನ್ನ ಸಮುದ್ರ ಶಕ್ತಿಯನ್ನು ಹೆಚ್ಚಿಸಲು ಪ್ರಯತ್ನ ಪಟ್ಟಿತು. ಸಮುದ್ರಗಳ ಒಡೆತನವಿಲ್ಲದೆ ಅದು ತನ್ನ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಿಕೊಳ್ಳಲಾಗುವುದಿಲ್ಲ. ಈ ಉದ್ದೇಶಪೂರ್ತಿಗಾಗಿ ಬ್ರಿಟನು ಆಫ್ರಿಕದಲ್ಲಿನ ಭೂಮಧ್ಯ ಸಮುದ್ರ ಕರಾವಳಿಯನ್ನು ಮೊದಲು ಭದ್ರಪಡಿಸಿಕೊಂಡಿತು. ಅಷ್ಟೇ ಸಾಲದು, ಸರಿಯಾದ ವಿಮಾನ ಬಲವನ್ನು ಹೆಚ್ಚಿಸಿ ಕೊಳ್ಳದಿದ್ದರೆ 'ಸಬ್ ಮೇರಿನ್' 'ಯುಬೋಟು'ಗಳ ಹಾವಳಿಯವನ್ನು ತಡೆಯಲಿಕ್ಕಾಗುವುದಿಲ್ಲ. ಅಂತೇ ನೌಕಾ ವಿಮಾನಗಳು ಹೆಚ್ಚು ಸಂಖ್ಯೆಯಲ್ಲಿ ಸರಬರಾಯಿ ಮಾಡಲ್ಪಟ್ಟವು.

ಜಲಾಂತರ್ಗಾಮಿಗಳ ಹಾವಳಿಯನ್ನು ತಡೆಗಟ್ಟಲು ವಿಮಾನಗಳು ಮಾತ್ರವಲ್ಲ, ಅವುಗಳಲ್ಲಿ ತುಂಬಲು ತಕ್ಕುದಾದ ಬೊಂಬು, ಟೊರ್ಪೆಡುಗಳೂ ಸಿದ್ಧಮಾಡಲ್ಪಟ್ಟವು.

ಯಾವ ಜನಾಂಗದ ತಯಾರಿಕೆ ಶಕ್ತಿಗೆ ಒಂದು ಮಿತಿ ಇವೆಯಲ್ಲವೆ? ಒಂದು ಕಡೆ ನೌಕೆಗಳನ್ನು ಹೆಚ್ಚಿಸಬೇಕು. ಇನ್ನೊಂದು ಕಡೆ ಬೊಂಬು ಸಿಡಿ ಮದ್ದುಗಳನ್ನು ತಯಾರಿಸಬೇಕು. ಮತ್ತೊಂದು ಕಡೆ ವಿಮಾನಗಳನ್ನು ತಯಾರಿಸಬೇಕು. ಇಷ್ಟಾದರೂ ರಷ್ಯಕ್ಕೆ ಬೇಕಾದುದದನ್ನು ಕಳುಹಿಸಬೇಕು. ಇದನ್ನು ಯೋಚಿಸುವಾಗ ಬ್ರಿಟನಿನ ಯುದ್ಧಸಿದ್ಧತೆಯ ಸಂಕಷ್ಟಗಳೆಷ್ಟೆಂದು ನಾವು ಊಹಿಸಬಹುದು. ಮಾತ್ರವಲ್ಲ ರಶ್ಯನ್ ಮಿತ್ರರಿಗೆ ಅವುಗಳನ್ನು ನೌಕೆಗಳ ಮೂಲಕ ಸರಬರಾಯಿ ಮಾಡುವುದೂ ಒಂದು ಕಷ್ಟಸಾಧ್ಯದ ಹೊಣೆಗಾರಿಕೆಯೇ ಸರಿ. ಸಮುದ್ರ ಮಾರ್ಗವನ್ನು ಕಾಯಲು ವಿಮಾನಗಳು ಮಾತ್ರವಲ್ಲ ಸರಿಯಾದ ನೌಕಾ ಸೈನ್ಯವೂ ಅತ್ಯಗತ್ಯ.

ಈ ಸಂಕಷ್ಟದಲ್ಲಿ ಅಮೇರಿಕಾನರು ಪ್ರಚಂಡ ಸಹಾಯವನ್ನು ಮಾಡಿದರು. ಅವರಿಗಾದರೊ ಅತ್ತ ದೂರ ಪೂರ್ವದಲ್ಲಿ ಜಪಾನಿನೊಡನೆ ಹೊಡೆದಾಟ ನಡೆಸಬೇಕು. ಇತ್ತ ಸಹಾಯದ ಕೆಲಸ ಪೂರೈಸಬೇಕು. ಆದರೂ ಬ್ರಿಟಿಷರ ಧೋರಣೆಗೆ ಅವರು ಹೃತ್ಪೂರ್ವಕ ಒಪ್ಪಿದರು.

ಹೀಗೆ ೧೯೪೧ರಿಂದ ೧೯೪೩ರ ವರೆಗೆ ಅಮೇರಿಕವು ತನ್ನ ನೌಕಾಬಲದ ಮೂಲಕ ಯಶಸ್ವಿಯಾಗಿಯೂ ನಿರ್ಧಾರದಿಂದಲೂ ತನ್ನ ಕರ್ತವ್ಯ ಪರಿಪಾಲನೆ ಮಾಡಿತು. ಸಬ್ ಮೇರಿನ್ ಕಾಟ ಹೆಚ್ಚುತಿದ್ದ ಹಾಗೆ ಆಫ್ರಿಕದಿಂದ ಶತ್ರುಗಳನ್ನು ಓಡಿಸಿ ಸಮುದ್ರ ಮಾರ್ಗಗಳು ಸುರಕ್ಷಿತ ಮಾಡಲ್ಪಟ್ಟವು. ಇಷ್ಟು ಹೊತ್ತಿಗೆ ಆರ್. ಎ. ಎಫ್. ವಿಮಾನ ದಳದ ಪ್ರಾಬಲ್ಯವು ಬೆಳೆದು ಅವು ಜರ್ಮನಿಯ ಹೃದಯವನ್ನೇ ಕೊರೆಯ ಹತ್ತಿದವು.

ನೌಕಾ ಬಲವನ್ನೂ ವಿಮಾನ ಬಲವನ್ನೂ ಸುದೃಡಗೊಳಿಸಿ ಮಿತ್ರರು ಯುರೋಪನ್ನು ಮುತ್ತುವ ಸಾಹಸ ಮಾಡಿದರು. ಮೊದಲು ಇಟೇಲಿಯನ್ನು ಗುರಿಯನ್ನಾಗಿ ಮಾಡಿ ಸಿಸಿಲಿಯಲ್ಲಿ ಇಳಿಯಲಾಯಿತು—ಮುಸ್ಸೊಲಿನಿಯ ಪತನವಾಯಿತು.

ಕೊನೆಗೆ ಫ್ರಾನ್ಸಿನ ಆಕ್ರಮಣವು ಸಂಭವಿಸಿತು. ಎಲ್ಲವೂ ಮುಂದಾಲೋಚನೆಗೆ ತಕ್ಕಂತೆ ಘಟಿಸಿತು. ಜನರಲ್ ಐಸನ್‌ಹಾವರ ನಾಯಕತ್ವದಲ್ಲಿ ಬ್ರಿಟಿಷ್ ಸೇನಾನಿ ಮೊಂಟ್‌ಗೊಮರಿಯವರು ಅಪ್ರತಿಮ ಸಾಹಸದಿಂದ ಮುಂದುವರಿದರು. ಅಮೇರಿಕನರ ಶೌರ ಸಾಹಸಗಳಂತೂ ಅವರ್ಣನೀಯವಿದೆ. ಭಾರತೀಯ ದಳಗಳೂ ತಮ್ಮ ಕೀರ್ತಿಗೆ ತಕ್ಕಂತೆ ಇಟಲಿಯಲ್ಲಿಯೂ ಫ್ರಾನ್ಸಿನಲ್ಲೂ ಅಸಾಮಾನ್ಯ ವೀರತ್ವವನ್ನು ಪ್ರದರ್ಶಿಸಿದರು.

ಐದು ದಿನಗಳಲ್ಲಿ ೨೫೦ ಮೈಲು ಮುಂದರಿಯಲಾಯಿತು. ಸೋಲು ಗೆಲುಗಳಿಂದ ಸ್ಥೈರ್ಯ ಕೆಡದೆ ಮಿತ್ರರು ಒಂದು ಕಡೆಯಿಂದಲೂ ರಷ್ಯನರು ಇನ್ನೊಂದು ಕಡೆಯಿಂದಲೂ ಮುಂದಕ್ಕೆ ಸರಿಯುತ್ತಾ, ಕೊನೆಗೆ ನಾಜೀ ಭೂತವು ಬೋನಿನಲ್ಲಿ ಸಿಲುಕಿಸಲ್ಪಟ್ಟಿತು. ಅದರ ಪ್ರಭಾವವು ಕೊನೆಯ ಸಲಕ್ಕೆ ಬರ್ಲಿನ್ ಪತನದಿಂದ ಕೊನೆಗೊಳಿಸಲಾಯಿತು.

ಮಿತ್ರರು ತಮ್ಮ ಯುದ್ಧ ತಂತ್ರದ ಯಶಸ್ಸಿನಲ್ಲಿ ಹೆಮ್ಮೆ ಪಟ್ಟು ಕೊಳ್ಳುವುದು ಸಹಜವಾದುದು. ಫ್ರಾನ್ಸು ಕಳೆದು ಹೋದರೂ ಎದೆಗುಂದದೆ ಅವರು ಆಫ್ರಿಕದಲ್ಲಿ ಶತ್ರು ಶಕ್ತಿಯ ಮೂಲವನ್ನು ಕಡಿಯ ಹತ್ತಿದರು. ಕ್ರಮೇಣ ನೆಲ ಬಲವನ್ನೂ ನೌಕಾ ಬಲವನ್ನೂ, ವಿಮಾನ ದಳವನ್ನೂ ಪುಷ್ಟೀಕರಿಸಿ ಅಚ್ಚು ರಾಷ್ಟ್ರಗಳ ಒಂದೊಂದೇ ಅಂಗಾಂಗವನ್ನೂ ಅವರು ಮುರಿಯ ಹತ್ತಿದರು. ಇವೆಲ್ಲವೂ ಯಶಸ್ವಿಯಾಗಿ ಕೊನೆಗೊಳ್ಳಲು ಮಿತ್ರರ ನೌಕಾಶಕ್ತಿಯೇ ಕಾರಣವಲ್ಲವೇ.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ANNOUNCEMENT
The Board of Directors of
The PRABHAKARA BANK Ltd.,
beg to announce the formal opening
of their Head Office at Mudabidri
on the 9th of May 1945 at 6 p.m.
Sri. A. B. SHETTY M. L. A. (MADRAS)
Ex. Parliamentary Secretary,
has kindly consented to preside
on the occasion.
K. S. Kamath B. A., Cert. A. I. I. B.
Managing Director,
Mudabidri, 6—5—'45
P. Dasa Kini,
Secretary.

ವಿಧಿವಿಲಾಸದ ಮುಂದೆ ಗಣಿತವೆಲ್ಲಿ?

ಹೆಸರಾಂತ ಗಣಿತಜ್ಞೆ ಲೀಲಾವತಿಯ ವಿವಾಹದ ದುರಂತ

ಅದೃಷ್ಟದ ಮುಂದೆ ಯಾರ ಆಟವೂ ಸಾಗಲಾರದೆಂಬುದಕ್ಕೆ ಲೀಲಾವತಿಯ ಕತೆಯೊಂದು ದೃಷ್ಟಾಂತ. ಭವಿಷ್ಯವನ್ನು ಪುಸ್ತಕದಂತೆ ಓದಬಲ್ಲ ಭಾಸ್ಕರಾಚಾರ್ಯನಿಂದಲೂ ತನ್ನ ಮಗಳ ವೈಧವ್ಯವನ್ನು ತಪ್ಪಿಸಲಿಕ್ಕಾಗಲಿಲ್ಲ—ಇತರರ ಪಾಡೇನು?

ಪ್ರಾಚೀನ ಭಾರತದಲ್ಲಿ, ಪ್ರೌಢಗಣಿತ ಹಾಗೂ ಖಗೋಲಶಾಸ್ತ್ರ ಸಂಬಂಧವಾದ ಅತಿ ದೊಡ್ಡ ಗ್ರಂಥವೆಂದರೆ 'ಸಿದ್ಧಾಂತ ಶಿರೋಮಣಿ' ಎಂಬುದಾಗಿತ್ತು. ಪ್ರಪಂಚದ ಉತ್ಕೃಷ್ಟ ಗ್ರಂಥಗಳಲ್ಲಿ ಒಂದೆಂಬುದಾಗಿ ಈಗಲೂ ಅದು ಪರಿಗಣಿಸಲ್ಪಡುತ್ತಿದೆ. ಅದನ್ನು ಬರೆದವನೆಂದರೆ ಹದಿನೆರಡನೆಯ ಶತಮಾನದಲ್ಲಿದ್ದ ಬ್ರಾಹ್ಮಣ ಗಣಿತಜ್ಞನಾದ ಭಾಸ್ಕರಾಚಾರ್ಯನೆಂಬವನು.

ಭಾಸ್ಕರಾಚಾರ್ಯನು ಉತ್ತಮ ಗಣಿತಜ್ಞ ಹಾಗೂ ಖಗೋಲಶಾಸ್ತ್ರಜ್ಞನೇ ಮಾತ್ರವಲ್ಲ ಮಹಾ ಜ್ಯೋತಿಷಿಯೂ ಆಗಿದ್ದ. 'ಭವಿಷ್ಯ'ವೆಂದರೆ ಅವನಿಗೆ ತೆರೆದಿಟ್ಟ ಪುಸ್ತಕದಂತಿತ್ತು. ಇಷ್ಟಿದ್ದರೂ ತನ್ನ ಮಗಳ ಭವಿಷ್ಯವನ್ನೇ ಅವನಿಂದ ತಪ್ಪಿಸಲಿಕ್ಕಾಗದಿದ್ದುದು ಆಶ್ಚರ್ಯವಷ್ಟೆ!

ಭಾಸ್ಕರಾಚಾರ್ಯನಿಗೆ ತನ್ನ ಮಗಳ ಭವಿಷ್ಯವೇನಾಗುವುದೆಂದು ಚೆನ್ನಾಗಿ ಗೊತ್ತಿದ್ದೇ ಅವನ್ನು ತಪ್ಪಿಸಲು ಅವನು ತನ್ನಿಂದಾದಷ್ಟು ಪ್ರಯತ್ನಿಸಿದನೆಂದು ಜನರು ಹೇಳುತ್ತಾರೆ. ಹಿಂದೆ ಪರೀಕ್ಷಿತ ಮಹಾರಾಜನು ದಕ್ಷಕನೆಂಬ ಸರ್ಪದಿಂದಲೇ ತನ್ನ ಮರಣವುಂಟಾಗುವುದೆಂದು ತಿಳಿದು ಅದನ್ನು ತಪ್ಪಿಸಲಿಕ್ಕೋಸ್ಕರ ಸಮುದ್ರದ ಮಧ್ಯಕ್ಕೆ ಹೋದರೂ, ನಿರ್ದಿಷ್ಟ ಸಮಯದಲ್ಲೇ ಅವನು ಕೊಲ್ಲಲ್ಪಟ್ಟನೆಂದು ಪುರಾಣಗಳು ಹೇಳುತ್ತಿಲ್ಲವೆ? ದಕ್ಷಕನು ಒಂದು ಹುಳದ ರೂಪದಲ್ಲಿ ಒಂದು ಲಿಂಬೆಯೊಳಗೆ ಸೇರಿ, ಸಮುದ್ರದಲ್ಲಿ ತೇಲಿ ಬಂದು ಅಡಗಿಕೊಂಡಿದ್ದ ಅರಸನನ್ನು ತೀರ ಅನಿರೀಕ್ಷಿತ ರೀತಿಯಲ್ಲಿ ಕೊಂದನಂತೆ. ಇದೇ ರೀತಿಯಲ್ಲಿ ಭಾಸ್ಕರಾಚಾರ್ಯನ ಮಗಳು ಲೀಲಾವತಿಯ ಅವಸ್ಥೆಯಾಯಿತು.

ಲೀಲಾವತಿಯ ಜಾತಕದಲ್ಲಿ, ಆಕೆಯ ವಿವಾಹವಾದ ಒಂದೇ ತಿಂಗಳಲ್ಲಿ ಅವಳು ವೈಧವ್ಯವನ್ನು ಹೊಂದುವಳೆಂದು ಬರೆದಿತ್ತು. ಜಾತಕದ ಗ್ರಹಗಳಿಂದ ಭಾಸ್ಕರಾಚಾರ್ಯನು ಅದನ್ನು ಸರಿಯಾಗಿ ತಿಳಿದಿದ್ದ. ಅವನು ತನ್ನ ಮಗಳನ್ನು ಧಾರೆಯೆರೆದು ಕೊಡದೇನೆ ಆ ಗಂಡಾಂತರವನ್ನು ನಿಲ್ಲಿಸಬಹುದಿತ್ತು. ಆದರೆ ಬ್ರಾಹ್ಮಣರಲ್ಲಿ ಕನ್ಯಾವಿವಾಹವು ಒಂದು ಕಡ್ಡಾಯದ ಸಂಸ್ಕಾರವಷ್ಟೆ! ವಿವಾಹ ವಯಸ್ಕಳಾದ ಮಗಳನ್ನು ಹಾಗೆಯೇ ಇಡುವುದು ಪಾಪಕರವೆಂದೂ, ಅದರಿಂದ ತನಗೆ ಜಾತಿ ಬಹಿಷ್ಕಾರವಾಗಬಹುದೆಂದೂ ಭಾಸ್ಕರಾಚಾರ್ಯನು ಹೆದರಿದನು.

ಈ ಸಂಕಷ್ಟದ ಪರಿಸ್ಥಿತಿಯಿಂದ ಪಾರಾಗಲು ಒಂದು ಉಪಾಯವನ್ನು ಕಂಡು ಹಿಡಿಯಬೇಕೆಂದು ಅವನು ಗ್ರಂಥಗಳನ್ನೆಲ್ಲ ಶೋಧಿಸಿದನು; ಬಹಳ ಶ್ರಮಪಟ್ಟನು. ಕಟ್ಟಕಡೆಗೆ, ಅವನಿಗೊಂದು ಉಪಾಯವು ಹೊಳೆಯಿತು. ಗ್ರಹಗಳೆಲ್ಲ ಅತ್ಯಂತ ಶುಭಪ್ರದವಾದ ಸ್ಥಾನದಲ್ಲಿರುವ ಕೆಲವೇ ಕ್ಷಣಗಳ ಒಂದು ಮುಹೂರ್ತವು ಅವನಿಗೆ ಗೊತ್ತಾಯಿತು. ಆ ಮುಹೂರ್ತದಲ್ಲೇ ತನ್ನ ಮಗಳ ಕೊರಳಿಗೆ ತಾಳಿಯನ್ನು ಕಟ್ಟಿದರೆ, ಮಗಳು ಸುಮಂಗಲಿಯಾಗಿ, ಸುಖದಿಂದ ಬಾಳುವಳೆಂದು ಅವನಿಗೆ ಖಚಿತವಾಯಿತು. ಮುಹೂರ್ತದ ಅವಧಿಯು ಒಂದು ನಿಮಿಷಕ್ಕಿಂತಲೂ ಕಿರಿಯದಾಗಿತ್ತು. ಆದರೂ ಅಷ್ಟರಲ್ಲೇ ಲೀಲಾವತಿಯ ವಿವಾಹ ವಿಧಿಯನ್ನು ಮುಗಿಸಬಹುದೆಂದು ಅವನಿಗೆ ಧೈರ್ಯವಿತ್ತು.

ಈ ಶೋಧವಾದುದೇ ತಡ, ಭಾಸ್ಕರಾಚಾರ್ಯನು ಮುಹೂರ್ತವು ತಪ್ಪಿಹೋಗಬಾರದೆಂದೂ, ಮುಹೂರ್ತಕ್ಕೆ ಸರಿಯಾಗಿಯೇ ಲಗ್ನವಾಗಬೇಕೆಂದೂ-ಅವನು ನಿರ್ಧರಿಸಿದನು. ಅದಕ್ಕೆ ಸರಿಯಾಗಿ, ಸಮಯವನ್ನು ಸೂಚಿಸುವ ಒಂದು ಸಾಧನವನ್ನು ತಯಾರಿಸಿದನು. ಆ ಸಾಧನವು ತಪ್ಪಿಲ್ಲದೆ ಸಮಯವನ್ನು ಸೂಚಿಸುತ್ತದೋ ಇಲ್ಲವೋ ಎಂಬುದನ್ನು ತಿಂಗಳುಗಟ್ಟಲೆ ಪರೀಕ್ಷೆಮಾಡಿ, ಮನಸ್ಸಿಗೆ ಸಮಾಧಾನವನ್ನು ತಂದುಕೊಂಡನು. ಅಂತೂ ತಪ್ಪಿಲ್ಲದೆ ಕಾಲವನ್ನು ಸೂಚಿಸಬಲ್ಲ ಒಂದು ಸಾಧನವೂ ತಯಾರಾಯಿತು.

ಭಾಸ್ಕರಾಚಾರ್ಯನ ಶಿಷ್ಯರಲ್ಲೊಬ್ಬನನ್ನೇ ವರನನ್ನಾಗಿ ಆರಿಸಲಾಯಿತು. ಪ್ರಾಯಶಃ ಲೀಲಾವತಿಯ ಜಾತಕದಲ್ಲಿರುವ ದೋಷವನ್ನು ತಿಳಿದವರು ಆಕೆಯನ್ನು ಮದುವೆಯಾಗಲು ಒಪ್ಪಲಿಲ್ಲ. ಅಥವಾ ಲೀಲಾವತಿ ಮತ್ತು ಆಕೆಯ ಭಾವೀ ಪತಿಗೆ ತಮ್ಮ ಭವಿಷ್ಯವೇನಾಗುವುದೆಂದು ತಿಳಿದಿದ್ದರಲೂ ಬಹುದು. ಅಂತೂ ವಿವಾಹ ನಿಷ್ಕರ್ಷೆಯಾಯಿತು. ಆಮಂತ್ರಣಗಳು ಹೊರಟವು. ಲಗ್ನದ ಮುಹೂರ್ತವು ಪ್ರಕಟವಾಯಿತು. ಲಗ್ನದ ದಿನ ಮುಂಜಾನೆ ನಿಶ್ಚಿತ ಮುಹೂರ್ತವು ಸನ್ನಿಹಿತವಾಗುತ್ತ ಬಂದಿತ್ತು. ಆ ಮುಹೂರ್ತದಲ್ಲಿ ಮದುವೆ ನಡೆದರೇನೇ ಲೀಲಾವತಿಯು ವೈಧವ್ಯದಿಂದ ಪಾರಾಗಬಲ್ಲಳಷ್ಟೆ! ಅದು ಕಾರಣ ಭಾಸ್ಕರಾಚಾರ್ಯನ ಲಕ್ಷ್ಯವೆಲ್ಲ ತನ್ನ ಸಮಯ ಸೂಚಕ ಸಾಧನದ ಕಡೆಗೇ ಹೋಗಿತ್ತು. ಪುರೋಹಿತರೆಲ್ಲ ಮಂತ್ರವನ್ನು ಉಚ್ಚರಿಸುತಿದ್ದರು. ಹೂ ಆಭರಣಗಳಿಂದ ಅಲಂಕೃತರಾದ ವಧೂವರರು ಪವಿತ್ರ ಅಗ್ನಿಯ ಮುಂದೆ ಕುಳಿತಿದ್ದರು. ವಿವಾಹದ ಸಾಮಾನ್ಯ ವಿಧಿಗಳೆಲ್ಲ ಮುಗಿದುವು. ವಧುವಿನ ಕೊರಳಿಗೆ ಮಂಗಲಸೂತ್ರವನ್ನು ಕಟ್ಟುವುದಷ್ಟೇ ಉಳಿಯಿತು.

ಆದರೆ ಏನಿದು ಆಶ್ಚರ್ಯ! ಭಾಸ್ಕರನ ಯಂತ್ರವು ಫಕ್ಕನೇ ನಿಂತುಹೋಗಬೇಕೇ? ಭಾಸ್ಕರನು ನಿರಾಶನಾದ. ಅವನ ಮುಖವು ಬಾಡಿತು. ಅವನು ಯಂತ್ರದೊಳಗೆ ಅತ್ತಿತ್ತ ಇಣಿಕಿ ನೋಡಿದ. ಸಣ್ಣದೊಂದು ಮುತ್ತು ಹೇಗೋ ಆ ಯಂತ್ರವನ್ನು ಸೇರಿ, ಅದರಲ್ಲಿನ ಒಂದು ಚಕ್ರದ ಚಲನೆಯನ್ನು ತಪ್ಪಿಸಿತ್ತು. ಅದೃಷ್ಟದ ಆಟವೇ! ಭಾಸ್ಕರಾಚಾರ್ಯನು ಅಷ್ಟು ಶ್ರಮಪಟ್ಟು ತನ್ನದಾಗಿ ಮಾಡಿಕೊಳ್ಳಬೇಕೆಂದೆಣಿಸಿದ ಮುಹೂರ್ತವು ಜಾರಿಹೋಯಿತು. ಅದೃಷ್ಟದ ಮುಂದೆ ಗಣಿತವೆಲ್ಲಿ!

ಲಗ್ನವನ್ನು ಅಲ್ಲಿಯೇ ನಿಲ್ಲಿಸುವುದೆಂತು? ವಿಧಿಗಳೆಲ್ಲ ಮುಂಬರಿದುವು. ವಿವಾಹವಾದ ಒಂದೇ ತಿಂಗಳಲ್ಲಿ ಭವಿಷ್ಯವು ನಿಜವಾಯಿತು. ಲೀಲಾವತಿಯು ವಿಧವೆಯಾದಳು.

ಲೀಲಾವತಿಯು ತನ್ನ ಸಮಯವನ್ನೆಲ್ಲ ಗಣಿತ, ಮತ್ತು ಖಗೋಲಶಾಸ್ತ್ರದ ಅಧ್ಯಯನದಲ್ಲೇ ಕಳೆಯ ತೊಡಗಿದಳು. ಅವುಗಳಲ್ಲೇ ಆಕೆಯು ತನ್ನ ಕಳೆದು ಹೋದ ಪತಿ ಮತ್ತು ಆಗಬೇಕಾಗಿದ್ದ ಮಕ್ಕಳ ಸುಖವನ್ನು ಕಂಡಳು. ಅವೇ ಆಕೆಯ ಸರ್ವಸ್ವವಾದುವು.

ಲೀಲಾವತಿಯ ಪ್ರತಿಭೆ, ಅವಳ ಕಾರ್ಯ ಜಾಣ್ಮೆ—ಇವುಗಳಿಂದಾಗಿ ಆಕೆಯು ಪ್ರಪಂಚದ ಅತಿದೊಡ್ಡ ಗಣತಜ್ಞೆ. ಯಾಗಿ ಪರಿಗಣಿಸಲ್ಪಟ್ಟಳು. ಅವಳ ಕೀರ್ತಿಯು ಇಂದಿಗೂ ಮಾಸಿಹೋಗಿಲ್ಲ. 'ಸಿದ್ಧಾಂತ ಶಿರೋಮಣಿ'ಯನ್ನು ರಚಿಸುವುದರಲ್ಲಿ ಆಕೆಯು ತನ್ನ ತಂದೆಗೆ ತುಂಬಾ ನೆರವಿತ್ತ ಕಾರಣ, ಅದರ ಮೊದಲನೆಯ ಭಾಗಕ್ಕೆ 'ಲೀಲಾವತಿ' ಎಂಬ ಹೆಸರೂ ಉಂಟಾಗಿದೆ.

ಮುಂದಾಲೋಚನೆ
ಶಾಂತಿಕಾಲದ ಕುರಿತು ಆಲೋಚಿಸಿ, ತಕ್ಕ ಯೋಚನೆಗಳನ್ನು ಮಾಡಲು ಇದೀಗ ತಕ್ಕ ಸಮಯ ಏಕೆಂದರೆ, ಯುದ್ಧಕಾಲದ ಸಮಸ್ಯೆಗಳಿಗಿಂತ ಶಾಂತೀಕಾಲದವುಗಳು ಕಷ್ಟತಮ.
ಮುಂಬರುವ ದಿನಗಳು ಅನಿಶ್ಚಿತ. ಅವುಗಳಿಂದ ನಿರುಪಾಯವಾಗಿ ಪಾರಾಗಲು ಜನರಿಗೆ, ಅನುಭವ ಮತ್ತು ಜ್ಞಾನ ಇವುಗಳೇ ಸಹಾಯಕವಾಗುವುವು. ತಮ್ಮ ಮೂವತ್ತೊಂಬತ್ತು ವರ್ಷಗಳ ಅನುಭವದಲ್ಲಿ ಎರಡು ಜಾಗತಿಕ ಯುದ್ಧಗಳನ್ನೂ ಎರಡು ವ್ಯಾಪಾರಿ ಮುಗ್ಗಟ್ಟುಗಳನ್ನೂ ಕಂಡ ಕೆನರಾ ಬ್ಯಾಂಕಿನವರು-ಆರ್ಥಿಕ ವಿಷಯಗಳಲ್ಲಿ ನಿಮಗೆ ಮಾರ್ಗದರ್ಶಕರಾಗಬಲ್ಲರು ಅವರಲ್ಲಿ ವಿಶ್ವಾಸವಿಡಲು ಸಂಕೋಚಿಸದಿರಿ; ವಿಲಂಬಿಸಬೇಡಿ.
ಮುಂಬರುವ ದಿನಗಳಲ್ಲಿ ನಿಮಗೆ ಸಹಾಯಕರಾಗಲು ಅವರು ಸಮರ್ಥರು.
ಸ್ಥಾಪನೆ: 1906
ಕೆನರಾ ಬೇಂಕ್ ಲಿಮಿಟೆಡ್.
(ESTD. 1906)
CANARA BANK LIMITED
In corporated in British India, liability of Members limited.



ನಿಜ ಸಂಗತಿಗಳೇ ಭವ್ಯವಾದವುಗಳು.
ಈಗಾಗಲೇ ನಮ್ಮ ಜನಪ್ರಿಯ ವಾಚುಗಳು ಕಾರ್ಖಾನೆಯಿಂದ ಈ ದೇಶಕಡೆ ಕಳುಹಲ್ಪಟ್ಟಿವೆ ಎಂಬುದು ನಿಜವಾದ ಸಂಗತಿ. ಇಷ್ಟಾದರೂ ಸದ್ಯದಲ್ಲೇ ತಕ್ಕಷ್ಟು ಅವು ನಮಗೆ ತಲುಪಲಾರವು. ಸಾವಿರಾರು ಮೈಲುಗಳ ಅಭ್ಯಂತರವಿದೆ. ವಾಹನ ಸೌಕರ್ಯಗಳೂ ಇಲ್ಲ. ನಮ್ಮ ತಯಾರಿಕೆಗಳ ಪ್ರವಾಹವು ಸರಿಯಾಗಿ ಹರಿಯಬೇಕಾದರೆ ಇನ್ನೂ ಕೆಲವು ತಿಂಗಳು ಬೇಕಾಗುವುವು.
ನಮ್ಮ ದಾಸ್ತಾನು ಕಮ್ಮಿಯಾಗಿದೆ. ನಿರ್ದಿಷ್ಟವಾಗಿದೆ. ತಮ್ಮ ಅವಶ್ಯಕತೆಗಳನ್ನು ಕೂಡಲೇ ಪೂರೈಸಲಾಗದಿದ್ದುದಕ್ಕೆ ನಮ್ಮ ಗ್ರಾಹಕರು ನಮ್ಮನ್ನು ಕ್ಷಮಿಸುವರಾಗಿ ಕೋರುತ್ತೇವೆ.
ವೆಸ್ಟ್ ಎಂಡ್ ವಾಚ್ ಕೊ. ಬೊಂಬ್ಯಾ ಮತ್ತು ಕಲ್ಕತ್ತಾ.
WEST END WATCH Co.
BOMBAY CALCUTTA
Makers of Quality Watches for over 75 Years.

ಯುದ್ಧ ಮುಗಿಯಿತು ಆದರೆ....?

ನಮ್ಮ ಸಮಸ್ಯೆಯ ಕದನ ಮುಗಿದಿಲ್ಲ!

ಇಂದಿನ ಶಾಂತಿ ಮತ್ತೊಮ್ಮೆ ವಿಷಬೀಜವಾಗದಿರಲಿ!

ಯುದ್ಧ ಮುಗಿಯುತೆಂದು ಸುದ್ದಿ ಬಂತು. ಹೌದು; ಯುದ್ಧ-ಮುಗಿಯಿತಂತೆ. ಪ್ರತಿಯೊಂದು ಕಡೆಯಲ್ಲಿ ಹಾರುವ 'ಯುನಿಯನ್ ಜೆಕ್' ಧ್ವಜವೇ ಇದರ ಪ್ರಮಾಣ ಪತ್ರವಾಯಿತು. ಬಸ್ಸುಗಳ ಮೇಲೆ ಮಂದಹಾಸ ಬೀರುವ 'V' ನಿಶಾನಿಯು ಮಿತ್ರರ ವಿಜಯವನ್ನೂ ವೈರಿಗಳ 'ವಿನಾಶ' ವನ್ನೂ ತೋರಿಸಿತು. ಸತ್ಕಾರ ಕೂಟಗಳಲ್ಲಿ ಕೂಡಿದವರ ಹೊಟ್ಟೆ ತುಂಬಿ ಹೊರಡುವ ಶಬ್ದವು ವಿಜಯದ ಪ್ರತಿಧ್ವನಿ ಮಾಡಿತು.

ನಗರದ ಬೀದಿಗಳು ಅನೇಕ ತರುಣ ತರುಣಿಯರ ಹಾಡುಗಳಿಂದ ವಿಜಯದ ನೆನಪು ಮಾಡಿಕೊಟ್ಟವು. ದೇಗುಲದ ಭೋಜನವು, ಇಗರ್ಜಿಯ ಗಂಟೆಗಳು ಪುನಹ ಪುನಹ ವಿಜಯದ ಸಂದೇಹ ಸಾರಿದುವು.

ಹೌದು; ಖಂಡಿತವಾಗಿಯೂ ಯುದ್ಧ ಮುಗಿಯಿತೆಂದು ತೋರುವ ಪರಿಸ್ಥಿತಿ ಉಂಟಾಯಿತು. ಬಡವನೂ ಯೋಚಿಸಿದ ಯುದ್ಧ ಮುಗಿಯುತಂತೆ. ಅಂದರೆ ಅಕ್ಕಿಯು ಸರಾಗವಾಗಿ ಸಿಗಬೇಕಲ್ಲವೆ? ಅಕ್ಕಿಯ ಸ್ಟೋರಿಗೆ ಆತ ಬಂದು ಕೇಳಿದ. 'ಸ್ವಾಮಿ, ಯುದ್ಧ ಮುಗಿಯಿತಂತೆ, ನಮ್ಮ ಅರಸರಿಗೆ ಜಯವಾಯಿತಂತೆ. ಅಕ್ಕಿಯು ಸರಾಗವಾಗಿ ಸಿಗುವುದೇನು? ಅಕ್ಕಿಯ ಕ್ರಯ ಕಮ್ಮಿಯಾಗುವುದೇನು?'

ಆತನಿಗೆ ದೊರೆಯುವ ಉತ್ತರ 'ನ' ಕಾರವಾಯಿತು. ಯುದ್ಧ ಮುಗಿದರೇನು? ಅಕ್ಕಿಯ ಇತರ ಧಾನ್ಯಗಳ ಕ್ರಯ ಇನ್ನೆರಡು ವರ್ಷಗಳಿಗೆ ಇಳಿಯದು ಎಂಬ ಭಾವನೆ ಆತನಿಗೆ ಬಂತು.

ಹಲವು ಕಡೆಗಳಲ್ಲಿ ಮದುವೆಗಳು ನಡೆಯುತ್ತಿದ್ದವು. ಒಂದು ಕಡೆಯಲ್ಲಿ ನೋಡಿದೆ. ವಾದ್ಯಗಾರನೊಬ್ಬನ ವಾದ್ಯದಿಂದ ಸ್ವರವೇ ಹೊರಡುತಿದ್ದಿಲ್ಲ. ವಿಷಯವೇನೆಂದು ನೋಡಿದೆ. ಆತನ ಹೊಟ್ಟೆ ಬೆನ್ನಿಗೆ ಅಂಟಿಕೊಂಡಿತ್ತು. ಜೀವನ ಸಮಸ್ಯೆಯೊಡನೆ ಆತನ ಯುದ್ಧ ಇನ್ನು ಮುಗಿದಿಲ್ಲ.

ನಮ್ಮ ನೆನಪು ಇಂದು ೭ ವರ್ಷಗಳಿಗೆ ಹಿಂದೆ ಓಡುತ್ತಿದೆ. ೧೯೩೮! ಅಂದು ಸಾಮ್ರಾಜ್ಯಲಾಲಸೆಯ ಶಕ್ತಿಯೊಂದು ಆಸ್ಟ್ರಿಯಾ ಎಂಬ ಚಿಕ್ಕ ದೇಶವೊಂದರ ಸ್ವಾತಂತ್ರ್ಯ ಅಪಹರಿಸಿತು. ಜಗತ್ತು ನೋಡಿತು. ಕೂತಾಡಲಿಲ್ಲ. ಚಿಕ್ಕ ದೇಶವೊಂದನ್ನು ಇನ್ನೊಂದು ದೇಶ ನುಂಗಿದರೆ ಜಗತ್ತೇನು ಮಾಡಬೇಕು? ಚಿಕ್ಕ ಮೀನೊಂದನ್ನು ತಿಮಿಂಗಿಲವೊಂದು ನುಂಗಿದರೆ, ಹಲವು ಮೀನುಗಳನ್ನು ಹೊಟ್ಟೆಯಲ್ಲಿರಿಸಿ ಕೊಂಡ ಇತರ ತಿಮಿಂಗಿಲಗಳು ಅಸೂಯೆ ಪಡಬೇಕೇಕೆ?

ನಂತರದ ಪತನ ಝೆಕೊಸ್ಲೊವೇಕಿಯದ್ದು. ಎರಡು ಬೆಕ್ಕುಗಳ ಮತ್ತು ಮಂಗವೊಂದರ ಪ್ರಕರಣದಂತೆ ಅದನ್ನು ಹಂಚಿದರು.

೧೯೩೯!

ಜರ್ಮನಿಯ ಸಾಮ್ರಾಜ್ಯಲಾಲಸೆಗೆ ಪೋಲೆಂಡು ಬಲಿಯಾಯಿತು. ಇತರ ರಾಷ್ಟ್ರಗಳು ಕಣ್ದೆರೆದುವು. ಬ್ರಿಟಿಷರು ಯುದ್ಧ ಸಾರಿದರು. ಆಯಿತು. ಮಹಾಯುದ್ಧವು ಪ್ರಾರಂಭವಾಯಿತು.

೧೯೪೦ರಲ್ಲಿ ಸ್ವಾತಂತ್ರ್ಯಕ್ಕೆ ತವರು ಮನೆಯೆಂದು ಕರೆಯಲ್ಪಟ್ಟ ಫ್ರಾನ್ಸೇ ಸಾಮ್ರಾಜ್ಯದಾಹಕ್ಕೆ ಬಲಿಯಾಯಿತು. ೧೯೪೧ನೇ ವರ್ಷವು ಜನರಿಂದ ಸ್ಥಾಪಿಸಲ್ಪಟ್ಟ ರಷ್ಯದ ಸೋಲನ್ನು ನೋಡುವಂತಾಯಿತು.

ಜರ್ಮನಿ ಅಜೇಯವಾಗಿತ್ತು. ತನ್ನನ್ನು ಎದುರಿಸುವವರೇ ಇಲ್ಲವೆಂದು ಅವರ ಭಾವನೆಯಾಗಿತ್ತು. ಇತ್ತ ಕುಳ್ಳ ಜಪಾನರು ಸುಮ್ಮನಿರಲಿಲ್ಲ. ಅವರೂ ಮುಂದೆ ಬಂದರು. ಜಗತ್ತಿನ ಭಂಡವಾಳದಂತಿರುವ ಅಮೇರಿಕವು ಯುದ್ಧ ರಂಗಕ್ಕೆ ಕಾಲಿರಿಸಿತು.

ಇತ್ತ ಹಿಂದೂಸ್ಥಾನದಲ್ಲೇನು? ೧೯೪೦ರಲ್ಲಿ ಗಾಂಧೀಜಿ ವೈಯಕ್ತಿಕ ಸತ್ಯಾಗ್ರಹ ಹೂಡಿದರು. ೧೯೪೨ ಬಂತು. ಜಪಾನು ಹಿಂದುಸ್ಥಾನ ಮೇಲೆ ಹೊಂಚು ಹಾಕಿ ಕುಳಿತಿತ್ತು.

ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರ ಮುಖಂಡರು ಯೋಚನೆಯಲ್ಲಿ ಇರುವ ಮೊದಲೇ ಬ್ರಿಟ್ಟನಿನ ಕ್ರಿಪ್ಸರು ಬಂದರು. ಸಲಹೆ ತಂದರು. ಬಂದ ದಾರಿಗೆ ಸುಂಕವಿಲ್ಲದಂತೆ ನಡೆದರು.

ನಮ್ಮ ರಕ್ಷಣೆ ನಮ್ಮಿಂದ ಆಗದೆಂದು ಖಂಡಿತವಾಗಿಯೂ ತಿಳಿದಿದ್ದ ನಮ್ಮ ಆಳರಸರು ನಮ್ಮ ರಕ್ಷಣೆಗೆ ತಾವೇ ಟೊಂಕ ಕಟ್ಟಿ ನಿಂತರು. ದೇಶದಲ್ಲಿ ಕಣ್ಣೀರ ಕಾಲಿವೆ ಹರಿಯಿತು. ದೇಶ ರಕ್ಷಣೆಯ ಕಾರ್ಯ ಸುಗುಮವಾಗಿರಬೇಕೆಂದು ನಮ್ಮ ಮುಖಂಡರನ್ನು ಸುರಕ್ಷಿತ ಸ್ಥಾನದಲ್ಲಿ ಇರಿಸಿದರು. ದೇಶದ ಕಷ್ಟ ಹೆಚ್ಚುತ್ತಲೇ ಇತ್ತು. ಕಳ್ಳ ಸಂತೆಯೂ ಭರದಲ್ಲಿತ್ತು. ಬಂಗಾಲವು ಕಂಗಾಲಾಯಿತು. ಮಲಬಾರು ಮಲತಾಯಿಯ 'ಮಮತೆ'ಯ ಮಗುವಾಯಿತು.

ಸಮಯವು ಸಾಗುತ್ತಲೇ ಇತ್ತು. ಯುರೋಪಿನಲ್ಲಿ ಯುದ್ಧದಿಂದ ಜನರು ಸಾಯುತಿದ್ದರು. ಇಲ್ಲಿ ಹಸಿವೆಯಿಂದ ಎಲ್ಲಿಯಾದರೇನು? ನಾವು ಒಂದೇ ಎಂಬ ಭಾವನೆ ಬೇರೂರಿತು.

ಇತ್ತ ಜನಾಂಗದ ಪ್ರೀತಿಯು ಮುಖಂಡರು ಒಬ್ಬೊಬ್ಬರೇ ಕಣ್ಮರೆಯಾಗುತ್ತಿದ್ದರು ಸತ್ಯ ಮೂರ್ತಿ, ರಣಜಿತ್ ಪಂಡಿತ್ ಕಸ್ತೂರ ಬಾ ಹೆಸರಿಲ್ಲದ ಇನ್ನೂ ಅನೇಕ ವೀರರು ಒಬ್ಬೊಬ್ಬರೇ ದು:ಖದ ಜಗತ್ತನ್ನು ಬಿಟ್ಟರು.

ಚಕ್ರ ತಿರುಗಿತು ವಿಜಯ ಶಿಖರದಲ್ಲಿದ್ದ ಜರ್ಮನಿಯು ಅಧ:ಪತನದ ಒಂದೊಂದೇ ಸೋಪಾನ ಇಳಿಯುತಿತ್ತು. ವೀರರೆಂದು ಹೇಳಿಸಿಕೊಂಡ ರೊಮೆಲ್ ಕಿಟ್ಟಲ್ ರಂಡಸ್ಟಡ್, ಅಂತಹ ಸೇನಾನಿಗಳಿದ್ದರೂ ಜರ್ಮನಿಗೆ ಅಧಃಪತನವನ್ನು ತಡೆಯಲಾಗಲಿಲ್ಲ. ಜನರ ಶಕ್ತಿಯು ಅಡಿಗಲ್ಲಾದ ರಷ್ಯವು ವಿಜಯ ಪತಾಕೆಯನ್ನು ಹಿಡಿದೇ ಮುಂದುವರಿಯುತಿತ್ತು. ಜನರ ಶಕ್ತಿಯ ಎದುರು ಸಾಮ್ರಾಜ್ಯ ಮದದಿಂದ ಮೆರೆಯುವ ಶಕ್ತಿಯು ಖಂಡಿತವಾಗಿಯೂ ನಿಲ್ಲಲಾರದೆಂದು ರಷ್ಯವು ಜಗತ್ತಿಗೆ ಸಾರಿತು.

ಸ್ವಾತಂತ್ರ್ಯಕ್ಕಾಗಿ ಈ ಯುದ್ಧ ನಡೆಯುತ್ತಿದೆಯೆಂದು ಕೇಳಿದೆವು. ಯಾರ ಸ್ವಾತಂತ್ರ್ಯಕ್ಕಾಗಿ ಎಂದು ಯಾರು ಕೇಳಲಿಲ್ಲ. 'ಜನರ ಹಿತಕ್ಕಾಗಿ ಜನರಿಂದ ನಡೆಸಲ್ಪಡುವ ಜನರ ಸರಕಾರವಿರುವ ಅಮೇರಿಕದಿಂದ ಕೂಡಾ ಈ ಪ್ರಶ್ನೆಗೆ ಉತ್ತರ ಬರಲಿಲ್ಲ.

ಯುದ್ಧ ಮುಗಿಯುವ ಮೊದಲೇ ಯುದ್ಧದಿಂದ ಜರ್ಜರಿತವಾದ ದೇಶಗಳ ಪುನನಿರ್ಮಾಣದ ಯೋಜನೆಗಳು ಬೆಳಕಿಗೆ ಬಂದುವು. ನಮ್ಮ ದೇಶದಲ್ಲಿಯೂ ಹಲವು ಯೋಜನೆಗಳು ಮುಖ ತೋರಿಸಿದವು. ಆದರೆ ಯೋಜನೆಗಾರರು ದೃಷ್ಟಿಯಿಂದ ದೂರದಲ್ಲಿರುವರು ಎಂಥ ಮನಸ್ಸು ಹೇಳುತಿತ್ತು.

ಈಗ ಜಗತ್ತಿನ ಶಾಂತಿಯ ಸಮಸ್ಯೆ ಚರ್ಚಿಸಲು ಸಾನ್ ಫ್ರಾನ್ಸಿಸ್ಕೊದಲ್ಲಿ ಸಮ್ಮೇಳನ ನಡೆಯುತ್ತಿದೆ. ಈ ಕಾಲದಲ್ಲಿಯೇ ಸ್ವಾತಂತ್ರ್ಯದ ಕಹಳೆ ಊದಿದ ರೂಜ್‌ವೆಲ್ಟರು ಕಣ್ಮರೆಯಾದರೂ ಸಮ್ಮೇಳನಕ್ಕೇನೂ ಭಂಗ ಬರಲಿಲ್ಲ.

ನಮ್ಮ ಪ್ರತಿನಿಧಿಗಳೆಂದು ಹೇಳಿ ನಮ್ಮಿಂದಲೂ ಇಬ್ಬರೂ ಮಹನೀಯರು ಆ ಸಮ್ಮೇಳನಕ್ಕೆ ಹೋಗಿರುವರು. ಒಬ್ಬರು ನಮ್ಮ ಸರಬರಾಯಿ ನೋಡುವ ರಾಮ ಸ್ವಾಮಿ ಮುದಲಿಯಾರರು, ಇನ್ನೊಬ್ಬರು ನಮ್ಮ ರಕ್ಷಣಾ ಕಾರ್ಯದಲ್ಲಿ ಕೂದಲು ಬೆಳ್ಳಗೆ ಮಾಡುವ ಫಿರೋಜ್ ಖಾನ ನೂನರು.

ನೂನರು ಅಮೇರಿಕದಲ್ಲಿ ಹೇಳಿದ ಮಾತುಗಳ ನೆನಪು ಬರುತ್ತಿದೆ. 'ಗಾಂಧೀಜಿ ರಾಜಕೀಯ ರಂಗದಿಂದ ಹೊರಟು ಅವರ ಸ್ಥಾನ ನೆಹರು ಆಕ್ರಮಿಸಬೇಕು.'

ಚಿಂತಿಲ್ಲ. ನೂನರೇ ನಾವದಕ್ಕೆ ಸಿದ್ಧರು. ರಾಜಕೀಯ ರಂಗದಲ್ಲೇಕೆ? ನೀವಿಗ ಹೋಗಿರುವ ಸಮ್ಮೇಳನಕ್ಕೂ ನೆಹರು ಹೋಗುತಿದ್ದರೆ ಚರಿತ್ರೆಯೇ ಬದಲಾಗುತಿತ್ತೋ ಏನೋ ಇದನ್ನೇಕೆ ಹೇಳಲಿಲ್ಲ?

ಯುದ್ಧ ಮುಗಿದು ಶಾಂತಿಯು ಬರಲಿದೆ. ೧೯೧೮ರ ಶಾಂತಿಯ ನೆನಪು ನಮ್ಮಿಂದ ಇನ್ನೂ ದೂರ ಹೋಗಿಲ್ಲ. ರಾಷ್ಟ್ರಗಳ ಸ್ವಾತಂತ್ರ್ಯ ಅಪಹರಿಸಬಾರದೆಂಬ ಸಂದೇಶವು ಎಲ್ಲರಿಗೂ ಮುಂದಟ್ಟಾಗಬೇಕು?.

ಪಶ್ಚಿಮವು ಸ್ವತಂತ್ರವಾಗಿ ಪೂರ್ವವು ಮೊದಲ ಸ್ಥಿತಿಯಲ್ಲಿಯೇ ಇದ್ದರೆ ಶಾಂತಿ ಶಬ್ದದ ದುರುಪಯೋಗವಾಗದೆ? ಇಲ್ಲವೇ ಪಶ್ಚಿಮದಲ್ಲಿಯೂ ೧೯೧೮ರ ಶಾಂತಿಯ ಸಂಧಾನದಂತೆ ಇಂದೂ ನಡೆದರೆ ನಮ್ಮ ಭೀತಿಯು ದೂರ ಹೋಗುವುದೇನು?

ಇಂದಿನ ಶಾಂತಿಯು ಶ್ವಾಸತವಾಗುವಂತೆ ಪಶ್ಚಿಮವು ಯತ್ನಿಸಬೇಕು. ಪೂರ್ವದ ಗುಲಾಮಗಿರಿಯು ದ್ವೇಷದ ಅಡಿಗಲ್ಲಿನಂತೆ ಆದರೆ ಪಶ್ಚಿಮದ ಶಾಂತಿಗೆ ಬೆಲೆಬಾರದು. ಪೋಲೆಂಡಿನ ಪ್ರಶ್ನೆ ಹಿಡಿದು ರಷ್ಯಾ ಮತ್ತು ಮಿತ್ರರೊಳಗೆ ವಿವಾದ ಎದ್ದರೆ ಇಷ್ಟು ರಕ್ತ ಸುರಿದು ಕೊನೆಗೊಮ್ಮೆ ಯುದ್ಧ ನಿಂತಿತು ಎಂದು ಆನಂದದ ಉಸಿರು ಬಿಡುವುದು ಹೇಗೆ?

ಭಾರತೀಯ ಮುಖಂಡರು ಹೊರ ಬರಲಿ. ನಮ್ಮ ಸಮಸ್ಯೆಯ ಕದನ ಇನ್ನೂ ಮುಗಿದಿಲ್ಲ ಎಂದು ಭಾರತೀಯರು ಇನ್ನೊಮ್ಮೆ ಹೇಳುವುದು ಬೇಡ. ಆಶಾ ಕಿರಣ ಚಿಕ್ಕದಾಗಿ ಕಂಡು ಬರುತ್ತದೆ. ವೇವಲ್ಲರು ಇಂಗ್ಲೆಂಡಿಗೆ ಹೋಗಿ ಏನು ಮಾಡುವರೋ ತಿಳಿಯದಾಗಿದೆ.

ನಾವು ಆಶಿಸುವುದು ಇದೇ. ಇಂದಿನ ಶಾಂತಿ ಮುಂದಿನ ಯುದ್ಧಕ್ಕೆ ವಿಷ ಬೀಜವಾಗ ಬಾರದು. ಜಗತ್ತಿನ ರಾಷ್ಟ್ರಗಳಿಗೆಲ್ಲಾ ಸ್ವಾತಂತ್ರ್ಯವಿದ್ದ ದಿನ! ಎಂತಹ ಕಲ್ಪನೆ!

ನಾವೂ ಸ್ವತಂತ್ರರಾಗಿ, ನಮ್ಮ ಸಮಸ್ಯೆಗಳ ಕದನ ಮುಗಿದ ದಿನ ಎಂತಹ ಆನಂದವಾಗುವುದೆಂದು ಕಲ್ಪನೆ ಮಾಡಲು ಸಾಧ್ಯವಿಲ್ಲ. ಅಂದು ಇಡೀ ಊರು ಹಾಡುವುದು ನಮ್ಮ ಸ್ವಾತಂತ್ರ್ಯ ಗೀತೆ ಜಗತ್ ಸ್ವಾತಂತ್ರ್ಯ ಗೀತೆಯೊಡನೆ ಮಿಲನವಾಗುವುದು ಅಂದು 'V' ನಿಶಾನಿಯು ಮೂಲೆ ಮೂಲೆಯಲ್ಲಿ ಹಾರಾಡುವುದು. ಜನರು 'ಯುದ್ಧ ಮುಗಿಯಿತು. ಆದರೆ..' ಎಂದು ಹೇಳುವ ಉದ್ಗಾರ ಅಂದು ಏಳದು ಆದರೆಹೌದು; ಅದರೇನು? ಅದು ಆಗುವುದೆ?.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯುವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಹಿಂದೂಸ್ಥಾನ್ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡ್.

ಕಲ್ಕತ್ತ — ಸ್ಥಾಪನೆ 1907.

ಪ್ರಥಮ ಶ್ರೇಣಿಯ ವಿಮಾ ಸಂಸ್ಥೆ.

೧೯೪೪ರ ವ್ಯವಹಾರ ೧೦ ಕೋಟಿ ಮೀರಿದೆ.

೧೯೪೩ನೇ ಯಿಸ್ವಿಯ ವೇಲ್ಯುಯೇಶನ್ ಉಳಿತಾಯ-೩೫,೬೭೦೦೦

ಧಾರಾಳವಾದ ಕಮಿಷನ್ ಮೇಲೆ ಪ್ರತಿಭಾ ಶಾಲಿಗಳಾದ ಎಜಂಟರೂ, ಮತ್ತು ಸ್ಪೆಶಲ್ ಏಜಂಟರುಗಳೂ ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕೊಡಗು ಪ್ರಾಂತ್ಯಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

K. S. Apremaya
Inspector of Agencies.

(Hindustan Co-operative Ins. Society Ltd., Mangalore.)

ಮಂಗಳೂರಲ್ಲಿ ವಿಜಯೋತ್ಸವ

ಮಳೆಗಾಲದಲ್ಲಿ ಕಟ್ಟಿಗೆ ಸಮಸ್ಯೆ

ಪಾಣೆಮಂಗಳೂರಲ್ಲಿ ಸ್ತುತ್ಯ ಕಾರ್ಯ

ಇಲ್ಲಿಯ ಗಣಪತಿ ಹೈಸ್ಕೂಲಿನ ಸಭಾಸದನದಲ್ಲಿ ತಾ. ೧೬ರಂದು ಸಾಯಂಕಾಲ ಶ್ರೀ. ಶಂಕರ ಜಯಂತಿ ಉತ್ಸವವು ರಾ. ಬ. ಡಾ| ಎಂ. ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಮತಸಿದ್ಧಾಂತಾಭಿಮಾನಿಗಳು ಬಹುಸಂಖ್ಯೆಯಲ್ಲಿ ನೆರಿದಿದ್ದರು. ದ. ಕ. ಅದ್ವೈತ್ಯ ಸಮಿತಿಯ ಸದಸ್ಯರೂ ಇತರರೂ ಆ ಅದ್ವೈತ್ಯ ಮತ ಸಂಸ್ಥಾಪಕಾಚಾರ್ಯನ ಮತ್ತವನ ತತ್ವಜ್ಞಾನದ ಕುರಿತು ಸುರಸ ಭಾಷಣಮಾಡಿದರು.

ಸ್ಥಳೀಯ ಸೂಟರ್ಸ್ ವಾಚನಾಲಯದಲ್ಲಿ ನೊನ್‌ಗಜೆಟೆಡ್ ಆಫೀಸರರ ಕಬ್ಬಿನ ವಾರ್ಷಿಕೋತ್ಸವವು ಜರುಗಿಸಲ್ಪಟ್ಟಿತು. ಹಜೂರ್ ಶಿಸ್ತೆದಾರ್ ಶ್ರೀ. ಅಪ್ಪುರಾವ್ ಅವರು ಸೂಚಿಸಿದ ಪ್ರಕಾರ ಕಲೆಕ್ಟರರ ಪರ್ಸನಲ್ ಅಸಿಸ್ಟಾಂಟರಾದ ಜನಾಬ್ ಗುಲಾಮ್ ಮಹಮುದ್ ಅವರು ಅಂದಿನ ಅಧ್ಯಕ್ಷತೆಯನ್ನು ವಹಿಸಿದರು. ಅನೇಕ ಗಜೇಟೆಡ್ ಮತ್ತು ಇತರ ಆಫೀಸರರು ನೆರಿದಿದ್ದು ಭಾಷಣಗಳಾದುವು. ಮುಂದಿನ ವರ್ಷದ ಕಾರ್ಯ ಕರ್ತರುಗಳನ್ನು ಆರಿಸಲಾಯಿತು.

ಹಿಂದೂಸ್ಥಾನ ಸರಕಾರದ ಪ್ರಾದೇಶಿಕ ಆಹಾರ ಶಾಖೆಯ ಕಮಿಶನರು ಇತ್ತೀಚೆಗೆ ಮಂಗಳೂರಿಗೆ ಬಂದಿದ್ದಾಗ ಜಿಲ್ಲೆ ವರ್ಗದಾರರ ಸಂಘದ ಪರವಾಗಿ ಶ್ರೀಗಳಾದ ಕೆ. ಜಿನರಾಜಹೆಗ್ಗಡೆ, ರಾ. ಬ. ಕೆ. ಟಿ. ಆಳ್ವ, ಎಮ್. ಶಿವರಾವ್, ಎ. ಬಿ. ಶೆಟ್ಟಿ, ಕೆ. ಜೆ. ಬಲ್ಲಾಳ್, ಮತ್ತು ಕೆ. ಎಸ್. ಹೆಗ್ಗಡೆ ಇವರಿಂದ ಕೂಡಿದ ಒಂದು ಸಮಿತಿ ಶಿಷ್ಟಮಂಡಳವು ಆ ಅಧಿಕಾರಿಗಳ ಭೇಟಿ ಪಡೆದು ದ. ಕನ್ನಡದಲ್ಲಿ ಕಡಿಮೆ ಬೀಳುವ ಆಹಾರ ಧಾನ್ಯದ ಕುರಿತು ಸವಿಸ್ತಾರವಾದ ಒಂದು ಮನವಿಯನ್ನು ಒಪ್ಪಿಸಿತು.

ಪ್ರಕಟಣೆ—ಮಂಗಳೂರು ರೇಶನ್ ಸರಹದ್ದುಗಳವಳಗೆ ರೇಶನ್ ಕಾರ್ಡು ಯಾ ಪರ್ಮಿಟುದಾರರು ಗೋದಿಯನ್ನು ಖಡ್ಡಾಯವಾಗಿ ಪಡಕೊಳ್ಳಬೇಕೆಂತ ಇಲ್ಲ. ರೇಶನಿನ ಮುಕ್ಕಾಲು ಅಂಶದಷ್ಟು ಅಕ್ಕಿಯನ್ನು ಈ ಮುಂಚಿನಂತೆ ಕೊಡಲಾಗುವುದು. ಗೋದಿಯ ಬದಲಿಗೆ ಮಾತ್ರ ಅಕ್ಕಿಯನ್ನು ಕೊಡಲಾಗಲಿಕ್ಕಿಲ್ಲ- ಹೀಗೆಂದು ಮಂಗಳೂರು ರೇಶನಿಂಗ್ ಆಫೀಸರ್ ಶ್ರೀ. ಎಚ್. ಸುಂದರರಾವ್ ಬಿ. ಎ. ಅವರು ಪ್ರಕಟಿಸುತ್ತಾರೆ.

ಇನ್ನೊಂದು ಪ್ರಕಟನೆಯಲ್ಲಿ ಮೇಲ್ಕಂಡ ಆಫೀಸರರು ಹೀಗೆ ತಿಳಿಸುತ್ತಾರೆ: ದ. ಕ. ಜಿಲ್ಲೆಯಲ್ಲಿನ ಯಾವ ಕಡೆಯಲ್ಲಾದರೂ ವ್ಯವಸಾಯ ಭೂಮಿ ಇದ್ದು ಭೂಮಾಲಿಕರು ಮಂಗಳೂರು ರೇಶನ್ ಸರಹದ್ದಿನಲ್ಲಿ ವಾಸಮಾಡುವ ಪಕ್ಷದಲ್ಲಿ ಅಂಥಾ ಭೂಮಾಲಿಕರು ತಮ್ಮ ಸ್ವಂತ ಖರ್ಚಿಗೆ ಬೇಕಾಗುವಷ್ಟು, ಅಗತ್ಯವಿರುವಷ್ಟು, ಬೇಕಾದ ರೇಶನ್ ಪದಾರ್ಥಗಳನ್ನು ರೈಲು ಬಂಡಿಯಲ್ಲಿ ತರುವರೆ ಹುಕುಂ ದೊರಿಯಲಾರದು.

ಕಟ್ಟಿಗೆಯ ಕುರಿತು ಒಂದು ಪ್ರಕಟನೆ ಕೊಡುತ್ತಾ ಜಿಲ್ಲಾ ಕಲೆಕ್ಟರರು "ಇದೇ ೧.೬.೪೫ ರಿಂದ ಕಟ್ಟಿಗೆಯನ್ನು ೨ ಮಣಗಿಂತ ಹೆಚ್ಚಾಗಿ ಯಾರಿಗೂ ಕೊಡಲಾಗುವುದಿಲ್ಲವಾದುದರಿಂದ ನಾಗರೀಕರೆಲ್ಲರೂ ತಮ್ಮ ಅವಶ್ಯಕತೆಯ ಪ್ರಮಾಣವನ್ನು ಈಗಲೇ ದಾಸ್ತಾನು ಮಾಡುವುದೊಳಿತು" ಎಂದು ತಿಳಿಸುತ್ತಾರೆ.

* * *

ಗ್ಲುಕೋಸ್‌ಡಿ, ಹೊರ್ಲಿಕ್ಸ್ ಮೊಲ್ಟೆಡ್ ಮಿಲ್ಕ್, ಡೆಕ್ಸಸ್ಟ್ರೋಲ್, ಇ. ಬಲ್ಬುಗಳು, ಸೈಕಲ್ ಮತ್ತು ಉಪಕರಣಗಳು, ಪೆನ್ನು ಮತ್ತು ನಿಬ್ಬುಗಳು, ಆಣಿಗಳು, ಒವಲ್ಟಿನ್, ವಾಟರ್ಬರಿ ಕಂಪೌಂಡು, ರೇಶ್ಮೆನೂಲು ಮತ್ತು ವಸ್ತ್ರ (ಕೃತಕ ಸಮೇತ), ಕೊಡೆಗಳು, ಸೆಪ್ಟಿ ರೇಜರ್ ಬ್ಲೇಡುಗಳು, ಗ್ಲೆಕ್ಸೊ, ಗಡಿಯಾರ, ಟೋರ್ಚ್, ಸೆಲ್ಲು ಮತ್ತು ಬಲ್ಬು, ಇವುಗಳನ್ನು ಮಾರಾಟಮಾಡುವವರು ಅವುಗಳ ತಪಶೀಲು ಮತ್ತು ಬೆಲೆ ಪಟ್ಟಿಗಳನ್ನು ಪೂರ್ಣ ವಿವರದೊಂದಿಗೆ, ಅವುಗಳು ಕಳುಹಲ್ಪಟ್ಟ ವದಂತಿ ತಲಪುತ್ತಲೇ ದ. ಕ. ಜಿಲ್ಲಾ ಕಮ್ಮರ್ಶಿಯಲ್ ಟೇಕ್ಸ್ ಆಫೀಸರ್ ಮಂಗಳೂರು ಇವರಿಗೆ ತಿಳಿಸತಕ್ಕದ್ದೆಂದು ಸದ್ರಿ ಆಫೀಸರರು ತಿಳಿಸುತ್ತಾರೆ.

* * *

ಮೂರು ಮಂದಿ ಮೈಸೂರವರ ಮೇಲೆ ಕೈ ಮಾಡಿ ಅವರೊಳ್ಳೊಬ್ಬನು ಮರಣಕ್ಕೆ ಕಾರಣಭೂತರಾದರೆಂದು ಇಲ್ಲಿಯ ಸೆಶ್ಶನ್ ಜಡ್ಜರಿಂದ ಟಾಪು ಶಿಕ್ಷೆಗೆ ಗುರಿಯಾದ ಶ್ರೀ. ಎ. ಕೃಷ್ಣಾಜಿಯರ ಪರವಾಗಿ ಒಂದು ಅಫೀಲು ಮದ್ರಾಸ್ ಹ್ಯಾಕೋರ್ಟಿನ ವಿಚಾರಣೆಗೆ ಬಂದು ಅದೇ ಶಿಕ್ಷೆಯು ಕಾಯಂಮಾಡಲ್ಪಟ್ಟಿತ್ತೆಂದು ತಿಳಿದುಬರುತ್ತದೆ.

ತಾ. ೧೪ರಂದು ಮಧ್ಯಾಹ್ನ ಎರಡು ಗಂಟೆಗೆ ಇಲ್ಲಿಯ ಕೆನರಾ ಹ್ಯಾಸ್ಕೂಲಿನ ಕೃಷ್ಣ ಮಂದಿರದ ಮೂರ್ತಿ ಪ್ರತಿಷ್ಟೆ ಮತ್ತು ಉದ್ಘಾಟನಾ ಸಮಾರಂಭಗಳು ಮೈಸೂರಿನ ವಿವೇಕಾನಂದ ಸಭೆಯ ಶ್ರೀ. ನಂದಜಿಯವರ ದಿವ್ಯ ಹಸ್ತದಿಂದ ಜರುಗಿಸಲಾಯಿತು. ಮಂದಿರವು ಹಿಂದುಗಳೆಲ್ಲರಿಗೂ ತೆರೆದಿರುವುದು. ಸುಂದರವಾದ ಕಪ್ಪು ಕಲ್ಲಿನ ಮೂರ್ತಿಯನ್ನು ಕಾರ್ಕಳದ ಶಿಲ್ಪಿ ಶ್ರೀ. ಗೋಪಾಲ ಶೆಣೈ ಅವರು ಕೆತ್ತಿಕೊಟ್ಟದ್ದೆಂದು ತಿಳಿದು ಬರುತ್ತದೆ.

ಈ ಸಲದ ಇಂಟರ್‌ಮಿಡಿಯೇಟ್ ಪರೀಕ್ಷೆಗೆ ಸ್ಥಳೀಯ ಸೈಂಟ್ ಎಲೊಶಿಯಸ್ ಕೋಲೆಜಿನಿಂದ ಕುಳಿತ ೧೫೫ ಮಂದಿ ವಿದ್ಯಾರ್ಥಿಗಳಲ್ಲಿ ೫೬ ಮಂದಿ I ಕ್ಲಾಸ್, ೪೨ II ಕ್ಲಾಸ್ ಪಾಸಾಗಿರುವರು. ಒಟ್ಟಿಗೆ ೯೮ ಪಾಸ್. (63-20/o)

* * *

ವಿಜಯೋತ್ಸವವು ಮಂಗಳೂರಲ್ಲೂ ಜಿಲ್ಲೆಯ ಇತರ ಕಡೆಗಳಲ್ಲೂ ಸಂಭ್ರಮದಿಂದ ಆಚರಿಸಲ್ಪಟ್ಟಿತು. ತಾ. ೯, ೧೦ ದಿನಗಳಲ್ಲದೆ, ೧೩ ಆದಿತ್ಯವಾರದಂದು ಅನೇಕ ದೇವಾಲಯ, ಸಭೆಗಳಲ್ಲಿ ಕೃತಜ್ಞತಾ ಸಮಾರಂಭಗಳೂ ಜರಗಿದವು. ತಾ. ೧೪ ಸಾರ್ವಜನಿಕ ರಜಾದಿನವಿದ್ದು ನಗರದ ಪ್ರಮುಖ ಪೇಟೆಗಳು ಮುಚ್ಚಲ್ಪಟ್ಟಿದ್ದವು. ಅಂದು ಸ್ಥಳೀಯ ಶ್ರೀ. ವೆಂಕಟ್ರಮಣ ದೇವಸ್ಥಾನ, ಶ್ರೀ. ಗೋಕರ್ಣನಾಥ ದೇವಸ್ಥಾನ, ಕದಿರೆ ದೇವಸ್ಥಾನ ಮತ್ತಿತರ ಕಡೆಗಳಲ್ಲಿ ಬಡಬಗ್ಗರಿಗೆ ಬೋಜನವೀಯಲಾಯಿತು. ನಗರದ ಸಿಟಿ ಬಸ್, ಮತ್ತಿತರ ಬಸ್ಸು, ಲೋರಿಗಳೂ, ವಾಹನಗಳೂ, ಕಟ್ಟಡಗಳೂ 'ವಿ' ಚಿಹ್ನೆಯಿಂದ ಶೃಂಗರಿಸಲ್ಪಟ್ಟಿದ್ದು ಶೋಭಿತವಾಗಿದ್ದುವು. ಅಂದು ಸಾಯಂಕಾಲ ಸೆಂಟ್ರಲ್ ಮೈದಾನಿನಲ್ಲಿ ಸಾರ್ವಜನಿಕ ಸಭೆ ನೆರೆದಿದ್ದು ಯುದ್ಧ ಮುಖದ ಪ್ರಮುಖರೂ, ಸರಕಾರಿ ಮತ್ತು ಇತರ ಅಧಿಕಾರಿಗಳೂ, ನಗರ ಮುಖಂಡರೂ ಸಭೆಯಲ್ಲಿ ನೆರೆದಿದ್ದರು. ಪೋಲಿಸ್ ಕವಾತು ನಡೆದು ಮಾನ್ಯ ಕಲೆಕ್ಟರರೂ ಮತ್ತು ಪೋಲಿಸ್ ಸುಪರಿಂಟೆಂಡರೂ ವಂದನೆಯನ್ನು ಸ್ವೀಕರಿಸಿದರು. ಹರ್ಷೋದ್ಗಾರದ ಭಾಷಣಗಳಾದುವು. ಕಲೆಕ್ಟರ್ ಸಾಹೇಬರು ಜಿಲ್ಲೆಯ ಯುದ್ಧ ಸಹಾಯ ಶ್ರಮವನ್ನು ಶ್ಲಾಘಿಸಿ ಮಾತನಾಡಿ ಜಗತ್ತಿಗೆ ಚಿರಶಾಂತಿಯನ್ನು ಕೋರಿ ಸಭಿಕರಿಗೆ ವಂದನೆಯನ್ನರ್ಪಿಸಿದರು.

ಮಂಜೇಶ್ವರ-ಬಂಗ್ರ. ಮಂಜೇಶ್ವರ 'ಹಿಂದೂ-ಮುಸ್ಲಿಂ ಕ್ಲಬ್ಬಿನ' ಆಶ್ರಯಲ್ಲಿ ತಾ. ೧೪ ರಂದು ಬೆಳಿಗ್ಗೆ ವಿಜಯೋತ್ಸವ ದಿನಾಚರಣೆಮಾಡಲಾಯಿತು. ಜ. ಎಂ. ಪಿ. ಸೂಪಿ ಸಾಹೇಬರು ಅಧ್ಯಕ್ಷರಾಗಿದ್ದರು. ಫಲಹಾರ, ಸುಗಂಧ ದ್ರವ್ಯ ಹಂಚಿಕೆ, ಟೀಪಾರ್ಟಿ ಸತ್ಕಾರಗಳಾದ, ಮೇಲೆ ಸೆಕ್ರೆಟರಿ ಮಿ. ಎಂ. ಬಾಪುಂಞ ಸಾಹೇಬರ ವಂದನಾರ್ಪಣೆ ನಂತರ ಜಯ ಘೋಷಗಳೊಂದಿಗೆ ಸಭೆ ಮುಕ್ತಾಯವಾಯಿತು.

ದ. ಕ. ಆದಿದ್ರಾವಿಡ ಸಂಘದವರು ತಮ್ಮ ಅಭಿವೃದ್ಧಿಗೆ ಪರ ಮತ್ತು ವಿರೋಧವಾದ ಸಂಗತಿಗಳ ಕುರಿತು ಈ ಕೆಳಗಿನ ನಿರ್ಣಯಗಳನ್ನು ಮಾಡಿರುವರು:

೧. ಪಾಣೆ ಮಂಗಳೂರು ಮೊಡರ್ನ್ ಕಾಫಿ ಕ್ಲಬ್ಬಿನವರು ಸದರಿ ಕ್ಲಬ್ಬಿನಲ್ಲಿ ಹರಿಜನರಿಗೆ ಪ್ರವೇಶ ಕೊಡುತ್ತಾರೆಂಬುದನ್ನು ತಿಳಿಯಲು ಈ ಸಮಿತಿಯು ತುಂಬಾ ಸಂತೋಷಗೊಳ್ಳುವುದು-ಮಾತ್ರವಲ್ಲದೆ-ಆದಿದ್ರಾವಿಡ ಸಮಾಜದ ಪರವಾಗಿ ಆ ಹೋಟೇಲಿನ ಮ್ಹಾಲಿಕರನ್ನು, ಆ ಊರಿನ ಮಹಾ ಜನರನ್ನು ಅವರ ಆದರ್ಶ ವರ್ತನೆಗಾಗಿ ಹೃದಯ ಪೂರ್ವಕವಾಗಿ ಅಭಿನಂಧಿಸುವುದು.

೨ ಈ ಸಂಘದ ಸದಸ್ಯರಾದ ಮತ್ತು ಮಂಗಳೂರು ಮುನಿಸಿಪಲ್ ಕೌನ್ಸಿಲರಾದ ಶ್ರೀ ಜೆ. ವಾಮನವರು ಸಂಘದ ಅಧ್ಯಕ್ಷರಿಗೆ ತಾನು ಬಂದು ಸ್ಮಶಾನ ಮೊಕದಮ್ಮೆಯಿಂದಾಗಿ ಜೈಲಿಗೆ ಹೋಗುತ್ತೇನೆಂದು ಬರೆದ ಪತ್ರವನ್ನು ಓದಲಾಯ್ತು.

ಅವರು ಒಂದು ಉದಾತ್ತಧ್ಯೇಯಕ್ಕಾಗಿ ಜೈಲಿಗೆ ಹೋಗುವುದರಿಂದ ಅವರಿಗೆ ಜೈಲಿನಲ್ಲಿ ಆರೋಗ್ಯವು ಸೌಖ್ಯವೂ ದೊರಿಯಲೆಂದು ಈ ಸಮಿತಿಯು ದೇವರನ್ನು ಪ್ರಾರ್ಥಿಸುವುದು. ಮತ್ತು ತಾ. ೨೩-೫-೪೫ರಲ್ಲಿ ಅಪರಾಹ್ನ ಗಂಟೆ ೩ಕ್ಕೆ ಅತ್ತಾವರ ಡಿ. ಸಿ. ಮಿಶನ್ ಶಾಲೆಯ ವಠಾರದಲ್ಲಿ ಅವರನ್ನು ಅಭಿವಂದಿಸುವರೆ ಆದಿದ್ರಾವಿಡರ ಒಂದು ಸಭೆ ಕೂಡಿಸುವುದಾಗಿ ನಿರ್ಣಯಿಸಲಾಯಿತು.

೩ (a) The Removal of Civil Disabilities Act 1939 ಜಾರಿಯಲ್ಲಿರುವಾಗ ನಂದಿಗುಡ್ಡೆ ಸಾರ್ವಜನಿಕ ಮುನಿಸಿಪಲ್ ಸ್ಮಶಾನದಲ್ಲಿ ಒಬ್ಬ ಆದಿದ್ರಾವಿಡ ಸಂಭವಿತನ ಶವದಹನ ಮಾಡಿದುದಕ್ಕಾಗಿ ಮೂವರು ಆದಿದ್ರಾವಿಡ ಯುವಕರು ಶಿಕ್ಷೆಗೊಳಗಾದರೆಂದು ತಿಳಿಯಲು ಈ ಸಮಿತಿಯು ತುಂಬಾ ಸಂತಾಪಗೊಳ್ಳುವುದು.

(b) ಶಿಕ್ಷಿತರು ಮಾಡಬಹುದಾದ ಅಪೀಲು ವ್ಯವಹರಣೆಯನ್ನು ಉದಾರಿಯಾದ ಜಿಲ್ಲಾ ಮೆಜಿಸ್ಟ್ರೇಟರವರು ಸ್ವತಃ ತನಿಖಿ ನಡೆಯಿಸಿ ಶೆಡ್ಯೂಲ್ ಜಾತಿಗಳ ಹಕ್ಕುಗಳನ್ನು ಕಾಪಾಡಬೇಕಾಗಿ ಈ ಸಭೆಯು ಅವರನ್ನು ಪ್ರಾರ್ಥಿಸುವುದು.

೪. ಈ ಸಂಬಂಧ ಆದಿದ್ರಾವಿಡ ಮಹಾಜನರ ವಿವರವಾದ ಒಂದು ಮನವಿಯನ್ನು ಜಿಲ್ಲಾ ಮೆಜಿಸ್ಟ್ರೇಟಾ ದೊರೆಗಳಿಗೆ ಒಪ್ಪಿಸುವರೆ ಈ ಕೆಳಗಿನವರಿಗೆ ಅಧಿಕಾರ ಕೊಡಲಾಯಿತು-೧. ಶ್ರೀ. ಟಿ. ಕೃಷ್ಣ, B. A., L. T., ಶ್ರೀ. ಪಿ. ರಾಮಚಂದ್ರ ೪. ಕಾಂಕಪ್ಪ ಮತ್ತು ಶ್ರೀ ಯು. ಲಕ್ಷ್ಮಣ.

ತಾ. ೨೬-೪-೪೫ರಲ್ಲಿ ಜರಗಿದ ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಸಭೆಯಲ್ಲಿ ಸದರಿ ಮುನಿಸಿಪಾಲಿಟಿಯ ಅಧಿಕಾರದಲ್ಲಿರುವ ಎಲ್ಲಾ ಸಾರ್ವಜನಿಕ ಸ್ಮಶಾನಗಳಲ್ಲಿ ಜಾತಿ ಮತ ಭೇಧಗಳಿಲ್ಲದೆ ಶವ ಸಂಸ್ಕಾರ ಮಾಡಬಹುದೆಂಬ ನಿರ್ಣಯವನ್ನು ಮಾಡಿದುದಕ್ಕಾಗಿ ಅವರನ್ನು ಆದಿದ್ರಾವಿಡರ ಪರವಾಗಿ ಈ ಸಭೆಯು ಅಭಿನಂದಿಸುವುದು.

(Sd). T. Krishna.
ಅಧ್ಯಕ್ಷ.

ಸಂಕ್ಷೇಪ ಸುದ್ದಿ ಸಾರ

'ಬಹು ಮಂದಿ ಬ್ರಿಟಿಷ್ ಪ್ರಚಾರಕರು ಒಂದು ಕಡೆ, ಓರ್ವ ನೆಹರು ಮಹಿಳೆ ಒಂದು ಕಡೆ' ಹೀಗೆ ಅಮೇರಿಕನ್ ಪತ್ರಿಕೆಗಳು ವಿಜಯ ಲಕ್ಷ್ಮಿಯವರ ಭಾರತದ ನೈಜ್ಯ ಚಿತ್ರ ಪ್ರಚಾರದ ಕುರಿತು ಬರೆದಿವೆ. ಅವರು ಬಿಡುವಿಲ್ಲದೆ ವಾರದ ಏಳು ದಿನವೂ ಅವಿಶ್ರಾಂತಿವಾಗಿ ತಮ್ಮ ಕಾರ್ಯ ಸಾಗಿಸುತಿದ್ದಾರೆ. ಬೆಳಿಗ್ಗೆ ಎಂಟು ಗಂಟೆಗೆ ಪತ್ರಿಕಾ ಪ್ರತಿನಿಧಿಗಳು ಗಂಟೆ ಬಾರಿಸಿ ಅವರನ್ನು ಎಚ್ಚರಿಸುತ್ತಾರೆ. ನಂತರ ಅವರು ಮೊದಲೇ ಏರ್ಪಡಿಸಲ್ಪಟ್ಟ ತಮ್ಮ ಕಾರ್ಯ ಕ್ರಮದಲ್ಲಿ ಕೆಲವು ಹೊಸದನ್ನು ಸೇರಿಸಿ ಪ್ರಾತಃಫಲಾಹಾರ ಮುಗಿಸಿ ಪತ್ರ ವ್ಯವಹಾರದಲ್ಲಿ ತೊಡಗುವರು.

ಅವರಿಗೆ ಪರಿಚಯವಿಲ್ಲದ ಅನೇಕ ಅಮೇರಿಕನರು ಅವರಿಗೆ ಪುಷ್ಪಹಾರಗಳನ್ನೂ, ಫಲವಸ್ತುಗಳನ್ನೂ ರಾಶಿ ರಾಶಿಯಾಗಿ ಕಳುಹಿಸುತ್ತಾರೆ. ಅವರನ್ನು ಅಭಿನಂದಿಸಿ ಯಶಸ್ಸು ಕೋರುವ ಪತ್ರಗಳಿಗೆ ಇತಿಮಿತಿಯೇ ಇಲ್ಲ. ಪತ್ರಿಕಾ ಪ್ರತಿನಿಧಿಗಳು ಸಾನ್ ಫ್ರೆನ್ಸಿಸ್ ನಗರದಲ್ಲಿ ೨ ಸಾವಿರಕ್ಕೂ ಮಿಕ್ಕಿ ಇದ್ದಾರೆ. ಅವರೆಲ್ಲರಿಗೂ ಶ್ರೀಮತಿ ಪಂಡಿತರು ೧೫ ಮಿನಿಟುಗಳ ಭೇಟಿ ಕೊಟ್ಟು ಭಾರತದ ಕುರಿತು ಸಂಕ್ಷೇಪವಾಗಿಯಾದರೂ ಸಂಪೂರ್ಣವಾಗಿ ಪರಿಸ್ಥಿತಿ ನಿರೂಪಣೆ ಮಾಡುತ್ತಾರೆ.

ಮಧ್ಯಾಹ್ನ ಊಟವನ್ನು ಶ್ರೀಮತಿಯವರು ಅಮೇರಿಕದಲ್ಲಿನ ತಮ್ಮ ಸಹಕಾರ್ಯ ಕರ್ತರೊಡನೆ ತೆಗೆದು ಕೊಳ್ಳುವರು. ಆಗ ಅವರು ತಮ್ಮ ಪ್ರಚಾರ ಯೋಜನೆಗಳನ್ನು ತರ್ಕಿಸುವರು. ಅಮೇರಿಕದ ದೊಡ್ಡ ದೊಡ್ಡ ಪತ್ರಿಕಾ ಸಂಸ್ಥೆಗಳ ಪ್ರತಿನಿಧಿಗಳೂ ಕೆಲವು ಸಲ ಆಹ್ವಾನಿಸಲ್ಪಡುವರು.

ಮಧ್ಯಾಹ್ನ ಊಟದನಂತರ ಶ್ರೀಮತಿ ಪಂಡಿತರು ಸ್ವಲ್ಪ ಹೊತ್ತು ನಗರ ಸಂಚಾರ ಮಾಡಿ

(೮ನೇ ಪುಟಕ್ಕೆ ಮುಂದುವರಿದಿದೆ)

ಕೋಮಲ ಸೌಂದರ್ಯ ನಿಮಗೆ ಇರಬೇಕೆ?

ನಿಮಗೆ ಶುದ್ಧವಾದ ಮತ್ತು ಹಾಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯು ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನು ಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕೆ ಕೋಮಲತೆಯನ್ನುಂಟುಮಾಡುವುದು

BILE BEANS

ಬೈಲ್ ಬೀನ್ಸ್ ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು

ಜೀವ ನಿರ್ಜೀವ ವಸ್ತುಗಳ ಸ್ವಭಾವ

ಪ್ರಕೃತಿ ವ್ಯಾಪಾರದಿಂದ ಭೂಚರಿತ್ರೆ ತಿಳಿಯಬಹುದು

ಮನುಷ್ಯನು ಪ್ರಕೃತಿಯನ್ನು ಮೀರಿದವನಲ್ಲ

"ಬಂಡೆಯ ಮೇಲೆ ಹಕ್ಕಿ ಕೊಂಚ ಹೊತ್ತು ಕುಳಿತಿದ್ದು ಬಳಿಕ ಹಾರಿಹೋಗುವುದು. ಆದರೆ ಬಂಡೆ ಮಾತ್ರ ಅಲ್ಲೇ ಅಲುಗಾಡದೆ ನೆಲೆಯಾಗಿ ನಿಂತಿರುವುದು. ಹಕ್ಕಿ ಹಾರುತ್ತದೆ ಅದಕ್ಕೆ ರೆಕ್ಕೆಗಳಿವೆ. ಹಕ್ಕಿಗೆ ನೋಡಲು ಕಣ್ಣುಗಳಿವೆ, ಕೇಳಲು ಕಿವಿಗಳಿವೆ. ಆದರೆ ಬಂಡೆಗೆ ಇಂತಹ ಅಂಗಾಂಗಗಳಾವುವೂ ಇಲ್ಲ, ಅದರ ತುಂಡುಗಳೆಲ್ಲಾ ಒಂದೇ ಬಗೆಯವು. ಬಂಡೆಗೆ ಹಕ್ಕಿಗಿರುವಂತೆ ಗೊತ್ತಾದ ಕೆಲಸಗಳನ್ನು ಮಾಡಲು ಏರ್ಪಟ್ಟಿರುವ ಬಗೆ ಬಗೆಯ ಅಂಗಗಳಿಲ್ಲ. ಆದುದರಿಂದಲೇ ನಾವು ಹಕ್ಕಿಯನ್ನು 'ಚಿತ್' (ಜೀವಿ) ಎಂದು ಕರೆಯುತ್ತೇವೆ. ಬಂಡೆಯನ್ನು ಅಚಿತ್ (ನಿರ್ಜೀವ) ವಸ್ತು ಎಂದು ಹೇಳುತ್ತೇವೆ." ಹೀಗೆಂದು ಮೈಸೂರ ಕಡೆಯ ಶ್ರೀ. ಶ್ರೀನಿವಾಸ ಅಯ್ಯಂಗಾರ್, ಬಿ. ಎಸ್. ಸಿ. (ಆನರ್ಸ್) ಅವರು 'ಕನ್ನಡ ನುಡಿ'ಯಲ್ಲಿ 'ಪ್ರಕೃತಿ ಪರಿಚಯ' ಎಂಬ ಲೇಖನದಲ್ಲಿ ಬರೆಯುತ್ತಾರೆ.

ಭೂಮಿಯ ಮೇಲಿರುವ ವಸ್ತುಗಳನ್ನೆಲ್ಲಾ ಜೀವವುಳ್ಳದ್ದು ಮತ್ತು ಜೀವವಿಲ್ಲದ್ದು ಎಂಬೆರಡು ಪಂಗಡವಾಗಿ ವಿಂಗಡಿಸಬಹುದೆಂದೂ, ಈ ವಸ್ತುಗಳ ಸಮಷ್ಟಿಯೇ 'ಪ್ರಕೃತಿ' ಎಂದೂ, ಇವುಗಳ ಸ್ವರೂಪ, ಸ್ವಭಾವ, ಸ್ಥಿತಿ, ಪ್ರವೃತ್ತಿಗಳನ್ನು ತಿಳಿಸುವ ಶಾಸ್ತ್ರವೇ ಪ್ರಕೃತಿ ವಿಜ್ಞಾನವೆಂದೂ ತಿಳಿಸುತ್ತಾ ಶ್ರೀಮಾನ್ ಅಯ್ಯಂಗಾರರು ಬಂಡೆಯ ಮೇಲೆ ಕುಳಿತಿರುವ ಹಕ್ಕಿಯ ಉದಾಹರಣೆ ಕೊಟ್ಟು "ಅದನ್ನು ನಾವು ಪ್ರಕೃತಿಯ ಸಂಜ್ಞೆ ಎಂದು ಭಾವಿಸಬಹುದು" ಎಂದು ತಿಳಿಸುತ್ತಾರೆ.

ತಮ್ಮ ತರ್ಕ ಸರಣಿಯನ್ನು ಮುಂದರಿಸುತ್ತಾ ಶ್ರೀಯುತರು ಹೀಗೆ ಬರೆದಿದ್ದಾರೆ: ಹಕ್ಕಿ ಮೊಟ್ಟೆ ಇಡುತ್ತದೆ; ಮೊಟ್ಟೆಗಳು ಮರಿಯಾಗಿ ಮತ್ತೆ ಹಕ್ಕಿಗಳಂತೆ ಬೆಳೆದು ತಮ್ಮ ಸಂತಾನವನ್ನು ಬೆಳೆಸುತ್ತವೆ. ಭೂಚರಿತ್ರೆಯ ನಾನಾ ಯುಗಗಳಲ್ಲೂ ಬಗೆ ಬಗೆಯ ಜೀವಿಗಳು ಭೂತಲವನ್ನು ಸಿಂಗರಿಸಿವೆ. ಭೂಮಿ ಎಂಬ ರಂಗಸ್ಥಳದ ಮೇಲೆ 'ಜೀವನ'ದ ನಾಟಕ ಸಹಿತವಾಗಿ ಮುಂದುವರಿಯುತ್ತ ಬಂದಿರುವ ಅಂಶ ಹಲವು ದೃಷ್ಟಿಗಳಿಂದ ಮುಖ್ಯವಾದುದು. ನಿರ್ಜೀವ ಪದಾರ್ಥಗಳಲ್ಲಿ ಇಂತಹ ಮಾರ್ಪಾಟುಗಳಾವುವೂ ಆಗುವುದಿಲ್ಲ. ಹಿಂದಿನ ಕಲ್ಪದ ಕಡಲ ತೀರದಲ್ಲಿ ಬಿದ್ದಿದ್ದ ಕಲ್ಲಿನ ಚೂರು-ಅದನ್ನು ಪ್ರಕೃತಿ ಶಕ್ತಿಗಳು ಬೇರೆ ತಾಣಕ್ಕೆ ಕೊಂಡೊಯ್ಯದೆ, ಅದನ್ನು ಪುಡಿ ಪುಡಿಯಾಗಿ ಮಾಡದೆ ಇದ್ದರೆ-ಅದು ಅಲ್ಲೇ ಹಲವು ಕಲ್ಪಗಳು ಉರುಳಿದರೂ 'ತನ್ನ ತನ'ವನ್ನು (ಸ್ವಭಾವ ಲಕ್ಷಣಗಳನ್ನು ?) ಕಳೆದುಕೊಳ್ಳದೆ ಬಿದ್ದಿರುವುದು. ಅದು ಪ್ರಕೃತಿ ಶಕ್ತಿಗಳ ವಶಕ್ಕೆ ಗುರಿಯಾಗಿ ಕಡಲ ತಳದ ಮೇಲೆ ಬಿದ್ದು ಒಂದು ಶಿಲೆಯ ಅಂಗವಾಗಬಹುದು, ಮತ್ತೆ ಬಹುಕಾಲದ ನಂತರ ಆ ಶಿಲೆಯಿಂದ ಸ್ವತಂತ್ರವಾಗಿ ಹಿಂದಿನಂತೆ ಕಲ್ಲಿನ ಚೂರಾಗಿ ಉಳಿಯಬಹುದು. ಅದು ಗಾಳಿ, ನೀರು, ಮಂಜು, ಇವುಗಳ ಹೊಡೆತಕ್ಕೆ ಸಿಕ್ಕಿ ದುಂಡನೆ ನಯವಾದ ಕಲ್ಲಾಗಬಹುದು, ಅಥವಾ ಪುಡಿ ಪುಡಿಯಾಗಿ ಮರಳೋ ಮಣ್ಣೋ ಆಗಬಹುದು. ಆದರೆ ಅದರಿಂದ ಅದರಂತಹ (ಬೇರೆ) ಕಲ್ಲುಗಳು ತಾನಾಗಿ ಉಂಟಾಗುವುದಿಲ್ಲ."

ಜೀವಿಗಳು ತಮ್ಮ ಸುತ್ತ ಇರುವ ಭೌತಿಕ ಸ್ಥಿತಿಗತಿಗಳಿಗೆ ಹೊಂದಿಕೊಂಡಿರುವ ಕಾರಣದಿಂದಲೇ ಹಿಂದೆ ಅದ್ಭುತವಾದ ಜೀವಿಗಳು ನೆಲದ ಮೇಲೆ ಸಂಚರಿಸುತ್ತಿದ್ದವೆಂದು ನಾವು ಈಗ ಸುಲಭವಾಗಿ ನಂಬಬಹುದಾಗಿದೆ ಎಂದು ತಿಳಿಸುತ್ತಾ ವಿಜ್ಞಾನಾಭ್ಯಾಸಿ ಅಯ್ಯಂಗಾರರು ಹೀಗೆ ಬರೆಯುತ್ತಾರೆ:

ಜೀವಿಗಳು ಇತರ ಜೀವಿಗಳನ್ನೂ ನಿರ್ಜೀವ ವಸ್ತುಗಳನ್ನು ತಮ್ಮ ಬೆಳವಣಿಗೆಗೆ ಉಪಯೋಗಿಸಿಕೊಳ್ಳುತ್ತವೆ. ಗಿಡಗಳು ನೆಲ, ನೀರು, ಗಾಳಿಗಳಲ್ಲಿರುವ ವಸ್ತುಗಳಿಂದ ಆಹಾರವನ್ನು ನಿರ್ಮಿಸುತ್ತವೆ; ಹಕ್ಕಿಗಳು ಗಾಳಿಯಲ್ಲಿ ಹಾರಾಡುತ್ತವೆ; ಮನುಷ್ಯನು ಪ್ರಕೃತಿ ಶಕ್ತಿಗಳನ್ನು ತನ್ನ ಬುದ್ಧಿ ಬಲದಿಂದ ತನ್ನ ಸೇವೆಗೆ ಬಳಸಿಕೊಳ್ಳುತ್ತಾನೆ. ಆದರೂ ಮನುಷ್ಯನು ಪ್ರಕೃತಿಯನ್ನು ಮೀರಿದವನಲ್ಲ. ಅವನು ಪ್ರಕೃತಿಯ ಒಂದು ಅಂಗ, 'ಮಗು' ಎಂದರೂ ಸಲ್ಲುವುದು. ಇತರ ಜೀವಿಗಳು ಮನುಷ್ಯನ ಬರೀ ಸಂಗಡಿಗರಲ್ಲ; ಅವನ ಬಂಧುಗಳು. ಅವುಗಳಂತೆ ಮನುಷ್ಯನೂ ಪ್ರಪಂಚದ ಸ್ಥಿತಿಗತಿಗಳಿಗೂ ಜೀವನದ ಸೂತ್ರಗಳಿಗೂ ಬದ್ಧನಾಗಿದ್ದಾನೆ. ಅವುಗಳ ಗನ್ನಡಿಕಷ್ಟೂ ಮಾನವನ ಅರಿವು ಉತ್ತಮಗೊಳ್ಳುವುದು. ಆದರಿಂದ ಅವನಿಗೆ ತನ್ನ ಮೇಲ್ಮೆಗಾಗಿ ದುಡಿಯುವ ಬಲ ಬೆಳೆಯುವುದು. ಈ ಭೂಮಿಯು ಮನುಷ್ಯನ ರಂಗಸ್ಥಳ ಮಾತ್ರವಲ್ಲ ಇದು ಅವನ ಜನ್ಮ ಭೂಮಿಯಂತೆ, ಬಾಳಿನ ರಂಗಸ್ಥಳದಂತೆ, ಅವನ ರುದ್ರ ಭೂಮಿಯೂ ಆಗಿದೆ. ಆದರೆ ಭೂಮಿಯ ಮೇಲಿರುವ ವಸ್ತುಗಳೆಲ್ಲಿ ಅವನಿಗೆ ಹಿಂದೆ ಬಂದಿರುವುದು ಅವನ ಬುದ್ಧಿ ಬಲದಿಂದ, ಸೌಂದರ್ಯೋಪಾಸನೆಯಿಂದ, ಸಾಹಿತ್ಯ ಕಲಾಭಿರುಚಿಗಳಿಂದ, ಸೌಹಾರ್ದ, ಸೌಶೀಲ್ಯಾದಿಗುಣಗಳಿಂದ, ಇವುಗಳೆಲ್ಲಕ್ಕಿಂತ ಮೇಲಾಗಿ ಧರ್ಮನಿಷ್ಠೆ, ದೈವ ಭಕ್ತಿಗಳಿಂದ.

ಹಿಂದೆ ಬಲು ಹಿಂದೆ—

ನಮಗರಿಯದ ಅದಾವುದೂ ವಿಚಿತ್ರ ರೀತಿಯಲ್ಲಿ ನಿರ್ಜೀವ ವಸ್ತುಗಳ ನಡುವೆ ಜೀವ ವಸ್ತುಗಳು ಉದ್ಭವಿಸಿದುವೆಂದೂ ತತ್ಫಲವಾಗಿ ನಾನಾ ತರದ ಜೀವಿಗಳು ಭೂಮಿಯ ಮೇಲೆ ಬೇರೆ ಬೇರೆ ಕಾಲಗಳಲ್ಲಿ ತಮ್ಮ ಅಧಿಕಾರವನ್ನು ನಡೆಸಿವೆ ಎಂದೂ ತಿಳಿಸುತ್ತಾ ಶ್ರೀಮಾನ್ ಅಯ್ಯಂಗಾರರು ಈ ಕೆಳಗಿನ ವಿಷಯವನ್ನು ನಿರೂಪಿಸುತ್ತಾರೆ:

ಈ ನಿರ್ಜೀವ ವಸ್ತು ಎಲ್ಲಾ ಬಗೆಯಲ್ಲಿಯೂ ಬಲು ತೊಡಕಾಗಿದೆ. ಇದರ ಸ್ವರೂಪ, ಸ್ವಭಾವ-ಪ್ರವೃತ್ತಿ-ಸ್ಥಿತಿ-ಶಕ್ತಿಗಳ ಅಳವನ್ನು ಬಲ್ಲವರೇ ಇಲ್ಲ. ಈಗ ಇದು ಎಲ್ಲೆಲ್ಲೂ-ನೆಲದ ಮೇಲೂ ನೀರಿನಲ್ಲೂ ಗಾಳಿಯಲ್ಲೂ-ನೆಲೆಸಿದೆ. ಇದೇ ಭೂದೇವಿಗೆ ಹಚ್ಚನೆಯ ಹಸುರಿನ ಜಮಖಾನವನ್ನು ಹೊದಿಸಿದೆ. ಇದಿಲ್ಲದೇ ಇದ್ದರೆ ಭೂತಲವು ಬರೀ ಬರಡುಗಲ್ಲಿನಕಾಡಾಗಿ ಪರಿಣಮಿಸುತ್ತಿತ್ತು!

ಜೀವಿಗಳಂತೆಯೇ ನಿರ್ಜೀವ ವಸ್ತುಗಳೂ ಕಾಲಗತಿಯಲ್ಲಿ—ಆದರೆ ಬೇರೆ ಬೇರೆ ರೀತಿಯಲ್ಲಿ—ಬದಲಾಯಿಸಿವೆ. ಪ್ರಪಂಚದ ಈ ಜೀವ ನಿರ್ಜೀವ ವಸ್ತುಗಳ ಬದಲಾವಣೆಗಳ ದಾಖಲೆಯೆಲ್ಲಾ ಭೂಮಿಯ ಮೇಲ್ಮೈಯ ಶಿಲೆಗಳ ಪದರುಗಳಲ್ಲಿ ಪ್ರಕೃತಿ ಶಕ್ತಿಗಳಿಂದಲೇ ಸಂಗ್ರಹಿಸಲ್ಪಟ್ಟಿದೆ. ಆದರೆ ಈ ದಾಖಲೆಗಳು ಪೂರ್ಣವಾಗಿಲ್ಲ. ಇರುವ ದಾಖಲೆಗಳು ಎಲ್ಲೆಲ್ಲೂ ನಮ್ಮ ಪರಿಶೀಲನೆಗಾಗಿ ಕಾಯುತ್ತಿವೆ. ಇವುಗಳ ಪರಿಚಯವನ್ನು ಮಾಡಿಕೊಂಡು ಭೂಮಿಯ ಶಿಲೆಗಳೊಡನೆ ಸ್ನೇಹವನ್ನು ಬೆಳೆಸಿ ಅವುಗಳನ್ನು ಬಿಡಿಸಿ ಮಾತನಾಡಿಸುವುದು ನಮ್ಮ ಕರ್ತವ್ಯ.

ಈ ಕೆಲಸವನ್ನು ಮಾಡಿ ನಮಗೆ ದಾರಿ ತೋರಿಸಿದವನು ಚಾರಲ್ಸ್ ಲಯೆಲ್ ಎಂಬ ಇಂಗ್ಲಿಷ್ ವಿಜ್ಞಾನಿ. ಅವನು "ಭೂವಿಜ್ಞಾನತತ್ತ್ವಗಳು" (Principles of Geology) ಎಂಬ ಗ್ರಂಥದಲ್ಲಿ 'ಭೂಮಿಯ ಮೇಲೆ ಮೊದಲಿನಿಂದಲೂ ಪ್ರಕೃತಿ ವ್ಯಾಪಾರಗಳು ಇಂದಿನಂತೆಯೇ—ಹೆಚ್ಚು ಕಡಿಮೆ ಇದೇ ವೇಗದಲ್ಲಿಯೇ—ನಡೆಯುತ್ತಾ ಬಂದಿವೆ' ಎಂದು ಸಪ್ರಮಾಣವಾಗಿ ತೋರಿಸಿ, ಮನುಷ್ಯನು ಹುಟ್ಟುವುದಕ್ಕೆ ಮೊದಲೇ-ಅವನಿಗೆ ಓದು ಬರಹ ಬರುವ ಮುನ್ನ-ಭೂಮಿಯ ಮೇಲೆ ನಡೆದಿರುವ ಘಟನೆಗಳ ಕಾಲವನ್ನು ತಿಳಿದು ನಿಷ್ಪಕ್ಷಿಕ, ಭೂಚರಿತ್ರೆಯನ್ನು ಸಂಗ್ರಹಿಸುವುದು ಸಾಧ್ಯ ಎಂದು ಸಾರಿದನು. ಈ 'ಏಕರೂಪ'ವಾದಕ್ಕೆ (Uniformitarianism) ವಿರುದ್ಧವಾಗಿರುವಂತೆ ಆಗಾಗ ಪ್ರಕೃತಿಯ ವಿಪ್ಲವ—ಕಾರಕ ಶಕ್ತಿಗಳು ನಮಗೆ ಗೋಚರವಾಗುತ್ತವೆ. ಇವನ್ನು ಪರಿಶೀಲಿಸಿ ಕಂಡುಹಿಡಿಯುವುದು ಮನುಷ್ಯನ ಕರ್ತವ್ಯ.

ಸಂಕ್ಷೇಪ ಸುದ್ದಿ ಸಾರ

(೩ನೇ ಪುಟದಿಂದ)

ಸಾಮಾನುಗಳ ಖರೀದಿಯನ್ನು ನಿರೀಕ್ಷಿಸುವುದಕ್ಕೆ ನೋಡುವರು. ಅವರು ಮಾರ್ಗಕ್ಕೆ ಇಳಿದೊಡನೆ ಅವರ ಕಪ್ಪು ಅಥವಾ ಬಿಳಿ ಸೀರೆಯಿಂದ ಅವರ ಗುರುತು ಹಿಡಿಯಬಲ್ಲ ಅನೇಕ ಅಮೇರಿಕನರು ಅವರ ಹಿಂದೆ ಗುಂಪು ಗುಂಪಾಗಿ ಓಡಿ ಬಂದು ಅವರ ಛಾಯಾ ಚಿತ್ರವನ್ನು ಸಹಿಯನ್ನೂ ತೆಗೆದುಕೊಳ್ಳುವರು. ಅವರು ಅಲ್ಲಿನ ಜನರಿಗೆ ಬಹಳ ಪರಿಚಿತರಾಗಿ ಹೋಗಿರುವರು. ಕೆಲವು ದಿನಗಳ ಹಿಂದೆ ಅಲ್ಲಿನ ಜನರು ಪ್ರಖ್ಯಾತ ಚಲಚಿತ್ರನಟ ಜೇಮ್ಸ್ ಕೆಗ್ನಿ ಎಂಬವನನ್ನು ಸಹ ಶ್ರೀಮತಿ ಒಂದು ಉಪಹಾರ ಗೃಹದಲ್ಲಿ ವಿಜಯ ಲಕ್ಷ್ಮಿಯವರ ಮೇಜಿನ ಸುತ್ತು ನೆರೆದು ಅವರ ಹಸ್ತಾಕ್ಷರವನ್ನು ಪಡೆಯಲು ಕಾತರಿಸಿದರು.

ಒಂದು ದಿನ ಫಿಸ್ಕೋದಲ್ಲಿನ ಚೀನಿ ಬಡಾವಣೆಗೆ ಶ್ರೀಮತಿಯವರು ಭೇಟಿಯಿತ್ತು ಅದು 'ದಿಲ್ಲಿಯ ಚಾಂದನಿ ಚೌಕದಂತೆ' ತೋರುವುದೆಂದರು. ಆಗಾಗ್ಗೆ ಅವರು ಉಪಹಾರ ಕೂಟಗಳನ್ನು ತಮ್ಮ ವಸತಿಗೃಹದಲ್ಲಿ ಏರ್ಪಡಿಸುವರು. ಆಗಲೇ ಈಜಿಪ್ಟ್, ಇರಾಕ್, ಅರೇಬಿಯಾ ದೇಶದ ರಾಯಭಾರಿಗಳು ಅವರ ಆತಿಥ್ಯವನ್ನು ಹೊಂದಿರುವರು.

★ ಕ್ಷಣಿಕ ಜೀವನ ★

ನಮ್ಮೀ ಜೀವಮಾನವು ಖಂಡಿತವಾಗಿಯೂ ಅಲ್ಪಾಯುವಾದುದು. ನೂರರ ಈ ಕಡೆಯಲ್ಲೇ ಅದು ನಶಿಸುವುದು. ಒಂದು ವೇಳೆ ಯಾವನಾದರೂ ಅದಕ್ಕೂ ಮಿಕ್ಕಿ ಜೀವಿಸಿದರೆ, ಕೊನೆಗಂತೂ ನಶ್ವರತೆಯಿಂದ ಅದು ನಾಶವಾಗುವುದು.

ಸ್ವಾರ್ಥದಿಂದಲೇ ಜನರು ದುಃಖಿತರಾಗುವುದು. 'ಈ ಜಗತ್ತಿನಲ್ಲಿನ ಸೊತ್ತು ಸ್ವಾರ್ಜಿತಗಳು ನಿರಂತರ ಬಾಳ್ವಿಕೆಯವುಗಳಲ್ಲ. ಎಲ್ಲವೂ ಸ್ಥಿತ್ಯಂತರಕ್ಕೆ ಒಳಗಾದವುಗಳು,'—ಇವುಗಳನ್ನು ನೋಡಿ, ತಿಳಿದ ಮೇಲೂ ಯಾರೂ ಸ್ವಾರ್ಥದ ಈ ಸುಖಕ್ಕಾಗಿ ಹೇಚಾಡದಿರಲಿ.

ಕನಸಿನಲ್ಲಿ ಕಂಡವನನ್ನು ನೆನಸಿನಲ್ಲಿ ಕಾಣುವುದು ಎಷ್ಟು ಅಶಕ್ಯವೋ ಅಂತೇ ಮೃತ್ಯುವಿಗೀಡಾಗಿ ಪ್ರೇತವಾದೊಬ್ಬನನ್ನು ಕಾಣುವುದೂ ಅಷ್ಟೇ ಅಶಕ್ಯ.

ಬುದ್ಧದೇವ ವಚನ

ಜಾಂಬಕನ್ನುಪಯೋಗಿಸಿ ನಿಮ್ಮ ಪಾದದನೋವನ್ನು ಗುಣಪಡಿಸಿರಿ.

ಪ್ರತಿರಾತ್ರಿ ತಪ್ಪದೆ ಇದನ್ನು ಹಚ್ಚಿರಿ.

ನೋವುಳ್ಳ ಪಾದಗಳಿಗೆ ಮತ್ತು ಬಾತುಹೋದ ಮಣಿಗಂಟಿಗೆ ಜಾಂಬಕಿನಷ್ಟು ಉತ್ತಮ ಔಷಧಿ ಬೇರೆ ಇಲ್ಲ. ಮಣಿಗಂಟಿಗೆ ಪಾದಕ್ಕೆ ಬೆರಳುಗಳ ಮಧ್ಯಕ್ಕೆ ಇದನ್ನು ಮೆಲ್ಲಗೆ ಹಚ್ಚಿ ಉಜ್ಜಿರಿ. ಇದರಲ್ಲಿರುವ ಉತ್ತಮ ವನೌಷಧಿ ಸತ್ವವು ಚರ್ಮದೊಳಗೆ ಹೀರಲ್ಪಟ್ಟು ನೋವನ್ನು ಕಡಿಮೆಮಾಡಿ ಗಾಯವನ್ನು ಗುಣಪಡಿಸುತ್ತದೆ. ಚರ್ಮ ಗಟ್ಟಿಯಾದದ್ದು ಮೃದುವಾಗುತ್ತದೆ. ಆಳದ ಗಾಯಗಳೂ ಕೂಡುತ್ತವೆ. ಇದರಿಂದ ನೀವು ಸಂತೋಷಪಡುವಿರಿ.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಟ್ರೊನ್

(೨ನೇ ಪುಟದಿಂದ)

ಅದಕ್ಕೆ ಸೆಲೆಸ್ಟೀನ್ ಮೆಲ್ಲೊಸೆಲನು: "ಹೌದು ನಾನು ಟ್ರೊನಪ್ಪಾ. ಇವತ್ತು ನಿನ್ನ ಹಾರಾಟ ಹೇಗಿದೆ ನನ್ನ ಮುದ್ದು ಮೊಲವೆ?" ಎಂದು ಉತ್ತರವೀಯುತಿದ್ದನು.

"ಇನ್ನೂ ಹಾರಾಟವಾಡಲಿಕ್ಕಾಗುವುದಿಲ್ಲ ಕಣೋ! ಆದರೂ ನಾನೇನು ಸೊರಗಿಬರುತ್ತಿಲ್ಲ. ನನ್ನ ಹೊರಚಿಪ್ಪು ಇನ್ನೂ ಗಟ್ಟಿಯಾಗಿದೆ." ಎಂದು ಟ್ರೊನನೆನ್ನುತಿದ್ದನು. ನಂತರ ಅವನು ಆಪ್ತರನ್ನು ತನ್ನ ಕೋಣೆಗೆ ಆಹ್ವಾನಿಸಿ ಅವರ ಕೂಟದಲ್ಲಿ ಸಂತೋಷಿಸುತಿದ್ದನು. ತನ್ನನ್ನು ಬಿಟ್ಟು ಕುಡಿಯುತ್ತಾರಲ್ಲಾ ಎಂದು ಅವನಿಗೆ ಚಿಂತೆ. ಅವರೊಂದಿಗೆ ಒಂದು ಗ್ಲಾಸು ಕುಡಿಯಲಿಕ್ಕಾಗದುದಕ್ಕಾಗಿ ಅವನು ಖೇದ ಸೂಚಿಸುವನು. "ನಾನು ಏನನ್ನಾದರೂ ಸಹಿಸಬಲ್ಲೆ. ಆದರೆ ನನ್ನ ಮಕ್ಕಳೇ, ನಿಮ್ಮೊಂದಿಗೆ ಬೆರೆತು ಕುಡಿಯದಿದ್ದರೆ ನನಗೆ ಮಹಾ ವ್ಯಥೆಯಾಗುವುದು" ಎಂದು ಹೇಳಿದನು.

ಅಷ್ಟರಲ್ಲಿ ಕಿಟಕಿಯಿಂದ ತನ್ನ ಗೂಬೆತಲೆಯನ್ನು ತೋರಿಸಿ ಟ್ರೊನ್ ಮಹಿಳೆಯು "ನೋಡಿ, ಅವನನ್ನು ನೋಡಿ! ಈ ಕೊಳಕು ಕತ್ತೆಯನ್ನು ನೋಡಿ! ಹಂದಿಯಂತೆ ಅವನಿಗೆ ಉಣಿಸಬೇಕು, ತೊಳೆಯಬೇಕು, ಆರೈಕೆ ಮಾಡಬೇಕಾಗಿದೆ!" ಎಂದು ಭುಸುಗುಟ್ಟುವಳು.

ಅವಳು ಆ ಕಡೆ ಹೋದಾಕ್ಷಣ ಕೆಂಪು ಜುಟ್ಟಿನ ರೂಸ್ಟರ್ ಪಕ್ಷಿಯು ಕಿಟಕಿಯ ಮೇಲೆ ಕೂತುಕೊಂಡು ಕರ್ಕಶವಾಗಿ ಕಾಗುಟ್ಟುವುದು. ಕೆಲವು ಸಲ ಎರಡು ಮೂರು ಹೇಟೆಗಳು ಒಳಗೆ ಹಾರಿ ನೆಲವನ್ನು ಕೆದರಿ, ಕುಕ್ಕುತಿದ್ದವು. ಟ್ರೊನನ ಬಟ್ಟಲಿಂದ ಕೆಳಗೆ ಬಿದ್ದ ಬ್ರೆಡ್ಡು ಚೂರುಗಳಿಂದ ಆಕರ್ಷಿತವಾಗಿ ಅವು ಬರುತಿದ್ದುವು.

ಟ್ರೊನನ ಸ್ನೇಹಿತರೂ ಗಡಂಗನ್ನು ಬಿಟ್ಟು ಅವನ ಕೋಣೆಯನ್ನೇ ತಮ್ಮ ಹರಟೆ ಸ್ಥಾನವಾಗಿ ಮಾಡಿಕೊಂಡರು. ಪ್ರತಿದಿನ ಮಧ್ಯಾಹ್ನದ ಮೇಲೆ ಅವರು ಅವನ ಹಾಸಿಗೆ ಸುತ್ತ ಕೂತು ಹರಟೆ ಕೊಚ್ಚುತಿದ್ದರು. ಹಾಸಿಗೆ ಹಿಡಿದರೂ ಈ ಖೂಳ ಟ್ರೊನನು ಇನ್ನೂ ಅವರನ್ನು ವಿನೋದ ಪಡಿಸುತಿದ್ದನು. ಅವನು ದೈವಗಳನ್ನೇ ನಗಿಸಬಲ್ಲವನಾಗಿದ್ದನು—ಅಂಥಾ ಮೋಜಿನ ಮನುಷ್ಯ ಅವ. ಪ್ರತಿದಿನ ಅವನಲ್ಲಿಗೆ ಬರುವವರೆಂದರೆ ಮೂರು ಸ್ನೇಹಿತರು. ಅಗಸೆ ಮರದ ತಿರುವಿಹೋದ ಕಾಂಡದಂತೆ ಎತ್ತರವಾಗಿರುವ ಸೆಲೆಸ್ಟಿನನನೊಬ್ಬ; ನರಿಯಂತೆ ಕುತಂತ್ರಿಯೂ, ಹೀನ ಕಾಂತಿಯವನೂ ಆದ ಪ್ರೊಸ್ಪರನು ಮತ್ತೊಬ್ಬ; ಇನ್ನೊಬ್ಬನೆಂದರೆ ಸೆಜರ್ ಪೊಮೆಲ್ಲನು-ಈಗ ಮಾತೆತ್ತದೆ ಕೂರುವ ಮೂಗ ಸ್ವಭಾವದ ವ್ಯಕ್ತಿ, ಆದರೂ ಟ್ರೊನನ ಎಲ್ಲಾ ವಿನೋದದ ಮಾತುಗಳಿಂದಲೂ ಸಂತೋಷಪಟ್ಟುಕೊಳ್ಳುತಿದ್ದನು. ಇವರು ಹೊರ ಅಂಗಳದಿಂದ ಒಂದು ಹಲಗೆಯನ್ನು ತಂದು ಟ್ರೊನನ ಹಾಸಿಗೆಯ ಮೇಲೆ ಅದನ್ನಿಟ್ಟು ಅದರ ಮೇಲೆ ಇಸ್ಪೀಟು ಆಟ ಆಡುತ್ತಾ ಸಾಯಂಕಾಲ ಆರು ಗಂಟೆಯ ತನಕ ಕುಳಿತುಕೊಳ್ಳುತಿದ್ದರು. ಆಟದ ಮಧ್ಯದಲ್ಲಿ ಟ್ರೊನನ ಹೆಂಡತಿ ಬಂದು ಗಲಾಟೆ ಮಾಡದೆ ಬಿಡುತ್ತಿರಲಿಲ್ಲ. ಹಾಸಿಗೆಯ ಮೇಲೆ ಮಲಗಿಯಾದರೂ ಟ್ರೊನನು ಇಸ್ಪೀಟ್ ಆಡುವುದನ್ನು ನೋಡಿ ಅವಳಿಗೆ ಕೋಪದ ಪಿತ್ತವೇರುತಿತ್ತು. ಬಿರುಗಾಳಿಯಂತೆ ಕೋಣೆಯೊಳಗೆ ನುಗ್ಗಿ ಅವಳು ಆ ಹಲಗೆಯನ್ನು ಕವಚಿಹಾಕಿ, ಇಸ್ಪೀಟ್ ಎಲೆಗಳನ್ನು ಹಿಡಿದು ಗಡಂಗಿಗೆ ಹೋಗಿ "ನಾನು ಕಷ್ಟಪಟ್ಟು ದುಡಿಯುವಾಗ ಈ ಡೊಳ್ಳು ಹೊಟ್ಟೆ ಮಾಂಸದ ಮುದ್ದೆ ಆಟವಾಡುವುದು ಬೇಡ" ಎಂದು ಬೊಬ್ಬಿಡುವಳು. ಸೆಲೆಸ್ಟೀನನು ಈ ಬಿರುಗಾಳಿ ರಭಸಕ್ಕೆ ತಲೆಬಾಗಿಸಿ ಕೂಡ್ರುವನಾದರೂ, ಪ್ರೊಸ್ಪರನು ಇನ್ನಷ್ಟು ಅವಳನ್ನು ರೇಗಿಸಿ ತಮಾಷೆ ನೋಡುತಿದ್ದನು. ಒಂದು ದಿನ ಅವಳು ಅತ್ಯುಗ್ರ ಕೋಪಿಷ್ಠಳಾದುದನ್ನು ಕಂಡು ಅವನು:"ಓಹ್ಯೊ! ಟ್ರೊನಮ್ಮನವರೇ! ನಿಮ್ಮಂತೆ ನಾನಾಗಿರುತಿದ್ದರೆ ಏನು ಮಾಡುತಿದ್ದೆ ಬಲ್ಲಿರಾ?" ಎಂದನು. ಅವಳು ತನ್ನ ಗೂಬೆ ಕಣ್ಣುಗಳನ್ನು ಅವನ ಮೇಲೆ ನೆಟ್ಟು ಅವನು ಮುಂದೆ ಹೇಳುತ್ತಿರುವುದನ್ನು ಆಲಿಸುತ್ತ ನಿಂತಳು. ಅವನೆಂದನು: "ಹಾಸಿಗೆ ಹಿಡಿದ ನಿನ್ನ ಗಂಡನು ಬೆಂಕಿ ಉರಿಸುವ ಒಲೆಯಂತೆ ಬೆಚ್ಚಗಾಗಿದ್ದಾನೆ. ನಾನಾದರೆ ಮೊಟ್ಟೆಗಳಿಗೆ ಕಾವು ಕೊಡಲು ಅವನನ್ನೇ ಉಪಯೋಗಿಸುತಿದ್ದೆ."

ಅವನು ಕುಶಾಲು ಮಾಡುತ್ತಿರುವನೆಂದು ಅವಳು ದಿಗಿಲು ಬಡಿದಂತೆ ನಿಂತುಬಿಟ್ಟಳು. ಅವನ ಸೊರಗಿಹೋದ ನರಿ ಮುಖವನ್ನು ನೋಡುತ್ತಾ ಹಾಗೇ ನಿಲ್ಲಲು ಅವನು ಮತ್ತೆ ಹೀಗೆಂದನು: "ಮೊಟ್ಟೆಗಳಿಗೆ ಕಾವು ಕೊಡುವ ದಿನ ನಾನು ಈ ಟ್ರೊನನ ಕಂಕುಳಲ್ಲಿ ಐದೈದು ಮೊಟ್ಟೆಗಳನ್ನಿರಿಸುವೆ, ಅವೆಲ್ಲವೂ ಒಂದೇ ಸಾರಿ ಒಡೆದು ಮರಿಗಳಾಗುವುವು. ಮತ್ತೆ ನಿನ್ನ ಗಂಡನ ಆ ಮರಿಗಳನ್ನು ಅವುಗಳ ತಾಯಿಯ ಬಳಿಗೆ ಪೋಷಣೆಗೆ ಕಳುಹಿಸುವೆ. ಇದರಿಂದ ನಿನ್ನ ಕೋಳಿ ಮಂದೆಯು ಹೆಚ್ಚುವುದು ಟ್ರೊನಮ್ಮನವರೇ"

ಅವಳಿಗೆ ಇನ್ನಷ್ಟು ಆಶ್ಚರ್ಯವಾಯಿತು. "ಅದು ಸಾಧ್ಯವೇ" ಎಂದವಳು ಪ್ರಶ್ನಿಸಿದಳು.

ಅದಕ್ಕೆ ಪ್ರೊಸ್ಪರನು: "ಏಕೆ ಸಾಧ್ಯವಿಲ್ಲ, ಮೊಟ್ಟೆಗಳನ್ನು ಉಷ್ಣದ ಪೆಟ್ಟಿಗೆಯಲ್ಲಿ ಹಾಕಿ ಮರಿ ಮಾಡುವುದಿಲ್ಲವೆ? ಅಂದ ಮೇಲೆ ಬೆಚ್ಚಗಾದ ಹಾಸಿಗೆಯಲ್ಲಿ ಹಾಕಿದರೇನು?"

ಅವನ ತರ್ಕ ಸರಣಿಯಿಂದ ಮನಗಂಡವಳಾಗಿ ಅವಳು ಯೋಚನಾಮಗ್ನಳಾಗಿ ಹೊರಗೆ ಹೋದಳು.

ಎಂಟು ದಿವಸದ ನಂತರ ಒಂದು ದಿನ ಅವಳು ಟ್ರೊನನ ಕೋಣೆಗೆ ಬಂದಳು. ಒಂದು ಕೈ ವಸ್ತ್ರದಲ್ಲಿ ತುಂಬ ಮೊಟ್ಟೆಗಳನ್ನು ತುಂಬಿಸಿ ತಂದಿದ್ದಳು. ಅವಳೆಂದಳು: "ಹತ್ತು ಮೊಟ್ಟೆಗಳನ್ನು ಆ ಹಳದಿ ಹೇಟೆಯ ಬಳಿ ಕಾವಿಗೆ ಇಟ್ಟು ಬಂದೆ, ಈಗ ಇಲ್ಲಿ ನಿನಗೋಸ್ಕರ ಹತ್ತು ಇವೆ. ಹೊಡೆದು ಗಿಡೆದು ಹಾಕಿದರೆ ಜೋಕೆ!"

ಟ್ರೊನನಿಗೆ ಪರಮಾಶ್ಚರ್ಯವಾಯಿತು: "ಇದೇನಿದು, ನಿನ್ನ ಉದ್ದೇಶವೇನು?" ಎಂದು ಬೆರಗು ಕಣ್ಣು ಮಾಡಿ ಕೇಳಿದನು.

"ನೀನು ಅವುಗಳಿಗೆ ಕಾವು ಕೊಟ್ಟು ಮರಿ ಮಾಡಬೇಕು, ಕೆಲಸಕ್ಕೆ ಬಾರದ ಜಂತುವೇ! ತಿಳಿಯಿತೇನು?"

ಮೊದಲು ಟ್ರೊನನು ನಗಾಡಿದನು. ಆದರೆ ಅವಳು ಒತ್ತಾಯ ಮಾಡಿದಾಗ ಅವನಿಗೆ ಕೋಪಬರಹತ್ತಿತು. ಅವನು ತನ್ನ ವಿಶಾಲ ತೋಳಿನಡಿಯಲ್ಲಿ ಮೊಟ್ಟೆಗಳನ್ನು ಇರಿಸಲು ಬಿಡಲಿಲ್ಲ. ಇದರಿಂದ ರೋಷಗೊಂಡ ಆ ಮುದುಕಿಯು: "ಹಾಗೋ, ಈ ಮೊಟ್ಟೆಗಳನ್ನು ಮರಿ ಮಾಡಲಿಕ್ಕೆ ಬಿಡುವುದಿಲ್ಲವಾದರೆ ನಿನಗೊಂದು ಕೂಳೂ ಸಿಕ್ಕಲಿಕ್ಕಿಲ್ಲ—ನೋಡೋಣ ಏನಾಗುತ್ತದೆಂದು" ಎಂದಳು.

ಟ್ರೊನನು ಕಳವಳಗೊಂಡನಾದರೂ ಒಂದೂ ಮಾತೂ ಆಡಲಿಲ್ಲ. ಅಷ್ಟರಲ್ಲಿ ಗಂಟೆ ಹದಿನೆರಡಾಗಲು ಅವನು ಹೆಂಡತಿಯನ್ನು ಕರೆಯತೊಡಗಿದನು. ಅಡಿಗೆ ಮನೆಯಿಂದಲೇ ಅವಳು ಗಟ್ಟಿಯಾಗಿ ಒದರಿ ಹೇಳಿದಳು. "ಎಲೇ ಆಲಸ್ಯ! ಇವತ್ತು ನಿನಗೆ ಊಟವಿಲ್ಲ!"

ಅವಳು ತಮಾಷೆಗೆ ಹೇಳುತ್ತಿರಬಹುದೆಂದು ಅವನು ಮೊದಲು ನೆನಸಿದ. ಅವಳು ನಿಜವಾಗಿ ಹಾಗೆ ಮಾಡುತ್ತಿರುವಳೆಂದು ಗೊತ್ತಾದ ಮೇಲೆ ಅವನು ಊಟಕ್ಕಾಗಿ ಅವಳನ್ನು ಪ್ರಾರ್ಥಿಸಿಕೊಂಡ, ಬೇಡಿದ. ಹಸಿವೆಯಿಂದ ಬಳಲಿದ ಆತನು ಮುಷ್ಟಿಗಳನ್ನು ಗೋಡೆಗೆ ಬಡಿಯುತ್ತಾ ಉತ್ತರಕ್ಕೂ ದಕ್ಷಿಣಕ್ಕೂ ಹೊರಳುತ್ತಾ ಬೊಬ್ಬಿಟ್ಟನು. ಅಡಿಗೆ ಮನೆಯ ಒಗ್ಗರಣೆಯ ಪರಿಮಳವು ಅವನನ್ನು ಇನ್ನಷ್ಟು ತಳಮಳಗೊಳಿಸಿತು. ಕಡೆಗೆ ತಡೆಯಲಾರದೆ ನಿರುಪಾಯನಾಗಿ ಮೊಟ್ಟೆಗಳನ್ನು ತೋಳಿನಡಿಯ ಹಾಸಿಗೆಯಲ್ಲಿರಿಸಲು ಒಪ್ಪಿಕೊಂಡ-ಅದರ ನಂತರ ಒಂದಿಷ್ಟು ಸಾರನ್ನ ಅವನಿಗೆ ಬಳಸಲಾಯಿತು.

ಅವನ ಸ್ನೇಹಿತರು ಬಂದಾಗ ಟ್ರೊನನು ಕಠಿಣ ಕಾಯಿಲೆಯಿಂದ ನರಳುವನೆಂದು ತಿಳಕೊಂಡರು. ಅವನು ಭಯಂಕರ ಸಂಕಷ್ಟದಿಂದ ನರಳುವಂತೆ ತೋರಿತು.

ಎಂದಿನಂತೆ ಅವರು ಇಸ್ಪೀಟ್ ಆಟ ಪ್ರಾರಂಭಿಸಿದರು. ಆದರೆ ಆಟದಲ್ಲಿ ಟ್ರೊನನಿಗೆ ಯಾವ ಅಭಿರುಚಿ ಇದ್ದಂತೆ ಕಾಣಲಿಲ್ಲ. ಅವನು ತನ್ನ ಕೈಯನ್ನು ಬಹಳ ಮೆಲ್ಲಗೆ ಚಲಿಸುವುದನ್ನು ಕಂಡಾಗ ಅವರಿಗೇನೊ ಸ್ವಲ್ಪ ಸಂದೇಹವಾಯಿತು.

"ನಿನ್ನ ತೋಳಿಗೆ ಕಟ್ಟು ಹಾಕಲ್ಪಟ್ಟಿದೆಯೇ?" ಎಂದು ಕೇಳಿದ ಪ್ರೊಸ್ಪರ್. ಟ್ರೊನನೆಂದ: "ನನ್ನ ಹೆಗಲು ಜಾಡ್ಯದಿಂದ ಭಾರವಾಗಿದೆ."

ಅಷ್ಟರಲ್ಲಿ ಹೊರಗೆ ಗಡಂಗಿನಲ್ಲಿ ಯಾರೋ ಹೊಕ್ಕಿದರು; ಆಟಗಾರರು ಯಾರೆಂದು ಆಲಿಸಲಿಕ್ಕೆ ಕಿವಿ ನೆಟ್ಟಗೆ ಮಾಡಿದರು. ಗ್ರಾಮದ ಪಟೇಲನೂ ಅವನ ಕೈಕೆಳಗಿನೆರಡು ಅಧಿಕಾರಿಗಳೂ ಎರಡು ಗ್ಲಾಸು ಶರಾಬು ಕುಡಿಯಲಿಕ್ಕೆ ಬಂದಿದ್ದು ಅವರು ಗ್ರಾಮದ ಆಡಳಿತೆಯ ಕುರಿತು ಏನೋ ಸಂಭಾಷಿಸುತ್ತಿದ್ದರು. ಅವರು ಮೆಲ್ಲಗೆ ಮಾತಾಡುತಿದ್ದುದರಿಂದ ಟ್ರೊನನು ಅದನ್ನು ಕೇಳಲು ತನ್ನ ಕಿವಿಗಳನ್ನು ಗೋಡೆಗೆ ಒತ್ತಿದನು. ಕೆಳಗಿದ್ದ ಮೊಟ್ಟೆಗಳನ್ನು ಮರೆತು ಒಂದಿಷ್ಟು ದಕ್ಷಿಣಕ್ಕೆ ಹೊರಳಿಬಿಟ್ಟ. ಕೆಳಗಿದ್ದ ಮೊಟ್ಟೆಗಳು ಜಜ್ಜಿಹೋಗಿ ದಪ್ಪವಾದ ಒಂದು ಮೊಟ್ಟೆ ದೋಸೆಯಾಯಿತು. "ಅಯ್ಯೊ ದೇವರೆ" ಎಂದನವನು. ಅವನ ಈ ಮರುಗು ಧ್ವನಿಯನ್ನು ಕೇಳಿ ಮುದುಕಿ ಟ್ರೊನಳು ಅಲ್ಲಿಗೆ ಓಡಿ ಬಂದಳು, ಸಂಗತಿ ತಿಳಿದವಳಾಗಿ ಅವಳು ಅವನು ಹೊದ್ದುಕೊಂಡ ವೊಲ್ಲಿಯನ್ನು ಸರ್ರನೆ ಹಿಡಿದು ಎಳೆದಳು. ತನ್ನ ಗಂಡನ ಪಾರ್ಶ್ವಭಾಗದಲ್ಲಿ ಲೇಪ ಹಚ್ಚಿದಂತೆ ಅಂಟಿಕೊಂಡ ಮೊಟ್ಟೆದೋಸೆಯನ್ನು ನೋಡಿ ಕಂಗಾಲಾಗಿ ಅವಳು ಮಿತಿಮೀರಿದ ಸಿಟ್ಟಿನಿಂದ ಉಸಿರುಕಟ್ಟಿದವಳಾಗಿ ಒಂದು ಕ್ಷಣ ಬೆಪ್ಪನೆ ನಿಂತುಬಿಟ್ಟಳು. ನಂತರ ಕೋಪದಿಂದ ನಡುಗುತ್ತಾ ಒಂದೇ ಸವನೆ ಬಟ್ಟೆ ಒಗೆಯುವಂತೆ ಪಾರ್ಶ್ವವಾತದಿಂದ ನರಳುವ ತನ್ನ ಪತಿಯನ್ನು ಬಡಿಯ ಹತ್ತಿದಳು. ಯುದ್ಧದಲ್ಲಿ ರಣಭೇರಿಯನ್ನು ಬಾರಿಸುವ ತೆರದಲ್ಲಿ ಅವಳು ಏಟುಗಳನ್ನು ಅವನಿಗೆ ಬಿಟ್ಟಳು.

ಟ್ರೊನನ ಸ್ನೇಹಿತರು ಹೊಟ್ಟೆ ಹುಣ್ಣಾಗುವಂತೆ ನಕ್ಕು ನಕ್ಕು ಬಿದ್ದರು. ತನ್ನ ಇನ್ನೊಂದು ಮಗ್ಗುಲಲ್ಲಿದ್ದ ಬೇರೆ ಐದು ಮೊಟ್ಟೆಗಳನ್ನು ಒಡೆಯದಂತೆ ಜಾಗರೂಕತೆ ವಹಿಸಿ ಟ್ರೊನನು ಹೆಂಡತಿಯ ಪೆಟ್ಟುಗಳನ್ನು ತಿನ್ನುತಿದ್ದನು.

III

ಟ್ರೊನನು ಸಂಪೂರ್ಣ ಸೋತುಹೋದನು. ಕೋಳಿ ಮೊಟ್ಟೆಗಳನ್ನು ಕಾವುಕೊಟ್ಟು ಮರಿ ಮಾಡಬೇಕಾದ ಒತ್ತಾಯದ ಪ್ರಸಂಗ ಅವನ ಮೇಲೆ ಬಂತು. ದೃಷ್ಟಿಯನ್ನು ಅಟ್ಟದ ಕಡೆಗೆ ನೆಟ್ಟು, ತೋಳುಗಳನ್ನು ರೆಕ್ಕೆಗಳಂತೆ ಬಿಡಿಸಿ ಬಿಳಿ ಚಿಪ್ಪಿನೊಳಗಿನ ಕೋಳಿ ಮರಿಗಳನ್ನು ಕಾಯಿಸುತ್ತಾ ಅವನು ಬಿದ್ದುಕೊಂಡನು. ಹಗುರ ಸ್ವರದಲ್ಲಿ ಅವನು ಮಾತಾಡುತಿದ್ದನು. ಆಗಿಂದಾಗ್ಗೆ ತನ್ನಂತೆ ಕಾವು ಕೊಡುತ್ತಿರುವ ಅಂಗಳದಲ್ಲಿನ ಹಳದಿ ಹೇಟೆಯ ಕುರಿತು ಅವನು ಕೇಳುತಿದ್ದನು. ಹಾಸಿಗೆಯಲ್ಲೂ, ಕೋಳಿಗೂಡಿನಲ್ಲೂ ಬೆಳೆಯುತ್ತಿರುವ ಮರಿಗಳ ಕುರಿತು ಆಸಕ್ತಿಪಟ್ಟುಕೊಂಡವಳಾಗಿ ಅವನ ಹೆಂಡತಿಯು ಹೇಟೆಯಿಂದ ಗಂಡನ ಬಳಿಗೂ, ಗಂಡನ ಬಳಿಯಿಂದ ಹೇಟೆಯ ಕಡೆಗೂ ಓಡಾಡುತಿದ್ದಳು. ಈ ವರ್ತಮಾನವನ್ನು ತಿಳಿದ ಹಳ್ಳಿಗರು ಕೌತುಕಗೊಂಡವರಾಗಿ ಗಂಭೀರವಾಗಿ ಟ್ರೊನನ ಸಂಗತಿ ತಿಳಿಯಲು ಗುಂಪು ಗುಂಪಾಗಿ ಬರತೊಡಗಿದರು. ಬೆರಳ ಮೇಲೆ ನಡೆಯುತ್ತಾ ಮೆಲ್ಲಗೆ ಕಾಯಿಲೆಯವರ ಕೋಣೆಗೆ ಯಾರಾದರೂ ಸಹಜವಾಗಿ ಬರುವಂತೆ ಬಂದು: "ಟ್ರೊನಪ್ಪ, ಹೇಗಿದೆ ಈಗ?" ಎಂದು ಕೇಳಿದರು.

"ಇಷ್ಟರಲ್ಲಿ ಇದು ನಿಲ್ಲಬೇಕಿತ್ತು, ಆದರೆ ಬಹಳ ಸಮಯವಾಯಿತು, ನನ್ನ ಚರ್ಮದ ಮೇಲೆ ಚಳಿಯ ನಡುಕುವುಂಟಾಗುತ್ತಿದೆ" ಎಂದನು ಟ್ರೊನ್.

ಒಂದು ದಿನ ಬೆಳಗ್ಗೆ ಅವನ ಹೆಂಡತಿಯು ಆತುರದಿಂದ "ಒಂದು ಹೇಟೆಯು ಏಳು ಮರಿಗಳನ್ನು ಒಡೆದಳು. ಮೂರು ಹಾಳಾಗಿ ಹೋದವು!" ಎಂದು ಉದ್ಗರಿಸಿದಳು.

(೧೦ನೇ ಪುಟಕ್ಕೆ ಮುಂದುವರಿದಿದೆ)

ಟ್ರೊಯ್ನ್

(೮ನೇ ಪುಟದಿಂದ)

ಟ್ರೊಯ್ನನ ಎದೆ ಬಡಿಯಲಾರಂಭಿಸಿತು, ತಾನು ಅದೆಷ್ಟನ್ನು ಮರಿಮಾಡುವೇನೊ ಎಂದು ಅವ ಮರುಗಿದ.

ಮಗುವನ್ನು ಹೆರಲಿರುವ ತಾಯ ವೇದನೆಯಿಂದ ಅವನು ಕೇಳಿದನು: "ಇದು ಬೇಗ ಆಗಬಹುದೆ?"

ತನ್ನ ಯೋಜನೆಯು ಅಪಯಶಸ್ವಿಯಾಗಬಹುದೆಂಬ ಹೆದರಿಕೆಯಿಂದ ಕೂಡಿದ್ದ ಆ ಮುದುಕಿಯು: "ಬೇಗ ಆಗಬಹುದೆಂದು ಹಾರೈಸಬಹುದು" ಎಂದಳು.

ಮತ್ತೆ ಅವರು ನಿರೀಕ್ಷಿಸಿದರು.

ಟ್ರೊಯ್ನನಿಗೆ ಸಾವು ಹತ್ತಿರ ಬಂತೆಂದು ತಿಳಕೊಂಡ ಅವನ ಸ್ನೇಹಿತರು ನಿಜವಾಗಿಯೂ ಕಳವಳಗೊಳ್ಳುವವರಾದರು. ಅವರು ಗೊಣಗುಟ್ಟತೊಡಗಿದರು. ನೆರೆಕರೆಯವರಿಗೆಲ್ಲಾ ಪರಿಸ್ಥಿತಿಯನ್ನು ತಿಳಿಸುತ್ತಲಿದ್ದರು. ಸುಮಾರು ಮೂರು ಗಂಟೆಯ ಸಮಯಕ್ಕೆ ಟ್ರೊಯ್ನನು ಕಣ್ಣುಕೂರಿದನು. ಸ್ವಲ್ಪ ಹೊತ್ತು ಅವನು ನಿದ್ರಿಸಿದನು. ಸ್ವಲ್ಪ ಹೊತ್ತಿನ ನಂತರ ತನ್ನ ಎಡ ಮಗ್ಗುಲಲ್ಲಿ ಕಿಚುಕುಳಿಯಂತಾದುದರಿಂದ ಪಕ್ಕನೆ ಎಚ್ಚೆತ್ತನು. ಆ ಕಡೆಗೆ ಅವನು ತನ್ನ ಕೈಯನ್ನು ತುರುಕಿಸಿದನು. ಒಂದು ಚಿಕ್ಕ ಜಂತು ಅವನ ಬೆರಳೊಳಗೆ ಸಿಲುಕಿತು. ಗಾಬರಿಗೊಂಡು ಅವನು ಆ ಮರಿಯನ್ನು ಜಾಡಿಸಿ ಬಿಟ್ಟಾಗ ಅದು ಅವನ ಎದೆಯ ಮೇಲೆ ಓಡಾಡಲಾರಂಭಿಸಿತು. ಗಡಂಗಿನಲ್ಲಿ ಜನರು ತುಂಬಿದ್ದರು. ಎಲ್ಲಾ ಗಿರಾಕಿಗಳೂ ಟ್ರೊಯ್ನನಿದ್ದ ಕೋಣೆಯೊಳಗೆ ನುಗ್ಗಿ ಬಂದು ಅವನ ಹಾಸಿಗೆ ಸುತ್ತ ಸೇರಿದರು. ಮೊದಲಿನ ಗಲಾಟೆಗೆ ಓಡಿಬಂದಿದ್ದ ಅವನ ಹೆಂಡತಿಯು ಒಂದೊಂದಾಗಿ ಆ ಕಿರು ಕೋಳಿಮರಿಗಳನ್ನು ಹೊರಗೆ ತೆಗೆಯುತಿದ್ದಳು. ಎಲ್ಲರೂ ಮೌನದಿಂದ ನೋಡುತಿದ್ದರು. ಅದು ಎಪ್ರಿಲ್ ತಿಂಗಳ ಬೇಸಿಗೆಯ ಕಾಲವಾಗಿತ್ತು. ಕಿಟಕಿಯ ಹೊರ ಅಂಗಳದಿಂದ ತಾಯಿ ಹೇಂಟೆಯು ಹೊಸದಾಗಿ ಜನಿಸಿದ ತನ್ನ ಮರಿಗಳನ್ನು ಕೂಗಿ ಕರೆಯುತಿತ್ತು. ವೇದನೆಯಿಂದಲೂ, ಭಾವೋದ್ರೇಕದಿಂದಲೂ ಬೆವರಿದವನಾಗಿ ಟ್ರೊಯ್ನನು: "ನನ್ನ ಬಲ ಕಂಕುಳಲ್ಲಿ ಒಂದು ಇದೆಯಾಗಿ ತೋರುತ್ತದೆ." ಎಂದು ಗುಣುಗುಟ್ಟಿದನು.

ಸೂಲಗಿತ್ತಿಯ ಜಾಗರೂಕತೆಯಿಂದ ಟ್ರೊಯ್ನಮ್ಮನು ತನ್ನ ಒರಟು ಕೈಯನ್ನು ಅವನ ಬಗಲೊಳಗೆ ತುರುಕಿಸಿ ಆ ಮರಿಯನ್ನು ಹೊರತೆಗೆದಳು.

ನೆರೆದ ಹಳ್ಳಿಗರು ಅದನ್ನು ನೋಡುವ ಕಾತುರತೆಯಿಂದ ಒಬ್ಬರಿಂದೊಬ್ಬರಿಗೆ ಅದನ್ನು ಮುಂದರಿಸಿದರು. ಅವರು ಅದೊಂದು ಪ್ರಕೃತಿ ವೈಚಿತ್ರವೆಂದುಕೊಂಡರು. ಇಪ್ಪತ್ತು ನಿಮಿಷಗಳ ತನಕ ಬೇರೆ ಯಾವ ಮೊಟ್ಟೆಗಳೂ ಒಡೆಯಲಿಲ್ಲ. ನಂತರ ಒಂದೇ ಸಲ ನಾಲ್ಕು ಮರಿಗಳು ತಮ್ಮ ಚಿಪ್ಪಿನಿಂದ ಹೊರಬಂದುವು. ಪ್ರೇಕ್ಷಕರಲ್ಲಿ ಈ ದೃಶ್ಯವು ಮಹದಾಶ್ಚರ್ಯವನ್ನುಂಟುಮಾಡಿತು.

ತನ್ನ ಯಶಸ್ಸಿಗಾಗಿ ಟ್ರೊಯ್ನನು ಸಂತೋಷದ ಮುಗುಳ್ನಗೆಯೊಂದನ್ನು ನಕ್ಕನು. ತನ್ನ ಹೊಸ ಪಿತೃತ್ವಕ್ಕೆ ಅವನು ಹೆಮ್ಮೆಪಟ್ಟುಕೊಂಡ. ಇಂತಹ ಅಧ್ಭುತ ದೃಶ್ಯವೂ ಹಿಂದೆಂದೂ ನೋಡಲ್ಪಟ್ಟದ್ದಿಲ್ಲ. ನಿಜವಾಗಿಯೂ ಇವನೊಬ್ಬ ವಿಚಿತ್ರ ಹಾಸ್ಯಾಸ್ಪದ ವ್ಯಕ್ತಿ! "ಒಟ್ಟಿಗೆ ಆರು ಮಂದಿ" ಎಂದು ಒದರಿದ ಟ್ರೊಯ್ನ್. "ನಾಮಕರಣ ಸಮಾರಂಭಕ್ಕೆ ಏನು ಗೌಜಿ ಇದ್ದೀತು!" ಎನ್ನುತ್ತಾ ನೆರೆದವರು ಗೊಳ್ಳನೆ ನಕ್ಕು ನಕ್ಕು ನಲಿದಾಡಿದರು. ಅನೇಕರು ಗಡಂಗಿನಿಂದಲೂ ಬಾಗಿಲ ಹೊರಗಿನಿಂದಲೂ ಕತ್ತು ಉದ್ದಮಾಡಿ ಇಣಿಕಿ ನೋಡಲು ಪ್ರಯತ್ನಿಸಿದರು.

"ಅವನಿಗೆಷ್ಟಾಯಿತು?" ಎಂದರವರು.

"ಆರು ಮಂದಿಗಳಿವೆ"

ಟ್ರೊಯ್ನ್ ಮಹಿಳೆಯು ಹೊಸ ಮರಿಗಳನ್ನು ಅಂಗಳಕ್ಕೆ ತೆಗೆದುಕೊಂಡು ಓಡಿದಳು. ಅಲ್ಲಿ ತಾಯಿ ಹೇಟೆಯು ಅವುಗಳನ್ನು ಬರಮಾಡಿಕೊಂಡು, ತನ್ನ ಬೆಳೆಯುತ್ತಿರುವ ಸಂಸಾರದ ವಿಷಯವಾಗಿ ಹೆಮ್ಮೆಪಟ್ಟುಕೊಳ್ಳುತ್ತಾ ಅವುಗಳನ್ನು ತನ್ನ ರೆಕ್ಕೆಗಳಡಿಯಲ್ಲಿ ಆಶ್ರಯವಿತ್ತಳು.

"ಇಲ್ಲಿ ಇನ್ನೊಂದು ಬರುತ್ತಲಿದೆ" ಎಂದು ಟ್ರೊಯ್ನ್ ಉದ್ಘೋಷಿಸಿದ. ಅವನು ತಪ್ಪು ಎಣಿಸಿದ್ದ–ಅಲ್ಲಿ ಮತ್ತೆ ಮೂರು ಇದ್ದವು. ಇದೊಂದು ಅದ್ವಿತೀಯ ದಿಗ್ವಿಜಯವೇ ಸರಿ. ಕೊನೆಯದೊಂದು ಸಂಜೆ ಏಳುಗಂಟೆಗೆ ತನ್ನ ಚಿಪ್ಪು ಮನೆಯೊಡೆದು ಹೊರಬಂತು. ಟ್ರೊಯ್ನನ ಎಲ್ಲಾ ಮೊಟ್ಟೆಗಳು ಒಳ್ಳೇಯವಿದ್ದವು. ಅವನ ಬೇನೆ ಇಳಿಯಿತು. ಹರುಷದಿಂದ ಮತ್ತನಾಗಿ ಅವನು ಆ ಕೊನೆಯ ಮರಿಯನ್ನು ಹಿಡಿದು ಬೆನ್ನಿನ ಮೇಲೆ ಮುದ್ದಿಟ್ಟ. ಅದನ್ನು ಅವನು ಮರುದಿನದ ತನಕ ಹಾಸಿಗೆಯಲ್ಲೆ ಇರಗೊಡಿಸಿ ಮುದ್ದಿಸಬೇಕೆಂದಿದ್ದ. ಆ ಜಂತುವಿಗೆ ಜೀವಕೊಟ್ಟವನು ಅವನಾದ್ದರಿಂದ ತಾಯಿ ಸಮಾನವಾದ ಪ್ರೀತಿಯಿಂದ ಅವನ ಎದೆ ಉಕ್ಕಿತು. ಆದರೆ ಮುದಿ ಟ್ರೊಯ್ನಮ್ಮನು ಅದನ್ನು ಒಯ್ದೇಬಿಟ್ಟಳು. ಗಂಡನ ಅರಿಕೆಗಳಿಗೆ ಅವಳು ಗಮನವನ್ನೇ ಕೊಡದಾದಳು.

ಟ್ರೊಯ್ನನ ಸ್ನೇಹಿತರು ಅಂದಿನ ಆ ವಿಚಿತ್ರ ಘಟನೆಯಿಂದ ಆನಂದಿತರಾಗಿ, ತರ್ಕಿಸುತ್ತಾ ಮನೆಗಳಿಗೆ ಮರಳಿದರು.

ಎಲ್ಲರೂ ಹೋದ ಮೇಲೆ ಪ್ರೊಸ್ಪರನು ಮಾತ್ರ ಟ್ರೊಯ್ನನ ಕೋಣೆಯಲ್ಲೇ ಉಳಿದನು. ಟ್ರೊಯ್ನನ ಕಿವಿಯ ಬಳಿಸಾರಿ ಅವನು: "ಮೊದಲ ಕೋಳಿ ಔತಣಕ್ಕೆ ನನ್ನನ್ನೂ ಆಮಂತ್ರಿಸುತ್ತಿಯೋ ಇಲ್ಲವೋ?" ಎಂದು ಕೇಳಿದ.

ಔತಣದ ವಿಚಾರ ಕೇಳುತ್ತಲೇ ಟ್ರೊಯ್ನನ ಮುಖ ಅರಳಿತು. ಅವನೆಂದ: "ನಿಜವಾಗಿಯೂ ಆಮಂತ್ರಿಸುವೆ, ನನ್ನ ಮಗನೇ"

ಶಾಂತಿಯ ತ್ರಿಮೂರ್ತಿಗಳು

ಪೋಪ್, ಶೋ ಮತ್ತು ಗಾಂಧಿ

"ಇನ್ನೂ ವಿಜಯ ಅರ್ಥವೇ ಆಗಿದೆ"—ಶೋ.

ಪ್ರಖ್ಯಾತಗ್ರಂಥಕಾರರಾದ ಜೋರ್ಜ್ ಬರ್ನಾಡ್ ಶೋ ಅವರು ವಿಜಯೋತ್ಸವವನ್ನಾಚರಿಸಲು ತಿರಸ್ಕರಿಸಿದರು. ಅದಕ್ಕೆ ಅವರು ಕಾರಣವನ್ನೂ ಕೊಟ್ಟಿರುವರು. "ಯುರೋಪಿನಲ್ಲಿ ಇನ್ನೂ ಶಾಂತಿಯಾಗಿಲ್ಲ-ಅಲ್ಲಿ ದುಷ್ಕಾಲವು ಇನ್ನೂ ಬರಲಿದೆ." ಎಂದವರು ತಿಳಿಸುತ್ತಾರೆ.

ಅಷ್ಟಕ್ಕೆ ಅವರು ನಿಲ್ಲಿಸಲಿಲ್ಲ. "ಶಾಂತಿ ಯೋಜನೆಗಳೊಂದಿಗೆ ಹರಟೆ ಕೊಚ್ಚುವ ಮತ್ತು ಎಲ್ಲವೂ ಮುಗಿಯಿತು ಎಂದು ಸಂಭ್ರಮಿಸುವ ಹುಚ್ಚರೊಂದಿಗೆ ನಾನು ಕೈಜೋಡಿಸುವವನಲ್ಲ. ಭೀಕರಕಾಲವು ಯುರೋಪಿಗೆ ಇನ್ನೂ ಬರಲಿದೆ. ಈ ದುಸ್ಥಿತಿ ದುರವಸ್ಥೆಗಳ ನಡುವೆ ಗಂಭೀರ ವಿಚಾರವಂತರು ಹೇಗೆ ಸಂತೋಷಪಟ್ಟುಕೊಳ್ಳುವರು?" ಎಂಬುದೇ ಅವರ ಪ್ರಶ್ನೆ.

ಮತ್ತೂ ಅವರೆಂದರು: "ಮಕ್ಕಳ ಸಮೇತ ಮಿಲಿಯಾವಧಿ ಜನರು ಉಪವಾಸ ಸಾಯುತಿದ್ದಾರೆ. ದೊಡ್ಡ ನಗರಗಳು ಹಾಳು ಬಿದ್ದಿವೆ. ರಸ್ತೆ ಮಾರ್ಗಗಳು ಘಾಯಾಳುಗಳಿಂದಲೂ ಶವಗಳಿಂದಲೂ ಮುಚ್ಚಿಹೋಗಿವೆ."

ಬರ್ಲಿನಿನ ಶ್ಲಾಘನೆ

ಜನಾಂಗಗಳ ಸಂಸ್ಕೃತಿಯ ಕಡೆಗೆ ತುಂಬಾ ಮನ್ನಣೆ ಗೌರವವಿದ್ದು ಹಿಂದೆ ಒಂದು ಸಲ ಅವರು ಹಿಂದೂ ಸಂಸ್ಕೃತಿಯ ಅಮೋಘತೆಗಾಗಿ ಭಾರತೀಯರನ್ನು ಶ್ಲಾಘಿಸಿದ್ದರು. ಅದೇ ಪ್ರಕಾರ ಬರ್ಲಿನ್ ನಗರಕ್ಕಾದರೂ ಅವರು ತಮ್ಮದೇ ಆದ ಮಾತಿನಲ್ಲಿ ಹೀಗೆ ಶ್ಲಾಘನೆ ಇತ್ತರು: "ಬರ್ಲಿನ್ ನಗರವನ್ನು ಹೊತ್ತಿಸಿದ್ದು ವಿಜಯವೆಂದು ನಾವು ಹೇಗೆ ಸಾರಲಿಕ್ಕಾಗುತ್ತದೆ? ಬರ್ಲಿನು ಜರ್ಮನರ ರಾಜಧಾನಿಯಲ್ಲ, ಅದು ಲಂಡನ್ ನ್ಯೂಯೋರ್ಕ್‌ಗಳಂತೆ ವಿಶ್ವರಾಜಧಾನಿ. ಅದು ಶತಮಾನಗಳ ಸಂಸ್ಕೃತಿಯು ಒಟ್ಟುಗೂಡಿಸಲ್ಪಟ್ಟ ನಗರ. ಅಂತಹ ಸಂಸ್ಕೃತಿಯನ್ನು ನಾಶಮಾಡಿ ಅದನ್ನು ವಿಜಯವೆಂದು ಹೇಳಲು ಬರುವುದಿಲ್ಲ."

ವಿಜಯದ ಕುರಿತು ಹೊಸ ಅರ್ಥವನ್ನು ಕೊಡುತ್ತಾ ಎಂಬತ್ತು ವರ್ಷದ ಆ ಐರೀಷ್‌ಮೇನರು "ವಿಜಯವು ಒಂದು ಕಡೆಯವರದಾಗಿರುತಿದ್ದ ದಿನಗಳು ಕಳೆದುವು. ಈಗ ಅದು ಎಲ್ಲರಿಗೂ ದುಷ್ಕಾಲ ದುರವಸ್ಥೆಗಳನ್ನು ತಂದೊದಗಿಸುವಂತಹ ಪರಿಣಾಮದ್ದಾಗಿ ಅಂತ್ಯವಾಗಿರುತ್ತದೆ. ಯುದ್ಧವನ್ನು ನಿಲ್ಲಿಸುವುದಕ್ಕಾಗುವುದಿಲ್ಲ, ಮತ್ತು ಚಿರಶಾಂತಿಯು ಅಸಾಧ್ಯವಾದ ಕೆಲಸವೇ ಸರಿ. ಮನುಷ್ಯರ ಬಳಿ ಆಯುಧಗಳಿಲ್ಲದಿದ್ದರೂ ಅವರು ತಮ್ಮ ಕೈಗೆ ಮುಷ್ಟಿಗಳಿರುವ ತನಕ ಒಬ್ಬರೊಂದಿಗೊಬ್ಬರು ಗುದ್ದಾಡಿಯೇ ತೀರುವರು.'

ಅಂತ್ಯದಲ್ಲಿ ನಾಟಕಕಾರ ಶೋ ಅವರು ರಷ್ಯದ ಕುರಿತು ಮಾತಾಡುತ್ತಾ ಹೀಗೆಂದರು:-'ರಷ್ಯವು ಇಂದು ಐರೋಪ್ಯ ರಾಷ್ಟ್ರಗಳಲ್ಲಿ ಅತೀ ಬಲಾಢ್ಯವಾಗಿವೆ. ಕಾರಣ ಅವರು ತಮ್ಮ ರಾಜ್ಯ ಪದ್ಧತಿಗಾಗಿಯೂ ತಮ್ಮ ದೇಶಕ್ಕಾಗಿಯೂ ನಿರಂತರ ಹೋರಾಟ ನಡೆಸಿರುವರು. ಆದರೆ ಇತರ ದೇಶಗಳು ತಮ್ಮ ಜಮೀನ್ದಾರರಿಗಾಗಿ ಮಾತ್ರಹೋರಾಡುತ್ತಿರುವರು. ಶಕ್ತಿವಂತ ರಾಷ್ಟ್ರಗಳು ಒಕ್ಕಟ್ಟಿನಿಂದ ಕೆಲಸ ಮಾಡುವರಾಗಿ ನಾವು ಆಶಿಸೋಣ. ಅವರು ಒಟ್ಟುಗೂಡಿದರೆ ಭಯಂಕರ ಶಕ್ತಿಯುಂಟಾಗುವುದು. ಆದರೆ ಅವರು ಬೇರೆ ಬೇರೆಯಾಗಿ ಬಿದ್ದರೆ ನಮಗೆ ದೇವರೇ ಗತಿ!'

ಪೋಪರ ಉಪದೇಶ

ಕ್ರೈಸ್ತ ಜಗದ್ಗುರುಗಳಾದ ಪೋಪ್ ಸಾಹೇಬರು ವಿಜಯ ದಿನವನ್ನಾಚರಿಸದಿದ್ದರೂ ಯುರೋಪಿನಲ್ಲಿ ಯುದ್ಧ ಮುಗಿದುದರ ಸಂಕೇತಾರ್ಥವಾಗಿ ಒಂದು ಭಾಷಣ ಕೊಟ್ಟರು. 'ವಿಶ್ವಾಸದ ಮೇಲೆ ಹೊಸ ಜಗತ್ತೊಂದು ಕಟ್ಟಲ್ಪಡಲಿ. ಈ ಯುದ್ಧದಿಂದ ಪರಸ್ಪರ ವೈಶಮ್ಯ ಸಂದೇಹ ಬಿಕ್ಕಟ್ಟುಗಳು ಎಲ್ಲೆಲ್ಲೂ ಪಸರಿಸಲ್ಪಟ್ಟಿವೆ. ಆದುದರಿಂದ ಜಗತ್ತು ಶಾಂತಿಯನ್ನು ಎಳೆಸುವುದಾದರೆ ಮೋಸತನ ಮತ್ತು ವೈರತ್ವಗಳು ಮಾಯವಾಗಬೇಕು.'

ಮಹಾತ್ಮಾಗಾಂಧೀ

ಯುದ್ಧದ ವಿಚಾರವಾಗಿ ಗಾಂಧೀಜಿಯ ಅಭಿಪ್ರಾಯವು ಜಗತ್ಪ್ರಸಿದ್ಧವಾದುದು. ಅವರು ಅಹಿಂಸಾತ್ಮಕವಾಗಿಯೇ ಎಲ್ಲಾ ಯುದ್ಧಗಳನ್ನು ಮಾಡಲೆಳೆಸುವರು. 'ಕೊಲೆಯಿಂದ ಶಾಂತಿ ಬಾಳಲಾರದೆಂಬ' ಅವರ ಪ್ರಖ್ಯಾತ ಹೇಳಿಕೆಯು ಹಿಂಸಾತ್ಮಕ ತತ್ವಜ್ಞಾನಕ್ಕೆ ಅವರು ಕೊಟ್ಟ ಅಮೋಘ ಸಲಹೆ.

'ಇಂತಹ ಶಾಂತಿ ಮೂರ್ತಿಗಳಿಂದು ಶಾಂತಿ ಪರಿಷತ್ತಿನಲ್ಲಿ ಶ್ರೇಷ್ಟ ಸ್ಥಾನ ಮನ್ನಣೆಗಳನ್ನು ಪಡೆಯಬೇಕಾದುದು ಅತ್ಯಾವಶ್ಯಕವಾದರೂ ವಿಧಿಯ ವೈಚಿತ್ರದಿಂದೆಂಬಂತೆ ಈ ಮೂವರು ವಿಶ್ವಯೋಚನೆಗಳಿಂದ ದೂರವಿರಿಸಲ್ಪಟ್ಟಿರುವುದು ಶಾಂತಿ ನಿರೀಕ್ಷಕರಿಗೆ ಶುಭ ಸೂಚಕವಾಗಿ ತೋರುವುದಿಲ್ಲ.' ಹೀಗೆಂದು ಒಂದು ಪ್ರಮುಖ ಆಂಗ್ಲ ಪತ್ರಿಕೆ ಬರೆಯುತ್ತದೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಸಿಹಿ ಸುದ್ದಿ ಸಂಗ್ರಹ

ಜರ್ಮನಿಯನ್ನು ಶರಣಾಗತಗೊಳಿಸಿದ ಯೋಜನೆಗಳನ್ನು ದಕ್ಷತೆಯಿಂದ ನಿರ್ದೇಶಿಸಿದ ಕೀರ್ತಿ ಜನರಲ್ ಐಶನ್ ಹಾವರಿಗೆ ಸಲ್ಲುವುದು. ಇವರ ಹಿರಿಯರು ಜರ್ಮನರೆಂಬ ಸಂಗತಿಯು ಸೋಜಿಗವನ್ನುಂಟು ಮಾಡುವುದಾದರೂ ನಿಜವಾದುದು. ಮಾತ್ರವಲ್ಲ ಅವರು ಯುದ್ಧ ವಿರೋಧಿಗಳಾದ ಕ್ರೈಸ್ತ ಅರ್ಚಕರ ಪಾರಂಪರ್ಯಕ್ಕೆ ಸೇರಿದವರು. ಸುಮಾರು ಇನ್ನೂರು ವರ್ಷಗಳ ಹಿಂದೆ ಐಶನ್ ಹಾವರ ಕುಟುಂಬಿಕರು ನೂತನ ಖಂಡವಾದ ಅಮೇರಿಕಕ್ಕೆ ಬಂದು ನೆಲೆನಿಂತರು. ಈಗಿನ ಪ್ರಖ್ಯಾತ ಸೇನಾಪತಿಗಳ ತಂದೆಯವರು ಹತ್ತಿ ಉಳುವ ಬಾಲಕನಾಗಿದ್ದರು.

೧೫೬೮ರಲ್ಲಿ ಸ್ಪೈನ್ ದೇಶದ ಅರಸನಾದ ಪಿಲಿಪ್ಪನೆಂಬವನು ಇತಿಹಾಸದಲ್ಲಿ ಅತ್ಯಾಶ್ಚರ್ಯಕರವಾದೊಂದು ಮರಣ ದಂಡನೆಯ ಪತ್ರಕ್ಕೆ ಸಹಿ ಹಾಕಿದನು. ತನ್ನ ಕೈ ಕೆಳಗಿದ್ದ ಹೊಲೆಂಡಿನ ೩೦ ಲಕ್ಷ ಜನರನ್ನು, ಅವರು ತನ್ನ ರೋಮನ್ ಕೆಥೋಲಿಕ್ ಮತ ತತ್ವಕ್ಕೆ ವಿರೋಧಿಗಳೆಂದು, ಗಲ್ಲಿಗೇರಿಸಲು ಆ ಪತ್ರವು ಸಹಿ ಮಾಡಲ್ಪಟ್ಟಿತು.

* * *

ಎಷ್ಟು ಎತ್ತರದಿಂದಾದರು ಎಷು ಗಾತ್ರದ ಮನುಷ್ಯನಾದರೂ ಕೆಳಗೆ ಬೀಳುವಾಗ ಅವನ ವೇಗವು ೧೧೮ ಮೈಲುಗಳಿಗೆ ಮಿಗುವುದಿಲ್ಲ.

* * *

ಬರ್ನಾಡ್ ಶೋ ಮತ್ತು ಎಚ್. ಜಿ. ವೆಲ್ಸ್ ಇವರು ಜಗತ್ತಿನ ಇರ್ವ ಸರ್ವ ಶ್ರೇಷ್ಟವಿಜ್ಞಾನಿಗಳು. ಇವರು ಅಭ್ಯಾಸಿಸದ ಟೀಕಿಸಿದ ಮತ್ತು ವಿಮರ್ಶಿಸದವಿಷಯ ವಿಜ್ಞಾನಗಳೇ ಕಡಿಮೆ. ಎಚ್. ಜಿ. ವೆಲ್ಸರು ತಮ್ಮ ಗ್ರಂಥ ಲೇಖನದಿಂದಲೇ ೫೦ ಲಕ್ಷ ರೂಪಾಯಿ ಸಂಪಾದಿಸಿರುವರು. ಅವರ 'ಇತಿಹಾಸ ಸಂಕ್ಷೇಪ' ಎಂಬ ಗ್ರಂಥದ ೨೦ ಲಕ್ಷ ಪ್ರತಿಗಳು ಇದು ತನಕ ಮಾರಿ ಹೋಗಿವೆ.

* * *

ಪ್ರಾಣಿಗಳಲ್ಲಿ ಅತಿ ಉದ್ದವಾದುದು ಆಫ್ರಿಕಾದ ಪೊದರು ಪ್ರದೇಶದಲ್ಲಿನ ಜಿರಾಫೆ. ದೂರದಿಂದ ಪ್ರೇಕ್ಷಿಸುವಾಗ ಕಾಗದ ರಟ್ಟಿನ ಗೊಂಬೆಯಂತೆ ಕಾಣುವುದು. ಕೆಲವು ಹದಿನೆಂಟು ಅಡಿಗೂ ಮಿಕ್ಕಿರುತ್ತವೆ. ಇದರ ಕತ್ತು ಇಡೀ ಉದ್ದದ ಅರ್ಧದಷ್ಟಿದೆ. ಕತ್ತು ಸುಲಭವಾಗಿ ಬಗ್ಗುವುದಿಲ್ಲವಾದುದರಿಂದ ಇವು ಮರ ಚಿಗುರುಗಳನ್ನೇ ಹುಲ್ಲಿನ ಬದಲಾಗಿ ಮೇವನ್ನಾಗಿ ಮಾಡಿಕೊಳ್ಳುತ್ತದೆ. ಇನ್ನೊಂದು ವಿಶೇಷವೆಂದರೆ ಜಿರಾಫೆಗಳು ಯಾವ ತರದ ಶಬ್ದವನ್ನೂ ಮಾಡುವುದಿಲ್ಲ–ಅವಕ್ಕೆ ಧ್ವನಿ ಇಂಧ್ರಿಯವಿಲ್ಲ.

* * *

ಕುದುರೆಗಿಂತಲೂ ಎತ್ತರವಿದ್ದು ಅದಕ್ಕಿಂತಲೂ ವೇಗವಾಗಿ ಓಡಬಲ್ಲ ಪಕ್ಷಿಯೆಂದರೆ ಶಹರಾ ಮರುಭೂಮಿಯ ಉಷ್ಟ್ರ ಪಕ್ಷಿ. ಇದರ ಕೂಗನ್ನು ದೂರದಿಂದ ಕೇಳುವಾಗ ಸಿಂಹದ ಗರ್ಜನೆಯಂತೆಯೇ ಇರುತ್ತದೆ.

* * *

ಅಮೇರಿಕದ ಪ್ರಜೆಗಳಲ್ಲಿ ಇಂದು ಸುಮಾರು ೨ ಕೋಟಿ ಜನರು ಶುದ್ಧ ಜರ್ಮನ್ ವಂಶಮೂಲಕ್ಕೆ ಸೇರಿದವರಿದ್ದಾರೆ.

* * *

ಒಂದು ಇಂಚು ಉದ್ದದ ಅಳತೆಯಲ್ಲಿ ೩೩೩ ಕೂದಲುಗಳನ್ನು ಒಂದರ ಹತ್ತಿರ ಒಂದಾಗಿ ಇಡಬಹುದು.

* * *

ಜಗತ್ತಿನ ಜನ ಸಂಖ್ಯೆಯು ವರ್ಷಕ್ಕೆ ೩ ಕೋಟಿಯಂತೆ ಹೆಚ್ಚುತ್ತದೆ.

* * *

ಇಂಗ್ಲೆಂಡಿನ ಪವನಿನ ನೋಟು ನಮ್ಮ ಹತ್ತು ನೂರು ರೂಪಾಯಿ ನೋಟಿನಷ್ಟೇ ಹೆಚ್ಚು ಕಡಿಮೆ ಇದೆ-ಅಳತೆಯಲ್ಲಿ. ಒಂದು ಅಕ್ಕಿ ಮುಡಿಯಷ್ಟು ಭಾರದ ನೋಟುಗಳನ್ನು ಹೊತ್ತುಕೊಂಡು ಹೋಗಿ ಎಂದು ನಿಮಗೆ ಮುಫತ್ತಾಗಿ ಬಿಟ್ಟರೆ ನಿಮ್ಮಿಂದ ೭ ಸಾವಿರ ಪವನುಗಳಿಗಿಂದಲೂ ಹೆಚ್ಚನು ಹೊರಲಾಗಲಿಕ್ಕಿಲ್ಲ.

* * *

ಸಾಮಾನ್ಯವಾಗಿ ಸ್ಥೂಲವಾಗಿ ಕಾಣುವ ಆನೆಗಳು ಗಂಟೆಗೆ ೨೦ ಮೈಲು ವೇಗದಲ್ಲಿ ಓಡ ಬಲ್ಲುವು. ಸ್ಕ್ಯಾಕಲ್ಲಿನಲ್ಲಿ ಅದರ ಬೆನ್ನು ಹಿಡಿಯಲಿಕ್ಕಾಗುವುದಿಲ್ಲ. ಕೆಲವು ೨೫॥ ಮೈಲು ವೇಗದಲ್ಲೂ ಓಡಿವೆಯಂತೆ.

* * *

ಆನೆ ದಾಡೆಗಳು ೨ರಿಂದ ೫ ಮಣದ ವರೆಗೆ ತೂಕವಿರುತ್ತದೆ. ದಂತದ ಬೆಲೆ ರಾತ್ತಲಿಗೆ ೨೫ರಿಂದ ೫೦ ರೂಪಾಯಿ ತನಕವಿದೆ.

* * *

ಮನುಷ್ಯನಿಗೆ ಮೀಸೆಗಳಿಂದ ಹೆಚ್ಚು ಪ್ರಯೋಜನವಿಲ್ಲವಾದರೂ ಬೆಕ್ಕುಗಳಿಗೆ ಅದು ಅತ್ಯಾವಶ್ಯಕ. ತಮ್ಮ ಚೂಪು ಮೀಸೆಗಳಿಂದ ಅವು ರಂಧ್ರಗಳ ವಿಶಾಲತೆಯನ್ನು ಅಳತೆ ಮಾಡುವುವು. ಮೀಸೆಯ ಎರಡೂ ತುದಿಗಳು ತಾಗುವ ಸಂಧಿನೊಳಗೆ ನೂರುವುದು ಅಪಾಯಕರವೆಂದು ಅದಕ್ಕೆ ಕೂಡಲೇ ತಿಳಿಯುವುದು.

* * *

'ಸಾಲ' ತಂದ ಶಬ್ದಗಳೇ ಹೆಚ್ಚಾಗಿರುವ ಭಾಷೆಯೆಂದರೆ ಇಂಗ್ಲಿಷು. ಇದರಲ್ಲಿ ಮೂರನೆ ಎರಡಂಶದಷ್ಟು ಶಬ್ದಗಳು ಪರಭಾಷೆಯವು.

* * *

ಹುಂಜಗಳಿಗಿಂತ ಕೋಳಿಗಳೇ ಹೆಚ್ಚು. ಕುದುರೆ ಮತ್ತು ಕುರಿಗಳಲ್ಲೂ ಹಾಗೆ–ಗಂಡಿಗಿಂತ ಹೆಣ್ಣೇ ಹೆಚ್ಚು.

ಫ್ರಿಸ್ಕೊದಲ್ಲಿ ರಷ್ಯದ ಹೊಸ 'ಬಾಂಬು'

ಜರ್ಮನಿಯ ಶರಣಾಗತಿಗಿಂತಲೂ, ಹಿಟ್ಲರನ ಮರಣ ವಾರ್ತೆಗಿಂತಲೂ ಮಿಗಿಲಾದ ಸುದ್ದಿಯೆಂದರೆ ಫ್ರಿಸ್ಕೊದಲ್ಲಿ ಮೊಲೊಟೊವರು ಭಾರತದ ಪರವಾಗಿ ಮಾತನಾಡಿದ್ದು. 'ಅದು ಹಿಟ್ಲರನಷ್ಟೇ ಕುಖ್ಯಾತಿಯುಳ್ಳ ಠಕ್ಕತನವನ್ನು ಹೊರಗೆಳೆಯಿತು' ಎಂದು ಬೊಂಬೇ ಕ್ರೊನಿಕಲ್ ಪತ್ರಿಕೆಯ ರಾಜಕೀಯ ವಿಚಾರ ಬಾತ್ಮೀದಾರರು ಬರೆಯುತ್ತಾರೆ.

ಮೊಲೊಟೊವರ ಈ ಸ್ಫೂರ್ತಿದಾಯಕ ಹೇಳಿಕೆಯನ್ನು ಬ್ರಿಟಿಷ್ ವರ್ತಮಾನ ಸಂಸ್ಥೆಯವರು 'ಬ್ಲೇಕ್ ಔಟ್' ಮಾಡಿಬಿಟ್ಟದ್ದು ವಿಚಿತ್ರದ ಸಂಗತಿಯೆಂದೂ ಇದರಿಂದಲೇ ಅದಕ್ಕೆ ಐತಿಹಾಸಿಕ ಮಹತ್ವ ಬಂದಿರುವುದಾಗಿಯೂ ಅವರು ತಿಳಿಸುತ್ತಾರೆ.

ಮೊಲೊಟೊವರ ಹೇಳಿಕೆಯ ಸುಸ್ಪಷ್ಟವಾಗಿದ್ದು ಸಂದರ್ಭಕ್ಕೆ ತಕ್ಕಂತಿತ್ತು. ಅದು ಹೀಗಿದೆ:

'ಇಲ್ಲಿ ಬಂದ ಭಾರತೀಯ ಪ್ರತಿನಿಧಿಗಳು ಸ್ವತಂತ್ರ ರಾಷ್ಟ್ರವೊಂದರ ಪ್ರಾತಿನಿಧ್ಯವುಳ್ಳವರಾಗಿಲ್ಲವೆಂಬ ಸಂಗತಿಯು ಸೊವಿಯಟ್ ಸರಕಾರಕ್ಕೆ ಸಂಪೂರ್ಣ ತಿಳಿದಿದೆ....ಸ್ವತಂತ್ರ ಭಾರತದ ವಾಣಿಯು ಕೇಳಿ ಬರುವ ಸಮಯವೊಂದು ಸದ್ಯದಲ್ಲೇ ಬರುವುದೆಂದು ನಮಗೆ ಭರವಸೆ ಇದೆ.'

'ಅರ್ಜೆಂಟಿನಾ ಮತ್ತು ಪೊಲೆಂಡ್ ದೇಶಗಳ ಪ್ರಾತಿನಿಧ್ಯ ಸಂಬಂಧದಲ್ಲಿ ಭಾರತದ ಪ್ರಶ್ನೆಯನ್ನು ಎತ್ತಿದಂತೆ ಮೊಲ್ಟೊವ್ ಮಹನೀಯರು ನೇರವಾಗಿ ಆ ಭಾರತ ಪ್ರತಿದಿಧಿಗಳೆನಿಸಲ್ಪಟ್ಟವರ ಕೂಡೆ ಅವರು ಪ್ರತಿನಿಧಿ ಅಧಿಕಾರ ಹಕ್ಕುಗಳ ಕುರಿತು ಪ್ರಶ್ನಿಸಬಹುದಿತ್ತು. ಬಂದು ವೇಳ ಲಬ್ಲಿನ್ ಪೊಲಿಶ್ ಸರಕಾರಕ್ಕೆ ಪ್ರಾತಿನಿಧ್ಯ ಕೊಟ್ಟಿದ್ದರೆ ಬಹುಷ್ಯ ರಶ್ಯನ್ ರಾಯಭಾರಿಗಳು ಭಾರತದ ಕುರಿತು ಮಾತನಾಡುತ್ತಿರಲಿಲ್ಲವೊ ಏನೋ

'ಆದರೂ ಮೊಲೊಟೊವರ ಈ 'ಬೊಂಬು' ಸಾಕಷ್ಟು ಪರಿಣಾಮಕಾರಿಯಾಗುರುವುದು. ಅದು ಸುಸ್ವಾಗತಾರ್ಹವಾದುದು. ಸಾಮ್ರಾಜ್ಯವಾದಿಗಳ ವೇಷ ಕವಚಗಳು ಕೆಲವು ಅದರ ಸಿಡಿತಕ್ಕೆ ಹಾರಿಹೋದುವು. ರಶ್ಯಾ ಭಾರತದೊಳಗೆ ಒಂದು ಐತಿಹಾಸಿಕ ಸಮಾನತೆ ತೋರಿಬರುತ್ತದೆ. ಹೀಗೆಂದು 'ಕ್ರೊನಿಕ್ಲರ'ರು ತಿಳಿಸುತ್ತಾ ಈ ಕೆಳಗಿನ ಸಂಗತಿಗಳನ್ನು ನಿರೂಪಿಸುತ್ತಾರೆ:

ಹಿಂದಿನ ವರ್ಸೆಲಿಸ್ ಪರಿಷತ್ಕಾಲದಲ್ಲಿ ರಶ್ಯಕ್ಕೆ ಪ್ರಾತಿನಿಧ್ಯವಿರಲಿಲ್ಲ. ಇಂದಿನ ಫ್ರಿಸ್ಕೋದಲ್ಲಿ (ನಿಜವಾದ) ಭಾರತಕ್ಕೆ ಪ್ರಾತಿನಿಧ್ಯವಿಲ್ಲ.

ವರ್ಸೆಲಿಸ್ ಪರಿಷತ್ತಿನಲ್ಲಿ ರಷ್ಯದ ಪ್ರತಿನಿಧಿಗಳು ಹಿನ್ನೆಲೆಯಿಂದಲೇ ಅನಧಿಕೃತವಾಗಿ ತಮ್ಮ 'ಸ್ವರ' ಕೇಳುವಂತೆ ಮಾಡಿದರು. ಈಗ ಸೇನ್ ಫ್ರಾನ್ಸಿಸ್‌ಕೋದಲ್ಲಿ ವಿಜಯ ಲಕ್ಷ್ಮಿಯವರೂ ಮತ್ತವರ ಸಹೋದ್ಯೋಗಿಗಳೂ ಅದೇ ರೀತಿ ಮಾಡುತ್ತಲಿದ್ದಾರೆ.

ವರ್ಸೇಲಿಸ್‌ನಲ್ಲಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯ ಶಾಹಿ ಮಾತುಗಾರರು ಅಂದಿನ ಯುದ್ಧದಲ್ಲಿ ರಷ್ಯದ ಮೇಲೆ ಕೈ ಮಾಡಿದ್ದನ್ನು ಜರ್ಮನರಿಗೆ ಸರಬರಾಯಿ ಸಿಗದಂತೆ ನಿಲ್ಲಿಸಲು ಹಾಗೆ ಮಾಡಲಾಯಿತು' ಎಂದು ಸಮರ್ಥಿಸಿದರು.

ಫ್ರಿಸ್ಕೋದಲ್ಲೂ ' ಸಾಮ್ರಾಜ್ಯವಾದಿ ಮಾತುಮಲ್ಲರು 'ಯುದ್ಧವನ್ನು ಯಶಸ್ವಿಯಾಗಿ ಕೊನೆಗಾಣಿಸಲೋಸುಗ ಭಾರತಕ್ಕೆ ಸ್ವಾತಂತ್ರ್ಯ ಕೊಡಲಿಲ್ಲ ಮತ್ತು ಅದರ ನಾಯಕರನ್ನು ಬಂಧನದಲ್ಲಿರಿಸಲಾಗಿದೆ' ಎಂದು ಜಗತ್ತಿನ ಕಣ್ಣಿಗೆ ಮಂಕು ಬಳೆಯಲು ಪ್ರಯತ್ನಿಸುವರು.

೧೯೧೯ರ ವರ್ಸೇಲಿಸ್‌ನಲ್ಲಿ ಸ್ಥಾನ ನಿರಾಕರಿಸಲ್ಪಟ್ಟ ರಶ್ಯವು ೧೯೪೫ರಲ್ಲಿ ಜಗತ್ತಿನ ಅತೀ ದೊಡ್ಡ ಶಕ್ತಿರಾಷ್ಟ್ರವಾಯಿತು.

೧೯೪೫ರಲ್ಲಿ ಫ್ರಿಸ್ಕೋದಲ್ಲಿ ಸ್ಥಾನ ನಿರಾಕರಿಸಲ್ಪಟ್ಟ ಭಾರತವು೧೯..ರಲ್ಲಿ...?

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[ಸಂಪುಟ 39] ತಾರೀಕು 25—5—1945 [ಸಂಚಿಕೆ 10]

ಅಮೇರಿಕದ ಕಳ್ಳಸಂತೆ ಕೂಸುಗಳು

ಜಗತ್ತಿನ ಲಜ್ಜಾರ್ಹ ವ್ಯಾಪಾರ ವಹಿವಾಟು

ಕಳ್ಳ ಸಂತೆಯು ಅಮೇರಿಕಾನರಿಗೆ ಹೊಸ ಅನುಭವದ ಸಂಗತಿಯಲ್ಲ. ಇಂದಿಗೆ ಎಷ್ಟೋ ವರ್ಷಗಳಿಂದ ಆ ನೂತನ ಖಂಡದಲ್ಲಿ ಜಗತ್ತಿನ ಅತೀ ಭೀಕರವೂ ಲಜ್ಜಾಸ್ಪದವೂ ಆದ ಒಂದು ಗುಪ್ತ ವ್ಯಾಪಾರವು ಅವ್ಯಾಹತವಾಗಿ ನಡೆಯುತ್ತದೆಂದೂ ಅದರ ಕುರಿತು ಓದುವಾಗ ನಾಗರೀಕ ಜನರು ನಾಚಿಕೆಯಿಂದ ತಲೆ ಬಗ್ಗಿಸಿಕೊಂಡಿರಬೇಕಾಗುತ್ತದೆಂದೂ ಓರ್ವ ಪ್ರಖ್ಯಾತ ನೈತಿಕ ಜೀವನ ತತ್ವ ಪ್ರಚಾರಕರು ತಿಳಿಸುತ್ತಾರೆ.

ಹಲವು ಜನಾಂಗಿಕರ ಮಿಶ್ರ ಜನ ಸಂಖ್ಯೆಯಿಂದ ಕಿಕ್ಕಿರಿದಿರುವ ಅಮೇರಿಕನ್ ನಗರಗಳಲ್ಲಿ ಸಾವಿರಾರು ದಂಪತಿಗಳು ಸಂತಾನ ಪ್ರಾಪ್ತಿಯಿಲ್ಲದೆ ಹೆರವರ ಮಕ್ಕಳನ್ನು ದತ್ತಕ್ಕೆ ತೆಗೆದುಕೊಳ್ಳಲು ಯೋಚಿಸುತ್ತಾರೆ. ಆದರೆ ಸುಖ ಸಂತೃಪ್ತಿಯಲ್ಲಿ ಮೆರೆಯುವ ಅಲ್ಲಿನ ಸಂಸಾರಸ್ಥರು ತಮ್ಮ ಮಕ್ಕಳನ್ನು ಇತರರ ಪೋಷಣೆಗೆ ಹೇಗೆ ಕೊಡಲೊಪ್ಪುವರು? ಇಂತಹ ಪರಿಸ್ಥಿತಿಯಲ್ಲಿ ಶಿಶು ಕಾಂಕ್ಷಿಗಳಾದ ಆ ದಂಪತಿಗಳು ಈ ಕಳ್ಳ ಸಂತೆಯ ದಲ್ಲಾಳಿಗಳ ಸಹಾಯವನ್ನು ಹುಡುಕಿಹೋಗುವರು. ಅತ್ಯಂತ ಲಾಭಕಾರಿಯಾದ ಈ ವ್ಯಾಪಾರ ಕ್ಷೇತ್ರದಲ್ಲಿ ನುರಿತ ಮಧ್ಯಸ್ಥರಿಗೆ ಕೊರತೆಯಿಲ್ಲ. ಅವರು ಅವಿವಾಹಿತ ತಾಯಿಂದಿರ ಮೇಲೂ ಅನೀತಿ ವ್ಯಾಪಾರದ ಗಲ್ಲಿಗಳಲ್ಲೂ ಸದಾ ಹೊಂಚುಹಾಕಿರುತ್ತಾರೆ.

ಅಮೇರಿಕದಲ್ಲಿ ಹುಟ್ಟುವ ಪ್ರತಿ ನೂರು ಮಕ್ಕಳಲ್ಲಿ ಐದು ಮಕ್ಕಳು ಅವಿವಾಹಿತ ತರುಣಿಯರಿಗೆ ಹುಟ್ಟಿದವುಗಳು. ಯುದ್ಧ ಕಾಲದ ಮಿತಿಮೀರಿದ ಜನನ ಸಂಖ್ಯೆಯಲ್ಲಿ ಇಂತಹ ಅನೀತಿ ಮಕ್ಕಳ ಸಂಖ್ಯೆಯೂ ವಿಪರೀತ ಏರಿದೆ. ಸಾಕಣೆಗೆ ದತ್ತ ತೆಗೆದುಕೊಳ್ಳಲ್ಪಡುವ ಮಕ್ಕಳಲ್ಲಿ ಅರ್ಧಕ್ಕರ್ಧ ಸಂಖ್ಯೆಯಷ್ಟು ಇಂತಹ ಮಕ್ಕಳೇ ಇರುವರೆಂಬುದು ಕೌತುಕದ ವಿಷಯ.

ಈಚೇಗೆ ಅನೀತಿ ಜನನದ ಶಿಶುಗಳನ್ನು ಕೊಂಡುಕೊಳ್ಳುವ ಮತ್ತು ಮಾರುವ 'ಕಂಪೆನಿ'ಗಳೇ ಆ ವಿಚಿತ್ರ ದೇಶದಲ್ಲಿ ಸ್ಥಾಪಿಸಲ್ಪಟ್ಟಿವೆ. ಅನೇಕ ವೈಯಕ್ತಿಕ ದಲ್ಲಾಳಿಗಳು ಈ ವಹಿವಾಟಿನಿಂದಲೇ ಹೊಟ್ಟೆತುಂಬಿಸಿಕೊಳ್ಳುತ್ತಾರೆ. ಓರ್ವ ಚತುರ ಮಹಿಳೆ ತನಗೆ ವರ್ಷಕ್ಕೆ ೮೦ ಸಾವಿರ ರೂಪ್ಯಾ ಹುಟ್ಟುವಳಿ ಇದೆಯಾಗಿ ಜಂಬಕೊಚ್ಚಿಕೊಳ್ಳುತ್ತಾಳೆ.

ಧೈರ್ಯವಂತ ಶಿಶು ದಲ್ಲಾಳಿಗಳು ಸ್ಥಳೀಯ ಪತ್ರಿಕೆಗಳಲ್ಲಿ ಬಹಿರಂಗ ಜಾಹಿರಾತು ಕೊಡುತ್ತಿದ್ದಾರೆ. ಗರ್ಭಿಣಿ ಸ್ತ್ರೀಯರಿಗೆ ಬೇಕಾದಷ್ಟು ಹೆರಿಗೆ ಮತ್ತಿತರ ಖರ್ಚನ್ನೂ ಕೊಡಲು ಅವರು ಸಿದ್ಧರಿರುತ್ತಾರೆ.

ಟೆಕ್ಸಾಸ್ ಪ್ರಾಂತ್ಯದ ಒಂದು ಜಿಲ್ಲೆಯ ನಗರ ಸಭೆಯವರ ಗಮನಕ್ಕೆ ಇಂತಹ ವ್ಯಾಪಾರದ ದಾಖಲೆಗಳು ಬಂದಿವೆ. ದಂಪತಿಗಳಿಬ್ಬರು ೪೫೦ ರೂಪ್ಯಾಗೆ ಒಂದು ಕೂಸನ್ನು ಪಡಕೊಂಡು ೮೭೨ ರೂಪ್ಯಾಗಳಿಗೆ ಅದನ್ನು ಮಾರಿ ೪೨೨ ರೂಪ್ಯಾ ಲಾಭ ಪಡೆದರು. ಅಲ್ಬಾಮಾ ಎಂಬೂರಿನ ೧೭ ವರ್ಷದ ಓರ್ವ ಅವಿವಾಹಿತ ಗರ್ಭಿಣಿಯು ಓರ್ವ ಗರ್ಭ ತೆಗೆಯುವ ವೈದ್ಯನ ಬಳಿ ಹೋದಳು. ವೈದ್ಯನು ಅತ್ಯಾಸಕ್ತಿಯಿಂದ ಆಕೆಗೆ ತನ್ನ ಖಾಸಗಿ ಆಸ್ಪತ್ರೆಯಲ್ಲಿ ಪ್ರತ್ಯೇಕ ಕೋಣೆಕೊಟ್ಟು ಮಗು ಜನಿಸಿದ ಮೇಲೆ ತಾಯಿಗೆ ೨೦ ರೂಪ್ಯಾಯ ಬಟ್ಟೆಬರೆಗಳನ್ನು ತೆಗೆದುಕೊಟ್ಟನು. ನಂತರ ಆ ಕೂಸನ್ನು ೧೮೦೦ ರೂಪ್ಯಾಗಳಿಗೆ ಮಾರಿ ಲಾಭಗಳಿಸಿದನು.

ಈ ಶಿಶು ದಲ್ಲಾಳಿಗಳನ್ನು ನಿರ್ಮೂಲಿಸಲಿಕ್ಕೆ ಕೊಲಂಬಿಯಾ ಪ್ರಾಂತ್ಯದ ನ್ಯಾಯವಿಧಾಯಕ ಸಭೆಯಲ್ಲಿ 'ಶಿಶು ದಲ್ಲಾಳಿಶಾಸನ'ದ ಠರಾವು ಮುಂಡಿಸಲ್ಪಟ್ಟು ಬಹುಮತ ಪಡೆಯಿತು.

ಕಳ್ಳ ಸಂತೆಯಲ್ಲಿ ಶಿಶು ಮಾರುವ ಉದ್ಯೋಗಸ್ಥರನ್ನು ತಡೆಗಟ್ಟಲು ಇಂದು ಅಲ್ಲಿನ ಪ್ರತಿ ಪ್ರಾಂತ್ಯದವರು ನಿರ್ಬಂಧ ಶಾಸನಗಳನ್ನು ಮಾಡುತ್ತಲಿದ್ದಾರೆ. ಇಷ್ಟಾದರೂ ಮಗು ಮಾರಾಟದ ಮಧ್ಯಸ್ಥರ ಸಂಖ್ಯೆ ಗುಪ್ತ ರೀತಿಯಲ್ಲಿ ಬೆಳೆಯುತ್ತಲಿದೆ. ಕೆಲವು ಪ್ರಾಂತ್ಯಗಳ ಸರಕಾರದವರು ನೀತಿ ಪ್ರಚಾರಕ ಸಂಸ್ಥೆಗಳ ಮೂಲಕ ಅವಿವಾಹಿತ ತಾಯಿಂದಿರಿಗೆ ಸಲಹೆಕೊಡುವ ಏರ್ಪಾಡೂ ಮಾಡಿರುವರು. ಈ ನೀತಿ ಸಂಸ್ಥೆಯವರು ಸಹಾನುಭೂತಿ ದೃಷ್ಟಿಯಿಂದ 'ದಾರಿತಪ್ಪಿದ' ತರುಣಿಯರ ಪರಿಸ್ಥಿತಿಗಳನ್ನು ಪರಿಶೀಲಿಸಿ ಅವರಿಗೆ ಹುಟ್ಟಿದ ಕೂಸುಗಳನ್ನು ಯೋಗ್ಯ ಕಂಡವರಿಗೆ ದತ್ತಕ್ಕೆ ಕೊಡುತ್ತಾರೆ.

ಸರಕಾರದ ಈ ಏರ್ಪಾಡಿನ ವಿಷಯ ಅರಿವಿಲ್ಲದ ತರುಣಿಯರು ಸ್ವತಂತ್ರ ವೈದ್ಯರ, ವಕೀಲರ ಇಲ್ಲವೆ ಆಪ್ತ ಸಂಬಂಧಿಕರ ಸಹಾಯವನ್ನಪೇಕ್ಷಿಸಿ ಅವರ ಬಳಿಹೋಗುವರು. ಕೆಲವು ಸಂದರ್ಭಗಳಲ್ಲಿ ಇಂತಹ ಪರಿಸ್ಥಿತಿಯಲ್ಲಿ ಸಿಲುಕುವವರು ಚಿಕ್ಕ ಹುಡುಗಿಯರೇ ಇರುತ್ತಾರೆ. ಅವರು ಮಗುವಿನ ಮೇಲೆ ತಮಗಿರುವ ಹಕ್ಕನ್ನು ಸುಲಭವಾಗಿ ಬಿಟ್ಟು ಬಿಡುವರೆ ಸಮ್ಮತಿ ಪತ್ರಕ್ಕೆ ಸಹಿಹಾಕುತ್ತಾರೆ. ಒಂದು ವೇಳೆ ಹೆತ್ತ ಮೇಲೆ ಆ ತರುಣಿಗೆ ತನ್ನ ಮಗು ಬೇಕೆಂದಾದರೆ ಅದು ಅವಳ ದುರಾದೃಷ್ಟವಾಗಿ ಪರಿಣಮಿಸುವುದು. ಅಷ್ಟರಲ್ಲೇ ಆ ಮಗು ಯಾರಿಂದ ಯಾರಿಗೆ ಎಂಬಂತೆ ಕೈ ಬದಲಾಗುತ್ತದೆ.

ಹೊಟ್ಟೆಯೊಳಗಿನ ಗರ್ಭವನ್ನು ವಿಸರ್ಜಿಸಿಕೊಳ್ಳುವ ತನಕ ಅವಿವಾಹಿತ ತಾಯಿಂದಿರಿಗೆ ಏನೂ ಯಾವುದೂ ಬೇಡವಾಗುತ್ತದೆ. ಹುಟ್ಟಿದ ಮಗುವನ್ನು ನೋಡಿದ ಕೂಡಲೇ ಕೆಲವರಲ್ಲಿ ಒಂದು ತರದ ಶಿಶುವಾತ್ಸಲ್ಯ ಹುಟ್ಟಿ ಅದು ಅವಳ ವಶವಿರದಿದ್ದರೆ ಭೀಕರ ಮನೋವ್ಯಾಧಿಯುಂಟಾಗಿ ಅವಳು ಹುಚ್ಚರ ಆಸ್ಪತ್ರೆಗೆ ಸೇರಿಸಲ್ಪಟ್ಟರೂ ಪಡಬಹುದು.

ಓರ್ವ ತರುಣಿಗೆ ಸೈನಿಕನೊಬ್ಬನು ಪ್ರಣಯಿಯಾಗಿದ್ದನು. ಮದುವೆಯಾಗುವ ಮೊದಲು ಅವನು ನೂರಾರು ಮೈಲು ದೂರದ ಯುದ್ಧರಂಗಕ್ಕೆ ಕಳುಹಿಸಲ್ಪಟ್ಟನು. ಅವನು ಹೊರಡುವಾಗ ಅವನ ೧೭ ವರ್ಷದ ಪ್ರೇಯಸಿಯು ಗರ್ಭಧರಿಸಿಕೊಂಡಿದ್ದಳು. ಸಾರ್ವಜನಿಕ ನಿಂದೆಯಿಂದ ದೂರವಿರಲು ಆ ತರುಣಿಯು ದೂರದ ಹಳ್ಳಿಯೂರಿಗೆ ತನ್ನ ಸೋದರತ್ತೆಯ ಮನೆಗೆ ಹೋಗಿ ನಿಂತಳು. ಆ ಅತ್ತೆಗಾದರೊ ಹುಟ್ಟಲಿರುವ ಮಗುವಿನಿಂದ ತನಗಾಗುವ ಲಾಭದ ಯೋಚನೆ ಹುಟ್ಟಿತು. ಕೂಡಲೇ ಅತ್ತೆಯು ಶಿಶು ದಲ್ಲಾಳಿ ಸಂಸ್ಥೆಯೊಂದರ ಸಲಹೆ ಕೇಳಿದಳು: ಹೆರಿಗೆ ಖರ್ಚನ್ನಲ್ಲದೆ ಅತ್ತೆಗೇ ೨ ಸಾವಿರ ರೂಪ್ಯಾ ಕೊಡುವುದಾಗಿ ಆ ದಲ್ಲಾಳಿಗಳು ವಾಗ್ದಾನ ಮಾಡಿದರು.

ತರುಣಿಯು ಅರ್ಧ ಮನಸ್ಸಿನಿಂದ ಹಕ್ಕುತ್ಯಾಜ್ಯದ ಸಮ್ಮತಿ ಪತ್ರಕ್ಕೆ ಸಹಿಹಾಕಿದಳು. ಹುಟ್ಟಿದ ಮಗು ಗಂಡು ಎಂದು ತಾಯಿಗೆ ತಿಳಿದಾಗ ಅವಳಲ್ಲಿ ಸಹಜವಾದ ಮಾತೃವಾತ್ಸಲ್ಯ ಹುಟ್ಟಿತು. ತನ್ನ ಮಗುವನ್ನು ಬಿಟ್ಟು ಇರಲಾರನೆಂದು ಅವಳು ಅತ್ತೆಗೆ ತಿಳಿಸಿದಳು. ಆದರೆ ಅತ್ತೆಯು ತನ್ನ ಕೆಲಸವನ್ನು ಶೀಘ್ರವಾಗಿ ಮುಗಿಸಿದಳು—ಮರುದಿನವೇ ಕೂಸನ್ನು ದಲ್ಲಾಳಿಗಳ ಬಳಿ ಕೊಂಡೊಯ್ದು ತನ್ನ ೨ ಸಾವಿರವನ್ನು ಪಡೆದಳು.

ತರುಣಿಯು ತನ್ನ ಸ್ವಂತ ಮನೆಗೆ ಬಂದು ಹೆತ್ತವರ ಬಳಿ ತನ್ನ ಗೋಳನ್ನು ಹೇಳಿಕೊಂಡಳು. ಅವಳ ತಂದೆಯು ವಕೀಲನೊಬ್ಬನ ಬಳಿ ಹೋಗಿ ಸಲಹೆ ಕೇಳಿದನು. ಆದರೆ ಕಾನೂನು ಪ್ರಕಾರ ತರುಣಿಗೆ ಮಗುವಿನ ಮೇಲೆ ಯಾವ ಅಧಿಕಾರವಿಲ್ಲವೆಂದು ಸ್ಪಷ್ಟವಾಯಿತು. ಅವಳು ಸಮ್ಮತಿ ಪತ್ರಕ್ಕೆ ಸಹಿ ಹಾಕಿದ್ದೇ ತಪ್ಪು.

ದತ್ತಕ್ಕೆ ತೆಗೆದುಕೊಳ್ಳಲು ಸರಕಾರದ ಅನುಮತಿ ಪಡೆಯಬೇಕೆಂದು ಶಾಸನವಿರುತ್ತಿದ್ದರೆ ಆ ತರುಣಿಗೆ ಅಂತಹ ದುರಂತವು ಸಂಭವಿಸುತ್ತಿರಲಿಲ್ಲ. ಇಂತಹ ಶಾಸನವು ಸಂಯುಕ್ತ ಅಮೇರಿಕದ ೨೦ ಪ್ರಾಂತ್ಯಗಳಲ್ಲಿ ಮಾತ್ರವಿದೆ. ಇನ್ನುಳಿದ ೨೮ರಲ್ಲಿ ಅವಿಲ್ಲ—ಅಂತಹ ಒಂದು ಪ್ರಾಂತ್ಯಕ್ಕೆ ಮೇಲ್ಕಂಡ ತರುಣಿಯು ಸೇರಿದ್ದಳು.

ಇನ್ನೊಂದು ಕಡೆ ಓರ್ವ ತರುಣಿಯ ಮಗುವನ್ನು ಪೋಷಣೆಗೆ ತೆಗೆದುಕೊಳ್ಳಲು ಇರ್ವ ದಂಪತಿಗಳು ಕರಾರು ಬರಕೊಂಡಿದ್ದರು. ಆದರೆ ಅನೀರಿಕ್ಷಿತವಾಗಿ ತರುಣಿ ಅವಳಿ ಜವಳಿ ಮಕ್ಕಳನ್ನು ಹೆತ್ತಳು. ಕೆಲವು ದಿವಸಗಳಲ್ಲಿ ಒಂದು ಮಗು ಸತ್ತುಹೋಯಿತು. ಶವ ಪರೀಕ್ಷೆ ನಡೆದಾಗ ಅದು ವ್ಯಭಿಚಾರ ರೋಗದಿತ್ತೆಂದು ತಿಳಿಯಿತು. ಆ ರೋಗವು ಜೀವಂತವಿದ್ದ ಇನ್ನೊಂದಕ್ಕೂ ಇತ್ತು. ಆದರೆ ಅದನ್ನು ಪೋಷಿಸದೆ ಉಪಾಯವಿಲ್ಲ. ಅವರು ಕ್ರಮಪ್ರಕಾರ ಸರಕಾರ ಇಲಾಖೆಮೂಲಕ ತಮ್ಮ ಕೆಲಸವನ್ನು ಮಾಡುತ್ತಿದ್ದರೆ ಆರೋಗ್ಯವಂತ ಬೇರೆ ಮಗುವನ್ನು ಹೊಂದುತ್ತಿದ್ದರು.

ದತ್ತಕ್ಕೆ ತೆಗೆದುಕೊಳ್ಳುವವರು ಮಗುವಿನ ಸಂಪೂರ್ಣ ವೈದಕೀಯ ಪರೀಕ್ಷೆ ನಡೆಸಿದ ಮೇಲೆಯೇ ಪಡಕೊಳ್ಳಬೇಕೆಂದು ಓರ್ವ ಪ್ರಖ್ಯಾತ ಶಿಶು ಸಂರಕ್ಷಣ ಸಂಸ್ಥೆಯ ಚಾಲಕರು ಸಲಹೆಕೊಡುತ್ತಾರೆ.

ಮಕ್ಕಳನ್ನು ಗುಪ್ತ ರೀತಿಯಲ್ಲಿ ದತ್ತಕ್ಕೆ ತೆಗೆದುಕೊಳ್ಳಲಿಚ್ಛಿಸುವ ಶ್ರೀಮಂತರು ಇರುವ ತನಕ ಈ 'ಕಳ್ಳ ಸಂತೆ'ಯು ತಡೆಯಿಲ್ಲದೇ ಸಾಗುವುದು. ಮಾನವ ಸುಖ ಶಾಂತಿಯ ವಿಚಾರಹೀನರಾದ ದಲ್ಲಾಳಿಗಳೂ ಈ ಕೆಲಸಕ್ಕೆ ಸಿದ್ಧರಾಗಿಯೇ ಸಿಗುವರು.

ಆದರೂ ಎಲ್ಲಾ ದೇಶಗಳಲ್ಲೂ ಇಂತಹ ದುರವಸ್ಥೆಗಳನ್ನು ಆದಷ್ಟು ಮಟ್ಟಿಗೆ ಕಮ್ಮಿ ಮಾಡಲು ಆಯಾ ಸರಕಾರದವರು ಯೋಗ್ಯ ಶಾಸನಗಳನ್ನು ಮಾಡುವುದರಲ್ಲಿ ಹಿತವಿದೆ.

ಜನರಲ್ ಮೇಕಾರ್ಥರ್ ಮತ್ತು ಜನರಲ್ ಮಾರ್ಕ್ ಕ್ಲಾರ್ಕ್ (ಇಟೆಲಿಯಲ್ಲಿ ಅಮೇರಿಕನ್ ದಳಪತಿ) ಅವರು ಅಮೇರಿಕದ ಹತ್ತು ಅತೀ ಸುಂದರ ಶರೀ ವ್ಯಕ್ತಿತ್ವವುಳ್ಳವರಲ್ಲಿ ಇರ್ವರೆಂದು ಕೆತರಿನ್ ವಾರ್ಡ್ ಎಂಬ ಪ್ರಖ್ಯಾತ ಅಮೇರಿಕನ್ ಮಹಿಳಾ ಶಿಲ್ಪಕಲಾಜ್ಞಳು ತಿಳಿಸುತ್ತಾಳೆ.

* * *

ಅವನು ಬಿರುದು ಪಡೆದರೀತಿ

[ಯುರೋಪಿನ ೧೯ನೇ ಶತಮಾನದ ಸಣ್ಣ ಕತೆಗಾರರಲ್ಲಿ ಅತೀ ಶ್ರೇಷ್ಠನೆನಿಸಿದ ಮಾಪಸಾಂತನು ಈ ಕತೆಯ ಮೂಲ ಲೇಖಕರು ಜೀವನ ಚಿತ್ರಗಳನ್ನು ಮುಚ್ಚುಮರೆ ಇಲ್ಲದೆ, ಅದರ ಅಶ್ಲೀಲತೆಗಳನ್ನು ಕಾಳಿದಾಸನ ಗಾಂಭೀರ್ಯದಿಂದ ವರ್ಣಿಸುವುದರಲ್ಲಿ ಅಸಮಾನ ಪ್ರತಿಭೆಯುಳ್ಳ ಈ ಫ್ರೆಂಚ್ ಸಾಹಿತಿಯ ಕಲಾವಂತಿಕೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ವಾಚಕರ ಮುಂದಿರಿಸಲು ಕೆಲವುವಾರಗಳ ತನಕ ಅವನ ಕತೆಗಳನ್ನು ಕೊಡುವುದರ ಮೂಲಕ ಪ್ರಯತ್ನಮಾಡಲಾಗುವುದು.]

ಕೆಲವು ಜನರು ಹುಟ್ಟುವಾಗಲೇ ಒಂದಲ್ಲ ಒಂದು ತರದ ಮಹಾತ್ಮಾಕಾಂಕ್ಷೆಯಿಂದ ಕೂಡಿದವರಿರುತ್ತಾರೆ. ಮಾತಾಡಲೂ ಯೋಚಿಸಲೂ ಸಮರ್ಥರಾದಾಗಲೇ ಅವರಲ್ಲಿ ಅದು ಒಡೆದು ಕಾಣುತ್ತಿರುತ್ತದೆ.

ಬಾಲ್ಯದಿಂದಲೇ ಕೈಲಾರ್ಡ್ ಮಹನೀಯನಲ್ಲಿ ಬಿರುದುಗಳನ್ನು ಸಂಪಾದಿಸಬೇಕೆಂಬ ಒಂದೇ ಒಂದು ಬಲವಾದ ಕಾಂಕ್ಷೆ ಇತ್ತು. ಅವನು ಬಾಲಕನಾಗಿದ್ದಾಗ ಇತರ ಹುಡುಗರು ಸೈನಿಕನ ಪೋಷಾಕು ಧರಿಸುವುದರಲ್ಲಿ ಸಂತೋಷಪಟ್ಟುಕೊಳ್ಳುವಂತೆ ಬಾಲಕ ಕೈಲಾರ್ಡನು ತನ್ನ ಎದೆಗೆ ಒಂದು ಲೋಹದ ಪದಕವನ್ನು ಧರಿಸಿ ತಾಯಿಯೊಂದಿಗೆ ತಿರುಗಾಡಲು ಹೋಗುವಾಗ ಎದೆ ಮುಂದೆ ಮಾಡಿ ಮಾರ್ಗದಲ್ಲಿ ಎಲ್ಲರ ಗಮನಕ್ಕೂ ಬರುವಂತೆ ಪ್ರದರ್ಶಿಸಿ ನಡೆಯುತಿದ್ದನು.

ವಿದ್ಯಾಭ್ಯಾಸದ ಮಟ್ಟಿಗೆ ಅವನು ತುಂಬಾ ಅಯಶಸ್ವಿಯಾದನು. ಬಿ. ಎ. ಪರೀಕ್ಷೆಯಲ್ಲಿ ಅವನು ಫೈಲಾಗಿಬಿಟ್ಟನು. ಏನು ಮಾಡಬೇಕೆಂದು ತೋಚದೆ ಅವನೊಂದು ಸುಂದರ ತರುಣಿಯನ್ನು ವಿವಾಹವಾದನು. ಕಾರಣ ಅವನಲ್ಲಿ ಸ್ವಂತದ ತುಂಬಾ ಧನವಿತ್ತು.

ಅವರು ಪೆರಿಸ್ ನಗರದಲ್ಲಿ ವಾಸಮಾಡಿಕೊಂಡಿದ್ದರು. ಶ್ರೀಮಂತ ವರ್ಗದ ಜನರಂತೆ ಅವರು ಸಾಮಾನ್ಯ ಜನರಾರೊಡನೆಯೂ ಬೆರೆಯುತ್ತಿರಲಿಲ್ಲ. ಮುಂದೆ ಸರಕಾರದ ಮಂತ್ರಿಗಳಾಗಬಹುದಾದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನೂ, ದೊಡ್ಡ ಸರಕಾರಿ ಹುದ್ದೇದಾರರನ್ನೂ ಅವರು ಆಪ್ತ ಸ್ನೇಹಿತರನ್ನಾಗಿ ಮಾಡಿಕೊಳ್ಳುತಿದ್ದರು. ಅವರ ಸ್ನೇಹದಲ್ಲಿ ಅವರು ಹೆಮ್ಮೆ ಪಟ್ಟುಕೊಳ್ಳುತಿದ್ದರು.

ಇಷ್ಟಾದರೂ ಕೈಲಾರ್ಡ್ ಮಹನೀಯನಿಗೆ ತನ್ನ ಕೋಟಿಗೆ ಬಿರುದು ಪದಕಗಳನ್ನು ಸಿಕ್ಕಿಸಿ ಮೆರೆಯಬೇಕೆಂದಿದ್ದ ಆ ಯೋಚನೆಯು ದಿನ ಹೋದಂತೆ ತುಂಬಾ ಬಾಧಿಸತೊಡಗಿತು. ತನ್ನಷ್ಟಕ್ಕೆ ಬೇಕಾದ ಪದಕಗಳನ್ನು ಧರಿಸಲು ಅವನಿಗೆ ಯಾವ ಹಕ್ಕೂ ಇರಲಿಲ್ಲ. ಅದರಿಂದ ಅವನು ಆಗಿಂದಾಗ್ಗೆ ಬಹಳ ದುಃಖಿತನಾಗುತಿದ್ದನು.

ಬಿರುದು ಪದಕ ಧರಿಸಿದ ಯಾವನಾದರೊಬ್ಬನು ಅವನಿಗೆ ನೋಡಸಿಕ್ಕಿದರೆ ಕೈಲಾರ್ಡನು ಓರೆಕಣ್ಣಿನಿಂದ ಅವನನ್ನು ದಿಟ್ಟಿಸುತ್ತಾ ಅವನ ಮೇಲೆ ತುಂಬಾ ಅಸೂಯೆ ಪಟ್ಟುಕೊಳ್ಳುತಿದ್ದನು. ಏನೂ ಕೆಲಸವಿಲ್ಲದಾಗ ಅವನು ತಾನು ನೋಡಿದ ಪದಕಧಾರಿಗಳ ಲೆಕ್ಕ ಹಾಕುತ್ತಾ: "ಮೆಡಲಿನ್ ಮಾರ್ಗದಿಂದ ರ್‍ಯೂಲಾಟ್ ರಸ್ತೆಗೆ ಹೋಗುವುದರಲ್ಲಿ ಅದೆಷ್ಟು ಮಂದಿ ಪದಕಧಾರಿಗಳು ಸಿಗುತ್ತಾರೆ ನೋಡೋಣ" ಎನ್ನುತಿದ್ದನು.

ನಂತರ ಅವನು ಮೆಲ್ಲಗೆ ನಡೆಯುತ್ತ ತನ್ನ ಪಳಗಿದ್ದ ಕಣ್ಣುಗಳಿಂದ ಮಾರ್ಗಸ್ಥರೆಲ್ಲರ ಕೋಟುಗಳನ್ನು ಈಕ್ಷಿಸುತ್ತಾ ಅಲ್ಲೇನಾದರೂ ಕೆಂಪು ರೇಶ್ಮೆ ಪಟ್ಟಿಯಿಂದ ತೂಗಿಸಲ್ಪಟ್ಟ ಪದಕಗಳಿವೆಯೋ ಎಂದು ನೋಡುತಿದ್ದು, ಮಾರ್ಗದ ಕೊನೆಗೆ ಮುಟ್ಟಿದೊಡನೆ ಗಟ್ಟಿಯಾಗಿ ತಾನು ನೋಡಿದ ಪದಕಧಾರಿಗಳ ಒಟ್ಟು ಸಂಖ್ಯೆಯನ್ನು ಬಲವಾಗಿ ಉಚ್ಚರಿಸಿಬಿಡುವನು. "ಎಂಟು ಅಧಿಕಾರಿಗಳೂ, ಹದಿನೇಳು ಸೇನಾಧಿಪತಿಗಳು! ಎಷ್ಟೊಂದು ಬಿರುದಾಂಕಿತರಪ್ಪಾ! ಪಾರಿತೋಷಕ ಪದಕಗಳನ್ನು ಬಹಿರಂಗವಾಗಿ ಹಾಗೆ ಸಿಕ್ಕಿಸಿಕೊಳ್ಳುವುದೆಂದರೆ ಥೇಟ್ ಮೂರ್ಖತನ. ಹಿಂತಿರುಗಿ ಹೋಗುವಾಗ ಇಂಥವರು ಇನ್ನೆಷ್ಟು ನೋಡಸಿಗುವರೊ ಕಾಣೆ!"

ಹೀಗೆ ಮನಸ್ಸಿನಲ್ಲಿ ಮೆಲ್ಲನೆ ಮರುಗುತ್ತಾ ಹಿಂತಿರುಗುವಾಗ ಮಾರ್ಗಸ್ಥರ ಗುಂಪುಗಳೇ ಅವನ ಕಣ್ಣನ್ನು ಕುಕ್ಕುತಿದ್ದುವು.

ಅಂತಹರೆಲ್ಲ ಹೆಚ್ಚಾಗಿ ಎಲ್ಲೆಲ್ಲಿ ನೋಡಸಿಗುತ್ತಾರೆಂದೂ ಅವನಿಗೆ ಚೆನ್ನಾಗಿ ಗೊತ್ತಿತ್ತು. ರಾಜ ಅರಮನೆಯ ಮುಂದುಗಡೆಯೇ ಅವರು ಹೆಚ್ಚಾಗಿ ಗುಂಪು ಕೂಡುತಿದ್ದರು. ನಾಟಕ ಶಾಲೆಯ ಉಪವನದ ಬಳಿ ಕೆಲವರಿರುತ್ತಾರೆ. ಅಶ್ವಶಾಲೆಯ ಉಪವನದ ಎಡಬದಿಗಿಂತಲೂ ಬಲಬಾಗದ ರಸ್ತೆಯಲ್ಲಿ ಹೆಚ್ಚುಮಂದಿ ಪದಕಧಾರಿಗಳು ನೋಡಸಿಗುತ್ತಾರೆ.

ಇನ್ನೂ ಅನೇಕ ಉಪಹಾರ ಗೃಹಗಳಲ್ಲೂ, ನಾಟ್ಯ ವಿನೋದ ಮಂದಿರಗಳಲ್ಲೂ ಅವರು ತುಂಬಾ ಸಂಖ್ಯೆಯಲ್ಲಿರುತ್ತಾರೆ. ಕಾಲುದಾರಿಯಲ್ಲಿ ಯಾವಾಗಲಾದರೂ ಕೆಲ ಬಿಳಿಕೂದಲಿನ ಹಳೇ ಸಭ್ಯಗೃಹಸ್ಥರು ನಿಂತಿದ್ದರು. ಕೈಲಾರ್ಡನು ತನ್ನಷ್ಟಕ್ಕೆ: "ಅವರು ಸನ್ಮಾನ್ಯ ಗೌರವ ದಳದ ಅಧಿಕಾರಿಗಳು" ಅನ್ನುತಿದ್ದನು. ಗೌರವಪೂರ್ವಕವಾಗಿ ಅವನು ತನ್ನಷ್ಟಕ್ಕೆ ತಲೆಯ ಹೇಟನ್ನು ಎತ್ತುವುದಕ್ಕೆ ಮನಸ್ಸು ಮಾಡುತಿದ್ದನು.

ಸರಕಾರ ಅಧಿಕಾರಿಗಳು ಸೈನ್ಯಾಧಿಕಾರಿಗಳಿಗಿಂತ ಹೆಚ್ಚಿನ ಗಂಭೀರ ಭಾವದವರೆಂದು ಅನೇಕ ಸಲ ಅವನು ಹೇಳಿದ್ದನು. ಅಧಿಕಾರಿಗಳು ಹೆಚ್ಚು ದರ್ಪದಿಂದ ತಲೆ ಮೇಲಕ್ಕೆತ್ತಿ ನಡೆಯುತ್ತಾರೆ; ಅವರಿಗೆ ಸರಕಾರದ ಕಡೆಯಿಂದ ಹೆಚ್ಚಿನ ಸಹಾನುಭೂತಿ ಇರುವುದರಿಂದ ಅವರ ಪ್ರಾಧಾನ್ಯವು ಹೆಚ್ಚು ವಿಶಾಲತೆಯದು ಎಂದೇ ಅವನ ಅಭಿಪ್ರಾಯ.

ಕೆಲವು ಸಲ ಕೈಲಾರ್ಡನು ಪದಕಧಾರಿ ಗೃಹಸ್ಥರ ವಿಷಯವಾಗಿ ಇಲ್ಲದ ಮಾತ್ಸರ್ಯ ತಾಳುತಿದ್ದನು. ಅವರನ್ನು ನೋಡಿದರೆ ಉರಿದು ಬೀಳುವ ಸಮತಾವಾದಿಗಳಂತೆ ಅವನಾಗುತಿದ್ದನು. ಹಸಿವೆಯಿಂದ ಬಳಲುವ ಭಿಕ್ಷುಕನೊಬ್ಬನು ಉಪಹಾರ ಮಂದಿರದ ಎದುರಿನಿಂದ ಹಾದುಹೋಗುವಾಗ ಯಾವ ರೀತಿಯಲ್ಲಿ ಉದ್ವಿಗ್ನನಾಗುವನೋ ಅದೇ ತರದಲ್ಲಿ ಪದಕಧಾರಿಗಳನೇಕರನ್ನು ಹಾದು ಬಂದ ಕೈಲಾರ್ಡನು ಅಸಹನೀಯ ಮತ್ಸರದಿಂದ ಬಳಲಿದವನಾಗಿ ಬಹು ಉದ್ವೇಗದಿಂದ ಮನೆಗೆ ಬಂದು ಗಟ್ಟಿಯಾದ ಸ್ವರದಲ್ಲಿ: 'ಈ ಹಾಳಾದ ಸರಕಾರದಿಂದ ನಾವೆಂದು ಪಾರಾಗುವೆವೊ ಕಾಣೆ' ಎಂದು ಒದರುವನು, ಸೋಜಿಗಗೊಂಡವಳಾದ ಅವನ ಹೆಂಡತಿಯು: "ಇಂದು ನಿಮಗೇನಾಗಿದೆ?" ಎಂದು ಪ್ರಶ್ನಿಸುವಳು.

"ನನಗೆ ಭಯಂಕರ ಕೋಪ ಬಂದಿದೆ. ನಮ್ಮ ಸುತ್ತಮುತ್ತಲಲ್ಲಿ ಅದೆಂತಹ ಅನ್ಯಾಯ ನಡೆಯುತ್ತಲಿದೆ. ಸಮತವಾದಿಗಳ ಮತವು ನಿಜವಾಗಿ ಸರಿಯಾದುದು" ಎಂದವನು ಉತ್ತರಿಸುವನು.

ಊಟದ ನಂತರ ಅವನು ಪದಕಗಳನ್ನು ಮಾರುವ ಅಂಗಡಿಗೆ ಹೋಗಿ ಅಲ್ಲಿ ಮಾರಲಿಟ್ಟ ನಾನಾ ವಿಧದ ಸಂಕೇತ ಪದಕಗಳನ್ನು ಬಿರುದು ಚಿಹ್ನೆಗಳನ್ನು ಸೂಕ್ಷ್ಮವಾಗಿ ಪರಿಕಿಸುವನು. ಅವುಗಳೆಲ್ಲವನ್ನು ಧರಿಸಿ ಮಡಚಿದ ಹೇಟನ್ನು ಕಂಕುಳಲ್ಲಿಟ್ಟು ಒಂದು ದೊಡ್ಡ ಮೆರವಣಿಗೆಯ ಮುಂಬಾಗದಲ್ಲಿ ಜನರ ಹೊಗಳುವಿಕೆ ಸನ್ಮಾನಪೂರ್ವಕ ವಂದನೆಗಳಿಂದ ಉಜ್ವಲವಾಗಿ ಚಲಿಸುವ ತಾರೆಯಂತೆ ಮೆರೆಯಬೇಕೆಂದು ಅವನಿಗೆ ಅನಿಸುವುದು. ಅಯ್ಯೋ ಪಾಪ! ಅದಕ್ಕೆ ಪದಕಗಳನ್ನು ಧರಿಸಲು ಅವನಿಗೆ ಯಾವ ಪರವಾನಿಗೆಯೂ ಇಲ್ಲ. ಸರಕಾರದ ಯಾವ ಪಾರಿತೋಷಕವೂ ಅವನಿಗೆ ಸಿಕ್ಕಲಿಲ್ಲ.

ಅವನು ತನ್ನಷ್ಟಕ್ಕೆ ಹೀಗೆ ಹೇಳಿಕೊಳ್ಳುತಿದ್ದನು: "ಒಬ್ಬನು ಸಾರ್ವಜನಿಕ ಕೆಲಸದಲ್ಲಿ ಪ್ರಾಶಸ್ತ್ಯ ಪಡೆಯದಿದ್ದರೆ ಯಾವನಿಗಾದರೂ ಬಹುಮಾನದ ಆ ಪದಕಗಳನ್ನು ಸಂಪಾದಿಸುವುದು ಅತೀ ಕಷ್ಟದ ಕೆಲಸವೇ ಸರಿ. ಒಂದು ವೇಳೆ ನಾನು ವಿದ್ಯಾಂಗ ಮಂಡಳದ ಅಧಿಕಾರಿಯಾಗಿ ನೇಮಿಸಲ್ಪಡಲು ಪ್ರಯತ್ನಿಸಿದರೆ ಹೇಗೆ?"

ಆದರೆ ಆ ಪ್ರಯತ್ನಕ್ಕೆ ಹೇಗೆ ಕೈಹಾಕುವುದೆಂದೇ ಅವನಿಗೆ ಗೊತ್ತಿಲ್ಲ, ಈ ವಿಷಯದ ಕುರಿತು ಅವನು ತನ್ನ ಅರ್ಧಾಂಗಿಯೊಡನೆ ಪ್ರಸ್ತಾಪಿಸಿದಾಗ ಅವಳಿಗೆ ದಿಗಿಲಾಶ್ಚರ್ಯಗಳುಂಟಾದುವು.

ಅವಳೆಂದಳು: "ವಿದ್ಯಾಂಗಮಂಡಳದ ಅಧಿಕಾರಿಗಳೇ? ಅದನ್ನು ಪಡೆಯಲು ನೀವೇನು ಅಂತಹ ಶ್ಲಾಘನೀಯ ಕೆಲಸ ಮಾಡಿರುವಿರಿ"

ಅವನಿಗೆ ಕೋಪ ಬಂತು: "ನಾನು ಏನು ಮಾಡುತ್ತಿರುವೆನೆಂದು ನನಗೆ ಗೊತ್ತಿದೆ. ಆ ಕೆಲಸಕ್ಕೆ ಹೇಗೆ ತೊಡಗಬೇಕೆಂದು ತಿಳಿಯಲು ಮಾತ್ರ ನಾನು ಬಯಸುತ್ತೇನೆ. ಕೆಲವು ಸಲ ನೀನು ಮೂರ್ಖಳಂತೆ ವರ್ತಿಸುವೆ" ಎಂದನು.

ಅವಳು ಮುಗುಳ್ನಗೆ ನಕ್ಕಳು: "ನೀವು ಹೇಳುವುದು ನಿಜ. ನನಗೆ ಅದರ ವಿಷಯ ಏನೂ ತಿಳಿಯುವುದಿಲ್ಲ."

ಕಡೆಗೊಂದು ಯೋಚನೆ ಅವನಿಗೆ ಹೊಳೆಯಿತು: "ಒಂದು ವೇಳೆ ನೀನು ಹೋಗಿ ನ್ಯಾಯವಿಧಾಯಕ ಸಭೆಯ ಪ್ರತಿನಿಧಿಯಾದ ಆ ರೊಸೆಲಿನ್ ಮಹಾಶಯರೊಡನೆ ಈ ವಿಷಯ ಕುರಿತು ಮಾತಾಡಿದರೆ ಅವರೇನಾದರೂ ಸಲಹೆ ಕೊಡಬಲ್ಲರು. ನಾನೇ ಹೋಗಿ ಅದರ ಪ್ರಸ್ತಾಪವೆತ್ತುವುದು ಚೆನ್ನಾಗಿ ಕಾಣುವುದಿಲ್ಲ. ಅದು ಬಹು ಕಷ್ಟದ್ದೂ ಮತ್ತು ಅತೀ ತೀಕ್ಷ್ಣವೂ ಆದ ಕೆಲಸ."

ಕೈಲಾರ್ಡ್ ಮಹಿಳೆಯು ಗಂಡನು ಹೇಳಿದಂತೆ ಮಾಡಿದಳು. ರೊಸೆಲಿನ್ ಮಹಾಶಯನು ವಿದ್ಯಾಂಗ ಮಂತ್ರಿಯೊಡನೆ ಆ ಕುರಿತು ಮಾತನಾಡುವುದಾಗಿ ವಾಗ್ದಾನ ಮಾಡಿದರು. ಕೈಲಾರ್ಡನ ಕುರಿತು ಆ ಪ್ರತಿನಿಧಿಯು ತುಂಬಾ ಭಂಗಪಟ್ಟುಕೊಂಡನು. ಕೊನೆಗೆ "ನಿನ್ನ ಯೋಗ್ಯತೆಯನ್ನು ಪ್ರತಿಪಾದಿಸಿ ಒಂದು ಅರ್ಜಿ ಮಾಡು" ಎಂದವನು ಕೈಲಾರ್ಡನಿಗೆ ಸಲಹೆಕೊಟ್ಟನು.

"ಅವನ ಯೋಗ್ಯತೆಯಾದರೂ ಏನು? ಅವನು ಬಿ. ಎ. ಕೂಡಾ ಪಾಸಾಗಲಿಲ್ಲ" ಹೀಗೆಂದು ಪ್ರತಿನಿಧಿ ಎಂದ.

ಹೇಗಾದರೂ ಕೈಲಾರ್ಡನು ಕೆಲಸಕ್ಕೆ ತೊಡಗಿದ. ಕೊನೆಗೆ 'ವಿದ್ಯೆಪಡೆಯುವುದು ಜನರ ಜನ್ಮ ಸಿದ್ಧ ಹಕ್ಕು" ಎಂಬೊಂದು ಲೇಖನವನ್ನು ಸಿದ್ಧಮಾಡಿದನು. ಅದರಲ್ಲಿ ಯಾವ ಯಾವ ವಿಚಾರಗಳನ್ನು ತುಂಬಬೇಕೆಂದು ಅವನಿಗೆ ತೋಚದ್ದರಿಂದ ಅದನ್ನು ಸಂಪೂರ್ಣಗೊಳಿಸಲು ಅವನಿಂದಾಗಲಿಲ್ಲ.

ಅವನು ಬೇರೆ ಇನ್ನೂ ಸುಲಭವಾದ ವಿಷಯಗಳನ್ನು ಬರೆಯಲು ಪ್ರಾರಂಭಿಸಿದ. ಅದರಲ್ಲಿ "ದೃಷ್ಟಿಮೂಲಕ ಮಕ್ಕಳ ಶಿಕ್ಷಣ" ಎಂಬದೊಂದು ಮೊದಲನೆಯದು. ಪೆರಿಸಿನ ಎಲ್ಲಾ ಕಡೆಗಳಲ್ಲೂ ಮಕ್ಕಳ ನಾಟಕಶಾಲೆಗಳನ್ನು ಏರ್ಪಡಿಸಬೇಕೆಂದು ಅವನು ಸೂಚಿಸಿದನು. ಚಿತ್ರಗಳ ಮೂಲಕವೂ, ಮೆಜಿಕ್ ಲಾಂದ್ರದ ಮೂಲಕವೂ ಮಕ್ಕಳಿಗೆ ಪ್ರತಿಯೊಂದು ವಿಜ್ಞಾನ ವಿಷಯವನ್ನೂ ಕಲಿಸಬೇಕು. ನೋಡುವುದರ ಮೂಲಕ ಮಕ್ಕಳ ಮನಸ್ಸು ಶಿಕ್ಷಣ ಸಂಸ್ಕಾರ ಹೊಂದುತ್ತದೆ. ಚಿತ್ರಗಳು ಅವರ ಮನಸ್ಸಿನ ಮೇಲೆ ಪರಿಣಾಮಕಾರಿಯಾದ ಪ್ರಭಾವ ಮಾಡುವುವು. ಹೀಗೆ ವೈಜ್ಞಾನಿಕ ಪರಿಜ್ಞಾನವು ಅವರಿಗುಂಟಾಗುವುದು. ವಿಶ್ವ ಇತಿಹಾಸವನ್ನೂ, ಭೌಗೋಲಿಕ ಜ್ಞಾನವನ್ನೂ, ಪ್ರಕೃತಿ ಶಾಸ್ತ್ರವನ್ನೂ, ಸಸ್ಯ, ಪ್ರಾಣಿಗಳನ್ನೂ, ಅಂಗರಚನಾ ವಿಧಾನವನ್ನೂ ಈ ರೀತಿ ಕಲಿಸುವುದಕ್ಕಿಂತಲೂ ಹೆಚ್ಚಿನ ಸರಳತೆಯ ಬೇರೆ ವಿಧಾನವಾವುದಿದೆ?

ಅವನು ತನ್ನ ಶಿಕ್ಷಣ ಪ್ರಬಂಧವನ್ನು ಪುಸ್ತಕ ರೂಪದಲ್ಲಿ ಅಚ್ಚು ಹಾಕಿಸಿ ತನ್ನ ಸ್ನೇಹಿತ ನ್ಯಾಯವಿಧಾಯಕ ಸಭೆಯ ಪ್ರತಿನಿಧಿಗೆ ಒಂದು ಪ್ರತಿ ಕಳುಹಿಸಿಕೊಟ್ಟನು, ಸರಕಾರದ ಪ್ರತಿ ಮಂತ್ರಿಗೂ ಹತ್ತತ್ತು, ಪ್ರಭುತ್ವದ ಅಧ್ಯಕ್ಷರಿಗೆ ಐವತ್ತು ಪ್ರತಿಗಳನ್ನೂ ಕಳುಹಿಸಿದನು. ವಾರ್ತಾಪತ್ರಿಕೆಗಳಿಗೆ ಪ್ರತಿಯೊಂದಕ್ಕೂ ಐದೈದು ಪ್ರತಿಗಳನ್ನು ಕಳುಹಿಸಿಕೊಟ್ಟನು.

(೯ನೇ ಪುಟಕ್ಕೆ ಮುಂದುವರಿದಿದೆ)

★ ★ ಜಪಾನಿ ಸೈನಿಕ ★ ★

ಬರ್ಮದ ಮಲೇರಿಯಾ ಪೀಡಿತ ಕಾಡುಗಳಲ್ಲಿ ಯುದ್ಧಮಾಡುವುದು ನುರಿತ ಹಿಂದೀ ದಳಗಳಿಗೇ ಬಹಳ ಕಷ್ಟತರವೆನಿಸಿದಾಗ ಒಂದು ಹಿಡಿ ಅನ್ನ ತಿಂದು ಜಪಾನಿ ಸೈನಿಕರು ದಿವಸಗಟ್ಲೆ ಉಪವಾಸ ಬಿದ್ದು ಶ್ರಮಾಯಾಸವಿಲ್ಲದೆ ಯುದ್ಧ ಮಾಡುತಿದ್ದರೆಂಬ ವಿಷಯವು ಹಿಂದೊಮ್ಮೆ ಪ್ರಕಟವಾಗಿತ್ತು. ಬಾಲ್ಯದಲ್ಲಿ ವಿಪರೀತ ಉಣ್ಣಿಸಿದುದರ ಫಲವಾಗಿ ದೊಡ್ಡದಾದ ಮೇಲೆ ಅವರಿಗೆ ಆಹಾರದ ಹೆಚ್ಚು ಆಸಕ್ತಿ ಇಲ್ಲದಿರುವುದೇ ಇದಕ್ಕೆ ಕಾರಣವೆನ್ನಲಾಗಿದೆ. ಇದಲ್ಲದೆ ಇನ್ನಿತರ ಬೇರೆ ಅನೇಕ ಕಾರಣಗಳೂ ಇವೆ.

ಎಂಟನೇ ವರ್ಷದ ಬಾಲ್ಯದಲ್ಲಿ ಜಪಾನಿ ಹುಡುಗನ ಸೈನ್ಯ ತರಬೇತಿ ಪ್ರಾರಂಭವಾಗುತ್ತದೆ. ಅದು ಅವನ ವಿದ್ಯಾಭ್ಯಾಸದ ಒಂದು ಅಂಗವೇ ಆಗಿರುತ್ತದೆ. ಆಗಿನಿಂದಲೇ ಅವನಲ್ಲಿ ಈ ದೇಹಿಕ ಶ್ರಮ ಸಹಿಷ್ಣುತಾ ಶಕ್ತಿಯು ಬೆಳೆಯತೊಡಗುತ್ತದೆ.

ಕಟುಕ ಮನೋವೃತ್ತಿಯ ಜಪಾನಿ ಸೈನಿಕರ ಜೀವನವು ಕೆಲವು ಆವೇಶಭರಿತ ಭಾವೋದ್ರೇಕಗಳಿಂದ ರೂಪುಗೊಂಡಿದೆ ಎಂಬ ಸಂಗತಿಯು ಕೌತುಕವನ್ನುಂಟು ಮಾಡದಿರದು. ಸಂದರ್ಭಗಳು ಅವರ ಇಚ್ಛೆಯಂತೆ ಕೈಗೂಡದಿದ್ದಾಗ ಅವರ ಮಿದುಳೇ ಕೆಟ್ಟಂತಾಗಿ ಕೊನೆಗೆ ಆತ್ಮಹತ್ಯದಲ್ಲಿ ಅದು ಪರಿಣಾಮಗೊಳ್ಳುತ್ತದೆ.

ಜಪಾನಿ ಸೈನಿಕನ ಜೀವನವೆಲ್ಲವೂ ಚಕ್ರವರ್ತಿ ವಿಧೇಯತ್ವದ ಧ್ಯೇಯದಿಂದ ಪರಿಪೋಷಿತವಾಗಿರುವುದು. ಅವನ ಚಕ್ರವರ್ತಿಯು ಯುದ್ಧಮಾಡುವನು, ಶಾಂತಿಗೈಯುವನು, ಒಪ್ಪಂದ ಮಾಡುವನು ಸೈನಿಕನೊಬ್ಬನ ಉಚ್ಚ ಕಾಂಕ್ಷೆಯೆಂದರೆ ತನ್ನ ಚಕ್ರವರ್ತಿಗಾಗಿ ಪ್ರಾಣವನ್ನರ್ಪಿಸುವುದು.

ಈಚೆಗೆ ಜಪಾನೀ ಸೈನಿಕರ ಈ ಮನೋವೃತ್ತಿಯು ಸುಧಾರಿಸಿದಂತೆ ತೋರುತ್ತದೆ. ಅವರು ಶತ್ರುಗಳಿಂದ ಚಕ್ರವರ್ತಿಗೆ ಅಪಮಾನ ಬರದಂತೆ ಆತ್ಮಹತ್ಯಮಾಡಿಕೊಳ್ಳುವುದರ ಬದಲು ಹೆಚ್ಚೆಚ್ಚು ಸಂಖ್ಯೆಯಲ್ಲಿ ಶರಣಾಗತರಾಗುತಿದ್ದಾರೆ.

ಇಷ್ಟೊಂದು ಮೂರ್ಖ ವಿಧೇಯತ್ವದ ವ್ಯಕ್ತಿಯಾಗಿದ್ದರೂ ಜಪಾನಿ ಸೈನಿಕನು ನಿರಕ್ಷರಕುಕ್ಷಿಯಲ್ಲ. ಸಾವಿರದಲ್ಲಿ ೯೯೪ ಮಂದಿ ಜಪಾನಿ ಸೈನಿಕರು ವಿದ್ಯಾವಂತರು-ಕವಿಷ್ಕ ಪಕ್ಷದಲ್ಲಿ ಓದಲೂ ಬರೆಯಲೂ ತಿಳಿದವರು. ಇನ್ನೊಂದು ಸ್ವಾರಸ್ಯದ ಸಂಗತಿ ಎಂದರೆ ಶೇಕಡಾ ೫೦ರಷ್ಟು ಸೈನಿಕರಿಗೆ ಇಂಗ್ಲಿಷ್ ಭಾಷೆ ಚೆನ್ನಾಗಿಗೊತ್ತಿರುತ್ತದೆ.

ಬಾಲ್ಯದ ತರಬೇತಿ

ಎಂಟನೇ ವರ್ಷದಲ್ಲಿ ಜಾಪ್ ಹುಡುಗನು ವಾರಕ್ಕೆ ೨ ಗಂಟೆ ಸೈನಿಕ ತರಬೇತಿ ಹೊಂದುತ್ತಾನೆ. ೧೪ನೇ ವರ್ಷದಲ್ಲಿ ಅವನಿಗೆ ಎಲ್ಲಾ ಮಿಲಿಟರಿ ಶಬ್ದಗಳೂ ಚೆನ್ನಾಗಿ ಅಭ್ಯಾಸವಾಗುತ್ತವೆ. ೧೭ರಲ್ಲಿ ಅವನನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಾರೆ.

ಸರ್ವಸಾಧಾರಣವಾಗಿ ಜಪಾನಿಯನ ಸರಾಸರಿ ಎತ್ತರವು ೫ ಅಡಿ ೩ ಅಂಗುಲವಿದ್ದು ಅವನು ಸರಾಸರಿ ನಾಲ್ಕು ಮಣದಷ್ಟು ಭಾರವಿರುತ್ತಾನೆ. ಇಷ್ಟೊಂದು ಚಿಕ್ಕ ವ್ಯಕ್ತಿಯಿಂದ ಅದ್ಭುತ ಸಾಹಸಗಳು ನಿರೀಕ್ಷಿಸಲ್ಪಡುತ್ತದೆ. ಪ್ರತಿದಿನ ಅವನು ೨೦ ಮೈಲು ನಡೆಯಲೇಬೇಕು. ಅವಸರದ ಪರಿಸ್ಥಿತಿಯಲ್ಲಿ ಮಧ್ಯ ರಾತ್ರೆಯಿಂದ ಮಧ್ಯಾಹ್ನದ ಚಹಾ ಹೊತ್ತಿನೊಳಗೆ ೭೦ ಮೈಲು ಚಲಿಸಲೂ ಅವನು ಸಿದ್ಧನೇ ಇದ್ದಾನೆ, ಇರಬೇಕು.

ಜಾಪನ ಸೈನಿಕ ತರಬೇತಿ ದಿನವು ಪ್ರಾತಃ ೫-೩೦ಕ್ಕೆ ಪ್ರಾರಂಭವಾಗುತ್ತದೆ. ರಾತ್ರೆ ೧೦ರ ತನಕ ಅವನಿಗೆ ಬಿಡುವಿಲ್ಲ. ೭ ಗಂಟೆಗಿಂತ ಹೆಚ್ಚು ಹೊತ್ತು ಅವನು ನಿದ್ರಿಸಲೇ ಬಾರದು.

ಖಂಡಿತವಾಗಿಯು ಜಪಾನಿ ಸೈನಿಕನು ಯುದ್ಧರಂಗಕ್ಕೆ ಸಿದ್ಧನಾಗಿಯೇ ತಯಾರಿಸಲ್ಪಡುವನು. ಮೇಲಿನಿಂದ ಕೆಳಗಿನ ವರೇಗೆ ವಿಧೇಯತ್ವವೇ ಅವರಿಗೆ ಗೊತ್ತಿರುವ ಒಂದು ವಿಷಯವಲ್ಲದೆ ಬೇರೆ ಸ್ವತಂತ್ರವಾಗಿ ಅವರೂ ಏನನ್ನೂ ಮಾಡಲಾರರು. ಒಂದು ಸಾರಿ ಮಾಡಿದ ಅವರ ಯೋಜನೆಗಳು ಕಾರಣಾಂತರದಿಂದ ತಬ್ಬಿಬ್ಬಾದರೂ ಅವರು ತಮಗೆ ಮೊದಲು ತಿಳಿಸಿದಂತೆ ಮಾಡಿ ತಮ್ಮ ಮೂಢ ಸೈನಿಕತನದ ಪ್ರದರ್ಶನ ಮಾಡುತ್ತಾರೆ.

ಜಪಾನಿನಲ್ಲಿ ಪೆಟ್ರೋಲು ಇಲ್ಲ

೧೯೩೯ರ ವರೇಗೆ ಜಪಾನಿಗಳ ಹತ್ತಿರ ತಮ್ಮ ಸ್ವಂತ ತಯಾರಿಕೆಯ ಟೇಂಕುಗಳು ಇರಲಿಲ್ಲವೆಂಬ ಸಂಗತಿ ಅತೀ ಸೋಜಿಗವಾದುದು. ಕ್ರಮೇಣ ಅವರು ಬ್ರಿಟಿಷ್, ಫ್ರೆಂಚ್ ಮತ್ತು ರಶ್ಯನ್ ಟೇಂಕುಗಳ ಮಾದರಿಯನ್ನು ಪ್ರತಿ ನಕಲು ತೆಗೆದು ತಯಾರಿಸಹತ್ತಿದರು. ಯುದ್ಧಾನಂತರವಂತೂ ಈ ನಕಲು ತೆಗೆಯುವಿಕೆಯು ಅತೀ ಹೆಚ್ಚಾಯಿತು.

ಯುರೋಪು ಯುದ್ಧದಲ್ಲಿ ೩ ಆನೆ ಭಾರದ ಟೇಂಕುಗಳು ಉಪಯೋಗಿಸಲ್ಪಟ್ಟರೂ ಜಪಾನರ ಹತ್ತಿರ ಇರುವ ಅತೀ ದೊಡ್ಡ ಟೇಂಕಿನ ಭಾರ ಹೆಚ್ಚಾದರೆ ಒಂದು ಆನೆಯಷ್ಟಿದೆ–ಸುಮಾರು ೯೦ ಖಂಡಿ. ಅವರ ಅತೀ ಸಣ್ಣ ಟೇಂಕು ಬರೀ ೨೦ ಖಂಡಿ ಭಾರವಿದೆ. ಆದರೆ ಈ ಸಣ್ಣ ಟೇಂಕು ಕಾಡು ಬೆಟ್ಟ ಯುದ್ಧದಲ್ಲಿ ಬಹಳ ಪ್ರಯೋಜನಕಾರಿಯೆನ್ನಬಹುದು.

ಯುದ್ಧಾರಂಭದಿಂದ ಜಪಾನಿಗಳಿಗೆ ಪೆಟ್ರೋಲ್ ಅಭಾವದಿಂದ ತುಂಬಾ ತೊಂದರೆಯಾಗಿದೆ. ಜಪಾನರ ಸ್ವಂತ ದೇಶದಲ್ಲಂತೂ ಮಿಲಿಟರಿ ಲೋರಿಗಳನ್ನೂ 'ಗೇಸ್' ಉಪಕರಣದಿಂದಲೇ ಓಡಿಸುತಿದ್ದಾರೆ. ಇತರ ನಾಗರೀಕರ ವಾಹನಗಳಿಗೆ ಪೆಟ್ರೋಲು ಎಣ್ಣೆ ಇಲ್ಲವೇ ಇಲ್ಲ.

ಜಪಾನಿಗಳ ಲೋರಿಗಳಾದರೂ ಅವರ ಇತರ ಸಾಮಾನುಗಳಂತೆ ನಿರ್ಬಲಾವಸ್ಥೆಯವು. ಅವರ ಯುದ್ಧರಂಗ ಮೋಟಾರುಗಳು ಮಂಚೂರಿಯದಂತಹ ಶೀತ ಪ್ರದೇಶದಲ್ಲಿ ಓಡಲು ತಕ್ಕವುಗಳಾಗಿದ್ದರೂ ಉಷ್ಣ ಪ್ರದೇಶದಲ್ಲಿ ಅವು ಹೆಚ್ಚು ಕಾಲ ಬಾಳದಂತವು.

ಜಾಪರ ವೈದಕೀಯ ಸಲಕರಣೆ

ಅವರ ಇಂಜಿನಿಯರರೂ ಯಂತ್ರೋಪಕರಣ ದುರಸ್ತಿಗಾರರೂ ತುಂಬಾ ಪ್ರವೀಣ ಕೆಲಸಗಾರರು. ಆದರೂ ಅತ್ಯಲ್ಪ ಅವಧಿಯಲ್ಲಿ ಅವರಿಂದ ಹೆಚ್ಚಿನ ಕೆಲಸವನ್ನು ನಿರೀಕ್ಷಿಸಲಾಗುವುದಿಲ್ಲ. ಅವರ ವಿಮಾನ ನಿಲ್ದಾಣಗಳಾಗಲೀ, ಮಾರ್ಗಗಳಾಗಲೀ ಮಿತ್ರ ಕೆಲಸಗಾರರಷ್ಟು ಶ್ರೇಷ್ಠತೆಯವುಗಳಲ್ಲ. ಆದರೆ ಅವರ ಯುದ್ಧ ಕ್ಷೇತ್ರದ ಭದ್ರತಾಸಾಧನ ಸಿದ್ಧತೆಗಳು ನಿಸ್ಸಂದೇಹವಾಗಿ ಪ್ರಥಮ ತರಗತಿಯವುಗಳು.

ಜಪಾನಿಗಳ ವಿಮಾನದಳ ತರಬೇತಿಯು ಮುಂಚೆ ಹತ್ತು ತಿಂಗಳಿತ್ತು–ಈಗ ಮೂರೇ ತಿಂಗಳಲ್ಲಿ ಅದನ್ನು ಮುಗಿಸುತ್ತಾರೆ. ಅವರ ವಿಮಾನ ತಯಾರಿಕೆಯ ಕುರಿತು ಹೆಚ್ಚಿನ ವಿಷಯಗಳನ್ನು ಹೇಳುವ ಅವಶ್ಯಕತೆ ಇಲ್ಲ.

ಅವರ ರೇಡಿಯೊ ಉಪಕರಣಗಳು ತೃಪ್ತಿಕರ ಶ್ರೇಷ್ಠತೆಯವುಗಳಾದರೂ, ಬ್ರಿಟಿಷ್-ಅಮೇರಿಕನ್ ಮಾದರಿಯವುಗಳಿಗೆ ಅವು ಸರಿಗಟ್ಟಲಾರವು.

ಅವರ ಪ್ರತಿ ಸೈನಿಕನ ಬಳಿ ಇರುವುದೊಂದು ಗೋಣಿ ಚೀಲ. ೧೩ ಇಂಚು ಚಚ್ಚೌಕ, ಐದು ಇಂಚು ಆಳ. ಇಷ್ಟು ಸಣ್ಣ ಚೀಲದೊಳಗೆ ಜಾಪ್ ಸೈನಿಕನು ತನ್ನೆರಡು ಬೂಟ್ಸು, ಒಂದು ಚಿಕ್ಕ ಟೆಂಟು, (ಮಡಚುವ ಮರದ ಕೋಲುಗಳ ಸಮೇತ) ಕಾಲು ಚೀಲ, ಒಂದು ಶಾಲು, ಸಾಬೂನು ಮತ್ತಿತರ ಚಿಕ್ಕ ಚಿಕ್ಕ ಸಾಮಾನುಗಳು, ಔಷಧಿಗಳು, ಇಷ್ಟೊಂದು ವಸ್ತುಗಳನ್ನು ತುಂಬುವುದಲ್ಲದೆ ಕೆಲವು ದಿನಗಳಿಗೆ ಬೇಕಾದ ಆಹಾರ ವಸ್ತುಗಳನ್ನೂ ನುಗ್ಗಿಸಿಡುತ್ತಾನೆ.

ಅವರ ವೈದಕೀಯ ಸಲಕರಣೆಗಳಂತು ಸುಮಾರಾಗಿದೆ. ಅದರಲ್ಲಿ ವಿಟಮಿನ್‌ಗಳೂ, ಕ್ವಿನಿನ್, ಘಾಯ ಔಷದ, ತಲೆನೋವು ಹೊಟ್ಟೆನೋವು ಮಾತ್ರೆಗಳು ಇರುತ್ತವೆ. ಒಬ್ಬನ ದೇಹದಿಂದ ರಕ್ತವನ್ನು ಇನ್ನೊಬ್ಬನ ದೇಹದೊಳಗೆ ತುಂಬಿಸಲು ಬೇಕಾದ ಉಪಕರಣವೂ ಅವರ ಬಳಿ ಇದೆ. ಆದರೆ ಇದು ಅಷ್ಟೊಂದು ಆಧುನಿಕ ಮಾದರಿಯದಲ್ಲ. ಅವರು ಅದನ್ನು ಉಪಯೋಗಿಸುತ್ತಾರೋ ಇಲ್ಲವೊ ಎಂಬ ಸಂಗತಿಯೂ ಸಂದೇಹಾಸ್ಪದ. ಕಾರಣ ಆತ್ಮಹತ್ಯಮಾಡಿಕೊಳ್ಳುವ ಜನಾಂಗದವರಿಗೆ ಜೀವ ರಕ್ಷಿಸುವ ಕೆಲಸವೇಕೆ?

The Canara Banking Corporation, Ltd.

(Incorporated in British Inbia)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.



ನಿಜ ಸಂಗತಿಗಳೇ ಭವ್ಯವಾದವುಗಳು.

ಈಗಾಗಲೇ ನಮ್ಮ ಜನಪ್ರಿಯ ವಾಚುಗಳು ಕಾರ್ಖಾನೆಯಿಂದ ಈ ದೇಶಕಡೆ ಕಳುಹಲ್ಪಟ್ಟಿವೆ ಎಂಬುದು ನಿಜವಾದ ಸಂಗತಿ. ಇಷ್ಟಾದರೂ ಸದ್ಯದಲ್ಲೇ ತಕ್ಕಷ್ಟು ಅವು ನಮಗೆ ತಲುಪಲಾರವು. ಸಾವಿರಾರು ಮೈಲುಗಳ ಅಭ್ಯಂತರವಿದೆ. ವಾಹನ ಸೌಕರ್ಯಗಳೂ ಇಲ್ಲ. ನಮ್ಮ ತಯಾರಿಕೆಗಳ ಪ್ರವಾಹವು ಸರಿಯಾಗಿ ಹರಿಯಬೇಕಾದರೆ ಇನ್ನೂ ಕೆಲವು ತಿಂಗಳು ಬೇಕಾಗುವುವು.

ನಮ್ಮ ದಾಸ್ತಾನು ಕಮ್ಮಿಯಾಗಿದೆ. ನಿರ್ದಿಷ್ಟವಾಗಿದೆ. ತಮ್ಮ ಅವಶ್ಯಕತೆಗಳನ್ನು ಕೂಡಲೇ ಪೂರೈಸಲಾಗದಿದ್ದುದಕ್ಕೆ ನಮ್ಮ ಗ್ರಾಹಕರು ನಮ್ಮನ್ನು ಕ್ಷಮಿಸುವರಾಗಿ ಕೋರುತ್ತೇವೆ.

QUALITY WATCHES

ವೆಸ್ಟ್ ಎಂಡ್ ವಾಚ್ ಕೊ. ಬೊಂಬ್ಯಾ ಮತ್ತು ಕಲ್ಕತ್ತಾ.

WEST END WATCH Co.

BOMBAY CALCUTTA

Makers of Quality Watches for over 75 Years.

ವಿಶ್ವದೃಷ್ಟಿಯಲ್ಲಿ ಭಾರತ

ಬಂಗಾಲದ ಮುಸ್ಲಿಂ ಲೀಗ್ ಮಂತ್ರಿಮಂಡಳವು ಕೊನೆಗೊಳ್ಳಲು 'ಅಲ್ಲಿಯ ವಿಚಾರವಂತ ಮುಸ್ಲಿಂ ವರ್ಗದವರು ಲೀಗಿಗೆ ಮಾಡಿದ ವಿಶ್ವಾಸ ದ್ರೋಹ'ವೇ ಕಾರಣವೆಂದು ಲೀಗ್ ಸೆಕ್ರೆಟರಿಗಳಾದ ನವಾಜ್‌ಜಾದಾ ಲಿಯಾಖತ್ ಹಯತ್ ಖಾನರು ಒಂದು ಹೇಳಿಕೆಯಲ್ಲಿ ತಿಳಿಸುತ್ತಾರೆ. 'ಇತಿಹಾಸದಲ್ಲಿ ಅತ್ಯಂತ ಭೀಕರ ಬರಗಾಲಕ್ಕೆ ಕಾರಣ ಭೂತವಾದ ಮಂತ್ರಿಮಂಡಳವನ್ನು ಅಂತ್ಯಗೊಳಿಸಲು ಬಂಗಾಲದ ಚಾರವಂತ ಮುಸಲ್ಮಾನರು ತಾವು ಸದಸ್ಯರಾಗಿದ್ದ ಸಂಸ್ಥೆಗೆ ವಿಶ್ವಾಸ ದ್ರೋಹ ಮಾಡಿದರೂನ್ಯಾಯವೆನಿಸದಿರದು'ಎಂದು ಬೊಂಬಾಯಿ ಪತ್ರಿಕೆಯೊಂದು ಅಭಿಪ್ರಾಯ ಪಡುತ್ತದೆ.

ಬಂಗಾಲದ ಬರಗಾಲವು ಬಿಹಾರದ ಭೂಕಂಪದಂತೆ ದೈವ ಪ್ರಧಾನವಾಗಿರದೆ ಅದು ಕೇವಲ ಮಾನವ ಕೃತವಾದುದೆಂದು ಅದರ ಕುರಿತು ವರದಿ ತಯಾರಿಸಲು ಸಂಯೋಜಿಸಲ್ಪಟ್ಟ ಸಮಿತಿಯವರು ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸುತ್ತಾರೆ.

ಬಂಗಾಲದ ದೃಶ್ಯಗಳು

ಈಗಲೂ ಮೃತ್ಯು ಛಾಯೆಯಿಂದ ಬಂಗಾಲವು ಮುಕ್ತವಾಗಿಲ್ಲ. ಲೀಗ್ ಮಂತ್ರಿಮಂಡಳವು ಸ್ಥಾಪಿತವಾದಂದಿನಿಂದಲ್ಲಿನ ಬರಗಾಲದ ದುಸ್ಥಿತಿಗೂ ಆರಂಭವಾಯಿತು. ಕೆಲವು ವಾರಗಳ ತನಕ ಬಂಗಾಲವನ್ನು ಸಂಚರಿಸಿ ಬಂದ ಓರ್ವ ಪತ್ರಿಕೋದ್ಯೋಗಿಗಳು ಈ ಕೆಳಗಿನ ವರ್ಣನೆಯನ್ನು ಕೊಟ್ಟಿರುವರು.

ಮಿಲಿಯಾವಧಿ ರೈತರು ನಿರಾಶ್ರಿತರಾಗಿದ್ದಾರೆ. ಕುಟುಂಬ ಜೀವನವು ನಾಶವಾಗಿದೆ.

ಮಿಲಿಯಾವಧಿ ಎಕ್ರೆ ಜಮೀನು ರೈತರಿಂದ ಜಮೀನ್ದಾರರ ವಶವಾಗಿದೆ. ಹಣ ಸಾಲಕೊಡುವವರು ಮತ್ತು ಸರಕಾರ'ಕಂಟ್ರಿಕ್ಟರು'ಗಳು ಹೆಚ್ಚಿನ ಜಮೀನನ್ನು ವಶಪಡಿಸಿಕೊಂಡಿರುವರು.

ಬಂಗಾಲೀ ಹಳ್ಳಿಸಮಾಜ ಜೀವನ ಧಾರೆಯು ಜರ್ಝರಿತವಾಗಿ ನಶಿಸಿ ಹೋಗಿದೆ. ಮಿಲಿಟರಿ ಕಾಮಗಾರಿಗಳಿಗೆ ಹೋಗುವ ಹೆಂಗುಸರು ತುಟಿಗೆ ಕೆಂಪು ಹಚ್ಚಿ ಕೊರಳು ತುಂಬ ಬಂಗಾರ ಒಡವೆಗಳನ್ನು ಧರಿಸುವುದನ್ನು ಕಾಣಬಹುದು. ಇದಕ್ಕೆ ಕಾರಣ ಅವರು ಹಗಲು ಕೂಲಿ ಕೆಲಸ ಮಾಡುತ್ತಾರೆ, ರಾತ್ರೆ ತಮ್ಮ ದೇಹಗಳನ್ನು ಮಾರುತ್ತಾರೆ. ಲೇಖನಿಯಿಂದ ಬರೆಯಲಸಹ್ಯವೂ, ಛಾಪಖಾನೆಯಲ್ಲಿ ಅಚ್ಚು ಮಾಡಲನರ್ಹವೂ ಆದ ಸಂಗತಿಗಳನ್ನು ಅಲ್ಲಿ ಕೇಳಬಹುದು, ನೋಡಬಹುದು.

ಎಂಟು ಹತ್ತು ವರ್ಷದ ಮಕ್ಕಳು ವ್ಯಭಿಚಾರ ಜೀವನದಲ್ಲಿ ಪ್ರವೀಣತೆ ಪಡೆದಿರುವರು. ಅನೇಕರು ತಮ್ಮ ಹುಡುಗಿಯರನ್ನು ಮಾರಲು ಮಧ್ಯಸ್ಥಿಕೆ ವಹಿಸುತ್ತಾರೆ.

ಎಲ್ಲಾ ಕಡೆಗಳಲ್ಲೂ ಮನೋಭ್ರಾಂತಿ ಹುಚ್ಚು ತಲೆಕೆಡುವಿಕೆಯ ಕುರುಹುಗಳೇ ತೋರುತ್ತಿವೆ. ತನ್ನ ಕುಟುಂಬದವರು ನಡೆಸಿದ ಭಯಂಕರ ಅನಾಚಾರವನ್ನು ಕಂಡು ಓರ್ವ ಬಾಲಕನಿಗೆ ಜ್ಞಾಪಕ ಶಕ್ತಿಯೇ ಇಲ್ಲವಾಗಿದೆ. ಓರ್ವ ತರುಣಿಯು ತಾನು ಮಾಡಿದ ವ್ಯಭಿಚಾರದಿಂದ ಹುಚ್ಚಳಾಗಿ ಶೋಕವಾಣಿಯನ್ನು ಅರುಹುತ್ತಿರುವಳು.

ಬರಗಾಲದ ಹಿಂದೆ ವ್ಯಾಧಿಗಳು ಬಂದುವು. ಮೊದಲು ಮಲೇರಿಯಾ, ನಂತರ ವಾಂತಿಭೇದಿ, ಈಗ ಕಾಳಜ್ವರವು ಜನರನ್ನು ಭೇಟಿ ಮಾಡುತ್ತಿದೆ.

ಅಲ್ಲಿ ನಿಜವಾಗಿ ಶ್ರೇಯಸ್ಕರವಾಗಿರುವವರೆಂದರೆ ಸರಕಾರಿ ಕಂಟ್ರಿಕ್ಟರರು. ಅವರು ದೇಹಗಳನ್ನು ಬೊಜ್ಜು ಬೆಳಸಿ ತಿರುಗುತ್ತಿರುವರು. ಅವರೊಂದಿಗೆ ಅವರ ಖಜಾನೆಯೂ ಬೆಳೆದಿದೆ. ಹಣವನ್ನು ಹೇಗೆ ವ್ಯಯಿಸಬೇಕೆಂಬುದೇ ಅವರಿಗೆ ಹೊಳೆಯದಾಗಿದೆ.

ಅಧಿಕಾರ ಏಕೆ ಬಿಟ್ಟುಕೊಡಬೇಕು?

ಫ್ರಿಸ್ಕೋದಲ್ಲಿ ಬ್ರಿಟಿಷ್ ರಾಯಭಾರಿ ಪ್ರತಿನಿಧಿ ಈಡನ್ನರು ಭಾರತದ ಕುರಿತು ಮಾತನಾಡುತ್ತಾ 'ಅಲ್ಲಿಯ ರಾಜಕೀಯ ಪಕ್ಷಗಳೊಳಗೆ ಒಪ್ಪಂದವಾಗದ್ದರಿಂದ ರಾಜ್ಯ ಘಟನೆಯಲ್ಲಿ ಯಾವ ಸುಧಾರಣೆಯನ್ನೂ ಮಾಡಲು ಸಾಧ್ಯವಾಗಿಲ್ಲವಾಗಿದೆ' ಎಂಬ ಹಳೇ ರಾಗವನ್ನೆ ಹಾಡಿರುವರು. ಆದರೆ ಇನ್ನೊಬ್ಬ ಬ್ರಿಟಿಷ್ ಪ್ರಚಾರಕರಾದ ಸರ್ ಅಲ್ಫ್ರೆಡ್ ವಾಟ್ಸನ್ ಅವರು (ಇವರೂ ಬ್ರಿಟನಿನ ಸಾಮ್ರಾಜ್ಯವಾದ ತತ್ವದ ಸಮರ್ಥಕರಾದರೂ) 'ಭಾರತೀಯರೊಳಗೆ ಒಪ್ಪಂದವಾಗಲೇ, ಬೇಕೆಂಬ ಶರ್ತವು ಅತ್ಯಾವಶ್ಯಕವಲ್ಲ.' ಎಂದಿರುವುದು ಗಣನೀಯವಾದುದು. ಆದರೆ ಈ ನೆವದಿಂದ ಬ್ರಿಟಿಷರು ಅನಿರ್ದಿಷ್ಟ ಅವಧಿಯ ತನಕ ತನ್ನ ಅಧಿಕಾರವನ್ನಿಟ್ಟುಕೊಳ್ಳಲು ಸಾಧ್ಯವಾಗುತ್ತದೆ ಎಂದೂ ಅವರು ಸ್ಪಷ್ಟ ತಿಳಿಸುತ್ತಾರೆ.

ಫಿರೋಜ್‌ಖಾನನವರಂತೆ ಈಡನ್ನರೂ 'ಕೊಂಗ್ರೆಸ್ ಮುಂಖಡರು ಜಪಾನಿ ಸಹಾನುಭೂತಿಗಳು' ಎಂಬ ವಿಷಯವನ್ನೂ ತಮ್ಮ ಹೇಳಿಕೆಯಲ್ಲಿ ತಿಳಸಿದುದಕ್ಕೆ ಉತ್ತರವನ್ನು ಭಾರತದ ಆ ವೀರ ಮಹಿಳೆ ವಿಜಯ ಲಕ್ಷ್ಮಿಯವರು ಹೀಗೆ ಉತ್ತರ ಕೊಟ್ಟಿರುವರು: "೧೯೩೯ರಲ್ಲಿ ಫೆಸಿಸ್ಟ್ ಅಚ್ಚು ರಾಷ್ಟ್ರಗಳನ್ನೂ ಅವುಗಳ ರಾಜಕೀಯ ತತ್ವವನ್ನೂ ಖಂಡಿಸಿ ಕೊಂಗ್ರೆಸ್ ಮುಖಂಡರು ಸರ್ವಾನುಮತದ ಠರಾವು ಮಾಡಿರುವಾಗ ಬ್ರಿಟಿಷ್ ಮುತ್ಸದ್ಧಿಗಳು ಆ ರಾಷ್ಟ್ರಗಳನ್ನು ಮೆಚ್ಚಿಸಲು ಗಂಭೀರ ಪ್ರಯತ್ನದಲ್ಲಿ ತೊಡಗಿದ್ದರೆಂಬ ವಿಷಯವು ಜಗತ್ತು ತಿಳಿದಿರಲಿ."

'ರಾಂಡ್ ಟೇಬಲ್' ಎಂಬ ಬ್ರಿಟಿಷ್ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖವು ಪ್ರಕಟವಾಗಿತ್ತು. ಭಾರತದ ಬಿಕ್ಕಟ್ಟಿನ ಕುರಿತು ಬರೆಯುತ್ತಾ: "ಪಾರ್ಲಿಮೆಂಟಿನ ಬಹುಮಂದಿ ಸದಸ್ಯರು ಭಾರತೀಯ ಕೋಮು ಪಕ್ಷಗಳೊಂದಿಗೆ ಎಂದಿಗೂ ಮೇಳಾಮೇಳಿಯಾಗುವುದಿಲ್ಲವೆಂಬ ವಿಷಯವನ್ನು ತಿಳಿದುಕೊಳ್ಳಬೇಕು. ಭಾರತದಲ್ಲಿ ಜಾತಿ ಕಲಹಗಳಾಗುವುದಾದರೆ ಬ್ರಿಟಿಷರಿರುವಾಗಲೂ ಅದು ಸಂಭವಿಸಬಹುದು. ಭಾರತೀಯ ಸೈನ್ಯಗಳಲ್ಲೂ ರಾಷ್ಟ್ರೀಯತ್ವವು ಹರಡುತ್ತಿದೆ. ೧೯೪೨ರ ಗಲಭೆಯಲ್ಲಿ ಬ್ರಿಟನು ರಷ್ಯದ ಗೆಳೆತನದಲ್ಲಿದೆ ಎಂಬ ಕಾರಣದಿಂದ ಕೊಮ್ಯುನಿಷ್ಟರು ಭಾಗವಹಿಸಲಿಲ್ಲವಾದುದರಿಂದ ಪರಿಣಾಮವು ಹೆಚ್ಚು ಗಂಭೀರವಾಗಲಿಲ್ಲವಾದುದರಿಂದ ಪರಿಣಾಮವು ಹೆಚ್ಚು ಗಂಭೀರವಾಗಲಿಲ್ಲ. ಇನ್ನೂ ಮುಂದೆ ಕೊಂಗ್ರೆಸಿನ ಅಹಿಂಸಾತ್ಮಕ ಧೋರಣೆಯ ಪರಿಣಾಮವಾಗಿ ಹಿಂದೂ ಮಹಾಸಭೆಯಂತಹ ಸಂಸ್ಥೆಗಳು ಸೈನಿಕ ಧೋರಣೆಯನ್ನನುಸರಿಸಬಹುದು." ಹೀಗೆಂದು ಅಭಿಪ್ರಾಯಪಡುತ್ತದೆ.

ಕೊನೆಯಲ್ಲಿ ಸಲಹೆ ಕೊಡುತ್ತಾ ಆ ಪತ್ರಿಕೆಯು ಹೀಗೆ ಬರೆದಿದೆ: "ಈ ಎಲ್ಲ ಸಂಗತಿಗಳನ್ನೂ ನೆನಸಿಕೊಂಡು ಬ್ರಿಟನು ತನಗೆತೃಪ್ತಕರವಾದ ಒಪ್ಪಂದ ಕಂಡು ಬಂದಮೇಲೆ ಅಧಿಕಾರವನ್ನು ಬಿಟ್ಟು ಕೊಡುತ್ತೇನೆಂಬ ಛಲವನ್ನೂ ಬಿಟ್ಟು ಬಿಡುವುದು ಹಿತಕರ."

ಘನ ಮಹಿಳೆ ವಿನಂತಿ

ಮಾಜಿ ಅಧ್ಯಕ್ಷ ರೂಸ್‌ವೆಲ್ಟರ ಧರ್ಮಪತ್ನಿಯವರು 'ಅಮೇರಿಕದಲ್ಲಿನ ದಾನ ಧರ್ಮ ಸಂಸ್ಥೆಗಳು ತಮ್ಮ ನಿಧಿಗಳನ್ನು ಭಾರತ ಜನರ ಸಂಕಷ್ಟ ನಿವಾರಣೆಗಾಗಿ ತೆರೆದಿಡಲಿ' ಎಂದು ವಿನಂತಿಸಿಕೊಂಡಿರುವರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಪ್ರಚಾರದ ಪರಿಣಾಮ ಇದು ಇದ್ದರೂ ಇರಬಹುದು. "ಭಾರತವು ನಮ್ಮಿಂದ ಬಹಳ ಅಂತರದಲ್ಲಿದ್ದರೂ ಅಲ್ಲಿಯ ಜನರ ಸಂಕಷ್ಟಗಳನ್ನು ನಾವು ಮನಸ್ಸಿಗೆ ತಂದುಕೊಳ್ಳಲು ಯಾವ ಅಭ್ಯಂತರವೂ ಇಲ್ಲ. ಅಲ್ಲಿ ಹೋಗಿರುವ ನಮ್ಮ ಸೈನಿಕರು ಆ ದೇಶಸ್ಥರ ಕರುಣಾಜನಕ ಸ್ಥಿತಿಗತಿಗಳ ವರ್ಣನೆಯನ್ನು ನಮಗೆ ತಿಳಿಸುವರು." ಹೀಗೆಂದು ಆಕೆ ಜನಾಂಗಕ್ಕೆ ವಿನಂತಿಸಿಕೊಂಡಿರುವುದು ಸ್ತುತ್ಯ. ಮಹಾತ್ಮಾಗಾಂಧಿಯವರು ಗತ ಅಧ್ಯಕ್ಷರ ಕುರಿತು ಶ್ಲೋಕ ಸಂದೇಶವೊಂದನ್ನು ಈ ಮಹಿಳೆಗೆ ಕಳುಹಿಸಿದ್ದರು. ಈ ವಿನಂತಿಗೆ ಇದು ಇನ್ನೊಂದು ಕಾರಣವಿರಬಹುದು.

ಮಾಣಿಕ್ಯದಂತಾ ಮಾತು

ಜವಾಹರಲಾಲ ನೆಹರುಗಳಿಗೆ ಅರ್ಪಿಸಲು ಒಂದು ನಿಧಿಯು ಸಿದ್ಧವಾಗುತ್ತಿದೆ. ಅದರ ಸಮಿತಿಯವರು ಗಾಂಧೀಜಿಯ ಆಶೀರ್ವಾದ ಬಯಸಿದಾಗ 'ಅದರಲ್ಲೇ ನನ್ನ ಕೈಗಳಿವೆ, ಅಂದಮೇಲೆ ಆಶೀರ್ವಾದವೇಕೆ?' ಎಂದು ಒಂದೇವಾಕ್ಯದಲ್ಲಿ ತಮ್ಮ ಅಭಿಮತವನ್ನು ವ್ಯಕ್ತಪಡಿಸಿರುವರು.

ಮಹಾತ್ಮರು ಪ್ರತಿಭಾವಂತ ವಾಕ್ಪ್ರವೀಣರು. ಒಂದು ವಾಕ್ಯ, ಹೆಚ್ಚೇಕೆ ಒಂದೇ ಶಬ್ದದಲ್ಲಿ ಅವರು ಗಹನ ವಿಚಾರಗಳನ್ನು ದಿಗಂತದ ತನಕ ಒಯ್ಯಬಲ್ಲರು, ಅನ್ಯಾಯದ ಸಂಗತಿಗಳನ್ನು ನೆಲಕ್ಕೆ ಕೆಡಹಬಲ್ಲರು. ಅಂದು ಕ್ರಿಪ್ಸರ ಯೋಜನೆ ಕುರಿತು 'ಇದು ದೀವಾಳಿಯಾಗಲಿರುವ ಬೇಂಕಿಗೆ ಮುಂದಿನ ತಾರೀಕು ಹಾಕಿಕೊಟ್ಟ ಚೆಕ್' ಎಂದು ತಿಳಿಸಿದಾಗ ಇಡೀ ಯೋಜನೆಯೇ ನೆಲಸಮವಾಯಿತು. 'ಹರಿಜನ' ಎಂಬ ಶಬ್ದದಿಂದಲೇ ದೇಶದೊಳಗಿನ ದೇವಾಲಯಗಳ ಆಡಳಿತ ವರ್ಗದವರಿಗೆ ತೆರೆಯಲ್ಪಟ್ಟವು. 'ಹೃದಯ ಪರಿವರ್ತನ'ವೆಂದಾಗ ಅಮೋಘ ಸಮಾಜ ಸುಧಾರಣೆಯ ಬುನಾದಿಕಲ್ಲನ್ನೇ ಅವರು ಹಾಕಿಕೊಟ್ಟರು. ಫ್ರಿಸ್ಕೊ ಪ್ರಾತಿನಿಧ್ಯದ ಕುರಿತು "ಇಂತಹ ಪ್ರಾತಿನಿಧ್ಯಕ್ಕಿಂತ ಪ್ರಾತಿನಿಧ್ಯವಿಲ್ಲದಿರುವುದೇ ಲೇಸು" ಎಂದಾಗ ಎಲ್ಲಾ ಪೊಳ್ಳುತನವೂ ಹೊರಗೆಬಿತ್ತು.

ಇಂಗ್ಲೆಂಡ್ ಅಮೇರಿಕಕ್ಕೆ ಕೈಗಾರಿಕೆ ಮುಖಂಡರು ಹೋಗುತಿದ್ದಾಗ "ನಿಮಗೆ ಸಿಗುವುದು ಶೇಕಡಾ ೫, ಬ್ರಿಟಿಷ್ ಸರಕಾರಕ್ಕೆ ೯೫, ವರ್ಕಿಂಗ್ ಕಮಿಟಿಯವರು ಬಂಧನದಲ್ಲಿದ್ದಾಗ ಯಾಕೆ ಕೈಗಾರಿಕೆ ಒಪ್ಪಂದ?"ವೆಂದಾಗ ಭಾರತೀಯ ವಾಣಿಜ್ಯ, ಕೈಗಾರಿಕೆಯು ಗುಟ್ಟುರಟ್ಟಾಯಿತು. ಇನ್ನು ತಮ್ಮ ಹಲವು ದೊಡ್ಡ ಶಬ್ದದ ಯೋಜನೆಗಳಿಂದ ಟಾಟಾ, ಬಿರ್ಲರುಗಳು ದೇಶವನ್ನು ವಂಚಿಸುವುದಸಾಧ್ಯ. ಇಷ್ಟಾಗಿ ಬಿರ್ಲಾ ಅವರು ಮಹಾತ್ಮರ ಆಪ್ತರು. ಆದರೂ ಕೊನೆಯಲ್ಲಿ ಮಹಾತ್ಮರು ಅವರನ್ನು ಹರಸಿ "ಭಾರತದ ಬರಗಾಲ ದೀನಾವಸ್ಥೆಯ ಮೂಲಕ ನಿಮ್ಮನ್ನುಆಶೀರ್ವದಿಸುತ್ತೇನೆ"ಎಂದಾಗ ಇಡೀ ಸಮಸ್ಯೆಯ ಸಾರವನ್ನೇ ಅವರು ಹೃದಯಂಗಮವಾಗಿ ಸಾರಿದಂತಾಗಿದೆ.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ವಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ANNOUNCEMENT

The Board of Directors of
The PRABHAKARA BANK Ltd.,
beg to announce the formal opening
of their Head Office at Mudabidri
on the 9th of May 1945 at 6 p. m.
Sri. A. B. SHETTY M. L. A. (MADRAS)
Ex. Parliamentary Secretary,
has kindly consented to preside
on the occasion.
K. S. Kamath B. A., Cert. A. I. I. B.
Managing Director,
Mudabidri, 6—5—'45.
P. Dasa Kini,
Secretary.

ಸಾಕ್ಷಿ ಸುಳ್ಳಲ್ಲ—ಅಪರಾಧಿ ನಿಜವಲ್ಲ

"ಹೌದು ಇವನೇ ದರೋಡೆಗಾರ"

ನೀವು ಯಾವುದನ್ನು ನಂಬುವಿರಿ— ಖೂನಿ ನೋಡಿದವನ ಸಾಕ್ಷವೊ, ಸಂದರ್ಭಾನುಸಾರ ಸಾಕ್ಷ್ಯ?

"ನೂರು ಅಪರಾಧಿಗಳನ್ನು ಬಿಟ್ಟರೂ ಒಬ್ಬ ನಿರಪರಾಧಿಯನ್ನು ಶಿಕ್ಷೆಗೆ ಗುರಿಪಡಿಸಬಾರದು." ನ್ಯಾಯಸ್ಥಾನದ ತತ್ವವಿದು ನಿರಪರಾಧಿಯು ಶಿಕ್ಷಾರ್ಹನಲ್ಲ. ಅದು ಮಾನವೀಯತೆಗೆ ವಿರೋಧವಾದ ದ್ರೋಹವಾಗುತ್ತದೆ.

ಆದರೂ ಹಲವು ಸಂದರ್ಭಗಳಲ್ಲಿ ಅಂತಹ ಸಂಗತಿಯೊಂದೊಂದು ನಡೆದು ಹೋಗುತ್ತದೆ. ಒಬ್ಬ ಮನುಷ್ಯನು ವಿಚಾರಣೆಗೊಳಗಾಗುತ್ತಾನೆ. ಪ್ರಾಮಾಣಿಕರೂ, ಸದ್ಗೃಹಸ್ಥರೂ ಆದ ಸಾಕ್ಷಿಗಳನ್ನು ಪ್ರತ್ಯಕ್ಷ ಪ್ರಮಾಣಪೂರ್ವಕವಾಗಿ ಕೊಡುತ್ತಾರೆ. ದೇವರ ಹೆಸರಿನಲ್ಲಿ ಸತ್ಯನಿರೂಪಣೆಗೈಯಲು ಪ್ರತಿಜ್ಞೆ ತೆಗೆದು ಅವರು ನ್ಯಾಯಸ್ಥಾನದ ಸಾಕ್ಷಿ 'ಪೆಟ್ಟಿಗೆ'ಯೊಳಗೆ ನಿಲ್ಲುವರು. ಇಷ್ಟಾದರೂ ಅವರ ಹೇಳಿಕೆಯು ತಪ್ಪಿರಲು ಸಾಧ್ಯವಿದೆ. ಸಾಕ್ಷಿ ಸುಳ್ಳಲ್ಲ—ಸಾಕ್ಷ್ಯವು ಸುಳ್ಳಿರಬಹುದು. ನಿದರ್ಶನವಾಗಿ ಈ ಕೆಳಗಿನ ಕೆಲವು ನಿಜವಾದ ಘಟನೆಗಳನ್ನು ಓದಿರಿ. ಅಂದರೆ ಈ ಲೇಖನದ ಉದ್ದೇಶವು ಸ್ಪಷ್ಟವಾಗುವುದು.

ಇದು ನಡೆದುದು ಅಮೇರಿಕದ ನ್ಯೂಜೆರ್ಸಿ ಜಿಲ್ಲೆಯೊಂದರ ಹಳ್ಳಿ ಊರಲ್ಲಿ ಸ್ಕ್ಯುಯ್ಲರ್ ರೆನಿಯರ್ ಎಂಬೊಂಬ ಮುದಿ ರೈತ. ತನ್ನ ಸಂಪಾದನೆಯನ್ನು ಬೇಂಕಿನಲ್ಲಿಡಲು ಭರವಸೆ ಇಲ್ಲದೆ ತನ್ನ ಮನೆಯ ಗೋಡೆಯೊಳಗೆ ಇರಿಸಿದ ಒಂದು ಹಣದ ಪೆಟ್ಟಿಗೆಯಲ್ಲಿ ಭದ್ರವಾಗಿರಿಸುತಿದ್ದನು. ಅದರಲ್ಲಿ ಸುಮಾರು ೫೦ ಸಾವಿರ ಡೊಲರ್‌ಗಳಿದ್ದವು.

ಒಂದು ದಿನ ಮಧ್ಯಾಹ್ನ ಸಮಯಕ್ಕೆ ರೈತ ರೆನಿಯರನು ತನ್ನ ಬೇಸಾಯ ಪ್ರದೇಶಗಳ ಪರಿಶೀಲನೆಗಾಗಿ ಹೊರಹೋಗಿದ್ದ. ನಿತ್ಯವೂ ಅವನು ಮನೆಗೆ ಹಿಂತಿರುಗುವಾಗ ೬ ಗಂಟೆ ಸಂಜೆಯಾಗುತಿತ್ತು. ಅವನ ಮನೆ ಕೆಲಸದವಳಾದ ಜೇನ್ ನಿಕ್ಸನ್ ಎಂಬಾಕೆ ಹೊರ ಕೋಣೆಯಲ್ಲಿ ಆರಾಮ ಕುರ್ಚಿಯ ಮೇಲೆ ಕೂತು ತೂಕಡಿಸುತಿದ್ದಳು.

ಪಕ್ಕನೆ ಕಾಲು ಸಪ್ಪಳವಾಯಿತು. ಯಾರೊ ಜಗಲಿ ಹತ್ತಿ ಬಂದಂತೆ ತೋರಿತು. ಕೋಣೆಯ ಬಾಗಿಲೂ ತೆರೆಯಿತು—! ಒಂದು ಕರ್ಕಶ ಸ್ವರ: "ಹಾಗೇ ಕುಳಿತುಕೊ, ಬಾಯಿ ತೆರೆದರೆ ಜೋಕೆ!" ಎಂದಾಗ ಕಣ್ಣು ಬಾಯಿ ಕೆರಳಿಸಿ ಜೇನಳು ಎಚ್ಚರಗೊಂಡಳು. ಕೆಂಪು ಎಲವಸ್ತ್ರದಿಂದ ಮುಖ ಮುಚ್ಚಲ್ಪಟ್ಟ ಓರ್ವ ವ್ಯಕ್ತಿಯ ಕೈಯೊಳಗಿನ ಪಿಸ್ತೂಲು ಅವಳ ಹಣೆಗೆ ಗುರಿಯಾಗಿ ಹಿಡಿಯಲ್ಪಟ್ಟಿತು. ನೋಡುತಿದ್ದ ಹಾಗೆ ಆ ಭೀಕರ ವ್ಯಕ್ತಿಯು ಗೋಡೆ ಅಗೆದು ತಗಡಿನ ಆ ಪೆಟ್ಟಿಗೆ ಒಡೆದು ದ್ರವ್ಯವನ್ನು ಬರಿದು ಮಾಡಿತು.

ಭಯಭ್ರಾಂತಳಾದ ಜೇನಳು ಆರಾಮ ಕುರ್ಚಿಗೆ ಅಂಟಿಕೊಂಡ ಗೊಂಬೆಯಂತೆ ಕೂತಿದ್ದಳು. ಅವಳ ರಕ್ತವು ಹೆಪ್ಪುಗಟ್ಟಿದಂತಾಯಿತು. ಕೂಡಲೇ ಅವಳಲ್ಲಿ ಸಾಮಾನ್ಯ ತಿಳುವಳಿಕೆಯು ಉತ್ಪನ್ನವಾಯಿತು. ಕಳ್ಳನನ್ನು ಹಿಂಬಾಲಿಸುವ ಅವಶ್ಯಕತೆ ಇಲ್ಲ. ಅವನ ಗುಂಡಿಗೆ ಬಲಿಬೀಳಬೇಕಾದುದೂ ಇಲ್ಲ. ರೆನಿಯರ್ ರೈತನು ಬಂದಾಗ ಅವಳು ಹೇಳಿದಳು: "ಅವನು ಯಾರೆಂದು ನನಗೆ ಖಂಡಿತಗೊತ್ತು."

ಕಾರಣ ಅವನು ಪೆಟ್ಟಿಗೆ ಒಡೆಯುತಿದ್ದಾಗ ಅವಳಿಗೆ ಅವನ ಗುರ್ತು ಸ್ಪಷ್ಟವಾಗಿ ತಿಳಿದಿದ್ದಿತು. ಹೇಗೆ? ಅವನ ಮುಖದ ಬಟ್ಟೆ ಪಕ್ಕನೆ ಜಾರಿದ್ದಿತು—ಐದೇ ಅಡಿ ದೂರದಿಂದ ಜೇನಳು ಅವನನ್ನು ಸ್ಪಷ್ಟವಾಗಿ ನೋಡಿದ್ದಳು. ಆ ವ್ಯಕ್ತಿ ಬೇರೆ ಯಾರಾಗಿರದೆ ನೆರೆಯ ಹೊಲದ ಮಾಲಕನಾದ ವಿಲ್ ಹೆಮಿಲ್ಟನನೆಂಬುದಕ್ಕೆ ಸಂಶಯವಿಲ್ಲ!

ವಿಲ್‌ಹೆಮಿಲ್ಟನನು ಅಂದೇ ಕೈದು ಮಾಡಲ್ಪಟ್ಟನು. ಮೂರು ಇತರ ಸಾಕ್ಷಿಗಳು ತಾವು ನೋಡಿದ ಸಂಗತಿಗಳನ್ನು ರುಜುವಾತು ಪಡಿಸಿದರು. ಆ ಹಳ್ಳಿಯ ಪಾದ್ರಿಯೊಬ್ಬನು ರೆನಿಯರನ ಮನೆ ಕಡೆಯಿಂದ ಒಂದು ಚೀಲ ಹಿಡಿದುಕೊಂಡು ಹೋಗುವ ಹೆಮಿಲ್ಟನನನ್ನು ನೋಡಿದ್ದನು. ನಂತರ ಇರ್ವ ಬೇಟೆಗಾರರು ಪೊದರುಗಳಡಿಯಲ್ಲಿ ತಲೆಮರಸಿಕೊಂಡು ಓಡುತ್ತಿರುವ ಅವನನ್ನು ಕಂಡಿದ್ದರು. ಕರೆದಾಗ ಅವನು ಮಾತನಾಡಲೇ ಇಲ್ಲ.

ವಿಲ್‌ಹೆಮಿಲ್ಟನನ ದುರಾದೃಷ್ಟವೆನ್ನಬೇಕು. ಇದರ ಮುಂಚೆ ಅವನು ಒಳ್ಳೇ ಮನುಷ್ಯನೆನಿಸಿಕೊಂಡಿದ್ದ. ಅಷ್ಟೊಂದು ಜಾಗರೂಕತೆಯಿಂದ ಅವನು ಹಂಚಿಕೆ ಹಾಕಿ ಬಂದಿದ್ದರೂ ಮುಖಕ್ಕೆ ಕಟ್ಟಿದ ಬಟ್ಟೆಯು ಸಂದಿಗ್ಧ ಸಮಯದಲ್ಲಿ ಜಾರಿ ಬೀಳಬೇಕೆ? ಆ ಪಾದ್ರಿಯು ಅದೇ ಸಮಯಕ್ಕೆ ಎದುರು ಸಿಕ್ಕಬೇಕೆ? ಆ ಬೇಟೆಗಾರರ ದೃಷ್ಟಿಗೆ ಅವನು ಬೀಳ ಬೇಕೆ?

ಹೆಮಿಲ್ಟನನ ಮೇಲೆ ಕಟ್ಲೆಯಾಯಿತು. ಆರೋಪ ರುಜುವಾಯಿತು—ಶಿಕ್ಷೆಯೂ ವಿಧಿಸಲ್ಪಟ್ಟಿತು...ಕೆಲವು ತಿಂಗಳು ಜೈಲುವಾಸವನ್ನನುಭವಿಸಿದಾಗ ಹೆಮಿಲ್ಟನನಿಗೆ ಒಂದು ದಿನ ಒಂದು ಸೋಜಿಗವನ್ನುಂಟುಮಾಡುವ ಪತ್ರ ಬಂತು. ಪತ್ರಲೇಖಕನು 'ರೆನಿಯರ್ ರೈತನ ಹಣ ದರೋಡೆ ಮಾಡಿದವನು ಯಾರೆಂದು ಗೊತ್ತೊ. ಅವನ ಹೆಸರು ಜೋನ್ ಎಲ್ಸ್‌ವರ್ತ್ ಎಂಬವನು. ಅವನು ಇಂತಿಂಥಾ ಕಡೆ ವಾಸಿಸುತ್ತಾನೆ."ಎಂದು ಉಲ್ಲೇಖಿಸಿದ್ದನು. ಪೋಲಿಸರು ಎಲ್ಸ್‌ವರ್ತನ ಪತ್ತೆ ಹಚ್ಚಿದರು. ಅವನ ಬಳಿ ರೆನಿಯರನ ಗುರ್ತು ನೋಟುಗಳೂ ಸಿಕ್ಕಿದವು.

ಇನ್ನೊಂದು ಸಂಗತಿ: ನೆನ್ಸಿ ಲೂಯಿಸ್ ಬೋಕ್ಸ್ ಎಂಬವಳು ಇಂಡಿಯಾನಾ ಪ್ರಾಂತ್ಯದವಳು. ಮೃದುವೆಯಾಗಿ ಮೂರು ತಿಂಗಳಲ್ಲಿ ಅವಳಿಗೆ ಹದಿನಾಲ್ಕು ವರ್ಷದ ಶಿಕ್ಷೆ ವಿಧಿಸಲ್ಪಟ್ಟಿತು. ಕಾರಣ ಇಷ್ಟೆ! ತನ್ನ ಗಂಡನಿಗೆ ಕೆಲಸವಿರಲಿಲ್ಲ. ತಾನು ಮೈ ಮುರಿದು ಕೆಲಸಮಾಡಿ ಜೀವನ ನಡೆಸುವುದಕ್ಕಿಂತ ಬೇರೊಂದು ಚತುರ ಉಪಾಯವು ಅವಳಿಗೆ ಹೊಳೆಯಿತು.

ಅವಳು ಬೇರೆಯವರ ದಸ್ಕತುಗಳನ್ನು ನಕಲುಮಾಡ ಕಲಿತಳು. ತಾನು ಸಾಮಾನು ತಂದ ಅಂಗಡಿಗಾರರಿಗೆ ಶ್ರೀಮಂತ ಮನುಷ್ಯರ ಹೆಸರಿನಲ್ಲಿ ಪೊರ್ಜರಿ ಬೇಂಕು ಚೆಕ್ಕುಗಳನ್ನು ಕೊಟ್ಟಳು. ಮೊದ ಮೊದಲು ಎಲ್ಲಾ ಚೆಕ್ಕುಗಳೂ ನಗದಿಮಾಡಲ್ಪಟ್ಟವು. ಕೊನೆಗೊಂದು ಚೆಕ್ಕಿನಲ್ಲಿನ ಸಹಿಯು ಸಂಶಯಾಸ್ಪದವಾಗಿ ನೆನ್ಸಿಯನ್ನು ಪೋಲಿಸರು ಪತ್ತೆ ಮಾಡತೊಡಗಿದರು. ಏಳು ಅಂಗಡಿಗಾರರು ಅವಳ ಗುರ್ತು ಹಿಡಿದರು. "ಹೌದು ಇವಳೇ ಕೊಟ್ಟದ್ದು!" ಅವರು ಅವಳನ್ನು ತಮ್ಮ ಸ್ವಂತ ಕಣ್ಣುಗಳಿಂದ ಹಲವು ಸಲ ನೋಡಿದ್ದರು. ಅವಳ ಗಂಡನು ತನ್ನಹೆಂಡತಿಯು ನಿರಪರಾಧಿನಿಯೆಂದು ತುಂಬಾ ಬೇಡಿಕೊಂಡರೂ, ಸಾಕ್ಷ್ಯಗಳು ಸುಳ್ಳಲ್ಲ—ಶಿಕ್ಷೆ ಹದಿನಾಲ್ಕು ವರ್ಷ....

ಏಳು ತಿಂಗಳು ಶಿಕ್ಷೆಯಾದ ನಂತರವೂ ಪೊರ್ಜರಿ ಚೆಕ್ಕುಗಳು ನಿಲ್ಲಲಿಲ್ಲ. ಅಂಗಡಿಕಾರರ ದೂರುಗಳು ಪೋಲಿಸರಿಗೆ ಬಂತು. ಈ ಸಲ ಮೋಸಗಾರ್ತಿ ನೆನ್ಸಿ ಮಹಿಳೆಯಲ್ಲ. ಕಾರಣ ಅವಳು ಜೈಲಿನಲ್ಲಿದ್ದಾಳೆ. ಪೋಲಿಸರು ನೆನ್ಸಿಯ ಚಿತ್ರವನ್ನು ತಂದು ಅಂಗಡಿಗಾರರಿಗೆ ತೋರಿಸಿದಾಗ ಅವರು "ಹೌದು, ಇವಳೆ, ಅವಳು" ಎಂದರು. ಆದರೆ ನಿಜವಾದ ತಪ್ಪಿತಸ್ಥಳು ನೆನ್ಸಿಯಾಗಿರದೆ ಅವಳಂತೆ ರೂಪಿನ ಮತ್ತು ಬಟ್ಟೆಬರೆಗಳನ್ನು ತೊಡುವ ಇನ್ನೊರ್ವ ದರೋಡೆಗಾರ್ತಿಯಿದ್ದಳು. ಮೂರು ವರ್ಷಗಳ ನಂತರ ಅವಳು ಹಿಡಿಯಲ್ಪಟ್ಟರು. ಅಲ್ಲಿನ ಗವರ್ನರರು ನೆನ್ಸಿಗೆ ಶಿಕ್ಷೆ ಮಾಫಿ ಮಾಡಿ ಕ್ಷಮಾಪಣೆ ಕೇಳಿ ಗೌರವಿಸಿದರು.

ಕೊನೆಯ ಕತೆ: ಮೆಸ್ಸಾಚುಸೆಟ್ಸ್ ಪ್ರಾಂತ್ಯದ ಲಿನ್ ಎಂಬೂರಿನ ಸಿನೆಮಾ ಕಂಪೆನಿಯ ಆಫೀಸಿಗೆ ಒಂದು ದಿನ ಬೆಳಗ್ಗೆ ಮೂರು ದರೋಡೆಗಾರರು ನುಗ್ಗಿದರು— ಮೂರು ಪಿಸ್ತೂಲುಗಳೂ ಇದ್ದವು. ಅಲ್ಲಿ ಕೆಲಸಮಾಡುತಿದ್ದವರನ್ನು ಒಂದು ಕೋಣೆಗೆ ಸೇರಿಸಲಾಯಿತು. ಒಬ್ಬ ಬೋರ್ಡು ಹಚ್ಚುವವ ಏಣಿ ಹುಡುಕಿ ಬಂದಾಗಲೂ ಅವನನ್ನೂ ಕೋಣೆಯೊಳಗೆ ಹಾಕಲು ಪ್ರಯತ್ನಪಟ್ಟಾಗ ಅವನು ಸ್ವಲ್ಪ ಮೊಂಡುತನ ತೋರಿಸಿದ. ಕೋಪಗೊಂಡ ಕಳ್ಳರು ಪಿಸ್ತೂಲು ಹಾರಿಸಿಯೇ ಬಿಟ್ಟರು—ಅವನ ಹಣೆ ಒಡೆಯಿತು.

ಹಣದ ಗುಮಾಸ್ತ ಬಂದಾಗ ಅವನನ್ನೂ ಕೋಣೆಯೊಳಗೆ ಒಯ್ಯಲಾಯಿತು ಆದರೆ ಅವರಿಗೆ ನಿರಾಶೆಯಾಯಿತು. ಅಂದು ಹಣವಿರಲಿಲ್ಲ. ಎಲ್ಲವೂ ಬೇಂಕಿಗೆ ಕಳುಹಿಸಲ್ಪಟ್ಟಿತ್ತು. ಅವರು ತಮ್ಮ ತಮ್ಮೊಳಗೆ ಮಾತನಾಡಿಕೊಂಡರು. ಅವರೊಳಗೊಬ್ಬನ ಹೆಸರು ಮೆಕ್ ಎಂದು ಆ ಕೋಣೆಯಲ್ಲಿದ್ದ ಸಿನೇಮಾ ಕೆಲಸಗಾರರಿಗೂ ತಿಳಿಯಿತು.

ಮರುದಿನ ರೈಲ್ವೆ ಕಂಬಿಗಳ ಮೇಲೆ ಮೆಕ್‌ಡೊನಾಡ್ ಎಂಬ ಟೆಕ್ಸಿ ಡ್ರ್ಯಾವರನ ಶವ ಸಿಕ್ಕಿತು. ಜೆರೆಟ್ ಮತ್ತು ಮೊಲ್ಲೆ ಎಂಬಿಬ್ಬ ಬೇರೆ ಡ್ರ್ಯಾವರರು ಅವನ ಸ್ನೇಹಿತರು. ಅವರು ಹಿಡಿಯಲ್ಪಟ್ಟರು. ಸಿನೇಮಾ ಥಿಯೇಟರಿನೊಳಗೆ ದರೋಡೆಗೆ ಬಂದವರ ಪೈಕಿ ಮೆಕ್ ಎಂದೊಬ್ಬನಿರಲಿಲ್ಲವೇ? ಅವನೇ ಕೊಲ್ಲಲ್ಪಟ್ಟ ಡ್ರ್ಯಾವರ್ ಮೆಕಡೊನಾಲ್ಡ್ ಇರಬೇಕು. ಅವರವರೊಳಗೆ ಏನೊ ಕಚ್ಚಾಟ ನಡೆದು ಹಾಗೆ ಘಟಿಸಿರಬಹುದು. ಮಾತ್ರವಲ್ಲ ಪ್ರಶ್ನಿಸಿದಾಗ ಮುಂಚಿನ ದಿನದ ಅವರ ಚಲನವಲನ ಹೇಳಿಕೆಯಲ್ಲಿ ತುಂಬಾ ತಾರತಮ್ಯ ಕಂಡುಬಂತು.

ಸಿನೇಮಾ ಕೆಲಸಗಾರರೂ ಬಹಳ ಹೊತ್ತು ಅವರನ್ನು ನೋಡಿದ್ದರಿಂದ ಅವರ ಗುರ್ತುಗಳನ್ನು ಹೇಳಿದರು. ಅವರಲ್ಲಿ ಒಬ್ಬ 'ಕೆಂಪು ಬರೆಯ ಬನಿಯನ್' ಹಾಕಿದ್ದ.....ಅವರಿಗೂ ಶಿಕ್ಷೆಯಾಗುತಿತ್ತು.... ಆದರೆ ಜೂರಿಗಳು ತಮ್ಮ ಅಭಿಪ್ರಾಯ ಚರ್ಚಿಸಲಿಕ್ಕೆ ಹೋದಾಗ ಒಂದು ಘಟನೆ ನಡೆಯಿತು.

ಅಂದು ದರೋಡೆ ಮಾಡಿದ, ಕೊಲೆ ಮಾಡಿದ ವ್ಯಕ್ತಿಗಳು ಬೊಸ್ಟನ್ ನಗರದ ಮಿಲ್ಲಾನ್ ಬಂಧುಗಳು. ಈ ಅಣ್ಣತಮ್ಮಂದಿರು ತಾವು ಹೋಗುವಲ್ಲಿ ಆಯಾ ಸ್ಥಳದಲ್ಲಿ ಪರಿಚಿತರಾದ ವ್ಯಕ್ತಿಗಳಂತೆ ವೇಷ ಹಾಕಿ ತಮ್ಮ ಕೆಲಸ ನಡೆಸುತಿದ್ದರು. ಅಂದು ಅವರು ಆ ಟೆಕ್ಸಿ ಡ್ರ್ಯಾವರರಂತೆ ಉಡುಪುತೊಟ್ಟಿದ್ದರು. ಮೆಕ್ ಎಂಬ ಹೆಸರು ಅವರು ಠಕ್ಕುಮಾಡಲಿಕ್ಕೆ ಇಟ್ಟುಕೊಂಡದ್ದು. ಮೇಲಿನ ಆರೋಪಿಗಳು ಕೂಡಲೇ ಬಿಡಲ್ಪಟ್ಟರು.

ಹೀಗೆ ಅಮೇರಿಕದ ಸುಸಂಸ್ಕೃತ ಕಳ್ಳರು ನಮ್ರ ನಾಗರಿಕರ ರೂಪರೇಶೆಗಳನ್ನು ಸ್ವಭಾವ ರೀತಿಗಳನ್ನೂ ಚೆನ್ನಾಗಿ ಅಭ್ಯಾಸಿಸಿ ಅದನ್ನು ತಮ್ಮ 'ಕಲೆ'ಯಲ್ಲಿ ಚಾಣಾಕ್ಷತನದಿಂದ ಉಪಯೋಗಿಸಿಕೊಳ್ಳುವ ಇಂತಹ ಎಷ್ಟೊ ಘಟನೆಗಳು ಆ ದೇಶದಲ್ಲಿ ನಡೆಯುತ್ತವೆ. ಆದುದರಿಂದ ಅಲ್ಲಿನ ನ್ಯಾಯಾಧೀಶರೂ, ಗುಪ್ತ ಪೋಲಿಸರೂ ತುಂಬಾ ಜಾಗರೂಕರೂ ಆಗಿದ್ದಾರೆ.

ಭೂಮಿಯ ಒಳಗಿನ ಮಧ್ಯಭಾಗವು ಹೆಚ್ಚಾಗಿ ಶಿಲೆಕಲ್ಲಿನಿಂದಲೇ ರಚಿತವಾಗಿದೆ. ಕೆಲವುಕಡೆ ೨೦ ಮೈಲು ದಪ್ಪದ ಶಿಲಾಬೆಟ್ಟಗಳೂ ಇವೆಯಂತೆ.

* * *

Buy the Best
CASHEW SHELL OIL
We have great pleasure to announce that we have placed on the market the best and purest Cashew Shell oil manufactured by us.
Packing — Tin of 35 lbs. nett or bulk in barrels.
Hindusthan Commodity Corporation Ltd.
Manufacturers & Exporters,
CANARA BANK BUILDING BUNDER Mangalore

ಮನದಲ್ಲಿ ಸಂತಾಪವಾದರೆ ಮುಖದಲ್ಲಿ ಮುಗುಳುನಗೆ–

ಜಪಾನೀ ಮಹಿಳೆಯರ ವಿಚಿತ್ರ ವರ್ತನೆಯ ರಹಸ್ಯ!

ಜಪಾನೀ ಹೆಂಗಸಿನ ಬಾಳು ನಾಯಿ ಬಾಳಿಗಿಂತಲೂ ಕೀಳು; ಗಂಡನ ಚಾಕರಿಮಾಡುವ ಹೆರಿಗೆಯ ಯಂತ್ರವಾಗಿದ್ದಾಳೆ ಆಕೆ; ತನ್ನ ದುಃಖ ಪ್ರದರ್ಶಿಸಲಿಕ್ಕೆ-ಏಕೆ ಆತ್ಮಹತ್ಯೆ ಮಾಡಲಿಕ್ಕೂ ಅವಳಿಗೆ ಅಧಿಕಾರವಿಲ್ಲವಂತೆ; ಆ ನಿರ್ಭಾಗ್ಯೆಯರ ಜೀವನವನ್ನಿಲ್ಲಿ ನೋಡಿರಿ

ಲೋಕದಲ್ಲಿ ಹೊರದೃಷ್ಟಿಗೆ, ಜಪಾನೀ ಮಹಿಳೆಯರಷ್ಟು ಸುಖಿಗಳು ಬೇರಾರು ಇಲ್ಲವೆಂಬಂತೆ ಕಾಣುತ್ತದೆ. ಏಕೆಂದರೆ, ಹೂಗಳಿಂದ ತೊಡಗಿ ಎಂತಹ ಗಂಡಾಂತರದ ವಿಷಯ ಮಾತನಾಡುವಾಗಲೂ ಅವರ ಮುಖಗಳಲ್ಲಿ ಸದಾ ಮುಗುಳ್ನಗೆಯಿದ್ದೇ ಇರುತ್ತದೆಯಂತೆ. 'ಕಿಮೊನೊ' ಎಂದು ಕರೆಯಲ್ಪಡುವ ಅಂದಚಂದದ ಉಡಿಗೆತೊಡಿಗೆಗಳನ್ನು ಧರಿಸಿ, ಮಾತು ಮಾತಿಗೆ ಮಂದಹಾಸವನ್ನು ಬೀರುವ ಈ ಹೆಂಗುಸರಷ್ಟು ಸದಾಸುಖಿಗಳು ಬೇರೆ ಯಾವ ದೇಶದಲ್ಲಿಯೂ ಸಿಗಲಾರವೆಂಬಂತೆ ಭಾಸವಾಗುವುದಾದರೂ, ಅವರಷ್ಟು ನಿರ್ಭಾಗ್ಯೆಯರು ಮತ್ತಾರೂ ಇಲ್ಲವೆಂದು ಆ ಜಪಾನೀ ಮಹಿಳೆಯರ ಸ್ಥಾನಮಾನಗಳನ್ನು ಚೆನ್ನಾಗಿ ಅಭ್ಯಾಸಿಸಿದ ಓರ್ವ ಲೇಖಕಿಯರು ಹೇಳುತ್ತಾರೆ. ಅವರೆನ್ನುವಂತೆ, ಮನಸ್ಸಿನ ಕಳವಳವನ್ನು ಮರೆಮಾಚಿ, ನಗುವುದರಲ್ಲಿ ಜಪಾನಿ ಸ್ತ್ರೀಯರು ಅಗ್ರಗಣ್ಯರು. ಇಂತಹ ಕೃತಕ ವರ್ತನೆಯು ಅವರಿಗೆ ಚಿಕ್ಕಂದಿನಿಂದಲೂ ಕಲಿಸಲ್ಪಡುವ ಪಾಠವಾಗಿದೆಯಂತೆ.

ಜಪಾನಿನಲ್ಲಿ ಹೆಂಗುಸರೆಂದರೆ, ಗಂಡಸರ ಸೇವಿಕೆಯರು ಇಲ್ಲವೇ ಅವರ ಕೈಗೊಂಬೆಗಳು ಎಂಬ ಭಾವನೆ ಈಗಲೂ ಇದೆ. ಅದುಕಾರಣ, ಗಂಡಸರಿಗೆ ಬೇಕಾದಂತೆ ವರ್ತಿಸುವ ಕಲೆಯನ್ನು ಅವರಿಗೆ ಮೊದಲಿನಿಂದಲೂ ಕಲಿಸಿಕೊಡುತ್ತಾರೆ. ಶಾಲೆಯ ಶಿಕ್ಷಣದಲ್ಲಿಯೂ ಇದೇ ಅಭಿಪ್ರಾಯವು ಪುನಃ ಪುನಃ ಅವರ ಕಿವಿಗಳಲ್ಲಿ ಊದಲ್ಪಡುವುದು. ಒಬ್ಬ ಜಪಾನೀ ಗಂಡಸು ತನ್ನ ಹೆಂಡತಿಯು ಗೃಹಕೃತ್ಯ, ಹೂಗಳನ್ನು ಸರಿಪಡಿಸಿಡುವುದು, ಶಿಷ್ಟ ಸಂಪ್ರದಾಯಾದಿಗಳನ್ನು ಅರಿತಿರಬೇಕೆಂದು ಬಯಸುತ್ತಾನೆ ಹೊರತು ಆಕೆಯು ಬುದ್ಧಿವಂತಳಾಗಿರಬೇಕೆಂದು ಆಶಿಸುವುದಿಲ್ಲ. ಬುದ್ಧಿವಂತಳಾಗಿದ್ದರೆ ತನಗೆ ಎಲ್ಲಿಯಾದರೂ ಅವಿಧೇಯಳಾಗಿ ವರ್ತಿಸುವಳೋ ಎಂಬ ಹೆದರಿಕೆ ಅವನಿಗಿದ್ದೇ ಇದೆ.

ಜಪಾನೀ ಹೆಂಗಸಿಗಿರುವುದು ಎರಡೇ ಮಾರ್ಗ–ವಿವಾಹವಾಗುವುದು ಅಥವಾ 'ಗೈಶಾ' ಎಂದು ಕರೆಯಲ್ಪಡುವ 'ಸೂಳೆ'ಯಾಗುವುದು; ಹೊರತು ಬೇರಾವ ಹಕ್ಕೂ ಅವಳಿಗಿಲ್ಲ. ವಿವಾಹವಾದರೆ, ಗಂಡಸಿಗೆ ಆಕೆಯನ್ನು ತ್ಯಜಿಸಲು ಹಕ್ಕಿದೆ, ಪರಂತು ಆಕೆಗೆ ಗಂಡನನ್ನು ತ್ಯಜಿಸಲು ಹಕ್ಕಿಲ್ಲ. ಅದರಲ್ಲೂ ಆಕೆಗೆ ಮಕ್ಕಳು ಹುಟ್ಟದಿದ್ದರೆ ತೀರಿತು–ಗಂಡನು ನಪುಂಸಕನಾಗಿದ್ದರೂ ಮಕ್ಕಳಾಗದಿರಲು ಹೆಂಡತಿಯಲ್ಲೇ ದೋಷವಿದೆಯೆಂದು ತೀರ್ಮಾನಿಸಿ, ಆಕೆಯ ಕೈಬಿಡುತ್ತಾನೆ.

ಎಂತಹ ಬಡ–ಯಾ, ಶ್ರೀಮಂತ ಕುಟುಂಬದಲ್ಲಾದರೂ ಸರಿಯೆ, ಜಪಾನೀ ಹೆಂಡತಿಯು ಗಂಡನ ಗುಲಾಮಳಂತೆಯೇ ಎಂದು ಭಾವಿಸತಕ್ಕದು. ಮುಂಜಾನೆ ಎಲ್ಲರಿಗಿಂತ ಮುಂಚಿವಾಗಿ ಏಳಬೇಕು. ರಾತ್ರಿ ಎಲ್ಲರೂ ಮಲಗಿದ ನಂತರ ತಾನು ಮಲಗಬೇಕು. ಗಂಡನು ಮೋಜಿನ ಜೀವನವನ್ನು ನಡೆಯಿಸಿ, ಮನೆಗೆ ಎಷ್ಟು ತಡಮಾಡಿ ಬಂದರೂ ಕಾಚೂ ಮಾತೆತ್ತದೆ, ಹೊಸ್ತಿಲಲ್ಲಿ ಮೊಣಕಾಲೂರಿ ಅವನನ್ನು ಸ್ವಾಗತಿಸಿ, ಯಾವ ತರದ ಅಸಂತೋಷವನ್ನೂ ತೋರಿಸದೆ ಒಳಗೆ ಬರಮಾಡಬೇಕು. ಎಂತಹ ಶ್ರೀಮಂತರ ಮನೆಯಲ್ಲಿಯೂ ಹೆಂಡತಿಯೇ ಗಂಡನ ಮೈ ತಿಕ್ಕಿ ಅವನನ್ನು ಮೀಯಿಸಬೇಕು. ಗಂಡನ ಇದಿರಲ್ಲಿ, ಆಕೆ ಮಂಜುಗಡ್ಡೆಯಂತೆ ತಣ್ಣಗಾದ ನೆಲದ ಮೇಲೇನೆ ಕೂತು ಕೊಳ್ಳಬೇಕಲ್ಲದೆ ದಿಂಬಿನ ಮೇಲೆ ಕೂತುಕೊಳ್ಳಲು ಆಕೆಗೆ ಅಧಿಕಾರವಿಲ್ಲ. ನಡೆಯುವಾಗಲೂ, ಗಂಡನ ಹಿಂದೆ ಸಾಕಷ್ಟು ದೂರದಲ್ಲಿಯೇ ಅವನ ಸಾಮಾನುಗಳ ಹೊರೆಯನ್ನು ಹೊತ್ತುಕೊಂಡು ಆಕೆ ಹೋಗಬೇಕು. ಆಗ ಚಳಿ ವಿಪರೀತವಿದ್ದರೆ, ತನ್ನ ಶಾಲಿನಿಂದ ಗಂಡನ ದೇಹವನ್ನು ಹೊದೆದು ತಾನು ಗಡಗಡ ನಡುಗುತ್ತ ಮುಂಬರಿಯಬೇಕು ಆಕೆ–ಹೀಗಿದೆ ಅವಳ ಕೀಳು ಬಾಳು.

ಜಪಾನೀ ಮಹಿಳೆಗೆ ತನ್ನ ಮಕ್ಕಳ ಮೇಲೂ ಯಾವ ತರದ ಅಧಿಕಾರವೂ ಇಲ್ಲ. ಕಾನೂನು ಪ್ರಕಾರ ಮಕ್ಕಳ ಮೇಲಿನ ಅಧಿಕಾರವೆಲ್ಲ ತಂದೆಯದೇ ಆಗಿದೆ. ತಾಯಿಯು ತನ್ನ ಮಗುವಿಗೆ ೨೧ ವರ್ಷ ತುಂಬುವವರೆಗೆ ಅವನ ಲಾಲನೆ ಪಾಲನೆ ಮಾಡುತ್ತಾಳೆ. ಅನಂತರ ಒಂದು ದಿನ ಆ ಮಗುವನ್ನು ಕರೆದು, ತನ್ನ ಕುಟುಂಬಕ್ಕಾಗಿ–ದೇಶಕ್ಕಾಗಿ–ಆ ಮಗು ಸಲ್ಲಿಸಬೇಕಾದ ಕರ್ತವ್ಯದ ಮನವರಿಕೆ ಮಾಡಿಸಿ ಕಳುಹಿಸಿಕೊಡುತ್ತಾಳೆ. ಆಗ ತಾನೆ 'ಹರ-ಕೀರಿ' (ಎಂದರೆ ಗೌರವ ರಕ್ಷಣೆಗಾಗಿ ಆತ್ಮಹತ್ಯೆ)ಯ ಪ್ರತಿಜ್ಞೆಯನ್ನು ಆಕೆ ಆ ಮಗುವಿನಿಂದ ಪಡೆಯುವಳು. ಹೀಗೆ ತಾಯಿಯ ಪಾಲನೆಯಿಂದ ಮುಕ್ತನಾದ ಹುಡುಗನು ಒಬ್ಬ ಹೆಂಗುಸನ್ನು ಮನ್ನಿಸುವುದಂತಿರಲಿ, ಅವಳಿಗೆ ಒಂದಿಷ್ಟು ವಿನಯವನ್ನು ತೋರಿಸುವುದೂ ಅವನ ಪೌರುಷಕ್ಕೆ ಕುಂದನ್ನು ತರುವುದು. ಜಪಾನೀ ಸಮಾಜದಲ್ಲಿ ಹೆಂಗಸಿಗೆ ಸ್ಥಾನವೇ ಇಲ್ಲ. ಅವಳು ಗಂಡನ ಸೇವೆ ಮಾಡುವ ಮತ್ತು ಮಕ್ಕಳನ್ನು ಹೆರುವ ಒಂದು ಯಂತ್ರವಷ್ಟೆ.

ಜಪಾನಿನಲ್ಲಿ ಅಲ್ಪಸ್ವಲ್ಪ ಸ್ವಾತಂತ್ರ್ಯವಿರುವ ಹೆಂಗುಸೆಂದರೆ 'ಗೈಶಾ' ಎಂದು ಹೇಳಿಸಿಕೊಳ್ಳುವ ಸೂಳೆ. ಕೆಲವು ವರ್ಷಗಳ ಹಿಂದಿನ ವರೆಗೆ ಮದುವೆಯಾದ ಯುವಕರು ತಮ್ಮ ಮದುವೆಯಾದ ಸ್ವಲ್ಪ ಸಮಯದಲ್ಲಿಯೇ ಇಂತಹ ಒಬ್ಬ 'ಸೂಳೆ'ಯನ್ನಿಟ್ಟುಕೊಳ್ಳುವುದೊಂದು ಆಶ್ಚರ್ಯದ ವಿಷಯವಾಗಿರಲಿಲ್ಲ. ಎಷ್ಟೋ ವೇಳೆ ಇಂತಹ ಸೂಳೆಯರು ಮನೆಯ ಮತ್ತೊಂದು ಪಾರ್ಶ್ವದಲ್ಲೇ ಇರುತಿದ್ದರು. ಗಂಡಸರು ಅವರ ನಿಜವಾದ ಸಂಗಾತಿಗಳಂತಿದ್ದು ಅವರಿಗೆ ಸಲಗೆಯನ್ನು ಕೊಡುತಿದ್ದರು. ಈಗ ಅಷ್ಟು ಬಹಿರಂಗವಾಗಿ ಸೂಳೆಯನ್ನಿಟ್ಟು ಕೊಳ್ಳುವುದು ಕಡಿಮೆಯಾಗುತ್ತ ಬಂದಿದೆ. ಆದರೆ ಈಗಲೂ ಹೆಂಡತಿಯು ಅಂತಹ ಸೂಳೆಯಿಂದ ಹುಟ್ಟಿದ ಮಕ್ಕಳನ್ನು ದತ್ತಕ್ಕೆ ತೆಗೆದುಕೊಳ್ಳಲೇ ಬೇಕಾಗುವುದು.

ಜಪಾನೀ ಸ್ತ್ರೀಯರಿಗೆ ತಮ್ಮ ದೇಶವನ್ನು ಬಿಟ್ಟು ಹೊರಗೆ ಹೋದರೇನೆ ಸಂಪೂರ್ಣ ಸ್ವಾತಂತ್ರ ಸಿಗಬಲ್ಲುದು. ಹೀಗೆ ಒಮ್ಮೆ ಹೊರ ಹೋದ ಸ್ತ್ರೀಯರಿಗೆ ಪುನಃ ತಮ್ಮ ದೇಶಕ್ಕೆ ಮರಳಿ ಹೋಗುವ ಮನಸ್ಸೇ ಇರುವುದಿಲ್ಲವಂತೆ; ಕಾರಣ, ತಮ್ಮ ಮಾತೃ ಭೂಮಿಯಲ್ಲಿ ತಮ್ಮ ಬಾಳು ನಾಯಿಯ ಬಾಳಿಗಿಂತಲೂ ಕೀಳು ಎಂದು ಅವರ ಎಣಿಕೆ.

ಇಷ್ಟಾದರೂ ಜಪಾನಿನಲ್ಲಿ ಮಹಿಳೆಯರು ಮಾತನಾಡುವಾಗಲೆಲ್ಲ, ತಮ್ಮ ಮನಸ್ಸಿನಲ್ಲೆಷ್ಟು ಬೇಸರವಿದ್ದರೂ, ನಗುನಗುತ್ತಿರಲು ಕಾರಣವೇನೆಂದು ಎಲ್ಲರೂ ಆಶ್ಚರ್ಯಪಡಬಹುದು. ಜಪಾನೀ ಶಿಕ್ಷಣದ ಶಿಸ್ತು ಅಷ್ಟು ಕಠಿಣವಾದುದೇ ಇದಕ್ಕೆ ಕಾರಣ.

ಜಪಾನೀ ಹೆಂಡತಿಗೆ ಸಿಗುವ ಒಂದೇ ಒಂದು ಸುಖವೆಂದರೆ ಅತ್ತೆಯಾಗಿ ಸೊಸೆಯನ್ನು ಪೀಡಿಸುವುದು. ತನ್ನ ಮಗುವಿಗೆ ಒಂದು ಹುಡುಗಿಯನ್ನು ಗೊತ್ತುಮಾಡಿ, ಅವಳನ್ನು ಮನೆಗೆ ತಂದು, ಅವಳ ಮೇಲೆ ದಬ್ಬಾಳಿಕೆಯನ್ನು ಹೂಡುವವರೆಗೆ ಆಕೆಗೆ ಕಷ್ಟ ತಪ್ಪಿಲ್ಲ. ಸೊಸೆಯು ಮನೆಗೆ ಬಂದ ಮೇಲಂತೂ, ಆಕೆಯೇ ಅವಳ ಕಾಲೊತ್ತಬೇಕು, ರಾತ್ರಿ ಆಗಾಗ ನಿದ್ರೆಯಿಂದ ಎಚ್ಚತ್ತು ಅವಳ ಮೈಯೊತ್ತಬೇಕು, ಅವಳಿಗೆ ತಿಂಡಿತಿನಸುಗಳನ್ನು ತಯಾರಿಸಿ ಅವಳ ಮುಂದೆ ತಂದಿಡಬೇಕು. ಹೀಗೆ ಸೊಸೆಯೆಂದರೆ ತೊತ್ತಿಗಿಂತಲೂ ಕೀಳು.

ಇವೆಲ್ಲ ಕಷ್ಟಗಳಿಂದ ಪಾರಾಗಬೇಕೆಂದು ಹಂಬಲಿಸುವ ಜಪಾನಿ ಹೆಂಗುಸಿಗೆ ಆತ್ಮಹತ್ಯೆಯೊಂದೇ ಉಪಾಯವಷ್ಟೆ! ಆದರೆ ಹಾಗೆ ಆತ್ಮಹತ್ಯೆಯನ್ನು ಕೂಡಾ ತನಗೆ ಬೇಕಾದ ರೀತಿಯಲ್ಲಿ ಮಾಡಿಕೊಳ್ಳಲು ಅವಳಿಗೆ ಸ್ವಾತಂತ್ರ್ಯವಿಲ್ಲ. ನೀರಿನಲ್ಲಿ ಬೀಳುವುದು, ಅಥವಾ ಜ್ವಾಲಾಮುಖಿಯಲ್ಲಿ ಧುಮುಕುವುದು-ಇವೆರಡೇ ಅವಳಿಗಿರುವ ಆತ್ಮಹತ್ಯೆಯ ವಿಧಾನಗಳು. ಅವಳಿಗೆ 'ಹರ-ಕೀರಿ' ಮಾಡಿಕೊಳ್ಳುವಷ್ಟೂ ಅಧಿಕಾರವಿಲ್ಲ. ತನ್ನ ಗಂಡನೊಂದಿಗೇನೆ ಸಾಯಬೇಕಾದರೂ ಆಕೆ ಮೊದಲಾಗಿಯೇ ಅವನ ಅನುಮತಿಯನ್ನು ಪಡೆಯಬೇಕು."

ಕಣ್ಣಿನ ರಕ್ಷಣೆ

ಇಂಡಿಯನ್ ರೆಡ್ ಕ್ರೊಸ್ ಸೊಸೈಟಿಯ 'ಕಿರಿಯ ವಿಭಾಗದವರು ಕಣ್ಣಿನ ರಕ್ಷಣೆಗಾಗಿ– ಹಾಗೂ ಕಣ್ಣು ರೋಗಗಳು ಬಾರದಂತೆ ಈ ಕೆಳಗಿನ ಮುಂಜಾಗ್ರತೆಗಳನ್ನು ಕೈ ಕೊಳ್ಳುವುದು ಅಗತ್ಯವೆಂಬುದಾಗಿ ಭಾವಿಸುತ್ತಾರೆ.

೧. ನಿಮ್ಮ ಮುಖವನ್ನು, ಮತ್ತು ಕೈಗಳನ್ನು ಸದಾ ಶುಚಿಯಾಗಿಡಿರಿ. ದಿನಕ್ಕೆರಡಾವರ್ತಿಯಾದರೂ ಅವುಗಳನ್ನು ಉತ್ತಮ ಸಾಬೂನು ಮತ್ತು ಶುದ್ಧ ನೀರಿನಿಂದ ತೊಳೆದು ಶುಚಿ ಪಡಿಸಿರಿ.

೨. ಕಣ್ಣುಗಳಲ್ಲಿ ನುಸಿಗಳು ಯಾ ದೂಳು ಸೇರದಂತೆ ಜಾಗ್ರತೆ ವಹಿಸಿರಿ.

೩. ಬೇರೆಯವರು ಉಪಯೋಗಿಸಿದ ಕರವಸ್ತ್ರ, ವಸ್ತ್ರ ಯಾ ಕಣ್ಣಿಗೆ ಹಾಕುವ ಕಡ್ಡಿಯನ್ನು ನೀವೆಂದಿಗೂ ಉಪಯೋಗಿಸಬೇಡಿರಿ.

೪. ನಿಮ್ಮ ಅನುದಿನದ ಆಹಾರದಲ್ಲಿ ಸಾಕಷ್ಟು ಬೆಣ್ಣೆ ಅಥವಾ ಹದವಾಗಿ ಬೇಯಿಸಲ್ಪಟ್ಟ ಟೊಮೆಟೊ ಯಾ ಹಸುರು ತರಕಾರಿಗಳು ಯಾ ಹಾಲು ತುಂಬಾ ಇರುವಂತೆ ಎಚ್ಚರಿಕೆ ತೆಗೆದು ಕೊಳ್ಳಿರಿ.

೫. ನಿಮ್ಮ ಕಣ್ಣು ಕೆಂಪಗಾದರೆ ಇಲ್ಲವೆ ಅದರಿಂದ ಕೊಳೆಕು ಹೊರಗೆ ಬರುತ್ತಿದ್ದರೆ ಕೂಡಲೆ ವೈದ್ಯರನ್ನು ವಿಚಾರಿಸಿರಿ.

೬. ಕಣ್ಣಿಗೆ ನೋವಿದ್ದರೆ, ಶುದ್ಧವಾದ ನೀರಿನಿಂದಾಗಲೀ ಬೋರಿಕ್ ಲೋಶನಿನಿಂದಾಗಲೀ ಅದನ್ನು ತೊಳೆದು ಕೆಲವು ಹನಿ ಶುದ್ಧವಾದ ಹರಳೆಣ್ಣೆಯನ್ನು ಹಾಕಿರಿ.

೭. ಕಾಟು ವೈದ್ಯರ (Quacks) ಮದ್ದುಗಳನ್ನೆಂದಿಗೂ ತೆಗೆದುಕೊಳ್ಳ ಬೇಡಿರಿ. ಅವರು ಕಣ್ಣಿನಲ್ಲಿ ಉದ್ರೇಕವನ್ನುಂಟುಮಾಡುವ ಅಪಾಯಕಾರಿ ಮದ್ದು ಯಾ ಕೊಳೆತ ಸಾಧನಗಳನ್ನು ಹಾಕಿ ಕಣ್ಣನ್ನು ಕೆಡಿಸುವರು.

೮. ನಿಮ್ಮ ದೃಷ್ಟಿಯು ಮಂದವಾಗುತ್ತ ಬರುತ್ತಿದೆಯಾದರೆ, ತರಬೇತು ಹೊಂದಿದ ಉತ್ತಮ ನೇತ್ರ ವೈದ್ಯರನ್ನು ವಿಚಾರಿಸಿರಿ.

೯. ಮೇಹ(Gonorrhea) ಅಥವಾ ಫರಂಗಿ (Syphilis) ರೋಗವಿದ್ದವರು ತಮ್ಮ ಕಣ್ಣಿನ ರೋಗಗಳು ಸಂಪೂರ್ಣ ವಾಸಿಯಾಗುವ ತನಕ ವೈದ್ಯರ ಚಿಕಿತ್ಸೆಯನ್ನು ನಿಲ್ಲಿಸಬಾರದು. ವೈದ್ಯರು ಆಗಬಹುದೆನ್ನುವಷ್ಟರ ತನಕ ಮದುವೆಯಾಗಬಾರದು.

೧೦. ಒಂದು ಮಗು ಜನನಕ್ಕೆ ಬಂದೊಡನೆ ಅದರ ಕಣ್ಣಿನಲ್ಲಿ ಸೆ. ೧ ಬಲದ ಸಿಲ್ವರ್ ನೈಟ್ರೇಟ್ ದ್ರಾವಣದ ಕೆಲವು ತಟಕುಗಳನ್ನು ಹಾಕುವಂತೆ ಸೂಲಗಿತ್ತಿಗೆ ಹೇಳಿರಿ.

೧೧. ಸಿಡುಬಿನ ದಾಕು ಹಾಕಿಸಿ ಕೊಳ್ಳಿರಿ: ಪ್ರತಿ ೭ ವರ್ಷಗಳಿಗೊಮ್ಮೆ ಮತ್ತು ಆಸು ಪಾಸಿನಲ್ಲಿ ಸಿಡುಬು ತಲೆದೋರಿದಾಗ ದಾಕು (Vaccination) ಹಾಕಿಸಲೇ ಬೇಕು.

೧೨. ಕಲ್ಲು ಕಡ್ಡಿ ಮುಂತಾದವುಗಳಿಂದ ಕೂಡಿದ ಅಪಾಯಕರವಾದ ಆಟಗಳನ್ನು ಆಡಬೇಡಿರಿ. ಬಾಣ ಬಿರುಸುಗಳ ಸಮೀಪ ಕಣ್ಣುಗಳಿಗೆ ಅಪಾಯವಿದೆಯೆಂಬುದನ್ನು ಮರೆಯಬೇಡಿರಿ.

೧೩. ಬಿಸಿಲಿನ ಝಳ ಹಾಗೂ ದೂಳಿನಿಂದ ತಪ್ಪಿಸಲಿಕ್ಕೆ ಮತ್ತು ಅಪಾಯಕಾರಿ ಯಾ ಮನೋರಂಜನೆಯ ಸ್ಥಳಗಳಲ್ಲಿ ಅವಘಡಗಳಾಗದಂತೆ ಕಣ್ಣುಗಳಿಗೆ ಬಣ್ಣದ ಕನ್ನಡಕ(goggles ಧರಿಸಿರಿ.

೧೪. ಗರ್ಭಿಣಿ ಸ್ತ್ರೀಯು ಹೆರಿಗೆಯ ಸ್ವಲ್ಪ ಮುಂಚಿತವಾಗಿ ಡಾಕ್ಟರರಿಂದ ಕಣ್ಣನ್ನು ಪರೀಕ್ಷೆ ಮಾಡಿಸುವುದು ಉತ್ತಮ.

೧೫. ಒಂದು ಹೆಗಲ ಮೇಲೆ ಹಿಂದಿನಿಂದ ಬೀಳುವ ಒಳ್ಳೆಯ ಬೆಳಕಿನಲ್ಲೇ ಓದಿರಿ.

೧೬. ಓದುವಾಗ ಪುಸ್ತಕ ೧೪ ಇಂಚು ದೂರದಲ್ಲಿರಲಿ.

ಉಷ್ಣ ಕಾಲದಲ್ಲಿ ನಿಮ್ಮ ಕಂಠದ ಕುರಿತು ಜಾಗ್ರತೆ ತೆಕ್ಕೊಳ್ಳಿರಿ.
ಶ್ವಾಸಯೋಗ್ಯ ಮಾತ್ರೆ ಪೆಪ್ಸುಗಳನು
ಪೆಪ್ಸು ನಿಮ್ಮ ಬಾಯಲ್ಲಿ ಹಾಕಿದ ಕೂಡಲೇ ಕರಗಿ ಅತ್ಯುತ್ತಮ ಔಷಧಿ ರಸವನ್ನು ಹೊರಗೆಡವುದು. ಅದರಿಂದ ಕಂಠಬೇನೆ, ಉರಿಶೀತ, ಎದೆನೋವು, ಮೊದಲಾದ ಶೀತಬಾಧೆಗಳು ಗುಣ ಹೊಂದುವುದು.

ಪೆಪ್ಸು ತೆಕ್ಕೊಳ್ಳಿರಿ.
PEPS
ವಿಷಹಾರೀ ಶ್ವಾಶಯೋಗ್ಯ ಮಾತ್ರೆಗಳು

ನಗರದ ಪ್ರಾಣಿಹಿಂಸಾ ನಿವಾರಕ ಸಂಘ

ಬಸ್ ಸರ್ವೀಸ್ ಬಗ್ಗೆ ಜಿಲ್ಲಾ ಬೋರ್ಡ್ ಯೋಜನೆ

ರಾತ್ರಿ ಶಾಲೆ ದಿನ– ನಿಯಂತ್ರಣ ಕಟ್ಲೆ– ಬಿ. ಎ. ಫಲಿತಾಂಶ– ವೈದ್ಯ ಸಮ್ಮೇಲನ.

ಕಳೆದ ತಾ. ೨೯-೪-೧೯೪೫ರಲ್ಲಿ ಸ್ಥಳೀಯ ಗ। ಕೊಲೇಜಿನಲ್ಲಿ ದ. ಕ. ಎಡಿಶನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ನೆರೆದ ಮಂಗಳೂರು ನಾಗರಿಕರ ಒಂದು ಸಭೆಯಲ್ಲಿ ಮಂಗಳೂರಿಗಾಗಿ ಮೇಲ್ಕಂಡ ಹೆಸರಿನ ಸಂಘವೊಂದು ಸ್ಥಾಪಿಸಲ್ಪಟ್ಟಿದ್ದು ಅದು ತಾ. ೧-೪-೧೯೪೫ರಿಂದ ಕಾರ್ಯಾರಂಭಮಾಡಲು ಅಧಿಕಾರ ಪಡೆದಿದೆ. ದ. ಕ. ಜಿಲ್ಲಾ ಕಲೆಕ್ಟರರು ಇದರ ಎಕ್ಸ್ಒಫೀಸಿಯೊ ಪ್ರಸಿಡೆಂಟರು.

ಪ್ರಾಣಿಹಿಂಸಾ ಕಾಯಿದೆ (೧೮೯೦ರ ಎಕ್ಟ್ XI) ಯ ಮೇರೆಗೆ ಈ ಕೆಳಗಿನವು ಅಪರಾಧವೆಂದೆಣಿಸಲ್ಪಡುವವು ಎಂದು ಮಾನಾರ್ಥ ಕಾರ್ಯದರ್ಶಿ ಶ್ರೀ. ಎಂ. ಕೆ. ದೇವರಾಜ್ ಅವರು ತಿಳಿಸುತ್ತಾರೆ:–

ಹೊಡೆಯುವುದು, ಕಲ್ಲಿನಿಂದ ಹೊಡೆಯುವುದು, ಮಿತಿ ತಪ್ಪಿ ಓಡಿಸುವುದು, ಮಿತಿತಪ್ಪಿ ಭಾರ ಹೇರಿಸುವುದು, ಆಹಾರ ಕೊಡದಿರುವುದು, ಬಾಯಾರಿಕೆಗೆ ಗುರಿಮಾಡುವುದು, ಮಳೆ ಬಿಸಿಲುಗಳಲ್ಲಿ ಕಟ್ಟಿಹಾಕುವುದು, ಇವೇ ಮೊದಲಾದ ರೀತಿಗಳಲ್ಲಿ ಪ್ರಾಣಿಗಳನ್ನು ಕೆಟ್ಟ ರೀತಿಗಳಲ್ಲಿ ನಡೆಸುವುದು.

ಯಾವ ಪ್ರಾಣಿಯನ್ನಾದರೂ ಅನಾರೋಗ್ಯಕರವಾದ ಶೆಡ್ಡು, ಹಟ್ಟಿ, ದೊಡ್ಡಿ ಮೊದಲಾದ ಕಡೆಗಳಲ್ಲಿ ಇರಿಸುವುದು.

ಕಾಯಿಲೆ ಇರುವ ಅಂಗಹೀನವಾದ ಅಥವಾ ಇತರ ರೀತಿಗಳಿಂದ ಅಯೋಗ್ಯವೆನ್ನಿಸಿದ ಪ್ರಾಣಿಯನ್ನು ಗಾಡಿಗೆ, ಊರಿನ ಗಾಣಕ್ಕೆ ಅಥವಾ ನೇಗಿಲಿಗೆ ಅಥವಾ ಬೇರೆ ಯಾವದಾದರೂ ಕೆಲಸಗಳಿಗೆ ಉಪಯೋಗಿಸುವುದು ಅಥವಾ ಉಪಯೋಗಿಸಲು ಅಸ್ಪದಕೊಡುವುದು.

ಅನಾವಶ್ಯಕವಾದ ಕ್ರೂರತನವನ್ನು ತೋರಿಸಿ ಯಾವುದಾದರೂ ಪ್ರಾಣಿಯನ್ನು ಕೊಲ್ಲುವುದು.

ಒಬ್ಬನ ವಶವಿರುವ ಅಥವಾ ಮೇಲ್ವಿಚಾರಕ್ಕೆ ಒಳಪಟ್ಟಿರುವ ಕಾಯಿಲೆಯಾದ ಒಂದು ಪ್ರಾಣಿಯ ವಿಷಯದಲ್ಲಿ ತಕ್ಕ ಜಾಗ್ರತೆ ವಹಿಸದಿರುವುದು ಅಥವಾ ಅಗತ್ಯವಿರುವ ಪಶು ವೈದ್ಯ ಚಿಕಿತ್ಸೆಯನ್ನು ಕೊಡಿಸದೆ ಅಸಡ್ಡೆ ಮಾಡುವುದು; ಅಂಥ ಪ್ರಾಣಿ ಎಲ್ಲಿಯಾದರೂ ಹೋಗಲು ಇಲ್ಲವೆ ಸಾರ್ವಜನಿಕ ರಸ್ತೆ ಮುಂತಾದ ಕಡೆ ಬಿದ್ದು ಸಾಯಲು ಅದನ್ನು ಬಿಡುವುದು.

ಶರೀರದಲ್ಲಿ ಊನವಿರುವ, ಹೊಟ್ಟೆಗೆ ಸಾಲದಿರುವ ಅಥವಾ ಕೆಟ್ಟ ರೀತಿಯಿಂದ ನಡೆಯಿಸಿರುವ ಕಾರಣದಿಂದ ನೋವನ್ನು ಅನುಭವಿಸುತ್ತಿರುವ ಯಾವುದೊಂದು ಸಜೀವ ಪ್ರಾಣಿಯನ್ನಾದರೂ ಮಾರಾಟಕ್ಕೆ ಹೊರಗೆ ಇರಿಸುವುದು. ಅಥವಾ ಒಪ್ಪಿಸುವುದು. ಅನಾವಶ್ಯಕವಾದ ನೋವು ಅಥವಾ ಕಷ್ಟಗಳಿಗೆ ಗುರಿ ಪಡಿಸುವ ರೀತಿಯಲ್ಲಿ ಅಥವಾ ಸ್ಥಿತಿಯಲ್ಲಿ ಕಟ್ಟುವುದು. ಅಥವಾ ಹೊತ್ತುಕೊಂಡು ಹೋಗುವುದು.

ಹಳೇ ಪದ್ಧತಿಯ, ಅನಾಗರಿಕ ಕ್ರಮದಿಂದ ಯಾವ ಪ್ರಾಣಿಯ ಬೀಜವನ್ನಾದರೂ ಜಜ್ಜಿ ತೆಗೆಯುವುದು (ಅದರ ಬದಲಿಗೆ ಜಾನುವಾರು ಆಸ್ಪತ್ರೆಯ ಸರ್ಜನರ ಪದ್ಧತಿಯ 'ಬುರ್ಡಿಜೊ' ರೀತಿಯನ್ನು ಅನುಸರಿಸಬಹುದು.)

ಅನಾವಶ್ಯಕವಾದ ನೋವು ಅಥವಾ ಕಷ್ಟಗಳಿಗೆ ಯಾವ ಪ್ರಾಣಿಯನ್ನಾದರೂ ಗುರಿಪಡಿಸುವಂಥಾ ಇತರ ಎಲ್ಲಾ ಕ್ರೂರ ಕಾರ್ಯಗಳು ಮತ್ತು ಅವುಗಳನ್ನು ಕೆಟ್ಟ ರೀತಿಯಿಂದ ನಡೆಸಿಕೊಂಡು ಹೋಗುವ ರೀತಿಗಳು.

ಪ್ರಾಣಿಯೆಂದರೆ ಗ್ರಹಕೃತ್ಯಕ್ಕೆ ಸಂಬಂಧಪಟ್ಟ ಅಥವಾ ಹಿಡಿದು ತಂದ (ಪಕ್ಷಿ, ಮೃಗಗಳ ಇತ್ಯಾದಿ) ಪ್ರಾಣಿಯೆಂದರ್ಥ.

ಇಂತಹ ಅಪರಾಧಗಳನ್ನು ಯಾರು ವಾಸ್ತವವಾಗಿ ಮಾಡುತ್ತಾನೋ ಆ ಮನುಷ್ಯನೂ ಅಲ್ಲದೆ ಆ ಜಾನುವಾರಗಳ ಮ್ಹಾಲಕನೂ ಯಾವುದಾದರೊಂದು ಪ್ರಾಣಿಯ ಮೇಲೆ ಅಂಥಾ ಕ್ರೂರಾಚಾರಗಳನ್ನು ಜರುಗಿಸಲು ಆ ಪ್ರಾಣಿಗಳನ್ನು ಕೆಟ್ಟ ರೀತಿಯಲ್ಲಿ ನಡೆಸಲೂ ಅಸ್ಪದ ಕೊಡುವ ಬೇರೆ ಯಾವ ಮನುಷ್ಯನೂ ಅಥವಾ ಇತರ ರೀತಿಯಿಂದ ಅಂಥಾ ಅಪರಾಧಗಳಿಗೆ ಜವಾಬ್ದಾರನಾಗುವ ಇನ್ನಿತರ ಯಾವನೂ ಪ್ರೊಸಿಕ್ಯೂಟ್ ಮಾಡಲ್ಪಡಲು ಅರ್ಹನಾಗುತ್ತಾನೆ.

ಯಾವ ಪ್ರಾಣಿಗಳು ಅಂಥಾ ಕ್ರೂರಾಚಾರಗಳಿಗೆ ಒಳಪಡಿಸಲ್ಪಟ್ಟಿವೆಯೋ ಅಂಥಾ ಪ್ರಾಣಿಗಳನ್ನು ಮೇಜಿಸ್ಟ್ರೇಟರ ಅಥವಾ ವೆಟರ್ನರಿ ಸರ್ಜನರ ಪರೀಕ್ಷೆಯ ಉದ್ದೇಶಕ್ಕಾಗಿ ತನ್ನ ವಶಪಡಿಸಿಕೊಳ್ಳಲಿಕ್ಕೂ, ಸೆಳೆದುಕೊಳ್ಳಲಿಕ್ಕೂ ಅಂಥಾ ಕಾರ್ಯಗಳಿಗೆ ಹೊಣೆಗಾರರಾದವರನ್ನು ವಾರಂಟು ವಿನಹ ಕೈದು ಮಾಡಲಿಕ್ಕೂ–ಈ ಸಂಘದ ಇನ್ಸ್‌ಪೆಕ್ಟರರಿಗೆ ಅಧಿಕಾರವಿದೆ.

ಮಾನವನ ಪರಮ ಸೇವೆ ಮಾಡುವ ಪ್ರಾಣಿಗಳನ್ನು ಯಾವ ರೀತಿಯಲ್ಲೂ ಹಿಂಸಿಸುವುದು ಅವಿವೇಕತನವೇ ಸರಿ. ಅದು ಕಾಡು ಸ್ವಭಾವವನ್ನು ತೋರಿಸುತ್ತದೆ. ಪ್ರಾಣಿಗಳನ್ನು ಸಹಾನುಭೂತಿಯಿಂದ ಕಾಪಾಡಿದರೆ ದೇಶದ ಆಕಳು ಮತ್ತಿತರ ಉಪಯುಕ್ತ ಜಾನುವಾರೆಗಳ ಸಂಖ್ಯೆ ಹೆಚ್ಚಿ ನಾವು ಅವುಗಳಿಂದ ಹೆಚ್ಚಿನ ಅಮೂಲ್ಯದ ಉಪಕಾರವನ್ನು ಪಡೆಯಬಹುದು.

ಜಿಲ್ಲಾ ಬೋರ್ಡು ಸಭೆ:— ಇದು ಕಳೆದ ತಾ. ೧೭ರಂದು ಶ್ರೀ ಆರೂರು ವಕೀಲರ ಅಧ್ಯಕ್ಷತೆಯಲ್ಲಿ ಜರಗಿತು.

ಅಂದು ಚರ್ಚೆಗೆ ಬಂದ ಪ್ರಶ್ನೆಗಳಲ್ಲಿ ವೇಣೂರು ಗ್ರಾಮದ ಡಿಸ್ಪೆನ್ಸರಿ ಮತ್ತು ಅದಕ್ಕೆ ಸಂಬಂಧಿಸಿದ ಸೂಲಗಿತ್ತಿಯ ಸಮಸ್ಯೆಯೂ ಒಂದು ಪ್ರಾಮುಖ್ಯವಾದುದು. ಆ ಗ್ರಾಮದಲ್ಲಿ ನೇಮಿಸಲ್ಪಟ್ಟ ಸೂಲಗಿತ್ತಿಯು ಓರ್ವ ಹರಿಜನ ವರ್ಗದವಳು ಅವಳಿಗೆ ನಿರ್ದೇಶಿಸಿದಷ್ಟು ಕೇಸುಗಳಿಗೆ ಅವಳು ಹೋಗಿಲ್ಲವೆಂದು ಜಿಲ್ಲಾ ಮೆಡಿಕಲ್ ಆಫೀಸರರು ತಮ್ಮ ವರದಿಯಲ್ಲಿ ಆಕ್ಷೇಪಿಸಿದ್ದರು. ಉಚ್ಚ ವರ್ಗದ ಹಿಂದುಗಳು ತನ್ನನ್ನು ಕರೆಯುವುದಿಲ್ಲವೆಂದು ಆಕೆಯ ಕಾರಣ ಉದಾಹರಣೆ. ಉತ್ತಮ ಜಾತಿಯವಳೊಬ್ಬಳನ್ನು ಆ ಕಡೆಗೆ ಕಳುಹಿಸದರಾಗದೇ ಎಂದು ಜಿ. ಮೆ. ಆಫೀಸರರಿಗೆ ಬರಕೊಳ್ಳಲಾಗಿ 'ಆ ರೀತಿ ಮಾಡುವ ಅಗತ್ಯವಿಲ್ಲ'ವೆಂದು ಅವರು ತಿಳಿಸಿದರು. ಈ ವಿಚಾರವನ್ನು ಸಭೆಯಲ್ಲಿ ಪ್ರಕಟಿಸಲಾಯಿತು.

ಅನೀತಿ ವ್ಯಾಪಾರವನ್ನು ವ್ಯಭಿಚಾರ ಸಂಬಂಧ) ತಡೆಗಟ್ಟಲು ಶಾಸನವನ್ನು ಜಾರಿಗೆ ತರಬೇಕೆಂಬ ಸರಕಾರದ ಸೂಚನೆ ಜಿಲ್ಲಾ ಬೋರ್ಡು ಸಭೆಯ ಚರ್ಚೆಗೆ ಬಂದು ಯೋಗ್ಯ 'ಸ್ತ್ರೀ ರಕ್ಷಣಾಲಯ'ಗಳನ್ನು ಸ್ಥಾಪಿಸಲು ಸಹಾಯ ಮಾಡುವುದಾದರೆ ಹಾಗೆ ಮಾಡಬಹುದೆಂದಾಯಿತು.

'ಈ ಜಿಲ್ಲಾ ಬೋರ್ಡಿಗೊಬ್ಬ ಅಧಿಕಾರಿಗಳು ಅಗತ್ಯವಿಲ್ಲ' ಎಂಬ ಠರಾವನ್ನು ಶ್ರೀ. ವಿ. ಜತ್ತಪ್ಪ ರೈಗಳು ಮಂಡಿಸಿದರು. ನಂಬಿಯಾರರು ಅದನ್ನು ಸಮರ್ಥಿಸಿದರು. ಡಾ. ಪಿ. ಜಿ. ಆಚಾರ್, ಶ್ರೀಗಳಾದ ಸರ್ವೋತ್ತಮ ಪೈ, ನಾಗಪ್ಪಯ್ಯ ಮೊದಲಾದವರು ಅದನ್ನು ವಿರೋಧಿಸಿದರು. ಕೊನೆಗೆ ಸಭೆಯ ಅನುಮತಿ ಪಡೆದು ಶ್ರೀ. ರೈಗಳು ಅದನ್ನು ಹಿಂದೆ ತೆಗೆದುಕೊಂಡರು.

"ಜಿಲ್ಲಾ ಬೋರ್ಡು ತಾನೇ ಈ ಜಿಲ್ಲೆಯ ಬಸ್ ಸರ್ವಿಸ್‌ಗಳನ್ನು ಕೈಗೆ ತೆಗೆದುಕೊಂಡು ನಡಿಸಬೇಕು." ಎಂಬುದು ಶ್ರೀ ಜತ್ತಪ್ಪ ರೈಗಳ ಇನ್ನೊಂದು ಠರಾವೂ ಚರ್ಚೆಗೆ ಬಂತು. ಪರ್ಯಾಲೋಚಿಸಿ ನಂತರ ಆ ಸರ್ವಿಸ್‌ಗಳನ್ನು ಕೈಗೆ ತೆಗೆದುಕೊಳ್ಳುವ ಹಾಗೆ ಅಗತ್ಯವಿರುವ ಉಪಾಯಗಳನ್ನು ಅವಲಂಬಿಸುವಂತೆ ಒಂದು ಸಮಿತಿಯು ರಚಿಸಲಾಯಿತು.— ಶ್ರೀಗಳಾದ ಡಾ। ಪಿ. ಜಿ. ಆಚಾರ್, ಸಿ. ಕೆ. ಆರ್. ನಂಬಿಯಾರ್, ತ್ಯಾಂಪಣ್ಣ ಯಾನೆ ಕೃಷ್ಣ ಶೆಟ್ಟಿ, ಸಿ. ಎಲ್. ಲೋಬೋ, ವೆಂಕಟ್ರಮಣ ಗೌಡ, ನಾರಾಯಣ ಹೆಗ್ಡೆ, ಜತ್ತಪ್ಪ ರೈ–ಸದ್ರಿ ಸಮಿತಿಯ ಸದಸ್ಯರಾದ ಇವರು ಶೀಘ್ರದಲ್ಲಿ ಒಂದು ವರದಿ ತಯಾರಿಸಲಿರುವರು.

ಈಚೆಗೆ ಜಿ। ಬೋ।ಗಳಲ್ಲಿ ಗಹನವೂ ಸಾರಸ್ಯವೂ ಆದ ವಿಷಯಗಳು ಚರ್ಚೆಗೆ ಬರಲಾರಂಭಿಸಿವೆ.

* * *

ದಿ. ಮೊಗವೀರ ಲಿಟರರಿ ಯೂನಿಯನ್ ಬೊಕ್ಕಪಟ್ಣ, ಮಂಗಳೂರು, ಈ ಸಂಘದ ೨೨ನೇ ವಾರ್ಷಿಕೋತ್ಸವ ಮತ್ತು ಇದರ ಆಶ್ರಯದಲ್ಲಿ ನಡೆಸಿಕೊಂಡು ಬರುವ ರಾಷ್ಟ್ರೀಯ ಧರ್ಮಾರ್ಥ ರಾತ್ರಿ ಶಾಲೆಯ ದ್ವಿತೀಯ ವಾರ್ಷಿಕೋತ್ಸವವು ಇದೇ ತಾ ೨೭ನೇ ಆದಿತ್ಯವಾರ ಸಂಜೆ ಗಂಟೆ ೫–೩೦ಕ್ಕೆ ಸರಿಯಾಗಿ ಬೊಕ್ಕಪಟ್ಣ ಮುನ್ಸಿಪಲ್ ಹಾ. ಎ. ಶಾಲೆಯ ಕಟ್ಟಡದಲ್ಲಿ ಶ್ರೀಮಾನ್ ಕೆ. ವೈ. ಪೂಜಾರಿ ಬಿ. ಎ. ಬಿ. ಎಲ್ ಎಡ್ವೋಕೇಟ್ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಅಲ್ಲದೆ ಪ್ರಸಿದ್ಧ ಕನ್ನಡ ಬಾಷಣ ಕರ್ತರ ಭಾಷಣಗಳು, ಆಧುನಿಕ ಕವಿತೆಗಳ ವಾಚನ, ಸುಮಧುರ ಸಂಗೀತ, ಹೃದಯ ಸ್ತಂಭಿತ ಸರ್ಕಸಿನ ಆಟಗಳು ಮತ್ತು ದಿವಂಗತ ಮಾಧವ ತಿಂಗಳಾಯ ವಿರಚಿತ "ಬದಿರಕ್ಕಸ" ಎಂಬ ತುಳು ನಾಟಕ ಸಹ ಇದೆ. ಆ ಪ್ರಯುಕ್ತ ಪ್ರತಿಯೊಬ್ಬ ವಿದ್ಯಾಭಿಮಾನಿಗಳೂ ತಪ್ಪದೆ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸಾದರದಿಂದ ವಿನಂತಿಸಿಕೊಳ್ಳುತ್ತೇವೆ. ಎಂದು ಗೌ। ಕಾರ್ಯದರ್ಶಿ ಶ್ರೀ ಬಿ. ಕೋಟ್ಯಾಂಕಾರ್ ಅವರು ತಿಳಿಸುತ್ತಾರೆ.

ಪಳ್ನೀರಿನ ಮಿ। ಎ. ಪಿ. ಮತಾಯಸ್ ಎಂಬವರ ಮೇಲೆ ಪೆಟ್ರೋಲ್ ಸಂಬಂಧ ಹೂಡಲಾಗಿದ್ದ ಮೊಕದ್ದಮೆ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಗೆ ಬಂದು ಆರೋಪಗಳು ರುಜುವಾತಾಗಿ ಬೇರೆ ಬೇರೆ ಎರಡು ತಕ್ಸೀರುಗಳಿಗೆ ಒಟ್ಟು ರೂ. ೧೦೦೦ ಜುಲ್ಮಾನೆ ವಿಧಿಸಲಾಯಿತು. ಒಂದು ತಿಂಗಳಿಗೆ ಕೊಟ್ಟ ಪೆಟ್ರೋಲನ್ನು ಇನ್ನೊಂದು ತಿಂಗಳಿಗೆ ಉಪಯೋಗಿಸಿಕೊಂಡದ್ದು. ಮುಗಿಯದ ಕೂಪನುಗಳನ್ನು ಮುಗಿದಿವೆ ಎಂದು ಸುಳ್ಳು ಡಿಕ್ಲರೇಶನ್ ಕೊಟ್ಟದ್ದು ಎಂಬಿವು ಆರೋಪಗಳು.

ಬಂದರದ ಪುರುಷೋತ್ತಮ ಪೈ ಎಂಬವರು ಕಲ್ಲು ಸಕ್ಕರೆಯನ್ನು ನಿಯಂತ್ರಿತ ಧಾರಣೆಗೆ ಮಿಕ್ಕಿ ಮಾರಿದರೆಂಬ ತಕ್ಸೀರುಗಳಿಗೆ ಒಟ್ಟು ರೂ. ೫೦೦ ಜುಲ್ಮಾನೆಗೆ ಒಳಪಡಿಸಲ್ಪಟ್ಟಿರುವರು.

ರಥಬೀದಿಯ ಕಾರ್ಕಳ ಜನರಲ್ ಪ್ರೊವಿಜನ್ ಸ್ಟೋರ್ಸ್ ಲಿಮಿಟೆಡ್ ಇವರು ರೇಶನ್ ಕ್ಷೇತ್ರದೊಳಗೆ ಒಂದು ಮುಡಿ ಅಕ್ಕಿಯನ್ನು ಗುಪ್ತ ವ್ಯವಹಾರ ಮೂಲಕ ಮಾರಿದರೆಂಬ ಆರೋಪದಿಂದ ಸದ್ರಿ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ. ಕೆ. ಕೃಷ್ಣ ಪೈ ಅವರಿಗೆ ೬ ತಿಂಗಳ ಶಿಕ್ಷೆಯೂ ೧ ಸಾವಿರ ರೂಪಾಯಿ ಜುಲ್ಮಾನೆಯೂ ಆಗಿದ್ದು, ಶ್ರೀಯುತ ಪೈಗಳಿಗೆ ಮದ್ರಾಸ್ ಹೈಕೋರ್ಟ್ ಅಪ್ಪಣೆ ಮೇರೆಗೆ ಜಾಮೀನಿನ ಮೇಲೆ ಬಿಡಲಾಗಿದೆ.

ಸಾರ್ವಜನಿಕ ಆರೋಗ್ಯ ಖಾತೆಯ ಅಸಿಸ್ಟೆಂಟ್ ಡೈರೆಕ್ಟರರಾದು ಕಳೆದ ೧೯ರಂದು ಮಂಗಳೂರಿಗೆ ಬಂದಿದ್ದು, ಜಿಲ್ಲೆಯ ಆರೋಗ್ಯ ಪರಿಸ್ಥಿತಿ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ನಗರದಲ್ಲಿ ಮಾನ್ಯ ಅಧಿಕಾರಿಗಳು ಬೋಳೂರಿನ ನಿಜಾಮ್ ಕಾರ್ಸ್ ಗೇರುಬೀಜ ಕಾರ್ಖಾನೆಯನ್ನು ಸಂದರ್ಶಿಸಿ ಅದರಿಂದಾಗುವ ಸಾಧಕ ಭಾಧಕಗಳ ಕುರಿತು ತನಿಖೆ ನಡೆಸಿರುವರು.

ಸ್ಥಳೀಯ ಸೈಂಟ್ ಎಲೋಸಿಯಸ್ ಕೊಲೇಜಿನಿಂದ ಬಿ. ಎ. ಪರೀಕ್ಷೆಕೊಟ್ಟ ೬೪ ವಿದ್ಯಾರ್ಥಿಗಳಲ್ಲಿ ೪೪ ಮಂದಿಗಳು ಯಶಸ್ವಿಯಾಗಿ ಪಾಸಾಗಿರುವರು. ಈ ಫಲಿತಾಂಶವು ಶೇಕಡಾ ೬೮.೪ ರಷ್ಟಾಯಿತು.

ಜಿಲ್ಲಾ ಕಲೆಕ್ಟರರು ಜಿಲ್ಲೆಯ ಸರ್ಕೀಟಿಗೆ ಹೋದಾಗ ಮತ್ತು ಕೆಳ ಅಧಿಕಾರಿಗಳ ವರದಿಯಂತೆ, ಮಧ್ಯ ತರಗತಿಯ ವರ್ಗದಾರರೂ ವಕ್ಕಲುಗಳೂ ಹೆಚ್ಚಾಗಿ ತಮ್ಮ ಉಳಿತಾಯದ ಅಕ್ಕಿ ಭತ್ತಗಳನ್ನು ಪ್ರಾಮಾಣಿಕವಾಗಿ, ಇದ್ದಕ್ಕಿದ್ದಂತೇ ಒಪ್ಪಿಸಿರುವರೆಂದೂ, ಕೆಲ ಶ್ರೀಮಂತ ವರ್ಗದಾರರು ಸರಿಯಾಗಿ ತಂದೊಪ್ಪಿಸಲಿಲ್ಲವೆಂದೂ ಜಿಲ್ಲಾ ಕಲೆಕ್ಟರರ ಗಮನಕ್ಕೆ ಬಂದಿದೆ– ಇಂತಹ ಶ್ರೀಮಂತ ವರ್ಗದಾರರು ತಮ್ಮ ವರ್ಚಸ್ಸಿನ ಮೂಲಕ ಕೆಳ-ಅಧಿಕಾರಿಗಳಿಂದ ಇದ್ದುದಕ್ಕಿಂತ ಕಡಿಮೆ ಅಂದಾಜು ಹಾಕಿಸಿರುರುವರು ಅಥವಾ ಆರ್ಡರಿನಂತೆ ನಡಕೊಂಡಿಲ್ಲ. ಸಂದೇಹ ಕಂಡಲ್ಲೆಲ್ಲ ಕ್ರಮವಾದ ಜಡ್ತಿ ನಡೆಸಲಾಗುವುದೆಂದೂ, ಯಾರು ತಾವು ಕೊಟ್ಟ ಡಿಕ್ಲೆರೇಶನಿಗಿಂತ ಹೆಚ್ಚಿನ ಸ್ಟಾಕನ್ನಿರಿಸಿಕೊಂಡಿರುವರೋ ಅಂಥವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಾಗುವುದೆಂದೂ, ಜಿಲ್ಲಾ ಕಲೆಕ್ಟರರು ಎಚ್ಚರಿಕೆ ಕೊಡುತ್ತಾರೆ.

ಕಟಪಾಡಿಯ ಎಸ್. ಎ. ಟಿ. ಹ್ಯಾಸ್ಕೂಲು ಹೊಸದಾಗಿ ಇದೇ ಬರುವ ೧–೬–೪೫ಕ್ಕೆ ತೆರೆಯಲ್ಪಡುವುದು. ಅಂದಿನ ಪ್ರಾರಂಭೋತ್ಸವವನ್ನು ಡಾ। ಎಂ. ಕೇಶವ ಪೈ ಅವರು ಜರುಗಿಸಲಿರುವರು.

"ಮಂಜೇಶ್ವರ ಮುಸ್ಲಿಂಲೀಗಿನ ವರ್ಷಾವಧಿ ಸಮ್ಮೇಳನವು ನಿನ್ನೆ ರಾತ್ರಿ ೮-೩೦ಕ್ಕೆ ಸ್ಥಳೀಯ ಲೀಗಾಫೀಸಿನಲ್ಲಿ ಜನಾಬ್ ಎಂ. ಮಮ್ಮುಮಾಲವಿ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಭಾಷಣಾನಂತರ ಜನಾಬ್ ಕಜಿಯ್ಯೂಕರನ್ ಮುಹಮ್ಮದ್ ಸಾಹೆಬ್, ಯು. ಕೆ. ಅಂದುಂಞ ಸಾಹೆಬ್, ಕಜಿಯಿಲ್ ಮುಹಮ್ಮದ್ಕುಂಞ ಸಾಹೆಬ್ ಮೊದಲಾದವರ ಯಥೋಚಿತ ಭಾಷಣಗಳಾದುವು. ೧೯೪೪ರ ಜಮಾ–ಖರ್ಚು ಲೆಕ್ಕಾಚಾರವನ್ನು ರಿಕಾರ್ಡು ಮಾಡಲಾಗಿ ಮುಖ್ಯವಾದ ಕೆಲವು ಠರಾವುಗಳನ್ನು ಪಾಸುಮಾಡಲಾದ ನಂತರ ಹೊಸವರ್ಷದ ಚುನಾವಣೆಯು ನಡೆಯಿತು. ಜನಾಬ್ ಎಂ. ಎ. ಮುಹಮ್ಮದ್ ಸಾಹೇಬ್, (ಪ್ರೆಸಿಡೆಂಟ್) ಯು. ಕೆ. ಅಂದುಂಞ ಸಾಹೆಬ್, ತಜಿಯ್ಯೂರನ್ ಮುಹಮ್ಮದ್ ಸಾಹೆಬ್ (ವೈಸ್ ಪ್ರಸಿಡೆಂಟರು) ಯಂ. ಬಾಪುಂಞ ಸಾಹೆಬ್ (ಜನರಲ್ ಸೆಕ್ರೆಟರಿ) ಬಿ. ಯಂ. ಇಬ್ರಾಹಿಮ್ ಸಾಹೆಬ್, ಯಂ. ಪಿ. ಅಬ್ದುಲ್‌ಕಾದರ್ ಸಾಹೆಬ್ (ಅ. ಸೆಕ್ರೆಟರಿಗಳು) ಎಂ. ಪಿ. ಅಬ್ದುಲ್ಲಸಾಹೆಬ್ (ಖಜಾಂಜಿ) ಜಿಲ್ಲಾ ಪ್ರತಿನಿಧಿಯಾಗಿ ಜನರಲ್ ಸೆಕ್ರೆಟರಿಯನ್ನೆ ಚುನಾಯಿಸಿ ೨೫ ಮೆಂಬರರನ್ನೊಳಗೊಂಡ ಒಂದು ಕಮಿಟಿಯು ಸ್ಥಾಪಿಸಲ್ಪಟ್ಟು ಅಧ್ಯಕ್ಷರ ಉಪಸಂಹಾರ ಭಾಷಣಕ್ಕೂ ಕಾರ್ಯದರ್ಶಿಯವರ ವಂದನೆಯ ಪೂರ್ಣಕ್ಕೂ ನಂತರ ಸಭೆಯು ಮುಕ್ತಾಯವಾಯಿತು.

ಅಖಿಲ ಭಾರತ ಆಯುರ್ವೇದ ಸಮ್ಮೇಲನದ ವರ್ಷಾಧಿವೇಶನವು ಡಿಸೆಂಬರ್ ತಿಂಗಳಲ್ಲಿ ಮಂಗಳೂರಲ್ಲಿ ಜರಗಿಸಲು ನಿರ್ಣಯಿಸಲಾಗಿರುವುದು ಹೆಮ್ಮೆಯ ವಿಷಯ. ಆಯುರ್ವೇದ ವಿದ್ಯೆಯು ಬಹಳ ದೀನಾವಸ್ಥೆಗೆ ಮುಟ್ಟಿದ್ದು ಈಗ ಅದರಲ್ಲಿ ಜ್ಞಾನಕ್ಕಿಂತ ಅಜ್ಞಾನವೇ ಹೆಚ್ಚಾಗಿ ಅಭ್ಯಾಸಿಸಲಾಗುತ್ತದೆಂದು ಅನೇಕ ದೇಶವಿದೇಶ ಪ್ರೇಕ್ಷಕರು ಅಭಿಪ್ರಾಯ ಪಟ್ಟಿರುವರು. ಸಮ್ಮೇಲನದವರು ಯೋಗ್ಯ ಪ್ರಚಾರ ಸಂಶೋಧನೆಗಳಿಗೆ ಅತೀ ಹೆಚ್ಚಿನ ಗಮನವನ್ನು ಕೊಟ್ಟು ತಜ್ಞ ಬ್ರಿಟಿಷ್ ಶಾಸ್ತ್ರಜ್ಞರಿಂದ ಆ ಪ್ರಾಚೀನ ವಿದ್ಯೆಯ ಮಹತ್ವವನ್ನು ಅಮೋಘತೆ ವೈಶಿಷ್ಟಗಳನ್ನು ಬೆಳಕಿಗೆ ತರುವುದಕ್ಕೆ ಪ್ರಯತ್ನಪಡುವುದರೊಂದಿಗೆ ಆ ಪ್ರತ್ಯೇಕ ಕ್ಷೇತ್ರದಲ್ಲಿ ಅಭ್ಯಾಸಿಸುವ ಅನಜ್ಞರನೇಕರಿಂದುಂಟಾಗುವ ಸಾಧಕ ಭಾದಕಗಳನ್ನು ಸಾರ್ವಜನಿಕರ ಮುಂದಿರಿಸಿ ಆಯುರ್ವೇದಲ್ಲಿ ಹೆಚ್ಚಿನ ಭರವಸೆಯುತ್ಪನ್ನ ಮಾಡುವುದಕ್ಕೆ ಈ ಸಮ್ಮೇಲನದವರು ಪ್ರಯತ್ನಿಸುವರಾಗಿ ಓರ್ವ ಬಾತ್ಮಿದಾರ ಆಯುರ್ವೇದಾಭಿಮಾನಿಗಳು ಕೋರುತ್ತಾರೆ.

ಪಂಡಿತ್ ನೆಹರುಗಳು ಬಂಧಿವಾಸದಿಂದ ಹೊರಬರುವಂದು ಅವರಿಗೊಂದು ಜನಾಂಗದ ಪರವಾಗಿ ಕೃತಜ್ಞತೆ ನಿಧಿಯನ್ನು ಅರ್ಪಿಸಲೇರ್ಪಾಡಾಗಿದೆ. 'ನೆಹರುನಿಧಿ' ಎಂಬ ಸಂಗ್ರಹವನ್ನು ಬೊಂಬಾಯ ಬ್ಲಿಟ್ಜ್ ಪತ್ರಿಕೆಯವರು ಮಾಡುತ್ತಿದ್ದಾರೆ. ನಿಧಿಯ ಸಮಿತಿಗೆ ಶ್ರೀ। ಕಮಲಾದೇವಿಯವರು ಅಧ್ಯಕ್ಷರು.

ಸ್ವರಾಜ್ಯದಿಂದ ಸ್ವಾತಂತ್ರ್ಯಬರುವುದಿಲ್ಲ
ಸ್ವಾತಂತ್ರ್ಯವೆಂಬುದರ ತಿರುಳೇನು?
ಅದು ಜನತೆಯ ಹೃದಯದಲ್ಲಿರುವುದು

ಅಮೇರಿಕಾನರು ಬ್ರಿಟಿಷರನ್ನು ತಮ್ಮ ದೇಶದಿಂದ ಓಡಿಸಿ ಸ್ವತಂತ್ರರಾದರು-ಸುಮಾರು ನೂರೈವತ್ತು ವರ್ಷಗಳ ಹಿಂದೆ. ಆದರೆ ಅಮೇರಿಕನ್ ಪ್ರಜೆಗಳಿಗೆಲ್ಲರಿಗೂ ಸ್ವಾತಂತ್ರ್ಯ ಸಿಕ್ಕಿತೆ? ಇಲ್ಲ, ಲಕ್ಷಾಂತರ ಅಮೇರಿಕನ್ ನಿಗ್ರೊ ಜನರು ಹಲವು ವರ್ಷಗಳ ತನಕ ಬಿಳಿ ಅಮೇರಿಕಾನರ ಗುಲಾಮರಾಗಿದ್ದರು. ನಿಗ್ರೋ ಮಾರಾಟವು ಭರದಿಂದ ಆಗಲೂ ಸಾಗುತಿತ್ತು.

ಒಂದು ಕಾಲದಲ್ಲಿ ರೋಮಾಯರು ಬ್ರಿಟನ್ ಫ್ರಾನ್ಸುಗಳನ್ನು ಆಳುತಿದ್ದರು. ಬ್ರಿಟನ್ನರು ಸ್ಕೊಟ್ಲೆಂಡಿನವರನ್ನು ಆಳುತಿದ್ದರು. ಸ್ಕೊಟ್ಲೆಂಡಿನವರು ಆಯರ್ಲೆಂಡಿನವರನ್ನು ಕೈಕೆಳಗೆ ಇಟ್ಟುಕೊಂಡಿದ್ದರು. ಮತ್ತೆ ರೋಮಾಯರ ನಂತರ ನೊರ್ವೆಯನ್ ಮತ್ತು ಡೇನ್ ಜನರು ಇಂಗ್ಲೆಂಡನ್ನು ಆಳಿದರು.

ಇತ್ತ ಮಂಗೋಲರು ಚೀನಿಯರನ್ನೂ, ಚೀನಿಯರು ಬರ್ಮಿಯರನ್ನೂ ದಾಸತ್ವದಲ್ಲಿಟ್ಟುಕೊಂಡಿದ್ದರು. ಐಗುಪ್ತರು ಇಸ್ರಯೋಲ್ಯರನ್ನೂ, ಇಸ್ರಯೋಲ್ಯರು (ಈಗ ಯೆಹೂದಿಗಳೆಂದು ಕರೆಯಲ್ಪಡುತ್ತಾರೆ) ಅರಬರನ್ನೂ, ಅರಬರು ಹಬಸಿಗಳನ್ನೂ ಆಳಿಕೊಂಡಿದ್ದರೆನ್ನಬಹುದು.

ಒಂದೇ ದೇಶದ ಮಟ್ಟಿಗೆ ನೋಡಿದರೂ ಅದೇ ಪರಿಸ್ಥಿತಿ ಕಂಡುಬರುತ್ತದೆ. ಆರ್ಯರು ದ್ರಾವಿಡರನ್ನೂ, ದ್ರಾವಿಡರು ಸಿಂಹಳ ದ್ವೀಪಸ್ಥರನ್ನೂ ಅಂಕಿತದಲ್ಲಿಟ್ಟುಕೊಳ್ಳಲು ಅಮೋಘ ಹೋರಾಟ ನಡೆಸಿದ್ದಾರೆ. ಮೊಗಲರು ರಾಜಪುತ್ರರನ್ನೂ, ರಾಜಪುತ್ರರು ಮರಾಟರನ್ನೂ, ಮರಾಟರು ದಕ್ಷಿಣದ ದ್ರಾವಿಡ ರಾಜ್ಯಗಳನ್ನೂ ವಶಪಡಿಸಿಕೊಳ್ಳಲು ನಿರಂತರ ಕಾದಾಟ ನಡೆಸಿದ್ದಾರೆ.

ಇನ್ನು ಒಂದೇ ದೇಶದಲ್ಲಿ ಅಧಿಕಾರಕ್ಕೆ ಬರುವ ಒಂದು ಬಹುಸಂಖ್ಯಾಕ ಪಕ್ಷದವರು ಹಲವಾರು ಅಲ್ಪ ಸಂಖ್ಯಾಕ ವಿರೋಧಿ ಪಕ್ಷಗಳ ಮೇಲೆ ಪ್ರಜಾಪ್ರಭುತ್ವದ ಹೆಸರಲ್ಲಿ ದಬ್ಬಾಳಿಕೆ ನಡೆಸಲು ಪ್ರಯತ್ನಪಟ್ಟು ವಿರೋಧಿ ಪಕ್ಷದ ಮುಖಂಡರನ್ನು ಸೆರೆಮನೆಗೆ ಕಳುಹಿಸಲೂ ಹಿಂಜರಿಯದ ಅನೇಕಾನೇಕ ನಿದರ್ಶನಗಳೂ ದೊರೆಯುತ್ತವೆ.

ಜರ್ಮನಿಯಲ್ಲಿ ನಾಜೀ ಪಕ್ಷವು ಅಧಿಕಾರಕ್ಕೆ ಬಂದು ಇಡೀ ಜನಾಂಗದ ಸ್ವಾತಂತ್ರ್ಯದ ಮೂಲಕ್ಕೇ ಕೊಡಲಿ ಹಾಕಿತು. ಇಟೆಲಿಯಲ್ಲಿ ಫೆಸಿಸ್ಟ್ ಪಕ್ಷದ ರಂಬಾಲೂಟಿಯಂತೂ ಹಳೇ ಪುರಾಣವಲ್ಲ. ಇಂದು ಜಪಾನದಲ್ಲಿ ಮಿಲಿಟರಿ ಪಕ್ಷದವರು ಅಧಿಕಾರದಲ್ಲಿದ್ದು ತಮ್ಮ ಜನಾಂಗವನ್ನು ಗಂಡಾಂತರದ ಗುಂಡಿಗೆ ಒಯ್ಯುತ್ತಿರುವರು.

ಅಂತೂ ಜನತೆಗೆ ಸ್ವಾತಂತ್ರ್ಯ ಎಂಬುದರ ಅನುಭವ ಬಹಳ ಅಪರೂಪವಾಗಿ ಆಗುತ್ತಿದೆ. ಅಂತಹ ದೇಶಗಳಲ್ಲಿ ಸ್ವಿಜರ್ಲೆಂಡ್, ಸ್ವೀಡನ್ ಮತ್ತಿತರ ಅಮೇರಿಕದ ಕೆಲವು ರಾಷ್ಟ್ರಗಳ ದೃಷ್ಟಾಂತವನ್ನು ಮಾತ್ರ ಕೊಡಬಹುದು.

ಹಾಗಾದರೆ ಸ್ವಾತಂತ್ರ್ಯವೆಲ್ಲಿದೆ?

ಮಾನವ ಕೋಟಿಯು ಇಂದು ಸ್ವಾತಂತ್ರ್ಯಕ್ಕೆ ಹಾತೊರೆಯುತ್ತಿದೆ. ಅದರ ಅರ್ಥವೇನು? ಎಂಬ ವಿಷಯವನ್ನೂ ಚರ್ಚಿಸುತ್ತಾ ಅಮೇರಿಕದ ಪ್ರಖ್ಯಾತ ನ್ಯಾಯಾಧೀಶರಾದ ಲರ್ನೆಡ್ ಹೇಂಡ್ ಎಂಬ ಮಹನೀಯರು ತಮ್ಮ ಜನಾಂಗಕ್ಕೆ ಕೊಟ್ಟ ಭಾಷಣ ಒಂದರಲ್ಲಿ ಹೇಗೆ ತಿಳಿಸುತ್ತಾರೆ:

ಜನರು ಈ ರಾಜ್ಯಘಟನೆಗಳ, ಈ ಕಾನೂನು ಶಾಸನಗಳ, ಈ ಉನ್ನತ ನ್ಯಾಯಸ್ಥಾನಗಳ ಮೇಲೆ ಅತೀ ಹೆಚ್ಚಿನ ವಿಶ್ವಾಸವನ್ನು ಏಕೆ ಇಟ್ಟುಕೊಂಡಿರುತ್ತಾರೆಂಬ ವಿಷಯವು ನನ್ನನ್ನು ಅನೇಕ ವೇಳೆ ಕೌತುಕವನ್ನುಂಟುಮಾಡುತ್ತದೆ. ಈ ಆಶಾದಾಯಕ ನಿರೀಕ್ಷಣೆಯು ವಂಚನಾಸ್ಪದವಾದುದು.

ಸ್ವಾತಂತ್ರ್ಯ, ಸ್ವತಂತ್ರತಾಭಾವವು ಸ್ತ್ರೀಪುರುಷರೆಲ್ಲರ ಹೃದಯದಲ್ಲಿರುವಂತಹುದು. ಅದು ಅಲ್ಲಿ ಮಡಿದರೆ ಯಾವ ರಾಜ್ಯಘಟನೆಯಿಂದಲೂ, ಯಾವ ಶಾಸನದಿಂದಲೂ ಮತ್ಯಾವ ನ್ಯಾಯಸ್ಥಾನದಿಂದಲೂ ಅದನ್ನು ಬದುಕಿಸಲು ಸಾಧ್ಯವಿಲ್ಲ. ಅವುಗಳೆಲ್ಲದರಿಂದ ಅದಕ್ಕೆ ಯಾವ ಸಹಾಯವೂ ದೊರಕದು. ಅದು ಮಾನವ ಕೋಟಿಯ ಹೃದಯಗಳಲ್ಲಿ ವಿರಾಜಿಸುವಂತಾದರೆ ಅದನ್ನು ರಕ್ಷಿಸಲು ಯಾವ ರಾಜ್ಯಘಟನೆಯೂ, ಶಾಸನವೂ ಮತ್ತು ನ್ಯಾಯಸ್ಥಾನವೂ ಅವಶ್ಯವಿಲ್ಲ.

ಮಾನವ ಹೃದಯದಲ್ಲಿ ನೆಲೆನಿಲ್ಲಬೇಕಾದ ಈ ಸ್ವಾತಂತ್ರ್ಯಭಾವವಾದರೂ ಎಂತಹುದು? ಅದು ಕ್ರೂರ ಕಾಠಿಣ್ಯಗಳಿಂದ ಕೂಡಿದ ಮನೋಭಾವವಲ್ಲ. ಅದು ಮನಸ್ಸಿಗೆ ಬಂದಂತೆ ನಡೆದುಕೊಳ್ಳುವಂತಹ ಸ್ವತಂತ್ರತೆಯೂ ಅಲ್ಲ. ಇದನ್ನು ಸ್ವಾತಂತ್ರ್ಯ ಶೂನ್ಯತೆಯೆನ್ನಬಹುದು. ಇಂತಹ ಧೋರಣೆಯಿಂದ ಸ್ವಾತಂತ್ರ್ಯವು ತನ್ನ ಸಮಾಧಿ ಕಂಡಂತಾಗುವುದು.

ಸ್ವೇಚ್ಛಾವರ್ತಿ ಮಾನವನ ಮೇಲೆ ತಡೆಯಿರದಿರುವ ಸಮಾಜದಲ್ಲಿ ಸ್ವಾತಂತ್ರ್ಯವು ಕೆಲವೇ ಅಮಾನುಷಿಕರ ಅಧೀನವಾಗುತ್ತದೆ.

ಹಾಗಾದರೆ ಆ ಸ್ವಾತಂತ್ರ್ಯಭಾವದ ತಿರುಳೇನು? ನನಗದನ್ನು ವಿಶದವಾಗಿ ಹೇಳಬರುವುದಿಲ್ಲ. ನಾನು ನಿಮಗೆ ನನ್ನ ಸ್ವಂತ ವಿಶ್ವಾಸವನ್ನು ಮಾತ್ರ ತಿಳಿಸಬಲ್ಲೆ:

ಇತರ ಸ್ತ್ರೀ ಪುರುಷರ ಮನೋಭಾವವನ್ನು ತಿಳಕೊಳ್ಳಲು ಕಾತರಿಸುವ ಇಚ್ಛೆಯೇ ಸ್ವಾತಂತ್ರ್ಯ. ಇತರರ ಹಿತಗಳೊಂದಿಗೆ ತನ್ನ ಹಿತವನ್ನು ಸಮತೂಕಗೊಳಿಸಲು ಪ್ರಯತ್ನಪಡುವುದೇ ಸ್ವಾತಂತ್ರ್ಯ. ಈ ಜಗತ್ತಿನಲ್ಲಿ ಒಂದೇ ಒಂದು ಜೀವಿಯಾದರೂ ಅಲಕ್ಷಿಸಲ್ಪಡದಿರುವುದೇ ಸ್ವಾತಂತ್ರ್ಯ, ಸಾವಿರಾರು ವರ್ಷಗಳ ಹಿಂದೆ ಪವಿತ್ರಾತ್ಮರಾದ ಮತ ಭೋಧಕರು ಅಜ್ಞ ಮಾನವತೆಗೆ ಭೋಧಿಸಿದ ನೀತಿತತ್ವಗಳನ್ನು ಮರೆಯದಿರುವುದೇ ಸ್ವಾತಂತ್ರ್ಯ. ನಮ್ಮಲ್ಲಿ ಅತೀ ಕನಿಷ್ಟರಾದವರೂ ಅತೀ ಶ್ರೇಷ್ಟರಾದವರ ಸಮಾನತೆಯಲ್ಲಿ ಆಳಲ್ಪಡುವ ರಾಜ್ಯವೇ ಸ್ವಾತಂತ್ರ್ಯ ರಾಜ್ಯ.

ಅದೇ ರಾಮರಾಜ್ಯ.

ಭಾರತೀಯ ಆನೆ ದಳಗಳ ವೈಶಿಷ್ಟ್ಯ
ಯುರೋಪಿನಲ್ಲಿ ಭಾರತೀಯ ಮಾವುತರು
ಬ್ರಿಟಿಷರನ್ನು ಗೆದ್ದ ಭಾರತೀಯ ಆನೆ

ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದಿನ ಇತಿಹಾಸದಲ್ಲೂ ಭಾರತೀಯ ಆನೆಗಳು ಯುದ್ಧದಲ್ಲಿ ಉಪಯೋಗಿಸಲ್ಪಡುತಿದ್ದವು. ಇಂದಿನ ಬರ್ಮಾರಂಗದಲ್ಲೂ ಅವುಗಳು ನಾನಾ ತರದ ಕೆಲಸಗಳಿಗೆ ನಿಯೋಜಿಸಲ್ಪಡುತ್ತಿವೆ.

ಅಲೆಕ್ಸಾಂಡರನು ಭಾರತಕ್ಕೆ ಬಂದಾಗ ಅವನ ಗ್ರೀಕ್ ಸೈನಿಕರು ಅವುಗಳನ್ನು 'ಚಲಿಸುವ ಬೆಟ್ಟಗಳು' ಎಂದು ವರ್ಣಿಸಿದರು. ಅಂದಿನಿಂದ ಗ್ರೀಕರು ಆನೆಗಳನ್ನು ಯುರೋಪಿಗೆ ಒಯ್ದು ಅಲ್ಲಿನ ಯುದ್ಧದಲ್ಲಿ ಹೇರಳವಾಗಿ ಉಪಯೋಗಿಸಿ ಪರಿಣಾಮಕಾರಿಯಾದ ವಿಜಯವನ್ನು ಸಂಪಾದಿಸಿದರು. ಆ ಕಾಲದಲ್ಲಿ ಅವುಗಳ ಬೆಲೆಯೂ ವಿಪರೀತ ಹೆಚ್ಚಿತು.

ಆಫ್ರಿಕದ ಕಾರ್ತೇಜ್ ಎಂಬ ದೇಶಕ್ಕೂ ರೋಮಾಯರಿಗೂ ಯುದ್ಧ ನಡೆದಾಗ ಕಾರ್ತೇಜದವರ ಆನೆಗಳಿಂದ ರೋಮನ್ ದಳಪತಿಯಾದ ಶಿಗುಲಸನು ಸೋತುಹೋಗಿ ಸೆರೆಯಾಳಾದನು. ನಂತರ ಕಾರ್ತೇಜದ ಹನಿಬಾಲನೂ ರೋಮಾಯರ ವಿರೋಧ ಹೋರಾಡುವಾಗಲೂ ಅವುಗಳನ್ನು ದೊಡ್ಡ ಸಂಖ್ಯೆಯಲ್ಲಿ ಉಪಯೋಗಿಸಿದನು.

ಕ್ರಿಸ್ತ ಪೂರ್ವದಲ್ಲಿ ನಡೆದ ಈ ಘಟನೆಗಳಲ್ಲಿ ಅತೀ ಸ್ವಾರಸ್ಯವಾದುದೆಂದರೆ ರೋಮನ್ ಸೇನಾಪತಿಯಾಗಿದ್ದ ಜೂಲಿಯಸ್ ಸೀಸರನು ಬ್ರಿಟಿಷ್ ದ್ವೀಪಗಳನ್ನು ವಶಪಡಿಸಿದಾಗಲೂ ಅವನ ಸೈನ್ಯದಲ್ಲಿ ಆನೆಗಳಿದ್ದವು. ಭಾರತೀಯ ಮಾವುತನಿಂದ ಸವಾರಿಮಾಡಲ್ಪಟ್ಟ ಒಂದೇ ಒಂದು ಆನೆಯು ಲಂಡನ್ ಬಳಿಯಲ್ಲಿ ಬ್ರಿಟಿಷ್ ಸೈನ್ಯವನ್ನು ಚದರಿಸಿ ಚಲ್ಲಾಪಿಲ್ಲಿಯಾಗಿ ಮಾಡಿಬಿಟ್ಟ ಪರಿಣಾಮವಾಗಿ ಬ್ರಿಟನ್ನರು ಸೋತುಹೋದರು.

ಈ ಎಲ್ಲಾ ಘಟನೆಗಳಲ್ಲೂ ಉಪಯೋಗಿಸಲ್ಪಟ್ಟ ಆನೆಗಳಿಗೆ ಭಾರತೀಯರೇ ಮಾವುತರಾಗಿದ್ದರೆಂಬುದು ಇನ್ನೂ ಹೆಚ್ಚಿನ ಸ್ವಾರಸ್ಯದ ಸಂಗತಿ.

ಯುದ್ಧದಲ್ಲಿ ಆನೆಗಳ ಉಪಯೋಗವನ್ನು ಕಮ್ಮಿಮಾಡಲು ಮೈಸೂರಿನ ಟಿಪ್ಪುವು ಒಂದು ಉಪಾಯವನ್ನು ಮಾಡಿದನು. ಆ ವಿಶಾಲ ಗಾತ್ರದ ಪ್ರಾಣಿಗಳು ಭದ್ರವಾಗಿರದ ನೆಲದ ಮೇಲೆ ಚಲಿಸಲಾರವು. ಅದಕ್ಕಾಗಿ ಶ್ರೀರಂಗ ಪಟ್ಟದಲ್ಲಿ ಟಿಪ್ಪುವು ಓರ್ವ ಫ್ರೆಂಚ್ ಎಂಜಿನಿಯರಿನಿಂದ ಅಲುಗಾಡುವ ಸೇತುವೆಯೊಂದನ್ನು ಕಟ್ಟಿಸಲು ಪ್ರಯೋಗಗಳನ್ನು ನಡೆಸಿದ್ದನೆಂದು ಪ್ರತೀತಿ ಇದೆ. ಅಂತಹ ಮಾದರಿ ಸೇತುವೆಯೊಂದು ಕೆಲವು ವರ್ಷಗಳ ಹಿಂದಿನ ತನಕ ಶ್ರೀರಂಗ ಪಟ್ಟಣದಲ್ಲಿದ್ದು ಪ್ರೇಕ್ಷಕರನ್ನು ಬೆರಗುಗೊಳಿಸುತಿತ್ತು.

ಸಂಕ್ಷೇಪ ಸುದ್ದಿ ಸಾರ

'ಸಂಡೆ ಮೈಲ್' ಎಂಬ ಕಲ್ಕತ್ತಾ ಪತ್ರಿಕೆಯೊಂದರ ವಾರ್ಷಿಕ ಸಂಚಿಕೆಯಲ್ಲಿ ಒಂದು ವಿಶೇಷ ಲೇಖನವನ್ನು ಬರೆಯುತ್ತಾ, ರಾಜಾಜಿಯವರು ಪಾಕಿಸ್ಥಾನದ ಕುರಿತು ಕೆಲವು ವಿಶೇಷ ಸಂಗತಿಗಳನ್ನು ಹೊರಗೆಡಹಿದ್ದಾರೆ.

ಗಾಂಧಿಜೀಯ ಸೂಚನೆಗಳನ್ನು ಜಿನ್ನಾ ಸಾಹೇಬರು ತಿರಸ್ಕರಿಸಿದುದರ ಕುರಿತು ಅವರು ಹೀಗೆ ಬರೆದಿದ್ದಾರೆ:—

"ಬಹುಸಂಖ್ಯಾಕ ಪ್ರದೇಶದಲ್ಲಿನ ಮುಸಲ್ಮಾನರ ಆಶೆ ಆಕಾಂಕ್ಷೆಗಳನ್ನು ಲೀಗು ಪ್ರತಿಬಿಂಬಿಸುವುದಿಲ್ಲವೆಂದು ನನಗೆ ತೋರುತ್ತದೆ. ಆದರೆ ಅದು ಅಲ್ಪಸಂಖ್ಯಾಕ ಮುಸ್ಲಿಂ ಪ್ರದೇಶಗಳ ಮುಸಲ್ಮಾನರ ಮನೋಭಾವನೆಯನ್ನೂ ಆಕಾಂಕ್ಷೆಗಳನ್ನೂ ಅದು ಪ್ರತಿರೂಪಿಸುತ್ತದೆಯಾದರೂ ಅದು ಪ್ರತ್ಯೇಕ ವಿಚಾರವೆನ್ನಬೇಕು. ನಾಯಿಗಿಂತಲೂ ಅದರ ಬಾಲವು ಅತೀ ದೊಡ್ಡದಾದಂತಾಗಿದೆ. ಲೀಗು ಒಂದು ಅಖಿಲ ಭಾರತ ಸಂಸ್ಥೆ. ಆದರಲ್ಲಿ ಬಹುಸಂಖ್ಯಾಕ ಪ್ರದೇಶದ ಜನತೆಯ ಅಭಿಪ್ರಾಯಗಳಿಗಿಂತ ಅಲ್ಪಸಂಖ್ಯಾಕರ ಪ್ರದೇಶದವರ ಕೋರಿಕೆಗಳೇ ಹೆಚ್ಚು ನಲಿದಾಡುತ್ತಿವೆ. ಬಹುಸಂಖ್ಯಾಕ ಪ್ರಾಂತ್ಯಕ್ಕೆ ಒಂದು ಸ್ವತಂತ್ರ ರಾಜಘಟನೆ ಬೇಕೆಂಬುದಕ್ಕಿಂತ ಸಮಾನ ಪ್ರಾತಿನಿಧ್ಯ, ಪ್ರತ್ಯೇಕ ಮತದಾನದ ಹಕ್ಕೂ ಭದ್ರತಾ ಭರವಸೆಬೇಕೆಂಬ ಅಲ್ಪಸಂಖ್ಯಾಕರ ಭಯಭೀತಿಗಳೇ ಹೆಚ್ಚಾಗಿ ತೋರುತ್ತಿವೆ. ಪಾಕಿಸ್ಥಾನ ಯೋಜನೆಗಿಂತ ಮುಸ್ಲಿಂ ಲೀಗಿಗೆ ಸಪ್ರೂ ಸೂಚನೆಗಳೇ ಹೆಚ್ಚು ಹತ್ತಿರದವುಗಳಾಗುತ್ತವೆ. ಆದರೆ ಅದು ಒಪ್ಪಲ್ಪಡಲಿಲ್ಲ.

ಗಾಂಧಿ ಜಿನ್ನಾ ಮಾತುಕತೆ ಮುರಿತದ ಕುರಿತು ರಾಜಾಜಿಯವರ ಅಭಿಪ್ರಾಯ ಹೀಗೆ ನಿರೂಪಿಸಲ್ಪಟ್ಟಿದೆ:

"ಈ ಮಾತುಕತೆ ಮುರಿತದಿಂದ ಪಾಕಿಸ್ಥಾನದ ಕುರಿತು ಎಲ್ಲರಿಗೂ ಹೆಚ್ಚು ಸ್ಪಷ್ಟವಾದ ರೂಪರೇಶೆಗಳ ಮೇಲೆ ಚರ್ಚಿಸುವಂತಾ ಒಂದು ಎಚ್ಚರಿಕೆ ಸಿಕ್ಕಂತಾಯಿತು. ಐಕ್ಯಹೊಂದಿದ ಒಂದು ಸಂಯುಕ್ತ ರಾಜ್ಯಘಟನೆಯಲ್ಲಿರುವುದು ಸುಖಕರವೂ ಲಾಭದಾಯಕವೂ ಎಂದು ತೋರಿದರೆ ಮುಸ್ಲಿಮರು ಹಾಗೇ ಮಾಡಬಹುದು. ಸ್ವತಂತ್ರವಾದ ಮತ್ತು ಸ್ವೇಚ್ಛಾ ಬೆಳವಣಿಗೆಗೆ ಯಾವ ತಡೆಯಿಲ್ಲದೆ ಒಂದು ಸಮ್ಮಿಳಿತ ಪ್ರಾಂತ್ಯಮಂಡಳಿಯಿಂದೊಡಗೂಡಿದ, ಅರ್ಧ ಮನೆಯಂತಿರುವ ಘಟನೆಯು ಅವರಿಗೆ ಬೇಕೆಂದಾದರೆ ಅದನ್ನೂ ಅವರು ಪಡೆಯಬಹುದು. ಇವೆರಡೂ ಬೇಕಾಗಿಲ್ಲದೆ ಕರಾರು ಒಪ್ಪಂದಗಳ ಮೂಲಕ ವಿಂಗಡಿಸಲ್ಪಟ್ಟ ವಿಚ್ಛೇಧೀಕರಣವಾಗಬೇಕೆಂದು ಇಚ್ಛಿಸಿದರೂ ಅದನ್ನು ಬೇಕಾದರೂ ಅವರು ಹೊಂದಬಹುದು. ಆಯಾ ಗಡಿನಾಡು ಪ್ರದೇಶದ ಜನರ ಅಭಿಪ್ರಾಯಗಳನ್ನು ತಿಳಕೊಳ್ಳದೆ ಒಂದು ದೇಶವನ್ನು ವಿಭಾಗಿಸಲು ಸಾಧ್ಯವಿಲ್ಲ. ತಮ್ಮಷ್ಟಕ್ಕೆ ಯಾರಾದರೂ ತಮತಮಗೆ ಬೇಕಾದ ಹಾಗೆ ಗಡಿಮೇರೆಗಳನ್ನು ಹಾಕಲಾಗುವುದಿಲ್ಲ. ಇದನ್ನು ಯಾರೂ ಒಪ್ಪುವಂತಿಲ್ಲ. ಈಗಿನ ಸದ್ಯದ ನಿರಂಕುಶಆಡಳಿತದಿಂದ ತಪ್ಪಿಸಿಕೊಳ್ಳಲು ನಾವು ನಮ್ಮ ಚರ್ಚೆಗಳನ್ನು ಬದಿಗೊತ್ತಿ ಸಮಾನ ಪ್ರಾತಿನಿಧ್ಯವುಳ್ಳ ಒಂದು ಕೇಂದ್ರ ಸರಕಾರವನ್ನಾದರೂ ರಚನೆಮಾಡಲು ಒಪ್ಪಂದಮಾಡಿಕೊಳ್ಳಬಹುದು. ಸಪ್ರೂ ಸೂಚನೆಗಳಲ್ಲಿನ ತಾತ್ಕಾಲಿಕ ಸರಕಾರದ ಯೋಜನೆಯು ಬದಲಿಗೆ ಇದಾಗಬಹುದು. ಅದಕ್ಕಾಗಿಯೇ ದೇಸಾಯಿ-ಲಿಯಾಖತ್ ಮಾತುಕತೆಗಳನ್ನು ನಾನು ಸಮರ್ಥಿಸುತ್ತೇನೆ. ಹತ್ತಿರದ ಸಂಪರ್ಕ, ಮತ್ತು ಸಂಯುಕ್ತ ಹೊಣೆಗಾರಿಕೆಯಿಂದ ಮುಂದಿನ ಒಪ್ಪಂದವು ಸುಲಭವಾಗಬಹುದು."

ಚರ್ಮವ್ಯಾದಿಗಳು ಮೇಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು.
(Cuticura Ointment)
ಚರ್ಮವ್ಯಾದಿಗಳನ್ನು ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು
CUTICURA OINTMENT

ಅವನು ಬಿರುದು ಪಡೆದ ರೀತಿ

(೨ನೇ ಪುಟದಿಂದ)

ನಂತರ ಅವನು ಬರೆದ ಪ್ರಬಂಧ "ಮಾರ್ಗದಲ್ಲಿ ಓದಕೊಡುವ ಪುಸ್ತಕ ಭಾಂಡಾರಗಳು" ಎಂಬ ಪುಸ್ತಕ ತುಂಬಿದ ಸಣ್ಣ ಗಾಡಿಗಳನ್ನು ಹಣ್ಣುಗಾಡಿಗಳಂತೆ ಮಾರ್ಗದಲ್ಲಿ ತಿರುಗಾಡಿಸುವುದು. ಅರ್ಧಾಣೆಯಂತೆ ಚಂದಾಹಣ ತೆತ್ತು ಪ್ರತಿಯೊಬ್ಬನೂ ತಿಂಗಳಿಗೆ ಹತ್ತತ್ತು ಪುಸ್ತಕಗಳನ್ನು ಸಾಲ ಪಡೆಯಬಹುದು ಎಂಬುದೇ ಅವನ ಯೋಜನೆ.

"ಓದುವ ಸಂತೋಷಕ್ಕಾದರೂ ಜನರು ಸ್ವಲ್ಪ ಪರಿಶ್ರಮ ತೆಗೆದುಕೊಳ್ಳುವರು. ಜನರು ಶಿಕ್ಷಣ ಪಡೆಯಲು ಹೋಗಲಿಷ್ಟವಿಲ್ಲದವರಿದ್ದುದರಿಂದ, ಶಿಕ್ಷಣವನ್ನು ಅವರ ಮನೆ ಬಾಗಿಲಿಗೇ ಕಳುಹಿಸಲ್ಪಡಬೇಕು" ಹೀಗೆಂದು ಕೈಲಾರ್ಡನು ಬರೆದಿದ್ದನು

ಕೈಲಾರ್ಡನ ಪ್ರಬಂಧಗಳೊಂದೂ ಯಾರ ಗಮನವನ್ನೂ ಸೆಳೆಯದಾದವು. ಆದರೂ ಅವನು ತನ್ನ ಅರ್ಜಿಯನ್ನು ವಿದ್ಯಾಂಗ ಖಾತೆಗೆ ಕಳುಹಿಸಿದನು. ಕ್ರಮವಾಗಿ ಅಧಿಕಾರಯುಕ್ತವಾದ ಉತ್ತರವೂ ಅವನಿಗೆ ಬಂತು. ಆದರೆ ಅವನು ನೆನಸಿದಂತೆ ಅವರಿಂದೇನೂ ಪ್ರಯೋಜನವಾಗದಾಯಿತು.

ನಂತರ ಅವನು ಸ್ವತಃ ಹೋಗಿ ಪ್ರಯತ್ನ ಮಾಡಲು ನಿರ್ಧರಿಸಿದ. ವಿದ್ಯಾಂಗ ಖಾತೆಯ ಮಂತ್ರಿಯೊಡನೆ ಅವನು ತನಗೊಂದು ಸಂದರ್ಶನ ಕೊಡಬೇಕಾಗಿ ಬೇಡಿಕೊಂಡನು. ವಿದ್ಯಾಂಗ ಮಂತ್ರಿಯ ಕಛೇರಿಯಲ್ಲಿ ಓರ್ವ ತರುಣ ಅಧಿಕಾರಿಯು ಅವನನ್ನು ಬರಮಾಡಿಕೊಂಡನು. ಆ ಅಧಿಕಾರಿಯು ಆಗಿಂದಾಗ್ಗೆ ಸೇವಕರನ್ನೂ, ಜವಾನರನ್ನೂ, ತನ್ನ ಕೈಕೆಳಗಿನ ಇತರ ಅಧಿಕಾರಿಗಳನ್ನು ಒಂದು ವಿದ್ಯುತ್ ಗಂಟೆ ಬಾರಿಸುವುದರ ಮೂಲಕ ಕರೆಯುತಿದ್ದನು. ಕೈಲಾರ್ಡ್ ಮಹನೀಯನ ವಿಷಯವು ತೃಪ್ತಿಕರವಾಗಿ ಯೋಚಿಸಲ್ಪಡುತ್ತಿದೆಯಾಗಿ ಆ ಅಧಿಕಾರಿಯು ತಿಳಿಸಿದನು. ಕೈಲಾರ್ಡನು ತನ್ನ ಪರಿಶ್ರಮವನ್ನು ಇನ್ನೂ ಮುಂದರಿಸುವಂತೆಯೂ ಅವನು ಸೂಚಿಸಿದನು. ಆದುದರಿಂದ ಕೈಲಾರ್ಡ್ ಮಹಾಶಯನು ಪುನಃ ತನ್ನ ಪ್ರಬಂಧ ರಚನೆಗೆ ಪ್ರಾರಂಭಿಸಿದ.

ಪ್ರತಿನಿಧಿ ರೊಸೆಲೀನನು ಕೈಲಾರ್ಡನ ಕೆಲಸದಲ್ಲಿ ತುಂಬಾ ಅಭಿರುಚಿ ವಹಿಸಲಾರಂಭಿಸಿದ. ಮತ್ತು ಅವನಿಗೆ ಕಾರ್ಯರೂಪಕ್ಕೆ ತರಬಹುದಾದ ಅನೇಕ ಅಮೂಲ್ಯ ಸಲಹೆಗಳನ್ನಿತ್ತ. ರೊಸೆಲೀನನೂ ಬಿರುದು ಪದಕಗಳಿಂದ ಸನ್ಮಾನಿಸಲ್ಪಟ್ಟ. ಆದರೆ ಅದು ಹೇಗೆ ಅವನಿಗೆ ದೊರೆಯಿತೆಂದು ಒಬ್ಬರಿಗೂ ತಿಳಿಯದಾಯಿತು.

ಕೈಲಾರ್ಡನು ಯಾವ ಹೊಸ ಸಂಶೋಧನಾತ್ಮಕ ಅಭ್ಯಾಸಗಳನ್ನು ಕೈಕೊಳ್ಳಬೇಕೆಂದು ರೊಸೆಲೀನನು ಸಲಹೆಕೊಟ್ಟ. ರಹಸ್ಯವಾದ ವೈಜ್ಞಾನಿಕ ತತ್ವ ಪರಿಶೋಧನೆಯಲ್ಲಿ ಪ್ರಯೋಗ ನಡೆಸಿ ಆ ಮೂಲಕ ಪಾರಿತೋಷಕ ಬಹುಮಾನಗಳನ್ನು ಪಡೆಯಲೆಳಸುವ ಅನೇಕ ವಿಜ್ಞಾನಿಗಳ ಸಂಘಗಳವರ ಪರಿಚಯವನ್ನು ರೊಸೆಲೀನನು ಕೈಲಾರ್ಡನಿಗೆ ಮಾಡಿಕೊಟ್ಟ. ಮಾತ್ರವಲ್ಲ ಅವನನ್ನು ತನ್ನ ಮಂತ್ರಿಮಂಡಲ ಶಾಖೆಯ ಆಶ್ರಯದಲ್ಲಿಯೂ ಅವನಿಗೊಂದು ಸ್ಥಾನ ದೊರಕಿಸಿಕೊಟ್ಟ.

ಒಂದು ದಿನ ಬಹಳ ಸಮಯದ ನಂತರ ಕೈಲಾರ್ಡನು ರೊಸೆಲೀನನಲ್ಲಿಗೆ ಒಂದು ಔತಣಕ್ಕಾಗಿ ಹೋಗಿದ್ದ. ಆಗ ಆ ಸ್ನೇಹಿತನು ಅವನ ಕಿವಿಯಲ್ಲಿ: "ನಾನು ನಿನಗೊಂದು ದೊಡ್ಡ ಹುದ್ದೆಯನ್ನು ಸಂಪಾದಿಸಿಟ್ಟಿದ್ದೇನೆ. ಐತಿಹಾಸಿಕ ಕೃತಿ ಪರಿಶೋಧನಾ ಸಮಿತಿಯವರು ನಿನಗೊಂದು ಸಂಶೋಧನಾ ಹುದ್ದೆಯ ಹೊಣೆಗಾರಿಕೆಯನ್ನು ವಹಿಸಿಕೊಡಲಿದ್ದಾರೆ. ಫ್ರಾನ್ಸ್‌ನಲ್ಲಿರುವ ವಿವಿಧ ಪುಸ್ತಕ ಭಂಡಾರಗಳನ್ನು ಪರಿಶೀಲಿಸಿ ನೀನು ಸಂಶೋಧನೆ ನಡೆಸಬೇಕು" ಎಂದು ಪಿಸುಗುಟ್ಟಿದನು.

ಕೈಲಾರ್ಡನಲ್ಲಿ ತಡೆಯಲಾರದ ಸಂತೋಷ ಉಕ್ಕಿ ಬಂದು ಅವನು ಏನನ್ನೂ ತಿನ್ನಲೂ ಕುಡಿಯಲೂ ಆಗದವನಾದ. ಒಂದು ವಾರದ ನಂತರ ಅವನು ತನ್ನ ಹೊಸ ಉದ್ಯಮಕ್ಕೆ ತೊಡಗಿದ. ಗ್ರಂಥಾಲಯಗಳ ಪುಸ್ತಕ ಪಟ್ಟಿಯನ್ನು ಅಭ್ಯಾಸಿಸುತ್ತಾ ಅವನು ಊರಿಂದ ಊರಿಗೆ ಸಂಚರಿಸಿದ. ಪ್ರತಿ ಊರಿನ ಪುಸ್ತಕ ಭಂಡಾರಗಳಲ್ಲಿ ಗ್ರಂಥ ದಪ್ತರುಗಳನ್ನು ಧೂಳು ತುಂಬಿದ ಅವುಗಳ ಸ್ಥಾನದಿಂದ ತೆಗೆದು ಪರಿಶೀಲಿಸುವುದೇ ಅವನ ಕೆಲಸವಾದುದರಿಂದ ಗ್ರಂಥಾಲಯದವರಿಗೆ ಅವನೊಂದು ತಲೆನೋವಿನ ವಿಷಯವಾಗಿ ಬಿಟ್ಟ.

ಒಂದು ದಿನ ಅವನು ರೊಯೆನ್ ಪಟ್ಟಣದಲ್ಲಿ ಸಂಚರಿಸುತಿದ್ದಾಗ ಪಕ್ಕನೆ ಅವನಿಗೆ ತನ್ನ ಪತ್ನಿಯನ್ನಾಲಂಗಿಸಬೇಕೆಂಬ ವಿಚಿತ್ರ ಬಯಕೆಯು ಉತ್ಪನ್ನವಾಯಿತು. ಕೂಡಲೇ ರಾತ್ರೆ ಹದಿನೆರಡು ಗಂಟೆಗೆ ತನ್ನ ಊರು ತಲ್ಪುವ ಒಂಬತ್ತು ಗಂಟೆ ಗಾಡಿಯನ್ನು ಅವನು ಹಿಡಿದು ಪ್ರಯಾಣ ಬೆಳೆಸಿದ.

ಮನೆಯ ಒಂದು ಬೀಗದ ಕೈ ಅವನ ಬಳಿಯಲ್ಲಿದ್ದುದರಿಂದ ಅವನು ಸದ್ದುಮಾಡದೆ ಮೆಲ್ಲನೆ ಬಾಗಿಲು ತೆರೆದು ಒಳಗೆ ಪ್ರವೇಶಿಸಿದ. ಹೆಂಡತಿಯನ್ನು ಅಕಸ್ಮಾತ್ತಾಗಿ ಕೌತುಕಗೊಳಿಸಬೇಕೆಂದು ಅವನ ಸಂತೋಷ ಭರಿತವಾದ ಮನಸ್ಸಿನ ಆಶಯವಿತ್ತು. ಅವಳು ಒಳಗಿನಿಂದ ಬೀಗಹಾಕಿ ಕುಳಿತಿದ್ದಳು. ಅದೆಷ್ಟು ಆಯಾಸವಾಗಿದೆ ಅವನಿಗೆ! ಬಾಗಿಲಿನ ಎಡೆಯಿಂದ "ಪ್ರಿಯೆ! ಇದೊ ನಾನು ಬಂದಿದ್ದೇನೆ" ಎಂದು ಕೂಗಿದ.

ಅವಳಿಗೆ ಬಹಳ ಬೆದರಿಕೆಯಾಗಿರಬೇಕು. ಕಾರಣ ಹಾಸಿಗೆಯಿಂದ ಹಾರಿ ಎದ್ದ ಶಬ್ದವು ಅವನಿಗೆ ಕೇಳಿಸಿತು. ಕನಸ್ಸಿನಲ್ಲಿದ್ದಂತೆ ಅವಳು ತನ್ನೊಡನೇ ಮಾತಾಡಹತ್ತಿದಳು. ನಂತರ ಅವಳು ತನ್ನ ಉಡುಪು ಕೋಣೆಗೆ ಹೋದಳು. ಅದರ ಬಾಗಿಲು ತೆರೆದಳು, ಮುಚ್ಚಿದಳು. ತನ್ನ ಕೋಣೆಯೊಳಗೆ ಬರಿಗಾಲಿನಲ್ಲಿ ಎರಡು ಮೂರು ಸಲ ಆಚೆ ಈಚೆ ಚಲಿಸಿದಳು. ಕುರ್ಚಿ ಮೇಜುಗಳೂ, ಅವುಗಳ ಮೇಲಿಟ್ಟ ಹೂ ಪಾತ್ರೆ ಸುಗಂಧ ದ್ರವ್ಯದ ಪಾತ್ರೆಗಳೂ ಅಲುಗಾಡಿದಂತಾದುವು. ಕಡೆಗೆ ಅವಳು "ಯಾರು ಪ್ರಿಯ ಕೈಲಾರ್ಡರೇ?" ಎಂದು ಕೇಳಿದಳು.

"ಹೌದು, ತ್ವರೆಯಾಗಿ ಬಾಗಿಲು ತೆರೆ" ಅವನೆಂದ.

ಬಾಗಿಲು ತೆರೆದೊಡನೆ ಅವಳು ಅವನನ್ನು ಹಾರಿ ಅಪ್ಪಿಕೊಂಡು, "ಹೋ! ಅದೆಷ್ಟು ಗಾಬರಿಯಾದೆ! ಅದೆಂತಹ ಸೋಜಿಗ! ಅದೆಂತಹ ಸಂತೋಷ!"

ಕ್ರಮವಾಗಿ ಅವನು ಒಂದೊಂದೇ ಬಟ್ಟೆಯನ್ನು ಬಿಚ್ಚಿದ. ನಂತರ ಪ್ರತಿಯೊಂದೂ ಸರಸಲ್ಲಾಪ ವಿಲಾಸಾದಿಗಳನ್ನು ಮುಗಿಸಿ, ಅವನ ಅಭ್ಯಾಸದಂತೆ ಒಂದು ಕುರ್ಚಿಯಲ್ಲಿ ತೂಗಿಸಿದ ತನ್ನ ನಿಲುವಂಗಿಯನ್ನು ತೆಗೆದಾಗ ಅವನು ಅತೀ ಕೌತುಕಗೊಂಡವನಾಗಿ ದಿಗ್ಭ್ರಮೆಗೊಂಡ-ಅದರಲ್ಲಿ ಕೆಂಪು ರೇಶ್ಮೆ ಪಟ್ಟಿಗೆ ಸಿಕ್ಕಿಸಿದ ಒಂದು ಪದಕವು ತೂಗುತಿತ್ತು. ಸ್ತಂಭಿ ಭೂತನಾಗಿ ಅವನು ಮರಗಟ್ಟಿದಂತಾದ.

"ಯಾಕೆ? ಈ-ಈ, ನಿಲುವಂಗಿಗೆ ಬಿರುದು ಪದಕವೊಂದಿದೆ!" ಎಂದು ಗದ್ದದಿಸಿದ: ಕ್ಷಣದಲ್ಲಿ ಅವನ ಹೆಂಡತಿಯು ಅವನ ಮೇಲೆ ಜಿಗಿದು ಆ ಅಂಗಿಯನ್ನು ಕಸಿದುಕೊಂಡಳು.

"ಅಲ್ಲ-ನೀವು ತಪ್ಪು ಭಾವಿಸಿದಿರಿ-ಅದನ್ನು ಈಚೆ ಕೊಡಿ" ಎಂದಳವಳು.

ಇನ್ನೂ ಅವನು ಅದನ್ನು ಬಿಡಲಿಲ್ಲ. ಅದರ ಕೈಯನ್ನು ಹಿಡಿದು ಅವನು ಅತೀ ಬಿರಗಿನಿಂದ ಕೇಳಿದ: ಹಾ! ಯಾಕೆ? ಸರಿಯಾಗಿ ವಿಸ್ತರಿಸಿ ಹೇಳು. ಇದು ಯಾರ ಕೋಟಾಗಿರುವುದು? ಇದು ನನ್ನದಲ್ಲ, ಇದರಲ್ಲಿ ರಾಜ ಸನ್ಮಾನದ ಬಿರುದು ಪದಕವಿದೆ!"

ದಿಗಿಲುಗೊಂಡವಳಾಗಿ ಸರಿಯಾಗಿ ಸ್ಪಷ್ಟವಾಗಿ ಮಾತನಾಡಲಾರದವಳಾಗಿ ಅವಳು ಅದನ್ನು ಅವನಿಂದ ಕಸಿದುಕೊಳ್ಳಲು ಪ್ರಯತ್ನಿಸಿದಳು.

"ಕೇಳಿ-ಇಲ್ಲಿ ಕೇಳಿ-ಅದು ಈಚೆ ಕೊಡಿ-ಅದೊಂದು ರಹಸ್ಯ ವಿಷಯ ಗುಪ್ತ ಸಂಗತಿ-ನಾನು ನಿಮಗೆ ಹೇಳುವೆನು-ಕೇಳಿ ಈ ಕಡೆ" ಎಂದಳು.

ಅವನು ಅತೀ ಕೋಪಗೊಂಡವನಾಗಿ ನಿಸ್ತೇಜನಾದ:

"ಈ ನಿಲುವಂಗಿ-ಈ ಓವರ್ ಕೋಟ್-ಇಲ್ಲಿಗೆ ಹೇಗೆ ಬಂತೆಂದು ನಾನು ತಿಳಿಯ ಬಯಸುತ್ತೇನೆ. ಇದು ನನ್ನದಾಗಿರುವುದಿಲ್ಲ" ನಂತರ ಅವಳು ಗಟ್ಟಿಯಾಗಿ ಒದರಿದಳು: "ಇದು ನಿಮ್ಮದೇ ಆಗಿರುತ್ತದೆ. ಇಲ್ಲಿ ಕೇಳಿ-ನೀವು ಬಿರುದು ಪದಕದಿಂದ ಸನ್ಮಾನಿತರಾಗಿದ್ದೀರಿ"

ಅವನಿಗೆ ಸಂಕಷ್ಟ ಕೊಟ್ಟು ವಿನೋದಮಾಡಬೇಕೆಂದು ಅವಳ ಉದ್ದೇಶವಿಲ್ಲ.

ಮಿತಿಮೀರಿದ ಭಾವನಾಮಗ್ನನಾಗಿ ಅವನು ಕೋಟನ್ನು ಕೆಳಗೆ ಬೀಳಬಿಟ್ಟನು. ಸ್ತಬ್ಧನಾಗಿ ಕೈಕುರ್ಚಿಯ ಮೇಲೆ ದೊಪ್ಪನೆ ಬಿದ್ದುಕೊಂಡ.

"ನಾನು-ನೀನು ಹೇಳುತ್ತಿರುವೆಯಲ್ಲಾ-ನಾನು-ಪದಕ ಸನ್ಮಾನಿತನಾಗಿದ್ದೇನೆಯೋ?"

ಹೌದೆಂದು ನುಡಿಯುತ್ತಾ ಅವಳೆಂದಳು! "ಇದೊಂದು ನಾನು ನಿಮಗಾಗಿ ತಯಾರಿಸಿದ ಹೊಸ ನಿಲುಕೋಟು. ಇನ್ನು ಒಂದೆರಡು ತಿಂಗಳುಗಳ ತನಕ ಅಂದರೆ ನೀವು ನಿಮ್ಮ ಸಂಚಾರ ಮುಗಿಸಿ ಬಂದ ನಂತರ ನಿಮಗೆ ಅಧಿಕಾರಯುಕ್ತವಾಗಿ ತಿಳಿಸಲ್ಪಡಲಿಕ್ಕಿರುವುದರಿಂದ ಅವರ ವಿಷಯವಾಗಿ ನಾನು ನಿಮಗೇನನ್ನು ತಿಳಿಸಲಾರನೆಂದು ಆಣೆ ಹಾಕುತ್ತೇನೆ. ರೊಸೆಲಿನ್ ಮಹಾಶಯರು ಅದನ್ನು ನಿಮಗಾಗಿ ದೊರಕಿಸಲು ಪ್ರಯತ್ನಪಟ್ಟರು."

ಅವನ ಬಾಯಿ ಆರಿಹೋಯಿತು. ಒಂದು ತಟ್ಟೆ ನೀರನ್ನು ಕುಡಿಯುತ್ತಾ ಅವನು ಭ್ರಾಂತನಂತೆ: "ರೋಸಲಿನ್! ಅವನು ಇದನ್ನು ನನಗೋಸ್ಕರ ದೊರಕಿಸಿ ಕೊಡಲು ಶ್ರಮಿಸಿದನೇ? ಅಯ್ಯೋ! ಅವನು?" ಎಂದು ನಿಟ್ಟುಸಿರು ಬಿಟ್ಟ.

ಆ ನಿಲುಕೋಟಿನ ಕಿಸೆಯಿಂದ ಒಂದು ಚಿಕ್ಕ ಕಾಗದದ ಚಿಟ್ಟಿಯು ಕೆಳಗೆ ಬಿದ್ದಿತ್ತು. ಕೈಲಾರ್ಡನು ಅದನ್ನು ಹೆಕ್ಕಿದ. ಅದೊಂದು 'ವಿಸಿಟಿಂಗ್ ಕಾರ್ಡ್' ಇಲ್ಲವೆ ಸಂದರ್ಶನ ಚೀಟಿಯಾಗಿತ್ತು. ಅದರಲ್ಲಿ "ರೊಸೆಲಿನ್-ವಿಧಾಯಕ ಸಭೆಯ ಪ್ರತಿನಿಧಿ" ಎಂದಿತ್ತು.

ಪಾಪ ಅವನು ನಂಬಿದ. ಅವನಿಗೆ ಸಂತೋಷದ ಭರದಲ್ಲಿ ಯಾವ ಸಂಗತಿಯೂ ತಿಳಿಯಲಿಲ್ಲ. ಬಿರುದು ಪದಕದಿಂದ ಸನ್ಮಾನಿತನಾದೆನೆಂಬ ಹರುಷದಲ್ಲಿ ತನ್ನ ಹೆಂಡತಿಯ ಮತ್ತಾ ರೋಸೆಲೀನನ ವ್ಯವಹಾರವು ಅವನ ಮನಸ್ಸಿಗೆ ಹೊಳೆಯದಾಯಿತು.....

ಮೂರು ವಾರಗಳ ನಂತರ ಸರಕಾರಿ ಪತ್ರಿಕೆಯಲ್ಲಿ 'ಕೈಲಾರ್ಡ್ ಮಹಾಶಯನ ಅದ್ವಿತೀಯ ಪರಿಶೋಧನಾ ಸೇವೆಗಾಗಿ ಅವನಿಗೆ ರಾಜ ಸನ್ಮಾನದ ಬಿರುದು ಪದಕವು ಕೊಡಲ್ಪಟ್ಟಿದೆ' ಎಂದು ಬಂತು.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯುವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ॰ ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಗಾಂಧೀ ಶೈಲಿಯಲ್ಲಿ ಡಿವೆಲರಾ

"ಬ್ರಿಟನಿನ ಆವಶ್ಯಕತೆ-ನೀತಿಯ ನೆಲೆಗಟ್ಟೆ?"

"ನಮ್ಮ ಹೃದಯ ಪರಿಶೀಲನೆಯಾಗಲಿ" ಚರ್ಚಿಲ್

'ಸ್ವೇಚ್ಛೆ' 'ಸ್ವಾತಂತ್ರ್ಯ' ಪ್ರಜಾಪ್ರಭುತ್ವಗಳ ಹೊಸ ಅರ್ಥ!

ಸಣ್ಣ ವಿಷಯಗಳನ್ನು ದೊಡ್ಡ ಮಾತಿನಲ್ಲಿ ಹೇಳಲು ಬ್ರಿಟಿಷ್ ಪ್ರಧಾನ ಚರ್ಚಿಲ್ಲರು ತುಂಬಾ ಸಮರ್ಥರು ಆದರೆ ದೊಡ್ಡ ವಿಷಯಗಳನ್ನು ಸಣ್ಣವೂ ಸರಳವೂ ಆದ ಮಾತುಗಳಲ್ಲಿ ನಿರೂಪಿಸಲು ಮಹಾತ್ಮಾ ಗಾಂಧೀಯವರಿಗೆ ಸಮಾನರಾದವರು ಕೆಲವರೇ ಇರುವರು.

ತಾ ೧೩ರ ತಮ್ಮ ರೇಡಿಯೋ ಭಾಷಣದಲ್ಲಿ ಚರ್ಚಿಲ್ ಸಾಹೇಬರು ಅವೋಘ ವಿಜಯ ಭಾಷಣವನ್ನು ಮಾಡಿದರು. ಅದರಲ್ಲಿ ಅವರು ತಮ್ಮಂತೆ ದಕ್ಷಿಣ ಆಯರ್ಲೆಂಡಿನಲ್ಲಿ ಪ್ರಧಾನರಾಗಿರುವ ಡಿವೆಲರಾ ಅವರ ಧೋರಣೆಯನ್ನು ಖಂಡಿಸಿ ಉದ್ಗರಿಸಿದ ಅಂಶವು ಮಾತ್ರ ಜಗತ್ತಿನ ರಾಜಕೀಯ ಕೇಂದ್ರಗಳನ್ನು ಯೋಚನಾತರಂಗದಲ್ಲಿ ಮುಳುಗಿಸಿದೆ.

ಡಿವೆಲರರು ಐರ್ಲೆಂಡಿನ ಪ್ರಖ್ಯಾತ ಕ್ರಾಂತಿಕಾರರು. ಒಂದು ಕಾಲದಲ್ಲಿ ಡಬ್ಲಿನ್ ವಿಶ್ವವಿದ್ಯಾಲಯದ ಗಣಿತ ಶಾಸ್ತ್ರಜ್ಞರಾಗಿದ್ದು ಕ್ರಮೇಣ ರಾಜಕೀಯ ರಂಗವನ್ನು ಸೇರಿ ಜನಪ್ರಿಯರಾದರು. ಹಲವು ಶತಮಾನಗಳಿಂದ ಬ್ರಿಟಿಷರಿಗೂ ಐರ್ಲೆಂಡಿಗೂ ನಡುವೆ ಹೋರಾಟ ನಡೆದು ಕೆಲವು ವರ್ಷಗಳ ಹಿಂದೆ ದಕ್ಷಿಣ ಮತ್ತು ಉತ್ತರ ಆಯರ್ಲೇಂಡುಗಳಾಗಿ ಆ ದೇಶವು ವಿಭಾಗಿಸಲ್ಪಟ್ಟಿತು. ಅದರಲ್ಲಿ ದಕ್ಷಿಣ ಆಯರವು ಸ್ವತಂತ್ರ ಸಾಮಂತರಾಜ್ಯವಾಗಿ ಈ ಯುದ್ಧದಲ್ಲಿ ತಾಟಸ್ಥ್ಯ ಧೋರಣೆಯನ್ನು ವಹಿಸಿತು. ಯು ಬೋಟು ಗಳೊಡನೆ ಕಾದಾಡಲು ಬ್ರಿಟನ್ನು ನೌಕಾ ಠಾಣ್ಯ ಕೇಳಿದಾಗ ಡಿವೆಲರರ ಸರಕಾರವು ಅದನ್ನು ತಿರಸ್ಕರಿಸಿ 'ನಿಷ್ಪಕ್ಷಪಾತದ ತಾಟಸ್ಥ್ಯ ನೀತಿಯನ್ನು' ಕಾಪಾಡಿತ್ತೆಂದು ಹೇಳಲಾಗಿದೆ. ಈಚೆಗೆ ಹಿಟ್ಲರನ ಮರಣವಾರ್ತೆಯನ್ನು ಕೇಳಿದಾಕ್ಷಣ ತಾಟಸ್ಥ ನೀತಿಗನುಸಾರವಾಗಿ ಡಿವೆಲರರು ತಮ್ಮ ದೇಶದಲ್ಲಿರುವ ಜರ್ಮನ್ ರಾಯಭಾರಿಗೆ ಶೋಕ ಪ್ರದರ್ಶನವನ್ನು ಮಾಡಿದರು.

ಇದರಿಂದ ಚರ್ಚಿಲ್ಲರ ಮನಸ್ಸು ಇನ್ನಷ್ಟು ಉಗ್ರವಾಯಿತೆಂದು ರಾಜಕೀಯ ತಜ್ಞರ ಅಭಿಪ್ರಾಯ.

ಚರ್ಚಿಲ್ ಡಿವೆಲರಾ ವಾಗ್ಯುದ್ಧ

ಬ್ರಿಟಿಷ್ ಮುಖ್ಯ ಮಂತ್ರಿಗಳ ಭಾಷಣಕ್ಕೆ ಐರಿಶ್ ಪ್ರಧಾನರು ಮೂರೇ ದಿನಗಳಲ್ಲಿ ಮರುತ್ತರ ಕೊಟ್ಟರು. ಅದರ ಕೆಲವಂಶವನ್ನು ಇಲ್ಲಿ ಹೆಕ್ಕಿ ಕೊಡಲಾಗಿದೆ. ಈ ಉತ್ತರವು ಘನ ಗಾಂಭೀರ್ಯದ ವಾಕ್ಸರಣಿಯಿಂದ ಕೂಡಿದ್ದು ನಿರೂಪಣೆಯಲ್ಲಿ ಗಾಂಧೀ ಮಾದರಿಯನ್ನು ಹೋಲುವುದೆಂದು ಭಾಷಣ ಪಂಡಿತರನೇಕರ ಅಭಿಪ್ರಾಯವಿದೆ.

ತಮಗೆ ನೌಕಾ ಠಾಣ್ಯಗಳನ್ನು ಕೊಡಲು ತಿರಸ್ಕರಿಸಿದುದರ ಕುರಿತು ಚರ್ಚಿಲ್ಲರು ಹೀಗೆಂದರು: 'ಇದು ನಮ್ಮ ಜೀವನದಲ್ಲಿ ಪ್ರತ್ಯಕ್ಷ ಮೃತ್ಯುಕಾಲವಂತಿತ್ತು. ಉತ್ತರ ಆಯರ್ಲೆಂಡಿನ ಸ್ನೇಹ ಸಹಾಯವಿರದಿರುತಿದ್ದರೆ ಒಂದೆ ನಾವು ಡಿವೆಲರಾರೊಡನೆ ಕೈ ಕೈ ಹತ್ತಿಸಿಕೊಳ್ಳುತಿದ್ದೆವು ಇಲ್ಲವೆ ಈ ಜಗತ್ತಿನಿಂದಲೇ ನಾಶ ಹೊಂದುತಿದ್ದೆವು'.

ಆದರೆ ಅಂತಹ ಪರಿಸ್ಥಿತಿ ಸಂಭವಿಸದಿದ್ದುದಕ್ಕೆ ತಮ್ಮ ಆತ್ಮ ಸ್ವಯಂಸವೇ ಕಾರಣವೆಂದು ತಿಳಿಸುತ್ತಾ ಚರ್ಚಿಲ್ಲರು ಹೀಗೆಂದರು: 'ನಮ್ಮಷ್ಟು ಗಾಂಭೀರ್ಯದ ಮನಸ್ಸು ಬಿಗಿಹಿಡಿತವು ಇತಿಹಾಸವು ಕಂಡ ಕೆಲವೇ ಸಮಾನ ನಿದರ್ಶನಗಳಲ್ಲಿ ಒಂದು.

ಉತ್ತರಕ್ಕೆ ಉತ್ತರ

ಡಿವೆಲರರ ಉತ್ತರವು ಸಂಕ್ಷೇಪವಾಗಿ ಹೀಗಿದೆ:

'ವಿಜಯೋತ್ಸವ ಭರದಲ್ಲಿ ಉದ್ಗರಿಸುವ ತಪ್ಪು ಗ್ರಹಿಕೆಯ ಹೇಳಿಕೆಗಳನ್ನು—ಅವು ಅದೆಷ್ಟು ಅಯೋಗ್ಯವಿದ್ದರೂ, ಲಕ್ಷಿಸಬೇಕೆಂದಿಲ್ಲ. ಆದರೂ ಕೆಲವು ವಿಷಯಗಳ ಸ್ಪಷ್ಟಗೊಳಿಸುವುದವಶ್ಯಕವಿವೆ. ಶಕ್ಯವಿದ್ದಷ್ಟು ನಿರ್ವಿಕಾರ ಭಾವದಲ್ಲಿ ಅದನ್ನು ಹೇಳ ಬಯಸುತ್ತೇನೆ.

'ಕೆಲವು ಸಂದರ್ಭಗಳಲ್ಲಿ ನಮ್ಮ ತಾಟಸ್ಥ್ಯವನ್ನು ಮುರಿದು ಅದನ್ನು "ಬ್ರಿಟನಿನ ಅವಶ್ಯಕತೆಯ ದೃಷ್ಟಿಯಿಂದ ನ್ಯಾಯವೆಂದು ಪ್ರತಿವಾದಿಸುತಿದ್ದೆ ಎಂದು ಮಿ. ಚರ್ಚಿಲ್ಲರು ಸ್ಪಷ್ಟೀಕರಿಸಿದ್ದಾರೆ.

'ಇದರಿಂದ ಬ್ರಿಟನಿನ ಅವಶ್ಯಕತೆಯೇ ನೀತಿ ಸೂತ್ರವಾಗುವುದೆಂಬ ಅರ್ಥವಾಗುತ್ತದೆ. ಇಂತಹ ಆವಶ್ಯಕತೆಗಳು ಉದ್ಭವಿಸಿದಾಗ ಇತರ ಜನರ ಹಕ್ಕು ಭಾದ್ಯತೆಗಳು ಗಣನೆಗೆ ಬರಲಾರವು ಎಂಬರ್ಥವೂ ಇದರಲ್ಲಿದೆ.

ನಿಜ, ಇತರ ದೊಡ್ಡ ಶಕ್ತಿ ರಾಷ್ಟ್ರಗಳೂ ಇದೇ ಸೂತ್ರವನ್ನು ನಂಬಿದ್ದರು. ಆ ನಂಬಿಕೆಯಂತೇ ಅವು ವರ್ತಿಸಿಯೂ ಇವೆ. ಖಂಡಿತವಾಗಿಯೂ ಇದರಿಂದಲೇ ಒಂದರ ಹಿಂದೆ ಒಂದಾಗಿ ವಿನಾಶಕಾರಕ ಯುದ್ಧಗಳು ಹಿಂಬಾಲಿಸಿದವು. ಒಂದನೇ ವಿಶ್ವ ಯುದ್ಧ, ಎರಡನೇ ವಿಶ್ವ ಯುದ್ಧ ಮತ್ತು ಮೂರನೇ ವಿಶ್ವ ಯುದ್ಧವು ಖಂಡಿತ ಸಂಭವಿಸುವುದು."

"ನಮ್ಮ ಮೇಲೆ ಕೈ ಮಾಡಿದ್ದನ್ನು ಒಪ್ಪಿಕೊಂಡರೆ ಇನ್ನೊಂದು ಕಡೆಯಲ್ಲಾಗುವ ಅದೇ ತರದ ಕಾರ್ಯವನ್ನು ಮಿ. ಚರ್ಚಿಲ್ಲರು ನ್ಯಾಯವೆಂದೇ ತಿಳಿಯಬೇಕು. ಹೀಗಾದರೆ ದೊಡ್ಡ ರಾಷ್ಟ್ರದ ನೆರೆಕೆರೆಯಲ್ಲಿರುವ ಯಾವ ಚಿಕ್ಕ ರಾಷ್ಟ್ರವು ಚಿತ್ತ ಶಾಂತಿಯಿಂದ ಬದುಕುವ ನಿರೀಕ್ಷೆ ಇರಲಾರದು. ಎಂಬುದನ್ನು ಅವರು ಕಂಡುಕೊಳ್ಳಲಿ".

"ಮಿ. ಚರ್ಚಿಲ್ಲರು ಅಂತಹ ಕಾರ್ಯವನ್ನು ನಡೆಸುವ ಪರಮಾವಧಿಗೆ ಇಂಗ್ಲೆಂಡಿನ ಅವಶ್ಯಕತೆ ಮುಟ್ಟದಿದ್ದುದು ಸುದೈವವೇ ಸರಿ."

"ಅಂತಹ ಮಹಾ ಆಕರ್ಷಣೆಯನ್ನವರು ಯಶಸ್ವಿಯಾಗಿ ಜಯಿಸಿ ಕೊಂಡದ್ದು ಕೀರ್ತಿಪ್ರದವೆನ್ನಬೇಕು. ಅನೇಕ ಸಂದರ್ಭಗಳಲ್ಲಿ ಇಂತಹ ಮಹಾಕರ್ಷಣೆಗಳು ಅವರನ್ನು ಸಂಕಷ್ಟ ಕಾಲದಲ್ಲಿ ಸಹಾಯ ಮಾಡಿವೆ. ಇತರರಾದರೆ ಅದಕ್ಕೆ ಸುಲಭವಾಗಿ ಬಲಿ ಬೀಳುತಿದ್ದರೆಂದು ನಾನು ಸಂಕೋಚವಿಲ್ಲದೆ ಒಪ್ಪಿಕೊಳ್ಳುತ್ತೇನೆ.

ನಿರ್ಬಲರೊಂದಿಗೆ ನ್ಯಾಯ ರೀತಿಯಲ್ಲಿ ವರ್ತಿಸುವುದು ಬಲಾಢ್ಯರಿಗೆ ನಿಜವಾಗಿಯೂ ಕಷ್ಟ ತರವೆನಿಸುವುದು. ಆದರೂ ನ್ಯಾಯ ವರ್ತನೆಯಿಂದ ಸುಕೃತ ಫಲವು ಖಂಡಿತದೊರಕುವುದು. ಮಿ. ಚರ್ಚಿಲ್ಲರು ತಮ್ಮ ಆವಶ್ಯಕತೆಯ ಕಾಲದಲ್ಲಿ ಮನಸ್ಸು ಬಿಗಿಹಿಡಿದುಕೊಂಡದರಿಂದ ಈ ವರೆಗೆ ರಕ್ತ ಕಲಂಕಿತವಾದ ನಮ್ಮ ಮತ್ತು ಇಂಗ್ಲೆಂಡಿನ ಸಂಬಂಧದ ಇತಿಹಾಸಕ್ಕೆ ಇನ್ನೊಂದು ಅಂಕವನ್ನು ಕೂಡಿಸದಂತಾಯಿತು. ಇಷ್ಟೇ ಅಲ್ಲ. ಅದರಿಂದ ಅವರು ಶಾಂತಿಯ ತಳಹದಿಯಾದ ಅಂತರಾಷ್ಟ್ರೀಯ ನೀತಿ ಧರ್ಮ ಧ್ಯೇಯವನ್ನು ಶೋಭೆಗೊಳಿಸಿದಂತೆಯೂ ಆಯಿತು.

"ಫ್ರಾನ್ಸ್ ಪತನಾನಂತರ ಅಮೇರಿಕವು ರಣಕ್ಕಿಳಿಯುವ ಮುನ್ನ ಬ್ರಿಟನೂ ಏಕಾಂಗಿಯಾಗಿ ಒಂದು ಸಂವತ್ಸರದ ತನಕ ಹೋರಾಡಿದಕ್ಕೆ ಚರ್ಚಿಲ್ಲರು ಹೆಮ್ಮೆ ಪಡುತ್ತಾರೆ. ಆದರೆ ಒಂದೆರಡಲ್ಲ, ಹಲವು ಶತಮಾನಗಳ ದಬ್ಬಾಳಿಕೆಯನ್ನು ಎದುರಿಸಿ, ಅಂತ್ಯವಿಲ್ಲದೆ ಮೇಲಿಂದ ಮೇಲೆ ಬರಗಾಲ ಕಷ್ಟ ನಷ್ಟ ಹತ್ಯಾಕಾಂಡ್ಯಗಳನ್ನು ಸಹಿಸಿದ್ದು, ಮೂರ್ಛೆ ಹೋಗುವ ತನಕ ಹೊಡೆತವನ್ನು ತಿಂದರೂ ಮತ್ತೆ ಸ್ಮೃತಿ ಚೇತನಕ್ಕೆ ಬಂದು ಪ್ರತಿಸಲವೂ ಹೊಸದಾಗಿ ಹೋರಾಟವನ್ನು ಕೈಕೊಂಡ ಆದೊಂದು ಚಿಕ್ಕ ಜನಾಂಗವಿದೆಯೆಂದು ತಿಳಿಕೊಳ್ಳುವಷ್ಟು ಔದಾರ್ಯವನ್ನು ಅವರು ತಮ್ಮ ಹೃದಯದಲ್ಲಿ ಕಾಣಬಯಸರೇ?"

ಬಂಗಾಲದ ಬರಗಾಲ

ಅದು ಮಾನವ ನಿರ್ಮಿತವು

"ಯುದ್ಧದಲ್ಲಿ ಭಾಗಿಗಳಾದ ಭಾರತೀಯರಲ್ಲಿ ಮಡಿದ ಮತ್ತು ಘಾಯಗೊಂಡವರ ಸಂಖ್ಯೆ ಹತ್ತು ಲಕ್ಷಕ್ಕಿಂತ ಒಂದಿಷ್ಟು ಹೆಚ್ಚು ಎಂದು ಚರ್ಚಿಲ್ಲರು ಕೊಮನ್ಸ್ ಸಭೆಯಲ್ಲಿ ತಿಳಿಸಿದರು. ಬಂಗಾಲದಲ್ಲಿ ಬರಗಾಲದಿಂದ ಸುಮಾರು ಹದಿನಾಲ್ಕು ಲಕ್ಷ ಮಂದಿ ಸಾವಿಗೀಡಾದರು. ಈ ಬರಗಾಲವು ಯುದ್ಧದ ಪರಿಣಾಮದಿಂದಲೇ ಉಂಟಾದುದರಿಂದ ಚರ್ಚಿಲ್ಲರ ಹತ್ತು ಲಕ್ಷಕ್ಕೆ ಮತ್ತೆ ಹದಿನೈದು ಲಕ್ಷವನ್ನು ಸೇರಿಸಬೇಕು." ಹೀಗೆಂದು ಬಂಗಾಲದ ಒಂದು ಪ್ರಮುಖ ಪತ್ರಿಕೆಯು ತನ್ನ ಅಗ್ರಲೇಖವೊಂದರಲ್ಲಿ ಬರೆದಿರುತ್ತದೆ. ಅದಕ್ಕೆ ಈ ಕೆಳಗಿನ ಕಾರಣಗಳನ್ನು ಅದರಲ್ಲಿ ಕೊಡಲಾಗಿದೆ:

ಪರಿಸ್ಥಿತಿಯನ್ನು ಹದದಲ್ಲಿಡಲು ಬಂಗಾಲ ಸರಕಾರವು ಅಸಮರ್ಥವಾಯಿತು. ಸರಕಾರದವರು ಅಕ್ಕಿಯನ್ನು ಸಂಗ್ರಹಿಸಿಟ್ಟರೇ ಹೊರತು ಅದರ ಹಂಚುವಿಕೆಯ ಒಂದು ಸುವ್ಯವಸ್ಥೆ ಮಾಡಲು ಅವರಿಂದ ಸಾಧ್ಯವಾಗಲಿಲ್ಲ. ಹೀಗಾಗಿ ಬಹು ಪ್ರಮಾಣದಲ್ಲಿ ಅಕ್ಕಿಯು ಹಾಳಾಗಿ ಹೋಯಿತು. ಹಳ್ಳಿ ಪ್ರದೇಶದ ಫಲವತ್ತು ಪ್ರದೇಶಗಳು ಮಿಲಿಟರಿ ಅವಶ್ಯಕತೆಗಳಿಗೆ ವಶಪಡಿಸಲಾಗಿ ೮೦ ಸಾವಿರ ರೈತ ಕುಟುಂಬಗಳು ದಿಕ್ಕು ದಿಶೆ ಕೆಟ್ಟವು. ಬಂಗಾಲದಲ್ಲಿ ವಸ್ತು ಸಾಗಿಸುವಿಕೆಗೆ ಅವಶ್ಯವಾದ ದೋಣಿಗಳನ್ನು ಸರಕಾರದವರು ಸುವ್ಯಸ್ಥಿತಿ ರೀತಿಯಲ್ಲಿ ಇಡಲಾರದಾದರು. ವಿಪರೀತ ಬೆಲೆ ಏರಿದಾಗ ಅದನ್ನು ನಿಯಂತ್ರಣದೊಳಗೆ ತರುವಷ್ಟು ಪುರುಷಾರ್ಥ ಬಂಗಾಲ ಸರಕಾರಕ್ಕೆ ಇಲ್ಲದೆಹೋಯಿತು. ಆದುದರಿಂದ ಭೀಕರ ನರಹತ್ಯಾಕಾಂಡವು ಸಂಭವಿಸಿತು. ಇದೂ ಯುದ್ಧ ಪರಿಣಾಮವೆಂತಲೇ ತಿಳಕೊಳ್ಳತಕ್ಕದ್ದು. ಇದು ಬಂಗಾಳದ ಬರಗಾಲವು ದೈವ ನಿರ್ಮಿತವಲ್ಲ-ಕೇವಲ ಮೂರ್ಖ ಮಾನವ ನಿರ್ಮಿತವಾದುದು.

CANARA BANK LTD.

Applications are invited for clerical posts in the Bank. Minimum qualification necessary S. S. L. C. Selected candidates will have to undergo training for about 3 months during which period they will not be given any salary or remuneration. But they will be as far as possible, allowed to work in any of the Bank's offices of their choice during the period of training.

Applications with testimonials will be received upto 20-6-45.

Apply to:

CANARA BANK LIMITED, LIGHT HOUSE HILL MANGALORE.

ಮುಂದಾಲೋಚನೆ

ಶಾಂತಿಕಾಲದ ಕುರಿತು ಆಲೋಚಿಸಿ, ತಕ್ಕ ಯೋಜನೆಗಳನ್ನು ಮಾಡಲು ಇದೀಗ ತಕ್ಕ ಸಮಯ ಏಕೆಂದರೆ, ಯುದ್ಧಕಾಲದ ಸಮಸ್ಯೆಗಳಿಗಿಂತ ಶಾಂತೀಕಾಲದವುಗಳು ಕಷ್ಟತರ.

ಮುಂಬರುವ ದಿನಗಳು ಅನಿಶ್ಚಿತ. ಅವುಗಳಿಂದ ನಿರುಪಾಯವಾಗಿ ಪಾರಾಗಲು ಜನರಿಗೆ, ಅನುಭವ ಮತ್ತು ಜ್ಞಾನ ಇವುಗಳೇ ಸಹಾಯಕವಾಗುವುವು. ತಮ್ಮ ಮೂವತ್ತೊಂಬತ್ತು ವರ್ಷಗಳ ಅನುಭವದಲ್ಲಿ ಎರಡು ಜಾಗತಿಕ ಯುದ್ಧಗಳನ್ನೂ ಎರಡು ವ್ಯಾಪಾರಿ ಮುಗ್ಗಟ್ಟುಗಳನ್ನೂ ಕಂಡ ಕೆನರಾ ಬ್ಯಾಂಕಿನವರು—ಆರ್ಥಿಕ ವಿಷಯಗಳಲ್ಲಿ ನಿಮಗೆ ಮಾರ್ಗದರ್ಶಕರಾಗಬಲ್ಲರು ಅವರಲ್ಲಿ ವಿಶ್ವಾಸ ಇಡಲು ಸಂಕೋಚಿಸದಿರಿ; ವಿಲಂಬಿಸಬೇಡಿ.

ಮುಂಬರುವ ದಿನಗಳಲ್ಲಿ ನಿಮಗೆ ಸಹಾಯಕರಾಗಲು ಅವರು ಸಮರ್ಥರು.

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited.

ಸಿಹಿ ಸುದ್ದಿ ಸಂಗ್ರಹ

ಶರೀರಾರೋಗ್ಯದಲ್ಲಿ ಧೃಡಕಾಯರಾಗಿದ್ದರೂ ಬ್ರಿಟಿಷ್ ಜನರ ಮಾನಸೀಕ ಅಸ್ತವ್ಯಸ್ತತೆಯು ಈ ಯುದ್ಧಕಾಲದಲ್ಲಿ ಹೆಚ್ಚಿದೆಯೆಂದು ಓರ್ವ ಮನೋವ್ಯಾಧಿ ತಜ್ಞರು ತಿಳಿಸುತ್ತಾರೆ

ಲಂಡನಿನ ಪ್ರತೀ ೨೦೦ ನಾಗರೀಕರಲ್ಲಿ ಒಬ್ಬನು ಹುಚ್ಚರ ಆಸ್ಪತ್ರೆಯಲ್ಲಿದ್ದಾನೆ. ಪ್ರತೀ ೨೭೪ರಲ್ಲಿ ಒಬ್ಬನು ಮಾನಸೀಕ ಅನಾರೋಗ್ಯದವನಿದ್ದಾನೆ ಅಲ್ಲಿ.

ಸ್ಕೊಟ್ಲೆಂಡಿನಲ್ಲಿ ೨೬೦೦೦ ಮನೋವ್ಯಾಧಿಯವರಿದ್ದಾರೆ. ಆದರೆ ಅದರ ಕಾಲಾಂಶದಷ್ಟು ಜನರಿಗೆ ಮಾತ್ರ ಆರೈಕೆ ಕೊಡುವ ಆಸ್ಪತ್ರೆಗಳು ಅಲ್ಲಿವೆ. ಯುರೋಪಿನ ಪ್ರತಿಯೊಂದು ದೇಶದಲ್ಲೂ ಹೆಚ್ಚುಕಡಿಮೆ ಇಷ್ಟೇ ಸಂಖ್ಯೆಯ ಮನೋಭ್ರಮೆಯವರಿದ್ದಾರೆ ಇಂಗ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿನ ಹುಚ್ಚರ ಆಸ್ಪತ್ರೆಗಳಲ್ಲಿ ೧೪೭,೫೫೭ (ಇದರಲ್ಲಿ ೮೪೫೦೩ ಸ್ತ್ರೀಯರು) ಶುಶ್ರೂಷೆ ಪಡೆಯುತ್ತಾರೆ.

* * *

೭೩೦ ಚದರಮೈಲುವಿಸ್ತಾರದ ವಿಶಾಲ ಲಂಡನ್ ನಗರದಲ್ಲಿಯೇ ೬೦೦ ರೈಲ್ವೇ ಸ್ಟೇಶನುಗಳಿವೆ.

* * *

ಬವರ್ ಎಂಬ ಮರವನ್ನು ಕೊರೆದು ತೂತುಮಾಡುವ ನೊಣವು ೪ ಇಂಚು ದಪ್ಪದ ಮರವನ್ನು೨೦ ನಿಮಿಷಗಳಲ್ಲಿ ತೂತು ಮಾಡಬಲ್ಲುದಂತೆ.

* * *

ನಗರಗಳಲ್ಲಿನ ವಾತಾವರಣವು ತಂಪಾಗಿ ಬಂದ ಹಾಗೆ ಜನರ ಜ್ಞಾಪಕ ಶಕ್ತಿಯೂ ಕಡಿಮೆಯಾಗುತ್ತದೆಯಂತೆ. ಈ ಮರೆಯುವಿಕೆಯಿಂದ ತಂಪು ಕಾಲದಲ್ಲಿ ನಗರವಾಸಿಗಳು ತಮ್ಮ ಬಳಿಯಲ್ಲಿನ ಅನೇಕ ವಸ್ತುಗಳನ್ನು ಎಲ್ಲೆಲ್ಲೊ ಮರೆತು ಬಿಡುವುದು ಹೆಚ್ಚಾಗಿ ತೋರಿ ಬರುತ್ತದೆ.

ಶೀತಕಾಲದಲ್ಲಿ ಸೆಕೆಕಾಲಗಿಂತ ಹೆಚ್ಚು ವಾಹನ ಅವಘಡಗಳಾಗುತ್ತವೆ. ಉಷ್ಣ ವಾತಾವರಣದಲ್ಲಿ ಲೇಖಕರು ಸುಲಭವಾಗಿ ಲೇಖನಗಳನ್ನು ಬರೆಯಬಲ್ಲರು. ಶೀತಕಾಲದಲ್ಲಿ ಅಂಟು ಜಾಡ್ಯಗಳೂ ಹೆಚ್ಚು ಪ್ರಸರಿಸುತ್ತವೆ.

* * *

ಬಿರುಗಾಳಿ ಬರುವ ಸಂಗತಿಯು ಕುದುರೆ, ನಾಯಿ, ದನಗಳಿಗೆ ಮುಂಚಿತವಾಗಿ ತಿಳಿಯುತ್ತದೆಯಂತೆ. ಆಗ ಅವು ತುಂಬಾ ಕಳವಳವನ್ನೂ ಉದ್ವೇಗವನ್ನೂ ತೋರಿಸುತ್ತವೆ. ಸಣ್ಣ ಮಕ್ಕಳ ಮನಸ್ಸಿನ ಮೇಲೂ ಬಿರುಗಾಳಿಯು ಬರುವ ಸೂಚನೆಯು ಪರಿಣಾಮಗಳಾಗಿ ಅವು ನಿದ್ರೆಮಾಡಲು ಕೇಳುವುದಿಲ್ಲ. "ಆದುದರಿಂದ ಕೆಲವು ಸಮಯ ನಿಮ್ಮ ಮಕ್ಕಳು ನಿದ್ದೆಮಾಡಲು ಹಟಮಾಡಿದರೆ ಅದಕ್ಕೆ ಮುಂಬರುವ ಭೀಕರ ಹವಾಗುಣವೇ ಕಾರಣವಿರಬಹುದು" ಎಂದೊಬ್ಬ ತಜ್ಞರು ತಿಳಿಸುತ್ತಾರೆ.

* * *

ಸಂಯುಕ್ತ ಅಮೇರಿಕದ ೧೪ ಕೋಟಿ ಪ್ರಜೆಗಳಲ್ಲಿ ೧ ಕೋಟಿಯಷ್ಟು ಜನರಿಗೆ ಒಂದಲ್ಲ ಒಂದು ರೀತಿಯ ಕಿವುಡುತನವಿದೆಯಂತೆ—ಅರ್ಧ ಕೋಟಿಯಷ್ಟು ತಾಜಾ ಕಿವುಡರಂತೆ.

ಸ್ವಂತ ಹೃದಯ ಪರಿಶೀಲನೆಯಾಗಲಿ

ಚರ್ಚಿಲ್ ಭಾಷಣದ ಉದಾತ್ತ ತತ್ವಗಳು

"ಅವು ಕೃತಿಯಲ್ಲಿ ರೂಪುಗೊಳ್ಳಲಿ"

ವಿಜಯೋತ್ಸವದ ದಿನ ಚರ್ಚಿಲ್ಲರ ಭಾಷಣದ ಕುರಿತು ಅಗ್ರಲೇಖವೊಂದನ್ನು ಬರೆಯುತ್ತಾ ಕಲ್ಕತ್ತದ ಅಮೃತ್ ಬಜಾರ್ ಪತ್ರಿಕೆಯು ಅವುಗಳಲ್ಲಿನ ಅನೇಕ ಗಹನ ವಿಚಾರಗಳ ಕಡೆಗೆ ತನ್ನ ವಾಚಕರ ಗಮನವನ್ನು ಸೆಳೆದಿದೆ. ಅದು ಹೀಗೆ ಪ್ರಾರಂಭಿಸುತ್ತದೆ: 'ಅವರ ಹೃದಯದಲ್ಲಿ ಎರಡು ಪರಸ್ಪರ ವಿರೋಧ ಧ್ಯೇಯಗಳು ಹೋರಾಡುತ್ತಿವೆಯೆಂದು ಈ ಭಾಷಣದಿಂದ ಅಭಿಪ್ರಾಯವಾಗುತ್ತದೆ. ಒಂದು ಕಡೆ ಸಹಜ ದರ್ಪ ಇನ್ನೊಂದೆಡೆ ನೀತಿ ಭೋಧಕನ ಉಪದೇಶ"

"ವಿಜಯಿಗಳು ತಮ್ಮ ಹೃದಯ ಪರಿಶೀಲನೆ ಮಾಡಿ ಕೊಳ್ಳುವುದವಶ್ಯಕವಿದೆ. ಅವರು ತಮ್ಮಲ್ಲಿನ ಅಪಾರ ಶಕ್ತಿ ಸಾಮರ್ಥ್ಯದ ಘನಸ್ತಿಕೆಗೆ ಯೋಗ್ಯರೆನಿಸಬೇಕು' ಎಂದು ಚರ್ಚಿಲ್ಲರು ಹೇಳಿದ್ದನ್ನು ಸಮರ್ಥಿಸುತ್ತ ಆ ಪತ್ರಿಕೆ ಹೀಗೆ ಬರೆದಿದೆ:

'ಇದು ತನಕ ಪ್ರಧಾನ ಚರ್ಚಿಲ್ಲರು ಶಕ್ತಿವಂತರಿಗೆ ಹೃದಯ ಪರಿಶೀಲನೆ ಮಾಡಿಕೊಳ್ಳಲು ಬೋಧಿಸಿದಿಲ್ಲ. ಈಗ ಅವರೂ ವಿಜಯಿಗಳಲ್ಲೋರ್ವರಾಗಿರುವುದರಿಂದ ಈ ವಿಜಯೋತ್ಸವವನ್ನು ಅವರು ತಮ್ಮ ಸ್ವಂತ ಹೃದಯ ಪರಿಶೀಲನೆಯಿಂದ ಪ್ರಾರಂಭಿಸಲಿ' ಮತ್ತೆ ಮುಂದುವರಿಯುತ್ತಾ ಹೀಗೆ ಕೇಳುತ್ತದೆ:

'ತಮಗಿದ್ದುದನ್ನು ತಾವು ಬಿಡುವುದಿಲ್ಲವೆಂದು ಹೇಳಿದ ಅಭಿಪ್ರಾಯವು ಇನ್ನೂ ಅದರ ಹೃದಯದಲ್ಲಿದೆಯೆ? ಜನತೆಯ ಉನ್ನತ ಆದರಾಭಿಮಾನಗಳಿಗೆ ಪಾತ್ರರಾದ ಸಾವಿರಾರು ಭಾರತೀಯ ಮುಖಂಡರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿರಿಸಿದ್ದು ಯಥಾಯೋಗ್ಯವೆಂದು ಅವರ ಹೃದಯವು ಇನ್ನೂ ಅವರಿಗೆ ತಿಳಿಸುವುದೆ? ಶಾಂತಿ ಪರಿಷತ್ತಿನಲ್ಲಿ ಪ್ರಧಾನ ಸೂಚನೆಗಳನ್ನು ಮುಂದೆ ತರುವ ಇಂಗ್ಲೆಂಡು ಸೇನ್ ಫ್ರೆನ್ಸಿಸ್ ಕೊ ಪರಿಷತ್ತಿಗೆ ಭಾರತೀಯರಿಂದ ಖಂಡಿಸಲ್ಪಟ್ಟ ಮೂರು ಪ್ರತಿನಿಧಿಗಳನ್ನು ಕಳುಹಿಸಿದ್ದು ಸರಿಯೆಂದು ಅವರ ಹೃದಯವು ತಿಳಿಸುವುದೆ? ಇನ್ನು ಅನೇಕಾನೇಕ ವಿಚಾರಗಳಲ್ಲಿ ಚರ್ಚಿಲ್ ಸಾಹೇಬರು ತಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಬಹುದು.'

ಒಂದು ಕಡೆ ಚರ್ಚಿಲ್ಲರು ಹೀಗೆಂದಿರುವರು: ನಾವು ಯುದ್ಧ ಮಾಡಿದ ತತ್ವಗಳು ಮೂಲೆಪಾಲಗದಿರಲಿ 'ಸ್ವಾತಂತ್ರ್ಯ' ಮತ್ತು 'ಪ್ರಜಾಪ್ರಭುತ್ವ' ಎಂಬ ಶಬ್ದಗಳ ನಾವು ಅರಿತುಕೊಂಡ ಅರ್ಥದ ರೂಪುಗೆಡದಿರಲಿ' ಪತ್ರಿಕೆಯ ಟೀಕೆ: ಈ ಶಬ್ದಗಳಿಗೆ ಚರ್ಚಿಲ್ ಸಾಹೇಬರ ಅರ್ಥವಾದರೂ ಯಾವುದಿದೆ? ಇದರ ಅರ್ಥವನ್ನು ಬಿಳಿಯರಿಗೊಂದು ಇತರರಿಗೆ ಇನ್ನೊಂದು ತರವಿರದಂತೆ ಅವರು ತಮ್ಮ ಹೃದಯ ಪರಿಶೀಲಿಸಲಿ. ಭಾರತದಲ್ಲಿನ ಇಂದಿನ ನಿರಂಕುಶ ಆಡಳಿತವು ಪ್ರಜಾಪ್ರಭುತ್ವದ ಅರ್ಥದ್ದೆ? ಯುದ್ಧವು ಯಾವ ಉದ್ದೇಶಕ್ಕಾಗಿ ಹೋರಾಡಲ್ಪಟ್ಟಿತೆಂಬುದರ ಕುರುಹು ಫ್ರಿಸ್ಕೊದಲ್ಲಿ ಸ್ವಲ್ಪಮಟ್ಟಿಗೆ ತೋರಿಬಂದಿದೆ. "ರಶ್ಯವು ತನ್ನ ಜಮೀನಿಗಾಗಿ ಹೋರಾಡಿದಾದರೆ ಇತರರು ತಮ್ಮ ಜಮೀನ್ದಾರರಿಗಾಗಿ ಕಾದಾಡಿದರು " ಎಂದು ಬರ್ನಾರ್ಡ್ ಶೋ ಅವರು ಹೇಳಿದ ಮಾತುಗಳು ಗಮನೀಯ.

ಚರ್ಚಿಲ್ಲರೆಂದಿದ್ದಾರೆ: "ನ್ಯಾಯನೀತಿಗಳು ಆಳದಿದ್ದರೆ, ನಾಜೀ ಆಡಳಿತ ಸ್ಥಾನದಲ್ಲಿ ನಿರಂಕುಶವಾದ ಪೋಲಿಸ್ ರಾಜಾಡಳಿತವು ಸ್ಥಾಪಿತವಾಗುವುದಾದರೆ ನಾವು ಹಿಟ್ಲರ್ ವಾದಿಗಳಿಗೆ ಶಿಕ್ಷೆಕೊಟ್ಟು ಫಲವೇನು?"

ಅ. ಬ. ಪತ್ರಿಕೆ ಹೀಗೆ ಬರೆಯುತ್ತದೆ: "ಇದು ಫ್ರಿಸ್ಕೊದಲ್ಲಿ ನಮಗೆ ಕೇಳಿ ಬಂದಂತಹ ಇನ್ನೊಂದು ಭಾವನಾತ್ಮಕ ಸೂಚನೆಯೆ? ಅವರು 'ದೂರವೇಕೆ ಹೋಗಬೇಕು. ಇತ್ತ ಬ್ರಿಟಿಷ್ ಸಾಮ್ರಾಜ್ಯದಲ್ಲೇ ಸ್ವಲ್ಪ ಇಣಿಕಿನೋಡಲಿ-ಎಲ್ಲಿ ನ್ಯಾಯನೀತಿಗಳು ನೆಲೆಸಿಲ್ಲ, ಎಲ್ಲಿ ಪೋಲಿಸ್ ಆಡಳಿತಗಳು ಸ್ಥಾಪಿಸಲ್ಪಟ್ಟಿವೆ ಎಂದು."

'ಐದು ವರ್ಷ ಹಿಂದಿನದಗಿಂತ ಇಂದು ನಾವು ಮುಂದಿನ ಗಂಡಾಂತರದ ಸಮಸ್ಯೆಗಳನ್ನು ಬಗೆಹರಿಸಲು ಶಕ್ತಿವಂತರಾಗಿದ್ದೇವೆ." ಎಂದು ಹೇಳಿದ ಚರ್ಚಿಲ್ಲರಿಗೆ ಉತ್ತರವೀಯುತ್ತಾ ಪತ್ರಿಕೆ ಹೀಗೆ ಬರೆದಿದೆ:

"ಕೆಲವೊಂದು ಆಕಸ್ಮಿಕ ಘಟನೆಗಳಿಂದಾಗಿ ಬ್ರಿಟನಿಗೆ ಜರ್ಮನಿಯಿಂದ ಬಂದ ಗಂಡಾಂತರ ದೂರವಾಯಿತೆಂದು ವಿಷಯವುಸರಿಯಾಗಿ ಯೋಚಿಸಿದರೆ ಚರ್ಚಿಲ್ಲರಿಗೆಮನವರಿಕೆಯಾಗದಿರದು. ಸುದೈವದ ಪ್ರಭಾವದಿಂದಲೇ ಇಂಗ್ಲೆಂಡು ಈ ಗಂಡಾಂತರದಿಂದ ತಪ್ಪಿದೆಂದು ಅವರಿಗೇ ಖಚಿತವಾಗಿದೆ ಎಂದು ಅವರ ಭಾಷಣದಿಂದಲೇ ಗೊತ್ತಾಗುತ್ತದೆ. "ರಶ್ಯದ ಮೇಲೆ ಜರ್ಮನಿ ಬಿದ್ದುದು ಭೀಕರ ತಪ್ಪಾಯಿತೆಂದು" ಅವರೇ ತಿಳಿಸಿದ್ದಾರೆ. ಜರ್ಮನಿಯು ಆ ತಪ್ಪನ್ನು ಮಾಡದಿದ್ದರೆ ಏನಾಗುತಿತ್ತು? "ಜರ್ಮನಿಯನ್ನು ಸೋಲಿಸಲು ಸಹಾಯಮಾಡಿದ ಅಮೇರಿಕದ ಶಕ್ತಿ ಶ್ರೇಷ್ಠತೆಯನ್ನು' ಅವರು ಒಪ್ಪಿರುವರು. ಜಪಾನು ಪರ್ಲ್ ಹಾರ್ಬರಿನ ಮೇಲೆ ದಾಳಿ ಮಾಡಿದ ತಪ್ಪು ಮಾಡದಿದ್ದರೆ ಏನಾಗುತಿತ್ತು? ಇನ್ನೊಂದು ಯುದ್ಧವಾದಾಗ (ಅದು ಸಂಭವಿಸದಂತೆ ಪ್ರಾರ್ಥಿಸುತ್ತೇವೆ) ಶತ್ರುಗಳು ಅಂತಹ ತಪ್ಪುಗಳನ್ನು ಮಾಡುವರೆಂದು ಚರ್ಚಿಲ್ಲರು ತಿಳಕೊಂಡಿರುವರೊ?"

ಕೊನೆಗೆ ಭವಿಷ್ಯದ ಕುರಿತು ಬರ್ನಾರ್ಡ್ ಶೋ ಅವರು ಹೇಳಿದ ಮಾತುಗಳನ್ನು ಆ ಪತ್ರಿಕೆಯು ಉದಹರಿಸಿದೆ:" ಈ ಮೂರು ರಾಷ್ಟ್ರಗಳು ಒಟ್ಟುಗೂಡಿದರೆ ಅವರ ಶಕ್ತಿಯು ಅಗಾಧವಾಗುವುದು. ಒಂದು ವೇಳೆ ಅವರು ಪ್ರತಪ್ರತ್ಯೇಕವಾದರೆ ನಮಗೆ ದೇವರೇ ಗತಿ."

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ. ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು: ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 2—6—1945 [ಸಂಚಿಕೆ 11]

ಗಡ್ಡದಿಂದ ಉಂಟಾಗುವುದು ಹೇನು-ಬುದ್ಧಿಯಲ್ಲ

ಜನಜೀವನದಲ್ಲಿ ಗಡ್ಡದ ಪ್ರಭಾವ

ಗಡ್ಡವಿಲ್ಲದ ಮುಸ್ಲಿಂ ಮುಖಂಡರು

'ಜೈಲಿನಿಂದ ಹಿಂತಿರುಗುವ ಕೊಂಗ್ರೆಸಿಗರು ಗಡ್ಡವನ್ನು ಬೆಳೆಸಿ ಬರುವುದು ಈಚೀಗೆ ಸಾಮಾನ್ಯ ವಿಷಯವೆನಿಸಿದೆ. ಗಣನೀಯ ವಿಚಾರವೆಂದರೆ ಕೊಂಗ್ರೆಸು ಮುಂದಾಳುಗಳಲ್ಲಿ ಅಗ್ರಗಣ್ಯರೆನಿಸಿದ ಶಂಕರರಾವ್ ದೇವರಿಗೆ ಬಂಧನ ಕಾಲದಲ್ಲಿ ಗಡ್ಡವಿತ್ತು. ಈಗ ಅವರು ಅದನ್ನು ತೆಗೆದಿರುವರಂತೆ. ಬಂಧಿಸಲ್ಪಟ್ಟಾಗ ಆಚಾರ್ಯ ಕೃಪ್ಲಾನಿಯವರಿಗೆ ಗಡ್ಡವಿರಲಿಲ್ಲ. ಈಗವರು ಗಡ್ಡ ಬಿಟ್ಟಿರುವರೆಂದು ತಿಳಿದು ಬರುತ್ತದೆ. ತಮ್ಮ ಮಿತ್ರ ದೇವರು ತೆಗೆಸಿದುದಕ್ಕಾಗಿ ಅದರ ಮಹತ್ವ ನಷ್ಟವಾಗದಿರಲೆಂದು ಬಹುಶ ಕೃಪ್ಲಾನಿ ಮಹಾಶಯರು ಅದನ್ನು ಬಿಟ್ಟಿರಬೇಕೆಂದು ನನ್ನ ಕಲ್ಪನೆ' ಹೀಗೆಂದು ನೇಶನಲ್ ಹೆರಾಲ್ಡ್ ಪತ್ರಿಕೆಯ ಕೆ. ರಾಮ ರಾವ್ ಅವರು ಗಡ್ಡದ ಕುರಿತು ಬರೆದದೊಂದು ಲೇಖದಲ್ಲಿ ತಿಳಿಸುತ್ತಾರೆ. ಮತ್ತೆ ಅವರು ನಿರೂಪಿಸಿದ ಇತರ ಸಾರಸ್ಯ ವಿಷಯಗಳನ್ನೂ ಈ ಕೆಳಗೆ ಸಂಕ್ಷೇಪಿಸಿಲಾಗಿದೆ:

ಇದಕ್ಕೆ ಕಾರಣವಿದೆ. ಜೈಲಿನಲ್ಲಿ ಕ್ಷೌರದ ಕೆಲಸವು ಬಹಳ ತೊಂದರೆಯದು. ಅಲ್ಲಿನ ಕೈದಿಗಳಲ್ಲಿ ಪ್ರವೀಣ ಕ್ಷೌರಿಕ ವೃತ್ತಿಯವರು ದೊರಕುವುದು ಅಪರೂಪ. ಬಹುಶ: ಕ್ಷೌರಿಕರು ಜೈಲಿಗೆ ಹೋಗುವ ಕೆಲಸ ಮಾಡುವುದೇ ಕಮ್ಮಿ ಇರಬಹುದು. ಮಾತ್ರವಲ್ಲ ಜೈಲು ಕ್ಷೌರಿಕರ ಬಳಿ ಇರುವುದು ದೇಶ ತಯಾರಿಕೆಯ ಬಾಳುಗಳು. ಇವುಗಳನ್ನು ಪ್ರಯೋಗಿಸುವುದರಿಂದ ಈ ಕೂದಲಿನೊಂದಿಗೆ ಮುಖದ ಕೆಪ್ಪೆಗಳು ಸಿಗಿಯಲ್ಪಡುತ್ತವೆ. ಈ ಯಾತನೆಗಾಗಿ ಕೈದಿಗಳು ಗಡ್ಡ ಬೆಳೆಸುವಿಕೆಯನ್ನೇ ಅಪೇಕ್ಷಿಸುವಂತವರಾಗುವರು.

ಮಹಾರಾಷ್ಟ್ರದವರಿಗೆ ಗಡ್ಡವಿಲ್ಲದ ಶಂಕರರಾವ್ ದೇವರನ್ನು ನೋಡಿದರೆ ಗುರುತು ಹತ್ತಲಾರದು. ಸಿಂಧದ ಜನರಿಗೆ ಗಡ್ಡ ಬಿಟ್ಟ ಕೃಪ್ಲಾನಿಯರು ಅಪರಿಚಿತರೇ ಆಗುವರು. ಸಿಂಧದ ಹಿಂದೂ ಮುಸಲ್ಮಾನರಿಗೆ ಗಡ್ಡವು ಸಾಮಾನ್ಯ ಸಂಗತಿ. ಅವರು ಅದನ್ನು ಕಂಡು ಬಣ್ಣದಿಂದ ಶೃಂಗರಿಸಿಕೊಳ್ಳುತ್ತಾರೆ. ಆದರೂ ಕೃಪ್ಲಾನಿಯರಿಗೆ ಇದರಿಂದ ಸ್ವಲ್ಪ ಗಂಡಾಂತರವಿದೆ-ಅವರು ಒಂದು ಕಾಲದಲ್ಲಿ ಕೋಲೇಜ್ ಪ್ರೊಫೆಸರರಾಗಿದ್ದ ಆಚಾರ್ಯರು ನಮ್ಮ ದೇಶದ ಮಹಾವೇದಾವಿನಾಯಕರಲ್ಲಿ ಒಬ್ಬರಾಗಿರುವುದು ಮಾತ್ರವಲ್ಲ ಅವರು ಪ್ರಖ್ಯಾತ ವಿನೋಧ ಮಾತುಕತೆಯವರೂ ಆಗಿರುವರು. ಎಲ್ಲಿಯಾದರೂ ಒಂದು ದಿನ ಅವರು ತಮ್ಮ ವಿರೋಧಿಗಳನ್ನು ಹಾಸ್ಯ ಮಾಡುವಾಗ ಆ ವಿರೋಧಿಗಳು ರೇಗಿಕೊಂಡರೆ ಅವರ ಪ್ರಥಮ ದಾಳಿಯು ಕೃಪ್ಲಾನಿಯವರ ಗಡ್ಡದ ಮೇಲೆಯೇ ಪ್ರಯೋಗಿಸಲ್ಪಡಬಹುದು.

ಭಾರತೀಯ ರಾಜಕಾರಣದಲ್ಲಿ ಗಡ್ಡಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ನಾವು ಚಿಕ್ಕಂದಿನಲ್ಲಿ ಗಡ್ಡವಿದ್ದ ಮದ್ರಾಸು ಪ್ರಾಂತ್ಯದ ಹೊರಗಿನವರಾದವರನ್ನು ನೋಡಿದರೆ ಅವರು ಬಂಗಾಳಿಗಳಿರುವರೆಂದು ತಿಳಕೊಳ್ಳುತ್ತೇವೆ. ಒಂದೊ ಅವರು ಬ್ರಹ್ಮಸಮಾಜದ ಬೋಧಕರಿರಬೇಕು ಇಲ್ಲವೇ ರಾಜಕೀಯ ಭಾಷಣಗಾರರಿರಬೇಕೆಂದೇ ನಮ್ಮ ಕಲ್ಪನೆ. ಕೊಂಗ್ರೆಸಿನ ಮೊದಲ ಅಧ್ಯಕ್ಷರುಗಳಿಗೆಲ್ಲ ಗಡ್ಡವಿತ್ತು. ಉಮೇಶ ಚಂದ್ರ ಬಾನರ್ಜಿಯವರ ಕಾಲದಿಂದಲೇ ಅದು ಪ್ರಾರಂಭವಾಗಿರಬೇಕು. ಈಗಿನ ಕೊಂಗ್ರೆಸು ಅಧ್ಯಕ್ಷರೂ ಗಡ್ಡದವರೇ ಆಗಿರುವುದು ಸಾರಸ್ಯದ ವಿಷಯ. ಗಡ್ಡವನ್ನು ಸವರುತ್ತಾ ಮಾಜೀ ಕೊಂಗ್ರೆಸ್ ಅಧ್ಯಕ್ಷ ದಿವಂಗತ ಸುರೇಂದ್ರನಾಥ ಬಾನರ್ಜಿಯವರು ಸಭಿಕರನ್ನು ತಮ್ಮ ಭಾಷಣ ಗಾಂಭಿರ್ಯದಿಂದ ಮುಗ್ಧಗೊಳಿಸುತಿದ್ದರು.

ಆ ಪ್ರಾಚೀನ ಸಾಂಪ್ರದಾಯವನ್ನು ಇಂದಿಗೂ ಅನೇಕ ರಾಜಕೀಯ ಮುಖಂಡರು ಅನುಸರಿಸುತ್ತಾರೆ. ಬಾಬು ಪುರುಷೋತ್ತಮ ದಾಸ್ ಟೆಂಡನ್ನರು ಅದರಲ್ಲಿ ಅಗ್ರಗಣ್ಯರೆನ್ನಬಹುದು. . ಡಾ. ಮೂಂಜೆಯವರು ಇನ್ನೊಬ್ಬರು ಗಡ್ಡದಾರಿಗಳೂ ಹಿಂದೂ ಮಹಾ ಸಭೆಯ ಆದಾರ ಸ್ತಂಭದಂತಿರುವ ಇವರ ರಾಜಕೀಯವೇ ಬೇರೆ.

ಮುಸ್ಲಿಂ ಲೀಗಿನ ಮೊದಲ ಶ್ರೇಣಿಯ ಮುಖಂಡರಿಗೆ ಗಡ್ಡವಿಲ್ಲದಿರುವುದು ಅತೀ ಸೋಜಿಗವೆನಿಸದಿರದು ಮಿ. ಜಿನ್ನಾ, ಲಿಯಾಖತ್ ಹಯತ್ ಖಾನ್. ಯಾಮಿನ್ ಖಾನ್, ನೂನ್, ಇವರಿಗೆ ಇಸ್ಲಾಂ ಸಾಂಪ್ರದಾಯದ ಬೆಳವಣಿಗೆ ಇಲ್ಲ ದಿವಂಗತ ಮೌಲನಾ ಮಹಮ್ಮದ್ ಅಲಿ ಅವರು ಗಡ್ಡವಿಲ್ಲದ ಮುಸಲ್ಮಾನನು ಕಾಫೀರ (ನಂಬಿಗೆ ಇಲ್ಲದವರು)ರಿಗೆ ಸಮಾನರೆಂದು ಧೃಡವಾಗಿ ನಂಬಿದ್ದರು. ಅದಕ್ಕಾಗಿಯೇ ಜಿನ್ನರಿಗೆ ಮುಸ್ಲಿಂ ಲೀಗಿನಲ್ಲಿ ಉನ್ನತ ಸ್ಥಾನ ಸಿಗುವುದಕ್ಕೆ ಅವರಿಗೆ ಅಷ್ಟೊಂದು ಮನಸ್ಸಿರಲಿಲ್ಲ. ಪ್ರಕೃತಿಯ ಘನವಂತ ವ್ಯಕ್ತಿಯಂತಿರುವ ಮೌಲಾನಾ ಅಜದರ ಮುಖದಲ್ಲಿ ಮತ ತತ್ವ ಸಂಕೇತವಾದ ಗಡ್ಡವು ಅಲಂಕರಿಸಲ್ಪಟ್ಟಿದೆ.

ಗಡ್ಡವು ವಿಶ್ವ ಬಾಂಧವ್ಯ ಭಾವನೆಯ ಚಿಹ್ನೆ. ಅದಕ್ಕೆ ಜಾತಿಮತ, ದೇಶ ಜನಾಂಗಗಳ ಬಂಧನವಿಲ್ಲ. ಹೆಚ್ಚು ಕಡೆಮೆ ಜಗತ್ತಿನ ಮತ ಭೋಧಕರೆಲ್ಲರೂ ಗಡ್ಡಬೆಳೆಸಿದ್ದರೆಂದೇ ಚಿತ್ರಕಾರರ ಮತ್ತಿತರ ಭಾವನೆ ಸಹಜವಾಗಿ ಉಂಟಾಗುತ್ತದೆ. ಗಡ್ಡವಿಲ್ಲದ ವಶಿಷ್ಠ ವಿಶ್ವಾಮಿತ್ರರನ್ನೂ ನಾಟಕಗಳಲ್ಲಿ ನೋಡುವುದೆಂದರೆ ತೀರ ಅಪ್ರಾಕೃತಿಕವೆನಿಸುವುದು. ಅವರು ತಮ್ಮ ಗಡ್ಡದಿಂದ ಮೇಧಾವಿಗಳಾಗಿಯೂ, ಗಂಭೀರರಾಗಿಯೂ, ಕೋಪಿಷ್ಟರಾಗಿಯೂ, ಪವಿತ್ರರಾಗಿಯೂ, ಮಾನವಿಯತೆಯಿಂದ ಕೂಡಿದ ಪ್ರವಾದಿಗಳಂತೆಯೂ ತೋರಬೇಕು.

ಗಡ್ಡವು ವಿಶ್ವಮಾನ್ಯವಾದದು ಯೆಹೂದಿ, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಎಲ್ಲರೂ ಗಡ್ಡಬೆಳೆಸುತ್ತಾರೆ. ಚಿತ್ರಕಾರರೂ ಕವಿಗಳೂ, ವಿಜ್ಞಾನಿಗಳೂ ಸಾಹಿತಿಗಳೂ ಎಲ್ಲರೂ ಅದನ್ನೇ ಅನುಸರಿಸುವರು. ಇಂಗ್ಲೆಂಡಿನಲ್ಲಿ ಡಾರ್ವಿನನಿದ್ದಂತೆ ಭಾರತದಲ್ಲಿ ಪ್ರಫುಲ್ಲ ಚಂದ್ರ ರಾಯ್ ಅವರಿದ್ದರು. ಇರ್ವರೂ ಪ್ರಖ್ಯಾತ ವಿಜ್ಞಾನಿಗಳೇ ಇಂಗ್ಲೆಂಡಿನಲ್ಲಿ ಕವಿ ಟೆನ್ನಿಸನ್ನರಿಗೆ ಗಡ್ಡವಿದ್ದಂತೆ ರವೀಂದ್ರನಾಥ ಠಾಗೂರರಿಗೂ ಇತ್ತು. ಹಾಸ್ಯವಿನೋದ ವಿಡಂಭನೆಯ ಮಾತುಗಳಿಗೆ ಪ್ರಖ್ಯಾತರಾದ ಜಾರ್ಜ್ ಬರ್ನಾರ್ಡ್ ಶೋ ಅವರನ್ನೂ ಯಾವ ಗುಂಪಿನಲ್ಲೂ ಕಂಡುಹಿಡಿಯಬಹುದು. ಅವರ ಹೆಮ್ಮೆಯ ಗಡ್ಡದ ಶೈಲಿಯೇ ವಿಶಿಷ್ಟವಾದುದು.

ಟಾಗೂರರ ಗಡ್ಡವನ್ನುನೋಡಿ ಸ್ಫೂರ್ತಿಗೊಂಡ ಓರ್ವ ಇಟಾಲಿಯನ್ ಸಾಹಿತಿಗಳು 'ಅವರ ಹಾಡುಗಳಿಗಿಂತಲೂ ಗಡ್ಡದಲ್ಲಿ ಹೆಚ್ಚು ಕವಿತಾ ಮಾಧುರ್ಯವಿದೆ' ಎಂದಿರುವರಂತೆ. ಅಮೇರಿಕದಲ್ಲಿ ಅವರು ಒಂದು ಕಿಕ್ಕಿರಿದ ಸಭೆಯಲ್ಲಿ ಪಾಶ್ಚಾತ್ಯರ 'ಐಹಿಕ ನಾಗರೀಕತೆಯ ಕುರಿತು ಭಾಷಣ ಮಾಡುವಾಗ ಅವರ ಆವೇಶಭರವನ್ನೂ ಕಂಡು ಅನೇಕರು ಅವರನ್ನು ಯೇಸು ಕ್ರಿಸ್ತನೆಂತಲೇ ಶ್ಲಾಘಿಸಿದದಂತೆ. ಮತ್ತೆ ಕೆಲ ಮಹಿಳೆಯರು ಭಾವನಾವೇಶದಿಂದ ಮೂರ್ಛೆಗೊಂಡಿರುವರಂತೆ.

ಹಿಂದಿನ ಯುದ್ಧದ ಮುಖಂಡರುಗಳಲ್ಲಿ ಅನೇಕ ವಿಷಯಗಳಲ್ಲಿ ಭೇದಾಭೇದಗಳಿದ್ದರೂ ಗಡ್ಡದ ಮಟ್ಟಿಗೆ ಅವರು ಒಂದೇಯಾಗಿದ್ದರು. ಜರ್ಮನಿಯ ಕೈಸರನಿಗೂ, ಇಂಗ್ಲೆಂಡಿನ ಐದನೇ ಜೋರ್ಜರಿಗೂ ಮತ್ತು ರಷ್ಯದ ಜಾರ್ ನಿಕೋಲಸರಿಗೂ ಗಡ್ಡಗಳಿದ್ದವು. ಆದರೂ ಇದರಿಂದ ಯುದ್ಧಮಾತ್ರ ತಪ್ಪದಾಯಿತು.

ಹಿಂದಿನ ರೋಮನ್ ಜನರ ಅಭಿಪ್ರಾಯದಲ್ಲಿ ಮುಖವು ಕೋಳಿಮೊಟ್ಟೆಯಷ್ಟು ನುಣುಪಿರಬೇಕೆಂದಿತ್ತು. ಅವರು ಎಲ್ಲಾ ತರದ ಕೂದಲು ವಿರೋಧಿಗಳಾಗಿದ್ದರೆನ್ನಬಹುದು. ಸ್ತ್ರೀಯರಿಗೆ ಸಮಾನ ಹಕ್ಕುಗಳಿರುವ ಈ ಕಾಲದಲ್ಲಿ ಅವರು ಗಡ್ಡದ ಕುಂದುಕೊರತೆಗಳನ್ನು ಬಾಧಕಗಳನು ಖಂಡಿಸದಿರರು. ಗಡ್ಡವು ಕೊಳ್ಳೆಯ ಸೂಚಕವೆಂದು ಅವರು ಅನ್ನದಿರಲಾರರು ಓರ್ವಗ್ರೀಕ್ ಕವಿ 'ಗಡ್ಡವು ಹೇನುಗಳನ್ನುಂಟು ಮಾಡೀತಲ್ಲದೆ ಮಿದುಳನ್ನಲ್ಲ' ಎಂಬಂತೆ ಸ್ತ್ರೀಯರು ಆ ಪ್ರಖ್ಯಾತ ವಾಕ್ಯವನ್ನು ಸಮರ್ಥಿಸದಿರರು.

ಮನಸ್ಸಿದ್ದರೆ ದಾರಿ ಇದೆ.

ಒಂದು ನಿಜ ಕಥೆ

ಬೊಂಬಾಯಿಯ 'ಯಾವುದೋ ಒಂದುಕಡೆ'ಯ ಕಟ್ಟಡದ ಗೋಡೆಯ ಮೇಲೆ ಜನಪ್ರಿಯವಾದ "ಕ್ವಿಟ್ ಇಂಡಿಯಾ" ಘೋಶವನ್ನು ಬರೆದುಹಾಕಲಾಗಿತ್ತು.

ಒಂದು ತಿಂಗಳ ಹಿಂದೆ ಆ ಕಡೆ ಬಂದ ಬ್ರಿಟಿಷ್ ಸೈನಿಕನೊಬ್ಬನು 'ಇಲ್ಲಿಂದ ಹೋಗುವಂತಾದರೆ ನನಗೂ ಒಳ್ಳೇದಿತ್ತು' ಎಂದು ಬರೆದು ಬಿಟ್ಟನಂತೆ.

ಮರುದಿವಸ ಯಾರೋ ಅವರ ಕೆಳಗೆ ಇನ್ನೊಂದು ವಾಕ್ಯವನ್ನು ಬರೆದಿದ್ದರು: 'ನೀನು ಯಾಕೆ ತೊಲಗುವುದಿಲ್ಲ? ಮನಸಿದ್ದ ಕಡೆ ದಾರಿ ಇದೆ.'

೧೭ನೇ ಶತಮಾನದ ಇಂಗ್ಲೆಂಡಿನಲ್ಲಿ 'ಕಪ್ಪುವ್ಯಾಧಿ' ಎಂಬ ಅಂಟು ರೋಗವು ಹರಡಿದಾಗ ಅಧಿಕಾರಿಗಳು ಶಾಲಾ ಮಕ್ಕಳಿಗೆ ತಂಬಾಕು ಸೇದುವಂತೆ ಪ್ರೋತ್ಸಾಹಿಸಿದರು. ಹೊಗೆ ಸೊಪ್ಪಿನಲ್ಲಿ ರೋಗಾಣುಗಳನ್ನು ನಾಶ ಮಾಡುವ ಸತ್ವವಿದೆ. ಘಾಯಗಳಿಗೂ ಹೊಗೆಸೊಪ್ಪನ್ನಿಟ್ಟು ಕಟ್ಟುತಿದ್ದರು.

* * *

೭೦ ವರ್ಷದ ಅವಧಿಯಲ್ಲಿ ಒಬ್ಬ ಮಾಂಸಹಾರಿ ಮನುಷ್ಯನು ೪೪ ಸಾವಿರ ಪ್ಯಾಂಟ್ ದ್ರವ ಪದಾರ್ಥಗಳನ್ನೂ, ೫೨ ಖಂಡಿ ರೊಟ್ಟಿಯನ್ನೂ, ೪ ಸಾವಿರ ರಾತ್ಲ ಮಾಂಸವನ್ನೂ ೧೨ ಸಾವಿರ ಕೋಳಿ ಮೊಟ್ಟೆಗಳನ್ನೂ, ಮತ್ತು ೨೦೦ ಮಣ ಕಾಯಿಪಲ್ಯಗಳನ್ನೂ ಭಕ್ಷಿಸುತ್ತಾನಂತೆ.

* * *

ನಿಷ್ಪ್ರಯೋಜಕ ಸೌಂದರ್ಯ

[ಯುರೋಪಿನ ೧೯ನೇ ಶತಮಾನದ ಸಣ್ಣ ಕತೆಗಾರರಲ್ಲಿ ಅತೀ ಶ್ರೇಷ್ಠನೆನಿಸಿದ ಮೊಪಸಾಂತನು ಈ ಕತೆಯ ಮೂಲ ಲೇಖಕನ. ಜೀವನ ಚಿತ್ರಗಳನ್ನು ಮುಚ್ಚುಮರೆ ಇಲ್ಲದೆ, ಅದರ ಅಶ್ಲೀಲತೆಗಳನ್ನು ಕಾಳಿದಾಸನ ಗಾಂಭೀರ್ಯದಿಂದ ವರ್ಣಿಸುವುದರಲ್ಲಿ ಅಸಮಾನ ಪ್ರತಿಭೆಯುಳ್ಳ ಈ ಫ್ರೆಂಚ್ ಸಾಹಿತಿಯ ಕಲಾವಂತಿಕೆಯನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ವಾಚಕರ ಮುಂದಿರಿಸಲು ಕೆಲವುವಾರಗಳ ತನಕ ಅವನ ಕತೆಗಳನ್ನು ಕೊಡುವುದರ ಮೂಲಕ ಪ್ರಯತ್ನಮಾಡಲಾಗುವುದು.]

ಕಪ್ಪಾದೆರಡು ಕುದುರೆಗಳಿಂದೆಳೆಯಲ್ಪಡುವ ಸುಂದರ ವಾಹನವೊಂದು ಆ ಬಂಗಲೆಯ ಮುಂದೆ ನಿಂತಿತು. ಅದು ಕಡು ಬೇಸಗೆಯ ಸಾಯಂಕಾಲವಾದುದರಿಂದ ಸಂಧ್ಯಾಕಾಲದ ಸೂರ್ಯ ರಶ್ಮಿಗಳು ಆ ಬಂಗಲೆಯ ಹೊರ ಬಯಲಲ್ಲಿ ಬೆಚ್ಚನೆ ಪ್ರಕಾಶಿಸುತ್ತಲಿದ್ದುವು.

ಮೆಸ್ಕರೇಟಿನ ಕೌಂಟೆಸಳಾದ ಗೆಬ್ರಿಯೇಲಳು ಭವನದಿಂದ ಕೆಳಗಿಳಿಯುತ್ತಿರುವಾಗಲೇ ಮನೆಗೆ ಹಿಂತಿರುಗುತಿದ್ದ ಅವಳ ಗಂಡನು ಗಾಡಿಯ ಬಾಗಿಲ ಬಳಿ ನಿಂತಿದ್ದನು. ತನ್ನ ಮಡದಿಯ ಸೌಂದರ್ಯವನ್ನು ನಿರೀಕ್ಷಿಸುತ್ತಲೇ ಅವನು ನಿಂತ ಹಾಗೆ ಸ್ವಲ್ಪ ಸಪ್ಪಗಾದನು. ಅವಳ ಸುಂದರವಾದ ಮುಖ, ಹೊಳೆಯುವ ಚಂದ್ರಕಾಂತಿಗೆ ಸಮಾನವಾದ ವರ್ಣ, ವಿಶಾಲವಾದ ಕಣ್ಣುಗಳು ಮತ್ತು ಕಪ್ಪಾದ ಕೇಶರಾಶಿಯಿಂದ ಸುಶೋಭಿತಳಾಗಿ ಅವಳು ಕಲಾಪೂರ್ಣ ಭಾವದವಳೂ, ಶ್ರೇಷ್ಠ ವ್ಯಕ್ತಿತ್ವ ವಿಶೇಷತೆಯಿಂದಲೂ ಕೂಡಿದ್ದು ಅತ್ಯಂತ ಸೌಂದರ್ಯವತಿಯಾಗಿ ಕಾಣುತಿದ್ದಳು. ಪತಿಯನ್ನು ಕಣ್ಣೆತ್ತಿ ಕೂಡಾ ನೋಡದೆ, ಅವನ ಇರವನ್ನು ಗವನಿಸದೆಯೂ ಅವಳು ವಾಹನದೊಳಗೆ ಪ್ರವೇಶಿಸಿದಳು. ಈ ಶ್ರೀಮಂತಗಿರಿಯ ಅವಳ ನೋಟ ಶೈಲಿಯನ್ನು ನೋಡುತಿದ್ದ ಹಾಗೆ ಬಹಳ ದಿವಸಗಳಿಂದ ಅವನ ಮನಸ್ಸಿನಲ್ಲಿ ಜ್ವಲಿಸುತಿದ್ದ ಅಸೂಯೆಯ ಕಿಚ್ಚು ಅವನ ಹೃದಯವನ್ನು ಕೊರೆಯ ತೊಡಗಿತು. ಅವನೂ ಗಾಡಿಯನ್ನು ಪ್ರವೇಶಿಸಿದ, ಕೇಳಿದ: "ನೀನು ಸಂಚಾರಕ್ಕೆ ಹೊರಟೆ ಏನು?"

ತಿರಸ್ಕಾರ ಭಾವದಿಂದ ಅವಳು ಉತ್ತರವಿತ್ತಳು: "ಹೌದು, ತಿಳಿಯಿತೆ?"

"ಬೊಲೋನ್ ಉಪವನಗಳ ಮಾರ್ಗವಾಗಿಯೋ?"

"ಇರಬಹುದು"

"ನಾನೂ ನಿನ್ನೊಡನೆ ಬರಬಹುದೆ?"

"ಈ ಗಾಡಿಯು ನಿನ್ನದೇ ಆಗಿರುತ್ತದೆ"

ತನ್ನ ಪತ್ನಿಯ ವರ್ತನೆಯಲ್ಲಿ ಯಾವತರದ ಕೌತುಕ ಪಡದೆ ಅವನು ಗಾಡಿಯನ್ನು ಹೊಕ್ಕು ಅವಳ ಬಳಿಯಲ್ಲಿ ಕುಳಿತು ಹೀಗೆಂದನು: "ಬೊಲೋನ್ ರಸ್ತೆಯಾಗಿ ಹೋಗಲಿ". ಸೇವಕನು ಗಾಡಿ ನಡೆಸುವವನ ಬಳಿ ಹಾರಿ ಕುಳಿತನು. ಕುದುರೆಗಳು ಮೆಲ್ಲನೆ ಮಾರ್ಗವನ್ನು ಸೇರಿದವು. ಮೌನವಾಗಿ ದಂಪತಿಗಳಿಬ್ಬರೂ ಹತ್ತತ್ತಿರ ಕೂತಿದ್ದರು. ಸಂಭಾಷಣೆಯನ್ನು ಹೇಗೆ ಪ್ರಾರಂಭಿಸುವುದೆಂದು ಅವನು ಯೋಚಿಸುತಿದ್ದನು. ಆದರೆ ಅವನಿಗೆ ಧೈರ್ಯ ಸಾಲಲಿಲ್ಲ. ಕಡೆಗೆ ಅಕಸ್ಮಾತಾಗಿ ಅವನ ಕೈಯು ಅವಳ ಕೈಚೀಲಗಳಿಂದಾವೃತವಾದ ಕೈಗಳಿಗೆ ತಗಲಲು ಅವನು ಅವಳ ಕೈಯನ್ನು ಹಿಡಿಯಲು ಪ್ರಯತ್ನ ಪಟ್ಟನು. ಆದರೆ ಜಿಗುಪ್ಸೆಯನ್ನು ಸೂಚಿಸುವ ರೀತಿಯಿಂದ ಅವಳು ತನ್ನ ಕೈಯನ್ನು ಹಿಂದಕ್ಕೆ ಎಳೆದಳು. ನಿರಂಕುಶ ವರ್ತನೆಯವನೂ, ಅಧಿಕಾರ ಪ್ರದರ್ಶನ ಪ್ರಿಯನೂ ಆಗಿದ್ದ ಆತನು ಇಷ್ಟಕ್ಕೂ ಮೌನವಾಗಿದ್ದು ಯೋಚನಾಮಗ್ನನಾದನು. ಕಡೆಗೆ "ಗೇಬ್ರಿಯಲ್" ಎಂದನು.

"ನಿಮಗೇನು ಬೇಕಾಗಿದೆ?"

"ನೀನು ತುಂಬಾ ಆಕರ್ಷಕಳಾಗಿ ತೋರುವಿ ಎಂದು ಭಾವಿಸುತ್ತೇನೆ." ಅವಳು ಉತ್ತರಕೊಡಲಿಲ್ಲ. ಕೆದರಿದ ರಾಣಿಯಂತೆ ಅವಳು ಹಿಂದಕ್ಕೆ ಒರಗಿಕೊಂಡಳು. ಇಷ್ಟು ಹೊತ್ತಿಗೆ ಗಾಡಿಯು ಚೋಂಪ್ಸ್ ಎಲಿಸ್ ರಸ್ತೆಯನ್ನು ದಾಟಿ ಆರ್ಕ್‌ಡಿಟ್ರಿಯೊಂಪ್ ಮಾರ್ಗದ ಕಡೆ ಚಲಿಸುತಿತ್ತು. ಆ ರಸ್ತೆಯ ಕೊನೆಯಲ್ಲಿ ಭವ್ಯವಾಗಿ ಎದ್ದು ನಿಂತಿರುವ ವಿಜಯ ಸ್ಮಾರಕ ಕಟ್ಟಡವು ಸಂಧ್ಯಾಕಾಲದ ಆ ಕೆಂಪು ಆಕಾಶದತ್ತ ಕಡೆ ತನ್ನ ಶಿರವನ್ನು ಎತ್ತಿತ್ತು. ಸೂರ್ಯನು ತನ್ನ ಕೆಂಪು ದೂಳಿನ ರಶ್ಮಿರಾಶಿಯನ್ನು ಅದರ ಮೇಲೆ ಸುರಿಸಿ ಅದರ ಹಿಂದೆ ಮುಳುಗುತಿದ್ದನು.

ಮಾರ್ಗದಲ್ಲಿ ಅಶ್ವವಾಹನಗಳ ಎರಡು ಸಾಲುಗಳು ಪರಸ್ಪರ ವಿರೋಧ ದಿಕ್ಕುಗಳಲ್ಲಿ ಹರಿಯುವ ನದಿತೊರೆಯಂತೆ ಕಾಣುತಿದ್ದುವು. ಒಂದು ಸಾಲು ನಗರದತ್ತ ಕಡೆಗೂ, ಇನ್ನೊಂದು ಹತ್ತಿರದ ವಿಹಾರದ ವನಕ್ಕೂ ಹರಿಯುತ್ತಿದ್ದುವು. ಸಂಜೆಗೆಂಪಿನ ಹೊಳಪುಕಿರಣಗಳು ವಿರುಗುವ ಅಶ್ವ ಭೂಷಣಗಳ ಮೇಲೆ ಪ್ರತಿಬಿಂಬಿವಾಗಿ ಚಮಕಿಸುತಿದ್ದುವು. ಕೌಂಟನು ಪತ್ನಿಯನ್ನುದ್ದೇಶಿಸಿ ಪುನಃ ಎಂದನು: "ಪ್ರಿಯ ಗೇಬ್ರಿಯೇಲಳೇ!"

ಹೆಚ್ಚುಕಾಲ ಸಹಿಸಲಾರದಾದ ಅವಳು ಆವೇಶ ಧ್ವನಿಯಿಂದ ಹೀಗೆಂದಳು: "ದಯಮಾಡಿ ನನಗೆ ಶಾಂತಿಯಲ್ಲಿರಲು ಬಿಡಿ! ಅಯ್ಯೋ ನನಗೆ ನನ್ನ ಸ್ವಂತ ಗಾಡಿಯಲ್ಲೂ ಸ್ವತಂತ್ರಳಾಗಿರಲು ಸಾಧ್ಯವಿಲ್ಲದಾಯಿತಲ್ಲಾ!" ಅವಳನ್ನು ಕೇಳದವನಂತೆ ಅವನು ನಟಿಸಿ ಮುಂದರಿಸಿದ: "ಇಂದಿನಂತೆ ಎಂದೂ ನೀನು ಇಷ್ಟೊಂದು ಮನೋಹರಳಾಗಿ ಕಂಡಿಲ್ಲ."

ಅವಳ ಸಹಾನಾ ಶಕ್ತಿಯು ತೀರಿ ಹೋಯಿತೋ ಎಂಬಂತೆ ಅವಳು ತಡೆಯಲಾರದ ಸಿಟ್ಟಿನಿಂದ ಎಂದಳು: "ನೀವು ಅದನ್ನು ನೋಡಿದ್ದೆ ತಪ್ಪು, ಯಾಕೆಂದರೆ ಇನ್ನು ಮುಂದೆ ಈ ಸೌಂದರ್ಯವನ್ನು ಸವಿಯಲು ನಾನು ನಿಮಗೆ ಬಿಡಲಾರೆ." ಒಂದು ಕ್ಷಣಕ್ಕೆ ಅವನು ದಿಗ್ಮೂಢನಾದನು. ಕಳವಳವು ಅವನಲ್ಲಿ ಹೆಚ್ಚಿತು. ಅವನ ಕಠಿಣ ಸ್ವಭಾವವು ಅವನಲ್ಲಿ ಪುನಃ ಕಾಣಿಸಿಕೊಂಡಿತು. ಅವನೆಂದನು: "ಹಾಗೆನ್ನುವುದರಲ್ಲಿ ನಿನ್ನ ಅಭಿಪ್ರಾಯವೇನು?" ಅವನು ಪ್ರಣಯವಿಲಾಸಿಯಂತಿರದೆ ಕಾಠವೇ ಕಾಠಿಣ್ಯದ ಕ್ರೂರಿಯಂತೆ ತೋರಿದನು. ಹೊರಗಿನ ಸೇವಕರಿಗೆ ಕೇಳಿಸದಂತೆ ಆ ಗಾಡಿಯ ಗಡಬಡ ಶಬ್ದದ ಮಧ್ಯದಲ್ಲಿ ಅವಳು ಮೆಲ್ಲನೆ ನುಡಿದಳು: "ಹಾ! ನನ್ನ ಅಭಿಪ್ರಾಯವೇನೆಂದು ಕೇಳಿದಿರಾ? ನನ್ನ ಅಭಿಪ್ರಾಯವೆ? ಈಗ ನಿಮ್ಮ ವಿಷಯ ನನಗೆ ತಿಳಿಯಿತು. ನಾನು ಎಲ್ಲವನ್ನೂ ಹೇಳಬೇಕೆಂದು ಬಯಸುವಿರಾ?"

"ಹೌದು"

"ನಿಮ್ಮ ಭಯಂಕರ ಸ್ವಾರ್ಥಾಭಿಲಾಷೆಗಳಿಗೆ ಬಲಿಯಾದಂದಿನಿಂದ ನನ್ನ ಹೃದಯದಲ್ಲಿ ಬಿಗಿಹಿಡಿದಿದ್ದ ಎಲ್ಲಾ ವಿಷಯವನ್ನೂ ಹೇಳಲೇ?"

ಕೌತುಕದಿಂದಲೂ, ಕೋಪದಿಂದಲೂ ಅವನ ಮುಖವು ಕೆಂಪಾಗಿತ್ತು. ಕಚ್ಚಿದ ದವಡುಗಳಿಂದ ಅವನೆಂದನು: "ಹೌದು, ಹೇಳು, ನನಗೆ ಎಲ್ಲವನ್ನೂ ಹೇಳು."

ಅವನೊಬ್ಬ ವಿಶಾಲ ಹೆಗಲುಳ್ಳ ಎತ್ತರ ವ್ಯಕ್ತಿ. ಕೆಂಪಂಗಿನ ದೊಡ್ಡ ಗಡ್ಡದಿಂದ ಗಂಭೀರನೂ, ಸುಂದರನೂ, ಘನಸ್ತನೂ ಆಗಿ ಕಾಣುವ ಓರ್ವ ಪ್ರಾಪಂಚಿಕ ಸುಸಂಸ್ಕೃತ ಪತಿಯೂ, ಪ್ರೀತಿಯ ತಂದೆಯೂ, ಅವನಾಗಿದ್ದನು. ಅವನೊಬ್ಬಸಂಸಾರ ಪ್ರಿಯನು. ಗಾಡಿ ಹತ್ತಿದ ಮೇಲೆ ಮೊದಲನೇ ಸಲಕ್ಕೆ ಅವನ ಮುಖವನ್ನು ದಿಟ್ಟಿಸಿ ಅವಳು ಹೀಗೆಂದಳು: "ಹಾ! ನೀವು ಕೆಲವು ಅಪಮಾನಕರವಾದ ವಿಷಯಗಳನ್ನು ಕೇಳುವಿರಿ. ಆದರೆ ನಾನು ಎಂತಹದಕ್ಕೂ ಸಿದ್ಧಳಾಗಿದ್ದೇನೆಂದು ಖಂಡಿತ ತಿಳಿಯಿರಿ. ನನಗೆ ಯಾವ ಅಂಜಿಕೆಯೂ ಇಲ್ಲ. ನಿಮಗೆ ನಾನು ಹೆದರುವುದೇ ಇಲ್ಲ ಎಂಬೀ ವಿಷಯವನ್ನು ಸ್ಪಷ್ಟ ತಿಳಕೊಳ್ಳಿರಿ."

ಅವನು ಅವಳ ಕಣ್ಣುಗಳನ್ನೇ ಈಕ್ಷಿಸುತಿದ್ದು ಆಗಲೇ ಮೋಹಪರವಶತೆಯಿಂದ ಅವನು ನಡುಗುತಿದ್ದನು. ಮತ್ತೆ ತಗ್ಗು ಸ್ವರದಲ್ಲಿ ಅವನೆಂದನು: "ನೀನು ಹುಚ್ಚಳಾಗಿದ್ದಿ."

"ಇಲ್ಲ, ಆದರೆ ಇನ್ನು ಮುಂದೆ ಆ ಅಸಹನೀಯವಾದ ಮಕ್ಕಳು ಹೆರುವ ಕೆಲಸಕ್ಕೆ ನಾನು ನಿಮ್ಮ ಕಾಮಾಗ್ನಿಗೆ ಬಲಿಬೀಳಲಾರೆ. ಇಂದಿಗೆ ಹನ್ನೊಂದು ವರ್ಷಗಳಿಂದ ನೀವು ನನಗೆ ತಾಯಿತನಕ ಶಿಕ್ಷೆ ಕೊಟ್ಟಿರಿ. ಈಗ ನಾನು ಸ್ವತಂತ್ರ ಸ್ತ್ರೀಯಾಗಿರಲು ಆಶಿಪಡುತ್ತೇನೆ. ಪ್ರತಿಯೊಬ್ಬ ಸ್ತ್ರೀಗಿರುವಂತೆ ಹಾಗೆ ಇರಲು ನನಗೂ ಸಂಪೂರ್ಣ ಹಕ್ಕಿದೆ"

ಕೂಡಲೇ ಅವನ ಮುಖವು ವಿವರ್ಣವಾಯಿತು. ಗದ್ಗದ ಕಂಠದಿಂದ ಅವನೆಂದನು: "ಈಗ ನೀನ್ನನ್ನು ತಿಳಕೊಂಡೆ"

"ಹೌದೌದು, ನೀವೆಲ್ಲವನ್ನೂ ಸರಿಯಾಗಿ ತಿಳಕೊಳ್ಳುತ್ತೀರಿ. ನನ್ನ ಕೊನೆಯ ಮಗುವನ್ನು ಹೆತ್ತು ಆಗಲೇ ಮೂರು ಮಾಸಗಳಾದುವು. ಆದರೂ ನಾನು ಇನ್ನೂ ಸೌಂದರ್ಯವತಿಯಾಗಿಯೇ ಇದ್ದೇನೆ. ಇನ್ನು ಮುಂದೆ ನಿಮ್ಮ ಎಲ್ಲಾ ಪ್ರಯತ್ನಗಳಿಂದಲೂ ನೀವು ನನ್ನ ಈ ಸೌಂದರ್ಯವನ್ನು ಹಾಳುಮಾಡಲಾರಿರಿ. ಆಗಲೇ ನಾನು ಮನೆಯಿಂದ ಹೊರಡುವಾಗಲೇ ನಿಮ್ಮ ಆ ಭಾವನೆ ಉಂಟಾಗಿದೆ. ಪುನಃ ಗರ್ಭವತಿಯಾಗಲು ನಾನು ಸಿದ್ಧಳಾಗಿದ್ದೇನೆಂದು ನೀವು ತಿಳಕೊಂಡಿದ್ದೀರಿ."

"ಇದೇನು ಹುಚ್ಚಾಬಟ್ಟೆ ಮಾತಾಡುವಿ ಏಕೆ?"

"ನಾನು ಹುಚ್ಚಳಲ್ಲ, ಈಗ ನನ್ನ ವಯಸ್ಸು ಮೂವತ್ತು. ಆಗಲೇ ಏಳು ಮಕ್ಕಳನ್ನು ಹಡೆದಿರುತ್ತಾ ಮದುವೆ ಆಗಿ ಇನ್ನೂ ಹನ್ನೊಂದು ವರ್ಷಗಳಾಗಲಿಲ್ಲ. ಇದೇ ರೀತಿ ಇನ್ನೂ ಹತ್ತು ವರ್ಷಗಳ ತನಕ ನಡೆಯಬಹುದೆಂದು ತಿಳಕೊಂಡಿದ್ದಿರಲ್ಲವೇ? ಅನಂತರ ನೀವು ಜಿಗುಪ್ಸೆ ಪಟ್ಟು ಮಾತ್ಸರ್ಯದಿಂದ ನನ್ನನ್ನು ತೊಲೆದು ಹೋಗುವಿರಲ್ಲವೆ?"

ಅವಳ ತೋಳನ್ನು ಹಿಡಿದು ಬಲವಾಗಿ ಬಿಗಿಹಿಡಿದು: "ಈ ರೀತಿಯಲ್ಲಿ ಬಹಳ ಹೊತ್ತು ಮಾತನಾಡಲು ನಾನು ಬಿಡಲಾರೆ" ಎಂದು ಗದರಿಸಿದದು.

"ಆದರೆ ನಾನು ಮಾತ್ರ ಕಡೆಯ ತನಕ ಮಾತಾಡ ಬಯಸುತ್ತೇನೆ. ನಿಮ್ಮ ಹತ್ತಿರ ಹೇಳಲಿಕ್ಕಿರುವುದನ್ನು ಹೇಳಿಯೇ ತೀರಿಸುತ್ತೇನೆ. ನೀವು ನನ್ನನ್ನು ತಡೆದರೆ ಬೊಬ್ಬೆ ಎಳಿಸಿ ಹೊರಗೆ ಕೂತ ಸೇವಕರಿಗೆ ಕೇಳುವಂತೆ ಮಾಡುವೆ. ಅದಕ್ಕಾಗಿಯೇ ನಿಮ್ಮನ್ನು ನನ್ನೊಡನೆ ಬರಲು ಬಿಟ್ಟೆ. ನಾನು ಹೇಳಿದನ್ನು ಸುಮ್ಮಗೆ ಕೇಳುವಿರೆಂದು ಈ ಸೇವಕರನ್ನು ಜೊತೆಯಲ್ಲಿ ತಂದಿದ್ದೇನೆ. ನೀವು ಏನಾದರೂ ಹೆಚ್ಚುಕಮ್ಮಿ ಮಾಡಿದರೆ ಅವರೇ ನಿಮಗೆ ಸಾಕ್ಷಿಗಳಾಗುವರು. ಆದುದರಿಂದ ನಾನು ಹೇಳುವುದನ್ನು ಗಮನವಿಟ್ಟು ಕೇಳೋಣಾಗಲಿ. ನಿಮ್ಮ ಮೇಲೆ ಮುಂಚಿನಿಂದಲೂ ಮನೋವಿರೋಧದ ಭಾವನೆ ಇತ್ತು. ನಿಮಗೆ ಆಗಿಂದಾಗ್ಯೆ ನಾನು ಅದನ್ನು ತೋರಿಸುತಿದ್ದೆ. ಯಾಕೆಂದರೆ ನಾನು ಇದುತನಕ ಸುಳ್ಳೆಂಬುದನ್ನು ಹೇಳಿದವಳಲ್ಲ, ನನ್ನ ಮನಸ್ಸಿಗೆ ವಿರೋಧವಾಗಿ ನೀವು ನನ್ನನ್ನು ಲಗ್ನವಾದಿರಿ. ತಾಪತ್ರಯದಲ್ಲಿ ಮುಳುಗಿದ್ದ ನನ್ನ ಹೆತ್ತವರು ನನ್ನನ್ನು ನಿಮಗೆ ಕೊಡುವಂತೆ ಬಲಾತ್ಕಾರದ ಸಂದರ್ಭಗಳನ್ನು ತಂದೊಡ್ಡಿದ್ದೀರಿ. ಯಾಕೆಂದರೆ, ನೀವು ಶ್ರೀಮಂತರಿದ್ದೀರಲ್ಲವೆ? ನನ್ನ ಕಣ್ಣೀರು ವಿರೋಧವಾಗಿ ಅವರು ನನ್ನನ್ನು ನಿಮಗೆ ಕೊಟ್ಟರು.

"ಹೀಗೆ ನೀವು ನನ್ನನ್ನು ಕೊಂಡುಕೊಂಡಿರಿ. ಆ ಮೇಲೆ ನಾನು ನಿಮ್ಮ ಅಧಿಕಾರದೊಳಗೆ ಬಂದ ಮೇಲೆ, ನಿಮ್ಮ ಸಂಗಾತಿಯಾದ ಮೇಲೆ, ನಿಮ್ಮ ಬಲಾತ್ಕಾರದ ವಿಷಯವನ್ನು ಮರೆತು ನಾನು ಮನಃ ಪೂರ್ವಕಳಾಗಿ ಓರ್ವ ಒಳ್ಳೇ ಸತಿಯಂತೆ ನಿಮ್ಮೊಂದಿಗೆ ಬೆರೆತಿರಲು ಪ್ರಯತ್ನಿಸಿದೆ. ಸಾಧ್ಯವಿದ್ದಷ್ಟು ನಿಮ್ಮನ್ನು ಪ್ರೀತಿಸಲು ಶ್ರಮಿಸಿದೆ. ಆದರೆ ನೀವು—ನೀವು—ನಿಮ್ಮಂತಹ ಮನುಷ್ಯರು ಬೇರೆ ಇಲ್ಲ—ಗುಪ್ತಾಚಾರನಂತೆ, ಕೀಳು, ಅಶ್ಲೀಲವಾದ ಮಾತ್ಸರ್ಯ, ಹೊಟ್ಟೆಕಿಚ್ಚಿನಿಂದ ಕೂಡಿದವರಾಗಿ ನನ್ನ ಚರ್ಯೆಗಳನ್ನು ಶಂಕಿಸುವವರಾದಿರಿ. ಮದುವೆಯಾದ

ಬರುವ ವಾರಕ್ಕೆ ಮುಂದರಿಸಲಾಗಿದೆ.

೩ನೇ ಯುದ್ಧದ ಪೂರ್ವ ಪೀಠಿಕೆ

ಚರ್ಚಿಲ್ ಸ್ಟೇಲಿನರ ತತ್ವ ಘರ್ಷಣೆ

ಫ್ರಾನ್ಸು ಪುನಃ ಸಾಮ್ರಾಜ್ಯವಾದಿಯಾಗಿದೆ

ರಶ್ಯವು ಬ್ರಿಟಿಷ್ ಧೋರಣೆ ಅನುಸರಿಸಿದೆ.

ಜಪಾನು ಯುದ್ಧವು ಇನ್ನೂ ಮುಂದುವರಿಯುತ್ತಿರುವಾಗಲೇ ಯುರೋಪಿನಲ್ಲಿ ಇನ್ನೊಂದು ಭೀಕರ ಯುದ್ಧದ-ಪೂರ್ವ ಪೀಠಿಕೆ ನಡೆಯುತ್ತಿದೆಯೆಂದು ರಾಜಕೀಯ ತಜ್ಞರು ಅಭಿಪ್ರಾಯ ಪಡುತ್ತಾರೆ. ಬ್ರಿಟಿಷ್ ಪ್ರಧಾನರ ವಿಜಯ ಭಾಷಣದಲ್ಲಿ ಮೂರನೆಯ ಮಹಾ ಯುದ್ಧದ ವಿಷ ಬೀಜಗಳು ತೋರುತ್ತಿವೆಯಾಗಿ ಆಯರ್ಲೆಂಡಿನ ಡಿವೆಲರರು ಎಚ್ಚರಿಸಿರುವರು. ಒಂದು ಕಾಲದಲ್ಲಿ ಜಿನೆವದಲ್ಲಿನ ಜನಾಂಗ ಸಭೆಯ ಅಧ್ಯಕ್ಷರಾಗಿದ್ದ ಡಿವೆಲರರ ಅಭಿಪ್ರಾಯವನ್ನು ಅಲಕ್ಷಿಸಲಾಗುವುದಿಲ್ಲ.

ಅಂದಿನ ತಮ್ಮ ಭಾಷಣದಲ್ಲಿ ಚರ್ಚಿಲ್ಲರು: "ಮುಕ್ತಗೊಳಿಸಿದ ಯುರೋಪಿನಲ್ಲಿ ಪೋಲೀಸ್ ಸರಕಾರಗಳ ಸ್ಥಾಪಿಸಲ್ಪಡುವಂತಾದರೆ ಹಿಟ್ಲರ್ ವಾದಿಗಳನ್ನು ಸೋಲಿಸಿದ್ದು ನಿರರ್ಥಕ"ವೆಂದು ತಿಳಿಸಿದ್ದುದರಲ್ಲಿ ಗಂಭೀರಾರ್ಥವು ಅಡಕವಾಗಿದೆ ಎಂದು ಊಹಿಸಿದ ರಾಜಕೀಯ ತಜ್ಞರ ಊಹೆಯು ನಿಜವಾಯಿತು. ಸ್ಟೇಲಿನರು ಕೆಲವು ದಿವಸ ನಂತರದ ತಮ್ಮ ಭಾಷಣದಲ್ಲಿ ಚರ್ಚಿಲ್ಲರಿಗೆ ಉತ್ತರವೆಂಬಂತೆ: "ರಷ್ಯದೊಡನೆ ಮೈತ್ರಿ ಇಲ್ಲದ ಸರಕಾರಗಳಿಂದ ನಮ್ಮ ದೇಶವು ಸುತ್ತುಗಟ್ಟುವಂತಾದರೂ ಪ್ರಯೋಜನವಿಲ್ಲ"ವೆಂಬರ್ಥದಲ್ಲಿ ನುಡಿದರು. ರಷ್ಯವು ತನಗಿಷ್ಟ ಬಂದಂತೆ ತನ್ನ ನೆರೆಕೆರೆಯ ರಾಷ್ಟ್ರಗಳಲ್ಲಿ ತನ್ನ ಸ್ವಂತ ತಯಾರಿಕೆಯ ಸರಕಾರಗಳನ್ನುಬಲಾತ್ಕಾರಬಲದಿಂದ ರಚಿಸಬಾರದೆಂದು ಬ್ರಿಟಿಷ್ ಪ್ರಧಾನರು ಸೂಚಿಸಿದರೆ, ತಮಗೆ ವಿರೋಧಿಗಳಾದ ಸರಕಾರಗಳನ್ನು ಸ್ಥಾಪಿಸುವುದರಲ್ಲೂ ತನಗೆ ಒಪ್ಪಿಗೆ ಇಲ್ಲವೆಂದು ಸಮತಾವಾದಿ ಸ್ಟೇಲಿನರು ಸ್ಪಷ್ಟಪಡಿಸಿದರು.

ಫ್ರಾನ್ಸ್ ರಷ್ಯಾ ಒಪ್ಪಂದ

ಫ್ರಾನ್ಸನ್ನು ಜರ್ಮನ್ ಹಿಡಿತದಿಂದ ಮುಕ್ತಗೊಳಿಸಿದ್ದು ಬ್ರಿಟಿಷ್ ಮತ್ತು ಅಮೇರಿಕನರಾದರೂ, ಡಿಗೊಲೆಯವರು ಅಲ್ಲಿ ಅಧಿಕಾರ ವಹಿಸಿದ ಕೂಡಲೇ ರಶ್ಯದೊಡನೆ ೨೦ ವರ್ಷದ ಪರಸ್ಪರ ಸಹಾಯ ಮೈತ್ರಿಯ ಒಪ್ಪಂದ ಮಾಡಿಕೊಂಡದ್ದು ಬ್ರಿಟಿಷ್ ಮುತ್ಸದಿಗಳಿಗೆ ತುಂಬಾ ಮನಕ್ಲೇಶವನ್ನುಂಟುಮಾಡುವ ವಿಷಯ ನಾಳೆ ಏನಾದರೂ ಘರ್ಷಣೆಗಾರಂಭವಾದರೆ ಕ್ಷಣದಲ್ಲಿ ಫ್ರಾನ್ಸು ರಶ್ಯದೊಡನೆ ಸೇರುವುದು.

ಆದರೆ ಫ್ರಾನ್ಸಿನ ವಸಾಹತು ಧೋರಣೆಯೂ ತುಂಬಾ ಸಂಶಯಾಸ್ಪದವಾಗಿದೆ. ಸಿರಿಯದಲ್ಲಿ ಆಗಲೇ ಜನತೆಗೂ ಫ್ರೆಂಚ್ ಸೈನ್ಯಗಳಿಗೂ ಕೈ ಕೈ ಹತ್ತಿದೆ. ಫ್ರಾನ್ಸಿನ ಈ ಧೋರಣೆಯನ್ನು ಇಡೀ ಅರಬ ಪ್ರಪಂಚವೇ ಖಂಡಿಸಿದೆ. ಪ್ರಭಾವಶಾಲೀ ಈಜಿಪ್ತೂ ತನ್ನ ಸಹಾನುಭೂತಿಯನ್ನೂ ಸರಿಯಾದ ಕಡೆಗೇ ಎಸೆದಿದೆ. ಇಂತಹ ಪ್ರಸಂಗದಲ್ಲಿ ಡಿಗೊಲೆ ಸರಕಾರದ ನೀತಿಯನ್ನು ಸಮತಾವಾದಿ ರಶ್ಯವಾದರೂ ಸಮರ್ಥಿಸಲಾರದು. ಅಂದ ಮೇಲೆ ಫ್ರಾನ್ಸಿನ ನೀತಿಯೂ ಬದಲಾವಣೆಯಾಗಬೇಕು. ಇಲ್ಲವೆ ಡಿಗೋಲೆಯವರು ಅಧಿಕಾರ ತ್ಯಜಿಸಬೇಕು.

ಬ್ರಿಟಿಷ್ ಸಮಾನ ಧೋರಣೆ

ಈ ಯುದ್ಧ ಪೋಲೆಂಡಿನ ಸ್ವಾತಂತ್ರ್ಯ ಅಪಹರಿಸಲ್ಪಡುವುದಕ್ಕಾಗಿ ಪ್ರಾರಂಭಿಸಲ್ಪಟ್ಟಿತು. ಆದರೆ ಜರ್ಮನಿಯು ಸೋತ ಮೇಲೂ ಜಗತ್ತು ಪೋಲೆಂಡು ಪಾರತಂತ್ರ್ಯದಲ್ಲಿರುವುದನ್ನೇ ನೋಡಿತು. ಜರ್ಮನಿಯ ಬದಲಿಗೆ ಅದು ರಷ್ಯದ ಕೈಯೊಳಗೆ ಬಂದಿತ್ತು. ರಶ್ಯಕ್ಕೆ ಖೂತುಕತೆಗಾಗಿ ಆಹ್ವಾನಿಸಲ್ಪಟ್ಟಿರುವರೆಂದು ಹೇಳಲ್ಪಟ್ಟ ಒಂದು ಪೋಲಿಸ್ ರಾಯಭಾರ ಮಂಡಳಿಯ ಸದಸ್ಯರನ್ನು ರಷ್ಯನ್ ಅಧಿಕಾರಿಗಳು ಕೈ ಸೆರೆಹಿಡಿದರು.

ರಷ್ಯದ ವರ್ತನೆಗೆ ವಿಸ್ಮಯ ಪ್ರದರ್ಶಿಸಿದ ಬ್ರಿಟನ್ ಅಮೇರಿಕಗಳಿಗೆ ಉತ್ತರ ಕೊಡುತ್ತಾ ಸ್ಟೇಲಿನರು: "ಬಂಧಿಸಲ್ಪಟ್ಟ ಪೋಲಿಸ್ ಮುಖಂಡರು ಕೆಂಪು ಪಡೆಯ ವಿರೋಧ ಪಿತೂರಿ ನಡೆಸಿದಂತವರು. ಅವರನ್ನು ಯಾವ ಮಾತುಕತೆಗಳಿಗೂ ಯಾರೂ ಆಹ್ವಾನಿಸಲಿಲ್ಲ. ಬ್ರಿಟಿಷರು ಭಾರತದಲ್ಲಿ ಯಾವ ಕಾರಣಕ್ಕೆ ಅಲ್ಲಿನ ಮುಖಂಡರನ್ನು ಬಂಧಿಸಿರುವರೊ ಅದೇ ಭದ್ರತೆಯ ಕಾರಣಗಳಿಗಾಗಿ ಈ ಪೋಲಿಶ್ ಪಿತೂರಿಗಾರರನ್ನು ಸೆರೆಯಲ್ಲಿಡಲಾಗಿದೆ" ಎಂಬರ್ಥದಲ್ಲಿ ನುಡಿದರು. ಇದಕ್ಕೆ ಯಾರು ಹೇಗೆ ಮರುತ್ತರವನ್ನು ಕೊಡಬಲ್ಲರು?

ಟೀಟೊ ಅಲೆಗ್ಝಾಂಡರ್ ಕಚ್ಚಾಟ

"ಟೀಟೊರವರು ತಮ್ಮ ಸೈನ್ಯಶಕ್ತಿಯ ಬಲಾತ್ಕಾರದಿಂದ ತಮ್ಮ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಪಡುತ್ತಾರೆ. ಈ ವರ್ತನೆಯು, ಹಿಟ್ಲರ್ ಮುಸ್ಸೋಲಿನಿ ಜಪಾನುಗಳ ವರ್ತನೆಯನ್ನು ಜ್ಞಾಪಕಕ್ಕೆ ತರುತ್ತದೆ" ಹೀಗೆಂದು ದಕ್ಷಿಣ ಯುರೋಪಿನ ಸೇನಾಪತಿ ಜನರಲ್ ಅಲೆಗ್ಝಾಂಡರವರು ಯುಗೊಸ್ಲೇವಿಯದ ಮಾರ್ಶಲ್ ಟೀಟೋವಿನ ಧೋರಣೆಯನ್ನು ಖಂಡಿಸಿದರು. ಈ ಮಾತುಗಳು ಚರ್ಚಿಲ್ಲರ ಧಾಟಿಯಲ್ಲೇ ನುಡಿಯಲ್ಪಟ್ಟವೆಯಾಗಿ ರಾಜಕೀಯ ತಜ್ಞರ ಅಭಿಪ್ರಾಯ.

ಮಾರ್ಶಲ್ ಟೀಟೊ ಅವರಿಗೆ ರಶ್ಯದ ಬೆಂಬಲ ಬೇರೆ ಇದೆ. ಅಂದ ಮೇಲೆ ಬ್ರಿಟನು ಯಾರ ಮೇಲೆ ಮುನಿದುಕೊಳ್ಳಬೇಕು? ಆದರದಿಂದ ಈ ಎಲ್ಲ ಪರಿಸ್ಥಿತಿಗಳನ್ನು ಗಮನಿಸುವಾಗ ವಾತಾವರಣವು ಸಾಕಷ್ಟು ತೃಪ್ತಿಕರವಾಗಿಲ್ಲವೆಂದು ತಿಳಿಯಬೇಕಾಗುತ್ತದೆ.

ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್
ಗಂಗೊಳ್ಳಿ, ದ. ಕ.

ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲಿನ I, II, IIIನೇ ಫಾರ್ಮುಗಳು ಇದೇ ಬರುವ ಜೂನ್ ೨೧ನೇ ಗುರುವಾರ ಹೊಸತಾಗಿ ತೆರೆಯಲ್ಪಡುವವು

ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಆ ಬಗ್ಗೆ ಅರ್ಜಿಗಳನ್ನು ಇದೇ ಜೂನ್ ೧೧ರಿಂದ ಸ್ವೀಕರಿಸಲಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಅವರ ಖರ್ಚಿನಲ್ಲೇ ಮಧ್ಯಾಹ್ನ ಊಟದ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ ಕಾಯಂ ಊಟ, ವಸತಿಗಳ ಬಗ್ಗೆ ಶಾಲಾ ಕಮಿಟಿಯ ಮೇಲ್ವಿಚಾರದಲ್ಲಿ ಯೋಗ್ಯವ್ಯವಸ್ಥೆ ಮಾಡಲಾಗುತ್ತದೆ.

ದಾಖಲಾತಿಯ ಅರ್ಜಿಫಾರ್ಮುಗಳಿಗೆ ಮತ್ತು ವಿಶೇಷ ಮಾಹಿತಿಗೆ;—

ಮೆನೇಜರ್,
ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್,
ಗಂಗೊಳ್ಳಿ, ದ. ಕ.

'ಖಂಡಿತ ನೀನು ಭಾರತೀಯನಲ್ಲ'

ಸೋಲ್ಜರರಿಗೆ ಕೈತೋರಿಸಿದ ಭಾರತೀಯ ತರುಣ

ಹುಲಿಗಳಂತಿದ್ದವರು ಇಲಿಗಳಂತಾದರು

ಕೆಲವು ದಿನಗಳ ಹಿಂದೆ ಬೊಂಬಾಯಿಯ ಚರ್ಚಿಗೇಟ್ ಸ್ಟೇಶನ್ ಬಳಿ ಒಂದು ಘಟನೆಯಿಂದ ಓರ್ವ ಭಾರತೀಯ ತರುಣನು ಇರ್ವ ಬ್ರಿಟಿಷ್ ಸೋಲ್ಜರರಿಗೆ ತನ್ನ ಸಾಮರ್ಥ್ಯವನ್ನು ತೋರಿಸಿ ಹೊಗಳಲ್ಪಟ್ಟ.

ಆ ಇರ್ವ ಸೋಲ್ಜರರು ಮಿತಿ ಮೀರಿ ಕುಡಿದು ಮೇಲ್ಮಂಡ ಸ್ಥಳದಲ್ಲಿ ಗಲಾಟೆ ಮಾಡಲಾರಂಭಿಸಿದರು. ಹಾದು ಹೋದವರನ್ನು ಬೈಯುವುದು, ದೂಡುವುದು, ಹೊಡೆಯಲು ಹೋಗುವುದು ಇವೇ ಕೆಲವುದುಷ್ಕೃತಿಗಳಲ್ಲಿವರು ತೊಡಗಿದರು. ಒಬ್ಬ ಚಿಕ್ಕ ಹುಡುಗನನ್ನು ಎತ್ತಿ ಬಿಸಾಡಿದರು. ಅನಂತರದ ಘಟನೆಯ ವಿವರವನ್ನು ಬೊಂಬಾಯಿ ಕ್ರೊನಿಕಲ್ ಪತ್ರಿಕೆಯ ಓರ್ವ ಬಾತ್ಮಿದಾರರು ಹೀಗೆ ಕೊಡುತ್ತಾರೆ:

'ಅತ್ತ ಹಾದು ಬಂದ ಮಹಿಳೆಯರನ್ನು ಅಶ್ಲೀಲ ಮಾತುಗಳಿಂದ ಹೀಯಾಳಿಸಿ ಆ ಸೋಲ್ಜರರು ತಮ್ಮ ನಾಗರೀಕತೆಯ ಪ್ರದರ್ಶನ ಮಾಡಿದರು. ಇಷ್ಟಾದರೂ ಆ ಗುಂಪಿನೊಳಗಿನ ಒರ್ವನಾದರೂ ಅವರ ಮೇಲೆ ಕೈ ಮಾಡಲು ಧೈರ್ಯಪಡಲಿಲ್ಲ. ಅವರ ಪೊಳ್ಳು ಬೆದರಿಕೆಗೆ ಎಲ್ಲರೂ ಹೆದರಿ ನಿಂತಂತೇ ತೋರಿತು. ನಂತರ ಆ ಧೀರ ಟೊಮಿಗಳು ಓರ್ವ ಬಿಳಿ ಗಡ್ಡದ ಮುದುಕನ ಮೇಲೆ ಹಾರಿ ಅವನನ್ನು ಪೀಡಿಸ ತೊಡಗಿದರು.

'ಅಷ್ಟು ಹೊತ್ತಿಗೆ ಹತ್ತಿರದ ರೈಲ್ವೇ ಸ್ಟೇಶನಿಸಿಂದ ಓರ್ವ ತರುಣನು ಹೊರ ಬರುವವನಾದನು. ಸೋಲ್ಜರರಿಂದ ಪೀಡಿಸಲ್ಪಡುತಿದ್ದ ಮುದುಕನ ಗೋಳನ್ನು ನೋಡಿ ಸಹಿಸಲಾರದೆ ತರುಣನು ಅವನ ಸಹಾಯಕ್ಕೆ ಮುಂದೇ ಬಂದೇ ಬಿಟ್ಟ.

'ಈ ಮುದುಕನನ್ನು ಬಿಟ್ಟು ಬಿಡುವಿರೊ ಇಲ್ಲವೊ?' ಎಂದವನು ಗರ್ಜಿಸಿದ ಅವನ ಸ್ವರದಲ್ಲಿ ನಿರ್ಧಾರವು ಕೂಡಿತ್ತು. ಮುದುಕನನ್ನು ಬಿಟ್ಟು ಸೋಲ್ಜರರು ತರುಣನ ಕಡೆ ತಿರುಗಿದರು.

'ಜಗಳ ಮಾಡಲು ಮನಸ್ಸಿದೆಯೇ? ಎಂದೊಬ್ಬನು ಶರ್ಟಿನ ಕೈಗಳನ್ನು ಮೇಲೆಮಾಡುತ್ತಾ ಕೇಳಿದನು.

'ನನಗೆ ಜಗಳಾಡಲು ಮನಸ್ಸಿಲ್ಲ. ಆದರೆ ನಿಮಗೆ ಮನಸಿದ್ದರೆ ನನ್ನ ಅಡ್ಡಿ ಇಲ್ಲ. ಹೀಗೆಂದು ತರುಣ ಭಾರತೀಯನು ಉತ್ತರವಿತ್ತ. ಮತ್ತು ತಾನು ತನ್ನ ಶರ್ಟಿನ ತೋಳುಗಳನ್ನು ಮೇಲಕ್ಕೆ ಮಾಡಹತ್ತಿದ.

ಸ್ವಲ್ಪ ಸಮಯದ ತನಕ ಸೋಲ್ಜರನೂ ತರುಣನೂ ಉರುಳಾಡಿ ಬಲಾಬಲಗಳನ್ನು ನೋಡಿದರು. ಒಬ್ಬನು ಮತ್ತೊಬ್ಬನ ಶರ್ಟನ್ನು ಒತ್ತಿ ಹಿಡಿದಿದ್ದ.

ಕಡೆಗೆ ತಮ್ಮ ಪೊಳ್ಳು ಬೆದರಿಕೆಯಿಂದ ಹೆದರಿಸಲಾಗದ ಓರ್ವ ಭಾರತೀಯ ಇಲ್ಲಿದ್ದಾನೆಂದು ತಿಳಿದ ಸೋಲ್ಜರರು ಧೀರತ್ವಕ್ಕಿಂತ ವಿವೇಕವೇ ಒಳ್ಳೆ ಮಾರ್ಗವೆಂದು ತಿಳಕೊಂಡರು. ಅವರು ತಮ್ಮ ದಾಟಿ ಬದಲಾಯಿಸಿದರು. ಹುಲಿಗಳಂತಿದ್ದವರು ಇಲಿಗಳಂತಾದರು.

'ನೀನು ಭಾರತೀಯನಿರಲಾರೆ' ಎಂದರವರು.

'ಒಳ್ಳೇದು ಖಂಡಿತವಾಗಿಯೂ ನಾನೊಬ್ಬ ಭಾರತೀಯ' ತರುಣನೆಂದ.

'ಛೆ, ಎಂದಿಗೂ ಹಾಗಿರಲು ಸಾಧ್ಯವಿಲ್ಲ' ಎಂದು ಮತ್ತೊಬ್ಬ ಕುಡಿದ ಸೈನಿಕನೆಂದ.

'ಯಾಕಾಗಬಾರದು?' ಎಂದು ತರುಣ ಕೇಳಿದ.

"ಯಾಕೆಂದರೆ ನಾವಿಲ್ಲಿ ಒಂದು ಗಂಟೆಯಿಂದ ಗಲಾಟೆ ಮಾಡುತಿದ್ದರೂ ಒಬ್ಬನಾದರೂ ನಮ್ಮೊಡನೆ ಜಗಳಕ್ಕೆ ಮುಂದೆ ಬರಲಿಲ್ಲ. ಅಂಥವರು ಭಾರತೀಯರಾದರೆ ನೀನು ಭಾರತೀಯನೆಂದಿಗೂ ಅಲ್ಲ!"

ಈ ಘಟನೆಯನ್ನು ವಿಮರ್ಶಿಸುತ್ತಾ ಕ್ರೊನಿಕ್ಲರರು ಹೀಗೆ ಬರೆದಿದ್ದಾರೆ:

ಬಿಳಿ ಸಾಹೇಬರ ಈ ವರ್ತನೆಗೆ ಕಾರಣಗಳಿವೆ. ಕಾನೂನುಗಳು ಅವರ ಪರವಾಗಿಯೇ ತೀರ್ಪು ಕೊಡುತ್ತದೆ. ಒಂದು ಸಲ ಓರ್ವ ಬಿಳಿ ಸೈನಾಧಿಕಾರಿಯು ಒಬ್ಬ ಭಾರತೀಯ ಕೂಲಿಯವನಿಗೆ ಹೊಟ್ಟೆಯ ಮೇಲೆ ಒದೆದಾಗ ಅವನು ಮಡಿದನು. ನ್ಯಾಯಸ್ಥಾನದಲ್ಲಿ 'ಕೂಲಿಯವನಿಗೆ ಪಿತ್ತಕೋಶದ ವಿಕಾರ'ವಿತ್ತೆಂದು ಸಾಹೇಬರನ್ನು ಬಿಡುಗಡೆ ಮಾಡಲಾಯಿತು. ಬೊಂಬಾಯಿಯ ಇನ್ನೊಂದು ಕಡೆ ಒಬ್ಬ ಬಿಳಿಯನು ಚಕ್ರವರ್ತಿ ಗೀತೆಯಾಗುವಾಗ ನಿಲ್ಲಲಿಲ್ಲವೆಂದು ಒಬ್ಬ ಭಾರತೀಯನಿಗೆ ಕೆನ್ನೆಯ ಮೇಲೆ ಹೊಡೆದು ಪೋಲೀಸರಿಗೆ ಕೈದು ಮಾಡಲು ಹುಕುಂ ಕೊಟ್ಟನಂತೆ. ತನಗೆ ಕೆನ್ನೆಯ ಮೇಲೆ ಹೊಡೆದಿದ್ದಾನೆಂದಾಗ ಪೋಲಿಸರು ಗಮನಿಸಲೇ ಇಲ್ಲ. ಎಷ್ಟು ಕಾಲದ ತನಕ ನಾವು ಇಂತಹ ಪುಂಡರ ಬೆದರಿಕೆಗೆ ಸ್ವಾಭಿಮಾನ ಕಳಕೊಂಡಿರಬೇಕೆಂದು ನಾನು ಬೊಂಬಾಯಿ ಪೋಲೀಸರಿಗೆ ಪ್ರಶ್ನಿಸಬಯಸುತ್ತೇನೆ.

ದನಗಳಿಗೆ ದಿವಸಕ್ಕೆ ೨೫ ಸಲ ಬಾಯಾರಿಕೆಯಾಗುವುದೂ ಇದೆ. ಅಷ್ಟು ಸಲವೂ ಅವು ನೀರು ಕುಡಿಯುತ್ತಿರುತ್ತವೆ.

* * *

ಯುದ್ಧಕಾಲದಲ್ಲಿ ಕಳ್ಳರ ಕಾಟ

ಮನೆಗಳನ್ನೂ ಮರಗಳನ್ನೂ ಕದ್ದರು

ರೈಲು ವಾಹನಗಳು ಕಳವಾದುವು

ಯುರೋಪ್ ಮುಕ್ತಿಗೆಯಲ್ಲಿ ಘಾಯಗೊಂಡ ಸೈನಿಕರು ಶುಶ್ರೂಷೆಹೊಂದುತ್ತಿರುವಾಗ ಅವರಿಗೆ ಓದಲು ಪುಸ್ತಕಗಳು ಬೇಕಾದವು. ಇಂಗ್ಲೆಂಡಿನ ಸ್ಕೊಟ್ಲೆಂಡ್-ಯಾರ್ಡ್ ಪತ್ತೆದಾರಿ ಇಲಾಖೆಯವರು ೪ ಸಾವಿರ ಪುಸ್ತಕಗಳ ಒಂದು ರಾಶಿಯನ್ನೇ ಯುದ್ಧಾಧಿಕಾರಿಗಳಿಗೆ ಕಳುಹಿಸಿಕೊಟ್ಟರು. ಪುಸ್ತಕ ಕಳ್ಳರ ಕೂಟವನ್ನು ಹಿಡಿದಾಗ ಇಷ್ಟೊಂದು ಗ್ರಂಥ ರಾಶಿಯು ಅವರಿಗೆ ದೊರೆಯಿತು. ಆ ಕಳ್ಳರು ಒಂದು ಪ್ರಕಟನಾಲಯದಿಂದ ೭ ಸಾವಿರ ಪುಸ್ತಕಗಳನ್ನು ಕದ್ದು ಬಂಧಿಸಲ್ಪಡುವ ಹೊತ್ತಿಗೆ ಅವುಗಳಲ್ಲಿ ಮೂರು ಸಾವಿರಗಳನ್ನು ಮಾರಿದ್ದರು.

ಯುದ್ಧ ಕಾಲದ ಇಂಗ್ಲೆಂಡಿನಲ್ಲಿ ಮಾರಿ ಹೋಗದ ವಸ್ತುವಿಲ್ಲ. ಆದರೂ ಅಲ್ಲಿ ಯುದ್ಧಪೂರ್ವದಿಂದಲೂ ಭಾರೀ ಕಳ್ಳಾಟಿಕೆ ದರೋಡೆಗಳು ನಡೆಯುತ್ತಲೇ ಇದ್ದವು. ಒಂದು ಕಟ್ಟಡವು ಬೊಂಬಿಗೆ ಆಹುತಿಯಾಗಿ ಕುಸಿದುಬಿದ್ದರೆ ಕೆಲವೇ ದಿವಸಗಳಲ್ಲಿ ಅದರಲ್ಲಿ ಪ್ರತಿಯೊಂದು ಚರ ಸೊತ್ತು ಕಾಣೆಯಾಗುತಿತ್ತು. ಕಿಟಿಕಿ ಚೌಕಟ್ಟುಗಳಿಂದ ಹಿಡಿದು ಬಾಗಿಲ ಬಿಜಾಗ್ರಗಳೂ ಕೂಡಾ ಮಾಯವಾಗುತಿದ್ದವು.

ಇಷ್ಟೇ ಅಲ್ಲ. ಇಡಿ ಇಡೀ ಕಟ್ಟಡಗಳೇ ಕಳವಾಗಿ ಹೋದ ದಾಖಲೆಗಳು ಪತ್ತೆಯಾಗಿವೆ. ಯುದ್ಧಾರಂಭದ ಕೆಲವೇ ತಿಂಗಳುಗಳ ಮೊದಲು ಎಸೆಕ್ಸ್ ಜಿಲ್ಲೆಯಲ್ಲಿ ಒಂದು ಕೌತುಕದ ಘಟನೆ ನಡೆಯಿತು. ಅಲ್ಲೊಬ್ಬನು ೮೦೦ ರೂಪಾಯಿ ಬೆಲೆಬಾಳುವ ಇಟ್ಟಿಗೆಗಳನ್ನು ಕದ್ದ ಆರೋಪದಿಂದ ಬಂಧಿಸಲ್ಪಟ್ಟನು. ತನಿಖೆ ನಡೆದಾಗ ಕದ್ದ ಇಟ್ಟಿಗೆ ೧೨೦ ಅಡಿಯ ಒಂದು ಹೊಗೆ ಕಂಭದವುಗಳೆಂದು ತಿಳಿದುಬಂತು. ಅಷ್ಟೊಂದು ಎತ್ತರದ ಸ್ತಂಭವು ನೆಲದಡಿಯ ಅದರ ತಳಹದಿಯಿಂದಲೇ ಬರಿದು ಮಾಡಲ್ಪಟ್ಟಿತ್ತು.

ಸಾವಿರ ಮರಗಳ ಕಳವು

ಹತ್ತು ವರ್ಷಗಳ ಹಿಂದೆ ಕೆನಡದಲ್ಲಿ ಓರ್ವ ಕಟ್ಟಡ ಮಾಲಿಕನು ತನ್ನ ಆಸ್ತಿಯನ್ನು ನೋಡಹೋಗಿದ್ದನು. ಯುದ್ಧ ಮುಂಚಿನ ಆ ಆರ್ಥಿಕ ದುಸ್ಥಿತಿಕಾಲದಲ್ಲಿ ಆ ಕಟ್ಟಡಗಳನ್ನು ಬಾಡಿಗೆಗೆ ಪಡೆಯುವವರಾರೂ ಇರಲಿಲ್ಲವಾದುದರಿಂದ ಬಹಳ ಸಮಯದಿಂದ ಅವುಗಳ ಆ ಮಾಲಿಕನು ಆ ಕಡೆ ಬಂದಿರಲಿಲ್ಲ. ಆದರೆ ಆ ಮಾಲಕನು ತನ್ನ ಕಟ್ಟಡಗಳಲ್ಲಿ ಒಂದನ್ನೂ ಕಾಣದಾದಾಗ ಅವನ ಆಶ್ಚರ್ಯ ಕಳವಳಗಳೆಷ್ಟೆಂದು ಯೋಚಿಸಿರಿ. ಒಂದು ಕಟ್ಟಡವೂ ಇರಲಿಲ್ಲ-ಕೆಲವದರ ಪಂಚಾಂಗದ ಕಲ್ಲುಗಳು ಕೂಡಾ ತೆಗೆಯಲ್ಪಟ್ಟಿದ್ದವು. ಕಟ್ಟಡ ಕಳ್ಳರ ಒಂದು ಸೈನ್ಯವೇ ಅಲ್ಲಿಗೆ ಬಂದಿದ್ದು ಆ ಕಟ್ಟಡಗಳನ್ನು ನೆಲಕ್ಕುರುಳಿಸಿ ಅವುಗಳ ಸಾಮಾಗ್ರಿಗಳನ್ನೆಲ್ಲಾ ಇತರ ಕಡೆಗೆ ಹೊರಿಸಿದ್ದರು.

ಅಮೇರಿಕದ ನ್ಯೂಜೆರ್ಸಿ ಪ್ರಾಂತ್ಯದ ಒಂದು ಹಳ್ಳಿಯಲ್ಲಿ ಇನ್ನೂ ವಿಚಿತ್ರದ ಘಟನೆ ನಡೆಯಿತು. ಅಲ್ಲೊಂದು ಇಗರ್ಜಿ ಇತ್ತು. ಪ್ರಾರ್ಥನೆಗಾಗಿ ಅಲ್ಲಿ ನಿಗ್ರೋ ನಿವಾಸಿಗಳೇ ಹೆಚ್ಚಾಗಿ ಬರುತಿದ್ದರು. ಒಂದು ಸಲ ಬಿಳಿಯವರಿಗೂ ಕರಿಯರಿಗೂ ಕಲಹವೆದ್ದಿತು. ಪರಿಣಾಮವಾಗಿ ಬಿಳಿಯರು ರಾತ್ರೆ ಬೆಳಗಾಗುವುದರೊಳಗೆ ಇಗರ್ಜಿಯ ಕಟ್ಟಡವನ್ನು ಕಾಣೆಮಾಡಿಬಿಟ್ಟಿದ್ದರು. ಅದು ಬರೀ ೨೦ ಅಡಿ ಉದ್ದ ೧೫ ಅಡಿ ಅಗಲದ ಕಟ್ಟಡವಾಗಿದ್ದರೂ ಒಂದೇ ರಾತ್ರೆಯೊಳಗೆ ಪತ್ತೆಹತ್ತದಂತೆ ಅದರೊಳಗಿನ ಪ್ರತಿಯೊಂದು ಸಲಕರಣೆಯೊಂದಿಗೆ ಅದು ಮಾಯಮಾಡಲ್ಪಟ್ಟದು ಒಂದು ಸೋಜಿಗದ ಸಂಗತಿಯೇ ಸರಿ. ಇನ್ನು ಯುದ್ಧಾನಂತರ ಮರ ಮತ್ತು ಕಾಗದದ ಗೋಡೆಗಳ ಕಾರ್ಖಾನೆ ತಯಾರಿತ ಮನೆಗಳು ಬಂದಾಗ 'ಮನೆ ಕದಿಯುವಿಕೆ'ಯ ಕೇಸುಗಳು ಹೆಚ್ಚಾದರೆ ಆಶ್ಚರ್ಯವಲ್ಲ.

ತೋಟದೊಳಗಿನ ಗಿಡ ಬಳ್ಳಿ ಹೂಗಳನ್ನು ಕದಿಯುವುದು ಸಾಮಾನ್ಯ ಅನುಭವ. ೧೯೩೭ರಲ್ಲಿ ನ್ಯೂಯೋರ್ಕಿನ ಬಳಿಯ ರುತ್ಲೆಂಡ್ ಎಂಬ ಪ್ರದೇಶದಲ್ಲಿ ನೆಟ್ಟ ೧೦೦೦ ಹಣ್ಣಿನ ಮರಗಳು ಕಳವಾಗಿ ಹೋದುದು ವೃಕ್ಷ ಚೌರ್ಯದ ಒಂದು ಗಣನೀಯ ದಾಖಲೆಯೆನ್ನಬಹುದು. ಕಳ್ಳರು ಒಂದೇ ರಾತ್ರೆಯೊಳಗೆ ಚಕಾರ ಸದ್ದಿಲ್ಲದೆ ಆ ಮರಗಳನ್ನು ಅಗೆದು ಸಾಗಿಸಿದರು! ಅಲ್ಲಿನ ಪತ್ರಿಕೆಯೊಂದು ಈ ಘಟನೆಯ ಕುರಿತು ಟೀಕಿಸುತ್ತಾ: "ಸರಕಾರದವರು ಪೋಲಿಸರನ್ನು ಪಹರೆಗೆ ಇಡುವ ಬದಲು ಮರ ಕುಟಿಗ ಹಕ್ಕಿಗಳನ್ನು ಪತ್ತೆಗೆ ಕಳುಹಿಸಬೇಕು" ಎಂದು ಹಾಸ್ಯಾಸ್ಪದವಾಗಿ ಬರೆಯಿತು.

ಮರಕುಟಿಗ ಹಕ್ಕಿಯಾದರೆ ನ್ಯೂಯೋರ್ಕಿನ ಬಳಿ ಇನ್ನೊಂದು ಕಡೆ ನಡೆದ ಮರ ಮಟ್ಟು ಕದಿಯುವಿಕೆಯನ್ನು ಪತ್ತೆಹಚ್ಚುತಿತ್ತೊ ಏನೋ! ಕಾರಣ ಅಲ್ಲೊಂದು ಮರದ ಪೊರಟುಗಳಿಂದ ಮುಚ್ಚಲ್ಪಟ್ಟ ಮಾರ್ಗವಿತ್ತು. ಯಾರೋ ಒಬ್ಬರು ಮೊದಲಿನ ಕೆಲವು ಹಲಗೆಗಳನ್ನು ಒಂದು ಕಡೆ ಸುಟ್ಟು ಹಾಕಿದ್ದರು. ಕೆಲವೇ ಸಮಯದಲ್ಲಿ ಕಟ್ಟಿಗೆಗೆ ತತ್ವಾರವಾದ ಕೂಲಿಗಾರರು ಮತ್ತಿತರರು ಕಬ್ಬಿಣದ ಸಲಕೆಗಳನ್ನು ತಂದು ಬೇಕಾದ ಹಾಗೆ ಹಲಗೆಗಳನ್ನು ಒಯ್ದುಬಿಟ್ಟರು. ಪೋಲಿಸರು ಬರುವಷ್ಟರೊಳಗೆ ೪೦೦ ಅಡಿ ಉದ್ದದ ಮಾರ್ಗವು ಬರಿದಾಗಿತ್ತು.

ಮರಗಳನ್ನು ಕೊಂಡ್ಯೊಯ್ದ ಸಂಗತಿಯನ್ನು ಹುಲ್ಲು ಮೈದಾನೊಂದು ಕಳವಾದ ಘಟನೆಗೆ ಹೋಲಿಸಿದರೆ ಮೊದಲಿನದು ಅತೀ ಸಾಮಾನ್ಯವಾಗಿ ಕಾಣುವುದು. ಅಮೇರಿಕದ ಒಂದು ಪಟ್ಟಣದಲ್ಲಿ ಒಬ್ಬನು ತನ್ನ ಹುಲ್ಲುಗಾವಲಿನ ವಿಷಯ ತುಂಬಾ ಹೆಮ್ಮೆಪಟ್ಟುಕೊಂಡಿದ್ದನು. ಒಂದು ರಜೆ ಕಾಲದಲ್ಲಿ ಅವನು ಕೆಲವು ದಿನಗಳ ವರೆಗೆ ಸಂಚಾರ ಹೋಗಿದ್ದ. ಬರುವಾಗ ಹುಲ್ಲಿನ ಬದಲಿಗೆ ಬರೀ ಕೆಂಪು ನೆಲ ಮಾತ್ರ ಕಾಣುತಿತ್ತು. ನೆರೆಕೆರೆಯವರೊಂದಿಗೆ ವಿಚಾರಿಸಿದಾಗ ಯಾರೊ ಕೆಲವರು ಲೋರಿಗಳನ್ನು ತಂದು ಹುಲ್ಲು ಭಾಗವನ್ನು ಕೆತ್ತಿ ಸಾಗಿಸಿದರೆಂದೂ ಬಹುಶ್ಯ ಅವರಿಗೆ ಆ ಮೈದಾನು ಮಾರಲ್ಪಟ್ಟಿರಬಹುದೆಂದು ಅವರು ಊಹಿಸಿದರೆಂದೂ ತಿಳಿಸಲಾದರು.

ರೈಲು ಚೋರರು

ರೈಲು ಕಂಬಿಗಳನ್ನೂ ರೈಲ್ವೇ ಬಂಡಿಗಳನ್ನೂ ಕದ್ದ ದಾಖಲೆಗಳೂ ಇವೆ. ಕೆಲವು ವರ್ಷಗಳ ಹಿಂದೆ ಕೆನೆಡದ ಒಂದು ರೈಲು ನಿಲ್ದಾಣದಲ್ಲಿರಿಸಲ್ಪಟ್ಟಿದ ಉಗಿಯಂತ್ರವೊಂದನ್ನು ಕಳ್ಳರು ಮೆಲ್ಲಗೆ ಹೊರದೂಡಿ ಸ್ವಲ್ಪ ದೂರದ ತನಕ ತಂದು ನಿರ್ಜನವಾದ ಪ್ರದೇಶದಲ್ಲಿ ಅದನ್ನು ಮುರಿಯ ಹತ್ತಿದಾಗ ಹಿಡಿಯಲ್ಪಟ್ಟರು. ಸುಮಾರು ಐವತ್ತು ವರ್ಷಗಳ ಹಿಂದೆ ಆಯರ್ಲೆಂಡಿನಲ್ಲಿ ಅಂತಹದೇ ರೈಲು ಕದಿಯುವಿಕೆಯ ಘಟನೆಯೊಂದು ನಡೆಯಿತು. ಆಗ ಅದೊಂದು ಚಿಕ್ಕ ಉಗಿಯಂತ್ರ, ಸ್ವಲ್ಪ ದೂರದ ರೈಲುಕಂಬಿಗಳು—ಕಳ್ಳರು ಎಲ್ಲವನ್ನೂ ಸಾಗಿಸಿಬಿಟ್ಟಿದ್ದರು. ಅಂದಿನ ಆ ಕಳ್ಳರು ಯಾರೂ ಸಿಕ್ಕಲಿಲ್ಲ. ರೈಲ್ವೆ ಕಂಪೆನಿಯ ಮಾಲಕರಾರೆಂಬ ವಿಷಯದಲ್ಲಿಯೂ ಚರ್ಚೆ ಇದ್ದುದರಿಂದ ಸಂಗತಿಯು ಇನ್ನೂ ವಿಷಮವಾಯಿತು.

ವಾರ್ಸೊ ನಗರದಿಂದ ೬೦ ಮೈಲು ದೂರದಲ್ಲಿ ಒಂದು ಕಬ್ಬಿಣದ ಸೇತುವೆ ಇತ್ತು. ೧೯೩೬ರಲ್ಲಿ ಅದೂ ಕಳವಾಗಿ ಹೋಯಿತು. ಮುಂಚಿನ ಸಾಯಂಕಾಲ ಓರ್ವ ಪೋಲಿಸ್ ಅಧಿಕಾರಿಯ ಕಾರು ಅದರ ಮೇಲಿಂದ ಹಾದುಹೋಗಿದ್ದು ಮರುದಿನ ಮುಂಜಾವಾಗ ಸೇತುವೆ ಇರಲಿಲ್ಲ.

ಯುದ್ಧದ ಒಂದು ವರ್ಷದ ಮೊದಲು ಮಲಯದ ಸೈನ್ಯ ಶಿಬಿರದಿಂದ ೨೫ ಸೈನ್ಯ ಸುದ್ದಿವಾಹಕ ಪಾರಿವಾಳಗಳು ಕಳವಾದುವು. ಕಳವಿನ ವರದಿ ಅಧಿಕಾರಿಗಳಿಗೆ ಮುಟ್ಟುವ ಮೊದಲೇ ಒಂದು ಹಕ್ಕಿಯು ಹಾರಿ ಪುನಃ ಶಿಬಿರ ಸೇರಿತ್ತು. ಅವುಗಳನ್ನು ಕದಿಯುವುದಕ್ಕಿಂತ ಇಟ್ಟುಕೊಳ್ಳುವುದು ಕಳ್ಳನಿಗೆ ಕಠಿಣವೆನಿಸಿತು.

ಈಜಿಪ್ತಿನಲ್ಲಿ ಕೆಲವು ಕಳ್ಳ ಅರಬರು ೨೭೨ ಒಂಟೆಗಳನ್ನು ಕದ್ದು ಕಾಣೆಯಾದರು. ಆದರೆ ಅಲ್ಲಿ ಒಂಟೆಗಳಿಗೆ ಸುಂಕ ಕಟ್ಟಬೇಕಾದುದರಿಂದ ಕಳ್ಳರು ತಮ್ಮ ಕೆಲಸದಲ್ಲಿ ಯಶಸ್ವಿಯಾಗಲಿಲ್ಲ. ಸುಂಕದ ಅಧಿಕಾರಿಗಳು ಕಳ್ಳತನವನ್ನು ಪತ್ತೆಮಾಡಿಯೇ ಬಿಟ್ಟರು.

ಪ್ರಾಣಿ ಕಳವಿನ ಇತರ ದಾಖಲೆಗಳಲ್ಲಿ ಸೋಜಿಗವಾದುದೆಂದರೆ ಅಮೇರಿಕದ ಸೋಲ್ಟ್‌ಲೇಕ್ ನಗರದ ಮೃಗಾಲಯದಿಂದ ಎರಡು ಸಿಂಹಗಳನ್ನು ಕದ್ದ ಸಂಗತಿ.

ಚಾತುರ್ಯದ ಮಟ್ಟಿಗೆ ಕಳ್ಳಾಟಿಕೆಯ ಪ್ರಥಮ ಬಹುಮಾನ ಸ್ಕೊಟ್ಲೆಂಡಿನ ಕೆಲವು ಕಳ್ಳರಿಗೆ ಸಲ್ಲತಕ್ಕದ್ದು. ಅವರು ಅಲ್ಲಿನ ಜಗತ್ಪ್ರಸಿದ್ಧ ಪತ್ತೆದಾರಿ ಸಂಸ್ಥೆಯಾದ 'ಸ್ಕೊಟ್ಲೆಂಡ್ ಯಾರ್ಡ್' ಕಛೇರಿಯ ಮುಂಗಡೆಯಲ್ಲಿ ನಿಲ್ಲಿಸಿದ ಮೋಟಾರ್ ಕಾರೊಂದನ್ನೇ ಹಾರಿಸಿಬಿಟ್ಟಿದ್ದರು. ಹತ್ತು ವರ್ಷಗಳ ಹಿಂದೆ ಲಂಡನಿನ ಐತಿಹಾಸಿಕ ವಸ್ತು ಸಂಗ್ರಹಾಲಯವಾದ 'ಟವರ್ ಆಫ್ ಲಂಡನ್' ಎಂಬ ಪ್ರಾಚೀನ ಕೋಟೆಯಿಂದ ಓರ್ವ ಪ್ರೇಕ್ಷಕನು ಒಂದು ಹಳೇ ಖಡ್ಗವನ್ನು ಕದ್ದನು. ೨೭೫ ವರ್ಷಗಳ ಹಿಂದೆ ಅಲ್ಲಿನ ಕಬ್ಬಿಣ ಕೋಣೆಯೊಳಗಿರಿಸಲ್ಪಟ್ಟಿದ್ದ ಕಿರೀಟ ರತ್ನಗಳನ್ನು ಕೆಪ್ಟನ್ ಬ್ಲಡ್ ಎಂಬಾತನು ಕದ್ದಿದ್ದನು. ಅಲ್ಲಿ ಬಲವಾದ ಸರಕಾರಿ ಪಹರೆಗಾರರಿದ್ದರೂ ಇಷ್ಟೊಂದು ಕೆಲಸ ನಡೆದು ಹೋಯಿತು.

ಯುದ್ಧಕಾಲದಲ್ಲಿ ಅನೇಕ ಕಬ್ಬಿಣದ 'ಗೇಟು'ಗಳೂ, ಬೇಲಿಗಳೂ ಕಳವಾಗುತ್ತಿವೆ. ಕೆಲವು ಸಮಯದ ಹಿಂದೆ ಲೋಹಗಳು ಬಹಳವಾಗಿ ಬೇಕಾಗಿದ್ದಾಗ ಇಂತಹ ಕಳವುಗಳು ವಿಪರೀತವಾಗಿದ್ದವು. ಹಲವು ಸಂದರ್ಭದಲ್ಲಿ ಕದ್ದ ಗೇಟುಗಳು ಬೃಹದಾಕೃತಿಯವಾಗಿದ್ದು ಅವನ್ನು ಆ ಚಾಣಾಕ್ಷರು ಸದ್ದಿಲ್ಲದೆ ಹೇಗೆ ತೆಗೆದರೆಂಬುದೇ ಎಲ್ಲರಿಗೂ ಕೌತುಕದ ವಿಷಯ.

ನಮ್ಮ ಕಡೆಗಳಲ್ಲೂ ಸಾರ್ವಜನಿಕ ಉಪವನಗಳಲ್ಲಿನ ಬೆಂಚುಗಳ ಬೇಲಿಗಳ ಸಲಾಕೆಗಳನ್ನೂ, ನಟ್ಟು ಬೋಲ್ಟು, ಸ್ಕ್ರೂ ಉಪಕರಣಗಳನ್ನೂ ಕದ್ದ ನಿದರ್ಶನಗಳನ್ನು ನಾವು ಕಣ್ಣಾರೆ ಕಾಣಬಹುದು. ಹೀಗೆ ಕಳ್ಳಾಟಿಕೆಯಾಗುವ ಸ್ಥಳಗಳಲ್ಲಿ ಜನರು ಸಂಪೂರ್ಣ ನಾಗರೀಕ ಜೀವನದ ಹೊಣೆಯನ್ನರಿತು ಕೊಂಡಿಲ್ಲವೆಂದು ಅರ್ಥವಾಗುತ್ತದೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ

ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಜಿಲ್ಲೆಯ ಆಹಾರ ಪರಿಸ್ಥಿತಿ:—ದ. ಕ. ಜಿಲ್ಲೆಯ ವರ್ಗದಾರರ ಸಂಘದ ಪರವಾಗಿ ಶ್ರೀ॥ ಗಳಾದ ಎಂ. ಶಿವರಾವ್, ಕೆ. ಬಿ. ಜಿನರಾಜ ಹೆಗ್ಗಡೆ, ಎ. ಬಿ. ಶೆಟ್ಟಿ, ರಾ॥ ಸಾ॥ ಪಿ. ಆರ್. ಆರ್. ಪೂಂಜಾ, ಇವರುಗಳು ಇಲ್ಲಿಗೆ ಧಯಮಾಡಿಸಿದ ಸಿವಿಲ್ ಸರಬರಾಯಿ ಖಾತೆಯ ಕಮಿಶನರರನ್ನು ಬೇಟಿಯಾಗಿ ಈ ಪ್ರದೇಶ ಆಹಾರ ಪರಿಸ್ಥಿತಿಯ ಕುರಿತು ಅಂಕೆಸಂಖ್ಯೆಗಳ ಮೂಲಕ ವಿವರಿಸಿದರು.

"ನೀವು ಈ ಅಂಕೆಸಂಖ್ಯೆಗಳಿಗೆ ಉಪ್ಪು ಖಾರ ಹಚ್ಚಿ ಉತ್ಪ್ರೇಕ್ಷೆ ಮಾಡಿ ಹೇಳುತಿದ್ದೀರಿ" ಎಂಬರ್ಥವನ್ನು ಸೂಚಿಸುತ್ತಾ, ಮಾನ್ಯ ಸರಬರಾಯಿ ಕಮಿಶನರರು "ಈಗ ಸದ್ಯಕ್ಕೆ ಹೊರಗಿಂದ ಅಕ್ಕಿ ತರಿಸುವ ಆವಶ್ಯಕತೆ ತೋರುವುದಿಲ್ಲ, ಕಾರಣ ಅಕ್ಕಿ ಸಂಗ್ರಹ ಇನ್ನೂ ನಡೆಯುತ್ತಲಿದೆ. ರೇಶನ್ ಅಂಗಡಿಗಳಲ್ಲಿನ ಖರ್ಚು, ಉಳಿತಗಳ ಲೆಕ್ಕ ತಿಳಿದಿಲ್ಲ. ಇವೆಲ್ಲ ತಿಳಿದ ಮೇಲೆ ಮುಂದೆ ಪರ್ಯಾಲೋಚಿಸಲಾಗುವುದು" ಎಂದೂ ಹೇಳಿದರು.

ಇನ್ನು ಹತ್ತುದಿನ್ನೈದು ದಿನಗಳಲ್ಲಿ ಮಳೆ ಪ್ರಾರಂಭವಾಗುತ್ತದೆ. ಇದರಿಂದ ಹಲವು ಡಿಪೊಗಳನ್ನು ನಿಲ್ಲಿಸಬೇಕಾಗುತ್ತದೆ. ಮಳೆಗಾಲದಲ್ಲಿ ಸಾಗುಸುವಿಕೆ ಕಷ್ಟ ಸಾಧ್ಯ ಹೀಗೆಂದು ಶ್ರೀ. ಮಳಹಳ್ಳಿ ಶಿವರಾಯರೇ ತಿಳಿಸಿದರು. ಅನುಕೂಲ ಡಿಪೊಗಳಿಂದ ಕಾಸರಗೋಡು ತಾಲೂಕಿಗೆ ಮಾತ್ರ ಸುಮಾರು ೨೪ಸಾವಿರ ಮುಡಿ ಕಳುಹಿಸಿಕೊಟ್ಟರೆ ಸಾಕು ಅದು ಮುಗಿಯುವುದರೊಳಗೆ ಅಲ್ಲಿಗೆ ಬೇರೆ ಜಿಲ್ಲೆಗಳಿಂದ ಸರಬರಾಯಿ ಮಾಡುವ ಏರ್ಪಾಡು ಮಾಡುತ್ತೇವಾಗಿ ಮಾನ್ಯ ಕಮಿಶನರರು ತಿಳಿಸಿದರು.

ಈ ಬಗ್ಗೆ ರೈಲು ಮತ್ತು ಮೋಟಾರು ವಾಹನ ಸೌಕರ್ಯ ಏರ್ಪಡಿಸಲು ಕಮಿಶನರರು ಸಂಬಂಧಪಟ್ಟ ಅಧಿಕಾರಿಗಳಿಗೆ ತಂತಿ ಕಳುಹಿಸಿರುವರು.

ಪರಿಸ್ಥಿತಿ ಕಾಯುತ್ತಲಿದ್ದು ಅವಶ್ಯ ಕಂಡಂತೆ ಅದಕ್ಕೆ ಸ್ವಾಕುಕೂಡಿಸಿ ಕೊಡುತ್ತೇವೆಂದೂ ತಿಳಿಸಿದರು.

ಈಗಿನಂತೆ ರೇಶನು ಮುಂದೆಯೂ ಸರಿಯಾಗಿ ನಡೆಸುವಂತೆಯೂ, ಕಾಸರಗೋಡಿನಲ್ಲಿ ಮಾಡಿದ ಮಾರ್ಪಾಟನ್ನು ಹಿಂದಿನಂತೆ ಸರಿಪಡಿಸುವುದಾಗಿಯೂ ಕಮಿಶನರರು ಅಭಯವಿತ್ತಿರುವರು. ಅಶಾಸ್ತ್ರೀಯ ರೇಶನಿಂಗ್ ಪದ್ಧತಿಯ ಪ್ರವೇಶದೊಡನೆ ದ. ಕನ್ನಡವು ೧೨ ಟನ್ಸ್ ಅಕ್ಕಿ ೪ ಟನ್ಸ್ ರಾಗಿ ಯಾ ಗೋದಿ ಇವಿಷ್ಟನ್ನು ಇಡೀ ವರ್ಷ ಪಡೆವಂತೆ ವ್ಯವಸ್ಥಿಸಲಾಗುವುದೆಂದೂ, ದೇಶದ ಈಗಿನ ಆಹಾರ ದಾಸ್ತಾನು ಪ್ರಮಾಣದ ದೃಷ್ಟಿಯಿಂದ ದ. ಕ. ಜಿಲ್ಲೆಗೆ ಯಾವ ಭೀತಿಗೂ ಅವಕಾಶವಿಲ್ಲವೆಂದೂ ಸದ್ರಿ ಅಧಿಕಾರಿಗಳು ತಿಳಿಸಿದರು.

ಸರಬರಾಯಿ ಖಾತೆಯವರು ಈ ಜಿಲ್ಲೆಯನ್ನು ಅಲಕ್ಷಿಸುವುದಿಲ್ಲ. ಈ ಕ್ರಮಬದ್ಧವಾದ ಮತ್ತು ಹಾಗಿರದ ರೇಶನ್ ಕ್ಷೇತ್ರಗಳೆಂದು ಸರಕಾರವು ವ್ಯತ್ಯಾಸ ಮಾಡುವುದಿಲ್ಲವೆಂದೂ ಸರಬರಾಯಿ ಅಧಿಕಾರಿಗಳು ತಿಳಿಸಿದರು.

ಗುಪ್ತ ರೀತಿಯಲ್ಲಿ ಈ ಕಡೆ ಇನ್ನೂ ಅಕ್ಕಿ ದಾಸ್ತಾನುಗಳಿವೆಯೆಂಬ ತಮ್ಮ ಸಂಶಯವನ್ನು ತಿಳಿಸುತ್ತಾ ಬರಬೇಕಾದಷ್ಟು ಅಕ್ಕಿ ಬತ್ತ ಬಂದಿಲ್ಲವೆಂದರು. ವಾರವಿಡೀ ರೇಶನ್ ಸಿಗುವುದೆಂದು ಜನರಿಗೆ ಭರವಸೆ ಇತ್ತರೆ ತಮ್ಮಲ್ಲಿ ಒಂದಿಷ್ಟು ಉಳಿಸಿಕೊಳ್ಳುವ ಪ್ರೇರೇಪಣೆ ಜನರಲ್ಲಿ ಉಂಟಾಗದೆಂದೂ ಅದಕ್ಕಾಗಿ ಪ್ರಚಾರ ಮಾಡಬೇಕೆಂದೂ ಶ್ರೀ. ಜಿನರಾಜ ಹೆಗ್ಗಡೆಯವರು ತಿಳಿಸಿದರು. ಅದನ್ನು ಕಮಿಶನರ್ ಸಾಹೇಬರು ಒಪ್ಪಿಕೊಂಡರು.

ಒಬ್ಬ ಕೃಷಿಕನ ಅವಶ್ಯಕತೆಯ ಪ್ರಮಾಣ ಎಷ್ಟೆಂದು ನೋಡಲಿಕ್ಕೆ ತಕ್ಕ ಸಿಬಂದಿ ಇಲ್ಲ, ರೈತನಿಂದ ಪೂರ್ಣಗೇಣಿ ವಸೂಲಿಸಿ ಅವನಿಗೆ ಕಾರ್ಡು ಕೊಡುವುದರಿಂದ ಅವನ ಸಂಕಷ್ಟ ಏರಿದೆ, ಇದರಿಂದ ರೈತನಿಗೆ ತನ್ನ ಅಕ್ಕಿಗೆ ತಾನೇ ಹೆಚ್ಚು ಕ್ರಯ ಕೊಡಬೇಕಾದ ಪ್ರಸಂಗ ಬಂದಿದೆ ಎಂದು ಶ್ರೀಮಾನ್ ಹೆಗ್ಗಡೆಯವರು ತಿಳಿಸಿದಾಗ ಆ ಕುರಿತು ಮುಂದಿನ ಅಕ್ಕಿ ಸಂಗ್ರಹದ ಕಾಲದೊಳಗೆ ತಕ್ಕ ಬದಲಾವಣೆ ಮಾಡಲಾಗುವುದೆಂದು ಕಮಿಶನರರು ಭರವಸೆ ಇತ್ತರು.

ಸ್ಟೋಕು ಹೆಚ್ಚಿಸಿ ರೇಶನ್ ಪ್ರಮಾಣವನ್ನು ಪೂರ್ವ ಪ್ರಮಾಣಕ್ಕೆ ತಂದು ನಿಲ್ಲಿಸಿದಕ್ಕೆ ವರ್ಗದಾರರ ಶಿಷ್ಯ ಮಂಡಳಿಯವರು ಕಮಿಶನರನ್ನು ಅಭಿನಂದಿಸಿದರು. ಜಿಲ್ಲಾ ಕಲೆಕ್ಟರರೂ ಈ ಬೇಟಿ ಕಾಲದಲ್ಲಿ ಹಾಜರಿದ್ದರು.

ಮಂಗಳೂರು ಮತ್ತು ಜಿಲ್ಲಾ ವಾರ್ತೆಗಳು

ವಿದ್ಯಾವೇತನ:—ದಕ್ಷಿಣ ಮತ್ತು ಉತ್ತರ ಕನ್ನಡ ಹ್ಯಾಸ್ಕೂಲುಗಳಲ್ಲಿ ಕಲಿಯುವ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ೩೦-೬-೪೫ರೊಳಗೆ ಅರ್ಜಿಗಳನ್ನು 'ಸೆಕ್ರೆಟರಿ, ಗೌ. ಸಾ. ಬ್ರಾಹ್ಮಣ ಸ್ಕೋಲರ್ ಶಿಪ್‌ಲೀಗ್ 'C/o ಸಾರಸ್ವತ ಬ್ರಾಹ್ಮಣ ಸಮಾಜ ನಿಕ್ಟಾರಿಲೇನ್ ಗಿರ್‌ಗಾಂವ್, ಬೊಂಬ್ಬಾ ಇಲ್ಲಿಗೆ ಕಳುಹಿಸತಕ್ಕದ್ದು. ಕೈಗಾರಿಕೆ ಶಾಲೆ ಕೋಲೇಜುಗಳಲ್ಲಿ ಅಭ್ಯಾಸಿಸುವವರು ಅರ್ಜಿಗಳನ್ನು ಕಳುಹಿಸಬಹುದು.

ಆರೋಗ್ಯ:—ನಗರದಲ್ಲಿ ಪ್ಲೇಗಿನ ವಾರ್ತೆಯು ತಿಳಿದು ಬಂದಿಲ್ಲ. ಆದರೆ ಸಿಡುಬಿನಿಂದ ಈಚೆ ಎರಡು ಮರಣಗಳಾಗಿರುವುವೆಂದು ತಿಳಿದು ಬರುತ್ತದೆ.

ಈ ಜಿಲ್ಲೆಯ ದಕ್ಷಿಣ ಭಾಗಕ್ಕೆ ಚಿಮಿಣಿಎಣ್ಣೆಯ ಸರಬರಾಯಿಯ ಪ್ರಮಾಣವನ್ನು ಸಿವಿಲ್ ಸಪ್ಲಾ, ಖಾತೆಯವರು ಕಡಿಮೆ ಮಾಡಿರುವುದರಿಂದ ಮಂಗಳೂರು ಮುನ್ಸಿಪಾಲಿಟಿಯೊಳಗಿನ ರೇಶನ್‌ಕ್ಷೇತ್ರದೊಳಗಿನ ಪ್ರತಿಯೊಂದು ಸಂಸಾರಸ್ಥ ಕುಟುಂಬಕ್ಕೂ, ವ್ಯಾಪಾರ್ಸ್ತ ವಹಿವಾಟುದಾರರಿಗೂ ಮತ್ತು ಇತರರಿಗೂ ತಾ.೧-೬-೪೫ರಿಂದ ಈ ಕೆಳಗಿನಂತೆ ಚಿಮ್ಣಿಎಣ್ಣೆ ಕೊಡಲಾಗುವುದು:

ಇದು ತನಕ ಪಕ್ಷಕ್ಕೆ 1 ಬಾಟ್ಲಿಗಿಂತ ಹೆಚ್ಚು ೨ ಬಾಟ್ಲಿಗಿಂತ್ಹ ಕಡಿಮೆ ಸಿಗುತಿದ್ದವರಿಗೆ ಇನ್ನು ಮುಂದೆ ತಿಳಿಸಲಾಗುವ ತನಕ ತಿಂಗಳಿಗೆ ½ ಬಾಟ್ಲಿ. ೨ರಿಂದ ೩ರೊಳಗೆ ಸಿಗುತಿದ್ದವರಿಗೆ ತಿಂಗಳಿಗೆ ¾ ಬಾಟ್ಲಿ. 3ರ ಮೇಲೆ 4ರ ಒಳಗೆ ಸಿಗುತಿದ್ದವರಿಗೆ ತಿಂಗಳಿಗೆ 1 ಬಾಟ್ಲಿ. 4ರ ಮೇಲೆ 5ರ ಒಳಗೆ ಸಿಗುತಿದ್ದವರಿಗೆ ತಿಂಗಳಿಗೆ 1½ ಬಾಟ್ಲಿ. 5ರ ಮೇಲೆ 10ರ ಒಳಗೆ ಸಿಗುತಿದ್ದವರಿಗೆ ತಿಂಗಳಿಗೆ 2 ಬಾಟ್ಲಿ. 10ರ ಮೇಲೆ ಸಿಗುತಿದ್ದವರಿಗೆ ತಿಂಗಳಿಗೆ 4 ಬಾಟ್ಲಿ. ಕೆಡಮೆಯೆಂದು ಕಲೆಕ್ಟರರ ಒಂದು ಪ್ರಕಟನೆ ತಿಳಿಸುತ್ತದೆ.

ಕೆನರಾ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ. ಎಂ. ನಾರಾಯಣ ಪ್ರಭು ಬಿ. ಎ. ಎಲ್. ಟಿ. ಇವರು ತಮ್ಮ 78ನೇ ವಯಸ್ಸಿನಲ್ಲಿ ಕಳೆದ ಶುಕ್ರವಾರ ರಾತ್ರೆ ದಿವಂಗತರಾದರು. ಇವರು ತಮ್ಮ ಜೀವಮಾನವನ್ನು ಉಪಾಧ್ಯಾಯ ವೃತ್ತಿಯಲ್ಲಿ ಮುತುವರ್ಜಿಯಿಂದ ಕಳೆದು ಸರ್ವಜನರ ಪ್ರೀತಿಗೆ ಪಾತ್ರರಾಗಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿಯನಿತ್ತು ಅವರ ಕುಟುಂಬದವರ ದುಃಖವನ್ನು ಭಗವಂತನು ಪರಿಹರಿಸಲಿ.!

ನಿವೃತ್ತ ಡಿಸ್ಟ್ರಿಕ್ಟ್ ಮತ್ತು ಸೆಶನ್ ಜಡ್ಜರಾಗಿದ್ದ ಶ್ರೀ ಮೂರ್ಕ್ಕಿ ನರಸಿಂಗರಾವ್, ಬಿ. ಎ. ಎಂ. ಎಲ್.ರವರು ೨೪ರ ರಾತ್ರೆ ೯ ಗಂಟೆಗೆ ಪೆಂಟ್‌ಲೆಂಡ್ ಪೇಟೆಯ ತಮ್ಮ ಭವನದಲ್ಲಿ ವಿಧಿವಶರಾದರು. ಇವರು ಇಂಗ್ಲಿಷ್ ಮತ್ತು ಕನ್ನಡ ಕವಿಗಳಾಗಿದ್ದು ಹಲವು ಗ್ರಂಥಗಳನ್ನು ಬರೆದು ಭಾಷಾಸೇವಕರಾಗಿದ್ದರು. ಸರ್ವಜ್ಞ, ಸಹಸಾರ್ಥ ಸುಶೋಭಿತ, ಸುಭಾಷಿತ, ತುಲಸಿದಾಸ ರಾಮಾಯಣ, ಋಗ್ವೇದಿ ಸಂಧ್ಯಾವಂದನೆ ಇತ್ಯಾದಿ ಹಲವು ಪುಸ್ತಕಗಳನ್ನು ಪ್ರಚುರ ಮಾಡಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿ ಇರಲಿ!

ಜಿಲ್ಲಾ ಬೋರ್ಡುಗಳಿಗೆ ಈಗ ಖರ್ಚು ಹೆಚ್ಚಾಗಿದೆ; ಆದಕ್ಕೆ ತಕ್ಕಷ್ಟು ಉತ್ಪತ್ತಿ ಇಲ್ಲ; ಆದ್ದರಿಂದ ಈ ಹಣದ ಕೊರತೆಯನ್ನು ನಿವಾರಿಸಲು, ಇದೇ ಜುಲ್ಯಾ ತಾ. ೧ರಿಂದ ಈಗ ರೂಪಾಯಿಗೆ ೧॥ ಆಣೆಯಂತಿರುವ 'ಲೇಂಡ್ ಸೆಸ್ಸು'ನ್ನು ೨ ಆಣೆಗೆ ಏರಿಸಬೇಕೆಂದು ಮದ್ರಾಸು ಸರಕಾರದವರು ಯೋಚಿಸಿ ಆ ಸಂಬಂಧವಾಗಿ ಒಂದು ಮಸೂದೆಯನ್ನು ತಯಾರಿಸಿದ್ದಾರೆ. ಈ ಕುರಿತು ಜನಾಭಿಪ್ರಾಯವು ಬೇಗನೆ ಹೊರಪಡಲಿದೆ. ಈ ಮಸೂದೆಯ ಕುರಿತಾದ ಆಕ್ಷೇಪಗಳು ಅಥವಾ ಸೂಚನೆಗಳು ಏನಾದರೂ ಇದ್ದರೆ, ಅವನ್ನು ಇದೇ ಜೂನ್ ೨೪ರ ನಂತರ ಆಲೋಚಿಸಲಾದೀತೆಂದೂ, ಆ ತಾರೀಕಿಗೆ ಮೊದಲೇ ಮದ್ರಾಸು ಸರಕಾರದ ಸ್ಥಳೀಯ ಆಡಳಿತೆಯ ಶಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸಬೇಕೆಂದೂ ತಿಳಿದು ಬಂದಿದೆ.

ಸ್ಥಳೀಯ ಸೈಂಟ್ ಎಲೋಸಿಯಶ್ ಕಾಲೇಜಿ ಬಿ. ಎ. ಇಂಗ್ಲಿಷಿನಲ್ಲಿ ಪರೀಕ್ಷೆ 68ಮಂದಿ ಕುಳಿತಿದ್ದು ಅವರಲ್ಲಿ IIಕ್ಲಾಸ್ 2 ಮಂದಿಯೂ IIIಕ್ಲಾಸ್ 50 ಮಂದಿಯೂ ಹೀಗೆ ಒಟ್ಟಿಗೆ 52ಮಂದಿ ಉತ್ತೀರ್ಣರಾಗಿದ್ದಾರೆ; ಕನ್ನಡದಲ್ಲಿ 42ಮಂದಿ ಪರೀಕ್ಷೆಗೆ ಕೂತಿದ್ದು IIನೇ ತರಗತಿಯಲ್ಲಿ ಒಬ್ಬನೂ IIIನೇ ತರಗತಿಯಲ್ಲಿ 37 ಮಂದಿಯೂ, ಒಟ್ಟು 38ಮಂದಿಯೂ ಸಂಸ್ಕೃತ ಮತು ಮೆಥಮೆಟಿಕ್ಸಿನಲ್ಲಿ ಪರೀಕ್ಷೆಗೆ ಕಟ್ಟಿದವರೆಲ್ಲರೂ ಪಾಸಾಗಿರುತ್ತಾರೆ.

ಇಷ್ಟರ ವರೆಗೆ ಮಂಗಳೂರು ಕಟ್ಟಿಗೆ ಡಿಪೊಗಳಿಂದ ನಾಗರಿಕರಿಗೆ ಅರ್ಧ ಖಂಡಿಯಂತೆ ಕಟ್ಟಿಗೆಯನ್ನು ಒದಗಿಸಲಾಗುತಿತ್ತು. ಇನ್ನು ಮುಂದೆ ಅಂದರೆ ಇದೇ ಜೂನ್ ತಾ. ೧ರಿಂದ ಈ ಡಿಪೊಗಳಲ್ಲಿ ದಿನಕ್ಕೆ ಎರಡು ಮಣಕ್ಕೆ ಹೆಚ್ಚಾಗಿ ಕಟ್ಟಿಗೆ ದೊರಕದೆಂದು ತಿಳಿದು ಬಂದಿದೆ.

"ಬಟ್ಟೆ ಮತ್ತು ನೂಲಿನ ಕಂಟ್ರೋಲ್ ಆರ್ಡರಿನ ನಿಯಮಗಳನ್ನು ಮೀರಿ, ಸರಕಾರ ನಿರ್ಣಯಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ಬಟ್ಟೆಬರೆಗಳನ್ನು, ಇಲ್ಲಿಯ ಬೊಂಬಾಯಿ ಏಜನ್ಸಿಯ ಮಾಲಕರಾದ ಶ್ರೀ. ಎನ್. ಟಿ. ಎಸ್. ಮಾಸ್ಟರ್ ಅವರೂ, ಸೇಲ್ಸ್‌ಮೇನ್ ಎಮ್. ಜಿ. ಸಿರಿಯಾನ್ ಅವರೂ ಮಾರಿದರೆಂಬ ಆರೋಪದ ಮೊಕದ್ದಮೆ, ನಮ್ಮ ಸಬ್ ಡಿ। ಮೇಜಿಸ್ಟ್ರೇಟರಾದ ಶ್ರೀ. ಪಿ. ವಿ. ಮಾಧವರಾಯರಲ್ಲಿ ತನಖೆಯಾಗಿ, ಮೊದಲನೆಯವರಿಗೆ ರೂ.೫೦೦ ಮತ್ತು ಎರಡನೆಯವರಿಗೆ ರೂ. ೨೦೦ರ ಜುಲ್ಮಾನೆ ವಿಧಿಸಲ್ಪಟ್ಟಿತು.

ಬಟ್ಟೆ ವ್ಯಾಪಾರಿಗಳ ಲ್ಯಾಸೆನ್ಸ್ ಶರ್ತಗಳನ್ನು ಮೀರಿ ಬಿಚರುಗಳನ್ನು ಕೊಡಲಿಲ್ಲವೆಂಬ ಆರೋಪಕ್ಕೆ ಒಳಗಾದ ಇಲ್ಲಿಯ ಮಿ। ಮೊರಿಸ್ ಕುತಿಂಞ ಇವರ ಮೊಕದ್ದಮೆಯೂ, ನಮ್ಮ ಸ॥ ಡಿ॥ ಮೇಜಿಸ್ಟ್ರೇಟರಲ್ಲಿ ತನಖೆಯಾಗಿ ಮಿ। ಕುತಿಂಞರಿಗೆ ರೂ. ೭೫ರ ಜುಲ್ಮಾನೆ ವಿಧಿಸಲಾಯಿತು.

ತಾನೊಬ್ಬ ರೇಶನಿಂಗ್ ಆಫೀಸರನೆಂದು ನಟಿಸುತ್ತಾ, ಒಬ್ಬೊಬ್ಬರಿಂದ ಹಣವನ್ನು ಸೆಳೆದುಕೊಳ್ಳಲು, ಪ್ರಯತ್ನಿಸಿದನೆಂದು ಆರೋಪವಿದ್ದ ಮಾಜಿ॥ ಪೋಲಿಸ್ ಕೊನ್‌ಸ್ಟೆಬಲ್ (ನಂಬ್ರ ೪೪೪) ಜನಾರ್ಧನನೆಂಬಾತನು ಮೇಲಿನ ಮೊಕದ್ದಮೆ, ನಮ್ಮ ಎಡಿ॥ ಫೆಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮಿ। ಜೋಶ್ವರ ಕೋರ್ಟಿನಲ್ಲಿ ತನಖೆಯಾಗಿ, ಆರೋಪಿಗೆ ೧೫ ತಿಂಗಳ ಕಠಿನ ಸಜೆ ವಿಧಿಸಲಾಯಿತು.

ಗಂಗೊಳ್ಳಿ:—ಇಲ್ಲಿಯ ಸರಸ್ವತಿ ವಿದ್ಯಾಲಯ ಸಂಘದವರಿಗೆ ಇದೇ ಬರುವ ಜೂನಿನಲ್ಲಿ ಹೊಸತಾಗಿ I, II, IIIನೇ ಫಾರ್ಮುಗಳನ್ನು ತೆರೆಯಲು ಸರಕಾರದ ಅನುಮತಿ ದೊರೆತಿದೆಯೆಂದು ತಿಳಿಸಲುಸಂತೋಷವಾಗುತ್ತದೆ. ತರಗತಿಗಳು ಜೂನ್ ೨೦ನೇ ಗುರುವಾರ ತೆರೆಯಲ್ಪಡುವುವು. ಶಾಲಾ ವಿದ್ಯಾರ್ಥಿಗಳಿಗೆ ಅವರ ವೆಚ್ಚದಲ್ಲೇ ಮಧ್ಯಾಹ್ನ ಊಟದ ವ್ಯವಸ್ಥೆಗೂ ಕಾಯಂ ನಿವಾಸಕ್ಕೂ ಏರ್ಪಾಡಿದೆಯೆಂಬುದಾಗಿ ತಿಳಿದು ಬರುತ್ತದೆ.

ಪುತ್ತೂರು:-೧ ಪುತ್ತೂರು ಬೋರ್ಡು ಹ್ಯಾಸ್ಕೂಲಿನ ಹೊಸ ಕಟ್ಟೋಣದ ಬಗ್ಗೆ ರೂ. ೨೫೦೦/-ಯಾ ಅದಕ್ಕೆ ಮಿಕ್ಕಿದ ಐವಜನ್ನು ದಾನಮಾಡುವವರ ಹೆಸರನ್ನು ಶಾಶ್ವತಗೊಳಿಸುವ ಬಗ್ಗೆ ಒಂದು ಕೋಣೆಗೆ ಅಂತಹವರ ಯಾ ಅವರು ಸೂಚಿಸಿದವರ ಹೆಸರು ಹಾಕುವುದೆಂತಲೂ, ಅಂತಹವರ ಹೆಸರನ್ನು ಆ ಕೋಣೆಯ ಪ್ರವೇಶ ದ್ವಾರದಲ್ಲಿ ಚಂದ್ರಕಾಂತ ಶಿಲೆಯಲ್ಲಿ ಕೆತ್ತಿಸಿ ಇರಗೊಳಿಸುವುದೆಂತಲೂ;

(2) ರೂ. ೧೫೦೦/-ಕ್ಕೆ ಮಿಕ್ಕಿದ ಐವೇಜನ್ನು ದಾನಮಾಡುವವರ ತೈಲ ಚಿತ್ರವನ್ನು ಅವರ ಖರ್ಚಿನಿಂದಲೇ ತಯಾರಿಸಿ ಕಟ್ಟೋಣದ ಸಭಾಮಂದಿರದಲ್ಲಿ ತೂಗಡಿಸುವುದೆಂತಲೂ;

(3) ರೂ. ೫೦೦/- ಯಾ ಅದಕ್ಕಿಂತ ಮೇಲ್ಪಟ್ಟ ಐವೇಜನ್ನು ದಾನಮಾಡುವವರ ಹೆಸರುಗಳನ್ನು ಚಂದ್ರಕಾಂತ ಶಿಲೆಯಲ್ಲಿ ದಾನದ ಐವೇಜು ಸಮೇತ ಕೆತ್ತಿಸಿ ಸಭಾಮಂದಿರದ ಪ್ರಮುಖ ಸ್ಥಳದಲ್ಲಿ ಇರಗೊಳಿಸುವುದೆಂತಲೂ ಶಾಲಾ ಕಟ್ಟೋಣದ ಸಮಿತಿಯವರು ನಿರ್ಣಯಿಸಿರುತ್ತಾರೆಂಬುದನ್ನು ತಿಳಿಸಲು ತುಂಬ ಸಂತೋಷಪಡುತ್ತೇನೆ.

ಈ ಶಾಲೆಯ ಮೇಲೆ ಅಭಿಮಾನವಿರುವ ಎಲ್ಲಾ ಮಾನ್ಯ ಸದ್ಗೃಹಸ್ಥರೂ, ಶಾಲೆಯ ಹಳೆ ವಿದ್ಯಾರ್ಥಿಗಳೂ ಮೇಲಿನ ನಿರ್ಣಯಗಳನ್ನು ಪರಾಂಬರಿಸಿ ಇನ್ನಷ್ಟು ಉದಾರಹಸ್ತದಿಂದ ಧನಸಹಾಯಮಾಡಿ ಅದಷ್ಟು ಮೇಲಿನ ತರಗತಿಯಲ್ಲಿ ತಮ್ಮ ಯಾ ತಮಗೆ ಇಷ್ಟವುಳ್ಳವರ ಹೆಸರುಗಳನ್ನು ಶಾಶ್ವತಗೊಳಿಸಬೇಕಾಗಿ ಕಾರ್ಯದರ್ಶಿ ಶ್ರೀ ಬೆಳ್ತಂಗಡಿ ಮಂಗೇಶರಾಯರು ವಿನಂತಿಸುತ್ತಾರೆ.

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೋಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು

ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ

ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

Incorporated in British India, liability of Members limited.

ಅಂದಿನ 'ಕೇಡಿಗಳು'-ಇಂದು ವಿಶ್ವಮಾನ್ಯರು

ಪೋಲೀಸ್ ದಾಖಲೆಯಿಂದ ಪ್ರಪಂಚ ನಾಯಕತ್ವ

ಕೈದಿಯಾದರೆ ಕೀರ್ತಿಬರುವುದು

ಮೂವತ್ತೈದು ವರ್ಷಗಳ ಹಿಂದಿನ ರಷ್ಯದ ಪೋಲಿಸ್ ಇಲಾಖೆಯ ದಾಖಲೆ ಪುಸ್ತಕಗಳನ್ನು ಪರಿಶೀಲಿಸಿದಾಗ ಅದರಲ್ಲಿ ಜೊಸೆಫ್ ವಿಸಾರಿಯೊನೊವಿಚ್ ಜುಗಾಶ್ವಿಲಿ ಎಂಬೊರ್ವ 'ಖೂನಿಕಾರ'ನ ಮೂರು ಫೋಟೊಗಳನ್ನೂ ಹೆಬ್ಬೆಟ್ಟು ಗುರುತನ್ನೂ ಕಾಣಬಹುದು. ಅದೊಬ್ಬ ಬೊಲ್ಶೆವಿಕ್ ಸಮತಾವಾದಿ ಕ್ರಾಂತಿಕಾರ ತರುಣನ ದಾಖಲೆಯಾಗಿತ್ತು. ಗುಪ್ತ ಪೋಲಿಸರು ಅವನ ಮೇಲೆ ಸದಾ ಕಣ್ಣಿಟ್ಟುಕೊಂಡಿದ್ದರು.

ಇಂದವನ ಹೆಸರು ಜೊಸೆಫ್ ಸ್ಟೆಲಿನ್ ಎಂದಾಗಿದೆ. ಅವನು ರಷ್ಯದ ಸಮತಾವಾದಿ ಸಂಯುಕ್ತ ಪ್ರಜಾಪ್ರಭುತ್ವದ ಅಧ್ಯಕ್ಷನೂ ಸೇನಾಪತಿಯೂ ಆಗಿ ಪ್ರಭಾವಶಾಲಿ ವಿಶ್ವಪ್ರಭೃತಿಗಳಲ್ಲಿ ಓರ್ವನೆನಿಸಿದ್ದಾನೆ. ಇದೊಂದು ರಾಜಕೀಯ ವಿಧಿ ವೈಚಿತ್ರ್ಯವೆನ್ನಬಹುದು.

"ಮಾರ್ಶಲ್ ಸ್ಟೆಲೀನರನ್ನು 'ಖೂನಿಕಾರ'ನೆಂದು ದಾಖಲೆ ಮಾಡಿದ ಆ ಪೋಲಿಸ್ ರಿಕಾರ್ಡುಗಳನ್ನು ಜೋಪಾನವಾಗಿರಿಸಲ್ಪಡಬೇಕಾದುದು ಆವಶ್ಯಕ. ಕಾರಣ ಅವುಗಳಲ್ಲಿ ಅಮರವಾದ ಒಂದು ನೀತಿ ಸಂದೇಶವಿದೆ. ಅದೆಂದರೆ: "ಪೋಲಿಸ್ ದಾಖಲೆಗೆ ಒಳಪಟ್ಟ ಮನುಷ್ಯನ ಮೇಲೆ ಅತೀ ಕಾಠಿಣ್ಯ ತೋರಿಸಬೇಡಿರಿ. ನಾಳೆ ಆತನು ತನ್ನ ದೇಶದ ಸರ್ವಶ್ರೇಷ್ಠ ನಾಯಕನಾಗಬಹುದು." ಹೀಗೆಂದು ಓರ್ವ ಪ್ರಖ್ಯಾತ ಲೇಖಕರು ಬರೆಯುತ್ತಾರೆ. ಇನ್ನೂ ಕೆಲವೊಂದು ವಿಷಯಗಳನ್ನು ಅವರು ಹೀಗೆ ತಿಳಿಸುತ್ತಾರೆ:

"ಇಂದು ಸ್ಟೆಲೀನ್ ಮತ್ತಿತರ ರಶ್ಯನ್ ಕ್ರಾಂತಿಕಾರರ ಹೆಸರುಗಳು ಚೆನ್ನಾಗಿ ನಮ್ಮ ಸ್ಮರಣೆಗೆ ಬರಲು ಅವರ ಇಂದಿನ ಅಸಾಮಾನ್ಯ ವಿಶ್ವಖ್ಯಾತಿಯೇ ಕಾರಣವೆನ್ನಬೇಕು. ಅವರಿಂದ ಅಂತರಾಷ್ಟ್ರೀಯ ವ್ಯವಹಾರದಲ್ಲಿ ಅಪ್ರತಿಮ ಪ್ರಭಾವಶಾಲಿಗಳಾಗಿರುವರು.

"ಯುರೋಪಿನ ಜೈಲುಗಳಲ್ಲಿ ಅರೆವಾಸಿಯಷ್ಟು ಬೊಲ್ಶೆವಿಕ್ ತತ್ವಜ್ಞಾನಿಗಳಿಂದ ತುಂಬಲ್ಪಟ್ಟವು." ಹೀಗೆಂದು ಇಂದಿನ ರಶ್ಯನರು ಹೆಮ್ಮೆಯಿಂದ ನುಡಿಯುತ್ತಾರೆ. ಲೆಲಿನರಂತೆ ಸ್ಟೆಲೀನರೂ ಅಂತಹ ಒಬ್ಬ ತತ್ವಜ್ಞಾನಿಗಳು. ಇಂತಹ ಬೊಲ್ಶೆವಿಕರು ಅಧಿಕಾರಕ್ಕೆ ಬಂದಾಗ ಮಿ। ಚರ್ಚಿಲ್ಲರು ಅವರನ್ನು "ಕೊರಳು ಕೊಯ್ಯುವ ವಿಶ್ವಾಸ ಘಾತುಕಿಗಳು" ಎಂದೂ "ಭೂಮಿಯ ಕೆಸರುಕೊಂಪೆಗಳು" ಎಂದೂ ವರ್ಣಿಸಿದರು.

ಮಹಾತ್ಮಾಗಾಂಧಿಯವರು ಮಾಜಿ ವ್ಯಾಸ್‌ರಾಯರಾಗಿದ್ದ ಲೋರ್ಡ್ ಇರ್ವಿನರಿಂದ ವ್ಯಾಸ್‌ರಾಯ ಭವನಕ್ಕೆ ಆಹ್ವಾನಿಸಲ್ಪಟ್ಟಾಗ ಚರ್ಚಿಲ್ ಸಾಹೇಬರಿಗೆ ದಂಗು ಬಡೆದಂತಾಗಿ ಅವರು "ಅರ್ಧನಗ್ನ ವಕೀಲನೊಬ್ಬನು ಚಕ್ರವರ್ತಿ ಪ್ರತಿನಿಧಿಗಳಿಂದ ಆಹ್ವಾನಿತರಾಗಿ ವ್ಯಾಸ್‌ರಾಯ್ ಅರಮನೆಯ ಮೆಟ್ಟಲನ್ನು ಹತ್ತಿಹೋಗುವುದೆಂದರೇನು?" ಎಂದು ಉದ್ಗರಿಸಿದ್ದರು.

ಆದರೆ ಚಕ್ರವರ್ತಿಗಳ ಮುಖ್ಯಪ್ರಧಾನರು "ಕೊರಳು ಕೊಯ್ಯುವ ವಿಶ್ವಾಸಿಘಾತಿಗಳ" ಆಜ್ಞೆಯಂತೆ ಯಾಲ್ಟಾಕ್ಕೆ ಹಾರಿ ಬಂದ ದೃಶ್ಯವೂ ಇನ್ನೂ ಬೆರಗನ್ನು ಉಂಟುಮಾಡುವಂತಹುದು.

ಕ್ರಿಸ್ತ, ಗಾಂಧಿ, ಸೊಕ್ರೆಟಿಸ್

ಇತಿಹಾಸವನ್ನು ಮೆಗುಚಿದರೆ ಅಲ್ಲೂ ಇಂತಹ ವಿಚಿತ್ರಗಳನ್ನು ನಾವು ಕಾಣಬಹುದು. ಧ್ಯೇಯವಾದಿಗಳೂ, ನೀತಿ ಬೋಧಕರೂ, ತತ್ವಜ್ಞಾನಿಗಳೂ, ವಿಜ್ಞಾನಿಗಳು, ಕಲಾಗಾರರು, ಜನಾಂಗ ಮುಖಂಡರೂ, ರಾಜಕೀಯ ದಂಗೆಕಾರರು ಮತ್ತು ಜನತಾ ಸಂಕಷ್ಟನಿವಾರಣೆಗಾರರು ತಮ್ಮ ಜೀವನದ ಅಮೂಲ್ಯ ಅವಧಿಯನ್ನು ಸೆರೆಮನೆಗಳಲ್ಲೊ, ಹಿಂಸಾಲಯಗಳಲ್ಲೊ ಕಳೆದಿರುವುದನ್ನು ನಾವು ಓದಬಹುದು. ಇವರಲ್ಲಿ ಅನೇಕರು ತಮ್ಮ ಧ್ಯೇಯಕ್ಕಾಗಿ ಮರಣಕ್ಕೂ ಒಳಪಡಿಸಲ್ಪಟ್ಟಿರುವರು.

ಯೇಸು ಕ್ರಿಸ್ತನನ್ನು ಶಿಲುಬೆ ಕಂಭಕ್ಕೇರಿಸಿದು ಇಂದು ಒಂದು ಮತೀಯ ವಿಚಾರವಾಗಿರುತ್ತಾದರೂ, ಅತೀ ಪ್ರಾಚೀನ ಕಾಲದಲ್ಲಿ ನಿರಂಕುಶ ಆಳ್ವಿಕೆಗೆ ವಿರೋಧವಾಗಿ 'ದಂಗೆ' ಎದ್ದ ಅಮೋಘ ನಿದರ್ಶನವು ಅದಾಗಿರುವುದು. ಪ್ರಾಪಂಚಿಕ ದೃಷ್ಟಿಯಿಂದ ಅದು (ಅಯಶಸ್ವಿ) ಯಾಗಿರುವುದು. ಕಾರಣ ಆ ಮಹಾ ನಾಯಕನನ್ನು ಹಿಡಿದು, ವಿಚಾರಣೆಗೆ ಒಳಪಡಿಸಿ, ಶಿಕ್ಷೆ ವಿಧಿಸಲ್ಪಟ್ಟು, ಮರಣಕ್ಕೆ ಗುರಿಕರು ತಮ್ಮನ್ನು ಹಿಂಸಿಸಿದವರ ಒಡೆಯರಾದ ನಿದರ್ಶನಗಳು ಹೇರಳವಿದೆ. ಇಟೇಲಿಯನ್ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ ಮಾಝಿನಿಯು ಪೋಲಿಸ್ ಶೋಧನೆಯಲ್ಲಿದ್ದನು. ಮೆಕ್ಸಿಕೋದ ಅಧ್ಯಕ್ಷನಾದ ಜೊರೇಝುನು ಪ್ರಖ್ಯಾತ 'ದಂಗೆಖೋರ'. ಕೊನೆಗೆ ತನ್ನ ದೇಶದ ಅಧ್ಯಕ್ಷನಾಗಿ ತನ್ನನ್ನು ಕೊಲ್ಲಲು ಆಜ್ಞೆಮಾಡಿದ ಅರಸನ್ನೇ ಗಲ್ಲಿಗೇರಿಸುವ ಆಜ್ಞೆ ಕೊಟ್ಟ.

ಇಂದು ಅಗಾಧರಾದ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರಿಗೆ ನಿರ್ಭೀತಿಯಿಂದ ಧಿಕ್ಕರಿಸಿನಿಂತಿರುವ ವೆಲೆಲಾ ಅವರು ಬ್ರಿಟಿಷ್ ಪೋಲಿಸರಿಂದ ಪತ್ತೆ ಮಾಡಲ್ಪಡುತಿದ್ದರು. ಕೆಲವು ವರ್ಷಗಳ ಹಿಂದೆ ಅವರು ಜನಾಂಗ ಸಭೆಯ ಅಧ್ಯಕ್ಷ ಗಡಿಯನ್ನು ಅಲಂಕರಿಸಿದ್ದರು. ಅವರ ದಾಖಲೆಗಳು ಬ್ರಿಟಿಷ್ ಪೋಲಿಸ್ ಇಲಾಖೆಯಲ್ಲಿ ಇಂದೂ ಇವೆ.

ಸ್ವಾತಂತ್ರ್ಯಕ್ಕೆ ಬಾಧಕ

ಇಂದು ಭಾರತದಲ್ಲಿ ಪ್ರತಿಯೋರ್ವ ಸಿ. ಐ. ಡಿ. ಪೋಲೀಸನೂ ತನ್ನ ಗುಪ್ತ ವರದಿ ಪುಸ್ತಕವನ್ನಿಟ್ಟುಕೊಳ್ಳುತಿದ್ದಾನೆ. ಸಾವಿರಾರು 'ಖೂನಿಕಾರ'ರ 'ಕ್ರಾಂತಿ ಪ್ರಚೋದಕ'ರ ಕುರಿತು ಅದರಲ್ಲಿ ಲಿಖಿತವಾಗಿವೆ. ಆದರೆ ದೇಶ ಪ್ರೇಮವೇ ಈ 'ಖೂನಿಕಾರ'ರ ದೊಡ್ಡ 'ದ್ರೋಹ'. ಈ ಪೋಲಿಸ್ ವರದಿ ದಾಖಲೆಗಳು ಪ್ರತಿ ದೇಶಭಕ್ತನ ತಲೆದಿಂಬಿನಡಿಯ ಹಾವಿನಂತಾಗಿದೆ. ಅವು ನಮ್ಮ ನಾಗರೀಕ ಸ್ವಾತಂತ್ರ್ಯಕ್ಕೆ ಬಾಧಕರವಾದುವುಗಳು. ೧೯೩೭ರಲ್ಲಿ ಅಧಿಕಾರಕ್ಕೆ ಬಂದ ಕೊಂಗ್ರೆಸ್ ಮಂತ್ರಿಗಳು ಇವುಗಳನ್ನು ಅಗ್ನಿಗಾಹುತಿ ಮಾಡದಿದ್ದದು ತುಂಬಾ ವಿಷಾದಕರ ಸಂಗತಿ. ಇನ್ನು ಮುಂದೆ ಬರುವ ರಾಷ್ಟ್ರೀಯ ಸರಕಾರವಾದರೂ ತನ್ನ ಮೊದಲ ಶಾಸನವಾಗಿ ಇವುಗಳ ಉರಿಸುವಿಕೆಯನ್ನು ಮಂಜೂರು ಮಾಡಲೆಂದು ಹಾರೈಸೋಣ".

ಕೊನೆಗೆ ಆ ಲೇಖಕರು ಹೀಗೆ ಸೂಚಿಸುತ್ತಾರೆ: "ಸ್ಟೆಲೀನರ ಪೋಲಿಸ್ ದಾಖಲೆಯ ಚಿತ್ರಗಳಿಂದ ಮಿ। ಚರ್ಚಿಲ್, ಎಮೆರಿಗಳು ಒಂದು ಪಾಠವನ್ನು ಕಲಿಯಲಿ. ಜೈಲಿನಿಂದ ಹೊರಬರಲು ಅವರು ಅಜಾದ್ ನೆಹುರುಗಳಿಗೆ ಓಗಸ್ಟ್ ಠರಾವನ್ನು ಹಿಂದೆಗೆಯುವಂತೆ ತಿಳಿಸುತ್ತಾರೆ. ರಶ್ಯದ ಝಾರನೂ ಅವನ ಸರಕಾರದವರೂ ಸ್ಟೆಲೀನ್ ಮತ್ತವನ ಅನುಯಾಯಿಗಳಿಂದ ಬೊಲ್ಶೆವಿಸಂ ತತ್ವವನ್ನು ಹಿಂದೆಗೆಯುವಂತೆ ನಿರೀಕ್ಷಿಸಿದ್ದರು. ಅಲ್ಲಿ ಅವರು ಹಿಂದೆಗೆಯಲಿಲ್ಲ, ಹಿಂಜರಿಯಲಿಲ್ಲ. ಆದರೆ ಅವರಿಂದು ಯಾವ ಸ್ಥಾನದಲ್ಲಿರುವರೆಂದು ನೋಡಿ. ಅವರನ್ನು ಪೋಲಿಸ್ ದಾಖಲೆಯಲ್ಲಿರಿಸಿದವರೂ ಎಲ್ಲಿರುವರಿಂದು?"

ಉಡುಪಿಯಲ್ಲಿ ವಿವಾಹ ಸಮಾರಂಭ



ಸಖುಬಾಯಿ ಪಿ. ವಿ. ಪ್ರಭು

ಶ್ರೀಮಾನ್ ಕೊಚ್ಚಿಕಾರ್ ನರಸಿಂಹ ಪೈ ಅವರ ದ್ವಿತೀಯ ಕುಮಾರಿ ಸೌ. ಸಖುಬಾಯಿ, ಮತ್ತು ಅಂಕೋಲೆಯ ಶ್ರೀಮಾನ್ ವಿಶ್ವನಾಥ ಪ್ರಭುಗಳವರ ಚಿರಂಜೀವರಾದ ಶ್ರೀಯುತ ಪಿ. ವಿ. ಪ್ರಭು ಇವರ ವಿವಾಹವು ಉಡುಪಿಯಲ್ಲಿ ತಾ. ೧೩-೫-೪೫ರಂದು ವಿಜೃಂಭಣೆಯಿಂದ ಜರಗಿಸಲಾಯಿತು.

ಮೈಸೂರಿನ ಶ್ರೀಮನ್ಮಹಾಜರು ತಮ್ಮೊಬ್ಬ ಕಾರ್ಯವಾಹಕರ ಮೂಲಕ ಘನ ಆಶೀರ್ವಾದ ಪಾರಿತೋಷಗಳನ್ನು ಕಳುಹಿಸುವ ಕೃಪೆ ಮಾಡಿದ್ದರು. ಉಡುಪಿಯ ಅಷ್ಟ ಮಠಾಧಿಪತಿಗಳು ತಮ್ಮ ಪಾರುಪತ್ಯಗಾರರ ಮೂಲಕ ಆಶೀರ್ವಚನಗಳ ಕಳುಹಿಸಿದ್ದರು. ಘನವಂತರಾದ ಸಂಸ್ಥಾನ ಮಂತ್ರಿ, ದಿವಾನರುಗಳೂ, ಹ್ಯೆಕೋರ್ಟು ನ್ಯಾಯಾಧೀಶರಗಳೂ, ಎಡ್ವೋಕೇಟ್ ಜನರಲ್‌ರವರೂ, ಕ್ರೌನ್ ಪ್ರೊಸಿಕ್ಯೂಟರರುಗಳೂ ಜಿಲ್ಲಾ ಜಡ್ಜರುಗಳೂ, ಪತ್ರಿಕಾ ಸಂಪಾದಕರೂ ಮಾತ್ರವಲ್ಲ ಬೊಂಬ್ಬಾ, ಕಾನ್‌ಪೂರ್, ಮದ್ರಾಸ್, ಮುಂತಾದ ಕಡೆಗಳಲ್ಲಿನ ವಾಣಿಜ್ಯ ಸಂಸ್ಥೆಗಳವರೂ ಮತ್ತು ಇತರ ಅನೇಕ ಪ್ರಭಾವಶಾಲಿ ಮಹನೀಯರೂ ನೂತನ ದಂಪತಿಗಳಿಗೆ ಉಡುಗೊರೆ ಶುಭಸಂದೇಶಗಳನ್ನೂ ಕಳುಹಿಸಿಕೊಟ್ಟಿರುವರು.

ಇದೊಂದು ಅಂತರ್‌ಪ್ರಾಂತೀಯ ವಿವಾಹವಾಗಿದೆ. ವಿಭಾಗಿಸಲ್ಪಟ್ಟ ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡಾ ಜಿಲ್ಲೆಗಳನ್ನು ಎರಡು ಪ್ರಾಮುಖ್ಯ ಕುಟುಂಬಗಳು ಇದರಿಂದ ಒಟ್ಟುಗೂಡಿಸಲ್ಪಟ್ಟವು.

ಮಾಡಿದರು. ಇದರಿಂದ ಇಡೀ ಮಾನವ ಇತಿಹಾಸವೇ ಬದಲಾಯಿತು.

ಅದಕ್ಕಿಂತಲೂ ಹಿಂದೆ ಜಗತ್ತಿನ ಸರ್ವಶ್ರೇಷ್ಠ ತತ್ವಜ್ಞಾನಿಗಳಲ್ಲಿ ಓರ್ವನೆಂದು ಪರಿಗಣಿಸಲ್ಪಟ್ಟ ಸೊಕ್ರೆಟೀಸನಿಗೂ ಅಂತಹದೇ ದುರ್ವಿಧಿಯು ಪ್ರಾಪ್ತವಾಯಿತು. ಅವನು "ಡಿಫೆನ್ಸ್ ಆಫ್ ಗ್ರೀಕ್ ರೂಲ್ಸ್"ಗಳಿಗೆ ವಿರೋಧವಾಗಿ ಬೋಧಿಸ ತೊಡಗಿದನು. ಅದರಿಂದ ಅವನನ್ನು ಮರಣಕ್ಕೀಡು ಮಾಡಲಾಯಿತು. ಗ್ರೀಕರ ಮತ್ತು ರೋಮಾಯರ ಕಾಲದಲ್ಲಿ ಪೋಲಿಸ್ ದಾಖಲೆಗಳಿರುತಿದ್ದರೆ ಅದರಲ್ಲಿ ಕ್ರಿಸ್ತ ಮತ್ತು ಸೊಕ್ರೆಟಿಸನ ಉಲ್ಲೇಖಗಳಿರುತಿದ್ದುವೇನೊ!

ಪೋಲಿಸ್ ದಾಖಲೆಯಲ್ಲಿದ್ದವರನೇ

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ॰ ಸೂ॰- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

Application are invited for the flowing post for the Saraswathi Vidyalaya High School to be newely opened at Ganguli (S. K.) on 20th June 1945 from experienced and qualified hands.

1. One Headmaster.
2. One Asistant.
3. Two Secondary Grade Trained Teachers.
4. One Drawing master.
5. One Y. M. C. A. Trained Physical Instructor.

Applications should reach the undersigned before 15-6-1945.

The Manager
S. V. High School
Ganguli (S. K.)

ಬ್ರಿಟನಿನಲ್ಲಿ ಚುನಾವಣೆ ಯುದ್ಧ

ಟೋರಿ ಮಜೂರಪಕ್ಷಗಳ ಬಲಾಬಲ

ಅಂತ್ಯದಲ್ಲಿ ಎಲ್ಲಾ ಬ್ರಿಟಿಷರೂ ಒಂದೇ

ಯುದ್ಧಾನಂತರದ ಪುನಃರ್ರಚನೆಯ ಕುರಿತು ಬ್ರಿಟಿಷ್ ವಿವಿಧ ಪಕ್ಷಗಳೊಳಗೇ ಕಚ್ಚಾಟವೆದ್ದು ಐದು ವರ್ಷಗಳ ತನಕ ಯುರೋಪ್ ಯುದ್ಧದ ಗಂಡಾಂತರವನ್ನು ತೋರಿಸುತ್ತಾ ಬಿಗಿಹಿಡಿದ ಚರ್ಚಿಲ್ಲರ ಸಮಿಶ್ರ ಸರಕಾರವು ಒಡೆದು ಹೋಯಿತು. ಚರ್ಚಿಲ್ಲರ ಟೋರಿಗಳೊಳಗೂ ಎಟ್ಲಿಯವರ ಲೇಬರ್ ಪಕ್ಷದವರೊಳಗೂ ಇನ್ನು ಮುಂದೆ ಒಂದು ಕ್ಷಣ ಮೇಳಾಮೇಳಿಯಾಗದೆಂದು ಖಚಿತವಾಯಿತು. ಚುನಾವಣೆಗಳಾಗಲೇ ಬೇಕೆಂದು ಲೇಬರ್ ಪಕ್ಷವು ಹಟ ಹಿಡಿಯಲು ರಾಜಿನಾಮೆಕೊಟ್ಟು ತಮ್ಮ ಮಂಡಳದೊಳಗಿನ ಮಜೂರ ಸದಸ್ಯರನ್ನು ಹೊರಗೆ ಹಾಕಬೇಕಾಯಿತು. ಚುನಾವಣೆಗಳ ಫಲಿತಾಂಶ ಕೇಳುವ ವರೆಗೂ ಚಕ್ರವರ್ತಿ ವರ್ತಿಗಳು ಚರ್ಚಿಲ್ಲರನ್ನೇ ತಾತ್ಕಾಲಿಕ ಮಂತ್ರಿಮಂಡಳ ರಚನೆಯ ಹೊಣೆಗಾರಿಕೆ ಕೊಟ್ಟಿರುವರು.

ಚುನಾವಣೆಗಳಿಂದೇನು?

ಇನ್ನು ಚುನಾವಣೆಯ ವಿಷಯ. ಚರ್ಚಿಲ್ಲರ ಧೋರಣೆಯು ಜಗತ್ಪ್ರಸಿದ್ಧವಾದುದು. ಅವರು 'ಬ್ರಿಟಿಷ್ ಸಾಮ್ರಾಜ್ಯವನ್ನು ದಿವಾಳಿ ಮಾಡಲು ಚಕ್ರವರ್ತಿಗಳ ಪ್ರಥಮ ಸಚಿವ'ರಿಂದೂ ಆಗಲಾರರು. ಅಂದ ಮೇಲೆ ಪುನಃ ಟೋರಿ ಸರಕಾರವು ಅಧಿಕಾರಕ್ಕೆ ಬಂದರೆ ವಸಾಹತುಗಳ ಸಮಸ್ಯೆ ಬಗೆ ಹರಿಯುವಂತಿಲ್ಲವೆಂಬುದು ಸ್ವತ ಸಿದ್ಧವಾಗುತ್ತದೆ.

ಚುನಾವಣೆ ಗಲಾಟೆಯಲ್ಲಿ ಲಂಡನಿಗೆ ಹೋದ ವೆವೆಲ್ ಸಾಹೇಬರ ಸೂಚನೆಗಳೇನಾದರೂ ಮಾನವ್ಯಾಗಬಹುದೋ ಎಂದು ಅನೇಕರಲ್ಲಿ ನಿರೀಕ್ಷಣೆಗಳಿವೆ. 'ಕ್ರಿಪ್ಸ್ ಯೋಜನೆ'ಯು ಇನ್ನೂ 'ಭಾರತೀಯರ ಮುಂದಿವೆ' ಎಂದು ಎಂಟನಿ ಏಡನ್ನರು ಫ್ರಿಸ್ಕೊದಲ್ಲಿ ಸ್ಪಷ್ಟ ಹೇಳಿಬಿಟ್ಟದ್ದರಿಂದ ಅಲ್ಲಿಗೆ ಭಾರತದ ಪ್ರಶ್ನೆ ಮುಗಿದಂತೆಯೇ ಸರಿ.

ಲೇಬರ್ ಪಕ್ಷದವರಾದರೊ ದೊಡ್ಡ ದೊಡ್ಡ ಸೂಚನೆಗಳನ್ನು ಧ್ಯೇಯಗಳನ್ನು ತಮ್ಮ ಜನರ ಮುಂದಿಟ್ಟಿರುವರು. ಅವರು ಭಾರತ ಬಿಕ್ಕಟ್ಟನು ಬಿಡಿಸಿ, ಅಲ್ಲಿನ ರಾಜಕೀಯ ಪಕ್ಷಗಳೊಡನೆ ಸಂಧಾನ ನಡೆಸುವರು. ಬಂಧಿತ ಮುಂದಾಳುಗಳನ್ನು ಬಿಡುವರು. ಕ್ರಮವಾಗಿ ಬಾರತವು ಸ್ವಸ್ವಾತಂತ್ರತೆ ಹೊಂದುವಂತೆ ಸಹಾಯ ಮಾಡುವರು. ರಷ್ಯದೊಡನೆ ಸೌಹಾರ್ಧದಿಂದಿರುವರು.

ಲೇಬರ್ ಧೋರಣೆ

ಆದರೆ ಲೇಬರ್ ಪಕ್ಷದ ಹಿಂದಿನ ದಾಖಲೆಗಳು ಅಷ್ಟೊಂದು ಉತ್ತೇಜಕವಾಗಿಲ್ಲ. ವಸಾಹತುಗಳ ಪ್ರಶ್ನೆ ಬಂದಾಗ ಬ್ರಿಟನಿನ ಎಲ್ಲಾ ಪಕ್ಷಗಳೂ ಒಟ್ಟು ಸೇರುವುದು ಅಲ್ಲಿನ ಜನತೆಯ ಸಾಮ್ರಾಜ್ಯ ಲಾಲಸೆಯ ಒಂದು ಲಕ್ಷಣ. ಲೇಬರ್ ಮುಖಂಡರು ಚುನಾವಣೆ ಕಾಲದಲ್ಲಿ ಕೊಡುವ ವಾಗ್ದಾನಗಳು ಅವರು ಮತ್ತೆ ಅಧಿಕಾರಕ್ಕೆ ಬಂದ ಕೂಡಲೇ ಸಾವಿರಾರು ನೆಪಗಳ ತೆರೆಯ ಹಿಂದೆ ಮರೆಯಾಗುತ್ತವೆಂಬುದು ಹಿಂದೆ ಮಿ। ಮೆಕ್ ಡೊನಾಲ್ಡರು ಪ್ರಧಾನಿಗಳಾಗಿದ್ದಾಗಲೇ ತಿಳಿದು ಹೋಗಿದೆ ಎಂದು ಹಲವು ಭಾರತೀಯ ಪತ್ರಿಕೆಗಳು ತೋರಿಸಿ ಕೊಟ್ಟಿವೆ. ಮಾತ್ರವಲ್ಲ. ಮೊನ್ನೆಯ ವರೆಗೆ ಮಜೂರ ಪಕ್ಷದವರು ಚರ್ಚಿಲ್ಲರ ಸಮಿಶ್ರ ಮಂತ್ರಿಮಂಡಳದಲ್ಲಿದ್ದಾಗಲೂ ತಮ್ಮ ಸ್ಪಷ್ಟವಾದ ಧೋರಣೆಯನ್ನು ಮುಂದೊತ್ತಲು ಪ್ರಯತ್ನ ಮಾಡಲಿಲ್ಲ.

ಹೀಗಿದ್ದರೂ ಟೋರಿಗಳಿಗಿಂತ ಮಜೂರ ಪಕ್ಷವರೆವೆಷ್ಟು ಮಟ್ಟಿಗಾದರೂ ಆದೀಬಂತೆ ಭಾವನೆಗೆ ಬಹುಮತವಿದೆ. ಆದರೆ ಟೋರಿಗಳು ತಮ್ಮ ಜನತೆಯನ್ನುಜಪಾನ್ ಯುದ್ಧದ ಗಂಡಾಂತರದಿಂದಲೂ, ಸಾಮ್ರಾಜ್ಯನಷ್ಟವಾಗಿ ಹೋಗುವ ಭಯದಿಂದಲೂ ಹೆದರಿಸಿ ವೋಟುಗಳನ್ನೂ ತಮ್ಮ ಕಡೆಗೇ ಸೆಳೆಯಬಹುದೆಂದೂ ನಿರೀಕ್ಷಿಸಲಾಗಿದೆ. ಬ್ರಿಟಿಷ್ ಸಾರ್ವಜನಿಕರಿಗೆ ಚರ್ಚಿಲ್ಲರ ಮುಂದಾಳತ್ವದಲ್ಲಿದ್ದಷ್ಟು ಪೂಜ್ಯಭಾವನೆ ಬೇರೆ ಯಾವ ಉದಾತ್ತ ಧ್ಯೇಯಗಳಲ್ಲೂ ಇಲ್ಲವೆನ್ನಬಹುದು. ಸಾಮ್ರಾಜ್ಯ ಕಳೆದು ಹೋಗಿ ಇಂಗ್ಲೆಂಡು ವರ್ಚಸ್ಸು ರಹಿತವಾದರೆ ತಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದೆಂದು ಆ ಜನರು ಸಂದೇಹಗೊಳ್ಳದಿರಲಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ ಚರ್ಚಿಲ್ಲರೇ ಪುನಃ ಮುಖ್ಯ ಮಂತ್ರಿಗಳಾಗಿ, ಅಮೆರಿ ಸಾಹೇಬರು ಭಾರತ ಮಂತ್ರಿಗಳಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

The Canara Banking Corporation, Ltd.

(Incorporated in British Inbia)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

ಸಿಹಿ ಸುದ್ದಿ ಸಂಗ್ರಹ

ಹೊಟೇಲು ವ್ಯಾಪಾರವು ಅಮೇರಿಕದ ದೊಡ್ಡ ಉದ್ಯಮಗಳಲ್ಲಿ ಏಳನೇ ಸ್ಥಾನ ಪಡೆಯುತ್ತದೆ. ಅಲ್ಲಿನ ಫಲಹಾರ ಭೋಜನ ಮಂದಿರಗಳಲ್ಲಿ ೫೫೦ ಸಾವಿರ ಕೆಲಸಗಾರರಿದ್ದು ಪ್ರತಿ ವರ್ಷ ಅವರು ೨೦೦ ಕೋಟಿ ಅತಿಥಿಗಳಿಗೆ ಸೌಕರ್ಯವನ್ನು ಒದಗಿಸುತ್ತಾರೆ.

* * *

ಕಿತ್ತಳೆ ಹಣ್ಣಿನ ರಸವು ನಮ್ಮ ಎಲುಬುಗಳಿಗೆ ಅವಶ್ಯವಿರುವ ಪೋಷಕ ವಸ್ತುಗಳನ್ನು (ಕೆಲ್ಶಿಯಂ) ಒದಗಿಸುತ್ತದೆ ಮಾತ್ರವಲ್ಲ ನಾವು ತಿಂದ ಇತರ ಆಹಾರ ವಸ್ತುಗಳಿಂದಲೂ ಕೆಲ್ಶಿಯಂ ಅನ್ನು ಸಂಗ್ರಹಿಸಿ ದೇಹದೊಳಗೆ ಶೇಖರಿಸಿಡುತ್ತದೆ.

* * *

ಸುಮಾರು ೫ ಶತಮಾನಗಳ ಹಿಂದಿನ ಯುರೋಪಿನಲ್ಲಿ ಪುಸ್ತಕಗಳಿಗೆ ಹೊರ ಕವಚ (ಬ್ಯಾಂಡು)ವನ್ನು ಹಾಕುವ ಕೆಲಸವು ಪವಿತ್ರ ವೃತ್ತಿಯೆನಿಸಿತ್ತು. ಅದನ್ನು ಆಗಿನ ಕ್ರೈಸ್ತ ಪಾದ್ರಿಗಳು ಮಾತ್ರ ಮಾಡುತಿದ್ದರು.

* * *

ಗಾಜಿನ ಹರಳುಗಳು ಒಡೆಯಲ್ಪಟ್ಟಾಗ ತೆಗೆದ ಚಲಚಿತ್ರದಿಂದ ಅದರಲ್ಲುಂಟಾಗುವ ಒಂದು ಘಾಯದ ವೇಘವು ಸೆಕುಂದಿಗೆ ಒಂದು ಮೈಲಷ್ಟಿದೆಯೆಂದು ತಿಳಿದು ಬಂದಿದೆ.

* * *

ಅಮೇರಿಕದ ಖಗೋಳ ಪರಿಶೋಧನ ಮಂದಿರದಲ್ಲಿ ಜಗತ್ತಿನ ಅತೀ ದೊಡ್ಡ ದುರ್ಬೀನು ಇದೆ. ಅದರ ಭೂತ ಕನ್ನಡಿಯು ೨೦೦ ಇಂಚು ವ್ಯಾಸವುಳ್ಳದಿದೆ. ಒಂದು ಮೈಲು ದೂರದ ನೊಣವನ್ನು ಇದರಿಂದ ನೋಡಿದರೆ ಅದರ ಸೂಕ್ಷ್ಮವಾದ ಕಣ್ಣುಗಳೂ ಸ್ಪಷ್ಟವಾಗಿ ಕಾಣಿಸುತ್ತವೆ.

* * *

ಕಾಫಿಯು ಪಾನೀಯವಾಗಿ ಉಪಯೋಗಿಸಲ್ಪಡುವ ಮೊದಲು ಔಷಧಿಯಾಗಿ ತೆಗೆದುಕೊಳ್ಳಲ್ಪಡುತಿತ್ತು. ಘಾಯಗಳನ್ನು ಬೋರಿಕ್ ಪೌಡರಿನಿಂದ ತೊಳೆಯದಂತೆ ಬ್ರೆಜಿಲಿನ ಜನರು ಕಾಫಿ ಬೀಜ ಅದ್ದಲ್ಪಟ್ಟ ನೀರಿನಿಂದ ನೋವಿನ ಕಣ್ಣುಗಳನ್ನು ತೊಳೆಯುತ್ತಾರೆ. ಬ್ರೆಜಿಲಿನಲ್ಲಿ ಕಾಫಿ ಬೀಬದ ಬೆಳೆ ಎಷ್ಟು ಹೆಚ್ಚೆಂದರೆ ಅಲ್ಲಿನ ರೈಲುಗಳಲ್ಲಿ ಬೆಂಕಿ ಉರಿಸಲು ಅದನ್ನು ಉಪಯೋಗಿಸುತಿದ್ದರಂತೆ.

* * *

ಶಾಂಘಾಯಿಯಲ್ಲಿ ಕಾಗದ ಕೊರತೆಯನ್ನು ಸಾರಸ್ಯವಾದೊಂದು ರೀತಿಯಲ್ಲಿ ಸುಧಾರಿಸಲು ಪ್ರಯತ್ನ ಮಾಡುತ್ತಾರೆ. ಅಲ್ಲಿನ ದಿನ ಪತ್ರಿಕೆಗಳು ಮಾರಲ್ಪಡುವುದಕ್ಕಿಂತ ಹೆಚ್ಚಾಗಿ ಬಾಡಿಗೆಗೆ ಕೊಡಲ್ಪಡುವವು. ಒಬ್ಬನು ಓದಿ ಮುಗಿಸಿದ ಕೂಡಲೇ ಪತ್ರಿಕೆ ಮಾರುವ ಹುಡುಗನು ಅದನ್ನು ಬೇರೆಯೊಬ್ಬನಿಗೆ ಕೊಡುವನು. ಕಮ್ಮಿ ಪಕ್ಷದಲ್ಲಿ ಒಂದು ಪ್ರತಿ ಹತ್ತಿಪ್ಪತ್ತು ಜನರಿಂದ ಓದಲ್ಪಡುತ್ತದೆ-ಎಲ್ಲವೂ ಬಾಡಿಗೆಗೆ.

* * *

ಮರಿ ಇಡುವ ಪ್ರಾಣಿಗಳು ಜಗತ್ತಿನಲ್ಲಿ ೧೩ ಸಾವಿರ ತರದವುಗಳಿವೆ. ೨೪ ಸಾವಿರ ಪಕ್ಷಿ ಜಾತಿಗಳೂ, ೭ ಸಾವಿರ ಹಾವು ಉರಗ ಬೇಧಗಳೂ ನೋಡ ಸಿಗುತ್ತವೆ.

* * *

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡ್ಪುಪಿ

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ, ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 8—6—1945 [ಸಂಚಿಕೆ 12]

ಸಾಧಿಸಿದರೆ ನೀವೂ ಖಡ್ಗ ನುಂಗಬಹುದು

ಸ್ವಲ್ಪ ಅಧೈರ್ಯಪಟ್ಟರೆ ಮರಣವೇ ಸರಿ

ಅಮೆರಿಕನ್ ಸರ್ಕಸ್‌ವಾಲನ ವಿಚಿತ್ರ ಅನುಭವ

ವಿದ್ಯುತ್ ದೀಪದ ನಳಿಗೆಯನ್ನು ನುಂಗುವರು

'ಸಾಧಿಸಿದರೆ ಸಬಳ ನುಂಗಬಹುದು' ಎಂಬುದಕ್ಕೆ ನಮ್ಮ ಅರ್ಥವು ಇತರ ಕಾರ್ಯ ಸಾಧನೆಯ ಕ್ಷೇತ್ರಗಳಿಗೆ ಅನ್ವಯಿಸುವಂತಿದ್ದರೂ. ಜಗತ್ತಿಗೆ ಸರ್ಕಸ್ ಕಸರತ್ತುಗಾರರು ತಮ್ಮ ಹಗಲು ರಾತ್ರೆಯ ಸಾಧನೆಯಿಂದ ಹರಿತವಾದವೂ ಮೊನಚಾದುದೂ ಆದ ಖಡ್ಗಗಳನ್ನು ನುಂಗಿ ತಮ್ಮ ಪ್ರೇಕ್ಷಕರನ್ನು ಬೆರಗುಗೊಳಿಸುವರು. ವಿದ್ಯುತ್ ಪ್ರಕಾಶದ ಉದ್ದವಾದ ನಿಯನ್ ಲ್ಯಾಟ್ ಎಂಬ ೨೪ ಇಂಚಿನ ನಳಿಗೆಗಳನ್ನೂ ಅವರು ನುಂಗಿ ಸಭಿಕರನ್ನು ದಂಗು ಬಡಿಸುವುದು. ಈಚೆಗೆ ಆ ದೇಶದಲ್ಲಿ ಬಹಳ ಆಕರ್ಷಕ ಕಸರತ್ತು ಕಾರ್ಯಕ್ರಮಗಳಲ್ಲಿ ಒಂದೆನಿಸಿದೆ.

ನಮ್ಮ ಕಡೆಗಳಲ್ಲಿ ಅಪರೂಪವಾಗಿ ಸಾರ್ವಜನಿಕ ಪ್ರದರ್ಶನ ಮಾಡುವ ಚೀನಿ ಡೊಂಬರಾಟದವರೂ ಇಂತಹ ಭಯಾನಕ ಸಾಧನೆಗಳನ್ನು ಮಾಡಿ ತೋರಿಸುವುದನ್ನು ಅನೇಕರು ಕಂಡಿರಬಹುದು. ಕಸರತ್ತು ಆಟಗಳಲ್ಲಿ ಚೀನಿಯರಿಗೆ ಪ್ರಥಮ ಸ್ಥಾನಸಲ್ಲುವುದು. ಅವರಲ್ಲಿ ಕೆಲವರು ಸಪೂರವಾದ ಚಿಕ್ಕ ನೀರುಹಾವುಗಳನ್ನು ಬಾಯಿಯೊಳಗೆ ನುಂಗಿ ಮೂಗಿನೊಳಗಿಂದ ತರಿಸುವ ಅತೀ ರೋಮಾಂಚಕವಾದ ಕೆಲಸವನ್ನೂ ಮಾಡಿ ತೋರಿಸುವವರೂ ಇದ್ದಾರೆ.

ಆದರೆ ಇಂತಹ ವಿಚಿತ್ರ ಆಟಗಳನ್ನು ಮಾಡಿ ತೋರಿಸುವುದರಲ್ಲಿ ಪ್ರಖ್ಯಾತರಾದ ಲ್ಯೂಸ್ ಲೊಂಗ್ ಎಂಬ ಅಮೇರಿಕನ್ ಕಸರತ್ತುಗಾರರು ತಮ್ಮ ಅನುಭವದ ಕುರಿತು ಒಂದು ಲೇಖನ ಬರೆದಿದ್ದಾರೆ. ಅದನ್ನು ಈ ಕೆಳಗೆ ಸಂಕ್ಷೇಪಿಸಲಾಗುವುದು:

ನಾನು ಮೊದಲನೆ ಸಲಕ್ಕೆ ಎರಡು ಅಡಿಯ ಒಂದು ನಿಯೊನ್ ಟ್ಯೂಬನ್ನು ನುಂಗಿದ ಸನ್ನಿವೇಶವು ಎಂದಿಗೂ ಮರೆಯುವಂತಹದಲ್ಲ. ಆ ಕಾಲದ ಕಸರತ್ತುಗಾರರು ನುಂಗುವ ನಿಯನ್ ಟ್ಯೂಬುಗಳು ನೇರವಾಗಿರದೆ ಕುದುರೆ ಲಾಳದ ಆಕೃತಿಯಲ್ಲಿ ಬಗ್ಗಿಸಲ್ಪಟ್ಟಿದ್ದವು. ಇದಕ್ಕೆ ಕಾರಣವೆಂದರೆ ಇಲೆಕ್ಟ್ರಿಕ್ ಕಂಪೆನಿಯವರು ನುಂಗು ಕಸರತ್ತಿಗಾಗಿ ನಿಯನ್ ಟ್ಯೂಬುಗಳನ್ನು ಮಾರುತ್ತಿರಲಿಲ್ಲ. ಅನೇಕ ಖಡ್ಗ ಭಕ್ಷಕರು ಇದನ್ನು ನುಂಗಲು ಪ್ರಯತ್ನ ಪಟ್ಟು ಕೊಲ್ಲಲ್ಪಟ್ಟಿದ್ದಾರೆ. ಕೊರಳೊಳಗೆ ತೂರಲ್ಪಟ್ಟ ವಿದ್ಯುತ್ಪ್ರವಾಹದ ಗಾಜಿನ ನಳಿಗೆಗಳು ಒಡೆದು ಹೋದರೆ ಮರಣವೇ ಸಿದ್ಧ. ಇದರಿಂದ ಅಂತಹ ಟ್ಯೂಬುಗಳ ವಿಚಾರ ಅಪಪ್ರಚಾರವಾಗಿ ವಿದ್ಯುತ್ ಅಕ್ಷರಗಳಿಗೆ ಉಪಯೋಗಿಸಲ್ಪಡುವ ತಮ್ಮ ನಿಯನ್ ಟ್ಯೂಬುಗಳ ವ್ಯಾಪಾರಕ್ಕೆ ದಕ್ಕೆ ತಗಲುವುದೆಂದು ವಿದ್ಯುತ್ ಉಪಕರಣ ತಯಾರಕ ಸಂಸ್ಥೆಗಳು ನಂಬಿದ್ದುವು.

ವಿದ್ಯುತ್ ಪ್ರಕಾಶದ ಈ ನಿಯನ್ ಟ್ಯೂಬುಗಳನ್ನು ನುಂಗುವುದನ್ನು ನೋಡಿದರೆ ಅದು ಬಹಳ ಮನೋಹರವಾಗಿ ಕಾಣುವುದು. ಇಂತಹ ಪ್ರದರ್ಶನ ಕಾಲದಲ್ಲಿ ಸರ್ಕಸ್ ಮಂದಿರದೊಳಗಿನ ಎಲ್ಲಾ ದೀಪಗಳೂ ಆರಿಸಲ್ಪಡುವವು. ನುಂಗಲ್ಪಡುವ ನಳಿಗೆಯೊಳಗೆ ಮಾತ್ರ ಒಂದು ವಿದ್ಯುತ್ ಜ್ಯೋತಿಯು ಕೆಂಪು ಇಲ್ಲವೆ ನೀಲ ಪ್ರಕಾಶದಿಂದ ಉರಿಯುತಿದ್ದು ಅದು ಕಸರತ್ತುಗಾರನ ಬಾಯೊಳಗಿಂದ ಹೊಟ್ಟೆಯನ್ನು ಸೇರಿದಾಗ ಅವನ ಶರೀರವೆಲ್ಲವೂ ಜ್ಯೋತಿರ್ಮಯವಾಗುವುದು. ದೇಹದೊಳಗಿಂದ ಅದರ ಮಂದ ಪ್ರಕಾಶವು ಒಂದು ತರದ ಅಲೌಕಿಕವೂ ಸ್ಫೂರ್ತಿದಾಯಕವೂ ಆದ ಭಾವನೆಯನ್ನುಂಟುಮಾಡುವುದು. ನಿರ್ಬಲ ಮನಸ್ಕರಾದ ಅನೇಕಾನೇಕ ಮಕ್ಕಳು ಮಹಿಳೆಯರು ಇದನ್ನು ಕಂಡು ಭಾವನಾವೇಷದಿಂದ ಮೂರ್ಛೆ ಹೋಗುವುದೂ ಇದೆ. ಇದರಿಂದ ಈ ಆಟವು ಬಹಳ ಇನ್ನಷ್ಟು ಹೆಚ್ಚು ಜನಪ್ರಿಯವಾಗುವುದು.

ನಿಯನ್ ಟ್ಯೂಬ್ ಇಂಗ್ಲಿಷ್ U ಅಕ್ಷರಾಕೃತಿಯಲ್ಲಿದ್ದು ಬಾಯಿಂದ ಹೊರ ನಿಲ್ಲುವ ಅದರ ಎರಡು ತುದಿಗಳಿಗೆ ವಿದ್ಯುತ್ ಸರಿಗೆಗಳ 'ಕನೆಕ್ಷನ್' ಇರಬೇಕಾಗುತ್ತದೆ. ಹೀಗೆ ನಿಯನ್ ನಳಿಗೆ ನುಂಗುವುದೆಂದರೆ ಎರಡು ನಳಿಗೆಗಳನ್ನು ನುಂಗಬೇಕಾಗುತ್ತದೆ. ಇದು ಖಡ್ಗ ನುಂಗುವಿಕೆಗಿಂತಲೂ ಹೆಚ್ಚು ಅಪಾಯಕರ. ಅವನ್ನು ಕೊರಳದಾರಿಯೊಳಗೆ ಕಳುಹಿಸಬೇಕಾದರೆ ಅವು ಆದಷ್ಟು ಸಪೂರವಾಗಿರಬೇಕು. ಹೆಚ್ಚು ಸಪೂರವಾದರೆ ಅರ್ಧದಲ್ಲೇ ಮುರಿಯಬಹುದು.

ಒಂದು ಸಲ ನನಗೆ ಇಂತಹ ನಳಿಗೆಯನ್ನು ನುಂಗುವಾಗ ಒಂದು ತರದ ಅಧೈರ್ಯವುಂಟಾಯಿತು. ಆಗ ನನ್ನ ಗುರುಗಳಾದ 'ಅಗ್ನಿ ಭಕ್ಷಕ' ಫ್ಲಾಮೊ ಅವರಿಗೆ ನನ್ನ ಕಳವಳ ಸ್ಥಿತಿಯನ್ನು ಕುರಿತು ತಿಳಿಸಿದೆ. ಕೆಲವು ದಿನಗಳ ಮುಂಚೆ ಪ್ರಖ್ಯಾತ ನಿಯನ್ ನುಂಗುಗಾರರಲ್ಲಿ 'ರಾಜ'ನೆನಿಸಿದನೊಬ್ಬನು ನಳಿಗೆ ಮುರಿತದಿಂದ ಮರಣ ಪಟ್ಟ ವಾರ್ತೆ ನಮಗೆ ತಿಳಿದಿತ್ತು. ಅಷ್ಟೇ ಪ್ರವೀಣನಾದ ಇನ್ನೊಬ್ಬನು ವಿದ್ಯುತ್ ಪ್ರವಾಹದಲ್ಲುಂಟಾದ ಒಂದು ಅವ್ಯವಸ್ಥೆಯಿಂದ ಮಡಿದಿದ್ದನು.

ಹೆದರಿದರೆ ಇಂತಹ ನುಂಗು ಕಸರತ್ತುಗಳನ್ನು ಮಾಡಲು ಸಾಧ್ಯವಿಲ್ಲ. ಕೊರಳು ಬಿಗಿದು ಹೋಗಿ ಬಿಸಿಯಾದ ಆ ನಳಿಗೆಯು ಒಳಗಿನ ಸ್ನಾಯುಗಳಿಗೆ ಅಂಟಿಕೊಳ್ಳುವುದು ಮತ್ತೆ ಅದನ್ನು ಹಿಂದಕ್ಕೆ ಎಳೆಯಲಾಗುವುದಿಲ್ಲ.

ಅಂದು ನಾನು ಹೇಗೋ ಧೈರ್ಯಮಾಡಿ ಕೆಲಸಕ್ಕಾರಂಭಿಸಿದೆ. ಮೊದಲು ಮುಖವನ್ನು ಮೇಲೆ ಮಾಡಿಕೊಂಡು ಬಾಯಿ ಮತ್ತು ಕೊರಳಿನ ದಾರಿಯನ್ನು ನೇರ ಮಾಡಿಕೊಳ್ಳಬೇಕು. ನಳಿಗೆ ಕಂಠಪ್ರವೇಶ ಮಾಡಿದಾಗ ಬೆಚ್ಚಗಾಗುತ್ತದೆ. ಕೆಳಗೆ ಕಳುಹಿಸಿದ ನಳಿಗೆ ಅರ್ಧದಲ್ಲೇ ಎದೆ ಎಲುಬಿಗೆ ಬಡಿಯಿತು. ಒಂದು ಸಲಕ್ಕೆ ನನ್ನ ಶರೀರವಿಡೀ ಕಂಪಿಸಿತು. ಮೆಲ್ಲಗೆ ಒತ್ತಿ ಹೇಗೋ ಇನ್ನೂ ಕೆಳಗೆ ಕಳುಹಿಸಿದಾಗ ಅದು ಮತ್ತೆ ಅಭ್ಯಂತರವಿಲ್ಲದೆ ಸಂಪೂರ್ಣ ಒಳಸೇರಿತು. ನಂತರ ಕೆಲವು ಕ್ಷಣದೊಳಗೆ ಅದನ್ನು ಹೊರ ತೆಗೆದೆ. ಕೂಡಲೇ ನನ್ನ ಗುರುವಿನ ಬಳಿ ಓಡಿ ಕೇಳಿದೆ 'ಅದು ನನ್ನ ದೇಹದೊಳಗೆ ಪ್ರಕಾಶಿಸಿತೇನು?' "ಮಗನೇ, ನೀನೊಂದು ಗೂಡು ದೀಪದಂತೆ ಶೋಭಿಸಿದೆ' ಎಂದವರು ಶ್ಲಾಘಿಸಿದರು.

ಮರುದಿನ ರಾತ್ರೆ ಪ್ರದರ್ಶನವು ಇನ್ನೂ ಹೆಚ್ಚಿನ ಯಶಸ್ವಿಯಾಯಿತು. ಕಾರಣ ಅಂದು ಎರಡು ಮಹಿಳೆಯರು ಮೂರ್ಛೆಯಾದರು. ಒಂದು ಮಗುವು ಅರೆ ಮೂರ್ಛೆಯಾಗಿ ಅದರ ಹೆತ್ತವರು ನಮ್ಮ ಕಂಪೆನಿಯ ಮೇಲೆ ದಾವೆ ಮಾಡಿದಾಗ ನನ್ನ ಕೀರ್ತಿ ಜನಜನಿತವಾಯಿತು.

ವಿದ್ಯುತ್ ನಳಿಗೆ ಮತ್ತು ಖಡ್ಗ ನುಂಗುವಿಕೆಯಲ್ಲಿ ಕಣ್ಣು ಕಟ್ಟು ಮಾಡುವವರು ಹೆಚ್ಚು ಮಂದಿ. ಮತ್ತು ಇಂಥ ಸಾಧನೆ ಮಾಡುವವರು ಹೆಚ್ಚಾಗಿ ಮನೆ ಬಿಟ್ಟು ಓಡಿ ಬಂದ ತರುಣರು. ಇತರ ಕಸರತ್ತು, ಜಾದು, ವಿದ್ಯೆಗಳನ್ನು ಕಲಿಯಬೇಕಾದರೆ ವಿಶೇಷ ಬುದ್ಧಿ ಮತ್ತು ಶರೀರ ಸಾಮರ್ಥ್ಯಗಳು ಬೇಕು. ಸುಲಭವಾಗಿ ಕಲಿಯಲಾಗುವ ಒಂದು ವಿದ್ಯೆಯೆಂದರೆ ಖಡ್ಗ ನುಂಗುವಿಕೆ.

ನಾಲ್ಕೈದು ತಿಂಗಳೊಳಗೆ ಒಬ್ಬನು ತಳವಾರು ನುಂಗುವ ಪ್ರವೀಣನಾಗಬಹುದು. ಮೊದಲು ಎಷ್ಟು ಉದ್ದದ ಖಡ್ಗವನ್ನು ನಾವು ನುಂಗಬಹುದೆಂದು ತಿಳಕೊಳ್ಳಬೇಕು. ಮೊದ ಮೊದಲು ಎಲ್ಲಿಯತನಕ ಅದು ಒಳಗೆ ಹೋಗುತ್ತದೊ ಅಲ್ಲಿಗೆ ಅಂದಿನ ಅಭ್ಯಾಸ ನಿಲ್ಲಿಸಬೇಕು. ಪ್ರತಿ ನುಂಗಲ್ಪಟ್ಟ ಖಡ್ಗದ ಅಂಶವನ್ನು (ಹಲ್ಲಿನ ತನಕ ಮುಟ್ಟಿದ ಭಾಗ) ಗುರುತು ಮಾಡಿಕೊಳ್ಳಬೇಕು.

ಮೊದಲು ಒಂದೆರಡು ತಿಂಗಳು ನಿಮಗೆ ಬಹಳ ವೇದನೆಯ ಅನುಭವವಾಗುವುದು. ಆ ಮೇಲೆ ಉಕ್ಕಿನ ಪಟ್ಟಿಯ ಹೆದರಿಕೆ ಸಹಜವಾಗಿ ಮಾಯವಾಗುವುದು. ಉದ್ದದ ಮನುಷ್ಯರು ಉದ್ದದ ಖಡ್ಗವನ್ನು ನುಂಗಬಹುದು. ನಾನು ೨೬ ಇಂಚಿನ ಖಡ್ಗವನ್ನು ನುಂಗಿ ದಾಖಲೆ ಮಾಡಿದ್ದೇನೆ.

ಪ್ರಾಚೀನ ಇಜಿಪ್ತ್ ಮತ್ತು ರೋಮನ್ ಅರಸರಕಾಲದಲ್ಲಿ ಖಡ್ಗ ಭಕ್ಷಕರು ಇದ್ದರೆಂಬುದಕ್ಕೆ ಇತಿಹಾಸದ ದಾಖಲೆಗಳಿವೆ. ನಂತರ ಡೊಂಬರಾಟದವರೂ, ಸಂಚಾರಕ ಸರ್ಕಸ್ ಕಂಪೆನಿಯವರೂ ಅದನ್ನು ಅಭ್ಯಾಸಿಸ ತೊಡಗಿದರು. ಅಮೇರಿಕದಲ್ಲಿ ಅದು ೧೮೯೦ರಲ್ಲಿ ಪ್ರಖ್ಯಾತಿ ಪಡೆಯಿತು. ನಂತರ ವರ್ತಮಾನ ಪತ್ರಿಕೆಗಳಲ್ಲಿ ಅದರ ವಿಷಯ ನಿರಾಂತಕವಾದ ವರದಿಗಳು ಬರಹತ್ತಿದವು. ಪತ್ರಿಕೆಗಳು ಖಡ್ಗ ನುಂಗುವವರ ಅನೇಕ 'ಕಣ್ಣು ಕಟ್ಟು'ಗಳನ್ನು ಬಯಲು ಮಾಡಿದರು.

ಟೊಳ್ಳಾದ ಖಡ್ಗ ಹಿಡಿಯೊಳಗೆ ಖಡ್ಗದ ಪಾನ ಮಡಚಿಕೊಂಡರೆ ಅದು ಕಣ್ಣು ಕಟ್ಟು ಎನಿಸುವುದು. ಇಲ್ಲಿ ಖಡ್ಗ ಹೊಟ್ಟೆಯೊಳಗೆ ಹೋಗದೆ ಬಾಯಿಯ ಒಳಗೆ ಮಾತ್ರ ನಿಲ್ಲುತ್ತದೆ. ಅನೇಕ ಸ್ತ್ರೀ ಕಸರತ್ತುಗಾರರು ಹೀಗೆ ಮೋಸಮಾಡಿ ಸಿಕ್ಕಿಬಿದ್ದಿರುವರು. ಆದುದರಿಂದ ನೀವೆಂದಾದರೂ ಅಂತಹ ಆಟ ನೋಡಿದರೆ ಅದು ನಿಜವೊ ಠಕ್ಕೋ ಎಂದು ಖಚಿತ ಮಾಡಿಕೊಳ್ಳಿರಿ.

In the court of the District Judge of South Kanara.

In the matter of the guardianship of minor Sitharama.

1. M. Yamuna 2. M. Krishnappa 3. Kanthu Petitioners.

To all whom it may concern:—

Please take notice that the above named petitioners have filed this application for the appointment of the 2nd petitioners as the guardian of the Property and the 1st Petitioner as the guardian the person of the minor Sitharam and the said petition is posted on 11-6-1945 before the said court and the final orders will be passed on the said date.

M. VENKATRAYA KAMATH,
Advocate for Petitioners.
Mangalore, 7-6-1945

ನಿಷ್ಪ್ರಯೋಜಕ ಸೌಂದರ್ಯ

ಮೇಸ್ಕರೀಟಿನ ಕೌಂಟನು ಸಂಸಾರ ಪ್ರಿಯ. ಕೌಂಟಿನಳ ಸುಂದರಳೂ, ಸೌಂದರ್ಯ ಪ್ರಿಯಳು. ಆದರೂ ೩೦ ವರ್ಷ ಪ್ರಾಯದಲ್ಲಿ ಅವಳಿಗೆ ಏಳು ಮಕ್ಕಳು. ತನ್ನ ಸೌಂದರ್ಯವನ್ನು ಮೆರಿಸಿ ಕೆಲಕಾಲ ಸುಖ ಪಡೆಯಬೇಕೆಂದು ಅವಳೊಂದು ಉಪಾಯ ಮಾಡಿದಳು.

ಎಂಟು ತಿಂಗಳುಗಳಲ್ಲಿ ನೀವು ನನ್ನಲ್ಲಿ ಪ್ರತಿಯೊಂದು ತರದ ಸಂದೇಹವನ್ನು ತಾಳಿದಿರಿ. ಅದನ್ನು ನೀವೇ ನನ್ನ ಬಳಿ ಹೇಳಿಯೂ ಇದ್ದೀರಿ. ಅದೆಂತಹ ಅಪಮಾನ! ಆದರೆ ನನ್ನ ಈ ಸೌಂದರ್ಯವನ್ನು ನಾಶಮಾಡಲು ನಿಮ್ಮಿಂದ ಸಾಧ್ಯವಾಗಲಿಲ್ಲ. ನಾನು ಜನರಿಂದ ಆಕರ್ಷಿಸಲ್ಪಡುವುದನ್ನೂ, ಅವರಿಂದ ಆದರಿಸಲ್ಪಡುವುದನ್ನೂ ನೀವು ಸಹಿಸಲಾರದಾದಿರಿ. ವೃತ್ತ ಪತ್ರಿಕೆಗಳಲ್ಲಿ ನನ್ನನ್ನು 'ಪೇರಿಸಿನ ಅತ್ಯಂತ ಸುಂದರಿ' ಎಂದು ಶ್ಲಾಘಿಸಿದುದು ನಿಮ್ಮಲ್ಲಿ ಹೊಟ್ಟೆಯುರಿಯನ್ನುಂಟುಮಾಡಿತು. ಅದಕ್ಕಾಗಿ ನೀವು ನನ್ನನ್ನು ಪ್ರತಿಯೊಬ್ಬರಿಂದಲೂ ದೂರವಿರಿಸಲು ಪ್ರಯತ್ನಪಟ್ಟಿರಿ. ಅದಕ್ಕಾಗಿ ನೀವೊಂದು ಹೇಯವಾದ ಭೀಕರ ಉಪಾಯವೊಂದನ್ನು ಹುಡುಕಿದಿರಿ. ನನ್ನನ್ನು ಸದಾ ಮಕ್ಕಳು ಹಡಿಯುವುದರಲ್ಲೇ ಮುಳುಗಿಸಿಡುವುದು ನಿಮ್ಮ ಧೋರಣೆಯನ್ನಾಗಿ ವಹಿಸಿದಿರಿ. ಇದರಿಂದಾದರೂ ಪ್ರತಿಯೋರ್ವನೂ ನನ್ನ ಮೇಲೆ ತಿರಸ್ಕಾರ, ಜಿಗುಪ್ಸೆಗಳನ್ನು ಹೊಂದಲಿ ಎಂದು ನಿಮ್ಮ ಭಾವನೆ. ಇದನ್ನು ಮಾತ್ರ ಅಲ್ಲಗಳೆಯದಿರಿ! ಕೆಲವು ಕಾಲ ಈ ನಿಮ್ಮ ಧೋರಣೆಯು ನನಗೆ ತಿಳಿಯಲೇ ಇಲ್ಲ. ಕಡೆಗಂತೂ ನಾನದನ್ನು ಊಹಿಸದಿರಲಿಲ್ಲ. ನಿಮ್ಮ ತಂಗಿಯೊಡನೆ ಕೂಡಾ ನೀವು ಈ ವಿಷಯವನ್ನು ಕೊಚ್ಚಿಕೊಂಡಿರಿ. ಅವಳು ಅದನ್ನು ನನ್ನೊಡನೆ ಹೇಳಿದಳು. ಏಕೆಂದರೆ ಅವಳಿಗೆ ನನ್ನ ಮೇಲೆ ತುಂಬಾ ಪ್ರೀತಿಯಿತ್ತು. ಮತ್ತವಳು ನಿಮ್ಮ ಈ ಪಶುವಿನಂತಹ ಓರಟುತನಕ್ಕೆ ಅಸಹ್ಯಪಟ್ಟುಕೊಂಡಿದ್ದಳು.

"ಹಾ! ನಿಮ್ಮ ಆ ಬಲತ್ಕಾರದಿಂದ ಬಾಗಿಲು ದೂಡಿ ಬರುವುದನ್ನೂ ಬೀಗ ಮುರಿದು ಒಳಗೆ ಬರುವುದನ್ನೂ ನೆನಪಿಗೆ ತಂದುಕೊಳ್ಳಿರಿ. ಹನ್ನೊಂದು ವರ್ಷಗಳ ತನಕ ನೀವು ಮರಿಗಳನ್ನು ಹೊರುವ ಹೆಣ್ಣು ಕುದುರೆಯಂತೆ ನನ್ನನ್ನು ಅಸಹನೀಯವಾದ ಶಿಕ್ಷೆಗೆ ಗುರಿ ಮಾಡಿದಿರಿ. ಮತ್ತೆ ನಾನು ಗರ್ಭವತಿಯಾಗಲು ನೀವು ನನ್ನ ಮೇಲೆ ಜಿಗುಪ್ಸೆ ಪಟ್ಟುಕೊಂಡು ನನ್ನನ್ನು ಹೆರಿಗೆ ಸಲುವಾಗಿ ಹೊಲಗದ್ದೆಗಳಿಂದ ಆವೃತವಾದ ಕುಟುಂಬದ ನಾಡು ಮನೆಗೆ ಕಳುಹಿಸಿದಿರಿ. ಕೆಲವು ತಿಂಗಳ ಕಾಲ ಮತ್ತೆ ನಿಮ್ಮ ಪತ್ತೆ ಇಲ್ಲ. ಆ ಮೇಲೆ ಪುನಃ ನವಯುವತಿಯಂತೆ ಹೆರಿಗೆಯಿಂದ ಮರಳಲು ನನ್ನ ಸೌಂದರ್ಯವು ಅಚ್ಚಳಿಯದಂತಿರುವುದನ್ನು ನೋಡಿ ಪುನಃ ವಿಲಾಸ ಮಗ್ನರಾದಿರಿ. ನನ್ನ ಸೌಂದರ್ಯದ ಬೆಡಗಿಗೆ ಮರುಳಾದ ನನ್ನ ಸ್ನೇಹಿತರನ್ನು ಕಂಡು ಪುನಃ ನಿಮ್ಮಲ್ಲಿ ಹೊಟ್ಟೆಕಿಚ್ಚು ಉತ್ಪನ್ನವಾಯಿತು. ಶ್ರೀಮಂತ ಸ್ತ್ರೀಯರಂತೆ ರೂಪವತಿಯಾಗಿಯೂ, ಆಕರ್ಷಕಳಾಗಿಯೂ ಮೆರೆಯಬೇಕೆಂಬ ನನ್ನ ಮಹತ್ವಾಕಾಂಕ್ಷೆಯನ್ನು ನೀವು ಮಣ್ಣುಗೂಡಿಸಲು ಪ್ರಯತ್ನ ಮಾಡಿದಿರಿ. ನನ್ನ ಬಳಿಯಲ್ಲಿ ಕೂತು ಈಗ ನೀವು ಪಡುತ್ತಿರುವ ಕಾಮಾಗ್ನಿಯೇ ನಿಮ್ಮನ್ನೂ ಆಗಲೂ ಆವರಿಸಿತ್ತು. ಅದರಿಂದ ನೀವು ಪುನ ನನ್ನನ್ನು ಆ ಭಯಂಕರ ಯಾತನೆಗೆ ಗುರಿ ಮಾಡಲುಪಕ್ರಮಿಸಿದಿರಿ. ನನ್ನನು ಸದಾ ಹತ್ತಿರವಿರಿಸಿಕೊಳ್ಳಬೇಕೆಂದು ನಿಮ್ಮ ಬಯಕೆಯಾಗಿರದೆ ನನ್ನನ್ನು ಕುರೂಪಿಯನ್ನಾಗಿ ಮಾಡುವುದು ನಿಮ್ಮ ಹಿರಿಯಾಸೆಯಿರುವಂತೆ ಕಾಣುತ್ತದೆ.

"ಇದರ ಜೊತೆಯಲ್ಲೇ ಆ ರಹಸ್ಯವೂ, ಹೇಯವೂ ಆದ ಘಟನೆಯು ನಡೆಯಿತು. ನಿಮ್ಮ ಯೋಚನೆಗಳನ್ನೂ, ಕಾರ್ಯಗಳನ್ನೂ ನೋಡುತಿದ್ದ ಹಾಗೆ ನನ್ನ ಮನಸ್ಸು ಬೇರೆ ಕಡೆಗೆ ತಿರುಗಿತು. ನನ್ನ ಹೊಟ್ಟೆಯಲ್ಲಿ ಹುಟ್ಟಿದವಾದರೂ ನಿಮ್ಮ ಮಕ್ಕಳನ್ನು ನೀವು ಬಿಡದೆ ಕಡುವಾಗಿ ಮೋಹಿಸಿದಿರಿ ನಿಜ. ನೀವು ನನ್ನ ಮೇಲೂ ಅನುರಾಗ ತಾಳಿದಿರಿ. ಆ ಮೇಲೆ ನೀಚವಾದ ನಿಮ್ಮ ಆ ಸಂದೇಹಗಳನ್ನೂ ಬದಿಗಿರಿಸಿ, ಮತ್ತೆ ನನ್ನ ಮೇಲೆ ತಾಯಿತನವನ್ನು ಹೊರಿಸುವ ಕೆಲಸ ಪ್ರಾರಂಭಿಸುವರಾದಿರಿ.

"ಹಾ! ಅದೆಷ್ಟು ಸಲ ನಿಮ್ಮಲ್ಲಿ ಆ ಸಂತೋಷವನ್ನು ನಾನು ಕಂಡಿಲ್ಲ! ನಿಮ್ಮ ಕಣ್ಣುಗಳನ್ನು ನೋಡಿಯೇ ನಾನವುಗಳನ್ನು ಊಹಿಸಿಕೊಂಡೆ. ನೀವು ಮಕ್ಕಳನ್ನು ನಿಮ್ಮ ದಿಗ್ವಿಜಯದ ಕುರುಹಾಗಿ ಪ್ರೀತಿಸಿದಿರೇ ವಿನಹ ಅವು ನಿಮ್ಮ ರಕ್ತಕ್ಕೆ ಹುಟ್ಟಿದವಾಗಿ ನೀವು ತಿಳಕೊಳ್ಳಲಿಲ್ಲ. ಅವು ನನ್ನ ಮೇಲೆ ನೀವು ಗೆದ್ದ ವಿಜಯಗಳು—ನನ್ನ ಯೌವನದ ಮೇಲೆ, ನನ್ನೀ ಸೌಂದರ್ಯದ ಮೇಲೆ, ನನ್ನ ಆಕರ್ಷಣೆಗಳ ಮೇಲೆ, ನನಗೆ ಜನರು ತೆತ್ತ ಶ್ಲಾಘನೆಗಳ ಮೇಲೆ, ನಿಮ್ಮ ಈ ದಿಗ್ವಿಜಯವಾಯಿತು. ನೀವು ಆ ವಿಷಯ ಹೆಮ್ಮೆ ಪಟ್ಟುಕೊಂಡಿದ್ದೀರಿ. ಅದರ ಪ್ರದರ್ಶನ ಮಾಡುತಿದ್ದಿರಲ್ಲವೆ? ಈ ಮಕ್ಕಳನ್ನು ನಿಮ್ಮ ಗಾಡಿಯಲ್ಲಿ ಸಂಚಾರಕ್ಕೆ ಒಯ್ಯುತ್ತೀರಿ, ಅವರಿಗೆ ಬಹಿರಂಗವಾಗಿ ನಾನಾತರದ ಆಟದ ವಸ್ತುಗಳನ್ನು ಕೊಟ್ಟು ಪ್ರದರ್ಶಿಸುತ್ತೀರಿ. ಜನರು ನೋಡಲೆಂದು ಅವರನ್ನು ತೆಗೆದುಕೊಂಡು ನಾಟಕಕ್ಕೆ ಹೋಗುತ್ತೀರಿ. ಅವುಗಳ ಮಧ್ಯದಲ್ಲಿ ನಿಮ್ಮನ್ನು ಜನರು ನೋಡಿ ಎಂತಹ ಕರುಣಾಳು ತಂದೆ!" ಎಂದು ಹೇಳಲೆಂದು. ಎಲ್ಲರೂ ಅದೇ ರೀತಿ ಹೇಳಲೆಂದಲ್ಲವೇ ನಿಮ್ಮ ಉದ್ದೇಶ.'

ಪಾಶವೀ ಶಕ್ತಿಯಿಂದ ಅವನು ಅವಳ ಕೈಯನ್ನು ಹಿಡಿದಿದ್ದನು. ಮತ್ತು ಅವುಗಳನ್ನು ಎಷ್ಟು ಬಲವಾಗಿ ಒತ್ತಿದನೆಂದರೆ ಮೌನವಾಗಿದ್ದ ಹಾಗೆ ಅವಳು ಅಳಲಾರಂಭಿಸಿದಳು-ವೇದನೆಯಿಂದ ಆ ಮೇಲೆ ಪಿಸು ಮಾತಿನಿಂದ ಅವನೆಂದನು:

"ನಿಜವಾಗಿ ನಾನು ನನ್ನ ಮಕ್ಕಳನ್ನು ಪ್ರೀತಿಸುವೆ ತಿಳಿಯಿತೆ? ನೀನು ಈಗ ಹೇಳಿದ ವಿಷಯವು ತಾಯಿಯಾದವಳಿಗೆ ಅವಮಾನಕರವಾದುದು. ಆದರೂ ನೀನು ನನ್ನ ಆಳು. ನಾನು ಯಜಮಾನ—ನಿನ್ನ ಯಜಮಾನ. ನಾನು ನನಗೆ ಬೇಕಾದುದಂತಹದನ್ನೂ, ಯಾವುದನ್ನಾದರೂ, ಯಾವ ಸಮಯದಲ್ಲಾದರೂ ಪಡೆದುಕೊಳ್ಳ ಬಲ್ಲೆ. ನ್ಯಾಯವೂ ನನ್ನ ಕಡೆಗೇ ಇದೆ."

ಅವನು ತನ್ನ ಕಲ್ಲು ಮುಷ್ಟಿಯಿಂದ ಅವಳ ಬೆರಳುಗಳನ್ನು ಪುಡಿ ಮಾಡುತಿದ್ದಂತೆ ತೋರುತಿದ್ದನು. ಆ ಬಿಗಿತದಿಂದ ತಪ್ಪಿಸಲು ಅವಳು ಬಹಳ ಪ್ರಯತ್ನಪಟ್ಟಳು. ಆದರೆ ಸಾಧ್ಯವಾಗಲಿಲ್ಲ. ನೋವಿನಿಂದ ಅವಳು ಅಳ ಹತ್ತಿದಳು. ಕಣ್ಣೀರು ಸುರಿಯ ಹತ್ತಿತು. ಅವನೆಂದನು: "ತಿಳಿಯಿತೆ? ನಾನು ನಿನ್ನ ಯಜಮಾನ, ನಿನಗಿಂತ ಹೆಚ್ಚು ಬಲಶಾಲಿ". ಅವನು ತನ್ನ ಬಿಗಿತವನ್ನು ಸಡಿಸಿದ ನಂತರ ಅವಳು ಕೇಳಿದಳು. "ನಾನೊಬ್ಬ ಧಾರ್ಮಿಕ ಸ್ತ್ರೀಯೆಂದು ನೀವು ತಿಳಕೊಂಡಿದ್ದೀರೋ?"

ಅವನಿಗೆ ಆಶ್ಚರ್ಯವಾಯಿತು. ತಡವರಿಸಿ ಕೇಳಿದನು: 'ಹೌದು' ಯೇಸು ಕ್ರಿಸ್ತನ ದೇಹವಿರಿಸಲ್ಪಟ್ಟ ದೇವಾಲಯದ ಪೀಠದ ಮೇಲೆ ಕೈಯಿಟ್ಟು ಪ್ರಮಾಣ ಮಾಡಿ ಹೇಳಿದರೆ ನೀವು ನಾನು ಹೇಳುವುದನ್ನು ಸತ್ಯವೆಂದು ತಿಳಿಯುವಿರೋ?.

"ಹೌದು"

"ಹಾಗಾದರೆ ಹತ್ತಿರದ ದೇವಾಲಯಕ್ಕೆ ನಡೆಯಿರಿ"

"ನಿನ್ನ ಇಚ್ಛೆ, ಹಾಗಾದರೆ ಹಾಗೆಯೇ ಆಗಲಿ"

ಅವಳು ಗಾಡಿಯವನಿಗೆ ಕರೆದಳು. ಅವನು ಕುದುರೆಯತ್ತ ಕಡೆ ನೋಡುತ್ತಾ ತಲೆಯನ್ನು ಯಜಮಾನಿಯ ಕಡೆ ಬಗ್ಗಿಸಿದನು.

"ಗಾಡಿಯನ್ನು ಸೈಂಟ್ ಫಿಲಿಪ್ಸ್‌ನ ದೇವಾಲಯಕ್ಕೆ ಹೊಡೆ." ಕೂಡಲೇ ಪೇಯರ್ಸ್ ಮಾರ್ಗದತ್ತ ಕಡೆ ವಾಹನವು ತಿರುಗಿತು. ದೇವಾಲಯಕ್ಕೆ ಮುಟ್ಟುವ ತನಕ ಗಂಡಹೆಂಡತಿ ಒಂದು ಶಬ್ದವನ್ನು ಮಾತಾಡಲಿಲ್ಲ. ಚರ್ಚಿನ ಎದುರು ನಿಂತೊಡನೆ ಗ್ರೇಬ್ರಿಯೇಲಳು ಹೊರಗೆ ಇಳಿದಳು. ದೇವಾಲಯದೊಳಗೆ ಪ್ರವೇಶಿಸಿದಳು. ಹಿಂದಿನಿಂದ ಗಂಡನು ಹಿಂಬಾಲಿಸಿದನು. ದೇವ ಪೀಠದ ತನಕ ಅವಳು ಮುಂದರಿದಳು. ಅಲ್ಲಿ ಮೊಣಕಾಲೂರಿ ತನ್ನ ಮುಖವನ್ನು ಕೈಯಲ್ಲಿಟ್ಟು ಬಹಳ ಹೊತ್ತಿನ ತನಕ ಪ್ರಾರ್ಥನೆ ಮಾಡುವವಳಾದಳು. ಅವಳ ಹಿಂದೆ ನಿಂತಿದ್ದ ಗಂಡನು ಅವಳು ಅಳುವುದನ್ನು ಕಂಡನು. ಅವಳು ನಿಶ್ಶಬ್ದವಾಗಿ ಅತ್ತಳು. ಅಸಹನೀಯ ಶೋಕದಲ್ಲಿರುವ ಸ್ತ್ರೀಯರು ಅಳುವಂತೆ ಅವಳು ಅತ್ತಳು. ಅವಳ ಮೈಯಲ್ಲಿ ಒಂದು ತರದ ನಡುಕವುಂಟಾಯಿತು. ಕಡೆಗೆ ದು:ಖದ ಒಂದು ನಿಟ್ಟುಸುರು ಬಿಡುತ್ತ ಅವಳು ಎದ್ದಳು.

ಪರಿಸ್ಥಿತಿಯು ಬಹಳ ಉದ್ದಕ್ಕೆ ಹೋಯಿತೆಂದು ಕೌಂಟನು ಅವಳ ಹೆಗಲ ಮೇಲೆ ಕೈ ಹಾಕಿದನು. ಈ ಸ್ಪರ್ಶದಿಂದ ಚೇತರಿಸಿಕೊಂಡವಳಾಗಿ ಅವಳು ಎದ್ದು ಅವನ ಮುಖವನ್ನೇ ದಿಟ್ಟಿಸಿ ನೋಡುವವಳಾದಳು.

"ನಾನು ನಿಮ್ಮೊಡನೆ ಹೇಳಬೇಕಾದ ವಿಷಯ ಇದು. ನೀವು ಏನು ಮಾಡಿದರೂ ನನಗೆ ಭಯವಿಲ್ಲ. ನೀವು ಬೇಕಾದರೆ ನನ್ನನ್ನು ಕೊಂದು ಹಾಕಿರಿ. ನಿಮ್ಮ ಏಳು ಮಕ್ಕಳಲ್ಲಿ ಒಂದು ಮಾತ್ರ ನಿಮಗೆ ಹುಟ್ಟಿದಲ್ಲ—ಒಂದು ಮಾತ್ರ. ಇದನ್ನು ನಮ್ಮನ್ನು ಆಲಿಸುವ ದೇವರ ಮುಂದೆ ಪ್ರಮಾಣವಾಗಿ ಹೇಳುತ್ತೇನೆ. ನನಗೆ ನೀವು ಗುರಿ ಮಾಡಿದ ಆ ನರಕಯಾತನೆಗೆ ಸೇಡು ತೀರಿಸಿಕೊಳ್ಳುವ ಅದೇ ಒಂದು ದಾರಿ ಮಾತ್ರ ನನಗೆ ತೋರಿತು. ನನ್ನನ್ನು ಪ್ರೀತಿಸಿದ ಆ ಪ್ರಣಯಿ ಯಾರೆಂಬುದನ್ನು ನೀವು ಎಂದಿಗೂ ತಿಳಕೊಳ್ಳಲಾರಿರಿ. ಅವನಾರಿರಬಹುದೆಂದು ನೀವು ಪ್ರತಿಯೊಬ್ಬರನ್ನೂ ಸಂದೇಹದಿಂದ ಕಾಣಬಹುದು. ಆದರೆ ಅವನ್ಯಾರೆಂದು ಕಂಡು ಹಿಡಿಯಲು ನಿಮ್ಮಿಂದ ಸಾಧ್ಯವೇ ಇಲ್ಲ. ನಿಮ್ಮನ್ನು ವಂಚಿಸಲೋಸುಗವಾಗಿಯೇ ನಾನು ಪ್ರೀತಿ ಇಲ್ಲದೆ, ಸಂತೋಷವಿಲ್ಲದೆಯೂ, ಅವನಿಗೆ ನನ್ನ ದೇಹವನ್ನು ಅರ್ಪಿಸಿದೆ. ಅವನು ನನ್ನನ್ನು ಗರ್ಭವತಿಯನ್ನಾಗಿ ಮಾಡಿದನು. ಅವನಿಗೆ ಹುಟ್ಟಿದ ಮಗು ಯಾವುದು? ಅದನ್ನು ನೀವು ತಿಳಿಯಲಾರಿರಿ. ನನಗೀಗ ಏಳು ಮಕ್ಕಳಿವೆ. ಅವುಗಳಲ್ಲಿ ಯಾವುದೆಂದು ನೀವೇ ಹುಡುಕಿರಿ. ನಾನು ನಿಮಗೆ ಈ ವಿಷಯವನ್ನು ಇನ್ನು ಸ್ವಲ್ಪ ಸಮಯದ ನಂತರ ತಿಳಿಸಬೇಕೆಂದಿದ್ದೆ. ಓರ್ವ ಸ್ತ್ರೀಯು ತನ್ನ ಗಂಡನನ್ನು ವಂಚಿಸಿಕೊಂಡ ವಿಷಯವನ್ನು ಅವನಿಗೆ ತಿಳಿಸದೆ ಸೇಡು ತೀರಿಸಿಕೊಳ್ಳಲಿಕ್ಕಾಗುವುದಿಲ್ಲ. ಅದನ್ನು ನನ್ನಿಂದ ಹೇಳಿಸುವಂತೆ ನೀವು ಮಾಡಿದಿರಿ. ಇಲ್ಲಿಗೆ ಆ ವಿಷಯವು ಮುಗಿಯಿತು."

ಅವಳು ದೇವಾಲಯದಿಂದ ಹೊರಗೆ ಧಾವಿಸಿದಳು. ತನ್ನ ಗಂಡನು ಹಿಂದಿನಿಂದ ಬಂದು ಬಲವಾದ ಒಂದು ಏಟಿನಿಂದ ತನ್ನನ್ನು ಕೆಡವಿ ಹಾಕಬಹುದೆಂದು ಅವಳು ನಿರೀಕ್ಷಿಸುತಿದ್ದಳು. ಆದರೆ ಅಂತಹದೇನೂ ನಡೆಯಲಿಲ್ಲ. ಅವಳು ಗುಡಿಯ ಬಳಿಗೆ ಬಂದಳು. ಭಯದಿಂದ ಸ್ತಂಭಿತಳೂ, ದುಃಖದಿಂದ ದಿಗ್ಮೂಢಳೂ ಆದ ಅವಳು ತಟ್ಟನೆ ಗಾಡಿಯೊಳಗೆ ಹಾರಿದಳು. ಗಾಡಿಯವನಿಗೆ "ಬಂಗಲೆಗೆ ನಡಿ" ಎಂದಾಕ್ಷಣ ಕುದುರೆಗಳು ವೇಗವಾಗಿ ಚಲಿಸತೊಡಗಿದವು.

ಮೆಸ್ಕರೆಟಿನ ಕೌಂಟೆಸಳಾದ ಗ್ರೇಬಿಯೇಲಳು ತನ್ನ ಕೋಣೆಯೊಳಗೆ ತನ್ನ ಗಲ್ಲೀ ಸಮಯವನ್ನು ನಿರೀಕ್ಷಿಸುತ್ತಿರುವ ಕೈದಿಯಂತೆ ಊಟದ ಹೊತ್ತನ್ನು ನಿರೀಕ್ಷಿಸುತಿದ್ದಳು. ಅವನು ಏನು ಮಾಡಲಿರುವನು? ಅವನು ಮನೆಗೆ ಬಂದಿರುವನೆ? ಉದ್ವಿಗ್ನನೂ, ನಿರಂಕುಶನೂ, ಹಿಂಸಾಭಿಲಾಷಿಯೂ ಆಗಿದ್ದ ಆತನು ಏನನ್ನು ಯೋಚಿಸುತ್ತಿರಬಹುದು? ಏನನ್ನು ಮಾಡಲು ಅವನು ಮನಸ್ಸು ಮಾಡಿರಬಹುದು? ಬಂಗಲೆಯೊಳಗೆಲ್ಲ ನಿಶಬ್ದವು ಆವರಿಸಿತ್ತು. ಅವಳು ಕ್ಷಣಕ್ಷಣಕ್ಕೂ ಗಡಿಯಾರವನ್ನು ನೋಡುತಿದ್ದಳು. ಸೇವಕಿಯು ಬಂದು ಅವಳಿಗೆ ಸಾಯಂಕಾಲದ ಉಡುಪು ತೊಡಿಸಿ ಹೋದಳು. ಎಂಟು ಗಂಟೆ ಹೊಡೆಯಿತು. ಅದೇ ಸಮಯಕ್ಕೆ ಬಾಗಿಲನ್ನು ಎರಡು ಸಲ ಹೊಡೆದ ಶಬ್ದವಾಯಿತು. ಬಟ್ಲರನು ಬಂದು ಊಟವು ಸಿದ್ಧವಾಗಿದೆ ಎಂದನು.

"ಕೌಂಟರು ಬಂದಿರುವರೇ?"

"ಹೌದು ಶ್ರೀಮತಿಯವರೆ; ಅವರು ಆಗಲೇ ಭೋಜನಾಲಯವಲ್ಲಿರುವರು."

ಬರುವ ವಾರಕ್ಕೆ ಮುಂದರಿಸಲಾಗಿದೆ.

ಇಂಡಿಯಾ ಸೆಕ್ರೆಟರಿ- ಆರ್. ಪಿ. ದತ್

ಬ್ರಿಟಿಷ್ ಚುನಾವಣೆ-ಅಮೆರಿಯವರ ಸೋಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಜಯವೆನ್ನಿಸುವುದು.

ಲಂಡನಿನ 'ಡೈಲಿ ವರ್ಕರ್' ಪತ್ರಿಕೆಯು ಅಮೆರಿಯವರ ಕುರಿತು ಹೀಗನ್ನುತ್ತದೆ.

ಹಿಂದೂದೇಶದಲ್ಲಿ ಜನ್ಮವೆತ್ತಿದ, ಪ್ರಕೃತ ಇಂಡಿಯಾ ಸೆಕ್ರೆಟರಿಗಳಾಗಿದ್ದ ಅಮೆರಿಯವರು ಹಿಂದೂದೇಶದ ಜೈಲರರಾಗಿ ಈಗ ಚುನಾವಣೆಗೆ ನಿಂತಿರುವರು. ಪ್ರತಿಗಾಮಿ ಮನೋಭಾವ, ಜನರನ್ನು-ಹತ್ತು ಸಾವಿರ ಗಟ್ಟಲೆಯಲ್ಲಿ-ಕಾರಾಗ್ರಹಕ್ಕೆ ಅಟ್ಟಿದವರು. ಪಂಡಿತ ನೆಹುರೂ ಅಂತಹ ನಾಯಕರನ್ನು ಸೆರೆಗೆ ಅಟ್ಟಿದವರು. ಅಮೆರಿಯವರ ವಿರೋಧಿಗಳಾದ ಶ್ರೀ. ದತ್ತರವರಾದರೊ, ಇಂಗ್ಲಾಂಡಿನಲ್ಲಿ ಜನಿಸಿದವರು, ಕೊಮ್ಯುನಿಷ್ಟ ಪಕ್ಷದವರು, ಹಿಂದೂದೇಶದ ಸ್ವಾತಂತ್ರ ಸಮಸ್ಯೆಯ ವಿಚಾರದಲ್ಲಿ ಬಹಳ ದುಡಿದವರು. ಅವರಿಗೆ ಪ್ರಜಾಪ್ರಭುತ್ವಶಾಹಿ ಪ್ರಭಾವಗಳ ಬೆಂಬಲವಿದೆ. ಆದರೆ ಈ ವಿಭಾಗದಲ್ಲಿ ಲೆಬರ್ ಪಕ್ಷ ಇತರ ಎರಡು ಪಂಗಡಗಳು ತಮ್ಮ ಹುರಿಯಾಳುಗಳನು ಹಾಕುವ ನಿರ್ಣಯವಾದುದರಿಂದ, ಅವರಿಂದ ಅಮೆರಿಯವರಿಗೆ ತಮ್ಮ ಸ್ಥಾನವನ್ನು ರಕ್ಷಿಸಿಕೊಳ್ಳಲು ಸುಲಭಸಾಧ್ಯವಾಗಬಹುದು. ಆದರೆ ಅಮೆರಿಯವರನು ಅಧಿಕಾರ ಚ್ಯುತರನ್ನಾಗಿ ಮಾಡಬೇಕಾದರೆ, ಅವರ ಯಾವತ್ತೂ ವಿರೋಧಿಗಳು, ೯ ಸಾವಿರ ಚಿಲ್ಲರೆ ಮತಗಳನ್ನು ಗೆಲ್ಲಬೇಕಾಗಿರುವುದರಿಂದ, ಕೊಮ್ಯುನಿಷ್ಟರೂ ಇತರ ಲೆಬರ್ ಪಕ್ಷಗಳೊಡನೆ ಸಂಧಾನ ಬೆಳೆಯಿಸಿ ದತ್ತರು ಮಾತ್ರ ಅಮೆರಿಯವರನ್ನು ವಿರೋಧಿಸುವ ಹಾಗೆ, ಯತ್ನಗಳು ನಡೆಯುತ್ತಿವೆ.

ಅಮೆರಿಯವರ ಕುರಿತು ಈ ಕೆಳಗಿನ ಅಭಿಪ್ರಾಯವುಳ್ಳ ಇನ್ನೊಂದು ಲೇಖವು (ಪ್ರಖ್ಯಾತ ಎಂತೋನಿ ಹರ್ನ ಎಂಬವರಿಂದ) ಪ್ರಕಟವಾಗಿರುತ್ತದೆ.

ಮೊನ್ನೆ ಮಿಲಾನದಲ್ಲಿ (ಇಟಲಿ) ಸೇನೆಗೆ ಆಹುತಿಯಾಗಿ ಮಡಿದವನ ಕುರಿತು ಅಮೆರಿಯವರು ಹಿತೋಕ್ತಿಗಳನ್ನು ನುಡಿದಿರುವರು. ಮುಸಲೇನಿಯು ಮಡಿದಿರುವನು. ಅಮೆರಿಯವರು ಆತನ ಕುರಿತು ಆಡಿದುದು ಆತನು ಜೀವಂತವಿರುವಾಗ. ೧೯೩೩ರಲ್ಲಿ ಆಗ ಅಮೆರಿಯವರು ಹೀಗೆಂದಿದ್ದರು—"ಇರೋಪದ ಶಾಂತಿಕಾರಣದಲ್ಲಿ ಪ್ರತ್ಯಕ್ಷ ರೀತಿ ದುಡಿದು ಉಪಕಾರ ಮಾಡಿದುದರಲ್ಲಿ, ಮುಸಲೇನಿಯಂತಹ ಇನ್ನೊಂದು ವ್ಯಕ್ತಿಯಿಲ್ಲ."

ಆಗ ಅಮೆರಿಯವರು ಕತ್ತಲೆಯಲ್ಲಿದ್ದರು. ಮತ್ತೆ ಒಂದು ಸ್ಥಾನದಿಂದ ಇನ್ನೊಂದು ಲಾಗ ಹಾಕಿ, ಕೊನೆಗೆ ೧೯೪೦ರಲ್ಲಿ ಚರ್ಚಿಲ್ಲರಿಂದ ಇಂಡಿಯಾ ಸೆಕ್ರೆಟರಿಯವರಾದರು.

ಕಳೆದ ಬಾರಿ ಅವರಿಗೆ ೯೦೦೦ ಬಹುಮತಗಳು ದೊರಕಿದ್ದವು. ಈ ಬಾರಿ ಅವರನ್ನು ಹೊರದಬ್ಬಲೆಬೇಕು.

ಪ್ರಿಸ್ಕೊ ಪರಿಷತ್ತು

ಪ್ರಿಸ್ಕೊದಲ್ಲಿ ನಡೆಯುವ ಪರಿಷತ್ತಿನಲ್ಲಿ ದಂಬಾರ್ಟನ್‌ಓಕ್ಸ್ ಸೂಚನೆಗಳ ಆಧಾರ ಮೇಲೆ ಪ್ರಜಾಸತ್ತಾ ನೀತಿಯನ್ನೊಳಗೊಂಡ ಶಾಸನವು ರಚನೆಯಾಗುವ ಕಾರ್ಯವು ಯಶಸ್ಸು ಪಡೆಯುವುದೆಂದು, ಸಂ. ಅಮೇರಿಕಾದ ಸ್ಟೆಟ್ ಸೆಕ್ರೆಟರಿಗಳಾದ ಸ್ಟೆಟನ್ನಿಯನರು, ತಮ್ಮದೊಂದು ಆಕಾಶವಾಣಿ ಭಾಷಣದಲ್ಲಿ ಅಮೆರಿಕನ್ ಪ್ರಜೆಗಳಿಗೆ ಸಾರಿರುವರು. ಮುಂದಕ್ಕೆ ರಚನೆಯಾಗಲಿರುವ ಜಗತ್ ವ್ಯವಸ್ಥೆಯು, ಮುಂದೆ ಯುದ್ಧಗಳೆ ಉಂಟಾಗದಂತೆಯೂ, ಯುದ್ಧದ ಕಾರಣಗಳನ್ನು ನಿವಾರಿಸುವ ಸಾಂಪತ್ತಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ನಿರ್ಮಿಸುವುದರಲ್ಲಿಯೂ, ಅತ್ಯಂತ ಬಲಕಾರಿ ವ್ಯವಸ್ಥೆಯಾಗುವುದೆಂದು ಭರವಸೆಯನ್ನು ಅವರು ವ್ಯಕ್ತಪಡಿಸಿರುವರು. ಜರ್ಮನಿಯನ್ನು ಮುರಿಯಲು ಉಂಟಾದ ಐಕ್ಯತೆಯನ್ನು ಶಾಂತಿ ಸಮಯದಲ್ಲೂ ಬೆಳೆಯಿಸಿಕೊಂಡು ಬರುವ ಮಹಾ ಇಚ್ಛೆಯು ಸಂಯುಕ್ತ ರಾಷ್ಟ್ರಗಳಲ್ಲಿರುವುದೆಂದೂ, ಕೆಲವೊಂದು ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿವೆ ನಿಜ, ಆದರೆ ಅವುಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಿದೆ ಎಂದೂ ಅಭಿಪ್ರಾಯ ಸೂಚಿಸಿರುವರು.

ಮಧ್ಯಪೂರ್ವದ ಫ್ರೆಂಚರ ಅಧೀನದಲ್ಲಿರುವ ಸಿರಿಯಾದಲ್ಲಿ, ಅಲ್ಲಿನ ಜನರ ಸ್ವಾತಂತ್ರ್ಯದ ಮೇಲೆ ಕೈಮಾಡುವ ತರದಲ್ಲಿ ಫ್ರೆಂಚರು ವರ್ತಿಸಿ, ತಮ್ಮ ಅಂಕಿತವನ್ನು ನಡೆಯಿಸಿ ಪ್ರೆಂಚರು ಅಲ್ಲಿ ಸಂಗ್ರಾಮ ಚಟುವಟಿಕೆಯನ್ನು ಕೈಕೊಂಡದ್ದರಿಂದ, ಬಹಳ ಗೊಂದಲವೆದ್ದು, ಕೊನೆಗೆ ಈ ಸಮಸ್ಯೆ ನಿವಾರಣೆಗೆ ಬ್ರಿಟನೂ, ಅಮೇರಿಕಾವೂ, ರಷ್ಯವೂ ಮುಂದೆ ಬಂದಿದ್ದು, ರಾಜಿಯಿಂದ, ಮಾತುಕತೆಗಳಿಂದ ಈ ಸಮಸ್ಯೆಯನ್ನು ನಿವಾರಿಸಲಾಗುವುದೆಂದೂ, ಪ್ರೆಂಚರು (ಡಿ'ಗೋಲೆಯವರು) ಇದಕ್ಕೆ ಒಪ್ಪಿರುವರೆಂದು (ಬ್ರಿಟಿಷ್ ದಂಡುಗಳ ಪ್ರವೇಶವಾದ ನಂತರ) ತಿಳಿದು ಬಂದಿದೆ. ಸಿರಿಯಾ ಜನರ ಸ್ವಾತಂತ್ರ್ಯದ ಕುರಿತು ಇಷ್ಟು ಶ್ರಮವನ್ನು ವಹಿಸುವ ಮಿತ್ರರು, (ಅಮೇರಿಕಾ, ಬ್ರಿಟನು, ರಷ್ಯಾ) ಹಿಂದೂದೇಶದ ಸ್ವಾತಂತ್ರದ ಕುರಿತು ಯಾಕೆ ಲಕ್ಷ್ಯತೋರಿಸುವುದಿಲ್ಲವೆಂದು ಹಿಂದೀಯರಿಗೆ ತೋರಲಿಕ್ಕಿಲ್ಲವೆ?

ಟೆಲಿಗ್ರಾಪ್ ಇಲಾಖೆಯ ಅಲಿಪುರದ (ಕಲ್ಕತ್ತಾ) ಸ್ಟೋರ್ಸ ವಿಚಾರದಲ್ಲಿ, ಇಂಡಿಯಾ ಸರಕಾರಕ್ಕೆ ರೂ. ೪೦ ಲಕ್ಷ ಮಟ್ಟಿಗೆ ಮೋಸ ನಡೆದಿರುವುದಾಗಿ, ಆ ಬಗ್ಗೆ ಸ್ಪೆಶಲ್ ಪೋಲಿಸ್ ಸಿಬಂಧಿಯವರಿಂದ ತನ್ಕಿ ಪ್ರಾರಂಭವಾಗಿರುವುದೆಂದೂ, ಈ ಸಂಭಂದದಲ್ಲಿ ಕಲ್ಕತ್ತೆಯ ಹತ್ತು ಹದಿನೆರಡು ದೊಡ್ಡ ವ್ಯಾಪಾರಿ ಸಂಸ್ಥೆಗಳ ಜಡ್ತಿ ನಡೆದಿದೆ ಎಂದೂ ತಿಳಿದುಬಂದಿದೆ.



ಹರಾಜುದಾರನ ಏಕರೀತಿಯಾದ ಧ್ವನಿಯು ಅಭ್ಯಾಸ ಬಲದಿಂದ ಒಂದೇ ಸಮನಾಗಿ ಮೊರೆಯುವುದು. ಮೋಸಗಾರಿಕೆಯಲ್ಲಿ ಚತುರನಾದ ಆತನು, ತನ್ನ ಸಾಮಾನುಗಳನ್ನು ಪ್ರಶಂಸೆಮಾಡುವುದು, ಅಲ್ಲಿ ಕೂಡಿದ ಜನರು ಹೆಚ್ಚು ಹೆಚ್ಚು ಸವಾಲು ಮಾಡುವಂತೆ ಪುಸಲಾಯಿಸುವುದು, ಇವುಗಳ ಬಲೆಗೆ, ಅನುಭವಶೂನ್ಯರಾದ ಜನರು ಸಿಕ್ಕಿ, ಖರೀದಿಯನ್ನು ಮೇಲು ಮೇಲಕ್ಕೆ ಏರಿಸುವರು. ಹರಾಜು ಸಮಾಪ್ತಿಯಾದಾಗ, ಆಶಾಭರಿತನಾದ ಆಖೈರ್ ಸವಾಲ್‌ದಾರನು ಒಂದು ಕ್ಷಣ ಯೋಚಿಸತೊಡಗುವನು.... ನಾನು ನ್ಯಾಯವಾದ ಬೆಲೆಗಿಂತ ಹೆಚ್ಚು ಕೊಟ್ಟಿರುವೆನೇ? ಎಂದು ಯೋಚಿಸುವನು. ಅವನು ಕೊಡಬೇಕೆಂದಿದ್ದ ಬೆಲೆಗಿಂತಲೂ ಹೆಚ್ಚೇನೊ ಕೊಟ್ಟಿರುತ್ತಾನೆ!

ನೀವು ಯಾವ ಪದಾರ್ಥವನ್ನಾಗಲೀ ಕೊಳ್ಳುವಾಗೆಲ್ಲಾ, ಇದೇ ಪ್ರಶ್ನೆಯನ್ನು ಹಾಕಿಕೊಳ್ಳುವಿರಾ? ಇಂದಿನ ದಿನಗಳಲ್ಲಿ, ನೀವು ಏನನ್ನಾದರೂ ಕೊಳ್ಳುವಾಗೆಲ್ಲಾ, ಒಂದು ತರಹ ಹರಾಜಿನಲ್ಲಿ ಭಾಗಿಯಾಗುವಿರಿ ಎಂಬುದು ಪ್ರಾಯಶಃ ನಿಮ್ಮ ಅವಗಾಹನಕ್ಕೆ ಬಂದಿರಲಾರದು. ಸಾಮಾನುಗಳ ಸರಬರಾಯಿ ಬಹಳ ಕಡಿಮೆಯಾಗಿರುವುದೂ, ಮತ್ತು ಗಿರಾಕಿಗಳ ಸಂಖ್ಯೆ ಹೆಚ್ಚಿರುವುದೂ, ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿರುತ್ತದೆ. ಒಂದು ಪದಾರ್ಥ ಮಾರಾಟಕ್ಕೆ ಬಂದರೆ, ಅದಕ್ಕೆ ಅನೇಕ ಡಜನ್, ಅನೇಕ ಶತ ಗಿರಾಕಿಗಳು ಅತಿ ಕುತೂಹಲದಿಂದ ಕಾದಿರುವ ಸಂಭವವುಂಟಾಗಿರುತ್ತದೆ. ಈ ವಿಚಾರ ವ್ಯಾಪಾರಿಗಳಿಗೆ ಗೊತ್ತಾಗಿರುವುದರಿಂದ, ಅವರೂ ಕೂಡ ಹರಾಜುದಾರನಂತೆಯೇ, ಈ ಸನ್ನಿವೇಶವನ್ನು ತಮ್ಮ ಸ್ವಂತಕ್ಕೆ ಉಪಯೋಗವಾಗುವಂತೆ ತಿರುಗಿಸಿಕೊಳ್ಳುವರು. ಮಿತಿ ಮೀರಿದ ಖರೀದಿಗಳಿಗೆ ಪದಾರ್ಥಗಳನ್ನು ಕೊಳ್ಳಬೇಡಿರಿ. ಯುದ್ಧ ಪರ್ಯವಸಾನದವರಿವಿಗೂ ಕೊಳ್ಳುವುದನ್ನು ನಿಲ್ಲಿಸಿ ಬುದ್ಧಿವಂತರಾಗಿರಿ. ಈಗ ಹಣವನ್ನು ಶೇಖರಿಸಿರಿ.

**ನಾಳೆಗಾಗಿ ಇಂದಿನಿಂದಲೇ ಅಂದಾಜು ಮಾಡಿರಿ
ನಿಮ್ಮ ಶಕ್ತಿಯಿದ್ದಷ್ಟೂ ಉಳಿತಾಯ ಮಾಡಿರಿ**

ಆದರೆ ಈ ರೀತಿ ಕೂಡಿಟ್ಟಿದ್ದುದನ್ನು ಭದ್ರವಾಗಿಯೂ, ಬೇಕಾದಾಗ ನಿಮಗೆ ಸಿಕ್ಕುವಂತೆಯೂ ವಿನಿಯೋಗಿಸಬೇಕೆಂಬುದನ್ನು ಲಕ್ಷ್ಯದಲ್ಲಿಡಿರಿ.

ಜಮೀನು, ಕಟ್ಟಡಗಳು, ವ್ಯಾಪಾರದ ಸರಕುಗಳು, ಕೈಗಾರಿಕೆ ಸಾಮಾನುಗಳು, ಆಭರಣಗಳು, ಮೊಹಲಾದುವುಗಳನ್ನು ಕೊಳ್ಳಬೇಡಿರಿ. ಅವುಗಳ ಖರೀದಿ ಈಗ ಹೆಚ್ಚು. ಆದರೆ ಕಾಲಕ್ರಮದಲ್ಲಿ ಬಹಳ ಕಡಿಮೆಯಾಗುವ ಸಂಭವ ವಿರುತ್ತದೆ. ವಿಮೆ, ಪರಸ್ಪರ ಸಹಾಯ ಸಂಘಗಳು, ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು, ಇವುಗಳೀಗ ಅತ್ಯುತ್ತಮ ವಿನಿಯೋಗ ಮಾರ್ಗಗಳು. ಆದರೆ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಮತ್ತು ಗೌರ್ನಮೆಂಟು ಲೋನುಗಳು ಸರ್ವೋತ್ತಮವಾದವುಗಳು. ನಿಮ್ಮ ಭವಿಷ್ಯೋಪಯೋಗಕ್ಕಾಗಿ ಉಳಿತಾಯಮಾಡಿ ಭದ್ರಪಡಿಸಿರಿ.

ಗೌರ್ನಮೆಂಟು ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ.

AAA 149 KN

ಬ್ರಿಟನಿನಲ್ಲಿ ಚುನಾವಣೆ ಗದ್ದಲ.

ಜುಲ್ಯಾಯಲ್ಲಿ ನಡೆಯಲಿರುವ ಚುನಾವಣೆಗಾಗಿ ಬ್ರಿಟನಿನ ಕಾನ್ಸರ್‌ವೇಟಿವ್ ಪಕ್ಷವು ಪ್ರಧಾನ ಚರ್ಚಿಲ್ಲರ ಅಧಿನಾಯಕತ್ವದಲ್ಲಿ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿದೆ. ಚರ್ಚಿಲ್ಲರು ಈ ಸಂಭಂಧ ಎಂಟು ಭಾಷಣಗಳನ್ನು ಮಾಡಲಿರುವರು. ಅದರಲ್ಲಿ ಮೊದಲನೆಯ ಭಾಷಣವು ಅವರಿಗಾಗಿ ನವೀನವಾಗಿ ರಚನೆಯಾದ ವುಡ್‌ವರ್ಡ್ ವಿಭಾಗದಲ್ಲಿ ಮಾಡಲಾಯಿತು. ಅವರೊಡನೆ ಟೋರಿ ಪಕ್ಷ ಇತರ ಮುಖಂಡರುಗಳು ಭಾಷಣವಿತ್ತರು.

"ಭೇದಗಳಿಂದ ಒಡೆದು ನುಚ್ಚುನೂರಾದ ಇರೋಪು ಖಂಡವು ನಮ್ಮೆದುರಿದೆ. ನಮ್ಮ ಹಿತವು ಇರೋಪು ಖಂಡದ ಹಿತದೊಡನೆ ಕೂಡಿಕೊಂಡಿದೆ." ತಮ್ಮಿಂದ ರಚನೆಯಾದ ನೂತನ ಸರಕಾರವನ್ನು ವರ್ಣಿಸುತ್ತಾ, ಸದ್ಯಯಿರುವ ಮಹಾ ಕಾರ್ಯದ ಹೊರೆಯನ್ನು ಹೊರಲು ಯೋಗ್ಯತೆವುಳ್ಳ ಸರಕಾರವದು, ಎಂದರು.

ಶಾಂತಸಾಗರದಲ್ಲಿ ವಿಜಯ ದೊರಕಿಸಿಕೊಳ್ಳುವ ಮಹಾ ಕಾರ್ಯವು ದೇಶದ ಮುಂದಿರುವಾಗ, ಆ ಕಾರ್ಯವನ್ನು ಯಶಸ್ವಿಯಾಗಿ ನಡೆಯಿಸಿಕೊಂಡು ಹೋಗುವ ಸರಕಾರವನ್ನೆ ಜನರು ಆರಿಸಬೇಕಾಗಿಯೂ, ಎಲ್ಲರೂ ಸಂತೃಪ್ತರಾಗಿರುವಂತೆ ಎಲ್ಲರಿಗೂ ಉದ್ಯೋಗವನ್ನು ಒದಗಿಸಿಕೊಡುವುದು ಕಾನ್ಸರ್‌ವೇಟಿವ್ ಮುಖ್ಯ ಉದ್ದೇಶವಿರುವುದೆಂದೂ ಈ ಭಾಷಣಗಳಲ್ಲಿ ಸಾರಲಾಗಿದೆ.

ರಷ್ಯದೊಡನೆ ಮೈತ್ರಿಯನ್ನು ಬೆಳೆಯಿಸಿಕೊಂಡು ಬರುವ ತರದ್ದೆ ಟೋರಿಗಳ ಭಹೀರ್ ವ್ಯವಹಾರ ನೀತಿಯ ಧೋರಣವಾಗುವುದೆಂದೂ ಸಾರಲಾಗಿದೆ.

ಹೀಗನೆ ಲೆಬರ್ ಪಕ್ಷದ ಪ್ರಚಾರ ಭಾಷಣಗಳೂ ನಡೆಯುತ್ತಿವೆ. ಹಿಂದೂದೇಶಕ್ಕೆ ಪೂರ್ಣ ಸ್ವಾತಂತ್ರವನ್ನು ಕೊಡುವ ಕುರಿತು ರಾಗಗಳು ಅವರ ಭಾಷಣದಲ್ಲಿ ಕೇಳಿಸಿಕೊಳ್ಳುತ್ತವೆ. ಆದರೆ ಈ ಭಾಷಣಗಳಿಂದ ಹಿಂದೀಯರು ಭರವಸೆನೀಯ ವಿಶ್ವಾಸವನ್ನು ತಾಳಲು ಅವಕಾಶವು ದೊರಕುತ್ತಿಲ್ಲ. ಆದರೆ ಇಷ್ಟನ್ನು ಹೇಳಬಹುದು, ಹಿಂದೀಯರ ಹಿತದಲ್ಲಿ, ಟೋರಿಗಳಿಗಿಂತ, ಲೆಬರ್ ಪಕ್ಷದವರನ್ನು ಬಯಸತಕ್ಕವರು. ಹಿಂದೀಯರ ಸಮಸ್ಯೆಗಳಿಗೆ ಈ ಪಕ್ಷದವರಿಂದ ಸ್ವಲ್ಪ ಲಕ್ಷವು ದೊರಕಬಹುದು.

ಜಗತ್ತನ್ನು ಪ್ರಗತಿಪರ ಹಾದಿಯಲ್ಲಿ ನಡೆಯಿಸುವ ಉದ್ದೇಶವನ್ನು ಹಾಕಿಕೊಂಡು, ಲಿಬರಲ್ ಪಕ್ಷದವರೂ ತಮ್ಮ ಪ್ರಚಾರಕಾರ್ಯವನ್ನು ಪ್ರಾರಂಭಮಾಡಿರುವರು.

ಆಕ್ರಮಿತ ಜರ್ಮನಿಯ ರಾಜ್ಯಭಾರ

ಮಿತ್ರರಲ್ಲಿ ಭಿನ್ನಾಭಿಪ್ರಾಯವೆ?

ತಮ್ಮಿಂದ ಆಕ್ರಮಿಸಲ್ಪಟ್ಟ ಜರ್ಮನಿಯ ರಾಜ್ಯಭಾರದ ಕುರಿತು ಮಿತ್ರರು ಈ ತನಕ ಒಂದು ಒಡಂಬಡಿಕೆಯ ಇತ್ಯರ್ಥಕ್ಕೆ ಬಾರದಿದ್ದರೂ, ಈ ವಿಚಾರದಲ್ಲಿ ಮಿತ್ರರೊಳಗೆ ಭಿನ್ನಾಭಿಪ್ರಾಯಗಳು ಉದಯವಾಗಿದೆಯೊ ಎಂಬ ಸಂದೇಹವನ್ನುಂಟು ಮಾಡುವ ವಿದ್ಯಮಾನಗಳು ಈಗ ನಡೆಯುತ್ತಿವೆ. ತಮ್ಮ ಪಾಲಿಗೆ ಬಂದ ಜರ್ಮನ್ ಪ್ರದೇಶದಲ್ಲಿ ಮಿಲಿಟರಿಯ ಅಂಕಿತದಲ್ಲಿ ರಾಜ್ಯಭಾರವು ನಡೆಯಬೇಕೆಂದೂ ಜರ್ಮನರು ಅದರಲ್ಲಿ ಭಾಗಿಯಾಗಬಾರದೆಂದೂ ಅಮೆರಿಕನ್ ಅಭಿಪ್ರಾಯವಿರುವಾಗ, ಸೋವಿಯಟ್ ಆಕ್ರಮಿತ ಪ್ರದೇಶದಲ್ಲಿ ರಾಜ್ಯಾಡಳಿತದಲ್ಲಿ ಜರ್ಮನರು ಭಾಗಿಯಾಗುವ ತರದ್ದೆ ಧೋರಣವು ಕೆಂಪು ಬಲದಿಂದ ಕೈಗೊಳ್ಳಲಾಗಿದೆ. ತಮಗೆ ಬಗ್ಗುವ ಜರ್ಮನರನ್ನುಪಯೋಗಿಸಿ, ಈ ಕಾರ್ಯವನ್ನು ನಡೆಯಿಸಿ, ಕೊನೆಗೆ ತಮ್ಮ ಅಂಕಿತದಲ್ಲಿ ಜರ್ಮನ್ ಪ್ರಾತಿನಿಧ್ಯದ ಸರಕಾರವನ್ನು ಸ್ಥಾಪಿಸುವುದು ಸೋವಿಯಟ್ ಸರಕಾರದ ನೀತಿಯಿದ್ದಂತೆ ಕಾಣುತ್ತದೆ. ಇದೆ ನೀತಿಯನ್ನು ತಾವೂ ಅನುಸರಿಸುವ ಕುರಿತು ಅಭಿಪ್ರಾಯವು ಬ್ರಿಟಿಷ ಪ್ರಧಾನ ಚರ್ಚಿಲ್ಲರ ಒಂದು ಭಾಷಣದಿಂದ ತಿಳಿದುಬಂದಿದೆ. ಜರ್ಮನ್ ಸೇನೆಯ ಕೈಗಳಿಂದ ತಮಗೆ ತುಂಬಾ ನಷ್ಟ ಅಪಮಾನ ಇತ್ಯಾದಿಗಳು ದೊರಕಿದ್ದರೂ, ಮುಯ್ಯಿಗೆ ಮುಯ್ಯಿ ತೀರಿಸುವ ಬದಲಾಗಿ, ಜರ್ಮನರನ್ನು ತಮ್ಮ ನೀತಿಗೆ ಪರಿವರ್ತಿಸಿಕೊಂಡು ನಡೆಯಿಸುವುದೆ ಸ್ಟೆಲೀನಉದ್ದೇಶವು. ರಷ್ಯನರು ಜರ್ಮನರನ್ನು ಹೀಗೆ ಒಲಿಸಿಕೊಳ್ಳುವಾಗ ತಾವೂ ಸುಮ್ಮನಿರುವುದೆ, ಎಂಬ ಭಾವನೆಯಿಂದ, ರಷ್ಯನರದೆ ನೀತಿಯನ್ನು ಎತ್ತಿಹಿಡಿದಿರಬಹುದು—ಚರ್ಚಿಲ್ಲರು.

ಶ್ರೀ. ಸುಬಾಸ್ಚಂದ್ರ ಬೋಸರು—ಬೆಂಗ್‌ಕೊಕಿನಲ್ಲಿ

ಫ್ರಿ ಇಂಡಿಯಾ ಸೇನೆಯ ದಳಪತಿಗಳಾಗಿ ಬರ್ಮಾದಲ್ಲಿ ದುಡಿಯುತ್ತಿದ್ದ ಸುಬಾಸು ಈಗ ಅಲ್ಲಿಂದ ಬೆಂಗ್‌ಕೊಕಿಗೆ ನಡೆದಿರುವರಾಗಿ ತಿಳಿದುಬಂದಿದೆ. ಅವರಿಂದ ವ್ಯವಸ್ಥೆಪಡಿಸಿರುವ ಫ್ರಿ ಇಂಡಿಯಾ ಸೇನಾಬಲದ ಹೆಚ್ಚಿನ ದಳಗಳು ಮಿತ್ರರಿಗೆ ಶರಣು ಹೋಗಿವೆಯಾಗಿ ತಿಳಿದುಬಂದಿದೆ. ಮೊದ ಮೊದಲು ಜಪಾನೀಯರು ಈ ಬಲದ ವ್ಯವಸ್ಥೆಯ ಕುರಿತು ಕುತೂಹಲವನ್ನು ತೋರಿಸಿದ್ದರೂ ಕೊನೆಕೊನೆಗೆ ಜಪಾನಿಯರಿಂದ ಅದಕ್ಕೆ ಯಾವ ಸಹಾಯವೂ, ಸಹಾನುಭೂತಿಯೂ ದೊರಕಿಲ್ಲವೆಂದು ತಿಳಿದುಬಂದಿದೆ. ಈ ಕಾರಣದಿಂದ ಈ ಬಲದಲ್ಲಿ ೩ ಲಕ್ಷ ಹಿಂದೀಯ ಸೈನಿಕರುಯಿರುವಂತೆ ಕಲ್ಪಿಸಲಾಗಿದ್ದರೂ, ಕೊನೆಗೆ ೩೦ ಸಾವಿರದಲ್ಲೆ ಕೆಲಸ ನಡೆಯಬೇಕಾಯಿತು. ಶರಣಬಂದ ಫ್ರಿ, ಇಂಡಿಯಾ ಸೈನಿಕರನ್ನು ಕನಿಕರದಿಂದ ಕಾಣಬೇಕೆಂದು ಕೇಳಿಕೊಳ್ಳಲಾಗಿದೆ.

ಶಾಂಘಾಯಿಯಲ್ಲಿ ಜಪಾನಿಯರ ಮುಂಜಾಗ್ರತೆ

ಮಲೆಯಾ, ಸಿಂಗಾಪುರ ಮೊದಲಾದ ಶಾಂತಸಾಗರದ ಪ್ರದೇಶಗಳ ಪುನರಾಕ್ರಮಣದ ಬಗ್ಗೆ, ಮಿತ್ರರ ಕಡೆಯಿಂದ ಮಹಾ ಸಿದ್ಧತೆಗಳು ಈಗ ನಡೆಯುತ್ತಿರುವಾಗ, ಜಪಾನಿಯರೂ ಆ ಕುರಿತು ಮುಂಜಾಗ್ರತೆಯ ಕೆಲವು ಕಾರ್ಯಗಳನ್ನು ಕೈಕೊಂಡಿರುವರು. ಶಾಂಘಾಯಿಯಲ್ಲಿ ತಮ್ಮದೆ ಅಂಕಿತವನ್ನು ಹೆಚ್ಚಿಸಿರುವರು. ಪೋಲಿಸ್ ಖಾತೆಯಲ್ಲಿ ಜಪಾನಿಯರನ್ನು ಮಾತ್ರ ಇಟ್ಟು, ಇತರರನ್ನು ಅಧಿಕಾರದಿಂದ ಕಿತ್ತುಹಾಕಿರುವರು.

ಜಪಾನಿನ ಮೇಲೆ ಇನ್ನಷ್ಟು ಬಲವಾದ ವಾಯು ಆಕ್ರಮಣವನ್ನು ನಡೆಸುವರೆ ಅಮೇರಿಕನ್ ಬಲದಿಂದ ಏರ್ಪಾಡುಗಳಾಗಿವೆಯಾಗಿಯೂ, ಈಗಲೆ ಜಪಾನಿನ ಟೊಕಿಯೊ ನಗರದ ಹೆಚ್ಚಿನಂಶವೂ ನೆಲಸಮವಾಗಿರುವುದೆಂದೂ ತಿಳಿದುಬಂದಿದೆ.

ಈ ಯುದ್ಧದಿಂದ ಹಿಂದೂದೇಶಕ್ಕೆ ವಿಪತ್ತು ಒದಗಿದೆ

ನ್ಯೂಯೊರ್ಕ್ ಟ್ಯಾಮ್ಸ ಪತ್ರಿಕೆಯ ಅಭಿಪ್ರಾಯ

"ಹಿಂದೂದೇಶವು ರಣರಂಗಗಳಿಂದ ಬಹಳ ದೂರವಿದ್ದರೂ, ಯುದ್ಧದ ಪರಿಣಾಮವಾಗಿ ಅಲ್ಲಿ ಅನೇಕ ವಿಪತ್ತುಗಳು ನಡೆದುಬಿಟ್ಟಿವೆ. ಅದು ಅತ್ಯಂತಯಾತನೆಯನ್ನು ಅನುಭವಿಸಿದೆ. ೧೯೪೩-೪೪ರಲ್ಲಿ ಉಂಟಾದ ಕ್ಷಾಮವು ಯುದ್ಧ ನಿರ್ಮಿತವು.... ಈ ಎಲ್ಲಾ ದುರ್ಘಟಣೆಗಳಿಂದಾಗಿ, ಕಳೆದ ಮೂರು ವರ್ಷಗಳ ಸಮಯದಲ್ಲಿ ಸಾಧಾರಣ ಮೂರು ಮಿಲಿಯ ಜನರೂ ಹಸಿವಿನಿಂದ ಮೃತರಾಗಿರುವರು; ಮಡಿದ ಪ್ರತಿಯೊಬ್ಬನಿಗೆ ಹತ್ತರಂತೆ ಜನರು ಮಹಾರೋಗಗಳಿಗೆ ತುತ್ತಾದರು.

"ಹಿಂದೂದೇಶದ ಸಂಕಷ್ಟ ನಿವಾರಣೆಗಾಗಿ ಅಮೇರಿಕನ್ ಮಿತ್ರ ಮಂಡಳದ ಆಶ್ರಯದಲ್ಲಿ, ನ್ಯಾಶನಲ್ ವಾರ್ ಫ್ರಂಟಿನ ಆಧೀನದಲ್ಲಿ, ಒಂದು ವ್ಯವಸ್ಥೆಯು ಸಂಘಟನೆ ಹೊಂದಿತು. ಹಿಂದೂದೇಶದ ಸಂಕಟಗಳಿಗಾಗಿ ಕನಿಕರಪಟ್ಟ ಜನರಿರುವ ಇತರ ಸಂಘ ಸಂಸ್ಥೆಗಳು ಇವರೊಡನೆ ಸಹಕರಿಸಿದವು. ನಂತರ ಹಿಂದೂದೇಶದ ಸಂಕಷ್ಟ ನಿವಾರಣೆಗಾಗಿಯೇ ಬೇರೆ ಒಂದು ಸಂಸ್ಥೆಯು ರಿಜಿಸ್ಟರ್ ಮಾಡಲ್ಪಟ್ಟಿತು. ಲೋಕ ಹಿತದೃಷ್ಟಿಯಲ್ಲಿ ನರಳುತ್ತಿರುವ ಹಿಂದೂದೇಶಕ್ಕೆ ಉಪಶಮನ ಕೊಡುವುದು ಮುಖ್ಯ ಕರ್ತವ್ಯವೆಂದು ಮನಗಂಡು ಅಮೆರಿಕದ ಅನೇಕ ಉಧಾರಿಗಳು ಈ ಕಾರ್ಯದಲ್ಲಿ ನೆರವಾದರು.

"ಹಿಂದೂದೇಶದಿಂದ ಅಮೆರಿಕಾದ ವರ್ತಕವರ್ಗಕ್ಕೆ ಲಾಭವಿದೆ. ಅಲ್ಲಿ ನಮ್ಮ ವರ್ತಕರಿಗೆ ಸರಿಯಾದ ಮಾರ್ಕೇಟುಗಳು ದೊರಕಬೇಕಾದರೆ ಹಿಂದೂದೇಶವು ಆರೋಗ್ಯವಂತವಾಗಿ ಬಾಳ ಬೇಡವೆ? ಹಿಂದೂದೇಶದ ವಿಪತ್ತಿನಿಂದ ನಮಗೂ ನಷ್ಟವಿದೆ. ಅಲ್ಲಿ ಮುಂದಕ್ಕೆ ಕೈಗಾರಿಕೆಯ ಮಹಾ ಯೋಜನೆಗಳು ನಡೆಯಲಿವೆ. ಕೈಗಾರಿಕೆ ಇತ್ಯಾದಿಗಳಲ್ಲಿ ಸುಧಾರಣೆಯಾಗಲಿವೆ. ಅಮೆರಿಕದಲ್ಲಿ ಸಿದ್ಧವಾಗುವ ಅನೇಕ ಯಂತ್ರ ಇತ್ಯಾದಿಗಳಿಗೆ ಹಿಂದೂದೇಶವು ಒಂದು ಒಳ್ಳೆ ಗಿರಾಕಿ.

"ಆದುದರಿಂದ ಹಿಂದೂದೇಶದಿಂದ ನಮಗೆ ತುಂಬಾ ಹಿತವಾಗಲಿದೆ. ನಮ್ಮ ಹಿತದೃಷ್ಟಿಯಿಂದ ಹಿಂದೂದೇಶವು ನಮ್ಮಿಂದ ಬೇರೆ ಎಂದು ಪರಿಗಣಿಸಲು ಬಾರದು. ಹೀಗೆ ಹಿಂದೂದೇಶದಲ್ಲಿ ನಮ್ಮ ಹಿತವನ್ನು ರಕ್ಷಿಸುವ ಕಾರ್ಯವನ್ನು ನಾವು ಬೇರೆಯವರಿಗೆ ಬಿಟ್ಟು ಸುಮ್ಮನೆ ಕುಳಿತಿರಬಾರದು.

ರಷ್ಯಾ, ಅಮೇರಿಕಾ, ಬ್ರಿಟನು,—ನಾಯಕರು ಸದ್ಯದಲ್ಲೆ ಕೂಡಿ ಒಂದು ಮಹತ್ವದ ಕೆಲವು ವಿಚಾರಗಳ ಕುರಿತು ಆಲೋಚಿಸಲಿರುವರೆಂದು ತಿಳಿದುಬಂದಿದೆ.

ಪೆಸಿಷ್ಟರ ಪರವಾಗಿ ಪ್ರಚಾರಕಾರ್ಯ ನಡೆಯಿಸಿದ, ಇಟೆಲಿಯಲ್ಲಿ ಸೆರೆಹಿಡಿಯಲ್ಪಟ್ಟ, ಇಂಡಿಯಾ ಸೆಕ್ರಟರಿ ಅಮೆರಿಯವರ ಪುತ್ರನ ಕುರಿತು ವಿಚಾರಣೆಯು ಆಗದ ಹಾಗೆ ಯತ್ನಗಳು ನಡೆಯುತ್ತಿವೆಯಾಗಿ ತಿಳಿದುಬಂದಿದೆ.

ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್
ಗಂಗೊಳ್ಳಿ, ದ. ಕ.

ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲಿನ I, II, IIIನೇ ಫಾರ್ಮುಗಳು ಇದೇ ಬರುವ ಜೂನ್ ೨೧ನೇ ಗುರುವಾರ ಹೊಸತಾಗಿ ತೆರೆಯಲ್ಪಡುವವು

ದಾಖಿಲಾಗಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಆ ಬಗ್ಗೆ ಅರ್ಜಿಗಳನ್ನು ಇದೇ ಜೂನ್ ೧ರಿಂದ ಸ್ವೀಕರಿಸಲಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಅವರ ಖರ್ಚಿನಲ್ಲೇ ಮಧ್ಯಾಹ್ನ ಊಟದ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ ಕಾಯಂ ಊಟ, ವಸತಿಗಳ ಬಗ್ಗೆ ಶಾಲಾ ಕಮಿಟಿಯ ಮೇಲ್ವಿಚಾರದಲ್ಲಿ ಯೋಗ್ಯವ್ಯವಸ್ಥೆ ಮಾಡಲಾಗುತ್ತದೆ.

ದಾಖಲಾತಿಯ ಅರ್ಜಿಫಾರ್ಮುಗಳಿಗೆ ಮತ್ತು ವಿಶೇಷ ಮಾಹಿತಿಗೆ;—

ಮೆನೇಜರ್,
ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್,
ಗಂಗೊಳ್ಳಿ, ದ. ಕ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ದ. ಕ. ಜಿಲ್ಲಾ ಎಡಿಶನಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರ ವಿಚಾರಣೆ ಕ್ಷೇತ್ರವು ತಾ. ೧—೬—೪೫ರಿಂದ ಮಂಗ್ಳೂರು, ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳ ವರೆಗಿರುತ್ತದೆ. ಈ ಕ್ಷೇತ್ರದೊಳಗೆ ಆವರು ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರು ವ್ಯವಹರಿಸುವಂತಹ ಎಲ್ಲಾ ಕ್ರಿಮಿನಲ್ ಕಟ್ಲೆಗಳನ್ನು ವಿಚಾರಣೆ ಮಾಡುವರು. ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸೆಕ್ಯೂರಿಟಿ ಸೆಕ್ಶನು ಮೇರೆಗಿನ ಕೇಸುಗಳು ಮಾತ್ರ ಅವರ ಕ್ಷೇತ್ರದವುಗಳಲ್ಲ. ಇವುಗಳ ಹೊರತಾದ ಸೆಕೆಂಡ್ ಮತ್ತು ಥರ್ಡ್ ಕ್ಲಾಸ್ ಮೆಜಿಸ್ಟ್ರೇಟರ ತೀರ್ಪುಗಳ ವಿರೋಧವಾಗಿ ಮಾಡಲ್ಪಟ್ಟ ಅಪೀಲುಗಳನ್ನೂ ಅವರು ವಿಚಾರಿಸಬಹುದು. ಹೀಗೆಂದು ಮಾನ್ಯ ಜಿಲ್ಲಾ ಕಲೆಕ್ಟರರು ಕೋರ್ಟ ಸಂಬಂಧವಾದ ಒಂದು ಹುಕುಮಿನಲ್ಲಿ ಪ್ರಕಟಿಸಿದ್ದಾರೆ.

ಉರ್ವದಲ್ಲಿನ ಮಿಜಾರ್‌ಕಾರರ ಗೇರು ಬೀಜ ಕಾರ್ಖಾನೆಯು ಇದೇ ತಿಂಗಳ ಪ್ರಾರಂಭದಿಂದಲೇ ಮುಚ್ಚಲ್ಪಟ್ಟಿದೆ. ಸದ್ರಿ ಕಾರ್ಖಾನೆಯಿಂದ ಹೊರ ಬೀಳುವ ಹೊಗೆಯು ಆಸುಪಾಸಿನ ನಿವಾಸಿಗಳಿಗೆ ಹಾನಿಕರವೆಂದು ಅಧಿಕಾರಿಗಳಿಗೆ ಖಚಿತವಾಗಿ ಅಂತಹ ಹೊಗೆಯನ್ನು ಯೋಗ್ಯ ಏರ್ಪಾಡಿನ ಮೂಲಕ ತಡೆಗಟ್ಟುವ ತನಕ ಕೆಲಸ ನಡೆಸಬಾರದೆಂದು ತಿಳಿಸಲಾದಂದಿನಿಂದ ಮ್ಹಾಲಕರು ಹೀಗೆ ಮಾಡಿರುವರು. ಈ ಕಾರ್ಖಾನೆ ಮುಚ್ಚಿದುದರಿಂದ ಸುಮಾರು ಒಂದು ಸಾವಿರ ಮಜೂರರು ನಿರುದ್ಯೋಗಿಗಳಾಗಿರುವರು. ಒಂದು ಕಡೆಯಿಂದ ವ್ಯಾಪಾರಕ್ಕೂ ಇನ್ನೊಂದು ಕಡೆಯಿಂದ ಮಜೂರರಿಗೂ ದಕ್ಕೆಯೊದಗಿದಂತಾಗಿದೆ. ಮಜೂರರ ಪತಿಯಿಂದ ಈ ಕುರಿತು ಮನವಿಗಳು ಸರಕಾರಕ್ಕೆ ಹೋಗಿದ್ದು ಸದ್ರಿ ಮುಚ್ಚುವಿಕೆಯಿಂದ ಮಜೂರರಿಗುಂಟಾದ ಆರ್ಥಿಕ ನಷ್ಟಕ್ಕೆ ಮ್ಹಾಲಕರು ನ್ಯಾಯ ಬದ್ಧವಾದ ಅಪಹಾರವನ್ನು ಕೊಡಬೇಕೆಂದೂ, ಹೊಗೆ ನಳಿಗೆಯನ್ನು ಮಾರ್ಪಡಿಸುವ ಏರ್ಪಾಡನ್ನು ಆದಷ್ಟು ಶೀಘ್ರದಲ್ಲಿ ಮಾಡಿ ಕಾರ್ಖಾನೆಯನ್ನು ಪುನ: ಪ್ರಾರಂಭಿಸಬೇಕೆಂದೂ ವಿನಂತಿಸಲಾಗಿದೆ.

ನಗರದಲ್ಲಿ ಮಳೆಗಾಲವು ಪ್ರಾರಂಭವಾಗಿದ್ದು ಸ್ವಲ್ಪವಾಗಿಯಾದರೂ ಬಿರುಸಾದ ಕೆಲವು ಮಳೆಗಳು ಬೀಳ ಹತ್ತಿವೆ. ಇದೇ ಸಮಯಕ್ಕೆ ವಿದ್ಯಾಲಯಗಳೂ, ಕೋರ್ಟುಕಚೇರಿಗಳೂ ಪ್ರಾರಂಭವಾಗಿವೆ. ನಗರದಲ್ಲಿ ಇತರ ಎಲ್ಲಾ ಏರ್ಪಾಡುಗಳೂ ತೃಪ್ತಿಕರವಾಗಿ ಮಾಡಲ್ಪಟ್ಟಿರುವಂತೆ ಕೊಡೆಗಳ ಮಾರಾಟದ ವ್ಯವಸ್ಥೆಯನ್ನು ಇನ್ನಾದರೂ ಮಾಡಬೇಕೆಂದು ಬಹು ಸಂಖ್ಯಾತ ನಾಗರೀಕರ ಹಾರೈಕೆ ಇದೆ. ಕೊಡೆಗಳಿಲ್ಲದಿದ್ದರೆ ನಾಗರೀಕ ಜೀವನದ ಅನೇಕ ಕ್ಷೇತ್ರಗಳಲ್ಲಿ ತುಂಬಾ ತೊಡಕುಂಟಾಗುತ್ತದೆ. ಅದುದರಿಂದ ಅಧಿಕಾರಿಗಳು ಯೋಗ್ಯ ವ್ಯವಸ್ಥೆ ಮಾಡುವರೆಂದು ಅಪೇಕ್ಷಿಸಲಾಗಿದೆ.

ಈ ಸಲದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವು ಜಿಲ್ಲೆಯ ಹೆಚ್ಚಿನ ಕಡೆಗಳಲ್ಲೆಲ್ಲಾ ಬಹಳ ಅಧಿಕಾಂಶದಲ್ಲಿ ದಾಖಲೆಯಂಟುಮಾಡುವ ತರದಲ್ಲೆಂಬಂತೆ ಬಂದುದು ಬಹಳ ಸಂತೋಷ ವಿಷಯ. ಪರೀಕ್ಷೆಗೆ ಕೂತವರಲ್ಲಿ ಆದಷ್ಟು ಹೆಚ್ಚು ಮಂದಿಗಳು ಪಾಸಾಗ ಬೇಕಾದುದು ಸಹಜ ನಿರೀಕ್ಷಣೆ. ಸ್ಥಳೀಯ ಕೆನರಾ ಹ್ಯಾಸ್ಕೂಲಿನಲ್ಲಿ ಶೇಕಡಾ ೬೨ರಷ್ಟೂ, ಸ್ಯೆಂಟ್ ಎಲೋಶಿಯಸ್ ಕೊಲೇಜಿನಲ್ಲಿ ೯೨ರಷ್ಟೂ, ಬಂಟ್ವಾಳ್ ಹ್ಯಾಸ್ಕೂಲಿನಲ್ಲಿ ೮೮ರಷ್ಟು ವಿದ್ಯಾರ್ಥಿಗಳೂ ಉತ್ತೀರ್ಣರಾಗಿರುವರು.

ರಥ ಬೀದಿಯಲ್ಲಿನ ಶ್ರೀ ಮರ್ಕಡ್ ಪದ್ಮನಾಭ ಕಮ್ತಿಯವರಲ್ಲಿ ಇಲೆಕ್ಟ್ರಿಕ್ ಬಲ್ಬುಗಳನ್ನು ಮಾರತಂದ ಒರ್ವ ಮುಸಲ್ಮಾನ ಗ್ರಹಸ್ಥನನ್ನು ಪೋಲಿಸ್ ಅಧಿಕಾರಿಗಳು ಕಳ್ಳ ತನದ ಆರೋಪದ ಮೇಲೆ ಕೈದು ಮಾಡಿರುವರು. ಆ ಪಾದಿತನನ್ನು ಸಾಮಾನು ಸಮೇತ ಹಿಡಿದು ಸ್ಟೇಶನಿಗೆ ಒಯ್ದು ಆ ಸಂಬಂದ ಹೆಚ್ಚಿನ ತನಖಿಯು ನಡೆಸಲ್ಪಟ್ಟಿತು.

'ಮೋಟರ್ ಸ್ಪಿರಿಟ್ ರೇಶನಿಂಗ್ ಒರ್ಡರ್ ೧೯೪೧' ಇದರ ೨೬, ೨೮, ಮತ್ತು ೩೦ನೇ ಕಲಮುಗಳನ್ನು ಮೀರಿ ನಡೆದ ಆರೋಪದ ಸಂಬಂಧ ಅತ್ತಾವರದ ಲೋರಿ ಮ್ಹಾಲಕ ಶ್ರೀ ಸೋಮಪ್ಪ ಇವರಿಗೆ ಎರಡು ತಕ್ಷೀರುಗಳ ಬಗ್ಗೆ ಪ್ರತೀ ತಕ್ಷೀರಿಗೆ ರೂ. ೭೫೦ರಂತೆ ಒಟ್ಟಿಗೆ ರೂ. ೧೫೦೦ ಜುಲ್ಮಾನೆಯಾಗಿದೆ. ಅದೇ ಆರೋಪಗಳ ಸಂಬಂಧ ಅತ್ತಾವರ ಶ್ರೀ ಗಂಗಯ್ಯ ಎಂಬ ಲೋರಿ ದ್ಹಾಲಕರಿಗೆ ಎರಡು ತಕ್ಷೀರುಗಳ ಬಗ್ಗೆ ೭೫೦ ಮತ್ತು ೫೦೦ ರೂಪ್ಯಾಗಳ ಜುಲ್ಮಾನೆ ವಿಧಿಸಲ್ಪಟ್ಟಿದೆ.

ಮಂಗಳೂರು ಮತ್ತು ಜಿಲ್ಲಾ ವಾರ್ತೆಗಳು

ದೇರೆ ಬೈಲಿನ ಶ್ರೀ. ಎಸ್. ವೆಂಕಟ್ರಾಯ ಶೆಣೈ ಎಂಬವರು ಸಕ್ಕರೆ ಚಿಮಿಣಿ ಎಣ್ಣೆಗಳ ದಾಸ್ತಾನು ವಿವರ ಎಷ್ಟೆಂದು ಬೋರ್ಡಿನಲ್ಲಿ ಬರೆಯದಿದ್ದದಕ್ಕೆ ಎಡಿಶನಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಿಂದ ೧೦೦ ರೂಪ್ಯಾ ಜುಲ್ಮಾನೆ ವಿಧಿಸಲ್ಪಟ್ಟಿರುವರು.

ತಲಪಾಡಿ ಬಳಿಯ ಸಮುದ್ರ ಮಾರ್ಗವಾಗಿ ಬೇರೆ ಕಡೆಗೆ ಗುಪ್ತ ರೀತಿಯಲ್ಲಿ ಸುಮಾರು ೩೦, ೩೨ ಮುಡಿ ಅಕ್ಕಿಯನ್ನು ಸಾಗಿಸಲು ಪ್ರಯತ್ನಿಸಿದರೆಂಬ ಆರೋಪದ ಮೇಲೆ ವಿಚಾರಣೆಗೊಳಗಾಗಿದ್ದ ಶ್ರೀಯುತರಾದ ಉಗ್ಗ ಮೂರ್ಲ ಮತ್ತು ಪೆರ್ಗಡೆ ಭಂಡಾರಿ ಎಂಬವರ ಮೇಲಿನ ತಕ್ಷೀರುಗಳು ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ವಿಚಾರಣೆ ಮುಗಿದು ಆರೋಪಿಗಳಿಗೆ ಪ್ರತಿಯೊಬ್ಬರಿಗೂ ಅರಾರು ತಿಂಗಳ ಕಠಿಣ ಸಜೆ ವಿಧಿಸಲಾಗಿದೆ. ಮಂಗಳೂರಿನ ಸರ್ಕಲ್ ಇನ್ಸ್‌ಪೆಕ್ಟರರಾದ ಶ್ರೀ ಸೇತು ಮಾಧವ ಮೆನನ್ ಬಿ. ಎ. ಅವರು ಈ ಮೊಕದ್ದೆಮೆಯನ್ನು ಪತ್ತೆ ಮಾಡಿದವರು. ಈ ಸಂಬಂಧ ಇನ್ನೂ ಇರ್ವ ಆರೋಪಿಗಳು ತಪ್ಪಿಸಿಕೊಂಡಿದ್ದು ಇದು ತನಕ ಸಿಕ್ಕಿಲ್ಲವೆಂದು ತಿಳಿದು ಬರುತ್ತದೆ. ಶಿಕ್ಷೆಗೆ ಗುರಿಯಾದ ಮೇಲಿನ ಇರ್ವರನ್ನು ಜಿಲ್ಲಾ ಸೆಶ್ಯನ್ ಜಡ್ಜರು ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ನಮ್ಮ ಜಿಲ್ಲಾ ಪಿರಿಯೋಡಿಕಲ್ ಕೊನ್ಫರೆನ್ಸು ಕಳೆದ ತಿಂಗಳ ೨೧ರಂದು ಸೇರಿದ್ದು, ಕಾಸರಗೋಡು ತಾಲೂಕಿನ ಶಮ್ನಾಡ ಗ್ರಾಮದ ಕೊಳ್ಳಿ ಹಳ್ಳಕೊಂದು ಸೇತುವೆ ಕಟ್ಟುವ ವಿಚಾರ ನಡೆಸಬೇಕೆಂದೂ ಇಂಡಿಯಾ ಸರಕಾರದ ಸಹಾಯದಿಂದ ಜೋಡಿಸಿರುವ ಪಂಪು (ನಳ್ಳಿ) ಗಳ ದುರಸ್ತಿ ಕಾರ್ಯವನ್ನು ಮುಂದೊತ್ತಬೇಕೆಂದೂ ನಿರ್ಧರಿಸಲಾಯಿತು. ಜಿಲ್ಲಾ ಕಲೆಕ್ಟರ್ ಮತ್ತಿತರ ಆಡ್ಯ ಅಧಿಕಾರಿಗಳು ಅಂದು ಭಾಗವಹಿಸಿದ್ದರು.

ರಿಸೆಪ್ಶೆನ್ ತಹಶಿಲ್ದಾರ್ ಶ್ರೀ. ಕೆ. ಕೇಶವ ಕುಡ್ವ, ಬಿ. ಎ. ಎಲ್. ಎಲ್. ಬಿ. ಅವರು ರಜೆಯಿಂದ ಮರಳಿ ಬಂದಿರುವ ಕಾರಣ ಆ ಸ್ಥಾನದಲ್ಲಿದ್ದ ಜನಾಬ್ ಯು. ಪಳ್ಳಿಬ್ಯಾರಿ ಅವರು ಮಂಗಳೂರು ತಾಲೂಕಿನ ಗ್ರೈನ್ ಪರ್ಚೆಸಿಂಗ್ ತಹಶಿಲ್ದಾರರಾಗಿಯೂ, ಆ ಸ್ಥಾನದಲ್ಲಿದ್ದ ಶ್ರೀ. ಬೇಕಲ್ ನಾರಾಯಣರಾವ್ ಬಿ. ಎ. ಅವರು ಕಾರ್ಕಳದ ತಹಶೀಲದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಕೃಷಿ ಆದಾಯ ತೆರಿಗೆ:—ಈ ಕುರಿತು ಕೇಂದ್ರ ಎಂ. ಎಲ್. ಎ. ಗಳಾದ ಶ್ರೀಮಾನ್ ಜಿನರಾಜ ಹೆಗ್ಗಡೆಯವರು ರೆವಿನ್ಯೂ ಇಲಾಖೆಯ ಕಾರ್ಯದರ್ಶಿಯವರಿಗೆ ಬರೆದ ಪತ್ರದಲ್ಲಿನ ಮುಖ್ಯಾಂಶಗಳು ಹೀಗಿವೆ:

ವ್ಯವಸಾಯಗಾರರ ವ್ಯಾಜ್ಯ ಉತ್ಪತ್ತಿಯಿಂದ ಸಿವಿಲ್ ಕೋರ್ಟುಗಳು ನಡೆಯುತ್ತವಾದ್ದರಿಂದ ಅವರು ವ್ಯಾಜ್ಯಕ್ಕೆ ಖರ್ಚುಮಾಡುವ ಐವೇಜನ್ನು ತೆರಿಗೆ ವಿರಹಿತ ಪಡಿಸಬೇಕು. ಇದೇ ರೀತಿ ಧರ್ಮ ಖಾತೆಗೆ ವೆಚ್ಚವಾಗುವುದನ್ನು ತೆರಿಗೆ ವಿರಹಿತಮಾಡಬೇಕು. ಧರ್ಮ ಖಾತೆಯ ಹಣ ಯಾವುದೆಂದು ಸ್ಪಷ್ಟೀಕರಿಸಬೇಕು. ಅವಿಭಕ್ತ ಕುಟುಂಬದ ಪ್ರತೀ ಸದಸ್ಯನ ತಲೆವಾರು ಉತ್ಪತ್ತಿ ನಿಶ್ಚಯಿಸಿ ಅದು ೫ ಸಾವಿರಕ್ಕೆ ಮಿಕ್ಕಿದರೆ ಮಾತ್ರ ತೆರಿಗಾರ್ಹಮಾಡಬೇಕು. ಅನೇಕ ಶತಮಾನಗಳಿಂದ ಅಸ್ತಿತ್ವದಲ್ಲಿರುವ ಅವಿಭಕ್ತ ಕುಟುಂಬಗಳನ್ನು ವಿಭಾಗೀಕರಿಸುವ ಪ್ರಕರಣಗಳನ್ನು ತಿದ್ದಬೇಕು. ದ. ಕನ್ನಡದಲ್ಲಿ ಅಳಿಯ ಸಂತಾನ ಕುಟುಂಬದಲ್ಲಿ ಪಾಲುತೆಗೆದುಕೊಳ್ಳುವ ಅಧಿಕಾರವಿಲ್ಲದ ಎಲ್ಲಾ ಅಳಿಯಸಂತಾನ ಕುಟುಂಬಗಳು ವಿಭಕ್ತವಾಗಿಯೇ ಇರುವುದರಿಂದ ಆಯಾ ಕುಟುಂಬದ ಯಜಮಾನನ ಮೇಲೆ ಮಾತ್ರ ತೆರಿಗೆ ಹೊರಿಸಬೇಕು. ಇಡೀ ಕುಟುಂಬದ ಯಜಮಾನನ ಮೇಲೆ ಹೊರಿಸಬಾರದು. ಈ ಸಂದರ್ಭದಲ್ಲಿಯೂ ತಲೆವಾರು ಉತ್ಪತ್ತಿಯನ್ನು ನಿಶ್ಚಯಿಸಿ ತೆರಿಗೆ ಮೊಕರೂರು ಮಾಡಬೇಕು. ಪಾಲಾದ ಒಂದೊಂದು ಕುಟುಂಬದ ಜನರ ೧೦ ಪಂಗಡವಾಗಿ ವಿಂಗಡಿಸಿ ಅವರ ಉತ್ಪತ್ತಿಯ ಮೇಲೆ ತೆರಿಗೆ ಹೊರಿಸುವುದೂ, ಅಥವಾ ೧೦ಕ್ಕಿಂತ ಕಡಿಮೆಇದ್ದಲ್ಲಿ ಅವರ ಒಟ್ಟು ಉತ್ಪತ್ತಿಯ ಮೇಲೆ ತೆರಿಗೆ ಹೊರಿಸುವುದೂ ನ್ಯಾಯವಲ್ಲ. ಯಾವ ಕಾರಣಕ್ಕೆ ಈ ೧೦ ಜನರ ಪಂಗಡ ನಿರ್ಣಯಿಸಲಾಗಿದೆ ಎಂಬುದು ಸ್ಪಷ್ಟೀಕರಿಸಲ್ಪಟ್ಟಿಲ್ಲ. ಜಾಸ್ತಿ ತೆರಿಗೆ ಪಡೆಯುವ ಇಚ್ಚೆ ಇದರಲ್ಲಿ ಕಾಣುತ್ತದೆ. ಈ ಮಸೂದೆಯ ೨೬ನೇ ಪ್ರಕರಣ ತಿದ್ದುಪಡಿ ಮಾಡಬೇಕು. ಅವಿಭಕ್ತಗಳಾಗಿದ್ದರೂ ಅಂತಹ ಕುಟುಂಬಗಳಲ್ಲಿ ಆಸ್ತಿಗಳ ಉತ್ಪತ್ತಿಯನ್ನು ಕರಾರು ಮೂಲಕ ಪಾಲುಮಾಡಿಕೊಂಡು ಬಂದಿದ್ದರೆ, ಕಾನೂನು ಪ್ರಕಾರ ಅವುಗಳ ಅವಿಭಕ್ತ ಕುಟುಂಬಗಳೆಂದು ಎಣಿಸಲ್ಪಟ್ಟಾಗ್ಯೂ ಈ ಮಸೂದೆಯ ಮಟ್ಟಿಗೆ ಅಂತಹ ಕುಟುಂಬಗಳು ವಿಭಕ್ತ ಕುಟುಂಬಗಳೆಂಬುದಾಗಿ ಭಾವಿಸತಕ್ಕದ್ದು.

ಬಂಟ್ವಾಳ:—ಇಲ್ಲಿಗೆ ಕೆಲವೇ ಮೈಲು ದೂರದಲ್ಲಿರುವ ಬಾಮಿಲ್ ಬಳಿ ತಾ. ೫ ರಂದು ಸಾಯಂಕಾಲ ಸುಮಾರಿಗೆ ಒಂದು ಮೋಟಾರು ಅವಘಡವಾಯಿತು. ಮಂಗ್ಳೂರಿನಿಂದ ಕಡೂರಿಗೆ ಹೋಗುವ ಒಂದು ಬಸ್ಸಿಗೆ ಬಾಮಿಲ್ ಬಳಿ ಎದುರು ಬರುತ್ತಿರುವ ಒಂದು ಲೋರಿ ಘರ್ಶಣೆಯಾಗಿ ಬಸ್ಸಿನ ಬಲ ಬದಿಯಲ್ಲಿ ಕೂತ ನಾಲ್ಕಾರು ಮಂದಿ ಪ್ರಯಾಣಿಕರಿಗೆ ವಿಪರೀತ ಘಾಯಗಳಾದುವು. ಬಸ್ಸು ಲೋರಿಗಳಿಗೂ ದಕ್ಕೆಯಗಲಿದೆ. ಆಸ್ಪತ್ರೆಗೆ ಸಾಗಿಸಲ್ಪಟ್ಟ ನಾಲ್ಕೈದು ಮಂದಿಗಳ ಪೈಕಿ ಒಬ್ಬನು ಆಗಲೇ ಮೃತಪಟ್ಟಿರುವನೆಂದು ತಿಳಿದು ಬರುತ್ತದೆ. ಅವಘಡದ ಕಾರಣದ ಕುರಿತು ಪೋಲಿಸ್ ತನಿಖೆ ನಡೆಯುತ್ತಿದೆ. ಮೃತಪಟ್ಟ ಬಿ. ನಾರಾಯಣ ಎಂಬ ತರುಣನು ಮಿಲಿಟರಿಯಲ್ಲಿ ಕಾರಕೂನ ಕೆಲಸದಲ್ಲಿದ್ದರೆಂದು ಹೇಳಲಾಗಿದೆ.

ಕಟಪಾಡಿ:—ಇಲ್ಲಿಯ ಎಸ್. ವಿ. ಟಿ. ಹ್ಯಾಸ್ಕೂಲು ಕಳೆದ ತಾ. ೧ರಂದು ಪ್ರಾರಂಭವಾಯಿತು. ಅಂದಿನ ಉದ್ಘಾಟನೆಯನ್ನು ಡಾ। ಕೇಶಪೈಯವರು ಜರುಗಿಸಲಿದ್ದರು. ಆದರೆ ಡಾಕ್ಟರರ ಅನಿರೀಕ್ಷಿತ ಅನಾರೋಗ್ಯದಿಂದ ಶ್ರೀ. ಎಂ. ದಾಮೋದರ ಕಿಣಿ, ರಿಟಾಯರ್ಡ್‌ಪ್ರಿನ್ಸಿಪಾಲ್ ಎಗ್ರಿಕಲ್ಚರಲ್ ಕೊಲೇಜ್ ಕೊಯಂಬೂತ್ತೂರು, ಇವರು ನೆರವೇರಿಸಿದರು. ವಿದ್ಯಾರ್ಥಿಗಳೂ ಬಹು ಸಂಖ್ಯೆಯಲ್ಲಿ ಸೇರುತ್ತಿರುವರು. ಸದ್ರಿ ಹ್ಯಾಸ್ಕೂಲಿನಲ್ಲಿ ಸಂಸ್ಕೃತವನ್ನು ಕಲಿಸುವ ಏರ್ಪಾಡೂ ಮಾಡಿರುವರೆಂದೂ ತಿಳಿದುಬರುತ್ತದೆ.

ಪುಂಜಾಲಕಟ್ಟೆ:—ಇಲ್ಲಿಯ ಆಸುಪಾಸಿನಲ್ಲಿ ಕೆಲವು ದಿನಗಳ ಹಿಂದೆ ಒಂದು ಖೂನಿ ನಡೆಯಿತು. ಪಾಂಡಾವರ ಎಂಬಲ್ಲಿ ಬಿಲ್ಲವ ಜಾತಿಯ ರೈತನೊಬ್ಬನ ಶವವು ಸಿಕ್ಕಿದ್ದು, ಹೊಡೆದು ಕೊಂದ ಕುರುಹುಗಳು ಮೃತನ ದೇಹದ ಮೇಲೆ ಕಂಡು ಬಂದಿದೆ. ಅಕ್ಕಿಯ ಸಂಬಂಧ ಯಾವುದೊ ಕಚ್ಚಾಟ ನಡೆದುದರ ಪರಿಣಾಮವಿದ್ದಿರಬಹುದೆಂದು ಊಹಿಸಲಾಗಿದೆ. ಪೋಲಿಸ್ ತನಿಖಿಯು ನಡೆಯುತ್ತಿದೆ.

ಕಳೆದ ೩ ಸಾವಿರ ವರ್ಷಗಳಲ್ಲುಂಟಾದ ಭೂಕಂಪದಿಂದ ಸುಮಾರು ೧॥ ಕೋಟಿ ಜನರು ಮಡಿದಿರುವರೆಂದು ತಜ್ಞರು ಲೆಕ್ಕ ಹಾಕಿರುವರು.

* * *

ಈ ಪ್ರಖ್ಯಾತ ಲೇಪವು ಕಲೆ ಉಳಿಯದಂತೆ ಗುಣ ಪಡಿಸುತ್ತದೆ

ಈ ಜಾಂಬಕ್ ಪೆಟ್ಟಿಗೆ ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದು

ನೀವೆಷ್ಟೇ ಜಾಗರೂಕರಾಗಿದ್ದರೂ, ಮನೆಯಲ್ಲಿ ಕೆಲಕೆಲವು ಅಪಾಯಗಳು ಸಂಭವಿಸಿಯೇ ಬಿಡುತ್ತದೆ. ಗಾಯ, ಮೊಣಕಾಲು ಬೇನೆ, ಬಾವು ಇತ್ಯಾದಿಗಳಾಗಿ ಮಕ್ಕಳು ಆಗಾಗ ಬಹಳ ತೊಂದರೆಕೊಡುತ್ತವೆ. ಅಂಥಾ ಗಾಯಗಳು ಒಳಗಡೆ ವಿಷಕ್ರಿಮಿ ಹೋಗದಿದ್ದರೆ ಯಾವಾಗಲೂ ಆಪಾಯಕಾರಿಗಳಲ್ಲ. ಅದಕ್ಕಾಗಿಯೂ ನೀವು ಆಗ ಜಾಂಬಕ ತಾಗಿಸಬೇಕು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವನ್ನು ಚರ್ಮವು ಬೇಗನೇ ಹೀರಿಕೊಂಡು, ನೋವನ್ನು ಗುಣಮಾಡಿ, ಬಾವನ್ನು ಕಡಿಮೆಮಾಡಿ ರೀಶಿ ಇತ್ಯಾದಿಗಳನ್ನು ಒಣಗಿಸುವುದು.

ಯಾವಾಗಲೂ ಜಾಂಬ ಕನ್ನೇಸವರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—

ಕುಟಿಕೂರ ಟಾಲ್ಕಮ್ ಪೌಡರ್

CUTICURA TALCUM POWDER

ದೀರ್ಘ ಅವಧಿಯ ಯುದ್ಧ ನಡೆಯಿಸಲು

ಜಪಾನಿನೊಡನೆ ಇನ್ನೂ ಶಕ್ತಿಯಿದೆ

ಈ ಕುರಿತು ಹೊರಟ ಒಂದು ವರದಿಯಲ್ಲಿ ಈ ಕೆಳಗಿನ ಅಭಿಪ್ರಾಯಗಳು ಸೂಚಿಸಲಾಗಿವೆ.

'ಯುದ್ಧವನ್ನು ದೀರ್ಘ ಸಮಯ ನಡೆಯಿಸಿಕೊಂಡು ಹೋಗುವರೆ ಬೇಕಾದ ಸಕಲ ಪೂರೈಕೆಯನ್ನು ಮಾಡುವರೆ ಜಪಾನಿಯರ ಕೈಗಾರಿಕೆ ಕೇಂದ್ರಗಳು ಇನ್ನೂ ಸುರಕ್ಷಿತವಾಗಿವೆ. ಇಷ್ಟರ ತನಕ ಜಪಾನಿಯರಿಂದ ವಿಮೋಚಿಸಲ್ಪಟ್ಟ ಪ್ರದೇಶವು ಈ ಮೊದಲು ಅವರ ಕೈಸೇರಿದ ಪ್ರದೇಶದ ಶೇ. 7ರಷ್ಟಾಗಿದೆ. ವಾಯೋಭಿಯೋಗದಿಂದ ತಮ್ಮ ಕಾರ್ಖಾನೆಗಳಿಗೆ ದಕ್ಕೆ ಬರಬಹುದೆಂಬ ಊಹನೆಯು ಜಪಾನಿಯ ಸಂಗ್ರಾಮ ನಾಯಕರಿಗೆ ಈ ಮೊದಲೆ ಯಿದ್ದುದರಿಂದ, ಅವರು ಯುದ್ಧ ಸಂಬಂಧಪಟ್ಟ ಕೈಗಾರಿಕೆ ಇತ್ಯಾದಿಗಳನ್ನು ಸುರಕ್ಷಿತವಾಗಿರುವ ದೂರ ದೂರ ಪ್ರದೇಶಗಳಲ್ಲಿ ಬಾಂಬು ದಾಳಿಯಿಂದ ರಕ್ಷಿಸಲ್ಪಟ್ಟ, ವಿಮಾನಗಳಿಗೆ ಕಾಣದ ಗುಡ್ಡೆ ಬಯಲು ಇತ್ಯಾದಿ ಕಡೆಗಳೊಳಗೆ ಒಯ್ದಿರುವರು. ಕೈಗಾರಿಕೆಗಳನ್ನುದೂರಕ್ಕೆಚದರಿಸಿ ಸುರಕ್ಷಿತಗೊಳಿಸುವ ಕಾರ್ಯವು ಇತ್ತೀಚೆಗೆ ಬಹಳ ಭರದಲ್ಲಿ ಸಾಗಿರುತ್ತದೆ.'

ಆದರೂ ಜಪಾನು ಇನ್ನೂ ಆರೆ ತಿಂಗಳಲ್ಲಿ ತಲೆ ಮಣಿಯಬಹುದೆಂದು ಕೆಲವು ತಜ್ಞರ ಅಭಿಪ್ರಾಯವಿರುವುದು.

ಅಮೇರಿಕನ್ ವಿಮಾನಪಡೆಗಳಿಂದ ಒದಗಿದ ಹಾನಿಯಿಂದ ಟೊಕಿಯೊ ನಗರವನ್ನು ಮುಂದಕ್ಕೆ ಸಂಪೂರ್ಣ ಪುನರ್ರಚನೆ ಮಾಡುವ ಅವಶ್ಯ ಬೀಳಬಹುದೆಂದು ಹೇಳಲಾಗಿದೆ.

ಜಪಾನಿಯರನ್ನು ಸದೆಬಡೆಯುವ ಕಾರ್ಯವು ಬೇಗನೆ ಕೊನೆಗೊಳ್ಳಬೇಕಾದರೆ ದೂರ ಪೂರ್ವದ ಯುದ್ಧರಂಗದಲ್ಲಿ ಸೋವಿಯಟ್ ಸೈನ್ಯದ ಪ್ರವೇಶವಾಗುವುದು ಅಗತ್ಯವಿದೆ. ಆದರೆ ರಷ್ಯವು ಜಪಾನಿನೊಡನೆ ಈಗಲೂ ತಟಸ್ಥ ಸಂಬಂಧದಲ್ಲಿದೆ. ಆಂಗ್ಲೋ-ಅಮೇರಿಕಕ್ಕೂ-ಜಪಾನಿಗೂ, ಸಂಧಾನ ಉಂಟಾಗುವಂತೆ ರಷ್ಯವು ಮಧ್ಯಸ್ಥಿಕೆಯನ್ನು ವಹಿಸಬಹುದೆಂದೂ ಕೆಲಸಮಯ ಹಿಂದೆ ಒಂದು ವಾರ್ತೆಯು ಬಂದಿತ್ತು.

ಇರೋಪದಲ್ಲೇನು?

ಜರ್ಮನಿಯು ಶರಣು ಬಂದು ಇರೋಪದ ಯುದ್ಧವು ಮುಗಿಯಿತ್ತಾದರೂ, ಅಲ್ಲೀಗ ದಿನೇದಿನೇ ಹೊಸ ಸಮಸ್ಯೆಗಳು ಉಂಟಾಗುತ್ತಿವೆ. ಯುಗೊಸ್ಲೆವಿಯಾ ಮತ್ತು ಇಟಲಿಯ ನಡುವೆ ಟ್ರಿಸ್ಟೆ ಎಂಬ ಬಂದರ ಪ್ರದೇಶದ ಕುರಿತು, ಮಾರ್ಸೆಲ್ ಟಿಟೋವಿಗೂ, ಬ್ರಿಟಿಷ್ ದಳಪತಿ ಅಲೆಕ್ಸಾಂಡರನಿಗೂ ತಿಕ್ಕಾಟವೆದ್ದಿದೆ. ಟಿಟೋರವರು ಹೇಳುವಂತೆ ಟ್ರಿಸ್ಟೆಯು ಯುಗೊಸ್ಲೆವೆಕಿಯಾಕ್ಕೆ ಹೋಗತಕ್ಕದು. ಅಲೆಕ್ಸಾಂಡರರೂ ಹೇಳುವಂತೆ ಅದು ಇಟಲಿಗೆ ಸೇರಿರುವುದರಿಂದ ಅದು ತಮ್ಮ ಅಂಕಿತ ಬರಬೇಕೆಂದೂ ವಾದಿಸುತ್ತಿರುವರು. ಈ ಸಮಸ್ಯೆಯನ್ನು ಘರ್ಷಣೆಯಿಲ್ಲದೆನೆ ನಿವಾರಿಸಲು ಎಲ್ಲ ಕಡೆಗಳಿಂದ ಯತ್ನಗಳು ನಡೆಯುತ್ತಿವೆ.

ಆಸ್ಟ್ರೀಯದಲ್ಲಿ ಸೋವಿಯಟ್‌ನ ಪ್ರವೇಶವೂ ಬ್ರಿಟಿಷ್ ಮತ್ತು ಅಮೇರಿಕನ್ ದಂಡುಗಳ ಪ್ರವೇಶವು ಆಗಿರುವುದಷ್ಟೆ. ಆಸ್ಟ್ರೀಯಾದ ರಾಜಧಾನಿ ವಿಯನ್ನಾದಲ್ಲಿ ಸೋವಿಯಟ್ ರಷ್ಯಾದ ನೆರವಿನಲ್ಲಿ ಒಂದು ಸರಕಾರವು ಸ್ಥಾಪನೆಯಾಗಿರುತ್ತದೆ. ತಾವು ಆಕ್ರಮಿಸಲ್ಪಟ್ಟ ಪ್ರದೇಶದ ಆಡಳಿತದ ಕುರಿತು ಜನರಲ್ ಅಲೆಕ್ಸಾಂಡರರೂ ಬೇರೆ ಒಂದು ಪ್ರಕಟಣೆಯನ್ನು ಮಾಡಿರುವರು. ಇದಕ್ಕೂ ವಿಯನ್ನಾದ ಸರಕಾರಕ್ಕೂ ಯಾವ ಸಂಭಂದವಿದ್ದಂತೆ ಕಾಣುವುದಿಲ್ಲ.

ತೆಹಾರನ್ ಯಾಲ್ಟಾ ಮೊದಲಾದ ಕಡೆ ನಡೆದ ಕೂಡುವಿಕೆಗಳಲ್ಲಿ ಆಕ್ರಮಿತ ಪ್ರದೇಶಗಳ ಕುರಿತು ಮಿತ್ರರು ಒಡಂಬಡಿಕೆಯ ಧೋರಣೆಗಳನ್ನು ಕೈಗೊಳ್ಳಬೇಕೆಂದೂ ನಿರ್ಣಯಿಸಲಾಗಿದ್ದರೂ ಈಗ ನಡೆಯುವ ವಿದ್ಯಮಾನಗಳಲ್ಲಿ ಭಿನ್ನತೆಯು ಕಾಣಿಸಿಕೊಂಡದೆ.

ಇನ್ನೊವೆಮ್ಮೆ ಇರೋಪನ್ನು ಗೆದ್ದ ತ್ರಿರಾಷ್ಟ್ರ ಮುಖಂಡರು ಕೂಡ ಬರಬೇಕಾಗಿದೆ. ಈ ವಿಷಯಗಳನ್ನು ಸರಿಯಾಗಿ ಚರ್ಚಿಸಿ ಒಂದು ಬಡಂಬಡಿಕೆ ಇತ್ಯರ್ಥಕ್ಕೆ ಬಂದರೆ, ಆಗ ಜಗತ್ತು ಹಾಯ್ ಎನ್ನಬಹುದು.

ವೇವಲ್ಲರು ಹಿಂದಕ್ಕೆ ಬರುವರು

ರಾಷ್ಟ್ರ ಮುಖಂಡರ ಬಿಡುಗಡೆಯಾಗುವುದೆ?

ಲೇಬರ್ ಪಕ್ಷವು ಹಿಂದೀಯರಿಗೆ ಅನುರಾಗ ತೋರಿಸಿದ ದಸೆಯಿಂದ ಟೋರಿಗಳ ನಮ್ಮ ಕುರಿತು ವರ್ತನೆಯಲ್ಲಿ ಮಾರ್ಪಾಡಾಗಬಹುದೆಂದು ಹೇಳಲಾಗಿದೆ. ಹಿಂದೀಯರನ್ನು ಸಮಜಾಯಿಸಲು ಕೆಲವು ಸಲಹೆಗಳು, ಚರ್ಚಿಲ್-ಅಮೇರಿಯವರಿಂದ, ವೆವಲ್ಲರೊಡನೆ ಕೊಡಲಾಗಿವೆಯೆಂದೂ, ಇವುಗಳೊಡನೆ ಅವರು ಹಿಂದೂದೇಶಕ್ಕೆ ಹಿಂತಿರುಗಿರುವರು. ಕಾಂಗ್ರೆಸ್ಸಿಗರೂ ಇನ್ನಿತರರೂ ತಾವು ತಂದ ಸಲಹೆಗಳಿಗೆ ಒಪ್ಪುವುದಾದರೆ ಬೇಗ ಸೆರೆಯಲ್ಲಿರುವ ಕಾಂಗ್ರೆಸ್ ಮುಖಂಡರ ವಿಮೋಚನೆಯಾಗಬಹುದೆಂದೂ ಹೇಳಲಾಗಿದೆ ಸದ್ಯಕ್ಕೆ ತಿಳಿದು ಬರುವ ಹಾಗೆ ವೈಸ್ರಾಯ ವೆವಲ್ಲರು ಕ್ರಿಪ್ಸ್ ಸಲಹೆಗಳನ್ನು ಸುಧಾರಿಸಿಕೊಂಡ ರೂಪದಲ್ಲಿ ತೆಗೆದುಕೊಂಡು ಬಂದಿರುವರೆಂದು ಹೇಳಲಾಗಿದೆ. ಈ ಕುರಿತು ಪ್ರಕಟಣೆಯೊಂದು ವೈಸ್ರಾಯರ ಕಡೆಯಿಂದ ಹೊರಡುವುದಾಗಿ ನಿರೀಕ್ಷೆಯಿದೆ.

ಚರ್ಚಿಲ್ಲರಿಗೆ ವಿರೋಧಿಗಳಿಲ್ಲ

ಮುಂಬರುವ ಚುನಾವಣೆಯಲ್ಲಿ ಚರ್ಚಿಲ್ಲರಿಗೆ ಎದುರಾಗಿ ಯಾವ ಪಕ್ಷದವರೂ ಹುರಿಯಾಳನ್ನು ಹಾಕುವುದಿಲ್ಲವೆಂದು ತಿಳಿದುಬಂದಿದೆ. ಇದಕ್ಕೆ ಅನೇಕ ಕಾರಣಗಳಿವೆ. ಅದರಲ್ಲಿ ಮುಖ್ಯವಾದುದೆಂದರೆ,-ಸದ್ಯದಲ್ಲಿ ತ್ರಿರಾಷ್ಟ್ರ ಮುಖಂಡರ ಕೂಡುವಿಕೆಯು ನಡೆಯುವ ಸಂಭವಗಳಿರುವುದರಿಂದ ಚರ್ಚಿಲ್ಲರು ಅದರಲ್ಲಿ ನಿರಾತಂಕವಾಗಿ ಭಾಗವಹಿಸಲು ಸುಲಭಸಾಧ್ಯವಾಗುವಂತೆ, ಎಲ್ಲಾ ಪಕ್ಷದವರು ಚರ್ಚಿಲ್ಲರನ್ನು ವಿರೋಧಿಸಬಯಸುವುದಿಲ್ಲವೆಂದು ಹೇಳಲಾಗಿದೆ. ಈ ಯುದ್ಧವನ್ನು ಗೆದ್ದ ಮಹಾವೀರರೆಂದು ಪ್ರಜ್ವಲಿಸುತ್ತಿರುವ ಚರ್ಚಿಲ್ಲರ ಎದುರುನಿಂತು, ನಮ್ಮ ಠೇವಣಾತಿ ಹಣವನ್ನು(700ರೂ.) ಕಳಕೊಳ್ಳಲು ಯಾರಿಗೂ ಇಚ್ಛೆಯಿಲ್ಲದಿರುವುದೂ ಒಂದು ಕಾರಣವಾಗಿರಬಹುದು.

ಚರ್ಚಿಲ್ಲರು ತನ್ನ ಪಕ್ಷದ ಪರವಾಗಿ ಆಕಾಶವಾಣಿಯ ಮೂಲಕ ಪ್ರಚಾರ ಭಾಷಣಗಳನ್ನು ಮಾಡಲಿರುವರೆಂದು ತಿಳಿದುಬಂದಿರುತ್ತದೆ.

ಸೋವಿಯಟ್ ರಷ್ಯವೂ–ಹಿಂದೂದೇಶವೂ

ಸದ್ಯ ಹಿಂದೂದೇಶದಲ್ಲಿ ನೆಲೆಸಿದ್ದ ಬಿಕ್ಕಟ್ಟಿನ ಪರಿಸ್ಥಿತಿಯು ಬೇಗನೆ ನಿವಾರಣೆಯಾಗದಿದ್ದರೆ, ಹಿಂದೂದೇಶವು ಸೋವಿಯಟ್ ರಷ್ಯದ ಬದಿ ಸೇರುವಂತಾಗಬಹುದೆಂದೂ, ಇದಕ್ಕಾಗಿ ರಷ್ಯವು ಹೊಂಚುಹಾಕಿ ಕುಳಿತಿದೆ ಎಂದೂ, ಹಿಂದೂದೇಶದಲ್ಲಿ ಸೋವಿಯಟ್ ರಷ್ಯದ ಪರವಾಗಿ ಪ್ರಚಾರಕಾರ್ಯ ಇತ್ಯಾದಿಗಳನ್ನು ನಡೆಯಿಸಲೂ ರಷ್ಯದ ಕಾಜಸ್ಥಾನ ಎಂಬಲ್ಲಿ ಕೆಲ ಹಿಂದೀಯ ತರುಣರು ತರಬೇತು ಹೊಂದುತ್ತಿದ್ದಾರೆಂದೂ, ಹಿಂದೀಯ ಸಮಸ್ಯೆಯು ಯೋಗ್ಯ ರೀತಿಯಲ್ಲಿ ಆದಷ್ಟು ತ್ವರ್ಯದಲ್ಲಿ ಸುಧಾರಿಸಲ್ಪಡುವುದು ಅವಶ್ಯವಿದೆ ಎಂದು ಮೊದಲಾಗಿ ಅಭಿಪ್ರಾಯಪಟ್ಟ ಪ್ರಕಟಣೆಯೊಂದು ಸಂ. ಅಮೇರಿಕದ ಶಾಸನ ಸಭೆಯ ಸದಸ್ಯೆಯಾದ ಸ್ತ್ರೀಯೊಬ್ಬಳಿಂದ ಮಾಡಲಾಗಿವೆ. ಈ ಅಭಿಪ್ರಾಯದಲ್ಲಿ ಸತ್ಯಾಂಶವಿಲ್ಲವೆಂದು, ಹಿಂದೂದೇಶದ ಕೊಮ್ಯುನಿಷ್ಟರ ಪರವಾಗಿ ಶ್ರೀ. ಜೋಸಿಯರು ಅದನ್ನು ನಿರಾಕರಿಸಿರುವರು.

ಚೀನಾದಲ್ಲಿ ಭೀಕರ ಪರಿಸ್ಥಿತಿ

ಚೀನಾದ ಸೆಚಿವ್ಹಾನ್ ಪ್ರದೇಶದಲ್ಲಿ ಆಹಾರ ಕೊರತೆಯಿಂದ ಅತ್ಯಂತ ಭೀಕರ ಪರಿಸ್ಥಿತಿಯು ಉಂಟಾಗಿರುವುದೆಂದೂ, ಆಹಾರಕ್ಕಾಗಿ ಮಕ್ಕಳು ಮಗಿಗಳ ಮಾರಾಟವಾಗುತ್ತಿದೆ ಎಂದೂ, ಜನರು ಬುದ್ಧಿಭ್ರಮರಾಗಿ ಮನುಜ ಮಾಂಸವನ್ನೂ, ಮಕ್ಕಳನ್ನು ಕೊಂದಿಕ್ಕಿ ತಿನ್ನುತ್ತಿದ್ದಾರೆಂದೂ ವಾರ್ತೆಯೊಂದು ಬಂದಿದೆ.

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ
ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906
ಕೆನರಾ ಬೇಂಕ್ ಲಿಮಿಟೆಡ್.
(ESTD. 1906)
CANARA BANK LIMITED
In corporated in British India, liability of Members limited.

Buy the Best
CASHEW SHELL OIL
We have great pleasure to announce that we have placed on the market the best and purest Cashew Shell oil manufactured by us.
Packing — Tin of 35 lbs. nett or bulk :n barrels.
Hindusthan Commodity Corporation Ltd.
Manufacturers & Exporters,
CANARA BANK BUILDING BUNDER Mangalore

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಕೂದಲಿನಿಂದ ಸಿದ್ಧೌಷಧ

ಮಲೇರಿಯಾವನ್ನು ತಡೆಯಲು ಮತ್ತದನ್ನು ನಿವಾರಿಸಲು ಜಪಾನೀಯ ಸಂಶೋಧಕರು ಅತ್ಯಂತ ಗುಣಕಾರ ಔಷಧಿಯೊಂದನ್ನು ಕಂಡುಹಿಡಿದಿರುವರಾಗಿ ತಿಳಿದುಬಂದಿದೆ. ಈ ಔಷಧಿಗೆ ಮಲೇರಿಯಾವನ್ನು ಗುಣಪಡಿಸುವುದರಲ್ಲಿ ಕ್ವಿನೀನಿಗಿಂತ ಶ್ರೇಷ್ಠ ಗುಣಗಳಿರುವುದೆಂದೂ, ಈ ಔಷಧದ ಒಂದೇ ಇಂಜೆಕ್ಷನಿನಿಂದ ಮಲೇರಿಯಾದಿಂದ ಯಾತನೆ ಪಡುವವನನ್ನು ಪೂರ್ಣ ಗುಣಪಡಿಸಬಹುದೆಂದೂ ಹೇಳಲಾಗಿದೆ. ಈ ಔಷಧವು ಮಾನವನ ಕೂದಲು ಮತ್ತು ರೋಮದಿಂದ ಸಿದ್ಧವಾದುದಂತೆ.

ಹಿಂದೂದೇಶಕ್ಕೆ ಸ್ವದೇಶಿ ಶಾಸನ

ಹಿಂದೂದೇಶ ಉದ್ಧಾರಕ್ಕಾಗಿ, 'ಗಾಂಧಿಯನ್ ಪ್ಲೆನ್' ಎಂಬ ಪತ್ರಕವನ್ನು ಸಿದ್ಧಪಡಿಸಿದ ಶ್ರೀ. ಅಗರ್‌ವಾಲಾರವರು ಸದ್ಯದಲ್ಲಿ ಗಾಂಧಿತತ್ವಗಳ ಮೇಲೆ ಹಿಂದೂದೇಶಕ್ಕೆ 'ಸ್ವದೇಶಿ ಶಾಸನ' ಒಂದನ್ನು ಹೊರಡಿಸಲಿದ್ದಾರೆಂದು ತಿಳಿದುಬಂದಿದೆ. ಈ ವಿಚಾರದಲ್ಲಿ ಅವರು ಗಾಂಧೀಜಿಯರನ್ನು ಕಂಡು ಮಾತನಾಡಿರುವರು. ಹಳ್ಳಿಯು ಈ 'ಸ್ವದೇಶಿ ಶಾಸನ'ದ ತಳಹದಿಯಾಗಿ ತೆಗೆದುಕೊಳ್ಳಲಾಗುವುದಂತೆ. ಅಗರ್‌ವಾಲರಿಂದ ಸಂಕಲ್ಪಿಸಲಾದಂತೆ, ಹಳ್ಳಿ ಜೀವನ ಮೇಲೆ ಹೊಂದಿಕೊಂಡು ಸಮಸ್ತ ಹಿಂದೂದೇಶಕ್ಕೊಂದು ಶಾಸನವು ಕಲ್ಪಿಸಲಾಗುವುದೆಂದೂ ಈ ಶಾಸನದ ಮೂಲಸೂತ್ರಗಳು,– ಗಾಂಧಿತತ್ವಗಳನ್ನು ಹೊಂದಿಕೊಳ್ಳುವವೆಂದೂ ತಿಳಿಯುತ್ತೇವೆ.

ಪಂಜಾಬದಲ್ಲಿ

ಪಂಜಾಬದಲ್ಲಿ ಮುಸ್ಲಿಂ ಲೀಗಿನ ಪರವಾಗಿ ಆರಿಸಲ್ಪಟ್ಟ ಆರು ಮಂದಿ ಎಸೆಂಬ್ಲಿ ಸದಸ್ಯರು ರಾಜಿಯಿತ್ತಿರುವರು. ತಮ್ಮ ಶಕ್ತಿಯನ್ನು ತಿಳಿದುಕೊಳ್ಳಲು ಯೂನಿಯನಿಷ್ಟ ಪಕ್ಷದವರಿಗೆ, ಮುಸ್ಲಿಂ ಲೀಗಿನ ಇದೊಂದು ಕರೆ ಎಂದು ಹೇಳಲಾಗಿದೆ. ಮೊನ್ನೆ ಈಚೆಗೆ ನಡೆದ ಉಪ ಚುನಾವಣೆಗಳಲ್ಲಿ ಯೂನಿಯನಿಸ್ಟ್ ಹುರಿಯಾಳುಗಳೆ ಚುನಾಯಿತರಾಗಿ ಬಂದಾಗ, ಜನತೆಯು ನಮ್ಮ ಬೆಂಬಲಕ್ಕೆ ತಮಗೆ ಇದೆ ಎಂದು ಯೂನಿಯನಿಷ್ಟ ಪಕ್ಷದವರು ಹೇಳಿಕೊಂಡುದಕ್ಕೆ ಅವರದನ್ನು ಪರೀಕ್ಷಾರ್ಥವಾಗಿ ವ್ಯಕ್ತಪಡಿಸಲಿ ಎಂದು ಮುಸ್ಲಿಂ ಲೀಗಿನ ಆರು ಮಂದಿ ಸದಸ್ಯರು ತಮ ಸ್ಥಾನಕ್ಕೆ ರಾಜಿಯಿತ್ತು, ಆ ಸ್ಥಾನಗಳಿಗೆ ಚುನಾವಣೆ ನಡೆಯುವಂತೆ ಮಾಡಿರುವರಂತೆ.

ಸಿರಿಯಾ ಪ್ರಕರಣ

ಸಿರಿಯಾದಲ್ಲಿ ಉಂಟಾದ ಗದ್ದಲಕ್ಕೆ ಮೂಲಕಾರಣವು, ಅರಬಿ ನಾಡುಗಳ ಎಣ್ಣೆ ಉತ್ಪತ್ತಿಯು ಎಂದು ತಜ್ಞರೊಬ್ಬರಿಂದ ಹೇಳಲಾಗಿದೆ. ಈ ಎಣ್ಣೆಯಲ್ಲಿ ಬ್ರಿಟನು ಮತ್ತು ಸಂ. ಅಮೇರಿಕಾವು ಆಸಕ್ತರಾಗಿರುವುದರಿಂದ, ಅವರು ಅರಬರ ಪಕ್ಷವನ್ನು ಹಿಡಿದಿರುವರಾಗಿಯೂ ಅರಬರ ಸ್ವಾತಂತ್ರ್ಯರಕ್ಷಣೆಗಾಗಿ ಮುಂದೆ ಬಂದಿರುವರಾಗಿ ಹೇಳಲಾಗಿದೆ.

ಸಾನ್‌ಫ್ರಾನ್ಸಿಸ್ಕೊದಲ್ಲಿ ಭಾವಿಲೋಕ ಶಾಂತಿಗಾಗಿ ವ್ಯವಸ್ಥೆಯ ಕುರಿತು ಪರ್ಯಾಲೋಚನೆಗಳು ನಡೆಯುತ್ತಿರುವಾಗಲೆ ಸಿರಿಯಾದಲ್ಲಿ ಘರ್ಷಣೆ ಎದ್ದುಬಿಟ್ಟಿದೆ. ಡಿ'ಗೊಲೆಯವರು ಹೇಳುವಂತೆ ಸಿರಿಯಾದ ಗದ್ದಲವು ಉಂಟಾಗಲು ಬ್ರಿಟಿಷ ಏಜಂಟರುಗಳು ಹಂಚಿಕೆಗಳು ಕಾರಣವೆಂದೂ ಮತ್ತು ಅರಬ ಸ್ವಾತಂತ್ರ ಪ್ರಶ್ನೆಯನ್ನು ಸಿರಿಯಾದ ಕುರಿತು ಮಾತ್ರವಲ್ಲ, ಮಧ್ಯ ಪೂರ್ವದ ಎಲ್ಲಾ ಅರಬ ನಾಡುಗಳ ಸ್ವಾತಂತ್ರ್ಯದ ಕುರಿತೂ ವಿಚಾರಿಸುವುದಾದರೆ ಮಾತ್ರ ಎಂಗ್ಲೊ-ಅಮೇರಿಕಾದೊಡನೆ ಆ ಕುರಿತು ಪ್ರಸ್ತಾಪಿಸಲು ಸಿದ್ಧರಿದ್ದೇವೆಂದೂ, ತಮ್ಮಿಂದ ಸಿರಿಯಾ ಜನರ ಸ್ವಾತಂತ್ರ್ಯಕ್ಕೆ ಭಂಗಬರಲಿಲ್ಲವೆಂದೂ, ಅಮೇರಿಕಾ, ಬ್ರಿಟನುಗಳು ಕೇಳುವಂತೆ ಸಿರಿಯಾದಲ್ಲಿ ಕೆಲವು ತಳಗಳನ್ನು ಮಾತ್ರ ತಮ್ಮ ಬೇಡಿಕೆಯಾಗಿರುವುದೆಂದೂ ಮೊದಲಾಗಿ ಆಡಿರುವರು. ಮಧ್ಯಪೂರ್ವ ಇರಾಕ್ ಪೆಲೆಸ್ಟೀನ ಮೊದಲಾದ ಕಡೆಗಳಲ್ಲಿ ಬ್ರಿಟಿಷ್ ದಂಡುಗಳು ಸ್ಥಾನಿಕರಿಸಲ್ಪಟ್ಟಿರುವಾಗ, ಅದೇ ರೀತಿಯಲ್ಲಿ ತಾನೇಕೆ ವರ್ತಿಸಬಾರದೆಂದು ಡಿ'ಗೊಲೆರವರ ಪ್ರಶ್ನೆ.

ಸಿರಿಯಾದ ಪ್ರಕರಣದಲ್ಲಿ ಹೊರಗಿನ ನೋಟಕ್ಕೆ ಅಲ್ಲಿ ಜನರ ಸ್ವಾತಂತ್ರ್ಯ ಸಮಸ್ಯೆಯು ಕಾಣಿಸಿಕೊಳ್ಳುತ್ತಿರುವುದಾದರೂ, ಆ ವಿಷಯವು ಅತಿ ಗೂಢವಿದೆ. ಇದು ಮಧ್ಯಪೂರ್ವದ ಅರಬಿ ಪ್ರದೇಶದಲ್ಲಿ ಪ್ರಭುತ್ವದ ರಾಷ್ಟ್ರಗಳ ತಮ್ಮ ತಮ್ಮ ಸ್ವಾರ್ಥ ಪರಲಾಲಸೆಗಳ ಪರಸ್ಪರ ಬಡಿದಾಟವಲ್ಲದೆ ಅದು ಬೇರೆ ಅಲ್ಲ.

ಕಾಗದದ "ಕಳ್ಳಸಂತೆ" ವ್ಯಾಪಾರ ನಡೆಯಿಸಿದ ರಿಜಿಸ್ತ್ರಾರರು

ಚಿಟಾಗುರ ಕಾಗದ ಕಾರ್ಖಾನೆಯವರಿಂದ ಕಂಟ್ರೋಲ್ ದರದಲ್ಲಿ ಒದಗಿಸಲಾದ ಕಾಗದವನ್ನು, ಅತಿರೇಖ ಲಾಭಗಳಿಸುವ ಉದ್ದೇಶದಿಂದ ಮಾರಿದ ಕುರಿತು ಮೊಕದ್ದಮೆಯು ಪಾಟ್ನಾ ನಗರದ ಸಿಟಿ ಕೋರ್ಟಿನಲ್ಲಿ ವಿಚಾರಣೆಗೆ ಬಂದಿರುತ್ತದೆ. ತಪ್ಪಿತಸ್ತರು, ಪಾಟ್ನಾ ವಿಶ್ವವಿದ್ಯಾಲಯದ ರಿಜಿಸ್ತ್ರಾರರಾಗಿದ್ದ ಪ್ರೊಫೆಸರ್ ಜಮ್ನಾ ಪ್ರಸಾದರು. ವಿಶ್ವವಿದ್ಯಾಲಯಕ್ಕೆಂದು ಹೇಳಿ ಬರಮಾಡಿಕೊಂಡ ಕಾಗದವನ್ನು ಅವರು ಕಳ್ಳ ಸಂತೆಯಲ್ಲಿ ಮಾರಿದರೆಂದು ಆರೋಪಿಸಿಲಾಗಿದೆ. ತನಿಕೆಯು ನಡೆಯುತ್ತಿದೆ.

ಚೀನಾದ ಕೌಮಿಂಗ್‌ಟಾಂಗ್ ಸರಕಾರದಲ್ಲಿ ಕೆಲವು ಬದಲಾವಣೆಗಳಾಗಿವೆ. ಪ್ರಗತಿಪರ ಭಾವಗಳಿಂದ ಕೂಡಿದ ಸೂಂಗರು ಪ್ರಧಾನರಾಗಿರುವರು. ಪ್ರಗತಿ ವಿರೋಧಕರೆಂದೆನಿಸಿಕೊಂಡ ಹಾ। ಕಂಗರು ನಿವೃತ್ತರಾಗಿರುವರು. ಆದರೂ ಕೌಮಿಂಗ್ ಟಾಂಗ್—ಕೊಮ್ಯುನಿಷ್ಟ ವಿವಾಧವು ಬೇಗನೆ ನಿವಾರಣೆಹೊಂದುವ ಕುರುಹುಗಳು ಕಾಣಿಸಿಕೊಳ್ಳಲಿಲ್ಲ. ದೂರ ಪೂರ್ವದ ಯುದ್ಧದಲ್ಲಿ ರಷ್ಯನ ಪ್ರವೇಶವಾದರೆ, ಆಗ ಕೌಮಿಂಗ್ ಟಾಂಗ್-ಕೊಮ್ಯುನಿಸ್ಟ್ ಎಳೆದಾಟವು, ರಷ್ಯಾ-ಆಂಗ್ಲೊ ಬ್ರಿಟನ್ ಎಳೆದಾಟವಾಗಿ ಪರಿಣಮಿಸಬಹುದೆಂದು, ಕೆಲವರ ಅಭಿಪ್ರಾಯವಿರುವುದು.

ಸಿರಿಯಾದ ಲಬ್ಲಿನ್, ಲೆವೆಂಟದಲ್ಲಿ ಉಂಟಾದ ಗದ್ದಲವು, ಬ್ರಿಟಿಷ್ ದಂಡು ಪ್ರವೇಶವಾದ ನಂತರ ಶಾಂತವಾಗಿರುವುದೆಂದು ತಿಳಿದುಬಂದಿದೆ. ಫ್ರೆಂಚರಿಗೂ ಸಿರಿಯದ ಜನರಿಗೂ ಉತ್ತಮ ಒಪ್ಪಂದ ಉಂಟಾಗುವಂತೆ ಯತ್ನಗಳು ಮಾಡಲಾಗುವಂತೆ.

ನೆಹರುಗಳಿಗೆ ಅರ್ಪಿಸಲು ಬ್ರಿಟನಿನಲ್ಲಿ ಒಂದು ನಿಧಿ ಕೂಡಿಸಲಾಗುವುದೆಂದೂ, ಈ ಕೆಲಸದಲ್ಲಿ ಬ್ರಿಟನಿನ ಅನೇಕ ಪ್ರಭೃತಿಗಳು ದುಡಿಯಲಿದ್ದಾರೆಂದು ತಿಳಿದುಬಂದಿದೆ.

ಮಡಿ ಬಟ್ಟೆಗಳಿಗೆ ಇಸ್ತ್ರಿ ಮಾಡುವವನು ಒಂದು ಕಂಬಳಿಯ ಮೇಲಾಗಲೀ ಇಲ್ಲವೆ ರಬ್ಬರಿನ ಚಾಪೆಯ ಮೇಲಾಗಲಿ ನಿಂತು ತನ್ನ ಕೆಲಸ ಮಾಡಿದರೆ ಅವನಿಗೆ ಆಯಾಸವು ಬಹಳ ಕಡಿಮೆಯಾಗುತ್ತದೆ.

* * *

ಪೌರ್ವಾತ್ಯ ದೇಶಗಳೆಲ್ಲ ಬುದ್ಧನ ಪ್ರತಿಮೆಗಳು ದೈವ ಸ್ಫೂರ್ತಿಯಿಂದ ನಿರ್ದೇಶಿಸಲ್ಪಟ್ಟ ಆಯೂ ಆಕೃತಿ ಮತ್ತು ಪ್ರಮಾಣಗಳಿಗನುಸಾರವಾಗಿಯೇ ಕೆತ್ತಲ್ಪಡುತ್ತವೆಯೆಂದೂ, ಆದುದರಿಂದ ಅವು ಯಾವ ದೇಶಕ್ಕೆ ಹೋದರೂ ಒಂದೇ ರೂಪರಚನೆಯವಾಗಿರುತ್ತವೆಂದೂ ಹೇಳಲಾಗಿದೆ.

* * *

Application are invited for the flowing post for the Saraswathi Vidyalaya High School to be newely opened at Ganguli (S. K.) on 20th June 1945 from experienced and qualified hands.

1. One Headmaster.
2. One Asistant.
3. Two Secondary Grade Trained Teachers.
4. One Drawing master.
5. One Y. M. C. A. Trained Physical Instructor.

Applications should reach the undersigned before 15-6-1945.

The Manager
S. V. High School
Ganguli (S. K.)

The Canara Banking Corporation, Ltd.
(Incorporated in British Inbia)
ESTD: 1906
Head Office: UDIPI, SOUTH KANARA.
ANNOUNCEMENT
A branch of the Bank has been opened at Camp Bazaar, CANNANORE, on 18—5—1945.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ
ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.
ಪ್ರಯಾಣ ಮಾಡಲೇ ಬೇಕೆಂದಿರುವಾಗ
ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.
ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.
JOINT MANAGERS,
The Combined Booking Agency, MANGALORE.
The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

THE JAYA CASH CERTIFICATES.

Issued by the Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂತಾದ ಬೇನೆ, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 15—6—1945 [ಸಂಚಿಕೆ 13]

ರಾಮ ರಾಜ್ಯದ ಸ್ವಪ್ನ ಸುಖ

ಗಾಂಧೀಜಿ ಇನ್ನೂ ೫೧ ವರ್ಷ ಬದುಕುವರು.

ಭೂಮಿಯ ಮೇಲೆ ದೇವರ ರಾಜ್ಯ

ಅದೇ ಪರಿಪೂರ್ಣವಾದ ಪ್ರಜಾರಾಜ್ಯ

೧೨೫ ವರ್ಷ ಬದುಕುವುದರ ಉದ್ದೇಶ ಮತ್ತು ರಾಮರಾಜ್ಯದ ಸಂಪೂರ್ಣ ಅರ್ಥವೇನೆಂದು ಕೇಳುವ ಅನೇಕ ಪತ್ರ ಪ್ರಶ್ನೆಗಳು ಮಹಾತ್ಮಗಾಂಧಿಯವರಿಗೆ ಮೇಲಿಂದ ಮೇಲೆ ಕೇಳಲ್ಪಡುತ್ತವೆ. ಈಗ ಪಂಚಗನಿಯಲ್ಲಿ ವಿರಾಮ ಪಡೆಯುತ್ತಿರುವ ಮಹಾತ್ಮರು 'ಇದು ಅಂತಹ ಎಲ್ಲಾ ಪ್ರಶ್ನೆಗಳಿಗೂ ಕೊನೆಯ ಉತ್ತರ'ವೆಂದು ತಿಳಿಸುತ್ತಾ ಒರ್ವ ಪತ್ರಿಕಾ ಪ್ರತಿನಿಧಿಗೆ ಬರೆದು ಕೊಟ್ಟ ಒಂದು ಲೇಖದಲ್ಲಿ ತಿಳಿಸುತ್ತಾರೆ. ಆ ಲೇಖದ ಸಾರಾಂಶವು ಕೆಳಗೆ ಭಾಷಾಂತರಿಸಲ್ಪಟ್ಟಿದೆ:

'ಕಳೆದ ೧೯೪೨ ಓಗಸ್ಟ್ ೮ರಂದು ಎ. ಐ. ಸಿ. ಸಿ. ಸಭೆಯಲ್ಲಿ ಭಾಷಣ ಮಾಡುವಾಗ ನನಗೆ ಈ ೧೨೫ ವರ್ಷ ಬದುಕುವ ಯೋಚನೆ ಬಂತು. ನಾನು ಬರೀ ಹದಿನೆಂಟು ಮಂತ್ರಗಳಿರುವ ಈಶೋಪನಿಷತ್ತಿನಲ್ಲಿ ತುಂಬಾ ಮನಪೂರ್ವಕ ಅಭಿರುಚಿಯುಳ್ಳವನು. ಅದರ ಎರಡನೇ ಮಂತ್ರದ ಮೊದಲ ಅರ್ಧದಲ್ಲಿ 'ಈ ಪೃಥ್ವಿಯಲ್ಲಿ ಸೇವೆ ಮಾಡಲು ಶತಮಾನದ ತನಕ ಬದುಕಲಿಚ್ಛಿಸು'ಎಂಬರ್ಥವು ಹೇಳಲ್ಪಟ್ಟಿದೆ. ಕೆಲವು ಸಂಸ್ಕೃತಕಾರರು 'ಶತಮಾನ' ಎಂಬ ಮೂಲ ಶಬ್ದಕ್ಕೆ ೧೦೦ರಿಂದ ೧೨೫ ಎಂಬರ್ಥವಾಗುವುದಾಗಿ ವಾದಸಿದ್ಧಮಾಡಿರುವರು. ಅದಷ್ಟು ಹೆಚ್ಚಿನ ಅವಧಿಯನ್ನು ಈಗ ನನ್ನ ಉದ್ದೇಶವಾಗಿ ನಾನು ತೆಗೆದುಕೊಂಡಿರುವೆನು.

"ಪ್ರಕೃತೀಯಜೀವನಪ್ರಿಯನಾಗಿರುವೆನಾದುದರಿಂದ ಸಂಪೂರ್ಣ ಜೀವಮಾನ ಅವಧಿಯ ತನಕ ಬದುಕುವ ಸಾಧ್ಯತೆಯಲ್ಲಿ ನನಗೆ ನಂಬಿಕೆ ಇದೆ. ಆದರೆ ವೈದಕೀಯ ದೃಷ್ಟಿಯಿಂದ ನನ್ನ ಮಟ್ಟಿಗೆ ಅದು ಅಸಂಭನೀಯವೆಂದೆನಿಸುವುದು.ಕಾರಣ ನಾನು ಮುಂಚಿನಿಂದಲೂ ಪ್ರಕೃತಿನಿಯಮವನ್ನನುಸರಿಸಿದವನಲ್ಲ. ವಿವಾಹ ಜೀವನದ ಪ್ರಾರಂಭದಿಂದಲೇ ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ಬಾರದ್ದರಿಂದ ಸಂಪೂರ್ಣ ಜೀವಮಾನ ಅವಧಿಯ ಆಶೆಯು ನನ್ನ ಮಟ್ಟಿಗೆ ವಿರೋಧವಾಗಿದೆ.

'ದೇಹದಾರ್ಢ್ಯವನ್ನು ಪ್ರಕೃತೀಯವಿಧಾನದಿಂದ ನಿವಾರಿಸಿಕೊಳ್ಳುವ ನನ್ನ ರೀತಿನೀತಿನಿಯಮಗಳಲ್ಲೂ ಅನೇಕ ಬದಲಾವಣೆಗಳಾಗಿವೆ. ಮನುಷ್ಯನು ಆದಷ್ಟು ಅನಾಸ್ತಕನಾಗಿರುವುದರಿಂದ ಮೃತ್ಯುಕಾಲವನ್ನು ಮುಂದರಿಸಬಹುದೆಂದು ಬಹುಕಾಲದಿಂದ ನಾನು ನಂಬಿಬಂದಿದ್ದೇನೆ. ಸ್ವಾನುಭವದಿಂದ ಶಾಸ್ತ್ರಪಠನದಿಂದ, ದೇವರ ಮೇಲಿನ ಆಳವಾದ ವಿಶ್ವಾಸದಿಂದಲೂ ಆಸಕ್ತಿರಹಿತ ಭಾವದಿಂದಲೂ ನಮ್ಮ ಶರೀರದೊಳಗೆ ಕೆಲವೊಂದು ಬದಲಾವಣೆಗಳಾಗುತ್ತವೆಂದು ನನಗೆ ತಿಳಿದಿದೆ. ಇದನ್ನು ನಿರಂತರ ಅಭ್ಯಾಸದಿಂದ ಹೊಂದಬಹುದು. ಇದರ ಮೇಲೆ ದೈವಾನುಗ್ರಹವೂ ಕೊಂಚ ಮಟ್ಟಿಗೆ ಅವಶ್ಯ. ದೈವಾನುಗ್ರಹವಿಲ್ಲದಿದ್ದರೆ ಮನುಷ್ಯ ಪ್ರಯತ್ನವು ವ್ಯರ್ಥ.

ಆಸಕ್ತಿಯನ್ನು ಜಯಿಸುವುದು ಕಷ್ಟದ ಕೆಲಸ.ಹಾಗಲ್ಲದಿದ್ದರೆ ಸಂಪೂರ್ಣ ಅಹಿಂಸಾವ್ರತವು ಸುಲಭವಾಗುತಿತ್ತು. ನಾನು ನನ್ನ ಆಸಕ್ತಿಯನ್ನು ದಬ್ಬಿ ಹಿಡಿಯುವುದರ ಮಟ್ಟಿಗೆ ಮಾತ್ರ ಜಯಿಸಿದ್ದೇನೆ. ಇದರಿಂದ ಶರೀರ ಮತ್ತು ಮನಸ್ಸಿನ ತುಂಬಾ ದಣು ಬೀಳುತ್ತದೆ. ಆಸಕ್ತಿಯನ್ನು ಜಯಿಸಬೇಕಾದುದೇ ಹೆಚ್ಚಿನ ಅವಶ್ಯಕತೆಯ ವಿಷಯ. ಅನಾಸ್ತಕನೆಂದರೆ ಭಾವನಾರಹಿತನೆಂದರ್ಥವಲ್ಲ. ಪ್ರತಿಯೊಂದು ಸೃಷ್ಟಿಜೀವಿಯೊಡನೆ ತನ್ನ ಸಮಾನತೆ ನೋಡುವವನು ಅವುಗಳ ಪ್ರತಿಯೊಂದು ಸುಖದು:ಖದಿಂದ ಭಾವೋದ್ರೇಕಗೊಂಡರೂ ಅದರಲ್ಲಿ ಆಸಕ್ತಿ ಹೊಂದುವವನಾಗಬಾರದು. ಇದು ಸಂಪೂರ್ಣ ಅಹಿಂಸೆಯು.

ಇಷ್ಟಸಿದ್ಧಿಯ ಕಷ್ಟದಿಂದ ಯಾರು ಚಿಂತಿಸಬೇಕಾಗಿಲ್ಲ. ಸರಿಯಾದ ಮಾರ್ಗದಲ್ಲಿರುವವನು ತನ್ನ ಗುರಿಗೆ ಹತ್ತಿರ ಹತ್ತಿರವಾಗಿಯೇ ತಲಪುವನು.

"ಹೀಗೆ ೧೨೫ ವರ್ಷ ಬದುಕುವುದು ನನ್ನ ಇಚ್ಛೆ ಹಾರೈಕೆಗಳಿದ್ದರೂ, ಒಂದು ವೇಳೆ ನಾನು ನಾಳೆಯೇ ಮರಣಪಟ್ಟರೂ ಅದರಿಂದಾಗುವುದಕ್ಕೇನೂ ನನ್ನಲ್ಲಿ ಯಾವ ತರದ ದುಃಖ ಬೇಸರಿಕೆಗಳಿಲ್ಲ. ಆದುದರಿಂದ ಬೇಗ ಸಾಯುವುದರ ವಿಷಯದಲ್ಲೂ ನನಗೆ ಯಾವ ತರದ ಮನೋವೇದನೆಗಳಿರುವುದಿಲ್ಲ.

ಧೀರ್ಘ ಅವಧಿ ಬದುಕುವ ನಿರೀಕ್ಷೆಯಿಂದ ಈಗ ನನ್ನ ಕರ್ತವ್ಯ ಕಾರ್ಯದಲ್ಲಿ ಯಾವ ತರದ ಅಸಡ್ಡೆಗಳಿಲ್ಲ. ನಾನು ಎಂದಾದರೂ ಸಾಯಲು ಸಿದ್ಧನೇ ಇದ್ದೇನೆ.

"ಮರಣವೇ ಎಲ್ಲಾ ಶ್ರಮಗಳ ಅಂತ್ಯವಲ್ಲ. ಹಾಗಾದರೆ ಅನಂತ್ಯವಾದ ಸತ್ಯತತ್ವಕ್ಕೆ ಲೋಪ ಬಂದಂತಾಗುವುದು. ಯೋಗ್ಯ ರೀತಿಯಲ್ಲಿ ಜೀವನ ನಡೆಸಿ ಸಾಯುವುದೆಂದರೆ ಮರಣಾನಂತರದ ಶ್ರೇಷ್ಠ ಜೀವನಕ್ಕೆ ಅದೊಂದು ಪ್ರಥಮ ಸೋಪಾನ.

"ಇನ್ನು ರಾಮರಾಜ್ಯದವಿಷಯ. ಶಾಸ್ತ್ರಪುರಾಣ ದೃಷ್ಟಿಯಿಂದ ಅದನ್ನು 'ಭೂಮಿಯ ಮೇಲಿನ ದೇವರ ರಾಜ್ಯ'ವೆಂದೆನ್ನಬಹುದು. ಅದೊಂದು ಪರಿಪೂರ್ಣವಾದ ಸಮಾನತೆಯ ಸಮಾಜ. ಅದರಲ್ಲಿ ಉಚ್ಚನೀಚ, ಕಪ್ಪು ಬಿಳಿ ಭೇದಗಳಿಲ್ಲ. ಭೂಮಿ ಮತ್ತು ರಾಜ್ಯಗಳು ಅದರಲ್ಲಿ ಜನತೆಗೆ ಸೇರಿದವುಗಳಾಗಿರುತ್ತವೆ. ಅಲ್ಲಿ ನ್ಯಾಯ ಸುಲಭ ಶೀಘ್ರದಲ್ಲಿ ದೊರಕುವುದು. ಪ್ರತಿಯೊಂದು ವಿಷಯದಲ್ಲೂ ಸ್ವಾತಂತ್ರ್ಯ. ಎಲ್ಲವೂ ಪ್ರತಿಯೊಬ್ಬನ ನೈತಿಕ ಸ್ವಯಂಮನೆದಿಂದಲೇ ಕೂಡಿ ಬರುವುದು.

"ಅಂತಹ ರಾಜ್ಯವು ಸತ್ಯ ಅಹಿಂಸೆಗಳ ಮೇಲೆ ಕಟ್ಟಲ್ಪಡಬೇಕು. ಅಲ್ಲಿ ಸ್ವಾವಲಂಭಿಗಳು ಸ್ವತಂತ್ರರೂ ಆದ ಹಳ್ಳಿ ಸಮಾಜ ರಚನೆಯಿರಬೇಕು. ಅಂತಹ ಸ್ವಪ್ನ ರಾಜದಲ್ಲಿ ನನಗೆ ಆನಂದವೆನಿಸುತ್ತದೆ. ಅದನ್ನು ಹೊಂದಲೋಸುಗವೂ ನಾನು ಸದಾ ಪ್ರಯತ್ನವನ್ನು ಮಾಡುತ್ತೇನೆ.

ಸಂ. ಅಮೇರಿಕಾವು ತಮಗೆ ಶರಣು ಬರುವ ತನಕ ತಾವು ಕಾದಾಡುವೆವೆಂದು ಜಪಾನಿಯ ಸಂಗ್ರಾಮ ಪಕ್ಷದವರು ಪ್ರಚಾರ ಮಾಡುತ್ತಿರುವರು.

ಸಿರಿಯಾ ಲೆವೆಂಟಿನ್ ವಾದದ ಕುರಿತು ಪಂಚಮ ರಾಷ್ಟ್ರಗಳು ಕೂಡಿಬಂದು ಇತ್ಯರ್ಥವಾಗಬೇಕೆಂದು ಡಿ'ಗೋಲೆರವರ ಬೇಡಿಕೆಯು ಮಾನ್ಯತೆ ಪಡೆಯಲಿಲ್ಲವಾಗಿ ತಿಳಿದು ಬಂದಿದೆ. ಡಿ'ಗೋಲೆರವರಿಂದ ಬ್ರಿಟಿಷರ ಮೇಲೆ ಹೊರಿಸಿದ ಆರೋಪಗಳು ಚರ್ಚಿಲ್ಲರಿಂದ ನಿರಾಕರಿಸಲಾಗಿವೆ.

ಜಪಾನಿಯ ಚಕ್ರವರ್ತಿಗಳ ಪಲಾಯನವೆ?

ಮಿತ್ರ ಬಲಗಳು ತಮ್ಮ ದ್ವೀಪಗಳ ಮೇಲೇರಿ ಬರುತ್ತಿದ್ದ ಹಾಗೆ, ಮತು ಅಮೆರಿಕಾದ ದೊಡ್ಡ ವಿಮಾನಗಳಿಂದ ನಡೆಯುವ ದಾಳಿಯಿಂದ ತಮ್ಮ ಸುತ್ತುಮುತ್ತಲೂ ನಡೆದ ಹಾನಿ ಅನರ್ಥಗಳನ್ನು ಕಂಡು ಜಪಾನೀಯ ಚಕ್ರವರ್ತಿಗಳಾದ ಹಿರೋಹಿಟಾರವರು ದಿಕ್ಕು ಕಾಣದವರಂತೆ ದಿಗ್ಭ್ರಾಂತರಾಗಿ ತಮ್ಮ ಕಾಲಿಗೆ ಬುದ್ಧಿ ಹೇಳಿರುವರಾಗಿಯೂ ಒಂದು ಗಾಳಿವಾರ್ತೆಯು ಬಂದಿರುತ್ತದೆ. ಈ ಚಕ್ರವರ್ತಿಗಳವರಿಗೆ ವಿರೋಧವಾಗಿ ಒಂದು ಪಂಗಡವು ಅಲ್ಲೀಗ ಜನಿಸಿದ್ದು ಮಿತ್ರರೊಡನೆ ಸಂಧಾನ ಸಾಧಿಸುವ ಹವಣಿಕೆ ನಡೆಯುತ್ತಿರುವುದಾಗಿ ಇನ್ನೊಂದು ವಾರ್ತೆಯು ಬಂದಿರುತ್ತದೆ.

'ಅಮೇರಿಕೆಕ್ಕೂ ವಸಾಹತುಗಳ ಕುರಿತು ಆಸೆಯಿದೆ'

ರಷ್ಯನ್ ಪತ್ರಿಕೆಯೊಂದರಲ್ಲಿ ಅಭಿಪ್ರಾಯ

ಶಾಂತಸಾಗರದಲ್ಲಿ ಬ್ರಿಟಿಷರ ಹಿಂದೂದೇಶದ ಮಾದರಿಯಲ್ಲಿ ಶಮಗಾಗಿ ವಸಾಹತು ರಾಜ್ಯವನ್ನು ಕಟ್ಟಿಕೊಳ್ಳುವ ದೃಷ್ಟಿಯಿಂದ, ಸಂ. ಅಮೇರಿಕಾವು ಅಲ್ಲೀಕ್ರಮ ಪಡುತ್ತಿರುವುದಾಗಿಯೂ, ಈ ಉದ್ದೇಶ್ಯದಿಂದ ಅಮೇರಿಕನ್ನರು ತಾವು ಆಕ್ರಮಿಸಿದ ಪ್ರದೇಶಗಳಲ್ಲಿ ಪ್ರಚಾರಕಾರ್ಯದಲ್ಲಿ ತೊಡಗಿರುವರಾಗಿಯೂ, ಪೆಸಿಫಿಕ್ ದ್ವೀಪಗಳೆಲ್ಲಾ ಅಮೆರಿಕಾನ್ನರ ಸೊತ್ತುಗಳಾಗ ಮಾಡಿಬಿಡುವ ಯತ್ನಗಳು ನಡೆಯುತ್ತಿವೆಯಾಗಿಯೂ ರಶ್ಯನ್ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

ಮುಂಬಾಯಿ ಸರಕಾರೀ ಗೋದಾಮುಗಳಲ್ಲಿ ಶೇಖರಿಸಿಟ್ಟ ೧೭೫೦೦ ಮಣ ಬಟಾಟೆ ಕೊಳೆತು ಹಾಳಾಗಿ ತಿಳಿದು ಬಂದಿದೆ.

ಬರ್ಮಾದ ಕುರಿತು ರಾಜ ಶಾಸನವೊಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿತಷ್ಟೆ. ಇದರ ವಿವರಗಳು ಗಾಂಧೀಜಿಯವರಿಗೆ ಓದಿ ಹೇಳಲಾಗಿ, ಅವರ ದಣ ತುಂಬಾ ವ್ಯಥೆಯನ್ನು ವ್ಯಕ್ತಪಡಿಸಿರುವರಾಗಿಯೂ ತಿಳಿದುಬಂದಿದೆ.

ಜಪಾನಿಯರ ಆತ್ಮತ್ಯಾಗ ಉಪಾಯದಿಂದ ಈ ಯುದ್ಧ ಕೊನೆಗೊಳ್ಳುವ ದಿನವು ದೂರಸರಿಯಬಹುದೆಂದು ಅಮೆರಿಕದಲ್ಲಿ ಕೆಲವರ ಅಭಿಪ್ರಾಯವಿರುತ್ತದೆ.

ನಿಷ್ಪ್ರಯೋಜಕ ಸೌಂದರ್ಯ

ಮೇಸ್ಕರೇಟಿನ ಕೌಂಟನು ಸಂಸಾರ ಪ್ರಿಯ. ಕೌಂಟೆಸಳು ಸುಂದರಳೂ, ಸೌಂದರ್ಯ ಪ್ರಿಯಳು. ಆದರೂ ೩೦ ವರ್ಷ ಪ್ರಾಯದಲ್ಲಿ ಅವಳಿಗೆ ಏಳು ಮಕ್ಕಳು. ತನ್ನ ಸೌಂದರ್ಯವನ್ನು ಮೆರೆಸಿ ಕೆಲಕಾಲ ಸುಖ ಪಡೆಯಬೇಕೆಂದು ಅವಳೊಂದು ಉಪಾಯ ಮಾಡಿದಳು. ಏಳು ಮಕ್ಕಳಲ್ಲಿ ಒಂದು ಮಾತ್ರ ಗಂಡನಿಗೆ ಹುಟ್ಟಿದಲ್ಲವೆಂದು ಪ್ರಮಾಣ ಮಾಡಿ ಹೇಳಿದಳು. ಗಂಡನು ದಾರಿ ತೋಚದೆ ಹೊರಟು ಹೋದನು. ಅಂದಿನಿಂದ ಅವಳು ತನ್ನ ಸುಖ ಜೀವನಕ್ಕಾರಂಭಿಸಿದಳು.

(ಕಳೆದ ಸಂಚಿಕೆಯಿಂದ)

ಒಂದು ಕ್ಷಣ ಪಿಸ್ತೂಲನ್ನು ಹಿಡಿದುಕೊಂಡು ಹೋಗೋಣವೆನಿಸಿತು. ಅದನ್ನು ಅವಳು ಕೆಲವು ವಾರಗಳ ಹಿಂದೆ ಕೊಂಡುಕೊಂಡಿದ್ದಳು. ಈ ಪ್ರಸಂಗವನ್ನು ಅವಳು ಮೊದಲೇ ಯೋಚಿಸಿ ಕೊಂಡಿದ್ದಳು. ಮಕ್ಕಳೆಲ್ಲರೂ ಭೋಜನಾಲಯದಲ್ಲೇ ಇರುವುದರಿಂದ ಅವಳಿಗೆ ಸ್ವಲ್ಪ ಧೈರ್ಯವಾಯಿತು. ಅವಳು ಪರಿಮಳದ ಒಂದು ಕುಪ್ಪಿಯನ್ನು ಮಾತ್ರ ಹಿಡಕೊಂಡು ನಡೆದಳು. ಅವಳು ಬಂದೊಡನೆ ಗಂಡನು ಎದ್ದು ಅವಳಿಗೆ ಆಸನ ಕೊಟ್ಟನು. ಅವರು ಕೂತುಕೊಂಡರು. ಅವಳ ಬಲಗಡೆಯಲ್ಲಿ ಅವಳ ಮೂರು ಗಂಡು ಮಕ್ಕಳು ತಮ್ಮ ಉಪಾಧ್ಯಾಯನೊಂದಿಗೆ ಕೂತಿದ್ದರು. ಅವಳ ಎಡಗಡೆಯಲ್ಲಿ ಮೂರು ಹೆಣ್ಣು ಮಕ್ಕಳು ತಮ್ಮ ಇಂಗ್ಲಿಷ್ ದಾದಿಯೊಂದಿಗೆ ಕೂತಿದ್ದರು. ಬರೇ ಮೂರು ತಿಂಗಳ ಕಿರಿಯ ಕೂಸು ಅದರ ದಾದಿಯೊಡನೆ ಮಹಡಿಯ ಕೋಣೆಯಲ್ಲಿತ್ತು.

ಉಪಾಧ್ಯಾಯನು ಎಂದಿನಂತೆ ಚಿಕ್ಕ ಭೋಜನ ಪ್ರಾರ್ಥನೆ ಮಾಡಿದನು. ಆ ದಿನ ಅತಿಥಿಗಳು ಯಾರೂ ಇರಲಿಲ್ಲ, ಅವರಿದ್ದರೆ ಮಕ್ಕಳು ಅವರೊಂದಿಗೆ ಕೂತುಕೊಳ್ಳುತ್ತಿರಲಿಲ್ಲ. ಕೌಂಟೆಸ್ಸಳು ಮುಖ ಬಾಗಿಸಿ ಕೂತಿದ್ದಳು. ಅವಳ ಗಂಡನು ಒಂದು ಸಾರಿ ಮೂರು ಗಂಡುಮಕ್ಕಳನ್ನೂ ಇನ್ನೊಂದು ಸಾರಿ ಮೂರು ಹೆಣ್ಣುಮಕ್ಕಳನ್ನೂ ಸಾವಧಾನವಾಗಿ, ಅಸ್ಥಿರ ದೃಷ್ಟಿಯಿಂದ ಚಿಂತಾವದನನಾಗಿ ನೋಡುತಿದ್ದನು. ಅಷ್ಟರಲ್ಲಿ ಅವನ ಹತ್ತಿರವಿದ್ದ ದ್ರಾಕ್ಷಾರಸದ ಗ್ಲಾಸನ್ನು ಅವನು ತಳ್ಳಿದನು. ಅದು ಬಿದ್ದು ಒಡೆದು ರಸವು ಮೇಜಿನ ಮೇಲೆಲ್ಲಾ ಚೆಲ್ಲಿದಾಗ ಕೌಂಟೆಸ್ಸಳು ಗಾಬರಿಯಾದಂತೆ ಮೇಲಕ್ಕೆದ್ದು ಮೊದಲಿನ ಸಲಕ್ಕೆ ಗಂಡನ ಮುಖ ನೋಡಿದಳು. ಅನಂತರ ಪ್ರತಿಕ್ಷಣಕ್ಕೂ ಅವರೊಳಗೆ ಪರಸ್ಪರ ದೃಷ್ಟಿ ಯುದ್ಧವು ನಡೆಯಿತು. ಪ್ರತಿಯೊಂದು ನೋಟಕ್ಕೂ ಅವರೊಳಗಿನ ಕೋಪ ವೈಷಮ್ಯ ಕಳವಳಗಳು ಅವರಲ್ಲಿ ಉಕ್ಕೇರಿದವಾದರೂ ಬಹು ರಭಸದಿಂದ ಅವರು ದೃಷ್ಟಿಯನ್ನು ಬದಲಾಯಿಸಿಕೊಳ್ಳುವವರಾದರು.

ಮಕ್ಕಳ ಉಪಾಧ್ಯಾಯನಿಗೆ ಅವರೊಳಗೆ ಏನೊ ಒಂದು ವಿಶೇಷ ವ್ಯಾಕುಲತೆಗೆ ಕಾರಣ ಉಂಟಾಗಿರುವುದೆಂದು ತಿಳಿಯಿತು. ಅವನು ಯಾವುದಾದರೊಂದು ಸಂಭಾಷಣೆ ಪ್ರಾರಂಭಿಸಬೇಕೆಂದು ಹಲವು ವಿಷಯಗಳ ಕುರಿತು ಮಾತುಕತೆ ನಡೆಸಿದ. ಆದರೆ ಅವನ ಪ್ರಯತ್ನಗಳೆಲ್ಲಾ ನಿಷ್ಫಲವಾಗಿ ಅವರ ಕಡೆಯಿಂದ ಒಂದು ಶಬ್ದವನ್ನಾದರೂ ಹೊರಡಿಸಲು ಸಾಧ್ಯವಾಗಲಿಲ್ಲ. ಸಾಮಾನ್ಯ ಪ್ರಾಪಂಚಿಕ ಸ್ತ್ರೀಯ ಸ್ವಭಾವದಂತೆ ಕೌಂಟೆಸಳು ಹಲವು ಬಾರಿ ಉಪಾಧ್ಯಾಯನ ಮಾತಿಗೆ ಉತ್ತರ ಕೊಡಲು ಪ್ರಯತ್ನಿಸಿದಳಾದರೂ ಅವಳಿಂದ ಸಾಧ್ಯವಾಗಲಿಲ್ಲ. ಅವಳ ಮನೋವ್ಯಥೆಯ ಮುಂದೆ ಅವಳಿಗೆ ಮಾತುಗಳೇ ಬಾರದಾದವು. ಆ ಭೋಜನಾಲಯದ ವಿಶಾಲ ನಿಶಬ್ದತೆಯ ಮಧ್ಯದಲ್ಲಿ ಅವಳ ಮಾತುಗಳೇ ಅವಳಿಗೆ ಭಯವನ್ನುಂಟು ಮಾಡುವಂತೆ ತೋರಿತು. ಅಲ್ಲಿ ಊಟದ ಪಾತ್ರೆ, ಉಪಕರಣ ಸದ್ದಲ್ಲದೆ ಬೇರೆ ಯಾವುದೂ ಕೇಳಿಸದಾಯಿತು.

ಆಗ ಪಕ್ಕನೇ ಅವಳ ಗಂಡನು ಮುಂದಕ್ಕೆ ಬಗ್ಗಿಕೊಂಡು ಅವಳಿಗೆ ಹೀಗೆ ಹೇಳುವವನಾದನು: "ಇಲ್ಲಿ ನೋಡು, ಈ ಮಕ್ಕಳ ಮಧ್ಯದಲ್ಲಿ ನಿಂತು ನೀನು ಇವತ್ತು ದೇವಾಲಯದಲ್ಲಿ ಹೇಳಿದ ವಿಷಯವು ನಿಜವಿರುತ್ತದೆಂದು ಆಣೆಹಾಕುವಿಯಾ?"

ಅವಳ ನಾಡಿಗಳಲ್ಲಿ ಬೆಳೆಯುತಿದ್ದ ವೈಷಮ್ಯವು ಅವಳನ್ನು ಜಾಗೃತಳನ್ನಾಗಿ ಮಾಡಿತು. ಆ ಪ್ರಶ್ನೆಗೆ ಹಿಂದಿನ ಅವನ ಕಣ್ಣು ಕೆರಳಿಸುವಿಕೆಗೆ ಉತ್ತರವಿತ್ತಂತೆ ಕಠಿಣವಾಗಿಯೇ ಉತ್ತರವಿತ್ತಳು. ಎರಡೂ ಕೈಗಳನ್ನು ಎತ್ತಿದಳು. ಬಲಗೈಯನ್ನು ಗಂಡು ಮಕ್ಕಳ ಕಡೆಗೂ, ಎಡಗೈಯನ್ನು ಹೆಣ್ಣು ಮಕ್ಕಳ ಕಡೆಗೂ ತೋರಿಸುತ್ತಾ ಅವಳು ಸ್ಥಿರವಾದ, ನಿರ್ಧರಿತ ಧಾಟಿಯಲ್ಲಿ ಸಂಕೋಚವಿಲ್ಲದಂತೆ ಎಂದಳು: "ನನ್ನ ಈ ಮಕ್ಕಳ ತಲೆಯ ಮೇಲೆ ಕೈಯಿಟ್ಟು ಹೇಳುತ್ತೇನೆ, ಏನೆಂದರೆ ಇಂದು ಸಾಯಂಕಾಲ ನಾನು ನಿಮಗೆ ಹೇಳಿದ ವಿಷಯವು ಸತ್ಯವಿರುತ್ತದೆ."

ಕೈಯಲ್ಲಿದ್ದ ಊಟದ ಬಟ್ಟೆಯನ್ನು ಮೇಜಿನ ಮೇಲೆ ಬಿಸಾಡುತ್ತಾ ಕೂತ ಕುರ್ಚಿಯನ್ನು ಗೋಡೆಯ ಕಡೆಗೆ ಒಗೆದು ಅವನು ಎದ್ದು ನಿಂತನು. ಆ ಮೇಲೆ ತಿರುಗಿಕೊಂಡು ಪಿಟ್ಟೆಂದು ಮಾತೆತ್ತದೆ ಹೊರಟು ಹೋಗಿಯೇಬಿಟ್ಟ. ಅವಳು ಗೆದ್ದವಳಂತೆ, ನಿಟ್ಟುಸಿರು ಬಿಡುತ್ತ, ಪ್ರಶಾಂತ ಸ್ವರದಲ್ಲಿ ಮಕ್ಕಳಿಗೆ ಹೀಗೆಂದಳು: "ಪ್ರಿಯ ಮಕ್ಕಳೆ ನೀವು ನಿಮ್ಮ ತಂದೆಯು ಈಗ ಹೇಳಿದ ಮಾತುಗಳಿಗೆ ಗಮನಕೊಡಬಾರದು ಸ್ವಲ್ಪ ಸಮಯದ ಹಿಂದೆ ಅವರಿಗೆ ಏನೊ ಸಂಕಷ್ಟವಾಗಿದೆ. ಕೆಲವೇ ದಿವಸಗಳಲ್ಲಿ ಅವರು ಸರಿಯಾಗುವರು."

ಆ ಮೇಲೆ ಅವಳು ಉಪಾಧ್ಯಾಯನ ಬಳಿ ಸ್ವಲ್ಪ ಹೊತ್ತು ಸಂಭಾಷಿಸಿದಳು. ದಾದಿಯೊಡನೆ ಮಾತಾಡಿದಳು. ಎಲ್ಲಾ ಮಕ್ಕಳೊಡನೆ ಒಂದೆರಡು ಪ್ರೀತಿಯ ನುಡಿಗಳನ್ನಾಡಿದಳು. ಕಿರಿಗೂಸುಗಳ ಹೃದಯವನ್ನು ಬಿಚ್ಚುವ ತಪ್ಪು ದಾರಿಹಿಡಿದ ತಾಯಿಯ ನುಡಿಗಳವು.

ಊಟ ಮುಗಿದೊಡನೆ ಅವಳು ವಿಶ್ರಾಂತಿ ಗೃಹಕ್ಕೆ ಬಂದಳು. ಅವಳ ಮಕ್ಕಳೂ ಅವಳನ್ನು ಹಿಂಬಾಲಿಸಿದುವು. ಹಿರಿಯ ಮಗುವಿನೊಂದಿಗೆ ಅವಳು ಮಾತಾಡಿದಳು, ತರ್ಕಿಸಿದಳು, ಕಡೆಗೆ ನಿದ್ರಾಸಮಯವು ಬರಲು ಅವರೆಲ್ಲರನ್ನೂ ಒಂದೊಂದಾಗಿ ಚುಂಬಿಸಿ ಅವರವರ ಮಲಗುವ ಕೋಣೆಗೆ ಕಳುಹಿಸಿದಳು. ನಂತರ ಏಕಾಂಗಿಯಾಗಿ ಅವಳು ತನ್ನ ಕೋಣೆಗೆ ಹೋದಳು.

ಅವಳು ಅಲ್ಲಿ ದಾರಿ ಕಾಯುತ್ತಾ ನಿಂತಳು, ಅವನು ಖಂಡಿತವಾಗಿಯೂ ಬರುವನೆಂದು ಅವಳಿಗೆ ಗೊತ್ತು. ಈಗ ಅವಳನ್ನು ರಕ್ಷಿಸಲು ಅವಳ ಬಳಿಯಲ್ಲಿ ಅವಳ ಮಕ್ಕಳು ಇರಲಿಲ್ಲವಾದುದರಿಂದ ಆ ಚಿಕ್ಕ ಪಿಸ್ತೂಲನ್ನು ಅವಳು ತನ್ನ ಉಡುಪಿನಲ್ಲಿ ಸೇರಿಸಿಕೊಂಡಳು. ಅವಳು ಸಂಸಾರ ಬಂಧನದೊಳಗಿಂದ ತಪ್ಪಿಸಿಕೊಳ್ಳಲು ಓರ್ವ ಪ್ರಾಪಂಚಿಕ ಸ್ತ್ರೀಯಂತೆ ಮನೋನಿರ್ಧಾರ ಮಾಡಿಕೊಂಡಳು. ಗಂಟೆಗಳು ಕಳೆದವು, ಗಂಟೆಗಳು ಹೊಡೆದವು, ಪ್ರತಿಯೊಂದು ಶಬ್ದವೂ ಆ ನೀರವತೆಯಲ್ಲಿ ತಲ್ಲೀನವಾಯಿತು. ಮಾರ್ಗದಲ್ಲಿ ಒಂದೊಂದು ಕುದುರೆ ಗಾಡಿಯು ಗಡಗಡಿಸುತಿತ್ತು. ಆ ಗಾಜು ಮುಚ್ಚಿದ ಮತ್ತು ತೆರೆ ಹಾಕಿದ ಕಿಟಿಕಿಗಳಿಂದ ಅವುಗಳ ಶಬ್ದವು ಲಘುವಾಗಿ ಮಾತ್ರ ಕೇಳುತಿತ್ತು.

ಕಳವಳಾತುರತೆಗಳಿಂದ ಅವಳು ಕಾದು ನಿಂತಳು. ಅವಳಿಗೆ ಅವನ ಯಾವ ಹೆದರಿಕೆಯೂ ಈಗ ಇಲ್ಲ. ಅವಳು ಯಾವುದಕ್ಕೂ ಸಿದ್ಧಳಿದ್ದಳು. ಗಂಡನ ಮೇಲೆ ಈಗ ಅವಳು ದಿಗ್ವಿಜಯವನ್ನು ಹೊಂದಿದ್ದಳು. ಅವನನ್ನು ನಿರಂತರವಾದ ಯಾತನೆಗೆ ಗುರಿ ಮಾಡಿ ಅವನ ಜೀವನದ ಪ್ರತಿಕ್ಷಣವೂ ಸಂಕಟವನ್ನುಂಟುಮಾಡುವಂತಹ ವಿಧಾನವನ್ನು ಅವಳು ಕಂಡು ಹಿಡಿದಿದ್ದಳು.

ಪ್ರಭಾತ ಕಾಲದ ಪ್ರಕಾಶ ಕಿರಣಗಳು ಕಿಟಿಕಿ ತೆರೆಗಳಿಂದ ಒಳಗೆ ಇಣಕತೊಡಗಿದವು. ಅವುಗಳೊಂದಿಗೆ ಅವಳ ಗಂಡನೂ ಬರುವಂತೆ ತಿಳಿಯಿತು. ಆದರೆ ಅವಳ ಆಶ್ಚರ್ಯಕ್ಕೆಂಬಂತೆ ಅವನು ಕೋಣೆಯ ಒಳ ಬರಲಿಲ್ಲ. ಅವಳು ಬಾಗಿಲ ಅಗಣಿಗಳನ್ನು ಪುನಃ ಭದ್ರಪಡಿಸಿ ಮಲಗಿಕೊಂಡಳು, ಮಲಗಿಕೊಂಡು ಒರಗಿಕೊಂಡು ಅವನೇನು ಮಾಡಬಲ್ಲನೆಂಬ ಯೋಚನೆಯು ಹೊಳೆಯದವಳಂತೆ ಕಣ್ಣುಗಳನ್ನು ವಿಶಾಲಿಸಿಯೇ ನಿದ್ರಿಸ ಪ್ರಯತ್ನಿಸಿದಳು.

ಸೇವಕಿಯು ಫಲಹಾರ ಪಾನಿಯಗಳನ್ನು ತಂದಾಗ ಅವಳ ಬಳಿ ಅವಳ ಗಂಡನು ಕೊಟ್ಟು ಕಳುಹಿಸಿದ ಪತ್ರವೊಂದು ಕೂಡಾ ಇತ್ತು. ತಾನು ಒಂದು ಧೀರ್ಘಕಾಲದ ಪ್ರವಾಸನವನ್ನು ಕೈಕೊಳ್ಳುವೆನಾಗಿ ಬರೆದಿತ್ತು. ಇನ್ನೊಂದು ಅವಳಿಗೆ ಬೇಕಾಗುವ ಖರ್ಚಿನ ಹಣವನ್ನು ಅವನ ವಕೀಲನು ಅವಳಿಗೆ ಕೊಡುವನೆಂದೂ ತಿಳಿಸಲಾಗಿತ್ತು.

ಅಂದು ನಾಟಕ ಶಾಲೆಯಲ್ಲಿ 'ರಾಬರ್ಟ್ ದಿ ಡೆವಿಲ್' ಎಂಬ ನಾಟಕ. ಮಹಡಿಯ ಮೇಲೆ ಶ್ರೀಮಂತ ವರ್ಗದವರು ಸೇರಿದ್ದರು. ಪುರುಷರು ತಮ್ಮ ಹೇಟುಗಳನ್ನು ಭುಜದ ಮೇಲೆ ತೂಗಿಸಿಕೊಂಡು ಒಳಗೆ ವೇಸ್ಟ್‌ಕೋಟುಗಳಿಗೆ ತೂಗಿದ ಅಮೂಲ್ಯ ವಜ್ರಾಭರಣ ಖಚಿತವಾದ ಬಂಗಾರ ಸರಪಣಿಗಳನ್ನೂ, ಉಂಗುರ ಗುಂಡಿಗಳನ್ನೂ ಪ್ರದರ್ಶಿಸಲು ಎದೆಯುಬ್ಬಿಸಿ ನಿಂತು ನೋಡುತಿದ್ದರು. ಗೋಡೆಗೆ ಅಂಟಿಸಿದ್ದ ಬಾಕ್ಸ್‌ನಲ್ಲಿ ಕುಳಿತಿದ್ದ ಶೃಂಗಾರದ ಸ್ತ್ರೀಯರ ಕಡೆಗೇ ಅವರು ಹೆಚ್ಚಾಗಿ ಲಕ್ಷಿಸುತ್ತಿದ್ದರು. ಸ್ತ್ರೀಯರ ಲಘು ಉಡುಪುಗಳೂ, ವಜ್ರ ಮುತ್ತಿನ ಹಾರಗಳೂ ಅವರನ್ನು ಆಕರ್ಷಿಸಿದ್ದುವು. ಅವರು ಆ ಬೆಚ್ಚಗಾದ ಗೃಹದಲ್ಲಿ ಹಾವುಗಳಂತೆ ಉಬ್ಬಿಕೊಳ್ಳುತಿದ್ದರು. ಅವರ ಸುಂದರವಾದ ಮುಖಗಳೂ, ಕಾಂತಿಯುಕ್ತವಾದ ಹೆಗಲುಗಳೂ ಪುರುಷರ ಅವಗಾಹನೆಗೆ ಒಳಪಟ್ಟಿದ್ದುವು. ಅಲ್ಲಿನ ಸಂಗೀತದೊಂದಿಗೆ ಮಾನವ ಧ್ವನಿಗಳು ಬೆರೆತಿದ್ದುವು.

ಸಂಗೀತ ಮಂಡಳಿಗೆ ಬೆನ್ನುಹಾಕಿ ಇರ್ವ ಸ್ನೇಹಿತರು ಅಲ್ಲಿನ ಆ ಕೋಮಲ ವಾತಾವರಣವನ್ನು ಅವಲೋಕಿಸುತಿದ್ದರು. ಆ ವೇಷ ಭೂಷಣಗಳ, ವಜ್ರ ವೈಡೂರ್ಯಗಳ, ನಿಜವಾದ ಮತ್ತು ಕೃತಕವಾದ ಶೈಲಿ ವೈಯಾರಗಳ, ಸುಖೋಪಭೋಗ ನಟನೆಗಳ ಕಡೆಗೆ ಇವರ ಮನಸ್ಸು ಸೆಳೆದಿದ್ದಿತು. ಅವರೊಳಗೊಬ್ಬನಾದ ರೋಜರ್ ಡಿ ಸಾಲ್ಮೀಸ್‌ನೆಂಬವನು ತನ್ನ ಸ್ನೇಹಿತನನ್ನು ಕುರಿತು ಹೀಗೆಂದನು: "ನೋಡು, ಮೆಸ್ಕರೇಟಿನ ಕೌಂಟೆಸಳು ಅದೆಷ್ಟು ಈಗಲೂ ಸೌಂದರ್ಯವತಿಯಾಗಿ ಕಾಣುತ್ತಾಳೆ."

ಸ್ವಲ್ಪ ಹಿರಿಯನಾದ ಇನ್ನೊಬ್ಬನು ತನ್ನ ದುರ್ಬೀನು ಮೂಲಕ ತನ್ನೆದುರಿನ ಬಾಕ್ಸಿನಲ್ಲಿ ಕೂತ ಎತ್ತರಾಕೃತಿಯ ಮಹಿಳೆಯನ್ನು ನೋಡಿದವನಾದನು. ಅವಳು ಇನ್ನೂ ನವಯೌವನೆಯಾಗಿ ಕಾಣುತಿದ್ದಳು, ಅವಳ ಮಿರುಗು ಸೌಂದರ್ಯವು ನಾಟಕ ಶಾಲೆಯೊಳಗಿನ ಪ್ರತಿಯೋರ್ವ ಪುರುಷ ವ್ಯಕ್ತಿಯ ಗಮನವನ್ನು ಸೆಳೆಯುತಿತ್ತು. ಆನೆದಂತದ ಸಪ್ಪಗಾದ ಶರೀರ ವರ್ಣದಿಂದ ಅವಳು ಕಲಾಮಯವಾದ ಮೂರ್ತಿಯಂತೆ ಕಾಣುತಿದ್ದಳು. ಅವಳ ಕೇಶರಾಶಿಯಲ್ಲಿ ಸಿಕ್ಕಿಸಿದ ಒಂದು ವಜ್ರದ ಆಭರಣವು ನಕ್ಷತ್ರರಾಶಿಯಂತೆ ಮಿನುಗುತಿತ್ತು.

ಅವಳನ್ನು ಕೆಲವು ಹೊತ್ತು ನೋಡಿದ ನಂತರ ಬರ್ನಾಡ್‌ಗೇಡಿನನು ವಿನೋದವಾಗಿಯೂ ಹೃತ್ಪೂರ್ವಕವಾಗಿಯೂ ನುಡಿದನು: "ಅವಳು ಎಷ್ಟು ವಯಸ್ಸಿನವಳೆಂದು ನಿನ್ನ ಭಾವನೆ?"

"ಸ್ವಲ್ಪ ತಾಳು ನಾನು ನಿನಗೆ ಸರಿಯಾಗಿ ಹೇಳಬಲ್ಲೆ. ಅವಳನ್ನು ಮಗುವಿರುವಾಗಿನಿಂದಲೂ ನಾನು ಬಲ್ಲೆ. ಹುಡುಗಿಯಾಗಿರುವಾಗಲೇ ಸಮಾಜ ಕೇಂದ್ರಗಳಲ್ಲಿ ಅವಳು ಮೆರೆಯುತಿದ್ದುದನ್ನು ನಾನು ನೋಡಿದ್ದೇನೆ. ಅವಳು—ಅವಳು—ಮೂವತ್ತ—ಆರು ವಯಸ್ಸಿನವಳಿರಬಹುದು."

"ಅಸಾಧ್ಯ"

"ನನಗೆ ಖಂಡಿತ ಗೊತ್ತಿದೆ"

"ಅವಳು ಇಪ್ಪತ್ತೈದು ವಯಸ್ಸಿನವಳಂತೆ ಕಾಣುತ್ತಾಳೆ"

"ಅವಳಿಗೆ ಏಳು ಮಕ್ಕಳಾಗಿವೆ"

"ಅದು ನಂಬಲರ್ಹವಾಗಿಲ್ಲ"

"ಅದರಲ್ಲೂ ಅವಳು ಒಳ್ಳೇ ತಾಯಿಯಾಗಿರುವುದರಿಂದ ಆ ಏಳು ಮಂದಿ ಕೂಡಾ ಬದುಕಿದ್ದಾರೆ' ಅವಳ ಮನೆಗೆ ನಾನು ಆಗಾಗ್ಗೆ ಹೋಗುತ್ತಲಿದ್ದೇನೆ. ಅದು ಪ್ರಶಾಂತವೂ ಹರುಷದಾಯಕವೂ ಆಗಿರುವ ಬಂಗಲೆ, ಈ ಪ್ರಪಂಚದಲ್ಲಿ

ಬರುವ ವಾರಕ್ಕೆ ಮುಂದರಿಸಲಾಗಿದೆ.

ಲೋರ್ಡ್ ವೇವಲ್ಲರು ಡಿಲ್ಲಿಗೆ ಮರಳಿರುವರು

ಚರ್ಚಿಲ್ಲರು ಅವರೊಡನೆ ಸುಧಾರಿಸಲ್ಪಟ್ಟ 'ಕ್ರಿಪ್ಸ್ ಸಲಹೆ ಗಳನ್ನು ಕಳುಹಿಸಿ ಕೊಟ್ಟಿರುವರು

ಅನೇಕ ವಾರಗಳ ಸಮಯ ಪರಿಶ್ರಮ ನಡೆಯಿಸಿ, ವೇವಲ್ಲರು ಒಂದು 'ಪ್ಲೇನನ್ನು ಹಿಡಿದು ಡಿಲ್ಲಿಗೆ ಮರಳಿ ಬಂದಿರುವರು. ಬಂದವರೆ ತಮ್ಮ ಕಾರ್ಯಕಾರಿ ಮಂಡಳದ ಸದಸ್ಯರನ್ನು ಬರಮಾಡಿಕೊಂಡು ತಾವು ತಂದ ಪ್ಲೇನಿನ ಕುರಿತು ವಿಚಾರಿಸಿದರಾಗಿಯೂ, ಕಾರ್ಯಕಾರಿ ಮಂಡಳದ ಸದಸ್ಯರಲ್ಲಿ ಕೆಲವರು ಈ ಪ್ಲೇನಿನ ಸಲಹೆಗಳ ಕುರಿತು ತಮ್ಮ ವಿರೋಧವನ್ನು ಸೂಚಿಸಿರುವರಾಗಿಯೂ, ಈ ಸಂಬಂಧದಲ್ಲಿ ವೈಸ್ರಾಯರು ಪ್ರಾಂತ್ಯಗಳ ಗವರ್ನರರ ಅಭಿಪ್ರಾಯವನ್ನು ತಿಳಿಯುವರಾಗಿಯೂ ತಿಳಿದುಬಂದಿದೆ.

ಚರ್ಚಿಲ ಸರಕಾರವು ವೇವಲ್ಲರೊಡನೆ ಕಳುಹಿಸಿಕೊಟ್ಟ ಸಲಹೆಗಳಲ್ಲಿ ಈ ಕೆಳಗಿನ ಅಭಿಪ್ರಾಯಗಳು ಅಡಕವಾಗಿವೆ. ಎಂದು ಊಹಿಸಲಾಗಿದೆ.

(೧) ಈ ಸಲಹೆಗಳು ಸದ್ಯಯಿರುವ ಹಿಂದೂದೇಶ ವಿವಿಧ ರಾಜಕೀಯ ಪಂಗಡಗಳ ಕೇಳಿಕೆಗಳಿಗೆ ಯಾವ ಕುಂದುಗಳನ್ನು ತರುವಂತವುಗಳಲ್ಲ. ಭವಿಷ್ಯವು ಪ್ರಕೃತಕ್ಕೆ ಎಲ್ಲಾ ಪಕ್ಷಗಳು ಒಗ್ಗಟ್ಟಿನಿಂದ ಕೆಲಸಮಾಡಲು ಕಲಿಯುವುದರ ಮೇಲೆ ಹೊಂದಿಕೊಂಡಿದೆ; ಇದಕ್ಕೆ ೫ ವರ್ಷಗಳ ಅವಧಿಯು ಕೊಡಲಾಗಿದೆ. (೨) ವೈಸ್ರಾಯರ ಕಾರ್ಯಕಾರಿ ಮಂಡಳದ ಸಂಪೂರ್ಣ ಮಾರ್ಪಾಟು; ಅತ್ಯಂತ ಪ್ರಾಮುಖ್ಯವಾದ ಇಲಾಖೆಗಳ ಕುರಿತೂ ಇದು ಅನ್ವಯಿಸುವುದು. ಆದರೆ ಇಂಡಿಯಾ ಆಕ್ಟಿನಲ್ಲಿದ್ದ ವೈಸ್ರಾಯರ ಅಲ್ಲಗಳೆಯುವ ಅಧಿಕಾರದಲ್ಲಿ ಏನಾದರೂ ವ್ಯತ್ಯಾಸವು ಮಾಡಲಾಗಲಿಲ್ಲ. ಹೋಮ್, ಫ್ಯಾನೆನ್ಸ (ಹಣಕಾಸು) ಮತ್ತು ಸಂಚಾರದ ಇಲಾಖೆಗಳು ಹಿಂದೀಯರ ಕೈಗಳಿಗೆ ಕೊಡಲಾಗುವುವು. ಭಹೀರ್ ವ್ಯವಹಾರ ಸಂಭಂದ ಇಲಾಖೆಯು ವೈಸ್ರಾಯರ ಅಂಕಿತದಲ್ಲೇ ಇರಿಸಲಾಗುವುದು. (೩) ದೇಶದ ಪ್ರಾಮುಖ್ಯ ರಾಜಕೀಯ ಪಂಗಡಗಳೊಳಗೆ ನಡೆದ ಪರಸ್ಪರ ಒಡಂಬಡಿಕೆ ಸರಿಯಾಗಿ ಅವರಿಗೆ ಸ್ಥಾನಗಳು ಕೊಡಲಾಗುವವು. (೪) ಲೆಜಿಸ್ಲೇಚರಿಗೆ ಯಾವ ಹೊಣೆಗಾರಿಕೆಯು ಇಲ್ಲದಿರುವುದು. (೫) ಕೊಯಿಲಿಶನ್ ಅಂದರೆ ಎಲ್ಲಾ ಪಕ್ಷಗಳ ಕೂಡುವಿಕೆಯಲ್ಲೆ ಪ್ರಾಂತ್ಯದ ಸರಕಾರ ಮಂಡಳಗಳನ್ನು ರಚಿಸುವುದು.

ಇಂಗ್ಲಾಂಡಿನಲ್ಲಿ ಈಗ ಚುನಾವಣೆಯ ಸಮಯವಾದುದರಿಂದ ಹಿಂದೀಯರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಇದೊಂದು ಟೋರಿಗಳ ಯತ್ನವೆಂದು ಹೇಳಲಾಗಿದೆ. ಈ ಸಲಹೆಗಳನ್ನು ಬಾರತೀಯರು ತಿರಸ್ಕರಿಸಬಾರದಾಗಿ, ಅನೇಕ ಬ್ರಿಟಿಷ್ ಪ್ರಭೃತಿಗಳಿಂದ ಕೇಳಿಕೊಳ್ಳಲಾಗಿದೆ. ಹಿಂದೂದೇಶದ ಸಮಸ್ಯೆಯನ್ನು ಯೋಗ್ಯರೀತಿಯಲ್ಲಿ ಬಗೆಹರಿಸದೆ ಇರಲು ಟೋರಿಗಳಿಗೆ ಸಾಧ್ಯವಿಲ್ಲದ್ದರಿಂದ ಈ ಸಲಹೆಗಳು ಮುಂದಕ್ಕೆ ಹಾಕಲಾಗಿವೆ ಎಂದು ಹೇಳಲಾಗಿದೆ. ಈ ಸಲಹೆಗಳಿಗೆ; ಸರ್ ಸ್ಟಾಫರ್ಡ್ ಕ್ರಿಪ್ಸ್, ಸರ್ ಜೋನ್ ಎಂಡರ್‌ಸನ್, ಸರ್ ಜೇಮ್ಸ ಗ್ರಿಗ್, ಲೋರ್ಡ ಸ್ಯಾಮುನ್, ಅಮೆರಿ ಮೊದಲಾದವತ ಸಮ್ಮತವಿದೆಯೆಂದು ತಿಳಿಯಬೇಕಾಗಿಯದೆ. ಬರ್ಮಾದ ಕುರಿತು ಆದರಿಸಲಾದ ಧೋರಣವನ್ನು ನೋಡಿದರೆ [ಬರ್ಮಾವನ್ನು ಮೊಂಟೆಗ್ಯೂ ಸುಧಾರಣೆ ಕಾಲಗಿಂತಲೂ ಹಿಂದಕ್ಕೆ ಇಡುವ ತರದ್ದು] ಜಗತ್ತಿನ ನೂತನ ವ್ಯವಸ್ಥೆಯಲ್ಲಿ ಆಸ್ಯಾಖಂಡದ ಜನರಿಗೆಹೆಚ್ಚಿನ ಅವಕಾಶ ದೊರಕಿಸಿ ಕೊಡುವುದು ಟೋರಿಗಳ ಅಭಿಪ್ರಾಯವಲ್ಲವೆಂದು ತಿಳಿಯಬೇಕಾಗಿದೆ. ವೈಸ್ರಾಯ ವೇವಲ್ಲರು ಬಹಳ ಯತ್ನಿಸಿಯೂ, ಟೋರಿಗಳೂ ಉಧಾರಿಗಳಾಗಿಯೂ ಕಳುಹಿಸಿಕೊಟ್ಟ 'ಸಲಹೆ'ಗಳಿಂದ ಹೆಚ್ಚಿನದನ್ನು ಬಯಸಬೇಕಾಗಿಲ್ಲ ಎಂದು ಕೆಲವು ರಾಜಕೀಯ ತಜ್ಞರ ಅಭಿಪ್ರಾಯವಿರುತ್ತದೆ.

ಸೆರೆಸೇರಿಸಿದ ಕಾಂಗ್ರೆಸು ಮುಖಂಡರುಗಳ ಬಿಡುಗಡೆಯ ವಿಚಾರವು ಈ ಸಲಹೆಗಳ ಪ್ರಕಾರ ಸ್ಥಾಪನೆಯಾಗುವ ಸರಕಾರಕ್ಕೆ ಬಿಟ್ಟು ಬಿಡಲಾಗುವುದೆಂದೂ ಅಂದರೆ ಚರ್ಚಿಲ್ಲರು ಕಳುಹಿಸಿಕೊಟ್ಟಸಲಹೆಗಳು ಸ್ವೀಕೃತವಾದರೆ ಮಾತ್ರ ನಮ್ಮ ಮುಖಂಡರುಗಳ ವಿಮೋಚನೆಯಾಗುವುದೆಂದು ತಿಳಿಯಬೇಕಾಗಿದೆ.

ಕಾಂಗ್ರೆಸ್ಸಿನ ಬೇಡಿಕೆಗಳನ್ನು ಸಮಾಧಾನಪಡಿಸುವ ಲಕ್ಷಣಗಳು ಈ ಸಲಹೆಗಳಲ್ಲಿಲ್ಲದುದರಿಂದ, ಅವುಗಳನ್ನು ಕಾಂಗ್ರೆಸ್ಸಿಗರು ಸ್ವಿಕರಿಸುವ ಕುರಿತು ಸಂದೇಹಗಳುಂಟಾಗಿವೆ. ವೈಸ್ರಾಯರು, ಬೂಲಾಬ್ಯಾ ದೇಸಾಯಿ ಮೊದಲಾದ ದೇಶ ಮುಖಂಡರುಗಳನ್ನು ಕಂಡು ಮಾತನಾಡಲಿರುವರು. ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸುವ ಕುರಿತು ರಾಜಗೋಪಾಲಾಚಾರ್ಯರಂತಹ ಮುಖಂಡರ ಚಟುವಟಿಕೆಗಳು ನಡೆಯುತ್ತಿದ್ದಾಗ ವೇವಲ್ಲರ ಪ್ಲೆನಿಗೆ ಮಾನ್ಯತೆಯು ದೊರಕಲೂ ಬಹುದು ಎಂದು ಕೆಲವೆಡೆಗಳಲ್ಲಿ ಹೇಳಲಾಗಿದೆ.

ಈ ಸಲಹೆಗಳು ಸ್ವಿಕೃತವಾದರೆಕೇಂದ್ರ ಸರಕಾರ ಮಂಡಳದ ರಚನೆಗಾಗಿ, ಗಾಂಧೀಜಿ, ದೇಸಾಯಿ, ಮೊದಲಾದ ೩೩ ಮಹನಿಯರುಗಳುಳ್ಳ ಶಿಷ್ಟಮಂಡಳಿಯು ನೇಮಕವಾಗುವುದೆಂದು ತಿಳಿದುಬಂದಿದೆ.

ಈ ಸಲಹೆಯ ಕುರಿತು ಅಧಿಕೃತ ಪ್ರಕಟಣೆಯು ಸದ್ಯದಲ್ಲೇ ಆಗಲಿದೆ.

ಚಿಯಾಂಗರೇ ಯುದ್ಧ ನಡೆಯಿಸುತ್ತಿರುವರು

ಮಿತ್ರರು ಯಶಸ್ವಿ ತರದಲ್ಲಿ ಜಪಾನಿಯರನ್ನು ಸುತ್ತುಗಟ್ಟಿ ಬರುತ್ತಿರುವ ಈ ಸಮಯದಲ್ಲಿ, ಚೀನಿಯರು ತಮ್ಮಲ್ಲಿ ತಳವೂರಿದ ಜಪಾನಿಯರನ್ನು ಹೊಡೆದೊಡಿಸುವ ಕಾರ್ಯವನ್ನು ಅತ್ಯಂತ ಹುರುಪಿನಿಂದ ನಡೆಯಿಸುತ್ತಿರುವರು. ಚೀನಿಯ ದಂಡುಗಳು ಇಂಡೋ ಚೀನಾದ ಬಳಿ ಸೇರಿದ್ದು ಈ ಪ್ರದೇಶದಿಂದ ಜಪಾನಿಯರು ಅಟ್ಟಲ್ಪಟ್ಟಿರುವರು.

ಚಿಯಾಂಗರು ರಾಷ್ಟ್ರ ಸಭೆಯ ಅಧ್ಯಕ್ಷತನವನ್ನುತ್ಯಜಿಸಿದ್ದರೂ ಅವರು ಈಗಲೂ ಕೌಮಿಂಗ್‌ಟಾಂಗ ಪಕ್ಷದ ನಾಯಕರೂ ಚಾಲಕರೂ ಆಗಿರುವರು.

ಬರ್ಮಾದಲ್ಲಿ ಜಪಾನಿಯರ ಹಿನ್ನಡೆ

ಬರ್ಮಾದಲ್ಲಿ ಮಿತ್ರರ ಬಲಗಳು ಜಪಾನಿಯರನ್ನು ಹೊರದೂಡುವ ಕಾರ್ಯವು ಬಹಳ ಉತ್ತಮ ತರದಲ್ಲಿ ಸಾಗುತ್ತಿದೆ. ಮಿತ್ರರ ಬಲವಾದ ಟ್ಯಾಂಕು ಇತ್ಯಾದಿ ಆಧುನಿಕ ಯುದ್ಧೋಪಕರಣಗಳ ಎದುರು ಜಪಾನಿಯರು ತಮ್ಮ ಸ್ಥಾನಗಳನ್ನು ರಕ್ಷಿಸಿಕೊಳ್ಳುವರೆ ಹಾದಿ ಕಾಣದೆ ಹಿಂದಕ್ಕೆ ಸರಿಯುತ್ತಿರುವರು.

ಜಪಾನಿಯರ ಈ ದುಸ್ಥಿತಿಯಿಂದ, ಅವರ ನೆರವಿನಲ್ಲಿ ರಚನೆಯಾದ ಶ್ರೀ ಸುಬಾಶ್ಚಂದ್ರ ಬೋಸರ ಫ್ರಿ ಇಂಡಿಯ ಸರಕಾರದ ಮಂಡಳದಲ್ಲಿ ಅನೇಕ ಬದಲಾವಣೆಗಳು ನಡೆದಿವೆಯಾಗಿ ಸಿಂಗಾಪುರದಿಂದ ವಾರ್ತೆಯೊಂದು ಬಂದಿರುತ್ತದೆ.

ಜಪಾನಿನ ಮೇಲೆ ಅಮೇರಿಕನ್ನರ ಅತ್ಯುಗ್ರ ಧಾಳಿಯು ನಡೆಯುತ್ತಿದೆಯಾದರೂ, ಅವರನ್ನು ಸಂಪೂರ್ಣ ಸೋಲಿಸಬೇಕಾದರೆ ಚೀನಾದಲ್ಲಿ ನೆಲೆಸಿದ ಜಪಾನನ್ನು ಎದುರಿಸಿ ಅದನ್ನೂ ಪೂರ್ಣ ಸೋಲಿಸುವ ಅವಶ್ಯವಿದೆಯೆಂದು ಕೆಲವು ಸಂಗ್ರಾಮ ತಜ್ಞರಿಗೆ ಮನವರಿಕೆಯಾಗಿರುವುದು.

ಮಾರ್ಶೆಲ್ ಟಿಟೋರವರು

ಯುಗೊಸ್ಲೆವಿಯಾ ಇಟೆಲಿಗಳ ನಡುವೆ ಇರುವ ಟ್ರಿಯಸ್ಟೆ ಬಂದರು ನಾಡಿನ ಕುರಿತು ಟಿಟೋವಿಗೂ ಇಟೆಲಿಯನರಿಗೂ ಅಂದರೆ ಮಿತ್ರರ ಕಡೆಯ ಕೆಲವು ದಳಪತಿಗಳಿಗೂ ವಾದ ಉಂಟಾಗಿತಷ್ಟೆ. ಇಷ್ಟರ ತನಕ ಘರ್ಷಣೆಯು ಉಂಟಾಗದಿದ್ದರೂ ತಮ್ಮ ನಾಡಾದ ಟ್ರಿಯಸ್ಟೆಯನ್ನು ರಕ್ಷಿಸಿಕೊಳ್ಳಲು ಟಿಟೋರವರು ಹೋರಾಡಲು ಕೂಡ ಸಿದ್ಧರಿರುವರೆಂದು ಹೇಳಲಾಗಿದೆ.

ಒಕಿನಾವಾ ಅಭಿಯೋಗವು ಒಂದು ದುರಂತವು

ಜಪಾನಿಯರ ವಶವಾಗಿದ್ದ ಒಕಿನಾವಾ ದ್ವೀಪವನ್ನು ಹಿಡಿಯುವುದರಲ್ಲಿ ಸಂ ಅಮೇರಿಕನ್ ಬಲಗಳು ಜಗತ್ತನ್ನು ಬೆರಗುಗೊಳಿಸುವ ತರದಲ್ಲಿ ಹೋರಾಡಿದ್ದರೂ, ಅದೊಂದು ಮಹಾ ಅಭಿಯೋಗವೆನ್ನುವ ಬದಲಾಗಿ ಅದೊಂದು ಮಹಾ ದುರಂತವಾಗಿ ಪರಿಗಣಿಸಬೇಕೆಂದು ಅಮೇರಿಕನ್ ಪತ್ರಿಕಾ ಪ್ರತಿನಿಧಿಗಳೊಬ್ಬರು ಅಭಿಪ್ರಾಯ ಸಾರಿರುವರು. ಈ ಅಭಿಯೋಗದ ಕುರಿತು ಮೊದಲೆ ಸರಿಯಾದ ನಿರೀಕ್ಷಣೆಯು ನಡೆಯದೆ, ಅಪಾರ ನಷ್ಟವು ಉಂಟಾಗಿರುವುದಾಗಿಯೂ, ಇದರಿಂದ ಸಂಗ್ರಾಮಾಧಿಕಾರಿಗಳ ಅಯೋಗ್ಯತೆಯು ಹೊಳೆದು ಕಾಣಿಸಿಕೊಂಡದೆಯೆಂದೂ ಅಲ್ಲಿ ವಿಜಯವು ದೊರಕಿರುವುದಾದರೂ ಅಲ್ಲಿ ನಡೆದ ಪ್ರಾಣನಷ್ಟ ಇತ್ಯಾದಿಗಳೊಡನೆ ಅದನ್ನು ತುಲನೆಮಾಡಿ ನೋಡಿದರೆ,—ಈ ವಿಜಯದಿಂದ ಅಷ್ಟೊಂದು ಸಾರ್ಥಕತೆ ಪಡೆದಂತಾಗಿಲ್ಲವೆಂದು ಹೇಳಬರುವುದಿಲ್ಲವೆಂದೂ ಅವರ ಅಭಿಪ್ರಾಯವಿರುತ್ತದೆ.

ಸ್ಪೆಯಿನಿನಲ್ಲಿ ತಲೆ ತಪ್ಪಿಸಿ ಕೂತಿದ್ದ ಹಿಂದೆ ಹಿಟ್ಲರನೊಡನೆ ಸಹಕರಿಸಿದ ಲಾವಲ್ಲರು ವಿಮಾನ ಮೂಲಕ ಹಾರಿಬಂದು ಡ'ಗೊಲೆರವರಿಗೆ ಶರಣುಹೋಗುವರೆಂದು ತಿಳಿದುಬಂದಿದೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಮೇಲೆ ಏರುತ್ತಿರುವ ಧಾರಣೆಗಳನ್ನು ತಡೆದು ನಿಲ್ಲಿಸಿ

ಅನಾವಶ್ಯಕವಾಗಿ ಹಣವನ್ನು ವೆಚ್ಚಮಾಡಬೇಡಿರಿ

ಮುಂಬರುವ ಕಾಲದ ಸಲುವಾಗಿ ಈಗಿನಿಂದಲೇ ಉಳಿಸಿರಿ

ಹಣವನ್ನು ಲಾಭದಾಯಕವಾಗಿ ತೊಡಗಿಸುವ ಈಗಿನ ಕಾಲದ ಉತ್ತಮ ಮಾರ್ಗಗಳಾವವೆಂದರೆ, ವಿಮೆ ಇಳಿಸುವದು, ಸಹಕಾರ ಸಂಘಗಳಲ್ಲಿ ಠೇವಿಡುವದು, ಸೇವಿಂಗ್ಸ್ ಬ್ಯಾಂಕುಗಳಲ್ಲಿ ಲೆಕ್ಕಗಳನ್ನು ತೆಗೆಯುವದು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಲೆಕ್ಕಗಳನ್ನು ತೆಗೆಯುವದು ಆಗಿರುತ್ತವೆ; ಮತ್ತು ಇವೆಲ್ಲವುಗಳ ಪೈಕಿ ಅತ್ಯುತ್ತಮವಾದ ಮಾರ್ಗಗಳೆಂದರೆ, ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳುವದು ಮತ್ತು ಸರಕಾರದವರು ತೆಗೆದ ಸಾಲಗಳಿಗೆ ಹಣ ತುಂಬುವದು, ಆಗಿರುತ್ತವೆ.

ಹಿಂದುಸ್ಥಾನ ಸರಕಾರದ ಫೈನಾನ್ಸ್ ಡಿಪಾರ್ಟಮೆಂಟಿನಿಂದ ಹೊರಡಿಸಿದ್ದು.

AAA 289

ಹಿಂದೂದೇಶಕ್ಕೆ 'ದಶಮಾಂಶ' ನಾಣ್ಯಗಳು

ಸದ್ಯ ನಮ್ಮ ರೂಪಾಯಿಯು ೧೯೨ ಪೈಗಳಾಗಿರುವುದನ್ನು, ಅವಕಾಶವಾದಾಗ ೧೦೦ ಸೆಂಟುಗಳಾಗಿ ವಿಭಾಗಿಸಿ, ಈಗಿನ ಎಂಟಾಣೆ, ನಾಲ್ಕಾಣೆ ಪಾವಲಿಗಳ ಸ್ಥಳದಲ್ಲಿ, ೫೦ ಸೆಂಟ್, ೨೫ ಸೆಂಟ್ ಪಾವಲಿಗಳನ್ನೂ, ಅರ್ಧಾಣೆ ಕಾಲಾಣೆ, ಪೈಗಳ ಸ್ಥಳದಲ್ಲಿ ೧ ೨, ೫, ೧೦ ಸೆಂಟುಗಳ ಪಾವಲಿಗಳನ್ನು ಹಾಕುವರೆ ಇಂಡಿಯಾ ಸರಕಾರವು ಪರ್ಯಾಲೋಚಿಸಿದೆ. ಈಗಿನ ಈ ಯುದ್ಧ ಸಂದರ್ಭದಲ್ಲಿ ನಾಣ್ಯ ಚಲಾವಣೆಯು ಹೆಚ್ಚಿದುದರ ಪರಿಣಾಮವಾಗಿ ನಾಣ್ಯಗಳನ್ನು ಕೀಳು ಲೋಹಗಳಿಂದ ಹೊಡೆದುದನ್ನು ಬೇಗನೆ ಹಿಂದಕ್ಕೆ ತೆಗಿಯಬೇಕಾದ ಅವಶ್ಯವಿದ್ದುದರಿಂದ, ಮೇಲೆ ಸೂಚಿಸಿದ ಕ್ರಮದಲ್ಲಿ ಹೊಸ ನಾಣ್ಯಗಳು ಮುಂಚಿಗಿಂತ ಉತ್ತಮ ಲೋಹ ಮಿಶ್ರಣದಲ್ಲಿ ಹೊಡೆಯಲಾಗಬಹುದೆಂದು ಹೇಳಲಾಗಿದೆ. ಈ ಮಾರ್ಪಾಟಿನಿಂದ ರೂಪಾಯಿ ಬೆಲೆಯಲ್ಲಿ ಏನೂ ವ್ಯತ್ಯಾಸವಾಗದೆಂದು ಹೇಳಲಾಗಿದೆ.

ಕಳ್ಳಸಂತೆ ವ್ಯಾಪಾರಿಗಳಿಗೆ ಹೊಸತೊಂದು ತಡೆ

ಕಳ್ಳಸಂತೆಯ ವ್ಯಾಪಾರಕ್ಕೆ ಅಡ್ಡಿಯನ್ನು ಹಾಕುವ ದೃಷ್ಟಿಯಲ್ಲಿ ಕಳ್ಳಸಂತೆಯ ವರ್ತಕರು ತರುವ ಕ್ರೊಸ್ಡ್ ಚೆಕ್ಕುಗಳನ್ನು ವಟಾಯಿಸಿದಂತೆ ಇಂಗ್ಲಾಂಡಿನ ಬೇಂಕುಗಳ ಮೇಲೆ ನಿರ್ಬಂದ ಹಾಕಿರುವರು. ಅಲ್ಲದೆ ಕಳ್ಳಸಂತೆ ವರ್ತಕರಿಗೆ ತೊಂದರೆಯಾಗುವಂತೆ ಹೆಚ್ಚಿನ ಮೌಲ್ಯದ ಅಂದರೆ ೫ ಪವನುಗಳಿಗಿಂತ ಹೆಚ್ಚಿನ ಮೌಲ್ಯ ನೋಟುಗಳು ಸರಕಾರದಿಂದ ಚಲಾವಣೆಯಿಂದ ಹಿಂದಕ್ಕೆ ತೆಗೆಯಲಾಗಿವೆ. ಕಳ್ಳ ಸಂತೆಯ ವ್ಯಾಪಾರಿಗಳು ತಮಗೆ ಬರಬೇಕಾದ ಹಣವನ್ನು ಒಂದು ಪವನು ನೋಟುಗಳಲ್ಲಿ ಪಡಕೊಂಡು ಕಷ್ಟ ತೊಂದರೆಗಳಿಗೆ ಒಳಗಾಗುವಂತೆ ಈ ಹವಣಿಕೆಯು ಮಾಡಲಾಗಿದೆ.

ಮಹದೇವ ದೇಸಾಯಿ ಸ್ಮಾರಕ

ಗಾಂಧೀಜಿಯರ ಆಪ್ತ ಕಾರ್ಯದರ್ಶಿಗಳಾಗಿ ಅವಿಶ್ರಾಂತವಾಗಿ ದುಡಿದು, ಗಾಂಧೀಜಿಯರ ತತ್ವಗಳು ಪ್ರಕಾಶ ಬರುವಂತೆ ಬರವಣಿಗೆಯ ಮಹಾ ಶ್ರಮವನ್ನು ನಡೆಯಿಸಿ, ದೇಶಕ್ಕೆ ಅಪಾರ ಸೇವೆಯನ್ನು ಮಾಡಿದ ದಿವಂಗತ ಮಹದೇವ ದೇಸಾಯಿಯರಿಗೊಂದು ಸ್ಮಾರಕವನ್ನು ರಚಿಸಬೇಕಾಗಿ ನಿರ್ಣಯವಾಗಿದೆ. ಈ ಸ್ಮಾರಕ್ಕಾಗಿ ೨೫ ಲಕ್ಷ ರೂ.ಗಳ ನಿಧಿಯನ್ನು ಕೂಡಿಸಬೇಕಾಗಿಯೂ ಈ ನಿಧಿಯನ್ನು ಗ್ರಾಮೋದ್ಧಾರದ ಬಗ್ಗೆ ವಿನಿಯೋಗಿಸಲ್ಪಡುವಂತೆ ವ್ಯವಸ್ಥೆ ಮಾಡಲಾಗುವುದೆಂದು ತಿಳಿದು ಬಂದಿದೆ. ಈ ನಿಧಿಯನ್ನು ದೇಸಾಯಿರವರ ಮಾತೃನಾಡಾದ ಗುಜರಾತಿನ ಹಳ್ಳಿಗಳ ಉದ್ಧಾರದ ಯೋಜನೆ ಸಂಬಂಧ ವ್ಯಯಿಸಲಾಗುವುದೆಂದು ಹೇಳಲಾಗಿದೆ.

ವಿಸರ್ಜನೆ ವಸ್ತುಗಳಿಂದ ಉತ್ತಮ ಗೊಬ್ಬರ

ನಗರದ ಕಸ ಕಲ್ಮಶ, ಇತ್ಯಾದಿ ವಿಸರ್ಜನೆ ವಸ್ತುಗಳನ್ನು ಸುಟ್ಟುಬಿಟ್ಟೋ, ಸಮುದ್ರಕ್ಕೆ ತಳ್ಳಿಹಾಕಿಯೊ ಮೊದಲಾದ ಉಪಾಯಗಳಿಂದ ನಾಶ ಪಡಿಸಲಾಗುತ್ತಿದ್ದವಷ್ಟೆ. ಈ ವಿಸರ್ಜಿಸಲ್ಪಟ್ಟ ವಸ್ತುಗಳನ್ನು ಕಂದಕಗಳಲ್ಲಿ ಹೂಣಿಟ್ಟು ಬೇಸಾಯಕ್ಕೆ ಬೇಕಾದ ಉತ್ತಮ ಗೊಬ್ಬರವನ್ನು ತಯಾರಿಸುವ ಉಪಾಯವನ್ನು ಕಂಡುಹುಡುಕಲಾಗಿದೆ. ಬ್ರಿಟಿಷ್ ಇಂಡಿಯಾದಲ್ಲಿ ಪ್ರತಿಯೊಂದು ಮುನಿಸಿಪಾಲಿಟಿಯವರು, ಪಂಚಾಯತು ಬೋರ್ಡು ಇತ್ಯಾದಿ ನಾಗರೀಕ ಸಂಸ್ಥೆಗಳು, ತಮ್ಮ ಪ್ರದೇಶದ ವಿಸರ್ಜನಾ ವಸ್ತುಗಳನ್ನು ಗೊಬ್ಬರವಾಗಿ ಮಾರ್ಪಡಿಸುವ ಈ ಉಪಾಯ ಕೈಗೊಳ್ಳುವಂತೆ ಇಂಡಿಯಾ ಸರಕಾರದ ಯೋಜನೆಯೊಂದು ಹೊರಟಿರುತ್ತದೆ. ಈ ಕಾರ್ಯವನ್ನು ಕೈಗೊಳ್ಳುವ ಪ್ರಾರಂಭದ ವೆಚ್ಚಕ್ಕೆ ಬೇಕಾದ ದ್ರವ್ಯ ಸಹಾಯವು ಪ್ರಾಂತೀಕ ಸರಕಾರಗಳಿಂದ ಆಗುವ ಸೌಕರ್ಯ ಮಾಡಲಾಗಿದೆ.

ಜಪಾನಿನ "ಆತ್ಮತ್ಯಾಗ" ದಳಗಳು

ತಮ್ಮ ಮೇಲೇರಿ ಬರುವ ಮಿತ್ರರ ಅಭಿಯೋಗವನ್ನು ಎದುರಿಸಿ ಅದನ್ನು ತಡೆಯಲು ಜಪಾನಿಯರು ಅತ್ಯಂತ ಹತಾಶರಾಗಿ ಹೋರಾಡುತಿದ್ದಂತೆ ಕಾಣುತ್ತದೆ. ಓಕಿನಾವಾದಿಂದ ಮುನ್ನಡೆಯುವ ಯತ್ನದಲ್ಲಿದ್ದ ಅಮೆರಿಕನ್ ಬಲವನ್ನು ತಡೆಯುವರೆ, ಅವರು 'ಆತ್ಮತ್ಯಾಗ' ದಳ ಎಂಬ ನವೀನ ವ್ಯವಸ್ಥೆಯನ್ನು ಮಾಡಿರುವರು. ಪ್ರಾಣದಾಸೆಯಿಲ್ಲದೆ ದುಡಿಯುವ ವೈಮಾನಿಕರನ್ನು ಇದರಲ್ಲಿ ಬಳಸುತ್ತಿದ್ದಾರೆ. ಈ ವೈಮಾನಿಕರು ಯಾವ ಅಪಾಯಕ್ಕೂ ಹಿಂಜರಿಯದೆ ಅಮೇರಿಕನ್ ನೌಕಾ ದಳಗಳ ಮೇಲೆ ಬಂದು ಬೀಳುವುದರಿಂದ ತುಂಬಾ ಅನರ್ಥಕ್ಕೆ ಕಾರಣವಾಗಿರುವುದೆಂದೂ ಅನೇಕ ಅಮೆರಿಕನ್ ಜಹಜುಗಳು ಇವರಿಗೆ ಆಹುತಿಯಾಗಿವೆ ಎಂದೂ ತಿಳಿದು ಬಂದಿದೆ.

ಸಿರಿಯಾದಲ್ಲಿ ಯಾರಿಗೂ ತಾವು ತಳಗಳನ್ನು ಕೊಡಲು ಸಿದ್ಧರಿಲ್ಲವೆಂದು ಫ್ರಿಸ್ಕೊವಿಗೆ ತೆರಳಿದ ಸಿರಿಯನ್ ಪ್ರತಿನಿಧಿಗಳ ಹೇಳಿಕೆಯಾಗಿರುವುದು. ಮಧ್ಯ ಪೂರ್ವದ ಅರಬಿ ರಾಷ್ಟ್ರಗಳೆಲ್ಲಾ ಸ್ವತಂತ್ರರಾಗಲು ಒಕ್ಕಟ್ಟಿನಲ್ಲಿ ದುಡಿಯುತ್ತಿರುವರು. ಇರಾಕ್, ಪೆಲೆಸ್ತೀನ ಮೊದಲಾದ ಕಡೆಗಳಲ್ಲಿ ಯುದ್ಧದ ಅಗತ್ಯವಾಗಿ ತಂದಿರಿಸಲಾದ ಬ್ರಿಟಿಷ್, ಫ್ರೆಂಚ್, ಮತು ರಷ್ಯನ್ ದಳಗಳೂ ಬೇಗನೆ ಹೊರಡುವಂತೆ ಕೇಳಿಕೊಳ್ಳಲಾಗಿದೆಂದು ಹೇಳಲಾಗಿದೆ. ಪೆಲೆಸ್ತೀನದ ವಿಚಾರದಲ್ಲಿ ಯಹೂದಿ-ಅರಬಿ ಬಿನ್ನತೆಯು ತೊಂದರೆಗಳಿಗೆ ಕಾರಣವಾಗಬಹುದು.

ಬ್ರಿಟಿಷ್ ಪಾರ್ಲಿಮೆಂಟಿನ ಚುನಾವಣೆಗೆ ಹುರಿಯಾಳುಗಳಾಗಿ ನಿಂತ್ಕ ಎಂಟು ಮಂದಿ ಹಿಂದೀಯರಿಗೆ ವ್ಯಯಕ ಬೇಕಾದ ಹಣವನ್ನು ಒದಗಿಸಿಕೊಡುವರೆ ಹಿಂದೂದೇಶದ ಪ್ರಸಿದ್ಧ ಕ್ರೋಡಪತಿಗಳಾದ ಶ್ರೀ ಬಿರ್ಲಾರವರು ಒಪ್ಪಿರುವರಾಗಿ ತಿಳಿದು ಬಂದಿದೆ.

ಬೇಕಾದ ರೈಲ್ವೆ ಇಂಜೀನುಗಳು ಮುಂದಕ್ಕೆ ಹಿಂದೂದೇಶದಲ್ಲೆ ಸಿದ್ಧವಾಗುವದೆಂದೂ, ಈ ಬಗ್ಗೆ ಮಹತ್ತಾದ ಕಾರ್ಖಾನೆಗಳು ಸ್ಥಾಪನೆಯಾಗುತ್ತಲಿವೆ ಎಂದೂ, ರೈಲ್ವೆ ಇಂಜೀನುಗಳನ್ನು ತಯಾರಿಸುವ ದೊಡ್ಡದೊಂದು ಕಾರ್ಖಾನೆಯು ತಾತಾ ಸಂಸ್ಥೆಯವರ ಆಧೀನದಲ್ಲಿ ತಾತಾ ಪುರದಲ್ಲಿ ರಚನೆಯಾಗುತ್ತಿದೆ ಎಂದೂ ಹೇಳಲಾಗಿದೆ. ಈ ಕೈಗಾರಿಕೆಗೆ ಬೇಕಾದ ಯಾಂತ್ರಿಕ ಉಪಕರಣಗಳಿಗಾಗಿ ಲಂಡನಿಗೆ ಆರ್ಡರು ಕಳುಹಿಸಕೊಡಲಾಗಿದೆ.

ನಾಜೀ ಸರಕಾರದ ಆಗಮನವಾಗುವ ಪೂರ್ವದಲ್ಲಿದ್ದ ವೈಮಾರ್ ರಿಪಬ್ಲಿಕನ್ ಶಾಸನ ಕ್ರಮಗಳು ಈಗ ಬರ್ಲಿನ ನಗರದಲ್ಲಿ, ರಶ್ಯಾದ ನೆರವಿನಲ್ಲಿ ಬಳಕೆಗೆ ತರಲಾಗಿವೆಯಾಗಿಯೂ, ಅನೇಕ ಸಮಯದ ನಂತರ ಮೊನ್ನೆಯಿಂದ, ಬರ್ಲಿನ್ ನಗರದ ಬೀದಿಗಳಲ್ಲಿ ಜರ್ಮನ್ ಪೋಲಿಸಿನವರ ಗಸ್ತಿಯು ಪ್ರಾರಂಭವಾಗಿರುವುದೆಂದು ತಿಳಿದು ಬಂದಿದೆ.

ಚೀನಕ್ಕೂ, ಕಲ್ಕತ್ತೆಗೂ ನಡುವೆ ಟೆಲಿಪೊನು ಲ್ಯಾನು ಹಾಕಲಾಗಿದೆ ಎಂದೂ ಇನ್ನು ಕಲ್ಕತ್ತೆಯಿಂದ ಚೀನಾದೊಡನೆ ಟೆಲಿಪೋನು ಮೂಲಕ ಮಾತುಕತೆ ನಡೆಯಿಸಲು ಸುಲಭಸಾಧ್ಯವಾಗಿದೆ ಎಂದು ಹೇಳಲಾಗಿದೆ.

Application are invited for the following post for theSaraswathiVdyalaya High School to be newly opened at Ganguli (S. K.) on 20th June 1945 from experienced and qualified hands

1. One Headmaster.
2. One Asistant.
3. Two Secondary Grade Trained Teachers.
4. One Drawing master.
5. One Y. M. C. A. Trained Physical Instructor.

Applications should reach the undersigned before 1[illegible]-6-1945.

The Manager
S. V. High School Ganguli (S. K.)

WANTED

Wanted for Pompei Secondary School, Kirem, Talipady, one Secondary grade trained teacher, one Y. M. C. A qualified drill master and one drawing master on decent salary.

Manager,
POMPEI SECONDARY SCHOOL.
Post Aikala, S. Kanara.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.



New Watches are Scarce
ಹೊಸ ವಾಚುಗಳು ಅಪರೂಪ.
ಹಲವು ಪದಾರ್ಥಗಳಂತೆ ವಾಚುಗಳ ಸರಬರಾಯಿಯೂ ಈಗ ಕಡಿಮೆ. ನಮ್ಮ ಬಹುಜನಪ್ರಿಯ ವಾಚುಗಳು ತಕ್ಕಷ್ಟು ಪ್ರಮಾಣದಲ್ಲಿ ಈಚಿಗೆ ಕಾರ್ಖಾನೆಗಳಿಂದ ರವಾನಿಸಲ್ಪಟ್ಟಿದ್ದರೂ ಸಾಗಬೇಕಾದ ಸಾವಿರಾರು ಮೇಲು ಪ್ರದೇಶಗಳಲ್ಲಿ ವಾಹನ ಸೌಕರ್ಯಗಳು ಕಡಿಮೆಯಾಗಿ ಅವು ಈ ದೇಶಕ್ಕೆ ತಲುಪಲು ಪ್ರಾಯಶಃ ಹಲವು ತಿಂಗಳುಗಳೇ ಅಗತ್ಯ.
ಸರಬರಾಯಿಗಿಂತ ಕೇಳಿಕೆಗಳು ಹೆಚ್ಚಿರುವ ಈಗಿನ ವಿದ್ಯಮಾನಗಳಲ್ಲಿ ನಾವು ನಮ್ಮ ಕೆಲ ಗಿರಾಕಿಗಳಲ್ಲಿ ನಿರಾಶೆಯನ್ನು ಉಂಟುಮಾಡುವಂತಾಗಿದೆ; ಮತ್ತು ಸ್ಥಿತಿಗತಿಗಳು ಸುಧಾರಿಸಿ ಅವರ "ವೆಸ್ಟ್ಎಂಡ್" ವಾಚುಗಳ ಆರ್ಡರುಗಳನ್ನು ಕೂಡಲೇ ಪೂರೈಸಲು ನಾವು ಶಕ್ತರಾಗುವ ತನಕ ಅವರು ನಮ್ಮಲ್ಲಿ ಕೃಪೆ ಇರಿಸಬೇಕೆಂದು ಅರಿಕೆ.
ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ & ಕಲ್ಕತ್ತ
WEST END WATCH Co.
BOMBAY CALCUTTA
Makers of Quality Watches for over 75 Years.

ಮಂಗಳೂರಲ್ಲಿ ನೀರಿನ ಸರಬರಾಯಿ

ಉಡುಪಿಯಲ್ಲಿ ಹುಲಿ ಕುದುರೆ ಯುದ್ಧ

ಸಕ್ಕರೆ, ಚಿಮಿಣಿ ಎಣ್ಣೆ ಬೆಲೆ-ವರ್ಗಾವರ್ಗಿ-ಪೋಸ್ಟುಮೇನನ ಆರೋಪ

ಮಂಗಳೂರು:-ನಮ್ಮ ಜಿಲ್ಲಾ ಮತ್ತು ಸೆಶ್ಯನ್ ಜಡ್ಜರಾಗಿದ್ದ ಶ್ರೀ. ಎಂ. ಸಿ. ಬಿ. ಕೋಮನ್, ಐ. ಸಿ. ಎಸ್. ಅವರ ಬದಲಿಗೆ ಶ್ರೀ। ಕೆ. ಶ್ರೀನಿವಾಸನ್ ಐ. ಸಿ. ಎಸ್. ಅವರೂ, ಇಲ್ಲಿಯ ಪ್ರಿನ್ಸಿಪಾಲ್ ಸಬ್ ಜಡ್ಜರಾಗಿದ್ದು ನಿವೃತ್ತರಾದ ಶ್ರೀ. ಪರಮೇಶ್ವರ ಐಯರ್ ಅವರ ಸ್ಥಾನಕ್ಕೆ ಎಲ್ಲೂರು ಜಿಲ್ಲಾ ಮುನ್ಸೀಫ್‌ರಾದ ಶ್ರೀ. ಎಸ್. ನರಸಿಂಹಲು ಬಿ. ಎ. ಅವರೂ ವರ್ಗಾಯಿಸಲ್ಪಟ್ಟು ಅವರಿಬ್ಬರೂ ತಮ್ಮ ಹುದ್ದೆಗಳ ಚಾರ್ಜು ವಹಿಸಿರುವರು.

ಕುಂದಾಪುರ ಪ್ರಿನ್ಸಿಪಾಲ್ ಜಿ॥ ಮುನ್ಸೀಫ್‌ರಾದ ಶ್ರೀ। ಇ. ಕೃಷ್ಣಮೂರ್ತಿ ಬಿ. ಎ. ಎಂ. ಎಲ್. ಅವರು ಇಲ್ಲಿಯ ಎಡಿಶನಲ್ ಸಬ್ ಜಡ್ಜರಾಗಿಯೂ, ಶ್ರೀ॥ ಯು. ನಾರಾಯಣರಾವ್ ಬಿ. ಎ. ಬಾರ್-ಎಟ್-ಲೊ, ಎಡಿ॥ ಮುನ್ಸೀಫ್ ಅವರು ಕುಂದಾಪುರದ ಪ್ರಿನ್ಸಿಪಲ್ ಜಿ॥ ಮುನ್ಸೀಫ್‌ರಾಗಿಯೂ, ಜನಾಬ್ ಅಬ್ದುಲ್ ರಹೀಂ ಅಹಮ್ಮದ್ ಸಾಹೇಬ್ ಬಿ. ಎ. ಬಿ. ಎಲ್. ಅವರು ಕುಂದಾಪುರದ ಎಡಿ॥ ಜಿ॥ ಮುನ್ಸೀಫ್‌ರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಸಹಕಾರಿ ತರಬೇತಿ:-ಇಲ್ಲಿಯ ಸಹಕಾರಿ ಸಂಘದ ಪಂಚಾಯತುದಾರರು ಮತ್ತು ಸದಸ್ಯರು-ಇವರಿಗೆ ಸಹಕಾರಿ ಶಿಕ್ಷಣ ಕೊಡಲುಳ್ಳ ಆ ತರಬೇತಿ ಕ್ಲಾಸುಗಳು ಕಳೆದ ಮೇ ೨೧ರಲ್ಲಿ ಆರಂಭವಾಗಿ ಇದೇ ಜೂನ್ ಮೊದಲ ವಾರದಲ್ಲಿ ಮುಗಿದವು. ಈ ಸಂದರ್ಭದಲ್ಲಿ ಈ ಕೆಳಗಿನ ಮಹನೀಯರು ಸದ್ರಿ ಸಹಕಾರಿ ತರಬೇತು ಕ್ಲಾಸುಗಳಿಗೆ ದಯಮಾಡಿಸಿ ಉಪನ್ಯಾಸ ಕೊಟ್ಟಿದ್ದರು: ಶ್ರೀಯುತರುಗಳಾದ ಬಿ. ವೆಂಕಟ್ರಮಣಯ್ಯ ವೆಟರ್ನರಿ ಅಸಿಸ್ಟಾಂಟ್ ಸರ್ಜನ್; ಎಂ. ಆನಂದನ್ ಕೃಷಿ ಶಾಖೆಯ ಡೆ॥ ಡೈರೆಕ್ಟರ್; ಡಾ। ಬಿ. ಸುಬ್ರಾಯ ಬಾಳಿಗಾ ಮುನ್ಸಿಪಲ್ ಹೆಲ್ತ್ ಆಫೀಸರ್; ಎಫ್. ಎಂ. ಪಿಂಟೊ, ಟೆಕ್ಸಾಟ್ಯಾಲ್ ಕಂಟ್ರೋಲ್ ಆಫೀಸರ್; ಡಾ। ಕೆ. ಪಿ. ಥಾಮಸ್; ಜಿಲ್ಲಾ ಹೆಲ್ತ್ ಆಫೀಸರ್; ರಾ। ಸಾ। ಕೆ. ಕೃಷ್ಣಯ್ಯ ಬಿ. ಬಿ. ಜಿಲ್ಲಾ ರೇಶ್ನಿಂಗ್ ಆಫೀಸರ್; ಶ್ರೀ. ಎಂ. ಬಿ. ಶಂಕರರಾವ್ ಎ॥ ಜಿಲ್ಲಾ ವ್ಯವಸ್ಥಾಪಕ (ರಾ. ಯು. ಮು.); ದತ್ತಾತ್ರೇಯರಾವ್, ಜಿಲ್ಲಾ ಕೈಗಾರಿಕೆ ಅಧಿಕಾರಿ; ಕೆ. ಸರ್ವೋತ್ತಮರಾವ್ ಸಹಕಾರಿ ಸಂಘಗಳ ಡೆ॥ ರಿಜಿಸ್ಟ್ರಾರರು.

ಮುಸ್ಲಿಂ ವಿಧ್ಯಾರ್ಥಿಗಳು: ಇವರ ಫೆಡರೇಶನಿನ ಆಶ್ರಯದಲ್ಲಿ ಕಳೆದ ತಾ. ೫ರಂದು ಸ್ಥಳೀಯ ಇಸ್ಲಾಮಿಯಾ ಕ್ಲಬ್ಬಿನ ವಠಾರದಲ್ಲಿ ಸೇರಿದ ಸಭೆಗೆ ಶ್ರೀ. ಬಿ. ವೈಕುಂಠ ಬಾಳಿಗಾ, ವಕೀಲ್, ಅವರು ಅಧ್ಯಕ್ಷರಾಗಿದ್ದರು. "ವಿದ್ಯಾರ್ಥಿಗಳು ಜ್ಞಾನಾಭಿವೃದ್ಧಿಯನ್ನು ಮಾಡಿಕೊಂಡು ವಿದ್ವತ್ತನ್ನು ಸಂಪಾದಿಸಲು ಯತ್ನಿಸಬೇಕು. ಅವರು ಆಶಾವಾದದ ಶುಭ ಸಂದೇಶವನ್ನು ಹಳ್ಳಿ ಗ್ರಾಮಗಳಲ್ಲಿ ಸಾರಬೇಕು, ತಮ್ಮ ಬಂಧುಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕು, ಗ್ರಾಮೋದ್ಧಾರದ ಸಾಮಾನ್ಯ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು, ಮೇಲಾಗಿ ಇಸ್ಲಾಮಿನ ತತ್ವಗಳನ್ನು ತಪ್ಪದೆ ಅನುಸರಿಸುವುದು ಅಗತ್ಯ" ಹೀಗೆಂದು ಅಧ್ಯಕ್ಷ ಬಾಳಿಗರು ತಮ್ಮ ಭಾಷಣಗಳಲ್ಲಿ ಸೂಚಿಸಿದರು. ಅನೇಕ ಮುಸ್ಲಿಂ ಮತ್ತಿತರ ಪ್ರಮುಖರು ಹಾಜರಿದ್ದರು.

ಖೂನಿಗಾಗಿ ೧ ವರ್ಷ: ಹೊಸ ಡಿ॥ ಮತ್ತು ಸೆ॥ ಜಡ್ಜರಾದ ಶ್ರೀ. ಕೆ. ಶ್ರೀನಿವಾಸನ್ ಐ. ಸಿ. ಎಸ್. ಅವರು ಕಾಸರಗೋಡು ತಾಲೂಕಿನ ಒಂದು ಖೂನಿ ಮೊಕದ್ದಮೆಯ ತನಿಖೆ ನಡೆಸಿ ಆರೋಪಿಗೆ ೧ ವರ್ಷದ ಕಠಿಣ ಸಜೆ ವಿಧಿಸಿದರು. (ಕಾಸರಗೋಡು ತಾಲೂಕಿನ ಅಡೂರು ಗ್ರಾಮದಲ್ಲಿ ಗಾಣಿಗ ರಾಮ ಎಂಬವನು ಮಹಾಲಿಂಗ ಎಂಬವನನ್ನು ಕೊಲೆಮಾಡಿದ ಎಂಬುದೇ ಆರೋಪವಾಗಿತ್ತು. ಹಾಗೂ ಆರೋಪಿ ಗಾಣಿಗ ರಾಮ ತನ್ನ ಸಹೋದರನೊಡನೆ (ಮೃತನಾಧ) ಮಹಾಲಿಂಗ ಜಗಳವಾಡಿ ಗಾಸಿಗೊಳಿಸಲು ಯತ್ನಿಸುತಿದ್ದ ಹಾಗೇ ಮಹಾಲಿಂಗನನ್ನು ಆಕ್ರಮಿಸಿದನೆಂದೂ ಹೇಳಲಾಗಿದೆ.)

ನಗರಕ್ಕೆ ನೀರು ಸರಬರಾಯಿ:- ತಾ. ೧೧ರಂದು ಮುನ್ಸಿಪಲ್ ಕೌನ್ಸಿಲ್ ಸಭೆ ಸೇರಿತ್ತು. ಆದಿಯಲ್ಲಿ ಚೆಯರ್‌ಮೇನರು 'ನಮ್ಮ ನಗರದಲ್ಲೇ ರಸ್ತೆ ಮತ್ತು ಇತರ ಕಾಮಗಾರಿ ಕೆಲಸಗಳು ಧಾರಾಳವಿರುವಾಗ ನಮಗೊಬ್ಬ ಇಂಜಿನಿಯರ್ ಇಲ್ಲದೆ ನಿರ್ವಾಹವಿಲ್ಲ. ಇದ್ದವರೊಬ್ಬರನ್ನು ಸರಕಾರದವರು ಕೊಯಮುತ್ತೂರಿಗೆ ವರ್ಗಾಯಿಸಿದ್ದಾರೆ. ನಮಗೊಬ್ಬ ಇಂಜಿನಿಯರರಿಲ್ಲದೆ ನಿರ್ವಾಹವಿಲ್ಲ" ಎಂದು ಸೂಚಿಸಿದರು. ಈ ಕುರಿತು ಮುಂದಿನ ಸಭೆಯಲ್ಲಿ ಒಂದು ಠರಾವುಮಾಡಿ ಮೇಲಧಿಕಾರಿಗಳಿಗೆ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

ಕೌನ್ಸಿಲಿನ ಮಿಟಿಂಗಿನ ಸಮಯದಲ್ಲಿ ಬೀಡಿ ಸಿಗ್ರೇಟ್ ಇತ್ಯಾದಿಗಳನ್ನು (ಸಭಾ ಮಂದಿರದಲ್ಲಿ) ಸೇದಬಾರದೆಂದು ವಿಧಿಸಲಾಯಿತು.

ಗುಳಿಗ ಹಿತ್ತಲಿನಲ್ಲಿ ಒಂದು ಬಸ್‌ಸ್ಟಾಂಡಿಗಾಗಿ ರೂ. ೪೩ ಸಾವಿರ ಮಂಜೂರುಮಾಡಲ್ಪಟ್ಟಿತು. ಇಲ್ಲಿ ಒಂದು ಗಡಿಯಾರದ ಗೋಪುರವೂ ಇರುವುದೆಂದು ತಿಳಿದು ಬಂದಿದೆ.

ಮಂಗಳೂರು ನಗರದ ನಿವಾಸಿಗಳಲ್ಲಿ ಪ್ರತಿಯೊಬ್ಬರಿಗೆ ದಿನಕ್ಕೆ ೧೫ ಗೆಲನ್ ನೀರು ಒದಗಿಸಬಲ್ಲ ಒಂದು ನೀರು ಸರಬರಾಯಿ ಯೋಜನೆಯು ಕೌನ್ಸಿಲಿನಿಂದ ಮಂಜೂರಾತಿಹೊಂದಿತು. ಅಲ್ಲದೆ ತೀವ್ರದಲ್ಲಿಯೇ ಚರಂಡಿಗಳ ವ್ಯವಸ್ಥೆಯ ಅನ್ವೇಷಣ ಕಾರ್ಯವನ್ನೂ ಈ ನಗರಕ್ಕಾಗಿ ಕೈಕೊಂಡು ಪೂರೈಸಬೇಕಾಗಿ ಸರಕಾರವನ್ನು ವಿನಂತಿಸುವ ಒಂದು ಠರಾವೂ ಪಾಸಾಯಿತು.

ರೇಡಿಯೊ ಮಂದಿರದ ಬಳಿ ಒಂದು ಹೆಚ್ಚು ಪ್ರಕಾಶದ ಮರ್ಕ್ಯೂರಿ ದೀಪಕ್ಕಾಗಿ ರೂ. ೩೦೦, ಬೇರೆ ಕೆಲವು ಕಡೆ ಅಂತಹದೇ ದೀಪಗಳನ್ನು ಇರಿಸಲು ರೂ. ೩೦೦೦-ಕಂಕನಾಡಿಯ ಕುಷ್ಠರೋಗಿಗಳ ಆಸ್ಪತ್ರೆಯ ಧನ ಸಹಾಯಕ್ಕಾಗಿ ರೂ. ೬೦೦-ಇವಿಷ್ಟು ಮಂಜೂರಾಯಿತು. ಮುನ್ಸಿಪಲ್ ಉದ್ಯೋಗಿಗಳಿಗೆ ಏರಿದ ತುಟ್ಟಿ ಭತ್ತೆ ಕೊಡಲು ಕೌನ್ಸೀಲು ಒಪ್ಪಿತು.

ವಿದ್ಯುಚ್ಛಕ್ತಿಯ ಸರಬರಾಯಿ ವಿಚಾರಕ್ಕಾಗಿ ನೇಮಿಸಿದ ಸಮಿತಿಯ ವರದಿಯನ್ನು ಅಂಗೀಕರಿಸಲಾಯಿತು. ವಿದ್ಯುಚ್ಛಕ್ತಿಯನ್ನು ಆದಷ್ಟು ಅಗ್ಗವಾಗಿ ನಗರ ದೀಪಗಳಿಗೂ, ಕೈಗಾರಿಕೆ ಕಾರ್ಖಾನೆಗಳಿಗೂ ಒದಗಿಸಬೇಕೆಂಬ ಉದ್ದೇಶದಿಂದ ಪೈಕಾರಾ ಗೆರ್ಸೊಪ್ಪೆ, ಅಥವಾ ಇನ್ನಿತರ ಕಡೆಯಿಂದ ಸರಬರಾಯಿಯಾಗುವ ಹಾಗೆ ಸರಕಾರದಲ್ಲಿ ಅರಿಕೆಮಾಡಿಕೊಳ್ಳಬೇಕೆಂದಾಯಿತು.



ಧೂಳು ಶ್ವಾಸಕೋಶಕ್ಕೆ ರೋಗವನ್ನು ಒಯ್ಯುವುದು
ಶ್ವಾಸಯೋಗ್ಯ ಮಾತ್ರೆ ಪೆಪ್ಸ ತೆಕ್ಕೊಳ್ಳಿರಿ.
ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕರಗಿ, ಉತ್ತಮ ಔಷಧಿಯೋಗ್ಯ ರಸವನ್ನು ಹೊರಗೆಡವುದು; ಅದರಿಂದ ಶೀತ, ಇಂಪ್ಲುಯೆಂಜಾ, ಮೊದಲಾದ ಬಾಧೆಗಳು ಕೂಡಲೆ ಗುಣವಾಗುವುದು.
ಪೆಪ್ಸ ಸೇವಿಸಿರಿ.

PEPS
ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಉಡುಪಿಯಲ್ಲಿ ಹುಲಿಕಾಟ:— ಕೆಲವು ದಿವಸಗಳ ಹಿಂದೆ ಈ ನಗರದಲ್ಲಿ ಒಂದು ವಿಚಿತ್ರ ಹುಲಿ ಘಟನೆಯಾಯಿತು. ಒಂದು ದಿನ ಸಾಯಂಕಾಲದ ಹೊತ್ತಿಗೆ ಸ್ಥಳೀಯ ವಿಕ್ಟರಿ ಕ್ಲಬ್ಬಿನ ಹಿಂದುಗಡೆಯ ಬಿದಿರ ಪೊದರಿನಲ್ಲಿ ಮಾರ್ಗಸ್ಥರು ಎರಡು ಹುಲಿಗಳು ಅವಿತಿರುವುದನ್ನು ಕಂಡರು. ಅವುಗಳನ್ನು ಅಲ್ಲಿಂದ ಬೆದರಿಸಿ ಓಡಿಸಲಾಯಿತು. ಆದರೆ ಗಾಬರಿಗೊಂಡ ಹುಲಿಗಳಲ್ಲಿ ಒಂದು ಹತ್ತಿರದ ಕುದುರೆ ಲಾಯದಲ್ಲಿ ಅಡಗಿಕೊಂಡದ್ದು ಯಾರ ಗಮನಕ್ಕೂ ಬರಲಿಲ್ಲ. ಲಾಯದಲ್ಲಿ ಎರಡು ಜಟ್ಕಾ ಕುದುರೆಗಳು ಕಟ್ಟಲ್ಪಟ್ಟಿದ್ದುವು. ಹುಲಿ ಹುಲ್ಲಿನ ರಾಶಿಯೊಳಗೆ ಸೇರಿದ್ದು ಕುದುರೆಗಳು ಹುಲ್ಲನ್ನು ತಿನ್ನುವಾಗ ತೊಂದರೆ ಕೊಟ್ಟು ಒಂದರ ಮುಖಕ್ಕೆ ಪರಚಿ ಕಣ್ಣನ್ನೇ ಕಿತ್ತುಹಾಕಿತಂತೆ. ನಂತರ ಇನ್ನೊಂದು ಕುದುರೆಗೂ ಹುಲಿಗೂ ರಾತ್ರಿ ಇಡಿ ಮಲ್ಲ ಯುದ್ಧವಾಗಹತ್ತಿತು. ಕುದುರೆಯು ತನ್ನ ಕಾಲು ಒದೆತದಿಂದಲೇ ಆ ವ್ಯಾಘ್ರವನ್ನು ತಡೆ ಹಿಡಿದಿರಬೇಕೆಂದು ಊಹಿಸಲಾಗಿದೆ. ಅಂತೂ ಮರುದಿನ ಕುದುರೆ ಕೆಲಸದವನು ಲಾಯದ ಬಾಗಿಲು ತೆರೆಯುವಾಗ ಅದರಲ್ಲಿ ಆ ಕ್ರೂರ ಪ್ರಾಣಿಯ ಇರುವಿಕೆಯು ಗಮನಕ್ಕೆ ಬಂತು. ವರ್ತಮಾನವು ಆಸುಪಾಸಿನವರಿಗೆ ತಿಳಿದೊಡನೆ ಜನರು ಸೇರತೊಡಗಿದರು. ಯಾರೊ ಒಬ್ಬರು ಬದಿಯ ಗೋಡೆಯ ಎಡೆಯಿಂದ ಒಳಗೆ ಇಣಿಕಿದಾಗ ಹುಲಿಯು ಆತನ ಮುಖಕ್ಕೂ ಪರಚಿ ಬಲವಾದ ಘಾಯವನ್ನುಂಟುಮಾಡಲಾಗಿ ಘಾಯಾಳುವನ್ನು ಆಸ್ಪತ್ರೆಗೆ ಕೊಂಡುಹೋಗುವ ಪ್ರಸಂಗ ಬಂತು. ಮತ್ತೆ ಚತುರ ಕೋವಿಯಾಳುಗಳು ಉಪಾಯ ಹುಡುಕಿ ಒಂದು ಲೋರಿ ಮೇಲೆ ನಿಂತು ಗುಂಡಿನಿಂದ ಸುರಕ್ಷಿತವಾಗಿ ಹುಲಿಯನ್ನು ಹೊಡೆದರಂತೆ. ಸತ್ತ ಹುಲಿಯ ಶವವನ್ನು ಊರಲ್ಲೆಲ್ಲಾ ಮೆರವಣಿಗೆ ಮಾಡಲಾಯಿತೆಂದೂ ಓರ್ವ ಆ ಕಡೆಯಿಂದ ಬಂದ ಪ್ರಯಾಣಿಕರ ಬಾಯಿಮಾತಿನ ಹೇಳಿಕೆಯಿಂದ ತಿಳಿದು ಬರುತ್ತದೆ.

ಮಂಜೇಶ್ವರ:-ಇಲ್ಲಿಯ ಪೋಸ್ಟಾಪೀಸಿಗೆ ಸೇರಿದ ನರಸಿಂಹ ಎಂಬ ಪೋಸ್ಟ್‌ಮೇನನು ಕೆಲವೊಂದು ಮನಿಯಾರ್ಡರುಗಳ ಹಣವನ್ನು ದುರುಪಯೋಗ ಮಾಡಿದನೆಂಬ ಆರೋಪದ ಮೊಕದ್ದಮೆ ನಮ್ಮ ಎಡಿ। I ಕ್ಲಾಸ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಯಾಗಿ ಆರೋಪಿಗೆ ೧ ವರ್ಷದ ಕಠಿಣ ಶಿಕ್ಷೆ ವಿಧಿಸಲಾಯಿತು.

ಎಲ್ಲಾ ತರದ ಮತ್ತು ಎಲ್ಲಾ ಕಡೆಗಳಲ್ಲಿ ಚಿಮಿಣಿ ಎಣ್ಣೆ ತುಂಬಿದ ಡಬ್ಬಿಯ ಬೆಲೆಯಲ್ಲಿ ಆರು ಪೈ ಇಳಿಸಲಾಗಿದೆ ಎಂದು ಜಿಲ್ಲಾ ಕಲೆಕ್ಟರರ ಒಂದು ಪ್ರಕಟನೆ ತಿಳಿಸುತ್ತದೆ.

NOTICE

Notice having been given of the loss of Policy No 141300 on the life of Mr. Thokur Sanjiva Mally it is hereby declared that duplicate there of will be issued if no objection is lodged with us within one month from this date.

J. C. Jain
General Manager
Bharat Ins. Co. Ltd., Lahore.
Date 15-6-1945.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಉಲ್ಲಾಸವಾಗಿ ಆರೋಗ್ಯವಾಗಿ ಮತ್ತು ಸಪೂರವಾಗಿ ಏಕೆ ಇರಬಾರದು?
ಕ್ರಮವಾಗಿ ಪ್ರತಿ ರಾತ್ರೆಯೂ ಎರಡು ಬೈಲ್ ಬೀನ್ಸುಗಳನ್ನು ಸೇವಿಸುವ ಅಮೂಲ್ಯ ಸೂತ್ರವನ್ನು ಅನುಸರಿಸಿದಲ್ಲಿ ನೀವು ಉಲ್ಲಾಸವಾಗಿ, ಆರೋಗ್ಯವಾಗಿ ಮತ್ತು ಅತ್ಯುತ್ತಮ ಚೇತನಗೊಂಡಿದ್ದು, ಜೀವನದ ಪೂರ್ಣ ಸುಖವನ್ನು ಅನುಭವಿಸಬಹುದು.
ಬೈಲ್‌ಬೀನ್ಸ್ ಉತ್ತೇಜಿತ ಆರೋಗ್ಯ ಮತ್ತು ಕಸುವು ಉಂಟು ಮಾಡುವುವಲ್ಲದೆ, ಅಂಗಕಾಂತಿಯನ್ನು ಸ್ವಚ್ಛಗೊಳಿಸುವುವು ಮತ್ತು ನಿಮ್ಮ ದೇಹಾಕೃತಿಯನ್ನು ಸಪೂರವಾಗಿ ಹಾಗೂ ಯೌವನವಾಗಿಡುತ್ತದೆ.
ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್‌ಬೀನ್ಸ್ ಶುದ್ಧ ಸಸ್ಯ ಸಾರಗಳಿಂದ ತಯಾರಿಸಿದ್ದಾಗಿವೆ. ಅದು ಕಾಣ ಪೂರ್ಣ ವಿಶ್ವಾಸದಿಂದ ಇವನ್ನು ಕ್ರಮವಾಗಿ ಪ್ರತಿ ರಾತಿಯಲ್ಲೂ ಸೇವಿಸಬಹುದು. ಇವು ಅಂಗ ರಚನೆಯನ್ನು ಚೇತನಗೊಳಿಸಿ ರಕ್ತವನ್ನು ಶುದ್ಧಮಾಡಿ, ಕೊಬ್ಬುಂಟಾಗುವ ಮಲಪದಾರ್ಥವನ್ನು ದಿನವೂ ಹೊರಗೆಡುವುವು; ಹಾಗೆ ನಿಮ್ಮ ಅಂತರಾರೋಗ್ಯವು ನಿಶ್ಚಿತಗೊಂಡು ನೀವು ಮನೋಹರ ಮತ್ತು ಚಿತ್ತಾಕರ್ಷವಾಗಿ ಸಪುರ ಆಗುವಿರಿ.

BILE BEANS
ಬೈಲ್ ಬೀನ್ಸ್ ನಿಮ್ಮನ್ನು ಆರೋಗ್ಯವಂತರಾಗಿ ಮಾಡುವುದು.

‘ಮಹಾರಾಷ್ಟ್ರ’ದ ಪತ್ರಿಕೋದ್ಯಮ ‘ಶಿವಾಜಿ’

‘ಗಾಜಿ ಬುರುಡೆ’ಯ ಮಿದುಳು ಅವರದು

ಲೋಕಮಾನ್ಯ ತಿಲಕರ ಸಹದ್ಯೋಗಿ—ಕೊಂಕಣಸ್ಥ ಗೋಪಾಲ ಅನಂತ ಓಗ್ಲೇ

ನೀವು ಎಂದಾದರೂ ಓಗ್ಲೇ ಚಿಮಿಣಿ ಬುರುಡೆಗಳನ್ನು ಕೊಂಡುಕೊಳ್ಳುವಾಗ ಅದು ನಾಗ್ಪುರದ ದಿವಂಗತ ಗೋಪಾಲ ಅನಂತ ಒಗ್ಲೇ ಎಂಬವರ ಗಾಜು ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟಿತೆಂಬ ವಿಷಯವನ್ನು ಅರಿತುಕೊಂಡಿರುವಿರಾ? ಇಂದು ಅವರು ಕಾರ್ಖಾನೆಯಲ್ಲಿ ನಾನಾ ತರದ ಶ್ರೇಷ್ಠ ಗಾಜಿನ ಉಪಕರಣಗಳು ತಯಾರಾಗುತ್ತವೆ—ಅವು ಅಖಿಲ ಭಾರತ ಖ್ಯಾತಿಯನ್ನು ಪಡೆದಿವೆ.

ಈ ಗಾಜಿನ ಕಾರ್ಖಾನೆ ಮ್ಹಾಲಕರು ಮಧ್ಯಪ್ರಾಂತ್ಯ ಬಿಹಾರದಲ್ಲಿ ಮಾತ್ರವಲ್ಲ ಭಾರತೀಯ ಪತ್ರಿಕಾ ಪ್ರಪಂಚದಲ್ಲೇ ಸುಖ್ಯಾತಿಪಡೆದಿರುವರು. ಬಂಗಾಲಕ್ಕೆ ಒಬ್ಬ ತುಷಾರಕಾಂತಿ ಘೋಶರೂ, ಬೊಂಬ್ಯಾಗೆ ಬ್ರೆಲ್ವಿಯವರೂ, ಯುಕ್ತಪ್ರಾಂತ್ಯಕ್ಕೆ ಒಬ್ಬ ಚಿಂತಾಮಣಿ, ದೇವದಾಸ್ ಗಾಂಧಿಯವರೂ ಮತ್ತು ಮದ್ರಾಸಿಗೆ ಗೊಯೊಂಕಾ, ಶ್ರೀನಿವಾಸನರುಗಳಿದ್ದಂತೆ ಮಹಾರಾಷ್ಟ್ರಕ್ಕೆ ಒಬ್ಬ ಒಗ್ಲೇ.

ಗೋಪಾಲ ಅನಂತ ಒಗ್ಲೆಯವರು ಶಿವಾಜಿಯು ಸಾಹಸ ನಡೆಸಿದ ಕೊಂಕಣ ದೇಶದ ವಿಜಯ ದುರ್ಗ (ರತ್ನಗಿರಿ ಜಿಲ್ಲೆ)ದಲ್ಲಿ ಹುಟ್ಟಿ ಬೆಳೆದವರು. ತಂದೆಗೆ ಐದು ರೂಪ್ಯಾ ಸಂಬಳದ ‘ಘನಸ್ಥ’ ಉಪಾಧ್ಯಾಯ ಕೆಸಲವಿತ್ತು. ಇಷ್ಟು ದೀನಾವಸ್ಥೆಯಲ್ಲೂ ಒಗ್ಲೆಯವರು ಕೋಲೆಜ್ ತನಕ ಸ್ವಪ್ರಯತ್ನದಿಂದ ಕಲಿತರೂ ಡಿಗ್ರಿ ಪಡೆಯುವಷ್ಟು ಭಾಗ್ಯ ಅವರಿಗಿಲ್ಲದಾಯಿತು. ಪೂನಾದಲ್ಲಿ ಕೋಲೆಜ್ ಕಲಿಯುತ್ತಿರುವಾಗಲೇ ಲೋಕಮಾನ್ಯ ತಿಲಕರ ಪ್ರಭಾವಕ್ಕೆ ಬಿದ್ದು ಒಗ್ಲೇಯವರು ಅವರ ಬಳಿ ಸ್ವಯಂಸೇವಕರಾದರು. ತಿಲಕರ ಮಕ್ಕಳಿಗೂ ಅವರು ಮನೆಯಲ್ಲೇ ಪಾಠಹೇಳಿ ಕೊಡುತಿದ್ದರು.

ಮತ್ತೆ ಪ್ರಖ್ಯಾತ ಪಾನನಿರೋಧ ಚಳವಳಿಗಾರರಾದ ಬೋಫಾಟ್‌ಕರ್ ಬಂಧುಗಳ ಹ್ಯಾಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದಾಗ ಸಾರ್ವಜನಿಕ ಸೇವೆಯ ಕಡೆ ಆಕರ್ಷಿಸಲ್ಪಟ್ಟು ಸಾರ್ವಜನಿಕ ಸಭೆಗಳಲ್ಲಿ ಕ್ರಾಂತಿಕಾರಕ ಭಾಷಣಮಾಡತೊಡಗಿದರು. ಆಗಲೇ ‘ಭಲಾ’ ಎಂಬ ಪತ್ರಿಕೆಗೆ ಲೇಖನ ಬರೆಯ ಹತ್ತಿ ತಿಲಕರಿಂದ ಶ್ಲಾಘಿಸಲ್ಪಟ್ಟು ನಾಗ್ಪುರದ ‘ದೇಶ ಸೇವಕ’ ಎಂಬ ರಾಷ್ಟ್ರೀಯ ಪತ್ರಿಕೆಯ ಸಂಪಾದಕತ್ವ ಕೊಡಲ್ಪಟ್ಟಿತು.

ಎರಡು ವರ್ಷ ನಂತರ ಪುನಃ ಪೂನಾಕ್ಕೆ ಬಂದ ಒಗ್ಲೇಯವರು ಪಾನನಿರೋಧ ಚಳವಳಿಯಲ್ಲಿ ಶರಾಬು ಗಡಂಗ್ ಪಿಕೆಟಿಂಗ್ ಮಾಡಿ ಜುಲ್ಮಾನೆಗೊಳಗಾದರು. ಅಲ್ಲಿಂದ ಸರಕಾರಕ್ಕೂ ಅವರಿಗೂ ಕೈ ಕೈ ಕಚ್ಚಾಟ ಹತ್ತಿತು. ಅಷ್ಟು ಹೊತ್ತಿಗೆ ಪೂನಾದ ‘ಕಾಳ್’ ಎಂಬ ಪತ್ರಿಕೆಯ ಸಂಪಾದಕ ಪರಂಜಾಪೆ ಎಂಬವರು ಒಂದು ಆಕ್ಷೇಪಾರ್ಹ ಲೇಖನಕ್ಕಾಗಿ ಜೈಲಿಗೆ ಕಳುಹಿಸಲ್ಪಟ್ಟಾಗ ಒಗ್ಲೇಯವರು ಅದರ ಸಂಪಾದಕತ್ವ ವಹಿಸಿದರು.

ಇತ್ತ ನಾಗ್ಪುರದಲ್ಲಿನ ತಮ್ಮ ‘ದೇಶ ಸೇವಕ’ದ ಸಂಪಾದಕ ಕೊಲಾಟ್‌ಕರರು ಮತ್ತೊಂದು ಲೇಖನಕ್ಕಾಗಿ ‘ಚಕ್ರವರ್ತಿಯ ಅತಿಥಿ’ಯಾಗಿ ಕಳುಹಿಸಲ್ಪಟ್ಟಾಗ ಒಗ್ಲೇಯವರು ‘ಕಾಳ್’ ಪತ್ರಿಕೆ ಬಿಟ್ಟು ಪುನಃ ‘ದೇಶ ಸೇವಕ’ತನಕ್ಕೇ ಬಂದರು.

ಆದರೆ ನಿರಂಕುಶ ಸರಕಾರದ ಕೈ ಅವರನ್ನು ಬಿಡಲಿಲ್ಲ. ಒಂದು ಕ್ರಾಂತಿ ಪ್ರಚೋದಕ ಲೇಖನಕ್ಕಾಗಿ ೩ ಸಾವಿರ ರೂಪ್ಯಾ ಜಾಮೀನು ಅವರಿಂದ ಕೇಳಲಾಯಿತು. ಆದರೆ ಓಗ್ಲೇಯವರು ಆ ಕುರಿತು ಕೋರ್ಟಿನಲ್ಲಿ ಸ್ವಂತ ‘ವಕಾಲತು’ ವಹಿಸಿ ಪ್ರತಿವಾದಿಸಿದಾಗ ನ್ಯಾಯಾಧೀಶರು “ಇವರ ಲೇಖನಗಿಂತ ಕೋರ್ಟ್ ಭಾಷಣವು ಹೆಚ್ಚು ಕ್ರಾಂತಿ ಪ್ರಚೋದಕವಾಗಿದೆ” ಎಂದು ಬಿಟ್ಟು ಬಿಟ್ಟರು.

ಓಗ್ಲೇಯವರು ‘ದೇಶಸೇವಕ’ದ ಕಾರ್ಯವನ್ನು ಬಿಡಬೇಕಾಯಿತು. ಮತ್ತೆ ನಾಗ್ಪುರದಿಂದ ಮುಂಬಾಯಿಗೆ ಬಂದ ರಾಷ್ಟ್ರೀಯವಾದಿ ಓಗ್ಲೇಯವರಿಗೆ ‘ರಾಷ್ಟ್ರಮತ’ ಎಂಬ ಪತ್ರಿಕೆಯ ಹೊಣೆಗಾರಿಗೆ ಸಿಕ್ಕಿತು. ಈ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಓಗ್ಲೇಯವರೊಂದಿಗೆ ಸಹಕರಿಸಿದವರಲ್ಲಿ ನಮ್ಮ ಕರ್ನಾಟಕದ ಗಂಗಾಧರರಾವ್ ದೇಶಪಾಂಡೇಯವರೂ ಒಬ್ಬರಿದ್ದರೆಂಬ ಸಂಗತಿಯು ಸಾರಸ್ಯವಾದುದು. ‘ರಾಷ್ಟ್ರಮತ’ಕ್ಕೆ ಓಗ್ಲೇಯವರ ಪ್ರವೇಶವಾದಂದಿನಿಂದ ಬೊಂಬ್ಯಾ ಸರಕಾರದ ಸಂಶಯದ ಕಣ್ಣು ಅವರ ಮೇಲೆ ಬಿತ್ತು. ಆ ಕಾಲದ ಅಲ್ಲಿನ ಸರಕಾರದ ದಬ್ಬಾಳಿಕೆ ಧೋರಣಕ್ಕೆ ‘ರಾಷ್ಟ್ರಮತ’ ಬಲಿಬಿತ್ತೆಂದು ಬೇರೆ ಹೇಳಬೇಕಾಗಿಲ್ಲ.

ಆ ಸಮಯದಲ್ಲಿ ನಾಸೀಕದಲ್ಲಿ ಜೇಕ್ಸನ್ ಎಂಬ ಅಧಿಕಾರಿಯ ಕೊಲೆಯಾಯಿತು. ಲಂಡನಿನಲ್ಲಿದ್ದ ಸಾವರಕರರನ್ನು ಆ ಪಿತೂರಿ ಸಂಬಂಧದಲ್ಲಿ ಹಿಡಿದು ತರಲಾಯಿತು. ಅದೇ ಪಿತೂರಿಯಲ್ಲಿ ಓಗ್ಲೇಯವರ ಕೈವಾಡವೂ ಇದೆಯೆಂಬ ಸಂದೇಹದಲ್ಲಿ ಸಿ. ಐ. ಡಿ.ಗಳು ಮೇಲಿಂದ ಮೇಲೆ ಅವರಿಗೆ ತೊಂದರೆ ಕೊಡತೊಡಗಿದರು. ಅತ್ತ ವೀರ ಸಾವರಕರರು ಮಾರ್ಸೆಲಿಸ್‌ನಲ್ಲಿ ಹಡಗದಿಂದ ಹಾರಿ ತಪ್ಪಿಸಿಕೊಂಡಾಗ ಇತ್ತ ಓಗ್ಲೇಯವರು ಸರಕಾರ ಕಾಟ ತಪ್ಪಿಸಲು ಕೆಲಸಮಯ ಪುನಃ ಉಪಾಧ್ಯಾಯ ವೃತ್ತಿ ವಹಿಸಿಕೊಂಡರು— ಒಂದು ಮರಾಟಿ ಹೈಸ್ಕೂಲಿಗೆ ಅವರು ಸೇರಿದ್ದರು. ಸಂಸ್ಕೃತದಲ್ಲಿ ತುಂಬಾ ಪಾಂಡಿತ್ಯವಿದ್ದ ಓಗ್ಲೇಯವರಿಗೆ ಬೊಂಬಾಯಿಯ ಸೈಂಟ್ ಕ್ಸೇವಿಯರ್ ಕೊಲೇಜಿನಲ್ಲಿ ಪ್ರೊಫೆಸರರಾಗಲು ಆಹ್ವಾನ ಬಂತು. ಆದರೆ ತಮ್ಮ ಉದಾತ್ತ ಪತ್ರಿಕೋದ್ಯಮಕ್ಕೆ ತಿಲಾಂಜಲಿ ಕೊಡಲು ಅವರು ಸಿದ್ಧರಿರಲಿಲ್ಲವಾದುದರಿಂದ ಸದ್ರಿ ಆಮಂತ್ರಣವನ್ನು ತಿರಸ್ಕರಿಸಿದರು.

ಬರ್ಮದ ಮಂಡಾಳೆ ಜೈಲಿನಲ್ಲಿರಿಸಲ್ಪಟ್ಟ ಲೋಕಮಾನ್ಯರು ಮೊಂಟೊಮೊರ್ಲಿ ಸುಧಾರಣೆ ಕಾಲದಲ್ಲಿ ಬಿಡಲ್ಪಟ್ಟಾಗಲೇ ಓಗ್ಲೇಯವರು ತಮ್ಮ “ಮಹಾರಾಷ್ಟ್ರ” ಎಂಬ ಪತ್ರಿಕೆಯನ್ನಾರಂಭಿಸಿದರು. ಎನ್ನಿಬೆಸೆಂಟರ ಹೋಮ್‌ರೂಲ್ ಚಳವಳದಲ್ಲಿ “ಮಹಾರಾಷ್ಟ್ರ”ವು ಅಭಿವೃದ್ಧಿ ಹೊಂದಿತು. ಓಗ್ಲೇಯವರ ಪತ್ರಿಕೆಯು ತಿಲಕರ ಪ್ರಚಾರ ಪತ್ರವೆಂದು ಜನರು ಎನ್ನತೊಡಗಿದರು. ಸರಕಾರವು ಕೂಡಲೇ ಅದಕ್ಕೆ ೨ ಸಾವಿರ ರೂಪ್ಯಾಗೆ ನೋಟಿಸ್ ಕಳುಹಿಸಿದರು. ಪತ್ರಿಕಾ ಪ್ರಾರಂಭದಲ್ಲಿ ಕೇವಲ ನೂರು ರೂಪ್ಯಾಯಷ್ಟು ಭಂಡವಾಳ ಓಗ್ಲೇಯವರ ಬಳಿಯಲ್ಲಿರಲಿಲ್ಲ.

(೭ನೇ ಪುಟಕ್ಕೆ ಮುಂದುವರಿದಿದೆ)

ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್
ಗಂಗೊಳ್ಳಿ, ದ. ಕ.

ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲಿನ I, II, IIIನೇ ಫಾರ್ಮುಗಳು ಇದೇ ಬರುವ ಜೂನ್ ೨೦ನೇ ಗುರುವಾರ ಹೊಸತಾಗಿ ತೆರೆಯಲ್ಪಡುವವು

ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಆ ಬಗ್ಗೆ ಅರ್ಜಿಗಳನ್ನು ಇದೇ ಜೂನ್ ೧ರಿಂದ ಸ್ವೀಕರಿಸಲಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಅವರ ಖರ್ಚಿನಲ್ಲೇ ಮಧ್ಯಾಹ್ನ ಊಟದ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ ಕಾಯಂ ಊಟ, ವಸತಿಗಳ ಬಗ್ಗೆ ಶಾಲಾ ಕಮಿಟಿಯ ಮೇಲ್ವಿಚಾರದಲ್ಲಿ ಯೋಗ್ಯವ್ಯವಸ್ಥೆ ಮಾಡಲಾಗುತ್ತದೆ.

ದಾಖಲಾತಿಯ ಅರ್ಜಿಫಾರ್ಮುಗಳಿಗೆ ಮತ್ತು ವಿಶೇಷ ಮಾಹಿತಿಗೆ;—

ಮೆನೇಜರ್,
ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್,
ಗಂಗೊಳ್ಳಿ, ದ. ಕ.

The Canara Banking Corporation, Ltd.

(Incorporated in British Inbia)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

It is proposed to start a College of Commerce, entitled

The Karnatak College of Commerce, MANGALORE

The College will commence work from the 25th June 1945. Admissions to the different Courses of study, fitting students to hold responsible officers' positions in the Commercial field, such as those of Cert. A. I. I. B. or Cert. A. I. B, A. A. I. A, A. C. C. S etc., will begin from the 18th June 1945 onwards.

Among the lecturers will be the following gentlemen who

1. Sri Karkal Sadashiva Rao, B. A., M. L.
2. Rao Saheb P. R. Ranganatha Punja, B. A., B. L.
3. Sri M. Madhava Rao, B. A., B. L.
4. Sri B. Vaikunta Baliga, B. A., B. L.
5. Mr. C. N. V. Pais, B. A., B. L.
6. Sri B. Keshava Baliga, M. A. (Hons.) L. T.,
7. Sri A. Umanath Rao. B. A., G. D. A., Dip. Econ., R. A.,
8. Sri A. Dayananda Rao, M. A. (Hons)., B. L.
9. Sri A. Venkappaya B. A. L. T.
10. Sri D. R. Murdeshwar Dip. Econ., F. R. Econ., S. (Lond.)—Registrar.
11. Sri B. M. Baliga, B. A., B. L.
12. Sri. K. Gopal Rao, B. A., B. L.

College Hours will be from 8-15 to 9 A. M. and 6. P. M. to 8-15 P. M.

The Registrar will be in attendance in the Office Room of the college every morning and evening during College Hours except on Sundays and Public holidays to register Admissions.

For further particulars as well as a copy of Prospectus apply to:—

The Registrar,
The Karnataka College of Commerce,
Mangalore, S. Kanara.

‘ಮಹಾರಾಷ್ಟ್ರ’ದ ಪತ್ರಿಗೋದ್ಯಮ ‘ಶಿವಾಜಿ’

(೬ನೇ ಪುಟದಿಂದ)

ಇಂತಹ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲೂ ಓಗ್ಲೇಯವರು ತಮ್ಮ ಸ್ವಂತ ಪತ್ರಿಕೆಯನ್ನು ಧೈರ್ಯದಿಂದ ಮುಂದರಿಸಿದರು. ಅನೇಕ ಶ್ರೀಮಂತರು ಅವರಿಗೆ ಸಹಾಯ ಹಸ್ತವನ್ನು ನೀಡಿದ್ದರೂ ಅವರು ಸಾರ್ವಜನಿಕ ಸಮಸ್ಯೆಗಳಲ್ಲಿ ತಮ್ಮ ನಿರ್ಭೀತ ಅಭಿಪ್ರಾಯಗಳನ್ನು ಪಕ್ಷಪಾತವಿಲ್ಲದೆ ಬರೆಯಲು ಹಿಂಜರಿಯಲಿಲ್ಲ. ತಿಲಕರ ‘ಕೇಸರಿ’ ಪತ್ರಿಕೆಯ ಅಭಿಪ್ರಾಯಗಳೂ ಓಗ್ಲೇಯವರ ‘ಮಹಾರಾಷ್ಟ್ರ’ದ ಅಭಿಪ್ರಾಯಗಳೂ ಹೆಚ್ಚು ಕಡಿಮೆ ಒಂದೇಯಾಗಿರುತಿದ್ದವು. ಆದರೂ ಕೆಲವೊಂದು ಪ್ರಾಮುಖ್ಯ ಪ್ರಶ್ನೆಗಳ ವಿಚಾರದಲ್ಲಿ ಅವರೊಳಗೆ ಭೇದಾಭಿಪ್ರಾಯಗಳು ಇದ್ದೆ ಇದ್ದವು.

೧೯೪೦ರಲ್ಲಿ ‘ಮಹಾರಾಷ್ಟ್ರ’ದ ರಜತೋತ್ಸವವೂ, ಓಗ್ಲೇಯವರ ಷಷ್ಟ್ಯಾಬ್ಧಿ ಪೂರ್ತಿ ಸಮಾರಂಭವೂ ಒಂದೇ ಸಮಯಕ್ಕೆ ಕೂಡಿ ಬಂದವು. ಆಗ ಅವರು ತಮ್ಮ ಜೀವನದ ಇತಿಹಾಸದ ವಿಶೇಷ ಸಂಚಿಕೆ ಹೊರಡಿಸಲು ಒಪ್ಪಲಿಲ್ಲ. ಅದಕ್ಕೆ ಕಾರಣಗಳನ್ನು ಅವರೇ ಈರೀತಿ ಹೇಳಿರುವರು: “ಬರೀ ಆರುವತ್ತು ವರ್ಷಗಳ ತನಕ ಬದುಕಿದ್ದೇನೆಂಬ ಮಾತ್ರಕ್ಕೆ ನಾನೊಬ್ಬ ಪ್ರಶಂಹಾರ್ಹ ವ್ಯಕ್ತಿಯಾಗಿಲ್ಲ. ಅಂತಹ ಮನ್ನಣೆಗೆ ಯೋಗ್ಯನೆನಿಸಬೇಕಾದ ನಿಸ್ವಾರ್ಥಸೇವೆಯನ್ನು ನಾನು ಮಾಡಿಲ್ಲ. ಆ ಗೌರವಕ್ಕೆ ತಕ್ಕದಾದ ವ್ಯಕ್ತಿಗಳು ಸಿಗುವುದೇ ಅತಿ ವಿರಳ.” ಇವು ನಿಜವಾಗಿಯೂ ವಿಚಾರಣೀಯ ಗಾಂಭೀರ್ಯದ ಮಾತುಗಳು.

ಇಂದವರ ‘ಮಹಾರಾಷ್ಟ್ರ’ ಪತ್ರಿಕಾ ಸಂಸ್ಥೆಯು ಲಕ್ಷಾಂತರ ಮೌಲ್ಯದ್ದಾಗಿದೆ. ಇದಲ್ಲದೆ ಅವರ ಒಂದು ಗಾಜಿನ ಕಾರ್ಖಾನೆಯೂ, ಬೆಂಕಿಪೆಟ್ಟಿಗೆ ಫೆಕ್ಟರಿಯೂ, ಮತ್ತೊಂದು ಹ್ಯಾಸ್ಕೂಲೂ ಇದೆ. ಓಗ್ಲೇಯವರು ಕೊಂಕಣಸ್ಥ ಚಿತ್ಪಾವನ ಬ್ರಾಹ್ಮಣರಾಗಿದ್ದರೂ ಸಮಾಜ ಸುಧಾರಣೆಯ ಆದರ್ಶ ಕಲ್ಪಿಸಿದ್ದಾರೆ. ತಮ್ಮ ಹೆಣ್ಣು ಮಕ್ಕಳಿಗೆ ಇವರ ಬ್ರಾಹ್ಮಣ ಉಪವರ್ಗದವರಿಗೆ ಕೊಟ್ಟು ವಿವಾಹವನ್ನು ಮಾಡಿರುವರು. ಈ ಪತ್ರಿಕೋದ್ಯೋಮಿಗಳ ಸಾಹಸ ಜೀವನವು ಅಮೋಘ ಜೀವನ ಸಂಗ್ರಾಮದ್ದು!

ಪ್ರತಿಯೊಂದ್ರು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ — ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited.

ನೂರನೆ ರಿಚ್ ಕೊನೆಗೊಂಡಿತು

ಜರ್ಮನಿಯು ನಾಲ್ಕು ಭಾಗವಾಗಿ ಮಿತ್ರರ ಅಂಕಿತದೊಳಗೆ ತರಲಾಗುವುದು

ಸೋತು ಶರಣು ಬಂದ ಜರ್ಮನಿಯ ಆಡಳಿತವನ್ನು ನಡೆಯಿಸುವರೆ, (ಜರ್ಮನಿಯು ಯೋಗ್ಯ ಸ್ಥಿತಿಗೆ ಬರುವ ತನಕ) ಸಂ. ರಾಷ್ಟ್ರಗಳೊಳಗೆ ಒಡಂಬಡಿಕೆಯ ಒಪ್ಪಂದವಾಗಿರುವುದು. ಜರ್ಮನಿಯನ್ನು ನಾಲ್ಕು ಭಾಗಗಳುವಿಭಾಗಿಸಿ, ಅವುಗಳನ್ನು ಕ್ರಮಪ್ರಕಾರ ರಶ್ಯಾ, ಬ್ರಿಟನ್, ಅಮೆರಿಕನ್, ಫ್ರೆಂಚ್, ಬಲಗಳ ಅಂಕಿತಕ್ಕೆ ಬಿಟ್ಟುಕೊಡಲಾಗುವುದೆಂದು ನಿರ್ಣಯವಾಗಿದೆ. ಸಂ. ರಾಷ್ಟ್ರಗಳ ಪರವಾಗಿ ಈ ವಿಭಾಗಗಳ ರಾಜ್ಯಾಡಳಿತಕ್ಕಾಗಿ, ಉತ್ತಮ ಅನುಭವಗಳಿಂದ ಕೂಡಿದ ವ್ಯವಸ್ಥೆಯು ಮಾಡಲಾಗಿದೆ. ಜರ್ಮನಿಯು ನಾಜೀ ಪ್ರಭಾವದಿಂದ ಹೊರಗಾಗಲು ಬಹಳ ದೀರ್ಘ ಸಮಯ ಬೇಕಾಗುವುದೆಂದು ಲೆಕ್ಕಹಾಕಲ್ಪಟ್ಟುದರಿಂದ, ಅದನ್ನು ೨೦ ವರ್ಷಗಳ ಸಮಯವಾದರೂ ಸಂ. ರಾಷ್ಟ್ರಗಳ ಅಂಕಿತದೊಳಗಿಟ್ಟು, ಅದು ಉತ್ತಮ ದಾರಿಯಲ್ಲಿ ಪರಿವರ್ತಿಸಲ್ಪಡುವಂತೆ ಹವಣಿಸಲಾಗುವುದೆಂದು ತಿಳಿದು ಬರುತ್ತದೆ.

ಮಿತ್ರರ ಮೇಲಿನ ವ್ಯವಸ್ಥೆಯಿಂದ ನಾಜೀ ಅಧಿಕಾರದಡಿಯಲ್ಲಿ ಬಹಳ ವಿಸ್ತರಿಸಿಕೊಂಡ ಜರ್ಮನ್ ಪ್ರದೇಶವು ೧೯೩೭ರ ಗಡಿಗಳಿಗೆ ತಂದು ನಿಲ್ಲಿಸಲಾಗಿದೆ. ಆಸ್ಟ್ರಿಯಾ ಮತ್ತು ಜೆಕೊಸ್ಲೊವೆಕಿಯಾದ ಸುಡಾಟೆನ್‌ಲೆಂಡು ಜರ್ಮನಿಯಿಂದ ಬೇರ್ಪಡಿಸಲಾಗಿದೆ.

ಜರ್ಮನಿಯು ತೆರ ಬೇಕಾಗಿರುವ ಯುದ್ಧ ನಷ್ಟವನ್ನು ಲೆಕ್ಕ ಹಾಕುವರೆ ಒಂದು ಶಿಷ್ಟಮಂಡಳವು ರಚನೆಯಾಗಿದ್ದು, ಇದರ ಮುಖ್ಯ ಕಾರ್ಯಾಲಯ ಮಸ್ಕೊದಲ್ಲಿ ವ್ಯವಸ್ಥೆಪಡಿಸಲಾಗಿದೆ. ಈ ಶಿಷ್ಟ ಮಂಡಳವು ಬೇಗನೆ ತನ್ನ ಕಾರ್ಯಕಲಾಪಗಳನ್ನು ಪ್ರಾರಂಭಿಸಲಿದೆ.

ಜರ್ಮನಿ ಸರ್ವ ಸೇನಾ ಬಲ, ವಿಮಾನ ಬಲ, ನೌಕಾ ಬಲ, ಇತ್ಯಾದಿಗಳನ್ನು ಸಂಪೂರ್ಣ ತಟಸ್ಥಗೊಳಿಸಲಾಗಿವೆ. ಅದರಲ್ಲೂ ನಾಜೀಗಳ ಮುಖ್ಯ ಆಧಾರವಾಗಿದ್ದ, ಎಸ್ ಎಸ್ ದಳಗಳನ್ನು ನಿಶಸ್ತ್ರಗೊಳಿಸಿದುದು ಮಾತ್ರವಲ್ಲ, ಮೇಲೆ ಅತಿ ಕಡು ತರದ ಅವುಗಳ ಕಾವಲಿನ ವ್ಯವಸ್ಥೆಯು ಮಾಡಲಾಗಿದೆ.

ರಷ್ಯಾ-ಜಪಾನ್ ತಿಕ್ಕಾಟ

ದೂರ ಪೂರ್ವದ ಯುದ್ಧದಲ್ಲಿ ತಮಗೆ ವಿರೋಧವಾಗಿ ರಷ್ಯದ ಪ್ರವೇಶವಾಗದಂತೆ ಜಪಾನಿಯರು ಅತ್ಯಂತ ಶ್ರಮಪಡುತ್ತಿರುವರು. ರಷ್ಯಾವನ್ನು ಸಮಾಧಾನ ಪಡಿಸಲು ಕೆಲವು ಪ್ರದೇಶಗಳನ್ನು ರಷ್ಯಕ್ಕೆ ಬಿಟ್ಟು ಬಿಡಲು ಅವರು ಸಿದ್ಧರಿರುವರಂತೆ. ಒಂದು ವೇಳೆ ಸಾಮೋಪಾಯದಿಂದ ರಷ್ಯವನ್ನು ಒಲಿಸಲು ಸಾಧ್ಯವಾಗದ ಸಂಭವದಲ್ಲಿ ಮೆಂಚ್ಯೂರಿಯಾದಿಂದ ಕೆಂಪು ಬಲದ ಮೇಲೆ ಮೇಲೇರಲು ಜಪಾನಿಯರು ಸರ್ವ ಸಿದ್ಧತೆಗಳನ್ನು ಮಾಡಿರುವರಾಗಿಯೂ, ತಮ್ಮ ಬಲವನ್ನು ವೃದ್ಧಿಪಡಿಸಿರುವರಾಗಿಯೂ ತಿಳಿದು ಬಂದಿದೆ. ಅಂದರೆ ರಷ್ಯವೂ ಜಪಾನಿ ಮೇಲೆ ಕೈಮಾಡದೆಯಿದ್ದರೂ, ಜಪಾನೆ ರಷ್ಯದ ಮೇಲೆ ಬೀಳುವ ಸಂಭವಗಳುಂಟಾಗಬಹುದು.

In the court of the District Judge of South Kanara

O. P. No. 65/1945

In the matter of the guardianship of minor Sayyad Abdulla Hadi

Hawabi alias Mathubi:-Petitioner

To all whom it may concern:

Please take notice that the above petition has been filed for the appointment of the guardian of the person and property of the minor, and the same stands posted to 19-6-1915 at 11 O'clock. Any person interested may appear and oppose the said petition on the said date.

M. Venkatraya Kamath.
Advocate for Petitioner
Mangalore, 11-6-1945.

Canara Bank Limited.

Applications are invited for clerical posts in the Bank. Minimum qualification necessary S.S.L.C. Selected candidates will have to undergo training for about 3 months during which period they will not be given any salary or remuneration. But they will be as far as possible allowed to work in any of the Bank's offices of their choice during the period of training.

Applications with testimonials will be received UPTO 20-6-1945.

Apply to:

CANARA BANK LTD.,
LIGHT HOUSE HILL, Mangalore.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. — **The Joint Booking Office,** KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/3 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{4}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ.

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್‌ನ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 22—6—1945 [ಸಂಚಿಕೆ 14]

ಹಿಂದೂದೇಶಕ್ಕೆ ಹೊಸತ್ತೊಂದು ಯೋಜನೆ ★ ಇದೇ ತಾ. ೨೫ರಲ್ಲಿ ಸಿಮ್ಲಾದಲ್ಲಿ ಮುಖಂಡರ ಪರಿಷತ್ತು ★ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಬಿಡುಗಡೆ ★

ವೈಸ್ರಾಯ ವೇವೆಲ್ಲರು ಬ್ರಿಟಿಷ್ ಸರಕಾರದ ಸಮ್ಮತವಿರುವ, ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲೋಸುಗ ಸಿದ್ಧವಾದ ಯೋಜನೆಯನ್ನು ಮೊನೆ ಗುರುವಾರ ಡಿಲ್ಲಿಯಿಂದ ಆಕಾಶವಾಣಿಯ ಮೂಲಕ ಸಾರಿದರು.

ವೈಸ್ರಾಯರ ಕಾರ್ಯಕಾರಿ ಮಂಡಳದಲ್ಲಿ ಹಿಂದೂ ಮುಸ್ಲಿಮರಿಗೆ ಸಮಾನವಾದ ಹಾಗು ಇತರರಿಗೆ ಯೋಗ್ಯವಾದ ಪ್ರಾತಿನಿಧ್ಯದೊರೆಯುವಂತೆ ಧುರೀಣರನ್ನು ಸೇರಿಸಿಕೊಳ್ಳಲಾಗುವುದು. ಯುದ್ಧ ಮತ್ತು ಗಡಿನಾಡಿನ ಪ್ರಶ್ನೆ ಖಾತೆಗಳನ್ನು ಬಿಟ್ಟು ಇತರ ಎಲ್ಲಾ ಖಾತೆಗಳು, ಅಂದರೆ ವಿದೇಶ, ಮತ್ತು ಆರ್ಥಿಕ ಖಾತೆಗಳನ್ನು ಕೂಡ ಹಿಂದೀಯರಿಗೆ ಕೊಡಲಾಗುವುದು.

ಈ ಯೋಜನೆಯ ಸಂಭಂದ ಸಿಮ್ಲಾ ರಾಜದಲ್ಲಿ ಮುಖಂಡರ ಪರಿಷತ್ತು ಜರಗಲಿದೆ ಅದಕ್ಕಿಂತ ಮೊದಲೇ ಈ ಕುರಿತು ಪರ್ಯಾಲೋಚಿಸಲು ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯರ ಬಿಡುಗಡೆಯಾಗಿರುವುದು. ಗಾಂಧೀಜಿಯರ ಸೂಚನೆ ಮೇರೆಗೆ ಕಾಂಗ್ರೆಸ್ ಅಧ್ಯಕ್ಷ ಅಜಾದರೂ ಸಿಮ್ಲಾದ ಪರಿಷತ್ತಿಗೆ ಅಹ್ವಾನಿಸಲ್ಪಟ್ಟಿರುವರು.

ಇಪ್ಪತ್ತಮೂರು ಕಲಮುಗಳಿಂದ ಕೂಡಿದ ಹೊಸ ಯೋಜನೆಯು ದೇಶದ ಮುಂದಿರಸಲ್ಪಟ್ಟಿದೆ. ಕಾರ್ಯರೂಪಕ್ಕೆ ಬಂದಾಗ ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಸಂಪೂರ್ಣ ಹಿಂದೀಮಯವಾಗಿ ಮಾಡಲ್ಪಟ್ಟ ಮತ್ತು ಜಪಾನ್ ಯುದ್ಧವನ್ನುಜಯಶೀಲ ಅಂತ್ಯಕ್ಕೊಯ್ಯುವ ಧ್ಯೇಯಗಳುಳ್ಳ ಮಂತ್ರಿ ಮಂಡಳಗಳನ್ನು ನಾವು ಕಾಣಬಹುದು.

ಈ ಯೋಜನೆಯುನ್ನು ವಿಮರ್ಶೆಯನ್ನು ದೇಶದಲ್ಲಿನ ರಾಜಕೀಯ ಮತ್ತಿತರ ಪಕ್ಷಗಳ ಬಲಾಬಲಗಳ ಮತ್ತು ಧ್ಯೇಯ ಧೋರಣೆಗಳೊಂದಿಗೆ ತುಲನೆ ಮಾಡುವುದವಶ್ಯ. ಕಾರಣ ಇವುಗಳ ಮೇಲೆ ಹೊಸ ಯೋಜನೆಯ ಸೋಲು ಗೆಲುಗಳು ಅವಲಂಭಿಸಿವೆಂದು ಹೇಳಬಹುದು.

ಕೊಂಗ್ರೇಸು ರಾಷ್ಟ್ರೀಯ ಧ್ಯೇಯ ಧೋರಣೆಯ ಸಂಸ್ಥೆಯಾಗಿದ್ದು ಇಡೀ ದೇಶದ ಜನತೆಯ ಪರವಾಗಿ ನಿಂತಿರುವ ಸಂಸ್ಥೆ. ಆದರೂ ಹೆಚ್ಚು ಮಂದಿ ಮುಸಲ್ಮಾನರನ್ನು ಆಕರ್ಷಿಸಿಲ್ಲವೆಂಬ ವಿಷಯವನ್ನು ಒಪ್ಪಲೇ ಬೇಕು. ರಾಷ್ಟ್ರೀಯ ವಾದಿಗಳಾದರೂ ಅದರ ಮುಖಂಡರು ಹೆಚ್ಚಾಗಿ ಹಿಂದುಗಳೇ ಆಗಿರುವರು. ಇಷ್ಟಾದರೂ ಅದು ಹಿಂದೂ ಮಹಾ ಸಭೆಯಂತೆ ಜಾತೀಯ ಇಲ್ಲವೇ ಕೋಮುವಾರು ಸಂಸ್ಥೆಯಲ್ಲ, ಆದುದರಿಂದ ಎಲ್ಲಾ ಪ್ರಾಂತ್ಯಗಳಲ್ಲೂ ಅದು ಪ್ರಭಾವ ಶಾಲಿ ಪಕ್ಷವಾಗಿ ಉಳಿದಿದೆ. ಬಹು ಸಂಖ್ಯಾತ ಹಿಂದುಗಳಿರುವ ಏಳು ಪ್ರಾಂತ್ಯಗಳಲ್ಲೂ ಹಿಂದುಗಳು ಅಲ್ಪ ಸಂಖ್ಯಾತರಾಗಿರುವ ಗಡಿನಾಡಿನಲ್ಲೂ ಅದಕ್ಕೆ ಬಹು ಸಂಖ್ಯಾತ ಬೆಂಬಲವಿರುವುದು. ಆ ಸಂಸ್ಥೆಯ ಜನಪ್ರಿಯತೆಯ ಒಂದು ನಿದರ್ಶನ. ಅಸ್ಸಾಮ ಸಿಂಧ್ ಮತ್ತು ಬಂಗಾಳಗಳಲ್ಲಿ ಅದು ದೊಡ್ಡ ಒಂದು ಪಕ್ಷವಾಗಿದೆ.

ಮುಸ್ಲಿಂ ಲೀಗ್ ಇಡೀ ದೇಶದ ಮುಸಲ್ಮಾನರ ಪರವಾಗಿ ಪ್ರಾತಿನಿಧ್ಯ ವಹಿಸಲಿಚ್ಛಿಸುವ ಜಾತೀಯ ಸಂಸ್ಥೆ. ಇದರ ರಾಜಕಾರಣದಲ್ಲಿ ದೇಶ ಹಿತಕ್ಕಿಂತಲೂ ಮತೀಯ ಹಿತಕ್ಕೇ ಹೆಚ್ಚು ಪ್ರಾಧಾನ್ಯ. ಆದರೆ ಇದಕ್ಕೆ ಬಹು ಸಂಖ್ಯಾತ ಮುಸಲ್ಮಾನರಿರುವ ಪ್ರಾಂತ್ಯಗಳೊಂದರಲ್ಲೂ ನಿರ್ದಿಷ್ಟವೂ ಮತ್ತು ಹೃತ್ಪೂರ್ವಕವೂ ಆದ ಬೆಂಬಲವಿಲ್ಲ. ಉದಾಹರಣೆಗಾಗಿ ಪಂಜಾಬ್ ಮತ್ತು ಗಡಿನಾಡು ಪ್ರಾಂತ್ಯಗಳನ್ನು ತೆಗೆದುಕೊಳ್ಳಬಹುದು. ಅಲ್ಲಿ ಇನ್ನೂ ಕೆಲವು ವರ್ಷದ ಮಟ್ಟಿಗಾದರೂ ಲೀಗು ತಲೆ ಎತ್ತಲಾರದೆಂದು ತೋರುತ್ತದೆ. ಬಂಗಾಲದಲ್ಲಿ ಯುರೋಪಿಯನ್ ಪಕ್ಷದ ಬೆಂಬಲವಿಲ್ಲದಿದ್ದರೆ ಲೀಗು ಮುಂದೆ ಬರುತ್ತಲೇ ಇರಲಿಲ್ಲ.

ಹಿಂದೂ ಮಹಾಸಭೆಯ ಧ್ಯೇಯ "ಹಿಂದೂಸ್ಥಾನ ಹಿಂದುಗಳದ್ದು" ಎಂಬ ಘೋಷಣೆಯೇ ಮೂಲ ಮಂತ್ರವಾಗಿರುವಂತಹುದು. ಇಂದಿನ ಭಾರತದಲ್ಲಿನ ಬಹು ಸಂಖ್ಯಾತ ಹಿಂದೂಗಳು ರಾಷ್ಟ್ರೀಯವಾದಿಗಳು ಕಳೆದ ಚುನಾವಣೆಗಳಲ್ಲೂ ಮಹಾಸಭೆಗೆ ದೊರಕಿದ ವೋಟುಗಳು ಅತೀ ಕಡಿಮೆ. ಆದುದರಿಂದ ಇದಕ್ಕೆ ಇಂದು ಪ್ರತ್ಯೇಕ ಪ್ರಾತಿನಿಧ್ಯ ಬೇಕಾಗಿಲ್ಲವೆಂದು ಬ್ರಿಟಿಷರು ಅಭಿಪ್ರಾಯ ಪಟ್ಟಿರುವಂತೆ ತೋರುತ್ತದೆ.

ಹೊಸ ಘೋಷಣೆಯಲ್ಲಿ ವ್ಯಾಸರಾಯರ ವಿಶೇಷಾಧಿಕಾರಿಗಳು ಇದ್ದ ಹಾಗೇ ಇವೆ. ಆದರೆ ಅವರು ಅದನ್ನು ಸತ್ಸಂದರ್ಭಗಳಲ್ಲೇ ಉಪಯೋಗಿಸುವರೆಂದು ಭರವಸೆ ಕೊಡಲಾಗಿದೆ. ಇದರಿಂದ ಯಾವ ಪ್ರಾಂತ್ಯದ ಅಲ್ಪ ಸಂಖ್ಯಾಕರು ತಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಗಲುವುದೆಂದು ಹೆದರ ಬೇಕಾದಿಲ್ಲ.

ಹಿಂದೂಗಳಲ್ಲಿ ಸವರ್ಣ ಮತ್ತು ಅಸ್ಪರ್ಶರೆಂದು ವಿಂಗಡಿಸಿದ್ದು ಮಹಾತ್ಮರಿಂದ ಆಕ್ಷೇಪಿಸಲ್ಪಟ್ಟಿದೆ. ಹಿಂದೆ ರೌಂಡ್ ಟೇಬಲ್ ಪರಿಷತ್ತಿನಲ್ಲೂ ಇದೇ ತರಹದ ಭೇದ ಕಲ್ಪಿಸಿದಂತೆ ಅವರೂ ಈಗಲೂ ಸಂದೇಹಕ್ಕೊಳಗಾಗಿದ್ದಾರೆ. ಹಿಂದೂಗಳೆಂದರೆಲ್ಲರೂ ಒಂದೇ ಎಂಬುದಾಗಿ ಪರಿಗಣಿಸಬೇಕೆಂದು ಅವರ ಆಶಯ.

ಇನ್ನು ಸಿಕ್, ಕ್ರೈಸ್ತ ಪಾರ್ಸಿ ಮತ್ತಿತರ ಬಹು ಅಲ್ಪ ಸಂಖ್ಯಾಕರ ಒಬ್ಬೊಬ್ಬ ಪ್ರತಿನಿಧಿಗಳನ್ನೂ ವ್ಯಾಸ್‌ರಾಯರ ಸಲಹೆ ಮಂಡಳಿಯಲ್ಲಿ ತೆಗೆದು ಕೊಳ್ಳಬಹುದೆಂದು ಸೂಚಿಸಲಾಗಿದೆ.

ಒಟ್ಟಿನಲ್ಲಿ ೧೫ ಮಂತ್ರಿಗಳಲ್ಲಿ ಸವರ್ಣ ಹಿಂದೂ, ೫ ಮುಸ್ಲಿಂ, ೧ ಹಿಂದುಳಿದ ವರ್ಗ ಮತ್ತೊಂದು ಇತರರಿಗೆ ಅಲ್ಪ ಸಂಖ್ಯಾತವರ್ಗಗಳಿಂದೆ ಆರಿಸಲ್ಪಟ ಮಂತ್ರಿಗಳು. ಹೀಗೆ ಸಂಪೂರ್ಣ ಹಿಂದೀಕರಣ ಮಾಡಲ್ಪಟ್ಟ ಮಂಡಳಿಯಲ್ಲಿ ವ್ಯಾಸರಾಯರೂ, ಭಾರತ ಸೇನಾಪತಿಗಳೂ ಯುದ್ಧ ಖಾತೆಯ ನಿರ್ವಾಹವನ್ನುನೋಡಿಕೊಳ್ಳುವರು.

ಒಂದು ಮಹತ್ವದ ಶಾಸನವನ್ನು ಜಾರಿಗೆ ತರಬೇಕಾದ ಸಂದರ್ಭದಲ್ಲಿ ಆ ಶಾಸನವು ರಾಷ್ಟ್ರ ಒಳಿತಿಗೆಂದಾದರೆ ಮತ್ತು ಅದು ಮುಸಲ್ಮಾನ ಪ್ರತಿನಿಧಿಗಳಿಗೆ ವಿರೋಧವೆಂದು ಕಂಡುಬಂದರೂ ಹಿಂದೂಗಳ ಕಡೆಗೆ ಇತರರು ಸೇರಿಕೊಂಡರೆ ಅವರಿಗೆ ದಳಿತ ವರ್ಗದ ಮತ್ತು ಇತರ ಅಲ್ಪ ಸಂಖ್ಯಾತ ಪ್ರತಿನಿಧಿಗಳ ವೋಟು ಸಿಗಬಹುದು.

ಹೀಗೆ ಯಾರಿಗೆ ಯಾರೂ ಅಹಿತವವಾಗುವಂತಹ ಧೋರಣೆಯನ್ನು ಅನುಸರಿಸುವಂತಿಲ್ಲ. ಸದ್ಯದ ತುರುತಿನ ಸಮಸ್ಯೆಗಳನ್ನು—ಅಂದರೆ ಲಂಚಖೋರತನ ಅಧಿಕಾರವರ್ಗದ ದಬ್ಬಾಳಿಕೆ, ನಾಗರೀಕ ಸರಬರಾಯಿ ವ್ಯವಸ್ಥೆ—ಬಗೆಹರಿಸಲೋಸುಗವಾಗಿ ಈ ಸಮ್ಮಿಶ್ರ ಮಂತ್ರಿ ಮಂಡಳವು ಒಮ್ಮತದಿಂದ ಕೆಲಸ ಮಾಡಬಹುದು.

“ಯಾವುದಕ್ಕೂ ವರ್ಕಿಂಗ್ ಕಮಿಟಿಯ ಸದಸ್ಯರ ಬಿಡುಗಡೆಯಾದರೆ ಅವರನ್ನು ನಾನು ಹೇಗಾದರೂ ಪರಿವರ್ತಿಸಿಕೊಳ್ಳಲು ಸಾಧ್ಯವಿದ್ದಷ್ಟು ನನ್ನ ಪ್ರಭಾವವನ್ನುಪಯೋಗಿಸುತಿದ್ದೆ” ಎಂದು ಮಹಾತ್ಮರು ಮೇಲಿಂದ ಮೇಲೆ ನಿರಾಶಾ ಸೂಚಕ ಉದ್ಗಾರ ತೆಗೆಯುತಿದ್ದರು. ಈಗಂತೂ ವರ್ಕಿಂಗ್ ಕಮಿಟಿ ಮುಖಂಡರೂ ಬಿಡುಗಡೆ ಹೊಂದಿರುವರು. ವ್ಯಾಸರಾಯರು ಹತ್ತುವಾರ ದೀರ್ಘಾಲೋಚನೆಯ ಹೊಸ ಯೋಜನೆ ಪ್ರಕಟವಾಗಿದೆ.

ಯುದ್ಧದಲ್ಲಿ ಸಹಕರಿಸಲಿಕ್ಕೆ ಅಹಿಂಸಾತ್ಮಕ ಮಹಾತ್ಮರಿಗೆ ಅಸಾಧ್ಯದ ಕೆಲಸವೇ ಸರಿ. ಅಂದ ಮೇಲೆ ಅವರು ಹೇಗೆ ಕೊಂಗ್ರೆಸಿಗೆ ಸಲಹೆ ಕೊಡುವರು? ವ್ಯಾಸರಾಯರ ವಿಶೇಷಾಧಿಕಾರವಂತೂ ದಾರಿಯಲ್ಲಿನ ಮುಳ್ಳಿನಂತೆ ತೋರ ಬಹುದು. ಮಾತ್ರವಲ್ಲ ಯಾವ ಜನರನ್ನು ಹಿಂದೂಗಳಿಂದ ಪ್ರತ್ಯೇಕಿಸಬಾರದೆಂದು ಮಹಾತ್ಮರು ಹಿಂದೆ ಪ್ರಾಣಾಂತಿಕ ಉಪವಾಸ ಮಾಡಿದರೆ ಅದೇ ಸಮಸ್ಯೆ ಈಗಿನ ಹೊಸ ಘೋಷಣೆಯಲ್ಲಿ ಸವರ್ಣ ಮತ್ತು ಅಶ್ವರ್ಗವೆಂಬ ಭೇದಾಭೇದದಿಂದ ಒತ್ತಿ ಹೇಳಲ್ಪಟ್ಟಿದೆ.

ಪಂಡಿತ್ ನೆಹರುಗಳ ಅತೀ ಪ್ರಿಯವಾದ ಆರ್ಥಿಕ ಮತ್ತು ಅಂತರಾಷ್ಟ್ರೀಯ ಸೌಹಾರ್ದಕ್ಕೆ ಈ ಯೋಜನೆಯಿಂದ ಎಷ್ಟರಮಟ್ಟಿನ ಅನುಕೂಲತೆಯಿದೆ ಎಂಬ ವಿಷಯವು ಇನ್ನೂ ತಿಳಿದಿಲ್ಲ. ಆದರೂ ಹಿಂದಿನ ಲೋಪ ದೋಶಗಳಿಂದ ಮನಸ್ಸನ್ನು ಉದ್ರೇಕಗೊಳಿಸದೆ ಅವರು ಈಗಿನ ಪರಿಸ್ಥಿತಿಯನ್ನು ಯೋಚಿಸುವರಾಗಿ ಭರವಸೆ ಇತ್ತಿದ್ದಾರೆ.

ಅಂತೂ ಜಿನ್ನರ ಪಾಕಿಸ್ಥಾನದ ಪ್ರಶ್ನೆಯೂ, ಕೊಂಗ್ರೆಸಿನ ಪ್ರಜಾಪ್ರಭುತ್ವದ ವಿಚಾರವೂ, ಮತ್ತಿತರರ ಹೊಣೆಗಾರಿಕೆಯ ರಾಷ್ಟ್ರೀಯ ಸರಕಾರದ ಬಯಕೆಯೂ ಒಂದೂ ಇಲ್ಲದಂತಹ ಈ ಹೊಸ ಯೋಜನೆಯಲ್ಲಿ ಕೆಲವರು ಆಶೆಯನ್ನೂ, ಬೇರೆ ಕೆಲವರು ನಿರುತ್ಸಾಹವನ್ನು ಕಂಡಿರುವರು. ಮತ್ತೆ ಕೆಲವರು ‘ಇದು ಟೋರಿಗಳ ಚುನಾವಣೆ ತಂತ್ರವಿದು’ ಎಂದು ಟೀಕಿಸಿರುವರು. ಹಾಗಾದರೆ ಇಂಗ್ಲೆಂಡಿನಲ್ಲಿ ಚುನಾ

(೬ನೇ ಪುಟಕ್ಕೆ ಮುಂದುವರಿದಿದೆ)

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳಕಡ್ಡಿಮುದ್ದು

AMRUTANJAN DEPOTS MADRAS CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2¼ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ.

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 22—6—1945 [ಸಂಚಿಕೆ 14]

ಹಿಂದೂದೇಶಕ್ಕೆ ಹೊಸತ್ತೊಂದು ಯೋಜನೆ ★ ಇದೇ ತಾ. ೨೫ರಲ್ಲಿ ಸಿಮ್ಲಾದಲ್ಲಿ ಮುಖಂಡರ ಪರಿಷತ್ತು ★ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಬಿಡುಗಡೆ ★

ವೈಸ್ರಾಯ ವೇವೆಲ್ಲರು ಬ್ರಿಟಿಷ್ ಸರಕಾರದ ಸಮ್ಮತವಿರುವ, ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲೋಸುಗ ಸಿದ್ಧವಾದ ಯೋಜನೆಯನ್ನು ಮೊನ್ನೆ ಗುರುವಾರ ಡಿಲ್ಲಿಯಿಂದ ಆಕಾಶವಾಣಿಯ ಮೂಲಕ ಸಾರಿದರು.

ವೈಸ್ರಾಯರ ಕಾರ್ಯಕಾರಿ ಮಂಡಳದಲ್ಲಿ ಹಿಂದೂ ಮುಸ್ಲಿಮರಿಗೆ ಸಮಾನವಾದ ಹಾಗು ಇತರರಿಗೆ ಯೋಗ್ಯವಾದ ಪ್ರಾತಿನಿಧ್ಯದೊರೆಯುವಂತೆ ಧುರೀಣರನ್ನು ಸೇರಿಸಿಕೊಳ್ಳಲಾಗುವುದು. ಯುದ್ಧ ಮತ್ತು ಗಡಿನಾಡಿನ ಪ್ರಶ್ನೆ ಖಾತೆಗಳನ್ನು ಬಿಟ್ಟು ಇತರ ಎಲ್ಲಾ ಖಾತೆಗಳು, ಅಂದರೆ ವಿದೇಶ, ಮತ್ತು ಆರ್ಥಿಕ ಖಾತೆಗಳನ್ನು ಕೂಡ ಹಿಂದೀಯರಿಗೆ ಕೊಡಲಾಗುವುದು.

ಈ ಯೋಜನೆಯ ಸಂಬಂಧ ಸಿಮ್ಲಾ ರಾಜದಲ್ಲಿ ಮುಖಂಡರ ಪರಿಷತ್ತು ಜರಗಲಿದೆ ಅದಕ್ಕಿಂತ ಮೊದಲೇ ಈ ಕುರಿತು ಪರ್ಯಾಲೋಚಿಸಲು ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯರ ಬಿಡುಗಡೆಯಾಗಿರುವುದು. ಗಾಂಧೀಜಿಯರ ಸೂಚನೆ ಮೇರೆಗೆ ಕಾಂಗ್ರೆಸ್ ಅಧ್ಯಕ್ಷ ಅಜಾದರೂ ಸಿಮ್ಲಾದ ಪರಿಷತ್ತಿಗೆ ಆಹ್ವಾನಿಸಲ್ಪಟ್ಟಿರುವರು.

ಇಪ್ಪತ್ತಮೂರು ಕಲಮುಗಳಿಂದ ಕೂಡಿದ ಹೊಸ ಯೋಜನೆಯು ದೇಶದ ಮುಂದಿರಿಸಲ್ಪಟ್ಟಿದೆ. ಕಾರ್ಯರೂಪಕ್ಕೆ ಬಂದಾಗ ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಸಂಪೂರ್ಣ ಹಿಂದೀಮಯವಾಗಿ ಮಾಡಲ್ಪಟ್ಟ ಮತ್ತು ಜಪಾನ್ ಯುದ್ಧವನ್ನುಜಯಶೀಲ ಅಂತ್ಯಕ್ಕೊಯ್ಯುವ ಧ್ಯೇಯಗಳುಳ್ಳ ಮಂತ್ರಿ ಮಂಡಳಗಳನ್ನು ನಾವು ಕಾಣಬಹುದು.

ಈ ಯೋಜನೆಯನ್ನು ವಿಮರ್ಶೆಯನ್ನು ದೇಶದಲ್ಲಿನ ರಾಜಕೀಯ ಮತ್ತಿತರ ಪಕ್ಷಗಳ ಬಲಾಬಲಗಳ ಮತ್ತು ಧ್ಯೇಯ ಧೋರಣೆಗಳೊಂದಿಗೆ ತುಲನೆ ಮಾಡುವುದವಶ್ಯ. ಕಾರಣ ಇವುಗಳ ಮೇಲೆ ಹೊಸ ಯೋಜನೆಯ ಸೋಲು ಗೇಲುಗಳು ಅವಲಂಭಿಸಿವೆಂದು ಹೇಳಬಹುದು.

ಕೊಂಗ್ರೇಸು ರಾಷ್ಟ್ರೀಯ ಧ್ಯೇಯ ಧೋರಣೆಯ ಸಂಸ್ಥೆಯಾಗಿದ್ದು ಇಡೀ ದೇಶದ ಜನತೆಯ ಪರವಾಗಿ ನಿಂತಿರುವ ಸಂಸ್ಥೆ. ಆದರೂ ಹೆಚ್ಚು ಮಂದಿ ಮುಸಲ್ಮಾನರನ್ನು ಆಕರ್ಷಿಸಿಲ್ಲವೆಂಬ ವಿಷಯವನ್ನು ಒಪ್ಪಲೇ ಬೇಕು. ರಾಷ್ಟ್ರೀಯ ವಾದಿಗಳಾದರೂ ಅದರ ಮುಖಂಡರು ಹೆಚ್ಚಾಗಿ ಹಿಂದುಗಳೇ ಆಗಿರುವರು. ಇಷ್ಟಾದರೂ ಅದು ಹಿಂದೂ ಮಹಾ ಸಭೆಯಂತೆ ಜಾತೀಯ ಇಲ್ಲವೇ ಕೋಮುವಾರು ಸಂಸ್ಥೆಯಲ್ಲ. ಆದುದರಿಂದ ಎಲ್ಲಾ ಪ್ರಾಂತ್ಯಗಳಲ್ಲೂ ಅದು ಪ್ರಭಾವ ಶಾಲಿ ಪಕ್ಷವಾಗಿ ಉಳಿದಿದೆ. ಬಹು ಸಂಖ್ಯಾತ ಹಿಂದುಗಳಿರುವ ಏಳು ಪ್ರಾಂತ್ಯಗಳಲ್ಲೂ ಹಿಂದುಗಳು ಅಲ್ಪ ಸಂಖ್ಯಾತರಾಗಿರುವ ಗಡಿನಾಡಿನಲ್ಲೂ ಅದಕ್ಕೆ ಬಹು ಸಂಖ್ಯಾತ ಬೆಂಬಲವಿರುವುದು. ಆ ಸಂಸ್ಥೆಯ ಜನಪ್ರಿಯತೆಯ ಒಂದು ನಿದರ್ಶನ. ಅಸ್ಸಾಮ ಸಿಂಧ್ ಮತ್ತು ಬಂಗಾಳಗಳಲ್ಲಿ ಅದು ದೊಡ್ಡ ಒಂದು ಪಕ್ಷವಾಗಿದೆ.

ಮುಸ್ಲಿಂ ಲೀಗ್ ಇಡೀ ದೇಶದ ಮುಸಲ್ಮಾನರ ಪರವಾಗಿ ಪ್ರಾತಿನಿಧ್ಯ ವಹಿಸಲಿಚ್ಛಿಸುವ ಜಾತೀಯ ಸಂಸ್ಥೆ. ಇದರ ರಾಜಕಾರಣದಲ್ಲಿ ದೇಶ ಹಿತಕ್ಕಿಂತಲೂ ಮತೀಯ ಹಿತಕ್ಕೇ ಹೆಚ್ಚು ಪ್ರಾಧಾನ್ಯ. ಆದರೆ ಇದಕ್ಕೆ ಬಹು ಸಂಖ್ಯಾತ ಮುಸಲ್ಮಾನರಿರುವ ಪ್ರಾಂತ್ಯಗಳೊಂದರಲ್ಲೂ ನಿರ್ಧಿಷ್ಟವೂ ಮತ್ತು ಹೃತ್ಪೂರ್ವಕವೂ ಆದ ಬೆಂಬಲವಿಲ್ಲ. ಉದಾಹರಣೆಗಾಗಿ ಪಂಜಾಬ್ ಮತ್ತು ಗಡಿನಾಡು ಪ್ರಾಂತ್ಯಗಳನ್ನು ತೆಗೆದುಕೊಳ್ಳಬಹುದು. ಅಲ್ಲಿ ಇನ್ನೂ ಕೆಲವು ವರ್ಷದ ಮಟ್ಟಿಗಾದರೂ ಲೀಗು ತಲೆ ಎತ್ತಲಾರದೆಂದು ತೋರುತ್ತದೆ. ಬಂಗಾಲದಲ್ಲಿ ಯುರೋಪಿಯನ್ ಪಕ್ಷದ ಬೆಂಬಲವಿಲ್ಲದಿದ್ದರೆ ಲೀಗು ಮುಂದೆ ಬರುತ್ತಲೇ ಇರಲಿಲ್ಲ.

ಹಿಂದೂ ಮಹಾಸಭೆಯ ಧ್ಯೇಯ "ಹಿಂದೂಸ್ಥಾನ ಹಿಂದುಗಳದ್ದು" ಎಂಬ ಘೋಷಣೆಯೇ ಮೂಲ ಮಂತ್ರವಾಗಿರುವಂತಹುದು. ಇಂದಿನ ಭಾರತದಲ್ಲಿನ ಬಹು ಸಂಖ್ಯಾತ ಹಿಂದೂಗಳು ರಾಷ್ಟ್ರೀಯ ವಾದಿಗಳು ಕಳೆದ ಚುನಾವಣೆಗಳಲ್ಲೂ ಮಹಾಸಭೆಗೆ ದೊರಕಿದ ವೋಟುಗಳು ಅತೀ ಕಡಿಮೆ. ಆದುದರಿಂದ ಇದಕ್ಕೆ ಇಂದು ಪ್ರತ್ಯೇಕ ಪ್ರಾತಿನಿಧ್ಯ ಬೇಕಾಗಿಲ್ಲವೆಂದು ಬ್ರಿಟಿಷರು ಅಭಿಪ್ರಾಯ ಪಟ್ಟಿರುವಂತೆ ತೋರುತ್ತದೆ.

ಹೊಸ ಘೋಷಣೆಯಲ್ಲಿ ವ್ಯಾಸರಾಯರ ವಿಶೇಷಾಧಿಕಾರಿಗಳು ಇದ್ದ ಹಾಗೇ ಇವೆ. ಆದರೆ ಅವರು ಅದನ್ನು ಸತ್ಸಂದರ್ಭಗಳಲ್ಲೇ ಉಪಯೋಗಿಸುವರೆಂದು ಭರವಸೆ ಕೊಡಲಾಗಿದೆ. ಇದರಿಂದ ಯಾವ ಪ್ರಾಂತ್ಯದ ಅಲ್ಪ ಸಂಖ್ಯಾಕರು ತಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಗಲುವುದೆಂದು ಹೆದರ ಬೇಕಾದಿಲ್ಲ.

ಹಿಂದೂಗಳಲ್ಲಿ ಸವರ್ಣ ಮತ್ತು ಅಸ್ಪರ್ಶರೆಂದು ವಿಂಗಡಿಸಿದ್ದು ಮಹಾತ್ಮರಿಂದ ಆಕ್ಷೇಪಿಸಲ್ಪಟ್ಟಿದೆ. ಹಿಂದೆ ರೌಂಡ್ ಟೇಬಲ್ ಪರಿಷತ್ತಿನಲ್ಲೂ ಇದೇ ತರಹದ ಭೇದ ಕಲ್ಪಿಸಿದಂತೆ ಅವರೂ ಈಗಲೂ ಸಂದೇಹಕ್ಕೊಳಗಾಗಿದ್ದಾರೆ. ಹಿಂದೂಗಳೆಂದರೆಲ್ಲರೂ ಒಂದೇ ಎಂಬುದಾಗಿ ಪರಿಗಣಿಸಬೇಕೆಂದು ಅವರ ಆಶಯ.

ಇನ್ನು ಸಿಕ್, ಕ್ರೈಸ್ತ ಪಾರ್ಸಿ ಮತ್ತಿತರ ಬಹು ಅಲ್ಪ ಸಂಖ್ಯಾಕರ ಒಬೊಬ್ಬ ಪ್ರತಿನಿಧಿಗಳನ್ನೂ ವ್ಯಾಸ್‌ರಾಯರ ಸಲಹೆ ಮಂಡಳಿಯಲ್ಲಿ ತೆಗೆದು ಕೊಳ್ಳಬಹುದೆಂದು ಸೂಚಿಸಲಾಗಿದೆ.

ಒಟ್ಟಿನಲ್ಲಿ ೧೫ ಮಂತ್ರಿಗಳಲ್ಲಿ ಸವರ್ಣ ಹಿಂದೂ, ೫ ಮುಸ್ಲಿಂ, ೧ ಹಿಂದುಳಿದ ವರ್ಗ ಮತ್ತೊಂದು ಇತರರಿಗೆ ಅಲ್ಪ ಸಂಖ್ಯಾತವರ್ಗಗಳಿಂದ ಆರಿಸಲ್ಪಟ ಮಂತ್ರಿಗಳು. ಹೀಗೆ ಸಂಪೂರ್ಣ ಹಿಂದೀಕರಣ ಮಾಡಲ್ಪಟ್ಟ ಮಂಡಳಿಯಲ್ಲಿ ವ್ಯಾಸರಾಯರೂ, ಭಾರತ ಸೇನಾಪತಿಗಳೂ ಯುದ್ಧ ಖಾತೆಯ ನಿರ್ವಾಹವನ್ನು ನೋಡಿಕೊಳ್ಳುವರು.

ಒಂದು ಮಹತ್ವದ ಶಾಸನವನ್ನು ಜಾರಿಗೆ ತರಬೇಕಾದ ಸಂದರ್ಭದಲ್ಲಿ ಆ ಶಾಸನವು ರಾಷ್ಟ್ರ ಒಳಿತಿಗೆಂದಾದರೆ ಮತ್ತು ಅದು ಮುಸಲ್ಮಾನ ಪ್ರತಿನಿಧಿಗಳಿಗೆ ವಿರೋಧವೆಂದು ಕಂಡುಬಂದರೂ ಹಿಂದೂಗಳ ಕಡೆಗೆ ಇತರರು ಸೇರಿಕೊಂಡರೆ ಅವರಿಗೆ ದಳಿತ ವರ್ಗದ ಮತ್ತು ಇತರ ಅಲ್ಪ ಸಂಖ್ಯಾತ ಪ್ರತಿನಿಧಿಗಳ ವೋಟು ಸಿಗಬಹುದು.

ಹೀಗೆ ಯಾರಿಗೆ ಯಾರೂ ಅಹಿತವವಾಗುವಂತಹ ಧೋರಣೆಯನ್ನು ಅನುಸರಿಸುವಂತಿಲ್ಲ. ಸದ್ಯದ ತುರುತಿನ ಸಮಸ್ಯೆಗಳನ್ನು—ಅಂದರೆ ಲಂಚಖೋರತನ ಅಧಿಕಾರವರ್ಗದ ದಬ್ಬಾಳಿಕೆ, ನಾಗರೀಕ ಸರಬರಾಯಿ ವ್ಯವಸ್ಥೆ—ಬಗೆಹರಿಸಲೋಸುಗವಾಗಿ ಈ ಸಮ್ಮಿಶ್ರ ಮಂತ್ರಿ ಮಂಡಳವು ಒಮ್ಮತದಿಂದ ಕೆಲಸ ಮಾಡಬಹುದು.

"ಯಾವುದಕ್ಕೂ ವರ್ಕಿಂಗ್ ಕಮಿಟಿಯ ಸದಸ್ಯರ ಬಿಡುಗಡೆಯಾದರೆ ಅವರನ್ನು ನಾನು ಹೇಗಾದರೂ ಪರಿವರ್ತಿಸಿಕೊಳ್ಳಲು ಸಾಧ್ಯವಿದ್ದಷ್ಟು ನನ್ನ ಪ್ರಭಾವವನ್ನುಪಯೋಗಿಸುತಿದ್ದೆ" ಎಂದು ಮಹಾತ್ಮರು ಮೇಲಿಂದ ಮೇಲೆ ನಿರಾಶಾ ಸೂಚಕ ಉದ್ಗಾರ ತೆಗೆಯುತಿದ್ದರು. ಈಗಂತೂ ವರ್ಕಿಂಗ್ ಕಮಿಟಿ ಮುಖಂಡರೂ ಬಿಡುಗಡೆ ಹೊಂದಿರುವರು. ವ್ಯಾಸರಾಯರು ಹತ್ತುವಾರ ದೀರ್ಘಾಲೋಚನೆಯ ಹೊಸ ಯೋಜನೆ ಪ್ರಕಟವಾಗಿದೆ.

ಯುದ್ಧದಲ್ಲಿ ಸಹಕರಿಸಲಿಕ್ಕೆ ಅಹಿಂಸಾತ್ಮಕ ಮಹಾತ್ಮರಿಗೆ ಅಸಾಧ್ಯದ ಕೆಲಸವೇ ಸರಿ. ಅಂದ ಮೇಲೆ ಅವರು ಹೇಗೆ ಕೊಂಗ್ರೆಸಿಗೆ ಸಲಹೆ ಕೊಡುವರು? ವ್ಯಾಸರಾಯರ ವಿಶೇಷಾಧಿಕಾರವಂತೂ ದಾರಿಯಲ್ಲಿನ ಮುಳ್ಳಿನಂತೆ ತೋರ ಬಹುದು. ಮಾತ್ರವಲ್ಲ ಯಾವ ಜನರನ್ನು ಹಿಂದೂಗಳಿಂದ ಪ್ರತ್ಯೇಕಿಸಬಾರದೆಂದು ಮಹಾತ್ಮರು ಹಿಂದೆ ಪ್ರಾಣಾಂತಿಕ ಉಪವಾಸ ಮಾಡಿದರೆ ಅದೇ ಸಮಸ್ಯೆ ಈಗಿನ ಹೊಸ ಘೋಷಣೆಯಲ್ಲಿ ಸವರ್ಣ ಮತ್ತು ಅಸ್ವರ್ಗವೆಂಬ ಭೇದಾಭೇದದಿಂದ ಒತ್ತಿ ಹೇಳಲ್ಪಟ್ಟಿದೆ.

ಪಂಡಿತ್ ನೆಹರುಗಳ ಅತೀ ಪ್ರಿಯವಾದ ಆರ್ಥಿಕ ಮತ್ತು ಅಂತರಾಷ್ಟ್ರೀಯ ಸೌಹಾರ್ದಕ್ಕೆ ಈ ಯೋಜನೆಯಿಂದ ಎಷ್ಟರಮಟ್ಟಿನ ಅನುಕೂಲತೆಯಿದೆ ಎಂಬ ವಿಷಯವು ಇನ್ನೂ ತಿಳಿದಿಲ್ಲ. ಆದರೂ ಹಿಂದಿನ ಲೋಪ ದೋಶಗಳಿಂದ ಮನಸ್ಸನ್ನು ಉದ್ರೇಕಗೊಳಿಸದೆ ಅವರು ಈಗಿನ ಪರಿಸ್ಥಿತಿಯನ್ನು ಯೋಚಿಸುವರಾಗಿ ಭರವಸೆ ಇತ್ತಿದ್ದಾರೆ.

ಅಂತೂ ಜಿನ್ನರ ಪಾಕಿಸ್ಥಾನದ ಪ್ರಶ್ನೆಯೂ, ಕೊಂಗ್ರೆಸಿನ ಪ್ರಜಾಪ್ರಭುತ್ವದ ವಿಚಾರವೂ, ಮತ್ತಿತರರ ಹೊಣೆಗಾರಿಕೆಯ ರಾಷ್ಟ್ರೀಯ ಸರಕಾರದ ಬಯಕೆಯೂ ಒಂದೂ ಇಲ್ಲದಂತಹ ಈ ಹೊಸ ಯೋಜನೆಯಲ್ಲಿ ಕೆಲವರು ಆಶೆಯನ್ನೂ, ಬೇರೆ ಕೆಲವರು ನಿರುತ್ಸಾಹವನ್ನು ಕಂಡಿರುವರು. ಮತ್ತೆ ಕೆಲವರು 'ಇದು ಟೋರಿಗಳ ಚುನಾವಣೆ ತಂತ್ರವಿದು' ಎಂದು ಟೀಕಿಸಿರುವರು. ಹಾಗಾದರೆ ಇಂಗ್ಲೆಂಡಿನಲ್ಲಿ ಚುನಾ

(೬ನೇ ಪುಟಕ್ಕೆ ಮುಂದುವರಿದಿದೆ)

ರಂಗೂನಿಗೆ ಭಾರತೀ ಎಂಜನಿಯರುಗಳ ಸರಬರಾಜು

ನೌಕಾ ಶಾಲೆಯ ಎಂಜನಿಯರುಗಳು ತೆರವಿಲ್ಲದೆ ದುಡಿದು ನಿಷ್ಕಂಟಕವಾದ ಕಾನ್‌ವಾಯ್‌ಗಳು ಬೇಗಬೇಗನೆ ಬರುವಂತೆ ಏರ್ಪಡಿಸಿದ್ದಾರೆ; ಮತ್ತು ನಗರದ ಪುನರ್ನಿರ್ಮಾಣ ಕಾರ್ಯದಲ್ಲಿಯೂ ಅವರೈ ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ಒಂದು ಕಡೆಯವರು ರಾತ್ರಿಯಲ್ಲಿ ಪ್ರಯಾಣ ಮಾಡಿ ಮಾರನೆಯ ಬೆಳಗ್ಗೆ ೧೭೧ ಸೈನ್ಯದ ಗಾಡಿ ಮತ್ತು ಫಿರಂಗಿಗಳನ್ನು ರಂಗೂನಿಗೆ ಸಾಗಿಸಿದ್ದಾರೆ. ೩೩ ಟನ್ ಭಾರವುಳ್ಳ ಟ್ಯಾಂಕುಗಳನ್ನು ಜಹಜಿನಿಂದ ಇಳಿಸಿದ್ದಾರೆ. ಒಂದೇ ದಿನ ೫೦೦ ಟನ್ ಪೆಟ್ರೋಲನ್ನು ಹುಷರಾಗಿ ಜಹಜಿನಿಂದ ಇಳಿಸಿಕೊಂಡಿದ್ದಾರೆ. ಇವರಲ್ಲಿ ಹಲವರಿಗೆ ಸೈನ್ಯಕ್ಕೆ ಸೇರುವುದಕ್ಕೆ ಮುಂಚೆ ಜಹಜೆಂದರೇನು, ಸಮುದ್ರವೆಂದರೇನು ಎಂಬುದು ಗೊತ್ತಿರಲಿಲ್ಲ. ಆದರೆ ಈಗ ಇವರು ನೌಕಾಕಾರ್ಯದಲ್ಲಿ ಪ್ರವೀಣರಾಗಿದ್ದಾರೆ. ಎಂದು ನೌಕಾ ಪ್ರವೀಣರೊಬ್ಬರು ಪ್ರಶಂಸೆ ಮಾಡಿದ್ದಾರೆ.

ಇಂದು ಜಹಜಿನ ಸಾಮಾನುಗಳನ್ನು ಎತ್ತಿಡುವುದು ಮುಂತಾದುವು ಭಾರತೀಯ ಬದೂದಾರರ ಕೈಯಲ್ಲಿದೆ. ಅವರು ಆಶೀರ್ವಾದಗಳಲ್ಲಿ ಶಿಕ್ಷಣ ಪಡೆದು ಈ ಕೆಲಸಗಸಿಲ್ಲವನ್ನೂ ತೂಗಿಸುತಿದ್ದಾರೆ.

ಆರ್. ಎ. ಎಫ್. ವಿಮಾನಗಳ ಅದ್ಭುತ ಶಕ್ತಿ.

ಆರ್. ಎ. ಎಫ್. ವಿಮಾನವೊಂದು ಮಧ್ಯೆ ಕೈರೋದಲ್ಲಿ ಎಣ್ಣೆ ಶೇಖರಿಸಿಕೊಳ್ಳಲು ೪೦ ನಿಮಿಷಕಾಲ ನಿಂತೂ, ಇಂಗ್ಲೆಂಡಿನಿಂದ ಇಂಡಿಯಾಕ್ಕೆ ೧೨ ಗಂಟೆ ೨೫ ನಿಮಿಷಗಳಲ್ಲಿ ಬಂದು ತಲಪಿತು. ಗಂಟೆಗೆ ೪೦೦ ಮೈಲು ಪ್ರಕಾರ ಒಟ್ಟು ೪,೬೦೦ ಮೈಲು ದೂರ ಹಾರಿ ಕರಾಚಿಗೆ ಮಧ್ಯಾಹ್ನ ೩-೩೯ಕ್ಕೆ ಬಂದು ಸೇರಿತು.

ಯುದ್ಧಾನಂತರದ ಭಾರತೀಯ ವೈಮಾನಿಕ ಪಡೆ

ಕನಿಷ್ಟಪಕ್ಷ ೧೦ ತಂಡಗಳಾದರೂ ಇರಬೇಕು

ಯುದ್ಧಾನಂತರದ ಭಾರತೀಯ ವೈಮಾನಿಕ ಪಡೆ ಎಷ್ಟಿರ ಬೇಕೆಂಬ ಅಂಶವನ್ನು ಮೊದಲೇ ತಿಳಿಯ ಪಡಿಸಿದರೆ ಈ ಪಡೆಯಲ್ಲಿ ಈಗಿರುವ ಅಧಿಕಾರಿಗಳಿಗೆ ತಮ್ಮ ಸ್ಥಾನ ಭದ್ರತೆ ಗೊತ್ತಾಗುವುದಲ್ಲದೆ ಈ ನಾಡಿನ ಯುವಕರಿಗೆ ಎಂಥ ಭವಿಷ್ಯವಿದೆಯೆಂಬುದು ವಿದಿತವಾಗಿ ಅವರು ಈ ಪಡೆಗೆ ಹೆಚ್ಚು ಹೆಚ್ಚಾಗಿ ಸೇರಲು ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಇಂಡಿಯಾ ಸರ್ಕಾರಕ್ಕೆ ಅರಿಕೆ ಮಾಡಲಾಗಿದೆ. ಸರ್ಕಾರದವರು ಈ ಅಂಶವನ್ನು ಚೆನ್ನಾಗಿ ಪರ್ಯಾಲೋಚಿಸಿ, ಈ ಬಗ್ಗೆ ಪ್ರಕಟನೆಯೊಂದನ್ನು ಹೊರಡಿಸಲು ನಿಶ್ಚಯಿಸಿದ್ದಾರೆ.

ಯುದ್ಧಕ್ಕೆ ಮುಂಚೆ ಆರ್. ಐ. ಎ. ಎಫ್. ಪಡೆಯಲ್ಲಿ ಒಂದೇ ದಳವಿತ್ತು; ಈ ಯುದ್ಧ ಕಾಲದಲ್ಲಿ ಈ ಪಡೆ ಬೆಳೆಯುತ್ತ ಬಂತು. ಜಪಾನಿನೊಡನೆ ಯುದ್ಧ ಮುಗಿದ ಮೇಲೆ ಭಾರತೀ ವೈಮಾನಿಕ ಪಡೆಯಲ್ಲಿ ಕನಿಷ್ಠ ಪಕ್ಷ ೧೦ ತಂಡಗಳಾದರೂ ಇರತಕ್ಕದ್ದು; ಪಡೆ ಸ್ವಸಂಪೂರ್ಣವಾಗಿದ್ದು, ಎಲ್ಲ ಶಾಖೆಗಳ ಖಾಯಂ ಅಧಿಕಾರಿಗಳ ಏಳಿಗೆಗೆ ಅವಕಾಶವಿರುವಂತೆ ಏರ್ಪಡಿಸಲು, ಇದರ ಜೊತೆಗೆ ಶಿಕ್ಷಣ ಕೊಡುವ ಮತ್ತು ಇತರ ಉಪ ಶಾಖೆಗಳನ್ನೂ ಸೇರಿಸ ತಕ್ಕದ್ದು ಎಂದು—ಇಂಡಿಯಾ ಸರ್ಕಾರವು ಪ್ರಕಟಿಸಿದೆ. ಅಲ್ಲದೆ, ಈ ಪಡೆಯ ಪ್ರಮಾಣ ಇಷ್ಟೇ ಇರುವುದಿಲ್ಲ, ಪರಿಸ್ಥಿತಿ ಅನುಕೂಲಿಸಿದಂತೆಲ್ಲ ಜನ ಸಿಕ್ಕಿದಂತೆಲ್ಲ ಇದು ದೊಡ್ಡದಾಗಿ ಬಳೆಯುತ್ತದೆಂದು ಸರ್ಕಾರವು ಒತ್ತಿ ಹೇಳುತ್ತಿದೆ. ಇನ್ನು ಮುಂದೆ ಆರ್. ಐ. ಎ. ಎಫ್. ಪಡೆಗೆ ಸೇರಲು ಅರ್ಹರಾದ ಭಾರತೀಯ ಯುವಕರು ಬಹು ಸಂಖ್ಯೆಯಲ್ಲಿ ಮುಂದೆ ಬರುತ್ತಾರೆಂದು ನಂಬಲಾಗಿದೆ.

ಈ ಸಂದರ್ಭದಲ್ಲಿ, ರಾಯಲ್ ಇಂಡಿಯನ್ ಏರ್ ಫೋರ್ಸಿಗೆ ಜನರನ್ನು ಸೇರಿಸಲು ನೆರವಾಗ ಬೇಕೆಂದು ನಾಡಿನ ವಿದ್ಯಾಲಯಗಳಿಗೆ, ಭಾರತೀಯ ಯುವಕರಿಗೆ, ಮತ್ತು ಮಹಾ ಜನಕ್ಕೆ ಇಂಡಿಯಾ ಸರ್ಕಾರವು ಬಿನ್ನೈಸಿ ಕೊಳ್ಳುತ್ತದೆ; ಮತ್ತು ಸಾರ್ವಜನಿಕ ಸಹಕಾರದಿಂದ ಬೇಕಾಗಿರುವಷ್ಟು ಮಂದಿ ಭಾರತೀಯ ಯುವಕರು ಈ ಪಡೆಗೆ ಸೇರಲು ದೊರೆಯುತ್ತಾರೆಂದೂ ನಂಬಲಾಗಿದೆ.

ಚರ್ಚಿಲ್ಲರಿಗೆ ವಿರೋಧ

ಈ ಮೊದಲು ಮೂರಿ ಭಾರಿ ಹುರಿಯಾಳಾಗಿ ನಿಂತು ಸೋತ, ಮೊನ್ನೆ ಕಾರಾಗೃಹದಿಂದ ಹೊರಬಿದ್ದ ಡಗ್ಲಾಸ್ ಹೋಮ್ ರೆಂಬವರು, ಚರ್ಚಿಲ್ಲರಿಗೆ ವಿರೋಧವಾಗಿ ವುಡ್‌ಪರ್ಡ್ ವಿಭಾಗಕ್ಕೆ ಹುರಿಯಾಳಾಗಿ ನಿಲ್ಲುವರೆಂದು ತಿಳಿದು ಬಂದಿದೆ. ಇದರಿಂದ ಚರ್ಚಿಲ್ಲರು ಹೆಚ್ಚು ಹೆದರುವ ಅವಶ್ಯವಿಲ್ಲದಿದ್ದರೂ, ಚರ್ಚಿಲ್ಲರನ್ನು ರಾಜಕೀಯ ರಂಗದಿಂದಲೆ ಓಡಿಸಿಬಿಡುವ ಉದ್ದೇಶದಿಂದ ತಾನು ಹುರಿಯಾಳಾಗಿ ನಿಂತಿರುವನೆಂದು ಹೋಮರ ಹೇಳಿಕೆ ಹೊರಡಿರುವುದು.

"ಸ್ಪೇಯಿನಿನಲ್ಲಿ ಜನರಲ್ ಪ್ರೆಂಕೊನನ್ನು ಮಿತ್ರರು ಸಹಿಸಿಕೊಂಡು ಬರಲು ಕಾರಣ ಯಾವುದೆಂದುಗೊತ್ತೆ. ಜನರಲ್ ಪ್ರೆಂಕೊನು ಹಿಟ್ಲರ ಮಿತ್ರನಾಗಿದ್ದನು. ಆತನನ್ನು ಅಲ್ಲಿಂದ ಓಡಿಸಿದ್ದರೆ ಜರ್ಮನ್ ದಂಡುಗಳು ಖಂಡಿತವಾಗಿಯೂ ಸ್ಪೇಯಿನನ್ನು ಪ್ರವೇಶಿಸುತಿದ್ದರು. ಆದುದರಿಂದ ಜರ್ಮನ್ ಬಲವು ಸ್ಪೇಯಿನಿನಲ್ಲಿ ನುಗ್ಗದಂತೆಯೂ, ಸ್ಪೆಯಿನು ಅಕ್ಷ ರಾಷ್ಟ್ರಗಳ ಪರವಾಗಿ ಯುದ್ಧರಂಗವನ್ನು ಪ್ರವೇಶಿಸದಂತೆ ಮಾಡುವುದೆ ಮಿತ್ರರ ಸ್ಪೇಯಿನಿನ ಪ್ರೆಂಕೊನ ಕುರಿತು ಧೋರಣವಾಗಿತ್ತು. ಈಗ ಪ್ರೆಂಕೊನನ್ನೂ ಓಡಿಸುವ, ಯಾ ಆತನನ್ನು ಅಧಿಕಾರದಲ್ಲೆ ಬಿಡುವ ವಿಷಯ ಸ್ಪೇಯಿನಿನ ಪ್ರಜಾವರ್ಗದ ಮೇಲೆ ಹೊಂದಿಕೊಂಡಿದೆ." ಹೀಗೆಂದು ಅಮೆರಿಕನ್ ಬರೆಹಗಾರರೊಬ್ಬರ ಅಭಿಪ್ರಾಯವು.

ದಕ್ಷಿಣ ಅಮೇರಿಕಾವನ್ನು ಸಂ: ಅಮೆರಿಕಾಕ್ಕೆ ವಿರುದ್ಧವಾಗಿ ಉಪಯೋಗಿಸಿಕೊಳ್ಳುವ ಹಂಚಿಕೆಯು ಅಕ್ಷರಾಷ್ಟ್ರಗಳಾಗಿತ್ತು. ಜಪಾನು ಅದರ ಪಶ್ಚಿಮ ಕರಾವಳಿಯಲ್ಲಿಳಿಯುವಾಗ ಜರ್ಮನರು ಮತ್ತು ಇಟಲಿಯನರು ಅದರ ಪೂರ್ವ ಕರಾವಳಿಯಲ್ಲಿಳಿಯಬೇಕಾಗಿ ಗೊತ್ತಾಗಿತ್ತು. ಆದರೆ ಸಂ: ಅಮೇರಿಕಾವು ದಕ್ಷಿಣ ಅಮೇರಿಕಾದ ಲೆಟಿನ್ ಪ್ರಾಂತ್ಯಗಳನ್ನು ತನ್ನ ಕಡೆಗೆ ಸೆಳೆದುಕೊಂಡು ಅಲ್ಲಿ ತನಗೆ ಬೇಕಾದ ಕೆಲವು ತಳಗಳನ್ನು ಒದಗಿಸಿಕೊಂಡುದರಿಂದ ಅಕ್ಷರಾಷ್ಟ್ರಗಳ ಯತ್ನಗಳು ನೀರಿನಲ್ಲಿ ಹೋಮದಂತಾದುವು.

ಬಂಗಾರದ ಸಂಗ್ರಹವನ್ನು ಮುಳುಗಿಸಿ ಬಿಡಲು ಅಪ್ಪಣೆಕೊಟ್ಟ ತಪ್ಪಿನ ಮೇಲೆ, ವಿಚೀ ನಾಯಕ ಪಿಟೇನರ ವಿಚಾರಣೆಯಾಗಲಿದೆ.

ನ್ಯೂಯೋರ್ಕಿನಲ್ಲಿ ಕಳೆದ ೧೯೪೨ರಲ್ಲಿ ಕೃತಕ ರೀತಿಯಲ್ಲಿ ೧ ಲಕ್ಷ ಕರುಗಳನ್ನು ತಯಾರಿಸಲಾಯಿತಂತೆ.

ಮೊತ್ತ ಮೊದಲು ಅಂಚೆ ಕಾರ್ಡನ್ನು ತಯಾರಿಸಿದ ಕೀರ್ತಿಯು ಆಸ್ಟ್ರಿಯಾದ ಡಾ। ಹರ್ಮನ್ ಎಂಬವರಿಗೆ ಸಲ್ಲತಕ್ಕದ್ದು. ಈಗ ಇಡೀ ಜಗತ್ತಿನಲ್ಲಿ, ವರ್ಷವೊಂದಕ್ಕೆ ೬೦ ಕೋಟಿಗೂ ಮಿಕ್ಕಿದ ಅಂಚೆ ಕಾರ್ಡುಗಳು ಉಪಯೋಗಿಸಲ್ಪಡುತ್ತವೆ.

ಸೋವಿಯಟ್ ರಶ್ಯದಲ್ಲಿ ೫೯ ವಿವಿಧ ಜನಾಂಗಗಳಿವೆ. ಅಲ್ಲಿ ಒಟ್ಟಿಗೆ ೧೧೪ ಭಾಷೆಗಳಿವೆ. ನಮ್ಮ ಹಿಂದೂದೇಶದ ಬೇರೆ ಬೇರೆ ಭಾಷೆಗಳ ಲೆಕ್ಕ ನೋಡಿದರೆ ೨೦೦ಕ್ಕಿಂತಲೂ ಹೆಚ್ಚಿವೆ. ಸ್ವಂತ ಲಿಪಿಯಿಲ್ಲದ ಭಾಷೆಗಳನ್ನು ಕೂಡಿಸಿದರೆ ೩೦೦ ಆಗುತ್ತವೆಯೋ ಏನೊ!

ಒಬ್ಬ ವ್ಯಕ್ತಿಯ ಎದೆ ಬಡಿತ ನಿಂತಾಗ ಅವನು ಸಾಯುವನಷ್ಟೆ! ಆದರೆ ವ್ಯಕ್ತಿಯು ಸತ್ತ ಕೆಲವು ಕಾಲದ ವರೇಗೆ ಅವನ ವಿವಿಧ ಅಂಗಗಳಲ್ಲಿ ಜೀವ ಉಳಿದಿರುತ್ತದೆ. ಉದಾ: ಮಿದುಳಿನಲ್ಲಿ ೧೦ ನಿಮಿಷ, ಹೃದಯದ ಸ್ನಾಯುಗಳಲ್ಲಿ ೨೦ ನಿಮಿಷ; ಕಣ್ಣಿನಲ್ಲಿ ೩೦ ನಿಮಿಷ; ಕಿವಿಗಳಲ್ಲಿ ೧ ತಾಸು ತೋಳಿನ ಹಾಗೂ ಕಾಲಿನ ಸ್ನಾಯುಗಳಲ್ಲಿ ೪ ತಾಸು; ರಕ್ತಕಣಗಳಲ್ಲಿ ೧೮ ತಾಸು; ಎಲುಬಿನಲ್ಲಿ ೩ ದಿನ; ಚರ್ಮದಲ್ಲಿ ೫ ದಿನ;—ಈ ರೀತಿಯಲ್ಲಿ ಜೀವವಿರುತ್ತದೆ.

ರಷ್ಯಕ್ಕೆ ಇರಾನಿನ ಮೂಲಕ ನಡೆಯುತಿದ್ದ ಅಮೆರಿಕನ್ ಪೂರೈಕೆಯ ಏರ್ಪಾಡು ಈಗ ಕೊನೆಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ಆಹ್ವಾನಿಸಲ್ಪಟ್ಟರೆ ಗಾಂಧೀಜಿಯವರು ವೈಸಾಯರನ್ನು ಕಾಣಬಹುದೆಂದು ಅಧಿಕೃತವಾದ ಕಡೆಗಳಿಂದ ವಾರ್ತೆಯು ಬಂದಿದೆ.

ತಣಿಸಲು ಅಸಾಧ್ಯವೆನಿಸಲು ಒಂದು ತರದ ಬೆಂಕಿಯನ್ನು ಹುಟ್ಟಿಸುವ ತರದ ನೂತನ ಬಾಂಬುಗಳು ಅಮೇರಿಕನ್ನರು ಸಿದ್ಧ ಪಡಿಸಿದ್ದರಾಗಿ ತಿಳಿದುಬಂದಿದೆ. ಈ ಬಾಂಬಿಗೆ 'ಲಾವಾ ಬಾಂಬು' ಎಂದು ನಾಮಕರಣವಾಗಿದೆ.

ಹಿಂದೂದೇಶಕ್ಕೆ ಮುಂದಕ್ಕೆ ಅಂದರೆ ಬರುವ ಜುಲ್ಯಾ ತಿಂಗಳಿಂದ, ತಿಂಗಳೊಂದರ ೧೨,೦೦೦ ಟನ್ನು ಸೀಮೆಎಣ್ಣೆಯು ಹೆಚ್ಚಿಗೆ ಪೂರೈಸಲಾಗುವುದು.

ಶಾಂತಿ ರಕ್ಷಣೆಯ ಸಲುವಾಗಿ ಸೋವಿಯಟ್ ರಷ್ಯಾದ ಭೋಧನೆ ಮೇರೆಗೆ ಯೊಗೊಸ್ಲೆವಕಿಯಾದ ಟಿಟೊವಿನ ಬಲಗಳು ಇಟಲಿಯ ಟ್ರಿಯಸ್ಟೆ ಬಂದರದಿಂದ ಹಿನ್ನಡೆದಿರುವರಾಗಿ ತಿಳಿದು ಬಂದಿದೆ. ಶಾಂತಿ ರಕ್ಷಣೆಗಾಗಿ ತನ್ನ ಕಡೆಯಿಂದ ಇದೊಂದು ಮಹಾತ್ಯಾಗವೆಂಬುದಾಗಿ ಟಿಟೊರವರ ಅಭಿಪ್ರಾಯ ತಳೆದಿರುವುದು.

ಗುಪ್ತ ಅಸ್ತ್ರಗಳನ್ನು ನಿರ್ಮಿಸುವುದರಲ್ಲಿ ರಹಸ್ಯದಲ್ಲಿ ಒಂದು ಗುಡ್ಡದ ತಪ್ಪಲಲ್ಲಿ ದುಡಿಯುತ್ತಿದ್ದ ಜರ್ಮನ್ ನೌಕಾ ಜನರನ್ನು ಮಿತ್ರ ಬಲದ ಸೈನಿಕ ದಳದವರು ಸೆರೆ ಹಿಡಿದಿರುವರು.

ಚರ್ಚಿಲ್ಲರು ತಮ್ಮ ದೇಶದ ಸಾಮ್ಯವಾದೀಗಳನ್ನು ಜರೆದು ಮಾಡಿದ ಭಾಷಣದಿಂದ ಮೊಸ್ಕೊದಲ್ಲಿ ವ್ಯಥೆಉಂಟಾಗಿರುವುದೆಂದೂ, ಇದರಿಂದ ಸೋವಿಯಟ್ ಹಿಂದಿನ ಕಹಿ ನೆನಪುಗಳಾಗಬಹುದೆಂದೂ ಹೇಳಲಾಗಿದೆ.

ಮನುಷ್ಯನ ನಂತರ ಒಳ್ಳೆ ಬುದ್ಧಿವಂತ ಪ್ರಾಣಿ ಯಾವುದು? (ಚಿಂಪಾಜಿ)

ಮಾನವ ವರ್ಗಕ್ಕೆ ಅತ್ಯಂತ ಉಪಕಾರಿಯೆನಿಸುವ ಪ್ರಾಣಿಯೆಂದರೆ,—ಎರೆಹುಳವು. ಮಣ್ಣನ್ನು ಕೊರೆದು ಮೇಲಕ್ಕೆ ಹಾಕಿ ಭೂಮಿಯ ಫಲವತ್ತತೆಯನ್ನು ವೃದ್ಧಿಕರಿಸಿ, ಅದು ಕೃತನಿಗೆ ಒಳ್ಳೆ ಉಪಕಾರವನ್ನು ಮಾಡುತ್ತಿದೆ.

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ ಕಡಿತವುಂಟಾದರೆ ವಿಷವು ನಮ್ಮ ಚರ್ಮದೊಳಗೆ ಸೇರಿ ಬಿಡುವುದು. ಅದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ. ಅದರಿಂದ ನೋವು ಕಡಿಮೆಯಾಗುತ್ತದೆ. ರಣಿಗೆ ಒಣಗುತ್ತದೆ. ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶವಾಗುತ್ತದೆ.

ಯಾವಾಗಲೂ ಜಾಂಬಕನ್ನು ಉಪಯೋಗಿಸಿರಿ.



ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ರಷ್ಯದಲ್ಲಿ ಯುವಕರ ತರಬೇತು

೧೫ ರಿಂದ ೧೬ರ ವಯಸ್ಸಿನವರು ಯುದ್ಧ ತರಬೇತಿಗಾಗಿ ಕೂಡಿಬರುವಂತೆ ಸೋವಿಯಟ್ ರಷ್ಯದಲ್ಲಿ ಆಜ್ಞೆ ಹೊರಟಿದ್ದು, ಈಗಲೆ ಈ ಕಾರ್ಯವು ಪ್ರಾರಂಭವಾಗಿರುವುದು. ಯಾರೊಬ್ಬನನ್ನು ಬಿಡದೆ ಈ ತರಬೇತು ನಡೆಯುವುದಾಗಿ ತಿಳಿದು ಬಂದಿದೆ. ನಮ್ಮ ಸಂರಕ್ಷಣೆಗಾಗಿ ಮುಂದಕ್ಕೆ ಯಾವತ್ತೂ ಸಮಸ್ಯೆಗಳು ಉಂಟಾಗದಂತೆ ಈ ಹವಣಿಕೆಯನ್ನು ಕೈಗೊಳ್ಳಲಾಗಿದೆಂದೂ ಕೆಂಪು ಬಲದ ಉಚ್ಚಾಧಿಕಾರಿಗಳಿಂದ ಹೇಳಲಾಗಿದೆ. ಯುದ್ಧ ಕಾಲದಲ್ಲಿ ನಡೆದುದಕ್ಕಿಂತ ಹೆಚ್ಚಿನ ತರದಲ್ಲಿ ಈ ತರಬೇತು ನಡೆಯಿಸಲಾಗುವುದೆಂದು ಅವರ ಹೇಳಿಕೆ.

ಸಿಂಕಿಯಾಂಗಿನಲ್ಲೇನು?

ಸಿಂಕಿಯಾಂಗು ರಷ್ಯಕ್ಕೂ, ತಿಬೆಟ್ಟು, ಆಫ್ಘಾನಿಸ್ಥಾನ ನಡುವೆಯಿರುವ ಚೀನಾಕ್ಕೆ ಕೂಡಿದ ಪ್ರದೇಶವು. ಅಲ್ಲೀಗ ಚೀನಾದ ಚುಂಕಿಂಗ್ ಸರಕಾರಕ್ಕೆ ವಿರೋಧದಂಗೆಯು ಉಂಟಾಗಿರುವುದಾಗಿ ವಾರ್ತೆ ಬಂದಿದೆ. ಈ ದಂಗೆಯು ಪೋಲೆಂಡದ ಸಮಸ್ಯೆಗಿಂತ ಹೆಚ್ಚಿನ ಅಪಾಯಕಾರಿಯಾಗಬಹುದು. ಸಿಂಕಿಯಾಂಗು ಹಿಂದೂದೇಶಕ್ಕೆ ಸಮೀಪವಿರುವುದರಿಂದ, ಅಲ್ಲಿ ಸೋವಿಯಟ್ ರಷ್ಯದ ಪ್ರಭಾವವು ಕಾಲಿಡುವುದೆ? ಎಂಬ ಭಯವು ಅಮೇರಿಕಾ-ಬ್ರಿಟನುಗಳಿಗೆ ಇರಬಹುದು. ಈ ಮೊದಲೊಮ್ಮೆ ಅಲ್ಲಿ ಇದೇ ತರದ ದಂಗೆ ಉಂಟಾದಾಗ ಸೋವಿಯಟ್ ರಷ್ಯಾವು ಅದರ ಬೆಂಬಲಕ್ಕೆ ಇತ್ತಾಗಿಯೂ, ಅಲ್ಲಿ ಕೆಲ ಸಮಯ ಕೆಂಪು ಬಲದ ಕೆಲವು ದಳಗಳು ಬಂದಿದ್ದುವಾಗಿಯೂ ಹೇಳಲಾಗಿತ್ತು. ಸದ್ಯದ ದಂಗೆಯಲ್ಲಿ ರಷ್ಯಕ್ಕೆ ಕೈಯಿರಬಹುದು. ಈ ದಂಗೆಯು ಬೆಳೆಯುತ್ತಾ ಹೋದರೆ, ಅದು ರಷ್ಯಾ-ಬ್ರಿಟನ್ ತಿಕ್ಕಾಟವಾಗಿ ಪರಿಣಮಿಸಬಹುದೆಂದು, ಅಮೇರಿಕದ ಪ್ರಸಿದ್ಧ ಪತ್ರಿಕಾ ಲೇಖಕರಾದ ಡ್ರೂ ಪಿಯರ್‌ಸನ್ನರ ಅಭಿಪ್ರಾಯವಿರುತ್ತದೆ.

ಬೆಲೂನು ಬೊಂಬುಗಳು ಜಪಾನಿನಿಂದ ಸಂಯುಕ್ತ ಅಮೇರಿಕಾಕ್ಕೆ

ಜಪಾನಿನಿಂದ ಸಂ: ಅಮೇರಿಕಾದ ಮೇಲೆ ಬೊಂಬುಗಳನ್ನು ಕರೆಯಲು ಜಪಾನಿಯರು ನವೀನ ಒಂದು ಉಪಾಯವನ್ನು ಹೂಡಿರುವರು. ಬೊಂಬು ಕಟ್ಟಲ್ಪಟ್ಟ ವಿಚಿತ್ರ ತರದ ಬೆಲೂನು ಬಿಟ್ಟ ಸ್ಥಳದಿಂದ ಹಾರಾಡಿ ನೂರು ತಾಸುಗಳ ಪ್ರಯಾಣಮಾಡಿ ಸಂಯುಕ್ತ ಅಮೆರಿಕಾಕ್ಕೆ ತಲುಪಿ ಅಲ್ಲಿ ತನ್ನಲ್ಲಿದ್ದ ಬೊಂಬನ್ನು ಕೆಳಗೆ ಎಸೆಯುವುದಂತೆ. ಈ ತರದ ಅನೇಕ ಬೆಲೂನುಗಳು ಜಪಾನ್ ದ್ವೀಪಗಳಿಂದ ಸಂ: ಅಮೇರಿಕಾದ ಕಡೆಗೆ ಬಿಟ್ಟವೆಯಾಗಿಯೂ, ಇವುಗಳಲ್ಲಿ ಒಂದು ಅಲ್ಲಿಗೆ ತೆರಳಿ ಸಣ್ಣ ತರದ ವಿನಾಶ ಕಾರ್ಯಕ್ಕೆ ಕಾರಣವಾಗಿರುವುದೆಂದೂ, ಇದರಿಂದ ಒಬ್ಬರೊ, ಇಬ್ಬರೊ ಮಡಿದಿರುವರೆಂದು ತಿಳಿದು ಬಂದಿದೆ. ಈ ಬೆಲೂನುಗಳಲ್ಲಿ ತನ್ನಷ್ಟಕ್ಕೆ ತಾನೆ ನಡೆಯುವ ಕೆಲವು ಉಪಕರಣಗಳು ಇರಗೊಳಿಸಲಾಗಿವೆ ಎಂದು ಹೇಳಲಾಗಿದೆ. ಜಪಾನಿಯರ ಈ ಬೆಲೂನು ಅಭಿಯೋಗವು ಯಶಸ್ವಿಯಾಗಿ ನಡೆಯುತ್ತೆಂದಾದರೆ ಸಂ. ಅಮೇರಿಕಾದ ಪ್ರದೇಶಗಳೂ ಕೂಡ ಈ ಯುದ್ಧದ ಸವಿ ನೋಡಬೇಕಾಗಿಬರುಬಹುದೆಂದು ಹೇಳಲಾಗಿದೆ. ಈ ಬೆಲೂನುಗಳನ್ನು ತಡೆಯಲು ಪ್ರತಿ ಉಪಾಯಗಳು ಹೂಡಲಾಗುವುದೆಂದೂ ಹೇಳಲಾಗಿದೆ.

ಡಿ'ಮಿಲೆರವರ 'ಕಿಂಗ್ ಓಫ್ ಕಿಂಗ್ಸ್'

ಯೇಸುಕ್ರಿಸ್ತರ ಜೀವನ ಕಥೆಯಿಂದೊಡಗೂಡಿದ 'ಕಿಂಗ್ ಒಫ್ ಕಿಂಗ್ಸ್ ಎಂಬ ವಾಕ್ಚಲ ಚಿತ್ರವು ೧೯೨೬ರಲ್ಲಿ ಸಿದ್ಧವಾದುದು. ಅಂದಿನಿಂದ ಇಂದಿನ ತನಕ ೬೦೦,೦೦೦,೦೦೦ ಪ್ರೇಕ್ಷಕರು ಈ ಚಿತ್ರವನ್ನು ನೋಡಿ ಆನಂದಿಸಿರುವರು. ಈ ಚಿತ್ರವು ತಯಾರಾಗಿ ಇವತ್ತಿಗೆ ೧೭ ವರುಷಗಳಾಗಿದ್ದರು ಈಗಲೂ ಈ ಚಿತ್ರವು ಅತ್ಯಂತ ಜನಜನೀತವಾಗಿ ಪ್ರದರ್ಶಿಸಲಾಗುತ್ತಿದೆ.

ಈ ಚಿತ್ರದ ನಿರ್ಮಾಪಕರು, ಅಮೆರಿಕದ ಹೊಲಿವುಡ್ಡಿನ ಶ್ರೇಷ್ಟ ಡ್ಯಾರೆಕ್ಟರರಾದ ಡಿ'ಮಿಲೆಯವರು. ಈ ಚಿತ್ರ ತೆಗಿಯಲು ತಗಲಿದ ವೆಚ್ಚವು ೨,೪೦೦,೦೦೦ ಡಾಲ್ಲರುಗಳು (೧ಡಾ=೨॥।ರೂ) ೬೦೦೦ ಸಾವಿರ ಜನರಿರುವ ನಟ ವರ್ಗವು ಈ ಚಿತ್ರದಲ್ಲಿ ಭಾಗವಹಿಸಿದೆ. ಈ ಚಿತ್ರದಲ್ಲಿ ಯೇಸುಕ್ರಿಸ್ತರು ಧರಿಸಿದ ಮುಳ್ಳಿನ ಕಿರೀಟವು ಯೇಸುಕ್ರಿಸ್ತರ ಜನ್ಮನಾಡಿನಿಂದಲೆ ತರಲಾಗಿದ್ದಿತು.

೧೯೨೭ರಲ್ಲಿ ಹೊಲಿವುಡ್ಡಿನಲ್ಲಿ ಈ ಚಿತ್ರದ ಪ್ರಥಮ ಪ್ರದರ್ಶನವಾದಾಗ ಪ್ರವೇಶದ ಟಿಕೇಟುಗಳು ೧೫ ರೂ.ಗಳಿಗೆ ಮಾರಲ್ಪಟ್ಟಿದ್ದವು.

ಬೈಬಲಿನ ವಿವರಣೆಗಳಿಗೆ ಸರಿಯಾಗಿ ಈ ಚಿತ್ರವು ಇದೆಯಾಗಿ ಜಗತ್ತಿನ ಕ್ರಿಸ್ತಮತದ ಗುರುಗಳೆಲ್ಲಾ ಒಂದೆ ಮಾತಿನಲ್ಲಿ ಒಪ್ಪಿರುವರು. ಚಲಚಿತ್ರಗಳನ್ನು ನೋಡದ ಕ್ರೈಸ್ತ ಪಾದ್ರಿಗಳು ಕೂಡ ಈ ಚಿತ್ರವನ್ನು ನೋಡುತ್ತಿರುವರು. ಪ್ರತಿಯೊಂದು ಕ್ರೈಸ್ತ ಮಿಶನ್ನಿನ್ಯತ್ತಿರ ಈ ಚಿತ್ರದ ಪ್ರತಿಯೊಂದು ಇರುವುದು. ಹಿಂದೂದೇಶದ ಕ್ರೈಸ್ತ ಮಿಶೆನರಿಗಳೊಡನೆ ಈ ಚಿತ್ರದ ಮೂರು ಪ್ರತಿಗಳಿರುವವು. ಮುಂಬ್ಯಾಯ ಚಲಚಿತ್ರ ಪ್ರದರ್ಶಕರೊಬ್ಬರು ತಮ್ಮ ಕೂಡೆ ಇರುವ ಈ ಚಿತ್ರದ ಪ್ರತಿಯಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಕೂಡಿಸಲು ಅಪ್ಪಣೆಯನ್ನು ಕೇಳಿರುವರು.

ಶ್ರೀ. ವಿಜಯಲಕ್ಷ್ಮಿ ಪಂಡಿತರವರು ತಮ್ಮ ಆತ್ಮಕಥೆಯನ್ನು ಪ್ರಕಟಣೆಗಾಗಿ ನ್ಯೂಯೋರ್ಕಿನ ಪ್ರಕಟಣಾ ವ್ಯವಸ್ಥೆಗೆ ಕೊಟ್ಟಿರುವರೆಂದೂ, ಅದು ಸದ್ಯದಲ್ಲೇ ಪ್ರಕಟವಾಗಲಿದೆ ಎಂದು ತಿಳಿದುಬಂದಿದೆ.

ನಾಳಿನ ವೆಚ್ಚವನ್ನು ಇಂದೇ ಉಳಿತಾಯ ಮಾಡಿರಿ. ನಿಮಗೆ ಸಾಧ್ಯವಾದಷ್ಟು ಉಳಿತಾಯ ಮಾಡಿರಿ.

ಆದರೆ ನಿಮ್ಮ ಉಳಿತಾಯವನ್ನು ಸುರಕ್ಷಿತ ಮಾರ್ಗದಲ್ಲಿ ವಿನಿಯೋಗಿಸುವುದಲ್ಲದೆ, ನಿಮಗೆ ಬೇಕಾದಾಗ ಅದು ಸಿಕ್ಕುವಂತೆಯೂ ವಿನಿಯೋಗಿಸಬೇಕೆಂಬುದನ್ನು ಗಮನದಲ್ಲಿಡಿರಿ. ಅಂತಹ ಮಾರ್ಗಗಳ್ಯಾವವೆಂದರೆ:—

ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಗೌರ್ನಮೆಂಟು ಲೋನುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟು, ವಿಮೆ, ಪರಸ್ಪರ ಸಹಾಯಕ ಸಂಘಗಳು, ಮತ್ತು ಸೇವಿಂಗ್ಸ್ ಬ್ಯಾಂಕ್ ಅಕೌಂಟ್‌ಗಳು, ಇವು ಸುರಕ್ಷಿತವಾದ ಮತ್ತು ಲಾಭಕರವಾದ ಮಾರ್ಗಗಳು. ಜಮೀನು, ಕಟ್ಟಡಗಳು, ವ್ಯಾಪಾರದ ಸರಕುಗಳು, ಕೈಗಾರಿಕೆಯ ಸಾಮಾನುಗಳು, ಆಭರಣಗಳು, ಪಣ್ಯೆಕೊಂಡುಕೊಳ್ಳುವುದರಲ್ಲಿ ನಿಮ್ಮ ಹಣವನ್ನು ಹಾಕಬೇಡಿರಿ. ಈಗ ಅವುಗಳ ಖರೀದಿ ಬಹಳ ಹೆಚ್ಚು, ಆ ಖರೀದಿಗಳು ಬಹಳ ಮಟ್ಟಿಗೆ ಇಳಿಯುವ ಸಂದರ್ಭಗಳು ಬಹು ಹೆಚ್ಚಾಗಿವೆ.

ನೀವೇ ಇರಬಹುದು; ಇಲ್ಲಿ ಚಿತ್ರಿಸಿರುವಂತೆ ಪ್ರಾಯಶಃ ಸುಡದೇ ಇರಬಹುದು; ಆದರೆ ಮತ್ತೊಂದು ರೀತಿಯಲ್ಲಿ ಸುಡುತ್ತಿರುವಿರಿ. ಎರಡೂ ಒಂದೇನೆ. ಅನವಶ್ಯಕವಾದ ಪದಾರ್ಥಗಳನ್ನೇ ಆಗಲೀ, ಮಿತಿಮೀರಿದ ಬೆಲೆಗೇ ಆಗಲೀ ನೀವು ಕೊಂಡುಕೊಳ್ಳುವ ಪ್ರತಿಯೊಂದು ಸಲವೂ ಹಣವನ್ನು ಸುಡುತ್ತಿದ್ದೀರಿ. ಏಕೆಂದರೆ ಯುದ್ಧಕಾಲದ ಖರೀದಿಗಳು ಪದಾರ್ಥಗಳ ಯೋಗ್ಯತೆ ಮೀರಿದವುಗಳೆಂದು ಎಲ್ಲರಿಗೂ ಗೊತ್ತೇ ಇದೆ.

ಅನೇಕ ಪದಾರ್ಥಗಳು ವ್ಯಾಪಾರ ಮಂಡಲದಿಂದ ಅದೃಶ್ಯವಾಗಿವೆ—ಉತ್ತೆ ಕೆಲವು ಅತಿ ಸ್ವಲ್ಪವಾಗಿವೆ. ಇರತಕ್ಕ ಪದಾರ್ಥಗಳು ಎಲ್ಲರಿಗೂ ಸಮಂಜಸವಾಗಿ ವಿನಿಯೋಗವಾಗುವದಕ್ಕಾಗಿ ರೇಷನಿಂಗ್ ಮತ್ತು ಕಂಟ್ರೋಲ್ ಪದ್ಧತಿಗಳು ಅವಶ್ಯವಾಗಿರುತ್ತವೆ. ಕಂಟ್ರೋಲ್ ಮಾಡಲ್ಪಟ್ಟಿರುವ ಪದಾರ್ಥಗಳ ಬೆಲೆಗಳೂ ಕೂಡ, ಯುದ್ಧಪೂರ್ವದ ಖರೀದಿಗಳಿಗಿಂತ ಹೆಚ್ಚು ಆಗಿರುತ್ತವೆ. ಹೀಗಿರುವಲ್ಲಿ ಕಂಟ್ರೋಲ್ ಮಾಡಲ್ಪಡದೇ ಇರುವ ಸಾಮಾನುಗಳ ಖರೀದಿಗಳ ವಿಚಾರ ಹೇಳಬೇಕಾದ್ದೇ ಇಲ್ಲ. ನೀವು ಸತ್ತ್ರಜೆಗಳೆಂತಲೂ, ಕಪ್ಪು ಮಾರ್ಕೆಟ್ಟಿನ ಖರೀದಿಗಳನ್ನು ಕೊಡುವರಲ್ಲವೆಂತಲೂ ನಾವು ಭಾವಿಸುತ್ತೇವೆ. ಐದು ರೂಪಾಯಿಗಳಿಗಿಂತಲೂ ಹೆಚ್ಚು ಬಾಳದೇ ಇರುವ ಪದಾರ್ಥಕ್ಕೆ ಹತ್ತು ರೂಪಾಯಿಗಳನ್ನು ಏತಕ್ಕೆ ಕೊಡಬೇಕು? ಆದುದರಿಂದ, ಧಾರಣವಾಸಿಯು ಮಾಮೂಲ್ ಮಟ್ಟಕ್ಕೆ ಇಳಿದು, ಕಡಿಮೆ ಖರೀದಿಗೆ ಉತ್ತಮವಾದ ಪದಾರ್ಥಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುವವರಿವಿಗೂ, ಪದಾರ್ಥಗಳನ್ನೇ ಕೊಳ್ಳದೇ ಇರುವುದು ಬಹಳ ಉತ್ತಮ.

ನಿಮ್ಮ ಭವಿಷ್ಯದುಪಯೋಗಕ್ಕಾಗಿ ಉಳಿತಾಯಮಾಡಿ ಅದನ್ನು ಸುರಕ್ಷಿತಮಾಡಿರಿ.

ಗೌರ್ನಮೆಂಟ್ ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟ್‌ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ AAA 150 KN

ಹೃದಯ ವಿಕಾರಗಳನ್ನು ಗುಣಪಡಿಸಬಹುದು

ಹೃದಯ ಪೀಡೆಯಿಂದ ಪಾರಾಗುವುದು ಅತಿ ಕಷ್ಟದ ವಿಷಯವೆಂದು ಹೇಳಲಾಗಿದ್ದರೂ ಹೃದಯ ಪೀಡಿತರು ಸ್ವಲ್ಪ ಜಾಗರೂಕತೆಯನ್ನು ವಹಿಸಿದರೆ ಈ ಸಂಕಟವನ್ನು ದಾಟಬಹುದೆಂದು ನುರಿತ ವೈದ್ಯಕೀಯ ಜನರ ಅಭಿಪ್ರಾಯವು. ಹೃದಯ ವಿಕಾರಕ್ಕೊಳಗಾದ ರೋಗಿಯೂ,ಮತ್ತು ಆರೋಗ್ಯದಲ್ಲಿರುವವನು ಈ ಕೆಳಗಿನ ನಿಯಮಗಳನ್ನು ಅನುಸರಿಸಿ ನಡೆದರೆ ಕೆಟ್ಟ ಪರಿಣಾಮಗಳನ್ನು ತಪ್ಪಿಸಿಕೊಳ್ಳಬಹುದು.

(೧) ನಿಮ್ಮಲ್ಲಿ ಈ ಕೆಳಗಿನ ವಿಕಾರಗಳು ಕಾಣಿಸಿಕೊಂಡೊಡನೆ ಕೂಡಲೆ ಡಾಕ್ಟರರನ್ನು ನೋಡಿ ನಿಮ್ಮ ದೇಹ ಸರಿಯಾದ ರೀತಿಯಲ್ಲಿದೆಯೊ ಎಂಬುದನ್ನು ಖಚಿತಮಾಡಿಕೊಳ್ಳ ತಕ್ಕದ್ದು.

ಘಟವಾದ ಕೆಮ್ಮು, ರಕ್ತ ಉಗುಳುವುದು, ಉಬ್ಬಸ ಉಂಟಾಗುವುದು, ಗಂಟುಗಳು ಬಾತುಹೋಗುವುದು, ಹೊಟ್ಟೆಯೊಳಗೆ ವಾಯುವಿನ ಒತ್ತಡ, ಅಶಕ್ತಭಾವವು ಕಾಣಿಸಿಕೊಂಡಾಗ, ಅಜೀರ್ಣ ಉಂಟಾದಾಗ, ಹೃದಯದ ಬಡಿತವು ಅತಿರೇಖ ಹೆಚ್ಚಿದಾಗ, ಶ್ವಾಸವು ಸಣ್ಣದಾದಾಗ, ಎದೆಯಲ್ಲಿ ನೋವು ಕಾಣಿಸಿಕೊಂಡಾಗ,ಆಗಾಗ್ಗೆ ತಲೆತಿರುಗುವಿಕೆ ಉಂಟಾಗುವುದು, ಯಾ ಹಾಸಿಗೆ ಮೇಲೆ ಬೆನ್ನಿಟ್ಟು ಮಲಗಲು ಅಸಾಧ್ಯವೆನಿಸಿದಾಗ ಕೂಡಲೆ ಡಾಕ್ಟರರೊಡನೆ ಪರೀಕ್ಷಿಸಿರಿ.

(೨) ಡಾಕ್ಟರರು ಹೇಳಿದ ಅಭಿಪ್ರಾಯಗಳನ್ನು ಮಾತ್ರ ಮನ್ನಿಸಿರಿ. ಹೃದಯ ವಿಕಾರ ಕುರಿತು ಮಿತ್ರರಿಂದಲೊ, ವಾರ್ತಪತ್ರಿಕೆಯ ಜಾಹೀರಾತುಗಳಿಂದಲೊ, ಇತರ ಪ್ರಕಟಣೆಗಳಿಂದಲೆ ಬಂದ ಸೂಚನೆಗಳನ್ನನ್ನಯಿಸಿ ವರ್ತಿಸಿರಿ.

(೩) ಹೃದಯ ವಿಕಾರ ಉಂಟೆಂದು ಗೊತ್ತು ಹಿಡಿಯಲಾದ ಮೇಲೆ, ರೋಗಿಯು ತುಂಬಾ-ಅತಿರೇಖ, ವಿಶ್ರಾಂತಿಯನ್ನು ಪಡೆಯಬೇಕು.

ಹೃದಯವಿಕಾರಕ್ಕೆ ಇದು ಅತಿ ಶ್ರೇಷ್ಠ ಚಿಕಿತ್ಸೆಯು. ಹೃದಯ ವಿಕಾರದಲ್ಲಿ, ವಿಶ್ರಾಂತಿಯು ಅತಿ ಮಹತ್ವದ್ದು..

ಹೃದಯದ ಕುರಿತು ಕೆಲವು ವಿವರಗಳು

ನಿಮ್ಮ ಹೃದಯದ ಕುರಿತು ನಿಮಗೇನು ಗೊತ್ತಿದೆ? ಅದು ತೂಕದಲ್ಲಿ ಬರಿ ೧೦ ಔನ್ಸು ಭಾರವಿದೆ. ಆದರೂ ಇಷ್ಟು ಸಣ್ಣವಾದ ಈ 'ಪಂಪು' ನಿಮ್ಮ ಮುಷ್ಟಿಯ ಪ್ರಮಾಣದಷ್ಟು, ಒಂದು ಸರ್ತಿ ಅಮುಕಿದಾಗ, ೬ ಔನ್ಸು ರಕ್ತವನ್ನು ಹೊರಸೂಸುತ್ತದೆ. ಅಂದರೆ ೨೪ ತಾಸುಗಳಿಗೆ ೫೦೦೦ ಗೆಲನು ರಕ್ತವು ಸೂಸಲ್ಪಡುವುದು—೨೦ ಟನ್ನುಗಳು ಆದರೆ ಹೃದಯದ ಮೇಲೆ ಹೆಚ್ಚಿನ ಕೆಲಸ ಬಿದ್ದಾಗ, ಈ ಪರಿಮಾಣವು ೫೦ರಿಂದ ೧೦೦ ಟನ್ನುಗಳೂ ಆಗಬಹುದು.

ಹೃದಯ ಅವಿಶ್ರಾಂತರಾಗಿ ನಡೆಯುವ (ತನ್ನಷ್ಟಕ್ಕೆ ತಾನೆ) ಒಂದು ವಿಚಿತ್ರ ಇಂಜಿನು. ಹೃದಯದಂತೆ ಇಂಜಿನು ಬೇರೊಂದಿಲ್ಲ. ನಮ್ಮ ದೇಹದ ಇತರ ಯಾವ ಅಂಗವಾದರೂ ತನ್ನ ಚಟುವಟಿಕೆಯಲ್ಲಿ ಸ್ವಲ್ಪ ಇಳಿಮುಖವನ್ನು ತೋರಿಸಬಹುದು —ತಮ್ಮ ಕಾರ್ಯವನ್ನು ನಿಲ್ಲಿಸಿ ಸುಮ್ಮನಿರಬಹುದು. ನಾವು ಹತ್ತು ದಿವಸ ಉಪವಾಸ ನಡೆಸಬಹುದು, ಹತ್ತು ಮಿನಿಟು ಕಣ್ಣುಗಳನ್ನು ಮುಚ್ಚಬಹುದು. ಹತ್ತು ಸೆಕುಂಡು ಶ್ವಾಸಕಟ್ಟಬಹುದು—ನಂತರವೂ, ತಮ್ಮ ಚಟುವಟಿಕೆಯನ್ನು ಮತ್ತೊಮ್ಮೆ ಮುಂದರಿಸಬಲ್ಲವು. ಆದರೆ ಹೃದಯವು ಬರಿ ಹತ್ತು ಸೆಕುಂಡುಗಳ ಸಮಯ ನಿಂತುಬಿಟ್ಟರೆ—ನಂತರ ಅದು ಚಲಿಸುವುದೆ ಅಲ್ಲಿಗೆ ಮುಗಿಯುವುದು ನಮ್ಮ ಜೀವನ.

ಪೋಲೆಂಡ್ ಸಮಸ್ಯೆ

ಸಂ: ಅಮೇರಿಕದ ಅಧ್ಯಕ್ಷರ ಕಡೆಯಿಂದ ಹೆರಿ ಹೊಪ್ಕಿನ್ಸರೆಂಬ ರಾಯಭಾರಿಗಳು ಮೊಸ್ಕೊವಿಗೆ ತೆರಳಿ ರಷ್ಯದ ನಾಯಕರಾದ ಸ್ಟೆಲೀನರನ್ನು ಕಂಡು ಮಾತುಕತೆ ನಡೆಯಿಸಿ, ಪೋಲೆಂಡಿನ ಕುರಿತು ರಷ್ಯಕ್ಯೂ—ಅಮೇರಿಕಾ ಬ್ರಿಟನುಗಳಿಗೆ ನಡುವೆ ಎದ್ದ ಬಿನ್ನಾಭಿಪ್ರಾಯವು ಬಹುಮಟ್ಟಿಗೆ ನಿವಾರಿಸಿರುವರು. ಲಂಡನಿನಿಂದ ಪೋಲೆಂಡಿಗೆ ತೆರಳಿ, ರಷ್ಯಕ್ಕೆ ವಿರುದ್ಧವಾಗಿ ಒಳ ಸಂಚು ನಡೆಯಿಸಿದರಾಗಿ ಹೇಳಿದ ಅಪಾದನೆಯ ಮೇಲೆ ರಷ್ಯನರಿಂದ ಬಂದಿಸಲ್ಪಟ್ಟ ಪೋಲಿಶ್ ಲಂಡನ್ ಸರಕಾರದ ಹದಿನಾರು ಮಂದಿಗಳನ್ನು ಈ ಮಾತುಕತೆಯ ಫಲಿತಾಂಶವಾಗಿ ವಿಮೋಚಿಸಲಾಗಿದೆ. ಪೋಲೆಂಡದ ಸಮಸ್ಯೆಯನ್ನು ಯೋಗ್ಯರೀತಿಯಲ್ಲಿ ಬಗೆಹರಿಸುವರೆ ಇತ್ಯರ್ಥಗಳಾಗಿವೆ. ಸದ್ಯದಲ್ಲೆ ತ್ರಿಮೂರ್ತಿಗಳ ಕೂಡುವಿಕೆಯು ನಡೆಯಬೇಕೆಂದು ನಿರ್ಧಾರವಾಗಿದ್ದು, ಈ ಸಮಯ ಈ ಸಮಸ್ಯೆಯ ವಿಚಾರವೆತ್ತಲಾಗುವುದೆಂದು ತಿಳಿದುಬಂದಿದೆ. ಹೀಗೆ ಮಿತ್ರರೊಳಗೆ ಮುಖ್ಯವಾಗಿ ಅಮೇರಿಕಾ ರಷ್ಯಾಗಳೊಳಗೆ ಕೆಲವಿಚಾರಗಳ ಕುರಿತು ಉಂಟಾದ ಬಿನ್ನಾಭಿಪ್ರಾಯಗಳು ನಿವಾರಿಸಲ್ಪಡುತ್ತಾ ಬರುತ್ತಿರುವುದು, ಭಾವಿ ಲೋಕ ಶಾಂತಿಯ ಕುರಿತು ಶುಭ ಚಿಹ್ನೆಗಳೆಂದು ಭಾವಿಸಲಾಗಿದೆ.

ಬ್ರಿಟನಿನ ಪ್ರಧಾನ ಚರ್ಚಿಲ್ಲರು ಸದ್ಯ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದು, ತಮ್ಮ ಭಾಷಣಗಳಲ್ಲಿ ಸಾಮ್ಯವಾದವನ್ನು ಮತ್ತದಕ್ಕೆ ಸಂಭಂದ ಪಟ್ಟ ವಿಚಾರಗಳನ್ನು ಬಲವಾಗಿ ಹಳಿಯುತಿದ್ದರೂ, ಲೋಕಹಿತ ದೃಷ್ಟಿಯಲ್ಲಿ ಅಂಗ್ಲೊ ರಷ್ಯನ್ ಮೈತ್ರಿಯನ್ನು ಬೆಳೆಯಿಸಿಕೊಂಡು ಬರುವುದು ತನ್ನ ಪಕ್ಷದ ಅಂದರೆ ಟೋರಿಪಕ್ಷದ ಮುಖ್ಯ ಧ್ಯೇಯವಿರುವುದೆಂದು ಸಾರುತ್ತಿರುವರು. ಹಿಂದೂದೇಶದ ಕುರಿತು ಬ್ರಿಟಿಷರ ಧೋರಣದಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವುದೆಂದು ವೆವಲ್ ಪ್ಲೇನಿನಿಂದ ತಿಳಿಯಬೇಕು. ಅಂದರೆ ಲೋಕಶಾಂತಿಯ ಸಂರಕ್ಷಣೆಗಾಗಿ ಆದರ್ಶ ತರದ ವ್ಯವಸ್ಥೆಯಾಗುವುದು ಸಂದೇಹಕರವಾದರೂ, ಸದ್ಯ ಜಗತ್ತಿನಲ್ಲಿ ಕಲಹಗಳುಂಟಾಗದಂತೆ, ಜಗತ್ತಿನ ಸದ್ಯದ ಸ್ಥಿತಿಯು ಸುಧಾರಿಸಿಕೊಳ್ಳುವಂತೆ ಕೆಲವೊಂದು ವ್ಯವಸ್ಥೆಗಳಾಗಬಹುದೆಂದು ಈಗ ಸ್ವಲ್ಪ ಧೈರ್ಯದಿಂದ ಹೇಳಬಹುದಾಗಿದೆ.

ಪ್ರಾನ್ಸು ಮತ್ತು ಮಿತ್ರರು

ಮೊಸ್ಕೊವಿಗೆ ತೆರಳಿದ ಸಂ: ಅಮೇರಿಕಾದ ರಾಯಭಾರಿಗಳು ಸ್ವದೇಶಕ್ಕೆ ಹಿಂತೆರಳುವಾಗ ಪ್ರಾನ್ಸಿನ ಪೆರಿಸ್ ನಗರದ ಮಾರ್ಗವಾಗಿ ಪ್ರವಾಸಿಸಿ, ಪೆರಿಸ್ ನಗರದಲ್ಲಿಳಿದು ಡಿ'ಗೋಲೆಯವರನ್ನು ಕಂಡು ಕೆಲವು ಮಹತ್ವದ ವಿಚಾರಗಳ ಕುರಿತು ಪ್ರಸ್ತಾಪಿಸಿದರಾಗಿ ತಿಳಿದುಬಂದಿದೆ. ಸಿರಿಯಾದ ಪ್ರಕರಣದ ಕುರಿತು ಪ್ರೆಂಚ್ ಕೆಬಿನೆಟ್ ಮಂಡಳದಲ್ಲಿ ಪರ್ಯಾಲೋಚನೆಗಳು ನಡೆದು, ಎಲ್ಲರೂ ಡಿ'ಗೋಲೆರವರ ಅಭಿಪ್ರಾಯವನ್ನೇ ಎತ್ತಿ ಹಿಡಿದಿರುವರು, ಮತ್ತು ಅವರಂತೆಯೆ, ಸಿರಿಯಾ ಪ್ರಕರಣದಲ್ಲಿ ಬ್ರಿಟನು ದರ್ಪದಿಂದ ವರ್ತಿಸುತ್ತಿದೆಯೆಂದು ಅಭಿಪ್ರಾಯ ಪಡುವವರಾದರು. ಸಿರಿಯಾದಲ್ಲಿ ಒಡಂಬಡಿಕೆ ಉಂಟಾಗಬೇಕಾದರೆ ಇನ್ನೂ ತಾವು ಮಾಡಬೇಕಾದುದು ಏನೂ ಇಲ್ಲ. ಲಂಡನಿನ ಕಡೆಯಿಂದ ಯತ್ನಗಳು ನಡೆಯಬೇಕೆಂದೂ ಅಭಿಪ್ರಾಯ ಪಟ್ಟಿರುವರು.

ಜಪಾನಿನಲ್ಲಿ—?

ಸದ್ಯ ಉಂಟಾದ ಭಯಂಕರ ಸಂದಿಗ್ಧದ ದಸೆಯಿಂದ ಜಪಾನಿನಲ್ಲಿ ಮಿಲಿಟರಿ ಸರ್ವಾಧಿಕಾರತ್ವವು ಸ್ಥಾಪಿಸಲ್ಪಟ್ಟಿರುವುದು. ಈಗಿನ ಪ್ರದಾನರಾದ ಎಡ್ಮಿರಲ್ ಸೂಜೂಕಿಯವರಿಗೆ ಈ ಅಧಿಕಾರವು ಕೊಡಲಾಗಿದೆ. ದೇಶರಕ್ಷಣೆಗಾಗಿ ರಕ್ಷಣದಳಗಳ ವ್ಯವಸ್ಥೆಯು ಬಿರುಸಾಗಿ ನಡೆಯುವಂತೆ ಕಾರ್ಯಗಳು ನಡೆಯುತ್ತಿವೆ. ಯುದ್ಧ ಸಂಭಂದದ ಕೈಗಾರಿಕೆಗಳೂ, ಒಳ್ಳೆ ಹುರುಪಿನಿಂದ ನಡೆಯುವರೆ ವ್ಯವಸ್ಥೆಗಳಾಗುತ್ತಿವೆ.

ಶಾಂತಸಾಗರದ ತಮ್ಮ ವಸಾಹತುಗಳಲ್ಲಿ ಕಾಲಿಟ್ಟ ಜಪಾನಿಯರ ವಿರೋಧವಾಗಿ ಒಂದುವರೆ ಲಕ್ಷ ಸೈನಿಕರಿರುವ ಒಂದು ಡಚ್ ಬಲವು ಕಾರ್ಯಿಸುವುದೆಂದು ತಿಳಿದು ಬಂದಿದೆ. ಯರೋಪುರಂಗಕ್ಕೆ ಕಳುಹಿಸಲಾದ ಅನೇಕ ವಿಮಾನ, ಟ್ಯಾಂಕು ಇತ್ಯಾದಿ ಉಪಕರಣಗಳು ಈಗ ಶಾಂತಸಾಗರದ ಯುದ್ಧರಂಗಕ್ಕೆ ಕಳುಹಿಸಲಾಗುತ್ತಿವೆ.

ಬೋರ್ನಿಯೊ ದ್ವೀಪದ ಒಂದು ಕಡೆಯಲ್ಲಿ ಮಿತ್ರ ಬಲಗಳು ಇಳಿದವೆಯಾಗಿಯೂ ಅಲ್ಲಿ ನೆಲಸಿದ್ದ ಜಪಾನಿಯ ದಂಡುಗಳ ಬಲವಾದ ವಿರೋಧವು ಇದ್ದಾಗ್ಯೂ, ಈ ಬಲಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವರಾಗಿ ವಾರ್ತೆ ಬಂದಿದೆ.

ಹಿಟ್ಲರನು ಜೀವಿತನಿರುವನೆ?

ಹಿಟ್ಲರನು ಜೀವಿತನಾಗಿರುವಾಗ ಜಗತ್ತಿಗೆಲ್ಲಾ ತಲೆಸಿಡಿತಕ್ಕೆ ಕಾರಣನಾಗಿದ್ದನು. ಈಗ ಆತನು ಸತ್ತ ಮೇಲೂ ಆತನ ಪೀಡೆಯು ನಿಂತಿಲ್ಲವೆಂದು ಹೇಳಬೇಕು. ಹಿಟ್ಲರನು ಸತ್ತದ್ದು ಯಾರೂ ಕಂಡುದಿಲ್ಲ. ಆತನ ಕಳೇಬರವೂ ಕಾಣಸಿಗಲಿಲ್ಲ. ಹೀಗಾಗಿ ಆತನು ಸತ್ತಿರುವನಾಗಿ ಕೆಲವರು, ಆತನು ಜೀವಂತನಿರುವನೆಂದೂ ಕೆಲವರು ವಾದಿಸುತ್ತಿರುವರು. ಹಿಟ್ಲರನು ಮೃತನಾದುದಿಲ್ಲ, ಆತನು ಸ್ಪೆಯಿನಿನಲ್ಲಿರುವನೆಂದು ಮೊನ್ನೆ ವಾರ್ತೆ ಬಂದಿತ್ತು. ಈ ವಾರ್ತೆಯ ಬೆನ್ನಲ್ಲೆ ಅದು-ಸುಳ್ಳೆಂಬ ವಾರ್ತೆಯೂ ಬಂದಿತ್ತು. ವಿಚಿತ್ರ ವಿದ್ಯಮಾನವಿದು! ಒಂದು ಸೊಸೆಯನ್ನು ಬಹಳ ಪೀಡಿಸುತ್ತಿರುವ ಅತ್ತೆಯೊಬ್ಬಳು ತಾನು ಸತ್ತ ನಂತರವೂ ಸೊಸೆಗೆ ತನ್ನ ಭೀತಿಯಿರುವಂತೆ, ಅಡುಗೆಯ ಮನೆಯ ಗೋಡೆಯ ಮೇಲೆ ತನ್ನ ಮುಖ ಬಿಂಭದ ಚಿತ್ರವನ್ನು ಬರೆದು ಇಟ್ಟಿದ್ದಳಂತೆ! ಈ ಚಿತ್ರವನ್ನು ನೋಡುತ್ತಿದ್ದ ಹಾಗೆ ಸೊಸೆಗೆ ಗಾಬರಿಯಾಗುತ್ತಿತ್ತಂತೆ. ಹಿಟ್ಲರನ ಕುರಿತು ಹೊರಡಿರುತ್ತಿರುವ ಕಥೆಗಳನ್ನು ಕೇಳುತ್ತಿರುವಾಗ, ಈ ಅತ್ತೆಯ ನೆನಪಾಗುತ್ತದೆ. ಹಿಟ್ಲರನ ಮರಣ ರಹಸ್ಯವು ಬೇಗನೆ ಬಳಕಿಗೆ ಬಾರದೆಯಿರನು. ಹೀಗೆಂದು ಕಲ್ಕತ್ತೆಯ ಅಮೃತ ಬಜಾರ ಪತ್ರಿಕೆ ಟೀಕೆ ಹೊರಡಿರುತ್ತದೆ.

ಸೆಂಟ್ರೆಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ
ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ
ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು
ತೆತ್ತ ಮೂಲಧನ 26 ಲಕ್ಷ
ಕ್ಷೇಮ ನಿಧಿ 10 ಲಕ್ಷ
ಸ್ಥಾಪನೆ: 1906
ಕೆನರಾ ಬೇಂಕ್ ಲಿಮಿಟೆಡ್.
(ESTD. 1906)
CANARA BANK LIMITED
In corporated in British India, liability of Members limited.

ಮಂಗಳೂರು: ಬೊಳೂರು ಬಡಾವಣೆಯಲ್ಲಿರುವ ಮಿಜಾರ್‌ಕಾರರ ಗೇರುಬೀಜ ಕಾರ್ಖಾನೆಯ ಬಳಿ ವಾಸಿಸುವರೊಬ್ಬರು ಸದ್ರಿ ಕಾರ್ಖಾನೆಯಿಂದೇಳುವ ಹೊಗೆಯಿಂದಾಗುವ ಸಂಕಷ್ಟವನ್ನೂ ಮತ್ತು ಆ ಸಂಬಂಧ ನಡೆದ ತನಿಖೆ ವಿಚಾರಗಳನ್ನೂ ಈ ರೀತಿ ತಿಳಿಸುತ್ತಾರೆ:

ತಾ. ೬-೫-೪೫ರಲ್ಲಿ ಮಂಗಳೂರು ಮುನ್ಸಿಪಲ್ ಕೌನ್ಸಿಲಿನವರು ಸದ್ರಿ ಕಾರ್ಖಾನೆಯ ಕುರಿತು ಒಂದು ಠರಾವು ಮಾಡಿದ ಮೇಲೂ ಅದು ಕಾರ್ಯರೂಪಕ್ಕೆ ಬಾರದೇಹೋಯಿತು. ಕೂಡಲೇ ಆಸುಪಾಸಿನ ಜನರು ಜಿಲ್ಲಾ ಕಲೆಕ್ಟರರಿಗೂ ಆರೋಗ್ಯ ಖಾತಾ ಮೇಲಧಿಕಾರಿಗಳಿಗೂ ಮನವಿ ಮಾಡಿಕೊಂಡಾಗ ಕಲೆಕ್ಟರರು ತನಿಖೆ ನಡೆಸುವರೆ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರಿಗೆ ನಿರ್ದೇಶಿಸಿದರು. ಸುಪರಿಂಟೆಂಡರು ಡೆಪ್ಯುಟಿ ಸುಪರಿಂಟೆಂಡರ ಮೂಲಕ ತನಿಖೆ ನಡೆಸಿದರು. ಡೆಪ್ಯುಟಿಯವರು ಕಾರ್ಖಾನೆ ಮತ್ತದರ ವಠಾರದ ಜನರನ್ನು ಸಂದರ್ಶಿಸಿ ಹಾನಿಕಾರಕ ಪರಿಸ್ಥಿತಿಯನ್ನು ಮನಗಂಡು ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಲು ಕೂಡಲೇ ಕಾರ್ಖಾನೆಯಲ್ಲಿ ಗೇರುಬೀಜ ಹುರಿಯ ಬಾರದಾಗಿ ಹುಕುಂ ಕೊಡಲ್ಪಟ್ಟಿತು. ಕೆಲವು ಶರ್ತಗಳನ್ನು ಪೂರೈಸಿದರೆ ಮಾತ್ರ ಮುಂದೆ ಲ್ಯಾಸೆನ್ಸ್ ಕೊಡಲಾಗುವುದೆಂದೂ ತಿಳಿಸಲಾಯಿತು. ಮದ್ರಾಸಿನಿಂದ ಆರೋಗ್ಯ ಖಾತೆಯ ಅಸಿಸ್ಟೆಂಟ್ ಡೈರೆಕ್ಟರರು ಸ್ವತಃ ಬಂದು ತನಿಖೆ ನಡಿಸಿ ಚೀಫ್ ಡೈರೆಕ್ಟರರ ಮೂಲಕ ಆರೋಗ್ಯಕರ ವ್ಯವಸ್ಥೆಯನ್ನು ಸ್ಥಾಪಿಸಲು ಕಾರ್ಖಾನೆ ಮಾಲಿಕರಿಗೆ ತಿಳಿಸಲಾಯಿತು.

ಅಸಿಸ್ಟೆಂಟ್ ಹೆಲ್ತ್ ಡೈರೆಕ್ಟರರ ಸೂಚನೆಗಳು ಹೀಗಿದ್ದವು: ಕೂಲಿಗಾರರ ಆರೋಗ್ಯ, ಕಾರ್ಖಾನೆಯ ಶುಚಿತ್ವ, ಕೂಲಿಯವರಿಗೆ ಕೊಡಲಾಗುವ ಸೌಕರ್ಯಗಳು ಯೋಗ್ಯವಾಗಿಲ್ಲ. ಗೇರುಬೀಜದ ಹೊಗೆಯು ಕೂಲಿಗಾರರಿಗೂ ನೆರೆ ಕೆರೆಯ ನಿವಾಸಿಗಳಿಗೂ ಹಾನಿಕಾರಕವೆಂಬುದು ನಿಸ್ಸಂದೇಹ. ಅದನ್ನು ನಿಲ್ಲಿಸಬೇಕಾದುದು ಅವಶ್ಯಕ. ಈ ಹಾನಿಯನ್ನು ತಡೆಗಟ್ಟಲು ಕಂಪೆನಿಯವರು ೫೦ ಫೀಟು ಎತ್ತರದ ಇಟ್ಟಿಗೆ ಚಿಮಿಣಿಯನ್ನು ಕಟ್ಟಿಸಬೇಕು. ಬೀಜದ ಎಣ್ಣೆ ಹೊಗೆಯನ್ನು ನೀರಿನಿಂದ ಅಥವಾ ಬೇರೆ ವಿಧಾನದಿಂದ ಶುದ್ಧಗೊಳಿಸಬಹುದು. ಹುರಿಯಲಿಕ್ಕೆ ಬೀಜದ ತೊಗಟೆಯನ್ನೂ ಉಪಯೋಗಿಸಬಾರದು. ಅದರಲ್ಲಿನ ಎಣ್ಣೆ ಅಂಶವನ್ನು ತೆಗೆದಾದ ಮೇಲೆ ಬೇಕಾದರೆ ಉಪಯೋಗಿಸಬಹುದು. ಇವೆಲ್ಲ ಏರ್ಪಾಡುಗಳಿದ್ದರೆ ಮಾತ್ರ ಲಾಸೆನ್ಸ್ ಕೊಡಬಹುದು.

ಸದ್ರಿ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕೂಲಿಕಾರರ ಆರೋಗ್ಯದ ವಿಚಾರವಾಗಿಯೂ ಕೆಲವು ಸೂಚನೆಗಳು ಕೊಡಲ್ಪಟ್ಟಿವೆ: ಕಾರ್ಖಾನೆಯ ಮಾಡು ಬಹಳ ತಗ್ಗಾಗಿದೆ. ಸಾಕಷ್ಟು ಗಾಳಿ ಬೆಳಕಿನ ಆಸ್ಪದವಿಲ್ಲ. ಬೀಜ ಹುರಿಯುವ ಕೋಣೆಗಳು ನಿರ್ಮಲವಾಗಿರಲಿಲ್ಲ-ಬಹಳ ಹೀನಾವಸ್ಥೆಯಲ್ಲಿವೆ. ಚಿಕ್ಕ ಕೊಟಡಿಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ಕೆಲಸಮಾಡಬೇಕಾಗಿದೆ—ಇದು ಸರಿಯಲ್ಲ. ಕಾರ್ಖಾನೆಯಲ್ಲಿ ಸಾಕಷ್ಟು ನೀರಿನ ಸರಬರಾಯಿ ಇಲ್ಲ. ಮಜೂರರಿಗೆ ಊಟಕ್ಕೆ ಬೇಕಾದ ಸ್ಥಳ ಸೌಕರ್ಯವಿಲ್ಲ. ಸಾವಿರಾರು ಹೆಮ್ಮಕ್ಕಳೂ ಸ್ತ್ರೀಯರೂ ಕೆಲಸಮಾಡುವಲ್ಲಿ ಓರ್ವ ಲೇಡಿ ಡೊಕ್ಟರರನ್ನೂ ಮತ್ತು ಸ್ತ್ರೀ ಮಜೂರರ ಮಕ್ಕಳ ಆರೈಕೆ ನೋಡಲು ದಾದಿಯರನ್ನೂ ಇಡುವುದು ಅವಶ್ಯ. ಮಜೂರರಿಗೆ ಮಧ್ಯಾಹ್ನದ ಊಟವನ್ನು ಕಾರ್ಖಾನೆಯವರೇ ವ್ಯವಸ್ಥೆಮಾಡಬೇಕು. ನಗರದ ಒಂದು ಪ್ರಮುಖಾಂಶದಷ್ಟು ನಾಗರೀಕರು ವಾಸಿಸುವ ಸ್ಥಳದಲ್ಲಿನ ಈ ಕೊರತೆಯನ್ನು ನೀಗುವುದಕ್ಕೆ ಕಾರ್ಖಾನೆಯವರು ಪ್ರಯತ್ನಿಸುವರೆಂದು ಬಾತ್ಮಿದಾರರು ಹಾರೈಸುತ್ತಾರೆ.

ಕೊಂಗ್ರೆಸ್ ಕಮ್ಯೂನಿಸ್ಟ್ ಬೇದಃ— ಜಿಲ್ಲೆಯ ಪ್ರಮುಖ ಕೊಂಗ್ರೆಸ್ ಮುಂದಾಳುಗಳು ಕೆಲವು ದಿನಗಳ ಹಿಂದೇ ಸಭೆಯ ಒಂದು ಸಮಿತಿ ರಚಿಸಿರುವರು. ದೇಶದ ಎಲ್ಲಾ ಕಡೆಗಳಲ್ಲಿ ಆಹಾರದ ದುರವಸ್ಥೆ, ಮಿತಿಮೀರಿದ ಬೆಲೆ, ಅಂಚದ ಹಾವಳಿಗಳು ಹೆಚ್ಚುತ್ತಿರುವಾಗ ಜನತೆಯ ಕಡೆಯಿಂದ ಜನತಾ ಮುಖಂಡರು ಮುಂದೆ ಬಂದು ಯೋಗ್ಯ ಪರಿಹಾರಕ್ಕಾಗಿ ಪ್ರಯತ್ನ ಮಾಡಬೇಕಾದುದು ಅತ್ಯಾವಶ್ಯಕವಾದುದರಿಂದ ಜಿಲ್ಲೆಯ ಜನರಲ್ಲಿ ಕೊಂಗ್ರೆಸ್ ಸಮಿತಿ ರಚನೆಯಿಂದ ತುಂಬಾ ಸಮಾಧಾನವಾಗಿದೆ. ಮಾತ್ರವಲ್ಲ ಈಗ ಕೊಂಗ್ರೆಸ್ ಸಂಬಂಧ ಸಂಸ್ಥೆಗಳ ಮೇಲಿನ ನಿರ್ಬಂಧಗಳನ್ನೂ ತೆಗೆದು ಹಾಕಿರುವುದರಿಂದ ಕೊಂಗ್ರೆಸಿನರು ಸಾರ್ವಜನಿಕದ ಕಡೆಯಿಂದ ಮುಂದಾಳುತನ ವಹಿಸಬೇಕಾಗಿ ಬಹುಮತಾಭಿಪ್ರಾಯವಿದೆ. ರಚನಾತ್ಮಕ ಚಟುವಟಿಕೆಗಳೂ ಭರದಿಂದ ಸಾಗಬೇಕಾಗಿದೆ.

ಜಿಲ್ಲಾ ಕೊಂಗ್ರೆಸ್ ಕೆಲಸಗಾರರ ಸಮಿತಿ

ಕಾರ್ಖಾನೆ ಹೊಗೆ – ಸಾರ್ವಜನಿಕ ಮತ—ರೇಶನಿಂಗ್ ಕಟ್ಲೆ— ಪ್ರಮುಖರ ನಿಧನ—ಗೀತಾಸ್ಪರ್ಧೆ—ವಿದ್ಯಾವೇತನ

ಆದರೆ ಮೊನ್ನೆಯ ಸಭೆಯಲ್ಲಿ 'ಹಿಂದೂ ಮಹಾಸಭೆ ಮುಸ್ಲಿಂಲೀಗ್ ಇವುಗಳಂತಹ ಜಾತೀಯ ಸಂಸ್ಥೆಗಳಲ್ಲಿಯೂ, ರೆಡಿಕಲ್ ಡೆಮೋಕ್ರೆಟಿಕ್ ಪಾರ್ಟಿ ಮತ್ತು ಕಮ್ಯೂನಿಸ್ಟ್ ಪಾರ್ಟಿಯಂತಹ ರಾಜಕೀಯ ಪಕ್ಷಗಳಲ್ಲಿಯೂ ಸೇರಿರುವ ಕೊಂಗ್ರೆಸಿಗರು ಸಮಿತಿಯಲ್ಲಿ ಸೇರಿರಲ್ಪಡಲಾರರು'ಎಂದು ಸಮಿತಿ ತೀರ್ಮಾನಿಸಿದೆಯಂತೆ. ಮಹಾಸಭೆ ಲೀಗ್‌ಗಳಲ್ಲಿ ಸೇರಿದವರು ಕೊಂಗ್ರೆಸಿನೊಳಗೆ ಸೇರಿಸಿಕೊಳ್ಳಲರ್ಹರಲ್ಲವೆಂಬುದಕ್ಕೆ ಕೊಂಗ್ರೆಸಿನ ಅಧಿಕೃತನಿರ್ಧಾರವಿದೆ. ಆದರೆ ಸ್ಥಳೀಯ ಕಮ್ಯೂನಿಸ್ಟ್ ಪಾರ್ಟಿಯವರಿಗೆ ಇದರಿಂದ ಮನನೋಯಿಸಿದಂತಾಗಿದೆ ಎಂದು ತಿಳಿದು ಬರುತ್ತದೆ. ಎ. ಐ. ಸಿ. ಸಿ.ಯಲ್ಲೂ, ಪ್ರಾಂತೀಯ ಎಸೆಂಬ್ಲಿಗಳಲ್ಲೂ ಕಮ್ಯೂನಿಸ್ಟರು ಕೊಂಗ್ರೆಸ್ ಸದ್ಯರಾಗಿರುವರಂತೆ ಕೊಂಗ್ರೆಸಿನಿಂದ ಕಮ್ಯೂನಿಸ್ಟರನ್ನು ಹೊರಗಿಡಬಾರದೆಂದು ಸರೋಜಿನಿ, ಹರಿಕೃಷ್ಣ ಮೆಹತಾಬ್, ಸಯ್ಯದ್ ಮುಂತಾದ ಮುಖಂಡರು ಸೂಚಿಸಿರುವರು. ಆದರೆ ಈ ಸಂದರ್ಭದಲ್ಲಿ ವರ್ಕಿಂಗ್ ಕಮಿಟಿಯ ಇನ್ನೊಬ್ಬ ಪ್ರಮುಖ ಸದಸ್ಯರಾದ ಡಾ. ಪಿ. ಸಿ. ಘೋಷ್ ಅವರು "ಎರಡು ಧ್ಯೇಯಗಳಿಗೆ ಪ್ರತಿಜ್ಞಾಬದ್ಧರಾದವರು ಒಂದು ಸಂಸ್ಥೆಯಲ್ಲಿರುವುದು ಅಪಾಯಕರ'ವೆಂದೂ ತಿಳಿಸಿರುವರೆಂದೂ ಇಲ್ಲಿಯ ಓರ್ವ ಕೊಂಗ್ರೆಸಿಗರು ತಿಳಿಸುತ್ತಾರೆ. ಆ ದೃಷ್ಟಿಯಿಂದ ಸಮಿತಿಯವರು ಮೇಲಿನ ನಿರ್ಧಾರ ಮಾಡಿರುವರಂತೆ. ಕೊಂಗ್ರೆಸಿನೊಳಗೆ ಸೇರಲಿಚ್ಛಿಸುವ ಕಮ್ಯೂನಿಸ್ಟರು ಕೊಂಗ್ರೆಸಿನೊಳಗೇ ಸೇರಿ ತಮ್ಮ ಧ್ಯೇಯಗಳನ್ನು ಏಕೆ ಪ್ರತಿಪಾದಿಸಬಾರದು? ಮತ್ತು ಬಹುಮತವನ್ನು ಏಕೆ ಗಳಿಸಲು ಪ್ರಯತ್ನಿಸಬಾರದು? ಎಂದೂ ಸದ್ರಿ ಕೊಂಗ್ರೆಸಿನರು ಪ್ರಶ್ನಿಸಿದರು. ಮಾತ್ರವಲ್ಲ 'ಕಮ್ಯೂನಿಸ್ಟರೂ ಇತರರಂತೆ ತಮ್ಮ ಸಂಸ್ಥೆಯನ್ನೆ ಬಲಪಡಿಸಿ ಕೊಂಗ್ರೆಸಿಗೆನೇ ಹಾತೊರೆಯುವುದಕ್ಕಿಂತ ಕೊಂಗ್ರೆಸಿಗರನ್ನೇ ತಮ್ಮ ಸಂಸ್ಥೆಗೆ ಸೇರುವಂತೆ ಪ್ರಚಾರ ಮಾಡಲಿ.' ಎಂದು ಮತ್ತೊಬ್ಬರು ತಿಳಿಸುತ್ತಾರೆ. ಅಂತೂ ದೇಶದಲ್ಲಿನ ಬಿಕ್ಕಟ್ಟು ಪರಿಹಾರವಾಗಿ ಸೌಮ್ಯ ಪರಿಸ್ಥಿತಿ ನೆಲೆಸುವಂತಿರುವಾಗ ಇಂತಹ ಪಕ್ಷ ಕಲಹಗಳೇಳದಿರಲೆಂದು ಹಾರೈಕೆ.

ಬಿರುದು:— ಚಕ್ರವರ್ತಿ ಜನ್ಮೋತ್ಸವದ ಸಂಬಂಧ ನಮ್ಮ ಜಿಲ್ಲಾ ಕಲೆಕ್ಟರ್ ರಾವ್ ಸಾಹೇಬ್ ಪಿ. ರಾಮದಾಸ್ ನ್ಯಾಡು ಬಿ. ಎ. ಅವರಿಗೆ 'ರಾವ್ ಬಹುದ್ದೂರ್' ಬಿರುದು ದೊರಕಿದೆ. ಈ ಜಿಲ್ಲೆಯಲ್ಲಿನ 'ಕಳ್ಳಸಂತೆ'ಯನ್ನು ಅಣಗಿಸುವುದರಲ್ಲಿಯೂ ಆಹಾರ ಬಟ್ಟೆ ಸರಬರಾಯಿ ವ್ಯವಸ್ಥೆಗಾಗಿ ರಾವ್ ಬಹುದ್ದೂರ್ ಪಿ. ರಾಮದಾಸ್ ಅವರು ಅವಿಶ್ರಾಂತ ಶ್ರಮಪಟ್ಟ ಕಲೆಕ್ಟರರಲ್ಲಿ ಒಬ್ಬರಾಗಿರುವರು.

ನಿಧನ:— ಜಿಲ್ಲೆಯ ಸುಪ್ರಸಿದ್ಧ ವರ್ತಕರೂ ವಾಣಿಜ್ಯ ಕ್ಷೇತ್ರದಲ್ಲಿ ಪ್ರಖ್ಯಾತರೂ, ಮಂಗಳೂರಿನ ಎಂ. ಎ. ಕೃಷ್ಣನಾಯ್ಕ್ ಎಂಡ್ ಸನ್ಸ್ ಎಂಬ ಕಟ್ಲೆರಿ ಮತ್ತು ಹಾರ್ಡ್‌ವೇರ್ ಸಂಸ್ಥೆಯ ಮಾಲ್ಹಕರೂ ಆಗಿದ್ದ ಶ್ರಿ. ಮಣೇಲ್ ಅಣ್ಣಪ್ಪ ನಾಯ್ಕರು ತಾ. ೧೭ನೇ ಆದಿತ್ಯವಾರ ಬೆಳಿಗ್ಗೆ ಮದರಾಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾಧಿಸುತ್ತೇವೆ. ಇಚೇಗೆ ವಿವಿಧ ಕ್ಷೇತ್ರಗಳಲ್ಲಿ ಶ್ರೀಯುತರು ತಮ್ಮ ವ್ಯಾಪಾರ ವಹಿವಾಟುಗಳನ್ನು ವಿಶಾಲಿಸಿದ್ದರು. ಇಲ್ಲಿಯ ಕೆನರಾ ಚೇಂಬರ್ ಆಫ್ ಕಾಮರ್ಸಿನ ಸ್ಥಾಪಕರೂ ಆಗಿದ್ದು ದಿವಂಗತ ನಾಯ್ಕರು ವ್ಯಾಪಾರಸ್ಥರ ಹಕ್ಕು ಬಾಧ್ಯತೆಗಳಿಗಾಗಿಯೂ ಐಕ್ಯತೆಗಾಗಿಯೂ ತುಂಬಾ ಶ್ರಮಿಸಿದ್ದರು. ಅವರಿಗೆ ಸಂಗೀತ ಕಲೆ ವೇದ ಪುರಾಣ ಶಾಸ್ತ್ರಗಳಲ್ಲೂ ತುಂಬಾ ಪ್ರೀತಿಮೆ ಇದ್ದು ವಿದ್ವಾಂಸ ಮಂಡಳಿಯಲ್ಲಿ ವಿಚಾರಪರ ವಿಷಯಗಳನ್ನು ಪ್ರತಿಪಾದಿಸುತಿದ್ದರು. ಮರಣಕ್ಕೆ ಕೆಲವು ಸಮಯ ಹಿಂದೆ ಇವರು ಸ್ವಲ್ಪ ಕಾಯಿಲೆ ಬಿದ್ದಿದ್ದು ಚಿಕಿತ್ಸೆಗಾಗಿ ಮದರಾಸಿಗೆ ಒಯ್ಯಲ್ಪಟ್ಟಿದ್ದರು. ದುಃಖ ಸೂಚಕಾರ್ಥವಾಗಿ ನಗರದ ಹಲವು ಪ್ರಮುಖ ವ್ಯಾಪಾರಿ ಸಂಸ್ಥೆಗಳು ಹರತಾಳವನ್ನಾಚರಿಸಿದ್ದವು. ಕೆನೆರಾ ಹೈಸ್ಕೂಲುಗಳಿಗೆ ರಜೆಗಳೂ ಕೊಡಲ್ಪಟ್ಟಿದ್ದುವು. ಮೃತರ ಆತ್ಮಕ್ಕೆ ಶಾಂತಿ ಕೋರುವೆವು.

ಕಾರ್ಕಳದ ಪ್ರಸಿದ್ಧ ವಕೀಲರೂ, ಸಹಕಾರಿ ಉದ್ಯಮ ಪ್ರಚಾರದಲ್ಲಿ ತುಂಬಾ ಅಭಿರುಚಿ ಶ್ರಮ ವಹಿಸಿದವರೂ ಆದ ಶ್ರೀಮಾನ್ ವಕೀಲ್ ಲಕ್ಷ್ಮಣ ಕುಡ್ವಾ ಅವರು ಮಂಗಳೂರಿನ ವೆನ್‌ಲೊಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಲಿದ್ದು ಗುಣಮುಖರಾಗಿ ಕಂಡುಬಂದಂತೆ ಅಕಸ್ಮಾತಾಗಿ ಅವರ ಕಾಯಿಲೆಯು ಪುನಃ ತೋರಿಕೊಂಡು ನಿಧನ ಹೊಂದಿದರೆಂದು ತಿಳಿಸಲು ವಿಷಾಧಿಸುತ್ತೇವೆ. ದಿವಂಗತರ ಆತ್ಮಕ್ಕೆ ಶಾಂತಿ ಕೋರುವೆವು.

ಸ್ಟೇಶನರಿಸರಬರಾಯಿ: ಜಿಲ್ಲೆಯ ಶಾಲೆಗಳಿಗೆ ಬೇಕಾದ "ಸ್ಟೇಶನರಿ"ದೊರಕಿಸಿ ಕೊಳ್ಳುವಲ್ಲಿ ತೊಂದರೆಯಾದರೆ ಆ ಶಾಲೆಗಳವರು ಕೂಡಲೇ ಬೇಕಾದ ಪದಾರ್ಥಗಳ ಇಂಡೆಂಟುಗಳ ಸಹಿತ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ಬರೆದುಕೊಳ್ಳಬೇಕಾಗಿದೆ.

ರೇಶ್ನಿಂಗ್ ಕಟ್ಲೆ: ರೇಶ್ನಿಂಗ್ ಕಾನೂನು ಮೀರಿ ಬತ್ತ ಮಾರಿದನೆಂಬ ಆರೋಪದ ಸಂಬಂಧ ಮಂಗಳೂರಿನ ಕೊರಗ ಮೂಲ್ಯ ಎಂಬವರ ಕಟ್ಲೆ ವಿಚಾರಣೆಯಾಗಿ I ಕ್ಲಾಸ್ ಮೆಜಿಸ್ಟ್ರೇಟರು ಆರೋಪಿಗೆ ೩ ತಿಂಗಳ ಶಿಕ್ಷೆಯನ್ನೂ ೨೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದ್ದರು. ಅಪೀಲಿನಲ್ಲಿ ಸೆಶ್ಶನ್ ಜಡ್ಜರು ಅವೆರಡು ದಂಡನೆಗಳನ್ನೂ ರದ್ದು ಮಾಡಿದರು.

ಕಲೆಕ್ಟರರ ಪ್ರಕಟನೆ ಮೀರಿ ೩೦ ಮುಡಿ ಬತ್ತ ಮಾರಿದನೆಂಬ ಆರೋಪ ಸಂಬಂಧ ಇಲ್ಲಿಯ ಸಬ್ ಡಿ|| ಮೆಜಿಸ್ಟ್ರೇಟರು ಸಜೀಪ ಪಡು ಗ್ರಾಮದ ನಾರಾಯಣ ಸೆಟ್ಟಿ ಎಂಬಾತನಿಗೆ ೩ ತಿಂಗಳ ಕಠಿಣ ಸಜೆ, ೨೦೦ ರೂ. ಜುಲ್ಮಾನೆ ವಿಧಿಸಿದ್ದರು. ಅಪೀಲಿನಲ್ಲಿ ಸೆ|| ಜಡ್ಜರು ಆರೋಪಿ ಈಗ ಅನುಭವಿಸಿದಷ್ಟು ಸಜೆ ಸಾಕೆಂದು ವಿಧಿಸಿ ಜುಲ್ಮಾನೆಯನ್ನು ಕಾಯಂ ಇರಿಸಿದರು.

ವೇತನ: ೧೯೪೫ನೇ ಮಾರ್ಚಿ ತಿಂಗಳಲ್ಲಿ ನಡೆದ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಮೊಗವೀರ ವಿದ್ಯಾರ್ಥಿನಿ ಅಥವಾ ಎಲ್ಲರಿಗಿಂತಲೂ ಹೆಚ್ಚಿಗೆ ಮಾರ್ಕು ಪಡೆದ ಮೊಗವೀರ ವಿದ್ಯಾರ್ಥಿಗೆ "ದಿವಂಗತ ಕೈಪುಂಜಾಲು ಚನ್ನಪ್ಪ ಸಾಹುಕಾರ ಸ್ಮಾರಕ ಚಿನ್ನದ ಪದಕ"ವನ್ನು ಕೊಡಲಿಕ್ಕಿರುವುದರಿಂದ ಸದರಿ ಪರೀಕ್ಷೆಯಲ್ಲಿ ಪಾಸಾದ ಮೊಗವೀರ ವಿದ್ಯಾರ್ಥಿನಿಗಳೂ ವಿದ್ಯಾರ್ಥಿಗಳೂ ತಮ್ಮ ಸಂಪೂರ್ಣ ಹೆಸರು ಮತ್ತು ಅವರು ಪಡೆದ ಮಾರ್ಕುಗಳನ್ನು ಅವರವರ ಶಾಲಾ ಹೆಡ್ ಮಾಸ್ತರರ ದಸ್ಕತು ಸಹಿತವಾಗಿ ಇದೇ ತಾ. ೨೫—೬—೪೫ರೊಳಗೆ "ಕಾರ್ಯದರ್ಶಿ, ಮೊಗವೀರ, ವ್ಯವಸ್ಥಾಪಕ ಮಂಡಳಿ 8 ನಾನಾ ಭಾಯಿಲೇನ್, ಕೋಟೆ, ಮುಂಬಯಿ" ಇಲ್ಲಿಗೆ ಕಳುಹಿಸಬೇಕು.

ಗೀತಾ ಪ್ರಬಂಧ ಸ್ಪರ್ಧೆ: "ಆಧುನಿಕ ಸಾಮಾಜಿಕ ಹಾಗೂ ನೈತಿಕ ಜೀವನದಲ್ಲಿ ಭಗವದ್ಗೀತೆಯ ಮಾರ್ಗ ದರ್ಶಕತ್ವ" ಎಂಬ ವಿಷಯದಲ್ಲಿ ಇಂಗ್ಲಿಷ್ ಸಂಸ್ಕೃತ, ತಮಿಳು, ತೆಲುಗು, ಕನ್ನಡ ಮತ್ತು ಮಲೆಯಾಳಿ ಈ ಭಾಷೆಗಳಲ್ಲಿ ಮೂರು ಸಾವಿರ ಶಬ್ದಗಳಿಗೆ ಮಿಕ್ಕದ ಪ್ರಬಂಧವನ್ನು ಬರೆದು "ಕಾರ್ಯದರ್ಶಿ, ಗೀತಾ ಸಮಿತಿ, ಸಂಸ್ಕೃತ ಕಾಲೇಜು ಮೈಲಾಪುರ, ಮದ್ರಾಸು" ಇಲ್ಲಿಗೆ ಕಳುಹಿಸಿಕೊಟ್ಟರೆ, ಅವುಗಳಲ್ಲಿ ಉತ್ತಮವಾದವುಗಳಿಗೆ ರೂ. ೭೫ ಬಹುಮಾನ ಕೊಡಲಾಗುವುದು. ಪ್ರಬಂಧ ತಲುಪಿಸುವ ತಾರೀಕು ೩೦—೭—೪೫.

ನ್ಯೂಯೋರ್ಕಿನಲ್ಲಿ ಕಳೆದ ೧೯೪೨ರಲ್ಲಿ ಕೃತಕ ರೀತಿಯಲ್ಲಿ ೧ಲಕ್ಷ ಕರುಗಳನ್ನು ತಯಾರಿಸಲಾಯಿತಂತೆ.

* * *

ಮೊತ್ತ ಮೊದಲು ಅಂಚೆ ಕಾರ್ಡನ್ನು ತಯಾರಿಸಿದ ಕೀರ್ತಿಯು ಆಸ್ಟ್ರಿಯಾದ ಡಾ| ಹರ್ಮನ್ ಎಂಬವರಿಗೆ ಸಲ್ಲತಕ್ಕದ್ದು ಈಗ ಇಡೀ ಜಗತ್ತಿನಲ್ಲಿ. ವರ್ಷವೊಂದಕ್ಕೆ ೭೫ಕೋಟಿಗೂ ಮಿಕ್ಕಿದ ಅಂಚೆ ಕಾರ್ಡುಗಳು ಉಪಯೋಗಿಸಲ್ಪಡುತ್ತವೆ.

* * *

ಸೋವಿಯಟ್ ರಷ್ಯದಲ್ಲಿ ೫೫ವಿವಿಧ ಜನಾಂಗಗಳಿವೆ. ಅಲ್ಲಿ ಒಟ್ಟಿಗೆ ೧೧೪ಬಾಷೆಗಳಿವೆ. ನಮ್ಮ ಹಿಂದೂದೇಶದ ಬೇರೆ ಬೇರೆ ಭಾಷೆಗಳ ಲೆಕ್ಕ ನೋಡಿದರೆ ೨೦೦ಕಿಂತಲೂ ಹೆಚ್ಚಿವೆ. ಸ್ವಂತ ಲಿಪಿಯಿಲ್ಲದೆ ಭಾಷೆಗಳನ್ನು ಕೂಡಿಸಿದರೆ ೩೦೦ ಆಗುತ್ತವೆಯೋ ಏನೊ!

ಉಷ್ಣ ಕಾಲದಲ್ಲಿ ನಿಮ್ಮ ಕಂಠದ ಕುರಿತು ಜಾಗ್ರತೆ ತೆಕ್ಕೊಳ್ಳಿರಿ.
ಶ್ವಾಸಯೋಗ್ಯ ಮಾತ್ರೆ ಪೆಪ್ಪಗಳನ್ನು
ಪೆಪ್ಪ ನಿಮ್ಮ ಬಾಯಲ್ಲಿ ಹಾಕಿದ ಕೂಡಲೆ ಕರಗಿ ಅತ್ಯುತ್ತಮ ಔಷಧಿ ರಸವನ್ನು ಹೊರಗೆಡವುದು. ಅದರಿಂದ ಕಂಬೆಣೆ, ಉರಿತ, ಎದೆನೋವು ಮೊದಲಾದ ತಿಕಬಾಧೆಗಳು ಗುಣ ಹೊಂದುವುದು.

ಪೆಪ್ಸ ತೆಕ್ಕೊಳ್ಳಿರಿ.
PEPS
ವಿಷಹಾರೀ ಸ್ವಾಸಯೋಗ್ಯಮಾತ್ರೆಗಳು

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ
ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಆದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು
CUTICURA OINTMENT

ಜನತಾ ಸರಕಾರದ ಆವಶ್ಯಕತೆ

ಭಾರತೀಯನ ಹೆಸರಿನ ಯುದ್ಧನಾವೆ

ಯುದ್ಧಾಂತ್ಯವನ್ನು ಕಾಯುವುದು ಅವಿವೇಕ

ರಾಜಾಜಿ ಮತ್ತು ಅಧಿಕಾರ ಸ್ವೀಕಾರ

“ನಮ್ಮ ದೇಶವು ಇಂದು ಅದೆಷ್ಟು ನಿರ್ಭಾಗ್ಯ ಪರಿಸ್ಥಿತಿಯಲ್ಲಿರುವುದೆಂದರೆ ವಿವೇಕವಂತರೂ ಕೂಡಾ ಏನನ್ನು ಹೇಳಬೇಕೆಂಬುದರ ಕುರಿತು ಕಳವಳಾವಸ್ಥೆಯಲ್ಲಿರುವರು” ಹೀಗೆಂದು ರಾಜಾಜಿಯವರು ಟ್ಯುಟಿಕೊರಿನ್‌ನಲ್ಲಿ ಓರ್ವ ದೇಶಭಕ್ತರ ಸ್ಮಾರಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಟ್ಯುಟಿಕೊರಿನಿನ ದಿವಂಗತ ಚಿದಂಬರಂ ಪಿಳ್ಳೆ ಎಂಬವರೇ ಆ ದೇಶಭಕ್ತರು. ದಕ್ಷಿಣ ಭಾರತದಲ್ಲಿ ಮೊದಲು ಸ್ವದೇಶಿ ಚಳವಳವನ್ನು ಪ್ರಾರಂಭಿಸಿದವರಲ್ಲಿ ಪಿಳ್ಳೆಯವರು ಅಗ್ರಗಣ್ಯರು. ‘ಭಾರತದ ಒಂದು ಯುದ್ಧನಾವೆಯನ್ನು ಅವರ ಹೆಸರಿನಿಂದ ನಾಮಕರಣ ಮಾಡಬಹುದು’ ಹೀಗೆಂದು ರಾಜಾಜಿಯವರು ದಿವಂಗತ ಪಿಳ್ಳೆಯವರ ಗುಣಕಂಥನ ಮಾಡಿದರು.

ರಾಜಕೀಯ ಪರಿಸ್ಥಿತಿ ಕುರಿತು ಮಾತನಾಡುತ್ತಾ ರಾಜಾಜಿಯವರು “ಹಿಂದೆ ನಡೆದುದೆಲ್ಲವನ್ನೂ ನಾವು ಮರೆತು ಮುಂದೇನು ಮಾಡಬೇಕೆಂಬುದರ ಕುರಿತು ಯೋಚಿಸೋಣ” ಎಂದರು. ಯುರೋಪಿನ ಯುದ್ಧ ಮುಗಿದಿರುವುದಾದರೂ ಜಪಾನ್ ಯುದ್ಧ ಮುಂದರಿಯುತ್ತಲಿದೆಯೆಂದೂ ಅದನ್ನು ಆದಷ್ಟು ಬೇಗನೇ ಮುಗಿಸಲು ಬ್ರಿಟಿಷರಿಗೆ ಮನಸ್ಸಿಲ್ಲವೆಂಬುದನ್ನು ವೃತ್ತ ಪತ್ರಿಕೆಗಳನ್ನು ಜಾಗರೂಕತೆಯಿಂದ ಓದುವುದರ ಮೂಲಕ ತಿಳಕೊಳ್ಳಬಹುದೆಂದೂ ತಿಳಿಸಿದರು. “ಬೇಗನೇ ಮುಗಿಸಲು ಅವರು ಇಚ್ಛೆ ಪಟ್ಟರೂ ಅದನ್ನು ಶೀಘ್ರದಲ್ಲಿ ಮುಗಿಸಲಿಕ್ಕೂ ಸಾಧ್ಯವಿಲ್ಲ. ಡಚ್ಚರ ವಸಾಹತುಗಳಿಂದಲೂ, ಚೀನಾ ಸಯಾಮುಗಳಿಂದಲೂ ಜಪಾನರನ್ನು ಓಡಿಸಲಿಕ್ಕಿದೆ. ಅದೇನು ಬಹಳ ಸುಲಭವಲ್ಲ” ಹೀಗೆಂದು ರಾಜಾಜಿಯವರ ಅಭಿಪ್ರಾಯ.

ಅಧಿಕಾರ, ಅಧಿಕಾರ!

‘ಮಾತ್ರವಲ್ಲ, ಬ್ರಿಟಿಷರಿಗೆ ಯುದ್ಧದ ಹೆಸರಿನಲ್ಲಿ ಭಾರತದ ಪ್ರಶ್ನೆಯನ್ನು ಮುಂದು ಹಾಕಲಿಕ್ಕೆ ಒಳ್ಳೇ ನೆಪವೂ ಬೇಕಾಗುತ್ತದೆ. ಅದಕ್ಕಾಗಿಯೇ ಅವರು ಮೇಲಿಂದ ಮೇಲೆ ಜಪಾನ್ ಯುದ್ಧವು ಕಷ್ಟದೆಂದೂ, ಅದು ದೀರ್ಘಕಾಲದ ತನಕ ಮುಂದುವರಿಯುವುದೆಂದೂ ಹೇಳುತ್ತಿರುವುದು. ಈ ಕುರಿತು ಜಪಾನಿಯರು ಒಂದು ಶಬ್ದವೂ ಮಾತಾಡುವುದಿಲ್ಲ. ಒಂದು ವೇಳೆ ಬಹು ಬೇಗನೆ ಜಪಾನರು ಶರಣಾಗತರಾದರೂ ಬ್ರಿಟಿಷರು ಅದನ್ನು ತಪ್ಪಿಸುವರೆಂದು ತೋರುತ್ತದೆ” ಹೀಗೆಂದೂ ಸಿ. ಆರ್‌ರು ಸೂಚಿಸಿದರು.

“ಯುದ್ಧಾಂತ್ಯದ ವರೇಗೆ ಭಾರತದ ಪ್ರಶ್ನೆ ಮುಂದೆ ಹಾಕುವುದು ಅವರ ಆಶಯ. ಆದರೆ ನಾವು ಮಾತ್ರ ಅದರಲ್ಲಿ ಭಾಗಿಯಾಗಬಾರದು” ತಮ್ಮ ಮತ್ತು ಇತರರೊಳಗೆ ಇರುವ ಭೇದಾಭಿಪ್ರಾಯವು ಅಧಿಕಾರ ಸ್ವೀಕಾರದ ಕುರಿತಲ್ಲವೆಂದು ತಿಳಿಸುತ್ತಾ ರಾಜಾಜಿಯರು ‘ಇತರರೂ ಅಧಿಕಾರ ಸ್ವೀಕಾರಕ್ಕೆ ವಿರೋಧಿಗಳಾಗಿಲ್ಲ. ನನಗೂ ಆ ಕುರಿತು ಹೆಚ್ಚು ಆಸಕ್ತಿಯುಲ್ಲ. ಆದರೆ ಭಾರತೀಯ ಸಮಸ್ಯೆಯು ಯುದ್ಧ ಅವಧಿಯೊಳಗೆ ಇತ್ಯರ್ಥವಾಗಬೇಕೆಂದು ನನ್ನ ಇಚ್ಛೆ. ಇತರರು ಯುದ್ಧಾನಂತರ ಅದರ ತೀರ್ಮಾನವಾಗಲೆಂದು ಹಾರೈಸುತ್ತಾರೆ” ಎಂದು ತಿಳಿಸಿದರು.

ಈಗಲೇ ಯಾಕೆ?

“ಯುದ್ಧಾನಂತರದ ವರೇಗೆ ಈ ಸಮಸ್ಯೆಯನ್ನು ಮುಂದರಿಸಬಾರದೆಂದು ನನ್ನ ಧೃಡ ನಿರ್ಧಾರ. ಇತರ ಮುಖಂಡರೂ ಈ ಕುರಿತು ಆಳವಾಗಿ ಯೋಚಿಸತಕ್ಕದ್ದು. ಅದರಿಂದ ಹಾನಿ ಇದೆ. ಅದಕ್ಕಾಗಿಯೇ ಈ ನಾಲ್ಕು ವರ್ಷಗಳಿಂದ ನಾನು ಚಳವಳ ಮಾಡುತಿದ್ದೇನೆ” ಹೀಗೆಂದು ಹೇಳುತ್ತಾ ರಾಜಾಜಿಯವರು ತಮ್ಮ ಕಾರಣಗಳನ್ನು ಈ ಕೆಳಗಿನಂತೆ ಸಂಕ್ಷೇಪವಾಗಿ ನಿರೂಪಿಸಿದರು:

“ಅರ್ಧ ಯುದ್ಧ ಮುಗಿಯುವಾಗಲಾದರೂ ಬ್ರಿಟನು ಮತ್ತು ಇತರ ಐರೋಪ್ಯ ರಾಷ್ಟ್ರಗಳು ಭಾರತದ ಕುರಿತು ಮಾತಾಡುತಿದ್ದಾರೆ. ಆದರೆ ಯುದ್ಧ ಸಂಪೂರ್ಣವಾಗಿ ಮುಗಿದ ಮೇಲೆ ಅವರು ಭಾರತದ ಪ್ರಶ್ನೆಯನ್ನೇ ಮರೆತು ಬರೀ ಶಾಂತಿ, ಶರ್ತಗಳ ಕುರಿತೇ ಚರ್ಚಿಸುವರು. ಭಾರತವು ಪಾರತಂತ್ರ್ಯದಲ್ಲಿರುವುದೇ ಜಗತ್ತಿನ ಶಾಂತಿಗೆ ಸಹಾಯಕವಾದರಿಂದ ಯುದ್ಧಕಾಲದಲ್ಲೇ ನಾವು ಆಡಳಿತವನ್ನು ವಹಿಸಿ ಶಾಂತಿ ಸಮ್ಮೇಳನದಲ್ಲಿ ನಮ್ಮ ಹಕ್ಕು ಬಾಧ್ಯತೆಗಳಿಗಾಗಿ ಕಾದಾಡಲು ಉಪಾಯಗಳನ್ನು ಮಾಡಬೇಕಾಗಿದೆ.

“ಇಂತಹ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವಾದರೂ ಏನಿರುವುದು? ಅಧಿಕಾರ ಸ್ವೀಕಾರಕ್ಕೆ ನಾವು ತಕ್ಕ ಕಾರಣಗಳನ್ನು ಹುಡುಕಿ ಬ್ರಿಟಿಷರಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಬೇಕು.

ಅಧಿಕಾರ ಜನರಿಗೆ

“ನಮಗೆ ಅಧಿಕಾರಬೇಕೆಂದಾಗ ಅದು ನನ್ನ ಸ್ವಂತಕ್ಕಲ್ಲ—ಅದು ದೇಶಕ್ಕೂ ಅದರ ಜನತೆಗೂ ಸಿಗಬೇಕಾದ ಅಧಿಕಾರ. ಸಮಯವನ್ನು ಆನಂದದಿಂದ ಕಳೆಯಲು ನನಗೆ ಅಧಿಕಾರವಲ್ಲ. ಯುದ್ಧಕಾಲದ ನಿರ್ಬಂಧಗಳಿಂದಲೂ ಸಹಾನುಭೂತಿ ಇಲ್ಲದ ಅಧಿಕಾರಿಗಳಿಂದಲೂ ದೇಶವು ಭಯಂಕರ ಸಂಕಷ್ಟಕ್ಕೊಳಗಾಗಿದೆ. ಜವಾಬುದಾರಿಕೆ ಇಲ್ಲದ ಆಡಳಿತಗಾರರ ವರ್ತನೆಯಿಂದ ಜನತೆಯು ಕಂಗಾಲಾಗಿರುವುದು. ಪ್ರತಿಯೊಬ್ಬರಿಗೂ ಸಲಾಂ ಹೊಡೆದೇ ಕೆಲಸ ನಡೆಸಬೇಕಾದ ದುಃಸ್ಥಿತಿ ಬಂದೊದಗಿದೆ. ಇದರಿಂದ ಜನತೆಯನ್ನು ತಪ್ಪಿಸಬೇಕಾದುದು ಕರ್ತವ್ಯ.

“ನಾನು ಗಾಂಧೀಜಿಯೊಡನೆ ಕಲಹ ಮಾಡುತ್ತೇನೆಂದು ಅನೇಕರು ಭಾವಿಸಿಕೊಂಡು ನನ್ನ ಮೇಲೆ ರೇಗಿಕೊಂಡಿರುವರು. ಗಾಂಧೀಜಿಯೊಡನೆ ಜಗಳ ಮಾಡಲು ನನ್ನಿಂದ ಎಂದಿಗೂ ಸಾಧ್ಯವಿಲ್ಲದ ಕೆಲಸ. ನನ್ನ ಅವರ ಸಂಬಂಧವು ಒಂದು ವಿಚಿತ್ರ ತರದ್ದಾಗಿದ್ದು ಅನೇಕರಿಗೆ ಅದರ ಮರ್ಮವೇ ತಿಳಿಯುವುದಿಲ್ಲ. ಯಾವ ಧೋರಣೆ ಅನುಸರಿಸಬೇಕೆಂಬುದರ ಕುರಿತು ನನ್ನ ಅವರೊಳಗೆ (ಗಾಂಧಿಯವರೊಳಗೆ) ಸ್ವಲ್ಪ ವ್ಯತ್ಯಾಸಗಳಿರಬಹುದು. ಆದರೆ ಅವರು ನನಗೆ ತಮ್ಮ ಬಳಿಯಲ್ಲೇ ಇರಲು ಇಚ್ಛಿಸುತ್ತಾರೆಂಬ ವಿಷಯ ಅನೇಕರಿಗೆ ತಿಳಿದಿಲ್ಲ.

‘ನಾವು ಎಲ್ಲಾ ಹೊಣೆಗಾರಿಕೆಯನ್ನೂ ಗಾಂಧೀಜಿಯ ಮೇಲೆ ವಹಿಸಬಾರದು. ಜನರೂ ಅದರಲ್ಲಿ ಸಹಭಾಗಿಗಳಾಗಿ ಸ್ವಲ್ಪವನ್ನು ಹೊರಬೇಕು. ಒಂದು ಸಲ ನಮ್ಮ ಅಭಿಪ್ರಾಯಗಳು ಅವರಿಗೆ ಸರಿಕಂಡರೆ ಅವರದನ್ನು ಪ್ರಕಟವಾಗಿ ನಿರ್ಭೀತಿಯಿಂದ ತಿಳಿಸಲು ಹಿಂಜರಿಯಲಾರರು.

ಗಾಂಧೀಜಿ ಮತ್ತು ರಾಜಾಜಿ

‘೧೯೩೭ರಲ್ಲಿ ಗಾಂಧೀಜಿಯುವರು **ಸ್ವತಃ ಅಧಿಕಾರ ಸ್ವೀಕರಿಸುವಂತೆ ಸಲಹೆ ಕೊಡಲಿಲ್ಲವೆ? ಈ ಸಲವೂ ಕೊಂಗ್ರೆಸಿನ ಮುಖಾಂತರ ಅವರು ಹಾಗೆ ಹೇಳಲು ಸಿದ್ಧರಿರುವರು.** ವೇವೆಲ್ ಸಾಹೇಬರು ತಮ್ಮ ಯೋಜನೆ ತಿಳಿಸಿದ ಮೇಲೆ ಯೋಚಿಸೋಣವೆಂದು ಕೆಲವರು ಅನ್ನುತಿರುವರು. ಇಷ್ಟು ವರ್ಷಗಳಿಂದ ಬ್ರಿಟಿಷ್ ಸರಕಾರದವರು ಹೇಳುತ್ತಾ ಇರುವುದಕಿಂತಲೂ ಹೆಚ್ಚಿನದನ್ನು ಅವರು ನಮಗೆ ಹೇಳಲಾರರು. ನಮ್ಮ ನಮ್ಮೊಳಗೆ ಭೇದವಿದೆ ಎಂಬ ಹಳೇ ಹಾಡನ್ನೇ ಅವರಾದರೂ ತಿಳಿಸುವರು. ಅವರು ಸಿದ್ಧರಿದ್ದಾರೆ ನಾವು ಮಾತ್ರ ತಯಾರಿಲ್ಲ ಎಂಬುದೇ ಅವರ ಪಲ್ಲವಿ.

“ಅವರು ಕೊಡುವುದು ನಾವು ಬಿಡುವುದು, ಇದೇ ಒಂದು ರೂಢಿಯಾಗ ಹತ್ತಿದೆ. **ಕದ್ದು ಹೋದ ಸೊತ್ತಿನಿಂದ ಒಂದಿಷ್ಟು ಅಂಶ ಬಂದರೂ ಅದನ್ನು ತೆಗೆದುಕೊಂಡು ಮತ್ತೆ ಸಂಪೂರ್ಣ ಸೊತ್ತಿಗಾಗಿ ಕಾದಾಡಬೇಕು.**

“ವರ್ಕಿಂಗ್ ಕಮಿಟಿ ಸದಸ್ಯರು ಹೊರಬರುವಂತಾಗಿ ಅವರು ನಿಷ್ಪಕ್ಷಪಾತ ದೃಷ್ಟಿಯಿಂದಲೂ ನಿರ್ವಿಕಾರ ಮನೋಭಾವನೆಯಿಂದಲೂ ಸದ್ಯದ ಪರಿಸ್ಥಿತಿಯನ್ನು ವಿಮರ್ಶಿಸಿ ಒಂದು ಇತ್ಯರ್ಥಕ್ಕೆ ಬರಬೇಕು. ಈಗಿನ ಈ ಗುಲಾಮತನವನ್ನೂ, ಈ ನಿರಂಕುಶ ಆಡಳಿತವನ್ನೂ ನಾವು ಅಂತ್ಯಗೊಳಿಸಬೇಕು. ಆದುದರಿಂದ ವ್ಯಾಸರಾಯರು ಏನೇ ಕೊಡಲಿ ಅದನ್ನು ಸ್ವೀಕರಿಸಿ ಮುಂದಿನ ಹಕ್ಕುಗಳಿಗಾಗಿ ಹೋರಾಡಬೇಕು.

“ಇದು ಪ್ರಜಾಪ್ರಭುತ್ವ ಸರಕಾರಗಳನ್ನು ಸ್ಥಾಪಿಸಲು ತಕ್ಕಕಾಲ. ಅದನ್ನು ಸ್ಥಾಪಿಸುವುದೇ ನನ್ನ ಇಚ್ಛೆ. ಜನರು ಈ ಕುರಿತು ಸರಿಯಾಗಿ ಯೋಚಿಸಬೇಕು. ಮತ್ತು ತಮ್ಮ ಅಭಿಪ್ರಾಯಗಳನ್ನು ತೊಡಕಿಲ್ಲದೆ ವ್ಯಕ್ತಮಾಡಬೇಕು.”

(೧ನೇ ಪುಟದಿಂದ)

ವಣೆ ಮುಗಿವ ತನಕ ಇಲ್ಲಿನ ಪ್ರಮುಖ ರಾಜಕೀಯ ಪಕ್ಷಗಳು ಈ ಯೋಜನೆಯ ಇತ್ಯರ್ಥವನ್ನು ಮುಂದೆ ಹಾಕಬಹುದೆಂದು ಕೆಲವು ಪತ್ರಿಕೆಗಳ ಅಭಿಪ್ರಾಯ.

ಹಿಂದೂ ಮುಸಲ್ಮಾನರೊಳಗಿನ ಬಿರುಕು ಇನ್ನಷ್ಟು ವಿಶಾಲಗೊಳ್ಳುವುದೆಂದು ಕೆಲವು ತಜ್ಞರೂ, ಅವರೊಳಗೆ ಐಕ್ಯವಾಗಬಹುದೆಂದು ಮತ್ತೆ ಕೆಲವರೂ ಅಭಿಪ್ರಾಯಪಟ್ಟಿರುವರು. ಅಂತೂ ಪ್ರಮುಖ ರಾಜಕೀಯ ಮುಖಂಡರು ತಮ್ಮ ಬುದ್ಧಿ ಸಾಮರ್ಥವನ್ನು ಪರಿಪೂರ್ಣವಾಗಿ ಉಪಯೋಗಿಸಿ ದೇಶಕ್ಕೆ ಸರಿಯಾದ ದಾರಿಯನ್ನು ತೋರಿಸಬೇಕೆಂದು ವಿಶ್ವವೇ ಹಾರೈಸುತ್ತದೆ.

ಇನ್ನೊಂದು ವಿಷಯವೆಂದರೆ ಒಂದು ಪಕ್ಷಕ್ಕೆ ವರ್ಕಿಂಗ್ ಕಮಿಟಿಯವರು ಸಹಾಯ ಮಾಡುವುದರ ಬದಲಿಗೆ ತೊಡಕನ್ನುಂಟು ಮಾಡಿದರೆಂದು ಬ್ರಿಟಿಷ್ ಸಾಮ್ರಾಜ್ಯ ವಾದಿಗಳಿಗೆ ತೋರಿದರೆ ಮತ್ತೆ ಮುಖಂಡರ ಬಂಧನಕ್ಕೆ ಪ್ರಾರಂಭವಾಗುವುದು. ಬಾಬು ರಾಜೇಂದ್ರ ಪ್ರಸಾದರು ಆಗಲೇ ‘ನಾವು ಜೈಲಿಗೆ ಹೋಗುವುದು, ಇಲ್ಲವೇ ಹೊರಬರುವುದು ಒಂದು ಸಾಮಾನ್ಯ ವಿಷಯವಾಗಿದೆ.’ ಎಂದುದರಲ್ಲಿ ಬಹಳ ಅರ್ಥವಿದೆ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ
“ಕಲ್ಯಾಂಜೀಸ್ ಮೆಟಲ್ ವೇರ್”
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

Buy the Best
CASHEW SHELL OIL
We have great pleasure to announce that we have placed on the market the best and purest Cashew Shell oil manufactured by us.
Packing — Tin of 35 lbs. nett or bulk in barrels.
Hindusthan Commodity Corporation Ltd.
Manufacturers & Exporters,
CANARA BANK BUILDING BUNDER Mangalore

ಜರ್ಮನಿಯಲ್ಲಿ – ?

ಸದ್ಯಕ್ಕೆ ಜರ್ಮನಿಯನ್ನು ಉತ್ತಮ ರೀತಿಯಲ್ಲಿ ನಡೆಯಿಸಿಕೊಂಡು ಹೋಗುವರೆ, ಉತ್ತಮ ವ್ಯವಸ್ಥೆಯು ಇಲ್ಲದುದರಿಂದ, ಅದರ ಆಡಳಿತವು ಮಿತ್ರ ಸೇನಾಪತಿಗಳಿಗೆ ಬಿಟ್ಟುಕೊಡಲಾಗಿದ್ದು ಆ ಬಗ್ಗೆ ಕಾರ್ಯಕ್ಷೇತ್ರಗಳು ನಿರೂಪಿಸಲಾಗಿದ್ದವಷ್ಟೆ. ಜರ್ಮನಿಯು ಲೋಕಶಾಂತಿಗೆ ನಿರಪಾಯಕಾರವಾಗುವ ತನಕ ಈ ವ್ಯವಸ್ಥೆಯು ಅಲ್ಲಿ ರೂಢಿಯಲ್ಲಿಡಲಾಗುವುದೆಂದೂ, ದೇಶದ ಆಡಳಿತವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸುವರೆ ಯಾವತ್ತೂ ವ್ಯವಸ್ಥೆಯು ಇಲ್ಲದುದರ ಕಾರಣವಾಗಿ ಅಲ್ಲಿ ಮಿತ್ರ ಸೈನ್ಯ ಕಾವಲಿನ ಆಡಳಿತ ಕ್ರಮವು ಜ್ಯಾರಿಗೆ ತರಲಾಗಿದೆ ಎಂದೂ, ಜರ್ಮನಿಯು ಒಂದು ರಾಷ್ಟ್ರವಾಗಿ ಬಾಳುವುದರಲ್ಲಿ ಮಿತ್ರರು ಯಾವತ್ತೂ ತಡೆಗಳನ್ನು ಹಾಕುವುದಿಲ್ಲವೆಂದೂ, ಆದರೆ ಜರ್ಮನಿಯಿಂದ ತಮಗಾದ ನಷ್ಟಕ್ಕೆ ತಕ್ಕ ಪ್ರಾಯಶ್ಚಿತ್ತವು ಜರ್ಮನಿಯಿಂದಲೆ ಆಗುವಂತೆ ಮಿತ್ರರು ನೋಡಿಕೊಳ್ಳುವರೆಂದೂ ಮೊಸ್ಕೊ ಆಕಾಶವಾಣಿಯಿಂದ ಸಾರಲಾಗಿದೆ. ಬಹಳ ರೋಷದಿಂದ ಕಾಳಗ ಕೊಟ್ಟ ಜರ್ಮನರು ಈಗ ಸೋಲಿನಲ್ಲಿ ಅತ್ಯಂತ ಶಾಂತತೆಯಿಂದ ವರ್ತಿಸುತ್ತಿರುವರಾಗಿ, ಜನರಲ್ ಐಸನ್‌ಹೋರವರ ಅಭಿಪ್ರಾಯವು. ಜನರಲ್ ಐಸನ್‌ಹೋರವರು ಸ್ವಲ್ಪ ಸಮಯಕ್ಕಾಗಿ ಸ್ವದೇಶಕ್ಕೆ ತೆರಳುವರೆಂದು ತಿಳಿದುಬಂದಿದೆ. ಜರ್ಮನಿಗೆ ತಲೆಎತ್ತುವ ಶಕ್ತಿಯು ಪ್ರಕೃತದಲ್ಲಿ ಮಾತ್ರವಲ್ಲ, ಅದು ಇನ್ನೂ ಬಹಳ ಸಮಯಕ್ಕೆ ಬಾರದೆಂದು ಅವರ ಅಭಿಪ್ರಾಯವು.

ಚೀನಾ ಲೆಂಟರ್ನ್

ಇದೊಂದು ಚೀನಾರಂಗದಲ್ಲಿ ದುಡಿಯುತ್ತಿರುವ ಅಮೇರಿಕನ್ ಯೋಧರಿಗಾಗಿ ಹಿಂದೂದೇಶದಿಂದ ಪ್ರಕಟವಾಗುತ್ತಿರುವ ಪತ್ರಿಕೆಯು. ಈ ಪತ್ರಿಕೆಯು ಕಲ್ಕತ್ತೆಯ ಅಮೃತಬಜಾರದ ಪತ್ರಿಕೆಯ ಕಾರ್ಯಾಲಯದಲ್ಲಿ ಛಾಪಿಸಲ್ಪಡುತ್ತಿದೆ. ವಿಮಾನಗಳ ಮೂಲಕ ಬರೆ ಐದು ತಾಸುಗಳೊಳಗೆ ಇದು ಕಲ್ಕತ್ತೆಯಿಂದ ಚೀನಾಕ್ಕೆ ಹೋಗುತ್ತಿದೆ. ಈ ಪತ್ರಿಕೆಗೆ ಅಮೇರಿಕಾದಲ್ಲಿ ವಾರ್ತಾಪತ್ರಿಕೆ ಸ್ಪರ್ದೆಯಲ್ಲಿ ಮೊದಲಿನ ಬಹುಮಾನವು ದೊರಕಿರುತ್ತದೆ. ಈ ಸ್ಪರ್ದೆಯಲ್ಲಿ ೫೦೦ ಪತ್ರಿಕೆಗಳು ಭಾಗವಹಿಸಿದ್ದವು. ಲೋಕವಾರ್ತೆಗಳನ್ನು ಸಂಗ್ರಹಿಸಿ ಬಿಸಿಬಿಸಿಯಾಗಿ ಸಾರುವುದರಲ್ಲಿ ಈ ಪತ್ರಿಕೆಯು ಪ್ರಥಮ ಶ್ರೇಣಿದ್ದೆಂದು ಈ ಬಹುಮಾನವು ಅದಕ್ಕೆ ದೊರಕಿದೆ.

ಜಪಾನಿನ ಸೋಲಿನ ಕುರಿತು ಉಹಾಪೂಹೆಗಳು

ಜಪಾನಿನ ಕುರಿತು ಉಹಾಪೂಹೆಗಳ ಸುರಿಮಳೆಯೇ ಸುರಿಯುತ್ತದೆ. ಇವುಗಳಲ್ಲಿ, ಕೆಲವು ಜಪಾನು ಇನ್ನು ಆರೆ ತಿಂಗಳಲ್ಲಿ ಸೋಲಿಸಲ್ಪಡುವುದೆಂದೂ ಹೇಳುತ್ತಿರುವಾಗ ಇನ್ನೂ ಕೆಲವು ಅದು ಸಂಪೂರ್ಣ ಶರಣು ಬರಲು ಬಹಳ ದೀರ್ಘ ಅವಧಿಯ ಹೋರಾಟವು ನಡೆಯಬೇಕೆಂದೂ ಒಂದು, ರಶ್ಯಾವು ಜಪಾನಿಗೆ ವಿರೋಧವಾಗಿ ಬೇಗನೆ ಯುದ್ಧ ಹೂಡುವುದೆಂದೂ ಒಂದು ವೇಳೆ ರಷ್ಯಾವು ಹಾಗೆ ಮಾಡದೆ ಇದ್ದರೆ ಜಪಾನೆ ರಷ್ಯದ ಮೇಲೆ ಬೀಳಬಹುದೆಂದು ರಷ್ಯವು ಮಿತ್ರರಿಗೂ ಜಪಾನಿಗೂ ನಡುವೆ ಸಂಧಾನದ ಯತ್ನಗಳಮಾಡುತ್ತಿದೆಯೆಂದೂ ಒಂದು, ಜಪಾನು, ಸಂಯುಕ್ತ ಅಮೇರಿಕಾವು ಇಂದು ಪರಸ್ಪರ ಹೋರಾಡುತ್ತಿರುವುದು ಅತೀ ಪ್ರಮಾದ ವಿಷಯವೆಂದು ಜಪಾನಿನ ಪ್ರಧಾನ ಅಮಾತ್ಯರು ಹೇಳಿದರೆಂದು ಇನ್ನೊಂದು; ಹೀಗೆ ಅನೇಕ ಬಗೆಯ ಉಹಾಪೂಹೆಗಳಿಂದ ಕೂಡಿದ ವಾರ್ತೆಗಳು ಹೊರಡುವುದರಿಂದ ಇದರಲ್ಲಿ ಯಾವದು ಸತ್ಯ, ಯಾವದು ಸುಳ್ಳು ಎಂಬುದನ್ನು ಖಂಡಿತವಾಗಿ ತಿಳಿಯಲು ಕಷ್ಟಸಾಧ್ಯವಾಗಿದೆ.

ಸಂ. ಅಮೇರಿಕಾಕ್ಕೆ ರಷ್ಯದ ಹೆದರಿಕೆಯೆ?

ಪ್ರಚಂಡ ರಷ್ಯದ ಎದುರು ಅಮೇರಿಕಾವು ಹೆದರಿ ನಡಗಲು ಪ್ರಾರಂಭಿಸಿದೆಯೆ? ಎಂಬ ಪ್ರಶ್ನೆಯನ್ನು ಹಾಕಿ, ನೂಯೋರ್ಕಿನ ‘ಡೈಲಿನ್ಯೂಸ್’ ಪತ್ರಿಕೆಯು, ಚರ್ಚಿಲ್ಲರ ಇಚೇಗಿನ ಭಾಷಣಗಳನ್ನು ಟೀಕಿಸುತ್ತಾ, ಇವುಗಳಿಂದ ಸದ್ಯದಲ್ಲೆ ಆಂಗ್ಲೊ-ರಷ್ಯಾ ತಿಕ್ಕಾಟವು ಉಂಟಾಗುವುದೆಂದು ತಿಳಿಯಬೇಕೆಂದೂ, ಬ್ರಿಟನು ರಷ್ಯಾದ ಮೇಲೆಕೈಮಾಡಿದರೆ, ರಷ್ಯವನ್ನು ಸೋಲಿಸಿ ಬಿಡಲು ಸಾಧ್ಯವಾಗದೆಂದೂ, ಈ ಕೆಲಸವು ನೆಪೊಲೀಯನನಿಂದ ಸಾಧ್ಯವಾಗಲಿಲ್ಲ; ಹಿಟ್ಲರನಿಂದ ಸಾಧ್ಯವಾಗಲಿಲ್ಲ, ಎಂದೂ ಚರ್ಚಿಲ್ಲರೂ ಮತ್ತು ಅವರ ಟೋರಿ ಅನುಯಾಯಿಗಳು ರಷ್ಯದ ಬಲದ ಕುರಿತು ಏನು ಭಾವಿಸಿರುವರೆಂದೂ ಎಂಬ ಪ್ರಶ್ನೆ ಹಾಕಿಯೂ, ಆಂಗ್ಲೊ-ಅಮೇರಿಕಾನರು ತನ್ನ ಹೃದಯ ಪರಿಶೋಧಿಸಿ ರಷ್ಯದ ಮಹತ್ವವು ಯಾವುದು? ಹಿಟ್ಲರನ ಪ್ರಚಂಡ ಬಲವು ನುಚ್ಚುನುರಾಗಲು ಕಾರಣವೇನು, ಎಂಬುದನ್ನು ತಿಳಕೊಳ್ಳಬೇಕಾಗಿಯೂ, ಒಂದು ಲೇಖವನ್ನು ಬರೆದಿರುತ್ತದೆ.

ಚರ್ಚಿಲ್ಲರು “ಕೂಸಿನಂತೆ ಅತ್ತಿದ್ದರಂತೆ”

ವಿನ್‌ಸ್ಟನ್ ಚರ್ಚಿಲ್ಲರು, ೧೯೪೦ರ ಜೂನ್‌ನಲ್ಲಿ ಫ್ರಾನ್ಸು ನಾಜಿಗಳಿಗೆ ಶರಣ ಹೋಗುವುದನ್ನು ತಡೆಯಲು ಪೆರಿಸ್ ನಗರಕ್ಕೆ ಹಾರಿಹೋಗಿದ್ದ ಸಮಯ, ಅವರು ಕೂಸಿನಂತೆ ಅತ್ತಿದ್ದರೆಂದೂ, ಫ್ರಾನ್ಸಿನ ಶಾಸನ ಸಭೆಯ ಅಧ್ಯಕ್ಷರಾದ, ಎಡ್ವರ್ಡ್ ಹೆರಿಯಟರು, ಮೊನ್ನೆ ತಾವು ವಿಮೋಚನೆಯಾದ ಮೇಲೆ ಪ್ರೆಂಚ್ ಶಾಸನ ಸಭೆಯಲ್ಲಿ ಮಾಡಿದ ತಮ್ಮ ಪ್ರಥಮ ಭಾಷಣದಲ್ಲಿ ತಿಳಿಸಿದರು. ಅವರು ತಮ್ಮ ಈ ಭಾಷಣದಲ್ಲಿ ಮುಖ್ಯವಾಗಿ ಆಂಗ್ಲೊ-ಪ್ರೆಂಚ್ ಸಂಭಂದಗಳ ಕುರಿತೆ ಪ್ರಸ್ತಾಪಿಸಿದ್ದರು. ಅಂದು ಬ್ರಿಟನು ನಮ್ಮೊಡನೆ, ಮೊಣಕಾಲೂರುತ್ತಿದ್ದರೆ, ಆಗ ನಮ್ಮ ಗತಿಯೆ ಬೇರೆಯಾಗುತಿತ್ತು. ನಾವು ಇಂದು ಒಕ್ಕಟ್ಟಿನಲ್ಲಿರುವ ಬದಲಾಗಿ, ನಮ್ಮಲ್ಲಿಗೆಸ್ಟೆಪೊಗಳ ಆಗಮನವಾಗುತಿತ್ತು. ಫ್ರಾನ್ಸಿಗೂ ಇಂಗ್ಲಾಂಡಿಗೂ ನಡುವೆ ಕೆಲವು ಚಿಕ್ಕಪುಟ್ಟ ಕಲಹಗಳು ಆಗಾಗ್ಯೆ ಉಂಟಾಗುತ್ತಿವೆ ನಿಜ. ಆದರೆ ತಮ್ಮ ಧುರೀಣರೆಲ್ಲರೂ ದುಡುಕಿದಾಗ ಬ್ರಿಟನು ತಲೆ ತಗ್ಗಿಸದೆ ನಿಂತುದನ್ನು ನಾವು ಎಂದಿಗೂ ಮರೆತುಬಿಡಬಾರದು. ೧೯೪೦ರಲ್ಲಿ ಬ್ರಿಟನು ಆರ್ಮಿಸ್ಟಿಸ್ ಪತ್ರಕ್ಕೆ ಸಹಿಹಾಕುತಿದ್ದರೆ ಆಗ ನಮ್ಮ ಗತಿ ಏನಾಗುತಿತ್ತು? ಬಹಳ ಹಿಂದಿನಿಂದ ನಡೆದುಬಂದ ನಮ್ಮ ಮೈತ್ರಿಯನ್ನು ನಾವು ಮನ್ನಿಸಲೆಬೇಕು. ಸತ್ಯ ಮತ್ತು ಸ್ವಾತಂತ್ರ್ಯಕ್ಕಾಗಿ ಬ್ರಿಟನು ಹೋರಾಡಿತು ಇದನ್ನು ನಾವು ಎಂದಿಗೂ ಮರೆಯಬಾರದು.”

“ಸಂ. ಅಮೇರಿಕಾದ ಅಧ್ಯಕ್ಷ ಪದವಿಯಲ್ಲಿ ರೂಸ್‌ವೆಲ್ಟರಂತ ಪುರುಷರೂ ಇಲ್ಲದಿರುತ್ತಿದ್ದರೆ, ಅಮೇರಿಕಾವು ಈ ಯುದ್ಧದಲ್ಲಿ ಕೈಹಾಕದೆ ಸುಮ್ಮನೆ ಕುಳಿತುಬಿಡುತ್ತಿದ್ದರೆ, ರಷ್ಯನರು ಜರ್ಮನಿಯ ಹೆಚ್ಚಿನ ಬಲವನ್ನು ವಿರೋಧಿಸಿ ಹೋರಾಡುವ ಶ್ರಮವನ್ನು ವಹಿಸದಿರುತ್ತಿದ್ದರೆ, ಆಗ ಏನಾಗುತಿತ್ತೊ? ಸತ್ಯವನ್ನೆ ತಿಳಿದು ವರ್ತಿಸಿರಿ. ಇತರರ ಮಾತುಗಳಿಂದ ಮರುಳಾಗಬೇಡಿರಿ”

“ರಷ್ಯಾ ಅಮೇರಿಕಾಗಳೊಡನೆ ಹೋಲಿಸಿ ನೋಡಿದರೆ ನಮ್ಮದೊಂದು ಅತಿ ಸಣ್ಣ ರಾಷ್ಟ್ರ. ಆದುದರಿಂದ ಅತಿ ಕಠಿಣ ಪ್ರಸಂಗದಲ್ಲಿ ತಮ್ಮ ಗೌರವವನ್ನು ಎತ್ತಿಹಿಡಿದ ಡಿ'ಗೊಲೆಯವರ ನಾಯಕತ್ವದಲ್ಲಿ ನಾವು ಅವರೊಡನೆ ಒಕ್ಕಟ್ಟನ್ನು ಸಾಧಿಸುವುದು, ನಮಗೆ ಒಳಿತಿದೆ.”

NOTICE

In the Court of the District Munsif of Udipi

O. S. No. 222/ 1945

Between:–
S. Venkatesha Pai **Plaintiff.**
AND
Subbanna Shettigara & another– **Defendants.**

Notice under Order I, Rule 8 of C. P. Code

Please take notice that the plaintiff has filed the above suit against the defendants both on his behalf and also as representing the general body of Creditors of the 2nd defendant, Koraga Shettigara, son of Nagappa Shettigara of Varamaballi Village. The suit is posted for 5-7-'45 for service of notice on the defendants and such of the Creditors desirous of contesting the suit may do so by putting in their appearance on that day.

M. Damodar Kamath.
Advocate for plaintiff.
Udipi, Dated 19-6-1945.

The Canara Banking Corporation, Ltd.
(Incorporated in British Inbia)
ESTD: 1906
Head Office: UDIPI, SOUTH KANARA.
ANNOUNCEMENT
A branch of the Bank has been opened at Camp Bazaar, CANNANORE, on 18—5—1945.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ
ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.
ಪ್ರಯಾಣ ಮಾಡಲೇ ಬೇಕೆಂದಿರುವಾಗ
ಅತ್ಯಲ್ಪ ಸಾಮಾನನ್ನ ನಿಮ್ಮೊಡನೆ ಇಟ್ಟಕೊಳ್ಳಿರಿ.
ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.
JOINT MANAGERS,
The Combined Booking Agency, MANGALORE.
The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಏಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ರೋಗಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 29—6—1945 [ಸಂಚಿಕೆ 15]

ನೆಹರು ದೃಷ್ಟಿಯಲಿ ಕಮ್ಯೂನಿಸ್ಟರು

ಭಾರತೀಯ ಪರಿಸ್ಥಿಯ ಸಿಂಹಾವಲೋಕನ

ಸೈನ್ಯಗಳ ಮೇಲೆ ರಾಷ್ಟ್ರಿಯತೆಯ ಪ್ರಭಾವ

"ಸುಭಾಸ್ ಭೋಸರ ಧೋರಣೆ ತಪ್ಪು"

"ಕೊಮ್ಯುನಿಷ್ಟರ ಧೋರಣೆಯು ಪ್ರಾಮುಖ್ಯವಾಗಿ ತಾವಿರುವ ದೇಶದ ಪರಿಸ್ಥಿತಿಗನುಸಾರವಾಗಿರದೆ ಅದು ರಷ್ಯದ ವಿದೇಶಾಂಗ ಧೋರಣೆಯ ದೃಷ್ಟಿಕೋನದಿಂದಲೇ ಅವಲೋಕಿಸಿದ್ದಾಗಿರುತ್ತದೆ." ಹೀಗೆಂದು ಪಂಡಿತ್ ನೆಹರು ಅವರು ಬೊಂಬ್ಯಾಯಲ್ಲಿನ ಒಂದು ಪತ್ರಿಕಾಪ್ರತಿನಿಧಿಕೂಟದಲ್ಲಿ ದೇಶಪರಿಸ್ಥಿತಿಯನ್ನು ವಿಮರ್ಶಿಸುತ್ತಾ ತಿಳಿಸುವವರಾದರು. ರಷ್ಯನರ ಸಾಹಸವು ಶ್ಲಾಘನಾರ್ಹವೆಂದೂ ಅವರ ಮೇಲೆ ತುಂಬಾ ಸಹಾನುಭೂತಿಯಿದೆಯೆಂತಲೂ ತಿಳಿಸುತ್ತಾ ಪಂಡಿತ್‌ಜಿಯವರು; 'ರಷ್ಯನರ ಧೋರಣೆಯು ನಮ್ಮ ಧ್ಯೇಯಗಳಿಗೆ ಸಾಧಕ ಇಲ್ಲವೆ ಭಾದಕವಾಗಿದೆಯೋ ಎಂಬುದೇ ಮುಖ್ಯ ಪ್ರಶ್ನೆ' ಎಂದರು.

'ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಧ್ಯೇಯ ದೋರಣೆಗಳಿಗೆ ಘರ್ಷಣೆಯುಂಟಾದಾಗ ಸ್ವರಾಷ್ಟ್ರ ಧೋರಣೆಯೇ ಜಯಿಸುವುದು. ಸ್ವತಂತ್ರ ಬೃಹದ್ರಾಷ್ಟ್ರಗಳ ವಿಷಯದಲ್ಲಿ ಇದು ನಿಜವಾಗಿದ್ದರೆ ಪರತಂತ್ರ ಭಾರತದ ವಿಚಾರದಲ್ಲಂತೂ ಇನ್ನೂ ಹೆಚ್ಚು ಸತ್ಯವಾಗಿದೆ.' ಹೀಗೆಂದರು ನೆಹರು.

ಕೊಂಗ್ರೆಸ್ ಲೀಗ್ ಐಕ್ಯಕ್ಕೂ, ಮುಖಂಡರ ಬಿಡುಗಡೆಗೂ ಕಮ್ಯೂನಿಷ್ಟರು ಒತ್ತಾಯಪಡಿಸಲಿಲ್ಲವೆ ಎಂಬುದಕ್ಕೆ ನೆಹರುಗಳು ಹೀಗೆಂದರು: 'ಕೊಮ್ಯೂನಿಸ್ಟರು ತಮ್ಮ ಜೀವನದ ಒಂದು ಅಪೂರ್ವ ಸುಸಂಧಿಯನ್ನು ಕಳಕೊಂಡರು. ಈ ಮೂರು ವರ್ಷಗಳಲ್ಲಿ ಅವರು ಸ್ವಲ್ಪ ಬೇರೊಂದು ತರದಲ್ಲಿ ವ್ಯವಹರಿಸಿದ್ದರೆ ಅವರ ಪಕ್ಷವು ಅತಿ ಬಲಾಢ್ಯವಾಗುತಿತ್ತು. ಭಾರತದ ಇತಿಹಾಸದ ಒಂದು ಸಂದಿಗ್ಧ ಸಮಯದಲ್ಲಿ ಯಾರಿಗಾದರೂ ತಟಸ್ಥರಾಗಿರುವುದು ಕಷ್ಟಸಾಧ್ಯವೇ ಸರಿ. ಆದರೆ ಅವರು ಎದುರು ಪಕ್ಷವನ್ನು ಸೇರಿದರು. ಒಂದು ವೇಳೆ ಅವರ ಧೋರಣೆ ಸರಿಯಿರಬಹುದು. ಆದರೂ ಆ ಧೋರಣೆಯ ವ್ಯವಹಾರ ನಿರ್ವಹಣೆಯೇ ಮುಖ್ಯವಾದ ಪ್ರಶ್ನೆ.' ಕೊಮ್ಯುನಿಸ್ಟರ ವ್ಯವಸ್ಥಾಶ್ರಮಕ್ಕೆ ನೆಹರುಗಳು ತುಂಬಾ ಶ್ಲಾಘನೆ ಇತ್ತರು.

ಸೈನ್ಯ ಮತ್ತು ರಾಷ್ಟ್ರೀಯತೆ

ಭಾರತೀಯ ಸೈನ್ಯಗಳು ಅಸಾಮಾನ್ಯ ಶಕ್ತಿ ಸಾಮರ್ಥದವುಗಳಾಗಿದ್ದು ಸಂದರ್ಭ ಸಿಕ್ಕಿದಲ್ಲಿ ಅವು ಪ್ರಶಂಸಾರ್ಹವಾಗಿ ವ್ಯವಹರಿಸಿವೆಯೆಂದು ತಿಳಿಸುತ್ತಾ ನೆಹರುಗಳೆಂದರು: 'ಸೈನ್ಯಗಳಿಗೆ ರಾಷ್ಟ್ರೀಯತೆಯ ಬಣ್ಣ ಕೊಡುವುದರಿಂದ, ಇನ್ನೂ ಹೆಚ್ಚಿನ ಪರಿಣಾಮಕಾರಿ ಫಲಗಳು ಖಂಡಿತ ದೊರಕುತಿದ್ದುವು."

ಕ್ರಿಪ್ಸ್ ಸಂದಾನ ಕಾಲದಲ್ಲಿ ನೆಹರುಗಳು ಸರ್‌ಸ್ಟಾಫರ್ಡ್‌ರಿಗೆ ಹೀಗೆ ಕೇಳಿದ್ದರು: 'ನಾವು ಸರಕಾರ ವಹಿಸಿಕೊಂಡರೆ ಭಾರತೀಯ ಸೈನ್ಯವನ್ನು ರಾಷ್ಟ್ರೀಯ ಮನೋಭಾವನೆಯದಾಗಿ ಮಾಡುವುದು ನಮ್ಮ ಮೊದಲ ಕೆಲಸವನ್ನಾಗಿ ಮಾಡುತಿದ್ದೆವು. ಜನರು ಮತ್ತು ಸೈನ್ಯಗಳೊಳಗಿನ ಭೇದಾಭೇದಗಳನ್ನು ಕಿತ್ತು ಹಾಕಲು ಪ್ರಯತ್ನಿಸುತ್ತಿದ್ದೆವು. ಅವರು ನಿಜವಾಗಿ ಪ್ರಜಾಪ್ರಭುತ್ವಕ್ಕೂ ದೇಶ ಸ್ವಾತಂತ್ರಕ್ಕೂ ಹೋರಾಡುತ್ತಿರುವಂತೆ ಮಾಡುತಿದ್ದೆವು.'

ಇದಕ್ಕೆ ಕ್ರಿಪ್ಸರು 'ಈಗಿನ ಭಾರತೀಯ ಸೈನ್ಯ ರಾಷ್ಟ್ರೀಯ ಸೈನ್ಯವಲ್ಲ. ಅದು ಬ್ರಿಟಿಷ್ ಸೈನ್ಯದ ಒಂದು ಭಾಗ—ಅಷ್ಟೆ. ಆದುದರಿಂದ ಹಾಗೆ ಮಾಡಲು ಸಾಧ್ಯವಿಲ್ಲ.' ಎಂದಂರತೆ.

ಹಾಗಾದರೆ ಪ್ರತ್ಯೇಕ ಒಂದು ಭಾರತೀಯ ದಳವನ್ನೇರ್ಪಡಿಸಿದರೆ ಹೇಗೆಂದು ಪ್ರಶ್ನಿಸಿದಾಗ ಕ್ರಿಪ್ಸ್ ಸಾಹೇಬರು 'ಅದು ಕೂಡಾ ಸೇನಾಪತಿಯ ಕೈಕೆಳಗಿರಬೇಕಾಗುವುದು' ಎಂದರು.

ಈಗಿನ ಹಿಂದೀ ಸೈನಿಕರು 'ಸಂಬಳದ ದಾಳುಗಳು' ಎಂದು ಕೊಂಗ್ರೆಸ್ ಠರಾವುಗಳಲ್ಲಿ ನಿರೂಪಿಸಿದ್ದು ಸೈನ್ಯಗಳನ್ನು ನಿಂದಿಸಲೋಸುಗವಲ್ಲ. ಅವುಗಳ ಸ್ಥಾನಮಾನವನ್ನು ನ್ಯಾಯದೃಷ್ಟಿಯಿಂದ ಸ್ಪಷ್ಟೀಕರಿಸಲು ಆ ಶಬ್ದವನ್ನು ಉಪಯೋಗಿಸಿದೆಂದು ಪಂಡಿತ್‌ಜಿಯವರು ತಿಳಿಸುವವರಾದರು.

ಈಗಿನ ಯುದ್ಧಕ್ಕೆ ಸೇರಿದ ಭಾರತೀಯ ಸೈನಿಕರನ್ನು ಯುದ್ಧಾನಂತರ ನಿಶಸ್ತ್ರೀಕರಿಸುವ ಸಮಸ್ಯೆಯು ಬಹಳ ಕಠಿಣವಾದುದು: ಬ್ರಿಟಿಷ್ ಸರಕಾರಕ್ಕೇ ಅದು ಕಷ್ಟಸಾಧ್ಯವಾದುದು ಎಂದು ಹೇಳುತ್ತಾ ಪಂಡಿತರು 'ಭಾರತೀಯ ಸೈನಿಕನು ರಾಷ್ಟ್ರೀಯವಾದಿಯಾಗಿದ್ದಾನೆ' ಎಂದರು.

ಒಗಸ್ಟ್ ಗಲಭೆ.

ಈ ಗಲಭೆಯ ಕುರಿತು ವರ್ತಮಾನ ಪತ್ರಿಕೆಗಳ ಆಧಾರಗಳಿಂದ ಒಂದು ಅಭಿಪ್ರಾಯ ಕೊಡಲು ಬರುವುದಿಲ್ಲ. ಆದರೆ ಭಾರತೀಯನೊಬ್ಬನ ಸರ್ವಸಾಮಾನ್ಯ ಮನಸ್ಸು 'ನಮ್ಮನ್ನು ತಳ್ಳಿ ಮೂಲೆ ಪಾಲು ಮಾಡುವವರು ನರಕಕ್ಕಿಳಿಯಲಿ' ಎಂದಿರುತ್ತದೆ. ಹಿಂಸೆ ಅಥವಾ ಅಹಿಂಸೆ—ಏನೇ ಇರಲಿ—ಯಾವನೊಬ್ಬನಾಗಲಿ, ಇಲ್ಲವೆ ಯಾವ ಅಧಿಕಾರವೇ ಆಗಲೀ ತಮ್ಮನ್ನು ಒದೆದು ತಳ್ಳಿದರೆ ಅಂತಹ ಸಂದರ್ಭದಲ್ಲಿ ಧೈರ್ಯಸ್ಥೈರ್ಯಗಳನ್ನು ತೋರಿಸುವುದು ಜನರಿಗೆ ಹೆಚ್ಚು ಮಹತ್ವದ್ದು.'

'ಇನ್ನೊಂದು ಸಲ ಬ್ರಿಟಿಷ್ ಸರಕಾರದವರು ದಾಳಿಯನ್ನಾರಂಭಿಸಿದರೆ ನಮ್ಮ ಪ್ರತಿಯೊಬ್ಬ ಮನುಷ್ಯನು ಅವನು ಎಲ್ಲೂ ಇರಲಿ-ಅದನ್ನು ಎದುರಿಸುವುದೇ ಖಂಡಿತ. ಅನೇಕರು ಅದಕ್ಕೆ ಬಗ್ಗಿ ಸುಮ್ಮಗಿರಬಹುದು. ಇಂತಹ ವರ್ತನೆಗೆ ತಲೆತಗ್ಗಿಸುವ ಜನಾಂಗವು ಜೀವನ್ಮೃತವೇ ಸರಿ. ನನ್ನ ಜನರು ಜೀವನ್ಮೃತರಾಗಿರಬೇಕೆಂದು ನಾನು ಬಯಸುವುದಿಲ್ಲ. ಆದುದರಿಂದ ಅಂತಹದೇನಾದರೂ ನಡೆದರೆ ಅದನ್ನು ಎದುರಿಸಿಯೇ ತೀರಬೇಕು.' ಇದು ನೆಹರುಗಳ ಅಭಿಪ್ರಾಯ.

ಬೊಂಬ್ಯಾ ಯೋಜನೆ, ಕಳ್ಳಸಂತೆ

'ಎಂತಹ ಶ್ರೇಷ್ಠ ಯೋಜನೆಯೇ ಆಗಿರಲಿ ಅದನ್ನು ಸಿಕ್ಕಾ ಬಟ್ಟೆ ಜನರು ನಿರ್ವಹಿಸಿದರೆ ಅದರಿಂದ ದೇಶಕ್ಕೆ ಹಾನಿಯುಂಟು. ಬೊಂಬ್ಯಾ ಯೋಜನೆಯ ಪ್ರಕಾರ ಶೀಘ್ರ ಅವಧಿಯಲ್ಲಿ ಜನತೆಯ ಜೀವನದಲ್ಲಿ ಒಂದು ಬದಲಾವಣೆಯುಂಟು ಮಾಡಬೇಕೆಂದಿದೆ. ಆದರೆ ಇದನ್ನು ಕಾರ್ಯರೂಪಕ್ಕೆ ತರುವಂತಹ ಅಧಿಕಾರ ಯಾರದು?'.

ಕಳ್ಳ ಸಂತೆಯ ವಿಚಾರ ಜವಹರಲಾಲರು ಹೀಗೆಂದರು: 'ನಿರಂಕುಶ ಅಧಿಕಾರ ತೋರಿಸುವ ವಿದೇಶಿ ಸರಕಾರವಿದ್ದೆಡೆಗಳಲ್ಲಿ ಸಾತ್ವಿಕ ಪುರುಷರಿಗೆ ಸ್ಥಾನವಿಲ್ಲ. ಅನೇಕ ಜನರ ನೈತಿಕ ಅಧಪತನವು ಅಲ್ಲಿ ಉಂಟಾಗುವುದು. ಬಂಗಾಳದಲ್ಲಿನ ಕೆಲವರು ಅಲ್ಲಿ ಸತ್ತವರಲ್ಲಿನ ಒಂದುವರೆ ಮಿಲಿಯದ ಪ್ರತಿಯೊಬ್ಬನಿಗೆಂಬಂತೆ ಒಂದೊಂದು ಸಾವಿರ ರೂಪ್ಯಾಯಂತೆ ಲಾಭಗಳಿಸಿರುವರಂತೆ (ಒಬ್ಬನಿಗೆ ಒಂದು ಸಾವಿರ ರೂಪ್ಯಾ ಲಾಭ ಮಾಡಬೇಕಾದರೆ ಒಬ್ಬನಿಗೆ ಕೊಲ್ಲುವಷ್ಟು ಆಹಾರವಸ್ತುಗಳನ್ನು ಅವನು ಗುಪ್ತವಾಸ್ತಾನಿರಿಸಬೇಕು.) ಇದು ಅಮಾನುಷೀಕವೂ ಅಸ್ಯಹವೂ ಆದುದಾಗಿದೆ.

'ನಾನೊಂದು ಇರುವೆಯನ್ನು ಕೊಲ್ಲಲಾರೆ, ಆದರೆ ಆ ದುರಂತಕ್ಕೆ ಸಂಬಂಧಪಟ್ಟ ಲಾಭಖೋರರನ್ನು ಪ್ರಾಣ ಹೋಗುವ ತನಕ ತೂಗಾಡಿಸಿದರೆ ನನಗೆ ಪರಮಸಂತೋಷವಾದೀತು.'

ಸುಭಾಸ್‌ರ ದೋರಣೆ.

ತಮ್ಮ ಮಾತುಕತೆಯ ಅಂತ್ಯದಲ್ಲಿ ನೆಹರುಗಳು ಸುಭಾಸ್ ಚಂದ್ರಬೋಸರ ಕುರಿತು ತಿಳಿಸುತ್ತಾ ಹೀಗೆಂದು ಮುಗಿಸಿದರು:

'ಬೋಸರು ಒಂದು ಭಾರತೀಯ ಸೈನ್ಯ ಸಮೇತರಾಗಿ ಭಾರತದ ಬಂಧವಿಮೋಚನೆಗೆ ಬರುವುದಾಗಿ ೧೯೪೨ರಲ್ಲಿ ಒಂದು ಸುದ್ದಿ ಇತ್ತು. ಆಗ ನನ್ನ ಧೋರಣೆ ಏನೆಂದು ಕೇಳಿದಾಗ ನಾನು ಹೀಗೆ ಹೇಳಿದೆ:'ಅಂತಹ ಸಂದರ್ಭದಲ್ಲಿ ನಾನು ಅವರನ್ನು ಎದುರಿಸಿ ಹೋರಾಡುವೆನು. ಕಾರಣ ಅವರು ಜಪಾನೀಯರ ಕೈಕೆಳಗೆ ಬರುವರು. ಅದರಿಂದ ಭಾರತಕ್ಕಿಂತಲೂ ಜಪಾನಿಗೆ ಹೆಚ್ಚು ಅನುಕೂಲವಾಗುವುದು. ಜಪಾನಿಗಳ ಸಹಾಯದಿಂದ ಭಾರತದ ಬಂಧವಿಮೋಚನೆ ಮಾಡುತ್ತೇನೆಂದು ತಿಳಕೊಂಡ ಸುಭಾಸರ ಧೋರಣೆಯು ಶುದ್ಧ ತಪ್ಪು.'

ಇಟೆಲಿಯಲ್ಲಿ ಗದ್ದಲವು ಇನ್ನೂ ಶಾಂತವಾಗಲಿಲ್ಲ. ಅಲ್ಲಿ ಸ್ಥಿರವಾದ ಸರಕಾರವೊಂದು ಇನ್ನೂ ಸ್ಥಾಪನೆಯಾಗಲಿಲ್ಲ. ಎಡ ಪಕ್ಷದವರು ಅಧಿಕಾರವನ್ನೆಲ್ಲಾ ತಮ್ಮ ಕೈಯಲ್ಲಿ ಹಿಡಿದು ವರ್ತಿಸುತ್ತಿರುವಂತೆ ಕಾಣುತ್ತದೆ. ಮೊನ್ನೆ ದಿನ, ಪೆಸಿಷ್ಟ ಜನರು ಕೆಲವರು ಒಟ್ಟುಗೂಡಿಸಲ್ಪಟ್ಟು, ಈ ಪಕ್ಷದ ಗುಂಡುಗಳಿಗೆ ಆಹುತಿಯಾದರೆಂದು ತಿಳಿದು ಬಂದಿದೆ. ವ್ಯವಸ್ಥಿತ ಸರಕಾರದ ವ್ಯವಸ್ಥೆಯಾಗಿ ಬೇಗನೆ ಸ್ಥಿತಿಯು ಸುಧಾರಿಸಲ್ಪಡದಿದ್ದರೆ, ರಾಜಾಡಳಿತದಲ್ಲಿ ತಮ್ಮ ಪ್ರವೇಶವಾಗುವ ಅವಶ್ಯ ಬೀಳಬಹುದೆಂದು ಮಿತ್ರರು ಇಟೆಲಿಯಾನರಿಗೆ ಎಚ್ಚರಿಕೆಯನ್ನು ಕೊಟ್ಟಿರುವರು.

ಜಪಾನಿಯರು ಸಿಂಗಾಪುರವನ್ನು ತ್ಯಜಿಸಿ ಪಲಾಯನ ಮಾಡಬಹುದೆಂದು ಹೇಳಲಾಗಿದೆ. ಬರ್ಮಾವು ಮಿತ್ರರ ಕೈ ಸೇರುತ್ತಿದ್ದಾಗ, ಇಂಡೊ-ಚೀನಾದಲ್ಲಿ ಚೀನಿಯರ ಪ್ರವೇಶವಾಗುತ್ತಿರುವಾಗ, ತಮ್ಮ ದಳಗಳು ಸಿಂಗಾಪುರದಲ್ಲಿರುವುದು ಯೋಗ್ಯವಲ್ಲವೆಂದು ಜಪಾನಿ ಮಿಲಿಟರಿ ಅಧಿಕಾರಿಗಳ ಅಭಿಪ್ರಾಯವಂತೆ.

ನೂರು ವರ್ಷಗಳ ಅವಧಿಗಿಂತ ಹೆಚ್ಚಿಗೆ ಬಾಳಿದ ೩೦,೦೦೦ ಜನರು ರಷ್ಯದಲ್ಲಿರುವರು.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಏಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ [illegible]ಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು [illegible]ವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 29—6—1945 [ಸಂಚಿಕೆ 15]

ನೆಹರು ದೃಷ್ಟಿಯಲಿ ಕಮ್ಯೂನಿಸ್ಟರು

ಭಾರತೀಯ ಪರಿಸ್ಥಿಯ ಸಿಂಹಾವಲೋಕನ

ಸೈನ್ಯಗಳ ಮೇಲೆ ರಾಷ್ಟ್ರಿಯತೆಯ ಪ್ರಭಾವ

"ಸುಭಾಸ್‌ಭೋಸರ ಧೋರಣೆ ತಪ್ಪು"

"ಕೊಮ್ಯುನಿಷ್ಟರ ಧೋರಣೆಯು ಪ್ರಾಮುಖ್ಯವಾಗಿ ತಾವಿರುವ ದೇಶದ ಪರಿಸ್ಥಿತಿಗನುಸಾರವಾಗಿರದೆ ಅದು ರಷ್ಯದ ವಿದೇಶಾಂಗ ಧೋರಣೆಯ ದೃಷ್ಟಿಕೋನದಿಂದಲೇ ಅವಲೋಕಿಸಿದ್ದಾಗಿರುತ್ತದೆ." ಹೀಗೆಂದು ಪಂಡಿತ್ ನೆಹರು ಅವರು ಬೊಂಬ್ಯಾಯಲ್ಲಿನ ಒಂದು ಪತ್ರಿಕಾಪ್ರತಿನಿಧಿಕೂಟದಲ್ಲಿ ದೇಶಪರಿಸ್ಥಿತಿಯನ್ನು ವಿಮರ್ಶಿಸುತ್ತಾ ತಿಳಿಸುವವರಾದರು. ರಷ್ಯನರ ಸಾಹಸವು ಶ್ಲಾಘನಾರ್ಹವೆಂದೂ ಅವರ ಮೇಲೆ ತುಂಬಾ ಸಹಾನುಭೂತಿಯಿದೆಯೆಂತಲೂ ತಿಳಿಸುತ್ತಾ ಪಂಡಿತ್‌ಜಿಯವರು; 'ರಷ್ಯನರ ಧೋರಣೆಯು ನಮ್ಮ ಧ್ಯೇಯಗಳಿಗೆ ಸಾಧಕ ಇಲ್ಲವೆ ಭಾದಕವಾಗಿದೆಯೋ ಎಂಬುದೇ ಮುಖ್ಯ ಪ್ರಶ್ನೆ' ಎಂದರು.

'ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಧ್ಯೇಯ ದೋರಣೆಗಳಿಗೆ ಘರ್ಷಣೆಯುಂಟಾದಾಗ ಸ್ವರಾಷ್ಟ್ರ ಧೋರಣೆಯೇ ಜಯಿಸುವುದು. ಸ್ವತಂತ್ರ ಬೃಹದ್ರಾಷ್ಟ್ರಗಳ ವಿಷಯದಲ್ಲಿ ಇದು ನಿಜವಾಗಿದ್ದರೆ ಪರತಂತ್ರ ಭಾರತದ ವಿಚಾರದಲ್ಲಂತೂ ಇನ್ನೂ ಹೆಚ್ಚು ಸತ್ಯವಾಗಿದೆ.' ಹೀಗೆಂದರು ನೆಹರು.

ಕೊಂಗ್ರೆಸ್ ಲೀಗ್ ಐಕ್ಯಕ್ಕೂ, ಮುಖಂಡರ ಬಿಡುಗಡೆಗೂ ಕಮ್ಯೂನಿಷ್ಟರು ಒತ್ತಾಯಪಡಿಸಲಿಲ್ಲವೆ ಎಂಬುದಕ್ಕೆ ನೆಹರುಗಳು ಹೀಗೆಂದರು: 'ಕೊಮ್ಯೂನಿಸ್ಟರು ತಮ್ಮ ಜೀವನದ ಒಂದು ಅಪೂರ್ವ ಸುಸಂಧಿಯನ್ನು ಕಳಕೊಂಡರು. ಈ ಮೂರು ವರ್ಷಗಳಲ್ಲಿ ಅವರು ಸ್ವಲ್ಪ ಬೇರೊಂದು ತರದಲ್ಲಿ ವ್ಯವಹರಿಸಿದ್ದರೆ ಅವರ ಪಕ್ಷವು ಅತಿ ಬಲಾಢ್ಯವಾಗುತಿತ್ತು. ಭಾರತದ ಇತಿಹಾಸದ ಒಂದು ಸಂದಿಗ್ಧ ಸಮಯದಲ್ಲಿ ಯಾರಿಗಾದರೂ ತಟಸ್ಥರಾಗಿರುವುದು ಕಷ್ಟಸಾಧ್ಯವೇ ಸರಿ. ಆದರೆ ಅವರು ಎದುರು ಪಕ್ಷವನ್ನು ಸೇರಿದರು. ಒಂದು ವೇಳೆ ಅವರ ಧೋರಣೆ ಸರಿಯಿರಬಹುದು. ಆದರೂ ಆ ಧೋರಣೆಯ ವ್ಯವಹಾರ ನಿರ್ವಹಣೆಯೇ ಮುಖ್ಯವಾದ ಪ್ರಶ್ನೆ.' ಕೊಮ್ಯುನಿಸ್ಟರ ವ್ಯವಸ್ಥಾಶ್ರಮಕ್ಕೆ ನೆಹರುಗಳು ತುಂಬಾ ಶ್ಲಾಘನೆ ಇತ್ತರು.

ಸೈನ್ಯ ಮತ್ತು ರಾಷ್ಟ್ರೀಯತೆ

ಭಾರತೀಯ ಸೈನ್ಯಗಳು ಅಸಾಮಾನ್ಯ ಶಕ್ತಿ ಸಾಮರ್ಥದವುಗಳಾಗಿದ್ದು ಸಂದರ್ಭ ಸಿಕ್ಕಿದಲ್ಲಿ ಅವು ಪ್ರಶಂಸಾರ್ಹವಾಗಿ ವ್ಯವಹರಿಸಿವೆಯೆಂದು ತಿಳಿಸುತ್ತಾ ನೆಹರುಗಳೆಂದರು: 'ಸೈನ್ಯಗಳಿಗೆ ರಾಷ್ಟ್ರೀಯತೆಯ ಬಣ್ಣ ಕೊಡುವುದರಿಂದ, ಇನ್ನೂ ಹೆಚ್ಚಿನ ಪರಿಣಾಮಕಾರಿ ಫಲಗಳು ಖಂಡಿತ ದೊರಕುತಿದ್ದುವು."

ಕ್ರಿಪ್ಸ್ ಸಂದಾನ ಕಾಲದಲ್ಲಿ ನೆಹರುಗಳು ಸರ್‌ಸ್ಟಾಫ್ಡ್‌ರಿಗೆ ಹೀಗೆ ಕೇಳಿದ್ದರು: 'ನಾವು ಸರಕಾರ ವಹಿಸಿಕೊಂಡರೆ ಭಾರತೀಯ ಸೈನ್ಯವನ್ನು ರಾಷ್ಟ್ರೀಯ ಮನೋಭಾವನೆಯದಾಗಿ ಮಾಡುವುದು ನಮ್ಮ ಮೊದಲ ಕೆಲಸವನ್ನಾಗಿ ಮಾಡುತಿದ್ದೆವು. ಜನರು ಮತ್ತು ಸೈನ್ಯಗಳೊಳಗಿನ ಭೇದಾಭೇದಗಳನ್ನು ಕಿತ್ತು ಹಾಕಲು ಪ್ರಯತ್ನಿಸುತ್ತಿದ್ದೆವು. ಅವರು ನಿಜವಾಗಿ ಪ್ರಜಾಪ್ರಭುತ್ವಕ್ಕೂ ದೇಶ ಸ್ವಾತಂತ್ರಕ್ಕೂ ಹೋರಾಡುತ್ತಿರುವಂತೆ ಮಾಡುತಿದ್ದೆವು.'

ಇದಕ್ಕೆ ಕ್ರಿಪ್ಸರು 'ಈಗಿನ ಭಾರತೀಯ ಸೈನ್ಯ ರಾಷ್ಟ್ರೀಯ ಸೈನ್ಯವಲ್ಲ. ಅದು ಬ್ರಿಟಿಷ್ ಸೈನ್ಯದ ಒಂದು ಭಾಗ—ಅಷ್ಟೆ. ಆದುದರಿಂದ ಹಾಗೆ ಮಾಡಲು ಸಾಧ್ಯವಿಲ್ಲ.' ಎಂದಂರತೆ.

ಹಾಗಾದರೆ ಪ್ರತ್ಯೇಕ ಒಂದು ಭಾರತೀಯ ದಳವನ್ನೇರ್ಪಡಿಸಿದರೆ ಹೇಗೆಂದು ಪ್ರಶ್ನಿಸಿದಾಗ ಕ್ರಿಪ್ಸ್ ಸಾಹೇಬರು 'ಅದು ಕೂಡಾ ಸೇನಾಪತಿಯ ಕೈಕೆಳಗಿರಬೇಕಾಗುವುದು' ಎಂದರು.

ಈಗಿನ ಹಿಂದೀ ಸೈನಿಕರು 'ಸಂಬಳದ ದಾಳುಗಳು' ಎಂದು ಕೊಂಗ್ರೆಸ್ ಠರಾವುಗಳಲ್ಲಿ ನಿರೂಪಿಸಿದ್ದು ಸೈನ್ಯಗಳನ್ನು ನಿಂದಿಸಲೋಸುಗವಲ್ಲ. ಅವುಗಳ ಸ್ಥಾನಮಾನವನ್ನು ನ್ಯಾಯದೃಷ್ಟಿಯಿಂದ ಸ್ಪಷ್ಟೀಕರಿಸಲು ಆ ಶಬ್ದವನ್ನು ಉಪಯೋಗಿಸಿದೆಂದು ಪಂಡಿತ್‌ಜಿಯವರು ತಿಳಿಸುವವರಾದರು.

ಈಗಿನ ಯುದ್ಧಕ್ಕೆ ಸೇರಿದ ಭಾರತೀಯ ಸೈನಿಕರನ್ನು ಯುದ್ಧಾನಂತರ ನಿಶಸ್ತ್ರೀಕರಿಸುವ ಸಮಸ್ಯೆಯು ಬಹಳ ಕಠಿಣವಾದುದು. ಬ್ರಿಟಿಷ್ ಸರಕಾರಕ್ಕೇ ಅದು ಕಷ್ಟಸಾಧ್ಯವಾದುದು ಎಂದು ಹೇಳುತ್ತಾ ಪಂಡಿತರು 'ಭಾರತೀಯ ಸೈನಿಕನು ರಾಷ್ಟ್ರೀಯವಾದಿಯಾಗಿದ್ದಾನೆ' ಎಂದರು.

ಒಗಸ್ಟ್ ಗಲಭೆ.

ಈ ಗಲಭೆಯ ಕುರಿತು ವರ್ತಮಾನ ಪತ್ರಿಕೆಗಳ ಆಧಾರಗಳಿಂದ ಒಂದು ಅಭಿಪ್ರಾಯ ಕೊಡಲು ಬರುವುದಿಲ್ಲ. ಆದರೆ ಭಾರತೀಯನೊಬ್ಬನ ಸರ್ವಸಾಮಾನ್ಯ ಮನಸ್ಸು 'ನಮ್ಮನ್ನು ತಳ್ಳಿ ಮೂಲೆ ಪಾಲು ಮಾಡುವವರು ನರಕಕ್ಕಿಳಿಯಲಿ' ಎಂದಿರುತ್ತದೆ. ಹಿಂಸೆ ಅಥವಾ ಅಹಿಂಸೆ—ಏನೇ ಇರಲಿ—ಯಾವನೊಬ್ಬನಾಗಲಿ, ಇಲ್ಲವೆ ಯಾವ ಅಧಿಕಾರವೇ ಆಗಲೀ ತಮ್ಮನ್ನು ಒದೆದು ತಳ್ಳಿದರೆ ಅಂತಹ ಸಂದರ್ಭದಲ್ಲಿ ಧೈರ್ಯಸ್ಥೈರ್ಯಗಳನ್ನು ತೋರಿಸುವುದು ಜನರಿಗೆ ಹೆಚ್ಚು ಮಹತ್ವದ್ದು.'

'ಇನ್ನೊಂದು ಸಲ ಬ್ರಿಟಿಷ್ ಸರಕಾರದವರು ದಾಳಿಯನ್ನಾರಂಭಿಸಿದರೆ ನಮ್ಮ ಪ್ರತಿಯೊಬ್ಬ ಮನುಷ್ಯನು ಅವನು ಎಲ್ಲೂ ಇರಲಿ-ಅದನ್ನು ಎದುರಿಸುವುದೇ ಖಂಡಿತ. ಅನೇಕರು ಅದಕ್ಕೆ ಬಗ್ಗಿ ಸುಮ್ಮಗಿರಬಹುದು. ಇಂತಹ ವರ್ತನೆಗೆ ತಲೆತಗ್ಗಿಸುವ ಜನಾಂಗವು ಜೀವನ್ಮೃತವೇ ಸರಿ. ನನ್ನ ಜನರು ಜೀವನ್ಮೃತರಾಗಿರಬೇಕೆಂದು ನಾನು ಬಯಸುವುದಿಲ್ಲ. ಆದುದರಿಂದ ಅಂತಹದೇನಾದರೂ ನಡೆದರೆ ಅದನ್ನು ಎದುರಿಸಿಯೇ ತೀರಬೇಕು.' ಇದು ನೆಹರುಗಳ ಅಭಿಪ್ರಾಯ.

ಬೊಂಬ್ಯಾ ಯೋಜನೆ, ಕಳ್ಳಸಂತೆ

'ಎಂತಹ ಶ್ರೇಷ್ಟ ಯೋಜನೆಯೇ ಆಗಿರಲಿ ಅದನ್ನು ಸಿಕ್ಕಾ ಬಟ್ಟೆ ಜನರು ನಿರ್ವಹಿಸಿದರೆ ಅದರಿಂದ ದೇಶಕ್ಕೆ ಹಾನಿಯುಂಟು. ಬೊಂಬ್ಯಾ ಯೋಜನೆಯ ಪ್ರಕಾರ ಶೀಘ್ರ ಅವಧಿಯಲ್ಲಿ ಜನತೆಯ ಜೀವನದಲ್ಲಿ ಒಂದು ಬದಲಾವಣೆಯುಂಟು ಮಾಡಬೇಕೆಂದಿದೆ. ಆದರೆ ಇದನ್ನು ಕಾರ್ಯರೂಪಕ್ಕೆ ತರುವಂತಹ ಅಧಿಕಾರ ಯಾರದು?'.

ಕಳ್ಳ ಸಂತೆಯ ವಿಚಾರ ಜವಹರಲಾಲರು ಹೀಗೆಂದರು: 'ನಿರಂಕುಶ ಅಧಿಕಾರ ತೋರಿಸುವ ವಿದೇಶಿ ಸರಕಾರವಿದ್ದೆಡೆಗಳಲ್ಲಿ ಸಾತ್ವಿಕ ಪುರುಷರಿಗೆ ಸ್ಥಾನವಿಲ್ಲ. ಅನೇಕ ಜನರ ನೈತಿಕ ಅಧಪತನವು ಅಲ್ಲಿ ಉಂಟಾಗುವುದು. ಬಂಗಾಳದಲ್ಲಿನ ಕೆಲವರು ಅಲ್ಲಿ ಸತ್ತವರಲ್ಲಿನ ಒಂದುವರೆ ಮಿಲಿಯದ ಪ್ರತಿಯೊಬ್ಬನಿಗೆಂಬಂತೆ ಒಂದೊಂದು ಸಾವಿರ ರೂಪ್ಯಾಯಂತೆ ಲಾಭಗಳಿಸಿರುವರಂತೆ (ಒಬ್ಬನಿಗೆ ಒಂದು ಸಾವಿರ ರೂಪ್ಯಾ ಲಾಭ ಮಾಡಬೇಕಾದರೆ ಒಬ್ಬನಿಗೆ ಕೊಲ್ಲುವಷ್ಟು ಆಹಾರವಸ್ತುಗಳನ್ನು ಅವನು ಗುಪ್ತವಾಸ್ತಾನಿರಿಸಬೇಕು.) ಇದು ಅಮಾನುಷೀಕವೂ ಅಸ್ಸಹವೂ ಆದುದಾಗಿದೆ.

'ನಾನೊಂದು ಇರುವೆಯನ್ನು ಕೊಲ್ಲಲಾರೆ, ಆದರೆ ಆ ದುರಂತಕ್ಕೆ ಸಂಬಂಧಪಟ್ಟ ಲಾಭಖೋರರನ್ನು ಪ್ರಾಣ ಹೋಗುವ ತನಕ ತೂಗಾಡಿಸಿದರೆ ನನಗೆ ಪರಮಸಂತೋಷವಾದೀತು.'

ಸುಭಾಸ್‌ರ ದೋರಣೆ.

ತಮ್ಮ ಮಾತುಕತೆಯ ಅಂತ್ಯದಲ್ಲಿ ನೆಹರುಗಳು ಸುಭಾಸ್ ಚಂದ್ರಬೋಸರ ಕುರಿತು ತಿಳಿಸುತ್ತಾ ಹೀಗೆಂದು ಮುಗಿಸಿಸಿದರು:

'ಬೋಸರು ಒಂದು ಭಾರತೀಯ ಸೈನ್ಯ ಸಮೇತರಾಗಿ ಭಾರತದ ಬಂಧವಿಮೋಚನೆಗೆ ಬರುವುದಾಗಿ ೧೯೪೨ರಲ್ಲಿ ಒಂದು ಸುದ್ದಿ ಇತ್ತು. ಆಗ ನನ್ನ ಧೋರಣೆ ಏನೆಂದು ಕೇಳಿದಾಗ ನಾನು ಹೀಗೆ ಹೇಳಿದೆ: 'ಅಂತಹ ಸಂದರ್ಭದಲ್ಲಿ ನಾನು ಅವರನ್ನು ಎದುರಿಸಿ ಹೋರಾಡುವೆನು. ಕಾರಣ ಅವರು ಜಪಾನೀಯರ ಕೈಕೆಳಗೆ ಬರುವರು. ಅದರಿಂದ ಭಾರತಕ್ಕಿಂತಲೂ ಜಪಾನಿಗೆ ಹೆಚ್ಚು ಅನುಕೂಲವಾಗುವುದು. ಜಪಾನಿಗಳ ಸಹಾಯದಿಂದ ಭಾರತದ ಬಂಧವಿಮೋಚನೆ ಮಾಡುತ್ತೇನೆಂದು ತಿಳಕೊಂಡ ಸುಭಾಸರ ಧೋರಣೆಯು ಶುದ್ಧ ತಪ್ಪು.'

ಇಟೆಲಿಯಲ್ಲಿ ಗದ್ದಲವು ಇನ್ನೂ ಶಾಂತವಾಗಲಿಲ್ಲ. ಅಲ್ಲಿ ಸ್ಥಿರವಾದ ಸರಕಾರವೊಂದು ಇನ್ನೂ ಸ್ಥಾಪನೆಯಾಗಲಿಲ್ಲ. ಎಡ ಪಕ್ಷದವರು ಅಧಿಕಾರವನ್ನೆಲ್ಲಾ ತಮ್ಮ ಕೈಯಲ್ಲಿ ಹಿಡಿದು ವರ್ತಿಸುತ್ತಿರುವಂತೆ ಕಾಣುತ್ತದೆ. ಮೊನ್ನೆ ದಿನ, ಪೆಸಿಷ್ಟ ಜನರು ಕೆಲವರು ಒಟ್ಟುಗೂಡಿಸಲ್ಪಟ್ಟು, ಈ ಪಕ್ಷದ ಗುಂಡುಗಳಿಗೆ ಆಹುತಿಯಾದರೆಂದು ತಿಳಿದು ಬಂದಿದೆ. ವ್ಯವಸ್ಥಿತ ಸರಕಾರದ ವ್ಯವಸ್ಥೆಯಾಗಿ ಬೇಗನೆ ಸ್ಥಿತಿಯು ಸುಧಾರಿಸಲ್ಪಡದಿದ್ದರೆ, ರಾಜಾಡಳಿತದಲ್ಲಿ ತಮ್ಮ ಪ್ರವೇಶವಾಗುವ ಅವಶ್ಯ ಬೀಳಬಹುದೆಂದು ಮಿತ್ರರು ಇಟೆಲಿಯಾನರಿಗೆ ಎಚ್ಚರಿಕೆಯನ್ನು ಕೊಟ್ಟಿರುವರು.

ಜಪಾನಿಯರು ಸಿಂಗಾಪುರವನ್ನು ತ್ಯಜಿಸಿ ಪಲಾಯನ ಮಾಡಬಹುದೆಂದು ಹೇಳಲಾಗಿದೆ. ಬರ್ಮಾವು ಮಿತ್ರರ ಕೈ ಸೇರುತ್ತಿದ್ದಾಗ, ಇಂಡೊ-ಚೀನಾದಲ್ಲಿ ಚೀನಿಯರ ಪ್ರವೇಶವಾಗುತ್ತಿರುವಾಗ, ತಮ್ಮ ದಳಗಳು ಸಿಂಗಾಪುರದಲ್ಲಿರುವುದು ಯೋಗ್ಯವಲ್ಲವೆಂದು ಜಪಾನಿ ಮಿಲಿಟರಿ ಅಧಿಕಾರಿಗಳ ಅಭಿಪ್ರಾಯವಂತೆ.

ನೂರು ವರ್ಷಗಳ ಅವಧಿಗಿಂತ ಹೆಚ್ಚಿಗೆ ಬಾಳಿದ ೩೦,೦೦೦ ಜನರು ರಷ್ಯದಲ್ಲಿರುವರು.

ನಿಷ್ಪ್ರಯೋಜಕ ಸೌಂದರ್ಯ

ಮೆಸ್ಕರೇಟಿನ ಕೌಂಟನು ಸಂಸಾರ ಪ್ರಿಯ. ಕೌಂಟೆಸಳು ಸುಂದರಳೂ, ಸೌಂದರ್ಯ ಪ್ರಿಯಳು. ಆದರೂ ೩೦ ವರ್ಷ ಪ್ರಾಯದಲ್ಲಿ ಅವಳಿಗೆ ಏಳು ಮಕ್ಕಳು. ತನ್ನ ಸೌಂದರ್ಯವನ್ನು ಮೆರೆಸಿ ಕೆಲಕಾಲ ಸುಖ ಪಡೆಯಬೇಕೆಂದು ಅವಳೊಂದು ಉಪಾಯ ಮಾಡಿದಳು. ಏಳು ಮಕ್ಕಳಲ್ಲಿ ಒಂದು ಮಾತ್ರ ಗಂಡನಿಗೆ ಹುಟ್ಟಿದಲ್ಲವೆಂದು ಪ್ರಮಾಣ ಮಾಡಿ ಹೇಳಿದಳು. ಗಂಡನು ದಾರಿ ತೋಚದೆ ಹೊರಟು ಹೋದನು. ಅಂದಿನಿಂದ ಅವಳು ತನ್ನ ಸುಖ ಜೀವನಕ್ಕಾರಂಭಿಸಿದಳು. ನಾಟಕ ಶಾಲೆಯಲ್ಲಿ ಅವಳ ಕುರಿತು ಇರ್ವರು ಚರ್ಚಿಸುತಿದ್ದರು.

(ಕಳೆದ ಸಂಚಿಕೆಯಿಂದ)

ಅವಳೊಂದು ಸಂಸಾರದ ನಡುವೆ ಇರುವ ಪಾತಿತ್ರವೆನ್ನಬೇಕು''

"ಏನು ಆಶ್ಚರ್ಯ! ಅವಳ ವಿಷಯವಾಗಿ ಯಾವುದೊಂದು ತರದ ಸುದ್ದಿಗಳಾಗಲಿಲ್ಲವೆ?''

"ಎಂದೂ ಇಲ್ಲ''

"ಆದರೆ ಅವಳ ಗಂಡನ ವಿಚಾರವೇನು? ಅವನೊಬ್ಬ ವಿಚಿತ್ರ ವ್ಯಕ್ತಿಯಲ್ಲವೆ?''

"ಹೌದೆನ್ನಲೂ ಬಹುದು. ಅಲ್ಲವೆನ್ನಲೂ ಬಹುದು. ಅವರೊಳಗೇನೊ ಒಂದು ರಹಸ್ಯ ನಾಟಕ ನಡೆದಿದೆ- ಒಬ್ಬನು ಸಂಶಯ ಮಾಡುವ ಆದರೆ ಪತ್ತೆಗೆ ಸಿಗದ ಆ ಗೃಹಜೀವನದ ನಾಟಕಗಳಲ್ಲೊಂದು"

''ಅದೇನದು?"

''ನನಗೆ ಅದರ ವಿಷಯ ಏನೂ ಗೊತ್ತಿರುವುದಿಲ್ಲ. ಇದು ತನಕ ಆದರ್ಶ ಪತಿಯಾಗಿದ್ದ ಮೆಸ್ಕರೇಟಿನ ಕೌಂಟನು ಈಗ ಪ್ರವಾಸ ಜೀವನ ನಡೆಸುತಿದ್ದಾನೆ. ಅವನು ಒಳ್ಳೆ ಗಂಡನಾಗಿ ಬಾಳ್ವೆ ಮಾಡಿಕೊಂಡಿದ್ದ ತನಕ ಅವನು ಕೋಪಿಷ್ಟನಾಗಿಯೂ, ಉದ್ಧಟತನದವನಾಗಿಯೂ ಇರುವ ಜೀವನ ನಡೆಸಿದ, ಈಗ ಅವನು ಗುರಿಯಿಲ್ಲದ ಸಂಚಾರ ಜೀವನ ಮಾಡುವುದರಿಂದ ಅವನು ತುಂಬಾ ಅಲಕ್ಷ್ಯಿಯಾಗಿದ್ದಾನೆ. ಏನೊ ಒಂದು ತರದ ವ್ಯಾಕುಲತೆಯ ಹುಳವು ಅವನನ್ನು ಭಾಧಿಸುತ್ತಿದೆ ಎಂದು ಯಾರಾದರೂ ಊಹಿಸಬಹುದು. ಕಾರಣ ಈಚೆಗೆ ಅವನು ಬಹಳ ವಯಸ್ಸಾದವನಂತೆಯೂ ಕಾಣುತ್ತಾನೆ."

ಅನಂತರ ಇರ್ವ ಸ್ನೇಹಿತರೂ ತತ್ವಜ್ಞಾನವನ್ನು ಮಾತಾಡುವುದರಲ್ಲೇ ಮಗ್ನರಾದರು. ಸಂಸಾರ ಕುಟುಂಭಗಳಲ್ಲಿ ಮೊದಮೊದಲು ಕಾಣದೆ ಇದ್ದು ಕ್ರಮೇಣ ತಲೆ ಎತ್ತುವ ಆ ಶಾರೀರಿಕ ಮಾನಸೀಕ ಮನೋವ್ಯಥೆಗಳು ಹೇಗೆ ರಹಸ್ಯವಾದ ಸಂಕಷ್ಟಗಳನ್ನುಂಟುಮಾಡುತ್ತವೆ, ಅವುಗಳು ಹೇಗೆ ಯಾರಿಂದಲೂ ಹೇಳಲಾಗದಂತೆ ಗೋಪ್ಯವಾಗಿರುತ್ತವೆ! ಎಂದು ಕೌಂಟೆಸ್ ಗೇಬ್ರಿಯಲಳ ಕಡೆಗೆ ದುರ್ಬೀನಿಟ್ಟು ನೋಡುತಿದ್ದ ರೋಜರ್ ಡಿಸಾಲ್ನೀಸನು ಹೇಳಿದನು:

"ಆ ಮಹಿಳೆಗೆ ಏಳು ಮಂದಿ ಮಕ್ಕಳಾಗಿವೆಯೆಂದರೆ ನಂಬಲಾಗದ ವಿಷಯವೇ ಸರಿ."

''ಹೌದು, ಬರೀ ಹನ್ನೊಂದು ವರ್ಷಗಳಲ್ಲಿ. ಅನಂತರ ಅಂದರೆ ಅವಳು ಮೂವತ್ತು ವರ್ಷದವಳಾದಾಗ ಅವಳು ಆ ಸೃಷ್ಟಿ ರಚನೆಗೆ ಒಂದು ತಡೆಹಾಕಿದಳು. ಜಗತ್ತಿನ ಆನಂದಮಯ ವಿನೋದ ಸಲ್ಲಾಪ ವಿಲಾಸಗಳ ಜೀವನ್ನನು ಬೋಗಿಸುವುದೇ ಅವಳು ತನ್ನ ಗುರಿಯನ್ನಾಗಿ ಮಾಡಿಕೊಂಡಳು. ಇನ್ನೂ ಅದು ಮುಗಿದಂತೆ ಕಾಣುವುದಿಲ್ಲ."

''ಪಾಪ! ಎಂತಹ ಮಹಿಳೆ"

"ನೀನು ಯಾಕೆ ಅವಳ ಮೇಲೆ ಕರುಣೆ ತಾಳುವಿ?"

''ಯಾಕೆ? ಹಾ ನನ್ನ ಸ್ನೇಹಿತನೇ! ಸ್ವಲ್ಪ ಯೋಚಿಸು! ಇಂತಹ ಸುಂದರ ನಾರಿಗೆ ಹನ್ನೊಂದು ವರ್ಷದ ತಾಯಿತನವೆ? ಅದೆಂತಹ ನರಕ. ಎಲ್ಲಾ ಸೌಂದರ್ಯವನ್ನೂ, ಕೀರ್ತಿ ಯಶಸ್ಸನ್ನೂ, ಎಲ್ಲಾ ಕಲಾಭಿಲಾಷೆಗಳನ್ನೂ, ಬಲಿದಾನವಾಗಿ ಕೊಡಲ್ಪಟ್ಟ ಸ್ತ್ರೀಯರನ್ನು ಬರೀ ಒಂದು ಮಕ್ಕಳು ತಯಾರಿಕೆಯ ಯಂತ್ರವನ್ನಾಗಿ ಮಾಡುವುದಕ್ಕೇ ಅವಳ ಜೀವನವೆಲ್ಲವೂ ಸವೆದಂತಾಗಲಿಲ್ಲವೆ?"

"ನೀನಾದರೂ ಏನು ಮಾಡಬಲ್ಲೆ? ಇದು ಪ್ರಕೃತಿ ಸಹಜವಾದುದು?

"ಹೌದು, ಪ್ರಕೃತಿಯೇ ನಮ್ಮ ಶತ್ರುವೆಂದು ನಾನು ಹೇಳುವುದು. ನಮ್ಮನ್ನು ಸದಾ ಪಶುಪ್ರಾಣಿಗಳ ಮಟ್ಟಕ್ಕೆ ಇಳಿಸುವ ಆ ಪ್ರಕೃತಿಯನ್ನು ನಾವು ಕಾದಾಡಲೇ ಬೇಕು. ದೇವರು ಈ ಜಗತ್ತಿನೊಳಗೆ ಶುದ್ಧವಾದ, ಸುಂದರವಾದ ಕಲಾಪೂರ್ಣವಾದ ಇಲ್ಲವೇ ನಮ್ಮ ಧ್ಯೇಯಕ್ಕೆ ಸಾಧನವಾಗಿರುವಂತಹ ಯಾವುದೊಂದನ್ನಾದರೂ ಉಂಟುಮಾಡಲಿಲ್ಲ. ಆದರೆ, ಮಾನವನ ಮಿದುಳು ಅದನ್ನು ಉಂಟುಮಾಡಿದೆ. ಸೌಂದರ್ಯ ಶೈಲಿಗಳನ್ನೂ, ಅಜ್ಞಾನವಾದ ಆಕರ್ಷಣೆಯನ್ನೂ ಇದರಲ್ಲಿ ಸೇರಿಸಿದವರು ನಾವೇ ಇರುತ್ತೇವೆ. ನಾವು ನಾಯಕರಾಗಿ ಅದರ ಕುರಿತು ಹಾಡಿದೆವು ನಿರೂಪಿಸಿದೆವು. ಕಲಾವಂತರಾಗಿ ಅವುಗಳನ್ನು ಮೂರ್ತಿ ಮತ್ತು ಗೊಳಿಸಿದೆವು, ವಿದ್ವಾಂಸರಾಗಿ ಅವುಗಳ ಗೂಢವನ್ನು ವಿವರಿಸಿದೆವು. ವಿದ್ವಾಂಸರಾದ ನಾವು ತಪ್ಪುಗಳನ್ನು ಮಾಡುತ್ತೇವೆ, ಚೇತನಭರಿತವಾದ ತರ್ಕಗಳನ್ನು ಕಲ್ಪಿಸುತ್ತೇವೆ. ಅವುಗಳೊಳಗೆ ಭಾವನಾಪೂರ್ಣವಾದ ಸೌಂದರ್ಯವನ್ನು ತುಂಬುತ್ತೇವೆ. ಮಾತ್ರವಲ್ಲ ಪ್ರಕೃತಿಯ ನಿಗೂಢ ರಹಸ್ಯ ವಿಚಿತ್ರಗಳಲ್ಲಿ ವರ್ಣಿಸಲಸದಳವಾದ ಸೌಂದರ್ಯವನ್ನು ತುಂಬುತ್ತೇವೆ.

"ಕೆಲವೇ ವರ್ಷಗಳ ಪಾಶವೀ ಸುಖೋಪಭೋಗಗಳಿಂದ ಶಕ್ತಿರಹಿತವಾದ ಮಾನವೀ ದುರ್ಬಲತೆಯಿಂದ ಜರ್ಜರಿತವಾಗಿ ಮುದಿತನ ನಿರ್ಬಲತೆಗಳುಂಟುಮಾಡುವ ರೋಗಾಣುಗಳಿಂದ ಕೂಡಿದ ಒರಟು ಜೀವಿಗಳನ್ನು ಮಾತ್ರ ದೇವರು ಸೃಷ್ಟಿಸುವವನಾದನು. ಅಸಹ್ಯವಾದ ರೀತಿಯಲ್ಲಿ ಪ್ರತಿಜೀವಿಗಳನ್ನುಂಟುಮಾಡಿ ಕ್ಷುದ್ರ ಕ್ರಿಮಿಕೀಟಗಳಂತೆ ನಶಿಸಿ ಹೋಗುವಂತಾಗುವಂತೆ ಅವನು ನಮ್ಮನ್ನುಂಟುಮಾಡಿದನೆಂದು ತೋರುತ್ತದೆ. ಅಸಹ್ಯವಾದ ರೀತಿಯಲ್ಲಿ ಅವನು ಪ್ರತಿಜೀವಿಗಳನ್ನು ಉಂಟುಮಾಡುವಂತೆ ಎಂದು ನಾನು ಮೇಲಿಂದ ಮೇಲೆ ಹೇಳಬಯಸುತ್ತೇನೆ. ಸೂಕ್ಷ್ಮ ಕಲಾವಂತ ಮನಸ್ಸುಗಳೂ ಸದಾ ದಂಗೆ ಎದ್ದ, ಮತ್ತು ಸದಾ ದಂಗೆ ಏಳುತ್ತಿರುವ ಆ ಕ್ಷುಲ್ಲಕವೂ ಹೇಯವೂ ಮತ್ತು ಹಾಸ್ಯಾಸ್ಪದವೂ ಆದ ಪ್ರತಿಜೀವಿಗಳನ್ನು ತಯಾರಿಸುವ ವಿಷಯವಾದರೂ ಅದೆಂತಹದಿರುವುದು? ನಿಂದಾರ್ಹನೂ, ಜಿಪುಣನೂ ಆದ ಆ ಸೃಷ್ಟಿಕರ್ತನು ಎಲ್ಲಾ ಇಂದ್ರಿಯಗಳನ್ನೂ ಎರಡು ಉದ್ದೇಶಗಳಿಂದ ಉಂಟುಮಾಡಿದಾಗ, ಈ ಪವಿತ್ರ ಎರಡನ್ನು ಮಾತ್ರ ಅವನು ಏಕೆ ಅಷ್ಟೇ ಶಕ್ತಿವಂತ ಕಲಾವಂತವಾಗಿ ಮಾಡಲಿಲ್ಲ? ಅವುಗಳಿಂದ ಘನವಾದ ಮಾನವಿ ಕೃತ್ಯಗಳು ಜರುಗಲಿಕ್ಕಿಲ್ಲವೆ? ತಾಯಿಯ ಹಾಲನ್ನು ಕುಡಿದು ದೇಹವನ್ನು ಪುಷ್ಟೀಕರಿಸುವ ಬಾಯಿಯು ಭಾಷಣವನ್ನೂ, ಯೋಚನೆಗಳನ್ನೂ ಸಾರುತ್ತದೆ. ನಮ್ಮ ಮಾಂಸಖಂಡವು ಅದರಿಂದಲೇ ಅಭಿವೃದ್ಧಿಗೊಳ್ಳುವಂತಹುದು. ಶ್ವಾಸಕೋಶಕ್ಕೆ ಗಾಳಿಯನ್ನು ಪೂರೈಸಿಕೊಡುವ ಮೂಗು ಪ್ರಪಂಚದಲ್ಲಿನ ಸುಗಂಧ ದುರ್ಗಂಧಗಳ ವಾಸನೆಯನ್ನು ಮಿದುಳಿಗೆ ಒಯ್ಯುತ್ತದೆ. ಹೂವುಗಳ, ಮರಗಳ, ತೋಟಗಳ, ಸಮುದ್ರಗಳ ಪರಿಮಾಣಗಳನ್ನು ಅದು ಆಘ್ರಾಣಿಸ ಬಲ್ಲುದು. ಸಮಸ್ತ ಜೀವಿಗಳೊಂದಿಗೆ ವ್ಯವಹಾರ ಮಾಡಲು ಸಹಾಯ ಮಾಡುವ ಕಿವಿಯು ನಮ್ಮಿಂದ ಸಂಗೀತವನ್ನು ಸಂಶೋಧಿಸಲು ಅನುವಾಯಿತು. ಸ್ವರಗಳಿಂದ ಹರುಷವನ್ನೂ, ಸುಖ ಸ್ವಪ್ನಗಳನ್ನೂ ಮಾತ್ರವಲ್ಲ ಎಲ್ಲಾ ತರದ ಶಾರೀರಿಕ ಆನಂದಗಳನ್ನೂ ನಾವು ಕಿವಿಯಿಂದ ಅನುಭವಿಸುತ್ತೇವೆ.

''ಮನುಷ್ಯನು ಸ್ತ್ರೀಯೊಂದಿಗೆ ಘನಸ್ಥವೂ, ಧ್ಯೇಯಮಯವೂ ಆದ ವ್ಯವಹಾರವನ್ನು ಮಾಡದಂತೆ ದೇವರು ನಿಷೇಧ ಹಾಕಿರುವನಾಗಿ ಒಬ್ಬನು ನಮಗೆ ತಿಳಿಸಬಹುದು. ಇಷ್ಟಾದರೂ ಆ ಸೃಷ್ಟಿಕರ್ತನೆಂಬ ದೇವತೆಗೆ ಹಾಳು ಉತ್ತರವಲ್ಲವೆಂಬಂತೆ ಮನುಷ್ಯನು ಪ್ರೇಮವೆಂಬ ವಸ್ತುವನ್ನು ಕಂಡುಹಿಡಿದನು. ಮಾತ್ರವಲ್ಲ ಕವಿತಾ ಸಾಹಿತ್ಯದ ಮೂಲಕ ಅವನು ಅದನ್ನು ಅದೆಷ್ಟು ಮೂರ್ತಿಮತ್ತಾಗಿ ರೂಪುಗೊಳಿಸಿದನೆಂದರೆ ಹೆಂಗುಸು ಅನೇಕ ವೇಳೆ ತಾನು ಬಿಟ್ಟುಕೊಡಬೇಕಾದ ಸಂಪರ್ಕವನ್ನೇ ಅವಳು ಮರೆತುಬಿಡುವಳು. ತಮ್ಮನ್ನು ತಾವೇ ವಂಚಿಸಲಾರದ ನಮ್ಮಲ್ಲಿ ಕೆಲವರು ದುರಾಚಾರಗಳನ್ನು ಶೋಧಮಾಡಿ ವ್ಯಭಿಚಾರವನ್ನು ಪರಿಪೂರ್ಣತೆಗೆ ಮುಟ್ಟಿಸಿರುವರು., ಇದು ದೇವರನ್ನು ನೋಡಿ ಹಾಸ್ಯಮಾಡಿ ನಗುವ ಇನ್ನೊಂದು ವಿಧಾನವೂ, ಸೌಂದರ್ಯಕ್ಕೆ ನಾವು ತೆರುವ ಲಜ್ಜಾಹೀನವಾದ ಕಾಣಿಕೆಯೂ ಆಗಿರುತ್ತದೆ.

"ಪ್ರಕೃತಿ ಸಹಜವಾದ ಬುದ್ಧಿಯಿಂದ ಮೃಗಗಳು ಒಂದು ಇನ್ನೊಂದರೊಡಗೂಡಿ ಮರಿಗಳನ್ನು ಮಾಡುವಂತೆ ಸಾಮಾನ್ಯ ಮನುಷ್ಯನೂ ಮಕ್ಕಳನ್ನುಂಟುಮಾಡುವನು.

''ಆ ಹೆಂಗುಸನ್ನು ನೋಡು! ಅವಳೊಂದು ಒಡವೆ, ಮುತ್ತು, ಸೌಂದರ್ಯದ ರಾಶಿಯೇ ಆಗಿ, ಜನರ ನಚ್ಚಿನ ಮೆಚ್ಚುಗಾರ್ತಿಯೆನಿಸಿದವಳು. ಹನ್ನೊಂದು ಸಂವತ್ಸರಗಳನ್ನು ಕೌಂಟೆಸಳು ಉತ್ತರಾಧಿಗಳನ್ನು ತಯಾರಿಸುವುದರಲ್ಲಿ ತನ್ನ ಯೌವನವನ್ನು ಕಳೆದಳೆಂದರೆ ಅದೆಷ್ಟು ಭೀಕರವಾದುದು!

ಸಾಲ್ನಿಸ್‌ನ ಭಾಷಣಕ್ಕೆ ಬೆನಾರ್ಡ್ ಗ್ರೆಂಡಿನ್ನನು ನಗುತ್ತಾ ಉತ್ತರವಿತ್ತನು: ''ನೀನು ಹೇಳಿದುದರಲ್ಲಿ ತುಂಬಾ ಸತ್ಯಾಂಶವಿದೆ. ಆದರೆ ಅನೇಕ ಜನರು ಅದನ್ನು ತಿಳಕೊಳ್ಳಲಾರರು."

ಸಾಲ್ನೀಸನು ಹೆಚ್ಚೆಚ್ಚು ಉದ್ವೇಗಗೊಂಡನು. ಅವನು ಮತ್ತೆ ತನ್ನ ಭಾಷಣವನ್ನು ಮುಂದರಿಸಿದನು: ''ನನ್ನ ಮಟ್ಟಿಗೆ ದೇವರು ಹೇಗಿರುವನೆಂಬುದನ್ನು ಬಲ್ಲೆಯಾ? ಸಾಗರದಲ್ಲಿನ ಮತ್ಸವೊಂದು ಲಕ್ಷಾಂತರ ಮೊಟ್ಟೆಗಳನ್ನಿಡುವಂತೆ ದೇವರೆಂಬುದು ನಮ್ಮ ಜ್ಞಾನಶಕ್ತಿಗೆ ನಿಲುಕದಂತಾ ಒಂದು ಸೃಷ್ಟಿರಚನಾ ಶಕ್ತಿಯ ಬೃಹದೇಂದ್ರಿಯವಾಗಿರುವುದು. ಅವನು ಸೃಷ್ಟಿಸುತ್ತಾನೆ ಯಾಕೆಂದರೆ ಅದು ಅವನ ಕ್ರಿಯಾಧರ್ಮವಾಗಿರುತ್ತದೆ. ಅದಲ್ಲದೆ ತಾನೇನನ್ನು ಸೃಷ್ಟಿಸುತ್ತಿವನೆಂಬ ಗೊಡವೆ ಕೂಡಾ ಅವನಿಗಿರುವುದಿಲ್ಲ. ಮಾತ್ರವಲ್ಲ ಅವನು ತನ್ನ ಕಾರ್ಯವನ್ನು ಬಹಳ ಮೂರ್ಖತನದಿಂದ ನಿರ್ವಹಿಸುತ್ತಲಿರುವನು—ತನ್ನಿಂದ ಪ್ರಸರಿಸಲ್ಪಟ್ಟ ಜೀವಾಣುಗಳ ಸಂಯುಕ್ತ ವ್ಯಾಪಾರವು ಹೇಗಿರುತ್ತದೆಂಬುದರ ಪರಿಜ್ಞಾನ ಅವನಿಗಿದ್ದಂತೆ ತೋರುವುದಿಲ್ಲ. ಮನುಷ್ಯನ ಯೋಚನೆಯೆಂಬುದು ಕ್ಷಣಕಾಲವಿದ್ದು ಮಾಯವಾಗುವ ಒಂದು ಚಿಕ್ಕ ಘಟನೆ, ಸಂಪೂರ್ಣವಾಗಿ ಅದೃಷ್ಟವಾಗಿರುವಂತಹದಿದ್ದು ಈ ಪೃಥ್ವಿಯೊಡನೆ ಅದೃಶ್ಯವಾಗಿ ಪುನಃ ಇಲ್ಲೇ ಆಗಲಿ ಇನ್ನೊಂದೆಡೆಯಾಗಲಿ ಹೊಸದಾದ ಸಂಯುಕ್ತ ರೂಪದಲ್ಲಿ ನಿರತವಾಗಿ ಪ್ರಾರಂಭಗೊಳ್ಳುವಂತಹದಿರುತ್ತದೆ. ದೇವರ ಜ್ಞಾನ ಶಕ್ತಿಗೆ ಉಂಟಾಗಿರುವ ಈ ಚಿಕ್ಕ ಲೋಪದಿಂದಲೇ ನಿಜವಾಗಿಯೂ ಪರಿಪೂರ್ಣರೂ ನಾಗರಿಕತೆಯುಳ್ಳವರೂ ಆಗಿರುವ ನಮ್ಮಂತ ಮನುಷ್ಯ ಜೀವಿಗಳು ಇಂದು ಅಂತ್ಯವಿಲ್ಲದೆ ಈ ವಿಧಿಲೀಲೆಯ ವಿರೋಧವಾಗಿ ಜೀವನ ಹೋರಾಟವನ್ನು ನಡೆಸಬೇಕಾಗಿದೆ, ಅದರಿಂದಲೇ ಈ ಜಗತ್ತಿನಲ್ಲಿ ನಾವಿಂದು ಸಂಕಷ್ಟದಿಂದ ಇರಬೇಕಾಗಿದೆ. ಈ ಜಗತ್ತು ನಮಗಾಗಿ ಮಾಡಲ್ಪಟ್ಟದ್ದೂ ಅಲ್ಲ, ನಾವಿರಲು ಯೋಗ್ಯವಾದುದೂ ಅಲ್ಲ. ನಮ್ಮ ಜೀವಿತವನ್ನು ಇಲ್ಲಿ ನಡೆಸಲು ಸಾಧ್ಯವಿಲ್ಲ, ನಮ್ಮ ಭಾವನೆಗಳನ್ನು ತೃಪ್ತಿಪಡಿಸಿಕೊಳ್ಳುವುದು ಇಲ್ಲಿ ಕಷ್ಟಸಾಧ್ಯವೇ ಸರಿ."

ಬಹುಕಾಲದಿಂದ ಸಾಲ್ನೀಸನ ಕಲ್ಪನಾಶಕ್ತಿಯ ಸಂಪೂರ್ಣ ಪರಿಚಯವಿರುವ ಗ್ರೆಂಡಿನನು ಗಮನಕೊಟ್ಟು ಅವನ ಭಾಷಣವನ್ನು ಕೇಳಿದ ಮೇಲೆ ಹೀಗೆಂದನು: ''ಹಾಗಾದರೆ ಮಾನವ ಮನಸ್ಸೆಂಬುದಿದು ಅಂಥವಾದ ಧೈವೀಕ ಸೃಷ್ಟಿಕ್ರಿಯೆಯ ಏಕಪ್ರಕಾರವಾಗಿ ಉಂಟಾದ ಫಲವೆಂದು ನಿನ್ನ ನಂಬಿಕೆಯೊ?"

ಬರುವ ವಾರಕ್ಕೆ ಮುಂದುವರಿವುದು.

ರಷ್ಯದ ಮಹಿಳೆಯರು

ಕಳೆದ ಮೂವತ್ತೇ ವರ್ಷಗಳಲ್ಲಿ ರಷ್ಯನ್ ಮಹಿಳಾ ಪ್ರಪಂಚದಲ್ಲಾದ ಪ್ರಗತಿ ಪುರುಷರಷ್ಟೇ ಸ್ಥಾನ-ಮಾನಗಳನ್ನು ಪಡೆದು ಮೆರೆಯುತ್ತಿರುವ ಮಹಿಳೆಯರು.

'ತನ್ನ ಅರ್ಧ ಜನಸಂಖ್ಯೆಯು ಅಡುಗೆ ಕೋಣೆಯಲ್ಲಿ ಗುಲಾಮ ಗಿರಿಯಲ್ಲಿರುವಷ್ಟು ಕಾಲ ಯಾವ ಜನಾಂಗವಾದರೂ ಸ್ವತಂತ್ರವಾಗಲಾರದು' ಎಂದು ಲೆನಿನ್ ಹೇಳಿದ್ದ. ಆ ಮಾತಿನ ಸತ್ಯಾಂಶವನ್ನು ರಷ್ಯವು ಇಂದು ಎಲ್ಲರಿಗೂ ತೋರಿಸಿಕೊಟ್ಟಿದೆ. ಯುರೋಪಿ ಇತರ ಎಲ್ಲ ದೇಶಗಳಿಗಿಂತ ಹೆಚ್ಚಾಗಿ ರಷ್ಯದಲ್ಲಿ ಮಹಿಳೆಯರಿಗೆ ಸ್ಥಾನ-ಮಾನಗಳು ಈಗ ದೊರೆಯುತ್ತಿವೆ. ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳು ತಮ್ಮ ಸ್ತ್ರೀಯರನ್ನು ಪೂಜ್ಯಭಾವದಿಂದ ನೋಡುತ್ತಿದ್ದೇವೆಯೆಂದು ಜಂಬ ಕೊಚ್ಚುತ್ತಿವೆಯಾದರೂ, ಅಲ್ಲಿಯ ಪ್ರಸಿದ್ಧ ಪುರುಷರ ಹೆಂಡಂದಿರು ತಮ್ಮ ಗಂಡಂದಿರಿಂದ ಪ್ರತಿಫಲಿತವಾದ ಕೀರ್ತಿಯನ್ನೇ ಅನುಭವಿಸುತಿದ್ದಾರೆ ಹೊರತು ಅಲ್ಲಿಯ ಸಾಮಾನ್ಯ ಹೆಂಗುಸೊಬ್ಬಳ ಸ್ಥಾನ-ಮಾನಗಳು ರಷ್ಯನ್ ಮಹಿಳೆಯರ ಸ್ಥಾನ-ಮಾನಗಳಿಗೆ ಸರಿ ಬರಲಾರದು ಎಂದು ದೃಢವಾಗಿ ಹೇಳಬಹುದು.

ಸ್ಟಾಲಿನ್ ಲಿಟ್ವಿನೋವ್ ಮುಂತಾದ ಪ್ರಮುಖರ ಹೆಂಡಂದಿರು ಕೂಡಾ ತಮ್ಮ ಸ್ವಂತ ಜಾಣ್ಮೆಯಿಂದ ಕೀರ್ತಿವಂತರಾಗಿದ್ದಾರೆ ವಿನಾ ಗಂಡಂದಿರ ಪ್ರತಿಫಲಿತ ಕೀರ್ತಿಯನ್ನು ಅವರು ಆಶಿಸುತ್ತಿಲ್ಲವೆಂಬುದಕ್ಕೆ ಅವರೆಲ್ಲ (ಕೀಳು ಮಟ್ಟದ್ದಾದರೂ ಚಿಂತೆಯಿಲ್ಲ) ಸ್ವಂತ ಉದ್ಯೋಗದಲ್ಲೇ ಗೌರವವನ್ನು ಸಂಪಾದಿಸುತ್ತಿರುವುದು ಸಾದೃಶ್ಯವಾಗಿದೆ.

ರಷ್ಯದಲ್ಲಿ ಮಹಿಳೆಯರ ಸ್ಥಾನವನ್ನು ಮೇಲ್ಮಟ್ಟಕ್ಕೇರಿಸಿದ ಕೀರ್ತಿಯು ಲೆನಿನನಿಗೆ ಸಲ್ಲತಕ್ಕುದು. ಇತರ ದೇಶಗಳಂತಲ್ಲದೆ, ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರಿಸಿ ತನ್ಮೂಲಕ ಮಹಿಳೆಯರ ಪ್ರಗತಿಯನ್ನು ಸಾಧಿಸಲು ಲೆನಿನ್‌ನೊಡನೆ ಸಮಗ್ರ ರಷ್ಯವೇ ಪ್ರಯತ್ನಿಸಿತು; ಆ ಪ್ರಯತ್ನವು ಇಂದು ಸಂಪೂರ್ಣ ಫಲಕಾರಿಯಾಗಿದೆಯೆಂದರೂ ತಪ್ಪಾಗಲಾರದು. ಆದರೆ ಈ ಪ್ರಗತಿಯ ಚರಿತ್ರೆಯು ಎಷ್ಟು ವಿಸ್ಮಯಕರವಾಗಿವೆಯೆಂಬುದನ್ನು ತಿಳಿಯಬೇಕಾದರೆ, ೧೯೧೭ರಂದಿನ ಮತ್ತು ಇಂದಿನ ರಷ್ಯನ್ ಮಹಿಳೆಯರ ಸ್ಥಿತಿಗತಿಗಳನ್ನೂ ಹೋಲಿಸಿ ನೋಡಬೇಕು.

ಅಂದು-ಎಂದರೆ ಕೇವಲ ೨೮ ವರ್ಷಗಳ ಹಿಂದೆ-ರಷ್ಯದ ಮಹಿಳೆಯರಲ್ಲಿ ಹತ್ತರಲ್ಲೊಂದಂಶವಾದ ಮುಸ್ಲಿಮ್ ಮಹಿಳೆಯರು ಘೋಷಾ ಪದ್ಧತಿಯನ್ನು ಆಚರಿಸುತಿದ್ದು, ಸಮಾಜದಲ್ಲಿ ಕೀಳೆಂಬುದಾಗಿ ಪರಿಗಣಿಸಲ್ಪಡುತಿದ್ದರು. ಗಂಡ ಸತ್ತಬಳಿಕವಾದರೋ ಹೆಂಡತಿಯು ಇತರ ಸ್ಥಿರ-ಚರ ಸೊತ್ತುಗಳಂತೆಯೇ ಆ ಗಂಡನ ಸಮೀಪದ ಸಂಬಂಧಿಕನ ವಶವಾಗುತಿದ್ದಳು. ಗಂಡನ ವಾರೀಸುದಾರನಿಗೆ ಆಕೆಯನ್ನು ಮಾರಾಟಮಾಡುವ ಅಧಿಕಾರ ಕೂಡಾ ಇತ್ತು ಸಂಪ್ರದಾಯ ಬದ್ಧವಾದ ಧರ್ಮ ಸಂಸ್ಥೆ (Church)ಗೆ ಸೇರಿದ ಮಹಿಳೆಯರಿಗೆ ಕೂಡಾ ನ್ಯಾಯಬದ್ಧವಾದ ಎಂತಹ ಹಕ್ಕುಗಳೂ ಇರಲಿಲ್ಲ. 'ಹೆಂಡತಿಯು ಗಂಡನಿಗೆ ವಿಧೇಯಳಾಗಿ ಇರಲೇ ಬೇಕು. ಎಷ್ಟು ಮಾತ್ರಕ್ಕೂ ಅವನ ಇಚ್ಛೆಗೆ ವಿರುದ್ಧವಾಗಿ ವರ್ತಿಸಬಾರದು' ಎಂಬುದು ಅಂದಿನ ನಿಯಮವಾಗಿತ್ತು. ಒಬ್ಬ ಹೆಂಗುಸು ಉಪಾಧ್ಯಾಯಿನಿ ದಾದಿ, ಯಾ ಟೆಲಿಗ್ರಾಫ್ ಓಪರೇಟರ್ ಆಗಿ ಉದ್ಯೋಗವನ್ನು ಕೈಕೊಂಡರೆ ಆಕೆಗೆ ಮದುವೆಯಾದೊಡನೆ ಕೆಲಸದಿಂದ ನಿವೃತ್ತಿಯಾಗಬೇಕಿತ್ತು. ದೇಶಬಿಟ್ಟು ಹೊರಹೋಗಲು ಅನುಮತಿ ಬೇಕಾದರೂ ಹೆಂಗುಸರಿಗೆ ಅದು ಸಿಗುತಿದ್ದಿಲ್ಲ. ಗಂಡನೊಂದಿಗೆ ವಿನಾ ತಾನೊಬ್ಬಳೇ ಮನೆಬಿಟ್ಟು ಹೊರಹೋಗಲಿಕ್ಕೂ ಆಕೆಗೆ ಅಧಿಕಾರವಿರಲಿಲ್ಲ. ರಷ್ಯದ ಹಳ್ಳಿಪಳ್ಳಿಗಳಲ್ಲಿಯೂ ಹೆಂಗಸರನ್ನು ಹೀಯಾಳಿಸುವ ಗಾದೆ ಮಾತುಗಳೂ ಬಳಕೆಯಲ್ಲಿದ್ದುವು. 'ಹೆಂಗುಸಿನ ಕೂದಲು ಉದ್ದ, ಆದರೆ ಮಿದುಳು ಸಣ್ಣದು.? 'ಹೆಂಗುಸರಿಲ್ಲ ಇವಳ ಸಂತಾನದವರು, ಅವರಿಂದಲೇ ಎಲ್ಲ ಪಾಪ ಉಂಟಾಗುವುದು?' 'ಸ್ವಾತಂತ್ರದಿಂದ ಹೆಂಗುಸರು ಕೆಡುತ್ತಾರೆ' ಎಂಬಿತ್ಯಾದಿ ಅರ್ಥದ ಮಾತುಗಳನ್ನು ಅಂದಿನವರಾಡುತಿದ್ದರು.

ಹೀಗೆ ಕರುಣಾಜನಕ ಪರಿಸ್ಥಿತಿಯಲ್ಲಿದ್ದ ಸ್ತ್ರೀಯರ ಉದ್ಧಾರಕ್ಕಾಗಿ ಪಣತೊಟ್ಟ ರಷ್ಯನ್ ಸರಕಾರವು ತಮ್ಮ ಮಹಿಳೆಯರಿಗೆ ಪುರುಷರಷ್ಟೇ ಸಮಾನ ರಾಜಕೀಯ ಹಕ್ಕುಗಳನ್ನು ಕೊಟ್ಟುದೇ ಅಲ್ಲ, ಆರ್ಥಿಕ ದೃಷ್ಟಿಯಲ್ಲಿಯೂ ಅವರ ಮಟ್ಟಕ್ಕೆ ತರಲು ಎಲ್ಲ ಉಪಾಯಗಳನ್ನು ಮಾಡಿದರು. ಮಹಿಳೆಯರ ಸುಧಾರಣಾ ಕಾರ್ಯದಲ್ಲಿ ಅಧಿಕಾರಿಗಳಿಗೆ ಮೊತ್ತ ಮೊದಲು ಅನೇಕ ಎಡರು ತೊಡರುಗಳಿದ್ದುವು, ಆದರೆ ನಾಡಿನ ಪ್ರಗತಿಶೀಲ ಸ್ತ್ರೀ ಪುರುಷರ ಬೆಂಬಲದಿಂದ ಅವನ್ನೆಲ್ಲ ಕಡೆಗಣಿಸಿ, ಸೋವಿಯಟ್ ಅಧಿಕಾರಿಗಳು ತಮ್ಮ ಸ್ತ್ರೀಯರಿಗೆ ಪುರುಷರಷ್ಟೇ ವೇತನ ಯಾ ಕೂಲಿ ಸಿಗಬೇಕೆಂಬ ಸೂತ್ರವನ್ನು ಜ್ಯಾರಿಗೆ ತಂದರು. ಶಾಲೆ ಕಾರ್ಖಾನೆ ಮುಂತಾದ ಸಂಸ್ಥೆಗಳಿಗೆ ಸಂಬಂಧಿಸಿ ಭೋಜನ ಶಾಲೆಗಳು ತೆರೆಯಲ್ಪಟ್ಟವು. ಅವಿವಾಹಿತ ಹಾಗೂ ವಿವಾಹಿತ ಸ್ತ್ರೀಯರು ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸಮಾಡುವ ಸಮಯದಲ್ಲಿ ಮಕ್ಕಳನ್ನು ಸುರಕ್ಷಿತವಾಗಿ ಇಡಲು ಕ್ರೆಚಸ್ (Creches) ಎಂದು ಕರೆಯಲ್ಪಡುವ ಶಿಶು ಸಂಗೋಪನಾಲಯಗಳೂ ಕಿಂಡರ್ ಗಾರ್ಡನುಗಳೂ ತಲೆದೋರಿದುವು. ಈ ಹೆಂಗುಸರಿಗೆ ಹೆರಿಗೆಯ ಮೊದಲು ಮತ್ತು ಹೆರಿಗೆಯ ನಂತರ, ವಿಶ್ರಾಂತಿಯ ಬಗ್ಗೆ ಸಾಕಷ್ಟು ಕಾಲ ಸಂಬಳಸಮೇತ ರಜೆ ದೊರೆಯುವ ಏರ್ಪಾಡೂ, ಸಣ್ಣ ಶಿಶುಗಳಿರುವ ತಾಯಂದಿರಿಗೆ ಮಕ್ಕಳ ಲಾಲನೆ ಪಾಲನೆಯ ಬಗ್ಗೆ ಕೆಲವು ತಾಸುಗಳ ಬಿಡುವಿನ ಅನುಕೂಲತೆಯೂ, ಮಗುವಿಗೆ ಒಂದು ವರ್ಷ ತುಂಬುವ ವರೆಗೆ ಅದರ ಪೋಷಣೆಯ ಬಗ್ಗೆ ಪ್ರತ್ಯೇಕ ಭತ್ತೆಯನ್ನು ಕೊಡುವ ಕ್ರಮವೂ ಪ್ರಾರಂಭವಾಯಿತು.

ಹೀಗಾಗಿ ಈಗ ಯುರೋಪು ಅಮೇರಿಕಗಳಿಗಿಂತಲೂ ಮಿಗಿಲಾಗಿ ರಷ್ಯದ ಮಹಿಳೆಯರು ಪುರುಷರಿಗೆ ಸರ್ವ ವಿಧದಲ್ಲಿಯೂ, ಸಮಾನವಾದ ಹಕ್ಕು ಬಾಧ್ಯತೆಗಳನ್ನು ಪಡೆದು ಮೆರೆಯುತಿದ್ದಾರೆ. ರಷ್ಯನ್ ಮಹಿಳೆಯರಲ್ಲಿ ಅನೇಕರು ಹಡಗುಗಳ ಕಪ್ತಾನರು, ರಾಯಭಾರಿಗಳು, ನ್ಯಾಯಾಧೀಶರು ಇದ್ದಾರೆ. ಇತರ ದೇಶಗಳ ಮಹಿಳೆಯರು ಇಂತಹ ದೊಡ್ಡ ಸ್ಥಾನಗಳಲ್ಲಿರುವುದು ಬಹಳ ಅಪರೂಪವೇ ಸರಿ. (All Union Congress) ಎಂದು ಕರೆಯಲ್ಪಡುವ ಏಕಮಾತ್ರ ಸೋವಿಯಟ್ ಸಂಸ್ಥೆಯಲ್ಲಿ ಐದರಲ್ಲಿ ಒಂದಂಶ ಮಹಿಳಾ ಸದಸ್ಯೆಯರಿದ್ದಾರೆ. ಸ್ಥಳೀಯ ಸೋವಿಯಟ್‌ಗಳ ಪೈಕಿ ಸುಮಾರು ೪೫೦೦೦೦ಕ್ಕೆ ಮಹಿಳಾ ಪ್ರತಿನಿಧಿಯರು ಪ್ರತಿವರ್ಷ ಆರಿಸಿಬರುತಿದ್ದು ಅವರಲ್ಲಿ ನೂರಾರು ಮಂದಿ ಅಧ್ಯಕ್ಷೆ ಯಾ ಕಾರ್ಯದರ್ಶಿಯ ಸ್ಥಾನವನ್ನು ಪಡೆದಿದ್ದಾರೆ. ನ್ಯಾಯಾಧೀಶರುಗಳಲ್ಲಿಯೂ ಕಾಲಂಶ ಮಹಿಳೆಯರೇ ಆಗಿದ್ದಾರೆ. ವೈದ್ಯಕೀಯ ಕಾಲೇಜುಗಳಲ್ಲಿ ಅರ್ಧಾಂಶ, ಯಂತ್ರವಿಜ್ಞಾನ (Engineering) ಶಾಲೆಗಳಲ್ಲಿ ಮೂರರಲ್ಲಿ ಒಂದಂಶ ಮಹಿಳೆಯರು ಕಲಿಯುತಿದ್ದಾರೆ. ಎಷ್ಟೋ ಮಂದಿ ಕೃಷಿ, ಕೈಗಾರಿಕೆಗಳ ಇಲಾಖೆಗಳಲ್ಲಿ ಹುದ್ದೆಗಳನ್ನು ಪಡೆದಿದ್ದಾರೆ. ನಾಲ್ಕು ಮಿಲಿಯ ಮಹಿಳೆಯರು ಕ್ರಮಾವತರಾಗಿ ಪೆರಚ್ಯೂಟ್, ವಿಮಾನಚಾಲನೆ, ವ್ಯಾಯಾಮ, ಶಸ್ತ್ರವಿದ್ಯೆ, ಮುಂತಾದ ವಿಷಯಗಳಲ್ಲಿ ಸೈನಿಕ ಶಿಕ್ಷಣವನ್ನು ಹೊಂದುತಿದ್ದಾರೆ. ಸೈನಿಕ ವಿದ್ಯಾಲಯಗಳಲ್ಲಿ ಪದವಿ ಹೊಂದಿದ ಎಷ್ಟೋ ಮಹಿಳೆಯರು 'ಜನರಲ್'ರಾಗಿಯೂ ನೇಮಕ ಹೊಂದಿದ್ದಾರೆ. ಕೂಲಿ ಕೆಲಸದಲ್ಲಿ, ಕೈಗಾರಿಕೆಗಳಲ್ಲಿ, ವಾಹಕ ಇಲಾಖೆ (transport) ಯಲ್ಲಿ ಸುಮಾರು ೮ ಮಿಲಿಯ ಮಹಿಳೆಯರು ವಿಮಾನ ಚಾಲಕರಾಗಿ, ನಾವಿಕರಾಗಿ, ರೈಲು ಯಾ ಮೋಟಾರು ಚಾಲಕರಾಗಿ, ಗನಿಗಾರರಾಗಿ ಯಾ ಬಡಗಿಗಳಾಗಿ ದುಡಿಯುತಿ

(೬ನೇ ಪುಟಕ್ಕೆ ಮುಂದುವರಿದಿದೆ)

The Canara Banking Corporation, Ltd.

(Incorporated in British Inbia)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

New Watches are Scarce

ಹೊಸ ವಾಚುಗಳು ಅಪರೂಪ.

ಹಲವು ಪದಾರ್ಥಗಳಂತೆ ವಾಚುಗಳ ಸರಬರಾಯಿಯೂ ಈಗ ಕಡಿಮೆ. ನಮ್ಮ ಬಹುಜನಪ್ರಿಯ ವಾಚುಗಳು ತಕ್ಕಷ್ಟು ಪ್ರಮಾಣದಲ್ಲಿ ಈಚಿಗೆ ಕಾರ್ಖಾನೆಗಳಿಂದ ರವಾನಿಸಲ್ಪಟ್ಟಿದ್ದರೂ ಸಾಗಬೇಕಾದ ಸಾವಿರಾರು ಮೇಲು ಪ್ರದೇಶಗಳಲ್ಲಿ ವಾಹನ ಸೌಕರ್ಯಗಳು ಕಡಿಮೆಯಾಗಿ ಅವು ಈ ದೇಶಕ್ಕೆ ತಲುಪಲು ಪ್ರಾಯಶಃ ಹಲವು ತಿಂಗಳುಗಳೇ ಅಗತ್ಯ.

ಸರಬರಾಯಿಗಿಂತ ಕೇಳಿಕೆಗಳು ಹೆಚ್ಚಿರುವ ಈಗಿನ ವಿದ್ಯಮಾನಗಳಲ್ಲಿ ನಾವು ನಮ್ಮ ಕೆಲ ಗಿರಾಕಿಗಳಲ್ಲಿ ನಿರಾಶೆಯನ್ನು ಉಂಟುಮಾಡುವಂತಾಗಿದೆ; ಮತ್ತು ಸ್ಥಿತಿಗತಿಗಳು ಸುಧಾರಿಸಿ ಅವರ "ವೆಸ್ಟ್‌ಎಂಡ್" ವಾಚುಗಳ ಆರ್ಡರುಗಳನ್ನು ಕೂಡಲೇ ಪೂರೈಸಲು ನಾವು ಶಕ್ತರಾಗುವ ತನಕ ಅವರು ನಮ್ಮಲ್ಲಿ ಕೃಪೆ ಇರಿಸಬೇಕೆಂದು ಅರಿಕೆ.

ವೆಸ್ಟ್ ಎಂಡ್ ವಾಚ್ ಕೊ., ಬೊಂಬ್ಯಾ & ಕಲ್ಕತ್ತ

WEST END WATCH Co

BOMBAY CALCUTTA

Makers of Quality Watches for over 75 Years.

ವಾರದ ವಿದ್ಯಮಾನಗಳು

ಸಿಮ್ಲಾ ಪರಿಷತ್ತು

ವೇವಲ್ಲ ಯೋಜನೆಯ ಕುರಿತು ಪರ್ಯಾಲೋಚಿಸಲು ದೇಶದ ಮುಖಂಡರುಗಳು ಸಿಮ್ಲಾದಲ್ಲಿ ಕೂಡಿದ್ದು ಈಗಾಗಲೆ ಹಲಕೆಲವು ಬೇಟಿಗಳೂ ಸಭೆಗಳೂ ನಡೆದುಬಿಟ್ಟವೆ. ಮಹಾತ್ಮಾಜಿಯರ ಮತ್ತು ವೈಸ್ರಾಯರ ಬೇಟಿಯು ನಡೆಯಿತು. ಅವರು ಪರಿಷತ್ತಿನ ಕುರಿತು ತ್ಯಾಜಸವನ್ನು ವಹಿಸಿರುವರು. ಕಾರಣ, ಅವರು ಕೊಂಗ್ರೆಸ್ಸಿನ ಸದಸ್ಯರಲ್ಲದಿರುವುದು. ಆದರೆ ಕಾಂಗ್ರೆಸ್ಸಿನ ಮುಖಂಡರಿಗೆ ಯಾ ವೈಸ್ರಾಯ ವೇವಲ್ಲರಿಗೆ ಸಂದರ್ಭ ಒದಗಿದಾಗ ಬೋಧಕರಾಗಿ ಸಹಾಯವನ್ನೀಯಲು ತಾನು ಸಿದ್ಧನಿರುವೆನೆಂದೂ, ಪರಿಷತ್ತು ಮುಗಿಯುವ ತನಕ ತಾನು ಸಿಮ್ಲಾದಲ್ಲೆ ಇರುವೆನೆಂದು ಹೇಳಿರುವರು.

ಹಳೇಯದನ್ನೆಲ್ಲಾ ಮರೆತು ಬಿಟ್ಟು ದೇಶದ ಹಿತದೃಷ್ಟಿಯಲ್ಲಿ ತನ್ನ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಸರ್ವರೂ ಸಹಾಯಕರಾಗಬೇಕೆಂದು ಕೋರಿ ವೈಸ್ರಾಯರು ಮುಖಂಡರ ಪರಿಷತ್ತಿನ ಮೊದಲಿನ ದಿನ ಭಾಷಣವಿತ್ತರು. ದೇಶದ ಮುಂದೆ ಮಹಾ ಪ್ರಶ್ನೆಗಳಿರುವವು, ಈ ಕಾರಣದಿಂದ ಸದ್ಯದ ಬಿಕ್ಕಟ್ಟು ನಿವಾರಿಸಲ್ಪಡಬೇಕೆಂಬ ಅಭಿಪ್ರಾಯವನ್ನು ಸೂಚಿಸಿದರು.

ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಅಜಾದರು ವೈಸ್ರಾಯರನ್ನು ಕಂಡು, ಈ ಯೋಜನೆಯ ಕುರಿತು ವಿಚಾರವೆತ್ತಿ ಸಾಧಾರಣ ಒಂದುವರೆ ತಾಸು ಮಾತನಾಡಿರುವರು. ಹಾಗೆನೆ ಮುಸ್ಲಿಂ ಲೀಗಿನ ಅಧ್ಯಕ್ಷ ಜಿನ್ನಾರವರು ಕೂಡ ವೈಸ್ರಾಯರನ್ನು ಕಂಡು ಮಾತನಾಡಿರುವರು.

ಹಿಂದೂ ಮಹಾಸಭೆಗೆ ವೇವಲ್ಲ ಯೋಜನೆಯಲ್ಲಿ ಒಂದಿಷ್ಟು ಸಮಾಧಾನ ವಿದ್ದಂತೆ ಕಾಣುವುದಿಲ್ಲ. ಈ ಯೋಜನೆಯಿಂದ ಹಿಂದೂಗಳಿಗೆ ಮಹಾ ಅನ್ಯಾಯವಾಗಿದೆ ಎಂದು ಅದರ ಅಂಭೋಣ. ತಮ್ಮ ಕೋರಿಕೆಗಳಿಗೆ ಸರಿಯಾಗಿ ತಿದ್ದಲ್ಪಡದೆ ಈ ಯೋಜನೆಯು ಕಾರ್ಯರೂಪಕ್ಕೆ ಬರುವಂತಾದರೆ ಅದನ್ನು ವಿರೋಧಿಸಲು ಅವರು ಬಲವಾದ ಚಳವಳವನ್ನು ಹೂಡುವವರಿದ್ದಾರೆಂದು ಮಹಾಸಭೆಯ ಅಧ್ಯಕ್ಷರಾದ ಮುಖರ್ಜಿಯವರಿಂದ ಸಾರಲಾಗಿದೆ.

ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ಸರಿಸಂಖ್ಯೆಯಲ್ಲಿ ವೈಸ್ರಾಯರ ಕಾರ್ಯಕಾರಿ ಮಂಡಳದಲ್ಲಿ ಸದಸ್ಯತನಗಳನ್ನು ದೊರಕಿಸುವುದೆ ಪರಿಷತ್ತಿನ ಮುಂದಿರುವ ಮುಖ್ಯ ವಿಷಯವು. ಈ ಶರ್ತವು ಕಾಂಗ್ರೆಸ್ಸಿನ ಧ್ಯೇಯಗಳಿಗೂ ಮುಸ್ಲಿಂ ಲೀಗಿನ ಕೋರಿಕೆಗಳಿಗೂ ಸರಿಯಾಗಿ ರೂಪಿಸುವುದು ಪರಿಷತ್ತಿನ ಮುಖ್ಯ ಕೆಲಸವಿರುತ್ತದೆ. ಮುಸ್ಲಿಮರಿಗಾಗಿ ಮೀಸಲಾಗಿಡುವ ಸದಸ್ಯತನಗಳೆಲ್ಲಾ ಲೀಗಿನ ಮುಸ್ಲಿಮರಿಗೆ ಮಾತ್ರ ಸಲ್ಲತಕ್ಕದೆಂದೂ ಲೀಗಿನ ವಾದವೆಂದೂ ಕಾಂಗ್ರೆಸ್ಸು ತನ್ನ ರಾಷ್ಟ್ರೀಯತೆಯನ್ನು ಕೊರೆದು ಬಿಟ್ಟು ವರ್ತಿಸಲೂ ಸಿದ್ಧವಿಲ್ಲವೆಂದೂ ಮೊದಲಾದ ಊಹಾಪೋಹೆ ವಾರ್ತೆಗಳು ಕೆಲವು ಹೊರಟಿವೆ. ಪರಿಷತ್ತಿನ ಕಾರ್ಯಕಲಾಪಗಳು ರಹಸ್ಯದಲ್ಲೆ ನಡೆಯುತ್ತಿದೆ.

ಯಾವತ್ತೂ ಒಂದು ಇತ್ಯರ್ಥಕ್ಕೆ ಬರುವ ಮುನ್ನ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸಭೆಯನ್ನು ಕರೆಯುವ ಅವಶ್ಯ ಬೀಳಬಹುದೆಂದು ರಾಷ್ಟ್ರಪತಿ ಅಜಾದರು ತಿಳಿಸಿರುವರು.

ಪರಿಷತ್ತಿನ ವಿಶೇಷವೆಂದರೆ ರಾಷ್ಟ್ರಪತಿ ಮೌಲಾನಾ ಅಜಾದರು ಲೀಗ್ ನಾಯಕ ಜಿನ್ನಾರವರು ಒಂದೆ ಮೇಜಿನ ಬಳಿ ಕೂಡಿ ಬಂದದ್ದು. ಈ ಮಹನಿಯರು ವೈಸ್ರಾಯರ ಇಕ್ಕಡೆಗಳಲ್ಲಿ ಕುಳಿತಿದ್ದರೆಂದು ತಿಳಿದುಬಂದಿದೆ. ಮೌಲಾನಾ ಅಜಾದರು ಇರುವ ಮೇಜಿನ ಬಳಿ ತಾನು ಬರಲೊಲ್ಲೆನೆಂದು ಲೀಗ್ ನಾಯಕ ಜಿನ್ನಾರವರು ಹಿಂದೆ ಒಮ್ಮೆ ಸಾರಿದ್ದರು. ಲೀಗ್ ನಾಯಕರು ಸದ್ಯದ ಯೋಜನೆಯ ಕುರಿತು ಆಗಿಂದಾಗ್ಯೆ ದೇಸಾಯಿಯವರೊಡನೆಯೂ, ರಾಜಗೋಪಾಲಾಚಾರ್ಯರೊಡನೆಯೂ ಮಾತೆತ್ತುತ್ತಿರುವರಾಗಿಯೂ, ಮೌಲಾನಾ ಸಾಹೇಬರೊಡನೆ ಅವರು ಮೌನ ಧೋರಣವನ್ನೆ ವಹಿಸಿರುವರಾಗಿ ತಿಳಿದುಬಂದಿದೆ.

ಗಾಂಧೀಜಿಯವರು ಪರಿಷತ್ತಿನಲ್ಲಿ ಭಾಗವಹಿಸದುದು ಲೀಗಿನವರಿಗೆ ಸರಿ ತೋರಲಿಲ್ಲವೆಂದೂ, ಈ ಕಾರಣದ ಮೇಲೆ ಈ ಪರಿಷತ್ತಿನಿಂದ ಹೊರ ನಡೆಯುವ ಆಲೋಚನೆಗಳು ಕೂಡ ಮಾಡಿದ್ದರಂತೆ. ಆದರೆ ಕೆಲವರ ಸೂಚನೆ ಮೇರೆಗೆ ಜಿನ್ನಾರವರು ಪರಿಷತ್ತಿನಲ್ಲಿ ಭಾಗವಹಿಸಲು ಸಮ್ಮತಿಸಿದರಂತೆ.

ಸಿಮ್ಲಾ ಪರಿಷತ್ತು ಯಶಸ್ವಿಯಾಗಿ ಕೊನೆಗೊಳ್ಳುವುದಾದರೆ, ನಂತರ ಪ್ರಾಂತ್ಯಗಳ ವಿಚಾರ ತೆಗೆದುಕೊಳ್ಳಲಾಗುವುದೆಂದೂ, ಅಲ್ಲಿ ಮತ್ತೊಮ್ಮೆ ಚುನಾವಣೆಗಳು ನಡೆಯಬಹುದೆಂದೂ ಹೇಳಲಾಗಿದೆ.

ಸಂಯುಕ್ತ ರಾಷ್ಟ್ರಗಳ ಆಜ್ಞಾಪತ್ರ

ಸಾನ್‌ಫ್ರಾನಿಸ್ಕೊದಲ್ಲಿ ಜರಗಿದ ಅಂತರಾಷ್ಟ್ರೀಯ ಪರಿಷತ್ತು ಮೇಲಿನ ವಿಚಾರ ಒಂದು ನಿರ್ಧಾರಕ್ಕೆ ಬಂದು, ಕೊನೆಗೊಂಡಿತು. ಎಲ್ಲರಿಗೂ ಸಮಾನತೆಯ ಹಕ್ಕು ಬಾಧ್ಯತೆಗಳಿರುವ ತರದಲ್ಲಿ ಅಂತರಾಷ್ಟ್ರೀಯ ವ್ಯವಸ್ಥೆಯೊಂದು ಸ್ಥಾಪಿಸಬೇಕೆಂದೂ ನಿರ್ಣಯವಾಗಿರುವುದು. ಭಾವಿ ಲೋಕ ಶಾಂತಿಯ ರಕ್ಷಣೆಯನ್ನು ಉದ್ದಿಶ್ಯವಾಗಿಟ್ಟು ಸಿದ್ಧವಾದ ಎಲ್ಲರ ಸಮ್ಮತಿವನ್ನು ಪಡೆದ ಆಜ್ಞಾಪತ್ರವೊಂದು ಪ್ರಕಟಿಸಲ್ಪಟ್ಟಿದೆ. ಲೋಕ ಶಾಂತಿಗಾಗಿ ಮುಂದೆ ಕೈಗೊಳ್ಳಬೇಕಾದ ಕ್ರಮ ವ್ಯವಸ್ಥೆ ಇತ್ಯಾದಿಗಳ ಕುರಿತು ಇದರಲ್ಲಿ ನಿರೂಪಿಸಲಾಗಿದೆ. ಗತಿಸಿದ ಜನಾಂಗ ಮಂಡಳಕ್ಕಿಂತ ಈ ಭಾರಿಯ ವ್ಯವಸ್ಥೆಯು ಹೆಚ್ಚು ಪ್ರಭಾವಶಾಲಿಯೂ, ಪ್ರಯೋಜನಕಾರಿಯೂ, ಶಕ್ತಿಯುತವೂ ಆಗುವ ಉದ್ದೇಶಗಳು ಈ ಆಜ್ಞಾಪತ್ರದಲ್ಲಿ ಕಾಣಿಸಿರುವುದಾದರೂ, ಇದರಲ್ಲಿ ಸೇರಿಸಲಾದ ಕೆಲವು ಶರ್ತಗಳನ್ನು ನೋಡಿದರೆ ಸಂಯುಕ್ತ ರಾಷ್ಟ್ರಗಳು ಕಲ್ಪಿಸಿದ ಉದ್ದಿಶ್ಯಗಳೆಲ್ಲಾ ಸಾಂಗವಾಗಿ ನೆರವೇರಬಹುದೆಂದು ಧೈರ್ಯದಿಂದ ಹೇಳಬರುವುದಿಲ್ಲ. ಆದರೂ ಲೋಕಶಾಂತಿ ಸಾಧನೆಯ ದಾರಿಯಲ್ಲಿ ಇಷ್ಟು ಉತ್ತಮ ತರದ ಯತ್ನಗಳು ನಡೆದುದು ಇದೆ ಪ್ರಥಮಬಾರಿಯಾಗಿರುವುದರಿಂದ, ಸದ್ಯ ಫಲಿಸಿದ ಫಲದಲ್ಲಿ ತೃಪ್ತಿಪಡಬೇಕು. ಜಗತ್ತಿನ ರಾಷ್ಟ್ರಗಳಲ್ಲಿ ಮುಂದಾಳುತನವನ್ನು ಪಡೆದ ರಷ್ಯವೂ, ಅಮೇರಿಕಾವೂ ಲೋಕಶಾಂತಿಯನ್ನು ಪಾಲಿಸಿ ಬರುವುದರಲ್ಲಿ ದೊಡ್ಡ ಮನಸ್ಸು ಮಾಡಿದಂತೆ ಕಾಣುತ್ತದೆ. ಅವರೊಡನೆ ಬ್ರಿಟನಿನ ಸಹಾನುಭೂತಿ ಇದ್ದೇ ಇದೆ. ಆದರೆ ಇಷ್ಟನ್ನು ಹೇಳಬೇಕಾಗಿಯದೆ, ಮನುಷ್ಯ ಸ್ವಭಾವ ಸಂಪೂರ್ಣ ತಿದ್ದಲ್ಪಡಲಿಲ್ಲ,- ಇನ್ನೂ ತಿದ್ದುವ ಅವಶ್ಯವಿದೆ.

ಶಾಲೆ ಕೊಲೇಜುಗಳ ಅಭಾವ

ಶಾಲೆ ಕೊಲೇಜುಗಳ ಅಭಾವ ಸಮಸ್ಯೆ ಕಳೆದ ವರ್ಷಕ್ಕಿಂತ ಈ ವರ್ಷ ಭಯಂಕರ ರೂಪವನ್ನು ತಾಳಿದ್ದು ಪ್ರಾಂತ್ಯದ ಅನೇಕ ಕಡೆಗಳಲ್ಲಿ ಕಾಣಿಸಿಕೊಂಡದೆ ಈ ಕಾರಣದಿಂದ ವಿದ್ಯೆ ಪಡೆಯಲು ಕುತೂಹಲವಂತರಾಗಿ ಮುಂದೆ ಬಂದ ಅನೇಕ ಮಂದಿಗಳಿಗೆ ಶಾಲಾ, ಕೊಲೆಜುಗಳಲ್ಲಿ ಸ್ಥಾನ ದೊರಕದೆ ಸುಮ್ಮನೆ ಕುಳಿತಿರಬೇಕಾದ ಪರಿಸ್ಥಿತಿಯು ಉಂಟಾಗಿರುತ್ತದೆ. ನಮ್ಮಲ್ಲಿ ಹ್ಯಾಸ್ಕೂಲಿಂದ ಪಾಸಾಗಿಬಂದ ಅನೇಕರಿಗೆ ಕಾಲೇಜುಗಳಲ್ಲಿ ಸ್ಥಾನ ದೊರಕದೆ ಮುಂದೇನು ಮಾಡಬೇಕೆಂದುಹಾದಿಕಾಣದವರಾಗಿರುತ್ತಾರೆ.

ಸೇಲಂನಲ್ಲಿ ಹ್ಯಾಸ್ಕೂಲುಗಳಲ್ಲಿ ಮಕ್ಕಳಿಗೆಪ್ರವೇಶ ದೊರಕದೆ ಮಹಾ ಸಮಸ್ಯೆಯುಉಂಟಾಗಿದ್ದು, ಅದನ್ನು ಬಗೆಹರಿಸಲು ಹೆಚ್ಚಿಗೆ ಒಂದು ಶಾಲೆಯನ್ನು ಸ್ಥಾಪಿಸಬೇಕಾಗಿ ಸಾರ್ವಜನಿಕ ಸಭೆಸೇರಿ ನಿರ್ಣಯವಾಗಿ, ಈ ಬಗ್ಗೆ ತಾತ್ಕಾಲಿಕವಾಗಿ ಚಪ್ಪರಗಳನ್ನು ಕಟ್ಟಿಸಬೇಕಾಗಿ ನಿರ್ಣಯವಾಗಿರುತ್ತದೆ. ನೂತನವಾಗಿ ಸ್ಥಾಪನೆಯಾಗಲಿರುವ ಈ ಶಾಲೆಗಾಗಿ ವಂತಿಕೆಯು ಕೂಡಿಸುತ್ತಿದ್ದಾರೆ. ಪ್ರಾಂತ್ಯದಲ್ಲಿ ಶಾಲೆಗಳೂ, ಕಾಲೇಜುಗಳೂ ಇನ್ನೂ ಹೆಚ್ಚಾಬೇಕಾಗಿಯೂ ಎಲ್ಲೆಲ್ಲೂ ಕೂಗುಎದ್ದಿರುತ್ತದೆ.

ಬಂಗಾಳದಲ್ಲಿ ಅರಿವೆ ಅಭಾವ

ಅರಿವೆ ಅಭಾವವು ಬಂಗಾಳದಲ್ಲಿ ಅತೀ ಕಠಿಣ ರೂಪನ್ನು ತಳೆದಿದೆ. ಬಟ್ಟೆಯಿಲ್ಲದೆ ನಗ್ನರಾಗಿರಬೇಕಾಗಿಡುವ ದುಸ್ಥಿತಿಯಿಂದ ತಪ್ಪಿಸಿಕೊಳ್ಳುವರೆ ಕೆಲವು ಸ್ತ್ರೀಯರೂ, ಪುರುಷರೂ ಆತ್ಮತ್ಯಾಗ ಮಾಡಿಕೊಂಡ ಕುರಿತು ವಾರ್ತೆಗಳು ಬಂದಿವೆ.

ಅಲ್ಲಿನ ಕುಲ್ನಾ ಎಂಬಲ್ಲಿ ಮಿಶೆನರಿ ಸ್ತ್ರೀಯೊಬ್ಬಳು ಸೀರೆಯೊಂದನ್ನು ಪಡಕೊಂಡು ತನ್ನ ನಿಲಯಕ್ಕೆ ತೆರಳುತ್ತಿರುವ ಸಮಯ, ಯಾರೊ ಕೆಲವರು ಅವಳನ್ನು ತಡೆದು ಅವಳೊಡನಿದ್ದ ಸೀರೆಯನ್ನು ದೋಚಿಗೊಂಡು ಹೋದರಂತೆ.

ಈ ಸಮಸ್ಯೆಯು ಕಡೆ ಸರಕಾರದ ಗಮನವು ಇನ್ನೂ ಹೆಚ್ಚು ಬೇಕೆಂದೂ ಬಂಗಾಳದ ಪತ್ರಿಕೆಗಳು ಕೇಳಿಕೊಂಡಿರುವವು.

ಜಪಾನಿನ ಸೋಲು

ಜಪಾನನ್ನು ಬೇಗನೆ ಸೋಲಿಸಬೇಕಾದರೆ ಶಾಂತಸಾಗರದ ಯುದ್ಧದಲ್ಲಿ ಜಪಾನಿಗೆ ವಿರೋಧವಾಗಿ ರಷ್ಯದ ಪ್ರವೇಶವಾಗಬೇಕೆಂದು ಸಂಗ್ರಾಮತಜ್ಞರ ಅಭಿಪ್ರಾಯವು. ಈ ವಿಚಾರವು ಸದ್ಯದಲ್ಲೆ ಕೂಡಿಬರಲಿರುವ ತ್ರಿಮೂರ್ತಿಯರ ಕೂಡುವಿಕೆ ಮುಂದೆ ಬರಬಹುದೆಂದು ಹೇಳಲಾಗಿದೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಳ

ಮುಂಬ್ಯಾಯಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕಾರಿ ಮಂಡಳದಲ್ಲಿ ಈ ಕೆಳಗಿನ ಅಭಿಪ್ರಾಯಗಳುಳ್ಳ ನಿರ್ಣಯಗಳಾದವು. ಇದಲ್ಲದೆ ವೇವಲ್ಲ ಪ್ಲೇನಿನ ಕುರಿತು ಪ್ರಸ್ತಾಪಿಸಲಾಯಿತು. ಈ ಸಂದರ್ಭದಲ್ಲಿ ಭೂಲಾಭ್ಯಾ ದೇಸಾಯಿಯವರು ಈ ವಿಷಯ ಬೇಕಾದ ಅನುಭವವನ್ನು ಕೊಟ್ಟರು.

ಲೋಕ ಶಾಂತಿಗಾಗಿ ಸಂಯುಕ್ತ ರಾಷ್ಟ್ರಗಳು ಮಾಡುತ್ತಿರುವ ಯತ್ನಗಳು ಶ್ಲಾಘನೀಯವಾಗಿದ್ದರೂ, ಸಂಯುಕ್ತ ರಾಷ್ಟ್ರಗಳು, ತಮ್ಮ ಕೈ ಕೆಳಗಿರುವ ದೇಶಗಳಿಗೆ ಸ್ವಾತಂತ್ರ್ಯ ಕೊಡದೆ ಯಿರುವುದರಿಂದ ಜಗತ್ತಿನಲ್ಲಿ ಶಾಂತಿ ಉಂಟಾಗುವ ದಿನವು ಅತಿ ದೂರಕ್ಕೆ ಹೋಗಬಹುದೆಂದು ಈ ಕಮಿಟಿಯು ಅಭಿಪ್ರಾಯ ಪಡುತ್ತದೆ.

ಸಾಮ್ರಾಜ್ಯಶಾಹಿ ಪ್ರಭಾವಗಳೆಲ್ಲಾ ಮಾಯವಾಗಿ, ಪರಾಧೀನ ರಾಷ್ಟ್ರಗಳೆಲ್ಲಾ ಸ್ವತಂತ್ರರಾಗದೆ ಜಗತ್ತಿನಲ್ಲಿ ನೂತನ ಯುಗದ ಪ್ರಾರಂಭವಾಗದೆಂದು ಈ ಕಮಿಟಿಯ ನಂಬಿಕೆಯಾಗಿರುತ್ತದೆ.

ಈ ಕಮಿಟಿಯು ತನ್ನಿಂದ ಠರಾಯಿಸಲಾದ ಅಗೋಸ್ತು ೮, ೧೯೪೨ರಲ್ಲಿ ನಿರ್ಣಯವನ್ನೆ ಮತ್ತೊಮ್ಮೆ ಅನುಮೋದಿಸುತ್ತದೆ.

ಸಿರಿಯಾ ಮತ್ತು ಲೆಬೊನೊನ್ ದೇಶಗಳ ಸ್ವಾತಂತ್ರ್ಯಕ್ಕೆ ದಕ್ಕೆ ಬಂದುದಕ್ಕೆ ಈ ಕಮಿಟಿಯು ವಿಶಾದಿಸುತ್ತದೆ.

ಗ್ರೀಸಿನಲ್ಲಿ ಶಾಂತತೆಯು ತಲೆದೋರಿದೆ ಎಂದು ಹೇಳಲಾಗಿದ್ದರೂ, ಅಲ್ಲಿ ಘರ್ಷಣೆಗಳು ಪಡೆದ ಕುರಿತು ವಾರ್ತೆಗಳು ಈಗಲೂ ಬರುತ್ತಿವೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ನಗರದಲ್ಲಿ ವಿಶ್ವಶಾಂತಿಗಾಗಿ ಯಜ್ಞ

ಜಿಲ್ಲಾ ವಾಣಿಜ್ಯ ಸಂಘದ ಠರಾವು

ಫಾಸಿ ಶಿಕ್ಷೆ—ಅಕ್ಕಿ ಕಟ್ಟೆ—ಖಾದಿ ವಿಚಾರ—ಸ್ಟೋರುಗಳು

ಖಾದಿ ವಿಚಾರ: ಅಖಿಲ ಭಾರತ ಚರಖಾಸಂಘದ ನಿರ್ಣಯದನುಸಾರವಾಗಿ ಇದೇ ಜುಲೈ ೧ರಿಂದ ಖದ್ದರನ್ನು ಕೊಂಡುಕೊಳ್ಳುವವರು ಅದರ ಬೆಲೆಯಲ್ಲಿ ಪ್ರತಿ ರೂಪಾಯಿ ಒಂದಕ್ಕೆ ಅರ್ಧಾಣೆಯ ಕೈನೂಲನ್ನು ಕೊಡತಕ್ಕದ್ದು. ಹೀಗೆ ನೂಲು ಕೊಡದ ವಿನಹ ಖಾದಿ ಸಿಗಲಾರದು. ಖಾದಿ ಧರಿಸುವವರು ಸ್ವಲ್ಪ ಸ್ವಲ್ಪವಾಗಿಯಾದರೂ ನೂಲ ಬೇಕೆಂಬುದಕ್ಕಾಗಿ ಈ ಏರ್ಪಾಡನ್ನು ಮಾಡಿರುತ್ತದೆ. ರಚನಾತ್ಮಕಕಾರ್ಯಕ್ರಮದ ಪ್ರಚಾರವೂ ಇದರಿಂದಾಗುವುದು.

ಕಟ್ಟಿಗೆ ವ್ಯಾಪಾರಿಗಳ ಸಂಘ: ಇಲ್ಲಿಯ ಕಟ್ಟಿಗೆ ಡಿಪೋ ವ್ಯಾಪಾರಿಗಳು ಕೆಲವು ದಿವಸಗಳ ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ (ಬಂದರದಲ್ಲಿ) ತಮ್ಮದೊಂದು ಸಂಘ ಸ್ಥಾಪಿಸುವರೆ ನಿರ್ಧರಿಸಿದ್ದರು. ಶ್ರೀ. ಕೆ. ಐತಪ್ಪ ಶೆಟ್ಟಿ ಸಂಘದ ಅವಶ್ಯಕತೆಯ ಕುರಿತು ಮಾತನಾಡಿದರು. ಇನ್ನು ಮುಂದೆ ಸಂಘದ ಸದಸ್ಯರ ಎಲ್ಲಾ ವ್ಯವಹಾರಗಳು ಸಂಘದ ಮೂಲಕವೇ (ಕಟ್ಟಿಗೆ ಗ್ರಾಹಕರ ಲಿಸ್ಟ್ ಸಮೇತ) ಕಳುಹಿಸಬೇಕೆಂದು ನಿಶ್ಚಯಿಸಲಾಯಿತು. ಅನಂತರ ಶ್ರೀ. ಕೆ. ಕೃಷ್ಣರಾಯರು ಅಧ್ಯಕ್ಷರಾಗಿಯೂ, ಜನಾಬ್ ಟಿ. ಎಸ್. ಅಬ್ದುಲ್ ಖಾದರ್ ಸಾಹೇಬರು ಉಪಾಧ್ಯಕ್ಷರಾಗಿಯೂ ಶ್ರೀ. ಉಳ್ಳಾಳ ಹರಿವಾಸುದೇವ ನಾಯಕರು ಕಾರ್ಯದರ್ಶಿ ಕೋಶಾಧಿಕಾರಿಗಳಾಗಿಯೂ ಶ್ರೀ. ರಘುಪತಿ ಭಟ್ಟರು ಜತೆಕಾರ್ಯದರ್ಶಿಗಳಾಗಿಯೂ ಮತ್ತು ಏಳು ಮಂದಿ ಮಹನೀಯರ ಕಾರ್ಯಕಾರಿ ಮಂಡಲಿಯೂ ಆರಿಸಲ್ಪಟ್ಟ ತರುವಾಯ ಸಭೆ ಮುಕ್ತಾಯವಾಯಿತು.

ಫಾಸಿ ಶಿಕ್ಷೆ: ಕಾಸರಗೋಡು ತಾಲೂಕಿನ ಪಣಿಯಾಲ ಗ್ರಾಮದ ಅಪ್ಪಿಯಾನೆ ಅಪ್ಪಣ್ಣ ಎಂಬಾತನನ್ನು ಖೂನಿಮಾಡಿದರೆಂಬ ಆರೋಪದ ಮೊಕದ್ದಮೆ ಸಂಬಂಧ ಪಿ. ಕುಂಞಂಬು ನಾಯರ್, ಅಲಾಮಿ, ವಾನಿಯನ್, ಎ. ನಾರಾಯಣನ್, ಕಞಪ್ರನಾಯರ್ ಮತ್ತು ಗೋವಿಂದನ್ ನಾಯರ್ ಎಂಬ ಆರು ಮಂದಿಗಳ ವಿಚಾರಣೆ ಸೆಶ್ಯನ್ ಕೋರ್ಟಿನಲ್ಲಿ ನಡೆದು ಜಡ್ಜರು ಮೊದಲಿನ ನಾಲ್ಕು ಮಂದಿಗಳಿಗೆ ಫಾಸಿ ಸಜೆಯನ್ನೂ ೫ನೇ, ೬ನೇಯವರಿಗೆ ಟಾಪು ಸಜೆಯನ್ನೂ ವಿಧಿಸಿದರು. ಅದರಲ್ಲಿ ಬೇರೆ ಕೆಲವು ಆರೋಪಿಗಳಿಗೂ ನಾನಾ ಅವಧಿಯ ಜೈಲುವಾಸವನ್ನೂ ವಿಧಿಸಲಾಗಿದೆ.

ಅಕ್ಕಿ ಒಪ್ಪಿಸದಿದ್ದುದಕ್ಕೆ: ಕಾರ್ಕಳ ತಾಲೂಕಿನ ಮಿಯಾರು ಗ್ರಾಮದ ಕಾಸ್ತಲಿನೊ ಎಂಬವರಿಗೆ I ಕ್ಲಾಸ್ ಮೆಜಿಸ್ಟ್ರೇಟರು ತಮ್ಮ ಕಾರ್ಕಳ ಕೆಂಪಿನಲ್ಲಿ ಆರೋಪಿಗೆ ೫೧ ರೂಪಾಯಿ ಜುಲ್ಮಾನೆ ವಿಧಿಸಿರುವರು.

ಮಣಕ್ಕೆ ೬ ರೂಪಾಯಿಗಳಂತೆ ಬೆಲ್ಲ ಮಾರಲು ಒಪ್ಪಿದ್ದಕ್ಕಾಗಿ, ರೂ. ೫||ಯಂತೆ ಬೆಲ್ಲಮಾರಿದ್ದಕ್ಕಾಗಿ, ಸುಳ್ಳು ಟಿಚರುಗಳನ್ನು ಇಟ್ಟದ್ದಕ್ಕಾಗಿ ಇಲ್ಲಿಯ ಬಂದರದ ಬೆಲ್ಲದ ವ್ಯಾಪಾರಿ ಶ್ರೀ. ಕೆ. ಮಾಧವನ್ನಾಕ್ ಅವರಿಗೆ ಎಡಿಶನಲ್ ಜಿಲ್ಲಾ ಮೆಜಿಸ್ಟ್ರೇಟ್ ಮಿ. ಗುಲಾಂ ಮಹಮ್ಮದ್ ಅವರು ಎಲ್ಲಾ ಆರೋಪಗಳಿಗೂ ಒಟ್ಟಿಗೆ ರೂ. ೨ ಸಾವಿರದ ಜುಲ್ಮಾನೆ ವಿಧಿಸಿರುವರು.

ಆಹಾರ ವಿಚಾರ: "ಇಂಡಿಯಾ ಸರಕಾರದ ಅನ್ನ ಶಾಖೆಯವರು ದ. ಕ. ಜಿಲ್ಲಾ ಆಹಾರ ಪರಿಸ್ಥಿತಿ ಸುಧಾರಿಸುವಂತೆ ಮದ್ರಾಸ್ ಸರಕಾರಕ್ಕೆ ಇನ್ನೂ ಹೆಚ್ಚಿನ ಸಹಾಯಮಾಡುವ ಪ್ರಶ್ನೆಯ ಕುರಿತು ಯೋಚಿಸುತಿದ್ದಾರೆಂದು" ಇಂಡಿಯಾ ಸರಕಾರದ ಆಹಾರ ಖಾತೆಯ ಅಸಿಸ್ಟಾಂಟ್ ಸೆಕ್ರೆಟರಿಗಳು ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ. ಅವರಿಗೆ ತಿಳಿಸಿರುತ್ತಾರೆ.

ಸಂತಾಪ ಸಭೆ: ಕೊಂಗ್ರೆಸಿಗರಾಗಿದ್ದು ದೇಶಕ್ಕೂ ಜಾತಿಮತ ಭೇದವಿಲ್ಲದೆ ಜಿಲ್ಲೆಯ ಎಲ್ಲಾ ಮಜೂರರಿಗಾಗಿಯೂ ಅವಿಶ್ರಾಂತವಾಗಿ ಸೇವೆ ಸಲ್ಲಿಸಿದ ದಿವಂಗತ ಕೆ. ಅಹಮದ್ ಬಾವ ಅವರ ನಿಧನಕ್ಕಾಗಿ ಸ್ಥಳೀಯ ಮುಸ್ಲಿಂ ಬೀಡಿ ಲೇಬರ್ ಯೂನಿಯನಿನ ನೇತೃತ್ವದಲ್ಲಿ ಒಂದು ಸಂತಾಪ ಸೂಚಕ ಸಭೆ ಸೇರಿತ್ತು. ಸಭೆಯಲ್ಲಿ ದಿವಂಗತರ ಗುಣ ಕಥನವಾಗಿ ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ಪ್ರಾರ್ಥನೆಗಳಾದುವು.

ಮುನ್ಸಿಪಲ್ ಸಭೆ: ಕಳೆದ ಸೋಮವಾರ ೧೮ರಂದು ಸೇರಿದ ಮುನ್ಸಿಪಲ್ ಸಭೆಯಲ್ಲಿ ವ್ಯಾಸ್‌ಚೆಯರ್‌ಮೇನ್ ಮಿ| ಸಿ. ಎಲ್. ಲೊಬೊ ಅವರು ಹೆಲ್ತ್ ಸಿಬಂಧಿಯ ಮೇಲೆ ಕೆಲವೊಂದು ಆರೋಪಗಳನ್ನು ಹೊರಿಸಿ ಇವುಗಳ ತನಿಖೆಗಾಗಿ ಒಂದು ಸಮಿತಿ ರಚಿಸಬೇಕೆಂದು ಸೂಚಿಸಿದ್ದರು. ಆ ಕುರಿತು ಕೌನ್ಸಿಲಿಗೆ ಅಧಿಕಾರವಿದೆಯೇ ಎಂದು ಚರ್ಚೆಯಾಗಿ "ಅಧಿಕಾರವಿದೆ" ಎಂದು ನಿರ್ಧರಿಸಿತು. ಮಿ| ಲೊಬೋ ಅವರು ಆರೋಪಗಳ ಕೆಲ ದೃಷ್ಟಾಂತಗಳನ್ನು ಆಧಾರಯುಕ್ತವಾಗಿ ತಿಳಿಸಿದರು. ಈ ಆರೋಪಗಳ ಕುಲಂಕುಶ ವಿವರಗಳನ್ನು ಒಂದು ಗುಪ್ತ ಸಭೆಯಲ್ಲಿ ನಡೆಯಬೇಕೆಂದು ಪ್ರಸ್ತಾಪಿಸಲ್ಪಟ್ಟು ಆಕುರಿತಾದ ಠರಾವಿನ ಇತ್ಯರ್ಥವು ಮುಂದರಿಸಲಾಯಿತು.

ಫುಡ್ ಕೌನ್ಸಿಲ್: ಕೆಲವು ದಿನಗಳ ಹಿಂದೆ (ತಾ. ೧೮ರಲ್ಲು) ಸೇರಿದ ಜಿಲ್ಲಾ ಫುಡ್ ಕೌನ್ಸಿಲ್ ಸಭೆಯಲ್ಲಿ ಮಾನ್ಯ ಕಲೆಕ್ಟರರು ಈ ರೀತಿ ತಿಳಿಸಿದರು: "ಸದ್ಯಕ್ಕೆ ಜಿಲ್ಲೆಯಲ್ಲಿ ಅಕ್ಕಿ ಗೋದಿ, ರಾಗಿಗಳ ಸ್ಟಾಕು ಸಾಕಷ್ಟು ಇದೆ. ಅಕ್ಕಿ ಸಂಗ್ರಹಿಸುವಿಕೆಯಲ್ಲಿ ಹ್ಯಾಮಭಾಗರಿಂದ ಮುಖ್ಯವಾಗಿ ಶ್ರೀಮಂತ ಹಾಗೂ ವರ್ಚಸ್ಸುಳ್ಳ ಜಮಿನ್ದಾರರ ಸ್ಟಾಕುಗಳ ವಿಷಯದಲ್ಲಿ ಕಡಿಮೆ ಅಂದಾಜೇ ನಡೆದಿದೆ. ಇದ್ದುದಕ್ಕಿಂತ ಕಡಿಮೆ ಸ್ಟಾಕು ತಿಳಿಸಿದವರ ಮನೆಗಳ ಜಪ್ತಿ ನಡೆಸಿ ಅಪರಾಧಿಗಳ ಮೇಲೆ ಅವಶ್ಯಬಿದ್ದ ಕಟ್ಲೆ ನಡೆಸಲಾಗುವುದು. ಈ ಜಿಲ್ಲೆಯಲ್ಲಿ ೬೨೬೦೦ ಟನ್ ಅಕ್ಕಿ ಸಂಗ್ರಹವಾಗಬೇಕೆಂದು ಬೋರ್ಡಿನವರು ನಿರ್ಣಯಿಸಿದರೂ ತಾ. ೯-೬-೪೫ರ ವರೇಗೆ ೪೮೫೭ ಟನ್ ಮಾತ್ರ ಸಂಗ್ರಹವಾಗಿದೆ. ಹೆಚ್ಚಿನ ಸಂಗ್ರಹದ ಅವಶ್ಯಕತೆ ಇದೆ."

ಫುಡ್ ಸಪ್ಲೈ ಕಮಿಶನರರು ಅಕ್ಕಿ ಸಂಗ್ರಹದ ಕುರಿತು ಸೂಚಿಸಿದ ಸುಧಾರಣೆಗಳನ್ನು ಅಂದಿನ ಸಭೆಯಲ್ಲಿ ಚರ್ಚಿಸಿ ಸದ್ಯದ ಯೋಜನೆ ಯೋಗ್ಯವಾಗಿದೆಯೆಂದು ನಿರ್ಧರಿಸಲಾಯಿತು. (ಪ್ರಥಮತಃ ಮುಂದಿನ ಬೆಳೆಯ ಬೀಜಕ್ಕಾಗಿ, ಎರಡನೆಯದಾಗಿ ಬೇಸಾಯದ ವೆಚ್ಚಗಳಿಗೆ, ಮೂರನೆಯದಾಗಿ ಜಮಿನ್ದಾರನ ಗೇಣಿಗೆ—ಹೀಗೆ ಮೂರನ್ನೂ ಜುಮ್ಲಾ ಉತ್ಪತ್ತಿಯಿಂದ ಕಳೆದು ಉಳಿದುದರಲ್ಲಿ ವಕ್ಕಲಿನ ಖರ್ಚಿಗೆ ಕೊಟ್ಟು ಮತ್ತೆ ಮಿಗುವುದನ್ನು ಉಳಿತಾಯದ ಅಕ್ಕಿಯಾಗಿ ಗಣಿಸಿ ಪಡೆಯಬೇಕು. ಉತ್ಪತ್ತಿ ಕಡಿಮೆ ಕಂಡು ಬಂದರೆ ವಕ್ಕಲಿಗೆ ಕಾರ್ಡು ಕೊಡಲ್ಪಡುವುದು.)

ಬ್ರೆಡ್ ಬಿಸ್ಕೀಟು ತಯಾರಿಕೆಯ ಸುಧಾರಣೆ ಕುರಿತು ಶ್ರೀ. ಎ. ಬಿ. ಶೆಟ್ಟರು ಪ್ರಸ್ತಾಪಿಸಲು ಕಲೆಕ್ಟರರು ಶಕ್ಯವಿದ್ದಷ್ಟು ಸಹಾಯ ಮಾಡುವುದಾಗಿ ಭರವಸೆ ಇತ್ತರು.

ವಿಶ್ವಶಾಂತಿಗಾಗಿ ಯಜ್ಞ: ಸ್ಥಳೀಯ ವೆಂಕಟ್ರಮಣ ದೇವಸ್ಥಾನದಲ್ಲಿ ಮಂಜೇಶ್ವರ ಬ್ರ| ವೇ| ಶ್ರೀ. ಕೇಶವ ಗೋವಿಂದ ಭಟ್ಟ್ ಅವರು ಒಂಬತ್ತು ದಿನಗಳ ತನಕ ನಡೆಯುವ ಋಕ್ ಸಂಹಿತಾ ಮಹಾ ಯಜ್ಞವನ್ನು ಕಳೆದ ತಾ. ೨೭ರಿಂದ ಆರಂಭಿಸಿರುವರು. ಅದರ ಮುಂಚಿನ ದಿನ ಶ್ರೀ. ಭಟ್ಟರವರ ಷಷ್ಟ್ಯಾಬ್ಧಪೂರ್ತಿ ಶಾಂತಿ ಸಮಾರಂಭವೂ ಜರುಗಿಸಲ್ಪಟ್ಟಿತು. ಬಹುಕಾಲದಿಂದ ವೈದಿಕ ವೃತ್ತಿಯನ್ನು ನಿಷ್ಠೆಯಿಂದ ಮಾಡಿಕೊಂಡು ಬಂದ ಕೇಶವ ಗೋವಿಂದ ಭಟ್ಟರಿಗೆ ಅನೇಕ ಸದ್ಗೃಹಸ್ಥರಿಂದ ಸಂಭಾವನೆಯಾಯಿತು.

ವಿಶ್ವಶಾಂತಿಗಾಗಿ ಈ ಯಜ್ಞವು ಕೈಕೊಳ್ಳಲಾಗಿದೆ. ಜಿಲ್ಲೆಯ ನಾನಾ ಕಡೆಗಳಿಂದ ಹಿರಿಯ ವೈದಿಕರೆಲ್ಲರೂ ಆಮಂತ್ರಿತರಾಗಿರುವರು. ಪ್ರತಿದಿನವೂ ಗಣಪತಿ ಪೂಜೆ, ಪುಣ್ಯಾಹವಾಚನ, ಋಕ್ ಸಂಹಿತಾ ಸ್ವಾಹಾಕಾರ, ಶ್ರೀ ನಾರಾಯಣ ಭಾರತ-ಭಾಗವತ-ಗೀತಾ-ಉಪನಿಷತ್ ಇತ್ಯಾದಿಗಳ ಪಾರಾಯಣೆ. ಕಲಶಾಭಿಮಂತ್ರಣ, ಶ್ರೀವೆಂಕಟ್ರಮಣ ದೇವರಿಗೆ ಪಂಚಾಮೃತಾಭಿಷೇಕಗಳಿರುವುದಲ್ಲದೆ ಬ್ರಾಹ್ಮಣ ಸಂತರ್ಪಣೆ, ಸಾಯಂಕಾಲ ಭಜನೆ ಇತ್ಯಾದಿ ಕಾರ್ಯಕ್ರಮಗಳೂ ಜರಗುವುವು.

ಎಸ್. ಕೆ. ಸಿ. ಸಿ: ಜಿಲ್ಲೆಯ ಈ ಬೃಹದ್ ಸಹಕಾರಿ ಸಂಘದ ವಾರ್ಷಿಕ ಸಭೆ ಕೆಲವು ದಿನಗಳ ಹಿಂದೆ ಜರಗಿದಾಗ ಸದ್ರಿ ಸಂಸ್ಥೆಗೆ ಈ ವರ್ಷದಲ್ಲಿ ರೂ. ೨೨೩೯೦-೧೪-೦ ಲಾಭವಾಗಿದೆ ಎಂಬ ವಿಷಯವು ತಿಳಿದು ಬಂದಿದೆ.

ಸ್ಟೋರುಗಳ ವಾರ್ಷಿಕ ಸಭೆ: ನಗರದ ಕೋಪರೆಟಿವ್ ಸ್ಟೋರುಗಳ ವಾರ್ಷಿಕ ಸಭೆ ಕಳೆದ ತಾ. ೧೭ರಂದು ಶ್ರೀ. ಪಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು. ಈ ಸ್ಟೋರುಗಳ ಸಂಘದಲ್ಲಿ ೧೪೬೨ ಮಂದಿ 'ಎ' ಕ್ಲಾಸ್ ಸದಸ್ಯರೂ, ೫೧ 'ಬಿ' ಕ್ಲಾಸ್ ಸದಸ್ಯರೂ ಇರುವರು. ಇವರ ಒಟ್ಟು ಭಂಡವಾಳ ರೂ. ೬೫೨೬ ಆಗಿತ್ತು. ಈಗ ಅದು ೧೦೬೪೦-೬-೦ಆಗಿದೆ. ಈ ಸ್ಟೋರುಗಳು ೧೫|| ಲಕ್ಷದಷ್ಟು ಸಾಮಾನು ಕೊಂಡುಕೊಂಡು ೧೫೬ಲಕ್ಷದಷ್ಟು ವಿಕ್ರಯವಾಗಿದೆ. ಲೆಕ್ಕ ತೆಗೆದಾಗ ಲಾಭ ೩|| ಸಾವಿರವೆಂದು ತಿಳಿದಿದೆ. ಹೊಸ ವರ್ಷಕ್ಕೆ ಶ್ರೀ. ಪಿ. ವ್ಯಾಸರಾಯರು ಅಧ್ಯಕ್ಷರೂ, ಶ್ರೀ. ಎಸ್. ನರ್ಸಪ್ರಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಜಿಲ್ಲಾ ವಾಣಿಜ್ಯಸಂಘ: ಕೆನರಾ ಚೇಂಬರ್ ಒಫ್ ಕೊಮರ್ಸ್ ಇದರ ನಾಲ್ಕನೆ ವಾರ್ಷಿಕ ಮಹಾಸಭೆ ಕಳೆದ ತಾ. ೨೪ರಲ್ಲಿ ಶ್ರೀ. ವಿಠಲಜಿ ಪುರುಷೋತ್ತಮ ಶೇಟ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ೫೫ ಸದಸ್ಯರು ಹಾಜರಿದ್ದರು. ಗತವರ್ಷದ ವರದಿಯನ್ನೂ ಆಯವ್ಯಯ ಪಟ್ಟಿಯೂ ಪ್ರಾರಂಭದಲ್ಲಿ ಸರ್ವ ಮತಸ್ವೀಕಾರವಾಯಿತು. ನಂತರ ಮಂಜೂರಾತಿ ಪಡೆದ ನಿರ್ಣಯಗಳಲ್ಲಿ "ಸರಕಾರದವರು ಪ್ರಾಂತ್ಯದಲ್ಲಿನ ಸೇಲ್ಸ್‌ಟೆಕ್ಸನ್ನು ರದ್ದುಮಾಡಬೇಕೆಂದೂ, ಕಾರಣ ಅದು ಯಾವ ಉದ್ದೇಶಕ್ಕಾಗಿ ಎತ್ತಲ್ಪಡುತಿತ್ತೊ ಆ ಉದ್ದೇಶವೀಗ ರದ್ದುಮಾಡಲಾಗಿದೆಯೆಂದೂ ವಿನಂತಿಸಿಕೊಂಡ ಠರಾವು ಸರ್ವಮತದಿಂದ ಪಾಸಾಯಿತು. ಜಿಲ್ಲೆಗೆ ಗೆರ್ಸೊಪ್ಪೆ ಇಲ್ಲವೆ ಕಲ್ಲಿಕೋಟೆಯಿಂದ ವಿದ್ಯುಚ್ಛಕ್ತಿಯನ್ನೊದಗಿಸುವರೇ ಶೀಘ್ರ ಏರ್ಪಾಡುಮಾಡಿ ಗುಡಿ ಮತ್ತಿತರ ಕೈಗಾರಿಕೆಗಳಿಗೂ, ಕೃಷಿಯ ವ್ಯವಸಾಯಕ್ಕೂ ಸಹಾಯಮಾಡಬೇಕೆಂದೂ ಕೇಳುವ ಠರಾವು ಪಾಸಾಯಿತು. ಯುದ್ಧ ಪರಿಸ್ಥಿತಿ ಅನುಕೂಲವೂ ಸುಧಾರಿಸಿರುವುದರಿಂದ ಇಂಡಿಯಾ ಸರಕಾರದವರು ವಾಣಿಜ್ಯ ಕೈಗಾರಿಕೆಗಳ ಮೇಲಿನ ಅನಾವಶ್ಯಕ ಕರಗಳನ್ನು ರದ್ದುಪಡಿಸಬೇಕು, ಕಾಫಿ, ಅಡಿಕೆಗಳ ಮೇಲಿನ ಸುಂಕವನ್ನು ರದ್ದುಮಾಡಬೇಕು, ಬರ್ಮಾ ಕಡೆಯಿಂದ ಅಕ್ಕಿಯನ್ನು ತರಿಸಿ ಸ್ಥಳೀಯ ವ್ಯಾಪಾರಿಗಳಿಗೆ ಯೋಗ್ಯ ಸವಲತ್ತುಗಳನ್ನು ಕೊಡಬೇಕು, ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಟ್ಟು ಬಿಡಬೇಕು, ಮತ್ತು ಪ್ರಾಂತೀಕ ವಿಧಾಯಕ ಸಭೆಗಳನ್ನು ಪುನಃ ಪ್ರಾರಂಭಿಸಬೇಕು ಎಂದು ವಿನಂತಿಸುವ ಠರಾವುಗಳೂ ಪಾಸಾದವು. ಹೊಸ ವರ್ಷಕ್ಕೆ ಶ್ರೀ. ಬಿ. ವೈಕುಂಠ ಬಾಳಿಗಾ ವಕೀಲ್ ಅವರು ಅಧ್ಯಕ್ಷರೂ, ಜನಾಬ್ ಅಬ್ದುಲ್ ಸುಕ್ಕೂರ್ ಅವರು ಉಪಾಧ್ಯಕ್ಷರೂ, ಶ್ರೀ. ಉಳ್ಳಾಲ ಸುಬ್ರಾಯ ಮಲ್ಯರು ಕೋಶಾಧಿಕಾರಿಗಳೂ, ಮತ್ತು ಶ್ರೀಯುತರಾದ ಪಿ. ಉಮಾನಾಥ ಭಂಡಾರಿ ಮತ್ತು ಕೊಂಚಾಡಿ ಕೇಶವ ಶೆಣೈ ಅವರು ಜೊತೆಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು. ಅಲ್ಲದೆ ಪ್ರಭಾವಶಾಲಿ ಸದಸ್ಯರನ್ನೊಳಗೊಂಡ ಸಮಿತಿಯೂ ಚುನಾಯಿಸಲ್ಪಟ್ಟಿತು.

ಗಂಗೊಳ್ಳಿ ಹೈಸ್ಕೂಲ್: ತಾ. ೨೦ರಂದು ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹೈಸ್ಕೂಲಿನ ಉದ್ಘಾಟನೆಯು ಶ್ರೀ. ಚಿತ್ರಾಪುರ ಮಠಾಧಿಪತಿ ಶ್ರೀ. ಮದಾನಂದಾಶ್ರಮ ತೀರ್ಥ ಸ್ವಾಮಿಜಿಯವರ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟಿತು. ಅಂದು ಶ್ರೀ. ಸ್ವಾಮಿಜಿಯವರು ಸ್ಥಳೀಯ ದೇವಸ್ಥಾನದಿಂದ ಶೃಂಗರಿಸಲ್ಪಟ್ಟ ಶಾಲಾ ಕಟ್ಟಡಕ್ಕೆ ಮೆರವಣಿಗೆಯಲ್ಲಿ ತರಲ್ಪಟ್ಟರು. ಶ್ರೀ. ಎಚ್. ಲಕ್ಷ್ಮಣನಾರಾಯಣ ಕಾಮತರು ಸ್ವಾಗತ ಭಾಷಣವನ್ನು, ಮೆನೇಜರ್ ಶ್ರೀ. ಸುರೇಂದ್ರ ನಾಯಕರು ಶಾಲಾ ವರದಿಯನ್ನೂ ನಿವೇದಿಸಿದರು. ಅಲ್ಲದೆ ಅನೇಕ ಸರಕಾರಿ ಮತ್ತು ಇತರ ಮಹನೀಯರು ಸಂದರ್ಭೋಚಿತ ಭಾಷಣಗೈದು ಯಶಸ್ಸು ಕೋರಿದರು. ಸ್ವಾಮಿಜಿಯವರೂ ಯೋಗ್ಯ ಸಲಹೆಗಳಿಂದ ವಿದ್ಯಾಲಯವನ್ನು ಹರಸಿದರು. ನಂತರ ಕರಸ್ಪಾಂಡೆಂಟ್ ಶ್ರೀ. ಬೈಲೂರು ರಾಮರಾಯರ ಧನ್ಯವಾದಗಳೊಂದಿಗೆ ಸಮಾರಂಭ ಮುಕ್ತಾಯವಾಯಿತು. ಶ್ರೀ. ಜಿ. ಆರ್. ಶೆಣೈ ಎಂ. ಎ. ಎಲ್. ಟಿ. ಅವರು ಸದ್ರಿ ಹೈಸ್ಕೂಲಿನ ಹೆಡ್ಮಾಸ್ತರು.

ಉಡುಪಿ, ಸ್ವಾಮಿಜಿ ನಿಧನ: ಶ್ರೀ. ಅಧಮಾರು ಮಠದ ಶ್ರೀ. ವಿಬುಧ ಮಾನ್ಯ ತೀರ್ಥ ಪಾದಂಗಳವರು ದೇಶ ದಿಗ್ವಿಜಯ ಸಂಚಾರಕ್ಕೆ ತೆರಳಿದವರು ಕಳೆದ ತಾ. ೧೭ರಂದು ಮಿರಜೆಯಲ್ಲಿ ವಿಷಮ ಜ್ವರದಿಂದ ವೃಂದಾವನಸ್ಥರಾದರೆಂಬ ಸಂತಾಪಕರ ವಾರ್ತೆಯು ವಿಷಾದಕರವಾದುದು. ಸ್ವಾಮಿಜಿಯವರ ವಯಸ್ಸು ೨೫ರೊಳಗಿದ್ದು ತಮ್ಮ ಶಿಷ್ಯ ವೃಂದ ಅನುಯಾಯಿಗಳಲ್ಲಿ ಜನಪ್ರಿಯತೆ ಪಡೆದಿದ್ದರು. ಭರತ ಖಂಡದ ಸರ್ವ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಲೋಸುಗವಾಗಿ ಶ್ರೀಯವರು ತಮ್ಮ ಪ್ರಥಮ ಪರ್ಯಾಯಾನಂತರ ಸಂಚಾರ ಹೊರಟಿದ್ದರು. ಸ್ವಾಮಿಯವರ ಜಡ ಶರೀರವು ಅಧಮಾರಿಗೆ ತರಲ್ಪಟ್ಟು ಅಲ್ಲಿಯ ವೃಂದಾವನದಲ್ಲಿ ಸಮಾಧಿ ಕೊಡಲ್ಪಟ್ಟಿತು. ಸ್ವಾಮಿಜಿಯವರು ಅನೇಕ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದು ಇನ್ನೂ ಹೆಚ್ಚಿನ ಧರ್ಮ ಕಾರ್ಯದ ಯೋಜನೆಗಳನ್ನು ತಯಾರಿಸಿದ್ದರೆಂದೂ ತಿಳಿದು ಬರುತ್ತದೆ.

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ — ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited.

ರಷ್ಯದ ಮಹಿಳೆಯರು

(೩ನೇ ಪುಟದಿಂದ)

ದ್ದಾರೆ. ಒಟ್ಟಿಗೆ ಹೇಳುವುದಾದರೆ ಕೆಂಪು ಸೇನೆಯು ರಣಕ್ಷೇತ್ರದಲ್ಲಿ ಪಡೆದ ವಿಜಯದ ಅಧಿಕಾಂಶ ಗೌರವವು ರಷ್ಯದ ಈ ಕಾರ್ಯ ಜಾಣೆಯರಾದ ಮಹಿಳೆಯರಿಗೇನೆ ಸಲ್ಲತಕ್ಕುದು.

ಸೋವಿಯಟ್ ರಾಜ್ಯಾಂಗರಚನೆಗನುಸಾರ ಪುರುಷರಿಗೆ ಸಮಾನರಾದ ಎಲ್ಲ ನಾಗರೀಕಹಕ್ಕುಗಳೂ ಸ್ತ್ರೀಯರಿಗೆ ಕೊಡಲ್ಪಟ್ಟಿದೆ, ಪುರುಷರಂತೆಯೇ ಮಹಿಳೆಯರು ತಮ್ಮ ಸ್ವಂತ ಜೀವನದ ಮಾರ್ಗವನ್ನು ತಾವೇ ಯೋಚಿಸುತ್ತಾರೆ. ಉಳಿದದೇಶಗಳಲ್ಲಿರುವಂತೆ ವಿವಾಹ ಸಮಸ್ಯೆಯು ಅವರನ್ನು ಭಾದಿಸುವುದೆಂದು ಇಲ್ಲ. ಸೋವಿಯಟ್ ರಷ್ಯದಲ್ಲಿ ಒಬ್ಬ ಹೆಂಗಸು ತನ್ನ ಸ್ವಂತ ಚಾತುರ್ಯದಿಂದ ಗೌರವವನ್ನು ಪಡೆಯಲು ಪ್ರಯತ್ನಿಸುತ್ತಾಳೆ, ಹೊರತು ಗಂಡನಿಂದಾಗಿ ತನಗೆ ಸ್ಥಾನ-ಮಾನಗಳು ಸಿಗಬೇಕೆಂದು ಬಗೆಯುವುದಿಲ್ಲ. ಎಷ್ಟೋ ವೇಳೆ ಗಂಡನಿಗಿಂತ ಹೆಂಡತಿಯು ಉಚ್ಚ ಪದವಿಯಲ್ಲಿ ಮೆರೆಯುವುದೂ ಇದೆ. ಗಂಡ ಹೆಂಡಿರಿಬ್ಬರು ತಮ್ಮ ಸಂಬಳಗಳನ್ನೆಲ್ಲ ಒಟ್ಟು ಹಾಕಿ ಮನೆಯನ್ನು ನಡೆಸುತ್ತಾರೆ. ಮಕ್ಕಳು ತಮ್ಮ ತಾಯಂದಿರು ಕೆಲಸಕ್ಕೆ ಹೋದವೇಳೆ (creches) ಕ್ರೆಚಸ್‌ಗಳಿಗೆ ಹೋಗುತ್ತಾರೆ. ಅಲ್ಲೇ ಅವರಿಗೆ ಊಟ, ಆಟ,–ಪಾಠಗಳ ವ್ಯವಸ್ಥೆ.

ಸೋವಿಯಟ್ ರಷ್ಯದಲ್ಲಿ ವಿವಾಹದ ಕುರಿತಾದ ಕಾನೂನುಗಳೆಲ್ಲವುಗಳ ಒಂದು ಮುಖ್ಯ ಉದ್ದೇಶವೆಂದರೆ ಮಕ್ಕಳ ಸಂರಕ್ಷಣೆ. ಅಲ್ಲಿಯ ಕಾನೂನು ಪ್ರಕಾರ ಎರಡು ತರದ ವಿವಾಹಗಳು ಸಿಂಧುವಾಗಿರುತ್ತವೆ. ೧. ರಿಜಿಸ್ಟರ್ಡ್ ವಿವಾಹ. ೨. ರಿಜಿಸ್ಟರಾಗದ ಅಥವಾ ಧಾರ್ಮಿಕ ರೀತಿಯ ವಿವಾಹ. ಮೊದಲನೆಯ ರೂಢಿಗನುಸಾರ ವಧೂವರರಿಬ್ಬರು Zags ಎಂಬ ಆಫೀಸಿಗೆ ಹೋಗಿ, ೩ ರುಬಲ್ಲುಗಳನ್ನು ಕೊಟ್ಟು, ತಮ್ಮ ಆರೋಗ್ಯ, ಮುಂಚಿನ ದಾಂಪತ್ಯ, ಮಕ್ಕಳು ಮುಂತಾದುವುಗಳ ಕುರಿತು ಕೆಲವು ಪ್ರಶ್ನೆಗಳಿಗೆ ಉತ್ತರವಿತ್ತು ಮದುವೆಯಾಗುತ್ತಾರೆ. ೧೮ ವರ್ಷಕ್ಕಿಂತ ಕೆಳಪ್ರಾಯದವರು, ಮತ್ತು ಅಂಗಹೀನರು ಹಾಗೂ ರೋಗಿಗಳು ಮದುವೆಯಾಗಲೇ ಬಾರದೆಂಬ ನಿಷೇದಾಜ್ಞೆಯಿದೆ. ಭಾವೀ ದಂಪತಿಗಳಿಗೆ ಧರ್ಮಾರ್ಥವಾಗಿ ವೈದ್ಯಕೀಯ ಉಪದೇಶ (medical advice) ಕೊಡುವ ಚಿಕಿತ್ಸಾಲಯಗಳೂ ಇವೆ. ಧಾರ್ಮಿಕ ರೀತಿಯಲ್ಲಾದ ವಿವಾಹಗಳಿಗೂ ರಿಜಿಸ್ಟರಾದ ವಿವಾಹಗಳಿಗೆ ಸಿಗುವಷ್ಟೇ ಮನ್ನಣೆಯು ದೊರೆಯುತ್ತದೆಯಾದರೂ ವಿವಾಹವಿಚ್ಛೇದನಾಗುವ ಸಂದರ್ಭದಲ್ಲಿ ದಂಪತಿಗಳ ಮಕ್ಕಳ ಸಂರಕ್ಷಣೆಯು ಸರಿಯಾಗಿ ನಡೆಯಲು ಅನುಕೂಲವಾಗುವಂತೆ ರಿಜಿಸ್ಟ್ರಿ ಮಾಡುವುದೇ ಯೋಗ್ಯವೆಂದು ಪರಿಗಣಿಸಲ್ಪಡುತ್ತದೆ.

ರಷ್ಯದಲ್ಲಿ ವಿವಾಹದಿಂದ ವಿಚ್ಛೇದವು (divorce) ಸುಲಭದಲ್ಲಿ ದೊರೆಯಬಲ್ಲುದು. ಗಂಡಹೆಂಡಿರಲ್ಲಿ ಯಾರಾದರೊಂದು ವ್ಯಕ್ತಿಯು ಆ ಬಗ್ಗೆ ಉಳಿದ ವ್ಯಕ್ತಿಯ ಸಮ್ಮುಖದಲ್ಲೇ ಅರ್ಜಿಮಾಡಿಕೊಂಡರಾಯಿತು. ಸಾಕಷ್ಟು ಫೀಸು ಕೊಟ್ಟಲ್ಲಿ ವಿವಾಹವು ರದ್ದಾಗುವುದು. ಈ ಬಗ್ಗೆ ತೆರಬೇಕಾದ ಫೀಸು ಮಾತ್ರ ಪ್ರತೀ ವಿಚ್ಛೇದದೊಂದಿಗೆ ಹೆಚ್ಚುತ್ತಾ ಹೋಗುವುದು. ಮಾಜೀ ಆರೋಗ್ಯ ಮಂತ್ರಿಗಳಲ್ಲೊಬ್ಬರು ಒಮ್ಮೆ ಹೇಳಿದರು–ಯುವಕ ಯುವತಿಯರೇ ನಿಮ್ಮ ಇಚ್ಛಾನುಸಾರ ಒಂದಾಗಿರಿ, ಅಂತೆಯೇ ಇಚ್ಛಾನುಸಾರ ವಿಚ್ಛೇದ ಹೊಂದಿರಿ. ಆದರೆ ನಿಮ್ಮ ಮಕ್ಕಳನ್ನು ಮಾತ್ರ ಮರೆಯ ಬೇಡಿರಿ. ಹಾಗೆ ಮಾಡಿದರೆ ನಿಮ್ಮ ಕಿವಿಗಳನ್ನು ಹಿಂಡಿ ಜನತಾ ನ್ಯಾಯ ಸ್ಥಾನದ ಮುಂದೆ ನಿಮ್ಮನ್ನು ತರಲಾಗುವುದು. ಅದರಂತೆ ಹೆತ್ತವರು ತಮ್ಮ ವಿವಾಹವನ್ನು ರದ್ದುಗೊಳಿಸಿದರೂ ಮಕ್ಕಳ ಲಾಲನೆ ಪಾಲನೆಯ ಭಾರವನ್ನು ಅವರಿಬ್ಬರು ಹಂಚಿಕೊಂಡೇ ಹೊರಬೇಕು. ಹೆಚ್ಚಾಗಿ ಮಕ್ಕಳು ತಾಯಿಯ ಬಳಿಯಲ್ಲೇ ಇರುತ್ತಾರೆ. ಆದರೆ ತಂದೆಯು ಒಂದು ಮಗುವಿಗಾದರೆ ತನ್ನ ಆಯದ ಕಾಲಂಶ, ಎರಡಾದರೆ ಆಯದ ಮೂರರಲ್ಲಿ ಒಂದಂಶ, ಮೂರರಲ್ಲಿ ಯಾ ಮೂರಕ್ಕಿಂತ ಹೆಚ್ಚಾದರೆ ತನ್ನ ಆಯದ ಅರ್ಧಾಂಶವನ್ನು ತನ್ನ ಹೆಂಡತಿಗೆ ಕೊಡಲೇ ಬೇಕು. ಹೀಗಿರುವುದರಿಂದ ವಿವಾಹ, ವಿಚ್ಛೇದಗಳು ಸ್ವಲ್ಪ ಮಿತಿಯಲ್ಲಿಯೇ ಆಗುತ್ತಿವೆ. ರಷ್ಯದ ಮಹಿಳೆಯರ ಆರ್ಥಿಕ ಸುಧಾರಣೆ ಮತ್ತು ವಿವಾಹದ ಕುರಿತು ಮೇಲಿನ ಸೋವಿಯಟ್ ರಕ್ಷಗಳ ಪರಿಣಾಮವಾಗಿ ರಷ್ಯದಲ್ಲಿ ವ್ಯಭಿಚಾರವು ಸಂಪೂರ್ಣ ಮಾಯಾವಾಗಿದೆಯೆಂದು ಹೇಳಬಹುದು.

ಮತ್ತೊಂದು ವಿಶೇಷವೆಂದರೆ, ಸೋವಿಯಟ್ ರಷ್ಯದಲ್ಲಿ ಮಕ್ಕಳನ್ನು ಸಾಕಿ ಸಲಹುವ ಹೊಣೆಗಾರಿಕೆ ತಂದೆ ತಾಯಂದಿರ ಮೇಲೆ ಇರುವಂತೆಯೇ ಆ ತಂದೆ ತಾಯಂದಿರನ್ನು ಅಗತ್ಯವಿದ್ದಲ್ಲಿ ಸಲಹುವ ಭಾರವು ಅವರ ಪ್ರಾಯ ಪ್ರಬುದ್ಧರಾದ ಮಕ್ಕಳ ಮೇಲಿದೆ. ಕಾರಣ, ಸೋವಿಯಟ್ ಕುಟುಂಬದ ತಳಹದಿಯೆಂದರೆ 'ಪ್ರೀತಿ'. ಪರಸ್ಪರ ಪ್ರೀತಿಯಿಲ್ಲದೆ ಕೌಟುಂಬಿಕ ಜೀವನವು ಸುಗಮವಾಗಿ ಸಾಗಲಾರದು.

ಒಬ್ಬ ವ್ಯಕ್ತಿಯ ಎದೆ ಬಡಿದ ನಿಂತಾಗ ಅವನು ಸಾಯುವನಷ್ಟೆ! ಆದರೆ ವ್ಯಕ್ತಿಯು ಸತ್ತ ಕೆಲವು ಕಾಲದವರೇಗೆ ಅವನ ವಿವಿಧ ಅಂಗಗಳಲ್ಲಿ ಜೀವ ಉಳಿದಿರುತ್ತದೆ. ಉದಾ: ಮಿದುಳಿನಲ್ಲಿ ೧೦ನಿಮಿಷ; ಹೃದಯದ ಸ್ನಾಯಿಗಳಲ್ಲಿ ೨೦ನಿಮಿಷ; ಕಣ್ಣಿನಲ್ಲಿ ೩೦ನಿಮಿಷ; ಕಿವಿಗಳಲ್ಲಿ ೧ತಾಸು; ತೋಳಿನ ಹಾಗೂ ಕಾಲಿನ ಸ್ನಾಯುಗಳಲ್ಲಿ ೪ತಾಸು; ರಕ್ತ ಕಣಗಳಲ್ಲಿ ೧೮ತಾಸು; ಎಲುಬಿನಲ್ಲಿ ೩ದಿನ; ಚರ್ಮದಲ್ಲಿ ೫ದಿನ;–ಈ ರೀತಿಯಲ್ಲಿ ಜೀವವಿರುತ್ತದೆ.

* * *

ಪ್ರಪಂಚದ ಹೆಸರಾಂತ ಸೇನಾನಿಗಳೆನ್ನಿಸಿಕೊಂಡ ಈ ಕೆಳಗಿನ ಮಹಾಪುರುಷರಲ್ಲಿಯೂ ಊನಗಳಿದ್ದುವಂತೆ: ಜೋರ್ಜ್‌ವೊಶಿಂಗ್ಟನ್ನರು ಕೃತಕ ಹಲ್ಲುಗಳನ್ನಿಡುತ್ತಿದ್ದರು; ನೆಪೋಲಿಯನನಿಗೆ ಜಠರದ ವ್ರಣಭಾಧೆ ಇತ್ತು; ಜೂಲಿಯಸ್ ಸೀಜರರಿಗೆ ಅಪಸ್ಮಾರ; ನೆಲ್ಸನರಿಗೆ ಒಂದೇ ಕಣ್ಣು, ಒಂದೇ ತೋಳು, ಡ್ಯೂಕ್ ಆಫ್ ವೆಲ್ಲಿಂಗ್ಟನ್ನರು ಭಾರದಲ್ಲಿ ಬಹಳ ಕಡೆಮೆ.

* * *

ನಾಜೀ ಕೊಲೆಗಡುಕರಿಗೆ ತಲೆತಪ್ಪಿಸಿಕೊಳ್ಳುವುದರಲ್ಲಿ ಸ್ಪೈಯಿನು ಸಹಾಯ ಮಾಡುತ್ತಿದೆಯಾಗಿ ಮೊಸ್ಕೊದಿಂದ ದೂರು ಹೊರಟಿರುತ್ತದೆ.

ಪೊಂಡುಚೇರಿಯ ಶ್ರೀ. ಅರವಿಂದರು ವೇವಲ್ಲ ಪ್ಲೆನಿನ ಕುರಿತು ಸಮಾಧಾನವನ್ನು ಸೂಚಿಸಿರುವರಾಗಿಯೂ ತಮ್ಮ ಈ ಅಭಿಪ್ರಾಯವನ್ನು ಕಾಂಗ್ರೆಸ್ ಕಾರ್ಯಕಾರಿ ಮಂಡಳಕ್ಕೆ ತಿಳಿಸಿರುವರಾಗಿಯೂ ತಿಳಿಯಲಾಗಿದೆ.

ಕಲ್ಲಿದ್ದಲ್ಲಿನ ಅಭಾವದಿಂದ ಅಹಮದಾಬಾದಿನ ಅರಿವೆ ಗಿರಣಿಗಳು ಮೊನ್ನೆ ಮೂರು ದಿನ ಕೆಲಸಮಾಡಲಿಲ್ಲವಂತೆ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ· ಸೂ:– ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಕೋಮಲ ಸೌಂದರ್ಯ ನಿಮಗೆ ಇರಬೇಕೆ?

ನಿಮಗೆ ಶುದ್ಧವಾದ ಮತ್ತು ಹಾಳಾಗದ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯು ಅಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಗೊಳಿಸುವುದು. ದಿನಂಪ್ರತಿಯ ಅಶುದ್ಧಾಹಾರವನ್ನು ಹೊರಹಾಕುವುದು ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ ಶರೀರಕ್ಕೆ ಕೋಮಲತೆಯನ್ನುಂಟುಮಾಡುವುದು.

ಬೈಲ್ ಬೀನ್ಸ್ ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು

BILE BEANS

AAA 290 KN

ಮೇಲೆ ಏರುತ್ತಿರುವ ಧಾರಣೆಗಳನ್ನು ತಡೆದು ನಿಲ್ಲಿಸಿರಿ

ಅನಾವಶ್ಯಕವಾಗಿ ಹಣವನ್ನು ವೆಚ್ಚಮಾಡಬೇಡಿರಿ

ಈಗಿನಿಂದಲೇ ಉಳಿಸಿರಿ ಮುಂಬರುವ ಕಾಲದ ಸಲುವಾಗಿ

ಹಣವನ್ನು ಲಾಭದಾಯಕವಾಗಿ ತೊಡಗಿಸುವ ಈಗಿನ ಕಾಲದ ಉತ್ತಮ ಮಾರ್ಗಗಳಾವವೆಂದರೆ, ವಿಮೆ ಇಳಿಸುವದು, ಸಹಕಾರ ಸಂಘಗಳಲ್ಲಿ ಠೇವಿಡುವದು, ಸೇವಿಂಗ್ಸ್ ಬ್ಯಾಂಕು ಖಾತೆಗಳು ಪೋಸ್ಟ್‌ಆಫೀಸ್ ಸೇವಿಂಗ್ಸ್ ಬ್ಯಾಂಕು ಖಾತೆಗಳು ಆಗಿರುತ್ತವೆ; ಮತ್ತು ಇವೆಲ್ಲಗಳ ಪೈಕಿ ಅತ್ಯುತ್ತಮವಾದ ಮಾರ್ಗಗಳೆಂದರೆ, ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳುವದು ಮತ್ತು ಸರಕಾರದವರು ತೆಗೆದ ಸಾಲಗಳಿಗೆ ಹಣ ತುಂಬುವದು, ಆಗಿರುತ್ತವೆ.

ಹಿಂದುಸ್ಥಾನ ಸರಕಾರದ ಫೈನಾನ್ಸ ಡಿಪಾರ್ಟಮೆಂಟಿನಿಂದ ಹೊರಡಿಸಿದ್ದು.

ಕರ್ಣಾಟಕದ ಖಾದಿ ಕಾರ್ಯಕರ್ತ ಕೌಜಲಗಿ

ನ್ಯಾಯಾಧಿಕಾರಿಗಳಿಗೂ ಬಗ್ಗದ ಗಾಂಧಿ ಟೊಪ್ಪಿ

ಕೊನೆತನಕ ನೂಲಿದರು–ವಿನೋದಿಸಿದರು

"ಇವರು ಹರಿದು ಹಂಚಿ ಹೋದ ಕರ್ಣಾಟಕದಲ್ಲಲ್ಲದೆ ಬೇರೆ ಎಲ್ಲಾದರೂ ಜನಿಸಿದ್ದರೆ, ರಾಷ್ಟ್ರ ಸಂಸ್ಥೆಯ ಅಧ್ಯಕ್ಷರೊ ಇಲ್ಲವೆ ಪ್ರಾಂತ್ಯದ ಪ್ರಧಾನಿಗಳೊ ಆಗಿರುತಿದ್ದರು." ಹೀಗೆಂದು ಒಂದು ಪತ್ರಿಕೆಯು ದಿವಂಗತ ಕೌಜಲಗಿ ಹನುಮಂತರಾಯರ ಕುರಿತು ಬರೆದಿರುವುದನ್ನು ಓದದರೆ ಆ ದೇಶಭಕ್ತರ ಸಾಮರ್ಥ್ಯ ಪ್ರತಿಭೆಗಳನ್ನು ಸಂಕ್ಷೇಪವಾಗಿ ತಿಳಿದಂತಾಗುವುದು. ಜನತಾ ಮುಂದಾಳತ್ವದ ಸರ್ವ ಗುಣ ವಿಶೇಷಗಳೂ ಅವರಲ್ಲಿದ್ದುವು. ಕುಂದದ ಉತ್ಸಾಹ ಅವಿಶ್ರಾಂತ ಕಾರ್ಯ ಚೈತನ್ಯಗಳೇ ಕೌಜಲಗಿ ಹನುಮಂತರಾಯರ ಕೀರ್ತಿ ರಹಸ್ಯಗಳು.

ಬೀಜಾಪುರವು ಅವರ ಕಾರ್ಯಕ್ಷೇತ್ರದ ರಾಜಧಾನಿಯಾಗಿತ್ತು. ಹಿಂದೆ ಶಿವಾಜಿಯ ಬಾಲ್ಯದ ಚಟುವಟಿಕೆಗಳು ಇದರ ಆಸುಪಾಸಿನಲ್ಲೂ ನಡೆದಿದ್ದವು. ಅಂತೂ ದೇಶ ಸೇವೋತ್ಸಾಹಗಳಿಗೆ ಪ್ರೋತ್ಸಾಹಕವಾದ ಅದಾವುದೊ ಒಂದು ವಾತಾವರಣದಿಂದ ಈ ಪ್ರದೇಶಗಳು ಕೂಡಿರಬೇಕು.

ಇಲ್ಲದಿದ್ದರೆ ಕನ್ನಡಿಗರಾದರೂ ಮರಾಠಿ ಮೂಲಕ ಶಿಕ್ಷಣ ಪಡೆದು, ವಕಾಲತು ಪಾಸುಮಾಡಿ ಭರದಿಂದ ಸಂಪಾದಿಸುತಿದ್ದಹಾಗೆ ಕೌಜಲಗಿ ಹನುಮಂತರಾಯರಿಗೆ ಲೋಕಮಾನ್ಯ ತಿಲಕ, ಗಾಂಧಿಯವರುಗಳ ದೇಶಸೇವಾ ಕರೆಯು ಅತ್ಯಂತ ಆಕರ್ಷಕವಾಗಿರಬೇಕೆ? ೧೯೨೧ರಲ್ಲೇ ಯಾವ ತರದಲ್ಲೂ ಶ್ರೀಮಂತರಲ್ಲದ ಕೌಜಲಗಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿಯೇ ಬಿಟ್ಟರು.

ತಿನ್ನುಣ್ಣಲು ಹೇರಳವಿದ್ದು ದೇಶಸೇವೆಯನ್ನೇ ಉದ್ಯಮವಾಗಿಟ್ಟುಕೊಳ್ಳುವ ತರವೊಂದು ಬೇರೆ. ಬೆನ್ನ ಮೇಲೆ ಸಂಸಾರ ಭಾರ ಹೊತ್ತು ನಾಡ ಮೋಕ್ಷಕ್ಕೆ ಟೊಂಕ ಕಟ್ಟುವ ಸ್ಫೂರ್ತಿಯೇ ಬೇರೆ. ಈ ಎರಡನೆಯ ತರದವರೇ ಕೌಜಲಗಿಯವರು. ಆದರೂ ಸಾಮಾನ್ಯ ಮಾನವ ಆಕರ್ಷಣೆಗೆ ಅವರು ಬಲಿಬೀಳದಿರಲಿಲ್ಲ. ೧೯೨೨ರ ನಂತರ ಸ್ವಲ್ಪ ಕಾಲ ರಾಷ್ಟ್ರೀಯ ಚಳವಳದ ಅಬ್ಬರ ತುಸು ಶಾಂತವಾದಾಗ ಒಂದು ಸಲ ಕೋರ್ಟು ಇಳಿದು ಬಂದ ಹಣಮಂತರಾಯರು ಮತ್ತೆ ಕೊಂಚಕಾಲ ವಕಾಲತು ತೆಗೆದುಕೊಂಡರು. ಆದರೆ ಮತ್ತೆ ಶೀಘ್ರದಲ್ಲೇ ಅದು ಹೇಯವೆಂದು ಕಂಡು ಬಂದು ಪುನಃ ಆ ವೃತ್ತಿಗೆ ನಿರಂತರವಾಗಿ ತಿಲಂಜಾಲಿಯನ್ನಿತ್ತು ಖಾದಿ ಕಾರ್ಯಕ್ಕೆ ತೊಡಗಿದರು.

ಕರ್ಣಾಟಕದಲ್ಲಿ ಮೊತ್ತ ಮೊದಲಿಗೆ ಖಾದಿ ಕಾರ್ಯ ಹಳ್ಳಿಗಳ ಪುನರುಜ್ಜೀವನಕ್ಕೆ ಕೈ ಹಾಕಿದ ಅಗ್ರಗಣ್ಯರಲ್ಲಿ ಹಣಮಂತರಾಯರು ಪ್ರಥಮ ಶ್ರೇಣಿಯವರು. ಚರಕಾ ಸಂಘದವರು ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸುವುದರ ಮೂಲಕ ಅವರ ಸಾಮರ್ಥ್ಯಕ್ಕೆ ಮನ್ನಣೆಕೊಟ್ಟರು. ಅಂದಿನಿಂದ ಮರಣ ಪರ್ಯಂತರ ಇಂತಹ ರಚನಾತ್ಮಕ ಚಟುವಟಿಕೆಗಳಲ್ಲಿ ಶ್ರೀಯುತರು ತಮ್ಮ ಜೀವನವನ್ನು ಸವೆದರು.

ಸಂಘ ರಚನೆ, ವ್ಯವಸ್ಥಾಪನೆ ಮತ್ತು ನಿರ್ವಹಣ ಕಾರ್ಯದಲ್ಲಿ ಕೌಜಲಗಿಯವರ ಪಾಂಡಿತ್ಯ ಅಸಾಧಾರಣವಾದುದು. ತೀಕ್ಷ್ಣ ಗ್ರಹಣ ಶಕ್ತಿ ಮತ್ತು ಯೋಜನಾ ಕೌಶಲ್ಯದಿಂದ ಕೂಡಿದವರಿದ್ದ ಅವರು ಕೈಕೊಂಡ ಶ್ರಮವೊಂದರ ಕುರಿತು ಆಳವೂ ಸವಿಸ್ತಾರವೂ ಆದ ಅಂಕೆಸಂಖ್ಯೆಗಳನ್ನು ತಯಾರುಮಾಡಿ ಅವುಗಳನ್ನು ನಿವೇದಿಸುವುದರ ಮೂಲಕ ಎಂತಹ ತಜ್ಞರನ್ನಾದರೂ ಬೆರಗು ಮಾಡುತಿದ್ದರು. ಸರಕಾರದ ಅಧಿಕಾರಿಗಳು ಕೂಡಾ ಅಂತಹ ವಿಷಯಗಳಲ್ಲಿ ಅವರ ಸಹಾಯವನ್ನು ಅನಿವಾರ್ಯವಾಗಿ ಪಡೆಯುತಿದ್ದರು.

ಕೌಜಲಗಿಯವರಿಲ್ಲದಿರುತಿದ್ದರೆ ಬೀಜಾಪುರ ಪ್ರಾಂತ್ಯವು ಇನ್ನೊಂದು ಬಂಗಾಲವಾಗಿ ಬರಗಾಲದ ಕಡು ಸವಿಯನ್ನುಣ್ಣುತಿತ್ತೆಂದು ಬಲ್ಲವರು ತಿಳಿಸುತ್ತಾರೆ. ಬಹಳ ವರ್ಷಗಳಿಂದ ಹೃದಯ ವಿಕಾರ ಬಾಧೆ ಹೊಂದುತ್ತಲಿದ್ದರೂ ಅವರು ರೈತರ ಮತ್ತು ಹಳ್ಳಿಗಾಡಿನ ಶ್ರೇಯಸ್ಸನ್ನೇ ಗುರಿಯಾಗಿಟ್ಟು ಶ್ರಮಿಸಿದುದರಿಂದ ಆ ಪ್ರದೇಶಗಳಲ್ಲಿ ಬರಗಾಲದ ಕಠಿಣತೆಯು ಸ್ಪರ್ಶಿಸದಾಯಿತು.

ತಾರುಣ್ಯದಲ್ಲೇ ಪತ್ನಿಯನ್ನು ಕಳಕೊಂಡ ಹಣಮಂತರಾಯರ ಮೇಲೆ ಸಂಸಾರದ ಭಾರವಾದ ಹೊರೆಯೇನೊ ಬಿದ್ದಿತ್ತು. ಆದರೂ ತಮ್ಮ ಪ್ರತಿಜ್ಞಾಬದ್ಧ ಕರ್ತವ್ಯಕ್ಕೆ ಅದರಿಂದ ಲೋಪಬಾರದಂತೆ ತನುಮನಗಳಿಂದ ಸಾಧಿಸಿದರು. ಆದರೂ ಪುನಃ ಮಾನವ ಸಾಮಾನ್ಯವಾದ ದೋಷವು ಅವರಿಗೆ ತಟ್ಟದಿರಲಿಲ್ಲ. ಚರಖಾ ಸಂಘದ ಕೆಲಸದ ವಿಚಾರದಲ್ಲಿ ಇವರ ಮೇಲೆ ಅಲಕ್ಷದ ಆರೋಪ ಬಡೆಯಿತು. ಅಂದಿನಿಂದ ಈ ದೇಶಭಕ್ತರ ತನುಮನಾರೋಗ್ಯಗಳು ಕ್ಷೀಣಿಸ ಹತ್ತಿದವು.

ಮರಾಠಿಯಲ್ಲಿ ಕಲಿತ ಕೌಜಲಗಿಯವರು ತಮ್ಮ ತಾಯಿನಾಡಿನ ನುಡಿಯನ್ನು ಕಲಿತರು ಮಾತ್ರವಲ್ಲ ಅದರಲ್ಲಿ ಗಣನಾರ್ಹ ಸ್ಥಾನವನ್ನು ಪಡೆದರು. ಕನ್ನಡ ಸಾಹಿತ್ಯದ ಅನೇಕ ಅಂಗಗಳಲ್ಲಿ ಇವರು ಪ್ರಭಾವ ಪೂರ್ಣವಾಗಿ ಕೈಯಾಡಿಸಿದರು. ಇವರ ಲೇಖನಗಳು ವಿನೋದ ಪೂರ್ಣವಾಗಿದ್ದಂತೆ ವಿಚಾರಪೂರ್ಣವೂ ಆಗಿದ್ದವು. ನಿದರ್ಶನವಾಗಿ: "ಸತ್ತರೂ ಮತ್ತೆ ರಾಷ್ಟ್ರ ಭಕ್ತರಲ್ಲೇ ಜನಿಸಲಿಚ್ಛಿಸುವೆ. ಆದರೆ ಅವರಲ್ಲಿ ಕೆಲವರು ಮುದುಕರು, ಕೆಲವರು ವಿದುರರು, ಮತ್ತೆ ಕೆಲವರು ಬ್ರಹ್ಮಚಾರಿಗಳು. ಹೀಗಾದರೆ ಹೇಗೆ? ಆದರೂ ಕಡೆಗೆ ಕರ್ಣಾಟಕದಲ್ಲಿಲ್ಲಾದರೂ ಚಿಂತಿಲ್ಲ" ಹೀಗೆ ಬರೆದುದರಲ್ಲಿ ತುಂಬಾ ವಿನೋದವೂ ವಿಚಾರವೂ ಇದೆ.

ಹಣಮಂತರಾಯರ ಆದರ್ಶವು ಅಮರವಾದುದು. ಮಹಾತ್ಮರೆಂದಂತೆ "ಅವರ ಸ್ಥಾನವನ್ನು ಸಮರ್ಥರು ತುಂಬಬೇಕು." ಎಂದು ಉದ್ಗರಿಸಿದುದನ್ನು ಗಮನಿಸಿ ಗತಿಸಿದ ಆ ದೇಶ ಸ್ವಯಂಸೇವಕರ ಉದಾತ್ತ ಧ್ಯೇಯಗಳನ್ನು ಪರಿಪೂರ್ಣಗೊಳಿಸುವ ಭಾರ ಕನ್ನಡಿಗರದು. ಕೌಜಲಗಿಯವರ ಆತ್ಮವು ಅದರಿಂದ ಶಾಂತಿ ಹೊಂದುವುದು.

ನೋಟೀಸು

ಕಾಂಞಂಗಾಡು ಗ್ರಾಮ ೮. ಸರ್ವೆ ೧೨೫ರಲ್ಲಿ ೪ A ಮುಂತಾದ ಸ್ಥಳಗಳು ಹೊಸದುರ್ಗ ಪಟೇಲ ಶಿವರಾಯರಿಂದ ನಾನು ಪಡಕೊಂಡಲ್ಲಿ ಸದ್ರಿ ಸ್ಥಳ, ಸದ್ರಿ ಪಟೇಲರಿಗೆ ಮೊದಲು ತಳಾಪರಿಂದ ಸಿಕ್ಕಿದ ದಸ್ತಾವೇಜು ಎಗ್ರಿಮೆಂಟ್‌ಗಳೂ ನನಗೆ ಕೊಟ್ಟಿದ್ದು ಸದ್ರಿ ದಸ್ತಾವೇಜು ಎಗ್ರಿಮೆಂಟುಗಳನ್ನು ನನ್ನ ಜವುಳಿ ಅಂಗಡಿಯಲ್ಲಿಟ್ಟಿದ್ದೆನು. ಸದ್ರಿ ಅಂಗಡಿ ಯಜಮಾನನಾದ ಕುಕ್ಕಳ ಕೋರನಾಯರು ಅಂಗಡಿಯ ಬಾಡಿಗೆಯನ್ನು ಮೊದಲಿನಕ್ಕಿಂತಲೂ ಹೆಚ್ಚಿಸುತ್ತೇನೆಂದು ಹೇಳಿದ್ದರಿಂದ ಬೇರೆ ಅಂಗಡಿಗೆ ನನ್ನ ಸಾಮಾನುಗಳನ್ನೆಲ್ಲಾ ತಾ. ೧೯-೬-೪೫ಕ್ಕೆ ಸಾಗಿಸುವಾಗ ಮೇಲೆ ವಿವರಿಸಿದ ದಸ್ತಾವೇಜು, ಎಗ್ರಿಮೆಂಟುಗಳು ಕಾಣೆಯಾಗಿವೆ. ಆದ್ದರಿಂದ ಸದ್ರಿ ದಸ್ತಾವೇಜು, ಎಂಗ್ರಿಮೆಂಟುಗಳು ಯಾರಾದರೂ ಸಿಕ್ಕಿದವರಿದ್ದರೆ ನನಗೆ ಕಳುಹಿಸಿ ಕೊಟ್ಟಲ್ಲಿ, ಸದ್ರಿಯವರಿಗೆ ತಕ್ಕ ಪ್ರತಿಫಲವು ಕೊಡಲಾದೀತು–ಸದ್ರಿ ಸ್ಥಳವನ್ನು ನಾನು ಕ್ರಯಕ್ಕೆಕೊಂಡುಕೊಂಡಿದ್ದರಿಂದ ಮೂಲಗೇಣಿಯವರು, ಅದರ ಗೇಣಿ, ತೀರ್ವೆ, ವಗೈರೆ ನನಗೆ ಕೊಟ್ಟು ನನ್ನಿಂದ ರಶೀದಿ ಪಡಕೊಳ್ಳಬೇಕೆಂದು ಈ ಮೂಲಕ ತಿಳಿಸೋಣಾಗುತ್ತದೆ.

P. ಕೇಳುಮಣಿಯಾಣಿ ಜವುಳಿ ವ್ಯಾಪಾರಿ–
ಹೊಸದುರ್ಗ, ಕಾಂಞಂಗಾಡು P. O.

In the court of the Subordinate Judge of South Kanara

R. E. P. 183/44.

Between:—

Ramanna Rai & others–Petitioners

AND

Ucheri & others Respondents.

To

Respondent 5

Koraga son of Manakke Residing at Keminje village of Puttur Taluk,

Respondent 25.

Korapolu d/of Belthamma Residing at Kakkunje of Bela village of Kasaragod Taluk.

Please take notice that the above execution petition is posted to 7-7-45. for settling the terms of sale proclamation and you are hereby informed to state objections if any to the same either in person or through a vakil failing which the execution petition will be proceeded with exparte.

By order of court

(*Sd.*) K. Uggappa Shetty.
Pleader for Petitioner

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ

ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನ ನಿಮ್ಮೊಡನೆ ಇಟ್ಟಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾಳದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಸಂಚಿಕೆ ಬೆಲೆ 0—1—0 ತಾರೀಕು 29—6—1945 Regd No. M 3406

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

AMRUTANJAN DEPOTS BOMBAY MADRAS CALCUTTA

ಹುಳಕಡ್ಡಿಮುಲಾಮು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ. ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 6—7—1945 [ಸಂಚಿಕೆ 16]

ಸಿಮ್ಲಾದಲ್ಲಿ ರಾಜಕೀಯ ಅಮೃತಮಂಥನ

ಭಾರತಕ್ಕೆ ಬ್ರಾಹ್ಮಣ ವ್ಯಾಸರಾಯರು

ಹಿಂದೂ ಮಹಾಸಭೆಯ ಇನ್ನೊಂದು ಓಗಸ್ಟ್ ಗಲಭೆ!

ಸಿಮ್ಲಾ ಪರಿಷತ್ತಿನಲ್ಲಿ ಪಾಕಿಸ್ತಾನದ ಸುದ್ದಿ ಕೇಳಿ ಬರದಿದ್ದುದು ಒಂದು ವಿಶೇಷ ಸಂಗತಿ ಎಂದು ಹಲವರ ಅಭಿಪ್ರಾಯ. ಆದರೂ ಅಲ್ಲಿನ ಮಾತುಕತೆಗಳ ಆಳದಲ್ಲಿ ದೇಶವಿಚ್ಛೇದದ ಆ ಭಾವವು ಸ್ಪಷ್ಟವಾಗಿ ಕಂಡು ಬರುತ್ತಿದೆ. ರಚನೆಯಾಗಲಿರುವ ಹೊಸ ಆಡಳಿತ ಮಂಡಳಿಯಲ್ಲಿ ಮೊದಲು ೪ ಮುಸ್ಲಿಮರು ೪ ಸವರ್ಣ ಹಿಂದೂಗಳು ಎಂದಿದ್ದದ್ದು ಆ ಸಂಖ್ಯೆ ಐದಕ್ಕೆ ಬಂದಿದ್ದು ಇನ್ನು ಅಂತ್ಯವಾಗುವುದರೊಳಗೆ ಆರಕ್ಕೆ ಏರಬಹುದೆಂದು ನಿರೀಕ್ಷಿಸಲಾಗಿದೆ.

ಅಷ್ಟಕ್ಕೆ ಮುಗಿಯುಲಿಲ್ಲ. ಮುಸ್ಲಿಂ ಸದಸ್ಯರು ಲೀಗಿನಿಂದಲೇ ಚುನಾಯಿಸಲ್ಪಟ್ಟವರಿರಬೇಕೆಂದು ಜಿನ್ನರ ಹಟ. ಅಂತಹ ಸಂದರ್ಭದಲ್ಲಿ ಲೀಗೇ ಮುಸ್ಲಿಮರ ಪರವಾಗಿ ಮಾತನಾಡಬಲ್ಲ ಸಂಸ್ಥೆಯೆಂದು ಒಪ್ಪಿಕೊಂಡ ಹಾಗಾಯಿತು. ಮಾತ್ರವಲ್ಲ ಕೊಂಗ್ರೆಸು ಹಿಂದೂಗಳ ಸಂಸ್ಥೆಯೆಂದೇ ರುಜುವಾತು ಪಡಿಸಿದಂತೆಯೂ ಆಯಿತು. ಕೊಂಗ್ರೆಸ್ಸು ತನ್ನ ರಾಷ್ಟ್ರೀಯ ರೂಪ ಭಾವವನ್ನು ಕಳಕೊಂಡು ಬರೇ ಜಾತೀಯ ಸಂಸ್ಥೆಯ ಕೀಲ್ಮಟ್ಟಕ್ಕೆ ಇಳಿದು ತನ್ನ ಶೋಭಾಯಮಾನ ಇತಿಹಾಸದ ವರ್ಚಸ್ಸನ್ನು ಕಳಕೊಂಡು ನಿಸ್ತೇಜವಾಗಬೇಕಾಗುವುದು. ಆ ಮಟ್ಟಿಗೆ ಪಾಕಿಸ್ತಾನದ ಗುಪ್ತ ಛಾಯೆಯು ಅಲ್ಲಿ ಹರಿದಾಡುತ್ತಿದೆ ಎಂಬದು ಗಮನಕ್ಕೆ ಬರುತ್ತದೆ:

ಎಲ್ಲಾ ಭಾರ ವೇವೆಲ್ಲರ ಮೇಲೆ

ಈಗ ನಡೆಯುತ್ತಿರುವುದು ತಾತ್ಕಾಲಿಕವಾದ ಒಂದು ಸುಧಾರಣೆ. ಇದಕ್ಕೆ ಎಲ್ಲಾ ಪಕ್ಷ ಪಂಗಡಗಳ ಒಪ್ಪಿಗೆಯಾಗಲೇ ಬೇಕೆಂಬ ಶರ್ತವಿಲ್ಲ. ಸವರ್ಣ ಹಿಂದೂಗಳಿಗೂ ಮುಸ್ಲಿಮರಿಗೂ ಸಮಾನ ಸ್ಥಾನಗಳು ಎಂದು ಹೇಳಲಾಗಿದೆಯೇ ಹೊರತು, ಲೀಗಿಗಾಗಲೀ, ಕೊಂಗ್ರೆಸಿಗಾಗಲೀ ಅವುಗಳನ್ನು ಸಂಪೂರ್ಣ ಬಿಟ್ಟುಕೊಡಲ್ಪಡುತ್ತವೆಂದು ಹೇಳಲ್ಪಟ್ಟಿಲ್ಲ. ದೇಶದಲ್ಲಿನ ರಾಜಕೀಯ ಜೀವನದ ಮುಂದಾಳುಗಳು ಆಮಂತ್ರಿಸಲ್ಪಟ್ಟಿದ್ದಾರೆ. ಅವರಿಂದ ಕೆಲವೊಂದು ಹೆಸರುಗಳೂ ಕೇಳಲ್ಪಟ್ಟಿವೆ. ಎಲ್ಲವನ್ನೂ ಪರ್ಯಾಲೋಚಿಸಿ ವ್ಯಾಸರಾಯರು ತಮಗೆ ತೃಪ್ತಿಯಿರುವವರನ್ನು ಚುನಾಯಿಸುವರು.

ಐದು ಮುಸ್ಲಿಮರಲ್ಲಿ ಮೂರರಿಗಿಂತ ಹೆಚ್ಚು ಮಂದಿಯನ್ನು ಲೀಗಿನಿಂದ ಚುನಾಯಿಸಲ್ಪಡುವುದಿಲ್ಲವೆಂಬ ಸಂಗತಿ ಸ್ಪಷ್ಟವಾಗಿದೆ. ಹೆಚ್ಚಾದರೆ ನಾಲ್ಕು ಮಂದಿ. ಐದನೇಯವರು ಲೀಗ್ ಬಾಹಿರರೊಬ್ಬರು—ಹೆಚ್ಚಿನ ಮಟ್ಟಿಗೆ ರಾಷ್ಟ್ರಿಯವಾದಿ ಮುಸುಲ್ಮಾನರೊಬ್ಬರು. ಕೊಂಗ್ರೆಸಿನ ಕಡೆಯಿಂದಲೂ ಹಾಗೇ. ಅಂತಹ ಸಂದರ್ಭದಲ್ಲಿ ಲೀಗಿಗೆ ಬಹುಮತ ದೊರೆಯಲಾರದೆಂದೂ ಆದುದರಿಂದ ಮತ್ತೆ ಲೀಗಿನ ಪ್ರಭಾವ ಕಡಿಮೆಯಾಗಬಹುದೆಂದೂ ಭಾವಿಸಿದ ಲೀಗ್ ಮುಂದಾಳುಗಳು ಹೊರ ನಿಲ್ಲುವುದೇ ಒಳ್ಳೇ ಮಾರ್ಗವೆಂದು ನಂಬಿದಂತೆ ತೋರುತ್ತದೆ.

ಕೊಂಗ್ರೆಸ್ಸಿನ ಧೋರಣೆ ಸ್ಪಷ್ಟವಿದೆ. ಅದು ಯುದ್ಧಾಂತ್ಯದ ತನಕ ಯಾವ ಧ್ವಂಸಕಾರಕ ಚಳವಳಕ್ಕೂ ಕೈ ಹಾಕುವುದಿಲ್ಲ. ತಾತ್ಕಾಲಿಕ ಆಡಳಿತ ವ್ಯವಸ್ಥೆಯಲ್ಲಿ ರಚನಾತ್ಮಕ ಮತ್ತು ಸಹಾಯಕಾರಿ ಸಹಕಾರವನ್ನು ತೆರುವುದು. ಇದಕ್ಕಿಂತಲೂ ಹೆಚ್ಚಿನದೇನನ್ನು ಬ್ರಿಟಿಷ್ ಆಡಳಿಗಾರರಾದರೂ ಅಪೇಕ್ಷಿಸುವುದಿಲ್ಲ. ಈಗಾದರೂ ಬ್ರಿಟಿಷ್ ಸರಕಾರದವರು ಕೊಂಗ್ರೆಸಿನ ತಾಳ್ಮೆ ಮತ್ತು ಕ್ಷಮಾ ದಮಾ ಗುಣಗಳನ್ನು ಕಣ್ಣು ಬಿಟ್ಟು ನೋಡದರರು.

ವ್ಯಾಸರಾಯರಾದರೂ ಲೀಗಿನ ಧೋರಣೆಯ ಕುರಿತು ತುಂಬಾ ನೊಂದಿರ ಬಹುದೆಂದು ತೋರುತ್ತದೆ. ಈ ಸಲ ಅವರು ಧೈರ್ಯದಿಂದ ವರ್ತಿಸುವರು. ಜೂಲ್ಯಾ ಹದಿನಾಲ್ಕಕ್ಕೆ ಪುನಃ ಸಿಮ್ಲಾ ಪರಿಷತ್ತು ಸೇರಲಿದೆ. ಅಂದು ಇಷ್ಟವಿದ್ದ ಪಕ್ಷಗಳು ತಮ್ಮ ಕಡೆಯವರ ಹೆಸರುಗಳ ಯಾದಿಯನ್ನು ಅರ್ಪಿಸಬೇಕು: ಅಂದೇ ಅವರು ಒಂದು ನಿರ್ಧರಿತ ಧೋರಣೆಯನ್ನು ವಿಶದಪಡಿಸಿ ತಮ್ಮ ಕಾರ್ಯವನ್ನು ಮುಂದರಿಸುವರು.

ಪ್ರಾರಂಭದಲ್ಲೇ "ಸ್ಪೆಶಲ್ ಪವರ್"

ಬಿಕ್ಕಟ್ಟಿನೊಳಗೆ ಬಿಕ್ಕಟ್ಟು ಉಂಟಾಗಿರುವುದರಿಂದ ದೇಶದ ಎಲ್ಲಾ ಪಕ್ಷಗಳೂ ಆಶಿಸದಿರುವ ವ್ಯಾಸರಾಯರ ಆ 'ಸ್ಪೆಶಲ್ ಪವರ್' (ವಿಶೇಷಾಧಿಕಾರ) ವನ್ನು ಪ್ರಾರಂಭದಲ್ಲೇ ಅವರು ಉಪಯೋಗಿಸುವಂತೆ ಮಾಡಿದಂತಾಗುವುದು. ಈ ಕುರಿತು ಹಿಂದೂ ಪತ್ರಿಕೆಯು ಹೀಗೆ ಅಭಿಪ್ರಾಯ ಬರೆದಿದೆ:

"ಮುಂದಿನ ರಾಜ್ಯ ಘಟನೆಗೆ ಯಾವ ತರದಲ್ಲೂ ಬಾಧಕ ವಿಲ್ಲದಿರುವ ಈ ಶುದ್ಧ ತಾತ್ಕಾಲಿಕ ಯೋಜನೆಯಲ್ಲೇ ಇಷ್ಟೊಂದು ಗಡಿಬಿಡಿ ಅನಾವಶ್ಯಕ ವಾದುದು ಮತ್ತು ಶೋಚನೀಯವಾದುದು. ರಾಷ್ಟ್ರೀಯ ಸಂಸ್ಥೆಯಾಗಿಯೇ ಬಾಳ ಬೇಕೆಂಬುದ್ದೇಶದ ಕೊಂಗ್ರೆಸ್ಸೇ ಸವರ್ಣ ಹಿಂದುಗಳಿಗೂ ಮುಸ್ಲಿಮರಿಗೂ ಸಮಾನ ಸದಸ್ಯತನದ ಏರ್ಪಾಡಿಗೆ ಒಪ್ಪಿರುವಾಗ ಲೀಗು ತನ್ನ ಹಟವನ್ನು ಏಕೆ ಬದಿಗೊತ್ತಬಾರದು? ದೇಸಾಯ್-ಲಿಯಾಖತ್ ಒಪ್ಪಂದದ ಮೇಲೆ ಎಂಬಂತೆ ಸೃಷ್ಟಿಸಿರುವ ಈ ವೇವೆಲ್ಲ ಯೋಜನೆಯನ್ನು ಸ್ವೀಕರಿಸಲು ಹೆಚ್ಚು ಕಷ್ಟವೇನಿಲ್ಲ. ಬಹುಶ್ಯ ದೇಸಾಯ್-ಲಿಯಾಖತ್ ಸೂಚನೆಗಳಲ್ಲಿ ಲೀಗ್–ಕೊಂಗ್ರೆಸುಗಳಿಗೆ ಸಮಾನ ಸ್ಥಾನಗಳಿರಬೇಕೆಂದಿರಬಹುದು. ಈಗ ಆದರೂ ಅವರು ದೇಶದಲ್ಲಿ ಸಾಧಾರಣ ಬೆಂಬಲ ವಿರುವ ಲೀಗ್ ಮತ್ತು ಕೊಂಗ್ರೆಸುಗಳ ಹೊರಗಿನವರನ್ನು ತಮ್ಮೊಳಗೆ ಸೇರಿಸಲೊಪ್ಪಿ, ಅಜಾದರು ಹೇಳಿದಂತೆ ರಚನಾತ್ಮಕವಾಗಿ ಆಡಳಿತ ನಿರ್ವಹಿಸುವ ವಿಶಾಲ ಮನೋಭಾವನೆಯ ಮಂತ್ರಿ ಮಂಡಳವಾಗಿ ಕೆಲಸಕ್ಕೆ ಕೈ ಹಚ್ಚಬಹುದು."

ರಾಜರಿಂದ ಕುಡುಕರ ತನಕ

ಸಿಮ್ಲಾದ ಏರಿ ಇಳಿಯುವ ಆಶೆ ನಿರಾಶಾ ವಾತಾವರಣದ ಮಧ್ಯದಲ್ಲಿ ಹಲವೊಂದು ವಿನೋದಮಯ ಘಟನೆಗಳೂ ನಡೆದಿವೆ. ಪತ್ರಿಕಾ ಪ್ರತಿನಿಧಿಗಳೂ, ಛಾಯಾ ಚಿತ್ರಗ್ರಾಹಕರೂ ಗಾಂಧೀಜಿಯನ್ನು ನೊಣಗಳಂತೆ ಮುತ್ತಿ ಅವರನ್ನು ಉಸಿರು ಕಟ್ಟಿಸಿದರು. ಇವರ ಉದ್ಧಟತನಕ್ಕೆ ಸೇವಾ ಗ್ರಾಮದ ಸಾಧುಗಳೂ ರೇಗಿ ಒರ್ವ ಸಿಕ್ ಫೊಟೋಗ್ರಾಫರನ ಕೆಮೆರಾವನ್ನು ಕಿತ್ತು ಕಾರ್ಯದರ್ಶಿ ಪ್ಯಾರೆಲಾಲರ ಬಳಿ ಕೊಟ್ಟರಂತೆ.

ಪರಿಷತ್ತು ಯಶಸ್ವಿಯಾಗಲೆಂದು ಶುಭ ಕೋರಿ ಬಂದ ಸಂದೇಶಗಳಲ್ಲಿ ಆಗಾಖಾನರದೂ ಮತ್ತು ಆಲ್ವಾರಿನ ಮಹಾ ರಾಜರದೂ ಗಮನೀಯವಾದುವುಗಳು. ಆಗಾಖಾನರು ಆಜಾದರಿಗೆ ಒಂದು ಹೊಸ ಯೋಜನೆ ತಿಳಿಸುತ್ತಾ "ಇದನ್ನು ನೀವು ಕಸದ ಡಬ್ಬಿಗೆ ಒಗೆದರೂ ಸಂತೋಷವೇ" ಎಂದಿರುವರು.

ಮದ್ರಾಸ್ ಕಡೆಯಿಂದ ಒರ್ವ ವರ್ಣ ಭಕ್ತರು ಕೊಂಗ್ರೆಸ್ ಅಧ್ಯಕ್ಷರಿಗೆ ಕಳುಹಿಸಿದ ತಂತಿಯಲ್ಲಿ ಬ್ರಾಹ್ಮಣರೊಬ್ಬರನ್ನು ಭಾರತದ ವ್ಯಾಸರಾಯರನ್ನಾಗಿ ಮಾಡಿದರೆ ಪರಿಸ್ಥಿತಿ ಶೀಘ್ರ ಸುಧಾರಿಸುವುದು" ಎಂದು ತಿಳಿಸಿರುವರು.

ಇನ್ನೊರ್ವ ಮಧ್ಯಪಾನ ಪ್ರಿಯರು "ಮಧ್ಯಪಾನ ನಿರೋಧ ಶಾಸನವನ್ನು ದೇಶವಲ್ಲೆಲ್ಲ ಜಾರಿಗೆ ತಂದರೇನೇ ನಿಮ್ಮ ಪ್ರಯತ್ನಗಳು ಫಲಿಸಿಯಾವು" ಎಂದು ಸೂಚಿಸಿರುವರು. ಭಾರತೀಯ ಕ್ರೈಸ್ತರ ಪರವಾಗಿ ಅವರ ಸಂಸ್ಥೆಯ ಅಧ್ಯಕ ರೊಡ್ರಿಗ್ಸರು "ಕೊಂಗ್ರೆಸಿನ ಮೇಲೆ ಕ್ರೈಸರಿಗೆ ಭರವಸೆ ಇದೆ. ಎಲ್ಲಾ ಜಾತಿ ಪಕ್ಷದವರಿಗೂ ನ್ಯಾಯ ಕೊಡಬಲ್ಲ ಸಂಸೆಯೆಂದರೆ ಕೊಂಗ್ರೆಸ್ಸೊಂದೇ" ಎಂದು ಅಜಾದರಿಗೆ ಯಶಸ್ಸು ಕೋರಿರುವರು.

ಜಿನ್ನರನ್ನು ಬಿಡಿರಿ

ಮನಸ್ಸಿಲ್ಲದವರನ್ನು ಬಿಟ್ಟು ಸಾರ್ವಭೌಮ್ಯ ಪ್ರತಿನಿಧಿಗಳು ಕಾರ್ಯ ಸಾಗಿಸಬೇಕೆಂದು ಲಂಡನ್‌ನಿಂದ ಲೋರ್ಡ್ ಸ್ಯೊಬೊಗ್ಲಿಯವರೂ, ಮತ್ತು ಲಿಬರಲ್ ಸಂಸ್ಥೆಯ ಅಧ್ಯಕ್ಷ ವೆಂಕಟ್ರಮಣ ಶಾಸ್ತ್ರಿಗಳೂ ಅಭಿಪ್ರಾಯ ಸೂಚಿಸಿರುವರು. ಜಿನ್ನರು ಕೊಂಗ್ರೆಸಿನೊಡನೆ ಒಂದು ಇತ್ಯರ್ಥಕ್ಕೆ ಬರುವುದೊಳ್ಳೆಯದೆಂದು ವ್ಯಾಸರಾಯರು ಅಜಾದರನ್ನು ನೋಡಿ ಹೇಳಿದಾಕ್ಷಣ ಆ ಚತುರ ಬ್ಯಾರಿಸ್ಟರರು "ಆ ವಿಷಯ ಇಂದು ಪಂಡಿತ್ ಪಂತರೊಡನೆ ಮಾತನಾಡುತ್ತೇನೆ" ಎಂದು ತಮ್ಮ ಅಜಾದರೊಳಗೆ ಆಗ ಬೇಕಾಗಿರುವ ಮಾತುಕತೆಗಳ ಸಂದರ್ಭವನ್ನು ತಪ್ಪಿಸಿ ಬಿಟ್ಟರು.

ಉರ್ದು–ಇಂಗ್ಲಿಷ್ ತಜ್ಞ ಪಂಡಿತ್ ಗೋವಿಂದ ವಲ್ಲಭ ಪಂತರು ಹಲವು ಬಾರಿ ಲೀಗ್ ಸರ್ವಾಧಿಕಾರಿಯನ್ನು ಕಂಡು ಮಾತನಾಡಿಸಿದರೂ ಫಲಿತಾಂಶ ಆಶಾದಾಯಕವಾಗಿ ಹೊರ ಬರಲಿಲ್ಲ.

ಲಂಡನ್ ಭಾರತೀಯರ ಮತ

ಸಿಮ್ಲಾ ಪರಿಷತ್ತು ಮುಂದರಿಸಿದುದು ಮುಸ್ಲಿಂ ಲೀಗಿನ ಅಸಹಾಯಕಾರ ಧೋರಣದಿಂದಾಗಿರುತ್ತದೆ ಎಂಬ ಪ್ರತಿಕ್ರಿಯೆ ಲಂಡನ್ ಭಾರತಿಯರಲ್ಲುಂಟಾಗಿದೆಯಾಗಿ ತಿಳಿದುಬರುತ್ತದೆ. ಅಲ್ಲಿನ ಭಾರತೀರಲ್ಲಿ ಹೆಚ್ಚಿನ ಮಂದಿಗಳು ರಾಷ್ಟ್ರೀಯವಾದಿ ಮನೋಭಾವನೆಯವರು. "ಈ ಸಲದ ಸೋಲುಗೇಲುಗಳ ಭಾರವು ಮುಸ್ಲಿಂ ಲೀಗನ್ನೇ ಹೊಂದಿಕೊಂಡಿವೆ. ಕೊಂಗ್ರೆಸ್ಸು ತನ್ನ ವಿಶಾಲ ಧೋರಣೆಯಿಂದ ಆರೋಪ ಬಾಹಿರವಾಗಿದೆ" ಹೀಗೆಂಬ ಅಭಿಪ್ರಾಯವು ಅಲ್ಲಿ ಎಲ್ಲರಲ್ಲೂ ಕಂಡುಬಂದಿದೆ.

ವ್ಯಾಸ್‌ರಾಯರ ತೀರ್ಪಿನಲ್ಲಿ ತಮಗೆ ಸಮ್ಮತವಿರುವುದಾಗಿ ತಿಳಿಸಿದ ಹಿಂದುಳಿದ ವರ್ಗದವರ ಧೋರಣೆಯೂ, ಗಾಂಧೀ ನೆಹರು ಅಜಾದ್ ಇವರ ರಚನಾತ್ಮಕ ಸಲಹೆಗಳೂ ಬ್ರಿಟಿಷ್ ಸಾರ್ವಜನಿಕರಲ್ಲಿ ಕೊಂಗ್ರೆಸಿನ ಮೇಲೆ ಸದಭಿಪ್ರಾಯವನ್ನುಂಟು ಮಾಡಿರುತ್ತದೆ:

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 6—7—1945 [ಸಂಚಿಕೆ 16]

ಸಿಮ್ಲಾ ಪರಿಷತ್ತಿನಲ್ಲಿ ಪಾಕಿ ಸ್ಥಾನದ ಸುದ್ದಿ ಕೇಳಿ ಬರದಿದ್ದುದು ಒಂದು ವಿಶೇಷ ಸಂಗತಿ ಎಂದು ಹಲವರ ಅಭಿಪ್ರಾಯ. ಆದರೂ ಅಲ್ಲಿನ ಮಾತುಕತೆಗಳ ಆಳದಲ್ಲಿ ದೇಶವಿಚ್ಛೇದದ ಆ ಭಾವವು ಸ್ಪಷ್ಟವಾಗಿ ಕಂಡು ಬರುತ್ತಿದೆ. ರಚನೆಯಾಗಲಿರುವ ಹೊಸ ಆಡಳಿತ ಮಂಡಳಿಯಲ್ಲಿ ಮೊದಲು ೪ ಮುಸ್ಲಿಮರು ೪ ಸವರ್ಣ ಹಿಂದೂಗಳು ಎಂದಿದ್ದದ್ದು ಆ ಸಂಖ್ಯೆ ಐದಕ್ಕೆ ಬಂದಿದ್ದು ಇನ್ನು ಅಂತ್ಯವಾಗುವುದರೊಳಗೆ ಆರಕ್ಕೆ ಏರಬಹುದೆಂದು ನಿರೀಕ್ಷಿಸಲಾಗಿದೆ.

ಅಷ್ಟಕ್ಕೆ ಮುಗಿಯುಲಿಲ್ಲ. ಮುಸ್ಲಿಂ ಸದಸ್ಯರು ಲೀಗಿನಿಂದಲೇ ಚುನಾಯಿಸಲ್ಪಟ್ಟವರಿರಬೇಕೆಂದು ಜಿನ್ನರ ಹಟ. ಅಂತಹ ಸಂದರ್ಭದಲ್ಲಿ ಲೀಗೇ ಮುಸ್ಲಿಮರ ಪರವಾಗಿ ಮಾತನಾಡಬಲ್ಲ ಸಂಸ್ಥೆಯೆಂದು ಒಪ್ಪಿಕೊಂಡ ಹಾಗಾಯಿತು. ಮಾತ್ರವಲ್ಲ ಕೊಂಗ್ರೆಸು ಹಿಂದೂಗಳ ಸಂಸ್ಥೆಯೆಂದೇ ರುಜುವಾತು ಪಡಿಸಿದಂತೆಯೂ ಆಯಿತು. ಕೊಂಗ್ರೆಸ್ಸು ತನ್ನ ರಾಷ್ಟ್ರೀಯ ರೂಪ ಭಾವವನ್ನು ಕಳ ಕೊಂಡು ಬರೇ ಜಾತೀಯ ಸಂಸ್ಥೆಯ ಕೀಲ್ಮಟ್ಟಕ್ಕೆ ಇಳಿದು ತನ್ನ ಶೋಭಾಯಮಾನ ಇತಿಹಾಸದ ವರ್ಚಸ್ಸನ್ನು ಕಳಕೊಂಡು ನಿಸ್ತೇಜವಾಗಬೇಕಾಗುವುದು. ಆ ಮಟ್ಟಿಗೆ ಪಾಕಿಸ್ತಾನದ ಗುಪ್ತ ಛಾಯೆಯು ಅಲ್ಲಿ ಹರಿದಾಡುತ್ತಿದೆ ಎಂಬದು ಗಮನಕ್ಕೆ ಬರುತ್ತದೆ:

ಎಲ್ಲಾ ಭಾರ ವೇವೆಲ್ಲರ ಮೇಲೆ

ಈಗ ನಡೆಯುತ್ತಿರುವುದು ತಾತ್ಕಾಲಿಕವಾದ ಒಂದು ಸುಧಾರಣೆ. ಇದಕ್ಕೆ ಎಲ್ಲಾ ಪಕ್ಷ ಪಂಗಡಗಳ ಒಪ್ಪಿಗೆಯಾಗಲೇ ಬೇಕೆಂಬ ಶರ್ತವಿಲ್ಲ. ಸವರ್ಣ ಹಿಂದೂಗಳಿಗೂ ಮುಸ್ಲಿಮರಿಗೂ ಸಮಾನ ಸ್ಥಾನಗಳು ಎಂದು ಹೇಳಲಾಗಿದೆಯೇ ಹೊರತು, ಲೀಗಿಗಾಗಲೀ, ಕೊಂಗ್ರೆಸಿಗಾಗಲೀ ಅವುಗಳನ್ನು ಸಂಪೂರ್ಣ ಬಿಟ್ಟು ಕೊಡಲ್ಪಡುತ್ತವೆಂದು ಹೇಳಲ್ಪಟ್ಟಿಲ್ಲ. ದೇಶದಲ್ಲಿನ ರಾಜಕೀಯ ಜೀವನದ ಮುಂದಾಳುಗಳು ಆಮಂತ್ರಿಸಲ್ಪಟ್ಟಿದ್ದಾರೆ. ಅವರಿಂದ ಕೆಲವೊಂದು ಹೆಸರುಗಳೂ ಕೇಳಲ್ಪಟ್ಟಿವೆ. ಎಲ್ಲವನ್ನೂ ಪರ್ಯಾಲೋಚಿಸಿ ವ್ಯಾಸರಾಯರು ತಮಗೆ ತೃಪ್ತಿಯಿರುವವರನ್ನು ಚುನಾಯಿಸುವರು.

ಐದು ಮುಸ್ಲಿಮರಲ್ಲಿ ಮೂರರಿಗಿಂತ ಹೆಚ್ಚು ಮಂದಿಯನ್ನು ಲೀಗಿನಿಂದ ಚುನಾಯಿಸಲ್ಪಡುವುದಿಲ್ಲವೆಂಬ ಸಂಗತಿ ಸ್ಪಷ್ಟವಾಗಿದೆ. ಹೆಚ್ಚಾದರೆ ನಾಲ್ಕು ಮಂದಿ. ಐದನೇಯವರು ಲೀಗ್ ಬಾಹಿರರೊಬ್ಬರು—ಹೆಚ್ಚಿನ ಮಟ್ಟಿಗೆ ರಾಷ್ಟ್ರೀಯವಾದಿ ಮುಸಲ್ಮಾನರೊಬ್ಬರು. ಕೊಂಗ್ರೆಸಿನ ಕಡೆಯಿಂದಲೂ ಹಾಗೇ. ಅಂತಹ ಸಂದ

ಸಿಮ್ಲಾದಲ್ಲಿ ರಾಜಕೀಯ ಅಮೃತಮಂಥನ

ಭಾರತಕ್ಕೆ ಬ್ರಾಹ್ಮಣ ವ್ಯಾಸರಾಯರು

ಹಿಂದೂ ಮಹಾಸಭೆಯ ಇನ್ನೊಂದು ಓಗಸ್ಟ್ ಗಲಭೆ!

ರ್ಭದಲ್ಲಿ ಲೀಗಿಗೆ ಬಹುಮತ ದೊರೆಯಲಾರದೆಂದೂ ಆದುದರಿಂದ ಮತ್ತೆ ಲೀಗಿನ ಪ್ರಭಾವ ಕಡಿಮೆಯಾಗಬಹುದೆಂದೂ ಭಾವಿಸಿದ ಲೀಗ್ ಮುಂದಾಳುಗಳು ಹೊರ ನಿಲ್ಲುವುದೇ ಒಳ್ಳೇ ಮಾರ್ಗವೆಂದು ನಂಬಿದಂತೆ ತೋರುತ್ತದೆ.

ಕೊಂಗ್ರೆಸ್ಸಿನ ಧೋರಣೆ ಸ್ಪಷ್ಟವಿದೆ. ಅದು ಯುದ್ಧಾಂತ್ಯದ ತನಕ ಯಾವ ಧ್ವಂಸಕಾರಕ ಚಳವಳಕ್ಕೂ ಕೈ ಹಾಕುವುದಿಲ್ಲ. ತಾತ್ಕಾಲಿಕ ಆಡಳಿತ ವ್ಯವಸ್ಥೆಯಲ್ಲಿ ರಚನಾತ್ಮಕ ಮತ್ತು ಸಹಾಯಕಾರಿ ಸಹಕಾರವನ್ನು ತೆರುವುದು. ಇದಕ್ಕಿಂತಲೂ ಹೆಚ್ಚಿನದೇನನ್ನು ಬ್ರಿಟಿಷ್ ಆಡಳಿಗಾರರಾದರೂ ಅಪೇಕ್ಷಿಸುವುದಿಲ್ಲ. ಈಗಾದರೂ ಬ್ರಿಟಿಷ್ ಸರಕಾರದವರು ಕೊಂಗ್ರೆಸಿನ ತಾಳ್ಮೆ ಮತ್ತು ಕ್ಷಮಾದಮಾ ಗುಣಗಳನ್ನು ಕಣ್ಣು ಬಿಟ್ಟು ನೋಡದಿರರು.

ವ್ಯಾಸರಾಯರಾದರೂ ಲೀಗಿನ ಧೋರಣೆಯ ಕುರಿತು ತುಂಬಾ ನೊಂದಿರ ಬಹುದೆಂದು ತೋರುತ್ತದೆ. ಈ ಸಲ ಅವರು ಧೈರ್ಯದಿಂದ ವರ್ತಿಸುವರು. ಜೂಲ್ಯಾ ಹದಿನಾಲ್ಕಕ್ಕೆ ಪುನಃ ಸಿಮ್ಲಾ ಪರಿಷತ್ತು ಸೇರಲಿದೆ. ಅಂದು ಇಷ್ಟವಿದ್ದ ಪಕ್ಷಗಳು ತಮ್ಮ ಕಡೆಯವರ ಹೆಸರುಗಳ ಯಾದಿಯನ್ನು ಅರ್ಪಿಸಬೇಕು: ಅಂದೇ ಅವರು ಒಂದು ನಿರ್ಧರಿತ ಧೋರಣೆಯನ್ನು ವಿಶದಪಡಿಸಿ ತಮ್ಮ ಕಾರ್ಯವನ್ನು ಮುಂದರಿಸುವರು.

ಪ್ರಾರಂಭದಲ್ಲೇ 'ಸ್ಪೆಶಲ್ ಪವರ್'

ಬಿಕ್ಕಟ್ಟಿನೊಳಗೆ ಬಿಕ್ಕಟ್ಟು ಉಂಟಾಗಿರುವುದರಿಂದ ದೇಶದ ಎಲ್ಲಾ ಪಕ್ಷಗಳೂ ಆಶಿಸದಿರುವ ವ್ಯಾಸರಾಯರ ಆ 'ಸ್ಪೆಶಲ್ ಪವರ್' (ವಿಶೇಷಾಧಿಕಾರ) ವನ್ನು ಪ್ರಾರಂಭದಲ್ಲೇ ಅವರು ಉಪಯೋಗಿಸುವಂತೆ ಮಾಡಿದಂತಾಗುವುದು. ಈ ಕುರಿತು ಹಿಂದೂ ಪತ್ರಿಕೆಯು ಹೀಗೆ ಅಭಿಪ್ರಾಯ ಬರೆದಿದೆ:

"ಮುಂದಿನ ರಾಜ್ಯ ಘಟನೆಗೆ ಯಾವ ತರದಲ್ಲೂ ಬಾಧಕ ವಿಲ್ಲದಿರುವ ಈ ಶುದ್ಧ ತಾತ್ಕಾಲಿಕ ಯೋಜನೆಯಲ್ಲೇ ಇಷ್ಟೊಂದು ಗಡಿಬಿಡಿ ಅನಾವಶ್ಯಕವಾದುದು ಮತ್ತು ಶೋಚನೀಯವಾದುದು. ರಾಷ್ಟ್ರೀಯ ಸಂಸ್ಥೆಯಾಗಿಯೇ ಬಾಳ ಬೇಕೆಂಬುದ್ದೇಶದ ಕೊಂಗ್ರೆಸ್ಸೇ ಸವರ್ಣ ಹಿಂದುಗಳಿಗೂ ಮುಸ್ಲಿಮರಿಗೂ ಸಮಾನ ಸದಸ್ಯತನದ ಏರ್ಪಾಡಿಗೆ ಒಪ್ಪಿರುವಾಗ ಲೀಗು ತನ್ನ ಹಟವನ್ನು ಏಕೆ ಬದಿಗೊತ್ತಬಾರದು? ದೇಸಾಯ್-ಲಿಯಾಖತ್ ಒಪ್ಪಂದದ ಮೇಲೆ ಎಂಬಂತೆ ಸೃಷ್ಟಿಸಿರುವ ಈ ವೇವೆಲ್ಲ ಯೋಜನೆಯನ್ನು ಸ್ವೀಕರಿಸಲು ಹೆಚ್ಚು ಕಷ್ಟವೇನಿಲ್ಲ. ಬಹುಶ್ಯ ದೇಸಾಯ್-ಲಿಯಾಖತ್ ಸೂಚನೆಗಳಲ್ಲಿ ಲೀಗ್-ಕೊಂಗ್ರೆಸುಗಳಿಗೆ ಸಮಾನ ಸ್ಥಾನಗಳಿರಬೇಕೆಂದಿರಬಹುದು. ಈಗ ಆದರೂ ಅವರು ದೇಶದಲ್ಲಿ ಸಾಧಾರಣ ಬೆಂಬಲ ವಿರುವ ಲೀಗ್ ಮತ್ತು ಕೊಂಗ್ರೆಸುಗಳ ಹೊರಗಿನವರನ್ನು ತಮ್ಮೊಳಗೆ ಸೇರಿಸಲೊಪ್ಪಿ, ಅಜಾದರು ಹೇಳಿದಂತೆ ರಚನಾತ್ಮಕವಾಗಿ ಆಡಳಿತ ನಿರ್ವಹಿಸುವ ವಿಶಾಲ ಮನೋಭಾವನೆಯ ಮಂತ್ರಿ ಮಂಡಳವಾಗಿ ಕೆಲಸಕ್ಕೆ ಕೈ ಹಚ್ಚಬಹುದು."

ರಾಜರಿಂದ ಕುಡುಕರ ತನಕ

ಸಿಮ್ಲಾದ ಏರಿ ಇಳಿಯುವ ಆಶೆ ನಿರಾಶಾ ವಾತಾವರಣದ ಮಧ್ಯದಲ್ಲಿ ಹಲವೊಂದು ವಿನೋದಮಯ ಘಟನೆಗಳೂ ನಡೆದಿವೆ. ಪತ್ರಿಕಾ ಪ್ರತಿನಿಧಿಗಳೂ, ಛಾಯಾ ಚಿತ್ರಗ್ರಾಹಕರೂ ಗಾಂಧೀಜಿಯನ್ನು ನೊಣಗಳಂತೆ ಮುತ್ತಿ ಅವರನ್ನು ಉಸಿರು ಕಟ್ಟಿಸಿದರು. ಇವರ ಉದ್ಧಟತನಕ್ಕೆ ಸೇವಾ ಗ್ರಾಮದ ಸಾಧುಗಳೂ ರೇಗಿ ಒರ್ವ ಸಿಕ್ ಫೊಟೋಗ್ರಾಫರನ ಕೆಮೆರಾವನ್ನು ಕಿತ್ತು ಕಾರ್ಯದರ್ಶಿ ಪ್ಯಾರೆಲಾಲರ ಬಳಿ ಕೊಟ್ಟರಂತೆ.

ಪರಿಷತ್ತು ಯಶಸ್ವಿಯಾಗಲೆಂದು ಶುಭ ಕೋರಿ ಬಂದ ಸಂದೇಶಗಳಲ್ಲಿ ಆಗಾಖಾನರದೂ ಮತ್ತು ಅಲ್ವಾರಿನ ಮಹಾ ರಾಜರದೂ ಗಮನೀಯವಾದುವುಗಳು. ಆಗಾಖಾನರು ಆಜಾದರಿಗೆ ಒಂದು ಹೊಸ ಯೋಜನೆ ತಿಳಿಸುತ್ತಾ "ಇದನ್ನು ನೀವು ಕಸದ ಡಬ್ಬಿಗೆ ಒಗೆದರೂ ಸಂತೋಷವೇ" ಎಂದಿರುವರು.

ಮದ್ರಾಸ್ ಕಡೆಯಿಂದ ಒರ್ವ ವರ್ಣ ಭಕ್ತರು ಕೊಂಗ್ರೆಸ್ ಅಧ್ಯಕ್ಷರಿಗೆ ಕಳುಹಿಸಿದ ತಂತಿಯಲ್ಲಿ ಬ್ರಾಹ್ಮಣರೊಬ್ಬರನ್ನು ಭಾರತದ ವ್ಯಾಸರಾಯರನ್ನಾಗಿ ಮಾಡಿದರೆ ಪರಿಸ್ಥಿತಿ ಶೀಘ್ರಸುಧಾರಿಸುವುದು" ಎಂದು ತಿಳಿಸಿರುವರು.

ಇನ್ನೊರ್ವ ಮಧ್ಯಪಾನ ಪ್ರಿಯರು "ಮಧ್ಯಪಾನ ನಿರೋಧ ಶಾಸನವನ್ನು ದೇಶವಲ್ಲೆಲ್ಲ ಜಾರಿಗೆ ತಂದರೇನೇ ನಿಮ್ಮ ಪ್ರಯತ್ನಗಳು ಫಲಿಸಿಯಾವು" ಎಂದು ಸೂಚಿಸಿರುವರು. ಭಾರತೀಯ ಕ್ರೈಸ್ತರ ಪರವಾಗಿ ಅವರ ಸಂಸ್ಥೆಯ ಅಧ್ಯಕ ರೊಡ್ರಿಗ್ಸರು "ಕೊಂಗ್ರೆಸಿನ ಮೇಲೆ ಕ್ರೈಸರಿಗೆ ಭರವಸೆ ಇದೆ. ಎಲ್ಲಾ ಜಾತಿ ಪಕ್ಷದವರಿಗೂ ನ್ಯಾಯ ಕೊಡಬಲ್ಲ ಸಂಸೆಯೆಂದರೆ ಕೊಂಗ್ರೆಸ್ಸೊಂದೇ" ಎಂದು ಅಜಾದರಿಗೆ ಯಶಸ್ಸು ಕೋರಿರುವರು.

ಜಿನ್ನರನ್ನು ಬಿಡಿರಿ

ಮನಸ್ಸಿಲ್ಲದವರನ್ನು ಬಿಟ್ಟು ಸಾರ್ವಭೌಮ್ಯ ಪ್ರತಿನಿಧಿಗಳು ಕಾರ್ಯ ಸಾಗಿಸಬೇಕೆಂದು ಲಂಡನ್‌ನಿಂದ ಲೋಡ್ರ್ ಸ್ಟ್ರೊಬೊಗ್ಲಿಯವರೂ, ಮತ್ತು ಲಿಬರಲ್ ಸಂಸ್ಥೆಯ ಅಧ್ಯಕ್ಷ ವೆಂಕಟ್ರಮಣ ಶಾಸ್ತ್ರಿಗಳೂ ಅಭಿಪ್ರಾಯ ಸೂಚಿಸಿರುವರು. ಜಿನ್ನರು ಕೊಂಗ್ರೆಸಿನೊಡನೆ ಒಂದು ಇತ್ಯರ್ಥಕ್ಕೆ ಬರುವುದೊಳ್ಳೆಯದೆಂದು ವ್ಯಾಸರಾಯರು ಅಜಾದರನ್ನು ನೋಡಿ ಹೇಳಿದಾಕ್ಷಣ ಆ ಚತುರ ಬ್ಯಾರಿಸ್ಟರರು "ಆ ವಿಷಯ ಇಂದು ಪಂಡಿತ್ ಪಂತರೊಡನೆ ಮಾತನಾಡುತ್ತೇನೆ" ಎಂದು ತಮ್ಮ ಅಜಾದರೊಳಗೆ ಆಗ ಬೇಕಾಗಿರುವ ಮಾತುಕತೆಗಳ ಸಂದರ್ಭವನ್ನು ತಪ್ಪಿಸಿ ಬಿಟ್ಟರು.

ಉರ್ದು-ಇಂಗ್ಲಿಷ್ ತಜ್ಞ ಪಂಡಿತ್ ಗೋವಿಂದ ವಲ್ಲಭ ಪಂತರು ಹಲವು ಬಾರಿ ಲೀಗ್ ಸರ್ವಾಧಿಕಾರಿಯನ್ನು ಕಂಡು ಮಾತನಾಡಿಸಿದರೂ ಫಲಿತಾಂಶ ಆಶಾದಾಯಕವಾಗಿ ಹೊರ ಬರಲಿಲ್ಲ.

ಲಂಡನ್ ಭಾರತೀಯರ ಮತ

ಸಿಮ್ಲಾ ಪರಿಷತ್ತು ಮುಂದರಿಸಿದುದು ಮುಸ್ಲಿಂ ಲೀಗಿನ ಅಸಹಾಯಕಾರ ಧೋರಣದಿಂದಾಗಿರುತ್ತದೆ ಎಂಬ ಪ್ರತಿಕ್ರಿಯೆ ಲಂಡನ್ ಭಾರತಿಯರಲ್ಲುಂಟಾಗಿದೆಯಾಗಿ ತಿಳಿದುಬರುತ್ತದೆ. ಅಲ್ಲಿನ ಭಾರತೀರಲ್ಲಿ ಹೆಚ್ಚಿನ ಮಂದಿಗಳು ರಾಷ್ಟ್ರೀಯವಾದಿ ಮನೋಭಾವನೆಯವರು. "ಈ ಸಲದ ಸೋಲುಗೇಲುಗಳ ಭಾರವು ಮುಸ್ಲಿಂ ಲೀಗನ್ನೇ ಹೊಂದಿಕೊಂಡಿವೆ. ಕೊಂಗ್ರೆಸ್ಸು ತನ್ನ ವಿಶಾಲ ಧೋರಣೆಯಿಂದ ಆರೋಪ ಬಾಹಿರವಾಗಿದೆ" ಹೀಗೆಂಬ ಅಭಿಪ್ರಾಯವು ಅಲ್ಲಿ ಎಲ್ಲರಲ್ಲೂ ಕಂಡುಬಂದಿದೆ.

ವ್ಯಾಸ್‌ರಾಯರ ಕೀರ್ಪಿನಲ್ಲಿ ತಮಗೆ ಸಮ್ಮತವಿರುವುದಾಗಿ ತಿಳಿಸಿದ ಹಿಂದುಳಿದ ವರ್ಗದವರ ಧೋರಣೆಯೂ, ಗಾಂಧೀ ನೆಹರು ಅಜಾದ್ ಇವರ ರಚನಾತ್ಮಕ ಸಲಹೆಗಳೂ ಬ್ರಿಟಿಷ್ ಸಾರ್ವಜನಿಕರಲ್ಲಿ ಕೊಂಗ್ರೆಸಿನ ಮೇಲೆ ಸದಭಿಪ್ರಾಯವನ್ನುಂಟು ಮಾಡಿರುತ್ತದೆ:

ನಿಷ್ಪ್ರಯೋಜಕ ಸೌಂದರ್ಯ

ಮೇಸ್ಕರೀಟಿನ ಕೌಂಟನು ಸಂಸಾರ ಪ್ರಿಯ. ಕೌಂಟೆಸಳು ಸುಂದರಳೂ, ಸೌಂದರ್ಯ ಪ್ರಿಯಳು. ಆದರೂ ೩೦ ವರ್ಷ ಪ್ರಾಯದಲ್ಲಿ ಅವಳಿಗೆ ಏಳು ಮಕ್ಕಳು. ತನ್ನ ಸೌಂದರ್ಯವನ್ನು ಮೆರೆಸಿ ಕೆಲಕಾಲ ಸುಖ ಪಡೆಯಬೇಕೆಂದು ಅವಳೊಂದು ಉಪಾಯ ಮಾಡಿದಳು. ಏಳು ಮಕ್ಕಳಲ್ಲಿ ಒಂದು ಮಾತ್ರ ಗಂಡನಿಗೆ ಹುಟ್ಟಿದಲ್ಲವೆಂದು ಪ್ರಮಾಣ ಮಾಡಿ ಹೇಳಿದಳು. ಗಂಡನು ದಾರಿ ತೋಚದೆ ಹೊರಟು ಹೋದನು. ಅಂದಿನಿಂದ ಅವಳು ತನ್ನ ಸುಖ ಜೀವನಕ್ಕಾರಂಭಿಸಿದಳು. ನಾಟಕ ಶಾಲೆಯಲ್ಲಿ ಅವಳ ಕುರಿತು ಇರ್ವರು ಚರ್ಚಿಸುತಿದ್ದರು.

(ಕಳೆದ ಸಂಚಿಕೆಯಿಂದ)

"ಸಹಜವಾಗಿಯೂ ಹೌದು, ಕೆಲವೊಂದು ವಸ್ತುದ್ರವಗಳಿಂದ ಅಗೋಚರವಾಗಿ ಉತ್ಪನ್ನವಾಗುವ ರಾಸಾಯನಿಕ ಕ್ರಿಯೆಯಂತೆಯೂ, ಕೆಲವೊಂದು ವಸ್ತುಗಳ ಸಾಮೀಪ್ಯ ಸಂಬಂಧದಿಂದಾಗಲೀ ಇಲ್ಲವೆ ಘರ್ಷಣೆಯಿಂದಾಗಲೀ ಅನಿರೀಕ್ಷಿತವಾಗಿ ಉಂಟಾಗುವ ವಿದ್ಯುಚ್ಛಕ್ತಿಯಂತೆಯೂ ಇಲ್ಲವೆ ಸಜೀವ ವಸ್ತುವಿಶೇಷಗಳ ಕೊಳೆಯುವಿಕೆಯಿಂದ ಫಲಪ್ರದವಾಗಿ ಪರಿಣಮಿಸುವ ನಿರಂತರ ಫಲಶಕ್ತಿಯಂತೆಯೂ ಸೃಷ್ಟಿ ವೈಚಿತ್ರವೆಂದೆನಿಸುವಂತೆ ಇದು ಘಟಿಸುತ್ತದೆ.

"ಆದರೆ ಪ್ರಿಯ ಸ್ನೇಹಿತನೇ ಇದನ್ನು ಪರಿಕಿಸುವ ಪ್ರತಿಯೊಬ್ಬನಿಗೂ ಇದರ ಸತ್ಯಾಂಶವು ಗೋಚರಿಸದಿರದು. ಬರೀ ಯಾಂತ್ರಿಕ ಮನೋವೃತ್ತಿಯ ದಿರದೆಯೂ ಸುಲಭವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಗಿರುವಂತಹದೂ ಆಗಿದ್ದು ಬಹಳ ಸೂಕ್ಷ್ಮ ತರ್ಕಶಕ್ತಿಯುಳ್ಳದ್ದೂ, ವಿವೇಕ ವಿಚಾರ ಸಂಪನ್ನವಾದುದೂ, ಉದ್ವೇಗ ಸ್ವಭಾವವುಳ್ಳದ್ದೂ ಮತ್ತು ದುಃಖಾನುಭವಕ್ಕೆ ಒಳಗಾಗುವಂತಹದೂ ಆಗಿದ್ದು ಇಂದು ಅಪೂರ್ವವಾದ ಪರಿಪೂರ್ಣತೆಗೆ ಮುಟ್ಟಿರುವಂತೆ ಮಾಡಿದವನ ಮಾನಸೀಕ ಶಕ್ತಿಯನ್ನು ಈ ವಿವೇಕಿಯಾದೊಬ್ಬ ಸೃಷ್ಟಿಕರ್ತನು ನಿರ್ಮಿಸಿರುವುದು ನಿಜವಿದ್ದರೆ ಅದು ಬಾಳಿಕೊಂಡಿರುವ ಈ ಜಗತ್ತು ಇಷ್ಟೊಂದು ಅಸಹ್ಯವಾದ ಚಿಕ್ಕ ವಸತಿಸ್ಥಾನವಾಗಿರುತ್ತಿರಲಿಲ್ಲ. ಇದೆಂತಹ ವಾಸಸ್ಥಾನ ಒಬ್ಬರನ್ನೊಬ್ಬರು ಕೊಂದು ತಿನ್ನುವ, ಮಳೆ ಬಿಸಿಲುಗಳಿಂದ ಪರಿಪೋಶಿಸಲ್ಪಡುವ ಸಸ್ಯಗಳನ್ನೊ, ಕೊಂದ ಪ್ರಾಣಿಗಳ ಮಾಂಸವನ್ನೊ ಬಕ್ಷಿಸಿ ಬತ್ತಲೆಯಾಗಿ ಮರಗವಿಗಳಲ್ಲಿ ವಾಸಿಸುವ ಹುಚ್ಚ ಮನುಷ್ಯರಿಂದ ಕೂಡಿದ್ದು, ಕಲ್ಲು ಬಂಡೆ, ಮರಗಳಿಂದ ಕೂಡಿದ ಉರುಟು ತೋಟವಾಗಿ ಆ ಅವಿವೇಕಿ ಸೃಷ್ಟಿಕರ್ತನು ಇದನ್ನು ನಮಗಾಗಿ ಸೃಷ್ಟಿಸಿರುವನೆ?

"ಒಂದು ಕ್ಷಣ ಯೋಚಿಸಿದರೆ ನಮ್ಮಂತ ಜೀವಿಗಳಿಗೆ ಈ ಸ್ಥಳವು ನಿರ್ಮಿಸಲ್ಪಟ್ಟುದೆಲ್ಲವೆಂಬ ವಿಷಯವು ನಮಗೆ ತಿಳಿಯುವುದು. ಶಕ್ತಿರಹಿತವೂ, ಅಜ್ಞಾನ ಭರಿತವೂ ಮತ್ತು ಸದಾ ಗೊಂದಲಕ್ಕೀಡಾದುದೂ ಆಗಿರುವ ಮಿದುಳಿನಿಂದಲೂ ಮತ್ತು ಮಿದುಳು ಬಳ್ಳಿ ಮಿದುಳು ಕಣಗಳಿಂದಲೂ ಪರಿಪೋಷಿಸಲ್ಪಟ್ಟು ಬೆಳೆದುಕೊಂಡು ಬಂದಿರುವ ವಿಚಾರ ಶಕ್ತಿಯು ಜ್ಞಾನವಂತ ಜೀವಿಗಳಾದ ನಮ್ಮನ್ನು ಈ ಜಗತ್ತಿನಲ್ಲಿ ನಿರಂತರ ದೀನರಾದ ದೇಶಭ್ರಷ್ಟರಂತಾಗಿ ಮಾಡುತ್ತದೆ.

"ಇಲ್ಲಿ ವಾಸಿಸುವವರಿಗಾಗಿ ದೇವರು ಬಿಟ್ಟುಕೊಟ್ಟ ಈ ಸೃಷ್ಟಿಯನ್ನು ನೋಡು. ಇಲ್ಲಿ ಕಣ್ಣಾರೆ ಕಾಣುವ ಈ ಜಗತ್ತು ಅರಣ್ಯಗಳಿಂದಲೂ ವನಸ್ಪತಿಗಳಿಂದಲೂ ನಿಬಿಡವಾಗಿ ಆವರಿಸಿದ್ದು ಪ್ರಾಣಿಗಳಿಗಾಗಿಯೇ ಸೃಷ್ಟಿಸಲ್ಪಟ್ಟುದಲ್ಲವೆ? ಪ್ರತಿಯೊಂದೂ ಹಾಗೆ. ಅವುಗಳು ಪ್ರಕೃತೀಯವಾದ ತಮ್ಮ ಸಹಜ ಸ್ವಭಾವಕ್ಕನುಗುಣವಾಗಿ ಬೇರೆ ಯಾವ ಕೆಲಸವೂ ಮಾಡಲಿಕ್ಕಿರದೆ ಸುಮ್ಮನೆ ತಿನ್ನುತ್ತಾ, ಒಂದನ್ನಿನ್ನೊಂದು ಬೇಟೆಯಾಡಿ ಜೀವಿಸಿಕೊಂಡು ಅಲೆಯಬೇಕಾಗಿದೆ. ಇದರಿಂದ ದೇವರು ಶಾಂತತೆಯ ಸ್ವಭಾವವನ್ನೂ, ನಮ್ರತೆಯ ಗುಣಗಳನ್ನೂ ಉಂಟುಮಾಡುವಷ್ಟು ದೂರದೃಷ್ಟಿಯುವನಲ್ಲ. ಒಂದನ್ನೊಂದು ನಾಶಮಾಡಿ ನುಂಗಿ ತಿನ್ನುವ ಈ ಜೀವಜಂತುಗಳ ಮತ್ತು ಸ್ವರೂಪವನ್ನು ಮಾತ್ರ ಅವನು ಸ್ಪಷ್ಟ ಕಾಣುವವನಾದನು. ಗಿಳಿ, ಪಾರಿವಾಳ, ಮೊಲಗಳು ಕ್ರೂರ ಗಿಡುಗನ ಆಹಾರ ಕೊಳ್ಳೆಗಳಲ್ಲವೆ? ಆಡು ಕುರಿಗಳೂ ಎತ್ತು ಜಿಂಕೆಗಳೂ ಕ್ರೂರ ಮಾಂಸಹಾರಿ ಪ್ರಾಣಿಗಳ ಕೊಳ್ಳೆಗಳಲ್ಲವೆ?

"ಹೀಗೆ ಪಶು ಸ್ವಭಾವವು ದೇವರ ಇಚ್ಛೆಯಿರುತ್ತದೆ. ನಾವು ಹೆಚ್ಚೆಚ್ಚು ನಾಗರೀಕರೂ ಕಲಾಕುಶಲರೂ ಸುಧಾರಿತರೂ ಆದ ಹಾಗೆ ಆ ಪಶು ಸ್ವಭಾವವನ್ನು ನಮ್ಮಿಂದ ದೂರ ಮಾಡಲು ಪ್ರಯತ್ನಿಸಬೇಕು. ನಾವು ವನ್ಯ ಪಶುಗಳಿಗಿಂತಲೂ ಮಿಗಿಲಾದವರೆಂದು ತೋರಿಸಲೋಸುಗವಾಗಿ ನಾವು ಈ ಮನೆ ಮಠಗಳನ್ನೂ, ಸಿಹಿ ಸಕ್ಕರೆಗಳನ್ನೂ, ಶುಚಿರುಚಿಯ ಪದಾರ್ಥಗಳನ್ನೂ, ಯಂತ್ರೋಪಕರಣಗಳನ್ನೂ ಮಾತ್ರವಲ್ಲ ಉಗಿ ಬಂಡಿಗಳನ್ನೂ, ಈ ಕಲೆ ವಿಜ್ಞಾನ ಶೋಧಗಳನ್ನೂ, ಈ ಲೇಖನ ಕವಿತೆಗಳನ್ನೂ ರಚಿಸಿದೆವು. ಈ ಶೃಂಗಾರದ ಉಡುಪು ತೊಡುಪುಗಳೂ ಒಡವೆ ಆಭರಣಗಳು ಅಂತೆಯೇ ನಿರ್ಮಿಸಲ್ಪಟ್ಟವು. ನಾವು ಸಾಮಾನ್ಯರಾದ ಪ್ರತಿ ಜೀವಿಗಳನ್ನೂ ಹುಟ್ಟಿಸುವವರು. ನಾವು ಉಂಟುಮಾಡುವ ಈ ಧ್ಯೇಯಗಳೂ, ಈ ಜೀವನ ಸೌಕರ್ಯಗಳೂ ಏಕಪ್ರಕಾರವಾದ ನಮ್ಮ ಈ ಬೇಸರಿಕೆಯನ್ನು ಅತ್ಯಲ್ಪ ಕಠಿಣತೆಯದಾಗಿ ಮಾಡುವ ಸಾಧನೋಪಾಯಗಳಲ್ಲದೆ ಬೇರೆಯಲ್ಲ.

"ಈ ನಾಟಕ ಶಾಲೆಯನ್ನಾದರೂ ನೋಡು. ಅಮರವಾದ ವಿಧಿಲೀಲಾ ಶಕ್ತಿಯ ವಿವೇಚನೆಗೆ ನಿಲುಕದಂತಹ ಒಂದು ಮಾನವ ಜಗತ್ತನ್ನೆ ನಾವು ಮನಸ್ಸಿ ಸೃಷ್ಟಿಸಿರುತ್ತೇವೆ. ಇವೆಲ್ಲವೂ ಏತಕ್ಕೆಂದು ತಿಳಿದೆ? ಇವು ಚಂಚಲ ಸ್ವಭಾವದ ಚಿಕ್ಕ ಪ್ರಾಣಿಗಳಾದ ನಮ್ಮ ಜ್ಞಾನ ಸ್ಪರ್ಶೇಂದ್ರಿಯಗಳಿಗೆ ಸುಖವನ್ನುಂಟು ಮಾಡುವ ಸಲುವಾಗಿ ಇದನ್ನು ರಚಿಸಿದೆವು.

"ಈಗಿನ ಆ ಮೇಸ್ಕರೀಟಿನ ಕೌಂಟೆಸ್ ಮಹಿಳೆಯನ್ನು ನೋಡು. ದೇವರು ಅವಳನ್ನು ನಗ್ನರೂಪಿಯಾಗಿ ಇಲ್ಲವೆ ಮೃಗಾದಿಗಳ ತೊಗಲನ್ನು ಉಟ್ಟುಕೊಂಡು ಗವಿಯಲ್ಲಿ ವಾಸಿಸಲೋಸುಗವಾಗಿ ನಿರ್ಮಿಸಿದನು. ಆದರೆ ಇಂದವಳು ಅದಕಿಂತಲೂ ಉತ್ತಮಳಾಗಿ ಕಾಣುವುದಿಲ್ಲವೆ? ಆದರೆ ಇಂದವಳ ದುರವಸ್ಥೆಯಾದರೂ ಹೇಗಿದೆ? ಪಶು ಸ್ವಭಾವದ ಅವಳ ಗಂಡನು ಅವಳನ್ನು ಏಳು ಮಕ್ಕಳ ತಾಯನ್ನಾಗಿ ಮಾಡಿ ಇಂದು ಅವಳನ್ನು ಒಂದೇ ಸವನೇ ಬಿಟ್ಟುಬಿಟ್ಟು ಹೊಲಸು ಹೆಂಗುಸಿನ ಹಿಂದೆ ಓಡಾಡುವ ಪ್ರಾಣಿಯಾಗಿದ್ದಾನೆಂಬ ವಿಷಯವನ್ನು ಯಾರಾದರೂ ಬಲ್ಲಿರುವರೆ?"

ಗ್ರೆಂಡಿನ್ನನು ಉತ್ತರಿಸಿದ: "ಸ್ನೇಹಿತನೇ, ಸದಾ ಇಂತಹ ಸುಂದರ ಸ್ತ್ರೀಯ ಜೊತೆಯಲ್ಲಿರುವುದು ಮುಂದೆ ಬಹಳ ಖರ್ಚಿಗೆ ಅವಕಾಶವಾಗುವುದೆಂದು ತಿಳಿದೇ ಅವಳ ಗಂಡನಾದ ಕೌಂಟನು ಇಂದು ಆ ಧೋರಣೆಯನ್ನು ಅನುಸರಿಸಿರಬೇಕು. ಅದೊಂದು ಹಣ ಉಳಿತಾಯದ, ಮನೆ ಖರ್ಚಿನ ಪ್ರಶ್ನೆ. ಆದರೆ ನೀನು ಮಾತ್ರ ಇದಕ್ಕೆ ತತ್ವಜ್ಞಾನದ ರೂಪವನ್ನು ಕೊಟ್ಟಿರುವೆ."

ಅಷ್ಟು ಹೊತ್ತಿಗೆ ಪರದೆಯು ಎತ್ತಲ್ಪಟ್ಟು ನಾಟಕದ ಮೂರನೇ ಅಂಕವು ಆರಂಭವಾಯಿತು. ಈ ಮಿತ್ರರು ತಮ್ಮ ಹೇಟುಗಳನ್ನು ತೆಗೆದು ಪುನಃ ರಂಗ ಭೂಮಿಯತ್ತ ಕಡೆ ತಿರುಗಿ ಕೂತರು.

ನಾಟಕ ಶಾಲೆಯಿಂದ ಮನೆಗೆ ಒಯ್ಯುವ ಗಾಡಿಯಲ್ಲಿ ಮೆಸ್ಕರೀಟಿನ ಕೌಂಟೆಸಳೂ ಅವಳ ಗಂಡನೂ ಮೌನವಾಗಿ ಹತ್ತಿರ ಹತ್ತಿರ ಕುಳಿತಿದ್ದರು. ಕೂಡಲೇ ಗಂಡನು ಪತ್ನಿಗೆ ಹೀಗೆಂದನು: "ಗ್ರೇಬ್ರಿಯೇಲ್"

"ನಿಮಗೇನು ಬೇಕಾಗಿದೆ?"

"ನನ್ನ ನಿನ್ನ ಸಂಬಂಧವು ನಿಂತುಹೋಗಿ ಬಹಳ ಕಾಲವಾಯಿತು. ಇದು ಅತೀ ಧೀರ್ಘ ಅವಧಿಯಾಗಲಿಲ್ಲವೆ?"

"ಏನು?"

"ಕಳೆದ ಆರು ವರ್ಷಗಳಿಂದ ನೀನು ನನ್ನನ್ನು ಅದೆಂತಹ ಘೋರ ನರಕ ಯಾತನೆಗೆ ಒಳೆ ಪಡಿಸಿರುವೆ?"

"ಈಗ ನಿಮಗೇನು ಬೇಕು? ಹಾಗೆ ಮಾಡದೆ ನನಗೆ ಬೇರೆ ದಾರಿ ಇಲ್ಲ"

"ಹಾಗಾದರೆ ನನ್ನದಲ್ಲದ ಆ ಮಗು ಯಾವುದೆಂದು ಹೇಳು."

"ಎಂದಿಗೂ ಹೇಳಲಾರೆ"

"ಈವೊಂದು ಸಂಶಯದ ಭಾರದಿಂದ ನರಳುವವನ ಹೃದಯವು ನನ್ನ ಮಕ್ಕಳನ್ನು ಪ್ರೀತಿಸದಂತೆ ಮಾಡಿರುತ್ತದೆ. ಹೇಳು ಅವುಗಳಲ್ಲಿ ಯಾವುದದು? ಪ್ರತಿಜ್ಞೆಮಾಡಿ ಹೇಳುತ್ತೇನೆ ನಾನು ನಿನ್ನನ್ನು ಕ್ಷಮಿಸುವೆ. ಆ ಮಗುವನ್ನು ನನ್ನದರ ಹಾಗೇ ಉಪಚರಿಸುವೆ."

"ನನಗೆ ಹೇಳಲು ಅಧಿಕಾರವಿಲ್ಲ"

"ಅವುಗಳನ್ನು ನೋಡುವಾಗ ಭಯಂಕರ ಕ್ಲೇಶವನ್ನುಂಟುಮಾಡುವ ಈ ಯೋಚನೆಯನ್ನು ಮನಸ್ಸಿನೊಳಗೆ ಇರಿಸಿ ನಾನು ಈ ಜೀವವನ್ನು ಬಹಳ ಕಾಲದವರೇಗೆ ಸೈರಿಸಿಕೊಂಡಿರಲಾರೆನೆಂಬ ವಿಷಯವನ್ನು ನೀನು ತಿಳಿದಿರುವುದಿಲ್ಲ. ಕ್ಷಣ ಕ್ಷಣಕ್ಕೂ ಈ ಯೋಚನೆಯು ನನ್ನ ಅಂತಃಕರಣವನ್ನು ಭಾದಿಸುತ್ತದೆ. ನನಗೆ ಅದು ಹುಚ್ಚನ್ನಾಗಿ ಮಾಡಬಹುದು."

"ಹಾಗಾದರೆ ನೀವು ಇದರಿಂದ ತುಂಬಾ ಬಳಲಿರುವಿರಲ್ಲವೆ?" ಎಂದು ಅವಳು ಕೇಳಿದಳು.

"ಭಯಂಕರವಾಗಿ ಬಳಲಿರುತ್ತೇನೆ. ನನ್ನ ಇತರ ಮಕ್ಕಳನ್ನೂ ಕೂಡಾ ಪ್ರೀತಿಸಲಿಕ್ಕೆ ಬಿಡದಂತಹ, ಆವೊಂದು ಮಗು ಇದೆಯೆಂದು ತಿಳಕೊಂಡಿದ್ದೂ ನಿನ್ನ ಬಳಿಯಲ್ಲಿ ವಾಸಿಸುವ ಆ ಭೀಕರ ಯಾತನೆ ಅದೆಂತಹುದು?"

ಅವಳು ಕೇಳಿದಳು: "ಹಾಗಾದರೆ ನೀವು ನಿಜವಾಗಿ ತುಂಬಾ ಸಂಕಷ್ಟದಿಂದ ಬಳಲಿರುವಿರೊ?"

ಬಿಗಿಯಾದ ಸ್ವರದಲ್ಲಿಯೂ ದುಃಖಿತನಾಗಿಯೂ ಅವನು ಉತ್ತರವಿತ್ತ:

"ಹೌದು, ಪ್ರತಿ ದಿನವೂ ನಾನು ನಿನಗೆ ಹೇಳುತ್ತಿರಲಿಲ್ಲವೇ?–ನನಗೆ ಅದು ಸಹಿಸಲಸದಳವಾದ ಯಾತನೆಯೆಂದು? ಅವರಿಗೆ ಪ್ರೀತಿಮಾಡದೆ ನಾನು ನಿನ್ನ ಮತ್ತು ಅವರ ಬಳಿಯಲ್ಲಿ ಈ ಮನೆಯಲ್ಲಿ ಇರುವುದಾದರೂ ಹೇಗೆ? ಹಾ! ನೀನು ನನಗೆ ವಿರೋಧವಾಗಿ ತುಚ್ಛವಾದ ಕೆಲಸವನ್ನು ಮಾಡಿದೆ. ನನ್ನ ಹೃದಯದ ಎಲ್ಲಾ ಪ್ರೇಮಾನುರಾಗಗಳನ್ನೂ ನಾನು ನನ್ನ ಮಕ್ಕಳ ಮೇಲೆ ಇರಿಸಿದ್ದೆ. ಆ ವಿಷಯ ನೀನೂ ಬಲ್ಲೆ. ಅವರಿಗೆ ನಾನು ಹಿಂದಿನ ಕಾಲದ ತಂದೆಯಾಗಿಯೂ, ನಿನಗೆ ಹಿಂದಿನ ಕಾಲದ ಗಂಡನಂತೆಯೂ ಇದ್ದೆ. ನನ್ನ ಸ್ವಭಾವವೇ ಆ ತರ ಒಲಿದಿತ್ತು. ನಿಜ, ನೀನು ನನ್ನಲ್ಲಿ ಮಾತ್ಸರ್ಯ ಅಸೂಯಗಳನ್ನುಂಟುಮಾಡಿದೆ. ಕಾರಣ ನೀನು ಬೇರೆಯೇ ಜನಾಂಗದವಳು, ಬೇರೆಯೇ ಆತ್ಮಬುದ್ಧಿಯವಳು ನಿನ್ನ ಕೋರಿಕೆಗಳೂ ಬೇರೆ ತರದವುಗಳಾಗಿದ್ದುವು. ಹಾ! ನೀನು ಹೇಳಿದ ವಿಷಯಗಳನ್ನು ನಾನೆಂದೂ ಮರೆಯಲಾರೆ. ಆ ದಿವಸದಿಂದ ನಿನ್ನ ವಿಷಯವಾಗಿ ನಾನು ಚಿಂತೆಯನ್ನೇ ಬಿಟ್ಟುಬಿಟ್ಟೆ. ನನ್ನದಲ್ಲದ ಆ ಮಗು ಯಾವುದೆಂದು ನನಗೆ ತಿಳಿಯಲಾಗದರಿಂದ ನಾನು ನಿನ್ನನ್ನು ಇದು ತನಕ ಕೊಲ್ಲದೆ ಬಿಟ್ಟೆ. ಇದು ತನಕ ನಾನು ಕಾದು ನಿಂತೆ. ನೀನು ತಿಳಕೊಂಡಿರುವುದಕಿಂತಲೂ ಹೆಚ್ಚಾಗಿ ನಾನು ಮನೋವೇದನೆಯನ್ನು ಅನುಭವಿಸಿದ್ದೇನೆ. ನನಗೆ ಅವರನ್ನೂ ಪ್ರೀತಿಸಲು ಧೈರ್ಯವಿಲ್ಲ. ಮೊದಲನೇ ಎರಡನ್ನು ಬಿಟ್ಟು ಮಿಕ್ಕುಳಿದವುಗಳ ಮುಖವನ್ನು ನೋಡಲು ಕೂಡಾ ನನಗೆ ಮನಸ್ಸಿಲ್ಲ, ಎದೆಗಾರಿಕೆ ಇಲ್ಲ. ಅವರಿಗೆ ಮುದ್ದಿಸುವ ಮನೋಸ್ಥೈರ್ಯ ನನ್ನಲಿಲ್ಲ. "ಇದು ನನ್ನದು ಹೌದೊ ಅಲ್ಲ"ವೆಂದು ಶಂಕಿಸದೆ ನಾನು ಅವನ್ನೆತ್ತಿ ಕೊಳ್ಳಲಾರೆ. ಈ ಆರು ವರ್ಷಗಳಲ್ಲಿ ನಾನು ನಿನ್ನ ಹತ್ತಿರ ಸರಿಯಾಗಿ ನಡಕೊಂಡಿದ್ದೇನೆ. ನಿನ್ನನ್ನು ಕರುಣೆಯಿಂದಲೂ, ಸಹಾನುಭೂತಿಯಿಂದಲೂ ಕಂಡಿದ್ದೇನೆ. ಪ್ರಿಯೆ ಸತ್ಯವನ್ನು ಹೇಳು, ನಾನು ಪ್ರತಿಜ್ಞೆಮಾಡಿ ಹೇಳುತ್ತೇನೆ ನಿನಗೆ ನಾನೆಂದೂ ನಿಷ್ಕಾರುಣ್ಯದ ಯಾವ ವರ್ತನೆಯನ್ನೂ ಮಾಡುವುದಿಲ್ಲ."

(೬ನೇ ಪುಟಕ್ಕೆ ಮುಂದುವರಿದುದು.)

ವಾರದ ವಿದ್ಯಮಾನಗಳು

ಮಹಾತ್ಮರು ವ್ಯಾಸರಾಯರಾದರೆ?—ಜವಾಹರರು ಭಾರತ ವಿದೇಶಾಂಗ ಮಂತ್ರಿ!--ಬ್ರಿಟಿಷ್ ಸರಕಾರದ ಸಲಹೆಗಾರ ಗಾಂಧೀ—ಜಿನ್ನಾ ಗಾಂಧೀ ಒಪ್ಪಂದ--ಅಲ್ಪ ಸಂಖ್ಯಾಕರಿಗೆ ಬಹುಮತ—ಸಿಮ್ಲಾದ ಕಲ್ಪನಾ ಚಲಚಿತ್ರ

ಇದೊ, ಇಲ್ಲಿ ನೋಡಿರಿ! ಇದೇ ಸಿಮ್ಲಾ. ಸಮುದ್ರ ಮಟ್ಟದಿಂದ ಏಳು ಸಾವಿರ ಅಡಿ ಎತ್ತರದ ಪ್ರದೇಶ. ಇಲ್ಲಿ ಮಂಜು ಮುಸುಕಿದಂತೆ ರಾಜಕೀಯ ಮಾತುಕತೆಗಳ ಫಲಿತಾಂಶವೂ ಸದ್ಯಕ್ಕೆ ಅಸ್ಪಷ್ಟವಸ್ಥೆಯಲ್ಲೇ ಇದೆ. ಆದರೂ ಅಲ್ಲಿ ಆಶೆ ನಿರಾಶೆ, ಊಹಾಪೋಹೆಗಳಿಂದ ಕೂಡಿದ ಸುದ್ದಿ ಗೊದ್ದಿಗಳ ಸುರಿಮಳೆ ಧಾರಾ ಕಾರವಾಗಿ ಸುರಿಯುತ್ತಿದೆ.

ರಾಜಕೀಯ ಹವಾಮಾನ ಪರೀಕ್ಷಕರಾದ ತಜ್ಞ ಪತ್ರಿಕಾ ಪ್ರತಿನಿಧಿಗಳು ತಮ್ಮ ಚತುರ ಪ್ರಶ್ನೆಗಳೆಂಬ ಹವಾಮಾಪಕ ಯಂತ್ರದಿಂದ ಸಿಮ್ಲಾ ಪರಿಷತ್ತಿನ ವಾತಾವರಣದ ಲಘು ಬಿಗಿಗಳನ್ನು ಅಳೆಯ ಹತ್ತಿಳುವರು.

ಇದು ಗಾಂಧಿ ಗುಡಿಸಲು. ಕಿಟಿಕಿಯಿಂದ ಮಹಾತ್ಮರು ದೂರದಲ್ಲಿನ ಹಿಮಾಚ್ಛಾದಿತ ಕೈಲಾಸಗಿರಿಗಳನ್ನು ಅವಲೋಕಿಸಿ ಆತ್ಮಾನಂದವನನ್ನುಭವಿಸುತಿದ್ದಾಗಲೇ ಮೂರು ವರ್ಷಗಳ ಹಿಂದೆ ಅವರನ್ನು ಕಂಡ ಪ್ರೆಸ್ಟನ್‌ಗೊವರ್ ಎಂಬ ಅಮೆರಿಕನ್ ಪತ್ರಿಕಾ ಪ್ರತಿನಿಧಿಗಳು ಗಾಂಧಿ ಕೊಟಡಿಯನ್ನು ಹೊಕ್ಕರು. ಯಥಾಪ್ರಕಾರ ಪ್ರಶ್ನೋತ್ತರಗಳಿಗಾರಂಭವಾಯಿತು.

"ಸಿಮ್ಲಾ ಪರಿಷತ್ತು ಜಾತಿಯ ಮಾತುಕತೆ ಕೂಟವಲ್ಲ. ಅದಕ್ಕೆ ರಾಜಕೀಯ ರೂಪ ಬಂದಿದೆ"

"ಕೊಂಗ್ರೆಸು ಜಾತೀಯ ಸಂಸ್ಥೆಯಲ್ಲ"

"ಜವಾಹರರು ನನ್ನ ಉತ್ತರಾಧಿಕಾರಿಗಳು."

"ಕೊಂಗ್ರೆಸು ನನ್ನನ್ನು ಮೂಲೆಗೆ ತಳ್ಳಬಹುದು"

"ಜಿನ್ನರು ಇಷ್ಟ ಪಟ್ಟರೆ ಪರಿಷತ್ತಿಗೆ ನನ್ನನ್ನು ಈಗ ಒಯ್ಯಬಹುದು—ಅವರಿಗೆ ಯಾವುದಾದರೂ ಒಂದು ಇತ್ಯರ್ಥ ಬೇಕಾದರೆ"

ಜಿನ್ನರ ಕಡೆಗೆ

ಗಾಂಧೀಜಿಯ ಮನಸ್ಸು ತಿಳಕೊಂಡ ಗೊವರರು ನೇರವಾಗಿ ಜಿನ್ನರ ಕಡೆಗೆ ತೆರಳಿದರು. ಅಷ್ಟರಲ್ಲೆ ಜಿನ್ನಾಸಾಹೇಬರ ಒಂದು ಪತ್ರಿಕಾ ಸಂದರ್ಶನ ಭಾಷಣವೂ ಆಗಿತ್ತು. ಅದರಲ್ಲಿ ಅವರು: "ಮುಸ್ಲಿಂ ಸದಸ್ಯರನ್ನು ಲೀಗೇ ಚುನಾಯಿಸಬೇಕು. ಕೊಂಗ್ರೆಸಿನಲ್ಲಿ ಮುಸ್ಲಿಮರು ಎಷ್ಟಿದ್ದಾರೆ? ಬಹಳೇ ಸ್ವಲ್ಪ. ಕಳೆದ ಚುನಾವಣೆಯಲ್ಲಿ ಚುನಾಯಿಸಿ ಬಂದ ೭೦೦ ಮುಸ್ಲಿಮರಲ್ಲಿ ೪೨೦ ಲೀಗಿನವರು. ಬರೀ ಮೂವತ್ತು ಕೊಂಗ್ರೆಸ್ ಮುಸಲ್ಮಾನರು. ಈಚೇಗೆ ನಡೆದ ೭೦ ಉಪಚುನಾವಣೆಗಳಲ್ಲಿ ೬೯ ಲೀಗಿನವರೇ ಗೆದ್ದಿದ್ದಾರೆ. ಈಗ ಪುನಃ ಛುನಾವಣೆ ನಡೆದರೆ ಲೀಗು ಸಂಪೂರ್ಣ ವಿಜಯಶಾಲಿಯಾಗುವುದು" ಎಂದಿದ್ದಾರೆ.

ಗಾಂಧಿಯವರು ಹೇಳಿದ ವಿಷಯವನ್ನು ಜಿನ್ನರಿಗೆ ತಿಳಿಸಿದಾಗ ಅವರು: "ತಮಗೆ ಪರಿಷತ್ತಿನಲ್ಲಿ ಸ್ಥಾನವಿಲ್ಲವೆಂದ ಗಾಂಧಿಯವರು ತಿಳಿಸಿದ ಮೇಲೆ ಅವರನ್ನು ಅಲ್ಲಿಗೆ ನಾನು ಹೇಗೆ ಒಯ್ಯಲಿ.? ಆದರೂ ನಾವಿಬ್ಬರು ಮನಸ್ಸು ಮಾಡಿದರೆ ಈಗಿನ ಈ ಪರಿಷತ್ತಿನ ಅವಶ್ಯಕತೆಯೇ ಇಲ್ಲ, ನಾವು ಬೇರೊಂದನ್ನೇ ಕರೆಯುವಂತೆ ಮಾಡ ಬಹುದು. ಈಗ ಗಾಂಧಿಯವರು ವ್ಯಾಸ್‌ರಾಯರಿಗೂ, ಅವರ ಮುಖಾಂತರ ಬ್ರಿಟಿಷ್ ಸರಕಾರಕ್ಕೂ ಸಲಹೆಗಾರರಾಗಿದ್ದಾರೆ. ಕೊಂಗ್ರೆಸಿನಲ್ಲಿ ಅವರ ಸಲಹೆಯೇ ಆಜ್ಞೆಯಂತಿರುವುದು—ಯಾರೂ ಅದನ್ನು ತೆಗೆದು ಹಾಕಲಾರರು."

ಜಿನ್ನಾ–ಗಾಂಧೀಜಿ ಬೇಟಿ

ಹಿಂದೆ ಹಲವು ಬಾರಿ ಗಾಂಧಿ–ಜಿನ್ನ ಭೇಟಿಗಳಾಗಿ ಅಯಶಸ್ವಿಯಾಗಿದ್ದವು. ಈಗ ಜಿನ್ನಾ–ಗಾಂಧಿ ಭೇಟಿಯಾಗುವ ಸಂಭವವಿದೆಯೆಂತಲೂ, ಒಂದು ತರದ ಹೊಸ ವಾತಾವರಣ ಸಿಮ್ಲಾದಲ್ಲಿ ಕಲ್ಪಿತವಾಗಿದೆ ಎಂದೂ ವದಂತಿ, ನಿರೀಕ್ಷೆಗಳು ಎದ್ದಿವೆ. ಅಂದರೆ ಈ ಸಲ ಜಿನ್ನಾರವರೇ ಮಹಾತ್ಮರನ್ನು ಆಮಂತ್ರಿಸಬೇಕೆಂದೂ ಕೋರಿಕೆಗಳಿವೆ. "ಇದು ತನಕ ಆದ ನಿಷ್ಫಲತೆಗಳಿಗೆ ಗಾಂಧೀಜಿಯನ್ನು ಹೊಣೆಗಾರರನ್ನಾಗಿ ಹೆಚ್ಚಿನವರು ಭಾವಿಸುವುದಿಲ್ಲ" ವೆಂದು ಒಂದು ಪತ್ರಿಕೆ ತಿಳಿಸುತ್ತದೆ.

ಜವಾಹರರ ಧೋರಣೆ

ತುರಂಗದಿಂದ ಹೊರಬಿದ್ದಕ್ಷಣದಿಂದ ತರುಣ ಭಾರತವೆಲ್ಲವೂ ಈ ಪ್ರಭಾವಶಾಲೀ ದುರೀಣರ ಕಡೆಗೆ ಉತ್ಸುಕತೆಯಿಂದ ನೋಡುತ್ತಿದೆ. ಜೈಲುವಾಸದ ಏಕಾಂತತೆಯಿಂದ ಪಂಡಿತರ ೫೦ ಮಿಕ್ಕಿದ ತಾರುಣ್ಯವು ಸ್ವಲ್ಪ ಸ್ವಲ್ಪವಾಗಿ ಹೋಗಹತ್ತಿ ಆಯಾಸಮಯ ವೃದ್ಧಾಪ್ಯದ ಕುರುಹುಗಳು ಕಾಣಹತ್ತಿವೆ. ಆದರೂ ಬಿಡುವಿಲ್ಲದೆ ತಮ್ಮ ಹಿಂದಿನ ಯುವಕೋತ್ಸಾಹ ಚೈತನ್ಯದಿಂದಲೇ ನೆಹರುಗಳು ಅವಿಶ್ರಾಂತವಾಗಿ ತಮ್ಮ ಹಿಂಬಾಲಕರನ್ನು ದರ್ಶನ ಭಾಷಣಗಳಿಂದ ತಣಿಸುತ್ತಿರುವರು. ಅಮೇರಿಕನ್ ಮತ್ತು ಬ್ರಿಟಿಷ್ ಸೇನಾಧಿಕಾರಿಗಳು ಅವರನ್ನು ಸಂದರ್ಭ ಸಿಕ್ಕಿದಲ್ಲಿ ಸಂಭಾಷಣೆಗೆಳೆದು ದೇಶವಿದೇಶ ಪರಿಸ್ಥಿತಿಯ ಕುರಿತು ಅಭಿಪ್ರಾಯ ವಿಚಾರಿಸುವರು.

ಓಗಸ್ಟ್ ಗಲಭೆಯ ಹೊಣೆ

"ಈ ಗಲಭೆಗೆ ಹೊಣೆ ಕೊಂಗ್ರೆಸಲ್ಲ. ಅದನ್ನು ನಾನು ವ್ಯಕ್ತಿಯವಾಗಿ ವಹಿಸುವೆ." ಎಂದು ತಿಳಿಸುತ್ತಾ ಪಂಡಿತ್‌ಜಿಯವರು "ಒಂದು ಪಕ್ಷಕ್ಕೆ ಕೊಂಗ್ರೆಸು ಜನತೆಗೆ ಚಳವಳ ಮಾಡುವಂತೆ ನಿರ್ದೇಶಿಸಿದ್ದರೆ ಆ ಗಲಭೆಯು ೧೯೪೨ರ ಓಗಸ್ಟಿನಲ್ಲಾದುದಕ್ಕಿಂತ ನೂರು ಮಡಿ ಹೆಚ್ಚಾಗುತಿತ್ತು" ಎಂದು ತಿಳಿಸಿರುವರು.

ಪ್ರಸ್ತುತದ ಸಿಮ್ಲಾ ಪರಿಷತ್ತಿನ ಮತು ವೇವಲ್ ಯೋಜನೆಯ ಕುರಿತು ತಿಳಿಸುತ್ತಾ ಪಂಡಿತ್‌ಜಿಯವರು ಒಂದೆಡೆ "ಮುಂದೆ ಅದರಿಂದ ಸ್ವಲ್ಪ ಒಳಿತಾದರೂ ಆಗಬಹುದೆಂಬ ಭರವಸೆ ಇದೆ. ಭಾರತೀಯರೆಲ್ಲರೂ ಐಕ್ಯಮತದಿಂದ ರಾಜ್ಯಪರಿಪಾಲನೆ ಕಾರ್ಯ ಸಾಗಿಸಲು ಸಮರ್ಥರಿದ್ದಾರೆ" ಎಂದು ಹೇಳಿ ವಿದೇಶದಲ್ಲಿ ಭಾರತದ ಕುರಿತು ಇರುವ ಜಾತಿ ಕಲಹದ ಅಭಿಪ್ರಾಯವನ್ನು ಸುಳ್ಳೆಂದು ತೋರಿಸಬೇಕೆಂಬ ತಮ್ಮ ಮನೋಗತವನ್ನು ಸ್ಪಷ್ಟ ಪಡಿಸಿದರು.

"ಒಂದು ವೇಳೆ ವರ್ಕಿಂಗ್ ಕಮಿಟಿಯವರು ನಿಮ್ಮನ್ನೇ ವ್ಯಾಸ್‌ರಾಯರ ಕೌನ್ಸಿಲ್ ಸದಸ್ಯರಾಗುವಂತೆ ಸೂಚಿಸಿದರೆ ಹೇಗೆ?" ಎಂದಾಗ ನೆಹರುಗಳು "ಅದೆಲ್ಲವೂ ನನ್ನ ಭಾವನಾಮಯ ವ್ಯಕ್ತಿತ್ವವನ್ನು ಹೊಂದಿಕೊಂಡಿದೆ. ನಾನೊಬ್ಬ ಭಾವನಾಜೀವಿ. ನಾನು ಇಂತಹದೇ ಧೋರಣೆ ವಹಿಸುವೆ ಎಂದು ಈಗ ಹೇಳಬರುವುದಿಲ್ಲ" ಎಂದರು.

ರಾಜಾಜಿ ಮನಸ್ಸು.

ಇವರ ಸಮಸ್ಯೆ ವಿಚಿತ್ರವಾದುದು. ಸದ್ಯಕ್ಕೆ ಸಿ. ಆರ್.ರು ಗಾಂಧೀಜಿಯಂತೆ ಕೊಂಗ್ರೆಸಿನ ನಾಲ್ಕಾಣೆ ಸದಸ್ಯರೂ ಅಲ್ಲ. ತಮ್ಮ ಸ್ವಂತ ಅಭಿಪ್ರಾಯ ಸ್ವಾತಂತ್ರ್ಯಕ್ಕಾಗಿ ೧೯೪೨ರ ಓಗಸ್ಟ್ ೮ರಂದಿನಿಂದ ಕೊಂಗ್ರೆಸ್ ಸದಸ್ಯತನಕ್ಕೆ ರಾಜಿಯಿತ್ತು ಹೊರಬಂದಿರುವರು. ಆದರೂ ಮದ್ರಾಸಿನ ಮಾಜಿ ಪ್ರಧಾನಿಗಳಾಗಿ ಇವರಿಗೆ ವ್ಯಾಸರಾಯರ ಕರೆ ಬಂದದ್ದು. ಆದರೂ ರಾಜಾಜಿಯವರು ಕೊಂಗ್ರೆಸಿಗರಾಗಿಯೇ ಸಿಮ್ಲಾಕ್ಕೆ ಹೋಗುವೆನೆಂತಲೂ, ಕೊಂಗ್ರೆಸ್ ಧೋರಣಕ್ಕೆ ಕಟ್ಟು ಬೀಳುವೆನೆಂತಲೂ ಸ್ಪಷ್ಟ ಪಡಿಸಿದ್ದಾರೆ.

ಪರಿಷತ್ತಿನ ಜಯಾಪಜಯಗಳ ಕುರಿತು ಒಂದು ಕಡೆ ರಾಜಾಜಿಯವರು. "ಅದು ಯಶಸ್ವಿಯಾಗುವುದೆಂದು ಆಶೆ ಇದೆ.' ಹೀಗೆಂದು ಒತ್ತಿ ಹೇಳಿರುವರು.

ವ್ಯಾಸ್‌ರಾಯರು ಚುನಾಯಿಸುವ ಸದಸ್ಯ ಮಂಡಳಿಯಲ್ಲಿ ಕೊಂಗ್ರೆಸ್ಸಿಗೇ ಬಹುಮತ ದೊರಕ ಬಹುದೆಂಬ ಜಿನ್ನರ ಭಯವು ನಿರಾಧಾರವೆಂದೂ, ಒಂದು ವೇಳೆ ಅಲ್ಪ ಸಂಖ್ಯಾಕರೆಲ್ಲರೂ ಒಟ್ಟುಗೂಡಿದಲ್ಲಿ ಮುಸ್ಲಿಂ ಲೀಗಿಗೆ ಬೆಂಬಲ ದೊರಕುವುದೆಂದೂ, ಒಟ್ಟಿನಲ್ಲಿ ಜಾತೀಯ ಪ್ರಶ್ನೆಯನ್ನು ಸರಿಪಡಿಸುವುದು ಪ್ರಭಾವಶಾಲಿ ವ್ಯಕ್ತಿಗಳ ಕೈಯಲ್ಲಿರುವುದೆಂದೂ ತಿಳಿಸುತ್ತಾರೆ.

The Canara Banking Corporation, Ltd.
(Incorporated in British Inbia)
ESTD: 1906
Head Office: UDIPI, SOUTH KANARA.
ANNOUNCEMENT
A branch of the Bank has been opened at Camp Bazaar, CANNANORE, on 18—5—1945.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

AAA 290 KN
ಮೇಲೆ ಏರುತ್ತಿರುವ ಧಾರಣೆಗಳನ್ನು ತಡೆದು ನಿಲ್ಲಿಸಿರಿ

ಅನಾವಶ್ಯಕವಾಗಿ ಹಣವನ್ನು ವೆಚ್ಚಮಾಡಬೇಡಿರಿ
ಈಗಿನಿಂದಲೇ ಉಳಿಸಿರಿ ಮುಂಬರುವ ಕಾಲದ ಸಲುವಾಗಿ
ಹಣವನ್ನು ಲಾಭದಾಯಕವಾಗಿ ತೊಡಗಿಸುವ ಈಗಿನ ಕಾಲದ ಉತ್ತಮ ಮಾರ್ಗಗಳಾವವೆಂದರೆ, ವಿಮೆ ಇಳಿಸುವದು, ಸಹಕಾರ ಸಂಘಗಳಲ್ಲಿ ಠೇವಿಡುವದು, ಸೇವಿಂಗ್ಸ್ ಬ್ಯಾಂಕು ಖಾತೆಗಳು ಪೋಸ್ಟ್ಆಫೀಸ್ ಸೇವಿಂಗ್ಸ್ ಬ್ಯಾಂಕು ಖಾತೆಗಳು ಆಗಿರುತ್ತವೆ; ಮತ್ತು ಇವೆಲ್ಲಗಳ ಪೈಕಿ ಅತ್ಯುತ್ತಮವಾದ ಮಾರ್ಗಗಳೆಂದರೆ, ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳುವದು ಮತ್ತು ಸರಕಾರದವರು ತೆಗೆದ ಸಾಲಗಳಿಗೆ ಹಣ ತುಂಬುವದು, ಆಗಿರುತ್ತವೆ.
ಹಿಂದುಸ್ಥಾನ ಸರಕಾರದ ಫೈನಾನ್ಸ ಡಿಪಾರ್ಟಮೆಂಟಿನಿಂದ ಹೊರಡಿಸಿದ್ದು.

ನಿಷ್ಪ್ರಯೋಜಕ ಸೌಂದರ್ಯ

ಮೇಸ್ಕರೀಟಿನ ಕೌಂಟನು ಸಂಸಾರ ಪ್ರಿಯ. ಕೌಂಟೆಸಳು ಸುಂದರಳೂ, ಸೌಂದರ್ಯ ಪ್ರಿಯಳು. ಆದರೂ ೩೦ ವರ್ಷ ಪ್ರಾಯದಲ್ಲಿ ಅವಳಿಗೆ ಏಳು ಮಕ್ಕಳು. ತನ್ನ ಸೌಂದರ್ಯವನ್ನು ಮೆರಿಸಿ ಕೆಲಕಾಲ ಸುಖ ಪಡೆಯಬೇಕೆಂದು ಅವಳೊಂದು ಉಪಾಯ ಮಾಡಿದಳು. ಏಳು ಮಕ್ಕಳಲ್ಲಿ ಒಂದು ಮಾತ್ರ ಗಂಡನಿಗೆ ಹುಟ್ಟಿದಲ್ಲವೆಂದು ಪ್ರಮಾಣ ಮಾಡಿ ಹೇಳಿದಳು. ಗಂಡನು ದಾರಿ ತೋಚದೆ ಹೊರಟು ಹೋದನು. ಅಂದಿನಿಂದ ಅವಳು ತನ್ನ ಸುಖ ಜೀವನಕ್ಕಾರಂಭಿಸಿದಳು. ನಾಟಕ ಶಾಲೆಯಲ್ಲಿ ಅವಳ ಕುರಿತು ಇರ್ವರು ಚರ್ಚಿಸುತ್ತಿದ್ದರು.

(ಕಳೆದ ಸಂಚಿಕೆಯಿಂದ)

"ಸಹಜವಾಗಿಯೂ ಹೌದು, ಕೆಲವೊಂದು ವಸ್ತುದ್ರವಗಳಿಂದ ಅಗೋಚರವಾಗಿ ಉತ್ಪನ್ನವಾಗುವ ರಾಸಾಯನಿಕ ಕ್ರಿಯೆಯಂತೆಯೂ, ಕೆಲವೊಂದು ವಸ್ತುಗಳ ಸಾಮೀಪ್ಯ ಸಂಬಂಧದಿಂದಾಗಲೀ ಇಲ್ಲವೆ ಘರ್ಷಣೆಯಿಂದಾಗಲೀ ಅನಿರೀಕ್ಷಿತವಾಗಿ ಉಂಟಾಗುವ ವಿದ್ಯುಚ್ಛಕ್ತಿಯಂತೆಯೂ ಇಲ್ಲವೆ ಸಜೀವ ವಸ್ತುವಿಶೇಷಗಳ ಕೊಳೆಯುವಿಕೆಯಿಂದ ಫಲಪ್ರದವಾಗಿ ಪರಿಣಮಿಸುವ ನಿರಂತರ ಫಲಶಕ್ತಿಯಂತೆಯೂ ಸೃಷ್ಟಿ ವೈಚಿತ್ರವೆಂದೆನಿಸುವಂತೆ ಇದು ಘಟಿಸುತ್ತದೆ.

"ಆದರೆ ಪ್ರಿಯ ಸ್ನೇಹಿತನೇ ಇದನ್ನು ಪರಿಕಿಸುವ ಪ್ರತಿಯೊಬ್ಬನಿಗೂ ಇದರ ಸತ್ಯಾಂಶವು ಗೋಚರಿಸದಿರದು. ಬರೀ ಯಾಂತ್ರಿಕ ಮನೋವೃತ್ತಿಯ ದಿರದೆಯೂ ಸುಲಭವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಗಿರುವಂತಹದೂ ಆಗಿದ್ದು ಬಹಳ ಸೂಕ್ಷ್ಮ ತರ್ಕಶಕ್ತಿಯುಳ್ಳದ್ದೂ, ವಿವೇಕ ವಿಚಾರ ಸಂಪನ್ನವಾದುದೂ, ಉದ್ವೇಗ ಸ್ವಭಾವವುಳ್ಳದ್ದೂ ಮತ್ತು ದುಃಖಾನುಭವಕ್ಕೆ ಒಳಗಾಗುವಂತಹದೂ ಆಗಿದ್ದು ಇಂದು ಅಪೂರ್ವವಾದ ಪರಿಪೂರ್ಣತೆಗೆ ಮುಟ್ಟಿರುವಂತೆ ಮಾಡಿದವನ ಮಾನಸೀಕ ಶಕ್ತಿಯನ್ನು ಈ ವಿವೇಕಿಯಾದೊಬ್ಬ ಸೃಷ್ಟಿಕರ್ತನು ನಿರ್ಮಿಸಿರುವುದು ನಿಜವಿದ್ದರೆ ಅದು ಬಾಳಿಕೊಂಡಿರುವ ಈ ಜಗತ್ತು ಇಷ್ಟೊಂದು ಅಸಹ್ಯವಾದ ಚಿಕ್ಕ ವಸತಿಸ್ಥಾನವಾಗಿರುತ್ತಿರಲಿಲ್ಲ. ಇದೆಂತಹ ವಾಸಸ್ಥಾನ ಒಬ್ಬರನ್ನೊಬ್ಬರು ಕೊಂದು ತಿನ್ನುವ, ಮಳೆ ಬಿಸಿಲುಗಳಿಂದ ಪರಿಪೋಶಿಸಲ್ಪಡುವ ಸಸ್ಯಗಳನ್ನೂ, ಕೊಂದ ಪ್ರಾಣಿಗಳ ಮಾಂಸವನ್ನೂ ಬಕ್ಷಿಸಿ ಬತ್ತಲೆಯಾಗಿ ಮರ ಗವಿಗಳಲ್ಲಿ ವಾಸಿಸುವ ಹುಚ್ಚ ಮನುಷ್ಯರಿಂದ ಕೂಡಿದ್ದು, ಕಲ್ಲು ಬಂಡೆ, ಮರಗಳಿಂದ ಕೂಡಿದ ಉರುಟು ತೋಟವಾಗಿ ಆ ಅವಿವೇಕಿ ಸೃಷ್ಟಿಕರ್ತನು ಇದನ್ನು ನಮಗಾಗಿ ಸೃಷ್ಟಿಸಿರುವನೆ?

"ಒಂದು ಕ್ಷಣ ಯೋಚಿಸಿದರೆ ನಮ್ಮಂತ ಜೀವಿಗಳಿಗೆ ಈ ಸ್ಥಳವು ನಿರ್ಮಿಸಲ್ಪಟ್ಟುದಲ್ಲವೆಂಬ ವಿಷಯವು ನಮಗೆ ತಿಳಿಯುವುದು. ಶಕ್ತಿರಹಿತವೂ, ಅಜ್ಞಾನ ಭರಿತವೂ ಮತ್ತು ಸದಾ ಗೊಂದಲಕ್ಕೀಡಾದುದೂ ಆಗಿರುವ ಮಿದುಳಿನಿಂದಲೂ ಮತ್ತು ಮಿದುಳು ಬಳ್ಳಿ ಮಿದುಳು ಕಣಗಳಿಂದಲೂ ಪರಿಪೋಷಿಸಲ್ಪಟ್ಟು ಬೆಳೆದು ಕೊಂಡು ಬಂದಿರುವ ವಿಚಾರ ಶಕ್ತಿಯು ಜ್ಞಾನವಂತ ಜೀವಿಗಳಾದ ನಮ್ಮನ್ನು ಈ ಜಗತ್ತಿನಲ್ಲಿ ನಿರಂತರ ದೀನರಾದ ದೇಶಭ್ರಷ್ಟರಂತಾಗಿ ಮಾಡುತ್ತದೆ.

"ಇಲ್ಲಿ ವಾಸಿಸುವವರಿಗಾಗಿ ದೇವರು ಬಿಟ್ಟುಕೊಟ್ಟ ಈ ಸೃಷ್ಟಿಯನ್ನು ನೋಡು. ಇಲ್ಲಿ ಕಣ್ಣಾರೆ ಕಾಣುವ ಈ ಜಗತ್ತು ಅರಣ್ಯಗಳಿಂದಲೂ ವನಸ್ಪತಿಗಳಿಂದಲೂ ನಿಬಿಡವಾಗಿ ಆವರಿಸಿದ್ದು ಪ್ರಾಣಿಗಳಿಗಾಗಿಯೇ ಸೃಷ್ಟಿಸಲ್ಪಟ್ಟುದಲ್ಲವೆ? ಪ್ರತಿಯೊಂದೂ ಹಾಗೆ. ಅವುಗಳು ಪ್ರಕೃತೀಯವಾದ ತಮ್ಮ ಸಹಜ ಸ್ವಭಾವಕ್ಕನುಗುಣವಾಗಿ ಬೇರೆ ಯಾವ ಕೆಲಸವೂ ಮಾಡಲಿಕ್ಕಿರದೆ ಸುಮ್ಮನೆ ತಿನ್ನುತ್ತಾ, ಒಂದನ್ನೊಂದು ಬೇಟೆಯಾಡಿ ಜೀವಿಸಿಕೊಂಡು ಅಲೆಯಬೇಕಾಗಿದೆ. ಇದರಿಂದ ದೇವರು ಶಾಂತತೆಯ ಸ್ವಭಾವವನ್ನೂ, ನಮ್ರತೆಯ ಗುಣಗಳನ್ನೂ ಉಂಟು ಮಾಡುವಷ್ಟು ದೂರದೃಷ್ಟಿಯವನಲ್ಲ. ಒಂದನ್ನೊಂದು ನಾಶಮಾಡಿ ನುಂಗಿ ತಿನ್ನುವ ಈ ಜೀವಜಂತುಗಳ ಮತ್ತು ಸ್ವರೂಪವನ್ನು ಮಾತ್ರ ಅವನು ಸ್ಪಷ್ಟ ಕಾಣುವವನಾದನು. ಗಿಳಿ, ಪಾರಿವಾಳ, ಮೊಲಗಳು ಕ್ರೂರ ಗಿಡುಗನ ಆಹಾರ ಕೊಳ್ಳೆಗಳಲ್ಲವೆ? ಆಡು ಕುರಿಗಳೂ ಎತ್ತು ಜಿಂಕೆಗಳೂ ಕ್ರೂರ ಮಾಂಸಹಾರಿ ಪ್ರಾಣಿಗಳ ಕೊಳ್ಳೆಗಳಲ್ಲವೆ?

"ಹೀಗೆ ಪಶು ಸ್ವಭಾವವು ದೇವರ ಇಚ್ಛೆಯಿರುತ್ತದೆ. ನಾವು ಹೆಚ್ಚೆಚ್ಚು ನಾಗರೀಕರೂ ಕಲಾಕುಶಲರೂ ಸುಧಾರಿತರೂ ಆದ ಹಾಗೆ ಆ ಪಶು ಸ್ವಭಾವವನ್ನು ನಮ್ಮಿಂದ ದೂರ ಮಾಡಲು ಪ್ರಯತ್ನಿಸಬೇಕು. ನಾವು ವನ್ಯ ಪಶುಗಳಿಗಿಂತಲೂ ಮಿಗಿಲಾದವರೆಂದು ತೋರಿಸಲೋಸುಗವಾಗಿ ನಾವು ಈ ಮನೆ ಮಠಗಳನ್ನೂ, ಸಿಹಿ ಸಕ್ಕರೆಗಳನ್ನೂ, ಶುಚಿರುಚಿಯ ಪದಾರ್ಥಗಳನ್ನೂ, ಯಂತ್ರೋಪಕರಣಗಳನ್ನೂ ಮಾತ್ರವಲ್ಲ ಉಗಿ ಬಂಡಿಗಳನ್ನೂ, ಈ ಕಲೆ ವಿಜ್ಞಾನ ಶೋಧಗಳನ್ನೂ, ಈ ಲೇಖನ ಕವಿತೆಗಳನ್ನೂ ರಚಿಸಿದೆವು. ಈ ಶೃಂಗಾರದ ಉಡುಪು ತೊಡುಪುಗಳೂ ಒಡವೆ ಆಭರಣಗಳು ಅಂತೆಯೇ ನಿರ್ಮಿಸಲ್ಪಟ್ಟವು. ನಾವು ಸಾಮಾನ್ಯರಾದ ಪ್ರತಿ ಜೀವಿಗಳನ್ನೂ ಹುಟ್ಟಿಸುವವರು. ನಾವು ಉಂಟುಮಾಡುವ ಈ ಧ್ಯೇಯಗಳೂ, ಈ ಜೀವನ ಸೌಕರ್ಯಗಳೂ ಏಕಪ್ರಕಾರವಾದ ನಮ್ಮ ಈ ಬೇಸರಿಕೆಯನ್ನು ಅತ್ಯಲ್ಪ ಕಠಿಣತೆಯದಾಗಿ ಮಾಡುವ ಸಾಧನೋಪಾಯಗಳಲ್ಲದೆ ಬೇರೆಯಲ್ಲ.

"ಈ ನಾಟಕ ಶಾಲೆಯನ್ನಾದರೂ ನೋಡು. ಅಮರವಾದ ವಿಧಿಲೀಲಾ ಶಕ್ತಿಯ ವಿವೇಚನೆಗೆ ನಿಲುಕದಂತಹ ಒಂದು ಮಾನವ ಜಗತ್ತನ್ನೆ ನಾವು ಮನಸ್ಸಿ ಸೃಷ್ಟಿಸಿರುತ್ತೇವೆ. ಇವೆಲ್ಲವೂ ಏತಕ್ಕೆಂದು ತಿಳಿದೆ? ಇವು ಚಂಚಲ ಸ್ವಭಾವದ ಚಿಕ್ಕ ಪ್ರಾಣಿಗಳಾದ ನಮ್ಮ ಜ್ಞಾನ ಸ್ಪರ್ಶೇಂದ್ರಿಯಗಳಿಗೆ ಸುಖವನ್ನುಂಟು ಮಾಡುವ ಸಲುವಾಗಿ ಇದನ್ನು ರಚಿಸಿದೆವು.

"ಈಗಳ ಮೇಸ್ಕರೀಟಿನ ಕೌಂಟೆಸ್ ಮಹಿಳೆಯನ್ನು ನೋಡು. ದೇವರು ಅವಳನ್ನು ನಗ್ನರೂಪಿಯಾಗಿ ಇಲ್ಲವೆ ಮೃಗಾದಿಗಳ ತೊಗಲನ್ನು ಉಟ್ಟುಕೊಂಡು ಗವಿಯಲ್ಲಿ ವಾಸಿಸಲೋಸುಗವಾಗಿ ನಿರ್ಮಿಸಿದನು. ಆದರೆ ಇಂದವಳು ಅದಕಿಂತಲೂ ಉತ್ತಮಳಾಗಿ ಕಾಣುವುದಿಲ್ಲವೆ? ಆದರೆ ಇಂದವಳ ದುರವಸ್ಥೆಯಾದರೂ ಹೇಗಿದೆ? ಪಶು ಸ್ವಭಾವದ ಅವಳ ಗಂಡನು ಅವಳನ್ನು ಏಳು ಮಕ್ಕಳ ತಾಯನ್ನಾಗಿ ಮಾಡಿ ಇಂದು ಅವಳನ್ನು ಒಂದೇ ಸವನೇ ಬಿಟ್ಟುಬಿಟ್ಟು ಹೊಲಸು ಹೆಂಗುಸಿನ ಹಿಂದೆ ಓಡಾಡುವ ಪ್ರಾಣಿಯಾಗಿದ್ದಾನೆಂಬ ವಿಷಯವನ್ನು ಯಾರಾದರೂ ಬಲ್ಲಿರುವರೆ?"

ಗ್ರೆಂಡಿನ್ನನು ಉತ್ತರಿಸಿದ: "ಸ್ನೇಹಿತನೇ, ಸದಾ ಇಂತಹ ಸುಂದರ ಸ್ತ್ರೀಯ ಜೊತೆಯಲ್ಲಿರುವುದು ಮುಂದೆ ಬಹಳ ಖರ್ಚಿಗೆ ಅವಕಾಶವಾಗುವುದೆಂದು ತಿಳಿದೇ ಅವಳ ಗಂಡನಾದ ಕೌಂಟನು ಇಂದು ಆ ಧೋರಣೆಯನ್ನು ಅನುಸರಿಸಿರಬೇಕು. ಅದೊಂದು ಹಣ ಉಳಿತಾಯದ, ಮನೆ ಖರ್ಚಿನ ಪ್ರಶ್ನೆ. ಆದರೆ ನೀನು ಮಾತ್ರ ಇದಕ್ಕೆ ತತ್ವಜ್ಞಾನದ ರೂಪವನ್ನು ಕೊಟ್ಟಿರುವೆ."

ಅಷ್ಟು ಹೊತ್ತಿಗೆ ಪರದೆಯು ಎತ್ತಲ್ಪಟ್ಟು ನಾಟಕದ ಮೂರನೇ ಅಂಕವು ಆರಂಭವಾಯಿತು. ಈ ಮಿತ್ರರು ತಮ್ಮ ಹೇಟುಗಳನ್ನು ತೆಗೆದು ಪುನಃ ರಂಗ ಭೂಮಿಯತ್ತ ಕಡೆ ತಿರುಗಿ ಕೂತರು.

ನಾಟಕ ಶಾಲೆಯಿಂದ ಮನೆಗೆ ಒಯ್ಯುವ ಗಾಡಿಯಲ್ಲಿ ಮೆಸ್ಕರೀಟಿನ ಕೌಂಟೆಸಳೂ ಅವಳ ಗಂಡನೂ ಮೌನವಾಗಿ ಹತ್ತಿರ ಹತ್ತಿರ ಕುಳಿತಿದ್ದರು. ಕೂಡಲೇ ಗಂಡನು ಪತ್ನಿಗೆ ಹೀಗೆಂದನು: "ಗ್ರೇಬ್ರಿಯೇಲ್"

"ನಿಮಗೇನು ಬೇಕಾಗಿದೆ?"

"ನನ್ನ ನಿನ್ನ ಸಂಬಂಧವು ನಿಂತುಹೋಗಿ ಬಹಳ ಕಾಲವಾಯಿತು. ಇದು ಅತೀ ಧೀರ್ಘ ಅವಧಿಯಾಗಲಿಲ್ಲವೆ?"

"ಏನು?"

"ಕಳೆದ ಆರು ವರ್ಷಗಳಿಂದ ನೀನು ನನ್ನನ್ನು ಅದೆಂತಹ ಘೋರ ನರಕ ಯಾತನೆಗೆ ಒಳ ಪಡಿಸಿರುವೆ?"

"ಈಗ ನಿಮಗೇನು ಬೇಕು? ಹಾಗೆ ಮಾಡದೆ ನನಗೆ ಬೇರೆ ದಾರಿ ಇಲ್ಲ"

"ಹಾಗಾದರೆ ನನ್ನದಲ್ಲದ ಆ ಮಗು ಯಾವುದೆಂದು ಹೇಳು."

"ಎಂದಿಗೂ ಹೇಳಲಾರೆ"

"ಈವೊಂದು ಸಂಶಯದ ಭಾರದಿಂದ ನರಳುವವನ ಹೃದಯವು ನನ್ನ ಮಕ್ಕಳನ್ನು ಪ್ರೀತಿಸದಂತೆ ಮಾಡಿರುತ್ತದೆ. ಹೇಳು ಅವುಗಳಲ್ಲಿ ಯಾವುದದು? ಪ್ರತಿಜ್ಞೆಮಾಡಿ ಹೇಳುತ್ತೇನೆ ನಾನು ನಿನ್ನನ್ನು ಕ್ಷಮಿಸುವೆ. ಆ ಮಗುವನ್ನು ನನ್ನದರ ಹಾಗೇ ಉಪಚರಿಸುವೆ."

"ನನಗೆ ಹೇಳಲು ಅಧಿಕಾರವಿಲ್ಲ"

"ಅವುಗಳನ್ನು ನೋಡುವಾಗ ಭಯಂಕರ ಕ್ಲೇಶವನ್ನುಂಟುಮಾಡುವ ಈ ಯೋಚನೆಯನ್ನು ಮನಸ್ಸಿನೊಳಗೆ ಇರಿಸಿ ನಾನು ಈ ಜೀವವನ್ನು ಬಹಳ ಕಾಲದವರೇಗೆ ಸೈರಿಸಿಕೊಂಡಿರಲಾರೆನೆಂಬ ವಿಷಯವನ್ನು ನೀನು ತಿಳಿದಿರುವುದಿಲ್ಲ. ಕ್ಷಣ ಕ್ಷಣಕ್ಕೂ ಈ ಯೋಚನೆಯು ನನ್ನ ಅಂತಃಕರಣವನ್ನು ಭಾದಿಸುತ್ತದೆ. ನನಗೆ ಅದು ಹುಚ್ಚನ್ನಾಗಿ ಮಾಡಬಹುದು."

"ಹಾಗಾದರೆ ನೀವು ಇದರಿಂದ ತುಂಬಾ ಬಳಲಿರುವಿರಲ್ಲವೆ?" ಎಂದು ಅವಳು ಕೇಳಿದಳು.

"ಭಯಂಕರವಾಗಿ ಬಳಲಿರುತ್ತೇನೆ. ನನ್ನ ಇತರ ಮಕ್ಕಳನ್ನೂ ಕೂಡಾ ಪ್ರೀತಿಸಲಿಕ್ಕೆ ಬಿಡದಂತಹ, ಆವೊಂದು ಮಗು ಇದೆಯೆಂದು ತಿಳಕೊಂಡಿದ್ದೂ ನಿನ್ನ ಬಳಿಯಲ್ಲಿ ವಾಸಿಸುವ ಆ ಭೀಕರ ಯಾತನೆ ಅದೆಂತಹುದು?"

ಅವಳು ಕೇಳಿದಳು: "ಹಾಗಾದರೆ ನೀವು ನಿಜವಾಗಿ ತುಂಬಾ ಸಂಕಷ್ಟದಿಂದ ಬಳಲಿರುವಿರೊ?"

ಬಿಗಿಯಾದ ಸ್ವರದಲ್ಲಿಯೂ ದುಃಖಿತನಾಗಿಯೂ ಅವನು ಉತ್ತರವಿತ್ತ:

"ಹೌದು, ಪ್ರತಿ ದಿನವೂ ನಾನು ನಿನಗೆ ಹೇಳುತ್ತಿರಲಿಲ್ಲವೇ?—ನನಗೆ ಅದು ಸಹಿಸಲಸದಳವಾದ ಯಾತನೆಯೆಂದು? ಅವರಿಗೆ ಪ್ರೀತಿಮಾಡದೆ ನಾನು ನಿನ್ನ ಮತ್ತು ಅವರ ಬಳಿಯಲ್ಲಿ ಈ ಮನೆಯಲ್ಲಿ ಇರುವುದಾದರೂ ಹೇಗೆ? ಹಾ! ನೀನು ನನಗೆ ವಿರೋಧವಾಗಿ ತುಚ್ಛವಾದ ಕೆಲಸವನ್ನು ಮಾಡಿದೆ. ನನ್ನ ಹೃದಯದ ಎಲ್ಲಾ ಪ್ರೇಮಾನುರಾಗಗಳನ್ನೂ ನಾನು ನನ್ನ ಮಕ್ಕಳ ಮೇಲೆ ಇರಿಸಿದ್ದೆ. ಆ ವಿಷಯ ನೀನೂ ಬಲ್ಲೆ. ಅವರಿಗೆ ನಾನು ಹಿಂದಿನ ಕಾಲದ ತಂದೆಯಾಗಿಯೂ, ನಿನಗೆ ಹಿಂದಿನ ಕಾಲದ ಗಂಡನಂತೆಯೂ ಇದ್ದೆ. ನನ್ನ ಸ್ವಭಾವವೇ ಆ ತರ ಒಲಿದಿತ್ತು. ನಿಜ, ನೀನು ನನ್ನಲ್ಲಿ ಮಾತ್ಸರ್ಯ ಅಸೂಯಗಳನ್ನುಂಟುಮಾಡಿದೆ. ಕಾರಣ ನೀನು ಬೇರೆಯೇ ಜನಾಂಗದವಳು, ಬೇರೆಯೇ ಆತ್ಮಬುದ್ಧಿಯವಳು ನಿನ್ನ ಕೋರಿಕೆಗಳೂ ಬೇರೆ ತರದವುಗಳಾಗಿದ್ದುವು. ಹಾ! ನೀನು ಹೇಳಿದ ವಿಷಯಗಳನ್ನು ನಾನೆಂದೂ ಮರೆಯಲಾರೆ. ಆ ದಿವಸದಿಂದ ನಿನ್ನ ವಿಷಯವಾಗಿ ನಾನು ಚಿಂತೆಯನ್ನೇ ಬಿಟ್ಟುಬಿಟ್ಟೆ. ನನ್ನದಲ್ಲದ ಆ ಮಗು ಯಾವುದೆಂದು ನನಗೆ ತಿಳಿಯಲಾಗದರಿಂದ ನಾನು ನಿನ್ನನ್ನು ಇದು ತನಕ ಕೊಲ್ಲದೆ ಬಿಟ್ಟೆ. ಇದು ತನಕ ನಾನು ಕಾದು ನಿಂತೆ. ನೀನು ತಿಳಕೊಂಡಿರುವುದಕಿಂತಲೂ ಹೆಚ್ಚಾಗಿ ನಾನು ಮನೋವೇದನೆಯನ್ನು ಅನುಭವಿಸಿದ್ದೇನೆ. ನನಗೆ ಅವರನ್ನೂ ಪ್ರೀತಿಸಲು ಧೈರ್ಯವಿಲ್ಲ. ಮೊದಲನೇ ಎರಡನ್ನು ಬಿಟ್ಟು ಮಿಕ್ಕುಳಿದವುಗಳ ಮುಖವನ್ನು ನೋಡಲು ಕೂಡಾ ನನಗೆ ಮನಸ್ಸಿಲ್ಲ, ಎದೆಗಾರಿಕೆ ಇಲ್ಲ. ಅವರಿಗೆ ಮುದ್ದಿಸುವ ಮನೋಸ್ಥೈರ್ಯ ನನ್ನಲಿಲ್ಲ. "ಇದು ನನ್ನದು ಹೌದೊ ಅಲ್ಲ"ವೆಂದು ಶಂಕಿಸದೆ ನಾನು ಅವನ್ನೆತ್ತಿ ಕೊಳ್ಳಲಾರೆ. ಈ ಆರು ವರ್ಷಗಳಲ್ಲಿ ನಾನು ನಿನ್ನ ಹತ್ತಿರ ಸರಿಯಾಗಿ ನಡಕೊಂಡಿದ್ದೇನೆ. ನಿನ್ನನ್ನು ಕರುಣೆಯಿಂದಲೂ, ಸಹಾನುಭೂತಿಯಿಂದಲೂ ಕಂಡಿದ್ದೇನೆ. ಪ್ರಿಯೆ ಸತ್ಯವನ್ನು ಹೇಳು, ನಾನು ಪ್ರತಿಜ್ಞೆಮಾಡಿ ಹೇಳುತ್ತೇನೆ ನಿನಗೆ ನಾನೆಂದೂ ನಿಷ್ಕಾರುಣ್ಯದ ಯಾವ ವರ್ತನೆಯನ್ನೂ ಮಾಡುವುದಿಲ್ಲ."

(೬ನೇ ಪುಟಕ್ಕೆ ಮುಂದುವರಿದುದು.)

ವಾರದ ವಿದ್ಯಮಾನಗಳು

ಮಹಾತ್ಮರು ವ್ಯಾಸರಾಯರಾದರೆ?—ಜವಾಹರರು ಭಾರತ ವಿದೇಶಾಂಗ ಮಂತ್ರಿ!--ಬ್ರಿಟಿಷ್ ಸರಕಾರದ ಸಲಹೆಗಾರ ಗಾಂಧೀ—ಜಿನ್ನಾ ಗಾಂಧೀ ಒಪ್ಪಂದ--ಅಲ್ಪ ಸಂಖ್ಯಾಕರಿಗೆ ಬಹುಮತ—ಸಿಮ್ಲಾದ ಕಲ್ಪನಾ ಚಲಚಿತ್ರ

ಇದೊ, ಇಲ್ಲಿ ನೋಡಿರಿ! ಇದೇ ಸಿಮ್ಲಾ. ಸಮುದ್ರ ಮಟ್ಟದಿಂದ ಏಳು ಸಾವಿರ ಅಡಿ ಎತ್ತರದ ಪ್ರದೇಶ. ಇಲ್ಲಿ ಮಂಜು ಮುಸುಕಿದಂತೆ ರಾಜಕೀಯ ಮಾತುಕತೆಗಳ ಫಲಿತಾಂಶವೂ ಸದ್ಯಕ್ಕೆ ಅಸ್ಪಷ್ಟವಸ್ಥೆಯಲ್ಲೇ ಇದೆ. ಆದರೂ ಅಲ್ಲಿ ಆಶೆ ನಿರಾಶೆ, ಊಹಾಪೋಹೆಗಳಿಂದ ಕೂಡಿದ ಸುದ್ದಿ ಗೊದ್ದಿಗಳ ಸುರಿಮಳೆ ಧಾರಾ ಕಾರವಾಗಿ ಸುರಿಯುತ್ತಿದೆ.

ರಾಜಕೀಯ ಹವಾಮಾನ ಪರೀಕ್ಷಕರಾದ ತಜ್ಞ ಪತ್ರಿಕಾ ಪ್ರತಿನಿಧಿಗಳು ತಮ್ಮ ಚತುರ ಪ್ರಶ್ನೆಗಳೆಂಬ ಹವಾಮಾಪಕ ಯಂತ್ರದಿಂದ ಸಿಮ್ಲಾ ಪರಿಷತ್ತಿನ ವಾತಾವರಣದ ಲಘು ಬಿಗಿಗಳನ್ನು ಅಳೆಯ ಹತ್ತಿಉವರು.

ಇದು ಗಾಂಧಿ ಗುಡಿಸಲು. ಕಿಟಿಕಿಯಿಂದ ಮಹಾತ್ಮರು ದೂರದಲ್ಲಿನ ಹಿಮಾಚ್ಛಾದಿತ ಕೈಲಾಸಗಿರಿಗಳನ್ನು ಅವಲೋಕಿಸಿ ಆತ್ಮಾನಂದವನನ್ನುಭವಿಸುತಿದ್ದಾಗಲೇ ಮೂರು ವರ್ಷಗಳ ಹಿಂದೆ ಅವರನ್ನು ಕಂಡ ಪ್ರೆಸ್ಟನ್‌ಗೊವರ್ ಎಂಬ ಅಮೆರಿಕನ್ ಪತ್ರಿಕಾ ಪ್ರತಿನಿಧಿಗಳು ಗಾಂಧಿ ಕೊಟಡಿಯನ್ನು ಹೊಕ್ಕರು. ಯಥಾಪ್ರಕಾರ ಪ್ರಶ್ನೋತ್ತರಗಳಿಗಾರಂಭವಾಯಿತು.

"ಸಿಮ್ಲಾ ಪರಿಷತ್ತು ಜಾತಿಯ ಮಾತುಕತೆ ಕೂಟವಲ್ಲ. ಅದಕ್ಕೆ ರಾಜಕೀಯ ರೂಪ ಬಂದಿದೆ"

"ಕೊಂಗ್ರೆಸು ಜಾತೀಯ ಸಂಸ್ಥೆಯಲ್ಲ"

"ಜವಾಹರರು ನನ್ನ ಉತ್ತರಾಧಿಕಾರಿಗಳು."

"ಕೊಂಗ್ರೆಸು ನನ್ನನ್ನು ಮೂಲೆಗೆ ತಳ್ಳಬಹುದು"

"ಜಿನ್ನರು ಇಷ್ಟ ಪಟ್ಟರೆ ಪರಿಷತ್ತಿಗೆ ನನ್ನನ್ನು ಈಗ ಒಯ್ಯಬಹುದು—ಅವರಿಗೆ ಯಾವುದಾದರೂ ಒಂದು ಇತ್ಯರ್ಥ ಬೇಕಾದರೆ"

ಜಿನ್ನರ ಕಡೆಗೆ

ಗಾಂಧೀಜಿಯ ಮನಸ್ಸು ತಿಳಕೊಂಡ ಗೊವರರು ನೇರವಾಗಿ ಜಿನ್ನರ ಕಡೆಗೆ ತೆರಳಿದರು. ಅಷ್ಟರಲ್ಲೇ ಜಿನ್ನಾಸಾಹೇಬರ ಒಂದು ಪತ್ರಿಕಾ ಸಂದರ್ಶನ ಭಾಷಣವೂ ಆಗಿತ್ತು. ಅದರಲ್ಲಿ ಅವರು: "ಮುಸ್ಲಿಂ ಸದಸ್ಯರನ್ನು ಲೀಗೇ ಚುನಾಯಿಸಬೇಕು. ಕೊಂಗ್ರೆಸಿನಲ್ಲಿ ಮುಸ್ಲಿಮರು ಎಷ್ಟಿದ್ದಾರೆ? ಬಹಳೇ ಸ್ವಲ್ಪ. ಕಳೆದ ಚುನಾವಣೆಯಲ್ಲಿ ಚುನಾಯಿಸಿ ಬಂದ ೬೦೦ ಮುಸ್ಲಿಮರಲ್ಲಿ ೪೭೦ ಲೀಗಿನವರು. ಬರೀ ಮೂವತ್ತು ಕೊಂಗ್ರೆಸ್ ಮುಸಲ್ಮಾನರು. ಈಚೇಗೆ ನಡೆದ ೭೦ ಉಪಚುನಾವಣೆಗಳಲ್ಲಿ ೬೯ ಲೀಗಿನವರೇ ಗೆದ್ದಿದ್ದಾರೆ. ಈಗ ಪುನಃ ಚುನಾವಣೆ ನಡೆದರೆ ಲೀಗು ಸಂಪೂರ್ಣ ವಿಜಯಶಾಲಿಯಾಗುವುದು" ಎಂದಿದ್ದಾರೆ.

ಗಾಂಧಿಯವರು ಹೇಳಿದ ವಿಷಯವನ್ನು ಜಿನ್ನರಿಗೆ ತಿಳಿಸಿದಾಗ ಅವರು: "ತಮಗೆ ಪರಿಷತ್ತಿನಲ್ಲಿ ಸ್ಥಾನವಿಲ್ಲವೆಂದ ಗಾಂಧಿಯವರು ತಿಳಿಸಿದ ಮೇಲೆ ಅವರನ್ನು ಅಲ್ಲಿಗೆ ನಾನು ಹೇಗೆ ಒಯ್ಯಲಿ.? ಆದರೂ ನಾವಿಬ್ಬರು ಮನಸ್ಸು ಮಾಡಿದರೆ ಈಗಿನ ಈ ಪರಿಷತ್ತಿನ ಅವಶ್ಯಕತೆಯೇ ಇಲ್ಲ, ನಾವು ಬೇರೊಂದನ್ನೇ ಕರೆಯುವಂತೆ ಮಾಡ ಬಹುದು. ಈಗ ಗಾಂಧಿಯವರು ವ್ಯಾಸ್‌ರಾಯರಿಗೂ, ಅವರ ಮುಖಾಂತರ ಬ್ರಿಟಿಷ್ ಸರಕಾರಕ್ಕೂ ಸಲಹೆಗಾರರಾಗಿದ್ದಾರೆ. ಕೊಂಗ್ರೆಸಿನಲ್ಲಿ ಅವರ ಸಲಹೆಯೇ ಆಜ್ಞೆಯಂತಿರುವುದು—ಯಾರೂ ಅದನ್ನು ತೆಗೆದು ಹಾಕಲಾರರು."

ಜಿನ್ನಾ-ಗಾಂಧೀಜಿ ಬೇಟಿ

ಹಿಂದೆ ಹಲವು ಬಾರಿ ಗಾಂಧಿ—ಜಿನ್ನ ಭೇಟಿಗಳಾಗಿ ಅಯಶಸ್ವಿಯಾಗಿದ್ದವು. ಈಗ ಜಿನ್ನಾ—ಗಾಂಧಿ ಭೇಟಿಯಾಗುವ ಸಂಭವವಿದೆಯೆಂತಲೂ, ಒಂದು ತರದ ಹೊಸ ವಾತಾವರಣ ಸಿಮ್ಲಾದಲ್ಲಿ ಕಲ್ಪಿತವಾಗಿದೆ ಎಂದೂ ವದಂತಿ, ನಿರೀಕ್ಷೆಗಳು ಎದ್ದಿವೆ. ಅಂದರೆ ಈ ಸಲ ಜಿನ್ನಾರವರೇ ಮಹಾತ್ಮರನ್ನು ಆಮಂತ್ರಿಸಬೇಕೆಂದೂ ಕೋರಿಕೆಗಳಿವೆ. "ಇದು ತನಕ ಆದ ನಿಷ್ಫಲತೆಗಳಿಗೆ ಗಾಂಧೀಜಿಯನ್ನು ಹೊಣೆಗಾರರನ್ನಾಗಿ ಹೆಚ್ಚಿನವರು ಭಾವಿಸುವುದಿಲ್ಲ" ವೆಂದು ಒಂದು ಪತ್ರಿಕೆ ತಿಳಿಸುತ್ತದೆ.

ಜವಾಹರರ ಧೋರಣೆ

ತುರಂಗದಿಂದ ಹೊರಬಿದ್ದಕ್ಷಣದಿಂದ ತರುಣ ಭಾರತವೆಲ್ಲವೂ ಈ ಪ್ರಭಾವಶಾಲೀ ದುರೀಣರ ಕಡೆಗೆ ಉತ್ಸುಕತೆಯಿಂದ ನೋಡುತ್ತಿದೆ. ಜೈಲುವಾಸದ ಏಕಾಂತತೆಯಿಂದ ಪಂಡಿತರ ೫೦ ಮಿಕ್ಕಿದ ತಾರುಣ್ಯವು ಸ್ವಲ್ಪ ಸ್ವಲ್ಪವಾಗಿ ಹೋಗಹತ್ತಿ ಆಯಾಸಮಯ ವೃದ್ಧಾಪ್ಯದ ಕುರುಹುಗಳು ಕಾಣಹತ್ತಿವೆ. ಆದರೂ ಬಿಡುವಿಲ್ಲದೆ ತಮ್ಮ ಹಿಂದಿನ ಯುವಕೋತ್ಸಾಹ ಚೈತನ್ಯದಿಂದಲೇ ನೆಹರುಗಳು ಅವಿಶ್ರಾಂತವಾಗಿ ತಮ್ಮ ಹಿಂಬಾಲಕರನ್ನು ದರ್ಶನ ಭಾಷಣಗಳಿಂದ ತಣಿಸುತ್ತಿರುವರು. ಅಮೇರಿಕನ್ ಮತ್ತು ಬ್ರಿಟಿಷ್ ಸೇನಾಧಿಕಾರಿಗಳು ಅವರನ್ನು ಸಂದರ್ಭ ಸಿಕ್ಕಿದಲ್ಲಿ ಸಂಭಾಷಣೆಗೆಳೆದು ದೇಶವಿದೇಶ ಪರಿಸ್ಥಿತಿಯ ಕುರಿತು ಅಭಿಪ್ರಾಯ ವಿಚಾರಿಸುವರು.

ಓಗಸ್ಟ್ ಗಲಭೆಯ ಹೊಣೆ

"ಈ ಗಲಭೆಗೆ ಹೊಣೆ ಕೊಂಗ್ರೆಸಲ್ಲ. ಅದನ್ನು ನಾನು ವ್ಯಕ್ತಿಯವಾಗಿ ವಹಿಸುವೆ." ಎಂದು ತಿಳಿಸುತ್ತಾ ಪಂಡಿತ್‌ಜಿಯವರು "ಒಂದು ಪಕ್ಷಕ್ಕೆ ಕೊಂಗ್ರೆಸು ಜನತೆಗೆ ಚಳವಳ ಮಾಡುವಂತೆ ನಿರ್ದೇಶಿಸಿದ್ದರೆ ಆ ಗಲಭೆಯು ೧೯೪೨ರ ಓಗಸ್ಟಿನಲ್ಲಾದುದಕ್ಕಿಂತ ನೂರು ಮಡಿ ಹೆಚ್ಚಾಗುತಿತ್ತು" ಎಂದು ತಿಳಿಸಿರುವರು.

ಪ್ರಸ್ತುತದ ಸಿಮ್ಲಾ ಪರಿಷತ್ತಿನ ಮತು ವೇವಲ್ ಯೋಜನೆಯ ಕುರಿತು ತಿಳಿಸುತ್ತಾ ಪಂಡಿತ್‌ಜಿಯವರು ಒಂದೆಡೆ "ಮುಂದೆ ಅದರಿಂದ ಸ್ವಲ್ಪ ಒಳಿತಾದರೂ ಆಗಬಹುದೆಂಬ ಭರವಸೆ ಇದೆ. ಭಾರತೀಯರೆಲ್ಲರೂ ಐಕ್ಯಮತದಿಂದ ರಾಜ್ಯಪರಿಪಾಲನೆ ಕಾರ್ಯ ಸಾಗಿಸಲು ಸಮರ್ಥರಿದ್ದಾರೆ" ಎಂದು ಹೇಳಿ ವಿದೇಶದಲ್ಲಿ ಭಾರತದ ಕುರಿತು ಇರುವ ಜಾತಿ ಕಲಹದ ಅಭಿಪ್ರಾಯವನ್ನು ಸುಳ್ಳೆಂದು ತೋರಿಸಬೇಕೆಂಬ ತಮ್ಮ ಮನೋಗತವನ್ನು ಸ್ಪಷ್ಟ ಪಡಿಸಿದರು.

"ಒಂದು ವೇಳೆ ವರ್ಕಿಂಗ್ ಕಮಿಟಿಯವರು ನಿಮ್ಮನ್ನೇ ವ್ಯಾಸ್‌ರಾಯರ ಕೌನ್ಸಿಲ್ ಸದಸ್ಯರಾಗುವಂತೆ ಸೂಚಿಸಿದರೆ ಹೇಗೆ?" ಎಂದಾಗ ನೆಹರುಗಳು "ಅದೆಲ್ಲವೂ ನನ್ನ ಭಾವನಾಮಯ ವ್ಯಕ್ತಿತ್ವವನ್ನು ಹೊಂದಿಕೊಂಡಿದೆ. ನಾನೊಬ್ಬ ಭಾವನಾಜೀವಿ. ನಾನು ಇಂತಹದೇ ಧೋರಣೆ ವಹಿಸುವೆ ಎಂದು ಈಗ ಹೇಳಬರುವುದಿಲ್ಲ" ಎಂದರು.

ರಾಜಾಜಿ ಮನಸ್ಸು.

ಇವರ ಸಮಸ್ಯೆ ವಿಚಿತ್ರವಾದುದು. ಸದ್ಯಕ್ಕೆ ಸಿ. ಆರ್.ರು ಗಾಂಧೀಜಿಯಂತೆ ಕೊಂಗ್ರೆಸಿನ ನಾಲ್ಕಾಣೆ ಸದಸ್ಯರೂ ಅಲ್ಲ. ತಮ್ಮ ಸ್ವಂತ ಅಭಿಪ್ರಾಯ ಸ್ವಾತಂತ್ರಕ್ಕಾಗಿ ೧೯೪೨ರ ಓಗಸ್ಟ್ ೮ರಂದಿನಿಂದ ಕೊಂಗ್ರೆಸ್ ಸದಸ್ಯತನಕ್ಕೆ ರಾಜಿಯಿತ್ತು ಹೊರಬಂದಿರುವರು. ಆದರೂ ಮದ್ರಾಸಿನ ಮಾಜಿ ಪ್ರಧಾನಿಗಳಾಗಿ ಇವರಿಗೆ ವ್ಯಾಸರಾಯರ ಕರೆ ಬಂದದ್ದು. ಆದರೂ ರಾಜಾಜಿಯವರು ಕೊಂಗ್ರೆಸಿಗರಾಗಿಯೇ ಸಿಮ್ಲಾಕ್ಕೆ ಹೋಗುವೆನೆಂತಲೂ, ಕೊಂಗ್ರೆಸ್ ಧೋರಣಕ್ಕೆ ಕಟ್ಟು ಬೀಳುವೆನೆಂತಲೂ ಸ್ಪಷ್ಟ ಪಡಿಸಿದ್ದಾರೆ.

ಪರಿಷತ್ತಿನ ಜಯಾಪಜಯಗಳ ಕುರಿತು ಒಂದು ಕಡೆ ರಾಜಾಜಿಯವರು. "ಅದು ಯಶಸ್ವಿಯಾಗುವುದೆಂದು ಆಶೆ ಇದೆ.' ಹೀಗೆಂದು ಒತ್ತಿ ಹೇಳಿರುವರು.

ವ್ಯಾಸ್‌ರಾಯರು ಚುನಾಯಿಸುವ ಸದಸ್ಯ ಮಂಡಳಿಯಲ್ಲಿ ಕೊಂಗ್ರೆಸ್ಸಿಗೇ ಬಹುಮತ ದೊರಕ ಬಹುದೆಂಬ ಜಿನ್ನರ ಭಯವು ನಿರಾಧಾರವೆಂದೂ, ಒಂದು ವೇಳೆ ಅಲ್ಪ ಸಂಖ್ಯಾಕರೆಲ್ಲರೂ ಒಟ್ಟುಗೂಡಿದಲ್ಲಿ ಮುಸ್ಲಿಂ ಲೀಗಿಗೆ ಬೆಂಬಲ ದೊರಕುವುದೆಂದೂ, ಒಟ್ಟಿನಲ್ಲಿ ಜಾತೀಯ ಪ್ರಶ್ನೆಯನ್ನು ಸರಿಪಡಿಸುವುದು ಪ್ರಭಾವಶಾಲಿ ವ್ಯಕ್ತಿಗಳ ಕೈಯಲ್ಲಿರುವುದೆಂದೂ ತಿಳಿಸುತ್ತಾರೆ.

The Canara Banking Corporation, Ltd.

(Incorporated in British Inbia)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

AAA 290 KN

ಮೇಲೆ ಏರುತ್ತಿರುವ ಧಾರಣೆಗಳನ್ನು ತಡೆದು ನಿಲ್ಲಿಸಿರಿ



ಅನಾವಶ್ಯಕವಾಗಿ ಹಣವನ್ನು ವೆಚ್ಚಮಾಡಬೇಡಿರಿ

ಈಗಿನಿಂದಲೇ ಉಳಿಸಿರಿ ಮುಂಬರುವ ಕಾಲದ ಸಲುವಾಗಿ

ಹಣವನ್ನು ಲಾಭದಾಯಕವಾಗಿ ತೊಡಗಿಸುವ ಈಗಿನ ಕಾಲದ ಉತ್ತಮ ಮಾರ್ಗಗಳಾವವೆಂದರೆ, ವಿಮೆ ಇಳಿಸುವದು, ಸಹಕಾರ ಸಂಘಗಳಲ್ಲಿ ಠೇವಿಡುವದು, ಸೇವಿಂಗ್ಸ್ ಬ್ಯಾಂಕು ಖಾತೆಗಳು ಪೋಸ್ಟ್‌ಆಫೀಸ್ ಸೇವಿಂಗ್ಸ್ ಬ್ಯಾಂಕು ಖಾತೆಗಳು ಆಗಿರುತ್ತವೆ; ಮತ್ತು ಇವೆಲ್ಲಗಳ ಪೈಕಿ ಅತ್ಯುತ್ತಮವಾದ ಮಾರ್ಗಗಳೆಂದರೆ, ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳುವದು ಮತ್ತು ಸರಕಾರದವರು ತೆಗೆದ ಸಾಲಗಳಿಗೆ ಹಣ ತುಂಬುವದು, ಆಗಿರುತ್ತವೆ.

ಹಿಂದುಸ್ಥಾನ ಸರಕಾರದ ಫೈನಾನ್ಸ ಡಿಪಾರ್ಟಮೆಂಟಿನಿಂದ ಹೊರಡಿಸಿದ್ದು.

ಹಿಂದೂದೇಶದಲ್ಲಿ ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಯತ್ನಗಳು ನಡೆಯುತ್ತಿರುವಾಗ, ಚೀನಾದಲ್ಲಿ ಕೊಮ್ಯುನಿಷ್ಟ-ಕೌಮಿಂಗ್‌ಟಾಂಗ್ ವಿವಾದವು ಬೆಳೆಯುತ್ತಾ ಬರುತ್ತಿದೆ. ಕೌಮಿಂಗ್‌ಟಾಂಗ್ ಪಕ್ಷದ ಧುರೀಣರಾದ ಡಾ। ಸೂಂಗರು (ಮೊನ್ನೆ ಪ್ರಧಾನರ ಪದವಿಗೆ ಬಂದವರು) ಮೊಸ್ಕೊವಿಗೆ ತೆರಳಿ ಅಲ್ಲಿ ಕೊಮ್ಯುನಿಷ್ಟ ನಾಯಕ ಸ್ಟೈಲೀನರೊಡನೆ ಮಾತುಕತೆಯಲ್ಲಿರುವರು.

ಚೀನಾದ ವಿಮೋಚನೆಯಲ್ಲಿ ಚಿಯಾಂಗರು ಎಷ್ಟು ಶ್ರದ್ಧೆಯಿಂದ ಶ್ರಮಿಸುತ್ತಿರುವರೊ ಎಷ್ಟೊ ಶ್ರದ್ಧೆಯ ಶ್ರಮವನ್ನು ವಹಿಸಿ, ಅಲ್ಲಿನ ಕೊಮ್ಯುನಿಷ್ಟರು ದುಡಿಯುತ್ತಿರುವರು. ಭವಿಷ್ಯದಲ್ಲಿ ತಮ್ಮ ಭದ್ರತೆಗಾಗಿ ಚೀನಿ ಕೊಮ್ಯುನಿಷ್ಟರು ಈಗಲೆ ಒಂದು ಕಾರ್ಯಕ್ರಮವನ್ನು ಕಲ್ಪಿಸಿಕೊಂಡಿರುವರು. ಮೊಸ್ಕೊವಿನ ಮಧ್ಯಸ್ಥಿಕೆಯಿಂದ ಕೊಮ್ಯುನಿಷ್ಟ-ಕೌಮಿಂಗ್‌ಟಾಂಗ ವಾದವು ಬಗೆಹರಿಸಲ್ಪಡಬಹುದೆಂದು ನಿರೀಕ್ಷೆಗಳಿವೆ. ಈ ವಾದವು ಬೇಗನೆ ಬಗೆಹರಿಸಲ್ಪಡಬೇಕೆಂದು ಸಂ. ಅಮೇರಿಕಾದ ಧುರೀಣರ ಬಯಕೆಯು ಇದೆ.

* * *

ಸಿಮ್ಲಾ ಪರಿಷತ್ತು ಜೂಲ್ಯಾ ತಾ. ೧೪ಕ್ಕೆ ಮುಂದುವರಿಸಲಾಗಿದೆ. ಅಷ್ಟರೊಳಗೆ, ಕಾಂಗ್ರೆಸ್ ಕಾರ್ಯಕಾರಿ ಮಂಡಳವೂ, ಮುಸ್ಲಿಂಲೀಗ್ ಕಾರ್ಯಕಾರಿ ಮಂಡಳವೂ, ಸಭೆ ಸೇರಿ ಒಂದು ಇತ್ಯರ್ಥಕ್ಕೆ ಬರಬೇಕಾಗಿಯದೆ. ಜಿನ್ನಾರವರು ಹೇಳುವಂತೆ, ವೈಸ್ರಾಯರ ಕಾರ್ಯಕಾರಿ ಮಂಡಳದ ಮುಸ್ಲಿಂ ಸದಸ್ಯರನ್ನು ಆರಿಸುವ ಅಧಿಕಾರವು ಲೀಗಿಗೆ ಬರಬೇಕೆಂದೂ ವಾದಿಸಲಾಗಿದೆ. ಅಲ್ಲದೆ, ಸಿಕ್ಕರಿಗೆ ಮತ್ತು ಹಿಂದುಳಿದ ಕೋಮುಗಳಿಗಾಗಿ ಮೀಸಲಾಗಿದ್ದ ಸದಸ್ಯರುಗಳು ಕಾಂಗ್ರೆಸ್ಸಿನಕಡೆ ವಾಲುವ ಸಂಭಾವಗಳು ಹೆಚ್ಚಾದುದರಿಂದ ಮುಸ್ಲಿಂ ಹಿತಗಳಿಗೆ ಈ ಕಾರಣದಿಂದ ದಕ್ಕೆ ಬರಬಹುದೆಂದೂ ಸಂದೇಹವು ಅವರಿಗಿದೆ. ಜಿನ್ನಾರವರ ಈ ಇತ್ಯರ್ಥಗಳಿಂದಾಗಿ, ಸಿಮ್ಲಾ ಪರಿಷತ್ತು ಯಶಸ್ವಿಯಾಗುವ ಕುರಿತು ಸಂದೇಹಗಳುಂಟಾಗಿದ್ದರೂ, ವೈಸ್ರಾಯ ವೇವಲ್ಲರ ಆಶಯಗಳು ಕಾರ್ಯರೂಪಕ್ಕೆ ಬರಬಹುದೆಂದೂ ಬಲವಾದ ಊಹೆಗಳಿವೆ.

ದೇಶದಲ್ಲಿ ಸದ್ಯ ಉಂಟಾದ ಕಠಿಣ ಪರಿಸ್ಥಿತಿ ನಿವಾರಿಸಲೋಸುಗ, ಗಾಂಧೀಜಿಯರು, ಮತ್ತು ಕಾಂಗ್ರೆಸ್ಸು, ವೈಸ್ರಾಯರೊಡನೆ ಸಹಕರಿಸಿ ನಡೆಯಲು ಸಿದ್ಧರಿದ್ದಂತೆ ಕಾಣುತ್ತದೆ. ವೇವಲ್ಲ ಪ್ಲೇನನ್ನು ಸ್ವೀಕರಿಸಿ ಸ್ವಾತಂತ್ರ್ಯ ಸಾಧನೆಯ ಮುಂದಿನ ಕಾರ್ಯಗಳಿಗೆ ಒಂದು ತಳಹದಿಯನ್ನು ಹಾಕಿಕೊಳ್ಳಬಹುದೆಂದು ದೇಶದ ಮುಖಂಡರಲ್ಲಿ ಅನೇಕರ ಅಭಿಪ್ರಾಯವು. ಇದು ಸತ್ಯವಾದುದು. ಜಾತೀಯ ಮತ್ತು ಪಕ್ಷೀಯ ಹಿತಾಹಿತ, ಗೌರವ ಕಡೆ ನೋಡುವ ಸಮಯ ಇದಲ್ಲ.

ದೇಶದ ಸದ್ಯದ ಪರಿಸ್ಥಿತಿಯನ್ನು ನಿವಾರಿಸುವರೆ, ಕಾಂಗ್ರೆಸ್, ಲೀಗೂ, ಇತ್ಯಾದಿ ಪಕ್ಷಬೇದ ಭಾವವಿಲ್ಲದನೆ, ಉತ್ತಮ ಜನರನ್ನು ಆರಿಸುವುದು, ಗಾಂಧೀಜಿಯರ ಹಾಗೂ ಕಾಂಗ್ರೆಸ್ ಮುಖಂಡರ ಅಭಿಪ್ರಾಯವಿರುತ್ತದೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸಭೆಯೊಂದು ಸಿಮ್ಲಾದಲ್ಲಿ ಕರೆಯಲಾಗಿದೆ. ಶ್ರೀ. ಜವಾಹರಲಾಲ ನೆಹರುಗಳವರು ಸಿಮ್ಲಾಕ್ಕೆ ತೆರಳಿರುವರು.

ಪ್ರಚಲಿತ ಸಮಾಚಾರಗಳು

ಸಿಮ್ಲಾದಲ್ಲಿ ಸದ್ಯ ನಡೆಯುತ್ತಿರುವ ಚಟುವಟಿಕೆಗಳಿಂದ ಉತ್ತಮ ಪರಿಣಾಮಗಳುಂಟಾಗಬಹುದೆಂದು ಅವರಲ್ಲಿ ಒಳ್ಳೆ ಆಶಾದಾಯಕ ಭಾವಗಳಿವೆ.

ಜಿನ್ನಾರವರು ಎಂದಿನಂತೆ ತಮ್ಮ ಛಲವನ್ನು ವ್ಯಕ್ತಪಡಿಸಿರುವರು ನಿಜ. ಇವರ ಈ ಧೋರಣದಿಂದ ವೈಸ್ರಾಯ ವೇವಲ್ಲರು ನೊಂದಿರುವರಂತೆ ಕಾಣುತ್ತದೆ. ಅವರು ತನ್ನದೆ ನಿಷ್ಕರ್ಷೆಯನ್ನುಪಯೋಗಿಸಿ, ಒಂದು ಇತ್ಯರ್ಥಕ್ಕೆ ಬಂದು ವರ್ತಿಸಲೂ ಬಹುದು. ಸದ್ಯ ದೇಶದಲ್ಲಿ ಕಾಣಿಸಿಕೊಂಡ ಕಠಿಣ ಸಮಸ್ಯೆಗಳನ್ನು ಬಗೆಹರಿಸಲು ಅವರು ದೃಢ ಸಂಕಲ್ಪ ಮಾಡಿದಂತೆ ಕಾಣುತ್ತದೆ.

ವೇವಲ್ಲ ಪ್ಲೇನನ್ನು ಸ್ವೀಕರಿಸಿ, ಅದರಂತೆ ರಾಷ್ಟ್ರೀಯ ಬಣ್ಣದ, ಪ್ರಜಾಸತ್ತಾತ್ಮಕರೂಪದ, ಯೋಗ್ಯ ಕಾರ್ಯಕಾರಿ ಮಂಡಳವೊಂದು ಆರಿಸಲ್ಪಡುವುದು, ದೇಶ ಹಿತದೃಷ್ಟಿಯಲ್ಲಿ ಅತೀ ಅವಶ್ಯವಿದೆ.

* * *

ಜರ್ಮನಿಯ ಆಡಳಿತವು ತ್ರಿರಾಷ್ಟ್ರಗಳ ಅಂಕಿತದಲ್ಲಿ ನಡೆಯಬೇಕೆಂದು ನಿರ್ಣಯವಾಗಿದೆ. ಇದಕ್ಕೆ ಸರಿಯಾಗಿ ಅದನ್ನು ಮೂರು ವಿಭಾಗಗಳನ್ನಾಗಿ ಮಾಡುವ ಕೆಲಸವು ಈಗ ನಡೆಯುತ್ತಿದೆ. ಆಂಗ್ಲೊ-ಅಮೇರಿಕನ್ ದಂಡುಗಳ ಕೈಗಳಿಗೆ ಬಂದ ಕೆಲ ಪ್ರದೇಶಗಳನ್ನು ರಷ್ಯಾಕ್ಕೆ ಬಿಟ್ಟುಬಿಡಬೇಕೆಂಬ ಇತ್ಯರ್ಥವಾಗಿದ್ದು, ಅದರಂತೆ ಆ ಪ್ರದೇಶಗಳಿಂದ ಆಂಗ್ಲೊ-ಅಮೇರಿಕನ್ ದಂಡಗಳು ಹಿಂತೆಗೆಯಲಾಗುತ್ತಿದ್ದು, ಅಲ್ಲಿಗೆ ಕೆಂಪು ದಂಡುಗಳು ಬರುತ್ತಿವೆ.

ಜರ್ಮನಿಯಲ್ಲಿ ಮಿತ್ರರ ಪ್ರವೇಶವಾದಂದಿನಿಂದ ನಾಜೀಗಳ ಪೈಶಾಚಿಕ ಮತ್ತು ಕ್ರೂರ ವರ್ತನೆಯ ಕುರುಹುಗಳನೇಕ ಬೆಳಕಿಗೆ ಬಂದಿವೆ. ನಾಜೀಗಳು ತಮ್ಮ ವಿರೋಧಿಗಳ ಪೀಡಣೆಗಾಗಿ ವ್ಯವಸ್ಥೆ ಪಡಿಸಿದ ನಿಲಯಗಳ ರಹಸ್ಯಗಳು ಬೆಳಕಿಗೆ ಬರುತ್ತಿವೆ. ಈ ನಿಲಯಗಳನ್ನು ನಾಜೀ ನರಕಗಳೆಂದು ಕರೆದರೆ ಹೆಚ್ಚಾಗದು. ಇಲ್ಲಿ ಸೇರಿಸಲ್ಪಟ್ಟ ಕೈದಿಗಳು ಹೊಟ್ಟೆಗಿಲ್ಲದೆ, ರಾಶಿ ರಾಶಿಯಾಗಿ ಸಾಯುತ್ತಿದ್ದವರನ್ನು, ರಾಶಿ ರಾಶಿಯಾಗಿ ಹೂಣಿಟ್ಟ ದೃಶ್ಯಗಳು ಅನೇಕ ಕಾಣಸಿಕ್ಕಿವೆ. ಮಿತ್ರ ಸೈನಿಕರು ಈ ನಿಲಯಗಳನ್ನು ಪ್ರವೇಶಿಸಿದಾಗ ನಾಜೀಗಳ ಚಿತ್ರಹಿಂಸೆಯನ್ನು ಅನುಭವಿಸಿ, ಭ್ರಾಂತರಾದ, ಅಸ್ಥಿಪಂಜರಗಳಾಗಿರುವ ಜನರು ಗುಂಪು ಗುಂಪಾಗಿ ಬಂದು, ಸೈನಿಕರನ್ನು ಅಪ್ಪಿ ಬಿಡಲು ಪ್ರಯತ್ನಿಸಿದರಂತೆ. ಕೆಲವರು ವಿಮೋಚನೆಯಿಂದ ಉಂಟಾದ ಸಂತೋಷದಲ್ಲೆ ಮಡಿದರಂತೆ. ನಾಜೀ "ಕಾನ್‌ಸನ್‌ಟ್ರೆಶನ್ ಕ್ಯಾಂಪುಗಳು" ಅಂದರೆ, ಮೇಲೆ ಸೂಚಿಸಿದ ನಿಲಯಗಳ ಅಮಾನುಷಕತೆ ವಿವರಗಳನ್ನು ಓದುವಾಗ, – ಗರುಢ ಪುರಾಣದಲ್ಲಿ ವಿವರಿಸಲಾದ ನರಕವು ಇದರಗಿಂತ ವಾಸಿ ಎಂಬ ಅಭಿಪ್ರಾಯವು ಉಂಟಾಗುತ್ತದೆ.

* * *

ಕೆಲವು ಮಹತ್ತರ ವಿಚಾರಗಳ ಮೇಲೆ ಇತ್ಯರ್ಥಕ್ಕೆ ಬರಲು ತ್ರಿರಾಷ್ಟ್ರಗಳ ಮುಖಂಡರುಗಳು ಅಂದರೆ, ಸ್ಟಾಲೀನ್, ಟ್ರೂಮೇನ್,-ಚರ್ಚಿಲ್ಲರ ಕೂಡುವಿಕೆ ಸದ್ಯದಲ್ಲೆ ಜರ್ಮನಿಯ ಬರ್ಲಿನ್ ನಗರದಲ್ಲಿ ನಡೆಯುವುದು. ಇಲ್ಲಿ ಮಿತ್ರರೊಳಗೆ ಸ್ವಲ್ಪ ತಿಕ್ಕಾಟಕ್ಕೆ ಕಾರಣವಾದ ಕೆಲ ಸಮಸ್ಯೆಗಳು ಬಿಡಿಸಲ್ಪಡಬಹುದು.

ಅಂತರಾಷ್ಟ್ರೀಯ ವಿಚಾಗಳಲ್ಲಿ ರಶ್ಯಾಕ್ಕೆ ಪ್ರಭಾವವು ಹೆಚ್ಚಿದುದು ಈಗ ಕಾಣಿಸುತ್ತದೆ. ಅದೀಗ ಟರ್ಕಿಯ ಡಾರ್ಡೆನಲ್ಸ ಭೂಸಂಧಿಯ ಹತ್ತಿರವಿರುವ ಕೆಲವು ಠಾಣ್ಯಗಳನ್ನು ಕೇಳಿದ ಕುರಿತೂ, ಸುಯೇಜ್ ಕಾಲಿವೆಯ ಕಂಪೆನಿಯಲ್ಲಿ ಒಂದು ಸ್ಥಾನವನ್ನು ಕೇಳಿದುದರ ಕುರಿತೂ ಕೇಳಿ ಬರುತ್ತಿದೆ.

ಅಂತರಾಷ್ಟ್ರೀಯ ವಿಚಾರದಲ್ಲಿ ಸಂ. ಅಮೇರಿಕಾವೂ ಒಳ್ಳೇ ಪ್ರಭಾವಶಾಲಿಯಾಗಿದೆ. ರಶ್ಯಾದೊಡನೆ ಮೈತ್ರಿಯಿಂದ ವರ್ತಿಸುವುದು ಹೊಸ ಅಧ್ಯಕ್ಷರ ಧೋರಣವಿದ್ದಂತೆ ಕಾಣುತ್ತದೆ. ಬ್ರಿಟಿಷರೂ ಕೂಡಾ ರಷ್ಯಾದೊಡನೆ ಅತ್ಯಂತ ಮೈತ್ರಿಯಿಂದ ವರ್ತಿಸುವರೆಂದು ಚರ್ಚಿಲ್ಲರ ಚುನಾವಣಾ ಭಾಷಣಗಳಿಂದ ತಿಳಿಯಬಹುದು.

ಅಂತರಾಷ್ಟ್ರೀಯ ವಿಚಾರಗಳಲ್ಲಿ ರಷ್ಯಾದ ಪ್ರಭಾವ ಹೆಚ್ಚಿದ ಹಾಗೆ ಯುರೋಪದ ಹೆಚ್ಚಿನ ರಾಷ್ಟ್ರಗಳಲ್ಲಿ ಕೆಂಪು ಪ್ರಭಾವವು ಪ್ರಶಸ್ತಿಗೆ ಬಂದದು ಕಾಣಿಸುತ್ತಿದೆ. ಈ ಕಾರಣದಿಂದ ಬೆಲ್ಜಿಯಮ್ಮಿನ ಚಕ್ರವರ್ತಿಯವರು ಪದಚ್ಯುತರಾಗಬೇಕಾಗಿ ಬಂದದೆ. ಇದೆ ತರದಲ್ಲಿ ಯುರೋಪದ ಇತರ ಕೆಲವು ಸಾರ್ವಭೌಮತೆಗಳು ವಿಸರ್ಜಿಸಲ್ಪಟ್ಟಿವೆ. ಅಲ್ಲಿ ಮುಂದಕ್ಕೆ ಅರಸುಗಳಿಗೆ ಸ್ಥಿರಣೆಯು ದುರ್ಲಭವೆಂದೆ ಹೇಳಬೇಕು.

ಯುರೋಪದ ಈ ತರದ ಪರಿವರ್ತನೆಯು ನಡೆಯುತ್ತಿರುವಾಗ ಅಲ್ಲೆ ಸಮೀಪದಲ್ಲಿರುವ ಬ್ರಿಟನು ತನ್ನ ಹಳೇ ಪದ್ಧತಿಗಳನ್ನು ತ್ಯಜಿಸಿ, ಪ್ರಗತಿಪರ ಪ್ರಭಾವಗಳನ್ನು ಮನ್ನಿಸಿ ವರ್ತಿಸುವಂತಾಗಬಹುದು. ಈಗ ಅಲ್ಲಿ ಚುನಾವಣೆಯ ಗದ್ದಲವು ನಡೆಯುತ್ತಿದೆ. ಅಲ್ಲಿನ ಲೇಬರ್ ಪಕ್ಷವು ಅಧಿಕಾರಕ್ಕೆ ಬರಲು ಮಹಾಯತ್ನಗಳನ್ನು ನಡೆಯಿಸುತ್ತಿದೆ. ಟೋರಿಗಳು ತಮ್ಮ ಅಧಿಕಾರವನ್ನು ರಕ್ಷಿಸಿಕೊಳ್ಳಲು ಮಹಾ ಯತ್ನಗಳನ್ನು ಮಾಡುತ್ತಿರುವರು. ಈ ದ್ವಿತೀಯ ಮಹಾಯುದ್ಧದ ನಾಯಕರಾದ ಚರ್ಚಿಲ್ಲರು ಈ ಟೋರಿಗಳ ನಾಯಕರಾಗಿದ್ದು, ಟೋರಿಗಳ ಹೋರಾಟವು ನಡೆಯುತ್ತಿದೆ. ಲೇಬರ್ ಪಕ್ಷಕ್ಕೆ ಜಯ ದೊರಕಬೇಕಾಗಿ ಬ್ರಿಟನಿನ ಪ್ರಗತಿಗಾಮಿಗಳ ಆಶಿಯೂ ಪ್ರೋತ್ಸಾಹವು ದಾರಳವಿದೆ. ಮಧ್ಯದಲ್ಲಿ ಲೀಬರ್ ಪಕ್ಷವೊಂದಿದೆ. ಚುನಾವಣೆಯ ಫಲಿತಾಂಶ ಏನಾಗಲಿನೆ ಎಂದು ನೋಡಬೇಕು.

ಬ್ರಿಟನಿನ ಲೇಬರ್ ಪಕ್ಷವು ಯುರೋಪದ ಇತರ ಎಡಪಕ್ಷಗಳ ಹಾಗಲ್ಲ. ಆದತೆ ಅದು ಅಲ್ಲಿನ ಇತರ ಪಕ್ಷಗಳಿಗಿಂತ ಉತ್ತಮವಾದುದು. ಈ ಪಕ್ಷವು ಅಧಿಕಾರಕ್ಕೆ ಬರುವುದರಿಂದ ಹಿಂದೂದೇಶದ ಕೋರಿಕೆಗಳು ನೆರವೇರಬಹುದು. ಕೊಮ್ಯುನಿಷ್ಟ ರಷ್ಯಾದೊಡನೆ ಕೂಡಿ ನಡೆಯುವ ಧೋರಣವು ಟೋರಿ ಪಕ್ಷದ್ದಾದರೂ, ತನ್ನ ಉರಲ್ಲಿ ಈ ಪಕ್ಷವು ಸಾಮ್ಯವಾದವನ್ನು ಬಲವಾಗಿ ವಿರೋಧಿಸುತ್ತಿರುವುದು, ಚರ್ಚಿಲ್ಲರ ಚುನಾವಣಾ ಪ್ರಚಾರ ಭಾಷಣಗಳಿಂದ ವ್ಯಕ್ತವಾಗುತ್ತದೆ. ಟೋರಿಗಳು ಸಾಮ್ರಾಜ್ಯಶಾಹಿ ಹಿತೈಷಿಗಳು. ಸಾಮ್ರಾಜ್ಯಶಾಹಿಯನ್ನು ಬಲವಂತವಾಗಿ ರಕ್ಷಿಸಿಕೊಳ್ಳುವುದೆ ಈ ಪಕ್ಷದ ಮೂಲ ಧ್ಯೇಯವು. ಅವರು ಮುಂದಿನ ಚುನಾವಣೆಯಲ್ಲಿ ಜಯಪ್ರದರಾಗುವ ಸಂಭವಗಳೂ ಇವೆ. ಒಂದು ವೇಳೆ ಟೋರಿಗಳೇ ಅಧಿಕಾರಕ್ಕೆ ಬಂದರೂ, ಅವರು ಹಳೇಯದಾದ ಸಾಮ್ರಾಜ್ಯಶಾಹೀ ನೀತಿಯನ್ನು ತೊರೆದು, ಲೋಕಶಾಂತಿ ರಕ್ಷಣೆಗಾಗಿ ನೂತನ ಪ್ರಗತಿಪರ ಭಾವನೆಗಳನ್ನು ತಳೆದು ವರ್ತಿಸಬೇಕಾಗಬಹುದು. ಹಾಗಲ್ಲದಿದ್ದರೆ ನೂತನವಾಗಿ ರಚನೆಯಾದ ಸಂಯುಕ್ತ ರಾಷ್ಟ್ರಗಳ ವ್ಯವಸ್ಥೆಗೆ ಲೋಕಶಾಂತಿಯನ್ನು ರಕ್ಷಿಸಲು ಸಾಧ್ಯವಾಗದು.

ಆಮಂತ್ರಣ ಮೇರೆಗೆ ನೆಹೂರುಗಳು ವೈಸ್ರಾಯರ ಭೇಟಿಮಾಡಿ, ಚಾ ಸತ್ಕಾರವನ್ನು ಸ್ವೀಕರಿಸಿದರೆಂದೂ ತಿಳಿದು ಬಂದಿದೆ. ಸಾಧಾರಣ ೨ ತಾಸಿನ ಸಮಯ ಮಾತುಕತೆಯು ಈ ಸಂದರ್ಭದಲ್ಲಿ ನಡೆದಿರುತ್ತದೆ. ನೆಹರುಗಳು ಲೇಡಿ ವೇವಲ್ಲರನ್ನೂ ಕಂಡು, ೪೫ ನಿಮಿಷ ಮಾತನಾಡಿದರು.

* * *

ವೇವಲ್ಲ ಪ್ಲೇನಿನ ಪ್ರಕಾರ ರಚನೆಯಾಗಬೇಕಾದ ಕಾರ್ಯಕಾರಿ ಮಂಡಳದಲ್ಲಿ, ನೆಹೂರು, ಅಜಾದ್, ಪಟೇಲ ಜಿನ್ನಾರಂತಹ ಮಹನೀಯರು ಸೇರುವಂತೆ ಯತ್ನಗಳು ನಡೆಯುತ್ತಿವೆ ಎಂದು ಸುದ್ಧಿ. ಹೀಗೆ ಪ್ರಸಿದ್ಧ ಪುರುಷರೆ ಈ ಮಂಡಳದಲ್ಲಿ ಸೇರುವುದರಿಂದ ವೈಸ್ರಾಯರಿಗೆ ತಮ್ಮ 'ವೇಟೊ' ಅಧಿಕಾರವನ್ನು ಪ್ರಯೋಗಿಸಲು ಸುಲಭವಾದದೆಂದೂ, ಮುಂದೆ ಆಗ ಬೇಕಾದ ಮಹತ್ಕಾರ್ಯಗಳು ಸಾಂಗವಾಗಿ ನಡೆಯಬಹುದೆಂದೂ ವಾದಿಸಲಾಗಿದೆ.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk n barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ಮಂಗಳೂರು ಮತ್ತು ಜಿಲ್ಲಾ ವಾರ್ತೆಗಳು

ಹವಾಮಾನ:—ಕೆಲವು ದಿನಗಳಿಂದ ಗಾಳಿಸಮೇತವಾದ ಮಳೆಯು ಅಲ್ಪ ಸ್ವಲ್ಪ ವಿರಾಮದಿಂದ ಬರುತ್ತಲಿದೆ. ಕೆಲವು ದಿನಗಳ ಹಿಂದೆ ಜೇಡಿಗುಡ್ಡೆಯ ಬಳಿ ಅಂದರೆ ಕೋರ್ಟಿನ್ ಪಶ್ಚಿಮದಿಕ್ಕಿನ ಇಳಿಯುವ ಕಡೆಯಲ್ಲಿನ ಒಂದು ಹಳೇ ಗೋಳಿಮರವು ಉರುಳಿ ಬಿದ್ದು ನೇರವಾಗಿ ಕೆಳಗೆ ಕಟ್ಟಲ್ಪಟ್ಟ ಎ. ಆರ್. ಪಿ. ಶೆಡ್ಡಿನ ಬಲ ಪಾರ್ಶ್ವವನ್ನು ಕೆಡವಿ ಹಾಕಿರುತ್ತದೆ. ಪುತ್ತು ಪ್ರಭು ಓಣಿಯಲ್ಲಿ ಒಂದುಕಡೆ ಒಂದು ತೆಂಗಿನಮರವು ಕಿತ್ತೊಗೆಯಲ್ಪಟ್ಟುದರ ಪರಿಣಾಮವಾಗಿ ಇನ್ನೊಂದು ತೆಂಗಿನಮರವೂ ಒಂದು ಹಲಸಿನಮರವೂ ಮುರಿದು ಬೀಳುವಂತಾಗಿದೆ. ವ್ಯಕ್ತಿ ಘಾತವೇನೂ ಸಂಭವಿಸಲಿಲ್ಲ. ನಗರದಲ್ಲಿನ ಅಲ್ಪ ಸ್ವಲ್ಪ ನೇಜಿಕೆಲಸವೂ ಮುಗಿಸಲ್ಪಟ್ಟಿತು.

ಮಂಜೇಶ್ವರ, ಕುಂಬಳೆ, ಮಂಗಲ್ಪಾಡಿ ಕಡೆಗಳಲ್ಲಿ ಈ ಸಲ ಸ್ವಲ್ಪ ನೀರಿನ ಏರುವಿಕೆ ಉಂಟಾಗಿ ಚಲಾವಣೆಗೆ ತೊಂದರೆ ಬಂದಿತ್ತೆಂದು ತಿಳಿದು ಬರುತ್ತದೆ.

ಅಕ್ಕಿ, ಗೋದಿ, ಕಟ್ಟಿಗೆ:—ಈ ತಿಂಗಳಲ್ಲಿ ಹೊಸ ರೇಶನು ಕಾರ್ಡುಗಳು ಕೊಡಲ್ಪಟ್ಟಿವೆ. ಮಳೆಗಾಲವಾದುದರಿಂದ ಹೊಸ ಕಾರ್ಡುಗಳನ್ನು ಹಂಚುವಾಗ ಅಲ್ಪ ಸ್ವಲ್ಪ ವಿಳಂಬವುಂಟಾಗಿ ಕೆಲವರಿಗೆ ಅನಾನುಕೂಲವುಂಟಾದ ದೂರುಗಳು ಕೇಳಿ ಬಂದಿರುತ್ತದೆ. ಮುಂದಿನ ಸಲದ ಕಾರ್ಡು ಹಂಚುವಿಕೆಯನ್ನು ಹತ್ತದಿನೈದು ದಿನ ಮುಂಚಿತವಾಗಿಯಾದರೂ ಮಾಡಲೇರ್ಪಡಿಸಿದರೆ ನಾಗರೀಕರಿಗೆ ಕ್ಲಪ್ತಕಾಲದಲ್ಲಿ ತಮ್ಮ ಆವಶ್ಯಕತೆಗಳನ್ನು ಕೊಂಡುಕೊಳ್ಳಲು ಅನುಕೂಲವಾಗುತ್ತದೆಂದೂ ಒಂದು ಬಾತ್ಮಿ.

ಅಕ್ಕಿಯ ಸರಬರಾಯಿಯು ತೃಪ್ತಿಕರವಾಗಿಯೇ ಸಾಗುತ್ತಿದೆ. ಆಹಾರ ಇಲಾಖೆಯವರೂ ಜಿಲ್ಲಾ ಆಡಳಿತ ಮುಖಂಡರೂ ಯಾವ ಕೊರತೆಯುಂಟಾಗದಂತೆ ವ್ಯವಸ್ಥೆ ಮಾಡುತ್ತಲಿರುವರು. ಗೋದಿ ಕಟ್ಟಿಗೆಗಳಿಗೂ ಏನೂ ಕೊರತೆಯಿಲ್ಲವೆಂದು ತಿಳಿದು ಬರುತ್ತದೆ. ಬಹುಮಂದಿ ಮೊದಲೇ ಅನುಕೂಲವಿದ್ದಷ್ಟು ದಾಸ್ತಾನಿರಿಸಿಕೊಂಡಿರುವರು. ಉಳಿದವರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡುವ ಮೂಲಕ ಸರಬರಾಯಿಯ ವ್ಯವಸ್ಥೆ ಮಾಡಿ ಕೊಂಡಿರುವರು.

ಕೊಡೆ, ಬಟ್ಟೆ:—ಕಳೆದ ತಿಂಗಳಿಂದ ಆದಷ್ಟು ಪರಿಮಾಣದಲ್ಲಿ ಕೊಡೆಗಳು ಸರಬರಾಯಿ ಮಾಡಲ್ಪಟ್ಟಿವೆ. ಇನ್ನೂ ಸರಬರಾಯಿ ಆಗಲಿದೆ ಎಂದೂ ತಿಳಿದು ಬರುತ್ತದೆ. ಇದರಿಂದ ಕೊಡೆಗಳ ತುಟ್ಟಿಯ ಸುದ್ದಿ ಕೇಳಿಬರುತ್ತಿದ್ದಿಲ್ಲ. ಆದರೂ ಉಡುವ ತೊಡುವ ಶ್ರೇಷ್ಠ ತರಗತಿಯ ಬಟ್ಟೆಗಳು ಇನ್ನೂ ಹೆಚ್ಚಿನ ಪರಿಮಾಣದಲ್ಲಿ ಅವಶ್ಯವಿರುವುದಾಗಿ ತಿಳಿದು ಬರುತ್ತದೆ. ಆ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪ್ರಯತ್ನ ನಡೆಸುವರೆಂದು ಹಾರೈಸಲಾಗಿದೆ.

ಮೈದಾನು ವಿವರ:-ರೇಡಿಯೋ ಮಂದಿರದ ಬಳಿ ಉಧ್ಯಾನವನವನ್ನು ಕಟ್ಟುವರೆ ಕಾಮಗಾರಿಕೆಯು ನಡೆಯುತ್ತಲಿದೆ. ಕೆಲವು ಸಮಯದ ಹಿಂದೆ ಖಾಲಿಯಾದ ಹಂಚು ದಾಸ್ತಾನಿನ ಸ್ಥಳವು ಪುನಃ ಹಂಚುನಿಬಿಡವಾಗಿದೆ.

ವಿಧ್ಯಾ ಸಂಸ್ಥೆಗಳು:—ಕೊಲೇಜುಗಳಲ್ಲಿ ಸೇರಲಿಚ್ಛಿಸುವ ಬಹುಮಂದಿ ವಿದ್ಯಾರ್ಥಿಗಳಿಗೆ 'ಸೀಟು' ಇಲ್ಲದೆ ನಿರಾಶೆಯಾಗಿದೆ. ಅನೇಕರು ಮೈಸೂರು ಅತ್ತ ಕಡೆ ಪ್ರವೇಶ ದೊರಕಿಸಿಕೊಳ್ಳಲು ತೆರಳಿರುವರೆಂದೂ ತಿಳಿದುಬರುತ್ತದೆ. ಅಂತೂ ಪ್ರಾಂತ್ಯದಲ್ಲೆಲ್ಲೂ ಇದೇ ಪರಿಸ್ಥಿತಿಯೊದಗಿದನ್ನು ಗಮನಿಸಿ ವಿದಾಂಗಾಧಿಕಾರಿಗಳು ಸ್ವಲ್ಪ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ಸ್ಥಳ ದೊರೆಯುವಂತೆ ಕೊಲೇಜು ನಿಯಮಾವಳಿಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ಸೂಚಿಸಿರುವುದರಿಂದ ಕೆಲವರಿಗಾದರೂ ಅನೀರಿಕ್ಷಿತ ಸಂದರ್ಭ ದೊರೆಯ ಬಹುದು.

ಶಾಲೆಗಳಲ್ಲೂ ಮುಖ್ಯವಾಗಿ ಹ್ಯಾಸ್ಕೂಲು ಕ್ಲಾಸುಗಳಲ್ಲಿ ಹೆಚ್ಚಿನ ಕಡೆ ಹದಮಿಕ್ಕಿ ಪ್ರವೇಶಗಳಾಗಿವೆ. ವಿದ್ಯಾಧಿಕಾರಿಗಳೂ ಈ ಸಂದರ್ಭಗಳನ್ನು ಗಮನಿಸಿ ಯೋಗ್ಯ ಮಾರ್ಪಾಟುಗಳನ್ನು ಮಾಡಿ ಶಿಕ್ಷಣಾಪೇಕ್ಷಿಗಳಿಗೆ ಸಂಧರ್ಭವನ್ನೊದಗಿಸುವರಾಗಿ ಹಾರೈಸಲಾಗಿದೆ.

ಯಜ್ಞ ಸಮಾಪ್ತಿ:—ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಕಳೆದ ಬಿದಿಗೆಯಿಂದ ಆರಂಭವಾದ ನವಸಂಹಿತಾ ಯಜ್ಞವು ವಿಜೃಂಭಣೆಯ ಮಂಗಲಾಚರಣೆಯಿಂದ ನಿನ್ನೆ ಯಶಸ್ವಿಯಾಗಿ ಸಮಾಪ್ತಿಗೊಂಡಿತು. ಹಲವು ಕಡೆಗಳ ಗೌಡಸಾರಸ್ವತ ವೈದೀಕರು ಭಾಗವಹಿಸಿದ್ದರು. ಪುರಾಣ ಪ್ರವಚನ, ಹರಿಕೀರ್ತನೆ, ಭಜನೆಗಳ ಆಕಾರ್ಷಿಕ ಕಾರ್ಯ ಕ್ರಮಗಳಿದ್ದುವು.

ಕೊಂಗ್ರೆಸಿಗರ ಸಭೆ:-ಸ್ಥಳೀಯ ಕೊಂಗ್ರೆಸಿಗರ ಸಭೆಯು ಈ ತಿಂಗಳ ಎರಡನೇ ವಾರದಲ್ಲಿ ಕರೆಯಲ್ಪಟ್ಟಿದ್ದು ಈಗ ಸಭೆ ಸೇರುವ ತಾರೀಕನ್ನು ಕೊನೆಯ ವಾರಕ್ಕೆ ಮುಂದರಿಸಲಾಗಿದೆ ಎಂದು ತಿಳಿದು ಬರುತ್ತದೆ. ಎಲ್ಲದಕಿಂತಲೂ ಮುಖ್ಯವಾದ ರಚನಾತ್ಮಕ ಕಾರ್ಯ ಕ್ರಮದ ಕೆಲಸವು ಭರದಿಂದ ಸಾಗಬೇಕಾದುದು ಅವಶ್ಯಕ. ಕೊಂಗ್ರೆಸಿನವರು ಅಂದಿನ ತಮ್ಮ ಸಭೆಯಲ್ಲಿ ಈ ಕುರಿತು ಮಹತ್ವದ ಯೋಜನೆ ತಯಾರಿಸಲೆಂದು ಒಂದು ಬಾತ್ಮಿ.

ರೈಲು ಸೌಕರ್ಯ:—ಇಲ್ಲಿಂದ ಜೋಳಾರ ಪೇಟೆ ತನಕ ನೇರವಾದ ಕನೆಕ್ಷನ್ ಸಿಗುವ ಒಂದು ರೈಲು ಅನುಕೂಲ ಸಮಯದಲ್ಲಿ ಹೊರಡುವಂತಾಗುತ್ತದೆಂಬ ಉಹಾಪೋಹೆಗಳು ಇವೆ. ಹೀಗಾದರೆ ಇಲ್ಲಿಗೆ ಬರುವ ಮತ್ತು ಹೋಗುವ ಮೂರು ರೈಲುಗಳಾದ ಹಾಗಾಗುತ್ತದೆ. ಪ್ರಯಾಣಿಕರ ಒತ್ತಡವೂ ತಗ್ಗಿದಂತಾಗಿ, ಸಾಮಾನು ಸಾಗಿಸುವಿಕೆಗೂ ಕೊಂಚ ಅನುಕೂಲವೇ ಆಗುತ್ತದೆ.

ನಿಯಂತ್ರಣ ಭಂಗ:—ಕಲಾಯಿ ತವರವನ್ನು ಲಾಸೆನ್ಸ್ ಇಲ್ಲದೆ ಪಡೆದಿದ್ದರೆಂಬ ಆರೋಪದ ಮೇಲೆ ವಿಚಾರಣೆಗೊಳಗಾದ ಬಂದರದ ಪ್ರಸಿದ್ಧ ಲೋಹ ಉಪಕರಣ ವ್ಯಾಪಾರಿಗಳಾದ ಎಂ. ಕೃಷ್ಣ. ಆರ್ ನಾಯಕ್ ಸಂಸ್ಥೆಯ ಶ್ರಿಗಳಾದ ಮಜೇಲ್ ವೆಂಕಟ್ರಾಯನಾಯ್ಕರಿಗೆ ರೂ. ೫೦೦; ಎಂ. ರಘುನಾಥ ನಾಯ್ಕರಿಗೆ ರೂ. ೫೦೦; ಎಂ. ಮಾಧವ ನಾಯ್ಕರಿಗೆ ರೂ. ೧ಸಾವಿರ; ಎಂ. ಅನಂತ ನಾಯ್ಕರಿಗೆ ರೂ. ೧ಸಾವಿರ; ಎಂ. ಮುಕುಂದ ನಾಯ್ಕರಿಗೆ ರೂ. ೧ಸಾವಿರ;- ಹೀಗೆ ಒಟ್ಟು ೪ ಸಾವಿರದ ಜುಲ್ಮಾನೆಯನ್ನು ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಪಿ. ವಿ. ಮಾಧವರಾವ್ ಅವರು ವಿಧಿಸಿ ತೀರ್ಪು ಕೊಟ್ಟಿರುವರು. ಈ ಕಟ್ಲೆಯು ಬಹು ಕಾಲದಿಂದಲೂ ನಡೆಯುತಿತ್ತು. ಆರೋಪಿಗಳಲ್ಲಿ ಕೊನೆಯವರಾದ ಶ್ರೀ ಎಂ. ಮುಕುಂದ ನಾಯ್ಕರು ಸ್ಥಳೀಯ ನಗರ ಸಭೆಯ ಸರಕಾರ ಚುನಾಯಿತ ಸದಸ್ಯರಾಗಿರುವರು.

ಮತ್ತೆ ಗ್ಲೂಕೋಸ್ ಡಿ:-ನಿಯಂತ್ರಿತ ದರಕಿಂತ ಹೆಚ್ಚಿನ ದರಕ್ಕೆ ಈ ಮಕ್ಕಳ ಔಷಧಿ ಆಹಾರವನ್ನು ಮಾರಿದಕ್ಕೆ ಮೇಲೆ ಹೇಳಲ್ಪಟ್ಟ ಸಂಸ್ಥೆಯ ಶ್ರಿಗಳಾದ ಮಜೇಲ್ ವೆಂಕಟ್ರಾಯ ನಾಯ್ಕರಿಗೆ ರೂ. ೫೦೦; ಎಂ- ರಘುನಾಥ ನಾಯ್ಕರಿಗೆ ರೂ ೫೦೦; ಎಂ. ಅನಂತ ನಾಯ್ಕರಿಗೆ ರೂ. ೧ ಸಾವಿರ; ಮತ್ತು ಸದ್ರಿ ಸಂಸ್ಥೆಯ ಸೇಲ್ಸ್‌ಮೆನ್‌ರಾದ ಶ್ರಿ ಪುಂಡಲೀಕ ಬಾಳಿಗರು ಅವರಿಗೆ ರೂ. ೧೦೦–ಹೀಗೆ ಒಟ್ಟು ರೂ. ೨೧೦೦ ಜುಲ್ಮಾನೆಯಾಗಿ ಮೇಲ್ಕಂಡ ಕೋರ್ಟಿನಿಂದಲೇ ವಿಧಿಸಲಾಗಿದೆ.

ಗುಪ್ತ ಅಕ್ಕಿ ಸಾಗಿಸುವಿಕೆಗೆ:—ಜಿಲ್ಲೆಯಿಂದ ಹೊರಗೆ ಕಳ್ಳಾಟಿಕೆಯಿಂದ ಸಾಗಿಸಲು ಪ್ರಯತ್ನಿಸಿದರೆಂಬ ಆರೋಪದ ಮೇಲೆ ಶ್ರಿಗಳಾದ ವಿಠಲ್ ಸೆಟ್ಟಿ, ಮೋರಿಸ್ ಸೋಜಾ, ಮತ್ತು ಹಮ್ಮದೆಬ್ಯಾರಿ ಎಂಬ ಮೂವರಿಗೆ ತಲಾ ೬ತಿಂಗಳ ಕಠಿಣ ಸಜೆ ವಿಧಿಸಲಾಗಿದೆ. ಈ ಕಾರ್ಯವು ನಡೆದದ್ದು ಸುರತ್ಕಲ್ಲಿನ ಬಳಿ. ಸೆಶ್ಯನ್ ಜಡ್ಜರು ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರು.

ರಿಕ್ವಿಜಿಶನ್ ಅಕ್ಕಿಯ ತಪ್ಪು:—ರಿಕ್ವಿಜಿಶನ್ ಮಾಡಲಾದ ಅಕ್ಕಿಯಲ್ಲಿ ಕೆಲಮುಡಿಯನ್ನೊಪ್ಪಿಸಿ ಕೆಲಮುಡಿಗಳನ್ನೊಪ್ಪಿಸದೆ ಹಾಗೇ ರಿಕ್ವಿಜಿಶನ್ ಅಪ್ಪಣೆಯನ್ನು ಮನ್ನಿಸದ ಆರೋಪದ ಸಂಬಂಧ ತಲ್ಪಾಡಿ ಪಟೇಲ್ ಶ್ರೀ ಸುಬ್ಬಯ್ಯ ಮಾರ್ಲರಿಗೆ ರೂ. ೧ ಸಾವಿರ ಜುಲ್ಮಾನೆ ವಿಧಿಸಲಾಗಿದೆ.

ಫಾಸಿ ದಂಡನೆ:—ಪುತ್ತೂರು ತಾಲೂಕಿನ ಸಾಂತಪ್ಪಗೌಡ ಎಂಬಾತನನ್ನು ಕೊಂದ ಆರೋಪದ ಮೇಲೆ ವಿಚಾರಣೆಗೊಳಗಾದ ನರಸಿಂಗ ಪೂಜಾರಿ, ಬಾಬು ಪೂಜಾರಿ, ಕಾಂತು ಗೌಡ, ಚೆನ್ನಪ್ಪ ಗೌಡ ಎಂಬವರ ಮೊಕದ್ದಮೆಯು ಸೆಶ್ಯನ್ ಜಡ್ಜರಲ್ಲಿ ತನಿಖೆ ವಿಚಾರಣೆಗಳಾಗಿ ಅವರಲ್ಲಿ ಮೊದಲನೇ ಆರೋಪಿ ನರಸಿಂಗ ಪೂಜಾರಿಯು ಕೊಲೆ ಕಾರ್ಯ ನಡೆಸಿದ್ದನೆಂದು ಸ್ಥಾಪಿತವಾಗಿ ಅವನಿಗೆ ಫಾಸಿ ಶಿಕ್ಷೆಯು ವಿಧಿಸಲ್ಪಟ್ಟಿತು. ಎರಡನೆಯ ಬಾಬು ಪೂಜಾರಿಯು ಸಾಕ್ಷಿಗಾರರಾದ ಗಂಗಯ್ಯ ಎಂಬಾತನ ಕಣ್ಣಿಗೆ ಹೊಡೆದ ಆರೋಪಕ್ಕಾಗಿ ಅವನಿಗೆ ೬ ವರ್ಷ ಕಠಿಣ ಸಜೆ. ಉಳಿದ ಇಬ್ಬರಿಗೂ ಸದ್ರಿ ಗಂಗಯ್ಯನೆಂಬವನಿಗೆ ಹೊಡೆದರೆಂಬ ಆರೋಪಕ್ಕಾಗಿ ಆರಾರು ತಿಂಗಳ ಕಠಿಣ ಸಜೆ ವಿಧಿಸಲ್ಪಟ್ಟಿರುವರು.

ಅಳಿಯನೊಬ್ಬನು ತನ್ನ ಮಾವನನ್ನು ಕೊಂದ ಆರೋಪದ ಕಟ್ಲೆಯೊಂದು ಸೆಶ್ಯನ್ ಜಡ್ಜರ ಕೋರ್ಟಿನಲ್ಲಿ ವಿಚಾರಣೆ ಬಂದಿತ್ತು. ಆರೋಪಿ ಪುತ್ತೂರು ತಾಲೂಕಿನ ದೂಮಣ್ಣ ಗೌಡ ಎಂಬಾತನು. ತನಗೆ ಹೆಣ್ಣು ಕೊಟ್ಟ ಪೊಕ್ಕಳ ಗೌಡನನ್ನು ಯಾವುದೊ ಗೃಹ ವಿಚಾರ ಸಂಬಂಧದ ದ್ವೇಷದಿಂದ ಕೊಂದನೆಂದು ರುಜುವಾತಾಗಿ ಜಡ್ಜರು ದೂಮಣ್ಣ ಗೌಡನಿಗೆ ಮರಣ ದಂಡನೆಯನ್ನು ವಿಧಿಸಿರುವರು.

ಮೇಲಿನಂತಹುದೇ ಆದರೆ ಸಂಬಂಧದಲ್ಲಿ ಮಾತ್ರ ವ್ಯತ್ಯಾಸ ಇರುವ ಇನ್ನೊಂದು ಮೊಕದ್ದಮೆಯೂ ಸೆಶ್ಯನ್ ಜಡ್ಜರಲ್ಲಿ ವಿಚಾರಣೆಗೆ ಬಂದಿತ್ತು. ಇದರಲ್ಲಿ ಆರೋಪಿ ಅಂದ್ರು ಯಾನೆಯಾನೆ ಎಂಬಾತನು. ಈತನು ತನ್ನ ಸಹೋದರಿಯ ಗಂಡ ಶೇಕ್ ಆಲಿ ಎಂಬಾತನನ್ನು ಕೊಂದನೆಂದು ಆರೋಪಿಸಲ್ಪಟ್ಟಿತು. ಆದರೆ ತನಿಖೆಯಲ್ಲಿ ಉದ್ದೇಶವು ಕೊಲೆಮಾಡಬೇಕೆಂಬುದಿದ್ದಿಲ್ಲವೆಂದೂ, ಮರಣದ ಸಂದರ್ಭಗಳು ಸಂದೇಹಾಸ್ಪದವಿದ್ದುದರಿಂದ ಆರೋಪಿಗೆ ಮೂರು ವರ್ಷದ ಕಠಿಣ ಸಜೆ ವಿಧಿಸಲಾಯಿತು.

ದಂಡನೆ ತಗ್ಗಿತ: ಕಳೆದ ಕೋರ್ಟು ರಜಾಂತ್ಯದಲ್ಲಿ ಅತಿ ಲಾಭದ ಕಾನೂನಿನ ಸಂಬಂಧ ಕೆಳ ಕೋರ್ಟಿನಲ್ಲಿ ೩ ತಿಂಗಳ ಸಜೆಗೂ ೨ ಸಾವಿರದ ಜುಲ್ಮಾನೆಗೂ ಒಳಗಾದ ಮಾರ್ಕೇಟು ರೋಡಿನಲ್ಲಿನ ಮೆ। ಎಂ. ಎಂ. ಶ್ಯಾನುಭಾಗ ಎಂಡ್ ಸನ್ಸ್ ಎಂಬ ಸಂಸ್ಥೆಯ ಮಾಲಕ ಶ್ರೀ. ಎಂ. ರಾಘವೇಂದ್ರ ಶ್ಯಾನುಭಾಗರ ಅಫೀಲು ಸೆಶ್ಯನ್ ಕೋರ್ಟಿನಲ್ಲಿ ವಿಚಾರಣೆಯಾಗಿ ಜಡ್ಜರು ಅನುಭವಿಸಿದ ಶಿಕ್ಷೆಯು ಸಾಕೆಂದೂ ತಿಳಿಸುತ್ತಾ ಜುಲ್ಮಾನೆಯನ್ನು ರೂ. ೨೫೦ಕ್ಕೆ ಇಳಿಸಿದರು.

ನಿಧನಗಳು: ಆಯುರ್ವೇದದ ಕ್ಷೇತ್ರದಲ್ಲಿ ಅವಿಶ್ರಾಂತವಾಗಿ ಸಂಶೋಧನ ಗ್ರಂಥ ವ್ಯವಸಾಯವನ್ನು ಮಾಡಿದ ಶ್ರೀ. ರಾಮಕೃಷ್ಣಯ್ಯ ಎಂಬ ಮಹನೀಯರು ತಮ್ಮ ೮೫ನೇ ವಯಸ್ಸಿನಲ್ಲಿ ಮೃತಪಟ್ಟರು. ಮೃತರು ಸರಕಾರಿ ಕೆಲಸದಲ್ಲಿ ರಿಜಿಸ್ಟ್ರಾರರಾಗಿದ್ದು ನಿವೃತ್ತರಾಗಿದ್ದರು. ಆದರೂ ಆಯುರ್ವೇದ ತುಂಬಾ ಪಾಂಡಿತ್ಯವಿದ್ದುದರಿಂದ ಅವರು ಆಯುರ್ವೇದ ಸಾರವೆಂಬ ಗ್ರಂಥವನ್ನು ರಚಿಸಿ ತುಂಬಾ ಸೇವೆಮಾಡಿರುವರು.

ಹಂಪನಕಟ್ಟೆ ಬಳಿಯ ಶಾರದಾ ಜುವೆಲರಿ ಮಾರ್ಟ್ ಎಂಬ ಚಿನ್ನಬೆಳ್ಳಿ ಆಭರಣ ಸಂಸ್ಥೆಯ ಮಾಲಕರಾಗಿದ್ದ ಶ್ರೀ. ಅಡ್ಯಾರ ನಾರಾಯಣಾಚಾರ್ಯ ಅವರು ಅಕಸಾತ್ ಹೃದಯ ಸ್ತಂಭನದಿಂದ ಮೃತಿಯನ್ನೈದಿದರೆಂದು ತಿಳಿದು ಬರುತ್ತದೆ.

ದಿನವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ· ಸೂ:- ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿತಿರುಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನ: ಯೌವನಶಾಲಿಗಳಾಗಿರಬಹುದು; ಹಾಗಾಗ ಬೇಕಾದರೆ ಪ್ರತಿದಿನರಾತ್ರೆ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರಾದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಆಧರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು.

ಬೈಲ್ ಬೀನ್ಸು ನಿಮ್ಮನ್ನು ಧೃಡ ಆರೋಗ್ಯವಂತರಾಗಿ ಮಾಡುವುದು.

BILE BEANS

ನಿಷ್ಪ್ರಯೋಜಕ ಸೌಂದರ್ಯ

(3ನೇ ಪುಟದಿಂದ)

ಗಾಡಿಯ ಕತ್ತಲೊಳಗೆ ಅವನು ಒಂದು ಕ್ಷಣ ಯೋಚನಾಮಗ್ನನಾದನು. ಅವಳಿಗೆ ಪರಿತಾಪ ಉಂಟಾಗಿದೆ ಎಂದು ಅವನಿಗೆ ತಿಳಿಯಿತು. ಅವಳು ಖಂಡಿತವಾಗಿ ಸತ್ಯಸ್ಥಿತಿಯನ್ನು ಹೇಳಬಹುದೆಂದು ತಿಳಿದು ಹೀಗೆಂದನು: "ಸತ್ಯಸ್ಥಿತಿಯನ್ನು ಹೇಳಬೇಕೆಂದು ನಿನ್ನಲ್ಲಿ ಅರಿಕೆಮಾಡಿಕೊಳ್ಳುವೆ. ಬೇಡುವೆ. ಹೇಳು"

ಅವಳು ಹೇಳಿದಳು: "ನೀವು ನೆನಸಿದಕಿಂತಲೂ ಹೆಚ್ಚು ತಪ್ಪನ್ನು ನಾನು ಮಾಡಿರುವೆ. ಸದಾ ಗರ್ಭವತಿಯಾಗಿರುವ ಆ ಜೀವನವನ್ನು ನಾನೆಂದಿಗೂ ಸಹಿಸಲಾರೆ. ನನ್ನ ಹಾಸಿಗೆಯಿಂದ ನಿಮ್ಮನ್ನು ದೂರ ಹೊರಡಿಸಲು ನನ್ನ ಬಳಿ ಒಂದೇ ಒಂದು ಉಪಾಯ ಉಳಿಯಿತು. ನಾನು ಸುಳ್ಳು ಹೇಳಿದೆ. ದೇವರ ಮುಂದೆ ನಿಂತು ಸುಳ್ಳು ಹೇಳಿದೆ. ನನ್ನ ಕೈಯನ್ನು ಮಕ್ಕಳ ತಲೆಯ ಮೇಲಿಟ್ಟು ಸುಳ್ಳು ಹೇಳಿದೆ. ನಿಜವಾಗಿಯೂ ನಾನು ನಿಮಗೆ ಅಪರಾಧವನ್ನು ಮಾಡಿಲ್ಲ.''

ಅಂದು ಅವಳ ಕೈಹಿಡಿದು ಅಮುಕಿದಂತೆ ಇಂದೂ ಅವನು ಅವಳ ತೋಳುಗಳನ್ನು ಬಿಗಿಯಾಗಿ ಒತ್ತಿ ಹಿಡಿದುಕೊಂಡು ಗದ್ಗದ ಕಂಠದಿಂದ ಕೇಳಿದನು: "ಇದು ಸತ್ಯವೆ?"

"ಇದು ಸತ್ಯ."

ಆದರೆ ಭಯಂಕರ ದುಃಖದಿಂದ ಗೋಣಗುಟ್ಟುತ್ತಾ ಅವನೆಂದನು: "ನನಗೀಗ ಅಂತ್ಯವಿಲ್ಲದ ಹೊಸ ಸಂದೇಹಗಳು ಉತ್ಪನ್ನವಾಗುತ್ತಲಿವೆ! ನೀನು ಸುಳ್ಳು ಹೇಳಿದ್ದು ಈ ಸಲವೊ, ಹಿಂದಿನ ಸಲ? ಇಷ್ಟು ಹೇಳಿದ ಹೆರಿಸನನ್ನು ಯಾರು ಹೇಗೆ ನಂಬಬಹುದು? ನನಗೀಗ ಏನು ಯೋಚಿಸಬೇಕೆಂಬುದೇ ತಿಳಿಯಹಾಗಿದೆ. "ಅವನು ಜೇಪ್ಸು, ಇಲ್ಲವೆ ಜೆಕ್" ಎಂದು ಹೇಳಿದ್ದರೆ ನನಗೆ ಸಂತೋಷವಾಗುತಿತ್ತು."

ಗಾಡಿಯು ಬಂಗಲೆಗೆ ಬಂದೊಡನೆ ಕೌಂಟನು ತನ್ನ ಹೆಂಡತಿಯನ್ನು ಕೈಕೊಟ್ಟು ಆದರಿಸಿ ಒಳಗೆ ಕರಕೊಂಡುಹೋದನು. ಮಹಡಿಯ ಮೆಟ್ಟಲನ್ನು ಹತ್ತುತ್ತಿರುವಾಗ ಅವನು ಕೇಳಿದನು: "ಇನ್ನು ಒಂದಿಷ್ಟು ಸಮಯ ನಿನ್ನೊಡನೆ ಮಾತನಾಡಬೇಕೆಂದಿದ್ದೇನೆ"

ಅವಳು ಹೇಳಿದಳು: "ತುಂಬಾ ಸಂತೋಷ."

ಅವರು ಒಂದು ವಿಶ್ರಾಂತಿ ಕೊಟಡಿಗೆ ಹೋದರು. ಕೌತುಕಗೊಂಡ ಓರ್ವ ಸೇವಕನು ದೀಪಗಳನ್ನು ಉರಿಸಿದನು. ಸೇವಕನು ಹೋದ ಮೇಲೆ ಎಲ್ಲವೂ ಮೌನವಾಗಿರುವಾಗ ಅವನು ಮುಂದರಿಸಿದನು: "ನಾನು ಈಗ ಸತ್ಯಸ್ಥಿಕೆಯನ್ನು ಹೇಗೆ ಕೊಳ್ಳಲಿ? ನಾನು ಸಾವಿರ ಸಾರಿ ಕೇಳಿದಾಗ ನೀನು ಮೌನದಿಂದಲೂ, ದರ್ಪದಿಂದಲೂ ತಿರಸ್ಕಾರದಿಂದಲೂ, ಇದ್ದೆ. ಈಗ ಅಂದು ಹೇಳಿದ ವಿಷಯವು ಸುಳ್ಳು ಎಂದು ತಿಳಿಸುತ್ತಿ! ಇಂದಿಗೆ ಆರು ವರ್ಷಗಳ ತನಕ ಅದನ್ನು ನಂಬುವಂತೆ ನನಗೆ ಮಾಡಿದೆ! ಇಲ್ಲ. ನೀನು ಈಗ ಹೇಳುತ್ತಿರುವುದು ಸುಳ್ಳು. ಯಾಕೆ ಹೀಗೆ ಮಾಡಿದ್ದಿಯೋ ನನಗರಿಯದು. ನನ್ನ ಮೇಲೆ ಕರುಣೆಪಟ್ಟು ಹೀಗೆ ಮಾಡಿದಿಯೋ ಏನು?"

ಹೃತ್ಪೂರ್ವಕವೂ ಸ್ಪಷ್ಟೋಕ್ತಿಯಲ್ಲಿಯೂ ಅವಳೆಂದಳು: "ನಾನು ಹಾಗೆ ಮಾಡದೆ ಇರುತಿದ್ದರೆ ಇಂದಿಗೆ ಈ ಆರು ವರ್ಷಗಳಲ್ಲಿ ನನಗೆ ಮತ್ತೆ ನಾಲು ಮಕ್ಕಳಾಗುತಿದ್ದುವು."

ಅವನು ಉದ್ಗರಿಸಿದ: "ತಾಯಿಯಾದವಳೋರ್ವಳು ಹೀಗೆ ಹೇಳಬಹುದೇ?"

ಅವಳು ಉತ್ತರವಿತ್ತಳು: "ಹುಟ್ಟಿರದಂತಹ ಮಕ್ಕಳ ತಾಯಿಯೆಂದು ನನಗೆ ಎಂದೂ ಅನಿಸಿದಿಲ್ಲ. ನನಗೆ ಇದುತನಕ ಹುಟ್ಟಿದ ಮಕ್ಕಳ ತಾಯಿಯಾಗಿದ್ದರೆ ಅಷ್ಟೇ ಸಾಕು. ನನಗೆ ಅವರ ಪ್ರೀತಿಯೇ ಸಾಕು. ನಾನು, ನನ್ನಂತಹ ನಾಗರೀಕ ಎಲ್ಲಾ ಸ್ತ್ರೀಯರು ಕೂಡಾ ಈ ಪೃಥ್ವಿಯಲ್ಲಿ ಬರಿ ಮಕ್ಕಳನ್ನು ಸೃಷಿಸುವ ಜೀವಿಗಳಾಗಿರಲು ಬಯಸುವುದಿಲ್ಲ. ಮಹನೀಯರೇ ನಾವು ಅಂತಹ ಸ್ತ್ರೀಯರಾಗಿರಲಿಚ್ಛಿಸುವುದಿಲ್ಲ."

ಅವಳು ಎದ್ದು ನಿಂತಳು. ಆದರೆ ಅವನು ಅವಳ ಕೈಗಳನ್ನು ಹಿಡಿದನು: "ಗೇಬ್ರಿಯೇಲಲೇ ಒಂದೇ ಒಂದು ಮಾತು ಇದೆ. ನನಗೆ ಸತ್ಯಸ್ಥಿಕೆಯನ್ನು ತಿಳಿಸು"

"ನಾನು ಈಗ ಅದನ್ನೇ ಹೇಳಿದೆ. ನಾನು ಎಂದೂ ನಿಮಗೆ ಅಪಮಾನ ಮಾಡಿಲ್ಲ."

ಅವಳ ಸೌಂದರ್ಯ ರಾಶಿಯನ್ನೇ ಎವೆಇಕ್ಕದೆ ಅವನು ಈಕ್ಷಿಸಿದ. ಶೀತಲವಾದ ಶುಭ್ರ ಆಕಾಶದಂತೆ ಅವಳ ಕಣ್ಣುಗುಡ್ಡೆಗಳಿದ್ದುವು. ಆಕಾಶದ ಕಾರ್ಗತ್ತಲಿನಂತೆ ಹೆಣೆಯಲ್ಪಟ್ಟ ಅವಳ ಕೇಶ ರಾಶಿಯಲ್ಲಿ ಅವಳು ಸಿಕ್ಕಿಸಿದ ವಜ್ರದ ಆಭರಣವು ನಕ್ಷತ್ರಗಳಂತೆ ಮಿನುಗುತಿತ್ತು. ಇವಳು ಮನುಷ್ಯ ಪ್ರಾಣಿಗಳನ್ನುಂಟು ಮಾಡುವ ಅಚ್ಚು ಎರಕವಾಗಿರದೆ ವಿಚಿತ್ರವೂ ರಹಸ್ಯವೂ ಆದ ಆ ಅಮೋಘ ಸೌಂದರ್ಯದ, ಆಶೆ ಕೋರಿಕೆಗಳ ಫಲವೊ ಎಂಬಂತೆ ಅವನಿಗೆ ತೋರಿತು. ಇವಳಂತಹವರು ಕೆಲವರೇ ಮಾತ್ರ ಇರುವರು. ಅವರು ನಮ್ಮ ಕನಸು ಕೋರಿಕೆಗಳಾಗಿಯೇ ಹುಟ್ಟುವರು. ನಾಗರೀಕತೆಯ ಕಾವ್ಯಮಯ ಸೌಂದರ್ಯದಿಂದಲೂ, ಅಧ್ಯಾತ್ಮ ಕಲಾ ಸೌಂದರ್ಯದಿಂದಲೂ ಕೂಡಿದ ಮೂರ್ತಿಯಂತೆ ಅವಳು ನಮ್ಮ ಜೀವನವನ್ನು ಹರುಷದ ಕಿರಣಗಳಿಂದ ಬೆಳಗುವವಳೂ ಅವಳಾಗುವಳು.

ಅವಳ ಗಂಡನು ಅವಳ ಎದುರಿನಲ್ಲಿ ನಿಂತುಬಿಟ್ಟನು. ತನ್ನ ಹಿಂದಿನ ಅಸೂಯೆ ಮಾತ್ಸರ್ಯಗಳನ್ನು ಅವನು ಸ್ಪಷ್ಟವಾಗಿ ನೆನಪಿಗೆ ತಂದುಕೊಂಡನು. ಈಗೆಲ್ಲವೂ ಅವನಿಗೆ ಸರಿಯೆಂದುತೋರಿತು. ಸತ್ಯಸ್ಥಿಕೆಯು ಅವನಲ್ಲಿ ಮೂಡಿತು. ಕಡೆಗೆ ಅವನು ಹೀಗೆಂದನು: "ಈ ಮುಂಚೆ ನೀನು ಸುಳ್ಳು ಹೇಳಿದ್ದಿ ಎಂದು ನನಗೆ ಖಂಡಿತ ಭಾಸವಾಗಿತ್ತು. ಆದರೆ ಈಗ ನೀನು ಸುಳ್ಳು ಹೇಳುತ್ತಿಲ್ಲವೆಂದು ನನಗೆ ಖಚಿತವಾಗಿದೆ."

ಅವಳು ತನ್ನ ಕೈಯನ್ನು ಮುಂದರಿಸಿದಳು: "ಹಾಗಾದರೆ ನಾವು ಇಂದಿನಿಂದ ಸ್ನೇಹಿತರಲ್ಲವೇ?'' ಎಂದಳು.

ಅವಳ ಕೈಯನ್ನು ಹಿಡಿದು ಅವನು ಚುಂಬಿಸಿ, ಹೇಳಿದನು: "ನಿಜವಾಗಿಯೂ ನಾವು ಸ್ನೇಹಿತರು. ನಿನಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಥೆಂಕ್ಸ್''

ಅವನು ಹೊರಗೆ ಹೊರಟುಹೋದನು. ಹೋಗುತ್ತಿರುವಾಗ ಅವಳನ್ನು ನೋಡಿ ಮತ್ತೊಂದು ಸಲ ಬೆರಗಾದನು. ಅವಳು ಅದೆಷ್ಟು ಪ್ರಶಾಂತಳೂ ಸೌಂದರ್ಯವತಿಯೂ ಆಗಿರುವಳು! ಒಂದು ವಿಚಿತ್ರ ಭಾವ ವಿಕಾರವು ಅವನಲ್ಲಿ ಮೂಡಿತು. ಅದು ಸರ್ವಸಾಮಾನ್ಯ ಪ್ರೀತಿ ಸಲ್ಲಾಪಗಳಿಗಿಂತಲೂ ಮಿಗಿಲಾಗಿತ್ತು.

ವಿದೇಶ ವರ್ತಮಾನ ವಿವರ

ಪಾಮೇ ದತ್ತರಿಗೆ ಬರ್ನಾಡ್‌ಶೊ ಸಂದೇಶ

ಇಂಗ್ಲೆಂಡಿನಲ್ಲಿ ಚುನಾವಣಾ ಗದ್ದಲ

ರಷ್ಯದ ನವೀನ ವಿದೇಶಾಂಗ ನೀತಿ

ಭಾರತದಲ್ಲಿ ಸಿಮ್ಲಾ ಪರಿಷತ್ತು ನಡೆಯುವಂತೆ ಇಂಗ್ಲೆಂಡಿನಲ್ಲಿ ಚುನಾವಣೆ ಗದ್ದಲ ಸಾಗುತ್ತಿದೆ. ಎರಡೂ ದೇಶದ ಜನತೆಯ ಭವಿತವ್ಯವು ಇವೆರಡು ವಿಶೇಷ ಘಟನೆಗಳ ಸತ್ಫಲದ ಮೇಲೆ ಹೊಂದಿಕೊಂಡಿವೆ. ಚರ್ಚಿಲ್ಲರೂ, ಎಮೆರಿ ಸಾಹೇಬರೂ ಚುನಾವಣೆಗೆ ನಿಂತಿರುವರು.

ಇಂಗ್ಲೆಂಡಿನಲ್ಲಿ ನಡೆಯುವ ಚುನಾವಣೆಗೆ ಭಾರತೀಯರಾದ ಪಾಮೇ ದತ್ತರೂ ಓರ್ವ ಉಮೇದ್ವಾರರು ಅದರಲ್ಲೂ ಅವರು ಪ್ರಸಿದ್ಧ ಎಮೆರಿಗಳಿಗೆದುರಾಗಿ ನಿಂತಿರುವರೆಂಬ ಸಂಗತಿಯೂ ಹೆಚ್ಚಿನ ಅಭಿರುಚಿಯದಾಗಿದೆ. ದತ್ತರು ಸಮತಾವಾದಿ ಕೊಮ್ಯುನಿಷ್ಟರು. ಎಮೆರಿಯವರು ಬದ್ಧಕಂಕಣರಾದ ಕಡು ಸಾಮ್ರಾಜ್ಯವಾದಿಗಳು. ಮೊದಲಿನವರಿಗೆ ಭಾರತದಿಂದ ಗಾಂಧಿ, ನೆಹರು ಮುಂತಾದ ಪ್ರಭೃತಿಗಳ ಶುಭ ಸಂದೇಶ ಮಾತ್ರ ಕಳುಹಿಸಲ್ಪಟ್ಟಿರುವುದಲ್ಲದೆ ಜಗತ್ತಿನ ಪ್ರಥಮಶ್ರೇಣಿ ಜ್ಞಾನಿಗಳೂ, ಸಾಹಿತಿಗಳೂ ಎಂದೆನಿಸಲ್ಪಟ್ಟ ಜೋರ್ಜ್ ಬರ್ನಾಡ್ ಶೋ ಅವರು ಯಶ ಕೋರಿ ಸಂದೇಹ ಕಳುಹಿಸಿರುವರು. ಬರ್ನಾಡ್‌ಶೋ ಅವರು ಸಮತಾವಾದಿಗಳಾಗಿದ್ದು ಸಾಮ್ರಾಜ್ಯಶಾಹಿಗೆ ಬದ್ಧ ವಿರೋಧಿಗಳು. ವಿರೋಧಿಗಳನ್ನು ಖಂಡಿಸುವುದರಲ್ಲಿ ಶೋ ಅವರು ನಿರ್ದಾಕ್ಷಿಣ್ಯರಾಗಿರುತ್ತಾರೆ. ಅವರು ಪಾಮೇ ದತ್ತರಿಗೆ ಬರೆದ ಪತ್ರದಲ್ಲಿನ ಕೆಲವಂಶಗಳನ್ನು ನೋಡಿ:

'ಪ್ರೀಯ ಪಾಮೆದತ್ತರೆ, ನೀವೂ ಕೊಮ್ಯುನಿಷ್ಟರು, ನಾನೂ ಕೊಮ್ಯುನಿಷ್ಟ. ಆದರೆ ಇಂದು ನಿಮ್ಮೆದುರು ನಿಂತಿರುವ ಚರ್ಚಿಲ್ ಕಡೆಯ ಎಮೆರಿಯವರು ಕಡು ಸಾಮ್ರಾಜ್ಯವಾದಿಗಳು. ಜಯಹೊಂದಲು ಅವರ ಎದುರಿಗೆ ನಿಮಗೆ ಸ್ವಲ್ಪ ಕಷ್ಟವೇ ಇದೆ. ನಿಮ್ಮ ಕ್ಷೇತ್ರದ ಜನರು ನೀವು ಹೇಳುವುದನ್ನು ವಿವೇಕವೆಂದೂ, ಚರ್ಚಿಲ್ಲರು ಹೇಳುವುದು ಶುದ್ಧ ಹುಚ್ಚುತನವೆಂದೂ ತಿಳಕೊಳ್ಳುವರೆಂದು ಹಾರೈಸುತ್ತೇನೆ...

'ನೀವು ಜಯಿಸುವರೆಂದು ಹಾರೈಸುತ್ತೇನೆ. ಆ ಕಡೆಯ ಎಲ್ಲಾ ರಾಜಕೀಯ ಗೂಬೆಗಳೂ ಮತ್ತು ಹುಚ್ಚರು ನಿಮ್ಮ ವಿರೋಧವಾಗಿಯೇ ವೋಟು ಕೊಡವುದು ಖಂಡಿತ. ಆದರೆ ನಿಮಗೆ ಕೊಡಲ್ಪಡುವ ಪತ್ರಿಯೊಂದು ವೋಟೂ ವಿದ್ವತ್ ಜ್ಞಾನಕ್ಕೆ ಕೊಟ್ಟ ಮನ್ನಣೆಯೆಂದು ತಿಳಿಯಿರಿ. ಮಾತ್ರವಲ್ಲ ಸನ್ಮಾರ್ಗಕ್ಕೂ ಕೊಟ್ಟ ಪುರಸ್ಕಾರವೂ ಅದೆಂದು ತಿಳಿಯಿರಿ'.

(೭ನೇ ಪುಟಕ್ಕೆ ಮುಂದುವರಿದುದು)





ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು.

ಜಾಂಬಕನ್ನು ಪ್ರತಿ ರಾತ್ರೆ ಮಲಕೊಳ್ಳುವಾಗ ಹಚ್ಚಿರಿ.

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಕೊಳ್ಳುವುದರಿಂದ, ಪರಿಹರಿಸಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಬೇಗನೆ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ.

ಯಾವಾಗಲೂ ಜಾಂಬಕನ್ನೆ ಸವರಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ವಿದೇಶ ವರ್ತಮಾನ ವಿವರ

(೬ನೇ ಪುಟದಿಂದ)

ತಮ್ಮ 'ಸೇವೆ'ಯ ಸಮರ್ಥನೆ ಎಮೆರಿಯವರ ಚುನಾವಣೆ ಘೋಷ

'ಚರ್ಚಿಲ್ಲರಿಂದ ಸ್ಫೂರ್ತಿಗೊಂಡ ಎಮೆರಿಯವರು ಸ್ಪಾರ್‌ಬ್ರೂಕಿನ ತಮ್ಮ ಮತದಾರರಿಗೆ ಭೋದಪರ ಪ್ರವಚನವಿತ್ತು ತಮ್ಮ ಭಾರತ ಸೇವೆಯನ್ನು ಸಮರ್ಥಿಸಿರುವರು' ಹೀಗೆಂದು ಅಮೃತ್ ಬಜಾರ್ ಪತ್ರಿಕೆಯು ಬರೆದಿರುತ್ತದೆ. ಬಂಗಾಲದ ಬರಗಾಲಕ್ಕೆ ತಾವು ಹೊಣೆಗಾರರಲ್ಲವೆಂತಲೂ, ಅದು ಅನೀರಿಕ್ಷಿತವಾಗಿ ಉದ್ಭವಿಸಿದೆಂತಲೂ ತಿಳಿಸುತ್ತಾ 'ಈಗಿನ ವೈಸರಾಯ್ ಕೌನ್ಸಿಲು ಸದಸ್ಯರಾದ ಆಹಾರ ಮಂತ್ರಿ ಸರ್ ಶ್ರೀವಾತ್ಸವರ ಒಂದು ಹೇಳಿಕೆಯನ್ನು ತಮ್ಮ ಪರವಾಗಿ ಕೊಟ್ಟ 'ಸರ್ಟಿಫಿಕೇಟ್' ಆಗಿ ಎಮೆರಿ ಸಾಹೇಬರು ಓದಿ ತಿಳಿಸಿದರು. ಅದರಲ್ಲಿ ಶ್ರೀವಾತ್ಸವರವರು ಭಾರತ ಮಂತ್ರಿ (ಎಮೆರಿ)ಗಳಿಂದ ತಮಗೆ ಸರ್ವ ಸಹಾಯ ಸಹಕಾರಗಳೂ ದೊರಕಿವೆಯೆಂದೂ, ಬಂಗಾಲದಲ್ಲಿನ ಕೃಷಿ ಉತ್ಪತ್ತಿ ಒಂದೇ ಸವನೆ ಕುಂದಿಹೋದುದರಿಂದ ಹಾಗಾಯಿತೆಂದೂ ಹೇಳಲಾಗಿದೆ.'

'ಬ್ರಿಟಿಷ್ ಸರಕಾರದಿಂದಲೇ ನಿಯಮಿತರಾದ ಬರಗಾಲದ ಕಾರಣ ಸಂಶೋಧನ ಸಮಿತಿಯವರು 'ಅನನುಭವಸ್ಥರ ಕೈಯಲ್ಲಿ ಆಹಾರ ಇಲಾಖೆ ಬಂದುದು ಒಂದು ಮುಖ್ಯ ಕಾರಣ'ವೆಂದು ಸ್ಪಷ್ಟ ತಿಳಿಸಿರುವಾಗ ಶ್ರೀ ವಾತ್ಸವಾರವರೂ ಅಂತಹರಲ್ಲೊಬ್ಬರಲ್ಲವೇ, ಅಂತಹವರನ್ನು ಚುನಾಯಿಸುವಾಗಲೇ ಭಾರತ ಮಂತ್ರಿಗಳಿಗೆ ದೂರದೃಷ್ಟಿ ಏಕೆ ಇಲ್ಲದೆ ಹೋಯಿತು. ಮುಂದೆಯೂ ಹೀಗಾದರೆ ಜನತೆಯ ಪಾಡೇನು?' ಎಂದು ಬಂಗಾಲದ ಅಮೃತ ಬಜಾರ ಪತ್ರಿಕೆ ಪ್ರಶ್ನಿಸುತ್ತದೆ.

ಜಪಾನರ ಯುದ್ಧ ಸನ್ನಾಹ

ಒಂದು ಕಡೆಯಿಂದ ಜಪಾನಿಯವರು ಅಮೇರಿಕದೊಡನೆ ಶಾಂತಿ ಭಿಕ್ಷೆಯ ಸೂಚನೆಗಳನ್ನು ರಹಸ್ಯವಾಗಿ ಮುಂದೊತ್ತುತ್ತಿರುವರೆಂದು ಓರ್ವ ಅಮೇರಿಕನ್ ಪ್ರಜಾಪ್ರತಿನಿಧಿಗಳು ಪ್ರಕಟಿಸಿರುವರು. ಆದರೆ ಇನ್ನೊಂದು ಕಡೆಯಿಂದ ಅವರು ಮಂಚೂರಿಯಾ ಕೋರಿಯಾಗಳ ತಮ್ಮ ಕೈಕೆಳಗಿನ ವಸಾಹತು ಪ್ರದೇಶಗಳಲ್ಲಿ ತಮ್ಮ ಯುದ್ಧಾಸ್ತ್ರ ತಯಾರಿ ಕಾರ್ಖಾನೆಗಳನ್ನು ಭದ್ರವಾಗಿ ಸ್ಥಾಪಿಸುತ್ತಿರುವರೆಂದೂ ತಿಳಿದು ಬರುತ್ತದೆ.

ಈಚೆಗೆ ಜಪಾನಿಯರ ಯುದ್ಧಾಸ್ತ್ರಗಳು – ಮುಖ್ಯವಾಗಿ ವಿಮಾನ ಮತ್ತು ನೌಕೆಗಳು—ಶ್ರೇಷ್ಠವೂ ಮತ್ತು ಹೆಚ್ಚಿನ ಪರಿಣಾಮಕಾರಿಯೂ ಆಗಿರುವಂತೆ ತಯಾರಿಸಲ್ಪಡುತ್ತಿರುವುವೆಂದು ಓರ್ವ ಅಮೇರಿಕನ್ ಸಮರ ತಜ್ಞರು ಪ್ರಕಟಿಸಿರುವರು. ಮಾತ್ರವಲ್ಲ ಅವರ ಆತ್ಮಹತ್ಯ ದಳಗಳು ಹೆಚ್ಚಿನ ಸಾಹಸಕ್ಕೆ ಕೈಯಿಕ್ಕಿರುವರು. ಓಕಿನಾವಾ ದ್ವೀಪವನ್ನು ಕಳಕೊಂಡರೂ ಜಪಾನಿಯರಿಗೆ 'ಅಮೇರಿಕಾನರು ಯಾವ ನಿರ್ದಿಷ್ಟ ಮಾರ್ಗದಿಂದ ಮುಂದುವರಿಯುವರೆಂಬ ವಿಷಯವು ತಿಳಿದಂತಾಗಿದೆ.'

ಚೀನದ ಕರಾವಳಿಯಲ್ಲಿ ಇಳಿಯುವುದರ ಮೂಲಕವೂ, ಇತ್ತ ಮಲಯಾವನ್ನು ಮುತ್ತುವುದರಿಂದಲೂ ಜಪಾನನ್ನು ಎರಡು ಮೂರು ಕಡೆಗಳಿಂದ ಜಜ್ಜಲು ಪ್ರಯತ್ನಗಳಾಗುತ್ತಿವೆ. ಆದರೂ ಕಮ್ಮಿ ಎಂದರೆ ಹದಿನೆಂಟು ತಿಂಗಳ ಕಾಲವಾದರೂ ಜಪಾನಿನ ಶರಣಾಗತಿಗೆ ಬೇಕಾಗುತ್ತದೆಂದು ಮಾರ್ಶಲ್ ಚಾಂಗರೀ ತಿಳಿಸಿರುತ್ತಾರೆ.

ಪೋಲೆಂಡ್, ಸಿರಿಯಾ, ಸಾಮ್ಯನೊಂದೆ ಜನರ ಗೋಳು ಒಂದೇ

'ಜಪಾನನ್ನು ಸೋಲಿಸಲು ಬ್ರಿಟಿಷರು ಭಾರತವನ್ನು ಸಮಾಧಾಯಿಸುವಂತೆ, ಆಫ್ರಿಕದಲ್ಲಿ ಸಿರಿಯಾ ಜನರನ್ನು ಫ್ರೆಂಚರೂ, ಪೋಲೆಂಡಿನ ಜನರನ್ನು ರಷ್ಯನರೂ ಹೊಸ ಯೋಜನೆಗಳಿಂದ ಬೆನ್ನು ಚಪ್ಪರಿಸುತ್ತಿರುವರು. ಈ ಮಹಾ ಯುದ್ಧಾನಂತರವಾದರೂ ಪರತಂತ್ರ ಜನರ ಹಾಲುಹವಾಲುಗಳು ಏಕ ಸಮಾನವಾದುವುಗಳೆಂಬುದರಲ್ಲಿ ಸಂದೇಹವಿಲ್ಲ. ಶಕ್ತಿರಾಷ್ಟ್ರಗಳು ವಿಶ್ವಶಾಂತಿ ಸಮ್ಮೇಳನಗಳನ್ನು ಬರಹ ಮೂಲಕ ಕೊನೆಗೊಳಿಸಿದರೂ ಕಾರ್ಯರೂಪದಲ್ಲಿ ವಿವೇಕವಂತರಾಗಿ ತಮ್ಮ ಕೈಕೆಳಗಿನ ಜನರ ಮನೋಭಿಷ್ಟಕ್ಕನುಸಾರವಾಗಿ ನಡೆಯದಿದ್ದರೆ ಮತ್ತೆ ಜಗತ್ತಿನ ಶಾಂತಿಗೆ ಧಕ್ಕೆ ತಪ್ಪಿದ್ದಲ್ಲ' ಹೀಗೆಂದು ಒಂದು ಅಮೇರಿಕನ್ ಪತ್ರಿಕೆಯು ಬರೆಯುತ್ತಾ ಅಂತರಾಷ್ಟ್ರೀಯ ಘಟನೆಗಳನ್ನು ಒಂದಕ್ಕೊಂದು ಮೇಳಾಯಿಸಿ ಬರೆದಿರುತ್ತದೆ.

'ವೇವಲ್ಲರು ಭಾರತಕ್ಕೆ ಒಂದು ಹೊಸ ಯೋಜನೆ ತಂದಿದ್ದಾರೆ. ಡಿಗಾಲೆಯವರು ಸಿರಿಯನರಿಗೆ ಮತ್ತೊಂದು ನವೀನ ವ್ಯವಸ್ಥೆ ಸೂಚಿಸಿದ್ದಾರೆ. ಇಂಗ್ಲೆಂಡಿನಲ್ಲಿ ಮಜೂರ, ಟೋರಿ ಪಕ್ಷಗಳು ತಮ್ಮ ತಮ್ಮ ಭಾವಿ ಯೋಜನೆಗಳನ್ನು ಮತದಾರರ ಮುಂದಿಟ್ಟು ಬಹುಮತ ಪಡೆಯಲು ಪ್ರಯತ್ನಿಸುತ್ತಾರೆ. ಹಿಂದೆ ಗ್ರೀಸಿನಲ್ಲಾದ ಭೀಕರ ದಂಗೆಯನ್ನು ಜನ ಮುಖಂಡರ ಸಹಕಾರದಿಂದಲೇ ಬಗೆಹರಿಸಬೇಕಾಯಿತು. ರಷ್ಯನರು ಪೋಲೆಂಡಿನಲ್ಲಿ ಹೊಸತೊಂದು ಸರಕಾರ ಮಂಡಳ ರಚಿಸಿ ಸರ್ವ ಪಕ್ಷಿಯರ ಸಮಿಶ್ರ ಮಂಡಳ ರಚಿಸಿರುವರು.'

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು,
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ

ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.

(ESTD. 1906)

CANARA BANK LIMITED

In corporated in British India, liability of Members limited

ನೋಟಿಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 85/1945

ಅರ್ಜಿದಾರಳು— ಪಾತಿಮಾಬಿ

ಎದ್ರಿ— ಎಲ್ಲಾ—

ಅರ್ಜಿದಾರಳು ತನ್ನ ಗಂಡ ಮೃತವಾದ ಮೈದಿನ ಬಾಪುಚೌಗುಳಿಗೆ Sun Life AssuranceCompany of Canada ಇನ್ಸೂರೆನ್ಸ್ ಕಂಪೆನಿಯಲ್ಲಿ ನಂಬ್ರ 8012164 ನೇ ಪೊಲೀಸಿ ಬಾಬ್ತು, ಬರತಕ್ಕ ರೂಪಾಯಿ 822—0—0 ಪಡೆಯುವರೆ ತಾನು ವಾರ್ಸಿದಾರಳೆಂದು ಆ ಕುರಿತು ತನಗೆ ಸಕ್ಸೆಶಂನ್ ಸರ್ಟಿಫಿಕೇಟು ಕೊಡಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾರೀಕು 19—7—45ನೇ ದಿವ್ಸ ತನ್ಕಿಗೆ ಯಿಟ್ಟಿರುವದ್ರಿಂದ ಆ ಕುರಿತು ಯಾರದಾದರೂ ಆಕ್ಷೇಪಯಿರುವಲ್ಲಿ ಅದನ್ನು ಸದ್ರಿ ತನ್ಕಿ ದಿವ್ಸ 11 ಘಂಟೆಗೆ ಕೋರ್ಟಿನವರು ಕರದಾಗ್ಯೆ ಹಾಜ್ರಾಗಿ ಜ್ಯಾಹೀರ್ಮಾಡಿ ಕೊಳ್ಳತಕ್ಕದ್ದು. ತಪ್ಪಿದರೆ, ಮುಂದಿನ ಹುಕುಂ ಮಾಡಲಾಗುವದೆಂದು ಈ ಮೂಲಕ ಸಮಸ್ತರಿಗೂ ಕೋರ್ಟು ಹುಕುಂ ಮೇರೆಗೆ ತಿಳಿಸೋಣಾಗುತ್ತದೆ.

K. Narayana Kamath
ಅರ್ಜಿದಾರಳ ಎಡ್ವೊಕೇಟ್.

ತಾರೀಕು 8—7—1945
ಕುಂದಾಪುರ

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

NOTICE.

Applications are invited from qualified candidates for the posts of Compounders, in L. F. Allopathic Medical Institutions under this District Board.

2. The applications with information regarding date of birth and copies of the certificates (Educational and Professional) should reach the President, District Board, South Kanara, before 31-7-1945.

(Sd) A. Lakhsminarayana Rao,
President,
District Board, S. K.

S. K. Dt. Board Office,
Mangalore, dated 26-6-45.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/3 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಉತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿ ಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[ಸಂಪುಟ 39] ತಾರೀಕು 13—7—1945 [ಸಂಚಿಕೆ 17]

ಬೊಂಬ್ಯಾಯಿಯ ವಿಕ್ಟೋರಿಯಾ ಟರ್ಮಿನಸ್ ಸ್ಟೇಶನ್ ಬಳಿ ಮಾನವತೆಯು ಸಾಗರವೇ ಸೇರಿದಂತಾಗಿದೆ. ತಡೆಯಿಲ್ಲದೆ ಹೊಡೆಯುವ ಮಳೆಗೆ ಸಾವಿರಾರು ನಮೂನೆಯ ಕೊಡೆಗಳಿಂದ ಜನಸಂದಣಿಯು ಕಿಕ್ಕಿರಿದಿದೆ. ಬಿದ್ದವರೆಷ್ಟೊ, ಕೊಡೆ ಪಾದರಕ್ಷೆಗಳನ್ನು ಕಳಕೊಂಡವರೆಷ್ಟೊ? ಯಾತಕ್ಕಾಗಿ ಇಷ್ಟೊಂದು ಪರಿಶ್ರಮ, ಉತ್ಸಾಹಗಳು? ಓಹೊ! ನೆಹರುಗಳು! ಇದೊ ಅಲ್ಲಿ, ಅಲ್ಲಿ? "ಜವಾಹರಲಾಲ್ ನೆಹರು ಜಿಂದಾಬಾದ್" ಜನರು ಘೋಷಿಸತೊಡಗಿದರು.

ಮನುಷ್ಯಾಕೃತಿಯ ಪುಷ್ಪಹಾರದ ನಡುವಿನಲ್ಲಿ ನಿಂತಿರುವರು ನೆಹರು. ಅವರ ಬಳಿ ಒಂದು ಟೆಲಿಗ್ರಾಮ್ ಸಂದೇಶವಿತ್ತು "ಪ್ರಿಯನೆ, ನೀನಿಲ್ಲದೆ ಜಗತ್ತು ಅಂಧಕಾರವಾಗಿತ್ತು" ಮಗಳು ಇಂದಿರಳು ತಂದೆಯ ಬಂಧಮುಕ್ತತೆಯ ವಾರ್ತೆ ಕೇಳಿ ಬಿಟ್ಟ ತಂತಿ ವಾರ್ತೆ ಅದು.

ಜನತೆಯ ಜವಾಹರಲಾಲರು

ಮೂವತ್ತನಾಲ್ಕು ತಿಂಗಳ ಬಂಧಿವಾಸ! ನೆಹರುಗಳು ಇಲ್ಲದೆ ಜಗತ್ತು ಅಂಧಕಾರವಾಗಿದ್ದುದು ಇಂದಿರಳಿಗೆ ಮಾತ್ರವಲ್ಲ 'ಇಡೀ ಇಂಡಿಯಕ್ಕೆ ಹಾಗಾಗಿತ್ತೆಂದರೆ ಅತಿಶಯವಲ್ಲ.' ಕಳೆದ ಕಾಲು ಶತಮಾನದಿಂದ ಭಾರತೀಯ ರಾಜಕೀಯ ದಿಗಂತವು ನೆಹರುಗಳ ಶೋಭಾಯಮಾನ ವ್ಯಕ್ತಿತ್ವದಿಂದ ಪ್ರಜ್ವಲಿತವಾಗಿತ್ತು. ಧೀರತ್ವ ವೀರತ್ವಗಳೂ ಶೌರ ಸಾಹಸಗಳೂ ಮೂರ್ತಿಮತ್ತಾಗಿರುವ ನೆಹರು—ಶುದ್ಧ ಸಮತಾವಾದಿಯಾಗಿ ಭೀಕರ ದಬ್ಬಾಳಿಕೆಗೊಳಗಾಗಿ ನೊಂದವರ ಪರವಾಗಿ ಹೋರಾಡುವ ವೀರ ನಾಯಕ ನೆಹರು.

ವಜ್ರದಂತೆ ತೀಕ್ಷ್ಣವೂ ಸುಪ್ರಸನ್ನವೂ ತೇಜೋಮಯವೂ ಆಗಿರುವ ಬುದ್ಧಿಶಕ್ತಿಯ ನೆಹರು. ಜಗತ್ತಿನ ಅಂತರಾಷ್ಟ್ರೀಯ ವಾದಿಗಳಲಿ ಮೊದಲಿಗರೆನಿಸಿ ಫೆಸಿಸ್ಟ್ ನಿರಂಕುಶ ವಾದಕ್ಕೆ ವಿರೋಧವಾಗಿ ರಣಕಹಳೆಯೂದಿದ ನೆಹರು. ದೇಶ ವಾತ್ಸಲ್ಯದ ಮಬ್ಬಿನಿಂದ ತನ್ನ ಅಂತರಾಷ್ಟ್ರೀಯ ಮತ್ತು ವಿಶ್ವ ವೈಶಾಲ್ಯದ ದೃಷ್ಟಿಯನ್ನು ಕಳಕೊಂಡಿರದ ನೆಹರು.

ಮೂವತ್ತನಾಲ್ಕು ತಿಂಗಳ ಏಕಾಂತದಿಂದ ನೆಹರು ಬದಲಾಯಿಸಿರುವರೆ? ಅದಕ್ಕಿಂತ ಮುಂಚೆ ಅವರ ಯೋಚನೆಗಳು, ಯೋಜನೆಗಳು, ಧ್ಯೇಯ ಧೋರಣೆಗಳು ಮಿಲಿಯಾಂತರ ಅವರ ದೇಶಬಂಧುಗಳ ಮನಸ್ಸಿನ ಮೇಲೆ ಘನ ಪರಿಣಾಮಕಾರಿಯಾಗಿದ್ದುವು. ಕೆಲವೊಂದು ವಿಷಯಗಳಲ್ಲಿ ಗುರುಗಾಂಧಿಜಿಗಿಂತಲೂ ಮಿಗಿಲಾದ ವರ್ಚಸ್ಸು ಅವರದು. ಒಂದು

ನೆಹರು ನಾಯಕತ್ವದಲ್ಲಿ ಭಾರತ

ಭಾರತವೆಂದ ನೆಹರು- ವೀರರತ್ನ ಅವರು ಸೇನಾಪತಿಯನ್ನು ಮಣಿಸುವರು

ವೇಳೆ ಗಾಂಧೀಯೇ ಭಾರತವೆನ್ನುವುದಕ್ಕಿಂತಲೂ ಭಾರತವೆಂದರೆ ನೆಹರು ಎಂದರೂ ಸೇವಾಗ್ರಾಮದ ಆ ಸಾಧುಗಳು ಕೂಡಾ ಒಪ್ಪದಿರರು.

ನಮ್ಮ ಸಂದೇಹಗಳು ಸುಳ್ಳು

ಅಂತಹ ನೆಹರುಗಳು ಇಂದು ಹೇಗಿರುವರು? ಮೂರು ವರ್ಷಗಳ ತನಕ ಮೌನವಾಗಿ ತನ್ನ ದೇಶಸ್ಥರ ಘೋರ ಸಂಕಷ್ಟಾನುಭವಗಳ ಏಕಾಂತ ಸಾಕ್ಷಿಯಾಗಿದ್ದ ಎಂತಹ ಶ್ರೇಷ್ಠ ವ್ಯಕ್ತಿಯಾದರೂ ಮಾನವ ಸಹಜವಾದ ಬದಲಾವಣೆಗೆ ಒಳಗಾಗದಿರನು. ಧೀರೋದಾತ್ತ ರಾಷ್ಟ್ರೀಯವಾದಿಗಳಾಗಿದ್ದಂತಹ ಸ್ವಾಮಿ ಶ್ರದ್ಧಾನಂದರು ತಮ್ಮ ಜೈಲು ಅನುಭವದ ನಂತರ ಕಡು ಹಿಂದೂಕೋಮು ವಾದಿಗಳಾದರು. ಅರವಿಂಧ ಘೋಷರು ತಮ್ಮ ಈಗಿನ ಅಜ್ಞಾತವಾಸ ಸೇರುವ ಮೊದಲೇ ಜಾತೀಯ ಅಭಿಮಾನಿಗಳಾಗಿ ಪರಿವರ್ತನ ಹೊಂದಿದರು. ಎಂ. ಎನ್. ರಾಯರಂತಹ ಅಂತರಾಷ್ಟ್ರೀಯ ಕ್ರಾಂತಿಕಾರರು ತಿಂಗಳಿಗೆ ೧೩ ಸಾವಿರ ರೂಪ್ಯಾ ಸಂಬಳದ 'ಸಹಾಯಕ'ರಾದರು. ಸುಭಾಸ್ ಭೋಸ್' ಡಿವೆಲೆರಾಗಳಂತಹವರು ತಮ್ಮ ವಿಪರೀತ ದೇಶಾಭಿಮಾನದಿಂದ ಅಂಧ ಯೋಜನಾಗಾರರಾಗಿ ತಪ್ಪು ಮಾರ್ಗಗಳನ್ನು ಹಿಡಿಯಲು ಹಿಂಜರಿಯಲಿಲ್ಲ.

ಆದರೆ ನೆಹರುಗಳು ಬದಲಾಯಿಸಿರುವರೆ? ವೇವಲ್ ಯೋಜನೆಯ ಕುರಿತು ಅವರ ಸ್ಪಷ್ಟ ಅಭಿಪ್ರಾಯವೇನು? ಅವರ ಸುಂದರವಾದ ಮುಖದ ಮೇಲೆ ಕೆಲವೊಂದು ನೆರಿಗಳು ಹೆಚ್ಚಿಗೆ ಕಂಡು ಬರುತ್ತವೆ. ಅವರ ಘನ ಗಂಭೀರವಾದ ಶಿರದ ಮೇಲೆ ಬೆಳ್ಳಿ ಬಣ್ಣದ ಕೂದಲ ರಾಶಿಯು ಹೆಚ್ಚಿರಬಹುದು. ಆದರೆ ಅವರ ಆ ತರುಣ ಚೈತನ್ಯದ ಸ್ಫೂರ್ತಿದಾಯಕ ಧ್ಯೇಯವಾದವೂ ಭಾಷಣ ಶೈಲಿಯೂ ಕಳೆಗುಂದಿಲ್ಲ.

ಮುಖ್ಯ ಮಂತ್ರಿ ನೆಹರು

ಬಂಗಾಲದ ಬರಗಾಲವು ಬ್ರಿಟಿಷ್ ಆಡಳಿತದ ಮೇಲೆ ಕೊಡಲ್ಪಟ್ಟ ಕೊನೆಯ ತೀರ್ಪು' ಎಂದು ಹೇಳಿದ ನೆಹರುಗಳ ಮಾತುಗಳಲ್ಲಿ 'ಜನಾಂಗವು ವಿಶಿಷ್ಟಾರ್ಥವನ್ನು ಕಾಣಬಹುದು? ವೇವಲ್ ಯೋಜನೆಯು ತಾತ್ಕಾಲಿಕವಾಗಿ ಒಳ್ಳೇಯದೆನ್ನಬಹುದು ಎಂದಭಿಪ್ರಾಯವನ್ನು ಕೊಂಗ್ರೆಸ್ಸೂ ಒಪ್ಪಿ ಹೊಸ ಯೋಜನೆಯನ್ನು ಸ್ವೀಕರಿಸಿದರೆ ವ್ಯಾಸರಾಯರ ಮುಂದಿನ ಆಡಳಿತ ಮಂಡಳಿಯಲ್ಲಿ ನೆಹರುಗಳಿಗೆ ನಾಯಕ ಸ್ಥಾನ ದೊರಕುವದು

"ಆಗ ನೆಹರುಗಳ ಮುಂದಿರುವ ಕರ್ತವ್ಯವಾದರೂ ಏನಾಗಿರುತ್ತದೆ? ಮೊತ್ತಮೊದಲು ಅವರು ತಮ್ಮ ಜನಾಂಗೋದ್ಧಾರದ ಧೋರಣೆಯಿಂದ ಇಡೀ ವ್ಯಾಸ್ ರಾಯ್ ಮಂತ್ರಿಮಂಡಳದಲ್ಲಿ ಒಗ್ಗಟ್ಟನ್ನುಂಟುಮಾಡಿ ಯಾವ ತರದ ಜಾತಿಮತ ಪ್ರಶ್ನೆಯು ಉದ್ಭವಿಸದ ಹಾಗೆ ಮಾಡುವರು. ನಂತರದ ಅವರ ಕೆಲಸವೆಂದರೆ ಐ. ಸಿ. ಎಸ್. ಅಧಿಕಾರಿಗಳನ್ನು ಮೆತ್ತಗೆ ಮಾಡುವುದು. ದೇಶದ ಸ್ವಾತಂತ್ರ್ಯಕ್ಕೆ ತೊಡಕುತರುವಂತಹ ಕೆಲಸಗಳನ್ನೇ ಅವರಿಗೆ ಕೊಡುವುದೇ ಇದಕ್ಕೆ ತಕ್ಕ ಪರಿಹಾರ.'

"ಈಗ ಚುನಾಯಿಸಲ್ಪಡುವ ಮಂತ್ರಿಮಂಡಳವು ವಿಧಾಯಕ ಸಭೆಗೆ ಹೊಣೆಗಾರಿಕೆ ಇಲ್ಲದಾಗಿದ್ದರೂ ಆ ಮಂಡಳದಲ್ಲಿದ್ದ ಕೊಂಗ್ರೆಸ್‌ವಾಲರು ಹೊಣೆಗಾರಿಕೆಯ ಭಾವನೆಯಿಂದಲೇ ವರ್ತಿಸಿ ಸಮಯ ಬಿದ್ದರೆ ರಾಜಿನಾಮೆ ಇತ್ತು ಕೂಡಾ ಪುನಃ ಬಿಕ್ಕಟ್ಟನ್ನುಂಟುಮಾಡಬಹುದು."

ಮುಖ್ಯ ಸೇನಾಪತಿಗಳು ಯುದ್ಧ ಖಾತೆಯ ಮೇಲ್ತನಕಿಯಲ್ಲಿದ್ದರೂ ಅವರಾಗಲಿ ಬ್ರಿಟಿಷ್ ಸೈನಿಕರಲ್ಲರಾಗಲಿ ಜಪಾನರ ವಿರೋಧ ಹೋರಾಡುವ ಹಾಗಿಲ್ಲ. ಅದಕ್ಕೆ ಭಾರತೀಯ ಸೈನಿಕರೂ, ಭಾರತೀಯ ಸಹಾಯ ಸಲಕರಣೆ ದ್ರವ್ಯವೂ ವಿಪುಲವಾಗಿಬೇಕಾಗುವುವು. ಶೇಕಡಾ ೯೯ ರಷ್ಟು ಆಡಳಿತ ಜವಾಬುದಾರಿಕೆ ಹೊರುವ ಭಾರತೀಯ ಮಂತ್ರಿಗಳು ನೆಹರುಗಳ ನಾಯಕತ್ವದಲ್ಲಿ ಮುಖ್ಯ ಸೇನಾಪತಿಗಳ ಅಧಿಕಾರವನ್ನು ತಣ್ಣಗೆ ಮಾಡಬಹುದು"

ನೆಹರುಗಳ ನಾಯಕತ್ವದಲ್ಲಿನ ಮಂತ್ರಿಮಂಡಳವು ಸ್ವಾತಂತ್ರ್ಯದ ಮಾರ್ಗವನ್ನು ಸುಗಮವಾಗಿ ತೆರೆಯಬಹುದು. ಗೃಹ ಖಾತೆ, ಹಣಕಾಸಿನ ಖಾತೆ, ವಾಣಿಜ್ಯ ಖಾತೆ, ಮತ್ತು ವಿದೇಶಾಂಗ ಖಾತೆಗಳ ಅಧಿಕಾರದಲ್ಲಿರುವ ಭಾರತೀಯ ಮಂತ್ರಿಗಳ ವರ್ಚಸ್ಸು ಅಧಿಕಾರ ಪ್ರಭಾವಗಳು ಅಸಾಮಾನ್ಯ ಶಕ್ತಿಗಳಾಗಿರುತ್ತವೆ.

ವ್ಯಾಸ್‌ರಾಯರು ಮಾತ್ರವಲ್ಲ, ಇಡೀ ಬ್ರಿಟಿಷ್ ಪಾರ್ಲಿಮೆಂಟನ್ನೇ ಇವರು ಪರಿವರ್ತಿಸಿಕೊಳ್ಳಲು ಪ್ರಯತ್ನಿಸಬಹುದು.

ಮಿ. ಎಮರಿಯವರು ತಮ್ಮ ಮತದಾರರಿಗೆ ಕೊಟ್ಟ ಒಂದು ಭಾಷಣದಲ್ಲಿ "ಈಗ ವೇವೆಲ್ ಯೋಜನೆಯನ್ನು ಒಪ್ಪಿ ಭಾರತೀಯರು ಒಂದಾಗಿ ಆಡಳಿತ ನಿರ್ವಹಿಸಲು ಪ್ರಾರಂಭಿಸಿದರೆ ಮುಂದೆ ಮೂರೇ ತಿಂಗಳಲ್ಲಿ ಅವರು ಸ್ವತಂತ್ರ ರಾಜ್ಯ ಘಟನೆಯನ್ನು ನಡೆಸುವವರಾಗುವರು" ಎಂದು ಭರವಸೆಕೊಟ್ಟಿರುವರಂತೆ.

ಬೊಂಬ್ಯಾಯಿಂದ ಸಿಮ್ಲಾಕ್ಕೆ ಹಾರುತಿದ್ದ ವಲ್ಲಭ್ಯಾ ಪಟೇಲರು ಡಿಲ್ಲಿಯಲ್ಲಿ ಕೊಂಚ ಕಾಲ ವಿಶ್ರಮಿಸಿದ್ದರು. ಆಗಲೂ ಪತ್ರಿಕಾ ಪ್ರತಿನಿಧಿಗಳು ಅವರನ್ನು ಮುತ್ತಿದಾಗ ಕೊಟ್ಟ ಒಂದು ಹೇಳಿಕೆಯಲ್ಲಿ "ಅಧಿಕಾರ ಬೇಡವೆಂದು ಕೊಂಗ್ರೆಸು ಎಷ್ಟೊ ಸಮಯ ದೂರ ನಿಂತಿತ್ತು. ಆಗ ಲೀಗಿನವರು ಆ ಸ್ಥಾನ ವಹಿಸಿ ಆಡಳಿತ ವಹಿಸಿಕೊಂಡರು ಈಗ ಬೇಕಾದರೆ ಅವರು ಸ್ವಲ್ಪ ವಿಶ್ರಮಿಸಲಿ" ಎಂದರು.

ಕೆಲ ಸಮಯದ ಹಿಂದೆ ಬರ್ಮಾ ದ್ವೀಪದ ಗವರ್ನರ್ ಪದವಿಯಿಂದ ನಿವೃತ್ತರಾದ ಡ್ಯೂಕ್ ಆಫ್. ವಿಂಡ್ಸರರನ್ನು ಕೆನಡದ ಗವರ್ನರ್ ಜನರಲ್ ಆಗಿ ನೇಮಿಸುವರೆಂದು ವದಂತಿ ಇದೆ. ತಮ್ಮ ಸ್ಥಾನಮಾನಕ್ಕೆ ತಕ್ಕದಾದ ಯಾವ ಉದ್ಯೋಗವನ್ನಾದರೂ ವಹಿಸುವೆನೆಂದು ಡ್ಯೂಕರು ತಿಳಿಸಿರುವರಂತೆ.

ಕಮ್ಯೂನಿಸ್ಟರು ೧೯೪೨ರ ನಂತರ ವಹಿಸಿದ ಧೋರಣೆಯು ತಪ್ಪೆಂದು ಅಭಿಪ್ರಾಯ ಸೂಚಿಸಿದ ಪಂಡಿತ್ ಜವಾಹರಲಾಲ್ ನೆಹರುಗಳಿಗೆ ಆ ಪಕ್ಷದ ಪ್ರಮುಖ ಮುಖಂಡರೊಬ್ಬರು "ಈ ಕುರಿತು ಪಂಡಿತ್‌ಜಿಯವರು ಪುನರಾಲೋಚಿಸುವುದೊಳಿತು". ಎಂದು ಸೂಚಿಸಿರುವರು ತಾವು ಸರಕಾರಿ ಪಕ್ಷ ವಹಿಸಿ "ಇದು ಜನರ ಯುದ್ಧವೆಂದು ಹೇಳುವುದಕ್ಕೆ ಯೋಗ್ಯ ಕಾರಣಗಳನ್ನು ಅವರು ಕೊಟ್ಟಿರುವರು.

೧೭೮೮ರಲ್ಲಿ ಮೊತ್ತ ಮೊದಲಿಗೆ 'ಭಗವತ್‌ಗೀತೆ'ಯ ರಷ್ಯನ್ ಭಾಷಾಂತರವು ಪ್ರಕಟಿಸಲ್ಪಟ್ಟಿತು. ೧೮೪೪ರಲ್ಲಿ ಅಂದರೆ ಸುಮಾರು ನೂರುವರ್ಷಗಳ ಹಿಂದೆ ನಳದಮಯಂತಿಯ ಕಥೆಯು ರಷ್ಯನ್ ಭಾಷೆಗೆ ಪರಿವರ್ತಿತವಾಯಿತು. ನಂತರ ಒಂದೊಂದಾಗಿ ಅನೇಕ ಪ್ರಾಚೀನ ಸಂಸ್ಕೃತ ಕಾವ್ಯಗಳೂ, ನಾಟಕ ಕೃತಿಗಳೂ ಭಾಷಾಂತರಿಸಲ್ಪಟ್ಟವು.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/3 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಉತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿ ಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು; ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 13—7—1945 [ಸಂಚಿಕೆ 17]

ನೆಹರು ನಾಯಕತ್ವದಲ್ಲಿ ಭಾರತ

ಭಾರತವೆಂದ ನೆಹರು- ವೀರರತ್ನ ಅವರು ಸೇನಾಪತಿಯನ್ನು ಮಣಿಸುವರು

ಬೊಂಬ್ಯಾಯಿಯ ವಿಕ್ಟೋರಿಯಾ ಟರ್ಮಿನಸ್ ಸ್ಟೇಶನ್ ಬಳಿ ಮಾನವತೆಯ ಸಾಗರವೇ ಸೇರಿದಂತಾಗಿದೆ. ತಡೆಯಿಲ್ಲದೆ ಹೊಡೆಯುವ ಮಳೆಗೆ ಸಾವಿರಾರು ನಮೂನೆಯ ಕೊಡೆಗಳಿಂದ ಜನಸಂದಣಿಯು ಕಿಕ್ಕಿರಿದಿದೆ. ಬಿದ್ದವರೆಷ್ಟೊ, ಕೊಡೆ ಪಾದರಕ್ಷೆಗಳನ್ನು ಕಳೆಕೊಂಡವರೆಷ್ಟೊ? ಯಾತಕ್ಕಾಗಿ ಇಷ್ಟೊಂದು ಪರಿಶ್ರಮ, ಉತ್ಸಾಹಗಳು? ಓಹೊ! ನೆಹರುಗಳು! ಇದೊ ಅಲ್ಲಿ, ಅಲ್ಲಿ? "ಜವಾಹರಲಾಲ್ ನೆಹರು ಜಿಂದಾಬಾದ್" ಜನರು ಘೋಷಿಸತೊಡಗಿದರು.

ಮನುಷ್ಯಾಕೃತಿಯ ಪುಷ್ಪಹಾರದ ನಡುವಿನಲ್ಲಿ ನಿಂತಿರುವರು ನೆಹರು. ಅವರ ಬಳಿ ಒಂದು ಟೆಲಿಗ್ರಾಮ್ ಸಂದೇಶವಿತ್ತು "ಪ್ರಿಯನೆ, ನೀನಿಲ್ಲದೆ ಜಗತ್ತು ಅಂಧಕಾರವಾಗಿತ್ತು" ಮಗಳು ಇಂದಿರಳು ತಂದೆಯ ಬಂಧಮುಕ್ತತೆಯ ವಾರ್ತೆ ಕೇಳಿ ಬಿಟ್ಟ ತಂತಿ ವಾರ್ತೆ ಅದು.

ಜನತೆಯ ಜವಾಹರಲಾಲರು

ಮೂವತ್ತನಾಲ್ಕುತಿಂಗಳ ಬಂಧಿವಾಸ! ನೆಹರುಗಳು ಇಲ್ಲದೆ ಜಗತ್ತು ಅಂಧಕಾರವಾಗಿದ್ದುದು ಇಂದಿರಳಿಗೆ ಮಾತ್ರವಲ್ಲ 'ಇಡೀ ಇಂಡಿಯಕ್ಕೆ ಹಾಗಾಗಿತ್ತೆಂದರೆ ಅತಿಶಯವಲ್ಲ.' ಕಳೆದ ಕಾಲು ಶತಮಾನದಿಂದ ಭಾರತೀಯ ರಾಜಕೀಯ ದಿಗಂತವು ನೆಹರುಗಳ ಶೋಭಾಯಮಾನ ವ್ಯಕ್ತಿತ್ವದಿಂದ ಪ್ರಜ್ವಲಿತವಾಗಿತ್ತು. ಧೀರತ್ವ ವೀರತ್ವಗಳೂ ಶೌರ ಸಾಹಸಗಳೂ ಮೂರ್ತಿಮತ್ತಾಗಿರುವ ನೆಹರು—ಶುದ್ಧ ಸಮತಾವಾದಿಯಾಗಿ ಭೀಕರ ದಬ್ಬಾಳಿಕೆಗೊಳಗಾಗಿ ನೊಂದವರ ಪರವಾಗಿ ಹೋರಾಡುವ ವೀರ ನಾಯಕ ನೆಹರು.

ವಜ್ರದಂತೆ ತೀಕ್ಷ್ಣವೂ ಸುಪ್ರಸ್ನವೂ ತೇಜೋಮಯವೂ ಆಗಿರುವ ಬುದ್ಧಿಶಕ್ತಿಯ ನೆಹರು. ಜಗತ್ತಿನ ಅಂತರಾಷ್ಟ್ರೀಯವಾದಿಗಳಲಿ ಮೊದಲಿಗರೆನಿಸಿ ಫೆಸಿಸ್ಟ್ ನಿರಂಕುಶ ವಾದಕ್ಕೆ ವಿರೋಧವಾಗಿ ರಣಕಹಳೆಯೂದಿದ ನೆಹರು. ದೇಶ ವಾತ್ಸಲ್ಯದ ಮಬ್ಬಿನಿಂದ ತನ್ನ ಅಂತರಾಷ್ಟ್ರೀಯ ಮತ್ತು ವಿಶ್ವ ವೈಶಾಲ್ಯದ ದೃಷ್ಟಿಯನ್ನು ಕಳಕೊಂಡಿರದ ನೆಹರು.

ಮೂವತ್ತನಾಲ್ಕು ತಿಂಗಳ ಏಕಾಂತದಿಂದ ನೆಹರು ಬದಲಾಯಿಸಿರುವರೆ? ಅದಕ್ಕಿಂತ ಮುಂಚೆ ಅವರ ಯೋಚನೆಗಳು, ಯೋಜನೆಗಳು, ಧ್ಯೇಯ ಧೋರಣೆಗಳು ಮಿಲಿಯಾಂತರ ಅವರ ದೇಶಬಂಧುಗಳ ಮನಸ್ಸಿನ ಮೇಲೆ ಘನ ಪರಿಣಾಮಕಾರಿಯಾಗಿದ್ದುವು. ಕೆಲವೊಂದು ವಿಷಯಗಳಲ್ಲಿ ಗುರುಗಾಂಧಿಜಿಗಿಂತಲೂ ಮಿಗಿಲಾದ ವರ್ಚಸ್ಸು ಅವರದು. ಒಂದುವೇಳೆ ಗಾಂಧೀಯೇ ಭಾರತವೆನ್ನುವುದಕ್ಕಿಂತಲೂ ಭಾರತವೆಂದರೆ ನೆಹರು ಎಂದರೂ ಸೇವಾಗ್ರಾಮದ ಆ ಸಾಧುಗಳು ಕೂಡಾ ಒಪ್ಪದಿರರು.

ನಮ್ಮ ಸಂದೇಹಗಳು ಸುಳ್ಳು

ಅಂತಹ ನೆಹರುಗಳು ಇಂದು ಹೇಗಿರುವರು? ಮೂರು ವರ್ಷಗಳ ತನಕ ಮೌನವಾಗಿ ತನ್ನ ದೇಶಸ್ಥರ ಘೋರ ಸಂಕಷ್ಟಾನುಭವನುಭವಗಳ ಏಕಾಂತ ಸಾಕ್ಷಿಯಾಗಿದ್ದ ಎಂತಹ ಶ್ರೇಷ್ಟ ವ್ಯಕ್ತಿಯಾದರೂ ಮಾನವ ಸಹಜವಾದ ಬದಲಾವಣೆಗೆ ಒಳಗಾಗದಿರನು. ಧೀರೊದಾತ್ತ ರಾಷ್ಟ್ರೀಯವಾದಿಗಳಾಗಿದ್ದಂತಹ ಸ್ವಾಮಿ ಶ್ರದ್ಧಾನಂದರು ತಮ್ಮ ಜೈಲು ಅನುಭವದ ನಂತರ ಕಡು ಹಿಂದೂಕೋಮು ವಾದಿಗಳಾದರು. ಅರವಿಂಧ ಘೋಷರು ತಮ್ಮ ಈಗಿನ ಅಜ್ಞಾತವಾಸ ಸೇರುವ ಮೊದಲೇ ಜಾತೀಯ ಅಭಿಮಾನಿಗಳಾಗಿ ಪರಿವರ್ತನ ಹೊಂದಿದರು. ಎಂ. ಎನ್. ರಾಯರಂತಹ ಅಂತರಾಷ್ಟ್ರೀಯ ಕ್ರಾಂತಿಕಾರರು ತಿಂಗಳಿಗೆ ೧೩ ಸಾವಿರ ರೂಪ್ಯಾ ಸಂಬಳದ 'ಸಹಾಯಕ'ರಾದರು. ಸುಭಾಸ್ ಭೋಸ್' ಡಿವೆಲೆರಾಗಳಂತಹವರು ತಮ್ಮ ವಿಪರೀತ ದೇಶಾಭಿಮಾನದಿಂದ ಅಂಥ ಯೋಜನಾಗಾರರಾಗಿ ತಪ್ಪು ಮಾರ್ಗಗಳನ್ನು ಹಿಡಿಯಲು ಹಿಂಜರಿಯಲಿಲ್ಲ.

ಆದರೆ ನೆಹರುಗಳು ಬದಲಾಯಿಸಿರುವರೆ? ವೇವಲ್ ಯೋಜನೆಯ ಕುರಿತು ಅವರ ಸ್ಪಷ್ಟ ಅಭಿಪ್ರಾಯವೇನು? ಅವರ ಸುಂದರವಾದ ಮುಖದ ಮೇಲೆ ಕೆಲವೊಂದು ನೆರಿಗಳು ಹೆಚ್ಚಿಗೆ ಕಂಡು ಬರುತ್ತವೆ. ಅವರ ಘನ ಗಂಭೀರವಾದ ಶಿರದ ಮೇಲೆ ಬೆಳ್ಳಿ ಬಣ್ಣದ ಕೂದಲ ರಾಶಿಯು ಹೆಚ್ಚಿರಬಹುದು. ಆದರೆ ಅವರ ಆ ತರುಣ ಚೈತನ್ಯದ ಸ್ಫೂರ್ತಿದಾಯಕ ಧ್ಯೇಯವಾದವೂ ಭಾಷಣ ಶೈಲಿಯೂ ಕಳೆಗುಂದಿಲ್ಲ.

ಮುಖ್ಯ ಮಂತ್ರಿ ನೆಹರು

ಬಂಗಾಲದ ಬರಗಾಲವು ಬ್ರಿಟಿಷ್ ಆಡಳಿತದ ಮೇಲೆ ಕೊಡಲ್ಪಟ್ಟ ಕೊನೆಯ ತೀರ್ಪು' ಎಂದು ಹೇಳಿದ ನೆಹರುಗಳ ಮಾತುಗಳಲ್ಲಿ 'ಜನಾಂಗವು ವಿಶಿಷ್ಟಾರ್ಥವನ್ನು ಕಾಣಬಹುದು? ವೇವಲ್ ಯೋಜನೆಯು ತಾತ್ಕಾಲಿಕವಾಗಿ ಒಳ್ಳೇಯದೆನ್ನಬಹುದು ಎಂದಭಿಪ್ರಾಯವನ್ನು ಕೊಂಗ್ರೆಸ್ಸೂ ಒಪ್ಪಿ ಹೊಸ ಯೋಜನೆಯನ್ನು ಸ್ವೀಕರಿಸಿದರೆ ವ್ಯಾಸರಾಯರ ಮುಂದಿನ ಆಡಳಿತ ಮಂಡಳಿಯಲ್ಲಿ ನೆಹರುಗಳಿಗೆ ನಾಯಕ ಸ್ಥಾನ ದೊರಕುವದು

"ಆಗ ನೆಹರುಗಳ ಮುಂದಿರುವ ಕರ್ತವ್ಯವಾದರೂ ಏನಾಗಿರುತ್ತದೆ? ಮೊತ್ತಮೊದಲು ಅವರು ತಮ್ಮ ಜನಾಂಗೋದ್ಧಾರದ ಧೋರಣೆಯಿಂದ ಇಡೀ ವ್ಯಾಸ್ ರಾಯ್ ಮಂತ್ರಿಮಂಡಳದಲ್ಲಿ ಒಗ್ಗಟ್ಟನ್ನುಂಟುಮಾಡಿ ಯಾವ ತರದ ಜಾತಿಮತ ಪ್ರಶ್ನೆಯು ಉದ್ಭವಿಸದ ಹಾಗೆ ಮಾಡುವರು. ನಂತರದ ಅವರ ಕೆಲಸವೆಂದರೆ ಐ. ಸಿ. ಎಸ್. ಅಧಿಕಾರಿಗಳನ್ನು ಮೆತ್ತಗೆ ಮಾಡುವುದು. ದೇಶದ ಸ್ವಾತಂತ್ರ್ಯಕ್ಕೆ ತೊಡಕುತರುವಂತಹ ಕೆಲಸಗಳನ್ನೇ ಅವರಿಗೆ ಕೊಡುವುದೇ ಇದಕ್ಕೆ ತಕ್ಕ ಪರಿಹಾರ.'

"ಈಗ ಚುನಾಯಿಸಲ್ಪಡುವ ಮಂತ್ರಿಮಂಡಳವು ವಿಧಾಯಕ ಸಭೆಗೆ ಹೊಣೆಗಾರಿಕೆ ಇಲ್ಲದಾಗಿದ್ದರೂ ಆ ಮಂಡಳದಲ್ಲಿದ್ದ ಕೊಂಗ್ರೆಸ್‌ವಾಲರು ಹೊಣೆಗಾರಿಕೆಯ ಭಾವನೆಯಿಂದಲೇ ವರ್ತಿಸಿ ಸಮಯ ಬಿದ್ದರೆ ರಾಜಿನಾಮೆ ಇತ್ತು ಕೂಡಾ ಪುನಃ ಬಿಕ್ಕಟ್ಟನ್ನುಂಟುಮಾಡಬಹುದು."

ಮುಖ್ಯ ಸೇನಾಪತಿಗಳು ಯುದ್ಧಖಾತೆಯ ಮೇಲ್ತನಕಿಯಲ್ಲಿದ್ದರೂ ಅವರಾಗಲಿ ಬ್ರಿಟಿಷ್ ಸೈನಿಕರೆಲ್ಲರಾಗಲಿ ಜಪಾನರ ವಿರೋಧ ಹೋರಾಡುವ ಹಾಗಿಲ್ಲ. ಅದಕ್ಕೆ ಭಾರತೀಯ ಸೈನಿಕರೂ, ಭಾರತೀಯ ಸಹಾಯ ಸಲಕರಣೆ ದ್ರವ್ಯವೂ ವಿಪುಲವಾಗಿಬೇಕಾಗುವುವು. ಶೇಕಡಾ ೯೯ರಷ್ಟು ಆಡಳಿತ ಜವಾಬುದಾರಿಕೆ ಹೊರುವ ಭಾರತೀಯ ಮಂತ್ರಿಗಳು ನೆಹರುಗಳ ನಾಯಕತ್ವದಲ್ಲಿ ಮುಖ್ಯ ಸೇನಾಪತಿಗಳ ಅಧಿಕಾರವನ್ನು ತಣ್ಣಗೆ ಮಾಡಬಹುದು"

ನೆಹರುಗಳ ನಾಯಕತ್ವದಲ್ಲಿನ ಮಂತ್ರಿಮಂಡಳವು ಸ್ವಾತಂತ್ರ್ಯದ ಮಾರ್ಗವನ್ನು ಸುಗಮವಾಗಿ ತೆರೆಯಬಹುದು. ಗೃಹಖಾತೆ, ಹಣಕಾಸಿನ ಖಾತೆ, ವಾಣಿಜ್ಯಖಾತೆ, ಮತ್ತು ವಿದೇಶಾಂಗ ಖಾತೆಗಳ ಅಧಿಕಾರದಲ್ಲಿರುವ ಭಾರತೀಯ ಮಂತ್ರಿಗಳ ವರ್ಚಸ್ಸು ಅಧಿಕಾರ ಪ್ರಭಾವಗಳು ಅಸಾಮಾನ್ಯ ಶಕ್ತಿಗಳಾಗಿರುತ್ತವೆ. ವ್ಯಾಸ್‌ರಾಯರು ಮಾತ್ರವಲ್ಲ, ಇಡೀ ಬ್ರಿಟಿಷ್ ಪಾರ್ಲಿಮೆಂಟನ್ನೇ ಇವರು ಪರಿವರ್ತಿಸಿಕೊಳ್ಳಲು ಪ್ರಯತ್ನಿಸಬಹುದು.

ಮಿ. ಎಮರಿಯವರು ತಮ್ಮ ಮತದಾರರಿಗೆ ಕೊಟ್ಟ ಒಂದು ಭಾಷಣದಲ್ಲಿ "ಈಗ ವೇವೆಲ್ ಯೋಜನೆಯನ್ನು ಒಪ್ಪಿ ಭಾರತೀಯರು ಒಂದಾಗಿ ಆಡಳಿತ ನಿರ್ವಹಿಸಲು ಪ್ರಾರಂಭಿಸಿದರೆ ಮುಂದೆ ಮೂರೇ ತಿಂಗಳಲ್ಲಿ ಅವರು ಸ್ವತಂತ್ರ ರಾಜ್ಯ ಘಟನೆಯನ್ನು ನಡೆಸುವವರಾಗುವರು" ಎಂದು ಭರವಸೆಕೊಟ್ಟಿರುವರಂತೆ.

ಬೊಂಬ್ಯಾಯಿಂದ ಸಿಮ್ಲಾಕ್ಕೆ ಹಾರುತಿದ್ದ ವಲ್ಲಭಾಯ್ ಪಟೇಲರು ಡಿಲ್ಲಿಯಲ್ಲಿ ಕೊಂಚ ಕಾಲ ವಿಶ್ರಮಿಸಿದ್ದರು. ಆಗಲೂ ಪತ್ರಿಕಾ ಪ್ರತಿನಿಧಿಗಳು ಅವರನ್ನು ಮುತ್ತಿದಾಗ ಕೊಟ್ಟ ಒಂದು ಹೇಳಿಕೆಯಲ್ಲಿ "ಅಧಿಕಾರ ಬೇಡವೆಂದು ಕೊಂಗ್ರೆಸು ಎಷ್ಟೊ ಸಮಯ ದೂರ ನಿಂತಿತ್ತು. ಆಗಲೀಗಿನವರು ಆ ಸ್ಥಾನ ವಹಿಸಿ ಆಡಳಿತ ವಹಿಸಿಕೊಂಡರು ಈಗ ಬೇಕಾದರೆ ಅವರು ಸ್ವಲ್ಪ ವಿಶ್ರಮಿಸಲಿ" ಎಂದರು.

ಕೆಲ ಸಮಯದ ಹಿಂದೆ ಬರ್ಮಾ ದ್ವೀಪದ ಗವರ್ನರ್ ಪದವಿಯಿಂದ ನಿವೃತ್ತರಾದ ಡ್ಯೂಕ್ ಅಫ್. ವಿಂಡ್ಸರರನ್ನು ಕೆನಡದ ಗವರ್ನರ್ ಜನರಲ್ ಆಗಿ ನೇಮಿಸುವರೆಂದು ವದಂತಿ ಇದೆ. ತಮ್ಮ ಸ್ಥಾನಮಾನಕ್ಕೆ ತಕ್ಕದಾದ ಯಾವ ಉದ್ಯೋಗವನ್ನಾದರೂ ವಹಿಸುವೆನೆಂದು ಡ್ಯೂಕರು ತಿಳಿಸಿರುವರಂತೆ.

ಕಮ್ಯೂನಿಸ್ಟರು ೧೯೪೨ರ ನಂತರ ವಹಿಸಿದ ಧೋರಣೆಯು ತಪ್ಪೆಂದು ಅಭಿಪ್ರಾಯ ಸೂಚಿಸಿದ ಪಂಡಿತ್ ಜವಾಹರಲಾಲ್ ನೆಹರುಗಳಿಗೆ ಆ ಪಕ್ಷದ ಪ್ರಮುಖ ಮುಖಂಡರೊಬ್ಬರು "ಈ ಕುರಿತು ಪಂಡಿತ್‌ಜಿಯವರು ಪುನರಾಲೋಚಿಸುವುದೊಳಿತು". ಎಂದು ಸೂಚಿಸಿರುವರು ತಾವು ಸರಕಾರಿ ಪಕ್ಷ ವಹಿಸಿ "ಇದು ಜನರ ಯುದ್ಧವೆಂದು ಹೇಳುವುದಕ್ಕೆ ಯೋಗ್ಯ ಕಾರಣಗಳನ್ನು ಅವರು ಕೊಟ್ಟಿರುವರು.

೧೭೮೮ರಲ್ಲಿ ಮೊತ್ತ ಮೊದಲಿಗೆ 'ಭಗವತ್‌ಗೀತೆ"ಯ ರಷ್ಯನ್ ಭಾಷಾಂತರವು ಪ್ರಕಟಿಸಲ್ಪಟ್ಟಿತು. ೧೮೪೭ರಲ್ಲಿ ಅಂದರೆ ಸುಮಾರು ನೂರುವರ್ಷಗಳ ಹಿಂದೆ ನಳದಮಯಂತಿಯ ಕಥೆಯು ರಷ್ಯನ್ ಭಾಷೆಗೆ ಪರಿವರ್ತಿತವಾಯಿತು. ನಂತರ ಒಂದೊಂದಾಗಿ ಅನೇಕ ಪ್ರಾಚೀನ ಸಂಸ್ಕೃತ ಕಾವ್ಯಗಳೂ, ನಾಟಕ ಕೃತಿಗಳೂ ಭಾಷಾಂತರಿಸಲ್ಪಟ್ಟವು.

ಗುಲಾಬಿ

ಆ ಈರ್ವ ತರುಣಿಯರು ಹೂವಿನ ರಾಶಿಯಲ್ಲಿ ಹುಗಿಯಲ್ಪಟ್ಟಂತೆ ತೋರುತಿದ್ದರು. ಒಂದು ದೊಡ್ಡ ಹೂವು ತುಂಬಿದ ಬುಟ್ಟಿಯಂತೆ ಕಾಣುವ ನಾಲ್ಕು ಚಕ್ರದ ಕುದುರೆ ಬಂಡಿಯಲ್ಲಿ ಅವರು ಇಬ್ಬರೇ ಪ್ರತ್ಯೇಕವಾಗಿದ್ದರು. ಅವರ ಎದುರುಗಡೆಯ ಸೇಟಿನ ಸೀಟಿನಲ್ಲಿರುವ ಎರಡು ದೊಡ್ಡ ಬುಟ್ಟಿಯಲ್ಲಿ ನೇರಳೆ ಹೂಗಳಿದ್ದುವು. ಅನೃತವಾಗಿರದ, ನುಣುಪಾದ ಚರ್ಮವುಳ್ಳ ಅವರ ಮೊಣಕಾಲಿನ ಮೇಲೆ ಗುಲಾಬಿ ಹೂವುಗಳ ರಾಶಿಯೊಂದಿತ್ತು. ಅದರೊಂದಿಗೆ ನಾನಾ ತರದ ಹಲವು ಬಣ್ಣಗಳ ಇತರ ಹೂವುಗಳಿದ್ದುವು. ಸಿಲ್ಕಿನದಾರದಿಂದ ಕಟ್ಟಲ್ಪಟ್ಟ ಆ ಹೂ ರಾಶಿಯ ಭಾರಕ್ಕೆ ಅವರು ಜಜ್ಜಿ ಹೋಗುವರೋ ಎಂದು ತೋರುತ್ತಿತ್ತು. ಒಬ್ಬಳು ನೀಲ ಇನ್ನೊಬ್ಬಳು ಕಿತ್ತಳೆ ಬಣ್ಣದ ಮೇಲಂಗಿಯನ್ನು ತೊಟ್ಟಿದ್ದರು. ಹೂ ರಾಶಿಯ ಮೇಲ್ಭಾಗದಲ್ಲಿ ಅವರ ಈ ರವಕೆ ಭಾಗಗಳೂ ಹೆಗಲೂ ಮಾತ್ರ ಕಾಣುತಿದ್ದುವು.

ಗಾಡಿ ಓಡಿಸುವವ ಚಾಟಿಗೆ ಹೂಗಳನ್ನು ಕಟ್ಟಿದ್ದನು. ಗೋಡೆ ಬಳಿಯ ಹೂಗಳಿಂದ ಕುದುರೆಯ ಶಿರಗಳು ಅಲಂಕರಿಸಲ್ಪಟ್ಟಿದ್ದುವು. ಬಂಡಿಯ ಚಕ್ರದ ಅಡ್ಡ ಕೋಲುಗಳಿಗೂ ಹೂಗಳನ್ನು ಸುತ್ತಿದ್ದರು. ದೀಪಗಳಿದ್ದುವಲ್ಲಿ ಎರಡು ಬೃಹದಾಕೃತಿಯ ಹೂಹಾರಗಳನ್ನು ತೂಗಿಸಲಾಗಿತ್ತು. ಇವು ಆ ಪುಷ್ಪಯುಕ್ತ ಮೃಗದ ಕಣ್ಣುಗಳಂತೆ ಶೋಭಿಸುತಿದ್ದುವು.

ಎಂಟ್ಬಾಬ್ ರಸ್ತೆಯ ಕಡೆಗೆ ಗಾಡಿಯು ಸಾಗುತಿತ್ತು. ಅದರ ಹಿಂದೆ ಇದೇ ರೀತಿ ಶೃಂಗರಿಸಲ್ಪಟ್ಟ ಇತರ ಗಾಡಿಗಳ ಗುಂಪೇ ಬರುತಿತ್ತು. ಕಾರಣ ಅಂದು ಕೇನ್ಸ್‌ನಲ್ಲಿ ಪುಷ್ಪ ಹಬ್ಬ. ಅಂದು ಒಂದು ಪುಷ್ಪ ಯುದ್ಧ ನಡೆಯಲಿದೆ.

ಅವರೆಲ್ಲರೂ 'ಯುದ್ಧ' ನಡೆಯುವ ಪೊನ್ಸಿಯರ್ ಉಪವನಕ್ಕೆ ಬಂದರು. ಅಂತ್ಯವಿಲ್ಲದ ಮಾಲೆಯಂತೆ ಸ್ತ್ರೀಭರಿತ ಗಾಡಿಗಳ ಸಾಲುಗಳು ಬರುತ್ತ ಹೋಗುತ್ತಲಿದ್ದುವು. ಒಂದು ರಥದಿಂದ ಇನ್ನೊಂದಕ್ಕೆ ಹೂಗಳನ್ನೂ ಬಿಸುಡುತಿದ್ದರು. ಹೂವಿನ ಎಸಳು ಗರಿಗಳಂತೆ ಗಾಳಿಯಲ್ಲಿ ಹಾರುತಿದ್ದುವು. ಕೆಲವು ಸುಂದರ ಮುಖಗಳ ಮೇಲೆ ಬೀಳುತಿದ್ದುವು. ಮಾರ್ಗದಲ್ಲಿ ಬಿದ್ದವುಗಳನ್ನು ಹೆಕ್ಕಲು ಚಿಕ್ಕ ಮಕ್ಕಳ ಒಂದು ಸೈನ್ಯವೇ ಸಿದ್ಧವಾಗಿತ್ತು.

ದಾರಿಯ ಬದಿಯಲ್ಲಿ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದು ಉತ್ಸುಕತೆಯಿಂದ ಆದರೆ ಬಹಳ ಶಿಸ್ತಿನಿಂದ ಮೆರವಣಿಗೆಯನ್ನು ನೋಡುತಿದ್ದರು. ಪುಂಡ ಜನರು ಶ್ರೀಮಂತರೊಂದಿಗೆ ಸೇರಿ ಗಲಾಟೆ ಮಾಡದಂತೆ ಅಶ್ವರೂಢರಾದ ಪೋಲೀಸರು ಕಾಲಿನಿಂದ ಒತ್ತಿ ಒತ್ತಿ ಜನಸಂದಣಿಯನ್ನು ಹಿಂದಕ್ಕೆ ದೂಡುತಿದ್ದರು.

ಗಾಡಿಯಲ್ಲಿ ಕೂತವರು ಒಬ್ಬರಿಗೊಬ್ಬರು ಕೂಗಿಕೊಳ್ಳುತ್ತ, ಸ್ನೇಹಿತರ ಹೆಸರು ಹೇಳಿ ಒದರುತ್ತ ಹೂವಿನಿಂದ ಹೊಡೆದಾಡಿಕೊಳ್ಳುತಿದ್ದರು. ಒಂದು ಗಾಡಿಯಲ್ಲಿ ಕೆಂಪು ಉಡುಪುಧಾರಿಗಳಾಗಿದ್ದ ತರುಣಿಯರು ತುಂಬಿದ್ದು ನೀರು ಕನ್ನೆಯರಂತೆ ಕಂಗೊಳಿಸುತಿದ್ದು ಜನತೆಯ ಗಮನವನ್ನು ಸೆಳೆಯುತಿದ್ದರು. ರಾಜಕೀಯದ ಓರ್ವ ಸಭ್ಯ ಗೃಹಸ್ಥನು ರಬ್ಬರಿನ ದಾರಕ್ಕೆ ಕಟ್ಟಿದ ಹೂಮಾಲೆಯನ್ನು ಮೇಲಿಂದಮೇಲೆ ಗಾಡಿಯಲ್ಲಿನ ತರುಣಿಯರ ಮೇಲೆ ಎಸೆಯುತಿದ್ದು ಅದು ಅವರ ಮುಖಕ್ಕೆ ಬಡಿದಾಕ್ಷಣ ತರುಣಿಯರು ತಲೆ ಬಗ್ಗಿಸಿ ಏಟಿನಿಂದ ತಮ್ಮನ್ನು ಕಾಯ್ದುಕೊಳ್ಳಲು ಪ್ರಯತ್ನಿಸುತಿದ್ದರು. ರಬ್ಬರಿನ ದಾರವನ್ನು ಕೈಯಲ್ಲಿ ಬಿಗಿಯಾಗಿ ಹಿಡಕೊಂಡಿದ್ದರಿಂದ ಒಂದು ಸಲ ಬಿಸಾಡಿದ ಮಾಲೆ ಪುನಃ ಅವರ ಕೈ ಸೇರುತಿತ್ತು. ಕೂಡಲೇ ಬೇರೆಯವರ ಮುಖಕ್ಕೆ ಅದನ್ನು ಬಿಸಾಡುತಿದ್ದನು.

ಆ ಈರ್ವ ತರುಣಿಯರು ತಾವು ತುಂಬಿಕೊಂಡ ಹೂವುಗಳನ್ನು ಎಸೆದು ಬರಿದುಮಾಡಿ ಪ್ರತಿಯಾಗಿ ಹಾರಗಳ ಸುರಿಮಳೆಯನ್ನೇ ಪಡೆಯುತಿದ್ದರು. ಒಂದು ಗಂಟೆಯ ಈ ಯುದ್ಧದ ನಂತರ ಅವರು ತಮ್ಮನ್ನು ಸಮುದ್ರ ದಂಡೆಯ ಬಳಿಗೆ ಒಯ್ಯುವಂತೆ ಗಾಡಿಯವನಿಗೆ ಸೂಚಿಸಿದರು.

ಈಸ್ಟೆಲ್ ಬೆಟ್ಟದ ಹಿಂದೆ ಆಗಲೇ ಸೂರ್ಯನು ಮುಳುಗುತಿದ್ದನಾದುದರಿಂದ ಅಗ್ನಿವರ್ಣದಿಯ ಮುಂದೆ ನಿಂತ ದೈವಗಳ ನೆರಳಂತೆ ಆ ಬೆಟ್ಟಗಳು ನಿಂತಿದ್ದುವು. ಇದರ ಬಳಿ ಸಮುದ್ರವು ನೀಲವೂ ಸ್ಫುಟವೂ ಆಗಿ ದಿಗಂತದ ತನಕ ಚಾಚಿದ್ದು ಅಲ್ಲಿಂದ ಆಕಾಶದೊಂದಿಗೆ ಸೇರಿಕೊಂಡಿತ್ತು. ದೂರದಲ್ಲಿ ನಿಲ್ಲಿಸಿದ ಹಡಗು ಪಡೆಗಳು ರಕ್ಷಿಸ ಪ್ರಾಣಿಗಳಂತೆ ತೋರುತಿದ್ದುವು. ನೀರಿನ ಮೇಲೆ ಚಲಿಸದೆ ನಿಂತಿರುವ ಅವು ಉಬ್ಬಿದ ಬೆನ್ನುಳ್ಳ ಉಕ್ಕಿನ ಕವಚ ಧರಿಸಿ, ಹಾಯಿಗಳೆಂಬ ಕೇಸರವನ್ನು ತೆಲಿಸಿ, ಕತ್ತಲಾಡೊಡನೆ ದೀಪಗಳೆಂಬ ಕಣ್ಣುಗಳಿಂದ ದುರುದುರನೆ ಕೆರಳಿ ನೋಡುವ ವಿಚಿತ್ರ ಮೃಗದಂತೆ ಕಾಣುತಿದ್ದುವು.

ಆ ತರುಣಿಯರು ರೋಮದ ನಿಲುವಂಗಿಯನ್ನು ತೊಟ್ಟು ಆ ದೃಶ್ಯವನ್ನು ಮೇಲಿಂದಮೇಲೆ ನೋಡುತಿದ್ದರು. ಕಡೆಗೆ ಅವರಲ್ಲೊಬ್ಬಳೆಂದಳು:

"ಮಾರ್ಗರ್‍ಯಾಟಳೇ ಈ ಸಂಧ್ಯಾಕಾಲದ ಸಮಯವು ಅದೆಷ್ಟು ಆಹ್ಲಾದಕರವಾಗಿದೆ. ಪ್ರತಿಯೊಂದೂ ಸಂತೋಷಭರಿತವಾಗಿದೆ ಅಲ್ಲವೆ?" ಇನ್ನೊಬ್ಬಳು ಉತ್ತರವಿತ್ತಳು: "ನಿಜವಾಗಿ ಇದು ಬಹಳ ಮನೋಹರವಾಗಿದೆ. ಆದರೆ ಯಾವಾಗಲೂ ಒಂದು ಮಾತ್ರಲೋಪವಾಗಿದೆ."

"ಅದೇನದು? ನನ್ನ ಮಟ್ಟಿಗೆ ನಾನು ಸಂಪೂರ್ಣ ಹರ್ಷಚಿತ್ತಳಾಗಿದ್ದೇನೆ. ನನಗೆ ಬೇರೇನೂ ಬೇಕಾಗಿಲ್ಲ".

"ಹೌದೊ? ಬಹುಶ್ಯ ನೀನು ಹಾಗೆ ನೆನಸುವುದು. ಆದರೆ ಅದೆಷ್ಟು ಒಳ್ಳೇ ಸೌಲಭ್ಯ ಸುಖಗಳೂ ನಮ್ಮ ಈ ದೇಹದ ಸುತ್ತಲಿದ್ದರೂ-ನಮ್ಮ ಹೃದಯಕ್ಕೆ ಮಾತ್ರ ಬೇರೊಂದು ಹೆಚ್ಚಿನ ವಸ್ತುಬೇಕೆಂದು ನಾವು ಕೋರುತ್ತೇವೆ."

ಮುಗುಳ್ನಗುತ್ತ ಇನ್ನೊಬ್ಬಳೆಂದಳು: "ಸ್ವಲ್ಪ ಪ್ರಣಯ?"

"ಹೌದು"

ಮೌನದಿಂದ ಅವರು ಎದುರುಗಡೆ ನೋಡುತ್ತಲಿದ್ದರು. ನಂತರ ಮಾರ್ಗರ್‍ಯಾಟ್ ಎಂಬವಳೆಂದಳು: "ಅದಿಲ್ಲದಿದ್ದರೆ ನನಗೆ ಈ ಜೀವ ಆಧಾರವಿಲ್ಲದಂತೆ ಅನುಭವವಾಗುತ್ತದೆ. ನಾನು ಯಾರಿಂದಲೂ ಪ್ರೀತಿಸಲ್ಪಡಬೇಕು-ನಾಯಿಯಿಂದಾದರೂ ಚಿಂತಿಲ್ಲ-ಸ್ಯಾಮೋನಳೇ, ನೀನು ಏನುಬೇಕಾದರೂ ಹೇಳು ನಾವೆಲ್ಲರೂ ಆ ವಿಷಯದಲ್ಲಿ ಒಂದೇ."

"ಪ್ರಿಯೇ, ಅಲ್ಲ, ಹಾಗಲ್ಲ. ಅಸಾಮಾನ್ಯನಿಂದ ಪ್ರೀತಿಸಲ್ಪಡುವ ಬದಲು ಪ್ರೀತಿಸಲ್ಪಡಬಾರದೆಂದೇ ನನ್ನ ಅಭಿಮತ. ಉದಾಹರಣೆಗಾಗಿ ಆ ಆ ಅವನಿಂದ ಪ್ರೀತಿಸಲ್ಪಡುವುದು ನನಗೆ ಒಪ್ಪುತ್ತದೆ ಎಂದು ತಿಳಿದಿರುವಿಯೇನು?"

ಅವಳು ಆಸುಪಾಸಿನ ಪ್ರದೇಶದ ಮೇಲೆ ದೃಷ್ಟಿ ಪಸರಿಸುತ್ತಾ ಅಲ್ಯಾರಾದರೂ ತನಗೆ ಪ್ರೀತಿ ಮಾಡುವವರಿರಬಹುದೇ ಎಂದು ಮೌನವಾಗಿ ನೋಡಿದಳು. ಇಡೀ ದಿಗಂತವನ್ನು ಸಂಚರಿಸಿ ಬಂದ ಮೇಲೆ ಅವಳ ದೃಷ್ಟಿಯು ಮೆಲ್ಲನೆ ಕುದುರೆ ಓಡಿಸುವ ಜವಾನನ ಹೊಳೆಯುವ ಕೋಟು ಗುಂಡಿಯ ಮೇಲೆ ಬಿತ್ತು ನಗುತ್ತ ಅವಳೆಂದಳು: ಆ ಆ ಕುದುರೆ ಜವಾನನಿಂದ?"

ಮಾರ್ಗರೇಟಳು ಉತ್ತರ ಕೊಡುವಾಗ ಸ್ವಲ್ಪವೂ ನಗಲಿಲ್ಲ.

"ಮನೆಯೊಳಗಿನನೊಬ್ಬನಿಂದಲೇ ಪ್ರೀತಿಸಲ್ಪಡುವುದರಲ್ಲಿ ತುಂಬಾ ಸಾರಸ್ಯವಿದೆಯೆಂಬುದರ ಕುರಿತು ನಾನು ನಿನಗೆ ಭರವಸೆ ಕೊಡುತ್ತೇನೆ. ಇಂತಹದು ನನಗೆ ಎರಡು ಮೂರುಸಲ ಸಂಭವಿಸಿದೆ. ಅವರು ತಮ್ಮ ಕಣ್ಣುಗಳನ್ನು ಎಷ್ಟು ಚಮತ್ಕಾರವಾಗಿ ತಿರುಗಿಸುತ್ತಾರೆ ಗೊತ್ತುಂಟೊ! ನಮಗೆ ನಗುಬರದಿರುವುದಿಲ್ಲ. ಅವನಿಂದ ಹೆಚ್ಚೆಚ್ಚು ಪ್ರೀತಿಸಲ್ಪಡುತಿದ್ದಹಾಗೆ ಅವಳ ವರ್ತನೆಯೂ ಹೆಚ್ಚೆಚ್ಚು ಕಠಿಣ ತರದ್ದಾಗುತ್ತದೆ. ಕಾರಣ ತಾನವನಿಂದ ಪ್ರೀತಿಸಲ್ಪಡುತ್ತೇನೆಂದು ಯಾರಾದರೂ ಕಂಡು ಹಿಡಿವಂತಾದರೆ ತುಂಬಾ ಅಪಹಾಸ್ಯಕ್ಕೆ ಗುರಿಯಾಗಬೇಕಾಗುವುದು"

ತರುಣಿ ಸ್ಯಾಮೋನಳು ಕೇಳಿದಳು. ಅವಳ ದೃಷ್ಟಿ ನೇರವಾಗಿ ಅವಳೆದುರಿನಲ್ಲೇ ನಟ್ಟಿತ್ತು. ಅವಳು ಹೇಳಿದಳು:

"ಇತರ ಮನುಷ್ಯರಲ್ಲಿದ್ದಂತೆ ಅದನ್ನು ನಾನು ಅವರಲ್ಲೂ ಕಂಡೆನು. ಅವರೂ ಥೇಟ್ ಮೂರ್ಖರಂತಾಗುತ್ತಾರೆ."

"ಪ್ರೀತಿ ಮಾಡುವ ಇತರರು ಅವರಷ್ಟು ಮೂರ್ಖರಲ್ಲವೆಂದೇ ನನ್ನ ಭಾವನೆ."

"ಗೆಳೆಯಳೇ ಅವರು ಥೇಟ್ ಶುಂಠರು, ಅವರಿಗೆ ಮಾತುಕತೆಯಾಡಲು ತಿಳಿಯುವುದಿಲ್ಲ, ಯಾವುದನ್ನು ತಿಳಿದುಕೊಳ್ಳಲಿಕ್ಕೂ ಬರುವುದಿಲ್ಲ."

"ಮನೆಯೊಳಗಿನಿಂದ ಪ್ರೀತಿಸಿಕೊಂಡಾಗ ನಿನ್ನ ಮೇಲೆ ಅದ್ಯಾವ ಪರಿಣಾಮಗಳಾದುವು? ನಿನಗೆ ದುಃಖ ಇಲ್ಲವೆ ಹೆಮ್ಮೆ ಉಂಟಾಯಿತೆ?"

"ದುಃಖ? ಇಲ್ಲ, ಹೆಮ್ಮೆ ಹೌದು ಸ್ವಲ್ಪ ಉಂಟಾಯಿತು. ಅವನು ಯಾರೇ ಇರಲಿ, ಸ್ತ್ರೀಯರು ಮನುಷ್ಯನ ಪ್ರೀತಿಯಿಂದ ಉಬ್ಬಿಕೊಳ್ಳುತ್ತಾರೆ."

"ಓ! ಮಾರ್ಗರೇಟಳೇ! ಈಗ....

"ಸರಿ ಆಪ್ತಳೆ ಸರಿ! ತಾಳು! ನನಗೊದಗಿದೊಂದು ಸಾಹಸ ಪ್ರಸಂಗವನ್ನು ನಿನಗೆ ವಿವರಿಸುತ್ತೇನೆ ಅಂತಹ ಸಂದರ್ಭಗಳಲ್ಲಿ ನಮ್ಮೊಳಗೆ ಏನ್ನೆಲ್ಲ ಅನರ್ಥ ಪರಿಸ್ಥಿತಿಗಳು ಉಪಸ್ಥಿತವಾಗುತ್ತವೆ ಎಂಬುದನ್ನು ತಿಳಿಯುವೆ.

"ನಾಲ್ಕು ವರ್ಷಗಳ ಹಿಂದೆ ನಮ್ಮ ಮನೆಕೆಲಸದವಳು ಬಿಟ್ಟುಹೋದಳು. ಆ ನಂತರ ಒಬ್ಬಳ ಹಿಂದೆ ಒಬ್ಬಳಂತೆ ಐದಾರು ಜನರನ್ನು ನಾನು ಕೆಲಸಕ್ಕಿಟ್ಟರೂ, ಎಲ್ಲರೂ ಅಯೋಗ್ಯರಾಗಿಯೇ ಕಂಡು ಬಂದರು. ಕಡೆಗೆ ಒಂದು ಸಲ ಪತ್ರಿಕೆಯ ಜಾಹೀರಾತಿನಲ್ಲಿ ಒಬ್ಬಳ ಕುರಿತು ಓದಿದೆ. ಅವಳಿಗೆ ಸ್ವಲ್ಪ ಇಂಗ್ಲಿಷೂ ಗೊತ್ತಿತ್ತು. ಹೊಲಿಗೆ ಕೆಲಸ, ತಲೆಬಾಚುವುದು ಮುಂತಾದ ಶೃಂಗಾರದ ಎಲ್ಲಾ ಉದ್ಯಮದಲ್ಲೂ ಅವಳು ನುರಿತವಳೆಂದು ಶಿಫಾರಸು ಪಡೆದಿದ್ದಳು.

"ಅವಳಿಗೆ ಪತ್ರ ಬರೆದಾಗ ಮರುದಿನ ಅವಳು ನನ್ನೆದುರು ಹಾಜರಾದಳು ಅವಳು ಉದ್ದವೂ ತೆಳಗೈಯೂ ಆಗಿದ್ದು ಅಂಜು ಸ್ವಭಾವದವಳಿದ್ದಂತೆ ತೋರಿತು. ಅವಳ ಕಪ್ಪಾದ ತಲೆಕೂದಲು ಆಕರ್ಷಕ ಬಣ್ಣ ಇವೆಲ್ಲವೂ ನನ್ನ ಮನಸ್ಸಿಗೆ ತಕ್ಷಣ ಒಪ್ಪಿಗೆಯನ್ನುಂಟುಮಾಡಿದವು. ಅವಳು ಓರ್ವ ಇಂಗ್ಲಿಷ್ ಮಹಿಳೆಯ ಬಳಿ ಹತ್ತು ವರ್ಷಗಳಿದ್ದುದರಿಂದ ಅವಳ ಶಿಫಾರಸು ಪತ್ರವನ್ನು ತೋರಿಸಿದಳು.

"ಅವಳು ಕೆಲಸ ಬಿಟ್ಟಿದ್ದು ಅವಳ ಸ್ವಂತ ಮನಸ್ಸಿನಿಂದಲ್ಲದೆ ಬೇರೆ ಯಾವ ಕಾರಣದಿಂದಲ್ಲವೆಂತಲೂ, ಅವಳ ಕೆಲಸದ ವಿಷಯವಾಗಿ ಆಕ್ಷೇಪ ತೆಗೆಯುವಂತಿಲ್ಲವೆಂದೂ, ಆದರೆ ಅವಳಲ್ಲಿ ಸ್ವಲ್ಪ ಫ್ರೆಂಚ್ ತರುಣಿಯರಿಗೆ ಸಹಜವಾದ ವೈಯಾರ ಹಾವಭಾವ, ಅತಿ ಮಾತುಕತೆಗಳಿವೆಯೆಂದೂ ಆ ಪತ್ರದಲ್ಲಿ ಬರೆದಿತ್ತು.

"ವೈಯಾರದ ಕುರಿತು ಬರೆದ ವಿಷಯವನ್ನು ಕುರಿತು ಓದುವಾಗ ನನಗೆ ಸ್ವಲ್ಪ ನಗುಬಂತು. ನಾನವಳನ್ನು ಕೂಡಲೇ ಕೆಲಸಕ್ಕೆ ಇಟ್ಟುಕೊಂಡೆ. ನನ್ನ ಮನೆಗೆ ಬಂದ ದಿವಸವೇ ಅವಳು ತನ್ನನ್ನು 'ರೋಸ್' (ಇಲ್ಲವೆ ಗುಲಾಬಿ) ಎಂದು ಕರೆದುಕೊಂಡಳು.

(ಬರುವ ವಾರಕ್ಕೆ ಮುಂದರಿಯುವುದು.)

ಯುದ್ಧದಲ್ಲಿ ಘಾಸಿಯಾದ ಮರಗಳು

ಜಪಾನಿನಲ್ಲಿ ಮರಹುಡಿಯಿಂದ ರೊಟ್ಟಿ

ಕಲ್ಪವೃಕ್ಷಗಳೂ, ವಿಜ್ಞಾನ ಪರಿಶೋಧಕರೂ

ಯುದ್ಧದಲ್ಲಿ ನಾಶಹೊಂದಿದವರಲ್ಲಿ ಮಿತ್ರ ಮತ್ತು ಶತ್ರು ದೇಶಗಳ ಮರಗಳನ್ನೂ ಗುಣಿಸಬೇಕಾಗುವುದು. ಇಂದು ಎಂದಿಗಿಂತಲೂ ನಾವು ಮರವನ್ನು ಉಪಯೋಗಿಸುತಿದ್ದೇವೆ. ನಮ್ಮ ಮಟ್ಟಿಗೆ ವೃಕ್ಷಗಳು ಒಂದು ನಿಧಿಯೇ ಆಗಿಬಿಟ್ಟಿದೆ.

ವೃಕ್ಷಗಳ ಉಪಯುಕ್ತತೆಯು ಇಂದು ಹಿಂದಿಗಿಂತಲೂ ಹೆಚ್ಚಾಗಿದೆ. ದಿನನಿತ್ಯದ ಜನಜೀವನ ವ್ಯವಹಾರದಲ್ಲಿ ಮರಗಳ ಉಪಯೋಗವು ಅನಿರ್ವಾಹವೆಂಬಂತೆಯೂ ಆಗಿದೆ ಎಂದರೆ ಹೆಚ್ಚಲ್ಲ. ಇಂದು ಎಂತಹದನ್ನಾದರೂ ಮರದಿಂದಲೇ ಮಾಡಬಹುದಾಗಿದೆ ಎಂದಾಗ ಆಶ್ಚರ್ಯವಾಗದಿರಲಿಕ್ಕಿಲ್ಲ.

ಈ ವಿಷಯವನ್ನು ಸಾರ್ವಜನಿಕರು ಇನ್ನೂ ಸರಿಯಾಗಿ ಮನಗಂಡಿಲ್ಲವಾದರೂ ಮರಗಳ ಪ್ರಾಮುಖ್ಯತೆಯೇ ಒಂದು ಅಂತರಾಷ್ಟ್ರೀಯ ಆವಶ್ಯಕತೆಎನಿಸಿದೆ. ಮರಗಳ ಮೇಲೆ ಹೊಂದಿಕೊಂಡೇ ಜರ್ಮನರು ಒಂದು ಚಾತುರ್ವಾರ್ಷಿಕ ಯೋಜನೆಯನ್ನು ರಚಿಸಿದ್ದು ಈಗ ಯುದ್ಧ ಕೈದಿಯಾಗಿರುವ ಫೀಲ್ಡ್ ಮಾರ್ಶಲ್ ಗೋರಿಂಗರು ಸ್ವತಃ ಅದರ ಮೇಲ್ವನಿಖಿ ನಡೆಸುತಿದ್ದರು.

ಮರ! ಮರದಿಂದೇನು ಮಾಡಬಹುದೆಂದು ತಿಳಿದಿರುವಿರಾ? ಅದರಿಂದ ಸಕ್ಕರೆ, ಕಾಗದ, ಕೃತಕ ರೇಶ್ಮೆ, ಪಾರದರ್ಶಕ ಸೆಲೆಫೋನ್ ಕಾಗದ, ಮದ್ಯಸಾರ, ಟರ್ಪೆಂಟೈನ್, ವಾರ್ನಿಶ್, ಇವೇ ಮುಂತಾದ ಕೈಗಾರಿಕೆಗಳಿಗೆ ಆವಶ್ಯಕವಾದ ವಸ್ತುಗಳನ್ನು ತಯಾರಿಸಬಹುದಲ್ಲದೆ, ಇತ್ತೀಚೆಗೆ ಜಪಾನಿಯರು ಮರದ ಹುಡಿಯಿಂದ ರುಚಿಕರವೂ ಆರೋಗ್ಯಕರವೂ ಆದ ರೊಟ್ಟಿಗಳನ್ನು ಮಾಡಬಹುದೆಂತಲೂ ಕಂಡುಹಿಡಿದಿದ್ದು ಆಗಲೇ ತಮ್ಮ ಜನರಿಗೆ ಅದನ್ನು ಹೇಗೆ ಮಾಡಬೇಕೆಂದು ಪ್ರಚಾರ ನಡೆಸುತ್ತಿರುವರು.

ಇಷ್ಟುಮಾತ್ರವಲ್ಲ, ಸ್ಫೋಟಕ ಬಾಂಬು ಮತ್ತು ಗುಂಡುಗಳ ಮದ್ದುಗಳನ್ನು ತಯಾರಿಸಲಿಕ್ಕೂ ಮರವನ್ನುಪಯೋಗಿಸುವರು. ಅತೀ ಶ್ರೇಷ್ಠತರ ಉಕ್ಕನ್ನು (steel) ತಯಾರಿಸಲು ಕೆಲವೊಂದು ಜಾತಿಯ ಮರಗಳ ಇದ್ದಲನ್ನು ಉಪಯೋಗಿಸುತ್ತಾರೆ. ಈಗ ಹೆಚ್ಚಿನ ಮೋಟಾರು ವಾಹನಗಳನ್ನು ಮರಗಳ ಇದ್ದಲಿನಿಂದಲೇ ಉಂಟಾಗುವ 'ಗೇಸಿ'ನಿಂದ ಓಡಿಸುತ್ತಾರೆ.

ಮರಹುಡಿಯನ್ನು ಕೆಲವೊಂದು ಅಂಟಿನೊಂದಿಗೆ ಮಿಶ್ರಮಾಡಿ ಮತ್ತೆ ಒಣಗಿಸಿ ಹೊಸತೊಂದು ತರದ ಲಘು ಹಲಗೆಗಳನ್ನು ತಯಾರಿಸಿ ರೇಡಿಯೋ ಗ್ರಾಹಕ ಪೆಟ್ಟಿಗೆಗಳನ್ನು ಇತರ ಆಕರ್ಷಕ ಉಪಕರಣಗಳನ್ನೂ ಮಾಡುತ್ತಾರೆ. ವಿಮಾನ ನಿಲ್ದಾಣಗಳನ್ನು ಕಟ್ಟುವಾಗ ಸಣ್ಣ ಸಣ್ಣ ಮರ ತುಂಡುಗಳನ್ನು ಜೋಡಿಸಿ ತಯಾರಿಸಿದ ಕಮಾನಾಕೃತಿಯ ತೊಲೆಗಳನ್ನು ಉಪಯೋಗಿಸುತ್ತಾರೆ. ಅವುಗಳನ್ನು ಬೇಕಾದ ರೀತಿಯಲ್ಲಿ ಬಗ್ಗಿಸಬಹುದು, ಆದರೆ ಎಷ್ಟು ಬಗ್ಗಿದರೂ ಮುರಿಯಲಾರವು.

ಮರದ ತೆಳ್ಳಗಿನ ಹಲಗೆಗಳನ್ನು ಒಂದಕ್ಕೊಂದಕ್ಕೆ ಅಂಟಿನಿಂದ ಇಲ್ಲವೆ ಸಿಮೆಂಟಿನಿಂದ ಜೋಡಿಸಿ ಸಣ್ಣ ಸಣ್ಣ ವಿಮಾನಗಳನ್ನು ಮಾಡಲು ಉಪಯೋಗಿಸುತ್ತಾರೆ. ಈಗ ಲೋಹಗಳು ಕಮ್ಮಿಯಾಗಿರುವಾಗ ಇಂತಹ ಹಲಗೆಗಳು ಬಹಳ ಉಪಯುಕ್ತವೆಂದು ಹೇಳಲಾಗಿದೆ.

ಬೆಂಕಿಪೆಟ್ಟಿಗೆಗಳು ನೋಡಲು ಚಿಕ್ಕವಾದರೂ ಅವುಗಳ ತಯಾರಿಕೆಗೆ ದೊಡ್ಡ ದೊಡ್ಡ ಕಾಡುಗಳೇ ಬರಿದಾಗುತ್ತಿವೆ. ಕುರ್ಚಿ, ಮೇಜು, ಕಪಾಟು ಮುಂತಾದವುಗಳಿಗೆ ಎಂದೆಂದಿಗೂ ಮರಗಳ ಆವಶ್ಯಕತೆ ಇದೆ.

ಮರಗಳನ್ನು ಕಡಿಯುವುದು ಸುಲಭ. ಆದರೂ ಅವುಗಳನ್ನು ಬೆಳೆಸಲು ಹತ್ತೈವತ್ತು ವರ್ಷಗಳಾದರೂ ಹಿಡಿಯುವವು. ಜರ್ಮನಿಯಲ್ಲಿ ಎಂಬತ್ತು ವರ್ಷ ಬೆಳೆದ ಮರವನ್ನು ಒಂದು ದಿನ ಬೆಳಗ್ಗೆ ೭-೩೦ಕ್ಕೆ ಕಡಿಯಲು ಹಿಡಿದರು. ಮರುದಿನ ಮಧ್ಯಾಹ್ನ ಅದೇ ಮರ ವರ್ತಮಾನ ಪತ್ರಿಕೆಯ ರೂಪದಲ್ಲಿ ಹೊರಬಂತು. ದೊಡ್ಡ ದೊಡ್ಡ ಯಂತ್ರಗಳಲ್ಲಿ ಅದನ್ನು ಚೂರುಮಾಡಿ, ಹುಡಿಮಾಡಿ ಕಾಗದ ತಯಾರಿಕೆ ಯಂತ್ರಗಳಿಗೆ ಕಳುಹಿಸಿ ಕಾಗದವಾಗಿ ಅಲ್ಲಿಂದ ನೇರವಾಗಿ ವರ್ತಮಾನ ಪತ್ರಿಕಾ ಸಂಸ್ಥೆಗೆ ಕಳುಹಿಸಲ್ಪಟ್ಟು ಅಲ್ಲಿಂದ ಅದು ಹೊರಬಿತ್ತು-ಪತ್ರಿಕೆಯಾಗಿ.

ಯುದ್ಧಾನಂತರ ಐವತ್ತು ವರ್ಷಗಳ ತನಕ ಬಿರುಸಾಗಿ ಮರಬೆಳೆಸುವ ಕೆಲಸ ನಡೆಯದಿದ್ದರೆ ಮುಂದೆ ಮರದ ತುಟ್ಟಿಯುಂಟಾಗಿ ಕಟ್ಟಿಗೆಗೂ ಇಲ್ಲ, ಪೆಟ್ಟಿಗೆಗೂ ಇಲ್ಲವಾದೀತು.

ನ್ಯೂಯೋರ್ಕಿನಲ್ಲಿ ವರ್ತಮಾನ ಪತ್ರಿಕೆಗಳನ್ನು ಮಾರಾಟ ಮಾಡುವ ಹುಡುಗರೆಲ್ಲ ಮುಷ್ಕರ ಹಿಡಿದುದರ ಪರಿಣಾಮವಾಗಿ ಆ ಮಹಾ ನಗರದ ೭೦ಲಕ್ಷ ಓದುಗರಿಗೆ "ವಾರ್ತಾ ಉಪವಾಸ" ಒದಗಿದೆ. ಮುಷ್ಕರ ಹೂಡಿದ ಕೆಲಸಗಾರರು ತಮ್ಮ ಸ್ಥಾನದಲ್ಲಿ ಕೆಲಸ ಮಾಡಲೊಪ್ಪಿದ ಇತರರಿಗೆ ಹೊಡೆ ಬಡೆಯುತ್ತಿರುವರು. ಸದ್ಯಕ್ಕೆ ವರ್ತಮಾನಗಳೆಲ್ಲ ರೇಡಿಯೋ ಮೂಲಕವೇ ಕೇಳಿಸುತ್ತಾರೆ.

"ಅಂತೂ, ನೀವು ನಿಮ್ಮ ಅರ್ಥ ಉಳಿತಾಯದಿಂದ ಒಂದು ಸೊಗಸಾದ ಸಣ್ಣ ಜಮೀನನ್ನೂ, ಉಳಿದ ಹಣದಿಂದ ಬಟ್ಟೆ, ಆಭರಣ ಮತ್ತು ಇತರ ಸಿಕ್ಕಿದ ಪದಾರ್ಥಗಳನ್ನು ಕೊಂಡುಕೊಂಡಿದ್ದೀರಿ.... ಒಳ್ಳೆಯದು, ಆಗ ಖರೀದಿಗಳು ಹೆಚ್ಚುತ್ತಿದ್ದವು, ಇನ್ನೂ ಹೆಚ್ಚು ಖರೀದಿಗೆ ಮಾರಿ ಲಾಭವನ್ನು ಹೊಂದಬಹುದೆಂದು ನೀವು ಯೋಚಿಸಿದಿರಿ. ಆದರೆ ಅಂದಿನಿಂದ ಖರೀದಿಗಳು ಇಳಿಯುತ್ತಿವೆಯೇ ಹೊರ್ತು ಏರುವ ಮಾತೇ ಇಲ್ಲ. ಈಗ ನಿಮಗೆ ಬಹಳ ದ್ರವ್ಯ ನಷ್ಟವಾಗಿರುತ್ತದೆ. ಹೀಗಾಗುವುದೆಂದು ಆ ಸಮಯದಲ್ಲಿಯೇ ನಾನು ನಿಮಗೆ ಎಚ್ಚರಿಸಿದೆನು."

ಆ ಬ್ಯಾಂಕ್ ಮ್ಯಾನೇಜರವರು ಬಹಳ ಅನುಭವಸ್ತರಾಗಿಯೂ, ವ್ಯವಹಾರ ಜ್ಞಾನವುಳ್ಳವರಾಗಿಯೂ ಇದ್ದುದರಿಂದ, ತತ್ಕಾಲದಲ್ಲಿ ಖರೀದಿಗಳು ಹೆಚ್ಚಾಗಿದ್ದರೂ, ಇಳಿಮುಖವಾಗುತ್ತಿರುವವೆಂಬುವನ್ನು ತಿಳಿದು, ಲಾಭಾಸಕ್ತಿಯಿಂದ ಪದಾರ್ಥಗಳನ್ನು ಆಗ ಕೊಳ್ಳುವುದು ಪರಿಣಾಮದಲ್ಲಿ ನಷ್ಟಕಾರಿಯಾದುದರಿಂದ, ಆ ರೀತಿ ಕೊಳ್ಳುವುದನ್ನು ತಡೆಯುವುದಕ್ಕಾಗಿ, ಅವರು ಆ ರೀತಿ ಬುದ್ಧಿವಾದವನ್ನು ಹೇಳಿದರು. ಈಗಲೂ ಕೂಡ ಅವರು ಹೇಳುವ ಬುದ್ಧಿವಾದವು ಅದೇನೆ. ನಿಮ್ಮ ಬ್ಯಾಂಕ್ ಮೇನೇಜರವರನ್ನೇ ನೀವು ಏತಕ್ಕೆ ಕೇಳಬಾರದು?

ಇಂದಿನ, ಅತ್ಯುತ್ತಮ ಮತ್ತು ಸುರಕ್ಷಿತವಾದ, ದ್ರವ್ಯ ವಿನಿಯೋಗ ಮಾರ್ಗಗಳು

ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು. ಸೇವಿಂಗ್ಸ್ ಬ್ಯಾಂಕ್ ಅಕೌಂಟುಗಳು. ಗವರ್ನ್ಮೆಂಟು ಲೋನುಗಳು. ವಿಮೆ. ಪರಸ್ಪರ ಸಹಾಯಕ ಸಂಘಗಳು. ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟುಗಳು.

ಜಮೀನುಗಳು, ಕಟ್ಟಡಗಳು, ಕೈಗಾರಿಕೆ ಸಾಮಾನುಗಳು, ವ್ಯಾಪಾರದ ಸರಕುಗಳು, ಆಭರಣಗಳು, ವಗೈರೆಗಳಲ್ಲಿ ನಿಮ್ಮ ಹಣವನ್ನು ಹಾಕಬೇಡಿರಿ. ಅವುಗಳ ಖರೀದಿಗಳು ಇಳಿಯುವ ಸಂಭವಗಳಿರುತ್ತವೆ.

ನಿಮ್ಮ ಭವಿಷ್ಯಕ್ಕಾಗಿ ಉಳಿತಾಯ ಮಾಡಿ ಭದ್ರಪಡಿಸಿರಿ. ನಾಳೆಗಾಗಿ ಇಂದೇ ಅಂದಾಜು ಮಾಡಿರಿ. ನಿಮಗೆ ಸಾಧ್ಯವಾದಷ್ಟು ಉಳಿತಾಯ ಮಾಡಿರಿ.

ಆದರೆ ನಿಮ್ಮ ಉಳಿತಾಯವನ್ನು ಸುರಕ್ಷಿತ ಮಾರ್ಗದಲ್ಲಿಯೂ, ಮತ್ತು ನಿಮಗೆ ಬೇಕಾದಾಗ ಅದು ಸಿಕ್ಕುವಂತೆಯೂ ವಿನಿಯೋಗಿಸಿರಿ.

ಗವರ್ನ್ಮೆಂಟ್ ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟ್ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ AAA 151 KN

ಬರ್ಲಿನನಲ್ಲಿ ಬಿಕ್ಕಟ್ಟು

ವಿಜಯಾನಂತರ ಮಿತ್ರ ಪಕ್ಷದವರಲ್ಲಿ ಮುಖ್ಯವಾಗಿ ತ್ರಿಶಕ್ತಿ ರಾಷ್ಟ್ರಗಳಲ್ಲಿ ಕಚ್ಚಾಟವುಂಟಾಗುವುದು ಖಂಡಿತವೆಂಬ ಕೆಲ ರಾಜಕೀಯ ತಜ್ಞರ ಅಭಿಪ್ರಾಯವು ಸತ್ಯ ಸ್ಥಿತಿಯ ರೂಪವನ್ನು ತಾಳಿದಂತೆ ಚಿಹ್ನೆಗಳು ತೋರುತ್ತವೆ. ಕಳೆದ ಗುರುವಾರ ಮಧ್ಯಾಹ್ನದಂದು ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ತಮಗಾಗಿ ನಿಶ್ಚಯಿಸಲಾದ ಕ್ಷೇತ್ರವನ್ನು ಆಕ್ರಮಿಸಬೇಕಾಗಿತ್ತು. ಆದರೂ ಮಾರ್ಶಲ್ ಝುಕೋವರು ತಮ್ಮ ಸೈನಾಧಿಕಾರಿಗಳಿಗೆ ಬರ್ಲಿನಿನ ಯಾವ ಭಾಗದಿಂದಲೂ ಕವಲ ಬಾರದೆಂದು ಹುಕುಂ ಕೊಟ್ಟುಬಿಟ್ಟರು. ಇದರಿಂದ ಮೊದಲು ಯೋಚಿಸಿಕೊಂಡ ಏರ್ಪಾಡು ಕಾರ್ಯ ರೂಪಕ್ಕೆ ಬರದಾಯಿತು.

ಈಗ ರಷ್ಯನರು ಬರ್ಲಿನಿನ ದುರವಸ್ಥೆಯು ಬಹಳ ಕಠಿಣ ತರದ್ದಾಗಿರುವುದರಿಂದ ಅಲ್ಲಿಂದ ತಾವು ಒಂದೇ ಸವನೆ ಹಿಂದಕ್ಕೆ ಸರಿದರೆ ಅಸ್ತವ್ಯಸ್ತತೆವುಂಟಾಗುವುದೆಂದು ಮೇಲಿನ ಧೋರಣೆ ಅನುಸರಿಸಿರುವರೆಂದು ತಿಳಿದು ಬರುತ್ತದೆ. ಅಂತೂ ಬರ್ಲಿನನ್ನು ಬಿಡಲು ಒಬ್ಬರಿಗೂ ಪೂರ್ಣ ಮನಸ್ಸಿಲ್ಲವೆಂದು ತೋರುತ್ತದೆ. ಸಂಗತಿಗಳು ಇದೇ ಮಾದರಿಯಲ್ಲಿ ಮುಂದರಿದರೆ ಸದ್ಯದಲ್ಲಿ ತ್ರಿಶಕ್ತಿ ರಾಷ್ಟ್ರಗಳ ಸೈನ್ಯಗಳೊಳಗೆ ಕೈಕೈ ಹತ್ತದಿರಲಿಕ್ಕಿಲ್ಲ. ಎಲ್ಲರೂ ಪೊಟ್ಸ್‌ಡೆಮಿನಲ್ಲಾಗುವ ತ್ರಿಮೂರ್ತಿ ಸಮ್ಮೇಳನದಲ್ಲೇ ಈ ಸಮಸ್ಯೆಯು ಇತ್ಯರ್ಥವಾಗಬೇಕೆಂದು ನಿರೀಕ್ಷಿಸುತ್ತಿರುವರು.

ಯುದ್ಧಾನಂತರದ ಜರ್ಮನಿ

ಯುದ್ಧದಿಂದಾಗಿ ಜರ್ಮನ್ ಜನರು ಅದೆಷ್ಟು ಭೀಕರ ಸಂಕಷ್ಟಗಳಿಗೆ ತುತ್ತಾಗಿರುವುದೆಂಬ ಸಂಗತಿಯು ಬರ್ಲಿನಿನ ನಾಗರೀಕರು ಆಹಾರ ಕೊರತೆಯಿಂದ ಪಡುವ ಸಂಕಷ್ಟಗಳ ವಿವರವನ್ನು ಓದಿದರೆ ತಿಳಿಯುವುದು. ಅಲ್ಲಿ ಬೇಕಾದಷ್ಟು ಆಹಾರ ವಸ್ತುಗಳೂ, ಮಾಂಸ ಎಣ್ಣೆ ಪದಾರ್ಥಗಳೂ ಸಿಗುವುದಿಲ್ಲ. ರಷ್ಯನರು ಬರ್ಲಿನನ್ನು ವಶಪಡಿಸಿಕೊಂಡ ಕೂಡಲೇ ಜನರ ರೇಶನ್ ಪಡಿಯ ಪರಿಮಾಣವನ್ನಸೆರಿಸಿದರು. ಆದರೆ ಅದು ಕಾರ್ಡಿನಲ್ಲಿ ಸೂಚಿತವಾದುದೇ ಹೊರತು ಪ್ರತ್ಯಕ್ಷ ಆದರಲ್ಲಿ ಕಾಣಿಸಿದಷ್ಟು ಸಿಗದಾಯಿತು. ಒಂದು ತರದ ಕಪ್ಪು ರೊಟ್ಟಿಯನ್ನೂ ಬಟಾಟೆ ಗೆಣಸನ್ನೂ ತಿಂದು ಬರ್ಲಿನಿನವರು ದಿನ ದೂಡುತಿದ್ದಾರೆ.

ಇತ್ತ ರಷ್ಯನರಿಗೆ ಅಲ್ಲಿ ಅವಿಶ್ರಾಂತವಾಗಿ ಮಾಡಬೇಕಾದ ಕೆಲಸ ವಿಪರೀತವಿದೆ. ಇನ್ನು ನಾಜೀಮಯ ಜರ್ಮನಿಯಲ್ಲಿ ಹಿಂದಿನ ನಾಜಿಗಳ ತೊಂದರೆಗಳು ತಪ್ಪಿಲ್ಲ. ಇದು ತನಕ ಸಹಸ್ರಗಟ್ಲೆಯಲ್ಲಿ ನಾಜೀಗಳು ಮತ್ತು ನಾಜೀ ಸಹಕಾರಿಗಳನ್ನು ಕೈದು ಮಾಡಿದರೂ ಇನ್ನೂ ಬಿಡುವಿಲ್ಲದೆ ಪೋಲಿಸ್ ಶೋಧಗಳು ನಡೆಯುತ್ತಿವೆ.

ಬೃಹದ್ ವ್ಯಕ್ತಿ ಸಮ್ಮೇಲನ

ಜರ್ಮನ್ ಸೈನಿಕವಾದದ ತವರೂರಾದ ಪೊಟ್ಸ್‌ಡೆಮ್‌ನಲ್ಲಿ ತ್ರಿಮೂರ್ತಿಗಳು ಸೇರಿ ಮಾತು ಕತೆಗಳು ಪ್ರಾರಂಭವಾಗಲಿವೆ. ಈ ಸ್ಥಳವೇ ವಿಶೇಷವಾಗಿ ಏಕೆ ಚುನಾಯಿಸಲ್ಪಟ್ಟಿದೆ ಎಂಬುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು ಎಂದರೆ ಪೋಟ್ಸ್‌ಡೇಮು ನಗರವು ಜರ್ಮನ್ ಕಡು ಸೈನ್ಯ ಶಿಸ್ತುಗಾರರ ತರಬೇತಿ ಕೇಂದ್ರ. ತಲಾಂತರಗಳಿಂದ ಪ್ರಶ್ಯಾವನ್ನು ಆಳಿದ ಮಾಂಡಳೀಕರಾದಿಯಿಂದ ಚಕ್ರವರ್ತಿಗಳ ತನಕದ ಜರ್ಮನ್ ಪ್ರಭುಗಳು ಆ ನಗರದಲ್ಲೇ ಅತ್ಯಮೋಘವಾದ ಸೈನ್ಯ ಸರಬರಾಯಿ ಕೇಂದ್ರವನ್ನಾಗಿ ಮಾಡಿದರು.

ವಿದೇಶಾಂಗ ವಿಚಾರ ವಿಮರ್ಶೆ

ಜರ್ಮನಿಯ ಆಹಾರ ದುರವಸ್ಥೆ-ಜರ್ಮನರನ್ನು ಸೌಮ್ಯರನ್ನಾಗಿ ಮಾಡುವರು-ಈಗಿನ ಸರತಿ ಜಪಾನಿನದು—ಚೀನರ ಅನೋಘ ಶೌರ್ಯ ಸಾಹಸ

ಜರ್ಮನರನ್ನು ಪ್ರತಿ ಹತ್ತಿಪ್ಪತ್ತು ವರ್ಷಗಳಿಗೊಂದಾವರ್ತಿ ವಿಶ್ವ ಕಲಹಕ್ಕೆ ಕೈ ಹಾಕುವಂತೆ ಮಾಡುವುದು ಪೋಟ್ಸ್‌ಡೇಮಿನಲ್ಲಿ ನಡೆಯುತ್ತಿರುವ ಆ ಸೈನಿಕ ಚಟುವಟಿಕೆಗಳೇ ಕಾರಣ. ವಿದೇಶಿಯರ ಯಾವ ತರದ ಪ್ರಜಾಪ್ರಭುತ್ವದ ರೀತಿನೀತಿಗಳ ಸೋಂಕೂ ಅದಕ್ಕೆ ತಗಲದೆ ಅದು ನಿರ್ಲಿಪ್ತವಾಗಿರುವುದು. ಜರ್ಮನ್ ಆಳೊಡೆಯರಿಗೆ ಯುದ್ಧದ ಆಶೆಯಾಗುವುದೇ ತಡ, ಪ್ರಶ್ಯದ ಸೈನ್ಯ ಕೇಂದ್ರವು ಚೈತನ್ಯಮಯವಾಗುವುದು.

ಈ ಸಲದ ತ್ರಿಮೂರ್ತಿಗಳ ಸಮ್ಮೇಲನದಲ್ಲಿ ಜರ್ಮನಿಯ ಭವಿತವ್ಯವು ನಿರ್ದಿಷ್ಟವಾಗಿ ಯೋಚಿಸಲ್ಪಡುವುದು. ಆ ಜನರ ಸೈನಿಕ ಸ್ವಭಾವವನ್ನು ಹದಮಾಡಿ ಪ್ರಜಾಪ್ರಭುತ್ವ ದೇಶಗಳ ಸಂಸ್ಕೃತಿಯನ್ನು ಜರ್ಮನರಲ್ಲಿ ಪ್ರಚಾರಿಸಲಾಗುವುದು.

ಚೀನಾ ಜಪಾನ್ ಯುದ್ಧ

ಎಂಟು ವರ್ಷಗಳ ಹಿಂದೆ ಒಂದು ಚಿಕ್ಕ ಘಟನೆ ನಡೆಯಿತು. ಚೀನದಲ್ಲಿನ ಒಂದು ಅಂತರಾಷ್ಟ್ರೀಯ ವಸತಿ ಪ್ರದೇಶದಲ್ಲಿನ ಚೀನಿ ಮತ್ತು ಜಪಾನಿ ಸೈನಿಕರೊಳಗೆ ಅವರವರ ಕ್ಷೇತ್ರಗಳ ಕುರಿತು ವಾದವಿವಾದವುಂಟಾಗಿ ಬಡಿದಾಟಕ್ಕೆ ಸುರುವಾಯಿತು.

ಅಂದಿನಿಂದ ಎಂಟು ವರ್ಷಗಳಲ್ಲಿ ಪೌರ್ವಾತ್ಯದ ಎರಡು ಐತಿಹಾಸಿಕ ಜನಾಂಗಗಳು ಮಿಲಿಯಾಂತರ ತಮ್ಮ ತರುಣರನ್ನು ಕಳಕೊಂಡು ನಿರಂತರ ಹೋರಾಟದಲ್ಲಿ ತಲ್ಲೀನರಾಗಿದ್ದರು; ಇಂದಿಗೂ ಆ ಚಿಕ್ಕ ಘಟನೆ ನಿಂತಿಲ್ಲ.

ಮತ್ತೆ ಆ ಎಂಟು ವರ್ಷಗಳಲ್ಲಿ ಹಲವು ಯುದ್ಧಗಳು ನಡೆದುವು. ಭೀಕರ ಯುರೋಪ್ ಯುದ್ಧವೂ ಕೊನೆಗೊಂಡಿತು. ಅತ್ತ ಸ್ಪೈನಿನಲ್ಲಿ ಯಾದವೀ ಕಲಹವಾಗಿ ಫೆಸಿಸ್ಟ್ ಸರ್ವಾಧಿಕಾರಿಯೊಬ್ಬನು ಅಲ್ಲಿ ಸ್ಥಾಪಿಸಲ್ಪಟ್ಟನು. ಇಟೇಲಿಯು ಅಭಿಸಿನಿಯವನ್ನು ನುಂಗಿತು. ಮತ್ತೆ ಅದನ್ನು ಸೆಳೆದುಕೊಳ್ಳಲಾಯಿತು.

ಇಷ್ಟಾದರೂ ಚೀನಾ ಜಪಾನ್‌ಗಳೊಳಗಿನ ಆ ಚಿಕ್ಕ ಜಗಳ ಬೆಳೆಯುತ್ತಲೇ ಇದೆ. ಜಪಾನು ಶಕ್ತಿ ರಾಷ್ಟ್ರಗಳೊಳಗೆ ಒಂದೆನಿಸಲ್ಪಟ್ಟದು ಅವ್ಯಾಹತವಾಗಿ ಚೀನದ ಅರ್ಧಾಂಶದಷ್ಟನ್ನು ನುಂಗಿ ಬಿಟ್ಟಿದೆ. ಆದರೆ ಇತ್ತ ಅಮೇರಿಕನರನ್ನು ಕೆಣಕಿದ ಆ ಕುಳ್ಳ ಹಳದಿ ಜನಾಂಗಿಕರು ಈಗ ತುಸು ತೊಂದರೆಗೆ ಸಿಲುಕಿದ್ದಾರೆ. ಅವರ ಮಾತೃದೇಶವು ದಿನವಹಿ ಎಂಬಂತೆ ಸಾವಿರಾರು ಪೌಂಡುಗಳ ಬಾಂಬುಗಳಿಗೆ ತುತ್ತಾಗಿದೆ. ಅವರ ಪರಮ ಪೂಜ್ಯ ಚಕ್ರವರ್ತಿಯ ಅರಮನೆಯೂ ಅಗ್ನಿದೇವನಿಗಾಹುತಿಯಾಗಿ ಆ ದೇವಸಂಭೂತನು ಬೇರೊಂದು ಕಡೆಯಲ್ಲಿ ವಸತಿ ಮಾಡಿಕೊಳ್ಳುವಂತಾಗಿದೆ. ಒಂದೊಂದಾಗಿ ಜಪಾನಿನ ದ್ವೀಪ ಸ್ತೋಮಗಳು ಮಾಯವಾಗುತ್ತಿವೆ. ಅದಕ್ಕೆ ಗಂಡಾಂತರವು ಸಮಿಾಪಿಸುತ್ತಲೇ ಇದೆ.

ರಷ್ಯಾದ ಮಾದರಿ ಚೀನ.

ರಷ್ಯವು ಜರ್ಮನಿಯೊಡನೆ ಎರಡು ಮೂರು ವರ್ಷಗಳ ತನಕ ಬಡಿದಾಡಿದಂತೆ ನಾಜಿಗಳ ಸರ್ವ ಶಕ್ತಿ ಬಲಗಳು ಕುಗ್ಗಿಹೋಗಿ ಮತ್ತೆ ಮಿತ್ರ ದಂಡುಗಳು ಸುತ್ತು ಮುತ್ತಲಿಂದ ಅದನ್ನು ಸೋಲಿಸುವರೆ ಅನುಕೂಲವಾಯಿತು. ಅದೇ ಪ್ರಕಾರದಲ್ಲಿ ಈಗ ಚೀನವು ಎಂಟು ವರ್ಷಗಳಿಂದ ಜಪಾನಿಗೆ ಪರಿಣಾಮಕಾರಿ ವಿರೋಧವನ್ನು ತೋರಿಸಿರುವುದರಿಂದ ಈಗ ಜಪಾನನ್ನು ಎರಡು ಮೂರು ಕಡೆಗಳಿಂದ ಸೋಲಿಸುವುದು ಸುಲಭದ ಕೆಲಸವೇ ಆಗದ.

ಆದರೆ, ಸಣ್ಣ ಸಣ್ಣ ದ್ವೀಪಗಳಾದ ಓಕಿನಾವಾ ಮೊದಲಾದುವುಗಳನ್ನು ಹಿಡಿಯುವಾಗಲೇ ಜಪಾನರು ಪ್ರದರ್ಶಿಸಿದ ಸಾಹಸವು ಮತ್ತು ಅದರಲ್ಲಿ ಅಮೇರಿಕನರು ಕಳಕೊಂಡ ಅಪಾರ ಸೈನ್ಯ ಬಲವೂ ಕಿಂಚಿತ ಕಳವಳಕ್ಕೆ ಎಡಗೊಟ್ಟಿದೆ. ಆದರೂ ಜಪಾನರ ಆ ಶೌರ್ಯ ಸಾಹಸಗಳು ಕೊನೆಯ ಹೋರಾಟದ ವೀರಾವೇಶವಿರಬಹುದೆಂದು ಊಹಿಸಲಾಗಿದ.

ರಷ್ಯದ ದ್ವಿಮುಖ ಧೋರಣೆ

ಜರ್ಮನಿಯ ಸೋಲಿನನಂತರ ರಷ್ಯವು ಪ್ರಭಾವ ಶಾಲಿ ಧೋರಣೆಯನ್ನೇ ಅನುಸರಿಸಿದೆ. ಒಂದು ಕಡೆಯಿಂದ ಅದು ಟರ್ಕಿಯನ್ನೂ ಕೆಲವೊಂದು ಸಮುದ್ರ ದ್ವಾರಗಳಿಗಾಗಿ ಒತ್ತಾಯ ಪಡಿಸುತ್ತದೆ. ಇನ್ನೊಂದು ಕಡೆಯಿಂದ ಚೀನಿಯದೊಳಗಿನ ಕೊಮ್ಯುನಿಸ್ಟ್ ಕೊಮಿಟೊಂಗ್ ಕಲಹದೊಳಗೆ ಕೈ ಹಾಕಿ ಮಂಚೂರಿಯದಲ್ಲಿ ಸೋವಿಯಟ್ ಪ್ರಭಾವವೇ ಹೆಚ್ಚು ಮಾಡುವಂತೆ ಹೆಣಗಾಡುತ್ತಿದೆ. ರಷ್ಯದ ಈ ಹೆಣಗಾಟವು ಶುದ್ಧ ರಾಜತಾಂತ್ರಿಕ ನೀತಿಗನುಸಾರವಾಗಿ ನಿರ್ವಹಿಸಲ್ಪಡುತಿದ್ದರೂ ಅದರ ಹಿಂದೆ ಅದು ತನ್ನ ಅಪಾರ ಸೈನ್ಯ ಶಕ್ತಿಯನ್ನೂ ಜಗತ್ತಿನ ರಾಜಕೀಯದಲ್ಲಿ ಇಂದಿನ ಅದರ ಅಸಾಮಾನ್ಯ ಸ್ಥಾನಮಾನಗಳನ್ನೂ ಅದು ಲೆಕ್ಕಿಸಿಕೊಳ್ಳದೆ ಇಲ್ಲ.

ಚೀನಿಯ ಮುತ್ಸದಿಗಳೂ ಮಂಚೂರಿಯದ ಮುಖಂಡರೂ ಮೋಸ್ಕೋದಲ್ಲಿ ಸ್ಟೇಲಿನರೊಡನೆ ಮಾತುಕತೆ ನಡೆಸುತ್ತಿರುವರು. ಫಲಿತಾಂಶವು ರಷ್ಯಕ್ಕೆ ಅನುಕೂಲವಾಗುವಂತೆ ಮಾಡಿಕೊಳ್ಳಲಾಗುವುದೇ ಎಂದು ಐರೋಪ್ಯ ಮತ್ತು ಅಮೇರಿಕಾನರು ಸಂದೇಹಪಟ್ಟುಕೊಳ್ಳುತ್ತಿದ್ದಾರೆ.

ಸಿರಿಯಾದಲ್ಲಿ ದೊಂಬಿ

ಕೆಲವು ವಾರಗಳ ಹಿಂದೆ ಸಿರಿಯಾದಲ್ಲಿ ಉಂಟಾದ ಚಳವಳದ ಪರಿಣಾಮವಾಗಿ ಫ್ರೆಂಚ್ ಆಡಳಿತೆಕಾರರು ಒಪ್ಪಂದದ ಏರ್ಪಾಡುಗಳನ್ನು ಯೋಚಿಸುತ್ತಿದ್ದರೆಂದು ವರ್ತಮಾನ ಬಂದಿತ್ತು. ಈಗ ಒಂದೇ ಸವನೆ ಆಕಸ್ಮಾತಾಗಿ ಎಂಬಂತೆ ಅಲ್ಲಿಯ ಪರಿಸ್ಥಿತಿಯು ವಿಷಮಾವಸ್ಥೆಗೆ ಪರಿವರ್ತನೆ ಹೊಂದಿತು.

ಒಪ್ಪಂದಕ್ಕೆ ಒಪ್ಪಿದ ಫ್ರೆಂಚ್ ಅಧಿಕಾರಿಗಳು ತಮ್ಮ ವರ್ತನೆಯನ್ನು ಬದಲಾಯಿಸಿಕೊಂಡಿಲ್ಲವೆಂದು ತೋರುತ್ತದೆ. ಫ್ರೆಂಚ್ ಸೈನಿಕರ ಒಂದು ಮೋಟಾರು ಕಾರು ಸಿರಿಯದ ಒಂದು ಚಿಕ್ಕ ಪಟ್ಟಣದಲ್ಲಿ ಅಲಕ್ಷದಿಂದಲೂ ರಭಸದಿಂದಲೂ ಓಡುತ್ತಿರುವಾಗ ಅಲ್ಲಿನ ನಾಗರೀಕರ ಒಂದು ಮಗುವನ್ನು ಕೆಡವಿಕೊಂದಿತು. ಈ ಘಟನೆಯಿಂದ ಉದ್ವೇಗಗೊಂಡ ಸಿರಿಯದ ನಾಗರೀಕರು ದಂಗೆ ಎದ್ದು ಕೆಲವು ಫ್ರೆಂಚ್ ಅಧಿಕಾರಿಗಳನ್ನು ತಿವಿದು ಕೊಂದರು.

ಫ್ರೆಂಚ್ ಸೈನ್ಯಗಳು ಆ ಪ್ರದೇಶಗಳಲ್ಲಿ ಎಷ್ಟು ದರ್ಪದಿಂದ ವರ್ತಿಸುತ್ತಿವೆಯೆಂದರೆ, ಅವರು ತಮ್ಮ ಮೇಲಧಿಕಾರಿಗಳ ಅಪ್ಪಣೆಯನ್ನು ಉಲ್ಲಂಘಿಸಿ ನಿಶಸ್ತ್ರ ನಾಗರೀಕರ ಮೇಲೆ ದೊಡ್ಡ ಫಿರಂಗಿಗಳನ್ನು ಹಾರಿಸುವವರಾದರು. ಪರಿಸ್ಥಿತಿಯು ಇನ್ನೂ ಸುಧಾರಿಸಲಿಲ್ಲ.

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ
ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906
ಕೆನರಾ ಬೇಂಕ್ ಲಿಮಿಟೆಡ್.
(ESTD. 1906)
CANARA BANK LIMITED
In corporated in British India, liability of Members limited

ಜಿಲ್ಲೆಯಲ್ಲಿ ಬಲವಾದ ಗಾಳಿ ಮಳೆ

ಜಿಲ್ಲಾ ಬೋರ್ಡ್ ಸಭೆ-ಉಪಾಧ್ಯಾಯ ಸಭೆ-ಪಾನ ವಿರೋಧ ಚಳವಳ-ಸಂಗೀತ ಕಛೇರಿ-ಚೆಂಬರಿನ ಗೊಂದಲ

ಮಳೆ, ಗಾಳಿ, ನೆರೆ:- ಕಳೆದ ವಾರದಲ್ಲಿ ಈ ಸಲದ ಮಳೆಗಾಲದ ಪ್ರಭಾವವು ತಕ್ಕ ಮಟ್ಟಿಗೆ ಕಾಣಿಸಿಕೊಂಡಂತಾಯಿತು. ಶನಿವಾರ ಆದಿತ್ಯವಾರಗಳಿಂದ ಆಕಾಶವು ಮೋಡನಿಬಿಡವಾಗುತ್ತಾ ಬಂದು ಜಡಿಮಳೆಗಳು ಮೇಲಿಂದ ಮೇಲೆ ಬರ ತೊಡಗಿದವು. ಸೋಮವಾರ ಮಂಗಳವಾರಗಳೆಂದೂ ಇನ್ನೂ ಹೆಚ್ಚಿನ ಸುರಿಯುವಿಕೆಯು ಅನುಭವಕ್ಕೆ ಬಂತು. ಮಾತ್ರವಲ್ಲ ಬಲವಾದ ಗಾಳಿಯೂ ಮಳೆಯೊಂದಿಗೆ ಕೂಡಿತ್ತು. ಕೆಲವು ಸಮಯ ಮಳೆ ಬಿಟ್ಟಿದ್ದರೂ ಬರಿ ಗಾಳಿ ಬಿಸಾಟವೇ ವಿಪರೀತವಾಗಿ ಆಯಿತು. ಇಷ್ಟಾದರೂ ಆಕಾಶವೂ ವಾತಾವರಣವೂ ಹೊಗೆ ಮುಚ್ಚಿದಂತಿದ್ದವು.

ಮಂಗಳೂರು ನಗರದ ಮಟ್ಟಿಗೆ ದೊಡ್ಡ ದೊಡ್ಡ ತೋಡು ಚರಂಡಿಗಳೂ, ಕಾಲುವೆ ಹಳ್ಳಗಳೂ, ಗದ್ದೆಗಳೂ ನೀರಿನಿಂದ ತುಂಬಿದುವು. ಇತ್ತ ಬಂದರದಲ್ಲಿನ ನದೀ ನೀರು ದಡಮಿಾರಿ ಸ್ವಲ್ಪ ಎತ್ತರಕ್ಕೇಂಬಂತೇ ಬಂದಿದ್ದಿತು. ಅಳ್ಕೆ ಕಂಬಳದ ಬಳಿಯಿಂದ ಹಾದು ಹೋಗುವ ಹಳ್ಳವೂ ಉಕ್ಕೇರಿ ಅದರ ದಡದ ಬದಿಗಳಲ್ಲಿನ ಗುಡಿಸಲುಗಳನ್ನು ಆವರಿಸಿತ್ತು. ಮಾತ್ರವಲ್ಲದೆ ಹತ್ತಿರದ ಗದ್ದೆಗಳಲ್ಲೂ ನಿರೀಕ್ಷಿಸಿದಕಿಂತಲೂ ಹೆಚ್ಚಾಗಿ ನೀರು ನಿಲ್ಲುವಂತಾಯಿತು. ಪರಿಣಾಮವಾಗಿ ಅಳ್ಕೆಯಿಂದ ಮಣ್ಣಗುಡ್ಡೆಗೆ ಹೋಗುವ ಮಾರ್ಗವು ಒಂದು ಫರ್ಲಾಂಗಿನ ಅಂತರದಲ್ಲಿ ಪಶ್ಚಿಮ ಭಾಗದಲ್ಲಿ ಎರಡು ಕಡೆ ಸುಮಾರು ಎರಡು ಮೂರು ಅಡಿಗಳಷ್ಟು ಕುಸಿದು ಬಿದ್ದಿರುತ್ತದೆ. ಸದ್ಯಕ್ಕೆ ಚಲಾವಣೆಗೆ ತೊಂದರೆ ಇಲ್ಲದಿದ್ದರೂ ಅವುಗಳ ದುರುಸ್ತಿಯು ಶೀಘ್ರದಲ್ಲಿಯೂ ಮತ್ತು ಹೆಚ್ಚಿನ ಭದ್ರತೆಯಿಂದಲೂ ನಡೆಸದಿದ್ದರೆ ಮುಂದಾದರೂ ಪ್ರತಿ ಮಳೆಗಾಲದಲ್ಲಿ ತ್ರದೀತಿಯ ಮತ್ತು ಹೆಚ್ಚಿನ ಅಪಾಯಕ್ಕೆ ಎಡೆಕೊಡದಿರಲಾರರು.

ರೈಲ್ವೆ ತಡೆ: ಮಂಜೇಶ್ವರದಿಂದೀಚೆ ಕಡೆಗಳಲ್ಲಿ ಕೆಲವು ಕಡೆ ರೈಲ್ವೇ ಕಂಬಿಗಳು ಕಿರಿದಾದ ಹಳ್ಳಗಳನ್ನೂ ನದಿಗಳನ್ನೂ ಹಾದು ಹೋಗುವಲ್ಲಿಯೂ ನೀರು ದಡಮಿಾರಿದ್ದು ಕಂಬಿಗಳ ಮೇಲಿಂದಲೇ ಹರಿಯುತ್ತಿರುವುದು ಕಂಡು ಬಂದಿತ್ತು. ರೈಲ್ವೆ ವಾಹನವು ಅಂತಹ ಸ್ಥಳಗಳಲ್ಲಿ ಕನಿಷ್ಟಗತಿಯಿಂದ ಬಂದುದರಿಂದ ಸ್ವಲ್ಪ ತಡವಾಗಿಯೇ ಬಂದಿದ್ದುವು. ಕೆಲವು ಕಡೆಗಳಲ್ಲಿ ರೈಲ್ವೇ ಕಂಬಿಗಳ ದುರುಸ್ತಿ ಕೆಲಸವು ಇನ್ನೂ ಮುಗಿಯಲ್ಲಿಕ್ಕಿದ್ದುದರಿಂದ ರೈಲ್ವೆ ಕಂಪೆನಿಯ ಕೆಲಸಗಾರರು ಎಲ್ಲಾ ತರದ ಮುಂಜಾಗ್ರತೆ ವಹಿಸಿದ್ದರು. ನೀರಿನ ಪ್ರಹಾಹಗಳನ್ನು ಬೇರೆ ದಿಕ್ಕಿನಲ್ಲಿ ಹರಿದು ಹೋಗುವಂತೆ ಮುಂಜಾಗ್ರತೆಗಳು ವಹಿಸಲ್ಪಟ್ಟಿದ್ದವು.

ಬಿರುಗಾಳಿ:- ಸೋಮವಾರ ಮಂಗಳವಾರಗಳೆಂದು ಪಶ್ಚಿಮ ಕರಾವಳಿಯಲ್ಲಿ ಹವಾಮಾಪಕ ಯಂತ್ರಗಳು ಒಂದೇ ಸವನೆ ವಾತಾವರಣದ ಒತ್ತಡದಲ್ಲಿ ಸ್ಥಿತ್ಯಂತರಗಳನ್ನು ತೋರಿಸಿದ್ದರಿಂದ ಬಿರುಸಾದ ಬಿರುಗಾಳಿಯು ಬರಬಹುದೆಂದೂ ನಾಗರೀಕರು ರಾತ್ರಿ ಹೊತ್ತಿನಲ್ಲಿ ಸ್ವಲ್ಪ ಜಾಗರೂಕತೆಯಿಂದಿರಬೇಕೆಂದೂ ಸಾರುವ ವದಂತಿಗಳು ನಗರದಲ್ಲೆಲ್ಲ ಹರಡಿದವು. ಸೋಮವಾರದಂದು ರಾತ್ರಿ ಗಾಳಿಯ ಬೀಸಾಟವೂ, ಮಧ್ಯ ಮಧ್ಯದಲ್ಲಿ ಗುಡುಗಿನ ಮತ್ತು ಮಳೆಯ ಆರ್ಭಟವೂ ಕೇಳಿ ಬಂದಿತ್ತಾದರೂ ಗಾಳಿಯ ಹೆಚ್ಚಿನ ಆವೇಶ ಕಂಡು ಬರಲಿಲ್ಲ.

ಬಂಟ್ವಾಳದಲ್ಲಿ ನೀರು:- ಇಲ್ಲಿಯ ಅತಿ ತಗ್ಗು ಪ್ರದೇಶವಾದ ಬಡ್ಡೆ ಕಟ್ಟೆಯ ಪ್ರದೇಶದಲ್ಲಿ ಮೊತ್ತಮೊದಲು ನೀರು ಏರತೋಡಗಿತು. ಕ್ರಮೇಣ ಮಳೆ ಗಾಳಿಗಳು ಹೆಚ್ಚುತ್ತಿರಲು ಬಂಟ್ವಾಳ ಪೇಟೆಯ ಮಾರ್ಗಗಳಲ್ಲೂ ನೀರು ತುಂಬ ತೊಡಗಿದುದು ಕಂಡುಬಂತು. ಹಿಂದೆ ೧೯೨೩ರಲ್ಲಿ ಒಂದು ಸಲ ನೆರೆ ಹಾವಳಿಗೆ ತುತ್ತಾದ ಈ ಪ್ರದೇಶದ ಜನರು ಮುಂಜಾಗ್ರತೆ ವಹಿಸಲು ಸಾವಧಾನಮಾಡಲಿಲ್ಲ. ಅನೇಕರು ತಮ್ಮ ಸೊತ್ತು ಸಾಮಾಗ್ರಿಗಳನ್ನು ಎತ್ತರ ಪ್ರದೇಶಕ್ಕೆ ರವಾನಿಸಲು ಎಲ್ಲಾ ತರದ ಏರ್ಪಾಡುಗಳನ್ನೂ ಸಿದ್ಧಗೊಳಿಸಿದರು. ಪೇಟೆಯಲ್ಲಿ ಹತ್ತು ಪ್ರತ್ತು ದೋಣಿಗಳು ತಯಾರಾಗಿದ್ದುವು. ಆದರೂ ದೈವವಶಾತ್ ನೀರು ಇಳಿಯ ತೊಡಗಿದಂತೆ ಅಪಾಯದ ಅವಧಿಯೂ ದಾಟಿ ಹೋದಂತಾಯಿತು. ಬಡ್ಡೆಕಟ್ಟೆ ಬಳಿಯ ಕೆಲವೊಂದು ಗುಡಿಸಲು ಮತ್ತು ಮಣ್ಣುಗೋಡೆಯ ಮನೆಗಳು ಕುಸಿದು ಬಿದ್ದಿರುತ್ತವೆಯಂತೆ.

ಅತ್ತ ಕಡೆ ಬರಲಿದ್ದ ಮೋಟಾರುಸರ್ವೀಸುಗಳೂ ಒಂದೆರಡು ದಿವಸಗಳ ಮಟ್ಟಿಗೆ ತಡೆದಂತಾದುವು. ಇತ್ತ ಜೋಡುಮಾರ್ಗದ ತನಕ ದೋಣಿಗಳಲ್ಲೇ ಪ್ರಯಾಣಿಸಬೇಕಾಗಿತ್ತು. ಮಂಗಳವಾರದಿಂದ ನೀರು ಇಳಿಯ ಹತ್ತಿದ್ದರಿಂದ ಚಲಾವಣೆಗೆ ಪುನಃ ಪ್ರಾರಂಭವಾಯಿತು ಆದರೂ ಜಕರ್‌ಬೆಟ್ ಮುಂತಾದ ಕಡೆಗಳಲ್ಲಿ ನೀರೂ ಇನ್ನು ಒಂದೆರಡು ದಿನ ಇತ್ತೆಂದು ಹೇಳಲಾಗಿವೆ.

ಅರ್ಕುಳ, ಅಡ್ಯಾರಗಳಲ್ಲಿ:- ಈ ಕಡೆಗಳಲ್ಲೂ ಗದ್ದೆ ಹೊಲಗಳು ತುಂಬಿದ್ದು ಮಾರ್ಗದಲ್ಲಿ ನೀರು ನಿಂತಿತ್ತು. ಕಣ್ಣೂರು ಅಡ್ಯಾರುಗಳಿಗೆ ಎರಡು ದಿವಸ ದೋಣಿ ಮೂಲಕವೇ ಚಲಾವಣೆಯಾಗಬೇಕಾಯಿತು. ನೀರು ಇನ್ನೂ ಗದ್ದೆಗಳಲ್ಲಿ ನಿಂತಿರಾವದರಿಂದ, ಅದು ಮತ್ತೆ ಅದೇ ರೀತಿ ಬಹುಕಾಲ ನಿಲ್ಲುವಂತಾದರೆ ಈ ಸಲದ ಬೆಳೆಗೆ ಕೊಂಚ ಹಾನಿ ಸಂಭವಿಸಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ರಜಕಸಂಘ ಮುಂಬಾಯಿ:- ಅಗಸ ಜಾತಿಯ ಪ್ರತಿಯೊಬ್ಬ ವ್ಯಕ್ತಿಯೂ ವಿದ್ಯಾವಂತನಾಗಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ವಿನಂತಿಸಿಕೊಳ್ಳುತ್ತಾ ಮೇಲ್ಕಂಡ ಸಂಘದ ಗೌರವ ಕಾರ್ಯದರ್ಶಿಗಳು ಹೀಗೆ ಬರೆದಿರುತ್ತಾರೆ: ನಮ್ಮ ಬಡ ಬಂಧುಗಳಿಗೆ (ಅಗಸ ಜಾತಿಯ) ತಮ್ಮ ಮಕ್ಕಳನ್ನು ಶಾಲೆಗೆ ಹಾಕಲು ಹಣದ ಅನಾನುಕೂಲತೆಯಿಂದ ಅಸಾಧ್ಯವಾದರೆ ದಯಮಾಡಿ ಎಂಟನೇ ಕ್ಲಾಸಿನ ವರೆಗೆ ವಿದ್ಯಾರ್ಥಿವೇತನಕ್ಕೆ ಮತ್ತು ಪುಸ್ತಕ ವಗೈರೆಗೆ ತಕ್ಕ ಧನಸಹಾಯವನ್ನು ಕೋರಿ ಈ ಕೆಳಗಿನ ವಿಳಾಸಕ್ಕೆ ತಾ. ೩೧-೮-೪೫ರ ಒಳಗೆ ವಿದ್ಯಾರ್ಥಿಗಳು, ಯಾ ಅವರ ರಕ್ಷಕರು ಬರಕೊಳ್ಳಬೇಕಾಗಿ ವಿನಂತಿ. ಅಂತಹ ಕೋರಿಕೆಗಳನ್ನು ಪರಿಶೀಲಿಸಿ ಕೈಲಾದಷ್ಟು ಧನಸಹಾಯವನ್ನೀಯುವರೆ ಸಂಘವು ತುಂಬಾ ಸಂತೋಷಪಡುತ್ತದೆ—ಮೂಡಬಿದ್ರಿ ಡಿ. ಈಶ್ವರ್, ಗೌ, ಕಾರ್ಯದರ್ಶಿ, ೧೬೯ ಬೋರಾ ಬಜಾರ್ ಸ್ಟ್ರೀಟ್, ೪ನೇ ಮಾಳಿಗೆ ಕೋಟೆ, ಮುಂಬಾಯಿ.

ಪಾನ ನಿರೋಧ ಭಾಷಣ:- ಕೆಲವು ದಿನಗಳ ಹಿಂದೆ ಸ್ಥಳೀಯ ಕೆಥೋಲಿಕ್ ಕ್ಲಬ್ಬಿನಲ್ಲಿ ಫಾದರ್ ಪೈಲೊ ಅವರು ತಮ್ಮ ಸಮಾಜದಲ್ಲಿ ಮಧ್ಯಪಾನ ನಿರೋಧದ ಅವಶ್ಯಕತೆಯ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು. ಅಂತಹ ಸುಧಾರಣೆಗಾಗಿ ಕಂಕಣತೊಟ್ಟ ಸಂಸ್ಥೆಯೊಂದು ಸದ್ರಿ ಸಮಾಜಸ್ಥರಲ್ಲಿ ೧೮೯೩ರಲ್ಲಿ ಸ್ಥಾಪಿಸಲ್ಪಟ್ಟಿದ್ದು ಅದನ್ನು ಪುನರುತ್ಥಾನಗೊಳಿಸುವ ಸೂಚನೆಗಳಾದುವು. ಮೇಜರ್ ಮಸ್ಕರೇನಸ್ ಎಂಬ ಮಿಲಿಟರಿ ಡಾಕ್ಟರರೂ ಮಧ್ಯಪಾನದಿಂದ ಮಾನವ ಶರೀರ ಮನಸ್ಸುಗಳ ಮೇಲಾಗುವ ದುಷ್ಪರಿಣಾಮಗಳ ಕುರಿತು ಬೋಧಪರ ಭಾಷಣವಿತ್ತರು. ಕೆಥೋಲಿಕರ ಕೊಂಕಣಿ ಭಾಷೆಯ ಪತ್ರಿಕೆಯೊಂದು ಮಧ್ಯಪಾನ ನಿರೋಧ ಚಳವಳಕ್ಕೆ ಸಮಾಜಸ್ಥರು ಬೆಂಬಲ ಕೊಡಬೇಕಾಗಿಯೂ ವಿನಂತಿಸಿಕೊಂಡಿರುತ್ತದೆ.

ಚೇಂಬರ್ ಆಫ್ ಕೋಮರ್ಸ್:- ಈ ಸಂಸ್ಥೆಯ ಆಡಳಿತ ನಿರ್ವಹಣದ ಕುರಿತು ಅದೇ ಸಂಸ್ಥೆಯ ಸದಸ್ಯರೊಬ್ಬರು ಸ್ಥಳೀಯ ಪತ್ರಿಕೆಯೊಂದರಲ್ಲಿ ದೋಷಾರೋಪಗಳನ್ನು ಮಾಡಿರುವರು. ಅವರ ಅಭಿಪ್ರಾಯದಲ್ಲಿ ಈ ಸಂಸ್ಥೆಯನ್ನು 'ಸ್ಥಾಪಿಸುವಾಗ್ಯೆ ಅದರ ಸಣ್ಣ ವಂತಿಗೆಯನ್ನು ಕೊಡಲು ಹಿಂಜರಿದವರು ಹಲವರಿದ್ದರೂ, ಈಗ ಅದರ ಮೂಲಕ ಅಧಿಕಾರವನ್ನು ಹೊಂದಬಹುದೆಂದಿರುವಾಗ ಮೇಲಾಡಿಸಿ ಬರುವವರು ಹಲವರಿದ್ದಾರೆ... ..ಈಗ ಕೆಲವು ವರ್ಷಗಳಿಂದ ಅದರ ಹಲವು ತರದ ಕೆಲಸ ಕಾರ್ಯಗಳೂ ಸಾಧನೆಗಳೂ ಕೆಲವು ವ್ಯಕ್ತಿಗಳ ಸ್ವಾರ್ಥ ಸಾಧನೆಗಾಗಿ ನಡೆಯುವಂತೆ ಕಾಣುತ್ತಿದೆ' ಎಂದಿದೆ.

ಸರಕಾರದವರು ಒಳ್ಳೇ ಮೆಣಸಿನ ವಹಿವಾಟುಗಳ ಮೇಲ್ವಿಚಾರದ ಬಗ್ಗೆ ಒಬ್ಬ ಸರಕಾರಿ ಅಧಿಕಾರಿಯನ್ನು ನೇಮಿಸಲಿಕ್ಕೆ ಸದ್ರಿ ಚೇಂಬರಿನ ಶಿಫಾರಸನ್ನು ಕೇಳಿದಾಗ ಅದರ ಅಧಿಕಾರಿಗಳು 'ತಮ್ಮ ಸ್ವಾರ್ಥದ ಉದ್ದೇಶದಿಂದ ಗುಪ್ತ ರೀತಿಯಲ್ಲಿ ಕಳುಹಿಸಿದರೆಂತಲೂ ಈ ಕಾರಣದಿಂದ ಚೇಂಬರಿನ ಶಿಫಾರಸಿಗೆ ಬೆಲೆ ಇಲ್ಲದೆ ಹೋಯಿತೆಂದು ಕಂಡು ಬರುತ್ತದೆ' ಎಂದು ಮೇಲ್ಕಂಡ ಸದಸ್ಯರು ಪ್ರಕಟಿಸಿದ್ದಾರೆ. ಈಗಿನ ಸ್ವಾರ್ಥದ ಧೋರಣೆಯಿಂದ ಸದಸ್ಯರ ವಿಶಾಲಹಿತಗಳು ಬಲಿಕೊಳ್ಳುತ್ತವೆಂದೂ ಎಚ್ಚರಿಕೆಯನ್ನವರು ಕೊಟ್ಟಿರುವರು. ಚೇಂಬರಿನ ಆಡಳಿತದವರು ಈ ಕುರಿತು ತಕ್ಕ ವಿವರ ಉದಾಹರಣೆಗಳನ್ನು ಕೊಡಬೇಕಾದುದು ಸಮಂಜಸವಾದುದು.

ಸಂಗೀತ ಕಛೇರಿ:- ಸ್ಥಳೀಯ ವೆಂಕಟರಮಣ ದೇವಸ್ಥಾನದ ಮಾಳಿಗೆಯಲ್ಲಿ ಕಳೆದ ಆದಿತ್ಯವಾರ ಸಂಗೀತ ವಿದ್ಯಾರ್ಥಿಗಳಾದ ಶ್ರೀ ಎಂ. ನಾರಾಯಣ ಪೈ ಅವರು ಸಾರಸ್ಯವಾದ ಸಂಗೀತ ಕಲಾ ಪ್ರದರ್ಶನವನ್ನು ಮಾಡಿದರು. ಶ್ರೀಯುತರು ಗಾಯನ ಕಲೆಯಲ್ಲಿ ತುಂಬಾ ಅಭಿರುಚಿ ಮತ್ತು ಕಲಾ ಸಾಮರ್ಥ್ಯವಿದ್ದವರು. ಬಹಳ ವರ್ಷಗಳಿಂದ ಮಂಗಳೂರಲ್ಲೇ ಅಲ್ಪಸ್ವಲ್ಪ ವಿದ್ಯೆಯನ್ನು ದೊರಕಿಸಿಗೊಂಡು ಶ್ಲಾಘನೀಯವಾದ ಪ್ರೌಢಿಮೆ ಹೊಂದಿದ್ದಾರೆ. ಆರ್ಥಿಕ ಅನಾನುಕೂಲತೆಯಿಂದ ಶ್ರೀ ಪೈಗಳಿಗೆ ಉಚ್ಚ ಸಂಗೀತ ಶಿಕ್ಷಣಕ್ಕೆ ಹೊರ ಪ್ರದೇಶಕ್ಕೆ ಹೋಗಲಾಗಲಿಲ್ಲ. ಅವರ ಸ್ನೇಹಿತರು ಮೊನ್ನೆಯ ಕಛೇರಿಯನ್ನೇರ್ಪಡಿಸಿ ಅವರಿಗೊಂದು ನಿಧಿಯನ್ನರ್ಪಿಸಿ ಯಶ ಕೋರಿದರು. ಅವರು ನುರಿತವರಲ್ಲಿ ಶಿಕ್ಷಣ ಪಡೆದು ಬಂದರೆ ನಿಜವಾಗಿಯೂ ಶ್ರೇಷ್ಟ ಕಲಾಗಾರರಾಗುವುದರಲ್ಲಿ ಸಂದೇಹವಿಲ್ಲ. ಜಿಲ್ಲೆಗೂ ಅದರಿಂದ ಕೀರ್ತಿ ಬರುವುದು.

ಕೋಲೇಜ್ ಯೂನಿಯನ್:- ಸೈಂಟ್ ಎಲೋಸಿಯಸ್ ಕೋಲೇಜ್ ಯೂನಿಯನಿನಲ್ಲಿ ಆಡಳಿತ ಮಂಡಳಿ ಚುನಾವಣೆಗಳು ತಾ. ೧೧ರಂದು ಬುಧವಾರ ಜರಿಗಿದುವು. ಶ್ರಿಯುವರುಗಳಾದ ಕೆ. ಕೆ. ಅಡಿಯೋಡಿ ಅವರು ಅಧ್ಯಕ್ಷರಾಗಿಯೂ, ಚಾಲ್ಸ್ ಸಿಕೇರಾ ಅವರು ಕಾರ್ಯದರ್ಶಿಗಳಾಗಿಯೂ ಆರಿಸಿ ಬಂದರು.

ಜಿಲ್ಲಾ ಬೋರ್ಡ್:- ಇದೇ ಬರುವ ೧೬ಕ್ಕೆ ಸೋಮವಾರ ಜಿಲ್ಲಾ ಬೋರ್ಡು ಆಫೀಸಿನಲ್ಲಿ ೧೧ ಗಂಟೆಚ ಸೇರುವುದು.

ಉಪಾಧ್ಯಾಯ ಸಭೆ:- ಸೆಂಟ್ರಲ್ ಉಪಾಧ್ಯಾಯರ ಸಂಘದ ಸಭೆ ಸೆಂಟ್ರಲ್ ವಾರ್ಡ್ ಮುನ್ಸಿಪಲ್ ಶಾಲೆಯಲ್ಲಿ ಕಳೆದ ಶನಿವಾರ ಶ್ರೀ ಉಡುಪಿ ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕಥೆಗಳ ವಿಷಯ ಮಾದರಿ ಪಾಠ ಪ್ರಯಾಣ ಸಾಧನಗಳ ಕುರಿತಾದ ಪ್ರದರ್ಶನ ವ್ಯಾಯಾಮ ಶಿಕ್ಷಣ ಮುಂತಾದ ವಿಷಯಗಳ ಕುರಿತು ಭಾಷಣಗಳಾದುವು. ಎಲಿಮೆಂಟರಿ ಶಿಕ್ಷಣದ ಪಾಠ ಕ್ರಮಗಳಲ್ಲಿ ಬದಲಾವಣೆ ಬೇಕೇ ಎಂದು ವಿದ್ಯಾ ಇಲಾಖೆಯವರು ಕೇಳಿದ ವಿಷಯವನ್ನಾಲೋಚಿಸಲು ಒಂದು ಸಮಿತಿ ನಿರ್ಣಯಿಸಲ್ಪಟ್ಟಿತು.

ದಂಪತಿ ಆತ್ಮಹತ್ಯ:- ಬಂಟ್ವಾಳದವರಂತಹದೇ ಸಮಾನ ಪರಿಸ್ಥಿತಿಯಲ್ಲಿ ಸಿಲುಕಿದ ಉಡುಪಿಯಲ್ಲಿನ ಮಣಿಪಾಲದ ಒಂದು ಸಂಸ್ಥೆಯ ಕೆಶಿಯರಾಗಿದ್ದ ಒರ್ವ ಯುವಕರು ತಮ್ಮ ಹೆಂಡತಿಯೊಂದಿಗೆ ಮಡುವೊಂದರಲ್ಲಿ ಬಿದ್ದು ಪ್ರಾಣತ್ಯಾಗ ಮಾಡಿದರೆಂದೂ ಎರಡು ಶವಗಳೂ ದೊರೆತಿವೆ ಎಂದೂ ತಿಳಿದು ಬರುತ್ತದೆ.

ಅಫೀಲು ವಿಚಾರಣೆಗಳು:- ಮೊರಿಸ್ ಕುತಿಂಜ ಅವರು ಟೆಕ್ಸ್‌ಟೈಲ್ ಕಂಟ್ರೋಲ್ ಒರ್ಡರನ್ನು ಮಿಾರಿ ನಡೆದರೆಂದು ಅವರಿಗೆ ಕೆಳಕೋರ್ಟಿನಲ್ಲಿ ರೂ. ೭೫೦ ಜುಲ್ಮಾನೆಯಾಗಿತ್ತು. ಸೆಶ್ಯನ್ ಅಫೀಲಿನಲ್ಲಿ ೧೫೦ಕ್ಕೆ ತಗ್ಗಿಸಲಾಯಿತು.

TIMES HAVE CHANGED!



ಕಾಲ ಬದಲಿಸಿದೆ

ಆಹಾಸಿನ ಸೂರ್ಯಚಕ್ರವು ಕ್ರಿಸ್ತಪೂರ್ವ 800 ವರ್ಷ ಹಿಂದಿನದು. ಅದಕ್ಕೂ ಹಿಂದೆ ಇಜಿಪ್ತಿನಲ್ಲಿ ಜನರು ಸೂರ್ಯನ ಉದಯಾಸ್ತ ಗತಿಯನ್ನು ತದ್ರೀತಿಯ ಬೇರೊಂದು ಉಪಕರಣದಿಂದ ಅಳೆಯುತಿದ್ದರು.

ಹೇಗಿದ್ದರೂ ಸೂರ್ಯಚಕ್ರವೇ ಹಿಂದಿನವರ ಸಮಯಮಾಪಕವಾಗಿತ್ತು. ನಂತರ ಅನೇಕ ವಿಧದ ಉಪಕರಣಗಳು ಬಂದುಹೋದುವು. ಈಗಿನ ವೆಸ್ಟ್ ಎಂಡ್ ವಾಚುಗಳಲ್ಲಿ ಆ ಹಿಂದಿನ ಜ್ಞಾನಾನುಭವವೆಲ್ಲ ಪರಿಪೂರ್ಣತೆಗೆ ಮುಟ್ಟಿಸಲಾಗಿದೆ-ಸರಿ ಸಮಯ, ಆಧುನಿಕ ಶೈಲಿ, ನುರಿತ ಕಾಮಗಾರಿಕೆ.

18 ಕ್ಯಾ. ಇಂಪರೆಟರ್ ಬಂಗಾರ (ಚಿನ್ನದ ಒಳಗಿನ ಕಮಾನು) ವಿಶಾಲಿಸಿದ ಮುಖಭಾಗ- ರೂ. 450.

ತರಿಸುವಿಕೆಯ ತೊಂದರೆಯಿಂದ ಎಲ್ಲಾ ನಮೂನೆಯವುಗಳನ್ನು ಪೂರೈಸಲಾಗುವುದಿಲ್ಲ. ಆದರೆ ಸಾಧ್ಯವಿದ್ದಷ್ಟನ್ನು ಮಾಡಲಾಗುವುದು. ಕಾಗದ ಕೊರತೆಯಿಂದ ಕೆಟಲಾಗನನ್ನು ಕಳುಹಿಸಲಾಗುವುದಿಲ್ಲ.

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬ್ಯಾ ಮತ್ತು ಕಲ್ಕತ್ತಾ.

WEST END WATCH Co
Bombay · Calcutta

ಲೀಗ್ ಹಿಂದೂಸಭೆಗಳ "ಸತ್ಯಾಗ್ರಹ"

ಜೈಲಿಗೆ ಹೋಗುವ ಮೊದಲ ಅನುಭವ

ಸಿಮ್ಲಾದ ಮೇಲೆ ಅಮೇರಿಕನ್ ದೃಷ್ಟಿ

ವೇವೆಲ್ ಯೋಜನೆಗನುಸಾರವಾಗಿ ಕೊಂಗ್ರೆಸು ಹೊಸ ಮಂತ್ರಿ ಮಂಡಳದ ಸದಸ್ಯರ ಯಾದಿಯನ್ನು ವ್ಯಾಸರಾಯರಿಗರ್ಪಿಸಿದೆ. ಆದರೆ ಮುಸ್ಲಿಂ ಲೀಗಿನವರು ಹೊಸ ಏರ್ಪಾಡಿನಲ್ಲಿ ಸಹಕರಿಸುವುದಕ್ಕೆ ತಮ್ಮ ಆಕ್ಷೇಪವನ್ನು ಸೂಚಿಸುತ್ತಾ ತಮ್ಮ ಕಡೆಯಿಂದ ಕೊಡಲಿಕ್ಕಿರುವ ಹೆಸರುಗಳ 'ಪಟ್ಟಿ'ಯನ್ನು ಕೊಡುವುದಿಲ್ಲವಾಗಿ ತೀರ್ಮಾನಿಸಿದೆ ಎಂದು ತಿಳಿದುಬರುತ್ತದೆ.

ಕೊಂಗ್ರೆಸ್ ಯಾದಿಯಲ್ಲಿ ನಾಲ್ಕು ಮಂದಿ ವರ್ಕಿಂಗ್ ಕಮಿಟಿ ಮೆಂಬರರ ಹೆಸರುಗಳು ಸೂಚಿಸಲಾಗಿವೆ. ಪಂಡಿತ್ ನೆಹುರು, ಸರ್ದಾರ್ ಪಟೇಲ್, ಮೌಲಾನಾ ಅಜಾದ್, ಬಾಬುರಾಜೇಂದ್ರ ಪ್ರಸಾದ್ ಈ ನಾಲ್ಕು ಉನ್ನತ ಮಟ್ಟದ ಕೊಂಗ್ರೆಸಿನವರು ಮುಂದೆ ಮಂತ್ರಿಗಳಾಗಬಹುದು. ಮಿ, ಜಿನ್ನರ ಮತ್ತು ಲಿಯಾಖತ್ ಹಯತ್ ಖಾನರ ಹೆಸರುಗಳನ್ನಲ್ಲದೆ ಇನ್ನೊಬ್ಬ ಲೀಗ್ ಸದಸ್ಯರ ಹೆಸರನ್ನು ಅದೇ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಲೀಗಿಗೆ ತಾನು ರಾಷ್ಟ್ರೀಯವಾದಿ ಮತ್ತು ರಾಜಕೀಯ ಸಂಸ್ಥೆಯಾಗುವೆನೊ ಎಂಬ ಭಯವಿದ್ದರೆ, ಕೊಂಗ್ರೆಸಿಗೆ ತಾನು ಜಾತೀಯ ವಾದಿಯಾಗುವೇನೊ ಎಂಬ ಹೆದರಿಕೆ. ಜಿನ್ನರಿಗೆ ಮುಂದಿನ ಪಾಕಿ ಸ್ಥಾನಕ್ಕೆ ಧಕ್ಕೆಯುಂಟಾಗುವುದೊ ಎಂಬ ಕಳವಳವಾದರೆ ಕೊಂಗ್ರೆಸಿಗೆ ಹಿಂದೂಸ್ತಾನದ ಅಖಂಡತ್ವಕ್ಕೂ ಐಕ್ಯಕ್ಕೂ ಎಲ್ಲಿ ಲೋಪವುಂಟಾಗುವುದೊ ಎಂಬ ಕಾಂಕ್ಷೆ.

ತಾತ್ಕಾಲಿಕವಾದರೂ ರಾಷ್ಟ್ರೀಯವಾದಿ ಏರ್ಪಾಡೊಂದರಲ್ಲಿ ಸಹಕರಿಸಿ ಕೆಲಸ ಮಾಡುವುದು ಜಿನ್ನರಿಗೆ ಹಿತವೆನಿಸುವುದಿಲ್ಲ. ಅವರ ಹೊಸ ಧೋರಣೆಯ ಕುರಿತು ಅಮೃತ್ ಬಜಾರ್ ಪತ್ರಿಕೆಯು ಈ ರೀತಿ ಬರೆದಿದೆ:—

"ಜಿನ್ನಾ ಸಾಹೇಬರು ಮೊದಲು ೧೦ ಕೋಟಿ ಮುಸ್ಲಿಮರ ಪ್ರತಿನಿಧಿ ತಾನೆಂದು ಹೇಳಿಕೊಳ್ಳುತಿದ್ದರು. ಆದರೆ ಲೀಗಿಗೆ ೪॥ ಕೋಟಿ ಮೊಮಿನ್ ಮುಸಲ್ಮಾನರು ವಿರೋಧಿಗಳಾಗಿದ್ದರು. ಈ ಸಂಖ್ಯೆಯನ್ನು ಒಂದು ಸಲ ಪಾರ್ಲಿಮೆಂಟಿನಲ್ಲಿ ತಮ್ಮ ಸಾಮ್ರಾಜ್ಯವಾದಿ ತರ್ಕದಿಂದ ಎಮರಿ ಸಾಹೇಬರು ¾ ಕೋಟಿ ಎಂದೇ ಸಾರಿದರು. ಮತ್ತು ಜಿನ್ನರನ್ನು ೯ ಕೋಟಿ ಮುಸಲ್ಮಾನರ ಏಕಮಾತ್ರ ನಾಯಕನಾಗಿ ಮಾಡಿದರು.

"ಜಿನ್ನರಿಗೆ ಸಾಮ್ರಾಜ್ಯವಾದಿಗಳ ಇಷ್ಟೊಂದು ಬೆಂಬಲವಿದ್ದರೂ, ಮತ್ತು ಮುಸ್ಲಿಮರಿಗೆ ಮುಂದಿನ ಯೋಜನೆಯಲ್ಲಿ ಸವರ್ಣ ಹಿಂದೂಗಳಷ್ಟೇ ಸಮಾನತೆ ಕೊಟ್ಟಿದ್ದರೂ ಲೀಗು ಕೊಂಗ್ರೆಸ್ಸನ್ನು ತೃಣೀಕರಿಸಲಾರರು.

ವೇವೆಲ್ಲರ ಧೋರಣೆ ಏನು?

"ಸಿಮ್ಲಾ ಪರಿಷತ್ತೂ ಅಪಯಶಸ್ವಿಯಾದರೆ ಏನಾಗುವುದು? ಮತ್ತು ಅದು ಹಾಗಾಗಲು ಯಾವ ಕಾರಣಗಳಿವೆ? ತಮ್ಮ ಘೋಷಣೆಯಲ್ಲಿ ವ್ಯಾಸ್‌ರಾಯರು "ಒಂದು ವೇಳೆ ಪರಿಷತ್ತು ಅಯಶಸ್ವಿಯಾದರೆ ತಾನು ಈಗ ಇದ್ದ ಮಂತ್ರಿ ಮಂಡಳದಿಂದಲೇ ಕೆಲಸ ಸಾಗಿಸುತ್ತೇನ" ಎಂದು ತಿಳಿಸಿರುವರು. ಅನೇಕ ಪಕ್ಷದವರ ಒಪ್ಪಿಗೆ ಇದ್ದು ಯಾವುದಾದರೂ ಒಂದು ಪಕ್ಷವು ದೂರನಿಂತ ಮಾತ್ರಕ್ಕೆ ಪರಿಷತ್ತು ಅಯಶಸ್ವಿಯಾದಂತಾಗುವುದೆ? ಅಂತಹ ಸಂದರ್ಭದಲ್ಲಿ ವ್ಯಾಸ್‌ರಾಯರು ಒಂದು ಪಕ್ಷದ ನಿರಂಕುಶ ಧೋರಣೆಗೆ ಬೆಂಬಲ ವಿತ್ತಂತಾಗುವುದು.

"ಕೊಂಗ್ರೆಸಿಗೆ ಸೇರಿದ ಮುಸಲ್ಮಾನರಿರುವರು. ಕೊಂಗ್ರೆಸ್ ಲೀಗ್‌ಗಳೆರಡಕ್ಕೂ ಸೇರಿರದ ಮುಸಲ್ಮಾನರಿರುವರು. ಇವರನ್ನು ವ್ಯಾಸ್‌ರಾಯರ ಮಂತ್ರಿಮಂಡಳದಲ್ಲಿ ಯಾರು ಪ್ರಾತಿನಿಧಿಸುವರು? ಕೊಂಗ್ರೆಸು ತನ್ನ ಸೇವಾದಶ್ರದ ಅಮೋಘ ಇತಿ ಹಾಸವನ್ನು ಒರಸಿ ಹಾಕಬೇಕೆಂಬ ಜಿನ್ನರ ಪ್ರಯತ್ನಕ್ಕೆ ಕೊಂಗ್ರೆಸು ಎಂದಿಗೂ ಬಗ್ಗದೆಂದು ಲೀಗ್ ಪ್ಯೂರರರು ತಿಳಿದಿರಲಿ."

ಸಿಮ್ಲಾದ ಮೇಲೆ ಅಮೇರಿಕದ ದೃಷ್ಟಿ

ನ್ಯೂಯೋರ್ಕಿನ ಪ್ರಮುಖ ಪತ್ರಿಕೆಯೊಂದು ಸಿಮ್ಲಾ ಮಾತುಕತೆಗಳ ಕುರಿತು ತುಂಬಾ ಆಸಕ್ತಿ ತೋರಿಸಿ ಅಗ್ರ ಲೇಖವೊಂದನ್ನು ಬರೆದಿದೆ. ಭಾರತದ ರಾಜಕೀಯ ಸುಧಾರಣೆಯಲ್ಲಾಗಲೀ ಇಲ್ಲವೆ ಸ್ವಾತಂತ್ರ್ಯದಲ್ಲಾಗಲೀ ಅಮೇರಿಕಕ್ಕೆ ಯಾವ ತರದ ಅಭಿರುಚಿ ಇರುವುದು ಇದಕ್ಕೆ ಕಾರಣವಲ್ಲ. ಅನೇಕ ಭಾರತೀಯ ರಾಷ್ಟ್ರೀಯ ವಾದಿಗಳು ದೀನಾವಸ್ಥೆಯಲ್ಲಿರುವ ಭಾರತೀಯರ ಆರ್ಥಿಕ ದುರವಸ್ಥೆಯನ್ನು ನಿವಾರಿಸಲು ಹಾತೊರೆಯುತಿದ್ದಾರೆಂದೂ, ಅಮೇರಿಕನ್ ಕೈಗಾರಿಕೆಗಳನ್ನು ಭಾರತದಲ್ಲಿ ಸ್ಥಾಪಿಸುವುದರ ಮೂಲಕ ಆ ಸದುದ್ದೇಶವನ್ನು ಪೂರೈಸಬಹುದೆಂತಲೂ ಅಮೇರಿಕನರ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಅಮೇರಿಕನ್ ಕೈಗಾರಿಕೆಗಳಿಗೆ ಒಂದು ಒಳ್ಳೇ ಮಹಿವಾಟು ಸ್ಥಾನ ದೊರಕಿದಂತಾದರೆ ಆ ನವೀನ ಖಂಡದ ಜನರಿಗೆ ಆನಂದವಾಗದಿರಲಿಕ್ಕಿಲ್ಲವೆಂದು ಒಂದು ಪತ್ರಿಕೆ ಹಾಸ್ಯಾಸ್ಪದವಾಗಿ ಬರೆದಿದೆ.

ಜಸ್ಟಿಸ್ ಪಾರ್ಟಿಯ ದೃಷ್ಟಿ

"ಕೊನೆಗಂತೂ ಭಾರತದ ಆಡಳಿತ ಮಂಡಳವು ಜಾತಿಮತಗಳ ಬಲಾ ಬಲಗಳ ಮೇಲೆ ರಚಿಸುವಂತಾದುದು ಜಸ್ಟಿಸ್ ಪಾರ್ಟಿಯ ಧ್ಯೇಯ ಧೋರಣೆಗಳು ನ್ಯಾಯ ಬದ್ಧವಾದುವುವೆಂದು ಸಿದ್ಧಾಂತ ಮಾಡಿ ತೋರಿಸುವಂತಾಯಿತು" ಹೀಗೆಂದು ಆ ಪಾರ್ಟಿಯ ಸ್ಥಾಪಕರೆಲ್ಲೊಬ್ಬರಾದ ಸರ್ ಷಣ್ಮುಗಂ ಚೆಟ್ಟಿ ಅವರು ಒಂದು ಭಾಷಣದಲ್ಲಿ ತಿಳಿಸಿದರು. "ಕೊಂಗ್ರೆಸೂ ಪರಿಸ್ಥಿತಿಯ ಸತ್ಯಸ್ಥಿಕೆಯನ್ನು ಮನಗಂಡು ವೇವೆಲ್ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಸಮ್ಮತಿಸಿದ್ದು ಶುಭದಾಯಕ" ಎಂದು ಚೆಟ್ಟಿಯಾರರ ಅಂಬೋಣ.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಶ್ರಿ ಚೆಟ್ಟಿಯಾರರಿಗೆ ಉತ್ತರವೀಯುವ ಒಂದು ಅಗ್ರಲೇಖದಲ್ಲಿ ಹೀಗೆ ಬರೆದಿರುತ್ತದೆ:— "ಕಡು ಜಾತೀಯ ವಾದಿಗಳಾಗಿ ಒಂದು ಕಾಲದಲ್ಲಿ ಬ್ರಿಟಿಷ್ ಸರಕಾರದ ಕೃಪಾ ದೃಷ್ಟಿಯನ್ನು ಆಕರ್ಷಿಸಿ ಅಧಿಕಾರದ ರೊಟ್ಟಿ ಚೂರುಗಳನ್ನು ಹೆಕ್ಕಿ ತಿನ್ನಲು ಟೊಂಕ ಕಟ್ಟಿದ ಸರ್ ಷಣ್ಮುಗಂ ಅವರ ಅಭಿಪ್ರಾಯವು ರಾಷ್ಟ್ರ ಹಿತಕ್ಕೆ ತಕ್ಕುದಾದುದಲ್ಲ. ಕೊಂಗ್ರೆಸು ಸಹಜವಾದ ತನ್ನ ವಿಶಾಲ ದೃಷ್ಟಿಯಿಂದ ಯುದ್ಧ ಕಾಲದಲ್ಲಿ ಬ್ರಿಟಿಷ್ ಸರಕಾರದೊಡನೆ ಸಹಕರಿಸಲು

(೭ನೇ ಪುಟಕ್ಕೆ ಮುಂದುವರಿದುದು)

The Canara Banking Corporation, Ltd.

(Incorporated in British India)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ನದಿವಹಿ ಉಪಯೋಗದ ಲೋಹದ ಪಾತ್ರೆಸಾಮಾನುಗಳು

ಖಾತರೀ ಬಾಳಿಕೆಯುವುಗಳು

ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಲ್ಮಂಜೇಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ॰ ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ

ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ

ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP.

ಲೀಗ್ ಹಿಂದೂಸಭೆಯ "ಸತ್ಯಾಗ್ರಹ"

(೬ನೇ ಪುಟದಿಂದ)

ನಿರ್ಧರಿಸಿದರೂ, ವ್ಯಾಸ್‌ರಾಯರ ಆಡಳಿತ ಮಂಡಳಿಯಲ್ಲಿ ರಾಷ್ಟ್ರೀಯ ವಾದಿ ಮನೋಭಾವನೆಯ ಉಚ್ಚ ದರ್ಜೆಯ ಜನತಾ ನಾಯಕರು (ಅವರು ಯಾವ ಪಕ್ಷಕ್ಕೆ ಸೇರಿದವರೇ ಇರಲಿ) ಇರಬೇಕೆಂದು ಸೂಚಿಸಿದ್ದುದನ್ನು ಆಳವಾಗಿ ವಿಚಾರಿಸಿದರೆ ಮತ್ತು ಸರ್ ಷಣ್ಮುಗರವರಂತಹರಿಗೆ ಅದರಲ್ಲಿ ಸ್ಥಾನ ಸಿಗದಿರುವುದನ್ನು ತಿಳಕೊಂಡರೆ ಜಸ್ಟಿಸ್ ಪಾರ್ಟಿ ಮುಖಂಡರ ಅಭಿಪ್ರಾಯವು ಅದೆಷ್ಟು ಸಮರ್ಪಕವೆಂಬ ಸಂಗತಿ ತಿಳಿಯುವುದು."

ಲೀಗ್, ಸಭೆಗಳ "ಸತ್ಯಾಗ್ರಹ"?

"ಒಂದು ವೇಳೆ ವ್ಯಾಸ್‌ರಾಯರು ತಮ್ಮ ಸ್ವಂತ ಹೊಣೆಗಾರಿಕೆಯಿಂದ ಆಡಳಿತ ಮಂಡಳಿಯ ಸದಸ್ಯರನ್ನು ಚುನಾಯಿಸಿದರೆ ಮುಸ್ಲಿಂ ಲೀಗಿನ ಮುಂದಿನ ಧೋರಣೆ ಏನಿರುವುದೆಂಬುದೇ ಪ್ರಶ್ನೆ. ಅಂತಹ ಸಮಸ್ಯೆ ಕೊಂಗ್ರೆಸ್ಸಿನ ಎದುರು ನಿಂತರೆ ಆ ಕುರಿತು ಪ್ರತ್ಯೇಕ ಆಲೋಚಿಸುವ ಅವಶ್ಯಕತೆ ಇಲ್ಲ. ಪರಿಸ್ಥಿತಿಯು—ಅದೆಂತಹ ಕಠಿಣ ದರ್ಜೆಯದಿದ್ದರೂ—ವಿಷಮವಾಗಿ ಉದ್ಭವಿಸಿದಾಗ ಕೊಂಗ್ರೆಸು ಮಹಾತ್ಮ ಗಾಂಧಿಯವರ ಸುಪ್ರಭಾವದ ನಿರ್ದೇಶಕತ್ವದಲ್ಲಿ ಮತ್ತು ಬಹು ಸಂಖ್ಯಾತ ಜನತೆಯ ಸೌಮ್ಯಶಿಸ್ತಿನಿಂದ ವಿರೋಧ ಚಳವಳವನ್ನು ಆಚರಿಸಿ ಅನೇಕಾನೇಕ ಸಂಕಷ್ಟಗಳನ್ನು ಅನುಭವಿಸಿ ತಮ್ಮ ಆತ್ಮ ಶಕ್ತಿಯನ್ನು ಪ್ರದರ್ಶಿಸಿರುವದು.

"ಈ ರೀತಿಯ ಅನುಭವವು ಇದು ತನಕ ಲೀಗಿಗಿರಲಿಲ್ಲ. ಆದರೂ ಮೊನ್ನೆಯ ಲೀಗ್ ವರ್ಕಿಂಗ್ ಕಮಿಟಿಯಲ್ಲಿ ಜೈಲಿಗೆ ಹೋಗುವ ಯೋಜನೆಯ ಕುರಿತೂ ದೀರ್ಘ ವಿಚಾರಗಳಾದುವೆಂದು ವದಂತಿ. ಇದು ನಿಜವಿದ್ದರೆ ಮತ್ತು ವ್ಯಾಸ್‌ರಾಯರ ಧೋರಣೆಯುಬಿಗುವಾದರೆ ದೇಶವು ಲೀಗಿನ ಮೊದಲು ಚಳವಳದ ಮಾದರಿಯನ್ನು ನೋಡಲಿರುವುದು.

"ಕೊಂಗ್ರೆಸ್ ಮತ್ತು ಸರಕಾರದೊಳಗಿನ ಕಚ್ಚಾಟದ ಯೋಗ್ಯ ಅನುಕೂಲತೆಯನ್ನು ಪಡೆದು ಲೀಗು ಇದು ತನಕ ಒಂದು ತಾತ್ಕಾಲಿಕ ಮಹತ್ವವನ್ನು ಸಂಪಾದಿಸಿತ್ತು. ಈಗ ಅದು ಕಾರ್ಯರೂಪವಾದ ಚಳವಳಕ್ಕೆ ಇಳಿದಾಗ ಅದರ ನಿಜವಾದ ಸಾಮರ್ಥ್ಯವು ಬಹಿರಂಗವಾಗುವುದು. ಯಾವ ರಾಜಕೀಯ ಸಂಸ್ಥೆಯಾದರೂ ಸ್ವಕಷ್ಟಾನುಭವದಿಂದ ಮತ್ತು ವಿಪುಲ ತ್ಯಾಗ ಬಲಿದಾನಗಳಿಂದಲೇ ತನ್ನ ಶಕ್ತಿ ಪ್ರಭಾವವನ್ನು ಬೆಳೆಸಬೇಕು. ಆದುದರಿಂದ ಲೀಗಿಗೆ ಒಂದು ದೃಷ್ಟಿಯಲ್ಲಿ ಸುಸಂದರ್ಭ ದೊರಕಿದಂತಾಯಿತು." ಹೀಗೆಂದು ಅ. ಬ. ಪತ್ರಿಕೆಯು ಬರೆದಿರುತ್ತದೆ.

ಇನ್ನು ಮಹಾ ಸಭೆಯ ಕಾರ್ಯಕ್ರಮವಾದರೂ ಏನಿರುವುದು? ಅದರ ಅಧ್ಯಕ್ಷರಾದ ಡಾ। ಶ್ಯಾಮ ಪ್ರಸಾದ ಮುಖರ್ಜಿಯವರಿಗೆ ಮಹಾತ್ಮರು ಹೊಸ ಮಂತ್ರಿಮಂಡಳದಲ್ಲಿ ಸೇರುವಂತೆ ಆಹ್ವಾನಕಳುಹಿಸಿದ್ದರು. ಆದರೂ "ಹಿಂದೂ ಮುಸ್ಲಿಂ ಸಮಾನತೆಯ ತತ್ವಕ್ಕೆ ನಾನು ಒಪ್ಪುವವನಲ್ಲ"ವೆಂದು ಮುಖರ್ಜಿಯವರು ಆಮಂತ್ರಣವನ್ನು ತಿರಸ್ಕರಿಸಿರುವರು.

ಶ್ಯಾಮಪ್ರಸಾದರು ದೇಶದ ಉದ್ದಗಲದಲ್ಲಿ ತಮ್ಮ ಸಂಸ್ಥೆಯ ಪರವಾಗಿ ಬಿರುಸಾದ ಚಳವಳ ನಡೆಸುತಿದ್ದಾರೆ. 'ಬಹು ಸಂಖ್ಯಾತರಿಗೆ ಅಲ್ಪ ಸಂಖ್ಯಾತ ಪ್ರಾತಿನಿಧ್ಯ ಸಿಗುವ ಈ ಯೋಜನೆಯು ಎಂತಹುದು?' ಎಂದೇ ಅವರ ಪ್ರಶ್ನೆ. ಇವರಿಗಾದ ಅತೃಪ್ತಿಯಿಂದಲೂ ಒಂದು ತರದ ಚಳವಳ ಆರಂಭವಾಗಬಹುದು. ಹೀಗಾದರೆ "ಪಾಕಿ ಸ್ಥಾನ"ದಲ್ಲಿ ಲೀಗಿನ ಚಳವಳ "ಹಿಂದೂಸ್ಥಾನ"ದಲ್ಲಿ ಹಿಂದೂ ಮಹಾ ಸಭೆಯ ಅಂದೋಲನ ಉಂಟಾಗುವುದು. ಆದರೆ ಅದೆಷ್ಟು ಮಂದಿ ಜನತೆಯು ಈ ಎರಡು ಸಂಸ್ಥೆಗಳಿಗೆ ನಿಜವಾದ ಬೆಂಬಲ ಕೊಡಲಿರುವರೊ ನೋಡಲಿದೆ.

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿತಿರುಗಿ ಸಂಪಾದಿಸಬಹುದು; ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು; ಹಾಗಾಗ ಬೇಕಾದರೆ ಪ್ರತಿದಿನ ರಾತ್ರಿತಪ್ಪದೆ ಎರಡು ಬೈಲ್‌ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ. ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದ್ದಾಗಿದೆ. ಅದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ ರಕ್ತವು ಶುದ್ಧವಾಗುವುದು. ಕೊಬ್ಬು ಬೆಳೆಯುವುದಿಲ್ಲ. ಹೀಗೆ ಇದು ನಿಮ್ಮನ್ನು ಸುಖ, ಆರೋಗ್ಯ ಮತ್ತು ಉಲಾಸ್ಲಯುತರನ್ನಾಗಿ ಮಾಡುವುದು.

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು

BILE BEANS

ಜಖಂ ಆರೋಪಕ್ಕೆ ಶಿಕ್ಷೆ:— ಮಂಗಳೂರು ತಾಲೂಕು ಸಜೀಪ ಪಡುಗ್ರಾಮದ ರಾಮಣ್ಣ ಭಂಡಾರಿ, ನಾರಾಯಣ ಸೆಟ್ಟಿ, ಪದ್ಮ ರೈ, ಭೋವಿ ಕುಜಪ್ಪ ಕೂಡ ೪ ಮಂದಿಗಳು ಜತ್ತಪ್ಪ ನ್ಯಾಕ ಎಂಬಾತನಿಗೆ ವಿಶೇಷವಾಗಿ ಜಖಂ ಮಾಡಿದರೆಂಬ ಆರೋಪದ ಮೊಕದ್ದಮೆ ನಮ್ಮ ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ತನಿಖೆಯಾಗಿ ಆರೋಪಿಗಳಲ್ಲಿ ಪ್ರತಿಯೊಬ್ಬರಿಗೂ ೧೮ ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ದುರ್ಮರಣ:—ಈ ವಾರದ ಪ್ರಾರಂಭದ ಸುಮಾರಿಗೆ ಬಂಟ್ವಾಳದ ಪಟೇಲ್ ವಾಸುದೇವ ಪ್ರಭು ಎಂಬವರ ದುರ್ಮರಣದ ವಾರ್ತೆಯು ಭೀಕರವೂ ಶೋಚನೀಯವೂ ಆಗಿದೆ. ಶ್ರಿಯುತ ಪ್ರಭುಗಳು ಚಿನ್ನ ಕರಗಿಸುವ ಏಸಿಡನ್ನು ಕುಡಿದರು. ಮೂರು ಗಂಟೆಗಳ ಕಾಲ ಭಯಂಕರ ವೇದನೆ ಗೋಳಾಟದಿಂದ ನರಳಿ ಮೃತಪಟ್ಟರು. ಕೈಯೊಳಗಿದ್ದ ತೀರ್ವೆ ಹಣವನ್ನು ಸಮಯದಲ್ಲಿ ಖಜಾನೆಗೆ ಕಟ್ಟಲಾಗದಿದ್ದುದೇ ಆತ್ಮ ಹತ್ಯಕ್ಕೆ ಕಾರಣವೆಂದು ಊಹಿಸಲಾಗಿದೆ.

WANTED

'Immediately one Office Manager for the Kanara Chamber of Commerce Mangalore on a salary not exceeding Rs. 150/-per month. Only graduates need apply. Applications in applicant's own handwriting should reach the Honorary Secretaries, The Kanara Chamber of Commerce, Bunder, Mangalore not later than 31st July, 1945.'

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನ ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

ಉಷ್ಣಕಾಲದಲ್ಲಿ ನಿಮ್ಮ ಕಂಠದ ಕುರಿತು ಜಾಗ್ರತೆ ತೆಕ್ಕೊಳ್ಳಿರಿ.

ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು

ಪೆಪ್ಸ ನಿಮ್ಮ ಬಾಯಲ್ಲಿ ಹಾಕಿದ ಕೂಡಲೇ ಕರಗಿ ಅತ್ಯುತ್ತಮ ಔಷಧಿ ರಸವನ್ನು ಹೊರಗೆಡವುದು. ಅದರಿಂದ ಕಂಠಬೇನೆ, ಉರಿಸೀತ, ಎದೆ ಸೋವು ಮೊದಲಾದ ಶೀತಬಾಧೆಗಳು ಗುಣ ಹೊಂದುವುದು.

ಪೆಪ್ಸ ತೆಕ್ಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ಚಳಿಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ $2\frac{1}{2}$ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 20—7—1945 [ಸಂಚಿಕೆ 18]

ಜಾಗತಿಕ ಶಾಂತಿಸಾಧನೆಯಲ್ಲಿ ಅಮೇರಿಕದ ಪಾತ್ರ

"ಅಮೇರಿಕಾಕ್ಕೆ ಇದೊಂದು ಸುಸಂಧಿ" ಎಂಬ ಶಿರೋನಾಮದಡಿಯಲ್ಲಿ, ಸಂಯುಕ್ತ ಅಮೇರಿಕಾದ ವಣಿಜಸಂಘದ ಅಧ್ಯಕ್ಷರಾದ ಎರಿಕ್ ಜೊನ್‌ಸ್ಟನ್ನರು ಬರೆದ ಲೇಖದ ಕೆಲ ಅಭಿಪ್ರಾಯಗಳು ಈ ಕೆಳಗೆ ಆರಿಸಿಕೊಡಲಾಗಿದೆ. ಇವರು ಹೇಳುವಂತೆ,—ಹಿಂದುಳಿದ ರಾಷ್ಟ್ರಗಳು ಮುಂಬರದೆ ಜಾಗತಿಕ ಶಾಂತಿಯು ಲಭಿಸದು-ಎಂದು ತಿಳಿಯಬೇಕಾಗಿದೆ. ಔದ್ಯೋಗಿಕರಣದ ವಿಚಾರದಲ್ಲಿ ಮಾತ್ರವಲ್ಲ, ಸ್ವಾತಂತ್ರ್ಯದ ವಿಚಾರದಲ್ಲೂ, ಹಿಂದುಳಿದ ದೇಶಗಳು ಎರಿಕ್ ಜೊನ್‌ಸ್ಟನ್ನರ ಅಮೇರಿಕಾದಷ್ಟೆ ಮುಂದೆ ಬಂದರೆ ಮಾತ್ರ ಜಗತ್ತಿಗೆ ಸುಖವಿದೆ. ಎರಿಕ್ ಜಾನ್‌ಸ್ಟನ್ ಈ ಅಭಿಪ್ರಾಯಗಳಿಗೆ ಸಂಯುಕ್ತ ರಾಷ್ಟ್ರಗಳ ಲಕ್ಷ್ಯವು ದೊರಕುವುದೆ ಎಂಬುದನ್ನು ಮಾತ್ರ ನೋಡಬೇಕು.

ಇಪ್ಪತ್ತನೆ ಶತಮಾನ ಕಡೆಯ ಅರ್ಧವು, ಮಾನವ ಚರಿತ್ರೆಯಲ್ಲಿ ಪ್ರಜ್ವಲಿಸುವ ಸಾಂಪತ್ತಿಕ ಯುಗವಾಗಿ ಪರಿಣಮಿಸಬೇಕು;—ಅದೊಂದು ಔದ್ಯೋಗಿಕ ಯುಗವಾಗಬೇಕು, ಹಿಂದುಳಿದ ಜನರ ಆಧುನೀಕರಣವೂ ನಡೆಯಬೇಕು.

ಜಗತ್ತಿನ ವಿವಿಧ ದೇಶಗಳ ಔದ್ಯೋಗಿಕರಣದೊಂದಿಗೆ ನಮ್ಮ ಉದ್ಧಾರವು ಕೂಡಿಕೊಂಡಿದೆ. ಆ ದೇಶಗಳ ಔದ್ಯೋಗಿಕ ಉದ್ಧಾರವು ನಡೆದ ಹಾಗೆ ಅಲ್ಲಿ ನಮಗೆ ಬೇಕಾದ ಗಿರಾಕಿಗಳ ಉದ್ಭವವಾಗುವುದು. ಬ್ರಿಟನು ಔದ್ಯೋಗಿಕ ರಾಷ್ಟ್ರವು. ಕಳೆದ ಮಹಾ ಯುದ್ಧದ ನಂತರ ಸಂತುಷ್ಟಿಯ ವರುಷವೆನಿಸಿದ ೧೯೨೯ರಲ್ಲಿ—ನಮ್ಮಲ್ಲಿಂದ ಅಲ್ಲಿಗೆ ರಫ್ತಿನ ಮೌಲ್ಯವು ೪೫೧ ಮಿಲಿಯ ಡೊಲ್ಲರುಗಳಾಗಿರುತ್ತದೆ. ಚೀನಾದ ಜನಸಂಖ್ಯೆಯು ೪೫೦ ಮಿಲಿಯ. ಅಲ್ಲಿಗೆ ನಮ್ಮಲ್ಲಿಂದ ತಲುಪಿದ ರಫ್ತಿನ ಮೌಲ್ಯವು ೧೨೪ ಮಿಲಿಯ ಡೊಲ್ಲರುಗಳಾಗಿರುತ್ತದೆ. ಇದಕ್ಕೆ ಕಾರಣ ಬ್ರಿಟನು ಔದ್ಯೋಗಿಕ ದೇಶವು ಚೀನಾವು ಬಹಳ ಹಿಂದುಳಿದ ದೇಶವು ಎಂಬುದು. ಚೀನಿಯರ ಕೊಂಡುಕೊಳ್ಳುವ ಶಕ್ತಿಯು ಅತೀ ಕಡಿಮೆಯಾಗಿತ್ತು.

ಈ ಜಗತ್ತಿನ ಒಂದು ಸಾವಿರ ಮಿಲಿಯಕ್ಕೆ ಮೇಲ್ಪಟ್ಟ ಜನರು ಔದ್ಯೋಗಿಕ ವಿಚಾರದಲ್ಲಿ ಬಹಳ ಹಿಂದುಳಿದವರಾಗಿ ಬಡತನದಲ್ಲಿ ಜೀವನ ಸಾಗಿಸುತ್ತಿರುವರು. ಈ ಜನರ ಉದ್ಧಾರವಾದರೆ, ಆಗ ಜಗತ್ತಿನ ವ್ಯಾಪಾರದಲ್ಲಿ, ಸಾಂಪತ್ತಿಕ ಸ್ಥಿತಿಯಲ್ಲಿ ಎಷ್ಟು ಉತ್ತಮ ಪರಿಣಾಮಗಳು ಉಂಟಾಗಲಿಕ್ಕಿಲ್ಲ!

ಸದ್ಯ ರೂಢಿಯಲ್ಲಿರುವ ಸಂಕುಚಿತ ಮನೋಭಾವನೆಗಳು ಮಾಯವಾಗಲೆ ಬೇಕಾದ ಸ್ಥಿತಿಯು ಭವಿಷ್ಯದಲ್ಲುಂಟಾಗುವುದು. ಆಗ ಉಂಟಾಗುವ ಏಳ್ಗೆಯ ದೆಸೆಯಿಂದ ವ್ಯಾಪಾರಿ ರಾಷ್ಟ್ರವಾದ ಅಮೇರಿಕಾಕ್ಕೆ ತನ್ನ ಹಿತಗಳನ್ನು ವೃದ್ಧಿಸಿಕೊಳ್ಳಲು ಇನ್ನೂ ಅನುಕೂಲವೆನಿಸುವುದು. ಜಗತ್ತಿನ ಮುಂದರಿದ ದೇಶಗಳ ಸ್ಥಾನಕ್ಕೇನೆ, ಹಿಂದುಳಿದ ದೇಶಗಳು ಬಂದರೆ, ಆಗ ಜಗತ್ತಿನ ವ್ಯಾಪಾರದಲ್ಲಿ ಅತಿ ದೊಡ್ಡ ಅಭಿವೃದ್ಧಿಯು ಉಂಟಾಗುವುದು.

ದೃಷ್ಟಾಂತವಾಗಿ, ಸಂಯುಕ್ತ ಅಮೇರಿಕದ ನಿವಾಸಿಯು ಉಪಯೋಗಿಸುವಂತೆ ಅರಿವೆಯನ್ನು ಜಗತ್ತಿನ ಪ್ರತಿಯೊಬ್ಬ ನಿವಾಸಿಯು ಉಪಯೋಗಿಸುವುದಾದರೆ, ಜಗತ್ತಿನ ಈಗಿನ ಹತ್ತಿ ಉತ್ಪನ್ನವು ಮೂರು ಪಾಲಷ್ಟು ಹೆಚ್ಚಬೇಕಾಗುವುದು. ಅಮೇರಿಕನ್ನರು ಉಪಯೋಗಿಸಿದಷ್ಟೆ ಸಾಮಾನು ಜಗತ್ತಿನ ಇತರ ಜನರೂ ಉಪಯೋಗಿಸುವುದಾದರೆ, ಸಾಬೂನಿನ ತಯಾರಿಕೆಯಲ್ಲಿ ಈಗಿನ ನಾಲ್ಕರಷ್ಟು ಹೆಚ್ಚು ನಡೆಯಬೇಕಾಗುವುದು.

ಸಂಯುಕ್ತ ಅಮೇರಿಕಾದಲ್ಲಿ ೨೭ ಮಿಲಿಯ ಟೆಲಿಫೋನುಗಳು ಬಳಕೆಯಲ್ಲಿವೆ. ಜಗತ್ತಿನ ಇತರ ದೇಶಗಳಲ್ಲೂ ಟೆಲಿಫೋನಿನ ಉಪಯೋಗವು ಅಮೇರಿಕಾದ ಮಟ್ಟಕ್ಕೆ ಬಂದುಬಿಟ್ಟರೆ ಆಗ ೩೫೦ ಮಿಲಿಯ ಟೆಲಿಫೋನುಗಳನ್ನು ಸಿದ್ಧಗೊಳಿಸಬೇಕಾಗುವುದು, ಅದೇ ರೀತಿಯಲ್ಲಿ ಅಲ್ಲೀಗ ೫೨ ಮಿಲಿಯ ರೇಡಿಯೋ ಪೆಟ್ಟಿಗೆಗಳು ಉಪಯೋಗದಲ್ಲಿವೆ. ಜಗತ್ತಿನ ಇತರ ದೇಶಗಳು ಈ ವಿಚಾರದಲ್ಲಿ ಅಮೇರಿಕಾದೊಡನೆ ಸರಿಸಮಾನತೆ ಪಡೆಯಬೇಕಾದರೆ,—೬೦೦ ಮಿಲಿಯ ರೇಡಿಯೋ ಪೆಟ್ಟಿಗೆಗಳು ಬೇಕಾಗುವುವು.

ನಮ್ಮ ಅಭಿವೃದ್ಧಿಯು, ಇಡೀ ಜಗತ್ತಿನ ಉದ್ಧಾರವಾದರೆ ಮತ್ತದರ ಐಶ್ವರ್ಯವು ಬೆಳೆದರೆ ಮಾತ್ರ ಸಾಧ್ಯವು.

ಹಿಂದುಳಿದ ದೇಶಗಳೆಲ್ಲಾ ಮುಂಬರುವ ಲವಲವಿಕೆಯಲ್ಲಿವೆ. ಮುಂದೆ ಬರಲು ಅವುಗಳಲ್ಲಿ ಯೋಗ್ಯತೆಗಳೂ ಇವೆ. ಹಿಂದೂದೇಶದಲ್ಲಿ ಅಮೇರಿಕನ್ನರ ನೆರವಿನಲ್ಲಿ ನಡೆಯುವ 'ಹಿಂದುಸ್ಥಾನ್ ಎಯರ್ ಕ್ರಾಪ್ಟ್'(ಅಂದರೆ ವಿಮಾನಗಳನ್ನು ಸಿದ್ಧಮಾಡಿ ದುರಸ್ತಿಯಾಗಿಡಲು ವ್ಯವಸ್ಥಿತವಾದ ಸಂಸ್ಥೆಯು) ಈ ಕುರಿತು ಒಂದು ಉತ್ತಮ ದೃಷ್ಟಾಂತವು. ಬ್ರಿಟನು, ಜರ್ಮನಿ, ಅಮೇರಿಕಾ ಮೊದಲಾದ ಕಡೆಗಳಲ್ಲಿ ವಿದ್ಯಾಭ್ಯಾಸಂಗ ನಡೆಯಿಸಿದ ನೂರಾರು ಹಿಂದೀಯರ ಕೈಕೆಳಗೆ, ಸಾಧಾರಣ ೧೫,೦೦೦ ಇತರ ಹಿಂದೀಯರು ಈ ಸಂಸ್ಥೆಯಲ್ಲಿ ದುಡಿಯುತ್ತಿರುವರು. ಈ ಸಂಸ್ಥೆಯು ಮೇಲಧಿಕಾರದಲ್ಲಿ ೩೫ ಅಮೇರಿಕನ್ನರು ಇರುವರು. ಈ ಸಂಸ್ಥೆಯ ಚಾಲಕರಾದ ವಿಲಿಯಮ್ ಡಿಪೌಲೆಯವರ ಅಭಿಪ್ರಾಯದಂತೆ, ಹಿಂದೂದೇಶಕ್ಕೆ ಪ್ರಚಂಡ ಔದ್ಯೋಗಿಕ ಉದ್ಧಾರದ ಭವಿಷ್ಯವಿದೆ ಎಂದು ತಿಳಿಯಬೇಕಾಗಿಯದೆ.

ಜಗತ್ತಿನ ಹಿಂದುಳಿದ ಜನರಲ್ಲೂ ಪಾಶ್ಚಾತ್ಯದ ಮುಂದರಿದ ಜನರಲ್ಲಿರುವಂತೆ ಔದ್ಯೋಗಿಕರಣಕ್ಕೆ ಯೋಗ್ಯತೆಯು ಇದ್ದೇ ಇದೆ. ಅವರಿಗೆ ಬೇಕು ಧನ. ಈ ಧನವು ಎಲ್ಲಿದೆ? ಸಂಯುಕ್ತ ಅಮೇರಿಕಾದಲ್ಲಿ.

ನಮ್ಮೊಡನೆ ಧನ ಸಂಚಯವು ಅತಿರೇಕವಿದೆ. ಇಷ್ಟರ ತನಕ ಈ ಧನವು ಏನೊಂದೂ ಉಪಯೋಗವಿಲ್ಲದೆನೆ, ಇದೆ. ಹಿಂದುಳಿದ ದೇಶಗಳು ಈ ಧನವನ್ನು ಕರೆಯುತ್ತಿದ್ದಾವೆ.

ಈ ಧನವನ್ನು ಆ ದೇಶಗಳಿಗೆ ಧಾನವಾಗಿ ಕೊಡಬೇಕಾಗಿಲ್ಲ, ಸಾಲವಾಗಿಯೂ ಕೊಡಬೇಕಾಗಿಲ್ಲ. ಈ ಹಣವು ಆ ದೇಶಗಳಲ್ಲಿ ಸಂಚಯಿಸಲ್ಪಡಬೇಕು. ನಮ್ಮ ನೆರವಿನಲ್ಲೇ, ಆಡಳಿತದಲ್ಲೇ, ಅಮೆರಿಕನ್ ಇಂಜಿನಿಯರುಗಳ ಅಂಕಿತದಲ್ಲೆ ಕಾರ್ಖಾನೆಗಳು ಅಲ್ಲಿ ಸ್ಥಾಪಿಸಲ್ಪಟ್ಟು ನಡೆಯಬೇಕು. ಈ ರೀತಿಯಿಂದ ನಮ್ಮ ಹಣದ ಭದ್ರತೆಯನ್ನೂ ನೋಡಿಕೊಳ್ಳಲು ಸುಲಭ ಸಾಧ್ಯವಾಗುವುದು. ಇದರಿಂದ ಆ ದೇಶಗಳಿಗೂ ಒಳಿತಿದೆ. ಕಾರಣ, ತಯಾರಿಕೆಯ ಅನುಕೂಲಗಳೆಲ್ಲಾ ಅವರಿಗೆ ಅಮೇರಿಕಾದ ಖರ್ಚಿನಲ್ಲಿ ದೊರಕುತ್ತವೆ. ಅಲ್ಲದೆ ಔದ್ಯೋಗಿಕರಣದಲ್ಲಿ ಪರಿಪಾಠಮಾಡಿಕೊಡಲು ಅಮೇರಿಕನ್ ತಜ್ಞರ ಸಹಾಯವೂ ಅವರಿಗೆ ದೊರಕುವುದು.

ಈ ಯುದ್ಧವು ಪ್ರಾರಂಭವಾಗುವಂದು ಅಮೇರಿಕದ ಧನವು ಹೊರದೇಶಗಳಲ್ಲಿ ಸಂಚಯಿಸಲ್ಪಟ್ಟಿದ್ದು—೧೦ ಸಾವಿರ ಮಿಲಿಯ ಡೊಲ್ಲರುಗಳು ಭವಿಷ್ಯದಲ್ಲೂ ನಮಗೆ ಹಿತವಾಗುವ ತರದಲ್ಲೆ, ಈ ಮೊಬಲಗನ್ನು ಅನೇಕ ಪಾಲಿಟ್ಟು ವೃದ್ಧಿಸಬಹುದು.

ದಕ್ಷಿಣ ಅಮೇರಿಕಾದಲ್ಲಿ, ಅಮೇರಿಕಾದ ಧನಸಂಚಯಗಳನ್ನು ಆಕರ್ಷಿಸುವ ಯೋಜನೆಗಳನ್ನು ಕಲ್ಪಿಸಿಕೊಡುವರೆ ಒಂದು ಸಮಿತಿಯು ಇದೆ. ಇದೇ ತರದ ವ್ಯವಸ್ಥೆಯೊಂದು ಮೆಕ್ಸಿಕೋದಲ್ಲೂ ಇದೆ. ಚೀನಾದಲ್ಲಿ ಸಾಧಾರಣ ಒಂದು ಸಾವಿರ ತರದ ಉದ್ಯಮಗಳನ್ನು ನಡೆಯಿಸುವರೆ ದೊಡ್ಡದೊಂದು ಪಟ್ಟಿಯು ಅಮೇರಿಕಾದ ಪರವಾಗಿ ಸಿದ್ಧಸಿದ್ಧವಾಗಿದೆ. ಈ ಉದ್ಯಮಗಳು ಲೋಹ, ಕಲ್ಲಿದ್ದಲು ಇತ್ಯಾದಿಗಳ ಗಣಿಗಳ ವ್ಯವಸಾಯ, ಉಕ್ಕಿನ ಸಾಮಾನು ಇತ್ಯಾದಿಗಳನ್ನು ತಯಾರಿಸುವುದು, ಇತ್ಯಾದಿಗಳಿಗೆ ಸಂಬಂಧಪಟ್ಟವುಗಳು. ಈ ಉದ್ಯಮಗಳಿಗೆ ಅಮೇರಿಕಾದ ಒಂದು ಸಾವಿರ ಮಿಲಿಯ ಡೊಲ್ಲರುಗಳ ಸಂಚಯವು ಅವಶ್ಯವಿದೆಯೆಂದು ಸೂಚಿಸಲಾಗಿದೆ. ಅದಲ್ಲದೆ, ಚೀನಾ ಸರಕಾರವು ನೆರವಿನಲ್ಲೆ ಯುದ್ಧೋತ್ತರದ ಹತ್ತು ವರ್ಷಗಳಲ್ಲಿ, ಪ್ರತೀವರ್ಷವೂ ೪ ಸಾವಿರ ಮಿಲಿಯ ಡೊಲ್ಲರುಗಳನ್ನು ವ್ಯಯಿಸಿ, ಔದ್ಯೋಗಿಕ ಕಾರ್ಯಕಲಾಪಗಳನ್ನು ನಡೆಯಿಸಬೇಕೆಂದು ನಿರ್ಧಾರವಾಗಿದೆ. ಈ ಅಂಕೆಸಂಖ್ಯೆಗಳು ಅತೀ ದೊಡ್ಡದೆಂದು ಕಾಣಿಸಿಕೊಳ್ಳಬಹುದು. ಚೀನಿಯರು ಅಮೇರಿಕಾದಷ್ಟೆ ಪ್ರಗತಿಯನ್ನು ಪಡೆಯಬೇಕಾದರೆ, ಮೇಲೆ ನಮೂದಿಸಿದ ಮೊಬಲಗುಗಳಿಗಿಂತ, ಅನೇಕ ಬಾರಿ ಹೆಚ್ಚು ಧನಸಂಚಯದ ಅವಶ್ಯವಿದೆ.

೧೯೨೯ರಲ್ಲಿ ಚೀನಾದ ಔದ್ಯೋಗಿಕರಣವು ನಡೆಯುತ್ತಿದ್ದರೆ, ಆ ವರ್ಷ ಅಲ್ಲಿಗೆ ಆದ ನಮ್ಮ ರಫ್ತು ೧೨೪ ಮಿಲಿಯ ಡೊಲ್ಲರುಗಳ ಬದಲಾಗಿ ೮ ಸಾವಿರ ಮಿಲಿಯ ಡೊಲ್ಲರುಗಳು ಆಗುತಿತ್ತು, ಅಮೇರಿಕಾದ ಧನವು ಪರದೇಶಗಳ ಔದ್ಯೋಗಿಕರಣದಲ್ಲಿ ಸಂಚಯಿಸಲ್ಪಡುವುದರಿಂದ

(೬ನೇ ಪುಟಕ್ಕೆ ಮುಂದುವರಿದಿದೆ)

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಟ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 39] ತಾರೀಕು 20—7—1945 [ಸಂಚಿಕೆ 18]

ಜಾಗತಿಕ ಶಾಂತಿಸಾಧನೆಯಲ್ಲಿ ಅಮೇರಿಕದ ಪಾತ್ರ

"ಅಮೇರಿಕಾಕ್ಕೆ ಇದೊಂದು ಸುಸಂಧಿ" ಎಂಬ ಶಿರೋನಾಮದಡಿಯಲ್ಲಿ, ಸಂಯುಕ್ತ ಅಮೇರಿಕಾದ ವಣಿಜಸಂಘದ ಅಧ್ಯಕ್ಷರಾದ ಎರಿಕ್ ಜೊನ್ಸ್ಟನ್ನರು ಬರೆದ ಲೇಖದ ಕೆಲ ಅಭಿಪ್ರಾಯಗಳು ಈ ಕೆಳಗೆ ಆರಿಸಿಕೊಡಲಾಗಿದೆ. ಇವರು ಹೇಳುವಂತೆ,–ಹಿಂದುಳಿದ ರಾಷ್ಟ್ರಗಳು ಮುಂಬರದೆ ಜಾಗತಿಕ ಶಾಂತಿಯು ಲಭಿಸದು–ಎಂದು ತಿಳಿಯಬೇಕಾಗಿದೆ. ಔದ್ಯೋಗಿಕರಣದ ವಿಚಾರದಲ್ಲಿ ಮಾತ್ರವಲ್ಲ, ಸ್ವಾತಂತ್ರ್ಯದ ವಿಚಾರದಲ್ಲೂ, ಹಿಂದುಳಿದ ದೇಶಗಳು ಎರಿಕ್ ಜೊನ್ಸ್ಟನ್ನರ ಅಮೇರಿಕಾದಷ್ಟೆ ಮುಂದೆ ಬಂದರೆ ಮಾತ್ರ ಜಗತ್ತಿಗೆ ಸುಖವಿದೆ. ಎರಿಕ್ ಜಾನ್ಸ್ಟನ್ ಈ ಅಭಿಪ್ರಾಯಗಳಿಗೆ ಸಂಯುಕ್ತ ರಾಷ್ಟ್ರಗಳ ಲಕ್ಷ್ಯವು ದೊರಕುವುದೆ ಎಂಬುದನ್ನು ಮಾತ್ರ ನೋಡಬೇಕು.

ಇಪ್ಪತ್ತನೆ ಶತಮಾನ ಕಡೆಯ ಅರ್ಧವು, ಮಾನವ ಚರಿತ್ರೆಯಲ್ಲಿ ಪ್ರಜ್ವಲಿಸುವ ಸಾಂಪತ್ತಿಕ ಯುಗವಾಗಿ ಪರಿಣಮಿಸಬೇಕು;–ಅದೊಂದು ಔದ್ಯೋಗಿಕ ಯುಗವಾಗಬೇಕು, ಹಿಂದುಳಿದ ಜನರ ಆಧುನೀಕರಣವೂ ನಡೆಯಬೇಕು.

ಜಗತ್ತಿನ ವಿವಿಧ ದೇಶಗಳ ಔದ್ಯೋಗಿಕರಣದೊಂದಿಗೆ ನಮ್ಮ ಉದ್ಧಾರವು ಕೂಡಿಕೊಂಡಿದೆ. ಆ ದೇಶಗಳ ಔದ್ಯೋಗಿಕ ಉದ್ಧಾರವು ನಡೆದ ಹಾಗೆ ಅಲ್ಲಿ ನಮಗೆ ಬೇಕಾದ ಗಿರಾಕಿಗಳ ಉದ್ಭವವಾಗುವುದು. ಬ್ರಿಟನು ಔದ್ಯೋಗಿಕ ರಾಷ್ಟ್ರವು. ಕಳೆದ ಮಹಾ ಯುದ್ಧದ ನಂತರ ಸಂತುಷ್ಟಿಯ ವರುಷವೆನಿಸಿದ ೧೯೨೯ರಲ್ಲಿ–ನಮ್ಮಲ್ಲಿಂದ ಅಲ್ಲಿಗೆ ರಫ್ತಿನ ಮೌಲ್ಯವು ೮೪೧ ಮಿಲಿಯ ಡೊಲ್ಲರುಗಳಾಗಿರುತ್ತದೆ. ಚೀನಾದ ಜನಸಂಖ್ಯೆಯು ೪೫೦ ಮಿಲಿಯ. ಅಲ್ಲಿಗೆ ನಮ್ಮಲ್ಲಿಂದ ತಲುಪಿದ ರಫ್ತಿನ ಮೌಲ್ಯವು ೧೨೪ ಮಿಲಿಯ ಡೊಲ್ಲರುಗಳಾಗಿರುತ್ತದೆ. ಇದಕ್ಕೆ ಕಾರಣ ಬ್ರಿಟನು ಔದ್ಯೋಗಿಕ ದೇಶವು ಚೀನಾವು ಬಹಳ ಹಿಂದುಳಿದ ದೇಶವು ಎಂಬುದು. ಚೀನಿಯರ ಕೊಂಡುಕೊಳ್ಳುವ ಶಕ್ತಿಯು ಅತೀ ಕಡಿಮೆಯಾಗಿತ್ತು.

ಈ ಜಗತ್ತಿನ ಒಂದು ಸಾವಿರ ಮಿಲಿಯಕ್ಕೆ ಮೇಲ್ಪಟ್ಟ ಜನರು ಔದ್ಯೋಗಿಕ ವಿಚಾರದಲ್ಲಿ ಬಹಳ ಹಿಂದುಳಿದವರಾಗಿ ಬಡತನದಲ್ಲಿ ಜೀವನ ಸಾಗಿಸುತ್ತಿರುವರು. ಈ ಜನರ ಉದ್ಧಾರವಾದರೆ, ಆಗ ಜಗತ್ತಿನ ವ್ಯಾಪಾರದಲ್ಲಿ, ಸಾಂಪತ್ತಿಕ ಸ್ಥಿತಿಯಲ್ಲಿ ಎಷ್ಟು ಉತ್ತಮ ಪರಿಣಾಮಗಳು ಉಂಟಾಗಲಿಕ್ಕಿಲ್ಲ!

ಸದ್ಯ ರೂಢಿಯಲ್ಲಿರುವ ಸಂಕುಚಿತ ಮನೋಭಾವನೆಗಳು ಮಾಯವಾಗಲೆ ಬೇಕಾದ ಸ್ಥಿತಿಯು ಭವಿಷ್ಯದಲ್ಲುಂಟಾಗುವುದು. ಆಗ ಉಂಟಾಗುವ ಏಳ್ಗೆಯ ದೆಸೆಯಿಂದ ವ್ಯಾಪಾರಿ ರಾಷ್ಟ್ರವಾದ ಅಮೇರಿಕಾಕ್ಕೆ ತನ್ನ ಹಿತಗಳನ್ನು ವೃದ್ಧಿಸಿಕೊಳ್ಳಲು ಇನ್ನೂ ಅನುಕೂಲವೆನಿಸುವುದು. ಜಗತ್ತಿನ ಮುಂದರಿದ ದೇಶಗಳ ಸ್ಥಾನಕ್ಕೇನೆ, ಹಿಂದುಳಿದ ದೇಶಗಳು ಬಂದರೆ, ಆಗ ಜಗತ್ತಿನ ವ್ಯಾಪಾರದಲ್ಲಿ ಅತಿ ದೊಡ್ಡ ಅಭಿವೃದ್ಧಿಯು ಉಂಟಾಗುವುದು.

ದೃಷ್ಟಾಂತವಾಗಿ, ಸಂಯುಕ್ತ ಅಮೇರಿಕದ ನಿವಾಸಿಯು ಉಪಯೋಗಿಸುವಂತೆ ಅರಿವೆಯನ್ನು ಜಗತ್ತಿನ ಪ್ರತಿಯೊಬ್ಬ ನಿವಾಸಿಯು ಉಪಯೋಗಿಸುವುದಾದರೆ, ಜಗತ್ತಿನ ಈಗಿನ ಹತ್ತಿ ಉತ್ಪನ್ನವು ಮೂರು ಪಾಲಷ್ಟು ಹೆಚ್ಚಬೇಕಾಗುವುದು. ಅಮೇರಿಕನ್ನರು ಉಪಯೋಗಿಸಿದಷ್ಟೆ ಸಾಮಾನು ಜಗತ್ತಿನ ಇತರ ಜನರೂ ಉಪಯೋಗಿಸುವುದಾದರೆ, ಸಾಬೂನಿನ ತಯಾರಿಕೆಯಲ್ಲಿ ಈಗಿನ ನಾಲ್ಕರಷ್ಟು ಹೆಚ್ಚು ನಡೆಯಬೇಕಾಗುವುದು.

ಸಂಯುಕ್ತ ಅಮೇರಿಕಾದಲ್ಲಿ ೨೭ ಮಿಲಿಯ ಟೆಲಿಫೋನುಗಳು ಬಳಕೆಯಲ್ಲಿವೆ. ಜಗತ್ತಿನ ಇತರ ದೇಶಗಳಲ್ಲೂ ಟೆಲಿಫೋನಿನ ಉಪಯೋಗವು ಅಮೇರಿಕಾದ ಮಟ್ಟಕ್ಕೆ ಬಂದುಬಿಟ್ಟರೆ ಆಗ ೩೫೦ ಮಿಲಿಯ ಟೆಲಿಫೋನುಗಳನ್ನು ಸಿದ್ಧಗೊಳಿಸಬೇಕಾಗುವುದು, ಅದೇ ರೀತಿಯಲ್ಲಿ ಅಲ್ಲೀಗ ೫೭ ಮಿಲಿಯ ರೇಡಿಯೋ ಪೆಟ್ಟಿಗೆಗಳು ಉಪಯೋಗದಲ್ಲಿವೆ. ಜಗತ್ತಿನ ಇತರ ದೇಶಗಳು ಈ ವಿಚಾರದಲ್ಲಿ ಅಮೇರಿಕಾದೊಡನೆ ಸರಿಸಮಾನತೆ ಪಡೆಯಬೇಕಾದರೆ,–೬೦೦ ಮಿಲಿಯ ರೇಡಿಯೋ ಪೆಟ್ಟಿಗೆಗಳು ಬೇಕಾಗುವುವು.

ನಮ್ಮ ಅಭಿವೃದ್ಧಿಯು, ಇಡೀ ಜಗತ್ತಿನ ಉದ್ಧಾರವಾದರೆ ಮತ್ತದರ ಐಶ್ವರ್ಯವು ಬೆಳೆದರೆ ಮಾತ್ರ ಸಾಧ್ಯವು.

ಹಿಂದುಳಿದ ದೇಶಗಳೆಲ್ಲಾ ಮುಂಬರುವ ಲವಲವಿಕೆಯಲ್ಲಿವೆ. ಮುಂದೆ ಬರಲು ಅವುಗಳಲ್ಲಿ ಯೋಗ್ಯತೆಗಳೂ ಇವೆ. ಹಿಂದೂದೇಶದಲ್ಲಿ ಅಮೇರಿಕನ್ನರ ನೆರವಿನಲ್ಲಿ ನಡೆಯುವ 'ಹಿಂದುಸ್ಥಾನ್ ಎಯರ್ ಕ್ರಾಫ್ಟ್' (ಅಂದರೆ ವಿಮಾನಗಳನ್ನು ಸಿದ್ಧಮಾಡಿ ದುರಸ್ತಿಯಾಗಿಡಲು ವ್ಯವಸ್ಥಿತವಾದ ಸಂಸ್ಥೆಯು) ಈ ಕುರಿತು ಒಂದು ಉತ್ತಮ ದೃಷ್ಟಾಂತವು. ಬ್ರಿಟನು, ಜರ್ಮನಿ, ಅಮೇರಿಕಾ ಮೊದಲಾದ ಕಡೆಗಳಲ್ಲಿ ವಿದ್ಯಾಭ್ಯಾಸಂಗ ನಡೆಯಿಸಿದ ನೂರಾರು ಹಿಂದೀಯರ ಕೈಕೆಳಗೆ, ಸಾಧಾರಣ ೧೫,೦೦೦ ಇತರ ಹಿಂದೀಯರು ಈ ಸಂಸ್ಥೆಯಲ್ಲಿ ದುಡಿಯುತ್ತಿರುವರು. ಈ ಸಂಸ್ಥೆಯು ಮೇಲಧಿಕಾರದಲ್ಲಿ ೩೫ ಅಮೇರಿಕನ್ನರು ಇರುವರು. ಈ ಸಂಸ್ಥೆಯ ಚಾಲಕರಾದ ವಿಲಿಯಮ್ ಡಿಪೌಲೆಯವರ ಅಭಿಪ್ರಾಯದಂತೆ, ಹಿಂದೂದೇಶಕ್ಕೆ ಪ್ರಚಂಡ ಔದ್ಯೋಗಿಕ ಉದ್ಧಾರದ ಭವಿಷ್ಯವಿದೆ ಎಂದು ತಿಳಿಯಬೇಕಾಗಿಯದೆ.

ಜಗತ್ತಿನ ಹಿಂದುಳಿದ ಜನರಲ್ಲೂ ಪಾಶ್ಚಾತ್ಯದ ಮುಂದರಿದ ಜನರಲ್ಲಿರುವಂತೆ ಔದ್ಯೋಗಿಕರಣಕ್ಕೆ ಯೋಗ್ಯತೆಯು ಇದ್ದೇ ಇದೆ. ಅವರಿಗೆ ಬೇಕು ಧನ. ಈ ಧನವು ಎಲ್ಲಿದೆ? ಸಂಯುಕ್ತ ಅಮೇರಿಕಾದಲ್ಲಿ.

ನಮ್ಮೊಡನೆ ಧನ ಸಂಚಯವು ಅತಿರೇಕವಿದೆ. ಇಷ್ಟರ ತನಕ ಈ ಧನವು ಏನೊಂದೂ ಉಪಯೋಗವಿಲ್ಲದೆನೆ, ಇದೆ. ಹಿಂದುಳಿದ ದೇಶಗಳು ಈ ಧನವನ್ನು ಕರೆಯುತ್ತಿದ್ದಾವೆ.

ಈ ಧನವನ್ನು ಆ ದೇಶಗಳಿಗೆ ಧಾನವಾಗಿ ಕೊಡಬೇಕಾಗಿಲ್ಲ, ಸಾಲವಾಗಿಯೂ ಕೊಡಬೇಕಾಗಿಲ್ಲ. ಈ ಹಣವು ಆ ದೇಶಗಳಲ್ಲಿ ಸಂಚಯಿಸಲ್ಪಡಬೇಕು. ನಮ್ಮ ನೆರವಿನಲ್ಲೇ, ಆಡಳಿತದಲ್ಲೇ, ಅಮೆರಿಕನ್ ಇಂಜಿನಿಯರುಗಳ ಅಂಕಿತದಲ್ಲಿ ಕಾರ್ಖಾನೆಗಳು ಅಲ್ಲಿ ಸ್ಥಾಪಿಸಲ್ಪಟ್ಟು ನಡೆಯಬೇಕು. ಈ ರೀತಿಯಿಂದ ನಮ್ಮ ಹಣದ ಭದ್ರತೆಯನ್ನೂ ನೋಡಿಕೊಳ್ಳಲು ಸುಲಭ ಸಾಧ್ಯವಾಗುವುದು. ಇದರಿಂದ ಆ ದೇಶಗಳಿಗೂ ಒಳಿತಿದೆ. ಕಾರಣ, ತಯಾರಿಕೆಯ ಅನುಕೂಲಗಳೆಲ್ಲಾ ಅವರಿಗೆ ಅಮೇರಿಕಾದ ಖರ್ಚಿನಲ್ಲಿ ದೊರಕುತ್ತವೆ. ಅಲ್ಲದೆ ಔದ್ಯೋಗಿಕರಣದಲ್ಲಿ ಪರಿಪಾಠಮಾಡಿಕೊಡಲು ಅಮೇರಿಕನ್ ತಜ್ಞರ ಸಹಾಯವೂ ಅವರಿಗೆ ದೊರಕುವುದು.

ಈ ಯುದ್ಧವು ಪ್ರಾರಂಭವಾಗುವಂದು ಅಮೇರಿಕದ ಧನವು ಹೊರದೇಶಗಳಲ್ಲಿ ಸಂಚಯಿಸಲ್ಪಟ್ಟಿದ್ದು–೧೦ ಸಾವಿರ ಮಿಲಿಯ ಡೊಲ್ಲರುಗಳು ಭವಿಷ್ಯದಲ್ಲೂ ನಮಗೆ ಹಿತವಾಗುವ ತರದಲ್ಲಿ, ಈ ಮೊಬಲಗನ್ನು ಅನೇಕ ಪಾಲಿಟ್ಟು ವೃದ್ಧಿಸಬಹುದು.

ದಕ್ಷಿಣ ಅಮೇರಿಕಾದಲ್ಲಿ, ಅಮೇರಿಕಾದ ಧನಸಂಚಯಗಳನ್ನು ಆಕರ್ಷಿಸುವ ಯೋಜನೆಗಳನ್ನು ಕಲ್ಪಿಸಿಕೊಡುವರೆ ಒಂದು ಸಮಿತಿಯು ಇದೆ. ಇದೇ ತರದ ವ್ಯವಸ್ಥೆಯೊಂದು ಮೆಕ್ಸಿಕೋದಲ್ಲೂ ಇದೆ. ಚೀನಾದಲ್ಲಿ ಸಾಧಾರಣ ಒಂದು ಸಾವಿರ ತರದ ಉದ್ಯಮಗಳನ್ನು ನಡೆಯಿಸುವರೆ ದೊಡ್ಡದೊಂದು ಪಟ್ಟಿಯು ಅಮೇರಿಕಾದ ಪರವಾಗಿ ಸಿದ್ಧಸಿದ್ಧವಾಗಿದೆ. ಈ ಉದ್ಯಮಗಳು ಲೋಹ, ಕಲ್ಲಿದ್ದಲು ಇತ್ಯಾದಿಗಳ ಗಣಿಗಳ ವ್ಯವಸಾಯ, ಉಕ್ಕಿನ ಸಾಮಾನು ಇತ್ಯಾದಿಗಳನ್ನು ತಯಾರಿಸುವುದು, ಇತ್ಯಾದಿಗಳಿಗೆ ಸಂಬಂಧಪಟ್ಟವುಗಳು. ಈ ಉದ್ಯಮಗಳಿಗೆ ಅಮೇರಿಕಾದ ಒಂದು ಸಾವಿರ ಮಿಲಿಯ ಡೊಲ್ಲರುಗಳ ಸಂಚಯವು ಅವಶ್ಯವಿದೆಯೆಂದು ಸೂಚಿಸಲಾಗಿದೆ. ಅದಲ್ಲದೆ, ಚೀನಾ ಸರಕಾರವು ನೆರವಿನಲ್ಲೆ ಯುದ್ಧೋತ್ತರದ ಹತ್ತು ವರ್ಷಗಳಲ್ಲಿ, ಪ್ರತೀವರ್ಷವೂ ೪ ಸಾವಿರ ಮಿಲಿಯ ಡೊಲ್ಲರುಗಳನ್ನು ವ್ಯಯಿಸಿ, ಔದ್ಯೋಗಿಕ ಕಾರ್ಯಕಲಾಪಗಳನ್ನು ನಡೆಯಿಸಬೇಕೆಂದು ನಿರ್ಧಾರವಾಗಿದೆ. ಈ ಅಂಕೆಸಂಖ್ಯೆಗಳು ಅತೀ ದೊಡ್ಡದೆಂದು ಕಾಣಿಸಿಕೊಳ್ಳಬಹುದು. ಚೀನಿಯರು ಅಮೇರಿಕಾದಷ್ಟೆ ಪ್ರಗತಿಯನ್ನು ಪಡೆಯಬೇಕಾದರೆ, ಮೇಲೆ ನಮೂದಿಸಿದ ಮೊಬಲಗುಗಳಿಗಿಂತ, ಅನೇಕ ಬಾರಿ ಹೆಚ್ಚು ಧನಸಂಚಯದ ಅವಶ್ಯವಿದೆ.

೧೯೨೯ರಲ್ಲಿ ಚೀನಾದ ಔದ್ಯೋಗಿಕರಣವು ನಡೆಯುತ್ತಿದ್ದರೆ, ಆ ವರ್ಷ ಅಲ್ಲಿಗೆ ಆದ ನಮ್ಮ ರಫ್ತು ೧೨೪ ಮಿಲಿಯ ಡೊಲ್ಲರುಗಳ ಬದಲಾಗಿ ೮ ಸಾವಿರ ಮಿಲಿಯ ಡೊಲ್ಲರುಗಳು ಆಗುತಿತ್ತು, ಅಮೇರಿಕಾದ ಧನವು ಪರದೇಶಗಳ ಔದ್ಯೋಗೀಕರಣದಲ್ಲಿ ಸಂಚಯಿಸಲ್ಪಡುವುದರಿಂದ

(೬ನೇ ಪುಟಕ್ಕೆ ಮುಂದುವರಿದಿದೆ)

ಭಾರತೀ ಸ್ತ್ರೀ ಸಹಾಯ ದಳಕ್ಕೆ ಇನ್ನೂ ಸ್ತ್ರೀಯರು ಬೇಕಾಗಿದ್ದಾರೆ

ರಾಯಲ್ ಏರ್ ಫೋರ್ಸಿನಲ್ಲಿ ಕೆಲಸ ಮಾಡುವುದಕ್ಕಾಗಿ ಸ್ತ್ರೀ ಸಹಾಯ ವೈಮಾನಿಕ ದಳದವರು ಭಾರತಕ್ಕೆ ಬಹು ಸಂಖ್ಯೆಯಲ್ಲಿ ಬಂದೀದಿದ್ದಾರೆ; ಆದರೂ ಭಾರತೀ ಸ್ತ್ರೀ ಸಹಾಯ ದಳಕ್ಕೆ ಇನ್ನೂ ಶಿಬಂಧಿ ಬೇಕಾಗಿದೆ ಎಂದು ಆ ದಳದ ಅಧಿಕಾರಿಯಿಂದ ತಿಳಿದು ಬಂದಿದೆ.

"ಸ್ತ್ರೀ ಸಹಾಯ ವೈಮಾನಿಕ ದಳದವರು ಭಾರತಕ್ಕೆ ಬಂದಾಗಿನಿಂದ ರಾಯಲ್ ಏರ್ ಫೋರ್ಸಿನಲ್ಲಿ ಕೆಲಸಮಾಡುತ್ತಿರುವ ಭಾರತೀ ಸ್ತ್ರೀ ಸಹಾಯ ದಳದವರನ್ನು ಸೈನ್ಯ ಶಾಖೆಗೆ ವರ್ಗಾಯಿಸುತ್ತಾರೆಂಬ ಸುದ್ದಿ ಹರಡಿತು. ಇದು ತಪ್ಪು ಅಭಿಪ್ರಾಯ. ಸ್ತ್ರೀ ಸಹಾಯ ವೈಮಾನಿಕ ದಳದಲ್ಲಿ ಹಲವರು ವಿಶೇಷ ರೀತಿಯ ಔದ್ಯೋಗಿಕ ಕೆಲಸಗಳನ್ನು ಮಾಡುತಿದ್ದಾರೆ. ಆದ್ದರಿಂದ ವೈಮಾನಿಕ ದಳದಲ್ಲಿ ಗುಮಾಸ್ತೆ ಕೆಲಸ ಮುಂತಾದುವುಗಳಿಗೆ ಸ್ತ್ರೀಯರು ಹೆಚ್ಚು ಹೆಚ್ಚಾಗಿ ಬೇಕಾಗಿದ್ದಾರೆ.

"ನಮಗೆ ಗೊತ್ತಿರುವಂತೆ ಮೂರು ಕಡೆಗಳಿಗೂ ಭಾರತೀ ಸ್ತ್ರೀ ಸಹಾಯ ದಳದವರು ಬೇಕಾಗಿದ್ದಾರೆ. ಜರ್ಮನಿ ಶರಣಾಗತವಾದ ಮಾತ್ರಕ್ಕೆ ನಾವು ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ನಿಂತಿಲ್ಲ. ಆದರೆ ಈ ದಳಕ್ಕೆ ಈಗ ಮೊದಲಿಗಿಂತ ಇನ್ನೂ ಹೆಚ್ಚಿನ ಉತ್ಸಾಹ, ಹುರುಪು ಹುಟ್ಟಬೇಕು. ಏಕೆಂದರೆ ಯುದ್ಧ ಈಗ ಸಂಪೂರ್ಣವಾಗಿ ಭಾರತದ ಹೊಸ್ತಿಲಿಗೆ ಬಂದಿದೆ. ನಮಗೆ ಬೇಕಾಗಿರುವಷ್ಟು ಶಿಬ್ಬಂದಿ ಇನ್ನೂ ದೊರಕಿಲ್ಲ. ಆದ್ದರಿಂದ ಭಾರತೀ ಸ್ತ್ರೀಯರು ಇನ್ನೂ ಹೆಚ್ಚಾಗಿ ದಳಕ್ಕೆ ಸೇರಿದರೆ ಸಂತೋಷ. ಹಿಂದಿನ ವರ್ಷಗಳಲ್ಲಿ ದಳಕ್ಕೆ ಸೇರಿದ ಸ್ತ್ರೀಯರ ಸಂಖ್ಯೆಯನ್ನು ನೋಡಿದರೆ, ದಳಕ್ಕೆ ಸೇರಲು ಇನ್ನೂ ಜನ ಸಿಕ್ಕುತ್ತಾರೆಂಬುದು ಗೊತ್ತಾಗುತ್ತದೆ. ಈಗ ನಮಗೆ ಸುಶಿಕ್ಷಿತ ಜನ ಸಿಕ್ಕದಿರಬಹುದು, ಆದರೆ ನಾವು ಅವರಿಗೆ ಬೇರೆ ಬೇರೆ ಶಿಕ್ಷಣ ಶಾಲೆಗಳಲ್ಲಿ ವಿವಿಧ ರೀತಿಯ—ಶಿಕ್ಷಣ ಕೊಡಲು ಸಿದ್ಧರಾಗಿದ್ದೇವೆ. ಈಗಾಗಲೆ ಗುಮಾಸ್ತೆ ಕೆಲಸದಲ್ಲಿರುವವರ ಸಂಖ್ಯೆಯನ್ನು ಹೋಲಿಸಿ ನೋಡಿದರೆ ಔದ್ಯೋಗಿಕ ಶಾಲೆಗಳಲ್ಲಿರುವವರು ಬಹಳ ಕಡಮೆ. ಆದರೆ ಯುದ್ಧಾನಂತರದಲ್ಲಿ ಔದ್ಯೋಗಿಕ ಶಿಕ್ಷಣ ಸ್ತ್ರೀಯರಿಗೆ ಬಹಳ ಉಪಯೋಗಕರವಾಗುತ್ತದೆ. ಆದಕಾರಣ ಭಾರತೀ ಸ್ತ್ರೀ ಸಹಾಯ ದಳಕ್ಕೆ ಸೇರಿದವರಿಗೆ ಟೆಲಿಫೋನ್ ಕಚೇರಿಗಳಲ್ಲಿ,-ಸಂಶೋಧನಾಲಯಗಳಲ್ಲಿ, ಗಡಂಗುಗಳಲ್ಲಿ ಕೆಲಸಮಾಡುವುದನ್ನು ಕಲಿಸಿಕೊಡಲಾಗುತ್ತದೆ" ಎಂದು ನವದೆಹಲಿಯ ಭಾರತೀ ಸ್ತ್ರೀ ಸಹಾಯ ದಳದ ಕೇಂದ್ರ ಕಚೇರಿಯ ಅಧಿಕಾರಿಗಳು ತಿಳಿಸುತ್ತಾರೆ.

ಮದರಾಸು ಸ್ಯಾಪರುಗಳಿಗೆ ಮಳೆಯ ಭಯವಿಲ್ಲ

ಬರ್ಮಾ ಯುದ್ಧದಲ್ಲಿ ಮದರಾಸು ಸ್ಯಾಪರ್ ಮತ್ತು ಮೇಸನ್ ದಳಕ್ಕೆ ಮಳೆಯೆಂದರೆ ನಿರ್ಲಕ್ಷ್ಯ. ಒಂದೇ ಸಮನಾಗಿ ಮೂರು ಮಳೆಗಾಲದಲ್ಲಿಯೂ ಕೆರಸಿಲ್ಲದೆ ಅವರು ದುಡಿಯುತ್ತಿದ್ದಾರೆ. ಅಸ್ಸಾಮಿನ ಕಡಿದಾದ ಬೆಟ್ಟ ಸಾಲುಗಳ ಪಕ್ಕದಲ್ಲಿ ರಸ್ತೆಮಾಡಿದ್ದಾರೆ; ೨೦೦೦ ಅಡಿ ಕೆಳಗಿರುವ ಹೊಳೆಗಳಿಂದ ನೀರೆತ್ತಿ ದಳಗಳಿಗೆ ಒದಗಿಸಿದ್ದಾರೆ. ಚಿಂಡ್ವಿನ್ ನದಿಯ ಮೇಲೆ ಹಲವು ದಳಗಳನ್ನು ದೋಣಿಗಳಲ್ಲಿ ಸಾಗಿಸಿದ್ದಾರೆ. ಏಷ್ಯಾ ಖಂಡದಲ್ಲಿ ಅತ್ಯಂತ ಉದ್ದವಾದ 'ಬೈಲಿ' ಸೇತುವೆಗಳನ್ನು ಕಟ್ಟಿದ್ದಾರೆ. ಇದೆಲ್ಲವನ್ನೂ ನಿರ್ವಹಿಸಿರುವುದು ಸುರಿಯುವ ಮಳೆಯಲ್ಲಿ. ಈಗ ಮತ್ತು ಮಳೆಯನ್ನು ಪ್ರತಿಭಟಿಸಿ ಪೂರ್ವಾಭಿಮುಖದಾಳಿಗೆ ಅವಶ್ಯಕವಾಗಿರುವ, ಭಗ್ನವಾಗಿರುವ ವಿಮಾನ ನಿಲ್ದಾಣವೊಂದನ್ನು ಪುನರ್ರಚಿಸಲು ತೊಡಗಿದ್ದಾರೆ.

ಹೊಸದಾಗಿ ರಚಿಸಿದ ಭಾರತೀ ನಾಕೆ

ಜಪಾನಿಗಳನ್ನು ಎದುರಿಸುವುದಕ್ಕೆ ಹೊಸದಾಗಿ ರಚಿಸಿದ ಎಚ್. ಎಂ. ಐ. ಎಸ್. "ಡೆಕ್ಕನ್" ಎಂಬ ಯುದ್ಧದ ಜಹಜು ಸಿದ್ಧವಾಗಿದೆ. ನೋಡುವುದಕ್ಕೆ ಗೆಲವಾಗಿ ಉಪಯುಕ್ತವಾಗಿ ಕಾಣುತ್ತದೆ. ಬೆಂಗಳೂರಿನ ಲೆ॥ ಸಿ. ಜೆ. ಮೋಹಗರು ಅದಕ್ಕೆ ನಾಯಕರು. ಇವರು ವ್ಯಾಪಾರದ ಜಹಜಿನಲ್ಲಿ ೫ ವರ್ಷ ಕೆಲಸಮಾಡಿ ಭಾರತೀ ನೌಕಾ ದಳಕ್ಕೆ ಸೇರಿದರು. ಇದು ಇವರ ಕೈಕೆಳಗಿರುವ ೧೪ನೇ ಜಹಜು.

ತಿರುವಾಂಕೂರಿನ ನಂ. ೧ನೇ ಲೆ॥ ಕೆ. ಸಿ. ನಾಯರ್ ಅವರು ವ್ಯಾಪಾರ ನೌಕೆಯಿಂದಲೇ ಭಾರತೀ ನೌಕಾದಳಕ್ಕೆ ಬಂದರು. ಇದುವರೆಗೆ ಅವರ ಸೇವೆ ಅತ್ಯಮೂಲ್ಯವಾಗಿದೆ. ಅಟ್ಲಾಂಟಿಕ್ ಸಾಗರದಲ್ಲಿ ಎರಡು ಸಾರಿ ವ್ಯಾಪಾರದ ಜಹಜುಗಳಲ್ಲಿ ಟಾರ್ಪಿಡೋಗೆ ಸಿಕ್ಕಿ, ಒಂದು ಬಾರಿ ರಕ್ಷಣ ನೌಕೆಯಲ್ಲಿ ಎಂಟು ದಿನ ಕಾಲಹಾಕಿದರು. ಇನ್ನೊಂದು ಸಾರಿ ಬ್ರೆಜಿಲಿನ ಬೆಸ್ತರು ಆಶ್ರಯಕೊಟ್ಟು, ರಿಯೊಡಿಜನಿಯರೋಗೆ ಕರೆದುಕೊಂಡು ಹೋಗುವವರೆಗೆ ಒಂದು ತೆಪ್ಪದ ಮೇಲೆಯೇ ೩॥ ದಿನ ಇರಬೇಕಾಯಿತು. ಆಗ ಒಂದು ಯು-ಬೋಟು ಪಕ್ಕದಲ್ಲಿ ಬಂದಿತು. ಅದರ ನಾವಿಕರು ಅವರ ಜಹಜನ್ನು ಮುಳುಗಿಸಿದ್ದಕ್ಕೆ ಕಾರಣವನ್ನು ಸವಿನಯವಾಗಿ ತಿಳಿಸಿದರು.

ಚೀಫ್ ಪೆಟಿ ಆಫಿಸರ್ ಯೂಸೂಫ್ ಬಾವಾ ೧೯೧೫ರಲ್ಲಿ ಕೆಲಸಕ್ಕೆ ಸೇರಿದರು. ಅವರು ೧೯೧೪-೧೮ನೇ ಯುದ್ಧದಲ್ಲಿ ಕೆಂಪುಕಡಲು, ಪರ್ಷಿಯನ್ ಜಲಸಂಧಿಗಳಲ್ಲಿ ಸೇವೆಯ ಸಗಿದರು. ಈ ಯುದ್ಧದಲ್ಲಿ ಉದ್ದಕ್ಕೂ ಜಹಜುಗಳಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾರೆ.

ವಿಚಿತ್ರ ಬೀಗ

ಸೊಲೊಮನ್ ದ್ವೀಪಗಳಲ್ಲಿ ಜನರೆಲ್ಲಾ ಗುಡಿಸಲುಗಳಲ್ಲಿ ವಾಸಿಸುತ್ತಿರುವರು. ಈ ಗುಡಿಸಲುಗಳನ್ನು ನಿವಾಸಿಗಳು ಜೊರಸಂಚಾರಕ್ಕೆ ಹೋದಾಗ ಭದ್ರವಾಗಿರಿಸುವ ಕ್ರಮವು ವಿಚಿತ್ರವಿದೆ. ಒಣಗಿದ ಒಂದು ಕುಂಬಳ ಕಾಯಿ, ಯಾ ತೆಂಗಿನ ಕಾಯಿಯನ್ನು ಹೊರಗಿನ ದ್ವಾರದ ಮೇಲೆ ಕಟ್ಟಬಿಟ್ಟರೆ ಸರಿ. ಅದೆ ಒಂದು ಅತೀ ಭದ್ರ ಬೀಗವಾಗುವುದು. ಮನೆಯ ಯಜಮಾನನು ಇಲ್ಲದ ಸಮಯದಲ್ಲಿ, ಈ ಕಾಯಿಗಳನ್ನು ದಾಟುವುದರಿಂದ ತಮಗೆ ಮಹಾ ಹಾನಿಯು ಒದಗುವುದೆಂದು ಅಲ್ಲಿನವರ ಭಾವನೆಯಾಗಿರುವುದು. ಆದರೆ ಮೊನ್ನಿನ ಯುದ್ಧದ ಸಮಯದಲ್ಲಿ, ಅವರ ದ್ವೀಪಗಳಲ್ಲಿ ಜಪಾನಿಯರ ಮತ್ತು ಇನ್ನಿತರರ ಪ್ರವೇಶವಾದಾಗ ಅವರು ತಮ್ಮ ಗುಡಿಸಲಿನ ಬಾಗಲಲ್ಲಿ ತೆಂಗಿನಕಾಯಿಗಳನ್ನು ಕಟ್ಟಿ ಒಳಪ್ರದೇಶಕ್ಕೆ ಪಲಾಯನ ಮಾಡಿದಾಗ, ಮತ್ತವರು ಹಿಂತೆರಳಿದಾಗ, ಅವರ ಗುಡಿಸಲುಗಳು ಮಾಯವಾದುವನ್ನು ನೋಡಿ ಅವರಿಗೆ ತುಂಬಾ ಆಶ್ಚರ್ಯವಾಗಿತ್ತಂತೆ! ಈ ದ್ವೀಪಗಳಲ್ಲಿ ಕಾಲಗಣನೆಯೇ ಇಲ್ಲ!

ಭ್ರಾಂತಿಯೆ ಹಲವು ರೋಗಗಳ ಕಾರಣವು

ಮಾನವನನ್ನು ಸಹಜವಾಗಿಯೂ ಹಲವು ರೋಗಗಳು ಪೀಡಿಸುತ್ತಿರುವುದಾದರೂ, ಹಲವರಲ್ಲಿ ಭ್ರಾಂತಿಯು ರೋಗದ ಮುಖ್ಯಕಾರಣವಾಗಿರುವುದು. ಈ ಕುರಿತು ಅನೇಕ ನಿದರ್ಶನಗಳನ್ನು ನಾವು ನಮ್ಮ ಸುತ್ತ ಮುತ್ತಲೂ, ನಿತ್ಯವೂ ನೋಡಬಹುದು. ಈ ಕುರಿತು ಅಮೇರಿಕಾದ ಡಾಕ್ಟರರು ತಮ್ಮ ಅನುಭವದ ಮೇಲೆ ಬರೆದಿರುವ ಕೆಲ ಲೇಖಗಳ ಅಭಿಪ್ರಾಯಗಳನ್ನು ಆರಿಸಿ ಇಲ್ಲಿ ಕೊಡಲಾಗಿದೆ.

೫ ವರ್ಷ ಪ್ರಾಯದ ಒಬ್ಬ ಹುಡುಗ. ತಾನು ಮೂಕನೆಂದೆ ಆತನು ಭಾವಿಸಿ ಹಾಗೆನೆ ನಟಿಸುತಿದ್ದನು. ಅಷ್ಟರ ತನಕ ಆತ ಮಾತನಾಡಲೇಯಿಲ್ಲ. ಎಲ್ಲಾ ಬಗೆಯಲ್ಲೂ ಆತನ ದೇಹ ಪ್ರಕೃತಿಯ ಸಹಜಾವಸ್ಥೆಯಲ್ಲಿತ್ತು. ಆತನು ಮೂಕನಾಗಿರಲು ಕಾರಣಗಳು ಡಾಕ್ಟರರಿಗೆ ಕಾಣಸಿಗದಾದವು.

ಕೊನೆಗೆ ಆತನನ್ನು ಒಂದು ಆಸ್ಪತ್ರೆಯಲ್ಲಿಡಲಾಯಿತು. ಆತನಿಗೆ ಅಲ್ಲಿ ಆತನು ಕೇಳುವ ವರೆಗೆ ನೀರೊಂದನ್ನಲ್ಲದೆ ಬೇರೆ ಯಾವತ್ತೂ ಆಹಾರವು ಕೊಡಲಾಗುವುದಿಲ್ಲವೆಂದು ಆತನೊಡನೆ ಹೇಳಲಾಯಿತು. ಮೊದಲಿನ ದಿನ ಆಸ್ಪತ್ರೆಯ ನೂತನ ವಾತಾವರಣದಿಂದ ಆತನಿಗೆ ಆಹಾರದ ನೆನಪಾಗದೆ ಆ ದಿನವು ಹಾಗೆನೆ ಕಳೆದುಹೋಯಿತು. ಎರಡನೆ ದಿವಸ, ಆಹಾರದ ಹರಿವಾಣಗಳನ್ನು ನೋಡಿ ಆತನು ಸ್ವಲ್ಪ ಚಡಪಡಿಸುವವನಾದನು. ಆದರೆ ಮೂರನೆಯ ದಿನವು ಉದಯವಾಗುವುದರೊಳಗೆ ಮುಂಜಾನೆ ದಾದಿಯು ಆತನ ಬಾಗಿಲನ್ನು ತೆರೆದಾಕ್ಷಣವೆ, ಆ ಹುಡುಗನು, "ಅದಿರಲಿ, ನನಗೆ ಸ್ವಲ್ಪ ತಿನ್ನಲಿಕ್ಕೆ ಕೊಡು" ಎಂದು ಕೇಳಿದ್ದನಂತೆ.

ಓರ್ವ ಪಾದ್ರಿ ತನ್ನ ಸ್ವರವು ಹೋಗಿರುವುದೆಂದು ಡಾಕ್ಟರರಲ್ಲಿ ಒಂದು ಕಾಗದದ ಮೇಲೆ ಬರೆದು ತಿಳಿಸಿದನು. ಪರೀಕ್ಷೆಮಾಡಿ ನೋಡಿದಲ್ಲಿ, ಆತನ ಕಂಠದೊಳಗೆ ಯಾವ ದೋಷಗಳೂ ಕಾಣಬಾರದ ಡಾಕ್ಟರರಿಗೆ ಆತನ ಪೀಡೆಯ ಕಾರಣವು ಹೊಳೆಯಿತು. ಪಾದ್ರಿಯು ಬರಿ ಭ್ರಾಂತಿಗೆ ಒಳಗಾಗಿರುವನೆಂದು ಅವರು ಒಂದು ಉಪಾಯವನ್ನು ಹೂಡಿದರು.

ಕಂಠದೊಳಗೆ ಶಸ್ತ್ರ- ಕ್ರಿಯೆಯಾಗಬೇಕೆಂದು ಪಾದ್ರಿಗೆ ತಿಳಿಸಿದರು. ಪಾದ್ರಿಯು ಸಮ್ಮತಿಸಿದನು. ಶಸ್ತ್ರಗಳೆಲ್ಲಾ ಸಿದ್ಧವಾದುವು. ಶುದ್ಧಗೊಳಿಸಲಾದವು. ಪಾದ್ರಿಯನ್ನು ಶಸ್ತ್ರ ಚಿಕಿತ್ಸೆ ಮೇಜಿನಲ್ಲಿ ಮಲಗಿಸಲಾಯಿತು. ಬಾಯಿ ತೆರೆದಿಡುವ ಕ್ಲಿಪೊಂದು ಆತನ ಬಾಯಿಯೊಳಗೆ ಇಡಲಾಯಿತು. ಒಳಗೆ ಶಸ್ತ್ರ ಚಿಕಿತ್ಸೆ ನಡೆಯಿಸುವಂತೆ ಡಾಕ್ಟರರು ನಟನೆಮಾಡಿ, ಆತನ ಕಂಠದೊಳಗಿನ ಎರಡು ಬದಿಗಳನ್ನು ಬಲವಾಗಿ ಚುಚ್ಚಿ ಆತನಿಗೆ ನೋವನು ಉಂಟುಮಾಡಿ, ಚಿಕಿತ್ಸೆಯನ್ನು ಪೂರ್ಣಗೊಳಿಸಿದರು. ಬಾಯಿಯೊಳಗೆ ಹಾಕಲಾದ ಕ್ಲಿಪ್ಪು ತೆಗೆಯಲಾಯಿತು. ಒಡನೆ ಪಾದ್ರಿಯು ಮಾತನಾಡಿದನು.

ಕಡು ಲೋಭಿಯೊಬ್ಬನಿದ್ದನು. ಉದರವ್ರಣದನಿಮಿತ್ತ ಆತನ ಹೊಟ್ಟೆಯ ಮೇಲೆ ಶಸ್ತ್ರ ಚಿಕಿತ್ಸೆಯು ನಡೆಯಿತು. ಆದರೆ ಆತನು ಗುಣಮುಖನಾಗುತ್ತ ಬಂದ ಹಾಗೆ ಆತನಲ್ಲಿ ಇನ್ನೊಂದು ವಿಕಾರವು ಕಾಣಿಸಿಕೊಂಡಿತು. ಕ್ಷಣ ಕ್ಷಣಕ್ಕೆ ತೇಗುವುದು. ಹಲವುತರದ ಔಷಧಿಗಳ ಪ್ರಯೋಗವಾದರೂ ಈವಿಕಾರವನ್ನುನಿವಾರಿಸಲು ಅಸಾಧ್ಯವಾಯಿತು. ಕೊನೆಗೆ ಡಾಕ್ಟರರು ಆತನಿಗೆ ಕಸ್ತೂರಿಮಿಶ್ರಿತ ಯಾವತ್ತೂ ಗುಣ ವಿಶೇಷವಿಲ್ಲದ ಔಷಧಿಯೊಂದನ್ನು ಕೊಟ್ಟರು. ಕಸ್ತೂರಿಯ ಪರಿಮಳವನ್ನು ತಿಳಿದ ಲೋಭಿಯು ಡಾಕ್ಟರರೊಡನೆ ಔಷಧಿಯ ಬೆಲೆಯ ಕುರಿತು ವಿಚಾರಿಸಿದನು. ಅದರ ಬೆಲೆಯು ಬಾಟ್ಲಿ ಒಂದರ ರೂ. ೩೦ ಎಂದು ತಿಳಿಸಲಾಗಲು ಆ ಕ್ಷಣದಲ್ಲೇ ಲೋಭಿಗೆ ಬರುತ್ತಿರುವ ತೇಗುಗಳು ನಿಂತುಹೋದುವು.

ಲೋಭಿಯ ಹಣದ ಕುರಿತು ಭ್ರಾಂತಿಯೆ ಇಲ್ಲಿ ದಿವ್ಯ ಔಷಧಿಯಾಗಿ ಪರಿಣಮಿಸಿತು.

ಸೆಂಟ್ರಲ್ ಎಕ್ಸೈಜ್ ಕಾನೂನಿನಂತೆ
ಹೊಗೆಸೊಪ್ಪು ಮತ್ತು ಅಡಿಕೆಯ ಲೆಕ್ಕಗಳನ್ನಿಡುವ
ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.
ಶಾರದಾ ಪ್ರೆಸ್, ರಥಬೀದಿ, ಮಂಗಳೂರು

ಚಳಿ ಮತ್ತು ಶೀತಗಳನ್ನು ಕೂಡಲೇ ಗುಣ ಪಡಿಸುವುದು.
ಜಾಂಬಕನ್ನು ಪ್ರತಿ ರಾತ್ರೆ ಮಲಗಿಕೊಳ್ಳುವಾಗ ಹಚ್ಚಿರಿ.
ಕೆಟ್ಟ ಶೀತಭಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಗಿಕೊಳ್ಳುವುದರಿಂದ,ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ

ಸತ್ವವು, ಬೇಗನೆ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ.
ಯಾವಾಗಲೂ ಜಾಂಬಕನ್ನೇ ಹಚ್ಚಿರಿ.
ZAM-BUK
ಪ್ರಾಣಿಕೊಬ್ಬು ವಿರಹಿತವಾದುದು.

ಸಂಪಾದಕೀಯ ಟೀಕೆಗಳು

ನಿರಾಶೆಹೊಂದಬೇಕಾಗಿಲ್ಲ

ಸಿಮ್ಲಾ ಪರಿಷತ್ತು ಕೊನೆಗೊಂಡಿತು. ಎಂದಿನಂತೆ ಜಾತೀಯತೆಯೇ ಒಂದು ತಡೆಯಾಗಿ ಮುಂದೆ ಬಂದುಬಿಟ್ಟಿತು. ಮುಸ್ಲಿಮ ಲೀಗೆ ದೇಶದ ಸರ್ವ ಮುಸ್ಲಿಮರ ಪ್ರಾತಿನಿಧ್ಯ ಸಂಸ್ಥೆ ಎಂಬುದನ್ನು ಮನ್ನಿಸಬೇಕಾಗಿ ಹೊರಟ ಜಿನ್ನಾ ಸಾಹೇಬರ ಕೇಳಿಕೆಯು ವೈಸ್ರಾಯ ವೇವಲ್ಲರಿಂದಲೂ, ಕಾಂಗ್ರೆಸ್ಸಿನಿಂದಲೂ ನಿರಾಕರಿಸಲ್ಪಟ್ಟಿತು. ಅಲ್ಲದೆ, ವೇವಲ್ಲ ಯೋಜನೆಯನ್ನನುಸರಿಸಿ ರಚನೆಯಾಗಲಿದ್ದ ಕೇಂದ್ರ ಸರಕಾರದಲ್ಲಿ ಇತರ ಪಕ್ಷಗಳು ಒಟ್ಟುಗೂಡಿ ಮುಸ್ಲಿಮರ ಹಿತಗಳಿಗೆ ವಿರೋಧವಾಗಿ ವರ್ತಿಸುವ ಸಂಭವಗಳಲ್ಲಿ ವೈಸ್ರಾಯರು ತಮ್ಮ ವೇಟೊ ಅಧಿಕಾರವನ್ನು ಪ್ರಯೋಗಿಸಬೇಕೆಂದೂ ಜಿನ್ನಾರಿಂದ ಕೇಳಲಾಯಿತು. ಕಾಂಗ್ರೆಸ್ ತನ್ನ ಐವತ್ತು ವರ್ಷದ ಚರಿತ್ರೆಯನ್ನು ಬಲಿಗೊಟ್ಟು, ಲೀಗಿನ ಕೇಳಿಕೆಗಳನ್ನು ಮನ್ನಿಸಲು ಸಿದ್ಧವಿಲ್ಲವಾಯಿತು.

ಆದರೆ, ರಾಷ್ಟ್ರಪತಿ ಅಜಾದರು ಅಂದಂತೆ, ತಡೆ ಹಾಕುವವರು ತಡೆಹಾಕಲಿ, ಮುಂದರಿಯಲು ಸಿದ್ಧರಿರುವರಿಗೆ ಮುಂದರಿಯಲು ಅವಕಾಶ ಕೊಡಬಹುದಿತ್ತು.

ಈ ಭಾರಿಯ ಯುದ್ಧದಿಂದ ಜಗತ್ತಿನಲ್ಲಿ ಅನೇಕ ಮಾರ್ಪಾಡುಗಳು ಉಂಟಾಗುತ್ತಿವೆ. ಪ್ರಜಾಸತ್ತಾತ್ಮಕ ಭಾವನೆಗಳೆಲ್ಲೆಲ್ಲೂ ಪ್ರಕಾಶಕ್ಕೆ ಬರುತ್ತಿವೆ. ಈ ತರದ ವಿದ್ಯಮಾನಗಳ ಎದುರು ಬ್ರಿಟನು ತಿದ್ದಿಕೊಳ್ಳಬೇಡವೆ? ಹೀಗೆ ತಿದ್ದಿಕೊಳ್ಳುವುದು ಅನಿವಾರ್ಯವೂ ಅವಶ್ಯವೂ ಇದ್ದರೂ ತಮ್ಮ ಕೈಗಳಲ್ಲಿದ್ದುದನ್ನು ಪಕ್ಕನೆ ಬಿಟ್ಟುಬಿಡಲು ಬ್ರಿಟನು ಸಿದ್ಧವಿಲ್ಲವೆಂದೆ, ಸಿಮ್ಲಾ ಪರಿಷತ್ತಿನಲ್ಲಿ ವೈಸ್ರಾಯರು ಅನುಸರಿಸಿದ ಧೋರಣೆಯಿಂದ ತಿಳಿಯಬೇಕಾಗಿದೆ. ಹೀಗೆಂದು ಜವಾಹರಲಾಲ ನೆಹರೂರುಗಳ ಅಭಿಪ್ರಾಯವು.

ಪರಿಷತ್ತು ಪರಿಣಾಮ ಕಾಣದೆ ಕೊನೆಗೊಂಡಿತ್ತೆಂದು ಯಾರೂ ನಿರಾಶೆಹೊಂದಬೇಕಾಗಿಲ್ಲ. ಬಹಳ ಸಮಯ, ದೂರ ಸರಿದು ನಿಂತುಕೊಂಡ ಸರಕಾರವೂ ಕಾಂಗ್ರೆಸ್ಸೂ ಒಂದೆ ಮೇಜಿನ ಬಳಿ ಒಟ್ಟುಗೂಡಿ ದೇಶದ ರಾಜಕೀಯ ಕುರಿತು ವಿಚಾರ ಪರಿಶೀಲನೆ ಮಾಡಿದ್ದೆ ಒಂದು ವಿಶೇಷದ ಸಂಗತಿಯು. ವೈಸ್ರಾಯರೂ, ಗಾಂಧಿಜಿಯರೂ, ನೆಹೂರೂಗಳೂ,ರಾಷ್ಟ್ರಪತಿ ಅಜಾಧರೂ, ಇತರ ಕಾಂಗ್ರೆಸ್ ಮುಖಂಡರೂ ಒಟ್ಟುಗೂಡಿದರಿಂದ ಕಾಂಗ್ರೆಸ್ಸಿಗೂ ಸರಕಾರಕ್ಕೂ ನಡುವೆ ಮೈತ್ರಿಯು ಉಂಟಾಗಿದ್ದು ಇದರಿಂದ ಮುಂದಕ್ಕೆ ಸತ್ಪರಿಣಾಮಗಳು ಉಂಟಾಗಬಹುದು. ಗಾಂಧೀಜಿಯರು, ನೆಹೂರುಗಳೂ, ವೈಸ್ರಾಯರ, ಮತ್ತು ಇತರ ಮುಖಂಡರುಗಳ ಹೇಳಿಕೆಗಳಿಂದ ಇದನ್ನು ತಿಳಿಯಬೇಕಾಗಿಯದೆ.

ಇನ್ನು, ಕೇಂದ್ರ ಸರಕಾರದಲ್ಲಿ ಕೆಲವು ಮಾರ್ಪಾಟುಗಳು ನಡೆಯಬಹುದೆಂದೂ, ಸದ್ಯದಲ್ಲೆ ಕೇಂದ್ರ ಎಸೆಂಬ್ಲಿಯ ಚುನಾವಣೆಯು ಕರೆಯಲಾಗಬಹುದೆಂದೂ, ಗವರ್ನರರ ಆಳ್ವಿಕೆಗೆ ಒಳಗಾದ ಪ್ರಾಂತ್ಯಗಳಲ್ಲಿ ಜನರ ಸರಕಾರಗಳು ರೂಢಿಗೆ ಬರಬಹುದೆಂದೂ ಮೊದಲಾದ ಊಹೆಗಳಿವೆ.

ಜಾತೀಯತೆಯ ಭೂತ

ಜಾತೀಯತೆಯು ಮಧ್ಯಯುಗದ ಸಾಂಪ್ರದಾಯವು. ಇಂದಿನ ಆಧುನಿಕ ದಿನಗಳಲ್ಲಿ ಈ ತರದ ಭಾವನೆಗಳಿಗೆ ಎಡೆಯಿಲ್ಲ. ನಮಗೆ ಈಗ ಅವಶ್ಯವಿರುವುದು, ಸಾಂಪತ್ತಿಕ ಉದ್ಧರಣ. ಜಗತ್ತಿನ ಮುಂಬರಿದ ದೇಶಗಳನ್ನು ದೃಷ್ಟಾಂತವಾಗಿಟ್ಟು ನಾನು ವರ್ತಿಸಬೇಕು. ಮುಂಬರಿದ ದೇಶಗಳ ಪಥದಲ್ಲೆ ನಡೆಯುವ ಇಚ್ಛೆ ನಮ್ಮದಾದುದರಿಂದ, ನಾವು ಈ ಹಳೇ ಭಾವನೆಗಳನ್ನು ಇಟ್ಟುಕೊಂಡು ಪ್ರಯೋಜನವಿಲ್ಲ. ನಮ್ಮ ಮುಂದೆ ಇರುವ ಸುಧಾರಣಾ, ಮತ್ತು ಉದ್ಧಾರ ಸಮಸ್ಯೆಗಳ ಎದುರು ಜಾತೀಯತೆಯು ಅತಿ ಅಲ್ಪವಾದ ವಿಷಯವು. ಜಾತಿಯು ನಮಗೆ ಅನ್ನವನ್ನುಒದಗಿಸುವುದಿಲ್ಲ. ನಮ್ಮ ಪ್ರಗತಿಯು ಇದರಿಂದ ತಡೆಯಲ್ಪಡುವುದು. ಸಂ. ಅಮೇರಿಕಾ ಪ್ರಾಂತ್ಯಗಳಲ್ಲಿ ಎಷ್ಟು ಜಾತಿಗಳು, ರಾಷ್ಟ್ರೀಯತೆಗಳಿಲ್ಲ. ಸೋವಿಯಟ್ ರಷ್ಯದಲ್ಲಿ ಎಷ್ಟು ಜಾತಿಪಂಡಗಳಿಲ್ಲ. ಬ್ರಿಟನಿನಲ್ಲಿ ಎಷ್ಟಿಲ್ಲ. ಆದರೆ ಜಾತೀಯತೆಯು ಅಲ್ಲಿನ ರಾಜಕೀಯಗಳಲ್ಲಿನ ಮಹತ್ವವನ್ನು ಪಡಿಯುತ್ತಿರುವುದೆ? ಅವರವರ ಧರ್ಮಗಳನ್ನು ಅನುಸರಿಸಿ, ಆರಾಧಿಸುವ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೆ ಇರಬೇಕು ನಿಜ. ಆದರೆ ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ದೇಶದ ರಾಜಕೀಯವನ್ನೆ ಕೆಡಿಸುವುದು ಒಪ್ಪತಕ್ಕ ವಿಷಯವಲ್ಲ. ಈ ವಿಚಾರ ನಾವು ನಮ್ಮ ನೆರೆಯವರಾದ ಚೀನಿಯರಿಂದ ಪಾಠ ಕಲಿಯಬೇಕಾಗಿಯದೆ. ಚೀನಾದಲ್ಲಿ, ಇಸ್ಲಾಂ, ಭೌದಮತ ಇತ್ಯಾದಿ ಮತಗಳನೇಕ ರೂಢಿಯಲ್ಲಿವೆ. ಆದರೂ ಜಾತೀಯತೆ ಬರೆ ಮನೆಯ ವಿಚಾರವಾಗಿರುವುದಲ್ಲದೆ, ದೇಶದ ರಾಜಕೀಯದಲ್ಲಿ ಎಲ್ಲರೂ ಒಂದೇರಾಷ್ಟ್ರೀಯ ದೃಷ್ಟಿಯಿಂದ ವರ್ತಿಸುತ್ತಿರುವುದು ಕಾಣಿಸುತ್ತದೆ. ಈ ಕಾರಣದಿಂದಲೆ ಚೀನಾದ ಮೇಲೆ ಯುದ್ಧಸಾರಿ ಇವತ್ತಿಗೆ ಎಂಟು ವರ್ಷಗಳು ದಾಟಿದ್ದರೂ, ಅದರ ಎದೆಮುರಿಯಲು ಜಪಾನಿಗೆ ಸಾಧ್ಯವಾಗಲಿಲ್ಲ.

ಮಧ್ಯಪೂರ್ವ ಮುಸ್ಲಿಮ ದೇಶಗಳಲ್ಲಿ ಈ ಜಾತೀಯತೆಗೆ ಅಷ್ಟು ಮಹತ್ವವು ದೊರಕುತ್ತಿರುವುದಿಲ್ಲ. ತಮ್ಮ ದೇಶದ ಉದ್ಧಾರಕ್ಕಾಗಿ, ಅವರೆಲ್ಲರೂ ಒಟ್ಟಾಗಿ, ಸಾಂಪತ್ತಿಕ ಹಿತಸಾಧನೆಗಾಗಿ, ಸ್ವಾತಂತ್ರ ಪಡೆಯಲು ಹವಣಿಸುತ್ತಿರುವರು. ಈ ಅರಬಿ ನಾಡುಗಳು, ಸದ್ಯದಲ್ಲೇ ಒಂದು ಸ್ವತಂತ್ರ ಸಂಯುಕ್ತತೆಯ ಅಡಿಯಲ್ಲಿ ಒಟ್ಟುಗೂಡಬಹುದು.

ಮುಸ್ತಾಫಕೆಮಲರ ನಾಯಕತ್ವದಲ್ಲಿ ಜಾತೀಯತೆಯನ್ನು ತೊರೆದು ಆಧುನಿಕತೆಯನ್ನು ಹೊಂದಿಕೊಂಡು ಪ್ರವೃತ್ತವಾದ ಟರ್ಕಿಯು ನಮಗೆಲ್ಲರಿಗೂ ಒಂದು ಉಚ್ಚ ದೃಷ್ಟಾಂತವು. ಟರ್ಕಿಯ ಕ್ರಮವನ್ನೆ ಅನುಸರಿಸಿ ನಡೆಯುವುದು ಮಧ್ಯಪೂರ್ವದ ಇಸ್ಲಾಂ ದೇಶಗಳ ಉದ್ದೇಶವಿದ್ದಂತೆ ಕಾಣುತ್ತದೆ.

ಅಂದ ಮೇಲೆ, ಹಿಂದೂದೇಶದಲ್ಲಿ ಮಾತ್ರ ಈ ಜಾತೀಯತೆಯ ಭೂತವು ಯಾಕೆ ಪೂಜಿಸತ್ತಿರಬೇಕು.?

ತ್ರಿರಾಷ್ಟ್ರಗಳ ಮುಖಂಡರುಗಳ ಕೂಡುವಿಕೆ

ಚುನಾವಣೆಯ ಮಹಾ ಗದ್ದಲವನು ತೀರಿಸಿಕೊಂಡು, ಚರ್ಚಿಲ್ಲರು, ಒಂದು ವಾರದ ವಿಶ್ರಾಂತಿ ಪಡೆದು, ಚೇತನವಂತರೂ, ಶುದ್ಧ ಚಿತ್ತರೂ ಆಗಿ, ಈ ಕೂಡುವಿಕೆಗೋಸ್ಕರ ಬರ್ಲಿನಿಗೆ ತೆರಳಿರುವರು. ಪ್ರಜಾಸತ್ತಾತ್ಮಕ ನೀತಿಯನ್ನು ಅನುಸರಿಸುವುದು ತಮ್ಮ ಧ್ಯೇಯವೆಂದು ಸಾರಿದ, ಸಂ. ಅಮೇರಿಕದ ನೂತನ ಅಧ್ಯಕ್ಷ ಟ್ರೂಮೇನನೂ ಅಲ್ಲಿಗೆ ಬಂದಿರುವರು. ಸೋವಿಯಟ್ ನಾಯಕ ಸ್ಟೇಲಿನರೂ ಅಲ್ಲಿಗೆ ಧಾವಿಸಿರುವನು. ಈ ಕೂಡುವಿಕೆಯು ಬಹಳ ದೀರ್ಘವಾಗಿ ನಡೆಯಬಹುದೆಂದು ನಿರೀಕ್ಷೆಗಳಿವೆ.

ಜರ್ಮನಿಯ ಸೋಲಿನ ನಂತರ ಜರಗುವ ಈ ಕೂಡುವಿಕೆಯು ಅತಿ ಮಹತ್ವವಾದುದು. ಇಲ್ಲಿ ಅನೇಕ ಘನವಾದ ವಿಚಾರಗಳು ನಿಷ್ಕರ್ಷೆಗೆ ಬರಲಿವೆ. ಪೋಲೆಂಡದ ಪ್ರಕರಣ, ಜರ್ಮನಿಯ ಮೇಲೆ ಸೈನ್ಯಗಾವಲು, ಆಸ್ಟ್ರಿಯಾದ ಆಕ್ರಮಣ ಮೊದಲಾದ ವಿಚಾರಗಳಲ್ಲಿ ಮಿತ್ರರೊಳಗೆ ಕೆಲವೊಂದು ಭಿನ್ನಾಭಿಪ್ರಾಯಗಳು ಉಂಟಾಗಿದ್ದರೂ, ಅಮೇರಿಕದ ಪ್ರಯತ್ನದಿಂದಲೂ, ಚರ್ಚಿಲ್ಲರ ಯತ್ನದಿಂದಲೂ ಎಂಬಂತೆ ಇವೆಲ್ಲಾ ಶಾಂತವಾದ ರೀತಿಯಲ್ಲಿ ಇತ್ಯರ್ಥ ಹೊಂದಿವೆ.

ಆದರೂ, ಕಡುವಾದ ಪ್ರಶ್ನೆಗಳು ಕೆಲವು ಇನ್ನೂ ಪರಿಹಾರಕ್ಕೆ ಬಾಕಿಯಿವೆ. ಚೀನಾದಲ್ಲಿನ, ಕೌಮಿಂಗ್‌ಟಾಂಗ್—ಕೊಮ್ಯುನಿಷ್ಟ ವಿವಾಧ, ಟರ್ಕಿಯೊಡನೆ ರಷ್ಯದ ಕೇಳಿಕೆ, ಜೆಕೆಸ್ಲೆವೆಕಿಯಾದ ಸಮಸ್ಯೆ, ಬಲ್ಗೇರಿಯಾ—ಗ್ರೀಸ್ ಸಮಸ್ಯೆ, ಮಧ್ಯಪೂರ್ವದ ಸಮಸ್ಯೆ, ಜಪಾನ್ ಯುದ್ಧದಲ್ಲಿ ಸೋವಿಯಟ್ಟಿನ ಪ್ರವೇಶ, ವಿಮೋಚಿಸಲ್ಪಟ್ಟ ಯುರೋಪ ದೇಶಗಳ ಪುನರ್ರಚನೆ, ಇಟೆಲಿಯ ವಸಾಹತುಗಳ ಕುರಿತು ಪ್ರಶ್ನೆ ಇತ್ಯಾದಿಗಳು ಚರ್ಚಿಸಲ್ಪಡಬಹುದೆಂದು ಹೇಳಲಾಗಿದೆ.

ಚುನಾವಣೆಯ ಮುನ್ನ ತಮ್ಮ ಪ್ರಚಾರ ಭಾಷಣಗಳಲ್ಲಿ ಸಾರಿದಂತೆ, ರಷ್ಯದೊಡನೆ ಮೈತ್ರಿಯಿಂದ ವರ್ತಿಸುವುದು ಚರ್ಚಿಲ್ಲರ ಧೋರಣವು. ಅವರ ಧರ್ಮ ಪತ್ನಿಯರು ಮೊನ್ನೆ ಮೊಸ್ಕೊ ನಗರಕ್ಕೆ ತೆರಳಿ, ರಷ್ಯ-ಬ್ರಿಟನು ಮೈತ್ರಿಯ ಕುರಿತು ಒಂದು ಪತ್ರಕವನ್ನು ಹೊರಡಿಸಿದರು. ತಮ್ಮ ಪತಿಯ ಪರವಾಗಿ ಭಂಗಾರದ ಒಂದು ಪೇನನ್ನು ಉಡುಗೊರೆಯಾಗಿ ಸ್ಟೇಲಿನರಿಗೆ ಅರ್ಪಿಸಿದರು.

ಆದರೆ ವಿಶ್ರಾಂತಿಗಾಗಿ ತೆರಳಿದ ಚರ್ಚಿಲ್ಲರು ಸ್ಪೆಯಿನಿನ ಪ್ರೆಂಕೊನೊಡನೆ ಸಂಪರ್ಕ ಬೆಳೆಸಿದ ಕುರಿತು ವಾರ್ತೆಯು ಪ್ರೆಂಚ್ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿದೆ. ಅಂದರೆ ಅವರ ಧೋರಣವು ಇನ್ನೂ ನಿಶ್ಚಿತ ರೂಪವನ್ನು ಹೊಂದಲಿಲ್ಲವೆಂದೆ ತಿಳಿಯಬೇಕೆ?

ಸಾನ್ ಫ್ರಾನಿಸ್ಕೊ ಪರಿಷತ್ತಿನಿಂದ ಹೊರಟ ಸಂಯುಕ್ತ ರಾಷ್ಟ್ರಗ ಸನ್ನದು ಪತ್ರದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಸಮಧಾನವಿಲ್ಲವೆಂದು, ಸಂಯುಕ್ತ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ಬಯಕೆಗಳು ಇನ್ನು ಅಡಗಿಕೊಂಡಿರುವುದು ಅದರಲ್ಲಿ ಕಾಣಿಸುತ್ತದೆಂದೂ, ವಸಾಹತುಗಳೆಲ್ಲಾ ಸ್ವಾತಂತ್ರವನ್ನು ಪಡೆಯುಪಂಬೇಕೆಂದೂ ಸಂಯುಕ್ತ ರಾಷ್ಟ್ರಗಳ ಮಂಡಳದಲ್ಲಿ ಸ್ವಾತಂತ್ರ ಭಾರತದ ಪ್ರತಿನಿಧಿಗೆ ಸ್ಥಾನ ದೊರಕುವುದು ಅವಶ್ಯವಿದೆಯೆಂದೂ ಅಭಿಪ್ರಾಯಪಟ್ಟು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಠರಾವೊಂದಾಗಿರುತ್ತದೆ. ಪ್ರಜಾಸತ್ತಾತ್ಮಕ ಸ್ವಾತಂತ್ರ ನೀತಿಯು ತಮ್ಮ ಮುಂದಿನ ಧೋರಣದ ತಳಹದಿಯೆಂದು ದಿವಂಗತ ಅಧ್ಯಕ್ಷ ರೂಸ್‌ವೆಲ್ಟರು ಅಂದದನ್ನು, ಪುಷ್ಟೀಕರಿಸುತ್ತೇನೆಂದು ಟ್ರುಮೇನರು ಸಾರಿದುದಕ್ಕೆ ಸರಿಯಾಗಿ ಅವರ ಕೂಡುವಿಕೆಯಲ್ಲಿ ವರ್ತಿಸುವರೆ, ಅವರ ಈ ಧೋರಣೆಗೆ ಚರ್ಚಿಲ್, ಸ್ಟೇಲಿನರ್ ಮಾನ್ಯತೆಯು ದೊರಕುವುದೆ ಎಂದು ನೋಡಬೇಕು.

ಪೆಸಿಸ್ಟ್ ನೀತಿಯಿಂದ ಜಗತ್ತಿಗೆ ತುಂಬಾ ಹಾನಿಯಾಗಿದೆ ಎಂದು ಮಿತ್ರರು ಸಾರುತ್ತಿರುವಾಗ, ಮತ್ತು ಭವಿಷ್ಯದ ಲೋಕಶಾಂತಿಯ ಭದ್ರತೆಗಾಗಿ ಈ ನೀತಿಯು ಬೇರು ಸಮೇತ ಕಿತ್ತೊಗೆಯಲಾಗಬೇಕೆಂದು ಅವರು ಒತ್ತಿಹೇಳುತ್ತಿರುವಾಗ ಜಗತ್ತಿನಲ್ಲಿ ಚಿರವಾದ ಶಾಂತಿಯು ನೆಲೆಗೊಳ್ಳುವಂತೆ, ಮತ್ತು ಜರ್ಮನ್ ಜನಾಂಗದ ಪರಿವರ್ತನೆಯಾಗುವಂತೆ ಮಿತ್ರರು ಒಳ್ಳೆ ಪ್ರಗತಿದಾಯಕ ಧೋರಣವನ್ನು ವಹಿಸುವುದು ಅತಿ ಅವಶ್ಯವಿದೆ.

ಈ ಕೂಡುವಿಕೆಯಲ್ಲಿ ಆಗುವ ಇತ್ಯರ್ಥಗಳಿಂದ ಮೇಲೆ ನಾವು ಮಿತ್ರರ ಪ್ರಾಮಾಣಿಕತೆಯ ಕುರಿತು ಒಂದು ಅಭಿಪ್ರಾಯಕ್ಕೆ ಬರಬಹುದು.

ಎಣ್ಣೆ ಗಿರಣಿ: ಬಂದರದ ಅನ್ಸಾರಿ ರಸ್ತೆಯಲ್ಲಿ ಕಳೆದ ಆದಿತ್ಯವಾರ ಶ್ರೀ. ಸುದರ್ಶನ ಮಿಲ್ಸ್ ಎಂಬ ಹೆಸರಿನ ಎಣ್ಣೆ ಮಿಲ್ಲುಸಂಸ್ಥೆಯೊಂದು ಹೊಸದಾಗಿ ತೆರೆಯಲ್ಪಟ್ಟಿತು.

ಮೇಲೆ ಏರುತ್ತಿರುವ ಧಾರಣೆಗಳನ್ನು ತಡೆದು ನಿಲ್ಲಿಸಿರಿ

ಅನಾವಶ್ಯಕವಾಗಿ ಹಣವನ್ನು ವೆಚ್ಚಮಾಡಬೇಡಿರಿ
ಮುಂಬರುವ ಕಾಲದ ಸಲುವಾಗಿ ಈಗಿನಿಂದಲೇ ಉಳಿಸಿರಿ
ಹಣವನ್ನು ಲಾಭದಾಯಕವಾಗಿ ತೊಡಗಿಸುವ ಈಗಿನ ಕಾಲದ ಉತ್ತಮ ಮಾರ್ಗಗಳಾವವೆಂದರೆ, ವಿಮೆ ಇಳಿಸುವದು, ಸಹಕಾರ ಸಂಘಗಳಲ್ಲಿ ಠೇವಿಡುವದು, ಸೇವಿಂಗ್ಸ್ ಬ್ಯಾಂಕುಗಳಲ್ಲಿ ಲೆಕ್ಕಗಳನ್ನು ತೆಗೆಯುವದು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಲೆಕ್ಕಗಳನ್ನು ತೆಗೆಯುವದು ಆಗಿರುತ್ತವೆ; ಮತ್ತು ಇವೆಲ್ಲವುಗಳ ಪೈಕಿ ಅತ್ಯುತ್ತಮವಾದ ಮಾರ್ಗಗಳೆಂದರೆ, ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳುವದು ಮತ್ತು ಸರಕಾರದವರು ತೆಗೆದ ಸಾಲಗಳಿಗೆ ಹಣ ತುಂಬುವದು, ಆಗಿರುತ್ತವೆ.
ಹಿಂದುಸ್ಥಾನ ಸರಕಾರದ ಫೈನಾನ್ಸ ಡಿಪಾರ್ಟಮೆಂಟನಿಂದ ಹೊರಡಿಸಿದ್ದು.
AAA 289

ಕೊಂಗ್ರೆಸಿಗೆ ಸೋಲು ಗೇಲುಗಳು ಏಕಸಮಾನ

ರಾಷ್ಟ್ರ ಸಂಸ್ಥೆಯ ಗೌರವ ಉಳಿಯಿತು

ಮುಂದಾಳುತನದ ವರ್ಚಸ್ಸು ಬೆಳೆಯಿತು

ರಚನಾತ್ಮಕ ಕಾರ್ಯಕ್ರಮವು ಸಾಗಲಿ

"ಸತ್ಯಾಗ್ರಹಿಗೆ ಸೋಲೆಂಬುದಿಲ್ಲ. ಅವನು ನಿರಂತರ ಸತ್ಯ ಶೋಧಕನೂ, ಕರ್ಮಾನುಷ್ಠಾಯಿಯೂ ಆಗಿರುವನು" ಎಂದು ಮಹಾತ್ಮರು ರಾಷ್ಟ್ರ ಸಂಸ್ಥೆಯ ನೈತೀಕ ಧ್ಯೇಯ ಧೋರಣೆಯನ್ನು ಹಲವು ಬಾರಿ ಸ್ಪಷ್ಟೀಕರಿಸಿರುವರು. ಅಂತೆಯೇ ದೇಶವೆಲ್ಲವೂ ಸಿಮ್ಲಾ ಪರಿಷತ್ತು ಅಯಶಸ್ವಿಯಾದುದರ ಕುರಿತು ಒಂದು ಕ್ಷಣಕ್ಕೆ ನಿರುತ್ಸಾಹಗೊಂಡರೂ ಕೊಂಗ್ರೆಸಿನ ಮೇಲಿ ಜನತೆಗಿರುವ ಪ್ರೀತಿ ವಾತ್ಸಲ್ಯ ಭರವಸೆಗಳು ನೂರುಮಡಿಯಾಗಿದೆ.

ಪರಿಷತ್ತು ಕೊಂಗ್ರೆಸ್ಸಿನಿಂದ ಅಪಯಶಸ್ವಿಯಾಗಲಿಲ್ಲ. ವೇವಲ್ ಸಾಹೇಬರು ಗಂಭೀರವಾಗಿ ಅದನ್ನು ತಮ್ಮದೆಂದು ಒಪ್ಪಿರುವರು. ಪರಸ್ಪರ ವಾಗ್ಯುದ್ಧದಲ್ಲಿ ಜನತೆಯು ಆತುರರಾಗಿರ ಬಾರದಾಗಿಯೂ ವ್ಯಾಸರಾಯರು ವಿನಂತಿಸಿ ಕೊಂಡಿರುವರು. ಹೊಣೆಗಾರಿಕೆಯ ಮುಖಂಡರು ಸಾರ್ವಭೌಮ್ಯ ಪ್ರತಿನಿಧಿಗಳ ಸಲಹೆಯನ್ನು ಮನ್ನಿಸದಿರರು. ಪರಸ್ಪರ ಧೋಷಾರೋಪಣೆಗಳು ಈ ಸಮಯದಲ್ಲಿ ಸಮಂಜಸವಲ್ಲವಾದರೂ ನಿಷ್ಪಕ್ಷಪಾತ ದೃಷ್ಟಿಯಿಂದ ಸಿಮ್ಲಾ ಪರಿಷತ್ತಿನ ಕಾರ್ಯಕಲಾಪಗಳ ಸಿಂಹಾವಲೋಕನ ಮಾಡುವುದು ಹಾನಿಕಾರಕವಲ್ಲ. ಒಕ್ಕಟ್ಟನ್ನೂ ಬಗೆಹರಿಸಲು ವ್ಯಾಸ್‌ರಾಯರಂತೆ ಆತುರತೆಯುಳ್ಳವರಿಗೆ ಇದರಿಂದ ಸ್ವಲ್ಪ ಸಹಾಯವಾಗಬಹುದು.

ಬಹಳ ಸೌಹಾರ್ದದ ವಾತಾವರಣದಲ್ಲಿಂಬಂತೆ ಪ್ರಾರಂಭವಾದ ಸಿಮ್ಲಾ ಮಾತುಕತೆಗಳು ಇಂದು ಮುರಿದು ಬೀಳಲು ಮುಸ್ಲಿಂ ಲೀಗಿನ ಹಟಮಾರಿತನದ ಧೋರಣೆಯೇ ಕಾರಣವೆಂಬ ವಿಷಯವನ್ನು ಯಾರೂ ಅಲ್ಲಗಳೆಯಲಾರರು. ಮೊದಲಿಂದಲೂ ಕೊಂಗ್ರೆಸ್ ಮುಂದಾಳುಗಳು ಸಮಧಾನದ ಧೋರಣೆಯನ್ನೆ ಅವಲಂಬಿಸಿ ಮುನ್ನಡೆದಿರುವರು. ಅವರ ಸಹಕಾರವು ರಚನಾತ್ಮಕವಾಗಿಯೂ ಇತ್ತು. ಲೀಗನ್ನು ಕೈಕೆಳಗಿಟ್ಟು ಕೊಂಡ ಜಿನ್ನಾ ಸಾಹೇಬರು ಸ್ವಲ್ಪವಾದರೂ ತಮ್ಮ ಧೋರಣೆಯನ್ನು ಪುನಃರಾಲೋಚಿಸಿಯಾಗಲಿ, ಪುನರ್ವಿಮರ್ಶಿಸಿಯಾಗಲೀ ನೋಡದೆ ಇರದಿರುವುದು ಖೇದಕರವಾದವಿಷಯ.

ಪ್ರಾರಂಭದಲ್ಲಿ ಮಾತುಕತೆಗಳು ಪ್ರಗತಿಪರವಾಗಿ ಸಾಗುತ್ತಿವೆಯಾಗಿ ಆಶಾದಾಯಕ ಚಿಹ್ನೆಗಳು ಕಂಡು ಬಂದವು. ಸರ್ವ ಸಾಮಾನ್ಯ ತತ್ವಗಳ ಮೇಲೆ ಪರಿಷತ್ತಿನ ಎಲ್ಲಾ ಪಕ್ಷದವರೂ ಸರ್ವಮತದಿಂದ ಒಪ್ಪಿಕೊಂಡಿರುವುದಾಗಿ ತಿಳಿದು ಬಂದಿತ್ತು. ತಾತ್ಕಾಲಿಕ ಸರಕಾರ ರಚಿಸಬೇಕೆಂಬುದರಲ್ಲಿ ಭೇದಾಭಿಪ್ರಾಯಗಳು ಯಾರಲ್ಲೂ ಇರಲಿಲ್ಲ. ಆದರೆ ಹೊಸ ಮಂತ್ರಿ ಮಂಡಳದ ರಚನೆಯಲ್ಲಿ ಸಿಗಬೇಕೆಂದು ಪ್ರಾತಿನಿಧ್ಯದ ಕುರಿತು ಪ್ರಮುಖ ಪಕ್ಷದವರಲ್ಲಿ ಒಮ್ಮತ ಕಂಡು ಬರಲಿಲ್ಲವೆಂಬ ನಂತರದ ಸುದ್ದಿಗಳು ನಿರಾಶಾಮಯವಾತವರಣವನ್ನು ಪ್ರಾರಂಭಿಸಿದವು. ಆಗಲೇ ವ್ಯಾಸರಾಯರು ಪರಿಷತ್ತನ್ನು ಎರಡು ವಾರಗಳ ತನಕ ಮುಂದರಿಸಿದರು. ಅಷ್ಟರೊಳಗೆ ಪ್ರತಿಯೊಂದು ಪಕ್ಷದವರು ತಮ್ಮ ಕಡೆಯವರ ಹೆಸರುಗಳನ್ನು ಕೊಡಬೇಕೆಂದು ಕೇಳಲಾಗಿತ್ತು. ಇದರ ಮರು ದಿವಸವೇ ಜಿನ್ನಾರವರು ತಾವು ಯಾವ ಶರ್ತಗಳಿಗೂ ಒಪ್ಪಲಿಲ್ಲವೆಂದೂ ಯಾವುದಕ್ಕೂ ಲೀಗ್ ವರ್ಕಿಂಗ್ ಕಮಿಟಿಯಲ್ಲಿ ಎಲ್ಲವೂ ತೀರ್ಮಾನಿಸಲ್ಪಡುವುದೆಂದೂ ತಿಳಿಸುತ್ತಾ ರಾಜತಾಂತ್ರಿಕ ಧೋರಣೆಯನ್ನೆ ಬಿಚ್ಚುವವರಾದರು. ಇಷ್ಟಕ್ಕೆ ಜನತೆಗೆ ಲೀಗಿನ ಮೇಲಿ ಒಂದು ತರದ ಜಿಗುಪ್ಸೆಯು ಹುಟ್ಟಿತು.

ಮುಸಲ್ಮಾನರಿಗೆ ಸವರ್ಣ ಹಿಂದುಗಳೊಡನೆ ಸಮಾನ ಸಂಖ್ಯಾಸ್ಥಾನವು ಕೊಡುವ ನಿರ್ಧಾರವು ರಾಜಕೀಯ ತಜ್ಞರ ಶ್ಲಾಘನೆಗೆ ಒಳಗಾಗಿದ್ದರೂ, ಜಿನ್ನರು ಆ ಕುರಿತಾದ ತಮ್ಮದೊಂದು ಹೊಸ ತರ್ಕವನ್ನು ಹೊರಗೆಡವಿದರು. ಸಮಾನ ಸಂಖ್ಯೆಯ ಸೂಚನೆಯು ನಿಜವಾಗಿ ಒಂದು ಬಹುಸಂಖ್ಯಾಕರು ಅಲ್ಪಸಂಖ್ಯಾಕರಿಗೆ ತೋರಿಸಿದ ವಿಶಾಲ ಹೃದಯ ಧೋರಣೆಯು ಕುರುಹೆನ್ನಬೇಕು.

ಜಿನ್ನಾ ಸಾಹೇಬರ ತರ್ಕ ಪ್ರಕಾರ ಮುಸ್ಲಿಮರಿಗೆ ಸವರ್ಣ ಹಿಂದುಗಳೊಳಗೆ ಸಮಾನ ಸ್ಥಾನ ಕೊಡಲ್ಪಟ್ಟಿದ್ದರೂ ಇತರ ಎಲ್ಲಾ ಅಲ್ಪ ಸಂಖ್ಯಾಕರು ಒಟ್ಟಾಗಿ ಲೀಗ್ ಸದಸ್ಯರನ್ನೂ ಅಲ್ಪ ಸಂಖ್ಯಾಕರನ್ನಾಗಿ ಮಾಡುವರೆಂದು ತಿಳಿಸುವವರಾದರು. ಮಂತ್ರಿ ಮಂಡಳದೊಳಗಿನ ಎಲ್ಲಾ ಅಲ್ಪ ಸಂಖ್ಯಾಕರೂ ಕೊಂಗ್ರೆಸಿನೊಡನೆ ಸೇರಿ ಒಟ್ಟಾಗಿ ತಮ್ಮ ಮೇಲೆ ಪಿತೂರಿ ನಡೆಸಬಹುದೆಂದು ಅವರು ತಮ್ಮ ಭಯವನ್ನು ಪ್ರಕಟಿಸುವವರಾದರು. ಈ ತರ್ಕದಲ್ಲಿ ಯಾವ ತಿರುಳು ಇಲ್ಲವೆಂದು ಸಾಮಾನ್ಯ ರಾಜಕೀಯ ಶಾಸ್ತ್ರದ ಯಾವ ವಿದ್ಯಾರ್ಥಿಗಾದರೂ ತಿಳಿಯದಿರಲಾರದು.

೧೯೪೦ರಲ್ಲಿ ಲಿನ್‌ಲಿತ್‌ಗೋ ಸಾಹೇಬರು ಲೀಗು ಕೊಂಗ್ರೆಸುಗಳಿಗೆ ಸಮಾನ ಸಂಖ್ಯೆಯ ಪ್ರಾತಿನಿಧ್ಯವನ್ನೂ ಮತ್ತು ಅವರಲ್ಲಿ ಯಾರೂ ಬಹುಮತ ಪಡೆಯದಂತಹ ಅಲ್ಪ ಸಂಖ್ಯಾಕ ಪ್ರಾತಿನಿಧ್ಯವನ್ನೂ ಸೇರಿಸುವ ಒಂದು ಹೊಸ ಯೋಜನೆಯನ್ನು ತಯಾರಿಸಿದಾಗ ಆ ಸಮಯದಲ್ಲಿ ಜಿನ್ನಾರವರು ಈ ತತ್ವವನ್ನು ಎದುರಿಸಲಿಲ್ಲ. ಮಾತ್ರ ಅವರು ಆ ಸಲ 'ಒಂದು ವೇಳೆ ಇದಕ್ಕೆ ಕೊಂಗ್ರೆಸು ಒಪ್ಪದಿದ್ದರೆ ಲೀಗಿಗೇ ಬಹುಮತ ಪ್ರಾತಿನಿಧ್ಯ ಕೊಟ್ಟು ಮಂತ್ರಿ ಮಂಡಳ ರಚಿಸಬೇಕು' ಎಂದು ಸೂಚಿಸಿದಾಗ ಈಗಿನ ತರ್ಕ ಅವರ ತಲೆಯಲ್ಲಿರಲಿಲ್ಲ.

ಈಗ ಒಂದೇ ಸವನೆ ಮನಸ್ಸು ಬದಲಾಯಿಸಲು ಯಾವ ಕಾರಣಗಳು ಘಟಿಸಿದುವು? ದೇಸಾಯ ಲಿಯಾಖತ್ ಒಪ್ಪಂದದ ಊಹಾಪೋಹೆ ಸುದ್ದಿಗಳ ಆಧಾರದಿಂದ ಹೇಳುವುದಾದರೆ ಅದರಲ್ಲೂ ಲೀಗ್ ಕೊಂಗ್ರೆಸುಗಳಿಗೆ ಸಮಾನ ಪ್ರಾತಿನಿಧ್ಯಾಧಿಕಾರದ ಸಲಹೆ ಸೂಚಿತವಾಗಿತ್ತಲ್ಲದೆ ಲೀಗಿಗೆ ಎಲ್ಲಾ ಪಕ್ಷ ಪಂಗಡಗಳ ಮೇಲೆ ಬಹುಮತ ದೊರಕುವಂತಾಗಬೇಕೆಂಬುದನ್ನು ಒಪ್ಪಿರಲಿಲ್ಲವೆಂದು ಹೇಳಲಾಗಿದೆ.

ಅವರ ಬಲಗೈಯಂತಿದ್ದ ಲಿಯಾಖತ್ ಹಯತ್ ಖಾನರೇ ಒಪ್ಪಿಕೊಂಡ (ಅಂದರೆ ಲೀಗು ಕೊಂಗ್ರೆಸಿಗಳೊಳಗೆ ಸಮಾನತೆಯ ಪ್ರಾತಿನಿಧ್ಯವಿರಬೇಕೆನ್ನುವ) ಯೋಚನೆಯನ್ನೇ ಬಿಟ್ಟು ತಮಗೆ ಸಹ ಬಹುಮತ ದೊರಕುವಂತಾಗಬೇಕೆನ್ನುವ ಧೋರಣೆಯನ್ನು ಜಿನ್ನರು ಮಾತುಕತೆಯ ಪ್ರಥಮಾಂಕದ ಅಂತ್ಯದಲ್ಲೇ ಎತ್ತಲು ಕಾರಣಗಳಾದರೂ ಏನಿರಬಹುದು? ಮುಸಲ್ಮಾನರ ಹಿತಗಳು ಅಪಾಯದಲ್ಲಿವೆಯೆಂದು ಲೀಗಿಗೆ ತೋರಿದಾಗ ವ್ಯಾಸರಾಯರು ತಮ್ಮ ವಿಶೇಷಾಧಿಕಾರಿಗಳ ಮೂಲಕ ತಮಗೇ ಬಹುಮತ ದೊರಕುವಂತೆ ಮಾಡಬೇಕೆನ್ನುವುದರ ಉದ್ದೇಶವಾದರೂ ಯಾರೂ ಒಪ್ಪುವಂತಹದಲ್ಲ.

ಲೀಗ್ ನಾಯಕರಿಗೆ ಈ ತರದ ವರ್ತನೆಯು ಈಗೇನು ಕೌತುಕದಲ್ಲ. ಕಾರಣ ಹಿಂದೆ ಪ್ರತಿಯೊಂದು ಸಲವೂ ಅವರು ಇದೇ ತಂತ್ರವನ್ನೇ ಅನುಸರಿಸಿ ಬಂದಿರುವರು. ಆದರೆ ಇದನ್ನೆಲ್ಲ ಸರಿಯಾಗಿ ಬಲ್ಲವರಾಗಿದ್ದ ವ್ಯಾಸ್‌ರಾಯರಾದರೂ ಕೊನೆಯ ಅವಧಿಯಲ್ಲಿ ಆತಂಕದ ಧೋರಣೆಯನ್ನು ಯಾವ ಪಕ್ಷದವರೂ ವಹಿಸದಂತೆ ಜಾಗರೂಕರಾಗಿರಬಹುದಿತ್ತೆಂದು ದೇಶವಿದೇಶಗಳ ಬಹು ಜನರ ಅಭಿಪ್ರಾಯವಿದೆ. ಎಲ್ಲರೂ ಹೆಸರುಗಳ ಯಾದಿಯನ್ನು ಕೊಟ್ಟು ಆದ ಮೇಲೆ ಅದರಿಂದ ತಾವು ಸ್ವಂತ ಇಚ್ಛೆಯವರನ್ನು ಚುನಾಯಿಸುವೆನೆಂದೂ ಸಾರಿದ ವ್ಯಾಸರಾಯರಿಗೆ ಜಿನ್ನರು ತಮ್ಮ ಯಾದಿಯನ್ನು ಕೊಡುವುದಿಲ್ಲವೆಂಬ ವಿಷಯವು ತಿಳಿಯದಿರಲಿಕ್ಕೆ ಸಾಧ್ಯವಿಲ್ಲ.

ಆದುದರಿಂದ ಲೀಗು ಆಕ್ಷೇಪ ಮಾಡಿದರೆ ತಾವು ಪರಿಷತ್ತನ್ನು ಯಶಸ್ವಿಗೊಳಿಸುವುದಿಲ್ಲವೆಂದು ವ್ಯಾಸ್‌ರಾಯರ ನಿರ್ಧಾರವಿದ್ದಿದ್ದರೆ ಕಳೆದ ತಿಂಗಳ ೨೫ರಂದು ಪರಿಷತ್ತನ್ನೂ ಮುಂದೆ ಹಾಕುವ ಆವಶ್ಯಕತೆಯೇ ಇರಲಿಲ್ಲ. ವ್ಯಾಸ್‌ರಾಯರು ಇನ್ನೊಂದು ಸಂದೇಹಾಸ್ಪದ ಕೆಲಸವನ್ನು ಮಾಡಿದರು. ತಮ್ಮದೇ ಒಂದು ಪ್ರತ್ಯೇಕ ಯಾದಿಯನ್ನು ತಯಾರಿಸಿ ಅದನ್ನು ಜಿನ್ನರಿಗೆ ತೋರಿಸಿದರೇ ವಿನಹ ಅದನ್ನು ಆಜಾದರಿಗಾಗಲೀ ಗಾಂಧೀಜಿಗಾಗಲೀಅವರು ತೋರಿಸದಿದ್ದುಕ್ಕೆ ಕಾರಣವೇನೆಂದೇ ಇನ್ನೂ ತಿಳಿಸಲಿಲ್ಲ. ಹೀಗೆ ವ್ಯಾಸ್‌ರಾಯರು ಈ ಸಲವೂ ಯಾವುದಕ್ಕೂ ಒಪ್ಪದ ಜಿನ್ನರನ್ನೇ ಮೆಚ್ಚಿಸಲು ನೋಡಿದರೆ ವಿನಹ ಎಲ್ಲದಕ್ಕೂ ಸಿದ್ಧರಿದ್ದ ಕೊಂಗ್ರೆಸನ್ನು ಅವರು ಕಡೆಗಾಣಿಸಿದುದು ಖೇದಾಸ್ಪರ ವಿಷಯ. ಇದರಿಂದ ಅವರು ಮತ್ತೊಂದು ಸಲ ತೊಡಕನ್ನುಂಟು ಮಾಡುವರೆ ಜಿನ್ನರಿಗೆ ಪ್ರೋತ್ಸಾಹಿಸಿದಂತಾಯಿತೆನ್ನಬೇಕು.

ಭಾರತೀಯರೊಳಗೆ ಇನ್ನೂ ಕಚ್ಚಾಟವಿದ್ದೇ ಇದೆ ಎಂದು ತೋರಿಸಲೋಸುಗವಾಗಿಯೇ ಬ್ರಿಟಿಷ್ ಸರಕಾರದವರು ಬಿಗಿಧೋರಣೆಯನ್ನು ಈ ಸಲವೂ ತಾಳದಾದರೆಂದು ಹೆಚ್ಚಿನವರ ಅಭಿಪ್ರಾಯವಿದೆ. ಮಾತ್ರವಲ್ಲ ದೇಶವನ್ನು ಅಸ್ಪಷ್ಟವಾದ ಆಶೆ ಹಾರೈಕೆಗಳಲ್ಲಿ ಮಗ್ನವಾಗಿರಿಸುವುದರಲ್ಲೂ ಈ ಧೋರಣೆ ವಹಿಸಿರಬಹುದೆಂದೂ ವ್ಯಕ್ತವಾಗುತ್ತದೆ.

'ಎಲ್ಲಾ ಪಕ್ಷದವರ ಒಟ್ಟು ಮೊತ್ತದ ಪ್ರತಿನಿಧಿ ಸಂಖ್ಯೆಗಳಷ್ಟೇ ತಮಗೆ ಕೊಟ್ಟು ಲೀಗಿನ ಪಾಕಿಸ್ಥಾದದ ಗುರಿಯನ್ನು ಒಪ್ಪಿಕೊಂಡರೆ ಮಾತ್ರ ತಾವು ತಾತ್ಕಾಲಿಕ ಏರ್ಪಾಡಿನಲ್ಲಿ ಭಾಗವಹಿಸುತ್ತೇವೆ' ಎಂಬುದೇ ಮಿ. ಜಿನ್ನರ ಇತ್ತೀಚಿಗಿನ ಧೋರಣೆ. ಅಂದರೆ ಲೀಗನ್ನೇ ಭಾರತವನ್ನಾಳುವ ಸಂಸ್ಥೆಯನ್ನಾಗಿ ಮಾಡಬೇಕೆಂಬುದೇ ಅವರ ಆಗ್ರಹ. ಇದು ಸತ್ಯಾಗ್ರಹವೊ, ದುರಾಗ್ರಹವೊ ವಿವೇಕಿಗಳೇ ತರ್ಕಿಸಬೇಕು. ಈಗಿನ ಯುದ್ಧ ಪರಿಸ್ಥಿತಿಯಲ್ಲಿ ಉಪಾಯಾಂತರದ ಮುಂಜಾಗರೂಕತೆಯ ಅವಶ್ಯಕತೆ ಬೇಕೆಂದು ವ್ಯಾಸರಾಯರ ಅಂಬೋಣ. ಆದರೆ ಮೇಲಿನ ತರ್ಕಗಳನ್ನು ಮುಂದೊತ್ತಿದ ಹಿಂದೂ ಪತ್ರಿಕೆಯು ತನ್ನ ಅಗ್ರಲೇಖದ ಅಂತ್ಯದಲ್ಲಿ 'ಇಂದಿನ ಪರಿಸ್ಥಿತಿಯಲ್ಲಿ ಧೈರ್ಯವಿವೇಕಗಳೇ ಹೆಚ್ಚು ಆವಶ್ಯಕವೆಂಬುದನ್ನು ವ್ಯಾಸರಾಯರು ತಿಳಿಯಬೇಕಿತ್ತು'ಎಂದು ಬಂದಿದೆ.

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕೈಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಈರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ — ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906

ಕೆನರಾ ಬೇಂಕ್ ಲಿಮಿಟೆಡ್.
(ESTD. 1906)
CANARA BANK LIMITED
In corporated in British India, liability of Members limited

ಅಕ್ಕಿ ಒಪ್ಪಿಸುವ ಕುರಿತು ಪ್ರಕಟಣೆ

ಅಡಿಕೆ ಸುಂಕದ ಮರುಪಾವತಿ

೧೮ ಸಾವಿರ ಜುಲ್ಮಾನೆ—ಉಡುಪಿ ವಿದ್ಯಮಾನಗಳು—

ಮರಗಳ ಚೌರ್ಯ—ಜಿನ್ನರಿಗೆ ಮುಸ್ಲಿಮರ ತಂತಿ

ಮುಂದಿನ ಬೆಳೆ ವಿಚಾರ:- ಈ ವರ್ಷ (೧೩೫೫ನೇ ಫಸಲಿ) ದ. ಕ. ಜಿಲ್ಲೆಯಲ್ಲಿ ಭತ್ತವನ್ನು ಬೆಳೆಯುಸುವ ಪ್ರತಿಯೊಬ್ಬ ಜಮೀನುದಾರ ವರ್ಗದಾರ, ಪಟ್ಟಾದಾರ, ಒಕ್ಕಲು, ಒಳ ವಕ್ಕಲು ಅಥವಾ ಅಡವುದಾರನು ಮತ್ತು ಗೇಣಿ, ಬಡ್ಡಿ, ಸಾಲದ ಮರುಪಾವತಿ ಮೊದಲಾದುವುಗಳನ್ನು ಭತ್ತ ಅಥವಾ ಅಕ್ಕಿಯ ರೂಪದಲ್ಲಿ ಪಡೆಯುವವರೆ, ಖರ್ಚಿಗೆ ಬೇಕಾದುದನ್ನು ಕಲೆಕ್ಟರರು ಯಾ ಅವರಿಂದ ನಿಯೋಜಿತರಾದ ಆಫೀಸರರು ನಿರ್ಧರಿಸಿದ ಬಳಿಕ ಮಿಗುವ ಅಕ್ಕಿ ಯಾ ಭತ್ತವನ್ನು ಕಲೆಕ್ಟರ್ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಏಜಂಟರು ಕೇಳಿದಾಗ ಒಪ್ಪಿಸಬೇಕಲ್ಲದೆ, ಇತರರಾರಿಗೂ ವಿಕ್ರಯಿಸಬಾರದು.

ಮಿಗಿತಾಯವನ್ನು ನಿರ್ಧರಿಸುವಾಗ ಈ ಕೆಳಗಿನ ವಿಚಾರಗಳನ್ನು ಗಮನಿಸಲಾಗುವುದು:—

೧. ತನ್ನ ಮತ್ತು ಮನೆಯುವರ ಖರ್ಚಿಗಾಗಿ ೨. ಗೇಣಿ ಬಡ್ಡಿ ಅಥವಾ ಸಾಲದ ಮರುಪಾವತಿಯನ್ನು ಅಕ್ಕಿ ಯಾ ಭತ್ತದ ರೂಪದಲ್ಲಿ ಪಾವತಿ ಮಾಡುವುದಿದ್ದರೆ, ಆ ಬಗ್ಗೆ. ೩. ಒಕ್ಕಲಿಗೆ ಮುಂಗಡ ಕೊಡುವ ಪದ್ಧತಿ ಇದ್ದರೆ ಆ ಬಗ್ಗೆ. ೪. ಮುಂದಿನ ಬೆಳೆಯ ಬೀಜಕ್ಕಾಗಿ ಮತ್ತು ಬೇಸಾಯದ ಕೂಲಿ ವೆಚ್ಚಕ್ಕಾಗಿ. ೫. ಹಳ್ಳಿಯಲ್ಲಿ ವರ್ಷ ಕೂಲಿ ಪಡೆಯುತ್ತಿರುವ ಕ್ಷೌರಿಕ, ಅಗಸ ಮೊದಲಾದ ಕಾಮಗಾರಿಗಳಿಗೆ ಕೊಡುವುದಕ್ಕಾಗಿ—

ಭತ್ತ ಬೆಳೆಯುವ ಗ್ರಾಮಕ್ಕೆ ಯಾವ ರಿಸೆಪ್ಶನ್ ಡಿಪೋ ಅತಿ ಸಮೀಪವಾಗಿದೆಯೋ ಅಲ್ಲಿಗೇ ಜಿ. ಕಲೆಕ್ಟರರು ಆಯಾ ಬೆಳೆಯನ್ನು ತಂದೊಪ್ಪಿಸಲು ನಿರ್ಧರಿಸುವ ತಾರೀಕಿನೊಳಗಾಗಿ ಮತ್ತು ನಿರ್ಧರಿಸಲ್ಪಟ್ಟ ಬೆಲೆಗೆ ತಂದೊಪ್ಪಿಸತಕ್ಕದ್ದು.

ಮೇಲೆ ಸೂಚಿಸಿದ ೧ರಿಂದ ೫ನೆಯ ಕಲಮಿಗನ್ವಯವಾಗಿ ಖರ್ಚಾಗಿ ಉಳಿಯುವ ಅಕ್ಕಿ ಯಾ ಭತ್ತದ ಯಾವ ಅಂಶವನ್ನೂ ಜಿಲ್ಲಾ ಕಲೆಕ್ಟರ್ ಅಥವಾ ಏಜಂಟರಿಗಲ್ಲದೆ ಇತರರಾರಿಗೂ ವಿಕ್ರಯಿಸಬಾರದು.

ಒಕ್ಕಲು ವರ್ಗದಾರ ಅಥವಾ ಇತರ ರೂಪದಿಂದ ಅಕ್ಕಿ ಭತ್ತವನ್ನು ಪಡೆಯುವವರು ಬೆಳೆ ಕಟವಾಗಿ (ಅಥವಾ ಅಕ್ಕಿ ತಮ್ಮ ಕೈಸೇರಿ) ೧೮ ದಿನದೊಳಗಾಗಿ, ಆಗ ತನ್ನ ವಶದಲ್ಲಿದ್ದ ಅಕ್ಕಿ ಯಾ ಭತ್ತದ ಮೊಬಲಗನ್ನು ತೋರಿಸುವ ಧೃಢ ಪತ್ರಿಕೆಯೊಂದನ್ನು ಆಯಾ ತಾಲೂಕಿನ ತಹಶೀಲ್ದಾರರಿಗೆ ಒಪ್ಪಿಸಬೇಕು. ಮತ್ತು ಅವರ ಬರಹ ಮೂಲಕ ಹುಕುಮು ಬಾರದೆ ಅದನ್ನು ಮುಟ್ಟಬಾರದು.

ಈ ಮೇಲಿನ ನಿಬಂಧನೆಗಳನ್ನು ಉಲ್ಲಂಘಿಸುವವರ ಅಕ್ಕಿ ಭತ್ತ ಸಂಗ್ರಹವನ್ನು ಸರಕಾರವು ಸ್ವಾಧೀನಪಡಿಸಿಕೊಳ್ಳುವುದು.

ಜೋಳ. ರಾಗಿ, ಸಾಮೆ ಮೊದಲಾದ ಧಾನ್ಯಗಳನ್ನು ಬೆಳೆಸುವವರಿಗೂ ಮೇಲಿನ ನಿಬಂಧನೆಗಳೆಲ್ಲ ಅನ್ವಯಿಸುವುವು.

ಗ್ರಾಮ ವಿನೋದ ವಿಶ್ರಾಮ ಸಂಸ್ಥೆ:—"ಹಳ್ಳಿಗರಲ್ಲಿ ಸ್ವಾಭಾವಿಕವಾಗಿರುವ ಜಡತ್ವವನ್ನು ದೂರಗೊಳಿಸಿ ಅವರ ಬುದ್ಧಿ ಚಟುವಟಿಕೆಗಳು ಬೆಳೆಯುವಂತೆ ಪ್ರೋತ್ಸಾಹಿಸಿ ಸುಖ ಸಂತೋಷಗಳು ನೆಲೆಯೂರುವಂತೆ ಮಾಡಿ ಹಳ್ಳಿ ಜನತೆಯಲ್ಲಿ ರಚನಾತ್ಮಕ ಚಟುವಟಿಕೆಗಳು ಉದ್ಭವಿಸುವಂತೆ ಮಾಡುವ" ಉದ್ದೇಶದ ಗ್ರಾಮವಿಶ್ರಾಮ ವಿನೋದ ಸಂಸ್ಥೆಗಳು ನಮ್ಮ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಸ್ಥಾಪಿಸಲ್ಪಟ್ಟಿದ್ದು ಅವು ಆಗಲೇ ಯಶಸ್ವಿಯಾಗಿ ತಮ್ಮ ಕಾರ್ಯ ಸಾಗಿಸುತ್ತಿವೆಯಾಗಿ ಒಂದು ಪ್ರಕಟನೆ ತಿಳಿಸುತ್ತದೆ.

ಹಿಂದೆ ಜಾಮೊರಿನ್ ಕಾಲೇಜಿನಲ್ಲಿಯೂ, ಎಲೋಸಿಯಸ್ ಕೊಲೇಜಿನಲ್ಲಿಯೂ ಪ್ರೊಫೆಸರರಾಗಿದ್ದ ಮಿ. ಟಿ. ಜೆ. ಮೆಥ್ಯೂ ಅವರು ನಮ್ಮ ಜಿಲ್ಲೆಯಲ್ಲಿ ಇಂತಹ ಸಂಸ್ಥೆಗಳ ವ್ಯವಸ್ಥಾಪಕಾಧಿಕಾರಿಗಳಾಗಿದ್ದಾರೆ.

ಹಳ್ಳಿಗರ ವಿರಾಮ ಕಾಲದಲ್ಲಿ ಅವರಿಗೆ ಮಾನಸಿಕ ಪುನಃರ್ಚೇತನ್ಯವನ್ನುಂಟುಮಾಡುವ ವಿನೋದವೂ ಆರೋಗ್ಯದಾಯಕವೂ ಆದ ಆಟ ಪಾಟಗಳನ್ನೂ, ವಾಚನಾಲಯದ ಸೌಕರ್ಯಗಳನ್ನೂ ಒದಗಿಸಿಕೊಡುವುದೇ ಈ ಸಂಸ್ಥೆಗಳ ಗುರಿ. ಜುಗಾರಿ, ಸುರಾಪಾನ ಒಳಜಗಳಗಳಲ್ಲಿ ಹಳ್ಳಿ ಜನತೆಯು ನಿರತರಾಗದಂತೆ ಈ ಚಟುವಟಿಕೆಗಳು ಅವರಿಗೆ ಆಕರ್ಷಕ ಬದಲಾವಣೆಗಳನ್ನು ಒದಗಿಸುವುದು.

ಈಗ ನಮ್ಮ ಜಿಲ್ಲೆಯಲ್ಲಿ ಇಂತಹ 75 ಕೇಂದ್ರಗಳಾಗಿ ರಚಿಸಲ್ಪಟ್ಟಿವೆ. ಪಂಚಾಯತ ಮತ್ತು ಜಿಲ್ಲಾ ಬೋರ್ಡಿನವರು ಈ ಸಂಸ್ಥೆಗಳೊಂದಿಗೆ ಸಹಕರಿಸುತ್ತಾರೆ. ಇನ್ನೂ ಹೆಚ್ಚು ಜನರು ಸದಸ್ಯರಾಗಿ ಹಳ್ಳಿಗರ ಅಭಿವೃದ್ಧಿಗೆ ಸಹಕಾರಿಯಾಗುವ ಇದನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

ವರ್ಗದಾರರ ಸಹಕಾರ:-ರಿಕ್ವಿಜಿಶನ್ ಅಕ್ಕಿ ಕೊಟ್ಟು ಇನ್ನೂ ಹೆಚ್ಚಿಗೆ ಸ್ಟಾಕನ್ನು ಒಪ್ಪಿಸಲು ತಯಾರಿರುವ ಕೆಲವು ಮಂದಿ ವರ್ಗದಾರರು ಈಗ ಮುಂದೆ ಬಂದಿರುವರು. ಈರೀತಿಯಲ್ಲಿ ಅಕ್ಕಿಯೊಪ್ಪಿಸುವ ಏರ್ಪಾಡನ್ನು ಪ್ರೋತ್ಸಾಹಿಸುವುದು ಅಗತ್ಯವಾಗಿದೆ. ಇನ್ನು ಮುಂದೆ ಹಾಗೆ ಗ್ರಾಮ ಉದ್ಯೋಗಸ್ಥರ ಸರ್ಟಿಫಿಕೇಟು ಪಡೆದು ಒಪ್ಪಿಸತಕ್ಕ ಆ ಮಿಗಿತೆಯ ಅಕ್ಕಿ ಮುಡಿಗೆ ಸಂಪೂರ್ಣವಾದ ದರವೇ ಸಿಕ್ಕುತ್ತದೆ. ಅವರಲ್ಲಿ ಮುಡಿಯೊಂದಕ್ಕೆ ರೂಪ್ಯಾ ಒಂದರಂತೆ ಕಳೆಯಲಾಗುವುದಿಲ್ಲ. ಹೀಗೆಂದು ಜಿಲ್ಲಾ ಕಲೆಕ್ಟರರ ಒಂದು ಹುಕುಂ ಪ್ರಕಟನೆ ತಿಳಿಸುತ್ತದೆ.

ಕಾಫಿ ವ್ಯಾಪಾರಿಗಳಿಗೆ ಎಚ್ಚರಿಕೆ:- ಈ ಜಿಲ್ಲೆಯ ಉಪಯೋಗಕ್ಕಾಗಿರುವ ಕಾಫಿ ಬೀಜವನ್ನು ಈ ಜಿಲ್ಲೆಯ ಕೆಲವು ರಖಂ ಕಾಫಿ ವ್ಯಾಪಾರಸ್ಥರು 'ಬ್ಲೇಕ್ ಮಾರ್ಕೇಟ್' (ಕಳ್ಳ ಸಂತೆಯು) ದರದಲ್ಲಿ ಹೊರ ಜಿಲ್ಲೆಗಳ ರಖಂ ವ್ಯಾಪಾರಿಗಳಿಗೆ ಮಾರಿ ಹಾಗೆ ಈ ಜಿಲ್ಲೆಯ ಚಿಲ್ಲರೆ ವ್ಯಾಪಾರಿಗಳ ಮೂಲಕ ಈ ಜಿಲ್ಲೆಯ ಗಿರಾಕಿಗಳಿಗೆ ಮಾರಾಟಕ್ಕೆ ದೊರೆಯ ಬೇಕಾದ ಆ ಕಾಫಿಬೀಜ ಸಂಬಂಧ ಒಂದು 'ಕೃತ್ರಿಮವಾದ ಅಭಾವ'ದ ಪರಿಸ್ಥಿತಿಯನ್ನು ಕಲ್ಪಿಸುತ್ತಿರುವರೆಂದು ತಮ್ಮ ಗಮನಕ್ಕೆ ಬಂದಿದೆ ಎಂದೂ ಆ ರಖಂ ವ್ಯಾಪಾರಿಗಳು ಈ ಕೆಟ್ಟ ಕ್ರಮವನ್ನು ಮುಂದೆಯೂ ಅನುಸರಿಸುವಲ್ಲಿ ಕಾಫಿ ಕಂಟ್ರೋಲರರು ಅಂಥವರ ಲೈಸನ್ಸುಗಳನ್ನು ರದ್ದು ಮಾಡುವಂತೆ ಏರ್ಪಡಿಸುವುದಲ್ಲದೆ 'ಅತಿ ಲಾಭ'ಕ್ಕಾಗಿ ಅವರ ಮೇಲೆ ಕಟ್ಲೆ ನಡೆಸಲಾಗುವುದೆಂದೂ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರು ಪ್ರಕಟಿಸುತ್ತಾರೆ.

ಹಳೇ ಅಪರಾಧಿ ಪುನಹ: ನೀರುಮಾರ್ಗದ ಮುದರ ಪೂಜಾರಿ ಎಂಬ ಹಳೇ ಅಪರಾಧಿ ಒಂದು ಮೀನಿನ ಬಲೆ ಕದ್ದು ೮ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದನು.

೧೮ ಸಾವಿರದ ಜುಲ್ಮಾನೆ: ಬಂದರದ ಹಾರ್ಡ್‌ವೇರ್ ಮತ್ತು ಕಟ್ಲರಿ ವ್ಯಾಪಾರಿಗಳಾದ ಎಂ. ಎ. ಕೃಷ್ಣನಾಯ್ಕ ಎಂಡ್ ಸನ್ಸ್ ಸಂಸ್ಥೆಯ ಶ್ರೀ॥ಗಳಾದ ಮಣೇಲ್ ಶ್ರೀನಿವಾಸ ನಾಯ್ಕ ಅವರ ಸಹೋದರ ಎಂ. ಕೃಷ್ಣನಾಯಕ್ ಮತ್ತು ಸೇಲ್ಸ್‌ಮೇನ್ ಶ್ರೀನಿವಾಸ ಕುಡ್ವ ಇವರು ಅಧಿಕ ಬೆಲೆಗೆ ಹಾರೆಗಳನ್ನು ಮಾರಿದರೆಂಬ ಆರೋಪದ ಸಂಬಂಧವಾದ ಮೊಕದ್ದಮೆಯೊಂದು ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ವಿಚಾರಣೆಯಾಗಿ ಮಾಲಕರಾದ ಮೊದಲಿನ ಇರ್ವರಿಗೆ ಎಂಟೆಂಟು ಸಾವಿರ ರೂಪ್ಯಾಗಳೂ, ಕೊನೆಯ ಸೇಲ್ಸ್‌ಮೇನರಿಗೆ ೨ ಸಾವಿರ ರೂಪ್ಯಾಗಳೂ ಜುಲ್ಮಾನೆಯಾಗಿ ವಿಧಿಸಲಾಗಿದೆ.

ಚಿಮಿಣಿ ಎಣ್ಣೆ ಪ್ರಮಾಣ: ಮಂಗಳೂರು ಮುನ್ಸಿಪಾಲಿಟಿ ಮತ್ತು ಆಸುಪಾಸುಗಳ ಮನೆವಾರ್ತೆಯವರಿಗೂ ಅಂಗಡಿಗಾರರಿಗೂ ಚಿಮಿಣಿ ಎಣ್ಣೆ ಸರಬರಾಯಿ ಪ್ರಮಾಣದಲ್ಲಿ ಕೊಂಚ ಕಡಿಮೆಮಾಡಲಾಗಿತ್ತಷ್ಟೆ. ಈಗ ಅದನ್ನು ರದ್ದುಮಾಡಿ ಮೊದಲಿನಷ್ಟೇ ಎಣ್ಣೆ ಪ್ರಮಾಣವು ಸಿಕ್ಕುವಂತೆ ಕಲೆಕ್ಟರರು ಅಪ್ಪಣೆ ಮಾಡಿರುವರು.

ಎಸ್. ಕೆ. ಸಿ. ಸಿ. ರಖಂ ಸ್ಟೋರ್ಸ್ ಸಭೆ: ದ. ಕ. ಜಿಲ್ಲಾ ಸೆಂಟ್ರಲ್ ಕೋಒಪರೇಟಿವ್ ರಖಂ ಸ್ಟೋರ್ಸಿನ ಡೈರೆಕ್ಟರ್ ಮಂಡಳದ ಪ್ರಥಮ ಸಭೆ ಕಳೆದ ಆದಿತ್ಯವಾರ ಅದೇ ಸ್ಟೋರ್ಸಿನ ಆಹಾರ ವಸ್ತು ಇಲಾಖೆಯ ಕಾರ್ಯಾಲಯದಲ್ಲಿ ಜರುಗಿ ಶ್ರೀ. ಎಂ. ಶಿವರಾಯರು ಡ್ಯಾ ಮಂಡಳದ ಅಧ್ಯಕ್ಷರಾಗಿಯೂ ತಿರುಗಿ ಚುನಾಯಿಸಲ್ಪಟ್ಟರು. ಒಂದು ಕಾರ್ಯಕಾರಿ ಸಮಿತಿಯೂ ಏರ್ಪಡಿಸಲ್ಪಟ್ಟಿತು.

ಮಂಜೇಶ್ವರ:—ಸಿಮ್ಲಾ ಪರಿಷತ್ತು ಕಾಲದಲ್ಲಿ ಇಲ್ಲಿಯ ಮುಸ್ಲಿಂ ಲೀಗಿನವರು "ತಾವು ಎಲ್ಲಾ ತ್ಯಾಗ ಬಲಿದಾನಗಳಿಗೂ ಸಿದ್ಧರಿರುವರೆಂದು" ತಿಳಿಸುತ್ತಾ ಜಿನ್ನಾ ಸಾಹೇಬರಿಗೆ ತಮ್ಮ ಬೆಂಬಲದ ತಂತಿಯನ್ನ ಕಳುಹಿಸಿದರು.

ಸೆಶ್ಶನ್ ಕೋರ್ಟಿನ ತೀರ್ಪು: ಕಾಸರಗೋಡು ತಾಲೂಕು ದೇಲಂಪಾಡಿ ಗ್ರಾಮದಲ್ಲಿ ವ್ಯೊದು ಕುಂಞ ಎಂಬಾತನು ತನ್ನ ಬಾವನೆಂಟನಾದ ಮಮ್ಮುಞ ಎಂಬಾತನ ಕೊಲೆ ಮಾಡಿದಕ್ಕೆ ಆರೋಪಿಗೆ ೨ ವರ್ಷದ ಕಠಿಣ ಸಜೆಯಾಗಿದೆ.

ವಸ್ತ್ರ ನಿಯಂತ್ರಣ ಆಜ್ಞೆ ಮೀರಿದ ಇಲ್ಲಿಯ ಟಿ. ಎಸ್. ಮಾಸ್ಟರ್ ಸೇಟ್ ಮತ್ತು ಶಿರಿಯನ್ ಎಂಬವರಿಗೆ ೫೦೦ ಮತ್ತು ೩೦೦ ರೂಪ್ಯಾಗಳ ಜುಲ್ಮಾನೆಯಾಗಿತ್ತು. ಅಫೀಲಿನಲ್ಲಿ ಎರಡೂ ಕಾಯಂ ಆದುವು.

ರಥಬೀದಿಯ "ಕಾರ್ಕಳ ಜನರಲ್ ಪ್ರೊವಿಜನ್ ಸಪ್ಲೈ ಲಿಮಿಟೆಡ್" ಎಂಬೀ ಸಂಸ್ಥೆಯ ಮೆನೆಜಿಂಗ್ ಡೈರೆಕ್ಟರ್ ಶ್ರೀ. ಕೆ. ಕೃಷ್ಣಪ್ಪೈ ಅವರಿಗೆ ಕೆಳ ಕೋರ್ಟಿನಲ್ಲಿ ೪ ತಿಂಗಳ ಶಿಕ್ಷೆ, ೧ ಸಾವಿರ ಜುಲ್ಮಾನೆಯಾಗಿತ್ತು. ಸೆಶ್ಶನ್ ಅಫೀಲಿನಲ್ಲಿ ಅದು ಕಾಯಂ ಮಾಡಲ್ಪಟ್ಟಿತು.

ಕಟ್ಪಾಡಿಯ ಪಿ. ದಾಮೋದರ ನಾಯ್ಕರಲ್ಲಿ ಅವಶ್ಯಕತೆಗಿಂತ ಹೆಚ್ಚು ಚಿಮಿಣಿ ಎಣ್ಣೆ ದಾಸ್ತಾನು ಇದ್ದ ತಪ್ಪಿಗೆ ಕೆಳ ಕೋರ್ಟಿನಲ್ಲಿ ರೂ. ೫೦೦ ಜುಲ್ಮಾನೆಯಾಗಿದ್ದು ಅಫೀಲಿನಲ್ಲಿ ಅದು ಕಾಯಂ ಆಯಿತು.

ರಿಕ್ವಿಜಿಶನ್ ಅಕ್ಕಿ ಒಪ್ಪಿಸದ ಕುಂದಾಪುರದ ಶ್ರೀ. ಅಣ್ಣಾಜಿ ಹೆಬ್ಬಾರರಿಗೆ ರೂ. ೫೦೦ ಜುಲ್ಮಾನೆಯಾಗಿದ್ದು ಅಫೀಲಿನಲ್ಲಿ ಅದು ಕಾಯಂ ಆಯಿತು.

ಪುತ್ತೂರಿನ ಅಬ್ದುಲ್‌ಖಾದರ್, ಅಬ್ದುಲ್ ಕುಞ, ಮತ್ತು ಎಂ. ಎ. ರಜಾಕ್ ಎಂಬವರು "ಅರಳೆ ಮತ್ತು ನೂಲಿನ" ನಿಯಂತ್ರಣ ಕಾನೂನನ್ನು ಮೀರಿದ್ದು ಮೊದಲನೇ ಇರ್ವರಿಗೆ ೨ ತಿಂಗಳು—೨೦೦ರೂ. ಜುಲ್ಮಾನೆಯೂ, ಕೊನೆಯವರಿಗೆ ೨ ತಿಂಗಳ ಶಿಕ್ಷೆ ಮಾತ್ರವೂ ಆಗಿದ್ದು ಅಫೀಲಿನಲ್ಲಿ ಕೆಳ ಕೋರ್ಟಿನ ತೀರ್ಪುಗಳೇ ಕಾಯಂ ಆದವು.

ಮಳೆ ನೆರೆಯ ಹಾನಿ: ಕಳೆದ ಪಕ್ಷದಲ್ಲಿ ಬಂದ ಮಳೆಯ ದೆಸೆಯಿಂದ ಇಲ್ಲಿಯ ಕೂಳೂರು, ಬೆಂಗರೆಗಳಲ್ಲಿ ಅಲ್ಪ ಸ್ವಲ್ಪ ಹಾನಿಯಾಗಿದೆ ಎಂದೂ, ಕೂಳೂರು ಬಳಿ ಎರಡು ಪ್ರಾಣ ನಷ್ಟಗಳು ಆಗಿವೆ ಎಂದೂ ವದಂತಿ ಇದೆ. ಪುತ್ತೂರಿನ ಚೊಕ್ಕಾಡಿ ಮೊದಲಾದ ಮೂಡು ಪ್ರಾಂತ್ಯಗಳಲ್ಲಿಯೂ ನೆರೆಯಿತ್ತಂತೆ. ಗುರುಪುರ ಸಂಕದ ಬಳಿಯಲ್ಲೂ ಕೆಲವು ಮನೆಗಳು ಮುಳುಗಿದ್ದು ಹಾನಿಗೊಳಗಾಗಿವೆ.

ಅಡಿಕೆ ಸುಂಕ ಮರು ಪಾವತಿ: ೧೯೪೪ನೆಯ ಇಸವಿ ಎಪ್ರಿಲ್ ತಿಂಗಳಲ್ಲಿ ವಸೂಲಿಕೊಟ್ಟ ಎಲ್ಲಾ ಅಡಿಕೆ ಸುಂಕವನ್ನೂ, ಸುಂಕ ಕೊಟ್ಟ ವಿವರವನ್ನೂ ಮಂಗಳೂರು ಇನ್ಸ್‌ಪೆಕ್ಟರ್ ಮಿ। ಪಿಂಟೊ ಅವರಿಗೆ ತಿಳಿಸಿದಲ್ಲಿ ಮರುಪಾವತಿಕೊಡಲಾಗುವುದು. ಎಪ್ರಿಲಲ್ಲಿ ಸುಂಕಕೊಟ್ಟ ಅಡಿಕೆಯು ಮಾರ್ಚಿ ೧ರ ಮೊದಲು ಕೊಯ್ದ ಅಡಿಕೆಯೆಂದು ಗಣಿಸಲ್ಪಟ್ಟು ತನಿಖೆ ಇಲ್ಲದೆಯೇ ಮರುಪಾವತಿಯಾಗುವುದು. ಇನ್ನು ಮೇ ತಿಂಗಳಲ್ಲಿ ತೆತ್ತ ಸುಂಕ ಕೂಡಾ ಇದೇ ರೀತಿ ಮರುಪಾವತಿಯಾಗುವುದು.

ಮಂಗಳೂರು ಭಂಡಸಾಲೆಗಳಿಗೆ ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಒಂದು ಬೋಂಡ್ ರಿಜಿಸ್ಟ್ರಿಗೆ ದಾಖಲು ಆದ ಅಡಿಕೆಯ ಮೇಲೆ ಅನಂತರ ಸುಂಕ ತೆತ್ತರೂ ಬೋಂಡ್ ಆದ ತಾರೀಕಿಗೇ ಸುಂಕತೆತ್ತುದೆಂದು ಭಾವಿಸಿ ಮರುಪಾವತಿ ಕೊಡಬೇಕೆಂದು ತೋಟಗಾರರ ಮತ್ತು ಅಡಿಕೆ ವ್ಯಾಪಾರಿಗಳ ಪರವಾಗಿ ಸರಕಾರಕ್ಕೆ ಮನವಿ ಹೋಗಿದೆ.

ಹಣ್ಣು ಅಡಿಕೆಗೆ ಸುಂಕವಿಲ್ಲವೆಂದು ಕೇಂದ್ರ ಎಸೆಂಬ್ಲಿಯಲ್ಲಿ ಫೈನೆನ್ಸ್‌ಮೆಂಬರರು ಶ್ರೀ. ಜಿನರಾಜ ಹೆಗ್ಡೆಯವರಿಗೆ ತಿಳಿಸಿರುವರು. ಆದರೆ ದ. ಕನ್ನಡ, ಉ. ಕನ್ನಡ, ಮಲಬಾರುಗಳಲ್ಲಿ ನೂರಕ್ಕೆ ೪ ಆಣೆಯಂತೆ ವಸೂಲುಮಾಡಲಾಗಿದೆ. ಇದು ಕಾನೂನು ವಿರೋಧವೆಂದು ಅಡಿಕೆ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಉಡುಪಿ: ಕಳೆದ ವಾರದಲ್ಲಿ ಇಲ್ಲಿಯ ಮಣಿಪಾಲದ ಕೆರೆಯಲ್ಲಿ ಪತ್ನಿ ಸಮೇತರಾಗಿ ಬಿದ್ದು ಆತ್ಮಹತ್ಯ ಮಾಡಿಕೊಂಡ ತರುಣರು ಅಲೆವೂರಿನ ಶ್ರೀ. ರಾಘವೇಂದ್ರ ಕಾಮತರೆಂಬವರು. ಈ ಭೀಕರ ವಾರ್ತೆಯನ್ನು ಕೇಳಿ ಸಹಿಸಲಾರದೆ ಮೃತ ಕಾಮತರ ತಂಗಿಯೊಬ್ಬರು ಕುಂದಾಪುರದಲ್ಲಿ ಬಾವಿಗೆ ಬಿದ್ದು ಪ್ರಾಣ ಕಳೆಕೊಂಡರೆಂಬ ವಿಷಾದಕರ ಸುದ್ದಿ ತಿಳಿದುಬಂದಿದೆ.

ಉಡುಪಿ ನಗರ ಸಭೆಯ ಆಡಳಿತ ವರದಿಯ ಕುರಿತು ಜಿಲ್ಲಾ ಕಲೆಕ್ಟರ್ ಅವರು ಹೀಗೆ ಷರಾ ಬರೆದಿರುತ್ತಾರೆ: ಆಡಳಿತ ಸರ್ವ ಸಾಧಾರಣ ಚೆನ್ನಾಗಿದೆ. ಜನರಿಗೆ ಅದರಲ್ಲಿ ವಿಶ್ವಸವೂ ಇದೆ. ಅಜ್ಜರ ಕಾಡಿನ ಕ್ರೀಡಾವನ ರೇಡಿಯೊ, ಉದ್ಯಾನಗಳಿಂದ ನಗರದ ಒಂದು ಭಾಗದ ಜನರಿಗೆ ಮಾತ್ರ ಹೆಚ್ಚು ಉಪಕಾರಿಯಾಗುವುದರಿಂದ ಶಕ್ಯವಿದ್ದಷ್ಟುಮಟ್ಟಿಗೆ ಇತರ ಕಡೆಯ ತೆರಿಗೆದಾರರಿಗೂ ಅದರ ಸೌಕರ್ಯ ಸಿಗುವಂತಾಗಬೇಕು. ಟೌನ್ ಸರ್ವೇ ಕೆಲಸವನ್ನು ಯುದ್ಧಾನಂತರ ಕೈಕೊಂಡರೆ ಸಾಕು. ನಗರ ಸಭಾಧ್ಯಕ್ಷ, ಸದಸ್ಯರು ಮತ್ತು ಕಮಿಶನರ್ ಇವರಲ್ಲಿ ಸೌಹಾರ್ದ ಸಹಕಾರಗಳಿವೆ.

ಕುಂದಾಪುರ: ಈ ತಾಲೂಕಿನ ಆಹಾರ ಸಮಿತಿಯವರು ತಮ್ಮ ತಾಲೂಕಿಗೆ ಈ ವರ್ಷದಲ್ಲಿ ೩೫ ಸಾವಿರ ಮುಡಿ ಅಕ್ಕಿ ಕಡಿಮೆ ಬೀಳುತ್ತದೆಂದು ಅವುಗಳನ್ನು ಕಳಿಸುವ ವ್ಯವಸ್ಥೆಮಾಡಬೇಕೆಂದೂ ಸರಕಾರಕ್ಕೆ ವಿನಂತಿಸಿಕೊಂಡಿರುವರು. ಮೂರು ತಿಂಗಳಿಂದ ಇಲ್ಲಿ ಗೋದಿ ಸರಬರಾಯಿ ಇಲ್ಲದಿದು ಈಗ ಪುನಃ ಹಂಚಲಾಗುತ್ತಿದೆ.

ಈ ತಾಲೂಕಿನ ಹೆಂಗ್ವಳ್ಳಿ ಎಂಬ ಗ್ರಾಮದ ರೆವಿನ್ಯೂ ಕಾಡಿನಿಂದ ೨ ಸಾವಿರ ಘನ ಅಡಿ ಮರವನ್ನು ಅಕ್ರಮವಾಗಿ ಯಾರೊ ಕಡಿಸಿರುವುದು ಇಲಾಖೆಯವರ ಗಮನಕ್ಕೆ ಬಂದಿದ್ದು ಈಗ ಪೋಲಿಸ್ ತಪಾಸಣೆ ನಡೆಯುತ್ತಿದೆ.

ನದಿವಹಿ ಉಪಯೋಗದ ಲೋಹದ
ಪಾತ್ರೆಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ದಾಗಿನೆಗಳ ಭಂಡಾರ
"ಕಲ್ಮಂಜೀಸ್ ಮೆಟಲ್ ವೇರ್"
(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳಿ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.
ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು
ವಿ: ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳಿ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಜಾಗತಿಕ ಶಾಂತಿಸಾಧನೆಗಾಗಿ ಅಮೇರಿಕದ ಪತ್ರ

(೧ನೇ ಪುಟದಿಂದ)

ಅಮೇರಿಕನ್ ಮಜೂರನಿಗೂ ಶ್ರೀಮಂತನಿಗೂ ಒಳ್ಳೇ ಲಾಭದಾಯಕವು. ಆದರೆ ಒಂದು ಶರ್ತವಿದೆ. ಈ ತನಕ, ಅಮೇರಿಕಾ, ಬ್ರಿಟನು, ಪ್ರಾನ್ಸ್ ಮೊದಲಾದ ಶ್ರೀಮಂತ ದೇಶಗಳು, ಹಿಂದುಳಿದ ದೇಶಗಳಲ್ಲಿ ತಮ್ಮ ಹಣವನ್ನು ಸಂಚಯಿಸಿ, ಉಂಟಾಗುವ ಲಾಭವನ್ನೆಲ್ಲಾ, ಡಿವಿಡೆಂಡುಗಳ ರೂಪದಲ್ಲಿ ಹಿಂದಕ್ಕೆ ಸೆಳೆಯುತ್ತಿದ್ದವು. ಇದರಲ್ಲಿ ಆ ದೇಶಗಳಿಗೆ ಸಮಾಧಾನವಿರಲಿಲ್ಲ. ನಮ್ಮ ಹಣವು ಅಲ್ಲಿ ಸಂಚಯಿಸಲ್ಪಡುವಾಗ್ಯೆ, ಅಲ್ಲಿನವರಿಗೂ ಲಾಭದಲ್ಲಿ ಪಾಲುಗಾರಿಕೆ ದೊರಕುವಂತೆ ಮುಂದೆ ನವವ್ಯವಸ್ಥೆಗಳಾಗಬೇಕು. ಸಾಮ್ರಾಜ್ಯಶಾಹೀ ಸಫಲಕರಣೆಯು ತ್ಯಜಿಸಲ್ಪಡಬೇಕು. ಆಧುನಿಕ ರಾಷ್ಟ್ರಗಳು ಹಿಂದುಳಿದ ದೇಶಗಳನ್ನು ತಮ್ಮ ಸ್ವಲಾಭಕ್ಕೆ ಉಪಯೋಗಿಸಿಕೊಳ್ಳುವ ಹವ್ಯಾಸವು ಹೋಗಬೇಕು. ಮುಂದರಿದ ದೇಶಗಳೂ ಹಿಂದುಳಿದ ದೇಶಗಳೂ, ಪರಸ್ಪರ ಸಹಕಾರದಿಂದ, ಪರಸ್ಪರ ಹಿತಲಾಭಗಳ ಸಾಧನೆಯಲ್ಲಿ ಒಟ್ಟುಕೂಡಿ, ನಡೆಯಬೇಕು. ಈ ನೀತಿಯನ್ನು ಅನುಸರಿಸಿಯೆ ದಕ್ಷಿಣ ಅಮೇರಿಕಾದ ಕೊಲಂಬಿಯಾ, ಪೆರ್ರು, ಟ್ಯಾಲ್, ಬೊಲಿವಿಯಾ ಮೊದಲಾದ ಕಡೆಗಳಲ್ಲಿ, ಅರಿವೆ ಗಿರಣಿಗಳೂ, ವನಸ್ಪತಿ ತುಪ್ಪವನ್ನು ತಯಾರಿಸುವ ಕಾರ್ಖಾನೆಗಳೂ, ಸಕ್ಕರೆ ಕಾರ್ಖಾನೆಗಳೂ, ಸಿಮೆಂಟ್ ಕಾರ್ಖಾನೆಗಳೂ ಇತ್ಯಾದಿ ಧಾರಾಳ ಸ್ಥಾಪನೆಯಾಗಿ ನಡೆಯುತ್ತಿವೆ. ಇವುಗಳಲ್ಲಿ ಅಲ್ಲಿನ ಜನರಿಗೆ ಪಾಲುಗಳು ಅಧಿಕ ಸಂಖ್ಯೆಯಲ್ಲಿವೆ. ಸಂ. ಅಮೇರಿಕಾದ ಧನದಿಂದ, ನೆರವಿನಿಂದ ಅವುಗಳು ನಡೆಯುತ್ತಿರುವುದಾದರೂ, ಅವುಗಳಿಗೆ ಆ ದೇಶಗಳದ್ದೇ ಬಣ್ಣವಿದೆ.

ಹೀಗೆ ದಕ್ಷಿಣ ಅಮೇರಿಕಾದಲ್ಲಿ ಮತ್ತು ಮೆಕ್ಸಿಕೋದಲ್ಲಿ ಅನೇಕ ಕಾರ್ಖಾನೆಗಳು ನಡೆಯುತ್ತಿದ್ದು, ಅಲ್ಲಿನ ಜನರ ಕೊಂಡುಕೊಳ್ಳುವಶಕ್ತಿಯು ವೃದ್ಧಿಯಾಗಿ ನಮ್ಮಲ್ಲಿ ಸಿದ್ಧವಾಗುವ ಸೇವನಾ ಸಾಹಿತ್ಯಗಳಿಗೆ ಗಿರಾಕಿಗಳು ಹೆಚ್ಚುತ್ತಿವೆ.

ಈ ತರದ ಧೋರಣದಿಂದ ಅಮೇರಿಕಾದ ರಫ್ತಿನಲ್ಲಿ ಇಬ್ಬಗೆಯ ವೃದ್ಧಿಗಳು ನಡೆಯಲು ಸಾಧ್ಯವಿದೆ. ಔದ್ಯೋಗಿಕರಣಕ್ಕೆ ಬೇಕಾದ ಯಂತ್ರಾದಿ ಉಪಕರಣಗಳ ರಫ್ತಿನಲ್ಲಿ ವೃದ್ಧಿ. [ಹೀಗೆ ಹಿಂದುಳಿದ ದೇಶಗಳಿಗೆ ೨೦ ವರ್ಷಗಳ ಸಮಯ ಈ ತರದ ರಫ್ತು ನಡೆಯಬೇಕಾಗುವುದು.] ನಮ್ಮ ಸೇವನಾ ವಸ್ತುಗಳ ವ್ಯಾಪಾರದಲ್ಲಿ ಅಭಿವೃದ್ಧಿ. ಹಿಂದುಳಿದ ದೇಶಗಳ ಔದ್ಯೋಗಿಕರಣದೊಡನೆ, ಅಲ್ಲಿನ ಜನರ ದುಡಿಮೆಯಲ್ಲಿ ಹೆಚ್ಚಳವು ಉಂಟಾಗಿ ಅವರು 'ಸೇವನಾವಸ್ತು'ಗಳನ್ನು ಹೆಚ್ಚಾಗಿ ಉಪಯೋಗಿಸುವುದರಲ್ಲಿ ಶಕ್ಯರಾಗುವರು. ಅರಿವೆ, ಗ್ರಹೋಪಕರಣಗಳು, ಅಡುಗೆಮನೆ ಸಾಮಾನುಗಳು, ಮೋಟಾರುಕಾರು, ರೇಡಿಯೊ, ಇತ್ಯಾದಿ ಆಧುನಿಕ ಸೇವನಾಸಾಹಿತ್ಯಗಳನ್ನು ಪಡಕೊಳ್ಳಲು ಅವರು ಮುಂದೆ ಬರುವರು. ನಮ್ಮ ಸಿದ್ಧವಾಗುವ ಈ ಸಾಮಾನುಗಳಿಗೆ ಹೆಚ್ಚಿನ ಗಿರಾಕಿಗಳು ಲಭಿಸುವರು. ಹೀಗೆ ಇಡೀ ಜಗತ್ತಿನ ಔದ್ಯೋಗಿಕರಣದಿಂದ ನಮಗೆ ಮಹಾ ಲಾಭವೂ, ಹಿತವೂ ಖಂಡಿತವಾಗಿ ಉಂಟಾಗುವುದು.

ಇಷ್ಟೆಲ್ಲಾ ಅಮೇರಿಕದ ರಫ್ತುಗಳ ವಿಷಯವಿರುತ್ತದೆ. ಈಗ ಆಮದಿನ ಕುರಿತು ವಿಚಾರಿಸೋಣ. ಪರದೇಶಗಳು ಡೊಲ್ಲರು ರೂಪದಲ್ಲೇ ನಮ್ಮ ಸಾಮಾನುಗಳ ಕ್ರಮವನ್ನು ತೆರಬೇಕಾದರೆ, ನಾವು ಅವರಿಂದ ಆಮದುಗಳನ್ನುಪಡೆದು ಅವುಗಳ ಮೌಲ್ಯವನ್ನು ಡೊಲ್ಲರು ರೂಪದಲ್ಲಿ ಕೊಡದೆ ಸಾಧ್ಯವಿಲ್ಲ.

ಜಗತ್ತಿನಲ್ಲೆಲ್ಲಾ ಔದ್ಯೋಗಿಕರಣವು ನಡೆಯುವುದರಿಂದ, ಸಾಮಾನುಗಳ ಧಾರಣೆಯು ಇಳಿದು ನಮ್ಮ ವ್ಯಾಪಾರಕ್ಕೆ ಹಾನಿಬರಬಹುದೆಂಬ ಭೀತಿಪಡಬೇಕಾಗಿಲ್ಲ. ಔದ್ಯೋಗಿಕರಣದೊಂದಿಗೆ ಮಜೂರನ ಸ್ಥಿತಿಗತಿಗಳ ಸುಧಾರಣೆಯೂ, ಮಜೂರಿಯಲ್ಲಿ ಹೆಚ್ಚಳವೂ ಉಂಟಾಗಿ, ಅದು ನಮ್ಮ ಕೆಲಸಗಾರರ ಮಜೂರಿಯ ಸಮತಲಕ್ಕೆ ಬರಬಹುದಾದ್ದರಿಂದ, ಸಾಮಾನುಗಳ ಕ್ರಯದಲ್ಲಿ ಇಳಿತವಾಗುವ ಸಂಭವ ಕಡಿಮೆ ಎಂದು ತಿಳಿಯಬೇಕು.

ಇದಲ್ಲದೆ, ನಮ್ಮ ರಫ್ತಿನ ಸಾಮಾನುಗಳನ್ನು ಸಿದ್ಧಪಡಿಸುವರೆ ಅನೇಕ ಕಾರಣ ಸಾಮುಗ್ರಿಗಳು ಹೊರದೇಶಗಳಿಂದ ಬರಮಾಡಿಕೊಳ್ಳುವುದು ಅವಶ್ಯವಿದೆ. ನಮ್ಮ ಕಾರ್ಖಾನೆಗಳಲ್ಲಿ ಸಿದ್ಧವಾಗುವ ಪ್ರತಿಯೊಂದು ಟೆಲಿಫೋನು ಉಪಕರಣದ ತಯಾರಿಕೆಯಲ್ಲಿ ಪರದೇಶಗಳಿಂದ ಆಮದಾಗುವ 18 ಬಗೆಯ ಸಾಮುಗ್ರಿಗಳ ಅವಶ್ಯವಿದೆ. ನಮ್ಮಲ್ಲಿ ಸಿದ್ಧವಾಗುವ ಮೋಟಾರು ವಾಹನದಲ್ಲಿ 56 ದೇಶಗಳಿಂದ ಬರುವ 300 ಸಾಮುಗ್ರಿಗಳು ಉಪಯೋಗಿಸಲ್ಪಡುತ್ತವೆ.

ನಮಗೆ ಅನೇಕ ಕಾರಣ ಸಾಮುಗ್ರಿಗಳ ಕೊರತೆಯುಯಿದೆ. ನಮ್ಮಲ್ಲಿ ಇಷ್ಟರ ತನಕ ದಾರಳವಾಗಿರುವ ಕೆಲ ಕಾರಣ ಸಾಮುಗ್ರಿಗಳು ಈಗ ಕಡಿಮೆಯಾಗುತ್ತಾ ಬಂದಿವೆ. ಕಬ್ಬಿಣದ ಅದುರಿನ ವಿಚಾರದಲ್ಲಿ ನಾವು ಜಗತ್ತಿನಲ್ಲಿ ಪ್ರಥಮ ಶ್ರೇಣಿಯಲ್ಲಿದ್ದೆವು. ಈಗ ನಮಗೆ ಪರದೇಶಗಳಿಂದ ಕಬ್ಬಿಣದ ಅದುರು ಬರಬೇಕಾಗಿದೆ. ತಯಾರಿಕೆಯು ಸಾಮಾನುಗಳ ರಫ್ತು ವೃದ್ಧಿಯಾದಂತೆ, ತಾಮ್ರ, ಸೀಸ, ಕರ್ಪುರ್ಸುತ, ಪೆಟ್ರೋಲ್ ಇತ್ಯಾದಿಗಳ ಆಮದಿನಲ್ಲೂ ವೃದ್ಧಿಯಾಗಬೇಕಾಗಿದೆ.

ಹೀಗೆ ಭವಿಷ್ಯದಲ್ಲಿ ನಾವು ಪರದೇಶಗಳಿಂದ ಕೈಗಾರಿಕೆಗಳಿಗೆ ಅವಶ್ಯವಿರುವ ಸಾಮುಗ್ರಿಗಳನ್ನು ತರಿಸಿಕೊಳ್ಳಲೆ ಬೇಕಾಗುವುದು. ಅದರಿಂದ ನಮ್ಮ ಸಂತುಷ್ಟಿಯು ನಮ್ಮ ಆಮದಿನ ಮೇಲೂ ಹೊಂದಿಕೊಂಡಿರುವುದೆಂದು ತಿಳಯಬೇಕು.

ಮೇಲೆ ಸೂಚಿಸಿದಂತೆ ನಾವು ಹಿಂದುಳಿದ ದೇಶಗಳೊಡನೆ ಸಹಕರಿಸಿ ನಡೆದರೆ ಆ ಜನರ ಉದ್ಧಾರವೂ ಅದರೊಡನೆ ನಮ್ಮ ಉದ್ಧಾರವೂ ಆಗುವುದು. ಅದರಿಂದ ನಮಗೆ ಲಾಭವೂ ನಮ್ಮವರಿಗೆ ಉದ್ಯೋಗವೂ ದುಡಿಮೆಯೂ ಒದಗಿಸಿಕೊಟ್ಟಂತಾಗುವುದು. ಮಾತ್ರವಲ್ಲ, ಅಂತರಾಷ್ಟ್ರೀಯ ಸೌಹಾರ್ದತೆಯನ್ನೂ, ಸಹಕಾರವನ್ನೂ ಬಳೆಸಿದಂತಾಗುವುದು. ಅಂತರಾಷ್ಟ್ರೀಯ ಹಿತಗಳ ಮೇಲೆ ನಮ್ಮ ಹಿತವು ಹೊಂದಿಕೊಂಡಿರುವುದರಿಂದ ನಾವು ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಅತ್ಯಂತ ಲಕ್ಷ್ಯವನ್ನು ವಹಿಸಿ ವರ್ತಿಸಬೇಕು.

ಆದರೆ ತೊಂದರೆಗಳು ತುಂಬಾ ಬರಲಿವೆ. ಈ ತೊಂದರೆಗಳು ಯಾವುವೆಂದರೆ– ಮುಂದರಿದ ದೇಶಗಳ ಸರಕಾರಗಳೂ ನಮ್ಮ ಸರಕಾರವೂ ಅಂತರಾಷ್ಟ್ರೀಯ ವ್ಯಾಪಾರದ ವಿಚಾರದಲ್ಲಿ ವಿಪರೀತ ಧೋರಣದಿಂದ ವರ್ತಿಸುವುದು. ಈ ವಿಪರೀತ ಧೋರಣದಿಂದ ವಿಪರೀತ ಪರಿಸ್ಥಿತಿಗಳು ಉಂಟಾಗುವುವು. ಈ ಕಾರಣದಿಂದ ಆ ಸರಕಾರಗಳೊಳಗೆ ಪೈಪೋಟಿಯು ಉಂಟಾಗುವುದು. ವ್ಯಾಪಾರೀ ಪ್ರಪಂಚದ ಪೈಪೋಟಿತನದಿಂದ ಅಂತರ್ರಾಷ್ಟ್ರೀಯ ಕಲಹಗಳು ಉದ್ಭವಿಸುವವು. ಬಲತ್ಕಾರವೆ ಮತ್ತೊಮ್ಮೆ ಪ್ರಯೋಗಕ್ಕೆ ಬರುವುದು.

ಶಾಂತವಾದ ರೀತಿಯಲ್ಲಿ ಜಗತ್ತಿನ ಉದ್ಧಾರವಾಗಬೇಕಾದರೆ, ಆ ಉದ್ಧಾರವು ಖಾಸಗಿ ಜನರ ಕೈಗಳಲ್ಲಿ ನಡೆಯಬೇಕು. ಪರದೇಶಗಳಿಗೆ ಹೋಗುವ ಬಂಡವಾಳವು, ಸರಕಾರಿ ಬಂಡವಾಳವಾಗಿ ಹೋಗುವ ಬದಲು ಖಾಸಗಿ ಬಂಡವಾಳವಾಗಿ ಹೋಗಬೇಕು. ರಾಷ್ಟ್ರೀಯ ಸಾಂಪತ್ತಿಕ ಸಫಲಕರಣೆಯ ಶಸ್ತ್ರವಾಗಿ ಅದು ಅಲ್ಲಿಗೆ ಹೋಗಬಾರದು. ಈ ಖಾಸಗಿ ಬಂಡವಾಳಕ್ಕೆ ಒಂದು ವೇಳೆ ಅಪಾಯ ಸಂಭವಿಸಿದರೂ ಅದು ಖಾಸಗಿ ವ್ಯಕ್ತಿಗಳಿಗೆ ಮಾತ್ರ ಅನ್ವಯಿಸಲ್ಪಟ್ಟು, ಗಲಭೆಗೆ ಕಾರಣವಾಗದು. ಆದರೆ ಸರಕಾರೀ ಬಂಡವಾಳದ ಭದ್ರತೆಯಲ್ಲಿ-ಸಮಸ್ತ ಜನರಿಗೂ, ರಾಷ್ಟ್ರೀಯ ಗೌರವಕ್ಕೂ ಕುಂದುಬಂದಂತಾಗುವುದು.

ಪ್ರತಿಯೊಂದು ರಾಷ್ಟ್ರದ ರಾಯಭಾರಿಯ ಹಿಂದಿನಲ್ಲಿ–ಸೈನಿಕನೂ, ನಾವಿಕನೂ ಮತ್ತು ರಾಷ್ಟ್ರೀಯ ಧ್ವಜವೂ ಇವೆ. ಸರಕಾರಗಳೊಳಗೆ ವ್ಯವಹಾರವೆಂದರೆ, ವಿರೋದ ಬಲಗಳ, ಗೌರವಗಳ, ವ್ಯವಹಾರವು. ಈ ವಿರೋಧಗಳಿಂದ ಜಗತ್ತು ತುಂಬಾ ಸಂಕಟಗಳನ್ನು ಅನುಭವಿಸಿದೆ. ಇವುಗಳ ಕೊನೆಯ ಗುರಿಯು, ಅಂತ್ಯವಿಲ್ಲದ ಯುದ್ಧಗಳು.

"ಸಾಂಪತ್ತಿಕ ಪ್ರಭಾವಗಳ ಪ್ರದೇಶ"ಗಳೆಂಬುದನ್ನು ರದ್ದುಗೊಳಿಸಬೇಕು. ಬರ್ಮಾದಲ್ಲಿ ಬ್ರಿಟಿಷರ ಯೂನಿಯನ್ ಜೇಕ್ ಹಾರಾಡುತ್ತಿರುವುದಾದರೂ, ಅಮೇರಿಕನ್ ಬಂಡವಾಳಕ್ಕೆ ಅಲ್ಲಿ ಅವಕಾಶ ದೊರಕಬೇಕು. ಹಾಗನೆ ಅಮೇರಿಕನ್ ರಿಪಬ್ಲಿಕ್‌ಗಳ ಮೇಲೆ "ಮುನ್ರೊ ಡೊಕ್ಟ್ರಿನ್" ಅಂದರೆ (ಅಲ್ಲಿ ಪರದೇಶಿಯರು ಬಾರದಂತೆ ಆಚರಿಸಲಾದ ನೀತಿ) ಹಾರಾಡುತ್ತಿರುವುದಾದರೂ ಅಲ್ಲಿ ಬ್ರಿಟಿಷ ಬಂಡವಾಳಕ್ಕೆ ಪ್ರವೇಶ ದೊರಕಬೇಕು. ಜಗತ್ತಿನ ಉದ್ಧಾರದಲ್ಲಿ ರಾಷ್ಟ್ರೀಯ ಮನೋಭಾವನೆಯಿಂದ ವರ್ತಿಸುವ ಬದಲು, ಇಡೀ ಜಗವೇ ಒಂದೆಂಬ ಭಾವನೆಯಿಂದ ಮಾನವನ ಸಂತುಷ್ಟಿಯ ಸಾಧನೆಯಲ್ಲೂ ಜಗತ್ತಿನ ಉದ್ಧಾರದಲ್ಲೂ ಎಲ್ಲರೂ ವರ್ತಿಸಬೇಕು.

"ಸರಕಾರಗಳ ಪರಸ್ಪರ ವಿನಿಮಯ ವ್ಯವಹಾರಗಳು ಕಡಿಮೆಯಾಗಿ ಜನಗಳ ಪರಸ್ಪರ ವಿನಿಮಯ ವ್ಯವಹಾರಗಳು ಹೆಚ್ಚಿದರೆ, ಉತ್ತಮವಿದೆ" ಎಂಬುದಾಗಿ ಜೆಪರ್‌ಸನ್ನರು ಆಡಿದ್ದರು. ಶಾಂತಿಯ ಉತ್ಪಾದನೆಯು ಜನಗಳ ಮನದಿಂದಲೆ ಆಗಬೇಕು. ಇಲ್ಲಿ ಸೂಚಿಸಲಾದ ಕೆಲಸಗಳು ಜನತೆಯಿಂದ ಜನತೆಗಾಗಿ ನಡೆಯಬೇಕು.

ಜಗತ್ತಿನ ಸಂತುಷ್ಟಿ ಸಾದನೆಗೆ ಇವುಗಳು ಸಾಂಪತ್ತಿಕ ಉಪಾಯಗಳು. ಈ ಉಪಾಯಗಳಿಲ್ಲದನೆ ರಾಜಕೀಯ ಉಪಾಯಗಳಿಂದಲೆ ಜಾಗತಿಕ ಶಾಂತಿಯನ್ನು ದೊರಕಿಸಿಕೊಳ್ಳಲು ಸಾಧ್ಯವಾಗದು. ಉದ್ಯೋಗ ಮತ್ತು ಐಶ್ವರ್ಯ ಪಡೆಯುವದಾರಿಯಲ್ಲಿ ಜಗತ್ತಿನ ಸಕಲ ಜನತೆಯು ಒಟ್ಟಾಗಿ ನಡೆದರೆ ಮಾತ್ರ ಆಗ ಶಾಂತಿಯು ಲಭಿಸುವುದು.

ಭವಿಷ್ಯವು ನಮ್ಮದು. ಎದೆಗಾರಿಕೆಯಿಂದ ವಿಶಾಲದೃಷ್ಟಿಯಿಂದ, ಪ್ರಜ್ವಲಿತ ನೂತನ ಯುಗದ ಕಡೆಗೆ ಗುರಿಯಿಟ್ಟು ನಾವು ನಡೆಯಬೇಕು.

The Canara Banking Corporation, Ltd.

(Incorporated in British Inbia)

ESTD: 1906

Head Office: UDIPI, SOUTH KANARA.

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

Buy the Best

CASHEW SHELL OIL

We have great pleasure to announce that we have placed on the market the best and purest Cashew Shell oil manufactured by us.

Packing — Tin of 35 lbs. nett or bulk in barrels.

Hindusthan Commodity Corporation Ltd.

Manufacturers & Exporters,

CANARA BANK BUILDING BUNDER Mangalore

ತಂಗಿ ವಿಜಯಾ, ತಾಯಿ ಲಕ್ಷ್ಮೀ

ಮಾಜೀ ವ್ಯಾಸ್‌ರಾಯರನ್ನ ಮೀರಿಸಿದ ಭಾರತೀಯಳು

ಅಮೇರಿಕನರ ಗೌರವಕ್ಕೆ ಪಾತ್ರಳಾದ ಮಹಿಳೆ

"೧೯೩೭ರಲ್ಲಿ ಸಂಯುಕ್ತ ಪ್ರಾಂತ್ಯದ ಗೃಹ ಮಂತ್ರಿ, ೧೯೪೨ರಲ್ಲಿ ಬ್ರಿಟಿಷ್ ಭಾರತದ ಒಂದು ಕೊಳಕು ಬಂಧಿಖಾನೆಯ ನಿವಾಸಿ, ೧೯೪೫ರಲ್ಲಿ ಜಗತ್ತಿನ ಪ್ರಖ್ಯಾತ ಪ್ರಜಾ ಪ್ರಭುತ್ವವಾದ ಸಂಯುಕ್ತ ಅಮೇರಿಕದ ಸಂಸ್ಥಾನಗಳಲ್ಲಿ ಗೌರವನೀಯ ಅತಿಥಿ'' ಹೀಗೆ ಓರ್ವ ಪತ್ರಿಕೋದ್ಯೋಮಿಗಳು ಶ್ರೀಮತಿ ವಿಜಯ ಲಕ್ಷ್ಮಿಯವರ ಜೀವನ ಇತಿಹಾಸದ ಮೂರು ಚಿರಸ್ಮರಣೀಯ ಇಸವಿಗಳನ್ನು ಕೊಡುತ್ತ ಅವರ ಚೈತನ್ಯಮಯ ಚಟುವಟಿಕೆಗಳನ್ನು ಸಂಕೆಪಿಸಿದ್ದಾರೆ.

ಅಮೇರಿಕದ ಜನರ ಚಿತ್ತದಲ್ಲಿ ಸಹಾನುಭೂತಿಯುಕ್ತವಾದ ಪ್ರೀತಿ ಆದರಗಳನ್ನುಂಟುಮಾಡಿ ಆ ಸ್ವಾತಂತ್ರ್ಯ ಪ್ರಿಯ ಜನರ ಮೆಚ್ಚುಗೆಗೆ ಪಾತ್ರರಾದ ಮೂರು ಭಾರತೀಯ ಮಹಿಳೆಯರಲ್ಲಿ ಇತ್ತೀಚೆಗಿನ ನಿದರ್ಶನ ವಿಜಯ ಲಕ್ಷ್ಮಿ ಪಂಡಿತರದು ಹತ್ತು ವರ್ಷಗಳ ಹಿಂದೆ ಅಲ್ಲಿಗೆ ಭಾಷಣ ಸಂಚಾರಕ್ಕೆ ಹೋಗಿ ತಮ್ಮ ಅಸಮಾನ್ಯ ಭಾಷಣ ಪ್ರೌಢಿಮೆಯಿಂದ ಅಮೇರಿಕನ್ ಪ್ರಜೆಗಳನ್ನು ಬೆರಗುಗೊಳಿಸಿದ ಮೊತ್ತ ಮೊದಲಿನ ಕೀರ್ತಿ ಆ ಕವಿತಾರತ್ನ ಸರೋಜಿನಿಗೆ ಸಲ್ಲುವುದು. ಯುದ್ಧಾರಂಭದಲ್ಲಿ ಮತ್ತೆ ಅಮೇರಿಕನ್ ಖಂಡದ ಒಂದು ಕರಾವಳಿಯಿಂದ ಇನ್ನೊಂದರ ತನಕ ಬ್ರಿಟಿಷ್ ಪ್ರಚಾರಕರನ್ನು ಮೂಲೆ ಪಾಲು ಮಾಡಿದ ಖ್ಯಾತಿ ಶೀಮತಿ ಕಮಲಾದೇವಿಯವರದು. ಈಚೆಗೆ ಭಾರತ ಸಮಸ್ಯೆಯನ್ನು ವಿಶ್ವ ಭೂಪಟದಲ್ಲಿ ಚಿತ್ರಿತವಾಗುವಂತೆ ಮಾಡಿದ ಅಮರ ಕೀರ್ತಿ ವಿಜಯ ಲಕ್ಷ್ಮಮ್ಮನವರ ಪಾಲಿನದು.

ಶ್ರೀಮತಿ ಪಂಡಿತರನ್ನು 'ಅಮ್ಮಾ' ಅನ್ನಲೂ ಒಂದು ಕಾರಣವಿದೆ. ೧೯೩೬ರ ಚುನಾವಣೆ ಸಮಯ ವಿಜಯ ಲಕ್ಷ್ಮಿಯವರು ತಮ್ಮ ಸಂಚಾರ ಕಾರ್ಯಕ್ರಮದಂತೆ ಒಂದು ಕಡೆ ಒಂದು ರೈಲುಗಾಡಿಯನ್ನು ಏರಿದರು. ಆ ಗಾಡಿಯೊಳಗೆ ಓರ್ವ ಭಾರತೀಯ ತರುಣನಿಗೂ ಮತ್ತೋರ್ವ ಅಮೇರಿಕನ್ ಗೃಹಸ್ಥನಿಗೂ ಚುನಾವಣೆ ಫಲಿತಾಂಶದ ಕುರಿತು ಚರ್ಚೆ ನಡೆಯುತಿತ್ತು.

ಇರ್ವರೂ ವಿಜಯ ಲಕ್ಷ್ಮಿಯವರ ಕುರಿತೇ ಚರ್ಚಿಸುತಿದ್ದರು. ತರುಣನು ಪಂಡಿತರನ್ನು ಬಾಯಿ ತುಂಬಾ ಹೊಗಳುತ್ತಾ ಅವಳೇ ಜಯಶಾಲಿಯಾಗಬೇಕೆಂದು ತನ್ನ ಆಶಯವನ್ನು ಒತ್ತಿ ಹೇಳಿದಾಗ, ಅಮೇರಿಕನನು "ಅವಳು ಅಂತಹದ್ದಾವ ದೇಶಸೇವೆಯನ್ನು ಮಾಡಿರುವಳು?" ಎಂದು ಕೇಳಿದನು.

"ಅವಳು ಏನನ್ನೂ ಮಾಡಬೇಕಿಲ್ಲ. ಅವಳು ನಮ್ಮ ತಾಯಿ, ಅವಳು ನಮ್ಮ ತಂಗಿ, ಅವಳೇ ಗೆಲ್ಲುವಳು" ಹೀಗೆಂದು ತರುಣನು ಉತ್ತರವಿತ್ತನು. ಇಷ್ಟಾದರೂ ಅದೇ ಗಾಡಿಯಲ್ಲಿ ಕೂತು ತಮ್ಮ ಚರ್ಚೆಯ ವ್ಯಕ್ತಿ ತಾಯಿ ಲಕ್ಷ್ಮಿಯನ್ನು ಚರ್ಚೆಗಾರರು ಗುರುತಿಸಲಿಲ್ಲ.

ಈ ಘಟನೆಯ ಕುರಿತು ಓರ್ವ ಲೇಖಕರು ಹೀಗೆ ಬರೆದಿದ್ದಾರೆ:- "ಇಂದೂ ಅವರು ನಮ್ಮ ತಾಯಿ, ತಂಗಿಯಾಗಿಯೇ ಇರುವರು. ಮಾತ್ರವಲ್ಲ ಅವರು ತುಂಬಾ ಸೇವೆಯನ್ನು ಮಾಡಿರುವರು."

ವ್ಯಾಸ್‌ರಾಯರ ಶ್ರೇಣಿಯಲ್ಲಿ

ಅಮೇರಿಕನರು ಚಲಚಿತ್ರ ತಾರೆಗಳನ್ನಲ್ಲದೆ ಹೆಚ್ಚಾಗಿ ಇನ್ನಿತರ ಕ್ಷೇತ್ರಗಳಲ್ಲಿ ಮಹಿಳೆಯವರಿಗೆ ಉನ್ನತ ಸ್ಥಾನ ಕೊಡುವುದಿಲ್ಲ. ಅಲ್ಲಿ ಸ್ತ್ರೀಯರು ಆಡಳಿತ ಹೊಣೆಗಾರಿಕೆ ವಹಿಸುವುದೆಂದರೆ ಅಲ್ಲಿನ ಪುರುಷರಿಗೆ ಏನೋ ಒಂದು ತರವಾಗಿ ಎನಿಸುತ್ತದೆ. ಅಧ್ಯಕ್ಷ ರೂಸ್‌ವೆಲ್ಟರ ಪತ್ನಿಗೆ ಓರ್ವ ಪತ್ರಿಕೆಯವನು:- "ಮಹಿಳೆಯೊರ್ವಳು ಅಧ್ಯಕ್ಷೆಯಾದರೆ ಹೇಗೆ? ಎಂದಾಗ ಆ ಅಧ್ಯಕ್ಷ ಪತ್ನಿಯು ಆಶ್ಚರ್ಯ ಸೂಚಿಸಿದಳುಮಾತ್ರವಲ್ಲ ಆ ಸೂಚನೆಯು ಅಶ್ಲೀಲ ಹಾಸ್ಯವೆಂದೂ ತಿಳಕೊಂಡರಂತೆ.

ಆದರೆ ಕೆಲಿಫೋರ್ನಿಯ ಪ್ರಾಂತ್ಯದ ನ್ಯಾಯ ವಿಧಾಯಕ ಸಭೆಯವರು ವಿಜಯ ಲಕ್ಷ್ಮಿಯವರನ್ನು ಒಂದು ಭಾಷಣ ಕೊಡಲು ಆಹ್ವಾನಿಸಿ ಅಭೂತ ಗೌರವ ತೋರಿಸಿದರು. ಆ ಪ್ರಾಂತ್ಯದ ವಿಧಾಯಕ ಸಭೆಯಲ್ಲಿ ಭಾಷೆ ಕೊಟ್ಟ ಹೊರ ದೇಶದವರೆಂದರೆ ಬರೇ ಮೂರು ಜನ–ಫಿಲಿಪ್ಪಾಯಿನ ಮುಖಂಡ ಮಿ। ರೊಮುಲೊ ಎಂಬವರೊಬ್ಬರು ಬ್ರಿಟಿಷ್ ರಾಯಭಾರಿ, ಲೋರ್ಡ್ ಹೆಲಿಫೆಕ್ಸ್ ಅವರೊಬ್ಬರು, ಮೂರನೆಯವರೇ ವಿಜಯಲಕ್ಷ್ಮಿಯವರು. ಹೆಲಿಫೆಕ್ಸರು ಭಾರತದ ಮಾಜಿ ವ್ಯಾಸರಾಯರು—ದೊಡ್ಡ ಪ್ರಚಾರಕರು ಅವರಾಗಿದ್ದಾರೆ.

ಬ್ರಿಟಿಷ್ ಜನಾಂಗವನ್ನೇ ನಿರ್ಮೂಲಗೊಳಿಸುವ ನಾಜಿ

ಮಿತ್ರ ಪಕ್ಷದವರು ಸೆರೆ ಹಿಡಿದ ಜರ್ಮನ್ ಮಾಜೀ ಮಂತ್ರಿಗಳಲ್ಲಿ ಡಾರೇ ಎಂಬವನೊಬ್ಬ. ಇವನು ಬಹಳ ಹಿಂದಿನಿಂದ ನಾಜೀ ಪಕ್ಷದ ಮುಖಂಡನಾಗಿದ್ದನಲ್ಲದೆ ಬಹಳ ಕಾಲ ಹಿಟ್ಲರ್ ಸರಕಾರದಲ್ಲಿ ಕೃಷಿ ಇಲಾಖೆಯ ಸಜಿವನಾಗಿದ್ದ. ಬ್ರಿಟಿಷ್ ಜನಾಂಗವನ್ನೇ ಸಮೂಲ ನಾಶಪಡಿಸಬೇಕೆಂಬುದೇ ಇವನ ಅಚ್ಚುಮೆಚ್ಚಿನ ತತ್ವ. ಜರ್ಮನಿಗೆ ಶರಣಾದ ಐರೋಪ್ಯ ದೇಶಗಳಲ್ಲೆಲ್ಲ ಡಾರೇಯು ತನ್ನಿಂದಾದಷ್ಟು ಮಟ್ಟಿಗೆ ಆ ತತ್ವವನ್ನು ಪ್ರತ್ಯಕ್ಷ ಜ್ಯಾರಿಗೆ ತಂದಿದ್ದನೆಂದು ಗೊತ್ತಾಗಿದೆ. ಬ್ರಿಟಿಷ್ ಸಂತಾನದ ನಿರ್ನಾಮ ಮಾಡಲು ಆತನು ಕಟ್ಟಿ ಕೊಂಡಿದ್ದ ಗಾಳಿ ಗೋಪುರದ ಸಾರಸ್ಯ ಹೀಗಿದೆ:

"ನಾವು ಬ್ರಿಟಿಷರನ್ನು ಜಯಿಸಿದೊಡನೆ ಅವರ ಜನಾಂಗವನ್ನೇ ನಿರ್ಮೂಲ ಮಾಡುವೆವು. ಅವರಲ್ಲಿ ಗಟ್ಟಿಮುಟ್ಟಾಗಿರುವವರನ್ನೆಲ್ಲ ಯುರೋಪಿಗೆ ಕೊಂಡೊಯ್ದು ನಮ್ಮ ಗುಲಾಮರನ್ನಾಗಿ ಮಾಡುವೆವು. ಉಳಿದವರನ್ನೆಲ್ಲ ಗೊಡ್ಡು ಮನುಷ್ಯರನ್ನಾಗಿ ಮಾಡುವೆವು.

ಒಂದೆರಡು ಮಿಲಿಯ ನಾರ್ಡಿಕ್ ತರುಣಿಯರನ್ನು ಪ್ರತ್ಯೇಕ ಚುನಾಯಿಸಲ್ಪಟ್ಟ ಜರ್ಮನ್ ಗಂಡಾಳುಗಳಿಗೂ ಅವರಿಗೂ ಒಟ್ಟುಕೂಡಿಸಿ ಹತ್ತುಹನ್ನೆರಡು ವರುಷಗಳ ತನಕ ಸಂತಾನ ಪ್ರಾಪ್ತಿಯಾಗುವಂತೆ ಏರ್ಪಡಿಸುವುದು. ಈ ಮಕ್ಕಳನ್ನು ಜರ್ಮನ್ ವಿಧಾನದಲ್ಲೇ ಬಳೆಸುವುದು. ಹೀಗೆ ಜರ್ಮನರಿಗೆ ಹುಟ್ಟಿದ ಮಕ್ಕಳೇ ಬ್ರಿಟನಿನ ಮುಂದಿನ ಜನಾಂಗವಾಗುವುದು.

"ಅವರಲ್ಲಿ ಕೆಲವರನ್ನು ಜರ್ಮನಿಗೆ ಒಯ್ದು ಶಿಕ್ಷಣ ಕೊಡಲಾಗುವುದು. ಹೀಗೆ ಶಿಕ್ಷಣ ಪಡೆದವರಲ್ಲಿ ನಾಜೀ ತತ್ವಕ್ಕೆ ಸರ್ವ ರೀತಿಯಲ್ಲಿ ಅನುಕೂಲರಾದವರನ್ನು ಮಾತ್ರ ಮರಳಿ ಇಂಗ್ಲೆಂಡಿಗೆ ಕಳುಹಿಸಲಾಗುವುದು. ಉಳಿದವರನ್ನು ಈ ಮೊದಲೇ ಆಮದು ಮಾಡಿದ ಗುಲಾಮರ ಗುಂಪಿಗೆ ಸೇರಿಸಿ ಕೊಳ್ಳಲಾಗುವುದು. ಹೀಗೆ ಒಂದೆರಡು ಪೀಳಿಗೆಗಳಲ್ಲೇ ಬ್ರಿಟಿಷರ ಹೆಸರೇ ಮಾಯವಾಗುವುದು.

"ನಮ್ಮ ಎಸ್. ಎಸ್. ಸೇನೆಗಳೂ, ಇನ್ನಿತರ ಜರ್ಮನರೂ ನಿರ್ದಾಕ್ಷಿಣ್ಯವಾಗಿ ಎಲ್ಲಾ ನಾಶ ಕ್ರಿಯೆಯನ್ನು ಮುಗಿಸುವುದು.

"ಬ್ರಿಟಿಷರ ಆಸ್ತಿ ಪಾಸ್ತಿಗಳನ್ನು ಕೈಗಾರಿಕೆಗಳನ್ನೂ ವಶಪಡಿಸಿ ನಾಜೀ ಪಕ್ಷದವರೊಳಗೆ ಮತ್ತು ಸೈನಿಕರೊಳಗೆ ಹಂಚಲಾಗುವುದು. ತನ್ಮೂಲಕ ಹೊಸತೊಂದು ಜರ್ಮನ್ ಶ್ರಿಮಂತ ವರ್ಗವುಂಟಾಗುವುದು...."

ಜರ್ಮನರೆಲ್ಲ ಈ ಯೋಜನೆಯು ಸುಲಭ ಸಾಧ್ಯವೆಂದು ನೆರೆನಂಬಿದ್ದರು. ಆದರೆ ತಾವೊಂದೆಣಿಸಿದರೆ ದೈವವು ಬೇರೊಂದೆಣಿಸಿದಂತೆ ನಾಜೀ ದುರೀಣ ಡಾರೇಯು ಕಟ್ಟಿಕೊಂಡು ಬಂದಿದ್ದ ಗಾಳಿ ಗೋಪುರವು ಕುಸಿದು ನೆಲ ಸಮವಾಯಿತು. ಕಾರಣ ವೀರ ಚರ್ಚಿಲ್ಲರಂತಹ ಬ್ರಿಟಿಷ್ ಮುತ್ಸದಿಗಳ ಮುಂದೆ ತಮ್ಮ ಆಟ ಸಾಗಲಾರದೆಂದು ಅವರಿಗೆ ತಿಳಿಯದೆ ಹೋಯಿತು.

ಭಾರತೀ ದಳಗಳಿಗೆ ನ್ಯೂಜಿಲೆಂಡ್ ದಳದವರ ಅಭಿವಂದನೆ

ಇಂಡಿಯನ್ ಇಂಡಿಪೆಂಡೆಂಟ್ ಲಾಯಿಟ್ ಇನ್‌ಫೆಂಟ್ರಿ ಪಡೆಯವರು ಇಟಲಿಯಲ್ಲಿ ಬ್ರಿಟಿಷ್, ಪೋಲಿಷ್ ಮತ್ತು ನ್ಯೂಜಿಲೆಂಡ್ ಪಡೆಗಳೊಡನೆ ಬಹು ಸಮರ್ಪಕವಾಗಿ ಸಹಕರಿಸಿ ಕೆಲಸ ಮಾಡಿದರು. ಆದಕಾರಣ ಇಟಲಿಯಿಂದ ಹೊರಟಾಗ ಅವರಿಗೆ ಸುಖ ಪ್ರಯಾಣ ಬಯಸಲಾಯಿತು. ನ್ಯೂಜಿಲೆಂಡ್ ಪಡೆಯವರು ಉಪಚಾರಕೂಟಗಳನ್ನೇರ್ಪಡಿಸಿದರು. ಜಹಜು ಹತ್ತುವ ವರೆಗೆ ಬೀದಿಗಳಲ್ಲಿ ವಾದ್ಯಘೋಷಮಾಡುವುದಕ್ಕಾಗಿ ಎರಡು ಬ್ಯಾಂಡಿನ ತಂಡಗಳನ್ನು ಕಳಿಸಿಕೊಟ್ಟರು. ಜನರಲ್ ಸರ್ ಬರ್ನಾರ್ಡ್ ಫ್ರೆಬರ್ಗ್‌ರು ತಮ್ಮ ಪೂರ್ಣ ತಿಬ್ಬಂದಿಯೊಡನೆ ರಸ್ತೆಯ ಪಕ್ಕದಲ್ಲಿ ನಿಂತು ಮುಂದುವರಿಯುತ್ತಿದ್ದ ಸೈನಿಕರನ್ನು ಉತ್ಸಾಹಿಸಿದರು. ಆ ಮೇಲೆ ಬಂದರಿಗೆ ಹೋಗಿ ಅಲ್ಲಿ ಸುಖಪ್ರಯಾಣ ಬಯಸಿದರು. ಇತರ ದಳಗಳವರೂ ಈ ಸಮಯದಲ್ಲಿ ರಸ್ತೆಯ ಇಕ್ಕಡೆಗಳಲ್ಲಿಯೂ ನಿಂತು ತಮ್ಮ ಸಂತೋಷ ಸೂಚಿಸಿದರು.

ಇದು ವಿವಿಧ ಜಾತಿ ಮತ ಸಂಸ್ಕೃತಿ ವರ್ಣಗಳಿಗೆ ಸೇರಿದ ಮತ್ತು ಜಗತ್ತಿನ ಯೋಧರಲ್ಲಿ ಸಮಾನ ಶಕ್ತಿ ಸಾಹಸಗಳುಳ್ಳ ಭಾರತೀಯರಿಗೆ ನ್ಯೂಜಿಲೆಂಡಿನ ದಳದವರು ಮಾಡಿದ ವಂದನೋಪಚಾರ.

"ಮಳೆ ವಿಪರೀತ; ನೌಕಾಕ್ರೀಡೆಗೆ ಬಹಳ ಸೊಗಸು" ಎಂದು ಮುಳುಗುತ್ತಿರುವ ದಳವೊಂದು ಬರ್ಮಾ ರಣಮುಖದ ವಾಯುಗುಣದ ವಿಚಾರವಾಗಿ ಸಂಕ್ಷೇಪ ಸುದ್ದಿ ಕಳಿಸಿದೆ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನ ನಿಮ್ಮೊಡನೆ ಇಟ್ಟಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

LOOK!

A LUCRATIVE, REAL OPPURTUNITY TO THOSE WHO HAVE BEEN UNABLE TO SOLVE THEIR INVESTEMENT PROBLEM, HERE IS THE KEY TO THE SOLUTION.

the JAYA CASH CERTIFICATES.

Issued by THE Bank of Mangalore, Limited.

EVERY RS. 89/8 INVESTED WILL BRING RS. 100/— AT MATURITY.

FOR FURTHER PARTICULARS PLEASE APPLY TO OR CALL AT ANY ONE OF ITS OFFICES.

Carstreet, Mangalore-Bundur, Mangalore, Moodabidri and Padubidri.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ವೊಡಿವೆ ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

(ಸ್ಥಾಪನೆ: 1908)

ಪ್ರಥಮಶ್ರೇಣಿಯ ಭಾರತೀಯ ವಿಮಾ ಸಂಸ್ಥೆಗಳಲ್ಲಿ ಒಂದು

1944ರಲ್ಲಿ 2½ ಕೋಟಿಯ ವ್ಯವಹಾರವನ್ನು ಮಾಡಿದೆ

ಮದ್ರಾಸು ಶಾಖೆಯ ಕಾರ್ಯದರ್ಶಿಗಳು ಮತ್ತು ದೇಶಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದುಸ್ಥಾನ ಪ್ರದೇಶದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

(ಸ್ಥಾಪನೆ: 1910)

ಪೋಲಿಸಿದಾರರಿಗೂ ಮತ್ತು ಪ್ರತಿನಿಧಿಗಳಿಗೂ ವಿಶೇಷ ಸಂದರ್ಭಾನುಕೂಲತೆಗಳನ್ನು ಕೊಡಲು ಸದಾ ಸಿದ್ಧವಿದ್ದು 35 ವರ್ಷಗಳ ವಿಶ್ವಾಸಾರ್ಹ್ಯ ಸೇವೆ ಸಲ್ಲಿಸಿದ ಸಂಸ್ಥೆ

1944ರಲ್ಲಿ 53 ಲಕ್ಷದ ವ್ಯವಹಾರಮಾಡಿ ದಾಖಲೆಗಳಿಸಿದೆ.

ಶಾಖೆಗಳು ಮದ್ರಾಸ್, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಮಧುರೆ, ಕಲ್ಲಿಕೋಟೆ, ಬೊಂಬಾಯಿ ಮತ್ತು ಉಡುಪಿ.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[ಸಂಪುಟ 39] ತಾರೀಕು 27—7—1945 [ಸಂಚಿಕೆ 19]

ಭಾರತದಲ್ಲಿ ಮುಂದೇನು?

ಪಂಡಿತ್ ನೆಹರು ಭಾಷಣದ ಅರ್ಥ

ಬಂಗಾಲ ಪತ್ರಿಕೆಯ ಸೂಚನೆಗಳು

ಸಿಮ್ಲಾ ಪರಿಷತ್ತು ಒಂದು ಲೆಕ್ಕದಲ್ಲಿ ನಿಧನ ಹೊಂದಿದಂತೆಯೇ ಸರಿ. ಅದರಲ್ಲಿ ಭಾಗವಹಿಸಿದವರು ಅದರ ಕುರಿತು ಹಾಡಿದ ಮರಣಗೀತಗಳು ಹೃದಯಂಗಮವೂ ಅಭಿರುಚಿ ಸ್ವಾರಸ್ಯಗಳಿಂದ ಕೂಡಿದವೂ ಆಗಿವೆ. ಮತ್ತೊಂದು ಸಲಕ್ಕೆ ಈ 'ಕೋಮುವಾರು ಪ್ರಶ್ನೆಯೇ' ತೊಡಕಿನ ಕಲ್ಲಾಗಿ ಕಂಠಕ ಪ್ರಾಯವಾಯಿತೆಂದು ಕೊಂಗ್ರೆಸ್ ಅಧ್ಯಕ್ಷರು ಮನಕರಗುವಂತಹದೊಂದು ಹೇಳಿಕೆಯಲ್ಲಿ ತಿಳಿಸಿರುವರು.

ಈಗ ದೇಶದಲ್ಲೆಲ್ಲ 'ಮುಂದೇನು?' ಎಂಬ ಪ್ರಶ್ನೆಯೇ ಕೇಳಲ್ಪಡುತ್ತದೆ. ಮುಸ್ಲಿಂ ಲೀಗು ತನ್ನದೇ ಆದೊಂದು ಉದಾಹರಣೆಯುಕ್ತವಾದ ಹೇಳಿಕೆ ಕೊಟ್ಟಿದೆ: 'ಈಗಲೇ ಚುನಾವಣೆಗಳು ಜರಗಲಿ. ಅದರಲ್ಲಿ ಲೀಗು ಬಹುಮತ ಪಡೆದು ಭಾರತೀಯ ಮುಸಲ್ಮಾನರ ಪರವಾಗಿ ಪ್ರಾತಿನಿಧ್ಯ ವಹಿಸಬಲ್ಲ ಏಕ ಮಾತ್ರ ಸಂಸ್ಥೆ ತಾನೇ ಎಂಬುದನ್ನು ರುಜುವಾತು ಪಡಿಸುವುದು.' ಆದರೆ ಪಂಡಿತ್ ನೆಹರುಗಳ ಸೂಚನೆ ಬೇರೆ: 'ಚುನಾವಣೆಯಾಗಲಡ್ಡಿಯಿಲ್ಲ. ಆದರೆ ಅದಕ್ಕೆ ಮೊದಲು ತುರಂಗದಲ್ಲಿದ್ದ ಅಖಿಲ ಭಾರತ ಕೊಂಗ್ರೆಸ್ ಸಭೆಯ ಸದಸ್ಯರ ಬಿಡುಗಡೆಯಾಗಬೇಕು. ಮತ್ತು ಕೊಂಗ್ರೆಸಿನ ಮೇಲಿನ ನಿರ್ಬಂಧವು ಎತ್ತಲ್ಪಡಬೇಕು.

ಜನತೆಯ ನಾಗರೀಕ ಹಕ್ಕು ಸ್ವಾತಂತ್ರಗಳು ಪುನಃ ಸ್ಥಾಪಿಸಲ್ಪಟ್ಟು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ದಿನನಿತ್ಯ ವ್ಯವಹಾರವನ್ನು ಅವ್ಯಾಹತವಾಗಿ ಸಾಗಿಸುವಂತಾದ ಮೇಲೆ ಚುನಾವಣೆಗಳಾಗಬೇಕೆಂದು ಕೊಂಗ್ರೆಸಿಗರ ಅಭಿಮತ. ಈ ವಿಷಯದ ಕುರಿತು ಅಜಾದ್ ವ್ಯಾಸ್‌ರಾಯರೊಳಗೆ ಪತ್ರವ್ಯವಹಾರ ನಡೆಯುತ್ತಲಿದೆ ಎಂದು ತಿಳಿದು ಬರುತ್ತದೆ. ಮಾನ್ಯ ವ್ಯಾಸ್‌ರಾಯರು ಕೊಂಗ್ರೆಸಿನ ಈ ಕೇಳಿಕೆಯನ್ನು ಮನ್ನಿಸುವರೆಂದು ಹಾರೈಸಲಾಗಿದೆ. ಇಷ್ಟಲ್ಲದೆ ಕೊಂಗ್ರೆಸು ತನ್ನ ಮುಂದಿನ ಧೋರಣೆ ಏನು, ಕೊಂಗ್ರೆಸ್ ಕಮಿಟಿಗಳನ್ನು ಪುನಃರ್ವ್ಯವಸ್ಥಿಸುವುದು ಹೇಗೆ, ಯುದ್ಧಾನಂತರದ ಯೋಜನೆಗಳೇನು ಎಂಬುದರ ಕುರಿತು ಸಾರ್ವಜನಿಕರಿಗೆ ಮಾರ್ಗದರ್ಶಕವಾದ ಸಲಹೆಗಳನ್ನು ಕೊಡಬೇಕೆಂದೂ ಆಶಿಸಲಾಗಿದೆ.

ಅತ್ತ ಸರ್ ಸ್ಟಾಫರ್ಡ್ ಕ್ರಿಪ್ಸರು ತಮ್ಮದೊಂದು ಹೇಳಿಕೆಯಲ್ಲಿ 'ತಾತ್ಕಾಲಿಕ ಸರಕಾರವನ್ನು ರಚಿಸಲು ಮಾಡಲ್ಪಡುವ ಪ್ರಯತ್ನಗಳು ಖಂಡಿತ ಇನ್ನೊಮ್ಮೆ ಅಯಶಸ್ವಿಯಾಗುವುವು. ಆದುದರಿಂದ ಈಗ ಜಪಾನೀ ಮುತ್ತಿಗೆಯ ಗಂಡಾಂತರವು ಹೆಚ್ಚು ಕಡಮೆ ದೂರವಾದಂತಿರುವಾಗಲೇ ಚುನಾವಣೆಗಳನ್ನು ಜರಗಿಸಬೇಕು, ಅದರ ಫಲಿತಾಂಶದ ಮೇಲೆ ಪ್ರಜಾಪ್ರತಿನಿಧಿ ಸಭೆಯೊಂದನ್ನು ಮೇಳಾಯಿಸಬೇಕು. ಆ ಸಭೆಯು (ಹಿಂದಿನ ಕ್ರಿಪ್ಸ್ ಯೋಜನೆಗನುಸಾರವಾಗಿ) ಒಂದು ರಾಜ್ಯಘಟನೆಯನ್ನೂ ಸಿದ್ಧಗೊಳಿಸಬೇಕು.' ಎಂದು ಸೂಚಿಸಿರುವರು.

ಹುಲ್ಲು ರಾಶಿಯ ಮೇಲೆ ನಿಂತು ನಾಯಿಯು 'ತಾನು ತಿನ್ನದು, ಇತರರಿಗೆ ತಿನ್ನಬಿಡದು' ಎಂಬ ಧೋರಣೆಯಿಂದ ವರ್ತಿಸದಂತೆ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಜಿನ್ನರನ್ನು ಮುಂದೆ ಹಾಕಿ ಮುಸ್ಲಿಮರ ಮತ್ತು ದೇಶದ ಪ್ರಗತಿಗೆ ತೊಡಕನ್ನುಂಟುಮಾಡುವ ರಾಜತಂತ್ರ ವಿಧಾನವನ್ನು ಬದಲಾಯಿಸುವ ತನಕ ಯಾವ ತಾತ್ಕಾಲಿಕ ಏರ್ಪಾಡೂ ಯಶಸ್ವಿಯಾಗಲಾರದು.

ಮೂರು ವರ್ಷಗಳ ಹಿಂದೆ ಇದಕ್ಕಾಗಿಯೇ ಗಾಂಧಿಜಿಯವರು ಪ್ರಖ್ಯಾತಿ ಹೊಂದಿ ತಮ್ಮ ಆ 'ಭಾರತ ಬಿಟ್ಟು ತೊಲಗಿರಿ' ಎಂಬ ಘೋಷಣೆಗೆ ಮರೆ ಹೋದರೆಂಬ ಸಂಗತಿಯನ್ನು ಕ್ರಿಪ್ಸ್ ಸಾಹೇಬರು ಅರಿತುಕೊಳ್ಳಬೇಕು. ಇತ್ತೀಚಿಗೆ ಪಂ. ಜವಾಹರಲಾಲ್ ನೆಹರು ಅವರು ಅದೇ ಧಾಟಿಯಲ್ಲಿ, ಈಗಿನ ವ್ಯಾಸ್‌ರಾಯ್ ವೇವಲ್ಲರ ಮೂಗಿನಡೆಯಲ್ಲೆಂಬಂತೆ ಒಂದು ಕಡೆ ಸ್ಪಷ್ಟವಾಗಿ ತಿಳಿಸುತ್ತಾರೆ. 'ಈ ಮೂರನೆ ಪಕ್ಷದವರು ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿಯಾದರೂ ರಾಜಕೀಯ ರಂಗಭೂಮಿಯಿಂದ ನಿವೃತ್ತರಾಗಿ ಇತರ ಪಕ್ಷದವರನ್ನು ಬಿಕ್ಕಟ್ಟು ಬಿಡಿಸುವ ಹೊಣೆಗಾರಿಕೆಗೂ ಮತ್ತದರ ಪರಿಣಾಮಕ್ಕೂ ಬಿಟ್ಟುಬಿಡಬೇಕು. ಇಂದಿಗೆ ಇನ್ನೂರು ವರ್ಷಗಳಿಂದ ನಡೆದು ಬಂದ ಪರದೇಶಿಯರ ಆಡಳಿತದಿಂದುಂಟಾದ ಅಸ್ತವ್ಯಸ್ತತೆಯೆಷ್ಟೆಂಬುದರ ಅರಿವಿಲ್ಲದವರಿಗೆ ಈ ಸೂಚನೆಯು ಗಲಿಬಿಲಿಯನ್ನುಂಟುಮಾಡಬಹುದು.

'ಮೂರನೆ ಪಕ್ಷದವರು ಪ್ರತ್ಯಕ್ಷ ಇಲ್ಲವೇ ಅಪ್ರತ್ಯಕ್ಷವಾಗಿ ಹಿಂತೆಗೆಯಬೇಕು.' ಎಂಬುದರ ಅರ್ಥ ಸರಿಯಾಗಿ ಆಗಲಿಕ್ಕಿಲ್ಲ. ಆದರೂ ಅದರ ಭಾವವು ಸ್ಪಷ್ಟವೇ ಇದೆ. ಜಪಾನಿ ಯುದ್ಧವು ಇನ್ನೂ ಮುಗಿದಿಲ್ಲವಾದುದರಿಂದ ಬ್ರಿಟಿಷ್ ಆಳ್ವಿಕೆ ವರ್ಗದವರು ಇಲ್ಲಿಂದ ನಿವೃತ್ತರಾಗುವುದು ಈಗಾಗಲೇ ಶಕ್ಯವಿಲ್ಲವೆಂದು ಭಾವಿಸಿಕೊಂಡಿರುವರು. ಅದಕ್ಕೆ ನೆಹರುಗಳು ಮತ್ತೊಂದು ದಾರಿಯನ್ನು ಸೂಚಿಸಿರುವರು. ಅದೇ 'ಅಪ್ರತ್ಯಕ್ಷವಾದ ಹಿಂತೆಗೆಯುವಿಕೆ'. ಕೇವಲ ಯುದ್ಧಾವಶ್ಯಕತೆಯ ವಿಷಯಗಳನ್ನಲ್ಲದೆ ಇತರ ಎಲ್ಲಾ ಅಂತರೀಕ ವ್ಯವಸ್ಥೆಯನ್ನು ಭಾರತೀಯರೊಳಗೇ ಬಿಟ್ಟುಬಿಡಬೇಕು. ಅದರೊಳಗೆಂದೂ ಅವರು ಕೈಯಿಕ್ಕಬಾರದು.

ಅಂತರೀಕ ವ್ಯವಸ್ಥೆಯನ್ನು ಒಂದೋ ಪರಸ್ಪರ ಒಪ್ಪಂದದಿಂದ, ಅದು ತಪ್ಪಿದರೆ ಬಹುಮತದ ನಿರ್ಧಾರದಿಂದ, ಅದೂ ತಪ್ಪಿದರೆ ಅಂತರಾಷ್ಟ್ರೀಯ ಸಮಿತಿಯೊಂದರ ತೀರ್ಮಾನದಿಂದ ಬಗೆ ಹರಿಸಿಕೊಳ್ಳಬೇಕು. ಈ ಯೋಜನೆಯಲ್ಲಿ ಬ್ರಿಟಿಷ್ ಆಡಳಿತಗಾರರಿಗೆ ಯಾವ ಸ್ಥಾನವೂ ಇರಬಾರದು— ಇದು ಪಂಡಿತ್ ನೆಹರುಗಳ ಯೋಜನೆ. ಅದೇ ಅವರ 'ಅಪ್ರತ್ಯಕ್ಷ ಹಿಂತೆಗೆಯುವಿಕೆಯ' ಅರ್ಥ. 'ಪ್ರತ್ಯಕ್ಷವಾಗಿ' ಅಂದರೆ ಯುದ್ಧ ಮುಗಿಯುವ ತನಕ ಯುದ್ಧ ಸಂಬಂಧ ವ್ಯವಹಾರಕ್ಕಾಗಿ ಮಾತ್ರ ಅವರು ಇಲ್ಲಿ ಇರುವುದು.

ಆಳ್ವಿಕೆ ವರ್ಗದವರ 'ವಿಭಾಗಿಸಿ ಆಳುವ' ಧೋರಣೆಯ ಮೇಲೆ ಜನತೆಗೆ ಸಂದೇಹವು ಹೆಚ್ಚುತ್ತಲಿದೆ. ಪರದೇಶಿಯರ ಆಳ್ವಿಕೆಯಿಂದ ಜನತೆಯು ಪರಸ್ಪರ ಕಲಹದಲ್ಲೂ, ದೋಷದೂಷಣೆಯಲ್ಲೂ ಮಗ್ನವಾಗಿ ಅವರಲ್ಲಿ ಒಂದು ತರದ ಚಟುವಟಿಕೆ ಇಲ್ಲದಂತಾಗಿ ಅವರಲ್ಲಿ ಮಾನಸಿಕ ಆಲಸ್ಯವೂ ಜಡ್ಡೂ ಉಂಟಾಗುವಂತಾಗಿದೆ. ರಾಜಕೀಯ ಪಕ್ಷಗಳು ದೇಶಭಕ್ತಿಯವುಗಳಾಗಬೇಕೆಂದಿಲ್ಲ. ಹೇಗಾದರೂ ರಾಜ್ಯಾಡಳಿತವು ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತದೆ ಎಂಬ ಮನೋಭಾವನೆಯು ಅವುಗಳಲ್ಲಿ ಉಂಟುಮಾಡಲಾಗಿದೆ. ಈ ಸಂದರ್ಭ ಭಾರತೀಯ ರಾಜಕೀಯ ಪಕ್ಷಗಳನ್ನೂ, ಅವುಗಳ ಮುಖಂಡರನ್ನೂ ಜರಿದು ಫಲವಿಲ್ಲ. ಬ್ರಿಟಿಷರ ಧೋರಣೆಯ ನಿಜರೂಪವು ಅನೇಕ ಸಲ ತೋರಿಕೆಗೆ ಬಂದಿರುತ್ತದೆ. ಒಂದೋ ಅವರು ಕೋಮು ಕಲಹದ ನೆವ ತೆಗೆಯುವರು, ಇಲ್ಲವೆ ವಸಾಹತುಗಳನ್ನು ಆಳುವ ತಮ್ಮ ಧರ್ಮದರ್ಶಿಯತ್ವದ ನೆವವನ್ನು ಮುಂತರುವರು. ಒಂದು ಸುಸಂದರ್ಭದಲ್ಲಿ ಹಿಂದೂ ಮುಸಲ್ಮಾನರಾದ ಬಹುಸಂಖ್ಯಾಕ ಅಲ್ಪ ಸಂಖ್ಯಾಕರೊಳಗೆ ಒಪ್ಪಂದ ಕೂಡಿಯೇ ಬಂದಲ್ಲಿ ಈ ಮೂರನೆ ಪಕ್ಷದವರು 'ಒಪ್ಪಂದವಾಗಲಿ, ಬಿಡಲಿ ಭಾರತದ ಸಂಬಂಧ ನಮಗೆ ಕೆಲವು ಅನಿವಾರ್ಯ ಹೊಣೆಗಾರಿಕೆ ಇದ್ದೇ ಇದೆ.' ಎನ್ನುವರು.

ಈಗ ವೇವಲ್ ಯೋಜನೆಯನ್ನೇ ನಾವು ಪರಿಶೀಲಿಸೋಣ. ಅದು ಅಯಶಸ್ವಿಯಾಯಿತು. ಕಾರಣ ಲಂಡನಿನಲ್ಲಿರುವ ಕರ್ತೃಗಳು ಅದನ್ನು ಯಶಸ್ವಿಯಾಗಬೇಕೆಂಬ ಉದ್ದೇಶದಿಂದ ತಯಾರಿಸಿಯೇ ಇಲ್ಲ. ಅವರಿಗೆ ಜಿನ್ನರ ಪ್ರತಿಪಾದನೆಯ ವಿಚಾರ ತಿಳಿದೇ ಇತ್ತು. ಕೊಂಗ್ರೆಸಿನ ಧ್ಯೇಯ ಧೋರಣೆಗಳನ್ನೂ ಅವರು ಚೆನ್ನಾಗಿ ಬಲ್ಲರು. ಇದನ್ನೆಲ್ಲ ತಿಳಿದಿದ್ದೂ ಅವರು ಒಂದೊ ಜಿನ್ನರೂ ಒಪ್ಪಬೇಕು ಇಲ್ಲವೆ ಇಡೀ ಯೋಜನೆಯೇ ಅಯಶಸ್ವಿಯಾಗಬೇಕು ಎಂದು ಶರ್ತ ಹಾಕಿದರು. ಇದರಿಂದ ಪ್ರಗತಿಗೆ ತಡೆಹಾಕುವ ಸರ್ವಾಧಿಕಾರವನ್ನು ಜಿನ್ನರಿಗೇ ಕೊಟ್ಟಂತಾಯಿತು. ಅದು ನಿರ್ಮಲ ಹೃದಯದ ರಾಜಕೀಯ ಮುತ್ಸದಿಗಳಿಗೆ ಹೇಳಿದ ಮಾತಲ್ಲ. ಅದು ಶುದ್ಧವಾದ ಪ್ರಜಾಪ್ರಭುತ್ವದ ನೀತಿಗನುಣವಾದುದೂ ಅಲ್ಲ. ಅದೆಂದರೆ ತೊಡಕನ್ನುಂಟುಮಾಡುವ ಅತ್ಯಂತ ಸರಳವಾದೊಂದು ವಿಧಾನವೇ ಸರಿ. ಇದೇ ತಂತ್ರ ವಿಧಾನಗಳನ್ನನುಸರಿಸುವುದಾದರೆ ನಾವು ಸ್ಪಷ್ಟವಾಗಿ ಎಲ್ಲರಿಗೂ; 'ನೋಡಿ ಹೀಗಾದರೆ ಎಂದಿಗೂ ನಮ್ಮಲ್ಲಿ ಒಂದು ಇತ್ಯರ್ಥವೇ ಆಗಲಾರದು' ಎಂದು ಹೇಳಬಹುದು. ಆ ಕುರಿತು ಭಾರತವು ಲಜ್ಜೆಪಟ್ಟುಕೊಳ್ಳಬೇಕಾದುದಿಲ್ಲ. ಕಾರಣ ಇದೇ ತರದ ಧೋರಣೆಯನ್ನನುಸರಿಸಿದರೆ ಯಾವ ದೇಶದಲ್ಲೂ ಯಾವ ತರದ ಇತ್ಯರ್ಥವೂ ಸಾಧ್ಯವಲ್ಲ.

ಆದ ಪ್ರಯುಕ್ತ ಇದರಿಂದ ಬಿಡುಗಡೆ ಹೊಂದುವ ಒಂದು ಉಪಾಯವೆಂದರೆ ಬ್ರಿಟಿಷ್ ಆಡಳಿತ ವರ್ಗದವರ ಹಿಂತೆಗೆಯುವಿಕೆ. ಜಿನ್ನರಿಗೆ ಮುಸಲ್ಮಾನರ ಸಂಪೂರ್ಣ ಬೆಂಬಲವಿರಲಿ ಇಲ್ಲದಿರಲಿ. ಲೀಗಿನ ಬೆಂಬಲಕ್ಕೆ ಮುಸ್ಲಿಮರೆಲ್ಲ ಇದ್ದಾರೆಂದಾದರೆ ಈ ಮೂರನೆ ಪಕ್ಷದವರ ಹಿಂತೆಗೆಯುವಿಕೆಗೆ ಅವರು ಹೆದರಬೇಕಾಗಿಲ್ಲ. ಶಕ್ತಿವಂತರಾದ ೯ ಕೋಟಿ ಮುಸಲ್ಮಾನರ ಹಿತಗಳನ್ನು ಯಾರೂ ಅಪಹರಿಸುವಂತಿಲ್ಲ. ಮಾತ್ರವಲ್ಲ ಬ್ರಿಟಿಷರು ಅವರಿಗೆ ಸದಾಕಾಲವೂ ರಕ್ಷಣೆ ಕೊಡಲಾಗುವುದಿಲ್ಲ. ಒಂದಲ್ಲ ಒಂದು ದಿನ ಭಾರತೀಯರೇ ತಮ್ಮ ದೇಶವನ್ನಾಳುವಂತಾಗುವುದು. ಒಂದು ವೇಳೆ ಜಿನ್ನರಿಗೆ ಮುಸ್ಲಿಮರ

(೬ನೇ ಪುಟಕ್ಕೆ ಮುಂದುವರಿದಿದೆ)

ಭಾವೀ ಜಗತ್ತಿನಲ್ಲಿ ರಷ್ಯದ ಸ್ಥಾನ

ಬ್ರಿಟಿಷರ ಧೋರಣದಲ್ಲಿ ಬದಲಾವಣೆ ನಡೆಯುವುದೆ?

ಸದಾ ಅಧಿಕಾರಕ್ಕೆ ಬಿಗಿದಪ್ಪಿಕೊಂಡಿರುವುದು ಬ್ರಿಟಿಷರ ಪರಮ ಪ್ರೀತಿಯ ಧೋರಣೆಯಿದ್ದು, ಎಂದಾದರೂ ಘರ್ಷಣೆಯುಂಟಾದಲ್ಲಿ ಅವರು ಭಾರತೀಯ ರಾಷ್ಟ್ರೀಯತೆಗೆ ಬದ್ಧ ವಿರೋಧಿಗಳಾಗಿರುತ್ತಾರೆಂಬುದು ನಿಮ್ಮ ಅಭಿಪ್ರಾಯವೊ ಎಂದೊಬ್ಬ ಕೆನೆಡಿಯನ್ ಪತ್ರಿಕೋದ್ಯೋಗಿಗಳು ಪಂಡಿತ್ ನೆಹುರುಗಳನ್ನು ಕೇಳಿದಾಗ ಅವರು ಹೀಗೆ ಉತ್ತರವಿತ್ತರು:–

"ಇಂದಿನ ಮತ್ತು ಮುಂದಾಗಲಿರುವ ವಿಶ್ವಪರಿಸ್ಥಿತಿಗಳು ಬ್ರಿಟಿಷ್ ಧೋರಣೆಯ ಮೇಲೆ ಬಲವಾದ ಒತ್ತಡವನ್ನು ಹಾಕುತ್ತಿವೆ. ಪರಿಣಾಮವಾಗಿ ಅವರು ಯಾವುದೊಂದು ತರದಲ್ಲಾದರೂ ಭಾರತ ಜನತೆಯೊಡನೆ ಒಪ್ಪಂದಕ್ಕೆ ಬರಲೇ ಬೇಕಾಗುವುದು"

ಈ ಯುದ್ಧ ಕಾಲದಲ್ಲೇ ಒಂದು ಸಲ ಅಂತಹ ಒತ್ತಡವು ಹಾಕಲ್ಪಟ್ಟಿತ್ತು. (ಬಹುಶ್ಯ ಸ್ಟ್ಯಾಕ್ರಿಪ್ಸ್ ಯೋಜನೆಯುಅದೇ ಕಾಲದಲ್ಲಿ ಇಲ್ಲಿ ಕಳುಹಲ್ಪಟ್ಟಿದುದು.) ಆ ಒತ್ತಡದ ಗಂಡಾಂತರದ ಸಮಯವು ಈಗ ದಾಟಿ ಹೋಗಿದೆ. ಬ್ರಿಟಿಷರು ಜರ್ಮನ್ ಯುದ್ಧವನ್ನು ಗೆದ್ದರು. ಸದ್ಯದಲ್ಲೇ ಅವರು ಜಪಾನೀಗಳನ್ನೂ ಸೋಲಿಸಲಿದ್ದಾರೆ.

ಹೇಗಿದ್ದರೂ ಈ ಯುದ್ಧಾನಂತರ ಉಂಟಾಗುವ ಪರಿಸ್ಥಿತಿಯೂ ಕೇವಲ ಹೊಸ ತರದ್ದಾಗಿರುತ್ತದೆಂಬುದಕ್ಕೆ ಸಂದೇಹವಿಲ್ಲ. ಹೊಸ ಸಮಸ್ಯೆಗಳು ಮತ್ತು ಹೊಸ ಮನೋಭಾವಗಳು ಅದರಿಂದ ಉದ್ಭವಿಸುವುವು. ಹಿಟ್ಲರನು ರಷ್ಯವನ್ನು ಕುರಿತು "ಅದೊಂದು ಹೊಸ ರಾಕ್ಷಸನೆಂದು" ತಿಳಿಸಿದ್ದನು. ಆ ರಾಕ್ಷಸನು ಇಂದೂ ಮತ್ತು ಮುಂದೆಯೂ ವಿಶ್ವರಾಜಕಾರಣದಲ್ಲಿ ಪ್ರಭಾವಶಾಲಿಯೇ ಇರುವಂತಾಗುವನು ಎಂಬುದಕ್ಕೆ ಹೇರಳ ನಿದರ್ಶನಗಳು ತೋರಿಬರುತ್ತಿವೆ. ಆಗಲೇ ಯುರೋಪಿನ ಅನೇಕ ದೇಶಗಳಲ್ಲಿ ಅವು ಪ್ರತ್ಯಕ್ಷ ಸಾಕ್ಷ್ಯ ಕೊಡುತ್ತಿವೆ. ಆ ದೇಶಗಳಲ್ಲಿ ಅನೇಕವು ಇದಾಗಲೇ ರಷ್ಯನ್ ಪ್ರಭಾವದೊಳಗೆ ಸಿಲುಕಿವೆ. ಇನ್ನುಳಿದುವು ಭರದಿಂದ ಆ ಕಡೆ ವಾಲಿವೆ.

ಈಗ ಪೊಟ್ಸ್‌ಡೇಮಿನಲ್ಲಿ ಸೇರಿರುವ ತ್ರಿಮೂರ್ತಿಗಳ ಸಮ್ಮೇಳನದಲ್ಲಿ ರಷ್ಯವು ಮುಂದೆ ಹಾಕಿದ ಕೆಲವು ಸೂಚನೆಗಳು ಎಂಗ್ಲೊ-ಅಮೇರಿಕನರಿಗೆ ಕಳವಳವನುಂಟುಮಾಡದಿರಲಿಕ್ಕಿಲ್ಲ. ಸ್ಪೈಯಿನಿನ ಟೆಂಜಿಯರ್ ಪ್ರದೇಶದ ಕುರಿತು ಇತ್ಯರ್ಥಗೊಳಿಸಲು ನಡೆಯುತಿದ್ದ ಫ್ರಾನ್ಸ್ ಬ್ರಿಟನುಗಳ ಪರಿಷತ್ತು ಸದ್ಯಕ್ಕೆ ನಿಲ್ಲಿಸಲ್ಪಟ್ಟಿದೆ. ಕಾರಣಅದರಲ್ಲಿ ಭಾಗವಹಿಸಲು ತಮಗೆ ಇಚ್ಛೆಯಿದೆಯೆಂದು ರಷ್ಯನರ ವಿನಂತಿಯೊಂದು ಅಲ್ಲಿಗೆ ಕಳುಹಿಸಲ್ಪಟ್ಟಿದೆ. ಜೆಕೊಸ್ಲೊವೇಕಿಯಾ ಮತ್ತು ಪೋಲೆಂಡ್ ಗಡಿಗಳಲ್ಲಿರುವ ಟೆಸ್ಚೆನ್ ಎಂಬ ಒಂದು ಮಹತ್ವದ ಕೈಗಾರಿಕೆ ಕೇಂದ್ರ ನಗರದ ಕುರಿತು ಜೆಕೋಸ್ಲೋವಾಕಿಯಾ ಪೊಲೆಂಡುಗಳೊಳಗೆ ಕಚ್ಚಾಟವೆದ್ದಿದ್ದು ರಷ್ಯವು ಅದರಲ್ಲಿ ಮಧ್ಯಸ್ಥಿಕೆ ತೆಗೆದುಕೊಳ್ಳುವ ಸಂಭವವಿದೆ.

ರಷ್ಯದ ಪ್ರಾವ್ಡಾ ಪತ್ರಿಕೆಯು ಸ್ಪೈನಿನ ಫ್ರೆಂಕೋವನ್ನು ಅವನ ಫೆಸಿಸ್ಟ್ ನಿರಂಕುಶವಾದದ ಧೋರಣೆಗಾಗಿ ಖಂಡಿಸಿ ಅವನು ಮುಂದಿನ ಫೆಸಿಸ್ಟ್ ಪಿತೂರಿಗಾರರಿಗೆ ಆಶ್ರಯದಾತನಾಗುವ ಸಂಭವವಿದೆ ಎಂದೂ ಆದುದರಿಂದ ಫ್ರೆಂಕೋ ಆಡಳಿತವನ್ನು ಬೇರು ಸಹಿತ ಕಿತ್ತೊಗೆಯಬೇಕೆಂದೂ ಒತ್ತಿ ಹೇಳಿರುತ್ತದೆ.

ಇನ್ನೊಂದು ವರದಿಯಪ್ರಕಾರ ಸೋವಿಯಟ್ ಸರಕಾರವು ಕೆಂಪು ಸಮುದ್ರದ ಸುವೇಜ್ ಕಾಲುವೆಯಲ್ಲಿ ಕೆಲವು ಪಾಲುಗಳನ್ನು ತನಗೆ ಕೊಡಬೇಕೆಂದು ಕೇಳಿದೆಯಾಗಿ ತಿಳಿದು ಬರುತ್ತದೆ. ಟರ್ಕಿ ಬಳಿಯ ಡಾರ್ಡೆನೆಲ್ಸ್ ಜಲಸಂಧಿಯ ಕುರಿತಾದ ಮೊಂಟ್ರೊ ಅಂತರಾಷ್ಟ್ರೀಯ ಒಪ್ಪಂದದಲ್ಲಿ ತಿದ್ದುಪಡಿಗಳಾಗಬೇಕೆಂದೂ ರಷ್ಯವು ಕೋರಿರುವುದಂತೆ. ತನ್ನ ಕೆಲವು ಶರ್ತಗಳನ್ನು ಒಪ್ಪಿದರೆ ರಷ್ಯವು ಟರ್ಕಿಯೊಡನೆ ಹೊಸತೊಂದು ಒಪ್ಪಂದಕ್ಕೆ ಸಿದ್ಧವಿದೆಯೆಂದೂ ತಿಳಿಸಿರುತ್ತದೆ. ಕಾಲು ಶತಮಾನಕ್ಕೂ ಹಿಂದೆ ಟರ್ಕಿಗೆ ಸೇರಿಸಲ್ಪಟ್ಟ ಕಾರ್ಸ್ ಪ್ರದೇಶವು ರಷ್ಯನರದಿದ್ದು ಅದನೀಗ ಹಿಂದಕ್ಕೆ ಕೊಡಬೇಕೆಂಬುದು ಈ ಶರ್ತಗಳಲ್ಲಿ ಒಂದು. ಮಾತ್ರವಲ್ಲ ಟರ್ಕಿಯ ಸರಕಾರದ ಪ್ರಜಾಪ್ರಭುತ್ವವಾದೀವರ್ಣವು ಇನ್ನೂ ಹೆಚ್ಚಬೇಕಾಗಿ ಸೂಚಿಸಲಾಗಿದೆ. ಈ ಪ್ರಕರಣದ ಕುರಿತು ಕೆಲವು ಸಮಯದ ಹಿಂದೆ ಟರ್ಕಿಯ ವಿದೇಶಾಂಗ ಮಂತ್ರಿಗಳಾದ ಹಸನ್ ಸಾಕಾ ಅವರು ಬ್ರಿಟಿಷ್ ಅಧಿಕಾರಿಗಳೊಡನೆ ಮಾತುಕತೆಗಳನ್ನು ನಡೆಸಿರುವರಾಗಿ ತಿಳಿದು ಬಂದಿದೆ.

ಕೆಲವು ತಿಂಗಳ ಹಿಂದೆ ರಷ್ಯವು ಪರ್ಶಿ (ಇರಾನ್) ಯದ ಎಣ್ಣೆ ಪ್ರದೇಶಗಳಲ್ಲಿ ತನಗೆ ಕೆಲವಂಶಗಳನ್ನು ಕೊಡ ಬೇಕೆಂದೂ ಕೇಳಿತ್ತು. ಇಷ್ಟರಲ್ಲಿ ಆ ಸಮಸ್ಯೆ ಹೊಸ ರೂಪವನ್ನೇ ತಾಳಿದ್ದು ತುಂಬಾ ತಲೆಸಿಡಿತಕ್ಕೆಡೆ ಕೊಟ್ಟಿದೆ. ಪ್ರಾವ್ಡಾ ಪತ್ರಿಕೆಯ ಈ ಸಂಬಂಧ ಬರೆದ ಲೇಖನದಿಂದ ತಿಳಿಯುವಂತೆ ಪರಿಸ್ಥಿತಿಯು ಹೆಚ್ಚಿನಘರ್ಷಣೆಗೆ ತುತ್ತಾಗಿದೆ. ಪ್ರಾವ್ಡಾದ ಲೇಖನದಲ್ಲಿ "ಪರ್ಶಿಯದಲ್ಲಿ ಪ್ರತಿಗಾಮಿಗಳ ಕಿರುಕುಳ ಹೆಚ್ಚಿದೆ" ಎಂದೂ ರಷ್ಯನ್ ಸಹಾನುಭೂತಿಪಕ್ಷದವರನ್ನು ಅಲ್ಲಿ ದಬ್ಬಾಳಿಕೆಗೆ ಗುರಿಮಾಡಲಾಗಿದೆ" ಎಂದೂ ದೋಷಾರೋಪಣೆ ಮಾಡಲಾಗಿವೆ. ಮಿತ್ರ ಸೈನ್ಯಗಳು ಪರ್ಶಿಯದಿಂದ ಹಿಂತೆಗೆಯಲ್ಪಟ್ಟೊಡನೆ ಅಲ್ಲೊಂದು ನಿರಂಕುಶ ಆಡಳಿತವನ್ನು ರಚಿಸಲು ಈಗಾಗಲೇ ಹಂಚಿಕೆಗಳು ಜರಗುತ್ತಿವೆಯಾಗಿಯೂ ಪ್ರಾವ್ಡಾ ಪತ್ರಿಕೆ ಆರೋಪಿಸಿದೆ. ಆಗಲೇ ಅಲ್ಲಿ ಬೆದರಿಕೆಯ ಆಳ್ವಿಕೆ ಪ್ರಾರಂಭವಾಗಿದೆ ಎಂದೂ ಪ್ರಜಾಪ್ರಭುತ್ವವಾದಿ ಪಕ್ಷದವರ ವಿರೋಧ ಕಠಿಣ ಕಾರ್ಯಕ್ರಮ ಕೈಕೊಳ್ಳುತ್ತಿರುವರೆಂದೂ ಇನ್ನೊಂದುಆರೋಪ. ಟರ್ಕಿಯ ಮತ್ತು ಪರ್ಶಿಯದ ಸಮಸ್ಯೆಗಳು ಇತ್ಯರ್ಥವಾಗದ ತನಕ ತಮ್ಮ ಸೈನ್ಯದಳಗಳನ್ನು ಪರ್ಶಿಯದಿಂದ ಹಿಂತೆಗೆಯುವ ನಿರ್ಧಾರವನ್ನು ಸೊವಿಯಟ್ ರಷ್ಯವು ಮಾಡುವಹಾಗಿಲ್ಲ. ಹೀಗೆಂದೆಲ್ಲಾ ರಾಜಕೀಯ ತಜ್ಞರ ಅಭಿಪ್ರಾಯವಿರುತ್ತದೆ.

ನ್ಯೂಸ್ ಆಫ್ ದಿ ವರ್ಲ್ಡ್ ಎಂಬ ಪತ್ರಿಕೆಯ ಮಧ್ಯ ಪೂರ್ವದ ಪ್ರತಿನಿಧಿಗಳೊಬ್ಬರು, "ರಷ್ಯಕ್ಕೆ ಬೇಕಾದಷ್ಟು ಎಣ್ಣೆ ಇದೆ. ಇರಾನಿನಲ್ಲಿ ಎಣ್ಣೆ ರಿಯಾತಿಗಳು ಬೇಕೆಂದು ಕೇಳುವ ರಷ್ಯದ ಉದ್ದೇಶ "ಅಲ್ಲಿನ ರೈಲು ಮಾರ್ಗವನ್ನು ಸ್ವಾಧೀನಪಡಿಸಿ ಮೆಲ್ಲಗೆ ಪಾರ್ಶೀ ಕೊಲ್ಲಿಯ ಬಾಸ್ರಾ ನೌಕಾ ಕೇಂದ್ರವನ್ನು ವಶಪಡಿಸಬೇಕೆಂದಿದೆ" ಎಂದು ತಿಳಿಸಿರುವುದು ಎಲ್ಲರನ್ನೂ ಕೌತುಕಗೊಳಿಸಿದೆ. ಆ ಪತ್ರಿಕಾ ಪ್ರತಿನಿಧಿಯ ಅಭಿಪ್ರಾಯದಲ್ಲಿ "ಎಣ್ಣೆಯ ಪ್ರಶ್ನೆಯೆಂದರೆ ದಬ್ಬಾಳಿಕೆಗೊಂದು ನೆಪವೆಂದಿದೆ. ಹಿಟ್ಲರನ ಕಾಲದಲ್ಲಿ "ಅಲ್ಪಸಂಖ್ಯಾಕರ ರಕ್ಷಣೆ"ಗಾಗಿ ಎಂಬ ನೆಪದಿಂದ ನೆರೆಕೆರೆಯ ದೇಶಗಳ ಮೇಲೆ ಅಭಿಕ್ರಮಣವಾಗುತಿತ್ತು. ಈಗ "ಪರ್ಶಿಯದಲ್ಲಿ ಎಣ್ಣೆ ರಿಯಾತಿಗಳನ್ನು ಕೇಳುವುದರ ಮೂಲಕ ರಷ್ಯವು ಅಲ್ಲಿನ ರಷ್ಯನ್ ಸಹಾನುಭೂತಿ ಪಕ್ಷದವರ ಮೇಲೆ ದಬ್ಬಾಳಿಕೆ ನಡೆಸಲ್ಪಡುತ್ತಿದೆ" ಎಂಬ ನೆಪವನ್ನು ತೆಗೆದಿದೆಯಾಗಿ ಅದೇ ಪತ್ರಿಕಾ ಪ್ರತಿನಿಧಿಗಳು ಅಭಿಪ್ರಾಯ ಪಟ್ಟಿರುವರು. ಪರ್ಶಿಯನ್ ಕೊಲ್ಲಿಯಲ್ಲಿ ಒಂದು ನೌಕಾ ಠಾಣ್ಯವನ್ನು ಪಡೆಯಲು ರಷ್ಯವು ಝಾರನ ಕಾಲದಲ್ಲೇ ಪ್ರಯತ್ನಿಸಿತ್ತು. ರಷ್ಯದ ಈ ಕೋರಿಕೆಯು ಈಡೇರಿದರೆ "ಅದಕ್ಕೆ ಉತ್ತರದ ಆರ್ಕ್‌ಟಿಕ್ ಸಮುದ್ರದಿಂದ ದಕ್ಷಿಣದ ಅರಬೀ ಸಮುದ್ರದ ತನಕ ತಡೆಯಿಲ್ಲದ ಸಾಗಿಸುವಿಕೆಯ ಮಾರ್ಗ ದೊರಕಿದಂತಾಗುವುದು. ಭಾರತಕ್ಕೂ ದೂರಪೂರ್ವದ ದೇಶಗಳಿಗೂ ಅದಕ್ಕೆ ಸಾಮೀಪ್ಯವಾದಂತಾಯಿತು. ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸದಲ್ಲೇ ಇದೊಂದು ದಾಖಲೆ ಎನಿಸುವುದು."

ಮೇಲಿನವುಗಳಲ್ಲಿ ಕೆಲವು ವಿಷಯಗಳಾದರೂ ನಿಜವಿದ್ದರೆ ರಷ್ಯವು ಮೊದಲನೇ ಶ್ರೇಣಿಯ ಮಹಾ ಶಕ್ತಿರಾಷ್ಟ್ರವಾಗುವುದಕ್ಕೆ ಪ್ರಯತ್ನಿಸುತ್ತಿದೆ ಎಂಬ ಸಂಗತಿಯು ಸ್ಪಷ್ಟವಾಗುವುದು. ಯುರೋಪು ಆಸ್ಯಾಗಳಲ್ಲಿನ ವಿಶಾಲ ವಿಭಾಗಗಳ ಮೇಲೆ ಒಡೆತನವಿರಿಸಲು ಅದು ಕಾತರಿಸುವುದೆಂದೂ ತಿಳಿಯುತ್ತದೆ.

ಬಹುಶ್ಯ "ಇಂದಿನ ಮತ್ತು ಮುಂದಿನ ವಿಶ್ವ ಪರಿಸ್ಥಿತಿಯು ಬ್ರಿಟಿಷರ ಮೇಲೆ ಒತ್ತಡ ಹಾಕುತ್ತದೆ" ಎಂದು ಹೇಳಿದ ಪಂಡಿತ ನೆಹುರುಗಳ ಆ "ವಿಶ್ವ ಪರಿಸ್ಥಿತಿ" ಈ ಕುರಿತಾಗಿ ನಿರೂಪಿಸಿದ್ದಾಗಿರಬೇಕು. ಅಂತಃರಾಷ್ಟ್ರಿಯ ರಾಜಕಾರಣದಲ್ಲಿ ರೂಪುಗೊಳ್ಳುತ್ತಿರುವ ಹೊಸ ಸಮಸ್ಯೆಗಳಕಡೆಗೆ ಬ್ರಿಟಿಷ್ ಅಮೇರಿಕನರ ಲಕ್ಷವಿದ್ದೇ ಇದೆ. ಅವರು ಈಗಾಗಲೇ ಈ "ಬೃಹದ್ ರಾಕ್ಷಸನನ್ನು" ಮೆಚ್ಚಿಸಲು ಪ್ರಯತ್ನಿಸುತ್ತಿರುವರು. ೧೯೩೯ ರಲ್ಲಿಯೂ ಬೇರೊಂದು "ಪೆಢಂಭೂತ"ವನ್ನು ಒಲಿಸಿಕೊಳ್ಳಲು ಸಾಧ್ಯವಾಗದೆ ವಿಶ್ವ ಸಮರವೊಂದು ಪ್ರಾರಂಭವಾಯಿತು. ಅಂತಹದೇ ಇನ್ನೊಂದು ಸಮಯವು ಬಹು ಬೇಗನೆ ಬಂದೇ ಬರುವುದೆಂದು ಹಾರೈಸಿದರೆ ತಪ್ಪಾಗಲಿಕ್ಕಿಲ್ಲ.

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ

ಶಾಖೆಗಳು

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ
		ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ತೆತ್ತ ಮೂಲಧನ 26 ಲಕ್ಷ
ಕ್ಷೇಮ ನಿಧಿ 10 ಲಕ್ಷ

ಸ್ಥಾಪನೆ: 1906
ಕೆನರಾ ಬೇಂಕ್ ಲಿಮಿಟೆಡ್.
(ESTD. 1906)
CANARA BANK LIMITED
In corporated in British India, liability of Members limited

Buy the Best
CASHEW SHELL OIL
Wehave great pleasure to announce that we have placed on the market the best and purest Cashew Shell oil manufactured by us.
Packing — Tin of 35 lbs. nett or bulk in barrels.
H ndusthan Commodity Corporation Ltd.
Manufacturers & Exporters,
CANARA BANK BUILDING BUNDER Mangalore

ಸೈನ್ಯ ಶಾಖೆಯ ಶಿಶು ರಕ್ಷಣಾಲಯ

ಬೆಂಗಳೂರಿನ ಸಮೀಪದಲ್ಲಿರುವ ಸೈನ್ಯದ ಸಾಮಾನಿನ ಗಡಂಗೊಂದರಲ್ಲಿ ಕೆಲಸ ಮಾಡುತ್ತಿರುವ ನೂರಾರು ಕೂಲಿಗಳ ಮಕ್ಕಳನ್ನು, ಅವರ ತಂದೆ ತಾಯಿ ಕೆಲಸಕ್ಕೆ ಹೋಗಿದ್ದಾಗ, ಎಚ್ಚರಿಕೆಯಿಂದ ನೋಡಿಕೊಳ್ಳಲು ಸೈನ್ಯ ಶಾಖೆಯವರು ಶಿಶು ರಕ್ಷಣಾಲಯವೊಂದನ್ನು ತೆರೆದಿದ್ದಾರೆ.

ಹುಟ್ಟಿದ ಎಳೆ ಮಕ್ಕಳನ್ನು ಅನುಭವಶಾಲಿಗಳಿಂದ ಭಾರತೀ ಕಂಪೌಂಡರುಗಳ ವಶಕೊಪ್ಪಿಸುತ್ತಾರೆ. ಅವರು ಮಕ್ಕಳ ಯೋಗಕ್ಷೇಮ ನೋಡಿಕೊಂಡು ಕಾಪಾಡುತ್ತಾರೆ. ಮತ್ತು ಬಂದ ಮಕ್ಕಳಿಗೆ ಉಚಿತವಾಗಿ ಓದು ಬರಹ ಕಲಿಸಿ ಅನ್ನ ಬಟ್ಟೆಯೊದಗಿಸಿ ಸಾಕುತ್ತಾರೆ; ಆಟದ ಸಾಮಾನು ಕೊಟ್ಟು ಆಟಗಳನ್ನೂ ಕಲಿಸುತ್ತಾರೆ.

ಕೆಲಸಗಾರರು ಹತ್ತಿರದ ಮತ್ತು ದೂರದ ಹಳ್ಳಿಗಳಿಂದ ತಮ್ಮ ಹೆಂಡತಿ ಮಕ್ಕಳೊಡನೆ ಗಡಂಗಿಗೆ ಕೆಲಸಕ್ಕೆ ಬರುತ್ತಾರೆ. ಹುಟ್ಟಿ ಕೆಲವು ದಿನವಾದ ಅವಳಿ ಮಕ್ಕಳನ್ನೂ ತಂದೆತಾಯಿಯವರು ರಕ್ಷಣಾಲಯದ ವಶಕ್ಕೊಪ್ಪಿಸಿ ನಿರ್ಯೋಚನೆಯಿಂದ ಕೆಲಸಕ್ಕೆ ಹೋಗುತ್ತಾರೆ.

ಸಾಮಾನು ಗಡಂಗಿನ ಕ್ಷೇಮನಿಧಿಯಿಂದ ಶಿಶು ರಕ್ಷಣಾಲಯದ ಖರ್ಚಿಗಾಗಿ ಸ್ವಲ್ಪ ಭಾಗ ಹಣ ಕೊಡುತ್ತಾರೆ. ವಿಶೇಷವಾಗಿ ಅವರ ಫಲಾಹಾರ ಮಂದಿರದಿಂದ ಬಂದ ಲಾಭದಿಂದಲೂ, ಡೆಪೋ ನಿಧಿಯಿಂದಲೂ ಈ ನಿಧಿಯನ್ನು ಶೇಖರಿಸಿದೆ. ಈ ಹಣದಿಂದ ಮಕ್ಕಳಿಗೆ ಪುಸ್ತಕ, ಆಟದ ಸಾಮಾನುಗಳನ್ನು ಕೊಳ್ಳುತ್ತಾರೆ. ದಿನಕ್ಕೆ ೫ ಗಂಟೆಗಿಂತ ಹೆಚ್ಚಾಗಿ ಕೆಲಸ ಮಾಡಲಾರದ ಬಾಲಕರು ಕೆಲಸ ಪ್ರಾರಂಭವಾಗುವುದಕ್ಕೆ ಮುಂಚೆ ಮತ್ತು ಆ ಮೇಲೆ ಆಟ ಪಾಟಗಳಲ್ಲಿ ತೊಡಗುತ್ತಾರೆ. ಸಿವಿಲಿಯನ್ ಕೆಲಸಗಾರರ ಕ್ಷೇಮ ಚಿಂತನೆಗಾಗಿ ಒಬ್ಬ ಸಿವಿಲ್ ಲೇಬರ್ ಅಧಿಕಾರಿಯನ್ನು ನೇಮಿಸಲಾಗಿದೆ.

ಒಂದೇ ದಿನ ಭಾರತೀ ದಳಕ್ಕೆ ಎರಡು ವಿಕ್ಟೋರಿಯಾ ಕ್ರಾಸ್‌ಗಳು

ಇಟೆಲಿ ಕದನದಲ್ಲಿ ವಿಕ್ಟೋರಿಯಾ ಕ್ರಾಸ್ ಪಡೆದ ೮ನೇ ಭಾರತೀ ದಳಕ್ಕೆ ಜಗತ್ತಿನ ಎಲ್ಲಡೆಗಳಿಂದ್ರಲೂ ಅಭಿನಂದನ ಪತ್ರಗಳು ಬರುತ್ತಿವೆ.

೧೩ನೇ ಗಡಿನಾಡಿನ ತುಪಾಕಿ ದಳಕ್ಕೆ ಸೇರಿದ ಸಿಪಾಯಿ ಅಲಿ ಹೈದರರಿಗೆ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ ದೊರಕಿದ ಸಂಗತಿ ಬಹಳ ಸ್ವಾರಸ್ಯ. ಇಟೆಲಿಯಲ್ಲಿ ನಡೆದ ೧೯ ತಿಂಗಳ ಕದನದಲ್ಲಿ ೮ನೇ ವಿ. ಸಿ. ದೊರಕಿತು; ಅಲ್ಲದೆ ಪಡೆ ೯ನೇ ಎಪ್ರಿಲ್ ದಿನ ಸಿನಿಯೋ ನದಿಯನ್ನು ಮುತ್ತಿದಾಗ ಇದು ಒಂದೇ ದಿನದಲ್ಲಿ ದೊರೆತ ಎರಡನೇ ವಿ. ಸಿ. ಇನ್ನೊಂದು ೫ನೇ ಮರಾಠ ಲೈಟ್ ಇನ್‌ಫೆಂಟ್ರಿಯ ಸಿಪಾಯಿ ನಾಮದೇವ್ ಜಾಧವರಿಗೆ ದೊರಕಿತು.

ನಾಲ್ಕು ವಿಕ್ಟೋರಿಯಾ ಕ್ರಾಸ್‌ಗಳನ್ನು ಗೆದ್ದವರೂ ಸಿಪಾಯಿಗಳೇ ಈ ಕದನದಲ್ಲಿ ೮ನೇ ಭಾರತೀ ದಳದವರು ೨೧,೧೦೦ ಶತ್ರುಗಳನ್ನು ಕೊಂದರು; ೬೦೦೦ ಮಂದಿಯನ್ನು ಕೈ ಸೆರೆ ಹಿಡಿದರು ಈ ನಾಲ್ಕು ವಿ. ಸಿ.ಗಳಲ್ಲದೆ ೬೫೦ಕ್ಕೂ ಮೀರಿದ ಬಹುಮಾನಗಳು, ನೂರಾರು ಪ್ರಶಸ್ತಿ ಪತ್ರಿಕೆಗಳು ದಳಕ್ಕೆ ದೊರಕಿದುವು. ದಳದ ದಂಡನಾಯಕರಿಂದ ಮೇಜರ್ ಜನರಲ್ ಡಬ್ಲ್ಯು ರಸೆಲ್‌ರಿಗೆ ದೊಡ್ಡ ದೊಡ್ಡ ಸೈನ್ಯಾಧಿಕಾರಿಗಳಿಂದ ಶುಭ ಸಂದೇಶಗಳು ಬಂದುವು.

ಹೈದರಾಬಾದಿನಲ್ಲಿ ಉಚಿತ ಚಲನ ಚಿತ್ರಗಳು

ಸೈನ್ಯ ಚಿಕಿತ್ಸಾಲಯಗಳ ಉಪಯೋಗಕ್ಕಾಗಿ

ಕಾಯಿಲೆ ಮಲಗಿರುವ ಮತ್ತು ಗಾಯಕೊಂಡ ಬ್ರಿಟಿಷ್ ಮತ್ತು ಭಾರತೀ ಶಿಪಾಯಿಗಳಿಗಾಗಿ ಚಲನ ಚಿತ್ರಗಳನ್ನೂ, ಸಂಗೀತ ಕಚೇರಿ ಮತ್ತು ಸಂತೋಷ ಕೂಟಗಳನ್ನೂ ಏರ್ಪಡಿಸುತ್ತ ಹೈದರಾಬಾದಿನ "ಅರ್ಗಸ್" ಎಂಬ ವಾಣಿಜ್ಯ ಸಂಸ್ಥೆಯವರು ಸಂಸ್ಥಾನದಲ್ಲಿ ಸೈನ್ಯೋಪಚಾರಕ್ಕಾಗಿ ತಮ್ಮ ವರಮಾನವನ್ನೆಲ್ಲ ವೆಚ್ಚ ಮಾಡುತಿದ್ದಾರೆ. ಅವರು ಸಿನೆಮ, ನಾಟಕ, ಸರ್ಕಸ್, ವಿವಿಧ ವಿನೋದಾವಳಿಗಳಿಂದ ಸಂಪಾದಿಸಿದ ಹಣವನ್ನೆಲ್ಲ ಮಿಲಿಟರಿ ಆಸ್ಪತ್ರೆಗಳಲ್ಲಿರುವ ರೋಗಿಗಳಿಗಾಗಿ ಉಪಯೋಗಿಸುತಿದ್ದಾರೆ. ಸುಖ ಸಂತೋಷಗಳನ್ನೇರ್ಪಡಿಸುವ ಶಾಖೆ ಒಬ್ಬ ಕಾರ್ಯದರ್ಶಿಯ ಅಧೀನದಲ್ಲಿದೆ. ಇದು ಆಸ್ಪತ್ರೆಗಳಲ್ಲಿ ವಾಕ್ಚಿತ್ರ, ತಂತೀವಾದ್ಯ ಸಂಗೀತ ಕಚೇರಿ, ಇವನ್ನು ಏರ್ಪಡಿಸುತ್ತದೆ, ಇದಕ್ಕೆ ಸೇರಿದಂತೆ ಗ್ರಾಮಫೋನ್, ಅವುಗಳ ತಟ್ಟೆಗಳ ಶಾಖೆ, ಪುಸ್ತಕ ಭಂಡಾರ, ಆಸ್ಪತ್ರೆಗಳಲ್ಲಿ ಹಾಸಿಗೆ ಹಿಡಿದು ಮಲಗಿದ ರೋಗಿಗಳಿಗೆ ಅಂಗಡಿಗಳು, ಆಗಾಗ ನಾಟಕಾಭಿನಯ ವೈಮಾನಿಕರ ಕೂಟ, ವಾಕ್ಚಿತ್ರ ಪ್ರದರ್ಶನಗಳನ್ನು ಏರ್ಪಡಿಸುತ್ತದೆ. ಸಾರ್ವಜನಿಕ ಮಂದಿರಗಳಲ್ಲಿ ತೋರಿಸುವಂತೆಯೇ ಅತ್ಯುತ್ತಮ ಚಿತ್ರಗಳನ್ನು ಪ್ರದರ್ಶಿಲಾಗುತ್ತದೆ. ಫಿಲ್ಮ್‌ಗಳನ್ನು ಒಳ್ಳೊಳ್ಳೆಯ ಕಂಪೆನಿಗಳಿಂದ ತರಿಸಿಕೊಳ್ಳಲಾಗುತ್ತದೆ.

ತಂತೀ ವಾದ್ಯವೆಂದರೆ ಬ್ರಿಟಿಷ್ ದಳಗಳಿಗೆ ಬಹಳ ಇಷ್ಟ. ಈ ಸಂಗೀತ ಆಸ್ಪತ್ರೆಯ ಬೇರೆ ಬೇರೆ ವಾರ್ಡುಗಳಲ್ಲಿ ಸರತಿಯ ಪ್ರಕಾರ ವಾರಕ್ಕೆ ೫ರಂತೆ ನಡೆಯುತ್ತದೆ. ಭಾರತೀ ಸಿಪಾಯಿಗಳಿಗಾಗಿ ಪದೇ ಪದೇ ನಾಟಕಾಭಿನಯಗಳನ್ನು ಆಸ್ಪತ್ರೆಯಲ್ಲಿಯೇ ಏರ್ಪಡಿಸಲಾಗುತ್ತದೆ.

"ನೋಡಿ, ನನಗೆ ಗೊತ್ತು. ಈ ವರ್ಷ ನನಗೆ 55 ವರ್ಷ ತುಂಬಿ ನನ್ನ ಕೆಲಸದಿಂದ ವಿಶ್ರಾಂತನಾದೆ. ಆದರೆ ಆ ವಿಚಾರದಲ್ಲಿ ನನಗೆ ಸ್ವಲ್ಪವಾದರೂ ಕಳವಳವುಂಟಾಯಿತೇ? ಇಲ್ಲವೇ ಇಲ್ಲ.... ಉದ್ಯೋಗದಿಂದ ನಿವೃತ್ತನಾದಾಗ, ದುಡ್ಡಿನ ತಾಪತ್ರಯವಿಲ್ಲದಿರುವುದಕ್ಕಾಗಿ, ತಕ್ಕಷ್ಟು ಹಣವನ್ನು ಕೂಡಿಟ್ಟಿದ್ದೆ. ನಾನು ಹೇಗೆ ಕೂಡಿಡಲು ಸಾಧ್ಯವಾಯಿತು? ಅದು ಅತಿ ಸುಲಭ. ನಾನು ಚಿಕ್ಕವನಾಗಿದ್ದಾಗಲೇ, ಉಳಿತಾಯ ಮಾಡುವದನ್ನು ಅಭ್ಯಾಸ ಮಾಡಿದೆ. ಆಗ ನನಗೇನೂ ಭಾರೀ ಪಗಾರ ಬರುತ್ತಿರಲಿಲ್ಲ. ಆದಾಗ್ಯೂ ಪ್ರತಿ ತಿಂಗಳೂ ಸ್ವಲ್ಪವಾದರೂ ಉಳಿಸಿ, ಸುರಕ್ಷಿತ ಮಾರ್ಗಗಳಲ್ಲಿ ಶೇಖರಿಸುತ್ತಿದ್ದೆ.

ಒಂದೇ ಗಂಟಿನಲ್ಲಿ ರೂ. 1000 ಅಥವಾ ರೂ. 5000 ವನ್ನು ಮೀಸಲಾಗಿಡುವುದು ಎಲ್ಲರಿಗೂ ಸಾಧ್ಯವಲ್ಲ. ಖರ್ಚು ಕಳೆದು ಅಲ್ಪ ಮೊಬಲಗು ಉಳಿಯುವುದಾದರೆ, ಅದನ್ನು ಶೇಖರಿಸುವುದು ನಿಷ್ಫಲವೆಂದು ಜನರು ಅನೇಕ ವೇಳೆ ಭಾವಿಸುತ್ತಾರೆ. ಅದು ಶುದ್ಧ ತಪ್ಪು. ಪರಿಣಾಮದಲ್ಲಿ ದೊಡ್ಡ ಗಂಟು ದೊರೆಯಬೇಕಾದರೆ, ಪ್ರತಿ ತಿಂಗಳೂ ಸ್ವಲ್ಪ ಮೊಬಲಗನ್ನು, ಎಷ್ಟೇ ಅಲ್ಪವಾಗಲೀ, ಕೂಡಿಡುತ್ತಾ ಬರುವ ನಿಯಮವೇ ಇದರ ಮುಖ್ಯ ರಹಸ್ಯ. ಕಾಲಕ್ರಮದಲ್ಲಿ ಈ ಅಲ್ಪ ಮೊಬಲಗುಗಳೇ ಗಣ್ಯವಾದ ಮೊಬಲಗಾಗಿ ಪರಿಣಮಿಸಿ, ನಿಮಗೆ ಆಶ್ಚರ್ಯವನ್ನುಂಟುಮಾಡುವವು....

ಕ್ರಮವಾದ ಉಳಿತಾಯವೇ ಇದರ ರಹಸ್ಯ. ನಾಳೆಗಾಗಿ ಇಂದಿನ ದಿನವೇ ಅಂದಾಜು ಮಾಡಿರಿ. ನಿಮ್ಮ ಶಕ್ತ್ಯನುಸಾರ ಉಳಿತಾಯ ಮಾಡಿರಿ.

ಆದರೆ ನೀವು ಈ ರೀತಿ ಕೂಡಿಟ್ಟ ಮೊಬಲಗನ್ನು, ಸುರಕ್ಷಿತವಾಗಿಯೂ, ನಿಮಗೆ ಬೇಕಾದಾಗ ದೊರೆಯುವ ಮಾರ್ಗಗಳಲ್ಲಿಯೂ ವಿನಿಯೋಗಿಸಬೇಕೆಂಬುದನ್ನು ಲಕ್ಷ್ಯದಲ್ಲಿಡಿರಿ.

ಬಹಳ ಸಣ್ಣ ಮೊಬಲಗುಗಳನ್ನು ಕೂಡ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಗೌರ‍್ನಮೆಂಟು ಲೋನುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು, ವಿಮೆ, ಪರಸ್ಪರ ಸಹಾಯಕ ಸಂಘಗಳು, ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು, ಈ ಮಾರ್ಗಗಳಲ್ಲಿ ವಿನಿಯೋಗಿಸಬಹುದು. ನಿಮ್ಮ ಹಣವು ಈ ರೀತಿಯಾಗಿ ವಿನಿಯೋಗಿಸಲ್ಪಟ್ಟರೆ, ಭದ್ರವಾಗಿರುವುದಲ್ಲದೆ, ದಿನ ದಿನಕ್ಕೂ ಹೆಚ್ಚುತ್ತಿರುವುದು. ವ್ಯಾಪಾರದ ಸರಕುಗಳು, ಕೈಗಾರಿಕೆ ಸಾಮಾನುಗಳು, ಆಭರಣಗಳು, ಜಮೀನು ವಗೈರೆ ಆಸ್ತಿ, ಇವುಗಳಲ್ಲಿ ನಿಮ್ಮ ಬಂಡವಾಳವನ್ನು ಹಾಕಿ ನಷ್ಟಕ್ಕೆ ಗುರಿಯಾಗಬೇಡಿರಿ. ಇವುಗಳ ಬೆಲೆಯು ಕಡಿಮೆಯಾಗುವ ಸಂಭವವಿರುತ್ತದೆ.

ನಿಮ್ಮ ಭವಿಷ್ಯೋಪಯೋಗಕ್ಕಾಗಿ ಉಳಿತಾಯ ಮಾಡಿ ಸುರಕ್ಷಿತ ಮಾರ್ಗಗಳಲ್ಲಿ ವಿನಿಯೋಗಿಸಿರಿ.

ಗೌರ‍್ನಮೆಂಟ್ ಆಫ್ ಇಂಡಿಯಾದ ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ AAA 182 KN